SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

*****

Please return this volume on or before the date last stamped
Overdue volume will be charged 1/- per day.

JANUARY 1938

ANNAS SIX

ಸಂ ೧೬

ಈ ಸಂಚಿಕೆಯಲ್ಲಿ —

ನಾಳೆಯ ನಾಗರಿಕನ
ಶಿಕ್ಷಣಸನ್ನಾಹ
ಎಚ್. ಜಿ. ವೆಲ್ಸರ ಭಾಷಣದಿಂದ

ಕುದುರೆಯ ಮೀಮಾಂಸೆ
ಶ್ರೀರಂಗ

ಯಾರ ಮಗು ? (ಸಣ್ಣ ಕತೆ)
ಶ್ರೀಮತಿ ಎಸ್. ಕಮಲಾದೇವಿ

ಬಾದಾಮಿಯ ಚಾಲುಕ್ಯರ ಕಾಲದ
ಕಲಾಜೀವನ
ದೇಸಾಯಿ ಪಾಂಡುರಂಗರಾಯರು

ಖನಿಜದ್ರವ್ಯಗಳೂ ಜಗತ್ತಿನ
ಸ್ಥಿತ್ಯಂತರಗಳೂ
"ನಾಗರಿಕ"

ಭೀಕರ ಪಾರುಪತ್ಯ (ಸಣ್ಣ ಕತೆ)
ಸೌ. ಶ್ಯಾಮಲೆ


ಸಂಪಾದಕರು:
ಬೆಳಗಾವಿ ರಾಮಚಂದ್ರರಾಯರು
ಬಿ. ಎ.



ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ

(ಮೈಸೂರು ಸರ್ಕಾರ)

ಭದ್ರಾವತಿ



ಅತ್ಯಂತ ಶ್ರೇಷ್ಠವಾದ

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ, ಸರಳು, ಕಂಬಿ ಮುಂತಾದ ಸಾಮಾನುಗಳು (M. S. Flats, Bars etc.) ಇದ್ದಿಲಿನ ಉಪಯೋಗದಿಂದ ತಯಾರಾಗುವ ಅತ್ಯುತ್ಕೃಷ್ಟವಾದ ಬೀಡು ಕಬ್ಬಿಣ (Charcoal Pig Iron) ಎರಕದ ನೀರಿನ ಕೊಳವೆಗಳು ಅಥವಾ ಪೈಪುಗಳು (Cast Iron Pipes) ಸ್ಪಿರಿಟ್ಸ್ (W. W. Methanol) " ಕ್ರೆಸೋ " ಎಂಬ ಫಿನಾಯಿಲ್ ಎಣ್ಣೆ ("Kreso") ಡಾಮರ್ ಎಣ್ಣೆ (Wood Tar) ಮರದ ಎಣ್ಣೆ (Wood preservative)

.... ಇವೇ ಮುಂತಾದವು ತಯಾರಾಗುತ್ತವೆ. ....

ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ.

ಉಕ್ಕಿನ ಸಾಮಾನುಗಳಿಗೆ—

ಏಜಂಟರು—

ದಕ್ಷಿಣ ಮಹಾರಾಷ್ಟ್ರ ದೇಶಕ್ಕೆ: .... ವಾಲ್ಕಾರ್ಟ್ ಬ್ರದರ್ಸ್, ಹು

ಮೈಸೂರು ಸಂಸ್ಥಾನದಲ್ಲಿ: .... ಬಿ. ವಿ. ನಾರಾಯಣಸ್ವಾಮಿ ಅಂಡ್

೪೨ ಅರ್ಕಾಟ್ ಶ್ರೀನಿವಾಸಾಚಾರ್ ಬೀದಿ, ... ಬೆಂಗಳೂ

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢೇಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ
ರಾಮಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ

ಜಯ ಕರ್ನಾಟಕ

೧೬ನೆಯ ಸಂಪುಟ—ಪೂರ್ವಾರ್ಧ

V. 6

(೧೯೩೮ನೆಯ ಜನೆವರಿ—ಜೂನ್)

1938

ಸಂಪಾದಕರು :

ಶ್ರೀ. ಬೆಳಗಾವಿ ರಾಮಚಂದ್ರರಾಯರು

ಧಾರವಾಡ

ವಾರ್ಷಿಕ ಚಂದಾ ರೂ. ೪—೮—೦ (ಹಿಂದುಸ್ಥಾನ); ೧ —೧—೦ (ಪರದೇಶ)

ಸಂಪುಟ ೧೬

೧೯೩೮ನೆಯ ಇಸ್ವಿ

ಸಂಚಿಕೆ ೧—೬

ಜಾನೆವಾರಿ—ಜೂನ್

ಪರಿವಿಡಿ

೧. ಲೇಖನಗಳು
೨. ಕವನಗಳು
೩. ಕತೆ-ನಾಟಕ-ಹರಟೆಗಳು
೪. ಜ್ಞಾನ-ವಿಜ್ಞಾನ
೫. ಸಂಚಯ
೬. ವೀಣಾವಿತಾನ
೭. ಸಾಹಿತ್ಯಗೋಷ್ಠಿ
೮. ವಿವಿಧ
೯. ವಿಚಾರವೇದಿಕೆ
೧೦. ಚಿತ್ರಗಳು
೧೧. ನಮ್ಮ ಬಳಗ

ವಿಷಯ — ಪುಟ

ಲೇಖನಗಳು

ಅಂದು-ಇಂದು ೮೨
ಅಖಿಲ ಕರ್ನಾಟಕ ಮಕ್ಕಳ ಕೂಟ ೪೬೦
ಆವಾಹನ ೧
ಇಂದಿನ ಉಭಯ-ಭಾಷಾ-ಚಕ್ರವರ್ತಿಗಳು ೨೯೮
ಉಂಡಾಡಿಗನ ಮುಂಡಿಗೆ ೪೪೧
ಒಕ್ಕಟ್ಟಿನ ಗುಟ್ಟು ೩೩೩
ಓಂ ಶಾಂತಿಃ ಶಾಂತಿಃ ಅರ್ಥಾತ್ ಆಂಗ್ಲೋ-ಇಟಾಲಿಯನ್ ಸಂಧಾನ ೪೩೪
ಓಜೋಗ್ರಂಥಿಗಳೂ ಲಿಂಗಭೇದವೂ ೪೪೯
ಕನ್ನಡನುಡಿ-ದೇಹೀ ದಫ್ತರ ೮೭
ಕಪ್ಪೆಗಳ ಪ್ರಣಯ ೩೦೨
ಖನಿಜ ದ್ರವ್ಯಗಳೂ ಜಗತ್ತಿನಲ್ಲಿಯ ಸ್ಥಿತ್ಯಂತರಗಳೂ ೩೦
"ಗದಾಯುದ್ಧ"ದ ರನ್ನನ ಕಾಲನಿರ್ಣಯದ ಶಾಸ್ತ್ರೀಯ ರೀತಿ ೨೬೪
ಚಿತ್ರಾಂಗದಾ ೧೯
ಜಗತ್ತಿನ ಕ್ರಾಂತಿಕೇಂದ್ರ ೧೯೫
ಜಪಾನಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ೨೫೪
ಜಮಖಂಡಿಯ ಜಯಭೇರಿ ೯೩
ಜೇಡದ ಜೀವನ ೩೮೦
ಕಾಂಗಡಾ ಪ್ರವಾಸ ೪೧೨
ನಮ್ಮ...ನ ಹಾಡು ಮತ್ತು ನಾಡಗುಡಿ ೯
ನಾಗಜನಾಂಗ...ವ ಪ್ರಾಶಸ್ತ್ಯ ೨೩
ನಾಗಪುರದ ಅಖಿಲ ... ೯೭
ನಾಳೆಯ ನಾಗರಿಕನ ಶಿಕ್ಷಣ ... ಮಹಿಳಾ ಪರಿಷತ್ತು ೧೫೯
ಪಕ್ಷಪಾತ ಇಲ್ಲವೆ ಅರ್ಧಾಂಗಿಯ ಅ... ೫
ಪ್ರಗತಿಪರ ಲೇಖಕರು ... ತ ೩೮೨
... ೮೩
ಪ್ರಾಚೀನ ಆರ್ಯಾವರ್ತದ 'ಮಿಸ್ ಮೇಯೋ' ೪೦೮
ಬಸವಣ್ಣನವರ ಬೆಳವಳಿಗೆ ೪೬೮
ಬಾದಾಮಿಯ ಚಾಲುಕ್ಯರ ಕಾಲದ ಕಲಾಜೀವನ ೨೫
ಬಾಳಿನ ಸವಿ ೨೪೮
ಭೀಮಕವಿಯ ಬಸವ ಪುರಾಣ ೧೧೧
ಮಲಶುದ್ಧಿ ೩೭೭
ಮಹಾದೇವಿಯಕ್ಕನ ಜೀವನ ಕಾವ್ಯ ೩೨೮
ಯುದ್ಧೋತ್ತರ ರಾಜಕೀಯ ವಿಚಾರಗಳು ೧೪೩
ಯುರೋಪಿನಲ್ಲಿ ನಮ್ಮ ಭಾರತೀಯರು ೩೩೫
ರನ್ನನ ಊರು ಮುಧೋಳ, ಬೆಳಗಲಿ ಅಲ್ಲ ೧೨೭
ರನ್ನನ ಮುದುವೊಳಲು ೧೮೪
ವಿವಾಹ ಮತ್ತು ಪ್ರೇಮ ೨೧೬
ವಿಷಮ ದಂಪತಿಗಳು ೨೧೭
ಸತ್ತ ಮೇಲಿನ ಜೀವನ ೩೪೯
ಸಮಂತಭದ್ರನ ಜನ್ಮಗ್ರಾಮವೂ ತಪೋಭೂಮಿಯೂ ೪೫
ಸ್ವಪ್ನಸೃಷ್ಟಿ ೨೬೩
ಹಿಟ್ಲರನ ವಿಕ್ರಮ ೩೦೭
ಹೈದರಾಬಾದಿನಲ್ಲಿ ರಾಜಕೀಯ ಸುಧಾರಣೆಗಳು ೩೫೩

ಕವನಗಳು

ಅಳಿಯಲಾರದ ನೆನಹು ೪೬[illegible]
ಆತ್ಮಸಂದೇಶ [illegible]
ಇವಳಾರು ? ೧೧೯
ಉಷೆ ೩
ಕಣ್ಣುಕಟ್ಟು ೩೨೭
ಕನ್ನಡಿತಿ (ಗದ್ಯಕಾವ್ಯ) ೨೪೬
ಕವಿ ೨೪೫
ಕಿರಣವೊಂದೆ ೩೭೦
ಚಿತ್ರಸೃಷ್ಟಿ ೮೧

ದರಿದ್ರ ೪೬೬
ನಾನು-ನೀನು ೭೬೬
ನಿವೇದನ ೪೦೬
ಪಂಡಿತವಕ್ಕಿ ೩೦೧
ಮೂರು ತೆರ ೪೬
ಮೌನ ೩೬
ಯಾವ ವೇಷ ? ೩೬೧
ವಾಮನ ೭೯
ಸಂಜೆಯಾಗುವುದೆಂದಿಗೆ ? ೭೬೬
ಹರಿಹರ ೪೬೬
ಹಸುರು ೭೬೬
ಹಾಡು ೩೬

ಕತೆ-ನಾಟಕ-ಹರಟೆಗಳು

ಕಂಡದ್ದೇ ನಿಜ ೭೬೬
ಕಡೇಪಾಠ ೧೧೬
ಕ್ಯಾನವಾಸರ್ ೧೯೧
ಕಿರುಗತೆಗಳು ೪೭
ಕುದುರೆಯ ಮೀಮಾಂಸೆ ೩೮
ಕುರಿಯ ಮೀಮಾಂಸೆ ೧೬೧
ಕೋಟೆಯಲ್ಲಿ ಗಂಗೂ ೩೬೭
ಕೋಳಿಯ ಮೀಮಾಂಸೆ ೧೬೫
ಗಿಳಿಯ ಮೀಮಾಂಸೆ ೩೫೫
ಗುಪ್ತಜ್ವಾಲೆ ೧೯೯
ಗೌಡರ ಸೊಸಿ ೭೬೯
ಚಂದ್ರಪ್ರವಾಸ ೪೨೩
ಚಿತ್ರಪತಂಗ ೧೦೫
ಜಪಾನದಲ್ಲಿ ಶ್ರೀರಾಮಗೋಪಾಲರವರ ನಾಟ್ಯಪ್ರದರ್ಶನ ೧೬೧
ತಪ್ಪುದಂಡ ೨೦೬
ತಾಹಿತಿಗಳ ಊಟ ೩೬೬
ನಾಟ್ಯಕಲೆ ೨೫೦
ನಾಯಿಯ ಮೀಮಾಂಸೆ ೭೯೪
ನಿಶೆಯು ಎಲ್ಲೆಲ್ಲೂ ೩೦೪
ನೀಲದುಂಗುರ ೩೮೬
ಬದಲಿ ೧೮೦
ಭೀಕರ ಪಾರುಪತ್ಯ ೪೮
ಮತಿಯೋ ಫಾಲಕೋನ್ ೩೪೧
ಮೂಡಲು-ಪಡುವಲು ೧೩೪
ಯಾರ ಮಗು ? ೧೩
ಯೋಗಿರಾಜ ಶ್ರೀಅರವಿಂದರ ದರ್ಶನ ೩೬೧
ವಸಂತರಾಯನ ಮದುವೆ ೪೩೧
ವೀಣೆ ೪೧೯
ಸಾನಿಯ ನಾನು ೪೫೩
ಸಾಹಿತ್ಯವೋ-ಕಲೆಯೋ ? ೨೬೦
ಸಿಂಹನಾದ ೧೬೮
ಸುಶೀಲೆಯ ನಿರ್ಧಾರ ೭೬೧

ಜ್ಞಾನ-ವಿಜ್ಞಾನ

ಅಮೇರಿಕನ್ನರ ಸಂತೋಷಕೂಟಗಳು ೫೫
ಅಮೇರಿಕೆಯಲ್ಲಿ ಬೆಡಗಿನ ಬೇಟೆ ೩೧೩
ಆಕರ್ಷಕತೆ ಎಲ್ಲದೆ ? ೨೨೩
ಇಂಗ್ಲಿಷ್ ಪಂಚಾಂಗದಲ್ಲಿ ಸುಧಾರಣೆ ೫೩
ಉತ್ತರ ಮಹಾಸಾಗರ ಬಿಸಿಯಾಗುತ್ತಿದೆ ! ೩೯೫
ಕತ್ತೆಯ ಹಾಲು ೨೨೫
ಒಂದು ತಲೆ ಹೋದರೆ ಮತ್ತೊಂದು ತಲೆ ! ೩೯೫
ಕಟ್ಟಿಗೆಯಿಂದ ಕಾಜಿನ ನಿರ್ಮಾಣ ! ೩೧೪
ಕರಿ ಜನರಾರು ? ಬಿಳಿ ಜನರಾರು ? ೨೭೪
ಕಲಕತ್ತೆಯ ಕರಿ ಕೋಣೆಯ ಕಥೆ ೪೬೩
ಕೃತ್ರಿಮ ರಕ್ತ ! ೩೧೫
ಕಾಜಿನ ಅರಿವೆ ೨೭೦
ಕಾಮನಬಿಲ್ಲಿನ ಸಿಗರೇಟ ೪೬೬
ಕುಡಿತವನ್ನು ಅಳೆಯಬಹುದು ! ೩೧೪
ಕುಡುಕರ ಆಯುರ್ಮಾನ ೨೨೫
ಕೂತಲ್ಲಿಂದಲೇ ದೂರದ ಗಾಡಿಗಳ ಮೇಲೆ ಲಕ್ಷ್ಯ ೭೧೯
ಚಿಕ್ಕ ಚಲಚ್ಚಿತ್ರಗಳು ೨೨೭
ಜೋಣರ ಹುಚ್ಚುಮಾತುಗಳು ! ೨೭೪
ಜಪಾನದಲ್ಲಿ ಶಿಕ್ಷಣ ೨೭೦
ಜಪಾನದಲ್ಲಿಯ ಸಿನೇಮಾ ಥಿಯೇಟರು [illegible]
ತಪ್ಪು ಹುಡುಕುವವರಿಗೆ ಮೆಚ್ಚು ೩೧೩
ತುರ್ಕಸ್ತಾನದ ಸಮಾಜ ಪ್ರಗತಿ ೨೨೩
ತುರ್ಕಸ್ತಾನದಲ್ಲಿ ಸ್ತ್ರೀಸೈನ್ಯ ೫೯
ತೊದಲುವವರಿಗೆ ವಾಕ್ಕಿ[illegible] ೪೬೫
ದಾಂಪತ್ಯವೃದ್ಧಿಯು ಬುದ್ಧಿವಂತರೆ ? ೨೨೩
ದೊಡ್ಡ ತಲೆತಯ ವಯಸ್ಸು ೨೨೩
ನವ್ವತ್ತು ವರ್ಷವಾಗಿದೆಯೋ ನಿಮಗೆ ? ೨೨೪

ನೀರು ತಾಗದ ಅರಿವೆ!	೩೧೪	ಹೊಗೆ ನುಂಗುವ ಹೊಗೆಗೊಳವೆ	೪೭೫
ನೊಣಗಳಿಗೆ ಬಣ್ಣ ಸೇರುವದಿಲ್ಲ	೩೯೬	ಹೊಗೆಯ ಅನಾಹುತ	೨೨೦
ನೊಣಗಳನ್ನು ಹಿಡಿಯುವ ಕಾಗದ	೨೧೯	ಹೊಗೆಸೊಪ್ಪಿನ ಅನಿಷ್ಟಗಳು	೨೧೯
ಪ್ಯಾರಾಶೂಟ್ಸ	೩೯೭	**ಸಂಚಯ**	
ಪೌರಸ್ತ್ಯ ಸ್ತ್ರೀಯರ ಜಾಗೃತಿ	೫೪	ಕಾಫೀ	೨೨೬
ಫಲಗಳನ್ನು ಪಕ್ವಗೊಳಿಸುವದು	೩೧೪	ಗಿಡಗಳಿಗೆ ಜ್ವರ	೨೨೬
ಬಣ್ಣಗಳ ಇಂದ್ರಜಾಲ	೧೪೬	ನಾಲಿಗೆಯ ನಮಸ್ಕಾರ	೨೨೬
ಬರ್ನಾರ್ಡ ಶಾ ಅವರ ಅನುಭವ	೪೭೫	ಬೂಟಿಗೆ ಮುದ್ದು	೨೨೬
ಬಿಸಿಲನ್ನು ಸೋಸಬಹುದು	೨೨೨	ಮಿಠಾಯಿ	೨೨೬
ಬಿಸಿಹವೆಯಲ್ಲಿ ಗಡ್ಡ ಬೇಗ ಬೆಳೆಯುತ್ತವೆ	೨೨೦	ಸಂಘದೇವ	೨೨೬
ಬೇನೆಗಳನ್ನು ಗುಣಪಡಿಸಲು ಪುಸ್ತಕಗಳು	೪೭೪	ಹೃದಯ ರೋಗ	೨೨೬
ಭಾರತೀಯ ನಾವಿಕ ವಿದ್ಯೆ	೫೭	ಹಾವಿನ ಹೆಡೆ	೨೨೬
ಭೂಮಾತೆಯ ತೂಕ ಬೆಳೆಯುತ್ತಿದೆ	೨೨೨	**ವೀಣಾವಿತಾನ**	
ಮದ್ಯದ ಬಗ್ಗೆ ತಜ್ಞರ ಮತ	೫೫	ಆಧುನಿಕ ಭಾರತ	೩೧೭
ಮಿಂಚಿನ ಕಣ್ಣು	೩೯೬	ಆರ್ಯವೈದ್ಯ	೪೭೯
ಮುಷ್ಕರಗಳಿಂದಾಗುವ ಹಾನಿ	೫೭	INNER CULTURE	೩೧೭
ಮೂಗು ಕಿವಿಗಳ ಕತ್ತಿ	೪೭೬	ಉಡುಗರೆ	೪೭೮
ಮೊಗಲ ಮಹಿಳೆಯರು	೨೨೧	ಓಂಕಾರವ	೧೫೨
ಮೋಡಗಳೊಳಗಿಂದ ಆಚೆ ನೋಡಬಹುದು	೨೨೧	ಕಂದನ ಕವಿತೆ	೪೦
ಯಾಂತ್ರಿಕ ಸೇವಕ	೩೯೪	ಕನ್ನಡ ಕವಾಯಿತು	೪೭೮
ಯುಗೊಸ್ಲಾವಿಕಿಯದ ಮುಸಲ್ಮಾನ ಮಹಿಳೆಯರು	೪೭೪	ಕನ್ನಡ ಕೋಗಿಲೆ	೩೧
ಯುದ್ಧಭೂಮಿಯಲ್ಲಿಯೂ ಫೋಟೋ ತೆಗೆಯಬಹುದು	೨೩೫	ಕರ್ನಾಟಕ ದರ್ಶನ	೨೨೭
ರಕ್ತಪೂರೈಸುವ ಸಂಸ್ಥೆಗಳು!	೩೯೪	ಕರ್ನಾಟಕ ವಿದ್ಯಾಲಯ ಪತ್ರಿಕೆ	೪೦೧
ರಶಿಯದ ಸ್ತ್ರೀಯರು !	೩೯೪	ಕಲ್ಯಾಣ	೪೦೧
ರಾಷ್ಟ್ರೀಯ ಸಾರ್ವಭೌಮತ್ವದ ಜಯಸ್ತಂಭ	೬೧	ಕಿರಣ	೩೧೮
ಲೋಹದ ಒತ್ತುಕರಡು	೩೯೫	किशोर	೪೭೯
ವಿದ್ಯುತ್ತಿನ ಇಕ್ಕಳ	೨೩೦	ಕುಸುಮರಿ	೪೭೮
ವಿಶ್ವಾಮಿತ್ರನ ಸೃಷ್ಟಿ	೧೪೮	ಗಾಳಿಪಟ	೪೭೮
ಶತ್ರುಸೈನಿಕರು ದೇವರಾಗುವರು	೪೭೩	ಚಿತ್ರಸಮಾಚಾರ್	೩೧೭
ಸರ್ಪವಿಷದಿಂದ ಔಷಧ!	೩೯೫	ಜಯಂತಿ	೪೭೯
ಸಾಂಪ್ರದಾಯಿಕ ಮನೋವಿಶ್ಲೇಷಣ	೪೭೫	ಟೆಂವ್ ಟೆಂವ್ ಟೇಂವಕ್ಕಿ	೪೦೧
ಸಾವಿನ ಸ್ವರೂಪದ ನವವಧು (ಸಚಿತ್ರ)	೩೧೫	ತರುಣ ತುರ್ಕಸ್ತಾನ ಅರ್ಥಾತ್ ಕಮಾಲಪಾಶಾ	೪೭೯
ಸಾವೂ ಒಂದು	೩೯೪	ತ್ರಿವೇಣಿ	೧೫೫
ಹಗಲು ರಾತ್ರಿಗಳ ಜೀವನ್ಯೋಗವೇ!	೨೨೫	ತುತೂರಿ	೪೦೦
ಹಲ್ಲುನೋವಿನ ಚರಿತ್ರೆ ಪರಿಹಾರ	೩೯೬	THE KANARA BROTHERHOOD ANNUAL	೧೫೬
ಹಾವನ್ನು ನಿರ್ಜಂತುಗೊಳಿಸುವದು	೪೭೫	THE INTERMEDIATE COLLEGE MAGAZINE	೩೧
ಹಿಂಸ್ರ ಪುಷ್ಪಗಳು	೩೧೩	THE UNIVERSAL BUDDHA SOCIETY	೪೦
	೧೪೮	ದೃಷ್ಟಿಲಾಭ	೨೨೯

ನವಯುಗ ೧೫೪
...ಲೋಕ ೪೭೯
ಪ್ರಭಾತ ೧೫೫
ಪಿಳ್ಳಂಗೋವಿ ೧೫೧
ಪುರಂದರದಾಸರ ಜಾಣ್ಣುಡಿಗಳು ೫೧೬
ಪುನ್ಸಿಲ್ಲದ್ಮದ್ವೆ ೧೫೦
ಮಹಾದೇವಿಯಕ್ಕ ೧೫೭
ಮುದ್ರಣ ಪ್ರಕಾಶ ೪೦೨
MYSORE ASSOCIATION BOMBAY ೪೭೨
MYSORE DASARA EXHIBITION ೧೫೬
...ಷ್ಟ್ರೀಯ ಇತಿಹಾಸ ಪರಿಷತ್ತಿನ ಅಧ್ಯಕ್ಷರ ಭಾಷಣ ೪೦೨
...ರ ಪಥಿಕ ೪೦೨
...ರಣ ಸಾಹಿತ್ಯ ೫೧೬
...ರ ಸುಭಾಸಚಂದ್ರ ಬೋಸ ೪೦೨
SCHOOL OF SPIRITUAL SCIENCE ೪೦೩
...ಗೀತಾಚಾರ್ಯ ೪೦೧
...ಹಂಸ'ದ ಪ್ರೇಮಚಂದ ಸ್ಮೃತಿ ಅಂಕ ೨೫೦
...ಳ್ಳಿಯ ವೈದ್ಯ ೪೭೭

ಸಾಹಿತ್ಯಗೋಷ್ಠಿ

...ನ್ನ ವೃತ್ತಪತ್ರಿಕೆ ೬೫
... ನನ್ನ ಸರ್ವಸ್ವದ ಸುಲಿಗೆಯಾಯಿತು !" ೬೩
...ಜೆಯವರ ಸ್ಮೃತಿ ೧೫೮
...ಖಕರೇ, ವಾಚಕರನ್ನು ಮರೆಯದಿರಿ ! ೧೫೮

ವಿವಿಧ

...ಣೋರಣೀಯಾನ್ ಮಹತೋ ಮಹೀಯಾನ್ ೨೫೭,೫೪೯, ೪೪೦
...ರೋಗ್ಯಬಿಂದು ೨೫೩,೫೪೮,೪೪೮
...ನ್ನಡದ ಮುನ್ನಡೆ ೨೫೫,೫೭೯,೪೦೫,೪೪೧
...ಗಬೇಡಿ ೨೩೨,೨೯೩,೫೭೫,೪೭೯
...ಮ್ಮ ಮಾತು ೪೮,೧೬೩,೫೨೫
...ತ್ರವ್ಯವಹಾರ ೫೨೬
...ದ್ಧಾಂಜಲಿ ೨೫೩
...ದರಸ್ವೀಕಾರ ೭೮,೨೫೬,೪೮೬

ವಿಚಾರವೇದಿಕೆ

...ಮೆರಿಕೆಯೂ ಸ್ಪರ್ಧೆಯ ಬಲಿ ೨೪೩
...ಲುಗಾಡುವ ಅಡಿಗಲ್ಲು ಗಟ್ಟಿಯಾಯಿತು ೨೫೮
...ಹಿಂಸೆಯೊಂದು ಹಿಂಸೆಯಾಗದಿರಲಿ ! ೧೬೧
...ಂಗ್ಲೋ-ಐರಿಷ್ ಸಂಧಾನ ೪೮೨

ಇಂಗ್ಲಂಡಿನಲ್ಲಿ ಸೈನ್ಯಖಾತೆಯ ಪುನರ್ಘಟನೆ ೭೨
ಈಗಲೂ ಕಡೆಗಣ್ಣೆ ? ೨೪೦
ಉತ್ತರಚೀನದ ತರುವಾಯ ಮಧ್ಯಚೀನ ೭೫
ಒಟ್ಟಿನಲ್ಲಿ ಖಂಡಿತವಾಗಿಯೂ ರಾಷ್ಟ್ರವಿಧಾಯಕ ೬೯
ಐಕ್ಯದ ಹೆಸರಿನಲ್ಲಿ ಸಂಕೋಲೆಗಳು ಬೇಡ ೪೮೪
ಐರ್ಲಂಡಿನ ಅಧ್ಯಕ್ಷರು ೪೮೨
ಕದನ ಕೊನೆಗಂಡಿತು; ಆದರೆ— ೨೪೧
ಕನ್ನಡ ಭಗಸಿಯರ ಸಮ್ಮೇಲನ ೭೨
ಕರ್ನಾಟಕದಲ್ಲಿಯ ಕಾಂಗ್ರೆಸ್ ಚುನಾವಣೆ ೧೬೫
ಕೂಲಿಕಾರರ ರಾಜ್ಯದ ಕೊಲೆಗಡಕ ೫೨೪
ಗಾಂಧಿ-ಲಿನ್ಲಿಥ್ಗೊ ಬೆಟ್ಟಿ ೪೮೫
ಜಮಖಂಡಿಯು ಮತ್ತೆ ತಿರುಳ್ಗನ್ನಡ ನಾಡಾಗಲಿ ! ೭೬
ಜಾಗತಿಕ ದೃಷ್ಟಿಕೋನವು ಮರೆಯಾಗದಿರಲಿ ೬೯
ಜಾತೀಯ ಡೊಂಬೆಗಳು ೫೨೪
ಜಿನ್ನಾ ಅವರ ಅಪಲಾಪ ೪೮೫
ತಿರುವಾಂಕೂರಿನ ತರುವಾಯ ಇಂದೂರು ೫೨೪
ದೊರೆಗಳು ತಲೆಯಲ್ಲಾಡಿಸಿದರು ! ೧೬೨
ನಮ್ಮ ಹೋರಾಟ ೫೨೧
ನವನಿರ್ಮಾಣದ ಗೊತ್ತುಗುರಿಗಳು ೨೫೮
ನ್ಯಾಯಮಂದಿರಗಳ ವಿಡಂಬನೆ ೫೨೫
ನಿಜಾಂ ಸಂಸ್ಥಾನದಲ್ಲಿ ನಾಗರಿಕಾಧಿಕಾರಗಳು ೨೪೧
ನೇಕಾರ ಪರಿಷತ್ತು ೭೭
ಪ್ರಜಾಮಂಡಲದ ವರದಿ ೨೪೨
ಪ್ರಾಂತರಚನೆ ಮೊದಲು; ತರುವಾಯ ರಾಷ್ಟ್ರಭಾಷಾ ಪ್ರಸಾರ ೭೫
ಪ್ರೊ. ಡಿ. ಕೆ. ಕರ್ವೆ ೪೫೬
ಬಿಕ್ಕಟ್ಟಿನಿಂದ ಒಕ್ಕಟ್ಟು ೨೫೮
ಭಾಪು ಸರ್ ಸಿಕಂದರ ! ೫೨೫
ಮತಪರಿವರ್ತನೆಯ ಮುಂಗುರುತು ೪೮೫
ಮಂತ್ರಿಮಂಡಲವೂ ಅಲ್ಪಸಂಖ್ಯಾಕರೂ ೧೬೨
ಮದರಾಸಿನ ಮುಸ್ಲಿಂ ಹೆಂಗಳೆಯರು ೪೮೮
ಮುಸ್ಲಿಂ ಲೀಗಿನ ರಾಜಕೀಯ ತತ್ವಜ್ಞಾನ ೫೨೨
ಮುಸೋಲಿನಿಯ ಚಾಣಕ್ಯನೀತಿಗೆ ಗೆಲವು ೨೪೫
ಮೈಸೂರಿಗೆ ಮಂಗಲದಿನಗಳು ೪೮೬
ಯುದ್ಧಸ್ಯ ವಿಗತಜ್ವರಃ ೧೬೧
'ರಾಜಿ'ಯ ದುರಂತ ೧೬೨
ರಾಷ್ಟ್ರಪತಿಗಳ ಅಧ್ಯಕ್ಷ ಭಾಷಣಸಾರ ೨೫೭
ರಾಷ್ಟ್ರೀಯ ಇತಿಹಾಸ ಪರಿಷತ್ತು ೭೧

‘ಲೋಕಮತ’ ವಾರ್ಷಿಕೋತ್ಸವ ೭೮
ವರ್ಧಾ ಶಿಕ್ಷಣಯೋಜನೆ ೬೭
ವಿಜ್ಞಾನಕ್ಕೆ ಪುರಸ್ಕಾರವಿರಲಿ! ೭೦
ಶಸ್ತ್ರಾಸ್ತ್ರ ಕಾನೂನು ಧೂಳಿಮುಕ್ಕಲಿ! ೭೧
ಸಂಘಟನೆಯ ಮೂರಂತಸ್ತುಗಳು ೭೩
ಸಂಯುಕ್ತ ಘಟನೆಯೊಡನೆ ಹೋರಾಟ ೨೪೯
ಸಾಮ್ರಾಜ್ಯಯುದ್ಧವೂ ಹಿಂದುಸ್ತಾನವೂ ೩೪೯
ಸಿಂಗಾಪುರದ ಸೈನಿಕ ಠಾಣ್ಯ ೨೪೨
ಹಡಗುಪಡೆಗಳ ಗುಪ್ತಸ್ಪರ್ಧೆ ೨೪೨
ಹಣಕಾಸಿನ ಪತ್ರಿಕೆಯೂ ಕರ್ನಾಟಕವೂ ೨೪೨
ಹವಣರಿತು ಹಣಿಯಬೇಕು ೨೪೯
ಹಳೆಹಗೆಗಳು ಗೆಳೆಯರಾದರು! ೨೪೩
ಹಿಂದುತ್ವವುಳಿಯಲು ಜಾತಿಯಳಿಯಬೇಕು ೭೪
ಹೊಟ್ಟೆ ತುಂಬಿರುವಾಗಿನ-ಹೊಟ್ಟೆ ಹಸಿದಿರುವಾಗಿನ ಸಾಹಿತ್ಯ ೭೬

ಚಿತ್ರಗಳು

ಅ. ನ. ಕೃಷ್ಣರಾಯರು ೪೬೮
ಅನಾಥ ಬಾಲಿಕಾಶ್ರಮಕ್ಕೆ ಬಂದೆವು... ೪೩೫
ಅಪೆನೈನ ಪರ್ವತಗಳು ಮತ್ತು ‘ಆರ್ಕಿಮಿಡಿಸ್’ ಅಗ್ನಿ ಪರ್ವತ ಕುಂಡ ೪೨೬
ಆಟದ ಯುದ್ಧವೋ, ಯುದ್ಧದ ಆಟವೋ? ೧೯೫
ಆತ್ಮಸಂರಕ್ಷಣೆಯ ವ್ಯಾಯಾಮವನ್ನು ಅಭ್ಯಾಸ ಮಾಡುತ್ತಿರುವುದು ೨೨೮
ಆದ್ಯ ಭಾರತೀಯ ಸ್ವಾತಂತ್ರ್ಯಧ್ವಜ ೯
ಆಸ್ಟ್ರೇಲಿಯದ ವ್ಯಾಯಾಮದ ಒಂದು ದೃಶ್ಯ (ಹೊದಿಕೆ: ಸಂ: ೨) ೧೬೫
ಇಂದ್ರನು ಐರಾವತವನ್ನು ಏರಿಕೊಂಡು ಹೋಗುವ ದೃಶ್ಯ (ನಾಟ್ಯ) ೧೭೧
ಉಪಾಧ್ಯಾಯಿನಿಯು ಕಲಿಸುತ್ತಿರುವ ಆಟಗಳು ೨೫೬
ಉಪಾಧ್ಯಾಯಿನಿಯು ಬಾಲಿಕೆಯರಿಗೆ ಬಡಿಸುವದನ್ನು ಕಲಿಸುತ್ತಿರುವುದು ೨೫೮
ಉಪಾಧ್ಯಾಯನು ಗಣಿತವನ್ನು ಕಲಿಸುತ್ತಿರುವುದು ೨೫೫
ಉಪಾಧ್ಯಾಯರು ಕೊಟ್ಟ ಲೆಕ್ಕಗಳನ್ನು ಮಾಡುತ್ತಿರುವದು ೨೫೬
ಎಸ್. ಕಮಲಾದೇವಿ ಎಂ. ಎ. ೧೩
ಓಜೋಗ್ರಂಥಿಯಿಂದ ಮಿತಿಮೀರಿ ಬೆಳೆದ ಹೆಂಗಸು; ಮತ್ತು ಸೊರಗಿ ಕಡ್ಡಿಯಾದ ಒಬ್ಬ ಗಂಡಸು ೨೭೨
ಕನ್ನಡಿತಿ
ಕಪ್ಪೆಗಳ ಪ್ರಣಯ ೩೦೨,
ಕ್ಲಾರ್ಚೂರ ಎಲ್. ಸಂಜಪ್ಪ
ಕಲ್ಲಿನ ಸ್ನಾಯುಗಳನ್ನು ಬಲಗೊಳಿಸುವ ವ್ಯಾಯಾಮ ೩೭೮,೩
ಕೃಷ್ಣರಾಧಾ ನಾಟ್ಯದ ಒಂದು ದೃಶ್ಯ
ಕಾಂಗಡಾ ಗುಡ್ಡಗಾಡಿನ ‘ಗದ್ದೀ’ ಜನರು
ಕಾಳಾ‘ನಾಗ’ನ ಮೇಲೆ ಆರೂಢನಾದ ಮೈಸೂರ ಸಾಭಿ
ಕುಮಾರಿ ಪದ್ಮಾವತಿ
ಕೆಮಾಲ ಪಾಶಾ
ಕೆರಳಿದ ಸಂಜೆ
ಗಂಗಾ ಆರವೀ ಒಗಿತಿದ್ದು. ಮಾದೇವ ಈಜಾಡುತ್ತಿದ್ದ
ಗೋಮಹಿಷ
ಚಲಚ್ಚಿತ್ರತಾರಕೆ ಲೀಲಾ ಚಿಟ್ನೀಸ
ಚೀನ ರಣಭೂಮಿ
ಜ್ವಾಲಾಮುಖಿ ದೇವಸ್ಥಾನ
ಜಾವಾದೇಶದ ಸೂರಕರ್ತ ನಾಟ್ಯದ ಒಂದು ದೃಶ್ಯ
ತತ್ತಿಗಳ ಗೂಡು
ತಾಡಪತ್ರಿ ರಾಘವಾಚಾರ್ಯರು
ತಾಹಿತಿಗಳ ಮರಳಿನ ಒಲೆ
ದ ಡೀವ್ಯಾಲಿನ ರಾಡಿಮಣ್ಣು ತಲೆಗೊತ್ತಿಕೊಂಡು ಹೊಳಿಗೆ ಕೈಜೋಡಿಸಿದಳು....
ದಿವಂಗತ ವಿಜಯ ಬೆಟಗೇರಿ
ದೇವಪ್ರಾರ್ಥನೆಯ ಒಂದು ದೃಶ್ಯ
ದೊಣ್ಣೆವರಸೆಯನ್ನು ಕಲಿಯಲಿಕ್ಕೆಂದು ಸಾಯಕಲ್ಲುಗ ಮೇಲೆ ಹೋಗುತ್ತಿರುವದು
ಧರ್ಮಶಾಲೆಯ ಡಲ್ಲ್ ಸರೋವರ
ನವೋದಿತ ತುರ್ಕಸ್ತಾನದ ಪ್ರತೀಕ (ಹೊದಿಕೆ ಸಂ. ೧)
‘ನಂದಕುಮಾರ’ದಲ್ಲಿಯ ಕೃಷ್ಣ
ನಾಗಪುರದ ಅಖಿಲಭಾರತೀಯ ಮಹಿಳಾ ಪರಿಷತ್ತು
ನಾಯಿಬೆಕ್ಕು
ಪ್ರಯೋಗಶಾಲೆ
ಪಾಲನಪುರದಿಂದ ಕಾಣುವ ಹಿಮಶಿಖರಗಳು
ಪ್ಯಾರಾಶೂಟ್ಸ್ ೩೯೭,
ಪಿಚುಯಿಟರಿಯಿಂದ ನಾಯಿಯ ತಲೆ ಬೆಳೆದಿರುವದು
ಪಿಚುಯಿಟರಿಯಿಂದ ಮಿತಿಮೀರಿ ಬೆಳೆದ ಹುಡುಗ
ಫಾಕ್ಸ ಕಾಲೇಜ

ಫೋಟೋಗ್ರಾಫರನಿಗೆ 'ಪೋಜ' ಕೊಟ್ಟು.... ೪೩೧
ಲೆ ಒಡ್ಡಿ ಬೇಟೆಗಾಗಿ ಕಾದಿರುವದು ೩೮೦
ಲೆಗೆ ಸಿಕ್ಕ ಜಿಟ್ಟೆಯನ್ನು ಬಂಧಿಸುವುದು ೩೮೧
ಲೆಯು ದಡಕ್ಕೆ ಸೇರುವುದು ೩೬೪
ನಾಲಕ ಬಾಲಿಕೆಯರು ಚಿತ್ರಕೆಲಸದಲ್ಲಿ ತೊಡಗಿರು
ವರು ೨೫೩
ುಕ್ಕಳ ಕೂಟದಲ್ಲಿಯ ಒಂದು ದೃಶ್ಯ ೮೬೨
ುರದುದಿಯಿಂದ ಸಂ. ೪
ಚಕಾಂಗಗಳು ೩೭೨
ಹಾದೇವಿಯಕ್ಕ ೩೨೮
ಸ್ ಮಾಧುರಿ (ಹೊದಿಕೆ ಸಂ. ೬)
ಸೆಸ್ ಲ್ಯೊನಾರ್ಡ ೬೪೯
ನುಗಳನ್ನು ನಿರ್ಮಲಗೊಳಿಸುವ ತ್ರಾಕ್ಷಿ ಹೇಗಸು ೩೬೭
ಸೂರು ಮಹಾರಾಜರು ೨೩೫
ುದ್ಧ ಭೂಮಿಯಲ್ಲಿಯೂ ಫೋಟೋ ತೆಗೆಯಬಹುದು ೨೫
ುವರಾಜ ಕುಮಾರಿಯವರಾದ ವಿಜಯಲಕ್ಷ್ಮಿ ಪ್ಸ್ಮ
ಣ್ಣಿಯವರು ೪೬೪
ುವರಾಜ ಕುಮಾರಿಯವರು ಉತ್ಸವವನ್ನು ಜರುಗಿಸಿ
ಹೊರಗೆ ಬರುತ್ತಿರುವುದು ೪೬೦
ಜಪುರೋಹಿತರು ನಾ. ಶ್ರೀ. ೨೬೪
ಷ್ಟ್ರಪತಿ ಸುಭಾಷಚಂದ್ರ ಬೋಸ (ಹೊದಿಕೆ ಸಂ. ೩) ೨೩೭
ಟ್ಟೇ ಹಣ್ಣಿನ ಗಿಡ ೩೬೬
ಟ್ಟೇ ಕಣ್ಣನ್ನು ಸುಲಿಯುವದು ೩೬೬
ತಾ (ದುಸಿಂಗಾ ಕ್ಯಾ ಕೈ ಮಾಕ್ಷಟ್) ಸಂ. ೫
ರ್ಪರಿಷತ್ತಿಗೆ ಬಂದ ಮುಸಲ್ಮಾನ ಶಿಕ್ಷಣ ತಜ್ಞರು ೬೮
ನರ ಮನುಷ್ಯ ೧೪೮
ಫ್ರಸಿಂಹ ೧೪೯
ರದ ಎತ್ತರವನ್ನು ಹೆಚ್ಚಿಸಿಗೊಳ್ಳುವ ವ್ಯಾಯಾಮ.
೨೭೯
ಅರವಿಂದರು ೩೬೧
ಗಳಾದ ಡಿ.ವಿ.ಜಿ., ಬಿ.ಎಂ., ಶ್ರೀ, ಶ್ರೀನಿವಾಸರು ೨೫
ಬಸವೇಶ್ವರರು ೪೭೦
ವವಾದ ಮೊಸಿನ ಬಲೆ ೩೬೮
ವೋಜ ದ್ವೀಪದ ನವವಧು (ಹೊದಿಕೆ ಸಂ. ೪) ೫
ಫ್ರಿಯಾ ಭಾವಿಯಿಂದ.... (ಹೊದಿಕೆ ಸಂ. ೭)
ಣ್ಣ ಮಕ್ಕಳು ಕಲಿಯುತ್ತಿರುವ ದೊಣ್ಣೆ ವರಸೆಯ
ವ್ಯಾಯಾಮ ೨೫೭

ನಮ್ಮ ಬಳಗ

(ದಯವಿಟ್ಟು ವಾಚಕರು ಈ ಕೆಳಗಿನ ಹೆಸರುಗಳ ಹಿಂದೆ ಶ್ರೀ ಅಥವಾ ಶ್ರೀಮತಿ ಎಂದು ಸಮಂಜಸವಾಗಿ, ಜೋಡಿಸಿಕೊಂಡು ಓದಬೇಕು. ಸಂ.)

"ಈ. ಸಾ." ೯೩,೨೬೦
'ಉಂಡಾಡಿ' ೪೪೧
ಕಮಲಾದೇವಿ ಎಸ್. ೧೩
ಕಲಮದಾನಿ ಜಿ. ಎಸ್. ೨೬೨
ಕೃಷ್ಣರಾಯರು ಅ. ನ. ೯೬೮
ಕೃಷ್ಣಶರ್ಮ ಸಿ. ೮೭
ಕಾಕಾಸಾಹೇಬ ಕಾಲೇಲಕರ ೧೬೮
ಕುಮಾರಿ ಪದ್ಮಾವತಿ ೩೩೫
ಕುಂಚೂರ ನಾ. ಸು. ೩೭೨
ಕುಲಕರ್ಣಿ ಆರ್. ವಿ. ೪೭
ಕುಲಕರ್ಣಿ ಎನ್. ಕೆ. ೧೧
ಖರೆ ಗ. ಹ. ೪೫
ಗೋಪಾಲಕೃಷ್ಣ ಅಡಿಗ ೪೬
ಚಂದ್ರಶೇಖರ ದೇವರು ೪೬೬
ಜವಾಹರಲಾಲ ನೆಹರು ೮೩
ಜೋಗಳೆಕರ ಪಾಂಡುರಂಗರಾಯರು ೪೭೮
ಡಾಕ್ಟರ ಗೋಪಾಲಕೃಷ್ಣರಾವ ೨೧೬,೨೭೧,೩೭೭,೪೪೯
ತಾರಾದಾಸ ೩೮೨
ದತ್ತಾತ್ರೇಯ ಕಟೂರ ೩೮೬
ದೇಸಾಯಿ ಪಾಂಡುರಂಗರಾಯರು ೨೫,೯೭,೧೨೭,೨೪೬
ದೊರೆಸ್ವಾಮಿ ಅಯ್ಯಂಗಾರ್ಯರು ೧೧೬,೧೮೦,೩೪೨
ನಂಜಪ್ಪ ಕೆ. ಎಲ್. ೧೭೧,೨೫೪
ನಂಜುಂಡರಾವ್ ೪೫೩
ನರಸಿಂಹಸ್ವಾಮಿ ಕೆ. ಎಸ್. ೨೭೨
ನಾಗರಿಕ ೩೦,೧೪೩,೧೫೫,೩೦೭,೪೩೪
'ನಿರೀಕ್ಷಕ' ೪೬೦
'ಪರಮೇಶ್ವರ' ೩೭
ಪಿ ಜಿ ಆರ್. ೩೦೧
ಬಸವರಾಜ ಕಟ್ಟೀಮನಿ ೨೭೯
ಭಾರತಸಂಚಾರಿ ಗೋಸಾವಿ ೩೬೧,೪೧೨
ಮಂಗೇಬೆಟ್ಟು ವಾಸುದೇವಾಚಾರ್ಯ ೩೪೯
'ಮನೋವಿಜ್ಞಾನಿ' ೭೦೩
ಮಾಳವಾಡ ಎಸ್. ಎಸ್. ೧೯
'ಮೂರ್ತಿ' ೨೯
ರಂಗನಾಥ ಟಿ. ಕೆ. ೧೧೯

ರವೀಂದ್ರನಾಥ ಮೈತ್ರ ೧೯೧
ರಾಘವಾಚಾರ್ಯರು ಟಿ. ೨೫೦
ರಾಜಪುರೋಹಿತರು ನಾ. ಶ್ರೀ. ೨೬೪
ರಾವ್. ಎಂ. ಜಿ. ೩೮೦
'ರಾಷ್ಟ್ರೀಯ' ೯
ರುದ್ರಭಟ್ಟ ೨೩
ವರದರಾಜರಾವ್ ಜಿ. ೩೭,೨೭೭
ವಾಸುದೇವ ೩೭೦
ವಿಜಯ ಬಿಟಗೇರಿ ೨೦೭
'ವಿಶ್ವವಿಹಾರಿ' ೩೬೬
ವೆಲ್ಸ ಎಚ್. ಜಿ. ೫
"ಶಂಕರತನಯ" ೩೦೪
ಶಂಕರ ನಾರಾಯಣ ವಿದ್ವಾನ್ ೩
ಶಂಕರ ಮಹಾದೇವ ನಾಯಿಕ ೧೦೫

ಶಂಕರರಾಯರು ಜೋಶಿ
ಶ್ಯಾಮಶೆ ೪೮,೧೯೯,೪
ಶ್ರೀಕೃಷ್ಣ ಶಾರದಾ ಮಂಡಲ
'ಶ್ರೀಧರ'
'ಶ್ರೀನಿವಾಸ' ೩೨೭,೪
ಶ್ರೀನಿವಾಸಮೂರ್ತಿ ಟಿ. ಎನ್. ೨೭೬,೩೭೧,೪
ಶ್ರೀಮನ್ನಿರಂಜನ ಮಹಾದೇವ ಸ್ವಾಮಿಗಳು ೩
'ಶ್ರೀರಂಗ' ೩೮,೧೨೧,೧೭೫,೨೯೪,೩
ಸಂಜೀವ ೪೨,
ಸರಾಫ ಡಿ. ಜಿ. ೧
ಸಾಲಿ ರಾಮಚಂದ್ರರಾಯರು ೮೧,
ಸೀತಾರಾಮರಾವ್ ಎಚ್.
ಸುಭದ್ರಾಬಾಯಿ ಜೋಶಿ
'ಹರಟೆಯ ಮಲ್ಲ'



ಪರಿವಿಡಿ

ಕಾಳಾ ನಾಗ'ನ ಮೇಲೆ ಆರೂಢನಾದ ಮೈಸೂರು ಸಾಬಿ (ಮುಖಚಿತ್ರ) ....
ವಾಹನ .... ಸಂಪಾದಕರಿಂದ ೧
ಉಷೆ (ಕವಿತೆ) .... ಶ್ರೀ. ಶಂಕರ ನಾರಾಯಣ, ವಿದ್ವಾನ್ ೩
ನವೀನ ರಣಭೂಮಿ (ಚಿತ್ರಗಳು) ೪
ನಾಳೆಯ ನಾಗರಿಕನ ಶಿಕ್ಷಣಸನ್ನಾಹ .... (ಎಚ್. ಜಿ. ವೆಲ್ಸರವರ ವಿಚಾರಗಳು) ೫
ನಮ್ಮ ನಾಡಿನ ಹಾಡು ಮತ್ತು ನಾಡಗುಡಿ .... 'ರಾಷ್ಟ್ರೀಯ' ೯
ಯಾರ ಮಗು? (ಸಣ್ಣ ಕತೆ) .... ಶ್ರೀಮತಿ ಎಸ್. ಕಮಲಾದೇವಿ ಎಂ. ಎ. ೧೩
ಚಿತ್ರಾಂಗದಾ (ಕಾವ್ಯಾವಲೋಕನ) .... ಪ್ರೊ. ಎಸ್. ಎಸ್. ಮಾಳವಾಡ ಎಂ. ಎ. ೧೯
ನಮ್ಮಲ್ಲಿ ಕಲೆಗಿರುವ ಪ್ರಾಶಸ್ತ್ಯ (ಪ್ರಬಂಧ) ಶ್ರೀ. ರುದ್ರಭಟ್ಟ, ಕರ್ನಾಟಕ ಕವಿಮಂಡಲಿ, ಮಲ್ಲೇಶ್ವರಂ ೨೩
ಬಾದಾಮಿಯ ಚಾಲುಕ್ಯರ ಕಾಲದ ಕಲಾಜೀವನ .... ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ. ೨೫
ವಾಮನ (ಕವಿತೆ) .... 'ಮೂರ್ತಿ' (ಋಷಿ ವ್ಹ್ಯಾಲಿ) ೨೯
ನಿಸರ್ಗಪ್ರವೃತ್ಯಗಳೂ ಜಗತ್ತಿನಲ್ಲಿಯ ಸ್ಥಿತ್ಯಂತರಗಳೂ .... 'ನಾಗರಿಕ' ೩೦
ಹಾಡು (ಕವನ) .... 'ಪರಮೇಶ್ವರ' ೩೨
ಮೌನ (ಕವನ) .... ಶ್ರೀ. ಜಿ. ವರದರಾಜರಾವ್, ಬೆಂಗಳೂರು ೩೭
ಇಡುರಿಯ ಮೀಮಾಂಸೆ (ವಿನೋದ ನಿರ್ಬಂಧ) .... 'ಶ್ರೀರಂಗ' ೩೮
ಒಗಟುಗಳು .... ಸಂಜೀವ ೪೩
ಸಮಂತಭದ್ರನ ಜನ್ಮಗ್ರಾಮವೂ ತಪೋಭೂಮಿಯೂ .... ಶ್ರೀ. ಗ. ಹ. ಖರೆ ೪೫
ಮಳಿಯಲಾರದ ನೆನಹು (ಕವನ) .... ಶ್ರೀ. ಎಮ್. ಗೋಪಾಲಕೃಷ್ಣ ಅಡಿಗ ೪೭
ಮೂರು ತೆರ (ಕವನ).... .... ಶ್ರೀ. ಆರ್. ವಿ. ಕುಲಕರ್ಣಿ ೪೭
ನೇಕರ ಪಾರುಪತ್ಯ (ಸಣ್ಣ ಕತೆ) .... ಶ್ರೀಮತಿ ಸೌ. ಶ್ಯಾಮಲೆ ೪೮
ಜ್ಞಾನ-ವಿಜ್ಞಾನ ೫೩
...ಇಂಗ್ಲಿಷ್ ಪಂಚಾಂಗದಲ್ಲಿ ಸುಧಾರಣೆ—ಪೌರಸ್ತ್ಯ ಸ್ತ್ರೀಯರ ಜಾಗೃತಿ—ಅಮೆರಿಕನ್ನರ ಸಂತೋಷಕೂಟಗಳು— ....
...ಮದ್ಯದ್ದ ಬಗ್ಗೆ ತಜ್ಞರ ಮತ—ಮುಷ್ಕರಗಳಿಂದಾಗುವ ಹಾನಿ—ಭಾರತೀಯ ನಾವಿಕ ವಿದ್ಯೆ—ತೊದಲುವವರಿಗೆ ....
...ವಾಕ್ಸಿದ್ಧಿ—ರಾಷ್ಟ್ರೀಯ ಸಾರ್ವಭೌಮತ್ವದ ಜಯಸ್ತಂಭ ....
ಸಾಹಿತ್ಯಗೋಷ್ಠಿ ೬೩
..."ನನ್ನ ಸರ್ವಸ್ವದ ಸುಲಿಗೆಯಾಯಿತು!"—ನನ್ನ ವೃತ್ತಪತ್ರಿಕೆ—ಸಾಹಿತ್ಯದಿಂದ ಸ್ವಾತಂತ್ರ್ಯಸಂಪಾದನೆ ....
ವಿಚಾರವೇದಿಕೆ ೬೭
...ವರ್ಧಾ ಶಿಕ್ಷಣಯೋಜನೆ—ಒಟ್ಟಿನಲ್ಲಿ ಖಂಡಿತವಾಗಿಯೂ ರಾಷ್ಟ್ರವಿಧಾಯಕ—ಜಾಗತಿಕ ದೃಷ್ಟಿಕೋನವು ಮರೆ ....
...ಯಾಗದಿರಲಿ—ವಿಜ್ಞಾನಕ್ಕೆ ಪುರಸ್ಕಾರವಿರಲಿ!—ರಾಷ್ಟ್ರೀಯ ಇತಿಹಾಸ ಪರಿಷತ್ತು—ಶಸ್ತ್ರಾಸ್ತ್ರ ಕಾನೂನು ....
...ಧೂಳಿಮುಕ್ಕಲಿ!—ಇಂಗ್ಲಂಡಿನಲ್ಲಿ ಸೈನ್ಯಖಾತೆಯ ಪುನರ್ಘಟನೆ—ಉತ್ತರಚೀನದ ತರುವಾಯ ಮಧ್ಯಚೀನ ....
...—ಸಂಘಟನೆಯ ಮೂರಂತಸ್ತುಗಳು—ಹಿಂದುತ್ವವುಳಿಯಲು ಜಾತಿಯಳಿಯಬೇಕು—ಪ್ರಾಂತರಚನೆ ಮೊದಲು; ....
...ತರುವಾಯ ರಾಷ್ಟ್ರಭಾಷಾಪ್ರಸಾರ—ಹೊಟ್ಟೆ ತುಂಬಿರುವಾಗಿನ - ಹೊಟ್ಟೆ ಹಸಿದಿರುವಾಗಿನ ಸಾಹಿತ್ಯ ....
...—ಜಮಖಂಡಿಯು ಮತ್ತೆ ತಿರುಳ್ಗನ್ನಡನಾಡಾಗಲಿ—ನೇಕಾರ ಪರಿಷತ್ತು—ಕನ್ನಡ ಭಗಿನಿಯರ ಸಮ್ಮೇಲನ ....
...—'ಲೋಕಮತ' ವಾರ್ಷಿಕೋತ್ಸವ ....
ಸಾದರಸ್ವೀಕಾರ ೭೮


ಮುಂಬರುವ ಲೇಖನಗಳು

ನಾಗಜನಾಂಗ
ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ.


ಸ್ವಪ್ನಸೃಷ್ಟಿ
ಮನೋವಿಜ್ಞಾನಿ

ಭೀಮಕವಿಯ ಬಸವಪುರಾಣ
ಶ್ರೀ. ಎಸ್. ಕೆ. ಕುಲಕರ್ಣಿ ಬಿ. ಎ. (ಆನರ್ಸ)

ಉದಾರರ ವಕಾಲತ್ತು
ಲಿನ್ ಯೂಟಂಗ್ (ಪ್ರಸಿದ್ಧ ಚೀನೀ ಲೇಖಕರು)


ಬಿಡುವಿನ ಹೊತ್ತನ್ನು ಆನಂದದಲ್ಲಿ ಕಳೆಯಲು
TRADE MARK
GOPAL FLUTE
REGISTERED
ಮತ್ತು
TRADE MARK
GOPAL PHONE
REGISTERED
ನಿಮ್ಮ
ಅಗತ್ಯ
GOPAL SAKHARAM & Co.
ಇದಲ್ಲದೆ ಮುಂಬಯಿಯಲ್ಲಿ ದೊರೆಯುವ ಬೇರೆ ಎಲ್ಲ ಬಗೆಯ ಮಾಲನ್ನು ಅಲ್ಪ ಕಮಿಶನ್ನಿನ ಮೇಲೆ,
ಅಗ್ಗವಾಗಿ
ಅತ್ಯಂತ
ಯಿಂದ ಮತ್ತು
ಸರಿಯಾಗಿ
ಹೆಚ್ಚಿನ ವಿವರಗಳಿಗಾಗಿ ಹೊಸ ದೊಡ್ಡ ೧೦೦ ಪುಟಗಳ ಸಚಿತ್ರ ಮರಾಠಿ ಕ್ಯಾಟಲಾಗನ್ನು, ೨ ಆಣೆಯ ಅಂಚೇಚೀಟಿ ಕಳಿಸಿದಲ್ಲಿ ಉಚಿತವಾಗಿ ಕಳಿಸಲಾ
ಗೋಪಾಳ ಸಖಾರಾಮ ಮತ್ತು ಕಂಪನಿ,
೩೯೭-೯೯ ಕಾಳಬಾದೇವಿ
ಮುಂಬಯಿ ನಂ. ೨.


SHREENIVAS & Co
HOME OF ART, IDEAS & INDUSTRIES
ARTISTS & DESIGNERS.
Beautiful & Faithful - Reproductions.
BY
OUR PERFECT LINE, HALF-TONE & COLOUR PROCESS.
-THE PREMIER-
Karnataka
PHOTO ENGRAVERS
- Malamaddi, DHARWAR.



'ಕಾಳಾ ನಾಗ'ನ ಮೇಲೆ ಆರೂಢನಾದ
ಮೈಸೂರು ಸಾಬಿ



ಸಂಪುಟ ೧೬ | ಈಶ್ವರ ಸಂವತ್ಸರದ ಮಾರ್ಗಶಿರ ಅಮಾವಾಸ್ಯೆ (೧-೧-೧೯೩೮) | ಸಂಚಿಕೆ ೧

ಆ ವಾ ಹ ನ

ನೂತನವರ್ಷಾರಂಭದ ಸಮಯದಲ್ಲಿ ಆದೀಗ ಗತಿಸಿದ ವರ್ಷದ ಪ್ರಯತ್ನ-ಪರಿಶ್ರಮಗಳನ್ನು ಒಂದು ಮುಹೂರ್ತ ಮಾತ್ರ ಅವಲೋಕಿಸಿ, ಮುಂದಣ ವರ್ಷದ ಕನಸು-ಕನವರಿಕೆಗಳನ್ನು ಹೇಳುವುದರಲ್ಲಿ ಒಂದು ಔಚಿತ್ಯವಿದೆ. ಹಾಗೆಂದ ಮಾತ್ರಕ್ಕೆ ಕಳೆದ ವರ್ಷದ ಲೇಖನಾದಿಗಳ 'ಲಾಭ-ಹಾನಿಯ ಪತ್ರಿಕೆ'ಯನ್ನು ವಿವರವಾಗಿ ಬಿಚ್ಚಿಟ್ಟು, ಬರುವ ವರ್ಷದ 'ಮುಂಗಡ ಪತ್ರಿಕೆ'ಯನ್ನು ವಿಸ್ತೃತವಾಗಿ ಮಂಡಿಸುವ ಗೋಜಿಗೆ ನಾವು ಹೋಗುವುದಿಲ್ಲ. ಆ ಕೆಲಸವನ್ನು ವಾಚಕರಿಗೇ ಬಿಟ್ಟುಕೊಡುವುದು ಒಳ್ಳೆಯದು. ಸಾರವನ್ನು ಸ್ವೀಕರಿಸಿ, ಸಿಪ್ಪೆಯನ್ನು ಎಸೆದುಬಿಡುವ ಕೆಲಸವನ್ನು ಅವರಷ್ಟು ಚೆನ್ನಾಗಿ ಇನ್ನಾರೂ ಮಾಡಲಾರರು. ಆದರೆ ಜ.ಕ.ದ ಲೇಖನಾದಿಗಳ ಮೂಲಕ, ನಮ್ಮ ನಾಡಿನ ಸೇವೆಯ ಒಂದು ಸ್ಪಷ್ಟ ಉದ್ದಿಷ್ಟವನ್ನು ನಾವಿಟ್ಟುಕೊಂಡಿದ್ದೇವೆಂದು ಇಲ್ಲಿ ಹೇಳಬಯಸುತ್ತೇವೆ.

* * * * *

ಕನ್ನಡನಾಡು-ಕನ್ನಡನುಡಿಗಳು (ಮತ್ತು ತನ್ಮೂಲಕವಾಗಿ ಭಾರತವರ್ಷವು) ಸರ್ವತೋಮುಖವಾದ ಉನ್ನತಿಯನ್ನೈದಬೇಕು ಎಂಬ ಬಗ್ಗೆ ಕಳೆದ ೧೫ ವರ್ಷಗಳಿಂದ 'ಜಯಕರ್ನಾಟಕ'ವು ಪರಿತಪಿಸುತ್ತಲಿದ್ದುದು ಎಲ್ಲರಿಗೂ ವಿದಿತವಾದ ವಿಷಯವೆ ಆಗಿದೆ. ಏಕೀಕರಣ, ಭಾಷೋನ್ನತಿ, ಸಂಸ್ಕೃತಿನಿರೂಪಣ, ನಾಡುನುಡಿಗಳ ಹಕ್ಕುಗಳಿಗಾಗಿ ಅತಂದ್ರಿತ ಆಂದೋಲನ—ಇವುಗಳಿಗಾಗಿ ಜ.ಕ.ವು ಮಾಡಿದ-ಮಾಡುತ್ತಲಿದ್ದ ಪರಿಶ್ರಮವನ್ನು ವಿಸ್ತಾರವಾಗಿ ಹೇಳಬೇಕಾಗಿಲ್ಲ. ಆದರೆ ಇವುಗಳ ಹೊರತು ಒಂದು ಹೆಚ್ಚಿನ ಮಾತನ್ನು ಇಲ್ಲಿ ಹೇಳಬಯಸುತ್ತೇವೆ. ದಿನದಿನಕ್ಕೂ ಮುಂದುವರಿಯುತ್ತಿರುವ ಜಗತ್ತಿನ ನಾಡಿಯನ್ನು ಕಂಡುಹಿಡಿದು, ಆ ಸ್ಪಂದನವನ್ನು ವಿವಿಧ ಲೇಖನಾದಿಗಳ ಮೂಲಕ ಜ.ಕ.ದ ವಾಚಕರಿಗೆ ಅರುಹಲೆತ್ನಿಸುವುದೆ ನಮ್ಮ ಸಂಪಾದಕೀಯ ನೀತಿಯ ಸೂತ್ರವಾಗಿದೆ. 'ಇದನ್ನೆಲ್ಲಿ ಮಾಡಿದ್ದೀರಿ?—ಯಾವ ಲೇಖನ-ಚಿತ್ರಗಳ ಮೂಲಕ?'.... ಎಂದು ಕೇಳುವವರಿಗೆ ನಾವಿಷ್ಟೆ ಹೇಳಬಯಸುತ್ತೇವೆ: 'ನಾವು ಕೈಯೆತ್ತಿ ತೋರಿಸಲಾರೆವು. ಆದರೆ ಆ ಉದ್ದೇಶದಿಂದಲೆ ನಮ್ಮ ಪ್ರಯತ್ನಗಳೆಲ್ಲ ಸ್ಫೂರ್ತಿಗೊಂಡಿವೆ; ಅದುವೆ ನಮ್ಮ ಕರ್ತವ್ಯದ ದಿಕ್ಕನ್ನು ತೋರಿಸುವ ಚುಕ್ಕೆಯಾಗಿದೆ; ಆದು ನಿಮಗೂ ಸ್ಫುರಿಸಿದರೆ ನಮ್ಮ ಆಶೋತ್ತರಗಳು ಈಡೇರಿದಂತೆಯೆ.'

ನಾವು ಆಧುನಿಕ ವಿಚಾರಗಳನ್ನು ಅರಿಯಬೇಕು, ಸ್ವೀಕರಿಸಬೇಕು, ಸ್ವಾಗತಿಸಬೇಕು. ಅದೊಂದು ಪ್ರ
ಜ್ಞಾನಸಮೀರ. ಹಳೆಯದನ್ನೆ ನೆನೆನೆನೆದು, ನಿಂತ ನೆಲದಲ್ಲಿಯೆ ಆಳವಾಗಿ ಬೇರುಬಿಟ್ಟು, ನಾನೆಷ್ಟು ಬೆಳೆದಿದ್ದೆ
ಎಂದು ಸಮಾಧಾನಪಟ್ಟುಕೊಂಡಿರುವುದು ತಿಳಿಗೇಡಿತನ. ಹಾಗೆಂದ ಮಾತ್ರಕ್ಕೆ ಹಳೆಯದನ್ನೆಲ್ಲ ಏಳುಕಡಲುಗಳ
ಎತ್ತಿ ತೂರಬೇಕು ಎಂದು ನಾವು ಹೇಳುತ್ತಿಲ್ಲ. ಪಡುವಲಗಾಳಿ ಬೀಸುತ್ತಿದೆ. ಹಳೆಯದರೊಳಗಿನ ಹುರು
ಉಳಿಯುವುದು, ಜೊಳ್ಳೆಲ್ಲ ಹಾರಿಹೋಗುವುದು. ನಮ್ಮ ಕಿಟಕಿ-ಬಾಗಿಲುಗಳನ್ನೆಲ್ಲ ಮುಚ್ಚಿ, ಹೊರಗಿನ ವಿಚಾರಗಳ
ಸೋಂಕದಂತೆ ಕುಳ್ಳಿರಲು ಬಯಸಿದರೆ, ಆ ಝುಂಝಾವಾತವು ನಮ್ಮ ಮನೆಮಾಳಿಗೆಗಳೊಡನೆ ನಮ್ಮನ್ನೂ ಹಾ
ಒಯ್ದೀತು. ಆಧುನಿಕ ಜೀವನಶಕ್ತಿಯ ನವ್ಯತೆ-ಭವ್ಯತೆಯನ್ನು, ಧೀರತೆ-ಚಾರುತೆಯನ್ನು, ಕ್ರೂರತೆ-ಘೋರತೆಯ
ನಾವು ಅರಿತಿರುವೆವೆ ? ಅದು ಸೌಮ್ಯಸೋಮನಂತೆಯೂ ಇದೆ, ಭೀಮಭೌಮನಂತೆಯೂ ಇದೆ. ಅದರಲ್ಲಿ ಮಾನುಷತೆ
ಇದೆ, ಅಮಾನುಷತೆಯೂ ಇದೆ. ಆ ಎರಡೂ ಪರಿಗಳನ್ನು ಅರಿಯುವುದು ನಮ್ಮ ಕರ್ತವ್ಯ. ಶ್ರೀ ಅರವಿಂದರು ಒಂದೆ
ಅಂದಿರುವಂತೆ, ಕಾಲೌಘದ ಮೇಲೆ ಕಣ್ಣುಮುಚ್ಚಿ ಪದ್ಮಾಸನಹಾಕಿ, ತಾನಿದ್ದಲ್ಲಿಯೆ ಇರುವೆನೆಂದು ಭ್ರಮಿಸಿದ ಯೋ
ರಾಜನಂತೆ ನಾವಿದ್ದೇವೆ. ನಾವು ಜ್ವಾಲಾಮುಖಿಯ ಮುಖದ ಮೇಲೆ ಸುಖಾಸೀನರಾಗಿರುವೆವೆಂಬುದನ್ನು ತಿಳಿದಿರುವ
ಜಗತ್ತಿಗೆ ಜಗತ್ತೆ ಅನಿರ್ವಚನೀಯವಾದ ಚೈತನ್ಯದಿಂದ ಸ್ಪಂದಿಸುತ್ತಿದೆ. ಜಪಾನದ ತೋಪು-ತುಬಾಕಿಗಳ ಗಡಗಡಾ
ಚೀನದ ಸುಖಜೀವನವನ್ನು ಇಂದು ಕೆಡಿಸಿದೆಯಾದರೆ, ನಾಳೆ ಹಿಂದುಸ್ತಾನದ ಮೂಡಲ ಅಗಸೆಬಾಗಿಲಿಗೂ ಬಂದು ತ
ಬಹುದು. ಇಟಲಿಯ ವಿಮಾನಗಳು ಅಬಿಸೀನಿಯದ ಮಂಜುವೆಟ್ಟಗಳ ನಿಲ್ದಾಣದಿಂದ ಹಾರಿಬಂದು ಕರಾಚಿ-ಮುಂಬಯಿ
ಮೇಲೆ ಸುಳಿದಾಡಬಹುದು. ಇದೆಲ್ಲವನ್ನೂ ತಿಳಿಯೋಣ. ನಮ್ಮ ಸುರಕ್ಷಿತತೆಯ ದೃಷ್ಟಿಯಿಂದಲಾದರೂ ಗೊತ್ತುಮಾ
ಕೊಳ್ಳೋಣ. ಪಾಶ್ಚಾತ್ಯನಾಗರಿಕತೆಯ ಭಯಂಕರ ಆಘಾತದಿಂದ ತಪ್ಪಿಸಿಕೊಳ್ಳುವ ಇಚ್ಛೆಯಿಂದಲಾದರೂ ಅದರ ರೂಪರೆ
ಗಳನ್ನು ಅರಿಯೋಣ. ನಗ್ನತಾಸಂಪ್ರದಾಯ, ಸಹಚರವಿವಾಹ, ಸಂಘಸ್ವಾಮ್ಯವಾದ, ವಿಜ್ಞಾನಸಿದ್ಧಿಯಿಂದ ಕರತಲಗತವಾ
ಅಕಲ್ಪಿತ ಸುಖಸಾಧನಗಳು—ಈ ಮೊದಲಾದ ಅದರ ಸ್ವಚ್ಛಂದ ವಿಲಾಸಗಳು ಕ್ಷಣಹೊತ್ತು ನಮ್ಮನ್ನು ದಿಗ್ಭ್ರಾಂತಗೊ
ಬಹುದು; ಆದರೆ ಅವೆಲ್ಲ ಅದರ ಚೈತನ್ಯೋರ್ಮಿಯ ತೆರೆನೊರೆಗಳು ಮಾತ್ರ, ಎಂದು ನಾವು ಅರಿಯಬೇಕು. ಇ
ಮಾನವಕುಲಸಂಹಾರಕವಾಗಿ ತೋರುವ ಅದರ ಶಕ್ತಿಯಲ್ಲಿ ಮಾನವಕುಲತಾರಕ ಸಂದೇಶವೂ ಅಡಗಿಲ್ಲದೆ ಇಲ್ಲ. ನ
ದೇಶದಲ್ಲಿ ನಡೆದ ಆಂದೋಲನವು ಆ ಜಾಗತಿಕ ಆಂದೋಲನದ ಒಂದಂಶ ಮಾತ್ರ. ಮ. ಗಾಂಧಿಯವರ ದಲಿತವ
ವಿಮೋಚನೆಯ ಮತ್ತು ನವಶಿಕ್ಷಣದ ಚಳವಳಿಯಲ್ಲಿ ಆ ಜಾಗತಿಕ ಆಂದೋಲನದ ಅಂಶಾವತಾರವು ಕಾಣಿಸಿಕೊಳ್ಳುತ್ತಿ
ಭಾರತೀಯ ಸಂಸ್ಕೃತಿಯ ಸಾತ್ತ್ವಿಕತೆಯ ತಳಹದಿಯ ಮೇಲೆ ಪಾಶ್ಚಾತ್ಯ ವೈಜ್ಞಾನಿಕ ಸಂಸ್ಕೃತಿಯ ಮರ್ಮವನಿ
ಸಾರ್ವತ್ರಿಕ-ಸುಖ-ಜ್ಞಾನ-ಪ್ರಸಾರದ ಸುಂದರ ಮಂದಿರವನ್ನು ಕಟ್ಟುವ ಕೆಲಸಕ್ಕೆ ನಾವು ಕನ್ನಡಿಗರು ಇಂದಿನಿಂದಲೆ ಟೊ
ಕಟ್ಟೋಣ. ಕಣ್ಣುಮುಚ್ಚಿಸುವ ಕುರುಡ ವೇದಾಂತವು ನಮಗೆ ಬೇಡ. ನಮ್ಮ ಕಣ್ಣುಗಳನ್ನು ಹಿಗ್ಗಿಸಿ ನೋಡಿದಮ
ನಮ್ಮ ಸ್ವತ್ವದ ಅರಿವು ನಮಗಾದೀತು; ಸುತ್ತಲಿನ ಸನ್ನಿವೇಶದಲ್ಲಿ ನಮ್ಮ ಸ್ಥಾನಮಾನವೇನೆಂಬುದರ ಪರಿವೆ ಹುಟ್ಟೀತ
ತಲೆತಲಾಂತರದಿಂದ ಜ್ಞಾನದ ಉಪಾಸನೆಯನ್ನು ಮಾಡಿರುವೆವು. ಇಂದು ಕೊಂಚ ವಿಜ್ಞಾನದ ಆರಾಧನೆಯನ್
ಕೈಕೊಳ್ಳೋಣ. ಮಾನವನು ಪರಿಸ್ಥಿತಿಯ ಗುಲಾಮನಲ್ಲ, ಸಾರ್ವಭೌಮನು ಎಂದು ವಿಜ್ಞಾನವಿಂದು ಕಿವಿಯು ಗಡಚಿಕ
ವಂತೆ ಕೂಗಿಹೇಳುತ್ತಿದೆ. ಅದನ್ನು ಕೇಳಿ ತಿಳಿದುಕೊಳ್ಳುವಷ್ಟು ಸಾಮರ್ಥ್ಯಶಾಲಿಗಳಾಗೋಣ. ಕನ್ನಡನಾಡು
ವಿಜ್ಞಾನಸೂರ್ಯನಿಂದ ಪ್ರಕಾಶಿತವಾಗಿ ಕಳೆಗೊಳ್ಳಲಿ, ಜಯಕರ್ನಾಟಕವು ತನ್ನ ಶಕ್ತಿಯಿದ್ದಮಟ್ಟಿಗೂ ಆ ಪ್ರಕಾಶ
ವಾಹಕವಾಗಲಿ, ಹಾಗೆ ಶಕ್ತವಾಗುವಂತೆ ಕನ್ನಡಿಗರೆಲ್ಲರೂ ಅದಕ್ಕೆ ನೆರವಾಗಲಿ ಎಂಬುದೆ ನಮ್ಮ ಹಾರೈಕೆ.

ಕನ್ನಡಿಗರಡಿಯಾಳು

ಬೆಳಗಾವಿ ರಾಮಚಂದ್ರರಾಯ

ಉಷೆ

ಮೂಡಣ
ಬಾನಿನ
ಕರೆ ನಗಲು,
ಕತ್ತಲೆ-
ನೊತ್ತವೆ
ಪರಿದುಗಲು,— ೧

ಉಷೆರಮೆ
ಸಿಶಿರಮೆ-
ಯನು ಜಯಿಸಿ,
ಮುಂದಕೆ
ಬಂದಳು
ಭವಿ ಹರಿಸಿ! ೨

ಕತ್ತಲೆ-
ಕಡಲಲಿ
ತೆರೆ ಮುಳುಗಿ,
ನಿಶ್ಚೇ-
ಷ್ಟಿತವಾ-
ಗಿರಲುಡುಗಿ,— ೩

'ಬೆಳಕಿನ
ತಿಳಿವನು
ಕರುಣಿಸುತ,
ಎಬ್ಬಿಸು-
ತಿರುವಳು
ನಸುನಗುತ! ೪

ಹೊಸದಾ-
ಗರಳಿದ
ತಾವರೆವೋಲ್
'ಲಕ-ಲಕ'
ಹೊಳೆವಳು
ಉಷೆಯಿನಳು! ೫

ಮುಗುವಿನ
ನಿರ್ವ್ಯಾ-
ಜ ಸ್ಮಿತವೋಲ್
'ಕಿಲ-ಕಿಲ'
ನಗುವಳು
ಉಷೆಯಿವಳು!! ೬

ಈ ವರೆ-
ಗಾದರೆ
ತೆರೆದಿರುವ
ಚುಕ್ಕಿಗ-
ಳಾಲಿಯ
ನಭ ವಧುವ— ೭

ಕಣ್ಣವೆ
ಕೀಲಿಸಿ,
ಕರಿ ಹೊದಿಕೆ
ತೆಗೆಯುತ,
ಕೊಟ್ಟಳು
ಬಿಳಿ ಹೊದಿಕೆ. ೮

ಅರುಣನ
ರೌದ್ರದ
ರಕ್ತತೆಯು,
ಸೂರ್ಯನ
ಪ್ರೋಜ್ವಲ
ಪ್ರಖರತೆಯು,— ೯

ಉಷೆಯಲಿ
ಬೆಸೆಯದು;
ಶಾಂತತೆಯ
ಮಾರ್ದವ-
ವೆಸೆವುದು
ಸೌಮ್ಯತೆಯು! ೧೦

ಅರುಣನ
ಭಗಿನಿಯು
ಉಷೆ ತರುಣಿ!
ನೇಸರ
ಮಾತೆಯು
ಉಷೆ ರಮಣಿ!! ೧೧

ಮಗನನು
ಪಡೆಯುತ,
'ಈ ಜಗದ
ಸೇವೆಯ
ನೆಸಗೆಂ-'
ದಾಪರದ— ೧೨

ಹರಕೆಯ-
ನರುಹುತ
ತಾಯ್ತನದ
ತನ್ನಧಿ-
ಕಾರದಿ
ನೆರೆವ ಮುದ! ೧೩

ಎಂದೋ
ಹಿಂದಿನ
ಕಾಲದಲಿ,
ಜಗದಲಿ
ಜೀವಿಯ
ಶೂನ್ಯದಲಿ,— ೧೪


ಅಂಥ ತ-
ಮಸ್ಸಿನ
ಸಮಯದಲಿ,
ಮೊಡವಿಗೆ
ಸರ್ವ-
ಪ್ರಥಮದಲಿ,— ೧೫

ಬೆಳಕಿನ
ಅನುಭವ-
ವಾರಿಂದ?
ಉಸೆವೆಳ-
ಕಿನ ಕಿರು-
ಗೆರೆಯಿಂದ! ೧೬

ಅಂದಿಂ-
ದೀ ವರೆ-
ಗಾ ಉಷೆಯು
ನಿತ್ಯ ಸ-
ನಾತನೆ-
ಯಾಗಿಹಳು! ೧೭

—ಶ್ರೀ. ಶಂಕರ ನಾರಾಯಣ, ವಿದ್ವಾನ್,
ಅಮ್ಮೆಂಬಳ (ದ. ಕ.)

ಚೀನ ರಣಭೂಮಿ



ಶಾಂಘಾಯ ಸಂರಕ್ಷಕದಲದಲ್ಲಿ ಚೀನೀ ವೀರಾಂಗನೆಯರು

ಈ ಚೀನೀ ವನಿತೆಯರು ಸೈನಿಕ ಕವಾಯಿತಿನಲ್ಲಿ ತರಬೇತಾಗಿದ್ದಾರೆ. ಶಾಂಘಾಯದ ಪ್ರೊಸು ವಿಭಾಗವನ್ನು ಸಂರಕ್ಷಿಸುವ ಕೆಲಸದಲ್ಲಿ ಇವರನ್ನು ನಿಯಮಿಸಲಾಗಿತ್ತು. ಚೀನಿಯರ ಪರಂಪರಾಗತ ಕಲ್ಪನೆಗೆ ಇದು ಸರಿಹೋಗದಿದ್ದರೂ ಮಾದಾಮು ಸನ್-ಯತ್-ಸೇನಳು 'ನವ ಚೀನ' ಚಳವಳಿಯ ಅಂಗವಾಗಿ ಸ್ತ್ರೀಯರಿಗೆ ಪೋಲೀಸ ಮತ್ತು ಸೈನಿಕದಲದ ಶಿಕ್ಷಣ ಕೊಡುವ ಏರ್ಪಾಡು ಮಾಡಿದಳು.

'ಪಾಒಆಂತುಯಿ'ಯೆಂದರೆ 'ಶಾಂತಿ ಸಂರಕ್ಷಕದಲ.' ಇದರ ಸದಸ್ಯರ ಸ್ವದೇಶಾಭಿಮಾನವು ಅತ್ಯುಜ್ವಲವಾದುದು; ಶತ್ರುವಿಗೆ ಒಂದಂಗುಲ ನೆಲವನ್ನೂ ಆಕ್ರಮಿಸಗೊಡಲಿಕ್ಕಿಲ್ಲವೆಂದೂ ಅಂತಹ ಸಂದರ್ಭದಲ್ಲಿ ಪ್ರಾಣಾರ್ಪಣೆಯನ್ನೂ ಮಾಡುವುದೆಂದೂ ಇವರು ಪ್ರತಿಜ್ಞೆಯನ್ನು ಮಾಡಿರುವರು.



ಶಾಂತಿ ಸಂರಕ್ಷಕ ಪಥಕದ ವೀರಭಟರು

ನಾಳೆಯ ನಾಗರಿಕನ ಶಿಕ್ಷಣ ಸನ್ನಾಹ

(ಎಚ್. ಜಿ. ವೆಲ್ಸರವರ ವಿಚಾರಗಳು)

ದೇಶದೇಶಗಳಲ್ಲಿಯ ಅಶಾಂತಿ ಹೇಗೆ ತೊಲಗೀತು? ವಿದ್ಯಾರ್ಥಿಯು ಜಗತ್ತಿನ ವಿಶಾಲ ದೃಷ್ಟಿಕೋನವನ್ನುಳ್ಳ ಕಾರ್ಯಕ್ಷಮ ಸುಜ್ಞಾನಯುತ ನಾಗರಿಕನು ಹೇಗಾದಾನು?—ಎಂಬೀ ಸಮಸ್ಯೆಗಳಿಗೆ ವಿಖ್ಯಾತ ವಿಚಾರಿಗಳಾದ ಎಚ್.ಜಿ. ವೆಲ್ಸರವರ ಉತ್ತರವೆಂದರೆ, ಒಂದೇ ತಳಹದಿಯ ಮೇಲೆ ಜ್ಞಾನೋಪಾಸನೆಯು ಸಾಗುವಂತೆ ಮಾಡುವುದು. ಈ ಕಲ್ಪನೆಯನ್ನು ಅವರು ವಿವರಿಸಿರುವರಲ್ಲದೆ, ಅದಕ್ಕೆ ಅವಶ್ಯಕವಾದ ಶಿಕ್ಷಣಕ್ರಮವನ್ನೂ ಸೂಚಿಸಿರುವರು. ಈವೊತ್ತು ಹಿಂದುಸ್ತಾನದಲ್ಲೆಲ್ಲ ನಡೆದ ಶಿಕ್ಷಣಚರ್ಚೆಯ ಕಾಲಕ್ಕೆ ಈ ಲೇಖವು ತುಂಬಾ ವಿಚಾರಪ್ರಚೋದಕವಾಗದಿರದು.

ಜಗತ್ತಿನಲ್ಲಿಯ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿಯ ಆಗುಹೋಗುಗಳ ಬಗ್ಗೆ ಒಳ್ಳೊಳ್ಳೆಯ ಪ್ರತಿಷ್ಠಿತ ಜನರಲ್ಲಿಯೂ ಅಗಾಧವಾದ ಅಜ್ಞಾನವು ನೆಲಸಿದೆ; ಇಂದಿನ ಜಗದ್ವ್ಯಾಪಿಯಾದ ಅಶಾಂತಿಗೂ ಅಸಾಮರಸ್ಯಕ್ಕೂ ಇದೇ ಕಾರಣವಾಗಿದೆ. ಎಲ್ಲಾ ಕಡೆ ರೂಢವಾಗಿರುವ 'ಪ್ರಾಥಮಿಕ ಶಿಕ್ಷಣ'ವು ನಿಜವಾದ ಶಿಕ್ಷಣವೇ ಅಲ್ಲವೆಂದು ನನ್ನ ಅಭಿಪ್ರಾಯ; ಯಾಕೆಂದರೆ ವ್ಯಕ್ತಿಗೆ ಸದ್ಯಃಸ್ಥಿತಿಯ ಸಮರ್ಪಕ ಜ್ಞಾನವನ್ನು ಅದು ಒದಗಿಸುವುದೇ ಇಲ್ಲ. ಆದುದರಿಂದ ಸದ್ಯಃಸ್ಥಿತಿಯ ಸರಿಯಾದ ತಿಳಿವಳಿಕೆಯನ್ನು ಮಾಡಿಕೊಡುವ ಜ್ಞಾನಭಾಗವನ್ನು ಕುರಿತೇ ಹೆಚ್ಚಾಗಿ ಹೇಳಬೇಕೆಂದು ಮಾಡಿರುವೆನು.

ಸಮಕಾಲೀನ ಪರಿಸ್ಥಿತಿಯಲ್ಲಿ ಬೇರೆ ಬೇರೆ ದೇಶಗಳಲ್ಲಿಯ ಜನರ ವಿಚಾರಗಳಲ್ಲಿಯೂ ಸಂಸ್ಕಾರಗಳಲ್ಲಿಯೂ ಏಕಸ್ವರವು ಹೊರಡುವಂತೆ ಮಾಡುವ ಒಂದೇ ಒಂದು ಉಪಾಯವೆಂದರೆ, ವಿದ್ಯಾರ್ಥಿದಶೆಯಲ್ಲಿ ಒಂದೇ ತಳಹದಿಯ ಮೇಲೆ ಜ್ಞಾನೋಪಾಸನೆಯು ಸಾಗುವಂತೆ ಮಾಡುವುದು. ಯೌವನವು ಪ್ರಾಪ್ತವಾದೊಡನೆ ಶಿಕ್ಷಣಕ್ಕೆ ಪೂರ್ಣವಿರಾಮ ಕೊಡುವುದೆಂಬ ನಮ್ಮ ಪೂರ್ವಿಕರ ತಿಳಿವಳಿಕೆಯು ಇಂದು ತಳಬುಡವಿಲ್ಲದುದಾಗಿದೆ. ಆಧುನಿಕರ ಕಲ್ಪನೆಯಂತೆ ಶಿಕ್ಷಣದ ಕರ್ತವ್ಯವು ಪದವೀಧರರ ಇಲ್ಲವೆ ಬುದ್ಧಿಜೀವಿಗಳ ಮಟ್ಟಿಗೆ ಮರ್ಯಾದಿತವಾಗಿರದೆ, ಕೂಲಿಕಾರರು, ಒಕ್ಕಲಿಗರು, ಕೆಲಸಗಾರರು, ನಿರುದ್ಯೋಗಿಗಳು ಇವರೇ ಮೊದಲಾದ ವರ್ಗಗಳವರಿಗೆ ಅವರ ಜೀವಮಾನದ ಅವಧಿಯವರೆಗೂ ಅದನ್ನು ಪೂರೈಸುವುದಾಗಿದೆ. ಇವೊತ್ತಿನ ವೇಲಾಪತ್ರಿಕೆಯ ವಿಭಜನೆಯಂತೆ, ಎರಡು ಭಾಷೆಗಳು, ಇತಿಹಾಸ-ಭೂಗೋಲ, ಗಣಿತ, ಡ್ರಾಯಿಂಗ್, ಡ್ರಿಲ್, ಶಾಸ್ತ್ರೀಯ ವಿಷಯ ಇವಿಷ್ಟಕ್ಕೆ ಸಮಯವನ್ನು ಕಲ್ಪಿಸಿದ ತರುವಾಯ ವಾರದಲ್ಲಿಯ ೩೦ ಗಂಟೆಗಳ ಹೊತ್ತಿನಲ್ಲಿ ೫—೬ ಗಂಟೆಗಳನ್ನು ಕೂಡ ಜ್ಞಾನವಿಸ್ತಾರದ ಕೆಲಸಕ್ಕೆ ಕೊಡಲಾಗುವುದಿಲ್ಲ. ವರ್ಷದಲ್ಲಿ ಸುಮಾರು ೩೨ ವಾರ ವರ್ಗಗಳು ನಡೆದರೆ ೨೦೦ ತಾಸುಗಳು ಕೂಡ ಉಪಯುಕ್ತವಾದ ಜ್ಞಾನಸಂಪಾದನಕ್ಕೆ ವೆಚ್ಚವಾಗುವುದಿಲ್ಲ. ಇದೇ ಪ್ರಮಾಣದಲ್ಲಿ ಲೆಕ್ಕ ಹಾಕಿದರೆ, ೧೨ ವರ್ಷಗಳ ಕಾಲ ಶಿಕ್ಷಣಪಡೆದರೂ ೬ ತಿಂಗಳು ಕೂಡ ಜಗತ್ತಿನ ವಾಸ್ತವಿಕ ಕಲ್ಪನೆ ಮತ್ತು ಜ್ಞಾನದ ಆವಶ್ಯಕ ಸ್ವರೂಪಗಳನ್ನು ತಿಳಿದುಕೊಳ್ಳಲು ವೆಚ್ಚವಾಗುವುದಿಲ್ಲ.

ಬಾಲಕರಿಗೆ ತಿಳಿಸಬೇಕಾದುದು

ಮಕ್ಕಳಿಗೆ ಜಗತ್ತಿನ ಜ್ಞಾನವು ಮೂರು ದಾರಿಗಳಿಂದ ಒದಗುತ್ತದೆ; ಮತ್ತು ತತ್ಸಂಬಂಧವಾಗಿ ಅವರು ಸ್ವಾಭಾವಿಕವಾಗಿಯೆ ಮನೋರಂಜಕ ಪ್ರಶ್ನೆಗಳನ್ನು ಕೇಳುತ್ತಾರೆ. ಭೂತಕಾಲ ಮತ್ತು ಬೇರೆ ದೇಶಗಳ ಬಗ್ಗೆ ಕತೆಗಳನ್ನು ಹೇಳುವುದರಿಂದ ಅವರ ಶಿಕ್ಷಣವು ಮೊದಲಾಗುತ್ತದೆ. ಈ ಸಂದರ್ಭದಲ್ಲಿ ಅರಸರ ನ್ಯಾಯ-ಅನ್ಯಾಯ, ಪರರಾಜ್ಯಗಳ ಆಕ್ರಮಣ ಇ. ವಿಷಯಗಳನ್ನು ಪ್ರಸ್ತಾಪಿಸುವದು ಓಘದಲ್ಲಿಯೆ ಪ್ರಾಪ್ತವಾಗುತ್ತದೆ. ಆದರೆ ಮಕ್ಕಳ ಎಳೆವಯಸ್ಸನ್ನು ಲಕ್ಷಿಸಲಾಗಿ, ಅವರಿಗೆ ರಾಜವಂಶಾವಳಿಗಳನ್ನೂ ಶಕಾವಲಿಗಳನ್ನೂ ಕಲಿಸುವುದು ಅನಾವಶ್ಯಕವಾಗಿ ತೋರುವುದು. ಈ ವಯಸ್ಸಿನಲ್ಲಿಯೆ ದಿನಂಪ್ರತಿಯ ಹವಾಮಾನದ ವಿಚಾರವನ್ನೆತ್ತಿ ಮತ್ತು ಆಯಾ ಋತುವಿನ ಕಾಯಿಪಲ್ಲೆಯ ಸಮಾಚಾರ ಹೇಳುತ್ತ ಪದಾರ್ಥವಿಜ್ಞಾನ ಶಾಸ್ತ್ರವನ್ನು ಕಲಿಸಬೇಕು.

ಪದಾರ್ಥಗಳ ಗುಣಧರ್ಮಗಳ ಜ್ಞಾನವನ್ನು, ನೀರು

ಹೇಗೆ ಕುದಿಯುತ್ತದೆ, ಅದು ಉಗಿಯಲ್ಲಿ ಹೇಗೆ ರೂಪಾಂತರ ಹೊಂದುತ್ತದೆ, ಅದು ಹೇಗೆ ಹೆಪ್ಪುಗಟ್ಟುತ್ತದೆ ಇ. ಗಳಿಂದ ಮಾಡಿಕೊಡಲಾರಂಭಿಸಿ, ತರುವಾಯ ಪದಾರ್ಥ ವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರಗಳ ಗುರುತನ್ನು ಮಾಡಿ ಕೊಡಬೇಕು. ಭೂಗೋಲದ ಪರಿಚಯವನ್ನು ಮಕ್ಕಳು ಇರುವ ಊರುಗಳ ಸುತ್ತಲಿನ ದಿಬ್ಬದಿನ್ನೆ, ಬೈಲುಗಳ ಮೂಲಕ ಮಾಡಿಕೊಡಬೇಕು. ಪೃಥ್ವಿಯು ಚೆಂಡಿನಂತೆ ದುಂಡಗಿದೆ ಎಂಬುದನ್ನು ಮಕ್ಕಳಿಗೆ ತಿಳಿಸಿಕೊಡುವುದಗತ್ಯ; ಆದರೆ ಕೆಲ ಕಾಲವಾದರೂ ಅವರೀ ಮಾತನ್ನು ಶ್ರದ್ಧೆಯಿಂದಲೆ ಒಪ್ಪಬೇಕಾಗುವುದು.

ಇನ್ನು ಪ್ರಾಣಿಶಾಸ್ತ್ರವನ್ನು ತೆಗೆದುಕೊಳ್ಳುವ. ತಮ್ಮ ಸುತ್ತುಮುತ್ತಲಿನ ಪಶುಪಕ್ಷಿಗಳ ಪರಿಚಯವನ್ನು ಮಾಡಿಕೊಳ್ಳುವ ಪ್ರವೃತ್ತಿಯು ಬಾಲಕರಲ್ಲಿ ಬೆಳೆಯುತ್ತಿದೆ. ವನಸ್ಪತಿಶಾಸ್ತ್ರದ ಜ್ಞಾನವನ್ನು ಶಾಬ್ದಿಕ ವರ್ಣನೆಯಿಂದ ಸಾಕಷ್ಟು ಮಾಡಿಕೊಡುವುದು ಸಾಧ್ಯವಿಲ್ಲ. ಆದರೆ ಗಿಡಬಳ್ಳಿಗಳು ಪಕ್ಷಿಗಳು ಅಡಗಿಕೊಳ್ಳುವ ಮತ್ತು ವಾಸಿಸುವ ಸ್ಥಳವಾಗಿವೆ ಮತ್ತು ಅವುಗಳ ಪೋಷಣೆಯ ಸ್ಥಾನವಾಗಿವೆ ಎಂಬ ಮಾತನ್ನು ಮಕ್ಕಳು ಉತ್ಸುಕತೆಯಿಂದ ಕೇಳುತ್ತವೆ. ಅದೇ ಮೇರೆಗೆ ಹೂ-ಹಣ್ಣು ಬಿಡುವ ಗಿಡಗಳನ್ನು ಚೆನ್ನಾಗಿ ಹೇಗೆ ಬೆಳೆಯಬೇಕು ಮತ್ತು ಪ್ರಾಣಿಗಳ ಆರೈಕೆಯನ್ನು ಹೇಗೆ ಮಾಡಬೇಕು—ಎಂಬುದರ ತಿಳಿವಳಿಕೆಯನ್ನು ಅವರಿಗೆ ಮಾಡಿಕೊಡಬೇಕು.

ನನ್ನ ಅಭಿಪ್ರಾಯದ ಮೇರೆಗೆ, ಇತಿಹಾಸವೆಂದು ತಿಳಿಯಲಾದ ವಿಷಯದ ಪರಿಚಯವನ್ನು ಮಕ್ಕಳಿಗೆ ಶಾಲೆಗಳಲ್ಲಾಗಲಿ, ಶಾಲೆಗಳ ಹೊರಗಾಗಲಿ ಮಾಡಿಕೊಡುವುದನ್ನು ತಪ್ಪಿಸಿದಷ್ಟು ಒಳ್ಳೆಯದು. ರಾಜ್ಯಪ್ರಾಪ್ತಿಗಾಗಿ ಹಿಂದಿನ ಅರಸರು ತಮ್ಮ ಆಪ್ತೇಷ್ಟರ—ಬಂಧುಬಳಗದವರ ಕೊಲೆಯನ್ನು ಹೇಗೆ ಮಾಡಿದರು, ಅವರನ್ನು ಹೇಗೆ ಹಿಂಸೆಗೊಳಿಸಿದರು, ಯಾವ ರಾಜನಿಗೆ ಎಷ್ಟು ಜನ ಹೆಂಡಂದಿರಿದ್ದರು, ಅವರಿಗೆ ಹಸ್ತಕರೆಷ್ಟು ಜನ ಇತ್ಯಾದಿ ಸಂಗತಿಗಳನ್ನು ವಿಸ್ತಾರವಾಗಿ ತಿಳಿಸುವುದರಿಂದ ಪ್ರಯೋಜನವೂ ಇಲ್ಲ, ಮನರಂಜನೆಯೂ ಇಲ್ಲ. ಇದರ ಆಶಯವು, ಶಿಕ್ಷಣಕ್ರಮದಿಂದ ಚರಿತ್ರವಿಷಯವನ್ನು ಪುಟ್ಟಪೂರಾ ತೆಗೆದು ಹಾಕಬೇಕೆಂತಲ್ಲ.

ಸಂಕುಚಿತ ದೇಶಾಭಿಮಾನ

ಈ ಮುಂದಿನ ಶಿಕ್ಷಣದ ಮೆಟ್ಟಲೆಂದರೆ ಸಹಶಿಕ್ಷಣ. ಈ ಕಾಲದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ, ಜಗತ್ತಿನಲ್ಲಿಯ ಬೇರೆಬೇರೆ ದೇಶಗಳ ನಿವಾಸಿಗಳೆಲ್ಲರು ಸೇರಿ ಒಂ[illegible] ಮಾನವಸಮಾಜವಾಗಿದೆಯೆಂಬ ಮಾತನ್ನು ಮನಗಾಣ[illegible] ಬೇಕು. ಸಂಕುಚಿತ ದೇಶಾಭಿಮಾನದಿಂದ ಪ್ರೇರಿತರಾ[illegible] ಹುಚ್ಚುಹಿಡಿದವರಂತೆ ನೆರೆಹೊರೆಯವರ ಭೂಮಿಕ[illegible] ಗಳನ್ನು ಸೆಳೆದುಕೊಳ್ಳುವ ಪ್ರವೃತ್ತಿಯಿಂದ ಪಾಶ್ಚಾತ್ಯ ನಾ[illegible] ರಿಕತೆಗೆ ಗಂಡಾಂತರ ಬಂದಿರುವುದು, ಮೂಲದಲ್ಲಿ ಅಧ್ಯಾ[illegible] ಪಕರು ವಿದ್ಯಾರ್ಥಿಗಳಿಗೆ ಚರಿತ್ರೆಯನ್ನು ತಪ್ಪು ರೀತಿಯ[illegible] ಕಲಿಸುವುದರಿಂದಲೆ ಎಂದು ಹೇಳಿದರೆ ತಪ್ಪಾಗದು. ವಿಕಾಸ[illegible] ಹೊಂದುವ ಚಿಕ್ಕ ಮಕ್ಕಳ ಮಾನಸಿಕ ಶಕ್ತಿಗಳಲ್ಲಿ[illegible] ಪಾಶವೀ ಅಂಶಕ್ಕೆ ಉತ್ತೇಜನಕೊಟ್ಟು ಅದು ಬೇರೂ[illegible] ತನ್ನ ರೆಂಬೆಕೊಂಬೆಗಳನ್ನು ಹೊರಚಾಚುವಂತೆ ಮಾಡು[illegible] ಕಲಿಸುವಿಕೆಯಲ್ಲಿ ನಮ್ಮ ಅಧ್ಯಾಪಕವರ್ಗವು ಹೆಸರಾಗಿ[illegible] ಬೇರೆ ಪ್ರಾಣಿಗಳೊಡನೆ ತುಲನೆಮಾಡುವಾಗ ಮಾನ[illegible] ಜೀವಿಯು ಹೇಗೆ ವಿಕಾಸ ಹೊಂದಿದನು, ಮಾನವಜೀವಿ[illegible] ದಲ್ಲಿ ಹೇಗೆ ಉತ್ಕ್ರಾಂತಿಯಾಯಿತು, ಪ್ರಾಥಮಿಕ ಅವ[illegible] ಯಲ್ಲಿ ಸಮಾಜದ ರಚನೆಯು ಯಾವ ತೆರನಾಗಿತ್ತು ಎಂಬೀ ಅಂಶಗಳನ್ನು ತಿಳಿಸುತ್ತ ಇತಿಹಾಸವನ್ನು ಬೋ[illegible] ಸುವುದು ಹಿತಕರವಾದುದು. ಇಂತು ಚರಿತ್ರೆಯನ್ನು ಕಲಿಸುವುದು ಬಾಲಕ-ಬಾಲಿಕೆಯರಿಗೆ ಉನ್ನತಿಕಾರಕವೂ ಮನೋವೇಧಕವೂ ಆಗುವುದು. ಪ್ರಸಂಗಾನುರೋಧದಿಂ[illegible] ಇಂಗ್ಲಂಡ್-ಫ್ರಾನ್ಸ್ ಮೊದಲಾದ ದೇಶಗಳ ಉಲ್ಲೇ[illegible] ಬಂದರೆ ಅವುಗಳ ಚರಿತ್ರೆಯನ್ನು ತಿಳಿಸಿ, ಜಗತ್ತಿನ ಇ[illegible] ಹಾಸದಲ್ಲಿ ಅವುಗಳ ಸ್ಥಾನವೇನೆಂಬುದನ್ನು ತಿಳಿಹೇ[illegible] ಬೇಕು.

ಭೂಗೋಲದ ವಿವರವಾದ ಪರಿಚಯವನ್ನೂ ಜಗತ್ತಿನ ಸಾಮಾನ್ಯ ಸ್ವರೂಪದ ಜ್ಞಾನವನ್ನೂ ಮಾಡಿಕೊಡುವ ಬಗೆಯನ್ನು ಇನ್ನು ವಿಚಾರಿಸುವ. ನಕ್ಷೆಗಳನ್ನು ತಯಾ[illegible] ರಿಸುವ ಕ್ರಮದಿಂದ ಇದನ್ನು ಸುಲಭಗೊಳಿಸುವುದು ಸಾಧ್ಯ ವಿದೆ. ಆದರೆ ಪ್ರತಿದೇಶದ ಭೂಭಾಗದ ಮತ್ತು ಅಲ್ಲಿ ಸಿಕ್ಕುವ ಪ್ರಾಣಿ-ವನಸ್ಪತಿಗಳ ಸ್ಪಷ್ಟಜ್ಞಾನವಾಗುವುದು ಅಗತ್ಯವಿದೆ. ಭೂಗೋಲ-ಇತಿಹಾಸಗಳ ಅನ್ಯೋನ್ಯ ಸಂಬಂಧವು ಇಲ್ಲಿ ವ್ಯಕ್ತವಾಗುತ್ತದೆ. ಅದೇ ರೀ[illegible] ಭೂಗೋಲ-ಪ್ರಾಣಿಶಾಸ್ತ್ರಗಳ ಪರಸ್ಪರ ಸಂಬಂಧವೂ ಇದ[illegible] ರಿಂದ ತಿಳಿಯ್ಯಾಗುತ್ತದೆ. ಈ ವಿಷಯದಲ್ಲಿಯೂ ಕಳೆದ ೫೦ ವರ್ಷಗಳಲ್ಲಿ ಉಪಲಬ್ಧವಾದ ನವೀನ ಜ್ಞಾನವನ್ನು ಮಕ್ಕಳಿಗೆ ಒದಗಿಸುತ್ತಲೇ ಇಲ್ಲ. ಜೀವ ಸೃಷ್ಟಿಯಲ್ಲಿಯ ಉತ್ಕ್ರಾಂತಿಯ ಇತಿಹಾಸವನ್ನು ತುಂಬಾ ಚಿತ್ತಾಕರ್ಷ[illegible]

ವಾಗಿ ತಿಳಿಸಬಹುದಾಗಿದೆ; ಹಾಗೆಯೆ ಜೀವಸೃಷ್ಟಿಯಲ್ಲಿಯ ಬೆಳವಣಿಗೆ, ಕುಗ್ಗುವಿಕೆ ಮತ್ತು ಅಳಿಯುವಿಕೆಗಳಲ್ಲಿ ನಡೆಯುವ ಕ್ರಿಯೆಗಳನ್ನು ಅತಿಸುಲಭ ರೀತಿಯಲ್ಲಿ ತಿಳಿಸುವುದು ಸಾಧ್ಯವಾಗಿದೆ. ಈಚೆಗಂತೂ 'ಜೀವನ'ದ ಕತೆಯು ಅತ್ಯಂತ ವಿಸ್ಮಯಜನಕವೂ ಬುದ್ಧಿಪ್ರಚೋದಕವೂ ಆಗಿರುತ್ತದೆ.

ನಾವಿನ್ನು ಜಡಸೃಷ್ಟಿಯ ವಿಚಾರವನ್ನು ಮಾಡಬೇಕಾಗಿದೆ. ಯಾಂತ್ರಿಕ ಉಪಕರಣಗಳು, ದೂರದರ್ಶಕ ಸೂಕ್ಷ್ಮದರ್ಶಕ ಯಂತ್ರಗಳು, ವಿದ್ಯುತ್ತು, ನಭೋವಾಣಿ ನೊದಲಾದ ಸಾಧನಗಳು ಕರಗತವಾಗಿರುವಾಗ, ಪ್ರತಿಯೊಬ್ಬನಿಗೂ ಪದಾರ್ಥವಿಜ್ಞಾನಶಾಸ್ತ್ರ-ರಸಾಯನಶಾಸ್ತ್ರಗಳ ಮೂಲಭೂತ ಸಿದ್ಧಾಂತಗಳ ಅಚ್ಚುಕಟ್ಟಿನ ತಿಳಿವಳಿಕೆಯಾಗುವುದು ತೀರಾ ಅಗತ್ಯವಾಗಿದೆ. ಈ ಕೆಲಸದಲ್ಲಿ ಗಣಿತಶಾಸ್ತ್ರವು ತುಂಬಾ ಸಹಾಯಕವಾಗುವುದು. ನಾಗರಿಕರಲ್ಲಿ ಪ್ರವರ್ಧಿಸುತ್ತಿರುವ ಕುತೂಹಲವು ತೃಪ್ತಿಗೊಳ್ಳುವಂತೆ, ಮತ್ತದಕ್ಕೆ ಅಶ್ಲೀಲ ಪ್ರವರ್ತನೆಯಾಗದಂತೆ ಪ್ರತಿಯೊಬ್ಬನಿಗೂ ಶರೀರರಚನಾಜ್ಞಾನವನ್ನು ಮಾಡಿಕೊಡುವುದು ಅನಿವಾರ್ಯವಾಗಿದೆ; ಅದರಂತೆಯೆ ಸುಪ್ರಜಾಜನನ, ಸಾಂಸರ್ಗಿಕ ರೋಗಗಳು, ಶಾರೀರಿಕ ಅಧೋಗತಿಯ ಕಾರಣಗಳು, ಪ್ರತಿನಿತ್ಯ ಸಂಭವಿಸುವ ಅಪಘಾತಗಳು ಇವುಗಳ ಜ್ಞಾನವನ್ನು ಒದಗಿಸುವುದು ತುಂಬಾ ಅಗತ್ಯವಾಗಿದೆ.

ನವೀನ ಶಿಕ್ಷಣಕ್ಕೆ ನವೀನ ಶಿಕ್ಷಕರು

ಈ ವರೆಗೆ ವಿವರಿಸಿದ ಶಿಕ್ಷಣಕ್ರಮವು ಶಾಲೆಯಲ್ಲಿಯೆ ಪೂರ್ತಿಗೊಳ್ಳಬೇಕು; ಆದರೆ ಈ ಕಾರ್ಯವು ಈಗಿನ ಶಿಕ್ಷಕರಿಂದ ಕೊನೆಗಾಣದೆಂಬುದನ್ನು ನಾನು ಒಪ್ಪುತ್ತೇನೆ. ನವಶಿಕ್ಷಣದೊಡನೆ ನವಶಿಕ್ಷಕರ ಪೂರೈಕೆಯೂ ಬೇಕು. ಅವರಿಗೆ ತಕ್ಕ ಸಾಧನಸೌಕರ್ಯಗಳನ್ನು ಪೂರೈಸಬೇಕಾಗುವುದು; ಮತ್ತು ಅವರಲ್ಲಿಯ ಉತ್ಸಾಹವು ಕುಗ್ಗದಂತೆ ಉಪಾಯಗಳನ್ನು ಕೈಕೊಳ್ಳಬೇಕಾಗುವುದು. ಶಾಲೋಪಯೋಗಿಯಾದ ಪಠ್ಯಪುಸ್ತಕಗಳ ವಿಚಾರವೂ ಇಲ್ಲಿ ಅಗತ್ಯವಾಗಿದೆ. ಶಾಲೆಗಳಲ್ಲಿ ಉಪಯೋಗಿಸಲಾದ ಪುಸ್ತಕಗಳು ಅತ್ಯಾಧುನಿಕ ವಿಷಯಸಾಮಗ್ರಿಯಿಂದ ಪರಿಪೂರ್ಣವಾಗಿರುವುದಿಲ್ಲ. ಶಾಲೆಗಳ ಗ್ರಂಥಾಲಯಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಪುಸ್ತಕಗಳಲ್ಲಿಯ ವಿಷಯಗಳು ಹತ್ತು-ಹದಿನೈದು ವರ್ಷಗಳ ಹಿಂದಿನ ತಂಗುಳೆನಿಂದ ತುಂಬಿರುತ್ತವೆ. ಕ್ರಮಿಕ ಪುಸ್ತಕಗಳ ಸಹಾಯದಿಂದ ಕಲಿಸಲಾಗುವ ತರಗತಿಗಳಲ್ಲಿ ವಿಶೇಷ ಸೂಕ್ಷ್ಮರೀತಿಯಲ್ಲಿ ವ್ಯಾಸಂಗ ನಡೆಯಬೇಕಾಗಿರುತ್ತದೆ. ನಾಳೆಯ ನಾಗರಿಕರಿಗೆ ಅರ್ಥಶಾಸ್ತ್ರದಿಂದ ಮಾನವಜೀವನದಲ್ಲಿ ಎಂತಹ ಅದಲುಬದಲುಗಳಾಗುತ್ತಿವೆಯೆಂಬುದರ ತಿಳಿವಳಿಕೆಯಾಗುವುದು ಅತ್ಯಗತ್ಯವಾಗಿದೆ. ಈ ಬದಲಾವಣೆಗಳು ಕಲ್ಪನಾಜನ್ಯವಾಗಿರದೆ ಮಾನವಜೀವನವನ್ನು ವಿವಿಧ ದೃಷ್ಟಿಕೋನಗಳಿಂದ ನಿರೀಕ್ಷಿಸುವ ರೀತಿಗಳಾಗಿವೆ. ಆದರೆ ನಮ್ಮ ವಿದ್ಯಾವಿಭೂಷಿತರಿಗೆ ಅದರ ಗಂಧವೂ ತಾಕಿರುವುದಿಲ್ಲ; ಎಂತಲೇ ಆವೇಶಪೂರ್ಣ ಸ್ವಾರ್ಥಪ್ರೇರಿತ ಸಮರ್ಥನೆಗಳಿಂದ ಅವರು ದಿಕ್ಕುಗಾಣದೆ ಕಕ್ಕಾವಿಕ್ಕಿಯಾಗುವರು.

ಇತಿಹಾಸದ ಅಂಗವಾಗಿಯೇ ಯುದ್ಧಗಳ ಚರಿತ್ರೆಯನ್ನು ಕಲಿಸಬೇಕು. ಅಪ್ರಬುದ್ಧರಿಗೆ ಈವರೆಗಾದ ಸಂಗ್ರಾಮಗಳು ಒಂದೇ ಬಗೆಯಾಗಿ ತೋರುತ್ತವೆ. ಆದರೆ ಇವೆಲ್ಲವುಗಳಲ್ಲಿ ಹಿಂಸೆಯೊಂದೇ ಸಾಮ್ಯವಾಗಿದೆ; ಆಯಾ ಕಾಲದ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಯಂತೆ ಅವು ಭಿನ್ನಭಿನ್ನ ಸ್ವರೂಪಗಳನ್ನು ಪಡೆದಿರುತ್ತವೆ. ಆಧುನಿಕ ಇತಿಹಾಸದ ಜತೆಯಲ್ಲಿಯೆ ಆಧುನಿಕ ಭೂಗೋಲವಿಜ್ಞಾನವನ್ನೂ ಕಲಿಸುವುದಗತ್ಯ; ಎಂದರೆ ವಿಶ್ವದಲ್ಲಿರುವ ಬೇರೆ ಬೇರೆ ಮಾನವವಂಶಗಳು, ಮಾನವ ಸಮಾಜದ ವಸತಿಗೆ ಯೋಗ್ಯವಿರುವ — ಯೋಗ್ಯವಾಗಬಹುದಾದ ದೇಶಗಳು, ಅದಕ್ಕೆ ಆವಶ್ಯಕವಾಗಿರುವ ಸಾಧನಗಳು ಇತ್ಯಾದಿಗಳ ವಿವರವಾದ ಮತ್ತು ವಿಸ್ತೃತವಾದ ಜ್ಞಾನವನ್ನು ಒದಗಿಸಬೇಕು. ಆದರ್ಶನಾಗರಿಕನಿಗೆ ಸಮಾಜದ ವಿನಿಮಯದ ವ್ಯವಹಾರಗಳು ಎಂದರೆ ಕೊಡು-ತಕ್ಕೊಳ್ಳುವ ಸಾಧನಗಳು, ಸಂಚಾರಸೌಕರ್ಯಗಳು, ಅಂತರ್ದೇಶೀಯ ವ್ಯಾಪಾರಗಳು, ಮಾಲಿನ ಹುಟ್ಟುವಳಿ, ಅದಕ್ಕೆ ಸಂಬಂಧಿಸಿದ ಶೋಧಗಳು, ಸ್ಥಾವರ ಆಸ್ತಿ-ಸಂಪತ್ತಿಗಳನ್ನು ಕುರಿತು ಪಾಲಿಸಲಾಗುವ ಬಹಿರಂಗ ಸಂಕೇತಗಳು, ತತ್ಸಂಬಂಧಿಯಾದ ನಿಯಮಗಳು—ಇವೆಲ್ಲವುಗಳ ಜ್ಞಾನವಿರುವುದರ ಅಗತ್ಯವಿದೆ.

ಸ್ವತ್ವದ ಸದಭಿಮಾನ

ಇನ್ನು ನಾನು ಶಿಕ್ಷಣಕ್ರಮದಲ್ಲಿಯ ಹೊಸ ಅಂತಸ್ತನ್ನು ಪ್ರವೇಶಿಸಲಿರುವೆನು. ಅದೆಂದರೆ ವ್ಯಕ್ತಿಯ ವ್ಯಾಪಕತ್ವದ ಗುರುತು ಮಾಡಿಕೊಡುವ ಶಿಕ್ಷಣವು. ಭವಿಷ್ಯದ ನಾಗರಿಕನಲ್ಲಿ ಸ್ವತ್ವದ ಅಭಿಮಾನವು ಜಾಗೃತವಾಗಿದೆ; ತನ್ನ ಅಭಿ

ಮತದಿಂದಲೆ ತನಗೆ ಸಂಬಂಧಿಸಿದ ಪ್ರಶ್ನೆಗಳ ನಿರ್ಣಯ ಮಾಡಬೇಕೆಂಬ ಅರಿವು ಹುಟ್ಟಿದೆ. ಮಾನವೀಯ ಪ್ರಜ್ಞೆಯು ಪ್ರೌಢಾವಸ್ಥೆಯನ್ನು ಪಡೆದಿದೆ. ವಿಶ್ವದಲ್ಲಿಯ ಬೇರೆ ಬೇರೆ ಧರ್ಮಗಳ, ಅವುಗಳ ಮೂಲಭೂತ ಸಿದ್ಧಾಂತಗಳ ಮತ್ತು ತತ್ವಜ್ಞಾನದ ಅನೇಕ ಪಂಥಗಳ ಜ್ಞಾನವು ಪ್ರಕಟವಾಗಿ ನಿಷ್ಪಕ್ಷಪಾತವಾಗಿ ಪ್ರತಿಯೊಬ್ಬನಿಗೂ ದೊರಕುವುದು ಅಗತ್ಯವಿದೆ. ವಿಚಾರಶೀಲ ತರುಣರನ್ನು, 'ನಾನೆಲ್ಲಿಂದ ಬಂದೆ ? ಹೇಗೆ ಬಂದೆ ? ಎಲ್ಲಿಗೆ ಹೋಗುವೆ ?' ಎಂಬೀ ಮುಂತಾದ ಪ್ರಶ್ನೆಗಳು ಹಠಾತ್ತಾಗಿ ಕಾಡುವವು; ಇವುಗಳನ್ನು ಉಪಲಬ್ಧ ಜ್ಞಾನದ ಆಧಾರದಿಂದ ನಿರ್ದಿಷ್ಟ ಮರ್ಯಾದೆಯ ವರೆಗೆ ಬಿಡಿಸಲನುಕೂಲವಾಗುವಂತೆ ಯೋಜನೆ ಮಾಡಬೇಕು. ಜಗತ್ತನ್ನು ನೋಡುವ ನಮ್ಮ ಧೋರಣೆ ಯಾವುದು ? ವ್ಯಕ್ತಿಯ ಜೀವನವನ್ನು ನಾವು ಯಾವ ಕೋನದಿಂದ ನೋಡುವೆವು ?— ಎಂಬುದನ್ನು ನಿರ್ಣಯಿಸುವುದೂ ಇಲ್ಲಿ ಕ್ರಮಪ್ರಾಪ್ತವಾಗುತ್ತದೆ. ಈ ಶಿಕ್ಷಣಕ್ರಮಕ್ಕೆ ಸಾಮಾನ್ಯವಾಗಿ ಇಡಿಯ ಶಿಕ್ಷಣಾವಧಿಯ ೧/೫ ಸಮಯವು ಬೇಕಾಗುವುದೆಂದು ನನ್ನ ಅಭಿಪ್ರಾಯ. ಈ ತರುವಾಯ ವಿದ್ಯಾರ್ಥಿಯಲ್ಲಿ ವ್ಯಕ್ತಿತ್ವವು ತೋರಿಬರುವುದು ಮತ್ತು ವಿಶಿಷ್ಟಶಿಕ್ಷಣದ ಬಯಕೆಯು ಅರಳುವುದು.

ಶಿಕ್ಷಣದ ಈ ಅವಸ್ಥೆಗೆ ತಲುಪಿದಾಗ ವಿದ್ಯಾರ್ಥಿಯ ಮಾಧ್ಯಮಿಕ ಶಿಕ್ಷಣವು ಕೊನೆಗೊಳ್ಳುವುದು. ಈ ತರುವಾಯ ಬಹುಶಃ ಎಲ್ಲರೂ ಯಾವುದಾದರೊಂದು ವೃತ್ತಿಯನ್ನು ಕೈಕೊಳ್ಳುವರು; ಇಲ್ಲವೆ ವಿಶಿಷ್ಟ ಉದ್ಯೋಗದ ಶಿಕ್ಷಣವನ್ನು ಪಡೆಯುವರು. ಈ ಮುಂದಿನ ಶಿಕ್ಷಣದಲ್ಲಿ ವಿವರ ವಿವರವಾದ ಸೂಕ್ಷ್ಮಭೇದದರ್ಶಕ ಅಭ್ಯಾಸಕ್ರಮವನ್ನು ಏರ್ಪಡಿಸಬೇಕಾಗುವುದು; ಈ ವಿಭಾಗಕ್ಕೆ ನಾನು 'ಅಂಡರ್‌ಗ್ರ್ಯಾಜುಏಟ್ ಕೋರ್ಸ್' ಎಂದು ಎನ್ನುವೆನು. ಈ ತರಗತಿಗೆ ಬರುವ ಜ್ಞಾನಾಪೇಕ್ಷಿಗಳಲ್ಲಿ ಅರ್ಥಜನರು ತಂತಮ್ಮ ಅಭಿರುಚಿಯಂತೆ ಮುಂದಿನ ಶಿಕ್ಷಣವನ್ನು ಸಾಗಿಸುವರು, ಇನ್ನುಳಿದವರು ಉತ್ತಮ ನಾಗರಿಕರಾಗುವ ಸಿದ್ಧತೆಯನ್ನು ನಡೆಯಿಸುವರು.

ರಾಜ್ಯಶಾಸನದ ಜ್ಞಾನ

ರಾಜ್ಯಶಾಸನದ ಕ್ರಮವು ಪ್ರತಿಯೊಬ್ಬರಿಗೂ ಪ... ವಾಗುವುದು ಅಗತ್ಯವಿದೆ. ಪ್ರತಿಯೊಬ್ಬ ಮತದಾ... ಇಂಗ್ಲಂಡ್, ಅಮೆರಿಕಾ, ಇಟಲಿ, ಜರ್ಮನಿ ಇ. ದೇಶಗ... ಕೈಕೊಳ್ಳಲಾಗುವ ಆರ್ಥಿಕ ಪ್ರಯೋಗಗಳ ಪರಿಚಯ... ತಕ್ಕಮಟ್ಟಿಗಾದರೂ ಆಗುವುದು ವಿಹಿತ. ಈ ಪ್ರಯೋ... ಗಳ ಪರಿಣಾಮವು ಅವನ ಅಥವಾ ಆಕೆಯ ಜೀವನಕ್ರ... ಮೇಲೆ ಹೆಚ್ಚಾಗಿ ಆಗುವುದು; ಎಂತಲೇ ಓದುಬರೆಹ... ಜತೆಗೆ ಅಂಕಶಾಸ್ತ್ರದ ಪದ್ಧತಿಬದ್ಧವಾದ ಜ್ಞಾನವು ಒ... ವುದು ಅವಶ್ಯವಾಗಿದೆ. ಬೇರೆ ಬೇರೆ ವಿಷಯಗಳಲ್ಲಿ ವಿ... ರ್ಥಿಗೆ ಪ್ರವೇಶ ಮಾಡಿಕೊಡುವ ಶಿಕ್ಷಣವು ಇಲ್ಲಿಗೆ ಪ... ಯುತ್ತದೆ; ಆಯಾ ವಿಷಯಗಳಲ್ಲಿ ಎಷ್ಟರಮಟ್ಟಿಗೆ ಪಾ... ಗತನಾಗಬೇಕೆಂಬುದು ಅವರವರ ಇಚ್ಛೆಯನ್ನವಲಂಬಿ...

ಕೊನೆಯ ಮಾತು

'ನನ್ನ ಈ ವಿಚಾರಗಳು ಬಹುದಿನಗಳ ಆಲೋಚನೆ... ಫಲವಾದುದರಿಂದ ನನ್ನ ಖಂಡಿತ ಅಭಿಪ್ರಾಯಗಳ... ಸಂಪೂರ್ಣ ಸದುದ್ದೇಶದಿಂದಲೆ ಅವನ್ನು ತಮ್ಮೆದುರಿ... ಸಿರುವೆನು. ಅವು ತಮಗೆ ಎಷ್ಟು ಒಪ್ಪಿಗೆಯಾಗುವ... ತಾವು ಅವನ್ನು ಯಾವ ರೀತಿ ವಿಮರ್ಶಿಸುವಿರೊ—... ಹೇಳಲರಿಯೆನು. ಈ ವಿಚಾರಗಳು ಅಶಕ್ಯಕೋ... ವೆಂದೂ ಸಾಹಸಪೂರ್ಣವೆಂದೂ ಮನೋರಾಜ್ಯದ... ಕುದುರೆಗಳೆಂದೂ ತೋರಬಹುದು. ಕೊನೆಗೆ ಒಂದು ಮಾ... ಹೇಳುವುದಿದೆ. ನನ್ನೀ ಯೋಜನೆಯು, ಜ್ಞಾನಪ್ರಸಾ... ಸಾರ್ವತ್ರಿಕವಾಗಿ ಸಮಪ್ರಕಾರದಿಂದ ಹೇಗಾಗಬಹುದೆ... ದರ ಬಗೆಗಿದೆ; ಶಿಕ್ಷಣವು ಹೇಗಿರಬೇಕು ಎಂಬುದರ... ಗಿಲ್ಲ. ಜ್ಞಾನಸಾಧನೆಯ ಒಂದಂಶವನ್ನು ಮಾತ್ರ ಸ... ದಿಗ್ದರ್ಶಿಸಿರುವೆನು. ಒಂದು ವಾರದಲ್ಲಿ ೧೬-೮ ತಾಸುಗ... ತ್ತವೆ; ಅವುಗಳಲ್ಲಿ ೫—೬ ತಾಸುಗಳಲ್ಲಿಯೆ ಏನೇನ... ಕಲಿಸಬಹುದಾಗಿದೆಯೆಂಬುದನ್ನು ನಾನು ಹೇಳಿರುವೆ... ಎಂತಲೆ ತಾತ್ತ್ವಿಕ—ಭಾವನಾಪ್ರಧಾನ—ಸೌಂದರ್ಯಾ... ಭವದಾಯಕ ವಿಷಯಗಳನ್ನು ವಿವೇಚಿಸಲಿಲ್ಲವೆಂಬ ಆ... ಪಣೆಯು ನನ್ನ ವಿವೇಚನೆಗೆ ತಟ್ಟಲಾರದು.

ನಮ್ಮ ನಾಡಿನ ಹಾಡು ಮತ್ತು ನಾಡಗುಡಿ

(ಲೇ: ರಾಷ್ಟ್ರೀಯ)



ಆದ್ಯ ಭಾರತೀಯ ಸ್ವಾತಂತ್ರ್ಯ ಧ್ವಜ

(೩೦ ವರ್ಷಗಳ ಹಿಂದೆ ಬರ್ಲಿನ್ ನಗರಿಯಲ್ಲಿ ಮಾದಾಮ ಕಾಮಾ ಅವರು ಮೆರೆಯಿಸಿದುದು)

ಬೆಳುದಿಂಗಳಿನ ಇರುಳಿನಲ್ಲಿ ಅವರಿಬ್ಬರು ಅರಣ್ಯದೊಳಗಿಂದ ನಿಶ್ಶಬ್ದರಾಗಿ ಸಾಗಿದ್ದರು. ಮಹೇಂದ್ರನು ಸ್ತಬ್ಧನೂ ಶೋಕಾತುರನೂ ಕೊಂಚ ಅಭಿಮಾನಿಯೂ ಕುತೂಹಲಯುಕ್ತನೂ ಆಗಿದ್ದನು.

ಭವಾನಂದನು ತನ್ನೊಡನೆಯೆ ಕೆಳಗಿನ ಗೀತವನ್ನು ಹಾಡಿಕೊಳ್ಳತೊಡಗಿದನು.

ವಂದೇ ಮಾತರಂ।
ಸುಜಲಾಂ, ಸುಫಲಾಂ, ಮಲಯಜಶೀತಲಾಂ
ಸಸ್ಯಶ್ಯಾಮಲಾಂ ಮಾತರಂ।

ಮಹೇಂದ್ರನು ಈ ಗೀತವನ್ನು ಕೇಳಿ ಕೊಂಚ ವಿಸ್ಮಿತನಾದನು. ಸುಜಲಾ, ಸುಫಲಾ, ಮಲಯಜಶೀತಲಾ, ಸಸ್ಯಶ್ಯಾಮಲಾ — ಇಂತಹ ಮಾತೆ ಯಾರು ? ಇದು ಅವನಿಗೆ ತಿಳಿಯಲಿಲ್ಲ. 'ಈ ತಾಯಿ ಯಾರು ?' ಅವನು ಕೇಳಿದನು. ಅದಕ್ಕುತ್ತರಕೊಡದೆ ಭವಾನಂದನು ಹಾಡನ್ನು ಮುಂದರಿಸಿದನು—

ಶುಭ್ರ-ಜ್ಯೋತ್ಸ್ನಾ ಪುಲಕಿತಯಾಮಿನೀಂ
ಫುಲ್ಲಕುಸುಮಿತ-ದ್ರುಮದಲಶೋಭಿನೀಂ
ಸುಹಾಸಿನೀಂ ಸುಮಧುರಭಾಷಿಣೀಂ
ಸುಖದಾಂ ವರದಾಂ ಮಾತರಂ ॥

ಮಹೇಂದ್ರನೆಂದನು “ಎಲಾ, ಇದಂತೂ ನಮ್ಮ ದೇಶದ ವರ್ಣನೆ ! ಇವಳೇನೂ ತಾಯಿಯಲ್ಲ—”

ಭವಾನಂದನೆಂದನು “ನಾವು ಬೇರೆ ತಾಯಿಯನ್ನು ಗುರುತಿಸುವುದಿಲ್ಲ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂದು ಎನ್ನುತ್ತೇವೆ. ಜನ್ಮಭೂಮಿಯೇ ನಮ್ಮ ತಾಯಿ, ನಮಗೆ ಬೇರೆ ತಾಯಿಯಿಲ್ಲ, ತಂದೆಯಿಲ್ಲ, ಬಂಧುವಿಲ್ಲ, ಸ್ತ್ರೀಯಿಲ್ಲ, ಪುತ್ರನಿಲ್ಲ, ಮನೆಯಿಲ್ಲ, ಮಾರಿಲ್ಲ. ನಮಗೆ ಕೇವಲ ಈ 'ಸುಜಲಾ, ಸುಫಲಾ, ಮಲಯಜಶೀತಲಾ, ಸಸ್ಯಶ್ಯಾಮಲಾ—”

ಆಗ ಮಹೇಂದ್ರನಿಗೆ ಎಲ್ಲ ಹೊಳೆಯಿತು. ಅವ ನಂದನು “ಮತ್ತೊಮ್ಮೆ ಆ ಹಾಡನ್ನು ಹಾಡು !”

ಸ್ವರ್ಗೀಯ ಶ್ರೀ. ಬಂಕಿಮಚಂದ್ರರ ಪ್ರಸಿದ್ಧ ಕಾದಂಬರಿಯಾದ 'ಆನಂದಮಠ'ದಲ್ಲಿ 'ವಂದೇ ಮಾತರಂ' ಗೀತವು ಬಂದ ಸಂದರ್ಭವನ್ನು ಪೂರ್ತಿಯಾಗಿ ಮೇಲಕ್ಕೆ ಉದಾಹರಿಸಲಾಗಿದೆ. ಈ ಗೀತಕ್ಕೆ ಕಳೆದ ಮೂವತ್ತೈದು ವರ್ಷಗಳಿಂದ ಹಿಂದುಸ್ತಾನದ ರಾಷ್ಟ್ರಗೀತದ ಅಗ್ರಮರ್ಯಾದೆಯು ಸಿಕ್ಕಿದೆ. ರಾಷ್ಟ್ರಸಭಾಪಕ್ಷವು ವಿಧಿಮಂಡಲಗಳಲ್ಲಿ ಬಹುಮತವನ್ನು ಪಡೆದು ಮಂತ್ರಿಪದಗಳನ್ನು ಸ್ವೀಕರಿಸಿದ ಮೇಲೆ, ಸಭಾಗೃಹದಲ್ಲಿ ಮೊಟ್ಟಮೊದಲನೆಯದಾಗಿ ರಾಷ್ಟ್ರಗೀತವನ್ನು ಹಾಡಲಾಯಿತು. ಮೂವತ್ತೈದು ವರ್ಷದ ತಪಸ್ಯೆಯು ಪೂರ್ತತೆಯನ್ನು ಹೊಂದಿತು. ಪರಸತ್ತೆಯ ಪ್ರತೀಕವೆನಿಸಿದ ಶಾಸನಸಭಾಮಂದಿರಗಳು ನಾಡಿನ ಹಾಡಿನ ಮಂಗಲಧ್ವನಿಯಿಂದ ದುಮದುಮಿಸಿದವು. ಅಂದಿನಿಂದಲೂ ಶಾಸನಮಂದಿರಗಳಲ್ಲಿ ರಾಷ್ಟ್ರಗೀತವು ಹಾಡಲ್ಪಡುತ್ತಿದೆ. ಆದರೆ ಮದ್ರಾಸದ ಮುಸಲ್ಮಾನ ಸದಸ್ಯನೊಬ್ಬನು, ತನ್ನ ಧಾರ್ಮಿಕ ಭಾವನೆಗೆ ಅಪ್ರಶಸ್ತವೆನಿಸುತ್ತದೆಂಬ ಆಕ್ಷೇಪವೆತ್ತಿ ಈ ಗೀತ ನಡೆದಾಗಲೆ ಸಭೆಬಿಟ್ಟು ಎದ್ದುಹೋದನು. ಮುಸ್ಲಿಂ ಲೀಗಿನವರ ಕುತಂತ್ರದ ಫಲವಿದು. ಅವರ ಕುಚೋದ್ಯವೇ ಅವರೊಬ್ಬ ಪ್ರತಿನಿಧಿಯ ಮುಖಾಂತರ ವ್ಯಕ್ತವಾಯಿತು. ಅಂದಿನಿಂದ ಅವರೀ ವಿರೋಧಕ್ಕೆ ಟೊಂಗೆ ಟಿಸಿಲುಗಳೊಡೆಯುತ್ತಲೆ ಇವೆ.

ಕಾವ್ಯದಲ್ಲಿ ನಿರೂಪಿಸಲ್ಪಟ್ಟ ರಾಷ್ಟ್ರದೇವಿಯ ಅಲಂಕಾರಯುತವಾದ ವರ್ಣನೆ ಕೂಡ 'ಮೂರ್ತಿಪೂಜೆ' ಯೆಂದು ತಿಳಿಯುವುದು ಧರ್ಮದ ಅಸದಭಿಮಾನವಲ್ಲದೆ ಮತ್ತೇನು? ಎಷ್ಟು ಜನಸಂಖ್ಯೆಯೊ ಅಷ್ಟು ಕಂಠಗಳು, ಅಷ್ಟು ಕರಗಳು ಎಂದು ಕಲ್ಪಿಸಿ, ಭಾರತಭೂದೇವತೆಯನ್ನು ಒಬ್ಬ ದೇವಿಯಾಗಿ, ಒಬ್ಬ ಮಾತೆಯಾಗಿ ಚಿತ್ರಿಸಿದುದರಲ್ಲಿಯ ಉತ್ಪ್ರೇಕ್ಷೆಯನ್ನು ತಿಳಿಯದಿರುವುದು, ತಿಳಿದು ಸವಿಯದಿಹುವುದು ಅಜ್ಞ—ಅರಸಿಕತೆಯಲ್ಲದೆ ಮತ್ತೇನು? ಗೀತದಲ್ಲೆಲ್ಲಾ ವಿಷಾದಮಿಶ್ರಿತವಾದ ಶಾಂತರಸವು ಪ್ರವಹಿಸುತ್ತಿದೆಯಲ್ಲದೆ ಉದ್ರೇಕ—ಉದ್ವೇಗಕಾರಕ ವಾಕ್ಯವೊಂದೂ ಅದರಲ್ಲಿಲ್ಲ.

ಈ ಹಾಡಿನ ಪೂರ್ವಚರಿತ್ರೆಯು ಉದ್ಬೋಧಕವಾದುದರಿಂದ ಅದನ್ನಿಲ್ಲಿ ಕೊಡಲಾಗಿದೆ. ಕಾಶಿಯಲ್ಲಿ ಇ. ಸ. ೧೯೦೫ರಲ್ಲಿ ಕೈ. ವಾ. ಗೋಖಲೆಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರಸಭೆಯ ಅಧಿವೇಶನವು ನೆರವೇರಿತು. ಸಭಾಕಾರ್ಯವು ಮುಗಿತಾಯಕ್ಕೆ ಬಂದಾಗ ಬಾಬೂ ಸುರೇಂದ್ರನಾಥ ಬಾನರ್ಜಿಯವರು ಶ್ರೋತೃಗಳಲ್ಲಿ ಈ ರೀತಿ ಬಿನ್ನಹ ಮಾಡಿಕೊಂಡರು: "ಅಧ್ಯಕ್ಷರ ಸಮಾರೋಪ ಭಾಷಣವಾದ ಮೇಲೆ ತಾವು ಕೂಡಲೆ ಹೋಗಬಾರದೆಂದು ವಿನಂತಿಯಿದೆ. ಶ್ರೀಮತಿ ದತ್ತ ಚೌಧರಾಣಿಯವರೂ ಬೇರೆ ಕೆಲ ಭ… ಯರೂ ವಂದೇಮಾತರಂ ಗೀತವನ್ನು ಹಾಡುವರು." … ವರ್ಷದಿಂದ ರಾಷ್ಟ್ರಸಭೆಯಲ್ಲಿ ಈ ಗೀತವು ರಾಷ್ಟ್ರೀ… ಗೀತವಾಗಿ ಪ್ರವೇಶವನ್ನು ಮಾಡಿತು.

ಬಂಗಾಲದ ಪ್ರಾಂತಿಕಪರಿಷತ್ತು ೧೯೦೬ರ ಏಪ್ರಿ… ತಿಂಗಳಲ್ಲಿ ಬಾರಿಸಾಲದಲ್ಲಿ ನಡೆಯಿತು. ಬ್ಯಾರಿಸ್ಟರ ರಸ… ರೆಂಬ ಮುಸಲ್ಮಾನ ಗೃಹಸ್ಥರೆ ಅದರ ಅಧ್ಯಕ್ಷರಾಗಿದ್ದ… ಪರಿಷತ್ತಿಗೆ ಬೇರೆ ಮುಸಲ್ಮಾನರೂ ಬಂದಿದ್ದರು. … ಯಲ್ಲಿ ಜನಸಮ್ಮರ್ದದ ಕೊರಳಮೇಳದಲ್ಲಿ ವಂ… ಮಾತರಂ ಗೀತಗಾಯನವಾಗಿ ಜಯಜಯಕಾರವಾಯಿ… ಕಲ್ಕತ್ತೆಯಲ್ಲಿ ೧೯೦೬ರಲ್ಲಿ ರಾಷ್ಟ್ರೀಯಸಭೆ ಸೇರಿದ… ಅದರ ಕಾರ್ಯಕಲಾಪಗಳು 'ವಂದೇಮಾತರಂ' ಗೀ… ಗಾಯನದಿಂದಲೆ ಮೊದಲಾದವು; ಮತ್ತು ಪ್ರತಿಯೊ… ವಕ್ತಾರರನ ಸ್ವಾಗತವನ್ನು 'ವಂದೇಮಾತರಂ' ಶಬ್ದದಿಂ… ಮಾಡಲಾಯಿತು. ಈ ಅಧಿವೇಶನಕ್ಕೆ ಹಲವು ಪ್ರಮು… ಮುಸಲ್ಮಾನರು ಉಪಸ್ಥಿತರಾಗಿದ್ದರು. ಈ ಗೀತವ… ಅನ್ನುವಾಗ ಎಲ್ಲರೂ ಎದ್ದುನಿಲ್ಲುವ ವಾಡಿಕೆಯು ಈ … ದಿಂದಲೆ ಪ್ರಾರಂಭವಾಯಿತು.

ದಿವಂಗತ ಸರ್ ಸುರೇಂದ್ರನಾಥ ಬಾನರ್ಜಿಯ… 'ಎ ನೇಶನ್ ಇನ್ ದಿ ಮೇಕಿಂಗ್' ಎಂಬ ಪುಸ್ತಕವ… ಬರೆದಿರುವರು. ಅದರಲ್ಲವರು ಇಂತೆನ್ನುವರು:—

"ಸರಕಾರವು ಒಂದರ ಹಿಂದೊಂದು ಪ್ರಚಾರಪ… ವನ್ನು ಹೊರಡಿಸತೊಡಗಿತು. ಲೋಕಕ್ಷೋಭೆಯ… ಅಡಗಿಸಬೇಕೆಂಬ ಅದರ ಉದ್ದೇಶವೆಲ್ಲಿಯೊ ಉಳಿದು, … ತೆಯ ಅಸಂತೋಷವು ಇನ್ನೂ ಹೆಚ್ಚಾಯಿತು. 'ವಂ… ಮಾತರಂ' ಗೀತದ ಬಗ್ಗೆ ಹೊರಟ ಪತ್ರಕವು ಅಂತಹ… ಒಂದು. ಇದನ್ನು ಪೂರ್ವ ಬಂಗಾಲ ಸರಕಾರವು ಹೊ… ಸಿತ್ತು. ವಂದೇಮಾತರಂ ಗರ್ಜನೆಯನ್ನು ಹಾದಿಯ… ಮಾಡುವುದು ಶಾಸನವಿರುದ್ಧವೆಂದು ಈ ಪತ್ರಕದಿಂ… ನಿರೂಪಿಸಲಾಗಿತ್ತು. ಸರಕಾರದ ಅಭಿಪ್ರಾಯವನ್ನು ಸಮ… ಸುವ ಒಬ್ಬ ಯುರೋಪಿಯನ್ ಅಧಿಕಾರಿಗಳೂ ಇದ್ದ… ಈ ಗೀತದಲ್ಲಿ, ಸೇಡು ತೀರಿಸಲು ಕಾಲೀಮಾತೆಗೆ ಆಹ್ವಾ… ವಿದೆಯೆಂದು ಅವರೆಂದರು. ಅವರಿಗೆ ಈ ಅರ್ಥವು ಹೇ… ಹೊಳೆಯಿತೋ ದೇವರೇ ಬಲ್ಲನು.

"ವಂದೇಮಾತರಂ ಗೀತದ ಪ್ರಾರಂಭದ ಸಾಲುಗ… ಮಾತೃಭೂಮಿಯ ಬಗ್ಗೆ ಪ್ರೇಮ-ಭಕ್ತಿಗಳನ್ನು ಪ್ರದರ್ಶಿ… ವಂತಹವೂ ಆವಳ ಸೌಂದರ್ಯ ಸಾಮರ್ಥ್ಯಗಳನ್ನು ಸ್ತು… ಸುವಂತಹವೂ ಆಗಿವೆ. ಇಂತಹ ನಿರುಪದ್ರವಿಯಾ… ಗೀತದ ಮೇಲೆ ಅಪಾರ್ಥವನ್ನು ಸರಕಾರಿ ಅಧಿಕಾರಿಗಳ…

ಅನ್ಯಾಯವಾಗಿ ಹೇರಿದರು. ನಾವು ಈ ವಿಷಯದಲ್ಲಿ ಕಲ್ಕತ್ತೆಯ ಪ್ರಸಿದ್ಧ ಕಾಯದೆಪಂಡಿತರಾದ ಮಿ. ಪಘೆ ಅವರನ್ನು ವಿಚಾರಿಸಿದೆವು. ಅವರೂ ನಮ್ಮಂತೆಯೆ ಅಭಿಪ್ರಾಯಪಟ್ಟರಲ್ಲದೆ ಸರಕಾರದ ಹೇಳಿಕೆಯು ತಪ್ಪೆಂದು ಹೇಳಿದರು. ಈಚಿಗೆ ಸರಕಾರದವರ ಮತಪರಿವರ್ತನೆಯೂ ಆಗಿ ಅವರೂ ನಮ್ಮ ಅಭಿಪ್ರಾಯಕ್ಕೇ ಸೈಯಿಕ್ಕಿದ್ದಾರೆ.

"ಮಹಾಯುದ್ಧಕಾಲದಲ್ಲಿ ಸೈನ್ಯಭರತಿಗಾಗಿ ಬಂಗಾಲದಲ್ಲಿ ಸಭೆಗಳು ಜರುಗುತ್ತಿದ್ದವು. ಉತ್ತರ ಬಂಗಾಲದಲ್ಲಿಯ ಇಂತಹ ಒಂದು ಸಭೆಗೆ ನಾನು ಹೋಗಿದ್ದೆನು. ಆ ಸಭೆಯಲ್ಲಿ ಈ ಗೀತವನ್ನು ಹೇಳುವಾಗ ಬ್ರಿಟಿಷ್ ಅಧಿಕಾರಿಗಳು ಎದ್ದುನಿಂತುದನ್ನು ನಾನು ನೋಡಿದ್ದೇನೆ. ಬಂಗಾಲಿ ಪಥಕಗಳಲ್ಲಿಯ ಸೈನಿಕರನ್ನು ಬಂಗಾಲಿ ದೇಶಬಾಂಧವರು ಕಾಣಲು ಹೋಬಾಗ 'ವಂದೇಮಾತರಂ' ಎಂಬ ಶಬ್ದಗಳಿಂದಲೇ ಅವರನ್ನು ಸ್ವಾಗತಿಸುತ್ತಿದ್ದರು. ಬಂಗಾಲಿ ಸೈನಿಕರು ಸೈನ್ಯಭರತಿಯ ಸಭೆಗಳಲ್ಲಿ ತಮ್ಮ ಅಧಿಕಾರಿಗಳ ಸಮಕ್ಷಮದಲ್ಲಿಯೆ ಭಾಷಣಗಳನ್ನು ಮಾಡುತ್ತಿದ್ದರು. ಅಗ, ಜರ್ಮನರ ಕಂದಕಗಳಮೇಲೆ ದಾಳಿಯಿಕ್ಕುವಾಗ 'ವಂದೇ ಮಾತರಂ' ಶಬ್ದವನ್ನು ಉಚ್ಚರಿಸುವುದರಲ್ಲಿ ಅವರಿಗೆ ಆನಂದವೂ ಅಭಿಮಾನವೂ ಎನಿಸುತ್ತಿದ್ದುದಾಗಿ ಅವರು ಹೇಳುತ್ತಿದ್ದರು. ಇಂಗ್ಲಿಷ್ ಮೇಲಧಿಕಾರಿಗಳಿಗೆ ಅದು ಅಸಮ್ಮತವಾಗಿದ್ದರೆ, ಇದು ಹೇಗೆ ಸಾಧ್ಯವಾಗುತ್ತಿತ್ತು? ಸಾರಾಂಶವೇನೆಂದರೆ, ಸರಕಾರವು ಒಂದು ಕಾಲಕ್ಕೆ ನಿಷಿದ್ಧವೆಂದು ನಿರ್ಮಾನಿಸಿದ ಈ ಗರ್ಜನೆಯು ಇಂದು ರಾಷ್ಟ್ರವ್ಯಾಪಿಯೂ ಅಖಿಲಭಾರತೀಯವೂ ಆಗಿದೆ. ಪ್ರತಿ ಸಾರ್ವಜನಿಕ ಸಮಾರಂಭದಲ್ಲಿಯೂ ಪ್ರತಿ ಸುಶಿಕ್ಷಿತ ಭಾರತೀಯನು ಈ ಕೂಗನ್ನೆಬ್ಬಿಸುತ್ತಾನೆ. ಅದರಲ್ಲಿ ರಾಜದ್ರೋಹವಾಗಲಿ, ಶಾಂತತಾಭಂಗವಾಗಲಿ ಇದೆಯೆಂದು ಸರಕಾರಕ್ಕೂ ಅನಿಸುತ್ತಿಲ್ಲ.

"ಬಂಕಿಮಚಂದ್ರರು ಈ ಗೀತವನ್ನು ರಚಿಸಿದಾಗ ಅದನ್ನು ರಾಷ್ಟ್ರೀಯ ಆಂದೋಲನಕ್ಕೆ ಈ ಪರಿಯಿಂದುಪಯೋಗಿಸಲಾಗುಹುದೆಂದು ಅವರೆಂದೂ ಭಾವಿಸಿರಲಾರರು. ಡಾಂಟೆಯು ಇಟಲಿಯ ಐಕ್ಯವನ್ನು ಕುರಿತು ಗೀತವನ್ನು ಕಟ್ಟಿದಾಗ ಅದರ ಉಪಯೋಗವನ್ನು ಮ್ಯಾಝಿನಿ-ಗ್ಯಾರಿಬಾಲ್ಡಿಯವರು ರಾಷ್ಟ್ರೀಯರೀತಿಯಲ್ಲಿ ಮಾಡುವರೆಂದಾಗಲಿ, ಇಟಲಿಯ ರಾಜಕೀಯ ಕ್ರಾಂತಿಯಲ್ಲಿ ಅದಕ್ಕಂತಹ ಮಹತ್ವವು ದೊರಬಹುದೆಂದಾಗಲಿ ಕವಿಯು ಕಲ್ಪಿಸಿರಲಾರನು. ಪ್ರತಿಭಾಶಾಲಿಗಳು ತಮ್ಮ ಕಲ್ಪನೆಗಳನ್ನು ತೂರಿಬಿಡುತ್ತಾರೆ. ಅವುಗಳಲ್ಲಿ ಕೆಲವಕ್ಕೆ ಅನುಕೂಲ ಭೂಮಿಯು ದೊರೆತು ಕಾಲದ ಪೋಷಣೆ ಹೊಂದುವವು. ಅವುಗಳಿಗೆ ಹುಲಸಾದ ಕಳೆ ಬಂದು, ಮುಂದಿನ ಪೀಳಿಗೆಗಳಿಗೆ ಅನಿರ್ವಚನೀಯ ಕಲ್ಯಾಣದಾಯಕವಾಗಿ ಪರಿಣಮಿಸುವವು."

* * *

ರಾಷ್ಟ್ರಗೀತದಂತೆ ರಾಷ್ಟ್ರಧ್ವಜದ ಕಥೆಯೂ ರೋಮಹರ್ಷಕವಾಗಿದೆ. ಪ. ವಾ. ಮದಾಮ ಕಾಮಾ ಅವರೇ ನಮ್ಮ ನಾಡಗುಡಿಯನ್ನು ಮೊದಲು ಮೆರೆಯಿಸಿದವರು. ಅವರ ಮೂಲನಾಮವು ಭಿಕಾಯಿಜೀ ರುಸ್ತುಮ ಕಾಮಾ ಎಂದು. ಅವರು ಔಷಧೋಪಚಾರಕ್ಕೆಂದು ಮೊದಲು ವಿಲಾಯತಿಗೆ ಹೋದರು. ಆ ತರುವಾಯ ಪ. ವಾ. ದಾದಾಭಾಯಿ ನೌರೋಜಿಯವರ ಆಯ್ಕೆಯ ಪ್ರಚಾರಕಾರ್ಯದಲ್ಲಿ ಅವರು ಚೆನ್ನಾಗಿಯೆ ಕೆಲಸಮಾಡಿದರು. ಬರುಬರುತ್ತ ಶಾಸನಬದ್ಧ ಚಳವಳಿಯಲ್ಲಿಯ ಅವರ ವಿಶ್ವಾಸವು ಹಾರಿಹೋಯಿತು. ಪಂಡಿತ ಶ್ಯಾಮಜೀ ಕೃಷ್ಣವರ್ಮಾ ಅವರು ಸಂಸ್ಥಾಪಿಸಿದ ಹೋಂರೂಲ್ ಸಂಘಕ್ಕೆ ಅವರು ಸೇರಿಕೊಂಡರು. ಅವರು 'ವಂದೇಮಾತರಂ' ಎಂಬ ಒಂದು ವೃತ್ತಪತ್ರವನ್ನು ಪ್ರಾರಂಭಿಸಿದರು. ಶ್ಯಾಮಜೀ ಕೃಷ್ಣವರ್ಮಾ ಅವರ 'ಇಂಡಿಯಾ ಹೌಸ'ದಲ್ಲಿ ನೆರೆಯುವ ಸಭೆಗಳಿಗೆ ಅವರು ಹಾಜರಾಗುತ್ತಿದ್ದರು. ಯುರೋಪೀಯ ರಾಷ್ಟ್ರಗಳಲ್ಲಿ ಸಂಚರಿಸಿ ಹಿಂದೀ ಸ್ವಾತಂತ್ರ್ಯದ ಪುರಸ್ಕಾರವನ್ನು ತಮ್ಮ ಭಾಷಣಗಳಲ್ಲಿ ಮಾಡುತ್ತಿದ್ದರು. ಬರ್ಲಿನ್‌ದಲ್ಲಿಯ ಸೋಶಾಲಿಸ್ಟರ ಸಭೆಯಲ್ಲಿ ಮಾತನಾಡಲು ಅವರಿಗೆ ಆಗ್ರಹಮಾಡಿದಾಗ, ಅವರು ಸಮ್ಮತಿಸಿ ಮಾತನಾಡಲೆದ್ದರು. ಆಗ ಅವರು ಓರ್ವ ಭಾರತೀಯ ರಾಜಕನ್ಯೆಯಂತೆ ಕಂಡರು. ಅವರು ತೊಟ್ಟ ಬಣ್ಣಬಣ್ಣದ ಹಿಂದೀ ಸೀರೆಯೆ ಅದಕ್ಕೆ ಕಾರಣವಾಗಿತ್ತು. ಪ್ರಾಸ್ತಾವಿಕ ವಾಕ್ಯಗಳನ್ನು ಹೇಳಿ, ಕೂಡಲೆ ತಮ್ಮೊಡನೆ ತಂದ ರೇಶ್ಮೆಯ ಮೂಬಣ್ಣದ ರಾಷ್ಟ್ರಧ್ವಜವನ್ನು ಹೊರದೆಗೆದು ಕೈಯನ್ನು ಮೇಲಕ್ಕೆತ್ತಿ ಎತ್ತರದಲ್ಲಿ ಹಾರಾಡಿಸಿದರು; ಮತ್ತು ಇಂತು ನುಡಿದರು:—

"ಇಕೊಳ್ಳಿ ಹಿಂದುಸ್ತಾನದ ಸ್ವಾತಂತ್ರ್ಯಧ್ವಜವನ್ನು, ಇದು ಇಂಥು ಇಲ್ಲಿ ಜನ್ಮವೆತ್ತಿದೆ. ಸಭ್ಯರೆ, ಈ ಹಿಂದೀ ಸ್ವಾತಂತ್ರ್ಯ ಧ್ವಜವನ್ನು ಸನ್ಮಾನಿಸಲು ತಾವೆಲ್ಲರೂ ಉತ್ಥಾಪನಮಾಡಿ ಅಭಿವಂದಿಸಿರಿ.! ವಂದೇಮಾತರಂ !"

ಸಭೆಗೆ ಸಭೆಯೇ ಎದ್ದುನಿಂತು 'ವಂದೇಮಾತರಂ' ಎಂದು ಉದ್ಘೋಷಮಾಡಿತು! ಹಿಂದುಸ್ತಾನದ ತ್ರಿವರ್ಣ ಸ್ವಾತಂತ್ರ್ಯಧ್ವಜವನ್ನು ಹಾರಿಸಿದುದು ಇದೇ ಮೊದಲಸಲ. 'ವಂದೇಮಾತರಂ' ಶಬ್ದಸಮುಚ್ಚಯವು 'ಸ್ವಾತಂತ್ರ್ಯ'ದೊಂದಿಗೆಯೆ ಮೈದಾಳಿದೆ. ಪ್ರಜಾಪತಿಯು ಪೂರ್ವದಲ್ಲಿ ಪ್ರಜೆಗಳನ್ನು 'ಸಹಯಜ್ಞ' ವಾಗಿಯೆ ಹುಟ್ಟಿಸಿದಂತೆಯೆ ಸ್ವಾತಂತ್ರ್ಯಧ್ವಜವೂ 'ಸಹ-ವಂದೇಮಾತರಂ' ತಲೆಯೆತ್ತಿದುದು ಅವುಗಳ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತದೆ.

ಶ್ರೀಮತಿ ಕಾಮಾ ಅವರು ಬೇನೆಬಿದ್ದು ಡಿಸೆಂಬರ ೧೯೩೫ರಲ್ಲಿ ತಮ್ಮ ವಯಸ್ಸಿನ ೭೫ನೆಯ ವರ್ಷಕ್ಕೆ ಮಾತೃಭೂಮಿಗೆ ಮರಳಿದರು. ಆಗಲೂ "ರಾಜಕೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲ"ವೆಂದು ಸರಕಾರಕ್ಕೆ ಬರೆದುಕೊಡಬೇಕಾಯಿತು. ೧೯೩೬ರ ಅಗಸ್ಟ ೧೨ ತಾ.ನ ದಿನ ಅವರು ಪರಂಧಾಮವನ್ನೈದಿದರು.

ಈ ಆದ್ಯ ರಾಷ್ಟ್ರಧ್ವಜವನ್ನು ಸತ್ಕರಿಸುವ ಸಮಾರಂಭವು ಪುಣ್ಯನಗರಿಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಆಸಮಯದಲ್ಲಿ ಪ್ರಮುಖ ವಕ್ತಾರರಾದ ಬ್ಯಾರಿಸ್ಟರ ಸಾವರಕರ ಅವರು ಮೇಲಣ ಧ್ವಜವನ್ನು ಕುರಿತು ಹೇಳಿದ ಸಂಗತಿಯನ್ನು ಇದರಡಿಯಲ್ಲಿ ಕೊಡಲಾಗಿದೆ:—

ನಾವು ಇಂಗ್ಲಂಡಿನಲ್ಲಿರುವಾಗ 'ಅಭಿನವ ಭಾರತ ಸಂಸ್ಥೆ'ಯೆಂಬ ಒಂದು ಗುಪ್ತಸಂಸ್ಥೆಯು ಸು. ೩೦-೪೦ ವರ್ಷಗಳ ಹಿಂದೆ ಸ್ಥಾಪಿತವಾಗಿತ್ತು. ಈ ಮಂಡಲದ ಕಾರ್ಯಾಲಯದಲ್ಲಿ ನಾನು, ಪಂ. ಶ್ಯಾಮಜೀ ಕೃಷ್ಣವರ್ಮಾ, ಶ್ರೀ. ರಾಣಾ, ಮಾದಾಮ ಕಾಮಾ, ಸೇನಾಪತಿ ಬಾಪಟ ಇಷ್ಟು ಜನ ಸೇರಿ ರಾತ್ರಿಯ ಹೊತ್ತಿನಲ್ಲಿ ಕೆಟ್ಟ ಚಳಿ ಬಿದ್ದಿರುವಾಗ ಗದಗದನೆ ನಡುಗುತ್ತ ಅಗ್ಗಿಷ್ಟಿಕೆಯ ಸುತ್ತು ಕೂಡುತ್ತಿದ್ದೆವು. ನಮ್ಮ ಸಂಸ್ಥೆಯ ಸಭಾಸದರು ಅತ್ಯಲ್ಪ ಜನರಾಗಿದ್ದರು. ಅವರಲ್ಲಿ ಸೇನಾಪತಿ ಬಾಪಟರೊಬ್ಬರೆ ನನಗೆ ಕಾಣುತ್ತಿದ್ದಾರೆ. ಕೆಲವರು ಸ್ಥಾನಬದ್ಧರಾದರು, ಕೆಲವರು ಪತ್ತೆಯಿಲ್ಲದೆ ಹೋದರು, ಕೆಲವರು ಸರಕಾರದ ಹಿಂಸೆ ತಾಳಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡರು. ಕೆಲವರು ಸರಕಾರದ ಕ್ರೋಧಕ್ಕೆ ತುತ್ತಾಗಿ ಗಲ್ಲೇರಿದರು.

ಆದರೆ ನಾವೆಲ್ಲರೂ ಒತ್ತಟ್ಟಿಗಿರುವಾಗ, ಲಂಡನ್‌ದಲ್ಲಿ ನಟ್ಟಿರುಳಿನಲ್ಲಿ ಅಫೀಮು ಸೇವಿಸುವವರಂತೆ ಎತ್ತರೆತ್ತರವಾದ ಗಾಳಿಗೋಪುರಗಳನ್ನು ಕಟ್ಟುತ್ತಿದ್ದೆವು. ನಮ್ಮ ಸಂಸ್ಥೆಯ ಪ್ರತಿಸಭಾಸದನೂ ಕೆಳಗಿನ ಆಣೆಗಳನ್ನು ಮಾಡಬೇಕಾಗಿದ್ದಿತು. ೧. ಏಕತ್ರಿತ ಮತ್ತು ಅಖಂಡ ಹಿಂದುಸ್ತಾನವೆ ನಮ್ಮ ದೇಶ. ೨. ಶಕ್ಯವಾದ ಎಲ್ಲಾ ಮಾರ್ಗಗಳಿಂದಲೂ ಮಾತೃಭೂಮಿಯನ್ನು ಸ್ವತಂತ್ರಗೊಳಿಸಲು ಪ್ರಯತ್ನಿಸುವೆವು. (ಬ್ರಿಟಿಷ್ ಹಿಂದುಸ್ತಾನ, ಫ್ರೆಂಚ್ ಹಿಂದುಸ್ತಾನ, ಪೋರ್ತುಗೀಜ್ ಹಿಂದುಸ್ತಾನ ಎಂಬ ಹೆಸರುಗಳು ನಮಗೆ ಬರ್ಷಣವಾಗಿದ್ದವು.) ೩. ಲೋಕಸತ್ತೆಯೆ ನಮ್ಮ ರಾಜ್ಯಪದ್ಧತಿಯ ಗುರಿ.... ಈ ಪ್ರತಿಜ್ಞೆಗಳ ಸಫಲತೆಗಾಗಿ ನಾವು ಜೀವಮಾನವೆಲ್ಲಾ ಧಾವತಿಪಡುವೆವೆಂದು ಆಣೆತೊಟ್ಟದ್ದೆವು. ನಮ್ಮ ಕೂಟಗಳಲ್ಲಿ ರಾಷ್ಟ್ರಧ್ವಜವು ಎಂತಿರಬೇಕೆಂಬ ಬಗ್ಗೆ ಆಗಾಗ ಚರ್ಚೆಯಾಗುತ್ತಿದ್ದಿತು. ಇಂತಹ ಚರ್ಚೆಯಿಂದಲೆ ನಮ್ಮ ಮುಂದೆ ನೆರೆಯ ರಾಷ್ಟ್ರಧ್ವಜವು ಜನ್ಮವೆತ್ತಿತು.

ರಾಷ್ಟ್ರಧ್ವಜದ ರೂಪರೇಷೆಗಳನ್ನು ನಿರ್ಣಯಿಸು[illegible] ನಮ್ಮ ಮನಶ್ಚಕ್ಷುಗಳೆದುರಿನಲ್ಲಿ ಬೇರೆಬೇರೆ ರಾಷ್ಟ್ರ ಧ್ವಜಗಳು ಬಂದು ನಿಲ್ಲುತ್ತಿದ್ದವು. ಅಮೆರಿಕೆಯ ಧ್ವ[illegible] ಮೇಲೆ ಒಂದು ಮೂಲೆಯಲ್ಲಿ ಚಿಕ್ಕೆಗಳ ಗೊಂಚಲಿದೆ. ತಾರಾಪುಂಜದೊಳಗಿನ ಒಂದೊಂದು ತಾರೆಯು ಅ[illegible] ಕೆಯ ಒಂದೊಂದು ಪ್ರಾಂತದ ಪ್ರತೀಕವಾಗಿದೆ. ಈ ಕ[illegible] ನಮಗೂ ಮಾನ್ಯವಾಗಿ, ನಮ್ಮ ದೇಶದ ವಿವಿಧ ಪ್ರಾ[illegible] ಗಳನ್ನು ಕಮಲಪುಷ್ಪಗಳಿಂದ ಸೂಚಿಸಬೇಕೆಂದು ಗೊ[illegible] ಪಡಿಸಿದೆವು. ಆಗ ಪ್ರಾಂತಗಳ ಸಂಖ್ಯೆಯು ಗೊತ್ತಾ[illegible] ಲಿಲ್ಲ. ಈಗಲೂ ಇನ್ನೂ ಅದು ನಿಶ್ಚಿತವಾಗಿಲ್ಲ. [illegible] ರಿಂದ ಇಂತಿಷ್ಟೆಂದು ನಿಶ್ಚಿತ ಅಂಕೆಯನ್ನು ಗೊತ್ತುಮಾ[illegible] ಧ್ವಜದ ಮೇಲ್ಗಡೆಯ ಹಸುರುಪಟ್ಟಿಯಲ್ಲಿ ಬರೆ[illegible] ಬರುವಷ್ಟು ಕಮಲಪುಷ್ಪಗಳನ್ನೆಲ್ಲ ಬಣ್ಣದಿಂದ ಬರೆ[illegible] ಈ ಧ್ವಜದಲ್ಲಿ ಅವು ಎಂಟಿವೆ. ಅಭಿನವಭಾ[illegible] ಸಂಸ್ಥೆಯು ಬಿಸಿನೆತ್ತರಿನ ಹರಯದವರದಾಗಿರುವುದ[illegible] ಮೇಲಣ ಪಟ್ಟಿಗೆ ಹಸುರು ಬಣ್ಣವನ್ನು ಕೊಟ್ಟೆವು. ನ[illegible] ನಡು ಕೇಸರೀ ಬಣ್ಣದ್ದಾಗಿದೆ. ಅದು ಗೆಲುವಿನ ಗು[illegible] ಮೂರನೆಯದು ಕೆಂಪುಬಣ್ಣ, ಅದು ಶಕ್ತಿಯ ದ್ಯೋತ[illegible] ಆದರ ಮೇಲೆ ಸೂರ್ಯಚಂದ್ರರನ್ನು ಬರೆದಿದೆ.

ಯಾವ ಪಾರ್ಸಿ ಭಗಿನಿಯಾದ ಮಾದಾಮ ಕಾಮಾ[illegible] ಸ್ವಾತಂತ್ರ್ಯಧ್ವಜಕ್ಕೆ ಮೂರ್ತಸ್ವರೂಪ ಕೊಟ್ಟ[illegible] ಯಾವ ವಂಗಬಂಧುಗಳಾದ ಹೇಮಚಂದ್ರದಾಸರು [illegible] ಬಣ್ಣ ಕೊಟ್ಟರೋ ಅವರ ಸ್ಮರಣೆಯನ್ನು ಈ ದಿನ ಮಾ[illegible] ವುದು ನಮ್ಮ ಪವಿತ್ರ ಕರ್ತವ್ಯವು.

೧೯೦೭ರಲ್ಲಿ ಲಾಲಾ ಲಜಪತರಾಯರನ್ನು ಸೆರೆಹಿಡಿ[illegible] ಮಾದಾಮ ಕಾಮಾ ಅವರು ಹಿಂದೀ ಜನರಿಗೊ[illegible] ಬಹಿರಂಗ ಪತ್ರವನ್ನು ಬರೆದಿದ್ದರು. ಆದರಲ್ಲಿ "ಹಿಂ[illegible] ಮುಸಲ್ಮಾನ-ಪಾರ್ಸಿ-ಕ್ರಿಶ್ಚನ್-ಶೀಖ"ರ ಐಕ್ಯವನ್ನು [illegible] ಉಪದೇಶಿಸಿದ್ದಾರೆ. ಪತ್ರದ ಕೊನೆಯ ಭಾಗದಲ್ಲಿ, "ಹಿ[illegible] ಸ್ತಾನವು 'ವಂದೇಮಾತರಂ' ಗರ್ಜನೆಯ ಸ್ಫೂರ್ತಿಯಿ[illegible] ಒಂದಾಗಲಿ!" ಎಂದು ಆಶಿಸಿದ್ದಾರೆ. 'ವಂದೇಮಾ[illegible] ಉಚ್ಚಾರವು ಆ ಪಾರ್ಸಿ ವಿದುಷಿಗೆ ಭಾರತೀಯ [illegible] ಬೀಜಮಂತ್ರವಾಗಿ ತೋರಿದ್ದಿತು; ಆದುವೆ ಮುಸಲ್ಮಾ[illegible] ಇಸ್ಲಾಂ-ವಿರೋಧಕವಾಗಿ ಕಾಣುತ್ತಲಿದೆ! ಇದು ದುರ್ವಿಪಾಕವೆ ಸರಿ! ಕೊನೆಗೂ 'ವಂದೇಮಾತರಂ'! [illegible] ಶಾಲಿಯಾಗುವುದು ಖಚಿತ!

ವಂದೇಮಾತರಂ !



ಯಾರ ಮಗು?

★

ಮರಣಾಸನ್ನಳಾದ ನೀಲಮ್ಮನು ತನ್ನ ಪತಿಗೆ "ಮಗು ನಿಮ್ಮದಲ್ಲ" ಎಂದು ಹೇಳಿ ಹೊರಟು ಹೋದಳು. ಬಸಪ್ಪನಿಗೆ ಮಗು ತನ್ನದಲ್ಲವೆಂಬ ಸಂದೇಹವು ಕೊನೆಯವರೆಗೂ ಬಾಧಿಸಿತು!

★

ಕತೆಗಾರ್ತಿಯರು:
ಶ್ರೀಮತಿ ಎಸ್. ಕಮಲಾದೇವಿ ಎಂ. ಎ.

ನವದಾಂಪತ್ಯದ ಅನುಭವಸುಖವನ್ನರಿತವರಿಗೇ ಗೊತ್ತು ಬಸಪ್ಪನ ಸಂಸಾರದ ಸವಿ. ಮನದೊಲವಿನ ಮಡದಿಯ ಕಟಾಕ್ಷದಿಂದಾಕರ್ಷಿಸಲ್ಪಡದ ಪುರುಷನಾರು! ಅಬಲೆಯ ಸೊಬಗಿನ ಮೋಹಜಾಲದಿಂದ ಆಹ್ಲಾದಿತ ಮನಸ್ಕನಾಗದಿರುವ ಮನುಷ್ಯನು ಮಹಾತ್ಮನಾಗಿರಬೇಕು, ಇಲ್ಲವೆ ಮರುಳನಾಗಿರಬೇಕು. ನಮ್ಮ ಬಸಪ್ಪನು ಮಹಾತ್ಮನೂ ಅಲ್ಲ, ಮರುಳನೂ ಅಲ್ಲ. ಪ್ರಾಪಂಚಿಕ ಕಷ್ಟಸುಖಗಳ ಸಾಗರತರಂಗಗಳಲ್ಲಿ ತೇಲಾಡುತ್ತಿರುವ ಮಾನವಕೋಟಿಗಳಲ್ಲೊಬ್ಬನು. ಅಶಿಕ್ಷಿತಜನರು ಪ್ರೇಮದ ಪ್ರಾಬಲ್ಯವನ್ನರಿಯರೆಂದೆಣಿಸುವ ಸುಶಿಕ್ಷಿತರೀಗಲೂ ಉಂಟು. ಆದರೆ ಮಾನವ ಸ್ವಭಾವವು ಎಲ್ಲೆಲ್ಲಿಯೂ ಒಂದೇ ಅಲ್ಲವೆ?

ನೀಲಮ್ಮನನ್ನು ನೋಡುವುದಕ್ಕೆ ಮೊದಲು ಯಾರಾದರೂ, ಬಸಪ್ಪನು ಸಾಯುವಾಗ ತನ್ನ ಮೊದಲ ಹೆಂಡತಿಗೆ ಕೊಟ್ಟ ವಚನವನ್ನು ಮುರಿಯುತ್ತಾನೆಂದೆಣಿಸಿರಲಿಲ್ಲ. ಆದರೆ ದೈವಪ್ರೇರಣೆಯೋ, ಹಣೆಯಬರಹವೋ, ಏನೆಂದಾದರೂ ಹೇಳಿಕೊಳ್ಳಬಹುದು. ಹೆಣ್ಣಿನ ಹಂಬಲವನ್ನು ತೊರೆದ ಬಸಪ್ಪನ ಹೃದಯವು ನೀಲಮ್ಮನನ್ನು ನೋಡಿದ ಕೂಡಲೆ ಕರಗಿ ನೀರಾಯಿತು. ಬಸಪ್ಪನು ಧಷ್ಟಪುಷ್ಟ ಮನುಷ್ಯ. ಲೌಕಿಕನು. ಮೇಲೆ ಪ್ರಪಂಚಜ್ಞಾನವನ್ನು ಚೆನ್ನಾಗಿ ಅರಿತವನು. ಮೇಲೂ, ತನಗೆ ಬೇಕಾದುದನ್ನು ಸಾಧಿಸಲು ಹೆದರುವ ಪುಕ್ಕನಲ್ಲ.

ಬಸಪ್ಪನು ನೆರೆಯೂರಿಗೆ ಮರಿಯಣ್ಣನ ಜಾತ್ರೆಗೆ ಹೋಗಿದ್ದ. ಅಲ್ಲಿಗೆ ನೀಲಮ್ಮನ ತಾಯಿತಂದೆಗಳೂ ಬಂದಿದ್ದರು. ಜಾತ್ರೆಯ ಹಂಬಲವಿಲ್ಲದ ಹಳಬರುಂಟೆ? ನೀಲಮ್ಮನಿಗೆ ಈಗ ಹದಿನೈದು ತುಂಬಿ ಹದಿನಾರರಲ್ಲಿ ಬಿದ್ದಿದೆ. ಹುಡುಗಿಯು ರೂಪವತಿಯಲ್ಲದಿದ್ದರೂ, ಕಳೆವಂತಿ. ಬಣ್ಣ ಸಾದಗಪ್ಪು. ವಿಶಾಲವಾದ ಕಾಡಿಗೆಕಣ್ಣು. ತೀಡಿದ ನಿಡಿಹುಬ್ಬು. ಬಾಗಿದ ಮೂಗು. ಅದರ ಮೇಲೆ ಮಿರುಗುವ ಹಸರುಕಲ್ಲಿನ ಮೂಗುಬೊಟ್ಟು. ಗುಂಗುರುಕೂದಲಿಂದಾವರಿಸಿದ ಮುದ್ದಾದ ಪುಟ್ಟ ಹಣೆ. ಕಿರುನಗೆಯಿಂದ ಮಿನುಗುತ್ತಿರುವ ಕೆಂದುಟಿ. ಹರೆಯಿಂದ ಹುರಿದುಂಬಿದ ಮೈಕಟ್ಟು. ಹುಡುಗಿಯು ಅಷ್ಟು ಎತ್ತರವಾಗಿರದಿದ್ದರೂ, ಕುಳ್ಳಾಗಿರಲಿಲ್ಲ.

ಬಸಪ್ಪನು ಪಂಪಾಪತಿಯ ದರ್ಶನಮಾಡಿಕೊಂಡು ದೇವಸ್ಥಾನದ ಜಗಲಿಯ ಮೇಲೆ ಸ್ವಲ್ಪ ಶಾಸ್ತ್ರಕ್ಕೆಂದು ಕೂತುಕೊಂಡ. ತೆಂಗಿನ ಚಿಪ್ಪನ್ನೊಡೆದು ದೇವರ ಪ್ರಸಾದವನ್ನು ಬಾಯಲ್ಲಿ ಹಾಕಿಕೊಂಡು, ಅತ್ತಿತ್ತ ನೋಡುತ್ತಿದ್ದ. ಇನ್ನೂ ದೇವರ ದರ್ಶನಕ್ಕೆ ಬರುತ್ತಿರುವ ಜನರ ಗುಂಪು ತಂಡ ತಂಡವಾಗಿ ಬರುತ್ತಲೇ ಇತ್ತು. ನೀಲಮ್ಮನೂ ತಾಯಿತಂದೆಗಳೊಡನೆ ಗುಡಿಯಿಂದ ಹೊರಗೆ ಬಂದಳು. ಹಳ್ಳಿಗಾಡಿನವರು ಸರಳ ಸ್ವಭಾವದವರು. ಒಣ ಡಂಭಾಚಾರವನ್ನು ಅರಿಯರು. ಒಬ್ಬರ ಪರಿಚಯವನ್ನೊಬ್ಬರು ಮಾಡಿಕೊಳ್ಳುವುದಕ್ಕವರಿಗಾರೂ ಮಧ್ಯಸ್ಥರು ಬೇಕಾಗಿಲ್ಲ. ಅದರಲ್ಲಿ ಜಾತ್ರೆಯಂತಹ ಸ್ಥಳದಲ್ಲಿ ಇದು ಅತಿ ನಿರಾಯಾಸವಾಗಾಗುವ ಕೆಲಸ. ಹೊಗೆಬಂಡಿಯಲ್ಲಿ ಪ್ರಯಾಣ ಮಾಡುವಾಗಲೂ, ನೌಕೆಯಲ್ಲಿ ಹೋಗುವಾಗಲೂ, ಜನರಲ್ಲೊಂದು ವಿಧವಾದ ಸ್ನೇಹಭಾವವುಂಟಾಗುವುದಿಲ್ಲವೇ?

ಬಸಪ್ಪನು ಮೆಲ್ಲನೆದ್ದು ಅವರ ಹಿಂದೆಯೇ, ಸ್ವಲ್ಪ ದೂರ ಹೋದ. ಸಮಯ ನೋಡಿ ಮಾತಿಗೆ ಮೊದಲುಮಾಡಿದ:

ಬಸಪ್ಪ:— "ಈಸಲ ಗದ್ದಲ ಕಮ್ಮಿ. ದೇವರ ದರ್ಶನ ಸುಸೂತ್ರವಾಗಿ ಆಯಿತು."

ಗೌರಣ್ಣ:—"ಹೌದು, ಸ್ವಾಮಿ. ಹೋದ ವರ್ಷ ಬಂದು, ದೇವರ ದರ್ಶನಕ್ಕೆ ಮೂರು ತಾಸು ಕಾದಿದ್ದು, ಈ ಪೂಜಾರಿಗೆ ಹನ್ನೆರಡಾಣೆ ಲಂಚಕೊಟ್ಟೆ. ಆದರೂ ಎರಡು ನಿಮಿಷವಾದರೂ ದೇವ

ರನ್ನು ಕಣ್ತುಂಬ ನೋಡೋದಕ್ಕಿಡ್ಲಿಲ್ಲ. ಏನ್ಹನ ಕಿಕ್ರಿಸಿದ್ರುಂದ್ರೀ. ನಿಮ್ದಾಂಶಿ ಊರ್ರೀ. ನನ್ಹೆಸರು ಗೌರಣ್ಣ. ನಮ್ದು ಕಂತೀಹಳ್ಳಿ.

ಬಸಪ್ಪ:— "ನನ್ಹೆಸ್ರು ಬಸಪ್ಪ. ನಮ್ದು ಕಾರೇಹಳ್ಳಿ. ಇಲ್ಲಿಂದ್ಮೂರ್ಮೈಲು. ನಿಮ್ಮೂರ್ಗೋಗ್ಬೇಕಾದ್ರೆ ನಮ್ಮೂರ್ಮೇಲೆ."

ಹೀಗೆ ಮಾತಿಗೆ ಮೊದಲಿಲ್ಲ, ಕಥೆಗೆ ಕಾಲಿಲ್ಲ. ಗೌರಣ್ಣನಿಗೆ ಹರಟೆ ಬೇಕು; ಬಸಪ್ಪನಿಗೆ ಅವರ ಪರಿಚಯ ಬೇಕು.

ಗೌರಣ್ಣ ಜೋಡೆತ್ತಿನ ಬಂಡಿಯಲ್ಲಿ ಬಂದಿದ್ದ. ನೀಲಮ್ಮ, ಪಾರ್ವತಮ್ಮ, ತಾನು ಮೂರೇ ಜನ. ಬಂಡಿಯಲ್ಲಿ ಬೇಕಾದಷ್ಟು ಸ್ಥಳವಿತ್ತು. ಬಸಪ್ಪ ಒಬ್ಬನೆ. ಹೊತ್ತು ಮುಳುಗಿತು. "ಕತ್ತಲೆಯಾಯ್ತು. ನಾವ್ಹೇಗಾದ್ರೂ ನಿಮ್ಮೂರ್ಮೇಲೆ ಹೋಗ್ಬೇಕು. ಬಂಡೀಲ್ಬೇಕಾದಷ್ಟು ಸ್ಥಳ ಇದೆ. ಬನ್ರೀ" ಅಂದ ಗೌರಣ್ಣ. ರೋಗಿ ಬಯಸಿದ್ದೂ ಹಾಲನ್ನ, ವೈದ್ಯ ಹೇಳಿದ್ದೂ ಹಾಲನ್ನ. ಬಸಪ್ಪನನ್ನೊಪ್ಪಿಸುವುದಕ್ಕೆ ಬಲವಂತ ಬೇಕೆ?

ದಾರಿಯುದ್ದಕ್ಕೂ ಆ ಮಾತು, ಈ ಮಾತು ಆಡುತ್ತಾ ಎತ್ತುಗಳನ್ನು ಹೋದಹಾಗೆ ಬಿಟ್ಟ ಗೌರಣ್ಣ. ಸರಿ, ಕಾರೇಹಳ್ಳಿಗೆ ಬರುವ ಹೊತ್ತಿಗೆ ಹೊತ್ತು ಎಂಟು ಘಂಟೆಯಾಯಿತು. ರಾತ್ರಿ ತಮ್ಮ ಮನೆಯಲ್ಲಿಯೇ ತಂಗಿದ್ದು ಹೊತ್ತಾರೆ ಎದ್ದು ಊರಿಗೆ ಹೊರಡಬೇಕೆಂದು ಬಸಪ್ಪನ ಬಲಾತ್ಕಾರ. ಗೌರಣ್ಣನಿಗೂ, ಕಾಳುರಾತ್ರಿಯಲ್ಲಿ ಹೆಂಗುಸರನ್ನು ಕರೆದುಕೊಂಡು ಮುಂದಕ್ಕೆ ಪ್ರಯಾಣ ಮಾಡುವುದು ಯುಕ್ತವಲ್ಲವೆಂದು ತೋರಿತು.

ಬಸಪ್ಪನಿಗೆ ಹತ್ತಿರಹೊಂದಿದವರಾರೂ ಇಲ್ಲ. ಮನೆಯಲ್ಲಿರುವುದು ತಾಯಿ ಮಗ ಇಬ್ಬರೆ. ಸೂರಕ್ಕನಿಗೆ ತಾಯಿ ಕಡೆಯಿಂದ ಬಂದ ಆಸ್ತಿ ಇವರಿಗೆ ಉಂಡುಡುವುದಕ್ಕೆ ತಾಪತ್ರಯವಿಲ್ಲದಷ್ಟಿದ್ದಿತು. ಬಸಪ್ಪನೂ ಸಾಗುವಳಿಯಿಂದ ಸಂಸಾರ ಸಾಗುವಷ್ಟು ಗಳಿಸುತ್ತಿದ್ದ. ಸೂರಕ್ಕನ ಸ್ವಭಾವವು ಸಕ್ಕರೆಯಂತಹುದು. ಆಕೆಗೆ ಮಗನೆಂದರೆ ಪಂಚಪ್ರಾಣ. ಅವನೂ ಸದ್ಗುಣಿ. ಯಾವ ವಿಧವಾದ ದುರ್ವ್ಯಸನಗಳೂ ಇಲ್ಲ. ಸ್ವಲ್ಪ ಓದುಬರಹವೂ ಬರುವುದು. ಒಂಭತ್ತನೆಯ ಕ್ಲಾಸಿನವರೆಗೂ ಓದಿದ್ದ. ಅವನಿಗೆ ಶಾಲೆಯಲ್ಲಿ ಓದುತ್ತಿರುವಾಗ ಎಲ್ಲಕ್ಕಿಂತಲೂ ಹಿಂದೂದೇಶದ ಚರಿತ್ರೆಯೆಂದರೆ ತುಂಬಾ ಇಷ್ಟ. ಅದರಲ್ಲೂ ಶಿವಾಜಿಯ ಚರಿತ್ರೆಯನ್ನು ಓದುವುದಕ್ಕೆ ಕುಳಿತನೆಂದರೆ ಊಟ ನಿದ್ದೆಯನ್ನೂ ಮರೆತು ಬಿಡುವನು. ಈಗಲೂ ಇವನೋದದ, ಶಿವಾಜಿಯ ವಿಷಯವಾಗಿ ಬರೆದ ಐತಿಹಾಸಿಕ ಕಾದಂಬರಿಗಳೊಂದೂ ಉಳಿದಿಲ್ಲ. ಎಲ್ಲರೂ ಸಾಮಾನ್ಯವಾಗಿ ಕಾದಂಬರಿಗಳನ್ನೊಂದುಸಲ ಓದುತ್ತಾರೆ. ಇವನಾದರೋ, ಕಾದಂಬರಿಗಳನ್ನೆಷ್ಟು ಸಲ ಓದಿದ್ದಾನೋ, ಲೆಕ್ಕವಿಲ್ಲ. ಇನ್ನೂ ಅವನ್ನೋದುತ್ತಾನೆ. ಸೂರಕ್ಕನಿಗೆ ಓದುಬರಹ ಒಂದೂ ಬಾರದು. ಆಕೆಗಿರುವುದೊಂದೇ ಕೊರಗು. "ಮಗನಿಗೆ ಓದಿನ ಹುಚ್ಚ್ಯಾವಾಗ ಬಿಟ್ಟೀತು. ಸಂಸಾರದ ಹುಚ್ಚ್ಯಾವಾಗ ಹಿಡಿದೀತು. ಮೊಮ್ಮಗನನ್ನ್ಯಾವಾಗ ಕಂಡೇನು?" ಎಂದು ನೆರೆಮನೆಯ ಹೆಂಗಸರಿಗೆ ಹೇಳಿಕೊಂಡು ಉಸುರ್ಗರೆಯುತ್ತಿದ್ದಳು.

ಸೂರಕ್ಕನು ಮಗನ ದಾರಿಯನ್ನೆದುರುನೋಡುತ್ತಾ ನಡುಮನೆಯಲ್ಲಿ ದೀಪವನ್ನಿಟ್ಟುಕೊಂಡು ಬೇಳೆಯನ್ನಾರಿಸುತ್ತಾ ಕುಳಿತಿದ್ದರು. ಮನೆಯ ಮುಂದೆ ಬಂಡಿ ನಿಂತುದನ್ನು ನೋಡಿ ಯಾರಿರಬಹುದೆಂದು ಹಾಗೆ ಬಗ್ಗಿ ನೋಡುವುದರೊಳಗೆ ಬಸಪ್ಪನು ಬಂಡಿಯಿಂದಿಳಿದು ಬಂದು,

"ಅಮ್ಮಾ, ದೀಪ ತೊಗೊಂಡ್ಬಾ." ಎಂದು ಕರೆದನು. ಸೂರಕ್ಕನು ಯಾರೋ ಗಂಡಸರು ಬಂದಿರಬೇಕೆಂದು ದೀಪವನ್ನು ತಂದು ಜಗುಲಿಯ ಮೇಲಿಟ್ಟು ಬಾಗಿಲಲ್ಲಿ ಹೋಗಿ ನಿಂತಳು. ಪಾರ್ವತಮ್ಮ, ನೀಲಮ್ಮ ಬಂಡಿಯಿಂದಿಳಿದು ಬಂದರು. ಬಸಪ್ಪನು ತಾಯಿಗೆ "ಅವರನ್ನು ಒಳಗೆ ಕರೆದುಕೊಂಡು ಹೋಗಮ್ಮ" ಎಂದನು.

ಸೂರಕ್ಕ ಒಳಗೆ ಕರೆದೊಯ್ದು ಆದರಿಸಿ ಕುಳ್ಳಿರಿಸಿದಳು. ಹೊತ್ತಾಗಿದ್ದುದರಿಂದ ನೀರಿನ ಮನೆಗೆ ಕರೆದುಕೊಂಡು ಹೋಗಿ ಅವರು ಕೈಕಾಲು ತೊಳೆದುಕೊಂಡ ಮೇಲೆ ಅಡಗೆಯ ಮನೆಯಲ್ಲಿ ಚಾಪೆಹಾಕಿ ಅವರನ್ನು ಕೂರಿಸಿ ತಾನು ಊಟದ ಸಿದ್ಧತೆ ಮಾಡತೊಡಗಿದಳು.

ಬೆಳಿಗ್ಗೆ ಹಬ್ಬದ ಊಟ. ಹುಳಿ, ಸಾರು, ಮುಂತಾದ ಸಾಧಕಗಳು ಉಳಿದಿದ್ದುವು. ಬೇಗ ಬಿಸಿ ಅನ್ನಮಾಡಿ ಬಂದವರಿಗೆ ಬಡಿಸಿದಳು. ಊಟವಾದ ಮೇಲೆ ಗೌರಣ್ಣ, ಬಸಪ್ಪ ಎಲೆ ಅಡಕೆ ಹಾಕಿಕೊಳ್ಳುತ್ತಾ ಹೊರಗಿನ ಪಡಸಾಲೆಯಲ್ಲಿ ಕುಳಿತಿದ್ದರು.

ಸೂರಕ್ಕನೂ ಬೇಗ ಊಟದ ಶಾಸ್ತ್ರ ಮುಗಿಸಿಕೊಂಡು ಪಾರ್ವತಮ್ಮನ ಜೊತೇಲಿ ಮಾತಾಡುತ್ತಾ ಕುಳಿತಳು. ಪಾಪ. ಅವರಿಗಿನ್ನೂ ಬಂದ ಅತಿಥಿಗಳೊಡನೆ ಮಾತನಾಡುವುದಕ್ಕವಕಾಶವೇ ದೊರೆತಿರಲಿಲ್ಲ.

ಇಬ್ಬರು ಹೆಂಗುಸರು ಕಲೆತರೆ ಸರಿ. ಮೊದಲು ಬರುವುದು ಮದುವೆಯ ಮಾತು. ಅದರಲ್ಲೂ ಸೂರಕ್ಕನಿಗೆ ಬೆಳೆದ ಹೆಣ್ಣಿನಲ್ಲಿ ಇಲ್ಲದ ಕುತೂಹಲ.

ಸೂರಕ್ಕ:— "ಏನಮ್ಮಾ, ಮಗಳು ಮದುವೆಗಾಗಿದ್ದಾಳೆ. ವರ ಗೊತ್ತಾಗಿದೆಯೆ?"

ಪಾರ್ವತಮ್ಮ:— "ಇಲ್ಲಮ್ಮ, ಈಗಿನ ಕಾಲದಲ್ಲೊಂದು ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದ ಹಾಗೆ. ವರ ಸಿಗುವುದೊಂದು ಮಹಾ ಗಂಡಾಂತರವಾಗಿದೆ. ನಮ್ಮ ಮರಿಗಂತೂ ಯಾವ ವರ ಬಂದರೂ ಸರಿಬೀಳುವುದಿಲ್ಲ. ವಿದ್ಯಾವಂತ ಅಳಿಯ ಬೇಕಂತೆ."

ಸೂರಕ್ಕ:— "ಏನೋ, ಕಂಕಣಬಂಧನದ ಕಾಲ ಕಲೆತು ಬರಬೇಕಲ್ಲ. ಸಮಯ ಬಂದರೆ ಎಲ್ಲಾ ಸಿದ್ಧಿಸುತ್ತೆ."

ಮಾತು ಮುಗಿಯುವ ಹೊತ್ತಿಗೆ ಘಂಟೆ ಹನ್ನೊಂದಾಯಿತು. ಮರುದಿನ ಬೇಗ ಹೊರಡಬೇಕಾಗಿದ್ದುದರಿಂದ ಎಲ್ಲರೂ ಮಲಗಿಕೊಂಡರು.

ಸೂರಕ್ಕನು ಮನಸ್ಸಿನಲ್ಲಿ, ಮಗ ಒಪ್ಪಿದರೆ ನೀಲಮ್ಮನನ್ನೇ ಮನೆಗೆ ಕರೆತರಬೇಕೆಂದು ಅಂದುಕೊಂಡರು.

ನಸುಕಿನಲ್ಲಿಯೇ ಎದ್ದು ಗೌರಣ್ಣ, ಪಾರ್ವತಮ್ಮ, ನೀಲಮ್ಮನು ಊರಿಗೆ ಹೊರಟರು.

ಬೆಳೆದ ಹುಡುಗಿ ಮನೆಯಲ್ಲಿರುವುದು ತಂದೆತಾಯಿಗಳಿಗೊಂದು ಎದೆಯ ಮೇಲೆ ಕಲ್ಲನ್ನು ಹೊತ್ತ ಹಾಗೆ. ಹೆಣ್ಣುಗಂಡಿನ ಕಡೆಯವರಿಬ್ಬರೂ ಒಪ್ಪಿದ ಮೇಲೆ ತಡವೇತರದು? ಇಬ್ಬರ ಜಾತಕವನ್ನೂ ನೋಡಿದ್ದಾಯಿತು. ಎಲ್ಲಾ ಕಲೆತು ಬಂದು ಶ್ರಾವಣದಲ್ಲಿ ವಿವಾಹವೂ ನಡೆಯಿತು. ನಿಷೇಕವೂ ಆಯಿತು. ಹುಡುಗಿಯು ಬೆಳೆದಿರುವಾಗ ಆಲಸ್ಯವೇಕೆ? ಬಸಪ್ಪನಿಗೆ ಮೆಚ್ಚಿನ ಮಡದಿಯೂ, ಸೂರಕ್ಕನಿಗೆ ಮುದ್ದಿನ ಸೊಸೆಯೂ ಬಂದಳು.

ಪ್ರೌಢ ದಾಂಪತ್ಯದ ಫಲಕ್ಕೆ ವಿಳಂಬವೆ? ಸೂರಕ್ಕನಿಗಂತೂ ಹಿಡಿಸಲಾರದಷ್ಟು ಸಂತೋಷ. ಎಲ್ಲವೂ ಸಾಂಗನಾಯಿತು. ಪುತ್ರೋತ್ಸವವೂ ಆಯಿತು. ಆದರೆ ಸಂಸಾರದಲ್ಲಿ ಸುಖವನ್ನು ಮಾತ್ರ ಕಂಡ ಪುಣ್ಯಾತ್ಮರುಂಟೆ! ಅದೂ ಅಲ್ಲದೆ ಒಂದು ವೇಳೆ ಯಾವಾಗಲೂ ಸುಖವಿದ್ದರೆ ಜನರಿಗೆ ಬದುಕಿನಲ್ಲಿ ಬೇಸರವುಂಟಾಗುವುದು. ಪ್ರಸಿದ್ಧ ಇಂಗ್ಲೀಯ ಲೇಖಕನಾದ ಅಲ್ಡಸ್ ಹಕ್ಸಲೆ ಹೇಳಿದ ಮಾತೇನೂ ಸುಳ್ಳಲ್ಲ: "Life is worry, worry is life. Without worry a person is half dead." ಚಿಂತೆಯಿಲ್ಲದ ಜೀವನ ಮಾಧುರ್ಯವಿಲ್ಲದ ಮಾಗಿದ ಹಣ್ಣಿನಂತೆ. ಇದು ಸೃಷ್ಟಿಯ ನಿಯಮ. ಇದಕ್ಕೆ ಹೊರೆಗಾದ ಮಾನವನುಂಟೆ?

ಹೆತ್ತ ಮೂರನೆಯ ದಿನ ನೀಲಮ್ಮನಿಗೆ ಸ್ವಲ್ಪ ಮೈಕಾವಾಯಿತು. ಒಡನೆ ವೈದ್ಯರನ್ನು ಕರೆಯಿಸಿ ನೋಡಿಸಿದರು. ಬಸಪ್ಪನಾಗಲೀ, ಸೂರಕ್ಕನಾಗಲೀ ಔಷಧ ಪಥ್ಯಗಳಿಗೇನೂ ಕೊರತೆ ಮಾಡಲಿಲ್ಲ. ಆದರೆ ದೈವ ಸಂಕಲ್ಪವನ್ನು ತಡೆಯುವುದಕ್ಕಾದೀತೆ! ನೀಲಮ್ಮನ ಜ್ವರವು ಹೆಚ್ಚಾಯಿತು. ಒಂದೆಕ್ಕೊಂದು ಬೆಳೆದು, ರೋಗವು ಬಲಿತು ಎಲ್ಲರೂ ನೀಲಮ್ಮನ ಆಶೆಯನ್ನು ಬಿಟ್ಟರು. ಒಂಭತ್ತನೆಯ ದಿನ ನೀಲಮ್ಮನು ಮುಚ್ಚಿದ ಕಣ್ಣು ತೆಗೆಯಲಿಲ್ಲ. ಮೈಮೇಲೆ ಎಚ್ಚರವಿರಲಿಲ್ಲ. ಹುಚ್ಚಾಬಟ್ಟೆ ಬಡಬಡಿಸುವುದು. ರಾತ್ರಿ ಒಂದು ಘಂಟೆಗೆ ಕಣ್ಣುಬಿಟ್ಟು ನೋಡಿದಳು. ಸ್ವಲ್ಪ ಪ್ರಜ್ಞೆ ಬಂದಹಾಗಿತ್ತು. ಹೆತ್ತತಾಯಿಗಿಂತ ಹೆಚ್ಚಾಗಿ ಸೂರಕ್ಕ ರಾತ್ರಿ ಹಗಲು ರೋಗಿಯ ಶುಶ್ರೂಷೆ ಮಾಡುತ್ತಿದ್ದಳು. ನೀಲಮ್ಮನಿಗೆ ಸ್ವಲ್ಪ ಗೆಲುವಾಗಿದ್ದುದನ್ನು ನೋಡಿ, ಸೂರಕ್ಕ,

"ನೀಲಾ, ಏನಮ್ಮ, ನಾನಾರು? ಗುರ್ತು ಸಿಕ್ಕಿತೇ" ಎಂದಳು.

ನೀಲಮ್ಮ:— "ಅತ್ತೆಮ್ಮ"…. ಸ್ವಲ್ಪ ಕಿತ್ತು ಹಾಗೆ ನೋಡುತ್ತಾ "ಅವರೆಲ್ಲಿ?"

ಸೂರಕ್ಕ:— "ಇಲ್ಲಿಯೇ ಇದ್ದಾನೆ. ಕರೆಯಲೆ?"

ನೀಲಮ್ಮನು 'ಹೂಂ' ಎಂದು ತಲೆಯಲ್ಲಾಡಿಸಿದಳು. ಸೂರಕ್ಕನು ಬಸಪ್ಪನನ್ನು ಕರೆದು, ಸ್ವಲ್ಪ ಹಾಲನ್ನು ಬಿಸಿಮಾಡಿ ತರೋಣವೆಂದು ಅಡಿಗೆಯ ಮನೆಗೆ ಹೋದಳು.

ಬಸಪ್ಪನು ಬಗ್ಗಿ ನೀಲೆಯ ತಲೆಯನ್ನು ಸವರುತ್ತಾ "ನೀಲಾ, ಏನು" ಎಂದು ಗದ್ಗದಕಂಠವಲ್ಲ ಕೇಳಿದನು.

ನೀಲಮ್ಮ- "ಅಯ್ಯೋ, ಅಳಬೇಡಿ. ನೀವು…. ಕಣ್ಣೀರು ಬಿ….ಡುವಷ್ಟು ಯೋಗ್ಯವಾದ ಮನು….ನಾನಲ್ಲ. ನಾನು ಮಹಾ….ಪಾಪಿ….ಕೊನೆಯ ಕಾಲದಲ್ಲಿ ನಿಮ್ಮ ಕ್ಷಮೆಯನ್ನು ಬೇಡು….ತ್ತೇನೆ. ಇಲ್ಲದಿದ್ದರೆ…. ನನಗೆ…. ನರಕದಲ್ಲೂ, ಸ್ಥಳ ಸಿಕ್ಕನು….ಅ…. ಮ್ಮಾ….ನೀರು…."

ಬಸಪ್ಪನು ಎರಡು ಚಮಚೆ ಹಾಲನ್ನು ಬಾಯಲ್ಲಿ ಬಿಟ್ಟ. ಹಾಗೆ ಅವಳ ಕೈಯನ್ನು ಹಿಡಿದುಕೊಂಡು ನೆಲದ ಮೇಲೆ ಮಂಡೆಗಾಲೂರಿ ಕುಳಿತು, ಮೆಲ್ಲಗೆ ಸವರುತ್ತಾ, "ಮಾತಾಡಿ

ಆಯಾಸ ಮಾಡಿಕೋಬೇಡ ನೀಲೂ. ಈಗ ನಿದ್ರೆಮಾಡು. ನಾಳೆ ಎಲ್ಲಾ ಹೇಳುವಂತೆ. ”

“ಅಯ್ಯೋ ನಾಳೆಯಂ.....ತೆ....ನಿಮ್ಗೊಂದು....ಹುಚ್ಚು.” ಅವನ ಕೈಯನ್ನೊತ್ತಿ, “ ಮಗು .... ನಿಮ್ಮದ .... ಲ್ಲಾ. ಕ್ಷಮಿ....ಸುವಿರಾ. ” ಧ್ವನಿಯು ಮೊದಲೆ ಕ್ಷೀಣ. ಆಯಾಸ ದಿಂದ ಮಾತೇ ಹೊರಡಲೊಲ್ಲದು. ಬಸಪ್ಪ ಇನ್ನೂ ಬಗ್ಗಿದ. “ಮಗುವಿನ—ಹೆಸರು :...ಶಿವ....”

ಮುಂದೆ ನಾಲಗೆ ನಿಂತುಹೋಯಿತು. ಬಾಯಾಡಲಿಲ್ಲ. ಕಣ್ಣು ಮುಚ್ಚಿದುವು. ಪುನಃ ತೆಗೆಯಲಿಲ್ಲ.

ಮಾನವ ಸ್ವಭಾವದ ಮರ್ಮವನ್ನರಿತ ಮೇಧಾವಿ ಗಳುಂಟೆ! ಪಾಶ್ಚಾತ್ಯ ದೇಶಗಳಿಗೆ ಹೋಗಿ ಮನಃಶಾಸ್ತ್ರ (Psychology) ವನ್ನು ಪರಿಶೋಧಿಸಿ ಬಂದಿರುವ ಪಂಡಿತ ರೆಲ್ಲಾ, ಮನಃಶಾಸ್ತ್ರವು ತೋಡಿದಷ್ಟೂ ಆಳವಿದೆ ಎಂದು ಹೇಳುತ್ತಾರೆ.

ಹೆಂಡತಿಯ ಮರಣಾನಂತರ ಬಸಪ್ಪನು ಮೊದಲಿನ ಬಸಪ್ಪನಲ್ಲ. ಯಾರನ್ನಿವನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದನೋ, ಅವಳು ಕುಲಟೆ, ವ್ಯಭಿಚಾರಿಣಿ, ಮೋಸಗಾರ್ತಿ. ಅವನಿಗೆ ಮಂಕು ಹಿಡಿದಂತಾಯಿತು. ಯಾವ ಭಾವನೆಯ ಪ್ರಜ್ಞೆಯೂ ಇರಲಿಲ್ಲ. ಪ್ರಾಪಂಚಿಕ ವ್ಯವಹಾರದಲ್ಲಾವುದರಲ್ಲಿಯೂ ಅವನಿಗೆ ರುಚಿ ಇಲ್ಲ. ಮಗುವಿನ ಮೇಲೆ ಪ್ರೇಮವೂ ಇಲ್ಲ, ದ್ವೇಷವೂ ಇಲ್ಲ. ಯಾವಾಗಲಾದರೂ “ ಪಾಪ ಅದೇನು ಮಾಡೀತು ” ಎಂದು ಕನಿಕರಪಡುವನು.

ಸೂರಕ್ಕನು “ಇನ್ನೊಂದು ಮದುವೆ ಮಾಡಿಕೊ, ನನಗೆ ವಯಸ್ಸಾಯಿತು. ಮಗುವನ್ನು ನೋಡಿಕೊಳ್ಳುವುದಕ್ಕಾ ದರೂ ಯಾರಾದರೂ ಬೇಡವೆ? ” ಎಂದು ಪೀಡಿಸುವಳು. ಇವನದಾವುದಕ್ಕೂ ಕಿವಿಗೊಡನು. ಇವನಿಗೆ ಸಂಸಾರದಲ್ಲಿ ಉತ್ಸಾಹವಿಲ್ಲ. ಸ್ತ್ರೀಸಂಪರ್ಕದಲ್ಲಿ ಲಾಲಸೆ ಇಲ್ಲ, ಜೀವಿತ ದಲ್ಲಿ ಬೇಸರ.

ಹೀಗೆಯೇ ಮೂರು ವರ್ಷಗಳಾದುವು. ಅವನ ಜಡ ವಾದ ಮನಸ್ಸು ಸ್ವಲ್ಪ ಚಲಿಸತೊಡಗಿತು. ಇತ್ತೀಚೆಗೆ ನೀಲೆಯಾಡಿದ ಕೊನೆಯ ಮಾತುಗಳು ಇವನನ್ನು ಪದೇ ಪದೇ ಪೀಡಿಸುವುವು. ಇದುವರೆಗಿದ್ದ ಉದಾಸೀನತೆಯು ಈಗಿಲ್ಲ. ಇವನನ್ನು ಈಗ ಅಹರ್ನಿಶಿಯು ದಹಿಸುತ್ತಿದ್ದು ದೊಂದೇ ಒಂದು ಯೋಚನೆ. ಬಾಲೆಯಾದ ನೀಲೆಯ ಹೃದಯವನ್ನು ಚೋರಿಸಿದವನನ್ನು ಕಂಡುಹಿಡಿಯ ಬೇಕೆಂಬ ಕುತೂಹಲ. ಆ ಕುತೂಹಲದಲ್ಲಿ ದ್ವೇಷ ಈರ್ಷೆ ಇಲ್ಲ. ಕಂಡುಹಿಡಿದ ಮೇಲೆ ಏನು ಮಾಡಬೇಕೆ ಊಹೆ ಇಲ್ಲ. ಅವನ ಮನಸ್ಸು ಈ ರೀತಿಯ ಯೋಚನಾತರಂಗಗಳಲ್ಲಿ ಹೊಯ್ದಾಡುತ್ತಿರುವ ಸ ಯಕ್ಕೆ ಸರಿಯಾಗಿ ಗೌರಣ್ಣನ ಕಡೆಯಿಂದ ಒಂದು ಒಂದು ಕಾಗದ ಬಂದಿತು:—

“ ಮಗಳೇನೋ ತೀರಿ ಹೋದಳು. ಅತ್ತು ಫಲ ಹೇಗಾದರೂ ಮೊಮ್ಮಗನನ್ನೊಂದು ಸಲ ಕರೆತಂದು ಕೊಡಿಸಿ ” ರೆಂದು. ಬಸಪ್ಪನು ಮಗುವನ್ನೆತ್ತಿಕೊ ಮಾರನೇ ದಿನವೇ ಕಂತೇಹಳ್ಳಿಗೆ ಬಂದನು.

ಪಾಪ ಗೌರಣ್ಣ-ಪಾರ್ವತಮ್ಮನವು ಬೇಡಾದ ಬ “ ಇದ್ದೊಬ್ಬ ಮಗಳು ಕಾಲವಾದಳು. ಮಗುವನ್ನಾ ನೋಡಿ ಕಾಲ ಹಾಕುತ್ತೇವೆ. ಇಲ್ಲೇ ಬಿಟ್ಟು ಹೋ ಎಂದು ಪರಿಪರಿಯಾಗಿ ಬೇಡಿಕೊಂಡರು.

ಬಸಪ್ಪನು ಒಪ್ಪಲಿಲ್ಲ. ಈಗವನಿಗೆ ಮಗುವಿನ ಇಲ್ಲದ ಅಭಿಮಾನ. ಅದು ಪ್ರೇಮಸ್ವರೂಪವೋ, ದ್ವೇ ಬೀಜವೋ ಹೇಳಲಾಗದು, ಅವನು ಮಗುವನ್ನು ಬ ಕ್ಷಣ ಇರಲಾರ.

ಪಾಪ ಮುದುಕರಿಗೆ ಇನ್ನೆರಡು ದಿನವಾದರೂ ನೋ ನನ್ನಿಟ್ಟುಕೊಂಡಿರಬೇಕೆಂದಾಸೆ. ಆ ಊರ ಜಹ ದಾರರ ಮಗ ಸೀಮೆಗೆ ವಿದ್ಯಾಭ್ಯಾಸಕ್ಕೆ ಹೋಗಿ ಬರುತ್ತಿದ್ದನು. ಹಳ್ಳಿ ಜನರು ಒಳ್ಳೆ ಸಂಭ್ರಮದಿಂದ ನನ್ನು ಬರಮಾಡಿಕೊಳ್ಳಬೇಕೆಂದು ಆಡಂಬರದಿಂದ ಕರಣೆ ಮಾಡುತ್ತಿದ್ದರು. ಗೌರಣ್ಣನು ಈ ಉತ್ಸವ ನೋಡಿಕೊಂಡು ಹೋಗುವಂತೆ ಅಳಿಯನನ್ನು ಪ್ರಾರ್ಥಿ ಕೊನೆಗೆ ಬಸಪ್ಪನು ಒಪ್ಪಿಕೊಂಡನು.

ಮಾತಿಗೆ ಮಾತು ಬಂದು ಬಸಪ್ಪನು, ಜಹಗೀರದಾ ಮಗನ ವಿಷಯವಾಗಿ ಗೌರಣ್ಣನನ್ನು ಪ್ರಶ್ನಿಸತೊ ದನು. ಹುಡುಗನು ಬಹಳ ಸಭ್ಯನೆಂದೂ ನೀಲಮ್ಮ ಅವನೂ ಒಂದೇ ಕಡೆ ಆಡಿ ಬೆಳೆದರೆಂದೂ, ದೊಡ್ಡ ಮಗನಾದರೂ ಜಂಬವಿಲ್ಲದೆ ತಮ್ಮ ಮನೆಗೆ ಬ ಹೋಗುತ್ತಾ ತುಂಬಾ ಸಲಿಗೆಯಿಂದಿದ್ದನೆಂದೂ ಗೌರಣ್ಣ ಹುಡುಗನ ಗುಣಗಳನ್ನು ವರ್ಣಿಸಿ ಹೇಳಿದನು.

ಬಸಪ್ಪ:— “ ಅವರ ಹೆಸರೇನು ? ”

ಗೌರಣ್ಣ:— “ಸದಾಶಿವರಾಯ. ಆದರೆ ನಾವೆಲ್ಲಾ ಶಿವ ಎಂದು ಕರೆಯುತ್ತೇವೆ.”

ಬಸಪ್ಪನಿಗೆ ಮಿಂಚಿನಂತೆ ಒಂದರಕ್ಷಣದಲ್ಲಿ ಹೊಳೆಯಿತು: ಸಾಯುವಾಗ ನೀಲೆಯು ಮಗುವಿಗೆ 'ಶಿವಪ್ಪ'ನೆಂದು ಹೆಸರಿಡಬೇಕೆಂದು ಕೋರಿದುದರರ್ಥ.

ಒಂದು ಚಿಕ್ಕ ಹಳ್ಳಿಯಲ್ಲಿ ಜಹಗೀರದಾರನೆಂದರೆ ರಾಜನಿದ್ದ ಹಾಗೆ. ಆದರಲ್ಲೂ ಸೀಮೆಗೆ ಹೋಗಿ ಬರುವನೆಂದರೆ ಕೇಳಬೇಕಾದ್ದೇನು? ಅವರ ಮನೆಮುಂದೆ ಹಳ್ಳಿಯವರೆಲ್ಲ ಕಲೆತು, ಮಾವಿನ ಎಲೆಗಳಿಂದಲೂ, ಬಾಳೆಯ ಕಂಬಗಳಿಂದಲೂ ಅಲಂಕಾರ ಮಾಡಿದ್ದರು. ಹಳ್ಳಿಯ ಜನರೆಲ್ಲರೂ ಅಲ್ಲಿ ನೆರೆದಿದ್ದರು. ಸದಾಶಿವರಾಯನು ಇದಕ್ಕೆಲ್ಲ ಬಹಳ ಸಂತೋಷಪಟ್ಟು ಕೃತಜ್ಞತೆಯಿಂದ ತಲೆಬಾಗಿ ಕೈಮುಗಿದು ಯುಕ್ತವಚನಗಳಿಂದ ಎಲ್ಲರನ್ನೂ ಆದರಿಸಿ ಮನ್ನಿಸಿದನು. ಬಸಪ್ಪನೂ ಈ ಗುಂಪಿನಲ್ಲಿ ಸೇರಿ ಸದಾಶಿವರಾಯನನ್ನು ಎವೆಯಿಕ್ಕದೆ ನೋಡಿದನು. ಅವನ ಭವ್ಯವಾದ ಆಕಾರ, ಸೌಮ್ಯ ರೂಪು, ಶಾಂತವಾದ ಕಳೆಯಿಂದ ಮುಗ್ಧನಾದನು. ವಿಚಿತ್ರವಾದ ಯೋಚನಾತರಂಗಗಳವನ ಹೃದಯವನ್ನು ಅಲ್ಲೋಲಕಲ್ಲೋಲ ಮಾಡತೊಡಗಿದುವು. ತನ್ನ ಮುಂದೆ ನಡೆಯುತ್ತಿರುವುದಾವುದೂ ಅವನ ದೃಷ್ಟಿಗೆ ಗೋಚರಿಸುತ್ತಿರಲಿಲ್ಲ. ಅವನ ಮನೋನಿರ್ಮಿತ ಭಾವನೆಯ ಘಟನೆಗಳಲ್ಲಿಯೇ ಅವನು ಲೀನನಾದನು. ಸದಾಶಿವರಾಯನು ಬಸಪ್ಪನ ಮನೋರಾಜ್ಯದಲ್ಲಿ ಸಾಧಾರಣವಾದ ಒಬ್ಬ ಜಹಗೀರದಾರನ ಮಗನಾಗಿರಲಿಲ್ಲ. ಮರಾಠಾಧಿಪತಿ ಶಿವಛತ್ರಪತಿಯ ವಂಶೋತ್ಪನ್ನನಾದ ರಾಜಪುತ್ರನಾಗಿದ್ದನು. ಬಸಪ್ಪನು ಪುನಃ ಊರಿಗೆ ತಿರುಗಿ ಬಂದ ಮೇಲೂ ಅವನಿಗೆ ಈ ಹುಚ್ಚು ಬಿಡಲಿಲ್ಲ. ನೀಲೆಯು ಅವನಿಗೆ ಈಗ ವ್ಯಭಿಚಾರಿಣಿಯಾಗಿ ಕಾಣಿಸಲಿಲ್ಲ. ತನಗನುರೂಪನಾದ ಪತಿಯನ್ನು ವರಿಸಿದ, ಬಡ ರೈತನ ಹೊಟ್ಟೆಯಲ್ಲಿ ಜನ್ಮವೆತ್ತಿದ ಮಹಾಸಾಧ್ವಿಯಾದಳು. ಅವಳಿಂದ ಹುಟ್ಟಿದ ಮಗು ತನ್ನ ವಂಶವನ್ನುದ್ಧರಿಸುವುದಕ್ಕೆ ಪುನರ್ಜನ್ಮವೆತ್ತಿದ ಶಿವಾಜಿರಾಜ. ಅವನ ಲಾಲನೆ ಪಾಲನೆಯಂತಹ ಸುಫಲವನ್ನು ತನಗೊದಗಿಸಿಕೊಟ್ಟ ಪರಮೇಶ್ವರನನ್ನು ಭಕ್ತಿಪೂರ್ವಕವಾಗಿ ನಮಿಸುವನು. ಶ್ರೀಕೃಷ್ಣನ ಸಾಕುತಂದೆಯಾದ ನಂದನಿಗೂ ತನಗೂ ಇರುವ ಭೇದವೇನೆಂದು ಮನದಲ್ಲಿ ಹಿಗ್ಗುವನು.

ಪಾಪ, ಸೂರಕ್ಕನಿಗಿದು ಯಾವುದೂ ತಿಳಿಯದು. ತಾಯಿಯಿಲ್ಲದ ಮಗುವನ್ನು ಮುದ್ದಿಸುವುದರಲ್ಲಿವಳಿಗಾವ ಆಗಾಧವೂ ತೋರದು. ಹೆಂಡತಿಯ ಮರಣದಿಂದ ಅನುಭವಶಾಲಿಯೂ, ಲೌಕಿಕಜ್ಞಾನಿಯೂ ಆದ ಬಸಪ್ಪನೂ ಹೀಗಾದನೇ, ಎಂದು ಆಡಿಕೊಳ್ಳುವರು ಜನರು.

ಹೀಗೆಯೇ ಒಂದೊಂದಾಗಿ ಹದಿನೈದು ವರ್ಷಗಳಾದುವು. ಬಸಪ್ಪನ ಭ್ರಮೆಯು ಹೆಚ್ಚಾಗುತ್ತಾ ಬಂದಿತೇ ವಿನಾ ಕಮ್ಮಿಯಾಗಲಿಲ್ಲ. ಈ ಮನೋವಿಭ್ರಮಣೆಗಿಂತ ಹೆಚ್ಚಿನ ವಿಭ್ರಮಣೆಯೇನುಂಟು?

ಶಿವಪ್ಪನು ಬೆಳೆದ ಹಾಗೆಲ್ಲಾ ಬಸಪ್ಪನ ಪ್ರತಿಬಿಂಬವೇನೋ, ಎಂಬ ಹಾಗೆ ಕಾಣುತ್ತಿದ್ದನು. ಶಿವಾಜಿಯ ಗುರುತುಗಳಾಗಲೀ, ಸದಾಶಿವರಾಯನ ಹೋಲಿಕೆಯಾಗಲೀ ಅವನಲ್ಲಿ ಕಾಣುತ್ತಿರಲಿಲ್ಲ. ಇದೊಂದು ದೊಡ್ಡ ಯೋಚನೆ ಬಸಪ್ಪನಿಗೆ.

ಒಂದು ಸಲ ಗೌರಣ್ಣ, ಪಾರ್ವತಮ್ಮ ಮೊಮ್ಮಗನನ್ನು ನೋಡಬೇಕೆಂದು ಕಾರೇಹಳ್ಳಿಗೆ ಬಂದು ಅಲ್ಲಿಯೇ ಒಂದು ತಿಂಗಳಿದ್ದರು. ಮಗಳನ್ನು ಕಳೆದುಕೊಂಡ ದುಃಖವು ಮಾಸಿತ್ತು. ದುಃಖವನ್ನು ದೂರಮಾಡುವುದಕ್ಕೆ ಕಾಲಕ್ಕಿಂತಲೂ ಮೀರಿದ ಪಥ್ಯವಾವುದು? ಈಗ ಪಾರ್ವತಮ್ಮನು ನೀಲೆಯ ಹೆಸರೆತ್ತಿದೊಡನೆ ಅಳುತ್ತಿರಲಿಲ್ಲ. ನೀಲಮ್ಮನು ಮಗುವಾಗಿರುವಾಗ ಆಡುತ್ತಿದ್ದ ಆಟಪಾಟಗಳನ್ನೂ ಮಾಡುತ್ತಿದ್ದ ಕುಚೇಷ್ಟೆಗಳನ್ನೂ ವರ್ಣಿಸಿ ವರ್ಣಿಸಿ ಹೇಳುವಳು. ಅದು ಅವಳಿಗೆ ಒಂದು ವಿಧವಾದ ಸಮಾಧಾನವನ್ನು ಕೊಡುವುದು.

ಮಧ್ಯಾಹ್ನದ ಹೊತ್ತು. ಅದೇ ಊಟವಾಗಿತ್ತು. ಗೌರಣ್ಣ ಪಡಸಾಲೆಯ ಚಾಪೆಯ ಮೇಲೆ ಮಲಗಿದ್ದ. ಹೊತ್ತು ಕಳೆಯುವುದಕ್ಕೆ ಬಸಪ್ಪ ಇಸ್ಪೇಟನ್ನಿಟ್ಟುಕೊಂಡು ತನ್ನಷ್ಟಕ್ಕೆ ತಾನೆ ಪೇಷೆನ್ಸ (Patience) ಆಡುತ್ತಿದ್ದ. ಪಾರ್ವತಮ್ಮನೂ. ಸೂರಕ್ಕನೂ ಒಳಮನೆಯಲ್ಲಿ ಕುಳಿತುಕೊಂಡು ಎಲೆ ಹಚ್ಚುತ್ತಿದ್ದರು. ಇಬ್ಬರು ಹೆಂಗಸರು ಕೂತುಕೊಂಡು ಸುಮ್ಮನೆ ಕೆಲಸಮಾಡುವುದಕ್ಕಾದೀತೆ! ಪಾರ್ವತಮ್ಮನು ನೀಲಮ್ಮನ ಬಾಲ್ಯದ ವಿಷಯಗಳನ್ನೇನೋ ಹೇಳುತ್ತಿದ್ದಳು.

"ನಮ್ಮಮ್ಮನಂತಹ ಕಲ್ಪನಾಶಕ್ತಿಯುಳ್ಳವರ್‍ಯಾರೂ ಇಲ್ಲ ಕಣ್ರೀ. ಅವರಿಗೆ ಬಲಹೀನವಾಗಿದ್ದಾಗ ಮತಿಭ್ರಮಣೆಯಾಗುತ್ತಿದ್ದಿತಂತೆ. ಆಗವರು ಏನೇನೋ ಮಾತಾಡ್ತಿದ್ರಂತೆ. ಆಮೇಲ್ಕೇಳಿದ್ರೆ ಅವರ್ಗೇನೂ ಗೊತ್ತಾಗ್ತಿರಲಿಲ್ಲ. ಅಂಥಾವೆ ಚಿನ್ಹಗಳು ನಮ್ಮ ನೀಲಮ್ಮನಲ್ಲೂ ಕಂಡ್ಬರ್ತಿದ್ದುವು. ತನ್ನ ಮನೋರಾಜ್ಯದಲ್ಲಿರುವಾಗವಳಿಗೇನೂ ಹೊರಗಿನ

ಪ್ರಪಂಚಜ್ಞಾನವೇ ಇರ್ತಿರಲಿಲ್ಲ. ಒಮ್ಮೊಮ್ಮೆ ಅವಳಾಡೋ ಮಾತ್ಕೇಳಿ ನಂಗಂತೂ ದಿಗ್ಭ್ರಮೆ ಹಿಡಿದಂತಾಗುತ್ತಿತ್ತು. ಚಿಕ್ಕೋಳಾಗಿದ್ದಾಗ ಅವಳ್ಯಾವಾಗ್ಲೂ ನಮ್ಮೂರ ಜಹಗೀರ್ದಾರರ ಮಗನ್ನೇ ಮದ್ವೇ ಮಾಡ್ಕೋತೀನಿ ಅಂತಿದ್ಲು. ಅವಳ್ಗೇನೂ ತಿಳೀದು. ಹದಿನಾಲ್ಕು ವರ್ಷದ್ಹುಡುಗಿಯಾಗಿದ್ರೂ ಅವಳು ಹಾಗೆ ನಂಬಿದ್ಲು. ಅವರು ಸೀಮೇ ಗೋದೋದಕ್ಹೋದ್ಮೇಲೆ ಕೂಡ ಅವಳಂದುಕೊಂಡಿದ್ಲು, ಅವರ್ಬಂದು ತನ್ನನ್ಮದ್ವೆಯಾಗ್ತಾರೆ ಅಂತ."

ಹೊರಗೆ ಕೂತಿದ್ದ ಬಸಪ್ಪನಿಗಿದೆಲ್ಲಾ ಕೇಳಿಸಿತು. ಅವನ ಕಣ್ಣೀಗ ನಿಚ್ಚಳವಾಯಿತು. ತಲೆಯನ್ನಾವರಿಸಿದ ಮಬ್ಬಾರಿ ಹೋಯಿತು. ನಿಜ ಸಂಗತಿಯು ವಿಶದವಾಯಿತು. ಹೆರಿಡಿಟೀ (Heredity)–ವಂಶಪಾರಂಪರ್ಯವಾಗಿ ಬಂದ ಮತಿವಿಭ್ರಮಣೆ ಎಂಬ ರೋಗದ ಪ್ರಭಾವವೆಂತಹದು! ಪಾಪ, ನೀಲೆಯು ಬಾಲ್ಯದ ಹಗಲುಗನಸುಗಳನ್ನು ಅಂತ್ಯಕಾಲದಲ್ಲಿ ನಿಜವೆಂದು ನಂಬಿದಳು. ಆದರೆ ಬಸಪ್ಪನಿಗೆ ಹೆಂಡತಿಯು ನಿಷ್ಕಳಂಕಳೆಂದು ಕೇಳಿದಮೇಲೆ ಆನಂದವಾಗುವುದಕ್ಕೆ ಬದಲು ಆಕುಲವುಂಟಾಯಿತು. ಅವನು ಮನಸ್ಸಿನಲ್ಲಿ ಮಾಡಿಕೊಂಡಿದ್ದ ಮಂಡಿಗೆಯೆಲ್ಲ ಸುಟ್ಟು ಬೂದಿಯಾಯಿತು.

ಇದನ್ನು ಹೇಗಾದರೂ ಪೂರಾ ಗೊತ್ತುಹಚ್ಚಬೇಕೆಂದು ಬಸಪ್ಪನು ಗೌರಣ್ಣನೆದ್ದ ಕೂಡಲೆ ಸದಾಶಿವರಾಯನು ಸೀಮೆಗೆ ಹೋದ ಕಾಲವಾವುದೆಂದು ವಿಚಾರಿಸಲು ನೀಲಮ್ಮನ ಮದುವೆಯಾಗುವುದಕ್ಕೆ ಒಂದು ವರ್ಷ ಮುಂಚಿತವಾಗಿ ಎಂದು ತಿಳಿಯಬಂದಿತು. ಆದರೆ ನೀಲೆಯು ಹಾಗೆ, ಹೇಳುವುದಕ್ಕೆ ಕಾರಣವೇನಿರಬಹುದೆಂದು ಎಷ್ಟು ಯೋಚನೆ ಮಾಡಿದರೂ ಬಸಪ್ಪನಿಗೆ ಬಗೆಹರಿಯಲಿಲ್ಲ.

ಬೆಂಗಳೂರಲ್ಲಿದ್ದ, ಮನಃಶಾಸ್ತ್ರಪ್ರವೀಣರಾಗಿ ವಿಲಾಯತಿಯಲ್ಲಿ ವ್ಯಾಸಂಗ ಮಾಡಿ ಅನೇಕ ಪದಕಗಳನ್ನು ಪಡೆದ ಡಾಕ್ಟರ ರಾಮರಾಯರ ಹೆಸರು ಕಂತೀಹಳ್ಳಿಗೂ ಹರಡಿತ್ತು. ಬಸಪ್ಪನು ಅವರನ್ನು ನೋಡಿ ಬರಬೇಕೆಂದು ಹೊರಟ

ಅವನ ಕಥೆಯನ್ನೆಲ್ಲಾ ಕೇಳಿದ ಮೇಲೆ ರಾಮರಾಯರು ಹಾಗೆ ಸ್ವಲ್ಪ ಹೊತ್ತು ಮೌನವಾಗಿದ್ದರು. ಅನಂತರ ಮೆಲ್ಲಗೆ

"ಮನಸ್ಸು ಅತ್ಯಂತ ಖಿನ್ನವಾಗಿರುವಾಗಲೂ, ದೇಹ ಬಲಹೀನವಾಗಿರುವಾಗಲೂ, ಮತ್ತು ಮೃತ್ಯುಕಾಲ ಲ್ಲಿಯೂ, ಜನರು ಮತಿಭ್ರಾಂತರಾಗಿ ಹೀಗೆ ಹೇಳು ದುಂಟು. ಇದಕ್ಕೆ ಇಂಗ್ಲೀಷಿನಲ್ಲಿ (Hallucination ಎನ್ನುತ್ತಾರೆ. ಆದರಲ್ಲೂ ಅವರು ಯಾವುದನ್ನು ಉ ಟೇಚ್ಛೆಯಿಂದ ಕೋರುತ್ತಾರೋ, ಅದು ಸಿದ್ಧಿಸಿದ ಹಾ ಅವರಿಗೆ ಇಂತಹ ಸಂಭವಗಳಲ್ಲಿ ತೋರುವುದು. ನಿ ಪತ್ನಿಯು ಬಾಲ್ಯಸ್ನೇಹಿತನನ್ನು ಮನಸ್ಸಿನಲ್ಲಿ ಪ್ರೇಮಿಸುತ್ತಿ ಬಹುದು. ಆ ಪ್ರೇಮವನ್ನು ಜಾಗರೂಕತಾವಸ್ಥೆಯಲ್ಲಿ ಇತ ರಿಂದ ಅವರು ಬಚ್ಚಿಟ್ಟಿರಬಹುದು. ಇಂತಹ ಉದಾಹರ ಗಳೆಷ್ಟೋ ಇವೆ. ಮಾನವಸ್ವಭಾವವೊಂದು ಯಕ್ಷ ಇದ್ದ ಹಾಗಿದೆ. ಅದರ ಕುಚೋದ್ಯವನ್ನರಿಯುವುದು ಬಹ ಕಷ್ಟ" ಎಂದರು.

ಬಸಪ್ಪನು ಪೆಚ್ಚುಮುಖ ಹಾಕಿಕೊಂಡು ಊರಿಗೆ ಬಂ ಮಗನು ಜಗುಲಿಯ ಮುಂದೆ ಹಳ್ಳಿಯ ಹುಡುಗರೊಂ ಆಡುತ್ತಿದ್ದ. ಅವನನ್ನು ನೋಡಿದ ಕೂಡಲೆ ಒತ್ತಿ ಅವನ ರೋಷವು ಎಲ್ಲೆಮೀರಿತು. ಆವೇಶ ಬಂದವನ ಮಗನ ಕಿವಿಯನ್ನು ಹಿಡಿದು ಎಳೆಯುತ್ತಾ—

"ಥೂ, ಪಿಶಾಚಿಯೆ. ತೊಲಗು ನನ್ನ ಮುಂದಿರಬೇ ಇಂತಹ ಆಟಗಳೇ ನಿನಗೆ! ಈ ಹಳ್ಳಿಗಾಡರೊಂದಿಗೆ ಸೇರುತ್ತೀ?"

"ನಾನಾರ ಜೊತೆಯಲ್ಲಿ ಸೇರಬೇಕಪ್ಪ. ಮತ್ತೆ?"

"ಸದಾಶಿವರಾಯನ ಮಗ ಹೀಗೆಯೇ ಆಡುತ್ತಾ ಕಾಲೇಜಿನಲ್ಲಿ ಹೋಗಿ ಓದುತ್ತಾನೆ."

"ಅವನಿಗೂ ನನಗೂ ಸಂಬಂಧವೇನಪ್ಪ. ಅವ ದೊಡ್ಡವರ ಮಗ. ಅದಕ್ಕೆ ನಾನೇನು ಮಾಡಲಿ."

"ಏನು ಮಾಡಲಿ? ಸರ್ವನಾಶಮಾಡಿದೆ!" ಎ ಭರಭರನೆ ಹೊರಟುಹೋದ. ಹೋಗುತ್ತಾ "ಇವನು ನ ಮಗನೆ? ಎಂದಿಗೂ ಇರಲಾರದು. ನನ್ನ ಮಗನೆ?" ನಲ್ಲಿ ಇವನ ರಚನಾಪ್ರಪಂಚದ ಶಿವಾಜಿರಾಜನ ಶರೀರ.

ಬಸಪ್ಪನನ್ನಾವರಿಸಿದ್ದುದಿದೆಂತಹ ಯಕ್ಷಿಣಿ ಇರಬೇ

ಚಿತ್ರಾಂಗದಾ*

(ಕಾವ್ಯಾವಲೋಕನ)

ಲೇಖಕರು: ಪ್ರೊ. ಎಸ್. ಎಸ್. ಮಾಳವಾಡ ಎಂ ಎ.

ಕನ್ನಡಿಗರಿಗೆ ಸುಪರಿಚಿತರಾದ ಕೆ. ವಿ. ಪುಟ್ಟಪ್ಪನವರ ಕಾವ್ಯಕೃತಿಯಿದು. ಪೌರಾಣಿಕಪಾತ್ರವಾದ ಚಿತ್ರಾಂಗದೆಯ ರಮ್ಯಜೀವನವನ್ನು ಸಂಪೂರ್ಣವಾಗಿ ಸರಳ ರಗಳೆಯಲ್ಲಿ ಅವರು ಚಿತ್ರಿಸಿದ್ದಾರೆ. ಇದು ಆರು ಪರ್ವಗಳಾಗಿ ವಿಭಾಗಿಸಲ್ಪಟ್ಟದೆಯಾದರೂ ಬೇರೆ ಬೇರೆ ಪರ್ವಗಳಿಗೆ ಹೆಸರುಗಳನ್ನು ಕೊಟ್ಟಿಲ್ಲ. ಚಿತ್ರಾಂಗದೆಯ ಪಾತ್ರದ ವಿಷಯವಾಗಿರುವ ಬೇರೆ ಬೇರೆ ಸಂಗತಿಗಳನ್ನು ಸಮನ್ವಯಿಸಿ ಕವಿಗಳು ಒಂದು ನೂತನ ಕಲಾಕೃತಿಯನ್ನು ನಿರ್ಮಿಸಿರುವದರಿಂದಲೂ ಇಡಿ ಕಾವ್ಯವು ಪುಟ್ಟಪ್ಪನವರಿಂದ ಸರಳ ರಗಳೆಯಲ್ಲಿ ಬರೆಯಲ್ಪಟ್ಟಿರುವದರಿಂದಲೂ ಕನ್ನಡಿಗರಿಗೆ ಈ ಗ್ರಂಥದಲ್ಲಿ ಒಂದು ವಿಶಿಷ್ಟ ಸ್ವಾರಸ್ಯವು ಕಂಡುಬರದೆ ಇರದು.

ಈ ಕಾವ್ಯದ ಉದ್ದೇಶ, ಅದರ ನಿರ್ವಹಣದಲ್ಲಿಯ ಯಶಸ್ಸು, ಉಪಯೋಗಿಸಿದ ಸಾಧನಗಳ ಔಚಿತ್ಯ ಇವುಗಳನ್ನು ಅರಿತುಕೊಳ್ಳಲಿಕ್ಕೆ ಮುನ್ನುಡಿಯಲ್ಲಿ ಗ್ರಂಥಕರ್ತರ ಮಾತುಗಳು ಉಪಯುಕ್ತವಾಗಿವೆ.

"ಅಲ್ಲಿಯ (ಜೈಮಿನಿ ಭಾರತದಲ್ಲಿಯ) ಆಕೆಯ (ಚಿತ್ರಾಂಗದೆಯ) ಚಿತ್ರವನ್ನು 'ಉತ್ತರ ಚಿತ್ರಾಂಗದಾ' ಎಂದು ಕರೆಯಬಹುದು. ವಂಗಕವಿ ರವೀಂದ್ರನಾಥ ಠಾಕೂರರ.... ಚಿತ್ರಾನಾಟಕದಲ್ಲಿ ಚಿತ್ರಾಂಗದೆಯ ಪೂರ್ವಜೀವನವನ್ನು ಚಿತ್ರಿಸಿದ್ದಾರೆ.... ಅವರ ಚಿತ್ರಾಂಗದೆಯನ್ನು 'ಪೂರ್ವ ಚಿತ್ರಾಂಗದಾ' ಎಂದು ಕರೆಯಬಹುದು. ಈ ಕನ್ನಡ ಕಾವ್ಯದಲ್ಲಿ ಸೃಷ್ಟಿಯಾಗಿರುವ ಚಿತ್ರಾಂಗದೆಯ ಮೈಯ್ಯಲ್ಲಿ ಲಕ್ಷ್ಮೀಶ ಮತ್ತು ಠಾಕೂರರ ಚಿತ್ರಾಂಗದೆಯ ನೆತ್ತರು ಸ್ವಲ್ಪಮಟ್ಟಿಗೆ ಹರಿಯುತ್ತಿರುವದಾದರೂ ವಂಶಪಾರಂಪರ್ಯವೊಂದು ವಿನಾ ಮತ್ತೆ ಬಹುವಿಷಯಗಳಲ್ಲಿ ಈಕೆ ಬೇರೆಯವಳಾಗಿದ್ದಾಳೆ. ಇಲ್ಲಿ ಲಕ್ಷ್ಮೀಶನ ಕೃತಿಯಲ್ಲಿರುವಂತೆ ಅತಿಮಾನುಷ ಪೌರಾಣಿಕತೆಯಿಂದ ಪಾರಾಗುವ ಅನುಕೂಲವಿಲ್ಲ. ಠಾಕೂರರ ಕೃತಿಯಲ್ಲಿರುವಂತೆ ತಾರುಣ್ಯದ ಸಂಯಮರಹಿತ ವ್ರತಭ್ರಷ್ಟತೆಗೆ ಪ್ರಾಯಶ್ಚಿತ್ತವಿಹೀನವಾದ ಭೋಗಕಿರೀಟವನ್ನಿಟ್ಟು ಪ್ರೇಮದ ಮಂಗಳಾರತಿಯೆತ್ತುವದಕ್ಕೂ ಸಾಧ್ಯವಾಗಿಲ್ಲ."

"........ಈ ಚಿತ್ರಾಂಗದೆ ಆ ಚಿತ್ರಗಳೆರಡನ್ನೂ ಕೂಡಿ ತಯಾರಾದವಳಲ್ಲ. ಅವುಗಳಿಂದ ಮೂಡಿ ಸೃಷ್ಟಿಯಾಗಿದ್ದಾಳೆ. ಗಣಿತಕರ್ಮವಾಗಿಲ್ಲ; ಕಲಾಕೃತಿಯಾಗಿದ್ದಾಳೆ."

ಕವಿಗಳ ಕಾವ್ಯೋದ್ದೇಶವು ಸ್ಪಷ್ಟವಾಗಿದೆ. ಲಕ್ಷ್ಮೀಶ, ಠಾಕೂರರ ಚಿತ್ರಾಂಗದೆಯ ವಂಶಪಾರಂಪರ್ಯವನ್ನು ಕಾಯ್ದುಕೊಂಡರೂ ನವೀನ ಚಿತ್ರಾಂಗದೆಯನ್ನು ಅವರು ಚಿತ್ರಿಸಲು ಹೊರಟಿದ್ದಾರೆ.

ಠಾಕೂರರ ಚಿತ್ರದ ರೂಪರೇಷೆಯು ಮಹಾಭಾರತದ್ದಾದರೂ ಕೂಡ ಅದರಲ್ಲಿ ಎಷ್ಟೋ ಮಾರ್ಪಾಡುಗಳಿವೆ. ಮಹಾಭಾರತದ ಸಣ್ಣ ಘಟನೆಯೊಂದನ್ನು ಆರಿಸಿಕೊಂಡು ಠಾಕೂರರು ಒಂದು ರಮ್ಯ ಪ್ರಣಯಕಥೆಯನ್ನು ನಿರ್ಮಿಸಿದ್ದಾರೆ. ಚಿತ್ರಾಂಗದೆಯು ಮಣಿಪುರದ ರಾಜನ ಮಗಳು. ತೀರ್ಥಯಾತ್ರೆಗೆ ಹೊರಟ ಅರ್ಜುನನನ್ನು ಕಂಡು ಮೋಹಿಸಿ ಮದುವೆಯಾಗುತ್ತಾಳೆ. ಆಕೆ ಸುಂದರಿಯಾಗಿದ್ದಳೆಂದೂ ತನ್ನ ತಂದೆಯ ಆಜ್ಞೆಯನ್ನು ಪಡೆದು ಮದುವೆಯಾದಳೆಂದೂ ಇರುವ ಅಂಶಗಳನ್ನು ಠಾಕೂರರು ಮಾರ್ಪಡಿಸಿದ್ದಾರೆ. ಆಕೆಗೆ ಸ್ತ್ರೀಯರ ಆಕರ್ಷಕ ರೂಪವಿದ್ದಿಲ್ಲ. ಗಂಡಸಿನ ಗಡಸುತನವಿತ್ತು. ತಂದೆಗೆ ಗಂಡುಮಕ್ಕಳಿಲ್ಲದ್ದರಿಂದ ಆಕೆಯನ್ನು ಗಂಡುಮಗನಂತೆ ಬಳೆಸಿದನು. ಅವಳು ಶಸ್ತ್ರಾಸ್ತ್ರ ಪ್ರಯೋಗಗಳಲ್ಲಿ ಪರಿಣತಳಾಗಿದ್ದರೂ ಕಟಾಕ್ಷವಿಕ್ಷೇಪದ ಲಾಘವವು ಅವಳಿಗೆ ಇರಲಿಲ್ಲವೆಂಬದಾಗಿ ಠಾಕೂರರು ಚಿತ್ರಿಸಿದ್ದಾರೆ. ಇಂತಹಳನ್ನು ಅರ್ಜುನನು ತಿರಸ್ಕರಿಸಿದಾಗ ಆಕೆಯು ಕಾಮದೇವನನ್ನು ಮೆಚ್ಚಿಸಿ ಒಂದು ವರುಷದ ವರೆಗೆ ಸುಂದರ ರೂಪವನ್ನು ವರವಾಗಿ ಪಡೆದು ಅರ್ಜುನನ್ನು ವರಿಸುತ್ತಾಳೆ. ಕೊನೆಗೂ ತಾನಾರೆಂಬುದನ್ನು ಹೇಳುವದಿಲ್ಲ. ಚಿತ್ರಾಂಗದೆಯೆಂಬವಳ ಶೌರ್ಯವನ್ನು ಅರ್ಜುನನು ಕೇಳಿ ಮೆಚ್ಚುತ್ತಿರುವಾಗ ತಾನು ಆತನನ್ನು ಮೋಸಗೊಳಿಸಿದೆನೆಂಬ ಭಾವ ಅವಳನ್ನು ಪೀಡಿಸುತ್ತಿದೆ. ಕಡವಾಗಿ ತಂದ ಕೃತಕ ಸೌಂದರ್ಯ ತನ್ನದೆಂಬ ಅರಿವು

---

* ಲೇಖಕರು. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು. ಶಿವಮೊಗ್ಗೆಯ ಕಾವ್ಯಾಲಯದ ಪ್ರಕಟನೆ. ಪುಟ ಕ್ರಾ.ಆ. ಸು ೧೦೦. ಬೆಲೆ ಸಾದಾ ೦—೧೨—೦; ಕ್ಯಾಲಿಕೊ ೧—೪—೦

ಅವಳಿಗಿದ್ದುದರಿಂದಲೇ 'Wearied my hero's heart with deceit' ಎಂದು ಕೊರಗುತ್ತಾಳೆ. ತಾನು ನಿಜವಾಗಿ ಸೌಂದರ್ಯಶಾಲಿನಿಯಲ್ಲವೆಂಬುದನ್ನು ಒಪ್ಪಿ "If you allow me to share the great duties of your life then you will know my true self" ಎಂದು ಅರ್ಜುನನಿಗೆ ಹೇಳುತ್ತಾಳೆ. ಹಾಗೂ ತನ್ನ ಮಗನು ಬೇರೊಬ್ಬ ಅರ್ಜುನನಾಗುವಂತೆ ಶಿಕ್ಷಣಕೊಟ್ಟು ಅರ್ಜುನನೆದುರು ಕಳಿಸುವೆನೆಂದು ತಿಳಿಸುತ್ತಾಳೆ. ಇದುವರೆಗೆ ಚಿತ್ರಾಂಗದೆಯು ಅರ್ಜುನನಿಗೆ ಒಂದು ಸಮಸ್ಯೆಯಾಗಿರುತ್ತಾಳೆ. ಆದರೆ ಈಗ ಆಕೆಯಿಂದ ತನ್ನ ಜೀವನವು ಪರಿಪೂರ್ಣವಾಯಿತೆಂದು ಒಪ್ಪುತ್ತಾನೆ.

ಠಾಕೂರರ ಚಿತ್ರಾಂಗದೆಯು ಪವಿತ್ರ ಪ್ರೇಮದ ಉದಾತ್ತ ಮೂರ್ತಿಯಾಗಿದ್ದಾಳೆ. ಮೋಸಕ್ಕೆ ಅವಳಲ್ಲಿ ಎಡೆ ಇಲ್ಲ. ರತಿಯೇ ಮೈವೆತ್ತು ಬಂದಿರುವಂತಹ ರೂಪವನ್ನು ಕಾಮದೇವನು ಆಕೆಗೆ ದಯಪಾಲಿಸಿರುವಾಗ ಅರ್ಜುನನು ಆಕೆಯನ್ನು ಮೋಹಿಸಿದ್ದು ಆಶ್ಚರ್ಯವಲ್ಲ. ಆಗಲೂ ಕೂಡ ಚಿತ್ರಾಂಗದೆಯು ತನ್ನನ್ನು—ಕೃತಕ ಸೌಂದರ್ಯ ಹೊಂದಿದವಳನ್ನು—ಮೋಹಿಸಿ ತಪ್ಪು ಹಾದಿ ಹಿಡಿಯಬೇಡವೆಂದು ಅರ್ಜುನನಿಗೆ ಎಚ್ಚರಕೊಡುತ್ತಾಳೆ. ಅರ್ಜುನನಾದರೂ "I grope for that ultimate 'you'" ಎಂದು ಹಂಬಲಿಸಿ ಕೊನೆಗೆ ಅವಳಲ್ಲಿಯೇ ಜೀವನಸರ್ವಸ್ವವನ್ನು ಕಂಡುಕೊಳ್ಳುತ್ತಾನೆ. ದಿವ್ಯಪ್ರೇಮವನ್ನು ಕಂಡು ಅರ್ಜುನನು "Beloved, my life is full" ಎಂದು ಸಮಾಧಾನ ಪಡೆಯುತ್ತಾನೆ. ಇಂತಹ ಉದಾತ್ತ ಚಿತ್ರವನ್ನು ಒಳಗೊಂಡ ಠಾಕೂರರ ಕೃತಿಯು "ತಾರುಣ್ಯದ ಸಂಯಮರಹಿತ ಪ್ರತಭ್ರಷ್ಟತೆಗೆ ಪ್ರೇಮದ ಮಂಗಳಾರತಿ" ಯನ್ನಿಟ್ಟ ಚಿತ್ರವೆಂಬ ಮಾತನ್ನು ನಾವು ಒಪ್ಪಲಾರೆವು.

ಇನ್ನು ಜೈಮಿನಿ ಭಾರತದ 'ಉತ್ತರ ಚಿತ್ರಾಂಗದೆ'ಯ ವಿಷಯ. ಅವಳ ಮಗ ಬಭ್ರುವಾಹನನು ಕಾಳಗದಲ್ಲಿ ಅರ್ಜುನನನ್ನು ಕೊಲ್ಲುತ್ತಾನೆ. ಆಗ ಅವನ ತಾಯಿ ಶೋಕದಿಂದ ಕೊರಗಿ ಮಗನನ್ನು ಹಳಿಯುತ್ತಾಳೆ. ಕೊನೆಗೆ ಪಾತಾಳಲೋಕದ ಸಂಜೀವಿನಿಯನ್ನು ತರಿಸಿ, ಅರ್ಜುನನನ್ನು ಬದುಕಿಸುತ್ತಾಳೆ. ಪಾತಾಳಲೋಕ, ಸರ್ಪಗಳ ಕಥೆ, ಸಂಜೀವಿನಿ ಇವುಗಳಿಂದ ಲಕ್ಷ್ಮೀಶನ ಕೃತಿಯು 'ಅತಿಮಾನುಷ ಪೌರಾಣಿಕ ಕಥೆ'ಯಾಗಿರುವದನ್ನು ಯಾರಾದರೂ ಒಪ್ಪಬೇಕು.

ಪುಟ್ಟಪ್ಪನವರ ಚಿತ್ರಾಂಗದೆಯು "ಬಹು ವಿಷಯಗಳಲ್ಲಿ ಬೇರೆಯಾಗಿದ್ದಾಳೆ" ಎಂಬ ಮಾತು ನಿಜವಾದುದರಿಂದ ಅವರು ಮಾಡಿಕೊಂಡಿರುವ ಮಾರ್ಪಾಟುಗಳನ್ನೂ ಅವುಗಳ ಪರಿಣಾಮವನ್ನೂ ನಾವೀಗ ಅವಲೋಕಿಸಬೇಕಾಗುತ್ತದೆ.

ಪುಟ್ಟಪ್ಪನವರ ಕೃತಿಯಲ್ಲಿ ಅವರ ಸುಂದರ ಕಲ್ಪನೆಯ ಫಲವಾಗಿ ಕೆಲವು ಪರಿಣಾಮಕಾರಕ ಸನ್ನಿವೇಶಗಳು ಉಂಟಾಗಿವೆ. ಮೊದಲಿಗೆ ಚಿತ್ರಾಂಗದೆಯು ಕನಸಿನಲ್ಲಿ ಅರ್ಜುನನ ಮೂರ್ತಿಯನ್ನು ಕಾಣುತ್ತಾಳೆ. ಈ ಸೃಷ್ಟಿಯ ವರ್ಣನೆಯು ಪುಟ್ಟಪ್ಪನವರ ವಾಡಿಕೆಯ ಸುಂದರ ವರ್ಣನಾಕೌಶಲ್ಯಕ್ಕೆ ನಿದರ್ಶನವಾಗಿದೆ. ಸುಂದರಿ, ಕಾನನ, ಕಾಸಾರಗಳನ್ನು ಕಲ್ಪನಾಸುಂದರವನ್ನು ಬೇಡಿಯೇ ಕವಿಗಳು ಬಣ್ಣಿಸಿದ್ದಾರೆ. ಅವು ಆಕರ್ಷಕವೂ ಆಗಿವೆ. ಕನಸಿನಲ್ಲಿ 'ತೇಲುವಾ ದ್ವೀಪಮಂ ಪುಷ್ಪರಂಗದಲಿ ದೇವವಂದಿತ ಮೋಹನಾಕೃತಿಯ ರಾಗಾತಪಸ್ನಾತ ಮಾನವಮೂರ್ತಿ (ಯಂ) ಕಂಡು ನಿದಳಾದಳು ಕನ್ಯೆ ಕರುವಿಟ್ಟು ಕಂಡರಿಸಿದಂತೆ,........ ಸಿತಾ ಗಂಡಿದೆಯ ಹೃದಯದಲಿ ತಾನು ಹೆಣ್ಣೆಂಬ ಲಹರಿ ಮೊತ್ತಮೊದಲು'—ಇದರಿಂದ ಈ ಪ್ರಣಯದ ಬೀಜವು ಸರಿಯಾಗಿ ಬಿತ್ತಲ್ಪಡುತ್ತದೆ. ಮುಂದೆ ಆಕೆ 'ಕನಸುದೀವಿಯ ಪುರುಷ ಹರುಷಮೂರುತಿ'ಯನೆ ಪ್ರ ಕಂಡು ಕಾತರಳಾಗುತ್ತಾಳೆ. ಆಗ ಅವಳನ್ನು

> ಮಣಿಪುರದ
> ನೃಪತನಯೆ ವೇಷವಾವೇಶದೊಳ್ ಬಿಜ್ಜೆಯೊಳ್
> ಬಿಲ್ಲ ಬಿನ್ನಾಣದೊಳ್ ಬೀರದೊಳ್ ಕೆಚ್ಚೆದೆಯ
> ಕಜ್ಜದೊಳ್ ಲಜ್ಜೆಯನರಿಯದ ಧೀರಚರ್ಯೆಯೊಳ್
> ನೃಪಕುಮಾರನೆ ತಾನು ಎಂಬಂತಿರ್ದಾಕೆ
> ನಿಂದಳದೊ ಮೊತ್ತಮೊದಲಬಲತಾ ಭಾವದಿಂ
> ಹಾ ಪೆಣ್ತನದ ನಾಣನನುಭವಿಸಿ

ಎಂದು ಬಣ್ಣಿಸಿದ್ದಾರೆ. ಆದರೆ ಅರ್ಜುನನನ್ನು ಸಂದರ್ಶಿಸಿದ ಕಾಲಕ್ಕೆ 'ಅಂಜದಿರು' ಎಂಬ ಮಾತನ್ನು ಕೇಳಿ ನಾಚಿಕೆಯಿಂದ ನಿಶ್ಚಲವಾಗಿದ್ದ ಗಡಸುತನ ಒಮ್ಮೆಲೆ ಹೆಡೆಯೆತ್ತಿತು. 'ನಯವಿನಯಮಂ ಮರೆದು' ಬಿರುಸು ಮಾತುಗಳನ್ನು ನುಡಿದು ಅರ್ಜುನನನ್ನು ರೇಗಿಸುತ್ತಾಳೆ. ಈ ನೂತನ ಸನ್ನಿವೇಶ ಹೆಚ್ಚು ಪರಿಣಾಮಕಾರಿಯಾಗಿದೆ; ಸಹಜವಾಗಿದೆ. ಚಿತ್ರಾಂಗದೆಯ ಬಯಕೆಯಾರಾಧನೆಯ ಮೂರ್ತಿ ಶಿಕ್ಷೆಗೊಡಿತನದಿಂದ ಮರೆಯಾಗುತ್ತದೆ. ಆಗ

'ತನ್ನ ಗಂಡಸುತನಕೆ ಪೇಸಿದಳ್.' ಮುಂದೆ 'ಪೆಣ್ತನಕೆ ತಗುವಂತೆ, ಚೆಲ್ವರಳುವಂತೆ ಸಿಂಗರದ ಪಸದನಂಗೈದು' ಅರ್ಜುನನಲ್ಲಿ ಪ್ರೇಮಭಿಕ್ಷೆಯನ್ನು ಬೇಡಲು ಹೊರಡುತ್ತಾಳೆ. ಆಗ ಕವಿಯು ಆಕೆಯನ್ನು ವರ್ಣಿಸುವ ರೀತಿಯನ್ನು ನೋಡಬೇಕು.

> ಲಲನಾಸಹಜ ರತಿಕಳಾಭ್ಯಾಸವಿನಿತಿರದ
> ಆ ಚೈತ್ರವಾಹಿನಿ ಕಿರೀಟಿಯೆಡೆಗೈದಿದಳ್
> ವರನೆಡೆಗೆ ವೈಯಾರದಿಂದೈದುವಂಗನೆಯ
> ಪಾಂಗಿನಿಂದಲ್ತು, ವಿದ್ವೇಷಮಂ ಸಂಹರಿಸಿ
> ....ಬಿಂಕದಿಂ ಮುಂಬರಿವ
> ಕಲಿಯ ವಿಕ್ರಮ ಗರ್ವ ವಿನ್ಯಾಸಮಂ ಮೆರೆದು.
> ಪುರುಷನೊಲ್ಮೆಯನಾಕೆ ವೈರಿಯಂ ಗೆಲುವಂತೆ
> ಬಲದಿನಾಕ್ರಮಿಸಿ ಗೆಲೆ ಭಾವಿಸಿದಳಜ್ಞಾನದಿ.

ಈ ವರ್ಣನೆಯು, ಚಿತ್ರಾಂಗದೆಯು 'ರಣಕಲಾಪಂಡಿತೆ'ಯಂತೆ—ಪುರುಷವೇಷದಲ್ಲಿ ಬೆಳೆದ ರೀತಿಯನ್ನು ಸ್ವಾಭಾವಿಕವಾಗಿ ಚಿತ್ರಿಸಿದೆ. ಅವಳ ಪ್ರಣಯಭಿಕ್ಷೆ ವ್ಯರ್ಥವಾಗುತ್ತದೆ. ಅರ್ಜುನನು ಅವಳನ್ನು 'ಕಿರಾತಕನ್ಯೆ'ಯೆಂದು ಅಲ್ಲಗಳೆಯುತ್ತಾನೆ.

ಮುಂದಿನ ಕಥಾಭಾಗವು ಠಾಕೂರರನ್ನು ಅನುಸರಿಸಿದೆ. ಚಿತ್ರಾಂಗದೆ — ಮನ್ಮಥರ ಸಂದರ್ಶನದ ವಿಶದವಾದ ಭಾಗದ ಕೆಲವಂಶವನ್ನು ಪುಟ್ಟಪ್ಪನವರು ಇಲ್ಲಿ ಚಿತ್ರಿಸಿದ್ದಾರೆ. ಚಿತ್ರಾಂಗದೆಯು ಸುಂದರ ರೂಪವನ್ನು ಒಂದು ವರುಷದ ವರೆಗೆ ಪಡೆದಳೆಂದು ಠಾಕೂರರ ಕೃತಿಯಲ್ಲಿದ್ದರೆ ಇಲ್ಲಿ ಒಂದು ತಿಂಗಳೆಂದು ಹೇಳಿದೆ.

ಠಾಕೂರರ ಕೃತಿಯ ಪ್ರಭಾವವನ್ನು ಗ್ರಂಥಕರ್ತರು ಒಪ್ಪಿಯೇ ಇದ್ದಾರೆ. ಒಂದೆರಡು ಉಕ್ತಿಗಳನ್ನು ನೋಡಿದರೆ ಅನುವಾದದ ಸೊಗಸೂ ತಿಳಿದುಬರುವದು.

(ಪು ೨೯)

> ಬಿಲ್ಪಲ್ಮೆಯಂ ಬಲ್ಲೆನಾದೊಡಂ ಚನ್ನರ
> ಗೆಲ್ದವರ ಸೆರೆವಿಡಿದ ಕನ್ಯೆಯ ಕಡೆಗಣ್ಣ
> ನೋಟಗಳ ಜಾಣ್ಮೆಗಳನಿನಿತುಮಂ ತಿಳಿಯದಿಹ
> ಮುಗ್ಧೆಯಾಂ

ಇದು ಠಾಕೂರರ ಇಂಗ್ಲಿಷ ಕೃತಿಯಲ್ಲಿ ಹೀಗೆ ಇದೆ:—

My hands are strong to bear the bow. But I never learnt Cupid's archery, the play of eyes.

(ಪು ೪೧)

> ಎನ್ನಲೇನಂ ಕಾಣುತಿಂದು ನೀ
> ಧುಮುಕುತಿಹೆ ನಾಯಕದ ನರಕಕ್ಕೆ

What have you seen in me that makes you false to yourself?

ಮದನನಿತ್ತ ಸೌಂದರ್ಯಕ್ಕಾಗಿ ಚಿತ್ರಾಂಗದೆಯನ್ನು ಅರ್ಜುನನು ಮೋಹಿಸುತ್ತಾನೆ. ವ್ರತಭಂಗ ಮಾಡಬಾರದೆಂದೂ 'ನಶ್ವರದ ಪೂಜೆಗೆ ಚಿರಂತನದ ಬಲಿಗೊಡಬಾರ'ದೆಂದೂ ಚಿತ್ರಾಂಗದೆಯು ಹೇಳಿಯೂ ನೋಡುತ್ತಾಳೆ. ಠಾಕೂರರ ಕೃತಿಯಲ್ಲಿರುವಂತೆ ಇಲ್ಲಿಯೂ ಅರ್ಜುನನು "ನಿನ್ನಿದಿರೊಳಾವ ನಿಯಮಂ" ಎಂದು ಹೇಳಿ 'ನೀನೇ ಶಾಶ್ವತ ಸತ್ಯ, ಪ್ರಾಣೇಶ್ವರಿ, ನಿನ್ನನುಳಿದೆಲ್ಲವೂ ಬರಿಯ ನಶ್ವರ ಮಿಥ್ಯೆ' ಎಂದು ಒಪ್ಪುತ್ತಾನೆ.

ಚಿತ್ರಾಂಗದೆ—ಅರ್ಜುನರ ಸಂದರ್ಶನ ಸಂಯೋಗಗಳ ವರ್ಣನೆಗಳು ಚೆನ್ನಾಗಿಯೇ ಇವೆ. ಸ್ವಪ್ನದಂತೆ ಒಂದು ತಿಂಗಳು ಕಳೆದ ಮೇಲೆ ತೀರ್ಥಯಾತ್ರೆಗೆಂದು ಅರ್ಜುನನು ರಾತ್ರಿಯಲ್ಲಿ ಚಿತ್ರಾಂಗದೆ ಅರಿಯದಂತೆ ಹೊರಟು ಹೋಗುತ್ತಾನೆ. ಠಾಕೂರರ ಕೃತಿಯಲ್ಲಿ ಹೀಗೆ ಹೊರಟು ಹೋಗುವದಿಲ್ಲ. ಅರ್ಜುನನು ಹಾಗೆ ಹೊರಟು ಹೋಗುವದರಿಂದ ಆತನಿಗೆ ವ್ರತಭ್ರಷ್ಟತೆಯ ದೋಷವು ತಟ್ಟುವದಿಲ್ಲವೆಂಬ ನಂಬಿಗೆಯು ಪ್ರಸ್ತುತ ಗ್ರಂಥಕರ್ತರಲ್ಲಿರಬಹುದು. ತನ್ನ ಪ್ರಣಯಿನಿಯಲ್ಲಿಯೇ ಸರ್ವಸ್ವವನ್ನು ಕಂಡು 'My life is full' ಎಂದು ಸಮಾಧಾನ ಹೆಚ್ಚಿಕೊಳ್ಳುವ ಅರ್ಜುನನನ್ನು ಚಿತ್ರಿಸಿದ ಠಾಕೂರರ ಕೃತಿಯಲ್ಲಿ ಪ್ರೇಮದ ಒಂದು ದಿವ್ಯದೃಷ್ಟಿ ಇದೆ; ಒಂದು ಗಂಭೀರ ಸಂದೇಶವಿದೆ. ಅವು ಇಲ್ಲಿಲ್ಲ. ಇಲ್ಲಿಯ ಚಿತ್ರಾಂಗದೆಯು ಉದಾತ್ತಳಾಗಿಯೇ ಇದ್ದರೂ ಅರ್ಜುನನು ಮಾತ್ರ ಕೆಳಕ್ಕೆ ಇಳಿದಂತೆ ಅನಿಸುತ್ತದೆ.

ನಾಲ್ಕನೆಯ ಪರ್ವದಿಂದ 'ಪೂರ್ವ ಚಿತ್ರಾಂಗದಾ' ಚಿತ್ರವು ಬೇರೆಯಾಗುತ್ತದೆ. ಅರ್ಜುನನ ವಿಯೋಗದಿಂದ ಬಳಲುವ ಆಕೆಯ ವರ್ಣನೆಯು ಹೃದಯಸ್ಪರ್ಶಿಯಾಗಿದೆ. ವಚನ ಕೊಟ್ಟಂತೆ ಅರ್ಜುನನು ಆರು ತಿಂಗಳ ನಂತರ ಬರುವದಿಲ್ಲ. ಚಿತ್ರಾಂಗದೆಯ ಹೃದಯವೇದನೆ ಹೆಚ್ಚುತ್ತದೆ. ಒಮ್ಮೆ ಆತ್ಮಹತ್ಯೆಯ ಪ್ರಯತ್ನವೂ ನಡೆಯುತ್ತದೆ. ಆದರೆ ಅದು ಫಲಕಾರಿಯಾಗುವದಿಲ್ಲ.

ನಂತರ ಬರುವದು 'ಉತ್ತರ ಚಿತ್ರಾಂಗದಾ' ಚಿತ್ರವು. 'ಪಗಲಿರುಳ್ಗಾಲಿಗಳ ಮೇಲೆ ಕಾಲದ ತೇರು ತಾನುರುಳ್ದತ್ತು ನಂತಾಚ್ಛಿನ್ನ ಯಾತ್ರೆಯಲಿ!!' ಧರ್ಮರಾಜನ ಅಶ್ವಮೇಧದ ಕುದುರೆ ಮಣಿಪುರಕ್ಕೆ ಬರಲು ಬಭ್ರುವಾಹನನು ಅದನ್ನು ಕಟ್ಟುತ್ತಾನೆ. ಜೈಮಿನಿಭಾರತದಲ್ಲಿ ಚಿತ್ರಾಂಗದೆಯು ಮಗನಿಗೆ ಅರ್ಜುನನು ತಂದೆಯೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಾಳೆ. ಇಲ್ಲಿಯಾದರೋ 'ಬೇರೊಂದು ತೆರದಿಂದೆ ನಿನಗೆ

ಗುರು ಪೃಥೆಯಾತ್ಮಜಂ........ ಗುರುವು ಪಿತೃಸಮನಲ್ತೆ ' ಎಂಬುದಾಗಿ ಆಕೆಯು ಹೇಳುತ್ತಾಳೆಯೇ ಹೊರತು ಸ್ಪಷ್ಟವಾಗಿ ತಂದೆಯೆಂದು ತಿಳಿಸುವದಿಲ್ಲ. ಆದುದರಿಂದ ಯಾಗದ ಕುದುರೆಯನ್ನು ಬಿಟ್ಟುಕೊಡಲು ಬಭ್ರುವಾಹನನು ಒಪ್ಪಿದುದು ಅಷ್ಟೊಂದು ಸಮಂಜಸವೆಂದು ತೋರುವದಿಲ್ಲ. ಹೀಗಿದ್ದರೂ ಕೂಡ ತಂದೆಯೆಂಬುದನ್ನು ತಿಳಿಯದೆ ಯುದ್ಧ ನಡೆಸಿರುವಲ್ಲಿ Dramatic irony ('ವಿಚಿತ್ರದರ್ಶಕ ಪರಿಣಾಮ') ಮಾತ್ರ ಚೆನ್ನಾಗಿ ಸಾಧಿಸಿದೆ. ಇಲ್ಲಿಯೂ ಒಂದು ಹೊಸ ಸನ್ನಿವೇಶವನ್ನು ಲೇಖಕರು ಕಲ್ಪಿಸಿಕೊಂಡಿದ್ದಾರೆ. ಜೈಮಿನಿಭಾರತದಲ್ಲಿರುವಂತೆ ಇಲ್ಲಿಯ ಅರ್ಜುನನು ಸಾಯುವದಿಲ್ಲ. ಆದುದರಿಂದ ಸಂಜೀವಿನಿಯ ಸಂದರ್ಭವಿಲ್ಲ. ಅರ್ಜುನನು ಸೋಲುತ್ತಿರುವದನ್ನು ಚಿತ್ರಾಂಗದೆಯು ಸ್ವಪ್ನಮುಖದಿಂದರಿತು ರಣಭೂಮಿಗೆ ಬಂದು ತಂದೆ ಮಕ್ಕಳ ನಡುವೆ ನಿಂತು ಆತ್ಮಾಹುತಿಯನ್ನು ಕೊಡುತ್ತಾಳೆ. ಅರ್ಜುನನ ಮರಣವನ್ನು ತಪ್ಪಿಸುತ್ತಾಳೆ. ಸಾಯುವದಕ್ಕೆ ಮೊದಲು ರಹಸ್ಯವನ್ನು ಹೇಳುತ್ತಾಳೆ.

> ನಾನಿಲ್ಲಿಗೈತಂದೆನಲ್ಲದಿರ್ದೊಡೆ ನಿನ್ನ
> ತಂದೆಯಂ ಕೊಲುತಿರ್ದೆ ನೀಂ ಮಹಾಪಾತಕಕ್ಕೆ
> ಪಕ್ಕಾಗುತಿರ್ದೆ ನಾನಿನ್ನೆಗಂ ನಿನ್ನೊಡನೆ
> ಪೇಳದ ರಹಸ್ಯವೊಂದಿರ್ಪುದದನಿಂದೊರೆವೆ
> ನಾಲಿಸೈ. ನೀನುಮಂತೆಯ ಕೇಳ್ವುದೈ ನರನೆ
> ನೀನೆನ್ನ ಹೃದಯೇಶನೆನ್ನ ಪತಿ. ಬೆಚ್ಚದಿರ್
> ಬೆರಗಾಗದಿರ್.

ಕೊನೆಗೆ ಬರುವ ಈ ರಹಸ್ಯಸ್ಫೋಟ, ಚಿತ್ರಾಂಗದೆಯ ಆತ್ಮಾಹುತಿ ಇವುಗಳು ಈ ಕಾವ್ಯಕ್ಕೆ ಒಂದು ತರದ ಸೊಬಗನ್ನು ತಂದು ನಾಟಕೀಯ ಪರಿಣಾಮವನ್ನು ಹೆಚ್ಚಿಸಿವೆ.

ಮುನ್ನುಡಿಯಲ್ಲಿ ಹೇಳಿದಂತೆ ಈ ಚಿತ್ರದಲ್ಲಿ ಜೈಮಿನಿ ಭಾರತದ ಅತಿಮಾನುಷ ಪೌರಾಣಿಕತೆಯಿಲ್ಲ. ಕೃತಕ ರೀತಿಯಿಂದ ಅರ್ಜುನನನ್ನು ಬದುಕಿಸಿ ಕತೆಯನ್ನು ಮಂಗಳದಲ್ಲಿ ಕೊನೆಗಾಣಿಸುವ ಚಪಲಕ್ಕೆ ಬದಲಾಗಿ ಪತಿಗಾಗಿ ಪ್ರಾಣವನ್ನು ನೀಗಿದ ದುರಂತ ಚಿತ್ರವನ್ನು ಪುಟ್ಟಪ್ಪನವರು ಕೊಟ್ಟಿದ್ದಾರೆ. ಚಿತ್ರಾಂಗದೆಯ ಕೊನೆಯ ದರ್ಶನವು ಹೀಗಿದೆ:—

> ಕೈಯೊಂದರೊಳ್ ಮಗನ ಮತ್ತೊಂದರೊಳ್ ಪತಿಯು
> ಪಾಣಿಯಂ ಪಿಡಿದು ಸಂಧಿಯನೊರೆದು ಶಾಂತಿಯಂ
> ನುಡಿದು ಶಾಂತಾತ್ಮದಿಂ ಶಿವನಾಮಮಂ ಸ್ಮರಿಸಿ
> ಕಣ್ಣು ಮುಚ್ಚಿದಳಮೃತಮಯ ಚಿರಸಮಾಧಿಯಲಿ.

ಮುಂದೆ ಬರುವ ಶವಸಂಸ್ಕಾರ, ಪುಷ್ಪಕವಿಮಾನಾರೋಹಣೆ ಇವುಗಳಲ್ಲಿ ನಮಗೆ ಅಷ್ಟು ಆಸಕ್ತಿ ತೋರದು.

ಅಂತು ಪುಟ್ಟಪ್ಪನವರು ಚಿತ್ರಾಂಗದೆಯ ಅದ್ಭುತ[illegible] ಜೀವನವನ್ನು ಪರಿಪೂರ್ಣವಾಗಿ ಚಿತ್ರಿಸಿದ್ದಾರೆ. [illegible] ಕನ್ನಡಕ್ಕೆ ಹೊಸತೇ ಸರಿ. ಅಲ್ಲಲ್ಲಿ ದೊರೆಯುವ [illegible] ಭಾಗವನ್ನು ಅನುಸರಿಸಿದ್ದರೂ ತಮ್ಮವೇ ಆದ ಅನೇ[illegible] ಉಪಯುಕ್ತ, ಪರಿಣಾಮಕಾರಕ ಮಾರ್ಪಾಡುಗಳೊ[illegible] ಒಂದು ರಮ್ಯವಾದ 'ನೂತನ ಕಲಾಕೃತಿ'ಯನ್ನು [illegible]ಡಕ್ಕೆ ಸಲ್ಲಿಸಿದ್ದಾರೆ. ದೇವನಿಗಾಗಿ ಪ್ರಾಣಾಹುತಿಯ[illegible] ಕೊಟ್ಟ ಚಿತ್ರವು ಹೃದಯವೇಧಕವಾಗಿಯೇ ಇದೆ.

ಈ ಕವಿಗಳ ವಾಡಿಕೆಯ ನಿಸರ್ಗಳ ಶಬ್ದಪ್ರವಾ[illegible] ಸುಂದರ ವರ್ಣನೆ, ಸಂಸ್ಕೃತಪದ ಭೂಯಿಷ್ಠ ಶೈಲಿ[illegible] ಇಲ್ಲಿಯೂ ಇವೆ. ಅತಿಯಾಗಿ ಬರುವ ಸಂಸ್ಕೃತ [illegible]ಗಳನ್ನೂ (ಉದಾ. ಪು ೪೭, ಪಂಕ್ತಿ ೧೨೨೦-೨ ಇತ್ಯಾ[illegible]) ಅನಾವಶ್ಯಕವಾಗಿ ಉಪಯೋಗಿಸಿದ 'ಕೋಯಿಲ[illegible]' (ಪು ೩೭) ಎಂಬ ಬೇರೆ ಭಾಷೆಯ ಶಬ್ದವನ್ನೂ [illegible]ಬೇಕಾಗಿತ್ತು.

ಕಥೆಯನ್ನು ಬಳಸಿಕೊಂಡು ಹೋಗುವಲ್ಲಿ 'ಪುಷ್[illegible] ಮನೋಹರಿ' 'ಸ್ವಪ್ನಸುಂದರಿ'ಯರನ್ನು ಸಂಬೋಧಿ[illegible]ವಲ್ಲಿ ನಾವೀನ್ಯತೆ, ಅನುಕೂಲತೆ ಇವುಗಳಿವೆಯೆಂದು [illegible]ದರೂ ಸ್ವಾಭಾವಿಕತೆ ಇಲ್ಲವೆಂದು ಹೇಳಬೇಕಾಗುತ್ತ[illegible] ವರ್ಣನೆಯಲ್ಲಿ ಕೇವಲ ಒಂದು ಮಾತಿನಿಂದ ಉಪ[illegible] ಹೇಳದೆ ಒಂದು ಘಟನೆಯನ್ನು ವಿವರಿಸುವ ಮಿಶ್ರೋ[illegible]ಮೆಯ ಉಪಯೋಗವನ್ನು ಕನ್ನಡಿಗರು ಹೇಗೆ ಆದರಿ[illegible]ರೆಂಬುದನ್ನು ಇನ್ನು ನೋಡಬೇಕಾಗಿದೆ. ಅಂತಹ ಉಪ[illegible]ಗಳಲ್ಲಿ ಒಂದು ೨೪ ಪಂಕ್ತಿಗಳ ವರೆಗೂ ಬೆಳೆದು ಬಂ[illegible] (ಪು. ೧೫, ಪಂಕ್ತಿ ೩೮೩—೪೦೬).

ವಸ್ತುವು ದೃಶ್ಯಕಾವ್ಯಕ್ಕೆ ಉಪಯುಕ್ತವಾಗಿದ್ದ[illegible] ಗ್ರಂಥಕರ್ತರು ಅದನ್ನು ಕಥನರೀತಿಯಲ್ಲಿಯೇ (ಶ್ರ[illegible] ಕಾವ್ಯ) ಬರೆದಿದ್ದಾರೆ. ಸಂಪೂರ್ಣ ಸರಳ ರಗಳೆಯ[illegible]ದೊಂದು ಇದರ ವೈಶಿಷ್ಟ್ಯ. ಪುಟ್ಟಪ್ಪನವರ ಸರಳ [illegible]ಯನ್ನು ಓದುವಾಗ 'ರಗಳೆ' ತಲೆದೋರದೆ ಸರಳ, ಸು[illegible] ರೀತಿಯೇ ಕಂಡುಬರುವದೆಂದು ಬೇರೆ ಹೇಳಬೇಕಾ[illegible] ಕವಿಗಳ ಕಲ್ಪಕತೆಯ ಮೂಲಕ ಸುಂದರ ಸನ್ನಿವೇಶ[illegible] ವಸ್ತು ಮತ್ತು ಭಾವನೆಗಳ ಪರಿಣಾಮಕಾರಕ ಚಿತ್ರ[illegible] ಕಂಡುಬರುತ್ತಿವೆ.

ವಸ್ತು, ರೀತಿ ಇವೆರಡರಲ್ಲೂ ನವೀನವಾಗಿರುವ ಕಾವ್ಯಕೃತಿಯನ್ನು ಕನ್ನಡಿಗರು ಆನಂದದಿಂದ ಬರಮಾ[illegible]ಕೊಳ್ಳುವರೆಂದು ನಂಬುತ್ತೇವೆ.

ನಮ್ಮಲ್ಲಿ ಕಲೆಗಿರುವ ಪ್ರಾಶಸ್ತ್ಯ

ಲೇಖಕರು: ಶ್ರೀ. ರುದ್ರಭಟ್ಟ, ಕರ್ನಾಟಕ ಕವಿಮಂಡಲಿ, ಮಲ್ಲೇಶ್ವರಂ

ಪಾಶ್ಚಾತ್ಯರಲ್ಲಿ ಕಲಾಕೋವಿದರಿಗೆಷ್ಟು ಮರ್ಯಾದೆ! ಎಲ್ಲಿ ನೋಡಿದರೂ ಪ್ರತಿಮೆಗಳು, ಉದ್ಯಾನಗಳು, ಪಾಠಶಾಲೆಗಳು, ಸಂಶೋಧಕ ಶಾಲೆಗಳು ಮುಂತಾದುವು. ಷೆಕ್ಸಪಿಯರ್ ಸೊಸೈಟಿ, ಕೀಟ್ಸ್ ಸೊಸೈಟಿ, ಬೈರನ್ ಸೊಸೈಟಿ—ಒಂದೇ ಎರಡೇ! ನಮ್ಮ ಭವಭೂತಿ, ಕಾಳಿದಾಸ, ಷಡಕ್ಷರದೇವ, ಜೈಮಿನಿ, ರನ್ನ, ಪಂಪರಿಗೆ ತಕ್ಕ ಮರ್ಯಾದೆ ಕೊಡುವ ಕಾಲವೆಂದು ಬಂದೀತು? ಜನರು ಕಲೆಗೆ ಜೀವದಾನ ಮಾಡುವರೇ?

ಕಲೆಯ ಉತ್ಕೃಷ್ಟತೆಯು ಒಂದು ಜನಾಂಗದ ನಾಗರಿಕತೆಯ ಉನ್ನತಿಯ ಕುರುಹು. ಕಲೆಯು ಶಾಶ್ವತವಾದುದು. ಒಂದು ನಾಗರಿಕತೆಯು ನಾಶವನ್ನು ಹೊಂದಬಹುದು. ಒಂದು ಸಂಸ್ಕೃತಿಯು ಹಾಳಾಗಬಹುದು. ಆದರೆ ಆ ಕಾಲದ ಕೃತಿಗಳು, ಸೌಂದರ್ಯಮೂರ್ತಿಗಳು ಇದ್ದರೆ ಕಲೆಯ ಉತ್ಕೃಷ್ಟತೆಯನ್ನು ತಿಳಿಸುತ್ತವೆ. ಲ್ಯಾಟಿನ್‌ನಲ್ಲಿ "vita brevis ars longa" ಎಂದು ಹೇಳುತ್ತಾರೆ. ಅಂದರೆ ಜೀವಮಾನವು ಕೊಂಚಕಾಲದ್ದು; ಕಲೆಯು ಬಹಳ ಕಾಲದ್ದು ಎಂದರ್ಥ. ಶ್ರೀ. ಶಂ. ಬಾ. ಜೋಶಿಯವರು ಹೇಳುವ "ಬ್ರಹ್ಮನು ಸೃಷ್ಟಿಸಿದ ಶಕುಂತಲೆಯು ಮಣ್ಣುಗೂಡಿ ಎಷ್ಟೋ ಕಾಲವಾಯಿತು; ಆದರೆ ಕಾಳಿದಾಸನು ಸೃಷ್ಟಿಸಿದ ಶಕುಂತಲೆಯು ಇನ್ನೂ ಜೀವಂತಳಾಗಿದ್ದಾಳೆ" ಎಂಬುದು ದಿಟ.

ನಮ್ಮ ದೇಶದಲ್ಲಿ ಪೂರ್ವದಲ್ಲಿ ಕಲೆಗೆ ಬಹಳ ಪ್ರಶಸ್ತಿಯಿತ್ತು. ರಾಜರು ಶ್ರೀಮಂತರು ಕಲೆಗೆ ಪ್ರಾಧಾನ್ಯವನ್ನು ಕೊಟ್ಟಿದ್ದರು. ಆದುದರಿಂದಲೇ ಪ್ರಪಂಚದಲ್ಲೆಲ್ಲಾ ಪ್ರಸಿದ್ಧವಾದ ಅಜಂತ, ಎಲ್ಲೋರಗಳ ಗುಹಾಂತರ್ಗತ ದೇವಾಲಯಗಳು ಕಟ್ಟಲ್ಪಟ್ಟುದು. ಲೋಕಪ್ರಸಿದ್ಧವಾದ ಅನೇಕ ದೇವಾಲಯಗಳನ್ನು ನಮ್ಮ ದೇಶದಲ್ಲಿ ಎಲ್ಲಿ ನೋಡಿದರೂ ಕಾಣಬಹುದು. ರಾಜಾಶ್ರಯದಿಂದಲೇ ಕಾಳಿದಾಸ, ಭವಭೂತಿಗಳು ತಮ್ಮ ಪ್ರಸಿದ್ಧ ಗ್ರಂಥಗಳನ್ನು ರಚಿಸಿದುದು. ರಾಜರ ಮತ್ತು ಶ್ರೀಮಂತರ ಪ್ರೋತ್ಸಾಹದಿಂದಲೇ ಪೂರ್ವದಲ್ಲಿ ನರ್ತನ, ನಾಟಕ, ಸಂಗೀತ, ಚಿತ್ರಕಲೆ ಮುಂತಾದುವು ಬೆಳೆದು ಬಂದುದು. ಆದರೆ ಈಗ ಪ್ರಜಾಪ್ರಭುತ್ವವು ಬಲವಾಗುತ್ತಿರುವ ಕಾಲದಲ್ಲಿ ರಾಜರ ಪ್ರೋತ್ಸಾಹವು ಸಿಕ್ಕುತ್ತಿಲ್ಲ. ಬಡಪಾಯಿಯಾದುದರಿಂದ ನಮ್ಮ ದೇಶದಲ್ಲಿ ಶ್ರೀಮಂತರು ಇಲ್ಲವೆಂದೇ ಹೇಳಬೇಕು. ಪ್ರಜೆಗಳಿಗೆ ಪೂರ್ಣ ಸ್ವಾತಂತ್ರ್ಯವು ಇನ್ನೂ ಬಂದಿಲ್ಲವಾದುದರಿಂದ ಸಾಮಾನ್ಯ ಪ್ರಜೆಗಳು ಕಲೆಗೆ ಪ್ರಾಶಸ್ತ್ಯವನ್ನೀಯಲು ಸಾಧ್ಯವಿಲ್ಲ. ಈ ಅನೇಕ ತೊಂದರೆಗಳಿಂದ ನಮ್ಮ ದೇಶದಲ್ಲಿ ಈಗ ಕಲೆಗೆ ತೃಣಮಾತ್ರದಷ್ಟು ಸಹ ಪ್ರೋತ್ಸಾಹವಿಲ್ಲ.

ಆದರೆ ಪೂರ್ವದ ಸಂಪತ್ತನ್ನು ನೆನೆದು ಮೈಮರೆಯುವುದರಲ್ಲಿ, ಶ್ಲಾಘನೆ ಮಾಡಿಕೊಳ್ಳುವುದರಲ್ಲಿ ನಮ್ಮನ್ನು ಬಿಟ್ಟರೆ ಪ್ರಪಂಚದಲ್ಲಿ ಇನ್ನಾವ ಜನಾಂಗದವರೂ ಇಲ್ಲವೆಂದೇ ಹೇಳಬೇಕು. ಹಾಗಿಲ್ಲದಿದ್ದರೂ ನಮ್ಮ ಗರ್ವವು ಜರ್ಮನರ ಜಂಭಕ್ಕೆ ಕಡಿಮೆಯೇನೂ ಇಲ್ಲ.

ನಾವು ನಮ್ಮ ಹಿರಿಯರ ಕೀರ್ತಿಯನ್ನು ಎತ್ತಿಹಿಡಿಯುವುದು, ಅವರನ್ನು ಹೊಗಳುವುದು ಒಳ್ಳೆಯದು; ಕರ್ತವ್ಯವೇ ಅಹುದು. ಆದರೆ ಸುಮ್ಮನೆ ಬಾಯಲ್ಲಿ ಹೊಗಳುವುದರಿಂದ ನಮ್ಮ ಹಿರಿಯರ ಕೀರ್ತಿಯನ್ನು ಎತ್ತಿಹಿಡಿದಂತಾಗುವುದಿಲ್ಲ. ಹಗಲುಗನಸುಗಳನ್ನು ಕಾಣುವುದರಿಂದ ಪ್ರಯೋಜನವಿಲ್ಲ. ಕಾರ್ಯತತ್ಪರತೆಯಿಂದ ನಮ್ಮ ಹಿರಿಯರ ಮಹಿಮೆಯನ್ನು ಸಾರಬೇಕು. ಈಚೆಗೆ ನಾವು ಕಲೆಯ ಪ್ರಚಾರಕ್ಕೆ, ಸೌಂದರ್ಯದ ಸೊಬಗನ್ನು ಹೆಚ್ಚಿಸುವುದಕ್ಕೆ ಎಷ್ಟು ಪ್ರಯತ್ನ ಮಾಡಿದ್ದೇವೆಂಬುದನ್ನು ಚಿಂತಿಸುವ.

ತ್ಯಾಗರಾಜರು ನಮ್ಮ ದೇಶದ ಸಂಗೀತದಲ್ಲಿ ಬಹಳ ಪ್ರಸಿದ್ಧರು. ಇವರ ಕೃತಿಗಳನ್ನು ಹಾಡದ ಸಂಗೀತಗಾರನೇ ಇಲ್ಲ. ಇವರ ಕೃತಿಗಳನ್ನು ಕೇಳದ ಮನುಷ್ಯನೇ ಇಲ್ಲ. ಇವರನ್ನು ಸಂಗೀತ ಪ್ರಪಂಚಕ್ಕೆ ಒಡೆಯರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂತಹ ಮಹಾಪುರುಷರ ಜ್ಞಾಪಕಾರ್ಥವಾಗಿ ನಾವೇನು ಮಾಡಿದ್ದೇವೆ? ಒಂದು ಪ್ರತಿಮೆಯು ಸಹ ಇಲ್ಲವಲ್ಲ! ಹೋಗಲಿ, ಅವರ ವಿಷಯವು ನಮಗೆ ಎಷ್ಟು ಮಟ್ಟಿಗೆ ತಿಳಿದಿದೆ? ಅವರ ಚರಿತ್ರೆಯನ್ನು ತಿಳಿಯಲು ನಾವು ಎಷ್ಟು ಪ್ರಯತ್ನಗಳನ್ನು ಮಾಡಿದ್ದೇವೆ? ಅನೇಕ ಕೋಟಿ ಮಾನವರಲ್ಲಿ ಒಬ್ಬನಾದರೂ ಈ ಪವಿತ್ರಕಾರ್ಯಕ್ಕೆ ಕೈಹಾಕಲಿಲ್ಲವಲ್ಲಾ!

ಅದೇ ಪಾಶ್ಚಿಮಾತ್ಯ ದೇಶಗಳ ಕಡೆ ನೋಡೋಣ. ಕಲೆಗೆ ಎಂತಹ ಪದವಿಯನ್ನು ಕೊಟ್ಟಿದ್ದಾರೆ? ಪಾಶ್ಚಿಮಾತ್ಯರು ತಮ್ಮ ಪ್ರತಿಯೊಬ್ಬ ಲೇಖಕನಿಗೂ, ಕವಿಗೂ, ಸಂಗೀತಗಾರನಿಗೂ, ಚಿತ್ರಕಲಾಪ್ರವೀಣನಿಗೂ ವಿಶೇಷ ಮರ್ಯಾದೆ ಮಾಡಿದ್ದಾರೆ. ತಮ್ಮ ಮಹಾಪುರುಷರ ಹೆಸರಿನಲ್ಲಿ ಎಲ್ಲಿ ನೋಡಿದರೂ ಪ್ರತಿಮೆಗಳು, ಉದ್ಯಾನಗಳು, ಪಾಠಶಾಲೆಗಳು, ಸಂಶೋಧಕ ಶಾಲೆಗಳು ಮುಂತಾದುವನ್ನು ಕಟ್ಟಿದ್ದಾರೆ. ಫ್ರಾನ್ಸ್ ದೇಶದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರವು ಈ ಮಹಾನುಭಾವರ ಪ್ರತಿಮೆಗಳಿಂದ ತುಂಬಿ ಹೋಗಿದೆ. ರೋಮ್ ನಗರವು ಈ ಪುಣ್ಯಾತ್ಮರ ಪ್ರತಿಮೆಗಳಿಂದ, ಉದ್ಯಾನಗಳಿಂದ ಕಂಗೊಳಿಸುತ್ತಿದೆ. ಇನ್ನು ಲಂಡನ್, ಬರ್ಲಿನ್ ಮುಂತಾದ ನಗರಗಳನ್ನು ವಿಚಾರಿಸಬೇಕಾದುದಿಲ್ಲ.

ಇಂಗ್ಲೆಂಡಿನಲ್ಲಿ ಷೇಕ್ಸ್‌ಪಿಯರ್ ಸೊಸೈಟಿ, ಕೀಟ್ಸ್ ಸೊಸೈಟಿ, ಬೈರನ್ ಸೊಸೈಟಿ ಮುಂತಾದ ಅನೇಕ ಸಂಘಗಳಿವೆ. ಈ ಸಂಘಗಳು ವಿಶೇಷ ಶ್ರಮವಹಿಸಿ ಕೆಲಸ ಮಾಡುತ್ತಿವೆ. ಆದರೆ ನಮ್ಮಲ್ಲಿ ಅತ್ಯಂತ ಪ್ರಸಿದ್ಧ ವ್ಯಕ್ತಿಗೆ ನಾವು ಎಷ್ಟು ಮರ್ಯಾದೆಯನ್ನು ಸಲ್ಲಿಸುತ್ತಿದ್ದೇವೆ? ಆ ಮಹಾಪುರುಷರ ಉಪಕಾರವನ್ನು ನೆನೆಯುವುದು ಕೂಡಾ ಇಲ್ಲ. ಕವಿರತ್ನನೆನಿಸಿದ ಕಾಳಿದಾಸನಿಗೆ ನಾವೇನು ಮರ್ಯಾದೆ ಮಾಡಿರುವುದು? ಭವಭೂತಿ, ಭೈರವಿ, ಭಾಸ, ಷಡಕ್ಷರದೇವ, ರನ್ನ, ಪೊನ್ನ, ಜನ್ನ, ಚನ್ನ, ನಾರಣಪ್ಪ, ಲಕ್ಷ್ಮೀಶ, ತ್ಯಾಗರಾಜ, ನನ್ನಯ್ಯ, ತಿಕ್ಕಣ್ಣ ಮುಂತಾದ ಮಹಾಪುರುಷರಿಗೆ ನಾವು ಎಷ್ಟು ಮರ್ಯಾದೆಯನ್ನು ಸಲ್ಲಿಸಿದ್ದೇವೆ? ಇದು ನಾವು ಕಲೆಗೆ ಕೊಡುತ್ತಿರುವ ಪ್ರಾಶಸ್ತ್ಯ. ಇನ್ನು ಹೇಗೆ ತಾನೇ ನಮ್ಮ ಕಲೆಗಳು ಉತ್ತಮಗೊಂಡಾವು!

ನರ್ತನ ಮಾಡುವುದು ಒಂದು ಕೆಟ್ಟ ಚಾಳಿಯೆಂದು ನಮ್ಮ ದೇಶದಲ್ಲಿ ಪರಿಗಣಿಸಲ್ಪಟ್ಟಿದೆ. ಕಲೆಗೆ ಸಾಧ್ಯವಾದ ಮಟ್ಟಿಗೂ ಅಡಚಣೆಗಳನ್ನು ನಾವು ತಂದೊಡ್ಡಿದ್ದೇವೆ.

ಪ್ರತಿಯೊಬ್ಬ ಮನುಷ್ಯನೂ ಒಂದು ಕಲೆಯಲ್ಲಾದರೂ ಪಾಂಡಿತ್ಯವನ್ನು ಹೊಂದಲು ಶಕ್ತಿಯುಂಟು. ಆದರೆ ಏಕೆ ಎಲ್ಲರೂ ಕಲಾಕೋವಿದರಾಗಿಲ್ಲ? ಪ್ರಾಶಸ್ತ್ಯವಿಲ್ಲ; ಅವಕಾಶವನ್ನು ಕಲ್ಪಿಸಿಕೊಡುವುದಿಲ್ಲ. ಚಿಕ್ಕಂದಿನಲ್ಲಿ ಕಲೆಗೆ ಇರುವ ಪ್ರೀತಿಯು ದೊಡ್ಡವರಾದ ಮೇಲೆ ಇರುವುದಿಲ್ಲ. ಚಿಕ್ಕಂದಿನಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟರೆ ಪ್ರತಿಯೊಬ್ಬನೂ ಒಂದು ಕಲೆಯಲ್ಲಿಯಾದರೂ ಪ್ರಸಿದ್ಧನಾಗಬಹುದು. ಆದರೆ ಪ್ರಪಂಚದಲ್ಲಿ ಎಲ್ಲೆಡೆಗಳಲ್ಲಿಯೂ, ಆದರಲ್ಲಿಯೂ ನಮ್ಮ ದೇಶದಲ್ಲಿ ಕಲೆಗೆ ಪ್ರಾಶಸ್ತ್ಯವೇ ಇಲ್ಲ. ಪ್ರಾಶಸ್ತ್ಯ ಹೋಗಲಿ, ಸಹಿಷ್ಣುತೆಯು ಸಹ ಇಲ್ಲ. ಬಾಲಕರು ಹು[illegible]ಗಿಯೆ ಯಾವುದಾದರೊಂದು ಕಲೆಗೆ ಆಸೆಯನ್ನು ತೋ[illegible] ನಿರತರಾದರೆ, ಅವರನ್ನು ಪಾಠಶಾಲೆಯ ಆ ಒಣ ಪಾ[illegible]ಗಳನ್ನು ಓದುವಂತೆ, ಲೆಕ್ಕವನ್ನು ಮಾಡುವಂತೆ ಪೀ[illegible] ಕಲೆಯ ವ್ಯಾಸಂಗಕ್ಕೆ ಅಡಚಣೆಯನ್ನು ತಂದೊಡ್ಡುತ್ತಿ[illegible] ಇದರಿಂದ ಬಾಲಕರು ತಮ್ಮ ಇಷ್ಟದ ಕಲೆಯನ್ನು ಬಿ[illegible] ಬೇಕಾಗುತ್ತದೆ. ಈ ಕಷ್ಟಗಳನ್ನೆಲ್ಲಾ ಸಹಿಸಿಕೊ[illegible] ಮುಂದೆಬರುವ ಪ್ರವೀಣರು ಬಹಳ ವಿರಳ. ಹೊ[illegible] ಹೊರೆದುಕೊಳ್ಳಲು ಹಣವಿಲ್ಲದಿರುವುದರಿಂದ, ಕಲೆಯಿ[illegible] ಹೊಟ್ಟೆ ಹೊರೆದುಕೊಳ್ಳಲು ಅನುಕೂಲತೆ ಇಲ್ಲದಿರುವ[illegible]ರಿಂದ ಕಲೆಯು ಮೂಲೆಗೆ ಬಿದ್ದಿದೆ. ಜನರು ಕಲೆಗೆ ಜ[illegible]ದಾನ ಮಾಡುವರೇ?

ಬಾದಾಮಿಯ ಚಾಲುಕ್ಯರ ಕಾಲದ ಕಲಾಜೀವನ

ಲೇಖಕರು : ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ.

ಭಾರತೀಯ ಜೀವನದ ಅಂಗಾಂಗಗಳಿಗೆಲ್ಲ ಶಕ್ತಿಯನ್ನು ನೀಡಿದ ಧರ್ಮಪ್ರವೃತ್ತಿಯೇ ಕಲಾಜೀವನಕ್ಕೂ ಪ್ರೇರಣೆಯನ್ನು ಕೊಟ್ಟಿತ್ತು. ಧರ್ಮಚಿಂತನೆಗೆ ತಕ್ಕ ಸ್ಥಳಗಳಾಗಿಯೂ ವಿದ್ಯಾದಾನದ ನಿಲಯಗಳಾಗಿಯೂ ಬೌದ್ಧರು ಅನೇಕ ಚೈತ್ಯಾಲಯಗಳನ್ನೂ ವಿಹಾರಗಳನ್ನೂ ಕಟ್ಟಿಸಿದರು. ಬೌದ್ಧರು ಗವಿಗಳನ್ನು ಕೊರೆದರು, ಹಿಂದುಗಳು ಗುಡಿಗಳನ್ನು ಕಟ್ಟಿದರು. ಜೈನರೂ ಅವರನ್ನು ಅನುಸರಿಸಿದರು. ಅಯ್ಹೊಳೆ, ಕಾರ್ಲೆ, ಅಜಂತ, ಬಾದಾಮಿಗಳ ಶಿಲ್ಪಕೃತಿಗಳು 'ರೂಪಂ ರಮಣೀಯತಾಯಾಃ' ಎಂದು ಎನಿಸುವಂತಿವೆ. ಇವುಗಳ ಶೈಲಿಯು ಏಶಿಯದ ಪಶ್ಚಿಮ ಜನಾಂಗಗಳ ಮೂಲಕ ಫ್ರಾನ್ಸಿನಲ್ಲಿ ಸೇರಿ, ಅಲ್ಲಿಯ ಕ್ಯಾಥೆಡ್ರಲ್ಲುಗಳಿಗೆ ಜನ್ಮವಿತ್ತಿತು. ಎಲಿಫಂಟಾ ಕಲ್ಮನೆಗಳು ಹಿಂದುಸ್ತಾನದ ಪಾರ್ಥಿನಾನ್ ಆಗಿವೆ. ಅಜಂತೆಯಲ್ಲಿಯ ಭಿತ್ತಿ ಚಿತ್ರ ಶಿಲ್ಪವು ಈಗಿನ ನಮ್ಮ ಚಿತ್ರಕಲೆಯ ತಾಯಿಯಾಗಿದೆ. 'ವಾತಾಪಿ ಗಣಪತಿ'ಯನ್ನು ದಾಕ್ಷಿಣಾತ್ಯ ಸಂಗೀತಜ್ಞರು ಹಾಡಿಕೆಯ ಮೊದಲಿನಲ್ಲಿ ತಪ್ಪದೆ ಸ್ತುತಿಸುವುದು ದಕ್ಷಿಣ ಸಂಗೀತದ .... ಮಾತೃಸ್ಥಾನವನ್ನು ಸೂಚಿಸುತ್ತಿದೆ. ....

ಕಲಾಜೀವನ

ಇತರ ಪ್ರಪಂಚಕ್ಕಿಂತಲೂ ಕಲಾಪ್ರಪಂಚದಲ್ಲಿ ಜನಾಂಗದ ಆಳವಾದ ಆಂತರಂಗಿಕ ಸೂಕ್ಷ್ಮಜೀವನದ ಜೀವಾಳವು ಹೆಚ್ಚು ಪ್ರತಿಬಿಂಬಿತವಾಗಿರುವುದಲ್ಲದೆ, ಕಲೆ ರಾಷ್ಟ್ರದ ಸಂಸ್ಕೃತಿಯ ಆದರ್ಶ-ಧ್ಯೇಯಗಳ ಗಮಕವೂ ಆಗಿದೆ. ಯಾವುದೆ ಒಂದು ಜನಾಂಗದ ಕಲಾಸೃಷ್ಟಿಯನ್ನು ಪರೀಕ್ಷಿಸಿ, ಅದರ ಜೀವನಸಂಸ್ಕಾರವನ್ನು ನಿರ್ಧರಿಸಬಹುದು. ಭಾರತೀಯ ಜೀವನಮಾರ್ಗಗಳಿಗೆ ವಿಧವಿಧದಿಂದ ಪ್ರವರ್ತಕವಾದ ಧರ್ಮಪ್ರವೃತ್ತಿ ಕಲಾಜೀವನಕ್ಕೂ ಪ್ರೇರಣೆಯನ್ನು ನೀಡಿತು. ಭಾರತೀಯ ಜೀವನದ ಅಂಗವಾದ ಕರ್ನಾಟಕದ ಕಲಾಜೀವನವೂ ಪ್ರಾಮುಖ್ಯವಾಗಿ ಧರ್ಮಸ್ಫೂರ್ತಿಯಿಂದ ಪ್ರೇರಿತವಾದುದಾಗಿದೆ. ಈ ಕಾಲದ ಕರ್ನಾಟಕದ ಕಲಾಜೀವನವು ಮೂರ್ತಿಶಿಲ್ಪ (Sculpture), ಮಂದಿರಶಿಲ್ಪ (Architecture), ಚಿತ್ರಶಿಲ್ಪ, ಸಂಗೀತ ಮೊದಲಾದ ವಿವಿಧ ರೂಪಗಳಿಂದ ಅಭಿವ್ಯಕ್ತವಾಗಿ ಅಸಾಧಾರಣ ಘನತೆಯನ್ನು ಬೀರಿತು.

ಭಾರತೀಯ ಶಿಲ್ಪಕಲೆಯ (Architeeture & Sculpture) ಮಾರ್ಮಿಕ ಅಭ್ಯಾಸಕರಾದ ಫರ್ಗ್ಯುಸನ್ ಸಾಹೇಬರು ಇದರಲ್ಲಿ ಎರಡು ಭೇದಗಳನ್ನು ಕಲ್ಪಿಸಿ ಅವುಗಳಿಗೆ ದ್ರಾವಿಡ ಮತ್ತು ಚಾಲುಕ್ಯ ಪದ್ಧತಿಗಳು ಎಂದು ಹೆಸರಿತ್ತರು. ಅವರೀ ಪ್ರಭೇದವನ್ನು ಆಕ್ಷೇಪಿಸುತ್ತ ಹ್ಯಾವೆಲ ಸಾಹೇಬರು ಅದರಲ್ಲಿ ವಿಷ್ಣು, ಶಿವ ಮೊದಲಾದ ಸಾಂಕೇತಿಕ ರೀತಿಗಳನ್ನು (Symbolic features) ಹಿಂಗಡಿಸಿ, ಬೇರೆಯ ವರ್ಗೀಕರಣವನ್ನು ಸೂಚಿಸಿರುವರು.೭೫ ದ್ರಾವಿಡ ಅಥವಾ ಪಲ್ಲವ ಶಿಲ್ಪ ಸಂಪ್ರದಾಯವೆ ಒಂದು ವಿಶಿಷ್ಟ ಬಗೆಯಿಂದ ವಿಕಾಸವನ್ನು ಹೊಂದಿ, ಚಾಲುಕ್ಯ-ಹೊಯ್ಸಳ ರೀತಿಗಳಲ್ಲಿ ಪರಿಪಾಕಗೊಂಡಿತು ಎಂದು ಈ ಎರಡೂ ಪದ್ಧತಿಗಳ ಸಮನ್ವಯ ಮಾಡುವ ಕೆಲವು ತಜ್ಞರು ಅಭಿಪ್ರಾಯಪಟ್ಟಿರುವರು.೭೬ ಕರ್ನಾಟಕದ ಈ ಕಾಲದ ವಿಶಿಷ್ಟ ಶಿಲ್ಪಕಲೆಯ ಮಾದರಿಯಲ್ಲಿ ದಕ್ಷಿಣದ ದ್ರಾವಿಡ ಅಥವಾ ಪಲ್ಲವರ ಹಾಗೂ ಉತ್ತರದ ಇಂಡೊ-ಆರ್ಯನ್ ಕಲಾಮಾರ್ಗಗಳ ಪರಿಣಾಮಗಳನ್ನು ನಿರೀಕ್ಷಿಸಬಹುದೆಂದು ಕೆಲವರು ಪ್ರತಿಪಾದಿಸುವರು.೭೭ ಇದನ್ನು ಬಾದಾಮಿ—ಪಲ್ಲವ ರೀತಿ ಎಂಬ ಸಂಯುಕ್ತನಾಮದಿಂದ ಗುರುತಿಸಬೇಕು ಎಂದು ಇನ್ನೊಬ್ಬರು ಹೇಳುವರು.೭೮ ಅದೇನೆ ಇರಲಿ; ಈ ವಿವಾದಗಳಿಂದ ನಮ್ಮ ಚಿತ್ತವನ್ನು ಹೆಚ್ಚು ಹೊತ್ತು ವ್ಯಗ್ರವಾಗಗೊಡದೆ, ಈ ಕಲಾವೈಖರಿಯ ಸ್ವಾರಸ್ಯವನ್ನಷ್ಟೆ ಸಾರವಾಗಿ ಸೇವಿಸುವುದರತ್ತ ನಮ್ಮ ಲಕ್ಷ್ಯವನ್ನು ಹೊರಳಿಸುವ.

ಶಿಲ್ಪಕಲೆ

ಈ ಕಾಲದ ಶಿಲ್ಪಕಲೆ ಎರಡು ವಿಧದ ರಚನೆಗಳಲ್ಲಿ ವ್ಯಕ್ತವಾಗಿದೆ. ಕಲ್ಮನೆಗಳು ಅಥವಾ ಕಲ್ಲುಬಂಡೆಗಳಲ್ಲಿ ಕೊರೆದ ಗವಿಗಳು, ಒಂದನೆಯ ಪ್ರಕಾರ. ಕಟ್ಟಿದ ಗುಡಿಗಳು ಎರಡನೆಯ ಪ್ರಕಾರ. ಬೌದ್ಧರೂ ಹಿಂದುಗಳೂ

---

(೭೫) Hav. p. 102 (೭೬) C. A. p. 19
(೭೭) M. G. Vol, II, pt. I p. 357. Burgess quoted.
(೭೮) Ibid p. 134

ಈ ಎರಡೂ ಬಗೆಯ ರಚನೆಗಳನ್ನು ಹೇರಳವಾಗಿ ನಿರ್ಮಿಸಿರುವರು. ಅದರಲ್ಲಿಯೂ ಬೌದ್ಧರಲ್ಲಿ ಕೊರೆದ ಗವಿಗಳೂ, ಹಿಂದುಗಳಲ್ಲಿ ಕಟ್ಟಿದ/ಗುಡಿಗಳೂ ಹೆಚ್ಚು. ಜೈನರ ಗವಿಗಳಾಗಲಿ ಗುಡಿಗಳಾಗಲಿ ಕೆಲವೆ ದೊರೆತಿರುವವು. ಧರ್ಮಚಿಂತನೆಗೆ ತಕ್ಕ ಸ್ಥಳಗಳಾಗಿಯೂ ವಿದ್ಯಾದಾನದ ನಿಲಯಗಳಾಗಿಯೂ ಬೌದ್ಧರು ಅನೇಕ ಚೈತ್ಯಾಲಯಗಳನ್ನೂ ವಿಹಾರಗಳನ್ನೂ ಕೊರೆಯಿಸಿದರು, ಕಟ್ಟಿಸಿದರು. ಬೌದ್ಧರು ಕಟ್ಟಿಸಿದ ಚೈತ್ಯಗೃಹಗಳಲ್ಲ ತೇರದ ಚೈತ್ಯಗೃಹವು ೭೯ ಅತಿಪ್ರಾಚೀನವಾದುದು.೮೦ ಅಯ್ಹೊಳೆಯ ಜೈನ ಗುಡಿ ಈ ಚೈತ್ಯಗೃಹದ ಮಾದರಿಯಲ್ಲಿ ರಚಿತವಾಗಿದ್ದು ಬಹು ಮನೋಹರವಾಗಿದೆ. ೮೧ ಕಾರ್ಲೆ ಅಜಂತಗಳಲ್ಲಿಯ ಕೊರೆದ ಚೈತ್ಯಗೃಹಗಳೂ ವಿಹಾರಗಳೂ ಬಹು ಭವ್ಯವೂ ರಮಣೀಯವೂ ಆಗಿದ್ದು, ಈ ಕಾಲದ ಶಿಲ್ಪಕಲೆಯ ಅತ್ಯುನ್ನತ ಪ್ರತೀಕಗಳಾಗಿವೆ. ಇವುಗಳು ಏಳು-ಎಂಟನೆಯ ಶತಮಾನಗಳಲ್ಲಿ ಕೊರೆಯಿಸಲಾದುವು. ಅಜಂತೆಯ ಚೈತ್ಯಗೃಹಗಳು ಬೌದ್ಧ ವಿದ್ಯಾಪೀಠಕ್ಕಾಗಿ ಉಪಯೋಗಿಸಲಾಗುತ್ತಿದ್ದುವು. ೮೨ ಅಪ್ರತಿಮವಾದ ಈ ಶಿಲ್ಪಕಲಾಚಾತುರಿಯ ಅನುಕರಣವನ್ನು ಮೊದಲು ಏಶಿಯಖಂಡದ ಪಶ್ಚಿಮ ಜನಾಂಗಗಳು ಮಾಡಿದುವು; ಆ ಬಳಿಕ ಅದು ಯುರೋಪಖಂಡದಲ್ಲಿ ಪ್ರವೇಶಿಸಿ, ಫ್ರಾನ್ಸದೇಶದ ಮನೋರಮವಾದ ಧರ್ಮಮಂದಿರ (Cathedral)ಗಳಲ್ಲಿ ರೂಪುಗೊಂಡಿತು—ಎಂದು ಥ್ಯಾವೆಲರು ಹೇಳುತ್ತಾರೆ. ೮೩

ಎಲಿಫಂಟಾ ಅಥವಾ ಘಾರಾಪುರಿಯ ಕಲ್ಮನೆಗಳಲ್ಲಿ ಈ ಕಾಲದ ಹಿಂದೂ ಶಿಲ್ಪಕಲಾ ನೈಪುಣ್ಯದ ಅತ್ಯುಚ್ಚ ಶಿಖರವು ಕಣ್ಗೊಳಿಸುವುದು. ಇಲ್ಲಿಯ ತ್ರಿಮೂರ್ತಿಯ ಗುಡಿಯು ಮೂರ್ತಿಶಿಲ್ಪದಲ್ಲಿ ಪ್ರಕಟವಾದ ಅತ್ಯದ್ಭುತ ಕಲೋನ್ನತಿ ಅತ್ಯಾಶ್ಚರ್ಯಕರವಾಗಿದೆ. ಇದು ಹಿಂದುಸ್ತಾನದ ಪಾರ್ಥಿನಾನ್ (Indian Parthenon) ಎಂದು ಇದರತ್ತ ಬೆರಳುಮಾಡಿ ತೋರಿಸಬಹುದು. ಕಲಾಕೌಶಲದ ಈ ಔನ್ನತ್ಯವು ಪಾಶ್ಚಾತ್ಯರ ಉತ್ತಮದಲ್ಲಿ ಅತ್ಯುತ್ತಮವಾದ ಎಂತಹ ಕಲಾಚಾತುರಿಗೂ ನಿಲುಕದಂತಹದಾಗಿದೆ. ಭಾರತೀಯರ, ಅದರಲ್ಲಿಯೂ ಕರ್ನಾಟಕದ ಕಲಾಮಹಿಮೆಯ ಸಾರ್ವಭೌಮತ್ವವನ್ನು ಸಿದ್ಧಪಡಿಸಲಿಕ್ಕೆ ಇದೊಂದೆ ಉದಾಹರಣೆ ಸಾಕು. ೮೪ ಬಾದಾಮಿಯ ಕಲ್ಮನೆಗಳೂ ಅದರೊಳಗಿನ ಭವ್ಯವಾದ ಕಲಾರೀತಿಯೂ ಈ ಕಾಲದ ಭವ್ಯವಾದ, ಸ್ಫುಟವಾದ, ವಿಶಾಲವಾದ, ಆಕರ್ಷಕವಾದ ಕಲೆಯ ಬೇರೊಂದು ಮಾದರಿಯಾಗಿವೆ.

ಬಾದಾಮಿಯ ಮಾಲಗಿತ್ತಿಯ ದೇವಾಲ ಅಯ್ಹೊಳೆಯ ಮೆಗುಟಿ ಜಿನಾಲಯ, ಲಾಡ ದೇವಾಲಯ, ಕೊಂತೀಗುಡಿ, ಪಟ್ಟದಕಲ್ಲಿನ ನಾಥ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾ ಮುಂತಾದ ಗುಡಿಗಳು ಕರ್ನಾಟಕದ ಪ್ರಾಚೀನತಮ ಭವ್ಯವಾದ, ದಿವ್ಯವಾದ ಶಿಲ್ಪಕಲೆಯ ಮಾದರಿಗಳಾ ಈ ಕಾಲದ ಶಿಲ್ಪಕಲೆಯ ಪರಿಣತ ಸ್ವರೂಪವನ್ನು ಸ್ಪ ಪಡಿಸುವ ಪ್ರಮಾಣಗಳಾಗಿವೆ. ಪಟ್ಟದಕಲ್ಲಿನ ವಿ ಪಾಕ್ಷ ದೇವಾಲಯವು ದ್ರಾವಿಡ ಪದ್ಧ ಪ್ರಾಚೀನತಮ ಗುಡಿಗಳಲ್ಲೊಂದಾಗಿದ್ದು, ಇ ಸೂರೆಗೊಂಡ ಕಲಾಪ್ರೌಢಿ ಅನುಪಮವಾಗಿ ಇದರ ರಚನೆ ನೆನಿವಾ ಪಟ್ಟಣದಲ್ಲಿಯ ಮಂದಿ ಆಕಾರವನ್ನು ಹೋಲುತ್ತದೆ. ೮೫ ವಿಶ್ವದ ಅ ಗಳಲ್ಲಿ ಒಂದಾದ ಎಲ್ಲೋರದ ಕೈಲಾಸ ದೇ ಯಕ್ಕೆ ಈ ವಿರೂಪಾಕ್ಷದೇವಾಲಯದ ರೀತಿ ವಿ ಗಳೇ ಮಾದರಿಯಾಗಿದ್ದು, ಇದು ಈ ಶಿಲ್ಪ ಸುವರ್ಣಯುಗದ ಉತ್ಕೃಷ್ಟತಮ ಸೃಷ್ಟಿ ಗಿದೆ.೮೭

ಈ ರೀತಿಯಾಗಿ ಕಲ್ಲುಮಣ್ಣುಗಳಲ್ಲಿ ತಮ್ಮ ತೋನ್ನತವಾದ ಸಂಸ್ಕೃತಿಯನ್ನು ಸೂರೆಮಾಡಿದ ಈ ತತ್ವಜ್ಞಾನಿಗಳ ೮೮ ಜೀವನವು ಧನ್ಯವೆ ಸರಿ. ಸೃಷ್ಟಿ ಅವಿತುಕೊಂಡಿರುವ ದಿವ್ಯವಾದ ನೈಸರ್ಗಿಕ ಸೌಂದ ವನ್ನು ಆತ್ಮಸಾತ್ ಮಾಡಿಕೊಂಡು ಅದನ್ನು ತಮ್ಮ ಕೃತಿಯಲ್ಲಿ ಹೇಗೆ ಚೈತನ್ಯಗೊಳಿಸಬೇಕೆಂಬುದನ್ನು ಕಲಾಪರಮೇಷ್ಠಿಗಳು ಪೂರ್ಣವಾಗಿ ಅರಿತಿ

---

(೭೯). ಹೈದರಾಬಾದ ಸಂಸ್ಥಾನ

(೮೦) Hav. p. 66

(೮೧) Ibid p. 67

(೮೨) Ibid p. 152

(೮೩) Ibid p. 76

(೮೪) Ibid pp. 164-65.

(೮೫) Ibid p. 31

(೮೬) Ibid p. 178

(೮೭) Ibid p. 182. Masterwork of the Cla Period

(೮೮) Philosophers in brick & stone. Ibid p

ಪರಮೇಶ್ವರನ ಪ್ರಪಂಚದಲ್ಲಿ ಸುಷುಪ್ತವಾಗಿರುವ ಅಂತರಂಗದ ವಿಜ್ಞಾನವನ್ನು ಸಮರ್ಪಕವಾದ ಕಲೆಯ ಬಹಿರಾವರಣದಲ್ಲಿ ಪ್ರಕಟಗೊಳಿಸುವುದೆ ಈ ಕಲಾಯೋಗಿಗಳ ಕಲೆಯ ಗುರಿಯಾಗಿದ್ದಿತು. ಅವರ ಕಲಾಸೃಷ್ಟಿ ಅವರ ಜೀವನಸಾಮರಸ್ಯದ ನದೀಪ್ರವಾಹದಲ್ಲಿ ಆತ್ಮಾವಿಷ್ಕರಣಸ್ಫೂರ್ತಿಯಿಂದ ಸಹಜವಾಗಿ ತೇಲಿಬಂದ ಅಮರ ನೊರೆಯಾಗಿದ್ದಿತಲ್ಲದೆ, ಕೇವಲ ಬಾಹ್ಯಸೌಂದರ್ಯದ ಮೆರುಗಿನಿಂದ ಮನವನ್ನು ವ್ಯಾಮೋಹಗೊಳಿಸಲೆಳಸುವ ವಾಸನಾಚಾಪಲ್ಯವಾಗಿದ್ದಿಲ್ಲ ೫೯. ಅಸಾಧಾರಣವಾದ ಈ ಭಾರತೀಯ ಶಿಲ್ಪರೀತಿ ಮಧ್ಯಯುಗದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಊರ್ಜಿತವಾದ ಗೋಥಿಕ್ (Gothic) ರೀತಿಗಿಂತಲೂ ಎಷ್ಟೋ ಪಾಲು ಮಿಗಿಮಿಗಿಲಾಗಿದೆ.೬೦

ಚಿತ್ರಶಿಲ್ಪ

ಮೂರ್ತಿ-ಮಂದಿರ ಶಿಲ್ಪಗಳಲ್ಲಿ ಆವಿರ್ಭವಿಸಿದ-ಭಾರತೀಯ ನಾಗರಿಕತೆಯೂ ಆಧ್ಯಾತ್ಮಿಕ ಸಂಸ್ಕಾರವೂ ಚಿತ್ರಶಿಲ್ಪದಲ್ಲಿಯೂ ಅಭಿವ್ಯಕ್ತಿಯನ್ನು ಪಡೆದಿದೆ. ಈ ಕಾಲದಲ್ಲಿ ನಿರ್ಮಿತವಾದ ಅಜಂತೆಯ ವಿಶ್ವವಿಖ್ಯಾತ ಚಿತ್ರಶಿಲ್ಪವು ಪ್ರಾಮುಖ್ಯವಾಗಿ ಧಾರ್ಮಿಕ ಪ್ರೇರಣೆಯಿಂದ ಪ್ರೇರಿತವಾಗಿದ್ದು, ಅದರಲ್ಲಿ ಮಹಾತ್ಮಾ ಬುದ್ಧನ ಜೀವನಸಂನಿವೇಶಗಳಾಗಲಿ, ಜಾತಕಕಥೆಗಳಲ್ಲಿಯ ಪ್ರಸಂಗಗಳಾಗಲಿ ವಿಸ್ತಾರಿತವಾಗಿವೆ. ಅಸಾಧಾರಣವಾದ ರೇಷಾವಿನ್ಯಾಸ ಚಮತ್ಕಾರದಿಂದ ನಿರ್ಜೀವ ಭಿತ್ತಿಗಳ ಮೇಲಿನ ನಿರ್ಜೀವ ಜೀವಸೃಷ್ಟಿಯಲ್ಲಿ ಓತಪ್ರೋತವಾಗಿ ಚೈತನ್ಯವನ್ನು ತುಂಬುವ ಈ ಬುದ್ಧ ಚಿತ್ರಕಲಾ ಚಾತುರಿಯು ಭಾರತೀಯ ಚಿತ್ರಕಲಾ ಪ್ರಪಂಚದಲ್ಲಿ ಅಜರಾಮರ ಗೌರವದ ಸ್ಥಾನವನ್ನು ಪಡೆದಿದೆ. ಈ ಬುದ್ಧ ಕಲಾಶೈಲಿಗೂ ಚೀನ, ಮಧ್ಯ ಏಸಿಯ ಮೊದಲಾದೆಡೆಯಲ್ಲಿ ದೊರೆವ ಪ್ರಾಚೀನ ಬುದ್ಧಚಿತ್ರಕಲಾರೀತಿಗೂ ಕೆಲವಂಶಗಳಲ್ಲಿ ಸಾಮ್ಯವಿದ್ದರೂ, ಅಜಂತೆಯ ಕಲಾಮಹಿಮೆ ಅತುಲನೀಯವಾಗಿದೆ. ಅಜಂತೆಯ ಚೈತ್ಯಗೃಹಗಳಲ್ಲಿ ಚಿತ್ರವಿಚಿತ್ರವಾದ ಕಾಂತಿಯಿಂದ ಬೆಳಗುವ ಈ ಚಿತ್ರಕಲೆ ಭಾರತೀಯ ಚಿತ್ರಕಲಾ ಸೃಷ್ಟಿಯ ಉನ್ನತತಮ ಆದರ್ಶವಾಗಿದೆ. ೬೧ ಯುರೋಪದ ಚಿತ್ರಕಲಾ ರೀತಿಗಳು ಅಜಂತೆಯ ಈ ಕಲಾಸಿದ್ಧಿಯನ್ನು ಎಂದಿಗೂ ಸ್ಪರ್ಧಿಸಲಾರವು. ೬೨ ಈ ಚಿತ್ರಪ್ರಪಂಚದಲ್ಲಿ ಪ್ರಕಟವಾದ ಪ್ರಮಾಣ ತಾರತಮ್ಯ, ವರ್ಣಪರಿಜ್ಞಾನ, ಸಮ್ಮೇಲನ ಕೌಶಲ, ಭಾವಾವಿರ್ಭಾವ ಸಾಮರ್ಥ್ಯ, ಸ್ಫುಟತೆ, ಸೂಕ್ಷ್ಮತೆ ಇವುಗಳು ಉಚ್ಚತರವಾಗಿದ್ದು, ಕಥೆಯನ್ನು ಬಿಂಬಿಸುವ ಕಲಾಮಾರ್ಮಿಕತೆಯೂ ಸರಸವಾಗಿದೆ.೬೨ಅ ಈ ಪ್ರಬಂಧದ ಪ್ರಾರಂಭದಲ್ಲಿ ನಿರ್ದಿಷ್ಟವಾದ ಪುಲಿಕೇಶಿಯ ಓಲಗದ ಚಿತ್ರವು ಈ ಕಲಾಪ್ರಪಂಚಕ್ಕೆ ಸೇರಿದ ಬೌದ್ಧೇತರ ಚಿತ್ರಕಲೆಯ ಒಂದು ರಮ್ಯಕೃತಿಯಾಗಿದೆ. ಭಾರತೀಯ ನೈಜ ಚಿತ್ರಕಲೆಯನ್ನು ಪುನರುಜ್ಜೀವನಗೊಳಿಸಿದ ಶ್ರೇಯೋಭಾಗಿಯಾದ ಬಂಗಾಲದ ಅವನೀಂದ್ರನಾಥ ಟಾಗೋರರ ಅಭಿನವ ಕಲಾಪಂಥವು ಅಜಂತೆಯ ಕಲಾರೀತಿಯಿಂದ ಸ್ಫೂರ್ತಿಯನ್ನು ಪಡೆದುದೂ, ಈ ಕಲಾರಹಸ್ಯವನ್ನೆ ತನ್ನ ಆದರ್ಶವಾಗಿ ಇಟ್ಟುಕೊಂಡುದೂ ಆಗಿದೆ.

ಸಂಗೀತ

ಈ ಕಾಲದಲ್ಲಿ ಸಂಗೀತಕಲೆಯಾದರೂ ಉತ್ಕರ್ಷವನ್ನು ಪಡೆಯಿತು ಎಂಬುದು, ಬೇರೆ ಪ್ರಮಾಣಗಳ ಅಭಾವವಿದ್ದರೂ ಈ ಕಾಲದ ಮೂರ್ತಿ-ಮಂದಿರ-ಚಿತ್ರ ಶಿಲ್ಪಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಕಟವಾಗಿರುವ ಸಂಗೀತ ಕಲಾವಿದರ ದೃಶ್ಯಗಳಿಂದ ಊಹಿಸಬಹುದಾಗಿದೆ. ಇದಲ್ಲದೆ ಭಾರತೀಯ ಸಂಗೀತ ಪ್ರಪಂಚದಲ್ಲಿ ಪ್ರಾಧಾನ್ಯವನ್ನು ಪಡೆದ ದಾಕ್ಷಿಣಾತ್ಯರೀತಿಗೆ ಬಾದಾಮಿಯೆ ಉಗಮಸ್ಥಾನವಾಗಿದ್ದಿತು ಎಂದು ಹೇಳಬಹುದು. ಇದಕ್ಕೆ ಒಂದು ಪಾರಂಪರಿಕ ನಿದರ್ಶನವು ದೊರೆಯುತ್ತಿದೆ. ಈಗಲೂ ದಾಕ್ಷಿಣಾತ್ಯ ಸಂಗೀತಶಾಸ್ತ್ರಜ್ಞರು ಹಾಡುವುದಕ್ಕೆ ಮೊದಲು ಮಾಡುವಾಗ,

ವಾತಾಪಿ ಗಣಪತಿಂ ಭಜೇ।

ಎಂಬ ಶ್ರೀಗಣೇಶನಮನಪರ ಪದ್ಯವನ್ನು ಹೇಳಲಿಕ್ಕೆ ಮರೆಯುವುದಿಲ್ಲ. ಈ ಸಂಪ್ರದಾಯದ ಮರ್ಮವೇನಿರಬಹುದು? ಇಲ್ಲಿ ವಾತಾಪಿಯ ಎಂದರೆ ಬಾದಾಮಿಯ ಗಣಪತಿಗೇಕೆ ಇಷ್ಟು ಪ್ರಾಮುಖ್ಯ? ಇದರಿಂದ ಈ ಕಾಲದಲ್ಲಿ ಬಾದಾಮಿಯಲ್ಲಿ ಸಂಗೀತಕಲೆ ಸಶಾಸ್ತ್ರರೀತಿಯಲ್ಲಿ ಉಗಮವನ್ನು ಪಡೆದು ಮುಂದೆ ದಾಕ್ಷಿಣಾತ್ಯ ಸಂಗೀತಪದ್ಧತಿಯಾಗಿ ವಿಕಾಸಹೊಂದಿತು ಎಂದು ತರ್ಕಿಸಬಹುದಾಗಿದೆ. ಅಲ್ಲದೆ ಕರ್ನಾಟಕ ಸಂಗೀತ ಎಂಬ ಇದರ ಇನ್ನೊಂದು ಹೆಸರಾದರೂ ಕರ್ನಾಟಕದ

---

(೫೯) Hav. p. 119

(೬೧) Ibid p. 152.Greatest pictorial art of India.

(೬೨) Ibid.

(೬೨ಅ) A. p. 4. Fergusson quoted.

ಈ ಪ್ರಥಮ ಚಾಲುಕ್ಯ ಸಾಮ್ರಾಜ್ಯದಲ್ಲಿ ಈ ಕಲೆ ಹೆಚ್ಚಾಗಿ ಪೋಷಿತವಾಗಿರಬೇಕು ಎಂದು ಸೂಚಿಸುತ್ತದೆಯಲ್ಲವೆ?

ಕಲಾಜೀವನದ ಮರ್ಮಜ್ಞರಾದ ಹ್ಯಾವೆಲರು ಈ ಕಾಲದ ಭಾರತೀಯ ಮತ್ತೂ ಕರ್ನಾಟಕದ ಕಲೆಗಾರಿಕೆಯ ಮೇಲ್ಮೆಯನ್ನು ಹೊಗಳುತ್ತ, ಕಲೆಗೂ ಸಂಸ್ಕೃತಿಗೂ ಜೀವನಕ್ಕೂ ಇರುವ ನಿಕಟ ಸಾಹಚರ್ಯವನ್ನು ಈ ರೀತಿಯಾಗಿ ಕ್ರೋಡೀಕರಿಸಿ ಹೇಳಿರುವರು. ೯೩

The whole synthesis of Indian life & thought is written down in its craft traditions forming a priceless record of a great civilization...... No civilization ancient or modern has produced a higher culture. No other has succeeded better in making religion the philosophy of life.

ಉದ್ಯೋಗ-ವ್ಯವಸಾಯಗಳು

ಈ ಕಾಲದ ಕರ್ನಾಟಕದ ಪ್ರಧಾನ ವ್ಯವಸಾಯವು ಒಕ್ಕಲತನವಾಗಿದ್ದಿತು. ಒಕ್ಕಲತನದ ತರುವಾಯ ದಂಡಿನಲ್ಲಿ ಸೇರುವುದು ಎರಡನೆಯ ಪ್ರಮುಖ ಉದ್ಯೋಗವಾಗಿತ್ತು. ಇದಲ್ಲದೆ ವ್ಯಾಪಾರ, ನೂಲುವುದು, ನೇಯುವುದು, ಕಮ್ಮಾರಿಕೆ, ಕಂಚಗಾರಿಕೆ, ಬಡಿಗತನ ಮುಂತಾದ ಕೈಗಾರಿಕೆಗಳು, ಶಿಲ್ಪಕಲೆ, ಲಲಿತಕಲೆ ಮುಂತಾದ ಉದ್ಯೋಗಗಳು ಬಹುಜನರಿಗೆ ವೃತ್ತಿಗಳನ್ನು ಕಲ್ಪಿಸಿ ಕೊಡುತ್ತಿದ್ದುವು.

ಜನಾಂಗದ ಶೀಲಸ್ವಭಾವ--ಜೀವನದ ರೀತಿನೀತಿಗಳು

ಈ ಕಾಲದ ಸಮಾಜವು ವರ್ಣಜಾತಿಗಳ ಮೇಲೆ ಆಧಿಷ್ಠಿತವಾಗಿದ್ದರೂ, ಜಾತೀಯ ನಿರ್ಬಂಧಗಳು ಕಟುತರವಾಗಿದ್ದಿಲ್ಲ. ಬ್ರಾಹ್ಮಣ, ಕ್ಷತ್ರಿಯ ಮೊದಲಾದ ಉಚ್ಚಜಾತಿಗಳಲ್ಲಿ ಪರಸ್ಪರ ಅನ್ನವ್ಯವಹಾರ ಮೊದಲಾದ ಬಳಕೆ ಆಗುತ್ತಿರುವುದಲ್ಲದೆ, ಬೇರೆಬೇರೆ ಪ್ರಾಂತಗಳ ಜನರಲ್ಲಿಯೂ ವೈದಿಕ, ಬುದ್ಧ, ಜೈನ ಮೊದಲಾದ ಭಿನ್ನ ಭಿನ್ನ ಧರ್ಮಮತಗಳ ಅನುಯಾಯಿಗಳಲ್ಲಿಯೂ ಪರಸ್ಪರ ಬಳಕೆಯಾಗಲಿಕ್ಕೆ ವಿಶೇಷ ಸಂಕೋಚಗಳು ಇದ್ದಂತೆ ತೋರುವುದಿಲ್ಲ. ಭಿನ್ನಜಾತೀಯ ವಿವಾಹಗಳಾದರೂ ಕೆಲವೆಡೆಯಲ್ಲಿ ಆಗುತ್ತಿದ್ದುವು ಎಂದು ತೋರುತ್ತದೆ. ವ್ಯಾಪಾರ ಮೊದಲಾದ ಉದ್ದೇಶದಿಂದ ರೋಮ, ಇಜಿಪ್ತ ಮೊದಲಾದ ದ್ವೀಪಾಂತರಗಳೊಡನೆಯೂ ಸಾಂಸ್ಕೃತಿಕ ಸಂಬಂಧಗಳು ಬೆಳೆದಿದ್ದುವು.೯೪ ಚಿಕ್ಕ ವಯಸ್ಸಿನಲ್ಲಿ ಬಾಲಿಕೆಯರ ವಿವಾಹ ಮಾಡುವ ಪ್ರವೃತ್ತಿ ಬೆಳೆಯತೊಡಗಿತ್ತು.೯೫ ಸ್ತ್ರೀಯರಿಗೆ ಸಮಾಜದಲ್ಲಿ ಮಾನ್ಯತೆ ಇದ್ದು ಉಚ್ಚವರ್ಗದ ಸತಿಯರು ಧರ್ಮ, ರಾಜಕಾರಣ, ಮೊ ಲಾದ ಕಾರ್ಯಕ್ಷೇತ್ರಗಳಲ್ಲಿ ಹೆಚ್ಚು ಸ್ವಾತಂತ್ರ್ಯದಿಂದಲ ಪ್ರಮುಖತೆಯಿಂದಲೂ ಭಾಗವನ್ನು ವಹಿಸುತ್ತಿದ್ದರು. ಸ ಗಮನ ಪದ್ಧತಿ ರೂಢಿಯಲ್ಲಿ ಬಂದಿತ್ತು ಎಂದು ತೋ ತ್ತದೆ.

ಸರಲ ಸ್ವಭಾವ, ಶುದ್ಧ ಶೀಲ, ಸ್ವಾಭಿಮಾನ, ಸಾಹ ಪ್ರೀತಿ, ಪರಾಕ್ರಮಶಾಲಿತೆ, ಉದಾರ ಮನೋವೃತ್ತಿ ಧರ್ಮಪ್ರವಣತೆ, ದೀರ್ಘೋದ್ಯೋಗ, ಸತ್ಯನಿಷ್ಠೆ, ಕಲಾಸ ಇವು ಈ ಕಾಲದ ಕನ್ನಡ ಜನಾಂಗದಲ್ಲಿ ಒಡೆದು ಕಾಣು ಸ್ವಭಾವ ವೈಶಿಷ್ಟ್ಯಗಳಾಗಿವೆ. ಏಳನೆಯ ಶತಮಾನದ ಹಿಂದುಗಳ ಸ್ವಭಾವವನ್ನು ಕುರಿತು ಯೂಆನ್ ಚ್ವಾಂಗ ಹೇಳುವ ಮಾತುಗಳು ೯೬ ಕನ್ನಡಿಗರಿಗೂ ಅನ್ವಯಿ ವುವು.

"ಇವರು ಸ್ವಭಾವದಿಂದ ಚಂಚಲರಾಗಿದ್ದರೂ ಶಿ ಸಂಪನ್ನರಿರುವರು. ಇವರು ಅನ್ಯಾಯದಿಂದ ನಡೆಯ ಕಪಟವೆಂಬುದನ್ನು ಅರಿಯರು. ಶತ್ರುಗಳೊಡನೆಯ ಇವರು ಉದಾರ ಭಾವನೆಯಿಂದ ವರ್ತಿಸುವರು."

ಇದಕ್ಕೂ ವಿಶದವಾಗಿಯೂ ಮಾರ್ಮಿಕವಾಗಿಯೂ ಕಾಲದ ಕನ್ನಡಿಗರ ಶೀಲಸ್ವಭಾವಗಳನ್ನೂ ಉನ್ನತ ಚಾ ತ್ರ್ಯವನ್ನೂ ವರ್ಣಿಸುವ ಹುವೆನತ್ಸಾಂಗನ ನುಡಿಗಳ ಸಾರಾಂಶವನ್ನು ಇದರಡಿಯಲ್ಲಿ ನೀಡಿ, ಈ ಪ್ರಬಂಧವ ವಿರಾಮಗೊಳಿಸುವ.

"ಇಲ್ಲಿಯ ಜನರ (ಕನ್ನಡಿಗರ) ರೀತಿನೀತಿಗಳು ಲವೂ ಪ್ರಾಮಾಣಿಕವೂ ಆಗಿವೆ. ಈ ಜನಾಂಗದ ಉನ್ನತಕಾಯರು. ಬಹು ಸ್ವಾಭಿಮಾನಶಾಲಿಗ ಉಪಕಾರ ಮಾಡಿದವರಿಗೆ ಕೃತಜ್ಞರಾಗಿರುವರು. ಅಪಕಾ ಮಾಡಿದವರ ಸೇಡನ್ನು ತೀರಿಸದೆ ಬಿಡರು. ತಮ್ಮ ಮ ರಕ್ಷಣೆಯಲ್ಲಿ ತಮ್ಮ ಪ್ರಾಣಗಳನ್ನೂ ಲೆಕ್ಕಿಸರು. ಇವ ಬಹು ಪರೋಪಕಾರಶೀಲರು. ತಮ್ಮನ್ನೆ ಮರೆತು ಅಕ ಸಹಾಯಕ್ಕಾಗಿ ಧಾವಿಸುವರು. ಕಾಳಗದಲ್ಲಿ ಮೊರೆ ಹೊ ವರನ್ನು ಕಾಪಾಡುವರು....ಕ್ಷತ್ರಿಯ ಕುಲದ ವೀರಾಗ್ರ

---

(೯೩) Hav. p. 220

(೯೪) Hav. p. 167-68.

(೯೫) प्रा. शि. p. 131

(೯೬) प्रा. शि. p. 182

(೯೭) I. A. VII.

(ಇಮ್ಮಡಿ) ಪುಲಿಕೇಶಿ ಇವರಿಗೆ ನಾಯಕನಾಗಿರುವನು. ಆತನ ಔದಾರ್ಯಬುದ್ಧಿಯೂ ಪರೋಪಕಾರನೀತಿಯೂ ದೆಸೆದೆಸೆಗಳಲ್ಲಿ ಪಸರಿಸಿದೆ. ಆತನಲ್ಲಿ ಇವರಿಗೆ ಅಪಾರವಾದ ಭಕ್ತಿ. "*

ಸಂದರ್ಭಗ್ರಂಥಗಳೂ ಅವುಗಳ ಸಂಕ್ಷೇಪವೂ

1 Vincent Smith: Early History of India [V. S.]
2 Cousens: Chalukyan Architecture [C. A.]
3 Havell: Indo-Aryan Civilization [Hav.]
4 Pallavas of Kanchi [P. K.]
5 Mysore Gazetteer Vol. II Part I [M. G. 1.]
6 „ „ „ Pt. II [M. G. 11.]
7 Indian Painting by Percy Brown [I. P.]
8 Karmarkar: Chalukyan Administration H. R. Vol. 1-1 [K.]
9 Indian Antiquary (Hiewen-Tsang 's account) Vol. VII [I. A. VII]
10 Hindu Polity by Jaiswal [H. P.]
11 Early History of the Deccan by Dubreil
12 Aihole Inscription I. A. VI [A. 1.]
13 Ajanta Frescoes Hyd. Arch. Dept.
14 Guide To Ajanta Do Do [A]
15 Altekar: Rashtrakutas & Their times [Al]
16 मध्ययुगीन भारत by C.V. Vaidya [म. भा.]
17 मराठी रियासत Pt. I [म. रि.]
18 प्राचीन भारतीय शिक्षणपद्धति by Altekar [प्रा. शि.]
19 ಕರ್ನಾಟಕ ಸಾಮ್ರಾಜ್ಯ by R. H. Deshapande [ಕ. ಸಾ.]
20 ಕವಿಚರಿತೆ [ಕ. ಚ.]
21 ಬಾದಾಮಿಯ ವರ್ಣನೆ by Dr. Shirahatti [ಬಾ. ವ.]
22 Bhandarkar: Early History of Deccan [Bh.]
23 Bombay Gazetteer Vol. I. Pt. II [B. G.]
24 ಕಣ್ಮರೆಯಾದ ಕನ್ನಡ—ಶಂ. ಬಾ. ಜೋಶಿ [ಕ. ಕ.]
25 Dashakumara Charita. Bombay Sanskrit & Prakrit Series [D. K.]
26 ಸುರಪುರ ಸಂಸ್ಥಾನದ ಇತಿಹಾಸ—ಶ್ರೀ. ಕಪಟರಾಳ (Unpublished)
27 Kadamba Kula-Prof. Moraes [K. K.]

---

* ಧಾರವಾಡದ ಕರ್ನಾಟಕ ಕಾಲೇಜಿನ ೧೯೩೫ನೆಯ ಇಸ್ವಿಯ 'ಕನ್ನಡ ವಾರ್ಷಿಕ ಪ್ರಬಂಧ' ಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕವನ್ನು ಪಡೆದ ಪ್ರಬಂಧವು.

ವಾಮನ!

ಕುಬ್ಜರೂಪವ ಧರಿಸಿ ಬಲಿಚಕ್ರವರ್ತಿಯನು
ವರವೊಂದ ಬೇಡಿದೈ ಗುಪ್ತಮಹಿಮನೆ ನೀನು.
ಮೂರಡಿಯ ನೆಲವ ಯಾಚಿಸೆ ವಿಪ್ರನರ್ತಿಯನು
ಸಲಿಸಿದನು ಬಲಿಸಾರ್ವಭೌಮನೌದಾರ್ಯದಲಿ.
ಬೂದಿ ಮುಚ್ಚಿದ ಕೆಂಡ ನೀನೆಂದಸುರ ತಾನು
ಎಂತರಿವನೆಲೆ ಶಕ್ತ! ಮುಗಿಲ ಹಿಂದಿನ ಭಾನು
ನೀನಾಗಿ, ದೊರೆಯ ಸಕಲವನು ಚಾತುರ್ಯದಲಿ
ಆಪೋಶನಂಗೈದೆ ಋಷಿಯಗಸ್ತ್ಯನ ತೆರದಿ.
'ವಾಮನ' ನೆ! ಯಾಚಿಸುವೆನೊಂದು ವರವನು ನೀಡು.
ಕಸದಿ ಹುದುಗಿಹ ವಜ್ರ ನನ್ನ ಕನ್ನಡನಾಡು.
ಗಣಿಯಿಂದ ತೆಗೆದಿದಕೆ ಕೊಡು ಸಾಣೆಯನು ಭರದಿ.
ನನ್ನ ನಚ್ಚಿನ ನೆಲದ ಹಿರಿಮೆಯಾಸೆಯನುರದಿ
ಬೆಳೆಸಿಹೆನು ದೇವ. ಕರುಣಿಸಿದಕೆ ಮಹಾಸ್ಫೂರ್ತಿ.
ಕಿರಿಯದಾದರು ಮೂರ್ತಿ ಹಿರಿಯದಾಗಲಿ ಕೀರ್ತಿ.

—ಮೂರ್ತಿ

(ಋಷಿ ವ್ಯಾಳಿ)

ಖನಿಜದ್ರವ್ಯಗಳೂ ಜಗತ್ತಿನಲ್ಲಿಯ ಸ್ಥಿತ್ಯಂತರಗಳೂ

ಬೇರೆಬೇರೆ ದೇಶಗಳಲ್ಲಿ ಯಾವಯಾವ ಖನಿಜದ್ರವ್ಯಗಳು ಎಷ್ಟೆಷ್ಟು ಪ್ರಮಾಣದಲ್ಲಿವೆ ಯೆಂಬುದನ್ನು ವಿವರವಾಗಿ ತಿಳಿಸುವ ಲೇಖನವಿದು. ಉತ್ತರ ಅಟ್ಲಾಂಟಿಕ್ ಮಹಾ ಸಾಗರದ ತೀರದ ಮೇಲೆ ಹಬ್ಬಿದ ರಾಷ್ಟ್ರಗಳ ಕೈಯಲ್ಲಿಯೆ ಜಗತ್ತಿನ ಬಹುಭಾಗದ ಒಡೆತನವಿರುವುದಕ್ಕೆ ಅವುಗಳ ಖನಿಜಸಂಪತ್ತಿಯೇ ಕಾರಣ. ರಶಿಯಾವು ಇಂಗ್ಲಂಡ ಅಮೆರಿಕೆಗಳನ್ನೂ ಕೆಣಕುತ್ತಿದ್ದುದು ಈ ಗುಪ್ತನಿಧಿಯನ್ನು ಹೊರದೆಗೆಯಲು ತೊಡಗಿ ದಂದಿನಿಂದಲೆ. ಹಿಂದಸ್ತಾನದಲ್ಲಿಯೂ ಬಂಗಾರಕ್ಕಿಂತಲೂ ಬೆಲೆಯುಳ್ಳ—ಆಧುನಿಕ ಯಾಂತ್ರಿಕ ನಾಗರಿಕತೆಗೆ ಅತ್ಯುಪಯುಕ್ತವಾದ ನಾನಾ ಖನಿಜದ್ರವ್ಯಗಳು ಭೂಗರ್ಭಗತ ವಾಗಿವೆ. ಆದರಿಂದು ಜಗತ್ತಿಗೆ ಕಚ್ಚಾಮಾಲನ್ನು ಪೂರೈಸುವ ಬಡಪಾಯಿಗಳು ನಾವಾಗಿದ್ದೇವೆ. ಎಲ್ಲಾ ಸರಿಯಾದರೆ ನಮ್ಮ ಸಿದ್ಧವಸ್ತುಗಳು ಪರದೇಶದ ಪೇಟೆ ಗಳನ್ನು ಹೊಕ್ಕು, ನಮ್ಮ ರಾಷ್ಟ್ರಕ್ಕೆ ರಶಿಯ-ಅಮೆರಿಕೆಗಳ ದರ್ಜೆ ತಂದುಕೊಡುವುದು ಅಸಂಭವನೀಯವಲ್ಲ. ....

" ನಾಗರಿಕ "

ಒಂದಾನೊಂದು ಕಾಲಕ್ಕೆ ಗಡ್ಡೆಗೆಣಸು, ಹಣ್ಣು ಹಂಪಲ, ಉಪ್ಪು ಮೊದಲಾದ ಪದಾರ್ಥಗಳು ಮನುಷ್ಯನ ಜೀವನ ಸ್ವಾಸ್ಥ್ಯಕ್ಕೆ ಸಾಕಾಗಿದ್ದವು. ಅವುಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಪರಸ್ಪರರಲ್ಲಿ ಹೊಡೆಯು ವುದು ಬಡಿಯುವುದು ನಡೆಯುತ್ತಿತ್ತು; ತರುವಾಯ ಮಾನ ವನು ಸ್ವಂತದ ಭೂಮಿಯನ್ನೂ ಹೊಲಗಳನ್ನೂ ಸಂಪಾ ದಿಸತೊಡಗಿದನು. ಇವುಗಳ ರಕ್ಷಣೆಗಾಗಿಯೂ ಕದನಗಳು ನಡೆಯುತ್ತಿದ್ದುವು. 'ರಾಷ್ಟ್ರ'ದ ಕಲ್ಪನೆ ಮೈಗೊಂಡಹಾಗೆ ಭೂಮಿಯ ವಿಸ್ತಾರ, ದನಕರು, ಗುಲಾಮರ ಪಡೆ—ಇವೆಲ್ಲ ಸಿರಿವಂತಿಕೆಯ ಗುರುತುಗಳಾದವು. ಆದರೂ ಆ ಕಾಲ ದಲ್ಲಿ ಖನಿಜದ್ರವ್ಯಗಳ ಮಹತ್ವವು ಹೆಚ್ಚಾಗಿರಲಿಲ್ಲ,— ಇರಲಿಲ್ಲವೆಂದರೂ ಸಲ್ಲುವುದು.

ಔದ್ಯೋಗಿಕ ಕ್ರಾಂತಿಯು ಜಗತ್ತಿನಲ್ಲಿ ಅವತರಿಸಿದ ತರು ವಾಯ, ಎಂದರೆ ಸು. ೧೫೦-೧೭೫ ವರ್ಷಗಳ ಹಿಂದೆ ರಾಜ ತಂತ್ರವಿಶಾರದರು ರಾಷ್ಟ್ರದ ಅಭ್ಯುದಯಕ್ಕೆ ಅತ್ಯಗತ್ಯ ವಾದ ಈ ಅಮೌಲ್ಯ ಗುಪ್ತನಿಧಿಯತ್ತ ತಮ್ಮ ಕಣ್ಣುಗಳನ್ನು ಹೊರಳಿಸಿದರು. ಇದರ ಪರಿಣಾಮವಾಗಿ ಯುರೋಪೀಯ ರಾಷ್ಟ್ರಗಳಲ್ಲಿ ವ್ಯಾಪಾರದ ಸ್ಪರ್ಧೆಯು ಪ್ರಾರಂಭವಾಯಿತು. ಪ್ರತಿರಾಷ್ಟ್ರವೂ—ಅದು ಸಣ್ಣದಿರಲಿ, ದೊಡ್ಡದಿರಲಿ— ವಸಾಹತುಗಳನ್ನು ಪಡೆಯುವ ಉದ್ಯೋಗಕ್ಕೆ ತೊಡಗಿತು; ಪಡೆದ ಮೇಲೆ ಕಾಯ್ದುಕೊಳ್ಳುವ ಸನ್ನಾಹವನ್ನು ನಡಸಿತು. ಬೇರೆಬೇರೆ ಕಡೆ ನಡೆದ ಕದನ-ಕಾಳಗಗಳ ಮೀಮಾಂಸೆ ಯನ್ನು ಮಾಡಿದರೆ, ಖನಿಜಸಂಪತ್ತಿಯೆ ಅವುಗಳ ಕಾರಣ ವಾಗಿದೆಯೆಂಬುದು ದೀರ್ಘಾಲೋಚನೆಯ ತರುವಾ ಗೊತ್ತಾಗುವುದು. ತೋರಿಕೆಯ ನೆಪಗಳು ಬೇರೆಯೆ ರುವವು. ರೆಡ್ ಇಂಡಿಯನ್ನರಿಗಾಗಿ ಒಂದು ರಾಷ್ಟ್ರ ಕನಿಕರ ಹುಟ್ಟಿದರೆ, ಕಾಡು ಶಿದ್ದೀ ಜನರಿಗಾಗಿ ಇನ್ನೊಂ ಕರುಣೆಯ ಕಡಲುಕ್ಕೇರುವುದು. ಒಬ್ಬರಿಗೆ ಕಂದುಬ ಕ್ಕಾಗಿ ಮಮತೆ; ಇನ್ನೊಬ್ಬರಿಗೆ ಕೆಂದುಬಣ್ಣಕ್ಕಾಗಿ ಸ್ನೇ ಮಂಚುಕುವೊ, ಚೀನ, ಅಬಿಸೀನಿಯಗಳಲ್ಲೆಲ್ಲಾ ಸ ದಾಟ ನಡೆಸಿದ್ದುದು ಈ ಗುಪ್ತನಿಧಿಯೆ.

ಲೋಹಗಳ ಮತ್ತು ಖನಿಜದ್ರವ್ಯಗಳ ಉಪಯುಕ್ತ

ಉಗಿಬಂಡೆ, ಉಗಿಹಡಗು, ಡಾಯನಾಮೊ, ಮೋಟ ವಿಮಾನ, ವಿತಂತು ವಿದ್ಯುದ್ಯಂತ್ರ, ರೇಡಿಯೊ, ಟೆಲಿವ್ಹಿ ಮುಂತಾದ ಸಾಧನಗಳು, ಬೇರೆಬೇರೆ ವಾಯುಗಳ ಮೂ ಚಿತ್ರವಿಚಿತ್ರ ಬಣ್ಣಗಳನ್ನು ಕೊಡುವ ಪ್ರಕಾಶಗಳು ಇ ಇಂದಿನ ಯಾಂತ್ರಿಕನಾಗರಿಕತೆಯ ಮಹತ್ವದ ಸಾ ಗಳಾಗಿವೆ. ಇವಕ್ಕೆ ಔದ್ಯೋಗಿಕವಷ್ಟೇ ಅಲ್ಲ, ರಾಜಕೀ ಮಹತ್ವವೂ ಬಂದಿದೆ. ಇವುಗಳಿಗೆ ಬೇಕಾಗುವ ಖನಿಜದ್ರವ್ಯಗಳನ್ನೂ ಅವು ದೊರೆವ ಕಣಿಗಳನ್ನೂ ಪಡಿಸಿಕೊಳ್ಳುವುದೇ ಇಂದಿನ ಜಾಗತಿಕ ರಾಜತಂತ್ರದ ಹೇತುವಾಗಿದೆ.

ಕೆಳಗಿನ ವಿವರಣೆಯಿಂದ ಬೇರೆಬೇರೆ ಧಾತುಗಳೂ ದ್ರ ಗಳೂ ಯಾವಯಾವ ಕೆಲಸಕ್ಕಾಗಿ ಉಪಯುಕ್ತವಾ ಯೆಂಬುದು ತಿಳಿದುಬರುವುದು.

(೧) ಜೀವನಕ್ಕೆ ಅವಶ್ಯಕ: ಉಪ್ಪು, ನೀರು.

(೨) ಕೃಷಿಗಾಗಿ ಬೇಕಾಗುವ ಗೊಬ್ಬರಕ್ಕಾಗಿ: ಫಾಸ್ಫೇಟ್ಸ್, ಪೊಟ್ಯಾಶ್ (ಖಾರ).

(೩) ಡಾಯ್ನಾಮೊ, ಮೋಟಾರ ಮೊದಲಾದ ಶಕ್ತಿಗಳ ...ಟುಮಾಡುಲು ಬೇಕಾಗುವ ಯಂತ್ರಸಾಮುಗ್ರಿಗಳಿಗೆ ...ವಶ್ಯಕವಾದ ಲೋಹಗಳು: ತಾಮ್ರ, ಕಬ್ಬಿಣ ಮತ್ತು ...ಲ್ಯುಮಿನಿಯಂ.

ಅ) ಕಬ್ಬಿಣ ಮತ್ತು ಅಲ್ಯುಮಿನಿಯಂ:— ಹಡಗು, ಸಬ್ಮರೀನು, ವಿಮಾನಗಳಿಗಾಗಿ ಹಾಗೂ ತೋಪು, ಬಂದೂಕು, ಮದ್ದುಗುಂಡು ಮೊದಲಾದವುಗಳಿಗಾಗಿ.

ಆ) ತಾಮ್ರ ಮತ್ತು ಜಸ್ತು:-ಮದ್ದುಗುಂಡುಗಳಿಗಾಗಿ.

(೪) ಸಂರಕ್ಷಕ ಮತ್ತು ಏರಾಟಿಕೆಯ ಯುದ್ಧೋಪ...ರಣಗಳಿಗಾಗಿ ಬೇಕಾಗುವ ಲೋಹಗಳು:—

ಅ) ಸೀಸು:—ಗುಂಡುಗಳಿಗೆ ಮತ್ತು ವಿದ್ಯುತ್ತನ್ನು ಸಂಗ್ರಹಿಸುವ ಬ್ಯಾಟರಿಗಳಿಗೆ.

ಆ) ವ್ಹ್ಯಾನೆಡಿಯಂ, ಝಿರ್ಕೋನಿಯಂ, ಲಿಥಿಯಂ, ವ್ಹೆರಿಲಿಯಂ:—ಉಕ್ಕು ತಯಾರಿಸುವುದಕ್ಕಾಗಿ.

ಇ) ಸಿನೆಲಿಯಂ:-ಗಂಡಾಂತರದ ಸೂಚನೆ ಕೊಡುವ ದೀಪಗಳಿಗಾಗಿ.

(೫) ಸರ್ವಸಾಮಾನ್ಯವಾಗಿ ಔದ್ಯೋಗಿಕ ಯಂತ್ರಗಳಿಗೂ ...ತ್ನವು ಕಾರ್ಯಗಳಿಗೂ ಹತ್ತುವ ಲೋಹಗಳು:—

ಕಬ್ಬಿಣ, ಉಕ್ಕು:—ಉಗೆಬಂಡಿಗಳಿಗೆ ಬೇಕಾಗುವ ...ಾಮಾನುಗಳಿಗಾಗಿ; ಹಾಗೆಯೆ ಮೊಟಾರಗಾಡಿ, ಸೇತುವೆ, ...ಟ್ಟಡ, ಉಗೆಹಡಗು ಮತ್ತು ಬೇರೆ ಹಲಬಗೆಯ ಯಂತ್ರ...ಳಿಗಾಗಿ.

ತಾಮ್ರ:—ವಿದ್ಯುತ್ತು ಮತ್ತು ತತ್ಸಂಬಂಧಿ ಕೆಲಸಗಳು, ...ತ್ತಾಳಿ, ಕಂಚು, ಆಚ್ಚಿನ ಮೊಳೆ, ಕಟ್ಟಡ ಇ.ಗಳಿಗಾಗಿ.

ಜಸ್ತು:—ಹಿತ್ತಾಳಿ, ಬಣ್ಣ, ಗ್ಯಾಲ್ವನೈಜ್ಡ (ಜಸ್ತಿನ) ...ಗಡು ಮತ್ತು ರಬ್ಬರಗಳನ್ನು ತಾಳಿಕೆಯವೂ ಮತ್ತು ಗಟ್ಟಿ...ಮಾಗಿಯೂ ಮಾಡುವುದಕ್ಕಾಗಿ.

ಸೀಸು:—ಬಣ್ಣ, ಪ್ಲಂಬಿಂಗ, ಬ್ಯಾಟರಿ, ಬೆಅರಿಂಗ ...ಟಲ್, ಟಂಕು ಹಚ್ಚಲು ಬೇಕಾಗುವ ಮಿಶ್ರಧಾತು, ...ಚ್ಚಿನ ಮೊಳೆ ಮೊದಲಾದವುಗಳಿಗಾಗಿ.

ತವರು:-ಕಂಚಿಗಾಗಿ ಮತ್ತು ಡಬ್ಬಿಯ ತಗಡುಗಳಿಗಾಗಿ.

ಅಲ್ಯುಮಿನಿಯಂ:— ವಿಮಾನ, ಮೋಟಾರ, ಕಟ್ಟಡ, ...ರ್ನಿಚರ, ಅಡಿಗೆಯ ಪಾತ್ರೆಗಳು, ಬಣ್ಣ ಮತ್ತು ಹಗುರ...ಕದ ಮಿಶ್ರಧಾತುಗಳಿಗಾಗಿ.

ನಿಕಲ್:—ವಿದ್ಯುದ್ವಾಹಕ ತಂತಿಗಳ ಆಚ್ಛಾದನ, ಉಕ್ಕು, ಗಿಲೀಟು, ವಿದ್ಯುತ್ತಿನ ವೇಗವನ್ನು ಕಡಿಮೆಮಾಡುವ ತಂತಿಗಳು (Electric resistance wires), ಅದರಂತೆಯೆ ಮೋನೇಲ ಮತ್ತು ನಿಕ್ರೋಮು ಎಂಬ ಮಿಶ್ರಧಾತುಗಳಿಗಾಗಿ.

ಬಂಗಾರ:— ನಾಣ್ಯ, ಆಭರಣಗಳಿಗಾಗಿ.

ಬೆಳ್ಳಿ:—ನಾಣ್ಯ, ಕನ್ನಡಿ, ಫೋಟೊಗ್ರಾಫಿ.

ಪ್ಲ್ಯಾಟಿನಂ:—ಆಭರಣಗಳು, ಶಾಸ್ತ್ರೀಯ ಉಪಕರಣಗಳು, ದಂತವೈದ್ಯಕದ ಸಾಮುಗ್ರಿ ಇ.ಗಳಿಗಾಗಿ ಮತ್ತು ವೇಗವನ್ನು ಹೆಚ್ಚಿಸುವುದಕ್ಕಾಗಿ.

ಟಂಗ್‌ಸ್ಟನ್:—ವಿದ್ಯುದ್ದೀಪಗಳಲ್ಲಿಯ ಜಿನುಗಾದ ಎಳೆ, ದ್ರುತಗತಿಯ ಯಂತ್ರಗಳು ಮತ್ತು ಶಸ್ತ್ರಗಳಿಗಾಗಿ.

ಮ್ಯಾಂಗನೀಜ:— ಬಿರುಸಾದ ಉಕ್ಕು (ತಿಜೋರಿ, ಬಾಗಿಲು ಇ.ಗಳಿಗಾಗಿ.)

ಕ್ರೋಮಿಯಂ:—ಗಿಲೀಟು, ಗುದ್ದಲಿ-ನೇಗಿಲು ಮೊದಲಾದವುಗಳಿಗಾಗಿ ಬೇಕಾಗುವ ಉಕ್ಕಿಗಾಗಿ ಮತ್ತು ತುಕ್ಕು ಹಿಡಿಯದ ಉಕ್ಕಿನ ಯಂತ್ರಗಳಿಗಾಗಿ.

ವ್ಹ್ಯಾನೆಡಿಯಂ:—ಪ್ಲ್ಯಾಟಿನಮಿನಂತೆ ವೇಗ ಹೆಚ್ಚಿಸಲು, ಹಾಗೆಯೆ ಬಿರುಸಾದ ಉಕ್ಕನ್ನೂ ದ್ರುತವೇಗದಿಂದ ತಿರುಗುವ ಯಂತ್ರಗಳನ್ನೂ ತಯಾರಿಸಲು.

ಮ್ಯಾಗ್ನೇಶಿಯಂ:— ಭಾರದಲ್ಲಿ ಹಗುರಾಗಿರುವ (ವಿಮಾನ, ಮೊಟಾರು ಗಾಡಿಗಳಿಗೆ ಉಪಯುಕ್ತವಾದ) ಮಿಶ್ರಧಾತುಗಳಿಗಾಗಿ, ಹೊಳೆಯುವ ತೋಫಿನ ಗುಂಡುಗಳಿಗಾಗಿ.

ಪಾರಜ:—ಔಷಧಿ, ವಿಷದ್ರವ್ಯ, ಶಾಸ್ತ್ರೀಯ ಯಂತ್ರಾದಿಗಳಿಗಾಗಿ.

ಬೆರೆಲಿಯಂ ಮತ್ತು ಝಿರ್ಕೋನಿಯಂ:—ತುಕ್ಕು ಹಿಡಿಯದ ಗಟ್ಟಿಮುಟ್ಟಿಯಾದ, ಬಿರುಸಾದ, ಸವೆಯದ ಯಂತ್ರಗಳಿಗಾಗಿ (ತೋಪು, ಬಂದೂಕು, ವಾಯುನೌಕೆ ಮತ್ತು ದ್ರುತಗತಿಯ ಯಂತ್ರಸಾಮುಗ್ರಿ).

ದೇಶಾನುಗುಣ ವರ್ಗೀಕರಣ

ಯುನೈಟೆಡ್ ಸ್ಟೇಟ್ಸ್:— ಈ ಪ್ರದೇಶದಲ್ಲಿ ಹೆಚ್ಚಾಗಿ ದೊರೆಯುವ ದ್ರವ್ಯಗಳೆಂದರೆ ಇದ್ದಲು, ಕಬ್ಬಿಣ, ಗಂಧಕ, ಖನಿಜತೈಲ, ಹೀಲಿಯಂ ಅನಿಲ (ವಾಯು), ಸೃಷ್ಟಿಯ (Natural) ಅನಿಲ, ತಾಮ್ರ, ಸೀಸು, ಜಸ್ತು, ಅಲ್ಯುಮಿನಿಯಂ, ಮಾಲೆಬ್ಡಿನಂ, ಫಾಸ್ಫೇಟ್ಸ, ಟಂಕಿನ ಖಾರ ಎಂಬವು. ಆದರೆ ಈ ದೇಶದಲ್ಲಿ ಪ್ರಧಾನಧಾತು (Key metals) ಗಳಾದ ನಿಕಲ್, ಮ್ಯಾಂಗನೀಜ, ಕ್ರೋಮಿಯಂ, ಟಂಗ್-

ಸ್ಟನ್ ಮತ್ತು ವ್ಹ್ಯಾನೇಡಿಯಂ ಎಂಬುವು ತೀರು ಕಡಿಮೆ ಪ್ರಮಾಣದಲ್ಲಿ ಸಿಗುತ್ತವೆ; ಮತ್ತಿವುಗಳಿಗಾಗಿ ಈ ಪ್ರಬಲ ರಾಷ್ಟ್ರವು ಹೆರರ ಮೋರೆಯನ್ನು ನೋಡಬೇಕಾಗುತ್ತದೆ.

ಕಾನಡಾ:— ಈ ದೇಶದಲ್ಲಿ ಕಲ್ಲಿದ್ದಲು, ನಿಕಲ್, ಬಂಗಾರ, ಬೆಳ್ಳಿ, ತಾಮ್ರ, ಸೀಸು, ಜಸ್ತು, ಮತ್ತು ಆಸ್ಬೆಸ್ಟಾಸ್‌ಗಳು ಸಮೃದ್ಧವಾಗಿ ದೊರೆಯುತ್ತಿದ್ದರೂ, ಕಬ್ಬಿಣ ಮತ್ತು ಖನಿಜತೈಲದ ಮಟ್ಟಿಗೆ ಇದು ಬಹಳ ಹೀನಾವಸ್ಥೆಯಲ್ಲಿದೆ. ಆದರೆ ಮೊನ್ನೆಮೊನ್ನೆ ಮಾಡಿದ ನಿರೀಕ್ಷಣ-ಸಂಶೋಧನಗಳಿಂದ ಕೆಲವು ಹೊಸ ಖನಿಜಗಳು ಸಿಗಬಹುದೆಂದು ಆಶೆ ತೋರುತ್ತಲಿದೆ. ಇಲ್ಲಿ ಮೊನ್ನೆಮೊನ್ನೆಯೆ ರೇಡಿಯಮ್ಮಿನ ಗಣಿ ಸಿಕ್ಕಿದೆ.

ದಕ್ಷಿಣ ಅಮೆರಿಕಾ:— ದ. ಅಮೆರಿಕವು ಕೆಲವು ದ್ರವ್ಯಗಳನ್ನು ಜಗತ್ತಿಗೆ ಪೂರೈಸುವ ಗುತ್ತಿಗೆಯನ್ನು ಹೊತ್ತಿದ್ದರೂ, ಇದು ಅತ್ಯಾವಶ್ಯಕ ಖನಿಜಪದಾರ್ಥಗಳ ವಿಷಮ ವಿಭಜನೆಯ ಮೂಲಕ ಹಿಂದುಳಿದುದಾಗಿದೆ. ಇಲ್ಲಿ ಇದ್ದಲು ಹೆಚ್ಚಾಗಿ ಕಂಡುಬರುವುದಿಲ್ಲ.

(ಅ) ಚಿಲೀ:— ಇಲ್ಲಿ ಕಬ್ಬಿಣ-ತಾಮ್ರಗಳು ವಿಪುಲವಾಗಿವೆ.

(ಆ) ಬ್ರಾಝಿಲ್:— ಇಲ್ಲಿ ಕಬ್ಬಿಣ-ಮ್ಯಾಂಗನೀಜಗಳು ಹೇರಳವಾಗಿವೆ.

(ಇ) ಮೆಕ್ಸಿಕೊ:— ಇಲ್ಲಿ ಕಲ್ಲೆಣ್ಣೆ, ಬೆಳ್ಳಿ, ಸೀಸು, ಜಸ್ತು, ತಾಮ್ರ, ಬಂಗಾರ, ಆ್ಯಂಟಿಮನಿ ಮತ್ತು ಗ್ರ್ಯಾಫಾಯಿಟಗಳು ವಿಪುಲವಾಗಿವೆ. ಆದರೂ ಕಬ್ಬಿಣ-ಕಲ್ಲಿದ್ದಲುಗಳ ಪ್ರಮಾಣವು ತೀರ ಕಡಿಮೆ— ಇಲ್ಲವೇ ಇಲ್ಲವೆಂದರೂ ಸಲ್ಲುವುದು.

(ಈ) ಜಿನೀಆ:— ಬ್ರಿಟಿಷ್ ಮತ್ತು ಡಚ್ ಜಿನೀಆಗಳಲ್ಲಿ ಅಲ್ಯುಮಿನಿಯಂ ಬಹುದೊಡ್ಡ ಪ್ರಮಾಣದಲ್ಲಿದೆ.

(ಉ) ಕೋಲಂಬಿಯಾ:— ಈ ದೇಶದಲ್ಲಿ ಕಲ್ಲೆಣ್ಣೆ ಮತ್ತು ಪ್ಲ್ಯಾಟಿನಂ ಹೇರಳವಾಗಿವೆ.

(ಊ) ವ್ಹೆನೆಝುಏಲಾ, ಪೇರು ಮತ್ತು ಇಕ್ವೆಡೋರ:— ಈ ದೇಶಗಳಲ್ಲಿ ಎಣ್ಣೆಯ ಬಹು ದೊಡ್ಡ ಗಣಿಗಳಿವೆ.

ಉತ್ತರ ಆಫ್ರಿಕಾ:— ಈ ಪ್ರದೇಶವು ಖನಿಜ ಸಂಪತ್ತಿಯಿಂದ ಸುಸಂಪನ್ನವಾಗಿದ್ದರೂ ಔದ್ಯೋಗಿಕ ದೃಷ್ಟಿಯಿಂದ ಸ್ವತಂತ್ರ ಪ್ರಗತಿಯನ್ನು ಮಾಡಿಕೊಳ್ಳುವಷ್ಟು ಖಂಡಿತವಾಗಿ ಸಮರ್ಥವಿಲ್ಲ.

(ಅ) ಇಜಿಪ್ತ:— ಮ್ಯಾಂಗನೀಜ ಮತ್ತು ಎಣ್ಣೆ ಸಿಗುತ್ತದೆ.

(ಆ) ಮೊರೊಕ್ಕೊ:— ಕಬ್ಬಿಣ-ಫಾಸ್ಫೇಟ್ಸಗಳು ... ವಾಗಿವೆ.

(ಇ) ರ್‍ಹೊಡೇಶಿಯಾ:— ತಾಮ್ರ - ಕ್ರೋಮಿಯ... ಗಣಿಗಳಿವೆ.

(ಈ) ಬೆಲ್ಜಿಯನ್ ಕಾಂಗೊ:— ಕ್ಯಾಡ್ಮಿಯಂ ... ತಾಮ್ರಗಳಿವೆ.

(ಉ) ನೈಗೇರಿಯಾ:— ತವರು.

(ಊ) ಮಾಡಾಗಾಸ್ಕರ:— ಗ್ರ್ಯಾಫಾಯಿಟದ ಗಣಿ...

(ಎ) ಆಲ್ಜೀಅರ್ಸ ಮತ್ತು ಟ್ಯೂನಿಸ:— ತೈಲ... ಬೇಕಾದಷ್ಟಿವೆ.

ದಕ್ಷಿಣ ಆಫ್ರಿಕಾ:— ಈ ಪ್ರದೇಶದಲ್ಲಿ ಮಾತ್ರ... ತ್ರವಾಗಿ ಔದ್ಯೋಗಿಕ ಪ್ರಗತಿಯನ್ನು ಮಾಡಿಕೊ... ಬೇಕಾಗುವ ಖನಿಜಪದಾರ್ಥಗಳ ಯೋಗ್ಯ ಪ್ರಮಾ... ದೊರಕುತ್ತದೆ. ಇಷ್ಟೇ ಅಲ್ಲ, ಈ ದೇಶವು ಹೊ... ಜಗತ್ತಿಗೂ ತನ್ನಲ್ಲಿಯ ಪ್ಲ್ಯಾಟಿನಂ, ಆ್ಯಸ್ಬೆಸ್... ಬಂಗಾರ, ವಜ್ರಗಳನ್ನು ಪೂರೈಸುತ್ತದೆ.

ರಶಿಯಾ ಮತ್ತು ಸೈಬೀರಿಯಾ:— ಈ ದೇ... ಕಲ್ಲಿದ್ದಲು, ಕಬ್ಬಿಣ, ಎಣ್ಣೆ, ಮ್ಯಾಂಗನೀಜ, ತ... ಕ್ರೋಮಿಯಂ, ಬಂಗಾರಗಳ ಹಾಗೂ ಉಪ್ಪು, ಫಾ... ಗಳ ಸಮೃದ್ಧ ಖನಿಗಳಿವೆ. ಅಲ್ಲದೆ ಮೊದಲಿನಿಂದಲ... ದೇಶವು ಜಗತ್ತಿಗೆ ಪ್ಲ್ಯಾಟಿನಂ ಪೂರೈಸುತ್ತದೆಯೆ... ಸರ್ವಶ್ರುತವಾಗಿದೆ. ಬೇರೆಡೆಗಿಂತಲೂ ಇಲ್ಲಿ ಪ್ಲ್ಯಾ... ಹೆಚ್ಚಾಗಿ ದೊರಕುತ್ತದೆ.

ಚೀನ:— ಚೀನವು ಅನಾದಿಕಾಲದಿಂದ ಖನಿ... ತ್ತಿಗಾಗಿ ಹೆಸರಾಗಿದ್ದರೂ ಈ ದೇಶದಲ್ಲಿ ಬರಿ ಟಂಗ... ಮತ್ತು ಆ್ಯಂಟಿಮನಿಗಳೆ ಹೆಚ್ಚಾಗಿ ದೊರೆಯು... ಇಲ್ಲಿಯ ಕಲ್ಲಿದ್ದಲು ಉತ್ತಮ ಜಾತಿಯದಾಗಿದೆ. ... ಈ ದೇಶದ ಇದ್ದಲು, ಕಬ್ಬಿಣ, ಬಂಗಾರಗಳಿಗೆ ... ಮಹತ್ವವನ್ನು ಕೊಡುತ್ತಿಲ್ಲವಾದರೂ, ಭವಿಷ್ಯತ್ತಿ... ಇದು ಹೆಸರಾಗುವುದರಲ್ಲಿ ಸಂದೇಹವಿಲ್ಲ.

ಜಪಾನ:— ಇದು ಖನಿಜದ್ರವ್ಯಗಳ ಮಟ್ಟಿಗೆ ದರಿದ್ರ ದೇಶವಾಗಿದೆ. ಈ ಕೊರತೆಯಿಂದಲೆ ಮಾ... ಕುಮೊವನ್ನು ಸ್ವಾಹಾಮಾಡಿ, ಚೀನದ ಮೇಲೆ ತನ್ನ ದೃಷ್ಟಿಯನ್ನು ಬೀರಿದೆ.

ಪೂರ್ವಸಮುದ್ರದಲ್ಲಿಯ ದ್ವೀಪಗಳು:— ... ಕೂಡ ಖನಿಜದ್ರವ್ಯಗಳ ಮಟ್ಟಿಗೆ ತಕ್ಕಷ್ಟು ಪಡೆದಿವೆ.

(ಅ) ಫಿಲಿಪಾಯಿನ್ ದ್ವೀಪಗಳು:— ಇಲ್ಲಿ ಕಬ್ಬಿಣವಿದೆ.

(ಆ) ಈಸ್ಟ ಇಂಡೀಜ(ಡಚ್):—ಇಲ್ಲಿ ಕಬ್ಬಿಣ ತವರುಗಳು ತುಂಬಾ ಸಿಗುತ್ತವೆ. ತವರಿನ ಮಟ್ಟಿಗೆ ಜಗತ್ತಿಗೇ ಪೂರೈಸುವ ಗುತ್ತಿಗೆಯಿದೆಯೆಂದರೂ ಸಲ್ಲುವುದು.

(ಇ) ಮಲಾಯಾ ಸ್ಟೇಟ್ಸ್:— ಇಲ್ಲಿ ತವರಿನ ದೊಡ್ಡ ದೊಡ್ಡ ಗಣಿಗಳಿವೆ.

ಹಿಂದುಸ್ಥಾನ:— ಹಿಂದುಸ್ಥಾನದಲ್ಲಿ (ವಜಿರಿಸ್ಥಾನ ಮತ್ತು ಬ್ರಹ್ಮದೇಶಗಳೆಂಬ ಸುಸಂಪನ್ನ ಪ್ರಾಂತಗಳನ್ನು ಹೊರಪಡಿಸಿಯೂ) ಖನಿಜಸಂಪತ್ತಿಯು ವಿಪುಲವಾಗಿದೆಯೆಂಬುದನ್ನೇನೂ ಹೊಸದಾಗಿ ಹೇಳಬೇಕಾಗಿಲ್ಲ. ಹೀಗಿದ್ದೂ ಇಂದು ಈ ನಾಡು ಖನಿಜದ್ರವ್ಯಗಳ ವಿಷಯದಲ್ಲಿ ಹಿಂದುಳಿದುದೆಂದು ಎಣಿಸಲ್ಪಡುತ್ತಿದೆ! ಇಂದಿನ ಸ್ಥಿತಿ ಹೀಗಿದ್ದುದೇನೂ ಸುಳ್ಳಲ್ಲ. ಹಾಗೆ ನೋಡಿದರೆ, ಹಿಂದುಸ್ಥಾನವು ಜಗತ್ತಿಗೆಲ್ಲ ಬೇಕಾಗುವ ಉಕ್ಕಿಗೆ ಅವಶ್ಯಕವಾದ ೧/೩ ಮ್ಯಾಂಗನೀಜನ್ನು ಪೂರೈಸುತ್ತಿದೆ. ಆದರಂತೆಯೆ ಈ ಭೂಮಿಯಲ್ಲಿಯ ಕಬ್ಬಿಣವು ಉತ್ತಮಜಾತಿಯದಾಗಿದ್ದು ಕಲ್ಲೆಣ್ಣೆ—ಬಂಗಾರಗಳು ಅಷ್ಟೇನೂ ಕಡಿಮೆಯಾಗಿಲ್ಲ. ಇವುಗಳ ಸಮೃದ್ಧ ಖನಿಗಳಿವೆಯಷ್ಟೇ ಅಲ್ಲ, ಅತ್ಯಾವಶ್ಯಕವಾದ ಮುಖ್ಯಧಾತುಗಳು (ಕೀ ಮೆಟಲ್ಸ) ಮತ್ತು ವಿರಲಧಾತುಗಳು (ರೇಅರ ಮೆಟಲ್ಸ)—ಯಾವವುಗಳಿಂದ ತೂಕದಲ್ಲಿ ಹಗುರ ಅಥವಾ ಭಾರ ಮತ್ತು ಸಣ್ಣ ದೊಡ್ಡ ಯಂತ್ರಗಳೂ ಕಟ್ಟಡದ ಕೆಲಸಗಳೂ ನಡೆಯುತ್ತವೆಯೋ ಅಂಥವುಗಳು—ಹೇರಳವಾಗಿ ಸಿಗುತ್ತವೆ.

ಇವೊತ್ತಿನ ಮಹತ್ವದ ಪ್ರಶ್ನೆಯೆಂದರೆ ಈ ಎಲ್ಲ ಧಾತುಗಳನ್ನೂ ವಸ್ತುಗಳನ್ನೂ ಹೇಗೆ ಉಪಯೋಗಕ್ಕೆ ತರಬೇಕೆಂಬುದು. ವಸ್ತುಗಳನ್ನು ತಯಾರಿಸುವವರ ಕೊರತೆ ಮಾತ್ರ ಕಾಣುತ್ತಿದೆ; ಹಾಗೆಯೆ ಅವುಗಳನ್ನು ತಯಾರಿಸಲು ಬೇಕಾಗುವ ಸೌಕರ್ಯಗಳೂ ಹೆಚ್ಚುಹೆಚ್ಚಾಗಿ ಬೇಕಾಗಿವೆ. ಇದು ಟಾಟಾ ಕಂಪನಿಯವರ ಉದಾಹರಣೆಯಿಂದ ಸ್ಪಷ್ಟವಾಗಿದೆ. ಇಂದು ಹಿಂದುಸ್ಥಾನದಿಂದ ಯಂತ್ರಗಳು, ಕೃಷಿಯ ಉಪಕರಣಗಳು, ಮತ್ತು ಬೇರೆ ಹಲತೆರದ ಯಂತ್ರಸಾಮುಗ್ರಿ ಇವುಗಳಿಗಾಗಿ ಬೇಕಾಗುವ ಅಸಿದ್ಧ (ಕಚ್ಚಾ) ಧಾತುಗಳನ್ನು ಮೊಟ್ಟೆಕಟ್ಟಿ ಹಡಗುಗಳಲ್ಲೊಟ್ಟಿ, ಒಯ್ಯಲಾಗುತ್ತಿದೆ; ಮತ್ತವುಗಳಿಂದ ಹೊಸ ಹೊಸ ಒಡವೆಗಳನ್ನು ತಯಾರಿಸಿ, ಎರಡುಪಟ್ಟು ಮೂರುಪಟ್ಟು ದರಕ್ಕೆ ಮತ್ತೆ ಇಲ್ಲಿಯೆ ಮಾರಲಾಗುತ್ತಿದೆ! ಹಲ್ಲಿವೆ ಕಡಲಿ ಇವೆ, ಬಾಯಿ ಅಲುಗಾಡುವುದಿಲ್ಲ ಎಂಬುದು ನಮ್ಮ ಗತಿಯಾಗಿದೆ.

ಪಶ್ಚಿಮ ಯುರೋಪು:— ಯುರೋಪ್ ಖಂಡದ ಖನಿಜನಿಧಿಯು ತೀರಾ ಬಡವಾಗಿದೆ; ಇದ್ದುದೂ ವ್ಯಾಪಾರ ದೃಷ್ಟಿಯಿಂದ ಲಾಭಕರವಿಲ್ಲ. ಇಂದು ಅಲ್ಲಿಯ ಪ್ರಚಂಡ ಕಾರಖಾನೆಗಳು ಆಯಾತವಸ್ತುಗಳ ಮೇಲೆಯೆ ಅವಲಂಬಿಸಿವೆ. ಹೀಗಿದ್ದರೂ ಇಂದಿಗೂ ಕೆಲವು ಕಾರಖಾನೆಗಳು ಮತ್ತು ಭಟ್ಟಿಗಳು ಸ್ವದೇಶಗಳಲ್ಲಿಯ ಕಚ್ಚಾಮಾಲನ್ನು ಸಿದ್ಧವಸ್ತುಗಳಲ್ಲಿ ಮಾರ್ಪಡಿಸಿ, ಮೇಲೆ ಅವುಗಳನ್ನು ಲಾಭದಾಯಕವಾಗಿ ಮಾಡುತ್ತಿವೆ. ಇದರ ಕಾರಣವು, ಅಲ್ಲಿಯ ಜನರ ವಿಶೇಷಜ್ಞಾನವು, ಸುವ್ಯವಸ್ಥಿತವಾಗಿ ಮತ್ತು ಸುಧಾರಿಸಿದ ರೀತಿಯಲ್ಲಿ ಕೆಲಸಮಾಡುವ ಪದ್ಧತಿಯು ಮತ್ತು ಸುಸಂಘಟಿತವಾಗಿ ಕೆಲಸಮಾಡುವ ಮಂಡಲಗಳು. ಇಲ್ಲಿಯೊಂದು ಮಾತನ್ನು ನೆನಪಿನಲ್ಲಿಡುವುದು ಅಗತ್ಯ: ಯಾವ ಕಾರಣದಿಂದಲೇ ಆಗಲಿ, ಈ ದೇಶಗಳ ಆಯಾತ ವ್ಯಾಪಾರವು ನಿಂತುಹೋದರೆ, ಅಲ್ಲಿ ಮುಗ್ಗಟ್ಟು ಉಂಟಾಗುವುದು ಖಂಡಿತ. ಕಾರಖಾನೆಗಳು ಬಾಗಿಲು ಮುಚ್ಚಬೇಕಾಗುವುದು, ಮತ್ತು ಭಟ್ಟಿಗಳು ಬೆಕ್ಕು ಈಯುವ ಸ್ಥಳಗಳಾಗುವವು. ಪಶ್ಚಿಮ ಯುರೋಪಿನಲ್ಲಿ ಲೋಹಗಳ ಬರಗಾಲ ಬಿದ್ದು, ಜಗತ್ತಿನ ರಾಜಕೀಯ ಮತ್ತು ಔದ್ಯೋಗಿಕ ಕೇಂದ್ರವೆ ಸ್ಥಳಾಂತರಿಸಬೇಕಾಗಿ ಬರಬಹುದು. ಇಂದಿನ ಸ್ಥಿತಿಯನ್ನು ನೋಡಲಾಗಿ ಅದು ಪೂರ್ವದಿಕ್ಕಿಗೆ ಬರುವ ಚಿಹ್ನಗಳೇನೂ ಕಾಣದೆ ಇಲ್ಲ.

ಖನಿಜಸಂಪತ್ತಿಯೂ ದೇಶದ ಘನತೆಯೂ

ಉತ್ತರ ಆಟ್ಲಾಂಟಿಕ್ ಮತ್ತು ಭೂಮಧ್ಯ ಸಮುದ್ರ ತೀರಗಳ ರಾಷ್ಟ್ರಗಳೆ ಹಲವು ವರ್ಷಗಳಿಂದ ಅನ್ಯದೇಶಗಳ ಮೇಲೆ ಅಮಲು ನಡೆಸಿವೆ. ಇದರಿಂದ ಅವರ ಏರುಗೈ ಕೊನೆತನಕ ಹಾಗೆಯೆ ಉಳಿಯುವುದೆಂದು ಹೇಳಲಾಗದು. ಕಾಲಗತಿಯಂತೆ ದೇಶದ ಸ್ಥಿತಿಯೂ ಮಾರ್ಪಡುವುದೆಂಬುದನ್ನು ಮರೆಯಲಾಗದು. ಇತಿಹಾಸವಾದರೂ ಅದನ್ನೆ ಹೇಳುತ್ತಿದೆ.

ಖನಿಜದ್ರವ್ಯಗಳಲ್ಲಿ ಮೂಲಭೂತವೂ ಆಧಾರಭೂತವೂ ಆದ ಕಬ್ಬಿಣ ಕಲ್ಲಿದ್ದಲುಗಳಿಂದ ಸಂಪನ್ನವಾಗಿರುವ ದೇಶಗಳು ಅತ್ಯಲ್ಪವಾಗಿವೆ. ಸಂಪನ್ನತೆಯ ಮಾನದಿಂದ ೧. ಯುನೈಟೆಡ್‌ಸ್ಟೇಟ್ಸ್, ೨. ಗ್ರೇಟಬ್ರಿಟನ್, ೩. ಫ್ರಾನ್ಸ್, ೪. ರಶಿಯಾ, ೫. ಸೈಬೇರಿಯಾ, ೬ ಜರ್ಮನಿ ಮತ್ತು ೭. ಹಿಂದುಸ್ಥಾನ ಎಂದು ಅನುಕ್ರಮವಾಗಿ ಹೇಳಬಹುದು. ಮೂಲಭೂತ—ಆಧಾರಭೂತ ಖನಿಜಗಳ ಮಟ್ಟಿಗೆ ಹಿಂದುಸ್ಥಾನವು ನಿಜವಾಗಿಯೂ ಭಾಗ್ಯಶಾಲಿಯಾದ ರಾಷ್ಟ್ರವು.

ಈ ದೇಶದಲ್ಲಿ ಕಬ್ಬಿಣದ ಮತ್ತು ಕಲ್ಲಿದ್ದಲಿನ ಗಣಿಗಳು ಬದಿಬದಿಯಲ್ಲಿಯೆ ಇರುವವಾದ್ದರಿಂದ ಭೌಗೋಲಿಕವಾಗಿ ಮತ್ತು ವ್ಯಾಪಾರ ದೃಷ್ಟಿಯಿಂದ ಅವುಗಳ ಮಹತ್ವವು ಹೇಳತೀರದಷ್ಟಾಗಿದೆ. ಈ ಕಾರಣದಿಂದಲೆ ಬೇರೆ ದೇಶಗಳೊಡನೆ ಹೋಲಿಸಿದರೆ ಇಲ್ಲಿ ಈ ದ್ರವ್ಯಗಳನ್ನು ಸ್ಥಳಾಂತರಿಸುವ ಕೆಲಸವು ಅತಿ ಅಗ್ಗವಾಗಿ ನಡೆಯುತ್ತಿದೆಯಲ್ಲದೆ, ಕಬ್ಬಿಣವನ್ನು ಉತ್ತಮವಾಗಿಯೂ ಅತ್ಯಲ್ಪ ವೆಚ್ಚದಲ್ಲಿಯೂ ತಯಾರಿಸಲು ಬರುತ್ತದೆ. ಅದೇಮೇರೆಗೆ ಬೆರೇಲಿಯಂ, ಝಿರ್ಕೋನಿಯಂ, ಥೋರಿಯಂ, ಸೇರಿಯಂ ಮತ್ತು ರೆಅರ ಅರ್ಥ್ಸ್‌ಗಳಂತಹ ಅತ್ಯಾವಶ್ಯಕ ಧಾತುಗಳು ಒಳ್ಳೆಯ ಜಾತಿಯವೂ ವಿಪುಲಪ್ರಮಾಣದಲ್ಲಿಯೂ ದೊರೆಯುತ್ತವೆ.

ಮೇಲೆ ವಿವರಿಸಿದಂತೆ ತೈಲ-ಅನಿಲಗಳ ಖನಿಜಸಂಪತ್ತಿಯುಳ್ಳ ಬೇರೆ ದೇಶಗಳು ವಿವಿಧ ವಿಲಕ್ಷಣಕೃತಿಗಳನ್ನು ಮಾಡಿತೋರಿಸುತ್ತಿವೆ. ಇಂದು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳು ಇದೇ ಕಾರಣಕ್ಕಾಗಿ ಸುವಿಖ್ಯಾತವಾಗಿವೆ. ತಮ್ಮ ಬಂಡವಾಳದಿಂದಲೆ ಜಗತ್ತಿನ ಹೆಚ್ಚುಪಾಲಿನ ಯಾಂತ್ರಿಕಕಾರ್ಯವನ್ನು ತಾವೇ ಸಾಗಿಸುತ್ತಿವೆಯಲ್ಲದೆ ಸಿದ್ಧವಸ್ತುಗಳನ್ನು ತಮ್ಮ ಹಡಗುಗಳ ಮೂಲಕವೆ ಅನ್ಯರಾಷ್ಟ್ರಗಳಿಗೆ ಪೂರೈಸುತ್ತಿವೆ. ಹಿಂದುಸ್ತಾನದಲ್ಲಿಯೂ ಎಣ್ಣೆಯ ಗಣಿಗಳಿವೆ. ನಾವೂ ಅಮೆರಿಕೆಯ ಅನುಕರಣವನ್ನು ಮಾಡಿದರೆ, ನಮ್ಮ ನಾಡೂ ಶೀಘ್ರವಾಗಿಯೆ ಪ್ರಗತಿಪಥವನ್ನು ತುಳಿಯುವುದರಲ್ಲಿ ಸಂದೇಹವಿಲ್ಲ.

ಭೂಮಂಡಲದಲ್ಲಿ ಖನಿಜದ್ರವ್ಯಸಂಪತ್ತಿಯ ಸ್ವಾಮಿತ್ವವನ್ನು ಪಡೆಯಲು ರಾಷ್ಟ್ರರಾಷ್ಟ್ರಗಳಲ್ಲಿ ನಡೆದ ಗತ್ತುಗಾರಿಕೆಯೇನೂ ಹೊಸದಲ್ಲ; ಅದು ಹೊಸ ಹೊಸ ರೀತಿಯಲ್ಲಿಯೇ ಸಾಗುವುದೆಂಬುದೂ ಸ್ಪಷ್ಟವಿದೆ. ಕೆಲವರು ರಾಜಕೀಯ ಕಾರಣಗಳನ್ನೂ ಕೆಲವರೂ ಧಾರ್ಮಿಕ ಕಾರಣಗಳನ್ನೂ ಮುಂದುಮಾಡುವರು; ಆದರೆ ಎಲ್ಲವುಗಳ ಸೂತ್ರವು ಒಂದೇಯಾಗಿದೆ. ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೇನ್, ಗ್ರೇಟ್ ಬ್ರಿಟನ್ನುಗಳು ಕಾಲಕಾಲಕ್ಕೆ ಉತ್ತರ ಅಮೆರಿಕದಲ್ಲಿ ನಡೆಸಿದ ತಂತ್ರಗಳೂ ಜಪಾನವು ಮಂಚುಕುವೊ-ಚೀನಗಳಲ್ಲಿ ನಡೆಸಿದ ತಾಂಡವವೂ ಜರ್ಮನಿಯು ರೂಮಾನಿಯದ ತೈಲ ಖನಿಗಳನ್ನು ಸೆಳೆದುಕೊಳ್ಳಲು ನಡೆಸಿದ ಗತ್ತುಗಳೂ ಸುಪ್ರಸಿದ್ಧವಾಗಿವೆ.

ಹೀಗಿದ್ದರೂ ವ್ಹರ್ಸಾಯದ ಒಪ್ಪಂದದಿಂದ ಪ್ರಾಮುಖ್ಯವಾಗಿ ಜಾತೀಯ, ಐತಿಹಾಸಿಕ ಮತ್ತು ರಾಜಕೀಯ ದೃಷ್ಟಿಗಳಿಂದಲೇ ಸೀಮೆಗಳನ್ನು ನಿರ್ಣಯಿಸಲಾಯಿತೆಂಬುದೊಂದು ಆಶ್ಚರ್ಯದ ಸಂಗತಿಯೆ ಸರಿ. ಆದರ
ಗಳು ಏನೇ ಇರಲಿ, ಈಚೆಗೆ ಬಹಿರಂಗಕ್ಕೆ ಬರುತ್ತಿ
ಒಂದು ಸಂಗತಿಯೆಂದರೆ, ಉಪಯುಕ್ತ ಖನಿಜದ್ರ
ಖನಿಗಳನ್ನು ಸ್ವಂತದ ಬಲದಿಂದ, ಅದು ಸಾಧ್ಯವಾಗದಿ
ಸರಕಾರದ ಸಹಾಯದಿಂದ ವಶಪಡಿಸಿಕೊಳ್ಳಲು ಬೇರೆ
ಸಂಘಗಳು ದಿನದಿನಕ್ಕೆ ಹೆಚ್ಚಾಗಿ ಪ್ರಯತ್ನಿಸತೊಡ
ಈ ಸಂಘನಿಯಂತ್ರಣವು (Corporate Control) ಸ್ಥಿ
ಸ್ಥಿರವಾಗಿಯೂ ಪರಿಣಮಿಸುತ್ತಿದೆ. ಸಾಂಘಿಕ ಪ್ರ
ದಿಂದ ಬೇರೆ ಬೇರೆ ಕಡೆಯ ಉತ್ತಮ ಮತ್ತು ಸಾಮಾ
ತರಗತಿಗಳ ಖನಿಜಸಂಪತ್ತಿಯು ಸುವ್ಯವಸ್ಥಿತ
ಕಾಯ್ದಿಡಲ್ಪಡುತ್ತಿದೆ. ಇಷ್ಟು ಮಾತ್ರವಲ್ಲ, ಕೆಳತರಗ
ವೆನಿಸಿದ ಕಚ್ಚಾ ದ್ರವ್ಯಗಳು, ಬಳಸಿದ ಧಾತುಗಳು
ದ್ವಿತೀಯವರ್ಗದ ಧಾತುಗಳು (ಸೆಕೆಂಡರಿ ಮೆಟಲ್ಸ್
ಇವುಗಳಿಂದ ಶುದ್ಧಧಾತುಗಳನ್ನು ನಿರ್ಮಿಸುವುದ
ಹಳೆಯ ಪ್ರಕ್ರಿಯೆಗಳನ್ನು ಸುಧಾರಿಸಿ ಪ್ರಯೋಗ
ಕಾರ್ಯವು ನಡೆದಿದೆ. ಇಷ್ಟನ್ನೆಲ್ಲ ಮಾಡಿಯೂ
ಲಾಭದಾಯಕವಾಗಿ ತೋರದಿದ್ದರೆ ಹೊಸ ಹೊಸ
ಗಳನ್ನು ಶೋಧಿಸಲಾಗುತ್ತದೆ; ಈ ಮೂಲಕವೇ ಹ
ಮೋಟಾರಗಳು, ಹಳೆಯ ಯಂತ್ರಗಳು ತ್ಯಾಜ್ಯವೆಂದು
ಯಲ್ಪಡದೆ, ಅವುಗಳಿಂದ ತಾಮ್ರ, ನಿಕಲ, ಕ್ರೋಮಿ
ಅಲ್ಯುಮಿನಿಯಂಗಳನ್ನು ಬೇರ್ಪಡಿಸಿ ಮತ್ತೆ
ಯೋಗಿಸುತ್ತಾರೆ. ಇದೇ ಕ್ರಮದಲ್ಲಿ ಹಳೆಯ ಕ
ದಿಂದ ಉಕ್ಕುಮಾಡಿ, ಅದರಿಂದ ಮತ್ತೆ ಸೇತುವೆಗಳ
ಗಳನ್ನೂ ಬಾಯ್ಲರಗಳನ್ನೂ ತಯಾರಿಸುತ್ತಾರೆ.
ಅಲ್ಲ, ಈ ಮಂಡಳಗಳು ಬೇರೆ ಬೇರೆ ಕ್ರಾಂತಿಕಾರಿ ಸಂ
ಧನಗಳನ್ನು ಮಾಡಲೂ ಕಾರಣವಾಗಿವೆ. ಶಾಸ್ತ್ರಜ್ಞರ
ದುಡ್ಡಿನಿಂದಲೂ ಬೇರೆಬಗೆಯಿಂದಲೂ ನೆರವಾಗಿ,
ರಿಂದ ಸಂತತಕಾರ್ಯವನ್ನು ಮಾಡಿಸುತ್ತವೆ.
ದೀರ್ಘೋದ್ಯೋಗಕ್ಕಾಗಿ ಕೂಡಲೆ ಪ್ರತಿಫಲವೂ ದೊ
ತ್ತಿದೆಯೆಂಬುದು ಕೆಳಗಿನ ಉದಾಹರಣೆಯಿಂದ
ದಿರದು. ಇಂದು ೫ ಲಕ್ಷ ಮೈಲುದ್ದ ತಾಮ್ರದ ತಂ
ಬದಲು ಅಲ್ಯುಮಿನಿಯಮ್ಮಿನ ತಂತಿಯನ್ನು ಉಪಯೋ
ಸುತ್ತಿದ್ದಾರೆ. ಎಂತಹ ಉಳಿತಾಯವಿದು ! ಇನ್ನೊ
ಉದಾಹರಣೆಯೆಂದರೆ, ಇದ್ದಲಿನಿಂದ ತೆಗೆದ ಎಣ್ಣೆಯ
ಪ್ರವಾಹರೂಪ ಉರುವಲವನ್ನು ಎಣ್ಣೆಯ ಬದಲು
ಯೋಗಿಸುವುದು. ಈಚೆಗೆ ಈ ಎಣ್ಣೆಯನ್ನು ಖನಿ
ಸ್ಥಿತೆ ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ.

ಮೇರೆಗೆ ಇನ್ನೂ ಹಲವು ದೃಷ್ಟಾಂತಗಳನ್ನು ಕೊಡಬಹುದು. ಸುವರ್ಣದ ಬದಲು ಸೂರ್ಯಕ್ಷಾರವನ್ನೂ ಟಿನ್ನಿನ ಡಬ್ಬಿಗಳ ಬದಲು ಸೆಲ್ಯುಲೈಡಿನಂತಹ ಹಾಳೆಗಳ ಡಬ್ಬಿಗಳನ್ನೂ ಉಪಯೋಗಿಸುವುದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬಹುದು.

ಈ ಮೇರೆಗೆ ಈ ಸಂಘಗಳು ಅಥವಾ ಮಂಡಳಗಳು ಉಪಯುಕ್ತಕಾರ್ಯವನ್ನು ನಡೆಸಿದ್ದರೂ, ಅವು ಮೇಲೆ ಮೇಲೆ ಕಂಡಷ್ಟು ನಿರುಪದ್ರವಿಯಾಗಿಲ್ಲ. ಅವು ತೀರಾ ಸ್ವಾರ್ಥಪರವೂ ಲೋಭಗ್ರಸ್ತವೂ ಆಗಿರುತ್ತವೆ. ಈ ದುರ್ಗುಣಗಳಿಗಾಗಿಯೆ ಎಷ್ಟೋ ಸಲ ಅವಿರದಿದ್ದರೂ ಸರಿ ಹೋಗುತ್ತಿತ್ತೆಂದು ಅನಿಸುತ್ತಿದೆ. ಈ ಸಂಘಗಳು ಎಷ್ಟೋ ಸ್ಥಳೀಯ ಉದ್ಯೋಗಗಳನ್ನು ಸಂಪೂರ್ಣವಾಗಿ ನಾಶಗೊಳಿಸಿವೆ. ಹಿಂದುಸ್ತಾನದ ರಬ್ಬರದ ಮತ್ತು ನೀಲಿಯ ವ್ಯವಸಾಯವು ಇವುಗಳಿಂದಲೆ ಮೃತಿಹೊಂದಿತು. ಹಾಗೆಯೆ ಜಪಾನದ ಕರ್ಪೂರದ ವ್ಯವಸಾಯವನ್ನು ಮಣ್ಣುಮುಕ್ಕಿಸಲು ಇವು ಪಂಥ ತೊಟ್ಟವೆ. ಇಷ್ಟೆ ಅಲ್ಲ, ಇವರು ಸ್ವಂತವಾಗಿ ಅಥವಾ ಇನ್ನೊಬ್ಬರಿಂದ ನಡೆಯಿಸಿದ ಸತತ ಕಾರ್ಯದಿಂದ ಹುಟ್ಟಿದ ಶೋಧಗಳು, ಹಳೆಯ ಪದ್ಧತಿಯಿಂದ ಅಚ್ಚುಕಟ್ಟಾಗಿ ನಡೆದ ಕಾರಖಾನೆಗಳನ್ನು ಹಾಳುಮಾಡಲು ಕಾರಣವಾಗಿವೆ. ಇದರಿಂದಲೆ ಸಲ್ಫ್ಯೂರಿಕ್ ಆ್ಯಸಿಡ್ಡನ್ನು ತಯಾರಿಸುವ ಕಳೆಯ ಕ್ರಮವು ನಿಷ್ಪ್ರಯೋಜಕವೆನಿಸಿಕೊಳ್ಳುವ ಸಂಭವವು ತಲೆದೋರಿತ್ತು; ಹಾಗಾಗಲಿಲ್ಲವೆಂಬುದು ಸುದೈವದ ಸಂಗತಿಯೆ. ಹಾಗೆ ಲಾಭನಷ್ಟಗಳ ಲೆಕ್ಕಹಾಕಿದರೆ, ಈ ಸಂಸ್ಥೆಗಳು ಜಗತ್ತಿನಲ್ಲಿಯ ನೂರಾರು ಸಂಘಟನೆ-ವಿಘನೆಗಳಿಗೆ ಕಾರಣಗಳಾಗಿವೆಯೆಂಬುದು ಕಂಡು ಬರದಿರದು. ಹೀಗಿದ್ದರೂ, ಊರು ಸುಟ್ಟರೂ ಹನುಮಪ್ಪ ಹೊರಗೇ ಎನ್ನುವಂತೆ, ಎಂತಹ ಸಂದರ್ಭದಲ್ಲಿಯೂ ಇವು ಅಲಿಪ್ತವಾಗಿಯೇ ಉಳಿಯುವವು.

ಇಂದಿನ ಸ್ಥಿತಿಗತಿ

ಜಾಗತಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವರಿಗೆ ಒಂದು ಮಾತು ಮನದಟ್ಟಾಗುತ್ತಿದೆ. ಪ್ರತಿ ರಾಷ್ಟ್ರವೂ ಸ್ವಂತದ ಸಾಮರ್ಥ್ಯವನ್ನು ಬೆಳೆಯಿಸಿಕೊಳ್ಳಲು ಮತ್ತು ರಾಜಕೀಯ ವರ್ಚಸ್ವವನ್ನು ಭದ್ರಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇದನ್ನೆಲ್ಲ ಸಾಧ್ಯಗೊಳಿಸಲು ಯುದ್ಧಸಾಮಗ್ರಿಯ ಮತ್ತು ಬೇರೆ ಸಾಧನಗಳ ಸರ್ವಸಿದ್ಧತೆಗಾಗಿ ಅಗತ್ಯವಾಗಿರುವ ಖನಿಜದ್ರವ್ಯಗಳನ್ನು ಪ್ರಚಂಡಪ್ರಮಾಣದಲ್ಲಿ ಸಂಗ್ರಹಿಸಿ ಉಪಯೋಗಿಸುತ್ತಿದೆ. ಈ ದುಂದುಗಾರಿಕೆಯ ಅವಿರತ ಪ್ರವಾಹದ ಮೂಲಕ ಜಗತ್ತಿನ ಖನಿಜನಿಧಿಯೆ ಕ್ಷಯಿಸಿ ಹೋಗಬಹುದಾಗಿತ್ತು. ಆದರೆ ಹಾಗಾಗದಿರಲು ಎರಡು ಕಾರಣಗಳಿವೆ. ಮೊದಲನೆಯದಾಗಿ, ದೂರದರ್ಶಿಗಳಾದ ರಾಜತಂತ್ರಿಗಳು ಈ ಕೆಲಸವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಈ ದುಂದುಗಾರಿಕೆಯು ಮಿತಿಯನ್ನು ಮೀರದಂತೆ ಸಕಾಲದಲ್ಲಿಯೆ ದಕ್ಷತೆ ವಹಿಸಿದರು. ಎರಡನೆಯದಾಗಿ, ಶಾಸ್ತ್ರಜ್ಞರೆ ಸಂತತಪ್ರಯತ್ನದಿಂದ ಈ ಆಪತ್ತಿಯನ್ನು ತಪ್ಪಿಸಿದರು. ಶಾಸ್ತ್ರಜ್ಞರು ಹೊಸ ಹೊಸ ಶೋಧಗಳನ್ನು ಕಂಡುಹಿಡಿದಿರದಿದ್ದರೆ ಮತ್ತು ಸಂಯೋಗಾತ್ಮಕ ಪದಾರ್ಥಗಳನ್ನು ತಯಾರಿಸದಿದ್ದರೆ, ಜಗತ್ತಿನ ಪ್ರಗತಿಯೆ ಹರಿಗಡಿದು ಹೋಗುತ್ತಿದ್ದಿತು.

ಜಗತ್ತಿನ ಸಂಸ್ಕೃತಿಗೆ ವೈಜ್ಞಾನಿಕರ ಕಾಣಿಕೆಯು ಅಷ್ಟಿಷ್ಟಲ್ಲ. ಒಂದು ವಸ್ತುವನ್ನು ತಯಾರಿಸಿದ ಮೇಲೆ ಉಳಿಯುವ ಭಾಗವನ್ನು "ಕಸ"ವೆಂದು ನಾವು ಚೆಲ್ಲಿ ಕೊಡುವುದುಂಟು. ಆದರೆ ರಸಾಯನಶಾಸ್ತ್ರವು ಆ ಕಸವನ್ನೆ ರಸವಾಗಿಸುವುದು. ಆ ಕಸಕಡ್ಡಿಯಿಂದಲೆ ಹಲಬಗೆಯ ಪ್ರಯೋಜನಕಾರಿಯಾದ ವಸ್ತುಗಳನ್ನು ನಿರ್ಮಿಸಿದುದರ ಉದಾಹರಣೆಗಳಿವೆ. ದೀರ್ಘಪರಿಶ್ರಮವೆ ಇದಕ್ಕೆ ಕಾರಣ. ವೈಜ್ಞಾನಿಕರಿಗಂತೂ ಈ ಸದಭ್ಯಾಸವು ಮೈಯುಂಡುಬಿಟ್ಟಿದೆ. ರಾಷ್ಟ್ರಗಳ ಕಾಯ್ದಿಟ್ಟ ಸೈನ್ಯದಲಗಳು ತುಂಬಾ ವೆಚ್ಚದ ವಿಷಯಗಳಾಗಿವೆ; ಅವು ಕೊರಳೊಳಗಿನ ತಾಯಿತವಾಗಿರದೆ ಹೊರಲಾರದ ಗುದ್ದಿಗಳಾಗಿವೆ. ಈ ಸೈನ್ಯಗಳು ಶಾಂತಿಕಾಲದಲ್ಲಿ ಬರಿ ಸೋಮಾರಿತನದಲ್ಲಿ ಮತ್ತು ವಿಲಾಸಲೋಲುಪತೆಯಲ್ಲಿ ಕಾಲ ಕಳೆಯುತ್ತವೆ; ಅವರ ಕಾಲಯಾಪನೆಗಾಗಿ ಹೊಸ ಹೊಸ ಯುಕ್ತಿಗಳನ್ನು ಹುಡುಕಬೇಕಾಗುತ್ತದೆ. ಆದರೆ ಶಾಸ್ತ್ರಜ್ಞರ ಪಡೆಯು ಹಾಗಲ್ಲ. ಆದರಿಂದ ಯಾರಿಗೂ ಹಾನಿಯಿಲ್ಲ. ಸರಕಾರದ ಬೊಕ್ಕಸಕ್ಕೆ ಧಕ್ಕೆಯಿಲ್ಲ; ಕೆಲಕೆಲವು ಸಲ ಲಾಭವೇ ಉಂಟು. ರಾಜ್ಯಕರ್ತರಿಗೆ ಸ್ವಲ್ಪವೂ ಭಾರವಾಗದಂತೆ—ಅವರ ದೃಷ್ಟಿಯಲ್ಲಿ ವಿನಾವೇತನವಾಗಿಯೆ ದುಡಿಯುವ ಪಡೆಯಿದು. ಇವರ ಕೆಲಸಕ್ಕೆಂದೂ ವಿರಾಮವಿಲ್ಲ—ಇವರಿಗೆ ಹೊತ್ತೇ ಸಾಲುವುದಿಲ್ಲ. ಪ್ರತಿಸೈನಿಕನೂ ಸುಖೋಪಭೋಗಗಳ ಮೂಟೆ ಕಟ್ಟಿಟ್ಟು, ನಿದ್ದೆನೀರಡಿಕೆ ಮರೆತು, ಹಗಲಿರುಳೆನ್ನದೆ ತನ್ನ ಪ್ರಯೋಗಶಾಲೆಯಲ್ಲಿ ಒಂದಿಲ್ಲೊಂದು ಕರ್ಮದಲ್ಲಿ ನಿಮಗ್ನನಾಗಿಯೆ ಇರುವನು. ಮನುಷ್ಯರ ಉನ್ನತಿ-ಪ್ರಗತಿಗಾಗಿ ಸಂತತವೂ ಯತ್ನಿಸುತ್ತಿ

ರುವನು. ಈ ಸೈನಿಕರೆ ರಾಷ್ಟ್ರದ ಆಧಾರಸ್ತಂಭರು. ಇವರನ್ನು ಗೌರವಿಸಿದಷ್ಟು ಕಡಿಮೆಯೆ.

ಭೂಮಂಡಲದ ನಕ್ಷೆಯನ್ನು ನಿರೀಕ್ಷಿಸಿದರೆ ಖನಿಜದ್ರವ್ಯಗಳ ದೊಡ್ಡ ಸಂಗ್ರಹವು ಉತ್ತರ ಆಟ್ಲಾಂಟಿಕ್ ಮಹಾಸಾಗರದ ತೀರದ ಮೇಲೆ ಹಬ್ಬಿದ ರಾಷ್ಟ್ರಗಳ ವಶದಲ್ಲಿದೆಯೆಂಬುದು ತಿಳಿದು ಬರುವುದು. ಇದೇ ಪರಿಸ್ಥಿತಿಯಿರುವ ತನಕ ಈ ರಾಷ್ಟ್ರಗಳು ಜಗತ್ತಿಗೆ ಜಗತ್ತನ್ನೆ ತನ್ನ ಸ್ವಾಮಿತ್ವದಲ್ಲಿಟ್ಟುಕೊಳ್ಳುವವೆಂಬುದು ಖಂಡಿತ. ಇಂಗ್ಲಂಡ್-ಯುನೈಟೆಡ್ ಸ್ಟೇಟ್ಸ್‌ಗಳು ಜಗತ್ತಿನ ಬಲಾಢ್ಯ-ಧನಾಢ್ಯ ರಾಷ್ಟ್ರಗಳೆಂದು ತಿಳಿಯಲ್ಪಡುತ್ತವೆ. ಇದಕ್ಕೆ ಕಾರಣವು, ಅವುಗಳ ವಶದಲ್ಲಿರುವಷ್ಟು ಖನಿಜನಿಧಿಯು ಯಾರ ವಶದಲ್ಲಿಯೂ ಇರದಿರುವುದು. ಇಷ್ಟೇ ಅಲ್ಲ, ಬೇರೆ ಎಲ್ಲ ರಾಷ್ಟ್ರಗಳು ಸೇರಿದರೂ ಇವೆರಡರಲ್ಲಿ ಒಂದನ್ನು ಕೂಡ ಸರಿಗಟ್ಟಲಾರವು.

ಭವಿಷ್ಯತ್ಕಾಲ

ಇವೊತ್ತಿನ ಮಿತಿಗೆ ಇನ್ನೂ ಹೊರದೆಗೆಯದುಳಿದ ಖನಿಜ ಸಂಪತ್ತಿಯನ್ನು ಗಮನಿಸಿದರೆ, ಭೂಮಾತೆಯ ಉದರದಲ್ಲಿ ಲೆಕ್ಕವಿಲ್ಲದಷ್ಟು ನಿಧಿಯಿದೆಯೆಂದು ಗೊತ್ತಾಗದಿರದು. ಅದನ್ನು ಬೈಲಿಗೆ ತರುವವನು ಮಾತ್ರ ಬೇಕು. ಇಂದಿನ ರಶಿಯಾದೇಶದ ಆಡಳಿತಗಾರರು ಒಂದು ದೊಡ್ಡ ರಾಷ್ಟ್ರೀಯಧ್ಯೇಯವನ್ನು ತಮ್ಮ ಮುಂದಿಟ್ಟುಕೊಂಡಿದ್ದಾರೆ: ಅದೆಂದರೆ ಪ್ರಚಂಡಪ್ರಮಾಣದಲ್ಲಿ, ತುಂಬಾ ಪದ್ಧತಿಬದ್ಧವಾದ ರೀತಿಯಲ್ಲಿ, ತಮ್ಮ ದೇಶದಲ್ಲಿ ಏನೇನು ದೊರೆಯುತ್ತಿದೆಯೆಂಬುದರ ಶಾಸ್ತ್ರೀಯ ನಿರೀಕ್ಷಣೆಯನ್ನು ಕೈಕೊಳ್ಳುವುದು. ಈ ಸಂಶೋಧನದಿಂದ ಕನಸುಮನಸಿನಲ್ಲಿಯೂ ಕಾಣದ ಖನಿಜದ್ರವ್ಯಗಳ ಖಣಿಗಳು ಅಲ್ಲಿ ಸಿಕ್ಕುತ್ತಿವೆ; ಹೊಸಹೊಸವುಗಳು ದೊರೆಯಬಹುದೆಂಬ ಲಕ್ಷಣಗಳೂ ತೋರುತ್ತಿವೆ. ಈ ಸಾಮಗ್ರಿಯ ಬಲದಿಂದ ರಶಿಯವು ಇತರ ರಾಷ್ಟ್ರಗಳನ್ನು ಪ್ರಗತಿಪಥದಲ್ಲಿ ಹಿಂದಕ್ಕೆ ಹಾಕಬೇಕೆಂದು ಪಣತೊಟ್ಟಿದೆ. ಇದರಿಂದ ಇಂಗ್ಲಂಡಿಗೂ ಎದೆನಡುಕ ಹುಟ್ಟಿದೆಯೆಂಬುದು ಎಲ್ಲರೂ ತಿಳಿದ ವಿಷಯು. ಮಂಚುಕುವೊ ಚೀನಗಳಲ್ಲಿಯ ಖನಿಜನಿಧಿಗಾಗಿ ಜಪಾನವು ನಡೆಸಿದ ಸಾಹಸವೂ ಇಂಗ್ಲಂಡಿಗೆ ಅಪಥ್ಯಕರವಾಗಿಯೆ ಪರಿಣಮಿಸಿದೆ.

ನಾಳೆಯ ಭಾರತ

ಒಂದು ಕಾಲಕ್ಕೆ ಇಂದಿನ ದರಿದ್ರ ಹಿಂದುಸ್ತಾನಕ್ಕೆ "ಸುವರ್ಣಭೂಮಿ" ಯೆಂದು ಹೆಸರಿತ್ತು. ಆಗ ಆ ಸ್ಥಿತಿಯಿದ್ದುದೂ ನಿಜ. ಬೇರೆ ದೇಶಗಳಿಗಿಂತ ಇಲ್ಲಿ ಬಂಗಾರವು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿತ್ತಲ್ಲದೆ, ಇಲ್ಲಿಯ ಎಷ್ಟೋ ಸರಕುಗಳು ಲಾಭಕರ ರೀತಿಯಲ್ಲಿ ಪರದೇ[ಶಕ್ಕೆ] ರಫ್ತಾಗುತ್ತಿದ್ದವು. ಎಲ್ಲಾ ಕಡೆಗೂ ಸುಸಂಪನ್ನತೆ[ಯಿ]ತಲ್ಲದೆ ಪ್ರತಿಯೊಬ್ಬರ ಬಳಿಯಲ್ಲಿಯೂ ಏನಾದರೂ ಗ[...]ತ್ತಿದ್ದಿತೆಂಬುದು ಅವರಲ್ಲಿರುವ ವಸ್ತ್ರ ಒಡವೆಗಳಿಂದ[...] ಬರುತ್ತಲಿತ್ತು. ಈ ಪೂರ್ವಕಾಲೀನ "ಸುವರ್ಣಭೂ[ಮಿ]"ಯಲ್ಲಿ ಇಂದು ಪರದೇಶಗಳ ಮಾನದಿಂದ ಅತ್ಯಲ್ಪಪ್ರ[ಮಾಣ]ದಲ್ಲಿ ಬಂಗಾರವು ಹೊರಡುತ್ತಿದ್ದರೂ ಈ ನಾಡಿನ ಗರ್ಭ[...] ಬಂಗಾರದಂತಹ- ಏಕೆ, ಅದಕ್ಕಿಂತಲೂ ಬೆಲೆಯುಳ್ಳ[...] ಜಾತಿಯ ದ್ರವ್ಯಗಳು ತುಂಬಿಕೊಂಡಿವೆ. ಹೀಗಿ[...] ಹಿಂದಿನ ಭಾಗ್ಯಲಕ್ಷ್ಮಿಯು ಇಂದು ನಿಧಿಲಕ್ಷ್ಮಿಯಾಗಿ[...] ಆದರೆ ಇದರಿಂದ ನಾವೇನೂ ಎದೆಗುಂದಬೇಕಾಗಿಲ್ಲ.

ಗುಡ್ಡ, ಬೆಟ್ಟ, ದರಿ, ಕೊಳ್ಳ, ಘಟ್ಟ, ಝುರಿ, ಪ್ರ[...] ಅಥವಾ ವೇಗವಾಹಿಯಾದ ನದಿನದಗಳು—ಇವ[...] ಒಂದು ಕೂಡ ದೇಶದ ಪ್ರಗತಿಗೆ ಸಾಕಾಗಿದೆ. [...] ಭೂಮಿಯಲ್ಲಿ ಇವೆಲ್ಲವೂ ಕೈಕೂಡಿಸಿವೆಯಿಷ್ಟೇ[...] ಅಮೌಲ್ಯ ಖನಿಜದ್ರವ್ಯಗಳ ಐಶ್ವರ್ಯವೂ ಜತೆಗೂ[ಡಿದೆ] ಎಂದ ಮೇಲೆ ಇಲ್ಲಿ ಮಣ್ಣು ಬಿತ್ತಿ ಹೊನ್ನು ಬೆ[ಳೆಯ]ಬಹುದೆಂದರೆ ಅತ್ಯುಕ್ತಿಯಾಗದು. ಹಿಂದುಸ್ತಾ[ನದ] ಔದ್ಯೋಗಿಕ ಉನ್ನತಿಯು—ಎಲ್ಲಾ ಸರಿಯಾದರೆ—ಶೀಘ್ರಗತಿಯಿಂದ ಸಾಗಲೇಬೇಕು. ಇವೊತ್ತು ನಮ್ಮ[...]ದಲ್ಲಿ ಕಬ್ಬಿಣ, ಕಲ್ಲಿದ್ದಲು, ಮ್ಯಾಂಗನೀಜ, ಅಲ್ಯುಮಿನ[ಿಯಂ], ರೆಆರ ಅರ್ಥ್ಸ್, ಟಂಗ್‌ಸ್ಟನ್, ಝಿರ್ಕೋನಿಯಂ, ಥೋರಿ[ಯಂ], ಬೆರಿಲಿಯಂ ದ್ರವ್ಯಗಳು ಹೇರಳವಾಗಿ ದೊರೆಯು[ತ್ತವೆ]. ಹಾಗೆಯೆ ಬೇರೆ ಕೆಲ ಆವಶ್ಯಕ ಧಾತುಗಳೂ ಸಿಗು[ತ್ತವೆ]. ಇವುಗಳಲ್ಲಿ ಬಹಳ ದೊಡ್ಡ ಪಾಲು ಕಚ್ಚಾಮಾಲಿನ [ರೂಪ]ದಲ್ಲಿ ಪರದೇಶಕ್ಕೆ ಹೋಗುತ್ತಿದೆ. ಅದನ್ನು ನಿಲ್ಲಿ[ಸಿ] ದೇಶದಲ್ಲಿಯೆ ಉಪಯೋಗಿಸಲಾದರೆ, ಬಹು [...] ಪ್ರಮಾಣದಲ್ಲಿ ಇಲ್ಲಿ ಸಿದ್ಧವಸ್ತುಗಳು ತಯಾರಾಗು[...] ಆ ಪ್ರಮಾಣವು 'ಮುಂದೇನು ಮಾಡಬೇಕೆಂ'ಬ ಚಿ[ಂತೆಯ] ವಿಷಯವೂ ಆಗಬಹುದು; ಮತ್ತು ಅದಕ್ಕಾಗಿ ಪರ[...] ಪೇಟೆಗಳನ್ನು ಹುಡುಕಬೇಕಾಗಿಯೂ ಬರಬಹುದು. ಈ ವ್ಯಾಪಾರದಿಂದ ದೇಶದ ಕಲ್ಯಾಣವೇ ಆದೀತು. [...]ನಲ್ಲಿ ಹೇಳುವುದಾದರೆ, ಭಾರತದ ಈಗಿನಂತಹ [...]ಕೀಯ ಆರ್ಥಿಕ ಹೀನದೆಸೆಯು ಬಹಳ ದಿನ [...] ಉಳಿದೀತೆಂದು—ನಮ್ಮ ಖನಿಜ ಸಂಪತ್ತಿಯ ಜ್ಞಾ[ನ]ವರು—ಎಂದೂ ಹೇಳಲಾರರು.

(ಸಹ್ಯಾದ್ರಿಯಿಂದ ಸಂಗ್ರಹಿತ)

ಹಾಡು

ತಂಬೆಲರ ತೀಟದಲಿ ತನಿವಣ್ಣು ತೂಗುತಿರೆ
ಇನಿಗೊರಲೊಳುಲಿಯುತಿಹ ಪಿಕವು ನಲಿವಂತೆ,

ಮಲ್ಲಿಗೆಯ ಮಲರರಳಿ ಪರಿಮಳವ ಪಸರಿಸಿರೆ
ನೆರೆದುಗುವ ಸಂತಸದಿ ಪರಿಮೆ ನಲಿವಂತೆ

ನಲಿಯುತಿಹುದೆನ್ನ ಮನ, ಕಾತರಿಪುದೆನ್ನ ಎದೆ
ಇಂದವಳು ಎನ್ನಿನಿಯಳೈತರುವಳೆಂದು !

ಪ್ರೆಮದುರುವೇಗದಲಿ ಪೂರ್ಣಪುಳಕಿತ ಕಾಂತೆ
ತುಂಬಿದೊಲವನು ನೀಡೆ ಬರುವಳೆಂದು !

—ಪರಮೇಶ್ವರ

ಮೌನ

ಕವನದೇವಿ ಹೃದಯದಲ್ಲಿ
ನಾಟ್ಯಗೈದು ಮೆರೆದಿರೆ,
ಉಕ್ಕಿ ಬರುವ ಭಾವದಲ್ಲಿ
ಗಿರಿಯನೇರಿ ಕುಳಿತಿರೆ,

ಏನಿದೇನು ಬಲು ವಿಚಿತ್ರ !
ಕಾಣದಾಯ್ತು ಪುಷ್ಪ ಪತ್ರ !
ಅಳಸಿ ಹೋಯ್ತು ನಭದ ಚಿತ್ರ !

ಹಕ್ಕಿಗಾನ ನಿಂತಿತು !
ಸೊಬಗೆ ಕರಗಿ ನಶಿಸಿತು !

ಮನವು ಬೆದರೆ, ಕಣ್ಣ ತೆರೆದು
ದೂರದಲ್ಲಿ ನೋಡಲು
ಪಡುವಲೆಡೆಯ ತಡಿಯ ತುಳಿದು
ಬರುವ ಇರುಳು ಕಾಣಲು

ಅವಳ ಹಿಂದೆ ತಾಳ ತಟ್ಟೆ
ಹಕ್ಕಿಗಳಾ ಕೊರಲ ಕಟ್ಟೆ
ಬಂದಳಾಗ ತಿರೆಯ ಮೆಟ್ಟೆ,

ಚೆಲುವ ಕರುಳ ಭಕ್ಷಿಸಿ
ಕ್ರೂರ ಮೌನರಾಕ್ಷಸಿ !

— ಕೆ. ವರದರಾಜರಾವ್, ಬೆಂಗಳೂರು.

ಕುದುರೆಯ ಮೀಮಾಂಸೆ

(ಶ್ರೀರಂಗ)

★

ಹಗ್ಗವು ಸಡಿಲಾಗುತ್ತ ನಡೆದಿದೆ ಈಗ! ನೆಲವು ತಗ್ಗು ದಿನ್ನೆಯಾಗುತ್ತಿದೆ ಈಗ! ಕಲಿಯುಗದ ಮಹಿಮೆಯಿಂದ ಕುದುರೆಯ ಪರಮೈಶ್ವರ್ಯವನ್ನೂ ಘನತೆಯನ್ನೂ ಮರೆಯುತ್ತಲಿದ್ದೇವೆ ನಾವು! ಜಗತ್ತನ್ನು ನಿರ್ಭಯದಿಂದಲೂ ಸ್ವಾತಂತ್ರ್ಯದೃಷ್ಟಿಯಿಂದಲೂ ನಿರೀಕ್ಷಿಸುವ ಕುದುರೆಯ ಮರ್ಮಚಕ್ಷುಗಳಿಗೆ ಚರ್ಮರಕ್ಷೆಯ ಬಂಧನವನ್ನು ತೊಡಿಸಿದ್ದೇವೆ! ನಗರದ ತಗ್ಗು ದಿನ್ನೆಗಳಲ್ಲಿ ಮುಗ್ಗರಿಸಲು ತೊಡಗಿಸಿದ್ದೇವೆ! ಹುಲುಮಾನವನೇ! ಎಚ್ಚರ!! ಕುದುರೆಯು ಎಚ್ಚತ್ತಿದೆ! 'ಘೋಟಕಸಂಘ'ವು ಸಂಘಟಿತವಾಗುತ್ತಲಿದೆ! ಅದರ ಬೇಡಿಕೆಗಳನ್ನು ಸಲ್ಲಿಸದಿದ್ದರೆ, ಸಂಘಕ್ಕೆ ಸಂಘವೇ ಎರಡು ಕಾಲ್ಗಳ ಮೇಲೆ ನಿಂತು, ನಿನಗೆ ಬಾಯಲ್ಲಿ ಹುಲ್ಲುಕಡ್ಡಿ ಕಚ್ಚಲು ಹಚ್ಚೀತು!

★

ನನ್ನ ಪರಿಚಯದ ತಪಸ್ವಿಬ್ರಾಹ್ಮಣರೊಬ್ಬರದು ಒಂದು ನಿಷ್ಠೆ ಇದ್ದಿತು; ಅದೆಂದರೆ, ಮಡಿಯಲ್ಲಿರುವಾಗ ಸಂಸ್ಕೃತ ಭಾಷೆಯನ್ನೆ ಉಪಯೋಗಿಸುವುದು. ಮಡಿಯಲ್ಲಿದ್ದಾಗ ಸಿಟ್ಟಿಗೆ ಬರುವುದೂ ಅವರ ವಾಡಿಕೆಯಾಗಿತ್ತೆಂದು ಹೇಳಬಹುದು. ಒಮ್ಮೆ ಮಡಿಯಲ್ಲಿಯ ಅವರ ಕೋಪಸಾಗರದಿಂದ 'ಉಚ್ಚೈಃಶ್ರವಸ್' ಎಂಬ ಶಬ್ದರತ್ನವು ಉದ್ಭವಿಸಿತು; ಮೈಲಿಗೆಯಾಗದಿದ್ದರೆ ಕನ್ನಡದಲ್ಲಿ ಹೇಳುವೆ, 'ಉಚ್ಚೈಃಶ್ರವಸ್' ಎಂದು ಬದಿಯುವನನ್ನು ಬೈದರು! ನನಗೆ—ಆಗ ನಾನು ಇನ್ನೂ ಸಂಸ್ಕೃತ ಅಧ್ಯಾಪಕನಾಗಿರಲಿಲ್ಲ—ಎಷ್ಟೊತ್ತಿನ ವರೆಗೂ ಆ ಶಬ್ದದ ಅರ್ಥವೆ ಆಗಲಿಲ್ಲ. ಕೊನೆಗೆ ನನ್ನ ಗೆಳೆಯನನ್ನು ಕೇಳಿದೆ. ಮಠದ ಸ್ವಾಮಿಯಿಂದ ಮನೆಯೊಳಗಿನ ಕೆಲಸದ ಆಸಾಮಿಯ ವರೆಗೂ ಎಲ್ಲರ ಬೈಗಳನ್ನು ಅವನು ಕೂಡಿಸಿಟ್ಟಿದ್ದಾನೆ. ಅವುಗಳನ್ನೋದಿದರೆ ಸಮಾಜಪದ್ಧತಿಯ ಕಲ್ಪನೆಯಾಗುವುದಂತೆ! ಅದರದೊಂದು ಥೀಸಿಸ್ (ಪ್ರಬಂಧ) ಬರೆಯುವವನಿದ್ದಾನೆ! ಅವನಿಗೆ ಪೀಎಚ್‌ಡಿ ಪದವಿ ದೊರಕೀತೆಂಬ ಆಸೆ! ಏನೇ ಇರಲಿ, 'ಉಚ್ಚೈಃಶ್ರವಸ್'ದ ಅರ್ಥವನ್ನು ಮಾತ್ರ ಅವನು ತಟ್ಟನೆ ನನಗೆ ಹೇಳಿಕೊಟ್ಟ; ಉಚ್ಚೈಃಶ್ರವಸ್ ಎಂದರೆ ಉದ್ದಕಿವಿಯವನಂತೆ!

ನನಗೆ ಅತ್ಯಂತ ಖೇದವಾಯಿತು. ನನ್ನನ್ನು [illegible] ದಕ್ಕಲ್ಲ. ಹಾಗೆ ನೋಡಿದರೆ ಉದ್ದಕಿವಿ ಎಂದರೆ ಯಾವುದೂ ಅಪಮಾನವಿಲ್ಲ; ಇಷ್ಟೇಕೆ? ಒಂದು [illegible] ಯಿಂದ ಸಂತೋಷವೆ ಇದೆ. ಭಾರತದ 'ಕಾರಕೂ[illegible] (Clerk) ಯುಗದಲ್ಲಿ ಹುಟ್ಟಿದ ನಮಗೆಲ್ಲರಿಗೆ ಕಿ[illegible] ಎಷ್ಟು ಉದ್ದವಿರುವವೋ ಅಷ್ಟು ಅನುಕೂಲವೆ ಇದೆ. [illegible] ಣಿಕೆಯ ಜೊತೆಗೆ ಮಶಿ-ದೌತಿ, ಆಫೀಸಿನ ಫಾಯಿಲ್ ([illegible] ಮುಂತಾದ ಎಲ್ಲ ಸಲಕರಣೆಗಳನ್ನೂ ಕಿವಿಗೆಯೆ [illegible] ಹಾಕಲು ಬರುವುದು. ಆದುದರಿಂದ ಸ್ವಾರ್ಥದೃಷ್ಟಿಯಿಂ[illegible] ನನಗೆ ಖೇದವಾಗಲಿಲ್ಲ. ಆದರೆ ಸನಾತನತ್ವದ [illegible] ಪತಾಕೆಯಂತಿದ್ದ ನಾಲಗೆಯಿಂದ ಉಚ್ಚೈಃಶ್ರವಸ್ [illegible] ಶಬ್ದದ ಅಪಮಾನವಾಯಿತಲ್ಲ—ಎಂದು ನನ್ನ [illegible] ಉಚ್ಚೈಃಶ್ರವಸ್ ಎಂದರೆ ಏನೆಂದು ಹಿಂದೂಧರ್ಮಾಭಿ[illegible] ಮಾನಿಗಳಿಗೆ ಬೇರೆಯಾಗಿ ಹೇಳಬೇಕೆ? ಸಮುದ್ರಮಂ[illegible] ದಿಂದ ಹೊರದೆಗೆದ ಹದಿನಾಲ್ಕು ರತ್ನಗಳಲ್ಲಿ ಉಚ್ಚೈಃ[illegible] ಶ್ರವಸ್ ಒಂದು. ಉಚ್ಚೈಃಶ್ರವಸ್ ಎಂಬುದೊಂದು [illegible] ರತ್ನ ಅರ್ಥಾತ್ ಒಳ್ಳೆಯದಾದ ಕುದುರೆ. ಮ[illegible] ಕಾಲದಲ್ಲಿ ದೇವತೆಗಳ ಪ್ರಯಾಸದ ಫಲವಾಗಿ [illegible] ಕುದುರೆಯನ್ನು ಸನಾತನಾಭಿಮಾನಿಗಳಾದ ನಾವು [illegible] ದಲ್ಲೂ ಪೂಜಿಸಬೇಕು. ನಮ್ಮಲ್ಲಿ ಅಂತಹ ಭಾವನೆ ಬಿದ್ದೆ[illegible] ರಿಸಲೆಂದು, ಆ ಸದ್ಬುದ್ಧಿಯು ನಮ್ಮಲ್ಲಿ ಹುಟ್ಟಲೆ[illegible] ಸ್ವತಃ ಪರಮಾತ್ಮನೇ ಹಯಗ್ರೀವನ ರೂಪವನ್ನು ತೋ[illegible] ದನು. ಬ್ರಾಹ್ಮಣರಂತೆ ಕ್ಷತ್ರಿಯರಿಗಾದರೂ ಕುದುರೆ ಹುಟ್ಟಿ[illegible] ನಿಂದಲೂ ಸನ್ಮಾನ್ಯವೆನಿಸಿದೆ ಎಂಬುದನ್ನು ಅಶ್ವಮೇಧ[illegible] ಯಾಗದ ಸಾಂಕೇತಿಕ ಘನತೆಯಿಂದ ಅರಿತುಕೊಳ್ಳಬಹುದು. ಇನ್ನು ವೈಶ್ಯನಿಗೆ? ಒಂದು ಬದಿ ಬಟ್ಟೆಯ ಗಂಟು, ಇನ್ನೊಂದು ಬದಿಗೆ ಪಾದಗಳನ್ನೂ ಇಳಿಬಿಟ್ಟು ತುಲಾ[illegible] ದಿಂದ ಸುವರ್ಣೋತ್ಸವವನ್ನು ನಡೆಸುನಂತೆ ಕುದು[illegible] ನ್ನೇರಿ ಸಂತೆ-ಸಂತೆಗೆ ಜಾತ್ರೆ-ಜಾತ್ರೆಗೆ 'ರೊಕ್‌ವಿಜ[illegible] ಗ್ರೈವ ವಣಿಗ್ವೀರನನ್ನು ಎಂದರೆ ಬಣಜಿಗನನ್ನು [illegible] ನೋಡಿಲ್ಲ? ಆದಕಾಗಿಯೆ ವ್ಯಾಪಾರವಿಷಯದಲ್ಲಿ '[illegible] ಮಂದಿ' ಎಂಬ ಪಾರಿಭಾಷಿಕ ಪದಪ್ರಯೋಗವಿದೆ [illegible] ನನ್ನ ಪರಿಚಯದ ಶಬ್ದಶಾಸ್ತ್ರಪಂಡಿತರೊಬ್ಬರು [illegible] ಹೇಳಿದರು. ಲಾಭಕ್ಕೆ ಕಾರಣ, ಲಾಭದ ಸಂಕೇತ [illegible] (=ಕುದುರೆ) ಎಂದೂ, ಹಾನಿಯ ಸಂಕೇತ, ಹಾನಿಗೆ ಕಾ[illegible] ಮಂದಿ (=ಮನುಷ್ಯ ಇಲ್ಲವೆ ಮತ್ತೊಬ್ಬ) ಎಂದೂ [illegible] ಪದದ ಅರ್ಥವಂತೆ! ಏನೆ ಇರಲಿ, ಬ್ರಾಹ್ಮಣ-ಕ್ಷತ್ರಿ[illegible]

ವೈಶ್ಯ ಎಂಬ ದ್ವಿಜತ್ರಿವರ್ಗಕ್ಕೆ ಕುದುರೆಯು ಕೃತಯುಗದಾದಿಯಿಂದಲೂ ಕರ್ಮಸಾಕ್ಷಿಯಾಗಿದೆ, ಮೋಕ್ಷಸಾಧನವೆನಿಸಿದೆ ಎನಬಹುದು. ಇಂತಹ ಕುದುರೆಯನ್ನು ಬೈಯುವುದಕ್ಕಾಗಿ ಉಪಯೋಗಿಸಬಹುದೆ ? ಹಯಗ್ರೀವ ! ಹಯಗ್ರೀವ !

ನಿಜವಾಗಿ ನೋಡಿದರೆ ಮೇಲಿನ ದೃಷ್ಟಾಂತದಲ್ಲಿಯ ಅವಮಾನವು ಕುದುರೆಗೆ ಸಲ್ಲುವುದಿಲ್ಲ. ನಮ್ಮ ಸನಾತನ ಸಂಪ್ರದಾಯಕ್ಕೆಯೆ ಸಲ್ಲುತ್ತುದೆಂದು ಹೇಳಬಹುದು. ಕುದುರೆಯು ಆ ಸಂಪ್ರದಾಯದ ಸಂಕೇತ ಮಾತ್ರ. 'ಯದಾ ಯದಾ ಹಿ ಹಗ್ಗಸ್ಯ ಗ್ಲಾನಿರ್ಭವತಿ ಮಾನವ! ತೆಗ್ಗುತ್ಥಾನಂ ನೆಲಸ್ಯೈವ ತದಾತ್ಮಾನಂ ಪುಟಾಮ್ಯಹಂ ||, ಯಾವಾಗ ಕೈಯೊಳಗಿನ ಹಗ್ಗ ಸಡಿಲಾಗಿ, ನೆಲವು ತೆಗ್ಗು-ದಿನ್ನೆಯಾಗುವುದೊ ಅವಾಗ ನಾನು ನಿಮ್ಮ ಕೈಮೀರಿ ಪುಟಿದು ಹೋಗುವೆ' ಎಂದು ತನ್ನ ಸಂದೇಶವನ್ನು ಎಂದಿನಿಂದಲೊ ಸಾರಿದ ಕುದುರೆಗೆ ದೋಷ ಸಲ್ಲಬಹುದೆ ? ಅದರೇನು ? ಹಗ್ಗವು ಸಡಿಲಾಗುತ್ತ ನಡೆದಿದೆ ಈಗ ! ನೆಲವು ತೆಗ್ಗು-ದಿನ್ನೆಯಾಗುತ್ತಿದೆ ಈಗ! ಕಲಿಯುಗದ ಮಹಿಮೆಯು ಕಾಣಬರುತ್ತಿದೆ! ಈಗ ಕಲಿಯುಗದ ಮಹಿಮೆಯಿಂದ ಕುದುರೆಯ ಪರಮೈಶ್ವರ್ಯವನ್ನೂ ಘನತೆಯನ್ನೂ ಮರೆಯುತ್ತಲಿದ್ದೇವೆ ನಾವು ! ವಿಶ್ವದ ಬಯಲು-ಬೆಳಕುಗಳಲ್ಲಿ ತುಂಬಿ ತುರುಗಾಡಿ ಆರೋಗ್ಯಸಂಪನ್ನನಾಗಿದ್ದ ದೇವನನ್ನು ಅನಾರೋಗ್ಯಕರವಾದ ಕತ್ತಲೆಯ ಗರ್ಭಗುಡಿಯಲ್ಲಿ ಸೆರೆಯಿಟ್ಟಂತೆ ರಣರಂಗದಲ್ಲಿ ಕಲಿಗಳ ಖಡ್ಗಗಳ ಖಣಖಣಾಟದ ತಾಳಮೇಳಕ್ಕೆ ಕುಣಿಯುವ ಕುದುರೆಯನ್ನು ನಗರದ ತೆಗ್ಗು-ದಿನ್ನೆಗಳಲ್ಲಿ ಮುಗ್ಗರಿಸಲು ತೊಡಗಿಸಿದ್ದೇವೆ! ಜಗವನ್ನು ನಿರ್ಭಯದಿಂದಲೂ ಸ್ವಾತಂತ್ರ್ಯದೃಷ್ಟಿಯಿಂದಲೂ ನಿರೀಕ್ಷಿಸುವ ಕುದುರೆಯ ಮರ್ಮಚಕ್ಷುಗಳಿಗೆ ಇಂದು ಚರ್ಮಕಕ್ಷೆಯ ಬಂಧನವನ್ನು ತೊಡಿಸಿದ್ದೇವೆ. ನೋಡಿಕೊಂಡು ಮಾರ್ಗಧರ್ಮಗಳನ್ನು ನಿರ್ಣಯಿಸುವ ಕುದುರೆಗೆ ಇಂದು ತೋರಿಸಿದಂತೆ ನೋಡುವುದೆ ಧರ್ಮವಾಗಿದೆ! ಸಂಸಾರದ ದುಸ್ತರವಾದ ಪಥಪ್ರದೇಶದಲ್ಲಿ ಮರುಳ ಮಾನವನನ್ನು ನಡೆಯಿಸುವ ಶಕ್ತಿಯಿದ್ದ ಕುದುರೆಯನ್ನು ಇಂದು ಮಾನವನೆ ತಾನು ತುಳಿದ ದಾರಿಯಲ್ಲಿಯೆ ನಡೆವಂತೆ ಮರುಳುಗೊಳಿಸಿದ್ದಾನೆ!

ಮಾನವನ ಈ ಉದ್ದಾಮತನಕ್ಕೆ ಅಥವಾ ಕುದುರೆಗಳ ಈ 'ಉದ್ದಲಗಾಮತ್ವ'ಕ್ಕೆ ಪ್ರತೀಕಾರವೇನು ? ಇದು ನಾನು ಕೇಳುವ ಪ್ರಶ್ನೆಯಲ್ಲ. ಕುದುರೆಗಳು ನನ್ನ ಮುಖೇನ ಮಾನವವರ್ಗಕ್ಕೆ ಕೇಳುವ ಪ್ರಶ್ನೆಯಿದು. ನಾನಾದರೂ ಕೇಳಲು ಅಷ್ಟೊಂದು ಆತುರನಾಗಿರಲಿಲ್ಲ. ಆದರೆ ಒಂದು ತಿಂಗಳಿನಿಂದ ಈಗ ಒಂದೇ ಸವನೆ ಕುದುರೆ-ಸಂಘದ ಪ್ರತಿನಿಧಿಗಳು ನನ್ನ 'ಬೆನ್ನುಹತ್ತಿದರು'; ಮೊದಮೊದಲು, ನಾನು ಆ ಮಾತಿಗೆ ಕಿವಿಗೊಡಲಿಲ್ಲ. ಕುದುರೆಗಳ ಸಂಘವಿದ್ದೀತೆಂಬ ಮಾತಿನಲ್ಲಿ ನನ್ನ ವಿಶ್ವಾಸವೂ ಇರಲಿಲ್ಲ. ಆದರೆ ಅಧ್ಯಕ್ಷ—ಕಾರ್ಯದರ್ಶಿ—ಕಾರ್ಯಕಾರಿಮಂಡಳ ಮೊದಲಾದುವುಗಳ ಸಾಕ್ಷಿ-ಪುರಾವೆಗಳು ಸಾಕಷ್ಟು ನನ್ನ ಕಣ್ಣಿಗೆ ಬಿದ್ದುವು. ಅಧ್ಯಕ್ಷನಿದ್ದ ಮೇಲೆ ಸಂಘವಿರಲೇಬೇಕಲ್ಲವೆ? ಏನೇ ಇರಲಿ 'ಹಯಗ್ರೀವಸಭೆ'ಯ ಪ್ರತಿನಿಧಿಗಳ ಮಾತನ್ನು ನಾನು ಕೇಳಲೇಬೇಕಾಯಿತು. ಮತ್ತು ಅವರ ಇಚ್ಛೆ-ಆಜ್ಞೆಗಳ ಮೇರೆಗೆ ಅದನ್ನು ಇಲ್ಲಿ ಹೇಳಲೇಬೇಕಾಯಿತು. ಅದನ್ನೆ ಕೆಳಗೆ ಹೇಳಿದ್ದೇನೆ:—

ನಾವು (ಎಂದರೆ ಕುದುರೆಗಳು ಎಂದು ಪ್ರತಿನಿಧಿಗಳು ಮೊದಲುಮಾಡಿದರು) ದಿನೇದಿನೇ ನಿಕೃಷ್ಟಾವಸ್ಥೆಗಿಳಿಯುವ ನಮ್ಮ ಹೀನಾಯಮಾನ ಪರಿಸ್ಥಿತಿಯನ್ನು ತಡೆಯುವ ಉದ್ದೇಶದಿಂದ ಈ ಸಂಘರಥವನ್ನು ಹೂಡಿದ್ದೇವೆ. ಇದುವರೆಗೆ ಮನುಷ್ಯವರ್ಗದಲ್ಲಿದ್ದ ನಮ್ಮ ಆದರ-ವಿಶ್ವಾಸಗಳು ಇಂದು ಆಘಾತಕ್ಕೆ ಸಿಲುಕಿ ನಾಶಗೊಂಡುವೆಂದು ಹೇಳಲು ಅತ್ಯಂತ—ಘುರುರುರುರ್—ವಿಷಾದಿಸುತ್ತೇವೆ. ಹತ್ತನೆಯ ಅವತಾರದಲ್ಲಿ ಪರಮಾತ್ಮನು ನಮ್ಮ ಸಜಾತೀಯನನ್ನೇರಿಕೊಂಡು ನಮ್ಮನ್ನು ಉದ್ಧರಿಸುವನೆಂಬುದು ಖಂಡಿತ; ನಾವು ಈಗ ನಮ್ಮನ್ನೆ ಉದ್ಧರಿಸಿಕೊಳ್ಳುವ ಯತ್ನವು ಆ ಪರಮಾತ್ಮನಲ್ಲಿ ಅವಿಶ್ವಾಸಸೂಚಕವಲ್ಲವೆಂದು ನಮ್ಮ ಸಮ್ಮೇಳನದಲ್ಲಿ ಅತ್ಯಂತ ನಮ್ರಭಾವದಿಂದ ನಾವು ಮೊದಲನೆಯ ಗೊತ್ತುವಳಿಯನ್ನು ಸ್ವೀಕರಿಸಿದ್ದೇವೆ. ಆದರೆ ಮಾನವನು ನಮ್ಮನ್ನಾಳಲು ಹೂಡಿದ ಆಟದಿಂದ ನಮ್ಮ ಜನಾಂಗವೆ ನಷ್ಟವಾದೀತೆಂಬ ಭೀತಿ ನಮಗಿದ್ದುದರಿಂದ ನಾವು ಅವಸರಗೊಳ್ಳಬೇಕಾಯಿತು. ಮೊದಲನೆಯ ಮಾತೆಂದರೆ ನಮ್ಮ ಮೇಲೆ ತನ್ನ ಆಳಿಕೆಯನ್ನು ನಡೆಸುವ ದುರುದ್ದೇಶದಿಂದ ಮಾನವನು ನಮ್ಮ ನಮ್ಮೊಳಗೆ ಜಾತಿ-ಕಲಹ-ಭೇದಾವಸ್ಥೆಗಳನ್ನು ಹುಟ್ಟಿಸಿದ್ದಾನೆ. ಕಡಮೆ ಕೆಲಸ, ಹೆಚ್ಚಿನ ಸುಖ, ರಿಝರ್ವ್ಡ ಟ್ರೇನಿನ ಫಸ್ಟ್‌ಕ್ಲಾಸ ಪ್ರವಾಸಸೌಖ್ಯ, ಗವರ್ನರ-ಮಂತ್ರಿ-ಧನಿಕ-ವಿಭೂತಿಗಳ ಸಹವಾಸ — ಮೊದಲಾದ ಸೌಕರ್ಯಗಳನ್ನೊದಗಿಸಿ ನಮ್ಮಲ್ಲಿ ಕೆಲವರದೊಂದು ಬೇರೆ ಮೇಲಿನ ಜಾತಿಯೆ (Horse Race) ನಿರ್ಮಾಣವಾಗಿದೆ.

ಈ ಬಾಹ್ಯಸೌಖ್ಯಲಾಲಸಾಂಧರಿಂದ ಈ ನಮ್ಮ ಬಂಧುಗಳಿಗೆ ಅದೇ ಆಡಂಬರದ ವಾಲಗದ ಸದ್ದಿನಲ್ಲಿ ತಮಗೆ ತಾಕುವ ಒದಿಕೆಗಳ ಎಚ್ಚರವಿಲ್ಲದಂತಾಗಿದೆ. ಅಲ್ಲಿಂದಲ್ಲಿಯೆ ವರ್ತುಳಪ್ರದೇಶದಲ್ಲಿ ಸುತ್ತಾಡುತ್ತಿರುವ ತಾವು ಪ್ರಗತಿಯನ್ನು ಹೊಂದಿದವರೆಂಬ ಭಾವನೆ ಇವರಿಗೆ. ಅದರಂತೆಯೆ ಇನ್ನೊಂದು ವರ್ಗಕ್ಕೆ ಯುದ್ಧದ ಪಡೆಗಳಲ್ಲಿ ಸ್ಥಾನವನ್ನು ಒದಗಿಸಿ, ಮೊದಲು ಮನಬಂದಂತೆ ಮೆಯ್ಯಿಸಿ ಮೆಯ್ಯ ಕೆಸಿದ್ದಾನೆ ಮಾನವನು ! ಕಹಳೆಯ ಕೂಗಿನಲ್ಲಿ ತನ್ನನ್ನು ಮಾನವನು ಮೃತ್ಯುವಿನ ಬಾಯಿಗೆ ತುತ್ತುಮಾಡಲು ಮುಂದೆ ನಡೆಸಿದ್ದಾನೆಂಬುದರ ಅರಿವೇ ಇವರಿಗಿಲ್ಲ ! ಮೂರನೆಯ ವರ್ಗವೆಂದರೆ— ಘುರುಘುರುರುರು !— ನಮ್ಮಲ್ಲಿ ಎಷ್ಟೋ ಜನರು ಭಾರವಾಹಕರಾಗಿದ್ದಾರೆ ! ಅಶ್ವಸೃಷ್ಟಿಯಲ್ಲಿಯ ಅಸ್ಪೃಶ್ಯರಾದ ಲಂಬಕರ್ಣರು ಮಾಡತಕ್ಕ ಹೀನ ಕೃತ್ಯಗಳಲ್ಲಿ ಮಾನವನು ನಮ್ಮನ್ನು ಹೂಡಿದ್ದಾನೆ! ಎರಡೇ ಕಾಲ್ಗಳಿದ್ದ ಇವನನ್ನು ನಾವು—ನಾಲ್ಕು ಕಾಲ್ಗಳೊಡೆಯರು— ಎಳೆದೊಯ್ಯುವುದೆಂದರೆ ಎಂತಹ ಅಪಮಾನ ನಮಗೆ ! ಮಾನವನ ಹೀನಸಂಸ್ಕೃತಿಯ ' ದ್ಯೋತಕಪಲ್ಲವೆ ಇದು ? ಉಚ್ಚಸಂಸ್ಕಾರದ, ಉಚ್ಚಸ್ಥಾನವನ್ನಲಂಕರಿಸುವ ಸ್ವಾಮಿಗಳೆಂಬುವವರು ನಮ್ಮನ್ನು ಬಿಟ್ಟು ಮಾನವರನ್ನೆ ವಾಹಕರಾಗಿ ಮಾಡಿಕೊಂಡುಹೋಗುವ ಸೌಜನ್ಯವು ಈ ಮಾತಿಗೆ ಪುಷ್ಟಿಯನ್ನು ಕೊಡುವ ಸಾಕ್ಷ್ಯವಲ್ಲವೆ ? ನಮ್ಮ ದೂರದರ್ಶಿತ್ವವು ಹಾಳಾಗಿ ಇಂದು ನಾವು ಕೇವಲ ' ಎದೂರದರ್ಶಿ ' ಗಳಾಗಿದ್ದೇವೆ ! ಇರಲಿ.

ನಮ್ಮ ಸಂಘದ ಸ್ಥಾಪನೆಯ ಇತಿಹಾಸವು ಹೀಗಿದೆ. ಆದರೆ ನಮ್ಮ ಸುದೈವದಿಂದ ಸಂಘದ ಸ್ಥಾಪನೆಯಾದ್ದರಿಂದ ನಮ್ಮಲ್ಲಿ ಎಲ್ಲ ವ್ಯಕ್ತಿಗಳೂ ಒಂದಾಗಿದ್ದಾರೆ ಎಂದು ಹೇಳಬಲ್ಲೆವು. ಎಲ್ಲರೂ ಒಂದಾಗಿರುವರೆಂದೇ ಇಂದು ನಾವು ನಮ್ಮ ಬೇಡಿಕೆಗಳನ್ನು ಹಟದಿಂದ ಮಾನವನ ಮುಂದಿಡುತ್ತಲಿದ್ದೇವೆ. ಆ ಬೇಡಿಕೆಗಳಿಗೆ ಮಾನ್ಯತೆ ದೊರೆಯಲೇಬೇಕು. ದೊರೆಯದಿದ್ದರೆ — ಅಥವಾ ಆ ಮಾತೇಕೆ ಬೇಡ—ದೊರೆಯದಿದ್ದರೆ ಮಾನವನ ಸಂಸಾರವೆ ನಡೆಯದಂತೆ ಸಂಘಟಿತನಾಗಿ, ಸುಸಜ್ಜಿತವಾಗಿ ಯುದ್ಧವನ್ನು ಹೂಡುವವರಿದ್ದೇವೆ. ಪ್ರಸಂಗ ಬಂದಲ್ಲೆಲ್ಲ ನಾವೂ ಮಾನವನಂತೆ ಎರಡು ಕಾಲ್ಗಳ ಮೇಲೆಯೆ ನಿಂತುಬಿಡುವೆವು! ನಡೆಯಲಿ ಮಾನವನ ಸಂಸಾರವಾಹನ ! ಹೇಗೆ ನಡೆಯುವುದೊ ನೋಡುವಾ ! ಇಂದು ಯಂತ್ರವಾಹನಗಳಿವೆ ಎಂಬ ಹೆಮ್ಮೆ ಇದೆಯಲ್ಲವೆ ಮಾನವನಿಗೆ ? ಆದರೆ ನಾವು ನಡೆಯುವ ಬೀದಿಗಳಲ್ಲಿ ನಡೆಯಲು ಯಂತ್ರಗಳು ಸ[illegible]ನೆಂಬುದು ಎಷ್ಟು ಜನರಿಗೆ ಗೊತ್ತಿದೆ ? ನಾವು [illegible] ನೀರಿಲ್ಲದೆ ಸಂಸಾರ ನಡೆಸುವಂತೆ ಎಷ್ಟು ಯ[illegible] ನಡೆಸಬಲ್ಲವು ? ಮಾನವನಿಗೆ ನಮ್ಮ ಯೋಗ್ಯತೆ ನಿ[illegible] ತಿಳಿಯಬೇಕಾಗಿದ್ದರೆ ಆವನು ಕೆಲವು ಜನರ[illegible] ಕಮೀಶನ್ ಕಳುಹಿಸಲಿ; ವಿಚಾರಣೆಯಾಗಲಿ; ಆ[illegible] ಕೆಲವು ನಿಮಿಷಗಳಪರಿಗಾದರೂ ಟಾಂಗಾ—ವಾಹನ[illegible] ಎಳೆದು ನೋಡಲಿ; ನಾವು ಕುಡಿಯುವ ನೀರನ್ನು [illegible] ಸಿಯಾದರೂ ಬಿಡಲಿ; ನಾವು ತಿನ್ನುವ ಹುಲ್ಲನ್ನು [illegible]ಯಿಂದ ಕಚ್ಚಿಯಾದರೂ ನೋಡಲಿ. ಆ ಮೇ[illegible]ಯುವುದು ನಮ್ಮ ಯೋಗ್ಯತೆ. ಕುದುರೆ! ಕುದುರೆ! [illegible] ಯೆಂದರೆ ಇಂತಹ ಕೀಳುಪ್ರಾಣಿ ಎನಿಸಿತಲ್ಲವೆ [illegible]ವನಿಗೆ ? ಮಾನವನ ಇಡಿಯ ಜೀವನದ ಭಾರವನ್ನೆ ಹೊತ್ತಿದ್ದೇವೆ. ಮದುವೆಯಾದರೆ ಮದುವೆ-ಮಕ್ಕ[illegible]ವಣಿಗೆ ನಮ್ಮ ಬೆನ್ನಮೇಲೆ. ಹಿಂದುಧರ್ಮದ [illegible]ರುತ್ಥಾಪನೆಯನ್ನು ಮಾಡಿದ ಶಿವಾಜಿಗೆ—ನಮ್ಮ[illegible] ಆಧಾರ ! ಜಗತ್ತಿನಲ್ಲಿ ಸಾಮ್ರಾಜ್ಯಲೋಲುಪರ ಸೊ[illegible] ಮುರಿದು ಸರ್ವರಿಗೂ ಸಮನಾದ ಸ್ವಾತಂತ್ರ್ಯವೆಂಬ[illegible]ವನ್ನು ಹರಡುವ ನೆಪೋಲಿಯನ ಬೋನಾಪಾ[illegible] ನಮ್ಮ ಬೆನ್ನುಕಟ್ಟಿಕೊಂಡವನೆ ! ಆದರೇನು ? ನಮಗೆ ಈ ಗತವೈಭವವನ್ನು ನೆನೆಸಿಕೊಂಡು ಹ[illegible]ಯಲು ಕೂಡ ಹುರುಪಿಲ್ಲ, ಶಕ್ಯವಿಲ್ಲ; ಬಾಯ್ತು[illegible] ವಾಣವನ್ನು ಕಟ್ಟಿದ್ದಾರೆ !

ಈ ನಮ್ಮ ಪರಿಸ್ಥಿತಿಯನ್ನು ಸುಧಾರಿಸಲು [illegible] ಮೇಲೆ ಕಾಣಿಸಿದ, ಪ್ರಥಮ ಘೋಟಕಸಮ್ಮೇ[illegible] ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ [illegible]ವಾಗಿವೆ. ಇವು ನಮ್ಮ 'ಅಂತ್ಯಮಾತು' (ultim[illegible]) ಗಳು.

(೧) ನಮ್ಮ ಘೋಟಕಸಮಾಜದ ಪ್ರಾಚೀ[illegible]ವವು ಘನವಾಗಿದ್ದು, ಇಂದು ಮಾನವನು ನಾವು ಆ [illegible] ವೈಭವವನ್ನು ನೋಡದಂತೆ ತನ್ನ ನಗರಸಂಸ್ಕೃ[illegible] ನಮ್ಮ ಕಣ್ಣುಗಳನ್ನು ಕಟ್ಟಿಟ್ಟಿದ್ದಾನೆ. ಆ ದೃ[illegible]ವನ್ನು ಬಿಚ್ಚಿ, ಕೂಡಲೆ ನಮ್ಮೆಲ್ಲರಿಗೆ ಆ ಪ್ರಾಚೀನ[illegible]ತಿಯು ಮತ್ತೊಮ್ಮೆ ಸುಲಭವಾಗುವಂತೆ ಮಾಡಬೇ[illegible] ಈ ಸಭೆಯು ಹೂಂಕಾರದಿಂದ ಬೇಡುತ್ತಿದೆ.

(೨) ಹಿಂದಿನ ಕಾಲದಲ್ಲಿ ನಮಗೆ ಆಗಾಗ ಅಶ್ವ[illegible] ಎಂಬ ರಜೆ ಸಿಕ್ಕು, ಆದರ ಜೊತೆಗೆ ಪ್ರವಾಸದ ಸ[illegible]

ಮತ್ತು ಅಲಾವನ್ಸ (allowance) ಎರಡೂ ದೊರೆಯು ತ್ತಿದ್ದಂತೆ ಇಂದು ಕೂಡ ನಮ್ಮ ಸಮಾಜಸೇವೆಯ ಡಿಪಾರ್ಟಮೆಂಟಿನಲ್ಲಿ ದೊರೆಯುವಂತೆ ನಿಯಮಾವಳಿಯಲ್ಲಿ ತಿದ್ದುಪಡೆಯನ್ನು ಮಾಡತಕ್ಕದ್ದು.

(೩) ಇಂದು ನಗರಗಳಲ್ಲಿ ನಮಗಿದ್ದ ಹೀನದರ್ಜೆಗೆ ಬದಲಾಗಿ ಎಂದಿನಿಂದ ನಮಗೆ ಕುಲಕ್ರಮೋಚಿತವಾದ ಮಾನ-ಮರ್ಯಾದೆಗಳ ಸಲಹೆ-ಸೌಕರ್ಯಗಳ ಅಧಿಕಾರ ವಿರತಕ್ಕದ್ದು. ಎಂದರೆ ನಾಗರಿಕರಾದ ನಮಗೆ ಬೀದಿಗಳು ಸ್ವಚ್ಛವಾಗಿಯೂ, ನೆರಳು ಸಾಕಷ್ಟಾಗಿಯೂ, ನೀರು ಬೇಕೆನಿಸಿದಲ್ಲೂ ದೊರಕುವ ಏರ್ಪಾಟು ಆಗತಕ್ಕದ್ದು.

ವಿ. ಸೂ. ತನಗೆ ದೊರಕದ ಸೌಕರ್ಯ ನಮಗೆ ಹೇಗೆ ದೊರಕುವುದು ಎಂದು ಮಾನವನು ಸಂಶಯಪಡುವಂತಿಲ್ಲ. ಯಾಕೆಂದರೆ—ಸಮಾಜದಲ್ಲಿ ಮಾನವನಿಗಿಂತ ನಾವು ಹಿರಿಯರು, ಹಳೆಬರು, ಹೆಚ್ಚಿನ ಯೋಗ್ಯತೆಯವರು.

(೪) ಈ ನಮ್ಮ ಬೇಡಿಕೆಗಳು ಮಾನ್ಯವಾಗುವವೊ ಇಲ್ಲವೊ ಎಂಬುದರ ಸಂತತನಿರೀಕ್ಷಣೆಗಾಗಿ ನಮ್ಮ ಪ್ರತಿನಿಧಿಗಳಿಗೆ ಆಡಳಿತದಲ್ಲಿ ಸ್ಥಾನವಿರತಕ್ಕದ್ದು. ನಮ್ಮನ್ನು ನಗರಸಭೆಗಳಲ್ಲಿ ಸೇರಿಸಿಕೊಂಡರೆ ಸಾಮಾನ್ಯವಾಗಿ ಎದ್ದು ನಿಲ್ಲುತ್ತಿರುವ (standing=ಸ್ಟ್ಯಾಂಡಿಂಗ) ಕಮೀಟಿಗಳು ಇನ್ನುಮುಂದೆ ಕೂತ ಕಮೀಟಿಗಳಾಗಲು ಅಡ್ಡಿ ಇಲ್ಲ. ಇದರಿಂದ ಕಮೀಟಿಯು ಕೆಲಸವನ್ನು ಮಾಡಲೂ ಸಾಧ್ಯವಾಗುವುದು. ಇದಲ್ಲದೆ ಈಗ ನಗರಸಭೆಗಳ ಮತ್ತು ಸದಸ್ಯರ ಒಳಗೂ ಹೊರಗೂ ಪೈರು ಇಲ್ಲದಂತಾಗಿ ಕೇವಲ ಹುಲ್ಲು ಬೆಳೆಯುತ್ತಿದೆ ಎಂಬ ಕೂಗು ಇದೆ; ನಮ್ಮ ಸದಸ್ಯತ್ವದಿಂದ ಆ ಹುಲ್ಲಿನ ಸ್ವಾರ್ಥ-ಪರಾರ್ಥಕ ಸದುಪಯೋಗವಾಗಬಹುದು.

(೫) ಮೇಲಿನ ಬೇಡಿಕೆಗಳು ಮಾನ್ಯವಾಗದ ಪಕ್ಷದಲ್ಲಿ ಸಂಘದ ಸದಸ್ಯರೆಲ್ಲರೂ ಎರಡು ಕಾಲ್ಗಳ ಮೇಲೆ ನಿಂತು ಪ್ರತಿಭಟಿಸಬೇಕೆಂದು ಈ ಸಭೆಯ ಕೊನೆಯ—ಘುರುರುರ್ರುರು!

ಕಿರುಗತೆಗಳು

ಲೇ : ಸಂಜೀವ

೧. ಕೊನೆಯ ಆಶೆ

ಮುದುಕ ಓಬ್ಲಯ್ಯ ದೊಡ್ಡಿಯ ಕಡೆ ಕುಂಟುತ್ತಾ ಹೋಗುತ್ತಿದ್ದ. ಮಧ್ಯೆ ಮೃತ್ಯು ಬಂದು ಅವನನ್ನು ತಡೆದು ಹೇಳಿತು, "ಮಹಾನುಭಾವ ಓಬ್ಲಯ್ಯ, ಈ ಕ್ಷಣಕ್ಕೆ ಭೂಮಿಯಲ್ಲಿ ನಿನ್ನ ಕೆಲಸ ಮುಗಿಯಿತು. ದೇವಾನುದೇವತೆಗಳ ಸನ್ನಿಧಾನಕ್ಕೆ ಕರೆದುಕೊಂಡು ಹೋಗುತ್ತೇನೆ ಬಾ" ಎಂದು.

ಎಂಭತ್ತೆಂಟು ವರುಷ ಹೊತ್ತಿದ್ದ ತನ್ನ ಬೋಳುತಲೆಯನ್ನು ಮೇಲಕ್ಕೆತ್ತಿ ಓಬ್ಲಯ್ಯ ನೋಡಿದ. ಆಳದಲ್ಲಿ ಹೊಳೆಯುತ್ತಿದ್ದ ಕಣ್ಣುಗಳಿಂದ ಆಶೆಯನ್ನು ಹೊರ ಸೂಸುತ್ತಾ ಮೃತ್ಯುವನ್ನು ಕೇಳಿಕೊಂಡ, "ಅಯ್ಯಾ, ಒಂದು ಹತ್ತು ನಿಮಿಷ ತಡೆಯಲಾರೆಯಾ ?"

ಮೃತ್ಯು ನಗುತ್ತಾ ಉತ್ತರ ಕೊಟ್ಟಿತು, "ಕಾಲವಿಳಂಬನಕ್ಕೆ ಇದು ಸಮಯವಲ್ಲ, ಓಬ್ಲಯ್ಯ. ಆದರೂ ನಿನಗೋಸ್ಕರವಾಗಿ ಒಂದು ಹತ್ತು ನಿಮಿಷ ಕಾಯುತ್ತೇನೆ."

ಓಬ್ಲಯ್ಯ ಕುಂಟುತ್ತಾ ಕೋಲೂರಿಕೊಂಡು ತಲೆ... ಕೊಂಡು ದೊಡ್ಡಿಯ ಕಡೆಗೆ ನಡೆದ. ಮೃತ್ಯುವಿಗೆ ಆಶ್ಚ...ವಾಯಿತು. ಓಬ್ಲಯ್ಯನನ್ನು ಕೂಗಿ ಕೇಳಿತು:

"ಓಬ್ಲಯ್ಯ, ಎಲ್ಲಿಗೆ ಹೋಗುತ್ತೀ? ಮನೆಗೆ ಹ... ಮೊಮ್ಮಕ್ಕಳನ್ನು ಮುದ್ದಿಟ್ಟು, ಸೊಸೆಯನ್ನು ಮತ್ತೊ... ಬಾರಿ ಕಣ್ತುಂಬ ನೋಡಿಕೊಂಡು ಬರುವುದಿಲ್ಲವೇ ?"

ಮುದುಕ ತಲೆಯಲ್ಲಾಡಿಸಿ ಹಾಗೆಯೇ ಉತ್ತರ ಕೊ... "ಇಲ್ಲ, ದೊಡ್ಡಿಯಲ್ಲಿ ಸ್ವಲ್ಪ ಕೆಲಸವಿದೆ. ಹಸು... ಮೇವು ಹಾಕಬೇಕು. ಈಗ ನಾನು ಹಾಕದಿದ್ದರೆ, ... ಬೆಳಗಿನ ವರೆಗೆ ಅವು ಉಪವಾಸವಿರಬೇಕಾದೀತು !"

ಮೃತ್ಯು ಮೂಗಿನ ಮೇಲೆ ಬೆರಳಿಟ್ಟುಕೊಂಡು ವಿಗ್ರಹದಂತೆ, ಓಬ್ಲಯ್ಯ ಹಿಂದಿರುಗಿ ಬರುವ ... ಅಲ್ಲಿಯೇ ನಿಂತಿತ್ತು !

೨. ಕೊಚ್ಚೆನೀರಿನಲ್ಲಿ

ಉರಿಬೇಸಿಗೆ. ಸಂಜೆ ನಾಲ್ಕರ ಸಮಯ. ಮಿಲ್ಲಿನ ಹತ್ತಿರ ಹೋಗುವ ಕೆಲಸವಿತ್ತು, ಹೋಗುತ್ತಿದ್ದೆ. ಕಾದ ನೆಲದಿಂದ ಬಿಸಿಗಾಳಿ ಏರುತ್ತಿತ್ತು. ಮಿಲ್ಲುಗಳು ಬಿಸಿ ಹೊಗೆಯ ಮೋಡಗಳನ್ನು ಕಾರುತ್ತಿದ್ದುವು. ಎಲ್ಲೆಲ್ಲಿಯೂ ನಿಶ್ಶಬ್ದ, ನೀರವ. ನನ್ನ ದಪ್ಪ ಮೆಟ್ಟುಗಳ ಟಪ್ ಟಪ್ ಸಪ್ಪಳ ಮಾತ್ರ ನನಗೆ ಕೇಳುತ್ತಿತ್ತು.

"ಸುನೋ ಸುನೋ........"

ಬಾಲಕನೊಬ್ಬ ಕಿರುಚುತ್ತಿದ್ದ. ಅಪಸ್ವರದಿಂದ ಕೂಡಿ ರಾಗರಹಿತವಾಗಿದ್ದರೂ, ಧ್ವನಿಯ ಪ್ರತಿಯೊಂದು ತರಂಗದೊಡನೆಯೂ ಆ ಹಾಡಿಗೆ ಸಹಜವಾದ ರಮ್ಯತೆಯು ತೇಲಿ ಬರುತ್ತಿತ್ತು; ಬಿಸಿಬೇಸಗೆಯ ಉರಿಬಿಸಿಲಿನ ನಿಶ್ಶಬ್ದತೆಯಲ್ಲಿ ಪ್ರತಿಧ್ವನಿತವಾಗುತ್ತಿದ್ದರೂ, ಆ ಹಾಡಿನಲ್ಲಿ ಕಲ್ಪಿಸಲ್ಪಟ್ಟ ಶಾಂತವಾದ ವಾತಾವರಣದ ತಂಪು ಮನಸ್ಸಿಗೆ ಬಂದು ತಟ್ಟುತ್ತಿತ್ತು.

ಶಬ್ದ ಬಂದ ಕಡೆಗೆ ನೋಡಿದೆ. ಮಿಲ್ಲಿನಿಂದ ಹರಿದು ಬಂದ ಕೊಳೆನೀರು ತಗ್ಗಿನಲ್ಲಿ ನಿಂತಿತ್ತು. ನೀರಿನ ಮಧ್ಯದಲ್ಲಿ ತನ್ನದೇ ತಾನಾಗಿ, ಸುತ್ತಲಿದ್ದ ಪ್ರಪಂಚವನ್ನೆಲ್ಲಾ ಒಂದು ಬಗೆಯ ತುಚ್ಛತೆಯ ಅರ್ಧನಿಮೀಲಿತ ದೃಷ್ಟಿಯಿಂದ ನೋಡುತ್ತಾ, ತಲೆಯನ್ನು ಮೇಲಕ್ಕೆತ್ತಿ ಬಿದ್ದುಕೊ... ಒಂದು ಮುದಿ ಎಮ್ಮೆ. ಅರ್ಧ ಮುಳುಗಿದ ಕರೀ ...ಯಂತಿದ್ದ ಅದರ ಬೆನ್ನಿನ ಮೇಲೆ, ಕರೀ ಶಿಲೆ... ಕಡೆದ ಪ್ರತಿಮೆಯ ಹಾಗೆ, ನಗ್ನ ಬಾಲಕನೊಬ್ಬ ಮ... ಸೂರ್ಯರಶ್ಮಿಯ ಝಳವನ್ನು ತಡೆಯಲಾರದೆ ... ತನ್ನ ಕೈಯಿಂದ ಕಣ್ಣುಗಳನ್ನು ಮರೆಮಾಡಿಕೊ... ಆಗಾಗ್ಗೆ ಕೊಳೆನೀರನ್ನು ಮತ್ತೊಂದು ಕೈಯಿಂದ ಮೈಮೇಲೆ ಎರಚಿಕೊಳ್ಳುತ್ತಾ, ಮತ್ತೊಮ್ಮೆ ಎ... ಕೋಡುಗಳೊಡನೆ ಆಟವಾಡುತ್ತಾ, ಕೇಕೆ ಹಾ... ಹಾಡುತ್ತಿದ್ದನು.

ಅವನ ಮೆಯ್ಯ ಪ್ರತಿಯೊಂದು ಭಾಗದಿಂದಲೂ ...ಸವು ಹೊರಸೂಸುತ್ತಿತ್ತು. ಆ ಆನಂದ ದೃಶ್ಯ... ನೋಡಿದ ಪ್ರತಿಯೊಬ್ಬನಲ್ಲಿಯೂ ಒಂದು ತರಹದ ...ದವು ಪ್ರತಿಬಿಂಬಿಸುತ್ತಿತ್ತು. ಮನಸ್ಸು ಎಷ್ಟೇ ಕ... ಮುಗುಳ್ನಗೆಯನ್ನು ತಡೆಯುವುದಕ್ಕಾಗುತ್ತಿರಲಿಲ್ಲ.

ದೊಡ್ಡವರು, ತಿಳಿದವರು, 'ಓಂ' ಎಂಬ ... ಅನಂತವಾದ ಆನಂದವಿದೆ ಎಂದು ಹೇಳುತ್ತಾರೆ.

ಎಮ್ಮೆಯ ಒರಟಾದ ಮೈಮೇಲೆ ಮಲಗಿ, ಕೊಚ್ಚೆನೀರಿನಿಂದ ಮೈ ತಣ್ಣಗೆ ಮಾಡಿಕೊಳ್ಳುತ್ತಿದ್ದ ಆ ಬಾಲಕನಿಗೆ ಸ್ವರರಹಿತವಾದ ಅರಚುವುದರಲ್ಲಿ ಮಹದಾನಂದವು ಸಿಕ್ಕಿತ್ತು.

೩. ತಾಯಿ, ಮಗು

ಮಗುವು ಹೊರಗಡೆ ಅಂಗಳದಲ್ಲಿ ಸೀಸದ ಕಡ್ಡಿಯೊಡನೆ ಆಟವಾಡುತ್ತಿತ್ತು. ತಾಯಿಯು ಒಳಗಡೆ ಅಡುಗೆಮನೆಯಲ್ಲಿ ಒಲೆಯನ್ನು ಹೊತ್ತಿಡುತ್ತಿದ್ದಳು. ಎಷ್ಟು ಹೊತ್ತಿಸಿದರೂ ಹೊತ್ತದು ಆ ಒಲೆ; ಹಸಿ ಕಟ್ಟಿಗೆ; ಹಾಳು ಹೊಗೆ ಊದಿದ ಕ್ಕಾಗೆಲ್ಲಾ, ಭುಸ್ಸೆಂದು ಕಣ್ಣು ಮೂಗುಗಳೊಳಗೆ ತೂರಿ ಬಿಟ್ಟು, ಕಣ್ಣು ಕತ್ತಲುಮಾಡಿಬಿಡುತ್ತಿತ್ತು. ಸಾಕಪ್ಪ ದೇವರೆ, ಹೆಂಗಸಾಗಿ ಏಕೆ ಹುಟ್ಟಿಸಿದಿಯಪ್ಪಾ—ಅನ್ನುವಂತಾಯ್ತು ತಾಯಿಗೆ.

ಮಗು ಸೀಸದ ಕಡ್ಡಿಯನ್ನು ನೆಟ್ಟಗೆ ನಿಲ್ಲಿಸಬೇಕೆಂದು ಅರ್ಧಗಂಟೆಯಿಂದಲೂ ಪ್ರಯತ್ನಪಡುತ್ತಿತ್ತು. ಎಷ್ಟೆಷ್ಟು ಹುಷಾರಿನಿಂದ ಯಾವ ಯಾವ ರೀತಿಯಲ್ಲಿ ಇಟ್ಟರೂ ಸರಕ್ಕನೆ ಬಿದ್ದುಬಿಡುವುದು. ಮಗುವಿಗೆ ನಿರಾಶೆಯಾಯಿತು. ಕಣ್ಣಲ್ಲಿ ನೀರುಬರುವಷ್ಟರ ಮಟ್ಟಿಗೆ ಬಂತು. ಅಷ್ಟು ಹೊತ್ತಿಗೆ ಸೀಸದ ಕಡ್ಡಿಯು ನೆಟ್ಟಗೆ ನಿಂತಿತು. ಮಗುವಿನ ಆನಂದಕ್ಕೆ ಪಾರವೇ ಇಲ್ಲ. ಕೇಕೆ ಹಾಕಿ ಚಪ್ಪಾಳೆ ತಟ್ಟಿ, "ಅಮ್ಮಾ" ಎಂದು ಕರೆಯಿತು.

ಅಡುಗೆಮನೆಯಲ್ಲಿದ್ದ ತಾಯಿಗೆ, ಮಗುವೊಂದನ್ನೇ ಅಂಗಳದಲ್ಲಿ ಬಿಟ್ಟುಬಂದಿದ್ದೇನೆಂಬ ಅರಿವಾಗಿ, ಗಾಬರಿಯಾಯಿತು. ಮಗುವಿನ ಕೂಗು ಕೇಳಿದ ತಕ್ಷಣವೇ ಊದುಗೊಳವಿಯನ್ನು ಅತ್ತಕಡೆ ಬಿಸಾಟಬಿಟ್ಟು, ಹೊಗೆ ತುಂಬಿದ್ದ ಅಡುಗೆ ಮನೆಯನ್ನು ಬಿಟ್ಟು ಹಾಗೆಯೇ ಮಗುವಿನ ಹತ್ತಿರಕ್ಕೆ ಓಡಿಬಂದಳು.

ಮಗುವು ಕೇಕೆ ಹಾಕಿಕೊಂಡು ನಗುತ್ತಿದ್ದುದನ್ನು ಕಂಡು ತಾಯಿಯ ಮುಖದಲ್ಲಿ ಸಂತಸದ, ಪ್ರೀತಿಯ ನಗೆಯು ಮೂಡಿತು. ಅಡುಗೆಮನೆ, ಕಣ್ಣು ಕತ್ತಲುಕಟ್ಟುವ ಹೊಗೆ, ಒಲೆ ಊದಿ ಊದಿ ಆಗಿದ್ದ ದಮ್ಮು, ಎಲ್ಲಾ ಮರೆತು ಹೋಯಿತು. ತಾನು, ತನ್ನ ಮಗು, ತಮ್ಮಿಬ್ಬರ ಆನಂದ ಮಾತ್ರ ಮನಸ್ಸಿನಲ್ಲುಳಿದುವು. ಮಗುವು ಕೈಚಾಚಿ 'ಅಮ್ಮಾ' ಎಂದು ತಾಯಿಯ ಸೊಂಟವೇರಿತು.

ತಾಯಿಮಕ್ಕಳ ಮುದ್ದಾಟವನ್ನು ನೋಡಲು, ಹೊಗೆಯು ಅಡುಗೆಮನೆಯನ್ನು ಬಿಟ್ಟು, ಊಟದಮನೆಗೆ ಬಂದು, ಅಲ್ಲಿಂದ ನಡುಮನೆಯನ್ನು ಸೇರಿ, ಅಂಗಳದಲ್ಲಿ ತಲೆಹಾಕಿತು!

೪. ತಂದೆ, ಮಗು

ಮಗುವು ರೈಲುಗಾಡಿಯಲ್ಲಿ ತಂದೆಯ ಪಕ್ಕದಲ್ಲಿ ಕೂತಿತ್ತು. ತಂದೆಯು ಕಿಟಕಿಯ ಪಕ್ಕದಲ್ಲಿ ಕುಳಿತು, ಒಂದು ಇಂಗ್ಲೀಷ್ ಪತ್ರಿಕೆಯನ್ನೋದುತ್ತಿದ್ದನು. ಮಗುವಿಗೆ ಎದ್ದುನಿಂತು, ಕಿಟಕಿಯಿಂದ ಹೊರಗೆ ನೋಡಬೇಕೆಂದಾಶೆ; ಆದರೆ ತಂದೆಗೆ ಓದುವುದರಲ್ಲಿ ಮಗ್ನತೆ. ಮಗು ಆತನ ಭುಜವನ್ನು ಹಿಡಿದುಕೊಂಡು ಎದ್ದು ನಿಂತಾಗಲೆಲ್ಲಾ, ತಂದೆಗೆ ಬೇಸರವಾಗಿ, ಮಗುವನ್ನು ಬಲಾತ್ಕಾರದಿಂದ ಕೂಡಿಸಿ ಬಿಡುವನು.

ಹೊರಗಡೆ ಪ್ರಕೃತಿಯು ಕ್ಷಣಕ್ಷಣಕ್ಕೂ ಬದಲ್ಲಾಯಿಸುತ್ತಾ, ತನ್ನ ವಿವಿಧ ವರ್ಣಗಳ ವಿಚಿತ್ರವನ್ನು ನೋಡುಬಾ ಕಂದು ಕೈಬೀಸಿ ಕರೆಯುತ್ತಿತ್ತು. ದೊಡ್ಡದೊಡ್ಡ ವೃಕ್ಷಗಳ ಝೊಂಯ್ ಎಂಬ ಶಬ್ದವು ಕ್ಷಣಕಾಲ ಜೋರಾಗಿ ಕೇಳಿ ಮರುಕ್ಷಣದಲ್ಲಿ ಅಡಗಿಹೋಗುತ್ತಿತ್ತು. ಏರುತಗ್ಗುಗಳುಳ್ಳ ದಿಬ್ಬಗಳು ಕಣ್ಣಮುಂದೆ ಹಾದು ಹೋಗುತ್ತಾ, ಹಾವಿನ ಹರಿದಾಟವನ್ನು ಮನಸ್ಸಿಗೆ ತರುತ್ತಿದ್ದುವು. ಹೊಲಗಳು, ಗದ್ದೆಗಳು, ತೋಟಗಳು, ತಮ್ಮ ಆಕರ್ಷಕವಾದ ಬಣ್ಣಗಳ ಬೆಡಗಿನಿಂದ, ಹಸುರುಬಣ್ಣದ ಚಾಪೆಗಳನ್ನು ಹಾಸಿದಂತೆ ಕಾಣುತ್ತಿದ್ದುವು. ತಂತಿಯ ಕಂಭಗಳು ಗಾಡಿಯು ಹೋದಹಾಗೆಲ್ಲಾ ಒಂದಾದಮೇಲೊಂದು ಬರುತ್ತಲೇ ಇದ್ದು, ಸಂತೋಷಸಹಿತವಾದ ಬೇಸರವನ್ನುಂಟುಮಾಡುತ್ತಿದ್ದುವು. ಗಾಡಿಯ ಘುಡಘುಡನೆಂಬ ಶಬ್ದವು, ಆಗಾಗ್ಗೆ ಬರುತ್ತಿದ್ದ ಸೇತುವೆ-ಕಾಲುವೆಗಳ ಬಳಿ ಆಗುತ್ತಿದ್ದ ಭೋ ಎಂಬ ಅಗಾಧ ನಿನಾದದೊಡನೆ ಬೆರೆತು, ಒರಟಾದರೂ ಉದ್ವೇಗಪ್ರೇರಿತವಾದ ಸಮರನಿನಾದದಂತಿತ್ತು.

ಇವೆಲ್ಲವೂ ಮಗುವಿನ ಮನಸ್ಸನ್ನು ಆಕರ್ಷಿಸದೆ ಇರಲಿಲ್ಲ. ಆದರೆ ತಂದೆಯ ಮುಖವನ್ನು ನೋಡಿ ಭೀತಿಗೊಂಡು, ಆತನ ಶರೀರದ ಮರೆಯಲ್ಲಿ ನಿಶ್ಶಬ್ದವಾಗಿ ಕುಳಿತಿರಬೇಕಾಗಿತ್ತು. ಯಾವುದೋ ಒಂದು ಕಾಲ್ಪನಿಕ ಕಥೆಯಲ್ಲಿ ಮಗ್ನ

ನಾದ ಆ ತಂದೆಗೆ, ಮಗುವಿಗೆ ಸಹಜವಾಗಿ ಅನಿಸಬೇಕಿದ್ದ ಆನಂದದಲ್ಲಿ ಎಷ್ಟು ಮೋಸಮಾಡಿದ್ದೇನೆಂಬುದು ಹೇಗೆ ಅರಿವಾಗಬೇಕು ?

ಮಗುವಿನ, ತನ್ನ ಕಣ್ಣು ಮನಗಳನ್ನು ತಣಿಸಿಕೊಳ್ಳಬಹುದೆಂಬಾಶೆ ಕುಗ್ಗುತ್ತ ಕುಗ್ಗುತ್ತ, ಹಾಗೆಯೇ ನಿದ್ದೆ ಬಂದಿತು.

ಸಮಂತಭದ್ರನ ಜನ್ಮಗ್ರಾಮವೂ ತಪೋಭೂಮಿಯೂ

ಲೇಖಕರು: ಶ್ರೀಮಾನ್ ಗ. ಹ. ಖರೆ, ಭಾರತ ಇತಿಹಾಸ ಸಂಶೋಧಕ ಮಂಡಳ, ಪುಣೆ

★

ಪ್ರಬುದ್ಧ ಕರ್ಣಾಟಕದ ಈಚಿಯ ಸಂಚಿಕೆಯಲ್ಲಿ (ಸಂಪುಟ ೧೯, ಸಂಚಿಕೆ ೧) ಶ್ರೀಮಾನ್ ದ. ರಾ. ಬೇಂದ್ರೆ ಯವರು "ಸಮಂತಭದ್ರನೆ 'ಶ್ರೀವಿಜಯ' ನಿರಬಹುದೇ?" ಎಂಬೊಂದು ಲೇಖನವನ್ನು ಬರೆದಿದ್ದಾರೆ. ಆದರಲ್ಲಿ ಸಮಂತ ಭದ್ರನು ಭೀಮರಥೀ ಕೃಷ್ಣವೇಣೀ ಮಧ್ಯಪ್ರದೇಶದ ಉತ್ಕಲಿಕಾ ಗ್ರಾಮದಲ್ಲಿ ಹುಟ್ಟಿದನೆಂದೂ ಮಣುವಕ ಹಳ್ಳಿಯಲ್ಲಿ ತಪಸ್ಸು ಮಾಡಿದನೆಂದೂ ಗೃಹೀತ ಹಿಡಿಯ ಲಾಗಿದೆ. ಈ ಸಂಗತಿಯನ್ನು ಅವರು ಕರ್ಣಾಟಕ ಕವಿ ಚರಿತೆಯ ಪ್ರಥಮ ಭಾಗದಲ್ಲಿ (ಪುಟ ೨) ಉದ್ಧೃತವಾದ ರಾಜಾವಳೀ ಕಥೆಯ ಅವತರಣಿಕೆಯಿಂದ ತೆಗೆದುಕೊಂಡಿದ್ದಾರೆಂಬುದು ಸ್ಪಷ್ಟವಿದೆ. ರಾಜಾವಳೀ ಕಥೆಯ ಕರ್ತೃ ನಾದ ದೇವಚಂದ್ರನು ಪ್ರಸಿದ್ಧ ಸರ್ವೆಯರನಾದ ಕೊಲೆನ ಮ್ಯಾಕೆಂಝಿಯ ಕೈಕೆಳಗೆ ಕೆಲಸಮಾಡುತ್ತಿದ್ದನು ಮತ್ತು ಲಕ್ಷ್ಮೀನಿಯ ಇಚ್ಛೆಯಲ್ಲಿ ರಾಜಾವಳೀ ಕಥೆಯೆಂಬ ಗ್ರಂಥ ವನ್ನು ರಚಿಸಿದನು.* ಅವನು ಸಮಂತಭದ್ರನ ಚರಿತ್ರಾಂಶವನ್ನು ಯಾತರ ಆಧಾರದಿಂದ ಕೊಟ್ಟನೆಂಬುದು ಸ್ಪಷ್ಟವಿಲ್ಲ. ದೇವಚಂದ್ರನ ವಿದ್ವತ್ತೆಯನ್ನೂ ಅವನ ಮತ್ತು ಸಮಂತಭದ್ರನ ಕಾಲಗಳ ನಡುವಿನ ಅಂತರವನ್ನೂ ವಿಚಾರಿ ಸಿದಾಗಿ ಈ ಸಂಗತಿಯನ್ನು ಎಷ್ಟರ ಮಟ್ಟಿಗೆ ನಂಬ ಬೇಕೆಂಬುದೂ ವಿವಾದಾಸ್ಪದವಾಗಿ ತೋರುತ್ತದೆ. ಆದರೆ ಆ ಬಗೆಗೆ ನಾನೇನನ್ನೂ ಹೇಳಲು ಬಯಸುತ್ತಿಲ್ಲ. ಮೇಲಣ ಅವತರಣಿಕೆಯಲ್ಲಿ ಬಂದ ಉತ್ಕಲಿಕಾ ಮತ್ತು ಮಣುವಕ ಹಳ್ಳಿ ಎಂಬ ಗ್ರಾಮಗಳು ಎಲ್ಲಿರಬಹುದು ಎಂಬುದನ್ನು ಸೂಚಿಸುವುದೆ ಈ ಟಿಪ್ಪಣಿಯ ಉದ್ದೇಶವಾಗಿದೆ. ನನ್ನ ಅನುಮಾನವು ಸತ್ಯವೊ ಅಸತ್ಯವೊ ಎಂಬುದು ಹೆಚ್ಚಿನ ಸಂಶೋಧನವನ್ನೆ ಅವಲಂಬಿಸಿದೆ.

ಈ ಗ್ರಾಮಗಳು ಭೀಮಾ ಕೃಷ್ಣಾ ನದಿಗಳ ಸಂಗಮದ ಹತ್ತಿರ ಮತ್ತು ಅಂತರ್ವೇದಿಯಲ್ಲಿ ಎಲ್ಲಿಯಾದರೂ ಇರ ಬಹುದೆಂಬ ತಿಳಿವಳಿಕೆಯಿಂದ, ಸೂಕ್ಷ್ಮ ನಕ್ಷೆಗಳ ಸಹಾಯ ದಿಂದ ಆ ಪ್ರದೇಶವನ್ನು ಚೆನ್ನಾಗಿಯೆ ಪರೀಕ್ಷಿಸಿದೆನು. ಆದರೆ ಆ ಹೆಸರುಗಳೊಡನೆ ಹೋಲಿಕೆಯುಳ್ಳ ಊರುಗಳು ನನಗಂತೂ ತೋರಿಬರಲಿಲ್ಲ. ಆದರೆ ವಿಜಾಪುರ ಜಿಲ್ಹೆಯ ಬಾಗೇವಾಡಿ ತಾಲೂಕಿನಲ್ಲಿ ಉಕ್ಕಳಿ ಇಲ್ಲವೆ ಉಕಳಿ ಮತ್ತು ಮಾನಗೋಳಿ ಎಂಬೆರಡು ಊರುಗಳು ಮೇಲಿನ ಊರುಗಳ ಹೆಸರುಗಳೊಡನೆ ಒಳ್ಳೆ ಸಾದೃಶ್ಯವನ್ನು ಪಡೆದಿವೆ. ಉತ್ಕಲಿಕಾ ಎಂಬುದು ಉಕ್ಕಲಿಆ, ಉಕ್ಕಲೀ, ಉಕ್ಕಲಿ, ಉಕ್ಕಳಿ ಎಂಬ ಅನುಕ್ರಮದಲ್ಲಿ ಉಕ್ಕಳಿ ಅಥವಾ ಉಕಳಿ ಎಂಬ ರೂಪವನ್ನು ಸಹಜವಾಗಿ ಪಡೆಯಬಹುದಾಗಿದೆ. ಉಕ್ಕಲಿ ಎಂಬ ರೂಪವು ಶಿಲಾಲೇಖದಲ್ಲಿಯೂ ದೊರಕುತ್ತದೆ.† ಅಥವಾ ಉಕ್ಕಳಿ ಶಬ್ದದ ಸಂಸ್ಕೃತೀಕರಣವೆ ಉತ್ಕಲಿಕಾ ಎಂದಿರಬಹುದು. ಮಾನಗೋಳಿಯ ಸಂಸ್ಕೃತ ರೂಪವು ಮಾಣಿಕ್ಯವಲ್ಲೀ ಇಲ್ಲವೆ ಮಾಣಿಕ್ಯವಳ್ಳೀ ಮತ್ತು ಕನ್ನಡ ರೂಪವು ಮಾಣಿಂಗವಳ್ಳಿ ಇಲ್ಲವೆ ಮಾಣಿಗವಳ್ಳಿ ಎಂದಿದೆ. ಆದರೆ ದೇವಚಂದ್ರನಿಗೆ ಶಿಲಾ-ತಾಮ್ರಶಾಸನಗಳಲ್ಲಿ ದೊರೆವ ಈ ಹೆಸರುಗಳು ಗೊತ್ತಿರಲೇಬಹುದೆಂದು ನಿರ್ಧಾರ ವಾಗಿ ಹೇಳಲುಬಾರದು. ಆದುದರಿಂದ ಅವನು ಮಾನ ಗೋಳಿಯ ರೂಪವನ್ನು 'ಮಣುವಕಹಳ್ಳಿ'ಯೆಂದು ಮಾರ್ಪ ಡಿಸಿರಬಹುದು. ಉಕ್ಕಳಿಯಿಂದ ಉತ್ತರಕ್ಕೆ ಸುಮಾರು ೪೦ ಮೈಲು ಅಂತರದಲ್ಲಿ ಭೀಮಾನದಿಯೂ ದಕ್ಷಿಣಕ್ಕೆ ಸು. ೨೪ ಮೈಲು ಅಂತರಕ್ಕೆ ಕೃಷ್ಣಾನದಿಯೂ ಹರಿಯುವುದ ರಿಂದ ಮತ್ತು ಉಕ್ಕಳಿ-ಮಾನಗೋಳಿಗಳ ನಡುವಿನ ಅಂತ ರವು ಬರಿ ೭ ಮೈಲು ಮಾತ್ರ ಇರುವುದರಿಂದ ಎರಡೂ ಗ್ರಾಮಗಳು ಭೀಮಾ ಕೃಷ್ಣಾ ನದಿಗಳ ನಡುವಿನ ಪ್ರದೇಶ ದಲ್ಲಿ ಅಥವಾ ಅಂತರ್ವೇದಿಯಲ್ಲಿ ಎಣಿಸಲ್ಪಡಲು ಅಡ್ಡಿ ಯಿಲ್ಲ. ಈ ಊರುಗಳಿಗೆ ಹೋಗಿ ಸ್ಥಳೀಯ ಲೇಖ, ದಂತ ಕಥೆ, ಮಾಹಾತ್ಮ್ಯ, ಶಿಲ್ಪಾದಿಗಳನ್ನು ಸಂಶೋಧಿಸಿದರೆ ಈ ಅನುಮಾನದ ಮೇಲೆ ಹೆಚ್ಚಿನ ಪ್ರಕಾಶ ಬೀಳಬಹುದಾಗಿದೆ.

---

*ಕರ್ಣಾಟಕ ಕವಿಚರಿತೆ: ಖಂಡ ೩, ಪುಟ ೧೪೭, ೧೪೮.

† ಎಪಿಗ್ರಾಫಿಯಾ ಇಂಡಿಕಾ ೬--೨೬. ಎಪಿಗ್ರಾಫಿಯಾ ಇಂಡಿಕಾ ೬+೧೬-೧೯,೨೬,೩೦.

ಅಳಿಯಲಾರದ ನೆನಹು

ಅಳಿಯಲಾರದ ನೆನಹು ಜೀವಜೀವಾಳದಲಿ
ಬಲವಾಗಿ ಬೇರೂರಿ ನಿಂದು,
ಗಳಿಗೆ-ಗಳಿಗೆಗೆ ಬಾಳುವೆಯ ದಾರಿಯನು ತಡೆದು
ಸೆಳೆದಪುದು ಭೂತದೆಡೆಗಿಂದು.

ಕಳೆದ ಬಾಳುವೆಯ ನಲ್ಗನಸಿದೋ ಜೀವನದ
ಹೊಳೆಯ ಮೊದಲಿಂ ತುದಿಯ ವರೆಗು,
ಅಲೆಯಾಗಿ ಸುಳಿಯಾಗಿ ಸುಳಿವ ಮೆಲ್ಲೆಲರಾಗಿ
ಬಳಸಿಹುದು ಬಹುರೂಹುವಡೆದು.

ಭಾವವೀಣೆಯ ತಂತಿಯನು ಮಿಾಂಟಿದೊಡೆ ಕಳೆದ
ಜೀವನವೆ ಬಹುರಾಗಗೊಂಡು,
ತೀವಿ ಹರಿವುದು ಮನವನಳಲಿಪುದು ನಲಿಯಿಪುದು
ಅವುದೋ ನವರಸದಿ ನಾಂದು.

ಸುಖದುಃಖಗಳ ರಾಗಭೋಗಗಳ ನೇಹಗಳ
ಸಕಲಾನುಭೂತಿಗಳು ಕರಗಿ,
ಕರಗಿ ಸಮರಸವಾಗಿ ಬಂದೆದೆಯ ಕಂದರದಿ,
ಮೊರೆಯುತಿಹುವೊಂದೆ ತಾನದಲಿ !

ಎನಿತೆನಿತೊ ಹಗಲಿರುಳು ಸವೆದ ಕಿರುದಾರಿಯಲಿ
ನೆನಹೆಂಬ ಕಿರುಸೊಡರ ಹಿಡಿದು,
ಮನದ ಮಂದಿರಕಳಿದ ಬಾಳುವೆಯ ಚಿರವಿನೂ-
ತನ ಚಿತ್ರಗಳು ಥೀಂಕಿಡುವುವು.

ಸಂಜೆಯಾಗಸದ ನವರಾಗರಂಜಿತ ಮೇಘ
ಪುಂಜದಂತಿವು ಚಣಕೆ ಚಣಕೆ
ಒಂದೊಂದು ರೂಪದಲಿ, ಒಂದೊಂದು ರಾಗದಲಿ
ಬಂದು ಸೋಂಕುವುವೆದೆಯ ತಳಕೆ.

ಮುಂದುಮುಂದಕೆ ಹಾರಲಾರದೆನ್ನೆದೆದುಂಬಿ,
ಹಿಂದುಹಿಂದಕೆ ಹಾರುತಿಹುದು.
ಹಿಂದಿನಿರವಿನ ಬಾಡಿಬಿದ್ದ ಹೂವಿನ ಕೆಲದಿ
ನಿಂದು ನಿರುಕಿಸಿ ಚೀರುತಿಹುದು.

ಎಳೆಹರೆಯವೆಂಬ ಸಂತಸದ ಹೊನಲಡಗುತಿರೆ
ಅಳಿಜವ್ವನದ ಮರುವಿನೊಳಗೆ.
ಕಳೆಯುಡುಗಿ ಹಡಿಲಾಗಿ ಬಗೆಯಳಲ ಮಡಿಲಾಗಿ
ತಳರುತಿದೆ ಮೃತ್ಯುವಿನ ತಡಿಗೆ.

ಹರಿಯಲಾರದ ಬಾಳ್ವೊನಲ ಜಲವಿದೊ ಕೊಳೆತು
ಹರಡುತಿದೆ ದುರ್ಗಂಧವಿಂದು.
ಮರಣವೆಂಬಾತಪನ ಕಿರಣವಿದ ಶೋಷಿಸದೆ
ಪೆರತೆಂತು ಮುಕ್ತಿಯಿದಕಹುದು ?

ಮೊಗೇರಿ ಗೋಪಾಲಕೃಷ್ಣ ಅಡಿಗ

ಮೂರು ತೆರ

[ಚೆಲುವನ್ನು ಕಂಡೂ ಅನುಭವಿಸುವ ತಿಳಿವಿಲ್ಲದೆ ಸಾಗುವ ಗುಂಪೊಂದು, ಕಾಣುವ ಶಕ್ತಿ ಇಲ್ಲದುದಕ್ಕಾಗಿ ಅನುಭವಿಸದಿರುವ ಗುಂಪೊಂದು, ಕಂಡೂ ಕಾಲೇಳದೆ ನೆಲಹಿಡಿಯುವವರ ಗುಂಪೊಂದು —ಹೀಗೆ ಮೂರು ತೆರಗಳನ್ನು ಚಿತ್ರಿಸುವ ಭಾವಗೀತ.]

೧

ಪಚ್ಚೆಯ ಪಯರದು ಹರಡಿದೆ ಮುಂದೆ;
ಚಚ್ಚರದಿಂದಡಿಯಿಡುವುದೆಯೊಂದೆ
ಎಚ್ಚರ; ಕೊಳವಿಯನೂದುತೆ ಹಿಂದೆ
ಬರುತಿಹ ಕುರುಬನು; ನಡೆದಿದೆ ಮುಂದೆ
ಕುರಿಗಳ ಕುರಿಗಳ ಕುರಿಗಳ ಮಂದೆ.

೨

ಹಧುಳವ ಕರೆಯುವ ಚೆಲುವಿಹುದಿಲ್ಲ;
ಹೃದಯವನರಳಿಪ ನೋಟವಿದಿಲ್ಲ;
ಕದವನು ತೆರೆದಿದೆ ಸ್ವೈರೆಗಿಲ್ಲ;
ಅರಿಯದೆ ತೊರೆಯುತೆ ನಡೆದಿದೆ ಹಿಂಡು
ಕುರುಡರ ಕುರುಡರ ಕುರುಡರ ದಂಡು.

೩

ದೂರದ ಕರೆಯೋ ಸೆಳೆಯುತಲಿಹುದು;
ತೀರದ ಚೆಲುವೋ ಕಳೆಯುತಲಿಹುದು;
ಏರುವ ದಾರಿಯು ತಿಳಿಯುತಲಿಹುದು;
ಕರೆಯುತೆ ಜನಗಳ, ಬರದಿರೆ ಕಂಡು
ಹಳಿಯುತೆ ಕುಳಿತಿದೆ ಹೆಳವರ ಹಿಂಡು.

—ಆರ್. ವಿ. ಕುಲಕರ್ಣಿ, ಗದುಗು

ಭೀಕರ ಪಾರುಪತ್ಯ

ಕತೆಗಾರ್ತಿಯರು: ಸೌ. ಶ್ಯಾಮಲೆ

ದಂಡಿನ ರಾಜ್ಯದ ಭೀಕರ ಸನ್ನಿವೇಶದಲ್ಲಿಯ ಭೀಷಣ ಘಟನೆಯೊಂದು. ಮೋಟಾರ ಡ್ರಾಯ್ವರ ರಾಮಜಿಯು ಹದಿನಾಲ್ಕು ಹೆಡೆಯ ಹಾವಿಗೆ ಹಾಲೆರೆದುದರ ಫಲವನ್ನು ಅನುಭವಿಸಬೇಕಾಗಿ ಬಂದಿತು. ಹದಿನಾಲ್ಕು ಜನ 'ಗೋರಾ ಸೋಜಿರ'ರಿಗೆ ಒಂದೇ ದಿನ ತನ್ನ ಮುದ್ದು ಹೆಂಡತಿಯನ್ನು ಒಪ್ಪಿಸುವ ಆಪತ್ತಿಯೊದಗಿತು. ಅದನ್ನು ತಪ್ಪಿಸಿದನು ಮಾತ್ರವಲ್ಲ, ಸೇಡನ್ನೂ ಸರಿಯಾಗಿಯೇ ತೀರಿಸಿಕೊಂಡ! ಕೆರುಳು ಕೊರೆಯುವ ಆ ದಾರುಣ ವರ್ತಮಾನವನ್ನು ಓದಿಯೇ ಅರಿಯಬೇಕು.

"ಲಕ್ಷ್ಮೀ, ಏನಾಗೇತಿ ಹೇಳು. ಬರೇ ಅತ್ತರ ನಾಯೇನಂತ ತಿಳೀಲಿ? ಅವ್ವ ಏನರ ಅಂದ್ಲೋ, ಅಪ್ಪ ಏನರ ಮಾತಾಡಿದ್ನೋ, ಇಲ್ಲಾ ಹುಡುಗರೇನಾರ ಬೇಡಿ ಕಾಡಿದವೋ....?"

"ಇಲ್ಲಾ, ನಿಮ್ಮ ತಾಯಿಾ-ತಂದೀ ಅಂದ್ರ ನನ್ನ ಹಡೆದ ತಾಯಿಾ-ತಂಡೀ ಇದ್ಧಾಂಗs ಅದಾರ ನನ್ನ ಸಂಗಾಟ. ಹುಡುಗರೂ ಅಂಥಾ ಹಿರೇರ ಮೊಮ್ಮಕ್ಕಳು....ಭಾಳ ಸನ್ಮಂತಾಗಿ ಅದಾರ. ಯಾರೂ ಏನೂ ಮಾಡಿಲ್ಲಾ ನನಗ. ಆದರ....ಆದರ...."

"ನಿಂದರ್ತಿ ಯಾಕ ಮತ್ತ! ಆದರ—ಮುಂದೇನಾತೂ ಹೇಳು. ರಾತ್ರಿ ಭಾಳಾಗತೈತಿ, ನಿದ್ದೀ ಮಾಡೂನು, ಗಡಾನ ಎದ್ದು ಮತ್ತ ನನಗ ಸರ್ವೀಸ ಮ್ಯಾಗ ಹಾಜರಾಗಬೇಕು."

ಕಣ್ಣೊರಸಿಕೊಳ್ಳುತ್ತ ಲಕ್ಷ್ಮಿಯು, "ಇಲ್ಲಾ, ದಿನಾ ಬರೂಹಾಂಗ ಇಂದೂ ಅವರು ಬಂದಿದ್ರೂ, ಆಟ ಚಾ ಮಾಡಿಕೊಟ್ಟೇ .... ಈಗ ಐದಾರು ದಿನದಿಂದನೂ, ಎಲ್ಲಾರೂ ನನಗ ಕಣ್ಣೂ ಹುಬ್ಬೂ ಚಿವುಟತಿದ್ರಂತ ನಿನ್ನೇ ನಾ ನಿಮಗ ಹೇಳ್ಳಿಲ್ಲs!—ಇಂದ ಆದರದs ಇನ್ನಟ ಜೋರಾವರಿ ನಡಿಸಿ, ಪಿಸಿಪಿಸಿ ನಗೂದು, ನನಗ ನೋಡೂದು ಹೀಂಗ ಮಾಡಿಕೊಂತs,—ಅವರೆಲ್ಲಾರು ಹೇಳಿದಾಂಗ ನಾನು ನಾಳೆ ರಾತ್ರಿ ಕೇಳದಿದ್ರ ನನ್ನ ಮಕ್ಕಳೂಮುರಿ, ಮನಿಯಂತ ಮನಿಯಲ್ಲಾ, ನಿಸ್ಸಂತ ಮಾಡತೇವಂತ ಅಂಜಿಕೀ ಹಾಕಿ ಹೋಗ್ಯಾರು. ಇದಕೇನ ಮಾಡಲಿ? ನಾನs ಜೀಂವಾ ಕೊಟ್ರ, ಬೇಕಾದೀತು; ನನ್ನ ಮಾನಾ ಎಲ್ಲಾಕ್ಕೂ ಹೆಚ್ಚಿಂದೂ. ಮುಂದ ನೀವೇನೋ, ನಿಮ್ಮ ಹಡದವರೇನೋ, ನಿಮ್ಮ ಮಕ್ಕಳೇನೋ...." ಮಾತು [...] ದಾಗಿ ಬಿಕ್ಕಿಬಿಕ್ಕಿ ಅಳಹತ್ತಿದಳು; ದುಃಖ ಮೇ[...] ಕಣ್ಣು ಕತ್ತಲುಗೂಡಿ ಬಿದ್ದುಬಿಟ್ಟಳು.

"ಏನು? ನಾಳೆ ಒಂದs ರಾತ್ರಿಯೊಳಗ ಹದಿನಾಕು [...] ರಾಕ್ಷಸಗೋಳ ಹೇಳಿದಾಂಗ ಕೇಳಬೇಕs? ಯಾ[...] ಲಕ್ಷಮೆ? ನನ್ನ ಹೇಣತೆ? ಈಕಿ ನಾಳೆ ರಾತ್ರಿ ಹದಿ[...] ಜನರ ಸ್ವಾದೀನಾ?....ಆಂ!...."

ರಾಮಜಿಯು ದಂಗುಬಡಿದು ಹೋದನು. ಮು[...] ಮೇಲೆ ಪ್ರೇತಕಳೆಯು ಮೂಡಿತು. ಹೆಂಡತಿಯ ಬಾ[...] ಕೇಳಿದ ಒಂದೇ ವಾಕ್ಯವು ಅವನ ಕಿವಿಯಲ್ಲಿ ಕಾದ [...] ವನ್ನು ಸುರುವಿದಂತಾಯಿತು. ರೊಚ್ಚು ಹೆಚ್ಚಾ[...] ತಳಮಳವು ತಾಳದಾಯಿತು. ಕೂತಹಾಗೆಯೆ ಹಾ[...] ಮೇಲೆ ಕುಸಿಬಿದ್ದನು.

* * *

ದಂಡಿನ ರಾಜ್ಯದ ದಿನಗಳವು! ಶೋಕಾಪುರದಲ್ಲಿ [...] ಕಾನೂನು ತಾಂಡವವಾಡುತ್ತಿದ್ದಿತು. ಊರವರು ಹ[...] ಹೋಗುವಂತಿಲ್ಲ, ಹೊರಗಿನವರು ಊರೊಳಗೆ ಬರು[...] ಯಾರೂ "ಗಾಂಧೀಟೊಪ್ಪಿಗೆ" ಗಳನ್ನು ಹಾಕು[...] ಯಾವ ಬಗೆಯ 'ಚಳವಳಿ'ಯನ್ನೂ ಮಾಡುವಂತಿಲ್ಲ[...] ಯಲ್ಲಿ ಒಂಬತ್ತರ ಮೇಲೆ, ಯಾವ ಕಾರಣದಿಂದಲೇ[...] ಯಾರೂ ಬೀದಿಯಲ್ಲಿ ಅಡ್ಡಾಡುವಂತಿಲ್ಲ;—ಯಾ[...] ಯಲ್ಲಿ ಸತ್ತರೂ ಕೂಡ ಮರುದಿನ ಬೆಳಗಾಗುವ ವರೆ[...] ವನ್ನು ಹೊರಕ್ಕೆ ಹಾಕುವಂತಿಲ್ಲ! 'ಗೋರಾ ಸೋ[...] ಹೆಗಲ ಮೇಲೆ ತುಂಬಿದ ತುಬಾಕಿಗಳನ್ನು ಚೆಲ್ಲಿ[...] ಸೊಂಟಕ್ಕೆ ಪಿಸ್ತೂಲುಗಳನ್ನು ನೇತುಬಿಟ್ಟುಕೊಂಡು [...]

ನ್ನೆಲ್ಲಾ ಸುತ್ತಾಡುವರು! ಚಹಾ-ಚುಟ್ಟಾ, ಸೋಡಾ-ಪಾನಪಟ್ಟಿ ಅಂಗಡಿಯವರು ಮೊದಲ್ಗೊಂಡು ಸ್ಟೇಶನರೀ-ಜವಳೀ ಅಂಗಡಿಯವರ ವರೆಗೂ ಇವರ ಕೈಹಿಡಿಯುವವರು ಯಾರೂ ಇಲ್ಲ. ಎಲ್ಲಿ ಯಾವಾಗ 'ಘುಬ್' ಎನ್ನಿಸುವರೋ ಎಂಬ ಭೀತಿ. ಇವರೆಲ್ಲರೂ ಚಕ್ಕಂದದಿಂದ ವ್ಯಾಪಾರ ಮಾಡಿದಾಗ ರೊಕ್ಕ ಕೊಟ್ಟರೂ ಸರಿಯೇ, ಇಲ್ಲವಾದರೂ ಸರಿಯೇ! ಕೊಟ್ಟರೆ ಕೊಟ್ಟೇಕೊಡುವರು, ಬಿಟ್ಟರೆ ಬಿಟ್ಟೇಬಿಡುವರು! ಅವರ ಮನೋಲಹರಿಯನ್ನು ಯಾರು ಬಲ್ಲರು? ಅವರ ಅಪಕಾರಕ್ಕೂ ಮಿತಿಯಿಲ್ಲ, ಉಪಕಾರಕ್ಕೂ ಮಿತಿಯಿಲ್ಲ. ಒಂದೊಂದು ಸಲ ಹಣ್ಣಿನಂಗಡಿ ಸಾಲಿನ ಲೂಟಿಯೇ ಲೂಟಿ. ಪಿಟ್ಟೆನ್ನುವ ಧೈರ್ಯ ಯಾರಿಗೂ ಇಲ್ಲ. ಒಮ್ಮೊಮ್ಮೆ ರೊಕ್ಕ ಬಂತು....ಲೆಕ್ಕವಿಲ್ಲದಷ್ಟು ಬಂತು! ಹೋಯಿತು....ಹೋಗಿಯೇ ಬಿಟ್ಟಿತು! ಒಂದೊಂದು ಸಲ ಚಂದ ಚಂದ ಮಕ್ಕಳನ್ನು ಎತ್ತಿಕೊಂಡು ಹೋಗಿಬಿಡುತ್ತಿದ್ದರು. ತಾಯಿತಂದೆಗಳು ಹೌಹಾರಿ ಹೋಗಿರಬೇಕು.... ಅಷ್ಟರಲ್ಲಿ ಸೂಟು-ಬೂಟು-ಹ್ಯಾಟುಗಳಿಂದ ಸಿಂಗಾರಾಗಿ, ಕೈಯಲ್ಲಿ ಕರ್ಪುರದ ಗೊಂಬೆಗಳನ್ನೂ ಚಾಕೊಲೇಟಿನ ಪೊಟ್ಟಣಗಳನ್ನೂ ಹಿಡಿದುಕೊಂಡು ಕುಲುಕುಲು ಕುಣಿದಾಡುತ್ತ ಬರುವವು ಅವರ ಪ್ರೀತಿಯ ಪುತ್ತಳಿಗಳು! ಇನ್ನೇನು....ಊರಲ್ಲಿಯ 'ಒಂದಾಣೆ ನಾಲ್ಕಾಣೆ ಮಾಲೆ'ಗಳಿಗೆ—ಅಗ್ಗದ ದೇವದಾಸಿಯರಿಗೆ ಮಾತ್ರ ಒಳ್ಳೆ ತೇಜಿ ಬಂದಿತ್ತು. ಹೆಚ್ಚೇನು ಹೇಳುವುದು? ಶೋಕಾಪುರವೆಂದರೆ ಬೇನೆಯ ಪಿಡುಗಿನ ಊರಿನಂತೆ ಭೌಂಗುಡುತ್ತಲಿದ್ದಿತು. ಸಂದಿನ ಅಮಾವಾಸ್ಯೆಯ ಮಧ್ಯರಾತ್ರಿಯ ಸ್ಮಶಾನದಂತೆ ರಣಗುಡುತ್ತಲಿದ್ದಿತು. ಶೋಕಾಪುರವೆಂದರೆ ಅಂದಿನ ಕಾಲದ ಮಟ್ಟಿಗೆ "ಶೋಕಾಪುರ"ವೇ!

* * *

ಇಂತಹ ಪರಿಸ್ಥಿತಿಯಲ್ಲಿ, ಅದೇ ಶೋಕಾಪುರದಲ್ಲಿ, ಒಬ್ಬ ಸಾಮಾನ್ಯ ಮೋಟಾರ ಡ್ರಾಯವ್ಹರನ ಮನೆಯಲ್ಲಿ, ರಾತ್ರಿಯ ಹನ್ನೆರಡೂವರೆ ಗಂಟೆಗೆ, ಮೇಲೆ ಹೇಳಿದಂತೆ ಸಂಭಾಷಣೆ ನಡೆದಿದ್ದಿತು. ರಾಮಜಿಯು ಬಹಳ ಒಳ್ಳೆಯ ಡ್ರಾಯವ್ಹರನು. ಇಡಿಯ ಊರ ಜನರಿಗೆಲ್ಲ ಆತನೂ ಆತನ ಮನೆಯ ಜನರೂ ಬೇಕಾದವರಿದ್ದರು. ಮನೆಯಲ್ಲಿ ಮುಪ್ಪಿನ ತಾಯಿತಂದೆಗಳು, ಚಿಕ್ಕಚಿಕ್ಕ ನಾಲ್ಕೈದು ಮಕ್ಕಳು, ಹೆಸರಿಗೆ ತಕ್ಕಂತೆ ಚಲುವೆಯಾದ ಆತನ ಅಚ್ಚುಮೆಚ್ಚಿನ ಹೆಂಡತಿ ಲಕ್ಷ್ಮಿಯು. ಮನೆಯು ತೀರ ಸಣ್ಣದು. ಅವರ ಅರಿವೆ—ಅಂಚಡಿಗಳೂ ಬಡವರಿಗೊಪ್ಪುವಂತಹವೇ ಇದ್ದು ಜಳಜಳವಾಗಿದ್ದವು. ಆದರೆ ಲಕ್ಷ್ಮಿಯ ಮೈಮೇಲಿರುವ ಹಳೆಯ ಪದ್ಧತಿಯ ಬಂಗಾರದ ವಸ್ತ್ರವಡವೆಗಳನ್ನು ನೋಡಿದರೆ, ಅವಳಾರೋ ಸಿರಿವಂತರ ಮನೆಯ ಸೊಸೆಯಿರಬೇಕೆನಿಸುವ ಹಾಗಿತ್ತು. ಆ ಊರ ಜನರೆಲ್ಲ "ರಾಮಜೀ ಮನೀ ಒಳಗ ಇಕ್ಕೇರಿ ವರಾ ತುಂಬಿದ ನಾಲ್ಕು ಮಡಿಕೇನೋ ಅವಽ ಅಂತ. ಈಗ ನಾಲ್ಕು ತಲೀಯಿಂದ ಅವರಲ್ಲಿ ದುಡ್ಡು ಹತ್ತೇದ" ಎಂದು ಗುಣುಗುಟ್ಟುತ್ತಿದ್ದರಂತೆ. ರಾಮಜಿಗೆ ಯಾರಾದರೂ ನಗೆಯಾಡಿದರೆ "ಸುಳ್ಳು ಬಿಡ್ರ್ಯೋ, ಒಂದಕ್ಕ ನಾಕು ಹುಟ್ಟಿಸಿ ಮಾತಾಡೋವರ್ನ ನಂಬಬ್ಯಾಡ್ರಿ" ಎನ್ನುವನು. ಅದಕ್ಕೆ ಅವರಲ್ಲೊಬ್ಬ ಗಟ್ಟಿಗ ಗೆಳೆಯನು "ಒಂದರಽ ಇರಬೇಕಂತೊಪ್ಪೀಯಾ!" ಎನ್ನುವನು. ಆಗ ರಾಮಜಿಯು "ಇರಲಿರಲಿ ಬಿಡು, ಇಕಾ ಚುಟ್ಟಾ ಸೇದು". ಎಂದು ಆ ಮಾತನ್ನೇ ಮರೆಮಾತಿಗೆ ಹಾಕಿಬಿಡುತ್ತಿದ್ದನು. ಅದು ಹೇಗಿದ್ದರೂ ಕುಳಿತುತಿನ್ನುವದು ಜನರೂಢಿಗೆ ತಕ್ಕುದಲ್ಲವೆಂದು, ರಾಮಜಿಯು ಮೋಟಾರ ಸರ್ವ್ಹೀಸಿನಿಂದ ಉದರನಿರ್ವಾಹ ನಡೆಸಿದ್ದನು. "ಡ್ರಾಯವ್ಹರ"ನ ಪಟ್ಟವನ್ನೇರಿದ ಮೇಲೆ ರಾಮಜಿಯು ಮಿತಿಮೀರಿ ಕುಡಿಯಲಿಕ್ಕೆ ಕಲಿತಿದ್ದನು. 'ಸಮಾನಶೀಲವ್ಯಸನೇಷು ಸಖ್ಯಂ' ಎಂದು ಹೇಳುತ್ತಾರೆ. ಇದರಲ್ಲಿಯ 'ಶೀಲ' ಎಂಬುದನ್ನು ಹಾರಿಸಿಬಿಡಬೇಕು. ಒಂದೇ ವ್ಯಸನವಿದ್ದಲ್ಲಿಯೆ ನಿಜವಾದ ಗೆಳೆತನವಿರುತ್ತದೆ. ಅಂತೂ ಬೇರೆಯವರಿಗೆ ಹಸಿದ ಹುಲಿಗಳಂತೆ ತೋರುವ 'ಸೋಜಿರರು' ಇವನಿಗೆ ಸಾದು ಆಕಳಿನಂತಾದರು. ಇವನ ಉಲ್ಲಾಸದ ವೃತ್ತಿಯು ಈ ಗೆಳೆತನಕ್ಕೆ ಪುಟಕೊಟ್ಟಿತು. ಎಲ್ಲಿ ಬೇಕಲ್ಲಿಗೆ, ರಾತ್ರಿ-ಅಪರಾತ್ರಿಯೆನ್ನದೆ (ಇವನಿಗೆಲ್ಲಿಯ ಕರ್ಫ್ಯೂ ಆರ್ಡರ!) ತನ್ನ ಲಾರಿಯಲ್ಲಿ ತಿರುಗಾಡಿಸಬೇಕು; ವನಭೋಜನಕ್ಕೊಯ್ಯಬೇಕು; ತನ್ನ ಹೆಸರಿನ ಮೇಲೆ ಉದ್ದರಿ ಮಾಡಿ ಚಹಾ-ಫಲಾಹಾರ ಇ. ಇ. ಇ. ಮನದಣಿಯುವಂತೆ ಕೊಡಿಸಬೇಕು—ಹೀಗೆ ಕ್ರಮವಿಟ್ಟುಕೊಂಡಿದ್ದನು ರಾಮಜಿ. ಬರುಬರುತ್ತ ಸಲಿಗೆ ಹೆಚ್ಚಿತು. ಗೆಳೆಯರು ಮನೆಗೆ ಬರ-ಹೋಗಹತ್ತಿದರು. ಅವನಿಲ್ಲದಾಗಲೂ ಒಮ್ಮೊಮ್ಮೆ ಬರುತ್ತಿದ್ದರು. ಲಕ್ಷ್ಮೀಬಾಯಿಯ ಕಡೆಯಿಂದ ಚಹಮಾಡಿಸಿ ಕುಡಿಯುತ್ತಿದ್ದರು. "ಚಾ ಕೊಡಾಕೇನ ಅಡ್ಡಿ?" ಎಂದು ರಾಮಜಿಯೂ ಅಂದಿದ್ದನು. ನೆರೆಹೊರೆಯವರು—(ಮುಂಚಿನ) ಗೆಳೆಯರು, "ರಾಮಜೀ, ಹೊರಗ ನೀ ಬೇಕಾದ್ದು ಮಾಡು, ಮನ್ಯಾಗ ಆ ಮೂಳ ಗೋಳಿಗೆ ಸಲಿಗೀ ಕೊಡಬ್ಯಾಡಾ; ಸಲಿಗೀ ನಾಯಿ ತಲೀಗೇರ್‍ಯಾವು" ಎಂದು ಬಜಾಯಿಸಿದ್ದರು. ಸರಲಮನಸ್ಸಿನವ

ರಾಮುಜಿ. "ಸಾಹೇಬರ ಸ್ವಭಾವಾನs ಹಾಂಗ. ಎಲ್ಲಾರ ಜೋಡೀಲೀನೂ ಸಲಿಗೀಲೆ ಇರೋದು ಅವರ ನಡತೀನ ಐತಿ" ಎಂದು ಉತ್ತರ ಕೊಡುತ್ತಿದ್ದನು. "ಇಷ್ಟೂ ಖಾರಿ ಏನಂತೀರಿ! ದಂಡಿನ ರಾಜ್ಯಾ ಮುಗಿಯೋ ತನಕಾ ಭಾಳಾದ್ರ ಇಡಿದೊಂದು ಮಡಿಕೀ ಖಲಾಸಾದೀತ—ಇಷ್ಟs ಹೌದಲ್ಲೋ! ನಮ್ಮೆಲ್ಲಾರ ಜೀವೊಂದ ಉಳದ್ರ ಸಾಕು—ನಮ್ಮೆಲ್ಲಾರ ಮ್ಯಾಗಿಂದ ನಿವಾಳಿಸಿ ಛಲ್ತೇನಿ!" ಎಂದು ಸಮಾಧಾನ ಹೇಳಿ ನಕ್ಕುಬಿಡುತ್ತಿದ್ದನು. ಆದರ ಪರಿಣಾಮ ಬರಿಯ ಹೊನ್ನಿನ ಮೇಲಾಗದೆ, ಮನೆಯ ಮಂಗಳ ಲಕ್ಷ್ಮಿಯ ಮರ್ಯಾದೆಯ ಮೇಲೂ ಆಗುವುದೆಂದು, ಪಾಪ, ರಾಮುಜಿಯು ಏನು ಬಲ್ಲನು?

* * *

ದಿಗಿಲುಗೊಂಡು ಐದು ನಿಮಿಷ ಬಿದ್ದುಕೊಂಡವನು ಚೇತರಿಸಿಕೊಂಡು, ಮೆಲ್ಲನೆದ್ದು ಕುಳಿತು, "ಹದಿನಾಕು ಹಡೀ ಹಾಂವಿಗೆ ಹಾಲೆರಧಾಂಗಾತಲ್ಲೋ ಎಪ್ಪಾ, ದೇವ್ರ!" ಎಂದು ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಯೋಚನೆಯಲ್ಲಿ ಮುಳುಗಿಬಿಟ್ಟನು. ಹಾಗೆಯೆ ಎದುರಿಗೆ ಬಿದ್ದ ಲಕ್ಷ್ಮಿಯ ಕಡೆಗೆ ಆತನ ಲಕ್ಷ್ಯವು ಹೋಯಿತು. ಕ್ಷಣಾರ್ಧದಲ್ಲಿ ಅವನ ಮುಖದ ಮೇಲೆ ನಿಶ್ಚಯದ ಕಳೆ ಮೂಡಿತು. ಅವಳ ಬಳಿಗೆ ಬಂದು, "ಲಕ್ಷ್ಮೀ, ಎಳೂ, ನಮ್ಮಂಥಾ ಬಡವರ ಮ್ಯಾಗ ಹಿಂತಾ ಪರಸಂಗ ಹೆಚ್ಚಿಗೀ ಬರೂವ! ನಾ ಎಲ್ಲಾ ಇದರ ಇಚ್ಯಾರಾ ಮಾಡೇನಿ. ನಿನ್ನ ಕೂದಲೆಳೀಗೆ ಧಕ್ಕಿ ಬರದ್ಹಾಂಗ ನಾ ನೋಡಕೋತೇನಿ. ನೀ ಇದರ ಚಿಂತೀ ಬಿಡು" ಎಂದು ಅವಳನ್ನು ಸಂತೈಸಿದನು. ಆಗ ಲಕ್ಷ್ಮಿಯು ಕಣ್ಣೀರು ಸುರಿಸುತ್ತ,

"ನಿಮ್ಮಿಚಾರ ಏನು, ಯಾರಿಗೆ ಗೊತ್ತು? ನನಗ ಮುತ್ತೈದಿ ಮರಣಾ....ನಾವಿಬ್ಬರೂ ಜಲುಮ ಜಲುಮಕ್ಕೂ ಕೂಡಿರಬೇಕು...."

"ಹಾಂ, ಮುಂದಿನ ಜಲುಮಕ್ಕೂನೂ ಕೂಡಿರೂದು, ಹೌದಲ್ಲೊ? ಹಾಂಗಾರ ಈಗ ಮೊದಲ ನಾ ಸತ್ತು ಗಂಡಾಗಿ, ನಿನ್ನಕಿಂತಾ ಮುಂಚೆ ಹುಟ್ಟಿ ಬರಾಕಬೇಕೋ ಬ್ಯಾಡೋ? ಅವರ ಪಾರಪತ್ಯಾ ಮಾಡ್ತೇನಿ—ಇಷ್ಟು ಖರೇ. ಮಾಡಿ ತಿರಿಗಿ ಬರಾಕಿಲ್ಲರs ಯಾತರ ಮ್ಯಾಲಿಂದ? ಮಕ್ಕಳ್ಳು, ನನ್ನ ತಾಯಿತಂದಿ—ಅಲ್ಲಾ ನಿನ್ನ ತಾಯಿತಂದಿನ್ನ ಜ್ವಾಕಿ ಮಾಡಿಕೊಂಡಿರು. ನಾ ಸ್ವರ್ಗದಾಗಿಂದ ನಿನ್ನ ಧೀರೇ ನೋಡಿ, ಸುಖಬಡತೇನಿ. ಇನ್ನೇನು ಸಾಯತೇನಂತರ ಯಾತರ ಮ್ಯಾಲಿಂದ? ತಿರಿಗಿ ಬರಾಕಿಲ್ಲಾ ಅನ್ನ ಗತಿಗಾಣಿಸಿ ಅಂತರ ಯಾತರ ಮ್ಯಾಲಿಂದ?"

ಲಕ್ಷ್ಮಿಯು ಭೋರೆಂದು ಅತ್ತಳು. ರಾಮುಜಿಯು ಳನ್ನು ತಬ್ಬಿಕೊಂಡು ಸಂತೈಸಲೆತ್ನಿಸಿದನು. ಮಕ್ಕ ಮತ್ತೆ ಮತ್ತೆ ಮುದ್ದಾಡಿದನು. ಪತಿಪತ್ನಿಯರಿಗೆ ನಿದ್ರೆ ಇಲ್ಲ. ಹಾಂ ಹಾಂ ಎನ್ನುವಷ್ಟರಲ್ಲಿಯೇ ಬೆಳಗಾಯಿ

ರಾಮುಜಿಯು ಎದ್ದವನೇ ಮೊದಲು ಮೋಟಾರು ಕೊಂಡು, ನೇರವಾಗಿ ದಂಡಿನವರಿದ್ದಲ್ಲಿಗೆ ಬಂದು, ಡನೆ ಸ್ನೇಹ ಬೆಳೆಯಿಸಿದ ಆ ಹದಿನಾಲ್ಕು ಜನ ಸಾ ರನ್ನು ಕಂಡನು; ಅವರನ್ನೊಂದು ಕಡೆ ಕರೆದು, ಪೇಕ್ಷಿಸಿದ ಮೇರೆಗೆ ಆಂದಿನ ರಾತ್ರಿಯು ಹನ್ನೆರಡು ಅವರ ಬಯಕೆಯನ್ನು ಪೂರೈಸುವುದಾಗಿ ಹೇ ಅದಕ್ಕೆ ಪ್ರತಿಫಲವಾಗಿ ಹದಿನೈದು ನೂರು ರೂ ಗಳನ್ನು ಮೋಟಾರಿಗಾಗಿ ಮಾಡಿದ ಸಾಲ ತೀ ಕೊಡಬೇಕೆಂದು ತೀರ ಬಡವನಂತೆ ಬೇಡಿದನು. ಕೊಟ್ಟರು—ಅವರಿಗೇನು ಕೊರತೆ, ಕಲ್ಪವಲ್ಲರಿಯು ಸೊಂಟಕ್ಕೇ ಸುತ್ತಿರುವಾಗ? ಹಣವನ್ನು ತೆಗೆದುಕೊಂ ಬರುವಾಗ ದಾರಿಯಲ್ಲಿದ್ದ ಗಡಂಗವನ್ನು ಹೊಕ್ಕು ದಣಿಯೆ ಮದ್ಯಪಾನ ಮಾಡಿದನು; ಮನೆಗೆ ತಾಯಿಯ ಕೈಯಲ್ಲಿ 'ಮೋಟಾರಿಗಾಗಿ ತೆಗೆದ ವೆಂದು ಕೊಟ್ಟನು; ಎಂದರೆ ಅವನ ತಾಯಿಯೇ ಸಾಲಕೊಟ್ಟು ಸಾಹುಕಾರಳಾಗಿದ್ದಳು. 'ಇನ್ನು ಮೋಟಾರು ಇಂದಿಗೆ ಸ್ವತಂತ್ರವಾಯಿತು, ಆದರ ಯಾರ ಹಕ್ಕೂ ಹಂಗೂ ಇಲ್ಲವೆಂ'ದುಕೊಂಡನು. ಬಲು ಸೋಜಿಗವಾಯಿತು. ಆದರೆ ಅವನ ಮುಖ ಸುಮ್ಮನಾದಳು. ಎಲ್ಲರೂ ಕೂಡಿ ಊಟ ಮಾಡಿದ

ಅಂದು ರಾಮುಜಿಯ ಮನಸ್ಸು ಬಲು ವಿಚಿತ್ರವಾ ಒಮ್ಮೆ ತೀರ ದೀನನಾಗಿ, ಕಣ್ತುಂಬ ನೀರು ಹೆಂಡತಿ-ಮಕ್ಕಳನ್ನೂ ತಾಯಿತಂದೆಗಳನ್ನೂ ನೋಡುವನು; ಒಮ್ಮೆ ಮಕ್ಕಳೊಡನೆ ಉಲ್ಲಾಸದಿಂದ ವನು—ಆಗ ತನ್ನಷ್ಟು ಅದೃಷ್ಟಶಾಲಿಯು ಜಗತ್ತಿನ ಆದಾವನೂ ಇಲ್ಲವೆಂಬಂತೆ ತೋರುವನು; ಒಮ್ಮೆ ರಭಸದಿಂದ ಹಲ್ಲುಕಡಿಯುತ್ತ, ತನ್ನಷ್ಟಕ್ಕೆ ತಾನೇ ಗುಟ್ಟುವನು. ಇವನ ನಡೆವಳಿಕೆಯ ಅರ್ಥವು ಆರ ಆಗಲೇ ಇಲ್ಲ. ಏನು ಮಾಡಬೇಕೆಂದು ತೋಚದೆ, ಜನರೆಲ್ಲರೂ ಮೌನಧಾರಿಗಳಾಗಿದ್ದರು. ಇವನ ಕ್ಕಾಗಿ, ಬೂದಿಮುಚ್ಚಿದ ಕೆಂಡದಂತೆ ದುಃಖವನ್ನ

ಕೊಂಡು, ಒಳ್ಳೆಯ ಶೃಂಗಾರವಾಗಿ, ಸಡಗರದಿಂದ ಲಕ್ಷ್ಮಿಯು ಎರವಿನ ನಗೆಯಿಂದೊಡಗೂಡಿ ಓಡಾಡುತ್ತಿದ್ದಳು; ರಾಮಜಿಯ ಎದುರಿಗೆ ಪಿಟ್ಟೆಂದು ಮಾತನಾಡುವ ಧೈರ್ಯ ಒಬ್ಬರಿಗೂ ಇಲ್ಲ.

ಸಾಯಂಕಾಲದ ವರೆಗೆ ಇದೇ ಕ್ರಮವು ನಡೆಯಿತು. ರಾತ್ರಿಯ ಎಂಟರ ಸುಮಾರಿಗೆ ಬಗೆಬಗೆಯ ತಿನಿಸು-ಉಣಿಸುಗಳು ಇವನ ಅಪ್ಪಣೆಯ ಮೇರೆಗೆ ನಾಲ್ಕಾರು ಹೋಟಲುಗಳಿಂದ ಬಂದವು. ಹಾರ-ತುರಾಯಿ, ಅತ್ತರು-ಗುಲಾಬ, ಹೊಸ ಹೊಸ ಕಪ್ಪು-ಸಾಸರುಗಳನ್ನು ಕೊಂಡದ್ದಾಯಿತು; ಅವುಗಳ ಕೆಲಭಾಗವನ್ನಾಗಲೇ ಹೆಂಡತಿ-ಮಕ್ಕಳೊಂದಿಗೆ, ತಾಯಿತಂದೆಗಳೊಡನೆ ತಿಂದುಂಡು ಸುಖಬಟ್ಟನು; ಬಳಿಕ ಮೋಟಾರು ತೆಗೆದುಕೊಂಡು ಹೋಗಿ ಆ ಹದಿನಾಲ್ಕು ಜನ ಮಿತ್ರರಿಗೆ, ತಾನು ಸರಿಯಾಗಿ ಮಧ್ಯರಾತ್ರಿಯ ಒಂದು ಗಂಟೆಗೆ ಬಂದು ಅವರನ್ನೆಲ್ಲ ತನ್ನ ಮನೆಗೆ ಕರೆದೊಯ್ಯುವದಾಗಿಯೂ ಇಂತಹ ಮೆಟ್ಟಿನಲ್ಲಿ ತನಗಾಗಿ ಕಾದಿರಬೇಕೆಂತಲೂ ಹೇಳಿ, ತಿರುಗಿದನು; ಬಾಗಿಲ ಹಾಕಿ ಮೂರು ತಾಸಿಗೆ ತಿರುಗಿ ಬಂದನು. ಹನ್ನೆರಡು ಗಂಟೆ ಎಂದರೆ ಹನ್ನೆರಡರ ವರೆಗೆ ಪರಿವಾರದೊಂದಿಗೆ ನಿದ್ರೆ ಹೋದನು. ನಿದ್ರೆಯೇತರದು? ಹನ್ನೆರಡಕ್ಕೆ ಎದ್ದನು. ಮನೆಮಂದಿಯೊಂದಿಗೆ ಹಿತೋಕ್ತಿಯ, ಅಂತಃಕರಣದ, ಸೇವಜೀವಾಳದ, ಸುಖದುಃಖದ ಹರಟೆ ಮನವಾರೆ ಹೊಡೆದನು. ಕೊನೆಯ ಬಾರಿ, ಇನ್ನೊಂದು ಬಾರಿ ಹೆಂಡತಿ ಮಕ್ಕಳನ್ನು ಗಾಢವಾಗಿ ಆಲಿಂಗಿಸಿದನು. ಹದಿನಾಲ್ಕು ಹೆಡೆಗಳ ಸರ್ಪದ ಪಾರುಪತ್ಯಮಾಡಲು ಮೋಟಾರಿನೊಂದಿಗೆ ಹೊರಹೊರಟನು.

ಗೊತ್ತುಮಾಡಿದ ಮೆಟ್ಟಿಗೆ ಬಂದು ಹದಿನಾಲ್ಕು ಜನ ಮಿತ್ರರನ್ನು ಕರೆದುಕೊಂಡು, ಕಿಸನಸಿಂಗನ ಗಡಂಗಕ್ಕೆ ಬಂದು, ಅವರೆಲ್ಲರಿಗೂ ಮನದಣಿಯೆ ಮದ್ಯಪಾನ ಮಾಡಿಸಿದನು; ತಾನೂ ತೆಗೆದುಕೊಂಡನು. "ಕಿಸನಸಿಂಗ, ಮಿತ್ರಾ!" ಎಂದು ಅವನನ್ನಪ್ಪಿಕೊಂಡನು. ಹೀಗೇಕೆ ಮಾಡುವನೆಂದು ಅವನಿಗೆ ಸೋಜಿಗವಾಯಿತು; ಕುಡಿದದ್ದಕ್ಕೆ ಮಾಡುತಿರಬೇಕೆನ್ನಿಸಿತು.

ಮನೆಗೆ ಬಂದು, ಬಾಗಿಲೆದುರಿಗೆ ಮೋಟಾರು ನಿಲ್ಲಿಸಿದನು; ಒಳಗೆ ಹೊಕ್ಕು, ಪತ್ನಿಯನ್ನು ಆ ಗೋರಾಸಾಹೇಬರಿಗೆ ಕಾಣುವಂತೆ, ನಾಲ್ಕಾರು ಬಾರಿ ಒಳಗೇ ಬೆಳಕಿನಲ್ಲಿ ಓಡಾಡಿಸಿದನು. ಅಲ್ಲಾವುದ್ದೀನನ ಕಣ್ಣಿಗೆ ಪದ್ಮಿನಿಯು ಕಂಡಂತಾಯಿತು. ಹದಿನಾಲ್ಕು ಹೆಡೆಗಳೂ ಮಂತ್ರಮುಗ್ಧವಾದವು. ಅವರೆಲ್ಲರೂ ಇಳಿಯತೊಡಗಿದ ಕೂಡಲೆ, "ಹಾಂ, ಚಹಾಕ್ಕೆ ಹಾಲು ಇಲ್ಲವಂತೆ, ನಡೆಯಿರಿ, ಗೌಳಿಗರ ಧನಾಜಿಯಲ್ಲಿ ಹೋಗಿ ಒಂದು ಕೊಡ ಹಾಲು ತರುವಾ" ಎಂದು ಸರ್ರನೆ ಮೋಟಾರು ಬಿಟ್ಟನು. ಒಂದು ಬಡಿಯಲಿಕ್ಕೆ ಹದಿನೈದು ನಿಮಿಷವಿದ್ದಿತು. ಎಲ್ಲರೂ ಮತ್ತೇರಿದ ಮಂಗಗಳಾಗಿದ್ದರು. ಅಡ್ಡದಾರಿಯಿಂದ ಗೌಳಿಗರ ಬೀದಿಗೆ ಹೊಡೆದು, ಧನಾಜಿಯನ್ನೆಬ್ಬಿಸಿ, ಹಾಲು ಕೊಂಡುಕೊಂಡು, ಅವನ ಕೈಯಲ್ಲಿ ಹತ್ತು ರೂಪಾಯಿಯ ನೋಟನ್ನಿಟ್ಟನು; ಇಷ್ಟೇಕೆ ಎಂದು ಅವನು ಬೆರಗಾದಾಗ, "ನಾಳೆ ನೋಡೋಣ" ಎಂದವನೇ, "ಸಾಹೇಬರೆ, ಮನೆಗೆ ಹೋಗೋಣವೇ?" ಎಂದನು. "ಓಹೋ" ಎಂದುತ್ತರ ಬಂದಿತು. ಎಲ್ಲರೂ ಜೋಲೀ ಹೊಡೆಯುತ್ತಿರುವಾಗಲೆ ವಾಯುವೇಗದಿಂದ ಮೋಟಾರು ಬಿಟ್ಟನು. ಅದೆಲ್ಲಿಗೆ ಹೊರಟಿದ್ದಿತೆಂಬುದು, ರಾಮಜಿಯ ಹೊರತು ಯಾರಿಗೂ ಗೊತ್ತಿರಲಿಲ್ಲ. ಸ್ವರ್ಗಸುಖದ ದಾರಿಯನ್ನೇ ಎಲ್ಲರೂ ಕಾಯ್ದಿದ್ದರು.

ಹತ್ತು ನಿಮಿಷಗಳ ವರೆಗೆ ಮೋಟಾರು ಎಲ್ಲಿಯ ವರೆಗೋ ಸಾಗಿತ್ತು. ಸಾಗಿತು....ಸಾಗಿತು...ಒಂದು ಆಳವಾದ ಕಂದರದ ಇಳುಕಲಿನ ಹಾದೀ ಹಿಡಿದು, ಕಾಳರಾತ್ರಿಯ ಕಗ್ಗತ್ತಲೆಯಲ್ಲಿ, ಒಳಒಳಗೆ ಅದೆಲ್ಲಿಗೊ....! ಅರೆನಿಮಿಷದಲ್ಲಿ ಅದಾವುದೋ ಒಂದು ಗಿಡಕ್ಕೆ ಅಪ್ಪಳಿಸಿದುದರ ಸಪ್ಪಳ ಕೇಳಬಂದಿತು. "ಲಕ್ಷ್ಮೀ ನಿನ್ನ ಮಾನಾ ಕಾಯ್ದೆ—ಧನ್ಯಾದೆ!" ಎಂಬ ಗರ್ಜನೆಯ ನಿನಾದವು ದಶದಿಕ್ಕುಗಳಲ್ಲಿ ಪ್ರತಿಧ್ವನಿಗೊಂಡಿತು. ತೀರ ಒಳಗಿನಿಂದ, ಹಲವು ಪಿಸ್ತೂಲುಗಳು ಹಾರಿದ ಸಪ್ಪಳವೂ ಚೀರುವ ಧ್ವನಿಗಳ ಹಾಹಾಕಾರವೂ ಕಲೆತು ದೂರದ ಗುಡುಗಿನಬ್ಬರದಂತೆ ತೇಲಿ ಬಂದವು.

ಜ್ಞಾನ-ವಿಜ್ಞಾನ

ನವಜ್ಞಾನ, ನವವಿಚಾರ, ನವವಿಷಯ, ನವರಚನೆ, ನವಶೋಧನೆ, ನವಸಮಾಜ, ನವಪ್ರಪಂಚ

ಇವುಗಳ ಸುಲಭ—ಸೂಕ್ತ—ಸಾರರೂಪ ಪರಿಚಯ

ಇಂಗ್ಲಿಷ್ ಪಂಚಾಂಗದಲ್ಲಿ ಸುಧಾರಣೆ

ಇಂಗ್ಲಿಷ್ ಕ್ಯಾಲೆಂಡರದಲ್ಲಿ ಸುಧಾರಣೆ ಮಾಡಬೇಕೆಂಬ ಪ್ರಶ್ನೆಯನ್ನು ರಾಷ್ಟ್ರಸಂಘವು ಕಳೆದ ೧೫ ವರ್ಷಗಳಿಂದ ಯೋಚಿಸುತ್ತಲಿದೆ. ಮೊಟ್ಟಮೊದಲು ೧೯೩೩ರಲ್ಲಿ ರಾಷ್ಟ್ರಸಂಘವು ಇದರ ವಿಚಾರವನ್ನು ಕೈಕೊಂಡಂದಿನಿಂದಲೂ, ಈ ಚರ್ಚೆಯ ಎಳೆದಾಟವು ನಡೆದೇ ಇದೆ. ಆದರೆ ಈ ಪ್ರಶ್ನೆಯನ್ನು ಇನ್ನುಮೇಲೆ ತ್ವರಿತವಾಗಿ ಬಿಡಿಸುವ ಲಕ್ಷಣಗಳು ತೋರುತ್ತಿವೆ.

ಈಗಿನ ಇಂಗ್ಲಿಷ್ ವರ್ಷದಲ್ಲಿಯ ಒಂದು ತಿಂಗಳು ಇನ್ನೊಂದು ತಿಂಗಳಿನಂತಿರುವುದಿಲ್ಲ. ೨೮, ೨೯, ೩೦ ಇಲ್ಲವೆ ೩೧ ಇವುಗಳಲ್ಲಿ ಯಾವುದಾದರೊಂದು ದಿನಸಂಖ್ಯೆಯು ಒಂದು ತಿಂಗಳಿನಲ್ಲಿರಬಹುದಾಗಿದೆ. ವರ್ಷದಲ್ಲಿಯ ಮೊದಲನೆಯ ತ್ರಿಮಾಸಗಳಲ್ಲಿ ೯೦ ದಿನಗಳಿದ್ದರೆ, ಎರಡನೆಯ ತ್ರಿಮಾಸಗಳಲ್ಲಿ ೯೧ ದಿನಗಳಿರುತ್ತವೆ, ಮತ್ತು ಕೊನೆಯ ಎರಡು ತ್ರಿಮಾಸಾವಧಿಗಳಲ್ಲಿ ಪ್ರತಿಯೊಂದರಲ್ಲಿಯೂ ೯೨ ದಿನಗಳಿರುತ್ತವೆ; ಎಂದರೆ ವರ್ಷದ ಉತ್ತರಾರ್ಧವು ಪೂರ್ವಾರ್ಧಕ್ಕಿಂತ ೩ ದಿನಗಳಿಂದ ದೊಡ್ಡದಾಗಿರುತ್ತದೆ. ಪ್ರತಿಮಾಸದ ವಿಶಿಷ್ಟ ತಾರೀಖಿಗೆ ವಿಶಿಷ್ಟವಾರವೇ ಬರುವುದೆಂದು ಹೇಳಲು ಬರುವುದಿಲ್ಲ. ಒಂದು ತಿಂಗಳಿನಲ್ಲಿ ೫ ಭಾನುವಾರಗಳೂ ಬರಬಹುದು, ೪ ಭಾನುವಾರಗಳೂ ಬರಬಹುದು. ಎಲ್ಲಾ ತಿಂಗಳುಗಳಲ್ಲಿ ಕೆಲಸದ ದಿನಗಳು ಸಮವಾಗಿಯೆ ಬರುವುದಿಲ್ಲ. ಬಡ್ಡಿ, ಲಾಭವಿಭಜನೆ (ಡಿವಿಡೆಂಡ) ಇ.ಗಳ ಲೆಕ್ಕಗಳು, ನಿಶ್ಚಿತ ದಿನಸಂಖ್ಯೆಯ ವರ್ಷವಿಲ್ಲದುದಕ್ಕಾಗಿ ಬಹಳ ತೊಡಕಿನವಾಗಿವೆ. ಲೀಪ್ ಯಿಯರದಲ್ಲಿ ಫೆಬ್ರುವರಿ ತಿಂಗಳು ೨೯ ದಿನಗಳದಿರುತ್ತದೆ. ಸರಕಾರದ ಆರ್ಥಿಕಮಂತ್ರಿಗಳಿಗೆ ಸುಂಕದಿಂದಲೂ ಬೇರೆ ಕರಗಳಿಂದಲೂ ಈ ವರ್ಷದಲ್ಲಿ ಒಂದು ದಿನದ ಅಧಿಕ ಉತ್ಪನ್ನವು ದೊರೆಯುತ್ತದೆ; ಈ ರಕಮಾದರೂ ಸಣ್ಣದಿರುವುದಿಲ್ಲ. ರೇಲ್ವೆ ಪಾಸುಳ್ಳವರು ಒಂದು ದಿನ ಪುಕ್ಕಟೆಯಾಗಿ ಪ್ರವಾಸಮಾಡಬಲ್ಲರು. ತಿಂಗಳ ಸಂಬಳ ಗೊತ್ತುಮಾಡಿಕೊಂಡವರು ಒಂದು ದಿನ ಹೆಚ್ಚಿಗೆ ದುಡಿಯಬೇಕಾಗುತ್ತದೆ; ಅದಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ. ವಿದ್ಯಾರ್ಥಿಗಳ ಪರೀಕ್ಷೆ ಒಂದು ದಿನ ಮುಂದೆ ಬಿದ್ದುದರಿಂದ, ಅವರಿಗೆ ಮಾತ್ರ ಅಭ್ಯಾಸದ (ಅಥವಾ ವಿಲಾಸದ ?) ಒಂದು ದಿನವು ಹೆಚ್ಚಿಗೆ ಸಿಗುತ್ತದೆ.

ಪ್ರತಿವರ್ಷದ ಪ್ರಾರಂಭವೂ ಒಂದು ವಿಶಿಷ್ಟದಿನವೇ—ಉ: ಭಾನುವಾರ—ಆಗಬೇಕು ಮತ್ತು ಪ್ರತಿವರ್ಷದ ಪ್ರತಿ ತಾರೀಖು ವಿಶಿಷ್ಟ ದಿನಕ್ಕೇ ಬರಬೇಕು ಎಂಬ ಯೋಜನೆಯುಳ್ಳ ಕ್ಯಾಲೆಂಡರವನ್ನು ಬಳಕೆಯಲ್ಲಿ ತರುವ ಸೂಚನೆಯನ್ನು ರಾಷ್ಟ್ರಸಂಘವು ಯೋಚಿಸುತ್ತಲಿದೆ. ಕೆಲವರ ಅಭಿಪ್ರಾಯದಂತೆ ಪ್ರತಿವರ್ಷದ ನಾಲ್ಕು ತ್ರಿಮಾಸಗಳಲ್ಲಿ ಒಂದೊಂದರಲ್ಲಿಯೂ ೯೧ ದಿನಗಳಿರಬೇಕು; ಮತ್ತು ಪ್ರತಿಯೊಂದು ತ್ರಿಮಾಸವನ್ನೂ ಷಣ್ಮಾಸವನ್ನೂ ಒಂದು ನಿಶ್ಚಿತ ದಿನಕ್ಕೆ ಆರಂಭಿಸಬೇಕು. ತ್ರಿಮಾಸದಲ್ಲಿಯ ಮೊದಲನೆಯ ತಿಂಗಳಿನಲ್ಲಿ ೩೧ ದಿನಗಳೂ, ಮುಂದಿನ ೨ ತಿಂಗಳುಗಳಲ್ಲಿ ೩೦ ದಿನಗಳೂ ಇರಬೇಕು. ಪ್ರತಿತಿಂಗಳಿನಲ್ಲಿಯೂ ಕೆಲಸದ ೨೬ ದಿನಗಳಿರಬೇಕು. ಇನ್ನು ಕೆಲವರ ಅಭಿಪ್ರಾಯದಲ್ಲಿ ಪ್ರತಿತಿಂಗಳು ಒಂದೇಸಮನಾಗಿ ೨೮ ದಿನಗಳದೇ ಆಗಬೇಕು; ಅದಕ್ಕಾಗಿ ಜೂನ್ ಜೂಲೈಗಳ ನಡುವೆ ಒಂದು ಹೊಸ—ಹದಿಮೂರನೆಯ—ತಿಂಗಳನ್ನು ಹೊಗಿಸಿಬಿಡಬೇಕು. ಮೇಲಣ ಎರಡೂ ಸೂಚನೆಗಳಂತೆ ೩೬೪ ದಿನಗಳ ಲೆಕ್ಕವೇ ಆಗುತ್ತದೆ. ೩೬೫ನೆಯ ದಿವಸಕ್ಕೆ ಎಲ್ಲಿಯಾದರೂ ಸ್ಥಳ ಮಾಡಿಕೊಡಲೇಬೇಕಲ್ಲ ! ವರ್ಷದ ಕೊನೆಗೆ ಈ ದಿನವನ್ನು

ಜೋಡಿಸಿಬಿಡಬೇಕು; ಆದರೆ ಅದನ್ನು ಯಾವ ವಾರ (ಸಪ್ತಾಹ)ಕ್ಕೂ ಸೇರಿಸಬಾರದು; ಅದೇ ಮೇರೆಗೆ ಲೀಪ್ ಯಿಯರದಲ್ಲಿ ಇನ್ನೊಂದು ದಿವಸಕ್ಕೆ ಸ್ಥಾನಮಾಡಿಕೊಡಬೇಕಾಗುವುದು,—ಅದನ್ನು 'ಮೊದಲನೆಯ ಷಣ್ಮಾಸದ ತರುವಾಯ ಜೂನ್ ಕೊನೆಗೆ ಸೇರಿಸಬೇಕು ಎಂದು ಸೂಚನೆಯು ಬಂದಿದೆ.

ಯಾವ ಸುಧಾರಣೆಯನ್ನು ಗಟ್ಟಿಪಡಿಸತಕ್ಕದ್ದೆಂಬ ಬಗ್ಗೆ ರಾಷ್ಟ್ರಸಂಘವು ಇನ್ನೂ ನಿರ್ಣಯಕ್ಕೆ ಬಂದಿಲ್ಲ. ವರ್ಷದಲ್ಲಿಯ ಒಟ್ಟು ದಿನಗಳ ನಾಲ್ಕು ಸಮಭಾಗಗಳನ್ನು ಮಾಡಬೇಕೆಂಬ ಕ್ಯಾಲೆಂಡರವು ಕೆಲವರಿಗೆ ಒಪ್ಪಿಗೆಯಾಗಿದ್ದರೆ, ಕೆಲವರಿಗೆ ೧೩ ತಿಂಗಳ ವರ್ಷವು ಒಪ್ಪಿಗೆಯಾಗುತ್ತಿದೆ. ಅಂತೂ ಈ ಚರ್ಚೆಯು ಒಂದು ಮೆಟ್ಟುಮುಟ್ಟಿ ಬೇಗನೆ ಇತ್ಯರ್ಥಕ್ಕೆ ಬರುವುದರಲ್ಲಿ ಸಂದೇಹವಿಲ್ಲ.

—ಅರ್ಥ

ಪೌರಸ್ತ್ಯ ಸ್ತ್ರೀಯರ ಜಾಗೃತಿ

ಈ ಶತಮಾನದ ಒಂದು ವೈಶಿಷ್ಟ್ಯವೆಂದರೆ ಪೂರ್ವದಿಕ್ಕಿನ ದೇಶಗಳಲ್ಲಿ ಸ್ತ್ರೀಸ್ವಾತಂತ್ರ್ಯದ ಆಂದೋಲನಗಳು ಬೆಳೆಯುತ್ತಿದ್ದುದು. ಮಹಾಯುದ್ಧಕ್ಕಿಂತ ಮುಂಚಿನಿಂದಲೇ ಈ ಚಟುವಟಿಕೆಗಳು ನಡೆದಿದ್ದವು. ತುರ್ಕಸ್ತಾನದಲ್ಲಿ ಘೋಷಾಪದ್ಧತಿಯನ್ನು ಪೂರ್ತಿಯಾಗಿ ತೆಗೆದು ಹಾಕಲಾಗಿದೆ; ಹಿಂದುಸ್ತಾನ, ಇಜಿಪ್ತ, ಇರಾಣ, ಸೀರಿಯಾ, ಇರಾಕಗಳಲ್ಲಿಯ ಹಲವುಜನ ಹೆಣ್ಣುಮಕ್ಕಳು ಅದನ್ನು ಬಿಟ್ಟುಕೊಟ್ಟಿದ್ದಾರೆ. ಪೂರ್ವದಿಕ್ಕಿನ ಸ್ತ್ರೀಯರು ತಮ್ಮ ಸ್ವತಂತ್ರ ಸ್ನೇಹಮಂಡಲ (ಕ್ಲಬ್) ಗಳನ್ನೂ, ಸ್ವತಂತ್ರ ವೃತ್ತಪತ್ರಗಳನ್ನೂ, ಸ್ವತಂತ್ರ ಸಂಸ್ಥೆಗಳನ್ನೂ ನಡೆಯಿಸಿರುವರಲ್ಲದೆ, ಸ್ತ್ರೀಶಿಕ್ಷಣವನ್ನು ಸುಧಾರಿಸುವ ಬಗೆ, ಬಹುಪತ್ನೀಕ ವಿವಾಹವನ್ನು ನಿಲ್ಲಿಸುವ ಉಪಾಯ ಇ.ಗಳನ್ನು ಚರ್ಚಿಸಲು ಸಭೆ-ಸಮ್ಮೇಲನಗಳನ್ನು ಕೂಡಿಸುತ್ತಾರೆ. ಪೌರಸ್ತ್ಯ ಸ್ತ್ರೀಯರು ಇದೀಗ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುತ್ತಲಿರುವರು. ಮ. ಗಾಂಧಿಯವರ ಧ್ಯೇಯದಿಂದ ಪ್ರೇರಿತರಾಗಿ ಲಕ್ಷಗಟ್ಟಲೆ ಸ್ತ್ರೀಯರು ಕಾರ್ಯಮಾಡುತ್ತಿರುವರಲ್ಲದೆ, ಹಲವರು ಆ ಧ್ಯೇಯಪೂರ್ತಿಗಾಗಿ ಕಾರಾಗೃಹವಾಸವನ್ನೂ ಅನುಭವಿಸಿದ್ದಾರೆ. ೧೯೧೯ರಿಂದ ಇಜಿಪ್ತದಲ್ಲಿ ಸಾಗಿದ ಸ್ವಾತಂತ್ರ್ಯದ ಹೋರಾಟದಲ್ಲಿ ಅಲ್ಲಿಯ ಸ್ತ್ರೀಯರು ಮಹತ್ವದ ಭಾಗವನ್ನು ವಹಿಸಿದ್ದಾರೆ. ೧೯೩೪ರಲ್ಲಿ ಇರಾಣಸರಕಾರವು ಒತ್ತಾಯದ ಸೈನಿಕಶಿಕ್ಷಣದ ಕಾನೂನನ್ನು ಮಾಡಿದಾಗ, ಅದನ್ನು ನಿಷೇಧಿಸಲು ಅಲ್ಲಿಯ ... ಸಭೆಯೆದುರಿನಲ್ಲಿ ಸಾವಿರಾರು ಹೆಣ್ಣುಮಕ್ಕಳು ... ದಲ್ಲಿ ನೆರೆದಿದ್ದರು. ೧೯೩೯ರಿಂದ ಚೀನದಲ್ಲಿ ಪರರಾಷ್ಟ್ರ... ವಿರುದ್ಧ ನಡೆದ ದೊಂಬಿಗಳಲ್ಲಿ ಮತ್ತು ನಿಷೇಧ ಪ್ರದ...ಗಳಲ್ಲಿ ಚೀನೀ ಸ್ತ್ರೀಯರು ಭಾಗವಹಿಸಿದ್ದಾರೆ. ... ವರ್ಷ ಸೀರಿಯದಲ್ಲಿ ಫ್ರೆಂಚ್ ಸಾಮ್ರಾಜ್ಯದ ವಿ... ಹೂಡಿದ ಬಂಡಿನಲ್ಲಿ ೩೦೦ಕ್ಕಿಂತ ಹೆಚ್ಚು ಜನ ಹೆ...ಗಳು ಬಲಿದಾನವಿತ್ತರು. ಈ ಶತಮಾನದ ಪ್ರಾರಂಭ... ಇನ್ನು ೨೦ ವರ್ಷಗಳ ತರುವಾಯ ಪೌರಸ್ತ್ಯಸ್ತ್ರೀ... ಈ ರೀತಿ ತಮ್ಮ ರಾಷ್ಟ್ರದ ಸಾರ್ವಜನಿಕ ಜೀವ... ಪ್ರಮುಖ ಭಾಗವನ್ನು ವಹಿಸುತ್ತಾರೆಂದು ಯಾರಾ... ಕಾಲಜ್ಞಾನವನ್ನು ಹೇಳಿದ್ದರೆ, ಅವನೊಬ್ಬ ಮಹಾಮೂ...ನೆಂದೇ ಭಾವಿಸಲ್ಪಡಬಹುದಾಗಿತ್ತು.

ಪೌರಸ್ತ್ಯದೇಶಗಳಲ್ಲಿಯ ಸ್ತ್ರೀಯರು ಈಗ ... ನೌಕರಿಗಳನ್ನು ಸೇರಿರುವರಲ್ಲದೆ, ವ್ಯಾಪಾರವನ್ನೂ ... ತರ ಉದ್ಯೋಗಗಳನ್ನೂ ಮಾಡುತ್ತಿರುವರು. ... ಬ್ಯಾರಿಸ್ಟರ, ಶಿಕ್ಷಕ, ನ್ಯಾಯಾಧೀಶ, ವೈಮಾನಿಕ ... ವ್ಯಾಪಾರೀಸಂಘಗಳ ಚಾಲಕ—ಎಂಬೀ ವಿವಿಧ ...ಗಳನ್ನು ಸಲೀಲವಾಗಿ ಹೆಣ್ಣುಮಕ್ಕಳು ನಡೆಯಿಸು...ದನ್ನು ಕಾಣಬಹುದು. ಲಂಡನ್‌ದಲ್ಲಿಯ ಚೀನಿ... ಭಾರಿಯ ಕಚೇರಿಯಲ್ಲಿ ಮೂರನೆಯ ಮಹತ್ವದ ...ವನ್ನು ಮೊನ್ನೆಮೊನ್ನೆ ಒಬ್ಬ ಪೌರಸ್ತ್ಯಸ್ತ್ರೀಗೇ ಕೊ...ಗಿದೆ.

ಈ ರೀತಿ ಬೇರೆಬೇರೆ ಪೌರಸ್ತ್ಯದೇಶಗಳಲ್ಲಿಯ ಸ್ತ್ರೀ... ಚಳವಳಿಗಳಲ್ಲಿ ಎಷ್ಟೋ ಸಾಧರ್ಮ್ಯವಿದ್ದರೂ ...ಸ್ತಾನ ಜಪಾನಗಳಲ್ಲಿಯ ಸ್ತ್ರೀಯರ ಆಂದೋಲನಕ್ಕೂ ಪೌರಸ್ತ್ಯದೇಶಗಳಲ್ಲಿಯ ಸ್ತ್ರೀಯರ ಆಂದೋಲನ... ಕೆಲವು ಮಹತ್ವದ ಭೇದಗಳಿದ್ದುದು ಕಂಡುಬರು... ಉ:—ತುರ್ಕೀ ಮತ್ತು ಚೀನೀ ಸ್ತ್ರೀಯರು ಪಾ... ಸ್ತ್ರೀಯರ ಅವಾಸ್ತವ ಅನುಕರಣವನ್ನು ಮಾಡು... ತುರ್ಕೀ ಸ್ತ್ರೀಯರು ಪುರುಷರೊಡನೆ ಬಹಳೇ ... ರೀತಿಯಲ್ಲಿ ಕಲೆತುಬಿಡುತ್ತಾರೆ, ಚಿಲ್ಲರೆ ಕಾರಣಗಳಿಗಾಗಿ ತಮ್ಮ ಪ್ರಿಯಕರರೊಡನಾದ ವಾಙ್ನಿಶ್ಚಯವನ್ನು ಬಿಡುತ್ತಾರೆ, ಕೆಲವು ಮಾದಕ ಪದಾರ್ಥಗಳ ಸೇವನ... ದೇಹವಿಕ್ರಯವನ್ನೂ ನಡೆಸಿದ್ದಾರೆ. ತುರ್ಕಸ್ತಾನ... ಎಲ್ಲಾ ಹೆಂಗಳೆಯರೂ ಇಜಿಪ್ತ, ಚೀನ, ಇರಾಣಗ... ಸುಧಾರಕ ಸ್ತ್ರೀಯರೂ ತಮ್ಮ ರಾಷ್ಟ್ರೀಯ ...

ಬಿಟ್ಟುಕೊಟ್ಟು ಪಾಶ್ಚಾತ್ಯರ ಉಡುಪನ್ನೇ ಧರಿಸುತ್ತಾರೆ. ಪಾಶ್ಚಾತ್ಯಸ್ತ್ರೀಯರೇ ತಮ್ಮ ಆದರ್ಶವಲ್ಲವೆಂದು ತಿಳಿದುಕೊಂಡು ನಡೆಯುವ ಸ್ತ್ರೀಯರೆಂದರೆ ಹಿಂದೀ ಮತ್ತು ಜಪಾನಿಗಳೇ ಆಹುದು. ಜಪಾನಿ ಸ್ತ್ರೀಯರು ಪರದೇಶಕ್ಕೆ ಹೋದಾಗ ಪಾಶ್ಚಾತ್ಯ ಉಡುಪನ್ನೇ ತೊಟ್ಟರೂ ಜಪಾನದಲ್ಲಿರುವಾಗಲೆಲ್ಲ ಕಿಮೊನೋಗಳನ್ನೇ ಹಾಕಿಕೊಳ್ಳುವರು; ಮತ್ತು ಪ್ರಾಯಃ ಎಲ್ಲಾ ಹಿಂದೀ ಸ್ತ್ರೀಯರೂ, ಸ್ವದೇಶದಲ್ಲಿಯೇ ಇರಲಿ-ಪರದೇಶದಲ್ಲಿಯೇ ಇರಲಿ, ಸೀರೆಗಳನ್ನೇ ಉಡುವರು. ಜಪಾನಿ ಸ್ತ್ರೀಯರಂತೆ ಹಿಂದೀ ಸ್ತ್ರೀಯರೂ ತಮ್ಮ ರಾಷ್ಟ್ರದ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಧ್ಯೇಯವನ್ನು ಏಕನಿಷ್ಠತೆಯಿಂದ ಪಾಲಿಸುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿಯ ವಿವಾಹಸಂಸ್ಥೆಯು ಅನುಕರಣೀಯ ಆದದ್ದಾಗಿದೆಯೆಂದು ತಿಳಿಯುವ ಜಪಾನೀ, ಹಿಂದೀ ಹೆಣ್ಣುಮಕ್ಕಳು ತೀರ ಕಡಿಮೆ. ಸಹಚರ-ವಿವಾಹದ ಪ್ರಘಾತವು ಬೀಸುವ ಚೀನೀ - ತುರ್ಕೀ ಸ್ತ್ರೀಯರ ಮನಸೆಳೆದಿದ್ದರೆ, ಜಪಾನಿಯರಿಗೆ ಇಷ್ಟವೆನಿಸುವುದಿಲ್ಲ. ಜಪಾನೀ ಹಿಂದೀ ಸ್ತ್ರೀಯರ ಈ ಪುರಾಣಪ್ರಿಯತೆಯು, ಆಧುನಿಕಕಾಲಕ್ಕನುಸರಿಸಿ ಸಮಾಜದಲ್ಲಿ ಉಚ್ಚದರ್ಜೆಯ ಸ್ಥಾನವನ್ನು ಪಡೆಯಲು ಅವರು ಉತ್ಸುಕರಾಗಿಲ್ಲವೆಂಬುದರ ದ್ಯೋತಕವಲ್ಲ. ತಮಗೆ ಔದ್ಯೋಗಿಕ ಸ್ವಾತಂತ್ರ್ಯ ದೊರೆತು ಸ್ವಂತದ ಧನವನ್ನು ಗಳಿಸಲು ಬರಬೇಕು; ತಮ್ಮ ಜೀವಮಾನವೆಲ್ಲಾ ಅಜ್ಞಾನ ಸ್ತ್ರೀಯೆಂದೇ ಪರಿಗಣಿಸಲ್ಪಡಬಾರದು ಎಂಬುದಾಗಿ ಅವರ ಯತ್ನಗಳು ನಡೆದೇ ಇವೆ.

—THE INDIAN REVIEW

ಅಮೆರಿಕನ್ನರ ಸಂತೋಷಕೂಟಗಳು

ಸಂತೋಷಕೂಟ-ನೃತ್ಯಸಮಾರಂಭಗಳಿಗಾಗಿ ಲಕ್ಷಾವಧಿ ರೂಪಾಯಿ ಹಾಳುಮಾಡುವ ಸಿರಿವಂತರ ಹೆಸರುಗಳನ್ನು ಹಿಂದುಸ್ಥಾನದಲ್ಲಿ ಕೇಳುತ್ತೇವೆ. ಆದರೆ ಅಮೆರಿಕನ್ ಧನಿಕರು ಇವರನ್ನೂ ಹಿಂದಕ್ಕೆ ಹಾಕಿದ್ದಾರೆಂದು ಹೇಳಬಹುದು. ಅಗಣಿತ ದ್ರವ್ಯವನ್ನು ಸಂಪಾದಿಸಿದ ಅಮೆರಿಕನ್ ಧನಿಕರಿಗೆ ತಮ್ಮ ಸಂಪತ್ತಿಯನ್ನು ಹೇಗೆ ವೆಚ್ಚಮಾಡಬೇಕೆಂಬುದು ತಿಳಿಯುವುದಿಲ್ಲ. ಒಂದೊಂದು ಭೋಜನ ಸಮಾರಂಭಕ್ಕೆ ಎರಡುಲಕ್ಷ ರೂಪಾಯಿ ಹಾರಿಸುವುದು ಅವರಿಗೆ ಮಹತ್ವದ ವಿಷಯವಾಗಿ ತೋರುವುದಿಲ್ಲ. “ಮಿಲ್‌ಗೇಟ್” ಮಾಸಿಕದಲ್ಲಿ ಒಬ್ಬ ಲೇಖಕನು ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ. ಅದು ಒಳ್ಳೆ ಮನೋರಂಜಕವಾಗಿದೆ. ತಮ್ಮ ಮಗಳು ವಯಸ್ಸಿಗೆ ಬಂದುದರ ಸಮಾರಂಭವನ್ನು ಇಬ್ಬರು ದಂಪತಿಗಳು ಜರುಗಿಸಿದರು. ಅದಕ್ಕಾಗಿ ೨॥ ಲಕ್ಷ ರೂಪಾಯಿ ವೆಚ್ಚ ಬಂದಿತು. ತುಟ್ಟಿಯಾದ ಶಾಂಪೇನಿನ ಅರವತ್ತು ಪೆಟ್ಟಿಗೆಗಳು, ಕುದುರೆಯ ಜೂಜಾಟದ ಚಿಕ್ಕ ಬೈಲು, ವಿಶ್ವವಿಖ್ಯಾತ ಗಾಯಕ-ಗಾಯಕಿಯರ ಮೇಳ — ಇವೆಲ್ಲ ಇದ್ದುವು. ಇನ್ನೊಂದು ಸಮಾರಂಭಕ್ಕೆ ೧। ಲಕ್ಷ ರೂಪಾಯಿ ವೆಚ್ಚವಾಯಿತಂತೆ. ಈ ಸಮಾರಂಭಗಳು ಹೆಚ್ಚು ಹೆಚ್ಚು ವೆಚ್ಚದವಾಗುವಂತೆ ಮತ್ತು ಹೊಸಹೊಸ ಬೆಡಗುಗಳನ್ನು ಕಲ್ಪಿಸುವುದಕ್ಕಾಗಿ ಧನಿಕರ ಸ್ಪರ್ಧೆಯೆ ನಡೆಯುತ್ತಿದೆ. ಪುಷ್ಪಗುಚ್ಛಗಳ ಸುರಿಮಳೆಯೇನು! ಮದ್ಯದ ಹುಚ್ಚುಹೊಳೆಯೇನು! ಓಲಗಸಾಲೆಯನ್ನು ಚಿತ್ರವಿಚಿತ್ರರೀತಿಯಲ್ಲಿ ಸಿಂಗರಿಸಿ, ಸಾಕ್ಷಾತ್ ನಂದನವನವೆ ಇಳಿದುಬಂದಂತೆ ಮಾಡುತ್ತಾರೆ.

ಸಮಾಜದ ಉಚ್ಚದರ್ಜೆಯ ಜನರಲ್ಲಿ ತಮಗೆ ಸ್ಥಾನ ಸಿಕ್ಕಬೇಕೆಂಬ ಹವ್ಯಾಸದಿಂದ ಮಹಾತ್ವಾಕಾಂಕ್ಷಿಗಳಾದ ಧನಿಕರು ಈಪರಿ ಧಾವತಿಪಟ್ಟುಕೊಳ್ಳುತ್ತಾರೆ. ಈ ಸಿರಿವಂತಿಕೆಯ ಪ್ರದರ್ಶನದಿಂದ ಧನಿಕವರ್ಗದ ವಿರುದ್ಧವಾಗಿ ಜನಾಭಿಪ್ರಾಯವು ಸಿದ್ಧವಾಗುವುದರಲ್ಲಿ ಸೋಜಿಗವಿಲ್ಲ. ಇಂಗ್ಲಂಡಿನಂತೆಯೇ ಅಮೆರಿಕೆಯಲ್ಲಿ ‘ದೊರೆ’ಗಳು (Lords) ಇಲ್ಲ; ಅವರಿಗೆ ಬಿರುದುಬಾವಲಿಗಳಿಲ್ಲ; ಎಂತಲೇ ಅಲ್ಲಿಯ ಹಣಗಾರರು ಇಂತಹ ಪ್ರದರ್ಶನಗಳನ್ನು ಏರ್ಪಡಿಸುವರೆಂದು ಹೇಳಲಾಗುತ್ತಿದೆ. ಆದರೆ ಅಮೆರಿಕೆಯಲ್ಲಿಯೂ ಪ್ರೆ. ರೂಝ್‌ವೆಲ್ಟ ಮತ್ತು ಬೇರೆ ರಾಜಕೀಯ ಮುಂದಾಳುಗಳು ಇವರ ವಿಚಿತ್ರವಿಲಾಸಗಳನ್ನು ಕಣ್ಣೆತ್ತಿಯೂ ನೋಡುವುದಿಲ್ಲ—ತಮ್ಮ ಕೆಲಸಗಳನ್ನು ತಾವು ಮಾಡುತ್ತಿರುತ್ತಾರೆ. ಶ್ರೀಮತಿ ರೂಝ್‌ವೆಲ್ಟರವರು ಒಬ್ಬ ಸಾಮಾನ್ಯ ನಾಗರಿಕಳಂತೆ ಸ್ವಂತದ ಶ್ರಮದಿಂದ ಹಣ ಸಂಪಾದಿಸುತ್ತಾರೆ; ಅದರಲ್ಲಿಯ ಪ್ರತಿ ಕಾಸೂ ಸಮಾಜಹಿತಕ್ಕೆ ವಿನಿಯೋಗವಾಗುವಂತೆ ನೋಡಿಕೊಳ್ಳುತ್ತಾರೆ.

—MILL GATE

(ಇಲ್ಲಿ ‘ಮದ್ಯ’ ಶಬ್ದವನ್ನು ದ್ರಾಕ್ಷಾರಸವನ್ನು ನೈಸರ್ಗಿಕರೀತಿಯಲ್ಲಿ ಹುಳಿಗೊಳಿಸಿ ತಯಾರಿಸಿದ ಪೇಯ ಎಂಬ ಅರ್ಥದಲ್ಲಿ ಉಪಯೋಗಿಸಿದೆ. ಭಟ್ಟಿಯ ಸಹಾಯದಿಂದ ಬಾಷ್ಪೀಕರಣ ಮಾಡಿ ತಯಾರಿಸಿದ ಅರ್ಕವಲ್ಲ. ಮದ್ಯ-ಮದ್ಯಾರ್ಕಗಳನ್ನು ಬಿಂಗಡಿಸುವುದು ಅಗತ್ಯ.)

ಮದ್ಯದ ಬಗ್ಗೆ ತಜ್ಞರ ಮತ

೧೯೩೩ರ ಸಾಲಿನಲ್ಲಿ ಫ್ರಾನ್ಸದಲ್ಲಿ ಬಾರ್ಡೋ ಎಂಬ

ಲ್ಲಿಯ ಮೆಡಿಕಲ್ ಫ್ಯಾಕಲ್ಟಿಯೆದುರಿನಲ್ಲಿ ಡೂನ್ಯಾಕ್ ಎಂಬ ಗೃಹಸ್ಥರೊಬ್ಬರು ಒಂದು ಪ್ರಬಂಧವನ್ನೋದಿ ಡಾಕ್ಟರ್ ಪದವಿಯನ್ನು ಸಂಪಾದಿಸಿದರು. ಅದರಲ್ಲಿ ಮದ್ಯದ ಸರ್ವತೋಮುಖ ವಿಚಾರವನ್ನು ಮಾಡಿ, ತಮ್ಮ ಅಭಿಪ್ರಾಯದ ಸಮರ್ಥನಾರ್ಥವಾಗಿ ೨೩೨ ಲೇಖಕರ ಆಧಾರಗಳನ್ನು ಕೊಟ್ಟಿದ್ದರು. ಅದರ ನಿಷ್ಕರ್ಷೆಯು ಇಂತಿದೆ:—

ಶರೀರಕ್ಕೆ ಅಗತ್ಯವಾದ ಎಲ್ಲಾ ದ್ರವ್ಯಗಳ ಪುರವಠೆಯು ಮದ್ಯದಿಂದ ಆಗದುದರಿಂದ ಅದಕ್ಕೆ ಪೂರ್ಣ ಅನ್ನವೆಂದು ಕರೆಯಲು ಬಾರದಿದ್ದರೂ, ಶರೀರಕ್ಕೆ ಅಗತ್ಯವಾಗಿರುವ ಹಲವು ಪದಾರ್ಥಗಳು ಸುಲಭವಾಗಿ ಪಚನವಾಗುವ ರೂಪದಲ್ಲಿ ಮದ್ಯದಲ್ಲಿ ದೊರೆಯುವವು. ಉ:—ಅದರಲ್ಲಿ ನೀರು, ಪೊಟ್ಯಾಶಿಯಂ, ಕ್ಯಾಲ್ಸಿಯಂ, ಲೋಹ, ಸೋಡಿಯಂ, ಆಲ್ಕೊಹೋಲ, ಸಕ್ಕರೆ, ಗ್ಲಿಸ್ರಿನ್, ಜೀವಜನ್ಯ ಆಮ್ಲಗಳು, ಟ್ಯಾನಿನ್, ಈಥರ, ಆಲ್ಡೀಹಾಯಿಡ್ ಮತ್ತು ಅಮಿನೊ-ಆಮ್ಲಗಳು ಎಂಬೀ ಪದಾರ್ಥಗಳಿರುತ್ತವೆ. ಅದರಲ್ಲಿ ವಿಟ್ಯಾಮಿನ್ನುಗಳು ಇರುವವಲ್ಲದೆ, ಅದು 'ರೇಡಿಯೊ-ಆ್ಯಕ್ಟಿವ್' ಇರುತ್ತದೆ. ಆದುದರಿಂದ ಅನ್ನದ ದೃಷ್ಟಿಯಿಂದ ಅದು ಅತ್ಯುಪಯುಕ್ತವಾಗಿದೆ. ಅದು ರುಚಿಕಟ್ಟಾಗಿರುವುದರಿಂದ ಊಟದೊಡನೆ ಸೇವಿಸಿದರೆ ಅನ್ನಕ್ಕೆ ಅಗತ್ಯವಾಗಿರುವ ಪಾಚಕರಸವು ಅಧಿಕಪ್ರಮಾಣದಲ್ಲಿ ಸ್ರವಿಸುತ್ತದೆ. ಅದರಿಂದ ಹಸಿವು ಚೆನ್ನಾಗಿ ಆಗುವುದಲ್ಲದೆ, ಪಚನಕ್ರಿಯೆಯೂ ಸರಿಯಾಗಿ ಸಾಗುತ್ತದೆ. ಅದರ ಸುಪರಿಣಾಮವು ಅಂತಃಸ್ರಾವಗ್ರಂಥಿಗಳ ಮೇಲೆ ಆಗುವುದರಿಂದ, ಒಟ್ಟು ಶರೀರಪೋಷಣಕ್ರಿಯೆಗೆ ಉತ್ತೇಜನ ದೊರೆತು, ಸ್ನಾಯು-ಜ್ಞಾನತಂತುಗಳೆರಡೂ ಚೆನ್ನಾಗಿ ಪೋಷಿತವಾಗಿ, ಹೆಚ್ಚು ಕಾರ್ಯಕ್ಷಮವಾಗುತ್ತವೆ.

ಮದ್ಯವು ಜಂತುನಾಶಕವಾಗಿರುವುದರಿಂದ, ಟಾಯ್ಫಾಯಿಡ್ (ವಿಷಮಜ್ವರ), ಅಪೆಂಡಿಸಿಟಿಸ್ (ಕರುಳಿನ ಬೇನೆ), ಅಮಾಂಶ ಮೊದಲಾದುವುಗಳಿಂದ ಅದು ರಕ್ಷಿಸುತ್ತದೆ. ಅದನ್ನು ಯೋಗ್ಯಪ್ರಮಾಣದಲ್ಲಿ ಸೇವಿಸುವವರಿಗೇ ಈ ಲಾಭಗಳೆಲ್ಲ ದೊರೆಯುತ್ತವೆ; ಈ ಯೋಗ್ಯಪ್ರಮಾಣವು ವಯಸ್ಸು, ಲಿಂಗ, ಜೀವನದರ್ಜೆ, ಹವಾಗುಣ ಇ.ಗಳನ್ನೆಲ್ಲ ಅವಲಂಬಿಸಿರುವುದು. ಅದನ್ನು ಹೆಚ್ಚಾಗಿ ಸೇವಿಸುವುದರಿಂದ ಕೆಟ್ಟ ಪರಿಣಾಮವಾಗುವುದು; ವಿಶೇಷವಾಗಿ ಜಠರ, ಪಿತ್ತಾಶಯ, ಮೂತ್ರಪಿಂಡಗಳ ಮೇಲೆ ಅದರ ಪರಿಣಾಮವು ಬಹಳ ಕೆಟ್ಟದಾಗುವುದು. ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡರೂ, ಭಟ್ಟಿಯ ಸಹಾಯದಿಂದ ತಯಾರಿಸಿದ ಮದ್ಯಾರ್ಕಗಳನ್ನು (ಎಂದರೆ ಬ್ರಾಂಡಿ, ವ್ಹಿಸ್ಕಿ ...) ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡದ್ದಕ್ಕಿಂತ ಪಾಲು ವಾಸಿ.

ಪೂರ್ತಿ ಬೆಳೆವಣಿಗೆ ಹೊಂದಿದ ಮನುಷ್ಯನಿ[ಗೆ] ಅತ್ಯಂತ ಉಪಯುಕ್ತವಾಗಿದೆ; ವಿಶೇಷತಃ ರಟ್ಟೆ[...] ಮಡಿಯುವವರಿಗೆ ಹೆಚ್ಚಾಗಿ ಪ್ರಯೋಜನಕ[...] ವೃದ್ಧರ ಪಚನಶಕ್ತಿಯು ಕಡಿಮೆಯಾಗಿದ್ದರೆ [...] ಯೋಗಬೀಳುವುದಲ್ಲದೆ, ಸ್ತ್ರೀಯರ ಪ್ರಕೃತಿಗೂ [...] ರುತ್ತದೆ. ಇಷ್ಟೇ ಅಲ್ಲ, ಚಿಕ್ಕ ಕೂಸುಗಳು ಎಲ್ಲ[...] ಆಹಾರವನ್ನು ಸೇವಿಸತೊಡಗಿದ ಮೇಲೆ ಇದನ್ನ[...] ಪ್ರಮಾಣದಲ್ಲಿ ಕೊಡಲು ಅಡ್ಡಿಯಿಲ್ಲ.

ಟಾಯ್ಫಾಯಿಡ್, ಕಾಲರಾ, ಅಮಾಂಶ, ಜಂತ[...] ಬೀಜವು ನೀರಿನ ಮಾರ್ಗವಾಗಿ ಹೊಟ್ಟೆಯಲ್ಲಿ[...] ತ್ತದೆ; ಆ ಅಂಜಿಕೆಯು ಮದ್ಯದ ಬಗ್ಗೆ ಇರಬ[...] (ಈ ಮದ್ಯದಲ್ಲಿ ಆಲ್ಕೊಹೋಲದ ಪ್ರಮಾಣವ[...] ವಿದ್ದುದರಿಂದ ಯುರೋಪಿನಲ್ಲಿ ನೀರಿನ ಬದಲ[...] ವನ್ನೇ ಉಪಯೋಗಿಸುವ ಜನರು ಹಲವರ[...] ಮದ್ಯಾರ್ಕದಿಂದಾಗುವ ಅನಿಷ್ಟ ಪರಿಣಾಮಗಳು [...] ಆಗುವುದಿಲ್ಲ. ಟಾಯ್ಫಾಯಿಡ್, ನ್ಯೂಮೋನಿಯಾ[...] ರಿಯಾ, ಅತಿಸಾರ ಮೊದಲಾದ ಬೇನೆಗಳಲ್ಲಿ [...] ಉಪಯೋಗವು ಜಂತುನಾಶಕವಾಗಿಯೂ ಉತ್ತೇ[ಜಕವಾ]ಗಿಯೂ ಶಕ್ತಿವರ್ಧಕವಾಗಿಯೂ ಆಗುತ್ತದೆ. ಕ್ಷಯ[...] ಮಧುಮೇಹ, ರಕ್ತಸ್ರಾವ ಮೊದಲಾದ ರೋಗಗಳ[...] ಇದರ ಉಪಯೋಗವಿದೆ.

ಅಲ್ಜೀರಿಯದಲ್ಲಿ ನೆರೆದ ಫ್ರೆಂಚ್ ವೈದ್ಯಕೀಯ[...] ತ್ತಿನಲ್ಲಿ ಸೇರಿದ ಡಾಕ್ಟರರ ಅಭಿಪ್ರಾಯವನ್ನು [...] ವಿವರಿಸಬಹುದು. ೧. ನೂರಕ್ಕೆ ೯೨ ಡಾಕ್ಟರರ [...]ಗಳು ಮದ್ಯದ ಹೊರತು ಬಾಳುವುದೆ ಸಾಧ್ಯವಿಲ್ಲವೆಂಬ[...] ದ್ದರೂ, ಫ್ರೆಂಚ್ ಜನರ ಪ್ರಕೃತಿಯ ದೃಷ್ಟಿಯಿಂದ [...] ಅತ್ಯಂತ ಉಪಯುಕ್ತವಾಗಿದೆ. ೨. ನೂರಕ್ಕೆ [...] ರರ ಅಭಿಪ್ರಾಯದಲ್ಲಿ, ಮದ್ಯವು ಔಷಧದ[...] ಉಪಯುಕ್ತವಾಗಿದೆ; ಆದರೆ ಕೆಲವು ರೋಗಗಳ [...] ಅದನ್ನು ನಿಷೇಧಿಸುವುದು ಯೋಗ್ಯವಾಗಿದೆ. ೩. [...] ೮೩ ಡಾಕ್ಟರರ ಅಭಿಪ್ರಾಯದಲ್ಲಿ, ಮದ್ಯಾರ್ಕದ [...] ಗಳನ್ನು ಮದ್ಯದ ಮೇಲೆ ಹೇರದೆ ಎರಡರಲ್ಲಿಯೂ [...] ಸುವುದು ಅಗತ್ಯವಿದೆ.

—THE PRESS [...]

ಕೂಲಿಕಾರರ ತಂಟೆಗಳಿಂದಾಗುವ ಆರ್ಥಿಕ ನಷ್ಟವನ್ನು ಜಿನೀವದ ಅಂತರರಾಷ್ಟ್ರೀಯ ಕೂಲಿಕಾರ ಕಾರ್ಯಾಲಯ (International Labour Office)

ಮುಷ್ಕರಗಳಿಂದಾಗುವ ಹಾನಿ

ದವರು ಲೆಕ್ಕಹಾಕಿ ತಮ್ಮ 'ವಾರ್ಷಿಕ ಪುಸ್ತಕ (Year Book)' ದಲ್ಲಿ ಪ್ರಕಟಿಸಿದ್ದಾರೆ:

ಕಳೆದ ವರ್ಷ, ೨೧ ದೇಶಗಳಲ್ಲಿ ಸೇರಿ, ಸಂಪುಗಳ ಮೂಲಕ ೩ ಕೋಟಿ ದಿನಗಳ ಕೆಲಸವು ಹಾಳಾಯಿತು.

೬೬೮೪ ಜಗಳಗಳಲ್ಲಿ ಒಟ್ಟು ೨,೪೨೩,೬೮೪ ಕೂಲಿಕಾರರು ಸಿಕ್ಕಿಕೊಂಡಿದ್ದರು.

ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಈ ವಿಷಯದಲ್ಲಿ ಅಗ್ರಸ್ಥಾನವು ಸಿಗುತ್ತದೆ: ಅಲ್ಲಿ ೨೧೭೨ ಜಗಳಗಳಲ್ಲಿ ೭೮೮,೬೪೮ ಜನ ಕೂಲಿಕಾರರು ಕಟ್ಟು ಮಾಡಿದುದಕ್ಕಾಗಿ ೧೪,೦೦೦,೦೦೦ ಕೂಲಿಯ ದಿನಗಳು ವ್ಯರ್ಥಹೋದವು. ತರುವಾಯ ಪೋಲಂಡು ಬರುತ್ತದೆ: ಅಲ್ಲಿ ೨೦೫೮ ತಂಟೆಗಳಲ್ಲಿ ೬೬೪,೬೦೦ ಜನ ಕೆಲಸಗಾರರು ತೊಡಗಿದ್ದರ ಫಲವಾಗಿ ೪೦೦೬,೫೦೦ ಕೆಲಸದ ದಿನಗಳನ್ನು ಕಳೆದರು.

ಬ್ರಿಟನ್ನಿನಲ್ಲಿ ಒಟ್ಟು ೮೦೮ ಜಗಳಗಳಲ್ಲಿ ೩೧೫೦೦೦ ಜನರು ತೊಡಗಿ, ೧,೮೩೦,೦೦೦ ದಿನಗಳ ನಷ್ಟವಾಯಿತು.

—THE SUNDAY STANDARD

"Transport is Civilization" ಎಂದು ಇಂಗ್ಲಿಷಿನಲ್ಲಿ ಒಂದು ಗಾದೆಮಾತಿದೆ. ಪ್ರವಾಸ-ಪ್ರಯಾಣ-ವ್ಯಾಪಾರ ಪ್ರಸಾರಗಳಲ್ಲಿಯೆ ಸಂಸ್ಕೃತಿಯಡಗಿದೆ. ಹಿಂದುಸ್ತಾನದ

ಭಾರತೀಯ ನಾವಿಕವಿದ್ಯೆ

ಪ್ರಾಚೀನಸಂಸ್ಕೃತಿಯು ಜಗತ್ತಿನಲ್ಲೆಲ್ಲ ಪ್ರಸರಿಸಿದ್ದುದರ ಆಧಾರಗಳು ಸಿಕ್ಕಿವೆ. ಬಾಲಿ, ಜಾವಾ, ಚೀನ, ಇಜಿಪ್ತ, ದಕ್ಷಿಣ ಅಮೆರಿಕೆಯ ಮೆಕ್ಸಿಕೊ, ಚಿಲೀಗಳ ವರೆಗೆ ಹಿಂದುಸ್ತಾನದ ರೀತಿನೀತಿ, ಸಾಹಿತ್ಯ, ಧರ್ಮ, ರಾಜ್ಯಶಾಸ್ತ್ರಗಳು ಹೋಗಿ ತಲುಪಿದ್ದವು. ದ್ರಾವಿಡ ಧರ್ಮಪ್ರಚಾರಕರು ಉತ್ತರ ಯುರೋಪ್, ದಕ್ಷಿಣ ಪ್ಯಾಸಿಫಿಕ್ ಪ್ರದೇಶಗಳಲ್ಲಿ ಧರ್ಮಪ್ರಸಾರವನ್ನು ಮಾಡುತ್ತಿದ್ದರು. ಮೆಲೆನೇಶಿಯಾ, ಪೊಲಿನೇಶಿಯಾ ಮೊದಲಾದ ಪ್ರದೇಶಗಳಲ್ಲಿ ಹಿಂದೂ ಸಂಸ್ಕೃತಿಯ ಪ್ರತಿಬಿಂಬವು ಈಗಲೂ ತೋರಿಬರುತ್ತಿದೆ; ಫಿಲಿಪಾಯಿನ್ಸದಲ್ಲಿಯ ಜನರ ಭಾಷೆ-ರೀತಿ-ನೀತಿಗಳಲ್ಲಿ ತಮಿಳು ನುಡಿ-ನುಡಿಗಳ ಹೋಲಿಕೆಯು ಕಂಡುಬರುತ್ತದೆ.

ಸಂಸ್ಕೃತಿಯ ಉಪಾಯನವನ್ನು ಸಾವಿರಾರು ಮೈಲು ದೂರ ಮುಟ್ಟಿಸುವುದು ಸಮುದ್ರಯಾನವಿಲ್ಲದೆ ಸಾಧ್ಯವಾಗಿರಲಾರದು. ಅದಕ್ಕೆ ಬೇಕಾಗುವ ಹಡಗುಗಳು ವಿಶಾಲವೂ ತುಂಬಾ ಗಟ್ಟಿಮುಟ್ಟಿಯೂ ಆಗಿರಲೇಬೇಕು. ಇಂತಹ ಪ್ರಚಂಡಾಕಾರದ ಹಿಂದುಸ್ತಾನದ ಹಡಗುಗಳು ಕ್ರಿಸ್ತಪೂರ್ವದಲ್ಲಿ ಮತ್ತು ತದನಂತರವೂ ಕೆಲವು ಶತಮಾನಗಳ ಕಾಲ ಬ್ರಿಟನ್ನಿನ ಮತ್ತು ಜರ್ಮನಿಯ ದಂಡೆಗಳಲ್ಲಿ ಕಂಡುಬರುತ್ತಿದ್ದವು. ಆರ್ಕ್ಟಿಕ್ ಮಹಾಸಾಗರದಲ್ಲಿಯೂ ಹಿಂದೀ ಸಮುದ್ರಯಾನಗಳು ಸಂಚರಿಸುತ್ತಿದ್ದವೆಂದು ಉಲ್ಲೇಖಗಳು ದೊರೆಯುತ್ತಿವೆ.

ಕ್ರಿಸ್ತಶಕದ ಮೊದಲನೆಯ ೧೦ ಶತಮಾನಗಳಲ್ಲಿ ಹಿಂದೀ ನೌಕೆಗಳ ಸಂಚಾರವು ಜಗತ್ತಿನಲ್ಲೆಲ್ಲ ಅಪ್ರತಿಬದ್ಧವಾಗಿ ಸಾಗಿತ್ತೆಂದು ಹೇಳಬಹುದು. Lacouper ಎಂಬ ಲೇಖಕನೊಬ್ಬನು, ಇ. ಸ. ೧ನೆಯ ಶತಮಾನದಲ್ಲಿಯೇ ಹಿಂದೂ ಜನರು ಕಂಬೋಡಿಯದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದ್ದರೆಂದೂ ಹಿಂದುಸ್ತಾನದ ಸಮುದ್ರಶ್ರೇಷ್ಠಿಗಳು ಚೀನದ ತೀರದಲ್ಲಿರುವ 'ಕಿಯೋತ್ಸು' ವಿನ ವರೆಗೆ ಪರ್ಯಟನ ಮಾಡಿ ಒಕ್ಕಲೂರಿದ್ದರೆಂದೂ ಬರೆದಿರುವನು. Standford Raffels ಎಂಬಾತನು ತನ್ನ 'ಜಾವಾ ಚರಿತ್ರೆ' (History of Java) ಎಂಬ ಗ್ರಂಥದಲ್ಲಿ, 'ಇ.ಸ. ೬೦೩ರ ಸುಮಾರಿಗೆ ಗುಜರಾತದ ರಾಜ್ಯಕರ್ತನೊಬ್ಬನು ತನ್ನೊಬ್ಬ ಮಗನನ್ನು ೫೦೦೦ ಜನರೊಡನೆ ಜಾವಾದ್ವೀಪಕ್ಕೆ ಕಳುಹಿದನು; ಅವನೊಂದಿಗೆ ಆರು ದೊಡ್ಡ ಸಮುದ್ರಯಾನಗಳೂ ನೂರು ಸಣ್ಣ ಹಡಗುಗಳೂ ಇದ್ದವು. ಆ ರಾಜಪುತ್ರನು ಜಾವಾದಲ್ಲಿ ಒಂದು ನಗರವನ್ನು ಸ್ಥಾಪಿಸಿ, ಮತ್ತೆ ೨೦೦೦ ಜನರನ್ನು ಹಿಂದುಸ್ತಾನದಿಂದ ಕರೆಯಿಸಿಕೊಂಡನು' ಎಂದು ಬರೆದಿರುವನು. ಜಾವಾದೊಡನೆ ಹಿಂದುಸ್ತಾನದ ಬಳಕೆಯು ಬಹಳ ಪ್ರಾಚೀನವಾದುದಾಗಿದೆ.

ಕ್ರಿ. ಶ. ೧೦ನೆಯ ಶತಮಾನದ ತರುವಾಯ ಭಾರತೀಯ ನೌಕಾನಯನಕ್ಕೆ ಇಳಿಗಾಲ ಬಂದುದಾಗಿ ಕಂಡುಬರುವುದು. ಪೂರ್ವದಿಕ್ಕಿನ ಜಾವಾ, ಬಾಲಿ, ಚೀನ ಮೊದಲಾದ ಕಡೆಯ ಅವರ ಪರ್ಯಟನವು ನಿಂತುಹೋಯಿತು. ಚಿಲೀ, ಮೆಕ್ಸಿಕೊಗಳೂ ದೂರವಾಗಿ, ಅರಬಸ್ತಾನ ಮತ್ತು ಪೂರ್ವ ಆಫ್ರಿಕಾತೀರಗಳ ಮಟ್ಟಿಗೆ ಮಾತ್ರ ಸಮುದ್ರವ್ಯಾಪಾರವು ನಡೆದುಕೊಂಡು ಬಂದಿತು. ಈಗಲೂ ಅದೊಂದಾದರೂ ಉಳಿದುದು ನಮ್ಮ ಸುದೈವವೇ ಸರಿ.

ಮೇಲಣ ಕಾಲಖಂಡದಲ್ಲಿ ಭಾರತೀಯರ ನೌಕಾವಿದ್ಯೆಗೆ ಅವನತಿಯು ಪ್ರಾಪ್ತವಾಗಿದ್ದರೂ ಆಫ್ರಿಕಾಖಂಡದ ಪೂರ್ವ ತೀರದಲ್ಲಿ ಪೇಢಿಗಳನ್ನು ಹಾಕಿಕೊಂಡು ಹಿಂದೀ ವರ್ತಕರು ವ್ಯಾಪಾರವನ್ನು ನಡೆಯಿಸಿದುದನ್ನು ಪೋರ್ತುಗೀಜರು ಕಂಡರು. ಇಷ್ಟೇ ಅಲ್ಲ, "ಕೇಪ್ ಆಫ್ ಗುಡ್ ಹೋಪ್" (ಆಶಾಭೂಶಿರ)ಕ್ಕೆ ಸುತ್ತುಹಾಕಿ ಹಿಂದುಸ್ತಾನವನ್ನು ಹುಡುಕುತ್ತ ಬಂದ ವಾಸ್ಕೊ ಡಿ ಗಾಮಾನನ್ನು ಝಾಮೋರಿನನ ಕಾಲಿಕತ ಬಂದರಕ್ಕೆ ತಂದು ಮುಟ್ಟಿಸುವ ಕೆಲಸವನ್ನು ಪೂರೈಸಿದವನು ಕಾನಜೀಮಾಲಮ ಎಂಬ ಹೆಸರಿನ ಭಡಾಲಿ ಜಾತಿಯ ಒಬ್ಬ ಕಚ್ಛಿ ಹಿಂದುವೇ ಆಗಿದ್ದನು. (ಗಾಮಾನಿಗೆ ಹಿಂದುಸ್ತಾನದ ಹಾದಿಯನ್ನು ತೋರಿಸಿದವನು ತಿಮ್ಮಯ್ಯ ಎಂಬ ಹೆಸರಿನ ಹಿಂದೂ ವ್ಯಾಪಾರಿಯಾಗಿದ್ದನೆಂತಲೂ ಕೆಲವೆಡೆಯಲ್ಲಿ ಉಲ್ಲೇಖವಿದೆ.)

೧೭ನೆಯ ಶತಮಾನದಿಂದೀಚೆಯ ಹಿಂದೀ ಹಡಗುಗಳ ಉಲ್ಲೇಖಗಳು ಹಲವು ದೇಶೀಯ ಪರದೇಶಿಯ ಜನರ ಕಾಗದಪತ್ರಗಳಲ್ಲಿ ಕಂಡುಬರುತ್ತವೆ. ೧೬೧೧ರಲ್ಲಿ ಒಬ್ಬ ಇಂಗ್ಲಿಷ್ ಹಡಗಿನ ಕಪ್ತಾನನು (Captain Saris) ಒಂದು ಹಿಂದೀ ಹಡಗಿನ ಅಳತೆಯನ್ನು ಮಾಡಿದ್ದನು. ಅದು ೧೫೩ ಫೂಟು ಉದ್ದವೂ, ೪೨ ಫೂಟು ಅಗಲವೂ,೩೧ ಫೂಟು ಎತ್ತರವೂ ಆಗಿದ್ದಿತು. ನಿಕೋಲ ಕಾಂಟೆ ಎಂಬ ಪ್ರವಾಸಿಯು ಒಂದು ಕಡೆ ಹೀಗೆ ಬರೆದಿರುವನು: 'ಒಂದೊಂದಕ್ಕೆ ೧೫,೦೦೦ ವರಹ ಬೆಲೆಯಿರುವ ಎಷ್ಟೆಷ್ಟೋ ಹಡಗುಗಳನ್ನು ಇಟ್ಟುಕೊಂಡಿರುವ ವ್ಯಾಪಾರಿಗಳು ಹಿಂದುಸ್ತಾನದಲ್ಲಿದ್ದಾರೆ.'

'ಐನ ಅಕಬರಿ'ಯಲ್ಲಿ ಇಂತು ಉಲ್ಲೇಖವಿದೆ: 'ಸಿಂಧ ಪ್ರಾಂತದಲ್ಲಿಯ ಶಠ್ಠಾದಿಂದ ಕಚ್ಛತೀರದ ಶಂಖೋದ್ಧಾರ ನಡುಗಡ್ಡೆಯ ವರೆಗೆ ೪೦,೦೦೦ ಸಣ್ಣದೊಡ್ಡ ಹಡಗುಗಳು ಸದಾಸಿದ್ಧವಾಗಿ ನಿಂತಿರುವವು.' ಗುಜರಾತದ ಸುಲ್ತಾನರನ್ನು 'ಕಡಲಿನೊಡೆಯ'ರೆಂದು ಕರೆಯುತ್ತಿದ್ದರು. ಅವರಲ್ಲೊಬ್ಬನಾದವನ 'ಅಲಬಹಾರ' ಎಂಬ ಹೆಸರಿನಿಂದ ಮುಂದೆ 'ಆ್ಯಡ್ಮಿರಲ್' ಎಂದರೆ ಹಡಗುಪಡೆಯ ಸೇನಾನಿ ಎಂಬರ್ಥದ ಶಬ್ದವು ರೂಢವಾಯಿತಂತೆ.

೧೫ನೆಯ ಶತಮಾನದಲ್ಲಿ ಹಿಂದುಸ್ತಾನಕ್ಕೆ ಬಂದ ಅಬ್ದುಲ ರಝಾಕ ಎಂಬ ಅರಬ್ಬೀಪ್ರವಾಸಿಯು ಬರೆಯುವುದೇನಂದರೆ, "ಸ್ವಂತದ ಸ್ವಾಮಿತ್ವದ ನಾಲ್ವತ್ತು ನಾಲ್ವತ್ತು ಹಡಗುಗಳನ್ನುಳ್ಳ ವರ್ತಕರು ಪ್ರತಿಬಂದರದಲ್ಲಿಯೂ ಇದ್ದಾರೆ. ಈ ೨೦೦೦ ಮೈಲು ಉದ್ದವಾದ ಸಮುದ್ರತೀರದ ಮೇಲೆ ಇಂತಹ ಎಷ್ಟೆಷ್ಟೋ ಬಂದರಗಳಿವೆ. ಒಬ್ಬ ವಿಜಯನಗರದ ದೊರೆಯ ವಶದಲ್ಲಿ ಕಾಲಿಕತದಂತಹ ... ಬಂದರಗಳಿವೆ!"

ಮರಾಟರ ನೌಕಾವಿದ್ಯೆಯು ೧೭ನೆಯ ಶತಮಾನದಲ್ಲಿ ಶಿವಛತ್ರಪತಿಯು ನೌಕಾದಲವನ್ನು ಸ್ಥಾಪಿಸಿದಂದಿನಿಂದ ಪ್ರಕರ್ಷವನ್ನು ಪಡೆಯಿತೆಂದು ಹೇಳಬಹುದು. ತತ್ಪೂರ್ವದಲ್ಲಿ 'ಕಡಲುಗಳ್ಳತನ' ಮಾತ್ರ ಈ ತೀರದಲ್ಲಿ ಹಬ್ಬಿಕೊಂಡಿತ್ತು. ಈ ಕಡಲುಗಳ್ಳರ ಹಡಗುಗಳು ... ದಾಗಿದ್ದು ಚಿಕ್ಕವೂ ಚಪಲವೂ ಆಗಿದ್ದು ಬೇಕಾದ್ದನ್ನು ಮುಟ್ಟಿಸಲು ಬರುವಂತಹವಿದ್ದುವು. ಹಡಗುಪಡೆಯನ್ನು ಏರ್ಪಡಿಸಿದ ಮೇಲೆ ಮಾತ್ರ ನೌಕಾನಯನ ವಿದ್ಯೆಯು ... ಹಡಗು ಕಟ್ಟುವ ವಿದ್ಯೆಗೂ ಪ್ರೋತ್ಸಾಹನ ಸಿಕ್ಕಿತು. ... ಟರ ನೌಕಾಶಿಲ್ಪದ ಒಂದು ಉದಾಹರಣೆಯೆಂದರೆ, ... ಹಡಗುಪಡೆ. ನಿಪ್ಪವಾಗಿ ವಿಜಯದುರ್ಗವು ... ಕೈಸೇರಿದಾಗ ಅಲ್ಲಿ ೪೩೦ ಟನ್ ಭಾರವಾಗಿದ್ದ ೪೫೦ ... ಉದ್ದವೂ, ೩೩ ಫೂಟು ಅಗಲವೂ ಆದ ಹಡಗು ... ಸಿಕ್ಕಿತು.

೧೭ನೆಯ ಮತ್ತು ೧೮ನೆಯ ಶತಮಾನಗಳಲ್ಲಿ ಮರಾಠರ ಹಡಗುಪಡೆಯು ಆಂಗ್ರೆ-ಧುಳಪರ ನೇತೃತ್ವದಲ್ಲಿ ... ಸಮುದ್ರದಲ್ಲಿ ಹಾವಳಿಯೆಬ್ಬಿಸಿ, ಪೋರ್ತುಗೀಜ, ಇಂಗ್ಲಿಷ್ ಇ. ಯುರೋಪೀಯರ ಸ್ವೈರವಿಹಾರಕ್ಕೆ ... ನ್ನೊಡ್ಡಿ, ಅವರ ಮೇಲೆ ಕರ ತೆರಿಗೆ ಹೇರಿ, ಅವರ ... ಕಪ್ತಾನರನ್ನು ಸೆರೆ ಹಿಡಿದು ಇನ್ನೆಷ್ಟೆಷ್ಟೋ ... ದರೂ, ಆದರ ಆಕ್ರಮಣದ ಸೀಮೆಯು ... ಖಂಬಾಯತಗಳಾಚೆಗೆ ಎಂದೂ ಹಬ್ಬಲಿಲ್ಲ. ವ್ಯಾಪ... ವಾದ ಸಮುದ್ರಯಾನವು ಅವರ ಗಮನವನ್ನೆಂದೂ ... ಲಿಲ್ಲ. ಶಿವಾಜಿಯೊಬ್ಬನೇ ಅರಬಸ್ತಾನಕ್ಕೆ ... ಎರಡು ಹಡಗುಗಳಲ್ಲಿ ಮಾಲು ತುಂಬಿ ಸಿದ್ಧವಾಗಿ... ಉಲ್ಲೇಖವು ದೊರೆಯುತ್ತದೆ.

ನೌಕಾನಯನಶಾಸ್ತ್ರದ ಮಟ್ಟಿಗೆ ಹೇಳುವುದಾದರೆ ಕಾಠೇವಾಡ ತೀರದ ಸಮುದ್ರ ಸಂಚಾರಿಗಳ ನೌ... ಮೂಲದಲ್ಲಿ ಭಾರತೀಯವೆಂದು ಹೇಳಬಹುದು. ... ತೀರದ ಜನರು ಈ ವಿದ್ಯೆಯನ್ನು ಅರಬರಿಂದ ... ಮಲಬಾರದ ಕೋಚೀನ-ಕಾಲಿಕತ ಬಂದರಗ... ಅರಬರ ವ್ಯಾಪಾರಸಂಬಂಧವು ಹಲವು ಶತಮಾನ... ಬಂದುದರಿಂದ ಇದು ಸ್ವಾಭಾವಿಕವೇ ಆಗಿದೆ. ... ಪಟ್ಟೆಯ ಜನರು ಆತ್ಮಸಾತ್ತಾಗಿ ಮಾಡಿದ ನೌ... ಮೂಲದಲ್ಲಿ ಹಟಬಿಗಳಿಂದಲೆ ಬಂದುದಾಗಿರಬೇಕು.

ದ ಸಿದ್ದೀ ಜನರು ತಮ್ಮ ಹಡಗುಪಡೆಗಾಗಿ ಕೊಂಕಣದ ಭಂಡಾರಿಗಳ ಭರತಿಮಾಡಿಕೊಂಡು ಅವರನ್ನು ಈ ಕಲೆಯಲ್ಲಿ ತರಬೇತು ಮಾಡಿದುದರ ಉಲ್ಲೇಖವಿದೆ. ಮರಾಠರ ನೌಕಾದಲ ಸ್ಥಾಪನೆಯ ತರುವಾಯ ಈ ಕಲೆಯೆ ಬೆಳವಣಿಗೆಯನ್ನು ಪಡೆದಿದ್ದರೆ ಸೋಜಿಗವಿಲ್ಲ.

ಇದೀಗ ಪಶ್ಚಿಮತೀರದ ಎಲ್ಲಾ ಭಾಗಗಳಲ್ಲಿಯೂ ಅಂದರೆ ಸಿಂಧ, ಕಚ್ಛ, ಗುಜರಾತ, ಮಹಾರಾಷ್ಟ್ರ, ಕರ್ನಾಟಕ, ಮಲಬಾರ ಮೊದಲಾದ ಕಡೆಗೆಲ್ಲಾ ನೌವಿದ್ಯೆಗೆ ಸಂಬಂಧಿಸಿದ ಪರಿಭಾಷೆಯಲ್ಲಿಯೂ ಹಡಗುಗಳ ಹೆಸರುಗಳಲ್ಲಿಯೂ ಅರಬ್ಬೀ ಶಬ್ದಗಳ ಸರಿಬೆರಿಕೆಯು ಕಂಡುಬರುತ್ತದೆ. ಅರಬ್ಬೀ ಸಮುದ್ರದಲ್ಲಿಯ ಹಲವು ಶತಮಾನಗಳ ಕಾಲದ ಸಂಘರ್ಷ-ಸಂಪರ್ಕದಿಂದ ಹೀಗಾಗಿರುವುದು ಸಾಧ್ಯವಿದೆ. ಈ ನಾವಿಕಪರಿಭಾಷೆಯಲ್ಲಿಯ ಕೆಲವು ಅರಬ್ಬೀ ಶಬ್ದಗಳು ಮೂಲದಲ್ಲಿ ಭಾರತೀಯವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ; ಇದರಿಂದಲೆ ಅರಬ್ಬೀ ಜನರು ನೌವಿದ್ಯೆಯನ್ನು ಭಾರತೀಯರಿಂದಲೆ ಪಡೆದುಕೊಂಡಿರಬೇಕೆಂದು ಹಲವರು ಸಿದ್ಧಾಂತಿಸುತ್ತಾರೆ.

—चित्रमयजगत्

ಗುಕ್ಕುವ-ತೊದಲುವ ಜನರನ್ನು ನಾವು ಪ್ರತಿನಿತ್ಯವೂ ಕಾಣುತ್ತೇವೆ. ಅವರು ಎಡಚೆಡಚಾಗಿ ಮಾತನಾಡುವುದನ್ನು ಕೇಳಿ ಗೇಲಿ ಮಾಡುತ್ತೇವೆ.

ತೊದಲುವವರಿಗೆ ವಾಕ್ಸಿದ್ಧಿ

ಒಬ್ಬ ತೊದಲುವ ತಿಮ್ಮಯ್ಯನಿದ್ದನಂತೆ. ಅವನಿಗೆ 'ತ'ಕಾರದ ಉಚ್ಚಾರವು ಸರಿಯಾಗಿ ಬರುತ್ತಿಲ್ಲವಂತೆ. ಒಮ್ಮೆ ಆ ಮಹಾನುಭಾವ ಎತ್ತಿನ ಬಂಡಿಯೊಳಗಿಂದ ಪ್ರವಾಸ ನಡೆಸಿದ್ದನಂತೆ. ಹಾದಿಯಲ್ಲೊಂದು ತಗ್ಗಿತ್ತು. ಬಂಡಿ ಹೊಡೆಯುವವನಿಗೆ 'ಆ ತಗ್ಗು ನೋಡು' ಎಂದು ಅವನಿಗೆ ಹೇಳಬೇಕಾಗಿತ್ತು. ಆದರೆ ಮಾತಿಗಾಗಿ ಬಾಯಿತೆರೆದು ಆ ತಗ್ಗಿನ ಸೂಚನೆ ಮಾಡುವ ವರೆಗೆ ಬಂಡಿ ತಗ್ಗಿನಲ್ಲಿ ಬಿತ್ತು, ಕೂಡ! ಅಥವಾ ಬಿದ್ದ ಧಕ್ಕೆಯಿಂದಲೆ ಆ ಪ್ರವಾಸಿಯ ಬಾಯಿಂದ ತಕಾರವು ಹೊರಬಿತ್ತು!

ಈ ಶಾರೀರಿಕ ವೈಗುಣ್ಯಕ್ಕೆ ನಾವೆಲ್ಲರೂ ಹೊಟ್ಟೆತುಂಬ ನಗುತ್ತೇವೆ. ಆದರೇ ಈ ವೈಗುಣ್ಯವನ್ನು ಕುರಿತು ಸಹಾನುಭೂತಿಯುತವಾಗಿ ಎಂದಾದರೂ ಆಲೋಚಿಸಿರುವೆವೋ? ಈ ಲೋಪವು ಕೇವಲ ಶಾರೀರಿಕವಾಗಿರುತ್ತದೆಂತಲ್ಲ. ಮನಃಶಾಸ್ತ್ರಜ್ಞರು ಇದಕ್ಕೆ 'ಮಾನಸಭೀರುತೆ' (Psychic Fear) ಯೆ ಕಾರಣವಾಗಿದೆಯೆಂದು ಹೇಳುತ್ತಾರೆ. ಒಬ್ಬ ಅಮೆರಿಕನ್ ಡಾಕ್ಟರರ ಲಕ್ಷ್ಯವು ಈ ವಿಷಯದತ್ತ ಹೊರಳಿ, ಸುಮಾರು ೩೦ ವರ್ಷದ ಅವಿಶ್ರಾಂತ ಪರಿಶ್ರಮದಿಂದ 'ಮೂಕಂ ಕರೋತಿ ವಾಚಾಲಂ' ಎಂಬಂತೆ ಅವರು ಅದ್ಭುತ ಕ್ರಾಂತಿಯನ್ನು ಮಾಡಿತೋರಿಸಿದ್ದಾರೆ. ಅವರ ಹೆಸರು ಡಾ: ಜೇಮ್ಸ ಸಾನೆಟ್ ಗ್ರೀನ್ ಎಂದಿದೆ. ಅವರು ನ್ಯೂಯಾರ್ಕ ನಗರದಲ್ಲಿರುತ್ತಾರೆ. ಅಲ್ಲಿ ಅವರು ಸುಮಾರು ಸಾವಿರ ಮಂದಿ ತೊದಲುವವರಿಗೆ ಶಿಕ್ಷಣ, ಭಾಷಾಶುದ್ಧಿ ಮತ್ತು ಶಬ್ದೋಚ್ಚಾರಸ್ಪಷ್ಟತೆಯ ಬೆಳವಣಿಗೆಗಳ ಸೌಕರ್ಯಗಳನ್ನು ಒದಗಿಸಿಕೊಡುವ ರುಗ್ಣಾಲಯವನ್ನು ನಡೆಸಿದ್ದಾರೆ.

ಇವರ ಪೂರ್ವಚರಿತ್ರೆಯು ಮನನೀಯವಾದುದಾಗಿದೆ. ಸುಮಾರು ೩೫ ವರ್ಷಗಳ ಕೆಳಗೆ ಡಾಕ್ಟರಮಹಾಶಯರು ಶಿಕ್ಷಣಕ್ರಮವನ್ನು ಮುಗಿಸಿ ಹಳಿಗೆ ಹಚ್ಚಿಕೊಂಡಿದ್ದರು. ರೋಗಿಗಳ ದಾರೀ ನೋಡುವುದರಲ್ಲಿಯೆ ದಿನಗಳು 'ಉರುಳುತ್ತಿದ್ದವು, ತೆರಳುತ್ತಿದ್ದವು.' ಒಂದು ದಿನ ಸಂಜೆಯ ಹೊತ್ತಿನಲ್ಲಿ ಒಬ್ಬ ಕಾಯಿಲೆಯವನು ಅವರ ನಿರ್ಜನ ವೈದ್ಯಕಾಲಯಕ್ಕೆ ಬಂದನು, ಸುತ್ತುಮುತ್ತು ಕಣ್ಣು ಹಾಕಿ ಮಾತನಾಡತೊಡಗಿದನು,—ಅಲ್ಲ ಮಾತನಾಡುವ ಪ್ರಯತ್ನವನ್ನು ಆರಂಭಿಸಿದನು. ಅವನು ತನ್ನ ತೊದಲು ಗುಣವಾಗುವುದಕ್ಕೆ ಔಷಧಿಯನ್ನು ಕೇಳಿದನು. ಡಾಕ್ಟರರಂತೂ ಆ ಮಟ್ಟಿಗೆ ಅಸಮರ್ಥರೇ ಇದ್ದರು. ಹಾಗಿದ್ದರೂ 'ಅಶುಭಸ್ಯ ಕಾಲಹರಣಂ' ಎಂಬಂತೆ ಕೆಲ ದಿನಗಳ ನೇಲೆ ಬರಲು ಹೇಳಿದರು. ರೋಗಿಯು ಹೊರಟುಹೋದನು. ಆಫೀಸಿನ ತಿಂಗಳ ಬಾಡಿಗೆ ಹೇಗೆ ಮುಟ್ಟಬೇಕೆಂಬ ಯೋಚನೆಗೆ ಇದೊಂದು ಹೆಚ್ಚಿನ ಚಿಂತೆಯ ವಿಷಯ ಸೇರಿತು. ಕೆಲ ದಿನಗಳಲ್ಲಿಯೆ ಆ ಗುಕ್ಕುವವನು ತನ್ನ ಒಬ್ಬೊಂಟಿಗಳಾದ ತಾಯಿಯನ್ನು ತೊರೆದು ಆತ್ಮಹತ್ಯೆಯನ್ನು ಮಾಡಿಕೊಂಡನೆಂದು ಸುದ್ದಿ ಬಂದಿತು. ಡಾಕ್ಟರರಿಗೆ ತುಂಬಾ ಬೇಜಾರಾಯಿತು. ಇದಕ್ಕೇನಾದರೂ ಉಪಾಯವನ್ನು ಹುಡುಕಲೇಬೇಕು ಎಂದು ಕೃತಸಂಕಲ್ಪರಾದರು.

ಡಾಕ್ಟರಮಹಾಶಯರು ಈ ಬಗ್ಗೆ ಉಪಲಬ್ಧವಿರುವ ಗ್ರಂಥನಿಷ್ಪತ್ತಿಯನ್ನೆಲ್ಲಾ ತಿರುವಿಹಾಕಿದರು. ಸಮವ್ಯವಸಾಯಿಗಳೊಡನೆ ಚರ್ಚೆಯನ್ನೂ ಮಾಡಿದರು. ಸ್ವತಃ ರೋಗಿಗಳನ್ನು ಉಪಚರಿಸಿ ಪ್ರತ್ಯಕ್ಷಜ್ಞಾನವನ್ನೂ ಸಂಪಾದಿಸಿದರು. ಆದರೂ ಇದಕ್ಕೆ ಸಂಬಂಧಿಸಿದ ವ್ಯಾಸಂಗ

ವನ್ನೆಲ್ಲಾ ಅವರು ಮುಗಿಸಿದುದು, ಗ್ರ್ಯಾಜುಏಟರಾಗಲು ಜರ್ಮನಿಗೆ ಹೋದಾಗಲೇ. ಅಲ್ಲಿ ಅವರು ಡಾ. ಗಟ್ಜರು ಮನ್ ಎಂಬ ವಿಖ್ಯಾತ ಜರ್ಮನ್ ವೈಜ್ಞಾನಿಕನ ಕೈಯಲ್ಲಿ ಶಿಕ್ಷಣ ಪಡೆದರು. ಆ ಜರ್ಮನ್ ಡಾಕ್ಟರನೂ ಗುಕ್ಕುವವರಿಗಾಗಿ—ತೊದಲುವವರಿಗಾಗಿ ಒಂದು ಉಪಚಾರಾಲಯವನ್ನು ತೆರೆದಿದ್ದನಲ್ಲದೆ, ಪ್ರತ್ಯಕ್ಷ ಪ್ರಯೋಗಗಳನ್ನೂ ಕೈಕೊಂಡಿದ್ದನು. ಅಲ್ಲಿ ಅವನು ಕಂಡುಹಿಡಿದುದೇನೆಂದರೆ, ತೊದಲುವುದಕ್ಕೆ ಶಾರೀರಿಕ ವೈಗುಣ್ಯವೆ ಕಾರಣವಾಗಿಲ್ಲ; ಅವರಿಗೆ ಮಾತನಾಡಲು ಬರದಿದ್ದುದಕ್ಕೆ ಕಾರಣವು ಜಿಹ್ವಾ ವಿಕೃತಿ ಅಥವಾ ತತ್ಸಮ ದೋಷವಾಗಿರದೆ, ಹೆಚ್ಚಾಗಿ ಮಾನಸಿಕ ದೋಷವೆ ಆಗಿರುತ್ತದೆ. ತಮಗೆ ಇಂತಹುದೊಂದು ಅಕ್ಷರವು ಉಚ್ಚರಿಸಲು ಬರುವುದಿಲ್ಲವೆಂದು ದೂಷಿತಗ್ರಹಿಕೆಯಾದುದಕ್ಕೆ, ನೂರಕ್ಕೆ ತೊಂಬತ್ತು ಜನ ಗುಕ್ಕುವವರು ಅದನ್ನು ಉಚ್ಚರಿಸಲೇ ಅಸಮರ್ಥರಾಗುವರು. ಈ ತಿಳಿವಳಿಕೆಯನ್ನು ಪಡೆದುಕೊಂಡು ಡಾ. ಗ್ರೀನರವರು ಅಮೆರಿಕೆಗೆ ಮರಳಿದರು. ಇಷ್ಟಾದರೂ ತಾವು ಉಚ್ಚಾರವೈಗುಣ್ಯವುಳ್ಳವರಿಗಾಗಿ ಒಂದು ಉಪಚಾರಗೃಹವನ್ನು ಸ್ಥಾಪಿಸಬಹುದೆಂಬ ಕಲ್ಪನೆ ಅವರಿಗಿರಲಿಲ್ಲ. ಅದಕ್ಕೆ ದುಡ್ಡಿನ ಸಹಾಯದ ಕೊರತೆಯಿದ್ದಿತು. ಅಕಸ್ಮಾತ್ತಾಗಿ ಅವರ ಸಂಭಾಷಣೆಯಿಂದ ಉತ್ತೇಜಿತರಾದ ಅವರ ಮಿತ್ರರೊಬ್ಬರು ೧೦೦೦೦ ಡಾಲರಿನ ಧನಸಹಾಯ ಮಾಡಿದರು. ಅದರ ಅಲ್ಪ ಬಂಡವಾಳದಿಂದ ಡಾ. ಗ್ರೀನರವರು ತೊದಲನ್ನು ತಿದ್ದುವ ಮೊದಲನೆಯ ಧರ್ಮಾರ್ಥ ಉಪಚಾರ ಮಂದಿರವನ್ನು ನ್ಯೂಯಾರ್ಕ ನಗರದಲ್ಲಿ ಸಂಸ್ಥಾಪಿಸಿದರು.

ಡಾಕ್ಟರ ಮಹಾಶಯರ ಈ ಉದ್ಯಮಕ್ಕೆ ಅಡಚಣೆಗಳೇನೂ ಕಡಿಮೆ ಬರಲಿಲ್ಲ. ಬೇಜಾರು ಬರವಷ್ಟು ಪರಿಸ್ಥಿತಿಯಿದ್ದಿತು. ಆದರೂ ಅವರು ಹಿಡಿದ ಹಿಡಿತ ಬಿಡಲಿಲ್ಲ. ಅವರ ಉಪಚಾರಾಲಯದಲ್ಲಿ ಹಲವು ಜನರು ಗುಣ ಹೊಂದಿ ಸಲೀಸಾಗಿ ಮಾತಾಡಲು ಬಲ್ಲವರಾಗಿ ಹೊರಬೀಳಹತ್ತಿದರು. ಆದರೂ ಅವರ ಶ್ರಮದ ಸಾಫಲ್ಯವಾದುದು ಒಬ್ಬ ಮಹನೀಯ ರೋಗಿಯಿಂದ. ಇವರ ಹೆಸರು ಮಿ. ಬ್ಯುಗ್ಲೊ ಪೆನ್. ಸುಪ್ರಸಿದ್ಧ ವ್ಯಂಗ್ಯವಿನೋದಸರಣಿಯ ಲೇಖಕರಾದ ಮಾರ್ಕ್ ಟ್ವೇನರ ಚರಿತ್ರಕಾರರಿವರು. ಈ ಗುಕ್ಕುವ ಪ್ರಾಣಿಯು ಪೂರ್ಣ ಗುಣ ಹೊಂದಿ ಹೊರಬಿದ್ದನು. ಹೆಸರುವಾಸಿಯಾದ ವಕ್ತಾರನೆಂತಲೂ ಪ್ರಸಿದ್ಧಿ ಹೊಂದಿದನು. ಉಪಚಾರಪೂರ್ವದಲ್ಲಿ ಅವನಿಗೆ 'ಮ' ಎನ್ನಲು ಬರುತ್ತಿದ್ದಿಲ್ಲ. ಅವನಿರುವ ಊರಿನ ಹೆಸರೂ 'ಮ'ದಿಂದಲೆ ಮೊದಲಾಗುತ್ತಿತ್ತು. ರೇಲ್ವೆ ಪ್ರ ಹೊರಟಾಗ ತಿಕೀಟು ಬೇಡಲೂ ಸಂಕೋಚವೆನಿಸ್ತು ಅದಕ್ಕಾಗಿ ತನ್ನೂರನ್ನೆ ಬಿಟ್ಟುಕೊಟ್ಟಿದ್ದನು. ಉಪಚಾರದ ತರುವಾಯ ಈ ಅಡಚಣೆಯು ಹ ಹೋಯಿತು. ತನಗೆ ವಾಕ್ಸಿದ್ಧಿಯನ್ನು ದಯಪಾಲಿ ಉಪಕಾರವನ್ನು ಪೆನ್ನನು ಎಂದೂ ಮರೆ ಊರೂರು ಸುತ್ತಾಡಿ ಉಪನ್ಯಾಸಗಳನ್ನು ಕೊಡುತ್ತ ಗ್ರೀನರ ಸ್ತುತ್ಯ ಉಪಕ್ರಮದ ಪ್ರಚಾರವನ್ನು ಅನ ತುಂಬ ಮಾಡಿದನು.

ಶ್ರೀಯುತರಾದ ಪೆನ್ ಮತ್ತು ಗ್ರೀನ್ ಇವ ಸೇರಿ ಮುಂದಿನ ವರ್ಷವೆ ೧೯೨೧ರಲ್ಲಿ Talk (ಎಂಬ ಮಾಸಿಕವನ್ನು ಆರಂಭಿಸಿದರು. ಮೀಮಾಂಸೆ ಮತ್ತು ಉಪಚಾರಗಳೆ ಅದರ ವಿಷಯ ದ್ದವು. ಇದರಿಂದ ಅಮೆರಿಕನ್ ಜನತೆಯ ಲಕ್ಷ್ಯ ಕಾರ್ಯದತ್ತ ಹೋಯಿತು. ಅದರ ಫಲವಾಗಿ Am Speech Correction Association (ಅಮೆರಿಕನ್ ಧಾರಣಾ ಸಮಿತಿಯು) ಅಸ್ತಿತ್ವದಲ್ಲಿ ಬಂದಿತು.

ಇದೀಗ ಡಾ. ಗ್ರೀನರ ಪರಿಶ್ರಮಕ್ಕೆ ತಕ್ಕ ಫ ದೊರೆಯಹತ್ತಿತು. ಆದರೂ ಅವರು ಗುಣಪಡಿಸಿ ರಾರು ವಾಗ್ರೋಗಿಗಳೆ ಅವರಿಗೆ ದೊರೆತ ಮೆಚ್ಚು ಅವರ ರುಗ್ಣಾಲಯವಿನ್ನೂ ಚಿಕ್ಕದಾಗಿದ್ದರೂ, ಸರಾಸರಿ ೨೦೦ ರೋಗಿಗಳು ಅವರೆಡೆಗೆ ಶುಶ್ರೂ ಬರುವರು; ಆಸ್ಪತ್ರೆಯಲ್ಲಿ ಸ್ಥಳ ದೊರೆಯಲೆಂದು ಸು. ೧೦೦೦ಕ್ಕೆ ಮೇಲ್ಪಟ್ಟು ವಿನಂತಿಪತ್ರಗಳು ಬ

ಅವರ ಉಪಚಾರಪದ್ಧತಿಯು ಅಭಿನವವ ಅದೊಂದು ರುಗ್ಣಾಲಯವಾಗಿರದೆ ವಿದ್ಯಾಲಯ ಯೆಂದರೆ ಸಲ್ಲುವುದು. ಒಂದು ತರಗತಿಯಲ್ಲಿ 'ಸಹ ಸಾವಕಾಶವಾಗಿ ಮಾತನಾಡಿರಿ' ಎಂದು ಹೇ ಅಲ್ಲಿಯ ಶಿಕ್ಷಕರೂ ತರಬೇತಾದವರೆ ಇರುವರು; ರೆಲ್ಲ ತೊದಲುವವರೆ ಇರುವುದರಿಂದ ಯಾರು ಯ ನಗುವುದಿಲ್ಲ. ನಾಚಿಕೆಯ ಭೀತಿಯೆ ತೊಲಗಿರು ವೈಗುಣ್ಯದ ಅರ್ಧಬೀಜವೆ ನಷ್ಟವಾಗುತ್ತದೆ. ಉದರನಿರ್ವಾಹ ನಡೆಸಿ ಹೊತ್ತುಳಿದಾಗ ಉಪ ಬರುವ ರೋಗಿಗಳೆ ಹೆಚ್ಚುಜನ. ಯಾವ ಅಕ್ಷರವ ಶಬ್ದವು ಉಚ್ಚರಿಸಲು ಎಡಚೆಡಚಾಗುವುದೊ ಅ ತಿರುಗಿ ಬರುವಂತೆ ಅಲ್ಲಿಯ ರೋಗಿಗಳು ಉಪ ಕೊನೆಯ ಅವಸ್ಥೆಯಲ್ಲಿ 'ವ್ಯಾಖ್ಯಾನ ಕೊಡುತ್ತ

ನೋಡಿದರೆ ಯಾರಿಗಾದರೂ ಕೌತುಕಮಿಶ್ರಿತ ಸಂತೋಷವು ತಮ್ಮ ವಾಗ್ರೋಗಿ ವಿದ್ಯಾರ್ಥಿಗಳ ಬಗ್ಗೆ ಸಹರ್ಷ ಅಭಿ ಎನಿಸದಿರದು. ಡಾ. ಗ್ರೀನರಂತೂ ಒಬ್ಬ ಮಿಶನರಿಯಂತೆ ಮಾನವನ್ನು ತಾಳುತ್ತಾರೆ.

—ಕೇಸರಿ

ರಾಷ್ಟ್ರೀಯ ಸಾರ್ವಭೌಮತೆಯ ಜಯಸ್ತಂಭ



ಕಳೆದ ವರ್ಷದ ಅಕ್ಟೋಬರ ತಿಂಗಳಲ್ಲಿ ತುರ್ಕಸ್ತಾನದ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಯಿತು. ಕೆಮಾಲ ಪಾಶಾನ ಅದ್ವಿತೀಯ ಮುಖಂಡತ್ವದ ಮೂಲಕವೆ ತುರ್ಕಸ್ತಾನವು ಪ್ರಥಮ ತರಗತಿಯ ಯುರೋಪಿಯನ್ ರಾಷ್ಟ್ರವಾಗಿ ತಲೆಯೆತ್ತಿತು. ಗತಿಸಿಹೋದ ಒಟೋಮನ್ ಸಾಮ್ರಾಜ್ಯದ ಭಗ್ನಾವಶೇಷಗಳ ಮೇಲೆ ವೀರ್ಯಯುತವಾದ ತರುಣ ತುರ್ಕೀ ಪ್ರಜಾಪ್ರಭುತ್ವವು ಚಿಗಿತು ನಿಂತಿವೆ. ನಾಗರಿಕರಿಗೆ ಪೂರ್ಣ ಪ್ರಜಾಧಿಕಾರಗಳೂ, ಸ್ತ್ರೀಯರಿಗೆ ಸರ್ವಶೃಂಖಲಾಪರಿಹಾರವೂ ಯುವಕರ ಶಕ್ತಿಸಾಹಸಗಳಿಗೆ ವಿಮುಕ್ತಾವಸರವೂ [illegible] ದೊರೆತವು.

ಸಾಹಿತ್ಯಗೋಷ್ಠಿ

"ನನ್ನ ಸರ್ವಸ್ವದ ಸುಲಿಗೆಯಾಯಿತು!"

ಸುಪ್ರಸಿದ್ಧ ಹಿಂದೀ ಮಾಸಪತ್ರಿಕೆಯಾದ "ಹಂಸ"ವನ್ನು ದಿವಂಗತ ಶ್ರೀ. ಪ್ರೇಮಚಂದಜೀಯವರು ಸಂಸ್ಥಾಪಿಸಿದರು. ಅವರ ನಿಧನದ ತರುವಾಯ ಅದನ್ನು ಕೆಲ ದಿನ ಅವರ ಪತ್ನಿಯವರಾದ ಶ್ರೀ. ಶಿವರಾನೀ ದೇವಿಯವರು ನಡೆಯಿಸಿದರು. ಈಚೆಗೆ ಪ್ರಸಿದ್ಧ ಸಾಹಿತಿಗಳಾದ ಶ್ರೀ. ಜೈನೇಂದ್ರಕುಮಾರ ಅವರು ಅಷ್ಟೇ ಯೋಗ್ಯತೆಯಿಂದ ಅದರ ಸಂಪಾದಕೀಯ ಕರ್ತವ್ಯವನ್ನು ನಿರ್ವಹಿಸುತ್ತಿರುವರು. ಮೊನ್ನೆಮೊನ್ನೆ 'ಹಂಸ'ದ 'ಪ್ರೇಮಚಂದ ಸ್ಮೃತಿ-ಅಂಕ'ವನ್ನು ಹೊರಡಿಸಿದ್ದಾರೆ. ಅದರಲ್ಲಿಯ ಪ್ರಥಮ ಲೇಖನವನ್ನು ಶ್ರೀ. ಶಿವರಾನೀ ದೇವಿಯವರೆ ಬರೆದಿದ್ದಾರೆ. ಅದರ ಹೆಸರು "ಮೈ ಲುಟ ಗಯೀ" (ನನ್ನ ಸರ್ವಸ್ವದ ಸುಲಿಗೆಯಾಯಿತು) ಎಂದಿದೆ. ಪ್ರೇಮಚಂದರ ಸಹಧರ್ಮಿಣಿಯವರು ಬರೆದ ಈ ಶಬ್ದಚಿತ್ರವು ಅತ್ಯಂತ ಕೋಮಲ ರೇಖಾವಿನ್ಯಾಸದಿಂದ ಕೂಡಿದುದಾಗಿದೆ. ಪ್ರೇಮಚಂದರ ಅಂತಃಕರಣವು ಅದೆಷ್ಟು ಮೃದುಲವಾಗಿತ್ತು, ಪರೋಪಕಾರ, ದೇಶಭಕ್ತಿ ಮೊದಲಾದ ಸತ್ಸಂಸ್ಕಾರಗಳಿಂದ ಕೂಡಿದುದಾಗಿತ್ತು ಎಂಬುದನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ. ಸ್ತ್ರೀಸಹಜ ಶೈಲಿಯ ಸುಂದರ ಉದಾಹರಣೆಯಾದುದರಿಂದ ಅದನ್ನಿಲ್ಲಿ ಕನ್ನಡಿಸಿ ಕೊಡಲಾಗಿದೆ.

"ಮಗು ಧುನ್ನೂ! ಬಹಳ ಸೆಕೆಯಾಗುತ್ತಿದೆ. ಕೊಂಚ ಬೀಸಣಿಕೆ ತೆಗೆದುಕೋ—" ಎಂಬುದಾಗಿ ಅವರು ನುಡಿದರು. ಆ ತರುವಾಯ ತುಸುಹೊತ್ತಿನಲ್ಲಿಯೆ ಚಿಕ್ಕ ಬನ್ನೂ ನಾನು ಕುಳಿತಲ್ಲಿ ಬಂದು ಎಂದನು "ಅವ್ವಾ ಬಾಬೂಜಿಯವರಿಗೆ ವಾಂತಿಯಾಗಿದೆ." ಸಂಶಯ, ಭಯ, ಖೇದಗಳಿಂದ ಕೂಡಿದುದಾಗಿ ನನ್ನ ಸರ್ವಾಂಗವೂ ವಿಕಲವಾಯಿತು. ಕೂಡಲೆ ನಾನು ಅವರ ಕೋಣೆಗೆ ಹೋದೆ. ರಕ್ತದ ಕಾರಿಕೆಯನ್ನು ನಾನು ನೋಡಿದೆ. ನನ್ನ ಕೈಕಾಲೇ ಹೋದವು. ವಿದ್ಯುತ್ತಿನ ಧಕ್ಕೆ ಕೂತಂತಾಯಿತು. ಸ್ವಲ್ಪ ಹೊತ್ತಿನ ಮೇಲೆ ಅವರು ಸಣ್ಣ ದನಿಯಲ್ಲೆಂದರು—"ರಾಣೀ, ನಾನು ಹೊರಟೆ."

ನಾನೆಂದೆ "ಛೀ, ಹಾಗೆ ಮಾತನಾಡಬಾರದು. ತಾವು ನನ್ನನ್ನು ಬಿಟ್ಟುಹೋಗಲಾರಿರಿ." ರಕ್ತದ ಕಡೆಗೆ ಬೆರಳು ಮಾಡಿ ಅವರೆಂದರು "ನನ್ನ ಬಾಯಿಯಿಂದ ಇಷ್ಟು ರಕ್ತ ಹೋಗಿದೆ. ಆದರೂ ನಾನು ಜೀವಿಸುವ ಆಶೆ ಹಿಡಿದಿರುವಿ." ನಾನೆಂದೆ "ಯಾಕೆ ಆಶೆ ಹಿಡಿಯಬಾರದು? ನಾನು ಯಾರ ಕೆಡುಕನ್ನು ಕನಸುಮನಸಿನಲ್ಲಿಯೂ ಬಗೆದಿಲ್ಲ!" ನಾನು ಡಾಕ್ತರರನ್ನು ಕರೆಕಳುಹಿದೆ. ಡಾಕ್ತರರು ಧೈರ್ಯ ಕೊಟ್ಟರು. ಇಂತಹದರಿಂದಲೂ ಅವರು ಗುಣಹೊಂದುವರೆಂದು ನನಗೆ ಆಶೆ ಹುಟ್ಟಿತು.

* * *

ಆ ದಿನದಿಂದ ಅವರಿಗೆ ಚೆನ್ನಾಗಿ ನಿದ್ರೆ ಬರಲಿಲ್ಲ. ಅಂತಹ ಸ್ಥಿತಿಯಲ್ಲಿಯೇ ರಾತ್ರಿಯಲ್ಲಿ ಅವರು 'ಮಂಗಲಸೂತ್ರ'ದ ೩೦ ಪ್ರಕರಣಗಳನ್ನು ಬರೆದರು. ಪ್ರಕೃತಿಯು ಇನ್ನಿಷ್ಟು ಕೆಡಬಹುದೆಂದು ಒಂದೆರಡು ಬಾರಿ ಓದುಬರೆ ಮಾಡಬಾರದಾಗಿ ಹೇಳಿದೆನು. ಆದರೂ ಅವರಿಗೆ ವಿಶೇಷವಾಗಿ ತಡೆಯೊಡ್ಡಲಿಲ್ಲ. ಓದುಬರೆಯಿಂದಲೆ ಅವರ ಮನಸ್ಸು ಸುಪ್ರಸನ್ನವಾಗುಳಿಯಬಹುದೆಂದು ಭಾವಿಸಿದೆನು. ನಾನು ಅವರ ಹಾಸಿಕೆಯ ಬಳಿಯೇ ಕೂತಿರುತ್ತಿದ್ದೆ.

* * *

ಒಂದು ದಿನ ರಾತ್ರಿ ಅವರ ಹೊಟ್ಟೆಶೂಲೆ ಕಡಿಮೆಯಾದ ಮೇಲೆ ತಲೆಗಿಂಬಿನ ಬಳಿ ಕುಳಿತಿರುವಾಗ ಅವರೆಂದರು: "ನನಗೆ ನಿನ್ನ ಮತ್ತು ಬನ್ನೂನ ಚಿಂತೆಯೇ ಚಿಂತೆ. ಧುನ್ನೂ ದೊಡ್ಡವನಾಗಿದ್ದಾನೆ. ತನ್ನದನ್ನು ತಾನು ನೋಡಿಕೊಳ್ಳಬಲ್ಲನು. ನೀನು ಮತ್ತು ಬನ್ನೂ ಹೇಗಿರುವಿರೋ ದೇವರೇ ಬಲ್ಲ!" ನನ್ನ ಮನೋಧೈರ್ಯವು ಸಂಯಮದ ಎಲ್ಲೆಕಟ್ಟನ್ನೊಡೆದು ಅಶ್ರುರೂಪವಾಗಿ ಹೊರಬಿದ್ದಿತು. ನನ್ನ ಜೀವಮಾನದಲ್ಲಿ—ತಿಳಿದವಳಾದ ಮೇಲಿನ ಆಯುಷ್ಕ್ರಮಣದಲ್ಲಿ—ಅತ್ತುದು ಇದೇ ಮೊದಲಸಲ. ಹಲವು ಎಡರುಗಳಿಗೆ ಎದೆಗೊಟ್ಟಿದ್ದೆನು. ಆದರೆ ಆ ದಿನ....ನಾನು ಕಣ್ಣೀರನ್ನು ಚಟ್ಟನೆ ಒರಸಿಕೊಂಡೆನು: ನನ್ನ ಹೃದಯವು ವ್ಯಥಿತವಾಗಿದೆಯೆಂಬುದು ಅವರಿಗೆ ತಿಳಿದಿತ್ತು. ನನ್ನ ಕಂಬನಿ ಕಂಡು ಅವರಿಗೆ ನೋವೆನಿಸಿತು. ಅವರು ಮಾತನಾಡುತ್ತಲೆ ಇದ್ದರು.

"ನಿನ್ನನ್ನು ಬಿಟ್ಟುಹೋಗಬೇಕೆಂದು ನನಗಿಚ್ಛೆಯಿಲ್ಲ. ನಾನು ಬೇಕಾದ ದುಃಖವನ್ನು ಸಹಿಸಬಲ್ಲೆ. ಆದರೆ—

"ರಾಣೀ, ಕಳೆದ ಜನ್ಮದಲ್ಲಿ ನೀನು ನನಗೆ ಜನ್ಮಕೊಟ್ಟ ತಾಯಿಯಾಗಿರಬೇಕು; ಈ ಜನ್ಮದಲ್ಲಿ ನೀನು ನನ್ನ ದೇವತೆಯಾಗಿರುವೆ."

ನಾನು ಅವರ ಬಾಯಿಯ ಮೇಲೆ ಕೈಯಿಟ್ಟೆನು. ಅವರದನ್ನು ಬದಿಗೆ ಸರಿಸಿ "ಅಂಜಬೇಡ" ಎಂದರು. ಹೀಗೆ ಇರುಳೆಲ್ಲವೂ ಅವರು ನನಗೆ ಧೈರ್ಯ ಹೇಳಿದರು. ನನ್ನ ಕಣ್ಣು ಮುಚ್ಚಿದ್ದವು; ಮತ್ತು ಅವರ ಕೈ ನನ್ನ ಮಸ್ತಕದ ಮೇಲೆ—

ಹನ್ನೆರಡು ವರ್ಷಗಳ ಹಿಂದೆ

ಆದೀಗ ಮುದ್ರಣಾಲಯವು ಆರಂಭವಾಗಿತ್ತು. ಅಲ್ಲಿ ಅವರು ಸ್ವತಃ ಎಲ್ಲ ಕೆಲಸವನ್ನೂ ನೋಡಿಕೊಳ್ಳುತ್ತಿದ್ದರು.

ಆಗ ಬಹಳ ಚಳಿ ಬೀಳುತ್ತಿತ್ತು. ಉಣ್ಣೆಯ ಬಟ್ಟೆಗಳನ್ನು ಹೊಲಿದುಕೊಳ್ಳಲು ನಾನವರಿಗೆ ೪೦ ರೂಪಾಯಿಗಳನ್ನು ಎರಡುಸಲ ಕೊಟ್ಟೆನು; ಅವನ್ನೆಲ್ಲ ಅವರು ಕೆಲಸಗಾರರಿಗೆ ಕೊಟ್ಟುಬಿಟ್ಟರು! ನಾನು ಬಟ್ಟೆಗಳ ಬಗ್ಗೆ ಕೇಳಿದಾಗ "ಆ ಹಣದಿಂದ ಕೆಲಸಗಾರರು ಬಹುಶಃ ಅರಿವೆಗಳನ್ನು ಹೊಲಿಸಿಕೊಂಡುಬಿಟ್ಟಿರಬಹುದು" ಎಂದು ಹೇಳಿದರು. ನಾನು ಸ್ವಲ್ಪ ಅತೃಪ್ತಿಯನ್ನು ಸೂಚಿಸಿದೊಡನೆ ಅವರು ಸೌಮ್ಯಸ್ವರದಲ್ಲಿ ಹೇಳಿದರು "ದಿನವೆಲ್ಲ ದುಡಿದೂದುಡಿದೂ ಮತ್ತೆ ಉಪವಾಸಬೀಳುವವರಿಗಿಂತ ಮುಂಚೆಯೇ ನಾನು ಹೇಗೆ ಬೆಚ್ಚನ್ನ ಬಟ್ಟೆಗಳನ್ನು ಹಾಕಿಕೊಳ್ಳಲಿ?" ಆಗ ನಾನೆಂದೆ "ನಾನು ನಿಮ್ಮ ಕಾರಖಾನೆಯ ಕೂಲಿಯವರ ಬಟ್ಟೆಬರೆಗಳ ಗುತ್ತಿಗೆಯನ್ನೇನೂ ಹೊತ್ತಿಲ್ಲ!" ಅವರು ನಕ್ಕು ಹೇಳಿದರು "ನೀನು ನನ್ನ ಗುತ್ತಿಗೆಯನ್ನಾದರೂ ಹೊತ್ತಿರುವೆಯಾ! ನನ್ನದೆಂಬುದು ಏನಿದೆ? ನೀನು ನಾನು ಒಂದೇ ನಾವಿನಲ್ಲಿಯ ಸಂಗಾತಿಗಳು. ನಿನ್ನ ನನ್ನ ಬೇರೆ ಬೇರೆ ಕರ್ತವ್ಯಗಳು ಇಲ್ಲವೇ ಇಲ್ಲ." ನಾನೆಂದೆ "ಇದೆಲ್ಲ ನನಗೆ ತಿಳಿಯುವುದಿಲ್ಲ." ಆಗವರು ಲಲ್ಲೆಯಿಂದೆಂದರು "ನೀನೊಬ್ಬ ಹುಚ್ಚಿ!"

ಆ ನಂತರ ನಾನು ಭಾವಯ್ಯನ ಕಡೆಗೆ ದುಡ್ಡು ಕೊಟ್ಟು ಅವರಿಗೆ ಬಟ್ಟೆ ಹೊಲಿಸಿದೆನು. ಅವನ್ನು ಹಾಕಿಕೊಂಡು, ನನ್ನೆಡೆಗೆ ಬಂದು "ನಮಸ್ಕಾರ ರಾಣೀಸಾಹೇಬರೆ, ಇಕೊ ತಮ್ಮಾಜ್ಞೆಯನ್ನು ಪಾಲಿಸಿದ್ದೇನೆ." ನಾನೂ ವಿನೋದದಿಂದ ಆಶೀರ್ವಾದಪರವಾಗಿ "ಈಶ್ವರನು ನಿಮಗೆ ಕಲ್ಯಾಣ ಮಾಡಲಿ, ಮತ್ತು ಪ್ರತಿವರ್ಷವೂ ಹೀಗೇ ನಿಮಗೆ ಹೊಸ ಬಟ್ಟೆಗಳು ದೊರಕಲಿ!" ಎಂದೆನು.

ನಾನು ಮತ್ತೆ ಎಂದೆ "ನೀವು ನನ್ನನ್ನೇಕೆ ನಮಸ್ಕರಿಸಿದಿರಿ? ನಾನು ತಮಗಿಂತ ನಂಟತನದಿಂದಾಗಲಿ, ಜ್ಞಾನದಿಂದಾಗಲಿ ಹಿರಿಯಳಲ್ಲ." ಆಗ ಅವರು "ವಯಸ್ಸು, ನಂಟತನ, ಜ್ಞಾನ ಇವೆಲ್ಲವೂ ಚಿಲ್ಲರೆಯಾಗಿವೆ. ನಾನು ನೋಡುವುದು ಹೃದಯವನ್ನು. ನಿನ್ನ ಹೃದಯವಾದರೋ ಮಕ್ಕಳ ಸುಖದಿಂದ ಸುಖಿಸುವ ತಾಯಿಯದಾಗಿದೆ. ನನ್ನನ್ನು ಮಗುವಿನಂತೆ ಜೋಕೆಮಾಡುವುದರಿಂದಲೆ ನೀನು ಪ್ರಸನ್ನಳಾಗಿರುವೆ. ಆಗ ನಿನಗೇಕೆ ನಾನು ಪ್ರಣಾಮಮಾಡಬಾರದು?"

ಕಳೆದ ವರ್ಷ ಹೊಸ ಅಂಗಿ ಹಾಕಿ ನನಗೆ ನಮಸ್ಕರಿಸಿದ್ದೇ ಅವರ ಕೊನೆಯ ವಂದನೆ.

* * *

ಲಖನೌದಲ್ಲಿ 'ಮಾಧುರಿ'ಯ ಸಂಪಾದ[ಕತ್ವ] ಮಾಡುವ ಸಮಯವದು. ರಾಷ್ಟ್ರೀಯಸಭೆಯ ವಳಿಗೆ ನೆರೆ ಬಂದಿತ್ತು ಆ ವರ್ಷ. ಒಂದು ದಿನ ನಾ[ವು] ಮನೆಯಲ್ಲಿಯೇ ಉಳಿಯತಕ್ಕದ್ದೆಂದು ಗೊತ್ತು[ಮಾಡಿ]ಕೊಂಡೆವು. ಆದರೆ ಕೆಲ ದೇಶಸೇವಿಕೆಯರು ನನ್ನನ್ನು ಎಳೆದುಕೊಂಡು ಹೋಗಿಯೇ ಬಿಟ್ಟರು. ರಾತ್ರಿ ೮ ಗಂಟೆಗೆ ತಿರುಗಿ ಬಂದು ಕೇಳಿದಾಗ [...] ಹೇಳಿದರು, ಅವರೂ ಕಾಂಗ್ರೆಸ್ ಕಾರ್ಯಾ[ಲಯಕ್ಕೆ] ಹೋಗಿದ್ದರೆಂತ. ರಾತ್ರಿ ೨ ಗಂಟೆಗೆ ಅವರು ಬಂದರು. ಅವರಿಗೆ ಕೇಳಿದಾಗ, ನಕ್ಕು "ನೀನು [...] ದೇಶಭಕ್ತಿಗೆ ಮಾರುಹೋಗಬೇಕು, ನನಗೇನೂ [...]ವಾಗಲೇಬಾರದು, ಅಲ್ಲವೆ!" ಎಂದರು.

ಒಮ್ಮೆ ನಾನೆಂದೆ "ನೀವು ಹೊರೆಗಟ್ಟಲೆ ಬರೆಯು[ವಿರಿ] ಆದರೊಂದು ಕಾಸೂ ಹುಟ್ಟುವದಿಲ್ಲ." ಇದಕ್ಕವರ[...]ವೆಂದರೆ "ಬರೆಯುವುದು ನನ್ನ ಧರ್ಮ. ಅದೇ [...] ಪ್ರತಿಫಲ."

ಆದರೀಗ—

ಈಗ ನನ್ನನ್ನು ಸುಲಿದುಕೊಂಡು ಹೋಗಿರುವ[...] ನಿಧಿಯನ್ನೆಲ್ಲ ಕದ್ದೊಯ್ದಿರುವರು. ದೇವರು ಸ್ವ[...]ಪಾತಿಯೆಂಬ ನನ್ನ ವಿಶ್ವಾಸವೂ ಹಾರಿಹೋ[ಯಿತು]. ಇದು ನನ್ನ ಆಯುಷ್ಯದ ಅಮಾವಾಸ್ಯೆ. ನನಗೆ ಬಿಡದೆ ಅವರ ಶ್ರೇಷ್ಠ ವಿಭೂತಿತ್ವದ ನೆನಪು[...] ನನಗೆ ವಿಷಾದವಾಗುತ್ತಿರುವುದು, ಅವರು [...]ಸ್ವರೂಪರಿದ್ದೂ ಅವರ ಮೇಲೆ ಅಧಿಕಾರ ನ[...] ಎಂದು. ನಾನು ಗುಣಹೀನೆ—ನನ್ನಲ್ಲೇನಿದೆ?—ನನ್ನನ್ನುದ್ಧರಿಸಿದರು. ಅತಿ ಪ್ರೇಮದಿಂದ ನನ್ನನ್ನು[...]ಕೊಂಡರು, ಬಹಳ ಸನ್ಮಾನದಿಂದ ತಮ್ಮ ಹೃದ[ಯಾ]ಸನದ ಮೇಲೆ ಕೂರಿಸಿಕೊಂಡರು. ನನಗೆಷ್ಟು [...]ವೆನಿಸುತ್ತಿತ್ತು! ನಾನು ರಾಣಿಯಾಗಿದ್ದರೆ, ಅವರ ದೃಷ್ಟಿಯಲ್ಲಿ ಕಾದಂಬರೀಸಮ್ರಾಟರಾಗಿದ್ದರು. ನನ್ನ ಸ್ವಾಮಿಗಳಾಗಿದ್ದರೂ ನನ್ನ ಮೇಲೆ ನಿಃಸೀಮ[...]ವನ್ನಿಟ್ಟ ಜೀವದ ಗೆಳೆಯರಾಗಿದ್ದರು. ತ್ರೈಲೋ[ಕ್ಯ] ಸುಖದ ಸಾರವು ನನ್ನ ಬಳಿಯಲ್ಲಿತ್ತು. ಇಂದು [...] ಏಕಾಕಿನಿ. ನನ್ನ ಶಕ್ತಿಯೆಲ್ಲ ನೀರುನೀರಾಗಿ [...] ನನ್ನ ಅಮೌಲ್ಯರತ್ನವೆ ಕಳೆದು ಹೋಗಿದೆ.

ಇಂದು ಈ ಮನೆಯಲ್ಲಿ ಅವರ ಸರಲ ಹಾಸ್ಯ[...] ಗುತ್ತಿಲ್ಲ. ನನ್ನ ಸರ್ವಸ್ವವನ್ನು ಧಾರೆಯೆರೆದೂ[...]

ಉಳಿಸಲು ಪ್ರಯತ್ನಿಸುತ್ತಿದ್ದೆನು. ಆದರೆ ಮಾನವ ಪ್ರಯತ್ನವು ಎಷ್ಟು ಬೆಲೆಗೇಡಿಯೆಂಬುದು ತಿಳಿದುಬಂದಿತು.

ಅವರ ಸ್ಮೃತಿ.... 'ಹಂಸ'ವಿನ್ನೂ ಬದುಕಿದೆ. ಆದರೆ ಆ ಹಂಸದ ಮುತ್ತೆಲ್ಲಿದೆ? ಅವರು ನೆಟ್ಟ ಸಸಿಯನ್ನು ನನ್ನ ನೆತ್ತರೆರೆದೂ ಬೆಳೆಯಿಸಬೇಕೆಂತಲೇ ನಾನುಳಿದೆನೆ!

ನನ್ನ ದೇವತೆ ಹೇಳಿದುದು ನಿಜ: 'ನೀನೊಬ್ಬ ಹುಚ್ಚಿ!' ಜಗತ್ತಿನ ದೃಷ್ಟಿಯಲ್ಲಿಯೂ ನಾನು ಹುಚ್ಚಿಯೇ ಇರಬಹುದು. ನನಗೆ ಕೇಳಿಸುವುದೊಂದೇ ಧ್ವನಿ: "ನನ್ನ ಸರ್ವಸ್ವವೆಲ್ಲವೂ ಸುಲಿಗೆಯಾಯ್ತು!"

ಹೌದು! ನನ್ನದೆಲ್ಲವೂ ಅಪಹೃತವಾಯಿತು!

ಶೋಕಗ್ರಸ್ತಾ
ರಾನೀ

ನನ್ನ ವೃತ್ತಪತ್ರಿಕೆ

ಮಿ. ಫ್ರ್ಯಾಂಕ್ಲಿನ್ ಆಡಾಮ್ಸರು ೩೦ ವರುಷ ಪತ್ರಿಕಾ ಪ್ರಪಂಚದಲ್ಲಿ ಕೆಲಸಮಾಡಿದವರು. 'ನನ್ನೊಡೆತನದ ವೃತಪತ್ರಿಕೆಯಿದ್ದರೆ' ಎಂಬ ತಲೆಕಟ್ಟಿನಲ್ಲಿ ಒಂದು ಮನೋರಂಜಕವಾದ ಮಾರ್ಮಿಕವಾದ ಲೇಖನವನ್ನು ಅಮೆರಿಕನ್ ಸಾಪ್ತಾಹಿಕವೊಂದರಲ್ಲಿ ಬರೆದಿರುವರು. ತಮ್ಮ ಆದರ್ಶ ವೃತ್ತಪತ್ರಕ್ಕಾಗಿ ತಾವೇನು ಮಾಡಬಹುದೆಂಬುದರ ಮನೋರಾಜ್ಯವನ್ನು ಮನೋಜ್ಞವಾಗಿ ಚಿತ್ರಿಸಿರುವರು:—

(೧) ನನ್ನ ಪತ್ರಿಕೆಯು ದೈನಿಕವಾಗುಳಿಯುವುದು; ಹಾಗಿದ್ದರೂ

(೨) ನನ್ನ ಪತ್ರಿಕೆಯಲ್ಲಿ ಹಾಸ್ಯವಿನೋದದ ಅಂಕಣವಾಗಲಿ ಸಾಮಾಜಿಕ ಅಪರಾಧಗಳನ್ನು ಮತ್ತು ಆಟನೋಟಗಳನ್ನು ಉಪ್ಪುಕಾರ ಹಚ್ಚಿ ಬಣ್ಣಿಸುವ ಲೇಖನಗಳಾಗಲಿ ಬರಲಾರವು; ಆದರೂ

(೩) ನನ್ನ ಪತ್ರಿಕೆಯ ಬೆಲೆಯು ೫ ಸೆಂಟಿರುವುದು; ಮುದ್ರಣದ ವೆಚ್ಚವನ್ನೂ ಹೊರಡಿಸದಂತಹ ೨ ಸೆಂಟ್ ಬೆಲೆಯನ್ನಿಡಲಾರೆ; ಇಷ್ಟಿದ್ದೂ

(೪) ಜಾಹಿರಾತುದಾರರ ಅತ್ತೆಮನೆಯ ಉರಿದ್ದಾಟವನ್ನು ನನ್ನ ವಿಷಯಮಂಡನೆಯ ಮೇಲೆ ನಡೆಯಗೊಡಲಾರೆ. ಜಾಹಿರಾತಿನ ದರಗಳನ್ನು ಭಾರಿಯಾಗಿಡುವೆನು. ಅದರಂತೆಯೆ

(೫) ನನ್ನ ಪತ್ರದಲ್ಲಿಯ ಅಭಿಪ್ರಾಯಗಳು ಪೂರ್ಣ ಸ್ವತಂತ್ರವಾಗಿರುವವು.

(೬) ನನ್ನ ಪತ್ರಿಕಾಕಚೇರಿಯ ಕೆಲಸಗಾರರಿಗೆ ಸಾಕಷ್ಟು ಸಂಬಳ ಕೊಡುವೆನು; ಮತ್ತು ಪತ್ರಿಕೆಯ ಲಾಭನಷ್ಟದ ಲೆಕ್ಕಪತ್ರವನ್ನು ಪ್ರತಿ ಮೂರು ತಿಂಗಳಿಗೆ ಅವರೆದುರಿನಲ್ಲಿರಿಸುವೆನು.

(೭) ಜಿಲ್ಲಾ ಪತ್ರಗಳನ್ನೋದಿ ಅವುಗಳಲ್ಲಡಗಿದ ವಿಚಾರರತ್ನಗಳನ್ನು ವಾಚಕರ ಮುಂದಿಡುವೆನು.

(೮) ವ್ಯಂಗಚಿತ್ರವು ಪ್ರತಿಸಂಚಿಕೆಯಲ್ಲೂ ಇರುವುದು.

(೯) ವಿಷಯಗಳ ಮತ್ತಳಿಕೆಗಳು, ಸುದ್ದಿಯ ತುಂಡುಗಳು ಮೊದಲುಮಾಡಿಕೊಂಡು ಪ್ರಧಾನಲೇಖನದ ವರೆಗೆ ಸಂಪಾದಕೀಯ ಧೋರಣೆಯೆಂಬುದು ಸ್ವಚ್ಛವಾಗಿ ಕಾಣಿಸಿಕೊಂಡೀತು. ಪುಸ್ತಕ-ಪರೀಕ್ಷಣ, ಸಂಗೀತ-ಸಮೀಕ್ಷಣ, ನಾಟ್ಯ-ನಿರೀಕ್ಷಣಗಳೇ ಮೊದಲಾದ ವಿಭಾಗಗಳಿಗೆ ಅಗ್ರಲೇಖನದಷ್ಟೇ ಲಕ್ಷ್ಯವನ್ನು ಪೂರೈಸುವೆನು.

(೧೦) ಸರ್ವಸಾಮಾನ್ಯವಾಚಕರಿಗೆ ರುಚಿಸುವುದನ್ನು ಪ್ರಾಮಾಣಿಕತನದಿಂದಲೂ ಸಭ್ಯರೀತಿಯಲ್ಲಿಯೂ ಒದಗಿಸುತ್ತಲಿರುವೆನು.

ಸಾಹಿತ್ಯದಿಂದ ಸ್ವಾತಂತ್ರ್ಯ ಸಂಪಾದನೆ

ಲೇಖನದಿಂದ ಸ್ವಾತಂತ್ರ್ಯವನ್ನೂ ಸಂಪಾದಿಸಬಹುದೆಂಬುದನ್ನು ಪೋಲಂಡ್‌ದೇಶದ ಸರ್ಜಿಸ್ ಪಿಯಾಸೆಕಿ ಎಂಬ ಕಾದಂಬರೀಕಾರನು ತೋರಿಸಿಕೊಟ್ಟನು. ಈ ಮಹಾಶಯರು ಸಾಹಿತ್ಯದಂತೆ ಚೌರ್ಯಕಲೆಯಲ್ಲಿಯೂ ಪ್ರವೀಣರಾಗಿದ್ದಾರೆ. "ಸಾಹಿತ್ಯ-ಶರ್ವಿಲಕ" ಎಂಬ ಪದವಿಯು ಇವರಿಗೆ ಭಿನ್ನಾರ್ಥದಿಂದ ಒಪ್ಪುತ್ತಿದೆ. ಅವರು ದರೋಡೆಖೋರರ ಗುಂಪಿನ ನಾಯಕರಾಗಿದ್ದರು; ಅವರ ಪರಾಕ್ರಮಕ್ಕಾಗಿ ಗಲ್ಲಿನ ಶಿಕ್ಷೆಯನ್ನೂ ವಿಧಿಸಲಾಗಿತ್ತು. ಅದನ್ನು ಮುಂದೆ ಕರಿನೀರಿನ ಶಿಕ್ಷೆಯಲ್ಲಿ ರೂಪಾಂತರಿಸಲಾಯಿತು. ಕಾರಾಗೃಹದಲ್ಲಿರುವಾಗ ಶ್ರೀಯುತರು ದರೋಡೆಖೋರರಿಗೆಯೆ ಸಂಬಂಧಿಸಿದ 'Lover of the Northern Star' ಎಂಬ ಕಾದಂಬರಿಯನ್ನು ರಚಿಸಿದರು. ಅದು ಅತ್ಯಂತ ಸುಂದರವಾಗಿತ್ತು. ಅದರ ಸಾವಿರಾರು ಪ್ರತಿಗಳು ತೀರಿಹೋದವು. ಇಂತಹ ಕಾದಂಬರಿಯ ಲೇಖಕನು ಕಾರಾಗೃಹದಲ್ಲಿ—ಕೊಳೆಯಬೇಕೇ! ನೂರಾರು ರಸಿಕ ವಾಚಕರು ಅವನ ಬಿಡುಗಡೆಗಾಗಿ ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಂಡರು. ಅಧ್ಯಕ್ಷರು ಅವರನ್ನು ಮುಕ್ತಗೊಳಿಸಿದರು. ಅವರ ವಯಸ್ಸು ೩೯ ಮಾತ್ರ. ಅಷ್ಟರಲ್ಲಿಯೆ ೧೧ ವರ್ಷ ಸೆರೆಮನೆಯ ಸುಖವಾಸವನ್ನು ಅನುಭವಿಸಿದ್ದಾರೆ. ಅದೂ ಸಣ್ಣಪುಟ್ಟ ತಪ್ಪುಗಳಿಗಾಗಿಯಲ್ಲ, ತುಡುಗು - ದರೋಡೆಯಂತಹ ಶ್ರೇಷ್ಠ ಅಪರಾಧಗಳಿಗಾಗಿ!

ವಿಚಾರ ವೇದಿಕೆ

सुहृद्भिरत्र आ गहि

...ರ್ಧಾ ಶಿಕ್ಷಣಯೋಜನೆ

...ಮ. ಗಾಂಧಿಯವರು ಒಂದು ಪ್ರಶ್ನೆಯನ್ನು ಕೈಕೊಂಡ ...ಂದರೆ, ಅದರಲ್ಲಿ ಸಂಪೂರ್ಣವಾಗಿ ಧುಮುಕಿಬಿಡುತ್ತಾರೆ; ...ತ್ತು, ಅವರು ಕೈಕೊಂಡ ಕಾರ್ಯಕ್ಕೆ ರಾಷ್ಟ್ರೀಯ ಮಹ...ವು ಬಂದುಬಿಡುವುದು. ಖಾದಿ, ಗ್ರಾಮೋದ್ಯೋಗ, ...ಸ್ಪೃಶ್ಯತಾನಿವಾರಣೆಗಳಂತೆಯೆ ಪ್ರಾಥಮಿಕಶಿಕ್ಷಣದ ಪುನ...ರ್ಘಟನೆಗಾಗಿ ಅವರ ನೇತೃತ್ವದಲ್ಲಿ ತಯಾರಾದ ಯೋಜ...ಯು ಭರತಖಂಡದಲ್ಲೆಲ್ಲಾ ವಿಚಾರಾಂದೋಲನವನ್ನು ...ಟ್ಟಿಸಿದೆ.

...ವರ್ಧಾ ನಗರದಲ್ಲಿ ಕಳೆದ ಅಕ್ಟೋಬರ ತಿಂಗಳಿನಲ್ಲಿ ...ಖಿಲ ಭಾರತೀಯ ಶಿಕ್ಷಣ ಪರಿಷತ್ತು ಸೇರಿತ್ತು. ಅದರಲ್ಲಿ ...ಕ್ಷಣಕ್ರಮವನ್ನು ಸಿದ್ಧಗೊಳಿಸಲು ಒಂದು ಸಮಿತಿಯನ್ನು ...ಯಮಿಸಲಾಗಿತ್ತು. ಸಮಿತಿಯ ಪ್ರಮುಖರು ಡಾ. ಝಕೀರ ...ಸೇನರು. ಅವರು ಬರ್ಲಿನ್ ಯುನಿವರ್ಸಿಟಿಯ ಪಿ. ಎಚ್. ... ಇದ್ದಾರೆ. ಇನ್ನೊಬ್ಬ ಸಭಾಸದರು ಶ್ರೀ. ಖ್ವಾಜಾ ಸಯ್ಯ...ನ ಎಂಬವರು. ಅವರು ಅಲಿಗಡ ವಿಶ್ವವಿದ್ಯಾಲಯದಲ್ಲಿ ...ಪ್ರಾಧ್ಯಾಪಕರಾಗಿದ್ದಾರೆ. ಶ್ರೀ. ವಿನೋಬಾ ಭಾವೆಯವರು ...ರ್ಧಾ ಆಶ್ರಮದಲ್ಲಿಯ ಪ್ರಮುಖರೊಬ್ಬರಿದ್ದು, ೧೨ ವರ್ಷ ...ಕ್ಷಣದ ಅನುಭವಹೊಂದಿದವರಿರುವರು. ಶ್ರೀ. ಕಾಕಾ ...ಲೇಲಕರ ಇವರು ಶಾಂತಿನಿಕೇತನ-ಸತ್ಯಾಗ್ರಹಾಶ್ರಮ-...ಜರಾತ ವಿದ್ಯಾಪೀಠಗಳಲ್ಲಿ ಶಿಕ್ಷಕರಾಗಿ ಕೆಲಸಮಾಡಿರು...ರು. ಶ್ರೀಮತಿ ಆಶಾದೇವಿಯವರು ಹಿಂದೂ ಯುನಿ...ರ್ಸಿಟಿಯ ಎಂ. ಎ. ಇದ್ದು, ವರ್ಧಾದಲ್ಲಿಯ ಮಹಿಲಾ ...ದ್ಯಾಲಯದ ಪ್ರಮುಖರಾಗಿದ್ದಾರೆ. ಶ್ರೀ. ಆರ್ಯ...ಯಕಂ ಅವರು ವರ್ಧಾದ ನವಭಾರತ ವಿದ್ಯಾಲಯದ ...ಮುಖರಾಗಿದ್ದಾರೆ. ಶ್ರೀ. ಕುಮಾರಪ್ಪಾ ಎಂ. ಎ. ಅವರೂ ...ಸಿದ್ಧ ಶಿಕ್ಷಣತಜ್ಞರು. ಇವರಲ್ಲಿ ಮುಸಲ್ಮಾನ ಸದಸ್ಯರ ...ವರತು ಉಳಿದವರೆಲ್ಲರೂ ಮ. ಗಾಂಧಿಯವರ ಜೀವನ...ರ್ಯದೊಡನೆ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧಪಟ್ಟ...ರೇ ಆಗಿರುವರು. ಅವರೆಲ್ಲರ ವಿಚಾರಗಳು ಗಾಂಧೀಜೀ...ಯವರ ವಿಚಾರಗಳ ಮೂಸೆಯಲ್ಲಿಯೆ ರೂಪುಗೊಂಡಿದ್ದರೆ ...ಜಿಗವಿಲ್ಲ. ಪ್ರೊ. ಕೆ. ಟಿ. ಶಹಾ ಅವರು ಮಾತ್ರ ಭಿನ್ನ ಮತಪ್ರದರ್ಶಕ ಪತ್ರಿಕೆಯನ್ನು ಕೊಟ್ಟಿರುವರು. ಅದಿನ್ನೂ ಪ್ರಕಟವಾಗಿಲ್ಲ. ಅವರ ವಿಚಾರಕೋನವು ಗಾಂಧೀಜಿಯವರಿಗಿಂತ ತೀರ ಭಿನ್ನವಾದುದರಿಂದ, ವ್ಯವಸಾಯ ಶಿಕ್ಷಣ, ಸ್ವಾವಲಂಬನಪ್ರಯೋಗ ಮೊದಲಾದುವುಗಳ ಬಗ್ಗೆ ಅವರ ಭಿನ್ನಾಭಿಪ್ರಾಯಗಳು ಇದ್ದಿರುವುದು ಸಂಭವನೀಯವಿದೆ.

ಶಿಕ್ಷಣಕ್ಕೆ ಯಾವುದೊಂದು ಉತ್ಪಾದಕ ಹಸ್ತವ್ಯವಸಾಯದ ಜೋಡುಕೊಟ್ಟು, ಅದನ್ನು ಜೀವನಪ್ರವಣವಾಗಿಯೂ ವ್ಯವಹಾರಕ್ಷಮವಾಗಿಯೂ ಮಾಡುವುದು ಈ ಯೋಜನೆಯ ಗುರಿಯಾಗಿದೆ. ಸಮಿತಿಯವರ ಕಡೆಗೆ ಬೇರೆ ಬೇರೆ ಕೈಗಾರಿಕೆಗಳ ಅಭ್ಯಾಸಕ್ರಮಗಳು ಬಂದಿದ್ದವು. ಅವುಗಳಲ್ಲಿ ಶ್ರೀ. ವಿನೋಬಾ ಅವರ ನೂಲುವ ನೇಯುವ ಅಭ್ಯಾಸಕ್ರಮವೆ ಯೋಗ್ಯವಾಗಿ ತೋರಿದುದರಿಂದ ಸಮಿತಿಯವರು ಅದನ್ನೊಂದೆ ಸ್ವೀಕರಿಸಿದರು. ಬೇರೆ ಕೈಗಾರಿಕೆಗಳ ಯೋಜನೆಗಳಿಗೆ ಸಮಿತಿಯವರು ಪ್ರತಿಕೂಲರಿದ್ದಾರೆಂತಲ್ಲ.

ಸಮಿತಿಯು ತನ್ನ ವರದಿಯಲ್ಲಿ, ಶಿಕ್ಷಣದ ಮೂಲಭೂತ ತತ್ವಗಳು, ಉದ್ದೇಶಗಳು, ಶಿಕ್ಷಕರ ಸಿದ್ಧತೆ, ಪರೀಕ್ಷೆ, ಮೇಲ್ವಿಚಾರಣೆ, ಆಡಳಿತ ಹೀಗೆ ೫ ವಿಭಾಗಗಳನ್ನು ಮಾಡಿ ಅವುಗಳನ್ನು ವಿಸ್ತರಿಸಿದೆ. ಶಿಕ್ಷಣದ ತತ್ವಗಳನ್ನೂ ಉದ್ದೇಶಗಳನ್ನೂ ಸಮಿತಿಯವರು ವಿವರಿಸಿದುದನ್ನು ಇಲ್ಲಿ ಸಾರಾಂಶವಾಗಿ ಕೊಡಲಾಗಿದೆ.

"ಮಕ್ಕಳಿಗೆ ಶಿಕ್ಷಣಕೊಡುವಾಗ ಅವರಿಂದ ಕೆಲವೊಂದು ಉತ್ಪಾದಕ ಕಾರ್ಯವನ್ನೂ ಮಾಡಿಸಿಕೊಳ್ಳಬೇಕೆಂಬುದು ಇತ್ತೀಚೆಯ ವಿಚಾರವು. ಬರಿ ಓದುಬರೆಹ ಬರುವುದು ತೋರಿಕೆಯ ಸಾಕ್ಷರತೆಯು. ಬುದ್ಧಿಯನ್ನೂ ಕೈಕಾಲುಗಳನ್ನೂ ಉಪಯೋಗಿಸಿ ಹಚ್ಚುವುದರಿಂದಲೆ ಮಕ್ಕಳಿಗೆ ಸರ್ವಾಂಗೀನ ಸಾಕ್ಷರತೆಯು ಬರುವುದು. ಶಿಕ್ಷಣವು ಪ್ರಮಾದರಹಿತವೂ ಸತ್ಯನಿಷ್ಠವೂ ಆಗಬೇಕಾದರೆ ಇಂತಹ ಶಿಕ್ಷಣವನ್ನೆ ಕೊಡಬೇಕು. ನಮ್ಮ ಯೋಜನೆ ಕಾರ್ಯಕರ್ತರನ್ನು ತಯಾರಿಸುವುದಾಗಿದೆ. ಆ ಕಾರ್ಯಕರ್ತರಿಗೆ ಕೆಲಸ

ವೆಂಬುದೆಲ್ಲ—ಭಂಗಿಯ ಕೆಲಸವು ಕೂಡ—ಗೌರವಾಸ್ಪದವಾಗಿ ತೋರಬೇಕು.


ನಮ್ಮ ಯೋಜನೆಯು ಸ್ವಾವಲಂಬಿ, ಎಂದರೆ ಸ್ವಯಂಪೋಷಕವಾಗಬೇಕು ಎಂಬುದಾಗಿ ನಮ್ಮ ವಿಶೇಷ ಅಪೇಕ್ಷೆಯಾಗಿದೆ. ಯಾವುದೇ ಕಾರಣದಿಂದ ಅದು ಸ್ವಯಂಪೋಷಕವಾಗದಿದ್ದರೆ, ಶಿಕ್ಷಣದ ಮೂಲಗ್ರಾಹಿ ಧೋರಣೆಯೆಂಬ ದೃಷ್ಟಿಯಿಂದ ಅದು ವಿಧಾಯಕವೂ ರಾಷ್ಟ್ರೀಯ ಪುನರ್ರಚನೆಗೆ ಸಹಾಯಕಾರಿಯೂ ಆಗುವುದು. ಶಿಕ್ಷಣದ ವೆಚ್ಚವು ಶಾಲೆಯಲ್ಲಿ ನಡೆದ ಕಾರ್ಯದಿಂದಲೆ ತೂಗಬೇಕೆಂಬುದೆ ಗುರಿ. ಶಾಲೆಗಳಲ್ಲಿ ನೂಲುವುದನ್ನು ನೇಯುವುದನ್ನು ವಿದ್ಯಾರ್ಥಿಗಳ ಕಡೆಯಿಂದ ಮಾಡಿಸಿಕೊಳ್ಳಲಾಗುವುದು.

ಶಿಕ್ಷಣಕ್ರಮವು ೭ ವರ್ಷದ್ದಾಗಿರುವುದು. ಮೂಲಭೂತ ವ್ಯವಸಾಯಗಳೆಂದು ಮುಂದಿನವುಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳಬಹುದು—(೧) ಕೈನೂಲು, ಕೈನೇಯಿಗೆ, (೨) ಬಡಿಗತನ, (೩) ಒಕ್ಕಲುತನ, (೪) ಹಣ್ಣು-ಹಂಪಲ ಕಾಯಿಪಲ್ಲೆ ಬೆಳೆಯುವುದು, (೫) ತೊಗಲು ಹದಗೊಳಿಸುವುದು, (೬) ಬೇರೆ ಯೋಗ್ಯವೆನಿಸುವ ಸ್ಥಾನಿಕ ಉದ್ಯೋಗ. ಪ್ರತಿ ವಿದ್ಯಾರ್ಥಿಗೆ ನೂಲುವುದು, ನೇಯುವುದು ಮಾತ್ರ ಬರಲೇಬೇಕು.

ಸ್ವಭಾಷೆಯು ಶಿಕ್ಷಣದ ಅಡಿಗಲ್ಲು. ಸ್ವಭಾಷೆಯಲ್ಲಿ ಅಸ್ಖಲಿತವಾಗಿ ಸಂಭಾಷಿಸುವುದು ಇದರಲ್ಲಿ ಸಮಾವೇಶವಾಗುತ್ತದೆ. ಮಕ್ಕಳು ಸುತ್ತುಮುತ್ತಲಿನ ವಸ್ತುಗಳ ಬಗ್ಗೆ ಆತ್ಮವಿಶ್ವಾಸಪೂರ್ವಕವಾಗಿ ಸ್ವಭಾಷೆಯಲ್ಲಿ ಮಾತನಾಡಬಲ್ಲವರಾಗಬೇಕು. ಮಕ್ಕಳು ಸ್ವಗತವಾಗಿಯೂ ಪ್ರಕಟವಾಗಿಯೂ ಗದ್ಯಪದ್ಯಗಳನ್ನು ಓದಬಲ್ಲವರಾಗಬೇಕು. ಸುವಾಚ್ಯವಾಗಿ ತಪ್ಪಿಲ್ಲದೆ ಬರೆಯುವುದು ಅವರಿಗೆ ಬರಬೇಕು; ಹಳ್ಳಿಗಳಲ್ಲಿಯ ಸಭೆಗಳ ವೃತ್ತಾಂತವನ್ನು ಬರೆಯುವುದನ್ನು[illegible] ಬೇಕು; ಆತ್ಮೀಯ ಪತ್ರಗಳನ್ನೂ ವ್ಯವಹಾರದ ಪತ್ರ[illegible] ಬರೆಯುವುದನ್ನು ಬಲ್ಲವರಾಗಬೇಕು. [illegible] ಲೆಕ್ಕಪತ್ರ ಇವುಗಳ ಜ್ಞಾನವಿರಬೇಕು.

ಮಾನವಕುಲದ ಪ್ರಗತಿಯು ಜಗತ್ತಿನಲ್ಲಿ, [illegible] ಹಿಂದುಸ್ತಾನದಲ್ಲಿ ಎಂತು ನಡೆದಿದೆಯೆಂಬುದ[illegible] ಮಕ್ಕಳ ಮನಸ್ಸು ತೊಡಗಬೇಕು, ತಮ್ಮ [illegible] ಭೌಗೋಲಿಕ ಪರಿಸ್ಥಿತಿಯು ಅವರಿಗೆ ಮನದಟ್ಟಾ[illegible] ಅದು ಸುಧಾರಿಸಬೇಕೆಂಬ ಆತುರವು ಅವರಲ್ಲಿ[illegible] ಬೇಕು. ನಾಗರಿಕರ ಹಕ್ಕು-ಜವಾಬ್ದಾರಿಗಳ [illegible] ಅವರಿಗಾಗಬೇಕು. ಜಗತ್ತಿನ ಸರ್ವಧರ್ಮಗಳ ಬ[illegible] ಭಾವನೆ ಮೊಳೆಯಬೇಕು, ಹಿಂದುಸ್ತಾನದ ಸ್ಥೂ[illegible] ಉಂಟಾಗಬೇಕು, ಇತಿಹಾಸವನ್ನು ಕಲಿಸುವಾಗ[illegible] ಸತ್ಯ, ನ್ಯಾಯ, ಸಹಕಾರ್ಯ, ರಾಷ್ಟ್ರೀಯ ಭವ್ರತ[illegible] ಬಾಂಧವ್ಯಗಳನ್ನು ಒತ್ತಿ ಹೇಳಬೇಕು. [illegible] ಲೋಕೋಪಯೋಗಿಯಾದ ಖಾತೆಗಳು, ಪಂಚ[illegible] ಕೆಲಸಕಜ್ಜಗಳು, ಸಹಕಾರ ಚಳವಳಿ, ಸರಕಾರಿ[illegible]

ವರ್ಧಾ ಪರಿಷತ್ತಿಗೆ ಬಂದ ಮುಸಲ್ಮಾನ ಶಿಕ್ಷಣತಜ್ಞರು



ಎಡದಿಂದ ಬಲಕ್ಕೆ: ಶ್ರೀ. ಅಬ್ದುಲ್ ಹುಸೇನ, ಡಾ. ಝಾಕೀರ ಹುಸೇನ — ಅಧ್ಯಕ್ಷರು (ದಿಲ್ಲಿಯ ರಾಷ್ಟ್ರೀಯ ಮುಸ್ಲಿಂ ವಿಶ್ವವಿದ್ಯಾಲಯದವರು), ಮೌಲ್ವಿ ಅಬ್ದುಲ್ ಹಕ್ (ಹೈದ[illegible] ಉಸ್ಮಾನಿಯಾ ವಿ. ವಿದ್ಯಾಲಯ), ಶ್ರೀ. ಮಹಮ್ಮದ ಮುಜೀಬ (ದಿಲ್ಲಿಯ ರಾ. ಮು. ವಿಶ್ವವಿದ್ಯ[illegible]

...ರ ಕರ್ತವ್ಯಗಳು, ಜಿಲ್ಲಾ ಬೋರ್ಡು-ಮುನಿಸಿಪಾಲಿಟಿಗಳ ...ಟನೆ ಇವೆಲ್ಲವುಗಳ ಜ್ಞಾನವುಂಟಾಗಬೇಕು.

ತಮ್ಮ ಸುತ್ತಲಿನ ವನಸ್ಪತಿ, ಬೆಳೆ, ಪಶುಪಕ್ಷಿಗಳು, ಋತುಮಾನ, ಪೈರುಗಳ ಬಿತ್ತುವಿಕೆ-ಬೆಳವಣಿಗೆ ಇವೆಲ್ಲವು...ಳ ಬಗ್ಗೆ ತಿಳವಳಿಕೆಯಾಗಬೇಕು. ವನಸ್ಪತಿಗಳ ಭಾಗ...ಳೂ ಅವುಗಳ ಕಾರ್ಯಗಳೂ ವಿದಿತವಾಗಬೇಕು. ಮನು...ನ ಶರೀರ, ಇಂದ್ರಿಯಗಳು, ಅವುಗಳ ಕಾರ್ಯಗಳು ...ವುಗಳ ಅರಿವಾಗಬೇಕು.

ಹಿಂದುಸ್ತಾನಿ ಭಾಷೆಯನ್ನು ಒತ್ತಾಯವಾಗಿ ಕಲಿಸ...ಕು. ಹಿಂದೀ-ಉರ್ದು ಲಿಪಿಗಳೆರಡನ್ನೂ ಕಲಿಸುವ ...ರ್ಪಾಡಾಗಬೇಕು. ಗೀತಗಳನ್ನು ರಮ್ಯವಾಗಿ ಹೇಳುವು...ನ್ನು ಕಲಿಸಬೇಕು. ಆಕಾಶದಲ್ಲಿಯ ತಾರಕೆಗಳ-ಗ್ರಹಗಳ ...ಜ್ಞಾನವೂ ಅವರಿಗಾಗಬೇಕು.

...ಒಟ್ಟಿನಲ್ಲಿ ಖಂಡಿತವಾಗಿಯೂ ರಾಷ್ಟ್ರವಿಧಾಯಕ

ಶಿಕ್ಷಣವು ಸ್ವಾವಲಂಬಿಯಾಗಬೇಕೆಂಬುದು ಯುಕ್ತವೂ ...ಗತ್ಯವೂ ಆಗಿದೆ. ಆದರೆ ಆ ಭರದಲ್ಲಿ ಶಿಕ್ಷಣವು ಆರ್ಥಿಕ ...ತುವಿನಿಂದಲೆ ಪ್ರೇರಿತವಾಗದಂತೆ ನೋಡಿಕೊಳ್ಳುವುದ...ತ್ಯ. ಹಿಂದುಸ್ತಾನಿಯನ್ನು ಪ್ರಾಥಮಿಕ ವಿದ್ಯಾಕ್ರಮದಲ್ಲಿ ...ಡ್ಡಾಯವಾಗಿ ಸೇರಿಸುವುದರ ಅನಿಷ್ಟಪರಿಣಾಮಗಳು ...ಲದಿನಗಳಲ್ಲಿಯೆ ತೋರದಿರಲಾರವು. ಇಂಗ್ಲಿಷಿನ ಸ್ಥಲ...ನ್ನು ಹಿಂದುಸ್ತಾನಿಯು ಆಕ್ರಮಿಸಿ, ದೇಶಭಾಷೆಯ ...ರೋಪಜೀವಿತ್ವಕ್ಕೆ ಕಾರಣವಾಗದಿರಲಿ ಎಂಬುದೆ ಪ್ರತಿ...ಬ್ಬ ಭಾಷಾಭಿಮಾನಿಯ ಹಾರೈಕೆ. ಶಿಕ್ಷಕರು ಹಿಂದು...ನಿ-ಉರ್ದೂ ಲಿಪಿಗಳೆರಡನ್ನೂ ಕಲಿಯಲೇಬೇಕೆಂಬ ...ಬಂಧವು ಮುಹಮ್ಮದೀಯರ ಮುತವರ್ಜಿಗಾಗಿ ...ೇನೋ ಎಂದು ಎನಿಸುವಂತಿದೆ. ಗಾಂಧಿಯವರು ಕಾಂಗ್ರೆ...ನ 'ಅನಭಿಷಿಕ್ತ ರಾಜ'ರಾಗಿರುವುದರಿಂದ, ಈ ಯೋಜನೆ...ಲ್ಲಿಯ ಮಹತ್ವದ ಭಾಗಗಳು ಕಾಂಗ್ರೆಸ್ ಪ್ರಾಂತಗಳಲ್ಲಿ ...ರಿಯಲ್ಲಿ ಬರುವುದು ಖಂಡಿತ. ಅದನ್ನು ಒತ್ತಾಯದಿಂದ ...ಳಕೆಯಲ್ಲಿ ತರುವ ಸಂದರ್ಭದಲ್ಲಿ, ವರ್ಷೆರಡುವರ್ಷಗಳಲ್ಲಿ ...ದರ ದೋಷಗಳು ವ್ಯಕ್ತವಾಗುವ ಸಮಯಬಂದಾಗ ...ವನ್ನು ತಿದ್ದಿಕೊಳ್ಳಲು ಅವಕಾಶವನ್ನು ಕಲ್ಪಿಸುವುದು ...ಕ್ಷಣಯೋಜನೆಯ ಸೂತ್ರಧಾರರ ಕರ್ತವ್ಯ. ಇಲ್ಲವಾದರೆ ...ಂಗ್ಲಿಷ್ ಆಳರಸರು ಮಾಡಿದ ತಪ್ಪನ್ನೆ ರಾಷ್ಟ್ರೀಯ ...ರ್ವಾಧಿಕಾರಿಗಳೂ ಮಾಡುವ ಸಂಭವವಿದೆ. ಈ ಯೋಜ...ಯು—ಕೆಲವು ಸಂದೇಹಾಸ್ಪದ ಅಂಶಗಳನ್ನು ಬಿಟ್ಟರೆ—ಒಟ್ಟಿನಲ್ಲಿ ರಾಷ್ಟ್ರವಿಧಾಯಕವಾಗಿರುವುದರಲ್ಲಿ ಸಂದೇಹವಿಲ್ಲ. ಪ್ರಯೋಗವೆಂದು ಅದನ್ನು ಹೃತ್ಪೂರ್ವಕವಾಗಿ ಆಚರಣೆಯಲ್ಲಿ ತರುವುದು, ಹಾಗೆ ತರುವವರಿಗೆ ಎಲ್ಲರೂ ಸಹಾಯಕರಾಗುವುದು ಕರ್ತವ್ಯವೆ ಆಗಿದೆ; ಆದರೆ ಅದೊಂದು 'ಪ್ರಯೋಗ'—ಆದುದರಿಂದ ತನ್ನ ಗುಣದೋಷಗಳಿಂದಲೆ ಬೋಧೆಪಡೆದು ಆ ಪ್ರಯೋಗವು ಹೆಚ್ಚು ಹೆಚ್ಚು ಪರಿಪೂರ್ಣವಾಗುವಂತೆ ಅವಸರವನ್ನು ಕಲ್ಪಿಸಿಕೊಡುವುದು ಅಗತ್ಯವೆಂದು ಇನ್ನೂ ಒಮ್ಮೆ ಸೂಚಿಸದಿರಲಾರೆವು. 'ಶಿಕ್ಷಣತಜ್ಞ'ರನ್ನು ಮಾತ್ರವಲ್ಲ, ಅನುಭವಿಕಶಿಕ್ಷಕರ ಅಭಿಪ್ರಾಯಗಳನ್ನೂ ಕಾಲಕಾಲಕ್ಕೆ ಅರಿತುಕೊಂಡು ಶಿಕ್ಷಣಕ್ರಮವನ್ನು ಸುಧಾರಿಸಿಕೊಳ್ಳಬಹುದಾಗಿದೆ.

ಜಾಗತಿಕ ದೃಷ್ಟಿಕೋನವು ಮರೆಯಾಗದಿರಲಿ

ಇದೇ ಸಂಚಿಕೆಯಲ್ಲಿ ಬೇರೆಕಡೆ ಕೊಟ್ಟ, ಎಚ್. ಜಿ. ವೆಲ್ಸರವರ ಶಿಕ್ಷಣವಿಚಾರಗಳನ್ನು ಸಂಗ್ರಹಾತ್ಮಕವಾಗಿ ವಿವರಿಸುವ ಲೇಖನದತ್ತ ವಾಚಕರ ಲಕ್ಷ್ಯವನ್ನು ಎಳೆಯುತ್ತೇವೆ. ಆಂಗ್ಲವಿದ್ಯಾಭ್ಯಾಸಂಗದಿಂದ ಎಷ್ಟೇ ಹಾನಿಯಾಗಿರಲಿ, ಅದೊಂದು ಆ 'ವೈಜ್ಞಾನಿಕ' 'ಜಾಗತಿಕ' ದೃಷ್ಟಿಕೋನವನ್ನು ವಿದ್ಯಾರ್ಥಿಯು ಎಡವುತ್ತ ತಡವುತ್ತಲಾದರೂ ಪಡೆಯುವನೆಂಬುದು ನಿರ್ವಿವಾದವಾಗಿದೆ. ಆ ಉದ್ದೇಶವು ಈ ಶಿಕ್ಷಣಕ್ರಮದಿಂದ ಮರೆಯಾಗಲಿಕ್ಕಿಲ್ಲವೆಂದು ನಮ್ಮ ಭರವಸೆ; ಹಾಗೆ ಆಗದಂತೆ ನವಶಿಕ್ಷಣದ ಅಧ್ವರ್ಯಗಳು ನೋಡಿಕೊಳ್ಳಬೇಕೆಂದು ನಮ್ಮ ಸೂಚನೆ. ಜರ್ಮನಿ-ರಷ್ಯ ಮೊದಲಾದ ದೇಶಗಳಲ್ಲಿ ಮಕ್ಕಳಿಗೆ ಬಾಲ್ಯದಿಂದಲೂ ವೈಜ್ಞಾನಿಕ-ಯಾಂತ್ರಿಕ ನಾಗರಿಕತೆಯ ಸಂಸ್ಕಾರವು ಸುಲಭಸಾಧನಗಳ ಸಹಾಯದಿಂದ ಆಗುವಂತೆ ಅಲ್ಲಿಯ ಶಿಕ್ಷಣತಜ್ಞರು ವಿಶೇಷ ಪರಿಶ್ರಮಬಟ್ಟಿದ್ದಾರೆ. ಯಾಂತ್ರಿಕ ನಾಗರಿಕತೆಯು ಅಲ್ಲಿಯವರ ಜೀವನದುಸಿರೆ ಆಗಿದೆ. ಇಲ್ಲಿಯೋ, ಆ ನಾಗರಿಕತೆಯು ನಮ್ಮ ಜೀವನದಲ್ಲಿ ಆಕ್ರಮಣ ಮಾಡದೆ ಇಲ್ಲ. ಆದರೆ ಮಹಾತ್ಮಾ ಗಾಂಧಿಯವರು ಭಗೀರಥಪ್ರಯತ್ನಮಾಡಿ, ಆ ಯಾಂತ್ರಿಕ ನಾಗರಿಕತೆಯ ಸ್ಥಾನದಲ್ಲಿ ಮನೆಕೈಗಾರಿಕೆಯ ಸಂಸ್ಕೃತಿಯನ್ನು ಪುಸ್ಥಾಪಿಸಲು ತಪಸ್ಸನ್ನೆಸಗುತ್ತಿದ್ದಾರೆ. ಸದ್ಯದ ಶಿಕ್ಷಣಯೋಜನೆಯು ಆ ತಪಸ್ಯೆಯ ಸಾಧನಸಂಪತ್ತು. ಜಗತ್ತಿನ ಪ್ರವಾಹವನ್ನೆ ತಿರುವಿಸಿಕೊಂಡು ಹೋಗಬಲ್ಲೆವೆ ?—ಎಂಬುದೊಂದು ಪ್ರಶ್ನೆ. ಕೈರಾಟ-ಕೈಮಗ್ಗ ಗಳೇ ಮೊದಲಾದ ಕೈಗಾರಿಕೆಯ ಸಾಧನಗಳ ತಾಂತ್ರಿಕ ಪರಿಚಯವು ವಿದ್ಯಾರ್ಥಿಗಳಿಗೆ ಮುಂದಣ ಜೀವನದ ಜವಾಬ್ದಾರಿಯ ಅವಧಿಯಲ್ಲಿ ನಿಜ

ವಾಗಿಯೂ ಉಪಯುಕ್ತವಾಗುವುದೇ ? ದೇಶೀಯ-ವಿದೇಶೀಯ ಬಂಡವಾಳದೊಡೆಯರ ಹಾವಳಿಯನ್ನು ಸರಕಾರವು ನಿಶ್ಚಯವಾಗಿಯೂ ಪ್ರತಿಬಂಧಿಸಬಲ್ಲುದೇ ? ದಿನಕೊಂದು ಸುಖಸಾಧನವನ್ನು ಹಡೆಯುವ ಪಾಶ್ಚಾತ್ಯ ವಿಜ್ಞಾನದ ಆಕರ್ಷಣೆಯನ್ನು ಈ ಶಿಕ್ಷಣಯೋಜನೆಯಲ್ಲಿ ತರಬೇತಾದ ವಿದ್ಯಾರ್ಥಿಯು ಖಂಡಿತ ಪ್ರತಿಭಟಿಸಬಲ್ಲನೇ ? ಶಿಕ್ಷಣ ಹೆಚ್ಚಿದಂತೆ, ಮಾನವನ ಸುಖಸೌಲಭ್ಯಾಪೇಕ್ಷೆಯು, 'ಉಚ್ಚ ಜೀವನದರ್ಜೆ'ಯ ಬಯಕೆಯು ಹೆಚ್ಚದೇ ? ಈ ಶಿಕ್ಷಣದಲ್ಲಿ ನುರಿತು ಹೊರಬಿದ್ದವನೇ, ಆದರಿಂದಲೇ ಹೊಂದಿದ ತೀಕ್ಷ್ಣಜ್ಞಾನಾಪೇಕ್ಷೆಯ ಫಲವಾಗಿ, ವಿಜ್ಞಾನವು ನೀಡುವ ಹೊಸಹೊಸ ಶೋಧಬೋಧಗಳಿಗಾಗಿ ಹಾತೊರೆಯಲಾರನೇ? ಈ ಶಿಕ್ಷಣದ ಉದ್ದಿಷ್ಟವಾಗಿರುವ ಅಂತರ್ಮುಖತೆ, ಸರಲಜೀವನಪ್ರೀತಿ, ಸ್ವಾವಲಂಬಕ್ಕೆ ಸಹಾಯಕವಾದ ಉದ್ಯೋಗಜ್ಞಾನ; ಮತ್ತು ಪಾಶ್ಚಾತ್ಯನಾಗರಿಕತೆಯ ಫಲಗಳಾದ ನಿರರ್ಗಲ ಶೋಧಾಸಕ್ತಿ, ಹೊಸ ಹೊಸ ಯಾಂತ್ರಿಕ-ವೈಜ್ಞಾನಿಕ ಶೋಧಗಳಿಂದ ಮಾನವನ ಸುಖಸೌಲಭ್ಯಗಳ ಪ್ರಸಾರ, ತಡೆಯಿಲ್ಲದ ತರ್ಕಸರಣಿ—ಇವೆರಡರ ಮಧ್ಯದಲ್ಲೆಲ್ಲಿಯೊ ಮಾನವಪ್ರಗತಿಯ ಮಾರ್ಗವಿರುವಂತೆ ತೋರುತ್ತಿದೆ. ಸದ್ಯದ ಶಿಕ್ಷಣಯೋಜನೆಯ ಕಲ್ಪಕರು, ಮಕ್ಕಳು 'ನಾಗರಿಕತಾ ಸಂಸ್ಕಾರ'ವನ್ನು ಪಡೆಯಬೇಕೆಂದು ತುಂಬಾ ಅಪೇಕ್ಷೆಯುಳ್ಳವರಾಗಿದ್ದಾರೆಂಬುದು ಸ್ಪಷ್ಟವಿದೆ. ಆದರೆ ವ್ಯವಹಾರಕ್ಕಿಳಿದಾಗ ಶಿಕ್ಷಣವು ಪ್ರಾದೇಶಿಕವೂ ಏಕಾಂಗೀನವೂ ಆಗದೆ ವಿಶ್ವದ ವಿಶಾಲಭೂಮಿಕೆಯು ವಿದ್ಯಾರ್ಥಿಯ ಮನಸ್ಸಿನೆದುರಿನಲ್ಲಿ ಅಚಂಚಲವಾಗುಳಿಯುವಂತೆ ವಿಶೇಷವಾಗಿ ಎಚ್ಚರಪಡುವುದು ಅಗತ್ಯವಾಗಿ ತೋರುತ್ತದೆ. ಈ ಶಿಕ್ಷಣಯೋಜನೆಯ ಸದುದ್ದೇಶವು ಸ್ಪಷ್ಟವಾಗಿದೆಯಾದರೂ, ಅದರಲ್ಲಡಕವಾದ ಕಠೋರವಾದ 'ಶಿಸ್ತಿ'ನ ಮೂಲಕ ಈ ವಿಚಾರಗಳು ನಮಗೆ ಸ್ಫುರಿಸುತ್ತಿವೆ. ಈ ಯೋಜನೆಯ ರೂಪಕಾರರು ಹೇಳುವಂತೆ, ಎಲ್ಲವೂ ಶಿಕ್ಷಕರನ್ನೆ ಅವಲಂಬಿಸಿದೆ,—ವಿದ್ಯಾರ್ಥಿಗಳಿಗಿಂತಲೂ ಅವರಿಗೆ ಗುರುಗಳಾಗಲಿರುವ ಶಿಕ್ಷಕರೆ ಈ ಶಿಕ್ಷಣಕ್ರಮದಲ್ಲಿ—ಅದರ ನಿಜವಾದ ಇಂಗಿತದಲ್ಲಿ ಪರಿಣತರಾಗಬೇಕಾಗಿದೆ. ಈ ನವಶಿಕ್ಷಣದ ಹೊಣೆಯನ್ನು ಹೊರಲಿರುವ ಅಧ್ಯಾಪಕವರ್ಗವು ತಮ್ಮ ಕೈಯೊಳಗಿನ ಎಳೆಮಕ್ಕಳು ವಿಶಾಲವಿಶ್ವದ ನಾಗರಿಕರಾಗಲಿದ್ದಾರೆಂಬುದನ್ನು ಮರೆಯದಿರಲಿ, ಮಕ್ಕಳು ಆರ್ಥಿಕ ಉದ್ದೇಶದಿಂದಲೆ ಗ್ರಸ್ತರಾಗದಂತೆ—ಮಕ್ಕಳ ಮನಸ್ಸು ವ್ಯವಹಾರೋದ್ದೇಶಕ್ಕಿಂತಲೂ ಮಹತ್ತರವಾದ ಜೀವನಾವಶ್ಯಕ ವಿವಿಧಸಂಸ್ಕಾ... ಹದಗೊಳ್ಳುವಂತೆ ಎಚ್ಚರಪಡಲಿ ಎಂಬುದೇ ... ಶಿಕ್ಷಣಾಭಿಮಾನಿಯ ಹಾರೈಕೆಯಾಗಿದೆ.

ವಿಜ್ಞಾನಕ್ಕೆ ಪುರಸ್ಕಾರವಿರಲಿ !

ಸಾಹಿತ್ಯಸಮ್ಮೇಲನದ ಅಧ್ಯಕ್ಷಪೀಠದಿಂದ ... ನಾರಾಯಣಪ್ಪನವರು ವಿಜ್ಞಾನದ ಮಹತಿಯನ್ನು ... ವಾಣಿಯಿಂದ ಕನ್ನಡನಾಡಿಗೆ ಬೋಧಿಸಿದುದಕ್ಕೆ ... ಅಭಿನಂದಿಸಲೇ ಬೇಕು. ದೇಶದ ಸಮಸ್ಯೆಗಳನ್ನು ... ವಿಚಾರ ಮಾಡುತ್ತಿರುವಾಗ, ಭಾವನಾತ್ಮಕತೆಯ... ವಿದ್ದಮಟ್ಟಿಗೂ ಕಡಿಮೆಮಾಡಿ, ತರ್ಕ-ವಿಚಾರ... ಗಳನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸುವುದನ್ನು ... ಸಂದುಕಟ್ಟಿನಲ್ಲಿ ನಮಗೆಲ್ಲರಿಗೂ ಅತ್ಯಗತ್ಯವಾಗಿದೆ...

"ನಾವು ಈಗ ಭರತಖಂಡದ ಪ್ರಜೆಗಳು ಮಾತ್ರ... ಇಡೀ ಭೂಭಾಗದ ಪ್ರಜೆಗಳು. ಹೀಗಿರುವಲ್ಲಿ, ಪಾಶ್ಚಾತ್ಯ... ಶಾಖೋಪಶಾಖೆಗಳಿಗಾಗಿ ಹಬ್ಬಿರುವ ವಿಜ್ಞಾನದ ಕಡೆಗೆ ... ಕೊಡದಿದ್ದರೆ ನಮಗೆ ಉಳಿಗಾಲವೆಲ್ಲಿಯದು ! ನಮ್ಮ ... ಕೈಗಾರಿಕೆಗಳ ರಂಗವನ್ನಾಗಿ ಮಾಡಬೇಕೆನ್ನುತ್ತೇವೆ; ... ಬೇಕಾದ ವಿಜ್ಞಾನದ ಸುಲಭ ಸೂತ್ರಗಳನ್ನೂ ಅರಿಯ... ಅದು ಹೇಗೆ ಸಿದ್ಧಿಸೀತು ? ನಮ್ಮಲ್ಲಿ ಸರ್ ಸಿ. ವಿ. ರಾ... ಸರ್ ಜಗದೀಶಚಂದ್ರ ಬೋಸ, ಆಚಾರ್ಯ ಸರ್ ... ಮೊದಲಾದ ಕೆಲವು ಮಂದಿ ಪ್ರಸಿದ್ಧ ವೈಜ್ಞಾನಿಕ... ಇಂಡಿಯಾದಂತಹ ಭೂಖಂಡದಲ್ಲಿ ಅಂತಹವರು ನೂರ... ಇರಬೇಕಲ್ಲವೆ ! ನಮ್ಮ ನೆಲವೂ ಸನ್ನಿವೇಶಗಳೂ ವಿಜ್ಞಾನ... ಬೆಳವಣಿಗೆಗೆ ಹೊಂದುವಂತಿಲ್ಲ. ಈಗ ೩೦ ವರ್ಷ... ಬೆಂಗಳೂರಿನಲ್ಲಿ 'ಕರ್ನಾಟಕ ವಿಜ್ಞಾನ ಪ್ರಚಾರಿಣಿ... ಎಂಬ ವಿಜ್ಞಾನಪಂಡಿತಮಂಡಲಿ ಏರ್ಪಟ್ಟು, ಸುಲಭವಾದ ... ಭಾಷೆಯಲ್ಲಿ ಬರೆದ, ಅಂದವಾದ ಹೊಸ ರೂಪನ್ನು... ಸುಲಕ್ಷಣವಾದ ಚಿತ್ರಗಳನ್ನು ಹಾಕಿ ರಚಿಸಿದ 'ವಿಜ್ಞಾ... ಮಾಸಪತ್ರಿಕೆಯೊಂದನ್ನು ಪ್ರಕಟಿಸಿತು. ಅದನ್ನು ... ಸ್ಕರಿಸದೆ ಹೋದುದಂತಿರಲಿ; ಆಗ ಮೈಸೂರು ವಿಶ್ವ... ಅಧ್ಯಕ್ಷರಾಗಿದ್ದು ಸುಪ್ರಸಿದ್ಧರೂ ಉದ್ದಾಮ ಪಂಡಿತ... ಚರಿತ್ರಾರ್ದಿ ವಿದ್ಯಾಪಕ್ಷಪಾತಿಗಳೂ ಆದ ಮಹನೀಯರು ... ಯನ್ನು ನೋಡಿ ಇದರಿಂದ ಅಷ್ಟೇನೂ ಉಪಯೋಗ... ದೆಂದೂ ಇದಕ್ಕೆ ಬದಲಾಗಿ ವಿಜ್ಞಾನ ಪಠ್ಯಪುಸ್ತಕ... ಗಳ ಉಪಯೋಗಕ್ಕಾಗಿ ಬರೆದರೆ ಒಳ್ಳೆಯದೆಂದೂ ... ರಿಗೆ ಬೋಧನೆ ಮಾಡಿದರು. ಇದನ್ನು ಕೇಳಿ ವಿಜ್ಞಾನ... ನಿರಾಶೆಗೊಂಡು ಮನಮುರುಗಿ ತನ್ನ ಸದುದ್ದೇಶವನ್ನು ... ಬಿಡಬೇಕಾಯಿತು. ವಿಜ್ಞಾನಶಿಶುವು ಎರಡೇ ವರುಷ... ದಲ್ಲಿದ್ದು ಅಸುನೀಗಿತು. ಮುಂದೆಯಾದರೂ ನಾವು ...

ಸ್ಕರಿಸದೆ ತಿರಸ್ಕರಿಸುತ್ತ ಹೋದಲ್ಲಿ ನಮಗೆ ಖಂಡಿತವಾಗಿಯೂ ಳಿಗಾಲವಿಲ್ಲ."

ಶ್ರೀಯುತರು ಮೇಲೆ ಉಲ್ಲೇಖಿಸಿದ ಉದ್ಯಮವನ್ನು ರ್ನಾಟಕದಲ್ಲಿ ಮತ್ತೆ ಏಕೆ ಆರಂಭಿಸಬಾರದು? ಟಾಟಾ ಜ್ಞಾನ ಸಂಶೋಧನ ಮಂದಿರದ ಕಾರ್ಯಸ್ಥಲವೂ ಟ್ರಲ್ ಕಾಲೇಜ್ ಮೊದಲಾದ ವಿಜ್ಞಾನಪ್ರಧಾನ ಶಿಕ್ಷಣ ಸ್ಥೆಗಳ ಕೇಂದ್ರವೂ ಸೋಪ್ ಫ್ಯಾಕ್ಟರಿಯೇ ಮೊದಲಾದ ಸೂರು ಸರಕಾರದ ಔದ್ಯೋಗಿಕ ಕಾರಖಾನೆಗಳ ಆಗ ವೂ ಅನೇಕ ಸಾಹಿತ್ಯಸೇವಾಸಕ್ತರ ವಾಸಸ್ಥಳವೂ ಆದ ಗಳೂರೇ ವಿಜ್ಞಾನವನ್ನು ಸಾಹಿತ್ಯಗ ಭಟ್ಟಿಗಿಳಿಸಿ, ನವನ್ನು ಸುಗಮವೂ ಸುಬೋಧವೂ ಮಾಡುವ ಕಾರ್ಯ ವನ್ನು ಕೈಕೊಳ್ಳಬಲ್ಲುದು. ೨೦ ವರ್ಷಗಳ ಕಾಲಾವಧಿಯ ವಾಯು, ಕನ್ನಡನಾಡಿನ ನೆಲವು ವಿಜ್ಞಾನಕೃಷಿಗೆ ಹೆಚ್ಚು ನವಾಗಿದೆಯೆಂದು ಹೇಳಬಹುದು. ಈ ಅವಧಿಯಲ್ಲಿ ನ್ನಡನಾಡು ಹಲಬಗೆಯ ಸಾಹಿತ್ಯನಿರ್ಮಾಣವನ್ನು ಡಿದೆ. ಆ ಸಾಹಿತ್ಯಸೃಷ್ಟಿಯಿದೀಗ ಒಂದು ಸ್ತಿಮಿತಕ್ಕೆ ದುನಿಂತಿದೆ. ಇದೀಗ ಸಾಹಿತ್ಯಕ್ಕೆ ವಿಜ್ಞಾನದ ಸಂಸ್ಕಾರ ಗುವುದು ತುಂಬಾ ಅವಶ್ಯಕವಾಗಿದೆ. ಸಾಹಿತ್ಯ-ವಿಜ್ಞಾನ ಪರಸ್ಪರ-ಪೂರಕವಾಗುವ ಸಂದರ್ಭವಿದೀಗ ಬಂದಿದೆ. ಹಿತಿಗಳು-ವೈಜ್ಞಾನಿಕರು ಎಚ್ಚರಿಯಲಿ.

ಷ್ಟ್ರೀಯ ಇತಿಹಾಸ ಪರಿಷತ್ತು

ಶಿಕ್ಷಣದ ಮೂಲಭೂತ ಪುನರ್ಘಟನೆಯಾಗಬೇಕೆಂಬ ನನ್ನು ಹಿಂದೀ ಜನತೆಯು ಇದೀಗ ಸರ್ವಾನುಮತ ದ ಸ್ವೀಕರಿಸಿದೆ. ಶಿಕ್ಷಣಕ್ರಮದಲ್ಲಿ ಇತಿಹಾಸಶಿಕ್ಷಣವು ಮುಖ್ಯವಾದುದು. ನಮ್ಮ ಪೂರ್ವಜರ ಬಗ್ಗೆ ನ್ಯಾಯ್ಯ ದ ಅಭಿಮಾನವನ್ನು ತಾಳಲು ನಮ್ಮ ಶಾಲೆಗಳು ಕಲಿಸ ರೆ ಅವುಗಳ ಪ್ರಯೋಜನವಾದರೂ ಏನು? ಈ ತು ನಮ್ಮ ರಾಷ್ಟ್ರೀಯ ಮುಖಂಡರಿಗೆ ಒಪ್ಪಿಗೆಯಾಗಿ ದು ಸಂತೋಷದ ಸಂಗತಿ. ಪ್ರಸಿದ್ಧ ಇತಿಹಾಸಜ್ಞರಾದ ಡಾ. ಕಾಶೀಪ್ರಸಾದ ಜಯಸ್ವಾಲರವರು ೧೯೩೩ರಲ್ಲಿ ಬರೋದೆಯಲ್ಲಿ ನೆರೆದ ಭಾರತೀಯ ಪ್ರಾಚ್ಯವಿದ್ಯಾ ಪರಿಷತ್ತಿನ ಆಧ್ಯಕ್ಷೀಯ ಭಾಷಣದಲ್ಲಿ, ಹಿಂದುಸ್ತಾನದ ರಾಷ್ಟ್ರೀಯ ಇತಿಹಾಸವನ್ನು ಬರೆಯುವ ಆವಶ್ಯಕತೆಯನ್ನು ಷವಾಗಿ ಪ್ರತಿಪಾದಿಸಿದ್ದರು. ೧೯೩೩ರ ಏಪ್ರಿಲ್‌ದಲ್ಲಿ ನಾಗಪುರದಲ್ಲಿ ಸೇರಿದ ಹಿಂದೀ ಸಾಹಿತ್ಯಸಮ್ಮೇಲನದ ಇತಿ ಪರಿಷತ್ತಿನ ಆಧ್ಯಕ್ಷ ಭಾಷಣದಲ್ಲಿ ಶ್ರೀ. ಜಯಚಂದ್ರ ವಿದ್ಯಾಲಂಕಾರರವರು ಜಯಸ್ವಾಲರ ಅಭಿಪ್ರಾಯವನ್ನು ಅನುಮೋದಿಸಿ, ಒಂದು ರಾಷ್ಟ್ರೀಯಸಂಸ್ಥೆಯು ಈ ಚರಿತ್ರ ಲೇಖನ ಕಾರ್ಯವನ್ನು ಕೈಕೊಳ್ಳುವುದು ಅಗತ್ಯವೆಂದು ಒತ್ತಿಹೇಳಿದರು. ಸಮ್ಮೇಲನದ ಆಧ್ಯಕ್ಷರಾದ ಶ್ರೀ. ರಾಜೇಂದ್ರ ಪ್ರಸಾದರಿಗೆ ಇದು ಒಪ್ಪಿಗೆಯಾಗಿ, ಅವರೂ ಜಯಸ್ವಾಲ-ಜಯಚಂದ್ರರೂ ಸೇರಿ 'ಭಾರತೀಯ ಆಧ್ಯಯನಮಂದಿರ' ಸಂಸ್ಥೆಯ ರೂಪರೇಷೆಗಳನ್ನು ಸಿದ್ಧಪಡಿಸಿದರು. ಜಯಸ್ವಾಲರು ಕಾಲಾಧೀನರಾದರೂ, ಈ ಯೋಜನೆಯನ್ನು ಮುಂದರಿಸುವ ಕೆಲಸವಿದೀಗ ನಡೆದಿದೆ. ಶ್ರೀ. ಸರದೇಸಾಯಿ, ಸರ್ ಯದುನಾಥ ಸರಕಾರ, ಡಾ. ಹಿರಾನಂದ ಶಾಸ್ತ್ರಿ, ಭದಂತ ರಾಹುಲ ಸಾಂಕೃತ್ಯಾಯನ, ಮಹಾರಾಜ ಕುಮಾರ ಡಾ. ರಘುವೀರಸಿಂಹ, ಶ್ರೀ. ಶಿವಪ್ರಸಾದ ಗುಪ್ತರೇ ಮೊದಲಾದವರು ಈ ಯೋಜನೆಗೆ ತಮ್ಮ ಆನುಕೂಲತೆಯನ್ನು ವ್ಯಕ್ತಪಡಿಸಿರುವರು. ಡಿಸೆಂಬರ ಕೊನೆಯ ವಾರದಲ್ಲಿಯೆ ಕಾಶಿಯ 'ಭಾರತಮಾತಾ ಮಂದಿರ'ದಲ್ಲಿ ಈ ಪರಿಷತ್ತು ಸೇರಲಿತ್ತು. ಪರಿಷತ್ತಿನ ಸ್ವಾಗತಾಧ್ಯಕ್ಷರು ಡಾ. ಭಗವಾನದಾಸರೆ ಇದ್ದಾರೆ. ಮೈಸೂರಿನ ಡಾ. ಕೃಷ್ಣರೂ ಆಮಂತ್ರಿತರಲ್ಲೊಬ್ಬರಿದ್ದಾರಂತೆ. ಕನ್ನಡಿಗರ ಉಜ್ವಲ ಇತಿಹಾಸಕ್ಕೆ ಪ್ರತ್ಯೇಕ ಸ್ಥಾನವನ್ನು ದೊರಕಿಸುವ ಪ್ರಯತ್ನವು ನಡೆಯುವುದೆಂದು ಆಶಿಸಲಡ್ಡಿಯಿಲ್ಲ. ಪರಿಷತ್ತಿನ ಕಾರ್ಯಕಲಾಪಗಳು ಪ್ರಕಟವಾದ ಮೇಲೆ ಉಳಿದ ಮಾತುಗಳನ್ನು ಬರೆಯಲು ಅನುಕೂಲವಾಗುವುದು.

ಶಸ್ತ್ರಾಸ್ತ್ರಕಾನೂನು ಧೂಳಿಮುಕ್ಕಲಿ!

ಬ್ರಿಟಿಷರ ಏಕಛತ್ರಾಧಿಪತ್ಯದಲ್ಲಿ ಹಿಂದುಸ್ತಾನವು ಸುರಕ್ಷಿತವೂ ನಿರಪಾಯವೂ ಆಗಿದೆಯೆಂಬ ತಿಳಿವಳಿಕೆಯಿಂದ ನಾವಿದ್ದೇವೆ. ಅವರು ಹಾಗೆ ನಮ್ಮನ್ನು ಎಲ್ಲಾ ಸಂಕಟಗಳಿಂದ ರಕ್ಷಿಸಲು ಸಮರ್ಥರಿದ್ದಾರೆಂದು ತಿಳಿದರೂ, ಜಗತ್ತಿನ ಪರಿಸ್ಥಿತಿಯು ಬ್ರಿಟಿಷರ ಕೈಹಿಡಿತವನ್ನೂ ತಪ್ಪಿಸಿಕೊಳ್ಳುವಷ್ಟು ಕೆಟ್ಟುಹೋಗಿದೆ. ಇದರ ಅರಿವು ನಮ್ಮ ರಾಜ್ಯಕರ್ತರಿಗೆ ಇಲ್ಲದಿಲ್ಲ. ಜಪಾನ-ಇಟಲಿಗಳು ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ರಾಹುಕೇತುಗಳಂತೆ ಮಾಡುತ್ತಿರುವ ಹಾವಳಿಯು ಬ್ರಿಟಿಷರಿಗೂ ಚಿಂತೆಯ ವಿಷಯವಾಗಿದೆ. ಕರಾಚಿ-ಮುಂಬಯಿ-ಮದ್ರಾಸ-ಕಲ್ಕತ್ತೆಗಳಂತಹ ಧನಕನಕಸಂಪನ್ನವಾದ ವ್ಯಾಪಾರವಾಣಿಜ್ಯಕೇಂದ್ರಗಳಾದ ಮಹಾನಗರಿಗಳೇ ಬಾಂಬುಗಳ ಹೊಡೆತಕ್ಕೆ ಮೊದಲತುತ್ತಾಗುವುದೆಂಬುದು ಖಂಡಿತ. ಆದುದರಿಂದ ಆ ಪಟ್ಟಣಗಳಲ್ಲಿ ವಿಮಾನಗಳ ದಾಳಿಯಿಂದ ಸಂರಕ್ಷಿಸಿಕೊಳ್ಳುವ ಶಿಕ್ಷಣವನ್ನು

ಜನತೆಗೆ ಕೊಡಲು ಪ್ರಯೋಗಗಳನ್ನು ಕೈಕೊಳ್ಳುತ್ತ
ಲಿದ್ದಾರೆ. ಇಂಗ್ಲಂಡಿನಲ್ಲಿ ಈ ಬಗ್ಗೆ ಭಗೀರಥಪ್ರಯತ್ನಗಳು
ನಡೆದಿವೆ. ಎಲ್ಲಾ ಪಕ್ಷಪಂಗಡಗಳೂ ಸರಕಾರದ ಸೈನಿಕ
ಸಿದ್ಧತೆಗೂ ಸಂರಕ್ಷಕ ಉಪಾಯಗಳಿಗೂ ಬೆಂಬಲವಿತ್ತಿವೆ.
ಇಂಗ್ಲಂಡಿನ ಉಪಾಯಯೋಜನೆಯ ಕ್ಷೇತ್ರವು ಕಿರಿದಾಗಿ
ರುವುದರಿಂದ ಅಲ್ಲಿ ಅದನ್ನು ಬಹುಮಟ್ಟಿಗೆ ಯಶಸ್ವಿಗೊಳಿಸು
ವುದು ಸಾಧ್ಯವಿದೆ. ಆದರೆ ಹಿಂದುಸ್ತಾನದ ಕ್ಷೇತ್ರವು ತೀರ
ದೊಡ್ಡದು; ವಿಮಾನಗಳ ದಾಳಿಗೆ ಅದರ ವಿಶಾಲವಾದ ತೀರ
ಪ್ರದೇಶವೂ ಅಲ್ಲಲ್ಲಿ ಹರಡಿದ ಮಹಾನಗರಗಳೂ ಒಮ್ಮೆಲೆ
ಪಕ್ಕಾಗುವವು. ಎಂದಮೇಲೆ ಸರಕಾರದ ಉಪಾಯ
ಯೋಜನೆಯೊಂದೆ—ಆದೂ ಕೆಲವೆಡೆಗಳಲ್ಲಿಯೆ—ಸಾಲ
ದೆಂಬುದು ಸ್ಪಷ್ಟವಿದೆ.

ಹಿಂದುಸ್ತಾನದ ಸತ್ತ್ವಹರಣಕ್ಕೆ ಬ್ರಿಟಿಷರ ಎರಡು
ತಂತ್ರಗಳು ಕಾರಣವಾಗಿವೆ. ಒಂದು ಮೆಕಾಲೆಸಾಹೇಬರ
ಆಂಗ್ಲವಿದ್ಯಾಪ್ರಚಾರ; ಇನ್ನೊಂದು ಶಸ್ತ್ರಾಸ್ತ್ರ ಕಾನೂನು.
ಹಿಂದೀ ಜನಾಂಗಕ್ಕೆ ಜನಾಂಗವನ್ನೇ ನಿಶ್ಶಸ್ತ್ರಗೊಳಿಸಿದಂದಿ
ನಿಂದ ನಮ್ಮೊಳಗಿನ ಪ್ರತಿಕಾರಸಾಮರ್ಥ್ಯವಂತಿರಲಿ, ಪ್ರತಿ
ಕಾರವಿಶ್ವಾಸವೂ ಹಾರಿಹೋಗಿದೆ. ಆಂಗ್ಲವಿದ್ಯಾ
ಪ್ರೋತ್ಸಾಹವು ನಮ್ಮನ್ನು ಪರಸಂಸ್ಕೃತಿಗೆ ದಾಸರನ್ನಾಗಿ
ಮಾಡಿ, ನಮ್ಮಲ್ಲೊಂದುಬಗೆಯ ನ್ಯೂನಗಂಡ (Inferi-
ority Complex) ವನ್ನು ಉಂಟುಮಾಡಿದ್ದರೆ, ಶಸ್ತ್ರ
ಕಾನೂನು ಜನಾಂಗದ ಕ್ಷಾತ್ರವೃತ್ತಿಗೇ ಕೊಡಲಿಯಿಕ್ಕಿದೆ.
ಇಟಲಿ-ಜಪಾನಗಳೇ ಆಗಲಿ, ಅಫಗಾನಿಸ್ತಾನ-ಸೊವಿಯೆಟ್
ರಸ್ಯಗಳೇ ಆಗಲಿ — ಪರಚಕ್ರಗಳ ಅಭಿಯೋಗವನ್ನು
ಎದುರಿಸುವ ಸಾಮರ್ಥ್ಯವು ನಮ್ಮಲ್ಲಿ ಬರಬೇಕಾದರೆ, ಸೈನಿಕ
ಶಿಕ್ಷಣವನ್ನು ನಮ್ಮಲ್ಲಿಯ ಲಕ್ಷಾವಧಿ ಧೃಷ್ಟಪುಷ್ಟ ಯುವ
ಕರಿಗೆ ಕಡ್ಡಾಯವಾಗಿ ಕೊಡುವುದಗತ್ಯ. ಶಸ್ತ್ರಾಸ್ತ್ರ ಕಾನೂ
ನನ್ನು ನಿರ್ನಾಮಗೊಳಿಸುವುದಗತ್ಯ. ಸರಕಾರವೇನೋ
ಸಂರಕ್ಷಕ ಉಪಾಯಗಳನ್ನು ಜಾರಿಯಲ್ಲಿ ತರುವುದಕ್ಕಾಗಿ
ಒಂದು ಸಮಿತಿಯನ್ನು ನಿಯಮಿಸಿ, ಅದರ ಮುಖಾಂತರ
ಪ್ರಾಂತಿಕ ಕಾರ್ಯವಿಭಜನೆಯನ್ನು ಮಾಡಲಿದೆ. ವಿಮಾನ
ಗಳಿಂದ ತೀರಪ್ರದೇಶದ ಗಸ್ತಿಮಾಡಿಸುವುದು, ದೊಡ್ಡ
ಪಟ್ಟಣಗಳಲ್ಲಿಯ ನಾಗರಿಕರಿಗೆ ವಿಷಧೂಮನಿವಾರಕ ಮುಖ
ವಾಡಗಳನ್ನು ಉಪಯೋಗಿಸಲು ಕಲಿಸುವುದು, ಪರ
ರಾಷ್ಟ್ರೀಯ ವಿಮಾನಗಳ ಆಗಮನವನ್ನು ಮುಂಗಡ ತಿಳಿ
ಸಲು ನಿರೀಕ್ಷಕರನ್ನು ನಿಯಮಿಸುವುದು, ಇವನ್ನೆಲ್ಲ ಯಥಾ
ಪ್ರಕಾರ ಮಾಡಿಯೇ ಮಾಡುವರು. ಆದರೆ ಇದಿಷ್ಟೇ
ಸಾಲದು. ಜನತೆಗೆ ಜನತೆಯನ್ನೆ ಪ್ರತಿಕಾರ
ಮಾಡಬೇಕಾದುದು ಅಗತ್ಯ. ಎರಿಬರಬಹುದಾ
ವನ್ನು ಇದಿರಿಸುವ ಶಿಕ್ಷಣವನ್ನು ಪ್ರಾಯಕ್ಕೆ
ನಿಂದಲೆ ಕೊಡುವುದು ಅಗತ್ಯ.

ಪುಣ್ಯನಗರಿಯಲ್ಲಿ ಆದ್ಯಸ್ವಾತಂತ್ರ್ಯಧ್ವಜವನ್ನ
ಸುವ ಸಮಾರಂಭದಲ್ಲಿ ವೀರ ಸಾವರಕರರು ಇ
ದರು "ಕೈಯಲ್ಲಿ ದಂಡಶಕ್ತಿಯಿಲ್ಲದೆ ರಾಷ್ಟ್ರಗೀತ
ಸಮಿತಿ, ಸ್ವಾತಂತ್ರ್ಯ—ಇವುಗಳ ಉಚ್ಚಾರವು
"Down with the Arms act (ಕೈದಿನ ಕಾನೂ
ಮುಕ್ಕಲಿ)" ಎಂದು ಗಟ್ಟಿಯಾಗಿ ಕೂಗ
ಕಾಂಗ್ರೆಸ್ ರಾಜ್ಯವಿದೆಯೆನ್ನುವಿರಿ. ಹಾಗಾದರೆ
ಕಾನೂನು ನಷ್ಟವಾಗುವಂತೆ ಆಂದೋಲನಮಾಡ
ಯೋಗ್ಯಸಮಯವಾಗಿದೆ."

ಇಂಗ್ಲಂಡಿನಲ್ಲಿ ಸೈನ್ಯಖಾತೆಯ ಪುನರ್ಘಟನೆ

ನಾಳೆಯೆ ಯುದ್ಧವಾಗುವುದೆಂದು ಬ್ರಿಟಿಷ್ ಸ
ಗೃಹೀತಹಿಡಿದಿದೆ. ಸೈನ್ಯ, ಹಡಗುಪಡೆ, ವಿ
ಯಾಂತ್ರಿಕಸಾಧನಗಳು ಮೊದಲಾದುವುಗಳ
ತೆಯ ಬಗ್ಗೆ ಕೋಟ್ಯವಧಿ ಪೌಂಡುಗಳನ್ನು ವೆಚ್ಚ
ಲಿದೆ. ತನ್ನ ಅಸಿದ್ಧತೆಯ ಅರಿವು ಮೊನ್ನೆ
ಹುಟ್ಟಿದುದರಿಂದ, ಸಿದ್ಧತೆಯು ಮುಗಿಯಲು
ಕೊಂಚ ಕಾಲ ಬೇಕು. ತತ್ಪೂರ್ವದಲ್ಲಿ ಅತ್ಯ
ತ್ವದ ವಿಷಯವಾದ ಸೈನ್ಯಾಧಿಕಾರಿಗಳ ಪುನ
ಕೆಲಸವನ್ನು ಅದು ಈಗಲೆ ಕೈಕೊಂಡಿದೆ. ಹೊ
ಹೊಸಬರೆ ಕರ್ಣಧಾರರಾಗಬೇಕು. ಆದುದರಿಂದ
ಖಾತೆಯೊಳಗಿನ ಹಳಬರಾದ ವರಿಷ್ಠ ಅಧಿಕಾರಿ
ಕೆಲಸಕ್ಕೆ ತ್ಯಾಗಪತ್ರ ಕೊಡಲು ಹಚ್ಚಿ, ಅವ
ಹೊಸ ಅಧಿಕಾರಿಗಳನ್ನು ನಿಯಮಿಸಿರುವರು.
ಕೌಂಟ ಗಾರ್ಟರವರು ಇಂಪೀರಿಯಲ್ ಜನರಲ್
ಮುಖ್ಯಸ್ಥರಾಗಿರುವರು. ಇವರು ಧೈರ್ಯ-ಸ್ಥ
ಗಳಾಗಿರುವರು. ಮಹಾಯುದ್ಧಕಾಲದಲ್ಲಿ ಅವ
ನಂಟರಾಗಿದ್ದವರು ಕ್ಯಾಪ್ಟನ್ ಪದವಿಯನ್ನೆ
ಮಹಾಯುದ್ಧದಲ್ಲಿ ಕನಿಷ್ಠ ಅಧಿಕಾರಿಗಳೆಂದು ಕೆ
ಅನುಭವ ಪಡೆದವರೆ ಬರುವ ಯುದ್ಧದಲ್ಲಿಯ
ಯೋಗ ಬೀಳಬೇಕೆಂಬ ಧೋರಣೆಯೆ ಈ
ಲ್ಲಿದೆ. ಆರ್ಮಿ ಕೌನ್ಸಿಲಿನ ಸಭಾಸದರು ಇದುವರೆಗೆ
ವರ್ಷ ವಯಸ್ಸಿನವರಿರುತ್ತಿದ್ದರು; ಇನ್ನು ಮುಂ
ಮಿಸಲಾಗುವ ಸಭಾಸದರ ವಯಸ್ಸು ೫೨ ವರ್ಷ

ಹೊರಗಿರಬೇಕೆಂದು ತೀರ್ಮಾನವಾಗಿದೆ. ಈ ಬದಲಾವಣೆಗಳು ತೀರ ಮಹತ್ವದುವಾದುದರಿಂದ ಅವನ್ನು ಜಾರಿಯಲ್ಲಿ ತರುವ ಮೊದಲು ಯುದ್ಧಮಂತ್ರಿಗಳಾದ ಮಿ. ಹೋಅರ ಬೆಲಿಶಾ ಅವರು ಸಾರ್ವಭೌಮರ ಬೆಟ್ಟತೆಗೆದುಕೊಂಡು, ಎಲ್ಲವನ್ನು ವಿದಿತಪಡಿಸಿ, ಅವರ ಒಪ್ಪಿಗೆಯನ್ನು ಪಡೆದರು. ಬ್ರಿಟಿಷ್ ಮಂತ್ರಿಮಂಡಲದ ಈ ಕಾರ್ಯವು ಯೋಗ್ಯ ಸಮಯದಲ್ಲಿ ಯೋಗ್ಯಕಾಲದಲ್ಲಿಯೆ ಮಾಡಲ್ಪಟ್ಟಿತೆಂದು ಎಲ್ಲರೂ ಪ್ರಶಂಸಿಸುತ್ತಲಿರುವರು. ತನ್ನ ರಾಷ್ಟ್ರದ ರಕ್ಷಣೆಗಾಗಿ ಬ್ರಿಟಿಷ್ ಸರಕಾರವು ಎಂತಹ ದೀರ್ಘೋದ್ಯೋಗವನ್ನು ಕೈಕೊಂಡಿದೆಯೆಂಬುದನ್ನು ತಿಳಿಸಲೋಸುಗವೆ ಮೇಲಣ ವರ್ತಮಾನವನ್ನು ನಾವು ಕೊಟ್ಟಿರುವೆವು.

ಉತ್ತರಚೀನದ ತರುವಾಯ ಮಧ್ಯಚೀನ

ಉತ್ತರಚೀನವನ್ನು ನುಂಗಿದ ಮೇಲೆ, ಜಪಾನವು ಅಲ್ಲಿ ಹೊಸ ಸರಕಾರವನ್ನು ಸ್ಥಾಪಿಸುವ ಘೋಷಣೆಯನ್ನು ಮಾಡಿ ಸುಮ್ಮನೆ ಕೂಡಲಿಲ್ಲ. ದಕ್ಷಿಣ ಚೀನವನ್ನು ಇನ್ನೂ ಪ್ರವೇಶಿಸದಿದ್ದ ಕಾಲದಲ್ಲಿ, ಜಪಾನಿ ಸೈನ್ಯವು ಕೊಂಚ ವಿಶ್ರಾಂತಿಯನ್ನು ಪಡೆಯಬಹುದೆಂದು ಆಶಿಸಲಾಗಿತ್ತು. ಅದು ಸುಳ್ಳಾಯಿತು. ಕಾವಿದ್ದಾಗಲೆ ಹಣಿದುಬಿಡಬೇಕೆಂದು ಜಪಾನವು ಯೋಚಿಸಿದಂತೆ ಕಾಣುತ್ತದೆ. ಜಪಾನಿ ವಿಮಾನಗಳು ಕಂತಾನದ ಮೇಲೆ ಹಾರಾಡುತ್ತಲಿದ್ದು ಜಪಾನಿ ಹಡಗುಪಡೆಯು ಯುದ್ಧಕ್ಕೆ ಸಿದ್ಧವಾಗಿ ನಿಂತಿದೆ. ದಕ್ಷಿಣಚೀನದ ನಾಳೆಯು ಜಪಾನಕ್ಕೆ ಸುಲಭಸಾಧ್ಯವಾಗಲಾರದೆಂದು ಹೇಳುತ್ತಾರೆ. ಆದರೆ ಚೀನದ ಶಸ್ತ್ರಾಸ್ತ್ರ ಬಲವು ತೀರಾ ಕಿರುಕುಳವಾಗಿರುವಾಗ, ಜಪಾನದ ಆಕ್ರಮಣಕ್ಕೆ ತಡೆಯುಂಟಾಗುತ್ತೆಂದು ತೋರುವುದಿಲ್ಲ. ಹೊಸ ಆಂತರರಾಷ್ಟ್ರೀಯ ರೂಪದ ತೊಡಕು ಉಂಟಾಗದಿದ್ದರೆ, ಜಪಾನವು ದಕ್ಷಿಣ ಚೀನವನ್ನು ಸ್ವಾಹಾಗೊಳಿಸುವುದು ಖಂಡಿತವಾಗಿ ತೋರುತ್ತದು. ಲ್ಯಾನ್‌ಟ್ಯಾವೊ ನಡುಗಡ್ಡೆಗಳೂ ಕೌಲೂನ್-ಕಂತಾನ ರೇಲ್ವೆ ಮಾರ್ಗವೂ ಇಂಗ್ಲಂಡಿನ ಒಡೆತನದ್ದಾದೆ. ಜಪಾನಿ ವಿಮಾನಗಳು ಈ ನಡುಗಡ್ಡೆಗಳ ಮೇಲೆ ಹಾರಿದಾಡುತ್ತಿದ್ದುದರಿಂದ ಮತ್ತು ಈ ರೇಲ್ವೆದಾರಿಯಿಂದ ಚೀನಕ್ಕೆ ಮದ್ದುಗುಂಡಿನ ಪೂರೈಕೆಯಾಗುತ್ತಲಿದೆಯೆಂದು ಜಪಾನವು ದೂರಿಡುತ್ತಲಿದ್ದುದರಿಂದ ಇಂಗ್ಲಂಡ್-ಜಪಾನಗಳ ನಡುವೆ ಕಿಡಿಹಾರುವ ಸಂಭವವಿದೆ. ಆದರೆ ಈ ಸಂಭವವೂ ಅಸಂಭವನೀಯವಾಗಿಯೆ ಕಾಣುತ್ತಿದೆ. ಏಕೆಂದರೆ ಮೊನ್ನೆ ಮೊನ್ನೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಾದ ವಾದವಾದದಲ್ಲಿ ಮಿ. ಏಡನ್ನರು ಇಂಗ್ಲಂಡಿನ ಹಿತಸಂಬಂಧಗಳನ್ನು ಎಂತಹ ಸಂದರ್ಭದಲ್ಲಿಯೂ ಕಾಯುವೆವು ಎಂದು ಹೇಳುತ್ತ, ಹೇಳುತ್ತ, ಜಪಾನದ ಏರಾಟಿಕೆಯ ಪ್ರಶ್ನೆಯನ್ನೆತ್ತಿದಾಗ "ಮಹಾಯುದ್ಧದ ಸಿದ್ಧತೆ ಮಾಡದೆ ಜಪಾನವನ್ನು ದಂಡಿಸುವ ಮಾತು ಬರಿ ಬುರುಡೆ" ಎಂದು ಹೇಳಿಬಿಟ್ಟರು. ಎಂದರೆ ತಮ್ಮ ಹಿತಸಂಬಂಧಗಳಿಗೆ ಕೊಂಚ ಧಕ್ಕೆ ತಟ್ಟಿದರೂ ಚೀನದಲ್ಲಿಯ ಜಪಾನದ ಅತಿಕ್ರಮಣಕ್ಕೆ ಅಡ್ಡಗಾಲನ್ನು ಹಾಕಬಾರದಾಗಿ ಇಂಗ್ಲಂಡು ಸದ್ಯಕ್ಕಂತೂ ನಿರ್ಧರಿಸಿದಂತೆ ಕಾಣುವುದು. ಎಲ್ಲವೂ ಅನುಕೂಲವಾಗಿರುವಾಗ, ಜಪಾನವು ತನ್ನ ದೇಶದಲ್ಲಿಯ ಕಮ್ಯೂನಿಸ್ಟ್ ಸಾಮ್ಯವಾದಿ ಚಳವಳಿಗಾರರನ್ನು ಸೆರೆಮನೆಗಟ್ಟಿ, ಮನೆಯಲ್ಲೇಳಬಹುದಾದ ವಿರೋಧವನ್ನು ಸದೆಬಡಿದಿದೆ. ಚೀನದಲ್ಲಿಯ ಜಪಾನಿ ಸೇನಾಧಿಕಾರಿಯಾದ ಜನರಲ್ ಮಾತ್ಸುಯಿಯು, ಚೀನದಂಡಯಾತ್ರೆಯಲ್ಲಿಯ ತನ್ನ ಉದ್ದಿಷ್ಟವು ನೆರವೇರುವ ವರೆಗೂ ತಾನು ಹಿಂದಿರುಗುವುದಿಲ್ಲವೆಂದು ಹೇಳಿದ್ದಾನೆ. ಅದೇನಿರಬಹುದು ???

ಸಂಘಟನೆಯ ಮೂರಂತಸ್ತುಗಳು

ಡಿಸೆಂಬರ ೧೮ರಿಂದ ಕೊಲ್ಲಾಪುರದಲ್ಲಿ ಮಹಾರಾಷ್ಟ್ರ ಹಿಂದೂಧರ್ಮ ಪರಿಷತ್ತು ನಡೆಯಿತು. ಡಾ. ಮುಂಜೆಯವರು ಅಧ್ಯಕ್ಷರು. ಶ್ರೀಕ್ಷಾತ್ರಜಗದ್ಗುರುಗಳು ಪರಿಷತ್ತಿನ ಉದ್ಘಾಟನಸಮಾರಂಭವನ್ನು ಮಾಡಿದರು. ಒಬ್ಬ ಪತ್ರಿಕಾಕರ್ತರು ಹೇಳುವಂತೆ, ಡಾ. ಮುಂಜೆಯವರು ಜಾತಿಯಿಂದ ಬ್ರಾಹ್ಮಣರು, ವೃತ್ತಿಯಿಂದ ಕ್ಷತ್ರಿಯರು; ಕ್ಷಾತ್ರಜಗದ್ಗುರುಗಳು ಜಾತಿಯಿಂದ ಕ್ಷತ್ರಿಯರು, ವೃತ್ತಿಯಿಂದ — ಆಚರಣೆಯಿಂದ — ಉಪದೇಶಾಧಿಕಾರದಿಂದ ಬ್ರಾಹ್ಮಣರು; ಈ ಸುಂದರ ಸಂಗಮವನ್ನು ಈ ಪರಿಷತ್ತು ತಂದೊದಗಿಸಿತು. ಹಿಂದೂಕುಲವು ತನ್ನೊಳಗಿನ ಜಾತಿಭೇದಾದಿ ತೊಡಕು ತೊಡರುಗಳನ್ನು ಹರಿದೊಗೆದು ವಿಜಯಿಷ್ಣುವೂ ಪ್ರಭವಿಷ್ಣುವೂ ಆಗಬೇಕು, ಹಿಂದೂಧರ್ಮವು ಜಗತ್ತಿನ ಧರ್ಮಗಳ ಗುರುವೆಂಬ ತನ್ನ ಸ್ಥಾನವನ್ನು ಮತ್ತೆ ಪಡೆಯಬೇಕು ಎಂದು ವಿಚಾರಪೂರ್ವಕವಾಗಿ ಪ್ರತಿಪಾದಿಸುವ ಮಹಾರಾಷ್ಟ್ರದ ಗಣ್ಯವ್ಯಕ್ತಿಗಳಲ್ಲಿ ಕ್ಷಾತ್ರಜಗದ್ಗುರುಗಳೂ ಒಬ್ಬರು. ಉದ್ಘಾಟನ ಭಾಷಣದಲ್ಲಿ ಶ್ರೀಗಳವರು ಮಾಡಿದ ಹಿಂದೂಧರ್ಮನಿರೂಪಣವೂ ಹಿಂದೂಕುಲಸಂಘಟನಾವಿವರಣವೂ ಸುಂದರವಾದುದರಿಂದ, ಅದರಲ್ಲಿಯ ಸಾರಭಾಗವನ್ನು ಇಲ್ಲಿ ಕೊಡುತ್ತಿದ್ದೇವೆ.

"ಕ್ರಿಸ್ತೀಧರ್ಮವೇ ಆಗಲಿ, ಇಸ್ಲಾಂಧರ್ಮವೇ ಆಗಲಿ, ಇವೆರಡಕ್ಕೂ ಹಿಂದೂಧರ್ಮಕ್ಕೂ ದೊಡ್ಡ ಅಂತರವಿದೆ.

ಇತರ ಧರ್ಮಗಳಂತೆ ನಮ್ಮ ಧರ್ಮವು, ಕಿವಿಯಲ್ಲಿ ಹೇಳಲ್ಪಟ್ಟುದಾಗಲಿ, 'ನಾನು ಈಶ್ವರನ ಪುತ್ರನಿದ್ದೇನೆ ಮತ್ತು ನಿಮಗೆ ಈಶ್ವರನ ಆದೇಶ ಹೇಳಲು ಬಂದವನಾಗಿದ್ದೇನೆ' ಎಂದು ಆತ್ಮಪ್ರೌಢಿಮೆ ಮಾಡುವಂತಹದಾಗಲಿ ಅಲ್ಲ. ಸಹಸ್ರಾವಧಿ ವರ್ಷಗಳಿಂದ ನಮ್ಮ ಋಷಿಮುನಿಗಳು ಅನುಭವಹೊಂದಿ, ಹಿಂದೂಸಮಾಜ ಹಿಂದೂ ಸಂಸ್ಕೃತಿಗಳು ಒಳ್ಳೆಯ ರೀತಿಯಲ್ಲಿ ಬದುಕಬೇಕು ಎಂಬ ಬಗ್ಗೆ ಹೇಳಿದ ತತ್ವಗಳ ಏಕತ್ರಿತ ಸಾರವಾಗಿದೆ. ನಮ್ಮ ಋಷಿಗಳು ಈಶ್ವರನ ಬಗ್ಗೆ ಬೌದ್ಧಿಕ ಅಜ್ಞೇಯವಾದವನ್ನು ಸ್ವೀಕರಿಸಿದ್ದಾರೆ. ಅಖಿಲವಿಶ್ವದ ಹಿಂದೆ ಚಿಚ್ಛಕ್ತಿಯಿದೆ; ಅದರ ಅಂಶವು ಮನುಷ್ಯಮಾತ್ರನಲ್ಲಿಯೂ ಇದೆ. ಈ ಚೇತನಾಶಕ್ತಿಯಿಂದಲೆ ಜಗತ್ತಿನ ಆಗುಹೋಗುಗಳೆಲ್ಲ ನಡೆಯುತ್ತಿವೆ....ಮುಂಚಿನ ಜಡವಿಕಾಸವಾದವು ಇದೀಗ ಹಿನ್ನೆಲದಲ್ಲಿ ಹೋಗಿಬಿಟ್ಟದ್ದು, ಚೈತನ್ಯವಿಕಾಸವು ಮುಂದಕ್ಕೆ ಬಂದಿದೆ. ಈ ಬಗೆಯ ವಿಕಾಸವಾದವನ್ನು ಉಪನಿಷತ್ಕಾರರು ಎಂದೊ ನಿರೂಪಿಸಿರುವರು. ನಮ್ಮಲ್ಲಿ ಅದೃಶ್ಯ ರೂಪದಲ್ಲಿರುವ ಚಿಚ್ಛಕ್ತಿಯ ವಿಕಾಸಮಾಡಿಕೊಂಡು ನರನು ನಾರಾಯಣನಾಗಲು ಧರ್ಮವು ಆವಶ್ಯಕವಾಗಿದೆ. ಆಧುನಿಕ ನವನಾಗರಿಕತೆಯಿಂದ ನರನು ನಾರಾಯಣನಾಗುವುದಂತಿರಲಿ, ಅವನು 'ಜಾಣ ಸೈತಾನ'ನಾಗಿದ್ದಾನೆ. ಕತ್ತಲೆಯಿಂದ ಬೆಳಕಿನೆಡೆಗೆ ಬರುವ ದಾರಿಯೆಂದರೆ ಬರಿ ಜ್ಞಾನ ಸಂಪಾದನೆಯಲ್ಲ, ಜ್ಞಾನಪೂರ್ವಕವಾದ ಭಕ್ತಿಯುತವಾದ ಕರ್ಮಮಾಡುತ್ತ 'ಸರ್ವಭೂತಹಿತರತ'ನಾಗುವುದು. ಶ್ರೀಕೃಷ್ಣನು ಈ ದಾರಿಯನ್ನೆ ತೋರಿದ್ದಾನೆ.

"ಸರ್ವಸಮಾಜದ ಐಹಿಕ ಪಾರಮಾರ್ಥಿಕ ಉತ್ಕರ್ಷವನ್ನು ಸಾಧಿಸುವುದು ನಮ್ಮ ಗುರಿ. ಇದರ ಸಾಧನೆಯ ಮಾರ್ಗದಲ್ಲಿಯ ಆತಂಕಗಳನ್ನೆಲ್ಲ ನಾವು ಕಿತ್ತೊಗೆಯಬೇಕು. 'ಜಾತಿಭೇದ'ವು ಅಂತಹದೊಂದು ಬಂಡೆಗಲ್ಲಾಗಿದೆ. ಜಾತಿಭೇದಕ್ಕೂ ಧರ್ಮಕ್ಕೂ ಆಂತರಂಗಿಕ ಸಂಬಂಧವೇನೂ ಇಲ್ಲ. ಜಾತಿಭೇದವನ್ನು ನಷ್ಟಗೊಳಿಸುವುದೆಂದರೆ ಧರ್ಮದ ಮೇಲೆ ಕೊಡಲಿಯೆತ್ತಿದಂತಲ್ಲ. ಜಾತಿಭೇದನಾಶಕ್ಕೆ ಮೂರು ಮೆಟ್ಟಲುಗಳಿವೆ: "ಭೇಟಬಂದಿ, ರೋಟಿಬಂದಿ, ಬೇಟಬಂದಿ"ಗಳನ್ನು ನಿವಾರಿಸುವುದು; ಎಂಧರೆ ಸ್ಪೃಶ್ಯತಾನಿರ್ಬಂಧವನ್ನೂ ಅನ್ನೋದಕನಿರ್ಬಂಧವನ್ನೂ ವಿವಾಹನಿರ್ಬಂಧವನ್ನೂ ತೆಗೆದುಹಾಕುವುದು. ಇವುಗಳಲ್ಲಿ ಮೊದಲನೆಯ ಎರಡನ್ನು ಕೈ. ವಾ. ಶ್ರೀ. ಶಾಹೂ ಛತ್ರಪತಿಗಳು ಸುಲಭ ಮಾಡಿಟ್ಟರು; ಆ ಕಾರ್ಯವನ್ನೆ ಬ್ಯಾ. ಸಾವರಕರ ಅವರು ಮುಂದುವರಿಸುತ್ತಲಿದ್ದಾರೆ. ಮೂರನೆಯ ಮೆಟ್ಟಲನ್ನೇ[illegible] ಕೆಲಸ ತರುಣರದು; ಅವರದನ್ನು ಕೈಕೊಳ್ಳುವ[illegible] ನನ್ನ ದೃಢವಾದ ನಂಬಿಗೆ. ಅಸ್ಪೃಶ್ಯತೆಯನ್ನು ಎಲ್ಲ[illegible] ಮೊದಲು ಬೇರುಸಹಿತ ನಾಶಗೊಳಿಸಬೇಕು. ಸಮ[illegible] ಮಹತ್ವದ ಅಂಗವೊಂದನ್ನು ನಾವು ಕಡೆಗಣಿಸಿದರೆ, [illegible] ಮೇಲೆ ಅಡರಿಬರುತ್ತಿರುವ ವಿವಿಧ ಸಂಕಟಗ[illegible] ಹೇಗೆ ಎದುರಿಸಬಲ್ಲೆವು ? ಲಿಂಗಭೇದವು ಜಡದೇಹ[illegible] ಆತ್ಮಕ್ಕಿಲ್ಲ ಎಂಬ ತತ್ವವನ್ನು ಮನದಂದು ಸ್ತ್ರೀ[illegible] ಆತ್ಮವಿಕಾಸಕ್ಕೆ ಸಂಪೂರ್ಣಾವಸರವನ್ನು ನಾವು [illegible] ಕೊಡಬೇಕು. ಕೊನೆಗೆ ಋಗ್ವೇದಸಂಹಿತೆಯಲ್ಲಿಯ [illegible]ನೆಯನ್ನೆಂದು ಮುಗಿಸುವೆನು.

'ಸಮಾನಾ ವ ಆಕೂತಿಃ ಸಮಾನಾ ಹೃದಯಾ[illegible]
ಸಮಾನಮಸ್ತು ವೋ ಮನೋ ಯ ಭಾವಃ ಸುಸಹ[illegible]

ನಿಮ್ಮೆಲ್ಲರ ಮನಗಳು ಒಂದಾಗಲಿ, ನಿಮ್ಮೆಲ್ಲರ ಅಂತ[illegible]ಗಳು ಒಂದಾಗಲಿ, ನಿಮ್ಮೆಲ್ಲರ ಸುಸಂಘಟನೆಯಾ[illegible]

ಹಿಂದುತ್ವವುಳಿಯಲು ಜಾತಿಯುಳಿಯಬೇಕು

ಹಿಂದುಗಳ ಧರ್ಮ, ಜಾತಿ, ಸೊತ್ತು, ರಾಜಕೀಯ[illegible]ಸ್ವಗಳ ಮೇಲೆ ಎಲ್ಲಾ ಕಡೆಯಿಂದ ದಾಳಿ ನಡೆದಿ[illegible] ನಮ್ಮ ಸ್ವತ್ವವನ್ನು ಹೇಗೆ ಉಳಿಸಿಕೊಳ್ಳಬೇಕೆಂದು [illegible]ರಿಗೆ ಚಿಂತೆಹತ್ತಿ, ಅವರು ತೀವ್ರ ಉಪಾಯ[illegible]ಯನ್ನು ಸೂಚಿಸುತ್ತಿದ್ದರೆ ಆಶ್ಚರ್ಯವಲ್ಲ. ಕೊಲ್ಲಾ[illegible] ಹಿಂದೂಧರ್ಮಪರಿಷತ್ತಿನ ಅಧ್ಯಕ್ಷರಾದ ಡಾ. [illegible]ಯವರು ಜಾತಿವ್ಯವಸ್ಥೆಯು ಹೋಗಲೇಬೇಕೆಂದು [illegible] ಪ್ರತಿಪಾದಿಸಿದರು. ಜನತೆಯಲ್ಲಿ ಇಂದು ತೀವ್ರವಾಗಿ[illegible] ಇಚ್ಛೆಯು ನಾಳೆ ಸಾಮುದಾಯಿಕವಾಗಿ ಪ್ರಕಟವ[illegible] ಬಹುದು. ಜಾತಿವ್ಯವಸ್ಥೆಯು ಮುಂಚೆ ಹೇಗೆ ಧರ್ಮ[illegible]ವಾಗಿತ್ತೆಂಬುದನ್ನು ವಿವೇಚಿಸಿ ಡಾ. ಮುಂಜೆ[illegible] ಇಂತೆಂದರು:—

"ಜಾತಿಗಳನ್ನು ಶಾಶ್ವತವಾಗಿ ಇಟ್ಟುಕೊ[illegible] ಎಂಬುದೇ ಇಂದಿನವರ ಪ್ರಶ್ನೆಯಾಗಿದೆ. [illegible] ಕಾಲಕ್ಕೆ ಕೋಟಿಕೊತ್ತಳಗಳು ಉಪಯುಕ್ತ[illegible] ಬಹುದು; ಆದರೆ ಇವೊತ್ತು ಅವು ನಿಷ್ಪ್ರಯೋಜಕ[illegible] ಜಾತಿಯ ಅವಸ್ಥೆಯು ಅದೇ ತೆರನಾಗಿದೆ. ಇದೀಗ [illegible] ನಮ್ಮ ಸಂಕಟಗಳಿಗೆಲ್ಲ ಕಾರಣವಾಗಿದೆ. ಆದರ[illegible] ಇನ್ನಾವ ಯೋಜನೆಯನ್ನಾದರೂ ಮಾಡಬೇಕು. [illegible] ಸ್ಥಿತಿಕಾರಣಂ ಯತಃ ಸಾಕ್ಷಾದಭ್ಯುದಯನಿಃ[illegible] ಸಿದ್ಧಿಃ ಸ ಧರ್ಮಃ' ಎಂದು ನಮ್ಮ ಧರ್ಮದ [illegible]

ಹೇಳುತ್ತಿದೆ. ಹಿಂದಕ್ಕೆ ಜಾತಿಯ ಮೂಲಕ ಮುಂಚಿನ ಎರಡು ಸಂಗತಿಗಳು ಸಾಧಿಸಿದುದರಿಂದ ಅದು ಧರ್ಮ್ಯ ವೆನಿಸಿತು. ಈಗ ಹಾಗಿಲ್ಲ. ಈಗಿನ ಪ್ರಜಾಪ್ರಭುತ್ವದ ದಿನಗಳಲ್ಲಿ ಸಾಮಾಜಿಕ ಶ್ರೇಷ್ಠ ಕನಿಷ್ಠ ಭಾವವು ಅವ್ಯವಹಾರ್ಯವು. ಜಗತ್ತಿನ ಇವೊತ್ತಿನ ಪರಿಸ್ಥಿತಿಯೇ ಉಚ್ಚ-ನೀಚ ಕಲ್ಪನೆಗಳಿಗೆ ಮಾರಕವಾಗಿದೆ. ಮುಸಲ್ಮಾನ ಧರ್ಮದ ಜೊತೆಯಲ್ಲಿ ಕ್ರಿಸ್ತಮತದೊಡನೆಯೂ ನಾವಿಂದು ಹೋರಾಡಬೇಕಾಗಿದೆ. ಎರಡೂ ಪಂಥಗಳ ಏರಾಟಕೆಯ ರೀತಿಗಳು ಭಿನ್ನಭಿನ್ನವಾಗಿವೆ. ನಮ್ಮ ಅಸ್ಪೃಶ್ಯತೆಯಿಂದ ಮುಸಲ್ಮಾನರ ಸಂಖ್ಯಾಬಲವು ಹೆಚ್ಚುತ್ತಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಪ್ರತಿವರ್ಷ ೧೦ ಸಾವಿರ ಜನರು ಕ್ರಿಸ್ತ-ಧರ್ಮದೀಕ್ಷೆಯನ್ನು ತೆಗೆದುಕೊಳ್ಳುತ್ತಾರೆಂದು ಕೇಳುತ್ತೇವೆ ಹಿಂದೂಧರ್ಮವು ಮೇಣಬತ್ತಿಯಂತಿದೆ. ಮೇಲಣ ಭಾಗವನ್ನು ಇಸ್ಲಾಂ ಸುಡುತ್ತದೆ; ಕೆಳಗಿನದನ್ನು ಕ್ರಿಸ್ತಧರ್ಮ; ಮತ್ತು ನಡುವಿನದನ್ನು ನಮ್ಮೊಳಗಿನವರೇ ಆದ ಡಾ. ಅಂಬೇಡಕರರಂತಹರು ಬಿಸಿಮಾಡಿ ಮಿದುಮಿದು ಮಾಡಿ ಬಿಡುತ್ತಾರೆ. ಈ ಸ್ಥಿತಿಯಲ್ಲಿ ಮೇಣಬತ್ತಿಯು ಎಷ್ಟು ದಿನ ಬಾಳಬೇಕು? ಹೀಗೇ ಸಾಗಿದರೆ ಸುಮಾರು ೫೦ ವರ್ಷಗಳಲ್ಲಿಯೇ ಹಿಂದೂ ಎಂಬ ಹೆಸರೇ ಲುಪ್ತವಾಗಿ ಹೋಗುವುದು.

"....ಜಾತಿಸಂಸ್ಥೆಯನ್ನು ಮುರಿದು ಪುನಃ ವೈದಿಕ ಕಾಲದ ಏಕವರ್ಣ ಪದ್ಧತಿಯನ್ನು ರೂಢಗೊಳಿಸಬೇಕು. ಬೇರೆಬೇರೆ ಜಾತಿಗಳಲ್ಲಿ ಸಹಭೋಜನ-ವಿವಾಹಗಳನ್ನು ಆರಂಭಿಸಬೇಕು. ಧರ್ಮಶಾಸ್ತ್ರವು ಈ ಮಾತುಗಳಿಗೆ ವಿರುದ್ಧವಾಗಿಲ್ಲ. ಅನುಲೋಮ ಪ್ರತಿಲೋಮ ವಿವಾಹಗಳಿಗೆ ಮೊದಲು ಅನುಮತಿಯಿದ್ದೇ ಇದ್ದಿತು. ಮಹಾಭಾರತದಲ್ಲಿ—

ನ ವಿಶೇಷೋಽಸ್ತಿ ವರ್ಣಾನಾಂ, ಸರ್ವಂ ಬ್ರಾಹ್ಮಮಿದಂ ಜಗತ್।
ಬ್ರಹ್ಮಣಾ ಪೂರ್ವಸೃಷ್ಟಂ ಹಿ, ಕರ್ಮಭಿರ್ವರ್ಣತಾಂ ಗತಂ॥

ಎಂದು ಹೇಳಿದೆ...."

ಪ್ರಾಂತರಚನೆ ಮೊದಲು;

ತರುವಾಯ ರಾಷ್ಟ್ರಭಾಷಾಪ್ರಸಾರ

ಹೀಗೆಂದು ಮಧ್ಯಪ್ರಾಂತದ ಮಹಾರಾಷ್ಟ್ರ ಏಕೀಕರಣವಾದಿಗಳ ಭೂಮಿಕೆಯಾಗಿದೆ. ಕರ್ನಾಟಕ ಏಕೀಕರಣದಲ್ಲು ಕನ್ನಡನಾಡಿನ ಗಡಿ ದಾಟಿ ಮಹಾರಾಷ್ಟ್ರಾದಿ ಪರಪ್ರಾಂತಗಳಲ್ಲಿಯೂ ಕೇಳಿಸುತ್ತಿದೆಯೆಂಬುದು ಕನ್ನಡಿಗರಿಗೆ ಅಭಿಮಾನಾಸ್ಪದವಾದ ಸಂಗತಿ. ಕನ್ನಡಿಗರ ಏಕೀಕರಣದ ಆಂದೋಲನವನ್ನು ನೋಡಿಯಾದರೂ ನಾವು ಎದ್ದೇಳಬೇಕು; ಮಹಾರಾಷ್ಟ್ರ ಏಕೀಕರಣದ-ಚಟುವಟಿಕೆಯನ್ನು ಕೈಕೊಳ್ಳಬೇಕು ಎಂದು ಜವಾಬ್ದಾರ ಮರಾಟಿ ಪತ್ರಿಕೆಗಳು ಎನ್ನತೊಡಗಿವೆ. ಆದರೆ ಪುಣೆಯಿಂದ ಆ ಚಳವಳಿಯ ಸೂತ್ರಗಳು ಅಲ್ಲಾಡಬಾರದು—ಹಾಗೆ ಆದಲ್ಲಿ ಮುಂಬಯಿ ಪ್ರಾಂತದ ಮರಾಟಿಗರ ಮೇಲೆ ಸ್ವಾರ್ಥದ ಆರೋಪಣೆಯು ಬರಬಹುದು; ಮಧ್ಯಪ್ರಾಂತದ ನಾಗಪುರ ಮೊದಲಾದ ಕಡೆಯಿಂದಲೆ ಈ ಆಂದೋಲನದ ನಾಂದೀವಾಕ್ಯವು ಹೇಳಲ್ಪಡಲಿ—ತರುವಾಯ ಪುಣೆಯವರು ಅದನ್ನು ಎತ್ತಿಹಿಡಿಯುವರು...ಎಂದು ಮಹಾರಾಷ್ಟ್ರೀಯ ರಾಜಕಾರಣದ ಪ್ರಮುಖ ಮುಖಪತ್ರವಾದ 'ಕೇಸರಿ'ಯು ಸೂಚಿಸಿದೆ. ಆ ಮೇರೆಗೆ ಈಗಾಗಲೆ ಮಧ್ಯಪ್ರಾಂತದ ಮರಾಟಿಗರು ಏಕೀಕರಣದ ಓಂನಾಮವನ್ನು ಆರಂಭಿಸಿದ್ದಾರೆ; ಅಲ್ಲಿಯ ಪ್ರಮುಖ ವ್ಯಕ್ತಿಗಳು, ಪತ್ರಿಕೆಗಳು ಮತ್ತು ಸಂಘ-ಸಂಸ್ಥೆಗಳು ತಕ್ಕ ಪ್ರಚಾರಕಾರ್ಯವನ್ನು ನಡಸಿವೆ. ಅಂತಹರಲ್ಲೊಬ್ಬರಾದ ಉಮರಾವತಿಯ ಶ್ರೀ. ಬಾಮಣಗಾಂವಕರ ಎಂಬವರು 'ಕೇಸರಿ'ಯಲ್ಲಿ ಒಂದು ವಿಸ್ತೃತಲೇಖನ ಬರೆದು, ಮಹಾರಾಷ್ಟ್ರ ಏಕೀಕರಣ ಸಮಸ್ಯೆಯ ಅಂಗೋಪಾಂಗಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. ಇದೀಗ ಹಿಂದುಸ್ಥಾನದಲ್ಲೆಲ್ಲಾ ನಡೆದ ಹಿಂದೀ ಪ್ರಚಾರವು ಅಲ್ಲಿಯೂ—ಅಚ್ಚ ಹಿಂದಿಯ ನೆರೆಹೊರೆಯ ನುಡಿಯಾದ ಮರಾಟಿಯ ಮೇಲೆಯೂ — ಎಂತು ಅಪಥ್ಯಕರವಾಗಿದೆಯೆಂಬುದನ್ನು ಆ ಲೇಖನದಲ್ಲಿ ವಿವರಿಸಿದ್ದಾರೆ. ಅದರ ಮುಖ್ಯಾಂಶಗಳನ್ನು—ಅವು ಕನ್ನಡ ವಾಚಕರಿಗೂ ಬೋಧಪ್ರದವಾಗಬಹುದಾದುದರಿಂದ ಇಲ್ಲಿ ಕೊಡುತ್ತಿದ್ದೇವೆ.

ಹಿಂದೀ ರಾಷ್ಟ್ರಭಾಷೆಯಾಗಬೇಕು; ಅದು ಸಾಧ್ಯವೂ ಇದೆ, ಇಷ್ಟವೂ ಇದೆ ಎಂಬುದನ್ನು ಲೇಖಕರು ಒಪ್ಪುತ್ತಾರೆ. ಇನ್ನು ಇಪ್ಪತ್ತು ವರ್ಷಗಳಲ್ಲಾದರೂ ಏಳು ಕಾಂಗ್ರೆಸ್ ಪ್ರಾಂತಗಳಲ್ಲಿ ಇಂಗ್ಲಿಷಿನ ಪ್ರಾಧಾನ್ಯವು ಕಡಿಮೆಯಾಗಿ ಹಿಂದಿಗೆ ರಾಜಮಾನ್ಯತೆಯು ಸಿಗುವಂತೆ, ಕಾಂಗ್ರೆಸ್ ಮಂತ್ರಿಮಂಡಲಗಳು ಕಸುವಿನಿಂದ ಪ್ರಯತ್ನ ಮಾಡಬಹುದಾಗಿದೆ—ಹಾಗೆ ಪ್ರಯತ್ನಗಳೂ ನಡೆದಿವೆ. ಆದರೆ ಮರಾಟಿ ಭಾಷೆಯ ಭವಿತವ್ಯವೇನು ?— ಎಂಬುದು ಲೇಖಕರಿಗೆ ಯೋಚನೆಯ ವಿಷಯವಾಗಿದೆ. ಗೋವೆ ಪ್ರಾಂತದಲ್ಲಿ ಮರಾಟಿಯು ರಾಜಭಾಷೆಯಾಗುವುದು ದೂರದ ಕನಸೆ ಸರಿ. ಬಹುಸಂಖ್ಯಾಕರು ಮರಾಟಿ ಮಾತನಾಡುವವರೆ ಇರುವ ಮಹಾರಾಷ್ಟ್ರೀಯ ಹಿಂದೂ ಸಂಸ್ಥಾನಗಳಲ್ಲೊಂದೆ ಮರಾಟಿಯ ಅಭ್ಯುದಯದ ಬಗ್ಗೆ ಆಸೆಯನ್ನಿಟ್ಟುಕೊಳ್ಳಬಹುದು.

ನಿಜಾಂ ಸಂಸ್ಥಾನದಲ್ಲಿಯ ಮರಾಟಿಯು ಕೊನೆಗೂ ಆಸನ್ನ ಮರಣಾವಸ್ಥೆಯಲ್ಲಿಯೆ ಇರತಕ್ಕದು; ಅದರ ಮೇಲೆ ಉರ್ದುವಿನ ಛಾಯೆಯು ಅತಿಯಾಗಿದ್ದುಕೊಂಡು, ಅದು ಹಿಂದಿಯು- ಉರ್ದೂಮಿಶ್ರಿತ ಹಿಂದಿಯ--ಸಮಿಸಮಿಾಪವೇ ಹೋಗತಕ್ಕದು. ರಾಜರ ರಾಜಕೀಯ ಧೋರಣದಿಂದಲೂ ಈಗಾಗಲೆ ಮೈಯುಂಡ ರೂಢಿಯಿಂದಲೂ ಅಚ್ಚಮರಾಟಿ ಅಲ್ಲಿ ತಲೆಯೆತ್ತುವುದು ಸಾಧ್ಯವೇ ಇಲ್ಲ. ಇನ್ನು ನಾಗಪುರ ವರ್ಹಾಡದ—ಏಕೀಕರಣದ ಆಂದೋಲನಭೂಮಿಯಾಗಲಿರುವ ಪ್ರಾಂತದ ವಿಚಾರ. ಇಲ್ಲಿ ಅರ್ಧಕ್ಕೆ ಸ್ವಲ್ಪ ಕಡಿಮೆ ಜನಸಂಖ್ಯೆ ಮರಾಟಿಗರದು. ಹಿಂದಿಯವರ ಬಹುಮತವಿದ್ದುದರಿಂದ, ಅವರದೇ ರಾಜಕೀಯ ವರ್ಚಸ್ಸವಿದ್ದಿರುವುದರಿಂದ, ಹಿಂದೀಪ್ರಚಾರವು ಭರದಿಂದ ಸಾಗಿರುವುದರಿಂದ ಮತ್ತು ಹಿಂದಿಯನ್ನು ಆತ್ಮಸಾತ್ತಾಗ ಮಾಡಿಕೊಳ್ಳಲು ಅಲ್ಲಿಯ ಮರಾಟಿಗರಿಗೆ ತುಂಬಾ ಸಾಧ್ಯವಿದ್ದುದರಿಂದ, ಇಲ್ಲಿಯ ಶಿಕ್ಷಣಕ್ರಮದಿಂದ ಇಂಗ್ಲಿಷಿನ ಉಚ್ಚಾಟನೆ ಮಾಡಿ ಹಿಂದಿಗೆ ಪ್ರಾಧಾನ್ಯಕೊಟ್ಟರೆ ಇಲ್ಲಿಯ ಮರಾಟಿಯ ಮೇಲೂ ಹಿಂದಿಯ ನೆರಳೇ ಹೆಚ್ಚಾಗಿ ಬೀಳುವ ಸಂಭವವಿದೆಯೆಂದು ಲೇಖಕರು ಅಭಿಪ್ರಾಯಪಡುತ್ತಾರೆ. ಮಧ್ಯಪ್ರಾಂತ-ವಿದರ್ಭಗಳ ಕಡೆಯ ಮರಾಟಿಗರಿಗೆ ಪ್ರಾಂತರಚನೆಗೆ ಬೇಕಾಗುವ 'ಆರ್ಥಿಕ ಸ್ವಯಂಪೂರ್ಣತೆ'ಯ ಭಯವಿಲ್ಲ; ಮರಾಟಿಯೇ ಹಿಂದಿಗೆ ಮಾರುವೋಗಿ, ಮಹಾರಾಷ್ಟ್ರ ಏಕೀಕರಣ ಆಂದೋಲನವೇ ನಿಷ್ಕ್ರಿಯವಾಗುವ ಅಂಜಿಕೆಯಿದೆ. ಮುಂಬಯಿಪ್ರಾಂತದ ಮಹಾರಾಷ್ಟ್ರಕ್ಕೆ ಮಧ್ಯಪ್ರಾಂತೀಯ ಮಹಾರಾಷ್ಟ್ರವನ್ನು ಜೋಡಿಸುವುದರಿಂದ ಯಾರ.(ಆರ್ಥಿಕ, ಸಾಂಸ್ಕೃತಿಕ ಇ.) ವರ್ಚಸ್ಸವು ಯಾರ ಮೇಲೂ ಬೀಳುವಂತಿಲ್ಲ. ಆದರೆ ಇಂದಿನ ರಾಷ್ಟ್ರಭಾಷಾಂದೋಲನದ ಉತ್ಸಾಹಯುತ ಪ್ರಚಾರದ ಭಾಗವಾಗಿ ಇಂಗ್ಲಿಷನ್ನು ಪದಭ್ರಷ್ಟಗೊಳಿಸುವ ಹವ್ಯಾಸದಲ್ಲಿ, ಹಿಂದಿಯು ಮರಾಟಿಯನ್ನು ಹತಪ್ರಭವಾಗಿ ಮಾಡುವ ಸಂಭವವಿದೆ. ಭಾಷಾನ್ವಯಪ್ರಾಂತರಚನೆಯು ಕೂಡಲೆ ಆಗದಿದ್ದರೆ, ಅಲ್ಲಿಯ ಮರಾಟಿನಾಡಿನ ಮೇಲೆ ಹಿಂದಿಯ ಪ್ರಭಾವವೆ ಸ್ಥಿರಗೊಂಡು ಬಿಡಬಹುದಾಗಿದೆ. ಆದುದರಿಂದ ಮೊದಲು ಭಾಷಾನ್ವಯಪ್ರಾಂತರಚನೆ, ತರುವಾಯ ರಾಷ್ಟ್ರಭಾಷಾಪ್ರಸಾರ; ಮೊದಲು ಮಾತೃಭಾಷೆ, ತರುವಾಯ ರಾಷ್ಟ್ರಭಾಷೆ—ಎಂಬುದೆ ಎಲ್ಲ ಚಳವಳಿಯ ಸೂತ್ರವಾಗಬೇಕೆಂದು ಲೇಖಕರು ಸ್ಪಷ್ಟವಾಗಿ ಸೂಚಿಸಿದ್ದಾರೆ. "ಭಾಷಾನ್ವಯ ಪ್ರಾಂತರಚನೆಯ ವಿಚಾರವನ್ನು ಆಗತ್ಯಪೂರ್ವಕವಾಗಿ ಕೈಕೊಳ್ಳುವುದಾದರೆ, ಮರಾಟಿ ಜ[illegible] ಹಿಂದಿಗೆ ತಕ್ಕ ಪ್ರತಿಬಂಧೋಪಾಯಗಳನ್ನು ಎ[illegible] ಯಿಂದಲೂ ಜಾರಿಯಲ್ಲಿ ತರುವುದು ಪ್ರಥಮ[illegible]ವಾಗಿದೆ"ಯೆಂದು ಲೇಖಕರು ಹೇಳುವರು.

ಹೊಟ್ಟೆ ತುಂಬಿರುವಾಗಿನ --ಹೊಟ್ಟೆ ಹಸಿದಿರುವಾಗಿನ [illegible]

ಕನ್ನಡದಲ್ಲಿಯ ಗದ್ಯಪದ್ಯಗ್ರಂಥಗಳ ಪತ್ರ[illegible] ಅಂಕೆಗಳನ್ನು ವಿವರಿಸುತ್ತ, ಗುಜರಾತಿ-ಮರಾಟಿ[illegible] ತುಲನೆಮಾಡುತ್ತ, ಜಮಖಂಡಿಯ ಸಾ. ಸಮ್ಮೆ[illegible] ಅಧ್ಯಕ್ಷರಾದ ಶ್ರೀ. ಬೆಳ್ಳಾವೆ ವೆಂಕಟನಾರ[illegible]ನವರು "ಈ ಅಂಕೆಗಳಿಂದ ಗುಜರಾತಿ ಮರಾಟಿ ಭಾ[illegible] ಕನ್ನಡದ ಆರರಷ್ಟಾದರೂ ಮುಂದುವರಿದಿರುವಂತೆ[illegible]ವು"ದಾಗಿ ಹೇಳಿದರು. ಸಾಹಿತ್ಯಪರಿಷತ್ತಿನ [illegible] ಗ್ರಂಥಪ್ರದರ್ಶನಕ್ಕೆ ಬಂದ ಪುಸ್ತಕಗಳನ್ನು ಪೃಥಕ್[illegible] ಪದ್ಯಕಾವ್ಯ, ಕಾದಂಬರಿ, ಮತ-ಧರ್ಮ, ಜೀವ[illegible] ಸಣ್ಣಕತೆ, ಸಾಹಿತ್ಯಪ್ರಬಂಧ, ವಿಮರ್ಶೆ, ನಾಟ[illegible]ಲಾದುವೇ ತುಂಬಿಕೊಂಡು ವೈಜ್ಞಾನಿಕಸ[illegible] ಹೇಗೆ ಅತ್ಯಲ್ಪವಾಗಿದೆಯೆಂಬುದನ್ನು ತೋರಿಸಿ[illegible] ಇದರಿಂದ ಅವರು ಹೊರಡಿಸಿದ ಅನುಮಾನಕ್ಕೆ [illegible] ಎಲ್ಲಾ ಕರ್ನಾಟಕಭಕ್ತರೂ ಸೈಯಿಕ್ಕಲೇ ಬೇಕು.

"ಪದ್ಯಕಾವ್ಯಗಳು ಹೆಚ್ಚಾಗಿ ಬರಬೇಕಾದು[illegible] ಹೊಟ್ಟೆತುಂಬಿರುವಾಗ, ಹಸಿದಿರುವಾಗಲ್ಲ. ಸಾಹಿ[illegible]ದಲ್ಲಿ ಹೆಚ್ಚು ಪ್ರವೇಶವಿಲ್ಲದವರೂ ಕವನ[illegible] ಹೊರಟಿದ್ದಾರೆ. ಬಹುಶಃ ಇದನ್ನು ಅರಿತೇ[illegible] ಪೂರ್ವಿಕರು ಸಾಹಿತ್ಯದ ಈ ಪ್ರದೇಶಕ್ಕೆ ಸಾ[illegible] ಹಾರಲಾಗದ ಬೇಲಿಹಾಕಿದ್ದು ! ಇಂತಹ ಬೇಲಿ[illegible]ದೆಂದು ಆಧುನಿಕ ಕನ್ನಡ ಪಂಡಿತರು ಕೂಡ[illegible] ಕಿತ್ತುಹಾಕುತ್ತಿದ್ದಾರೆ. ಇದು ದೇಶಕ್ಕೆ ಉಪಕ[illegible] ನಾನು ಎಣಿಸುವುದಿಲ್ಲ. 'ಹುಟ್ಟನಿಂದ ಕವಿಯ[illegible] ಹೊರತು ಕಟ್ಟನಿಂದಲ್ಲ' ಎಂಬ ನಾಣ್ನುಡಿಯು [illegible]ರಲ್ಲಿಯೇ ಏಕೆ, ನಮ್ಮಲ್ಲಿಯೂ ರೂಢಿಯಲ್ಲಿಲ್ಲವೆ?"

ಜಮಖಂಡಿಯು ಮತ್ತೆ ತಿರುಳ್ಗನ್ನಡನಾ[illegible]

ಜಮಖಂಡಿಯು ಕ್ರಿ. ಶ. ೧೦ನೆಯ ಶತಮಾ[illegible] ತಿರುಳ್ಗನ್ನಡ ನಾಡಾಗಿತ್ತೆಂಬುದನ್ನು ಸಾ. ಸಮ್ಮೆ[illegible] ಸ್ವಾಗತಾಧ್ಯಕ್ಷರಾದ ಶ್ರೀ. ಪಂಡಿತಪ್ಪ ರಾಯಪ್ಪ[illegible]ಯವರು ಹಲವು ಉದಾಹರಣೆಗಳಿಂದ ಸ್ಪಷ್ಟ[illegible]

ಸಮೀಪದಲ್ಲಿಯ ಶೂರ್ಪಾಲಿಗ್ರಾಮದಲ್ಲಿಯ ಅತಿಪುರಾತನ ನೃಸಿಂಹ ದೇವಾಲಯ, ತೇರದಾಳದಲ್ಲಿ ಸುಮಾರು ೮೦ ವರ್ಷ ಕಾಲ ವಾಸಿಸಿದ ಶ್ರೀ ಅಲ್ಲಮಪ್ರಭುಗಳ ಸ್ಮೃತಿಯನ್ನು ಸೂಚಿಸುವ ಪ್ರಭುಸ್ವಾಮಿಯ ಗುಡಿ, ಕ್ರಿ.ಶ. ೯೪೯ರಲ್ಲಿ ರನ್ನ ಕವಿಗೆ ಜನ್ಮಕೊಟ್ಟ ಮುದುವೊಳಲಿನ (ಮುಧೋಳದ) ನೆರೆನಾಡು, ೧೧೨೩ರಲ್ಲಿ ಚಾಲುಕ್ಯರಾಜ ವಿಕ್ರಮಾದಿತ್ಯನ ಸಾಮಂತನಾದ ಗೊಂಕದೇವನು ಬರೆಯಿಸಿದ ಕನ್ನಡ ಶಾಸನ—ಇವೆಲ್ಲವು ಜಮುಖಂಡಿಯ ಕನ್ನಡತನಕ್ಕೆ ಸಾಕ್ಷ್ಯ ವಾಗಿವೆ. "ಸದ್ಯದಲ್ಲಾದರೂ ಜಮುಖಂಡಿ ಸಂಸ್ಥಾನದ ಒಟ್ಟು ೧,೧೪,೨೭೦ ಜನಸಂಖ್ಯೆಯಲ್ಲಿ ೮೫,೭೧೬ ಜನರು ಕನ್ನಡ ಮಾತನಾಡುವವರಿದ್ದು ೧೪,೯೩೪ ಜನರು ಮರಾಟಿ ಮಾತನಾಡುವವರಿದ್ದಾರೆ. ಉಳಿದವರಲ್ಲಿ ೧೨,೦೫೩ ಜನರು ಪಶ್ಚಿಮ ಹಿಂದೀ ಭಾಷೆಯನ್ನಾಡುವರು. ಅಂದಮೇಲೆ ಈಗಲೂ ಸಹ ಈ ಸಂಸ್ಥಾನವು ಮುಖ್ಯವಾಗಿ ಕನ್ನಡನಾಡೇ ಆಗಿರುವುದೆಂಬುದು ಸ್ಪಷ್ಟವಾಗುತ್ತದೆ. ಹೀಗಿದ್ದರೂ ಇಲ್ಲಿ ಕನ್ನಡ ನುಡಿಯು ಕಳೆಗುಂದಿದುದರ ಕಾರಣವು ನಮ್ಮ ಸ್ವಭಾಷಾಭಿಮಾನಶೂನ್ಯತೆಯೇ ಹೊರತು ಬೇರೆ ಯಾವದೂ ಅಲ್ಲವೆಂದರೆ ತಪ್ಪಾಗದು."

ನೇಕಾರ ಪರಿಷತ್ತು

ಕರ್ನಾಟಕದ ಪ್ರಮುಖ ಕೈಗಾರಿಕೆಗಳಲ್ಲಿ ನೇಯಿಗೆ ಯೊಂದು. ಮೊನ್ನೆ ಮೊನ್ನೆ ಕರ್ನಾಟಕದ ಕುರುಬರು ಕಲೆತು ತಮ್ಮ ಉಣ್ಣೆಯ ಉದ್ಯೋಗದ ಏಳ್ಗೆಯ ಉಪಾಯಗಳನ್ನು ಆಲೋಚಿಸಿದರು. ಇದೀಗ ವಿಜಾಪುರ ಜಿಲ್ಲೆಯ ನೇಕಾರರು ಸೇರಿ ತಮ್ಮ ಉದ್ಯಮದ ಅಭಿವೃದ್ಧಿಯ ಮಾರ್ಗಗಳನ್ನು ಚರ್ಚಿಸಿರುವರು. ಕನ್ನಡನಾಡಿನಿಂದ ದೂರವಾಗಿದ್ದರೂ ಕರ್ನಾಟಕದ ಉತ್ಸಾಹಯುತ ಅಭಿಮಾನವನ್ನು ತಾಳಿದ ಪ್ರೊ. ವಿಜಯೀಂದ್ರರಾವ್ ಅವರು ಅಧ್ಯಕ್ಷರು. ಉದಾರ ಧನಿಕರಾದ ಶಿವಶಂಕರಪ್ಪ ಸಕ್ರಿಯವರು ಸ್ವಾಗತಾಧ್ಯಕ್ಷರು.

ಅಧ್ಯಕ್ಷರ ಭಾಷಣವು ತುಂಬ ಮನನೀಯವಾಗಿದೆ. ಅನೇಕ ಉದ್ಯೋಗಗಳು ಹಾಳಾಗಿದ್ದರೂ ಗಿರಣಿಗಳ ಸ್ಪರ್ಧೆ ಯಲ್ಲಿ ನೇಯ್ಗೆಯು ಜೀವಹಿಡಿದು ನಿಂತುದು ಅದರ ಗಟ್ಟಿ ತನವನ್ನು ತೋರಿಸುತ್ತದೆ; ನೇಕಾರರು ಸ್ವಂತದ ಸಂಘ ಟನೆಯನ್ನು ಬಲಪಡಿಸಿಕೊಂಡು, ಅಭಿರುಚಿಗೆ ತಕ್ಕ ವೈವಿಧ್ಯವು ಬರುವಂತೆ ತಮ್ಮ ವ್ಯವಸಾಯವನ್ನು ಸುಧಾರಿಸಿ ಕೊಳ್ಳಬೇಕು; ಉತ್ಪತ್ತಿಯ ವೆಚ್ಚದಲ್ಲಿ ಇಳಿಕೆ, ಮಾರಾಟದ ಬೆಲೆಯಲ್ಲಿ ಇಳಿಕೆ, ಹೊಸ ಪದ್ಧತಿಯ ಅನುಕರಣ—ಇವೆಲ್ಲ ಅವಶ್ಯವಾಗಿವೆ; ನೇಕಾರರಲ್ಲಿ ಸಹಕಾರ ತತ್ವವು ಹೆಚ್ಚಾಗಿ ರೂಢವಾಗಬೇಕು; ಮದ್ರಾಸ ಸರಕಾರವು ಋಣಪರಿಹಾರ ಮಸೂದೆಯನ್ನು ರೈತರಿಗಷ್ಟೇ ನಿರ್ದಿಷ್ಟಗೊಳಿಸದೆ, ನೇಕಾರರಿಗೂ ಅನ್ವಯಿಸುವಂತೆ ವಿಸ್ತೃತಗೊಳಿಸಬೇಕು—ಎಂದು ಮುಂತಾಗಿ ಅವರು ಹೇಳಿದ ಮಾತುಗಳು ವಿಚಾರಾರ್ಹ ವಾಗಿವೆ. ಸರಕಾರವು ರೈತರಿಗೆ ಉತ್ತಮ ಬೀಜಗಳನ್ನು ಪೂರೈಸುವಂತೆ ನೇಕಾರರಿಗೂ ಹತ್ತಿಯ ಮತ್ತು ರೇಶ್ಮೆಯ ನೂಲನ್ನು ಪೂರೈಸುವುದು ಅಗತ್ಯವೆಂದೂ ಮದ್ರಾಸದಂತೆ ಮುಂಬಯಿ ಸರಕಾರವೂ ಬಟ್ಟೆಮಾರಾಟದ ಬಿಲ್ಲನ್ನು ತಯಾರಿಸುವುದಗತ್ಯವೆಂದೂ ನಿರ್ಣಯಗಳನ್ನು ಸ್ವೀಕರಿಸ ಲಾಯಿತು.

ಸ್ವಾಗತಾಧ್ಯಕ್ಷರ ಭಾಷಣದಿಂದ, ನೇಗಿಯ ಹಿಂದಿನ ಅಗ್ಗಳಿಕೆಯೂ ಈಗಿನ ಕರುಣಾಜನಕಸ್ಥಿತಿಯೂ ಕಣ್ಣಿಗೆ ಕಟ್ಟುವಂತಿದೆ:

ಪ್ರವಾಸದ ಸಾಧನಗಳ ಬೆಳವಣಿಗೆಯಾದಂತೆ ನಮ್ಮ ಜಿಲ್ಲೆಯು ಸೀರೆ ಖಣಗಳ ಹುಟ್ಟುವಳಿಗೆ ಕೇಂದ್ರವಾಗಿ, ಅವುಗಳ ವ್ಯಾಪಾರವು ಮಹಾರಾಷ್ಟ್ರ, ಬೆರಾರ, ಮಧ್ಯಪ್ರಾಂತ ಮೊದಲಾದ ದೂರದೂರದ ಪ್ರಾಂತಗಳಲ್ಲಿಯೂ ಹಬ್ಬಿ, ೧೯೩೧ರಲ್ಲಿ ಜಮುಖಂಡಿ, ಸಾಂಗಲಿ ಮುಧೋಳ, ಮೊದಲಾದ ಸಂಸ್ಥಾನಭಾಗಗಳನ್ನೊಳಗೊಂಡ ನಮ್ಮ ಜಿಲ್ಲೆಯಲ್ಲಿಯ ಮಗ್ಗಗಳ ಸಂಖ್ಯೆಯು ೨೭೦೦೦ಕ್ಕೆ ಮಿಕ್ಕಿತ್ತು.

ಕೈಮಗ್ಗದ ಉದ್ಯೋಗವು ವ್ಯಕ್ತಿಯ ಉದ್ಯೋಗಕ್ಕಿಂತಲೂ ಕುಟುಂಬದ ಉದ್ಯೋಗವಾಗಿದೆಯೆಂಬುದು ನಿರ್ವಿವಾದ ಮಾತು. ಅಂದರೆ ಒಂದು ಕುಟುಂಬಕ್ಕೆ ನಾಲ್ಕೆ ಜೀವಿಗಳಂತೆ ಲೆಕ್ಕ ಹಾಕಿದರೆ ಈ ೨೭೦೦೦ ಮಗ್ಗಗಳಿಂದ ನಮ್ಮ ಜಿಲ್ಲೆಯ ೧೦ ಲಕ್ಷ ಜನಸಂಖ್ಯೆಯೊಳಗೆ ೧ ಲಕ್ಷ, ೧½ ಲಕ್ಷ ಜೀವಿಗಳು ಈ ನೇಗಿಯ ಉದ್ಯೋಗದಿಂದ ಜೀವಿಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು. ಇದಲ್ಲದೆ ಈ ನೇಗಿಯ ವ್ಯವಸಾಯಕ್ಕೆ ಹೊಂದಿಕೊಂಡಿರುವ ತಟ್ಟು, ಹಣಿಗೆ, ಬೇಜ, ಹಾಸು, ಖಂಡಿಕೆ ಮೊದಲಾದವುಗಳನ್ನು ನಿರ್ಮಿಸುವ ಉಪೋದ್ಯೋಗಗಳಿಂದಲೂ ಅನೇಕ ಕುಟುಂಬಗಳ ಉದರ ನಿರ್ವಾಹವು ಸರಳವಾಗಿ ಸಾಗುತ್ತಿತ್ತು. ಅಂತು ನಮ್ಮ ಜಿಲ್ಲೆಯ ಒಂದಾರೆಂಶದಷ್ಟು ಜನರು ಮಾನವಂತರಾಗಿ ತಮ್ಮ ದುಡಿತದ ಆಧಾರದಿಂದ ಉಪಜೀವನ ಸಾಗಿಸಿಕೊಂಡು ಸುಖಶಾಂತಿಯಿಂದ ಜೀವಿಸುತ್ತಿದ್ದುದು ಈ ಏಳು ವರ್ಷಗಳಲ್ಲಿ ಕ್ರಮೇಣ ಅಳಿದು ಹೋಗಿದೆ. ವಾರಕ್ಕೆ ೫-೬ ರೂಪಾಯಿ ದುಡಿಯುತ್ತಿದ್ದ ನೇಕಾರನ ಇಂದಿನ ಒಂದು ವಾರದ ಕೂಲಿಯು ೧ ರೂಪಾಯಿ ನಾಲ್ಕು ಆಣೆಗಳಿಗೆ ಇಳಿದಿದೆ. ಅಲ್ಲದೆ ಜಿಲ್ಲೆಯಲ್ಲಿಯ ನೂರಕ್ಕೆ ೫೦ರಷ್ಟು ಮಗ್ಗಗಳು ಬಂದು ಬಿದ್ದು ಸದ್ಯಕ್ಕೆ ೧೩೦೦೦ ಮಗ್ಗಗಳು ಮಾತ್ರ ನಡೆಯುತ್ತಿದ್ದು ಅವುಗಳಿಗೂ [illegible] ಗದಾಗಿದೆ.

ರಾಷ್ಟ್ರೀಯ ಸರಕಾರದ ಆಧಿಪತ್ಯದಲ್ಲಿ ಎಲ್ಲಾ ಉದ್ಯೋಗಗಳವರೂ ಎಚ್ಚೆತ್ತು, ತಂತಮ್ಮ ಶ್ರೇಯೋಮಾರ್ಗವನ್ನು ಕಂಡರಿತುಕೊಳ್ಳುವುದಗತ್ಯ.

ಕನ್ನಡ ಭಗಿನಿಯರ ಸಮ್ಮೇಲನ

ದಾವಣಗೆರೆಯ ಶ್ರೀಮತಿ ಸಿದ್ದಮ್ಮನವರ ಆಧ್ಯಕ್ಷತೆಯಲ್ಲಿ ಕರ್ನಾಟಕ ಭಗಿನೀ ಮಂಡಲ ಪರಿಷತ್ತು ಸಾಂಗವಾದುದು ಕನ್ನಡ ಹೆಂಗಳೆಯರ ಜಾಗ್ರುತಿಯನ್ನು ಸೂಚಿಸುತ್ತದೆ. ಶ್ರೀಮತಿ ಸೌ. ಕೃಷ್ಣಾಬಾಯಿ ಪಂಜೀಕರ ಮತ್ತು ಶ್ರೀಮತಿ ಉಮಾಬಾಯಿ ಕುಂದಾಪುರ ಇವರ ಅವಿರತ ಪ್ರಯತ್ನದ ಫಲವೆ ಈ ಸಮ್ಮೇಲನ. ಆಧ್ಯಕ್ಷಿಣಿಯರೂ ತುಂಬ ಅನುಭವಶಾಲಿಗಳು ಮತ್ತು ಸ್ವತಂತ್ರವಿಚಾರಿಗಳು. ಇಂತಹ ಕೂಟಗಳು ಆಗಾಗ ಆಗುವುದಗತ್ಯ. ಹೆಂಗಳೆಯರು ತಮ್ಮ ಪ್ರಶ್ನೆಗಳನ್ನು ತಾವೇ ವಿಚಾರಿಸಿಕೊಂಡು ಅವುಗಳ ಪರಿಹಾರೋಪಾಯಗಳನ್ನು ಆ[illegible]ಚಿಸುವುದು ಉಚಿತ.

'ಲೋಕಮತ' ವಾರ್ಷಿಕೋತ್ಸವ

ಶ್ರೀ. ಪುರಾಣಿಕರವರ ಪ್ರಯತ್ನದಿಂದ ವಾರ[illegible] ಯಿದ್ದುದು ನಿಯತಸಂಸ್ಥೆಯ ರೂಪದಾಳಿ ದಿನ[illegible]ಯಾಯಿತು. ಲೋಕಮತದ ವಾರ್ಷಿಕೋತ್ಸವ ಕ[illegible] ಅನೇಕ ಮಹನೀಯರು ಅದರ ಗುಣಗಾನ[illegible]ದ್ದುದರಲ್ಲಿ ಎಳ್ಳಷ್ಟೂ ಅತ್ಯುಕ್ತಿಯಿಲ್ಲ. ತಕ್ಕ ಮ[illegible] ಹುರಿಕಟ್ಟಿನ ಭಾಷಾಸರಣಿ, ಅತಿ ವ್ಯಾಕರಣವಿದಗ್ಧ[illegible] ಸಾಮಾನ್ಯ ದರ್ಜೆಯ (ಭಾಷೆಯ-ಅಚ್ಚಿನ) ದೋಷ[illegible] ಶುದ್ಧಶೈಲಿ ಇವುಗಳಿಗಾಗಿ 'ಲೋಕಮತ'ವನ್ನು [illegible] ಕೊಂಡಾಡದಿರರು. 'ಲೋಕಮತ'ಕ್ಕೆ ದೀರ್ಘಾ[illegible] ಲಭಿಸಲಿ !

ಸಾದರಸ್ವೀಕಾರ

ಗ್ರಂಥಗಳು

೧೪೭. **ಹಣ ಪ್ರಪಂಚ.** ಲೇಖಕರು: ಶ್ರೀ. ವಿ. ಸೀತಾರಾಮಯ್ಯ ಎಂ. ಎ. ಪ್ರಧಾನ ಸಂಪಾದಕರು: ಶ್ರೀ. ಬಿ. ಎಂ. ಶ್ರೀಕಂಠಯ್ಯ, ಎಂ. ಎ., ಬಿ. ಎಲ್. ಮುನ್ನುಡಿಕಾರರು: ಶ್ರೀ. ಎನ್. ಎಸ್. ಸುಬ್ಬರಾವ್, ಎಂ. ಎ. (ಕ್ಯಾಂಟಬ್), ಬಾರ್-ಅಟ್-ಲಾ. ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೯ನೆಯ ಪುಸ್ತಕ. ಕ್ರಾ. ಅ. ೩೬೭ ಪುಟ ಬೆಲೆ ೧—೪—೦

೧೪೮. **ಅಪವಾದ** (ಒಂದು ದೃಶ್ಯ). ಲೇಖಕರು: ಕೆ. ರಾಜಾರಾವ್, ಬಿ. ಎ. ರಂಗಭೂಮಿ ಗ್ರಂಥಮಾಲೆಯ ಪ್ರಕಟನೆ. ಕ್ರಾನ ೧/೪ ೧೭ ಪುಟ.

೧೪೯. **ಬೆಳಗು** ಲೇಖಕರು: "ಮಧುರಚೆನ್ನ" ಅರವಿಂದ ಗ್ರಂಥಮಾಲೆಯ ೨ನೆಯ ವರ್ಷದ ೩ನೆಯ ಕಮಲ. ಶ್ರೀ. ದ. ರಾ. ಬೇಂದ್ರೆಯವರ ಮುನ್ನುಡಿ. ಕ್ರಾ. ಅ. ೧೧೮ ಪುಟ. ಬೆಲೆ ೦—೨—೦.

೧೫೦. **ಪ್ರಭುವರ್ಯರ ಯೂರೋಪ್ ಪ್ರವಾಸ.** ಲೇಖಕರು: ಶ್ರೀ. ಆರ್. ಎಸ್. ನಾರಾಯಣರಾವ್. ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ಮುನ್ನುಡಿ. ಕ್ರಾ. ಅ. ೩೦ ಪುಟ. ಬೆಲೆ ೦—೪—೦

೧೫೧. **ಭಕ್ತಿಸುಮಾಂಜಲಿ ಮತ್ತು ಪೂಮಾಲೆ** (ಪದ್ಯ) ಲೇಖಕರು: ಪಂಡಿತ ಪರಿಮಿ ಪದ್ಮನಾ[illegible] ಕ್ರಾ. ಅ. ೨೪ ಪುಟ. ಬೆಲೆ ೦—೪—೦.

೧೫೨. **ಶ್ರೀ ಕುಮುದೇಂದು ರಾಮಾಯ[ಣ]** (ಪೂರ್ವ ಭಾಗ—ಸಂಧಿಗಳು ೧—೮) ಲೇಖಕರು: ಕೆ. ಜಿ. ಕುಂದಣಗಾರ ಎಂ. ಎ. ಪ್ರಕಾಶಕರು: ಶ್ರೀ. ಪಿ. ಪಾಟೀಲ. ಡೆ. ಅ. ೨೪೨ ಪುಟ. ಬೆಲೆ ೩—೦

೧೫೩. **ಮಿತಸಂತಾನೋತ್ಪತ್ತಿ.** ಲೇಖಕರು: ಆರ್. ಆಳ್ವಾರಯ್ಯಂಗಾರ್, ಬಿ. ಎ. ಡೆ. ೧/೧೬ ಪ್ರ[illegible] ಬೆಲೆ ೦—೧—೦

೧೫೪. **ಪ್ರಪಂಚದ ಕೆಲಸಗಾರ.** ಲೇಖಕರು: ದಿನಕರ ದೇಸಾಯಿ, ಎಂ. ಎ. ಎಲ್‌ಎಲ್. ಬಿ. ಎನ್. ಎಸ್. ಸುಬ್ಬರಾವ್ ಅವರ ಮುನ್ನುಡಿ. ಕ್ರಾ. ೭೨ ಪುಟ. ಬೆಲೆ ೦—೪—೦

೧೫೫. **ವಾಕ್ಯವೃತ್ತಿ ಮತ್ತು ಲಘುವಾಕ್ಯ** ಸಂಸ್ಕರಿಸಿದವರು ಶ್ರೀ. ವೈ. ಸುಬ್ಬರಾವ್. ಆಧ್ಯಾತ್ಮ[ಗ್ರಂಥಾ]ವಳಿಯ ಪ್ರಕಟನೆ. ಕ್ರಾ. ಅ. ೩೬ ಪುಟ. ಬೆಲೆ ೦—

೧೫೬. **ಅಧ್ಯಾತ್ಮಸೂಕ್ತಿಮಂಜರಿ,** ಶ್ರೀ. [illegible] ಸರಸ್ವತೀ ಸ್ವಾಮಿಗಳವರದು. ಅನುವಾದಕರು: ಶ್ರೀ. ಸುಬ್ಬರಾವ್. ಆಧ್ಯಾತ್ಮ ಗ್ರಂಥಾವಳಿಯ ಪ್ರಕಟನೆ. [illegible] ಪುಟ. ಬೆಲೆ ೦—೬—೦

೧೬೦. ದೃಷ್ಟಿಲಾಭ ಲೇಖಕರು: ಶ್ರೀ. ವ್ಹಿ. ಎಮ್. ನಾಮದಾರ, B. A. (HONS.). ಕ್ರೌ. ಅ. ೯೨ ಪುಟ. ಲೆ (?)

೧೬೨. ಮಿಸ್ ಲಲಿತ (ಸಾಮಾಜಿಕ ಕಾದಂಬರಿ). ಖಕರು: ಶ್ರೀ. ಎಂ. ವಿ. ಪುತ್ರನ್. ಶ್ರೀ. M. N. AMATH ಅವರ ಮುನ್ನುಡಿ. ಕ್ರೌ. ಅ. ೯೪ ಪುಟ. ಲೆ ೦—೮—೦

೧೬೩. ತುತೂರಿ (ಕವಿತಾವಲಿ). ಲೇಖಕರು: ಶ್ರೀ. ಚಾಕ್ಷರಯ್ಯ ಹಿರೇಮಠ. ಶ್ರೀ. ಗು. ಭಿ. ಜೋಶಿ, ಎಮ್. ಬಿ. ಟಿ. ಅವರ ಮುನ್ನುಡಿ. ಕ್ರೌ. ಅ. ೬೪ ಪುಟ. ಲೆ ೦—೮—೦

೧೬೫. ಸರ್ ಸಿ. ವಿ. ರಾಮನ್ ಅವರ ಜೀವನ ಚಿತ್ರೆ. ಲೇಖಕರು: ಶ್ರೀ. ಎಸ್. ಎನ್. ಲೋಕನಾಥ್ . ಸಿ. ಬಿ. ರಾಮರಾವ್ ಅವರ ಮುನ್ನುಡಿ. ಕ್ರೌ. ಅ. ಪುಟ. ಬೆಲೆ ೦—೬—೦

೧೬೬. ಗಣೇಶನ ಕಥೆ 'ನಮ್ಮ ಪುಸ್ತಕ ಭಾಂಡಾರ'ದ ಕಟನೆ. ಸಂಪಾದಕರು: ಶ್ರೀ. ದೇವುಡು. ರಾ. ಅ. ಪುಟ. ಬೆಲೆ ೦—೧—೦

೧೬೭. PROSPECTS OF BEE-KEEPING IN DIA. ಲೇಖಕರು: ಶ್ರೀ. BHUPEN APIARIES ಮಲ್ ಅ. ೭೨ ಪುಟ. ಬೆಲೆ ೦—೮—೦

೧೬೯. ಮನ್ನಿಲ್ಲದಮ್ಮದ್ವೆ (ಪ್ರಹಸನ). ಲೇಖಕರು: ಶ್ರೀ. . ಯೋಗನರಸಿಂಹಂ, M. A. ಕ್ರೌ. ಅ. ೩೮ ಪುಟ. ೦—೪—೦

೧೭೩. ಮೈಸೂರು ಪ್ರವಾಸ ಮೈಸೂರ ದಸರಾ ಹೋತ್ಸವ. ಗ್ರಂಥಪ್ರಸಾರಕ ಮಂದಿರದ ಪ್ರಕಟನೆ. ಖಕರು: ಶ್ರೀ. ವೀರಭದ್ರಪ್ಪಾ ದುಂಡಪ್ಪಾ ಆರುಬೆರಳಿನ, ರ್ಯ ಶಾಸ್ತ್ರಿ. ಕ್ರೌ. ಅ. ಪುಟ ೭೫. ಬೆಲೆ ೦—೮—೦

೧೭೪. ಮಹಾಕಾರುಣಿಕ ಶ್ರೀ ಬಸವಣ್ಣನವರು ಖಕರು: ಶ್ರೀ ವೀರೇಶ್ವರ. ಡೆ. ೧/೧೬ ೫೨ ಪುಟ. ೦—೧—೬

೧೭೬. ಸನ್ಯಾಸಿ. ಲೇಖಕರು: ಶ್ರೀ. ಕಾಪಸೆ ರೇವಪ್ಪ. ಶ್ರೀನಿಂದ ಗ್ರಂಥಮಾಲೆಯ ೨ನೆಯ ವರ್ಷದ ೮ನೆಯ ಎಲ. ಕ್ರೌ. ಅ. ೯೪ ಪುಟ, ಬೆಲೆ ೦—೧೦—೦

೧೮೦. ರಾಮಾಯಣ ಸುಂದರಕಾಂಡವು. ನಾರಾಯಣ ಪಂಡಿತಾಚಾರ್ಯರಿಂದ ವಿರಚಿತವಾದುದು. ಕನ್ನಡಿಸಿದವರು: ಶ್ರೀ. ಅನಂದತೀರ್ಥಾಚಾರ್ಯರು. ಡೆ. ಅ. ೧೭೪ ಪುಟ. ಬೆಲೆ ೦—೮—೦

೧೮೧. ಪರಮಾತ್ಮಬೋಧ. ಶ್ರೀ. ಅನಂತಕೀರ್ತಿ ಗ್ರಂಥಮಾಲೆಯ ೯ನೆಯ ಪುಷ್ಪ. ವ್ಯಾಖ್ಯಾನಕಾರರು: ಆಸ್ಥಾನವಿದ್ವಾನ್ ನ್ಯಾಯತೀರ್ಥ ಎ. ಶಾಂತಿರಾಜ ಶಾಸ್ತ್ರಿಗಳವರು. ಪ್ರಕಾಶಿಕೆ: ಶ್ರೀಮತೀ ದೇಜಮ್ಮನವರು. ಕ್ರೌ. ಅ. ೧೯ ಪುಟ.

೧೮೩. ಪಿಳ್ಳಂಗೋವಿ. ಲೇಖಕರು: ಪಂಡಿತ ಕೆ. ಶ್ರೀಕಂಠಶಾಸ್ತ್ರಿ. ಕ್ರೌ. ಅ. ೭೧ ಪುಟ.

೧೮೪. ಮಹಾದೇವಿಯಕ್ಕ ಕ್ರೌ. ಅ. ೧೧೬ ಪುಟ. ಬೆಲೆ ೧—೦—೦

೧೮೫. ಪುರಂದರದಾಸರ ಜಾಣ್ನುಡಿಗಳು ಸಂಗ್ರಹಿಸಿದವರು: ಶ್ರೀ. ಉಡುಪಿ ಭೀಮರಾವ ಬೀಡಿ. ಕ್ರೌ. ಅ. ೨೧ ಪುಟ. ಬೆಲೆ ೦—೨—೦

೧೮೯. ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ ಅಂದರೇನೆ ಹನ್ನೆರಡು-ಕ್ಷಾರ-ಚಿಕಿತ್ಸಾ-ಪದ್ಧತಿ ಲೇಖಕರು: ಡಾ. ಗೋಪಾಳ ಸದಾಶಿವ ಪಳಸುಲೆ ಎಲ್. ಎಮ್. ಆ್ಯಂಡ್ ಎಸ್. (ನ್ಯಾಶನಲ್) ಎಲ್. ಎಚ್. ಎಮ್. ಎಸ್. ಭಾಷಾಂತರಕಾರರು: ಶ್ರೀ. ನಾರಾಯಣ ತಿರುಮಲರಾವ ದಾತಾರ ಬಿ. ಎ. ಕ್ರೌ. ಅ. ೮೩೮ ಪುಟ. ಬೆಲೆ ೩—೦—೦

೧೯೦. शिवचरित्र साहित्य (६ वा खंड. ಮರಾಟಿ); ಲೇಖಕರು: ಶ್ರೀ. ಗಣೇಶ ಹರಿ ಖರೆ, ಭಾರತ ಇತಿಹಾಸ ಸಂ. ಮಂಡಲ, ಪುಣೆ. ಡೆ. ಅ. ೧೮೧ ಪುಟ. ಬೆಲೆ ೧—೮—೦

೧೯೧. ಸನ್ಯಾಸಿಯ ಸೋಗಿನಲ್ಲಿ (ಸಾಮಾಜಿಕ ಕಾದಂಬರಿ). ತೊದಲ್ನುಡಿ ಗ್ರಂಥಮಾಲೆಯ ೧೧ನೆಯ ನುಡಿ. ಲೇಖಕ: ಶ್ರೀ. ಕೆ. ಕೆ. ಶೆಟ್ಟಿ ಕ್ರೌ. ಅ. ೭೯ ಪುಟ. ಬೆಲೆ ೦—೮—೦

೧೯೪. ಜೈಮಿನಿ ಭಾರತಮು (ತೆಲುಗು). ಮಲ್ಲಾದಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಂದ ಪರಿಷ್ಕರಿಸಿದುದು. ಪಬ್ಲಿಶರರು: ಕೊಂಡವಲ್ಲಿ ವೀರವೆಂಕಯ್ಯ, ಶ್ರೀ. ಸತ್ಯನಾರಾಯಣ ಬುಕ್ಕಡಿಪೊ, ರಾಜಮಹೇಂದ್ರಿ. ಡೆ. ಅ. ೧೬೬ ಪುಟ. ಬೆಲೆ ೧—೮—೦

೧೯೫. **ಕೋದಂಡನ ಉಪನ್ಯಾಸಗಳು** ಲೇಖಕರು: ಶ್ರೀ. ಜಿ. ವಾಮನ್ ಭಟ್, ಬಿ. ಎ. ಎಲ್. ಟಿ. ಕ್ರೌ. ಅ. ೮೨ ಪುಟ.

೧೯೭. **ಗುಬ್ಬಿ ಮರಿ** ವಂದೇಮಾತರಂ ಗ್ರಂಥಮಾಲೆಯ ೫ನೆಯ ಪುಷ್ಪ. ಲೇಖಕರು: ಶ್ರೀ. ಸಿ. ಆರ್. ರಾಮಣ್ಣ, ಕ್ರೌ. ಅ. ೨೨ ಪುಟ. ಬೆಲೆ ೦—೨—೦

ಪತ್ರ-ಪತ್ರಿಕೆಗಳು

೧೬೧ **ಹಂಸ** ಪ್ರೇಮಚಂದ ಸ್ಮಾರಕ ಸಂಚಿಕೆ. ಸುಪರ ರಾಯಲ್ ಅ. ೧೧೮ ಪುಟ. ಬೆಲೆ ೨—೦—೦

೧೬೦. **ಪ್ರಭಾತ** (ದಸರಾ ಸಂಚಿಕೆ)

೧೬೧. **INDIANA** ಸಂಪಾದಕರು: ಶ್ರೀ. S. C. GUHA

೧೬೨. **ಕಥಾಕುಂಜ** ಸಂಪಾದಕರು: ಪ್ಯಾಟಿ ಶಾಮರಾಯರು.

೧೬೫. **ಸುದರ್ಶನ** ಸಂಪಾದಕರು: ಶ್ರೀ. ಎಮ್. ಜಿ. ಪಾಲೇಕರ. ಕ್ರೌನ್ ೧/೪. ಪುಟ ೨೪. ವಾ. ಚ. ೧-೦-೦

೧೮೬. **समाज अंक** (चांद) ಕ್ರೌ. ಅ. ೧೬೨ ಪುಟ. ವಾ. ಚಂ. ೬—೮—೦

೧೮೭. **ತ್ರಿವೇಣಿ** (ದೀಪಾವಳಿ ಸಂಚಿಕೆ)

೧೮೮. **ಕಂಠೀರವ** (ದಸರಾ ಸಂಚಿಕೆ)

೧೯೭. **ಶರಣಸಾಹಿತ್ಯ** ಸಂಪಾದಕರು: ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿ. ರಾ. ಅ. ೬೮ ಪುಟ.

೧೬೪. Mysore Dasara Exhibition ಡೆ. ೧/೪. ೧೦೨ ಪುಟ.

೧೬೮. **ಸ್ಥಾನಿಕ ಸ್ವರಾಜ್ಯವೃತ್ತ.** ಸಂಪಾದಕರು: ಶ್ರೀ. ಎನ್. ಆರ್. ಕೊಪ್ಪೀಕರ, ಪ್ರೆಸಿಡೆಂಟ್, ಮ್ಯುನಸಿಪಲ್ ಬರೋ, ಧಾರವಾಡ. ೮ ಪುಟ.

ವರದಿ

೧೯೨. ಧರ್ಮಸ್ಥಳ ವಿವಿಧ ಮತಧರ್ಮ ಸಮ್ಮೇಳನದ ಚತುರ್ಥ ವಾರ್ಷಿಕ ವಿವರಣೆ. ಡೆ. ಅ. ೭೨ ಪುಟ.

೨೦೧. ಪುಣೆ ಅನಾಥ ವಿದ್ಯಾರ್ಥಿ ಗೃಹದ ವರದಿ.

ಇತರ

ಕ್ಯಾಲೆಂಡರು ಮತ್ತು ಡಾಯರಿ—ಪುಣೆ ಅನಾಥ ವಿದ್ಯಾರ್ಥಿ ಗೃಹದಿಂದ.

೫ ಸುಂದರವಾದ ಕ್ಯಾಲೆಂಡರುಗಳು (ತ್ರಿವರ್ಣ ಚಿತ್ರದವು)—LONG-LIFE INSUR Co. LTD. POONA ಅವರಿಂದ)

ಗೀತಾಪ್ರೆಸ್, ಗೋರಖಪುರದವರ ಪ್ರಕಟನೆಗಳು

೧೫೪. **कवितावली** गोस्वामी तुलसीदासजी ಅನುವಾದಕರು: श्री. इन्द्रदेवनारायण. ಕ್ರೌ. ಅ. ಬೆಲೆ ೦—೯—೦

೧೫೫. **भक्त नरसिंह मेहता** ಲೇಖಕರು: ಕ್ರೌ. ಅ. ೧೬೮ ಪುಟ. ಬೆಲೆ ೦—೬—೦

೧೫೭. **ध्यानावस्थामें प्रभुसे वार्तालाप** ಕರು: ಶ್ರೀ. जयदयाल गोयंदका. ಕ್ರೌ. ಅ. ಬೆಲೆ ೦—೧—೬

೧೭೭. **श्रीउडियास्वामीजीके उपदेश** ಕರು: **श्रीमुनिलालजी**. ಕ್ರೌ. ಅ. ಬೆಲೆ ೦—೬—೦

೧೭೮. **नवधा भक्ति** ಲೇಖಕರು: ಶ್ರೀ. गोयंदका. ಕ್ರೌ. ಅ. ೬೫ ಪುಟ. ಬೆಲೆ ೦—೨—

೧೭೯. **श्रीमद्भगवद्गीता भाषा** (गुटका) ೧/೧೬. ೩೭೬ ಪುಟ. ಬೆಲೆ ೦—೪—೦

೧೯೩. **हरिपदाञ्जलि** ರಚಿಸಿದವರು: लाल वैश्य मेरठी "हरिदास" ಡೆ. ೧/೧೬. ಬೆಲೆ ೦—೨—೦

ಜಯಕರ್ನಾಟಕ ಗ್ರಂಥಮಾಲೆ

ಗ್ರಂಥಮಾಲೆಗೆ ೩ ವರ್ಷಗಳು ತುಂಬಿ, ನಾಲ್ಕನೆಯ ವರ್ಷದಲ್ಲಿ ಅದು ಹೆಜ್ಜೆಯಿಟ್ಟಿದೆ. ಸರಸ, ಸು ಮನೋರಂಜಕ, ವಿನೋದಾತ್ಮಕ, ಉಪಯುಕ್ತ, ಪ್ರೌಢ ವಿಷಯಗಳ ಮೇಲೆ ಹಲವು ಪುಸ್ತಕಗಳನ್ನು ಕನ್ನ ಸಲ್ಲಿಸಲಾಗುವುದು.

ಕ್ರಾ. ೧/೮ ಆಳತೆಯ ಸು. ನೂರಾಇಪ್ಪತ್ತು ಪುಟಗಳುಳ್ಳ ೬ ಗ್ರಂಥಗಳು ಚಂದಾದಾರರ ಕೈಸೇರುವವು. ವ ಚಂದಾ ಅ. ವೆ. ಸೇರಿ ರೂ. ೩—೮—೦. **ಜಯಕರ್ನಾಟಕದ ಚಂದಾದಾರರಿದ್ದವರಿಗೆ** ೩—೦—೦ **ಮಾತ್ರ**

ಈಗ ಗ್ರಂಥಮಾಲೆಯ ಚಂದಾದಾರರಲ್ಲದವರಿಗೆ ಅಂಚೆಯ ವೆಚ್ಚ ಬೇರೆ. ನಡೆಯುವ ಮತ್ತು ಮುಂದಿನ ವ ಚಂದಾದಾರರಾಗಬಹುದು. ಆದರೆ ಹಿಂದಿನ ಪ್ರಕಟನೆಗಳ ಬಗ್ಗೆ ಚಂದಾಸೌಲಭ್ಯವಿಲ್ಲ. ಇಂದಿನ ಚಂದಾದಾರರು ಹಿಂದಿನ ಪುಸ್ತಕಗಳ ಬೆಲೆಯನ್ನೂ, ಅಂಚೆಯ ವೆಚ್ಚವನ್ನೂ ಸಹಿಸಬೇಕಾಗುವುದು.

ಪ್ರತಿ ಮನೆಯಲ್ಲಿಯೂ ವಾಚನಾಲಯದಲ್ಲಿಯೂ ಸಂಗ್ರಾಹ್ಯವಾದ ಗ್ರಂಥಗ

ಮುಂಚಿನ ಪ್ರಕಟನೆಗಳು

ಹರಟೆಗಳು: ಶ್ರೀ ಬೇಂದ್ರೆಯವರು ಬರೆದ ೫ ಹರಟೆಗಳು; ಪ್ರೊ. ಗೋಕಾಕ ಅವರ 'ಯುಗಾಂತರ' ಎಂಬ ಹಾಸ್ಯಪ್ರಬಂಧ ಸಹಿತ. ೦-೧೦-೦

ಅದೇನೆ ಇರಲಿ: ನೈಜಾಂ ಕರ್ನಾಟಕದ ಶ್ರೀ. ಮನ್ಸಬ್ದಾರರು ಬರೆದ ಸಾಮಾಜಿಕ ನಾಟಕ. ೦-೮-೦

ದರಿದ್ರನಾರಾಯಣ: ಪ್ರೊ. ಜಾಗೀರದಾರ ರಂಗಾಚಾರ್ಯರು ಬರೆದ ಸಾಮಾಜಿಕ ನಾಟಕ. ೦-೧೦-೦

ಜೀವನಸಂಗೀತ: ೧೪ ಲಾವಣಿಗಳು. ೦-೧೦-೦

ಮೂರನೆಯ ವರ್ಷದ ಪ್ರಕಟನೆಗಳು

ಮಾವಿನ ತೋಪು: ಶ್ರೀಮಾನ್ ಹ. ಪೀ. ಜೋಶಿ, ಬಿ. ಎ. ಅವರು ಬರೆದ ಸಾಮಾಜಿಕ ಕಾದಂಬರಿ. ೦-೧೦-೦

ತರಂಗಿಣಿ: ಶ್ರೀ. ಟೇಂಗ್ಸೆ ಗೋವಿಂದರಾಯರು ಬರೆದ ಕಾವ್ಯಮಯ ನಾಟ್ಯಚಿತ್ರ. ೦-೬-೦

ಬಂಗಾರದ ಡಾಬು: ಶ್ರೀಮಾನ್ ಕೆ. ಗೋಪಾಲಕೃಷ್ಣ ರಾಯರ ಕಥಾಸಂಗ್ರಹ. ೦-೧೦-೦

ಉದಯರಾಗ: ಶ್ರೀ. ಅ. ನ. ಕೃಷ್ಣರಾಯರು ಬರೆದ ಸಾಮಾಜಿಕ ಕಾದಂಬರಿ. ೦-೧೨-೦

ರಾಜವಲ್ಲಭ: ಶ್ರೀ. ಹ. ಪೀ. ಜೋಶಿ ವಿರಚಿತ ಸಂಗೀತ ಪೌರಾಣಿಕ ನಾಟಕ. ೦-೧೦-೦

ಕೆಲವು ನೀಳ್ಗತೆಗಳು: ಹೆಸರು ಪಡೆದ ಕತೆಗಾರರ ಆರು ಕತೆಗಳು. ೦-೧೦-೦

ಮಲ್ಲಿಗೆದಂಡೆ: ಸಂಗ್ರಾಹಕರು: ಶ್ರೀ. ಕಾಪಸೆ ರೇವಪ್ಪನವರು
ಸಾದಾಪ್ರತಿ ೦-೧೨-೦
ಫೇದರವೇಟ ಕಾಗದದ ಕ್ಯಾಲಿಕೋ ಹೊದಿಕೆಯ ಪ್ರತಿಗೆ ೧-೨-೦

ನಾಲ್ಕನೆಯ ವರ್ಷದ ಪ್ರಕಟನೆಗಳು

ಪರಿಣೀತಾ: ವಿಶ್ವವಿಖ್ಯಾತ ವಂಗ ಕಾದಂಬರಿಕಾ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಅತ್ಯಂತ ಕಾದಂಬರಿ. ಶ್ರೀ. ಗುರುನಾಥ ಜೋಶಿಯವರು ಅನುವಾದಿ

ಹೂಬಿಸಿಲು: ಸೌ॥ ಶಾಮಲೆಯವರ ಸರಸ ಕಥಾ ಶ್ರೀ. ಆನಂದಕಂದರ ಮುನ್ನುಡಿಯೊಡನೆ.

ಸಾಲುದೀಪ: ಶ್ರೀಮಾನ್ ಜೈನೇಂದ್ರ ಕುಮಾರ ಕತೆಗಳು. ಶ್ರೀ. ಗುರುನಾಥ ಜೋಶಿಯವರಿಂದ ಸರಸ ಅನುವಾದಿಸಲ್ಪಟ್ಟಿದೆ.

ಮುಂಬಯಿ ವಿದ್ಯಾಖಾತೆಯವರ ಮನ್ನಣೆಯ ಪಡೆದ ನಮ್ಮ ಪ್ರಕಟನೆಗಳು

೧ ಉದಯರಾಗ ೨ ಮಲ್ಲಿಗೆದಂಡೆ ೩ ಜ. ಕ. ಸ ೪ ತರಂಗಿಣಿ ೫ ಅದೇನೆ ಇರಲಿ ೬ ಪರಿಣೀತಾ ೭ ಜೀವನ ೮ ರಾಜವಲ್ಲಭ ೯ ಬಂಗಾರದ ಡಾಬು ೧೦ ದರಿದ್ರನಾರಾ

ರಾಜರಹಸ್ಯ (ಭಾಗ ೧): ಶ್ರೀ. ರಾ. ನ. ಮ ಬರೆದ, ಅದ್ಭುತರಸಪೂರ್ಣವಾದ ಈ ಕಾದಂಬರಿಯ ಭಾಗವು ಮಾರಾಟಕ್ಕೆ ಸಿದ್ಧವಾಗಿದೆ. ಪುಟಗಳು ೨೦೭

ಜಯಕರ್ನಾಟಕದ ವಿಜಯನಗರ ವಿಶೇ

ವಿಜಯನಗರದ ಸ್ಮಾರಕೋತ್ಸವ ಕಾಲದಲ್ಲಿ ಸಾಹಿತ್ಯ ಅಧ್ಯಕ್ಷರಾದ ಪ್ರೊ. ಬಿ. ಎಂ. ಶ್ರೀಕಂಠಯ್ಯನವರ ಪ್ರಕಾಶಿತವಾದ ಈ ಸಂಚಿಕೆಯ ಪ್ರತಿಗಳೆಲ್ಲ ತೀರಲು

FEB. 1938

ANNAS SIX

ಈ ಸಂಚಿಕೆಯಲ್ಲಿ—

ಪ್ರಗತಿಪರ ಲೇಖಕರು
ಜವಾಹರಲಾಲ ನೆಹರು

ಕನ್ನಡನುಡಿ—ದೇಹೀದಫ್ತರ
ಎಸ್. ಕೃಷ್ಣ ಶರ್ಮ


ನಾಗಜನಾಂಗ
ದೇಸಾಯಿ ಪಾಂಡುರಂಗರಾಯರು

ಕಲೆಯ ಮೀಮಾಂಸೆ
ಶ್ರೀರಂಗ

ಅಖಿಲ ಭಾರತೀಯ ಮಹಿಳಾ ಪರಿಷತ್ತು
ಸೌ. ಶ್ಯಾಮಲಾ ಬೆಳಗಾಂವಕರ

ಯುದ್ಧೋತ್ತರ ರಾಜಕೀಯ ವಿಚಾರಗಳು
"ನಾಗರಿಕ"

ಸಂಪಾದಕರು:
ಬೆಳಗಾವಿ ರಾಮಚಂದ್ರರಾಯರು
ಬಿ. ಎ.




ಆರೋಗ್ಯ-ಬಲ-ಉತ್ಸಾಹ-ಕ್ರೀಡೆ (ಆಸ್ಟ್ರೇಲಿಯದ ಒಂದು ದೃಶ್ಯ)

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾ

(ಮೈಸೂರು ಸರ್ಕಾರ)

ಭದ್ರಾವತಿ



ಅತ್ಯಂತ ಶ್ರೇಷ್ಠವಾದ

ಮೈಸೂರು ಉಕ್ಕಿನ ಸಾಮಾನುಗ

ಗಾಡಿಪಟ್ಟಿ, ಸರಳು, ಕಂಬಿ ಮುಂತಾದ ಸಾಮಾನುಗಳು (**M. S. Flats, Bars** e
ಇದ್ದಿಲಿನ ಉಪಯೋಗದಿಂದ ತಯಾರಾಗುವ ಅತ್ಯುತ್ಕೃಷ್ಟವಾದ ಬೀಡು ಕಬ್ಬಿಣ (**Charc**
Pig Iron) ಎರಕದ ನೀರಿನ ಕೊಳವೆಗಳು ಅಥವಾ ಪೈಪುಗಳು (**Cast Iron Pipe**
ಸ್ಪಿರಿಟ್ಸ್ (**W. W. Methanol**) "ಕ್ರೆಸೋ" ಎಂಬ ಫಿನಾಯಿಲ್ ಎಣ್ಣೆ ("**Kres**
ಡಾಮರ್ ಎಣ್ಣೆ (**Wood Tar**) ಮರದ ಎಣ್ಣೆ (**Wood preservati**

.... ಇವೇ ಮುಂತಾದವು ತಯಾರಾಗುತ್ತವೆ. ....

ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ.

ಉಕ್ಕಿನ ಸಾಮಾನುಗಳಿಗೆ—

ಏಜಂಟರು:—

ದಕ್ಷಿಣ ಮಹಾರಾಷ್ಟ್ರ ದೇಶಕ್ಕೆ: .... ವಾಲ್ಕಾರ್ಟ್ ಬ್ರದರ್ಸ್,

ಮೈಸೂರು ಸಂಸ್ಥಾನದಲ್ಲಿ: .... ಬಿ. ವಿ. ನಾರಾಯಣಸ್ವಾಮಿ ಅಂಡ್

೪೨ ಅರ್ಕಾಟ್ ಶ್ರೀನಿವಾಸಾಚಾರ್ ಬೀದಿ, ... ಬೆಂಗ

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢೇಕರ ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯ
ರಾಮಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯ

ಪರಿವಿಡಿ

ಕೆರಳಿದ ಸಂಜೆ (ಮುಖಚಿತ್ರ) ....
ಚಿತ್ರಸೃಷ್ಟಿ (ಕವನ) .... ಶ್ರೀ., ಸಾಲಿ ರಾಮಚಂದ್ರರಾಯರು ೮೧
ಅಂದು-ಇಂದು .... ಸಂಪಾದಕರಿಂದ ೮೨
ಪ್ರಗತಿಪರ ಲೇಖಕರು .... ಪಂಡಿತ ಜವಾಹರಲಾಲ ನೆಹರು ೮೩
ಕನ್ನಡನುಡಿ-ದೇಹೀದಫ್ತರ .... ಶ್ರೀ. ಸಿ. ಕೃಷ್ಣಶರ್ಮ, ಹೈದರಾಬಾದ ೮೭
ಜಮುಖಂಡಿಯ ಜಯಭೇರಿ .... "ಈ ಸಾ" ೯೩
ಆಟದ ಯುದ್ಧವೋ, ಯುದ್ಧದ ಆಟವೋ ? (ಚಿತ್ರ) ೯೫
ನಾಗಜನಾಂಗ (ಐತಿಹಾಸಿಕ) .... ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ. ೯೭
ಚಿತ್ರಪತಂಗ (ಜಪಾನಿ ಕತೆಯೊಂದು) .... ಶ್ರೀ. ಶಂಕರ ಮಹಾದೇವ ನಾಯಕ ೧೦೫
ಭೀಮಕವಿಯ ಬಸವಪುರಾಣ .... ಶ್ರೀ. ಎನ್. ಕೆ. ಕುಲಕರ್ಣಿ ಬಿ. ಎ. (ಆನರ್ಸ) ೧೧೧
ಹಡೇ ಪಾಠ (ಫ್ರೆಂಚ್ ಕತೆಯೊಂದು) ....ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ಯರು ಎಂ. ಎ. ಬಿ. ಎಲ್. ೧೧೬
ನವಳಾರು (ಕವನ) .... ಶ್ರೀ. ಟಿ. ಕೆ. ರಂಗನಾಥ ತೋವಿನಕೆರೆ ೧೧೯
ಹರಿಯ ಮೀಮಾಂಸೆ (ವ್ಯಂಗ್ಯಪ್ರಬಂಧ).... .... 'ಶ್ರೀರಂಗ' ೧೨೧
ರನ್ನನ ಊರು ಮುಧೋಳ, ಬೆಳಗಲಿ ಅಲ್ಲ (ಐತಿಹಾಸಿಕ ಟಿಪ್ಪಣಿ) ಶ್ರೀ. ದೇಸಾಯಿ ಪಾಂಡುರಂಗರಾಯರು ೧೨೭
ನಾಗಪುರದ ಅಖಿಲಭಾರತೀಯ ಮಹಿಳಾಪರಿಷತ್ತು .... ಶ್ರೀಮತಿ ಸೌ. ಶ್ಯಾಮಲೆ ೧೨೯
ಕೂಡಲು-ಪಡುವಲು (ಸಣ್ಣ ಕತೆ) .... ಶ್ರೀ. ಡಿ. ಜಿ. ಸರಾಫ ಬಿ. ಎ. ೧೩೪
ಯುದ್ಧೋತ್ತರ ರಾಜಕೀಯ ವಿಚಾರಗಳು (ಜಮುನಾದಾಸ ಮೆಹತಾ ಅವರ ಭಾಷಣದಿಂದ) ಸಂಗ್ರಾಹಕ 'ನಾಗರಿಕ' ೧೪೩
ಜ್ಞಾನ-ವಿಜ್ಞಾನ ೧೪೬
ಬಣ್ಣಗಳ ಇಂದ್ರಜಾಲ—ತಪ್ಪುಹುಡುಕುವವರಿಗೆ ಮೆಚ್ಚು—ಹಿಂಸ್ರವೃಕ್ಷಗಳು—ವಿಶ್ವಾಮಿತ್ರನ ಸೃಷ್ಟಿ ....
ಲಕ್ಷಾವಿತಾನ .... (ಎಸ್. ಎಸ್. ಎಂ., ನಾ. ಕು., ಸಂಪಾದಕರು) ೧೫೦
ಸಾಹಿತ್ಯಗೋಷ್ಠಿ ೧೫೮
ಪಂಜೆಯವರ ಸ್ಮೃತಿ—ಲೇಖಕರೇ, ವಾಚಕರನ್ನು ಮರೆಯದಿರಿ ! ....
ವಿಚಾರವೇದಿಕೆ ೧೬೧
ಯುದ್ಧ್ಯಸ್ವ ವಿಗತಜ್ವರಃ—ಅಹಿಂಸೆಯೊಂದು ಹಿಂಸೆಯಾಗದಿರಲಿ—'ರಾಜಿ'ಯ ದುರಂತ—ಮಂತ್ರಿಮಂಡಲವೂ ....
ಅಲ್ಪಸಂಖ್ಯಾಕರೂ—ದೊರೆಗಳು ತಲೆಯಲ್ಲಾಡಿಸಿದರು—ಕರ್ನಾಟಕದಲ್ಲಿಯ ಕಾಂಗ್ರೆಸ್ ಚುನಾವಣಿ ....
ನಮ್ಮ ಮಾತು ೧೬೩
ಆರೋಗ್ಯ-ಬಲ-ಉತ್ಸಾಹ-ಕ್ರೀಡೆ (ಚಿತ್ರ).... .... ೧೬೫

ಮುಂಬರುವ ಲೇಖನಗಳು

ಜಪಾನಿನಲ್ಲಿ ರಾಮಗೋಪಾಲರವರ ನಾಟ್ಯಪ್ರದರ್ಶನ
ಕರಾಚೂರ ಎಲ್. ನಂಜಪ್ಪ, ಟೋಕಿಯೊ

ನಾಟ್ಯಕಲೆ
ನಾಟ್ಯಪ್ರಪೂರ್ಣ ಟಿ. ರಾಘವಾಚಾರ್ಯರು ಬಿ. ಎ. ಬಿ. ಎಲ್.

ಹೋಳಿಯ ಮೀಮಾಂಸೆ
'ಶ್ರೀರಂಗ'

ಗದಾಯುದ್ಧ ರನ್ನನ ಕಾಲನಿರ್ಣಯದ ಶಾಸ್ತ್ರೀಯರೀತಿ
ನಾ. ಶ್ರೀ. ರಾಜಪುರೋಹಿತರು

ರನ್ನನ ಮುದುವೊಳಲು
ದೇಸಾಯಿ ಪಾಂಡುರಂಗರಾಯರು ಎಂ. ಎ.

ಜಗತ್ತಿನ ಕ್ರಾಂತಿಕೇಂದ್ರ—ರಶಿಯ
'ನಾಗರಿಕ'

ಸಾಲಕೊಡುವಾಗ ಬ್ಯಾಂಕುಗಳು ಗಮನಿಸಬೇಕಾದುದು
ಗುಂಜೀಕರ ಧೀರೇಂದ್ರರಾಯರು ಬಿ. ಕಾಂ.



ಕೆರಳಿದ ಸಂಜೆ



ಸಂಪುಟ ೧೬ | ಈಶ್ವರ ಸಂವತ್ಸರದ ಮಾಘ ಶುಕ್ಲ ೧ (೧-೨-೧೯೩೮) | ಸಂಚಿಕೆ ೨

ಚಿತ್ರಸೃಷ್ಟಿ

ವಿವಿಧ-ವಿಕಟಾಕೃತಿಯ ಕಿಸುಮುಗಿಲ್ ಪಡುವಲಂ |
ಕವಿದು ಕಣ್ಬೊಲನಾಗಿ ನಿಂದ ಪರಿಯಂ ನೋಡ ! |
ಸುವಿಧಾನಮೀಚಿತ್ರದೊಳಗಿಲ್ಲಮಾದೊಡಂ ಸೊಬಗಿಗೇಂ ಕೊರತೆಯುಂಟೇ ? ||
ಅವಿಧಾನದಿಂದಮೇ ರಮಣೀಯಮಾಯ್ತು ಚಿ- |
ತ್ರವಿದು ! ಕೌಶಲದ ಕೃತಿಗೇನಾದೊಡೇನೊ ಸಂ- |
ಭವಿಸುವುದು ಚೆಲ್ವು ! ಕುಂದುಂಟೆ ಶಿಲ್ಪಕೆ ಸೃಷ್ಟಿನಿರ್ಮಾಣನಿಷ್ಣಾತನಾ ? ||೧||

ಇದು ಶಾಂತಮಾಪುದೆಡೆ; ಜನದ ಸುಳಿವಿಲ್ಲ, ದೂ- |
ರದ ಪಕ್ಷಿ ನಲ್ಲಳಂ ಕರೆವ ದನಿ ಮುದಮನೀ- |
ವುದು ಮನಕೆ ! ನೆರೆಯ ಬೆಳೆವೊಲದ ನರುಗಂಪಿನಿಂ ತಣ್ಗಾಳಿ ಸೊಗಸಾದುದು ||
ಮೃದುವಾದುದಾಬೆಳಕು, ಸಂಜೆಯಾಕೆಂಪು ಕಂ- |
ದಿದುದೀಗಳೀಸೃಷ್ಟಿ ಪೊಸತೊಂದು ಚೆಲ್ವಿಂದೆ |
ಪುದಿದೆಸೆವುದೀದೃಶ್ಯಮೀಶಾಂತಿ ನೋವನಾರಿಸಿದುದೈ ನೊಂದ ಮನದಾ ! ||೨||

ಇಂದು ಪೂರ್ಣಿಮೆ, ರಜನಿ ರಾರಾಜಿಸುವುದು ಪೂ- |
ರ್ಣೇಂದುಮಂಡಳಮಂಡಿತಂ, ತಮಂ ಕಾಣಿಸದು, |
ಮಿಂದು ಜಗಮೀಗಳೀಜ್ಯೋತ್ಸ್ನಾಮೃತೋದಧಿಯೊಳೆಸೆವುದತಿ ಧವಳಮಾಗಿ ||
ಚೆಂದಮಿದು ಪೆರತೊಂದು ! ವಿಶ್ವಮೆಂಬುದು ಚಿತ್ರ- |
ಮಂದಿರಂ, ಸೌಂದರ್ಯನಿಧಿಸೃಷ್ಟಿಕರ್ತನಾ- |
ನಂದದಾವಿಷ್ಕೃತಿಗಳೈ ಕ್ಷಣಕ್ಷಣಕೊಗೆವ ವಿಧವಿಧದ ಚಿತ್ರಸೃಷ್ಟಿ ! ||೩||

—ಸಾಲಿ ರಾಮಚಂದ್ರರಾಯ

ಅಂದು-ಇಂದು

ಒಂದು ಕಾಲಕ್ಕೆ ಕವಿಯು—ಕಲಾಕೋವಿದನು ಪ್ರಪಂಚದ ಪರಿವೆಯಿಲ್ಲದೆ ತನ್ನೊಳಗೆ ತಾನೆ ತನ್ನ ರಸಾಸ್ವಾದನೆ ಮಾಡಬಲ್ಲವನಾಗಿದ್ದನು. ಆಗಿನ ಜಗತ್ತು ಅವನಾ ಭಾವಜೀವನಕ್ಕೆ ಅನುಕೂಲವಾಗಿತ್ತು. ಶಿಲ್ಪಾದಿ ಕಲೆಗಳು ಮಾತ್ರವಲ್ಲ, ಧರ್ಮವೂ ಮಾನವನ ಏಕಾಂತಿಕ ಆತ್ಮೋನ್ನತಿಗೆ ಸಹಾಯಕವಾಗಿತ್ತು.

ಈಗ ಅದು ಸಾಧ್ಯವಿಲ್ಲ. ಜೀವನದ ಘರ್ಷಣೆ ಹೆಚ್ಚಿದೆ. ಜಗತ್ತು ನಮ್ಮ ಹೊಸ್ತಿಲಿಗೆ ಬಂದು ನಿಂತಿದೆ. ವಿಶ್ವವು ಕಿರಿದಾಗಿದೆ. ಅಗಸ್ತ್ಯನು ಸಪ್ತಸಮುದ್ರಗಳನ್ನು ಆಪೋಷಣೆ ಮಾಡಿದ್ದನಂತೆ. ಅಹುದು; ವಿಜ್ಞಾನದ ಯಿಂದ ಮಾನವನಿಂದು ಅಭಿನವ ಅಗಸ್ತ್ಯನಾಗಿದ್ದಾನೆ. ಏಳುಕಡಲುಗಳು ಆತನ ಬೊಗಸೆಯಲ್ಲಿ ಹಿಡಿಸುತ್ತಿವೆ. ನಿಂದು ಭೂಮಿಯ ಸಮ್ರಾಟನು. ಇನ್ನು ವಿಶ್ವದ ವಿರಾಟನಾಗಲು ಅವನು ಹವಣಿಸುತ್ತಿರುವನು.

ಒಂದು ಕಾಲಕ್ಕೆ ಸಂನ್ಯಾಸವು ಸುಲಭವಾಗಿತ್ತು. ಜೀವನರಂಗವೇ ಕಿರಿದಾಗಿರುವಾಗ, ಅದನ್ನು ಬಿಟ್ಟು ವುದು ಸುಸಾಧ್ಯವಾಗಿತ್ತು. ಇದೀಗ ಅಡವಿ ಹೊಕ್ಕರೂ ಜಗತ್ತು ನಮ್ಮನ್ನು ಬೆನ್ನಟ್ಟಬಹುವುದು. ಇಂ ಶೇಖರನಾಗಲಿ, ಕಲಾಕೋವಿದನಾಗಲಿ, ಧರ್ಮಮಾರ್ತಾಂಡನಾಗಲಿ ಜೀವನದ ನಿಕಟತೆಯನ್ನು ಅಲ್ಲಗಳೆ ಹಾಗೆ ಮಾಡಿದರೆ ಅವನೊಬ್ಬ ಅರೆಮರುಳ.

ಅಂದಿನವರ ಕಣ್ಣಿನಲ್ಲಿ ಮಾನವನೊಬ್ಬ ತಪ್ಪುಗಾರ, ಆದುದರಿಂದ ತಪ್ಪೊಪ್ಪುವಿಕೆ (Confessions), ಶ್ಚಿತ್ತವಿಧಾನ, ಆತ್ಮದಂಡನೆಗಳನ್ನು ಅವರು ನಿರ್ಮಿಸಿದ್ದರು. ಇಂದಿನವರ ತಿಳಿವಳಿಕೆಯಂತೆ, ಮಾನವನ ಗಳು, ತಪ್ಪು-ಒಪ್ಪುಗಳು, ಒಳಿತು-ಕೆಡಕುಗಳು ಜೀವನಸಂಗೀತದ ಸಪ್ತಸ್ವರಗಳು.

> All your beauty cannot win
> Truth we learn in pain and sighs.

ಎಂದು ಏ. ಈ. ಕವಿ ಹೇಳುವನು. 'ದುಃಖದ ಸಾಲೆಯಲ್ಲಿ ನಾವು ಕಲಿವ ಅನುಭವಕ್ಕೆ ದೇವತೆಗಳ ಸೌಂ ಸಾಟಿಯಾಗಲಾರದು.' ಇಂದಿನ ಕವಿಯು ಅಳು-ನಗುವಿನ ಆಳವನ್ನು ತಿಳಿದಿರಬೇಕು; ಇಂದಿನ ಧರ್ಮಜ್ಞನು ಒಪ್ಪುಗಳ ದಾರಿಯನ್ನು ತುಳಿದಿರಬೇಕು; ಇಂದಿನ ನೀತಿಜ್ಞನು ಒಳಿತು-ಕೆಡಕುಗಳ ಕಳಗುಳದಲ್ಲಿ ಇಳಿದಿರಬೇಕು.

ನೋಟಕರ ಭೂಮಿಕೆಯು ಹಳಮಾತಾಯಿತು. ಕಣಕ್ಕಿಳಿದು ಮೈ ಮಣ್ಣು ಮಾಡಿಕೊಳ್ಳಬೇಕು. ಬಾಳಿನ ಕಾಳಗದ ಕಟ್ಟುನಿಟ್ಟುರಗಳು ತಿಳಿಯವು. Can your performance face the open fields and the ಎಂದು ವಾಲ್ಟ್ ವ್ಹಿಟ್ಮನ್ನನು ಕೇಳುವನು. ಜೀವನಸಂಘರ್ಷಣೆಯಿಂದ ಹುಟ್ಟುವ ಸಾಹಿತ್ಯ-ಸಂಸ್ಕೃತಿ ನಿಕಟಾನುಭವದ ಮುದ್ರೆಯಿರುವುದು. ನೇಗಿಲು ಹೊಡೆಯುವವ, ಉಳಿ ಹಿಡಿಯುವವ, ತಿದಿಯೂದುವವ ತಿರುಗಿಸುವವ ಕವಿಯಾಗಬೇಕು. ಸೆರೆಯಾಳು—ಅರಾಜಕವಾದಿ—ನಗ್ನಸಂಪ್ರದಾಯಿ—ಗಿರಣಿಕೆಲಸಗಾರ— ಹಾಡುಗಾರನಾಗಬೇಕು.

ಅಹುದು. ಹಾಗಾಗಬೇಕಾದರೆ ಸಂಸ್ಕೃತಿಯು ನೇಗಿಲು-ಉಳಿ-ತಿದಿ-ತಿಗರಿ ಹಿಡಿಯುವವರ ಮಟ್ಟಕ್ಕೆ ಬೇಕು. ಜ್ಞಾನಗಂಗೆಯು ಅಲ್ಲಿಯ ವರೆಗೂ ಇಳಿಯಬೇಕು. ಆಗ ಜೀವನದ ನಿಜವಾದ ಸೊಲ್ಲು ಕೇಳಿಸುವುದು. ಅಲ್ಲೆ ವಾತು, ಕನ್ನಡವಕ್ಕಿಯ ಕಲಿಕೆವಾತು ಅಲ್ಲಿರಲಾರದು. ಬಂಟನ ಬಿರುನುಡಿ, ಪತಿತನ ಕಹಿನುಡಿ, ಪ್ರಯತ್ನ ಹುರುಳುನುಡಿ ಆಗ ಮಿಡಿಯುವುದು.

ಬಾಳುವೆಯ ಸಾಣೆಕಲ್ಲಿಗೆ ನಮ್ಮ ಕಿರುಜೀವನವನ್ನೊಡ್ಡಬೇಕು. ಮೈ ತರಿಯಬೇಕು; ನೆತ್ತರು ಹರಿದು ಆಗ ಆ ನುಡಿಯ ಕಿಡಿ ಹಾರುವುದು. ಅದುವೆ ಸಾಹಿತ್ಯದ ಜೀವಜೀವಾಳ; ಸಂಸ್ಕೃತಿಯ ಸಾರಸರ್ವಸ್ವ.

—ಬೆಳಗಾವಿ ರಾಮಚಂದ್ರ

ಪ್ರಗತಿಪರ ಲೇಖಕರು

ಪಂಡಿತ ಜವಾಹರಲಾಲ ನೆಹರು

★

ಹಿಂದಿನವರ ಆದರ್ಶಪ್ರಪಂಚವು--Utopia--ಪುಸ್ತಕಗಳಲ್ಲಿತ್ತು. ಅಲ್ಲಾವುದ್ದೀನನ ಮಾಯಾದೀಪದಿಂದ, ಅರವತ್ತರವತ್ತು ಅಂತಸ್ತು ಹಾರುವ ಯಾಂತ್ರಿಕ ಕುದುರೆಯ ಸಹಾಯದಿಂದ ಆ ಪ್ರಪಂಚವನ್ನು ಕಾಣಲು-ತಲುಪಲು ಅವರು ಪ್ರಯತ್ನಿಸಿದರು. ಇಂದಿನವರು ಆ ಪ್ರಪಂಚವನ್ನು ಕಣ್ಣಾರೆ ಕಾಣಲು—ಮುಟ್ಟಲು ಭರವಸೆಯುಳ್ಳವರಾಗಿದ್ದಾರೆ. ಸಾಮ್ಯವಾದಿ ಸಮಾಜವೆ ಅದರ ಸ್ಥೂಲರೂಪ; ವಿಜ್ಞಾನವೆ ಸಾಧನಸಂಪತ್ತು. ಆ ಗುರಿಯನ್ನು ಜನಸಾಮಾನ್ಯರಿಗೆ ಸ್ಪಷ್ಟವಾಗಿ ತೋರಿಸಬಲ್ಲವನು ಸಾಹಿತಿಯೆ. ಉಳಿದವರು ಕಿರುಕಾಳಗಗಳಲ್ಲಿ ತೊಡಗುವರು; ಇವನು ತಿರುಳನ್ನೆ ತೋರಿಸುವನು. .. ..

★

ಸಾಹಿತ್ಯವನ್ನು ಕುರಿತು ಮತಪ್ರದರ್ಶನ ಮಾಡಲು ವಾಸ್ತವವಾಗಿ ನನಗೆ ಅಧಿಕಾರವಿಲ್ಲ. ಆದರೆ ಇಲ್ಲಿ ನನಗಿಂತ ಕಡಿಮೆ ಅಧಿಕಾರವುಳ್ಳವರು ಆಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟುದನ್ನು ನೋಡಿ, ನನಗೂ ಕೆಲವು ಮಾತುಗಳನ್ನು ಹೇಳಬೇಕೆನ್ನಿಸಿತು. ನಾನೂ ಎರಡು ಮೂರು ಪುಸ್ತಕಗಳನ್ನು ಬರೆದಿರುವೆನು. ಓದುವ ಬರೆಯುವ ಚಟವಾದರೂ ಹತ್ತಿದೆ ನನಗೆ. ಸಾಹಿತ್ಯಸೇವೆ ಮಾಡಲು ನನಗೆ ಬಿಡುವಿಲ್ಲ. ನನ್ನ ಶಕ್ತಿಯೆಲ್ಲವೂ ಯಾತರಲ್ಲಿ ವೆಚ್ಚವಾಗುತ್ತಿದೆ—ನೀವು ಬಲ್ಲಿರಿ.

ಮಾದಕ ಸಾಹಿತ್ಯ

ಪ್ರಗತಿಪರ ಸಾಹಿತ್ಯವೆಂದರೇನು ? ಸಾಹಿತ್ಯನಿರ್ಮಿತಿಯು ಯಾರ ಸಲುವಾಗಿ ನಡೆಯುತ್ತಿದೆ ? ಬರೆಹಗಾರರು ಬರೆಯುವುದಾದರೂ ಯಾತಕ್ಕೆ ?....ಎಂಬೀ ಬಗೆಯ ಪ್ರಶ್ನೆಗಳಿಗೆ ಪ್ರತಿಯೊಬ್ಬರೂ ಉತ್ತರಗಳನ್ನು ಕೊಡಬಲ್ಲರು. ಅವುಗಳನ್ನು ಮತ್ತೆ ಮತ್ತೆ ಹೇಳುವುದರಲ್ಲಿ ಪ್ರಯೋಜನವಿಲ್ಲ. ಈ ಪ್ರಶ್ನೆಗಳನ್ನು ಕೇಳಿದಾಗ ನನಗೂ ಅನಿಸಿತು—ನಾನೂ ಕೆಲಪ್ರಶ್ನೆಗಳನ್ನು ನನಗೇ ಕೇಳಿಕೊಳ್ಳಬೇಕೆಂದು. ಜೀವಿತದ ಉದ್ದೇಶವೇನು? ಜೀವನದ ಉದ್ದೇಶವು ಒಂದೇ ಇದ್ದೂ ಉಳಿದೆಲ್ಲ ವಿಷಯಗಳು ಪರಸ್ಪರಭಿನ್ನ ವಿಭಾಗಗಳಿವೆಯೋ, ಇಲ್ಲವೆ ಒಂದೇ ಪೆಟ್ಟಿಗೆಯ ಬೇರೆಬೇರೆ ಖಾನೆಗಳಂತೆ ಪರಸ್ಪರಸಂಬದ್ಧವಾಗಿವೆಯೋ ? ಜನರು ಡಾಕ್ತರರಾಗುತ್ತಾರೆ; ವಕೀಲರಾಗುತ್ತಾರೆ; ಪ್ರೊಫೆಸರರಾಗುತ್ತಾರೆ; —ಇವರೆಲ್ಲರೂ ಪರಸ್ಪರಸಂಬಂಧವಿರದ ಬೇರೆಬೇರೆ ಭಾಗಗಳೋ, ಒಂದೇ ಜೀವನದ ಬೇರೆಬೇರೆ ಕೋನಗಳೋ ? ಜಗತ್ತಿನಲ್ಲಿಯ ಜೀವನದೃಶ್ಯದಿಂದ ಇವರಲ್ಲಿ ಯಾರೊಬ್ಬರನ್ನಾದರೂ ಬೇರ್ಪಡಿಸಿ, ಅವರನ್ನೇ ಹುಡುಕುತ್ತ ಹೊರಟರೆ, ಅಡ್ಡದಾರಿ ಬಿದ್ದು ಕೊನೆಯವರೆಗೆ ಅಲೆದಾಡುತ್ತಲೇ ಇರಬೇಕಾಗಿ ಬರಬಹುದು.

ನೀವೇಕೆ ಬರೆಯುವಿರಿ? ಹೊಟ್ಟೆಗಾಗಿ! ಉತ್ತರವೇನೋ ಸರಿಯಾಗಿದೆ. ಹಲವರು ಇದೇ ಉತ್ತರವನ್ನು ಕೊಡಬಹುದಾಗಿದೆ. ಆದರೆ ಆದರಲ್ಲಿ ಮೂಲತತ್ವವೆಂಬುದೇನೂ ಇಲ್ಲ. ಕೆಲವರೆನ್ನಬಹುದು "ನಮಗೆ ಬರೆಯಬೇಕೆಂದೆನಿಸುವುದರಿಂದ ಬರೆಯುತ್ತಲಿದ್ದೇವೆ. ಕಾರಣವೇನೇ ಇರಲಿ. ನಾವು ಬರೆಯುತ್ತೇವೆಂಬುದು ನಿಜ." ಈ ಉತ್ತರವೂ ಸರಿಯಾಗಿದೆ. ಹಲವರೆನ್ನಬಹುದು "ಜನರ ರಂಜನೆಗಾಗಿ ಬರೆಯುತ್ತೇವೆ" ಎಂದು. ಸಂಸಾರಜಾಲದಲ್ಲಿ ಸಿಕ್ಕಿಬಿದ್ದವರನ್ನು ಕೆಲಹೊತ್ತು ರಮಿಸಿ, ಅವರ ಮಾನಸಿಕ ಇಲ್ಲವೆ ಶಾರೀರಿಕ ದುಃಖಗಳು ಮರೆತುಹೋಗುವಂತೆ ಮಾಡುವುದು ಈ ಬಗೆ! ಇಂತಹ ಲೇಖಕರ ಲೇಖನಗಳನ್ನು ಓದುವಾಗ ವಾಚಕನು ತನ್ನನ್ನು ತಾನು ಮರೆಯುವನು; ಅವನ ತೊಂದರೆಗಳು ಕ್ಷಣಮಾತ್ರ ಮರೆತುಹೋಗುವವು. ಇಂತಹ ಸಾಹಿತ್ಯವನ್ನು 'ಮಾದಕ'ವೆಂದು ಕರೆಯುವರು. ನಮಗೆ ನಮ್ಮ ಯಾತನೆಗಳು ಬೇಡವೆನಿಸಿದಾಗ, ಜೀವಕ್ಕೆ ಬೇಜಾರವೆನಿಸಿದಾಗ ನಾವು ಸಿನೇಮಾ ನೋಡಲು ಹೋಗುತ್ತೇವೆ. ಸ್ವಲ್ಪ ಸಮಯ ನಾವು ಹೊರಗಿನ ಜಗತ್ತನ್ನು ಮರೆತುಬಿಡುತ್ತೇವೆ. ನಮ್ಮ ದಣಿದ ಮನಸ್ಸು ಮತ್ತೆ ಚೇತನಗೊಳ್ಳುತ್ತದೆ. ಸಾಹಿತ್ಯವೂ ಅಂತಹ ಪರಿಣಾಮವನ್ನುಂಟುಮಾಡಬಲ್ಲದು. ಆದರೆ ಆದರಲ್ಲಿ ಅಂತಹ ಮಹತ್ವವೇನಿದೆ ?

ತತ್ವದ ಅಧಿಷ್ಠಾನ ಬೇಕು

ಈ ಬಗೆಯ ಸಾಹಿತ್ಯವು ಕ್ಷಣಿಕಜೀವನಕ್ಕೆ ಪ್ರಯೋಜನಕರವಾಗಬಹುದು. ಇಂತಹ ವಾಙ್ಮಯವು ಅಲ್ಪಕಾಲದಲ್ಲಿ ಅಳಿದುಹೋಗುವುದು. ಕೊಂಚಕಾಲದ ಸಿನೇಮಾ ನಮ್ಮಲ್ಲನೇಕರಿಗೆ ತುಂಬ ಸೇರುತ್ತದೆ; ಅದು ತಾತ್ಪೂರ್ತಿಕವಾಗಿ ಮನಸ್ಸಿನ ಮೇಲೆ ಪ್ರಚಂಡಪರಿಣಾಮವನ್ನುಂಟುಮಾಡುತ್ತದೆ. ಆದರೆ ಕೆಲದಿನಗಳಲ್ಲಿಯೇ ಆ ಸಿನೇಮಾ ನೆನಪಿನಿಂದ ಹಾರಿಹೋಗುವುದು. ಮೇಲಣ ಸಾಹಿತ್ಯವೂ ಆದೇ ರೀತಿ ಕ್ಷಣಿಕ ಪರಿಣಾಮವನ್ನು ಮಾಡುವುದು. ಲೇಖಕರ ಲೇಖನದ ಹಿಂದೆ ದೊಡ್ಡ ತತ್ವವಿರದಿದ್ದರೆ ಇಲ್ಲವೆ

ಉದಾತ್ತ ವಿಚಾರಸರಣಿಯಿರದಿದ್ದರೆ, ವಾಚಕರ ಮನಸ್ಸಿನ ಮೇಲೆ ಅದರ ಪರಿಣಾಮವಾಗಲಾರದು. ಜಗತ್ತಿನಲ್ಲಿ ಬರೆಹಗಾರರು ಸಾವಿರಗಟ್ಟಲೆ ಹುಟ್ಟುತ್ತಾರೆ; ಆದರೆ ಚಿರಕಾಲೀನ ಕೃತಿಗಳ ಹಿಂದೆ ಯಾವುದೊಂದು ದೊಡ್ಡ ತತ್ತ್ವವಾಗಲಿ, ಒಂದು ವ್ಯಾಪಕ ಪ್ರಮೇಯವನ್ನು ಬಿಡಿಸುವ ಪ್ರಯತ್ನವಾಗಲಿ ಇದ್ದುದು ಕಂಡುಬರುತ್ತದೆ.

ನಾನು ಮತ್ತೂ ನಿಮ್ಮನ್ನೆಲ್ಲ ಕೇಳುವುದೆಂದರೆ, ನಿಮಗೆ ಜಗತ್ತು ಹೇಗೆ ತೋರುತ್ತದೆ? ಜಗತ್ತಿನ ಸಂಪೂರ್ಣ ಚಿತ್ರವು ತಮ್ಮೆದುರಿಗಿದೆಯೆಂದು ನಿಮಗೆ ಅನಿಸುತ್ತಿದ್ದರೆ, ಆ ಚಿತ್ರದಲ್ಲಿ ನಿಮ್ಮ ಸ್ಥಾನವಾವುದು, ನೀವು ಯಾವ ನಿಟ್ಟಿಗೆ ಹೋಗಬಯಸುತ್ತೀರಿ, ನಿಮ್ಮ ಜತೆಗಾರರನ್ನು ಎಲ್ಲಿಯವರೆಗೆ ಕರೆದೊಯ್ಯಲು ಸಿದ್ಧರಿದ್ದೀರಿ—ಎಂಬೀ ಆಲೋಚನೆಯನ್ನು ನೀವು ಮಾಡಿರುವಿರಾ? ಇದನ್ನೆಲ್ಲ ನೀವು ಪೂರ್ತಿಯಾಗಿ ಯೋಚಿಸಿದ್ದರೆ, ನಿಮ್ಮ ಲೇಖನವು ನಿಶ್ಚಯವಾಗಿಯೂ ಹೆಚ್ಚಿನ ಅಂತಸ್ಸಿನದಾಗುವುದು....

ಆದರ್ಶ—ವಾಸ್ತವ

ವಿಚಾರಮಾಡುವ ಶಕ್ತಿಯು ಹಲವರಲ್ಲಿದೆ; ಆದರೆ ಕೆಲಸ ಮಾಡುವ ಶಕ್ತಿಯು ಮಾತ್ರ ಕಡಿಮೆಯಾಗಿರುವುದರಿಂದ ಹಲವು ಲೇಖಕರು ಗಾಳಿಯಲ್ಲಿ ಕಲ್ಪನೆಯ ಗೋಪುರಗಳನ್ನು ಕಟ್ಟುವುದರಲ್ಲಿಯೆ ಮಗ್ನರಾಗಿಬಿಡುವರು. ಆ ಆದರ್ಶ ಜೀವನದತ್ತ ಮುಟ್ಟಿಸುವ ದಾರಿಯು ಗೊತ್ತಿರುವುದಂತಿರಲಿ, ಅಲ್ಲಿಗೆ ಹೋಗುವ ಪ್ರಯತ್ನವನ್ನೂ ಅವರು ಮಾಡಲಾರರು. ಸತ್ಯಜಗತ್ತು ಒಂದು ಕಡೆ, ಅವರ ಕಾಲ್ಪನಿಕ ಜಗತ್ತು ಇನ್ನೊಂದುಕಡೆ—ಹೀಗೆ ಅವರ ಜೀವನವು ತಾಳಮೇಳವಿಲ್ಲದುದಾಗಿರುವುದು.

ಈಗಿನ ಸಾಹಸಪ್ರಿಯರೂ ನಿಃಸ್ಪೃಹರೂ ಆದ ಲೇಖಕರು ವಿಶ್ವಬಾಂಧವ್ಯವನ್ನು ಪ್ರಸ್ಥಾಪಿಸುವ ಪ್ರಯತ್ನದಲ್ಲಿದ್ದಾರೆ. ಪ್ರಚಲಿತ ಜೀವನವು ತಮ್ಮ ಧ್ಯೇಯಸೃಷ್ಟಿಯ ಜೀವನದಿಂದ ಭಿನ್ನವಾಗಿರುವುದು ಗೊತ್ತಾದೊಡನೆಯೆ, 'ನಮ್ಮ ಗುರಿಯನ್ನು ನಾವು ಸೇರಲಾರೆವೆ? ಸೇರಬಹುದಾದರೆ ಅಲ್ಲಿಗೊಯ್ಯುವ ದಾರಿ ಯಾವುದು?' ಎಂಬ ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಮೂಡುತ್ತವೆ.

ಪಾರಾಗುವ ದಾರಿ

ಈ ಪ್ರಶ್ನೆಗಳು ಪ್ರಾಚೀನಕಾಲದ ಲೇಖಕರ ತಲೆಯಲ್ಲೇಳುತ್ತಿರಲಿಲ್ಲವೆಂತಲ್ಲ. ಆದರೆ ಅವರಿಗೆ ಈ ಕಲ್ಪನಾಜಗತ್ತಿಗೆ ತಲುಪಿಸುವ ದಾರಿಯು ಕಾಣುತ್ತಿರಲಿಲ್ಲ; ಆದ್ದರಿಂದ ಅವರು ತಮ್ಮ ಪುಸ್ತಕಗಳಲ್ಲಿಯೆ ತಮ್ಮ ಆದರ್ಶ ಪ್ರಪಂಚವನ್ನು (Utopia) ನಿರ್ಮಿಸಿದರು. 'ತಮ್ಮಲ್ಲಿ ಸಾಮರ್ಥ್ಯವಿದ್ದಿದ್ದರೆ ಇಂತಹ ಜಗತ್ತನ್ನು ಮಾಡುತ್ತಿದ್ದೆವೆ'ಂದು ಹೇಳಿದರು.

ಇಂತಹ ಕಾಲ್ಪನಿಕಜಗತ್ತಿನೊಡನೆ ಸಂಪರ್ಕ ಕೆಲಕೆಲವರು ಅಲ್ಲಾವುದ್ದೀನನ ಮಾಯಾ ಗೊತ್ತುಹಿಡಿದರು. ಇಲ್ಲವೆ ಅರವತ್ತರವತ್ತು ಹಾರುವ ಯಂತ್ರದ ಕುದುರೆಯನ್ನು ಕಲ್ಪಿಸಿದ ವರ ವಿಚಾರಗಳು ಯಾವಾಗಲೂ ಜಗತ್ತಿನ ಇರುತ್ತವೆ. ವ್ಯವಹಾರಕ್ಕೂ ಅವರಿಗೂ ಹೆತ್ತು ಇರುವುದಿಲ್ಲ. ಆದರೆ ಇಂದಿನ ಜಗತ್ತ ಯನ್ನು ನೋಡಿದರೆ, ಕಾಲ್ಪನಿಕ ಆದರ್ಶ ಮುಟ್ಟಿಸುವ ದಾರಿ ನಮಗೆ ಕಾಣುತ್ತಲಿದೆ.

ಹಿಂದಿನವರ ಕನಸು—ಇಂದಿನವರ ನ

ಹಿಂದಿನ ಲೇಖಕರು, ಬಡವರು-ಬಲ್ಲಿದರೆಂಬ ಶಾಶ್ವತವೆಂದು ತಿಳಿಯುತ್ತಿದ್ದರು. ಅದೆಂದೂ ದೆಂದು ಅವರ ಅಭಿಪ್ರಾಯವಾಗಿತ್ತು. ಆದರೆ ಶಾಸ್ತ್ರೀಯಪ್ರಗತಿ, ಜ್ಞಾನಪ್ರಸಾರ ಮತ್ತು ಮತ್ತು ವರ್ತಮಾನವಿನಿಮಯಗಳ ಸೌಕರ್ಯ ನಿರೀಕ್ಷಿಸಿದರೆ, ನಮಗೆ ಬೇಕಾಗಿರುವ ಜಗತ್ತ ವಾಗಿ ನಿರ್ಮಿಸಬಲ್ಲೆವೆಂಬ ಭರವಸೆ ಹುಟ್ಟುತ್ತದೆ. ಶಾಶ್ವತವಾಗಿ ತೋರುವ ತೊಂದರೆಗಳು ಇಂದು ದಲ್ಲಿ ಮಾಯವಾಗಿ ಬಿಡುವವು. ಈ ಜಗತ್ತಿನಲ್ಲಿ ಪ್ರ ವ್ಯಕ್ತಿಯೂ ತನ್ನತನ್ನ ವಿಕಾಸವನ್ನು ಮಾಡಿಕೊ ವಾದ ಸೌಕರ್ಯವು ಸಿಗಬಹುದಾಗಿದೆ.

ಇದೆಲ್ಲವೂ ಸಾಧ್ಯಸೃಷ್ಟಿಯ ಸಂಗತಿಯಾಗಿದ್ದ ಮುಟ್ಟುವ ಇಲ್ಲವೆ ಪಡೆಯುವ ಪ್ರಯತ್ನವನ್ನೇ ಬಾರದು?

ಈ ಆದರ್ಶಜೀವನದ ಕಡೆಗೆ ನಮಗೆ ಹೋಗು ದಿದ್ದರೆ, ಆ ತಪ್ಪು ಯಾರದು? ಜಗತ್ತಿನಲ್ಲಿ ಸಾಮಾಜಿಕಶಕ್ತಿಯು ಅತ್ಯಂತ ಪ್ರಬಲವಾಗಿ ಪ್ರಪಂಚವನ್ನು ಅತ್ಯಲ್ಪ ಆಯಾಸದಿಂದ ದಾಗಿದೆ. ಆದರೆ ಜಗತ್ತಿನಲ್ಲಿ ತುಂಬಿಕೊಂಡ ಜ ಳಿಯು ಈ ಹೊಸ ಭೂಲೋಕದ, ಈ ಆದ ಕಲ್ಪನೆಯನ್ನೂ ಮಾಡಿಕೊಳ್ಳಲಾರದು. ಲೇಖಕರು ಇಲ್ಲಿ ದಾರಿ ತೋರಿಸಬಲ್ಲರು. ಕಲ್ಪನಾಬಲದಿಂದ ಆ ಆದರ್ಶಜಗತ್ತನ್ನು ಆ ಆದರ್ಶವನ್ನು ಸತ್ಯಸೃಷ್ಟಿಗೆ ತಂದಿಳಿಸಬೇಕು

ನ-ಸಮಾಜವನ್ನು ಅಲ್ಲಿಗೆ ಮುಟ್ಟಿಸಬೇಕೆಂದು ಅವರು ಂತತವೂ ಪ್ರಯತ್ನಿಸುತ್ತಿರುತ್ತಾರೆ. ಬಹುಜನ ಸಮು ಾಯವನ್ನು ಅಲ್ಲಿಗೆಳೆದೊಯ್ಯುವುದೆ ಅವನ ಕಾರ್ಯವು.

ಸಾಹಿತ್ಯ—ರಾಜನೀತಿ

ಪ್ರಚಲಿತ ಜಗತ್ತಿನ ಪರಿಸ್ಥಿತಿಯನ್ನು ಪಲ್ಲಟಗೊಳಿಸಿ ದರ್ಶಸ್ಥಿತಿಯತ್ತ ಒಯ್ಯುವ ಪ್ರಯತ್ನವನ್ನು ಇನ್ನು ಲವರು ಮಾಡುತ್ತಾರೆ. ರಾಜಕೀಯ ಚಳವಳಿಗಾರರು ಂಥವರೆಂದು ಹೇಳಬಹುದು. ಆದರೆ ರಾಜನೀತಿಪ್ರವಿಷ್ಟ ವನವರು ಸಣ್ಣಪುಟ್ಟ ಪ್ರಶ್ನೆಗಳಲ್ಲಿಯೆ ತೊಡಗಿ, ಮೂಲ ಪ್ರಶ್ನೆಯನ್ನು ಮರೆಮಾಡಿಕೊಳ್ಳುತ್ತಾರೆ. ಕಲಾಕೋವಿ ನು ಮಾತ್ರ ಈ ಕಿರುಕುಳ ಸಂಗತಿಗಳಿಂದ ಅಲಿಪ್ತ ಾಗಿ ಉಳಿಯಬಲ್ಲನು; ಅವನ ಜೀವನವೂ ಲಕ್ಷ್ಯವೂ ರಾಜ ೀಯ ಮುಖಂಡರ ಜೀವನ-ಲಕ್ಷ್ಯಗಳಿಂದ ಭಿನ್ನವಾದು ಾಗಿರುವುದರಿಂದ, ಮಹತ್ವದ ಮಾತಿನತ್ತ ಅವನು ಜನ ಯ ಗಮನವನ್ನು ಎಳೆದೊಯ್ಯಬಲ್ಲನು.

ಇಂದಿನ ಉರ್ದೂ-ಹಿಂದೀ ಪ್ರಶ್ನೆಯನ್ನೇ ತೆಗೆದು ೊಳ್ಳುವಾ. ಬೇರೆ ಮಹತ್ವದ ಸಮಸ್ಯೆಗಳು ದೂರ ಉಳಿದು ಟ್ಟು, ಜನತೆಯ ಮನಸ್ಸು ಇಂತಹ ಗೌಣವಿಷಯ ಳಲ್ಲಿಯೇ ತೊಡಗಿಕೊಂಡಿರುತ್ತದೆ; ಈ ಪ್ರಶ್ನೆ ಬಿಡಿಸುವ ್ರಯತ್ನದಲ್ಲಿರುವಾಗಲೇ ಬೇರೆ ಹೊಸ ಪ್ರಶ್ನೆಗಳ ಸಂತಾನವೆ ಟ್ಟುತ್ತದೆ.

ಸಾಹಿತ್ಯದ ಪ್ರಸಾರವಾಗುವಷ್ಟು ರಾಜಕೀಯ ಚಳವಳಿ ದಾಗಲಾರದು. ಸಾಹಿತ್ಯೋಪಾಸಕರು ಹೋಗುವಲ್ಲೆಲ್ಲ ಜನೀತಿವಿಶಾರದರು ಹೋಗಲಾರರು. ಲೇಖಕನು ಮಾನ್ಯ ಜನತೆಯ ಸಾದಾ-ಸೀದಾ ಮಾತುಗಳನ್ನು ಬಲ್ಲವ ಾಗಿರುವನು; ಅದರ ಸಹಾಯದಿಂದ ಕಲ್ಪನಾಪ್ರಪಂಚ ನ್ನೂ ವಾಸ್ತವಪ್ರಪಂಚವನ್ನೂ ಸಂಧಿಸುವ ಸೇತುವೆ ುನ್ನು ಕಟ್ಟಬಲ್ಲನು. ಸಾಮಾನ್ಯಜನತೆಯು ಕೂಡ ಆ ೇತುವೆಯ ಮಾರ್ಗವಾಗಿ ಆದರ್ಶಪ್ರಪಂಚದ ಮೆಟ್ಟಲನ್ನು ುಟ್ಟಬಹುದು. ಆದರ್ಶವಿಶ್ವವನ್ನು ಕಲ್ಪನೆಯಿಂದ ಒಮ್ಮೆ ಳಿದುಕೊಂಡರೆಂದರೆ, ಜನಸಾಮಾನ್ಯರು ಅದನ್ನು ುಟ್ಟಿಯೇ ಬಿಡುವ ಪ್ರಯತ್ನಕ್ಕೆ ತೊಡಗುತ್ತಾರೆ

ಪ್ರಗತಿಪರ ವ್ಯಕ್ತಿತ್ವ

ಸಾಹಿತಿಯಾಗಲಿ, ಕಲಾಕೋವಿದನಾಗಲಿ ತನ್ನದೊಂದು ೈಶಿಷ್ಟ್ಯವುಳ್ಳವನಾಗಿರುತ್ತಾನೆ; ಅದಕ್ಕೆ ವ್ಯಕ್ತಿತ್ವ (indi iduality) ಎನ್ನುವರು. ವ್ಯಕ್ತಿತ್ವವಿರದವನು ಕಲಾವಿದ ನಾಗಲಾರನು. ಆದರೀ ವ್ಯಕ್ತಿತ್ವವು ಅವನನ್ನು ಸಮಾಜ ದಿಂದ ದೂರಕ್ಕೊಯ್ಯುವಂತಹದಾಗಿದ್ದರೆ, ಅಥವಾ ಸಮಾಜ ಪೀಡಕ ಪರಿಸ್ಥಿತಿಯ ದೆಸೆಯಿಂದ ಆ ವ್ಯಕ್ತಿತ್ವದ ಬೆಳಕು ಬೀಳುತ್ತಿರದಿದ್ದರೆ, ಆ ಲೇಖಕನು ಕೆಲಸಕ್ಕೆ ಬಾರದವ ನಾಗಿರುವನು. ಅವನ ಲೇಖನಶಕ್ತಿಯು ಸಮಾಜವನ್ನು ಪ್ರಗತಿಪರವಾಗಿ ಮಾಡಲಾರದು. ಆದರೆ ಅವನ ವ್ಯಕ್ತಿತ್ವ ದಲ್ಲಿ ಸಮಾಜದ ಸುಖದುಃಖಗಳಿಗೊಂದು ಸ್ಥಾನವಿದ್ದದ್ದರೆ ಮಾತ್ರ ಅದಕ್ಕೊಂದು ಮಹತ್ವ ಬರುವುದು. ಆದರಲ್ಲಿ ರಾಷ್ಟ್ರದ ಶಕ್ತಿಯು ಕೇಂದ್ರೀಭೂತವಾಗಿರುವುದು ಮತ್ತು ಅದನ್ನುಳ್ಳವನು ರಾಷ್ಟ್ರವನ್ನಲ್ಲಾಡಿಸುವ ಸಾಮರ್ಥ್ಯವುಳ್ಳವ ನಾಗುವನು.

ಸಾಮ್ಯವಾದವೂ ವ್ಯಕ್ತಿತ್ವವೂ

ವ್ಯಕ್ತಿತ್ವಕ್ಕೆ ಅರ್ಥ ಹಚ್ಚುವಾಗ ಒಂದು ಮಾತನ್ನು ಮರೆಯಕೂಡದು. ನಾವು ಸಾಮ್ಯವಾದದ ನಿಟ್ಟಿನಿಂದ ಹೋಗುವವರಾದ್ದರಿಂದ, ಸಾಮ್ಯವಾದವು ವ್ಯಕ್ತಿತ್ವ ಕ್ಕೊಂದು ಕುಠಾರವು-ಎಂತಲೇ ಕಲೆಗೊಂದು ವಿಷಮೂಲಿಕೆ ಎಂದು ಕೆಲವರು ಭೀತಿಗ್ರಸ್ತರಾಗಿರುವರು. ಸಾಮ್ಯವಾದಿ ಪ್ರಪಂಚದಲ್ಲಿ ನಮ್ಮ ಆಚಾರವಿಚಾರಗಳು ಖಂಡಿತ ಉಚ್ಚ ದರ್ಜೆಯವಾಗಿರುವವು. ಆದರೆ ಆ ಉಚ್ಚದರ್ಜೆಯ ಜೀವನದಲ್ಲಿಯೂ ಒಂದು ವೈಶಿಷ್ಟ್ಯವಿರುವುದು. ಇದೀಗ ನಮ್ಮ ಮುಂದೆ ಉಚ್ಚಜೀವನವು ಒಂದು ಅಗಮ್ಯವಾದ ಪರ್ವತಪ್ರಸ್ತರದಂತೆ ಹಬ್ಬಿರುವುದು; ಹಾಗಾಗದೆ ನಾವೆ ಲ್ಲರೂ ಒಟ್ಟಾಗಿ ಸೇರಿಯೇ ಒಂದು ಎತ್ತರವಾದ ಪರ್ವತ ಪೃಷ್ಠದ ಮೇಲೆ ಇದ್ದುಬಿಡುವೆವು. ಸಾಮ್ಯವಾದದಿಂದ ವ್ಯಕ್ತಿತ್ವವು ಕೆಲವೊಂದು ನಿಯಂತ್ರಣಕ್ಕೆ ಒಳಪಡುವು ದೆಂದು ನಾನು ಒಪ್ಪುವೆನು. ಆದರೆ ಅದರಿಂದ ಕಲಾವಿದನ ಕೌಶಲವು ನಷ್ಟವಾದೀತೆಂದು ತಿಳಿಯುವುದು ತಪ್ಪಾಗು ವುದು. ನಿಯಂತ್ರಣಕ್ಕೊಳಪಟ್ಟ ಮೇಲೆ ಕಲಾಕೋವಿದನ ವ್ಯಕ್ತಿತ್ವವು ಯಾವ ಬಗೆಯದಾಗುವುದೆಂಬುದನ್ನು ನಾನೀಗ ಹೇಳಲಾರೆನು.

ಆಭಾಸಿಕ ಸ್ವಾತಂತ್ರ್ಯ

ಈಗಿನ ಜಗತ್ತಿನಲ್ಲಿ, ತಮ್ಮ ತಮ್ಮ ವಿಚಾರದಂತೆ ಕಾರ್ಯ ಮಾಡುವ ಸ್ವಾತಂತ್ರ್ಯವಿದೆಯೆಂದು ಎನ್ನುತ್ತಾರೆ. 'ದಿಲ್ ಚಾಹೇ ಸೋ' ಪ್ರತಿಯೊಬ್ಬನು ಮಾಡಬಲ್ಲನೆಂದೆನ್ನುತ್ತಾರೆ. ಅನಟೋಲ ಫ್ರಾನ್ಸನು ಒಂದೆಡೆಗೆ ಹೇಳಿರುವನು "ನಮ್ಮ ಕಾಯದೆಕಾನೂನುಗಳು ಹೇಗಿವೆ ನೋಡಿ! ಒಬ್ಬ ಭಿಕ್ಷು

ಪತಿಯಾಗಲಿ, ಲಕ್ಷಾಪತಿಯಾಗಲಿ ಹೊಟ್ಟೆಗಾಗಿ ರೊಟ್ಟೆ ಕದ್ದರೆ, ಇಬ್ಬರಿಗೂ ಸಮವಾದ ದಂಡನೆಯೇ ಆಗುವುದು." ಸತ್ಯಸ್ಥಿತಿಯಾದರೋ, ಲಕ್ಷಾಧೀಶನಿಗೆ ರೊಟ್ಟೆ ತುಡುಗು ಮಾಡುವ ಅಗತ್ಯವೇ ಇರುವುದಿಲ್ಲ. ಕಾನೂನಿನ ಬಲೆಯು ಬಡವನ ಕೊರಳಿಗೇ ಬೀಳುವುದು. ಎಂದಿನ ವರೆಗೆ ಮನುಷ್ಯನಿಗೆ ನಿತ್ಯಾವಶ್ಯಕ ಸೌಕರ್ಯಗಳು ದೊರೆಯುವುದಿಲ್ಲವೋ, ಓದುಬರೆಹಕ್ಕೆ ಬಿಡುವು ದೊರೆಯುವುದಿಲ್ಲವೋ, ಅಲ್ಲಿಯ ವರೆಗೆ ಅವನು ಇತರರೊಡನೆ—ಇಂತಹ ಸುಖಸಾಧನಗಳು ಯೋಗ್ಯಮಿತಿಗಿಂತ ಹೆಚ್ಚಾಗಿರುವವರೊಡನೆ—ಹೇಗೆ ತುಲನೆಗೆ ಅರ್ಹನಾಗುವನು ? ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ, ವ್ಯಕ್ತಿತ್ವವಿಕಾಸಕ್ಕೆ ಅವಕಾಶವು ದೊರೆತರೆ ರಾಷ್ಟ್ರದ ಅಪೂರ್ವ ಸೇವೆಯನ್ನು ಮಾಡಬಲ್ಲಂಥ ನೂರಾರು ಜನರಿರುವರು. ಈಗಿನ ಜಗತ್ತಿನಲ್ಲಿ ವ್ಯಕ್ತಿತ್ವಕ್ಕೆ ಉಸುಲು ಗಟ್ಟುತ್ತಿದೆ. ಪ್ರಚಲಿತ ವ್ಯವಸ್ಥೆಯಲ್ಲಿ ವ್ಯಕ್ತಿತ್ವದ ವಿಚಾರವೂ ಆಭಾಸಿಕವಾಗಿರುವುದು. ಎಲ್ಲಿ ಊಟ-ಉಡಿಗೆ, ಉಸುರಾಟ-ಅಲೆದಾಟಗಳಿಗೇ ಅನುವಿಲ್ಲವೋ, ಶಿಕ್ಷಣಕ್ಕೆ ಸೌಕರ್ಯವಿಲ್ಲವೋ, ವಿಚಾರಕ್ಕೆ ಬಿಡುವಿಲ್ಲವೋ ಅಲ್ಲಿ ವ್ಯಕ್ತಿತ್ವವು ಹೇಗೆ ವಿಕಾಸಗೊಂಡೀತು ?

ವ್ಯಕ್ತಿತ್ವವು ವಿಕಾಸಗೊಳ್ಳುವುದು ಸಾಮ್ಯವಾದಿ ಸಮಾಜದಲ್ಲಿಯೇ. ಪ್ರಾಚೀನಕಾಲದಲ್ಲಿ ಕೂಡ, ಸಿರಿವಂತರಿಗೇ ವ್ಯಕ್ತಿತ್ವವಿಕಾಸಕ್ಕೆ ಅನುಕೂಲತೆಯಿದ್ದಿತು. ಆದರೀಗಿನ ಕಾಲದಲ್ಲಿ, ಇಂತಹ ಜನರು ಹಲವು ಬಂಧನಗಳಿಂದ ಬಿಗಿಯಲ್ಪಟ್ಟಿದ್ದಾರೆ. ಆದ್ದರಿಂದ, ವರ್ತಮಾನ ಸ್ಥಿತಿಯಲ್ಲಿ ವಿಚಾರಸ್ವಾತಂತ್ರ್ಯವಿದೆಯೆನ್ನುವುದೂ ಸಾಮ್ಯವಾದಿ ಸಮಾಜದಲ್ಲಿ ವ್ಯಕ್ತಿತ್ವಕ್ಕೆ ಹಿಂಸೆಯುಂಟಾಗುವುದೆನ್ನುವುದೂ ಅಷ್ಟೇ ತಪ್ಪಾಗಿದೆ. ಸಾಮ್ಯವಾದದಲ್ಲಿ ಎಲ್ಲರೂ ಒಂದಾಗಿ ಹೋಗುವರು; ಇದರ ಅರ್ಥವೆಂದರೆ, ಆ ಜಗತ್ತಿನಲ್ಲಿ ತಂತಮ್ಮ ಶಕ್ತಿಯಂತೆ ಉನ್ನತಿಯನ್ನು ಮಾಡಿಕೊಳ್ಳುವ ಸೌಲಭ್ಯವು ಎಲ್ಲರಿಗೂ ದೊರೆಯುವುದು.

ಸಾಹಿತಿಯ ಕಾರ್ಯ—ಆದರ್ಶದರ್ಶನ

ಬರೆಹಗಾರನು ಬರೆಯುವುದೇತಕ್ಕೆ ? ಏಕೆಂದರೆ, ಅವನ ಕಲ್ಪನಾಲೋಕದಲ್ಲಿ ಹೊಸದೊಂದು ಜಗತ್ತು ರೂಪುಗೊಂಡಿರುತ್ತದೆ. ಅವನಿಗೆ ಅನಿಸುವುದು, ತಾನು ಆ ಹೊಸ ಸೃಷ್ಟಿಯನ್ನು ಮುಟ್ಟಬಲ್ಲನೆಂದು. ಆದರೆ ಹಾಗೆ ಮಾಡುವ ಒಂದೇ ಒಂದು ಉಪಾಯವು ಅವನ ಮುಟ್ಟಗಿರುತ್ತದೆ; ಅದೆಂದರೆ ಆ ನವ ಆದರ್ಶದ ಸ್ಫುರದ್ದರ್ಶನವನ್ನು ಬೇರೆಯವರಿಗೆ ಮಾಡಿಸುವುದು. ಅಲ್ಲದೆ ವಾಸ್ತವಿಕ ... ನಿಕ ಜಗತ್ತುಗಳ ನಡುವಿನ ಅಂತರವನ್ನು ... ಸೇತುವೆಯನ್ನು ಕಟ್ಟುವುದು. ಲೇಖಕರು ಈ ... ವನ್ನು ಮಾಡುವರು. ಓದುಗರು ಕುತೂಹಲದಿ... ಈ ನವನಿರ್ಮಾಣವನ್ನು ನೋಟ್ಟನೊದಲು ... ಅವರು ಸ್ವಂತವಾಗಿಯೇ ಆ ಸೃಷ್ಟಿಯತ್ತ ... ಪ್ರಯತ್ನಿಸುವರು.

(ಒಂದು ಹಿಂದೀ ...

ಕನ್ನಡನುಡಿ–ದೇಹೀದಫ್ತರ*

ಶ್ರೀ. ಸಿ. ಕೃಷ್ಣಶರ್ಮ, ಗೌ. ಕಾರ್ಯದರ್ಶಿ,
ನಿಜಾಮ ಕರ್ನಾಟಕ ಪರಿಷತ್ತು, ಹೈದರಾಬಾದ
ಇವರಿಂದ ಬರೆದು ಬಂದುದು

ವ್ಯವಹಾರಕ್ಕಾಗಲಿ, ವ್ಯವಸ್ಥೆಗಾಗಲಿ ಭಾಷೆ ಅಗತ್ಯ ...ಗಿದೆ. ವ್ಯವಹಾರ-ವ್ಯವಸ್ಥೆಗಳಿಗೆ ಅಗತ್ಯವಾದ ಅನು...ಲವಾದ ಭಾಷೆಯನ್ನು ಆಯಾ ಕೆಲಸಕ್ಕೆ ಉಪ...ಯೋಗಿಸುವದು ಸಹಜ ಮತ್ತು ನ್ಯಾಯ. ಈ ಮಾತು ...ನರಿಗೆ ಅನ್ವಯಿಸಿದಂತೆ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ...ನ್ನಡನಾಡಿನಲ್ಲಿ ಶಿಕ್ಷಣಪ್ರಸಾರಮಾಡುವ ಗುರಿಯುಳ್ಳ ...ಸ್ಥೆ ಜಪಾನೀನುಡಿಯಲ್ಲಿ ತನ್ನ ವ್ಯವಹಾರ ನಡೆಸಿದರೆ ...ಸಹಜವಾಗಿ—ಅನನುಕೂಲವಾಗಿ, ಕೆಲಸ ನಡೆಯದಂತಾ...ತ್ತದೆ. ಕನ್ನಡನಾಡಿನಲ್ಲಿ ವ್ಯಾಪಾರಮಾಡುವವನು ಕನ್ನಡ...ಲ್ಲಿ—ಒಂದೂ ಬಾರದುದೇ ಆದರೂ—ತನ್ನ ಕೆಲಸ ನಡೆ...ದ್ದರೆ ಸಫಲತೆ ಪಡೆಯ...ರ. ಎಲ್ಲ ಮಾತಿನಲ್ಲೂ ...ಗೇ, ಎಲ್ಲ ದೇಶದಲ್ಲೂ ...ಗೇ.

ಆಡಳಿತವೂ ಒಂದು ಸಂ... ನಾಡಿನಲ್ಲಿ ವ್ಯವಸ್ಥಾ...ಮವನ್ನು ನೆಲೆಗೊಳಿಸಲು, ...ಂತಿಯನ್ನು ಕಾಯಲು ...ಲಸ ಮಾಡುವದು ಇದರ ...ರಿ. ಈ ಗುರಿಯ ಸಾಧನೆ ...ಲ್ಲಿ, ಆಡಳಿತಕ್ಕೆ ಜನರೊ...ನೆ ಸಂಬಂಧ ಬಂದೇ ಬರು...ದು. ಒಂದೊಂದು ಆಡಳಿ...ಕ್ಕೆ ಒಂದೇ ಮಾತನಾಡುವ ...ಂಪಿನ ಸಂಬಂಧ ಬರಬಹುದು. ಒಂದೊಂದಕ್ಕೆ ನಾಲ್ಕು ...ಮಾತಿನ ಜನರೊಡನೆ ಬಳಕೆ ಬೆಳೆಯಬಹುದು. ವಿಸ್ತಾರ ಹೆ...ದಂತೆ, ಆಡಳಿತಕ್ಕೆ ಭಿನ್ನ ಭಿನ್ನ ಭಾಷಾಭಾಷಿಗಳ ಸಂಬಂಧ ...ಚ್ಚುತ್ತದೆ; ಅವರೆಲ್ಲರ ನಡುವೆ ಅನ್ಯೋನ್ಯತೆ ನೆಲೆಗೊಳಿಸಿ, ...ಲ್ಲರ ಸಂಸ್ಕೃತಿ, ವ್ಯಕ್ತಿತ್ವಗಳನ್ನೂ ಕಾಯುವ ಕರ್ತವ್ಯವು ...ಚ್ಚುತ್ತದೆ.

ಹೈದರಾಬಾದು ವಿಸ್ತಾರವಾದ ದೇಶ. ಪ್ರಧಾನವಾಗಿ, ...ಲ್ಕು ನುಡಿಯಾಡುವ ಜನರ ರಾಜ್ಯ. ನಿಜಾಮ ಸರಕಾರಕ್ಕೆ ...ವೆಲ್ಲ ಪಂಗಡಗಳ ವ್ಯಕ್ತಿತ್ವವನ್ನು ರಕ್ಷಿಸಬೇಕಾದ ಕರ್ತವ್ಯ ...ಬಂದಿದೆ. ಅಲ್ಲದೆ, ಇವರೆಲ್ಲರೊಡನೆ ವ್ಯವಹಾರಸೌಲಭ್ಯವನ್ನು ಅನುಲಕ್ಷಿಸಿ ವ್ಯವಸ್ಥೆ ಮಾಡಬೇಕಾಗುತ್ತದೆ. ಅಂತೆಯೇ ಆಡಳಿತದಲ್ಲಿ ಬೇರೆಬೇರೆ ಭಾಷೆಗಳಿಗೆ ಬೇರೆ ಬೇರೆ ಸ್ಥಳಗಳನ್ನು ನಿರ್ಣಯಿಸಿ, ಸಕ್ರಮವ್ಯವಸ್ಥೆ ಮಾಡಿ, ಯಾರಿಗೂ ನಷ್ಟವಾಗದಂತೆ ನೋಡಬೇಕಾಗುತ್ತದೆ. ಈ ತತ್ವ, ಈ ನೀತಿ ಸರಕಾರಕ್ಕೆ ಗೊತ್ತಿದೆ. ಅಂತಲೇ ೧೨೯೩ನೆಯ ಫಸಲಿಯಲ್ಲಿ, ೫೦ ವರ್ಷಗಳ ಹಿಂದೆಯೇ ಈ ಬಗ್ಗೆ ಆಡಳಿತವು ಒಂದು ನಿರ್ಣಯಕ್ಕೆ ಬಂದಿದೆ. ೧೨೯೩ ಫ. ನಂ. ೨೦ನೇ ಗಸ್ತಿಯಲ್ಲಿ "ದಿನಚರಿಯ ವ್ಯವಹಾರಕ್ಕೂ, ನ್ಯಾಯಾಪೇಕ್ಷಿಗಳಾದ ಪ್ರಜೆಗೂ, ರೆವಿನ್ಯೂ ಶಾಖೆಯ ಆಡಳಿತಕ್ಕೂ ಸುಗಮವಾಗಿ, ಕಚೇರಿಗಳ ಆಡಳಿತವು ಮಿತವ್ಯಯದಿಂದ ನಡೆಯುವಂತೆ ಮಾಡಬೇಕಾದರೆ ಯಾವ ಭಾಷೆ ರೆವಿನ್ಯೂ ಕಾಗದಪತ್ರಗಳಲ್ಲಿ ಉಪಯೋಗಿಸಬೇಕು?" ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಉತ್ತರ ಕೊಡಲಾಗಿದೆ. ನಿಜಾಮ ಪ್ರಭುಗಳು ಕೊಟ್ಟ ಅಧಿಕಾರಗಳ ಮೇರೆಗೆ ರೆವಿನ್ಯೂ ಬೋರ್ಡಿನವರು ಕೊಟ್ಟ ಅಪ್ಪಣೆ ಇದು: "ಪಟೇಲ ಪಟವಾರಿಗಳ ದಫ್ತರ, ರೈತರಿಗೆ

> ಎಲ್ಲರ ಮೇಲೊಬ್ಬ ಗಂಡನಿದ್ದಾನೆ, ಆದರೆ ಕಿರಿಹೆಂಡತಿಗೆ ಹಿರೇಸವತಿಯ ಕಾಟ ತಪ್ಪುವುದಿಲ್ಲ! ನಿಜಾಂ ಕರ್ನಾಟಕದಲ್ಲಿ ೧೬ ಲಕ್ಷ ಜನರಾಡುವ ಕನ್ನಡನುಡಿಯ ಗತಿಯು ಈತೆರನಾಗಿದೆ. ಉರ್ದುವಿನ ಸಾಮ್ರಾಜ್ಯ ವರ್ಚಸ್ಸಿನ ಹೊರತು, ನೆರೆನುಡಿಯಾದ ಮರಾಟಿಯ ಉರಿವಣಿಗೆ ಬೇರೆ. ಪ್ರಭುತ್ವದ ಆಜ್ಞೆ ಕನ್ನಡಕ್ಕನುಕೂಲವಾಗಿದ್ದರೂ, ಪಟೇಲ ಪಟವಾರಿಗಳು ದಫ್ತರನ್ನು ಕನ್ನಡದಲ್ಲಿಡಲಾರರು!... ಆದರಿದೀಗ ನಿಜಾಂ ಕನ್ನಡಿಗರೆಚ್ಚತ್ತಿದ್ದಾರೆ. ಕಳೆದ ವರ್ಷದ ಪ್ರಥಮ ನಿಜಾಂ ಕರ್ನಾಟಕ ಪರಿಷತ್ತು ಕನ್ನಡಿಗರ ಸಂಘಟನೆಯ ಚಿಹ್ನೆಯಾಗಿದೆ. ಅವರ ಪ್ರಯತ್ನಕ್ಕೆ ಅಖಂಡ ಕರ್ನಾಟಕವು ತನ್ನ ಬೆಂಬಲವನ್ನೀಯದಿರಲಾರದು.

---

*ಗಡಿನಾಡುಗಳಲ್ಲಿ ಕನ್ನಡಕ್ಕೆ ಅಂಟಿರುವ ನಾನಾತರದ ರೋಗಗಳಲ್ಲಿ ದಫ್ತರುಗಳ ಭಾಷೆಯ ರೋಗವೂ ಒಂದು. ನಿಜಾಂ ರಾಜ್ಯದಲ್ಲಿ ಈ ದಫ್ತರದ ಭಾಷೆ ಕನ್ನಡವಲ್ಲದೆ ಹೋಗಿ ಕನ್ನಡಿಗರ ಸ್ಥಿತಿ ಅಡುಗೆಮನೆಯಲ್ಲಿ ಕನ್ನಡ, ನಡುಮನೆಯಲ್ಲಿ ಮರಾಠಿ ಆಗಿದೆ. ಕಳೆದ ವರ್ಷ ನಿಜಾಂ ಕರ್ನಾಟಕದ ೧೬ ಲಕ್ಷ ಪ್ರಜೆಗಳ ಪರವಾಗಿ ಸ್ಥಾಪಿಸಲ್ಪಟ್ಟ ನಿಜಾಂ ಕರ್ನಾಟಕ ಪರಿಷತ್ತಿನಲ್ಲಿ ಈ ವಿಷಯದಲ್ಲಿ ಒಂದು ತೀರ್ಮಾನವನ್ನು ಕಲುಬುರ್ಗಿಯ ತರುಣ ವಕೀಲರಾದ ಶ್ರೀ. ಅಶ್ವತ್ಥರಾಯರು ತಂದರು. ಆದರ ಬಗ್ಗೆ ಪ್ರಭುತ್ವಕ್ಕೂ ನಿ. ಕ. ಪರಿಷತ್ತಿನ ಕಾರ್ಯಾಲಯಕ್ಕೂ ಪತ್ರವ್ಯವಹಾರ ನಡೆದು, ಈ ಮೇಲಣ ಅರಿಕೆ (Memorandum) ಯನ್ನು ರೆವಿನ್ಯೂ ಮಂತ್ರಿಗಳಾದ ಶ್ರೀ. ಟಾಸ್ಕರ ಐ. ಸಿ. ಎಸ್. ಇವರಿಗೆ ಕಳಿಸಲಾಯಿತು. ಆದರ ವಿಚಾರಣೆಯನ್ನು ಪ್ರಭುತ್ವದವರು ನಡೆಸಿ [illegible].—ಕಾರ್ಯದರ್ಶಿ, ನಿ. ಕ. ಪರಿಷತ್ತು.

ಕೊಡುವ ರೆವಿನ್ಯೂ ರಸೀದಿಗಳು ಮತ್ತು ಹಳ್ಳಿಯವರ ಇತರ ಪತ್ರವ್ಯವಹಾರ, ಎಲ್ಲಾ ಆಯಾ ಪ್ರಾಂತದ ಭಾಷೆಯಲ್ಲೇ ಇರಬೇಕು. ಪಟೇಲ ಪಟವಾರಿಗಳಿಗೂ ರೈತರಿಗೂ ತಹ ಸೀಲದಾರರಿಗೂ ನಡುವೆ ನಡೆಯುವ ಪತ್ರವ್ಯವಹಾರ ಪ್ರಾಂತೀಯ ಭಾಷೆಯಲ್ಲೇ ಇರಬೇಕು." (ಮುನ್ತಖಬಾ ಗಸ್ತಿಯಾತ್ ಮಾಲಗುಜಾರಿ. ಪು. ೧೧೬೫)

ಪ್ರಾಂತೀಯ ಭಾಷೆಯೆಂದರೇನೆಂಬದನ್ನೂ ಅದೇ ಗಸ್ತಿಯಲ್ಲಿ ನಿಸ್ಸಂದೇಹವಾಗಿ ವಿವರಿಸಲಾಗಿದೆ. "ಪ್ರಾಂತೀಯ ಭಾಷೆ (ಮುಲ್ಕಿ ಜಬಾನ್) ಎಂದರೆ, ತಾಲೂಕಾಗಳಲ್ಲಿ ಹಳ್ಳಿಗಳಲ್ಲಿ ಸಾಧಾರಣವಾಗಿ ಮಾತನಾಡುವ ಭಾಷೆ. ಉದಾ: ತೆಲಂಗಾಣದಲ್ಲಿ ತೆಲಗು, ಮರಾಠವಾಡಿಯಲ್ಲಿ ಮರಾಠಿ, ಕರ್ನಾಟಕದಲ್ಲಿ ಕನ್ನಡ."

ಹೈದ್ರಾಬಾದ ಸಂಸ್ಥಾನ ನಾಲ್ಕು ನುಡಿಯ ನಾಡು. ಒಂದೊಂದು ಭಾಷೆಯಾಡುವ ಜನರೂ ನಾಲ್ಕೂ ಕಡೆಯಲ್ಲೂ ಹೆಚ್ಚಾಗಿಯೋ ಕಡಿಮೆಯಾಗಿಯೋ ಸಿಗುತ್ತಾರೆ. ಹಾಗೆ ಬೇರೆಬೇರೆ ಭಾಷೆಯ ಜನರು ಸಿಗುವಕಡೆ ಪ್ರಾಂತೀಯ ಭಾಷೆ ಯಾವುದು ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ಹಾಗಿಲ್ಲದಿದ್ದರೆ ಅನ್ಯಾಯ ನಡೆಯುವ ಸಂಭವವಿರುತ್ತದೆ. ಒಂದು ನುಡಿಯಾಡುವ ಜನರ ಮೇಲೆ ಇನ್ನೊಬ್ಬರ ನುಡಿ ಹೇರಿದ ಹಾಗಾಗುತ್ತದೆ. ಇಂಥ ಸಂದರ್ಭಗಳಲ್ಲಿ ಹೇಗೆ ನಡೆಯಬೇಕೆಂಬ ಅಧಿಕಾರವನ್ನು ಎಲ್ಲ ಸಣ್ಣಪುಟ್ಟ ಅಧಿಕಾರಿಗಳ ವಿವೇಚನೆಗೆ ಬಿಡುವದು ಆಡಳಿತಕ್ಕೆ ಒಳ್ಳೆಯದಲ್ಲ. ಈ ದೃಷ್ಟಿಯಿಂದ ಅದೇ ಗಸ್ತಿಯಲ್ಲಿಯೇ ಸರಕಾರವು ಯಾವ ಪ್ರಾಂತದಲ್ಲಿ ಯಾವ ಭಾಷೆ ಬಳಕೆಯಲ್ಲಿದೆ, ಕಾಗದಪತ್ರಗಳಿಗೆ ಯಾವದನ್ನು ಬಳಸಬೇಕು ಎಂಬುದನ್ನು ನಿರ್ವಿವಾದವಾಗಿ ತೀರ್ಮಾನಮಾಡಿದೆ.

"ಇಂದೂರು ಜಿಲ್ಲೆಯ ಭಾಷೆ ತೆಲಗು; ಗುಲಬರ್ಗ, ರಾಯಚೂರು, ಲಿಂಗಸಗೂರು ಜಿಲ್ಲೆಗಳಲ್ಲಿ ಬಹುಭಾಗ ಕನ್ನಡ ಮಾತನಾಡುತ್ತಾರೆ. ಕೆಲವು ಸ್ಥಳಗಳಲ್ಲಿ ತೆಲಗನ್ನು ಆಡುತ್ತಾರೆ. ಆದರೆ ಎಲ್ಲಾ ದಫ್ತರೀಭಾಷೆ ಮರಾಠಿಯಾಗಿದ್ದು, ಇದು ಅಸಹಜ ಪರಿಸ್ಥಿತಿಯಾಗಿದೆ. ಹೀಗೆ ಅಸಹಜವಾದ ಪರಿಸ್ಥಿತಿಯುಳ್ಳ ಈ ತಾಲೂಕಗಳಲ್ಲೆಲ್ಲ ಮರಾಠಿಯ ಬದಲು ಕನ್ನಡವನ್ನು ಕೂಡಲೆ ಬಳಕೆಯಲ್ಲಿ ತರಬೇಕು. ಎಲ್ಲಿಯಾದರೂ ಕನ್ನಡ ಬಾರದ ಅಧಿಕಾರಿಗಳಿದ್ದು, ಇದು ತ್ರಾಸದಾಯಕವಾಗುತ್ತಿದ್ದಲ್ಲಿ ಈಗಿರುವ ಪದ್ಧತಿಯನ್ನು ಬದಲುಮಾಡದೆ, ಈ ಬಗ್ಗೆ ಒಂದು ವಾರದೊಳಗಾಗಿಯೇ ವರದಿಯನ್ನು ಕಳಿಸಬೇಕು. ಸದರ ತಾಲೂಕದಾರರ ಕಡೆಯಿಂದ, ತೊಂದರೆಯನ್ನು ನಿವಾರಣವಾಡುವ ಮಾಡಿಸಲಾಗುವದು. ಮತ್ತು ರೆವಿನ್ಯೂ ಬೋ... ತೀರ್ಮಾನಿಸಬೇಕಾದ ಸೂಚನೆಗಳಿದ್ದರೆ, ಅವು ಅಭಿಪ್ರಾಯದೊಂದಿಗೆ ಸದರ ತಾಲೂಕದಾರರು ಬೋರ್ಡಿಗೆ ಕಳಿಸತಕ್ಕದ್ದು."

ಸರಕಾರವು ತತ್ವನಿರೂಪಣೆ ಮಾಡಿ ಸುಮ್ಮನೆ ಲಿಲ್ಲ. ರೆವಿನ್ಯೂಕಚೇರಿಯಿಂದ ಗುಲಬರ್ಗದ ... ದಾರರೊಡನೆ ಪತ್ರವ್ಯವಹಾರ ನಡೆಯಿತು. ದಫ್ತರುಗಳಲ್ಲಿ ಪ್ರಾಂತೀಯಭಾಷೆ ಎಂಬ ಒಂದು ದೊಡ್ಡ ಕಡತವೇ ಆಯಿತು. ೧೩೩೪ ನಲ್ಲಿ (ನಂ. ೧೬೬೪) ರೆವಿನ್ಯೂಕಚೇರಿಯಿಂದ ಸುಬೇದಾರರಿಗೆ ಬರೆಸಿದ ಪತ್ರದಲ್ಲಿ ಹೀಗಿದೆ.

"ರಾಯಚೂರಿನ ತಾಲೂಕುಗಳಲ್ಲಿ ಪಟ... ಕರ್ಣಿ) ಗಳ ಮಾತೃಭಾಷೆ ಕನ್ನಡವಾಗಿದ್ದ... ಎಲ್ಲ ಕಾಗದಪತ್ರಗಳನ್ನು ಎರಡನೇ ಭಾಷೆ... ಮಾಡಬೇಕಾಗುತ್ತದೆ. ಲಿಂಗಸಗೂರಿನ ತಾ... ಪಟೇಲ ಪಟವಾರಿಗಳ ಮತ್ತು ತಹಸೀಲಿನ ನ... ದಲ್ಲಿ ಪತ್ರವ್ಯವಹಾರ ನಡೆಯುತ್ತದೆ. ಆದರೆ ದಫ್ತರು ಮಾತ್ರ ಮರಾಠಿಯಲ್ಲಿ ಇಡಲಾಗುತ್ತ... ಕಾರಣದಿಂದ ಸುರಪುರ, ಷಾಪೂರ ಮುಂತಾದ... ಗಳ ಪಟೇಲ ಪಟವಾರಿಗಳಿಗೆ, ವ್ಯವಹಾರದಲ್ಲಿ... ಯಾದಂಥ ಒಂದು ಭಾಷೆಯಲ್ಲಿ ಬರೆಯಬೇಕಾ... ತ್ತದೆ. ಅಲ್ಲಿನ ಸ್ಥಳೀಯ ಅಧಿಕಾರಗಳಿಗೆ ... ನಿಯಮಿಸುವಾಗ, ಮೂರು ಮೂರು ಭಾಷೆ... ನಿಯಮಿಸುವ ಅಗತ್ಯ ಬೀಳುತ್ತದೆ. ಇಂಥ ಪ... ದೇಶಭಾಷೆಯಾದ ಕನ್ನಡವನ್ನೇ ಏಕೆ ತಹಸೀ... ಭಾಷೆಯನ್ನಾಗಿ ಮಾಡಬಾರದು? ಅಥವಾ ... ಏಕಾಗಬಾರದು? ಪಟೇಲ ಪಟವಾರಿಗಳೊಡನೆ... ಹಾರ ಕನ್ನಡದಲ್ಲಿ ಮಾಡಬೇಕು. ಎಕಂದರೆ... ದಫ್ತರ ಕನ್ನಡದಲ್ಲೂ, ತಹಸೀಲು ದಫ್ತರ... ಯಲ್ಲೂ ಸಿದ್ಧಪಡಿಸುವದು ಆಡಳಿತದ ವ್ಯವಸ್ಥೆ... ನಕ್ಕೆ ವಿರೋಧವಾಗುತ್ತದೆ. ಈ ಪ್ರಶ್ನೆಯ ಬಗ್ಗೆ... ಅಧಿಕಾರಿಗಳ ಸೂಚನೆ ಸಲಹೆಗಳೊಂದಿಗೆ ಸಂಪೂರ್ಣ... ಯೊಂದು ತಯಾರಿಸಲ್ಪಡಬೇಕು."

ನವಾಬ ಇಮಾದ ಜಂಗಬಹಾದೂರರು, ಆಗ ... ಸುಬೇದಾರರಾಗಿದ್ದರು. ನವಾಬ ಸಾಹೇಬರು ... ನ್ಯಾಯಪಕ್ಷಪಾತಿಗಳು. ಕನ್ನಡಕ್ಕಾಗಿ ಅವರು ...

ಯತ್ನಗಳು, ಹೈದ್ರಾಬಾದಿನ ಅಧಿಕಾರಿಗಳ ನ್ಯಾಯ ಷ್ಟಿ, ಪ್ರಜಾಹಿತೇಚ್ಛೆಗಳ ಶಾಶ್ವತ ನಿದರ್ಶನವಾಗಿವೆ. ಜಾಮುಕನ್ನಡಿಗರಿಗೆ ಅವರ ಹೆಸರು ಎಂದೂ ಮರೆಯ ರದುದು ಆಗಬೇಕು.

ನವಾಬರು ಕೂಡಲೇ ತಾಲೂಕದಾರರಿಗೆ ಪತ್ರ ಬರೆ ಸಿದರು.

"ನಿಮ್ಮ ಜಿಲ್ಲೆಯ ಯಾವ ತಾಲೂಕುಗಳಲ್ಲಿ ಕನ್ನಡದಲ್ಲಿ ವಹಾರ ನಡೆಯುತ್ತದೆ ? ಯಾವುವರಲ್ಲಿ ಮರಾಠಿಯಲ್ಲಿ ? ಯಾವ ತಹಸೀಲುಗಳಲ್ಲಿ ಮರಾಠಿ ಕಾರವಾಯಿ ನಡೆದಿ ಯೋ ಅಲ್ಲಿ ಕನ್ನಡದಲ್ಲಿ ಏಕೆ ಮಾಡಬಾರದು ? ಬೇಗನೇ ಬರ ಬಗ್ಗೆ ವರದಿ ಕಳಿಸಬೇಕು. ಇದರ ತೀರ್ಮಾನ ಗಬೇಕು. (ನಂ. ೧೫೮೦—೩೦ ಆಬಾನ್ ೧೩೦೪ ಫ.) ಅವಕ್ಕೆ ಬಂದ ಉತ್ತರಗಳು ಹೀಗಿವೆ.

"ಹಿಂದೆ ಒಮ್ಮೆ ವಿದ್ಯಾಶಾಖೆಯಿಂದ ಈ ಬಗ್ಗೆ ಅಭಿ ಪ್ರಾಯ ಕೇಳಲಾಗಿತ್ತು: ಜಿಲ್ಲೆಯಲ್ಲಿ ಕನ್ನಡನುಡಿಯಾಡುವ ರೂಢಿಯಿದ್ದಾಗ ಓದುಬರಹ ಕನ್ನಡದಲ್ಲಿ ನಡೆಯಲು ಅಡ್ಡಿ ಯೇನು ಎಂಬದಾಗಿ. ಆದರ ಉತ್ತರ, ಈ ಜಿಲ್ಲೆಯಲ್ಲಿ ಕನ್ನಡ ಶಿಕ್ಷಣ ರೂಢಿಯಲ್ಲಿಲ್ಲ, ಮರಾಠಿಯಲ್ಲಿ ನಡೆದಿದೆ, ಎಂದು ಬಂತು. ಈ ಜಿಲ್ಲೆಯಲ್ಲಿ (ಗುಲಬರ್ಗ, ಮಹ ಗಾಂವ, ಅಂಡೋಲ, ಚಿಂಚೋಳಿ, ಸೇಡಂ, ಕೊಡಂಗಲ, ಗುರುಮಟಕಲ್) ಏಳು ತಾಲೂಕುಗಳಲ್ಲಿ ಕಡೆಯ ಎರಡ ರಲ್ಲಿ ತೆಲುಗನ್ನಾಡುತ್ತಾರೆ. ಗುಲುಬರ್ಗ, ಅಂಡೋಲ, ಚಿಂಚೋಳಿ, ಸೇಡಂಗಳಲ್ಲಿ ಕನ್ನಡ ಆಡುತ್ತಾರೆ. ಆದರೆ ಗ್ರಾಮದಫ್ತ್ತರಗಳು, ಮತ್ತು ತಹಸೀಲು ದಫ್ತ್ತರು, ಮರಾಠಿಯಲ್ಲಿವೆ. ಪರಸ್ಪರ ಪತ್ರವ್ಯವಹಾರವು ಮರಾಠಿ ಯಲ್ಲಿದೆ. ಪಟವಾರಿಗಳೆಲ್ಲರೂ ಮರಾಠಿ ಶಿಕ್ಷಣ ಪಡೆದವ ರಿದ್ದು, ಅವರಲ್ಲಿ ಒಬ್ಬರಾದರೂ, ಕನ್ನಡ ತೆಲುಗು ಬರೆಯ ಲಾರರು. ಸುರಪುರ, ಷಾಪುರ ತಾಲೂಕುಗಳ (ಲಿಂಗಸಗೂರ ಜಿಲ್ಲೆ) ಪರಿಸ್ಥಿತಿಯಂತೆ, ಗ್ರಾಮದಫ್ತ್ತರ, ಪತ್ರವ್ಯವಹಾರ ಗಳು ಕನ್ನಡದಲ್ಲಿದ್ದು, ತಹಸೀಲ ದಫ್ತ್ತರ ಮಾತ್ರ ಮರಾಠಿ ಯಲ್ಲಿರುವ ಪರಿಸ್ಥಿತಿ ಇಲ್ಲಿ ಇಲ್ಲ. ಈಗ ಆಯಾ ತಾಲೂಕಿ ನಲ್ಲಿ ಆಡುವ ಭಾಷೆಯಲ್ಲಿ, ಆಯಾ ಹಳ್ಳಿ-ತಹಸೀಲ ದಫ್ತ್ತರ ಗಳು ಇಡಲ್ಪಡಬೇಕೆಂದು ಸರಕಾರದ ಅಪ್ಪಣೆಯಾದರೆ ಕೊಡಂಗಲ್, ಗುರುಮಟಕಲ್, ತಾಲೂಕುಗಳಲ್ಲಿ ತೆಲಗಿ ನಲ್ಲಿ, ಉಳಿದ ತಾಲೂಕುಗಳಲ್ಲಿ ಕನ್ನಡದಲ್ಲಿ ಇಡಬೇಕಾಗು ತ್ತದೆ. ಆದರೆ, ಈ ಜಿಲ್ಲೆಯ ಪ್ರತ್ಯೇಕ ಪರಿಸ್ಥಿತಿಯ ಅನು ಭವವು ಇದಕ್ಕೆ ವಿರೋಧವಾಗಿದೆಯೆಂದು ತಿಳಿದು ಬರು ತ್ತದೆ. ಅಂದರೆ, ಪಟೇಲ ಪಟವಾರಿಗಳು, ಪ್ರಜೆಗಳು ಕನ್ನಡ ತೆಲಗು ಆಡಬಲ್ಲರು ಮಾತ್ರ; ಆದರೆ ಓದುಬರಹ ವೆಲ್ಲ ಮರಾಠಿಯಲ್ಲಿಯೇ ಇದೆ. ಪಟವಾರಿಗಳಿಗೆ ತೆಲಗು ಕನ್ನಡ ಬರೆಯಲು ಬರುವದಿಲ್ಲ. ಎಲ್ಲರೂ ಯಾವಾಗಲೂ ಮರಾಠಿಯಲ್ಲಿಯೇ ಪತ್ರವ್ಯವಹಾರ ಮಾಡುತ್ತಾರೆ. ಈ ಪರಿಸ್ಥಿತಿಯಲ್ಲಿ ದೇಹೀ ದಫ್ತ್ತರ ಕನ್ನಡದಲ್ಲಿಡುವ ಪ್ರಯತ್ನ ಮಾಡಿದರೆ, ಆ ಭಾಷೆ ಬರೆಯಬಲ್ಲವರು ಸಿಗುವ ಸಂಭವ ಕಾಣುವದಿಲ್ಲ. ಹಾಗೆ, ಭಾಷೆಯನ್ನು ಬರೆಯಬಲ್ಲವರು ಸಿಗು ವದು ಸಾಧ್ಯವಿಲ್ಲದಾಗ ಕೆಲಸ ಹೇಗೂ ನಡೆಯಲಾರದು. ತಹಸೀಲಿನಲ್ಲಿ ಇರುವ ನೌಕರರ ಗುಂಪು ಏಕಭಾಷಾವಿದ ವಾಗಿದೆ. ಅವರ ಸ್ಥಿತಿ ಕನ್ನಡ ಆಡುವದು, ಮರಾಠಿಯನ್ನು ಮಾತ್ರ ಬರೆಯುವದು, ಹೀಗಿದೆ. ಎರಡು ಭಾಷೆ ಬಂದವ ರೆಂದರೆ, ಉರ್ದು ಗೊತ್ತಿದ್ದವರು. ಒಂದು ವೇಳೆ ದಫ್ತ್ತ ರದ ಭಾಷೆಯನ್ನು ಬದಲಾಯಿಸಿದ್ದೇ ಆದರೆ ಈಗಿರುವ ಪಟೇಲ ಪಟವಾರಿಗಳು, ಉಳಿದ ನೌಕರರು ಆಡಳಿತದ ಕೆಲಸವನ್ನು ನಿರ್ವಹಿಸಲಾರದೆ ಹೋಗುತ್ತಾರೆ. ಹೊಸ ದಾಗಿ ಕನ್ನಡ ಬರೆಯಬಲ್ಲವರು ಒಮ್ಮೆಲೇ ಇಷ್ಟು ಜನ ಸಿಗುವದು ಅಸಂಭವ. ಬಹಳ ದಿವಸಗಳಿಂದ ನಡೆದು ಬಂದಿರುವ ಪರಿಸ್ಥಿತಿಯನ್ನು ಹಾಗೇ ಸಾಗಿಸುವದರಲ್ಲಿ, ಯಾವ ಆಕ್ಷೇಪಣೆಯಾಗಲಿ, ಯಾವ ಅಡಚಣಿಯಾಗಲಿ, ಇಲ್ಲ. ಸಾರಾಂಶ, ಗುಲಬರ್ಗಾ ಜಿಲ್ಹೆಯಲ್ಲಿ ತಹಸೀಲು, ದೇಹೀ ದಫ್ತ್ತರು ಮರಾಠಿಯಲ್ಲಿರುವದೇ ಯೋಗ್ಯವೆಂದು ನನ್ನ ಅಭಿಪ್ರಾಯವಿದೆ. ಏಕೆಂದರೆ, ಪಟೇಲ ಪಟವಾರಿಗಳ ಪತ್ರವ್ಯವಹಾರ ಕೂಡ ಇದೇ ಭಾಷೆಯಲ್ಲಿದೆ. ಅದೇ ಭಾಷೆಯೇ ಯೋಗ್ಯ" (ನಂ. ೧೨೩—೨೪ ಆಬಾನ್ ೧೩೦೫ ಫ.) ಹೀಗೆಂದು ಗುಲಬರ್ಗದ ತಾಲೂಕದಾರರು ಉತ್ತರ ಕೊಟ್ಟಿದ್ದಾರೆ.

ರಾಯಚೂರು ತಾಲೂಕದಾರರು ಹೀಗೆ ಬರೆದರು—

ಮೊದಲು ಈ ಜಿಲ್ಲೆಯ ತಾಲೂಕು ಮತ್ತು ಗ್ರಾಮ ಗಳಲ್ಲಿ ಬೇರೆಬೇರೆ ಭಾಷೆಗಳಲ್ಲಿ ದಫ್ತ್ತರದ ವ್ಯವಹಾರ ನಡೆಯುತ್ತಿತ್ತು. ಆದರೆ ೧೩೦೨ ಫ. ಯಲ್ಲಿ ಆಗಿನ ತಾಲೂಕ ದಾರರು, ಮಾನ್ವಿ, ರಾಯಚೂರು, ಎರಗೇರಿ, ದೇವದುರ್ಗ ತಾಲೂಕುಗಳ ಭಾಷೆ ಪೂರ್ಣ ಕನ್ನಡವಾದ್ದರಿಂದ, ದಫ್ತರದ ವ್ಯವಹಾರವು ಕನ್ನಡದಲ್ಲೇ ಆಗಬೇಕೆಂದು ಅಪ್ಪಣೆ ಕೊಡಿಸಿದರು. ಆಲಂಪೂರ ತಾಲೂಕಿನ ಭಾಷೆ ತೆಲಗು

ಆದ್ದರಿಂದ, ಅಲ್ಲಿ ತೆಲಗಿನಲ್ಲಿ, ಕಾರವಾಯಿ ಆಗಲು ರೂಢಿ ಗೊಳಿಸಲಾಯಿತು. ಯಾದಗಿರಿಯಲ್ಲಿ ಕನ್ನಡ ಮಾತೇ ಇದ್ದರೂ ಬಹಳ ದಿನಗಳಿಂದ ಹಳ್ಳಿಯ ದಫ್ತರು ಮರಾಠಿ ಯಲ್ಲಿಯೇ ಇರುವದರಿಂದಲೂ, ಪಟೇಲ ಪಟವಾರಿಗಳು ಅದಕ್ಕೆ ರೂಢಿಗೊಂಡವರೂ ಬಲ್ಲವರೂ ಆದ್ದರಿಂದಲೂ, ಅಲ್ಲಿ ಮರಾಠಿ ಪ್ರಚಾರದಲ್ಲಿಟ್ಟಿದೆ. ಸಧ್ಯದ ಪರಿಸ್ಥಿತಿ ಯಲ್ಲಿ, ಯಾವ ಬದಲಾವಣೆಗೂ ಆವಶ್ಯಕತೆ ತೋರುವ ದಿಲ್ಲ. ಅಲ್ಲದೆ ನೌಕರರ ನಿಯಾಮಕದಲ್ಲಿಯೂ ಈ ವಿಷಯವನ್ನು ದೃಷ್ಟಿಯಲ್ಲಿಡಲಾಗಿದೆ. (ನಂ. ೩೫೩, ೧೮ ಇಸ್ಫಂದಾರ ೧೩೦೫ ಫ)

ಲಿಂಗಸಗೂರು ಅಧಿಕಾರಿಗಳು ಹೀಗೆ ಬರೆದರು—

"ಈ ಜಿಲ್ಲೆಯಲ್ಲಿ ಆರು ತಾಲೂಕುಗಳಿವೆ; ಗಂಗಾವತಿ, ಕುಷ್ಟಗಿ, ಲಿಂಗಸುಗೂರು, ಸಿಂದನೂರು, ಸುರಪುರ, ಷಾಪುರ, ಇವುಗಳಲ್ಲಿ ಮೊದಲ ನಾಲ್ಕರಲ್ಲಿ ಹಿಂದಿನಿಂದಲೂ ಸಾಧಾರಣ ವಾಗಿ ತಹಸೀಲು ಮತ್ತು ಗ್ರಾಮದ ನಡುವೆ ವ್ಯವಹಾರ ದೇಶಿಭಾಷೆಯಲ್ಲಿ ನಡೆದಿದೆ, ಮತ್ತು ದೇಹೀದಫ್ತರ ಕನ್ನಡದಲ್ಲೇ ಇಡಲ್ಪಡುತ್ತಿದೆ. ಆದರೆ ಕಡೆಯ ೨ ತಾಲೂಕು ಗಳಲ್ಲಿ ಬಹಳ ದಿನಗಳಿಂದ ಮರಾಠಿಯಲ್ಲಿ ದಫ್ತರ ಇಡ ಲ್ಪಟ್ಟಿದೆ; ಇದೇ ಪ್ರಾಚೀನ ರೂಢಿಯಾಗಿದೆ. ಸಧ್ಯ ಈ ಎರಡು ತಾಲೂಕುಗಳ ದಫ್ತರು ಕನ್ನಡದಲ್ಲಿಟ್ಟರೆ, ಕೆಲಸ ನಡೆಯುವದು ಅಸಾಧ್ಯಮಾತ್ರವಲ್ಲ, ಒಂದೇ ಸಲಕ್ಕೆ ಕೆಲಸ ನಿಂತೇ ಹೋಗುವ ಸಂಭವವಿದೆ. ಎಲ್ಲಿಯ ವರೆಗೆ ಪಾಟೇಲ ಪಟವಾರಿಗಳು ಕನ್ನಡದಲ್ಲಿ ಶಿಕ್ಷಣ ಹೊಂದುವದಿಲ್ಲವೋ ಅಲ್ಲಿಯ ವರೆಗೆ ಸಧ್ಯದ ಪರಿಸ್ಥಿತಿಯಲ್ಲಿ ಬದಲುಮಾಡು ವದು ವ್ಯವಸ್ಥೆಗೆ ವಿರೋಧಕವಾಗುತ್ತದೆ. ಏಕಂದರೆ ಹಿಂದಿ ನಿಂದಲೂ ಈ ತಾಲೂಕುಗಳಲ್ಲಿ ಮರಾಠಿಯೇ ರೂಢಿಯ ಲ್ಲಿದೆ. ಒಂದು ವೇಳೆ, ಬದಲಾವಣೆ ಮಾಡುವದೇ ಆದರೆ, ಕನ್ನಡವಾಗಲಿಕ್ಕೆ ಕೆಲವು ಕಾಲದ ಅವಧಿ ಅಗತ್ಯವಿದೆ. ಸದ್ಯ, ಎಳ್ಳಷ್ಟೂ ಇದರ ಅಗತ್ಯ ಕಾಣುವದಿಲ್ಲ. ಯಾಕೆಂದರೆ, ಈ ತಾಲೂಕುಗಳು ಪೂರಾ ಕನ್ನಡದವೂ ಅಲ್ಲ. ಇಲ್ಲಿ, ಮರಾಠದ, ತೆಲಂಗಾಣದ ನೆರೆಹೊರೆಯ ಕಾರಣದಿಂದ, ಮರಾಠಿ ತೆಲುಗು ಬಳಿಕೆಯಲ್ಲಿದೆ. ಕನ್ನಡವನ್ನಾಡುವವರು, ಮರಾಠಿಯನ್ನೂ ಬಲ್ಲರು, ತೆಲುಗನ್ನೂ ಆಡುತ್ತಾರೆ. ಈ ಬದಲಾವಣೆಯ ಕಷ್ಟವನ್ನುಂಟುಮಾಡಿಕೊಳ್ಳುವ ಅಗತ್ಯ ವಿಲ್ಲೆಂದು ನನ್ನ ಅಭಿಪ್ರಾಯ." (ನಂ. ೪೪೩, ೨೪ ಇಸ್ಫಂದಿ ಯಾರ ೧೩೦೫ ಫ.)

ಇದನ್ನೆಲ್ಲ ಚಿತ್ತಯಿಸಿ ಸುಬೇದಾರರು ಪಟ್ಟ... ವಿದು—

" ನನ್ನ ಅಭಿಪ್ರಾಯ ಹೀಗಿದೆ:

ಗುಲಬರ್ಗಾ:— ಕೊಡಂಗಲ್, ಗುರುಮ... ದಫ್ತರವು ತೆಲುಗಿನಲ್ಲಿರುವದು ಯೋಗ್ಯ. ಉಳಿ... ಗಳಲ್ಲಿ ಕನ್ನಡಮಾತು ಆಡಲ್ಪಡುತ್ತಿರುವಾಗ ... ದಫ್ತರ, ತಹಸೀಲ ದಫ್ತರ ಕನ್ನಡ ಭಾಷೆಯಲ್ಲಿ... ಬೇಕಾದ್ದು ಆಗತ್ಯ. ಒಂದು ವೇಳೆ ಗೌಡಕುಲ... ರಿಗೆ ಕನ್ನಡ ಓದುಬರಹ ಬರುವದಿಲ್ಲೆಂಬ ಆಕ್ಷೇ... ವಿದ್ದರೆ, ಅವರಿಗೆ ಕೆಲವು ಕಾಲದ ಅವಧಿಯನ್ನ... ಬೇಕು. ನನಗೆ ಒಂದು ವರ್ಷ ಅವಧಿ ಸಾಕೆಂದ... ತ್ತದೆ. ಅವರು ಒಂದು ವರ್ಷದಲ್ಲಿ ಕಲಿಯಬಹು...

ರಾಯಚೂರ:— ಆಲಂಪೂರ, ಯಾದಗಿರಿಯ... ಉಳಿದ ತಾಲೂಕಗಳಲ್ಲೆಲ್ಲ ತಹಸೀಲದಫ್ತರ ಕ... ಮಾಡಿದ್ದು ಯೋಗ್ಯವಿದೆ. ಆಲಂಪೂರ ದಫ್ತ... ನಲ್ಲಿ ಇಡಬೇಕಾದದ್ದು ಯೋಗ್ಯ. ಉಳಿದುದು ... ಗಿರಿ. ಅಲ್ಲಿ ಕನ್ನಡ ಮಾತಾಡಲ್ಪಡುವಾಗ ಕ... ದಫ್ತರ ಏಕೆ ಇಡಬಾರದು? ಆಕ್ಷೇಪಣೆ ಏನೂ... ದಿಲ್ಲ; ಏನೂ ಕಾರಣಗಳಿಲ್ಲ. ಬಹಳ ದಿನಗಳಿಂದ... ಮರಾಠಿಯಲ್ಲಿದ್ದಿದ್ದು, ಪಟೇಲ ಪಟವಾರಿಗಳಿ... ರೂಢಿಯಾಗಿರುವದು ಸರಿಯಾದ ಕಾರಣವಾಗಲ...

ಲಿಂಗಸಗೂರು:—ಸುರಪೂರ, ಷಾಪೂರಗಳ... ಉಳಿದದ್ದರಲ್ಲಿ ತಹಸೀಲ-ದೇಹೀದಫ್ತರ ಕನ್ನ... ವುದು ಯೋಗ್ಯವಿದೆ. ಇವೆರಡರಲ್ಲೂ ಕೂಡ ದಫ್ತ... ದಲ್ಲಿಯೇ ಇಡಬೇಕು. ಪಟೇಲ ಪಟವಾರಿಗಳಿ... ಬರದಿದ್ದರೆ ಒಂದು ವರ್ಷ ಅವಧಿ ಕೊಡಬೇಕು."

ಈ ಅಭಿಪ್ರಾಯದೊಂದಿಗೆ ಕಡತ ಮೇಲಕ್ಕೆ ಹೋ... ರೆವಿನ್ಯುಶಾಖೆಗೆ ಇದು ಸರಿಕಂಡಿತು. ಆದರೆ ಈ ವ್ಯವಸ್ಥೆಯಾಗುವ ಮೊದಲು ಪಟೇಲ ಪಟ... ಕನ್ನಡ ಓದುಬರೆಯಲು ಬಾರದಿದ್ದರೆ, ಸರಕಾರದ ಬಾಧ್ಯತೆಗಳ ಸಂರಕ್ಷಣೆಗೆ ಲೋಪಬರಬಹುದೆಂದು ... ಸುತ್ತ, ಹೊಸ ಪದ್ಧತಿಯನ್ನು ಕ್ರಮೇಣ, ಸಾಧ್ಯ... ಆಚರಣೆಯಲ್ಲಿ ತರುವಂತೆ ಮಾಡಲು ಅವರು ಬರೆ...

ನವಾಬ ಇಮಾದ ಜಂಗಬಹಾದೂರರು ಅಪ್ಪಣೆಯನ್ನನುಸರಿಸಿ ತಾಲೂಕದಾರರಿಗೆ ಅಪ್ಪಣೆ ಮಾಡಿದರು—

ಗುಲಬರ್ಗ ತಾಲೂಕದಾರರಿಗೆ:— ಕೊಂಡಗಲ್, ಕುರುಮಟಕಲ್ ತಾಲೂಕುಗಳ ದೇಹೀದಫ್ತರ ತೆಲುಗಿನಲ್ಲಿದ್ದುದು ಯೋಗ್ಯ. ಉಳಿದವುಗಳಲ್ಲಿ ಸ್ಥಳೀಯ ಭಾಷೆ ಕನ್ನಡವಿದೆ; ಆದರೆ ದೇಹೀದಫ್ತರ ಮರಾಠಿಯಲ್ಲಿ, ಪಟೇಲ ಪಟವಾರಿಗಳ ವ್ಯವಹಾರ ಮರಾಠಿಯಲ್ಲಿ. ಸ್ಥಳೀಯಭಾಷೆ ಒಂದು, ದೇಹೀದಫ್ತರ ಬರೆಯುವದು ಮತ್ತೊಂದು ಭಾಷೆ,—ಹೀಗಿರುವದು ಯೋಗ್ಯವಲ್ಲ; ಆದ್ದರಿಂದ ಸ್ಥಳೀಯ ಭಾಷೆಯಲ್ಲಿ ದಫ್ತರ ಇಡುವ ಪ್ರಯತ್ನ ಮಾಡಬೇಕು. ಪಟೇಲ ಪಟವಾರಿಗಳಿಗೆ ಯೋಗ್ಯವಾದ ಅವಧಿ ಕೊಟ್ಟು—ಕಟ್ಟುಮಾಡಬೇಕು: "ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಪೂರ್ಣವಾಗಿ, ಓದುಬರೆಯಲು ಕಲಿಯತಕ್ಕದ್ದು." ಇದರ ಆಚರಣೆಗಾಗಿ ಪ್ರಯತ್ನಮಾಡಿದರೆ, ಇದರ ಸುಧಾರಣೆ ಕಠಿಣವಾಗುವದಿಲ್ಲ. ಒಂದು ವರ್ಷದ ಅವಧಿ ಸಾಕೋ ಹೇಗೆ? ನಿಮ್ಮ ಅಭಿಪ್ರಾಯ ತಿಳಿಸಿರಿ.

ರಾಯಚೂರ ತಾಲೂಕದಾರರಿಗೆ:—(ಮೇಲಿನ ಪ್ರತಿ ಯೊಂದು ಕಳಿಸಿ ಅದರ ಜೊತೆಗೆ) ೪ ತಹಸೀಲುಗಳಲ್ಲಿ ಕನ್ನಡ ದಫ್ತರು ಯೋಗ್ಯ. ಅಲಂಪೂರ ತೆಲುಗಿನಲ್ಲಿದ್ದುದು ಯೋಗ್ಯ. ಯಾದಗಿರಿ ತಾಲೂಕಿನಲ್ಲಿ, ಕನ್ನಡ ಸ್ಥಳೀಯಭಾಷೆಯಾಗಿರುವಾಗ, ಅದರಲ್ಲಿ ತಹಸೀಲು ದಫ್ತರು ಇಡದಿರಲು ಯಾವ ಕಾರಣವೂ ಇಲ್ಲ. ಅಲ್ಲಿ, ಮೇಗ ತಿಳಿಸಿದಂತೆ ಕನ್ನಡದಲ್ಲಿ ದಫ್ತರ ಇಡಲು ಪ್ರಯತ್ನ ಮಾಡಾಗಬೇಕು.

ಲಿಂಗಸಗೂರ ತಾಲೂಕದಾರರಿಗೆ:— (ಮೊದಲಿನ ಪ್ರತಿಯ ಸಂಗಡ)

ಸುರಪುರ, ಷಾಪೂರ, ತಾಲೂಕುಗಳ ಬಗ್ಗೆ, ಇದೇ ರೀತಿ ಯನ್ನು ರೂಢಿಯಲ್ಲಿ ತರಬೇಕು. ಏಕೆಂದರೆ, ಆ ತಾಲೂಕು ಗಳಲ್ಲಿ, ದೇಹೀದಫ್ತರು ಸ್ಥಳೀಯಭಾಷೆಯಲ್ಲಿ ಇಡುವಂತೆ ಆಗಬೇಕು."

ಇದಕ್ಕೆ ಮೂವರಿಂದಲೂ ಸಾಧಾರಣ ಒಂದೇ ಉತ್ತರ: ಒಂದು ವರ್ಷದ ಅವಧಿ ಸಾಲದು; ಮುಂದೆ ಕೆಲಸಕ್ಕೆ ನಿಯುಕ್ತರಾಗುವವರಿಗೆ ಕನ್ನಡ ಬರೆಯಬೇಕೆಂಬ ಕರಾರು ಮಾಡಬಹುದು. ಈಗ ಇದ್ದವರಿಗೆ ಕನಿಷ್ಠಪಕ್ಷ ೩ ವರ್ಷ ಅವಧಿ ಬೇಕು. ಮೂರು ವರ್ಷಗಳಲ್ಲಿಯೂ ಅವರಿಗೆ ಕನ್ನಡ ಸರಿಯಾಗಿ ಬಾರದಿದ್ದರೆ, ಮತ್ತೆ ಎರಡು ವರ್ಷ ಮೇಗಳನ್ನು ಕೊಡಬೇಕು. ಹೆಚ್ಚು ಕಾಲ ಅವಧಿ ಕೊಡದಿದ್ದರೆ, ಪರಿಣಾಮಕಾರಿಯಾಗುವದಿಲ್ಲ.

ನವಾಬರಿಗೆ ೩ ವರ್ಷದ ಅವಧಿ ಹೆಚ್ಚೆನಿಸಿತು. ಆದರೂ ಆಕ್ಷೇಪಣೆ ಮಾಡದೆ, ಸರಿ ಎಂದರು. ಮುಂದೆ ೨೮ ಆರ್ದಿಬೆಹೆಷ್ತ ೧೩೩೦ ಫಸಲಿಯಲ್ಲಿ ಸುಬೇದಾರಿಯಿಂದ (ನಂ. ೧೩೮) ಒಂದು ಗಷ್ತಿ ಹೊರಟಿತು:—

"ಷಾಪುರದ, ಸುರಪೂರದ ಜನರ ಮಾತೃಭಾಷೆ ಕನ್ನಡವಿದೆ. ಅಲ್ಲಿ ದಫ್ತರು ಕನ್ನಡದಲ್ಲಿಡುವದು ಅಗತ್ಯವಿದೆ. ಕೇವಲ ಮರಾಠಿ ರೂಢಿಯಾಗಿದೆ ಎಂಬ ಭಾವನೆಯಿಂದ, ಅದನ್ನೇ ಉಳಿಸಬೇಕು ಎಂಬುದರ ಅಗತ್ಯವಿಲ್ಲ. ಆದರೆ ಪಟೇಲ ಪಟವಾರಿಗಳಿಗೆ ಕನ್ನಡ ಓದುಬರೆಹ ಕಲಿಯಲು ಯೋಗ್ಯ ಅವಧಿ ಬೇಕೆಂಬುದು ಸರಿ. ಅಂತೆಯೇ ನಿಮ್ಮ ಸೂಚನೆಯ ಪ್ರಕಾರ, ಸುರಪುರ, ಷಾಪುರದ ಪಟೇಲ ಪಟವಾರಿಗಳಿಗೆ ಕನ್ನಡ ಕಲಿಯಲು ೩ ವರ್ಷ ಅವಧಿ ಕೊಡಲಾಗಿದೆ. ಯಾರಿಗೆ ೫೦ ವರ್ಷವಾಗಿಲ್ಲವೋ ಅಂಥಾ ಪಟೇಲ ಪಟವಾರಿಗಳಿಗೆ ಅಪ್ಪಣೆ ಕೊಡಬೇಕು —ಅವಧಿಯಲ್ಲಿ ಚನ್ನಾಗಿ ಕನ್ನಡ ಕಲಿಯಲು. ಯಾರಿಗೆ ೫೦ ಆಗಿದೆಯೋ ಅವರನ್ನು ಇದಕ್ಕೆ ಅಪವಾದವಾಗಿ ತಿಳಿಯುವೆನು. ಅವರಿಗೆ ಸ್ಪಷ್ಟವಾಗಿ ತಿಳಿಸಬೇಕು— ಅವರ ವಾರಸದಾರನ ಹಕ್ಕು ಸಿಗುವಾಗ ಅಂಥವರಿಗೆ ಕನ್ನಡ ಬಾರದಿದ್ದರೆ ಸಿಗಲಿಕ್ಕಿಲ್ಲ."

ರಾಯಚೂರ, ಲಿಂಗಸಗೂರುಗಳಿಗೂ ಪ್ರತಿ ಕಳಿಸಲಾಯಿತು.

ಇಲ್ಲಿಗೆ ಇದರ ಎಳೆ ಹರಿದಿದೆ. ಮುಂದೆ ಕೈಗೆ ಹತ್ತೊಲ್ಲದು. ಮೂರು ವರ್ಷಗಳ ತರುವಾಯ ಏನಾಯಿತೆಂಬದರ ಪತ್ತೆಯೇ ಇಲ್ಲ. ಅವಧಿಯನಂತರ ಕಡತವನ್ನು ಮತ್ತೆ ಪರಿಶೀಲನೆಗಾಗಿ ಇಡಬೇಕೆಂದು ಸುಬೇದಾರರ ಅಪ್ಪಣೆಯಾಗಿತ್ತು. ದೇವರು ವರ ಕೊಟ್ಟ; ಆದರೆ ಪೂಜಾರಿ— ?

ಈ ಪರಿಸ್ಥಿತಿ ಏನೂ ವ್ಯತ್ಯಾಸವಿಲ್ಲದೆ ಹೀಗೇ ನಡೆದಿತ್ತು. ಕನ್ನಡಿಗರ ಭಾಗ್ಯದಿಂದ ನಿಜಾಂ ಕರ್ನಾಟಕದಲ್ಲಿ ಕನ್ನಡ ಶಿಕ್ಷಣದ ಏರ್ಪಾಡಾಯಿತು. ಕನ್ನಡ ಓದುಬರಹ ಬಂದವರು ಈಗ ಸಿಗುವದು ದುರ್ಲಭವಿಲ್ಲ. ಪಟೇಲುಪಟವಾರಿಗಳಿಗೆ ಕನ್ನಡ ಕಲಿಯಲು ಈಗ ಅಷ್ಟು ಕಷ್ಟವೂ ಇಲ್ಲ. ಕನ್ನಡ ನುಡಿಯ ಅಭಿಮಾನವು ಈಗ ಉಂಟಾಗಿದೆ. ಇಂಥ ಹೊತ್ತಿನಲ್ಲಿ ಸರಕಾರದವರು ತಮ್ಮ ನ್ಯಾಯವಾದ ತತ್ವವನ್ನು ಆಚರಣೆಗೆ ತಂದು, ಕನ್ನಡ ಜನರನ್ನು ಅನುಗ್ರಹಿಸಬೇಕು. ಈ ಕಾರ್ಯದ ಅಗತ್ಯ-ನ್ಯಾಯಗಳ ಬಗ್ಗೆ ಹೇಳಲು ಪ್ರಭುತ್ವಕ್ಕಿಂತ ನಾವು ಬಲ್ಲವರಿಲ್ಲ.

ಆದರೆ ಇತ್ತೀಚೆಗೆ ತಿಳಿದು ಬಂದ ಸುದ್ದಿ ನಮ್ಮಲ್ಲಿ ಆಂದೋಲನೆಯನ್ನು ಉಂಟುಮಾಡಿದೆ. ಕನ್ನಡವನ್ನು ಕಲಿಯಿರೆಂದು ಈ ಪಟವಾರಿಪಟೇಲರಿಗೆ ಹೇಳುವದರ ಬದಲು, ಮರಾಠಿಯನ್ನು ಕಲಿಯಿರೆಂದು ಸುಬೇದಾರರು ಹೇಳುವ ತತ್ವ ನಮಗೆ ತಿಳಿಯದಾಗಿದೆ. ಮೊದಲು ಮೋಡಿಯಲ್ಲಿ ದಫ್ತರು ಇಡಲ್ಪಡುತ್ತಿತ್ತು. ಅದನ್ನು ತೆಗೆಯುವ ಕಾಲ ಬಂದಿದೆ. ಮೋಡಿ ಹಿಂದುಸ್ಥಾನದಲ್ಲಿ ಎಲ್ಲ ಕಡೆಯಲ್ಲಿಯೂ ತೆಗೆದುಹಾಕಲ್ಪಡುತ್ತಿದೆ. ಇಂಥ ಅನುಕೂಲ ಪ್ರಸಂಗದಲ್ಲಿ ಕನ್ನಡವನ್ನು ಬಳಕೆಗೆ ತಂದು, ಸರಕಾರದ ಮನಸ್ಸನ್ನು ತಿಳಿದು ನಡೆಯದೆ, ಮರಾಠಿಯನ್ನು ಬಳಕೆಗೆ ತರುವದು ಕನ್ನಡಕ್ಕೆ ಶಾಶ್ವತವಾದ ಅಪಕಾರ ಮಾಡಿದಂತಿದೆ. ಈ ಮಾತಿನ ಬಗ್ಗೆ ಕನ್ನಡ ಜನರಲ್ಲಿ ಎಷ್ಟು ನೋವು-ಸಂಕಟಗಳಿವೆ ಎಂಬದನ್ನು ೨೨—೨—೩೭ರಲ್ಲಿ ಹೈದ್ರಾಬಾದಿನಲ್ಲಿ ನೆರೆದ ಪ್ರಥಮ ನಿ. ಕ. ಪರಿಷತ್ತಿನ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ ಕೆಳಗಿನ ಮಾತುಗಳು ಸ್ಪಷ್ಟವಾಗಿ ಸರಿಯಾಗಿ ವಿಶದಗೊಳಿಸುತ್ತವೆ.

"ಅಂತು ಇಂತು ಕುಂತೀಮಕ್ಕಳಿಗೆ ರಾಜ್ಯವಿಲ್ಲವೆಂಬಂತೆ ಕನ್ನಡಕ್ಕೆ ಎಲ್ಲೂ ಇಂಬಿಲ್ಲದಾಗಿದೆ. ಸಾಲುದುದಕ್ಕೆ ಉಗುರುಸುತ್ತಿನ ಮೇಲೆ ಒನಕೆಯ ಪೆಟ್ಟು ಬೇರೆ. ಮೊನ್ನೆ ನಡೆದ ಸುಬೇದಾರರ ಕೂಟದಲ್ಲಿ ಪಟೇಲಪಟವಾರಿಗಳ ದಫ್ತರು ಇನ್ನು ಮುಂದೆ ಮೋಡಿ ಬಿಟ್ಟು ಬಾಲಬೋಧದಲ್ಲಿಡಬೇಕೆಂದೂ, ಆರುತಿಂಗಳಲ್ಲಿ ಅದನ್ನು ಕಲಿಯಲು ವಿಧಿಸಬೇಕೆಂದೂ ನಿರ್ಣಯವಾಯಿತಂತೆ. ಇದು ನಿಜವಿದ್ದಲ್ಲಿ ಕನ್ನಡಿಗರೆಲ್ಲ ಒಂದು ದನಿಯಿಂದ ಇದನ್ನು ವಿರೋಧಿಸಬೇಕು. ಕನ್ನಡಜಿಲ್ಲೆಯಲ್ಲಿ ಕನ್ನಡ ದಫ್ತರು ಇಡುವದು ಸಹಜ, ನ್ಯಾಯ; ಪರಭಾಷೆ ಏಕೆ?"

ಸ್ವಾಗತಾಧ್ಯಕ್ಷರೂ ಈ ಮಾತನ್ನು ಎತ್ತಿ ಹೀಗೆ ಆಡಿದರು.

"ಬೀದರು, ಕಲುಬುರ್ಗಿಗಳು ಮರಾಠಾ ಸರದಾರರ ಆಡಳಿತಕ್ಕೆ ಒಳಗಾಗಿದ್ದವು. ಆಗ ಆ ಜಿಲ್ಲೆಗಳಲ್ಲಿ ಕನ್ನಡ ಕಳೆಗುಂದಿತು. ಇನ್ನೂ ತಲೆ ಎತ್ತಿಲ್ಲ. ಮುಂದೆ ಬಂದ ಅಧಿಕಾರಿಗಳಲ್ಲಿ ಮರಾಠಿಗರೇ ಬಹಳ. ಗೌಡಕುಲಕರ್ಣಿಯರ ದಫ್ತರದವರೆಗೂ ನುಗ್ಗಿ ಬಂತು ಆಗ ಮರಾಠಿ. ಆ ಹಿಂದಿನ ಕರ್ಮ ಇನ್ನೂ ಬಿಟ್ಟಿಲ್ಲ. ಈಗಲೂ ಆ ದಫ್ತರು ಕನ್ನಡದಲ್ಲಿಡಲು ಅವಕಾಶ ಸಿಗುತ್ತಿಲ್ಲ ಚೂರಿಗೂ ಆ ಶಕೆ ತಗಲಿತ್ತು. ಈಚೆಗೆ ನ್ಯಾಯದೃಷ್ಟಿಯ ಅಧಿಕಾರಿಗಳ ಪುಣ್ಯವೆಂದು ತನ್ನ ಮನೆಯಲ್ಲಿ ಸ್ಥಾನ ಸಿಕ್ಕಿತು. ಕಲಬುರ್ಗಿ ದವರು ರಾಯಚೂರಿನ ನ್ಯಾಯಮಾರ್ಗ ಮರಾಠಿಯನ್ನು ತರುವ ಪ್ರಯತ್ನ ನಡೆಸಿದ್ದಾ ಸರ್ವಥಾ ನ್ಯಾಯವಲ್ಲ. ಕನ್ನಡಿಗರು ಯಾ ಒಪ್ಪಲಾರರು."

ಕಡೆಗೆ ಪರಿಷತ್ತಿನಲ್ಲಿ ಸರ್ವಾನುಮತದಿಂದ ತೀರ್ಮಾನವು ಗೊತ್ತಾಯಿತು.

"ಗ್ರಾಮಜೀವನಕ್ಕೆ ಸಂಬಂಧಿಸಿದ ತಹಸೀಲ ಪಟೇಲಪಟವಾರಿಗಳ ಲೆಕ್ಕಪತ್ರವನ್ನು, ಆಯಾ ಭಾಷೆಯಲ್ಲದ ಭಾಷೆಯಲ್ಲಿಡುವದು ಅಸಹಜವೂ ಕೂಲವೂ, ಅನ್ಯಾಯವೂ, ಎಂದು ಅಭಿಪ್ರಾ ಕನ್ನಡವೇ ಪ್ರಧಾನಭಾಷೆಯಾಗಿ ಬಳಸಲ್ಪಡುತ್ತಿ ಸೀಲುಗಳಲ್ಲಿ, ಪಟೇಲ ಪಟವಾರಿಗಳ ಲೆಕ್ಕಪತ್ರ ಬೋಧದಲ್ಲಿಡಬೇಕೆಂದು ಇತ್ತೀಚಿಗೆ ಸುಬೇದಾ ಆಗಿರುವ ತೀರ್ಮಾನವನ್ನು ವಿರೋಧಿಸುತ್ತ, ಸೀಲುಗಳಲ್ಲಿ ಪ್ರಜೆಯ ಭಾಷೆಯಾದ ಕನ್ನ ಆ ಲೆಕ್ಕಪತ್ರಗಳನ್ನಿಡುವ ಏರ್ಪಾಡಾ ಈ ಪರಿಷತ್ತು ಆಗ್ರಹಪೂರ್ವಕವಾಗಿ ಪ್ರ ಪ್ರಾರ್ಥಿಸುತ್ತದೆ."

ನಿಜಾಂಕನ್ನಡಿಗರ ಮನಸ್ಸಿನಲ್ಲಿ ಈ ಬಗ್ಗೆ ಆಂದೋಲನೆಗೆ ಇದಕ್ಕಿಂತ ಏನು ಹೆಚ್ಚಿನ ವಿವ

ಸರಕಾರದಲ್ಲಿ ನಾವು ಬೇಡುತ್ತಿರುವದು ದಲ್ಲ. ಅದರಲ್ಲಿ ಪಕ್ಷಪಾತವಿಲ್ಲ. ಕೇವಲ ನ್ಯಾ ವಾದುದನ್ನೇ, ಕನ್ನಡಿಗರ ವೈಶಿಷ್ಟ್ಯಕ್ಕೆ ದನ್ನೇ ಬೇಡುತ್ತಿದ್ದೇವೆ. ಪ್ರಭುತ್ವವು ನ್ಯಾಯವೆಂದು ೪೦ ವರ್ಷಗಳ ಹಿಂದೆ ಸಿದ್ಧ ಅದನ್ನೇ ನಾವಿಂದು ಕೇಳುತ್ತಿದ್ದೇವೆ. ಇದು ದಯಾಭಿಕ್ಷೆ; ಪ್ರಭುತ್ವವು ಇನ್ನಾದರೂ, ಅತಿ ದಿಂದ ಉಳಿದು ಬಂದಿರುವ ಈ ಸುಧಾರಣೆಯನ್ನು ವದೆ?

ಜಮಖಂಡಿಯ ಜಯಭೇರಿ

ಲೇಖಕರು: "ಈ ಸಾ"

ಉರಿಯುತಿದೆ ನಮ್ಮ ಮನೆ! ಉರಿಯುತಿದೆ ನಮ್ಮ ಮನೆ!
ರವೆ ಬನ್ನಿ, ಬನ್ನಿ ಬನ್ನಿ, ಅಣ್ಣದಿರೆ, ಓ!"

ಎಂಬ ಆರ್ತಧ್ವನಿಯು ಅಲ್ಪಕಾಲದಲ್ಲಿ ಎಲ್ಲೆಲ್ಲಿಯೂ ರಡಿತು. ನಾಟ್ಯಮಂಡಲಿಯ ಪ್ರಕಟನೆಯ ಮಾದ ಯ ಬರೆಹಗಳು ದಿನಪಹಿ ಪತ್ರಿಕೆಗಳಲ್ಲಿ ಪ್ರಕಾಶಿಸತೊಡಗಿ ವು. ಕನ್ನಡದ ಅಳಲಿನ ಕೂಗು ಕನ್ನಡಿಗರ ಬಗೆಯನ್ನು ದಿಸಿತು. ಎಲ್ಲ ನಾಡಿನ ಎಲ್ಲ ವಿಧದ ಕನ್ನಡಿಗರು ಹಿಂಡು ಂಡಾಗಿ ತಂಡತಂಡವಾಗಿ ಜಮಖಂಡಿಯತ್ತ ಧಾವಿಸಿ ರು. ಕಳೆದ ತಿಂಗಳ ಕೊನೆಯ ಮೂರು ದಿನಗಳಲ್ಲಿ ಇಪ್ಪ ರಡನೆಯ ಸಾಹಿತ್ಯಸಮ್ಮೇಲನವು ನೆರೆಯಿತು.

ಅದೊಂದು ಅಪೂರ್ವವಾದ ಸನ್ನಿವೇಶ. ಇಂತಹ ಾಗ್ಯವು ಹಿಂದಿನ ಯಾವ ಸಮ್ಮೇಲನಕ್ಕೂ ಬಂದಿರಲಿಲ್ಲ ಂದು ಬಲ್ಲವರು ಅಭಿಪ್ರಾಯಪಟ್ಟರು. ತಿಂಗಳು ತಿಂಗಳು ಳಿಂದ ಸಿದ್ಧತೆ ನಡೆದಿರುವಾಗಲೂ ಅದೆಷ್ಟೋ ಲೋಪಗಳು ದಗಿದುದು ಉಂಟು. ಸುಮಾರು ಒಂದು ತಿಂಗಳಿಗೂ ಡಿಮೆಯ ಅವಧಿಯಲ್ಲಿ ಪರಿಪರಿಯ ಎಡರು ತೊಡರು ಳನ್ನು ಇದಿರಿಸುತ್ತ ಕುಂದು ಕೊರತೆಗಳಿಗೆ ಇಂಬುಗೊಡ ಂತೆ ಈ ಸಮ್ಮೇಲನವು ಕಿತ್ತುಕೊಂಡ ಗೆಲುವು ಬೆರಗು ೂಳಿಸುವಂತಹದು.

ಕೊಡಗಿನಿಂದ ಕೊಪ್ಪಳದ ವರೆಗೆ ಎಲ್ಲ ಭಾಗಗಳಿಂದ ಗಮಿಸಿದ ಹಿರಿಸಾಹಿತಿಗಳ, ಮರಿಸಾಹಿತಿಗಳ, ಚಿಗುರು ಾಹಿತಿಗಳ, ಸಾಹಿತ್ಯಪ್ರೇಮಿಗಳ, ಸ್ತ್ರೀಪುರುಷ ಪ್ರತಿನಿಧಿ ಳ ಬಹುಸಂಖ್ಯೆಯಷ್ಟೇ, ಕಾರ್ಯಕಲಾಪಗಳ ವೈಪುಲ್ಯವೂ ವೈವಿಧ್ಯವೂ ನೋಡುವಂತಹದಾಗಿತ್ತು. ಸಮ್ಮೇಲನಕ್ಕೆ ಮುಂಚೆ ಕೆಲದಿನಗಳಿಂದ ಸಮ್ಮೇಲನವು ಮುಗಿದು ಕೆಲ ದಿನಗಳವರೆಗೆ ಹಗಲಿರುಳು ಬಿಟ್ಟೂಬಿಡದೆ ಕಾರ್ಯಕ್ರಮ ಗಳು ಸಾಗಿಯೆ ಇದ್ದುವು. ಎಲ್ಲೆಲ್ಲಿಯೂ ಉತ್ಸಾಹವೆ ಉತ್ಸಾಹ! ಒಂದು ಉಪನ್ಯಾಸವೆ, ಒಂದು ಕಾವ್ಯಗಾಯ ನವೆ, ಒಂದು ಕೀರ್ತನೆಯೆ, ಒಂದು ನಾಟ್ಯವೆ, ಒಂದು ನೃತ್ಯವೆ, ಒಂದು ಸಂಗೀತವೆ, ಒಂದು ವಾದ್ಯವೆ, ಒಂದು ಗಮಕವೆ, ಒಂದು ಪ್ರದರ್ಶನವೆ, ಒಂದು ಶಕ್ತಿಸಾಧನೆಯೆ, ಒಂದು ಗೋಷ್ಠಿಯೆ, ಒಂದು ಗೊತ್ತುವಳಿಯೆ, ಒಂದು ನಗೆಯೆ, ಒಂದು ಅಣಕವೆ, ಯಾವುದೆಂದು ಹೇಳಬೇಕು? ಇಷ್ಟಾಗಿಯೂ ಎಷ್ಟೊ ಕಾರ್ಯಕ್ರಮಗಳು ಉಳಿದು ಹೋಗಿ ಅನೇಕರಿಗೆ ಅಸಂತೋಷ ಸಂದರ್ಭಗಳು ಬಂದುವು.

ಈ ದಿನಗಳಲ್ಲಿ ಜಮಖಂಡಿಯ ವಾಯುಮಂಡಲವು ಕನ್ನಡದ ಕೆಚ್ಚಿನಿಂದ ಕಿಕ್ಕಿರಿದು ಹೋಯಿತು. ಇದಕ್ಕೆ ಬರಿಯ ಸಾಹಿತ್ಯಸಮ್ಮೇಲನವೆಂದರೆ ನಸುವೆ ಹೇಳಿದಂತಾ ಗುವುದು. ಕರ್ನಾಟಕ ಸಂಸ್ಕೃತಿಯ ಸಂದರ್ಶನ, ನವ ಕರ್ನಾಟಕದ ಶಕ್ತಿಪ್ರದರ್ಶನ, ಕನ್ನಡತನದ ಮಹಾಸಮ್ಮೇ ಲನವೆಂದರೆ ಸತ್ಯವನ್ನು ಸಮೀಪಿಸಿದಂತೆ ಆಗುವುದು.

ಶ್ರೀ. ದೇಶಪಾಂಡೆ ಗಂಗಾಧರರಾಯರ ಮಂಗಲಾಚರಣೆ ರೋಮಾಂಚಕಾರಕವಾಯಿತು. ಓಜಸ್ವಿಯಾದ ಅವರ ಭಾಷಣದಲ್ಲಿ ಹೊರಸೂಸಿದ ತೇಜಸ್ವಿಯಾದ ಕೆಲವು ವಿಚಾರ ಗಳು ಸಾಹಿತಿಗಳಿಗೆ ಚಿರಕಾಲ ಮಾರ್ಗದರ್ಶಕವಾಗಿವೆ. ಜನಜೀವನವನ್ನು ಸಂಸ್ಕಾರಗೊಳಿಸುವುದೆ ಸಾಹಿತಿಯ ನೈಜ ಕಾರ್ಯವು. ಇಂದಿನ ಸಾಹಿತ್ಯವು ಇಂದಿನ ಜೀವನದ ಪೂರ್ಣ ಪ್ರತಿಬಿಂಬವಾಗಬೇಕು. ಕರ್ನಾಟಕದಲ್ಲಿ ನೆಲಸಿದ ಮರಾಟರು ಕನ್ನಡಿಗರನ್ನು ಹೀಗಳೆದು ಬಾಳುವುದು ಸಾಧ್ಯ ವಿಲ್ಲ. ಕರ್ನಾಟಕದ ಆರಾಧನೆಯಲ್ಲಿಯೆ ಇಲ್ಲಿಯ ಮರಾಟ ರಿಗೆ ಉನ್ನತಿ ಇದೆ. ಕರ್ನಾಟಕದಲ್ಲಿ ಆಳುವ- ಮರಾಟ ಅರಸರು, ತಮಗೆ ಎಲ್ಲ ಭಾಷೆಗಳು ಸಮಾನವೆಂದಷ್ಟು ಹೇಳಿದರೆ ಕೆಲಸವು ಮುಗಿಯಲಿಲ್ಲ. ಇವರ ರಾಜ್ಯದಲ್ಲಿಯ ಕನ್ನಡಿಗನಿಗೆ ಹಿರಿಯ ಮಗನ ಅಧಿಕಾರಗಳು ಸಲ್ಲಬೇಕು. ಕನ್ನಡಿಗರು ನಿಜವಾಗಿ ದೊಡ್ಡವರಾಗಬೇಕು; ಬೆಳೆಯ ಬೇಕು. ಕನ್ನಡಿಗರ ಹಿರಿಮೆ, ಕನ್ನಡ ಸಾಹಿತ್ಯದ ಘನತೆ ತಾನೇ ತಾನಾಗಿ ಅನ್ಯರನ್ನು ತನ್ನತ್ತ ಎಳೆದು ತರಬೇಕು. ಮುಂತಾಗಿ ಗಂಡುಗುಡುಗಿನಿಂದ ಗರ್ಜಿಸುತ್ತಿರುವಾಗ ಕ್ಷಣ ಹೊತ್ತು ಸಾಹಿತ್ಯಪೀಠವು ರಾಜಕೀಯ ಪೀಠವಾದಂತೆ ಭಾಸ ವಾಯಿತು.

ಸ್ವಾಗತಾಧ್ಯಕ್ಷರ ಭಾಷಣದಲ್ಲಿಯ ಒಂದು ಸೂಚನೆಯು ವಿಚಾರಾರ್ಹವಾಗಿದೆ. ಗ್ರೀಕ್, ಲ್ಯಾಟಿನ ಭಾಷೆಗಳಂತೆ, ಹಳಗನ್ನಡಕ್ಕೆ ನಮ್ಮ ವ್ಯಾಸಂಗಕ್ರಮದಲ್ಲಿ ಸ್ವತಂತ್ರ ಸ್ಥಾನ ವನ್ನು ಕಲ್ಪಿಸಿ ಕೊಡುವುದು.

ಸಮ್ಮೇಲನದ ಅಧ್ಯಕ್ಷರ ಭಾಷಣದಲ್ಲಿ ಹೆಚ್ಚು ಮೊನೆ ಯಾಗಿ ಪ್ರಕಟವಾದ ಕಾರ್ಯಪರತೆಯು ಅಭಿನಂದನೀಯ ವಾಗಿದೆ.

ಸಾಹಿತ್ಯಗೋಷ್ಠಿಯ ಸಭಾಪತಿಗಳಾದ ಕವಿಭೂಷಣ ಶ್ರೀ. ಬೆಟಗೇರಿಯವರು ಮನನೀಯವಾದ ಕೆಲವು ವಿಚಾರ ಗಳನ್ನು ಬೀರಿದರು. ಸಾಹಿತ್ಯವೆಂಬುದು ಸಮುದ್ರಮಥನ-

ಚಲನವಲನವಿಲ್ಲದ, ಕ್ಷೋಭೆಯಿಲ್ಲದ ಸಾಹಿತ್ಯವು ಮುಂದಾರಿಯನ್ನು ಕಾಣಲಾರದು. ಸಂಪ್ರದಾಯ ಶರಣತೆ, ಮತೀಯ ದೃಷ್ಟಿಯ ಪ್ರಾಬಲ್ಯ ಇವುಗಳು ನಮ್ಮ ಸಾಹಿತ್ಯವನ್ನು ರಸಾತಳಕ್ಕೆ ಇಳಿಸಿದುವು. ನಮ್ಮ ಸಾಹಿತ್ಯವು ನಮ್ಮ ನಾಡಿನ ಅಧಃಪತನಕ್ಕೆ ಒಂದು ನಿದರ್ಶನವಾಗಿದೆ. ಈಗ ನಮ್ಮ ಸಾಹಿತ್ಯದ ಪುನರುಜ್ಜೀವನವಾಗಬೇಕಾದರೆ ಹೊಸ ದೃಷ್ಟಿಯು ಹುಟ್ಟಬೇಕು. ಸಾಹಿತಿಗಳು ತತ್ತ್ವಸಂಶೋಧನೆಯ ಮಾರ್ಗವನ್ನು ಅನುಸರಿಸಬೇಕು....ಮುಂತಾಗಿ ಹೇಳಿದರು.

ಸಮ್ಮೇಲನದ ಅಂಗವಾಗಿ ಧಾರವಾಡದ ಕರ್ನಾಟಕ ಇತಿಹಾಸಸಂಶೋಧಕಮಂಡಳದವರು ಏರ್ಪಡಿಸಿದ ಐತಿಹಾಸಿಕ ವಸ್ತುಪ್ರದರ್ಶನ ಮತ್ತು ಪತ್ರಿಕಾಪ್ರದರ್ಶನ, ಇವು. ಬಹುಜನರ ಮನಸ್ಸುಗಳನ್ನು ಸೆಳೆದುಕೊಂಡು ಯಶೋಭಾಗಿಗಳಾದುವು. ಕನ್ನಡದಲ್ಲಿ ಹುಟ್ಟಿದ ನೂರಾರು ಪತ್ರಿಕೆಗಳನ್ನು ನೋಡಿ ಅನೇಕರು ಬೆರಗಾದರು. ಐತಿಹಾಸಿಕ ವಸ್ತುಗಳನ್ನು ಕಂಡು ಎಷ್ಟೋ ಜನರಲ್ಲಿ ಕರ್ನಾಟಕ ಇತಿಹಾಸದ ಬಗೆಗೆ ಜಿಜ್ಞಾಸೆ-ಆದರಗಳು ಜಾಗೃತವಾದುವು. ವಿದ್ಯಾರ್ಥಿಗಳು ನಡೆಸುತ್ತಿರುವ ಕೈಬರೆಹದ ಪತ್ರಿಕೆಗಳು ಮೆಚ್ಚುವಂತಹವಾಗಿದ್ದುವು. ಇವುಗಳಲ್ಲಿ ಬೆಳಗಾವಿ, ಮುಧೋಳ, ಕಲಬುರ್ಗಿ ಮುಂತಾದೆಡೆಯ ಪತ್ರಿಕೆಗಳು ಸಾಹಿತ್ಯ ಮತ್ತು ಕಲೆ ಈ ಎರಡೂ ವಿಚಾರದಿಂದ ಮೇಲ್ತರಗತಿಯವಾಗಿದ್ದುವು.

ಸುಮಾರು ಮೂವತ್ತು ಪ್ರತಿನಿಧಿಗಳಿಂದ ಕೂಡಿದ ಕರ್ನಾಟಕ ಸಂಘ-ಸಂಸ್ಥೆಗಳ ಸಮ್ಮೇಲನವು ಈ ಅಧಿವೇಶನದ ಇನ್ನೊಂದು ಹೆಚ್ಚುಗಾರಿಕೆಯಾಗಿದೆ. ಕನ್ನಡದ ಏಳ್ಗೆಯೆ ತಮ್ಮ ಹೆಗ್ಗುರಿಯಾಗಿ ಇಟ್ಟುಕೊಂಡು ದುಡಿಯುವ ಕೆಲಸಗಾರರಲ್ಲಿ ಸೌಹಾರ್ದ ಸಾಮರಸ್ಯವನ್ನು ಹುಟ್ಟಿಸಲು ಇಂತಹ ಸಂದರ್ಭಗಳು ಅತ್ಯಗತ್ಯವಾಗಿವೆ. ಇಂದಿನ ಕನ್ನಡಿಗರ ಸಂಘಗಳು ಮುಂದಿನ ಕರ್ನಾಟಕದ ತಳಹದಿಯು. ಒಂದು ಮೂಲೆಯ ಒಬ್ಬ ಕನ್ನಡಿಗನಿಗೆ ನೋವಾದರೆ, ಅಖಿಲ ಕರ್ನಾಟಕಕ್ಕೆ ನೋವಾದಂತೆ. ಒಬ್ಬ ಕನ್ನಡಿಗನ ಕೂಗು ವಿಶಾಲ ಕರ್ನಾಟಕದ ಕೂಗು ಎಂಬ ಜೀವಾಳವು ಕನ್ನಡಿಗರಲ್ಲಿ ಜಾಗೃತವಾಗಬೇಕು. ಜಮುಖಂಡಿಯಲ್ಲಿ ಮೊದಲಡಿಯಿಟ್ಟ ಈ ಯೋಜನೆಯು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಲ್ಲಿ ಕರ್ನಾಟಕದ ಪ್ರಗತಿರಥವು ವೇಗದಿಂದ ಸಾಗುವುದು ಎಂದು ಹಾರಯಿಸಲಾಗಿದೆ.

ಇಂದಿಗೆ ಒಂದು ವರ್ಷ ಹಿಂದೆ ಹಂಪೆಯಲ್ಲಿ ನೆರವೇರಿದ ವಿಜಯನಗರ ಸಾಮ್ರಾಜ್ಯದ ಷಟ್ಶತ ಸಾಂವತ್ಸರಿಕ ಸ್ಮಾರಕೋತ್ಸವದ ವರದಿಯು ಇದೇ ಸಮಯಕ್ಕೆ ... ಸಂಮೇಲನಕ್ಕೆ ಇನ್ನೊಂದು ಶೋಭೆಯನ್ನು ...

ಸಂಮೇಲನದ ಕೋಲಾಹಲದಲ್ಲಿಯೂ ... ಹೊಸ ಜೀವಜ್ಯೋತಿಗಳು ಮಿಂಚಿ ಮೂಡಿದ್ದು ... ಕನ್ನಡದ ರಸಋಷಿಗಳಾದ ಶ್ರೀಮಾನ್ ... ಶ್ರೀಕಂಠಯ್ಯನವರು ತಮ್ಮ ವಿನಯ, ವಕ್ತೃತ್ವ ... ಯಿಂದ ಎಲ್ಲರನ್ನೂ ಮುಗ್ಧಗೊಳಿಸಿದರು. ... ಮಾಸ್ತಿಯವರು ಸರಸಮಧುರಸಲ್ಲಾಪಗಳ ... ಲ್ಲಿಯೂ 'ಹೊಸ ಕಣ್ಣ'ನ್ನು ಬೀರುತ್ತ ... ಬಳಗವನ್ನು ಬೆರಗುಗೊಳಿಸಿದರು. ಶ್ರೀಮಾ ... ವೀಡು ಕೃಷ್ಣರಾಯರ ವೀರವಾಣಿಯು ಕನ್ನ ... ತನವನ್ನು ದೂರ ಓಡಿಸಿತು. ಶ್ರೀ. ಕುಲಕರ್ಣಿ ... ನೃತ್ಯಪ್ರೌಢಿಮೆಯು ಕಲಾಪ್ರಿಯರನ್ನು ಬಹುವಾ ... ಇವರಿಂದ ಸ್ಫೂರ್ತಿಗೊಂಡ ಬಾಗಲಕೋ ... ಶ್ರೀಪಾದ ದೇಶಪಾಂಡೆ ಮತ್ತು ನವಬಾಲಿಕೆಯ ... ಪಳ್ಳಿ ಕೃಷ್ಣಾ ಇವರು ಮೊದಲುಬಾರಿ ಕರ್ನಾ ... ರಂಗದಲ್ಲಿ ಪದಾರ್ಪಣ ಮಾಡಿದರು.

ನವಕರ್ನಾಟಕವು ನಿರ್ಮಾಣವಾಗಿದೆ ... ಸಮ್ಮೇಲನವೊಂದು ಹಿರಿದಾದ ಪ್ರಮಾಣ. ... ನವಚೈತನ್ಯವು ಸ್ಫುರಿಸುತಲಿರದಿದ್ದರೆ ಜಮು ... ಹಳ್ಳಿ ಇಂತಹ ಸಮ್ಮೇಲನವು ಈ ರೀತಿಯ ... ಯಾಗುತ್ತಿರಲೆ ಇಲ್ಲ. ಕನ್ನಡಿಗನು ಎದ್ದ ... ಆತನಿಗೆ ಇದಿರಾರು?

ಬಹುಕಾಲ ಬರದ ಬವಣೆಯಿಂದ ... ಭೂಪ್ರದೇಶದಲ್ಲಿ ಸಮೃದ್ಧಿ ಮಳೆಯಾದಂತೆ ... ಸಂಮೇಲನ. ಈ ನಾಡಿನಲ್ಲಿ ಕನ್ನಡದ ಬಡತನ ... ಈ ಸುವೃಷ್ಟಿಯಿಂದ ಕನ್ನಡದ ಎಷ್ಟು ಬೀಜ ... ತವು; ಎಷ್ಟು ಸಸಿಗಳು ಚಿಗಿತವು; ಎಷ್ಟು ಸಸಿ ... ದುವು; ಯಾರು ಹೇಳಬೇಕು?

ಯಾವ ಜಮುಖಂಡಿಯಲ್ಲಿ ಕನ್ನಡದ ಹೆ ... ಕಳವಾಗಿತ್ತೊ ಆ ಜಮುಖಂಡಿಯಲ್ಲಿ ಕನ್ನ ... ಭೇರಿಯು ಮೊಳಗಿತು; ಮೊಳಮೊಳಗಿತು. ... ಭೇರಿಯು ವಿರೋಧಿಗಳ ಸದ್ದನ್ನು ಅಡಗಿಸಿ ... ಸೀನರನ್ನು ಉನ್ಮುಖಗೊಳಿಸಿತು. ಒಲಿದವ ... ಒಲಿಯಿಸಿತು. ಅತ್ತಲಿನ ಕರ್ನಾಟಕಸ್ಥರು, ... ಕರ್ನಾಟಕಸ್ಥರು ಎಂಬ ಬಯಕೆಗಳು ಬತ್ತಿ ... ಸ್ಥರೆಲ್ಲರೂ ಒಂದು, ಎಲ್ಲರೂ ಕನ್ನಡಿಗರು ಎ ...


...ನ್ನು ಬೆಳೆಯಿಸಿತು. ವಿಮುಖರಾದ ಅರಸರು ಶುಭ ಸಂದೇಶವನ್ನು ಅರುಹಿ ಕನ್ನಡ ಮೂರ್ಧನ್ಯರಿಗೆ ತಮ್ಮ ...ರಮನೆಯಲ್ಲಿ ಸ್ವಾಗತಸನ್ಮಾನಗಳನ್ನು ನೀಡುವಂತಹ ...ವರು.


ಇದೆಲ್ಲವು ಆಗತಕ್ಕದ್ದು, ಆದುದು. ಆಗಬೇಕಾದುದು ...ಂದೆಯೆ ಇದೆ. ಅಪಾರವಾಗಿದೆ, ಅನಂತವಾಗಿದೆ. ಆ ಗುರಿಯತ್ತ ಕನ್ನಡಿಗನು ಸಾಗಲಿ. ಭರದಿಂದ ಸಾಗಲಿ. ಅದರಲ್ಲಿಯೆ ಜಮುಖಂಡಿಯ ಜಯಭೇರಿಯ ಸಾರ್ಥಕ್ಯ.

ಕೊನೆಯದಾಗಿ ಈ ಸಮ್ಮೇಲನವನ್ನು ಯಶಸ್ವಿಗೊಳಿಸಲು ಸಹಾಯಕರಾಗಿ ಮನಮುಟ್ಟಿ ದುಡಿದ ಮಹನೀಯರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು, ಅಭಿವಂದನೆಗಳು.

...ಟದ ಯುದ್ಧವೋ, ...ಯುದ್ಧದ ಆಟವೋ ?

...ನೋರಂಜನೆಯ ಸಾಧನ ...ದು ಚದುರಂಗದಾಟ ...ನ್ನು ಆಡುವುದು ಎಲ್ಲರಿಗೂ ...ತ್ತು. ಇದು ಅಂತಹದೇ ...ದು ತಾವೆನ್ನಬಹುದು. ...ಗಲ್ಲ. ಯುದ್ಧಶಾಸ್ತ್ರದ ...ಗವಾಗಿದೆ ಈ ಆಟ. ...ನೆಯಲ್ಲಿ ಸೇರ್ಪಡೆಯಾದ ...ಗೆ ಯುದ್ಧದ ವ್ಯೂಹ ...ನ್ನೂ ಸೈನ್ಯದ ಸರಿದಾಟ ...ನ್ನೂ ಕಲಿಸಲು ಚದುರಂಗ ...ಟದ ಉಪಯೋಗವನ್ನು ...ಡಿಕೊಳ್ಳುತ್ತಿದ್ದಾರೆ.





ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೭-೦-೦.
ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೨-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ

'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮು ಚಂದಾದಾರರಿಗೆ ತಿಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಯಾಕೆಂದರೆ ಅದರಿಂದ ವ್ಯರ್ಥ ಅಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ವೆಚ್ಚಕ್ಕೆ ಗುರಿಯಾಗುವುದು ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ; ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಮಾಧ್ಯಮ.

ಜಾಹೀರಾತುದಾರರು ೨೫% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾ ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

	ವರ್ಷ.	೬ ತಿಂಗಳು.	೩ ತಿಂಗಳು.
ಒಂದು ಪುಟಕ್ಕೆ	೧೮೦ ರೂ.	೯೫ ರೂ.	೫೦ ರೂ.
ಅರ್ಧ ಪುಟಕ್ಕೆ	೯೫ ,,	೫೦ ,,	೩೦ ,,
೧/೪ ಪುಟಕ್ಕೆ	೫೦ ,,	೩೦ ,,	೨೦ ,,
೧/೮ ಪುಟಕ್ಕೆ	೩೦ ,,	೨೦ ,,	೧೨ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ಹೆಚ್ಚಿನ ವಿವರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು

ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಿಕೀಟೊಂದನ್ನು ಇಡಬೇಕು. (೨) ತಮ್ಮ ಲೇಖ ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಿಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖ ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು ಮಾರ್ಜಿನ್ ಬಿಡಬೇಕು. (೪) ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಲೇಖನಗಳು ಜಯಕರ್ನಾಟಕಕ್ಕೆಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗ ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾ ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರ "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾ

ನಾಗಜನಾಂಗ*

ಲೇಖಕರು: ಶ್ರೀ. ದೇಸಾಯಿ ಪಾಂಡುರಂಗರಾಯರು, ಎಂ. ಎ.
ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಧಾರವಾಡ.

ನಾಗರು ದ್ರಾವಿಡಪೂರ್ವ ಜನಾಂಗವು. ಆರ್ಯರು 'ದಸ್ಯು'ಗಳನ್ನು ಕೊನೆಗೆ ಮನುಷ್ಯ ಕೋಟಿಗೆ ಸೇರಿಸಿದರಾದರೆ, 'ನಾಗ'ರನ್ನು ಅ-ಮಾನುಷರನ್ನಾಗಿ ಕಂಡರು. ತಕ್ಷಕ, ವಾಸುಕಿ, ಶೇಷ, ಅನಂತರು ನಾಗಕುಲ ಸಂಸ್ಥಾಪಕರು. ಆರ್ಯ-ನಾಗ ರಕ್ತಸಂಬಂಧ ಪ್ರಾರಂಭವಾಯಿತು. ಹಲವು ಬ್ರಾಹ್ಮಣ ಋಷಿಗಳು ನಾಗಕನ್ನಿಕೆಯರೊಡನೆ ಬೆರೆತರು. ಅದೊಂದು ಸುರೂಪ-ಸುಸಂಸ್ಕೃತ ಜನಾಂಗ. ನಾಗರ 'ನಾಗರಿಕತೆ', 'ನಾಗರೀಲಿಪಿ'ಗಳೆ ಅವರ ಸಭ್ಯತೆಗೆ ಸಾಕ್ಷಿ. ನಾಗವಂಶವು ಆರ್ಯಾವರ್ತದಲ್ಲೆಲ್ಲಾ ಹರಡಿದ್ದರೂ, ದಕ್ಷಿಣ ಭಾರತವೇ ಅವರ ಹುಟ್ಟುನಾಡು. ಕನ್ನಡಿಗರಲ್ಲಿ ನಾಗರ ರಕ್ತವು ಹೆಚ್ಚಾಗಿ ಬೆರೆತಿದೆ; ಕರ್ನಾಟಕವೇ ಅವರ ಜನ್ಮಸ್ಥಾನವಾಗಿರಬಹುದೇ? ನಾಗರಖಂಡ, ನಾಗಮಂಡಲ, ನಾಗಮಂಗಲ, ನಾಗಲಾಂಬಿಕೆ, ನಾಗವರ್ಮ, ನಾಗದೇವ ಮುಂತಾದ ಹೆಸರುಗಳ ಐತಿಹ್ಯವನ್ನು ಪರಿಕಿಸುವುದು ಯುಕ್ತವಾಗಿದೆ. ಹೆಚ್ಚಿನ ಶೋಧನೆಯು ನಾಗರು ಕರ್ನಾಟಕಸ್ಥರು ಎಂದು ಸಿದ್ಧಗೊಳಿಸಬಹುದು. ಯಾರು ಬಲ್ಲರು? ಇತಿಹಾಸವು ಒಬ್ಬ ಮಾಂತ್ರಿಕ!

ವಿಷಯಸೂಚನೆ

ಒಂದು ಕಾಲದಲ್ಲಿ ಭಾರತೀಯ ಸಂಸ್ಕೃತಿಯು ತಿವಿಸ್ತಾರವಾಗಿ ಹಬ್ಬಿಕೊಂಡಿತ್ತು. ಮುಂದೆ ಈ ಸಂಸ್ಕೃ ಯು ಬಗೆಬಗೆಯ ವಿಪ್ಲವಗಳಿಗೆ ಈಡಾಗಿ ಖಿಲವಾಯಿತು, ನ್ನವಿಚ್ಛಿನ್ನವಾಯಿತು. ಯುಗ—ಯುಗಗಳು ಕಳೆದು ೋದುವು. ಆದರೂ ಅದರ ಕುರುಹುಗಳು ಪೂರ್ತಿಯಾಗಿ ಳಿದು ಹೋಗಲಿಲ್ಲ, ಅಳಿಸಿ ಹೋಗಲಿಲ್ಲ. ಸಂಶೋಧಕನ ರಾದ ಕಣ್ಣಿಗೆ ಅವು ಈಗ ದೊರೆಯುತ್ತಲಿವೆ. ಈ ಕಣ ಳನ್ನು ಆಯ್ದು ಆಯ್ದು ಅವುಗಳಿಂದ ಸಾಮಾನ್ಯರೂಪ ಖೆಗಳುಳ್ಳದಾದರೂ ಒಂದು ಚಿತ್ರವನ್ನು ಮತ್ತೆ ರ್ಮಿಸಿ, ಜೀವಕಳೆ ತುಂಬಿ ತೋರಿಸುವುದು ಆಧುನಿಕ ಂಶೋಧಕನ ಕಾರ್ಯವಾಗಿದೆ. ಮೇಲೆ ಪ್ರಯೋಗಿಸಿದ ದವು ಸಹೇತುಕವಾಗಿ ಭಾರತೀಯ ಸಂಸ್ಕೃತಿ ಎಂದಿದೆ, ಆರ್ಯಸಂಸ್ಕೃತಿ' ಎಂದಲ್ಲ ಎಂಬುದನ್ನು ಗಮನಿಸ ೇಕು.

ಭಾರತೀಯ ಸಂಸ್ಕೃತಿಯ ಕುರುಹುಗೆಟ್ಟ ಹೆಗ್ಗುರುಹು ಳಲ್ಲಿ ನಾಗಜನಾಂಗವು ಒಂದು. ಇದರ ಕುರುಹುಗಳು ೇರಳವಾಗಿ ದೊರೆಯುತ್ತವೆ. ಆದರೆ ಅವು ಒಂದೆಡೆಗೆ ೊರೆಯುವುದಿಲ್ಲ. ಒಂದು ರೂಪಾಗಿ ದೊರೆಯುವುದಿಲ್ಲ: ಟ್ಟಿಗೆಟ್ಟು, ರೂಪಗೆಟ್ಟು, ಬಣ್ಣಗೆಟ್ಟು, ತಿರುಳುಗೆಟ್ಟು, ವಿಕಾರವಾಗಿ ಎಲ್ಲೆಲ್ಲಿಯೊ ದೊರೆಯುತ್ತಲಿವೆ. ಈ ಮೂಲ ಕವೊ ಏನೊ, ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಂಶೋಧಕರ ದೃಷ್ಟಿಯು ಇದುವರೆಗೆ ಈ ವಿಷಯದತ್ತ ಸಾಕಷ್ಟು ಹೊರಳಿಲ್ಲ. ಈ ಕೊರತೆಯನ್ನು ಕೆಲಮಟ್ಟಿಗೆ ಹೋಗಲಾಡಿಸುವ ಕುತೂಹಲದಿಂದ ನಾನಿಂದು ಈ ವಿಷಯವನ್ನು ಆರಿಸಿಕೊಂಡಿದ್ದೇನೆ. ಈಗಿಲ್ಲಿ ನಾನು ಮಾಡುತ್ತಿರುವುದು ಈ ವಿಷಯದ ವ್ಯಾಪಕವಾದ ವಿವೇಚನೆಯಲ್ಲ, ಬರಿಯ ದಿಗ್ದರ್ಶನ ಮಾತ್ರ. ಅಲ್ಪಕಾಲದ ಅಲ್ಪವಾದ ನನ್ನ ಅವಲೋಕನಕ್ಕೆ ಒದಗಿರುವ ಕೆಲ ಮಾತುಗಳನ್ನು ಎತ್ತಿಕೊಂಡು ಸೂಚನಾತ್ಮಕವಾಗಿ ತಮ್ಮ ಮುಂದೆ ಇರಿಸುತ್ತಿರುವೆನು. ಇದರಿಂದ ಈ ಪ್ರಮೇಯಕ್ಕೆ ಚಾಲನೆಯು ದೊರೆಯಬೇಕು, ಹೆಚ್ಚಿನ ಸಂಶೋಧನಗಳು ನಡೆಯಬೇಕು ಎಂದು ಹಾರಯಿಸುವೆನು.

ಸಾಧನಸಾಮುಗ್ರಿ

ನಾಗಜನಾಂಗವನ್ನು ಕುರಿತು ಅರಿತುಕೊಳ್ಳುವವನು ಪರಿಶೋಧಿಸಬೇಕಾದ ಸಾಮುಗ್ರಿಯು ಬಹುವಿಸ್ತೃತವಾಗಿದೆ, ವಿವಿಧವಾಗಿದೆ, ವಿಕೀರ್ಣವಾಗಿದೆ. ಆತನು ಸಂಸ್ಕೃತ ಸಾಹಿತ್ಯವನ್ನು ಸಂಶೋಧಿಸಬೇಕು, ಪ್ರಾಕೃತಸಾಹಿತ್ಯ

* ಬೆಳಗಾವಿಯ ಅಭ್ಯಾಸಮಂಡಲದ ಸಾಹಿತ್ಯೋತ್ಸವದ ಪ್ರಬಂಧ ಗೋಷ್ಠಿಯಲ್ಲಿ (೧೯-೧೨-೩೭) ಓದಿದ ಪ್ರಬಂಧ.

ವನ್ನು ಪರಿಶೀಲಿಸಬೇಕು, ದೇಶ್ಯಭಾಷಾಸಾಹಿತ್ಯವನ್ನು ಅವ ಲೋಕಿಸಬೇಕು. ಆತನು ವೈದಿಕಸಾಹಿತ್ಯವನ್ನು ಪ್ರವೇಶಿಸಬೇಕು, ಬೌದ್ಧಸಾಹಿತ್ಯವನ್ನು ಪರೀಕ್ಷಿಸಬೇಕು, ಜೈನ ಸಾಹಿತ್ಯವನ್ನು ಜಾನಿಸಬೇಕು. ಆತನು ಇತಿಹಾಸ-ಪುರಾಣಗಳನ್ನು ಕಾವ್ಯ-ಪ್ರಬಂಧ-ನಾಟಕಾದಿಗಳನ್ನು ತಿರುವಿ ಹಾಕಬೇಕು. ಆತನು ವೇದಕಾಲ, ವೇದಪೂರ್ವಕಾಲದಿಂದ ಆಧುನಿಕ ಕಾಲದ ವರೆಗೆ ಕಣ್ಣುಗಳನ್ನು ಅರಳಿಸಿ ಅರಳಿಸಿ ನೋಡಬೇಕು. ಹೀಗೆ ಇಷ್ಟು ಪರಿಶ್ರಮ ಮಾಡುವವನು, ಮಾಡಿದವನು ಈ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲನು. ಇಂತಹನೇ ಕೊನೆಯ ನಿರ್ಣಯವನ್ನು ಹೇಳಬಲ್ಲನು. ಅದುವರೆಗೆ ಬೇರೆಯವರು ಬಳಸಿದ ವಿಚಾರಗಳೆಲ್ಲ ಹೆಚ್ಚುಕಡಿಮೆ ಊಹೆಗಳು, ಸೂಚನೆಗಳು.

ಸಂಕ್ಷಿಪ್ತ ಚರಿತ್ರೆ

ನಾಗಜನಾಂಗದ ಕುರುಹುಗಳು ಭಾರತದ ಮತ್ತು ವಿಶಾಲಭಾರತದ (Greater India) ಎಲ್ಲ ಭಾಗಗಳಲ್ಲಿ ಸಿಕ್ಕುವುವು. ಕಾಶ್ಮೀರದಿಂದ ಲಂಕೆಯ ವರೆಗೆ ಪೇಶಾವರದಿಂದ ಬ್ರಹ್ಮದೇಶದ ವರೆಗೆ ನಾಗಜನಾಂಗದ ಚಿನ್ಹಗಳು ಹರಡಿಕೊಂಡಿವೆ. ಸಾಲದುದಕ್ಕೆ ಜಾವಾ, ಸುಮಾತ್ರಾ ಮೊದಲಾದ ದ್ವೀಪಗಳಲ್ಲಿಯೂ ಈ ಜನಾಂಗದ ಸುಳಿವುಗಳನ್ನು ಕಾಣಬಹುದು. ಇದರಿಂದ ಈ ಜನಾಂಗವು ಬಹು ವ್ಯಾಪಕವೂ ಅತಿಪ್ರಭಾವಶಾಲಿಯೂ ಆಗಿದ್ದಿತು, ಎಂದು ತಿಳಿಯಬಹುದಾಗಿದೆ. ಮುಂದೆ ತೋರಿಸಲಿರುವ ಪ್ರಮಾಣ ಬಲದಿಂದ ನಾಗಜನಾಂಗವು ಸುಸಂಸ್ಕೃತವೂ ಆಗಿದ್ದಿತು ಎಂದು ಖಂಡಿತವಾಗಿ ಹೇಳಬಹುದು. ಆರ್ಯ-ಜನಾಂಗದ ಪ್ರಾಚೀನತಮ ಸಾಹಿತ್ಯವಾದ ವೇದಗಳಲ್ಲಿ ಆರ್ಯ ಮತ್ತು ಆರ್ಯೇತರವಾದ ಕೆಲವು ಜನಾಂಗಗಳ ನಿರ್ದೇಶವು ಬರ್‍ತ್ತದೆ. ಆದರಲ್ಲಿ ನಾಗಜನಾಂಗದ ನಿರ್ದೇಶವು ಯಥಾರ್ಥವಾಗಿ ದೊರೆಯುವುದಿಲ್ಲ. ಈ ಕಾಲದ ಆರ್ಯರಲ್ಲಿ ನಾಗರ ಬಗೆಗೆ ಅದ್ಭುತರಮ್ಯವಾದ ಕಲ್ಪನೆಗಳು ರೂಢವಾಗಿದ್ದುವು. ಇದರಿಂದ ನಾಗಜನಾಂಗವು ವೇದಕಾಲದ ಆರ್ಯಜನಾಂಗಕ್ಕೆ ಬಹು ದೂರಿನದೂ ಬಹುಕಾಲ ಹಿಂದಿನದೂ ಆದ ಜನಾಂಗವಾಗಿರಬೇಕು ಎಂದು ತೋರುತ್ತದೆ. ನಾಗಜನಾಂಗದ ವಿಷಯದಲ್ಲಿ ಇಲ್ಲಿ ನಾವು ಮೊದಲು ಮೂರು ಮಾತುಗಳನ್ನು ಕಂಡುಕೊಂಡಂತಾಯಿತು:

೧. ಈ ಜನಾಂಗವು ಅತಿಪ್ರಾಚೀನವಾಗಿತ್ತು.
೨. ಈ ಜನಾಂಗವು ಅತಿಪ್ರಭಾವಶಾಲಿಯಾಗಿತ್ತು.
೩. ಈ ಜನಾಂಗವು ಸುಸಂಸ್ಕೃತವಾಗಿತ್ತು

ಇದು ಆರ್ಯೇತರ ಜನಾಂಗವು

ನಾಗಜನಾಂಗವು ಆರ್ಯ ಜನಾಂಗವೆ ಆರ್ಯರ ಪ್ರಾಚೀನ ಸಾಹಿತ್ಯದಲ್ಲಿ ಕೆಲವು ಕಡೆ ಆದರ ಯಥಾರ್ಥವಾದ ನಿರ್ದೇಶವು ಬರುತ್ತಲಿ ಹಾಗೆ ಬಂದಿಲ್ಲ. ಆರ್ಯರು ನಾಗರನ್ನು ಹೊ ದೂರಿನವರಾಗಿ ಕಾಣುತ್ತಿದ್ದರು ಎಂದು ಅಲ್ಲದೆ, ಆರ್ಯರು ನಾಗರೊಡನೆ ದ್ವೇಷ ವೈರಭಾವದಿಂದಲೂ ವರ್ತಿಸಿದರು ಎಂಬ ನನ ಖಾಂಡವದಾಹದ ಕತೆಯಿಂದಲೂ ಜನ ಸರ್ಪಯಾಗದ ಆಖ್ಯಾನದಿಂದಲೂ ಸ್ಪಷ್ಟ ಆದುದರಿಂದ ನಾಗರು ಆರ್ಯೇತರ ಜನಾಂಗ ಬೇಕು.

ಆರ್ಯೇತರರೆಂದರೆ ದ್ರಾವಿಡರೆ?

ಆರ್ಯರ ಕಾಲದಲ್ಲಿಯೂ ಆರ್ಯರ ಪೂ ಇಲ್ಲಿ ಅನೇಕ ಜನಾಂಗಗಳು ನೆಲಸಿರಬೇಕು. ಈ ವಿಂಗಡಿಸಿ ಹೇಳಲಿಕ್ಕೆ ಇದು ವರೆಗೆ ಯಾವ ನಿಗೂ ಸಾಧ್ಯವಾಗಿಲ್ಲ. 'ಮೂಗಿಲಿ,' ಅಧಾರ್ಮಿಕ, ಪಾಖಂಡಿ ಎಂದು ಆರ್ಯರಿಂದ ಆಗಾಗ ಹೀಯಾ ಜನರು ಯಾರು ಎಂಬುದನ್ನು ಸರಿಯಾಗಿ ಬ ವುದು ಸುಲಭವಲ್ಲ. ಇವರು ದ್ರಾವಿಡರು ಎಂದು ವಾಗಿ ಎಲ್ಲರೂ ಊಹಿಸುತ್ತಲಿದ್ದಾರೆ. ದ್ರಾ ಪ್ರಾಚೀನರಾದ ಜನರೂ ಇಲ್ಲಿ ಇದ್ದರು ಎಂ ಕೆಲವರು ನುಡಿಯುತ್ತಲಿದ್ದಾರೆ. ನಾಗರು ದ್ರಾ ಜನಾಂಗವು ಆಗಿರಬಹುದು ಎಂದು ಊಹಿಸಲು ವಿದೆ. ಆರ್ಯರಿಗೆ ದ್ರಾವಿಡರು ದಸ್ಯುಗಳಾಗಿ ಎಷ್ಟಾದರೂ ಕೊನೆಗೆ ಆರ್ಯರು ದಸ್ಯುಗಳನ್ನು ಕೋಟೆಗೆ ಸೇರಿಸಿದರಲ್ಲವೆ ? ಆದರೆ ನಾಗರು ಅವರಿಗೆ ಅಮಾನುಷರಾಗಿ ಕಂಡರು. ಶೇ 'ಸಾಧ್ಯ'ನು, ನಾಗನೆಂದರೆ ಹಾವು, ನಾಗನೆಂದರೆ ಮುಖ —ಹಾವಿನ ದೇಹವುಳ್ಳ ಒಂದು ವಿಚಿ ಮುಂತಾಗಿ ಭಾವಿಸಿದರು. ಇದರಿಂದ ನಾಗರು ಪೂರ್ವ ಜನಾಂಗವಾಗಿರಬಹುದು, ಎಂದು ಬೇಕಾಗುತ್ತದೆ. ಆರ್ಯರು ಒಕ್ಕಲಾಗುವ ಕ ಜನಾಂಗದ ಅನೇಕ ಬೀಡುಗಳು ಅಲ್ಲಲ್ಲಿ ನೆ ಎಂದು ಮಹಾಭಾರತಾದಿ ಗ್ರಂಥಗಳಿಂದ ವ್ಯಕ್ತ

ಆರ್ಯ—ನಾಗ ಸಂಕರ

ಆರ್ಯ-ದ್ರಾವಿಡರಲ್ಲಿ ಶರೀರಸಂಬಂಧಗಳು ಬೆಳೆದಂತೆ, ಆರ್ಯ-ನಾಗರಲ್ಲಿಯೂ ರಕ್ತದ ಬಳಕೆಯು ಉಂಟಾಯಿತು. ಇದಕ್ಕೆ ಬೇಕಾದಷ್ಟು ಆಧಾರಗಳಿವೆ. ಯದುರಾಜನು ನಾಗಕನ್ಯೆಯರನ್ನು ಮದುವೆಯಾದನು. ಕುಶರಾಜನಿಗೆ ನಾಗಕುಮಾರಿಯೊಬ್ಬಳು ಹೆಂಡತಿಯಾಗಿದ್ದಳು. ಅರ್ಜುನನ ಅರ್ಧಾಂಗಿಯೂ ಬಭ್ರುವಾಹನನ ತಾಯಿಯೂ ಆದ ಚಿತ್ರಾಂಗದೆಯು ನಾಗಕುಲದವಳು. ಅನೇಕ ಬ್ರಾಹ್ಮಣಋಷಿಗಳೂ ನಾಗವಧುಗಳೊಡನೆ ಬೆರೆತ ಸಂಗತಿಗಳನ್ನು ಪುರಾಣಗಳು ಉಸಿರುವುವು. ಈ ಸಂದರ್ಭದಲ್ಲಿ ಜರತ್ಕಾರು ಋಷಿಯ ವೃತ್ತಾಂತವು ಸುವಿಶ್ರುತವಾಗಿದೆ. ಈ ಋಷಿಯಿಂದ ನಾಗರಾಜ ವಾಸುಕಿಯ ತಂಗಿಯಾದ ಜರತ್ಕಾರುವಿಗೆ ಹುಟ್ಟಿದ ಮಗನೆ ಪುಣ್ಯಶ್ಲೋಕನಾದ ಆಸ್ತಿಕ ಋಷಿಯು. ಸರ್ಪಬಾಧೆಯಾಗದಿರಲೆಂದು ಮಲಗುವಾಗ ಅನೇಕರು ಈಗಲೂ ಈತನ ಹೆಸರನ್ನು ನೆನೆಯುವರು. ಸುವಿಖ್ಯಾತ ಬೃಹತ್ಕಥೆಯ ಜನಕನಾದ ಗುಣಾಢ್ಯನು ಬ್ರಾಹ್ಮಣಕುಮಾರಿಗೆ ನಾಗರಾಜಕುಮಾರನಿಂದ ಜನಿಸಿದನು ಎಂದು ಕಥಾಸರಿತ್ಸಾಗರವು ನುಡಿಯುತ್ತದೆ.

ಆರ್ಯರ ಸಂಗ್ರಹಕೌಶಲ

ಈ ಮೇರೆಗೆ, ಒಂದೆಡೆಗೆ ಅಮಾನುಷರೆಂದು ಹೆದರಿಸುತಲೂ, ಕ್ರೂರಜಂತುವೆಂದು ತಿರಸ್ಕರಿಸುತ್ತಲೂ ಇರುವಾಗ, ಚತುರರಾದ ಆರ್ಯರು ಇನ್ನೊಂದೆಡೆಗೆ ನಾಗರೊಡನೆ ಹೆಚ್ಚು ಹೆಚ್ಚು ಸಂಬಂಧಗಳನ್ನು ಬೆಳೆಸುತ್ತಲೆ ಇದ್ದರು. ಬರಬರುತ್ತ ನಾಗಜನಾಂಗದ ಮಹಾಪುರುಷರು ಆರ್ಯರ ಇತಿಹಾಸ-ಪುರಾಣಗಳಲ್ಲಿಯೂ ಪ್ರವೇಶ ಮಾಡಿ ಮುಖಸ್ಥಾನವನ್ನು ಪಡೆದರು. ನಾಗರ ಕುಲಸ್ಥಾಪಕರೆ ನಾಮಾಂಕಿತರಾದವರು ತಕ್ಷಕ, ವಾಸುಕಿ, ಶೇಷ, ಅನಂತ, ಇ.. ಇವರಲ್ಲಿ ತಕ್ಷಕನು ಕಡೆಯುವರೆಗೆ ಆರ್ಯವೈರಿಯೆ ಆಗಿ ಉಳಿದನು. ಆದರೆ ವಾಸುಕಿಯು ಮಾತ್ರ ಆರ್ಯರಿಗೆ ಬೇಕಾದವನಾದನು. ಈತನ ನೆರವಿನಿಂದಲೆ ದೇವತೆಗಳಿಗೆ ಅಮೃತಪ್ರಾಪ್ತಿಯಾಯಿತು. ಶೇಷನು ನಾರಾಯಣನ ಹಾಸಿಗೆಯೂ ಈ ಪೃಥ್ವಿಗೆ ಆಧಾರವೂ ಆದನು. ಅನಂತನಂತೂ ಪ್ರತ್ಯಕ್ಷವಾಗಿ ಪರಮಾತ್ಮನ ವಿಭೂತಿಯೆನಿಸುವ ಘನತೆಯನ್ನು ಹೊಂದಿದನು. ಅನಂತಶ್ಚಾಸ್ಮಿ ನಾಗಾನಾಂ—ಗೀತಾ. ಈಗಲೂ ಭಾದ್ರಪದ ಶುದ್ಧ ಚತುರ್ದಶಿಯ ದಿನ ಅನಂತನ ವ್ರತ-ಪೂಜೆಗಳು ಕೆಲವೆಡೆಗಳಲ್ಲಿ ನಡೆಯುವುವು.

ನಾಗಜನಾಂಗದ ಮೂಲ

ಇಂತು ಅನೇಕ ವ್ಯತ್ಯಾಸಗಳನ್ನು ಹೊಂದಿ ಭಿನ್ನಭಿನ್ನ ಸ್ವರೂಪದಲ್ಲಿ ಪ್ರಕಟವಾಗುವ ನಾಗಜನಾಂಗದ ಮೂಲವನ್ನು ನಿರ್ಧರಿಸಿ ಹೇಳುವುದು ಅಷ್ಟು ಸುಲಭವಲ್ಲ. ಅದು ಏನೆ ಇರಲಿ, ನಾಗ ಎಂದರೆ ಹಾವು ಅಲ್ಲ, ಅದೊಂದು ಜನಾಂಗವೆಂಬುದು ಮಾತ್ರ ನಿಶ್ಚಿತವೆಂದು, ಮೇಲೆ ಸೂಚಿಸಿದಂತೆ ಪ್ರಾಚೀನ ಸಾಹಿತ್ಯವನ್ನು ಪರೀಕ್ಷಿಸಿದರೆ ಮನವರಿಕೆಯಾಗದಿರದು. ಹಾಗಾದರೆ, ನಾಗಶಬ್ದಕ್ಕೆ ೧. ಹಾವು, ೨. ಆನೆ, ೩. ಮೊಸಳೆ ಮುಂತಾದ ಅರ್ಥಗಳು ಹೇಗೆ ಉಂಟಾದುವು ಎಂಬ ಪ್ರಶ್ನೆಯು ಹುಟ್ಟುತ್ತದೆ. ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಹೇಳಬಹುದು. ಸಾಮಾನ್ಯವಾಗಿ ಭೂಮಿಯ ಮೇಲಿನ ಅನೇಕ ಪ್ರಾಚೀನ ಜನಾಂಗಗಳಂತೆ ನಾಗರಾದರೂ ಮೊದಮೊದಲು ಗುಡ್ಡ, ಕಾಡು, ಹಳುವು, ಕೊಳ ಇವುಗಳ ಪ್ರದೇಶದಲ್ಲಿ ವಾಸಿಸುತ್ತಿರಬೇಕು. ಈ ಸಂದರ್ಭದಲ್ಲಿ ರೆಡ್ ಇಂಡಿಯನರ ಚರಿತ್ರೆಯನ್ನು ನೆನೆದುಕೊಳ್ಳಬಹುದು. ಇಂತಹ ಪ್ರದೇಶಗಳಲ್ಲಿ ಹಾವು, ಮೊಸಳೆ, ಕಾಡಾನೆ ಮುಂತಾದ ಪ್ರಾಣಿಗಳೂ ಬಾಳಿರಬಹುದು. ಅಲ್ಲದೆ ನಾಗರು ನಾಗಪೂಜಕರಾಗಿದ್ದು, ತಮ್ಮ ಮೈಮೇಲಾಗಲಿ, ಒಡವೆಗಳ ಮೇಲಾಗಲಿ ನಾಗಚಿನ್ಹೆಗಳನ್ನು ಬರೆದುಕೊಳ್ಳುತ್ತಿರಬಹುದು. ಕಾಡಾಡಿಗಳಾದ ಇವರು ಹಾವಿನಂತೆ ಚಪಳರೂ ನುಸುಳಿ ಹೋಗುವವರೂ ಆಗಿರಬಹುದು. ಈ ಮುಂತಾದ ಕಾರಣಗಳ ಮೂಲಕ ನಾಗಶಬ್ದಕ್ಕೆ ಮೇಲೆ ಕಾಣಿಸಿದ ಅರ್ಥಗಳು ಉಂಟಾಗಿ, ನಾಗನಾದವನು ಮನುಷ್ಯನಲ್ಲ, ಹಾವು ಎಂಬ ತಪ್ಪು ತಿಳಿವಳಿಕೆ ಬೇರೂರಿಕೊಂಡಿರಬಹುದು. ಆದುದರಿಂದ ನಾಗ ಎಂದರೆ ನಾಗಜನಾಂಗವೆಂಬುದು ಮುಖ್ಯಾರ್ಥ, ಹಾವು ಮುಂತಾದುವು ಗೌಣಾರ್ಥಗಳು ಎಂದು ಹೇಳಬೇಕಾಗುತ್ತದೆ.

ನಾಗಶಬ್ದಕ್ಕೆ ಸರಿಯಾದ ವ್ಯುತ್ಪತ್ತಿಯು ಸಿಕ್ಕಿಲ್ಲವೆಂದು ಸಂಸ್ಕೃತ ಕೋಶಕಾರರೆ ಒಪ್ಪಿಕೊಳ್ಳುತ್ತಾರೆ. ೧ ನಗ= ಪರ್ವತ, ಅಥವಾ ೨ ನಗ್ನ ಎಂಬುದರಿಂದ; ಎಂದು ಸೂಚಿತವಾದ ವ್ಯುತ್ಪತ್ತಿಗಳು ತೃಪ್ತಿಕರವಾಗಿಲ್ಲ. ಇವುಗಳಿಂದ ನಾಗರು ೧ ಪರ್ವತಪ್ರದೇಶದವರು, ೨ ಬತ್ತಲೆ ಇರುವವರು ಎಂಬ ಅಭಿಪ್ರಾಯಗಳನ್ನು ಸಾಧಿಸಿಕೊಳ್ಳಬಹುದು. ಆದರೆ ಸಂಸ್ಕೃತ ಪಾಂಡಿತ್ಯದ ಈ ದೃಷ್ಟಿಯು ಎಷ್ಟರ ಮಟ್ಟಿಗೆ ಯಥಾರ್ಥವಾಗಿದೆ ಎಂಬುದು ವಿವಾದಾಸ್ಪದ.

ಸರ್ಪಪೂಜಕರು, ಶಿವಪೂಜಕರು

ನಾಗರು ದ್ರಾವಿಡಪೂರ್ವ ಜನಾಂಗವೆ ಆಗಿದ್ದರೆ, ದ್ರಾವಿ

ಡರು ಸರ್ಪಪೂಜೆಯನ್ನು ನಾಗರಿಂದ ಎತ್ತಿಕೊಂಡಿರಬೇಕು. ಸರ್ಪಪೂಜೆಯಂತೆ ಶಿವಪೂಜೆಯೂ ದ್ರಾವಿಡ ಸಂಪ್ರದಾಯ ವೆಂದು ಸಂಶೋಧಕರು ಅಭಿಪ್ರಾಯಪಡುವರು. ಶಿವ ಪೂಜೆಯು ನಾಗಜನಾಂಗದಲ್ಲಿಯೂ ಪ್ರಚಲಿತವಾಗಿರ ಬೇಕು ಎಂಬುದಕ್ಕೆ ಕೆಲವು ಆಧಾರಗಳಿವೆ. ನಾಗವಂಶ ದವರಾದ ಭಾರಶಿವ ಅರಸರು ಕಟ್ಟಿನ ಶಿವಭಕ್ತರಾಗಿದ್ದರು. (J). ಇದನ್ನು ಆಲೋಚಿಸಿದಲ್ಲಿ, ಶಿವಪೂಜೆಯಾದರೂ ನಾಗರಿಂದ ದ್ರಾವಿಡರಲ್ಲಿ ಪ್ರಚುರವಾಯಿತು ಎಂದು ಹೇಳ ಬೇಕಾಗುತ್ತದೆ. ಹೀಗೆ ಶಿವ-ನಾಗರು ಒಂದೆಡೆಗೆ ಸಂಮಿಲಿತ ರಾಗಿ ಶಿವನು ನಾಗಭೂಷಣನಾದ ಚರಿತ್ರೆಯು ಸಂಶೋ ಧನಾರ್ಹವೂ ಮನೋರಂಜಕವೂ ಆಗಿದೆ.

ನಾಗರ ಕುರುಹುಗಳು

ಶತಪಥ ಬ್ರಾಹ್ಮಣ, ಐತರೇಯ ಬ್ರಾಹ್ಮಣ ಮತ್ತು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಮಹಾನಾಗ, ನಾಗರ ನಿರ್ದೇಶಗಳು ಬರುತ್ತವೆ. ಇಲ್ಲಿ ಈ ಶಬ್ದಕ್ಕೆ ಸುಮಾರಾಗಿ ಹಾವು, ಆನೆ ಎಂಬ ಅರ್ಥವು ಅಭಿಪ್ರೇತ ವಿದ್ದಂತೆ ತೋರುತ್ತದೆ.

ಮಹಾಭಾರತದಲ್ಲಿಯೂ ಪುರಾಣಗಳಲ್ಲಿಯೂ ನಾಗರು ಆಗಾಗ ಮಿಂಚುವರು. ಪೂರ್ವದಿಕ್ಕಿಗೆ ಆಸಾಮು ದಲ್ಲಿ ನಾಗಲೋಕವಿದ್ದು, ಅವರ ರಾಜಧಾನಿಯಾದ ಮಣಿಪುರವು ವಿಖ್ಯಾತವಾಗಿದೆ. ವಿಷ್ಣುಪುರಾಣದಲ್ಲಿಯೂ ಭಾಗವತದಲ್ಲಿಯೂ ಹಲವುಸಲ "ನವನಾಗ"ರ ಪ್ರಸ್ತಾ ಪವು ಬರುತ್ತದೆ. ಈ "ನವನಾಗ"ರೆ ಕ್ರೂರ ಕುಶಾನರ ಘೋರ ಪಾಶಗಳನ್ನು ಹರಿದೊಗೆದು ಭಾರತದ ದಾಸ್ಯ ವಿಮೋಚನೆಯನ್ನು ಮಾಡಿದ ಭಾರಶಿವರು ಎಂದು ಶ್ರೀ. ಜಯಸ್ವಾಲರು ಪ್ರತಿಪಾದಿಸಿದ್ದಾರೆ. [J].

ಲಲಿತವಿಸ್ತಾರ, ಮಹಾವಂಶ, ಮಿಲಿಂದಪ್ರಶ್ನ ಮುಂತಾದ ಬೌದ್ಧಗ್ರಂಥಗಳಲ್ಲಿ ನಾಗರು ಹೇರಳವಾಗಿ ತಲೆದೋರುವರು.

ಕಲ್ಹಣನ ರಾಜತರಂಗಿಣಿಯಲ್ಲಿ ಕಾಶ್ಮೀರದ ನಾಗ ಕುಲದ ಚರಿತ್ರೆಯು ಕೆಲಮಟ್ಟಿಗೆ ಸಿಕ್ಕುತ್ತದೆ. ನಾಗರು ಕಾಶ್ಮೀರದಲ್ಲಿ ಬಹುಕಾಲ ಆಳಿದರು. ಕಾಶ್ಮೀರದ ಮೊದಲ ನೆಯ ಅರಸನ ಹೆಸರು ನಾಗ. ಮುಂದೆ ಕರ್ಕೋಟ ಎಂಬ ನಾಗವಂಶವು ಆನೆಯ ಶತಮಾನದಲ್ಲಿ ಇಲ್ಲಿ ಅರಸು ಗೆಯ್ದಿತು. ನಾಗರಸರು ನಡೆಸಿದ ಇದೇ ಶತಮಾನದ ಅನೇಕ ನಾಣ್ಯಗಳು ಕಾಶ್ಮೀರದಲ್ಲಿ ದೊರೆತಿವೆ. [B. p. 54]

ನಾಗರಿಗೂ ಗುಪ್ತರಿಗೂ ವಿವಾಹಸಂಬ[illegible] ದಿತ್ತು. ನಾಗ ಮನೆತನದ ಕುಬೇರ ನಾಗಾ[illegible] ಚಂದ್ರಗುಪ್ತ ವಿಕ್ರಮಾದಿತ್ಯನ ಮಹಾರಾಜ್ಞಿ[illegible] ನಾಗಾಹಿಲ್ಸ ಎಂಬುದು ಆಸಾಮದ ಒಂದು [illegible] ಗಿದೆ. ಆಸಾಮುದಲ್ಲಿ ನಾಗಜಾತಿಯ ಜನರು [illegible] ಶೈವ, ವೈಷ್ಣವ, ಶೀಖಮತಗಳಲ್ಲಿ ನಾಗ ಎಂ[illegible] ಸ್ವತಂತ್ರ ಪಂಥವಿದೆ.

ಗಂಗಾನದಿಯ ಕಣಿವೆಯಲ್ಲಿ ವಾಸವಾ[illegible] ಬ್ರಾಹ್ಮಣರು ನಾಗಜನಾಂಗಕ್ಕೆ ಸಂಬ[illegible] ಎಂದು ಶ್ರೀ. ಜಯಸ್ವಾಲರು ಹೇಳುವರು. ಮಹಮ್ಮದೀಯರ ಕಾಲದಲ್ಲಿ ಕುಲಗೆಟ್ಟ ಮುಸಲ್ಮಾನರಾಗಿದ್ದಾರೆ.

ಪ್ರಾಚೀನ ಕಾಲದಿಂದ ನಡುಭಾರತದ ಮುಂತಾದ ಪ್ರದೇಶಗಳಲ್ಲಿ ನಾಗರ ಒಂದು [illegible] ಗಡ್ಡೆಯೆ ನೆಲಸಿತ್ತು. ಗಣಪತಿನಾಗನೆಂಬವ[illegible] ಗುಪ್ತನ ಕಾಲಕ್ಕೆ ಈ ಭಾಗದಲ್ಲಿ ಆಳುತ್ತಿದ್ದನ[illegible] ನಾಗರ ಒಂದು ಟೊಂಗೆಯವರು ರಾಜಪುತಾನ[illegible] ಪುರದ ಬಳಿ ಕರ್ಕೋಟನಗರ ಎಂಬ ಊರ[illegible] ದರು. [J. p. 53] ಮಧ್ಯಪ್ರಾಂತದ ಚಕ್ರ[illegible] ನಾಗವಂಶದ ಅರಸರು ಆಳುತ್ತಿದ್ದರು (೧೪ ಶ). [I. H. Q.].

ಬಹು ಪ್ರಾಚೀನ ಕಾಲದಿಂದಲೂ ದಕ್ಷಿಣ[illegible] ರಾಜ್ಯಗಳು ನೆಲಸಿದ್ದುವು. ಸಾತವಾಹನ [illegible] ಆಳಿದ ಬಳಿಕ, ದಕ್ಷಿಣ ಭಾರತದಲ್ಲಿ ಆಳಿದ [illegible] ಗಳಲ್ಲಿ ಮೂರು ಅಗ್ರಗಣ್ಯವಾಗಿರುವುವು: ಚುಟು, ನಾಗ. ಈ ಮೂರೂ ಮನೆತನಗ[illegible] ವಿವಾಹಸಂಬಂಧಗಳು ಉಂಟಾದುವು. ಪಲ್ಲ[illegible] ವಂಶಗಳು ನಾಗ ಹೆಂಗಳೆಯರಿಂದ ಮುಂ[illegible] (Dubreuil, 57).

ಹನ್ನೆರಡು ಹದಿಮೂರನೆಯ ಶತಮಾನ[illegible] ವಂಶದ ಅರಸರು ಬೇರೆಬೇರೆಯಾಗಿ ವಿಜಾ[illegible] ಯಲ್ಲಿಯೂ ಕೊಪ್ಪಳ ಜಿಲ್ಲೆಯಲ್ಲಿಯೂ ([illegible] ಆಳಿದರು. ಇವರು ನಾಗಕುಲದವರು.

ದಕ್ಷಿಣದಲ್ಲಿ ಹೆಚ್ಚಾಗಿ ಬೌದ್ಧಧರ್ಮವನ್ನು ಬುದ್ಧ ಧರ್ಮೋಪದೇಶಕನ ಹೆಸರು ನಾಗ[illegible] ಈತನು ಕೃಷ್ಣಾತೀರದವನು, ಶ್ರೀಶೈಲ ಪ್ರ[illegible] ಎಂದು ಹೇಳುತ್ತಾರೆ.

ನಾಗರ ಮೂಲಸ್ಥಾನ

ಈ ಮೇರೆಗೆ ಭಾರತದ ಎಲ್ಲ ಪ್ರದೇಶಗಳನ್ನು ವ್ಯಾಪಿಸಿದ ನಾಗರ ಮೂಲಸ್ಥಾನವು ಯಾವುದಾಗಿರಬೇಕು ಎಂಬುವನ್ನು ನಿರ್ಧರಿಸುವುದು ತೊಡಕಾಗಿದೆ. ಆದರೂ ನಾಗರ ಮೂಲಸ್ಥಾನವನ್ನು ಕುರಿತು ಪ್ರಚುರವಾಗಿರುವ ಪುರಾತನವೂ ಪ್ರಬಲವೂ ಆದ ಆಖ್ಯಾಯಿಕೆಯನ್ನು ವಿಮರ್ಶಿಸಿದರೆ, ನಾಗರು ಬೊಡ್ಡೆಯಲ್ಲಿ ದಾಕ್ಷಿಣಾತ್ಯರು ಎಂದು ಹೇಳಬಹುದಾಗಿದೆ. ನಾಗರು ಕೆಳಗಿನ ಲೋಕದಲ್ಲಿ ವಾಸಿಸತಕ್ಕವರು. ಅವರದು ಪಾತಾಳಲೋಕವು ಎಂದು ಪುರಾಣಗಳು ಮತ್ತೆ ಮತ್ತೆ ಸಾರುವುವು. ಔತ್ತರೀಯರಾದ ಆರ್ಯರ ಈ ಪಾತಾಳಲೋಕವು ದಕ್ಷಿಣಭಾರತವಲ್ಲದೆ ಬೇರೆ ಯಾವುದು ಆಗಬೇಕು? ಇದಲ್ಲದೆ ಇನ್ನೂ ಅನೇಕವಿಧದಿಂದ ನಾಗರು ದಕ್ಷಿಣಭಾರತದೊಡನೆ ಸಂಲಗ್ನರಾಗಿದ್ದಾರೆ ಎಂಬುದು ಮೇಲೆ ಕಾಣಿಸಿದ ಕುರುಹುಗಳಿಂದಲೂ ಮುಂದೆ ಸೂಚಿಸಲಿರುವ ಅಂಶಗಳಿಂದಲೂ ಮನಗಾಣಬಹುದು.

ಕರ್ನಾಟಕದಲ್ಲಿ ನಾಗರು

ಮಿಕ್ಕ ಪ್ರದೇಶಗಳಂತೆ ಕರ್ನಾಟಕದಲ್ಲಿಯೂ ನಾಗರು ನೆಲಸಿದ್ದರು. ಇದಕ್ಕೂ ಹೆಚ್ಚಾಗಿ, ಕರ್ನಾಟಕಕ್ಕೂ ನಾಗರಿಗೂ ವಿಶೇಷವಾದ ಸಂಬಂಧವಿದೆಯೊ ಎಂಬುದು ವಿಚಾರಾರ್ಹ ಪ್ರಮೇಯವಾಗಿದೆ. ಇಷ್ಟು ಪ್ರಾಚೀನರಾದ ನಾಗರು ಕನ್ನಡಿಗರೆ ಆಗಿದ್ದರು ಎಂದು ಈಗಲೆ ನಿರ್ಧಾರವಾಗಿ ಹೇಗೆ ಹೇಳಬೇಕು? ಕರ್ನಾಟಕವು ನಾಗರ ಮೂಲಸ್ಥಾನವೆಂದಾದರೂ ಇಂದೇ ಪ್ರತಿಪಾದಿಸುವುದು ಹೇಗೆ? ಆದರೆ ಕೆಳಗೆ ಕಾಣಿಸಿದ ಆಧಾರಗಳನ್ನು ಸಮಾಲೋಚಿಸುತ್ತ, ಕನ್ನಡಿಗರಲ್ಲಿ ನಾಗರ ರಕ್ತವು ಹೆಚ್ಚಾಗಿ ಬೆರೆತುಕೊಂಡಿದೆ, ನಾಗರಿಗೂ ಕರ್ನಾಟಕಕ್ಕೂ ನಿಕಟವಾದ ಹತ್ತಿಗೆ ಯಿದ್ದಿತು ಎಂದು ಇದೀಗ ಹೇಳಬಯಸುವೆನು.

೧. ಪ್ರಾಯಿಕವಾಗಿ ಕರ್ನಾಟಕದ ಮುಂಚಿನ ನಿವಾಸಿಗಳು ಬಹುಭಾಗ ನಾಗರಾಗಿದ್ದರು; ಅದರಲ್ಲಿಯೂ ಹೆಚ್ಚಾಗಿ ಹೆಣ್ಣಿನ ಕಡೆಯಿಂದ; ಎಂದು ಶ್ರೀ. ರಾಯಿಸರು ಅಭಿಪ್ರಾಯಪಡುವರು.
"The early inhabitants of the country were probably to a great extent, specially on the female side, Nagas---" (Mysore & Coorg, p. 202).

೨. ಬನವಾಸಿಯ ನೆರೆಯ ಪ್ರದೇಶಕ್ಕೆ ನಾಗರಖಂಡವೆಂದು ಪ್ರಾಚೀನವಾದ ಹೆಸರು ಇದ್ದಿತು. ಸಾಳುವಾಭ್ಯುದಯ ಕಾವ್ಯದಲ್ಲಿ ಸಾಳುವ ನರಸಿಂಹನು ನಾಗಮಂಡಲವನ್ನು ಏರಾಡಿದನು ಎಂದು ಹೇಳಿದೆ. ಕರ್ನಾಟಕದ ಕೆಲವು ಪ್ರದೇಶಗಳಿಗೆ ಈಗಲೂ ನಾಗಾಂಕಿತ ಹೆಸರುಗಳಿವೆ; ಉದಾ.: ನಾಗಮಂಗಲ, ಇ.

೩. ನಾಗಾಂಕಿತವಾದ ವ್ಯಕ್ತಿನಾಮಗಳೂ ಗ್ರಾಮನಾಮಗಳೂ ಕರ್ನಾಟಕದಲ್ಲಿ ಹೇರಳವಾಗಿ ದೊರೆಯುತ್ತವೆ; ಉದಾ: ನಾಗಲಾಂಬಿಕೆ, ನಾಗವರ್ಮ, ನಾಗಸೆಟ್ಟಿ, ನಾಗದೇವ, ನಾಗಾಯಿ, ನಾಗಲೇಶ್ವರ ಇ. ಇ. ಇವುಗಳಲ್ಲಿ ನಾಗಕುಲಸೂಚಕವಾದುವು ಯಾವುವು, ಸರ್ಪಪೂಜೆಯ ಸೂಚಕವಾದುವು ಯಾವುವು ಎಂಬುದನ್ನು ವಿಂಗಡಿಸಬೇಕೆಂಬುದು ನಿಜ. ಆದರೆ ಈ ಸರ್ಪಪೂಜೆಯೆ ನಾಗಸಂಸ್ಕೃತಿಯ ಒಂದು ಹೆಗ್ಗುರುತಾಗಿದೆ ಎಂಬುದನ್ನು ಮರೆಯಲಾಗದು.

೪. ನಾಗರಪಂಚಮಿಯ ಹಬ್ಬವು ಹೆಚ್ಚಾಗಿ ಕನ್ನಡಿಗರ ಸೋಸಿನ ಹಬ್ಬವಾಗಿ ತೋರುತ್ತದೆ. ಬೇರೆಯವರು ಇಷ್ಟು ಆಸ್ಥೆಯಿಂದ ಇದನ್ನು ಪಾಲಿಸುತ್ತಾರೆಯೆ? ಇದರಲ್ಲಿ ಕನ್ನಡಿಗರದೆ ಆದ ವೈಶಿಷ್ಟ್ಯವೇನಾದರೂ ಇದೆಯೆ ಎಂಬುದನ್ನೂ ಅರಸಿ ನೋಡಬೇಕಾದುದು.

೫. ಕರ್ನಾಟಕದ ಶಿಲ್ಪಕಲೆಯಲ್ಲಿ ನಾಗಸಂಕೇತಗಳು ಎದ್ದುಕಾಣುತ್ತವೆ. ಅನೇಕ ಗುಡಿಗಳಲ್ಲಿ ಅರ್ಧಮನುಷ್ಯ, ಅರ್ಧಸರ್ಪದೇಹಿಗಳಾದ ನಾಗಕನ್ನಿಕೆಯರನ್ನು ಕಾಣಬಹುದು.

೬. ಮಹಾರಾಷ್ಟ್ರದಲ್ಲಿ ಹೊಲೆಯರಿಗೆ (ಮಹಾರ) 'ನಾಕ' ಇಲ್ಲವೆ 'ನಾಖ' ಎಂದು ಕರೆಯುತ್ತಿದ್ದು, ಇದು ನಾಗಕುಲಸೂಚಕವು ಎಂದು ಮರಾಠೀ ಜ್ಞಾನಕೋಶದಲ್ಲಿ ಹೇಳಿದೆ. ಈಗಿನ ಮಹಾರಾಷ್ಟ್ರದ ಬಹುಭಾಗವು ಮೂಲದಲ್ಲಿ ಕರ್ನಾಟಕವಾಗಿತ್ತು ಎಂಬುದು ಈಗ ಸರ್ವಮಾನ್ಯವಾದ ವಿಷಯವು.
ಮೈಸೂರಲ್ಲಿ ನಾಗರ್ತ ಎಂಬ ಹೆಸರಿನ ಒಂದು ವರ್ತಕ ಜಾತಿಯಿದೆ.

೭. ಬಹುಕಾಲ ಹಿಂದೆ (೨-೩ ಶತಮಾನ) ಕರ್ನಾಟಕದಲ್ಲಿ ಚುಟುಕುಲದ ಅರಸರು ಆಳಿದರು ಎಂದು ಹಿಂದೆ ಹೇಳಿದೆಯಷ್ಟೆ? ಈ ಅರಸರು

ನಾಗಕುಲದವರಾಗಿದ್ದರು. ಇವರು ಸಾಮ್ರಾಜ್ಯ ವಾಳಿದ ಸಾತವಾಹನ ಅರಸರ ಸಾಮಂತರಾಗಿದ್ದು, ಅವರಿಂದ ಭಿನ್ನರು, ಕಿರಿಯರು ಎಂದು ತೋರಿಸಲು ತಮ್ಮದು 'ಚುಟು' ಕುಲವೆಂದು ಹೇಳಿಕೊಂಡಿರುವರು. ಈ 'ಚುಟು' ಶಬ್ದವು ಸಂಸ್ಕೃತವಲ್ಲ, ದ್ರಾವಿಡವಾಗಿರಬೇಕೆಂದು ಶ್ರೀ. ಜಯಸ್ವಾಲರು ಸೂಚಿಸಿರುವರು. ಇದು ಕನ್ನಡವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಕನ್ನಡದಲ್ಲಿ ಸಣ್ಣದು ಎಂಬರ್ಥದಲ್ಲಿ 'ಕುಱು' ಎಂದು ಬಲು ಹಳದಾದ ಶಬ್ದವಿದೆ. 'ಕುಱು' ಶಬ್ದದಿಂದ ಕಿಱು-ಕಿರಿ ಶಬ್ದವು ಹೊರಟಿತು. ಇದೇ ಮೇರೆಗೆ 'ಚುಟು' ಎಂಬುದು ಸಣ್ಣದು ಎಂಬ ಅರ್ಥದಲ್ಲಿ ಬಹುಪ್ರಾಚೀನವಾದ ಅಚ್ಚಗನ್ನಡ ಶಬ್ದವು. ಈ ಶಬ್ದದಿಂದ 'ಚಿಟಿ' ಎಂಬ ಶಬ್ದವು ಆಯಿತು. ಚಿಟಿ ಎಂಬ ಶಬ್ದಕ್ಕೆ Smallness, Littleness ಎಂಬ ಅರ್ಥಗಳನ್ನು ಕಿಟಲ್ ಸಾಹೇಬರು ಹೇಳುತ್ತಾರೆ. ಇದರಿಂದ ಚಿಟ್ಟ, ಚಿಟಿಕೆ (ಒಂದು ಚಿಟಿಕೆ ನಸ್ಯ), ಚೋಟು ಮುಂತಾದ ಶಬ್ದಗಳು ಹುಟ್ಟಿದುವು. ಸ್ವಲ್ಪ ರೂಪಭೇದದಿಂದ ಮೈದೋರುವ ಚಿಣಿ, ಚಿಣ್ಣ ಎಂಬ ಶಬ್ದಗಳಾದರೂ ಅದೆ ಅರ್ಥವನ್ನು ಎತ್ತಿಕೊಂಡಿವೆ. ಮೊನ್ನೆ ಮೊನ್ನೆ ಬೆಳಕುಕಂಡ ಹಿಂದುಸ್ತಾನಿಯಲ್ಲಿ ಬಹುವಾಗಿ ಬಳಕೆಯಲ್ಲಿರುವ 'ಛೋಟಾ' ಎಂಬ ಶಬ್ದವು ಹಳಗನ್ನಡದ ಈ 'ಚುಟು' ಶಬ್ದದ ಸಂತತಿಯೆ ಆಗಿರಬೇಕು. ಹೀಗೆ ಕನ್ನಡ ವಿಶೇಷಣದಿಂದ ತಮ್ಮ ಮನೆತನದ ಹೆಸರನ್ನು ಹೇಳಿಕೊಂಡುದನ್ನು ನೋಡಿದರೆ, ಇವರ ಕನ್ನಡತನದ ಮೇಲೆ ಹೆಚ್ಚಿನ ಪ್ರಕಾಶವು ಬೀಳುತ್ತದೆ.

ನಾಗರ ನಾಗರಿಕತೆ

ನಾಗರು ಸುಸಂಸ್ಕೃತರಾದ ಜನರು, ನಾಗರಿಕವಾದ ಜನಾಂಗವು ಎಂಬುದು ಅವರ ಚರಿತ್ರೆಯನ್ನು ಪರಾಮರ್ಶಿಸಿದರೆ ಒಡೆದು ಕಾಣುವುದು. ಇವರು ಅಲ್ಲಲ್ಲಿ ರಾಜ್ಯಗಳನ್ನಾಳುವುದಲ್ಲದೆ, ಕ್ರಿ. ಯುಗದ ಎರಡು-ಮೂರನೆಯ ಶತಮಾನಗಳಲ್ಲಿ ಭಾರಶಿವ ಎಂಬ ಹೆಸರಿನಿಂದ ಬಲಾಢ್ಯವಾದ ಸಾಮ್ರಾಜ್ಯವನ್ನು ಕಟ್ಟಿ ಆಳಿದರು. ವಾಕಾಟಕರು, ಗುಪ್ತರು ಇವರ ಹೆಜ್ಜೆಯ ಮೇಲೆಯೆ ಹೆಜ್ಜೆಗಳನ್ನು 'ಇಕ್ಕಿದರು. ನಾಗಸಾಮ್ರಾಜ್ಯವು ಪ್ರಜಾಪ್ರಭುತ್ವ... ಜ್ಯವು ಎಂದು ಶ್ರೀ. ಜಯಸ್ವಾಲರು ಸ್ಥಾ... "Naga Empire was a democratic..." (p. 55.): ನಾಗರು ಪ್ರಜಾಪ್ರಭುತ್ವವನ್ನು ... ಸಿದರು, ಪರಿಪೋಷಿಸಿದರು. ನಾಗರ ... ಪ್ರಜಾಪ್ರಭುತ್ವಶಾಲಿಗಳಾದ ಮಾಲವರ ... ಹೊಂದಿಕೆಯಾಗಿತ್ತು ಎಂದು ಅದೇ ಮಹಾ... ಪಾದಿಸಿರುವರು.

'ದೊಡ್ಡ ಮನುಷ್ಯ,' 'ಸುಪ್ರಸಿದ್ಧನಾದ...' ಸಂಸ್ಕೃತದಲ್ಲಿ 'ನಾಗ' ಶಬ್ದಕ್ಕೆ ಉಂಟಾ... ನಾಗರ ಶ್ರೇಷ್ಠತೆಯನ್ನು ಸೂಚಿಸುವುದಲ್ಲವೆ?

ಇದಕ್ಕೂ ಹೆಚ್ಚಿನದಾದ ಒಂದು ಸೋಜಿಗ... ಇದುವರೆಗೆ ನಾವೆಲ್ಲರೂ ತಿಳಿದುಕೊಂಡುದು, ... ಎಂಬ ಪದದಲ್ಲಿಯ ಮೂಲವು 'ನಗರ,' ... ಇದರಿಂದ ನಾಗರ, ನಾಗರಿಕ, ನಾಗರಿಕತೆ... ಗಳು ಉಂಟಾದುವೆಂದು. ಇದು ಸರಿಯೆ? ... ಯಲ್ಲಿ 'ನಾಗರ' ಎಂಬುದೊಂದು ರೀತಿ... 'ನಗರ' ಶಬ್ದದಿಂದ ಸಾಧಿತವಲ್ಲ. 'ನಾಗ... ದೇಶ್ಯರೂಪವಾಗಿದ್ದು 'ನಾಗ' ಶಬ್ದಕ್ಕೆ ... ದೇಶ್ಯಪ್ರತ್ಯಯವು ಹೊಂದಿಕೊಂಡು ... ಎಂದು ಮೇಲ್ಕಂಡ ಪಂಡಿತರು ... [J. p. 55]. ಇದರಂತೆ ನಾಗರಿಕತೆ ಎಂಬ ಶಬ್ದ... ಶಬ್ದದಿಂದ ಬಂದುದಾಗಿರಬಹುದೇನೋ!

ನಾಗರೀ ಲಿಪಿ

ಇದೇ ರೀತಿಯಾಗಿ ನಾಗರೀ ಲಿಪಿಯು ... ಯಾಗಿರಬಹುದೆಂದು ಸೂಚಿಸಲಾಗಿದೆ. [J. p. 6...] ಲಿಪಿಗೆ 'ನಾಗರ ಲಿಪಿ' ಎಂದೂ ಕರೆಯುವರು. ಇ... ಲಿಪಿ, 'ನಾಗ'ರ ಲಿಪಿ, ಮೊದಲು ನಾಗರು ಹಿಡಿಸಿದ ಲಿಪಿ ಆಗಿರುವುದು ಸಂಭವನೀಯ... ಆರ್ಯರು ಈ ಲಿಪಿಗೆ ಆರ್ಯೀಕರಣವನ್ನು ... ನಾಗರಿ' ಎಂಬ ಗೌರವದ ಅಭಿಧಾನವನ್ನು ... ಡಂತೆ ತೋರುತ್ತದೆ. ಬ್ರಾಹ್ಮೀಲಿಪಿಯು ಭಾರ... ಯಾಗಿದೆ, ಆರ್ಯರ ಲಿಪಿಯಾಗಿದೆ ಎಂದು ... ಶಯರು ಪ್ರತಿಪಾದಿಸಿದರು. ಆದರೆ ಮಹೆಂ... ಆದಿದ್ರಾವಿಡ ಲಿಪಿಯು ಬ್ರಾಹ್ಮಿಯ ಮೂಲವ... ಹೆರಾಸ್‌ರು ಇದೀಗ ಸಾಧಿಸುತ್ತಿರುವರು. ಇದ... ಮಂಡಲ'ದ ಅಧ್ಯಕ್ಷರಾದ ಶ್ರೀ. ಪ್ರ. ಗೊ.

ವರು ಇನ್ನೊಂದು ಮಾರ್ಗದಿಂದ ಬ್ರಾಹ್ಮೀಲಿಪಿಯು ದ್ರಾವಿಡ ಲಿಪಿಯಿಂದ ಹುಟ್ಟಿದುದು ಎಂದು ಸೂಚಿಸಿರುರು. ಈ ಸಂದರ್ಭದಲ್ಲಿ ಈ ಮತಗಳು ಇನ್ನಿಷ್ಟು ವಿಮರ್ಶಾರ್ಹವಾಗಿವೆ ಎಂದು ಸಂಶೋಧಕರಿಗೆ ಸೂಚಿಸುವೆನು.

ನಾಗರ ಕಲಾವಂತಿಕೆ

ನಾಗರು ಸುಸಂಸ್ಕೃತರಾಗಿದ್ದಂತೆ, ಸುಂದರರು, ಕಲಾವಂತರೂ ಆಗಿರಬೇಕು. 'ನಾಗರ' ಎಂಬ ಸ್ವತಂತ್ರ ಬ ಶಿಲ್ಪಕಲಾಸಂಪ್ರದಾಯವೇ ಇದಕ್ಕೆ ಸಾಕ್ಷಿ. p. 56]. ನಾಗರ ನಯವಾದ 'ನಾಗರ' ರೀತಿಯನ್ನು ನುಸರಿಸಿ ಗುಪ್ತರು, ವಾಕಾಟಕರು ಹಲವು ಗುಡಿಗಳನ್ನು ಟ್ಟಿಸಿದರು. ನಾಗ ಸಾಮ್ರಾಜ್ಯದಲ್ಲಿ ಅಡಕವಾಗಿದ್ದ ಜಂತೆಯ ಚಿತ್ರಕಲೆಯ ಮೇಲ್ಮೆಯ ಶ್ರೇಯಸ್ಸು ಲವುಟ್ಟಿಗೆ ನಾಗರಿಗೆ ಸಲ್ಲುತ್ತದೆ.

ನಾಗಿನಿ ಎಂದರೆ ಸುಂದರಸ್ತ್ರೀ. ಈ ಅರ್ಥವು ಈ ಶಬ್ದಕ್ಕೆ ರೀತಿಯಲ್ಲಿ ಹೇಗೆ ಉಂಟಾಗಿರಬಹುದು? ನಾಗಮಹಿಳೆಯರು ಲುವಿಕೆಯಲ್ಲಿಯೂ ಕಲಾವಂತಿಕೆಯಲ್ಲಿಯೂ ಮಿಗಿಲಾದ್ದರು. ನಾಗರಮಣಿಯರಿಗೆ ಮರುಳಾದ ಆರ್ಯರು ಸುಲವಾಗಿ ಅವರ ಪಾಣಿಗ್ರಹಣ ಮಾಡಿದರು. ಕಾಡಾಡಿಗಳಾಗಿ ವೇದಾಭ್ಯಾಸಜಡರಾಗಿದ್ದ ಋಷಿಗಳು ನಾಗಕನ್ನಿಕೆಯರಿಗೆ ರೆಯಾಗಬೇಕಾದರೆ ಅವರ ರೂಪವು ಎಷ್ಟು ಮೋಹಕವಾರಬೇಕು? ಆರ್ಯರು ಸುಂದರರವಾದ ಜನಾಂಗವೆಂದು ಳುವರು. ಆರ್ಯರನ್ನು ಒಲಿಸಿಕೊಂಡ ನಾಗರು ವರಿಗಿಂತ ಸುಂದರವಾಗಿರಬಹುದಲ್ಲವೆ? ದ್ರಾವಿಡರು ರೂಪವಂತರೆಂದು ಇದುವರೆಗೆ ಯಾರೂ ಹೊಗಳಿಲ್ಲ. ನಾಗರು ದ್ರಾವಿಡರಿಂದ ಭಿನ್ನರು ಎಂದು ಸಾಧಿಸಲು ದು ಇನ್ನೊಂದು ನಿದರ್ಶನವು.

ಕೊನೆಯ ಮಾತು

ಇಂತು ಬಹು ಸಂಕ್ಷೇಪವಾಗಿ, ಕೇವಲ ಸೂಚನಾತ್ಮಕವಾಗಿ ನಾಗಜನಾಂಗದ ಚರಿತ್ರೆಯನ್ನು ಹೇಳಿದುದಾಯಿತು. ವಿಷಯದಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಯಿದೆ. ದೊಂದು ಪ್ರಮೇಯವಾಗಿ ಪರಿಶೋಧಕರ ಮುಂದೆ ಇರಿಸಿದ್ದೇನೆ, ಸಿದ್ಧಾಂತವಾಗಿಯಲ್ಲ. ಇದು ತುಂಬಾ ಸಂಶೋಧನಾರ್ಹವಾದ ವಿಷಯ. ಕನ್ನಡಿಗರಿಗೆ ಇದು ಮನೋರಂಜಕವೂ ಹತ್ತಿರದ್ದೂ ಆದ ವಿಷಯ. ನಾಗ–ಕರ್ನಾಟಕ, ನಾಗ-ಇತರ ಪ್ರಾಂತ ಸಂಬಂಧಗಳನ್ನು ಕೂಲಂಕಷವಾಗಿ ರಿಗಣಿಸಿ, ತೂಗಿ ನೋಡಿದಲ್ಲಿ ಹಲವು ಹೊಸ ಸಿದ್ಧಾಂತಗಳು ಕೈಸೇರಬಹುದು. ಅದುವರೆಗೆ ಆಳವಾಗಿ ಓದುವ, ಆಲೋಚಿಸುವ, ಚರ್ಚಿಸುವ.

ಸಂದರ್ಭಗಳು

1 ಮಹಾಭಾರತ
2 Vedic Index
3 Ancient History of the Deccan by Dubreuil
4 Mysore & Coorg from inscriptions
5 History of India by Jayaswal (J)
6 Indian Historical Quarterly; Vol. IX "The Nagavamshis of Chakra Kotta" (IHQ)
7 ಕಥಾಸರಿತ್ಸಾಗರ
8 ಮರಾಠೀ ಜ್ಞಾನಕೋಶ
9 Brown: Coins of India (B)
10 Molier's Sanskrit-English Dictionary
11 Kittel's Kannada-English Dictionary

ಚಿತ್ರಪತಂಗ

★

ಅನುವಾದಕರು :
ಶ್ರೀ. ಶಂಕರ ಮಹಾದೇವ ನಾಯಕ,
ರಾಣೇಬಿನ್ನೂರು.

★

ಪ್ರಪಂಚದಲ್ಲಿ ನಮ್ಮ ಅಂತಃಕರಣವನ್ನು ಆಳವಾಗಿ ಕುಲಕಿಬಿಡುವ ಸುಖದಾಯಕ ಸನ್ನಿವೇಶಗಳು ಕೂಡ ನಮ್ಮನ್ನು ಅಳಹಚ್ಚುವವು; ನಂದನವನದ ಮಂದಾನಿಲದಂತೆ ತೂರಿಬಂದು ನಮ್ಮ ಕಪೋಲಗಳನ್ನು ಮೆಲ್ಲನೆ ತಡವುವವು....... ವೃದ್ಧ ತಕಾಹಾಮನ ನಿಷ್ಕುರ-ನಿರ್ಲಿಪ್ತ-ಏಕಾಂತಜೀವನವನ್ನು ಕಂಡವರು, ಅವನು ತನ್ನ ರಮಣೀಯ ಸುಖಸ್ವಪ್ನಗಳ ದಾರಿ .... ಕಾಯುತ್ತಿದ್ದನೆಂದು ಎಂತು ಬಲ್ಲರು? ....

Where the flowers sleep
Thank God! I shall sleep to-night.
Oh, come, butterfly!

—Yone Noguchi.

ಹೂ ಪವಡಿಸುವಲ್ಲಿ, ಭಗವಂತಾ !
ನಾನೀ ದಿನ ಮಲಗುವೆನು.
ಬಾ, ನೀ ಬಾರ ಚಿತ್ರಪತಂಗ!

—ಯೋನೆ ನೋಗುಚಿ

ಸೊರ್ಘುಾಂಜಿಯ ಸಮಾಧಿಯ ಹಿಂಬದಿಯಲ್ಲಿದ್ದ ಒಂದು ಮನೆಯಲ್ಲಿ ತಾಕಾಹಾಮನು ವಾಸಿಸುತ್ತಿದ್ದನು. ಅವನೊಬ್ಬ ಮುದುಕ. ಆತನ ವಯಸ್ಸು ಇಷ್ಟೇ ಇತ್ತೆಂಬುದು ಆ ಹಳ್ಳಿಯಲ್ಲಿ ಯಾರಿಗೂ ಗೊತ್ತಿರಲಿಲ್ಲ; ಅರ್ಥಾತ್, ಆತನ ಪರಿಚಯ ಎಲ್ಲರಿಗೂ ಅಷ್ಟಕ್ಕೆ ಅಷ್ಟೆ. ಅವರು ಅವನನ್ನು ಸರಸಜೀವಿಯೆಂದೂ, ಆರೆಬೆಪ್ಪನಲ್ಲದಿದ್ದರೂ ಒಬ್ಬ ಮಾನಸಿಕರಾಯನೆಂದೂ ತಿಳಿದುಕೊಂಡಿದ್ದರು. ಆತನ ಅಗಾಧವಾದ ಗುಮ್ಮನಗುಸಕತನವು ಅಕ್ಕಪಕ್ಕದವರ ಕುತೂಹಲವನ್ನು ಹೆಚ್ಚಿಸುತ್ತಲೇ ಇತ್ತು. ಹಲವರು ಅವನ ವಿಷಯದಲ್ಲಿ ಅಲ್ಲದಸಲ್ಲದ ಕತೆಗಳನ್ನು ಹೆಣೆದು ಹೇಳುವರು; ಮತ್ತು ಅವನು ತನ್ನ ಬಾಳಿನ ಹೊಣೆಗೆ ತಲೆತಪ್ಪಿಸಿಕೊಂಡು ಜೀವಿಸುವನೆಂದು ಕಟುವಾಗಿ ಟೀಕಿಸುವ ಜನರಾವರೂ ಅಷ್ಟಿಷ್ಟಿರಲಿಲ್ಲ. ಆತನು ಲಗ್ನವಾಗದೇ ಇದ್ದುದರಿಂದ ಅವನ ನಾಡಿಗಳಲ್ಲೆಲ್ಲ ಹಿಮಜಲವೆ ಹರಿದಾಡುತ್ತಿರಬೇಕೆಂದು ಬಹು ಮಂದಿಯ ಮತ; ಅವರ ತಿಳುವಳಿಕೆಯಲ್ಲಿ ಅವನೊಬ್ಬ ಹೆಣ್ಣೆಂದರೇನೆಂಬುದನ್ನೇ ಅರಿಯದ ಪೆಚ್ಚು. ಲಗ್ನಮಾಡಿಕೊಂಡು ಸಂಸಾರ ಮಾಡುವದು, ಕೇವಲ ಬುದ್ಧದೀಕ್ಷಾಬದ್ಧನನ್ನುಳಿದು ಪ್ರತಿಯೊಬ್ಬ ಮಾನವನ ಕರ್ತವ್ಯವೆಂದು ಅವರು ತಿಳಿದಿದ್ದರು.

ತಾಕಾಹಾಮನು ಸನ್ಯಾಸಿಯಂತೆ ಯಾವಾಗಲೂ ಏಕಾಂತವಾಸದಲ್ಲಿಯೇ ಇರುತ್ತಿದ್ದನು. ಅವನು ಹಗಲು ತನ್ನ ತೋಟದಲ್ಲಿಯೇ ಏನಾದರೂ ಮಾಡುವನು; ಇಲ್ಲವಾದರೆ ಧ್ಯಾನ ಜಧ್ಯಾಸದಲ್ಲಿ ಮಗ್ನನಾಗಿ ಕೂಡುವನು. ಸಂಜೆಯ ಮುಂದೆ ಹಜಾರದಲ್ಲಿ 'ಬೀವೆ' ಯನ್ನು ಬಾರಿಸುತ್ತ ಹಾಡುತ್ತ ಕುಳಿತುಕೊಳ್ಳುವನು; ಇಲ್ಲವೆ ತನ್ನ ಕೋಣೆಗೆ ಹೋಗಿ 'ಲ್ಯಾಂಡನ್'ನಿನ ಬೆಳಕಿನಲ್ಲಿ ಬೌದ್ಧ ಧರ್ಮಗ್ರಂಥಗಳನ್ನು ಪರಿಶೀಲಿಸುವನು; ಮತ್ತು ಮನಬಂದಾಗ "ತಂಕ" ಅಲಂಕಾರದಲ್ಲಿ ಕವಿತೆಗಳನ್ನು ರಚಿಸುವನು. ಅವನದತಿ ಸಾದಾ ಊಟ; ತನ್ನ ಅಡಿಗೆಯನ್ನು ತಾನೇ ಮಾಡಿಕೊಂಡು, ತನ್ನ ಪುಟ್ಟ ಸಂಸಾರಕ್ಕೆ ಬೇಕಾಗುವ ಸಾಹಿತ್ಯ-ಸಾಮುಗ್ರಿಗಳನ್ನೆಲ್ಲ ಬಹು ವಿಶ್ವಾಸದಿಂದ ಚೊಕ್ಕಟವಾಗಿ ತಾನೇ ನೋಡಿಕೊಳ್ಳುವನು.

ಒಂದು ದಿನ ತಾಕಾಹಾಮನು ತನ್ನ ಮನೆಯ ಮುಂದೋಟದಲ್ಲಿ ಕಮಲಪುಷ್ಪದಿಂದ ತುಂಬತುಂಬಿದ ಕೃತ್ರಿಮ ಸರೋವರದ ದಡದಲ್ಲಿದ್ದ 'ಶೋರಿ' ವೃಕ್ಷದ ಬುಡದಲ್ಲಿ ಕುಳಿತಿದ್ದನು. ಆಗ ಅವನ ಬಾಲಮೈತ್ರಿಣಿಯಾದ ಆಯಾಮೆಯು ತನ್ನ ಮುರುಕ ಗೊಂಬೆಯೊಂದಿಗೆ ಬಂದಳು.

"ಅಜ್ಜಾ, ನೋಡಿಲ್ಲಿ." ಆ ವೃದ್ಧನ ಬಳಿಯಲ್ಲಿ ಕುಳಿತುಕೊಂಡು ಕಾತರದಿಂದ ಆಕೆ ಅಂದಳು, "ನನ್ನ ಗೊಂಬೆಯು ಮುರಿದುಹೋಗಿದೆ—ಸತ್ತುಬಿಟ್ಟದೆ." ಆ ಮೇಲೆ, ತನ್ನಿಂದ ಮುಂದೆ ಬರಲಿರುವ ಮಾತಿಗೆ ಬೆದರಿದಳೇನೋ ಎಂಬಂತೆ, ಮೆಲ್ಲಗೆ ಉಸುರಿದಳು—"ಈ ತೋಕೊ—ತಾರೊ—ಸಾನ

---

* ಹಡ್ಲಂಡ್ ಡೇವಿಸರವರ 'The Peony of Pao-Yo' ಎಂಬ ಕಥಾಗುಚ್ಛದಲ್ಲಿಯ White Butterfly' ಎಂಬ ಜಪಾನಿ ಕಥೆಯೊಂದರ ಅನುವಾದವು.

(ಗಂಡುಗೊಂಬೆ) ನನ್ನನ್ನುಳಿದು ಯಾರನ್ನೂ ನಾನು ಅಷ್ಟು ಪ್ರೀತಿಸುವದಿಲ್ಲ."

"ಪಾಪ! ಕೇಡಾಯಿತು!" ಮುದುಕನೆಂದನು — "ಅಮ್ಮಾ, ಮಾಡುವದಿನ್ನೇನು? ಅದನ್ನು 'ಕೋಚಿನ್' ದೇವರಿಗೆ ಒಪ್ಪಿಸಿಬಿಟ್ಟರಾಯಿತು. ಆತನು ಗೊಂಬೆಗಳ ಅಸ್ಥಿಪಂಜರಗಳನ್ನು ಬಹು ಅಕ್ಕರೆಯಿಂದ ಸಂರಕ್ಷಿಸುವನು. 'ಎನೋಕಿ' ವೃಕ್ಷವು ಆತನ ವಾಸಸ್ಥಾನವು. ಅಂಥದೊಂದು ಗಿಡವು ಈ ನನ್ನ ತೋಟದಲ್ಲಿಯೇ ಇದೆ. ಅದರಲ್ಲಿ ಕತ್ತಲುಳ್ಳದ್ದೂ ಬಹು ಬೆಚ್ಚಗಾದದ್ದೂ ಒಂದು ಹೊದರೂ ಉಂಟು. ಅಲ್ಲಿಯೇ ಇಟ್ಟುಬಿಡೋಣ ಈ ನಿನ್ನ ಗೊಂಬೆಯನ್ನು, ಅಯಾಮು."

ತಾಕಾಹಾಮನು ಆ ಹುಡಿಗಿಯ ಕೈಯನ್ನು ಹಿಡಿದುಕೊಂಡು ಕರೆದೊಯ್ದು ವಿಶ್ವಾಸಪೂರ್ವಕವಾಗಿ ಪ್ರಾರ್ಥನೆಗಳನ್ನು ಸಲ್ಲಿಸಿ, ಆ ಗಿಡದ ಹೊದರಿನಲ್ಲಿ ಆ ಮುರುಕ ಗೊಂಬೆಯನ್ನು ಮೆಲ್ಲನೆ ಇರಿಸಿದನು.

ಆ ಗಿಡದ ಹತ್ತಿರವೇ ಅವರೀರ್ವರೂ ಖಿನ್ನಮನಸ್ಕರಾಗಿ ನಿಂತಿರಲು ಅಯಾಮೆ ಅಂದಳು— "ಗೊಂಬೆಗಳು ಸತ್ತ ಮೇಲೆ ಪ್ರೇಮವು ಎಲ್ಲಿ ಹೋಗುವದು?"

"ತಾಯಿ," ಮುದುಕನು ಮೃದುವಾಗಿ ಅಂದನು— "ಅದೆಲ್ಲಿಯೂ ಹೋಗುವದಿಲ್ಲ. ಅಲ್ಲಿಯೇ ಸುಳಿಯುವದು—ಕಾಯುವದು. ಮುಂದೆ ನೀನು ಗೊಂಬೆಗಳನ್ನು ಬಿಟ್ಟು ನಿನ್ನದೇ ಮಗುವನ್ನು ಆಡಿಸುವಾಗ ಅದು ತಿರುಗಿ ಬರುವದು ನಿಜವಾಗಿಯೂ, ಅಯಾಮು, ಪ್ರೇಮವು ಅಲ್ಲಿಯಿಲ್ಲಿಯೇ ಸುಳಿದಾಡುವದು—ನಿರೀಕ್ಷಿಸುತ್ತಿರುವದು."

ನಂತರ ಅವರೀರ್ವರೂ ಪುನಃ 'ತೋರಿ' ವೃಕ್ಷದ ಬುಡದಲ್ಲಿ ಬಂದು ಕುಳಿತುಕೊಂಡರು.

"ತಾಕಾಹಾಮಾ," ಮೋರೆಯನ್ನು ಮೇಲಕ್ಕೆತ್ತಿ ಅವನ ಮುಖವನ್ನು ನೋಡುತ್ತ ಆ ಮಗು ಅಂದಿತು—"ನಿನ್ನನ್ನು ಹುಚ್ಚನೆಂದು ಕರೆಯುವರಲ್ಲ! ನೀನು ನಿಜವಾಗಿಯೂ ಹುಚ್ಚನೇ? ಈ ಬಗೆಯಾಗಿ ನಿಷ್ಠುರವಾಗಿ ಮಾತಾಡಿದುದಕ್ಕೆ ನನ್ನನ್ನು ದಯವಿಟ್ಟು ಕ್ಷಮಿಸು. ಆದರೆ ಹಳ್ಳಿಗರಲ್ಲಿ ನಿನ್ನ ಬಗ್ಗೆ ಈ ರೀತಿ ಅಭಿಪ್ರಾಯವಿರುವದೇನೋ ನಿಜ." ತಾಕಾಹಾಮನು ಮುಗುಳುನಗೆ ನಕ್ಕನು. ಆ ನಗು ಬಹು ಪ್ರಭಾವಶಾಲಿಯಾಗಿದ್ದಿತು. "ಈ ಪ್ರಪಂಚದಲ್ಲಿ ಜಗದ ರಾಜಮಾರ್ಗವನ್ನು ಬಿಟ್ಟು ಒಳದಾರಿಯನ್ನು ಹಿಡಿದು ನಾವು ನಡೆಯತೊಡಗಿದರೆ, ಒಮ್ಮೊಮ್ಮೆ ನಮ್ಮನ್ನು ಹುಚ್ಚರೆಂದು ಸಂಬೋಧಿಸುವರು. ಅವರು ನನ್ನನ್ನು ಹುಚ್ಚನೆಂದು ಕರೆಯುವದೇಕಂದರೆ, ನಾನು ... ದಿರುವದಕ್ಕೆ—ಹೆಂಡಿರುಮಕ್ಕಳ ಸವಿಸುಖದ ... ತಿಳಿಯದಿರುವದಕ್ಕೆ."

"ಅಜ್ಜಾ, ಹೀಗಿದ್ದ ಮೇಲೆ ನೀನು ಸ್ವ... ಹುಚ್ಚನಿರುವದೇ ನಿಜವೆಂದು ನಾನೂ ... ಹುಚ್ಚನೆಂದರೆ ಬಹಳ ಎಂತಲ್ಲ ಮತ್ತೆ. ... ದಿರುವದು ದಡ್ಡತನವಲ್ಲವೆ? ನಾನು ಮಾತ್ರ ... ತನವನ್ನು ಎಂದೂ ಮಾಡುವದಿಲ್ಲ ನೋಡು ... ಅಲ್ಲಿ ನೋಡಿದೆಯಾ? ಆ ಸುಂದರವಾದ ... ಗಳು ಹೇಗೆ ಹಾರಾಡುವವು! ಬಿಸಿಲಿನಲ್ಲಿ ... ಮಂದಮಂದವಾಗಿ ಹಾರಾಡುತ್ತ ಸುತ್ತು... ಚಿತ್ರಪತಂಗಗಳ ವಿಷಯದಲ್ಲಿ ನನಗಷ್ಟು ಹೇ...

"ಹಲವರು ಚಿತ್ರಪತಂಗಗಳು ಹೆಂಗಸ... ಗಳೆಂದೂ ಮತ್ತೆ ಕೆಲವರು ಜೀವಕಳೆ ತುಂಬಿದ... ಗಳೆಂದೂ ಹೇಳುವರು. ಅದೇನೇ ಇರಲಿ. ಹ... ನವೂ ಸುಗಂಧಬೀರುವ ಹೂ-ಪಕಳೆಯೂ ... ಕಡಿಮೆ ಒಂದೆಯೆ."

"ತಾಕಾಹಾಮು," ಆ ಮಗುವು ಕಾತರ... ದಿಂದ ಅಂದಿತು: "ನೀನೇಕೆ ಲಗ್ನವಾಗಬಾರ... ಚಿತ್ರಪತಂಗವನ್ನು—ಹೆಂಗಸಿನ ಆತ್ಮವನ್ನು? ... ಪತಂಗವನ್ನು ಹೆಂಡತಿಯಾಗಿ ಮಾಡಿಕೊಳ್ಳು... ಚಂದ! ನೀನು ಊಟಮಾಡುವಾಗ, ಚಹಾ... ವಾಗ, ನಿನ್ನ ಬದಿಯಲ್ಲಿದ್ದ ಹೂವುಗಳ ಮ... ಅವಳು ಆನಂದದಿಂದ ಸೇವಿಸುವದನ್ನು ... ನಲಿಯಬಹುದು. ಅವಳು ಮಲಗುವವಕ್ಕಾಗಿ ... ಫುಟಾನವು (ಹಾಸಿಗೆ) ಬೇಕಾಗಬಹುದು; ... ಯಾದಾಗ ಹೊದ್ದುಕೊಳ್ಳಲು ಮಾಟಾದ ... ಆವಶ್ಯಕತೆಯೂ ಬರಬಹುದು. ಅದೆಲ್ಲವನ್ನು ... ಸಿದ್ಧಗೊಳಿಸಿಕೊಡುವೆನು; ಯಾಕಂದರೆ ನಿ... ಒರಟಾಗಿ ಬಾಗಿದ ದೊಡ್ಡ ಕೈಗಳಿಂದ ಅಂಥ... ವಸನಗಳನ್ನು ತಯಾರಿಸುವದು ಸಾಧ್ಯವಾಗಲಿ...

"ಇಲ್ಲ." ತಾಕಾಹಾಮನು ಗಂಭೀರವಾ... "ನಾನು ಚಿತ್ರಪತಂಗವನ್ನು ಕೂಡ ಮದು... ದಿಲ್ಲ."

ಇದನ್ನು ಕೇಳಿ ಭಗ್ನಾಶಳಾದ ಆ ಹು... ನೋಡಿ ಪುನಃ ಅಂದನು—"ಇಗೋ, ನೋಡು ... ಚಿತ್ರಪತಂಗವು ಅಲ್ಪಾಯುಷಿಯು.

ಯುವದರೊಳಗಾಗಿಯೇ ನಾನು ವಿಧುರನಾಗಬೇಕಾಗುವದು."

"ಅದಕ್ಕೇಕಷ್ಟು ಚಿಂತೆ? ಆ ಮೇಲಾದರೂ ನಿನ್ನನ್ನು ಜನರು ಹುಚ್ಚನೆಂದು ಕರೆಯುವದಿಲ್ಲವಲ್ಲ. ಅಲ್ಲದೆ ಸುಖವಿಷಯಚಿಂತನೆಯಲ್ಲಿಯೂ ಸುಖಸ್ವಪ್ನಗಳಲ್ಲಿಯೂ ನೀನು ರಮಿಸಬಹುದಲ್ಲವೆ?"

"ಮಗು, ನನಗೆ ರಮಿಸಲು ಈಗಾಗಲೇ ಸುಖವಿಷಯಗಳೂ ಸುಖಸ್ವಪ್ನಗಳೂ ಬೇಕಾದಷ್ಟಿವೆ."

"ಆಹಾ!" ಹತ್ತರಕ್ಕೆ ಬಂದು ಸೋಜಿಗ-ಕಕ್ಕುಲತೆಗಳಿಂದ ಆ ಹಸುಳೆ ಅಂದಳು: "ಇದೇನು! ನಿನ್ನ ಕಣ್ಣುಗಳಿಂದ ಹೊಳೆಗಳೇ ಹರಿದು ಬರುವಂತಿವೆಯಲ್ಲ! ನನಗಿದರ ಬಗೆಯೇನೂ ತೋಚದಾಗಿದೆ."

"ಅಯಾಮ, 'ನನಗೇನೂ ತೋಚದೆಂಬದು' ಜಾಣರ ಮಾತು. ನೀನೂ ಒಂದು ದಿವಸ 'ಮೊನೊ ನೋ ಅವರೆ ವೆಸಿರು' (ಜಗದ 'ಆಹಾ!'ತೆ) ಎಂಬದರ ತಿರುಳನ್ನು ಅರಿಯುವೆ. ಪ್ರಪಂಚದಲ್ಲಿ ಬಹು ಸುಂದರವೂ ಸುಖದಾಯಕವೂ ಆದ ವಸ್ತುಗಳು—ನಮ್ಮ ಅಂತಃಕರಣವನ್ನು ಬಲವಾಗಿಯೂ ಆಳವಾಗಿಯೂ ಕುಲಕಿಬಿಡುವ ಉಲ್ಲಾಸಭಿನ್ನವೇಶಗಳು—ಇವು ಕೂಡ ನಮ್ಮನ್ನು ಅಳಹಚ್ಚುವವೆಂಬದನ್ನು ಒಮ್ಮೆ ನೀನು ಮನಗಾಣುವೆ. ಅವು ನಂದನವನದಿಂದ ತೂರಿಬಂದು ನಮ್ಮ ಕಪೋಲಗಳನ್ನು ಮೆಲ್ಲನೆ ತಡವುವ ಮಂದಾನಿಲಗಳಂತೆ. ನಾವು ಅವುಗಳ ಆಮೋದವನ್ನು ಆಸ್ವಾದಿಸಿ ಸಂತೋಷಿಸುವಷ್ಟರಲ್ಲಿಯೇ ಅವು ಮಾಯವಾಗುವವು. ಅಯಾಮ, ನನ್ನ ಸುಖಸ್ವಪ್ನಗಳ ಪುನರಾಗಮನವನ್ನು ನಿರೀಕ್ಷಿಸುತ್ತಲಿರುವೆನು."

"ಅದೆಷ್ಟು ಕಾಲ ನೀನು ಹೀಗೆ ಕಾಯುತ್ತಲಿರುವದು?"

"ಅರ್ಧಶತಮಾನ."

"ನಿನ್ನ ಸುಖಸ್ವಪ್ನಗಳು ನಿನಗೆ ಪುನಃ ತಿರುಗಿ ಬರುವವೊ ಇಲ್ಲವೊ ನಾ ಕಾಣೆ."

ಮುದುಕನು ಮುಗುಳುನಗೆ ನಕ್ಕು: "ಹೌದು, ಅವು ಬಂದೇ ಬರುವವು. ಇರಲಿ. ಮಗು, 'ಅಕಿಕೊ' ಎಂದು ಮೇಲಿಂದ ಮೇಲೆ ಉಚ್ಚರಿಸು ನೋಡುವಾ. ನೀನು ಹಾಗೆ ಉಚ್ಚರಿಸುವುದನ್ನು ಕೇಳಬೇಕೆಂದು ನನಗೊಳ್ಳೇ ಅಭಿಲಾಷೆ."

ಅವಳು ಹಾಗೆಯೇ ಮಾಡಿದಳು. ಆ ಹೆಸರನ್ನು ಅವಳು ಬಗುಬಗೆಯಿಂದ ಮೇಲಿಂದ ಮೇಲೆ ಉಚ್ಚರಿಸಲುಪಕ್ರಮಿಸಿದಳು. ಅವಳು ಹಾಗೆ ಮಾಡುವಾಗೆಲ್ಲ ತಾಕಾಹಾಮನು ಮುಂದೆ ಬಾಗಿ ಬಾಯಿ ತೆರೆದುಕೊಂಡು ಕೇಳುವನು. ಆಗ ಅವನ ಸುಕ್ಕುಗಟ್ಟಿದ ಮುಖದ ಮೇಲೆ ಅದೆಂಥ ಸುಂದರವಾದ ಆಶಾಪೂರಿತ ಭಾವ!

ಮುದುಕನು ಅಭಿಮಾನದಿಂದ ಕೇಳಿದನು— "ಅಕ್ಕಾ' ಅದು ಬಹು ಸುಂದರವಾದ ಹೆಸರಲ್ಲವೆ?"

"ಅಹುದಪ್ಪಾ. ಆದರೆ ನಾನು ಅದನ್ನೇಕಷ್ಟು ಉಚ್ಚರಿಸಬೇಕನ್ನುವೆ?"

"ಅಮ್ಮಾ, ಅದೊಂದು ನನಗೆ ಹೌಸು, ಏನೋ ಒಂದು ಬಗೆಯ ತಮಾಷೆ."

ಆಯಾಮೆಯು ಬಹಳ ಹೊತ್ತಿನವರೆಗೆ ಹಾಗೆಯೆ ತಾಕಾಹಾಮನ ಕರವನ್ನು ಹಿಡಿದುಕೊಂಡು ಕುಳಿತುಕೊಂಡಳು. ಅವಳ ಪುಟ್ಟ ತಲೆಯಲ್ಲಿ ಏನೇನೋ ವಿಚಾರತರಂಗಗಳು ತಾಕಲಾಡಿದವು; ಏನನ್ನೋ ತಿಳಿದುಕೊಳ್ಳಲು ಯತ್ನಿಸಿದವು. ಅವಳ ಹುಬ್ಬುಗಳು ಗಂಟಿಕ್ಕಿದವು; ಕೆಂಪಾದ ಮುಖವು ಮುದುಡಿಕೊಂಡಿತು. 'ಏನೋಕಿ' ವೃಕ್ಷವನ್ನು ದುರುದುರನೆ ನೋಡತೊಡಗಿದಳು. ತಡವೆ, ದಿಂಗನೆದ್ದು ಆ ಗಿಡದ ಬುಡಕ್ಕೆ ಓಡಿ ತನ್ನ ಮುರುಕ ಗೊಂಬೆಯನ್ನು ಭರ್ರನೆ ಕಿತ್ತುಕೊಂಡಳು. ಅದನ್ನು ತಲೆಯ ಮೇಲೆ ಇಟ್ಟುಕೊಂಡು ಚಿಟ್ಟನೆ ಚೀರಿಕೊಂಡಳು:— "ಈ ನನ್ನ ಗೊಂಬೆಯನ್ನು 'ಕೊಜಿನ್' ದೇವರಿಗೆ ನಾನೆಂದೂ ಒಪ್ಪಿಸಲಾರೆನು. ನಭೋಮಂಡಲದಲ್ಲಿ ದೇವತೆಗಳೆಲ್ಲರೂ ಒಂದಾಗಿ ಕೈನೀಡಿ ಅದನ್ನು ನನ್ನಿಂದ ಕಿತ್ತುಕೊಳ್ಳಲು ಯತ್ನಿಸಿದರೂ ನನ್ನ 'ತೋಕುತಾರೊ—ಸಾನ್'ನನ್ನು ಬಿಗಿಯಾಗಿ ತಬ್ಬಿಕೊಂಡು ಕೂಡುವೆನು. ಆ ಮೇಲೆ ಅದನ್ನು ಯಾರೂ ನನ್ನಿಂದ ಕಸಿದುಕೊಳ್ಳಲಾರರು.

ಆ ಮೇಲೆ ವೃದ್ಧನನ್ನು ಗಂಭೀರವಾಗಿ ಆರ್ದ್ರನಯನಗಳಿಂದ ಅಭಿವಂದಿಸಿ, ಗೊಂಬೆಯನ್ನು ತನ್ನ ದುಂಡತೋಳುಗಳಲ್ಲಿ ಬಿಗಿಯಾಗಿ ಅಪ್ಪಿಕೊಂಡು ತೋಟದಿಂದ ದುಡುದುಡನೆ ಓಡುತ್ತ ಹೊರಬಿದ್ದಳು.

ಹುಡುಗಿಯು ಹೋದ ಮೇಲೆ, ಮುದುಕನು ತನ್ನಲ್ಲಿ ತಾನೇ ಅಂದುಕೊಂಡನು: 'ಸರಿ, ಪ್ರೌಢವಯಸ್ಸಿನವರು ತಾವು ಪ್ರೇಮಿಸುವ ವರೆಗೆ ಇದಕ್ಕಿಂತಲೂ ಹೆಚ್ಚಾಗಿ ಹೊಂದಿಕೊಂಡಿರುವರು. ಆದರೆ ಅವರು ಒಬ್ಬರನ್ನೊಬ್ಬರು ಹಾಗೇ ಹೆಚ್ಚು ಹೆಚ್ಚು ತಬ್ಬಿಕೊಂಡು ಇರುಇರುತ್ತಲೇ ಅವರ ತೋಳುಗಳ ಬಿಗುವು ತನ್ನಷ್ಟಕ್ಕೆ ತಾನೇ ಸಡಲಿ, ಪ್ರಿಯವಸ್ತುವು ಮಾಯವಾಗಿ ಹೋಗುವದು. ಕೂಡಲೇ, ಒಳಗೆ ಕೊರೆಯುವ ವೇದನೆಯು ಹೃದಯದಲ್ಲಿ ಬಲವಾಗಿ ಬೇರೂರುವದು.'

ಆ ಮೇಲೆ ಮುದುಕನು ಮೆಲ್ಲನೆದ್ದು ಅಲ್ಲಿಯೇ ಇದ್ದ ಕಮಲಗಳನ್ನು ಸೂಕ್ಷ್ಮವಾಗಿ ನಿರುಕಿಸಿ, ಚನ್ನಾಗಿ ಅರಳಿದ ಹೂಗಳನ್ನಷ್ಟೇ ಆಯ್ದುಕೊಂಡು ಸದ್ದುಮಾಡದೆ ಹಾಗೆಯೇ ತೋಟದ ಬಾಗಿಲಿಗೆ ಬಂದು ಪಾರಿಯ ಅಕ್ಕಪಕ್ಕವನ್ನೆಲ್ಲ ಸುತ್ತಿ ನೋಡಿ ಸ್ಮಶಾನಭೂಮಿಯಲ್ಲಿ ಇಣಿಕಿನೋಡಿದನು.

ಅಲ್ಲೆಲ್ಲಿಯೂ ಯಾರ ಸುಳಿವೂ ಇಲ್ಲವೆಂದು ಮನದಟ್ಟು ಮಾಡಿಕೊಂಡು ತೋಟದ ಬಾಗಿಲನ್ನು ಮೆಲ್ಲನೆ ತೆರೆದು, ಮಸಣವನ್ನು ತುದಿಗಾಲಿನಿಂದ ಪ್ರವೇಶಿಸಿದನು. ಅಲ್ಲಿ ಒಂದು ಹಾವಸೆ ಮುಸುಕಿದ ಗೋರಿಯ ಬಳಿಯಲ್ಲಿ ಬಂದು ಮೊಣಕಾಲೂರಿ ಕುಳಿತುಕೊಂಡು ಕಣ್ಣುಮುಚ್ಚಿ ಬಹಳ ಹೊತ್ತಿನ ವರೆಗೆ ಸಮಾಧಿಸ್ಥನಾದನು. ಕಣ್ಣುಗಳನ್ನು ಮುಚ್ಚಿದ ಹಾಗೆಯೇ ಕೈಚಾಚಿ ಆ ಶಿಲಾಸಮಾಧಿಯ ಮೇಲೆ ತನ್ನ ಬೆರಳುಗಳನ್ನು ಆಡಿಸತೊಡಗಿದನು. ಹಾಗೆ ಮಾಡುವಾಗೆಲ್ಲ ಅವನಿಗೊಂದು ಬಗೆಯ ಸುಖವೆನಿಸುತ್ತಿರಬೇಕು. ಯಾಕಂದರೆ ಆಗ ಅವನ ಮುಖದಲ್ಲೆಲ್ಲ ಮುಗುಳು ನಗೆಯು ಬೆಳಗುತ್ತಿದ್ದಿತು.

ಬಳಿಕ ಮುದುಕನು ಕಣ್ಣುತೆರೆದು ಅಲ್ಲಿಯೇ ಬದಿಯಲ್ಲಿದ್ದ ಕಾಸಾರದಿಂದ ನೀರು ತಂದು ಗೋರಿಯ ಮಧ್ಯದಲ್ಲಿದ್ದ ರಂಧ್ರವನ್ನು ತುಂಬಿದನು. ಅದರ ಎಡಬಲದಲ್ಲಿದ್ದ ತೂತುಗಳಲ್ಲಿ 'ಜಾಸ್' ಬತ್ತಿಗಳನ್ನು ಹಚ್ಚಿಟ್ಟನು. ನಂತರ ಬಿದಿರುಬಟ್ಟಲುಗಳಲ್ಲಿಯ ನಿರ್ಮಾಲ್ಯಪುಷ್ಪಗಳನ್ನು ತೆಗೆದು ಬಿಸುಟಿ ಅದೇ ಆಯ್ದುತಂದ ಕಮಲದ ಹೂವುಗಳನ್ನು ಅವುಗಳಲ್ಲಿ ಹಾಕಿಟ್ಟು ಧೂಪವನ್ನು ಹೊತ್ತಿಸಿದನು. ಆ ಧೂಪದ ಸುನೀಲವಾದ ಧೂಮವು ತೇಲುತ್ತ ತೇಲುತ್ತ ಆ ಹಾವಸೆಯಿಂದ ಮುಚ್ಚಿದ ಶಿಲಾಸ್ಮಾರಕವನ್ನೆಲ್ಲ ಆವರಿಸಿ ಮೇಲೆ ಮೇಲೆ ಹಾರುತ್ತ ಆಗಸದ ತೇಜೋಮಯವಾದ ತರತರದ ವರ್ಣಮಾಲೆಯಲ್ಲಿ ಲೀನವಾಗುತ್ತಿದ್ದಿತು.

ಇದೇ ರೀತಿಯಾಗಿ ತಾಕಾಹಾಮನು ಅರ್ಧಶತಮಾನದಿಂದಲೂ ಮಾಡುತ್ತ ಬಂದಿದ್ದನು. ತನ್ನ ಈ ಪ್ರೇಮಪೂಜೆಯ ಕಾರ್ಯಕ್ರಮವನ್ನು ಯಾವ ಕಾರಣದಿಂದಲೂ ಚ್ಯುತಿಯಾಗದಂತೆ ಸಾಗಿಸಿಕೊಂಡು ಬಂದಿದ್ದನು. ಋತುಮಾನಕ್ಕನುಸರಿಸಿ ಬಿದಿರು-ಬಟ್ಟಲಿನಲ್ಲಿಯ ಹೂವುಗಳೂ ಬದಲಾಗುತ್ತಿದ್ದವು. ವಸಂತಋತುವಿನಲ್ಲಿ 'ಚೆರಿ' ಅಥವಾ 'ಪ್ಲಮ್' ಪುಷ್ಪಗಳು ಅದನ್ನು ಅಲಂಕರಿಸುವವು. ಗ್ರೀಷ್ಮ ಋತುವಿನಲ್ಲಿ ಕಮಲವಾಗಲಿ 'ಏರ್ಷೂಲಿ'ಯಾಗಲಿ, ಇಲ್ಲವೆ ಶ್ವೇತ ದೂರ್ವಾದಲಗಳಾಗಲಿ ಅದರಲ್ಲಿ ತೊಳಗುವವು. ಶರತ್ಕಾಲದಲ್ಲಿ ಝುಗಝುಗಿಸುವ 'ಮ್ಯಾಪಲ್' ಪರ್ಣಗಳಿಂದ ಅದು ವಿರಾಜಿಸುವದು. ಹೇಮಂತ ಋತುವಿ[...] ಬೀಳುವ ಮಂಜಿ ಬಿಳಿಸೇವಂತಿಗೆಯಿಂದ[...] ವರಣವು ಹಿಮತುಷಾರಗಳಿಂದ ತುಂಬಿಕೊಂ[...] ಪೀತವರ್ಣದ ಪತ್ರಪುಷ್ಪಗಳಿಂದಲೂ ಅದು [...]

ಹೀಗಿರಲೊಮ್ಮೆ ತಾಕಾಹಾಮನು ಬೇನೆ[...] ಅವನ ಆರೈಕೆಗೆ ಯಾರೂ ಇರಲಿಲ್ಲ. ಭ[...] ವ್ಯಥೆಪಡುತ್ತ ಕೊಂಚ ಊಟ ಮಾಡಬೇಕೆ[...] ಯೆಂದೆದ್ದು ಸಾವಕಾಶವಾಗಿ ಸರಿಯುತ್ತ [...] ಆದರೆ ಶಕ್ತಿಗುಂದಿ ಅವಕ್ಕಾ ಸಾವಕಾಶವಾಗಿ [...] ವನು. ಆ ಸ್ಥಿತಿಯಲ್ಲಿಯೆ ಸನ್ನಿಯಾಗಿ, [...] ರೀತವಾಗಿ ಬಡಬಡಿಸುತ್ತಿದ್ದನು. ಒಮ್ಮೆ [...] ಯಾಗಿ ಕಿರಿಚಿಕೊಳ್ಳುವನು; ಮತ್ತೊಮ್ಮೆ [...] ಮಗದೊಮ್ಮೆ ಬಿಕ್ಕಿಬಿಕ್ಕಿ ಅಳತೊಡಗುವನು. [...] ಬಗೆಯ ಚೀರಾಟವೇ ಆತನ ತೋಟದ ಮುಂ[...] ಹೋಗುತ್ತಿದ್ದ ಸೋಂಜೋನನ್ನು ಬರಮಾ[...] ತಾಕಾಹಾಮನ ಮೇಲೆ ಸೋಂಜೋನ ಅಭಿಮಾ[...] ಆತನು ಅವನನ್ನು ತುಂಬಾ ಪ್ರೀತಿಸುತ್ತಿದ್ದನು. ಕೂಡಲೆ ರೋಗಿಯ ಕೋಣೆಯನ್ನು ಹೊಕ್ಕ[...] ಹಾಮನ ಮೇಲೆ ಬಾಗಿ ನೋಡುತ್ತ ನುಡಿದನು. [...] ಹಾಮ, ಇದೇನು ? ನೀನು ಈ ಪರಿ ಕಾಯಿ[...] ಳುತ್ತಿರುವೆಯಲ್ಲ! ಅದೆಷ್ಟು ದಿನದಿಂದ ?"

ತಾಕಾಹಾಮನಿಂದ ಉತ್ತರ ಬರಲಿಲ್ಲ. ಆ[...] ಗೆಳೆಯನ ಗುರುತು ಹಿಡಿಯಲಿಲ್ಲ. ಅಲ್ಲದೆ ಆವ[...] ನೆಂಬುದರರಿವು ಕೂಡ ಆತನಿಗಿರಲಿಲ್ಲ. ಆತನ[...] ಕೂಗುತ್ತ, ಹಾಡುತ್ತ, ಬಿಕ್ಕುತ್ತ ಇದ್ದುಬಿಟ್ಟ[...]

ಸೋಂಜೋನು ಸುಮ್ಮನೆ ಕುಳಿತು ಕಾಲಹ[...] ಲಿಲ್ಲ. ಅವನು ಲಗುಬಗೆಯಿಂದ ಆ ಕೋಣೆಯ[...] ಕಾಡಿ ನೋಡಿದನು. ಔಷಧಿಯ ಪೆಟ್ಟಿಗೆಯ[...] ಕಣ್ಣಿಗೆ ಬಿತ್ತು. ಕೂಡಲೆ ತಂಪುಹುಟ್ಟುವ [...] ತಯಾರಿಸಿದನು.

ಸೋಂಜೋನು ಆ ಸಂಕಟಬಡುವ ರೋ[...] ಕುಡಿಸಲು ಬಹು ಪ್ರಯಾಸಬಟ್ಟನು. ಆತನ[...] ಸ್ವಲ್ಪಮಟ್ಟಿಗೆ ಸಾಧಿಸಿ, ಆ ಔಷಧದ ಕೆಲ[...] ಮಾತ್ರ ತಕಾಹಾಮನು ಗುಟುಕರಿಸಿದನು. [...] ಅವನಿಗಷ್ಟು ಸಮಾಧಾನವೆನಿಸಿತು. 'ಪ್ಯುಟನ್'[...] ಆ ವೃದ್ಧನು ಆಯಾಸದಿಂದ ಇತ್ತಿಂದತ್ತ [...] ದ್ದನು. ಆ ಬೇಸಿಗೆಯ ಬಿಸಿಲಿನ ಬಳಲು[...]

..ೂ ತುಂಬಾ ಹೊದ್ದುಕೊಂಡ ಹೊದಿಕೆಯನ್ನವನು ..ಮ್ಮೆ ಬಿಗಿಯಾಗಿ ತಬ್ಬಿಕೊಂಡು ಹಿಡಿಯುವನು.

.. ಯುವಕನು ತನ್ನ ಗೆಳೆಯನು ನಿದ್ರೆಹೋಗುವವರೆಗೂ ..ನ ಮುಗ್ಗುಲಲ್ಲಿಯೇ ಮೊಣಕಾಲೂರಿ ಕುಳಿತುಕೊಂಡು ..ಯುತ್ತಿದ್ದನು.

..ಸರಿ. ಪರವಾ ಇಲ್ಲ.'' ಸೋಂಜೋ ಅಂದನು:— ..ಸೋಚ್ಛ್ವಾಸವು ದೀರ್ಘವಾಗಿ ನಡೆಯತೊಡಗಿದೆ. ..ಹತ್ರಲಿದೆ. ಈಗಲೇ ಹೋಗಿ ನಾನೊಬ್ಬ ವೈದ್ಯ ..ಕರೆತರುವೆನು. ತಾಕಾಹಾಮನಿಗೆ ಇಷ್ಟರಲ್ಲಿಯೇ ..ವೆನಿಸುವದು." ಹೀಗನ್ನುತ್ತಲೆ ಮನೆಯಿಂದ ಹೊರ ..ನು.

..ಕಾಹಾಮನಿಗೆ ಗಾಢವಾದ ನಿದ್ರೆಯೇನೂ ಹತ್ತಿರ .. ಸೋಂಜೋನು ಹೊರಹೊರಟ ಮೇಲೆ ಆತನು ಕಣ್ಣು ..ು ಕೋಣೆಯಲ್ಲೆಲ್ಲ ನೋಡಿದನು.

..ಆಹಾ!' ಅವನಂದನು: "ನನಗೇನೋ ಜಡ್ಡಾಗಿರು ..ನಿಜ, ಆದರೆ ನನಗೀಗ ಹಗುರಾಗಿದೆ. ನಾನು ..ಮೈಯ್ಯಲ್ಲಿ ನೆಟ್ಟಗಿಲ್ಲದೆ ಬಿದ್ದುಕೊಂಡುದು ಅದೆಷ್ಟು ..ತ್ತೋ ಏನೋ!"

..ವನಿಗೆ ಆದಾವದೂ ಬಗೆಹರಿಯಲಿಲ್ಲ. ಕೆಲಹೊತ್ತಿನ ..ಲೆ ಅವನೊಮ್ಮೆಲೇ ಕೂಗಿಕೊಂಡನು— "ಆಯ್ಯೋ, ..ು ನನ್ನ ಇನಿಯಳನ್ನು ಮನ್ನಿಸದಾದೆನಲ್ಲ! ನಾನು ..ಣನಲ್ಲವೇ? ನನಗೆ ಸಾಕಷ್ಟು ಶಕ್ತಿಯನ್ನು ದಯ ..ಸಲು ದೇವರನ್ನು ಬೇಡಿಕೊಳ್ಳುವೆನು. ಹೇ ಬುದ್ಧ ..ೋ! ಕೇಳು. ನಾನು ಈಗ ಮಸಣಕ್ಕೆ ಹೋಗಲೇ ..ು—ಹೋಗಿಯೇ ತೀರಬೇಕು. ಇದೋ, ಈಗಲೇ ..ರಟೆ."

..ಲ್ಲಿಂದೆದ್ದು ಬಹು ಪ್ರಯಾಸದಿಂದ ಚಾಪಿಯನ್ನು ..ಕೊಂಡು ಬಂದು, ಹಾಸಿಗೆಯ ಮುಗ್ಗುಲಲ್ಲಿದ್ದ ಪುಷ್ಪ ..ದದಲ್ಲಿಯ ಹೂವುಗಳನ್ನೆಲ್ಲ ತೆಗೆದುಕೊಂಡು ತಡವರಿ.. ..ತೋಟದ ಹಾದಿಯನ್ನು ಹಿಡಿದು ಸಾಗಿ ಮುಸಣವನ್ನು ..ಕ್ಕನು. ಅಲ್ಲಿ ಹಾವಸೆಯಿಂದ ಆಚ್ಛಾದಿತವಾದ ಒಂದು ..ರಿಯ ಬದಿಯಲ್ಲಿ ಮೊಣಕಾಲೂರಿ ಕುಳಿತು—"ಇದೊ, ..ು ನಿನಗೀಗ ಅರ್ಪಿಸುವದು ಕೊನೆಯ ಕುಸುಮಾಂಜಲಿ. ..ದನ್ನೆ, ನಾನೀಗ ಬಿಡುತ್ತಿರುವದು ಅಂತ್ಯೋದಕ ತಿಳಿ..ತೆ? ಆಕಿಕೊ, ತಿಳಿಯಿತೆ? ನಾಗೀಗ ಹೆಜ್ಜೆಯಿಡಲಿರುವದು ..ದಳಗಳೆಲ್ಲಿ ಬಾಡುವದನ್ನರಿಯವೋ ಅಂಥ ನವನವೋ ..ನದಲ್ಲಿ—ಮತ್ತೆ ನಾನು ನಿನ್ನನ್ನೆಲ್ಲಿ ಅಪ್ಪಬಹುದೋ ಅಲ್ಲಿ! ಇದು ನೋಡು, ಧೂಪವು ನಿನ್ನೆಡೆಗೆ ತೇಲುತ್ತ ಸಾಗಿರುವದು; ಆದು ನೀನುಡುತ್ತಿದ್ದ ವಸನದೋಪಾದಿಯಲ್ಲಿದೆ."

ತಾಕಾಹಾಮನು ಗೋರಿಗೆ ತಲೆಯೊಡ್ಡಿ ಅದನ್ನು ಬಿಗಿಯಾಗಿ ಆಲಿಂಗಿಸಿದನು. ಆಗ ಆವನ ದೇಹವು ನಡುಗತೊಡಗಿತು. ಪ್ರಚಂಡ ವೇದನೆಯು ಒಳಗೇ ಹೃದಯವನ್ನದುಮಿತು "ಬಂದೆ. ಆಕಿಕೊ, ಅರ್ಧಶತಮಾನದ ನಂತರದಲ್ಲಿಯಾದರೂ ಇದೊ ಬಂದೆ" ಅವನು ಗುಣುಗುಟ್ಟಿದನು. ಅಸಹ್ಯವಾದ ವೇದನೆಯಿಂದ ಅವನ ವಿಷಣ್ಣ-ಗಂಭೀರವಾದ ಮುಖವು ಇನ್ನಿಷ್ಟು ಮುದುಡಿಕೊಂಡಿತು. "ನೀನಿರುವ ಉದ್ಯಾನದ ಬಾಗಿಲನ್ನು ತೆರೆದಿಡು. ಅಲ್ಲಿಯ ನವೋನವವಾದ ಸುಮನಗಳ ವಾಸನೆಯು ನನಗೆ ಸೋಂಕುತ್ತಲಿದೆ. ಆಹಾ! ನೇಸರಿನ ಶ್ವೇತಕಿರಣಗಳ ಮಂತ್ರಜಾಲವದೆಷ್ಟು! ಸುನೀಲವಾದ ನಭೋಮಂಡಲದ ಅಗಮ್ಯವಾದ ಶಾಂತಿಸಿಬಿಡತೆಯದೆಷ್ಟು! ಆಕಿಕೊ, ನಿನ್ನ ಕೋಮಲ ಕರಾಂದೋಲನ! ಆಹಾ—''

ದೇಹದ ನಡುಗು ನಿಂತಿತು. ಕೆಳಗೆ ಹಾಸಿದ ಕಲ್ಲಿನಂತೆಯೆ ಅದು ಸ್ತಬ್ಧವಾಗಿ ಬಿಟ್ಟಿತು.

ಸೋಂಜೋ-ಅಯಾಮಿಯರು ಅವನನ್ನು ನೋಡಿದುದು ಈ ಬಗೆಯಲ್ಲಿ.

"ತಾಕಾಹಾಮನಿಗೇನಾಗಿದೆ?" ಎಂದು ಕೇಳಿ ಆ ಹುಡುಗಿಯು ಬಿಕ್ಕಿಬಿಕ್ಕಿ ಅಳಹತ್ತಿದಳು.

"ಅವನಿಗೇನಾಗಿದೆಯೊಗ, ಅಯಾಮಿ? ನಮ್ಮ ಮಿತ್ರನಿಗೆ ಆಗಿರುವದು ಶಾಂತಿಸಂಪಾದನೆ. ತಾಕಾಹಾಮನೀಗ ಹೋಗಿರುವದು 'ಚಿರವಿಶ್ರಾಂತಿ ಮಂದಿರ'ಕ್ಕೆ."

ಒಂದು ದೊಡ್ಡದಾದ ಶ್ವೇತಪತಂಗವು ಹಾರಿ ಬಂದು ತಾಕಾಹಾಮನ ಮೋರೆಯ ಮೇಲೆ ಕುಳಿತುಕೊಂಡಿತು. ಆಯಾಮಿಯು ತನ್ನ ಬೀಸಣಿಕೆಯನ್ನು ಬಿಚ್ಚಿ ಬೀಸಿ ಅದನ್ನು ಹಾರಿಸಲಿಕ್ಕೆ ಅದೆಷ್ಟೋ ಪ್ರಯತ್ನ ಮಾಡಿದಳು; ಆದರೆ ಅದು ಮತ್ತೆ ಮತ್ತೆ ಬರತೊಡಗಿತು. ಅದು ಒಮ್ಮೆಲೇ ಹಾರಿ ಸುತ್ತಿ ಬಂದು ಆ ಗೋರಿಯಲ್ಲಿಯೇ ಸೇರಿ ಮಾಯವಾದಂತಾಯಿತು!

ಇದನ್ನು ನೋಡಿ, ಆ ಹುಡುಗಿಯು ಮೊಣಕಾಲೂರಿ ಕುಳಿತುಕೊಂಡು, ಗೋರಿಗೆ ಅಂಟದ ಹಾವಸೆಯನ್ನು ಕೈಬೆರಳುಗಳಿಂದ ಕೆದರತೊಡಗಿದಳು. ಕೂಡಲೆ ಅವಳು ಗಟ್ಟಿಯಾಗಿ ಓದಿದಳು— "ಆಕಿಕೊ." ಮತ್ತು ಆಕೆಯು ತನ್ನ ಹದಿನೆಂಟನೆಯ ವರ್ಷದಲ್ಲಿ ಹೇಗೆ ಸತ್ತಳೆಂಬದನ್ನು ತಿಳಿಸುವ ಬರಹವನ್ನಾದರೂ ಓದಿದಳು.

"ಈಗೆಲ್ಲವೂ ನನಗೆ ಹೊಳೆಯಿತು." ಆಯಾಮೆ ಅಂದಳು. ತಾಕಾಹಾಮನ ಸುಖಸ್ವಪ್ನಗಳು ಈಗವನಿಗೆ ಮತ್ತೆ ಮರಳಿ ಬಂದಿವೆ. ಅವನ ಪ್ರೇಯಸಿಯ ಹೆಸರು "ಆಕಿಕೊ." ಮತ್ತು ನಾವು ಕಂಡ ಆ ಚಿತ್ರಪತಂಗವು ಅವಳ ಆತ್ಮ. ಆಹಾ ! ತಾಕಾಹಾಮ, ನಿನಗಿನ್ನೆಲ್ಲಿಯ ಜೀವನದ ದಾಹ— 'ಆಹ-ತೆ !'

...ತ್ತ... ...ನನ್ನ... ...ವೇಶ... ...ಲತ... ...ವನ... ...ಧನೆ... ...ವು... ...ತ. ...ಸುಭದ್ರ... ...ಸ್ಥ... ...ರ್ಯವ... ...ತ್ತವೆ. ...ಹೀಗೆ... ...ಜೆಸು...

ಭೀಮಕವಿಯ ಬಸವಪುರಾಣ

ಲೇಖಕರು: ಶ್ರೀ. ಎಸ್. ಕೆ. ಕುಲಕರ್ಣಿ, ಬಿ. ಎ. (ಆನರ್ಸ್)

೧೪ನೆಯ ಶತಮಾನದಿಂದ ೧೬ನೆಯ ಶತಮಾನದ ವರೆಗೂ ವೀರಶೈವ ಪುರಾಣಯುಗದ ಸುಗ್ಗಿಯ ಕಾಲವು. ಭೀಮಕವಿಯ ಬಸವಪುರಾಣವು ಆ ಕಾಲಖಂಡದ ಶ್ರೇಷ್ಠಗ್ರಂಥ. ಬಸವಮಂತ್ರಿಯ ರಾಜಕೀಯ ಜೀವನದ ಇಲ್ಲವೆ ಅನುಭಾವಿ ಬಸವಣ್ಣನ ಕರುಣಾಲು ಜೀವನದ ವಾಸ್ತವಚಿತ್ರವಿದರಲ್ಲಿರದೆ, ಮತಪ್ರಸಾರಕ ಅವತಾರಿಪುರುಷನ ಪೌರಾಣಿಕ ವ್ಯಕ್ತಿತ್ವವು ಇಲ್ಲಿ ನಿರೂಪಿಸಲ್ಪಟ್ಟಿದೆ. ಹಾಗಿದ್ದರೂ ಜೈನಕವಿಗಳಂತೆ ಭೀಮಕವಿಯು ಕವಿಸಂಕೇತಗಳಿಗೆ ಕಟ್ಟುಬಿದ್ದಿಲ್ಲ. ಶಬ್ದಾಲಂಕಾರಗಳಿಗೆ ಮಾರುವೋಗಿಲ್ಲ. ಅಲ್ಲಲ್ಲಿ ಅರ್ಥಾಲಂಕಾರಗಳನ್ನು ಮಾತ್ರ ತೊಡಿಸಿ, ಶೈಲಿ .... ಯನ್ನು ಸುಗಮಗೊಳಿಸಿ, ಕಾವ್ಯಕನ್ನಿಕೆ ಸಹಜಸೌಂದರ್ಯದಿಂದೊಪ್ಪುವಂತೆ ಮಾಡಿದ್ದಾನೆ. ....

ಬಸವೇಶ್ವರರೆಂದರೆ ಹನ್ನೆರಡನೆಯ ಶತಮಾನದ ...ತ್ಮರು. ಇವರು ಕೈಕೊಂಡು ಕೊನೆಗಾಣಿಸಿದ ಮಹ...ರ್ಯವನ್ನು ನೋಡಿದರೆ, ಇವರ ತರುವಾಯದ ಶಿವ...ರು ಇವರನ್ನು ಪವಾಡಪುರುಷರೆಂದೂ ಪುರಾಣ...ಷರೆಂದೂ ಅವತಾರಪುರುಷರೆಂದೂ ತಿಳಿದುಕೊಂಡಿ...ದ್ದು ಆಶ್ಚರ್ಯವೇನಿದೆ ಎನುವಂತಿದೆ. ಬಸವೇಶ್ವರರು ...ಮ್ಮ ಸ್ಫೂರ್ತಿಯ ಅಂಕವನ್ನು ಸಂಸ್ಕೃತಿಯ ಅಂಗ...ಥ ಧರ್ಮ ಸಾಹಿತ್ಯಗಳಲ್ಲಿ ಪಡಿಮೂಡಿಸಿ ಹೋಗಿದ್ದಾರೆ. ...ಟ್ಟಪಾಡಿಗೆ ಬಿದ್ದ ಸನಾತನ ವೈದಿಕ ಧರ್ಮದ ಭಕ್ತಿ...ನೆಗಳಿಲ್ಲದ ಶುಷ್ಕಕರ್ಮವನ್ನು ಬಲವಾಗಿ ಖಂಡಿಸಿ ...ಯ, ವಿನಯ, ಭಕ್ತಿ ಇವೇ ಮೊದಲಾದ ಧರ್ಮದ ದೃಢ...ವ ಅಸ್ತಿವಾರಗಳಮೇಲೆ ವೀರಶೈವ ಮತದ ಜೀರ್ಣೋ...ರ ಮಾಡಿದರು. ಬುದ್ಧನಂತೆ ಬಸವೇಶ್ವರರೂ ಜನ...ಸಾಮಾನ್ಯರಲ್ಲಿ ಬೆರೆತು ಜನತೆಗೆ ತಿಳಿಯುವಂಥ ಭಾಷೆ...ಲ್ಲಿಯೆ ತಮ್ಮ ಸಂದೇಶವನ್ನು ಬೀರಿದರು. ಮಾತ್ರ ...ವೇಶ್ವರರು ಬುದ್ಧನಂತೆ ಸನಾತನ ಧರ್ಮವನ್ನು ...ಲತಃ ವಿರೋಧಿಸಲಿಲ್ಲ. ಧರ್ಮವು ಮೊದಲು ಜನ...ವನವನ್ನು ಉತ್ತಮಪಡಿಸಬೇಕು, ಆಮೇಲೆ ಮುಕ್ತಿ ...ಧನೆ ತಾನಾಗಿಯೆ ಆಗುವುದು ಎಂಬ ಬಸವೇಶ್ವರರ ...ವು ಜನಸಮುದಾಯದಲ್ಲೆಲ್ಲ ಮೈಗೂಡುವಂತೆ ದಟ್ಟಾ...ತ್ತಿ. ಸತ್ಯವನ್ನಾಗಲಿ ತತ್ವವನ್ನಾಗಲಿ ಅವರು ತಮ್ಮ ...ನುಭವದ ಕಣ್ಣಿನಿಂದಲೇ ಕಂಡರು. ಅಂತೆಯೆ ಅವರ ...ಸ್ಥಲಮಾರ್ಗವೂ ಅಷ್ಟಾವರಣವೂ ಪಂಚಾಕ್ಷರವೂ ...ರ್ಮಮೋಕ್ಷಗಳ ಸರಿಯಾದ ತಿರುಳನ್ನು ತಿಳಿಯಪಡಿ...ತ್ತವೆ.

...ಹೀಗೆ ಅಂತಶ್ಶುಚಿಯ ಬೆಳಕಿನಿಂದ ಧರ್ಮಗುರುಡರ ...ನ್ನು ತೆರೆದ ಬಸವೇಶ್ವರರನ್ನು ಇಂದಿಗೂ ದೇವರಂತೆ ...ಜಿಸುತ್ತಾರೆ. ಇಂತಹ ಅಲೌಕಿಕ ಪುರುಷರನ್ನು ಅನೇಕ ಶರಣರು ಮುಕ್ತಕಂಠದಿಂದ ಹೊಗಳಿದರೂ ಅವರ ಜೀವನ ಚರಿತ್ರೆಯನ್ನರಿತುಕೊಳ್ಳಬೇಕೆಂಬ ಕುತೂಹಲವನ್ನು ತೋರಿಸಿದವರು ಕಡಮೆಯೆಂದೇ ಹೇಳಬೇಕು. ಹಾಗಿಲ್ಲದಿದ್ದರೆ ಭೀಮ, ಷಡಕ್ಷರದೇವರಂತಹ ಕವಿಗಳು, ತೆಲುಗಿನಲ್ಲಿ ಪಾಲ್ಕುರಿಕೆಯ ಸೋಮನು ಬರೆದ ಕಾವ್ಯದಿಂದ ಅನುವಾದಿಸುವ ಪ್ರಸಂಗ ಬರುತ್ತಿರಲಿಲ್ಲ. ಮಲ್ಲಿಕಾರ್ಜುನ ಪಂಡಿತಾರಾಧ್ಯನು (ಸು. ೧೧೬೦) ಬಸವರನ್ನು ಕಾಣಬೇಕೆಂದ ಕಲ್ಯಾಣಕ್ಕೆ ಹೊರಟಾಗ ಹಾದಿಯಲ್ಲಿಯೆ "ಬಸವಂ ಕೂಡಲ ಸಂಗಮೇಶ್ವರನಲ್ಲಿ ಅಡಗಿದಂ; ಬಿಜ್ಜಳನಂ ಶರಣರು ಕೊಂದರು" ಎಂದು ಕೇಳಿದಾಗ "ಬಸವ ಬಯಲಾದೆಯಾ" ಎಂದು ಆ ಮಹಾತ್ಮನ ಗೀತವನ್ನು ಹಾಡುವಾಗಲೆ ಆತನ ಜನಜೀವನವನ್ನೂ ಚಿತ್ರವನ್ನೂ ಚಿತ್ರಿಸಬಹುದಾಗಿತ್ತು. ಆದರೆ ಆತನು ಹಾಗೆ ಮಾಡಲಿಲ್ಲ. ಇದಕ್ಕೆ ಕಾರಣವನ್ನೂ ಊಹಿಸಬಹುದು—ಬಸವೇಶ್ವರರ ಜೀವನನಾಟಕದಲ್ಲಿ ಎರಡು ಅಂಕಗಳನ್ನು ಮಾಡಬಹುದು. ಒಂದು ಬಿಜ್ಜಳನ ಮಂತ್ರಿಯಾಗಿ ರಾಜಕಾರಣ ವಹಿಸಿದ ಬಸವೇಶ್ವರರು. ಇನ್ನೊಂದು ವೀರಶೈವ ತತ್ವವನ್ನು ಸ್ಥಾಪಿಸಿದ ಅನುಭಾವಿಗಳಾದ ಬಸವೇಶ್ವರರು. ಆದರೆ ಅನುಭಾವಿ ಬಸವೇಶ್ವರರ ಚರಿತ್ರೆಯನ್ನು ಅವರ ವಚನಗಳಿಂದಲೆ ತಿಳಿದುಕೊಳ್ಳಬಹುದಾಗಿದೆ—ಏಕೆಂದರೆ ಅವರ ವಚನಗಳಲ್ಲೆಲ್ಲ ಅವರ ವ್ಯಕ್ತಿಸ್ವರೂಪದ ಪ್ರತಿರೂಪವೇ ಮೂಡಿದೆ. ಬಿಜ್ಜಳನ ಮಂತ್ರಿಯಾಗಿ ರಾಜಕಾರಣ ಮಾಡಿದ ಐತಿಹ್ಯವು ಅವರ ಧಾರ್ಮಿಕ ಸಂದೇಶಕ್ಕೇನೂ ಸಂಬಂಧಿಸಿರಲಿಲ್ಲ. ಅಂತೆಯೆ ಅವರಿಗೆ 'ಬಸವಮಂತ್ರೀಶನ' ಇತಿಹಾಸ ಅಷ್ಟೊಂದು ಮಹತ್ವವೆನಿಸಿರಲಿಕ್ಕಿಲ್ಲ. ಮತ್ತು ಎರಡನೆಯ ಕಾರಣವೆಂದರೆ ಬಸವೇಶ್ವರರೆಂದರೆ ಮನುಷ್ಯಗಣವನ್ನು ಮೀರಿದವರೆಂದು ಅವರ ಭಾವನೆಯಿದ್ದಿತು. ಹಾಗೆ ಅವರನ್ನು ಕ್ರಮವಾಗಿ ದೇವತಾಂಶಕ್ಕೆ ಒಯ್ಯಹತ್ತಿದಂತೆ

ಅವರ ಚರಿತ್ರೆಯಲ್ಲಿಯೂ ವ್ಯತ್ಯಾಸಗಳನ್ನು —ಪುರಾಣ ಪುರುಷೋತ್ತಮರಿಗೆ ಹೊಂದಿಕೆಯಾಗುವಂತೆ ಮಾಡಹತ್ತಿದರು. ಆದುದರಿಂದಲೆ ಬಿಜ್ಜಳನ ಮಗನು ಬಸವೇಶ್ವರನ ಮೇಲೆ ದಂಡೆತ್ತಿ ಬರಲು ಅವರು ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಂಡರೆಂದು* ತಿಳಿದುಬರಬಹುದಾದರೂ, ಬಸವೇಶ್ವರರು ಕೂಡಲಸಂಗಮೇಶ್ವರನಲ್ಲಿ ಲಿಂಗೈಕ್ಯರಾದರೆಂದು ಪುರಾಣಕರ್ತರು ಮೂಲಸಂಗತಿಯನ್ನು ಮರೆಯಾಗಿಸಿ ಹೇಳಿರಬಹುದೆಂದು ಊಹಿಸಬಹುದಾಗಿದೆ. (ಬಸವೇಶ್ವರರಂತಹ ಅನುಭಾವಿಗಳು ಲಿಂಗೈಕ್ಯರಾಗಿರುವುದೇನೂ ಸಂಶಯಾಸ್ಪದವಲ್ಲವೆಂಬುದನ್ನು ಮರೆಯಲಾಗದು.) ಮೂರನೆಯ ಕಾರಣವೆಂದರೆ ಆಗ ಇನ್ನೂ ಪುರಾಣಯುಗವು ಪ್ರಾರಂಭವಾಗಿರಲಿಲ್ಲ.

ಪ್ರಕೃತ ವಿಷಯವೆಂದರೆ ಮಹಾನುಭಾವರಾದ ಬಸವೇಶ್ವರರ ಪುರಾಣವನ್ನು ಬರೆದ ಭೀಮಕವಿಯ ಕಾವ್ಯದಲ್ಲಿ ಬಸವೇಶ್ವರರ ಜೀವನಚರಿತ್ರೆಯೊಡನೆ, ಅದರ ಕಥಾಕೌಶಲ್ಯವೂ ಕಾವ್ಯದ ಬೆಡಗೂ ಎಷ್ಟರಮಟ್ಟಿಗೆ ಹೊರಹೊಮ್ಮಿವೆಯೆಂಬುದನ್ನು ತಿಳಿದುನೋಡುವುದು.

ತೆಲುಗಿನಲ್ಲಿ ಪಾಲ್ಕುರಿಕೆಯ ಸೋಮನು ಬಸವೇಶ್ವರರ ಚರಿತ್ರೆಯನ್ನು ಚಿತ್ರಿಸಿದ ತರುವಾಯ ಅದನ್ನು ಕನ್ನಡಿಸಿದವರಲ್ಲಿ ಭೀಮಕವಿಯೇ ಮೊದಲಿಗನು. ಈತನ ಕಾಲ ಕವಿಚರಿತೆಕಾರರ ಪ್ರಕಾರ ಕ್ರಿ. ಶ. ೧೩೬೯. ಷಡಕ್ಷರದೇವನು (ಕ್ರಿ. ಶ. ೧೬೫೫) ತನ್ನ 'ವೃಷಭೇಂದ್ರ ವಿಜಯ' ದಲ್ಲಿ, ಬಸವಚರಿತವನ್ನು ಮೊದಲು ಪಾಲ್ಕುರಿಕೆ ಸೋಮನಾಥನು ತೆಲುಗಿನಲ್ಲಿಯೂ, ಅದನ್ನೆ ಭೀಮಕವಿ ಕನ್ನಡದಲ್ಲಿಯೂ ವರ್ಣಿಸಿದರೆಂದೂ ಮುಂದೆ ಭೀಮಕವಿಯಿಂದ ಶಂಕರನೆಂಬ ಕವಿಯು ಸಂಸ್ಕೃತಕ್ಕೆ ಪರಿವರ್ತಿಸಿದನೆಂದೂ ಆ ಸಂಸ್ಕೃತ ಕಾವ್ಯದಿಂದ ತಾನು ಕನ್ನಡದ ಚಂಪೂರೂಪದಲ್ಲಿ ಬರೆದೆನೆಂದೂ ಹೇಳಿದ್ದಾನೆ. ಎಂದರೆ ಭೀಮಕವಿಯು ತನ್ನ ಕಾವ್ಯವನ್ನು ತೆಲುಗಿನಿಂದ ಕನ್ನಡಿಸಿರಬೇಕೆಂದು ಷಡಕ್ಷರನ ಅಭಿಪ್ರಾಯವಿದ್ದಂತೆ ತೋರುತ್ತದೆ. ಆದರೆ ಭೀಮಕವಿಯು ಭಾಷಾಂತರಗೊಳಿಸಿದನೆಂದು ಹೇಳದೆ—

" ಅನುನಯದಿ ಪಾಲ್ಕುರಿಕೆ-ಸೋಮೇ। ಶನುಮನಘ-
ದೇವಾರ್ಯನುಂ ಕನ।
ಸಿನೊಳೊಸೆದು ಬಂದು ಪ್ರಸಾದವನಿತ್ತು [illegible]
ಅವುದಕ್ಕನುಮಾನಿಸದಿರೊಲಿ! ದಾಪ [illegible]
ಮು[illegible]
ಭಾವಿಸಲ್ಕಿನಗರುಪಿ ನಿನ್ನಾತ್ಮದೊಳಗಲದಿ[illegible]
ನಾವು ರಚಿಸುವೆವೆಸೆವ ಬಸವಕ। ಥಾವಿಸ[illegible]
ದೋಷಿದವರಾಜ್ಞೆಯನು ಶಿರದೊಳು ಧ[illegible]

ಬರೆದಂತೆ ಹೇಳಿದ್ದಾನೆ. ಹೀಗೆ ಪಾಲ್ಕು[illegible] ಪ್ರೇರಣೆಯೊಂದಲ್ಲದೆ ಆಗಿನ ಕಾಲದ [illegible] ಪ್ರೇರಣೆಯೂ ಭೀಮಕವಿಗೆ ಬಸವಪು[illegible]ಯುವಂತೆ ಪ್ರಚೋದಿಸಿರಬೇಕು. ೧೪[illegible]ದಿಂದ ೧೬ನೆಯ ಶತಮಾನದ ವರೆಗೂ ವೀ[illegible] ಯುಗದ ಸುಗ್ಗಿಕಾಲವೆಂದು ಕರೆಯಬ[illegible] ಕವಿಯ 'ಬಸವಪುರಾಣ'ವೂ ಲಕ್ಕಣದಂಡೆ[illegible] ಚಿಂತಾಮಣಿ'ಯೂ ಚಾಮರಸನ 'ಪ್ರಭು[illegible]' ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾ[illegible]' ಯುಗದ ಪ್ರಾತಿನಿಧಿಕ ಪುರಾಣಗ್ರಂಥ[illegible] ಬಹುದು. ಇದರ ತರುವಾಯ 'ಚೆನ್ನಬಸವ[illegible]' ಶ್ರೇಷ್ಠಪುರಾಣವು ಹೊರಟರೂ ಮೊದಲಿನ[illegible] ಸ್ಥಿತಿಯಲ್ಲಿದ್ದಿರಲಿಲ್ಲವೆಂದೇ ಹೇಳಬೇಕು. 'ಚೆನ್ನಬಸವಪುರಾಣ'ಕ್ಕಿರುವ ಪ್ರಾಶಸ್ತ್ಯ[illegible]ಗಳಿಗಿಲ್ಲ.

'ಬಸವಪುರಾಣ'ದಲ್ಲಿ ಚಿತ್ರಿತವಾಗಿರುವ ಜೀವನಚರಿತ್ರೆ

ಶಿವಪಾರ್ವತಿಯರು ಕೈಲಾಸದಲ್ಲಿ '[illegible] ಸತ್ಕಥಾಪ್ರಿಯಕೌತುಕದೊಳಿರಲು' ನಾ[illegible] ಭೂಲೋಕದಲ್ಲಿ ಶೈವಧರ್ಮವು ಕ್ಷೀಣದೆ[illegible]ದೆಂದು ತಿಳಿಸುವನು. ಇದನ್ನು ಕೇಳಿ ಶಿವ[illegible] ಮಾನವಾವತಾರವನ್ನು ಹೊಂದುವಂತೆ ಆ[illegible] ನಂದಿಯೆ ಇಂಗಳೇಶ್ವರ ಬಾಗವಾಡಿ[illegible] ಬ್ರಾಹ್ಮಣಕುಲದಂಪತಿಗಳಾದ ಮಾದಿರಾ[illegible]ಕೆಯ ಹೊಟ್ಟೆಯಲ್ಲಿ ಹುಟ್ಟುವನು. ತಮ್ಮ[illegible] ಪ್ರಕಾರ ಮಾದಿರಾಜನು ಮಗನಿಗೆ ಉಪನ[illegible]ದ್ಯುಕ್ತನಾಗಲು ಅದಕ್ಕೆ ಬಸವನು ಪ್ರತಿಭ[illegible] ಲಿಂಗದೀಕ್ಷೆ ಬೇಕೆಂದು ಹಟ ಹಿಡಿದನು. ಮನವೊಲಿಸಿ—ಆತನು ಹರಭಕ್ತನಾಗಿಯ[illegible] ಹೊಂದುವಂತಾಗಲು ಯಾವ ಅಭ್ಯಂತರವ[illegible]

---

* "Journal of the Bombay Br. R. A. S. VIII 97. Rice's Mysore 1, 332." From Kavicharite Part I.

ಪದೇಶಿಸಿದರೂ ವ್ಯರ್ಥವಾಯಿತು. ಇಷ್ಟಾಗಿಯೂ "ಕುಲದ ರಿಗೆ ನೀನೆ ಗುದ್ದಲಿಗೊಳಲದೇತಕೆ?.... ವಿಪ್ರರ್ ಕೇಳೆ ಡೆ ಪೊರಗಿಕ್ಕರೋ ನಿನ್ನಾ ?" ಎಂದು ಬೆದರಿಸಿಯೂ ಫಲವಾಯಿತು. ಹರನ ಅವರಾತ ಭಕ್ತನಾದವನು ಇದಕ್ಕೆ ಸುವನೆ? ವೈದಿಕ ಧರ್ಮವೆಂದರೆ ಆತನಿಗೆ ನಂಬುಗೆ ಲ್ಲ—"ಇಳೆಯೊಳಾಕ್ರಿಯೆ ಕರ್ಮಬಂಧದ ನೆಲೆಯದರ ಷಂ ವಿಚಾರಿಸಿ ನಿಲುವಡಿತರೇತರವಲಾ—ಯಿದು ಮೋಕ್ಷ ರಣವೆ ?" ಎಂದು ಪ್ರಶ್ನೆ ಮಾಡುವನು. ತಂದೆಯೊಬ್ಬನು ದಿಕನಾದರೆ ಮಗನೂ ಗತಾನುಗತಿಕನೇ ಆಗಬೇಕೆಂಬ ಯಮವೆಲ್ಲಿಯದು ? "ಕಾಗೆ ಸಾಕಿದ ಕೋಗಿಲೆಯ ಮರಿ ಗುವಡು ಸುಸ್ವರದೊಳಲ್ಲದೆ, ಕಾಗೆಯಂದದಿ ಕಾವು ವೆಂದರಿಚುವದೆ ಹೇಳು." "ಎನುತ ಬಸವಂ ನಿಜ ಹೋದರೆಯೆನಿಪ ನಾಗಾಂಬಿಕೆಯು ತಾನೂಯೆನಗೆ ಇಲ್ಲಿರ ಗದೆನುತೈತಂದು ಮಹಮನೆಯ" — ಅಲ್ಲಿ ತನ್ನ ೋದರಮಾವನಾದ ಬಲದೇವನಲ್ಲಿರುತ್ತಿರಲು ಆತನು ತನ್ನ ಗಳನ್ನು ಕೊಟ್ಟು ಮದುವೆಮಾಡುವನು. ಕೆಲದಿನಗಳ ವಾಯ ಬಲದೇವನು ಸ್ವರ್ಗಸ್ಥನಾಗಲು ಆತನನ್ನು ಂತ್ರಿಯಾಗಿ ಮಾಡಿಕೊಂಡಿದ್ದ ಬಿಜ್ಜಳನು ಬಸವೇಶ್ವರನ ಹಿಮೆಯನ್ನು ಕೇಳಿ ಆತನಿಗೆಯೆ ಮಂತ್ರಿಪದವನ್ನು ನುಪಾಲಿಸುವನು. ಇತ್ತ ಬಸವನು ಮಂತ್ರಿಯಾಗಿಯೂ ಷ್ಣ ಸಂದೇಶವನ್ನು ಮರೆತಿರಲಿಲ್ಲ. ತನ್ನ ಅಧಿಕಾರ ದಿಂದ ವೀರಶೈವ ಧರ್ಮಪ್ರಚಾರ ಮಾಡಲು ಮತ್ತಷ್ಟು ದ್ಯುಕ್ತನಾದನು. ಹೊನ್ನು, ಹೆಣ್ಣು, ಮಣ್ಣು ಕೊಟ್ಟ ರಿಗೆ ತನ್ನ ಮತದ ದೀಕ್ಷೆಯನ್ನು ಕೊಡಿಸಿದನು. ದಿನಕ್ಕೆ ವೀರಶೈವಧರ್ಮವು ಬಲವಾಗಿ ಬೆಳೆಯುತ್ತಿ ಾಗಿ ಜೈನನಾದ ಬಿಜ್ಜಳನು ಬಸವನ ಉತ್ಕರ್ಷೆಯನ್ನು ನಮಾಡದೆ ಶಿವಭಕ್ತರನ್ನು ಹಿಂಸಿಸಿ ಬಸವನನ್ನು ಕಾರದಿಂದ ತೆಗೆಯಲೆತ್ನಿಸಿದನು. ಇದು ಸಾಧ್ಯವಾಗದೆ ವನ ಜನರು ೧೧೬೭ರಲ್ಲಿ ಬಿಜ್ಜಳನನ್ನು ಕೊಂದು ಪ್ಪರು. ಇದನ್ನು ಕೇಳಿ ಬಿಜ್ಜಳನ ಮಗನಾದ ರಾಯ ರಾರಿ ಸೋಯಿದೇವನು ಬಸವನ ಮೇಲೆ ದಂಡೆತ್ತಿ ಲು, ಬಸವನು ಉಳಿವೆಗೆ ಓಡಿಹೋದನು. ಅಲ್ಲಿಯೂ ನು ಏರಿಬರಲು ಬಸವನು ಕೂಡಲಸಂಗಮವೆಂಬ ಮಕ್ಕೆ ಹೋಗಿ ಲಿಂಗೈಕ್ಯನಾದನು.

ಇಂತಿದ್ದ ಕಥಾಸರಣಿಯ ಪ್ರಾರಂಭದಲ್ಲಿ ಬಸವನು ನಂದಿ ವತಾರವಾಗಿ ಹೇಗೆ ಉದಿಸದನೆಂಬ ಪೌರಾಣಿಕ ಸಂಗತಿ ನ್ನು ಬಿಟ್ಟರೆ ಉಳಿದುದೆಲ್ಲವೂ ವಾಸ್ತವವೇ ಆಗಿದೆ. ಕವಿಯು ಇದನ್ನು ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದಾನೆ. ಕಥೆಯ ಓಘದೊಡನೆ ಕಾವ್ಯದ ಓಜಸ್ಸೂ ಇದೆ. ಸುಕವಿಯ ವರ್ಣನೆಯನ್ನೂ ಕುಕವಿಯ ದೂಷಣೆಯನ್ನೂ ಹೀಗೆ ಮಾಡಿದ್ದಾನೆ—

"ಪಾಲೊಳೊಪ್ಪಿನ ವಿವರವರಿವ ಮ | ರಾಳವಂ ಕಂಡುಬ್ಬಿ ಲೋಕಂ
ಲಾಲಿಸುವವೋಲ್ಸುನಕ ಮೊಗೆವಾಲಂ ಕುಡಿದು ಪೋಗೆ
ಆಳಿಗೊಳುತಂ ಬಡಿವರಲ್ಲದೆ | ಲಾಲಿಸುವರೆ? ಸುಕವಿಯೆಂದರೆ
ಮೇಲಹುದು ಕೃತಿ, ಕುಕವಿಯೆಂದಡದೇನಹುದು ತನಗೆ ?"

ಹಾಗಿದ್ದರೆ ಸುಕವಿಯ ಲಕ್ಷಣವೇನು ?—

"ಪರಿಮಿತಾಕ್ಷರ ತಲೆಯೊಳಪರಿಮಿತಾರ್ಥ ರಚನೆಯಲಿ |
ವಿರಚಿಸುವುದು ಕವಿಯ ಚತುರತೆ"

ಹೀಗೆಂದು ಬಸವಪುರಾಣವನ್ನು ಬರೆಯಹೊರಟ ಭೀಮಕವಿಯು ಕಥಾನಿರೂಪಣೆಯ ದೃಷ್ಟಿಯಿಂದಂತೂ ಸಂಪೂರ್ಣ ಯಶಸ್ವಿಯಾಗಿದ್ದಾನೆಂದೇ ಹೇಳಬೇಕು. ವೀರಶೈವಯುಗದಲ್ಲಿ ಕಂಡುಬರುವ ವಾಙ್ಮಯದ ಹೊಸ ಮಾರ್ಪಾಟುಗಳೆಲ್ಲವೂ ಭೀಮಕವಿಯಲ್ಲಿ ಕಂಡುಬರುತ್ತಿವೆ. ಉದಾಹರಣಾರ್ಥವಾಗಿ—(೧) ಱಟಿ ಕುಳ ಕ್ಷಳಗಳ ಭೇದವನ್ನು ಬಿಟ್ಟುಬಿಡುವದು, (೨) ಪಕಾರಕ್ಕೆ ಹಕಾರ, (೩) ದೇಸಿ ಪದಗಳ ಹೆಚ್ಚಳ, (೪) ವ್ಯಾಕರಣದ ಬಿಗಿಕಟ್ಟಿಗೆ ಉಪೇಕ್ಷೆ—ಇತ್ಯಾದಿ. ಆದರೆ ಕೆಲವೆಡೆಗಂತೂ ಶೈಲಿಯು ತೀರ ಹೊಚ್ಚ ಹೊಸದೆನಿಸಿ ಕಾವ್ಯದ ಕಾಂತಿಯನ್ನೆ ಕಳೆದುಕೊಂಡಿದೆ. ಬಸವನಿಗೂ ಮಾದಿರಾಜನಿಗೂ ನಡೆದ ಉಪನಯನ ಸಂಬಂಧದ ಸಂಭಾಷಣೆಯು ಹೃದಯಸ್ಪರ್ಶಿಯಾಗಿದೆ. ಇವರ ಸಂಭಾಷಣೆಯನ್ನು ಹೀಗೆ ಸಂಗ್ರಹಿಸಬಹುದು—

ಮಾದಿಗಸು "ಮಗನಿಗುಪನಯನವನೊಡರ್ಚಲ್ ಬಗೆದು ಶುಭಲಗ್ನಕ್ಕೆ ತೊಡಗಲ್, ನಗುತ ಬಸವಂ. ಭಕ್ತಿಯರಿಯದ ತಂದೆಗಿಂತೆಂದ."

ಬ—ಜನಕ, ಕೇಳ್ ಶಿವದೀಕ್ಷೆಯಿಲ್ಲದವನವೋಲ್ ಎನ್ನಂ ಮುಂಜಿಗಟ್ಟುವ ಮನವಿದೆಂತಾಯ್ತೀಗ ? (ಆದರೆ ಕವಿಯು ಬಸವನ ಮಾತಿನಲ್ಲಿ "ನಿನಗವಿವೇಕಿಯಂದದಲಿ" ಎಂದು ಸೇರಿಸುವುದು ಬಸವನ ದಯಾಲುತ್ವಕ್ಕೂ ವಿನಯಕ್ಕೂ ಒಂದೆಡೆ ಅಪವಾದವನ್ನುಂಟುಮಾಡಿದ ಹಾಗೆ ಆಗುತ್ತದೆ.)

(ಅಂ) ಜನಿಸಿದಾಗಳೆ ಸಂಗಮೇಶ್ವರನೆನಗೆ ಸದ್ಗುರುವಾಗಿ ಬೋಧಿಸಿ ವಿನುತ ಶೈವಾಚಾರ ಮಾರ್ಗದೊಳಿರಿಸಿ ಸಲುಹಿದನು. ಧಾರುಣೀಸುರ ಜನ್ಮಕರ್ಮಂ ಕ್ರೂರಕರ್ಮವಲಾ ! ವಿರಸವೆನಗಿದು ಮುಂಜಿಯೆಂಬುದನೊರೆಯದಿರು. ನೀರ ನೇಣಿನ ಬಾಧೆಯಿಲ್ಲದ ವೀರಶೈವಾಚಾರ

ದೀಕ್ಷಾ ಧಾರಕನನತಿ ನಿರ್ಮಿತೋಭಯಕರ್ಮ ನಿರ್ಮಲನ (ನ್ನು) ಘೋರ ಕರ್ಮಾಶ್ರಯದ ಪಾರಾವಾರದೊಳು ಮುಣಿಗಿಸುವೆನೆಂಬ ವಿಚಾರವಿಂತಿದು ನಿನಗೆ ಧರ್ಮವೆ ?

ಮಾ—ವಾದಿಸದೆ ಬಸವಣ್ಣ ಕೇಳೈ, ಮೇದಿನೀಸುರ ಮಾರ್ಗದಿರವಂ ವೇದಮತದಿಂ ಗರ್ಭಸಂಸ್ಕಾರಂ ಮೊದಲೆನಿಪ್ಪ ಆದಿಕರ್ಮಂಗಳವು ಹದಿನಾರಾದವಪದರೊಳಗೊಂದುವುಂ ಕುಂದಾದಡಾತಂ ಬ್ರಾಹ್ಮಣೋತ್ತಮನಾಗಲರಿಯ ಕಣಾ; ಇದರೊಳಾವ ವಿರುದ್ಧವುಂಟೈ ?

(ಕವಿಗೆ ಇವರಿಬ್ಬರ ಸಂಭಾಷಣದ್ವಾರಾ ವೈದಿಕ-ವೀರಶೈವ ಧರ್ಮ ತತ್ವಗಳ ಕೀಳ್ಮೆಮೇಲ್ಮೆಗಳನ್ನು ಹೇಳಬೇಕಾಗಿದೆ. ಅಂತೆಯೆ ಇಬ್ಬರನ್ನೂ ಒಂದೊಂದು ಧರ್ಮದ ಪಕ್ಷಪಾತಿಯನ್ನಾಗಿಮಾಡಿ ಚರ್ಚೆಗೆ ಅಣಿಗೊಳಿಸಿದ್ದಾನೆ.)

ಪುರಹರಂ ಭಿಕ್ಷಾಟನವನಾಚರಿಸಲೈದುವ ವೇಷವನಿತಂ ಧರಿಸಿದಲ್ಲದೆ ಭೂಸುರೋತ್ತಮನಾಗನು. (ಆತನು) ಪಿಡಿವ ಪಾತ್ರೆ ಪಿತಾಮಹನ ತಲೆ, ತೊಡುವ ಸೂತ್ರವೆ ಪಾವು, ಕೈಗಳವಡುವ ತತ್ಪಾಲಾಶದಂಡವೆ ವಿಷ್ಣುಕಂಕಾಳಾ, ಇಡುವ ಮೇಧಾವಿಯೆ ಭಸಿತವೆಡೆವಿಡಿದೆಸೆವ ಚಂಡಿಕೆಗಳೈದುಂ ಜಡೆ, ಕೊರಲ ಕೃಷ್ಣಾಜಿನವೆ ಕರಿಯಜಿನಮಾಗಿರಲು. (ಅದೂ ಹೋಗಲಿ) ಹರನ ಭಕ್ತಗೇಕಂ ವಿರುದ್ಧಮೆ? ವಿರಸವೆಂತಾಯ್ತೈ ತನೂಭವ ? ಪರಮಭಕ್ತಿಗೆ ಹೀನಮಪ್ಪುದೆ, ಮುಂಜಿಗಟ್ಟೆದೊಡೆ ? (ಆದ್ದರಿಂದ ಅದನ್ನು ಬಿಟ್ಟುಬಿಡು—) ನಾವು ಪೇಳಿದ ಮಾತನಾಲಿಸಿ ಮಾಡಬೇಹುದು ಮಕ್ಕಳಾದವರು (ಮಗನು ಮತ್ತೆಲ್ಲಿ ತನ್ನ ನುಡಿಗೆ ಕಿನಿಸುವನೊ ಎಂದು ಬೆದರಿದ ತಂದೆಯ ಆ ವಾತ್ಸಲ್ಯವನ್ನು ನೋಡಿರಿ—) ನೀವು ದಯಿಸಲ್ ಬದುಕಿದೆವು; ಪೆರತಾವುದಿಲ್ಲ, ಕೃತಾರ್ಥರಾದೆವು. ಕಾವುದೆಮ್ಮುವನುದ್ಧರಿಸು ಕುಲಕೋಟಿಯೆಲ್ಲವನೂ. (ಎಂದು ಸಂತೈಸಿ ಪ್ರಾರ್ಥಿಸುತ್ತಾನೆ.)

(ಇದಕ್ಕೂ ಹೆಚ್ಚಿಗೆ ನಾನು ಹೇಳಲಾರೆ, ಕೊಲ್ಲು ಕಾಯು ಎಂದು ನಿಡುಸುಯ್ದು—) ನಿನ್ನಂ ಪಿಡಿದು ಸುಗತಿಯನೊಂದಿ ಬದುಕುವೆವೆಂದು ನಾವ್ ನೆರೆ ನಂಬಿಕೊಂಡಿಹೆವು. (ಏನೊ ಆಶೆ ತಂಧೆಗೆ)

ಬ—ಇಳೆಗೆ ಮಾವಿನ ಬೀಜಮಂ ಬಿತ್ತಲದು ತಾಂ ಬೇವಹುದೆ ? ಬಹುಕಥೆಗಳನುಸುರಲೇಂ ? ಕುಲಸತಿಯವೊಲು ಭಕ್ತಿ, ಬೆಲೆವೆಣ್ಣಿನವೊಲಾ ಬ್ರಾಹ್ಮಶಿ. (ಆದುದರಿಂದ) ಕರ್ಮಪಥಂ ದ್ವಿಜತ್ವಂ ಸದಮಳೋತ್ತಮ ಭಕ್ತಿನಿಷ್ಠಿತವಹುದೆ ? ಈಗಳುಂ ದ್ವಿಜಮಾರ್ಗವನ[illegible] ದಿಟವಾಗಿ[illegible]ನೀ ಪಿಡಿದಾಡಿದೊಡೆ, ಎಮಗಾಗದೀ ಕರ್ಮ[illegible] ಪ್ರವರ್ತನವು. (ಹೇಗೆಂದರೆ—) ಕಾಗೆಸಾಕಿ[illegible] ಮರಿ ಕೂಗುವದು ಸುಸ್ವರದೊಳಲ್ಲದೆ ಕಾವುಕಾವೆಂದರಿಚುವದೆ, ಹೇಳು ?

ಈ ಮೇಲಿನ ಸಂಭಾಷಣೆಯಲ್ಲಿ ಕವಿಗೆ[illegible]ದುದು ಒಂದೇ ಒಂದು ಉದ್ದೇಶ. [illegible] ಧರ್ಮವನ್ನು ಕೀಳ್ಗೆಯ್ದು ವೀರಶೈವಧರ್ಮ[illegible]ಯನ್ನು ಪ್ರತಿಪಾದಿಸುವುದು. ಆದರೆ ವೈದಿಕ[illegible] ಕೀಳ್ಗೆಯ್ಯುವ ಕರ್ತವ್ಯವನ್ನು ಬಸವನಿಗೇ [illegible]ರಿಂದ 'ದಯವೇ ಧರ್ಮದ ಮೂಲವಯ್ಯ' [illegible]ದಾತನು ಸ್ವತಃ ತಂದೆಗೆ "ಎನ್ನಂ ಮುಂಜಿ[illegible] ವಿದೆಂತಾಯ್ತೀಗ ನಿನಗವಿವೇಕಿಯಂದದ[illegible] "ನಾವಾರು—ನೀವಾರು" ಎಂದೂ ಕಠಿಣ[illegible]ಸಿರುವುದು ಸಾಧ್ಯವೆ ಎಂದು ಉದ್ಗಾರ[illegible]ಗಿದೆ. "ಅಯ್ಯಾ ಎಂದೊಡೆ ಸ್ವರ್ಗ, [illegible] ಎಂದೊಡೆ ನರಕ"ವೆಂದು ಬೋಧಿಸಿದಾತ[illegible] ಎಂಬುದನ್ನು ಮಾರಿ ಹಡೆದ ತಂದೆಗೆ '[illegible]ದಲಿ' ಎಂದು ಉದ್ದೇಶಿಸಿ ನುಡಿವುದು ಎಷ್ಟು[illegible]ಕರ! ಎಂದರೆ ಕವಿಯು ಇಲ್ಲಿ ಬಸವನ[illegible] ರೂಪಿಸುವಾಗ ಆವರ ಪಾತ್ರರಚನೆಯಲ್ಲಿ [illegible]ದೆಂಬುದನ್ನೆ ಮರೆತಿದ್ದಾನೆ. ಇದಕ್ಕೆ [illegible] ತನ್ನ ಅಭಿಪ್ರಾಯವನ್ನು ಪ್ರತಿಷ್ಠಾಪಿಸ[illegible] 'ಬ್ರಾಹ್ಮ್ಯ'ದಲ್ಲಿಯೆ ಹುಟ್ಟಿ 'ಬಾಹ್ಮ್ಯ'ದ[illegible]ಮಾದಿರಾಜನಂತಹ ತಂದೆ ಮಗನಿಗೆ "ನೀ[illegible]ರೋಳ್ಬಂದು ಹರುಷಮನ್ನೈದಿಸದೆ ಪಿರಿದು[illegible]ಗೇ ತಂದು, ಅಕಟ! ಕುಲಗೇಡಿಯರೆ? [illegible] ಪಿಡಿದು ಸುಗತಿಯನೊಂದಿ ಬದುಕುವೆವೆ[illegible] ನಂಬಿಕೊಂಡಿಹೆವು" ಎಂದು ದೀನವಾಣಿ[illegible]ಯಿಡುವ ತಂದೆಗೆ ಸಂಕಟವೆಷ್ಟಾಗಿರಬೇಡ! ಪಡೆದ ಮಗನೊಬ್ಬನು ತಮ್ಮನ್ನು ದು[illegible] ನೂಕಿಪೋಗುವುದೆಂದರೆ! ಆದರೆ ಬಸವನು[illegible] ಜನರಲ್ಲಿಯೆ ಬೆರೆತು ಅವರಿಗೆ ಮನಸ್ಸಿನಲ್ಲಿ[illegible]ಯಾಗುವಂತೆ ಬುದ್ಧಿವಾದ ಹೇಳಿ ತನ್ನ[illegible] ಬೀರಿದಂತೆಯೆ, ತನ್ನ ತಂದೆಗಾದರೂ ಉ[illegible] ಮಾದಿರಾಜನೂ ಕೂಡ ವೀರಶೈವನೇ ಆಗ[illegible] ಬಸವನ ಹೃದಯವು ಆ ಎಳವಯಸ್ಸಿನಲ್ಲಿ [illegible]ರವನ್ನು ಸಾಕಷ್ಟು ಹೊಂದಿರಲಿಲ್ಲವೆನ್ನೊ[illegible]

ತ್ವಗಳನ್ನು ಖಂಡಿಸುವಷ್ಟು ಬುದ್ಧಿಸಂಸ್ಕಾರವೆಲ್ಲಿಂದ ದಿತು ಅವನಿಗೆ ಆ ಎಳವಯಸ್ಸಿನಲ್ಲಿ? ಜೀವನದ ನೆಯ ಸತ್ಯಾಂಶದಲ್ಲಿ ಕವಿಯ ಪ್ರತಿಭಾತ್ಮಕ ಕಲ್ಪನೆ ಯಿತೆಂದರೆ ಒಮ್ಮೊಮ್ಮೆ ಈವಗೆಯ ಸಂದೇಹಜನಕ ಸಂಗಗಳುದ್ಭವಿಸುವುದುಂಟು. ಪಾತ್ರನಿರೂಪಣೆಯ ಷ್ಟಿಯಿಂದ ಮೇಲಣ ಸನ್ನಿವೇಶದಲ್ಲಿ ಕವಿ ಸೋತಿರುವ ಪರೂ ವೈದಿಕಧರ್ಮದ ಮೇಲೆ ವೀರಶೈವಧರ್ಮದ ಷ್ಠತೆಯನ್ನು ಜಾಣ್ಮೆಯಿಂದ ಪ್ರತಿಷ್ಠಾಪಿಸುವುದರಲ್ಲಿ ಯು ವಿಜಯಶಾಲಿಯಾಗಿದ್ದಾನೆಂದೇ ಹೇಳಬೇಕು. ರಿಂದ ಭೀಮಕವಿಯ ಕಾಲಕ್ಕೂ ಧಾರ್ಮಿಕ ವಾತಾವರಣ ತಾಕಲಾಟಗಳು ನಡೆದೇ ಇದ್ದುವೆಂದು ಊಹಿಸಬಹು ಗಿದೆ. ವೀರಶೈವರು ಅನ್ಯಮತೀಯರನ್ನು ಮತಾಂತರ ಳಿಸುವುದರಲ್ಲಿಯೇ ಇನ್ನೂ ಉದ್ಯುಕ್ತರಾಗಿದ್ದರೆಂದು ಯುಬರುತ್ತದೆ. ಅಂತೆಯೆ ಬಸವನ ಬಾಯಲ್ಲಿ ಭೀಮ ಯು "ಕುಲಸತಿಯವೊಲು (ವೀರಶೈವರ) ಭಕ್ತಿ; ವೆಣ್ಣನವೊಲಾ ಬ್ರಾಹ್ಮ್ಯ" ಎಂಬ ನುಡಿಯನ್ನು ಡಿಸಿದ್ದಾನೆ. ಈ ವಿಚಾರವನ್ನು ಬದಿಗಿರಿಸಿ, ಕಾವ್ಯ ಷ್ಟಿಯಿಂದಲೇ ನೋಡಿದರೆ ಮೇಲಣ ಸಂಭಾಷಣೆಯಲ್ಲಿ ಯು ಬಹು ಚತುರತೆಯನ್ನು ತೋರಿರುವನೆಂಬುದು ರ ಪ್ರತ್ಯಯಕ್ಕೂ ಬಾರದಿರದು. "ಇಳೆಗೆ ಮಾವಿನ ಜಮಂ ಬಿತ್ತಲದು ತಾಂ ಬೇವಹುದೆ?" "ಕಾಗೆ ಸಾಕಿದ ಗಿಳೆಯ ಮರಿ ಕೂಗುವದು ಸುಸ್ವರದೊಳ್" ಎಂಬ ಪಮಾನಗಳು ಉತ್ತಮಕಾವ್ಯದ ನಿದರ್ಶನಗಳೇ ಆಗಿವೆ. ಭೀಮಕವಿಯ ಚಿತ್ರಕಶಕ್ತಿಯೂ ಬೆರಗುವಡಿಸುವಂತ ಹದು. ಬಸವನು ಸಂಗಮೇಶ್ವರಕ್ಕೆ ತೆರಳಲು ಬಜ್ಜಳ ರಾಜಧಾನಿಯಲ್ಲಿ ನಡೆವ ಅಮಂಗಲವನ್ನು ಕವಿ ಹೀಗೆ ಚಿತ್ರಿಸಿದ್ದಾನೆ—

"ಧರಣಿ ಕಂಪಿತವಾಯ್ತು; ಕಾಗೆಗ | ಳಿರುಳುಡುಗದರಚಿದುವು;
ಹಗಲುಂ
ನರಿಗಳೂಳಿದವುಲ್ಕ ಬಿದ್ದುವು; ಕಲ್ಲುಮಳೆ ಮೇಲೆ
ಸುರಿಯಿತಾದಿತ್ಯೇಂದುಗಳನಾ | ವರಿಸಿತಾಪರಿವೇಷವತಿನಿ-
ರ್ಭರದೊಳನಿಲಂ ಬೀಸಿದನು; ಕೆಂಧೂಳಿ ಮುಸಗಿತ್ತು.
ಹಗಲೆ ಮುಸುಕಿತು ಮಂಜುಗತ್ತಲೆ | ಗಗನದೊಳು;
ಭೀಕರ ಕೃತಾಂತನು
ವಿಗಡರೂಪಂ ತೋರಿದನು ಪಟ್ಟಣಸಮೀಪದಲಿ
ಜಗತಿಯೊಡೆಯನು ಶಿರಸುವಿಲ್ಲದ | ಬಗಿದ ಪೆಣನಂ
ಕಂಡೆನುವಯಾ-
ದ್ರಿಗೆ ತರಣಿ ಬಹ ಸಮಯದಲಿ ಪ್ರತಿಯಿನನುದಯಿಸಿದನೂ"

ತನ್ನ ತೀರ್ಥಂಕರ ಚರಿತ್ರೆಯಲ್ಲಿ ಅನಂತನಾಥನನ್ನು ಸೂಳೆಗೇರಿಗೆ ಸೆಳೆದೊಯ್ದ ಜನ್ನನಂತೆ—ಏಕೆ ಎಲ್ಲ ಜೈನ ಕವಿಗಳಂತೆ—ಬಸವಪುರಾಣದಲ್ಲಿ ವೀರಶೈವನಾದ ಭೀಮ ಕವಿಯು ಕವಿಸಂಕೇತಗಳಿಗೆ ಕಟ್ಟುಬಿದ್ದಿಲ್ಲ; ಶಬ್ದಾಲಂಕಾರದ ವೈಚಿತ್ರ್ಯದ ಜಾಲಕ್ಕೆ ಸಿಕ್ಕುಬಿದ್ದಿಲ್ಲ. ಕಥಾ ಕಾವ್ಯಕ್ಕೆ ಸೊಗಸನ್ನು ತರುವಂತೆ ಅಲ್ಲಲ್ಲಿಯೆ ಅರ್ಥಾಲಂಕಾರಗಳನ್ನು ಮಾತ್ರ ತೊಡಿಸಿ, ಶೈಲಿಯನ್ನು ಸುಗಮಗೊಳಿಸಿ ಕಾವ್ಯಕನ್ನಿಕೆಯ ಸಹಜ ಬೆಡಗು ಅಂದಚೆಂದವಾಗುವಂತೆ ರೂಪರೇಷೆಗಳನ್ನೆಳೆದಿದ್ದಾನೆ. ವೀರಶೈವರ ಪುರಾಣಯುಗದ ಶ್ರೇಷ್ಠ ಗ್ರಂಥಕ್ಕೆ ತಕ್ಕ ದೃಷ್ಟಾಂತವೆನ್ನುವಂತೆ ತನ್ನ ಕಾವ್ಯವನ್ನು ರಚಿಸಿದ ಯಶಸ್ಸು ಭೀಮಕವಿಗೇ ಸಲ್ಲುತ್ತದೆ.

ಫ್ರೆಂಚ್ ಕತೆಯೊಂದು

ಕಡೇ ಪಾಠ*

ಅನುವಾದಕರು: ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ಯರು, ಎಂ. ಎ. ಬಿ. ಎಲ್., ಮೈಸೂರು.

ಅಲ್ಸಾಸ್-ಲೋರೇನ್ ಪ್ರಾಂತಗಳಲ್ಲಿ ಫ್ರೆಂಚ್ ಪಾಠಪ್ರವಚನಗಳನ್ನು ನಿಲ್ಲಿಸಿ ಜರ್ಮನ್ ಯನ್ನೇ ಕಲಿಸಬೇಕೆಂದು ಸೈನಿಕಾಜ್ಞೆ ಹೊರಟಿದೆ. ಒಂದು ಶಾಲೆಯಲ್ಲಿ ಉಪಾಧ್ಯಾಯರು ಫ್ರೆಂಚ್ ಪಾಠವನ್ನು ಹೇಳುತ್ತಿದ್ದಾರೆ. ಉಡಾಳ ವಿದ್ಯಾರ್ಥಿಗಳಂತಿರಲಿ, ಊರ ಹಿರಿ ಮುದುಕರೂ ಅಂದಿನ ಕಡೇ ಪಾಠ ಕಲಿಯಲು ಬಂದಿದ್ದಾರೆ. ಅಂದು ಉಪಾಧ್ಯಾಯರ ಯಿಂದ ಫ್ರೆಂಚ್ ವಾಗ್ದೇವಿಯೇ ಮಾತನಾಡುವಂತಿದೆ. ಅಷ್ಟರಲ್ಲಿ ಕೇಳಬರುವುದು ಯನ್ ಸೈನಿಕರ ತುತೂರಿಯ ಧ್ವನಿ. ಉಪಾಧ್ಯಾಯರು ಹಲಿಗೆಯ ಮೇಲೆ ಬರೆದ ಕೊ

.... ವಾಕ್ಯ— "ಫ್ರಾನ್ಸಿಗೆ ಜಯವಾಗಲಿ !" ....

ಆ ದಿವಸ ಪ್ರಾತಃಕಾಲ ನಾನು ಶಾಲೆಗೆ ಬಹಳ ಹೊತ್ತಾಗಿ ಹೊರಟೆನು. ಆದಿನ ಉಪಾಧ್ಯಾಯರು ವ್ಯಾಕರಣದಲ್ಲಿ ಪ್ರತ್ಯಯಗಳ ವಿಚಾರವಾಗಿ ಪರೀಕ್ಷೆ ಮಾಡುವುದಾಗಿ ಹೇಳಿದ್ದರು. ಪ್ರತ್ಯಯ ಎಂದರೇನು ? ಎಂದು ಸ್ವಲ್ಪವೂ ತಿಳಿದುಕೊಂಡಿರಲಿಲ್ಲವಾದ್ದರಿಂದ ಅಂದು ಶಾಲೆಯಲ್ಲಿ ನನಗೆ ತಕ್ಕ ಶಾಸ್ತಿಯಾಗುವುದು ನಿಶ್ಚಯವೆಂದು ಹೆದರಿದ್ದೆನು. ಶಾಲೆಗೆ "ಚಕ್ಕರ್" ಹಾಕಿ ಬಯಲಿನಲ್ಲಿ ಆಟವಾಡುತ್ತಿದ್ದುಬಿಡಲೇ ಎಂದು ಒಂದು ಸಲ ತೋರಿತು. ಹೊಂಬಿಸಿಲಿಂದ ನಾಲ್ಕು ದಿಕ್ಕುಗಳೂ ಪ್ರಕಾಶಮಾನವಾಗಿದ್ದವು. ತೋಪಿನ ಬಳಿ ಪಕ್ಷಿಗಳು ಮಂಜುಳವಾಗಿ ಕಲಕಲ ಧ್ವನಿ ಮಾಡುತ್ತಿದ್ದವು. ಮಿಲ್ಲಿಗೆ ಆಚೆ ಬಯಲಿನಲ್ಲಿ ಪ್ರಷಿಯಾ ಸೈನಿಕರು ಕವಾತು ಮಾಡುತ್ತಿದ್ದರು. ಇವುಗಳ ಮುಂದೆ ವ್ಯಾಕರಣವು ಹೇಗೆ ರುಚಿಸೀತು ? ಆದರೂ ನಾನು ನನ್ನ ಚಿತ್ತವನ್ನು ದಮನಮಾಡಿಕೊಂಡು ಶಾಲೆಗೆ ಜಾಗ್ರತೆ ಹೋದೆನು.

ಪುರಮಂದಿರದ ಮಾರ್ಗವಾಗಿ ನಾನು ಹೋಗುತ್ತಿದ್ದಾಗ ಅದರ ಬಳಿ ಇದ್ದ ಪ್ರಕಟನಾಫಲಕದ ಬಳಿ ಜನರು ಗುಂಪು ಸೇರಿದ್ದರು. ಕಳೆದ ಎರಡು ವರ್ಷಗಳಿಂದಲೂ ನಮ್ಮ ಕೆಟ್ಟ ಸುದ್ದಿಯೆಲ್ಲವೂ—ಸೋಲುಗಳು, ಪ್ರಕಟನೆಗಳು, ಸೇನಾಧಿಕಾರಿಯ ಆಜ್ಞೆಗಳು ಇವೆಲ್ಲವೂ ಈ ಹಲಗೆಯಿಂದ ನಮಗೆ ಬರುತ್ತಿತ್ತು. ನಾನು ಅಲ್ಲಿ ನಿಲ್ಲದೆ, ಈಗ ಮತ್ತೇನು ಸಮಾಚಾರವಿರಬಹುದು ? ಎಂದು ಯೋಚಿಸುತ್ತಾ ಹೊರಟೆನು. ಪ್ರಕಟನೆಯನ್ನು ಓದುತ್ತ ಅಲ್ಲಿ ನಿಂತಿದ್ದ ನಮ್ಮ ಕಮ್ಮಾರನು ನನ್ನನ್ನು ನೋಡಿ, "ಮಗೂ, ಅಷ್ಟೊಂದು ಅವಸರಪಡಬೇಕಾಗಿಲ್ಲ. ನಿನ್ನ ಶಾಲೆಗೆ ಹೋಗಲು ಇನ್ನೂ ಬೇಕಾದಷ್ಟು ಕಾಲವಿದೆ" ಎಂದನು. ಅವನು ನನ್ನ ... ಮಾಡುತ್ತಿರುವನೆಂದು ಎಣಿಸಿ ನಮ್ಮ ಶಾಲೆ ... ಏದುತ್ತಾ ಹೋಗಿ ಸೇರಿದೆನು.

ಶಾಲೆಯು ಪ್ರಾರಂಭವಾಗುವಾಗ ಬೀದಿಗೆ ... ಸುತ್ತಿತ್ತು. ಆದಿವಸ ಮಾತ್ರ ಅದು ನಿ... ಇತರ ಹುಡುಗರೆಲ್ಲರೂ ತಂತಮ್ಮ ಸ್ಥಾನ... ದ್ದರು. ನಾನು ಗಲಭೆಯ ಮಧ್ಯೆ ನುಣುಚಿ... ನನ್ನ ಸ್ಥಳವನ್ನು ಸೇರಿಕೊಳ್ಳಬೇಕೆಂದು ... ಆದರೆ ಈಗ ಕೊಠಡಿಯ ಬಾಗಿಲನ್ನು ... ನೋಡುವಂತೆ ಹಾಗೆ ಮಾಡಬೇಕಾಯಿತು. ... ಯಿಂದಲೂ ಭಯದಿಂದಲೂ ಕುಗ್ಗಿ ಹೋಗಿ...

---

*೧೮೭೧ರಲ್ಲಿ ಜರ್ಮನಿಯವರು ಫ್ರೆಂಚರನ್ನು ... ಸೇರಿದ್ದ ಅಲ್ಸಾಸು ಮತ್ತು ಲೋರೇನ್ ಎಂಬ ... ಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ... ಈ ಪರದಾಸ್ಯವನ್ನು ಸಹಿಸದೆ ತಾವು ಫ್ರೆಂಚ್ ಸಂತಾ... ದರೂ ಮಾಡಿ ಪುನಃ ಫ್ರೆಂಚ್ ಜನಾಂಗದ ಅಂಗ... ಕನವರಿಸುತ್ತ ಮಹಾಛಲದಿಂದ ತಮ್ಮ ಆತ್ಮಸ್ವ... ಕ್ಷಿಸಿಕೊಂಡರು. ಫ್ರೆಂಚ್ ಜನಾಂಗವು ಸಹ ... ಮರಳಿ ಪಡೆಯಬೇಕೆಂದು ಜರ್ಮನರೊಡನೆ ಅರ್ಧ... ವೈರಸಾಧನೆ ಮಾಡಿ ೧೯೧೯ರಲ್ಲಿ ಇವುಗಳನ್ನು ಪುನ... ಸೇರಿಸಿಕೊಂಡಿತು. ಪರದಾಸ್ಯವು ಪ್ರಾಪ್ತವಾದ ... ಪ್ರಾಂತ್ಯಗಳಲ್ಲಿದ್ದ ಪರಿಸ್ಥಿತಿಯನ್ನು ವಿವರಿಸುವ ... ೧೮೭೩ರಲ್ಲಿ ಪ್ರಕಟವಾಯಿತು. ಇದನ್ನು ಬರೆದ ... (Alphonse Daudet 1840—1897) ... ಸಾಹಿತ್ಯದ ಇತಿಹಾಸದಲ್ಲೂ ಲೋಕಸಾಹಿತ್ಯದ ... ಬಹಳ ಪ್ರಸಿದ್ಧಿಯನ್ನು ಪಡೆದಿರುತ್ತಾನೆ.

ಯರು ನನ್ನನ್ನು ನೋಡಿ ಗದರಿಸಿಕೊಳ್ಳುವುದಕ್ಕೆ ಪ್ರತಿ ಗಿ, ಕರುಣಾವ್ಯಂಜಕ ಧ್ವನಿಯಲ್ಲಿ ನನ್ನ ಸ್ಥಳಕ್ಕೆ ೀಗಿ ಕುಳಿತುಕೊಳ್ಳುವಂತೆ ಹೇಳಿದರು. ನಾನು ಹಾಗೆಯೇ ಡಿದೆನು.

ನನ್ನ ಕಳವಳವು ಸ್ವಲ್ಪ ಇಳಿದ ಮೇಲೆ ನಾನು ಗೆಯೇ ಸುತ್ತಲೂ ತಿರುಗಿ ನೋಡಿದೆನು. ನಮ್ಮ ಪಾಧ್ಯಾಯರು ಉತ್ಸವದಿನಗಳಲ್ಲೂ ಇನಸ್ಪೆಕ್ಟರರು ಬಂದ ಲಗಳಲ್ಲೂ ಮಾತ್ರ ಧರಿಸುವುದಕ್ಕೆ ಇಟ್ಟುಕೊಂಡಿದ್ದ ರ ಸೊಗಸಿನ ಉಡುಪನ್ನು ಧರಿಸಿದ್ದರು. ನಾವು ್ಯಾರ್ಥಿಗಳ ಹಿಂದುಗಡೆ ನಮ್ಮೂರಿನ ಅನೇಕ ಮಂದಿ ಯರು ಬಂದು ನಮ್ಮಂತೆಯೇ ಅಂದಿನ ಪಾಠ ಕಲಿಯಲು ಳಿತಿದ್ದರು. ಅವರಲ್ಲಿ ಒಬ್ಬ ಮುದುಕನು ಜೀರ್ಣವಾಗಿ ೋಗಿದ್ದ ಒಂದು ಪ್ರಾಥಮಿಕ ಪಠ್ಯಪುಸ್ತಕವನ್ನು ಟ್ಟುಕೊಂಡು ನಮ್ಮೆಲ್ಲರಿಗಿಂತಲೂ ಶ್ರದ್ಧೆಯಿಂದ ಪಾಠ ಗಮನವಿಟ್ಟು ಕುಳಿತಿದ್ದನು.

ನಾನು ಇದಕ್ಕೆಲ್ಲಾ ಕಾರಣವೇನಿರಬಹುದೆಂದು ಶ್ಚರ್ಯಪಡುತ್ತಿದ್ದಾಗ ನಮ್ಮ ಉಪಾಧ್ಯಾಯರು ತಮ್ಮ ಸನವನ್ನು ಹತ್ತಿ ನನ್ನನ್ನು ಸಂಬೋಧಿಸಿದ್ದ ಗಂಭೀರವಾಣಿ ಲ್ಲಿ "ಮಕ್ಕಳಿರಾ, ಇದೇ ನಾನು ಬೋಧಿಸತಕ್ಕ ಕಡೇ ಠವು. ಅಲ್ಸಾಸ್ ಮತ್ತು ಲೋರೇನ್ ಪ್ರಾಂತ್ಯಗಳಲ್ಲಿ ರ್ಮನ್ ಭಾಷೆಯನ್ನು ಮಾತ್ರವೇ ಕಲಿಸಬೇಕೆಂದು ರ್ಲಿನ ನಗರದಿಂದ ಆಜ್ಞೆ ಬಂದಿದೆ. ಹೊಸ ಉಪಾಧ್ಯಾ ಯರು ನಾಳೆ ಬರುತ್ತಾರೆ. ಇದೇ ನಿಮ್ಮ ಫ್ರೆಂಚ್ ಭಾಷೆಯ ಡೇ ಪಾಠವು. ಆದುದರಿಂದ ನೀವು ತುಂಬಾ ಸಾವಧಾನ ದ ಕೇಳಿ" ಎಂದರು. ಇದನ್ನು ಕೇಳಿ ನನಗೆ ಸಿಡಿಲು ಡೆದಂತಾಯಿತು. ಹಾ, ಪಾಪಿಗಳಿರಾ! ಪುರಮಂದಿರದ ಲಗೆಯಲ್ಲಿ ಇದನ್ನೇ ಬರೆದಿದ್ದುದು!

ನನ್ನ ಕಟ್ಟಕಡೆಯ ಫ್ರೆಂಚ್ ಪಾಠವೇ? ನಾನಿನ್ನೂ ಮ್ಮ ಭಾಷೆಯಲ್ಲಿ ಬರೆಯುವುದಕ್ಕೆ ಸಹ ಕಲಿತಿರಲಿಲ್ಲ ಲ್ಲಾ! ಇನ್ನು ಮುಂದಕ್ಕೆ ನಾನು ಅದನ್ನು ಕಲಿಯಲೇ ಡದು! ಇಷ್ಟಕ್ಕೇ ನಿಲ್ಲಿಸಿಬಿಡಬೇಕು! ನಾನು ಶಾಲೆಗೆ ಚಕ್ಕರ್" ಹೊಡೆದು ಪಾಠಗಳನ್ನು ಕಲಿಯದೆ ಹೋದು ಕ್ಕೆ ತುಂಬಾ ಪಶ್ಚಾತ್ತಾಪಪಟ್ಟೆನು. ಇದು ವರೆಗೆ ಸಹ್ಯವೆನ್ನಿಸಿದ್ದ ನನ್ನ ಪುಸ್ತಕಗಳು ಈಗ ಅತಿ ಪ್ರಿಯಮಿತ್ರ ರಾಗಿ ಕಾಣಿಸಿದವು. ನಮ್ಮ ಉಪಾಧ್ಯಾಯರನ್ನು ಇನ್ನು ಮುಂದೆ ನಾನು ನೋಡಲಾರೆನೆಂದು ತಿಳಿದು, ಅವರ ಏಟು ಗಳೂ ಹುಚ್ಚಾಟಗಳೂ ಎಲ್ಲವೂ ಮರೆತು ಹೋಗಿ, ತುಂಬಾ ಸಂಕಟವಾಯಿತು. ಸ್ವಭಾಷೆಯ ಕಡೇ ಪಾಠವನ್ನು ಮರ್ಯಾ ದಿಸುವ ಸಲುವಾಗಿಯೇ ಇವರು ತಮ್ಮ ಹಬ್ಬದ ಉಡುಗೆ ಯನ್ನು ಧರಿಸಿದ್ದರು; ಊರಿನ ವೃದ್ಧರೆಲ್ಲರೂ ಆದುವರೆಗೂ ತಾವು ಸ್ವಭಾಷೆಯನ್ನು ಕಲಿಯದೆ ಹೋದುದಕ್ಕೆ ಪರಿತಪಿಸಿ ನಾಲ್ವತ್ತು ವರ್ಷಗಳಿಂದಲೂ ತಮ್ಮೂರಿನಲ್ಲಿ ಕೆಲಸಮಾಡಿದ್ದ ಉಪಾಧ್ಯಾಯರನ್ನು ಗೌರವಿಸುವುದಕ್ಕೂ ತಮ್ಮದಾಗಿದ್ದು ಈಗ ಪರಕೀಯವಾಗಿಬಿಟ್ಟಿದ್ದ ತಮ್ಮ ಸ್ವದೇಶವನ್ನು ಮರ್ಯಾದಿಸುವುದಕ್ಕೂ ಅಂದು ಅಲ್ಲಿ ಸೇರಿದ್ದರು.

ಇದನ್ನೆಲ್ಲಾ ನಾನು ಯೋಚಿಸುತ್ತಾ ಇರುವ ಕಾಲಕ್ಕೆ ಪಾಠ ಒಪ್ಪಿಸಲು ಅಸಮರ್ಥನಾಗಿದ್ದೆನು. ಉಪಾಧ್ಯಾಯರು ಮಾತ್ರ ನನ್ನನ್ನು ನಿಂದಿಸದೆ "ಪಾಪ ನೀನೂ ಸಂಕಟ ಪಡುತ್ತಿರಬೇಕು! ಹೇಗಿದೆ ಈಗ ನೋಡಿ! ಪ್ರತಿದಿನವೂ ನಾವು 'ಅಯ್ಯೊ, ಇನ್ನೂ, ಬೇಕಾದಷ್ಟು ಕಾಲವಿದೆ, ನಾಳೆ ಕಲಿತರಾಯಿತು,' ಎಂದುಕೊಳುತ್ತಾ ಬಂದೆವು. ಈಗ ನಾವು ಯಾವ ಗತಿಗೆ ಬಂದೆವು, ನೋಡಿ! ಅಲ್ಸಾಸಿನ ಸಂಕಟವನ್ನು ನೋಡಿ! ಅದು 'ನಾಳೆ, ನಾಳೆ' ಎಂದು ಕಲಿಯುವುದನ್ನು ಮುಂದುವರಿಸಿತು. ಈಗ ಆಚೇಕಡೆಯ ಜನರು, 'ಏನಿದು, ನೀವು ಫ್ರೆಂಚ್‌ರೆಂದು ಹೇಳಿಕೊಳ್ಳು ತ್ತಿದ್ದೀರಿ, ಆದರೆ ಯಾರೂ ಫ್ರೆಂಚ್‌ಭಾಷೆಯನ್ನು ಆಡು ವುದಕ್ಕೂ ಬರೆಯುವುದಕ್ಕೂ ಅಸಮರ್ಥರಾಗಿದ್ದೀರಿ?' ಎಂದು ದರ್ಪದಿಂದ ಕೇಳತಕ್ಕ ಅಧಿಕಾರವನ್ನು ಪಡೆದಿರು ವರು. ಊರಿನವರು ಮಕ್ಕಳನ್ನು ಕೆಲಸಕ್ಕೆ ಹಾಕಿದರೆ ಎರಡು ಕಾಸು ಸಿಕ್ಕುವುದೆಂದು ಶಾಲೆಗೆ ಕಳುಹಿಸಲು ಅಶ್ರದ್ಧೆ ಯಿಂದ ಇದ್ದರು. ನನ್ನಲ್ಲೂ ತಪ್ಪಿದೆ. ನಾನು ವಿದ್ಯಾರ್ಥಿ ಗಳಿಗೆ ಪಾಠಕಲಿಸುವ ಎಷ್ಟೋ ಕಾಲದಲ್ಲಿ ಅವರನ್ನು ನಮ್ಮ ಶಾಲೆಯ ತೋಟದ ಗಿಡಗಳಿಗೆ ನೀರು ಹಾಕಲು ಕಳುಹಿಸುತ್ತಿದ್ದೆನು. ನನಗೆ ನದಿಯಲ್ಲಿ ಮೀನು ಹಿಡಿಯ ಬೇಕೆಂದು ಮನಸ್ಸಾದಾಗ ಶಾಲೆಗೆ ರಜಾ ಕೊಟ್ಟುಬಿಡು ತ್ತಿದ್ದೆನು."

ಉಪಾಧ್ಯಾಯರು ಹೀಗೆಯೇ ಮಾತಾಡುತ್ತಾ ಫ್ರೆಂಚ್ ಭಾಷೆಯ ಮಹತ್ವವನ್ನು ಕುರಿತು ಹೇಳಲು ಹೊರಟರು. ಅದರಷ್ಟು ಸುಂದರವೂ ಖಚಿತವೂ ಸ್ಪಷ್ಟವೂ ಆದ ಭಾಷೆ ಮತ್ತೊಂದು ಇಲ್ಲವೆಂದೂ, ಅದನ್ನು ನಾವು ಹೇಗಾದರೂ ಮಾಡಿ ಮರೆಯದೆ ಸಂರಕ್ಷಿಸಿಕೊಳ್ಳಬೇಕೆಂದೂ, ಒಂದು ಜನರು ಪರಕೀಯರಿಗೆ ದಾಸರಾದರೂ ಸಹ ಅವರು ತಮ್ಮ ಭಾಷೆಯನ್ನು ಎಂದಿನವರೆಗೆ ಬಿಡುವುದಿಲ್ಲವೋ ಅಂದಿನ

ಫ್ರೆಂಚ್ ಕತೆಯೊಂದು

ಕಡೇ ಪಾಠ*

ಅನುವಾದಕರು: ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರ್‍ಯರು, ಎಂ. ಎ. ಬಿ. ಎಲ್., ಮೈಸೂರು.

ಅಲ್ಸಾಸ್-ಲೋರೇನ್ ಪ್ರಾಂತಗಳಲ್ಲಿ ಫ್ರೆಂಚ್ ಪಾಠಪ್ರವಚನಗಳನ್ನು ನಿಲ್ಲಿಸಿ ಜರ್ಮನ್ ಭಾಷೆಯನ್ನೇ ಕಲಿಸಬೇಕೆಂದು ಸೈನಿಕಾಜ್ಞೆ ಹೊರಟಿದೆ. ಒಂದು ಶಾಲೆಯಲ್ಲಿ ಉಪಾಧ್ಯಾಯರು ಕಡೆಯ ಫ್ರೆಂಚ್ ಪಾಠವನ್ನು ಹೇಳುತ್ತಿದ್ದಾರೆ. ಉಡಾಳ ವಿದ್ಯಾರ್ಥಿಗಳಂತಿರಲಿ, ಊರ ಹಿರಿಯ ಮುದುಕರೂ ಅಂದಿನ ಕಡೇ ಪಾಠ ಕಲಿಯಲು ಬಂದಿದ್ದಾರೆ. ಅಂದು ಉಪಾಧ್ಯಾಯರ ನಾ ಯಿಂದ ಫ್ರೆಂಚ್ ವಾಗ್ದೇವಿಯೇ ಮಾತನಾಡುವಂತಿದೆ. ಅಷ್ಟರಲ್ಲಿ ಕೇಳಬರುವುದು ಯನ್ ಸೈನಿಕರ ತುತೂರಿಯ ಧ್ವನಿ. ಉಪಾಧ್ಯಾಯರು ಹಲಿಗೆಯ ಮೇಲೆ ಬರೆದ ಕೊ

.... ವಾಕ್ಯ— "ಫ್ರಾನ್ಸಿಗೆ ಜಯವಾಗಲಿ!" ....

ಆ ದಿವಸ ಪ್ರಾತಃಕಾಲ ನಾನು ಶಾಲೆಗೆ ಬಹಳ ಹೊತ್ತಾಗಿ ಹೊರಟೆನು. ಆದಿನ ಉಪಾಧ್ಯಾಯರು ವ್ಯಾಕರಣದಲ್ಲಿ ಪ್ರತ್ಯಯಗಳ ವಿಚಾರವಾಗಿ ಪರೀಕ್ಷೆ ಮಾಡುವುದಾಗಿ ಹೇಳಿದ್ದರು. ಪ್ರತ್ಯಯ ಎಂದರೇನು? ಎಂದು ಸ್ವಲ್ಪವೂ ತಿಳಿದುಕೊಂಡಿರಲಿಲ್ಲವಾದ್ದರಿಂದ ಅಂದು ಶಾಲೆಯಲ್ಲಿ ನನಗೆ ತಕ್ಕ ಶಾಸ್ತಿಯಾಗುವುದು ನಿಶ್ಚಯವೆಂದು ಹೆದರಿದ್ದೆನು. ಶಾಲೆಗೆ "ಚಕ್ಕರ್" ಹಾಕಿ ಬಯಲಿನಲ್ಲಿ ಆಟವಾಡುತ್ತಿದ್ದುಬಿಡಲೇ ಎಂದು ಒಂದು ಸಲ ತೋರಿತು. ಹೊಂಬಿಸಿಲಿಂಡ ನಾಲ್ಕು ದಿಕ್ಕುಗಳೂ ಪ್ರಕಾಶಮಾನವಾಗಿದ್ದವು. ತೋಪಿನ ಬಳಿ ಪಕ್ಷಿಗಳು ಮಂಜುಳವಾಗಿ ಕಲಕಲ ಧ್ವನಿ ಮಾಡುತ್ತಿದ್ದವು. ಮಿಲ್ಲಿಗೆ ಆಚೆ ಬಯಲಿನಲ್ಲಿ ಪ್ರಷಿಯಾ ಸೈನಿಕರು ಕವಾತು ಮಾಡುತ್ತಿದ್ದರು. ಇವುಗಳ ಮುಂದೆ ವ್ಯಾಕರಣವು ಹೇಗೆ ರುಚಿಸೀತು? ಆದರೂ ನಾನು ನನ್ನ ಚಿತ್ತವನ್ನು ದಮನಮಾಡಿಕೊಂಡು ಶಾಲೆಗೆ ಜಾಗ್ರತೆ ಹೋದೆನು.

ಪುರಮಂದಿರದ ಮಾರ್ಗವಾಗಿ ನಾನು ಹೋಗುತ್ತಿದ್ದಾಗ ಅದರ ಬಳಿ ಇದ್ದ ಪ್ರಕಟನಾಫಲಕದ ಬಳಿ ಜನರು ಗುಂಪು ಸೇರಿದ್ದರು. ಕಳೆದ ಎರಡು ವರ್ಷಗಳಿಂದಲೂ ನಮ್ಮ ಕೆಟ್ಟ ಸುದ್ದಿಯೆಲ್ಲವೂ—ಸೋಲುಗಳು, ಪ್ರಕಟನೆಗಳು, ಸೇನಾಧಿಕಾರಿಯ ಆಜ್ಞೆಗಳು ಇವೆಲ್ಲವೂ ಈ ಹಲಗೆಯಿಂದ ನಮಗೆ ಬರುತ್ತಿತ್ತು. ನಾನು ಅಲ್ಲಿ ನಿಲ್ಲದೆ, ಈಗ ಮತ್ತೇನು ಸಮಾಚಾರವಿರಬಹುದು? ಎಂದು ಯೋಚಿಸುತ್ತಾ ಹೊರಟೆನು. ಪ್ರಕಟನೆಯನ್ನು ಓದುತ್ತ ಅಲ್ಲಿ ನಿಂತಿದ್ದ ನಮ್ಮ ಕಮ್ಮಾರನು ನನ್ನನ್ನು ನೋಡಿ, "ಮಗೂ, ಅಷ್ಟೊಂದು ಅವಸರಪಡಬೇಕಾಗಿಲ್ಲ. ನಿನ್ನ ಶಾಲೆಗೆ ಹೋಗಲು ಇನ್ನೂ ಬೇಕಾದಷ್ಟು ಕಾಲವಿದೆ" ಎಂದನು. ಅವನು ನನ್ನ ... ಮಾಡುತ್ತಿರುವನೆಂದು ಎಣಿಸಿ ನಮ್ಮ ಶಾಲೆಗೆ ... ಏದುತ್ತಾ ಹೋಗಿ ಸೇರಿದೆನು.

ಶಾಲೆಯು ಪ್ರಾರಂಭವಾಗುವಾಗ ಬೀದಿಗೆ ... ಸುತ್ತಿತ್ತು. ಆದಿವಸ ಮಾತ್ರ ಆದು ನಿಶ್ಶ... ಇತರ ಹುಡುಗರೆಲ್ಲರೂ ತಂತಮ್ಮ ಸ್ಥಾನ... ದ್ದರು. ನಾನು ಗಲಭೆಯ ಮಧ್ಯೆ ನುಣುಚಿಕೊ... ನನ್ನ ಸ್ಥಳವನ್ನು ಸೇರಿಕೊಳ್ಳಬೇಕೆಂದು ಯೋ... ಆದರೆ ಈಗ ಕೊಠಡಿಯ ಬಾಗಿಲನ್ನು ತೆಗೆ... ನೋಡುವಂತೆ ಹಾಗೆ ಮಾಡಬೇಕಾಯಿತು. ... ಯಿಂದಲೂ ಭಯದಿಂದಲೂ ಕುಗ್ಗಿ ಹೋಗಿದ್ದೆ...

---

*೧೮೭೧ರಲ್ಲಿ ಜರ್ಮನಿಯವರು ಫ್ರೆಂಚರನ್ನು ಸೋ... ಸೇರಿದ್ದ ಅಲ್ಸಾಸು ಮತ್ತು ಲೋರೇನ್ ಎಂಬ ... ಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಈ ಪ್ರ... ಈ ಪರದಾಸ್ಯವನ್ನು ಸಹಿಸದೆ ತಾವು ಫ್ರೆಂಚ್ ಸಂತಾ... ದರೂ ಮಾಡಿ ಪುನಃ ಫ್ರೆಂಚ್ ಜನಾಂಗದ ಅಂಗ... ಕನವರಿಸುತ್ತ ಮಹಾಛಲದಿಂದ ತಮ್ಮ ಆತ್ಮಸ್ವ... ಕ್ಷಿಸಿಕೊಂಡರು. ಫ್ರೆಂಚ್ ಜನಾಂಗವು ಸಹ ಈ ಪ್ರ... ಮರಳಿ ಪಡೆಯಬೇಕೆಂದು ಜರ್ಮನರೊಡನೆ ಅರ್ಧ... ವೈರಸಾಧನೆ ಮಾಡಿ ೧೯೧೯ರಲ್ಲಿ ಇವುಗಳನ್ನು ಪುನಃ ... ಸೇರಿಸಿಕೊಂಡಿತು. ಪರದಾಸ್ಯವು ಪ್ರಾಪ್ತವಾದ ... ಪ್ರಾಂತ್ಯಗಳಲ್ಲಿದ್ದ ಪರಿಸ್ಥಿತಿಯನ್ನು ವಿವರಿಸುವ ಕ... ೧೮೭೩ರಲ್ಲಿ ಪ್ರಕಟವಾಯಿತು. ಇದನ್ನು ಬರೆದ ಅಲ್ಫ... (Alphonse Daudet 1840—1897) ಎಂಬ... ಸಾಹಿತ್ಯದ ಇತಿಹಾಸದಲ್ಲೂ ಲೋಕಸಾಹಿತ್ಯದ ... ಬಹಳ ಪ್ರಸಿದ್ಧಿಯನ್ನು ಪಡೆದಿರುತ್ತಾನೆ.

...ಯರು ನನ್ನನ್ನು ನೋಡಿ ಗದರಿಸಿಕೊಳ್ಳುವುದಕ್ಕೆ ಪ್ರತಿಯಾಗಿ, ಕರುಣಾವ್ಯಂಜಕ ಧ್ವನಿಯಲ್ಲಿ ನನ್ನ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳುವಂತೆ ಹೇಳಿದರು. ನಾನು ಹಾಗೆಯೇ ಮಾಡಿದೆನು.

ನನ್ನ ಕಳವಳವು ಸ್ವಲ್ಪ ಇಳಿದ ಮೇಲೆ ನಾನು ಹಾಗೆಯೇ ಸುತ್ತಲೂ ತಿರುಗಿ ನೋಡಿದೆನು. ನಮ್ಮ ಉಪಾಧ್ಯಾಯರು ಉತ್ಸವದಿನಗಳಲ್ಲೂ ಇನಸ್ಪೆಕ್ಟರರು ಬಂದ ಕಾಲಗಳಲ್ಲೂ ಮಾತ್ರ ಧರಿಸುವುದಕ್ಕೆ ಇಟ್ಟುಕೊಂಡಿದ್ದ ಅವರ ಸೊಗಸಿನ ಉಡುಪನ್ನು ಧರಿಸಿದ್ದರು. ನಾವು ವಿದ್ಯಾರ್ಥಿಗಳ ಹಿಂದುಗಡೆ ನಮ್ಮೂರಿನ ಅನೇಕ ಮಂದಿ ಹಿರಿಯರು ಬಂದು ನಮ್ಮಂತೆಯೇ ಅಂದಿನ ಪಾಠ ಕಲಿಯಲು ಕುಳಿತಿದ್ದರು. ಅವರಲ್ಲಿ ಒಬ್ಬ ಮುದುಕನು ಜೀರ್ಣವಾಗಿ ಹೋಗಿದ್ದ ಒಂದು ಪ್ರಾಥಮಿಕ ಪಠ್ಯಪುಸ್ತಕವನ್ನು ಬಿಚ್ಚಿಟ್ಟುಕೊಂಡು ನಮ್ಮೆಲ್ಲರಿಗಿಂತಲೂ ಶ್ರದ್ಧೆಯಿಂದ ಪಾಠದಲ್ಲಿ ಗಮನವಿಟ್ಟು ಕುಳಿತಿದ್ದನು.

ನಾನು ಇದಕ್ಕೆಲ್ಲಾ ಕಾರಣವೇನಿರಬಹುದೆಂದು ಆಶ್ಚರ್ಯಪಡುತ್ತಿದ್ದಾಗ ನಮ್ಮ ಉಪಾಧ್ಯಾಯರು ತಮ್ಮ ಪೀಠವನ್ನು ಹತ್ತಿ ನನ್ನನ್ನು ಸಂಬೋಧಿಸಿದ್ದ ಗಂಭೀರವಾಣಿಯಲ್ಲಿ "ಮಕ್ಕಳಿರಾ, ಇದೇ ನಾನು ಬೋಧಿಸತಕ್ಕ ಕಡೇ ಪಾಠವು. ಅಲ್ಸಾಸ್ ಮತ್ತು ಲೋರೇನ್ ಪ್ರಾಂತ್ಯಗಳಲ್ಲಿ ಜರ್ಮನ್ ಭಾಷೆಯನ್ನು ಮಾತ್ರವೇ ಕಲಿಸಬೇಕೆಂದು ಬರ್ಲಿನ ನಗರದಿಂದ ಆಜ್ಞೆ ಬಂದಿದೆ. ಹೊಸ ಉಪಾಧ್ಯಾಯರು ನಾಳೆ ಬರುತ್ತಾರೆ. ಇದೇ ನಿಮ್ಮ ಫ್ರೆಂಚ್ ಭಾಷೆಯ ಕಡೇ ಪಾಠವು. ಆದುದರಿಂದ ನೀವು ತುಂಬಾ ಸಾವಧಾನದಿಂದ ಕೇಳಿ" ಎಂದರು. ಇದನ್ನು ಕೇಳಿ ನನಗೆ ಸಿಡಿಲು ಹೊಡೆದಂತಾಯಿತು. ಹಾ, ಪಾಪಿಗಳಿರಾ! ಪುರಮಂದಿರದ ಹಲಗೆಯಲ್ಲಿ ಇದನ್ನೇ ಬರೆದಿದ್ದುದು!

ನನ್ನ ಕಟ್ಟಕಡೆಯ ಫ್ರೆಂಚ್ ಪಾಠವೇ? ನಾನಿನ್ನೂ ನಮ್ಮ ಭಾಷೆಯಲ್ಲಿ ಬರೆಯುವುದಕ್ಕೆ ಸಹ ಕಲಿತಿರಲಿಲ್ಲವಲ್ಲಾ! ಇನ್ನು ಮುಂದಕ್ಕೆ ನಾನು ಅದನ್ನು ಕಲಿಯಲೇ ಕೂಡದು! ಇಷ್ಟಕ್ಕೇ ನಿಲ್ಲಿಸಿಬಿಡಬೇಕು! ನಾನು ಶಾಲೆಗೆ "ಚಕ್ಕರ" ಹೊಡೆದು ಪಾಠಗಳನ್ನು ಕಲಿಯದೆ ಹೋದುದಕ್ಕೆ ತುಂಬಾ ಪಶ್ಚಾತ್ತಾಪಪಟ್ಟೆನು. ಇದು ವರೆಗೆ ಅಸಹ್ಯವೆನ್ನಿಸಿದ್ದ ನನ್ನ ಪುಸ್ತಕಗಳು ಈಗ ಅತಿ ಪ್ರಿಯಮಿತ್ರರಾಗಿ ಕಾಣಿಸಿದವು. ನಮ್ಮ ಉಪಾಧ್ಯಾಯರನ್ನು ಇನ್ನು ಮುಂದೆ ನಾನು ನೋಡಲಾರೆನೆಂದು ತಿಳಿದು, ಅವರ ಏಟುಗಳೂ ಹುಚ್ಚಾಟಗಳೂ ಎಲ್ಲವೂ ಮರೆತು ಹೋಗಿ, ತುಂಬಾ ಸಂಕಟವಾಯಿತು. ಸ್ವಭಾಷೆಯ ಕಡೇ ಪಾಠವನ್ನು ಮರ್ಯಾದಿಸುವ ಸಲುವಾಗಿಯೇ ಇವರು ತಮ್ಮ ಹಬ್ಬದ ಉಡುಗೆಯನ್ನು ಧರಿಸಿದ್ದರು; ಊರಿನ ವೃದ್ಧರೆಲ್ಲರೂ ಅದುವರೆಗೂ ತಾವು ಸ್ವಭಾಷೆಯನ್ನು ಕಲಿಯದೆ ಹೋದುದಕ್ಕೆ ಪರಿತಪಿಸಿ ನಾಲ್ವತ್ತು ವರ್ಷಗಳಿಂದಲೂ ತಮ್ಮೂರಿನಲ್ಲಿ ಕೆಲಸಮಾಡಿದ್ದ ಉಪಾಧ್ಯಾಯರನ್ನು ಗೌರವಿಸುವುದಕ್ಕೂ ತಮ್ಮದಾಗಿದ್ದು ಈಗ ಪರಕೀಯವಾಗಿಬಿಟ್ಟಿದ್ದ ತಮ್ಮ ಸ್ವದೇಶವನ್ನು ಮರ್ಯಾದಿಸುವುದಕ್ಕೂ ಅಂದು ಅಲ್ಲಿ ಸೇರಿದ್ದರು.

ಇದನ್ನೆಲ್ಲಾ ನಾನು ಯೋಚಿಸುತ್ತಾ ಇರುವ ಕಾಲಕ್ಕೆ ಪಾಠ ಒಪ್ಪಿಸಲು ಅಸಮರ್ಥನಾಗಿದ್ದೆನು. ಉಪಾಧ್ಯಾಯರು ಮಾತ್ರ ನನ್ನನ್ನು ನಿಂದಿಸದೆ "ಪಾಪ ನೀನೂ ಸಂಕಟಪಡುತ್ತಿರಬೇಕು! ಹೇಗಿದೆ ಈಗ ನೋಡಿ! ಪ್ರತಿದಿನವೂ ನಾವು 'ಅಯ್ಯೊ, ಇನ್ನೂ, ಬೇಕಾದಷ್ಟು ಕಾಲವಿದೆ, ನಾಳೆ ಕಲಿತರಾಯಿತು,' ಎಂದುಕೊಳುತ್ತಾ ಬಂದೆವು. ಈಗ ನಾವು ಯಾವ ಗತಿಗೆ ಬಂದೆವು, ನೋಡಿ! ಅಲ್ಸಾಸಿನ ಸಂಕಟವನ್ನು ನೋಡಿ! ಅದು 'ನಾಳೆ, ನಾಳೆ' ಎಂದು ಕಲಿಯುವುದನ್ನು ಮುಂದುವರಿಸಿತು. ಈಗ ಆಚೇಕಡೆಯ ಜನರು, 'ಏನಿದು, ನೀವು ಫ್ರೆಂಚ್‌ರೆಂದು ಹೇಳಿಕೊಳ್ಳುತ್ತಿದ್ದೀರಿ, ಆದರೆ ಯಾರೂ ಫ್ರೆಂಚ್‌ಭಾಷೆಯನ್ನು ಆಡುವುದಕ್ಕೂ ಬರೆಯುವುದಕ್ಕೂ ಅಸಮರ್ಥರಾಗಿದ್ದೀರಿ?' ಎಂದು ದರ್ಪದಿಂದ ಕೇಳತಕ್ಕ ಅಧಿಕಾರವನ್ನು ಪಡೆದಿರುವರು. ಊರಿನವರು ಮಕ್ಕಳನ್ನು ಕೆಲಸಕ್ಕೆ ಹಾಕಿದರೆ ಎರಡು ಕಾಸು ಸಿಕ್ಕುವುದೆಂದು ಶಾಲೆಗೆ ಕಳುಹಿಸಲು ಅಶ್ರದ್ಧೆಯಿಂದ ಇದ್ದರು. ನನ್ನಲ್ಲೂ ತಪ್ಪಿದೆ. ನಾನು ವಿದ್ಯಾರ್ಥಿಗಳಿಗೆ ಪಾಠಕಲಿಸುವ ಎಷ್ಟೋ ಕಾಲದಲ್ಲಿ ಅವರನ್ನು ನಮ್ಮ ಶಾಲೆಯ ತೋಟದ ಗಿಡಗಳಿಗೆ ನೀರು ಹಾಕಲು ಕಳುಹಿಸುತ್ತಿದ್ದೆನು. ನನಗೆ ನದಿಯಲ್ಲಿ ಮೀನು ಹಿಡಿಯಬೇಕೆಂದು ಮನಸ್ಸಾದಾಗ ಶಾಲೆಗೆ ರಜಾ ಕೊಟ್ಟುಬಿಡುತ್ತಿದ್ದೆನು."

ಉಪಾಧ್ಯಾಯರು ಹೀಗೆಯೇ ಮಾತಾಡುತ್ತಾ ಫ್ರೆಂಚ್ ಭಾಷೆಯ ಮಹತ್ವವನ್ನು ಕುರಿತು ಹೇಳಲು ಹೊರಟರು. ಅದರಷ್ಟು ಸುಂದರವೂ ಖಚಿತವೂ ಸ್ಪಷ್ಟವೂ ಆದ ಭಾಷೆ ಮತ್ತೊಂದು ಇಲ್ಲವೆಂದೂ, ಅದನ್ನು ನಾವು ಹೇಗಾದರೂ ಮಾಡಿ ಮರೆಯದೆ ಸಂರಕ್ಷಿಸಿಕೊಳ್ಳಬೇಕೆಂದೂ, ಒಂದು ಜನರು ಪರಕೀಯರಿಗೆ ದಾಸರಾದರೂ ಸಹ ಅವರು ತಮ್ಮ ಭಾಷೆಯನ್ನು ಎಂದಿನವರೆಗೆ ಬಿಡುವುದಿಲ್ಲವೋ ಅಂದಿನ

ವರೆಗೆ ಅವರ ಸೆರೆಮನೆಯ ಬೀಗದ ಕೈ ಅವರಲ್ಲೇ ಇರುವುದೆಂದೂ ವಿವರಿಸಿದರು.

ಅನಂತರ ಉಪಾಧ್ಯಾಯರು ಒಂದು ಪಾಠವನ್ನು ಬೋಧಿಸಿದರು. ಅಂದು ನಾವೆಲ್ಲರೂ ಅದನ್ನು ಎಷ್ಟು ಸ್ಪಷ್ಟವಾಗಿ ಕಲಿತೆವು! ಆ ಪಾಠದಲ್ಲಿ ಒಂದಕ್ಷರವೂ ನನಗೆ ಅರ್ಥವಾಗದ್ದು ಇರಲಿಲ್ಲ. ಉಪಾಧ್ಯಾಯರು ನಮಗೆ ಅಂದಿನಂತೆ ಎಂದೂ ತಿಳಿಯಹೇಳಿರಲಿಲ್ಲ. ಪಾಪ, ಅವರು ಹೊರಟುಹೋಗುವುದಕ್ಕೆ ಮುಂಚಿತವಾಗಿ ತಮಗೆ ತಿಳಿದಿದ್ದುದನ್ನೆಲ್ಲಾ ಒಂದೇ ಸಲಕ್ಕೆ ನಮಗೆ ಕೊಟ್ಟು ಹೋಗಬೇಕೆಂದು ಅಪೇಕ್ಷಿಸುವಂತಿದ್ದಿತು!

ವ್ಯಾಕರಣವಾದ ಮೇಲೆ ಬರವಣಿಗೆಯ ಪಾಠವಾಯಿತು. ಉಪಾಧ್ಯಾಯರು ಅಂದು ಅತಿ ಮುದ್ದಾದ ಅಕ್ಷರಗಳಲ್ಲಿ ಬರೆದಿದ್ದ ಕಾಗದಗಳನ್ನು ಎಲ್ಲರಿಗೂ ಹಂಚಿದರು. ಅವುಗಳಲ್ಲಿ ಫ್ರಾನ್ಸ್—ಅಲ್ಸಾಸು ಇವೇ ತುಂಬಿದ್ದವು. ಬರವಣಿಗೆಯ ಪಾಠದ ಕಾಲದಲ್ಲಿ ನಮ್ಮ ಲೇಖನಿಗಳ ಧ್ವನಿಯೂ ಹೊರಗೆ ಪಾರಿವಗಳ ಕಲರವವೂ ಹೊರತು ಮತ್ತಾವ ಶಬ್ದವೂ ಇರಲಿಲ್ಲ. ಈ ಪಾರಿವಗಳು ಸಹ ಜರ್ಮನ್ ಭಾಷೆಯಲ್ಲೇ ಹಾಡಬೇಕೆಂದು ವಿಧಿಸುತ್ತಾರೆಯೇ, ನೋಡಬೇಕು, ಎಂದು ನಾನು ಹಾಗೆಯೇ ಯೋಚಿಸಿದೆನು. ನಾವು ಬರೆಯುತ್ತಿದ್ದಾಗ ಉಪಾಧ್ಯಾಯರು ಶೂನ್ಯ ದೃಷ್ಟಿಯಿಂದ ಈ ಕೊಠಡಿಯಲ್ಲಿ ನಾಲ್ವತ್ತು ವರ್ಷಗಳಿಂದಲೂ ಅವರಿಗೆ ಸಂಗಾತಿಗಳಾಗಿದ್ದ ವಸ್ತುಗಳನ್ನೆಲ್ಲಾ ನೋಡುತ್ತ ಶೋಕಮುದ್ರೆಯಿಂದ ಕುಳಿತಿದ್ದರು. ಮೇಲುಗಡೆ ಮಹಡಿಯಲ್ಲಿ ಅವರ ಸೋದರಿಯು ನ[illegible] ಪ್ರಯಾಣಕ್ಕಾಗಿ ಮನೆಯಲ್ಲಿದ್ದ ವಸ್ತುಗಳನ್ನೆ[illegible] ಕಟ್ಟುವ ಕೆಲಸದಲ್ಲಿದ್ದುದು ಕೇಳಿಸುತ್ತಿತ್ತು.

ಬರವಣಿಗೆಯ ಪಾಠವಾದ ಮೇಲೆ ಚರಿತ್ರೆ[illegible] ಅನಂತರ ಮೊದಲನೇ ತರಗತಿಯ ಮಕ್ಕಳ[illegible] ಕಾಗುಣಿತಗಳನ್ನು ಒಪ್ಪಿಸಿದರು. ನಮ್ಮ ಮುಂದೆ[illegible] ಮುದುಕನು ಸಹ ಅವರೊಡನೆ ತನ್ನ ಬಾಲ[illegible] ಅಕ್ಷರಗಳನ್ನು ಕೂಡಿಸುತ್ತಾ ಬಾಯಿಪಾಠ[illegible] ಅವನ ಧ್ವನಿಯು ಅಳುಧ್ವನಿಯಾಗಿತ್ತು.

ದೇವಾಲಯದ ಗಡಿಯಾರವು ಹನ್ನೆರಡು ಗಂ[illegible]ಯಿತು. ಆಗ ಪ್ರಾರ್ಥನೆ ಆಗಬೇಕು. ಅಷ್ಟರಲ್ಲಿ[illegible] ಮುಗಿಸಿಕೊಂಡು ಹಿಂತಿರುಗಿ ಬರುತ್ತಿದ್ದ ಪ್ರ[illegible]ಕರ ತುತೂರಿ ಧ್ವನಿಯು ನಮ್ಮ ಕಿಟಕಿಯ[illegible] ಬಂದಿತು. ನಮ್ಮ ಉಪಾಧ್ಯಾಯರು ಎದ್ದು ನಿಂ[illegible] ಮುಖವು ವಿವರ್ಣವಾಗಿ ಬಿಳುಪೇರಿದ್ದಿತು. [illegible] ಹೇಳಬೇಕೆಂದು "ಮಿತ್ರರೇ, ನಾನು, ನಾನು-" ತೊಡಗಿದರು. ಮುಂದಕ್ಕೆ ಮಾತು ಹೊರಡಲಿಲ್ಲ[illegible] ಮೇಲಿದ್ದ ಸುಣ್ಣವನ್ನು ತೆಗೆದುಕೊಂಡು ಹಲ[illegible] ದಪ್ಪವಾಗಿ "ಫ್ರಾನ್ಸಿಗೆ ಜಯವಾಗಲಿ" ಎಂ[illegible] ಹಾಗೆಯೇ ಗೋಡೆಗೆ ಸ್ವಲ್ಪ ಹೊತ್ತು ತಲೆ[illegible]ಕೊಂಡು ನಿಂತಿದ್ದು ಮತ್ತಾವ ಮಾತೂ ಇಲ್ಲ[illegible] ಮುಗಿಯಿತು, ನೀವು ಹೋಗಬಹುದು" ಎಂ[illegible]ದರು.

ಇವಳಾರು?

ಆರಿವಳು ಸುಂದರ ರೂಪಿನಿಂ ಮೆರೆವಳು
ಊರ ಮುಂದಿನ ಮಂಟಪದಿ
ಬಾರಿಬಾರಿಗು ಗೋಳಿಡುತ ಬಿಸುಸುಯ್ವ
ಳಾರಿವರು ಚಲುವಿನ ಚದುರೆ. ೧

ಮಾಸಿದ ಮಂಡೆಯಿಂದೊಪ್ಪುವ ಬಿಡುಮುಡಿ
ಬೇಸರದಿಂದಿಟ್ಟ ಬೊಟ್ಟು
ಆಸತ್ತು ನೊಂದುಟ್ಟ ಚಿಂದಿಯಾಗಿಹ ಸೀರೆ
ನೇಸರ ಸೋಲಿಪ ಕಾಂತಿ ೨

ನೊಸಲೊಳಗೆಸೆದಿರ್ಪ ಸುಳಿಗುರುಳೊಸೆದಾಟ
ಎಸೆವಕ್ಷಿ ಲಾವಣ್ಯ ಲೀಲೆ
ಒಸಗೆಯಿಂದೆಸೆಯುವ ಯೌವನ ಪಡಸಿರೆ
ಬೆಸನದಿ ಹಲುಬುವಳಿಂತು ೩

" ತಂದೆತಾಯಿಗಳಿಲ್ಲ ಬಂಧುಗಳಿಲ್ಲವಾ
ನಂದದಿ ಮೋದಿಪರಿಲ್ಲ
ನೊಂದೆದೆಯ ಸಂತೈಸಲಾಳಿಯ ನೆರವಿಲ್ಲ
ಮುಂದಿಲ್ಲ ವಾಸರೆ ಯೆಲ್ಲು ೪

" ಎಳೆತನದೊಳಗಾನಂದದಿಂದಲೆಯುತ
ಬಳೆದೆನು ತಿರಿದುಂಡು ನಾನು
ಕಳೆಯಿಂದಲೇರಿದ ಯೌವನ ಸವನಿಸೆ
ಲಳಲಿಪೆ ತಿರಿದುಂಡು ಬಾಳೆ ೫

" ತಿರುಕತನವಿರಲಿ ತಿರಿವೆನು ಬೇಸದೆ
ಮೆರೆಯುವ ಹರೆಯದ ಹೊರೆಯು
ತಿರುಕರ ಪಾಲಿಗೇತಕೆಲೆ ದೇವ
ಇರಲಿ ಧಿಕ್ಕಾರ ವದಕೆ ! " ೬

ಎಂದಿಂತು ಹಲುಬುತ ಕುಂದಿಹಳೀಕೆಯು
ನೊಂದು ಕನ್ನಿರವ ನೆನೆದು
ಎಂದಾದರೀಕೆಯ ದಂದುಗ ಹೋಗದೆ
ಮುಂದೆಯಾನಂದದಿಂದಿರಳೆ? ೭

ಬಡತನದೊಡಲುರಿಗೆ ಹರೆಯವ ಹಳಿದು
ಕಡುದುಃಖಗೊಂಡಿಹಳೀಕೆ
ಪೊಡವಿಯ ಭಾಗ್ಯವೆಲ್ಲ ವೀಚದುರಿಗೆ
ಅಡವಿಯಾಹುದಿವಳಾರು? ೮

—ಟಿ. ಕೆ. ರಂಗನಾಥ ತೋವಿನಕೆರೆ.

ಕುರಿಯ ಮೀಮಾಂಸೆ

—: ವಿನೋದ ನಿರ್ಬಂಧ :—

(ಶ್ರೀರಂಗ)

ಕುರಿಯೇ ಜಗದಾದಿದೇವನೆಂದು ತತ್ತ್ವ-ತರ್ಕ-ವ್ಯವಹಾರ-ಶಾಸ್ತ್ರಗಳು ಸಾರುತ್ತಿವೆ. ಆದ್ದರಿಂದ ಕುರಿಯ ಆರಾಧನೆಯನ್ನೇ ಮಾಡೋಣ. ಈಗೇನೋ ಯಥಾಶಕ್ತಿ ಕುರಿಯ 'ಹಿಂಡುತನ'ವನ್ನು ಅನುಕರಿಸುತ್ತಿದ್ದೇವೆ. ಮನಸಿನ ಮಾತನ್ನು ಮುಚ್ಚಿಟ್ಟು ಮಠದ ಸ್ವಾಮಿಗಳನ್ನು, ಮನಸಿನ ಲೋಭ-ಮೋಹಗಳನ್ನು ಬದಿಗಿಟ್ಟು ಮನೆಯ ತಂದೆತಾಯಿಗಳನ್ನು, ಮನಸಿನ ವಿಚಾರ-ವಿವೇಕಗಳನ್ನು ಒತ್ತಿಟ್ಟು ಮುಂದಾಳುಗಳನ್ನು ಹಿಂಬಾಲಿಸುತ್ತಿದ್ದೇವೆ. ಆದರೆ ಈ ದೂರದ ಆರಾಧನೆ ಸಾಲದು. ನಾವು 'ಕುರಿಗಳೆ' ಆಗಬೇಕು. ವರ್ಷಕ್ಕೊಮ್ಮೆಯಾದರೂ ಕುರಿದೇವನ ಜಾತ್ರೆಯನ್ನು ನೆರೆಯಿಸಬೇಕು, ಅಲ್ಲಿ ನಮ್ಮ ಮುಂದಾಳುಗಳನ್ನು ಮೆರೆಯಿಸಬೇಕು; ನಾವೆಲ್ಲರೂ ಕುರಿಗಳೆ ಇದ್ದೇವೆಂಬುದನ್ನು ಅವರ ಪ್ರತೀತಿಗೆ ತಂದುಕೊಡಬೇಕು. ಆಗ ನಮ್ಮಲ್ಲಿ ಸ್ವಾರ್ಥತ್ಯಾಗವೆಂಬ ಸದ್ಗುಣವು ನೆಲೆಗೊಳ್ಳುವುದು. ಯಜಮಾನನು ಉಣ್ಣೆ ಕತ್ತರಿಸುವಂತೆ ನಮ್ಮ ಕೋಟು-ಕಿಸೆಗಳನ್ನು ಕತ್ತರಿಸಿದರೂ, ಮೈದೊಗಲು ಸುಲಿದರೂ, ಅದೇಕೆ—ನಮ್ಮ ಜೀವದ ಆಹುತಿ ತೆಗೆದು .... ಕೊಂಡರೂ ನಾವು ಪಿಟ್ಟೆನ್ನದೆ ಆತ್ಮಾರ್ಪಣಭಾವದಿಂದಿದ್ದುಬಿಡುವೆವು. ....

ಪಂಚಮಹಾಭೌತಿಕ ಚರಾಚರ ವಿಶ್ವಪ್ರಪಂಚವು ಅರ್ಥಾತ್ ಭರತವರ್ಷವೆಂಬ ಸುವರ್ಣ ಭೂಮಿಯು ಹುಟ್ಟಿದುದು ಹೇಗೆ? ಕತ್ತಲೆಯಿಂದ ಎಂದು ಪ್ರಾಚೀನ ಋಷಿಗಳು, ಆತ್ಮನಿಂದ ಎಂದು ವೇದಾಂತಿಗಳು, ಯಜ್ಞನಿಂದ ಎಂದು ಮೀಮಾಂಸಕರು ಸೃಷ್ಟಿಯ ಉತ್ಪತ್ತಿಯನ್ನು ಕೊಡುತ್ತಾರೆ. ಈ ಮೂರೂ ಅಭಿಪ್ರಾಯಗಳು ಒಂದೇ ಎಂದು ನನ್ನ ಗೆಳೆಯನ ಮತ; ಸಂಸ್ಕೃತದಲ್ಲಿ ಅನೇಕ ಶಬ್ದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವ ರೂಢಿ ಇದ್ದುದರಿಂದ ಹಾಗೆ ಹೇಳಿದೆ ಎಂದೂ, ಕನ್ನಡದಲ್ಲಿ ಹೇಳಿದರೆ ಅವುಗಳ ಅರ್ಥ ಸುಲಭವಾಗಿ ತಿಳಿಯುವುದೆಂದೂ ನನ್ನ ಗೆಳೆಯನ ಇನ್ನೊಂದು ಮತ. ಹಾಗಿದ್ದರೆ ಕನ್ನಡದಲ್ಲಿ 'ಐದು-ದೊಡ್ಡ-ದೆವ್ವಗಳ-ನಡೆಯುವ-ನಡೆಯದ-ಎಲ್ಲ-ಹಬ್ಬುಗೆ' ಹುಟ್ಟಿದುದು ಹೇಗೆ? ಕುರಿಯಿಂದ! ಉತ್ತರ ನನ್ನದಲ್ಲ, ನನ್ನ ಗೆಳೆಯನದು ಎಂಬುದನ್ನು ವಾಚಕರು ದಯವಿಟ್ಟು ಲಕ್ಷ್ಯದಲ್ಲಿಡತಕ್ಕುದು. ಇಂದಿನ ಪ್ರಾಣಿಭೂತಗಳ ಕುಲವನ್ನು ತಲೆಯಿಂದ ತಲೆಗೆ ಶೋಧಿಸುತ್ತ ಹೋದರೆ ಮೂಲತಲೆಯು ಕುರಿಯದೇ ಎಂದು ಅವನ ಹಟ. ಇದಕ್ಕೆ ಅವನು ಅನೇಕ ಕಾರಣಗಳನ್ನೂ ಕೊಟ್ಟಿದ್ದಾನೆ. ಆದರೆ ಮೊದಲು ಮೇಲಿನ ಮೂರು ಅಭಿಪ್ರಾಯಗಳ ಬಗ್ಗೆ ಅವನು ಕೊಟ್ಟ ಉಪಪತ್ತಿಯನ್ನು ತಮಗೆ ತಿಳುಹಿಸುವೆ.

(೧) ಕತ್ತಲೆಯಿಂದ ಜಗತ್ತು ಹುಟ್ಟಿತು ಎಂದು ಋಗ್ವೇದದಲ್ಲಿ ಹೇಳಿದೆ. 'ತಮ ಆಸೀತ್ ತಮಸಾ ಗೂಢಮಗ್ರೇ। ಅಪ್ರಕೇತಂ ಸಲಿಲಂ ಸರ್ವಮಾ ಇದಂ॥ ತುಚ್ಛ್ಯೇನಾಭ್ವಪಿಹಿತಂ ಯದಾಸೀತ್। ತಪಸಸ್ತನ್ಮಹಿನಾಜಾಯತೈಕಂ॥' ಇದರ ಅರ್ಥವು ಹೀಗೆ: 'ಅದು (ಜಗತ್ತಿನ ಮೊದಲು) ಕಪ್ಪು ಇದ್ದಿತು, ಆದರ ಮೈಮೇಲೆ ಕಪ್ಪು ಇದ್ದಿತು, ಅಲ್ಲಿ ನೀರು ನಿಲ್ಲುತ್ತಿದ್ದಿಲ್ಲ (ಅಪ್ರಕೇತಂ), ಸರ್ವದಾ 'ಮಾ ಇದಂ' ಎನ್ನುತ್ತಿತ್ತು, ಆದರೆ (ತು) 'ಯಾವಾಗ ಅದು ಛೆಯ್ ಎಂಬುದರಿಂದ ಸುತ್ತುಗಟ್ಟಲ್ಪಟ್ಟಿತೊ ಆವಾಗ ಅದಕ್ಕೆ ತಪ್ಪಿಸಿಕೊಳ್ಳದ ಮಹಾಯತಿ (ತಪಸಸ್ತನ್ಮಹಿನಾಜಾಯತೈಕಂ)ಯಾದ ಅಜಾ ಎಂದು ಹೆಸರು ಬಿದ್ದಿತು.'

(೨) ಆತ್ಮನಿಂದ ಜಗತ್ತು ಹುಟ್ಟಿತು ಎನುವ ವೇದಾಂತಿಗಳು ಆತ್ಮನೆಂದರೆ ಯಾವುದೆಂದು ತಿಳಿದಿದ್ದಾರೆ? 'ಅಜೋಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಪಿ ಸನ್, ಸಣ್ಣದಾದ ಅಜ (= ಕುರಿ) ಎನಿಸಿದರೂ ಅದು ಪ್ರಾಣಿಗಳ ಈಶ್ವರನಾದ ಅವ್ಯಯವು (ಎಂದರೆ ವೆಚ್ಚವಿಲ್ಲದ ಎಂದರೆ ಸೋವಿಯಾದ ಕುರಿ) ಆತ್ಮನೆನಿಸಿತು.'

(೩) ಯಜ್ಞದಿಂದ ಜಗತ್ತು ಹುಟ್ಟಿತೆನ್ನುವುದರ ಅರ್ಥ ವೇನು? ಯಜ್ಞದಲ್ಲಿ ಆಹುತಿಯಾದ ಪ್ರಾಣಿ ಯಿಂದ ಜಗತ್ತು ಹುಟ್ಟಿತು. ಯಜ್ಞದಲ್ಲಿ ಆಹುತಿ ಯಾದ ಮೊದಲ ಪ್ರಾಣಿ ಯಾವುದು? ವಿರಾಟ ಪುರುಷ. ವಿರಾಟಪುರುಷನೆಂದರೇನು? ಈ ಶಬ್ದದ ಅರ್ಥವನ್ನು ತಿಳಿದುಕೊಳ್ಳಲು ಸಹಾಯ ಕಾರಿಯಾಗುವಂತೆ ಗೀತೆಯಲ್ಲಿ ಒಂದು ಮಾತು ಇದೆ. 'ದೇಹೀ ನಿತ್ಯಮವಧ್ಯೋಯಂ' ಎಂದು ಆತ್ಮನ ವರ್ಣನೆ ಇದೆ. ಆತ್ಮ ಎಂದರೇನು ಎಂಬುದನ್ನು ಮೇಲೆ ಹೇಳಿದೆ. ಅದೇ ಅರ್ಥವು ಇಲ್ಲಿ ದೃಢವಾಗುತ್ತಿದೆ. 'ಇವನನ್ನು ದಿನಾಲು (ನಿತ್ಯಂ) ಕೊಲ್ಲಬಾರದು' ಎಂದರೆ ಯಜ್ಞದ ಕಾಲಕ್ಕೆಯೆ ಕೊಲ್ಲತಕ್ಕುದೆಂಬಭಿಪ್ರಾಯ. ವಿರಾಟ ಪುರುಷ ಎಂದರೆ ವಿಶೇಷವಾಗಿ (ಬೇಕಾದಲ್ಲಿ) ತಿರುಗಾಡುವ ಪ್ರಾಣಿ. ಈ ಅರ್ಥಗಳನ್ನು ಒಂದಕ್ಕೊಂದು ಹೊಂದಿಸಿದಲ್ಲಿ ಯಜ್ಞದಲ್ಲಿ ಕುರಿಯೆ ಮೊದಲ ಆಹುತಿಯಾಗಿತ್ತೆಂದು ಹೇಳಬಹುದಲ್ಲವೆ? (ಇನ್ನೊಂದು ಆಧಾರ:– 'ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು, ಎಲೆ ಹೋತೇ, ಅಳು ಕಂಡೆಯಾ'—ಬಸವೇಶ್ವರರ ವಚನ). ಆದುದರಿಂದ ಯಜ್ಞದಿಂದ ಎಂದರೆ ಕುರಿಯಿಂದ ಜಗತ್ತು ಹುಟ್ಟಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವಷ್ಟೆ?

ನನ್ನ ಗೆಳೆಯನ ತರ್ಕ-ಮಾಟಕ್ಕೆ ಮೈಮರೆತು ನಾನು ಕುರಿಯಂತೆಯೆ ಹೂಯ್‌ಗುಡುತ್ತಿದ್ದೆ. ನನ್ನ ತಲೆಯೂ ತೂಗುತ್ತಿದ್ದಿತು, ಆದರೆ ಮನಸಿನಲ್ಲಿ ಮಾತ್ರ ಏನೊ ಒಂದು ಹಳಹಳಿ ಇದ್ದಂತೆ. ನಮ್ಮೆಲ್ಲರ ಗೋತ್ರಋಷಿಯು ಕುರಿ ಎಂಬ ವಿಚಾರವು ಅಸಹ್ಯವಾದಷ್ಟೆ ಅವಿಶ್ವಸನೀಯವೆನಿಸಿತು. ಆದರೆ ಮಾಡುವುದೇನು? ಸತ್ಯವು ಕಠಾರಿಯಾದುದಲ್ಲವೆ? ಕಠಾರಿಯಿಂದ ಸತ್ತು ನಮ್ಮೆಲ್ಲರನ್ನು ಹುಟ್ಟಿಸಿದ ಕುರಿಯ ಸ್ವಾರ್ಥತ್ಯಾಗವನ್ನು ಕುರಿತು ಅಭಿಮಾನ ಉಕ್ಕಿ ನನ್ನ ಕಣ್ಣುಗಳಿಂದ ದಳದಳನೆ ನೀರು ಸುರಿಯತೊಡಗಿತು. ಕುರಿಯೆ ನಮ್ಮೆಲ್ಲರ ಜನ್ಮದಾತೃ, ನಮ್ಮೆಲ್ಲರ ಪೋಷಕ ಎಂಬ ವಿಚಾರವು ಈಗ ಅಸಹ್ಯವೆನಿಸದೆ ಅಭಿಮಾನಾಸ್ಪದ ವೆನಿಸಿತು.

ನನ್ನಷ್ಟಕ್ಕೆ ನಾನಾಗಿಯೆ ವಿಚಾರಮಾಡಿದೆ. ಶಾಸ್ತ್ರೀಯ ದೃಷ್ಟಿಯಿಂದ, ವ್ಯವಹಾರದ ದೃಷ್ಟಿಯಿಂದ ಕುರಿಯ ವಿಶ್ವ ಮಾತೃತ್ವಪದವಿಗೆ ಏನಾದರೂ ಪ್ರಮಾಣಗಳ... ಶೋಧಿಸತೊಡಗಿದೆ. ಎಂತಹ ಆಶ್ಚರ್ಯ! ... ಳನ್ನು ಕುಕ್ಕುವಂತೆ ವ್ಯಾವಹಾರಿಕ ಪ್ರಮಾಣ... ನಿಂದಲೂ ನಮ್ಮೆದುರು ನಿಂತಿವೆ, ಆದರೆ ... ಅವುಗಳನ್ನು ನೋಡಿಲ್ಲ. ತಂದೆತಾಯ್ಗಳ... ಪೋಷಿಸುವುದು ರೂಢವ್ಯವಹಾರ; ನಮ್ಮನ್ನು... ರಂತೆ ಕುರಿಯು ಪೋಷಿಸುತ್ತಲಿದೆ, ಅಲ್ಲವೆ? ... ಗುವವನಂತೆ ಈ ಪ್ರಶ್ನೆಗೆ ನಾವು 'ಹು...' ಬೇಕಾಗುವುದು. ನಾಗರಿಕರಾದ ನಾವಂತೂ ... ಎನಲೇಬೇಕು; ಕಸ-ಕಡ್ಡಿಗಳ ವಿಶ್ವಾಮಿತ್ರನ... ಬೆಳೆಸುವ ನಮ್ಮ ಮ್ಯುನಿಸಿಪಾಲಿಟಿಗಳ ಸಂಸ್ಕೃ... ಮನೆಯ ಮುಂದಿನ, ಮನೆಯ ಅಂಗಣದ... ಗಂಟೆಗಳನ್ನು ಕುರಿಯು ತಿನ್ನುತ್ತಿದ್ದಿಲ್ಲವೆ... ಬದುಕುವುದು ಹೇಗೆ? ಬಡತನವೆ ಸ್ವರ್ಗ ... ಯಿಂದ ಮನಸ್ಸು ಗಟ್ಟಿ ಎನಿಸಿದ್ದರೂ ದೇಹದ... ದಂತಾಗಿ ಚಳಿಯಿಂದ ಸಾಯುವ ನಮಗೆ ಕು... ಮೈಮೇಲಿನ ಬಟ್ಟೆಗಳನ್ನು ಹೊದ್ದಿಸಿದ್ದಿಲ್ಲವೆ... ಸ್ಥಿತಿ ಏನಾಗಬಹುದಾಗಿತ್ತು? ಇಂದು ... ಕೆಲವು ಮುಂದಾಳುಗಳು ನಾವು ಬಲಾಢ್ಯ... ಕುರಿಯ ರಕ್ತ ನಮ್ಮ ಮೈಯಲ್ಲಿ ಹರಿದಾ... ಎಂದು ಹೇಳುತ್ತಾರೆ, ಅದರ ಅರ್ಥವೇನು? ... ನಮಗೆ ಆಹಾರ ದೊರೆಯತಕ್ಕುದು. ಹೀಗೆ ... ಳಂತೆ ಕುರಿಯು ನಮ್ಮನ್ನು ಅನೇಕವಿಧವಾಗಿ ... ರಲು ನಾವು ಕುರಿಯ ವಂಶಿಗರೆಂಬುದಕ್ಕೆ ...

ಇನ್ನು ಶಾಸ್ತ್ರೀಯದೃಷ್ಟಿಯಿಂದ ನೋಡಿದ... ಪಿತೃಸ್ಥಾನವು ಸಲ್ಲಬೇಕಾಗಿದೆ ಎಂದು ಹೇಳಬ... ತಾಯ್ಗಳಿಂದ ಆನುವಂಶಿಕವಾಗಿ ಕೆಲವು ಗುಣ... ಮಕ್ಕಳಿಗೆ ಇಳಿದುಬರುವುವು ಎಂದು ಶಾಸ್ತ್ರ... ತ್ತಿವೆ. ನಮ್ಮಲ್ಲಿ ಆನುವಂಶಿಕವಾಗಿ ಕುರಿ... ಗಳು ಎಷ್ಟೋ ಬಂದಿವೆ ಎಂಬುದನ್ನು ... ಕಾಣಬಹುದು. ಮೊದಲನೆಯ ಗುಣವೆಂದರೆ ... (gregariousness), ಗುಂಪುಗುಂಪಾಗಿ ... ಒಂದೇ ಕುರಿಯು ತನ್ನ ಮನಬಂದಂತೆ ನಡೆ... ಎಲ್ಲಿಂಯಾದರೂ ನೋಡಿರುವಿರಾ? ಹಿಂಡುಗ... ಹೊರಡತಕ್ಕದ್ದು; ಸಂಘೇ ಶಕ್ತಿಃ ಕುರಿಯು... ಹೇಳಬಹುದು. ಅದರಂತೆಯೆ ತನ್ನ ಮನ... ಯುವ ಮನುಷ್ಯನನ್ನು ಎಲ್ಲಿಯಾದರೂ ನೋ...

ನಾಲ್ಕು ಜನರಿಗೆ ಮನಬಂದಂತೆ ನಡೆಯುವುದೆ ಮನುಷ್ಯನ ಪ್ರವೃತ್ತಿಯಾಗಿದೆ, ವ್ಯವಹಾರದಲ್ಲಿ ಚಾತುರ್ಯವೆನಿಸಿದೆ. ಎಲ್ಲರೂ ಶಾಲೆಗೆ ಹೋಗುವರು, ನಾನೂ ಶಾಲೆಗೆ ಹೋಗುವೆ; ಮುಂದೆ ಎಲ್ಲರೂ ಕಾಲೇಜಿಗೆ ಹೋಗುವರು, ನಾನೂ ಕಾಲೇಜಿಗೆ ಹೋಗುವೆ; ಎಲ್ಲರೂ ಕಾರಕೂನರಾಗುವರು (ಇಲ್ಲವೆ ದೇಶಭಕ್ತರಾಗುವರು), ನಾನೂ ಕಾರಕೂನನಾಗುವೆ; ಎಲ್ಲರೂ ಆಫೀಸಿಗೆ (ಇಲ್ಲವೆ ಜೇಲಿಗೆ) ಹೋಗುವರು, ನಾನೂ ಆಫೀಸಿಗೆ ಹೋಗುವೆ; ಎಲ್ಲರೂ ಸಭೆಗೆ ಹೋಗುವರು, ನಾನೂ ಹೋಗುವೆ; ಎಲ್ಲರೂ ಚಪ್ಪಾಳೆ ಇಕ್ಕುವರು, ನಾನೂ ಇಡುವೆ; ಎಲ್ಲರೂ ಮನೆಗೆ ಹೋಗಿ ಮಲಗುವರು, ನಾನೂ ಮನೆಗೆ ಹೋಗಿ ಮಲಗುವೆ. ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು ನಮ್ಮಲ್ಲಿಯ 'ಕುರಿತನ'ವನ್ನು ತೋರಿಸಿಕೊಡಲಿಕ್ಕೆ.

ಕುರಿಗಳ ಹಿಂಡು ನಡೆಯುವಾಗ ಸೂಕ್ಷ್ಮವಾಗಿ ನೋಡಿದರೆ ಕುರಿಯ ಇನ್ನೊಂದು ವೈಶಿಷ್ಟ್ಯವು ಒಡೆದು ತೋರುವುದು. ಆ ಹಿಂಡಿನಲ್ಲಿ ಮುಂದೆ ಸಾಲಾಗಿ ನಡೆದ ಕುರಿಗಳ ಪ್ರಗತಿಗಿಂತ ಹಿಂದಿನಿಂದ ನಡೆದ ಕುರಿಗಳ ನುಗ್ಗಾಟವೆ ಮಾರ್ಗಕ್ರಮಣಕ್ಕೆ ಕಾರಣವಾಗಿರುವುದು. ಮುಂದೆ ನಡೆವ ಕುರಿಗಳಿಗೆ ಇಂತಹ ಸ್ಥಳಕ್ಕೆ ಹೋಗಬೇಕೆಂಬ ಉದ್ದಿಶ್ಯವಿರುವುದಿಲ್ಲ; ಮಾರ್ಗವನ್ನರಿಯದಿದ್ದ ಹಿಂದಿನ ಕುರಿಗಳ ಒತ್ತಡದಿಂದ ಇತ್ತ ಸಾಗಿಸಿದರೆ ಸಾಗಿಸಲಿ, ಅತ್ತ ಸಾಗಿಸಿದರೆ ಸಾಗಿಸಲಿ, ಅಭ್ಯಂತರವೇನೂ ಇಲ್ಲ. ದಾರಿಯನ್ನು ತೋರಿಸುವುವು ಮುಂದಿನ ಕುರಿಗಳು. ಧ್ಯೇಯವನ್ನು ತೋರಿಸುವುವು ಹಿಂದಿನ ಕುರಿಗಳು. ಈ ಶ್ರಮವಿಭಾಗದಿಂದ ಕುರಿಗಳ ಸಂಸಾರ ನಡೆದಿರುವುದು; ಅವುಗಳ ವಂಶಿಗರಾದ ನಮ್ಮಲ್ಲೂ ಈ ಗುಣವು ಬಂದಿದೆ, ಬಂದು ನಿಂದಿದೆ ಎಂದು ನಾವು ಅಭಿಮಾನದಿಂದ ಹೇಳುವೆವು. ನಮ್ಮ ಜೀವನದ ದಾರಿ ಸಾಗುವುದು ಹಿಂದಣವರ ಒತ್ತಡದಿಂದಲೆ ಅಲ್ಲವೆ? ಪುಣ್ಯಮಾಡಿದವರೆ ಪ್ರಾಣಿಗಳಲ್ಲಿ ಮಾನವರಾಗಿ ಹುಟ್ಟುವರೆಂದು ಪ್ರಾಚೀನ ಶಾಸ್ತ್ರಗಳು ಹೇಳದಿದ್ದಿಲ್ಲವೆಂದರೆ ನಾವೆಲ್ಲಿ ಮನುಷ್ಯರಾಗಿ ಹುಟ್ಟುತ್ತಿದ್ದೆವು? ಹಿಂದಣ ಹಿರಿಯರು ಹೇಳಿದಂತೆ ನಡೆದಿದ್ದಿಲ್ಲವೆಂದರೆ ನಾವೆಲ್ಲಿ ಬದುಕುತ್ತಿದ್ದೆವು? ಇಂದು ನಮ್ಮ ಧ್ಯೇಯವು ಹಿಂದಿನಿಂದ ನಡೆದು ಬಂದುದು, ಅದು ನೂಕಿದಂತೆ ಮತ್ತು ನೂಕಿದತ್ತ ನಡೆಯಲು ನಾವು ಯಾವಾಗಲೂ ಸಿದ್ಧರಿರುವೆವು. ಕುರಿಯು ನಮ್ಮ ಹಿರಿಯ, ಅವನ ಗುಡಿಗೆ ನಾವು ಕಳಸವನ್ನು ಕಟ್ಟಬೇಕಲ್ಲವೆ? ಅದಕಾಗಿ ದಾರಿಯನ್ನೂ ಧ್ಯೇಯವನ್ನೂ—ಎರಡನ್ನೂ—ನಾವು ಸ್ವಾರ್ಥತ್ಯಾಗದಿಂದ, ಶಿಸ್ತಿನ ಪ್ರೇಮದಿಂದ ನಮ್ಮ ಪ್ರಾಚೀನಶಾಸ್ತ್ರಗಳಿಗೆಯೆ ಒಪ್ಪಿಸಿಬಿಟ್ಟಿದ್ದೇವೆ. ನಮ್ಮ ಹಿಂಡುತನವನ್ನು ಕಾದುಕೊಂಡಿದ್ದೇವೆ, ಕತ್ತಲೆಯಾದರೂ ಇನ್ನೊಂದು ಹಿಂಡಿನಲ್ಲಿ ಸಿಕ್ಕುಬೀಳಲಿಕ್ಕಿಲ್ಲ. ವ್ಯಕ್ತಿಗೆ ಸ್ವಾತಂತ್ರ್ಯ ಬೇಲಿಕಟ್ಟಿದ ದಡ್ಡಿಯಲ್ಲಿ, ಬಯಲಬೆಳಕಿನ ದಾರಿಯಲ್ಲಿ ಅಲ್ಲ.

ಕುರಿಯು ವಿಶ್ವಾಂತರ್ಯಾಮಿ ಎಂದು ತೋರಿಸಲು ಇನ್ನೊಂದು ಶಾಸ್ತ್ರೀಯ ಕಾರಣವನ್ನು ತೋರಿಸಿಕೊಟ್ಟರೆ ಸಾಕು. ಹಿಂಡುಗೂಡಿಕೊಂಡು ನಡೆದರೂ, ಹಿಂದಿನವರ ಒತ್ತಡದಿಂದ ದಾರಿಯನ್ನು ಗೊತ್ತುಪಡಿಸಿದರೂ ಕುರಿಗೆ ಯಜಮಾನನೂ ಸುತ್ತಲು ನಾಯಿಗಳೂ ಬೇಕೇ ಬೇಕು. ಇಷ್ಟೊಂದು ಹಿಂಡಿನಲ್ಲಿ ನಡೆಯುವಾಗ ಕುರಿಗಳಿಗೆ ಹೆದರಿಕೆ ಏನಿದೆ ಎಂದು ಯಾರಾದರೂ ಕೇಳಬಹುದು. ಆದರೆ ಯಜಮಾನನಾಗಲಿ ನಾಯಿಗಳಾಗಲಿ ಇರುವುದು ಹೆದರಿಕೆಗಾಗಿ ಅಲ್ಲ, ಗೌರವಕ್ಕಾಗಿ; ಇಂದು ನಮಗಾದರೂ ಮುಂದಾಳುಗಳು ಬೇಕು. ಕುರಿಗಳಲ್ಲಿದ್ದ ಶಿಸ್ತಿನ ಪ್ರೇಮವಾದರೂ ನಮ್ಮಲ್ಲಿದೆ; ಯಜಮಾನನ ಉಸಿರು ಸೂಸಿದತ್ತ ಮರುಮಾತಿಲ್ಲದೆ ನಡೆಯುವುದು ಕುರಿಗಳ ಸ್ವಭಾವಗುಣ, ಮುಂದಾಳುವಿನ ಕೈಬೆರಳನ್ನು ಲೋಹಚುಂಬಕದಂತೆ ಅವಲಂಬಿಸಿ ನಡೆಯುವುದು ನಮ್ಮ ಸ್ವಭಾವಗುಣ. ನಮ್ಮ ಹಿತಕ್ಕಾಗಿ, ನಮ್ಮೆಲ್ಲರ ಕಾರ್ಯಭಾರವನ್ನು ಇಳಿಸುವುದಕ್ಕಾಗಿ ಇಷ್ಟಿದ್ದರೂ ನಮ್ಮ ಸೇವಕನಂತೆ ಹಿಂದಿನಿಂದ ನಡೆಯುವ ಯಜಮಾನನಿಗೆ ನಾವು ವಿಧೇಯತೆಯನ್ನು ತೋರಿಸಲೇಬೇಕಲ್ಲವೆ? ನಮ್ಮಿಂದ ಅವನ ಹೊಟ್ಟೆ ತುಂಬಬಹುದು, ಆದರೆ ಅವನ ಉದ್ದೇಶವು ಹಾಗಿರುವುದಿಲ್ಲ; ನಮ್ಮನು ಕತ್ತಲೆಯ ದಡ್ಡಿಯೊಳಗೆ ತುಂಬಬಹುದು, ಆದರೆ ಅದು ನಮ್ಮ ಸಂರಕ್ಷಣೆಗಾಗಿಯೆ; ಆದುದರಿಂದ ನಾವಾದರೂ ನಮ್ಮ ಮುಂದಾಳುವಿಗೆ ವಿಧೇಯರಾಗಿ ನಮ್ಮ ನಿಸ್ವಾರ್ಥ ಸೇವಕನಾದ ಅವನ ಮುಂದಿನಿಂದಲೆ ನಡೆಯುವೆವು. ಹಿಂದಿನಿಂದ ಅವನು ಪಡುತ್ತಿರುವ ಕಷ್ಟವನ್ನು ನಾವು ನೋಡುವುದಿಲ್ಲ, ಅವನು ಮಾಡುತ್ತಿರುವ ಸೇವೆಯನ್ನು ನೋಡುವಂತಿಲ್ಲ.

ತಾತ್ತ್ವಿಕದೃಷ್ಟಿಯಿಂದ, ತರ್ಕದಿಂದ, ವ್ಯವಹಾರದೃಷ್ಟಿಯಿಂದ, ಶಾಸ್ತ್ರೀಯದೃಷ್ಟಿಕೋಣದಿಂದ ಕುರಿಯು ನಮ್ಮೆಲ್ಲರಿಗೆ—ಅದೇಕೆ?—ನಿಖಿಲಜಡಾಜಡವಸ್ತುವಿಸ್ತಾರಾತ್ಮಕಪ್ರಪಂಚಕ್ಕೆ ಪಿತೃಸ್ಥಾನದಲ್ಲಿದೆ ಎಂದು ಸಿದ್ಧವಾಯಿತು. ಆದ್ದರಿಂದ ಕುರಿಯನ್ನು ಕುರಿತು ಮಾಡ

ತಕ್ಕ ನಮ್ಮ ಕರ್ತವ್ಯವೂ ಸಿದ್ಧವಾದಂತಾಯಿತು. ಮಾತೃದೇವೋ ಭವ, ಪಿತೃದೇವೋ ಭವ ಎಂಬ ಸಂದರ್ಭದಲ್ಲಿ ಕುರಿಯೆ ನಮ್ಮ ಮಾತೃ, ಕುರಿಯೆ ನಮ್ಮ ಪಿತೃ ಎಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು, ಕುರಿಯೆ ನಮಗೆ ದೇವಸಮಾನ ಎಂದು ಆಚರಿಸತಕ್ಕದ್ದು, ಅರ್ಥಾತ್ ಕಲ್ಲುದೇವರ ಭಜಿಸಿ ಕಲ್ಲಾಗುವುದನ್ನು ಬಿಟ್ಟು ಕುರಿ ದೇವರನ್ನು ಭಜಿಸಿ ಕುರಿಯಾಗಬಯಸಿ ಮೋಕ್ಷಸಾಧನೆಗಾಗಿ ಯತ್ನಿಸತಕ್ಕದ್ದು. ನಿಜವಾದ ದೇವನನ್ನು ಬಿಟ್ಟು ಅನ್ಯದೇವನನ್ನು ಪೂಜಿಸುವುದು ಪಾಪವಲ್ಲವೆ, ದೇವದ್ರೋಹವಲ್ಲವೆ? ಹಿಂದಣ ಬ್ರಾಹ್ಮಣರು ಕುರಿಯನ್ನು ಯಜ್ಞದಲ್ಲಿ ಭಜಿಸುತ್ತಿದ್ದರು, ಕ್ಷತ್ರಿಯರು ಪಾಕಗೃಹದಲ್ಲಿ ಕುರಿಯ ಅಧಿಷ್ಠಾನ ಮಾಡಿದ್ದರು, ವೈಶ್ಯರು ವ್ಯವಸಾಯದಲ್ಲಿ ಕುರಿಸೇವೆಯನ್ನು ಮಾಡುತ್ತಿದ್ದರು, ಶೂದ್ರರು ಬೆಳಗಿನಿಂದ ಸಂಜೆಯವರೆಗೆ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ದೇಹಪಾವಿತ್ರ್ಯವನ್ನು ತಂದುಕೊಳ್ಳುತ್ತಿದ್ದರು; ಎಂದರೆ ಹಿಂದಣ ಕಾಲದಲ್ಲಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಒಬ್ಬ ದೇವನ ಆರಾಧನೆಯನ್ನೆ ಮಾಡುತ್ತಿದ್ದರು. ಆ ದೇವನಾದರೂ ಅವರನ್ನು ಮೆಚ್ಚಿ ಸುಖಸಂತೋಷದಲ್ಲಿರಿಸುತ್ತಿದ್ದನು. ಇಂದು ಸಮಾಜದಲ್ಲಿ ಸ್ವಾಸ್ಥ್ಯವಿಲ್ಲ, ಐಕ್ಯವಿಲ್ಲ—ಯಾಕೆಂದರೆ ದೇವನು ನಮ್ಮ ಮೇಲೆ ಕುಪಿತನಾಗಿದ್ದಾನೆ; ಅವನನ್ನು ಮರೆತು ಬೇರೆಬೇರೆ ದೇವರುಗಳನ್ನು ಭಜಿಸುತ್ತಿದ್ದೇವೆ ಪಾಪಿಗಳಾದ ನಾವು! ಆದ್ದರಿಂದ ಇಂದಿನಿಂದ ನಾವೆಲ್ಲ ಕುರಿಯ ನಾಮಸ್ಮರಣೆಯನ್ನು ಮಾಡುವಾ, ಕುರಿಯ ಜಯಜಯಕಾರವನ್ನು ಉದ್ಘೋಷಿಸುವಾ, ಮೂಲೆಮೂಲೆಗೆ ಮನೆಮನೆಗೆ ಕುರಿಯ ಗುಡಿಗೋಪುರಗಳನ್ನು ನಿಲ್ಲಿಸುವಾ.

ಕುರಿಯ ಆರಾಧನೆಯನ್ನು ಮಾಡುವುದೆಂದರೇನು ಮತ್ತು ಹೇಗೆ ಎಂಬ ಸಂಶಯಗಳು ಅಜ್ಞಮಾನವರನ್ನಾವರಿಸುವುದು ಸಹಜವಿದೆ. ಸೋಹಂ ಬ್ರಹ್ಮ ಎಂಬ ತತ್ತ್ವವನ್ನನುಸರಿಸಿ ನಾವೇ ಕುರಿ ಎಂಬ ಯಾಥಾತ್ಮಿಕಜ್ಞಾನಸಂಪಾದನೆಯನ್ನು ಮಾಡಿಕೊಳ್ಳಬಹುದು, ಇಲ್ಲವೆ ದೇವನು ಈಶ ನಾವು ದಾಸ ಎಂಬ ಭಾವನೆಯಿಂದ ಕುರಿಯ ನಾಲ್ಕು ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಭಜಿಸಬಹುದು. ಇಲ್ಲವೆ—ಯೇ ಯಥಾ ಮಾಂ ಪ್ರಪದ್ಯಂತೇ ತಾನ್ ತಥೈವ ಭಜಾಮ್ಯಹಂ ಎಂದು ದೇವನೇ ಹೇಳಿದ್ದರಿಂದ ಹೆಚ್ಚಿನ ವಿಚಾರವಾದರೂ ಯಾಕೆ? ಇಂದು ನಾವೆಲ್ಲರೂ ಹಿಂಡುತನದಿಂದಿದ್ದೇವೆ, ಕುರಿಗುಣವನ್ನನುಕರಿಸಿ ಯಜ

ಮಾನನೊಬ್ಬನನ್ನು ಹಿಂಬಾಲಿಸುತ್ತೇವೆ, ಕ
ಸರಿಯಾದುದಲ್ಲವೆ ಎಂದು ಯಾರಾದರೂ
ತುಸುಮಟ್ಟಿಗೆ ಸರಿಯಾಗಿದೆ ಎಂದೇ ಹೇಳಬೇ
ಸಿನ ಮಾತನ್ನು ಮುಚ್ಚಿಟ್ಟು ಮನದ
ಮನಸಿನ ಮೋಹಲೋಭಗಳನ್ನು ಬದಿಗಿಟ್ಟು
ತಂದೆತಾಯಿಗಳನ್ನು, ಮನಸಿನ ವಿಚಾರ-
ಬದಿಗಿಟ್ಟು ಮುಂದಾಳುಗಳನ್ನು ಕುರಿಗಳಂತೆ
ಲಿಸುವೆವೇನೊ ನಿಜ. ಆದರೆ ಕುರಿಗಳಂತೆ
ಸುವೆವೆಂಬುದೆ ಇನ್ನೂ ನಮ್ಮ ಅಜ್ಞಾನ
ಪಾಪಪ್ರೇರಣೆ. ನಿಜವಾದ ಜ್ಞಾನವೆಂದ
ಆರಾಧನೆ ಎಂದರೆ ಸಾಕ್ಷಾತ್ ಕುರಿಗಳಾಗಿ
ನಿಜವಾಗಿ ಕುರಿಗಳೆ ಎಂಬ ಅರಿಕೆಯಿಂದಲೆ (
ಬ್ರಹ್ಮ ಸತ್ಯಂ ಜಗನ್ಮಿಥ್ಯಾ) ನಾವು ವ್ಯವಹ
ಯಬೇಕು. ಆದನೆಲ್ಲ ಬಿಟ್ಟುಕೊಟ್ಟು ಇಂದು
ಪಂಗಡಗಳನ್ನು ಬೇರೆಬೇರೆಯಾಗಿ ಹುಟ್ಟಿ
ವ್ಯಕ್ತಿಸ್ವಾತಂತ್ರ್ಯವಿರಬೇಕೆಂಬ ಪಾಪದ ವಿ
ದಲ್ಲಿ ಸಿಕ್ಕಿಕೊಂಡಿದ್ದೇವೆ; ಉದಾಹರಣಾರ್ಥವಾಗಿ
ಕವು ಬೇರೆಯಾದ ಪ್ರಾಂತವಾಗಬೇಕೆಂಬ
ಯವರಾಗಿದ್ದೇವೆ, ನಿಜವಾಗಿ ಕುರಿತನದಿಂದ
ಕುರಿಗಳಾಗಿ) ನಾವು ಭಾರತದ ಹಿಂಡಿನೊಳಗೆ
ಹಿಂಡಿನ ಎಲ್ಲ ಕುರಿಗಳಂತೆ ಬ್ಯಾ ಎಂಬ ಭಾಷೆ
ಕಲಿಯತಕ್ಕದ್ದು (ಇಲ್ಲವಾದರೆ ಯಜಮಾನ
ನಮಗೆ ತಿಳಿಯದೆ ನಾವು ಅಡವಿಯಲ್ಲಿ ತೋಳಗಳ
ಬೇಕಾದೀತು). ಪೂರ್ವಜನ್ಮದ ಪುಣ್ಯದ
ಏನೊ, ನಮ್ಮ ಮುಂದಾಳುಗಳಿಗೆ ಮಾತ್ರ
ತೋಚಿದೆ, ಯಾಥಾತ್ಮಿಕ ಜ್ಞಾನಸಂಪಾದನೆಯ
ಲ್ಲರೂ ಕುರಿಗಳು ಎಂಬ ಜ್ಞಾನವನ್ನು ಅವ
ಉದಾಹರಣೆಯಿಂದಲೂ ಉಪದೇಶದಿಂದಲೂ ನ
ಕೊಡುತ್ತಿದ್ದಾರೆ. ಆದ್ದರಿಂದ ಅವರನ್ನೆ ನಾ
ಸೋಣ—ಎಂದರೆ ದೇವನನ್ನೆ ಆರಾಧಿಸಿದಂ
ವರ್ಷಕ್ಕೊಮ್ಮೆಯಾದರೂ ಕುರಿದೇವನ
ನೆರೆಯಿಸಬೇಕು, ಅಲ್ಲಿ ನಮ್ಮ ಮುಂದಾಳುಗ
ಯಿಸಬೇಕು. ನಾವೆಲ್ಲರೂ ಕುರಿಗಳೆ ಇದ್ದೇವೆ
ಅವರ ಪ್ರತೀತಿಗೆ ತಂದುಕೊಡಬೇಕು.
ಯನ್ನು ಬಿಟ್ಟು ದೇಶಸೇವೆ ಎಂಬುದಿಲ್ಲ.
ಮೇಲೆ ಹೇಳಿದಂತೆ ಕುರಿಪೂಜೆಯನ್ನು ಮಾಡು
ದೇಶಸೇವೆ ಎಂದು ಎಲ್ಲರೂ ತಿಳಿಯ

ತು ಸಮಾಜಸೇವೆಗೂ ಅನ್ವಯಿಸುವುದು. ರಾಜಕಾರಣ ಯಂತೆ ಸಮಾಜದ ವ್ಯವಹಾರದಲ್ಲೂ ನಾವು ಕುರಿಗಳು ಪರಮಾರ್ಥಜ್ಞಾನಕ್ಕಾಗಿ ಹೆಣಗಾಡಬೇಕು. ಕುರಿ ದ ಮೇಲೆ ನಮ್ಮ ವ್ಯವಹಾರದಲ್ಲಿ ಸ್ವಾರ್ಥತ್ಯಾಗವೆಂಬ ಣವು ತಾನಾಗಿಯೆ ನಮ್ಮಲ್ಲಿ ಮನೆಮಾಡುವುದು. ಕುರಿಗಳೆಂದು ಅರಿತುಕೊಂಡ ಮೇಲೆ ಉಣ್ಣೆಯನ್ನು ರಿಸುವಂತೆ ನಮ್ಮ ಕೋಟು-ಕಿಸೆಗಳನ್ನು ಯಜಮಾನನು ರಿಸಿದರೆ ನಮಗೆ ಖೇದವೆಂಬ ಮೋಹವು ಆವರಿಸು ಲ್ಲ, ದುಃಖವೂ ಎನಿಸುವುದಿಲ್ಲ; ಮೈದೊಗಲನ್ನು ಸುಲಿ ನಾವು ತಳಮಳಿಸುವ ಕಾರಣವಿಲ್ಲ; ಕುರಿಯಂತೆ ನದ ಆಹುತಿಕೊಟ್ಟು ಬಿದ್ದರೂ ನಮಗೂ ಮೋಕ್ಷ, ನ್ನು ಆಹುತಿಕೊಟ್ಟವರಿಗೂ ಮೋಕ್ಷ ಎಂಬುದನ್ನು ಯುವಂತಿಲ್ಲ.

ಆದ್ದರಿಂದ, ಎಲೈ ಮಾನವಮಾತ್ರರಿರಾ, ನೀವೆಲ್ಲರೂ ಕ್ಷಣದಲ್ಲಿ ಕುರಿಗಳಾಗಿರಿ—ಅಥವಾ 'ಆಗಿರಿ' ಅನ್ನುವು ವಿಕೆ?— ನೀವೆಲ್ಲರೂ ಕುರಿಗಳೆ ಇರುವಿರಿ, ಆದರೆ ಮಾಯೆ ಲ್ಲಿ ಸಿಲುಕಿ ಕುರಿಗಳಲ್ಲವೆಂದು ತಿಳಿದಿದ್ದೀರಿ. ಇನ್ನು ವಾದರೂ ನೀವೆಲ್ಲರೂ ಕುರಿಗಳೆಂಬ ಯಾಥಾತ್ಮಿಕ ನವನ್ನು ದೊರಕಿಸಿರಿ, ಮೋಕ್ಷ ದೊರಕಿಸಲು ಸಜ್ಜಾಗಿ ರಿ, ಉಣ್ಣೆ ಕತ್ತರಿಸಲು ಯಜಮಾನನು ಸಿದ್ಧನಾಗಿ ನೆ, ಪ್ರಾಣದ ಆಹುತಿಯನ್ನು (ನಿಮ್ಮದು ಪ್ರಾಣ) ಸಲು ಪೂಜಾರಿಯಾದ ಮುಂದಾಳು ತವಕಪಡುತ್ತಿ ನೆ. ಕಾರಣ, ಏಳಿರಿ! ಎಚ್ಚರಾಗಿರಿ! ಬ್ಯಾ ಎನ್ನಿರಿ! ದ್ದು ಹಿಂಡುಗೂಡಿರಿ! ಇಲ್ಲವಾದರೆ ಬಯಲಬೀದಿಯಲ್ಲಿ ಮ್ಮನ್ನು ಕಾಯುವರಾರು? ಕತ್ತಲೆಯಾದಾಗ ದಡ್ಡಿಯೊ ನಿಮ್ಮನ್ನು ಭದ್ರವಾಗಿ ಇರಿಸುವವರು ಯಾರು?

ವಿ.ಸೂ. ಈ ಸಂದರ್ಭದಲ್ಲಿ ನನ್ನ ಗೆಳೆಯನು ಒಂದೆರಡು ಮಾತುಗಳನ್ನು ನನ್ನ ಮುಖಾಂತರವಾಗಿ ತಮ್ಮೆಲ್ಲರ ಲಕ್ಷ್ಯಕ್ಕೆ ತರಬೇಕೆಂದೆಣಿಸಿದ್ದಾನೆ. (೧) ಹಿಂದು ಮಹಾಸಭೆಯ ಕೆಲವು ಮುಂದಾಳುಗಳು ಆತ್ಮ ಸಾಮರ್ಥ್ಯಕ್ಕಾಗಿ ಕುರಿಯನ್ನೆ ಭಜಿಸಬೇಕೆಂದಿದ್ದಾ ರಂತೆ, ರಾಷ್ಟ್ರೀಯ ಸಭೆಯವರು 'ಸ್ವದೇಶಿ ಕುರಿಗಳಿ ದ್ದರೆ ನಾವು ಪ್ರತ್ಯಕ್ಷವಾಗಿ ವಿರೋಧಿಸಲಿಕ್ಕಿಲ್ಲ' ಎಂದಿದ್ದಾರಂತೆ, ಕರ್ನಾಟಕ ಏಕೀಕರಣಸಭೆಯ ವರು 'ಕನ್ನಡ ಕುರಿಗಳೆ ಇರಬೇಕೆಂ'ದು ಹಟ ತೊಟ್ಟಿದ್ದಾರಂತೆ, ನಮ್ಮ ಮುಂದಾಳುಗಳು 'ಸಜಾ ತೀಯ ಕುರಿಗಳೆ ಇರಬೇಕು' ಎಂದು ಸಾಧಿಸಿದ್ದಾ ರಂತೆ! ಆದರೆ ಈ ಒಳಜಗಳದಲ್ಲಿ ಸಿಕ್ಕಿಬೀಳಬಾರ ದೆಂದು ನನ್ನ ಗೆಳೆಯನು ಎಚ್ಚರಿಕೆಯನ್ನು ಕೊಟ್ಟಿ ದ್ದಾನೆ. (೨) ರಾಷ್ಟ್ರೀಯ ನಿಶಾನೆಯ ಮೇಲೆ ಕುರಿಯ ಚಿತ್ರವಿರಬೇಕೆಂದು ನನ್ನ ಗೆಳೆಯನ ಸಲಹೆ. ಚರಕಾಕಿಂತ ಕುರಿಯು ಹೆಚ್ಚು ಬೆಚ್ಚನ್ನ ಬಟ್ಟೆ ಯನ್ನು ಕೊಡುವುದಿಲ್ಲವೆ—ಎಂದು ಕೇಳಿದ್ದಾನೆ. (೩) ಸದ್ಯಕ್ಕಿದ್ದ ಗುಡಿಗಳಲ್ಲಿ ಕುರಿಮೂರ್ತಿಯ ಪ್ರತಿ ಷ್ಠಾಪನೆಯನ್ನು ಮಾಡಬೇಕೆಂದೂ, ಈಗಿದ್ದ ದೇವನು ಅಟ್ಟ ಅಡಿಗೆಯ ನೈವೇದ್ಯವನ್ನೆ ಬೇಡುವು ದರಿಂದ ಮೊದಲೇ ಬಡವರಾದ ನಮ್ಮ ಅನ್ನದಲ್ಲಿ ಇನ್ನೂ ಕಡಮೆಯಾಗುವುದೆಂದೂ, ಗಿಡ-ಗಂಟೆ ಗಳನ್ನು ತಿನ್ನುವ ಕುರಿ ದೇವನಿಂದ ಈ ತೊಂದರೆ ನಮಗಿಲ್ಲವೆಂದೂ ಇನ್ನೊಂದು ಸಲಹೆ. (೪) ಕೊನೆಯ ದಾಗಿ, ಈಗಿದ್ದ ದೇವರಿಗೆಲ್ಲ ಜಾತಿಮತಪಂಥಗಳಿವೆ. ಅದರಿಂದ ನಿಜವಾದ ಜ್ಞಾನವು ದೊರಕದು, ಕುರಿ ದೇವನಿಗೆ ಜಾತಿಯಿಲ್ಲ, ನಮ್ಮೆಲ್ಲರ ಜೀವನದ ಪ್ರತೀಕವಾಗಿದ್ದವನು ಅವನೊಬ್ಬನೆ, ಆದುದರಿಂದ ಕುರಿಯ ಪ್ರತಿಷ್ಠಾಪನೆ ಶೀಘ್ರದಲ್ಲಿಯೆ ಜರುಗಬೇಕು, ಇಲ್ಲವಾದರೆ ವಿಶ್ವದ ಪ್ರಳಯವಾದೀತು, ಎಂದರೆ ಈಗಿದ್ದ ದೇವರನ್ನು ಭಜಿಸುವವರಿಗೆ ಅನರ್ಥ ಒದ ಗೀತು; ಜರ್ಮನಿ-ಜಪಾನ-ಇಟಲಿಗಳನ್ನು ಗೆದ್ದ ಕುರಿದೇವನು ನಮ್ಮ ಉದ್ಧಾರಕ್ಕಾಗಿ ಇಷ್ಟರಲ್ಲಿಯೆ ಬರುವವನಿದ್ದಾನೆ. ಆದ್ದರಿಂದ, ನಮ್ಮ ಕುರಿತನದ ಜ್ಞಾನವು ಶೀಘ್ರವಾಗಿ ಆದಷ್ಟು ಶುಭಕರವಂತೆ. ವಂ(ಬಂ)ದೇ ಕುರಿಯಂ....

ತಕ್ಕ ನಮ್ಮ ಕರ್ತವ್ಯವೂ ಸಿದ್ಧವಾದಂತಾಯಿತು. ಮಾತೃದೇವೋ ಭವ, ಪಿತೃದೇವೋ ಭವ ಎಂಬ ಸಂದರ್ಭದಲ್ಲಿ ಕುರಿಯೆ ನಮ್ಮ ಮಾತೃ, ಕುರಿಯೆ ನಮ್ಮ ಪಿತೃ ಎಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು, ಕುರಿಯೆ ನಮಗೆ ದೇವಸಮಾನ ಎಂದು ಆಚರಿಸತಕ್ಕದ್ದು, ಅರ್ಥಾತ್ ಕಲ್ಲುದೇವರ ಭಜಿಸಿ ಕಲ್ಲಾಗುವುದನ್ನು ಬಿಟ್ಟು ಕುರಿ ದೇವರನ್ನು ಭಜಿಸಿ ಕುರಿಯಾಗಬಯಸಿ ಮೋಕ್ಷಸಾಧನೆಗಾಗಿ ಯತ್ನಿಸತಕ್ಕದ್ದು. ನಿಜವಾದ ದೇವನನ್ನು ಬಿಟ್ಟು ಅನ್ಯದೇವನನ್ನು ಪೂಜಿಸುವುದು ಪಾಪವಲ್ಲವೆ, ದೇವ ದ್ರೋಹವಲ್ಲವೆ? ಹಿಂದಣ ಬ್ರಾಹ್ಮಣರು ಕುರಿಯನ್ನು ಯಜ್ಞದಲ್ಲಿ ಭಜಿಸುತ್ತಿದ್ದರು, ಕ್ಷತ್ರಿಯರು ಪಾಕಗೃಹದಲ್ಲಿ ಕುರಿಯ ಅಧಿಷ್ಠಾನ ಮಾಡಿದ್ದರು, ವೈಶ್ಯರು ವ್ಯವಸಾಯದಲ್ಲಿ ಕುರಿಸೇವೆಯನ್ನು ಮಾಡುತ್ತಿದ್ದರು, ಶೂದ್ರರು ಬೆಳಗಿನಿಂದ ಸಂಜೆಯವರೆಗೆ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ದೇಹಪಾವಿತ್ರ್ಯವನ್ನು ತಂದುಕೊಳ್ಳುತ್ತಿದ್ದರು; ಎಂದರೆ ಹಿಂದಣ ಕಾಲದಲ್ಲಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಒಬ್ಬ ದೇವನ ಆರಾಧನೆಯನ್ನೆ ಮಾಡುತ್ತಿದ್ದರು. ಆ ದೇವನಾದರೂ ಅವರನ್ನು ಮೆಚ್ಚಿ ಸುಖಸಂತೋಷದಲ್ಲಿರಿಸುತ್ತಿದ್ದನು. ಇಂದು ಸಮಾಜದಲ್ಲಿ ಸ್ವಾಸ್ಥ್ಯವಿಲ್ಲ, ಐಕ್ಯವಿಲ್ಲ—ಯಾಕೆಂದರೆ ದೇವನು ನಮ್ಮ ಮೇಲೆ ಕುಪಿತನಾಗಿದ್ದಾನೆ; ಅವನನ್ನು ಮರೆತು ಬೇರೆಬೇರೆ ದೇವರುಗಳನ್ನು ಭಜಿಸುತ್ತಿದ್ದೇವೆ ಪಾಪಿಗಳಾದ ನಾವು! ಆದ್ದರಿಂದ ಇಂದಿನಿಂದ ನಾವೆಲ್ಲ ಕುರಿಯ ನಾಮಸ್ಮರಣೆಯನ್ನು ಮಾಡುವಾ, ಕುರಿಯ ಜಯಜಯಕಾರವನ್ನು ಉದ್ಘೋಷಿಸುವಾ, ಮೂಲೆ ಮೂಲೆಗೆ ಮನೆಮನೆಗೆ ಕುರಿಯ ಗುಡಿಗೋಪುರಗಳನ್ನು ನಿಲ್ಲಿಸುವಾ.

ಕುರಿಯ ಆರಾಧನೆಯನ್ನು ಮಾಡುವುದೆಂದರೇನು ಮತ್ತು ಹೇಗೆ ಎಂಬ ಸಂಶಯಗಳು ಅಜ್ಞಮಾನವರನ್ನಾವರಿಸುವುದು ಸಹಜವಿದೆ. ಸೋಹಂ ಬ್ರಹ್ಮ ಎಂಬ ತತ್ತ್ವವನ್ನನುಸರಿಸಿ ನಾವೇ ಕುರಿ ಎಂಬ ಯಾಥಾತ್ಮಿಕಜ್ಞಾನ ಸಂಪಾದನೆಯನ್ನು ಮಾಡಿಕೊಳ್ಳಬಹುದು, ಇಲ್ಲವೆ ದೇವನು ಈಶ ನಾವು ದಾಸ ಎಂಬ ಭಾವನೆಯಿಂದ ಕುರಿಯ ನಾಲ್ಕು ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಭಜಿಸಬಹುದು. ಇಲ್ಲವೆ—ಯೇ ಯಥಾ ಮಾಂ ಪ್ರಪದ್ಯಂತೇ ತಾನ್ ತಥೈವ ಭಜಾಮ್ಯಹಂ ಎಂದು ದೇವನೇ ಹೇಳಿದ್ದರಿಂದ ಹೆಚ್ಚಿನ ವಿಚಾರವಾದರೂ ಯಾಕೆ? ಇಂದು ನಾವೆಲ್ಲರೂ ಹಿಂಡುತನದಿಂದಿದ್ದೇವೆ, ಕುರಿಗುಣವನ್ನನುಕರಿಸಿ ಯಜ

ಮಾನನೊಬ್ಬನನ್ನು ಹಿಂಬಾಲಿಸುತ್ತೇವೆ, ... ಸರಿಯಾದುದಲ್ಲವೆ ಎಂದು ಯಾರಾದರೂ ... ತುಸುಮಟ್ಟಿಗೆ ಸರಿಯಾಗಿದೆ ಎಂದೇ ಹೇಳಬೇ... ಸಿನ ಮಾತನ್ನು ಮುಚ್ಚಿಟ್ಟು ಮಠದ ಸ್ವಾ... ಮನಸಿನ ಮೋಹಲೋಭಗಳನ್ನು ಬದಿಗಿಟ್ಟು ... ತಂದೆತಾಯಿಗಳನ್ನು, ಮನಸಿನ ವಿಚಾರ-ವಿ... ಬದಿಗಿಟ್ಟು ಮುಂದಾಳುಗಳನ್ನು ಕುರಿಗಳಂತೆ ... ಲಿಸುವೆವೇನೊ ನಿಜ. ಆದರೆ ಕುರಿಗಳಂತೆ ... ಸುವೆವೆಂಬುದೆ ಇನ್ನೂ ನಮ್ಮ ಅಜ್ಞಾನವಾ... ಪಾಪಪ್ರೇರಣೆ. ನಿಜವಾದ ಜ್ಞಾನವೆಂದರೆ, ... ಆರಾಧನೆ ಎಂದರೆ ಸಾಕ್ಷಾತ್ ಕುರಿಗಳಾಗಿ... ನಿಜವಾಗಿ ಕುರಿಗಳೆ ಎಂಬ ಅರಿಕೆಯಿಂದಲೆ (... ಬ್ರಹ್ಮ ಸತ್ಯಂ ಜಗನ್ಮಿಥ್ಯಾ) ನಾವು ವ್ಯವಹಾ... ಯಬೇಕು. ಅದನೆಲ್ಲ ಬಿಟ್ಟುಕೊಟ್ಟು ಇಂದು ... ಪಂಗಡಗಳನ್ನು ಬೇರೆಬೇರೆಯಾಗಿ ಹುಟ್ಟಿಸಿ... ವ್ಯಕ್ತಿಸ್ವಾತಂತ್ರ್ಯವಿರಬೇಕೆಂಬ ಪಾಪದ ವಿ...ದಲ್ಲಿ ಸಿಕ್ಕಿಕೊಂಡಿದ್ದೇವೆ; ಉದಾಹರಣಾರ್ಥವಾಗಿ ... ಕವು ಬೇರೆಯಾದ ಪ್ರಾಂತವಾಗಬೇಕೆಂಬ ... ಯವರಾಗಿದ್ದೇವೆ, ನಿಜವಾಗಿ ಕುರಿತನದಿಂದ ... ಕುರಿಗಳಾಗಿ) ನಾವು ಭಾರತದ ಹಿಂಡಿನೊಳಗೆ ... ಹಿಂಡಿನ ಎಲ್ಲ ಕುರಿಗಳಂತೆ ಬ್ಯಾ ಎಂಬ ಭಾಷೆ... ಕಲಿಯತಕ್ಕದು (ಇಲ್ಲವಾದರೆ ಯಜಮಾನ... ನಮಗೆ ತಿಳಿಯದೆ ನಾವು ಅಡವಿಯಲ್ಲಿ ತೋಳಗಳ... ಬೇಕಾದೀತು). ಪೂರ್ವಜನ್ಮದ ಪುಣ್ಯದ ... ಪನೊ, ನಮ್ಮ ಮುಂದಾಳುಗಳಿಗೆ ಮಾತ್ರ ... ತೋಚಿದೆ, ಯಾಥಾತ್ಮಿಕ ಜ್ಞಾನಸಂಪಾದನೆಯ... ಲ್ಲರೂ ಕುರಿಗಳು ಎಂಬ ಜ್ಞಾನವನ್ನು ಅವ... ಉದಾಹರಣೆಯಿಂದಲೂ ಉಪದೇಶದಿಂದಲೂ ನ... ಕೊಡುತ್ತಿದ್ದಾರೆ. ಆದ್ದರಿಂದ ಅವರನ್ನೆ ನಾವೆ... ಸೋಣ—ಎಂದರೆ ದೇವನನ್ನೆ ಆರಾಧಿಸಿದಂತೆ... ಪರ್ಷಕ್ಕೊನ್ಮೆಯಾದರೂ ಕುರಿದೇವನ ... ನೆರೆಯಿಸಬೇಕು, ಅಲ್ಲಿ ನಮ್ಮ ಮುಂದಾಳುಗಳ... ಯಿಸಬೇಕು. ನಾವೆಲ್ಲರೂ ಕುರಿಗಳೆ ಇದ್ದೇವೆ ... ಅವರ ಪ್ರತೀತಿಗೆ ತಂದುಕೊಡಬೇಕು. ... ಯನ್ನು ಬಿಟ್ಟು ದೇಶಸೇವೆ ಎಂಬುದಿಲ್ಲ. ... ಮೇಲೆ ಹೇಳಿದಂತೆ ಕುರಿಪೂಜೆಯನ್ನು ಮಾಡ... ನಿಜ ದೇಶಸೇವೆ ಎಂದು ಎಲ್ಲರೂ ತಿಳಿಯ...

ತು ಸಮಾಜಸೇವೆಗೂ ಅನ್ವಯಿಸುವುದು. ರಾಜಕಾರಣ
ಯಂತೆ ಸಮಾಜದ ವ್ಯವಹಾರದಲ್ಲೂ ನಾವು ಕುರಿಗಳು
ಪರಮಾರ್ಥಜ್ಞಾನಕ್ಕಾಗಿ ಹೆಣಗಾಡಬೇಕು. ಕುರಿ
ದ ಮೇಲೆ ನಮ್ಮ ವ್ಯವಹಾರದಲ್ಲಿ ಸ್ವಾರ್ಥತ್ಯಾಗವೆಂಬ
ಣವು ತಾನಾಗಿಯೆ ನಮ್ಮಲ್ಲಿ ಮನೆಮಾಡುವುದು.
ವು ಕುರಿಗಳೆಂದು ಅರಿತುಕೊಂಡ ಮೇಲೆ ಉಣ್ಣೆಯನ್ನು
ರಿಸುವಂತೆ ನಮ್ಮ ಕೋಟು-ಕಿಸೆಗಳನ್ನು ಯಜಮಾನನು
ರಿಸಿದರೆ ನಮಗೆ ಖೇದವೆಂಬ ಮೋಹವು ಆವರಿಸು
ಲ್ಲ, ದುಃಖವೂ ಎನಿಸುವುದಿಲ್ಲ; ಮೈದೊಗಲನ್ನು ಸುಲಿ
ನಾವು ತಳಮಳಿಸುವ ಕಾರಣವಿಲ್ಲ; ಕುರಿಯಂತೆ
ತದ ಆಹುತಿಕೊಟ್ಟು ಬಿದ್ದರೂ ನಮಗೂ ಮೋಕ್ಷ,
ಮ್ಮನ್ನು ಆಹುತಿಕೊಟ್ಟವರಿಗೂ ಮೋಕ್ಷ ಎಂಬುದನ್ನು
ಯುವಂತಿಲ್ಲ.

ಆದ್ದರಿಂದ, ಎಲೈ ಮಾನವಮಾತ್ರರಿರಾ, ನೀವೆಲ್ಲರೂ
ಕ್ಷಣದಲ್ಲಿ ಕುರಿಗಳಾಗಿರಿ—ಅಥವಾ ‘ ಆಗಿರಿ ’ ಅನ್ನುವು
?— ನೀವೆಲ್ಲರೂ ಕುರಿಗಳೆ ಇರುವಿರಿ, ಆದರೆ ಮಾಯೆ
ಲ್ಲಿ ಸಿಲುಕಿ ಕುರಿಗಳಲ್ಲವೆಂದು ತಿಳಿದಿದ್ದೀರಿ. ಇನ್ನು
ಂದಾದರೂ ನೀವೆಲ್ಲರೂ ಕುರಿಗಳೆಂಬ ಯಾಥಾತ್ಮಿಕ
ನವನ್ನು ದೊರಕಿಸಿರಿ, ಮೋಕ್ಷ ದೊರಕಿಸಲು ಸಜ್ಜಾಗಿ
ರಿ, ಉಣ್ಣೆ ಕತ್ತರಿಸಲು ಯಜಮಾನನು ಸಿದ್ಧನಾಗಿ
ನೆ, ಪ್ರಾಣದ ಆಹುತಿಯನ್ನು (ನಿಮ್ಮದು ಪ್ರಾಣ)
ತಲು ಪೂಜಾರಿಯಾದ ಮುಂದಾಳು ತವಕಪಡುತ್ತಿ
ನೆ. ಕಾರಣ, ಏಳಿರಿ! ಎಚ್ಚರಾಗಿರಿ! ಬ್ಯಾ ಎನ್ನಿರಿ!
ದ ಹಿಂಡುಗೂಡಿರಿ! ಇಲ್ಲವಾದರೆ ಬಯಲಬೀದಿಯಲ್ಲಿ
ಮ್ಮನ್ನು ಕಾಯುವವರಾರು? ಕತ್ತಲೆಯಾದಾಗ ದಡ್ಡಿಯೊ
ನಿಮ್ಮನ್ನು ಭದ್ರವಾಗಿ ಇರಿಸುವವರು ಯಾರು?

ವಿ. ಸೂ. ಈ ಸಂದರ್ಭದಲ್ಲಿ ನನ್ನ ಗೆಳೆಯನು ಒಂದೆರಡು ಮಾತುಗಳನ್ನು ನನ್ನ ಮುಖಾಂತರವಾಗಿ ತಮ್ಮೆಲ್ಲರ ಲಕ್ಷ್ಯಕ್ಕೆ ತರಬೇಕೆಂದೆಣಿಸಿದ್ದಾನೆ. (೧) ಹಿಂದು ಮಹಾಸಭೆಯ ಕೆಲವು ಮುಂದಾಳುಗಳು ಆತ್ಮ ಸಾಮರ್ಥ್ಯಕ್ಕಾಗಿ ಕುರಿಯನ್ನೆ ಭಜಿಸಬೇಕೆಂದಿದ್ದಾರಂತೆ, ರಾಷ್ಟ್ರೀಯ ಸಭೆಯವರು ‘ ಸ್ವದೇಶಿ ಕುರಿಗಳಿದ್ದರೆ ನಾವು ಪ್ರತ್ಯಕ್ಷವಾಗಿ ವಿರೋಧಿಸಲಿಕ್ಕಿಲ್ಲ ’ ಎಂದಿದ್ದಾರಂತೆ, ಕರ್ನಾಟಕ ಏಕೀಕರಣಸಭೆಯವರು ‘ ಕನ್ನಡ ಕುರಿಗಳೆ ಇರಬೇಕೆಂ ’ದು ಹಟ ತೊಟ್ಟಿದ್ದಾರಂತೆ; ನಮ್ಮ ಮುಂದಾಳುಗಳು ‘ ಸಜಾತೀಯ ಕುರಿಗಳೆ ಇರಬೇಕು ’ ಎಂದು ಸಾಧಿಸಿದ್ದಾರಂತೆ! ಆದರೆ ಈ ಒಳಜಗಳದಲ್ಲಿ ಸಿಕ್ಕಿಬೀಳಬಾರದೆಂದು ನನ್ನ ಗೆಳೆಯನು ಎಚ್ಚರಿಕೆಯನ್ನು ಕೊಟ್ಟಿದ್ದಾನೆ. (೨) ರಾಷ್ಟ್ರೀಯ ನಿಶಾನೆಯ ಮೇಲೆ ಕುರಿಯ ಚಿತ್ರವಿರಬೇಕೆಂದು ನನ್ನ ಗೆಳೆಯನ ಸಲಹೆ. ಚರಕಾಕಿಂತ ಕುರಿಯು ಹೆಚ್ಚು ಬೆಚ್ಚನ್ನ ಬಟ್ಟೆಯನ್ನು ಕೊಡುವುದಿಲ್ಲವೆ—ಎಂದು ಕೇಳಿದ್ದಾನೆ. (೩) ಸದ್ಯಕ್ಕಿದ್ದ ಗುಡಿಗಳಲ್ಲಿ ಕುರಿಮೂರ್ತಿಯ ಪ್ರತಿಷ್ಠಾಪನೆಯನ್ನು ಮಾಡಬೇಕೆಂದೂ, ಈಗಿದ್ದ ದೇವನು ಅಟ್ಟ ಅಡಿಗೆಯ ನೈವೇದ್ಯವನ್ನೆ ಬೇಡುವುದರಿಂದ ಮೊದಲೇ ಬಡವರಾದ ನಮ್ಮ ಅನ್ನದಲ್ಲಿ ಇನ್ನೂ ಕಡಮೆಯಾಗುವುದೆಂದೂ, ಗಿಡ-ಗಂಟಿಗಳನ್ನು ತಿನ್ನುವ ಕುರಿ ದೇವನಿಂದ ಈ ತೊಂದರೆ ನಮಗಿಲ್ಲವೆಂದೂ ಇನ್ನೊಂದು ಸಲಹೆ. (೪) ಕೊನೆಯದಾಗಿ, ಈಗಿದ್ದ ದೇವರಿಗೆಲ್ಲ ಜಾತಿಮತಪಂಥಗಳಿವೆ. ಅದರಿಂದ ನಿಜವಾದ ಜ್ಞಾನವು ದೊರಕದು, ಕುರಿದೇವನಿಗೆ ಜಾತಿಯಿಲ್ಲ, ನಮ್ಮೆಲ್ಲರ ಜೀವನದ ಪ್ರತೀಕವಾಗಿದ್ದವನು ಅವನೊಬ್ಬನೆ, ಆದುದರಿಂದ ಕುರಿಯ ಪ್ರತಿಷ್ಠಾಪನೆ ಶೀಘ್ರದಲ್ಲಿಯೆ ಜರುಗಬೇಕು, ಇಲ್ಲವಾದರೆ ವಿಶ್ವದ ಪ್ರಳಯವಾದೀತು, ಎಂದರೆ ಈಗಿದ್ದ ದೇವರನ್ನು ಭಜಿಸುವವರಿಗೆ ಅನರ್ಥ ಒದಗೀತು; ಜರ್ಮನಿ-ಜಪಾನ-ಇಟಲಿಗಳನ್ನು ಗೆದ್ದ ಕುರಿದೇವನು ನಮ್ಮ ಉದ್ಧಾರಕ್ಕಾಗಿ ಇಷ್ಟರಲ್ಲಿಯೆ ಬರುವವನಿದ್ದಾನೆ. ಆದ್ದರಿಂದ, ನಮ್ಮ ಕುರಿತನದ ಜ್ಞಾನವು ಶೀಘ್ರವಾಗಿ ಆದಷ್ಟು ಶುಭಕರವಂತೆ. ವಂ(ಬಂ)ದೇ ಕುರಿಯಂ....

ಐತಿಹಾಸಿಕ ಟಿಪ್ಪಣಿಯೊಂದು

ರನ್ನನ ಊರು ಮುಧೋಳ; ಬೆಳಗಲಿ ಅಲ್ಲ.

ಲೇಖಕರು: ಶ್ರೀಮಾನ್ ದೇಸಾಯಿ ಪಾಂಡುರಂಗರಾಯರು, ಎಂ. ಎ.

ಜಮಖಂಡಿಯ ಸಾಹಿತ್ಯಸಮ್ಮೇಲನದ ನಿಮಿತ್ತದಿಂದ ಖಂಡಿ ನಾಡಿನ ಚರಿತ್ರೆಯತ್ತ ಜನತೆಯ ಕುತೂಹಲವು ಗಿ ಒಲಿದಿತು. ಜಮಖಂಡಿ ಹಾಗೂ ನೆರೆಯ ಊರು ಐತಿಹ್ಯವನ್ನು ಅರಿತುಕೊಳ್ಳಲು ಜನರು ಎಳಸಿದರು. ತ್ರಿನ ಪರವಾಗಿಯೂ ಸ್ವಾಗತಸಮಿತಿಯ ಪರ ಯೂ ಪ್ರಕಟನೆಗಳು ಹೊರಟುವು. ಅವುಗಳಲ್ಲಿ ಮಹಾ ರನ್ನನ ಹುಟ್ಟಿದೂರ ವಿಷಯದಲ್ಲಿ ಒಂದು ಮಾತು ಮತ್ತೆ ಹೇಳಲಾಗಿದೆ: ರನ್ನನು ಹುಟ್ಟಿದ ಊರು ಗಲಿ ಎಂದು.

ಮಿಥ್ಯಾಜ್ಞಾನವು ಅಜ್ಞಾನಕ್ಕಿಂತ ಅಪಾಯಕರ. ತಿಳಿ ಒಂದು ಮಾತನ್ನು ಹೇಳಿಬಿಟ್ಟರೆ, ಅಜ್ಞಾನದ ಕತ್ತ ಲು ಕೂಡಲೆ ಹರಿದು ಹೋಗುವುದು. ಆದರೆ ಹುಸಿ ವನ್ನು ಕಳೆಯಲು ಮತ್ತೆ ಮತ್ತೆ ಹೋರಾಡಬೇಕಾಗು . ಹೀಗೆ ಹೋರಾಡಿ ಅದನ್ನು ತಳ್ಳಿ, ಅದರ ಸ್ಥಳದಲ್ಲಿ ದ ಬೀಜವನ್ನು ಬಿತ್ತಿ, ಬೆಳಸುವ ಪರಿಶ್ರಮ ಮಾಡ ಾಗುತ್ತದೆ. ರನ್ನನ ಹುಟ್ಟೂರಿನ ವಿಷಯದಲ್ಲಿ ಇದರ ಭವವು ಸಾಕಷ್ಟು ಬಂದುದಾಯಿತು. ಜಮಖಂಡಿಯ ಮ್ಮೇಲನ ಚಾಲಕರ ಪ್ರಕಟನೆಗಳು ಅಧಿಕೃತವೂ ವಿಶ್ವಾ ರ್ಹವೂ ಎಂದು ಜನತೆಯು ನಂಬುವುದು ಸ್ವಾಭಾವಿಕ. ರ ಮೂಲಕ ಎಲ್ಲರು ಬೆಳಗಲಿಯೆ ರನ್ನನ ಊರು ಎಂದು ಕೊಂಡಿರುವರು. ಸಾಮಾನ್ಯರಂತೂ ಸರಿಯೆ. ಬಲ್ಲ ಬಲ್ಲಸಾಹಿತಿಗಳೂ ಭ್ರಮಿಸಿರುವರು, ಸಂದೇಹಕ್ಕೆ ಕಿರುವರು. ಈಗ ಇದು ಯಥಾರ್ಥ, ಅದು ಅಯಥಾ ವೆಂದು ಇಷ್ಟು ಜನರಿಗೆ ತಿಳಿಪಡಿಸಿ ಅವರ ತಪ್ಪು ತಿಳಿ ಕೆಯನ್ನು ತಿದ್ದುವ ಬಗೆ ಹೇಗೆ ? ಈ ಭ್ರಮೆಯನ್ನು ಗಿಸುವುದೆಂತು ? ಆದರೂ ತಕ್ಕಷ್ಟಾದರೂ ಈ ಕೆಲಸ ಮಾಡಲೇಬೇಕಾದುದು. ಅದಕ್ಕಾಗಿ ಈ ಬರೆಹ ಬರೆಯಬೇಕಾಗಿದೆ. ಬರೆದು ಅಸತ್ಯವನ್ನು ಖಂಡಿಸಿ ಸಿದ್ಧಾಂತವನ್ನು ಸಾರಿಸಾರಿ ಹೇಳಬೇಕಾಗಿದೆ.

ರನ್ನನ ಕಾಲ ಹತ್ತನೆಯ ಶತಮಾನ. ಆತನು ಬರೆದ ಡು ಕಾವ್ಯಗಳು ದೊರೆತಿವೆ. ೧ ಗದಾಯುದ್ಧ ೨ ಅಜಿತ ಥಪುರಾಣ. ಅಜಿತನಾಥಪುರಾಣದ ಕೊನೆಯಲ್ಲಿ ರನ್ನನು ತನ್ನ ಚರಿತ್ರೆಗೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ತಾನೆ ಹೇಳಿಕೊಂಡಿದ್ದಾನೆ. ಅವುಗಳು ಹೀಗೆ:—

" ಪ್ರಸಿದ್ಧ ಕವಿಯಾದ ಕವಿರತ್ನನು ಬೆಳುಗರೆ ನಾಡಿನಲ್ಲಿ ಬಳೆಗಾರ ಕುಲದಲ್ಲಿ ಹುಟ್ಟಿದನು. ೪೩

" ಹೆಸರಾದ ಗಟ್ಟಗೆಯೂ (ಘಟಪ್ರಭಾ ನದಿಯೂ) . ಪೆರ್ದೊರೆಯೂ (ಕೃಷ್ಣೆಯೂ) ಹರಿದಲ್ಲಿ, ತದ್ದವಾಡಿಯ [ವಿಜಾಪುರ ಪ್ರಾಂತದ] ದಕ್ಷಿಣಕ್ಕೆ, ತೊರಗಲ್ಲ ಉತ್ತರಕ್ಕೆ ಬಹು ಸುಖ ಕರವಾದ ಬೆಳುಗಲಿ ದೇಶವಿರುವುದು. ೪೪

" ಐನೂರು ಊರುಗಳುಳ್ಳ ಬೆಳುಗಲಿ ನಾಡಿನಲ್ಲಿ ಮಿಗಿಲಾದ ಎಪ್ಪತ್ತು ಊರುಗಳುಳ್ಳ ಜಂಬು ಖಂಡಿಗೆ [ಜಮಖಂಡಿಗೆ] ತಿಳಕದಂತೆ ಒಪ್ಪುವ ಮುದುವೊಳಲಲ್ಲಿ [ಮುಧೋಳಲ್ಲಿ] ಹುಟ್ಟ ಕವಿರತ್ನನು ಸುಪುತ್ರನೆನಿಸಿದನು." ೪೫

—ಅಜಿತನಾಥಪುರಾಣ, ಆಶ್ವಾಸ ೧೨.

ಇಲ್ಲಿ ೪೩,೪೪ನೆಯ ಪದ್ಯಗಳಲ್ಲಿಯ ಬೆಳುಗರೆ, ಬೆಳುಗಲಿ ಇವೆರಡೂ ಒಂದೇ ಆಗಿವೆ. ಹೀಗೆ ರಕಾರಕ್ಕೆ ಲಕಾರ ಬರುವುದುಂಟು. ಉದಾಹರಣಾರ್ಥ: ತೊರಗರೆ, ತೊರಗಲೆ ಎಂದು ತೊರಗಲ್ಲನ್ನು ಕುರಿತು ಹೇಳಲಾಗಿದೆ.

ಇದರ ಮೇಲಿಂದ ರನ್ನನು ಹುಟ್ಟಿದುದು ಮುದುವೊಳಲಲ್ಲಿ ಎಂದರೆ ಈಗಿನ ಮುಧೋಳಲ್ಲಿ ಎಂಬುದು ಸುಸ್ಪಷ್ಟವಿದೆ. ಬೆಳಗಲಿಯಲ್ಲಿ ಆತನು ಹುಟ್ಟಲಿಲ್ಲ. ಬೆಳಗಲಿಯು ಆತನ ಹುಟ್ಟಿದ ಊರು ಅಲ್ಲ.

ಹಿಂದಿನ ಕಾಲದಲ್ಲಿ ರಾಜಕೀಯ ಪರಿಸ್ಥಿತಿಯಂತೆ ರಾಜಕೀಯ ವಿಭಾಗಗಳಾದರೂ ಈಗಿನದಕ್ಕಿಂತ ಬೇರೆಯೆ ಆಗಿದ್ದುವು. ಆಗ ರಾಜಕೀಯ ವಿಭಾಗಗಳನ್ನು ಹೇಳುವಾಗ ಆ ವಿಭಾಗವು ಒಳಗೊಂಡ ಊರುಗಳ ಸಂಖ್ಯೆಯನ್ನು ಕೂಡಿಸಿ ಹೇಳುವ ಸೊಗಸಾದ ಪದ್ಧತಿಯು ಆ ಕಾಲಕ್ಕೆ ಬಳಕೆಯಲ್ಲಿ ಇದ್ದಿತು. ಉದಾ: ಪುರಿಗೆರೆ ಮುನ್ನೂರು, ಬೆಳವಲ ಮುನ್ನೂರು, ಹಾನಗಲ್ ಐನೂರು ಇ. ಇ.

ಮೇಲಿನ ಮಾತುಗಳಲ್ಲಿ ರನ್ನನು ಮೊದಲು ಬೆಳುಗಲಿಯು ದೇಶವೆಂಮು ಹೇಳಿದ್ದಾನೆ. ಬಳಿಕ ಅದನ್ನು ಬೆಳುಗಲಿ ಐನೂರು ಎಂದು ನಿರ್ದೇಶಿಸಿದ್ದಾನೆ. ಇದರಿಂದ ಬೆಳುಗಲಿ ಎಂಬುದು ದೇಶದ ಹೆಸರು, ನಾಡಿನ ಹೆಸರು ಎಂಬುದು ಸಿದ್ಧವಾಗುತ್ತದೆ. ಈ ಬೆಳುಗಲಿ ನಾಡಿನಲ್ಲಿ ಐನೂರು ಊರುಗಳು ಇದ್ದುವು. ಬೆಳುಗಲಿಯೆಂಬುದು ನಾಡಿನ ಹೆಸರಾದರೂ ಬೆಳುಗಲಿ ಎಂಬ ಹೆಸರಿನ ಊರು ಇದ್ದೇ ಇತ್ತು. ಅದೇ ಈಗಿನ ಬೆಳಗಲಿ. ಈಗ ಬೆಳಗಾವಿ ಯೆಂದು ಊರಿನ ಹೆಸರೂ ಇದೆ, ಜಿಲ್ಲೆಯ ಹೆಸರೂ ಇದೆ ಯಷ್ಟೆ ? ಹೀಗೆ. ಐನೂರು ಊರುಗಳ ಈ ಬೆಳಗಲಿ ನಾಡಿನಲ್ಲಿ ಜಮುಖಂಡಿಯು ಒಂದು ಸಣ್ಣ ವಿಭಾಗ; ಈಗಿನ ಪರಗಣೆ, ಮಹಾಲ, ಪೇಠಾ ಎಂಬಂತೆ. ಈ ಜಮುಖಂಡಿ ವಿಭಾಗದಲ್ಲಿ ಎಪ್ಪತ್ತು ಹಳ್ಳಿಗಳು ಇದ್ದುವು. ಈ ಎಪ್ಪತ್ತು ಊರುಗಳಲ್ಲಿ ಮುದುವೊಳಲು ಒಂದು. ಇದು ಜಮುಖಂಡಿ ವಿಭಾಗಕ್ಕೆ ತಿಲಕದಂತೆ ಒಪ್ಪುತ್ತಿತ್ತು. ಅಲ್ಲಿ ತಾನು ಹುಟ್ಟಿ ಸುಪುತ್ರ ನೆನಿಸಿದನು ಎಂದು ರನ್ನನು ಹೇಳುವನು. ಆದುದರಿಂದ ಮುಧೋಳ್ ಇದುವೆ ರನ್ನನ ಊರು, ಬೆಳಗಲಿಯು ಅಲ್ಲವೆ ಅಲ್ಲ.

ಮೇಲೆ ಹೇಳಿದಂತೆ ಐನೂರ ಬೆಳಗಲಿನಾಡಿನಲ್ಲಿ ಎಪ್ಪತ್ತರ ಜಮುಖಂಡಿಯು, ಆ ಜಮುಖಂಡಿ ಎಪ್ಪತ್ತರಲ್ಲಿ ಮುಧೋಳ್ ಅಡಕವಾಗಿತ್ತಷ್ಟೆ ? ಹೀಗೆ ಈಗಿನ ಜಿಲ್ಲೆ-ತಾಲೂಕುಗಳಂತೆ ಒಂದು ದೊಡ್ಡ ನಾಡಿನಲ್ಲಿ ಸಣ್ಣ ಸಣ್ಣ ಪ್ರದೇಶಗಳು ಸೇರ್ಪಡೆಯಾಗಿದ್ದುದಕ್ಕೆ ಆಕಾಲದ ಅನೇಕ ಉದಾಹರಣೆಗಳು ಸಿಕ್ಕುವುವು. ಒಂದನ್ನು ಹೇಳುವೆ. ಬೆಳವಲು ಮುನ್ನೂರು ಊರುಗಳ ನಾಡು. ಈ ಬೆಳವಲ ನಾಡಿನಲ್ಲಿ ಕುಕ್ಕನೂರ ಪ್ರದೇಶವು (ಈಗಿನ ಕುಕನೂರು) ನೆಲಸಿತ್ತು. ಈ ಕುಕ್ಕನೂರ ಪ್ರದೇಶದಲ್ಲಿ ಮೂವತ್ತು ಊರುಗಳು ಇದ್ದುವು. ಈ ಮೂವತ್ತು ಊರುಗಳಲ್ಲಿ ಕುಕ್ಕನೂರು ಒಂದು.

ಜಮುಖಂಡಿ-ಮುಧೋಳುಗಳ ಆಗಿನ ಈಗಿನ ರಾಜಕೀಯ ಸ್ಥಾನದ ಬಗೆಗೆ-ಒಂದು ಮಾತು. ಈಗ ಮುಧೋಳ್ ಮತ್ತು ಜಮುಖಂಡಿ ಬೇರೆಬೇರೆ ಆಡಳಿತಕ್ಕೆ ಒಳಪಟ್ಟ ಸ್ವತಂತ್ರ ಸಂಸ್ಥಾನಗಳಾಗಿ ಬಾಳಿವೆ. ಬೆಳಗಲಿ ಊರು ಈಗ ಮುಧೋಳ ಸಂಸ್ಥಾನಕ್ಕೆ ಸೇರಿದೆ. ಮುಧೋಳ ಸಂಸ್ಥಾನದಲ್ಲಿ ಈಗ ಸುಮಾರು ಮೂವತ್ತು ಹಳ್ಳಿಗಳು ಇವೆ. ಜಮುಖಂಡಿ ಸಂಸ್ಥಾನದಲ್ಲಿ ಎಂಬತ್ತುಮೂರು ಹಳ್ಳಿಗಳು ಇವೆ. ರನ್ನನ ಕಾಲದಲ್ಲಿ ಈಗ ಹಳ್ಳಿಯಾಗಿದ್ದ ಬೆಳಗಲಿಯು ಐನೂರು ಊರುಗಳುಳ್ಳ ದೊಡ್ಡದಾದ ಬೆಳಗಲಿ ನಾಡಿನ ಮುಖ್ಯ ಸ್ಥಳವಾಗಿದ್ದಿತು. ಹೆಚ್ಚುಕಡಿಮೆ ಈಗಿನಷ್ಟೆ ದಾದ ಜಮುಖಂಡಿ ಪ್ರದೇಶವು ಈ ಬೆಳಗಲಿ ನಾಡಿನ ವಿಭಾಗವು ಆಗಿತ್ತು. ಮುಧೋಳು ಈ ಜಮುಖಂಡಿ ವಿಭಾಗಕ್ಕೆ ಒಳಪಟ್ಟಿತ್ತು. ಆಗ ಅದೊಂದು ಸಣ್ಣ ಊರು. ಈಗಿನಂತೆ ಯಾವುದೊಂದು ಸಂಸ್ಥಾನದ ಮುಖ್ಯ ಸ್ಥಳವಾಗುವ ಗೌರವವು ಅದಕ್ಕೆ ಇರಲಿಲ್ಲ. ಆದರೆ ಇನ್ನೊಂದು ಗೌರವವು ಇದ್ದಿತು—ರನ್ನನೆಂಬ ಕವಿಯನ್ನು ವೀರವಿಭೂತಿಯನ್ನು ಪ್ರಪಂಚಕ್ಕೆ ಕೊಟ್ಟಿತು ಎಂದು. ಆ ಗೌರವವು ಈ ಗೌರವಕ್ಕಿಂತ ಬಹಳ ಹಿರಿದು. ಇಂದಿನ ಗೌರವವು ಅಂದಿನ ಗೌರವದ ... ಅದಕ್ಕೋಸುಗವೇ ಕನ್ನಡಿಗನ ಕರ್ತವ್ಯ ... ಮುಧೋಳನ್ನು ಕಾಣಕಾಣಬೇಕೆಂದು ಹೇಳುವೆ.

ಜಮುಖಂಡಿಯ ಸಮ್ಮೇಲನವು ... ಮುಧೋಳ್, ಬೆಳಗಲಿ, ಮಹಾಲಿಂಗಪುರ ... ಸಂಚರಿಸಿದೆನು. ಈ ಊರುಗಳಲ್ಲಿ ಹಾಗು ... ಯಲ್ಲಿ ಕಂಡುಕೊಂಡ ಸಂಶೋಧನಗಳ ... ಸ್ವಲ್ಪ ನಿಧಾನವಾಗಿ ಪ್ರಕಾಶಿಸಲಿರುವೆನು.

ನಾಗಪುರದ ಅಖಿಲಭಾರತೀಯ ಮಹಿಳಾಪರಿಷತ್ತು

ಲೇಖಿಕೆಯರು: ಶ್ರೀಮತಿ ಶ್ಯಾಮಲಾ ಬೆಳಗಾಂವಕರ, ಕರ್ನಾಟಕ ಮಹಿಳಾ ಮಂಡಲ, ಧಾರವಾಡ.

ಸ್ಟ್ರೆಸ್ಸಿನ ಬೆದರಿಕೆ ಸುಳ್ಳಾಯಿತು — ಎಲ್ಲೆಲ್ಲಿಯೂ ಬಿಳಿಸೀರೆಗಳ ಸಾಲು — ಹೂಗಾರರ ಭಾಗ್ಯ ತೆರೆಯಿತು — ನಾಗಪುರದಲ್ಲಿ ಸ್ತ್ರೀಯರ ಬಂಡು! — ಕಾವ್ಯಪ್ರಪಂಚದಿಂದ ವ್ಯವಹಾರಪ್ರಪಂಚ — ಹಳ್ಳಿಗಳಲ್ಲಿ ಡಿಯುವ ಪ್ರತಿಜ್ಞೆಯೋ, ಪ್ರತಿಜ್ಞೆಯಲ್ಲಿ ಹಳ್ಳಿಯ ದುಡಿತವೋ? — ಅರ್ಥಕಾರಣ ವೇ ರಾಜಕಾರಣ — ಗತ್ತಿನಲ್ಲಿ ನವವಿಚಾರೋದಯ — ಸರೋಜಿನಿಯವರ ಜೋಳಿಗೆ — ಮುಂಬಯಿಯವರ ಶಿಫ್ಟ್ ಸಿಸ್ಟಿಮ್ — ಸ್ತ್ರೀಯರೂ ರಾಜಕಾರಣವೂ — ಗಾಳಿ ಎತ್ತ ಬೀಸುತ್ತಿದೆ? — ಉಡುಪು ಸಾದಾ ಆಯಿತು, ಊಟ ಸಾದಾ ಆಗಲಿ — ದುಡಿತಕ್ಕೂ ಗಟ್ಟಿ, ಸುಖಬಡಲೂ ಗಟ್ಟಿ—ನಾನು ಕಂಡ ವ್ಯಕ್ತಿವಿಶೇಷಗಳು

ಅಖಿಲಭಾರತೀಯ ಮಹಿಳಾ ಪರಿಷತ್ತಿಗೆ ಪ್ರತಿನಿಧಿಯೆಂದು ನನ್ನನ್ನು ಆರಿಸಿದಾಗಿನಿಂದಲೂ ನನಗೊಂದು ಬೆಗುದಿ. ೨೪-೧೨-೩೭ನೆಯ ದಿನ ಸಂಜೆಯ ಮೇಲಿನಿಂದ ನಾನು ಧಾರವಾಡವನ್ನು ಬಿಟ್ಟೆನು. ಬೆಳಗಾಂವಿ ಸ್ಟೇಶನ್ನಿಗೆ ಬಂದಾಗ ಡಬ್ಬಿಯಲ್ಲಿ ಶಾಲಾ ಮಿಸ್ಟ್ರೆಸ್ ಒಬ್ಬಳು A. I. W. C. (ಆಲ್ ಇಂಡಿಯಾ ವಿಮೆನ್ಸ್ ಕಾನ್ಫರನ್ಸ್) ಅಂದರೆ ರಾಜಠೀವಿಯ ಪೋಷಾಕಿನ ಮತ್ತು ಪಂಚಪಕ್ವಾನ್ನ ಊಟದ ಪ್ರದರ್ಶನ; ಜರದ ಸೀರೆಯವರಿಗೇ ಅಲ್ಲಿ ಮಾನ ಮರ್ಯಾದೆ!" ಎಂದು ಹೇಳಿ ಹೆದರಿಸಿಬಿಟ್ಟಳು. ಮಿರಜ ಸ್ಟೇಶನ್ನಿನಲ್ಲಿ ನಾಲ್ಕಾರು ಡೆಲಿಗೇಟ ಸ್ತ್ರೀಯರು ಹತ್ತಿದರು. ಮುಂದೆ ಪುಣೆ, ಕಲ್ಯಾಣ, ನಾಶಿಕ, ಉಮರಾಪತಿಗಳ ವರೆ ಅಂದರೆ ಹೆಂಗಸರ ಡಬ್ಬಿಯೆಲ್ಲವೂ ಬರಿ A. I. W. C. ಡೆಲಿಗೇಟರಿಂದಲೇ ತುಂಬಿಹೋಗಿತ್ತು. ನಾಗಪುರಕ್ಕೆ ೨೬ನೆಯ ತಾ.ನ ದಿನ ಮುಂಜಾನೆಯ ೮ ಗಂಟೆಗೆ ತಲುಪಿದೆವು. ಸ್ಟೇಶನ್ನಿನಲ್ಲಿ ಇದಿರ್ಗೊಂಡು, ನಮಗಾಗಿ ಕಾಯ್ದಿಟ್ಟ ವಸತಿಗೃಹಕ್ಕೆ ತಲುಪಿಸುವ ವ್ಯವಸ್ಥೆ ಅಪ್ರತಿಮವಾಗಿತ್ತು.

ಮುಂಜಾನೆ ೯ಕ್ಕೇ ಸ್ಟ್ಯಾಂಡಿಂಗ್ ಕಮಿಟಿಯ ಮತ್ತು ವಿಷಯನಿಯಾಮಕ ಕಮಿಟಿಯ ಸಭೆ. ಅಷ್ಟರಲ್ಲಿ ಸ್ನಾನ ಸಹಾ ತೀರಿಸಿ ಹಾಜರಾದೆವು. ಸಭೆಯಲ್ಲಿ ಹೊರಟ ಮೊದಲನೆಯ ಚರ್ಚೆ ಉಡುಪಿನದು. ಅಲ್ಲಿಯವರು (ಮಧ್ಯಪ್ರಾಂತದವರು), ಸಭೆಯ ಎಲ್ಲಾ ಕಾರ್ಯಕಲಾಪಗಳಲ್ಲಿ ಅಚ್ಚಬಿಳಿಯ ಸಾದಾ ಉಡುಪನ್ನೇ ಧರಿಸತಕ್ಕದ್ದಾಗಿ ನಿರ್ಣಯವನ್ನೇ ಮಾಡಿದ್ದರಂತೆ. ಅದರಂತೆ ಅಲ್ಲಿಯ ಹೆಂಗಳೆಯರೆಲ್ಲರೂ ಅಂತಹ ಉಡುಪಿನಲ್ಲಿಯೇ ಬಂದಿದ್ದರು. ಉಡುಪಿನ ಚರ್ಚೆ ಹೊರಟು, ಪರಸ್ಥಳದವರೂ ಬಿಳಿಯಿರದಿದ್ದರೂ ತೀರ ಸಾದಾ ಉಡುಪಿನಲ್ಲಿಯೇ ಸಮ್ಮೇಲನದ ಕಾರ್ಯಗಳಿಗೆ ಬರತಕ್ಕದ್ದೆಂದು ನಿರ್ಣಯವಾಯಿತು. ಬಂದವರು ಬಗೆಬಗೆಯ ಜಾರ್ಜೆಟ್‌ಗಳನ್ನೂ ಜರತಾರಿಯ ಸೀರೆಗಳನ್ನೂ ಟ್ರಂಕುಗಳಲ್ಲಿಯೇ ಬಿಟ್ಟುಬಿಡಬೇಕಾಯಿತು. ಸಂತೋಷಕೂಟ (At Home) ಗಳೇ ಮೊದಲಾದ ಖಾಸಗೀಪ್ರಸಂಗಗಳಲ್ಲಿ ಮಾತ್ರ ತಮ್ಮ ಬೆಲೆಯುಳ್ಳ ಪೋಷಾಕುಗಳಿಗೆ ಗಾಳಿಯಾದರೂ ತಗಲಲಿಯೆಂದು ಉಡುತ್ತಿದ್ದರು. ಅಂದಿನ ದಿನ ನಾಗಪುರದಲ್ಲಿ ಒಂದು ಜವಳಿ ಅಂಗಡಿಯಲ್ಲಿಯೂ ಬಿಳಿ ಮತ್ತು ಅಚ್ಚಿನ ಸಾದಾ ಪತ್ತಲಗಳೂ ಬ್ಲಾವುಜ ಪೀಸುಗಳೂ ಉಳಿಯಲಿಲ್ಲವಂತೆ. ಅಂತೂ ಮಿಸ್ಟ್ರೆಸ್ ಹಾಕಿದ ಬೆದರಿಕೆ ಸುಳ್ಳಾಯಿತು. ಆ ದಿನ ಹೂಗಾರರು ನಾಗವೇಣಿಯರಿಗೆ (ಅಲ್ಲಿಯವರು—ವೃದ್ಧೆಯರು ಕೂಡ—ಬೆನ್ನಮೇಲೆ ಹೆರಳು ಬಿಟ್ಟವರೇ ಹೆಚ್ಚು ಜನ) ಹೂಮಾಲೆಗಳನ್ನು ಪೂರೈಸಲಾರದೆ, ಎಳೆ ಕವಳಿಕಾಯಿಗಳ, ಎಳೆ ದಾಳಿಂಬದ ಹೂಕಾಯಿಗಳ, ನಡುನಡುವೆ ಕೋತಂಬರಿಹೂಗಳನ್ನು ಸೇರಿಸಿದ ಕ್ಯಾಬೇಜಿನ ಸಣ್ಣೆಲೆಗಳ ತರತರದ ಮಾಲೆಗಳನ್ನು ಕಟ್ಟಿಕಟ್ಟಿ ಕೊಟ್ಟರೂ ಅವೂ ಸಾಲದೆಹೋಗಲು, ಅಂಗಡಿಯ ಬಾಗಿಲಿನಲ್ಲಿ ಹಣೆಗೆ ಕೈಹಚ್ಚಿಕೊಂಡು ಕುಳಿತುಬಿಟ್ಟಿದ್ದರು. ಅಂದಿನ ಪತ್ರಿಕೆಗಳಲ್ಲೆಲ್ಲಾ "ಇದು ಅ. ಭಾ. ಮಹಿಳಾಪರಿಷತ್ತೋ, ಅಥವಾ 'ಬಾಯಕಾಂಚೇ ಬಂಡ'—ಸ್ತ್ರೀಯರ ಬಂಡೋ?" ಎಂಬ ಸೊಲ್ಲೇ ಸೊಲ್ಲು.

ಆದಿನ ಸಂಜೆಯ ಸಭೆಯಲ್ಲಿ ನಡೆದ ಸಂಗತಿಯೊಂದನ್ನು ಹೇಳದಿರಲಾರೆನು. ಸಭೆಯ ಕೆಲಸ ಅರ್ಧಕ್ಕೆ ಬಂದಿರುವಾಗ ಅಧ್ಯಕ್ಷರಾದ ಶ್ರೀಮತಿ ಸರೋಜಿನಿ ನಾಯಡು ಅವರು, ತನಗೆ ಬೇಜಾರವಾಯಿತು, ಬೇಗಂ ಹಮೀದ ಅಲ್ಲಿಯವರು ಕುರ್ಚಿಯನ್ನಲಂಕರಿಸಲಿ ಎಂದವರೇ ಎದ್ದುಬಿಟ್ಟರು. ಹಮೀದ

ಅಲ್ಲಿಯವರು ಬಂದೊಡನೆಯೆ, ಸರೋಜಿನಿಯವರ ಮಗಳಾದ ಲೀಲಾಮಣಿ ನಾಯಡು "Now from the poetical world, we come to the practical world!" ಎಂದಳು. ಎಲ್ಲರೂ ಚಪ್ಪಾಳೆ ಹೊಡೆದರು. ಬೇಗಂ ಹಮಿದ ಅಲ್ಲಿಯವರ ಕಾರ್ಯದಕ್ಷತೆಯ ಬಗ್ಗೆ ಎಲ್ಲರಿಗೂ ಅಭಿಮಾನವಿದೆ. ಸರೋಜನಿಯವರ ಪುತ್ರಿ ಒಳ್ಳೇ ಚುರುಕು ಮತ್ತು ಚತುರೆ. ಕಾರ್ಯಸಾಧಿಸುವ ಹಟವುಳ್ಳವಳು. ಮಾತಾ-ಪುತ್ರಿಯರ ಈ ಬಗೆಯ ವಾದ-ಸಂವಾದವು ಪರಿಷತ್ತು ನಡೆವಷ್ಟು ದಿನಗಳೆಲ್ಲಾ ನಡೆಯುತ್ತಿತ್ತು.

೨೭ನೆಯ ತಾ.ನ ಸಂಜೆಯ ನಾಲ್ಕು ಗಂಟೆಗೆ ನಾಗಪುರ ಮಹಿಳಾಸಮಾಜದ ಕಟ್ಟಡದ ಶಂಕುಸ್ಥಾಪನೆಯ ಸಮಾರಂಭವು ಶ್ರೀಮತಿ ಸರೋಜಿನಿಯವರ ಹಸ್ತದಿಂದ ನೆರವೇರಿತು.

೨೮ನೆಯ ದಿನ ಮುಂಜಾನೆ ೯ ಗಂಟೆಗೆ (ಬಹಿರಂಗ ಅಧಿವೇಶನದ ಪೂರ್ವದಲ್ಲಿ) ಕಾನ್ವೋಕೇಶನ್ ಹಾಲಿನಲ್ಲಿ, ಬೇರರದ ಸ್ತ್ರೀಯರ ಸೂಚನೆಯಮೇರೆಗೆ, ಮಹಿಳೆಯರ ಸ್ನೇಹಸಮ್ಮೇಳನವೊಂದು ನಡೆಯಿತು. ೨ ಸಾವಿರದಷ್ಟು ಸ್ತ್ರೀಯರು ನೆರೆದಿದ್ದರು. ಶ್ರೀಮತಿ ಮನೂತಾಯಿ ಕೋಲ್ಹಟಕರ ಅವರು ಅಧ್ಯಕ್ಷರಾಗಿದ್ದರು. ರಾಜಕುಮಾರಿ ಅಮೃತಕುವರರೇ ಮೊದಲಾದ ಅನೇಕರು ಮಾತನಾಡಿದರು. ಎಲ್ಲರ ಪಲ್ಲವಿಯೊಂದೇ—'ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡಬೇಕು!' ಕೇಳಿಕೇಳಿ ಬೇಸತ್ತ ಉಮರಾವತಿಯ ಮಿಸ್ತ್ರೆಸ್ಸೊಬ್ಬಳು "ಮಾತು ಸಾಕಾಯಿತು. ತಿಂಗಳಿನಲ್ಲಿ ಒಂದು ದಿವಸವನ್ನಾದರೂ ಹಳ್ಳಿಯಲ್ಲಿ ಕಳೆದು, ಅಜ್ಞಭಗಿನಿಯರಿಗಾಗಿ ದುಡಿಯುವ ದೃಢಪ್ರತಿಜ್ಞೆಯನ್ನು ಮಾಡಿರಿ"ಂದಳು.

ಅದೇ ದಿನ ಮಧ್ಯಾಹ್ನ ೪ ಗಂಟೆಗೆ ಬಹಿರಂಗ ಅಧಿವೇಶನದ ಪ್ರಾರಂಭ. ದಿಗ್ದೆಸೆಗಳಿಂದ ಶುಭಸಂದೇಶಗಳು ಬಂದಿದ್ದವು. ೨೬೦ ಸಂಸ್ಥೆಗಳ ಪರವಾಗಿ ಅಧ್ಯಕ್ಷರಾದ ರಾಜಕುಮಾರಿ ಅಮೃತಕುವರರಿಗೆ ಹೂಮಾಲೆಗಳನ್ನು ಹಾಕಲಾಯಿತು. ಅಲ್ಲದೆ ಎಷ್ಟೋ ಜನ ವ್ಯಕ್ತಿಗಳು. ಸ್ವಾಗತಾಧ್ಯಕ್ಷರಾದ ವಯೋವೃದ್ಧ ಲೇಡಿ ಚಿಟ್ಣವೀಸರವರ ಭಾಷಣವನ್ನು ಶ್ರೀಮತಿ ರೇಯವರು ಓದಿದರು. ವಾರ್ಷಿಕವರದಿಯನ್ನು ಓದಲಾಯಿತು. ತರುವಾಯ ಅಧ್ಯಕ್ಷರು ತಮ್ಮ ಭಾಷಣವನ್ನು ಸರಳಗಂಭೀರ ಶೈಲಿಯಲ್ಲೋದಿದರು. ಆ ಮೇಲೆ ಮುಖ್ಯಮಂತ್ರಿಗಳಾದ ನಾ. ಖರೆಯವರು ಸ್ಫೂರ್ತಿಯುಕ್ತವಾದ ಮಾತುಗಳನ್ನಾಡಿದರು: "ನನ್ನನ್ನು ಸರೋಜಿನಿ ದೇವಿಯವರು sick-bed ನಿಂದ ಎಳೆದು ತಂದಿದ್ದಾರೆ.

ಎಲ್ಲಿ ಹೋದರೂ ಹೆಂಗಸರು ಕಲೆಯನ್ನೂ ... ವನ್ನೂ ಕಾಯ್ದುಕೊಂಡೇ ಇರುವರು. ... ಟೀಕೆ ಮಾಡುತ್ತಿಲ್ಲ. ಇಲ್ಲಿ ನೆರೆದ ಹಿಂದುಸ್ಥಾ... ಮೂಲೆಯ ಸ್ತ್ರೀಯರ ಉಡುಪಿನ ನಾನಾ... ಕಂಡರೆ ಭಾರತಾಂಬೆಯೆ ನನ್ನ ಕಣ್ಮುಂದೆ... ನಿಂತಿರುವಂತೆ ಭಾಸವಾಗುತ್ತದೆ. ನಾನು... ದ್ದರೂ ಸ್ವಾತಂತ್ರ್ಯದ ಸಂಗ್ರಾಮವನ್ನೂ... ಹಿಂದುಸ್ತಾನದಲ್ಲಿ ಹೆಣ್ಣಾಗಿ ಹುಟ್ಟುವದು... ಅದರಲ್ಲಿ ಪತ್ನಿ, ಮತ್ತದರಲ್ಲಿಯೂ ... ಹುಣ್ಣಿನ ಮೇಲಿನ ಬರೆಯಿದ್ದಂತೆ. ಇಪ್ಪತ್ತು... ಹಿಂದೆ ಹೆಂಗಸರು ಮನೆ ಬಿಟ್ಟು ಹೊರಕ್ಕೆ... ಹತ್ತು ವರುಷಗಳ ಹಿಂದೆ ವಿದ್ಯೆ ಕಲಿತು ... ರಾದರು. ಈಗ ರಾಜಕೀಯ ಸುಧಾರಕರಾಗ... ರಾಜಕೀಯದಲ್ಲಿ ಹೆಂಗಸರು ಧುಮುಕಿದರೆ ... ಎಷ್ಟೋ ಕೆಲಸ ಮಾಡಬಲ್ಲರು, ಅವರು... ಇವರು ಸಾಧಿಸಬಲ್ಲರು. Economics... ಮಲೇರಿಯಾಪ್ರತಿಬಂಧಕ್ಕೆ ಮಚ್ಛರದಾನಿ... ಅವಕ್ಕೆ ದುಡ್ಡು ಬೇಕು. ಅದು ಸಿಗಬೇಕಾ... ಚಳವಳಿ ಮಾಡಲೇಬೇಕು; ರಾಜಕಾರಣ... ಬೇಕು. ರಾಜಕಾರಣದಲ್ಲಿ ಭಾಗ ವಹಿಸ... ತಮ್ಮ ಹಕ್ಕುಗಳಿಗಾಗಿ ಹೋರಾಡದ ಹೊ... ಕಾರಣವು ಸಾಧಿಸಲಾರದು. ಆದುದರಿಂದ... ಕಾರ್ಯಗಳಲ್ಲಿ ಹೆಚ್ಚುಹೆಚ್ಚಾಗಿ ಆಸ್ಥೆವಹಿ... ಸಾಧ್ಯವಿದ್ದ ಮಟ್ಟಿಗೂ ನೆರವಾಗಲು ಸಿದ್ಧನಿ... ವಾಯ ರಾಜಕುಮಾರಿಯವರ ಬಿನ್ನಹದ ... ಜಮನಾಲಾಲ ಬಜಾಜರು ಆಶೀರ್ವಾದಪರ... ಮಾತುಗಳನ್ನು ಹೇಳಿದರು. ಮತ್ತು (ರಾಣಿ... ಯವರ ತಂದೆಯವರಾದ) ಸರ್ ಮೋರೋ... ಯವರು ಸ್ತ್ರೀಯರು ತಕ್ಕ ಶಿಕ್ಷಣವನ್ನು ... ಮಹತ್ವವನ್ನು ವಿವರಿಸಿದರು. "ಸರಕಾರವು... ತಿಜೋರಿಯ ಕೀಲಿಕೈ (ಸೌ. ವಿಜಯಲಕ್ಷ್ಮಿ... ಕೈಮಾಡಿ) ನಿಮ್ಮ ಕಡೆಗಿದೆ. ಬೇಕಾದುದ... ಕೊಳ್ಳಿರಿ." ಸಂತತಿನಿಯಮನದ ಬಗ್ಗೆ ... "ಯಾವ ಪುರುಷನಿಗೂ ಅಪ್ರಶಸ್ತವಾಗ... ನಿರ್ಣಯವನ್ನು ಕೈಕೊಂಡು ಸರಕಾರಕ್ಕೆ ... ಹೇಳಿದರು. ಸೌ. ವಿಜಯಲಕ್ಷ್ಮಿಯವರು ... ವನ್ನು ಸ್ವೀಕರಿಸಿದ ಮೇಲೆ ಹಿಂದುಸ್ತಾನ...

ಸಾಬ್ದಾರಿಯೇ ನನ್ನ ಮೇಲೆ ಬಿದ್ದಂತೆ ಅನಿಸುತ್ತದೆ. ವೆಲ್ಲರೂ ನೆರವಾದರೆ ಅದನ್ನೂ ನೀಗಿಸಬಹುದು. ಜಗನಲ್ಲಿ ಹೊಸ ವಿಚಾರಗಳ ಪ್ರವಾಹಗಳು ಹರಿಯುತ್ತಿವೆ. ದುಸ್ತಾನವು ಸ್ವತಂತ್ರವಾಗುವವರೆಗೂ ಸ್ತ್ರೀಯರು ಜಕಾರಣದಿಂದ ಅಲಿಪ್ತರಾಗುಳಿಯುವುದು ಸರ್ವಥಾ ಕ್ಯವಿಲ್ಲ." ಎಂದು ಸ್ಫೂರ್ತಿಯುತವಾಗಿ ಮಾತನಾಡಿರು. ಸರ್ ಹರಿಸಿಂಗ್ ಗೌರರು ಸಮಯೋಚಿತವಾಗಿ ಷಣಮಾಡಿದರು. ಇಂಗ್ಲಂಡಿನಿಂದ ಪ್ರತಿನಿಧಿಗಳಾಗಿ ದ Mrs. Grace Lankester ಅವರು, ಹಿಂದೀ ಹೆಣ್ಣು ಕ್ಕಳಿಗಾಗಿ ತಾವು ಹೇಗೆ ದುಡಿಯುತ್ತಿರುವರೆಂಬುದನ್ನೂ ಲ್ಲಿಯ ಮತ್ತು ಇಲ್ಲಿಯ ಸಂಸ್ಥೆಗಳನ್ನು ಒಂದುಗೂಡಿವ ತಮ್ಮ ಪ್ರಯತ್ನವನ್ನೂ ಹೇಳಿ, ರಾಜಕುಮಾರಿಯವರ ೋರಿಕೆಯ ಮೇರೆಗೆ ಹಿಂದೀಯರ ಅಹಿಂಸಾಸಂದೇಶವನ್ನು ಸುರೋಪದ ಎಲ್ಲಾ ರಾಷ್ಟ್ರಗಳ ಎಲ್ಲಾ ಸ್ತ್ರೀಸಂಘಗಳಿಗೆ ಮುಟ್ಟಿಸುವುದಾಗಿ ಹೇಳಿದರು. ಕೊನೆಗೆ ಸರೋಜಿನೀದೇವಿಯವರು "ಡಾ. ಖರೆಯವರು, sick-bed ನಿಂದ ತನ್ನನ್ನು ಳೆದುತಂದರೆಂದು ಹೇಳಿದರು. ಅದು ಸುಳ್ಳು. ಅವರು ರಾಮಕುರ್ಚಿಯಲ್ಲಿ ಸ್ವಸ್ಥವಾಗಿ ಒರಗಿಕೊಂಡಿದ್ದರು. ಲ್ಲಿಂದ ಅವರನ್ನು ಕರೆತಂದಿದ್ದೇನೆ. ನಾವು ಅಬಲೆಯನ್ನುವರು. ನಾವು ಸಬಲೆಯರಾಗಿ ಕೆಲಸಮಾಡಿ ತೋರಿತ್ತಲಿದ್ದೇವೆ. ಪರದಾ ಬಿಟ್ಟು ಎಂದೂ ಹೊರಕ್ಕೆ ಬರದ ಸೆಸ್ ಮಿರ್ಝಾ ಇಸ್ಮಾಯಿಲರನ್ನು—ಇಕೊ—ಈ ದಿನ ರದೆ ಬಿಡಿಸಿ ಇಲ್ಲಿ ನಿಲ್ಲಿಸಿದ್ದೇನೆ. ಸರ್ ಮೋರೋಪಂತರು ಣುಮಕ್ಕಳಿಗಾಗಿ ಕೊನೆಯವರೆಗೂ ಸಹಾನುಭೂತಿಯನ್ನು ತೋರಿಸುತ್ತ ಬಂದಿದ್ದಾರೆ ಮಾತ್ರವಲ್ಲ, ರಾಣೀ ಜವಾಡೆಯವರಂತಹ ಅಪರೂಪ ಸಮಾಜಸೇವಾಸಕ್ತ ಗಳನ್ನು ಕೊಟ್ಟಿದ್ದಾರೆ; ಇದೇನು ಸಣ್ಣ ಮಾತಲ್ಲ. ತರುಣ ಳಿಗೆಯವರಿಂದಲೇ ನಮ್ಮ ಕೆಲಸವಾಗತಕ್ಕದ್ದಿದೆ." ಎಂದು ಹೇಳಿದರು. ಸಭೆಗೆ ೫೦೦೦ಕ್ಕೆ ಮೇಲ್ಪಟ್ಟು ಸ್ತ್ರೀಯರೂ ಸುಮಾರು ೫೦೦ ಗಂಡಸರೂ ಬಂದಿದ್ದರು. ವಂದೇ ಮಾತರಂ ಗೀತಗಾಯನವಾಗಿ ಸಭೆ ಮುಗಿಯಿತು.

ಮರುದಿನ (ತಾ. ೩೯-೧೨-೩೭) ಮುಂಜಾನೆ ಮತ್ತೆ ಸಭಾಪ್ರಾರಂಭ. ಅಜೆಂಡಾ, ಶಿಕ್ಷಣವರದಿ, ಸಾಮಾಜಿಕ ಕಾರ್ಯವರದಿ, ಲೆಕ್ಕಪತ್ರಗಳನ್ನು ಓದಿದುದಾಯಿತು. ರಾಜಕುಮಾರಿಯವರು ದುಡ್ಡಿನ ಅಗತ್ಯವನ್ನು ಹೇಳಿದರು. ಸರೋಜಿನಿಯವರು ಉಡಿಯುಡ್ಡಿ ೨೦೦೦ ರೂ. ನಗದು ಹಣವನ್ನೂ ೫೦೦೦ ರೂ.ಯ ವಚನಗಳನ್ನೂ ಪಡೆದರು. ಮಧ್ಯಾಹ್ನ ೩ ಗಂಟೆಗೆ ಸ್ತ್ರೀಯರ ಮತ್ತು ಚಿಕ್ಕಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸವು ಉಚಿತವೂ ಒತ್ತಾಯದ್ದೂ ಆಗಬೇಕೆಂಬ ನಿರ್ಣಯವು ಸ್ವೀಕೃತವಾಯಿತು. ತರುವಾಯ ಶಾಖಾವರದಿಗಳ ವಾಚನವಾಯಿತು. ನನಗೆ ತೋರಿದ ಮಟ್ಟಿಗೆ ಸಾಂಗಲಿಯವರದು ಮಾದರಿಯದಾಗಿತ್ತು. ರೈತಾವಳಿ ಹೆಂಗಸರಿಗೆ ಅವರ ಬಿಡುವಿನಲ್ಲಿ ಒಂದೇ ಗಂಟೆಯ ಮಟ್ಟಿಗಾದರೂ ಮಾತೃಭಾಷೆಯಲ್ಲಿ ಓದುಬರಹ, ಹೊಲಿಗೆ, ಗೃಹವೈದ್ಯಕಗಳನ್ನು ಸುಶಿಕ್ಷಿತೆಯರು ಉಚಿತವಾಗಿ ಕಲಿಸುವುದು, ಆ ಅವಧಿಯಲ್ಲಿ ಅವರ ಕೂಸುಕುನ್ನಿಗಳನ್ನು ನೋಡಿಕೊಳ್ಳಲು ಸಂಸ್ಥೆಯಿಂದ ಒಂದು ಆಳು, ಒಂದು ತೊಟ್ಟಿಲು ಒದಗಿಸುವುದು—ಅವರ ವರದಿಯ ವಿಶೇಷಗಳಾಗಿದ್ದವು.

೩೦—೧೨—೩೭ ಮುಂಜಾನೆ ೭||. ಪ್ರಾಥಮಿಕಶಿಕ್ಷಣದಲ್ಲಿ ಕೈಗಾರಿಕೆಯ ಶಿಕ್ಷಣವನ್ನು ಕೊಡುವಾಗ, ಬಾಲಕಬಾಲಿಕೆಯರಿಗೆ ಕನಿಷ್ಠ ಹತ್ತು ವರುಷಗಳ ವರೆಗೆ ಉದರನಿರ್ವಾಹದ ದೃಷ್ಟಿಯಿಂದ ಅದನ್ನು ಕೊಡದೆ, ಕೇವಲ ಆರಂಭ ಎಂಬುದಾಗಿ ಕೊಡಬೇಕು—ಎಂಬರ್ಥದ ನಿರ್ಣಯವು ಸ್ವೀಕೃತವಾಯಿತು. ಮುಂಬಯಿಯವರೊಬ್ಬರು Shift Systemನ ಮೇರೆಗೆ ನಡೆಸಿದ ಶಿಕ್ಷಣಪ್ರಯೋಗವನ್ನು ಹೇಳಿದರು. ಹಂಗಾಮ ತೀರಿದ ಮೇಲೆ ಒಕ್ಕಲಿಗ ಹುಡುಗರ ಬಿಡುವನ್ನು ನೋಡಿಕೊಂಡು, ಆಯಾ ಹಳ್ಳಿಗಳಲ್ಲಿ ಶಿಕ್ಷಿಕೆಯರು ಸಾದಾ ಚಪ್ಪರಗಳನ್ನು ಕಟ್ಟಿಸಿ, ಮುಂಜಾನೆ ೨|| ಗಂಟೆಯ ಹೊತ್ತು ಒಂದು ಗುಂಪಿಗೆ, ಸಂಜೆಯ ೨|| ಗಂಟೆಯ ಹೊತ್ತು ಇನ್ನೊಂದು ಗುಂಪಿಗೆ ಕಲಿಸುವ ಕ್ರಮವನ್ನು ತಿಳಿಸಿದರು. ಪ್ರೌಢಸ್ತ್ರೀಯರಿಗಾಗಿ ರಾತ್ರಿಶಾಲೆಗಳನ್ನು ನಡೆಸಿದುದಾಗಿಯೂ ಹೇಳಿದರು. ಒಂದು ವಿಶೇಷ ಸಂಗತಿಯೆಂದರೆ, ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಹಿಂದಿಯನ್ನು ಒತ್ತಾಯದಿಂದ ಕಲಿಸಬಾರದೆಂದು ನಿರ್ಣಯವಾಯಿತು.

ಘಟಸ್ಫೋಟದ ಬಗ್ಗೆ ಅನೇಕರು ಬಹಳ ಹೊತ್ತು ಚರ್ಚೆಮಾಡಿದ ಮೇಲೆ, ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಅದಕ್ಕೆ ಕಾಯದೆಯಿಂದ ಮಾನ್ಯತೆ ಸಿಗಬೇಕೆಂದು ಬಹುಮತದಿಂದ ನಿರ್ಣಯವಾಯಿತು.

ಕೊನೆಯದಾಗಿ, ಪರಿಷತ್ತಿನಲ್ಲಿಯೆ ಕೋಲಾಹಲವನ್ನೆಬ್ಬಿಸಿದ ಸ್ತ್ರೀಯರ ರಾಜಕಾರಣಪ್ರವೇಶದ ನಿರ್ಣಯವು ಚರ್ಚೆಗೆ ಬಂದಿತು. ೩೦ನೆಯ ತಾ.ನ ಮಧ್ಯಾಹ್ನ ೩ರಿಂದ ರಾತ್ರಿ ೧೧ರ ವರೆಗೂ, ಮರುದಿನ ಬೆಳಗ್ಗಿನಿಂದ ಮಧ್ಯಾಹ್ನ

೧॥ ವರೆಗೂ ಮಾತು-ಮರುಮಾತು ನಡೆದು ಕೊನೆಗೊಮ್ಮೆ ಎಲ್ಲರಿಗೂ ಒಪ್ಪಿತವಾಗುವಂತೆ ಮಧ್ಯಮ ಮಾರ್ಗದಲ್ಲಿ ಮುಕ್ತಾಯವಾಯಿತು.

ಡಾ. ಮಿಸ್ ಗೋಖಲೆಯವರು, ಸ್ತ್ರೀಯರು ಪ್ರತ್ಯಕ್ಷ ಪಕ್ಷನಿಷ್ಠ ರಾಜಕಾರಣದಲ್ಲಿ ಸೇರಬಾರದಾದರೂ, ತಮ್ಮ ಮತ್ತು ಬಾಲಕರ ಸರ್ವಾಂಗೀನ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಉನ್ನತಿಗಾಗಿ ಮತ್ತು ತನ್ಮೂಲಕ ಹಿಂದು ಸ್ಥಾನದ ಉನ್ನತಿಗಾಗಿ ಒಕ್ಕಟ್ಟಿನಿಂದ ಹೋರಾಡಬೇಕೆಂದು ನಿರ್ಣಯ ತಂದರು. ಬೇಗಂ ಹವಿೂದ ಅಲ್ಲಿಯವರು ಮೇಲಣ ವಾಕ್ಯದಲ್ಲಿಯ 'ರಾಜಕೀಯ' ಶಬ್ದವನ್ನು ಬಿಡುವ ಉಪಸೂಚನೆಯನ್ನು ತಂದರು. ಸಂಸ್ಥಾನಗಳ ಸ್ತ್ರೀಯರು 'ರಾಜಕೀಯ' ಶಬ್ದಕ್ಕೆ ಹೆದರುವದಿಲ್ಲವಾದರೂ, ಅದು ತಮ್ಮ ಕಾರ್ಯಕ್ಕೆ ಅಡ್ಡಬರಬಹುದಾದ್ದರಿಂದ ಅದನ್ನು ಬಿಟ್ಟು ಕೊಡಬೇಕೆಂದು ಸಾಮಾನ್ಯವಾದ ಅಭಿಪ್ರಾಯವಿರುವಂತೆ ತೋರಿತು. ರಾಣೀ ರಾಜವಾಡೆ, ಮೈಸೂರಿನ ಡಾ. ರತ್ನಮ್ಮ, ಸೌ. ಅನಸೂಯಾಬಾಯಿ ಕಾಳೆ, ಸೌ. ಕೋಳಿವಾನ ಮೊದಲಾದವರು ಮಿಸ್ ಗೋಖಲೆಯವರಿಗೆ ಬೆಂಬಲವಿತ್ತರು. ಒಟ್ಟು ೩೫ ಜನ ಸ್ತ್ರೀಯರು ಎರಡೂ ಪಕ್ಷಗಳನ್ನು ಹಿಡಿದು ಬಹಳ ಕೌಶಲ್ಯದಿಂದ ವಾದಿಸಿದರು. ಲೀಲಾಮಣಿ ನಾಯಡು ಅವರು ಮುನ್ನಾದಿನ Party Politicsಕ್ಕೆ ಸೈಯಿಕ್ಕಿದವರು ಮರುದಿನ ಹವಿೂದ ಅಲ್ಲಿಯವರ ಅಭಿಪ್ರಾಯವನ್ನೇ ಅನುಮೋದಿಸಿದರು. ಅಂತೂ ಪರಿಷತ್ತಿನ ಸದ್ಯದ ಘನತೆಗೆ ಕಾರಣರಾದ ಹವಿೂದ ಅಲ್ಲಿಯವರ ಮತಕ್ಕೆ ಮಾನವಿತ್ತು, 'ರಾಜಕೀಯ' ಶಬ್ದದ ಬದಲು 'For the national benefit of women and children (ಸ್ತ್ರೀ-ಬಾಲಕರ ರಾಷ್ಟ್ರೀಯ ಹಿತವರ್ಧನೆಗಾಗಿ) ಎಂಬ ಶಬ್ದಗಳನ್ನು ಪರಿಷತ್ತು ೬೫ ವಿರುದ್ಧ ೬೩ ಮತಗಳಿಂದ ಒಪ್ಪಿತು. ಹಿಂದೀಸ್ತ್ರೀಯರ ಮನೋವೃತ್ತಿಯು ಎಂತಹ ಬದಲಾವಣೆಗಳನ್ನು ಹೊಂದುತ್ತಿದೆಯೆಂಬುದಕ್ಕೆ ಆ ಚರ್ಚೆಯು ಒಳ್ಳೇ ನಿದರ್ಶನೆಯಾಗಿತ್ತು.

* * *

ಪರಿಷತ್ತಿನ ಕಾರ್ಯಕಲಾಪಗಳಿಲ್ಲದಾಗ, ಕೆಲಕೆಲವು ವ್ಯಕ್ತಿಗಳ ಪರಿಚಯವನ್ನು ಮಾಡಿಕೊಂಡೆನು. ೩೦ನೆಯ ತಾ.ನ ದಿನ ಸಂಜೆಗೆ ಕೆಲ ಕನ್ನಡಿತಿಯರ ಬೆಟ್ಟಿಯಾಗಿತ್ತು. ಸೌ. ಜಾನಕಿ ಅಮ್ಮಾಳ್ ಎಂಬವರು ಶ್ರೀಮತಿ ಕಮಲಮ್ಮ ದಾಸಪ್ಪ ಅವರೊಡನೆ ತಮ್ಮ ಸಂಸ್ಥೆಯ ೧೦ ಶಾಖೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ, ಶಿಕ್ಷಣಪ್ರಸಾರದ ... ರುವುದಾಗಿಯೂ, ಶಿಕ್ಷಿಕೆಯರಿಗೆ ಸಂಸ್ಥೆ... ಕೊಡುತ್ತಿರುವುದಾಗಿಯೂ ಹೇಳಿದರು. ಸೌ... ಕೋಳಿವಾನ್ ಅವರು ಮುನವಳ್ಳಿಯ ಸರ... ಪುತ್ರಿ. ಪುಣೆಯ ಕರ್ವೆ ಯುನಿವರ್ಸಿಟಿಯ... ನಾಗಪುರದಲ್ಲಿ ಒಂದು ಹೆಣ್ಣು ಮಕ್ಕಳ ಶಾಲೆ... ಸಂಬಳದ ಮೇಲೆ ಅಧ್ಯಾಪಿಕೆಯರಾಗಿರುವ... ಯ ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದ... ದಲ್ಲೆಲ್ಲಾ ಅವರ ಕಾರ್ಯತತ್ಪರತೆಯ ಬಗ್ಗೆ... ಧಾರವಾಡದ ಕ. ಮಹಿಳಾಮಂಡಳದ ... ಇನ್ನೊಬ್ಬ ಕನ್ನಡಿತಿ—ಸೌ. ತಾರಾಬಾಯಿ ... ಇವರು Standing Committee ಮೆಂ... ಧಾರವಾಡದ ಶ್ರೀಮತಿ ರಮಾಬಾಯಿ ಪಾ... ಕಲ್ಕತ್ತೆಯಲ್ಲಿ ಒಂದು ಸ್ತ್ರೀಯರ ಕಾಲೇಜಿನ... ಪಿಕೆಯರಾಗಿರುವರು. Servant of India S... ಸದಸ್ಯೆಯರಾಗಿರುವರು.

A. I. W. C. ಯ ಆರ್ಗನಾಯಿಜಿಂಗ್ ... ರಾದ ಶ್ರೀಮತಿ ಶಾಂತಾಬಾಯಿ ಭಾಲೇ... ನನ್ನನ್ನು ಕಂಡು, ಕ. ಮಹಿಳಾಮಂಡಲ... ಯರು ಹೆಚ್ಚಾಗಿ ಸೇರಿಕೊಂಡು, ಸ್ತ್ರೀ-ಜಾಗೃ... ಕಲಾಪಗಳನ್ನು ಕೈಕೊಳ್ಳಬೇಕೆಂದು ತಮ್ಮ... ಅಪೇಕ್ಷೆಯಿರುವುದಾಗಿ ಹೇಳಿದರು.

ಲೇಡಿ ಚಿಟ್ಣವೀಸರು ಏರ್ಪಡಿಸಿದ ಸಂತೋ... ಶ್ರೀಮತಿ ರಾಣೀ ರಾಜವಾಡೆಯವರಿಗೆ ನಾನು ... 'ವೇಷದ ಸಾದಾತನ ಸಾಧಿಸಿತು, ಊಟ-ಉ... ಮಧ್ಯಮ ವರ್ಗಕ್ಕೊಪ್ಪುವಂತೆ ಸಾದಾತನಕ್ಕೆ ... ಎಂದು ಸೂಚಿಸಿದೆನು. ಮುಂದಣ ಅಧಿವೇಶ... ಖಂಡಿತ ಹಾಗೆ ಆಗುವಂತೆ ಪ್ರಯತ್ನಿಸುವು... ಕೊಟ್ಟರು. ಫಲಟಣದ ರಾಣೀಸಾಹೇಬರು ... ಸ್ವಭಾವದವರು, ಸ್ತ್ರೀಯರ ಉನ್ನತಿಗಾಗಿ ... ವಾಗಿ ಯತ್ನಿಸುವವರು. ಅವರ ಜ್ಞಾನ... ಕೌತುಕಾಸ್ಪದವಾಗಿದೆ, ೩—ಳ ಮಕ್ಕಳ... ವಿದ್ಯಾವ್ಯಾಸಂಗವನ್ನು ನಡೆಯಿಸಿ, ಕರ್ವೆ ಯು... ಶಿಕ್ಷಣಕ್ರಮವನ್ನು ಮುಗಿಸಿರುವರು. ನಾಗಪು... ಸ್ತ್ರೀಯರ ಮುಖಂಡಳಾದ ಜಾಯಿಬಾಯ... ಸಂಘಟನಾಚಾತುರ್ಯವೂ ಕಾರ್ಯತತ್ಪರತೆ...

ರ್ಹವಾದುದು. ತಮ್ಮ ಸ್ತ್ರೀಯರಲ್ಲಿ ಶಿಕ್ಷಣ-ಸ್ವಚ್ಛತಾ ಸಾರವನ್ನು ಅತ್ಯುತ್ತಮವಾಗಿ ನಡೆಸಿರುವಳು.
ಒಟ್ಟಾರೆ ಅಲ್ಲಿಯ ಸ್ತ್ರೀಯರು ಬಡವರು-ಬಲ್ಲಿದರು, ಹಿರಿರು-ಕಿರಿಯರು, ಅತ್ತೆ-ಸೊಸೆಯರು ಎಂಬ ಭೇದಭಾವನೆಲ್ಲದೆ ನಸುಕಿನ ೪ರಿಂದ ಇರುಳಿನ ೧೨ರ ವರೆಗೆ ಬಿಡುವಿ ದುಡಿಯುವ ದೃಶ್ಯವು ಯಾರನ್ನೂ ಬೆರಗುಗೊಳಿಸುತಹದಿತ್ತು. ಅಲ್ಲಿಯವರು ಕೆಲಸಕ್ಕೂ ಗಟ್ಟಿಗರು, ಸುಖ-ತೋಷಗಳನ್ನು ಅನುಭವಿಸಲಿಕ್ಕೂ ಸಮರ್ಥರು. ಅಲ್ಲಿಯ dies' Club ನಲ್ಲಿ ಎಲ್ಲಾ ವರ್ಗಗಳ ಎಲ್ಲಾ ವಯಸ್ಸಿನ ಮಕ್ಕಳು ಸಂಜೆಯ ೫ರಿಂದ ೭ರ ವರೆಗೆ ಸ್ವಚ್ಛಂದಗ—ಯಾವ ವಿಶೇಷ ಉದ್ದೇಶವನ್ನೂ ಇಟ್ಟುಳ್ಳದೆ—ಹರಟುವದು, ಹಾಡುವದು, ಕುಣಿಯುವದು ದಲಾದುದನ್ನು ಪುನದಣಿಯೆ ಮಾಡುವರು.

ನಾಗಪುರದಲ್ಲಿ ಕುರುಡರ ಶಾಲೆ, ಶ್ರದ್ಧಾನಂದ ಅನಾಥ ಬಾಲಿಕಾಶ್ರಮ, ಸೇವಾಸದನಗಳನ್ನು ಸಂದರ್ಶಿಸಿದೆವು. ಬರುವಾಗ ವರ್ಧಾದಲ್ಲಿಳಿದು ಅಲ್ಲಿ ಮ. ಗಾಂಧಿಯವರ ನೇತೃತ್ವದಲ್ಲಿ ನಡೆದ ಮಹಿಳಾಸಮಾಜ, ಮಹಿಳಾವಸತಿ ಗೃಹ, ಜೇನುಹುಟ್ಟಿನ ವ್ಯವಸಾಯ, ಕಾಗದದ ಮತ್ತು ತೊಗಲಿನ ಕೈಗಾರಿಕೆಗಳ ಕಾರಖಾನೆ ಇ.ಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿಕೊಂಡು ಬಂದೆನು. ಮಹಾತ್ಮಾಜಿಯವರು ಅಲ್ಲಿರದಿದ್ದುದೊಂದೆ ಕೊರತೆ. ಅಲ್ಲಿಯ ಕೆಲಸಗಾರರಲ್ಲಿ ಕನ್ನಡಿಗರೂ—ಕನ್ನಡಿತಿಯರೂ ಹೆಚ್ಚಿನ ಭಾಗವನ್ನು ವಹಿಸಿರುವರು.

ಅಂತೂ ಈ ಪ್ರವಾಸವು ನನಗೊಂದು ಅನುಭವದ ನಿಧಿಯಾಗಿಯೆ ಪರಿಣಮಿಸಿದೆಯೆಂದು ಕೊನೆಯಲ್ಲಿ ಹೇಳದಿರಲಾರೆನು.

ಮೂಡಲು—ಪಡುವಲು

(ಸಣ್ಣ ಕತೆ)

ಅಮೆರಿಕನ್ ಕನ್ನಡಕಗಳನ್ನೇರಿಸಿದ ಸುಭಾಷಿಣಿಗೆ ನನ್ನ-ಸರಲೆಯ ಪ್ರೇ[illegible]
ನದ ಅರ್ಥವೆ ಹೊಳೆಯಲಿಲ್ಲ. ಆಕೆಯ ಕಣ್ಣಿನಲ್ಲಿ ಸರಲೆಯೊಬ್ಬ ಸ್ವಾತಂತ್ರ್ಯ[illegible]
ಗುಲಾಮಳು. "ಅವಳು ನನಗೆ ದಾಸಿಯೆನ್ನಲಿ, ಜೀತದ ತೊತ್ತೆನ್ನಲಿ, [illegible]
ಜನರ ಕೆಲಸ ಮಾಡುವುದರಲ್ಲಿ ಏತರ ನಾಚಿಕೆ? ನಿಮ್ಮ ಸೇವೆ ಮಾಡುವ[illegible]
ಹಕ್ಕು. ಆ ಹಕ್ಕನ್ನು ಯಾರೂ ಕಸಿದುಕೊಳ್ಳಲಾರರು." ಎಂಬುದೆ ಸರಲೆಯ[illegible]

ಶ್ರೀ|| ಡಿ. ಜಿ. ಸರಾಫ ಬಿ. ಎ.

ನನ್ನ ತಾಯಿ, ಅಕ್ಕತಂಗಿಯರು, ಅತ್ತಿಗೆನಾದಿನಿಯರು ಬಹಳ ಪ್ರೇಮಲಸ್ವಭಾವದವರು, ಸುಸ್ವಭಾವಿಗಳು; ಆದರೆ ಸರಲೆಯ ಬಗ್ಗೆ ನಾನು ವ್ಯಕ್ತಪಡಿಸುವ ಪ್ರೇಮವು ಅವರಿಗೆ ಅದೇಕೋ ಅಷ್ಟು ಸೇರುತ್ತಿರಲಿಲ್ಲ. ವಿವಾಹಕ್ಕೆ ಮುಂಚಿತವಾಗಿ ನಾನು ನನ್ನ ಆಪ್ತವರ್ಗದ ಹೆಂಗಳೆಯರೊಡನೆ ಸಲಿಗೆಯಿಂದಿದ್ದುದನ್ನು ಯಾರೂ ಕಂಡಿರಲಿಲ್ಲ. ಅವರೆಲ್ಲರ ಬಗ್ಗೆ ನನ್ನ ಅವ್ಯಾಜಪ್ರೇಮವಿರಲಿಲ್ಲವೆಂತಲ್ಲ. ಆದರೆ ಗಂಡಸರೊಡನೆ ಗಂಟೆಗಟ್ಟಲೆ ಪುನಸಾರೆ ಹರಟೆಹೊಡೆಯುತ್ತಿದ್ದ ನಾನು ಹೆಂಗಸರೆಂದರೆ ಮುಟ್ಟಲುಮುರುಕನಾಗಿರುತ್ತಿದ್ದೆನು. ಈ ನನ್ನ ಲಜ್ಜಾಶೀಲತೆಯು ಮದುವೆಯ ಪೂರ್ವದಲ್ಲಿ ತುಂಬಾ ನಗೆಚಾಟಿಕೆಯ ವಿಷಯವಾಗಿತ್ತು. ನನ್ನ ಹಿರೇ ಅತ್ತಿಗೆಯು ಒಮ್ಮೆ "ಭಾವನವರು ಪರವೂರಿಗೆ ನೌಕರಿಗೆ ಹೋಗಬೇಕಾಗಿ ಬಂದರೆ, ನಮ್ಮ ನೆಗೆಣ್ಣಿಯವರೊಡನೆ ಮಾತುಕತೆಯಾಡಿ ಹೊತ್ತುಹೋಗಲು ಹೊರಗಿನವರೊಬ್ಬರನ್ನು ಬೇಕೆಂತ ಕರೆದೊಯ್ಯಬೇಕಾಗುವುದು" ಎಂದು ಹಾಸ್ಯಮಾಡಿದಳು. ಸರಲೆಯು ನನ್ನ ಜೀವನಪ್ರಾಂಗಣದಲ್ಲಿ ಕಾಲಿಟ್ಟಂದಿನಿಂದಲೂ ಆಕೆಯ ಮಟ್ಟಿಗಾದರೂ ನನ್ನ ಸ್ವಭಾವದಲ್ಲಿ ಕ್ರಾಂತಿಯಾಯಿತೆಂದೇ ಹೇಳಬೇಕು. ಸರಲೆಯೊಡನೆ ಸರಸಸಲ್ಲಾಪಗಳಲ್ಲಿ ಗಂಟೆಗಂಟೆ ಹೊತ್ತುಕಳೆಯುವುದನ್ನು ನೋಡಿ ನನ್ನ ಅತ್ತಿಗೆಯರು ಸಂತೋಷಪಡಬೇಕಾಗಿತ್ತು; ಅದೊತ್ತಟ್ಟಿಗುಳಿದು ನನ್ನ ಅಕ್ಕನಿಗೆ, ಅದೇಕೆ ತಾಯಿಗೆ ಕೂಡ ಅದೊಂದು ತರಹದ ಅಸೂಯೆಯೆನಿಸತೊಡಗಿತು. "ಎಂಥ ಮುಗದಯ್ಯನಿದ್ದ, ಏನು ಮರುಳಾದ!" ಎಂದು ನನ್ನೆದುರಿನಲ್ಲಿಯೇ ಆಡಿಕೊಳ್ಳಲು ಅವರು ಹಿಂದೆಮುಂದೆ ನೋಡದಾದರು.

ನೀವೆನ್ನಬಹುದು—ನನ್ನ ಸ್ವಭಾವದಲ್ಲಿ ಪೂರಾ ಪಲ್ಲಟವಾಯಿತೆಂದು. ಹಾಗಲ್ಲ—ಉಳಿದ ಹೆಂಗಸರೊಡನೆ ನಾನು ಮೊದಲಿನಂತೆ ನಾಚಿಕೊಂಡೇ ನಡೆಯುತ್ತಿದ್ದೆ. ತಂಗಿ ಎಂದಾದರೂ ಬಂದರೆ, "ಏನು [illegible] ಕ್ಷೇಮವೆ?" ಎಂದವನೇ ಜಿಗಿದುಬಿಡುತ್ತಿದ್ದೆ. ಪುಸ್ತಕ ಮರೆಮಾಡಿಕೊಂಡು ಕೂತವನು [illegible] ಬಿಟ್ಟು ಹೋಗುವವರೆಗೂ ಕೆಳಗಿಳಿಯುತ್ತಿದ್ದಿ[illegible]

ನನ್ನತ್ತಿಗೆ ಬಯಸಿದಂತೆ ನನಗೆ ದೆಹಲಿಗೆ [illegible] ಯಜೇಕೇ! ಆದರೆ ಆಕೆಯ ಕಾಯಾಸ [illegible] ಸುಳ್ಳಾಯಿತು. ಸರಲೆಯೊಡನೆ ಹರಟೆಹೊ[illegible] ಯಾರೂ ಬೇಕಾಗಿರಲಿಲ್ಲ. ಒಂದು ಭಾನು[illegible] ಊಟತೀರಿಸಿಕೊಂಡು 'ಟೈಮ್ಸ ಆಫ್ ಇಂಡಿ[illegible] ಯನ್ನು ಹಿಡಿದುಕೊಂಡು ಓದುತ್ತ ಒರಗಿ[illegible] ಹತ್ತಿಬಿಟ್ಟಿತು. ಮೂರುವರೆ ಆದರೂ [illegible] ಯಲ್ಲಿಯೆ ಇದ್ದೆನು. ಅಷ್ಟರಲ್ಲೊಂದು ನಲ್ಗ[illegible] ಎಚ್ಚರಿಯುವುದರೊಳಗಾಗಿ. ಮಂಚದ [illegible] ಸುಪ್ರಸನ್ನಮೂರ್ತಿ!

"ಇದೇನು ಹೊಸ ತರಹೆ! ಹತ್ತಿರ [illegible] ಗಾಗಿ ನಿದ್ದೆಯಲ್ಲಿಯೇ ಮಧುರಸ್ಮಿತದಿಂ[illegible] ಮಾಡಿದಿರಿ! ಪ್ರತಿಭಾನುವಾರದ ಹುಬ್ಬು[illegible] ಹೋಯಿತು?" ಸರಲೆ ಕೇಳಿದಳು.

"ಇದು ನಿಮ್ಮ ಸ್ವಾಗತವಲ್ಲ, ಸಮ್ರಾಜ್ಞಿ[illegible] ತೀರಾ ಖಾಸಗೀ ವ್ಯವಹಾರ.... ನನಗೊಂದು [illegible] ಬಿದ್ದಿತ್ತು, ಆದರ ಸವಿಯನ್ನೇನು ಹೇಳಲಿ!"

"ಹೋಗ್ರೀ!" ನನ್ನ ಮಾತು ಮುಗಿ[illegible] ಗಾಗಿಯೆ ಸರಲೆ ಎಂದಳು. ಮಾತನ್ನ [illegible] ಹಾಕಲು ಪ್ರಯತ್ನಿಸಿದಳು. ಅದು ಸಾಧ್ಯವಾ[illegible] ಕಣ್ಣಿನಲ್ಲಿ ಎಂತಹದೋ ಒಂದು ತವಕ [illegible]

"ನಿನ್ನಂತೆಯೇ ಆಗಲಿ....ಉತ್ಕೃಷ್ಟ ಟೀ ತಯಾರಿಸಿ ...ಕೊಂಡು ಬಾ. ಎಂದರೆ ಸ್ಪೆಶಲ್ಲಾಗಿ ನಿನಗೋಸ್ಕರ ...ಸುವೆನು."

"ಟೀಗಿಂತಲೂ ಸರಸವಾದ ಸುದ್ದಿಯನ್ನು ತಂದರೆ—?"

"ಸರಸ ಸುದ್ದಿಗೆ ಸರಸ ಪಾರಿತೋಷಿಕವನ್ನೆ ಕೊಡು...ವು. ಖಂಡಿತ ಎಂದು ತಿಳಿ!" ಆಕೆಯ ಕಡೆಗೆ ಅರ್ಥ...ರ್ಣವಾಗಿ ನೋಡುತ್ತ ನುಡಿದೆನು.

ಸರಲೆ ಹೇಳಬೇಕೆಂದವಳು ಮಾತು ನುಂಗಿಕೊಂಡು ...ಮ್ಮನೆ ನಿಂತುಬಿಟ್ಟಳು.

"ಗಟ್ಟಿಮನಸ್ಸುಮಾಡಿ ಒಮ್ಮೆ ಹೇಳಿಬಿಡು. ನನಗೆ ...ಊರಿಗೆ ಹೋಗಬೇಕಾಗಿದೆ."

...ಕತ್ತು ಮೇಲಕ್ಕೆತ್ತಿ ಸರಲೆ ಮಾತನಾಡಲು ಪ್ರಯತ್ನಿಸಿ...ಳು, ಮತ್ತೆ ಸೋತಳು.

ನನಗೆ ನಗು ತಡೆಯದಾಯಿತು.

"ನಾನೊಲ್ಲೆ" ಎನ್ನುತ್ತ ಸರಲೆ ಮತ್ತಿಷ್ಟು ನಾಚಿದಳು. ಏನೋ ಒಂದು ಸುಖವಾರ್ತೆಯನ್ನು ಹೇಳಬೇಕೆಂಬ ...ಚಾರದಿಂದಲೆ ಆಕೆ ನಾಚಿದಳು; ಆಕೆ ನಾಚಿದಳೆಂದು ...ನಗೆ ತಿಳಿಯಿತೆಂಬುದು ತಿಳಿದಕೂಡಲೆ ಮತ್ತಿಷ್ಟು ನಾಚಿ...ಳು; ಇನ್ನು ತಾನು ಹೇಳಬೇಕೆಂದಿದ್ದ ಸಂಗತಿ ಹಾಗೇ ...ಳಿಯಿತಲ್ಲ ಎಂದು ಗೊಂದಲಗೆಟ್ಟು ಆಕೆಯ ನಾಚಿಕೆ ...ತೂ ಹೆಚ್ಚಾಯಿತು!

"ಗಂಡಂದಿರಿದಿರಿಗೆ ಚೆನ್ನಾಗಿ ಮಾತನಾಡಲು ಬರುವುದಿಲ್ಲ; ...ನಾತೇನೋ ರಾಜ್ಯ-ಸಾಮ್ರಾಜ್ಯ ಕಟ್ಟುವ ಬಗ್ಗೆ! ಸ್ತ್ರೀಯರಿ...ಗೊಂದೂ ಹಕ್ಕು ಕೊಡಬಾರದು ನೋಡು!" ನಾನೆಂದೆ.

ಸರಲೆಯು ಏನೂ ಮಾತನಾಡದೆ ನನ್ನ ಕಡೆಗೊಂದು ಪತ್ರ...ನ್ನೆಸೆದು ಬಿಟ್ಟಳು. ಅದನ್ನೋದಿಕೊಂಡವನೇ ಕೋಟು ...ಜೊಪ್ಪಿಗೆ ಹಾಕಿಕೊಂಡು ಹೊರಹೊರಡಲು ಎದ್ದುಬಿಟ್ಟೆನು. ...ದರೆ ಸರಲೆಯು ನನ್ನನ್ನು ತಡೆದಳು.

"ಇಶ್! ಹೀಗೇನು ಮಾಡುವುದು?"

"ಇದರಲ್ಲಿ ಇಶ್ ಏನಿದೆ?"

"ನನ್ನ ಗೆಳತಿಯ ತಂಗಿ ನನಗೆ ಬೆಟ್ಟಿಯಾಗಲು ಬರು...ವಳಿದ್ದಾಳೆ; ಮತ್ತು ನೀವಾದರೋ ಮನೆಬಿಟ್ಟು ಓಡಿ ...ಹೋಗುತ್ತಿದ್ದೀರಿ! ಸ್ತ್ರೀಯರಿಗೆ ಹಕ್ಕು ಕೊಡಬಾರದು. ...ರಿ. ಮತ್ತು ಪುರುಷರಿಗೆ....?" ಸರಲೆಯು ವಾಕ್ಯವನ್ನು ...ಪೂರ್ತಿಗೊಳಿಸಲಿಲ್ಲ. ನಾನು ಬೇರೆ ಹೆಂಗಳೆಯರೊಡನೆ ...ಕಾರಣವಿಲ್ಲದೆ ಒಂದು ಮಾತನ್ನೂ ಆಡುತ್ತಿರಲಿಲ್ಲವೆಂಬುದು ...ವಳಿಗೊಳ್ಳೆ ಕೌತುಕದ ವಿಷಯವಾಗಿತ್ತು.

ಸರಲೆ ದೆಹಲಿಗೆ ಬಂದ ಮೇಲೆ ಸುಹಾಸಿನೀ ಸಿಂಹೆ ಎಂಬವಳು ಅವಳ ಗೆಳತಿಯಾಗಿದ್ದಳು. ಆಕೆ ಒಂದು ಶಾಲೆಯಲ್ಲಿ ಮುಖ್ಯಾಧ್ಯಾಪಿಕೆಯಾಗಿದ್ದಳು. ಈಚೆಗೆ ಆಕೆಗೆ ಕಾನಪುರಕ್ಕೆ ವರ್ಗವಾಗಿತ್ತು. ಆಕೆಯ ತಂಗಿ ಸುಭಾಷಿಣಿಯು ಚಿಕ್ಕಂದಿನಲ್ಲಿಯೆ ಅಮೇರಿಕಾ ದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋಗಿದ್ದಳು; ಅಲ್ಲಿಯ ಶಿಕ್ಷಣ ಮುಗಿಸಿ, ಇಂಗ್ಲೆಂಡಿಗೆ ಹೋಗಿ, ಅಲ್ಲಿಂದ ಕರಾಚಿಯ ಮೇಲಿಂದ ದೆಹಲಿಗೆ ವಿಮಾನಮಾರ್ಗವಾಗಿ ಬರುವವಳಿದ್ದಳು. ಸುಹಾಸಿನಿಗೆ ವಾರ್ಷಿಕ ಪರೀಕ್ಷೆಗಳ ಗೊಂದಲ; ಆದ್ದರಿಂದ ಸರಲೆಯೇ ಸುಭಾಷಿಣಿಯನ್ನು ಇದಿರುಗೊಂಡು ತನ್ನ ಮನೆಯಲ್ಲಿಳಿಸಿಕೊಳ್ಳಬೇಕೆಂದು ಬಿನ್ನಯಿಸಿಕೊಂಡಿದ್ದಳು.

"ಬೇಡವಪ್ಪಾ ಆ ಅಮೆರಿಕನ್ ಬ್ಲೂ ಸ್ಟಾಕಿಂಗ ನಮ್ಮಲ್ಲಿ ಉಳಿದುಕೊಳ್ಳುವುದು! ನೀವೇ ಇಲ್ಲಿರದಿದ್ದರೆ ಆಕೆ ಏನು ಮಾಡುತ್ತಿದ್ದಳು? ಅಲ್ಲದೆ ಇಲ್ಲಿ ಇನ್ನಾರೂ ಬಂಗಾಲಿ ಬಾಬುಗಳೇ ದೊರೆಯಲಾರರೆ? ಯುರೋಪಿಯನ್ ಹೋಟಲುಗಳಿಗೇನೂ ಕೊರತೆಯಿಲ್ಲವಷ್ಟೆ!"

"ಇದೆಂಥ ಮಾತು! ನನ್ನ ಗೆಳತಿ ಹೇಳುವುದೇನು? ನೀವು ಹೀಗೆ ಮಾತನಾಡುವುದೇನು?"

"ನಿನ್ನ ಇಷ್ಟ! ವಿಧಿಯಿಲ್ಲ. ಮಾಡುವುದೇನು?"

* * * *

ಸುಭಾಷಿಣಿಯನ್ನು ಸ್ವಾಗತಿಸಲು ನಾವು ವಿಮಾನಗೃಹಕ್ಕೆ ಮಧ್ಯಾಹ್ನ ಹೋದೆವು. ಪರಸ್ಪರ ಪರಿಚಯವನ್ನು ಮಾಡಿಕೊಳ್ಳುವುದಾದ ಮೇಲೆ, ತಕ್ಕ ಶಬ್ದಗಳಿಂದ ಅವಳನ್ನು ಉಪಚರಿಸಿದೆವು; ಮತ್ತು ಕಾರಿನಲ್ಲಿ ಕೂರಿಸಿಕೊಂಡು ಮನೆಗೆ ಬಂದೆವು. ಸ್ನಾನ, ಭೋಜನ, ನಿದ್ರೆ, ವಿಶ್ರಾಂತಿಗಳಲ್ಲಿಯೆ ಆ ದಿನ ಕಳೆಯಿತು. ಮರುದಿನದಿಂದಲೆ ಸುಭಾಷಿಣಿಯ ನಮ್ಮ ಮನೆಯಲ್ಲಿಯ ವಾಸ್ತವ್ಯ ಆರಂಭವಾಯಿತೆನ್ನಬಹುದು. ತಿರುತಿರುಗಿ ಸರಲೆಯನ್ನು ಮುದ್ದಿಡುವುದು, 'ಓ ಮಾಯ್' 'ಡಿಯರ ಮಿ' ಎಂದು ಮಾತು ಮಾತಿಗೊಮ್ಮೆ ಅನ್ನುವುದು, ಚಿಲ್ಲರೆ ಕಾರಣಕ್ಕಾಗಿ ಆನಂದವಾಚಕ, ದುಃಖವಾಚಕ ಶಬ್ದಗಳನ್ನು ಉಚ್ಚರಿಸುವುದು—ಉಚ್ಚರಿಸುತ್ತಿರುವಾಗಲೆ ಮುಖಭಾವಗಳನ್ನು ಬದಲಾಯಿಸುವುದು—ಇದರಿಂದ ನನಗೊಳ್ಳೆ ಮನರಂಜನೆಯಾಯಿತು. ತಡೆಯಿಲ್ಲದ ಅವಳ ಮಾತಿನ ಶೈಲಿ, ಅವಳ ನಡೆವಳಿಕೆಯಲ್ಲಿಯ ಗಂಡುಗಾಡಿ, ಅತಿಚಿಲ್ಲರೆ ಕೆಲಸಗಳಲ್ಲಿಯೂ ಬೇರೆಯವರಿಗೆ ಮೈಕೈಯಿಂದ ಔಪಚಾರಿಕವಾಗಿ ನೆರವಾಗುವುದರಲ್ಲಿ ವ್ಯಕ್ತವಾಗುವ ಅವಳ ದಾಕ್ಷಿಣ್ಯ—ಇವೆಲ್ಲ ಯಾರ

ಮನಸ್ಸನ್ನೂ ಸೆಳೆಯುವಂತಹವಿದ್ದವು. ಒಂದು ವಿಷ
ಯದ ಮೇಲೆ ಮಾತನಾಡುತ್ತ ಅದನ್ನು ನಡುವೇ ಬಿಟ್ಟು
ಇನ್ನೊಂದನ್ನು ಪ್ರಾರಂಭಿಸುವುದು, ಈ ವಿಷಯಪಲ್ಲಟ
ದಲ್ಲಿಯ ಅಸಂಬದ್ಧತೆಯನ್ನು ಮಾತಿನ ಚಾತುರಿಯಿಂದ
ಮರೆಮಾಡುವುದು ಅವಳಿಗೆ ಬಹಳ ನಯವಾಗಿ
ಸಾಧಿಸಿತ್ತು. ಸುಭಾಷಿಣಿಯ ಬದಲು ಇನ್ನೊಬ್ಬ ಲಜ್ಜಾವತಿ
ಯಿದ್ದಿದ್ದರೆ, ನನಗೆ ಬಹಳ ಸಂಕೋಚವೆನಿಸಬಹುದಾಗಿತ್ತು.
ಆದರೆ ಅವಳ ದಿಟ್ಟತನ, ಅದರಲ್ಲಿಯೂ ತೋರಿಬರುವ
ಋಜುತೆ, ವಿಷಯಪೂರ್ಣಸಂಭಾಷಣೆಗಳು ನನ್ನ ಮುದು
ಡಿದ ಮನಸ್ಸನ್ನು ಅರಳಿಸಿಬಿಟ್ಟವು. ನಾನೂ ಸರಲೆಯೂ
ಅವಳ ಆದರಾತಿಥ್ಯವನ್ನು ಅತ್ಯಂತ ಆಸ್ಥೆಯಿಂದ ಮಾಡ
ತೊಡಗಿದೆವು.

ನಮ್ಮ ಊಟ ಇತ್ಯಾದಿಯೆಲ್ಲ ಹಿಂದೀಪದ್ಧತಿಯದಾ
ಗಿದ್ದರೂ, ಉಳಿದ ಇರುವಿಕೆಯ ರೀತಿ ಇಂಗ್ರೇಜಿಥಾಟಿಯ
ದಾಗಿದ್ದುದರಿಂದ, ಸುಭಾಷಿಣಿಗೆ ಅಷ್ಟೇನೂ ತೊಂದರೆ
ಯೆನಿಸಿರಲಿಕ್ಕಿಲ್ಲ. ಆಕೆಗಾಗಿಯೆ ಒಂದು ಬೇರೆ ಕೋಣೆ
ಯನ್ನು ಸಜ್ಜುಗೊಳಿಸಿದ್ದೆವು. ಸರಲೆಯು ಎಲ್ಲ ಮನೆಗೆಲಸ
ವನ್ನು ತಾನೆ ಮಾಡಿಕೊಳ್ಳುತ್ತಿದ್ದಳು. ಪಾತ್ರೆ ತಿಕ್ಕು
ವುದು, ಬಟ್ಟೆ ಒಗೆಯುವದು, ಕಸ ಗುಡಿಸುವದು ಮತ್ತು
ಹಾಸಿಗೆ ಹಾಸುವುದು ಇಷ್ಟಕ್ಕಾಗಿ ಮಾತ್ರ ಒಬ್ಬ ಕೆಲಸದಾಕೆ
ಯನ್ನು ಇಟ್ಟಿದ್ದಳು. ಆದ್ದರಿಂದ ಸುಭಾಷಿಣಿಯ
ಉಪಚಾರದ ಕೆಲಸವನ್ನು ಹೆಚ್ಚಾಗಿ ಸರಲೆಯೇ ಮಾಡ
ಬೇಕಾಗಿತ್ತು.

ಆಳು-ಹೋಳು, ಅತಿಥಿ-ಅಭ್ಯಾಗತರನ್ನು ಮನೆಯಲ್ಲಿ
ಬರಮಾಡಿಕೊಳ್ಳುವುದೆಂದರೆ ಮನೆಯಲ್ಲಿಯ ಮನೋಹರ
ರಹಸ್ಯಮಯತೆಯನ್ನು ಬೈಲಿಗೆಳೆದಂತೆಯೆ ಎಂದೊಬ್ಬ
ಮಹನೀಯರು ಎಂದಿರುವರು. ಈ ಮಾತಿನ ಯಥಾರ್ಥ
ತೆಯು ಸುಭಾಷಿಣಿಯು ನಮ್ಮ ಮನೆಯಲ್ಲಿ ಕಾಲಿಟ್ಟಂದಿ
ನಿಂದಲೂ ಗೋಚರವಾಗತೊಡಗಿತು. ನಮ್ಮ ಪ್ರೇಮಿ
ಜೀವನದಲ್ಲಿ ಮುಚ್ಚುಮರೆ ಮಾಡುವಂತಹದೇನೂ ಇರ
ಲಿಲ್ಲ. ಆದರೆ ಬೇರೆಯವರಿಂದ ಅಡಗಿಸುವಂತಹದೇನೂ
ಇರದಿದ್ದರೂ, ಅವರಿಗೆ ಎಲ್ಲವೂ ಕಂಡೇತೀರಬೇಕೆಂದು
ಯಾರಿಗೂ ಅನಿಸಲಾರದು. ಸುಭಾಷಿಣಿಯಾದರೋ ನಮ್ಮ
ಸಂಸಾರಜೀವನದ ವಿವರವಿವರವನ್ನು ದಿಟ್ಟಿಸಿ, ಪರಿಕಿಸಿ
ನೋಡುತ್ತಿದ್ದಳು. ಅದರಿಂದ ಮೊದಮೊದಲು ನಾನು
ಕೊಂಚ ಗೊಂದಲಗೆಟ್ಟು ಹೋದೆನೆಂದು ಒಪ್ಪಿಕೊಳ್ಳು
ತ್ತೇನೆ. ಸ್ತ್ರೀಯರನ್ನು ಎವೆಯಿಕ್ಕದೆ ನೋಡುವ ಪುರುಷ

ರಿಂದ ಅವರಿಗೆ ಎಂತಹ ತೊಂದರೆಯಾಗುತ್ತ
ಕಲ್ಪನೆಯು ನನಗೆ ಚೆನ್ನಾಗಿಯೆ ಆಯಿತು.

ಸುಭಾಷಿಣಿಯು ನಮ್ಮನ್ನು ಇಷ್ಟು ಹತ್ತಿ
ಸುವುದರ ಮರ್ಮವು ನನಗಾಗ ಗೊತ್ತಾಗಲಿ
ತಂದೆ ಬ್ರಹ್ಮೋಸಮಾಜದವರಿದ್ದರು. ಬ್ರ
ಗಳಲ್ಲಿ ಸ್ತ್ರೀಯರಿಗೆ ಇರುವಷ್ಟು ಸ್ವಾತಂತ್ರ್ಯ
ಕಂಡುಬರಲಾರದು. ಇಂತಹ ವಾತಾವರ
ವನ್ನು ಕಳೆದವಳು, ಅಲ್ಲದೆ ಅಮೇರಿಕದಂತಹ
ದೇಶದಲ್ಲಿ ತನ್ನ ಯೌವನವನ್ನು ಕಳೆ
ಜೀವನದ ಬಗ್ಗೆ ಯಾವ ದೃಷ್ಟಿಯುಳ್ಳವ
ದನ್ನು ಹೇಳಬೇಕಾಗಿಲ್ಲ.

ನಮ್ಮ ಮನೆಯಲ್ಲಿಯೋ ಇದರ
ಸರಲೆಯು ಕಾಲೇಜಿನಲ್ಲಿ ಕಾಲಿಟ್ಟವಳಾಗಿ
ಮನೆಯ ರೀತಿರಿವಾಜು ಹಳೆಯ ತಲೆಮಾ
ಮನೆಯಲ್ಲಿ ಸರಲೆಯೊಡನೆ ಸರಲವಾಗಿ
ದಕ್ಕೂ ನನಗೆ ಅಡಚಣೆ. ಇದರಿಂದ ನಮ್ಮ
ಗತ ಜೀವನದ ಕಲ್ಪನೆ ಬರಬಹುದಾಗಿದೆ.
ನಮಗೆ ಸ್ವಾತಂತ್ರ್ಯದ ಮೂಲಕ ಮತ್ತು
ಗಿನ 'ಸಾಹೇಬ'ರ ಬರುಹೋಗುವಿಕೆಯ ಮೂ
ಇಂಗ್ರೇಜಿ ಪದ್ಧತಿಯು ರೂಢಿಗೊಂ
ಮೇಲ್ನೋಟದ ಮರೆಗೆ ನಮ್ಮ ಹಳೆಯ
ಅವಿತುಕೊಂಡಿರದೆ ಇರಲಿಲ್ಲ. ನಮ್ಮ—
ಗಳಲ್ಲಿಯ ಈ ಅಂತರದಿಂದಲೆ ಅವಳಿಷ್ಟು
ನಮ್ಮನ್ನು ನಿರುಕಿಸುತ್ತಿರಬೇಕು.

ಮೇಲಾಗಿ ಸುಭಾ (ನಮ್ಮಲ್ಲಿ ಈ ಸಲ
ರೂಢವಾಗಿತ್ತು) ಒಬ್ಬ ಪ್ರಸಿದ್ಧ ಲೇಖಕ
'ಲೇಡೀಜ್ ಜರ್ನಲ್' 'ವೂಮನ್ಸ್ ಫ್ರೆಂಡ್'
ಮಹಿಳೆಯರ ಮಾಸಪತ್ರಿಕೆಗಳಲ್ಲಿ ಅವ
ಪ್ರಕಟವಾಗುತ್ತಿದ್ದವು. ಮರಳಿ ಅಮೇರಿ
ವಾಗ ಹಿಂದುಸ್ತಾನದ ಸ್ಥಿತಿಯನ್ನು ತಿ
ಕಥೆಗಳೇ ಮೊದಲಾದ ಲೇಖನಗಳನ್ನು
ಅವಳು ತನ್ನ ಪರಿಚಯದ ಹಲವು
ಯರಿಗೆ ಮಾತುಕೊಟ್ಟಿದ್ದಳು. ನಮ್ಮ ಜೀ
ಆಕೆ ಇಷ್ಟು ಮನಸ್ಸುಗೊಟ್ಟು ನೋಡುವ
ಆಕೆಯ ಕಣ್ಣಿಗೆ ಬಿದ್ದ ಪೌರಸ್ತ್ಯ-ಪಾಶ್ಚಾತ್ಯ
ಳಗಿನ ತೀವ್ರಭೇದವೆ ಇರಬೇಕು. ನಮ್ಮ

ನಳಿಗೆ 'ಸಂಕ್ಷಿಪ್ತ ಭಾರತೀಯ ದಾಂಪತ್ಯಜೀವನ' ವೆಂದು ...ನಿಸಿರಬಹುದು!

ಈ ಎಲ್ಲ ಮಾತುಗಳು ನನಗೆ ಹಿಂದಿನಿಂದ ತಿಳಿದವು. ...ಕೆ ಬಂದ ಮರುದಿನ ಮುಂಜಾನೆ ಮೇಜಿನ ಮೇಲೆ ಬಟ್ಟೆ ...ಸಿ ಉಪಹಾರದ ಸಿದ್ಧತೆಯನ್ನು ಮಾಡಿಟ್ಟಿದ್ದೆವು. ...ಊವರೂ ಉಪಹಾರವನ್ನು ಯಥೇಚ್ಛವಾಗಿ ಸೇವಿಸಿದೆವು. ...ಹೊತ್ತಿನಲ್ಲಿ ಸಂಭಾಷಣೆಯಲ್ಲಿ ತೊಡಗಿದವರು ನಾನು ...ತ್ತು ಸುಭಾ. ಸರಲೆಯನ್ನು ಅವಳು ಮಾತಿನಲ್ಲಿ ತೊಡಗಿಸ ...ಕೆಂದು ತುಂಬಾ ಪ್ರಯತ್ನಪಟ್ಟಳು, ಆದರೆ ಅವಳಿಗೆ ...ಲವು ದೊರೆಯಲಿಲ್ಲ. ಸರಲೆಗೆ ನನ್ನ ಮಾತನ್ನು ಕೇಳುವು ...ರಲ್ಲಿ ಆಸಕ್ತಿಯಿರುವಷ್ಟು ನನ್ನೊಡನೆ ಚರ್ಚೆಮಾಡುವು ...ದಲ್ಲಿರಲಿಲ್ಲವೆಂಬುದು ಅವಳಿಗೆ ಗೊತ್ತಾಗದೆ ಹೋಗಲಿಲ್ಲ. ...ನೆಲ್ಲ ಅವಳಿಗೆ ತುಂಬಾ ಸೋಜಿಗವನ್ನುಂಟುಮಾಡಿತು. ...ಸರಿದನ್ನು ಆಡಿತೋರಿಸಲಿಲ್ಲ. ಸಂಭಾಷಣಸಮಯದಲ್ಲಿ ...ನ್ನೊಬ್ಬರ ಮುಖವನ್ನು ನಿರುಕಿಸುತ್ತ ಕುಳಿತು, ...ಯಿಂದ ಹೊರಬೀಳುವ ಪ್ರತಿಶಬ್ದವನ್ನೂ ಪ್ರೀತ್ಯಾದರ ...ರ್ವಕವಾಗಿ ಸ್ವೀಕರಿಸುವ ಮನೋವೃತ್ತಿಯು ಶುದ್ಧ ...ಸ್ಯದ್ದೇ ಎಂದು ಅವಳಿಗೆ ಖಂಡಿತ ಅನಿಸಿರಬೇಕು. ...ನೇನೋ ಸರಲೆಯ ಅತಿಥಿಯಾಗಿದ್ದಳು; ಆದರೂ ಆಕೆಯ ...ತಿಗೆ ಹೆಚ್ಚಾಗಿ ಗಮನ ಕೊಡಬಾರದಾಗಿ ನಿಶ್ಚಯಮಾಡಿದ ...ಬಂತೆ ಕಂಡಿತು. ಬೌದ್ಧಿಕ ದಾಸ್ಯದಲ್ಲಿ ಹೊರಳಾಡುವ ...ೀವನ್ಮೃತಳನ್ನು ಯಾರಾದರೂ ಗೌರವಿಸಬಹುದೇ?

ಉಪಹಾರವಾದ ಕೂಡಲೆ ಸಿಗಾರೇಟ ಹೊತ್ತಿಸಲು ಕಡ್ಡಿ ...ಟ್ಟಿಗೆಯನ್ನು ನಾನು ಹುಡುಕಾಡುವಷ್ಟರಲ್ಲಿ ಸರಲೆಯು ...ರ್ಚಿಯಿಂದೆದ್ದು ಪೆಟ್ಟಿಗೆ ಹುಡುಕಲು ಹೋದಳು. ...ೀಪುರುಷರು ಸಮಾನದರ್ಜೆಯಿಂದ ನಡೆನುಡಿಯುವ ...ಸಮಾಜದಲ್ಲಿ ಬೆಳೆದವಳಾದ ಸುಭಾಷಿಣಿಯ ಮನಸ್ಸಿಗೆ ...ನೊಂದು ಚಿಕ್ಕದಾದ ಆಘಾತವೆ ಆಗಿರಬೇಕು. ತಾನು ...ೀಡುವುದು ಕಲ್ಪನೆಯ ಮಾಯಾಜಾಲ ಬೇರೆ ಇರಲಾರ. ...ಷ್ಟೆ ಎಂದವಳಿಗೆ ಅನಿಸಿರಬೇಕು. ಭೋಜನಸಮಯ ...ದಲ್ಲಿ ಒಬ್ಬ ಬಾದಶಹನಂತೆ ಖಾದ್ಯಪೇಯಗಳನ್ನು ಸ್ವೀಕರಿ ...ಸುವ ಕೆಲಸವನ್ನು ಮಾತ್ರ ನಾನು ಮಾಡುತ್ತಿದ್ದೆನು. ನನಗೆ ...ನೇನು ಬೇಕೆಂಬುದನ್ನು ಮುಂಗಡ ಊಹಿಸಿಕೊಂಡು ತಕ್ಕ ...ರ್ಪಾಡುಮಾಡುವುದು ಸರಲೆಯ ಕೆಲಸವಾಗಿತ್ತು. ಅದರ ...ಯೂ ಏನಾದರೂ ಕೊರತೆ ಕಂಡುಬಂದರೆ ನಂಬಿಗೆಯ ...ಕಿನಂತೆದ್ದು ಬೇಕಾದ ಪದಾರ್ಥವನ್ನು ಅವಳು ತಾನಾ ...ಯೆ ತಂದುಕೊಡುವಳು. ಊಟಮುಗಿದು ಕೈತೊಳೆದು ಕೊಂಡಕೂಡಲೆ ಟವಲನ್ನು ಹಿಡಿದುಕೊಂಡು ಸರಲೆಯು ಸಿದ್ಧಳು. ಕೈ-ಬಾಯಿ ಒರಸಿಕೊಳ್ಳುವುದರೊಳಗಾಗಿ ಕಟ್ಟಿದ ವೀಳ್ಯ ಸಿದ್ಧ. ಕಚೇರಿಗೆ ಹೊರಡುವ ಪೂರ್ವದಲ್ಲಿ ಅಗತ್ಯ ವಿರುವ ಬಟ್ಟೆಬರೆ ಅಲ್ಮಿರಾದಿಂದ ಹೊರಬಂದು ತಯಾರಾ ಗಿರುತ್ತಿದ್ದವು. ಹಾಗೆಯೆ ಕಾಲುಚೀಲಗಳನ್ನು ಒಗೆಯು ವುದು ಮತ್ತು ಹೊಲಿಯುವುದು, ಬೂಟುಗಳನ್ನು ಒರಸಿಡು ವುದು, ಬಟ್ಟೆ ಬದಲಾಯಿಸುವುದು, ಕೋಟು ಏರಿಸುವುದು, ಟಾಯ್ ಕಟ್ಟುವುದು ಮೊದಲಾದ ಕೆಲಸಗಳಲ್ಲಿ ಸರಲೆಯು ದಕ್ಷತೆಯಿಂದ ನೆರವಾಗುವುದನ್ನು ನೋಡಿ ಸುಭಾಷಿಣಿಯ ಭ್ರುಕುಟಿಗಳು ವಕ್ರವಾಗುತ್ತಿದ್ದವು. ಗುಲಾಮಗಿರಿ ಇನ್ನೂ ಪ್ರಚಾರದಲ್ಲಿರುವ ದೇಶದಲ್ಲಿ ನಾನು ಬಂದಿರುವೆನೇ ಎಂದ ವಳಿಗೆ ಎನಿಸುತ್ತಿರಬೇಕೆಂದು ನನಗೆ ಸಂಶಯ ಬರತೊಡ ಗಿತು.

ಕಚೇರಿಯಿಂದ ತಿರುಗಿ ಬರುವ ಹೊತ್ತಿಗೆ ಸರಲೆಯ ಚಾಕರಿಯು ಮತ್ತೆ ಪ್ರಾರಂಭವಾಗುತ್ತಿತ್ತು. ಪಾದತ್ರಾಣ ಗಳನ್ನು ತೆಗೆದಿಡುವುದು, ಬಟ್ಟೆ ತೆಗೆಯುವುದು, ತಿನಿಸು-ಉಣಿಸು ತಯಾರಿಸುವುದು—ತರುವುದು, ತೆರವಾದ ಪಾತ್ರೆ ಗಳನ್ನು ತೆಗೆದಿಡುವುದು—ಈ ಎಲ್ಲ ಕೆಲಸಗಳನ್ನು ಗಿರಣಿ ಯಲ್ಲಿಯ ಒಂದು ನಿರ್ಜೀವ ಆದರೆ ಸಮಯಶೀಲ ಯಂತ್ರ ದಂತೆ ಸರಲೆಯು ಮಾಡುತ್ತಿದ್ದಳು, ಇದರಲ್ಲಿ ಅವಳಿಗಾವ ಅಗೌರವವೂ ಕಾಣುತ್ತಿರಲಿಲ್ಲ; ನನಗೂ ವಿಚಾರಣೀಯ ಅಂಶವೇನೂ ಅನಿಸುತ್ತಿರಲಿಲ್ಲ. ಸುಭಾ ಮಾತ್ರ ಒಳಗೊಳಗೆ ಕುದಿಯುತ್ತಿದ್ದಳು.

ಮೂರನೆಯ ದಿನ ಮಧ್ಯಾಹ್ನ ನಾನು ಕಚೇರಿಗೆ ಹೋಪಾಗ ಸರಲೆಯು ಗೃಹಕೃತ್ಯಗಳಲ್ಲಿ ತೊಡಗಿದ್ದುದನ್ನು ನೋಡಿ ಸುಭಾಷಿಣಿಯು "ನಾನು ಕಂಡ ಭಾರತೀಯ ಗೃಹಜೀವನ" ಎಂಬ ಲೇಖನವನ್ನು ಬರೆಯಲು ಮೊದಲು ಮಾಡಿದಳು. ಸುಭಾಷಿಣಿಯಂತಹ ಅಭಿಜಾತ ಲೇಖಿಕೆಗೆ ಪರಿಚಿತವಿಷಯದ ಮೇಲಿನ ೩೦೦೦ ಶಬ್ದಗಳ ಬರಹ ವನ್ನು ಬರೆಯುವುದು ಅತಿ ಸುಲಭ ವಿಷಯವಾಗಿತ್ತು. ಇಂತಹ ಬರೆವಣಿಗೆಯನ್ನು ಅವಳು ಕೂತಪೆಟ್ಟಿಗೆ ಮುಗಿಸಿ ಬಿಡಬಹುದಾಗಿತ್ತು;—ಆ ಸಿದ್ಧತೆಯಿಂದ ಟೈಪ್‌ರೈಟರನ್ನು ತೆರೆದಿಟ್ಟುಕೊಂಡು ಕುಳಿತಳು. ಆದರೇಕೋ ಆದಿನ ಆಕೆಯ ಪ್ರತಿಭೆಯು ಅಪ್ರತಿಹತವಾಗಿ ಹರಿಯಲಿಲ್ಲ. ಪ್ರಥಮ ಪುಟ ವನ್ನು ಎರಡು ಸಲ ಬರೆದು ಎಸೆದುದಾಯಿತು; ಎರಡನೆಯ ಪುಟದ ಪ್ರತಿಯನ್ನು ಹರಿದೊಗೆಯಬೇಕಾಯಿತು;—ಇಷ್ಟಾ ದರೂ ಮನಸ್ಸಿಗೆ ತಕ್ಕಂತೆ ಲೇಖನ ಸಾಗಲಿಲ್ಲ. ಅದೇನು

ಅಡಚಣಿಯೆನಿಸಿತೋ—ಸುಭಾಷಿಣಿಯ ಭಾವಗಂಗೆಯು ಅಂದು ಹರಿಗಡಿದಂತಾದಳು.

ಸುಭಾ ಸ್ವೈರಣೆಯರಿಯದ ಬರೆಹೆಗಾರ್ತಿ. ಆದರೆ ಅವಳು ಪ್ರಾಮಾಣಿಕಳೂ ಆಗಿದ್ದಳು. ಹೊಣೆಯರಿತು ಬರೆಯುವ ರೂಢಿಯು ಅವಳದಾಗಿತ್ತು. ದಿನಕ್ಕೆ ೨೦೦೦ ಶಬ್ದಗಳನ್ನು ಗೀಚಿಬಿಟ್ಟು ಸುಖವೇತನ ಗಳಿಸುವ ಬಾಡಿಗೆಯ ಬರೆಹೆಗಾರ್ತಿ ಅವಳಾಗಿರಲಿಲ್ಲ. ಸರಲೆಯ ಗುಲಾಮಗಿರಿಯನ್ನೂ ನನ್ನ ಸುಲ್ತಾನೀ ನಡೆವಳಿಕೆಯನ್ನೂ—ಹೆಸರು ದೆಸೆ ಹಾಕದೆ—ಚೆನ್ನಾಗಿಯೆ ಚಿತ್ರಿಸಿದಳು. ಆದರೆ ಇಂತಹ ದಾಸ್ಯದ ಹುದಲಿನಲ್ಲಿ ಸಿಕ್ಕಿಬಿದ್ದ ಹೆಂಗಸು ಮತ್ತು ಕಲ್ಲೆದೆಯ ದಾಕ್ಷಿಣ್ಯಶೂನ್ಯ ಪತಿ—ಇವರಲ್ಲಿ ಪ್ರಗಾಢವಾದ ಪ್ರೇಮವೇಕಿದೆ, ಎಂತಿದೆ? ಅವರ ಸಂಸಾರವು ಸುಖಪೂರ್ಣವೂ ಭಾಗ್ಯಶಾಲಿಯೂ—ತೋರಿಕೆಗೇ ಆಗಲಿ—ಏಕಿರಬೇಕು?—ಎಂಬುದು ಮಾತ್ರ ಅವಳಿಗೆ ಒಡೆಯಲಾರದ ಒಡಪವಾಯಿತು. ಅದನ್ನೊಡೆಯದೆ ಬರಹವನ್ನು ಪೂರ್ತಿಗೊಳಿಸುವುದು ಸತ್ಯದ ಕೊಲೆಯೆ ಎಂದೆನಿಸಿ, ಅದನ್ನಾದಿನ ಅವಳು ಮುಗಿಸದೆ ಬಿಟ್ಟಳು. ಇದರ ಕೊನೆ ನೋಡಿಯೇ ಬಿಡಬೇಕೆಂದೆನಿಸಿ, ನನ್ನೊಡನೆ ಸಮಕ್ಷಮದಲ್ಲಿ ಚರ್ಚಿಸಿಯೆ ಇತ್ಯರ್ಥಗೊಳಿಸಬೇಕೆಂದು ನಿರ್ಧರಿಸಿದಳು. ಮರುದಿನ ಸರಲೆಯು ದೇವತಾಪೂಜೆಯಲ್ಲಿ ಮಗ್ನಳಾಗಿದ್ದುದನ್ನು ಕಂಡು, ನನ್ನೊಡನೆ ಮಾತುತೆಗೆದಳು.

* * *

“ನಮ್ಮ ಸರಲಕ್ಕನಂತಹ ಪತ್ನಿ ದೊರೆತದ್ದಕ್ಕೆ ತಮ್ಮನ್ನು ಅಭಿನಂದಿಸಬೇಕಾಗಿದೆ.”

“ಸರಲೆಯ ಸ್ವಭಾವವು ತಮಗೆ ಮೆಚ್ಚಿಗೆಯಾದದ್ದಕ್ಕೆ ನನಗೆ ಸಂತೋಷವೆನಿಸುತ್ತದೆ.”

“ನಾನು ಅಮೇರಿಕದಲ್ಲಿ ೭-೮ ವರ್ಷ ಕಳೆದೆನು; ಆದರೆ ಸರಲೆಯಂತಹ ಸರಲ, ಸಹಿಷ್ಣು, ಸಂತೋಷಿಯಾದ ಹೆಣ್ಣುಮಗಳು ನನಗೆಲ್ಲಿಯೂ ಕಂಡುಬರಲಿಲ್ಲ.”

“ಇದು ನಿಜವೇ?”

“ಇದರಲ್ಲೇನು ಸಂಶಯ? ಮತ್ತು ತಮ್ಮಂತಹ ದಾಕ್ಷಿಣ್ಯಪೂರ್ಣ ಪತಿಯೂ ನನ್ನ ದೃಕ್ಪಥಕ್ಕೆ ಬರಲಿಲ್ಲ.”

“ಹಾಂ! ತಿಳಿಯಿತು! ನೀವು ವಿನೋದ ಮಾಡುತ್ತಿದ್ದೀರಿ!”

“ನಿಜವಾಗಿಯೂ ನಿಮ್ಮಗಳ ಅನ್ಯೋನ್ಯಪ್ರೇಮದ ಸರಿಸಾಟಿಯನ್ನು ನಾನೆಲ್ಲಿಯೂ ನೋಡಲಿಲ್ಲ.

“ನೀವು ಮನಃಪೂರ್ವಕವಾಗಿ ಮಾ... ಅದು ನಿಜವಾಗಿಯೂ ಸಂತೋಷದ ... ಪ್ರಪಂಚಪರ್ಯಟನವನ್ನು ಮಾಡಿದ ತಮ್ಮ... ರಸು ನನಗೆ ಹೆಚ್ಚಿನ ಬೆಲೆಯುಳ್ಳದ್ದಾಗಿದೆ.”

“ನಾನೊಂದು ಪ್ರಶ್ನೆ ಕೇಳುತ್ತೇನೆ. ... ಲಾರಿರಷ್ಟೆ?”

“ಛೆ! ಸಿಟ್ಟಾಗಬೇಕೇಕೆ? ಕೇಳಿಯೆ ಬಿಡಿ!”

“ಸರಲಕ್ಕನೊಡನೆ ಕೊಂಚವಾದರೂ ... ಯಿಂದ ನಡೆದರೆ, ತಮ್ಮ ಸಂಸಾರರಥವು ... ವಾಗಿ ಸಾಗಬಹುದೆಂದು ತಮಗೆ ಅನಿಸ... ಆಶ್ಚರ್ಯಾತಿಶಯದಿಂದ ನಾನು ಸ್ತಂಭಿತನಾ... ಕೇಳುವುದು ದಿಟವೇ, ಎನಿಸಿತು. ಪ್ರಾಣಾಧಿ... ಸರಲೆಯೊಡನೆ ಇನ್ನೂ ನ್ಯಾಯಬುದ್ಧಿಯಿಂದ ... ಬೇಕೆ? ಇದರ ಅರ್ಥವೇನು? ನನಗೇನೂ ತಿ... ನಾದೆ.

“ಇದು ನೋಡಿ! ಸಿಟ್ಟು ಬರಬಹುದೆ...ತು. ನಿಜವಾಯಿತು. ನಾನು ಸುಮ್ಮನೆ ಮಾತನಾ...

“ಹಾಗಲ್ಲ ಸುಭಾಬಾಯಿ. ನಿಮ್ಮ ಮಾ... ನನಗಾಗಲಿಲ್ಲ. ನಮ್ಮ ಸಂಸಾರ ಅತ್ಯಂತ ... ಗಳಿಂದ ಸಾಗಿರುವಾಗ, ಬೇರೆಯವರು ... ಕೊಳ್ಳುತ್ತಾರೆಂಬುದರ ಕಲ್ಪನೆಯೂ ನಮ... ನಾವೆಲ್ಲಿಯಾದರೂ ತಪ್ಪುತ್ತಿದ್ದರೆ ತಮ್ಮ... ಬೇಕು; ಖಂಡಿತ ವಿಚಾರಮಾಡುವೆವು.”

“ನಿಜವಾಗಿಯೂ ನೀವು ಬಹಳ ತಿಳಿ... ಮೃದು ಸ್ವಭಾವದವರೂ ತೋರುತ್ತೀ... ಸರಲೆಯ ಮೇಲೆ ಈ ಅನ್ಯಾಯವೇಕೆ?”

“ಸರಲೆಯ ಮೇಲೆ........ನನ್ನ ಅನ್ಯಾಯ...

“ಅನ್ಯಾಯ....ದಬ್ಬಾಳಿಕೆ!” ಸುಭಾ... ದಿಂದ ನುಡಿದಳು; “ಮುಂಜಾನೆಯಿಂದ ... ಗುಲಾಮಳಂತೆ ದುಡಿಸಿಕೊಳ್ಳುವಂತಹ ನಿಮ್ಮ... ದೇವತೆಗಳು ಅಮೇರಿಕದ ಸಂದಿಗೊಂದಿಯ... ಲಾರರು; ಅಪ್ಪಿತಪ್ಪಿ ಸಿಕ್ಕಿದರೆ, ‘ಲಿಂಚ್’ ಆಗ... ಸ್ತ್ರೀಯು ಪುರುಷನ ಸಹಚರಿ, ಸಖಿ, ಅರ್ಧಾ... ದಕ್ಕೆ ನಿಮ್ಮ ದಿನಚರಿಯು ಜೀವಂತವಿ... ಅವಳ ಸುಖ, ಬಯಕೆ-ಬೇಡಿಕೆ, ಮನೋ... ಎಂದಾದರೂ ವಿಚಾರಿಸಿರುವಿರಾ? ಕೂತ...

ರ್ಯಂತೆ ಆಜ್ಞೆಮಾಡುತ್ತ, ತೆರಪಿಲ್ಲದೆ—ಪಾಪ—ಆ ಪ್ಪಾಪ ಹೆಣ್ಣನ್ನು ಎಡತಾಕಿಸುತ್ತೀರಿ—ಆಗ ಅವಳ ತಂದೆ ನುಗೊಂದು ವಿಶ್ವಾಸದ ಗಂಟನ್ನು ಒಪ್ಪಿಸಿದ್ದಾರೆಂಬುದು ನುಗೇದಾವರೂ ಹೊಳೆಯುವುದೇ ? ತಿಂಗಳಿಗೆ ಮೂರು-ಲ್ಕುನೂರು ರೂಪಾಯಿ ಸಂಬಳ ಗಳಿಸುತ್ತೀರೆಂತ ಆಕೆ ನ್ನು ಈಪರಿ ಉರಿಸಿಕೊಳ್ಳುವುದು, ಆಕೆಯ ಸ್ವಾಭಿ ನದ ಪರಿವೆಯಿಲ್ಲದೆ ನಡೆಯುವುದು, ಈ ಸುಧಾರಣಾ ಗದಲ್ಲಿ ಒಬ್ಬ ಊಳಿಗದ ತೊತ್ತಿನಂತೆ ಅವಳನ್ನು ನಡೆ ಸಿಕೊಳ್ಳುವುದು....ನಿಮ್ಮಂತಹ ಸುಸಂಸ್ಕೃತ ಸಜ್ಜನರಿಗೆ ಭಿಸುತ್ತದೆಯೇ ? ”

ಸುಭಾಷಿಣಿಯ ಈ ಭಾಷಣಪ್ರಹಾರದಿಂದ ನಾನು ನಿಸುಗೊಳ್ಳಲಿಲ್ಲ. ಆಕೆಯ ಮಾತಿನಲ್ಲಿ ಸತ್ಯಾಂಶವಿರ ಕೆನ್ನಿಸಿತು. ಅವಳ ವಿಚಾರಸರಣಿ ನನಗೆ ಒಪ್ಪಿಗೆಯಾಗ ದ್ದರೂ, ನನ್ನ ಪತ್ನಿಯೊಡನೆ ನಾನು ನಡೆಯುವುದರಲ್ಲಿ ಜಾತಿಯ ಪಕ್ಷಪಾತಿಗೆ ರೇಗು ಬರಿಸುವಂತಹದೇನಾ ರೂ ಇರುತ್ತಿರಬೇಕೆಂದು ನನಗೆ ಮನವರಿಕೆಯಾಗತೊಡ ತು. ಆದರೂ ಸರಲೆಯು ಈ ಬಗ್ಗೆ ನನಗೇನೂ ಎಂದೂ ಳಿಯೇ ಇಲ್ಲವಲ್ಲ, ಎಂಬ ವಿಚಾರವು ನನ್ನ ಮನಸ್ಸಿನಲ್ಲಿ ಂಚಿ ಹೋಗದಿರಲಿಲ್ಲ; ಆ ವಿಚಾರವನ್ನು ನಾನು ಸುಭಾಷಿ ಗೆ ಸಾಧ್ಯವಿದ್ದಷ್ಟು ಸಪ್ರಮಾಣವಾಗಿ ತಿಳಿಸಲು ಮರೆಯ ಲ್ಲ.

“ಅನ್ಯಾಯ ಮಾಡುವವರು ಎಂದಿಗೂ ಹೀಗೆಯೇ ಳುವರು, ‘ನಿಮಗೆ ಅನ್ಯಾಯವಾಗಿ ತೋರುವುದರಲ್ಲಿ ದಕ್ಕೊಳಪಟ್ಟವರು ಸಂತೋಷಪಟ್ಟುಕೊಂಡೇ ಇರುವ ಲ್ಲ !’ ಅನ್ಯಾಯದ ಬಗ್ಗೆ ತ್ವೇಷವೆನಿಸದೆ ಅದರಲ್ಲಿ ತಾರ್ಥತೆಯನ್ನು ಅನಿಸಿಕೊಳ್ಳುವುದು, ಮೆಣಸರೆಯುವ ಜಮಾನನ ಬಗ್ಗೆ ಪ್ರೇಮವನ್ನಿಡುವುದು—ಇದರಂತಹ ಧೋಗತಿ ಇನ್ನಿರಲಾರದು. ಜುಲುಮೆ ಮಾಡುವವರು ಲುಮೆಯಲ್ಲವೆಂಬುದಕ್ಕೆ ಇದನ್ನೇ ಆಧಾರವಾಗಿಡುವುದು, ರ್ಯದ ಪರಮಾವಧಿಯಲ್ಲದಿನ್ನೇನು ? ”

ನಾನು ಮರುಮಾತನಾಡಲಾರದೆ ಹೋದೆನು. ಸುಭಾಷಿ ಣಿಯು ತಾರಸ್ವರದಲ್ಲಿ ಮಾತನಾಡುತ್ತಿದ್ದಳು. ಆವೇಶದಿಂದ ಅವಳ ಮುಖವು ಕೆಂಪಗಾಗಿತ್ತು. ಅವಳ ಮಾತಿನಲ್ಲಿ ತುಸುವಾದರೂ ಸತ್ಯಾಂಶವಿರದಿರಲಾರದೆಂದು ನನಗೆ ಮನ ವರಿಕೆಯಾಯಿತು. ಸರಲೆಯು ಸುಖಜೀವಿಯಾಗಿ ತೋರು ತ್ತಿದ್ದಳೂ, ಸ್ವಾತಂತ್ರ್ಯ-ಸಮತೆ-ಸ್ವಾಭಿಮಾನಗಳ ಒರೆಗಲ್ಲಿನ ಮೇಲೆ ತಿಕ್ಕಿ ನೋಡಿದರೆ ನನ್ನ ನಡೆವಳಿಕೆಯಲ್ಲಿ ಎಷ್ಟೋ ತಿದ್ದುಪಾಡು ಮಾಡಲವಕಾಶವಿದೆಯೆಂದೆನಿಸಿತು.

“ನೀವು ನಿರ್ದಾಕ್ಷಿಣ್ಯವಾಗಿ ನನ್ನ ತಪ್ಪನ್ನು ನನಗೆ ಹೇಳಿದಿರಿ ಇದಕ್ಕಾಗಿ ಉಪಕೃತನಾಗಿದ್ದೇನೆ. ನೀವು ನಮ್ಮಲ್ಲಿರಬಂದುದು ಒಂದು ದೈವಯೋಗವೆಂದೇ ಭಾವಿಸಿದ್ದೇನೆ. ನಿಮ್ಮ ಸ್ಥಳದಲ್ಲಿ ಇನ್ನಾರಿದ್ದರೂ ಅವರೀರೀತಿ ಅಚ್ಚುಕಟ್ಟಾಗಿ ನನ್ನ ಪ್ರಮಾದಗಳನ್ನು ತೋರಿಸುತ್ತಿರಲಿಲ್ಲ. ಈಗ ಇದ್ದಂತೆಯೇ ಇನ್ನು ನಾಲ್ಕಾರು ದಿನ ಇದ್ದುಬಿಡಿ. ಎಂದರೆ ನನ್ನ ತಿದ್ದಿದ ನಡೆವಳಿಕೆಯ ಪರಿಣಾಮವನ್ನು ನೀವು ಕಂಡುಕೊಳ್ಳುವಿರಿ.”

ಸುಭಾಷಿಣಿಯ ಮಾತಿನ ತಿರುಳನ್ನು ನುರಿಸಿಕೊಳ್ಳಬೇಕೆಂದು ನಾನಾದಿನ ಸಂಜೆಗೆ ಮನೆಗೆ ಬರಬಾರದಾಗಿ ನಿಶ್ಚಯಿಸಿದೆನು. ಕಚೇರಿಯಿಂದ ಅತ್ತಿಂದತ್ತ ವಾಯುಸೇವನೆಗೆ ಹೋಗಿ, ಫೋನಿನಿಂದ ಉಷೆಗೆ ಸುಭಾನೊಡನೆ ಸಿನೇಮಾ ನೋಡಲು ಹೋಗಬೇಕಾಗಿ ಸೂಚಿಸಿದೆನು. ನನ್ನದೆಲ್ಲಿ ತಪ್ಪುತ್ತಿದೆಯೆಂದು ಬಹಳ ಯೋಚಿಸಿದೆ. ನನಗೇನೂ ಹೊಳೆಯಲಿಲ್ಲ. ಆಗರೂ ಸುಭಾಷಿಣಿಯ ಕನ್ನಡಕಗಳಿಂದ ನನ್ನ ಗೃಹಜೀವನವನ್ನು ಪರೀಕ್ಷಿಸಲು ಪ್ರಾರಂಭಿಸಿದೆನು.

ಮನೆಯ ಆಡಳಿತದಲ್ಲಿ ಸರಲೆಗೆ ಸಂಪೂರ್ಣ ಸ್ವಾತಂತ್ರ್ಯವಿದ್ದಿತು. ತನ್ನ ಅನುಕೂಲತೆಗಾಗಿ ಅಥವಾ ಮನೋಲಹರಿಗಾಗಿ ಆಕೆ ಏನಾದರೂ ಬೇಡಿದರೆ ನಾನೆಂದೂ ಅದನ್ನು ಪೂರೈಸದಿರಲಿಲ್ಲ. ಜರೆದು ಮಾತನಾಡಿದುದಾಗಲಿ ಕೆಟ್ಟತನದಿಂದ ನಡೆಸಿಕೊಂಡುದಾಗಲಿ ನನ್ನಿಂದೆಂದೂ ಸಂಭವಿಸಲಿಲ್ಲ. ಅವಳ ಪ್ರಕೃತಿಸ್ವಾಸ್ಥ್ಯವನ್ನೂ ನಾನೆಂದೂ ದುರ್ಲಕ್ಷಿಸಿರಲಿಲ್ಲ. ಅಂತೂ ಈ ಮಹತ್ವದ ಅಂಶಗಳ ಮಟ್ಟಿಗೆ ನಾನು ‘ನಿರ್ದೋಷಿ’ಯೆ-ಆಗಿದ್ದೆನು.

ನಾನು ಮಾತನಾಡುತ್ತಿದ್ದಾಗ ನನ್ನ ಶಬ್ದಶಬ್ದವನ್ನೂ ಸರಲೆಯು ಮೂಕಭಕ್ತಿಯಿಂದ ಅಂಗೀಕರಿಸುತ್ತಿದ್ದುದರಲ್ಲಿ ಅವಳ ದಾಸ್ಯವೃತ್ತಿಯು ವ್ಯಕ್ತವಾಗುತ್ತಿತ್ತೆಂದು ನನಗೆ ತೋರಲಿಲ್ಲ. ಆಕೆಯ ವರ್ತನೆಯ ಮಟ್ಟಿಗೆ ಅವಳೇ ಜವಾಬ್ದಾರಳಾಗಿದ್ದಳು.

ಇನ್ನುಳಿದುದು ನನ್ನ ನಡೆವಳಿಕೆ. ಇಲ್ಲಿ ಮಾರ್ಪಾಡಿಗೆ ಅವಕಾಶವಿತ್ತು. ಅವಳಿಗೆ ಇನ್ನಿಷ್ಟು ದಾಕ್ಷಿಣ್ಯವನ್ನು ತೋರಿಸುವುದು ಸಾಧ್ಯವಿತ್ತು. ಪ್ರತಿಮಾತಿನಲ್ಲಿ ಅವಳ ಇಷ್ಟಾನಿಷ್ಟಗಳನ್ನು ಮತಾಭಿಮತಗಳನ್ನು ಬಯಕೆಬೇಡಿಕೆಗಳನ್ನು ವಿಚಾರಿಸುವುದು, ಅವಳು ಕೂತ ಹೊರತು ಕೂಡ

ದಿರುವುದು, ಇದನ್ನೆಲ್ಲ ಮಾಡುವುದು-ಕೈಯೊಳಗಿನ ಮಾತಾಗಿತ್ತು. ನಾವು ಹಿಂದೂಗಳು ಔಪಚಾರಿಕ ಸಂಗತಿಗಳಿಗೆ ಬಹಳ ಗಮನಕೊಡುವುದಿಲ್ಲ, 'ಥ್ಯಾಂಕ್ಸ್‌ಯೂ'ದ ಬಿರುಮಳೆಯನ್ನು ಸುರಿಸುವುದಿಲ್ಲ. ಆದರೆ ಈಗಿನ ದಿನಮಾನದಂತೆ ಹಾಗೆ ಸ್ವಲ್ಪ ಮಾಡುವುದರಿಂದಲೆ ಮಾನಮರ್ಯಾದೆ ದೊರೆಯುತ್ತದೆ. ಆಫೀಸಿನಲ್ಲಿ ಎಷ್ಟು ನಡೆವಳಿಕೆಯ ನಿಯಮಗಳನ್ನು ಪಾಲಿಸುತ್ತೇವೆ, ಮನೆಯಲ್ಲೇಕೆ ಪಾಲಿಸಬಾರದು ಎನಿಸಿತು.

ಸರಲೆಗೆ ಸ್ವಂತದ ಕೆಲಸವೆಂದೇನನ್ನೂ ಹೇಳಬಾರದೆಂತ ನಿಶ್ಚಯಿಸಿದೆನು. ಬಟ್ಟೆ, ಬೂಟು, ಬೆಂಕಿಪೆಟ್ಟಿಗೆ, ವಾಚು ಮೊದಲಾದುವುಗಳನ್ನು ತರಹೇಳದೆ, ತನ್ನ ಕೆಲಸ ತಾನೇ ಮಾಡುವುದಾಗಿ ಸಂಕಲ್ಪಮಾಡಿದೆನು. ಇದರಿಂದ ಸುಭಾಷಿಣಿಯ ಆಪಾದನೆಗಳಲ್ಲಿ ಬಹುಭಾಗವು ಹೊರಟುಹೋಗುವುದೆಂದು ನನ್ನ ತಿಳಿವಳಿಕೆಯಾಯಿತು. 'ನವೀನರೀತಿಯ ಜೀವನವು ಈಗಿನ ಲಲನೆಯರಿಗೆ ಬೇಕಾಗಿದ್ದಿರಬಹುದು, ಯಾರು ಬಲ್ಲರು? ನನ್ನ ನಡೆನುಡಿಯನ್ನು ನಾನೇ ತಿದ್ದಿಕೊಂಡರಾಯಿತು' ಎಂದುಕೊಂಡೆನು.

ಮರುದಿನ ನಿತ್ಯದಂತೆ ಚಹಾಪಾನಕ್ಕೆ ಮೂವರೂ ಕುಳಿತಿರುವಾಗ, ಕೆಟಲ್ ಕೈಯಲ್ಲಿ ನಾನೆ ಹಿಡಿದುಕೊಂಡು ಚಹಾ ಸುರುವಲು ತೊಡಗಿದೊಡನೆ, ಸರಲೆಯು ಚಕಿತಳಾದಳು. 'ಇದೇನೋ ಹೊಸ ಸಂಗತಿ ಕಾಣುತ್ತಿದೆ; ಅದು ಅಷ್ಟೇನೂ ಒಳ್ಳೆಯದಲ್ಲ' ಎಂಬ ವಿಚಾವು ಅವಳ ಮುಖದ ಮೇಲೆ ಮೂಡದಿರಲಿಲ್ಲ.

ಕಚೇರಿಗೆ ಹೋಗುವ ಮೊದಲು ಬಟ್ಟೆತೊಟ್ಟುಕೊಳ್ಳುವಾಗ ಸರಲೆಯು ನನಗೆ ದಿನಾಲೂ ನೆರವಾಗುತ್ತಿದ್ದಳು, ಅದನ್ನೂ ನಾನು ತಪ್ಪಿಸಿದೆನು. ಊಟಕ್ಕೆ ಮುಂಚಿತವಾಗಿಯೇ ಬಟ್ಟೆಗಳನ್ನು ಸ್ವಂತವಾಗಿ ತೆಗೆದಿಟ್ಟೆನು. ವೀಳ್ಯ ತೆಗೆದುಕೊಂಡು ಸರಲೆ ಬಂದಳು, ಆದರೆ ಆಕೆಯ ಕೆಲಸವನ್ನು ನಾನೆ ಮುಗಿಸಿಬಿಟ್ಟಿದ್ದೆನು. 'ಹೀಗೇಕೆ' ಎಂಬ ಮೂಕಪ್ರಶ್ನೆಯನ್ನು ಅವಳ ಮುಖದ ಮೇಲೆ ನನಗೋದಲು ದೊರೆಯದಿರಲಿಲ್ಲ. ಅದಕ್ಕುತ್ತರವಾಗಿ ನಾನು ಸಾಭಿಪ್ರಾಯವಾಗಿ ಮುಗುಳ್ನಗೆ ನಕ್ಕೆನು. ಆದರೆ ಅವಳಿಗೆ ಅರ್ಥವಾಯಿತೋ ಇಲ್ಲವೊ?

ಸಾಯಂಕಾಲ ಬೂಟು-ಕೋಟು ತೆಗೆಯುವಾಗ ಸರಲೆಯ ಸಹಕಾರವನ್ನು ನಿರಾಕರಿಸಿದಾಗ ಮಾತ್ರ, ಅವಳಿಗೆ ಸುಮ್ಮನಿರುವುದಾಗಲಿಲ್ಲ. 'ಇದೇನೋ ವಿಚಿತ್ರ ತೋರುತ್ತಿದೆ!' ಎಂದಳು. ನಾನು ನಗೆಯ ಮೇಲೆ ಹಾಯಿಸಿಬಿಟ್ಟೆ.

ನನ್ನ ನಡತೆಯು ಅವಳ ಕೋಮಲ ಪರಿಣಾಮಮಾಡದಿರಲಿಲ್ಲ. ತನ್ನ ಪತಿಗೆ ದಂತಹದೇನಾದರೂ ಆಗಿರಬೇಕೆಂದೇ ತನ್ನ ಯನ್ನು ನಿರಾಕರಿಸಿರಬೇಕು ಎಂದವಳ

ಎಷ್ಟು ಸಲ ವಿಚಾರಮಾಡಿದರೂ ಅವಳ ತಿಳಿಯದೆ ಹೋಯಿತೆಂದು ತೋರುತ್ತಿದೆ. ಮೇಲೆ ದುಗುಡವು ಒಡಮೂಡಿದುದಾಗಿ ನಿದ್ರೆಯೂ ಬಂದಿರಲಾರದು.

ಸುಭಾಷಿಣಿ ಮನೆಯಲ್ಲಿರದಿದ್ದರೆ ಸಿಕ್ಕಾಪಟ್ಟೆ ಜಗಳವಾಡುತ್ತಿದ್ದಳೇನೋ! ಸಂಯಮದಿಂದಿದ್ದಳು. ಒಳಗೊಳಗೇ ರಿಂದ ಅವಳ ಮುಖದ ಮೇಲಿನ ಆ ಪ್ರ ಬಾಡಿ ಹೋಯಿತು.

ಮಾರನೆಯ ದಿನ ಮುಂಜಾನೆ ಒಳ್ಳೆ ನ ಎಚ್ಚರವಾಯಿತು. ಸುಮ್ಮನೆ ಕೂತು ಮಾ ಹರಿದ ಶರ್ಟಿನ ಭಾಗವನ್ನು ಹೊಲಿಯ ತೆಗೆದುಕೊಂಡು ಕುಳಿತೆನು.

ಈ ಕೆಲಸಕ್ಕೆ ನಾನು ತೀರಾ ಹೊಸಬ ಲಾಟ ದೇವರೇ ಬಲ್ಲ. ಸರಲೆ ಯಾವಾಗ ನನಗೆ ಗೊತ್ತಾಗಲಿಲ್ಲ. ಆದರೆ ಸೂಜಿ ನನ್ನ ನಟ್ಟು ರಕ್ತ ಬರುವುದಕ್ಕೂ ಸರಲೆ ಮಲ ಹಾಸ್ಯಧ್ವನಿ ಬರುವುದಕ್ಕೂ ಗಂಟುಬಿ ಸರಲೆಯ ಕಡೆ ನೋಡಿದೆ.

"ಚೆನ್ನಾಯಿತು! ಚಲೋ ಪ್ರಾಯಶ್ಚಿತ್ತ ಶರ್ಟು ನಾನು ಹೊಲಿದುಕೊಡುತ್ತಿರಲಿ ಮಾತೇಕೆ ಕೇಳೀರಿ! ಈಗಲಾದರೂ

ನಾನೇನೂ ಮಾತನಾಡಲಿಲ್ಲ. ಮತ್ತೆ ಗಿದೆ.

ಆಗ ಮಾತ್ರ ಸರಲೆಗೆ ಸುಮ್ಮನಿರುವುದಾ ಳೆದ್ದು ನನ್ನ ಹತ್ತಿರ ಬಂದು ಕೈಹಿಡಿದು " ಸಿದ್ದೀರಿ! ನಾನು ಬೇಡಾದೆನೆ? ನಾ ಈ ಎಲ್ಲ ಕೆಲಸ ಮಾಡುವುದೇ? ನಿಜಸಂಗ ಎಂದು ಕೇಳಿದಳು.

ಆಕೆಯ ಕಡೆಗೆ ನೋಡುತ್ತ ನಕ್ಕುಬಿಟ್ಟೆ.

"ನಗೆಚಾಟಿಕೆ ಬೇಡ. ತಪ್ಪಾಗಿದ್ದರೆ ತಮ್ಮ ಪ್ರೀತಿಯಲ್ಲಿ ಕೊರತೆಯಾದುದು ಯಾಕೆ..."

ಮಾತನಾಡುತಾಡುತ್ತಲೆ ಅವಳ ಕುತ್ತಿಗೆಯ ಸಿರ ಉಬ್ಬಿಂದವು.

ನನ್ನ ನಗುವೆತ್ತಲೊ ಆರಿ ಹಾರಿ ಹೋಯಿತು. ನನ್ನ ಷತೆಯಿಂದ ಅವಳ ಮನಸ್ಸಿಗೆ ಇಷ್ಟು ನೋವಾಗಬಹುಂದು ನನಗನಿಸಿರಲಿಲ್ಲ. ಸೂಜಿ, ದಾರ, ಶರ್ಟು ದೂರಲ್ಲಿ, ಸರಲೆಯನ್ನು ಹತ್ತಿರ ಎಳೆದುಕೊಂಡು ನಾನೆಂದೆ:

"ನಿನಗೆ ಹೀಗೆ ಅನಿಸುವ ಕಾರಣವೇನು?"

ನನ್ನ ಸ್ನೇಹಪೂರ್ಣ ಮಾತುಗಳಿಂದ ಆಕೆ ನಾಚಿದಳು.

"ಅನಿಸುವುದಿರಲಿ, ಪ್ರತ್ಯಕ್ಷ ಕಾಣಿಸುವುದಲ್ಲ!"

ನಾನೆಲ್ಲವನ್ನೂ ಸಾವಕಾಶವಾಗಿ ತಿಳಿಹೇಳಿದೆನು.

"ಚಿ:! ಸುಭಾಷಿಣಿಯ ಭಾಷಣವೇ ಈ ಪ್ರಯೋಗಕ್ಕೆ ರಣವಾಯಿತೇ! ಆ ಅಮೆರಿಕದ ವಿಚಾರಗಳು ನನ್ನ ನೆಯ ಹೊಸ್ತಿಲಲ್ಲಿ ಕಾಲಿಕ್ಕುವುದೂ ಬೇಡ. ಅವಳು ನಗೆ ದಾಸಿಯೆನ್ನಲಿ, ಜೀತದ ತೊತ್ತೆನ್ನಲಿ. ತಮ್ಮ ಜನರ ಕೆಲಸಮಾಡುವುದರಲ್ಲಿ ಏತರ ನಾಚಿಕೆ? ನಿಮ್ಮ ಸೇವೆ ಮಾಡುವುದು ನನ್ನ ಹಕ್ಕಿದೆ."

ಅಂದು ಚಹಾಪಾನದ ಸಮಯದಲ್ಲಿ ಕೆಟಲ್ ಮತ್ತೆ ಸರಲೆಯ ಕೈಯಲ್ಲಿ ನೋಡಿ, ಸುಭಾಷಿಣಿಗೆ ಸೋಜಿಗವೆನಿಸಿತು.

"ಸುಭಾಬಾಯಿ, ನಿಮಗೆ ವಿಸ್ಮಯವೆನಿಸಬಹುದು; ಆದರೆ ನಮ್ಮ ಸರಲೆ ತನ್ನ ಗುಲಾಮಗಿರಿಯಲ್ಲಿಯ ಹಕ್ಕುಗಳನ್ನು ಬಿಟ್ಟುಕೊಡಲು ಸಿದ್ಧಳಿಲ್ಲ. ಅವಳ ಮುಂದೆ ನಾನು ಕೈಯೂರಿದೆ. ಗುಲಾಮರೆ ಒಪ್ಪದಿರುವಾಗ ಧಣಿಗಳು ಏನು ಮಾಡಬೇಕು?"

"ನಾನೇ ತಪ್ಪು ತಿಳಿದುಕೊಂಡೆ. ಸರಲೆಯಿಂದ ನಾನೊಂದು ಹೊಸ ಪಾಠ ಕಲಿತೆ. ಪ್ರೇಮ-ದಾಸ್ಯಗಳು ಜತೆಜತೆಯಾಗಿರಲಾರವು. ಪ್ರೇಮದ ಪ್ರಭಾವವು ಹಕ್ಕಿನ ಭಾಷೆಯನ್ನು ಹುಸಿಗೊಳಿಸುವುದು." ಸುಭಾಷಿಣಿಯ ಬಾಯಿಂದ ಉದ್ಗಾರ ಬಂದವು.

ಯುದ್ಧೋತ್ತರ ರಾಜಕೀಯ ವಿಚಾರಗಳು

[ಬ್ಯಾರಿಸ್ಟರ ಜಮುನಾದಾಸ ಮೆಹತಾ ಅವರ ವ್ಯಾಖ್ಯಾನದಿಂದ]

ಸಂಗ್ರಾಹಕ: ' ನಾಗರಿಕ '

ಪ್ರಜಾಪ್ರಭುತ್ವದ ಬಗೆಗೆ ಉಂಟಾದ ಅನಿಶ್ಚಿತಿಯೇ ಸರ್ವಾಧಿಕಾರಿತ್ವಗಳನ್ನು ಪ್ರಸವಿಸಿದೆ. ಜರ್ಮನಿ-ಇಟಲಿ-ರಶಿಯಗಳಲ್ಲಿಯ ರಾಜ್ಯವ್ಯವಸ್ಥೆಯು ಬೇರೆ ಬೇರೆ ಮುಖವಾಡಗಳನ್ನು ಹಾಕಿಕೊಂಡಿದ್ದರೂ ಒಳಗೊಳಗೆ ಒಂದೆಯಾಗಿದೆ. ಬಲಿಷ್ಠ ಅಲ್ಪಸಂಖ್ಯಾಕರ 'ಅರಿಸ್ಟಾಕ್ರಸಿ'ಯೆ ಮೂರೂಕಡೆ ರಾಜ್ಯಸೂತ್ರಗಳನ್ನು ಕೈಯಲ್ಲಿರಿಸಿಕೊಂಡಿದೆ. ಇಷ್ಟಾದರೂ ಪ್ರಜಾಪ್ರಭುತ್ವವು ಪ್ರಯೋಗಾರ್ಹವಾಗಿದೆ; 'ವಿಶ್ವರಾಷ್ಟ್ರ'ವು (World State) ವ್ಯವಹಾರ್ಯ ಕಲ್ಪನೆಯಾಗಿದೆ.

ಅಲ್ಪಸಂಖ್ಯಾಕರ ಪ್ರಭುತ್ವ

ಇಸ್ವಿ ಸನ್ ೧೯೧೭ರ ನವಂಬರದಲ್ಲಿ ವ್ಹರ್ಸಾಯದ ...ಪ್ಪಂದವಾಯಿತು. ಆಗ ರಶಿಯವು ಕ್ರಾಂತಿಯ ಹೊಸ್ತಿಲ ...ಲಿತ್ತು. ಝಾರಶಾಹಿಗೆ ಬೇಸತ್ತ ರಶಿಯವು ಕ್ರಾಂತಿಯ ...ಾರ್ಗವನ್ನವಲಂಬಿಸಿತು. ಕೇಸರನ ಸರ್ವಾಧಿಕಾರಿತ್ವಕ್ಕೂ ...ಹಾಯುದ್ಧಕ್ಕೂ ಬೇಸತ್ತ ಜರ್ಮನಿಯೂ ಇನ್ನೊಂದು ...ಗೆಯ ಕ್ರಾಂತಿಯನ್ನು ಜರುಗಿಸಿತು. ಇಂತಹ ರಾಜ್ಯ...ಂತಿಗಳನ್ನು ಪೃಥಕ್ಕರಿಸಿ ಅವುಗಳ ಕಾರಣಮೀಮಾಂಸೆ...ಯನ್ನು ಮಾಡಿದರೆ, ಅವುಗಳಲ್ಲಿಯ ಒಳಹುರುಳು ತಿಳಿ...ಾಗುವುದು.

ಹಿಂದಕ್ಕೆ ರಾಷ್ಟ್ರವೆಂದರೆ ಒಂದು ಬಗೆಯ ಕಲ್ಪನೆಯಿತ್ತು; ...ರಕಾರದ ಕರ್ತವ್ಯವು ಕಾಯದೆಯನ್ನೂ ಸುವ್ಯವಸ್ಥೆ...ಯನ್ನೂ ಕಾಯುವುದೆಂಬುದೇ ಅದು. ಆದರೆ ಮಹಾಯುದ್ಧದ ...ುವಾಯ ರಾಷ್ಟ್ರೀಯ ಸರಕಾರದ ಬಗೆಗಿರುವ ಕಲ್ಪನೆ...ಯಲ್ಲಿ ಮಹದಂತರವಾಗಿದೆ. ರಾಷ್ಟ್ರದ ಸಾಮಾಜಿಕ ರಾಜ...ಯ ಜೀವನದಲ್ಲಿಯ ವಿಷಮತೆಯ ವಿಚಾರವು ತಲೆ...ತ್ತಿದುದರಿಂದ ರಶಿಯದಲ್ಲಿ ಸಾಮ್ಯವಾದದ ಅವತಾರ...ಯಿತು. ಕ್ರಮವಾಗಿ ಪ್ರಜಾಪ್ರಭುತ್ವದ ಮೆಟ್ಟಿಲನ್ನು ...ಟ್ಟುವುದು ಪೂರ್ವಕಾಲದಲ್ಲಿ ಸರ್ವಸಮ್ಮತವಾದ ರಾಜ...ಯ ಧ್ಯೇಯವಾಗಿತ್ತು. ಆದರೂ ಸಾಮ್ಯವಾದದಿಂದ ...ತ್ತು ಆರ್ಥಿಕ ಪ್ರಶ್ನೆಯ ತೀವ್ರತೆಯಿಂದ ಉಂಟಾದ ...ಟನೆಗಳಿಂದ ಈ ಪರಂಪರಾಗತ ಕಲ್ಪನೆಗೆ ಪ್ರಬಲವಾದ ...ಘಾತವುಂಟಾಯಿತು. ಕಾರ್ಲ ಮಾರ್ಕ್ಸ್‌ನ ತತ್ವಗಳು ...ಯದಲ್ಲಿ ಭರದಿಂದ ಹಬ್ಬಿದವು. ಕಾರ್ಲ ಮಾರ್ಕ್ಸ್‌ನ ...ಜವಾದ ತತ್ವಸರಣಿಯನ್ನು ಪ್ರಚಾರದಲ್ಲಿ ತರುವುದು ...ತ್ಯಂತ ಕಠಿನ ಕಾರ್ಯವಾಗಿದೆ. ಅವನನ್ನು ಬಾಯಿತುಂಬ ...ಹೊಗಳುವುದು ಸುಲಭವಾದ ಕೆಲಸ. ಅವನ ತತ್ವವನ್ನು ಪೂರ್ತಿಯಾಗಿ ತಿಳಿದುಕೊಳ್ಳುವುದು ಸಾಮಾನ್ಯರ ತುತ್ತಲ್ಲ. ಗಣಿತಶಾಸ್ತ್ರದಂತೆಯೆ ಅದೊಂದು ಶಾಸ್ತ್ರವಾಗಿದೆ. ಹೊಸ ವಿಚಾರಗಳು ಪ್ರಸಾರಹೊಂದಿದುದರಿಂದ, ಹಳೆಯ ಪ್ರಜಾಪ್ರಭುತ್ವದ ಕಲ್ಪನೆಯು ಸ್ತಿಮಿತಕ್ಕೆ ಬಂದಿತು. ಇದೀಗ ರಶಿಯದಲ್ಲಿ ಸತ್ತಾರೂಢವಾಗಿದ್ದ ಪಕ್ಷವು ತನ್ನ ಕೈಯಲ್ಲಿಯೆ ಸತ್ತಾಸೂತ್ರಗಳನ್ನು ಕೇಂದ್ರೀಕರಿಸಿಕೊಂಡಿದೆ.

ಪ್ರಜಾಪ್ರಭುತ್ವದ ಬಗ್ಗೆ ಉಂಟಾದ ಅನಿಶ್ಚಿತಿಯೇ ಹೊಸ ವಿಚಾರಗಳ ತಾಯಿಯಾಗಿದೆಯೆನ್ನಬಹುದು. ರಶಿಯದಲ್ಲಿ ಪ್ರಜಾಪ್ರಭುತ್ವವಿಲ್ಲ. ಅಲ್ಲಿಯ ಪ್ರಭುತ್ವಶಕ್ತಿಯು ಪ್ರಬಲ ಅಲ್ಪಸಂಖ್ಯಾಕರ ಕೈಯಲ್ಲಡಕವಾಗಿದೆ. ಆ ಅಲ್ಪಸಂಖ್ಯಾಕ ವರ್ಗವು ಸಾಮ್ಯವಾದದಲ್ಲಿ ತೀವ್ರನಿಷ್ಠೆಯುಳ್ಳದ್ದಾಗಿದೆ. ಕೆಲಸಗಾರರೂ ರೈತರೂ ಸಾಮ್ಯವಾದವನ್ನು ಕ್ರಮವಾಗಿ—ಆದರೆ ಒತ್ತಾಯದಿಂದ—ಸ್ವೀಕರಿಸಬೇಕು ಎಂಬುದಾಗಿ ಆ ಯೋಜನೆಯಾಗಿದೆ. ಯುದ್ಧಾನಂತರದಲ್ಲಿ ಜರ್ಮನಿಗೆ ಪ್ರಾಪ್ತವಾದ ಆರ್ಥಿಕ ದುಃಸ್ಥಿತಿಯೂ ಯುದ್ಧದ ಪ್ರಾಯಶ್ಚಿತ್ತವೆಂದು ಮಿತ್ರರಾಷ್ಟ್ರಗಳು ಮಿತಿಮೀರಿ ಹೇರಿದ ತಪ್ಪುದಂಡವೂ ಹಿಟ್ಲರನಿಗೆ ಜನ್ಮಕೊಟ್ಟವೆಂದು ಹೇಳಬಹುದು. ಇಟಲಿಯಲ್ಲಿ ಮುಸೊಲಿನಿಯ ರಾಜ್ಯವಿದೆ.

ಈ ಮೂರು ಪ್ರಮುಖ ಯುರೋಪೀಯ ದೇಶಗಳಲ್ಲಿಯ ರಾಜ್ಯಪದ್ಧತಿಗಳು ಪರಸ್ಪರಭಿನ್ನವಾಗಿದ್ದರೂ ಅವುಗಳ ಲ್ಲಡಕವಾದ ತತ್ವವು ಒಂದೇಯಾಗಿದೆ. ಆರ್ಥಿಕ ಪರಿಸ್ಥಿತಿಯ ದೆಸೆಯಿಂದಲೂ ರಾಜಕೀಯ ವಾತಾವರಣದ ಮೂಲಕವೂ ಪ್ರತಿಸ್ಥಳದಲ್ಲಿಯೂ ಕೆಲವೇ ಪ್ರಬಲ ಅಲ್ಪಸಂಖ್ಯಾಕರು ರಾಜ್ಯಸೂತ್ರಗಳನ್ನು ವಹಿಸಿದ್ದುದೇ ಆ ತತ್ವವು. ಅವುಗಳ ನಾಮ-ರೂಪಗಳಲ್ಲಿ ಅಲ್ಪಸ್ವಲ್ಪ ಅಂತರವಿರಬಹುದಾದರೂ ಮೂರೂ ಕಡೆ ಬಲಿಷ್ಠ ಅಲ್ಪಸಂಖ್ಯಾಕರ ರಾಜ್ಯವೆ (aristocracy) ರೂಢಿಗೊಂಡಿದೆಯೆನ್ನಬಹುದು.

ಜರ್ಮನಿ-ಇಟಲಿಗಳಲ್ಲಿ ಚುನಾವಣೆಗಳು ಬರಿ ಗೊಂಬೆ ಯಾಟಗಳು. ರಶಿಯದಲ್ಲಿ ಆರಿಸಿಬರುವ ಹುರಿಯಾಳುಗಳು ಚುನಾವಣೆಗೆ ನಿಲ್ಲಲೇ ಆರರು. ಕೂಲಿಕಾರರಿಗೂ ಒಕ್ಕಲಿಗರಿಗೂ ಮತಾಧಿಕಾರವಿದೆ; ಆದರೆ ಅಲ್ಲಿ ಆಯ್ಕೆಯೊಂದು ಆಟವಾಗಿದೆ. ಬೇಡಾದವನು ಆರಿಸಿಬರುವ ಸಂಭವವೇ ಇಲ್ಲ. ಅಲ್ಪಸಂಖ್ಯಾಕರ ರಾಜಸತ್ತೆಯು ರಶಿಯದಲ್ಲಿಯ ಶಾಸ್ತ್ರೀಯಸತ್ಯವು. ರಶಿಯದಲ್ಲಿ ಧರ್ಮವು ಪದಭ್ರಷ್ಟವಾಗಿದೆ. ಇಟಲಿಯಲ್ಲಿ ಧರ್ಮಸಂಸ್ಥೆಯ ಆಡಂಬರವು ಕೆಲಮಟ್ಟಿಗಿದೆ. ಜರ್ಮನಿಯಲ್ಲಿ ಇವೆರಡರ ನಡುವಿನ ಸ್ಥಿತಿಯಿದೆ. ಈ ಮೂರೂ ರಾಷ್ಟ್ರಗಳಲ್ಲಿಯೂ ಪ್ರಜಾಪ್ರಭುತ್ವದ ಲವಲೇಶವಿಲ್ಲವೆನ್ನಬಹುದು. ಅಲ್ಲಿ ರಾಷ್ಟ್ರಪೂಜೆಯಿದೆ. ರಾಷ್ಟ್ರಕಲ್ಯಾಣವೆ ರಾಜ್ಯಕರ್ತರ ಮುಖ್ಯದೃಷ್ಟಿಯಾಗಿದೆ. ಅದಕ್ಕಾಗಿ ಪ್ರಜಾಧಿಕಾರಗಳನ್ನು ಮರ್ಯಾದಿತಗೊಳಿಸುವುದು ಯೋಗ್ಯವೆಂಬುದು ಅವರ ವಿಚಾರಸರಣಿಯಾಗಿದೆ.

ಉದಾತ್ತವಿಚಾರಗಳ ಅಸ್ಥಿಪಂಜರ

ಇವುಗಳ ಜತೆಜತೆಯಲ್ಲಿಯೆ ರಾಷ್ಟ್ರಸಂಘದ ಉದಾತ್ತ ಕಲ್ಪನೆಯೊಂದಿದೆ. ವಿಶ್ವರಾಷ್ಟ್ರವ(World State) ವನ್ನು ನಿರ್ಮಿಸುವುದು ಅದರ ಆಸೆಯಾಗಿದೆ. ಆದರೆ ರಾಷ್ಟ್ರಸಂಘದಲ್ಲಿ ಸ್ವಸ್ತಿಗೀತವನ್ನು ಹಾಡುವ ಪ್ರತಿ ಸದಸ್ಯರಾಷ್ಟ್ರವು ಅನಿಶ್ಚಿತವಾತಾವರಣದ ಮೂಲಕವೊ, ರಾಷ್ಟ್ರಹಿತದ ದೃಷ್ಟಿಯಿಂದಲೊ ಭಾವಿ ಮಹಾಯುದ್ಧದ ಪ್ರಚಂಡ ಸಿದ್ಧತೆಯನ್ನೆ ಮಾಡುತ್ತಲಿದೆ. ಕಳೆದ ಪ್ರಪಂಚಸಂಗ್ರಾಮದಿಂದ ಬುದ್ಧಿ ಕಲಿತ ಪ್ರತಿರಾಷ್ಟ್ರವು ಯುದ್ಧಕ್ಕಾಗಿ ಸ್ವಯಂಸಿದ್ಧವೂ ಸ್ವಯಂಪೂರ್ಣವೂ ಆಗಲು ಪ್ರಯತ್ನಿಸುತ್ತಿದೆ. ಹೀಗಿದ್ದಾಗ ರಾಷ್ಟ್ರಸಂಘದ ಉಚ್ಚಾದರ್ಶವು ಅಣಕದ ವಿಷಯವಾಗಿದ್ದರೆ ಸೋಜಿಗವೇನು ? ರಶಿಯದಲ್ಲಿ ಕೂಲಿಕಾರರ ಮತ್ತು ಕೆಲಸಗಾರರ ಆಭಾಸಿಕ ರಾಜ್ಯವಿದ್ದರೆ, ಸಾಮ್ರಾಜ್ಯವಾದಿ ರಾಷ್ಟ್ರಗಳು ವಿಶ್ವರಾಷ್ಟ್ರದ ಟೊಳ್ಳು ಕಲ್ಪನೆಯ ನಿಶಾನಿಯನ್ನು ಹಾರಾಡಿಸುವವು. ತಮ್ಮ ಸಾಮ್ರಾಜ್ಯವು ಅಚ್ಚಳಿಯದುಳಿಯಬೇಕೆನ್ನುವವರೆ ರಾಷ್ಟ್ರಸಂಘದಲ್ಲಿ ಸೇರುವರು. ತಮ್ಮ ಸಾಮ್ರಾಜ್ಯವು ಉಳಿಯಬೇಕು, ಬೆಳೆಯಬೇಕು ಎಂಬುದೆ ಅವರ ನಿದಿಧ್ಯಾಸವು. ಬೆಲ್ಜಂ ದೇಶವೂ ಇದೇ ಭಾವನೆಯನ್ನಿಟ್ಟುಕೊಂಡಿದೆ. ಒಳಆಡಳಿತದಲ್ಲಿ ಈ ರಾಷ್ಟ್ರಗಳು ಪ್ರಜಾಪ್ರಭುತ್ವದ ಸೋಗನ್ನು ಚೆನ್ನಾಗಿಯೆ ಹಾಕಿಕೊಂಡಿವೆ. ಆದರೆ ಅವರ ಪ್ರಜಾಪ್ರಭುತ್ವವು ಸಾಮ್ರಾಜ್ಯವಾದಕ್ಕೆ ಅನುಕೂಲವಾದುದಾಗಿರಬೇಕೆಂದು ಅವರ ಬಯಕೆಯಾಗಿದೆ. ಚೀನ-ಜಪಾನ ಸಂಗ್ರಾಮದಲ್ಲಿ ಜಪಾನದ ಭೂಮಿಕೆಯು ಇದೇ[illegible]ಗಿದೆ. ಅಮೆರಿಕದ ಸಂಯುಕ್ತಸಂಸ್ಥಾನಗಳ[illegible] ವರ್ತಕಸಂಸ್ಥೆಗಳೆ ಒಡೆತನವುಳ್ಳವಾಗಿದ್ದು, ಕೆ[illegible]ಗಾರರ ಕೈಯಲ್ಲಿಯೆ ರಾಜ್ಯಸತ್ತೆಯಿದೆ. ಇ[illegible] (Corporations) ರಾಜನೀತಿಯ ಸ್ವರೂಪ[illegible]ಸುತ್ತವೆ.

ಪ್ರಯೋಗಕ್ಕಿನ್ನೂ ಅವಕಾಶ[illegible]

ಮೇಲಣ ವಿವರಣೆಯಿಂದ, ಜಗತ್ತಿನ ರಾ[illegible] ಯುದ್ಧೋತ್ತರ ಪ್ರಜಾಪ್ರಭುತ್ವದ ಬಗ್ಗೆ ಸಂಶಯಭಾವವು ಹುಟ್ಟಿದುದಾಗಿ ಕಂಡುಬರು[illegible] ಸಂಘವು ವಿಶ್ವರಾಷ್ಟ್ರಕಲ್ಪನೆಯ ಎಲು[illegible] ಮಾತ್ರ. ನಮ್ಮಂತಹ ಪರತಂತ್ರ ರಾಷ್ಟ್ರಗಳ[illegible]ವಿಲ್ಲ. ಚೀನವು ತ್ರಿಶಂಕುಸ್ವರ್ಗದಲ್ಲಿ ತತ್ತರಿಸ[illegible] ನೋಡಿದಲ್ಲಿ ಗೌರವರ್ಣದವರ ಮೇಲುಗೈ[illegible]ತ್ತರ ಕಾಲದಲ್ಲಿ ವಾತಾವರಣವು ತಿಳಿಯಾಗಿ[illegible] ಕದಡಿದುದಾಗಿದೆ. ಎಲ್ಲೆಲ್ಲಿಯೂ ಕಾಳ್ಗತ್ತ[illegible] ಸ್ಥಿತಿಯು ತುಂಬಾ ಕಂಟಕಮಯವಾಗಿದ್ದ[illegible] ಪ್ರಭುತ್ವದ ಪ್ರಯೋಗವು ಇನ್ನೂ ಕೊನೆಗ[illegible] ಹೇಳಬಹುದು. ಈ ಪದ್ಧತಿಯಲ್ಲಿ ಲೋಪ[illegible] ಬಹುದು; ಯಾವ ಮಾನವನಿರ್ಮಿತ ಪದ್ಧತಿ[illegible] ಪೂರ್ಣವಾಗಿಲ್ಲ ? ಆದರೆ ಈ ಪದ್ಧತಿಯಲ್ಲಿ[illegible] ಪದ್ಧತಿಗಿಂತಲೂ ಕಡಿಮೆದೋಷಗಳಿವೆ. ಏಕ[illegible] ಪದ್ಧತಿಯು ಎಷ್ಟೇ ಶ್ರೇಷ್ಠವಾಗಿದ್ದರೂ, '[illegible] ದೃಷ್ಟಿಯಿಂದಲೇ ಅದು ತ್ಯಾಜ್ಯವಾಗಿದೆ. ಅ[illegible] (ಅರಿಸ್ಟಾಕ್ರಸಿಯ) ಆಳಿಕೆಯು ಇತಿಹಾಸದಲ್ಲಿ [illegible] ನಿರ್ಣಯಿಸಲ್ಪಟ್ಟಿದೆ. ಜನಪದವು ಜಾಗೃತವಾ[illegible] ಅದಿನ್ನು ಬಳಕೆಯಲ್ಲಿ ಬರಲಾರದು.

'ವಿಶ್ವರಾಷ್ಟ್ರ'ವು ಅವ್ಯವಹಾರ್ಯ[illegible]

ಏಕತಂತ್ರ ರಾಜ್ಯಪದ್ಧತಿಯೂ ವರಿಷ್ಠವ[illegible] ಪದ್ಧತಿಯೂ ಅಳಿದುಹೋಗಲೇ ಬೇಕು; ಪ್ರ[illegible] ವಿಕಾಸವು ಮುಂದಗತಿಯದಾಗಿದ್ದರೂ ನಿ[illegible]ದ್ದಾಗಿದೆ. ರಾಜತಂತ್ರವಿಶಾರದರು ಜನಾ[illegible] ತಮ್ಮಿಷ್ಟದಂತೆ ರೂಪುಗೊಳಿಸುತ್ತಿರಬಹುದು; [illegible] ಮತವು ಇಂದು ಜಾಗೃತವೂ ಸಜ್ಞಾನವೂ ಆ[illegible] ಪ್ರಭುತ್ವದಂತಹ ಅತ್ಯಲ್ಪ ಅಪಾಯಕಾರಿಯ[illegible]ದಲ್ಲಿ ಕಲ್ಯಾಣಕರವೂ ಆದ ವ್ಯವಸ್ಥೆಯು [illegible]ಗಂತೂ ಇನ್ನೂ ಗೊತ್ತಾಗಿಲ್ಲ.

ಕರಿಸುವುದು ಯುಕ್ತಿಯುಕ್ತವಾಗಿದೆ. ಸ್ವಯಂನಿರ್ಣ
ನಿಜವಾದ ಶಾಸನಪದ್ಧತಿಯು. ಪ್ರಜಾಪ್ರಭುತ್ವದ
ನ ಜನತೆಯ ವಿಶ್ವಾಸವು ಇನ್ನೂ ಆಳವಾಗಬೇಕು.
ವಿಚಾರಿಸಿದರೆ, ವಿಶ್ವರಾಷ್ಟ್ರವು ಪ್ರಯೋಗಾರ್ಹವಾದ
ತ್ತಕಲ್ಪನೆಯಾಗಿದೆ. ಇಂತಹ ಜಾಗತಿಕ ರಾಷ್ಟ್ರ
ಅಶಕ್ಯವಾಗಿ ತೋರಿದರೂ ಎಂದಾದರೂ ಒಮ್ಮೆ
ವ್ಯವಹಾರ್ಯವಾಗಿ ಪರಿಣಮಿಸುವುದೆಂದು ನನ್ನ
ಸವಿದೆ.

ಜ್ಞಾನ-ವಿಜ್ಞಾನ

ನವಜ್ಞಾನ, ನವವಿಚಾರ, ನವವಿಷಯ, ನವರಚನೆ, ನವಶೋಧನೆ, ನವಸಮಾಜ, ನವಪ್ರ

ಇವುಗಳ ಸುಲಭ—ಸೂಕ್ತ—ಸಾರರೂಪ ಪರಿಚಯ

ಬಣ್ಣಗಳ ಇಂದ್ರಜಾಲ

ಕ್ಯಾನಡಾ ದೇಶದ ಒಂದು ಕಂಪನಿಯು ಬಣ್ಣವನ್ನು ಕುರಿತು ಒಂದು ಪ್ರಯೋಗವನ್ನು ಕೈಕೊಂಡಿತು. ಅದು 'ಪ್ರಿನ್ಸ್ ಡೇವಿಡ್' ಎಂಬ ಹೆಸರಿನ ತನ್ನೊಂದು ಉಗೆಹಡಗಿಗೆ ಹೊರಗಡೆ ಬಿಳಿಬಣ್ಣವನ್ನು ಬಳೆಯಿತು. ಕೂಡಲೆ ಒಳಗಿನ ಉಷ್ಣತೆಯು ೧೫ ಅಂಶ ಕಡಿಮೆಯಾದುದಾಗಿ ಕಂಡುಬಂದಿತು. ಇದೇ ಪ್ರಯೋಗವನ್ನು ಬೇರೆ ಹಡಗುಗಳಿಗೆ ಮಾಡಿದಾಗಲೂ ಅದೇ ಅನುಭವ ಬಂದಿತು.

'ಲಂಡನ್ ಸ್ಕೂಲ್ ಆಫ್ ಹೈಜಿನ್' ಎಂಬ ಸಂಸ್ಥೆಯ ಅಧ್ಯಾಪಕರಾದ ಡಾ. ಜಿ. ಪಿ. ಕೌಡೇನ ಎಂಬವರು, ಅಲ್ಯುಮಿನಿಯಂ ಬಣ್ಣದಲ್ಲಿ ಉಷ್ಣತೆಯನ್ನು ಪರಾವರ್ತನಗೊಳಿಸುವ ಶಕ್ತಿಯಿದೆಯೆಂಬುದನ್ನು ಕಂಡುಹಿಡಿದರು. ಒಂದು ಕೋಣೆಗೆ ಒಳಗಿನಿಂದ ಅಲ್ಯುಮಿನಿಯಮ್ಮಿನ ತಗಡು ಬಡಿದು ಒಳಗೆ ಒಂದು ವಿದ್ಯುದ್ದೀಪವನ್ನು ಹಚ್ಚಿದರು. ಕೂಡಲೇ ಉಷ್ಣತೆಯ ಪರಾವರ್ತನೆಗೆ ಮೊದಲಾಯಿತು. ಹೊರಗಡೆ ಹಿಮ ಬೀಳುತ್ತಿದ್ದರೂ ಒಳಗೆ ಬೆಚ್ಚಗೆನಿಸ ಹತ್ತಿತು. ಅಗ್ಗಿಷ್ಟಿಕೆಯ ಅಗತ್ಯವೂ ತೋರದಾಯಿತು. ಈ ಪ್ರಯೋಗದಿಂದ ಯುರೋಪಿನೊಳಗಿನ ಮನೆಕಟ್ಟುವ ಶಾಸ್ತ್ರದಲ್ಲಿ ಕ್ರಾಂತಿಯಾಗುವ ಸಂಭವವಿದೆ.

ಜರ್ಮನಿಯಲ್ಲಿ ಸ್ಟುಟಗಾರ್ಟ ಎಂಬ ನಗರದಲ್ಲಿ ಪ್ರೊ. ಮ್ಯಾನ್‌ಫ್ರೆಡ್ ಬೆನಿಂಜರ ಎಂಬ ಪ್ರಸಿದ್ಧ ಮಾನಸಶಾಸ್ತ್ರಜ್ಞರು ಇದ್ದಾರೆ. ಬಣ್ಣದಿಂದ ನಿದ್ರಾನಾಶವನ್ನು ತೊಲಗಿಸುವ ಅದ್ಭುತ ಉಪಾಯವನ್ನು ಅವರು ಕಂಡುಹಿಡಿದಿದ್ದಾರೆ. ಅವರಲ್ಲಿ ಈ ರೋಗವುಳ್ಳವರು ಬಹಳ ಜನ ಬರುತ್ತಾರೆ. ಈ ರೋಗಿಗಳು ತಮ್ಮ ರೋಗದ ಕಾರಣಗಳನ್ನು ಪ್ರೊಫೆಸರ ಮಹಾಶಯರಿಗೆ ಹೇಳುತ್ತಾರೆ. ಹಲವು ರೋಗಿಗಳಿಗೆ ಕಾರಣವಿಲ್ಲದೆಯೆ ಈ ರೋಗ ಗಂಟುಬಿದ್ದಿ ಪ್ರೊಫೆಸರರು ಅವರಿಗೊಂದು ಬಣ್ಣದ ಆಕೃ ಕೊಟ್ಟು, ಅದರ ಮೇಲೆ ತಮ್ಮ ಮನಸ್ಸನ್ನು ಏಕಾ ಸಲು ಹೇಳುತ್ತಾರೆ. ರೋಗಿಯು ಹಾಗೆ ಮಾಡುವು ಗಾಗಿ, ಅವನಿಗೆ ತೂಕಡಿಕೆ ಬರತೊಡಗುತ್ತದೆ; ಹೊತ್ತಿನಲ್ಲಿಯೆ ನಿದ್ದೆಯೂ ಬರುತ್ತದೆ.

ಅವರವರ ಪ್ರಕೃತಿಮಾನದಂತೆ ಬಣ್ಣದ ಮತ್ತು ತಿಯ ಆಯ್ಕೆಯನ್ನು ಮಾಡಿದರೆ ನಿದ್ದೆ ಖಂಡಿತ ದೆಂಬುದು ಅವರ ಶೋಧದ ಗುಟ್ಟಾಗಿದೆ. ಯಾವುದು ಯೋಗ್ಯವೆಂಬುದು ಅನುಭವಕ್ಕೆ ಮತ್ತು ಲ್ಯಕ್ಕೆ ಸಂಬಂಧಿಸಿದುದು. ರೋಗಿಗೆ ಉಪಯೋ ಬಣ್ಣದ ಆಕೃತಿಯನ್ನು ಅವನಿಗೆ ಒಪ್ಪಿಸಲಾಗುತ್ತ ಬರದಾಗಲೆಲ್ಲಾ ಆದನ್ನು ಏಕಾಗ್ರಚಿತ್ತದಿಂದ ದೊಡನೆ ನಿದ್ದೆ ಬಂದುಬಿಡುವುದು.

ಭಾವನಾಪ್ರಧಾನರ ಮತ್ತು ಕಲೋಪಜೀವಿಗ ಸ್ಸಿನ ಮೇಲೆ ಬಣ್ಣದ ಸಾನ್ನಿಧ್ಯವು ವಿಲಕ್ಷಣ ಪ ವನ್ನುಂಟುಮಾಡುತ್ತದೆ. ಬೀಥೋವೆನನಂತಹ ಕಲಾ ದನು ಬಣ್ಣಗಳಿಗೆ ಸ್ವರಗಳ ಉಪಮೆಯನ್ನು ಕೊಟ್ಟ ಅರ್ಥವಿಲ್ಲದಿಲ್ಲ. ನಿಜವಾಗಿಯೂ ಕೆಲಕೆಲವು ಬ ಆಹ್ಲಾದದಾಯಕವಾಗಿಯೂ ಕೆಲಕೆಲವು ಕ್ಷೋಭಕ ಆಗಿರುತ್ತವೆ. ಹಸಿರುಬಣ್ಣ ತುಂಬ ಪ್ರಸನ್ನತೆ ತಂದುಕೊಡುವುದು. ಹಸಿರು ಹೊಲಗದ್ದೆ, ತೋಟಪ ಯಾರನ್ನು ಉಲ್ಲಸಿತಗೊಳಿಸುವುದಿಲ್ಲ? ಬಿಲಿಯರ್ಡ್ ಬ್ರಿಜ್ ಟೇಬಲ್ ಮೇಲಿನ ಆಚ್ಛಾದನವನ್ನು ಯಾವಾ ಹಸಿರು ಬಣ್ಣದ್ದಾಗಿಯೇ ಇಡುವುದರಲ್ಲಿ ಈ ಹೇತುವ

ಕೆಂಪು ತದ್ವಿರುದ್ಧ ಪರಿಣಾಮವನ್ನುಂಟುಮಾಡು ಡಾ. ಡೊನಾಲ್ಡ ಲಾಯಿರ್ಡ್ ಎಂಬ ಯುನಿವರ್ಸಿಟಿ

ಪಕರೊಬ್ಬರು ಪ್ರಯೋಗಾಂತ್ಯದಲ್ಲಿ ಸಿದ್ಧಗೊಳಿಸಿದುದೇನೆಂದರೆ, ಕೆಂಪು ಬಳಿದ ಗೋಡೆಗಳುಳ್ಳ ಇಲ್ಲವೆ ಕೆಂಪಿನ ಸಾಮ್ರಾಜ್ಯವು ಎಲ್ಲಿ ನೋಡಿದಲ್ಲಿ ಹಬ್ಬಿರುವ ಮನೆಯಲ್ಲಿ ಮನುಷ್ಯನಿಗೆ ನಿದ್ದೆಬರುವುದು ಕಠಿನವಿದೆ. ಏಕೆಂದರೆ ಮನೋವೃತ್ತಿಯನ್ನು ಕೆರಳಿಸುವ ಗುಣವು ಕೆಂಪಿನಲ್ಲಿದೆ. ಎತ್ತುಗಳು ಈ ಬಣ್ಣಕ್ಕೆ ಬೆದರುವುದು ಅಕಾರಣವಾಗಿಯಲ್ಲ.

ಲಾಯನ್ಸ ನಗರದಲ್ಲಿ ಲಮಿಯರ ಎಂಬ ಫೋಟೋಗಳ ಕನ್ನಡಿಗಳನ್ನು ತಯಾರಿಸುವ ಕಾರಖಾನೆದಾರರೊಬ್ಬರಿದ್ದಾರೆ. ಕೆಂಪುದೀವಿಗೆಗಳಿರುವ ಕಡೆ ಕೆಲಸ ಮಾಡುವವರು ಜಗಳಗಂಟರಾಗಿಯೂ ಹಸಿರು ದೀವಿಗೆಗಳಿರುವ ಕಡೆ ಕೆಲಸ ಮಾಡುವವರು ಸೌಮ್ಯರಾಗಿಯೂ ಇದ್ದುದು ಕಂಡುಬಂದಿತು.

ನೀಲಿಬಣ್ಣವು ಶೀತಲತೆಯನ್ನು ತರುವುದು. ಇಂಗ್ಲಂಡಿನ ಹವೆಯು ಯಾವಾಗಲೂ ಹೆಚ್ಚಾಗಿಯೇ ತಣ್ಣಗಿರುವುದರಿಂದ ಅಲ್ಲಿಯ ಮನೆಗಳ ಒಳಭಾಗಕ್ಕೆ ಈ ಬಣ್ಣವನ್ನು ಯಾರೂ ಹಚ್ಚುವುದಿಲ್ಲವೆಂದು ಹೇಳಬಹುದು. ಆದರೆ ಹಿಂದುಸ್ಥಾನದಂತಹ ಉಷ್ಣಕಟಿಬಂಧ ಪ್ರದೇಶದಲ್ಲಿ ಇದನ್ನಾರೀತಿ ಉಪಯೋಗಿಸುವುದರಿಂದ ಖಂಡಿತ ಪ್ರಯೋಜನವಾಗುವುದು. ಕೆಲ ದಿನಗಳ ಹಿಂದೆ ಒಬ್ಬ ತಜ್ಞನು ಒಬ್ಬ ಹುಚ್ಚನನ್ನು ನೀಲವರ್ಣದ ಕೋಣೆಯಲ್ಲಿ ತಂದಿಟ್ಟು, ಮೇಲಿನ ಬೆಳಕು ಕೂಡ ನೀಲಿಬಣ್ಣದೊಳಗಿಂದಲೆ ಬರುವಂತೆ ವ್ಯವಸ್ಥೆಮಾಡಿದನು. ಕೆಲಕಾಲದ ತರುವಾಯ ಅವನ ಮನೋವೃತ್ತಿಯು ತಿಳಿಯಾಗುತ್ತ ಬಂದು, ಅವನು ಸಮಾಧಾನಗುಣವನ್ನು ಹೊಂದಿದನು.

ವೈದ್ಯಕದೃಷ್ಟಿಯಿಂದ ಬಣ್ಣಗಳನ್ನು ಹೇಗೆ ಉಪಯೋಗಿಸಬೇಕೆಂಬುದು ಇನ್ನೂ ನಿರ್ಧರವಾಗಿಲ್ಲವಾದರೂ ವಿಶಿಷ್ಟ ಬಣ್ಣಗಳು ವಿಶಿಷ್ಟಭಾವನೆಗಳ ನಿದರ್ಶಕವಾಗಿವೆಯೆಂದು ನೂರಾರು ವರ್ಷಗಳ ಹಿಂದೆ ತೀರ್ಮಾನವಾಗಿದ್ದುದು ತರ್ಕಶಾಸ್ತ್ರವನ್ನು ಬಿಟ್ಟಿಲ್ಲವೆಂಬುದು ಇದೀಗ ತಿಳಿದು ಬಂದಿದೆ. ಬಿಳಿದು ಪಾವಿತ್ರ್ಯವನ್ನೂ ಹಳದಿ ಬುದ್ಧಿವಂತಿಕೆಯನ್ನೂ ಕರಿದು ಪಾಪವನ್ನೂ ಸೂಚಿಸುತ್ತವೆ. ಬೌದ್ಧಭಿಕ್ಷುಗಳೂ ಪಂಡಿತರೂ ಹಳದಿಬಣ್ಣದ ಬಟ್ಟೆಗಳನ್ನುಡುವರು. ಸೂರ್ಯನ ಪ್ರತಿಕಿರಣವು ಸಪ್ತವರ್ಣಾತ್ಮಕವಿರುತ್ತದೆ: ಕೆಂಪು, ಕೇಸರಿ, ಹಳದಿ, ಹಸಿರು, ನೀಲಿ, ತಿಳಿನೀಲಿ, ವ್ಹಾಯೊಲೆಟ್ ಎಂಬವೇ ಆ ಬಣ್ಣಗಳು. ಇವುಗಳಲ್ಲಿ ಮೊದಲಿನವೆರಡು ತಾಮಸಸ್ವರೂಪದುವೂ ಉಳಿದುವು ಸಾತ್ವಿಕ ಸ್ವರೂಪದುವೂ ಆಗಿವೆ.

ನಮ್ಮ ಉಣಿಸು-ತಿನಿಸಿನ ಪದಾರ್ಥಗಳಲ್ಲಿಯೂ ಬಣ್ಣಕ್ಕೆ ತುಂಬಾ ಪ್ರಾಧಾನ್ಯವಿದೆ. ಹಳದಿ-ಕೆಂಪು ಬಣ್ಣಗಳಲ್ಲಿ ಬಾಯಲ್ಲಿ ಜೊಲ್ಲನ್ನೊಸರಿಸುವ ಗುಣವು ವಿಶೇಷ ಪ್ರಮಾಣದಲ್ಲಿದೆಯಾಗಿ ತಜ್ಞರು ಅಭಿಪ್ರಾಯಪಡುತ್ತಾರೆ. ಪಕ್ವಾನ್ನಗಳಲ್ಲಿ ಶ್ರೀಖಂಡ ಪುರಿ, ಜಿಲೇಬಿ, ಕೇಶರಭಾತ ಇವುಗಳಿಗೇಕೆ ಇಷ್ಟು ಮಹತ್ವವಿದೆಯೆಂಬುದರ ಗುಟ್ಟು ಇದೀಗ ತಿಳಿಯುವುದು.

—ಮಹಾರಾಷ್ಟ್ರ ಶಾರದಾ

ತಪ್ಪು ಹುಡುಕುವವರಿಗೆ ಮೆಚ್ಚು

ಇ. ಸ. ೧೯೩೩ರಿಂದ ಸೆಲ್‌ಫ್ರಿಜ್ ಕಂಪನಿಯ ಲಂಡನ್ನಿನ ಅಂಗಡಿಯವರು ಒಂದುಹೊಸ ಏರ್ಪಾಡು ಮಾಡಿದ್ದಾರೆ. ತಮ್ಮ ಅಂಗಡಿಯ ಜಾಹಿರಾತುಗಳಲ್ಲಿ ತಪ್ಪುಗಳನ್ನು ಹುಡುಕಿಕೊಡುವವರಿಗೆ ಒಂದೊಂದು ತಪ್ಪಿಗೆ ೫೦ ಡಾಲರಗಳಂತೆ ನಗದು ಬಹುಮಾನವನ್ನು ಕೊಡುತ್ತಿದ್ದಾರೆ. ಸಣ್ಣಪುಟ್ಟ ತಪ್ಪುಗಳಿಗಾಗಿ ಕೂಡ ಕಂಪನಿಯು ಇದು ವರೆಗೆ ೮೫೦ ಡಾಲರುಗಳನ್ನು ಕೊಟ್ಟಿದೆ. 'ಕೇಕ್‌ಸ್ಟ್ಯಾಂಡಿ'ನ ಜಾಹಿರಾತನ್ನು ಆ ಅಂಗಡಿಯವರೊಮ್ಮೆ ಕೊಟ್ಟಿದ್ದರು. ಆ ಸ್ಟ್ಯಾಂಡು ಚೀನೀ ಮಣ್ಣಿನ ಒಂದು ಪಾತ್ರೆಯಾಗಿತ್ತು. ಇನ್ನೊಂದು ಬಟ್ಟೆಯ ಜಾಹಿರಾತು: ಅದರಲ್ಲಿ ಚಿತ್ರಕಾರನು ತೋರಿಸಿದಷ್ಟು ಮಡಿಕೆಗಳು ಆ ಬಟ್ಟೆಯ ಮೇಲೆಯೇ ಇರಲಿಲ್ಲ. ಸರ್ವೋತ್ಕೃಷ್ಟ ಚಹಾ ಎಂದು ಇನ್ನೊಂದು ಪ್ರಕಟನೆಯ ಪ್ರಕಾರ, ಮಾರುವ ಚಹಾಸೊಪ್ಪಿರಲಿಲ್ಲ. ಈ ತಪ್ಪುಗಳು ಕಂಪನಿಯವರ ಲಕ್ಷ್ಯಕ್ಕೆ ತರಲ್ಪಟ್ಟಮೇಲೆ, ಬೇರೆಬೇರೆ ಅಂಗಡಿಗಳಲ್ಲೆಲ್ಲಾ ಇಂತಹ ತಪ್ಪುಗಳಾಗದಂತೆ ಒಂದು ಪತ್ರಕವನ್ನು ಹೊರಡಿಸಿದರು. ಅದರಿಂದ ಅಲ್ಲಿಯ ಕೆಲಸಗಾರರು ತಪ್ಪುಗಳನ್ನು ತಿದ್ದಿಕೊಂಡರು; ಮತ್ತು ಬಹುಮಾನಗಳ ಅಂಕೆಯೂ ಕಡಿಮೆಯಾಗತೊಡಗಿತು. ಮೇಲಣ ಯೋಜನೆಯು ಲಂಡನ್ ನಗರದ ಬೇರೆ ಬೇರೆ ವರ್ತಕರ ಲಕ್ಷ್ಯವನ್ನೆಳೆಯಿತು; ಮತ್ತು ಜಾಹಿರಾತುಗಳ ಬಗ್ಗೆ ಒಂದು ನಿಶ್ಚಿತ ನಿಯಮವನ್ನು ತಯಾರಿಸಿ ಪ್ರಸಿದ್ಧಿಸಲಾಯಿತು. ಇದರ ಪರಿಣಾಮವು ತುಂಬಾ ಚೆನ್ನಾಯಿತು; ಹಾಗೂ ಲಂಡನ್ನಿನ ಪೇಟೆಯಲ್ಲೆಲ್ಲ ಈ ಅಂಗಡಿಯ ಸತ್ತು ಬೆಳೆಯಿತು.

ನಮ್ಮಲ್ಲಿಯ ಜಾಹಿರಾತುದಾರರು ಈ ಕಡೆ ಸ್ವಲ್ಪ ಲಕ್ಷ್ಯವೀಯಬೇಕು.

—ಅರ್ಥ

ಹಿಂಸ್ರಪಶುಗಳೆಂಬ ಶಬ್ದವನ್ನು ಕೇಳುತ್ತಿದ್ದೆವು; ಆದರೆ ಹಿಂಸ್ರವೃಕ್ಷಗಳೂ ಇವೆ. ಗಿಡಬಳ್ಳಿಗಳಿಗೂ ವೇದನೆ-ಸಂವೇದನೆಗಳಿವೆಯೆಂದು ದಿವಂಗತ ಜೆ

ಹಿಂಸ್ರ ವೃಕ್ಷಗಳು

ಸಿ. ಬೋಸರ ಶೋಧವಲ್ಲವೆ? ಅಂದ ಮೇಲೆ ಮನುಷ್ಯ - ಪಶುವರ್ಗದ ಕ್ರೋಧ - ಕ್ರೌರ್ಯಗಳು ಅವುಗಳಿಗೂ ಏಕಿರಬಾರದು?

ಅಮೆರಿಕೆಯಲ್ಲಿಯ ಅತಿಕ್ರೂರ ವೃಕ್ಷವು (Evil One ಎಂದು ಹೆಸರಾದುದು) ವಿಷುವವೃತ್ತದ ಬಳಿ ಮೊರೆಲಾಸ ಮತ್ತು ಮೆಕ್ಸಿಕೊ ಪ್ರದೇಶಗಳಲ್ಲಿ ಮಾತ್ರ ಬೆಳೆಯುತ್ತದೆ. 'ಕೆಟ್ಟಹೆಣ್ಣಿನ ಗಿಡ' ಎಂದು ಆದರ ಪ್ರಸಿದ್ಧಿ. ಉಷ್ಣ-ಸಸ್ಯರಹಿತ ಪ್ರದೇಶಗಳಲ್ಲೆಲ್ಲಾ ಅದು ಸಾಮಾನ್ಯವಾಗಿ ಸಿಕ್ಕುವುದು. ಆ ಗಿಡದ ಬೊಡ್ಡೆಗೆ ಮತ್ತು ಟೊಂಗೆಗಳಿಗೆ ಎಲೆಗಳಿರುವುದಿಲ್ಲ. ಟೊಂಗೆಗಳು ಸಿಕ್ಕಾಬಟ್ಟೆ ಸೊಟ್ಟಪಟ್ಟವಾಗಿ ಬೆಳೆದಿದ್ದು ಗಿಡದೊಳಗಿನ ವಿಷದಿಂದಲೆ ಅವು ಹಾಗೆ ವಿಕೃತವಾಗಿವೆಯೇನೋ ಎಂದು ಎನಿಸುವಂತಿದೆ. ತಪ್ಪಿ ಸ್ಪರ್ಶವಾದರೂ, ಜ್ವರ, ತ್ವಗ್ರೋಗ ಅಥವಾ ಬೇರೆ ಕಠಿನ ಬೇನೆ-ಬೇಸರಿಕೆಗಳು ಆಗುತ್ತವೆ. ಈಗ ಆ ಗಿಡಗಳಿಗೆ 'ಗಂಡಾತರ'ವನ್ನು ಸೂಚಿಸುವ ಹಲಗೆಗಳನ್ನು ಹಚ್ಚುತ್ತಾರೆ.

ಮೆಕ್ಸಿಕೊವಿನಲ್ಲಿ ಮೇಲಿನ ಗಿಡದಂತೆಯೆ 'ಡಾಯನಾಮಾಯಿಟ್' ಎಂಬ ಹೆಸರಿನದೊಂದು ಗಿಡವಿದೆ. ಅದಕ್ಕೂ 'ಅಪಾಯ'ಸೂಚಕ ಹಲಗೆ ಹಚ್ಚಿರುತ್ತಾರೆ. ಅದು ಅತಿ ಗಿಡ್ಡವಾಗಿದ್ದರೂ ಪಕ್ಕದಲ್ಲೆಲ್ಲಾ ತುಂಬಾ ಹಬ್ಬುತ್ತದೆ, ಮತ್ತು ಕಿತ್ತಳೆಹಣ್ಣಿನಷ್ಟು ದೊಡ್ಡ ಹಣ್ಣು ಬಿಡುತ್ತದೆ. ಆ ಹಣ್ಣುಗಳು ಪಕ್ವವಾದ ಕೂಡಲೆ ಅವುಗಳೊಳಗಿಂದ ಒಂದು ಬಗೆಯ ರಸದ ತುಷಾರಗಳು ಹಾರಹತ್ತುತ್ತವೆ. ಈ ತುಷಾರಗಳ ಅಳವಿನಲ್ಲಿ ಯಾರಾದರೂ ಬಂದರೆ, ಅವರಿಗೆ ಬೇಗನೆ ಮಾಯದ ಗಾಯವಾಗುವುದು.

—ಚಿತ್ರಮಯಜಗತ್

ಬ್ರಹ್ಮದೇವನಿಗೆ ಪ್ರತಿಸ್ಪರ್ಧಿಯಾಗಿ ನಿಂತು ವಿಶ್ವಾಮಿತ್ರ ಋಷಿಯು ಪ್ರತಿಸೃಷ್ಟಿಯನ್ನು ಮಾಡಿದನೆಂದು ಪುರಾಣಗಳಲ್ಲಿ ಕತೆಯಿದೆ. ಈ ಸಂಗತಿಯು

ವಿಶ್ವಾಮಿತ್ರನ ಸೃಷ್ಟಿ

ತೀರಾ ಕಾಲ್ಪನಿಕವಾಗಿರಲಾರದೆಂದು ಈಚೆಗೆ ವೈಜ್ಞಾನಿಕರು ನಡೆಯಿಸಿದ ಪ್ರಯೋಗಗಳಿಂದ ತೋರುತ್ತದೆ. ಶಾಸ್ತ್ರಜ್ಞರ ಅದ್ಭುತಸಿದ್ಧಿಗಳಿ[ಗೆ] 'ಪ್ರತಿ]ಸೃಷ್ಟಿ'ಯೆಂಬ ಹೆಸರೇ ಒಪ್ಪುವುದು. ಒಂದೇ ಬಟಾಟೆ, ಟೊಮ್ಯಾಟೊಗಳ ಬೆಳೆ ಬರುವಂತೆ ಶೋಧವಾಗಲಿ, ನಾಯಿ-ಬೆಕ್ಕು, ಕೋಣ-ಆಕಳು ಹೆಣ್ಣು ಸಿಂಹ ಇವುಗಳ ಸಂಗಮದಿಂದ ಅದ್ಭುತಗಳನ್ನು ಹುಟ್ಟಿಸುವ ಸಾಹಸವಾಗಲಿ 'ಪ್ರತಿಸೃಷ್ಟಿ'ಯಿನ್ನೇನು?




ವಾನರಮನುಷ್ಯ

ಬೇರೆಬೇರೆ ಪ್ರಾಣಿಗಳ ವಿವಿಧ-ಪರಸ್ಪರವಿರೋಧಕ ಗುಣಗಳನ್ನು ಒಂದೆಡೆಗೆ ತರಲು ಆ ಪ್ರಾಣಿಗಳನ್ನು ಒಂದೇ ಕಡೆಗೆ ಇರಿಸಲಾಯಿತು, ಮತ್ತು ಅವುಗಳಿಂದಾದ ಪ್ರಜೋತ್ಪತ್ತಿಯಲ್ಲಿ ಶಾಸ್ತ್ರಜ್ಞರ ಅನುಮಾನದಂತೆಯೆ ಗುಣಾವಗುಣಗಳು ಪ್ರಕಟವಾದವು. ಕೋಣ-ಆಕಳುಗಳ ಕೂಟದಿಂದಾದ ಪ್ರಾಣಿಯನ್ನು 'ಗೋಮಹಿಷ' ಎಂದು ಹೆಸರಿಸಬಹುದು. ಈ ಗೋಮಹಿಷದ ಮೈಯಲ್ಲಿ ಕೋಣನ ಶಕ್ತಿಯೂ ಆಕಳಿನ ಚಪಲತೆಯೂ ಇವೆ. ಎಂದರೆ ಇವೆರಡರ ಸಂಯೋಗದಿಂದ ಕೋಣನ ಸೋಮಾರಿತನವು ಶಾಶ್ವತವಾಗಿ ನಷ್ಟವಾಯಿತು. ವನರಾಜ್ಞಿ-ವ್ಯಾಘ್ರರ ಸಂಯುಕ್ತ




ವ್ಯಾಘ್ರಸಿಂಹ



ಗೋಮಹಿಷ

ಪ್ರಜೆಯೂ ಇದೇ ರೀತಿ ಗುಣಶಾಲಿಯಾದುದು ಕಂಡು ಬಂದಿತು. ಈ ಹೊಸ ಪ್ರಾಣಿಯಲ್ಲ ಹುಲಿಯ ಕ್ರೂರತನ ಕಾಣದಾಗಿ, ಸಿಂಹದ ಧೀರೋದಾತ್ತವೃತ್ತಿಯು ತಲೆದೋರ ತೊಡಗಿತು! ಶಾಸ್ತ್ರಜ್ಞರು ಮನುಷ್ಯನ ಮತ್ತು ಚಿಂಪ್ಯಾಂಝಿಗಳ ಸಂಯೋಗದಿಂದ ಒಂದು ಹೊಸ ವಾನರನನ್ನು ಉಂಟುಮಾಡಿದ್ದಾರೆ. ವಾನರ-ನರರ ನಡುವಿನ ಕಳಿಗೆಯನ್ನು (missing link) ಹುಡುಕಿತೆಗೆಯಲು ಜೀವಶಾಸ್ತ್ರಜ್ಞರು ವಿಶ್ವಪ್ರಯತ್ನವನ್ನು ಮಾಡಿಯೂ ಪಡೆಯದಾಗಿದ್ದರು. ಈ ಹೊಸ ಪ್ರಾಣಿಯ ಉತ್ಪತ್ತಿಯಿಂದ ಆ ತಳಕು ಸಿಕ್ಕಿತೆಂದು ಹೇಳಬಹುದಾಗಿದೆ.



ನಾಯಿಬೆಕ್ಕು



ಗರ್ಲ್ ಮನ್ನಿಲ್ಲದಮ್ಮದ್ವೆ (ಪ್ರಹಸನ). ಲೇಖಕರು: ಶ್ರೀ. ಎಚ್. ಯೋಗನರಸಿಂಹ, M. A., ಬೆಂಗಳೂರು. ಕ್ರಾ. ಆ. ೩೮ ಪುಟಗಳು. ಬೆಲೆ ೦-೪-೦

ಈ ಏಕಾಂಕರೂಪಕವು ಫ್ರಾನ್ಸದೇಶದ ನಾಟಕಕಾರನಾದ ಮಾಲಿಯರನ ಒಂದು ಪ್ರಹಸನದ ಆಧಾರದಿಂದ ಬರೆಯಲ್ಪಟ್ಟಿದೆ. ಮಾಲಿಯರನ ಸಾಮಾಜಿಕ ನಾಟಕಗಳು ಜಾಗತಿಕ ಸಾಹಿತ್ಯದಲ್ಲಿ ಹೆಚ್ಚಿನ ಸ್ಥಾನ ಪಡೆದಿವೆ. ಆತನು ಹಾಸ್ಯಪಟುವಾಗಿದ್ದು ಸಮಾಜದ ಲೋಪದೋಷಗಳನ್ನು ಹಾಸ್ಯಾಸ್ಪದ ರೀತಿಯಲ್ಲಿ ಚಿತ್ರಿಸುವಲ್ಲಿ ಕುಶಲನಾಗಿದ್ದನು. ಪ್ರಸ್ತುತ ಪ್ರಹಸನದಲ್ಲಿ ಮಾಲಿಯರನ ನಗೆಗಾರಿಕೆ ಎದ್ದು ಕಾಣುತ್ತಿದೆ.

ಶ್ರೀ. ಯೋಗನರಸಿಂಹಂ ಅವರು ಮೂಲಕೃತಿಯನ್ನು ನಮ್ಮ ಸಮಾಜದ ರೀತಿನೀತಿಗಳಿಗೆ ಅನ್ವಯಿಸುವಂತೆ ರೂಪಾಂತರಿಸಿದ್ದಾರೆ. ಇದೊಂದು ಸ್ವತಂತ್ರಕೃತಿಯೆನ್ನುವಷ್ಟು ಸ್ವಾಭಾವಿಕತೆ ಈ ಪ್ರಹಸನದಲ್ಲಿದೆ. ತಾರ್ಕಿಕನಾದ ಪಟ್ಟಾಭಿಶಾಸ್ತ್ರಿ ಹಾಗೂ ಸ್ಯಾದ್ವಾದವಾದಿ ಶಾಂತರಾಜಶಾಸ್ತ್ರಿಗಳ ಪಾತ್ರಗಳು ಪರಕೀಯವೆಂದು ಅನಿಸುವದೇ ಇಲ್ಲ. ಪಟ್ಟಾಭಿಯ ತರ್ಕ ಹಾಗೂ ಸಂಸ್ಕೃತಗಳ ಪ್ರೇಮ, ಶಾಂತರಾಜನ ಸ್ಯಾದ್ವಾದದ ಅಭಿಮಾನ ಇವು ಬಹಳ ಸಹಜವಾಗಿ ನಿರೂಪಿತವಾಗಿವೆ. ಪಾಶ್ಚಾತ್ಯ ರೂಪಕಗಳನ್ನು ನಮ್ಮ ಜೀವನಕ್ಕೆ ಅನ್ವಯಿಸುವಂತೆ ಅನುವಾದಿಸುವದರಿಂದ ಅನೇಕ ಆಭಾಸ, ಅಸ್ವಾಭಿಕತೆಗಳು ಇಲ್ಲದಂತಾಗುತ್ತವೆ. ಈ ಸಂಬಂಧವಾಗಿರುವ ಲೇಖಕರ ಅಭಿಪ್ರಾಯ (ಮುನ್ನುಡಿ ಪುಟ II) ದಲ್ಲಿ ಹುರುಳಿದೆ. ಮೂಲಕೃತಿಯನ್ನು 'ಮಕ್ಕಾಮುಕ್ಕಿ'ಯಾಗಿ ಚಿತ್ರಿಸುವದರಿಂದ ಮೂಲ ಲೇಖಕನ ಜೀವಾಳವು ತಿಳಿಯುತ್ತಿದೆ. ಆದರೆ ಪಾಶ್ಚಾತ್ಯ ಜೀವನದ ಚಿತ್ರವು ನಮ್ಮ ರಂಗಭೂಮಿಯ ಮೇಲೆ ಅಸ್ವಾಭಾವಿಕವಾಗುತ್ತದೆ. ಉದಾಹರಣೆಗೆಂದು 'ಸೂತ್ರದ ಬೊಂಬೆ' ಯೆಂಬ ನಾಟಕವನ್ನು ನೋಡಬಹುದು. ರಂಗಭೂಮಿಯ ಮೇಲಿನ ಪ್ರಯೋಗದ ದೃಷ್ಟಿಯಿಂದ ಪ್ರಸ್ತುತ ಲೇಖಕರ ಮಾರ್ಗವು ಸಮಂಜಸವಾಗುವದು. ಮೂಲಕೃತಿಯಲ್ಲಿ ಮಾರ್ಪಾಡು ಮಾಡುವದರಿಂದ ಮೂಲ ಲೇಖಕನ ಕೃತಿಯ ನಿಜವಾದ ಪರಿಚಯವಾಗುವದಿಲ್ಲ. ಆದುದರಿಂದ ... ದ್ರೋಹ ಬಗೆದಂತಾಗುತ್ತದೆ ಎಂಬ ಅಭಿಪ್ರಾಯ... ಶಾಕುಂತಲವನ್ನು ಆಂಗ್ಲೇಯ ಜೀವನಕ್ಕೆ ಒ... ಅನುವರ್ತಿಸಿದರೆ ಅದೆಷ್ಟು ಆಭಾಸ ನಮಗೆ ತೋರ... ಆದರೆ ಮೂಲ ಲೇಖಕನ ಕೃತಿಯ ಪರಿಚಯವೇ ... ವಾದಾಗ 'ಮಕ್ಕಾಮುಕ್ಕಿ'ಯಾಗಿ ಚಿತ್ರಿಸುವದು ... ಭವವು ಮುಖ್ಯ ಧ್ಯೇಯವಾಗಿರುವಾಗ ಪ್ರಸ್ತುತ ... ಮಾರ್ಗವನ್ನು ಅನುಸರಿಸುವದೂ ಸರಿಯಾಗಬಹು...

ಈ ಪ್ರಹಸನದಲ್ಲಿ ಗಣೇಶರಾಯನೆಂಬ 'ಮು... ಧರ್ಮಾಂಬೆಯೆಂಬ ಥಳಕಿನ ಹುಡಿಗೆಯನ್ನು ... ಯಾಗಲು ಹಾತೊರೆಯುತ್ತಾನೆ. ಆಕೆಯು "ನಿ... ಡ್ಯಾಮ್ಡೋಂಟ್‌ಕೇರು ಬಹ್ದು. ನಾನ್ಬೇಕ್ಕಾದ್ದಾಮ್ಡೋಂಡ್ರೆ ... ಪಡಿಸಬೇಡಿ............ನೀವ್ನನ್ನಂಬ್ಬೇಕು; ನಾನ್ನಿ... ಬ್ಬೇಕು." ಎಂದು ಮಾತನಾಡಹತ್ತಲು ಗಣೇಶನಿ... 'ಕೆಟ್ಟ ಚಾಳಿ'ಯವಳೆಂಬ ಸಂಶಯ ಬರುತ್ತದೆ. ... ಮದುವೆಯಾಗಬೇಕೋ ಅಥವಾ ಬಿಡಬೇಕೋ ... ವಿಷಯವಾಗಿ ಸಲಹೆಯನ್ನು ಕೇಳಲು ಪಂ... ಸಂದರ್ಶಿಸುತ್ತಾನೆ. ಒಬ್ಬ ಪಂಡಿತನು ತರ್ಕಶು... ಹುಚ್ಚಿನಲ್ಲಿ, ಇನ್ನೊಬ್ಬನು "ಇರಬಹುದು; ಇ... ಎಂಬ ಸ್ಯಾದ್ವಾದದ ಭ್ರಮೆಯಲ್ಲಿ ಬಡಬಡಿಸುತ್ತಾ... ಶನ ಮಾತಿಗೆ ಲಕ್ಷ್ಯಗೊಡುವದೇ ಇಲ್ಲ. ಕೊನೆಗೆ ... ಧರ್ಮಾಂಬೆಯನ್ನು ಮದುವೆಯಾಗಬಾರದೆಂದು ... ಹಾಗೆ ಹೇಳಲು ಧರ್ಮಾಂಬೆಯ ಮನೆಗೆ ಹೋದಾ... ಅಣ್ಣನು ಅವನನ್ನು, ಮೈಮುರಿಯುವಂತೆ ಹೊಡೆ... ವೆಗೆ ಆತನನ್ನು ಒಪ್ಪಿಸುತ್ತಾನೆ. ಹಾಗೆ ಒಪ್ಪಿಸಿ... 'ಈ ತಾಟಕೀನ ತೊಲಗ್ನಿದ್ದಾಯ್ತಪ್ಪಾ. ಸ... ಧರ್ಮಾಂಬೆಯ ಧರ್ಮಕರ್ಮ ಎಲ್ಲ ಗಣೇಶ... ಸೇರಿದ್ದು' ಎಂದು ನಿಶ್ಚಿಂತನಾಗುತ್ತಾನೆ.

ಇದಿಷ್ಟು ಕಥಾವಸ್ತು. ಇದರಲ್ಲಿ ಗಣೇಶನ ಮ... ಹಂಬಲ, ಧರ್ಮಾಂಬೆಯ ಸ್ವೇಚ್ಛಾವೃತ್ತಿ, ಶಾಸ್ತ್ರದ ಹುಚ್ಚು, ಸ್ಯಾದ್ವಾದ ಪರಿಣಾಮ ಇವೆ... ಪೂರ್ಣವಾಗಿ ವರ್ಣಿಸಲ್ಪಟ್ಟಿವೆ. ಲೇಖಕರೇ ...

ಇದು 'ಮೊದಲಿನಿಂದ ತುದಿವರೆಗೂ ನಗಿಸುವ ರೂಪಕ' ವಾಗಿದೆ.

ಇದರಲ್ಲಿಯ ಭಾಷೆಯು ಕೈಲಾಸಂರ ಮಾರ್ಗದ್ದು. ಅಂತೆಯೇ 'ಸ್ವಲ್ಪೊತ್ನಿಂದ', 'ಸಮ್ಯಕ್ಸರಿಯಾಗ್ಸಿಕ್ಕಿದ್ರು', 'ಮಾಡ್ಕೊಡ್ಬಲ್ಲು' ಮುಂತಾದ ಎರಡು-ಮೂರು ಒತ್ತಕ್ಷರ ಗಳಿಂದ ಪುಸ್ತಕವು ತುಂಬಿದೆ. ಪುಸ್ತಕವು ಅಚ್ಚುಕಟ್ಟಾಗಿ ಮುದ್ರಿತವಾಗಿದೆ. ಆದರೆ 'ಚುತುಷ್ಪಾಧ್ಧರ್ಮ', 'ವತ್ಯಾಸ' ಎಂಬ ಮುದ್ರಣದೋಷಗಳು ಉಳಿದಿವೆ. ನಿಮ್ಮ "ಅಪಕೀರ್ತಿ ತಪ್ಪೋಕೆ ನಾವು ನಿಮಗೆ ಕೊಟ್ಟಿರೋ ಅವಕಾಶಾನ ಉಪಯೋಗಿಸಿಕೊಳ್ತೀರಿ ಅಂತ ನಂಬಲೇ" (ಪುಟ ೩೪) ಎಂಬ ಅಸ್ವಾಭಾವಿಕ ವಾಕ್ಯವು ಇಲ್ಲಿರುವದಕ್ಕೆ ಆಂಗ್ಲ ಭಾಷಾಪದ್ಧತಿಯನ್ನು ಅನುಸರಿಸುವದೇ ಕಾರಣವಾಗಿದೆ. ಪರಿವರ್ತನಕಾರರು ಇಂತಹ ಅಸ್ವಾಭಾವಿಕ ವಾಕ್ಯರಚನೆ ತಲೆದೋರದಂತೆ ಲಕ್ಷ್ಯವಹಿಸುವದು ಅವಶ್ಯವಾಗಿದೆ.

ಈ ಪ್ರಹಸನವು ಓದಲೂ, ಪ್ರದರ್ಶಿಸಲೂ ಒಳ್ಳೇ ಉಪಯುಕ್ತವಾಗಿದ್ದು ಹಾಸ್ಯಪಟುವಾದ ಮಾಲಿಯರನ ಈ ರೂಪಕವನ್ನು ಸುಂದರವಾಗಿ ರೂಪಾಂತರಿಸಿದ ಲೇಖಕರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

—ಎಸ್. ಎಸ್. ಎಂ.

ಪಿಳ್ಳಂಗೋವಿ: (ಆರು ಚಿಕ್ಕಕತೆಗಳು) ಬರೆದವರು—ಪಂಡಿತ ಕೆ. ಶ್ರೀಕಂಠಶಾಸ್ತ್ರಿ. ಪುಟ ೭೦ ಕ್ರಾ. ೧/೮. ಬೆಲೆ—೫ ಆಣೆ.

ಲಕ್ಷಣಕ್ಕೆ ಅಪವಾದಾತ್ಮಕ ದೃಷ್ಟಾಂತಗಳೆನ್ನುವಂತಿದ್ದ 'ಈ ಆರು ಚಿಕ್ಕಕತೆಗಳ'ನ್ನು 'ಆರು ಚಿಕ್ಕ ಹರಟೆ'ಗಳೆಂದಿದ್ದರೆ ಹೆಚ್ಚು ಒಪ್ಪಬಹುದಾಗಿತ್ತು. ಚಿಕ್ಕಕತೆಯಲ್ಲಿ ಜೀವನ ಘಟನಾವಳಿಗಳಲ್ಲಿ ಒಂದನ್ನೆ ಕುರಿತು ಕತೆಗಾರನು ತನ್ನ ಪಾತ್ರವಸ್ತುಗಳನ್ನು ಹೆಣೆದಿರುವನು. ಆದರೆ ಇಲ್ಲಿ ಸಂಕಲಿತವಾಗಿದ್ದ ಕತೆಗಳಲ್ಲಿ 'ಮಳೆ ಅಯ್ನೋರು' 'ಒಡ್ಡತಮ್ಮ' 'ಚನ್ನಿಭಟ್ಟರು' ಇವು ಮೂರು ಒಂದೊಂದು ವ್ಯಕ್ತಿಯ ಇಡೀ ಜೀವನದ ಮಾದರಿಯ ಚಿತ್ರಗಳಾಗಿವೆ. ಇವುಗಳಲ್ಲಿ ಚಿಕ್ಕಕತೆಯಲ್ಲಿ ಕಂಡುಬರುವ ಸಂಗತಿ-ಸನ್ನಿವೇಶಗಳಾವುವೂ ಇಲ್ಲ. ಪಾತ್ರ ಪ್ರಾಧಾನ್ಯತೆಯಿದ್ದರೂ ಅದಕ್ಕೆ ತಕ್ಕ ಹಿಡಿಳವಿಲ್ಲದೆ ಹೋಗಿದೆ; ಎಂದರೆ, ಪಾತ್ರಪರಿಚಯವು ವ್ಯಕ್ತಿಚರಿತ್ರ (biography) ಕ್ಕಿಳಿದುಬಿಟ್ಟಿದರಿಂದ — ನೂರಾರು ಪುಟಗಳಲ್ಲಿ ಹೇಳಬಹುದಾದ ಜೀವನವಿಸ್ತಾರವನ್ನು ಹತ್ತುಹನ್ನೆರಡು ಪುಟಗಳಲ್ಲಿ ಸಂಗ್ರಹಿಸಿ ಹೇಳಿದಂತಾಗಿಯೂ — ಶೈಥಿಲ್ಯವುಂಟಾಗಿದೆ. 'ಆವೇಶ' ವು ಚಿಕ್ಕ ಕತೆಯೆನ್ನುವುದಕ್ಕಿಂತ ಉತ್ತಮತರಗತಿಯ ಹಾಸ್ಯ ಪ್ರಧಾನ-ವಿಡಂಬನಾತ್ಮಕ ಹರಟೆಯೆಂದರೆ ಮತ್ತಷ್ಟು ಪ್ರಾಶಸ್ತ್ಯ ಬರಬಹುದು. 'ಗ್ರಹಗಳು'—ಗುರುಗಳು ಚಿಕ್ಕ ಬಾಲಕರಿಗೆ ಕಥಾರೂಪವಾಗಿ ಹೇಳುವ ವಸ್ತುಪಾಠದಂತೆ, ಮನೋರಂಜಕವಾಗಿ ಜ್ಯೋತಿಷದಂತಹ ಒಂದು ಶಾಸ್ತ್ರೀಯವಿಷಯವನ್ನೂ ತಿಳಿಯಪಡಿಸುತ್ತದೆ. 'ಅಂದು ಕಳೆಯಿತು' ಎಂಬುದೂ ಉತ್ತಮ ಹರಟೆಗೆ ಉದಾಹರಣೆಯಾಗಿದೆ.

ಶ್ರೀ. ಶ್ರೀಕಂಠಶಾಸ್ತ್ರಿಗಳವರ ಶೈಲಿಯು ಸರಳವೂ ಹದಗೊಂಡುದೂ ಇದೆ. ಅವರ ಕಥಾನಿರೂಪಣಾಕೌಶಲವು ಸುಗಮವಾಗಿದೆ. ಪಾತ್ರನಿರೂಪಣೆಯಲ್ಲಿ ಅಲ್ಲಲ್ಲಿ ಅಸ್ವಾಭಾವಿಕತೆಯುಂಟಾಗಿದ್ದರೂ ಜೀವನಕ್ಕೆ ಹೊರತಾಗದ 'ಮಾನಸಪುತ್ರ'ರನ್ನು ನಿರ್ಮಿಸಿದ್ದಾರೆ. 'ಆವೇಶ'ದಲ್ಲಿ ಆವಿಷ್ಕೃತವಾದ ಇವರ ಹಾಸ್ಯದ ಬಗೆಯೂ, ಅಲ್ಲಲ್ಲಿ ಬರುವ ಕಾವ್ಯಪ್ರಾಯ ರೀತಿ-ಭಾವಗಳೂ ಗ್ರಂಥಕರ್ತರ ಕಲಾಭಿಜ್ಞತೆಯನ್ನು ಸ್ಪಷ್ಟಪಡಿಸುತ್ತವೆ. 'ತಿರುಳನ್ನು ಮುಟ್ಟನುಡಿದ ಒಂದೆರಡು ಮಾತಿಗೂ ಕಿವಿಗೂ .... ಪಿಳ್ಳಂಗೋವಿಯ ಇಂಚರವು' ಮೈತ್ರಿಯನ್ನುಂಟುಮಾಡುವ ಸಂಕೋಲೆಯಾಗಬಹುದೆಂದು ಧಾರಾಳವಾಗಿ ಹೇಳಬಲ್ಲೆವು.

ಮಹಾದೇವಿಯಕ್ಕ: ಪ್ರಕಾಶಕರು-ಬಸವನಬಳಗ, ಕೊಲ್ಹಾಪುರ. ಲೇಖಕರು-ಪ್ರೊ. ಕೆ. ಜಿ. ಕುಂದಣಗಾರ ಎಂ. ಎ. ೧೬೬ ಪುಟಗಳು. ಕ್ರಾ. ೧/೮. ಬೆಲೆ ೧ ರೂಪಾಯಿ.

ಮಹಾದೇವಿಯಕ್ಕನ ಚರಿತ್ರೆಯನ್ನು ಸರಸಗದ್ಯದಲ್ಲಿ ನಿರೂಪಿಸಿ ಕನ್ನಡ ವಾಚಕರಿಗೆ ಪ್ರೊ. ಕುಂದಣಗಾರರು ಅತ್ಯಂತ ಉಪಕಾರವನ್ನು ಮಾಡಿದ್ದಾರೆ. ಈ ಮೊದಲೇ ಮಹಾದೇವಿಯಕ್ಕನ ಬಗ್ಗೆ ಅನೇಕ ಲೇಖನಗಳು ಪ್ರಕಟವಾಗಿದ್ದರೂ ಆಕೆಯ ವ್ಯಕ್ತಿತ್ವವನ್ನು ಸ್ಫುಟವಾಗಿ ಚಿತ್ರಿಸುವಂತಹ ಕೃತಿಗಳಾವುವೂ ಇದ್ದಿರಲಿಲ್ಲ. ಮಾನ್ಯ ಲೇಖಕರು ಪ್ರಸ್ತುತ ಚರಿತ್ರೆಗೆ ಹರಿಹರನ ಮಹಾದೇವಿಯಕ್ಕನ ರಗಳೆಯಿಂದಲೂ, ಚೆನ್ನಬಸವಾಂಕನ, ಮಹಾದೇವಿಯಕ್ಕನ ಪುರಾಣದಿಂದಲೂ, ಆಧಾರಮಾತ್ರವನ್ನು ಸಂಗ್ರಹಿಸಿದ್ದರೂ, ಅವೆರಡೂ ಗ್ರಂಥಗಳಲ್ಲಿ ಸ್ಪಷ್ಟವಾಗಿರದ ಅಕ್ಕನವರ ಮದುವೆಯ ವಿಚಾರವನ್ನು, ಅನೇಕ ಇತರ ಆಧಾರಗಳಿಂದಲೂ ಸ್ವಂತ ಊಹೆಯಿಂದಲೂ ಹಿರಿಯರ ಹೇಳಿಕೆಯಿಂದಲೂ ಅತ್ಯಂತ ಯೋಗ್ಯವೆನಿಸುವಂತೆ ಒಂದು ನಿಶ್ಚಿತ ಅಭಿಪ್ರಾಯಕ್ಕೆ ತರಲು ಪ್ರಯತ್ನಿಸಿದ್ದಾರೆ. ಇದೊಂದ

ರಿಂದಲೇ ಲೇಖಕರ ಸ್ವೋಪಜ್ಞತೆಯ ಕುರುಹು ಮುಗಿಯ ಲಿಲ್ಲ. ಮೂಲವಾತೃಕೆಯಿಂದ ಎತ್ತಿಕೊಂಡ ಸಂಗತಿಯನ್ನು ಹೃದ್ಯವಾಗುವಂತೆ, ವಾಚಕರ ಬಗೆಯನ್ನು ಸೆರೆಹಿಡಿಯು ವಂತೆ ಲಲಿತಗದ್ಯದಲ್ಲಿ, ಪುರಾಣಾಂಶವಿಲ್ಲದೆ ನವೋನವ ವಾಗುವಂತೆ ಕಾದಂಬರಿಯ ರೀತಿಯಲ್ಲಿ ಬರೆದ ಶ್ರೇಯ ಸ್ಸೆಲ್ಲವೂ ಲೇಖಕರದೇ ಆಗಿದೆ.

ಅಕ್ಕಮಹಾದೇವಿಯೆಂದರೆ ಭವಿಯಲ್ಲ—ಭಕ್ತೆ. "ಅವಳ ರೂಪ, ಲಾವಣ್ಯ, ಗಾಂಭೀರ್ಯ, ಮನೋದಾರ್ಢ್ಯ, ಸ್ಥೈರ್ಯ, ವಿರಕ್ತಿ, ಭಕ್ತಿ, ಮುಂತಾದ ಸಂಗತಿಗಳನ್ನು ಮೇಳವಿಸುವಾಗ ಬ್ರಹ್ಮದೇವನು ಈ ಮೂರ್ತಿಯನ್ನು ಸೃಷ್ಟಿ ಸುವಾಗ ಸ್ತ್ರೀವರ್ಗಕ್ಕೊಂದು ಅಪವಾದವನ್ನು ಕಲ್ಪಿಸುವ ಸಂಕಲ್ಪಮಾಡಿಕೊಂಡಿದ್ದಂತೆ, ತೋರುತ್ತಿತ್ತು"ಎಂಬಂತೆ ಇವಳ ಬಾಹ್ಯಾಂತರ ಚೆಲ್ವಿಕೆ. ಶಿವಭಕ್ತಿಯೆ ಸ್ತ್ರೀರೂಪ ವಾಗಿಯೂ, ವೇದಪಾಂಡಿತ್ಯವೇ ಜಂಗಮರೂಪವಾಗಿಯೂ ಅವತರಿಸಿದಂತಿದ್ದ ಇವಳನ್ನು ತಂದೆತಾಯಿಗಳು ರಾಜಾ ಜ್ಞೆಗೆ ಕಟ್ಟುಬಿದ್ದು ಭವಿಯಾದ ಕೌಶಿಕನಿಗೆ ಮದುವೆಮಾಡ ಬೇಕಾಯಿತು. ದೇಹದಿಂದ ರಾಜನನ್ನು ಮದುವೆಯಾದರೂ ಭಾವದಿಂದ ಚೆನ್ನಮಲ್ಲಿಕಾರ್ಜುನನನ್ನೆ ಮದುವೆಯಾಗಿದ್ದ ಮಹಾದೇವಿಯು ರಾಜನ ಕಾಮುಕವೃತ್ತಿಯನ್ನು ಜರಿದು, ಜಾತರೂಪಧಾರೆಯಾಗಿ ಸಂಸಾರಹೇಯದಿಂದ ರಾಜ್ಯವನ್ನು ತೊರೆದು ಕಲ್ಯಾಣಕ್ಕೆ ಹೋಗಿ ಬಸವಣ್ಣನವರ ಕೃಪಾ ಪ್ರಸಾದವನ್ನು ಪಡೆದು ಲಿಂಗೈಕ್ಯವನ್ನು ಹೊಂದಿದಳೆಂದು ಇವಳ ಚರಿತ್ರಾಂಶ. ಈಕೆಯ ವಚನಗಳಿಂದಲೂ ಕೆಲವು ಮಟ್ಟಿಗೆ ಈಕೆಯ ವ್ಯಕ್ತಿತ್ವವನ್ನು ಕಾಣಬಹುದಾಗಿದೆ. ಇವಳ ಭಾವೋತ್ಕಟತೆಯಿಂದಲೂ ಭಕ್ತಿಯ ಉದ್ವೇಗ ದಿಂದಲೂ ತಾವೇತಾವಾಗಿ ಹೊರಹೊಮ್ಮಿದ ವಚನಗಳು ಕಾವ್ಯಮಯವಾಗಿ ಕಲೆಯ ದೃಷ್ಟಿಯಿಂದಲೂ ಮಾನ್ಯ ವಾಗಿವೆ.

ಹರಿಹರನೂ—ಅವನನ್ನೆ ಅನುಸರಿಸಿದ ಚೆನ್ನಬಸವಾಂ ಕನೂ—ಮಹಾದೇವಿಯಕ್ಕನ ಚರಿತ್ರೆಯಲ್ಲಿ ಪುರಾಣಾಂಶ ವನ್ನು ಬೆರೆಸಿ ಅಕ್ಕನವರು ಅವತಾರಭಕ್ತೆಯೆಂದು ಹೇಳಿ ದ್ದರೂ—ಉಳಿದುವೆಲ್ಲವೂ ಜೀವನದ ವಾಸ್ತವಚಿತ್ರವೇ ಆಗಿದೆ. ಪ್ರೊ. ಕುಂದಣಗಾರರು, ಇವರಿಬ್ಬರ ಗ್ರಂಥಗಳಿಂದ ವರ್ಣನೆಗಳನ್ನು ತೆಗೆದುಕೊಂಡಿದ್ದರೂ ಹೊಸಗನ್ನಡಕ್ಕೆ ಒಗ್ಗುವಂತೆ, ಒಪ್ಪುವಂತೆ ಅದನ್ನು ಹದಗೊಳಿಸಿ ಚೊಕ್ಕಟ ವಾಗಿರಿಸಿದ್ದಾರೆ. ಈ ಗದ್ಯಶೈಲಿಯು ಲೇಖಕರದೇ ಆಗಿದೆ. ಪ್ರಸ್ತುತಗ್ರಂಥದಲ್ಲಿ ವೀರಶೈವಸಿದ್ಧಾಂತತತ್ವಗಳನ್ನು ಬೀಜ ರೂಪವಾಗಿ ನಿರೂಪಿಸಿದ್ದಾರೆ. ಅಲ್ಲಲ್ಲಿ ಅನೇಕ[illegible] ಗಳ ವರ್ಣನೆಗಳನ್ನು ಪ್ರಸ್ತುತ ವರ್ಣನೆಗಳಿಗೆ [illegible] ವೆನಿಸುವಂತೆ ಕೆಲವೆಡೆಗಳಲ್ಲಿ ಕೊಟ್ಟಿದ್ದರೂ—ಕಥೆಯ[illegible] ರೂಪತೆಯ ದೃಷ್ಟಿಯಿಂದ ಅವು ಅಷ್ಟು ಸಾಂಪ್ರತ[illegible] ಸುವುದಿಲ್ಲ. ಆದರೆ ಒಟ್ಟಿನ ಮೇಲೆ ಪ್ರೊ. ಕುಂದಣಗಾ[illegible] ಕನ್ನಡಿಗರಿಗೆಲ್ಲರಿಗೂ ಅತ್ಯಾವಶ್ಯಕವಾಗಿದ್ದ ಒಂದು [illegible] ಯನ್ನು ಸಲಿಸಿದ್ದಾರೆ. ಇದಕ್ಕಾಗಿ ಲೇಖಕರಿಗೂ [illegible] ಬಳಗದ ಪ್ರಕಾಶಕರಿಗೂ ನಾವು ತುಂಬಾ ಋಣಿಗಳು

—ನಾ. ಕ.

ವಿಶೇಷ ಸಂಚಿಕೆಗಳು

ಕಂಠೀರವ ದಸರಾ ಸಂಚಿಕೆ (೧೯೩೭): ಡೆಮಿ ಆಕಾರದ ೨೧೦ ಪುಟಗಳ ಈ ವಿಶೇಷಸಂಚಿಕೆಯು [illegible] ಕೈಸೇರಿದೆ. ಎಂದಿನಂತೆ ಈ ವಿಶೇಷಸಂಚಿಕೆಯಲ್ಲಿ '[illegible] ರವ'ನು ತನ್ನ ವೈಶಿಷ್ಟ್ಯವನ್ನೂ ಪರಿಶ್ರಮವನ್ನೂ [illegible] ಪಡಿಸಿದ್ದಾನೆ. ವಿಶ್ವವಿದ್ಯಾಲಯೊನ ವಿದ್ಯಾಭ್ಯಾಸವ[illegible] ನೀರಿನಂತಾಗಿ ಭವಿಷ್ಯತ್ತಿನ ಬಗ್ಗೆ ಅಂಧಕಾರವು[illegible] ರುವಾಗ 'ಡಿಪ್ಲೊಮಾ' ಅಭ್ಯಾಸಕ್ರಮಗಳನ್ನು [illegible] ಹೆಚ್ಚಾಗಿ ರೂಢಿಗೊಳಿಸುವ ಅಗತ್ಯವನ್ನು ವಿವರಿಸುವ[illegible] ಎನ್. ಎಸ್. ಸುಬ್ಬರಾಯರ ಲೇಖನವು ಅವರ [illegible] ನುಭವಕ್ಕೆ ಒಪ್ಪುವಂತಹದಾಗಿದೆ. ವಾಣಿಜ್ಯ, ಲೇಪ[illegible] ಲೆಕ್ಕಪರಿಶೋಧನೆ, ಇಂಜನಿಯರಿಂಗ್, ನೇಯಿಗೆ, ಇ.ಗಳಲ್ಲಿಯ " ಈ ಡಿಪ್ಲೊಮಾ ಪರೀಕ್ಷೆ ಮತ್ತು [illegible] ವ್ಯಾಪ್ತಿಯು ವಿಸ್ತರಿಸಿ ಸ್ಕೂಲ್‌ಫೈನಲ್ ಪಾಸಾ[illegible] ನೇಕರು ಯೂನಿವರ್ಸಿಟಿ ಶಿಕ್ಷಣಕ್ಕೆ ಸೇರಿ ಡಿಗ್ರಿ ಹೊ[illegible] ಬದಲಾಗಿ ಬೇರೆ ಶಿಕ್ಷಣಸಂಸ್ಥೆಗಳಿಗೆ ಸೇರಿ ಯಾ[illegible] ರೊಂದು ಬಗೆಯ ಡಿಪ್ಲೊಮಾ ಪಡೆಯುವಂತೆ [illegible] ವುದು ಅತ್ಯಾವಶ್ಯಕ" ಎಂದು ವಿಷಯಮಂಡನೆ[illegible] ಅದಕ್ಕೆ ಯುಕ್ತಿಯುಕ್ತ ಕಾರಣಗಳನ್ನೂ ಹೇ[illegible] ಶ್ರೀ|| ಟಿ. ರಾಘವಾಚಾರ್ಯರು ಜನಜೀವನದಲ್ಲಿ [illegible] ಅಭಿನಯ ಮೊದಲಾದ ಕಲೆಗಳ ಸ್ಥಾನವನ್ನು ವಿಸ್ತ[illegible] ಈಗಿನ ರಾಷ್ಟ್ರೀಯ ಸರಕಾರಗಳು ರಂಗಭೂಮಿಯ [illegible] ತಮ್ಮ ದೃಷ್ಟಿಯನ್ನು ಬೀರುವುದು ಅಗತ್ಯವೆಂದು [illegible] ದ್ದಾರೆ. "ಆಹಾರ ವಸ್ತ್ರಾದಿಗಳನ್ನು ಅವರಿಗೆ(ದೀನ[illegible] ಒದಗಿಸಿಕೊಡುವುದು ಅವರ ಪ್ರಥಮಕರ್ತವ್ಯವೆ[illegible] ಸಾಲದ ಜಾಲದಲ್ಲಿ ಬಿದ್ದವರನ್ನು ತಪ್ಪಿಸುವುದು [illegible] ಕರ್ತವ್ಯವೆನ್ನೋಣ. ಆದರೊಂದಿಗೆ ಅವರ [illegible]

ಯನ್ನೂ ವಿಕಾಸಗೊಳಿಸಿ ಅವರ ಕಲ್ಪನಾಶಕ್ತಿಯನ್ನು ಅಭಿವರ್ಧಿಸಿ ಜೀವನದ ಮಹತ್ವವನ್ನು ಸರಿಯಾಗಿ ತುಲನೆ ಮಾಡುವಂತೆ ಅವರನ್ನು ಪ್ರೋತ್ಸಾಹಿಸುವುದು ಕೂಡ ಅಗತ್ಯವಿದೆ." 'ನಮ್ಮ ಬೇಡಿಕೆ' ಎಂಬ ಶ್ರೀ|| ಎಂ. ಎಸ್. ಕಾಮತರ ಕವನ ಇಂದಿನ ಶ್ರಮಜೀವಿಗಳ ಆಶೋತ್ತರಗಳನ್ನು ವ್ಯಕ್ತಪಡಿಸುವುದು; ಇಂತಹ ವೀರ್ಯವಂತಿಕೆಯಿಂದ ಗಂಡುತನ-ಗಡಸುತನದಿಂದ ಕೂಡಿದ ಕವನಗಳು ಕನ್ನಡನಾಡಿನಲ್ಲಿ ಇನ್ನೂ ಹೆಚ್ಚಾಗಿ ಹುಟ್ಟಬೇಕು. ಶ್ರೀ. ಹನುಮಂತರಾವ್ ಮಾಂಜರೇಕರ ಅವರ 'ಒಂದು ಓಲೆ'— ಇಂದಿನ ಸಾಹಿತ್ಯಕ್ಷೇತ್ರದಲ್ಲಿಯ ವಿಚಾರಸಂಕರವನ್ನು ಬಯಲಿಗೆಳೆಯುವುದು; ಹಲವು ಸ್ವತಂತ್ರ ಸೂಚನೆಗಳನ್ನೊಳಗೊಂಡಿರುವುದು. ಶ್ರೀ|| ದ. ರಾ. ಬೇಂದ್ರೆಯವರು ಸುಮೇರಿ 'ಸಿನ್,' ದ್ರಾವಿಡ 'ತಿನ್,' ಆರ್ಯ 'ಚಂದ್ರ,' ವೈದಿಕ 'ಸಿನೀವಾಲೀ' ಗಳ ಹತ್ತುಗಡೆಯನ್ನು ವಿವರಿಸುತ್ತ, "ಅಂತೂ ಕನ್ನಡದಲ್ಲಿ ತಿನ್ ಎಂದರೆ ಅಮಾವಾಸ್ಯೆಯ ದಿನವೂ ಕ್ಷಯಿಸದಿದ್ದ ಬೀಜಚಂದ್ರ, ತಿಂಗಳ್ ಎಂದರೆ ಸಕಲಕಲಾಯುಕ್ತನಾದ ಪೂರ್ಣಚಂದ್ರ, ಪೆಟಿ ಎಂದರೆ ಬೆಳೆವ ಬಿದಿಗೆಯ ಚಂದ್ರ, ಚೆಂದಿರ ಎಂದರೆ ಕೆಂಪು ಸುಂದರ ಚಂದ್ರ, ಇತ್ಯಾದಿಯಾದ ಪ್ರಪಂಚ 'ಸಿನ್'ದಿಂದ ಬಂದಿತೆಂದು ತೋರುವುದು" ಎಂದು ಸಿದ್ಧಾಂತಿಸಿದ್ದಾರೆ. (ಈಚೆಗೆ ಶ್ರೀ|| ಗೋವಿಂದ ಪೈಯವರು ಇದನ್ನು ಆಕ್ಷೇಪಿಸಿದ್ದಾರೆ.) ಬರ್ಲಿನಿನ ಪ್ರೊ. ಕೆ. ಎ. ಭಟ್ಟರವರ, ಜರ್ಮನಿಯಲ್ಲಿಯ ಯುವಕ ಚಳವಳವನ್ನು ವಿಸ್ತಾರವಾಗಿ ವಿವರಿಸುವ ಲೇಖನ ವಿಷಯಪೂರ್ಣವಾದುದು. ವೈದ್ಯ-ಹಕೀಮರನ್ನು ರಜಿಸ್ಟರ ಮಾಡಿಸುವ ಪದ್ಧತಿಯು, ಹಿಂದೂ-ಯವನ ಗೃಹವ್ಯವಸ್ಥೆಗಳಲ್ಲಿ ಅನೂಚಾನಸಂಸ್ಕೃತಿಯಾಗಿ ಸೇರ್ಪಡೆಯಾದ ಗೃಹವೈದ್ಯಕಕ್ಕೇ ಕೊಡಲಿಯಿಕ್ಕೀತು ಎಂದು ಪಂ. ತಾರಾನಾಥರಾಯರು ಕಾಂಗ್ರೆಸ್ ಮಂತ್ರಿಮಂಡಳದವರ ಈ ವಿಚಾರವನ್ನು ಅನುಲಕ್ಷಿಸಿ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇಂಗ್ಲೆಂಡು ತನ್ನ ಮಕ್ಕಳ ಹಿತಚಿಂತನೆಯನ್ನು ಎಷ್ಟು ಚೆನ್ನಾಗಿ ಮಾಡುತ್ತಿದೆಯೆಂಬ ವಿಚಾರವನ್ನು ಕು. ಪದ್ಮಾವತಿಯವರ ಲೇಖನದಿಂದ ತಿಳಿದುಕೊಳ್ಳಬಹುದು. ಟಿ. ಎಸ್. ಆಚಾರ್ ಅವರ ಪ್ಯಾರೀಸಿನ ಅಂತರರಾಷ್ಟ್ರೀಯ ಪ್ರದರ್ಶನದ ಅಂಶಗಳನ್ನು ತಿಳಿಸುವ ಸಚಿತ್ರಲೇಖನವೂ ಟೋಕಿಯೋದ ಶ್ರೀ|| ಕೆ. ಎಲ್. ನಂಜಪ್ಪನವರ 'ಜಪಾನಿನ ಪುಟ್ಟ ಕೈಗಾರಿಕೆಗಳ ಉದ್ಯಮ'ದ ಜ್ಞಾನವನ್ನು ಮಾಡಿಕೊಡುವ ಸಚಿತ್ರ ಲೇಖನವೂ ಉದ್ಬೋಧಕಗಳಾಗಿವೆ. ಇವುಗಳ ಹೊರತು ಶ್ರೀ. ಅ. ನ. ಕೃಷ್ಣರಾವ್, ಶ್ರೀಮತಿ ಬಿ. ಟಿ. ಜಿ. ಕೃಷ್ಣ ಮೊದಲಾದವರ ಸೊಗಸಾದ ಕತೆಗಳೂ, ವಿನೋದ ಲೇಖನಗಳೂ, ಬೇರೆ ಐತಿಹಾಸಿಕ ಲೇಖನಗಳೂ ಬಂದಿವೆ. ವರ್ಷಕ್ಕೊಂದೇ ಸಲವಾದರೂ ೨೦೦ ಪುಟಕ್ಕೆ ಮೇಲ್ಪಟ್ಟ ಇಂತಹ ಸರ್ವಾಂಗಸುಂದರ ಸಂಗ್ರಾಹ್ಯ ಸಂಚಿಕೆಯನ್ನು ಹೊರಡಿಸಿದುದಕ್ಕಾಗಿ 'ಕಂಠೀರವ'ನಿಗೆ ನಮ್ಮ ಅಭಿನಂದನೆ. ಬೆಲೆಯನ್ನು ಎಲ್ಲೂ ಕಾಣಿಸಿಲ್ಲವಾದರೂ ಅದು ತೂಗುವಂತಹದಿದೆಯೆಂದು ಭಾವಿಸಿದ್ದೇವೆ.

ಪ್ರಭಾತ ದಸರಾ ಸಂಚಿಕೆ: ಜ.ಕ. ಆಕಾರದ ೧೨೦ಕ್ಕಿಂತ ಹೆಚ್ಚು ಪುಟಗಳು. ಬೆಲೆ ಕಾಣಿಸಿಲ್ಲ. ವಿಷಯಸಂಗ್ರಹಾತ್ಮಕ ಲೇಖನಗಳಿಗಿಂತ ಲಲಿತವಾಙ್ಮಯಕ್ಕೆ ಹೆಚ್ಚಿನ ಎಡೆಯನ್ನು ಕೊಡಲಾಗಿದೆ. ನಾಲ್ಕು ಸಣ್ಣ ಕತೆಗಳೂ ಎರಡು ಹರಟೆಗಳೂ ಒಂದು ಕವನಕಥೆಯೂ ಒಂದು ಏಕಾಂಕ ನಾಟಕವೂ ನಾಲ್ಕು ಕವನಗಳೂ ಇವೆ. ಒಟ್ಟಿನಲ್ಲಿ ಹೊಟ್ಟೆತುಂಬ ರಂಜನೆಯನ್ನು ಒದಗಿಸುವಂತಹವಿವೆ. ಶ್ರೀ|| ಕೊರಡ್ಕಲ್ ಶ್ರೀನಿವಾಸರಾಯರ 'ಅದೆಂತಹ ನೃತ್ಯ' ಎಂಬ ಕತೆಯು, ಬಡವರ ಮನೆಯ ಮಕ್ಕಳ ಗೋಳಾಟವನ್ನು ಹೃದಯದ್ರಾವಕವಾಗಿ ಚಿತ್ರಿಸುತ್ತದೆ. ಮಕ್ಕಳು ಕಷ್ಟಪಟ್ಟು ಎಲ್ಲಿಂದಲೋ ತಂದ ಬಾಳೆಯ ಕಂದನ್ನು ನೆಟ್ಟು, ಅದು ದೊಡ್ಡದಾಗಿ ಗೊನೆಬಿಡುವವರೆಗೂ ನೀರೆರೆದು ಬೆಳಸಿ, ಇನ್ನು ಹಣ್ಣು ತಿನ್ನಲು ಹಾತೊರೆಯುವಷ್ಟರಲ್ಲಿ ತಂದೆಯು ಸಾವುಕಾರನ 'ಸತ್ಯನಾರಾಯಣ'ನಿಗೆ ಕೊಟ್ಟುಬಿಡುವ ಸಂದರ್ಭ ಬಂದಾಗ, ಎಳೆಹಸುಳೆಗಳು ಭೋರೆಂದು ಕಣ್ಣೀರಿಡುತ್ತವೆ. ಕೊನೆಗೆ ಬೂದನು ಆವೇಶಬಂದವನಂತೆದ್ದು "ಇ ಇ ಇ ಇವು ಗೊನೆ ಹಾಕೋದೋೀೀ ಬೇಡಾೀೀ! ಆ ಆ ಆ ಸತ್ತ್ ನಾರ್ಣ್ಣಾೀೀೀ ತಿ ತಿ ತಿ ತಿ ತ್ತಿನ್ನೋದೋೀ ಬೇಡ!" ಎನ್ನುತ್ತ ಅವನ್ನೆಲ್ಲ ಸೀಳಿ ಸೀಳಿ ಮುರಿದು ಹಾಕಿ ಕುಣಿಯತೊಡಗುವನು! ಕತೆಯ ಬೆಳವಣಿಗೆಯು ಮನಸ್ಸನ್ನೆಳೆದೊಯ್ಯುತ್ತದೆ. "ಧರ್ಮಸಂಕಟ" ಎಂಬ ಶ್ರೀ|| ಅ. ನ. ಕೃಷ್ಣರಾಯರ ಏಕಾಂಕನಾಟಕದಲ್ಲಿ 'ವ್ಯಭಿಚಾರನೀತಿ (Ethics of Prostitution)' ಯ ಚರ್ಚೆಯಿದೆ. ನುರಿತ ಕುಂಟಣಿಯಾದ ಸರಸ್ವತಮ್ಮನು ಒಂದು ಆಕಸ್ಮಿಕ ಘಟನೆಯಿಂದ (ಅದಕ್ಕೆ ಒಳಗಾದ ಇನ್ನಿಬ್ಬರು ವ್ಯಕ್ತಿಗಳೊಡನೆ) ಒಮ್ಮೆಲೆ ಪರಿವರ್ತನೆ ಹೊಂದುವಳು. ಪಾತ್ರ-ಸಂಭಾಷಣೆ-ಕಥನಗಳಲ್ಲಿ ವಾಸ್ತವತೆಯಿದೆ-ನಿರ್ಭಯತೆಯಿದೆ. ಕೊನೆ ಕೊಂಚ ಅಸ್ವಾಭಾವಿಕವಾಗಿ ತೋರುವುದು. ಶ್ರೀ|| ಕೆ.

ನರಸಿಂಹಮೂರ್ತಿಯವರ 'ರಾಧಾ-ಕೃಷ್ಣ' ಇನ್ನೊಂದು ಚೆನ್ನಾದ ಕತೆ. ಗಂಡ ಬಿಟ್ಟುಹೋದ ಚೆನ್ನವ್ವನು ಶಾಲೆಯ ಹುಡುಗರಿಗೆ ಹಣ್ಣುಮಾರುತ್ತ ಉಪಜೀವನ ನಡೆಸುವಳು. ಒಂದು ಮಗು ಅವಳ ಮನ ಸೆಳೆದಿದ್ದಿತು. ಅದನ್ನು ಅಕೃತಿಮವಾಗಿ ಪ್ರೀತಿಸುವಳು. ಅನಾರೋಗ್ಯಕ್ಕಾಗಿ ಅದೊಮ್ಮೆ ಬರದಿದ್ದಾಗ, ಮನೆತನಕ ಹುಡುಕಿಕೊಂಡು ಹೋಗುವಳು. ಯಜಮಾನನು ಬಯ್ದು ಕಳಿಸಿಬಿಡುವನು. ಇನ್ನೊಮ್ಮೆ ಹೋಗುವಳು. ಅದು ಕೊನೆಯ ದರುಶನ. ಮಗು 'ಚೆನ್ನಾ!' ಎಂದು ಕೂಗುತ್ತ ಅಸು ನೀಗುವುದು. ಚೆನ್ನಾ ಊರು ಬಿಟ್ಟು ಹೋಗುವಳು.... ಎಲ್ಲಿ? ಯಾರು ಬಲ್ಲರು? ಮನ ಕರಗಿಸುವಂತಹ ಕತೆಗಾರಿಕೆ. ಶ್ರೀ|| ಶಿವರಾಮ ಕಾರಂತರ 'ಸೋಮಿಯ ಸೌಭಾಗ್ಯ' ಒಂದು ಹೊಸ ಲೇಖನಪ್ರಯೋಗ. 'ಈ ಕಥಾನಕವು ನಮ್ಮ ಜಿಲ್ಲೆಯ ಒಂದು ಬಳಗಕ್ಕೆ ಅನ್ವಯಿಸುವುದು. ಅದನ್ನು ಚಿತ್ರಿಸುವುದರಲ್ಲಿ ಬಿಜಾಪುರ ಅತ್ತಕಡೆಯ ಲಾವಣಿಯ ಮಾದರಿಯನ್ನೂ ತುಳುವಿನಲ್ಲಿ ಪ್ರಚಾರದಲ್ಲಿರುವ ಹಲವು ಧಾಟಿಗಳನ್ನೂ ಬಳಸಿರುತ್ತೇನೆ. ಇಡೀ ಕಥಾನಕವು ಹೊಲೆಯರ ಕುಣಿತದೊಂದಿಗೆ ಹಾಡಿ ತೋರಿಸಲು ಅನುಕೂಲವಾಗುವಂತೆ ಚಿತ್ರಿಸಿದೆ.... ಕಥೆಯ ಕೆಲವು ಭಾಗವನ್ನು ಹಿಮ್ಮೇಳದವರೂ, ಇನ್ನು ಕೆಲವು ಭಾಗವನ್ನು ಕಥಾಪಾತ್ರಗಳೂ ಹಾಡುತ್ತಿರಬೇಕು' ಎಂದು ಇದರ ರೂಪರೇಷೆಗಳನ್ನು ಲೇಖಕರು ತಿಳಿಸಿದ್ದಾರೆ. ಇದರ ಕಥನದ ನಡಿಗೆಯೂ ರೂಪಕಾಲಂಕಾರಗಳ ಸೊಗಸೂ ಮನೋಹರ ಕಥಾವಸ್ತುವೂ ಒಂದಾಗಿ ಓದುವಿಕೆಯಲ್ಲಿಯೆ ಇಷ್ಟು ಮನಸ್ಸನ್ನು ಸೆಳೆಯುವವೆಂದ ಮೇಲೆ ಕುಣಿತ-ಹಾಡು-ವಾದ್ಯ-ಹಿಮ್ಮೇಳಗಳೊಂದಿಗೆ ಅಭಿನಯಿಸಿದರೆ ತುಂಬ ಪರಿಣಾಮಕಾರಕವಾಗುವುದರಲ್ಲಿ ಸಂದೇಹವಿಲ್ಲ. ಹೊಲೆಯರ ಮಾತಿನ ದೇಸಿಯಿಂದ ಕುಡಿದುದಾಗಿ, ಸ್ವಾಭಾವಿಕ ಶೈಲಿಯಲ್ಲಿ, ಲಲಿತ ಗತಿಯಲ್ಲಿ ಚಿತ್ರಿತವಾಗಿದೆ. ತಾಯಿ ಕಳೆದುಕೊಂಡ 'ಸೋಮಿ'ಯನ್ನು ತಂದೆಯಾದ ಗುರ್ವಣ್ಣನು ಅಕ್ಕರತೆಯಿಂದ ಜೋಕೆಮಾಡುತ್ತಾನೆ. ಅವಳು ಬಳೆದ ಹಾಗೆ 'ಚನಿಯ'ನೆಂಬ ತಬ್ಬಲಿಮಗುವನ್ನು ಜತೆಗೆ ತಂದಿಡುತ್ತಾನೆ. ಅವರಿಬ್ಬರ ಅನ್ಯೋನ್ಯಪ್ರೇಮ ಅಕೃತ್ರಿಮವಾಗಿ ಬಳೆದುಬರುತ್ತದೆ. ಕಾಲಕ್ರಮದಲ್ಲಿ ಸೋಮಿಯ ಮದುವೆ ಬೇರೆಕಡೆಗಾಗುತ್ತಿದೆ. ಆಕೆ ಸೊರಗಿ ಸಣ್ಣಾಗುತ್ತಾಳೆ. ಆಕೆಯ ಕೊನೆಯ ಬೆಟ್ಟಿಗೆ ಚನಿಯನು ಬರುತ್ತಾನೆ. ಇದಿಷ್ಟೆ ಕಥಾವಸ್ತು, ಆದರೆ ಮನಸೆಳೆಯುವಂತೆ ವಿಸ್ತರಿಸಲ್ಪಟ್ಟಿದೆ.

'ಎಮ್ಮೆಯೂ ಹೊಟ್ಟೆನೋವೂ' ಎಂಬ 'ಕತೆಗಾ... ಬರೆದ ಹರಟೆಯು ಹೊಟ್ಟೆತುಂಬ ನಗೆಯನ್ನು... ತ್ತದೆ. 'ನಿಮ್ಮ ಜಾತಿ ಯಾವುದು? ಕನ್ನ... ಹೇಳುವ ಧೈರ್ಯ ತೋರುವಿರಾ?' ಎಂಬ ಶ್ರೀ|| ... ಜೋಶಿಯವರ ಲೇಖನವು ವಿಚಾರಪ್ರಚೋದಕ... ಇವಲ್ಲದೆ ಬೇರೆ ಸಂಗ್ರಾಹ್ಯ ಲೇಖನಗಳೂ ಇ... ಸಂಚಿಕೆಯು ವಾಚಕರ ರಂಜನೆಯ ದೃಷ್ಟಿಯಿಂದ ... ಯಾಗಿದೆಯೆನ್ನಬಹುದು.

ನವಯುಗ ಪರ್ಯಾಯ ಸಂಚಿಕೆ. ಜ. ಕ. ದ... ಆಕಾರದ ಸು. ೬೦ ಪುಟಗಳು. ಬೆಲೆ ೨ ಆಣೆ. ... ಕೆಯೂ ಬೆಲೆಗಿಂತ ಹೆಚ್ಚಾಗಿ ರಂಜನೆ-ಬೋಧ... ಒದಗಿಸುತ್ತದೆ. ಶ್ರೀ|| ಶಿವರಾಮ ಕಾರಂತರ '... ಆಟ ಕೂಟ' ಲೇಖನವು ವಾಚನೀಯವಾಗಿದೆ... ಉಪಯುಕ್ತ ರಚನಾತ್ಮಕ ಸೂಚನೆಗಳನ್ನೊಳ... ಶ್ರೀಯುತರು ಏನನ್ನು ಬರೆದರೂ ಅದರಲ್ಲಿ ಹೊಸ... ಇರುವುದು. 'ಒಬ್ಬ ಅರ್ಥಧಾರಿಗಾಗಿ ಯಕ್ಷಗಾನ... ಲಾರದು. ಅದು ನಾಟಕಕಲೆಯಂತೆ ಸಮ್ಮ... ಹೊಂದಿದೆ. ಅದರ ಪ್ರತಿಯೊಂದು ಅರ್ಥ, ಹಾಡು, ... ಮೊದಲಾದುವು ಮುಖ್ಯ ಉದ್ದೇಶದೊಡನೆ ಮೇ... ಬೇಕು. ಅಲ್ಲಿ ಬರಿಯ ಕುಣಿತ, ಬರಿಯ ಹಾಡು, ... ಮದ್ದಲೆಯು ಒಂದೊಂದೇ ಚೆನ್ನಾಗಿದ್ದರೂ ಸಾ... 'ಚೆನ್ನು' ಎಂಬುದು ಅಲ್ಲಲ್ಲಿ ಪ್ರತಿಪಾದಿತವಾಗಿರು... ಒಪ್ಪಬೇಕು. ಒಟ್ಟು ಪ್ರಸಂಗದ ದೃಷ್ಟಿಯಿ... ತನ್ನ ಸ್ಥಾನಕ್ಕೆ, ಸಮನಾದ ಅಳತೆಯಿಂದ ಪ್ರದ... ಬೇಕು'.... ಎಂಬೀ ವಿಚಾರವನ್ನು ವಿಸ್ತರಿಸುತ್ತ... ಗಾನಕೂಟ (ತಾಳಮದ್ದಲೆ)ಗಳನ್ನೂ ಯಕ್ಷಗಾನ... ಗಳನ್ನೂ ಈ ಒರೆಯಿಂದ ವಿಮರ್ಶಿಸುತ್ತ, ಅವುಗ... ರಣೆಗಳನ್ನು ಕುರಿತು ಉಪಯುಕ್ತ ಸೂಚನೆಗಳನ್ನಿ... ದ್ದಾರೆ. ಈ ಲೇಖನವನ್ನು ಕಲಾವಿಮರ್ಶಕರು ... ತೀರಬೇಕು. ಶ್ರೀಯುತರ ಲೇಖನದಿಂದ ಸ್ಫುರಿಸು... ವಿಚಾರವೆಂದರೆ, ಕನ್ನಡದಲ್ಲಿಯ ಕಲೆಯ ಪರಿ... ಇನ್ನೂ ಹದಕ್ಕೆ ಬಂದಿಲ್ಲ. ಶ್ರೀ. ಕಾರಂತರ... ಲಾದವರು ಸ್ವತಂತ್ರ ಪರಿಭಾಷೆಯನ್ನು ... ದ್ದಾರೆ. ಪಾಶ್ಚಾತ್ಯರಲ್ಲಿ ಬಳಕೆಯಲ್ಲಿರುವ ... ಪದಪ್ರಯೋಗಗಳ ಸಂಸ್ಕಾರವು ಅವುಗಳಲ್ಲಿ ... ತೋರುತ್ತದೆ. ಆದರೆ ಭರತಮುನಿಯಿಂದ ಮೊ... ನಮ್ಮಲ್ಲಿಯೂ ಕಲಾಪರಿಭಾಷೆಯು ಬಳೆದುಬ...

ಎರಡರ ಸಮನ್ವಯವನ್ನು—ಸಮೀಕರಣವನ್ನು ಮಾಡುವ ಹೊತ್ತು ಇದೀಗ ಬಂದಿದೆ. ಶ್ರೀಯುತರು ಸೌರಸ್ಯ, ವರ್ಣಿಕೆ, ಮೇಳ ಮೊದಲಾದ ಹಲವು ಶಬ್ದಗಳನ್ನು ಉಪಯೋಗಿಸಿದ್ದಾರೆ. ಅವುಗಳಲ್ಲಿ ಕೆಲವು ಹಿತವಾಗಿವೆ, ಕೆಲವು ಇಲ್ಲ. ಆದ್ದರಿಂದ ಈ ಸೂಕ್ತಪರಿಭಾಷಾನಿರ್ಮಾಣದ ಪ್ರಶ್ನೆಯನ್ನು ವಿಚಾರಿಸುವುದು ಅಗತ್ಯ. ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರ 'ಅಂದಿನ ಇಂದಿನ ಮುಂದಿನ ಉಡುಪಿಯ ರೂಪರೇಖೆ', ಎಂಬ ಲೇಖನವು ಸ್ಥಳಚರಿತ್ರೆಯ ದೃಷ್ಟಿಯಿಂದ ಅತ್ಯಮೂಲ್ಯವಾಗಿದೆ. ಶ್ರೀಮಧ್ವಾಚಾರ್ಯರ ಅವತಾರಕಾರ್ಯ, ಅವರು ತಮ್ಮ ತರುವಾಯದ ಧರ್ಮವ್ಯವಸ್ಥೆಯನ್ನು ಕುಶಲತೆಯಿಂದ ಹಂಚಿಕೊಟ್ಟುದು, ಅಷ್ಟಯತಿಗಳ ಮತ್ತು ಇತರ ಮತಗಳ ಸಂಪ್ರದಾಯ, ಅಲ್ಲಿಯ ವ್ಯವಸ್ಥೆ, ಕನಕನ ಕಿಂಡಿಯ ಕತೆ, ಆ ಪ್ರಸಂಗದ ನಿಮಿತ್ತವಾಗಿ ಶ್ರೀವಾದಿರಾಜರು ಸಂಚಾರಕ್ಕೆ ಹೋಗುವ ಯತಿಗಳ ೨ ತಿಂಗಳ ಸರತಿಯ ಬದಲಾಗಿ ೨ ವರ್ಷಗಳ ಸರತಿಯನ್ನು ಕಲ್ಪಿಸಿ, ಈಗಿನ ಪರ್ಯಾಯಕ್ರಮವನ್ನು ರಚಿಸಿ, ಉಡುಪಿಯ ಲೌಕಿಕ ಅಭ್ಯುನ್ನತಿಗೆ ಕಾರಣರಾದುದರ ವಿವರಣೆ, ಪರ್ಯಾಯಮಹೋತ್ಸವದ ವರ್ಣನೆ, ಅಲ್ಲಿ ನೋಡತಕ್ಕ ಸ್ಥಳಗಳು, ಉಡುಪಿಯ ಈಗಿನ ಉತ್ಸವ ಸಂದರ್ಭಗಳಲ್ಲಿಯ ಲೋಪದೋಷಗಳು, ಅವುಗಳನ್ನು ಸುಧಾರಿಸುವ ಬಗೆ—ಇದನ್ನೆಲ್ಲ ಚೆನ್ನಾಗಿ ಚಿತ್ರಿಸುವ ೧೩ ಪುಟದ ಈ ಲೇಖನವು 'ಉಡುಪಿಯ ಚಿಕ್ಕ ಕೈಪಿಡಿ'ಯೆ ಆಗಿದೆಯೆಂದರೆ ತಪ್ಪಾಗದು. ಶ್ರೀ. ಕುಡ್ಪಿ ವಾಸುದೇವ ಶೆಣೈ ಅವರ 'ಪಾಕೀಟುಗಳ ಪರ್ಯಾಯ' ಎಂಬ ಲೇಖನವು ಎಂದಿನಂತೆ ಮಾರ್ಮಿಕ ಹಾಸ್ಯದಿಂದ ಕೂಡಿದುದಾಗಿದೆ. 'ಹೊಸ ಮಂತ್ರಿಗಳ ಹೆಜ್ಜೆ ಹಿಂದೋ ಮುಂದೋ ?' ಎಂಬ ಲೇಖನದಲ್ಲಿ ಪಂ. ತಾರಾನಾಥರಾಯರು, ಮಂತ್ರಿಪದಗಳನ್ನು ಸ್ವೀಕರಿಸಿದಂದಿನಿಂದ ಅಧಿಕಾರಿಪಕ್ಷವು ಸ್ವಾತಂತ್ರ್ಯದ ಚಳವಳಿಯನ್ನು ಸ್ತಿಮಿತಕ್ಕೆ ತಂದಿದೆಯೆಂಬ ಸಾಮ್ಯವಾದಿಗಳ ದೂರು ಅಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. 'ಯಾತ್ರಾ ಸ್ಪೆಶಲ್' ಎಂಬ ನಗೆಬರೆಹದಲ್ಲಿ ಶ್ರೀ|| ಪಿ. ವಿ. ಉಪಾಧ್ಯಾಯರು, ಈಗಿನ ರೇಲ್ವೆ, ಬಸ್ಸು, ಟ್ರ್ಯಾವೆಲ್ ಲ್ಯಾಜ್ ಯು ಲೈಕ್ ಸೌಲಭ್ಯಗಳು, ವಿಮಾನ ಪ್ರವಾಸ ಮೊದಲಾದ ಸಂಸ್ಥೆಗಳು ಅಲ್ಪ ವೆಚ್ಚದಲ್ಲಿ ಅಲ್ಪ ಕಾಲದಲ್ಲಿ ಯಾತ್ರಿಕರಿಗೆ ಪ್ರಯಾಣಸೌಕರ್ಯಗಳನ್ನೊದಗಿಸಿ, ಪುಣ್ಯ ಸಂಪಾದಿಸುತ್ತಿರುವಷ್ಟು ಸ್ವಂತ ಯಾತ್ರಿಕರೂ ಸಂಪಾದಿಸುತ್ತಿಲ್ಲವೆಂದು ಹೇಳಿದ್ದಾರೆ; ಸಮುಸ್ತ ದೀನದರಿದ್ರರಿಗೆ ಇನ್ನೂ ಅನುಕೂಲವಾಗುವಂತೆ, ಅವರೆಲ್ಲರಿಗೆ ಕಾಸಿನ ವೆಚ್ಚವಿಲ್ಲದೆ ಕೂತಲ್ಲಿಯೆ ಮೋಕ್ಷಪ್ರಾಪ್ತಿಯಾಗುವಂತೆ, ದೇವರು ಎಲ್ಲಾಕಡೆ ಕಾಣಿಸಿಕೊಳ್ಳುವಂತೆ ಅನುಗ್ರಹ ಮಾಡಬೇಕು,—ಅದು ಸಾಧ್ಯವಾಗದಿದ್ದರೆ ತಿರುಪತಿ ರಾಮೇಶ್ವರಗಳಲ್ಲಿಯ ದೇವರುಗಳಂತೆಯೇ ಅಲ್ಲಲ್ಲಿರುವ ಗ್ರಾಮದೇವರುಗಳಿಗೂ ತಮ್ಮನ್ನು ದರ್ಶನ ಮಾಡಿದವರಿಗೆ ಮೋಕ್ಷ ಕೊಡುವ ಅಧಿಕಾರವಿರಬೇಕು....ಎಂದು ವ್ಯಂಗ್ಯಸರಣಿಯಲ್ಲಿ ವಿನೋದಯುತವಾಗಿ ಈಗಿನ ಯಾತ್ರಾರ್ಥಿಗಳ ಮೌಢ್ಯವನ್ನು ಟೀಕಿಸಿದ್ದಾರೆ. ಗುರುಪೀಠಗಳ ಸರ್ವಾಧಿಕಾರವನ್ನು ಕಿತ್ತುಕೊಂಡು ಅವುಗಳನ್ನು ಸಾರ್ವಜನಿಕ ಧರ್ಮಸಂಸ್ಥೆಗಳನ್ನು ಮಾಡುವ ಕಾಲ ಬಂದಿದೆಯೆಂದು ಶ್ರೀ|| ಕಟಪಾಡಿ ಶ್ರೀನಿವಾಸ ಶೆಣೈ ಅವರು ಅವರು ತಮ್ಮೊಂದು ಲೇಖನದಲ್ಲಿ ಪ್ರತಿಪಾದಿಸಿರುವರು. 'ಧರ್ಮ ಮತ್ತು ವ್ಯವಹಾರ' ಎಂಬ ಲೇಖನದಲ್ಲಿ ಶ್ರೀ|| ದೇವೇಂದ್ರ ಶೆಣೈ ಅವರು ತಮ್ಮ ಯೋಚನಾತರಂಗಗಳನ್ನು ಚಂದವಾಗಿ ಹರಿಬಿಟ್ಟಿದ್ದಾರೆ; ಧರ್ಮಮಾರ್ತಾಂಡರು ನಿಜವಾದ ಧರ್ಮಪ್ರಸಾರಣೆಯನ್ನು ಬಿಟ್ಟು, ಪ್ರತಿಷ್ಠೆಯನ್ನು ತರುವ ಸೋಗಿನ ಕೆಲಸಗಳಿಗೆ ತೊಡಗಿ ಜನರನ್ನು ವಂಚಿಸುವ ಬಗೆಯನ್ನು ಚಿತ್ರಿಸಿದ್ದಾರೆ. ಅಂತೂ ಈ ಸಂಚಿಕೆ ತಕ್ಕ ಬೋಧೆಯನ್ನೂ ಸುಧಾರಣಾವಿಚಾರಗಳನ್ನೂ ಸಮೀಚೀನವಾಗಿ ಒದಗಿಸುತ್ತದೆ.

ತ್ರಿವೇಣಿ ದೀಪಾವಳಿ ಸಂಚಿಕೆ: ಜ. ಕ. ಆಕಾರದ ಸು. ೮೫ ಪುಟಗಳ ಈ ವಿಶೇಷಸಂಚಿಕೆಯೂ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡಿದೆ. 'ತಿಂಗಳು' ಲೇಖನದಲ್ಲಿ ಶ್ರೀ|| ಗೋವಿಂದ ಪೈಯವರು ಶ್ರೀ|| ಬೇಂದ್ರೆಯವರ ಸಿದ್ಧಾಂತವನ್ನು ಅಲ್ಲಗಳೆದಿದ್ದಾರೆ. ವೇದಗಳಲ್ಲಿ 'ಸಿನೀವಾಲೀ' ದೇವತೆಯನ್ನು ಬಹುಪ್ರಸವದ ಹಾಗೂ ಸುಪ್ರಸವದ ದೇವತೆಯೆಂದು ಹೇಳಲಾಗಿದೆಯಲ್ಲದೆ ಚಂದ್ರದೈವತವೆಂದು ಎಲ್ಲಿಯೂ ಹೇಳಿಲ್ಲ; ಅಥರ್ವವೇದ ಮತ್ತು ಐತರೇಯ ಬ್ರಾಹ್ಮಣಗಳ ನಡುಗಾಲದಲ್ಲಿ ಯಾವಂದೊ ಅದು ಚಂದ್ರಕಲೆಯಾಗಿ ಮಾರ್ಪಟ್ಟಿರಬೇಕು; ಸುಮೇರಿ 'ಸಿನ್' ದಿಂದ ಬಂದುದಾಗಿಲ್ಲ; ತಿನ್ ಎಂದರೆ ಚಂದ್ರಕಲೆಯಲ್ಲ; ತಿಂಗಳ್ ಶಬ್ದವು 'ತಿಙ್+ಗಳ್' ಎಂದು 'ತುಂಬಿದುದು' ಎಂಬ ಅರ್ಥದಲ್ಲಿ ಬಂದಿರಬೇಕು....ಎಂದು ಮುಂತಾಗಿ ಪ್ರತಿಪಾದಿಸಿದ್ದಾರೆ. ಶ್ರೀ|| ಎಂ. ಜಿ. ವೆಂಕಟೇಶಯ್ಯನವರು ಗಧಾಯುದ್ಧದಲ್ಲಿ ರನ್ನನ 'ಗಾಯಕಪ್ರಕೃತಿ' (lyrical temperament) ಹೇಗೆ ಸುವ್ಯಕ್ತವಾಗಿದೆಯೆಂಬುದನ್ನು

ಸೋದಾಹರಣವಾಗಿ ವಿವರಿಸಿದ್ದಾರೆ. ಶ್ರೀ. ಪೇಜಾವರ ಸದಾಶಿವರಾಯರ 'ಶ್ರೀಗಂಧ' ಎಂಬ ಸಣ್ಣ ಕತೆಯು ರೋಮಾಂಚನಕಾರಿಯಾದ ಸನ್ನಿವೇಶವನ್ನು ಚಿತ್ರಿಸುವುದು. ಶ್ರೀಗಂಧ ಕಡಿಯಲು ಹೋದ ಸಂಕಪ್ಪ ಸಿಕ್ಕಿಬಿದ್ದು, ಯಾರ ಮೇಲೋ ಕೊಡಲಿಯೆಸೆದು, ಪಾರಾಗಿ, ದೇವಕಿಯೆಂಬ ವೃದ್ಧೆಯ ಗುಡಿಸಲಿಗೆ ಬಂದು, ಆಸರೆಯನ್ನು ಬೇಡಿ ಪಡೆಯುತ್ತಾನೆ; ಅವನನ್ನು ಹುಡುಕುತ್ತ ಜನ ಬರುವರು; ಕೊಡಲಿಯ ಪೆಟ್ಟಿಗೆ ಗಾಯಗೊಂಡು ಸತ್ತವನನ್ನು ಹೊತ್ತು ತರುವರು; ಮೃತಿಹೊಂದಿದವನು ವೃದ್ಧೆಯ ಮಗನೇ ಆಗಬೇಕೇ?—ಮುದುಕಿಯು ಭಯದಿಂದ ಚೀರಾಡುವಳು, ಆದರೆ ಸಂಕಪ್ಪನು ಆಸರೆಪಡೆದುದನ್ನು ಹೇಳುವುದಿಲ್ಲ!.... 'ಕನ್ನಡ ಲೇಖನ' ಎಂಬ ಲೇಖನದಲ್ಲಿ ಶ್ರೀ|| 'ಚಕ್ರಪಾಣಿ'ಯವರು ಕನ್ನಡ ಲೇಖನವು ಜನಪ್ರಿಯವಾಗುವುದರ ಹಾದಿಯಲ್ಲಿರುವ ಅಡೆತಡೆಗಳನ್ನು ವಿವೇಚಿಸಿ, ಅವನ್ನು ನೀಗುವುದಾದರೆ ಲೇಖಕರು ವಾಚಕರ ಮನೋವೃತ್ತಿಯನ್ನರಿತು ತಮ್ಮ ಶೈಲಿಯನ್ನು ಹದಗೊಳಿಸುವುದು ಹೇಗೆ ಅಗತ್ಯವಾಗಿದೆಯೆಂಬುದನ್ನು ಬಹು ಮಾರ್ಮಿಕವಾಗಿ ವಿವರಿಸಿದ್ದಾರೆ. ಸಾಹಿತ್ಯವ್ಯವಸಾಯಿಗಳೆಲ್ಲ ಅಗತ್ಯ ಓದಬೇಕಾದ ಲೇಖನವಿದು. 'ಸವಿಯಾದ ಸಾವಿರಗಳು' 'ನಮ್ಮ ಫಿಲೊಸೊಫಿ' ಎಂಬ ನಗೆಬರೆಹಗಳು ಚೆನ್ನಾಗಿವೆ. ದಿವಂಗತ ಪಂಜೆ ಮಂಗೇಶರಾಯರನ್ನು ಕುರಿತು ಶ್ರೀ. ಗೋವಿಂದ ಪೈಯವರು ಮಾಡಿದ ಭಾಷಣವು ಅತ್ಯಮೂಲ್ಯ ಸ್ಮೃತಿಲೇಖನವಾಗಿದೆ. ರಾಯರ ವಿಸ್ತೃತಜೀವನಚರಿತ್ರೆಯನ್ನು ಬರೆವುದಾದಲ್ಲಿ, ಇದು ಅತ್ಯುಪಯುಕ್ತವಾಗುವುದು. ಅಲ್ಲದೆ ಬೇರೆ ಸಣ್ಣ ಕತೆಗಳೂ, ಬಿಡಿಬರೆಹಗಳೂ, ಕವನಗಳೂ, ಪ್ರಬಂಧಗಳೂ ಇವೆ. ಸಂಚಿಕೆ ಸಂಗ್ರಾಹ್ಯವಾಗಿದೆ. ಬೆಲೆ ೨|| ಆಣೆ ಮಾತ್ರ.

The Kanara Brotherhood Annual

ರಾಯಲ್ ೧/೪ ಆಕಾರದ ೯೨ ಪುಟಗಳುಳ್ಳ, ಮುಂಬಯಿಯ ಕ್ಯಾನರಾ ಬ್ರದರ್‌ಹುಡ್ ಸಂಸ್ಥೆಯ ವಾರ್ಷಿಕ ಮುಖಪತ್ರಿಕೆಯಾದ ಇದರ ಜನವರಿ ೧೯೩೮ರ ಸಂಚಿಕೆಯು ನಮ್ಮ ಕೈಸೇರಿದೆ. ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಮತ್ತು ಅಲ್ಲಿ ವಾಸಿಸುವವರ ವಿಶಿಷ್ಟಸಮಸ್ಯೆಗಳನ್ನು ಚರ್ಚಿಸುತ್ತಿದ್ದರೂ, ಕನ್ನಡಿಗರೆಲ್ಲರೂ ಇದರ ಪುಟಗಳಲ್ಲಿ ಆಸಕ್ತಿಯನ್ನು ತೋರದಿರರು. ಇದರ ಬಹುಭಾಗವು ಇಂಗ್ಲಿಷಿನಲ್ಲಿದ್ದು, ವಾಚನೀಯವಿದೆ. ಕನ್ನಡ, ಮರಾಟಿ, ಪುಟಗಳೂ ಇವೆ. Social Problems of North Kanara ... ನದಲ್ಲಿ ಡಾ. ವಿ. ಎಂ. ಕೈಕಿಣಿಯವರು, ದಕ್ಷಿಣ ಜಿಲ್ಲೆಯ ದುಃಸ್ಥಿತಿಯನ್ನು,—ಅಲ್ಲಿಯವರ ... ರಿಯಾ, ಬಡತನ, ಕಾಡಿನ ಕಷ್ಟಗಳನ್ನು, ... ಜಾತಿಗಳ ಅವ್ಯವಸ್ಥೆ— ವೈಧವ್ಯ— ನಿರಾಶ್ರಿತ... ವಿವಾಹ—ವ್ಯಭಿಚಾರ ಮೊದಲಾದುವುಗಳನ್ನು ... ಸುತ್ತ, ಅವುಗಳ ನಿವಾರಣೋಪಾಯಗಳನ್ನು ... ವರು. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳನ್ನು ... ಗೂಡಿಸಬೇಕೆಂಬ ಬಗ್ಗೆ ಎರಡು ಲೇಖನಗಳಿ... ಇಬ್ಬರು ಲೇಖಕರ ದೃಷ್ಟಿಕೋನಗಳಲ್ಲಿಯೂ ... ವಿದೆ. ಸೆವರಿನ್ ಸಿಲ್ವಾ ಎಂಬವರು, ಎರಡೂ ಜಿಲ್ಲೆ... ಗಳ ಒಂದು ಪ್ರಾಂತವಾಗುವುದು; ಮದ್ರಾ... ಮುಂಬಯಿಯೆ ಐಹಿಕ-ಸಾಂಸ್ಕೃತಿಕ ದೃಷ್ಟಿಗಳಿ... ಹೆಚ್ಚು ಆತ್ಮೀಯವೆನಿಸುವ ಸ್ಥಳ; ಕರ್ನಾಟಕ ... ಣವು ಆಗಲಿ, ಆಗದಿರಲಿ—ಈಗಂತೂ ಎರಡೂ ... ಮುಂಬಯಿ ಆಧಿಪತ್ಯಕ್ಕೆ ಸೇರುವುದು ಅಗತ್ಯ; ಕರ್ನಾ... ಕನ್ನಡ ಜಿಲ್ಲೆಗಳಿಲ್ಲದೆ ಒಂದು ಪ್ರಾಂತವಾ... ಎರಡೂ ಕನ್ನಡ ಜಿಲ್ಲೆಗಳೂ ಒಂದುಗೂಡಿ ಒಂದು ... ಪ್ರಾಂತವಾಗಬಹುದಾಗಿದೆ .... ಎಂದು ಸಾಧಿ... ಅವರ ಭಾಷೆಯಲ್ಲಿಯೆ ಹೇಳುವುದಾದರೆ, Karna... be a province without Kanara and th... low-lying Kanaras should unite and ... province by itself. ಇದು ಸಂಕುಚಿತ ಜಾತಿನಿಷ್ಠ... ಕೋನವಿದೆಯೆಂಬುದು ಸ್ಪಷ್ಟವಿದೆ. ಕೊಂಕಣಿಗರ... ಕನ್ನಡಿಗರ ಅಲ್ಲಿಯ ಸಂಖ್ಯಾಬಲವನ್ನೂ ... ಪ್ರಾಮುಖ್ಯವನ್ನೂ ಅದು ಅಲ್ಲಗಳೆಯುತ್ತಿದೆ. The ... for South Kanara—Madras or Bombay ... ನದಲ್ಲಿ ಶ್ರೀ|| ಎಂ. ಎಸ್. ಮಾಧವರಾವ್ ... ಸೂಕ್ತ-ಸಮಂಜಸವಾದ ರೀತಿಯಲ್ಲಿ ಇದೇ ... ತ್ತಿದ್ದಾರೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ... ವಿಭಜನೆಯನ್ನೂ ದ. ಕನ್ನಡವನ್ನು ಮದ್ರಾಸ... ಬಾಲಾಗಸಿಮಾಡಿ ಮಾಡಿದ ಸಾಂಸ್ಕೃತಿಕ... ಅಪಕಾರವನ್ನೂ ವಿವೇಚಿಸುತ್ತ, ಕರ್ನಾಟಕ... ವನ್ನೂ ಅದರ ಅಂಗಭೂತವಾಗಿ ಎರಡೂ ... ಒಗ್ಗೂಡುವಿಕೆಯನ್ನೂ ಎತ್ತಿಹಿಡಿಯುತ್ತ, ... ಯೋಜನೆಯೆಂದು ಮುಂಬಯಿಪ್ರಾಂತಕ್ಕೆ ದ. ಕ... ಯನ್ನು ಸೇರಿಸಿಬಿಡುವುದರ ಔಚಿತ್ಯವನ್ನು

ಪಾದಿಸಿದ್ದಾರೆ. ಸಂಪಾದಕೀಯ ಸೂಚನೆಗಳಲ್ಲಿ, ಎರಡೂ ಜಿಲ್ಲೆಗಳ ಭವಿತವ್ಯವು ಏಕೀಕೃತ ಕರ್ನಾಟಕದೊಡನೆಯೆ ನಿಗಡಿತವಾಗಿದೆಯೆಂಬುದನ್ನು ಮರೆಯಲಾಗದು ಎಂದು ಎಚ್ಚರಿಕೆಕೊಟ್ಟಿದುದು ಯೋಗ್ಯವೆ ಆಗಿದೆ. ಶ್ರೀ|| ಯು. ರತ್ನಾಕರರಾವ್ ಅವರ ಮುದ್ದಣನ ಮೇಲಿನ ಲೇಖನ, ಕನ್ನಡ ಜಿಲ್ಲೆಯ ಇಬ್ಬರು ಸಾಧುಪುರುಷರ ಬಗ್ಗೆ ಶ್ರೀ. ಜಿ. ಎ. ಚಂದಾವರಕರರ ಲೇಖನ, ದಿವಂಗತ ಪಂಜೆ ಮಂಗೇಶ ರಾಯರ ಬಗ್ಗೆ ಶ್ರೀ. ಜಿ. ಎ. ಚಂದಾವರಕರರ ಮತ್ತು ಶಿವರಾಮ ಕಾರಂತರ ಇಂಗ್ಲಿಷ್ ಲೇಖನಗಳು ಮತ್ತು ಉಳ್ಳಾಲ ಮಂಗೇಶರಾಯರ ಕನ್ನಡ ಲೇಖನವು ಸ್ಮೃತಿ ಲೇಖನಗಳೆಂದು ಮಹತ್ವದುವಾಗಿವೆ. ದಿವಂಗತ ಸರ್ ನಾರಾಯಣ ಚಂದಾವರಕರರನ್ನು ಕುರಿತು ಶ್ರೀ. ಎಸ್. ಜಿ. ವರ್ತಿಯವರ ಲೇಖನವೂ ಉಲ್ಲೇಖನೀಯವಾಗಿದೆ. ಅಲ್ಲದೆ ಶ್ರೀ. ದಿನಕರ ದೇಸಾಯಿಯವರ 'ಉತ್ತರ ಕನ್ನಡ ಜಿಲ್ಲೆಯ ಶಿಕ್ಷಣ'ವನ್ನು ಕುರಿತಾದ ಲೇಖನವೂ ಶ್ರೀ. ಎಸ್. ಜಿ. ವರ್ತಿಯವರ 'ಉ. ಕನ್ನಡ ಜಿಲ್ಲೆಯ ಕಾಡಿನ ಇಲಾಖೆಯ ಧೋರಣೆ'ಯ ಸಂಬಂಧಿಯಾದ ಲೇಖನವೂ ಅಧಿಕೃತ ಅಂಕೆ-ಸಂಗತಿಗಳಿಂದ ಕೂಡಿದುವಾಗಿ, ಮಹತ್ವಪೂರ್ಣವಾಗಿವೆ. ಎಲ್ಲಾ ಲೇಖನಗಳೂ ಪರಿಶ್ರಮ, ಆಳ ವ್ಯಾಸಂಗಗಳಿಗೆ ಸಾಕ್ಷಿಯಾಗಿವೆ. ಮುಂಬಯಿಯ 'ಕನ್ನಡ ಭ್ರಾತೃ ಮಂಡಲಿ'ಯು ಇತೋಪ್ಯತಿಶಯವಾಗಿ ತನ್ನ ಸಾಮಾಜಿಕ ಕಾರ್ಯವನ್ನು ವಿಸ್ತರಿಸಲಿ, ಹೆಸರಿಗೆ ತಕ್ಕಂತೆ ಕನ್ನಡದ ಮುನ್ನಡೆಯನ್ನು ಸಾಧಿಸಲಿ ಎಂದು ನಮ್ಮ ಹಾರಯಿಕೆ.

Mysore Dasara Exhibition

(Official Handbook & Guide—1937)

ಉತ್ಕೃಷ್ಟ ಮುದ್ರಣ, ಮನೋಹರ ಚಿತ್ರಗಳು, ಮಹತ್ವದ ವಿಷಯ ವಿವರಣೆ, ದಸರಾಪ್ರದರ್ಶನ ಮಾತ್ರವಲ್ಲ—ಮೈಸೂರು ಸಂಸ್ಥಾನದ ಉದ್ಯೋಗ-ಕೃಷಿ-ವಾಣಿಜ್ಯ-ಆರೋಗ್ಯ ಮೊದಲಾದ ವಿವಿಧ ಅಂಗಗಳನ್ನು ಬಣ್ಣಿಸುವ ಅಮೂಲ್ಯ ಕೈಪಿಡಿ ಎಂದು ನಾಲ್ಕು ಮಾತುಗಳಲ್ಲಿ ಡೆ. ೧/೪ ಆಕಾರದ ೧೦೦ ಪುಟಗಳ ಈ ಅಂದ ಹೊತ್ತಿಗೆಯನ್ನು ವರ್ಣಿಸಬಹುದು. ಪ್ರದರ್ಶನದ ನಿಮಿತ್ತವಾಗಿ ಹೊರಡಿಸುವ ಈ ಕೈಪಿಡಿ, ಮೈಸೂರು ಸರಕಾರದ ಅತ್ಯಾಧುನಿಕ ಕಾರ್ಯವಿಶೇಷಗಳನ್ನು ಅಧಿಕೃತರೀತಿಯಲ್ಲಿ ವಿವರಿಸುತ್ತಿದೆ. ಮೈಸೂರಿನ ಹಳ್ಳಿಗಾಡಿನ ಮತ್ತು ಸಾರ್ವಜನಿಕ ಆರೋಗ್ಯ, ಖನಿಜಸಂಪತ್ತಿ, ಕಬ್ಬಿಣದ ಮತ್ತು ಉಕ್ಕಿನ ಉದ್ಯಮ—ವಿದ್ಯುನ್ನಿರ್ಮಾಣ - ಕಾಡು - ವಿದ್ಯಾಖಾತೆ - ಶಿಕ್ಷಣ - ಪುಸ್ತಕಾಲಯ ಚಳವಳಿ-ಪ್ರಾಚ್ಯಶಿಲ್ಪವೈಭವ-ರೇಶ್ಮೆಯ ವ್ಯವಸಾಯ-ಖಾದಿ-ಸಿಮೆಂಟ-ಹಳ್ಳಿಯ ಆಟಪಾಟಗಳು-ಸಹಕಾರ-ಕೃಷಿಸಂಶೋಧನ ಇ. ಇ. ಹಲವು ವಿಷಯಗಳ ಉಪಯುಕ್ತ ಜ್ಞಾನವನ್ನೊದಗಿಸುವ ಈ ಸಚಿತ್ರ ಸಂಗ್ರಹವು ನಿಜವಾಗಿಯೂ ಸಂಗ್ರಾಹ್ಯವಾಗಿದೆ. ಸರ್ ಮಿರ್ಝಾ ಇಸ್ಮಾಯಿಲ್‌ರವರು ಜಾವಾದ್ವೀಪದ ಬಂಡೊಯೆಂಗ ಎಂಬಲ್ಲಿ ಅಂತರರಾಷ್ಟ್ರೀಯ "ಹಳ್ಳಿಗಾಡಿನ ಆರೋಗ್ಯನೈರ್ಮಲ್ಯ ಶಾಸ್ತ್ರ ಪರಿಷತ್ತಿಗೆ" ಹಿಂದೀ ಶಿಷ್ಟಮಂಡಲದ ನಾಯಕರಾಗಿ ಹೋದಾಗ ಮಾಡಿದ ಭಾಷಣಕ್ಕೆ ಅಗ್ರಮಾನವನ್ನು ಕೊಟ್ಟಿದುದು ತುಂಬ ಉಚಿತವಾಗಿದೆ; ಪಳಗಿದ ಆಡಳಿತಗಾರನ ಅನುಭವವು ಅದರಲ್ಲಿ ಶೇಖರವಾಗಿದೆ. ವರ್ಷವರ್ಷವೂ ಹೊರಡುತ್ತಿದ್ದರೂ ಈ ಕೈಪಿಡಿ ಒಂದಿಲ್ಲೊಂದು ಹೊಸ ವಿಶೇಷದಿಂದೊಡಗೂಡಿರುತ್ತದೆ.

—ಸಂಪಾದಕರು

ಪ್ರಬುದ್ಧ ಕರ್ಣಾಟಕ

ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ, ಈ ಪ್ರಸಿದ್ಧವಾದ ಹಬ್ಬಗಳ ಹೊತ್ತಿಗೆ ಪ್ರಬುದ್ಧಕರ್ಣಾಟಕವು ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ. ಕವನ, ಕತೆ, ಪ್ರಬಂಧ, ವಿಮರ್ಶೆ, ಚರಿತ್ರೆ, ವಿಜ್ಞಾನಶಾಸ್ತ್ರ, ಸಾಹಿತ್ಯ-ಕಲೆಗಳನ್ನು ಕುರಿತು ಲೇಖನಗಳು ಈ ಮೊದಲಾದುವನ್ನು ಪ್ರಕಟಿಸಿ, ನಮ್ಮ ಜನರಿಗೆ ಆಧುನಿಕ ಮತ್ತು ಪ್ರಾಚೀನ ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಡುವುದೇ ಈ ಪತ್ರಿಕೆಯ ಉದ್ದೇಶ. ನಮ್ಮ ನಾಡಿನ ಶ್ರೇಷ್ಠಸಾಹಿತಿಗಳೂ ವಿದ್ವಾಂಸರೂ ಇದರ ಲೇಖಕವರ್ಗದಲ್ಲಿ ಸೇರಿದ್ದಾರೆ.

ಚಂದಾದಾರರಿಗೆ	ರೂ. ೨—೦—೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	,, ೩—೦—೦
ವಿದ್ಯಾರ್ಥಿಗಳಿಗೆ ಮಾತ್ರ	,, ೧—೮—೦

ಚಂದಾಹಣವನ್ನು ಮೈಸೂರು ವಿಶ್ವವಿದ್ಯಾಲಯದ ರಜಿಸ್ಟ್ರಾರರವರಿಗೆ ಪಾವತಿಮಾಡಬೇಕು. ಪತ್ರವ್ಯವಹಾರವನ್ನೆಲ್ಲಾ ಈ ಕೆಳಗಿನ ವಿಳಾಸದೊಂದಿಗೆ ನಡೆಯಿಸಬೇಕು.

ಸಂಪಾದಕ, ಪ್ರಬುದ್ಧ ಕರ್ಣಾಟಕ
ಯುನಿವರ್ಸಿಟಿ ಲೈಬ್ರರಿ, ಮೈಸೂರು

ಸಾಹಿತ್ಯಗೋಷ್ಠಿ

ಪಂಜೆಯವರ ಸ್ಮೃತಿ

ಇ. ಸ. ೧೯೩೨ರಲ್ಲಿರಬೇಕೆಂದು ತೋರುತ್ತದೆ....ಮಂಗಳೂರಿನಲ್ಲಿ ದ. ಕನ್ನಡ ಜಿಲ್ಲೆಯ ಬಾಲಕರ ಶಿಕ್ಷಣಸಪ್ತಾಹದ ಕಲ್ಪನೆ ಅವರಿಗೆ ಹೊಳೆಯಿತು. ನಾನವರಿಗೆ ಎಚ್ಚರಿಕೆ ಕೊಟ್ಟೆ—ವೆಚ್ಚದ ಕಾರಬಾರ ಆದೀತು; ಹಣವೆಲ್ಲಿಂದ ಬಂದೀತು? ಎಂದು. ಅವರು ಸುಮ್ಮನೆ ಹೇಳಿದರು, "ಕಾರಂತ, ಸಾಗು ಮುಂದಕ್ಕೆ!" ಮೊಳಹಳ್ಳಿ ಶಿವರಾಯರ ನೆರವಿನಿಂದ ನಾನು ಕೆಲಸ ಸಾಗಿಸಿಬಿಟ್ಟೆನು. ತುಂಬಿದ ಜನಸಂದಣಿ, ಭಾಷಣಗಳು, ಪ್ರದರ್ಶನಗಳು, ವಿವಿಧ ವಿನೋದಗಳು ಇ.ಗಳ ವಿಜೃಂಭಣೆಯನ್ನು ಹೇಳಲಾಸಲ್ಲ. ಎಲ್ಲಾ ಆಯಿತು....ಆದರೆ ಧನಸಹಾಯ ಬರಲಿಲ್ಲ. ದೊಡ್ಡವರ ಬಾಗಿಲಲ್ಲಿ ಭಿಕ್ಷೆಬೇಡುವುದು ಪಂಜೆಯವರಿಗೆ ಸೇರದ ಮಾತು. "ಅವರು ತಾವಾಗಿಯೆ ಬಂದು ಸಹಾಯ ಮಾಡಬಹುದಲ್ಲ! ಎಲ್ಲರ ಕೆಲಸವಲ್ಲವೆ ಅದು? ಕಾಣಿಕೆಯ ಪಟ್ಟಿಯೆಂದೊಡನೆ ಬಂದಿತು—ಆಮಂತ್ರಣಪತ್ರಿಕೆ, ಮುಖನೋಡಿ ಮಣೆ ಹಾಕುವುದು (ಎಂದರೆ ಕಾಣಿಕೆಯ ಗಾತ್ರದಂತೆ ಆಸನಗಳನ್ನು ಸಿದ್ಧವಾಗಿಡುವುದು) ಇತ್ಯಾದಿಗಳ ಮಾಲೆ" ಎಂದು ಅವರೆಂದರು. ಸಪ್ತಾಹ ಮುಗಿಯಿತು, ಲೆಕ್ಕಪತ್ರವನ್ನು ಪರೀಕ್ಷಿಸಿದುದಾಯಿತು, ೫೦೦ ರೂ.ಯ ನಗದು ನಷ್ಟ ಬಾಯೊಡ್ಡಿ ನಿಂತಿತು. 'ಇಷ್ಟೇ ತಾನೆ!' ಎನ್ನುವವರಂತೆ ಪಂಜೆಯವರು ಮುಗುಳ್ನಗೆ ನಕ್ಕರು. ಚಟ್ಟನೆ ಅಷ್ಟು ಹಣಕ್ಕೆ ಚೆಕ್ಕೊಂದನ್ನು ಬರೆದುಕೊಟ್ಟು ಎಂದರು, "ಕಾರಂತ, ಈ ಹಳ್ಳಿಯ ಉಪಾಧ್ಯಾಯರು ನಾನು ಡೆಪ್ಯುಟಿ ಇನ್‌ಸ್ಪೆಕ್ಟರನಿದ್ದಾಗ ಎಷ್ಟೊಂದು ಮಾಡಿದ್ದರು ಎಂಬುದನ್ನು ನೆನೆದರೆ, ಇದೇನೂ ಅಲ್ಲ. ಅವರ ಪ್ರೀತಿವಿಶ್ವಾಸಗಳನ್ನು ನಾನೆಂದಾದರೂ ಮರುಮುಟ್ಟಿಸ ಬಲ್ಲೆನೆ?"

ಅವರ ಸ್ವಭಾವ ಬಹಳ ಸಿಹಿ. ಜೀವನದಲ್ಲಿಯ ವಿಡೂಪತೆಯು ಅವರೆದೆಯಲ್ಲಿ ಅಳುಕುತ್ತಿತ್ತು, ಅವರನ್ನು ನೋಯಿಸುತ್ತಿತ್ತು. ಸಾಧ್ಯವಿದ್ದಷ್ಟೂ ಅದನ್ನು ತಪ್ಪಿಸಲು, ಅದರಿಂದ ತಪ್ಪಿಸಿಕೊಳ್ಳಲು ಅವರು ಪ್ರಯತ್ನಿಸುತ್ತಿದ್ದರು. ನಾನು ಅದೇ ಉತ್ತರಭಾರತದ ಪ್ರವಾಸದಿಂದ ಹಿಂದಿರುಗಿದ್ದೆನು; ಮತ್ತು ನನ್ನ ಅನುಭವಗಳನ್ನು ನಿವೇದಿಸಲು ಪಂಜೆಯವರಲ್ಲಿ ಹೋಗಿದ್ದೆನು. ಟಾಟಾನಗರದಲ್ಲಿ ಅವರ ಮಗ ಮುಕುಂದರಾಯರ ಅತಿಥಿಯಾಗಿದ್ದೆನು. ಅಲ್ಲಿ ನೋಡಿದುದನ್ನೆಲ್ಲ ಬಣ್ಣಿಸಿಹೇಳುವ ಭರದಲ್ಲಿ, "ರಾಯರೆ, ಟಾಟಾ ನಗರದ ಆ ಪ್ರಚಂಡ ಕಾರಖಾನೆಗಳು ನಿಮಗೆ [illegible] ಸೇರಿದವು?" ಎಂದು ಕೇಳಿದೆನು. ಅವರ [illegible] ಮಂದಸ್ಮಿತ ಮೂಡಿತು. ಅವರೆಂದರು, "[illegible] ನೋಡಲೆ ಇಲ್ಲ. ಏಕೋ, ಅವುಗಳ ನೋಟ[illegible] ತಡೆಯುವುದಿಲ್ಲ." ಅದು ಅವರ ಅತಿಸೂಕ್ಷ್ಮ[illegible] ಭಾವನೆಯ ಪರಿಣಾಮವಾಗಿರಬಹುದು; ಅವ[illegible] ಭಾವನೆಗಳು ಆ ರೀತಿ ಇದ್ದುದು ನಿಜ. ಅಜಸ್ರ[illegible]ಗಳಲ್ಲಿಯ ಪ್ರಚಂಡಚಕ್ರಗಳ ಘರ್ಘರ ಸ[illegible] ದೊಡ್ಡದೊಡ್ಡ ಭಟ್ಟಿಗಳ ಅಳೆತ್ತರ ಅಗ್ನಿಜ್ವಾ[illegible] ಒಂದು ನಿಮಿಷ ಕೂಡ ಅವರಿಗೆ ಸಹಿಸಲಾ[illegible]ವೆಂಬುದು ನೂರುಪಾಲು ದಿಟವಾಗಿದೆ.

—ಶ್ರೀ. ಕೋಟ ಶಿವರಾಮ ಕಾ[illegible]

(The Kanara Brotherhood

ಲೇಖಕರೇ, ವಾಚಕರನ್ನು ಮರೆಯದಿ[illegible]

ವಾಸ್ತವಿಕವಾಗಿ ನೋಡಿದರೆ, ಲೇಖನದಲ್ಲಿ ಸ್ವಾಂತಃಸುಖವೆಂಬುದು ಇಲ್ಲ; ಇದ್ದರೆ ಅಂತ[illegible]ನವು ಪ್ರಕಾಶಕ್ಕೆ ಬರಬೇಕೆಂಬ ಆವಶ್ಯಕತೆಯು [illegible]ಶಿತವಾದ ಮೇಲೆ ಜನರು ಅದನ್ನು ಓದಬೇಕೆಂಬ[illegible]ಕೆಯೂ ಲೇಖಕನಿಗೆ ಉಂಟಾಗಲಿಕ್ಕಿಲ್ಲ....ಜನ್ನ[illegible]ಯುಮೇನೊ? ಮಾಲೆಗಾರನ ಪೊಸಬಾಸಿಗ[illegible] ಭೋಗಿಗಳಿಲ್ಲದೆ ಬಾಡಿಪೋಗದೇ" ಎಂದು ನು[illegible] ಆದುದರಿಂದ ಕಲೆಯಲ್ಲಿ ಪರರ ಸುಖವೇ, ಒಂದು [illegible] ನೋಡಿದರೆ, ಸ್ವಾಂತಃಸುಖನೆಂದು ಭಾಸ[illegible] ಇದಲ್ಲದೆ ಕೀರ್ತಿ ಎಂಬ ಇನ್ನೊಂದು ಸುಖ[illegible]ಕರ ಉದ್ದೇಶವಾಗಿರುವುದುಂಟು....ಸುಖಕೀರ್ತಿ[illegible] ಎರಡು ವಸ್ತುಗಳೂ ಜನತೆಯ ಕೃಪೆಯ ಬಲದಿ[illegible] ಲೇಖಕನಿಗೆ ದೊರೆಯುವುವೆಂದ ಮೇಲೆ, [illegible] ಮೊದಲಾದ ಭೌತಿಕ ಹಿತಗಳಿಗೆ ಜನತೆಯ [illegible] ಎಷ್ಟು ಅವಶ್ಯವೆಂದು ವಿವರಿಸಬೇಕಾಗಿಲ್ಲ. ಈ ಪ್ರಯೋಜನವೂ ಬೇಡವೆಂದಿಲ್ಲ.

ಲೇಖಸಕ್ಕೆ ಜನತೆಯ ಪ್ರಸಾದವು ಬೇಕಾ[illegible] ಆ ಪ್ರಸಾದಕ್ಕೆ ತನ್ನಲ್ಲಿ ಅರ್ಹತೆಯುಂಟುಮಾ[illegible]ವುದು ಅದರ ಕೆಲಸ. ತನ್ನ ಕೈಹಿಡಿಯುವವರ[illegible] ಅಭಿರುಚಿಯನ್ನು, ಅದು ಎಷ್ಟರ ಮಟ್ಟಿಗೆ ಪೂರ್ಣ[illegible] ಅಷ್ಟರಮಟ್ಟಿಗೆ ಅದು ಸಾರ್ಥಕವಾಗುವುದು.

ಕನ್ನಡಿಗರಿಗೆ ವಾಚನಾಭಿರುಚಿಯೇ ಇಲ್ಲ, ಈ ಅಭಿರುಚಿ ಲೋಪಕ್ಕೆ ಅಭಿಮಾನಶೂನ್ಯತೆಯೇ ಕಾರಣ ಎಂಬ ಮಾತು ಗಳು ಸಮಂಜಸವೆಂದು ನಾನು ಪಕ್ಕನೆ ಒಪ್ಪಲಾರೆ. ಕಾರಣ ವೇನೆಂದರೆ, ಕೆಲವು ಜಾತಿಯ ಪುಸ್ತಕಗಳು ಮತ್ತೆ ಮತ್ತೆ ಮುದ್ರಿಸಲ್ಪಡುತ್ತಿವೆ....ಅಲ್ಲದೆ, ಕೇವಲ ಅಭಿಮಾನದಿಂದ ಎಷ್ಟು ಓದಬಹುದೆಂಬುದನ್ನು ಲೇಖಕರಾದರೂ ವಾಚಕ ಸ್ಥಾನದಲ್ಲಿ ಕುಳಿತು ಆಲೋಚಿಸಬೇಕು. ಇನ್ನು ಒಂದೂರ ಭಾಷೆ ಇನ್ನೊಂದೂರಿಗೆ ತಿಳಿಯುವುದಿಲ್ಲವೆಂಬ ಆಕ್ಷೇಪವೂ ಹುರುಳಿಲ್ಲದುದು. ಲೇಖನಭಾಷೆಯೆಂದು ಸಾಮಾನ್ಯವಾಗಿ ಗೃಹೀತವಾದ ಹೊಸಗನ್ನಡದಲ್ಲಿ ಬರೆದರೆ ಅರ್ಥವಾಗುವು ದಕ್ಕೆ ಹೆಚ್ಚೇನೂ ತೊಡಕಿಲ್ಲ. ಒಂದೊಂದು ಶಬ್ದವು ಅಲ್ಲಲ್ಲಿ ತಿಳಿಯದಿದ್ದರೆ ಪುಸ್ತಕವೇ ನಿರರ್ಥಕವಾಗಲಾರದು. ಆದರೆ ಮತ್ತೊಂದೂರವರಿಗೆ ತಿಳಿಯದ ಭಾಷೆಯೆಂದರೆ, ಆಯಾ ಊರಿನ ಆಡುಮಾತಿನಲ್ಲಿ ಬರೆದ ಭಾಷೆ. ಇಂತಹ ಗ್ರಂಥ ಗಳು ಈಗೀಗ ಹೆಚ್ಚಾಗಿ ಪ್ರಕಟಗೊಳ್ಳುತ್ತವೆ. ಈ ಭಾಷೆ ಯನ್ನು ಸಮಗ್ರ ಕರ್ನಾಟಕವು ತಿಳಿಯದಿದ್ದರೆ, ಅದು ವಾಚಕರ ನಿರಭಿಮಾನಿತೆಯೂ ಅಲ್ಲ, ಲೇಖಕರ ದುರ್ದೈ ವವೂ ಅಲ್ಲ; ಸಣ್ಣ ಪರಿಧಿಯೊಳಗೆ ಅಡಗುವ ಭಾಷಾ ಸ್ವರೂಪದ ಮೋಹವನ್ನು ಬಿಡಲಾರದೆ, ಸಮಗ್ರದೇಶದಲ್ಲಿ ಪ್ರಚಾರಹೊಂದಬೇಕೆಂಬ ಹಂಬಲನ್ನೂ ತೊರೆಯಲಾರದೆ ಮಾಡಿದ ಪೇಚಾಟದ ಫಲ. ನಾವು ಕನ್ನಡದಲ್ಲಿ ಲೇಖನ ವೊಂದನ್ನು ಬರೆದು, ಕನ್ನಡವೂ ದ್ರಾವಿಡ ಭಾಷೆಯಾದು ದರಿಂದ, ಮದ್ರಾಸು ಸಂಸ್ಥಾನದಲ್ಲೆಲ್ಲಾ ಅದು ಮೆರೆಯ ಬೇಕೆಂದು ಬಯಸಿ ಹತಾಶರಾದರೆ, ಅದು ಯಾರ ತಪ್ಪು? ಆಡುಮಾತಿನಲ್ಲಿ ಬರೆಯಲೇ ಬಾರದೆಂದು ನನ್ನ ಹೇಳಿಕೆ ಯಲ್ಲ. ಆದರೆ ಆ ಭಾಷಾಕ್ಷೇತ್ರದ ಹೊರಗೆಯೂ ಅದು ಮೆರೆದೀತೆಂಬ ದೊಡ್ಡಾಸೆಯನ್ನಿಟ್ಟುಕೊಳ್ಳಬಾರದು. ಇನ್ನು, ಇಂಗ್ಲಂಡು ಮೊದಲಾದ ದೇಶಗಳ ಪರಿಸ್ಥಿತಿಯಿಂದ ನಮ್ಮ ನಿಜಸ್ಥಿತಿಯು ವ್ಯಕ್ತವಾಗಲಾರದು. ಆ ದೇಶಗಳಲ್ಲಿ ಸೇಕಡಾ ನೂರುಮಂದಿ ಅಕ್ಷರಜ್ಞರಿದ್ದರೆ, ನಮ್ಮ ದೇಶದಲ್ಲಿ ಹತ್ತೋ ಹದಿನೈದೋ! ಅಲ್ಲಿಯವರಿಗೆ ದಿನವೊಂದಕ್ಕೆ ಸರಾಸರಿ ಮೂರು ರೂಪಾಯಿಗಳಷ್ಟು ಉತ್ಪತ್ತಿಯಿದ್ದರೆ, ನಮ್ಮವರಿಗೆ ದಿನಕ್ಕೆ ಮೂರಾಣೆಯೂ ಇಲ್ಲ! ಹಣವಿದ್ದವರಿಗೆ ವಿಶ್ರಾಂತಿ ಕಾಲವು ಸುಖಜನಕ; ದರಿದ್ರರಿಗೆ ಅದೇ ಚಿಂತಾಜನಕ, ಎಂಬು ದನ್ನು ನಾವು ಲಕ್ಷಿಸಬೇಕು. ಮನಸ್ಸು ಸುಸ್ಥಿತಿಯಲ್ಲಿದ್ದ ರಲ್ಲವೆ ವಾಚನಪ್ರೀತಿ? ಆದುದರಿಂದ ಕನ್ನಡದಲ್ಲಿ ಲೇಖನ ಬರೆದು ಧನಿಕರಾಗುವ ಕನಸು ಯಾರಿಗಾದರೂ ಕಟ್ಟಿದ್ದ ಯಾದರೆ, ಅವರದನ್ನು ಕನಸೆಂದೇ ತಿಳಿದುಕೊಳ್ಳುವು ದೊಳ್ಳೆಯದು. ನನ್ನ ಎಣಿಕೆಯಂತೆ ಇನ್ನು ಒಂದು ಶತ ಮಾನವಾದರೂ ದಾಟದೆ (ಅದು ಸಂಭವವೆಂದಾದರೆ) ಕನ್ನಡ ಲೇಖನಕ್ಕೆ ಚಿನ್ನವು ಬೆಲೆಯಾಗಲಾರದು.

ಎಲ್ಲಾ ವಿಷಯಗಳು ಎಲ್ಲರಿಗೂ ಇಷ್ಟವಲ್ಲ, ರೋಚ ಕವಲ್ಲ, ಗ್ರಾಹ್ಯವೂ ಅಲ್ಲ. ಕೆಲಕೆಲವು ಬಹುಜನರಿಗೆ ಸಂತೋಷವನ್ನುಂಟುಮಾಡಿದರೆ, ಇನ್ನು ಹಲವು ಕೆಲವೇ ಜನರಿಗೆ ತೃಪ್ತಿಕೊಡುವವು. ಬಹು ಜನರು ತಿಳಿದು ಲಾಭ ಪಡೆಯುವ ವಿಷಯವಾಗಿದ್ದರೂ, ಅದು ಅವರ ಕೈಗೆ ಎಟ ಕುವಂತೆ ಬರೆದಿದ್ದರೆ ಮಾತ್ರ ಸಫಲತೆ ದೊರೆಯುವುದು. ನಾವು ಅವರ ಕೈಮೈಯ ಉದ್ದವನ್ನು ಗಣಿಸದೆ ನಮ್ಮ ಅಮೂಲ್ಯವಾದ ಲೇಖರತ್ನಗಳನ್ನು ಎತ್ತರದಲ್ಲಿ ತೂಗಿಸಿ ಬಿಟ್ಟರೆ ಅನಂತರ ಆಶಾಭಂಗಕ್ಕೆ ಕಾರಣವಾಗುವುದು. ನಮ್ಮ ಸಾಮಾನ್ಯ ಜನರಲ್ಲಿ ಭಾಷಾಸಂಪತ್ತು ಎಷ್ಟಿದೆ, ಅವರ ಸಾಹಿತ್ಯಜ್ಞಾನದ ಮಟ್ಟವಾವುದು, ಅವರ ಅಭಿ ರುಚಿಯ ಸ್ವರೂಪವೇನು, ಅದನ್ನು ಮುರಿಯದೆ ಯಾವ ಇಷ್ಟವಾದ ಕಡೆಗೆ ಅದನ್ನು ತಿರುಗಿಸಬಹುದು, ತಿರುಗಿಸ ಬೇಕು, ನಮ್ಮ ಲೇಖನದ ಫಲವಾಗಿ ಅವರಲ್ಲಿ ಯಾವ ಸಂಸ್ಕಾರವುಂಟಾಗಬಹುದು, — ಎಂದು ಸಾಕಲ್ಯವಾಗಿ ವಿಮರ್ಶಿಸಿ ಅನಂತರ ನಾವು ಬರೆದುದಾದರೆ, ನಮಗೆ ಅವರ ಕೊಡುಗೈಯನ್ನು ಹಿಡಿದು ಬೇಡುವ, ಒತ್ತಾಯಿಸುವ ಅಧಿಕಾರವು ಬರುವುದು.

ಲೇಖಕರು ಬಹಳ ಎತ್ತರದಲ್ಲಿರಬಹುದು; ಪರಭಾಷೆಯ ಉತ್ಕೃಷ್ಟಸಂಸ್ಕಾರದಿಂದ ಅತ್ಯಮೋಘವಾದ ಭಾವ ಸ್ಫುಲಿಂಗಗಳು ಅವರ ಹೃದಯದಿಂದ ಸಿಡಿಯುತ್ತಿರಬಹುದು ಆದರೆ ಆ ಭಾವಗಳನ್ನು ತಿಳಿಯುವ ಯೋಗ್ಯತೆ ಬರಬೇಕಾ ದರೂ ವಿಶಿಷ್ಟವಾದ ಸಂಸ್ಕಾರ ಬೇಡವೆ? ಆ ಸಂಸ್ಕಾರವು ಜನರಲ್ಲಿ ಇದೆಯೆ? ಇಲ್ಲದಿರುವಾಗ ಆ ಬಿರುಸುಬಾಣಗಳನ್ನು ಹಾರಿಸಿಬಿಟ್ಟರೆ, ಹೆಚ್ಚಾದರೆ ಅದ್ಭುತರಸ, ಇಲ್ಲವೆ ಭಯಾ ನಕರಸ—ಇವುಗಳ ಹೊರತು ಬೇರೇನಾದರೂ ಫಲವಾ ದೀತೆ? ಅವುಗಳ ಭಯವು ಹೋಗಿ ಅವುಗಳಿಂದ ಆನಂದ ವನ್ನು ಜನತೆ ಪಡೆಯಬೇಕಾಗಿದ್ದರೆ, ಜನತೆಯ ಬಳಿಗೆ ಇಳಿದುಬಂದು ಒಂದೆರಡಾಗಿ ಸಣ್ಣಸಣ್ಣ ಕಿರುಗಿಡಿಗಳನ್ನು ಹಾರಿಸಿ ಮನವೊಲಿಸಬೇಡವೆ?

ಹೊಸತೆಂಬ ಒಂದು ರೀತಿಯ ಕವನ-ಲೇಖನಗಳು ಆರಂಭಿಸಿದ ಸಮಯದಲ್ಲಿ ಸಾಮಾನ್ಯ ಜನತೆಯ ಕಣ್ಣೊಮ್ಮೆ

ಸ್ವಲ್ಪ ಅರಳಿತ್ತು. ಆದರೆ ಅಭಿಮಾನಮಾತ್ರದಿಂದ, ಕುತೂಹಲಮಾತ್ರದಿಂದ, ವಾಚನವನ್ನು ಹೆಚ್ಚು ಜನರು ಬೆಳೆಯಿಸಿಕೊಳ್ಳಲಾರದೆ ಹೋದರು. ಓದಲಿಕ್ಕೆ ತಿಳಿಯದ, ಅಥವಾ ಓದಿದರೂ ಅರ್ಥವಾಗದ, ಅರ್ಥವಾದರೂ ಚಮತ್ಕಾರವು ಹೊಳೆಯದ, ಹೊಳೆದರೂ ಹೃದಯಕ್ಕೆ ಸಂಸ್ಕಾರವನ್ನು ಕೊಟ್ಟು ತದನುರಕ್ತಿಯನ್ನು ಹೆಚ್ಚಿಸಲಾರದ ಏಕರೂಪದ ಬರೆವಣಿಗೆಗಳೇ ಬರತೊಡಗಿ ಬೇಸರಹೊಂದಿದವರು ಹಲವರಿರುವರು. ಅಂಥವರೀಗ ನಿಜವಾಗಿಯೂ ಯೋಗ್ಯವೆನ್ನಿಸಿಕೊಳ್ಳುವ ಒಂದು ಹೊಸ ಬರವಣಿಗೆಯನ್ನು ಕಂಡರೂ, ಸುಡುಹಾಲಿನಿಂದ ಬಾಯಿಸುಟ್ಟ ತೆನ್ನಾಲಿಯ ಬೆಕ್ಕಿನಂತೆ ಮೊಗಮುರಿಯುತ್ತಿರುವರು. ಇಂಥವರನ್ನು ಪುನಃ ಒಲಿಸಿಕೊಳ್ಳಬೇಕೆಂಬ ಹವಣಿಕೆ ನಮಗಿದ್ದರೆ, ಜನತೆಯ ಆವಶ್ಯಕತೆ-ಅಭಿರುಚಿ-ಸ್ಥಿತಿಗತಿಗಳನ್ನು ಸೂಕ್ಷ್ಮಬುದ್ಧಿಯಿಂದ ನಿರೀಕ್ಷಿಸಿ ಎಚ್ಚರದಿಂದ ಬರೆಯುವ ಸಾಹಿತ್ಯ ತಪಶ್ಚರ್ಯೆಯನ್ನೇ ಕೈಕೊಳ್ಳಬೇಕು. ಇಷ್ಟ[illegible] ಯುವ ಲೇಖಕನಿಗೆ ಸ್ವಲ್ಪ ಸಂಯಮವನ್ನು ಕ[illegible] ಕೀರ್ತಿಯ ಹಂಬಲವನ್ನು ತತ್ಕಾಲ ಬಿಟ್ಟುಬಿ[illegible]ವನ್ನು ಧರಿಸಬೇಕು; ಜನತೆಯ ಸೇವೆಯೆಂಬ [illegible]ಶ್ಚಿತ್ತವನ್ನು ಮಾಡಿಕೊಳ್ಳಬೇಕು. ಇದಕ್ಕೆ [illegible]ರಲ್ಲವಾದರೆ, ಜನತೆಯನ್ನು ದೂರುವ ಕೆಲಸ[illegible] ಇಳಿಯದಿರಬೇಕು; ಇಲ್ಲವೆ 'ಉತ್ಪತ್ಸ್ಯತೇ [illegible] ಕೋಪಿ ಸಮಾನಧರ್ಮಾ' (ನನ್ನಂಥವನು ಯಾ[illegible] ಹುಟ್ಟಿಯಾನು) ಅಂಥವನಿಗಾಗಿ ನಾನು ಬರೆ[illegible]ವಿದು, ಎಂದು ಹೇಳಿಕೊಳ್ಳುವ ಧೈರ್ಯವಾದ[illegible]ಗಿರಬೇಕು.

—ಶ್ರೀ. 'ಚಕ್ರ[illegible]'

(ತ್ರಿವೇಣೀ—ದೀಪಾವಳೀ ಸ[illegible])

ವಿಚಾರ ವೇದಿಕೆ

मरुद्भिरग्न आ गहि

ಯುಧ್ಯಸ್ವ ವಿಗತಜ್ವರಃ

ಜನವರಿ ೨೨ನೆಯ ತಾ.ನ ದಿನ ಪುಣೆಯಲ್ಲಿ ಮುಂಬಯಿ ಪ್ರಾಂತದ 'ನಾಗರಿಕಾಧಿಕಾರ ಸಂರಕ್ಷಕ ಮಂಡಲ (ಸಿವಿಲ್ ಲಿಬರ್ಟೀಜ್ ಯುನಿಯನ್)'ದ ವಾರ್ಷಿಕ ಸರ್ವಸಾಧಾರಣ ಸಭೆ ಸರೋಜಿನಿದೇವಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. 'ಸರಕಾರವೇ ರಾಷ್ಟ್ರೀಯವಾಗಿರುವಾಗ ಈ ಸಂಘದ ಅಗತ್ಯ ವೇನು?' ಎಂದು ಕೇಳುವವರಿರುವರು. ಅವರಿಗುತ್ತರ ಕೊಡುತ್ತ ಉಪಾಧ್ಯಕ್ಷರಾದ ಶ್ರೀ. ಎನ್. ಎಮ್. ಜೋಶಿಯವರು ಹೀಗೆಂದರು:

"ಪರದೇಶೀಯ ಸರಕಾರಮಾತ್ರವಲ್ಲ—ಯಾವುದೇ ಸರಕಾರದಿಂದ ಅಥವಾ ಇನ್ನು ಬೇರೆ ಕಡೆಯಿಂದ ನಾಗರಿಕಾಧಿಕಾರಗಳ ಮೇಲೆ ಗದಾಪ್ರಹಾರವಾಗುತ್ತಿದ್ದರೆ, ಅವನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯವೆ ಆಗಿದೆ. ಮುಂಬಯಿ ಸರಕಾರವು ಈ ಪ್ರಾಂತದಲ್ಲಿ ನಾಗರಿಕರ ಹಕ್ಕುಗಳನ್ನು ಮರಳಿ ದಯಪಾಲಿಸುವ ಕೆಲಸವನ್ನು ಇನ್ನೂ ಪೂರ್ತಿಗೊಳಿಸಬೇಕಾಗಿದೆ. ಇನ್ನೂ ಎಷ್ಟೋ ಪುಸ್ತಕಗಳ ಮೇಲಿನ ಮುಟ್ಟುಗೋಲನ್ನೆತ್ತಬೇಕಾಗಿದೆ. ಗಾಬರಿ ಅವಸರದ ಕಾನೂನುಗಳನ್ನು ರದ್ದುಗೊಳಿಸಿ, ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟನ್ನು ಈ ಪ್ರಾಂತದಲ್ಲಿ ಉಪಯೋಗಿಸುವುದಿಲ್ಲವಾಗಿ ಜಾಹೀರುಪಡಿಸಿ, ಅದನ್ನು ತಾವಾಗಲಿ, ಕೇಂದ್ರಸರಕಾರವಾಗಲಿ ನಷ್ಟಪಡಿಸುವ ಉದ್ಯಮಕ್ಕೆ ತೊಡಗಬೇಕಾಗಿದೆ."

"Eternal vigilance is the price of Liberty" ಎಂದೊಂದು ಇಂಗ್ಲಿಷಿನಲ್ಲಿ ಸುಭಾಷಿತವಿದೆ. ಈಗಿನ ಅಲ್ಪ ಸ್ವಾಯತ್ತತೆಯಂತಿರಲಿ, 'ಸ್ವರಾಜ್ಯ' ದೊರೆತಮೇಲೂ ನಾಗರಿಕರ ಹಕ್ಕುಗಳ ಹೋರಾಟವು ನಿಲ್ಲದೆಂಬುದು ಸ್ಪಷ್ಟವಿದೆ.

'ಅಹಿಂಸೆ'ಯೊಂದು ಹಿಂಸೆಯಾಗದಿರಲಿ!

ಕಾಂಗ್ರೆಸು ರಾಜ್ಯಸೂತ್ರಗಳನ್ನು ವಹಿಸಿದಂದಿನಿಂದ, ಬಾಟ್ಲಿವಾಲಾ ಅವರನ್ನು ವ್ಯಾಜ್ಯಕ್ಕೆ ಗುರಿಪಡಿಸಲಾಯಿತು; ಕಾನಪುರದ ಕೆಲಸಗಾರರನ್ನೂ ಸಂ. ಪ್ರಾಂತದ ಕಿಸಾನರನ್ನು ಹಲವು ನಿರ್ಬಂಧಗಳಿಗೆ ಒಳಪಡಿಸಲಾಯಿತು; ಅಹಮದಾಬಾದದ ಕೂಲಿಕಾರರ ಮೇಲೆ ಕ್ರಿ. ಲಾ ಅ. ಆ್ಯಕ್ಟಿನ ಬಾಣಪ್ರಯೋಗ ಮಾಡಲಾಯಿತು. 'ಅಹಿಂಸಾವ್ರತಸ್ಥ' ಸರಕಾರಗಳು 'ಹಿಂಸಾಸಕ್ತ' (ಹಾಗೆಂದು ಅಧಿಕಾರಿ ವರ್ಗದ ಆಪಾದನೆ) ಪಕ್ಷಗಳೊಡನೆ ವ್ಯವಹರಿಸುವಾಗ ಯಾವ ನೀತಿಯನ್ನಿಟ್ಟುಕೊಳ್ಳಬೇಕೆಂಬುದೊಂದು ಈಚೆಗೆ ಕೂಟಪ್ರಶ್ನೆಯಾಗಿದೆ. ಹಲವು ಕಾಂಗ್ರೆಸ್‌ಮಂತ್ರಿಗಳು ದಬ್ಬಾಳಿಕೆಯ ಪ್ರಯೋಗವನ್ನು ಸಮರ್ಥಿಸುತ್ತಿದ್ದಾರೆ. ಈ ಸಂದರ್ಭದಲ್ಲಿ (ಮೇಲೆ ಉದಾಹರಿಸಿದ ಭಾಷಣದಲ್ಲಿಯ) ಶ್ರೀ. ಎನ್. ಎಂ. ಜೋಶಿಯವರ ಅಭಿಪ್ರಾಯವು ವಿಚಾರಾರ್ಹವಾಗಿದೆ:

"ಮುನ್ಶಿ ಮಂತ್ರಿಗಳವರು ತಮ್ಮ ನೀತಿಯನ್ನು ಸಮರ್ಥಿಸುವಾಗ 'ಹಿಂಸಾತ್ಮಕ ಚಟುವಟಿಕೆ'ಗಳ ನಿರ್ದೇಶವನ್ನು ಮಾಡಿದ್ದಾರೆ. 'ನಾಗರಿಕಾಧಿಕಾರ ಸಂರಕ್ಷಕ ಸಂಘ' ವಾದರೂ ಹಿಂಸಾಪ್ರಯೋಗಕ್ಕೆ ವಿರುದ್ಧವಾಗಿದೆ. ಆತ್ಮಸಂರಕ್ಷಣೆಗಾಗಿ, ಯುದ್ಧಕಾಲದಲ್ಲಿ ಇಲ್ಲವೆ ದಲಿತಜನಾಂಗಗಳು ಹೂಡಿದ ಬಂಡಿನಲ್ಲಿ ಸಶಸ್ತ್ರಪ್ರತೀಕಾರವನ್ನು—ಹಿಂಸೆಯನ್ನು ಅವಲಂಬಿಸಬೇಕೋ-ಬಾರದೋ ಎಂಬ ಬಗ್ಗೆ ಶಾಂತಿವಾದಿಗಳು ಹಾಗೂ ಇತರರು (pacifists and non-pacifists) ಬೇರೆಬೇರೆ ಅಭಿಪ್ರಾಯವುಳ್ಳವರಾಗಿರಬಹುದು. ಆದರೆ 'ನಾಗರಿಕಾಧಿಕಾರ ಸಂ. ಸಂಘ'ವು ಮಾತ್ರ ಸ್ವರಾಜ್ಯದ (ಮತ್ತು ಅದರಂತಹ ಬೇರೆ) ಸಾರ್ವಜನಿಕ ಚಳವಳಿಯಲ್ಲಿ ಹಿಂಸೆಗೆ ಸ್ಥಾನವಿಲ್ಲವೆಂದು ಉಚ್ಚಸ್ವರದಿಂದ ಹೇಳುತ್ತಿದೆ. ಆದರೆ ಪ್ರೊ. ಲಾಸ್ಕಿಯವರು ಹೇಳುವಂತೆ ಕೆಲವು ಸುಧಾರಣೆಗಳನ್ನು ಹಿಂಸೆಯ ಸಹಾಯವಿಲ್ಲದೆ ಜಾರಿಯಲ್ಲಿ ತರುವುದು ಸಾಧ್ಯವಿಲ್ಲವೆಂದು ನಂಬುವುದನ್ನು ಮತ್ತಾ ರೀತಿ ಮತಪ್ರದರ್ಶನೆ ಮಾಡುವುದನ್ನು ಶಾಸನದಿಂದ ನಿಷೇಧಿಸುವುದು ತಪ್ಪಾಗುವುದು. (ದಪ್ಪಕ್ಷರಗಳು ನಮ್ಮವು. —ಸಂ. ಜ. ಕ.) ಹಿಂಸಾಪದ್ಧತಿಯಲ್ಲಿ ನಂಬಿಕೆಯುಳ್ಳವರಿರುತ್ತಿದ್ದರೆ, ಅವರಿಗೆ ಅದರ ಯೋಗ್ಯಾಯೋಗ್ಯತೆಯನ್ನು ಬಹಿರಂಗವಾಗಿ ಚರ್ಚಿಸಲು ಅವಕಾಶ ಕೊಡುವುದರಿಂದಲೆ ಅಹಿಂಸೆಯಲ್ಲಿಯ ನಮ್ಮ ವಿಶ್ವಾಸವು ದೃಢತೆಯನ್ನು ಪಡೆಯುವುದು. ಪ್ರಚಾರಸ್ವಾತಂತ್ರ್ಯವನ್ನೆ

ನಿರ್ಬಂಧಿಸುವುದರಿಂದ ಹಿಂಸಾಪದ್ಧತಿಗೆ ಸಹಾನುಭೂತಿ ಯುಂಟಾಗುವ ಸಂಭವವಿದೆ. ಹಾಗೆಂದೇ, ಗ್ರೇಟ್‌ಬ್ರಿಟನ್ ಮತ್ತು ಬೇರೆ ದೇಶಗಳಲ್ಲಿಯಂತೆ ಇಲ್ಲಿಯೂ ಕಮ್ಯುನಿಸ್ಟ್ ಪಕ್ಷದ ಅಸ್ತಿತ್ವವನ್ನು ಕಾನೂನಿನಿಂದ ಮನ್ನಿಸಬೇಕೆಂದು ನಾವು ಕೆಲವರು ಸರಕಾರಕ್ಕೆ ಬಿನ್ನವಿಸಿಕೊಂಡಿದ್ದೇವೆ."

'ರಾಜಿ'ಯ ದುರಂತ

ಮುಂಬಯಿಯ ರಾಷ್ಟ್ರೀಯ ಮಂತ್ರಿಮಂಡಲವು ಪದಾ ರೂಢವಾದ ಮೇಲೆ, ಹಳೆಯ ಕೊಳಚೆಯನ್ನು ಹೊರದೂಡಿ ಹೊಸ ರಾಷ್ಟ್ರೀಯ ರಾಜ್ಯಭಾರಕ್ರಮಗಳನ್ನು ರೂಢಿಗೊಳಿಸ ಲೆಳಸುವುದು ಸ್ವಾಭಾವಿಕವಾಗಿದೆ. ಲೋಕಲ್‌ಬೋರ್ಡ್ ಕಾನೂನು ಅಂತಹದೊಂದು. ಹಳೆಯ (೧೯೨೩ರ) ಕಾನೂನಿ ನನ್ವಯ ಮುಸಲ್ಮಾನರಿಗೆ ಸ್ವತಂತ್ರ ಮತದಾರಸಂಘಗಳಿವೆ. ಅವನ್ನು ಹಾಗೇ ಉಳಿಯಗೊಟ್ಟು, ಮತದಾರರು ಬಯಸಿ ದರೆ (ಕಾಯ್ದಿಟ್ಟ ಸ್ಥಳಗಳೊಡನೆ) ಸಂಯುಕ್ತ ಸಂಘಗಳನ್ನು ಏರ್ಪಡಿಸುವ ಅವಕಾಶವನ್ನು ಕಲ್ಪಿಸಿಕೊಡುವುದೇ ಸರ ಕಾರದವರ ಆಶಯವಾಗಿತ್ತು. ಎಷ್ಟು ಸಣ್ಣ ಸುಧಾರಣೆ! ಆದರೆ ಮುಸ್ಲಿಂ ಲೀಗಿನವರಿದಕ್ಕೆ ಒಪ್ಪಲಿಲ್ಲ. ಕಳೆದ ತಿಂಗಳ ೨೨ನೆಯ ತಾ. ದಿನ ಕಾಯದೆ ಮಂಡಲದ ತುಂಬಿದ ಸಭೆಯನ್ನು ಬಿಟ್ಟೆದ್ದು ಹೋದರು!

ಬಂಗಾಲ-ಮದ್ರಾಸ ಪ್ರಾಂತಗಳ ಸ್ಥಳೀಯಸಂಸ್ಥೆಗಳ ಕಾನೂನುಗಳಲ್ಲಿ ಸಂಯುಕ್ತ ಮತದಾರ ಸಂಘಗಳಿಗೆ ಅನು ವಿದೆ. ಪಂಜಾಬ-ಸಿಂಧಗಳ ಮುಸಲ್ಮಾನ ಪ್ರಧಾನಮಂತ್ರಿ ಗಳು ಸಂಯುಕ್ತಸಂಘಗಳನ್ನು ಏರ್ಪಡಿಸಲು ಪ್ರಯತ್ನಿ ಸುತ್ತಿದ್ದಾರೆ. ಸ್ಥಳೀಯಸಂಸ್ಥೆಗಳು ಧಾರ್ಮಿಕ ವಿಷಯ ಗಳನ್ನು ನಿರ್ಣಯಿಸುವುದೇ ಇಲ್ಲ. ಎಂದ ಮೇಲೆ ಸ್ಥಳೀಯ ಸಂಸ್ಥೆಗಳಲ್ಲಿ ಸಂಯುಕ್ತಮತಸಂಘಪದ್ಧತಿಯೇ ಇಷ್ಟ ವಾದುದು. ಆದರೆ ಮುಸಲ್ಮಾನರ ಮನೋಭಾವನೆಯನ್ನು ಮನದಂದು ಸರಕಾರದವರು 'ರಾಜಿ'ಯ ಮಾರ್ಗವನ್ನು ಹಿಡಿದರು. ಅದೂ ತಿರಸ್ಕರಿಸಲ್ಪಟ್ಟಿತು. ಆದುದರಿಂದ ಅವರ ಒಪ್ಪಿಗೆಯಿರದೆಯೂ ಅದನ್ನು ಪಾಸುಮಾಡ ಲಾಯಿತು.

ಇದರ ಫಲವೇನಾಗುವುದು? ಈ ಐಚ್ಛಿಕಸೌಲಭ್ಯದ ಲಾಭವನ್ನು ಪಡೆದು ಸ್ವತಂತ್ರಸಂಘಗಳನ್ನು ಸಂಯುಕ್ತ ಸಂಘಗಳನ್ನಾಗಿ ಮಾರ್ಪಡಿಸುವ ಕಾಲವು ದೂರವಾಗಿಯೇ ತೋರುವುದು. ಚುನಾವಣೆಯ ವಚನಗಳನ್ನು ಗಮನಕ್ಕೆ ತಂದುಕೊಂಡು ಕಾಂಗ್ರೆಸ್ ಸರಕಾರವು ಒಂದೇ ಸೆಟ್ಟಿಗೆ ಸಂಯುಕ್ತ ಮತದಾರಸಂಘಗಳನ್ನು ಅಸ್ತಿತ್ವದಲ್ಲಿ ಬಿಡಬೇಕಾಗಿತ್ತು. ಅಂತ್ಯದಲ್ಲಿ ಎಲ್ಲರಿಗೂ ಸ[illegible] ತ್ತಿತ್ತು. 'ಜಾತೀಯ ನಿರ್ಣಯ'ವು ಸ್ಥಳೀಯಸ[illegible] ಅನ್ವಯಿಸುವುದೇ ಇಲ್ಲ. ಈಗ ಕೊಟ್ಟು ಕೊಡ[illegible] ಕಾವಿದ್ದಾಗಲೆ ಹಣಿಯಬೇಕು. 'ರಾಜಿ'ಯ[illegible] ಯಾರಿಗೂ ಸುಖಕರವಲ್ಲ.

ಮಂತ್ರಿಮಂಡಲವೂ ಅಲ್ಪಸಂಖ್ಯಾಕರೂ

ಲಮ್ಲೆ ದೊರೆಗಳವರ ಸಂಚಾರನಿಮಿತ್ತವಾಗಿ [illegible] ಅಂಜುಮಾನ-ಇ-ಇಸ್ಲಾಂನವರು ಕೊಟ್ಟ ಮಾ[illegible] ಮಂತ್ರಿಮಂಡಲದಲ್ಲಿ ಶ್ರೀ. ನೂರಿಯವರನ್ನು [illegible] ದ್ದನ್ನು ಆಕ್ಷೇಪಿಸಲಾಗಿತ್ತು. ಅವರು ಮುಸ್ಲಿ[illegible] ಇಲ್ಲವೆ ಮುಸ್ಲಿಂ ಜನತೆಯ ಪ್ರತಿನಿಧಿಗಳ[illegible] ದೂಷಿಸಲಾಗಿತ್ತು. ಈ ಸಂದರ್ಭದಲ್ಲಿ ದೊರೆಗಳ[illegible] ಕೆಚ್ಚಾದ ಉತ್ತರವನ್ನು ಕೊಟ್ಟರು.

"ಮುಸ್ಲಿಂ ಜನತೆಯಿಂದಲೆ ಚುನಾಯಿಸ[illegible] ಪ್ರತಿನಿಧಿಯನ್ನು ಮುಸಲ್ಮಾನಮಂತ್ರಿಯನ್ನಾಗಿ [illegible] ವುದು ಗವರ್ನಮೆಂಟ್ ಆಫ್ ಇಂಡಿಯಾ ಆ[illegible] ಗವರ್ನರನ ಆದೇಶಪತ್ರಗಳಿಗೆ ಭಂಗತರುವ[illegible] ಯೆನ್ನುವಿರಿ.... ನಿಮ್ಮ ಅಭಿಪ್ರಾಯ ತಪ್ಪಿದೆ. [illegible] ಕರ ಪ್ರತಿನಿಧಿಯು ಅಲ್ಪಸಂಖ್ಯಾಕರಿಂದಲೆ [illegible] ಬೇಕು ಎಂದು ಗವರ್ನರನು ಒತ್ತಾಯಪಡಿಸುವ[illegible] ನಿನಲ್ಲಾಗಲಿ, ಆದೇಶಪತ್ರದಲ್ಲಾಗಲಿ ಯಾವ[illegible] ಕಲಮೂ ಇಲ್ಲ. ಅಲ್ಪಸಂಖ್ಯಾಕರಿಗೆ ಸೇರಿದವ[illegible] ಮಂತ್ರಿಯಾಗಬೇಕೆಂದು ಆಗ್ರಹತೊಡಬಲ್ಲೆ, [illegible] ಜಾತಿಯವರಿಗೇ ಅವನನ್ನು ಆರಿಸುವ ಹಕ್ಕ[illegible] ಬೇಕೆಂದು ಹೇಳಲಾರೆ. ಅಲ್ಲದೆ, ಮಂತ್ರಿಗಳ [illegible] ಜವಾಬ್ದಾರಿಯನ್ನು ಆದೇಶಪತ್ರದಲ್ಲಿ ಘಂಟಾಘೋ[illegible] ಹೇಳಲಾಗಿದೆ. ಎಲ್ಲರೊಡನೆ ಹೊಂದಿಸಿಕೊ[illegible] ಮಾಡದವನೊಬ್ಬನನ್ನು ಮಂತ್ರಿಮಂಡಲದಲ್ಲಿ ಮಾಡಬೇಕೆಂದು ಹಟ ಹಿಡಿಯುವುದು ಅ[illegible] ಗತವಾಗುವುದು."

ದೊರೆಗಳು ತಲೆಯಲ್ಲಾಡಿಸಿದರು!

ಲಮ್ಲೆ ದೊರೆಗಳವರು ತಮ್ಮ ಕರ್ನಾಟ[illegible] ದಲ್ಲಿ ಏಕೀಕರಣವು ಹುಚ್ಚರ ಹೋರಿಯೆಂ[illegible] ಬಿಟ್ಟರು. ಮ. ಗಾಂಧಿಯವರ ಆದೇಶದ ಮೇ[illegible] ಮಂಡಲದವರು ಏಕೀಕರಣಕ್ಕೆ ತಮ್ಮ (ವಾ[illegible]

ಮಾನ್ಯತೆಯನ್ನು ಕೊಡಲಿದ್ದಾರೆ; ಇತ್ತ ಗವರ್ನರರು ಅದು ಅವ್ಯವಹಾರ್ಯವೆಂದು ವ್ಯವಹಾರೋಪದೇಶವನ್ನು ಮಾಡುತ್ತಿದ್ದಾರೆ. ಅವರು ಮಾತನಾಡಿದುದು ಸಂಯುಕ್ತ ಜವಾಬ್ದಾರಿಯ ತತ್ವದಂತಲ್ಲ, ತಮ್ಮ ವಿಶಿಷ್ಟ ಅಧಿಕಾರ ಕ್ಷೇತ್ರದ ಪರವಾಗಿ ಎಂದು 'ಬಲ್ಲವರು' ಹೇಳುವರು. ಇದು ನಿಜವಿದ್ದರೆ, "ಪ್ರಾಂತಿಕ ಸ್ವಾಯತ್ತತೆ ಒಂದು ಹುಚ್ಚಾಟ—'ದ್ವಿದಲ ರಾಜ್ಯಪದ್ಧತಿ'ಯಿನ್ನೂ ಪ್ರಾಂತಗಳಲ್ಲಿ ತಾಂಡವ ವಾಡುತ್ತಿದೆ"ಯೆಂದು ಹೇಳಬೇಕಾಗುತ್ತದೆ. ಕ. ಪ್ರಾ. ಕಾಂ. ಕಮಿಟಿಯ ಅಧ್ಯಕ್ಷರು ತಟ್ಟನೆ ನಿಷೇಧಪರ ಪತ್ರಿಕೆಯನ್ನು ಹೊರಡಿಸಿದರು; ಉಳಿದವರೂ ಪ್ರತಿಭಟಿಸಿದರು. ಆದರಿದು ಸಾಲದು. ಚುನಾಯಿಸಲ್ಪಟ್ಟ ಜನತೆಯ ಪ್ರತಿನಿಧಿಗಳು, ದೊರೆಗಳು ಈ ಹೇಳಿಕೆಯನ್ನು ತಿರುಗಿ ತೆಗೆದುಕೊಳ್ಳುವಂತೆ ಪ್ರಯತ್ನಿಸಲಾರರೇ? ಯಾವ ಸದಸ್ಯನೂ ಅಸೆಂಬ್ಲಿಯಲ್ಲಿ 'ನಿಲುವಳಿ ಸೂಚನೆ'ಯನ್ನು ತರಲಿಲ್ಲವಲ್ಲ? 'ಲೋಕಶಕ್ತಿ ಪತ್ರಿಕೆ'ಕ್ಕಾಗಿ ಪ್ರತಿಕಕ್ಷಿಗಳು ಸರಕಾರಕ್ಕೆ ಸಾಕುಬೇಕಾಗಿ ಹೋಗುವಂತೆ ಮಾಡಿಬಿಟ್ಟರು. ತಮ್ಮ ಜೀವಜೀವಾಳದ ಪ್ರಶ್ನೆಯನ್ನು ಕುರಿತು ಗವರ್ನರರು ನಿಷ್ಠುರವಾಗಿ ಆಡಿಬಿಟ್ಟುದನ್ನು ಕನ್ನಡ ಸದಸ್ಯರು ಸುಮ್ಮನೆ ಸಹಿಸಿ ಕೂತುಬಿಟ್ಟರಲ್ಲ? 'ಗಾಂಧಿ-ಜವಾಹರರ ಆಶೀರ್ವಾದವಿದೆ; ಚಿಂತೆಗೆ ಕಾರಣವಿಲ್ಲ' ಎನ್ನುತ್ತಾರೆ. ಆದರೆ ನಮಗೆ ನಂಬಿಕೆಯಿಲ್ಲ. ಏಕೀಕರಣವಾದಿಗಳಿಗೆ ಯಾರ ನೆರವೂ ಇಲ್ಲ ಎಂಬುದನ್ನರಿತೇ ಅವರು ಹೋರಾಟವನ್ನು ಸಾಗಿಸಬೇಕು.

ಕರ್ನಾಟಕದಲ್ಲಿಯ ಕಾಂಗ್ರೆಸ್ ಚುನಾವಣೆ

ಈಚೆಗೆ ಕಾಂಗ್ರೆಸ್ ಚುನಾವಣೆಗಳು ಅಧಿಕಾರ ಪ್ರಾಪ್ತಿಯ ಕಾಳಗದ ಕಣಗಳಾಗಿ ಬಿಟ್ಟಿವೆ. ಇದೊಂದು 'ಬಹಿರಂಗ ರಹಸ್ಯ.' ಕರ್ನಾಟಕದಲ್ಲಿಯಂತೂ ಇದು ನೂರುಪಾಲು ನಿಜವಾಗಿದೆ. ಎಂತಲೇ ಸಂಪ್ರದಾಯಬಿಟ್ಟ ಸ್ವತಂತ್ರ ವಿಚಾರಕ್ಕಾಗಲಿ ಆಚರಣೆಗಾಗಲಿ ಇಲ್ಲಿ ಅವಕಾಶವಿಲ್ಲ. ಯುಗಧರ್ಮವು ಪ್ರಬಲವಾದುದರಿಂದ ಯುವಕ ಚಳವಳಿ, ಸಾಮ್ಯವಾದಿ ಚಳವಳಿಗಳು ತಲೆಯೆತ್ತುತ್ತಿವೆ. ಆದರೆ ಅವು ಅಧಿಕಾರಿವರ್ಗಕ್ಕೆ ಅನುವರ್ತಿಯಾಗಿಯೇ ಇರಬೇಕಾಗಿದೆ. ರಾಣೆಬೆನ್ನೂರಿನಲ್ಲಿ 'ದಿವಾಕರಪಕ್ಷ'—'ಗಂಗಾಧರರಾವಪಕ್ಷ'ಗಳು (ಈ ಹೆಸರನ್ನು ಇಬ್ಬರೂ ಮಹನೀಯರು ಒಪ್ಪಲಿಕ್ಕಿಲ್ಲವಾದರೂ ಅನುಕೂಲತೆಗಾಗಿ ಉಪಯೋಗಿಸಿದ್ದೇವೆ) ವರ್ಚಸ್ವಕ್ಕಾಗಿ ಹೋರಾಡಿದವು; ಮೊದಲನೆಯದು ಬಿದ್ದು, ಎರಡನೆಯದು ತಲೆಯೆತ್ತಿತು. ಅದಕ್ಕಾಗಿ ಅಲ್ಲಿಯಿಲ್ಲಿ ಜನರು ಕುದಿಯುತ್ತಿದ್ದಾರೆ. ಏನು ತಪ್ಪಾಯಿತು?....ಎಂದು ನಾವು ಕೇಳುತ್ತೇವೆ. ಒಂದು ಪಕ್ಷವೇ ಅಧಿಕಾರಸೂತ್ರಗಳನ್ನು ಕೊನೆಯವರೆಗೂ ಹಿಡಿದಿಡಬೇಕೆಂದು ಎಲ್ಲಿ ಬರೆದಿಟ್ಟದೆ? ಅವರೂ ಕೊಂಚದಿನ ಅಧಿಕಾರದ 'ಸೇಬುಹಣ್ಣ'ನ್ನು ಆಸ್ವಾದಿಸಲಿ. ಎಲ್ಲಿಯ ವರೆಗೆ ಕರ್ನಾಟಕದಲ್ಲಿ ತತ್ವನಿಷ್ಠ ಜನತಾಭಿಪ್ರಾಯನಿದರ್ಶಕ ಪಕ್ಷಗಳಿಲ್ಲವೋ ಅಲ್ಲಿಯ ವರೆಗೆ 'ಯಾವ ರಾಯ ಪಟ್ಟಕ್ಕೆ ಬಂದರೇನು? ರಾಗೀ ಬೀಸೋದು ಯಾರಿಗೂ ತಪ್ಪಿಲ್ಲ.' ಇಂದು ರಾಯರ ಪಕ್ಷ ಅಧಿಕಾರಕ್ಕೆ ಬಂದಿದೆ, ನಾಳೆ ರಾವಬಹಾದ್ದೂರರದು ಬರಬಹುದು. ಯಾರು ಬಂದರೂ ಅಷ್ಟೆ.

ಇದಕ್ಕೊಂದೇ ಮದ್ದು. ತರುಣರು ಮುಂದರಿಯಬೇಕು. ವ್ಯಕ್ತಿಗಳಂತೆ ತತ್ವಗಳು ಕುಣಿಯಬಾರದು; ತತ್ವಗಳಂತೆ ವ್ಯಕ್ತಿಗಳು ಮಣಿಯಬೇಕು. ಅಂತಹ ಮೂಲತತ್ವಗಳ ಆಧಾರದ ಮೇಲೆ ರಚಿಸಲಾದ ಕಾರ್ಯಕ್ರಮವನ್ನು ಮುಂದಿಟ್ಟುಕೊಂಡು ಅದಕ್ಕಾಗಿ ಕರ್ನಾಟಕದ ತರುಣಲೋಕವು ದುಡಿಯಬೇಕು. ಆಗ ಕರ್ನಾಟಕದ ರಾಜಕೀಯಕ್ಷೇತ್ರವು ಹಸನಾಗಿ ಹರಗಲ್ಪಟ್ಟು, ರಸವತ್ತಾದ ಪೈರನ್ನು ಕೊಡುವುದು.

ನಮ್ಮ ಮಾತು

ದಿ ತರುಣ ಅಶ್ಯುರನ್ಸ ಕಂ. ಲಿ., ಮುಂಬಯಿ

ಇತಿಹಾಸಪ್ರಸಿದ್ಧ ಪಟ್ಟಣವಾದ ಅಹಮ್ಮದಾಬಾದದಲ್ಲಿ ೧೯೩೨ರಲ್ಲಿ ಸ್ಥಾಪಿತವಾದ ಈ ಕಂಪನಿಯು ಕಳೆದ ವರ್ಷ ಅಗಸ್ಟ ತಿಂಗಳಲ್ಲಿ ಮುಂಬಯಿಗೆ ಸ್ಥಲಾಂತರಿಸಲ್ಪಟ್ಟಿದೆ. ಶ್ರೀ. ಜಯಂತಿಲಾಲ ಮೆಹತಾ ಅವರು ಇದರ ಆಧಾರಸ್ತಂಭರು. ೧೯೩೫ರ ವರೆಗೆ ಪರದೇಶೀಯ ವಿಮಾಕಂಪನಿಗಳಿಗೆ ವರ್ಷಕ್ಕೆ ೧೦-೧೦ ಲಕ್ಷದ ಕೆಲಸಕೊಡುತ್ತಿದ್ದವರು ಮಿತ್ರರ ಆಗ್ರಹದಿಂದ ಈ ಕಂಪನಿಯನ್ನು ಸ್ಥಾಪಿಸಿ, ಅಲ್ಪಕಾಲದಲ್ಲಿ ಅದಕ್ಕೆ ಸ್ಥಿರತೆಯನ್ನು ತಂದುಕೊಟ್ಟಿರುವರು. ಇದರ ಮುಖ್ಯ ಏಜನ್ಸಿ ಆಫೀಸುಗಳು ಬಂಗಾಲ, ಬಿಹಾರ, ಒರಿಸಾ, ಮಹಾರಾಷ್ಟ್ರ, ಕರ್ನಾಟಕ, ಅಜಮೀರಗಳಲ್ಲಿದ್ದು ಈಸ್ಟ ಆಫ್ರಿಕಾ ಮೊದಲಾದ ಕಡೆ ಇದರ ಕಾರ್ಯದ ಕೇಂದ್ರಗಳಿವೆ. ಮ್ಯಾನೇಜಿಂಗ್ ಏಜಂಟರಾದ ಮೆಹತಾ ಮತ್ತು ಕಂಪನಿಯವರಿಗೆ ಮಹಾರಾಷ್ಟ್ರ-ಕರ್ನಾಟಕಗಳ ಚೀಫ್ ಏಜಂಟ

ರಾದ ಶ್ರೀ. ಎ. ಡಿ. ದೇಶಪಾಂಡೆಯವರ ಕರ್ತೃತ್ವಪೂರ್ಣ ಜೋಡಿ ದೊರೆತದ್ದರಿಂದ, ಇದು ಇನ್ನೂ ಪ್ರಭಾವಯುತವಾಗಿ ಕಾರ್ಯವಿಸ್ತಾರವನ್ನು ಮಾಡಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಇವರ 'ಬಾಂಡ್' ಯೋಜನೆ ಆಕರ್ಷಕವಾಗಿದೆ. ಕಂಪನಿಗೆ ಉತ್ಕರ್ಷವನ್ನು ಕೋರುತ್ತೇವೆ.

ದಿ ಲಾಂಗ ಲೈಫ್ ಇನ್ಶ್ಯುರನ್ಸ ಕಂ. ಲಿ., ಪುಣೆ

ಈ ಕಂಪನಿಯ ಶೇರಹೋಲ್ಡರರ ೪ನೆಯ ಸರ್ವಸಾಧಾರಣಸಭೆಯು ೧೯-೧೨-೩೭ನೆಯ ದಿನ ಪುಣೆಯಲ್ಲಿಕೂಡಿತ್ತು. ಸಭೆಯ ಅಧ್ಯಕ್ಷರಾದ ಡಾ. ತೆಂಡುಲಕರರ ಭಾಷಣದಿಂದ ಕಂಪನಿಯ ಪ್ರಗತಿಯ ಅಂಶಗಳು ತಿಳಿದುಬರುತ್ತಿವೆ.

ಜೂನ್ ೧೯೩೭ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ೩,೯೭,೩೫೦ ರೂ.ಯ ಹೊಸ ಕೆಲಸವನ್ನು ಕಂಪನಿಯು ಪೂರ್ತಿಗೊಳಿಸಿದೆ. ಕಳೆದ ವರ್ಷದೊಡನೆ ತುಲನೆಮಾಡಿದರೆ ಕಂಪನಿಯ ಪ್ರಗತಿಯು ಮನದಟ್ಟಾಗುವುದು. ಕೆಲಸದ ಪ್ರಮಾಣವು ಹೆಚ್ಚಿಲ್ಲದಿದ್ದರೂ ಸ್ವೀಕರಿಸಲ್ಪಟ್ಟ ವಿಮೆಯ ಕೆಲಸವು ನಿಶ್ಚಿತಸ್ವರೂಪದ್ದಾಗಿದೆಂಬುದು, ರದ್ದಾದ ಪಾಲಿಸಿಗಳ ಮತ್ತು ಕ್ಲೇಮಗಳ ಪ್ರಮಾಣದಿಂದ ಕಂಡುಬರುವುದು. ಹೊಸ ವರ್ಷದ ರದ್ದಾದ ಪಾಲಿಸಿಗಳ ಪ್ರಮಾಣವು ಪೂರ್ತಿಗೊಳಿಸಿದ ಕೆಲಸದ ೧೦೦ಕ್ಕೆ ೯ರಷ್ಟಿದೆ.

ಕನಿಷ್ಠ ವೆಚ್ಚ, ಚೊಕ್ಕ ವ್ಯವಸ್ಥೆಗಳ ಮೂಲಕ ಕಂಪನಿಯ ಜೀವವಿಮಾನಿಧಿಯು ರೂ. ೫೦,೦೦೦ವನ್ನು ಮಿಕ್ಕಿದೆ. ಕಂಪನಿಯ ಸ್ತ್ರೀವಿಮಾಶಾಖೆಯ ಡಾಯರೆಕ್ಟರರಾದ ಕು. ದ್ವಾರಕಾಬಾಯಿ ಭಟ್ಟ, ಬಿ. ಎ. ಬಿ. ಟಿ. (ಮುಂಬಯಿ), ಟಿ. ಡಿ. (ಲಂಡನ್) ಅವರ ಕಾರ್ಯಶಕ್ತಿಯು ಶ್ರೇಷ್ಠತರವಾದುದು; ಸ್ತ್ರೀಯರ ಉನ್ನತಿಯ ಚಿಂತೆಯೆ ಅವರೀ ಉತ್ಸಾಹಕ್ಕೆ ಕಾರಣವಾಗಿದೆ. ಸ್ತ್ರೀವಿಮೆದಾರರ ಸಲುವಾಗಿ ಏರ್ಪಡಿಸಿದ 'ಮ್ಯಾಟರ್ನಿಟಿ ಬೆನಿಫಿಟ್' ಯೋಜನೆಯ ಲಾಭವು ಜನರಿಗೆ ಮನವರಿಕೆಯಾಗುತ್ತಿದೆ. ಈಗಾಗಲೆ ಇಬ್ಬರು ಸ್ತ್ರೀಯರು ಇದರ ಲಾಭವನ್ನು ಪಡೆದಿರುವರು.

ಈ ವರೆಗೆ ಕಂಪನಿಯು ಬಡೋದೆ ಸರಕಾರದಲ್ಲಿ ೩೧,೧೦೦ ರೂ.ಯನ್ನೂ ಹಿಂ. ಸರಕಾರದಲ್ಲಿ ೬೯,೦೦೦ ರೂ.ಯನ್ನೂ ಪ್ರೊ. ನೋಟುಗಳ ರೂಪದಲ್ಲಿ ಠೇವನ್ನಾಗಿಟ್ಟಿದೆ. ಅಲ್ಲದೆ ವಿಮೆದಾರರ ಸ್ಥಾವರಾಸ್ತಿಯ ಮೇಲೆ ದೊಡ್ಡ ಅವಧಿಯ ಕರಾರಿನ ಮೇಲೆ ೪೨,೦೦೦ ರೂ.ಯ ಸಾಲವನ್ನು ಕೊಟ್ಟಿದೆ.

೧೯೩೭-೩೮ರ ಕೊನೆಗೆ ಪ್ರಥಮ ಮೂಲ್ಯಮಾಪನವಾಗುವ ಸಮಯಕ್ಕೆ ಕಂಪನಿಯು ಜಯಶೀಲವಾಗಿ ಕೆಲಸ ಜರುಗಿಸುವುದೆಂದು ಆಶಿಸಲು ಅಡ್ಡಿ ಕಾಣುವುದಿಲ್ಲ. ಕಂಪನಿಯು ಇನ್ನೂ ಊರ್ಜಿತಸ್ಥಿತಿಯನ್ನು ಹೊಂದ[illegible] ಕೋರುತ್ತೇವೆ.

ತಾಂಡವಮಂಡಲಿಯ ಕಾರ್ಯಕಲಾಪಗಳ[illegible]

ಧಾರವಾಡದಲ್ಲಿ ಶ್ರೀ. ಶ್ರೀನಿವಾಸ ಕುಲಕರ್ಣಿ[illegible]ರೊಬ್ಬರು ಸಾಹಸಿಗಳಾಧ ಯುವಕರು. ನರ್ತನದ [illegible] ಹೊಕ್ಕಿದೆ ಅವರ ಮನಸ್ಸಿನಲ್ಲಿ. ಅದೊಂದು ಸಾಮಾ[illegible] ಸಾಧ್ಯವಾಗದ ಕಲೆ, ಅದರ ತಂತ್ರ-ಟೆಕ್ನಿಕ್ [illegible]ದಾಗಿದೆ, ಅದರ ಸಲಕರಣೆ ವೆಚ್ಚದ್ದಾಗಿದೆ, ಅಲ್ಲದೆ [illegible]ಜಿಕ ತೊಡಕುಗಳೂ ಇವೆ....ಇತ್ಯಾದಿಯಾಗಿ [illegible]ವವರೆ ಹೆಚ್ಚುಜನ. ಆದರವರು ಹೆದರದೆ [illegible] ಬಟ್ಟು, ಕೆಲವು ಚಿಕ್ಕ ಕುಮಾರಿಕೆಯರನ್ನು [illegible]ಗೊಳಿಸಿ, ಇದೀಗ ಸಾರ್ವಜನಿಕ ನೃತ್ಯಪ್ರದರ್ಶನ[illegible] ರಸಿಕರಿಗೆ ಮನಮೆಚ್ಚುವಂತೆ ಮಾಡುತ್ತಿದ್ದಾರೆ. [illegible] ಹಿಮ್ಮೇಳಕ್ಕಾಗಿ ತರುಣ ವಾದನಪಟುಗಳ ಗುಂಪು[illegible] ಕೂಡಿಸಿಕೊಂಡುದರಿಂದ ಚಿನ್ನಕ್ಕೆ ಕುಂದಣವಿಕ್ಕಿದ[illegible] ಈ ಸಂಸ್ಥೆಯ ಹೆಸರೇ 'ತಾಂಡವಮಂಡಲಿ.' ತಮ್ಮ[illegible] ವಾದ್ಯವಾದನ-ನೃತ್ತ-ಸಂಗೀತಗಳಿಂದ ಅವರು [illegible]ಮೊನ್ನೆ ಧಾರವಾಡದ ರಸಿಕರನ್ನು ತಣಿಸಿದರು. [illegible]ವಕ್ಕೆ ಕಲಶವಿಡುವಂತೆ ನಾಟ್ಯಪ್ರಪೂರ್ಣ ಶ್ರೀ. [illegible] ವಾಚಾಯರವರೂ ಶ್ರೀಮತಿ ಪದ್ಮಾವತಿದೇವಿ[illegible] ತಮ್ಮ ಅಭಿನಯಪಾಟವವನ್ನು ವ್ಯಕ್ತಪಡಿಸಿ[illegible] ಅದೊಂದು ರಸದೂಟವೆ ಆಯಿತು. ಶ್ರೀನಿವಾಸ[illegible]ಯನ್ನು ಭರತನ ನಾಟ್ಯಸಂಕೇತಗಳಿಂದಾಗಲಿ, [illegible] ನೃತ್ಯದ ತಂತ್ರದಿಂದಾಗಲಿ ಅಳೆದುನೋಡುವುದು [illegible]ಗುವುದು. ಅವರಿನ್ನೂ ಬೆಳೆಯುವ ಕಲಾವಿದರು. [illegible] ಪ್ರಯೋಗಗಳಿಂದಲೆ ತಮ್ಮ ಕಲೆಯನ್ನು ಪರಿಷ್ಕ[illegible]ಗೊಯ್ಯಲು ಪ್ರಯತ್ನಿಸುತ್ತಿರುವರು. ಸಮಯಕ್ಕ[illegible] ಹಾವಭಾವ, ದ್ರುತಮಂದ ಪದಗತಿ, ಮನೋಹರ [illegible] ಸಂಗೀತ, ತಕ್ಕ ವೇಷರಚನೆ—ಇವು ಅವರ ಕಲೆಗ[illegible] ಮೂಲಧನವಾಗಿವೆ. ಇದರ ಬಲದಿಂದ ಅವರು [illegible] ಪ್ರಗತಿಹೊಂದುವರು. ಅನುಕೂಲತೆ ಸಿಕ್ಕರೆ ನಮ್ಮ[illegible]ವಿದರು ಬೇರೆ ಪ್ರಾಂತಗಳ ಕಲಾವಿದರನ್ನು ಮೀರಿಸ[illegible] ಅದೊಂದೆ ಕೊರತೆ ಕರ್ನಾಟಕದಲ್ಲಿ. ಸಾರ್ವಜನಿಕ[illegible]ವಾಸರ ಪ್ರಯತ್ನಕ್ಕೆ ಕೊಡುಗೈಯಿಂದ ನೆರವಾ[illegible]

ತಿದ್ದುಪಡೆ

ಶ್ರೀ. ದೇಸಾಯಿ ಪಾಂಡುರಂಗರಾಯರು ಬರೆ[illegible] [illegible] ಮುಮ್ಮೇಳ, ಬೆಳಗಲಿ ಅಲ್ಲ' ಎಂಬ ಲೇ[illegible]

ಪು. ೧೨೮ರಲ್ಲಿ, ಮೊದಲನೆಯ ಅಂಕಣದಲ್ಲಿ, ಕೆಳಗಿನಿಂದ ಮೂರನೆಯ ಸಾಲಿನಲ್ಲಿ ಆರಂಭವಾಗುವ ವಾಕ್ಯವನ್ನು

ಜಮುಖಂಡಿ ಸಂಸ್ಥಾನದ ಜಮುಖಂಡಿ ತಾಲೂಕಿನಲ್ಲಿ ಅರವತ್ತು ಹಳ್ಳಿಗಳು ಇವೆ.

ಎಂದು ಓದಬೇಕು.

ಕನ್ನಡ ಸೇವಾಸಂಘ, ಅಮ್ಮೆಂಬಳ

(ಬರೆದುಬಂದುದು)

ಕನ್ನಡ ಸಾಹಿತ್ಯದ ಹೊನಲು ಉತ್ಸಾಹದಿಂದ ತುಂಬಿ ತುಳುಕಿ ಹರಿಯುತ್ತಿದೆ. ಹಿರಿಯರೆಲ್ಲರೂ ಉಚ್ಚಾದರ್ಶವನ್ನು ಇದಿರಿಗಿಟ್ಟುಕೊಂಡು, ಹಿರಿಗುರಿಯನ್ನು ಸಾಧಿಸಲೆತ್ನಿಸಿ, ಭರದಿಂದ ಸಾಗುತಿದ್ದಾರೆ.

ಇಂತಿರುವಾಗ ಕಿರಿಯರಾದರೂ ಜಡರಾಗಿ ಸೋಮಾರಿಗಳಾಗಿ, ಕಣ್ಣುಮುಚ್ಚಿಕೊಂಡು ಕುಳಿತಿರುವುದೇಕೆ? ಭೋರ್ಗರೆದು ಪ್ರವಹಿಸುತ್ತಿರುವ ಆಧುನಿಕ ಕನ್ನಡ ಸಾಹಿತ್ಯದ ಪ್ರವಾಹದಲ್ಲಿ ತಾವು ಮುಂದುವರಿಯುತ್ತಿಲ್ಲವೆಂದು ಉದಾಸೀನರಾಗಿ ಕುಳಿತರೂ ಕೂಡ, ಆ ಸೆಳೆತವು ತಮ್ಮನ್ನು ಕೊಚ್ಚಿಕೊಂಡು ಹರಿಯುತ್ತದೆಂದಾದ ಮೇಲೆ, ಕಿರಿಯರೂ ಸಿದ್ಧರಾಗಿ, ಸನ್ನದ್ಧರಾಗಿ, ಕಂಕಣಬದ್ಧರಾಗಿ, ಅದಕ್ಕೆ ಅನುಕೂಲರಾಗಿರುವುದೇ ಮೇಲೆಂದೆನಿಸಿತು.



ಆರೋಗ್ಯ-ಬಲ-ಉತ್ಸಾಹ-ಕ್ರೀಡೆ (ಆಸ್ಟ್ರೇಲಿಯದ ಒಂದು ದೃಶ್ಯ)

ಅದರ ಸತ್ಫಲವಾಗಿ ಇತ್ತೀಚೆಗೆ 'ಕನ್ನಡ ಸೇವಾಸಂಘ'ವೆಂಬ ಸಾಹಿತ್ಯಪ್ರಚಾರಕ-ಸಾಹಿತ್ಯೋತ್ತೇಜಕ ಸಂಸ್ಥೆಯೊಂದು, ಶ್ರೀ 'ಗೋಪಬಾಲ' (ಮಿತ್ರಮಂಡಲಿ, ಮಂಗಳೂರು), ಶ್ರೀ ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್ [illegible]ರ ಉತ್ಸಾಹ-ಉತ್ತೇಜನಗಳಿಂದ ಅಮ್ಮೆಂಬಳ ಸೋಮನಾಥ ಸಂಸ್ಕೃತ ಶಾಲೆಯಲ್ಲಿ ಸಂಸ್ಥಾಪಿತವಾಗಿದೆ.

ಈ ಸಂಘದ ಪರವಾಗಿ 'ಸುಧಾ' ಎಂಬ ಕೈಬರೆಹದ ಕನ್ನಡ ಮಾಸಪತ್ರಿಕೆಯ ಬಿಂದುಗಳು ಜಿನುಗ ತೊಡಗಿರುವುವು. ಅದೇ ಸಂಘದ ಶಾಖೆಯಾಗಿ, 'ಸೇವಾಸದನ ಕನ್ನಡ ಪುಸ್ತಕಭಂಡಾರ'ವು ಉದ್ಘಾಟಿತವಾಗಿ ಕಾರ್ಯರೂಪದಲ್ಲಿ ಪ್ರಚಲಿತವಾಗಿದೆ. ಪ್ರಾಸ್ತಾವಿಕಸಭೆಗಳೂ ವ್ಯವಸ್ಥಿತವಾಗಿ ಜರುಗುವುವು.

ಜಯಕರ್ನಾಟಕ ಗ್ರಂಥಮಾಲೆ

ಗ್ರಂಥಮಾಲೆಗೆ ೩ ವರ್ಷಗಳು ತುಂಬಿ, ನಾಲ್ಕನೆಯ ವರ್ಷದಲ್ಲಿ ಅದು ಹೆಜ್ಜೆಯಿಟ್ಟಿದೆ. ಸರಸ, ... ಮನೋರಂಜಕ, ವಿನೋದಾತ್ಮಕ, ಉಪಯುಕ್ತ, ಪ್ರೌಢ ವಿಷಯಗಳ ಮೇಲೆ ಹಲವು ಪುಸ್ತಕಗಳನ್ನು ಕನ್ನ... ಸಲ್ಲಿಸಲಾಗುವುದು.

ಕ್ರಾ. ೧/೮ ಆಳತೆಯ ಸು. ನೂರಾಇಪ್ಪತ್ತು ಪುಟಗಳುಳ್ಳ ೬ ಗ್ರಂಥಗಳು ಚಂದಾದಾರರ ಕೈಸೇರುವವು. ... ಚಂದಾ ಅ. ವೆ. ಸೇರಿ ರೂ. ೩—೪—೦. ಜಯಕರ್ನಾಟಕದ ಚಂದಾದಾರರಿದ್ದವರಿಗೆ ೩—೦—೦ ಮಾತ್ರ

ಈಗ ಗ್ರಂಥಮಾಲೆಯ ಚಂದಾದಾರರಲ್ಲದವರಿಗೆ ಅಂಚೆಯ ವೆಚ್ಚ ಬೇರೆ. ನಡೆಯುವ ಮತ್ತು ಮುಂದಿನ ... ಚಂದಾದಾರರಾಗಬಹುದು. ಆದರೆ ಹಿಂದಿನ ಪ್ರಕಟನೆಗಳ ಬಗ್ಗೆ ಚಂದಾಸೌಲಭ್ಯವಿಲ್ಲ. ಇಂದಿನ ಚಂದಾದಾರ... ಹಿಂದಿನ ಪುಸ್ತಕಗಳ ಬೆಲೆಯನ್ನೂ ಅಂಚೆಯ ವೆಚ್ಚವನ್ನೂ ಸಹಿಸಬೇಕಾಗುವುದು.

ಪ್ರತಿ ಮನೆಯಲ್ಲಿಯೂ ವಾಚನಾಲಯದಲ್ಲಿಯೂ ಸಂಗ್ರಾಹ್ಯವಾದ ಗ್ರಂಥಗ...

ಮುಂಚಿನ ಪ್ರಕಟನೆಗಳು

ಹರಟೆಗಳು: ಶ್ರೀ ಬೇಂದ್ರೆಯವರು ಬರೆದ ೫ ಹರಟೆಗಳು; ಪ್ರೊ. ಗೋಕಾಕ ಅವರ 'ಯುಗಾಂತರ' ಎಂಬ ಹಾಸ್ಯಪ್ರಬಂಧ ಸಹಿತ. ೦-೧೦-೦

ಆದೇನೆ ಇರಲಿ: ನೈಜಾಂ ಕರ್ನಾಟಕದ ಶ್ರೀ. ಮನ್ಸಬ್ದಾರರು ಬರೆದ ಸಾಮಾಜಿಕ ನಾಟಕ. ೦-೮-೦

ದರಿದ್ರನಾರಾಯಣ: ಪ್ರೊ. ಜಾಗೀರದಾರ ರಂಗಾಚಾರ್ಯರು ಬರೆದ ಸಾಮಾಜಿಕ ನಾಟಕ. ೦-೧೦-೦

ಜೀವನಸಂಗೀತ: ೧೪ ಲಾವಣಿಗಳು. ೦-೧೦-೦

ಮೂರನೆಯ ವರ್ಷದ ಪ್ರಕಟನೆಗಳು

ಮಾವಿನ ತೋಪು: ಶ್ರೀಮಾನ್ ಹ. ಪೀ. ಜೋಶಿ, ಬಿ. ಎ. ಅವರು ಬರೆದ ಸಾಮಾಜಿಕ ಕಾದಂಬರಿ. ೦-೧೦-೦

ತರಂಗಿಣಿ: ಶ್ರೀ. ಟೇಂಗ್ಸೆ ಗೋವಿಂದರಾಯರು ಬರೆದ ಕಾವ್ಯಮಯ ನಾಟ್ಯಚಿತ್ರ. ೦-೬-೦

ಬಂಗಾರದ ಡಾಬು: ಶ್ರೀಮಾನ್ ಕೆ. ಗೋಪಾಲಕೃಷ್ಣರಾಯರ ಕಥಾಸಂಗ್ರಹ. ೦-೧೦-೦

ಉದಯರಾಗ: ಶ್ರೀ. ಅ. ನ. ಕೃಷ್ಣರಾಯರು ಬರೆದ ಸಾಮಾಜಿಕ ಕಾದಂಬರಿ. ೦-೧೨-೦

ರಾಜವಲ್ಲಭ: ಶ್ರೀ. ಹ. ಪೀ. ಜೋಶಿ ವಿರಚಿತ ಸಂಗೀತ ಪೌರಾಣಿಕ ನಾಟಕ. ೦-೧೦-೦

ಕೆಲವು ನೀಳ್ಗತೆಗಳು: ಹೆಸರು ಪಡೆದ ಕತೆಗಾರರ ಆ... ಕತೆಗಳು. ೦-೧೦-೦

ಮಲ್ಲಿಗೆದಂಡೆ: ಸಂಗ್ರಾಹಕರು: ಶ್ರೀ. ಕಾಪಸೆ ರೇವಪ್ಪನವರು
ಸಾದಾಪ್ರತಿ
ಫೇದರವೇಟ ಕಾಗದದ ಕ್ಯಾಲಿಕೋ ಹೊದಿಯ ಪ್ರತಿಗೆ ೧-೨-೦

ನಾಲ್ಕನೆಯ ವರ್ಷದ ಪ್ರಕಟನೆಗಳು

ಪರಿಣೀತಾ: ವಿಶ್ವವಿಖ್ಯಾತ ವಂಗ ಕಾದಂಬ... ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಅತ್ಯಂತ ... ಕಾದಂಬರಿ. ಶ್ರೀ. ಗುರುನಾಥ ಜೋಶಿಯವರು ಅನುವಾ...

ಹೂಬಿಸಿಲು: ಸೌ॥ ಶಾಮಲೆಯವರ ಸರಸ ಕ... ಶ್ರೀ. ಆನಂದಕಂದರ ಮುನ್ನುಡಿಯೊಡನೆ.

ಸಾಲುದೀಪ: ಶ್ರೀಮಾನ್ ಜೈನೇಂದ್ರ ಕುಮಾ... ಕತೆಗಳು. ಶ್ರೀ. ಗುರುನಾಥ ಜೋಶಿಯವರಿಂದ ಸರ... ಅನುವಾದಿಸಲ್ಪಟ್ಟಿದೆ.

ಮುಂಬಯಿ ವಿದ್ಯಾಖಾತೆಯವರ ಮನ... ಪಡೆದ ನಮ್ಮ ಪ್ರಕಟನೆಗಳು

೧ ಉದಯರಾಗ ೨ ಮಲ್ಲಿಗೆದಂಡೆ ೩ ಜ. ಕ. ... ೪ ತರಂಗಿಣಿ ೫ ಆದೇನೆ ಇರಲಿ ೬ ಪರಿಣೀತಾ ೭ ಜೀ... ೮ ರಾಜವಲ್ಲಭ ೯ ಬಂಗಾರದ ಡಾಬು ೧೦ ದರಿದ್ರನಾ...

ರಾಜರಹಸ್ಯ (ಭಾಗ ೧): ಶ್ರೀ. ರಾ. ನ. ... ಬರೆದ, ಅದ್ಭುತರಸಪೂರ್ಣವಾದ ಈ ಕಾದಂಬ... ಭಾಗವು ಮಾರಾಟಕ್ಕೆ ಸಿದ್ಧವಾಗಿದೆ. ಪುಟಗಳು ೨೦...

ಜಯಕರ್ನಾಟಕದ ವಿಜಯನಗರ ವಿ...
ವಿಜಯನಗರದ ಸ್ಮಾರಕೋತ್ಸವ ಕಾಲದಲ್ಲಿ ಸಾ... ಅಧ್ಯಕ್ಷರಾದ ಪ್ರೊ. ಬಿ. ಎಂ. ಶ್ರೀಕಂಠಯ್ಯನವ... ಪ್ರಕಾಶಿತವಾದ ಈ ಸಂಚಿಕೆಯ ಪ್ರತಿಗಳೆಲ್ಲ ತೀರಲ...


ಹುಬ್ಬಳ್ಳಿಯ ನಮ್ಮ ವಿಜಂ...

ಎಂ. ಆರ್. ಬೆಳ್ಳೇರಿ
ಕರ್ನಾಟಕ ಬುಕ್‌ಡಿ...
ದುರ್ಗದಬೈಲು,

MARCH 1938

ANNAS SIX

ನಂಜಪ್ಪ, ಟೋಕಿಯೋ); ಕೋಳಿಯ ಮೀಮಾಂಸೆ (ಶ್ರೀರಂಗ); ಜಗತ್ತಿನ ಕ್ರಾಂತಿಕೇಂದ್ರ—ರಶಿಯ (ನಾಗರಿಕ); ತಪ್ಪುದಂಡ (ದಿವಂಗತ ವಿಜಯ ಬೆಟಗೇರಿ)



ಸಂಪಾದಕರು:
ಬೆಳಗಾವಿ ರಾಮಚಂದ್ರರಾಯರು
ಬಿ. ಎ.

ರಾಷ್ಟ್ರಪತಿ ಸುಭಾಷಚಂದ್ರ ಬೋಸ

ಸಾದಾಪ
ಫೇವರವೆ

ನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ... ಸಿಂಧು ಮುದ್ರಣಾಲಯದಲ್ಲಿ
ಪುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ

ಪರಿವಿಡಿ

ಚಲಚ್ಚಿತ್ರತಾರಕೆ ಲೀಲಾ ಚಿಟ್ನೀಸ .... (ಮುಖಚಿತ್ರ) ....
ಬ್ರಿಟನ್ನು ಕಣ್ತೆರೆಯಲಿ! .... (ರಾಷ್ಟ್ರಪತಿಗಳ ಭಾಷಣದಿಂದ) ೧೬೭
ಸಿಂಹನಾದ ....(ಶ್ರೀ. ಕಾಕಾಸಾಹೇಬ ಕಾಲೇಲಕರ ಅವರ ಆತ್ಮಚರಿತ್ರದಿಂದ) ೧೬೮
ಜಪಾನದಲ್ಲಿ ಶ್ರೀ. ರಾಮಗೋಪಾಲರವರ ನಾಟ್ಯಪ್ರದರ್ಶನ .... ಶ್ರೀ. ಕೆ. ಎಲ್. ನಂಜಪ್ಪ, ಟೋಕಿಯೊ ೧೭೧
ಕೋಳಿಯ ಮೀಮಾಂಸೆ (ವಿನೋದ ನಿರ್ಬಂಧ) .... 'ಶ್ರೀರಂಗ' ೧೭೫
ಬದಲಿ (ಫ್ರೆಂಚ್ ಕತೆ) .... ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ ಎಂ. ಎ. ಬಿ. ಎಲ್. ೧೮೦
ರನ್ನನ ಮುದುವೊಳಲು (ಐತಿಹಾಸಿಕ) .... ಶ್ರೀ. ದೇಸಾಯಿ ಪಾಂಡುರಂಗರಾಯರು ಎಮ್. ಎ. ೧೮೪
ನಾಗಪುರದ ಅಖಿಲಭಾರತೀಯ ಮಹಿಳಾಪರಿಷತ್ತು .... (ಚಿತ್ರಗಳು) ೧೮೯
ಕ್ಯಾನವಾಸರ್ (ವಿನೋದಚಿತ್ರ) .... ಶ್ರೀ. ರವೀಂದ್ರನಾಥ ಮೈತ್ರ ೧೯೧
ಜಗತ್ತಿನ ಕ್ರಾಂತಿಕೇಂದ್ರ—ರಶಿಯ .... 'ನಾಗರಿಕ' ೧೯೫
ಗುಪ್ತಜ್ವಾಲೆ (ಪತ್ರಕಥನ) .... ಸೌ. ಸುಭದ್ರಾಬಾಯಿ ಜೋಶಿ ೧೯೯
ಸ್ವಪ್ನಸೃಷ್ಟಿ (ವೈಜ್ಞಾನಿಕ) .... 'ಮನೋವಿಜ್ಞಾನಿ' ೨೦೩
ತಪ್ಪುದಂಡ (ರಮ್ಯ ವಿನೋದಕಥೆ) .... ದಿವಂಗತ ವಿಜಯ ಬೆಟಗೇರಿ ೨೦೭
ವಿವಾಹ ಮತ್ತು ಪ್ರೇಮ (ಕಾಮವಿಜ್ಞಾನ) .... ಡಾ. ಎಮ್. ಗೋಪಾಲಕೃಷ್ಣರಾವ್ ೨೧೬
ಜ್ಞಾನವಿಜ್ಞಾನ ೨೧೯
....ನೊಣಗಳನ್ನು ಹಿಡಿಯುವ ಕಾಗದ—ಕೂತಲ್ಲಿಂದಲೇ ದೂರದ ಗಾಡಿಗಳ ಮೇಲೆ ಲಕ್ಷ್ಯ—ಹೊಗೆಸೊಪ್ಪಿನ ....
....ಅನಿಷ್ಟಗಳು—ಬಿಸಿ ಹನಿಯಲ್ಲಿ ಗಡ್ಡ ಬೇಗ ಬೆಳೆಯುತ್ತದೆ—ವಿದ್ಯುತ್ತಿನ ಇಕ್ಕಳ—ಹೊಗೆಯ ಅನಾಹುತ— ....
....ಕಾಜಿನ ಅರಿವೆ—ಜಪಾನದಲ್ಲಿ ಶಿಕ್ಷಣ—ಮೋಡಗಳೊಳಗಿಂದ ಆಚೆ ನೋಡಬಹುದು—ಮೊಗಲ ಮಹಿಳೆ ....
....ಯರು—ಭೂಮಾತೆಯ ತೂಕ ಬೆಳೆಯುತ್ತಿದೆ—ಬಿಸಿಲನ್ನು ಸೋಸಬಹುದು—ಚಿಕ್ಕ ಚಲಚ್ಚಿತ್ರಗಳು—ನವ ....
....ನಾಗರಿಕತೆಯ ವಯಸ್ಸು—ದೊಡ್ಡತಲೆಯಿದ್ದವರು ಬುದ್ಧಿವಂತರೇ?—ತುರ್ಕಸ್ತಾನದಲ್ಲಿ ಸ್ತ್ರೀಸೈನ್ಯ—ಜಪಾನ ....
....ದಲ್ಲಿಯ ಸಿನೇಮಾ ಥಿಯೇಟರು—ಆಕರ್ಷಕತೆ ಎಲ್ಲಿದೆ?—ನಾಲ್ವತ್ತು ವರ್ಷವಾಗಿದೆಯೋ ನಿಮಗೆ?— ....
....ಜಾಣರ ಹುಚ್ಚುಮಾತುಗಳು—ಕರಿಜನರಾರು? ಬಿಳಿಜನರಾರು?—ಸಾವೂ ಒಂದು ದೊಡ್ಡ ಉದ್ಯೋಗವೇ!— ....
....ಕುಡುಕರ ಆಯುರ್ಮಾನ—ಕತ್ತೆಯ ಹಾಲು—ಯುದ್ಧಭೂಮಿಯಲ್ಲಿಯೂ ಫೋಟೊ ತೆಗೆಯಬಹುದು! ....
ಸಂಚಯ ೨೨೬
....ಕಾಫೀ—ಹಾವಿನಹೆಡೆ—ಮಿಠಾಯಿ—ಬೂಟಿಗೆ ಮುದ್ದು—ನಾಲಿಗೆಯ ನಮಸ್ಕಾರ—ಸಂಘದೇವ—ಹೃದಯ ....
....ರೋಗ—ಗಿಡಗಳಿಗೆ ಜ್ವರ ....
ವೀಣಾವಿತಾನ .... (ಎಸ್. ಎಸ್. ಮಾ., ನಾ. ಕು., ಗೋ.) ೨೨೭
ನಗಬೇಡಿ! ೨೩೧
ಶ್ರದ್ಧಾಂಜಲಿ ೨೩೩
ಕನ್ನಡದ ಮುನ್ನಡೆ ೨೩೫
ಸಾದರ ಸ್ವೀಕಾರ ೨೩೬
ವಿಚಾರವೇದಿಕೆ ೨೩೭
....ರಾಷ್ಟ್ರಪತಿಗಳ ಅಧ್ಯಕ್ಷಭಾಷಣಸಾರ—ನವನಿರ್ಮಾಣದ ಗೊತ್ತುಗುರಿಗಳು—ಬಿಕ್ಕಟ್ಟಿನಿಂದ ಒಕ್ಕಟ್ಟು— ....
....ಅಲುಗಾಡುವ ಅಡಿಗಲ್ಲು ಗಟ್ಟಿಯಾಯಿತು—ಸಾಮ್ರಾಜ್ಯಯುದ್ಧವೂ ಹಿಂದುಸ್ತಾನವೂ—ಹವಣರಿತು ಹಣಿ ....
....ಯಬೇಕು—ಸಂಯುಕ್ತ ಘಟನೆಯೊಡನೆ ಹೋರಾಟ—ಈಗಲೂ ಕಡೆಗಣ್ಣೆ?—ಪ್ರಜಾಮಂಡಲದ ವರದಿ— ....
....ನಿಜಾಂ ಸಂಸ್ಥಾನದಲ್ಲಿ ನಾಗರಿಕಾಧಿಕಾರಗಳು—ಕದನ ಕೊನೆಗಂಡಿತು; ಆದರೆ— —ಹಣಕಾಸಿನ ಪತ್ರಿಕೆಯೂ ....
....ಕರ್ನಾಟಕವೂ—ಸಿಂಗಾಪುರದ ಸೈನಿಕಠಾಣ್ಯ—ಹಡಗುಪಡೆಗಳ ಗುಪ್ತಸ್ಪರ್ಧೆ—ಅಮೆರಿಕೆಯೂ ಸ್ಪರ್ಧೆಯ ....
ಬಲಿ—ಹಳೆಹಗೆಗಳು ಗೆಳೆಯರಾದರು!—ಮುಸೊಲಿನಿಯ ಚಾಣಕ್ಯನೀತಿಗೆ ಗೆಲುವು ....

ಮುಂದಿನ ಸಂಚಿಕೆಯ ವೈಶಿಷ್ಟ್ಯದ ಬಗ್ಗೆ ಕೊನೆಯ ಪುಟವನ್ನು ನೋಡಿರಿ.



ಚಲಚ್ಚಿತ್ರತಾರಕೆ ಲೀಲಾ ಚಿಟ್ನೀಸ

ಜಯಕರ್ನಾಟಕ

ಸಂಪುಟ ೧೬ | ಈಶ್ವರ ಸಂವತ್ಸರದ ಮಾಘ ಕೃಷ್ಣ ೧೪ (೧-೩-೧೯೩೮) | ಸಂಚಿಕೆ ೩

ಬ್ರಿಟನ್ನು ಕಣ್ತೆರೆಯಲಿ!

ಇದುವರೆಗೆ ಭೂತಾಯಿಯ ಬೆನ್ನಮೇಲೆ ಹಲವೊಂದು ಸಾಮ್ರಾಜ್ಯಗಳು ಉದಯಿಸಿ, ಅಸ್ತಂಗತವಾದವು. ರೋಮಸಾಮ್ರಾಜ್ಯ, ತುರ್ಕಿ ಸಾಮ್ರಾಜ್ಯ, ಆಸ್ಟ್ರಿಯಾ-ಹಂಗರಿಗಳ ಸಾಮ್ರಾಜ್ಯ, ನಮ್ಮಲ್ಲಿಯ ಮೌರ್ಯ-ಗುಪ್ತ ಸಾಮ್ರಾಜ್ಯಗಳು—ಇವೆಲ್ಲ ಎಲ್ಲಿಯೊ ಹೋದವು. ಇದು ಇತಿಹಾಸದ ನಿಯಮವಾಗಿರುವಾಗ ಬ್ರಿಟಿಷ್ ಸಾಮ್ರಾಜ್ಯವೊಂದೇ ಹೇಗೆ ಅಪವಾದವಾಗುಳಿಯಬೇಕು? ಬ್ರಿಟಿಷ್ ಸಾಮ್ರಾಜ್ಯವು ಬೀದಿಗೆ ಬಂದು ಹತ್ತಿದೆ; ಎದುರಿನಲ್ಲಿ ಒಡೆಯುವ ದಾರಿಗಳಲ್ಲಿ ಯಾವುದನ್ನು ಹಿಡಿಯಬೇಕೆಂಬುವನ್ನು ಅದು ನಿರ್ಧರಿಸಬೇಕಾಗಿ ಬಂದಿದೆ. ಮುಂಚಿನ ನಷ್ಟಸಾಮ್ರಾಜ್ಯಗಳ ಹಾದಿಯನ್ನಾದರೂ ಹಿಡಿಯಬೇಕು, ಇಲ್ಲವೆ ಸ್ವಂತದ ಘಟನೆಯಲ್ಲಿ ಬದಲುಮಾಡಿಕೊಂಡು ತನ್ನ ಸಾಮ್ರಾಜ್ಯವನ್ನು ಒಂದು ಸ್ವತಂತ್ರ ರಾಷ್ಟ್ರಸಮೂಹವನ್ನಾಗಿ ಮಾರ್ಪಡಿಸಬೇಕು. ೧೯೧೭ರಲ್ಲಿ ರಶಿಯನ್ ಝಾರನ ಸಿಂಹಾಸನವು ಉರುಳಿ, ಅದರ ಅವಶೇಷಗಳೊಳಗಿಂದ ಸೊವಿಯೆಟರ ಪ್ರಜಾಸತ್ತಾತ್ಮಕ ರಾಷ್ಟ್ರಸಂಘವು ತಲೆಯೆತ್ತಿತು. ರಶಿಯದ ಗತಿಯಿಂದ ಬ್ರಿಟನ್ನು ಪಾಠ ಕಲಿಯುವ ಸಮಯವು ಇನ್ನೂ ಕಳೆದಿಲ್ಲವೆಂದು ನನಗೆ ತೋರುತ್ತದೆ.

—ರಾಷ್ಟ್ರಪತಿಗಳ ಅಧ್ಯಕ್ಷಭಾಷಣದಿಂದ

ಸಿಂಹನಾದ

(ಆತ್ಮ ಚರಿತ್ರೆಯ ಕೆಲಪುಟಗಳು)

ಸಿಂಹನಾದವನ್ನು ಕೇಳಿ ನನ್ನ ಧನ್ಯತೆಗೆ ಮೇರೆಯುಳಿಯಲಿಲ್ಲ. ನನ್ನ ಭ... ವೇಳೆಯನ್ನು ಹೆಚ್ಚಿಸಿದೆ. ಹತ್ತಿರ ಮಲಗಿದವರ ಪರಿವೆ ಕೂಡ ಇಲ್ಲದೆ ... ಧನಿಯಿಂದ ನಾಮಸ್ಮರಣ ಮಾಡಹತ್ತಿದೆ. ಆದರೆ ಗೊಂದೂನ ... ದೃಷ್ಟಿಯು ಸಿಂಹನಾದದ ಗುಟ್ಟನ್ನು ಹುಡುಕಿತು. ನನಗೆ ಜ್ಞಾನದ ... ವಾಯಿತು. ಆದರೆ ಮನದ ಸೃಷ್ಟಿಯು ಕುಪ್ಪಳಿಸಿ ಹುಡಿಯಾಗಿ ಹೋ...

ಲೇಖಕರು: ಶ್ರೀ. ಕಾಕಾಸಾಹೇಬ ಕಾಲೇಲಕರ

"ಬಹಳ ವರ್ಷಗಳಾದವು, ನಾವು ಕುಲದೇವರ ದರ್ಶನಕ್ಕೆ ಹೋಗಲಿಲ್ಲ, ಎಷ್ಟೋ ಹರಕೆಗಳನ್ನು ಮುಟ್ಟಿಸ ಬೇಕಾಗಿವೆ, ದೇವರ ಕೋಪವಾದೀತು." ಹೀಗೆ ಅವ್ವನು ಹೇಳುತ್ತಿದ್ದುದನ್ನು ನಾನು ಕೇಳಿದ್ದೆ. ರಜೆ ಸಿಕ್ಕಕೂಡಲೆ ಘಟ್ಟದ ಕೆಳಗೆ ಹೋಗಬೇಕು, ಎಂದು ತಂದೆಯವರೂ ಮೇಲಿಂದ ಮೇಲೆ ಅನ್ನುತ್ತಿದ್ದರು. ಘಟ್ಟದ ಕೆಳಗೆ, ಅಂದರೆ ಕೊಂಕಣದಲ್ಲಿ ನಮ್ಮ ಕುಲದೇವರಾದ ಮಂಗಲೇಶ ಅಥವಾ ಮಂಗೇಶನ ಸ್ಥಾನವಿದೆ.

ಗೋವೆಯಲ್ಲಿ ಪೋರ್ತುಗೀಜರ ರಾಜ್ಯವಾದಾಗ ಧಾರ್ಮಿಕ ಒತ್ತಾಯಗಳಿಗೆ ಮೇರೆಯಿಲ್ಲದಾಯಿತು. ಆ ಜನರು ಅಸಂಖ್ಯ ಬ್ರಾಹ್ಮಣರನ್ನೂ, ಇತರ ಹಿಂದುಗಳನ್ನೂ ಬಲಾತ್ಕಾರ ಧಿಂದ ಜಾತಿ ಕೆಡಿಸಿದರು. ಗುಡಿಗಳನ್ನು ಕೆಡಹಿ ಇಗರ್ಜಿ (ಚರ್ಚ)ಗಳನ್ನು ಕಟ್ಟಿದರು. ಕೆಲವು ವಿಶಿಷ್ಟ ಪ್ರದೇಶ ಗಳಲ್ಲಿ ಇಗರ್ಜಿಗಳ ಹೊರತು ಬೇರೆ ಮಂದಿರಗಳೇ ಇರ ದಂತಾಯಿತು. ಹಾಗೆ ಕಟ್ಟುವದೆಂದರೆ ದೊಡ್ಡ ಅಪರಾಧ ವಾಗಿತ್ತು. ಮೆರವಣಿಗೆಯನ್ನಂತು ಹೊರಡಿಸುವಂತೇ ಇಲ್ಲ ಇಂತಹ ಅನೇಕ ಕಾಯದೆಗಳಿದ್ದವು. ಅವುಗಳಲ್ಲಿ ಹಲವು ಕಾಯದೆಗಳು ಇನ್ನೂ ಅಮಲಿನಲ್ಲಿದ್ದವು. ಇತ್ತೀಚೆ ಪೋರ್ತುಗಾಲದಲ್ಲಿ ರಾಜ್ಯಕ್ರಾಂತಿಯಾಗಿ, ಪ್ರಜಾಸತ್ತೆಯು ನಡೆಯಹತ್ತಿದಂದಿನಿಂದ ಆ ಧಾರ್ಮಿಕ ಬಲಾತ್ಕಾರ, ಪೀಡೆ ಗಳು ನಿಂತುಹೋದವು. ಇಂದಿನ ಪೋರ್ತುಗೀಜ ಸರಕಾರವು ಧರ್ಮಶೂನ್ಯ ಮತ್ತು ನಾಸ್ತಿಕವಾಗಿದೆ. ಅವರ ದೃಷ್ಟಿ ಯಲ್ಲಿ ಎಲ್ಲ ಧರ್ಮಗಳೂ ಲೋಕಭ್ರಮೆಯ ಸ್ವರೂಪ ಗಳಾಗಿವೆ. ಎಲ್ಲ ಧರ್ಮಗಳ ವಿಷಯಕ್ಕೂ ಆ ಸರಕಾರವು ಇಂದು ಉಪೇಕ್ಷಾಭಾವವನ್ನು ತಾಳಿದೆ.

ಧಾರ್ಮಿಕ ಬಲಾತ್ಕಾರದ ಹಿಂದಿನ ಕಾಲದಲ್ಲಿ ಗೋವೆ ಯಲ್ಲಿಯ ನಮ್ಮ ಜಾತಿಯ ಮುಂದಾಳುಗಳು "ನಾವು ಭ್ರಷ್ಟರಾದರೂ ಅಡ್ಡಿ ಇಲ್ಲ; ಕುಲದೇವರನ್ನ... ವಾಗಗೊಡಬಾರದು" ಎಂಬ ವಿಚಾರದಿಂದ ... ಕುಲದೇವರನ್ನು ಮೂಲಮಂದಿರದಿಂದ ... ದೆಯ ಸೀಮೆ ದಾಟಿದ ಒಂದು ಸ್ಥಾನದಲ್ಲಿ ... ಈ ಹೊಸ ಸ್ಥಾನಕ್ಕೆ ಈಗ ಮಂಗೇಶಿ ಎನ್ನುತ್ತಾ... ದೇವರ ಜಾತಿಯನ್ನು ಉಳಿಸಿದವರ ಜಾತಿಯ... ಸುಲಭವಾಗಿರಲಿಲ್ಲ. ಹೊಲಮನೆ, ಆಪ್ತೇಷ್ಟ... ಎಲ್ಲಿ ಓಡಿಹೋಗಬೇಕು? ಆದುದರಿಂದ ಹೃದ... ಯುತ್ತಿದ್ದರೂ ಅಪರಿಹಾರ್ಯವಾಗಿ ಅವರಿಗೆ ಕ್ರೈ... ವನ್ನು ಸ್ವೀಕರಿಸುವ ಪ್ರಸಂಗ ಬಂತು. ... ಮಿತವಾಗಿ ಚರ್ಚಿಗೆ ಹೋಗಹತ್ತಿದರು. ಆದರೆ ... ಸೋಮವಾರ, ಏಕಾದಶಿ, ಶಿವರಾತ್ರಿ ಮು... ಗಳನ್ನು ಮಾತ್ರ ತಪ್ಪದೆ ಪಾಲಿಸುತ್ತಿದ್ದರು. ... ಆದರ ಸುದ್ದಿ ಸಿಗದಂತೆ ಎಚ್ಚರಪಡುತ್ತಿದ್ದರು. ... ಯರ ಲಗ್ನವನ್ನು ತಮ್ಮ ಜಾತಿಗಳಲ್ಲೇ ಮಾ... ತ್ತಿದ್ದರು. ಕ್ರಿಸ್ತಧರ್ಮವನ್ನು ಸ್ವೀಕರಿಸಿದ... ಪ್ರವರಗಳನ್ನು ನೋಡಿಯೇ ಕನ್ಯಾದಾನ ಮಾ...

ಅಂತೂ ೧೮೯೯ರಲ್ಲಿ ನಾವು ಮಂಗೇಶಿಗೆ ... ದಕ್ಷಿಣದ ಮಂದಿರಗಳೆಲ್ಲ ಬಹುತರವಾಗಿ ವಿಶಿ... ಇಲ್ಲವೆ ವಿಶಿಷ್ಟ ಕುಟುಂಬಕ್ಕೆ ಸೇರಿದವುಗಳಾ... ಅಂದರೆ ಆಯಾ ಕುಟುಂಬದ ಜನರೇ ಅಲ್ಲಿ ಪೂಜೆ... ತ್ತಾರೆ. ಇಂತಹ ಮಂದಿರಗಳ ಹುಟ್ಟುವಳಿ ... ತ್ತದೆ; ಮತ್ತು ಹುಟ್ಟುವಳಿಯ ವ್ಯವಸ್ಥೆಯು ...

---

* ಶ್ರೀ. ಕಾಕಾಸಾಹೇಬ ಕಾಲೇಲಕರ ಅವರ "ಸ್ಮ..." ಎಂಬ ಆತ್ಮ ಚರಿತ್ರದ ಗುಜರಾಥಿ ಗ್ರಂಥದಲ್ಲಿಯ ಒಂದು... ಅನುವಾದವಿದು.

ಪಂಚರ ಕೈಯಲ್ಲಿರುತ್ತದೆ. ಗೋವೆಯಲ್ಲಿ ನಮ್ಮ ಜಾತಿಗೆ ಸೇರಿದ ನಾಲ್ಕಾರು ಗುಡಿಗಳು ಅಲ್ಲಲ್ಲಿ ಇವೆ. ನಾವು ಮಂಗೇಶಿಗೆ ಹೋಗಿ ಸುಮಾರು ಒಂದು ತಿಂಗಳು ಇದ್ದೆವು. ಸುತ್ತಲೂ ಸಣಬೊಡ್ಡ ಗುಡ್ಡಗಳು; ಹೆಜ್ಜೆಹೆಜ್ಜೆಗೂ ತೆಂಗು, ಅಡಿಕೆ, ಗೇರುಹಂಣಿನ ಮರಗಳು; ಮುಖ್ಯವಾಗಿ ಭತ್ತದ ಹೊಲಗಳು; ಬಾಳೆಗಿಡಗಳಂತೂ ಪ್ರತಿಯೊಂದು ಮನೆ ಅಂಗಳದಲ್ಲಿ ಇದ್ದೇ ತೀರಬೇಕು; ಮತ್ತು ಕಾಡಿನಲ್ಲಿ ಎಲ್ಲಿ ನೋಡಿದಲ್ಲಿ ಪಡೆಕಳಿಯ ಸುಂದರ ಕೆಂಪು ಹೂವಿನ ಗಿಡಗಳು. ನಾವು ನಮ್ಮ ಉಪಾಧ್ಯಾಯರ ಪ್ರಶಸ್ತವಾದ ಮನೆಯಲ್ಲಿ ಇಳಕೊಂಡಿದ್ದೆವು. ಮಂಗೇಶಿಯಲ್ಲಿ ನಮಗೆ ಅನೇಕ ಲಘುರುದ್ರ ಮಹಾರುದ್ರ ಅಭಿಷೇಕಗಳನ್ನು ಮಾಡಿಸುವದಿತ್ತು.

ಮಂಗೇಶಿಯ ಗುಡಿಯು ನೋಡತಕ್ಕಂತಹದಿದೆ. ಗುಡಿ, ಮಸೀದಿ, ಚರ್ಚ ಈ ಮೂರರ ಸೊಗಸೂ ಮಂದಿರದಲ್ಲಿ ಒಂದುಗೂಡಿದೆ. ಮಂಗೇಶಿಯ ಸಂಪತ್ತೂ ಒಂದು ಸಣ್ಣ ಸಂಸ್ಥಾನದಷ್ಟಿದೆ. ಮಂದಿರದ ಎದುರಿನಲ್ಲಿ ಮಿನಾರಗಳಂತೆ ಒಂದು ದೀಪಮಾಲೆಯಿದೆ. ಅದರಲ್ಲಿ ಒಳಗಿನಿಂದ ಮೇಲೇರಲು ಮೆಟ್ಟಲುಗಳಿವೆ. ದಿನಾಲು ರಾತ್ರಿ ಆ ದೀಪಸ್ತಂಭದ ತುದಿಯಲ್ಲಿ ಒಂದು ಹಣತೆಯಲ್ಲಿ ಪಂಜಿನಂತಹ ದೀಪ ಹಚ್ಚಿರುತ್ತದೆ. ಆದರಿಂದ ರಾತ್ರಿ ದಾರಿಕಾರರಿಗೆ ಇಲ್ಲಿ ಮಂಗೇಶಿಯ ಮಂದಿರವಿದೆಯೆಂದು ಗೊತ್ತಾಗುತ್ತದೆ. ಗುಡಿಯ ಹೊರಗೆ ನಾಲ್ಕು ಕಡೆಯಲ್ಲಿ ಮೆಟ್ಟಲುಗಳಿರುವ ಒಂದು ಅಂದವಾದ ಕೆರೆಯಿದೆ. ಮಹಾದ್ವಾರದಲ್ಲಿ ಎಂಟೂ ಪ್ರಹರಗಳಲ್ಲಿ ನೌಬತ್ತು ಬಾರಿಸಲ್ಪಡುತ್ತದೆ. ಮಹಾದೇವರ ಎರಡೂ ಪಕ್ಕಗಳಲ್ಲಿ ಅನೇಕ ನಂದಾದೀಪಗಳು ಉರಿಯುತ್ತಿವೆ; ಮತ್ತು ಆಗಾಗ್ಗೆ ಪೂಜಾರಿ ಮತ್ತು ಭಕ್ತರ ಬಾಯಿಂದ ಮಹಾದೇವರ ಜಯಜಯಕಾರವು ಕೇಳಬರುತ್ತದೆ.

ನನ್ನ ವಯಸ್ಸು ಸಣ್ಣದೆಂದು ನನಗೆ ಪೂಜೆಗೆ ಕೂಡಿಸುತ್ತಿರಲಿಲ್ಲ. ನಾನು ಮಾತ್ರ ಮಂಗೇಶಿಯಲ್ಲಿರುವ ವರೆಗೆ ದಿನಾಲೂ ಮಹಾದೇವರಿಗೆ ನೂರು ಕೊಡ ನೀರಿನ ಅಭಿಷೇಕ ಮಾಡುವೆನೆಂದು ಸಂಕಲ್ಪ ಮಾಡಿದ್ದೆ. ಬಾವಿಯಿಂದ ನೂರು ಕೊಡ ನೀರು ಎಳೆಯುವದು ಆ ವಯಸ್ಸಿನಲ್ಲಿ ನನಗೆ ಹಗುರಾಗಿರಲಿಲ್ಲ. ಆದರೆ ಸಂಕಲ್ಪವನ್ನಂತೂ ಮಾಡಿದೆ. ಕೆಲವು ದಿನಗಳಲ್ಲಿಯೇ ನನ್ನ ಸೊಂಟ ನೋಯಹತ್ತಿತು. ಒಂದು ಗೂಟಕ್ಕೆ ಕಟ್ಟಿದ ಹಗ್ಗವನ್ನು ಹಿಡಿದುಕೊಂಡೇ ಏಳುವದು ಕೂಡುವದು ಮಾಡಬೇಕಾಯಿತು. ಆದರೂ ನೀರೆಳೆಯುವದನ್ನು ನಾನು ಬಿಡಲಿಲ್ಲ. ಆ ಸಮಯವೆಂದರೆ ನನ್ನ ಮುಗ್ಧಭಕ್ತಿಯ ಕಾಲವಾಗಿತ್ತು. ಇಡೀ ಹಗಲು, ಇರುಳು ಕೂಡ ಅನೇಕ ಗಂಟೆಗಳವರೆಗೆ ನಾನು ಗುಡಿಯಲ್ಲಿಯೇ ಕಳೆಯುತ್ತಿದ್ದೆ.

ಒಂದು ದಿನ ನಮ್ಮ ಉಪಾಧ್ಯಾಯರಾದ ಛಿಕಂಭಟಜಿಯವರು ನನಗೆ ಹೇಳಿದರು. "ಅಭಿಷೇಕವು ನಡೆದಿರುವಾಗ ಮಹಾದೇವರು ಪ್ರಸನ್ನರಾದರೆ, ದೇವರ ಲಿಂಗದೊಳಗಿನಿಂದ ಸಿಂಹನಾದವು ಕೇಳಬರುತ್ತದೆ." "ಸಿಂಹನಾದವೆಂದರೇನು?" ಎಂದು ನಾನು ಕೇಳಿದೆ. ಅದಕ್ಕೆ ಭಟಜಿಯವರೆಂದರು "ಬೊಗರಿಯಂತೆ ಇಲ್ಲವೆ ಗುಂಗಿಹುಳದಂತಹದೇ ಆದರೆ ಹೆಚ್ಚು ಘೋರ ಗಂಭೀರವಾದ 'ಘುಂಗ್‌ಗ್' ಎಂಬ ಶಬ್ದವು ಮಹಾದೇವನ ಪೀಠದಿಂದ ಹೊರಟುಬರುತ್ತದೆ." ಮೊದಮೊದಲು ನನಗೆ ಅವರ ಮಾತಿನಲ್ಲಿ ನಂಬಿಗೆ ಹುಟ್ಟಲಿಲ್ಲ. ಕಲಿಯುಗದಲ್ಲಿ ಹೀಗಾಗುವದಾದರೂ ಸಂಭವವೇ? ಆದರೆ ಭಟಜಿಯವರು ಆ ಸಂಗತಿಯನ್ನು ತಿರುತಿರುಗಿ ಹೇಳಿ ನನ್ನಲ್ಲಿ ನಂಬಿಗೆಯನ್ನು ಹುಟ್ಟಿಸಿದರು.

ಅಂದು ರಾತ್ರಿ ನನಗೆ ನಿದ್ದೆ ಬರಲೊಲ್ಲದು. ನೂರು ಕಲಶಗಳ ಅಭಿಷೇಕದ ಸಂಕಲ್ಪದಿಂದ ಮಹಾದೇವನು ನನ್ನಲ್ಲಿ ಪ್ರಸನ್ನನಾಗಲಾರನೇ? ನನ್ನ ಸೇವೆಯು ನಿರರ್ಥಕವಾಗುವಂತಹ ಪಾಪವನ್ನಾದರೂ ನಾನೇನು ಮಾಡಿದ್ದೇನೆ? ನಾನು ಸುಳ್ಳು ಹೇಳಿರಬಹುದು, ಕದ್ದು ತಿಂದಿರಬಹುದು, ಪ್ರಾಣಿಗಳಿಗೆ ಪೀಡೆ ಕೊಟ್ಟಿರಬಹುದು, ಅದೆಲ್ಲವನ್ನೂ ನೆನಪು ಮಾಡಿಮಾಡಿ ನಾನು ಮಂಗೇಶ ಮಹಾರುದ್ರನಲ್ಲಿ ಕ್ಷಮೆ ಬೇಡಹತ್ತಿದೆ. "ಒಂದು ಸಲ ಸಿಂಹನಾದವು ನನಗೆ ಕೇಳಬಂದರೂ ಸಾಯುವವರೆಗೆ ನಾನು ನಿನ್ನ ಭಕ್ತನಾಗಿರುವೆನು. ಆ ಮೇಲೆ ನಿನಗೆ ಬೇಡವಾದ ಒಂದು ಕೆಲಸವನ್ನೂ ನಾನು ಮಾಡುವದಿಲ್ಲ" ಹೀಗೆಂದು ನಾನು ಮಹಾದೇವನಿಗೆ ವಚನಕೊಡಹತ್ತಿದೆ. ಆದರೂ ಸಿಂಹನಾದವನ್ನು ಕೇಳುವ ಸುದೈವಿಯು ನಾನಾಗಬಹುದೆಂಬ ನಂಬಿಗೆಯೇ ನನ್ನಲ್ಲಿ ಹುಟ್ಟಲೊಲ್ಲದು. ನನ್ನ ಭಕ್ತಿಯೇ ಬಲಹೀನವಾದುದು; ನನ್ನ ಶ್ರದ್ಧೆಯೇ ಕಸುಕಾದುದು. ಸಿಂಹನಾದವನ್ನು ಕೇಳುವದೆಂದರೆ ಯಾವ ನಾದರೊಬ್ಬ ಭಾಗ್ಯಶಾಲಿಯ ಹಣೆಯಲ್ಲಿ ಬರೆದ ಮಾತು! ಹೀಗೆ ನಾನು ನಿರಾಶೆಗೊಳ್ಳುತ್ತಿದ್ದೆ. ಕೆಲವು ದಿನಗಳು ಕಳೆದವು.

ಒಂದು ದಿನ ನನ್ನ ನೂರನೆಯ ಕಲಶವನ್ನು ಅಭಿಷೇಕ ಪಾತ್ರೆಯಲ್ಲಿ ಸುರಿದು ನಾನು ಹೊರಗೆ ಹೊರಟಿದ್ದೆ; ಅದೇ 'ಘುಂಗ್‌ಗ್' ಎಂಬ ಶಬ್ದವು ಕೇಳಬಂತು. ಮೊದಲು

ನನ್ನ ಕಿವಿಯ ಮೇಲೆಯೆ ನನಗೆ ವಿಶ್ವಾಸವಾಗಲೊಲ್ಲದು. ಮನಸಿನಲ್ಲಿದ್ದುದೇ ಕನಸಿನಲ್ಲಿ ತೋರುವದೆಂದು ನಾನು ತಿಳಿದೆ. ಆದರೆ ಕನಸಾದರೂ ಎಷ್ಟು ಹೊತ್ತು ಬಾಳಬಹುದು! ಸಿಂಹನಾದವು ಬೆಳೆಯಹತ್ತಿ ಹೆಚ್ಚು ಸ್ಪಷ್ಟವಾಗಿ ಕೇಳಹತ್ತಿತು. ನಾನು ಗೋಂದುವನ್ನು ಕರೆದು ಹೇಳಿದೆ "ನಾನಾ, ಕೇಳು. ನಿನಗೆ ಸಿಂಹನಾದವು ಕೇಳಿಬರುತ್ತಿದೆಯೋ!" ಆಚ್ಚರಿಯಿಂದ ಕಣ್ಣು ಅರಳಿಸಿ ಬಾಯ್ತೆರೆದ ಅವನು ಕೇಳುತ್ತ ನಿಂತ ! ಕೊನೆಗೆ ಅವನೆಂದ "ದತ್ತೂ, ನಿಜವಾಗಿ ದೇವರು ಇವತ್ತು ನಿನ್ನ ಮೇಲೆ ಪ್ರಸನ್ನನಾಗಿದ್ದಾನೆ !"

ನನ್ನ ಧನ್ಯತೆಗೆ ಮೇರೆಯಿಲ್ಲದಾಯಿತು. ಚಿಕ್ಕಂದಿನಿಂದ ಪೂಜೆ, ಸೇವೆ, ಭಜನೆ ಮಾಡಿದುದಕ್ಕೆ ಇಂದು ಫಲ ಸಿಕ್ಕಂತಾಯಿತು. ಇನ್ನು ನನ್ನ ಜೀವನವನ್ನೆಲ್ಲ ದೇವಸೇವೆಯಲ್ಲಿಯೇ ಕಳೆಯಬೇಕು. ಜಗತ್ತಿನ ವ್ಯವಹಾರಕ್ಕೆಲ್ಲ ಬೆಂಕಿ ಬೀಳಲಿ! ಮಹಾದೇವನು ಪ್ರಸನ್ನನಾದನು ! ಸಿಂಹನಾದವು ಕೇಳಬಂತು ! ಇದಕ್ಕಿಂತ ಹೆಚ್ಚಿನದೇನಿದೆ ! ಈಶ್ವರನ ವರದಹಸ್ತವು ನನ್ನ ಮಸ್ತಕದ ಮೇಲಿದೆ !

ಊಟ ಮಾಡುವಾಗ ಸಿಂಹನಾದದ ವಿಷಯವನ್ನು ಗೋಂದೂ ಎಲ್ಲರಿಗೂ ತಿಳಿಸಿದನು. ಅಪ್ಪನಿಗೆ ಸಂತೋಷವಾಯಿತು. ತಂದೆಯವರು ಏನೂ ಮಾತಾಡಲಿಲ್ಲ; ಆದರೆ ಅವರಿಗೂ ಆನಂದವಾದುದು ತೋರಿಬರುತ್ತಿತ್ತು. ನಾನಂತೂ ಗೆಲುವಿನ ಮುದ್ರೆಯಿಂದ ಎಲ್ಲರ ಮುಖದಕಡೆಗೂ ನೋಡಹತ್ತಿದೆ; ಮತ್ತು ಪ್ರತಿಯೊಬ್ಬರಿಂದಲೂ ಅಭಿನಂದನದ ತೆರಿಗೆಯನ್ನು ಎತ್ತಿದೆ. ಆ ದಿನ ರಾತ್ರಿ ಮತ್ತು ಮರುದಿನ ಮುಂಜಾನೆ ನನ್ನ ನಾಮಸ್ಮರಣದ ವೇಳೆಯನ್ನು ಇಮ್ಮಡಿ ಮಾಡಿಬಿಟ್ಟೆ ! ಹತ್ತರ ಮಲಗಿರುವವರ ಪರಿವೆ ಕೂಡ ಮಾಡದೆ ನನ್ನ ಧ್ವನಿಯನ್ನು ಏರಿಸಿದೆ, "ಸಾಂಬ ಸದಾಶಿವ! ಸಾಂಬ ಸದಾಶಿವ! ಜಯಹರ ಶಂಕರ, ಜಯಹರ ಶಂಕರ!!" ಹೀಗೆ ಎಷ್ಟೊ ದಿನಗಳು ಹೋದವು. ಅವುಗಳಲ್ಲಿ ಪುನಃ ಎರಡುಸಲ ಸಿಂಹನಾದ ಕೇಳಿಬಂತು. ಇದೇ ಸ್ಥಿತಿಯಲ್ಲಿ ನಾನು ಕೊನೆಯವರೆಗೆ ಇರುತ್ತಿದ್ದರೆ ಎಷ್ಟು ಚೆನ್ನಾಗುತ್ತಿತ್ತು !


ನಮ್ಮ ಗೋಂದೂಗೆ ಚಿಕ್ಕಂದಿನಿಂದ ವಿಜ್ಞಾನದೃಷ್ಟಿ ವಿಶೇಷವಾಗಿತ್ತು. ಅವನು ಯಾರಿಗೂ ಹೇಳದೆ ಸಿಂಹನಾದದ ಗುಟ್ಟನ್ನು ಹುಡುಕಹತ್ತಿದನು. ಇದರಲ್ಲಿ ಗುಪ್ತವಾದುದೇನೋ ಇರಬೇಕೆಂದು ಅವನು ಮನದಲ್ಲಿ ನಿಶ್ಚಯಿಸಿಕೊಂಡೇ ಬಿಟ್ಟನು. ದಿನವೂ ಅಭಿಷೇಕ ಪೂಜೆಗಳಾಗುತ್ತಿರುವಾಗ, ಗರ್ಭಗುಡಿಯಲ್ಲಿ ಅವನು ಗಂ... ನೋಡುತ್ತ ಕೂಡುತ್ತಿದ್ದ. ಒಂದು ದಿನ ಅ... ಅವನು ನನ್ನ ಬಳಿಗೆ ಬಂದು "ದತ್ತಾ, ನಿ... ತಮಾಷೆ ತೋರಿಸುತ್ತೇನೆ" ಎಂದನು. ನಾ... ಜೊತೆಗೆ ಗುಡಿಯಲ್ಲಿ ಹೋದೆ. ಮಂಗೇಶಿಯ ... ನೆಂದರೆ ಒಂದು ಪುರಾಣಪ್ರಸಿದ್ಧ ಹುರುಬ... ಯಾಗಿದೆ. ಪೂರ್ವಕಾಲದಲ್ಲಿ ಒಂದು ಗೋವು ತ... ನಿಂದ ಹಾಲಿನ ಧಾರೆಯನ್ನು ಅದರ ಮೇಲೆ ಬ... ದುಗ್ಧಾಭಿಷೇಕ ಮಾಡಿಸುತ್ತಿತ್ತು. ಆ ದಿನದಿಂ... ಮಾಹಾತ್ಮ್ಯವು ಪ್ರಕಟವಾಯಿತು. ಆ ಶಿ... ಅಭಿಷೇಕಪಾತ್ರೆಯಿಂದ ನೀರು ಬೀಳುವಾಗ ಮೇಲಿನ ಹೂಗಳು ಅತ್ತಿತ್ತ ಜಾರಿ ಹೋ... ಶಿಲೆಯು ಹುರುಬರವಾದುದರಿಂದ ಅಲ್ಲಲ್ಲಿ ಎತ್ತರ... ಇದ್ದವು. ಶಿಲೆಯು ಪೀಠದೊಳಗಿಂದ ನೀರು ... ಹೋಗುತ್ತಿರುವ ತೂತನ್ನು ಗೋಂದು ತನ್ನ ... ಮುಚ್ಚಿದನು. ಮತ್ತು ಅಭಿಷೇಕಪಾತ್ರೆಯನ್ನು ... ಕೈಯಿಂದ ಎಳೆದು ಹಿಡಿದನು. ನೀರಿನ ಧಾರೆಯು ... ವಿಶಿಷ್ಟ ಭಾಗದ ಮೇಲೆ ಬೀಳಹತ್ತಿದ ಕೂ... ನಾದವು ಹೊರಡಲಾರಂಭವಾಯಿತು.

ನನಗೆ ಮಾತ್ರ ಜ್ಞಾನಾನಂದವಾಗುವದ... ದುಃಖವಾಯಿತು. ನನ್ನ ಇಡೀ ಮನಃಸೃಷ್ಟಿ... ಹುಡಿಯಾಯಿತು ! ಗೋಂದು ಅಂದನು ... ಮುಂಜಾನೆ ಅನೇಕ ಹೂಗಳು ಪೀಠದ ಈ ... ಬಿದ್ದಿದ್ದವು. ಅಭಿಷೇಕ ಪಾತ್ರೆಯೂ ಜೋ... ಆಗ ನನಗೆ ಸಿಂಹನಾದವು ಕೇಳಿಸಿತು. ಸರಿ... ಸ್ಥಳದಲ್ಲಿ ಧಾರೆ ಬೀಳುವಾಗ ಸಿಂಹನಾದ ಹೊ... ಧಾರೆಯು ದೂರವಾದ ಕೂಡಲೆ ನಾದವು ... ಕೂಡಲೆ ನಾನು ನನ್ನ ಪ್ರಯೋಗ ಆರಂಭಿಸಿ... ಒಂದು ಗಂಟೆಯೊಳಗಾಗಿ ಸಿಂಹನಾದವನ್ನು ... ಮಾಡಿಕೊಂಡೆ. ಈಗ ನಾನು ನಿನಗೆ ಬೇಕಾದ... ನೀನು ಬೇಡಿದಾಗ ಸಿಂಹನಾದವನ್ನು ಕೇಳಿಸಬ...

ಗೋಂದೂನ ಕೈಯಿಂದ ಅಭಿಷೇಕಪಾತ್ರೆ... ಕೊಂಡು ನಾನು ಆ ಪ್ರಯೋಗವನ್ನು ... ಮಾಡಿನೋಡಿದೆ. ಪ್ರತಿಸಲವೂ ಸರಿಯಾಗಿ ... ಕೇಳುತ್ತಿತ್ತು. ಇದು ದೈವೀ ಚಮತ್ಕಾರ... ನಿಯಮಗಳ ಆಟವು ಎಂದು ಮನಸ್ಸಿಗೆ ... ವಾಯಿತು.

ಜಪಾನದಲ್ಲಿ ಶ್ರೀ ರಾಮಗೋಪಾಲರವರ ನಾಟ್ಯಪ್ರದರ್ಶನ

ಲೇಖಕರು: ಶ್ರೀ. ಕರಾಚೂರ್ ಎಲ್. ನಂಜಪ್ಪ, ಟೋಕಿಯೊ (ಜಪಾನ)



ಇಂದ್ರನು ಐರಾವತವನ್ನು ಏರಿಕೊಂಡು ಹೋಗುವ ದೃಶ್ಯ

ಭಾರತದ ಕೀರ್ತಿಯನ್ನು ಪರದೇಶಗಳಲ್ಲಿ ಪ್ರಚುರಿಸುತ್ತಿರುವ ಕನ್ನಡ ಯುವಕರಲ್ಲಿ, ಶ್ರೀ ರಾಮಗೋಪಾಲರವರು ಒಬ್ಬರು. ಇವರು ತಮ್ಮ ನಾಟ್ಯಕಲೆಯನ್ನು ವಿವಿಧ ಪೌರ್ವಾತ್ಯ ದೇಶಗಳಲ್ಲಿ ಪ್ರದರ್ಶಿಸಿ, ಮರೆತುಹೋದ ಭಾರತೀಯ ಕಲಾನೈಪುಣ್ಯವನ್ನು ಅನುಬೋಧನೆ ಮಾಡಿಕೊಡುತ್ತಲಿರುವರು. ಜಪಾನ ಚಕ್ರವರ್ತಿಗಳ ಸಹೋದರರಾದ ಪ್ರಿನ್ಸ ತಕಮಾತ್ಸು ಅವರ ಮುಂದೆ, ಇವರು ನಾಟ್ಯಪ್ರದರ್ಶನವನ್ನು ಮಾಡಿ ಪ್ರಶಂಸೆಯನ್ನು ಪಡೆದಿರುವರು.

ಶ್ರೀರಾಮಗೋಪಾಲರವರು, ಇಪ್ಪತ್ತು ವರ್ಷದ ತರುಣರು. ಇವರು ಹುಟ್ಟಿ ಬೆಳೆದುದು ಬೆಂಗಳೂರಿನಲ್ಲಿ, ನಾಟ್ಯಕಲೆಯನ್ನು ಮಲಬಾರಿನ ದೇವಸ್ಥಾನಗಳಲ್ಲಿ ಅಭ್ಯಾಸಿಸಿ, ಭಾರತದ ಅನೇಕ ರಾಜ, ಮಹಾರಾಜರುಗಳ ಮುಂದೆ ಅಭಿನಯಿಸಿ ಪ್ರಶಸ್ತಿಯನ್ನು ಪಡೆದವರು. ೨ ವರ್ಷಗಳ ಹಿಂದೆ, ಬರ್ಮ, ಜಾವಾ, ಬಾಲಿ ದೇಶಗಳಿಗೆ ಬಂದು, ತಮ್ಮ ವಿದ್ಯೆಯನ್ನು ಪ್ರದರ್ಶಿಸಿರುವರಲ್ಲದೆ, ಆಯಾ ದೇಶಗಳಲ್ಲಿ ನೆಲಸಿರುವ ಭಾರತದ ನಾಟ್ಯಕಲೆಯನ್ನು ಅಭ್ಯಾಸಿಸಿ ಹಾಂಕಾಂಗ್, ಷಾಂಘೈಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ, ೪ ತಿಂಗಳ ಕೆಳಗೆ, ಅಮೇರಿಕದ ಪ್ರಸಿದ್ಧ ನರ್ತಕಿಯಾದ ಶ್ರೀಮತಿ ಲಾಮೇರಿಯೊಡನೆ ಜಪಾನಕ್ಕೆ ದಯ್ಯ ಮಾಡಿಸಿದರು. ಇಲ್ಲಿ ಅನೇಕ ರಂಗಭೂಮಿಗಳ ಮೇಲೆ ತಮ್ಮ ಕಲೆಯನ್ನು ಪ್ರದರ್ಶಿಸಿ, ಜನರನ್ನು ಬೆರಗುಗೊಳಿಸಿ ಭಾರತದ ಗೌರವವನ್ನು ಹೆಚ್ಚಿಸುತ್ತಲಿರುವರು. ಕಳೆದ ತಿಂಗಳು ಚಕ್ರವರ್ತಿಗಳ ಸಹೋದರರಾದ,ಪ್ರಿನ್ಸ ತಕಮಾತ್ಸು ಅವರು, ಇವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು, ರಾಜಮರ್ಯಾದೆಯನ್ನು ಮಾಡಿದರು. ಇದರಂತೆ ಪರದೇಶದ ರಾಜಕಾರಣಪಟುಗಳು (Diplomats) ಕೂಡ ಸನ್ಮಾನಿಸಿದರು. ಇವರು ಜನವರಿಯಲ್ಲಿ ನಾಟ್ಯಪ್ರದರ್ಶನಕ್ಕಾಗಿ ಅಮೇರಿಕಕ್ಕೆ ದಯಮಾಡಿಸಲಿರುವರು.

ನಾಟ್ಯವು ಹಿಂದುಗಳ ನಿತ್ಯಜೀವನದಲ್ಲಿ ಬೆರೆತಿರುವ ಒಂದು ವಿಷಯವಾಗಿದೆ. ಇದು ಭಾರತೀಯ ನಾಗರಿಕತೆಯೊಡನೆಯೆ ಬೆಳೆದುಕೊಂಡು ಬಂದಿರುತ್ತದೆ. ನಾಟ್ಯಕಲೆಯೂ ಹಿಂದಿನ ದೇವಸ್ಥಾನಗಳ ನಿರ್ಮಾಣವೂ ಪರಸ್ಪರ ನಿಕಟ ಸಂಬಂಧವುಳ್ಳವುಗಳಾಗಿವೆ. ಆದುದರಿಂದಲೇ, ಯಮುನಾ, ಗಂಗಾ, ಕಾವೇರಿ ಮೊದಲಾದ ನದಿಗಳ ದಡಗಳ ಮೇಲೆ ಕಟ್ಟಲ್ಪಟ್ಟಿರುವ ಉತ್ತಮ ತರಗತಿಯ ಶಿಲ್ಪಿ ನಿರ್ಮಿತವಾದ ದೇವಸ್ಥಾನಗಳಲ್ಲಿ, ನಾಟ್ಯಕ್ಕೆ ಮನ್ನಣೆಯಿರುವುದನ್ನು ಕಾಣಬಹುದು. ದೇವರನ್ನು ಪೂಜಿಸುವುದರ ಜೊತೆಗೆ ನಾಟ್ಯವೂ ಸಹಜವಾದ ಒಂದು ಧರ್ಮಾಂಗವಾಯಿತು. ಮೇಲ್ಕಂಡ ಕಾರಣದಿಂದಲೇ ದಕ್ಷಿಣ ಭಾರತದ ಪ್ರಖ್ಯಾತ ದೇವಮಂದಿರಗಳಲ್ಲಿ, ನಾಟ್ಯಕ್ಕಾಗಿ ಪ್ರತ್ಯೇಕ "ರಂಗ"ಸ್ಥಳವು ನಿರ್ಮಾಣವಾಗಿರುವುದು. ಶಾಸ್ತ್ರೀಯವಾಗಿ ದೇವರ ಮುಂದೆ ನಾಟ್ಯವನ್ನು ಅಭಿನಯಿಸುವ ವರೆಗೆ ದೇವರ ಮಹಾಪೂಜೆಯು ಪೂರ್ಣವಾದಂತೆ ಆಗುವುದಿಲ್ಲ. ನಾಟ್ಯಶಾಸ್ತ್ರದಲ್ಲಿ ಪಾರಂಗತರಾದ ನಟನಟಿಯರಿಗೆ ಮಾತ್ರ ಇಲ್ಲಿ ಪ್ರವೇಶ ಉಂಟಲ್ಲದೆ ಪ್ರಾರಂಭಕರಿಗೆ (A[illegible] ಆಸ್ಪದವಿಲ್ಲ. ಭಾರತೀಯರ ನಾಟ್ಯಕಲೆಗೆ [illegible] ಆರಾಧಿಸುವುದಕ್ಕಾಗಿ ಮನ್ನಣೆ ಸಿಕ್ಕಿತಲ್ಲದೆ, ರಾ[illegible] ರಾಜರುಗಳ ವಿಹಾರಾರ್ಥವಾಗಿ ಅಲ್ಲ.

ಭಾರತೀಯ ನಾಟ್ಯವು, ಅಂತರಾತ್ಮನ ಕೂಗನ್ನು[illegible] ಸುವುದು. ಮೆಚ್ಚುಗೆಯು ಮೇರೆ ಮೀರಿದಾಗ[illegible]



ಕೃಷ್ಣ-ರಾಧಾ ನಾಟ್ಯದ ಒಂದು ದೃಶ್ಯ

ಪರವಶತೆಯಾದಾಗಲೂ ಆತ್ಮನ ಸುಖ, ದುಃಖ, [illegible] ಗಳನ್ನು ಶಾರೀರಿಕವಾಗಿ ಪ್ರಕಟಿಸಲು ಇಲ್ಲವೆ [illegible] ಹೇಳಲು ಅಸಾಧ್ಯವಾದಾಗಲೂ ಹಾವಭಾವದಿಂ[illegible] ಗೊಳಿಸುವುದು ಒಂದೇ ಮಾರ್ಗ. ಈ ರೀತಿಯ[illegible] ಕಾಲುಗಳಿಂದಲೂ, ಮುಖಮುದ್ರೆಯಿಂದಲೂ ಭಾ[illegible] ಟಿಸುವುದಕ್ಕೆ ನಟನಟಿಯರು ರಸಜ್ಞಾನವುಳ್ಳ[illegible] ರಬೇಕು. ಶೃಂಗಾರ, ರೌದ್ರ, ವೀರ, ಭೀಭತ್ಸ, ಹಾಸ್ಯ[illegible]

ಅದ್ಭುತ, ಭಯಾನಕ, ಮತ್ತು ಶಾಂತರಸಗಳು ಅವರ ಅಧೀನದಲ್ಲಿರಬೇಕು. ರಸಪ್ರಕಟನದಲ್ಲಿ ಪಾರಂಗತರಾದವರು, ನಾಟ್ಯವಾಡುವಲ್ಲಿ, ವಿಕ್ಷೋಭೆಯಿಂದ ದಣಿಯಬಹುದೇ ವಿನಾ, ಶಾರೀರಿಕವಾಗಿ ಬಳಲಿಕೆಯನ್ನು ಹೊಂದುವುದಿಲ್ಲ.

ನಾಟ್ಯಶಾಸ್ತ್ರವು ಭರತ ಮಹರ್ಷಿಗಳಿಂದ ವಿರಚಿಸಲ್ಪಟ್ಟಿತು. ಇವರ "ನಾಟ್ಯಶಾಸ್ತ್ರವು" ನಾಟ್ಯದ ಬಗ್ಗೆ ಪ್ರತಿಯೊಂದು ಅಂಶವನ್ನು ಒಳಗೊಂಡಿರುವುದು. ಇವರ ನಾಟ್ಯದ ಕಟ್ಟಳೆಯೂ, ಹಾವಭಾವವೂ, ಪರಮೇಶ್ವರನಾದ ಶ್ರೀನಟರಾಜನಿಂದ ಬೋಧಿಸಲ್ಪಟ್ಟಿರುವನೆಂದು ಪೌರಾಣಿಕ ಪ್ರತೀತಿಯುಂಟು. ನಾಟ್ಯಶಾಸ್ತ್ರದಂತೆ ನಾಟ್ಯವು, ಅಭಿನಯ, ನೃತ್ಯ, ಗೀತಗಳೊಡನೆ ಕೂಡಿಕೊಂಡಿರುವುದು. ಪ್ರಕೃತದ ನಾಟ್ಯದಲ್ಲಿ ಬಹುಭಾಗ ವಿಭಾಗಗಳಿರುವವ. ಇವುಗಳಲ್ಲಿ "ಕಥಕ್ಕಳಿ, ಕಥಕ್, ಮಣಿಪುರಿಶಾಖೆ" ಮೊದಲಾದವುಗಳು ಮುಖ್ಯವಾದವುಗಳು.

* ಕಥಕ್ಕಳಿ ನಾಟ್ಯವು, ಮಲಬಾರಿನ ಪ್ರಾಂತ್ಯದಲ್ಲಿ ಹುಟ್ಟಿ ಬೆಳೆದುಕೊಂಡು ಬಂದಿರುವುದು. ಇದು ಅಭಿನಯ, ನೃತ್ಯ, ಗೀತಗಳನ್ನೊಳಗೊಂಡ ಸಂಮಿಲಿತ ಕಲೆಯಾಗಿದೆ. ಇದರಲ್ಲಿ ನಟನಟಿಯರು ಹಾಡುವುದೂ ಇಲ್ಲ, ಮಾತನಾಡುವುದೂ ಇಲ್ಲ; ಹಾಡುವುದು, ಮಾತನಾಡುವುದು, ಹಿಮ್ಮೇಳದವರ ಕೆಲಸವಾಗಿದೆ. ಕಥಕ್ಕಳಿ ನಾಟ್ಯದಲ್ಲಿ ತಾಳ, ತಬಲಾ, ಕಿನ್ನರಿಗಳಿಗೆ ಹೆಚ್ಚು [illegible]. ಇವುಗಳು ಬಾರಿಸಿದಂತೆ ಎಲ್ಲ ನಟರು, ಕೈಕಾಲುಗಳ ಚಲನ ಮತ್ತು ಮುಖಮುದ್ರೆ


---

* ಲೇಖಕರು ಶ್ರೀರಾಮಗೋಪಾಲರೊಡನೆ ನಡೆಸಿದ ಸಂಭಾಷಣೆಯ [illegible].



ಜಾವಾದೇಶದ ಸುರೇಕರತ ನಾಟ್ಯದ ಒಂದು ದೃಶ್ಯ

ಗಳಿಂದ ಭಾವವನ್ನು ವ್ಯಕ್ತಗೊಳಿಸುವರು. ರಸಸ್ವಭಾವವನ್ನೂ ಜೀವನದ ತತ್ವವಿಜ್ಞಾನವನ್ನೂ ಸಂಸ್ಕೃತಿಯನ್ನೂ ತಿಳಿದವರಿಂದಲೇ ಕಥಕ್ಕಲಿಯಲ್ಲಿ ಭಾಗವಹಿಸಲು ಸಾಧ್ಯವಲ್ಲದೆ ಬೂಟಾಟಿಕೆಯ ದಾಸಯ್ಯಗಳಿಂದ ಸಾಧ್ಯವಿಲ್ಲ. ಸಾಮಾನ್ಯವಾಗಿ ನಾಟ್ಯವಾಡುವಾಗ, ೬ ಜನ ತಮ್ಮಟೆಗಾರರು, ತಮ್ಮಟೆಯನ್ನು ಬಾರಿಸಿ, ಭಾವವನ್ನು ಪ್ರಕಟಿಸು



ದೇವಪ್ರಾರ್ಥನೆಯ ಒಂದು ದೃಶ್ಯ

ವರು. ನಂತರ ವಿನಾಯಕನ ಮುಖವಾಡವನ್ನು ಧರಿಸಿದ ನಟನಿಗೆ ಮಂಗಳಾರತಿಯಾದ ಮೇಲೆ, ನಾಟ್ಯವು ಮತ್ತು ನಾಟಕವು ಪ್ರಾರಂಭವಾಗುವುದು. ನಾಟಕವು ಇಡಿ ರಾತ್ರಿ ನಡೆಯುವುದು. ಕಾಲವು ಗತಿಸಿದಂತೆ ಉತ್ತಮೋತ್ತಮಗತಿಯ ಕಥಕ್ಕಲಿಯು ಕ್ಷೀಣವಾಗಿ, "ತಾಂಡವ"ದ ಹಾಸ್ಯರೀತಿಯು ಬೆರೆತು ಅದೇ ಒಂದು ಬೇರೆಬಗೆಯದಾಗಿರುವುದು. ಮಲಬಾರಿನ ಏಕಾಂತ ಕವಿವರ್ಯರಾದ ಶ್ರೀಯುತ ವಲ್‌ಕಾಲ್ ರವರ ಪ್ರೇರಣೆಯಿಂದ ಕಥಕ್ಕಲಿಯು ತನ್ನ ಶು[illegible] ಸ್ವರೂಪವನ್ನು ಕಾಣುತ್ತಲಿರುವುದು. ಅಲ್ಲದೆ ನಾಟ್ಯ[illegible] ದಲ್ಲಿ ಪ್ರಖ್ಯಾತಿಯನ್ನು ಪಡೆದಿರುವ ಶ್ರೀಯುತ[illegible] ಉದಯಶಂಕರ, ರಾಮಗೋಪಾಲ, ಶ್ರೀಮತಿ[illegible] ಗಳಾದ, ರುಕ್ಮಿಣೀದೇವಿ, ಮೇನಕಾ, ರಾಗಿಣೀದೇ[illegible] ಲಾದವರುಗಳು, ಕಥಕ್ಕಲಿಯನ್ನು ಭಾರತದಲ್ಲಿಯ[illegible] ದೇಶಗಳಲ್ಲಿಯೂ ಅಭಿನಯಿಸಿ, ಅದಕ್ಕೆ ಹೆಚ್ಚು [illegible] ಯನ್ನು ಒದಗಿಸಿಕೊಡುತ್ತಲಿರುವರು.

"ಕಥಕ್" ನಾಟ್ಯವು ಮೊಗಲರ ಆಳಿಕೆಯಲ್ಲಿ [illegible] ಣಿಗೆಯನ್ನು ಪಡೆದಿತು. ಇದನ್ನು ದೇವಸ್ಥಾನದಲ್ಲಿ [illegible] ಅಭಿನಯಿಸುವುದಿಲ್ಲ. ಕಥಕ್ ನಾಟ್ಯದಲ್ಲಿ ನೋ[illegible] ಹದ ವಸ್ತ್ರಾಭರಣಗಳು ಉಪಯೋಗಿಸಲ್ಪ[illegible] ಸಾರಂಗ, ತಬಲಗಳು ನಾಟ್ಯಕ್ಕೆ ಹೆಚ್ಚು ಕಳೆಯನ್ನು[illegible] ತ್ತವೆ. ಸಂಣಸಂಣ ಗೆಜ್ಜೆಗಳನ್ನು ನಟಿಯರು ಕಾ[illegible] ಕಟ್ಟಿಕೊಂಡು ನರ್ತನಮಾಡುವುದುಂಟು. ಕಥಕ್[illegible] ದಲ್ಲಿ ನಟನಟಿಯರು ಪದಗಳನ್ನು ಹಾಡುವರು. [illegible] ದವರ ಕೆಲಸ ಬಹು ಕಡಿಮೆ.

ಕೋಳಿಯ ಮೀಮಾಂಸೆ

—: ವಿನೋದ ನಿಬಂಧ :—

(ಶ್ರೀರಂಗ)

ಬೆಳಗಾದಾಗ ಕೋಳಿ ಕೂಗುತ್ತದೆಂಬುದೊಂದು ಭ್ರಮೆ. ಕೋಳಿಯಿಂದ ಜಗತ್ತೇ ಬೆಳಗಿತು. ಜಗತ್ತಿಗೇ ಆಧಾರವಾದ ಬ್ರಹ್ಮಾಂಡವು, ಅಜಾಂಡವು ಕೋಳಿಯ ತತ್ತಿಯೆ. ಕೋಳಿಯು ಸಾಕ್ಷಾತ್ ಹಿರಣ್ಯಗರ್ಭನು— 'ಒಳಗೆ ಹಿರಣ್ಯ ಎಂದರೆ ಬಂಗಾರ ಎಂದರೆ ಹಳದಿ ಬಣ್ಣವುಳ್ಳದು.' ಇಂದಿನ ಕುಕ್ಕುಟಗಿಳಂಕರಣ ಶಾಸ್ತ್ರವೇ ಹೇಳುವುದಿಲ್ಲವೆ— ಕೋಳಿಯ ತತ್ತಿಯ ಒಳಗೂ ಹಳದಿಯ ಬಣ್ಣವಿರುವುದೆಂದು ?.... ಈ ಹಿರಣ್ಯಗರ್ಭನ ಪುನಃಪ್ರತಿಷ್ಠಾಪನೆಯಾಗಲಿ. ಎಲ್ಲ ಪಂಗಡಗಳ ಬ್ರಾಹ್ಮಣರು ಪರಮಾತ್ಮಸ್ವರೂಪನಾದ ಕೋಳಿಯನ್ನೆ ಆರಾಧಿಸಲಿ. ಇದರಲ್ಲಿ ಹಿಂಸೆಯಿಲ್ಲ. ಹಿರಣ್ಯಗರ್ಭನಿಗೆ ನೋವಿಲ್ಲ, ಸಾವಿಲ್ಲ. ಬಡವರಿಂದ ಬಲಾತ್ಕಾರವಾಗಿ ದಕ್ಷಿಣೆ ಸುಲಿವ ಹಿಂಸೆ ಇದರಲ್ಲಿಲ್ಲ, ಬರಿಯ ಜನ್ಮದಿಂದಲೆ ಶ್ರೇಷ್ಠನೆನಿಸಬೇಕೆಂಬ ಹೆಮ್ಮೆಯ ಹೇಯವೃತ್ತಿಯೂ ಇದರಲ್ಲಿಲ್ಲ. ಈ ಹಿರಣ್ಯಗರ್ಭನು ಗೋಮಾತೆಯನ್ನೂ ಹಿಂದಕ್ಕೆ ಸರಿಸಿದನು. ಒಂದು ಕೋಳಿಯ ಮೊಟ್ಟೆಯೆಂದರೆ ೨ ಸೇರು ಹಾಲು ! ಹೆಚ್ಚೆಂದರೆ ಅರ್ಧ ಆಣೆಗೆ ! ಆಹಾ ! ಭಾರತೀಯರ ಭಾಗ್ಯದೇವತೆಯೆ ! ಇಂದು ನೀನು ಪ್ರಸನ್ನಳಾದೆ ! ಆಹಾ ! ಗೋಮಾತೆಯೆ ! .... ಇನ್ನು ನಿನ್ನನ್ನು 'ಕರೆ'ಯುವುದೇಕೆ ? 'ತೊರೆಯಿಸಿ' ಹಿಂಸಿಸುವುದೇಕೆ ? ....

ಕೋಳಿಯ ಮೀಮಾಂಸೆ ಎಂದ ಮಾತ್ರಕ್ಕೆ ಕಾಲೇಜ ವಿದ್ಯಾರ್ಥಿಗಳ ಟೀಕೆ ಎಂದಾಗಲಿ ಹಿಂದುಮಹಾಸಭೆಯ ಒಂದು ಅಧಿವೇಶನದಲ್ಲಿ ಸ್ವೀಕೃತವಾದ ಗೊತ್ತುವಳಿ ಎಂದಾಗಲಿ ಯಾರೂ ಭಾವಿಸಬಾರದೆಂದು ನನ್ನ ಬೇಡಿಕೆ. ನಾನು ವಿವರಿಸುತ್ತಲಿರುವ ಪ್ರಾಣಿಮೀಮಾಂಸೆಗಳಿಂದ ಎಷ್ಟೋ ಜನರು ನನ್ನ ವಿಷಯವಾಗಿ ತರ್ಕ-ವಿತರ್ಕಗಳನ್ನು ನಡೆಸಿದ್ದಾರಂತೆ. ನಾನು ರಿಟಾಯರ್ಡ ಸರ್ಕಸ ಮ್ಯಾನೇಜರನೆಂದು ಕೆಲವರು, ಜೀವಿಸಂಗ್ರಹದ ಕಾವಲುಗಾರನೆಂದು ಕೆಲವರು, ವಿಜ್ಞಾನಶಾಸ್ತ್ರಪ್ರವೀಣನೆಂದು ಕೆಲವರು, ಮನೆ ಸಾಲದಷ್ಟು ಮಕ್ಕಳನ್ನು ಹಡೆದ ಮುಪ್ಪುಗಾಣದ ತಂದೆಎಂದು ಕೆಲವರು—ಹೀಗೆ ಏನೇನೊ ನನ್ನನ್ನು ತಿಳಿಯುತ್ತಿದ್ದಾರಂತೆ. ಆದರೆ ನಾನು ಇಂತಹ ಯಾವ ವರ್ಗಕ್ಕೂ ಸೇರಿದವನಲ್ಲವೆಂದು ಸಂಪಾದಕರ ಆಣೆ ಇಟ್ಟು ಹೇಳುವೆ. ನಾನೊಬ್ಬ ಲೇಖಕ, ಗದ್ಯಲೇಖಕ, ಪದ್ಯಲೇಖಕನಲ್ಲ. ಗದ್ಯಲೇಖಕನೆಂದೇ ಕುರಿ-ಕೋಣ-ಬೆಕ್ಕು-ನಾಯಿ-ಕಾಗೆ-ಕೋಳಿ ಮುಂತಾದ ಪ್ರಾಣಿಗಳು ನನಗೆ ಪರಿಚಿತವಾದುವು. ರವಿ ಕಾಣದ್ದನ್ನು ಕವಿ ಕಾಣುವನಂತೆ,—ಕವಿ ಕಾಣದ್ದನ್ನು ನೋಡಿ ಕಾಣುವ ಲೇಖಕವರ್ಗಕ್ಕೆ ಸೇರಿದವ ನಾನು. ಕಮಲ-ಕುಮುದಗಳ ಅರಳುವಿಕೆಯಾಗಲಿ, ನಲ್ಲ-ನಲ್ಲೆಯರ ಒಲುಮೆಯ ನರಳುವಿಕೆಯಾಗಲಿ, ಚಂದ್ರ-ಪ್ರಾತಃಕಾಲಗಳ ಸೌಂದರ್ಯವಾಗಲಿ ನಮ್ಮಲ್ಲಿಲ್ಲ. ಇದನ್ನೆಲ್ಲ ಹೇಳುವ ಕಾರಣವೇನು ? ಇಷ್ಟೆ, ಸದ್ಯಕ್ಕೆ ನಾನು ಕವಿಯಾಗಿದ್ದರೆ ಎಂದಿಗೂ ನೋಡದ ಪ್ರಾತಃಕಾಲವನ್ನೆ ಬಣ್ಣಿಸಬಹುದಾಗಿತ್ತು; ಆದರೆ ಕವಿಯೂ ಅಲ್ಲ, ಪ್ರಾತಃಕಾಲವನ್ನು ನೋಡಿಯೂ ಇಲ್ಲ. ಹೊಟ್ಟೆಯ ಆಸೆಗಾಗಿ, ಕರುಳಿನ ಕಿಚ್ಚಿಗಾಗಿ ಬೆಳಗಿನ ವರೆಗೆ ಬರೆದು ದಣಿದು ಬಿದ್ದುಕೊಂಡಾಗ, ಅರೆ-ಎಚ್ಚರಿಕೆಯಲ್ಲಿ, ಮರೆ-ಮುಚ್ಚುವಿಕೆಯಲ್ಲಿ ನನಗೆ ಹೊರಗಿನ ಪ್ರಾತಃಕಾಲದ ಕಲ್ಪನೆಯಾಗುವುದೆಂದರೆ ಕೋಳಿಯ ಕೂಗಿನಿಂದಲೆ ಅಲ್ಲವೆ? ಪ್ರಾತಃಕಾಲದಲ್ಲಿ ಕೋಳಿಯು ಕಲರವದಿಂದ ಕೂಗುವುದೆಂದು ಕವಿಗಳೆ ಹೇಳುವುದಿಲ್ಲವೆ—ಎಂದು ಯಾರಾದರೂ ಕೇಳಬಹುದು. ಅಹುದು, ಕವಿಗಳೆ ಹೇಳಿದ್ದಾರೆ, ಆದರೆ ನಾನು ಹೇಳುವುದನ್ನೂ ದಯವಿಟ್ಟು ಕೇಳಬೇಕು. ಕೋಳಿಯ ಕೂಗು ಕೇಳಿದೊಡನೆ ಪ್ರಾತಃಕಾಲದ ರಮ್ಯತೆಯು ಹೃದಯದಲ್ಲಿ ಅರಳಿ ಅರೆಮುಚ್ಚಿದ ಕಣ್ಣುಗಳನ್ನು ನಾನು ತೆರೆಯುವೆ; ಅಷ್ಟರಲ್ಲಿ ಮನೆಯಾಕೆಯ ಕೂಗು, ಪ್ರೇಮದ ಗುಡ್ಡ ಮಾರ್ನಿಂಗ ಅಲ್ಲ, 'ಗುಡ್ಡದಂತೆ ಬಿದ್ದಿರುವಿರೇನು? ಮಧ್ಯಾಹ್ನವಾಯಿತು!' ಎಂದು. ನೋಡಿದಿರಾ? ನನ್ನ ಕೋಳಿ 'ಕೂಗಿದಾಗ ಮಧ್ಯಾಹ್ನವಾಗಿದೆ! ಅದಕ್ಕೆಂದೇ ಇದು ಕವಿಗಳ' ಕೋಳಿ ಅಲ್ಲ ಎಂದು ಹೇಳಿದ್ದು. ನಿಜವಾಗಿ ನೋಡಿದರೆ ಅದು ನಮ್ಮ ನೆರೆಮನೆಯ ನರಸಪ್ಪನ ಕೋಳಿ.

ಮಧ್ಯಾಹ್ನದ ಸುಮಾರಿಗೆ ನಮ್ಮ ಮನೆಯವರ ಕಸ-ಕಡ್ಡಿಯನ್ನು ಉಡುಗಿ ಅದನ್ನು ನೆರೆಮನೆಯ ಕಾಂಪಾವುಂಡಿನಲ್ಲಿ ಒಗೆಯುವ ರೂಢಿ; ಅಲ್ಲಿ ಆಗ ಆ ಕೋಳಿಯು ಕಾಳುಕಡಿಗಳನ್ನಾರಿಸುತ್ತ ನಿಲ್ಲುವುದು; ಮೈಮೇಲೆ ಕಸಬಿದ್ದ ಕೂಡಲೆ ಕೂಗುತ್ತ ಓಡುವುದು. ಇಂತಿದು ಕೋಳಿಯ ಪ್ರಸ್ತಾವನೆ.

ನವಿಲುಗಳೆಲ್ಲ ಮಳೆಗಾಲದಲ್ಲಿಯೆ ಕುಣಿವಂತೆ, ಕೋಳಿಗಳೆಲ್ಲವೂ ಬೆಳಗಿನಲ್ಲಿಯೆ ಕೂಗಬೇಕೆಂಬ ನಿಯಮವಿಲ್ಲ; ಆದುದರಿಂದ ಕೋಳಿಗೂ ಬೆಳಗಿಗೂ ಕಾವ್ಯದಲ್ಲಿದ್ದ ಕಾರಣ-ಕಾರ್ಯಸಂಬಂಧವಿಲ್ಲ. ಕೋಳಿಗೆ ಸಂಬಂಧವಿದ್ದ ಬೆಳಗೇ ಬೇರೆ; ಅದು ಜಗತ್ತಿನ ಬೆಳಗು. ಅಲಂಕಾರವಿಲ್ಲದೆ ಹೇಳುವುದಾದರೆ ಕೋಳಿಯಿಂದ ಜಗತ್ತೇ ಬೆಳಗಿತು ಎಂದರೆ ಹುಟ್ಟಿತು ಎಂದು ಹೇಳಬಹುದು. ಈ ಮಾತಿಗೆ ಆಧಾರವಿದೆಯೆ? ಇದೆ—ಜಗತ್ತಿಗೆಯೆ ಆಧಾರವೆನಿಸಿದ ವೇದಗಳ ಆಧಾರವಿದೆ. ಜಗತ್ತು ಹುಟ್ಟಿದ್ದು ಬ್ರಹ್ಮಾಂಡದಿಂದ, ಅಜಾಂಡದಿಂದ, ಹಿರಣ್ಯಗರ್ಭನಿಂದ ಎಂದು ವೇದಗಳು ಸಾರುತ್ತಿವೆ. ಬ್ರಹ್ಮಾಂಡ ಇಲ್ಲವೆ ಅಜಾಂಡ ಇಲ್ಲವೆ ಹಿರಣ್ಯಗರ್ಭ ಎಂಬ ಶಬ್ದಗಳ ಅರ್ಥವು ಕೋಳಿಯ ತತ್ತಿ (ಮೊಟ್ಟೆ) ಎಂದು ಕನ್ನಡದಲ್ಲಾಗುವುದು. ಬ್ರಹ್ಮನ ಅನೇಕ ಹೆಸರುಗಳಲ್ಲಿ 'ಸ್ವಯಂಭೂ' ಎಂಬುದೊಂದು ಇದೆ. 'ಸ್ವಯಂಭೂ' ಎಂದರೆ 'ತಾನಾಗಿಯೆ ಹುಟ್ಟುವುದು.' ಕೋಳಿಯು ತಾನಾಗಿಯೆ ಹುಟ್ಟುವುದೆ ಎಂದು ಯಾರಾದರೂ ಕೇಳಬಹುದು. ನನ್ನ ಮಾತಿನಲ್ಲಿ ನಂಬುಗೆ ಇಲ್ಲದಿದ್ದರೆ ತಜ್ಞರನ್ನೇ ಕೇಳಿರಿ. ಹುಂಜದ ಸಹಕಾರ್ಯವನ್ನಪೇಕ್ಷಿಸದೆಯೆ ಕೋಳಿಯು ತತ್ತಿ (ಮೊಟ್ಟೆ)ಗಳನ್ನಿಡಬಲ್ಲದಂತೆ. ಎಂದ ಮೇಲೆ ತನ್ನಿಂದ ತಾನೇ ಹುಟ್ಟುವುದೆಂಬರ್ಥವಾಯಿತಲ್ಲವೆ? ಆದುದರಿಂದ ಬ್ರಹ್ಮಾಂಡ=ಅಜಾಂಡ=ಸ್ವಯಂಭುವಂಡ=ಕೋಳಿಯ ತತ್ತಿ (ಮೊಟ್ಟೆ) ಎಂದು ಸಮೀಕರಣದಿಂದ ಹೇಳಬಹುದಲ್ಲವೆ? ಅತಏವ ಜಗತ್ತು ನಿರ್ಮಿತವಾದದ್ದು ಕೋಳಿಯ ತತ್ತಿ (ಮೊಟ್ಟೆ)ಯಿಂದ ಎಂದು ಹೇಳಿದಂತಾಯಿತು.

ಜಗತ್ತನ್ನೆ ಹುಟ್ಟಿಸಲು ಕಾರಣೀಭೂತವಾದ ಕೋಳಿಯು ಪ್ರತಿದಿವಸದ ಸೂರ್ಯನನ್ನು ಸ್ವೇಚ್ಛೆಯಿಂದ ಹುಟ್ಟಿಸುವುದರಲ್ಲಿ ಆಶ್ಚರ್ಯವೇನು? ಹಿರಣ್ಯಗರ್ಭ ಎಂಬ ಶಬ್ದದಿಂದ ಇಂದಿಗೂ ನಮಗೆ ರೂಢವಾಗಿರುವ, ನಮ್ಮೊಡನೆ ವ್ಯವಹಾರದಲ್ಲಿ ಜೀವಿಸುವ ಕೋಳಿಯೆ ಜಗತ್ತಿನ ಕಾರಣಾಂತರ್ಯಾಮಿಯಾದ ಕೋಳಿ ಎಂದು ಹೇಳಬಹುದು. ಹಿರಣ್ಯಗರ್ಭ ಎಂದರೆ 'ಒಳಗೆ ಹಿರಣ್ಯ. ಎಂದರೆ ಬಂಗಾರ ಎಂದರೆ ಹಳದಿ ಬಣ್ಣವುಳ್ಳುದು' ಎಂದರ್ಥವಾಗುವುದು. ಇಂದಿನ ಕೋಳಿಯ ತತ್ತಿ(ಮೊಟ್ಟೆ)ಯ ಒಳಗೂ ಹಳದಿ ಬಣ್ಣ... ಕುಕ್ಕುಟಗಿಳಂಕರಣ ಶಾಸ್ತ್ರವು ಹೇಳುತ್ತಿದೆ. ... ನಮ್ಮ ನೆರೆಮನೆಯ ನರಸಪ್ಪನ ಕೋಳಿಯು ... ಪುರುಷನೆನಿಸುವ ಕೋಳಿ! ಆದರೂ ಹೇ... ಸುಳುವು ತೋರಿಸದೆ, ನಮ್ಮಭಾವದಿಂದ ... ಈ ಆದಿಪುರುಷನು ಬೇರೆಬೇರೆ ಜಾತಿಗಳಲ್ಲಿ ... ಆಕಾರದಿಂದ, ಅದೇ ಪ್ರತೀಕದಿಂದ ಕರ್ನಾಟ... ತ್ವದ ಕುರುಹು ಆಗಿದ್ದಾನೆ! ಆದರೆ ಮೂಲ... ನೆರೆಮನೆಯ ನರಸಪ್ಪನ ಕಾಂಪಾವುಂಡಿನಲ್ಲಿ... ತ್ತಿದೆ, ನಾವು ಅದನ್ನು ನೋಡಿಲ್ಲ. ಧಿಕ್ಕಾರ... ವನ ಅಜ್ಞಾನಮೋಹಾಂಧತಮೋರಾಶಿಗೆ!

ಕೋಳಿಯು ಸ್ವಯಂಭುವಾದ ಪರಮಾತ್ಮ... ಮೇಲೆ ಆದರ ಗುಣ-ರೂಪಗಳನ್ನು ನಾವು ಬಣ್ಣಿ... ನಿರ್ಗುಣವೆನ್ನೋಣವೆ, ಮಧ್ಯಾಹ್ನಕ್ಕೆ ನಮ್ಮ... ಸುವ ದುರ್ಗುಣ ಅದರಲ್ಲಿದೆ; ನಿರಾಕಾರ ... ಕುಕ್ಕುಟಗಿಳಂಕರಣ ಶಾಸ್ತ್ರದ ಅನುಭವವೇ ... ಪರಮಾತ್ಮನ ಲೀಲೆ ಎನ್ನೋಣ, ಕಿಡಿಗೇಡಿತನ... ಗುಣ-ಆಕಾರ-ಸ್ಥಾನಗಳು ಇಂತಹವೆ ಎಂದು ... ವಿಷಯವಾಗಿ ಹೇಳುವುದು ಸಾಧ್ಯವಾದೀತೆ! ... ಚಾಹಂ ಹೃದಿ ಸಂನಿವಿಷ್ಟಃ (ಎಲ್ಲರ ಹೊಟ್ಟೆಯ... ದ್ದೇನೆ) ಎಂದು ತನ್ನ ಭೂಲೋಕದ ... ಕೊಡುವ ಬ್ರಹ್ಮಾಂಡದ ಇಲ್ಲವೆ ಹಿರಣ್ಯಗರ್ಭನ... ಕೋಳಿಯ ತತ್ತಿ(ಮೊಟ್ಟೆ)ಯು ಕಿಡಿಗೇಡಿತ... ಷ್ಟೆಂದು ಹೇಳಬಹುದೆ? ಹಿಂದಿನ ಯುಗದಲ್ಲಿ... ಸತ್ಯವಾಗಿರಬಹುದು, ಆದರೆ ಈ ಕಲಿಯುಗದಲ್ಲಿ... ಹಿರಣ್ಯಗರ್ಭನು (ಎಂದರೆ ೦ ಯು) ನಮ್ಮೆಲ್ಲರ ಹೊ... ಇಲ್ಲವೆಂದೇ ಹೇಳಬಹುದು. ಯಾಕೆಂದರೆ ನಾ... ತ್ಮರು, ಪಾಪಬುದ್ಧಿಗಳು, ಕಲಿಯುಗದ ಕೇಡಿಗ... ರಂತೆ ಆ ಪರಮಾತ್ಮನನ್ನು ಇಂದು ನಾವು ... ದ್ದೇವೆ. ಏನೋ—ನಮ್ಮ ಸುದೈವದಿಂದ ... ಸ್ಫೂರ್ತಿಪ್ರೇರಿತರಾದ ಮಹಾರಾಷ್ಟ್ರ ಹಿಂದುಸ... ಕೆಲವು ಹಿಂದುಧರ್ಮದ ಪುನರುತ್ಥಾಪಕರು ... ಮಾತ್ಮನ ಪುನಃಪ್ರತಿಷ್ಠಾಪನೆಯನ್ನು ನಮ್ಮ... ಮಾಡಬೇಕೆಂದು ಯತ್ನಿಸುತ್ತಿದ್ದಾರೆ.

ಈ 'ಹಿರಣ್ಯಗರ್ಭ'ನ ಪುನಃಪ್ರತಿಷ್ಠಾ... ಮಾಡಿದರೆ ಬರಿಯ ಹಿಂದುಧರ್ಮದ್ದಷ್ಟೆ ಅಲ್ಲ... ಹ್ಮಣರದೂ ನಿಷ್ಠಾಪೂಜೆಯಾಗುವುದೆಂದು ...

ಇಂದು ಬ್ರಾಹ್ಮಣ್ಯವು ಉಳಿಯದಂತಾಗಿದೆ. ಬ್ರಾಹ್ಮಣರಿಗೆ ವ್ಯವಸಾಯವೆ ಇಲ್ಲದಂತಾಗಿದೆ. ಪರಮಾತ್ಮನ ಸೇವೆಯನ್ನು ಬಿಟ್ಟು ಅವರಾದರೂ ಬೇರೆ ವ್ಯವಸಾಯದ ಹಂಬಲಿಗೆ ಯಾಕೆ ಸಿಕ್ಕಬೇಕು? ಪರಮಾತ್ಮನನ್ನು ಎಂದರೆ ಹಿರಣ್ಯಗರ್ಭನನ್ನು ಮನೆಯಲ್ಲಿಟ್ಟುಕೊಂಡು ಪೂಜಿಸಲಿ, ಪೋಷಿಸಲಿ. ಯೇ ಯಥಾ ಮಾಂ ಪ್ರಪದ್ಯಂತೇ ಎಂದು ಹೇಳಿದ ಹಿರಣ್ಯಗರ್ಭಪರಮಾತ್ಮನು ತನ್ನ ಅರ್ಚಕರ ಗರ್ಭದಲ್ಲಿ (=ಹೊಟ್ಟೆಯಲ್ಲಿ) ಹಿರಣ್ಯ (=ಬಂಗಾರ)ವನ್ನು ಒದಗಿಸದೆ ಬಿಡಬಹುದೆ? ಅದ್ವೈತಿಯಾದವರು ಕೋಳಿಯೊಂದನ್ನೆ ಸಾಕಲಿ, ದ್ವೈತಿಗಳಾದವರು ಕೋಳಿ - ಹುಂಜಗಳನ್ನು ಸಾಕಲಿ, ವಿಶಿಷ್ಟಾದ್ವೈತಿಗಳು ವಿಶಿಷ್ಟವಾದ ಕೋಳಿಯನ್ನು ಸಾಕಲಿ, ನಾಸ್ತಿಕರು ಬರಿಯ ಹುಂಜವನ್ನೆ ಸಾಕಲಿ—ಅಂತೂ ಎಲ್ಲ ಪಂಗಡಗಳ ಬ್ರಾಹ್ಮಣರು ಪರಮಾತ್ಮಸ್ವರೂಪನಾದ ಕೋಳಿಯ ಆರಾಧನೆಯನ್ನು ಮಾಡಲಿ. ಇದು ಪಾಪಬುದ್ಧಿ, ಹಿಂಸಾಮಾರ್ಗ, ಹೇಯವೃತ್ತಿ ಎಂದು ನನ್ನನ್ನು ಅಲ್ಲಗಳೆಯಬೇಡಿರಿ. ಇದರಲ್ಲಿ ಹಿಂಸೆ ಏನಿದೆ? ಯಾರಿಗಿದೆ? ಪರಮಾತ್ಮನಿಗೆ, ಜಗತ್ತನ್ನು ಹುಟ್ಟಿಸಿದ ಬ್ರಹ್ಮಾಂಡಕ್ಕೆ—ಹಿರಣ್ಯಗರ್ಭನಿಗೆ ನೋವು ಇಲ್ಲ, ಸಾವೂ ಇಲ್ಲ. ಬಡವರಿಂದ ಬಲಾತ್ಕಾರವಾಗಿ ದಕ್ಷಿಣೆ ಸುಲಿವ ಹಿಂಸೆ ಇದರಲ್ಲಿಲ್ಲ, ಕೆಲಸವಿಲ್ಲದೆ ಹೊತ್ತುಗಳೆವ ಪಾಪಬುದ್ಧಿಯೂ ಇದರಲ್ಲಿಲ್ಲ, ಬರಿಯ ಜನ್ಮದಿಂದಲೆ ಶ್ರೇಷ್ಠನೆನಿಸಬೇಕೆಂಬ ಹೆಮ್ಮೆಯ ಹೇಯವೃತ್ತಿಯೂ ಇದರಲ್ಲಿಲ್ಲ. ಒಂದಕ್ಕೆ ನೂರೊಂದು ಸೀರೆಗಳನ್ನು ಕೊಟ್ಟು ದ್ರೌಪದಿಯನ್ನು ಕಾಯ್ದ ಪರಮಾತ್ಮನೆ ಒಂದಕ್ಕೆ ನೂರೊಂದು ಹಿರಣ್ಯಗರ್ಭರನ್ನು (ತತ್ತಿಗಳನ್ನು) ಹುಟ್ಟಿಸಿ ತನ್ನ ಬ್ರಾಹ್ಮಣಭಕ್ತರನ್ನು ಕಾಯುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ ಮನೆಯಲ್ಲಿದ್ದ ಕೋಳಿಯು ಮಧ್ಯಾಹ್ನಕ್ಕೆ ಕೂಗಿತೆಂದರೆ ಈಗ ಕಾಲ ಬದಲಾಯಿಸಿದೆ ಎಂಬುದರ ಜ್ಞಾನವೂ ಬ್ರಾಹ್ಮಣನಿಗಾಗಬಹುದು.

ಬ್ರಾಹ್ಮಣನಿಷ್ಠಾಪೂಜೆಯಂತೆ ಗೋನಿಷ್ಠಾಪೂಜೆಯಾದರೂ ನಮ್ಮ 'ಹಿರಣ್ಯಗರ್ಭ'ನ ಪುನಃಪ್ರತಿಷ್ಠಾಪನೆಯಿಂದಾಗುವುದು. ನಮ್ಮ ಈ ಪುಣ್ಯಭೂಮಿಯಲ್ಲಿ ಗೋವು ಮಾತೆಯಂತೆ ಪೂಜಿಸಲ್ಪಡುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ. ಹಿಂದುಸ್ತಾನದಲ್ಲಿ ಬೇಕಾದ ಕಡೆಯಲ್ಲಿ ಬೇಕಾದ ಗೋವನ್ನು ನೋಡಬಹುದು; ಅದನ್ನು ನೋಡಿದಾಕ್ಷಣ ಹಿಂದುಧರ್ಮೀಯನಿಗೆ ಮಾತೆಯ ಕಲ್ಪನೆಯೆ ಕಣ್ಣುಕಟ್ಟುವುದು. ಜ್ಞಾನವು ಪಾಪದ ಫಲವು (Knowledge is the fruit of Sin) ಎಂದು ಕ್ರೈಸ್ತಮತಾನುಯಾಯಿಗಳಂತೆ ನಾವೂ ನಂಬಿಕೊಂಡಿದ್ದೇವೆ; ಪರಮಾತ್ಮನ ಲೀಲೆಯಾದ ಸೃಷ್ಟಿಯನ್ನು ಪಾಮರರಾದ ನಾವು ತಿಳಿದುಕೊಳ್ಳುವುದೆಂದರೆ, ತಿಳಿದುಕೊಳ್ಳಲು ಯತ್ನಿಸುವುದೆಂದರೆ ಧಾರ್ಷ್ಟ್ಯದಷ್ಟೆ ಪಾಪವೂ ಎನಿಸುವುದು; ಅತ ಏವ ಜ್ಞಾನವು ಪಾಪ; ತಸ್ಮಾತ್ ದೇವತೆಯ ಸಮಾನಳಾದ ಮಾತೆಯನ್ನು ಜ್ಞಾನಪಾಪದಿಂದ ಕಲುಷಿತವಾಗದಂತೆ ಯತ್ನಿಸುವುದು ನಮ್ಮ ಕರ್ತವ್ಯ; ಆ ಕರ್ತವ್ಯವನ್ನು ಸಾವಿರಾರು ವರ್ಷಗಳಿಂದ ನಾವು ದಕ್ಷತೆಯಿಂದ ಪಾಲಿಸಿದ್ದೇವೆಂದು ಅಭಿಮಾನದಿಂದ ಹೇಳಬಹುದು. ಜ್ಞಾನದ ಬೆಳಕು ಪಾಪದ ಹೊರಸೆಳಕು; ಅಜ್ಞಾನದ ಕತ್ತಲೆ ಎಂದರೆ ಗರ್ಭಗುಡಿಯ ಕತ್ತಲೆಯಂತೆ ಪವಿತ್ರವಾದುದು. ನಮ್ಮ ಮಾತೆಯರು ಆ ಪವಿತ್ರಸ್ಥಾನದಲ್ಲಿದ್ದಾರೆ; ನಮ್ಮ ಗೋಗಳೂ ಅಂತಹ ಪವಿತ್ರಸ್ಥಾನದಲ್ಲಿದ್ದಾರೆಂದೇ ಹೇಳಬಹುದು. ಪತಿದೇವನಿಗಾಗಿ ಮೋಕ್ಷದ ಒಂದೊಂದು ಪಾವಟಿಗೆಯಂತೆ ಮಕ್ಕಳನ್ನು ಹೆತ್ತು ಹೆತ್ತು ಪುಣ್ಯಯಜ್ಞದೀಕ್ಷೆಯಿಂದ ಸವೆದು ಸಣ್ಣಾದ ನಮ್ಮ ಮಾತೆಗೂ ನಮ್ಮ ಗೋಗಳಿಗೂ ಎಷ್ಟೊಂದು ಸಾಮ್ಯವಿದೆ! ನಮ್ಮ ಗೋಗಳಾದರೂ ಅಂತಹ ಪುಣ್ಯಯಾಗದಲ್ಲಿಯೆ ಸವೆದು ತಮಗೆ ಸಲ್ಲತಕ್ಕ ಆಹಾರವನ್ನು ಬಿಟ್ಟುಕೊಟ್ಟು ಬಡವಾಗಿ ಅನ್ಯರಿಗೆ ಆಹಾರವನ್ನು ಒದಗಿಸುವಂತಹವು. ದೇವತೆಯಾದ ಗೋಮಾತೆಯನ್ನು ನಾವು—ಪಾಪಿ ಮಾನವರು—ಮುಟ್ಟಬಹುದೆ? ಅವುಗಳನ್ನು ತೊಳೆಯಬೇಕೆಂಬ ಕಲ್ಪನೆಯಂತೂ ದೂರದಲ್ಲಿರಲಿ. ತೊಳೆಯುವುದಂತೆ! ಗೋಮಾತೆಯು ಅಪವಿತ್ರಳೆ, ಕಲುಷಿತಳೆ? ಇದೆಂತಹ ಅಹಂಕಾರ ಮಾನವನಿಗೆ, ಗೋಮಾತೆಯ ಮೈದೊಳೆಯುವುದೆಂದರೆ! ಅಂತೂ ಗೋವನ್ನು ತೊಳೆಯುವುದೆಂದರೆ ಪಾಪ ಎಂದು ಸಿದ್ಧವಾದಂತಾಯಿತು. ಇನ್ನು ಮುಂದಿನ ವಿಷಯ. ಗೋವನ್ನು ತೊಳೆಯದಿದ್ದರೆ ಹಾಲಿನ ಗತಿ ಏನು? ನೀರಿನಿಂದ ತೊಳೆದರೆ ಮಾತ್ರ ಗೋವು ಹೆಚ್ಚು ಹಾಲನ್ನು ಕರೆಯುವುದೆಂಬುದು ಸಕಲಸಂಸಾರಿಗರಿಗೂ ಸರ್ವಶ್ರುತವಾದ ಮಾತು. ತೊಳೆಯಲು ಉಪಯೋಗಿಸಿದ ನೀರು ಗೋವಿನ ಮೈಗೂಡುವುದು. ಆ ಮೇಲೆ ಒಳಗಿನ ಹಾಲಿನೊಡನೆ ಸಮರಸವಾಗುವುದು, ಆ ಮೇಲೆ ನಮಗೆ ಸಾಕಷ್ಟು ಹಾಲು ದೊರೆಯುವುದು. ಹಾಲು ಮತ್ತು ನೀರು ಇವುಗಳ ಕೋ-ಆಪರೇಟಿವ್ ಸೊಸಾಯಿಟಿ (ಸಹಕಾರಿ ಸಂಘ) ಇದ್ದುದರಿಂದಲೆ ನಮ್ಮ ಪೋಷಣೆ ಇಷ್ಟರ ಮಟ್ಟಿಗಾದರೂ ನಡೆದಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಗವರ್ನಮೆಂಟ

ರಿಪೋರ್ಟಿನಲ್ಲಿಯ ಒಂದು ಮಾತು ನನ್ನ ಸ್ಮರಣೆಗೆ ಬರುತ್ತಿದೆ. ಕರ್ನಾಟಕದ ಕೇಂದ್ರವಾದ ಧಾರವಾಡದಲ್ಲಿ ನೀರಿನ ಪುರವಠೆ ಸಾಕಷ್ಟಿಲ್ಲ ಎಂಬ ಕೂಗು ಇದೆಯಂತೆ. ಆದರೆ ನೀರಿನ ಸಂಚಯದ ಬಹುಭಾಗವು ಹಾಲಿಗಾಗಿ ಹೋಗುತ್ತಿದೆ ಎಂಬುದು ಸಾಮಾನ್ಯಮನುಷ್ಯನಿಗೆ ತಿಳಿದಿಲ್ಲ; ಆ ಮಾತನ್ನು ತಿಳುಹಿಸುವುದು ನಗರಸಭೆಯ ಕರ್ತವ್ಯ ಎಂದು ತಜ್ಞರು ಆ ರಿಪೋರ್ಟಿನಲ್ಲಿ ಬರೆದಿದ್ದಾರೆ. ಧಾರವಾಡದಲ್ಲಿ ಹಾಲಿನ ಸೌಕರ್ಯ ಹೆಚ್ಚಾಗಿದ್ದುದು ಯಾಕೆ ಎಂಬುದರ ರಹಸ್ಯ ನಮಗೀಗ ತಿಳಿಯಿತು. ಆದರೆ ಗೋವನ್ನು ನೀರಿನಿಂದ ಮುಟ್ಟಿಸುವುದು ಪಾಪ ಎಂದು ನಾವು ಮೇಲೆಯೆ ಸಿದ್ಧಮಾಡಿದ್ದೇವೆ; ಆದುದರಿಂದ ಹಾಲಿನ ಪುರವಠೆ ಕಡಮೆಯಾಗಬಹುದಲ್ಲವೆ? ಬೇಕಾದಷ್ಟು ಕಡಮೆಯಾಗಲಿ; ನಮಗೆ ಹೆದರುವ ಕಾರಣವೆ ಇಲ್ಲ. ಹುಟ್ಟಿಸಿದ ದೇವನು ಹುಲ್ಲು ಮೇಯಿಸುವನೆ—ಎಂಬ ಮಾತನ್ನು ತಾವು ಕೇಳಿರುವಿರಷ್ಟೆ? ಹುಟ್ಟಿಸಿದ ಹಿರಣ್ಯಗರ್ಭನು ಹುಲ್ಲು ಮೇಯಿಸುವುದಿಲ್ಲ ಎಂದು ಅದರರ್ಥ; ಏಕೆಂದರೆ ಒಂದು 'ಹಿರಣ್ಯಗರ್ಭ' (=ತತ್ತಿ) ಎಂದರೆ ಸುಮಾರು ೨ ಸೇರು ಹಾಲು ಎಂದು ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ! ೨ ಸೇರು ಹಾಲು! ಅದೂ ಹೆಚ್ಚೆಂದರೆ ಅರ್ಧ ಆಣೆಗೆ! ಆಹಾ! ಭಾರತೀಯರ ಭಾಗ್ಯದೇವತೆಯೆ! ಇಂದು ನೀನು ಪ್ರಸನ್ನಳಾದೆ! ಆಹಾ! ಗೋಮಾತೆಯೆ! ಇನ್ನು ನಿನ್ನ ಮಾತೇಕೆ? ನಿನ್ನನ್ನು 'ಕರೆ'ಯುವುದೇಕೆ? 'ತೊರೆಯಿಸಿ' ಹಿಂಸಿಸುವುದೇಕೆ? ಹಿರಣ್ಯಗರ್ಭನು ನಿನ್ನನ್ನು ಸಂರಕ್ಷಿಸಿದ್ದಾನೆ! ಗೋಪಾಲನಾಗಿ ಪರಮಾತ್ಮನು ಲೀಲೆಗಳನ್ನಾಡಿದನೆಂಬ ಮಾತನ್ನು, ಹೇ ಕಲಿಯುಗದ ಧರ್ಮಲಂಡ ಹುಡುಗರಿರಾ ಇನ್ನಾದರೂ ನಂಬುವಿರಲ್ಲವೆ?

ಕೋಳಿಯ ಆರಾಧನೆಯಿಂದ ಅಜ್ಞಮಾನವನಿಗೆ ಧಾರ್ಮಿಕ ಪ್ರವೃತ್ತಿಯು ಹೇಗಾಗುವುದೆಂಬುದನ್ನು ಇದುವರೆಗೆ ಹೇಳಿದ್ದಾಯಿತು. ಆದರೆ ಇಷ್ಟಕ್ಕೆಯೆ ಮುಗಿಯಲಿಲ್ಲ ಕೋಳಿಯ ಮಹಾತ್ಮೆ. ಪಾರಲೌಕಿಕ ಸೌಖ್ಯಕ್ಕಾಗಿ ಧರ್ಮದಲ್ಲಿ ಪ್ರೇರಿಸುವಂತೆ ಐಹಿಕ ಸೌಖ್ಯಕ್ಕಾಗಿ ಸಮಾಜ ವ್ಯವಹಾರದಲ್ಲಿಯೂ ಕೋಳಿಯು ನಮಗೆ ಸಹಾಯಕವಾಗುವುದು. ಉದಾಹರಣೆ ಬೇಕೆ? ಆದಕ್ಕೆ ದೂರ ಹೋಗುವ ಕಾರಣವೆ ಇಲ್ಲ. ನಿಮ್ಮೂರ ಮ್ಯುನಿಸಿಪಾಲಿಟಿ (ನಗರಸಭೆ) ಯನ್ನೆ ಕೇಳಿರಿ. ಕೋಳಿಗಳಿದ್ದಿಲ್ಲವೆಂದರೆ ನಗರಸಭೆಯವರಿಗೆ ಎಷ್ಟು ತೊಂದರೆಯಾಗುತ್ತಿತ್ತೆಂಬ ಕಲ್ಪನೆ ನಮಗೆ-ನಿಮಗೆ, ಅನುಭವವಿಲ್ಲದವರಿಗೆ, ಬರುವಂತಿಲ್ಲ. ನಗರಸಭೆಗೆ ಎಷ್ಟೊಂದು ಜವಾಬ್ದಾರಿಯು, ಎಷ್ಟೊಂದು ಕೆಲ... ಡವಿದೆ! ಮೊದಲು ಚುನಾವಣೆಯಲ್ಲಿ ಯಶಸ್ವಿ... ಯತ್ನಿಸಬೇಕು; ಯಶಸ್ವಿಯಾಗಲಿಲ್ಲವೆಂದರೆ ನಗ... ರವಾಗುವುದು ಹೇಗೆ? ಯಶಸ್ವಿಯಾದ ಮೇಲೆ ... ಕಮಿಟಿಯ ಸದಸ್ಯತ್ವ--'ಕುರಿಸಿತನ'(Chairman... ಗಳಿಗಾಗಿ ಪ್ರಯತ್ನ ಪಡಬೇಕು; ಇಲ್ಲವಾದರೆ ... ವಣೆಯಲ್ಲಿ ಯಶಸ್ಸಿನ ವ್ಯವಸ್ಥೆ ಏನು? ಆ ಮೇ... ಕಂತ್ರಾಟದಾರರ ಪರಿಚಯವನ್ನು ಮಾಡಿ... ದೇವ-ದೆವ್ವಗಳಿಗೆ ಭಕ್ತಿಭೇದವಿಲ್ಲದೆ ಮಾ... ರ್ಪಿಸಬೇಕು, ಕಲೆಕ್ಟರಾದಿಗಳ ಮನೆಯ ಪಾವಟ... ವರಿಗೆ ಎತ್ತರ ಎನಿಸಬಾರದಂತೆ ಸವೆಸಬೇಕು— ... ಮುಂತಾಗಿ. ಈ ಮಹತ್ವದ ಕಾರ್ಯಭಾರದ... ಆರೋಗ್ಯ-ಸ್ವಚ್ಛತೆಯ ವಿಷಯವಾಗಿಯೂ ... ಮುಂದಾಗಬೇಕೆಂದರೆ? ಬಿಡುವು ಬೇಕಲ್ಲ! ... ಮುರಿದೀತಲ್ಲ? ಆದುದರಿಂದ ಮನೆ-ಮನೆಗಳ ... ಅಂಗಣವನ್ನು ಹಸನ ಮಾಡುವುದಕ್ಕೂ, ... ಗಳನ್ನು ನೆಲಸಮ ಮಾಡಲಿಕ್ಕೂ ಕೋಳಿಗಳು ... ಮುಂದೆ ಬಂದಿವೆ. ನಿಜವಾಗಿ ನೋಡಿದರೆ ಈ ಸ... ಸತ್ಕಾರ್ಯಕ್ಕಾಗಿ ಈಗಾಗಲೆ ಎಷ್ಟೊ ರಾವಸಾ... ಬಹಾದ್ದೂರ ಕೇಕೇಗಳಿರಬೇಕಾಗಿದ್ದಿತು; ಸರ್ ... ಬೇಕಾಗಿದ್ದಿತು; ಕಲಿಯುಗಮಾನ್ಯ ಕುಕ್ಕುಟ... ಕಾಗಿದ್ದಿತು. ಹೋಗಲಿ. ನಿಃಸ್ವಾರ್ಥಬುದ್ಧಿಯಿಂದ... ಯನ್ನು ಮಾಡುವ ಕೋಳೆಪ್ಪನಿಗೆ ಈ ಬಿರುದುಗಳ... ಬೇಕೇ ಇಲ್ಲ. ಇಂದಿನ ರಾಷ್ಟ್ರೀಯವೃತ್ತಿಯ... ಗಳು ಒಂದು ಕೆಲಸವನ್ನು ಮಾಡಿದರೆ ಸಾಕು... ನೇ-ಶ-ನ್....ಯುರೋಪದಲ್ಲಿ ರಾಷ್ಟ್ರಗಳ ಪರಸ್ಪ... ಗಳನ್ನು ತಡೆಯಲು ಲೀಗ ಆಫ್ ನೇಶನ್ ಇದ್ದಂತೆ ... ಜಾತಿಗಳ ಪರಸ್ಪರ ವೈಮನಸ್ಯವನ್ನು ತೆಗೆಯ... ನೇಶನ್ ಇದೆ ಎಂದು ಪಂಡಿತರ ಅಭಿಪ್ರಾಯ... ಗಳಂತಹ ನಿಃಸ್ವಾರ್ಥಸೇವಕರು ನಾಮಿನೇಶನ್... ವಿಲ್ಲದೆ ನಗರಸಭೆಗೆ ಹೋಗುವುದು ಶಕ್ಯವಿಲ್ಲ. ... ಪ್ರಜಾಸತ್ತಾತ್ಮಕ ಕಾಲ ಎಂದರೆ ಸತ್ತ ಪ್ರಜೆಗ... ವ್ಹೋಟ(ಮತವ)ನ್ನು ಕೊಡುವ ಕಾಲ; ಸತ್ತ... ಭೂತಗಳಾಗುವರೇನೊ? ಭೂತಗಳಿಗೆ ದೇವನನ್ನು ... ದ್ವೇಷವಂತೆ! ಹೀಗಿರುವಾಗ ಇಂತಹರು ಪರಮಾ... ಹಿರಣ್ಯಗರ್ಭನಾದ ಕೋಳಿಗೆ ಮತವನ್ನು ಕೊ... ಶಕ್ಯವಾದೀತೆ? ಕೋಳಿಗಳು ನಗರಸಭೆಯಲ್ಲಿ...

ಮೂಲೆಗಳ ಸ್ವಚ್ಛತೆ, ತಗ್ಗು-ದಿನ್ನೆಗಳ ಸಮನಾಗುವಿಕೆ ಇವಿಷ್ಟೆ ಅಲ್ಲದೆ ಇನ್ನೂ ಎಷ್ಟೋ ಹಿತಕೃತ್ಯಗಳಾಗುವುವು. ಮೊದಲನೆಯದೆಂದರೆ, ನಿದ್ರೆಹೋಗುತ್ತಿದ್ದ ಮಿಕ್ಕ ಸಭಾಸದರೆಲ್ಲ ಕೋಳಿಯ ಕೂಗನ್ನು ಕೇಳಿ ಎಚ್ಚರಾಗಬಹುದು. ನಗರಸಭೆಗಳ ವ್ಯವಹಾರದಲ್ಲಿ ಬೆಳೆದ ಕಸವು ಹಸನವಾಗಬಹುದು, ಇದು ಎರಡನೆಯದು. ಕೊನೆಯದೆಂದರೆ— ಅಥವಾ ಅಶುಭವನ್ನು ನಾವೇಕೆ ನುಡಿಯಬೇಕು ? ಅಹಿಂಸಾ ಪರಮೋ ಧರ್ಮಃ. ನಮ್ಮ ಕಿವಿಯಲ್ಲಿ ತುಳಸೀದಳಗಳಿವೆ. ನಮ್ಮ ಹೃದಯದಲ್ಲಿ ಜಪಮಂತ್ರವಿದೆ:—

ಭಜ ಕೋಳಿಯನೊಡೆಯನ ತತ್ತಿಗಳಾ । ಒಡೆಯುತ ಸೃಷ್ಟಿಯ ಹುಟ್ಟಿಪನಂ
ಭಜ ಕೋಳಿಯನಂ ಭಜ ಕೋಳಿಯನಂ ಕೋಳಿಯ ಭಜನೆಗೆ ಏಕಮತಾ.

ಬದಲಿ*

★

ಅನುವಾದಕರು :

ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರ್

ಎಂ. ಎ., ಬಿ. ಎಲ್.

★

ಸಮಾಜವು ಬಾಲಕನಾದ ಲೆಟೋರ್ಕನಿಗೆ ದ್ರೋಹ ಬಗೆದು, ಅವನನ್ನು ತಿಪ್ಪೆಯ ಕಸಕ್ಕಿಂತ ಕಡೆ... ಯಾಗಿ ಕಂಡಿತು— ಲೆಟೋರ್ಕನು ದೊಡ್ಡವನಾ... ಬೆಳೆದು ಸಮಾಜದ್ರೋಹಿಯಾದನು; ಅಪರಾ... ಯಾಗಿ, ದರೋಡೆಕೋರನಾಗಿ, ಸಮಾಜಕಂಟ... ನಾದನು. ಹೀಗಿದ್ದೂ, ಅವನಲ್ಲಿಯ ಮನುಷ್ಯತ್ವ... ಕಮರಿ ಹೋಗಲಿಲ್ಲ; ಅನುಕೂಲಸಮಯ ಬಂದ... ಡನೆ ಅವನ ಸದ್ವಾಸನೆಯು ಚಿಗಿತು, ಪೂತು, ಹ... ಬಿಟ್ಟಿತು—ತ್ಯಾಗದ ಜ್ಯೋತಿಯಾಗಿ ತೊಳಗಿ ... .ಗಿತು. ಲೆಟೋರ್ಕನೊಬ್ಬ ಹುತಾತ್ಮನಾದನು....

ಆ ಹುಡುಗನಿಗೆ ನೆಲೆ ಯಾವುದೂ ಇಲ್ಲವೆಂದು ದಸ್ತಗಿರಿ ಮಾಡಿದಾಗ ಇನ್ನೂ ಹತ್ತು ವರ್ಷ ಸಹ ಆಗಿರಲಿಲ್ಲ. ಹುಡುಗನು ನ್ಯಾಯಾಧೀಶನಿಗೆ ತನ್ನ ಕಥೆಯನ್ನು ಹೀಗೆಂದು ತಿಳಿಸಿದನು:

"ನನ್ನ ಹೆಸರು ಜೀನ್ ಫ್ರಾಂಚಾ ಲೆಟೋರ್ಕ್ ಎಂದು — ಬೀದಿಯಲ್ಲಿ ಒಂದು ತಂತಿಗೆ ಎರಡು ದೀಪಗಳನ್ನು ಕಟ್ಟಿ ನುಡಿಸಿ ಹಾಡುತ್ತಿರುವ ಭಿಕ್ಷುಕನ ಹಿಮ್ಮೇಳಕ್ಕೆ ಹಾಡುತ್ತ ನಾನು ಅವನೊಡನೆ ಆರು ತಿಂಗಳಿಂದ ಇದ್ದೆ. ಅವನು ಸದಾ ಕುಡಿಯುತ್ತ ನನ್ನನ್ನು ಹೊಡೆಯುತ್ತಿದ್ದನು. ಇದರಿಂದಲೇ ಪೋಲೀಸಿನವರು ನನ್ನನ್ನು ಬೀದಿಯಲ್ಲಿ ಹಿಡಿದುಕೊಂಡದ್ದು. ಇದಕ್ಕೆ ಹಿಂದೆ ವರಾಹಕೂರ್ಚಗಳನ್ನು ಮಾಡುತ್ತಿರುವ ಮತ್ತೊಬ್ಬನೊಡನೆ ಇದ್ದೆ. ನನ್ನ ತಾಯಿಯು ಅಗಸಕೆಲಸ ಮಾಡುತ್ತಿದ್ದಳು. ಅವಳ ಹೆಸರು ಅಡೇಲಿ ಎಂದು. ಒಂದಾನೊಂದು ಕಾಲದಲ್ಲಿ ಅವಳು ಒಬ್ಬ ಮನುಷ್ಯನೊಡನೆ ಒಂದು ಮನೆಯ ನೆಲದ ಅಂತಸ್ತಿನಲ್ಲಿ ಬಾಡಿಗೆಗೆ ಇದ್ದಳು. ನನ್ನನ್ನು ಕಂಡರೆ ಅವಳಿಗೆ ಪ್ರೀತಿ ಇತ್ತು. ಹೋಟಲುಗಳ ನೌಕರರು ಹೊಸ ಬಟ್ಟೆಗಳನ್ನು ಉಪಯೋಗಿಸುವುದು ಅಧಿಕ. ಅವರೆಲ್ಲರೂ ತಮ್ಮ ಬಟ್ಟೆಗಳನ್ನು ನಮ್ಮ ತಾಯಿಗೆ ಹಾಕುತ್ತಿದ್ದುದರಿಂದ ಅವಳಿಗೆ ವರಮಾನ ಚೆನ್ನಾಗಿತ್ತು. ಭಾನುವಾರಗಳಲ್ಲಿ ನನ್ನನ್ನು ಜಾಗ್ರತೆ ಮಲಗಿಸಿಬಿಟ್ಟು ಅವಳು ನೃತ್ಯಕೂಟಗಳಿಗೆ ಹೋಗಿಬರುತ್ತಿದ್ದಳು. ಇತರ ದಿವಸಗಳಲ್ಲಿ ... ಶಾಲೆಗೆ ಕಳುಹಿಸುತ್ತಿದ್ದುದರಿಂದ ಓದುಬರಹವನ್ನು ... ಕೊಂಡೆನು. ನಮ್ಮ ಬೀದಿಯಲ್ಲಿ ಗಸ್ತಿಗೆ ... ಪೋಲೀಸಿನವನು ನಮ್ಮ ಕಿಟಕಿ ಬಳಿ ನಿಂತು ನನ್ನ... ಯನ್ನು ಪ್ರತಿದಿನವೂ ಮಾತಾಡಿಸುತ್ತಿದ್ದನು. ... ಕಾಲದ ತರುವಾಯ ಅವನು ಅವಳನ್ನು ಮದುವೆ... ಅಲ್ಲಿಂದ ಮುಂದಕ್ಕೆ ನನ್ನ ಭಾಗಕ್ಕೆ ಸಕಲವೂ ... ವಾಗಿ ಪರಿಣಮಿಸಿತು. ಅವನಿಗೆ ನನ್ನನ್ನು ಕಂಡ... ತ್ತಿರಲಿಲ್ಲ. ಸ್ವಲ್ಪದರಲ್ಲೇ ಅವನು ನನ್ನ ತಾ... ಸಹ ನನ್ನ ಮೇಲೆ ತಿರುಗಿ ಬೀಳುವಂತೆ ಮಾಡಿದ... ಯಲ್ಲಿ ಎಲ್ಲರೂ ಕಂಡಾಗಲೆಲ್ಲಾ ಹೊಡೆಯುತ್ತಿ... ಆದಷ್ಟು ಕಾಲವನ್ನು ನಾನು ಬೀದಿಯಲ್ಲಿ ಕ... ಕಳೆಯಲು ಪ್ರಾರಂಭಿಸಿದೆನು. ಅಲ್ಲಿ ಅನೇಕ ... ಯವರು ನನಗೆ ಪರಿಚಯವಾದರು. ನನ್ನ ... ಗಂಡನಿಗೆ ಕೆಲಸ ಹೋಯಿತು; ನನ್ನ ತಾಯಿಯ ... ಗವೂ ನಷ್ಟವಾಯಿತು. ಗಂಡನಿಗೆ ತಂದು ... ಕ್ಕಾಗಿ ಬಟ್ಟೆ ಒಗೆಯಲು ಅವಳು ಮನೆಮನೆಗೆ ... ತೊಡಗಿದಳು. ಇದರಿಂದ ಅವಳಿಗೆ ಕೆಮ್ಮು ... ಹಾಕಿ ಸ್ವಲ್ಪದರಲ್ಲೇ ಅವಳು ಮೃತಳಾದಳು. ... ಮುಂದಕ್ಕೆ ನಾನು ಮೇಲೆ ಹೇಳಿದ ಭಿಕ್ಷುಕರ ... ವಾಸಿಸುತ್ತಾ ಬಂದೆ. ನನ್ನನ್ನು ಸೆರೆಮನೆಗೆ ... ತ್ತೀರೋ ?"

ಅವನನ್ನು ತಮ್ಮವನೆಂದು ಯಾರೂ ಬಂದು ... ಕೊಂಡು ಹೋಗಲಿಲ್ಲ. ಆದ್ದರಿಂದ ಶಿಕ್ಷಾಶಾಲೆ ... School) ಗೆ ಕಳುಹಿಸಿದರು. ಹುಡುಗನು ...

---

* ಇದು ಫ್ರಾನ್ಸು ದೇಶದ ಫ್ರಾಂಚಾ ಕೋಪೇ (Francois Coppee 1842—1908) ಎಂಬ ಕವಿಯು ಬರೆದ ಕಥೆಯ ಅನುವಾದವು. ಇವನ ಕಾವ್ಯಗಳು ಮುಖ್ಯವಾಗಿ ದೀನ ಜನತೆಯ ಸ್ಥಿತಿಗತಿಗಳನ್ನು ಅನುಲಕ್ಷಿಸಿವೆ.

ಸೋಮಾರಿ; ಬುದ್ಧಿ ಕಡಮೆ; ಕೈಚಳಕ ಏನೂ ಇರಲಿಲ್ಲ. ಆ ಶಾಲೆಯಲ್ಲಿ ಇವನಿಗೆ ಕುರ್ಚಿ ಸರಿಪಡಿಸುವ ಉದ್ಯೋಗ ಹೊರತಾಗಿ ಮತ್ತಾವುದನ್ನೂ ಕಲಿಸಲು ಆಗಲಿಲ್ಲ. ಅಲ್ಲಿ ಅವನು ವಿಧೇಯನಾಗಿಯೇ ಇದ್ದನು. ಅಲ್ಲಿನ ಬಾಲಕರಿಂದ ವಿಶೇಷವಾಗಿ ದುರ್ನಡತೆ ಯಾವುದನ್ನೂ ಕಲಿತುಕೊಳ್ಳಲಿಲ್ಲ. ಇವನ ಹದಿನೇಳನೆಯ ವಯಸ್ಸಿನಲ್ಲಿ ಇವನನ್ನು ಅಲ್ಲಿಂದ ಬೀದಿಗೆ ಅಟ್ಟಿದರು.

ಅಲ್ಲಿ ಹುಡುಗನು ತನ್ನ ಸೆರೆಮನೆಯ ಸಂಗಾತಿಗಳ ಸಂಗಕ್ಕೆ ಸಿಕ್ಕಿದನು. ಈ ಸಂಗಾತಿಗಳೆಲ್ಲರೂ ತೀರಾ ದುಷ್ಟರಾಗಿದ್ದರು. ಬೀದಿಬೆಕ್ಕುಗಳಲ್ಲಿ ಓಡಾಡುತ್ತಿರುವ ಇಲಿಗಳನ್ನು ಹಿಡಿಯುವಂತೆ ಬೀದಿನಾಯಿಗಳಿಗೆ ಕಲಿಸುವುದು, ನೃತ್ಯೋತ್ಸವಾದಿಗಳು ನಡೆಯುವ ಸ್ಥಳಗಳಲ್ಲಿ ಜನರ ಪಾದರಕ್ಷೆಗಳಿಗೆ ಬಣ್ಣದ ಮೆರಗಿಡುವುದು, ಮಧ್ಯಾಹ್ನ ಹೊಳೆಯಲ್ಲಿ ಮೀನು ಹಿಡಿಯುವುದು, ಬೀದಿಗಳಲ್ಲಿ ತಮ್ಮ ಶಕ್ತಿಯನ್ನು ಪ್ರದರ್ಶನ ಮಾಡುತ್ತಿರುವ ಜಟ್ಟಿಗಳೊಡನೆ ಎದುರುಗೈಯಾಗಿ ನಿಂತು ಕಾಳೆಗ ಮಾಡಿ ಸೋಲುವುದು— ಇತ್ಯಾದಿಯಾದ ಅವರ ಉದ್ಯೋಗಗಳನ್ನೆಲ್ಲಾ ಈ ಹುಡುಗನು ಕೆಲ ತಿಂಗಳು ಕಾಲ ತಾನೂ ಅನುಸರಿಸಿದನು. ಕಡೆಗೆ ಯಾವುದೋ ಅಂಗಡಿಯ ಕಿಟಕಿಯಲ್ಲಿಟ್ಟಿದ್ದ ಹಳೆಯ ಎಕ್ಕಡವನ್ನು ಕದ್ದನೆಂಬ ತಪ್ಪಿಗಾಗಿ ಇವನಿಗೆ ಒಂದು ವರ್ಷ ಶಿಕ್ಷೆ ವಿಧಿಸಿ ....ದಲ್ಲಿರುವ ಪಕ್ಕಾ ಸೆರೆಮನೆಗೆ ಕಳುಹಿಸಿದರು.

ಈ ಸೆರೆಮನೆಯಲ್ಲಿ ರಾಜಕೀಯ ಅಪರಾಧಿಗಳನ್ನು ಇಟ್ಟಿದ್ದರು. ನಮ್ಮ ಹುಡುಗನನ್ನು ಅವರ ಆಳುಕೆಲಸಕ್ಕೆ ಹಾಕಿದರು. ಈ ರಾಜಕೀಯ ಅಪರಾಧಿಗಳು ವಿದ್ಯಾವಂತರು. ಬಲು ಬಿಗುಮಾನದಿಂದ ವರ್ತಿಸುತ್ತಿದ್ದರು. ಇವರಿಗೆ ಮುಖಂಡನೊಬ್ಬನು ಇದ್ದನು. ಉಳಿದವರು ಪದೇ ಪದೇ ಅವನ ಬಳಿ ಸೇರಿ ಮಾತಿನಲ್ಲಿ ಲೋಕವನ್ನೆಲ್ಲಾ ಅಳೆದು ಸುರಿಯುತ್ತಿದ್ದರು. ಒಂದು ದಿವಸ ಒಂದು ಕಾಗದವನ್ನು ಅವನು ಬರೆದು ಸಂಭ್ರಮದಿಂದ ಹೇಳಿದನು— "ಆದೂ ಮುಗಿಯಿತು. ಇಗೊಳ್ಳಿ, ನಮ್ಮ ಆಧಿಪತ್ಯದ ಮಂತ್ರಿಮಂಡಳದ ಹೆಸರುಗಳು. ರೇಮಾಂಡ್—ವಿದ್ಯಾಮಂತ್ರಿ, ಮಾರ್ಷಿಯಲ್—ಸ್ವದೇಶಮಂತ್ರಿ, ನಾನು—ವಿದೇಶಮಂತ್ರಿ."

ಶಿಕ್ಷೆಯ ಅವಧಿ ಮುಗಿದ ಮೇಲೆ ನಮ್ಮ ಹುಡುಗನು ಮರಳಿ ಬೀದಿಬಸವನಾದನು. ಈ ಸಲ ಮಾತ್ರ ಪೋಲೀಸರು ಅವನ ಕೆಲಸಕಾರ್ಯಗಳನ್ನು ಹೊಂಚುಕಾಯುತ್ತಿದ್ದರು. ಅವರ ಇಲಾಖೆಯಲ್ಲಿ ಅವನ ವಿಳಾಸವನ್ನು ಕ್ರಮವಾಗಿ, "ಹೆಸರು—ಲೆಟೂರ್ಕ್", "ಬಂದಿ—ಲೆಟೂರ್ಕ್", "ಅಪರಾಧಿ—ಲೆಟೂರ್ಕ್" ಎಂದು ಬರೆದಿಟ್ಟುಕೊಂಡರು.

ಸೆರೆಯಿಂದ ಹೊರಬಿದ್ದ ಎರಡು ವರ್ಷಗಳು ಅವನು ಬೀದಿಯಲ್ಲಿ ಅಲೆದಾಡುತ್ತಿದ್ದನು. ಸಿಕ್ಕಿದ ಕಡೆ ಊಟ; ಸುಣ್ಣದ ಗೂಡುಗಳಲ್ಲಿ ನಿದ್ರೆ; ಬೀದಿಯಲ್ಲಿ ಪೋಲಿಗಳೊಡನೆ ಆಟ; ಬಡ ಉದ್ಯೋಗಗಳ ಜೂಜಾಟದಿಂದ ಜೀವನ. ಕುಡಿದು ಬೀದಿಯಲ್ಲಿ ಬಿದ್ದಿರುವವರನ್ನು ದರೋಡೆ ಮಾಡುತ್ತಿದ್ದ ಕೆಲ ಹುಡುಗರ ಜತೆಗೆ ಇವನೂ ಸಿಕ್ಕು ಬಿದ್ದನು. ಇವನ ಮೇಲೆ ರುಜುವಾತು ಒದಗದೆ ಇದ್ದರೂ ಇವನ ಹಿಂದಲ ಚರಿತ್ರೆಯ ಆಧಾರದ ಮೇಲೆ ಮೂರುವರ್ಷ ಕಾಲ ಸೆರೆಗೆ ಕಳುಹಿಸಿದರು. ಅಲ್ಲಿ ಇವನು ಕಳ್ಳರ ಸಂಕೇತ ಭಾಷೆಯನ್ನೂ ರಹಸ್ಯಗಳನ್ನೂ ಕಲಿತು ನಿಸ್ಸೀಮನಾಗಿ ಪುನಃ ಪಾರಿಸ ನಗರಕ್ಕೆ ಬಂದನು. ಮತ್ತೆ ಆರು ತಿಂಗಳೊಳಗಾಗಿ ಮನೆ ಒಡೆದು ಕಳ್ಳತನ ಮಾಡುತ್ತಿದ್ದ ಒಂದು ದರೋಡೆ ಗುಂಪಿನವರೊಡನೆ ಇವನೂ ಸಿಕ್ಕು ಬಿದ್ದು ಐದು ವರ್ಷದ ಕಠಿಣ ಶಿಕ್ಷೆಗೆ ಗುರಿಯಾಗಿ ಟೂಲೋನ್ ಬಂದರದಲ್ಲಿ ಕೆಲಸ ಮಾಡಲು ಕಳುಹಿಸಲ್ಪಟ್ಟನು. ಸೆರೆಗೆ ಹೋಗುವಾಗ ಯಾವುದೋ ತಿಪ್ಪೆಯಿಂದ ಎತ್ತಿ ತಾನು ಸಾಕುತ್ತಿದ್ದ ಒಂದು ಮುದಿನಾಯನ್ನು ಅಗಲಲಾರದೆ ಬಹಳ ಅತ್ತನು.

ಮೈಮುರಿಯುವ ಕೆಲಸ, ಕಬ್ಬಿಣದ ಕೊರಡೆಯಿಂದ ಸರ್ವದಾ ಪೆಟ್ಟುಗಳು; ಟ್ರಾಫಾಲ್ಗಾರ್ ಯುದ್ಧದ ಕಾಲದಲ್ಲಿ (ಕ್ರಿ. ಶ. ೧೮೦೫ರಲ್ಲಿ) ಬೆಳೆದ ಬೇಳೆಯ ಸಾರಿನೂಟ, ಮರದ ಪಾವುಗೆಗಳನ್ನು ಬರಿಗಾಲಲ್ಲಿ ಮೆಟ್ಟಿ ನಡೆದಾಡುವುದು, ಅಧಮಾಧಮ ಅಪರಾಧಿಗಳೊಡನೆ ಗೊಟ್ಟರೆಯಲ್ಲಿ ಮಲಗುವುದು—ಈ ರೀತಿ ಇವನು ಆ ಬಂದರದಲ್ಲಿ ಐದು ಉರಿಬೇಸಿಗೆಗಳನ್ನೂ ಐದು ಕೊರೆತದ ಚಳಿಗಾಲಗಳನ್ನೂ ಕಳೆದು ದಂಗುಬಡಿದು ಹೊರಗೆ ಬಂದನು. ಬಂದ ಮೇಲೆ ಪೋಲೀಸಿನವರ ಕಾವಲಿನಲ್ಲಿ ಕೆಲಸಮಾಡಲು ಹಾಕಿದರು. ಅಲ್ಲಿ ಸ್ವಲ್ಪ ದುಡ್ಡನ್ನು ಮಿಗಿಸಿಕೊಂಡು ಪೋಲೀಸಿನವರಿಗೆ ವಂಚಿಸಿ ಮರಳಿ ರಾಜಧಾನಿಗೆ ಬಂದು ಸೇರಿಕೊಂಡನು. ಈ ವೇಳೆಗೆ ಇವನ ಹಳೆಯ ಸಂಗಾತಿಗಳೆಲ್ಲರೂ ಮಾಯವಾಗಿದ್ದರು. ಇವನ ರೂಪವು ಸಹ ವ್ಯತ್ಯಾಸವಾಗಿತ್ತು. ತಾನೊಬ್ಬ ನಾವಿಕನೆಂದು ಹೇಳಿಕೊಂಡು ಒಬ್ಬ ಮುದುಕಿಯ ಮನೆಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಮಾಡಿಕೊಂಡು ಇರಲಾರಂಭಿಸಿದನು.

ಒಂದು ದಿವಸ ಇವನು ಹಾಗೆಯೇ ಧೈರ್ಯಮಾಡಿ ಬೀದಿಗಳಲ್ಲಿ ಹೊರಟಾಗ ಇವನು ಮಗುವಾಗಿದ್ದಾಗ ಕಲಿತ ಶಾಲೆಯ ಬಳಿ ಬಂದು ಗುರುತಿಸಿ ಅಲ್ಲಿ ಹಾಗೆಯೇ ನಿಂತು ಕೊಂಡನು. ಅಲ್ಲಿ ಒಂದು ಹಲಗೆಯ ಮೇಲೆ "ತೊಂಭತ್ತೊಂಬತ್ತು ಧರ್ಮಿಷ್ಠರಿಗಿಂತಲೂ ಪಶ್ಚಾತ್ತಾಪ ಪಡತಕ್ಕ ಒಬ್ಬ ಪಾಪಿಯಿಂದ ಸ್ವರ್ಗವಾಸಿಗಳು ಅಧಿಕ ಸಂತೋಷವನ್ನು ಹೊಂದುವರು" ಎಂದು ಬರೆದಿತ್ತು. ನಮ್ಮ ಮನುಷ್ಯನು ಈ ವಾಕ್ಯವನ್ನು ಚಿಂತಿಸುತ್ತಾ ಶಾಲೆಯಲ್ಲಿದ್ದ ಬಾಲಕರ ನಿಷ್ಕಪಟ ಮುಖಗಳನ್ನು ನೋಡಲಾರಂಭಿಸಿದನು. ಪಶ್ಚಾತ್ತಾಪಕ್ಕೆ ತನಗೆ ಇನ್ನೂ ಕಾಲವು ಮೀರಿಲ್ಲ; ಇತರರಂತೆ ತಾನೂ ಪ್ರಾಮಾಣಿಕವಾಗಿ ಸಂಪಾದನೆ ಮಾಡಿಕೊಂಡದ್ದೇ ಆದರೆ ಸಾಕು; ರಾಜಧಾನಿಯಲ್ಲಿ ಕೆಲಸಕ್ಕೆ ಕಡಮೆ ಇಲ್ಲ; ತನ್ನನ್ನು ಇನ್ನು ಯಾರೂ ಗುರುತಿಸಲಾರರು; ತಾನು ನ್ಯಾಯಾರ್ಜನೆಯಿಂದ ಮುಂದಕ್ಕೆ ಜೀವಿಸುತ್ತಾ ಹಿಂದಿನದನ್ನು ಮರೆಯಿಸಬೇಕು—ಎಂದು ಅವನು ಸಂಕಲ್ಪ ಮಾಡಿದನು.

ಕೂಡಲೇ ಇವನು ಈ ಸಂಕಲ್ಪವನ್ನು ಆಚರಣೆಗೆ ತಂದನು. ಬೆಳಗ್ಗಿನಿಂದ ಸಂಜೆಯ ವರೆಗೂ ಇವನು ದುಡಿದು ಕೆಲಸಮಾಡಿ ಚೆನ್ನಾಗಿ ಸಂಪಾದನೆ ಮಾಡಲಾರಂಭಿಸಿದನು. ದಣಿದು ಉಣ್ಣುತ್ತಿದ್ದ ಇವನಿಗೆ ಆಹಾರವೂ ರುಚಿಸುತ್ತಿತ್ತು, ನಿದ್ದೆಯೂ ಚೆನ್ನಾಗಿ ಬರುತ್ತಿತ್ತು. ಕ್ರಮವಾಗಿ ಇವನು ತನ್ನ "ಪ್ರಾಚೀನಜನ್ಮ" ಬಂಧನದಿಂದ ಮುಕ್ತನಾಗುತ್ತ ಬಂದನು. ಇದಕ್ಕೆ ಪ್ರತಿಫಲವಾಗಿ ಇವನಿಗೆ ಮಿತ್ರಸೌಖ್ಯವೂ ಬಂದೊದಗಿತು.

ಸವೀನಿಯನ್ ಎಂಬ ಕೆಂದುಟಿಯ ಚೆಂದದ ಒಬ್ಬ ಹಳ್ಳಿಗಾರ ಹುಡುಗನು ರಾಜಧಾನಿಗೆ ಬಂದು ನೆಲೆಸಿದ್ದನು. ಅವನು ಹೆಂಡದಂಗಡಿ ಎಂದರೆ ತುಂಬಾ ಹೆದರುತ್ತಿದ್ದನು; ತಪ್ಪದೆ ದೇವಾಲಯಗಳಿಗೆ ಹೋಗುತ್ತಿದ್ದನು. ಇವನಲ್ಲಿ ಲೆಟೂರ್ಕನಿಗೆ ಗಾಢಸ್ನೇಹವು ಹುಟ್ಟಿತು. ಅವನನ್ನು ತನ್ನ ಜತೆಯಲ್ಲೀ ವಾಸಿಸಲು ಕರೆತಂದು ಇಟ್ಟುಕೊಂಡನು. ಉಭಯರ ವರಮಾನವು ಸಾಕಾದಷ್ಟಾಗಿರಲಿಲ್ಲವಾಗಿ, ಇವರು ತಮ್ಮ ಕೊಠಡಿಗೆ ಮತ್ತೊಬ್ಬ ಬಾಡಿಗೆದಾರನನ್ನು ಜತೆಗೆ ಸೇರಿಸಿಕೊಂಡರು. ಲೆಟೂರ್ಕನು ಸದಾ ತನ್ನ ಮಿತ್ರನ ಜತೆಯಲ್ಲೇ ಇರುತ್ತಿದ್ದನು. ಪಟ್ಟಣದಲ್ಲೇ ಹುಟ್ಟಿ ಬೆಳೆದಿದ್ದ ಇವನಿಗೆ ಆ ಮಿತ್ರನಿಂದ ಹಳ್ಳಿಗಳ ವಿಚಾರಗಳು—ಗಿಡ ಮರ ಹೂವುಗಳ ಹೆಸರುಗಳು, ಕೃಷಿಯ ಸಂಗತಿಗಳು, ಹಳ್ಳಿಯ ಜೀವನಕ್ರಮಗಳು ಇತ್ಯಾದಿಗಳು ತಿಳಿದವು.

ಈ ಮಿತ್ರನು ತನ್ನ ನಡೆನುಡಿಗಳಲ್ಲಿ ತನ್ನ ವೃತ್ತಾಂತವನ್ನು ಕಂಡುಹಿಡಿದಾಗಲಿ ರಾಜಧಾನಿ[illegible]ಗಳಿಗೆ ಸಿಲುಕಿಯಾಗಲಿ ಎಲ್ಲಿ ತನ್ನನ್ನು ಪರಿತ್ಯ[illegible]ವನೋ ಎಂಬ ಭೀತಿಯು ಇವನಿಗೆ ಸರ್ವದಾ [illegible] ಈ ಭೀತಿಗೆ ಕಾರಣವಿಲ್ಲದಿರಲಿಲ್ಲ. ಈಚೆಗೆ [illegible] ವಸಂತಕಾಲದಲ್ಲಿ ಒಬ್ಬನೇ ಸಂಜೆಯಲ್ಲಿ ಹೊರಟು[illegible] ಕಡೆಗೆ ಇವನು ವೇಶ್ಯೆಯರ ಮೋಹಪಾಶಕ್ಕೆ [illegible] ಹಣವನ್ನೆಲ್ಲಾ ಪೋಲುಮಾಡುತ್ತ ಬಂದನು. [illegible] ಅವನ ಚರ್ಯೆಯು ಬದಲಾಯಿಸಿತು. ಲೆಟೂ[illegible] ಪದೇಪದೇ ಸಾಲ ಕೇಳಿ ತೆಗೆದುಕೊಂಡು ಹಿಂದಕ್ಕೆ [illegible]ವುದನ್ನು ನಿಲ್ಲಿಸಿಬಿಟ್ಟನು. ಇಷ್ಟಾದರೂ ಲೆ[illegible] ಅವನ ಅಗಲಿಕೆಯನ್ನು ಸಹಿಸಲಾರದೆ ಅವನು [illegible]ರುವುದನ್ನು ತಪ್ಪಿಸಲಸಮರ್ಥನಾಗಿ ದುಃಖಿಸುತ್ತಿ[illegible]

ಒಂದು ದಿವಸ ಇವನು ತನ್ನ ಕೊಠಡಿಗೆ ಬರು[illegible] ಅದರೊಳಗಡೆ ಇವನ ಜತೆಗಾರ ಮೂರನೆಯ [illegible]ದಾರನು ಮನೆಯ ಯಜಮಾನನೊಡನೆ [illegible]ದ್ದುದು ಕೇಳಿಸಿ ಇವನು ಬಾಗಿಲಲ್ಲೇ ನಿಂತುಕೊ[illegible] ಈ ಬಾಡಿಗೆದಾರನ ಪೆಟ್ಟಿಗೆಯನ್ನು ಒಡೆದು ಅದ[illegible] ಹಣವನ್ನು ಯಾರೋ ಅಪಹರಿಸಿದ್ದರಂತೆ. [illegible]ಕ್ಕಾಗಿ ಕೂಗಾಡುತ್ತ ಪೋಲೀಸರಿಗೆ ತಿಳಿಸಬೇಕೆಂ[illegible]ಸುತ್ತಿದ್ದನು. ಮನೆಯ ಯಜಮಾನನು ಅವನ[illegible]ದಾಯಿಸುತ್ತಿದ್ದನು. ಉಭಯತರೂ ಅಲ್ಲಿಲ್ಲಿ ಹು[illegible]ತ್ತಿರುವಂತೆ ಕೇಳಿಬರುತ್ತಿತ್ತು. ಅಷ್ಟರಲ್ಲೇ [illegible] ಬಾಡಿಗೆದಾರನು ಸವೀನಿಯನ್ನನ [illegible] ತೆರೆದಿದ್ದ [illegible] ಬಾಗಿಲನ್ನು ಎತ್ತಿ ನೋಡಿದಾಗ ಅಲ್ಲಿ ತನ್ನ ಹ[illegible] ಕಂಡುಹಿಡಿದನು. ಕೂಡಲೇ ಅವನನ್ನು ಹಿಡಿ[illegible] ಕಳುಹಿಸಬೇಕೆಂದು ಅವನೂ ಮನೆಯ ಯಜಮಾ[illegible] ಮಾತಾಡುತ್ತಿದ್ದರು. ಲೆಟೂರ್ಕನಿಗೆ ತನ್ನ [illegible] ಇತ್ತೀಚೆಗೆ ದುಂದಾಳಿಯೂ ಸಾಲಗಾರನೂ ಆಗಿ[illegible] ಕಳ್ಳನೂ ಆಗಿದ್ದುದನ್ನು ತಿಳಿದು ಬಲು ಸಂಕಟವಾ[illegible]

ಇಷ್ಟರಲ್ಲಿಯೇ ಕೊಠಡಿಗೆ ಸವೀನಿಯನ್ನನು [illegible]ದ್ದುದನ್ನು ಇವನು ಕಂಡನು. ಲೆಟೂರ್ಕನು [illegible] ಕೊಠಡಿಯೊಳಕ್ಕೆ ಹೋಗಿ, ತನ್ನ ಜತೆಗಾರನ [illegible] ತಾನು ಕದ್ದು ತನ್ನ ಮಿತ್ರನ ಪೆಟ್ಟಿಗೆಯಲ್ಲಿ [illegible]

ನೆಂದೂ ತಾನು ಹುಟ್ಟುಕಳ್ಳನೆಂದೂ ಹೇಳಿಕೊಂಡನು. ಅಷ್ಟರಲ್ಲೇ ಸವೀನಿಯನ್ನನು ಒಳಕ್ಕೆ ಬಂದು ತನ್ನ ಕಳ್ಳತನವು ಬಯಲಾಗಿರುವುದನ್ನು ಕಂಡು ನಡುಗುತ್ತಾ ನಿಂತುಕೊಂಡನು. ಲೆಟೂರ್ಕನು ಹತ್ತಿರಬಂದು "ಸುಮ್ಮನಿರು', ಎಂದು ಕಿವಿಯ ಬಳಿ ಉಸುರಿ, ಉಳಿದವರಿಗೆ ತಾನು ತಪ್ಪಿಸಿಕೊಳ್ಳುವುದಿಲ್ಲವೆಂದೂ ಅವರು ಪೋಲೀಸಿನವರನ್ನು ಕರೆದುತರಬಹುದೆಂದೂ ತಾನು ತನ್ನ ಮಿತ್ರನೊಡನೆ ಸ್ವಲ್ಪ ಏಕಾಂತವಾಗಿ ಮಾತಾಡಬೇಕಾಗಿರುವುದರಿಂದ ಅವರು ಹೊರಗೆ ಹೋಗಿ ಬಾಗಿಲನ್ನು ಬಂಧಿಸಿಕೊಳ್ಳಬೇಕೆಂದೂ ಹೇಳಿ ಹೊರಡಿಸಿದನು. ಸವೀನಿಯನ್ನನು ವಿಷಾದದಿಂದ ಮಾತಾಡಲಾರದೆ ನಿಂತಿದ್ದನು. ಲೆಟೂರ್ಕನು ಹೇಳಿದನು:

"ನಿನ್ನ ವಿಷಯ ನನಗೆ ತಿಳಿಯುತ್ತದೆ: ನೀನು ಯಾವಳೋ ಹುಡುಗಿಗೆ ಏನೋ ತೆಗೆದುಕೊಡುವ ಸಲುವಾಗಿ ಈ ಹಣವನ್ನು ಕದ್ದಿರುತ್ತೀ. ಇದಕ್ಕೆ ಆರು ತಿಂಗಳ ಸೆರೆಯಾಗಬೇಕು. ಆದರೆ ಒಂದು ಸಲ ಸೆರೆಗೆ ಹೋದವರು ಪುನಃ ಪುನಃ ಅಲ್ಲಿಗೆ ಹೋಗುತ್ತಲೇ ಇರಬೇಕು. ಇದು ನನಗೆ ಚೆನ್ನಾಗಿಯೂ ಗೊತ್ತುಂಟು. ನಾನಾಗಲೇ ನಾಲ್ಕು ಸಲಕ್ಕೆ ಹದಿನಾರು ವರ್ಷಕಾಲ ಸೆರೆಯಲ್ಲಿದ್ದು ಬಂದಿರುತ್ತೇನೆ. ನೀನು ಏನೂ ಭಯಪಡಬೇಡ. ನಾನು ನಿನ್ನನ್ನು ಪಾರುಮಾಡುತ್ತೇನೆ."

"ನಿನಗೆ ಎಂಥಾ ಭಯಂಕರವಾದ ವಿಪತ್ತು!" ಎಂದು ಸವೀನಿಯನ್ನನು ಹೇಳಿದನು. ಅವನ ಹೇಡಿಯ ಎದೆಯಲ್ಲಿ ಆಗಲೇ ಆಶೆಯು ತಲೆಯೆತ್ತಿಕೊಂಡಿದ್ದಿತು.

"ಅಣ್ಣನು ಸೇನೆಯಲ್ಲಿದ್ದಾಗ ತಮ್ಮನು ಯುದ್ಧಕ್ಕೆ ಹೋಗುವುದಿಲ್ಲ. ನಾನು ನಿನ್ನ ಬದಲಿಯಾಗುತ್ತೇನೆ. ನಿನಗೆ ನನ್ನಲ್ಲಿ ಸ್ವಲ್ಪ ಪ್ರೀತಿಯಿದ್ದರೆ ನನಗೆ ಸಾಕು. ಎಂದಾದರೂ ಒಂದು ದಿನ ಪೋಲೀಸಿನವರು ನನ್ನನ್ನು ಗುರುತಿಸಿಕೊಂಡೊಯ್ಯುತ್ತಿದ್ದರು. ನನಗೆ ಅಭ್ಯಾಸವಾಗಿರುವುದರಿಂದ ಸೆರೆಯು ಕಷ್ಟವಾಗಿ ಕಾಣಿಸುವುದಿಲ್ಲ. ಮಿತ್ರಾ, ನಾನು ನಿನ್ನನ್ನು ಪ್ರೀತಿಸುತ್ತಿದ್ದೆನು. ಆದರಿಂದ ನನ್ನ ಜೀವಕ್ಕೆ ಸ್ವಲ್ಪ ಸುಖವು ದೊರಕಿತ್ತು. ನಿನಗೆ ನಾನು ಇನ್ನೂ ಹೆಚ್ಚಾಗಿ ಸಹಾಯಕನಾಗಲಿಲ್ಲವೆಂದೂ ನನ್ನ ನಿಜವನ್ನು ಹೇಳಲಿಲ್ಲವೆಂದೂ ಖೇದವಿದ್ದಿತು. ಈಗ ನನ್ನ ಪೂರ್ವವನ್ನು ನಿನಗೆ ತಿಳಿಸಿದ್ದೇನೆ. ಅಗೋ, ಪೋಲೀಸಿನವರು ಬರುತ್ತಿರುವರು. ಅವರ ಮುಂದೆ ನಾವು ಮಿತ್ರರೆಂದು ತೋರ್ಪಡಿಸಿಕೊಳ್ಳಬಾರದು." ಎಂದು ಹೇಳಿ ಬಾಗಿಲುತೆರೆಯುತ್ತಿದ್ದ ಹಾಗೆಯೇ ತನ್ನ ಮಿತ್ರನನ್ನು ಒಂದು ಸಲ ಆಲಿಂಗಿಸಿ ದೂರವಾಗಿ ತಳ್ಳಿ ನಿಂತುಕೊಂಡನು. ಪೋಲೀಸಿನವರು ಅವನಿಗೆ ಕೈಕೋಳ ಹಾಕಿ ಹಿಡಿದುಕೊಂಡು ಹೋದರು.

ಈಗ ಅವನು ಜೀವಾವಧಿ ಕಾರಾಗೃಹಶಿಕ್ಷೆಗೆ ಗುರಿಯಾಗಿ ಅನುಭವಿಸುತ್ತಿರುವನು.

ರನ್ನನ ಮುದುವೊಳಲು

ಲೇಖಕರು: ಶ್ರೀ. ದೇಸಾಯಿ ಪಾಂಡುರಂಗರಾಯರು, ಎಂ. ಎ.
ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಧಾರವಾಡ.

ಕರ್ನಾಟಕದಲ್ಲಿ ನಡೆದು ಹೋದ ಜೈನಯುಗ ಮತ್ತು ವೀರಶೈವಯುಗ, ಈ ಎರಡೂ ಯುಗಗಳ ವಿಚಾರದಿಂದ ಫಲವತ್ತಾದ ನಾಡಿನಲ್ಲಿ ಕೈಕೊಂಡ ಐತಿಹಾಸಿಕ ಪ್ರವಾಸದ ಸುರಮ್ಯ ವರ್ಣನೆಯಿದು. ಐತಿಹಾಸಿಕ ಪ್ರವಾಸವೆಂದು ನೀರಸ ವರ್ಣನೆಯಾಗಿಲ್ಲ. ಕನ್ನಡದ ವರಪುತ್ರರಾದ ಉಭಯ 'ಶ್ರೀ'ಗಳವರ (ಶ್ರೀ॥ ಗಳಾದ ಬಿ. ಎಂ. ಶ್ರೀ. ಮತ್ತು ತೀ. ನಂ. ಶ್ರೀ. ಯವರ) ಸರಸ ಸಹವಾಸದಿಂದ ಈ 'ಸಂಚಾರವು ಒಂದು ರಸ .... ಗಬ್ಬವಾಗಿಯೆ ಪರಿಣಮಿಸಿತು. ಅದನ್ನೋದಿಯೆ ಸವಿಯಬೇಕು. ....

ಒಂದಿಕೆಯಿಲ್ಲದ ಬಾಳೊಂದು ಬಾಳೆ? ಇಂತಾಗಿದೆ ಕನ್ನಡದ ಬದುಕು ಇದೀಗ! ನಾಡೆಂದು ಕೂಗುವವರು ನುಡಿಯನ್ನು ಮರೆತಿಹರು. ನುಡಿಯೆಂದು ಉಸಿರುವವರು ನಡೆಯನ್ನು ಆಲಿಸರು. ಹಿಂದಿನದನ್ನು ಹೊಗಳುತ್ತ ಇಂದಿನದನ್ನು ತೆಗಳುವರು ಕೆಲರು. ಇಂದಿನದನ್ನು ಕೊಂಡಾಡುತ್ತ ಹಿಂದಿನದನ್ನು ಹೀಗಳೆಯುವರು ಕೆಲರು. ಹಿಂದು ಇಂದುಗಳ ತಿರುಳನ್ನು ಅರಿಯದೇ ಮುಂದುಗಾಣರು ಕೆಲರು. ಹಿಂದೆಂಬುದೊಂದು ಗೋರಿಯೆ? ಇಂದೆಂಬುದೊಂದು ಅರಮನೆಯೆ? ಮುಂದೆಂಬುದೊಂದು ಗೋಪುರವೆ? ನಿನ್ನೆ-ಇಂದು-ನಾಳೆಗಳು ಕಲ್ಲು ಮಣ್ಣು ಕಟ್ಟಿಗೆಯಂತೆ ಸ್ವತಂತ್ರ ವಸ್ತುಗಳೆ? ಇವುಗಳಲ್ಲಿ ಅನ್ಯೋನ್ಯ ಸಂಬಂಧವಿಲ್ಲವೆ? ಇವುಗಳಲ್ಲಿ ಒಂದೇ ಜೀವನವಾಹಿನಿಯು ಅವಿಚ್ಛಿನ್ನವಾಗಿ ಹರಿಯುತ್ತಿಲ್ಲವೆ? ಇವುಗಳಲ್ಲಿ ಒಂದನ್ನು ಮರೆತು ಮಿಕ್ಕುದರಲ್ಲಿ ಜೀವನ ಸಾಮರಸ್ಯದ ಗುರಿಯನ್ನು ಸಾಧಿಸಬಹುದೆ? ನಿನ್ನೆ ಎಂಬುದು ಅಲ್ಪಜೀವಿಗಳಾದ ನಮ್ಮ ಪಾಲಿಗೆ ಹಳದಾದರೆ ನಾಡಿನ ಬೃಹತ್ ಜೀವನಕ್ಕೂ ಹಳದೆ? ನಿನ್ನೆ ಬಾಳಿದ ನಾಡೆಂದು ತೋರಿಸಿದ ಮಾತ್ರಕ್ಕೆ ಇಂದು ಬಾಳಿದಂತಾಯಿತೆ? ನಾಡತಾಯಿಯ ಗುಡಿಯನ್ನು ಕಟ್ಟಬಯಸುವವರು ನಾಡಿನ ಹೊಲಬು-ಹವಣುಗಳನ್ನು ಬಿಟ್ಟೋಡಬಲ್ಲರೆ?

ದೂರಿನ ಮಣ್ಣು ಹೊನ್ನಾಗಿ ಬಳಿಯ ಹೊನ್ನು ಮಣ್ಣಾಗುವುದು ವಿವೇಕವೆ? ಹೆರವರನ್ನು ಬೆಂಬತ್ತಿ ನಮ್ಮವರನ್ನು ಕಡೆಗಣಿಸುವುದು ಬುದ್ಧಿವಂತಿಕೆಯೆ? ಕನ್ನಡ ಮಾತೆಯ ಸುಪುತ್ರರೆನಿಸಿಕೊಳ್ಳುವವರು ಏಳು ಸಮುದ್ರಗಳನ್ನು ದಾಟಿ ಹೋಗಿ ಆಂಗ್ಲ ಸಾಹಿತಿಗಳ ಸಮಾಧಿಗಳನ್ನು ಸಂದರ್ಶಿಸಲು ಹಾತೊರೆಯುವರು. ಕೀಟ್ಸ್, ಶೆಲ್ಲೆ ಮುಂತಾದ ಕವಿಗಳ ಮನೆಮಾಳಿಗೆಗಳನ್ನು ಕಂಡು ಕೃತಾರ್ಥರಾಗುವವ... ಜನ್ಮವು ಕಳೆದರೂ ನೆರೆಯಲ್ಲಿಯ ನಮ್ಮ ಪ... ಜನ್ಮಭೂಮಿಯನ್ನು ಅವಲೋಕಿಸುವ ಕುತೂಹಲ... ರನ್ನು ಸೋಂಕುವುದಿಲ್ಲ! ಇಷ್ಟಕ್ಕೇ ಸಾಲದ... ಮಾಡುವವರು ಮರುಳರಂತೆ. ಹೀಗೆ ಮಾಡುವ... ಭಾವನಾವಿಲಾಸವಂತೆ! ನಮ್ಮ ಸಂಸ್ಕೃತಿಯ ಕಿ... ವಾಗಿ ಪರಸಂಸ್ಕೃತಿಯ ಬೆಡಗಿಗೆ ಮಾರುಹೋ... ಗಳಿಗೆ ಆ ಕೀಟ್ಸ್-ಶೆಲ್ಲೆಗಳು ಬಳಿಯವರೂ ಬೇ... ಆಗುವರು! ಆದರೆ ಸಾವಿರ ವರುಷಗಳ ಆಚೆ... ಯಿಸಿ ನಮ್ಮ ಸಾಹಿತ್ಯವನ್ನು ಮೇಲಕ್ಕೆತ್ತಿ ನಮ್ಮ... ಮನ್ನಣೆಯನ್ನು ತಂದುಕೊಟ್ಟು ಇಂದಿಗೂ ... ಬೆಳಗುತ್ತಿರುವ ಪಂಪ-ರನ್ನರು ಮಾತ್ರ ... ದುರ್ಲಕ್ಷಣೀಯರೂ ಕಾಣುವರಲ್ಲವೆ? ಇದೂ ಒಂ... ಕನ್ನಡ ಜೀವನದ ದುರಂತವಿನ್ಯಾಸ!

ಕನ್ನಡ ಸಾಹಿತ್ಯ ಸಂಸ್ಥಾಪಕರಲ್ಲಿ ಅಗ್ರಗಣ್ಯ... ರನ್ನನ ನಾಡಾದ ಜಮಖಂಡಿಯಲ್ಲಿ ಇಪ್ಪತ್ತೆ... ಸಂಮೇಲನವು ನೆರೆದುದು ಹುಟ್ಟಿದ ಮನೆಯನ್ನು... ಬಂದಂತಾಯಿತು. ಸಂಮೇಲನದ ಕಾರ್ಯ... ಮುಗಿದ ಬಳಿಕ, ಜನವರಿ ಒಂದು ಗ... ಮುಧೋಳನ್ನು ಸಂದರ್ಶಿಸುವ ಸುಯೋಗವು ... ವಿಜಾಪುರದ ಸನ್ಮಾನ್ಯ ನ್ಯಾಯವಾದಿಗಳಾದ ಶ್ರೀ... ಆಳಬಾಳ ವೆಂಕಟರಾಯರು ಪ್ರವಾಸ ಸೌಕರ್ಯ... ಕಲ್ಪಿಸಿಕೊಟ್ಟರು. ಕನ್ನಡ ಮಹರ್ಷಿಗಳಾದ ... ಬಿ. ಎಂ. ಶ್ರೀಕಂಠಯ್ಯನವರೇ ಈ ಜ್ಞಾನ... ಪುರೋಹಿತರು. ಶ್ರೀಯುತರುಗಳಾದ ತೀ. ನಂ...

ಯ್ಯನವರೂ ಆಳಬಾಳರವರೂ ಜೊತೆಯಾಗಿದ್ದರು.

ಸಾವಿರ ವರುಷಗಳ ಹಿಂದೆಯೆ,

> ಆರಾತೀಯ ಕವೀಶ್ವರ
> ರಾರು. ಮುನ್ನಾರ್ತರಿಲ್ಲ ವಾಗ್ದೇವಿಯ ಭಂ।
> ಡಾರದ ಮುದ್ರೆಯ ನೊಡೆದಂ
> ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ ॥

ಎಂದು ಸಾರೋದ್ಧಾರವಾಗಿ ಸಾರಿದ ಕರ್ನಾಟಕ ಕವಿ ಚಕ್ರವರ್ತಿಯ ಜನ್ಮಭೂಮಿಯ ದರ್ಶನ ಲಾಲಸೆಯಿಂದ ಬಗೆನವಿಲು ಕುಣಿದಾಡುತ್ತಿರಲು ಯಾನವು ಸಾಗಿತು. ಮುದುವೊಳಲ ಆ ಮಹಾಸಾರಸ್ವತನು ಮನಶ್ಚಕ್ಷುವಿನ ಮುಂದೆ ಸುಳಿದಾಡತೊಡಗಿದನು. ಇಕ್ಕೆಲದಲ್ಲಿ ಸರಸ್ವತಿಯ ವರಪುತ್ರರಾದ ಉಭಯ 'ಶ್ರೀ'ಗಳು. 'ಶ್ರೀ' ಸಾರಸ್ವತರ ಇಂತಹ ಸಮಾಗಮ ಸೌಭಾಗ್ಯವು ಸ್ಪೃಹಣೀಯವಾದುದು.

ಜಮಖಂಡಿಯನ್ನು ಬಳಸಿದ ಗುಡ್ಡವನ್ನು ಇಳಿಯುತ್ತಿರುವಾಗ ತಂಗಾಳಿಯು ಸೋಂಕುತ್ತ ಸುತ್ತಲಿನ ಭೂಪ್ರದೇಶದ ರಾಮಣೀಯಕವು ಹೃದಯವನ್ನು ತಣಿಸಿತು. ಅಲ್ಪಾವಧಿಯಲ್ಲಿ ರನ್ನನ ಈ ಊರನ್ನು ಹೊಕ್ಕೆವು. ಮುಧೋಳು ಸುಮಾರು ಆರು ಸಾವಿರ ಜನಸಂಖ್ಯೆಯ ಸಾಧಾರಣ ದೊಡ್ಡದಾದ ಊರು. ನೆಲದಲ್ಲಿ ಅರ್ಧ ಹೂಗಿದ ಒಂದು ಗುಡಿ, ತಲೆಯ ಮೇಲೆ ಸುಮಾರು ೧೫ನೆಯ ಶತಮಾನದ ಶಾಸನವುಳ್ಳ ಇನ್ನೊಂದು ಈಶ್ವರ (ಕಲಮೇಶ್ವರ) ಗುಡಿ, ರಾಜೇಸಾಹೇಬರ ಅರಮನೆ ಇಷ್ಟನ್ನು ಸುಮಾರಾಗಿ ನೋಡಿ ಆಯಿತು. ಒಂದು ಜೈನಬಸದಿಯಿದೆ ಎಂಬ ಸುದ್ದಿಯನ್ನು ಕೇಳಿ ಅತ್ತ ಹೊರಳಿದೆವು. ಬಸದಿಯ ಒಂದೂ ಕುರುಹು ಇಲ್ಲದ, ಒಂದು ಮನೆಯ ಬೀಳ ಬಯಲಲ್ಲಿ ಒಂದು ಜಿನಮೂರ್ತಿ! ಪದ್ಮಾಸನಸ್ಥ, ಧ್ಯಾನಮುದ್ರೆ; ಕಾಲಚಕ್ರಕ್ಕೆ ಸಿಲುಕಿ ರುಂಡವು ಅಲುಗಾಡುವಂತಾದುದು. "ಎಷ್ಟು ಪರಿಯಿಂದ ಎಂತೆಂತಹ ರಾಜರು ಮಹಾರಾಜರಿಂದ ತಲೆಬಾಗಿಸಿಕೊಂಡಿತೊ! ಈಗ!" ಎಂಬ ನುಡಿದ 'ಶ್ರೀ'ಯವರ ಮರುಕದ ದನಿಗೆ ಬಿಸುಸುಯ್ಯುತ್ತ ಹೊಳೆಯತ್ತ (ಘಟಪ್ರಭೆ) ಸಾಗಿದೆವು. ಕೆಳಕೆಳಗೆ ಮೆಲ್ಲಮೆಲ್ಲನೆ ಹರಿಯುವ ಪಾತ್ರ. ಈ ವಾಗ್ಗಲು 'ಘಾಟ,' ಭದ್ರವಾದ ಮೆಟ್ಟಿಲುಗಳಿಂದ ಕಟ್ಟಿದ 'ಘಾಟ'. ಇಬ್ಬದಿಯ ದಂಡೆಯ ಮೇಲೆ ತೊನೆದಾಡುವ ಹಸರು ಪೈರಿನ ನೋಟ.

"ಇದೇ ಆ ರನ್ನನ 'ಅರಿಕೆಯ ಗಟ್ಟಗೆ.'"

"ಅಲ್ಲ ನೋಡಿ. ಆ ಆಚೆಯ ದಂಡೆಯ ಮೇಲೆ ಎಂತಹ ಚೆಲುವಿನ ಸುಗ್ಗಿ. ಹಸುರಾದ ಗಲಗದ ಬೆಳೆಯ ಮೇಲೆ ನವಿಲುಗರಿಯಂತೆ ಅಲೆಯುತ್ತಿರುವ ತೆನೆಹೂಗಳ ಬಿಳ್ಪು."

ಊರನ್ನು ಸುತ್ತಿಕೊಂಡು ಹೊರಟುಹೋಗುವಾಗ ರನ್ನನು ಹುಟ್ಟಿದ ಮನೆಯು ಯಾವುದಾಗಿರಬಹುದು ಎಂಬ ವಿಚಾರಲಹರಿಯು ತಲೆದೋರಿತು. "ಮುಂದೆ ಚಕ್ರವರ್ತಿಗಳ ಆಸ್ಥಾನದಲ್ಲಿ ಗೌರವ ಪಡೆದನಾದರೂ ಆತನ ಹುಟ್ಟೂರಾದ ಮುಧೋಳು ಆಗ ಚಿಕ್ಕದೆ ಆಗಿರಬೇಕು. ಯಾವನೋ ಒಬ್ಬ ನಾಯಕನೊ ಪಾಳೆಯಗಾರನೊ ಇಲ್ಲಿ ಆಳುತ್ತಿರಬಹುದು. ಸಾಮಾನ್ಯರಂತೆ ಯಾವುದೊ ಒಂದು ಮನೆಯಲ್ಲಿ ಹುಟ್ಟಿದನು ಮಹಾರಾಯ! ಯಾವ ಮನೆಯಲ್ಲಿಯೊ?" ಎಂಬ 'ಶ್ರೀ'ಯವರ ಕರುಳಿನ ಉದ್ಗಾರವು ಮತ್ತೆ ಎದೆಯನ್ನು ಮಿಡಿಯಿತು. ಮುಧೋಳ ಯಾತ್ರೆ ಮುಗಿಯಿತು. ಮಹಾಕವಿಯ ಸ್ಮೃತಿಪೀಠಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದುದಾಯಿತು.

ಮುಧೋಳಿಂದ ಬೆಳಗಲಿ. ಘಟಪ್ರಭೆಯ ದಂಡೆಯ ಬಳಿ ಬಳಿಯಿಂದ ಮಾರ್ಗವು ಹೋಗಿದೆ. ಹಾದಿಗಿದ್ದ ಒಂದು ದೇಗುಲವನ್ನು ಕಂಡೆವು. ಬಹು ಜೀರ್ಣವಾಗಿದೆ. ಇದರ ರೀತಿ ಪ್ರಾಚೀನವಾದುದು. ಕಲೆಯು ನೋಡತಕ್ಕಂತಹದು. ಇದುವೆ ರನ್ನನ ಐನೂರರ ಬೆಳಗಲಿ ದೇಶದ ಮುಖ್ಯಸ್ಥಳ. ಇದೀಗ ಹಳ್ಳಿಯಾಗಿದೆ. ಜನಸಂಖ್ಯೆ ಸುಮಾರು ನಾಲ್ಕು ಸಾವಿರ.

ಬೆಳಗಲಿಯಿಂದ ಮಹಾಲಿಂಗಪುರ. ಊರು ದೊಡ್ಡದು. 'ಶ್ರೀ'ಯವರ ಸಂದರ್ಶನಕ್ಕಾಗಿ ಜನರು ಗುಂಪುಗುಂಪಾಗಿ ಕಾದಿದ್ದರು. ಒಂದು ಮಳಿಗೆಗೆ ಕರೆದೊಯ್ದರು. ಇಲ್ಲಿ ಸಭೆಗೆ ಅಪ್ಪಣೆಯಿಲ್ಲವೆಂದು ಸವಿಷಾದ ತಿಳಿಸಿದರು. "ಅದನ್ನು ನಾವಾದರೂ ಬಯಸಿಲ್ಲ. ಇದು ನಮಗೆ ಇಷ್ಟವಾದುದೇ. ಏಕೆಂದರೆ ನಮಗೆ ಸಮಯವಿಲ್ಲ ನೋಡಿ" ಎಂದು ಹೇಳಿಯಾಯಿತು. ಹೋಗುವ ಅವಸರವಿದ್ದರೂ ಅಗ್ರಹದ ಉಪಚಾರ ಸತ್ಕಾರಗಳು ನಡೆದುವು. 'ಶ್ರೀ'ಯವರು ಅಲ್ಲಿಯ ಕನ್ನಡದ ಸುಖದುಃಖಗಳನ್ನು ಕೇಳಿಕೊಂಡರು. ಹೊರಡುವಾಗ ಅಮೋಘವಾದ ಸಂದೇಶವನ್ನು ಬೀರಿದರು:

"ಕನ್ನಡ ತಾಯಿಯನ್ನು ಮರೆಯಬೇಡಿರಿ; ಆಕೆಯೆ ನಮ್ಮೆಲ್ಲರನ್ನು ದೊಡ್ಡವರನ್ನಾಗಿ ಮಾಡುವಳು."

ಮಹಾಲಿಂಗಪುರದಲ್ಲಿ ಚಿಕ್ಕೋಡಿಯ ಬಸ್ಸನ್ನು ಹಿಡಿದು ಶ್ರೀ. ಬಿ. ಎಂ. ಶ್ರೀ ಹಾಗೂ ಶ್ರೀ. ತೀ. ನಂ. ಶ್ರೀ ಇವರು ಕೊಲ್ಲಾಪುರದ ಕಡೆಗೆ ಹೊರಡಲು ಪ್ರಯಾಣ ಬೆಳೆಸಿದರು. ನಾನು ಶ್ರೀ. ಆಳಬಾಳರೊಂದಿಗೆ ಮರಳಿದೆನು.

ಮಹಾಲಿಂಗಪುರದಲ್ಲಿ ನೋಡುವುದು ಉಳಿದಿತ್ತು. ಅಷ್ಟು ಸಮಯವಿರಲಿಲ್ಲ. ಸಂಜೆಗತ್ತಲೆ ಕವಿಯತೊಡಗಿತ್ತು. ಅಷ್ಟರಲ್ಲಿ ಶ್ರೀ. ಆಳಬಾಳರ ಸಹಾಯದಿಂದ ಕೆಲವು ವಿಷಯಗಳನ್ನು ನಿರೀಕ್ಷಿಸಲಾಯಿತು. ಮಹಾಲಿಂಗಪುರವು ದೊಡ್ಡದಾದ ಊರು. ಸುಮಾರಾಗಿ ಮುಧೋಳದಷ್ಟು. ಇಲ್ಲಿ ಭದ್ರವಾದ ಮಹಾಲಿಂಗೇಶ್ವರ ಮಠವಿದೆ. ಈ ಮಠದಲ್ಲಿ ಸುಮಾರು ೧೨೫ ತಾಳದೋಲೆಯ ಮತ್ತು ಕೈಬರೆಹದ ಹಳೆ ಗ್ರಂಥಗಳಿವೆ ಎಂದು ಮಠಪತಿಗಳು ಹೇಳಿದರು. ಇಲ್ಲಿಯ ಶಿವಾಲಯದಲ್ಲಿ ಒಂದು ಸ್ತ್ರೀಮೂರ್ತಿ ಇದೆ. ಒಬ್ಬ ಶಿವಶರಣೆಯದಾಗಿರಬೇಕು. ತಲೆಯ ಮೇಲೆ ಶಿವ-ನಂದಿ, ಎಡಗೈಯಲ್ಲಿ ಇಷ್ಟಲಿಂಗ, ಬಲಗೈಯಲ್ಲಿ ಮೊಗ್ಗೆ. ಪ್ರಭಾವಳಿಯೆಲ್ಲವು ಶಿವಲಿಂಗಗಳಿಂದ ತುಂಬ ಖಚಿತವಾಗಿದೆ. ೧೭೨ ಇವೆ ಎಂದು ಹೇಳಿದರು. ಈಕೆ 'ಸಿದ್ದವ್ವೆ'ಯಂತೆ.

ಮಹಾಲಿಂಗಪುರದಿಂದ ತಿರುಗಿ ಮುಧೋಳಿಗೆ ಬಂದೆನು. ಅಲ್ಲಿ ಶ್ರೀ. ಬಾಬೂರಾವ ಬಕ್ಷಿ ಇವರು ದಯವಿಟ್ಟು ತಮ್ಮಲ್ಲಿದ್ದ ತಾಮ್ರಶಾಸನವನ್ನು ನನಗೆ ನೋಡಲಿಕ್ಕೆ ಕೊಟ್ಟರು. ಇನ್ನೂ ಕೆಲವು ವಿಷಯಗಳನ್ನು ಅರುಹಿದರು. ಬೆಳಗಲಿಯಲ್ಲಿ ನಾವು ನೋಡತಕ್ಕುದನ್ನು ನೋಡಲಿಲ್ಲವಾಗಿ ತಿಳಿಯಿತು. ಅಲ್ಲಿ ಒಂದು ಸೂರ್ಯದೇವಾಲಯ, ಬಾವಿಯಲ್ಲಿ ಒಂದು ಶಿಲಾಶಾಸನ, ಬಹು ಸುಂದರವಾದ ಜಯವಿಜಯ ಮೂರ್ತಿಗಳು, ಶಿವತಾಂಡವ, ಅಷ್ಟದಿಕ್ಪಾಲಕರು ಮುಂತಾದುವು ದರ್ಶನೀಯವಾಗಿವೆಯಂತೆ. ಮುಧೋಳ ಗವಿಮಠದಲ್ಲಿ ಒಂದು ಶಿಲಾಶಾಸನವಿದೆಯೆಂದು ತಿಳಿಯಿತು. ಇಲ್ಲಿಗೆ ಈ ಸಂಶೋಧನಯಾತ್ರೆಯು ಮುಗಿತಾಯವಾಯಿತು.

ಜಮುಖಂಡಿಯಿಂದ ಮುಧೋಳು ದಕ್ಷಿಣಕ್ಕೆ ೧೨ ಮೈಲು. ಮುಧೋಳಿಂದ ಬೆಳಗಲಿ ಪಶ್ಚಿಮಕ್ಕೆ ೧೦ ಮೈಲು. ಬೆಳಗಲಿಯಿಂದ ಮಹಾಲಿಂಗಪುರ ಪಶ್ಚಿಮಕ್ಕೆ ೨ ಮೈಲು. ಹೀಗೆ ಸುಮಾರು ೨೪ ಮೈಲಿನ ಪ್ರವಾಸವು ಸುಮಾರು ಮೂರು ಗಂಟೆಯಲ್ಲಿ ಸಾಯಂಕಾಲ (೩||—೬||) ನಡೆದು ಮುಗಿಯಿತು.

ಜಮುಖಂಡಿಯಲ್ಲಿಯೂ ಸಂಶೋಧನಕ್ಕೆ ಎಡೆಯಿದೆ. ಇಲ್ಲಿಯ ಮುನ್ಸಿಫರಾದ ಶ್ರೀ. ಆಪಟೆಯವರು ಈ ನಾಡಿನ ಕೆಲವು ಶಾಸನಗಳನ್ನು ತರಿಸಿ ತಮ್ಮ ಮನೆಯಲ್ಲಿ ಇರಿಸಿದ್ದಾರೆ. ಜಮುಖಂಡಿಯಿಂದ ಪಶ್ಚಿಮಕ್ಕೆ ೧ ಮೈಲಿನಲ್ಲಿ ಕಡಪಟ್ಟಿ ಎಂಬ ನೆರೆ ಹಳ್ಳಿಯಿದೆ. ಇಲ್ಲಿಯ ಹರವಾದ ಬಸವಣ್ಣದೇವರ ಗುಡಿಯು ನೋಡತಕ್ಕುದು. ಈ ಗುಡಿಯಲ್ಲಿ ಶಿವ-ನಂದಿಗಳ ಸ್ಥಾನಮಾನಗಳು ತಿರುವುಮುರುವಾಗಿವೆ. ಬಸವಣ್ಣನೇ ಪ್ರಧಾನ, ಶಿವನು [illegible] ಬಸವಣ್ಣನ ವಿಗ್ರಹವು ಭವ್ಯವಾಗಿದೆ. ಅದರ [illegible] ಬಲಗಡೆಯ ಮಂಟಪಗಳಲ್ಲಿ ಪಂಚಲಿಂಗ, ಕಾ[illegible]ಶ್ವರ ಲಿಂಗಗಳು ಇವೆ. ಇದಿರಿನ ಸಭಾ[illegible] ಇನ್ನೊಂದು ತುದಿಗೆ ಶಿವಲಿಂಗವಿದೆ.

ಬಸವಣ್ಣಗುಡಿಯ ಹೊರಗಡೆ ಬಲಕ್ಕೆ ಆ[illegible]ದಲ್ಲಿ ಇನ್ನೊಂದು ಚಿಕ್ಕ ಗುಡಿ ಅದೆ. ಇಲ್ಲಿ ಪ[illegible] ಕುಳಿತ ಒಂದು ಸ್ತ್ರೀವಿಗ್ರಹ. ತಲೆಯ ಮೇಲೆ [illegible]ಕುಲಾಯಿ. ಬಲಗೈಯಲ್ಲಿ ಮೊಗ್ಗೆ, ಎಡಗೈ[illegible] ಲಿಂಗ, ಕೊರಳಲ್ಲಿ ಲಿಂಗ. ಈಕೆ ನೀಲವ್ವೆ ಎ[illegible]ತ್ತಾರೆ. ನೀಲವ್ವೆಯ ಮೂರ್ತಿಯು ಮಹಾ[illegible] ಸಿದ್ದವ್ವೆಗಿಂತ ಚೆಂದವಾಗಿದೆ, ಹಳದೂ ಆಗಿರಬೇ[illegible] ಬಸವಣ್ಣದೇವರ ಗುಡಿಯಲ್ಲಿ ಒಂದು ಶಿಲಾಶಾಸ[illegible] ಇದೆ. ಅದು ಕ. ಚಾಲುಕ್ಯರ ತ್ರಿಭುವನಮಲ್ಲ[illegible]ತ್ಯನದು. ಈ ಗುಡಿಯು ಬೇರೆ ಬೇರೆ ಕಾಲದಲ್ಲಿ[illegible]ದ್ಧಾರ ಹೊಂದಿದ ಕುರುಹುಗಳು ಇವೆ. ಸಾಧಾ[illegible] ಕಾಲದ ರೀತಿಗಳನ್ನು ಇಲ್ಲಿಯ ಕಟ್ಟಡದಲ್ಲಿ ಕಾ[illegible]

೧ ಕ. ಚಾಲುಕ್ಯರ ಕಾಲ, ೧೨ನೆಯ ಶತ[illegible] ಕಾಲದಲ್ಲಿ ಇದು ಶಿವಾಲಯವಾಗಿರಬೇ[illegible] ಶಾಸನ, ನವಗ್ರಹದ ಕಲ್ಲು, ಶಿವಲಿಂಗ [illegible]ಗಳು ಇದೇ ಕಾಲದವು.

೨ ಸು. ೧೫ನೆಯ ಶತಮಾನ. ಈ ಕಾಲಕ್ಕೆ [illegible] ಆಚೆಗೆ ತಳ್ಳಿ, ಬಸವಣ್ಣನು ಆತನ [illegible] ಆಕ್ರಮಿಸಿದನು. ನೀಲವ್ವೆ ಇದೇ ಕಾ[illegible] ಆಗಿರಬೇಕು.

೩ ಈಚೆಗೆ ಸುಮಾರು ಒಂದು ಶತಮಾ[illegible] ಬಸವಣ್ಣಗುಡಿಯ ಭದ್ರವಾದ ಕಟ್ಟಡ, [illegible]ಮುಂ. ಹೊಸವೆಂದು ಕಾಣುವ ಭಾಗ[illegible]ರಬೇಕು. ಇದನ್ನು ಮುಧೋಳ ದೇಸಾ[illegible]ಸಿರುವರು ಎಂದು ತಿಳಿಯಿತು.

ಮುಧೋಳಲ್ಲಿ ದೊರೆತ ತಾಮ್ರಶಾಸನವು ಮಂಟೂರ ಶ್ರೀ. ಮಲ್ಲಪ್ಪನವರ ಬಳಿಯಲ್ಲಿ ಇ[illegible]ಯುತ್ತದೆ. ಮಂಟೂರು ಮುಧೋಳಿಗೆ ನೇ[illegible] ಪೂರ್ವಕ್ಕೆ ಸು. ೯ ಮೈಲು ಅದೆ. ಇಲ್ಲಿ ಬಹ[illegible] ಕಾಲದ ಅವಶೇಷಗಳೂ ನಾಣ್ಯಗಳೂ ದೊ[illegible]ಯಂತೆ. ಈ ಮಂಟೂರ ತಾಮ್ರಶಾಸನದ [illegible]

ವರಾಹವಾಗಿದೆ. ಇದು ಕ. ಚಾಲುಕ್ಯರ ಸತ್ಯಾಶ್ರಯ ಅರಸನ ಕಾಲದ್ದು. ಇದರ ಲಿಪಿ ನಾಗರಿ.

ವಂಶಾವಳಿ, ಅರಸರ ಹೆಸರುಗಳು, ಊರ ಹೆಸರು, ಭಾಷೆ, ಕಾಲ ಮುಂತಾದ ದೃಷ್ಟಿಯಿಂದ ಈ ಶಾಸನದಲ್ಲಿ ಕೆಲವು ವೈಲಕ್ಷಣ್ಯಗಳು ಕಾಣಬರುತ್ತವೆ; ಅರಸನು ವೀರನಾರಾಯಣ ಸುತ ವೀರ ಸತ್ಯಾಶ್ರಯ. ನೆಲೆವೀಡು, ಅಯೋಧಿಪುರ. ಇದರ ಭಾಷೆ ಸಂಸ್ಕೃತ, ಕನ್ನಡ ಮತ್ತು ಮರಾಠಿಯನ್ನು ಹೋಲುವ ಪ್ರಾಕೃತ ಈ ಮೂರು ಭಾಷೆಗಳಿಂದ ಕೂಡಿದುದು. ಅಲ್ಲದೆ ಅಶುದ್ಧವೂ ಆಗಿದೆ.

ಉದಾ: ಅಯೋಧಿಪುರದ ನೆಲವೀಡಿನಲು ಸುಖಸಂಕಥಾವಿ
ನೋದೇ ರಾಜ್ಯ ಕರೀತ ದಕ್ಷಿಣದಿಶಾವರೇ ದಿಗುವಿ
ಜಯಯಾತ್ರೆ ವಿಜಯಕಟವುನ;
ತಥಾ ಗ್ರಾಮಾ ಈಶಾನ್ಯ ಸಂಕ್ಕ ನಾವಿದಿಗೆ ಮರ
ಮುರಿ ಮೋ ಗ್ರಾಮಾ ತ್ರಿಶಗಡಾ;
ಡೊಂಗರಾ ಮೋನೇ ನಿಂಬತೋ ಪಾಷಾಣ ಪುಂಜ.
ಇ. ಇ.

ಈ ತಾಮ್ರಶಾಸನವು ಡಾ. ಫ್ಲೀಟರು ಇಂಡಿಯನ್ ಎಂಟಿಕೇರಿಯಲ್ಲಿ (XIV) ಪ್ರಸಿದ್ಧ ಪಡಿಸಿದ ಮಿರಜ ತಾಮ್ರಶಾಸನವನ್ನು ಕೆಲಮಟ್ಟಿಗೆ ಹೋಲುತ್ತದೆ. ಈ ಶಾಸನವು ಕೃತಕವೆಂದು ಸಂದೇಹಪಡುವಂತಿದೆ. *

ಈ ಪ್ರದೇಶವು ಸಂಶೋಧನ ವಿಚಾರದಿಂದ ತುಂಬ ಬೆಲೆಯುಳ್ಳುದು. ಕರ್ನಾಟಕದಲ್ಲಿ ನಡೆದು ಹೋದ ಜೈನ ಯುಗ ಮತ್ತು ವೀರಶೈವಯುಗ ಈ ಎರಡೂ ಯುಗ ವಿಚಾರದಿಂದಲೂ ಈ ನಾಡು ಫಲವತ್ತಾಗಿದೆ. ಈ ಎರಡೂ ಯುಗದ ಅವಶೇಷಗಳು ಇಲ್ಲಿ ದೊರೆಯುತ್ತವೆ. ಈಚೆಯದಾದ ವೀರಶೈವ ವಿಪ್ಲವದಿಂದ ಆಚೆಯದಾದ ಜೈನ ಯುಗದ ಕುರುಹುಗಳು ಬಲುಮಟ್ಟಿಗೆ ಕೊಚ್ಚಿಕೊಂಡು ಹೋಗಿವೆ, ಛಿನ್ನವಿಚ್ಛಿನ್ನವಾಗಿವೆ. ಆದರೂ ಪೂರ್ತಿಯಾಗಿ ಅಳಿದು ಹೋಗಿಲ್ಲ.

ಜೈನಯುಗದ ಅವಶೇಷಗಳಲ್ಲಿ ಮುಧೋಳು ಪ್ರಧಾನವಾದುದು.' ರನ್ನನ ಕಾಲದಲ್ಲಿಯೆ ಇದಕ್ಕೆ ಮುದುವೊಳಲು ಎಂದರೆ ಹಳ ಪಟ್ಟಣವೆಂದು ಹೆಸರು. ಇದರಿಂದ ಈ ಊರ ಪ್ರಾಚೀನತೆಯನ್ನು ಊಹಿಸಬಹುದು. ಸೂಕ್ಷ್ಮವಾಗಿ ಸಂಶೋಧಿಸಿದರೆ ಜೈನಯುಗದ ಕುರುಹುಗಳು ಇಲ್ಲಿ ಇನ್ನೂ ಹೆಚ್ಚಾಗಿ ದೊರೆಯಬಹುದು ಎಂದು ಆಸೆಯಿದೆ. ಇಲ್ಲಿಯ ಜೈನ ಬಸದಿಯು ಮಾರ್ಪಟ್ಟು ಈಗಿನ ಕಲಮೇಶ್ವರ ಗುಡಿ ಆಗಿದೆಯಂತೆ. ಬಸದಿಯೆಂದು ತೋರಿಸಿದ ಹಾಳುಮನೆಯಲ್ಲಿ ನಾವು ಕಂಡ ಜೈನವಿಗ್ರಹವು ಮೊದಲು ಈ ಬಸದಿಯಲ್ಲಿ ಇದ್ದಿತಂತೆ. ಮುಧೋಳಲ್ಲಿಯೂ ಬೆಳಗಲಿಯಲ್ಲಿಯೂ ಜೈನಮನೆತನಗಳು ಇಂದಿಗೂ ಬಾಳಿವೆ. ಮುಧೋಳಲ್ಲಿ ಬಳಗಾರ ಮನೆತನಗಳು ಇವೆ ಎಂದೂ ಇದೀಗ ನಿಶ್ಚಿತವಾಗಿ ತಿಳಿಯುತ್ತದೆ. ಇಲ್ಲಿ ಕೆಲವು ದಿನಗಳನ್ನು ಕಳೆದು ದಂತಕಥೆ, ಆಖ್ಯಾಯಿಕೆ, ಐತಿಹ್ಯ, ಪರಂಪರೆಯನ್ನು ಆಳವಾಗಿ ಅಭ್ಯಸಿಸಿದರೆ, ಜೈನ ಯುಗದ ಎಳೆಗಳು ಹೆಚ್ಚಾಗಿ ಕೈಸೇರಬಹುದು. ಇಲ್ಲಿ ಆ ಹಾಳಮನೆಯಲ್ಲಿ ಕಂಡ ಜೈನವಿಗ್ರಹವು ನನ್ನ ಅಭಿಪ್ರಾಯಕ್ಕೆ ಅಷ್ಟು—ರನ್ನನ ಕಾಲದಷ್ಟು—ಹಳದಲ್ಲ. ಅದರ ಕೈವಾಡವನ್ನು ನೋಡಿಯೆ ಇದನ್ನು ನಿರ್ಧರಿಸಬಹುದು. ಆ ಕಾಲದ ಅನೇಕ ಜೈನವಿಗ್ರಹಗಳನ್ನು ಕಂಡು ಪರೀಕ್ಷಿಸಿದ್ದೇನೆ. ಬಗೆಯನ್ನು ಸೋಲಿಸುವ ಆ ಕಲಾಕಾಂತಿಯ ಕಿರಣಗಳು ಇಲ್ಲಿ ನನ್ನ ಕಣ್ಣನ್ನು ಸೆರೆಗೊಳ್ಳಲಿಲ್ಲ. ಈ ವಿಗ್ರಹವು ಈಚೆಯ ಕಾಲದ್ದಾಗಿರಬೇಕು.

ಹನ್ನೆರಡನೆಯ ಶತಮಾನದಲ್ಲಿ ಸ್ಥಾಪಿತವಾದ ವೀರಶೈವ ಸಂಪ್ರದಾಯವು ಮುಂದೆ ವಿಜಯನಗರ ಕಾಲದಲ್ಲಿ ಅಭಿವೃದ್ಧಿಯನ್ನು ಪಡೆಯಿತು. ೧೫ನೆಯ ಶತಮಾನವು ವೀರಶೈವ ಮಹೋದಯದ ಕಾಲವು, ಮತಸಂಘಟನೆಯ ಯುಗವು. ಈ ಯುಗದಲ್ಲಿ ವೀರಶೈವ ಮತ ಸಂಚಾಲಕರು, ಶಿವಶರಣರು, ಶರಣೆಯರು ಇವರ ಅರ್ಚನೆಯು ಉದ್ರೇಕಗೊಂಡಿತು. ಈ ಕಾಲದ ಈ ಆಂದೋಲನದ ಅನೇಕ ಕುರುಹುಗಳು ಈ ಭಾಗದಲ್ಲಿ ಹೇರಳವಾಗಿ ದೊರೆಯುತ್ತವೆ. ಜಮುಖಂಡಿಯ ಕಡೆಪಟ್ಟಿ ಬಸವಣ್ಣಗುಡಿಯು ಈ ಕಾಲದ ಒಂದು ನಿದರ್ಶನವು. ಅಲ್ಲಿಯ ನೀಲವ್ವೆಯ ಮೂರ್ತಿಯು—ಈಕೆ ಬಸವೇಶ್ವರ ಪತ್ನಿ ನೀಲಾಂಬೆಯಾಗಿರಬೇಕು—ಈ ಕಾಲದಲ್ಲಿ ಹುಟ್ಟಿರಬೇಕು. ಇದಕ್ಕೂ ಸ್ವಲ್ಪ ಈಚೆಯದಾಗಿ ತೋರುವ ಮಹಾಲಿಂಗಪುರದ ಸಿದ್ದವ್ವೆಯ ಮೂರುತಿ ಇದೇ ಸಂಪ್ರದಾಯ ಸೂಚಕವಾಗಿದೆ. (ಈ ಸಿದ್ದವ್ವೆಯು ಅಷ್ಟು ನಾಮಾಂಕಿತಳಲ್ಲದಿದ್ದರೂ ಈ ಭಾಗದ ಒಬ್ಬ ಶಿವಶರಣೆಯಾಗಿರಬೇಕು ಎಂದು ಊಹಿಸಬಹುದಾಗಿದೆ)


* ನಾನು ಈ ಶಾಸನವನ್ನು ಓದುತ್ತಿರುವಾಗ, ಇದು ಈ ಮೊದಲೆ ಪ್ರೊ. ಕುಂದಣಗಾರ ಇವರಿಂದ ಬಾಂಬೆ ಹಿಸ್ಟಾರಿಕಲ ಸೊಸಾಯಿಟಿ ಜರ್ನಲ ೧೯೩೯ ಸಪ್ಟೆಂಬರ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಯಿತು. ಇದಕ್ಕಾಗಿ ನಾನು ಅವರಿಗೆ ಉಪಕೃತನಾಗಿದ್ದೇನೆ.—ಲೇ.

ಪ್ರಭುದೇವರನ್ನು ಕುರಿತು ಸಂಶೋಧಿಸಲೆಳಸುವವರಿಗೆ ಇದು ಹುಲಸಾದ ನೆಲವು. ರಬಕವಿಯಲ್ಲಿ ಪ್ರಭುದೇವರ ಗುಡಿಯದೆ. ಈ ಸ್ಥಳದಲ್ಲಿ ಪ್ರಭುದೇವರು ೧೨ ವರ್ಷ ನೆಲಸಿ ತಪಃಸಿದ್ಧಿಯನ್ನು ಪಡೆದರಾಗಿ ಐತಿಹ್ಯವಿದೆ. ಮಹಾಲಿಂಗಪುರದ ಮಠದಲ್ಲಿ ಹಳಗ್ರಂಥಗಳ ದೊಡ್ಡದಾದ ಸಂಗ್ರಹವಿದೆ. ಇದರಲ್ಲಿ ಕೆಲವು ಗ್ರಂಥಗಳು ಮಹತ್ವದುವಾಗಿವೆ. ಹದಿನಾಲ್ಕು ಗ್ರಂಥಗಳ ಹೆಸರುಗಳನ್ನು ನಾನು ಟಿಪ್ಪಣಿಸಿಕೊಂಡೆನು. ಅವುಗಳಲ್ಲಿ ಆರು ಪ್ರಭುದೇವರ ಚರಿತ್ರೆಗೆ ಸಂಬಂಧಪಟ್ಟಿವೆ. ಇಲ್ಲಿಯ ಗ್ರಂಥಸಂಗ್ರಹದ ಮಹತ್ತ್ವವನ್ನು ತೋರಿಸಲು ಈ ಹದಿನಾಲ್ಕು ಗ್ರಂಥಗಳ ಹೆಸರುಗಳನ್ನು ಇಲ್ಲಿ ಕೊಡುತ್ತೇನೆ:

೧. ಭೈರವೇಶ್ವರ ಕಾವ್ಯಕಥಾಮಣಿ ಸೂತ್ರರತ್ನಾಕರ (ತಾಳದೋಲೆ)
೨ ರಾಘವಾಂಕನ ಕಾವ್ಯ (ಕಾಗದ)
೩ ಬಸವೇಶ್ವರ ಪುರಾಣ (ತಾ.)
* ೪ ಪ್ರಭುಲಿಂಗಲೀಲೆ ,,
* ೫ ಪ್ರಭುದೇವರ ವಚನ. ,,
೬ ಹಮ್ಮೀರ ಕಾವ್ಯ ,,
೭ ಭೈರವೇಶ್ವರ ಕಾವ್ಯ ,,
* ೮ ಅಲ್ಲಮ ಪ್ರಭುಸ್ವಾಮಿಗಳ ನಟನತಾರಾ... ,,
೯ ಶಬರ ಶಂಕರ ವಿಳಾಸ ,,
* ೧೦ ಅಲ್ಲಮ ಪ್ರಭುದೇವರ ಕೋಲಿನ ಪದ ,,
* ೧೧ ಪ್ರಭುಸ್ವಾಮಿಗಳ ವಚನ ,,
೧೨ ಪ್ರೌಢರಾಯನ ಕಾವ್ಯ ,,
೧೩ ಜೈಮಿನಿಭಾರತ ,,
* ೧೪ ಮೊಗ್ಗಿಯ ಮಾಯಿದೇವನಿಗೆ ಪ್ರಭು ನಿರೂಪಿಸಿದ ಏಕೋತ್ತರ ಶತಸ್ಥಲ

ಜಮಖಂಡಿಯಲ್ಲಿ ಮೊಗ್ಗಿಯ ಪ್ರಭು... ಹೇಳುವ ಒಂದು ಈಶ್ವರ ಗುಡಿಯಿದೆ.

ಸಂಶೋಧನೆಯು ಅವಸರದಲ್ಲಿ ಮಾಡತಕ್ಕ... ಮೂರುಗಂಟೆಯಲ್ಲಿ ಮೂರು ಊರುಗಳನ್ನು ...ಸಿದೆನು ಎಂದು ಹೇಳುವುದು ಸಂಶೋಧನೆಯ... ಸಿದಂತೆ. ಇನ್ನೊಮ್ಮೆ ವಿರಾಮವಾಗಿ ಈ ಭಾಗ... ರಿಸಿ ಕೂಲಂಕಷವಾದ ಸಂಶೋಧನವನ್ನು ಮಾಡ... ಇಟ್ಟುಕೊಂಡಿದ್ದೇನೆ. ಕೊನೆಗೆ ಈ ಜ್ಞಾನಯಾತ್ರೆ...ವಾಗಿ ನೆರವಾದ ವಿಜಾಪುರದ ಶ್ರೀಮಾನ್ ಆಳ... ರಾಯರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.



ಅಧ್ಯಕ್ಷರಾದ ರಾಜಕುಮಾರಿ ಅಮೃತಕುವರ ಮತ್ತು ಸೌ. ವಿಜಯಲಕ್ಷ್ಮಿ ಪಂಡಿತ ಸಂಯುಕ್ತ ಪ್ರಾಂತದ ಮಂತ್ರಿ)

ನಾಗಪುರದ ಅಖಿಲಭಾರತೀಯ ಮಹಿಳಾಪರಿಷತ್ತು

ಪರಿಷತ್ತಿನ ಮಹಾಮಂಟಪದ ಪ್ರವೇಶದ್ವಾರ. ಸ್ವಯಂಸೇವಿಕೆಯರು ಸಾಲಾಗಿ ಕಾವಲಿಕ್ಕುತ್ತಿರುವ ದೃಶ್ಯ



ಕ್ಯಾನವಾಸರ್

(ಒಂದು ವಿನೋದಚಿತ್ರ)

"ನಿಮಗೆ ಬದುಕುವ ಆಶೆಯಿದ್ದರೆ ಈಗಲೇ ಈ ಔಷಧ ಕೊಂಡುಕೊಳ್ಳಿರಿ. ಮನೆಗೆ ಹೋದಾಗ ನಿಮ್ಮ ಹುಡುಗನಿಗೆ ಹೊಟ್ಟೆ ನೋಯುತ್ತಿರಬಹುದು. ಹೆಂಡತಿಗೆ ಹಿಸ್ಟಿರಿಯಾ ಇರಬಹುದು! ಶನಿವಾರ ಮಂಗಳವಾರ ಎರಡೆರಡು ಮಾತ್ರೆ ನುಂಗಿಸಿರಿ ಹಿಸ್ಟಿರಿಯಾ ಖಲಾಸ್! ಕೆಮ್ಮು ಇರಲಿ; ದಮ್ಮು ಇರಲಿ!" .... ಮಾತನಾಡುತ್ತಲೇ ಔಷಧ ಮಾರುವವನ ಉಸುರುಗಟ್ಟುವಂತೆ ಕೆಮ್ಮಹತ್ತಿದನು!

ಲೇಖಕರು: ರವೀಂದ್ರನಾಥ ಮೈತ್ರ

(ಬಂಗಾಲಿಯಿಂದ)

ನಾನು ತೆಗೆದುಕೊಂಡುದು ಎರಡನೇ ವರ್ಗದ ಕೀಟು; ಆದರೆ ಗಾರ್ಡನು ಹಸರು ನಿಶಾನೆ ತೋರಿಸಿದುದ ಂದ ನಾನು ಗಡಿಬಿಡಿಯಿಂದ ಮೂರನೇ ವರ್ಗದ ಡಬ್ಬಿಯಲ್ಲಿ ಹೊಕ್ಕೆ. ನನ್ನ ಜಿಡಗಿನ ಉಡಿಗೆಗಳನ್ನು ನೋಡಿ ಎದುರಿನ ಬೆಂಚಿನ ಮೇಲಿನ ಒಬ್ಬ ಮನುಷ್ಯನು, ಸ್ವಲ್ಪ ಸ್ಥಳಮಾಡಿ 'ಬೈಠಿಯೆ ಬಾಬೂಜಿ' ಎಂದನು.

ನನಗೊಂದು ಕೆಟ್ಟ ಚಟವಿದೆ. ಗಾಡಿ ಹೊರಟ ಕೂಡಲೆ ನನಗೆ ನಿದ್ದೆ ಬರಹತ್ತುವದು. ಕೂತಕೂತಲ್ಲಿಯೇ ನಾನು ತೂಕಡಿಸಹತ್ತಿದೆ. ನಾನು ಕೂತ ಗಾಡಿಯು ಮೇಲ್ ಆದುದರಿಂದ, ಕನಿಷ್ಠ ಅರ್ಧ ಗಂಟೆಯ ವರೆಗೆ ಅದು ನಿಲ್ಲು ವಂತಿರಲಿಲ್ಲ. ನಿದ್ದೆಯ ಒತ್ತಾಯವು ಹೆಚ್ಚಿದರೂ ಮಲಗ ಲಾದೆ. ಅಷ್ಟರಲ್ಲಿ ತೀರ ನನ್ನ ಕಿವಿಯ ಹತ್ತರವೇ ಒದರಿ ದಂತಾಯಿತು "ಬದುಕಬೇಕೆಂಬ ಆಶೆಯಿದ್ದರೆ— "

ನಾನು ಬೆಚ್ಚಿ ಎಚ್ಚರಾದೆ. ಕಣ್ಣು ತೆರೆದು ನೋಡಿದೆ, ಗಾಡಿಯ ಗೋಡೆಗೆ ಆತುಕೊಂಡು ನಿಂತ ಒಬ್ಬ ಅಸ್ಥಿ ಪಂಜರದಂತಿದ್ದ ಮನುಷ್ಯನು ಗೊಗ್ಗರದನಿಯಲ್ಲಿ ತನ್ನ ವ್ಯಾಖ್ಯಾನವನ್ನು ಆರಂಭಿಸಿದ್ದನು. ಎಡಗೈಯಲ್ಲಿ ಒಂದು ಕ್ಯಾನವಾಸದ ಬ್ಯಾಗ್ ಇದೆ; ಬಲಗೈಯಲ್ಲಿ ಕೆಂಪು ಲೇಬಲ್ ಅಂಟಿಸಿದ ಒಂದು ಸಣ್ಣ ಸೀಸೆ ಇದೆ.

"ನಿಮಗೆ ಬದುಕುವ ಆಶೆಯಿದ್ದರೆ ಈಗಲೇ ಒಂದು ಸೀಸೆ ಕೊಂಡುಕೊಳ್ಳಿರಿ; ಮನೆಗೆ ಹೋಗಿ ಅದನ್ನು ಎಚ್ಚರ ದಿಂದ ಕಾದಿಡಿರಿ. ಪ್ರಸಂಗದಲ್ಲಿ ಉಪಯೋಗ ಬೀಳಬಹುದು. ಈ ಔಷಧದಿಂದ ಕೆಮ್ಮು ಗುಣವಾಗುವದು, ಉಬ್ಬಸ ಗುಣವಾಗುವದು, ಬಿಕ್ಕು ನಿಲ್ಲುವದು, ಕೋಡಿಗ್ಗೆಮ್ಮು ಗುಣವಾಗುವದು; ಕ್ಷಯ, ರಾಜಯಕ್ಷ್ಮ, ಆಮಾಂಶ, ಉದರಾಮಯ-ಜನಿತ ಕೆಮ್ಮು, ಎಲ್ಲವೂ ಗುಣವಾಗುವವು. ಬರಿ ಕೆಮ್ಮೇ ಅಲ್ಲ, ಎಲ್ಲ ವಿಧದ ಬೇನೆಗಳೂ ಇದರಿಂದ ದೂರ ವಾಗುತ್ತವೆ. ಹುಡುಗರ ಹೊಟ್ಟೆಶೂಲೆ, ಹುಡುಗಿಯರ ಹಿಸ್ಟೀರಿಯಾ, ಕೆಂಗಣ್ಣು, ಕಿವಿಸೋರುವಿಕೆ, ವಾತ, ಆಮ್ಲ ವಾತ, ಸಂಧಿವಾತ, ಪಕ್ಷಾಘಾತ, ಗಜಕರ್ಣ, ಕಜ್ಜಿ, ಇಸಬು,—ಎಲ್ಲವೂ ಒಂದೇ ಬಾಟ್ಲಿಯಲ್ಲಿ ಗುಣವಾಗುತ್ತವೆ. ಇದು ಧನ್ವಂತರೀವಟಿ. ಬೇರೆಬೇರೆ ಅನುಪಾನಗಳಲ್ಲಿ ತೆಗೆದುಕೊಂಡರೆ ಇದರಿಂದ ಗುಣವಾಗದ ರೋಗವೇ— "

ಇಷ್ಟು ಮಾತಾಡುವದರೊಳಗೆ ಆ ಮನುಷ್ಯನಿಗೆ ತೀವ್ರವಾದ ಕೆಮ್ಮಿನ ಉಕ್ಕುಬಂತು. ಸುಮಾರು ಒಂದು ಮಿನಿಟಿನ ವರೆಗೆ ಒಂದೇ ಸವನೆ ಕೆಮ್ಮಿದ ಮೇಲೆ ಮೇಲುಸುರು ಆಡಿಸುತ್ತ ಅವನು ಪುನಃ ಮಾತನಾಡಲಾರಂಭಿಸಿದನು. "ನಿಮಗೆ ಬದುಕ ಬೇಕಾದ್ದಗಿರೆ ಈ ಧನ್ವಂತರಿವಟಿಕೆಯನ್ನು ಕೊಂಡು ತೆಗೆದುಕೊಂಡು ಹೋಗಿರಿ. ಇದರಲ್ಲಿ ಕಪಟವಿಲ್ಲ. ಸರಕಾರದಲ್ಲಿ ರಜಿಸ್ಟರ ಮಾಡಿದ ಈ ಮಾತ್ರೆಯು ಪ್ರತ್ಯಕ್ಷ ಧನ್ವಂತರಿಯಿದ್ದಂತೆಯೆ. ಜ್ವರವಿದ್ದರೆ ಲಿಂಬೆ ರಸದಲ್ಲಿ ತಗೊಳ್ಳಿರಿ; ಕರೆ ಜ್ವರದಲ್ಲಿ ನೀರಿನ ಸಂಗಡ ತಗೊಳ್ಳಿರಿ; ಸರ್ತಿಯ ಜ್ವರಕ್ಕೆ ಅಲ್ಲದ ರಸದಲ್ಲಿ, ಸಾದಾ ಕೆಮ್ಮಿಗೆ ಲಿಂಬೆಯ ಎಲೆಯ ರಸದಲ್ಲಿ, ನಿಮೋನಿಯದಲ್ಲಿ ಜ್ಯೇಷ್ಠಮಧುವಿನ ಸಂಗಡ ತೆಗೆದುಕೊಳ್ಳಿರಿ. ಯಾವ ಬೇನೆಯಿದ್ದರೂ ಒಂದೇ ಮಾತ್ರೆಯಲ್ಲಿ ನೀರಾಗಿಹೋಗುವದು. ಕಿವಿ ಸೋರುತ್ತಿದ್ದರೆ ಒಂದು ಮಾತ್ರೆಯನ್ನು ಪಟಕದ ಸಂಗಡ ಅರೆದು ಹಚ್ಚಿರಿ. ಗಜಕರ್ಣ, ಕಜ್ಜಿ ಆಗಿದ್ದರೆ ಮಲ್ಲಿಗೆ ಎಂಣೆಯಲ್ಲಿ ಅರೆದು ಹಚ್ಚಿರಿ. ಹೂಂ! ಯಾರಿಗೆ ಬೇಕು?"

ಆ ಮನುಷ್ಯ ಸ್ವಲ್ಪ ಮುಂದೆ ಸರಿದು ಅಂದ "ನಿಮಗೆ ಬೇಕೇನು? ಮನೆಯಲ್ಲಿಯ ಮಕ್ಕಳುಮರಿಗಳಿಗೆ, ಮುದುಕಿ

ಅಜ್ಜಿಯರಿಗೆ, ಹರೆಯದವರಿಗೆ ಎಲ್ಲರಿಗೂ ಇದು ಉಪಯುಕ್ತವಾಗಿದೆ. ತಗೊಂಡು ಹೋಗಿರಿ. ಬೆಲೆ ಹೆಚ್ಚಿಲ್ಲ. ೩೨ ಮಾತ್ರೆಗಳಿಗೆ ೩೨ ಬಿಲ್ಲೆಗಳು; ಮೇಲೆ ಬಾಟ್ಲಿಗೆ ಬೆಲೆಯಿಲ್ಲ. ವಿಚಾರಮಾಡಿರಿ. ನಿಮ್ಮ ಎಲ್ಲ ಬೇನೆಗಳು ಇಲ್ಲದಂತಾಗುವವು. ಬರೆ ಎಂಟಾಣೆ! ಡಾಕ್ಟರರನ್ನು ಕರೆಸಿದರೆ ಇಷ್ಟು ರೋಗಗಳಿಗೆ ಕನಿಷ್ಠ ನಾಲ್ಕೈದುನೂರು ರುಪಾಯಿಗಳಾದರೂ ವೆಚ್ಚವಾಗುವವು. ತಗೊಳ್ಳಿರಿ."

ವ್ಯಾಖ್ಯಾನದಲ್ಲಿ ಮನಸ್ಸು ಮುಳುಗಿತ್ತು; ಇಷ್ಟರಲ್ಲಿ ರಸಭಂಗವಾಯಿತು. ಆ ಮನುಷ್ಯನು ತಿರುಗಿ ತಳಮಳಿಸಿ ಕೆಮ್ಮಹತ್ತಿದನು. ಕೆಮ್ಮು ನಿಂತಕೂಡಲೆ ಪುನಃ ವ್ಯಾಖ್ಯಾನ ಆರಂಭವಾಯಿತು. ಈಗಾಗಲೆ ಅವನ ಧ್ವನಿಯು ಬಹಳ ಅಶಕ್ತವಾಗಿತ್ತು. "ಏನು, ಬೇಕೇನು? ನೋಡಿರಿ. ಮನೆಗೆ ಹೋದಾಗ ನಿಮ್ಮ ಹುಡುಗನ ಹೊಟ್ಟೆ ನೋಯುತ್ತಿರಬಹುದು; ಹೆಂಡತಿಗೆ ಹಿಸ್ಟಿರಿಯಾ ಆಗಿರಬಹುದು; ಮಗಳಿಗೆ ಜ್ವರಬಂದಿರಬಹುದು; ಹಿಸ್ಟಿರಿಯಕ್ಕಾಗಿ ಶನಿವಾರ, ಮಂಗಳವಾರ ಎರಡೆರಡು ಮಾತ್ರೆ ಬಾಯಲ್ಲಿ ಹಾಕಿಬಿಡಿರಿ ತೀರಿತು! ಹಿಸ್ಟಿರಿಯಾ ಖಲಾಸ್! ಎಲ್ಲ ರೋಗಗಳಿಗೆ ಮುದ್ರಿಸಿದ ಅನುಪಾನವು ಪುಕ್ಕಟೆ! ಹೂಂ! ತಗೊಳ್ಳಿರಿ!"

ಒಬ್ಬಿಬ್ಬರು ಪ್ರವಾಸಿಗಳಲ್ಲಿ ಸ್ವಲ್ಪ ಗಡಿಬಿಡಿ ಆರಂಭವಾಯಿತು. ಒಬ್ಬನಂತೂ ದುಡ್ಡು ತೆಗೆಯುವದಕ್ಕೂ ಜೇಬಿನಲ್ಲಿ ಕೈಯನ್ನು ಹಾಕಿದನು. ಅದನ್ನು ನೋಡಿ ಮಾರುವ ಮನುಷ್ಯನು ಮುಗುಳುನಗೆಯಿಂದ ಒಂದಡಿ ಮುಂದಿಟ್ಟು ಅಂದನು "ಹೂಂ ತಗೊಳ್ಳಿರಿ! ಈ ಧನ್ವಂತರಿವಟಿಯು ಎಲ್ಲ ಬೇನೆಗಳಿಗೆ ರಾಮಬಾಣವಾಗಿದೆ! ೩೨ ಗುಳಿಗೆಗಳಿಗೆ ೩೨ ಬಿಲ್ಲೆಗಳು!" ಒಬ್ಬಿಬ್ಬರು ತಮ್ಮ ಜೇಬಿನಿಂದ ಕೈಯನ್ನು ಹೊರಗೆ ತೆಗೆದುದನ್ನು ನಾನು ಕಂಡೆನು. ಆ ಮನುಷ್ಯನ ಕಂಣು ಸಂತೋಷದಿಂದ ಹೊಳೆಯಹತ್ತಿದವು. ಅವನು ಪುನಃ ವ್ಯಾಖ್ಯಾನವನ್ನಾರಂಭಿಸಿದನು "ಕೆಮ್ಮು ಇರಲಿ ದಮ್ಮು ಇರಲಿ—" ಆದರೆ ಅವನಿಗೆ ತಿರುಗಿ ಕೆಮ್ಮು ಪ್ರಾರಂಭವಾದುದರಿಂದ ವ್ಯಾಖ್ಯಾನಕ್ಕೆ ಅಡ್ಡಿಯಾಯಿತು. ಅದೇ ಸಮಯಕ್ಕೆ ಹಿಂದೆ ಕೂತ ಒಬ್ಬ ಹುಡುಗನು ಬೇಸರದಿಂದ ಅಂದನು "ಎಲ್ಲ ಬೇನೆಗಳು ಗುಣವಾಗುವವಂತೆ! ಬರೆ ಇವರ ಕೆಮ್ಮು ಮಾತ್ರ ಗುಣವಾಗುವದಿಲ್ಲವೆಂದು ತೋರುತ್ತದೆ! ಸಾಕು ಸಾಕು ನಿಮ್ಮ ವ್ಯಾಖ್ಯಾನ." ಆ ಮನುಷ್ಯನ ಮೋರೆಯು ಒಮ್ಮೆಲೆ ಸಪ್ಪಗಾಯಿತು. ಜೇಬಿನಿಂದ ಹೊರಬೀಳುತ್ತಿದ್ದ ಒಂದೆರಡು ಕೈಗಳೂ ಜೇಬಿನಲ್ಲೇ ಸೇರಿದವು. ಆ ಮನುಷ್ಯ ಮುಂದೇನೂ ಮಾತಾಡಲಿಲ್ಲ.

ಗೋಡೆಗೆ ಆತುಕೊಂಡು ಗಾಡಿಯ ಹೊರಗೆ ನಿಂತುಬಿಟ್ಟನು. ನನಗೆ ಸ್ವಲ್ಪ ಕೆಡುಕೆನಿಸಿತು. 'ಇಲ್ಲಿ ಬನ್ನಿ' ಎಂದು ಕರೆದೆ.

ಅವನು ಮೆಲ್ಲಮೆಲ್ಲನೆ ನನ್ನೆದುರು ಬಂದು ಮೋರೆಯಿಂದ "ಏನು, ತಮಗೆ ಬೇಕೇನು?" ಕೇಳಿದ.

ನನಗೆ ಔಷಧದ ಅಗತ್ಯವಿರಲಿಲ್ಲ. ಆದರೂ ಒಂದು ರೂಪಾಯಿಯನ್ನು ತೆಗೆದು "ಕೊಡಿ ಬಾಟ್ಲಿ" ಎಂದಂತೆ.

ಅವನು ಒಣ ನಗೆಯನ್ನು ಬೀರುತ್ತ ರೂಪಾಯಿ ಜೇಬಿನಲ್ಲಿ ಹಾಕಿ "ಇಂದು ತಮ್ಮದೇ ಮೊದಲನೆಯದು. ದೇವರು ತಮಗೆ—"

ನಾನು ನಡುವೇ ಕೇಳಿದೆ "ಔಷಧವನ್ನು [illegible] ರಿಸಿದಿರೋ?"

"ಉಹೂಂ, ನಾನು ಕ್ಯಾನವಾಸರ್ (ಮಾ[illegible]"

"ಓಹೋ! ನನಗೆ ಮೊದಲೇ ತಿಳಿಯ[illegible] ನಿಮಗೆ ಸಂಬಳವೆಷ್ಟು?"

ಒಂದು ಸಲ ಅತ್ತ ಇತ್ತ ನೋಡುತ್ತ ಅವನು [illegible] ನೈದು ರೂಪಾಯಿ; ಆದರೆ 'ಯಾರಾದರೂ [illegible] ಮೂವತ್ತೈದು ಎಂದು ಹೇಳಬೇಕು' ಎಂ[illegible] ಮಾಲಕನ ಹುಕೂಮುದರಿ. ಇಲ್ಲದಿದ್ದರೆ ಔಷಧ[illegible] ಬೆಲೆ ಕೊಡಲಿಕ್ಕಿಲ್ಲವಂತೆ. ಆದರೂ ರೂಪಾಯಿ[illegible] ಬಿಲ್ಲೆಯಂತೆ ಕಮೀಶನ್ನು ಸಿಗುತ್ತದೆ."

"ಇಷ್ಟರಿಂದಲೇ ನಿಮ್ಮ ಜೀವನ ಸಾಗುತ್ತದೆ[illegible]"

"ಹೂಂ! ಸಾಗಿಸದಿದ್ದರೆ ಗತಿ? ಪ್ರಯತ್ನ[illegible] ಮಾತಾಡುತ್ತ ಅವನಿಗೆ ಪುನಃ ಕೆಮ್ಮಿನ ಉಬ್ಬ[illegible] ರಿಂದ ಮುಖವು ಕೆಂಪಗೆ ಕಾಣಹತ್ತಿತು. ಕೆಮ್ಮು[illegible] ಮೇಲೆ ನಾನೆಂದೆ "ನಿಮಗೆ ಬಹಳ ಅದೆ ಕೆಮ್ಮು! [illegible] ಸಲ ಈ ಔಷಧವನ್ನು—"

ಧ್ವನಿಯನ್ನು ತೀರ ಕೆಳಗೆ ಇಳಿಸಿ ಅವನಂದನು [illegible] ರಿಂದ ಏನು ಗುಣವಾಗುತ್ತದೆ ತಲೆ! ಇದು ನನ್ನ[illegible] ನನ್ನನ್ನು ಒಯ್ಯಲಿಕ್ಕೆ ಬಂದ ಯಮರಾಜ! [illegible] ಈ ಮಾಘಮಾಸವನ್ನು ಕಳೆದರೆ ಗೆದ್ದೆ...... ಬಹಳ ಬೆಳೆದು ನಿಂತಿದ್ದಾಳೆ, ಈಗ ರಜೆ [illegible] ವದು ಹೇಗೆ? ಎರಡು ಮೂರು ಸಾವಿರ ಬಾಟ್ಲಿ[illegible] ರೂಪಾಯಿಗೆ ೩ ಬಿಲ್ಲೆಯಂತೆ ಕಮೀಶನ್ನು ಕೊಡು[illegible] ಮಾಲಕರು ಹೇಳಿದ್ದಾರೆ, ಮತ್ತು ಹಾಗಾದರೆ [illegible]

ಂಗಡ ೭—೮ ದಿನಗಳ ರಜೆಯೂ, ತಿಂಗಳ ಸಂಬಳವು ಮುಂಗಡವಾಗಿಯೂ ಸಿಗಬಹುದೆಂದು ಭರವಸೆಯದೆ. ಮಾಲಕ ಒಳ್ಳೆಯವ ಇದ್ದಾನರಿ. ಮಾರೀಕಣಿವೆಯ ನಾರಾಯಣ ಪಂಡಿತರ ಹೆಸರನ್ನು ತಾವು ಕೇಳಿರಬಹುದು? ಅವರೇ ನಮ್ಮ ಮಾಲಕರು.''

ಯಾವ ಕಣಿವೆಯೋ, ಯಾವ ಪಂಡಿತನೋ ನನಗೇನೂ ಪರಿಚಯವಿಲ್ಲ. ಆದರೆ ಮುಂದಿನ ಸ್ಟೇಶನ ಬರುವವರೆಗೆ ಮಾತು ಸಾಗಿಸಬೇಕೆಂದು ನಾನೆಂದೆ "ಮಾರೀಕಣಿವೆಯ ನಾರಾಯಣ ಪಂಡಿತ! ಅವರು ಬಹುಶಃ—"

ಆ ಮನುಷ್ಯನು ಬಹಳ ಹುರುಪಿನಿಂದ ಮಾತಾಡಹತ್ತಿದನು. "ಅವರು ಬಲು ದೊಡ್ಡ ಮನುಷ್ಯರು ನೋಡಿರಿ ಬೆಂಗಳೂರಲ್ಲಿ ಅವರಿಗೆ ಮೂರುಪ್ಪರಿಗೆಯ ಒಂದು ಮನೆಯಿದೆ. ಅಲ್ಲದೆ ಹೇರಳವಾದ ಆಸ್ತಿಯಿದೆ. ಮತ್ತು ಎಲ್ಲ ದುಡ್ಡನ್ನು ಈ ಔಷಧದ ಉದ್ಯೋಗದಲ್ಲಿಯೇ ಅವರು ಗಳಿಸಿದ್ದಾರೆ. ಇದು ಔಷಧವಲ್ಲ; ಪ್ರತ್ಯಕ್ಷ ಲಕ್ಷ್ಮೀ ಇದ್ದಂತೆ; ಇದನ್ನು ಮಾರಲಿಕ್ಕೆ ೨೦—೩೦ ಕ್ಯಾನವಾಸರ್ಸ್ ಇದ್ದಾರೆ."

ಗಾಡಿಯ ವೇಗವು ಕಡಿಮೆಯಾಗಹತ್ತಿದ ಕೂಡಲೆ ಆ ಮನುಷ್ಯನು ಹೊರಡುತ್ತ ಅಂದನು "ಒಳ್ಳೇದು ನಾನಿನ್ನು ಇಳಿಗುತ್ತೇನೆ" ನಾನೆಂದೆ "ಸ್ವಲ್ಪ ತಡೆಯಿರಿ, ಗಾಡಿ ನಿಲ್ಲಲಿ."

ಕ್ಯಾನವಾಸರನು ಗಾಬರಿಯಿಂದ ಅಂದನು "ಛೇ ಛೇ! ಇದೇ ಡಬ್ಬಿಯಲ್ಲಿಯೇ ಮಾಲಕರು ಕೂತಿದ್ದಾರೆ! ನನ್ನ ದನಿಯು ಅವರ ಕಿವಿಗೆ ಬೀಳದಿದ್ದರೆ, ನಾನು ಸುಮ್ಮನೆ ಕೂತಿದ್ದೇನೆಂದು ಅವರು ತಿಳಿದುಕೊಳ್ಳಬಹುದು." ಹೀಗೆಂದು ಉಚ್ಚ ಸ್ವರದಲ್ಲಿ ಧನ್ವಂತರಿವಟಿಯ ನಾಮ ಸಂಕೀರ್ತನ ಮಾಡುತ್ತ ಅವನು ಡಬ್ಬಿಯಿಂದ ಹೊರ ಬಿದ್ದನು.

ನಾನು ಸೆಕಂಡ ಕ್ಲಾಸಿನ ಡಬ್ಬಿಯಲ್ಲಿ ಹೋಗಿ ಕೂತೆ. ಇನ್ನೊಬ್ಬ ಮನುಷ್ಯನು ಬರ್ಥಿನ ಮೇಲೆ ಒರಗಿ ಕೊಂಡು ಹುಕ್ಕೆಯನ್ನು ಎಳೆಯುತ್ತ ಹತ್ತರ ನಿಂತಿರುವ ಸೇವಕನ ಮೈಮೇಲೆ ಹೊಗೆಯನ್ನುಗುಳುತ್ತ ಬಿದ್ದುಕೊಂಡಿದ್ದ. ಸೇವಕನು ಕೈಯಲ್ಲಿ ಯಜಮಾನನು ಅರ್ಧ ತಿಂದು ಬಿಟ್ಟ ಊಟದ ಬೆಳ್ಳಿಯ ತಟ್ಟೆಯನ್ನು ಹಿಡಿದುಕೊಂಡು, ಎಂಜಲು ಹೊಗೆ ಕುಡಿಯುತ್ತ ನಿಂತಿದ್ದನು. ನಾನು ಬಂದುದನ್ನು ನೋಡಿ ಯಜಮಾನನು ಸರಿಯಾಗಿ ಕುಳಿತನು. ಸಾಯಂಕಾಲದ ಸೂರ್ಯಪ್ರಕಾಶದಲ್ಲಿ, ಅವನ ಎದೆಯ ಮೇಲೆ ಜೋತಿರುವ ವಜ್ರ ಮಾಣಿಕಗಳು ಥಳಥಳಿಸುತ್ತಿದ್ದವು. ನಾನು ಸಹಜವಾಗಿ ಒಂದು ಸಲ ಅವನನ್ನು ಇಡಿಯಾಗಿ ನೋಡಿದೆ. ಅವನ ಮೈಬಣ್ಣ ನಸುಕಂದು; ಶರೀರವು ಗಟ್ಟಿಮುಟ್ಟು. ಬೆಲೆಯುಳ್ಳ ತಿಳುವಾದ ಧೋತರವನ್ನು ಉಟ್ಟಿದ್ದ. ಮೈಯಲ್ಲಿ ರೇಶಿಮೆಯ ಅಂಗಿ ತೊಟ್ಟಿದ್ದ. ಅದಕ್ಕೆ ಬಂಗಾರದ ಗುಂಡಿಗಳಿದ್ದವು. ತಲೆಯ ಮೇಲೆ ಅರೆನರೆತ ಕೂದಲುಗಳು ಚನ್ನಾಗಿ ಬಾಚಲ್ಪಟ್ಟಿದ್ದವು. ತುಟಿಗಳಿಗೆ ವೀಳ್ಯದ ರಂಗೇರಿತ್ತು. ಕಣ್ಣು ಸಣ್ಣವಾದರೂ ತೇಜಸ್ವಿಯಾಗಿದ್ದವು.

ಜೊತೆಗಾರನಾದ ಪ್ರಯಾಣಿಕನೆಂದು ಅವನೊಡನೆ ಮಾತೆತ್ತುವ ಹವಣಿಕೆಯಲ್ಲಿ ನಾನಿದ್ದೆ. ಇಷ್ಟರಲ್ಲಿ ಅವನೇ ದೊಡ್ಡದಾಗಿ ನಕ್ಕು "ಅಂತೂ ತಮಗೂ ಅವನು ಟೊಪ್ಪಿಗೆ ಹಾಕಿದ!" ಎಂದನು.

ಅವನ ಮಾತಿನ ಅರ್ಥ ತಿಳಿಯದೆ ನಾನು ಕೇಳಿದೆ "ಎಂಥಾ ಟೊಪ್ಪಿಗೆ?"

ನನ್ನ ಕೈಯಲ್ಲಿಯ ಧನ್ವಂತರಿ ವಟಿಕೆಯ ಎರಡು ಬಾಟ್ಲಿಗಳನ್ನು ನೋಡಿ ಅವನು ಮತ್ತೊಮ್ಮೆ ದೊಡ್ಡದಾಗಿ ನಕ್ಕು ಅಂದನು "ಕ್ಯಾನವಾಸರ ನಿಜವಾಗಿ ಜಾಣನಾಗಿದ್ದಾನೆ. ತಮ್ಮಿಂದ ಬೆಲೆಯನ್ನು ಹೆಚ್ಚಾಗಿ ಎಬ್ಬಿಸಲಿಲ್ಲವಷ್ಟೆ ಅವನು? ನಾನು ಎಲ್ಲ ಕ್ಯಾನವಾಸರರಿಗೆ ಒಂದು ಬಿಲ್ಲೆ ಕೂಡ ಹೆಚ್ಚಿಗೆ ತೆಗೆದುಕೊಳ್ಳಬಾರದೆಂದು ಎಚ್ಚರಿಕೆ ಕೊಟ್ಟದ್ದೇನೆ. ತೆಗೆದುಕೊಂಡರೆ ನೌಕರಿಯಿಂದ ಕಿತ್ತೊಗೆಯುವೆನೆಂದೂ ಹೇಳಿಟ್ಟಿದ್ದೇನೆ."

ಈಗ ನನ್ನ ಲಕ್ಷ್ಯಕ್ಕೆ ಬಂತು ಇವರೇ ಆ ನಾರಾಯಣ ಪಂಡಿತರೆಂದು. ನಾನು ಬೇಕೆಂತಲೇ ಕೇಳಿದೆ "ಇದು ತಮ್ಮದೇ ಔಷಧವೆಂದು ತೋರುತ್ತದೆ? ಇದು ಚನ್ನಾಗಿದೆಯೋ?"

ಅವನು ಮತ್ತೊಮ್ಮೆ ನಕ್ಕು ಅಂದನು "ಉತ್ತಮವಾಗಿದೆ! ರಾಮಬಾಣವೇ ಸೈ! ಅದಕ್ಕಾಗಿ ಮೂವತ್ತು ಕ್ಯಾನವಾಸರ್ಸ್ ದುಡಿಯುತ್ತಿದ್ದಾರೆ. ತಿಂಗಳಾ ೩೦—೩೫ ರೂಪಾಯಿ ತೆಗೆದುಕೊಳ್ಳುತ್ತಾರೆ ಸ್ವಾಮಿ, ಔಷಧವು ಖಂಡಿತವಾಗಿ ಚನ್ನಾಗಿದೆ. ವ್ಯರ್ಥನಾಗಿ ಯಾರಾದರೂ ಸಂಬಳಕೊಡುತ್ತಾರೊ?"

"ಎಷ್ಟು ದಿನವಾಯಿತು ಇದನ್ನು ತಾವು ಶೋಧಿಸಿ? ಮೊದಲೆಲ್ಲೂ ಹೆಸರು ಕೇಳಿದಂತಿಲ್ಲ."

ತೀರ ಆಚ್ಚರಿಗೊಂಡು ಅವನೆಂದ "ನಾರಾಯಣ ಪಂಡಿತನ ಧನ್ವಂತರಿವಟಿಕೆಯ ಹೆಸರನ್ನು ನೀವು ಕೇಳಿಲ್ಲ! ವರ್ತಮಾನಪತ್ರ ನೀವು ಓದುವದಿಲ್ಲವೆಂದು ತೋರುತ್ತದೆ?"

ನಾನು ಅತ್ಯಂತ ವಿನಯದಿಂದ ಅಂದೆ "ಜಾಹಿರಾತು ಗಳನ್ನು ಓದಲು ನನಗೆ ಬಿಡುವಿಲ್ಲ. ಆದ್ದರಿಂದಲೇ ಬಹುಶಃ—"

ಅವನು ಸ್ವಲ್ಪ ಉತ್ತೇಜಿತನಾಗಿ ಅಂದ "ಜಾಹಿರಾತು ಗಳನ್ನು ನೀವು ಓದಿರಲಿಕ್ಕಿಲ್ಲ. ಆದರೆ ಮಾರೀಕಣಿವೆಯ ಧನ್ವಂತರಿ ಪ್ಯಾಲೇಸನ್ನೂ ನೀವು ನೋಡಿಲ್ಲವೇ? ಆ ಕೆಂಪು ಬಣ್ಣದ ಮೂರಂತಸ್ತಿನ ಅರಮನೆ! ವ್ಹರಾಂಡಕ್ಕೆ ಹಾಕಿದ ಕಟಾಂಜನವು ಚೀನ ಕಲಾವಿದನಿಂದ ಮಾಡಲ್ಪಟ್ಟದೆ! ಹನ್ನೆರಡುವರೆ ಎಕರೆ ಕಾಂಪೌಂಡು ಇದೆ! ಆ ದಿನ ಆ ಭಗನಮಲಶೇಠನು ಅಂತಿದ್ದ—"

ಇಷ್ಟು ಹೇಳಿ ಅವನು ಸ್ವಲ್ಪ ತಡೆದ ಮತ್ತು ಪುನಃ ನಕ್ಕು ಅಂದನು "ಆದರೆ ನೀವು ಕೇಳಿರಲೇ ಬೇಕು! ನೀವು ಚೇಷ್ಟೆಮಾಡುತ್ತಿರುವಂತೆ ಕಾಣುತ್ತದೆ.... ಅಲ್ಲಿ ಕಿವಿಗೊಡಿರಿ"

ನಾನು ಕಿವಿಗೊಟ್ಟೆ. ಹತ್ತರದ ಡಬ್ಬಿಯ... ಉಸುರುಗಟ್ಟುವಷ್ಟು ಕೆಮ್ಮುವ ಸಪ್ಪಳವು... ಕೆಮ್ಮು ನಿಂತ ಕೂಡಲೆ ಅದೇ ಪೂರ್ವಪರಿ... "ಕೆಮ್ಮು ಇರಲಿ, ದಮ್ಮು ಇರಲಿ—"

ಧನ್ವಂತರಿವಟಿಯ ಮಾಲಕನು ಪುನಃ ದೊಡ್ಡದಾಗಿ ನಕ್ಕನು. "ನೀವು ಚೇಷ್ಟೆ... ದವರಂತೆ ತೋರುತ್ತೀರಿ. ಸ್ವಾಮೀ—" ಆಡುತ್ತ ಪುನಃ ಅವನು ನಗಹತ್ತಿದ. ಅ... ಯಂಥ ಹೊಟ್ಟೆಯ ಮೇಲೆ ಆ ವಜ್ರಪದಕ... ಬೀಳುತ್ತಿದ್ದವು. ನಾನು ಸುಮ್ಮನೆ ಕ... ನೋಡುತ್ತಿದ್ದೆ.

ಜಗತ್ತಿನ ಕ್ರಾಂತಿಕೇಂದ್ರ—ರಶಿಯ

"ನಾಗರಿಕ"ರಿಂದ

★

'ಸಾಮುದಾಯಿಕ ಕೃಷಿ'ಯ ಪ್ರಯೋಗದಿಂದ, ಒಕ್ಕಲಿಗರು ಸುಸಂಪನ್ನರಾದರು. ರಶಿಯದ ಸಾಮ್ಯವಾದಿ ಪ್ರಯೋಗದ ಕಡುಹಗೆಗಳಾದ 'ಕೊಶ್ಯಾಕ'ರೆಂಬ ಬಲಿಷ್ಠ ರೈತರೇ ಇಂದು ಅದರ ಬೆನ್ನೆಲುಬಾಗಿದ್ದಾರೆ; ಅದರ ಬಲಿಷ್ಠ ಸಂಘಟನೆಗೆ ಕಾರಣರಾಗಿದ್ದಾರೆ. ಸಾಮುದಾಯಿಕ ಕೃಷಿಯು ಜನತೆಗೆ ಜನತೆಯನ್ನೇ ಶಿಸ್ತು, ಒಕ್ಕಟ್ಟು, ನಾಗರಿಕತೆ, ಸಂರಕ್ಷಣ ಶಕ್ತಿಗಳಿಂದೊಡಗೂಡುವಂತೆ ಮಾಡಿತು. ರಶಿಯದ ಸೈನಿಕರು ತಿಂದು, ತೇಗಿ, ತಿರುಗಾಡುವ ಕೊಬ್ಬಿದ ಗೂಳಿಗಳಲ್ಲ; ಸುಸಂಸ್ಕೃತ ನಾಗರಿಕರು, ಸದ್ಗೃಹಸ್ಥರು. ರಶಿಯವನ್ನು ಕೆಣಕುವುದು ಫಾಸಿಸ್ಟ ರಾಷ್ಟ್ರಗಳಿಗೆ ಹಗುರಾದ ವಿಷಯವಲ್ಲ.

★

ರಶಿಯವೆಂದರೆ ಒಂದು ಹೊಸ ವಿಷಯದ ಪ್ರಯೋಗಶಾಲೆ. ಅದರ ಪ್ರಯೋಗಗಳ ಪರಿಣಾಮವೇನೆಂಬುದನ್ನು ಈಗಲೇ ನಿರ್ಧರಿಸುವದು ಅಸಾಧ್ಯ. ಆದರೆ ಆ ಪ್ರಯೋಗಶಾಲೆಯ ಕೆಲಸಗಾರರಿಗೆ ತಮ್ಮ ಭಾವೀ ರಾಷ್ಟ್ರನಿರ್ಮಾಣದ ವಿಷಯದಲ್ಲಿ ನಿಶ್ಚಿತವಾದ ಕನಸುಗಳಿವೆ. ಅವುಗಳನ್ನು ನಿಜಸ್ವರೂಪಕ್ಕೆ ತಂದೇ ತೀರಬೇಕೆಂಬುದು ಅವರ ಹಟ. "ಅದೆಲ್ಲ ಹುಚ್ಚು; ತಮ್ಮ ಜಾಣತನದ ಜಾಲದಲ್ಲಿ ತಾವೇ ಉಸುರುಗಟ್ಟಿ ಸಾಯುವುದು ಖಂಡಿತ"ವೆಂದು ಆ ಪ್ರಯೋಗಗಳನ್ನು ನಿರೀಕ್ಷಿಸುತ್ತಿರುವ ಕೆಲವು ಹೊರಗಿನ ಜಾಣರು (?) ಅನ್ನುತ್ತಿರುವರು. ಆದರೆ ಇಂದು ರಶಿಯದಲ್ಲಿ ಸಾಗಿದ ಸಂಘಟನೆ, ಲೋಕಶಿಕ್ಷಣ, ಶಕ್ತಿಸಂವರ್ಧನಗಳ ಸಾಧನ ಪ್ರಯತ್ನಗಳ ಕಡೆಗೆ ನಾವು ಕೂಲಂಕಷವಾಗಿ ಲಕ್ಷ್ಯ ಕೊಟ್ಟರೆ, ರಶಿಯವು ತನ್ನ ಕನಸನ್ನು ಸಾಕ್ಷಾತ್ಕರಿಸಿಕೊಳ್ಳುತ್ತಲೇ ಸಾಗುತ್ತಿದೆಯೆಂದು ಮನಗಾಣದಿರದು.

೧೯೩೨ರ ಹಿಂದೆ ರಶಿಯದ ಸಾಮಾನ್ಯಸ್ಥಿತಿ ಹೇಗಿತ್ತೆಂಬುದು ಒಂದೆರಡು ಪ್ರಾಂತಗಳ ಆಗಿನ ಅವಸ್ಥೆಯನ್ನು ಲಕ್ಷ್ಯಕ್ಕೆ ತಂದುಕೊಂಡರೆ ತಿಳಿಯುವದು. ಯುಕ್ರೇನ ಪ್ರಾಂತದ ರೆಶಿಟೆಲವಕೊ ಎಂಬ ಊರು ತೀರ ಬಡತನದಲ್ಲಿತ್ತು. ಸರಕಾರವು ತೆರಿಗೆ ತೆಗೆದುಕೊಂಡು ಉಳಿದ ಧಾನ್ಯವು ಅಲ್ಲಿಯ ಬಡವರಿಗೆ ಎಂಟು ತಿಂಗಳು ಕೂಡ ಸಾಲುವಂತಿರಲಿಲ್ಲ. ಕೊನೆಯ ನಾಲ್ಕು ತಿಂಗಳು ಅವರಿಗೆ ಕೂಳುಕೂಳೆನ್ನುವ ಸ್ಥಿತಿ ಬರುತ್ತಿತ್ತು. ಆಗ ಅವರು ತಮ್ಮ ಬೂಟು ಕೋಟುಗಳನ್ನು ಮಾರಿ ಹೊರಗಿನಿಂದ ಅನ್ನವನ್ನು ತರಿಸುತ್ತಿದ್ದರು. ಆದರೆ ೧೯೩೨ರಿಂದ ೧೯೩೭ರ ವರೆಗಿನ ಅವಧಿಯೆಂದರೆ ರಶಿಯದ ಪುನರ್ಜೀವನಾವಧಿ. ಮೊದಲು ಯಾವ ರೈತನ ಹತ್ತರ ಒಂದು ಹಸುವಾಗಲಿ, ಹಂದಿಯಾಗಲಿ ಇರುತ್ತಿರಲಿಲ್ಲವೋ ಅವನ ಹತ್ತರ ಇಂದು ತಪ್ಪ ಸಾಗುವಳಿಗೂ ಉಪಜೀವಿಕೆಗೂ ಬೇಕಾಗುವಷ್ಟು ದನಗಳೂ, ಕೋಳಿ ಕುರಿಗಳೂ ಕಂಡುಬರುತ್ತವೆ. ತಿನ್ನಲಿಕ್ಕೆ ತತ್ತಿ, ಬೆಣ್ಣೆ, ಮಾಂಸ ಸಾಕಷ್ಟು ಸಿಗುತ್ತಿದೆ. ಪ್ರಾಂತದ ಹೊಲಗಳನ್ನೆಲ್ಲ ಒಂದುಗೂಳಿಸಿದ್ದರಿಂದ ಸಾಮುದಾಯಿಕವಾಗಿ ದುಡಿದು ಬೇಕಾದಷ್ಟು ಧಾನ್ಯವನ್ನು ಬೆಳಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ. ಕ್ಯುಬನ್ ಪ್ರಾಂತದ ಕೋಶ್ಯಾಕ ಜನರು ರಶಿಯದ ಹೊಸ ಸರಕಾರಕ್ಕೆ ಬಹಳ ವಿರೋಧಿಗಳಾಗಿದ್ದರು. ಕೋಶ್ಯಾಕರು ಬಹು ಬಲಿಷ್ಠರು. ಅಂತಹರ ಸಹಕಾರವು ಸರಕಾರಕ್ಕೆ ಅಗತ್ಯವಾದುದು. ಆದರೆ ಕ್ರಮೇಣ ಸಾಮುದಾಯಿಕವಾಗಿ ಹೊಲ ಸಾಗುಮಾಡುವ ಪದ್ಧತಿಯು ಬೆಳೆದುದರಿಂದ ಕೊಶ್ಯಾಕರ ಮೊದಲಿನ ಬಡತನವು ಕಡಿಮೆಯಾಗಹತ್ತಿತ್ತು. ಸರಕಾರವೂ ಅವರಿಗೆ ಕ್ರಮೇಣ ಶಸ್ತ್ರಸ್ವಾತಂತ್ರ್ಯವನ್ನು ಕೊಟ್ಟುದಲ್ಲದೆ, ಅವರ ಸುಖ ಸೌಕರ್ಯಗಳಿಗೆ ಸರಿಯಾದ ಏರ್ಪಾಡು ಮಾಡಿಕೊಟ್ಟಿತು. ಇದರಿಂದ ಕೊಶ್ಯಾಕರು ಇಂದಿನ ಸರಕಾರದೊಡನೆ ನಿಷ್ಠೆಯಿಂದ ವರ್ತಿಸಹತ್ತಿದ್ದರು. ಹೀಗೆ ರಶಿಯದಲ್ಲಿ ಎಲ್ಲಿ ನೋಡಿದಲ್ಲಿ, ಸಾಮಾನ್ಯ ಜೀವನದ ಸುಖಸೌಕರ್ಯಗಳು ಬೆಳೆದುದರ ಪರಿಣಾಮವಾಗಿ, ಜನರಲ್ಲಿ ಸರಕಾರದ ನವರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಪ್ರೀತಿಯೂ ಸಹಾಯವೂ ಹೆಚ್ಚುತ್ತಿದೆ.

ಸಾಮಾನ್ಯ ರೈತನ ಈ ಸುಖಸೌಕರ್ಯವು ಲಷ್ಕರೀ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ದೊಡ್ಡ ಪ್ರಮಾಣದಲ್ಲಿ ಹೊಸ ಸಾಧನಗಳಿಂದ ಹೊಲಗಳನ್ನು ಹುಲುಸಾಗಿ ಮಾಡಲು

ಬರುವದು. ಒಕ್ಕಲಿಗನಿಗೆ ಯಂತ್ರಗಳ ಜ್ಞಾನವಾಗುತ್ತದೆ. ಕೂಡಿ ಕೆಲಸಮಾಡುವ ರೂಢಿಯಾಗಿ ರಾಷ್ಟ್ರಸಂಘಟನೆಯು ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಸರಕಾರಕ್ಕೆ ಇಡಿ ದೇಶದ ಹೊಲಗಳ ಮೇಲೆ ಅಧಿಕಾರ ಉಳಿಯುತ್ತದೆ. ಇಡಿ ಊರೇ, ಪ್ರಾಂತವೇ ಒಂದೆನಿಸುವದರಿಂದ ಯುದ್ಧಕಾಲದಲ್ಲಿ ಶತ್ರುಗಳಿಗೆ ದೇಶದ ಯಾವ ಭಾಗದಲ್ಲಿಯೂ ಮೋಸದಿಂದ ನೆಲೆಗೊಳ್ಳಲಿಕ್ಕೆ ಸಾಧ್ಯವಾಗುವದಿಲ್ಲ. ರೈತರೆಲ್ಲರಿಗೂ ಇಡಿ ಊರಿನ ಹೊಲಗಳು ತಮ್ಮವು ಎನಿಸುವದರಿಂದ ಅವರು ಆ ಊರನ್ನು ಹಗೆಗಳಿಂದ ಸಂರಕ್ಷಿಸಲು ಜೀವದ ಹಂಗು ದೊರೆದು ಕಾದಾಡಲು ಸಿದ್ಧರಾಗುವರು.

ಸಾಗುವಳಿಯ ವಿಷಯದಲ್ಲಿ ಸಾಕಷ್ಟು ಮುಂವಡಿಯಿಡುತ್ತಿರುವಾಗಲೇ ರಶಿಯಕ್ಕೆ ತನ್ನ ಖನಿಜಸಂಪತ್ತಿಯ ಕಡೆಗೆ ಲಕ್ಷ್ಯ ಹೋಯಿತು. ಕ್ರಾಂತಿಪೂರ್ವದಲ್ಲಿ ಕನಸಿನಲ್ಲಿ ಕೂಡ ನೆನೆಯಲಾರದಷ್ಟು, ತನ್ನ ಭೂಮಿಯು ಸಂಪತ್ ಸಮೃದ್ಧವಾಗಿದೆಯೆಂದು ರಶಿಯಕ್ಕೆ ಇಂದು ಅನಿಸಹತ್ತಿದೆ. ಅತ್ತ ಹೊಲಗಳಲ್ಲಿ ತಾವು ಉಂಡು ಮಿಕ್ಕುದನ್ನು ಹೊರಗೆ ಮಾರುವಷ್ಟು ಹುಟ್ಟಿಸಲು ಯತ್ನ ನಡೆದಿದೆ. ಇತ್ತ ರಶಿಯದ ಸಮಗ್ರ ಖನಿಜ ಭಂಡಾರವನ್ನು ಹೊರದೆಗೆದು ಯಾವ ಮೂಲವಸ್ತುವಿಗಾಗಿಯೂ ಪರದೇಶದವರ ಮುಖ ನೋಡಬಾರದೆಂಬ ಹಟದಿಂದ ಸಂಶೋಧನೆಗಳು ನಡೆದಿವೆ. ಆದಕ್ಕಾಗಿ ಉತ್ತರ ಮಹಾಸಾಗರದ ದಡದಲ್ಲಿ ಖನಿಜ ಸಂಶೋಧನೆಗಾಗಿ ೩೫೦೦೦ ಜನವಸತಿಯ ಒಂದು ಪಟ್ಟಣವೇ ನಿರ್ಮಿತವಾಗಿದೆ. ಈಗಾಗಲೆ ಉರಲ ಪರ್ವತದಲ್ಲಿ ೧೫ ಅಬ್ಜ ಟನ್ ಪೊಟ್ಯಾಶ ಎಂಬ ಧಾತುವಿದೆಯೆಂದು ನಿರ್ಧರಿಸಿದ್ದಾರೆ. ಅವರು ಮೇಲಿಂದ ಮೇಲೆ ಕೈಕೊಳ್ಳುವ ಪಾಂಚವಾರ್ಷಿಕ ಯೋಜನೆಗಳಿಂದ ಕಬ್ಬಿಣ, ಮ್ಯಾಂಗನೀಸ, ಸತುವು, ಅಲ್ಯುಮಿನಂ, ಸುಪರಫಾಸ್ಫೆಟ್ಸ್, ಎಣ್ಣೆಗಳು, ಹತ್ತಿ, ಕ್ರೊಮಾಯಿಡ್ ಮತ್ತು ಸೆಲ್ಯುಲಾಯಿಡಗಳಂತಹ ನಿತ್ಯೋಪಯೋಗಿ ವಸ್ತುಗಳನ್ನು ತಮಗೆ ಸಾಕಾಗುವಷ್ಟು ಸಿದ್ಧಗೊಳಿಸಿ ಬೇರೆ ದೇಶಗಳಿಗೆ ಕೂಡ ಪೂರೈಸುವ ಧೈರ್ಯವುಳ್ಳವರಾಗಿದ್ದಾರೆ. ರಶಿಯವು ಇನ್ನು ದಿನಾಲು ೬೦ ಸಾವಿರ ಟನ್ನ ಉಕ್ಕನ್ನೂ, ೫೦ ಸಾವಿರ ಟನ್ ಸಂಯುಕ್ತ ಧಾತುಗಳನ್ನೂ ನಿರ್ಮಾಣ ಮಾಡಬಲ್ಲದೆಂದು ಸೋವಿಯಟ್ ಸರಕಾರವು ಘೋಷಿಸಿದೆ.

ರಶಿಯದಲ್ಲಿ ಸಾಮ್ಯವಾದದ ಉದಯವಾದಂದಿನಿಂದ ಸಾಮ್ರಾಜ್ಯವಾದಿ ರಾಷ್ಟ್ರಗಳಿಗೆ ಜೀವ ನಡುಗುತ್ತಲೇ ಇದೆ. ಇಂದು ಇಟಲಿ ಜಪಾನಗಳು ಪ್ರತ್ಯಕ್ಷವಾಗಿಯೂ, ಜರ್ಮನಿಯು ಅಪ್ರತ್ಯಕ್ಷವಾಗಿಯೂ ಬಡ ರಾಷ್ಟ್ರಗಳನ್ನು ... ಪ್ರಯತ್ನ ಪಡುತ್ತಿರುವವು. ಇದರ ಮೂಲದಲ್ಲಿ ... ಸುತ್ತಲೂ ಸಾಮ್ರಾಜ್ಯವಾದಿಗಳ ಫ್ಯಾಸಿಜಮ್ಮಿನ ... ರಚನೆಯ ಉದ್ದೇಶವೇ ಇದೆ. ಜರ್ಮನಿಗೂ ಜ... ಮಧ್ಯದಲ್ಲಿರುವ ರಶಿಯವು ಅವೆರಡಕ್ಕೂ ಒಂದು ... ಮುಳ್ಳಾಗಿದೆ. ಸಂದರ್ಭ ಸಿಕ್ಕಂತೆಲ್ಲ ಅದನ್ನು ... ಹೋಗುವ ಹಂಚಿಕೆಗಳನ್ನು ಅವು ಹಾಕುತ್ತಿವೆ. ... ಬಂದರೆ ರಶಿಯವನ್ನು ಸುಟ್ಟುಬಿಡುವ ಪ್ರಚಂಡ ... ಸಾಮಗ್ರಿಗಳ ತಯಾರಿಯನ್ನು ಅವೆರಡೂ ನಡೆಸಿವೆ. ರಶಿಯವು ಈ ಬೆದರುಗುಂಡಿಗೆ ಇಂದು ಅಂಜ... ೧೯೦೪ರಲ್ಲಿ ಪುಟ್ಟ ಜಪಾನು ತನ್ನ ಮೇಲೆ ಹೇರಿದ ... ಅಪಮಾನದ ಸೇಡು ಇಂದು ರಶಿಯದ ಹೊಟ್ಟೆಯಲ್ಲಿ ... ಮಳಿಸುತ್ತಿದೆ. ಅಲ್ಲದೆ ತನ್ನ ಸಾಮಾಜಿಕ ... ಸುವ್ಯವಸ್ಥೆಯಿಂದ ರಶಿಯವು ಪ್ರಸಂಗ ಬಂದ... ಜಪಾನಿನೊಡನೆ, ಅತ್ತ ಜರ್ಮನಿಯೊಡನೆ ಒಂದೇ ... ಕುಸ್ತಿಯಾಡಲು ಸಮರ್ಥವಾಗಿ ಕೂತಿದೆ ಎನ್ನಲು ... ಯಿಲ್ಲ.

ರಶಿಯದ ಇಂದಿನ ಸಂಘಟನೆಯನ್ನು ಚೆನ್ನಾಗಿ... ರಿಗೆ ಜರ್ಮನಿ ಜಪಾನಗಳ ಬೆದರಿಕೆಯು ಹಾಸ್ಯಾಸ್ಪ... ದಿರದು. ರಶಿಯವು ತನ್ನ ಕ್ರಾಂತಿಪೂರ್ವದ ಸಾ... ನಿರಾಕರಿಸಿ ಬಿಟ್ಟುದರಿಂದ ಅದಕ್ಕೆ ಈಗ ಬರಿ ೧... ರೂಪಾಯಿಯ ಸಾಲವಿದೆ. ೧೯೩೩ರಿಂದ ೧೯೩೫... ವ್ಯಾಪಾರದಲ್ಲಿ ಅದಕ್ಕೆ ೯ ಕೋಟಿ ರೂಪಾಯಿ ಲಾಭ... ಜಪಾನ ಮತ್ತು ಜರ್ಮನಿಯು ಪರರಾಷ್ಟ್ರ ವ್ಯಾ... ವಿಷಯದಲ್ಲಿ ಮೇಲಿಂದ ಮೇಲೆ ಎಬ್ಬಿಸುವ ಗುಲ್ಲು... ದಲ್ಲಿ ಕೇಳಬರುವದಿಲ್ಲ. ಏಕೆಂದರೆ ರಶಿಯವು ... ಪೂರ್ಣವಾಗಿದೆ. ಆದರೆ ಜಪಾನಕ್ಕೆ ಕಚ್ಚಾ ಮಾ... ಪೂರ್ಣವಾಗಿ ಪರದೇಶಗಳ ಮೇಲೆ ಅವಲಂಬಿಸಬೇಕು... ಜರ್ಮನಿಯು ಕೂಡ ರಾಸಾಯನಿಕವಾಗಿ ಆಹಾರ ಸಾ... ಯನ್ನು ಒಂದು ವೇಳೆ ತಯಾರಿಸಬಹುದು. ಯಂತ್ರ, ಶಸ್ತ್ರಾಸ್ತ್ರ, ಕಾರಖಾನೆಗಳಿಗೆ ಬೇಕಾದ ... ಮೂಲವಸ್ತುಗಳಿಗಾಗಿ ಜರ್ಮನಿಯು ಹೊರದೇಶಗಳ ... ನೋಡದೆ ಗತ್ಯಂತರವಿಲ್ಲ.

ಇನ್ನು ಪರದೇಶಗಳ ಆಕ್ರಮಣ ದೃಷ್ಟಿಯಿಂದ ರಶಿಯದ ಪ್ರಾಕೃತಿಕ ಸ್ಥಿತಿಯು ಬಹಳ ಸಂರಕ್ಷಣ... ಜರ್ಮನಿ ಜಪಾನಗಳಂತೆ ರಶಿಯವು ಜನಸಂಖ್ಯೆ... ಕಿಕ್ಕಿರಿದಿಲ್ಲ. ಅದು ವಿಶಾಲವಾಗಿದೆ. ಹಲಕೆಲವು ...

ಗಳಿಂದ ಅಲ್ಲಿಯ ಪ್ರಾಣ-ಧನ-ಹಾನಿ ಮಾಡಲಿಕ್ಕೆ ಬರುವಂತಿಲ್ಲ. ಈ ದೃಷ್ಟಿಯಿಂದ ಜಪಾನಕ್ಕೆ ಹೆಚ್ಚಿನ ಅಂಜಿಕೆಯಿದೆ. ರಶಿಯದಿಂದ ಹೊರಟ ಕೆಲವೇ ವೈಮಾನಿಕರು ಜಪಾನದ ದಟ್ಟಣಿಸಿದ ಪಟ್ಟಣಗಳನ್ನು ಭಸ್ಮಗೊಳಿಸಿ ಎರಡು ಗಂಟೆಗಳಲ್ಲಿ ಹಿಂದಿರುಗಿ ಬರಬಹುದು. ವಸ್ತುತಃ ಅಬಿಸೀನಿಯವು ಆಧುನಿಕ ಯುದ್ಧಕಲೆಯಲ್ಲಿ ತಜ್ಞವಾಗಿರದಿದ್ದರೂ, ಇಟಲಿಯಂತಹ ಪ್ರಬಲವೈರಿಗೆ ಅದನ್ನು ಹಾಳುಗೆಡವಲಿಕ್ಕೆ ಅನೇಕ ತಿಂಗಳುಗಳು ಬೇಕಾದುದು, ಅಬಿಸೀನಿಯದ ದುಷ್ಪ್ರವೇಶ್ಯವಾದ ಪ್ರಾಕೃತಿಕ ಸ್ಥಿತಿಯಿಂದಲೇ. ಅಬಿಸೀನಿಯವು ದುಷ್ಪ್ರವೇಶ್ಯವಿದ್ದರೆ ರಶಿಯವು ವಿಶಾಲವಾಗಿದೆ. ಅದನ್ನು ಹಾಳುಗೆಡಹಲು ಅಸಂಖ್ಯ ವಿಮಾನಗಳೂ ಯುದ್ಧಸಾಮುಗ್ರಿಗಳೂ ಬೇಕು.

ದೇಶದಲ್ಲಿ ಯುದ್ಧಕೌಶಲ್ಯವೂ ಮದ್ದಿನ ಸಾಮುಗ್ರಿಯೂ ಬೇಕಾದಷ್ಟು ಬೆಳೆದಿದ್ದರೂ ಜನಸಂಖ್ಯೆಯೂ, ಯುದ್ಧಕುಶಲರ ಸಂಖ್ಯೆಯೂ ಲಷ್ಕರೀ ದೃಷ್ಟಿಯಿಂದ ಮುಖ್ಯವಾದ ಸಂಗತಿಗಳಾಗಿವೆ. ಇಂದು ರಶಿಯದಲ್ಲಿ ಬಹುವರ್ಷಗಳವರೆಗೆ ಯುದ್ಧ ನಡೆದರೂ ಸಾಲುವಷ್ಟು ಯುದ್ಧತಜ್ಞರ ಸಂಖ್ಯೆ ಬೆಳೆದಿದೆ. ಅಲ್ಲದೆ ಸಾಮಾನ್ಯ ನಾಗರಿಕರೆಲ್ಲರೂ ಯುದ್ಧಕುಶಲರಾಗುವಂತೆ ಒಂದು ಸಂಸ್ಥೆಯೇ ಅಲ್ಲಿ ಸ್ಥಾಪಿಸಲ್ಪಟ್ಟಿದೆ. ಅದಕ್ಕೆ 'ನಾಗರಿಕ ಸಂರಕ್ಷಕ ಸಂಸ್ಥೆ' ಯೆಂದು ಹೆಸರು. ದೇಶದ ಎಲ್ಲ ಸಂಘ, ಶಾಲೆ, ಕಾಲೇಜ, ಕಾರಖಾನೆಗಳಲ್ಲಿಯೂ ನಾಗರಿಕ ಸಂರಕ್ಷಕ ಸಂಸ್ಥೆಯ ಶಾಖೆಗಳಿವೆ. ೧೯೩೫ರಲ್ಲಿ ಈ ಸಂಸ್ಥೆಯು ೩೫೦೦ ಜನರಿಗೆ ವೈಮಾನಿಕ ಶಿಕ್ಷಣವನ್ನು ಕೊಟ್ಟಿತು. ೧೯೩೬ರಲ್ಲಿ ೮೦೦೦ ವೈಮಾನಿಕರನ್ನು ತಯಾರಿಸಿತು. ೧೯೩೪ ರಿಂದ ೩೬ರೊಳಗೆ ಪ್ರತಿ ವರ್ಷಕ್ಕೆ ೧೦ಲಕ್ಷ ಜನರಿಗೆ ಯುದ್ಧದಲ್ಲಿ ಉಪಯೋಗಿಸುವ ನಿಶಾನೆಯ ಗುರುತುಗಳ ಶಿಕ್ಷಣ ಕೊಡಲಾಯಿತು. ೧೦ಲಕ್ಷ ಜನರಿಗೆ ವಿಷವಾಯುವಿನಿಂದ ರಕ್ಷಿಸಿಕೊಳ್ಳುವ ಬಗೆಯನ್ನು, ಸಂಗ್ರಾಮಯುಕ್ತಿಗಳನ್ನು ಕಲಿಸಲಾಯಿತು. ೧೫ಲಕ್ಷ ಜನರಿಗೆ ಕುದುರೆಗಳನ್ನು ಸಾಕುವ ಶಿಕ್ಷಣವು ಸಿಕ್ಕಿತು. ೨೦೦೦ ಜನರಿಗೆ ವಿಮಾನಗಳ ಯಂತ್ರದ ಜ್ಞಾನದಲ್ಲಿ ತಜ್ಞರನ್ನಾಗಿ ಮಾಡಲಾಯಿತು. ಇಂದಿನ ರಶಿಯನ್ ತರುಣರಿಗೆ ಎಲ್ಲರಿಗಿಂತ ವಿಮಾನಿನ ಹುಚ್ಚು ಹೆಚ್ಚಿದೆ. ದೇಶದ ತರುಣರೆಲ್ಲ ವೈಮಾನಿಕರಾಗಬೇಕೆಂದು ಅವರ ಪ್ರತಿಜ್ಞೆಯಿದೆ. ದೇಶದ ತುಂಬೆಲ್ಲ ನಾಗರಿಕ ಸಂರಕ್ಷಕ ಸಂಸ್ಥೆ'ಯು ಪ್ರದರ್ಶನಗಳನ್ನು ತೆರೆದು ಅವುಗಳಲ್ಲಿ ವಿಮಾನ, ಶಸ್ತ್ರಾಸ್ತ್ರ, ಯಂತ್ರಗಳ ತಿಳುವಳಿಕೆಯಾಗುವಂತೆ ವ್ಯವಸ್ಥೆಯನ್ನು ಮಾಡಿದೆ. ಇದರಿಂದ ನಾಗರಿಕನು ಯಾವ ಉದ್ಯೋಗದಲ್ಲಿಯೇ ಇರಲಿ, ಪ್ರಸಂಗ ಬಂದಾಗ ಅವನು ಅತ್ಯುತ್ತಮ ಸೈನಿಕನೂ ಆಗಬಲ್ಲನು.

ಸಾಮಾನ್ಯವಾಗಿ ಸೈನ್ಯದಲ್ಲಿ ಸೋಲ್ಜರರೆಂದರೆ ಎಲ್ಲ ದೇಶಗಳ ನಾಗರಿಕರೂ ಅಂಜುತ್ತಾರೆ; ಹೇಸುತ್ತಾರೆ. ಸೈನಿಕರಾದರೂ ಯುದ್ಧಕ್ಕೆ ಸಿದ್ಧರಾಗುವದು ಸಂಬಳದ ಆಶೆಯಿಂದಲೇ ಹೊರತು ದೇಶಾಭಿಮಾನದಿಂದಲ್ಲ. ಕ್ರಾಂತಿಪೂರ್ವದಲ್ಲಿ ರಶಿಯದ ಸೈನಿಕನಿಗೆ ಬೇಕಾದಷ್ಟು ವಸ್ತ್ರಗಳೂ, ಹೊಟ್ಟೆತುಂಬ ಆಹಾರವೂ ಸಿಗುತ್ತಿತ್ತು. ನಾಗರಿಕರು ಉಪವಾಸವಿದ್ದರೂ ಸೈನಿಕನು ಉಂಡು ತೇಗುತ್ತಿದ್ದನು. ಸೈನಿಕನು ನಾಗರಿಕರ ಮೇಲೆ ಮಾಡುವ ಅತ್ಯಾಚಾರವು ಕ್ಷಮಿಸಲ್ಪಡುತ್ತಿತ್ತು. ಆದುದರಿಂದಲೇ ನಾಗರಿಕರು ಸೈನಿಕರ ವಿಷಯದಲ್ಲಿ ಅಂಜಿಕೆ ಹೇಸಿಕೆಯುಳ್ಳವರಾಗಿದ್ದರು. ಆದರೆ ಈಗಿನ ರಶಿಯದ ಸ್ಥಿತಿಯು ತೀರ ಬದಲಾಗಿದೆ. ಇಂದು ರಶಿಯದಲ್ಲಿ ಸೈನಿಕನೆಂದರೆ ಜನರಿಗೆ ಪ್ರೇಮ ಆತ್ಮೀಯಭಾವಗಳಿವೆ. ಸೈನಿಕರೂ ಸುಶಿಕ್ಷಿತರಾಗಿರುವರಲ್ಲದೆ ಅತ್ಯಂತ ವಿನಯಶೀಲರಾಗಿರುತ್ತಾರೆ. ಮೊದಲಿನಂತೆ ಬೀದಿಗಳಲ್ಲಿ ಸೆರೆಕುಡಿದು ಮೈಮರೆತು ಬಿದ್ದ ಸೈನಿಕರು ಈಗ ನಿಮಗೆ ಒಬ್ಬರೂ ಸಿಗಲಾರರು.

ಇಂದಿನ ಸೈನಿಕರು ಮೊದಲಿನವರಿಗಿಂತ ಹೆಚ್ಚು ಸುಖಿಗಳೂ ಸ್ವತಂತ್ರರೂ ಆಗಿದ್ದಾರೆ. ಪರೇಡ ಗ್ರೌಂಡಿನಲ್ಲಿರುವಾಗ ಮಾತ್ರ ಅವರು ಸೈನಿಕರ ಬಿರುಸಾದ ಕಟ್ಟುಗಳಿಗನುಸರಿಸಿ ವರ್ತಿಸಬೇಕಾಗುತ್ತದೆ. ಮಿಕ್ಕ ಸಮಯಗಳಲ್ಲಿ ಅವರು ಸ್ವತಂತ್ರರಾಗಿ ಮಿಕ್ಕ ನಾಗರಿಕರಂತೆ ಇರುತ್ತಾರೆ. ಸಿನೇಮಾ ನಾಟಕಗಳಲ್ಲಿ ಒಬ್ಬ ಸಾಮಾನ್ಯ ದರ್ಜೆಯ ಶಿಪಾಯಿಯೂ, ಅವನ ಸೇನಾಧಿಪತಿಯೂ ಒಂದೇ ಬೆಂಚಿನ ಮೇಲೆ ನಿಸ್ಸಂಕೋಚವಾಗಿ ಕೂಡುವರು. ವಾರ್ಷಿಕ ಕ್ಯಾಂಪುಗಳಲ್ಲಿ ಸೈನಿಕರಿಗೆ ಅತ್ಯುತ್ತಮ ಗಾಯನ, ನರ್ತನ, ನಾಟಕಗಳ ಸವಿ ಸಿಗುವಂತೆ ಏರ್ಪಡಿಸಿರುತ್ತದೆ. ಸೈನಿಕರ ಶಾಲೆಗಳಲ್ಲಿ, ಸೊಕ್ಕಿಲ್ಲದಂತೆ ವಿನಯಪೂರ್ಣನಾದ ನಾಗರಿಕನಾಗುವಂತೆ ಪ್ರತಿಯೊಬ್ಬನಿಗೂ ಶಿಕ್ಷಣವು ಸಿಗುತ್ತದೆ. ಆದುದರಿಂದಲೇ ರಶಿಯದಲ್ಲಿ ಸೈನಿಕರೆಂದರೆ ಗೌರವಾಸ್ಪದ ಸದ್ಗೃಹಸ್ಥರಾಗಿದ್ದಾರೆ.

ಅಶಿಕ್ಷಿತ ಅಥವಾ ಯಾಂತ್ರಿಕ ಜ್ಞಾನವಿಲ್ಲದ ಸೈನಿಕನೇ ರಶಿಯದಲ್ಲಿ ಸಿಗುವದಿಲ್ಲ. ಒಂದು ಸಲ ಲೆನಿನ್‌ಗ್ರಾಡದಲ್ಲಿ ಕೂಡಿಸಿದ ಸೈನ್ಯಪ್ರದರ್ಶನದಲ್ಲಿ ೧೨೦೦ ಎಂಜಿನಿಯರರು, ೧೫೦೦೦ ಮುರಿತ ಯಂತ್ರಜ್ಞರು, ೯೦೦ ವಾಹನ ತಜ್ಞರು,

೪೫೦ ರೇಲ್ವೆ ಯಂತ್ರಜ್ಞರು, ೧೦೦೦ದ ಮೇಲ್ಪಟ್ಟು ಡ್ರಾಯ್ವರರು, ೨೫೦೦೦ ನುರಿತ ಗುರಿಹೊಡೆಯಬಲ್ಲವರು, ಅಲ್ಲದೆ ನೂರುಗಟ್ಲೆ ವಿವಿಧ ವಿಮಾನತಜ್ಞರೂ ಇದ್ದರು. ಇವರಲ್ಲಿ ಒಬ್ಬನೂ ಅಶಿಕ್ಷಿತನಿರಲಿಲ್ಲ. ಸಾಮರ್ಥ್ಯದ ದೃಷ್ಟಿಯಿಂದ ರಶಿಯದ ಸೈನ್ಯ ಮಿಕ್ಕೆಲ್ಲ ದೇಶಗಳಿಗಿಂತ ಬಲಿಷ್ಠವಾಗಿದೆ. ರಶಿಯದ ಸೈನ್ಯವು ಈಗ ೧೩ ಲಕ್ಷ ಹೆಚ್ಚಾಗಿದೆ. ೧ ಕೋಟಿ ಸೈನ್ಯವು ಕಾದಿಡಲ್ಪಟ್ಟಿದೆ. ಆದರಲ್ಲಿ ೬೮ಲಕ್ಷ ಜನರು ಸೈನಿಕಶಿಕ್ಷಣ ಪಡೆದ ನಾಗರಿಕರೇ ಆಗಿದ್ದು ಬೇಕಾದ ಕ್ಷಣದಲ್ಲಿ ಯುದ್ಧಕ್ಕೆ ಸಿದ್ಧರಾಗುವರು. ರಶಿಯನ್ ಸೈನ್ಯದ ಮಹತ್ವದ ವೈಶಿಷ್ಟ್ಯವೊಂದಿದೆ. ಒಟ್ಟು ಸೈನ್ಯದಲ್ಲಿ ಎರಡು ಸ್ವತಂತ್ರ ಭಾಗಗಳಿವೆ. ಒಂದು ಭಾಗವು ಪೂರ್ವದಿಕ್ಕಿನ ರಕ್ಷಣೆಗಾಗಿ; ಇನ್ನೊಂದು ಪಶ್ಚಿಮಕ್ಕಾಗಿ. ಆವೆರಡರ ವ್ಯವಸ್ಥೆಯೂ ಸ್ವತಂತ್ರವಾಗಿ ಬೇ- ಯಾಗಿಯೇ ಇವೆ.

ಒಂದು ದೇಶವು ಸುಖವಾಗಿ ಉಂಡು ... ಬೇಕಾದರೆ ಈಗಿನ ಕಾಲದಲ್ಲಿ ಆವಶ್ಯಕ ... ಎರಡು. ಪರಕೀಯರ ಆಕ್ರಮಣದಿಂದ ರಕ್ಷಣ- ಪ್ರಜೆಗಳಿಗೂ ಸಾಕಷ್ಟು ಆಹಾರ ಮತ್ತು ಸೌಕರ್ಯಗಳು. ಆವೆರಡೂ ಇಂದು ರಶಿಯದ- ಗೊಳ್ಳುತ್ತಿವೆ. ಜಗವೆಲ್ಲ ಇಂದು ರಶಿಯದಲ್ಲಿ ... ತ್ತಿರುವ ಅಭೂತಪೂರ್ವ ರಾಷ್ಟ್ರನಿರ್ಮಾಣಕಾ- ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದೆ. ರಶಿಯವು ಜಗ- ಎಣಿಕೆಗಳನ್ನೆಲ್ಲ ಅಲ್ಲಗಳೆದು, ಇತಿಹಾಸ- ಕಾಣದ ಕ್ರಾಂತಿಯ ಕೇಂದ್ರವಾಗುತ್ತಿದೆ.

(ರೌಂಡಟೇಬಲ್ ಕ್ವಾರ್ಟರ್ಲಿಯ ಆ-

ಗುಪ್ತ ಜ್ವಾಲೆ

ಲೇಖಿಕೆಯರು:

ಸೌ. ಸುಭದ್ರಾಬಾಯಿ ಜೋಶಿ.

ಆ ಸೆರೆಯ ಬಾಟ್ಲಿ, ಆ ಸಿಗರೇಟಿನ ಪೆಟ್ಟಿಗೆಗಳೇ ಅವರಿಗೆ ನನಗಿಂತ ಹೆಚ್ಚು ಪ್ರಿಯವಾಗಿವೆ! ಆ ಗಂಡು ಹೆಣ್ಣು ಹಕ್ಕಿಗಳ ಪ್ರಣಯಾನಂದವನ್ನು ನೋಡಿ ನನಗೆ ಹೊಟ್ಟೆಕಿಚ್ಚು. ಅವರ ಬೂಟಿನ ನೋವು ನನಗೆ ದೊಡ್ಡದಲ್ಲ. ನನ್ನ ಹೃದಯಕ್ಕೆ ಆದ ಗಾಯ ಎಂತಹದು! ಬಾಳು ಮುಗಿಯಲಿಲ್ಲ; ಸಾವಿಗೆ ಧೈರ್ಯವಿಲ್ಲ! ....

ರಮಾ,

ನೀನು ಹೋದಾಗಿನಿಂದ ನನಗೆ ತೀರ ಒಬ್ಬಳೇ ಒಬ್ಬಳಾಗಿರುವಂತೆ ಅನಿಸಹತ್ತಿದೆ. ನೀನು ಇಲ್ಲಿ ಇರುವಾಗ ನಾವು ಎಷ್ಟು ಮೋಜು ಮಾಡಿದೆವು! ವಸಂತ ಮತ್ತು ನಾನು ಹರಟೆಕೊಚ್ಚುವಾಗ ದಿನದಿನವೂ ನಿನ್ನ ನೆನಪು ಮಾಡುತ್ತೇವೆ. ರಮಾ, ಬಹಳ ದಿನಗಳಾದುವು, ನಿನ್ನಲ್ಲಿ ಒಂದು ಸಂಗತಿಯನ್ನು ಕೇಳಬೇಕೆಂದು ಹವಣಿಸುತ್ತಲೇ ಇದ್ದೇನೆ. ಕೇಳಲೇ? ನೀನು ಕೋಪಿಸಿಕೊಳ್ಳಲಿಕ್ಕಿಲ್ಲವಷ್ಟೆ? ಯಾರು ಬಲ್ಲರವ್ವ! ಮದುವೆಯಾದಾಗಿನಿಂದ ನಿನ್ನ ಬಂಣ ಕೊಂಚ ಬದಲಾಗಿದೆ. ನಿಜವಾಗಿ ನೀನು ಮೊದಲಿನ ರಮೆಯಲ್ಲ ನೋಡೀಗ. ನೀನು ಇಲ್ಲಿ ಇದ್ದಾಗ ಮೊದಲಿನಂತೆ ಮನಬಿಚ್ಚಿ ನನ್ನೊಡನೆ ವರ್ತಿಸಲಿಲ್ಲ. ನನಗೂ ವಸಂತರಿಗೂ ಸಮಾಧಾನವೆನಿಸಬೇಕೆಂದು ನಮ್ಮ ಹಂಚಿಕೆಗಳಿಗೆ ನೀನು ತೋರಿಕೆಯ ಒಪ್ಪಿಗೆಯನ್ನು ಕೊಡುತ್ತಿದ್ದಿ. ಕೃಷ್ಣರಾಜಸಾಗರ ನೋಡಲಿಕ್ಕೆ ಹೋದಾಗಲೂ ನನ್ನೊಡನೆ ಸಂಕೋಚದಿಂದ ವರ್ತಿಸಿದಿ. ನನಗೇನು ತಿಳಿಯುವದಿಲ್ಲವೆಂದು ತಿಳಿಕೊಂಡೆಯಾ? ನಿಜವಾಗಿ ವಸಂತರೆಲ್ಲಿಯಾದರೂ ನಿನಗೆ ಮನಕ್ಕೆ ನಾಟುವ ಮಾತನ್ನಾಡಿರಬಹುದೇ ಎಂದು ಅಂಜಿಕೆಯಾಗುತ್ತದೆ. ಹಾಗೆ ಆಡುವ ಸ್ವಭಾವ ಅವರದಲ್ಲ, ಅವರೂ ಇಚ್ಛೆಯಿಲ್ಲದಿದ್ದರೂ ಒಮ್ಮೊಮ್ಮೆ ಬಾಯಿಂದ ಒಂದು ಒಗರು ಮಾತು ಜಾರಿಹೋಗಿ ಬಿಡುತ್ತದೆ. ರಮಾ, ಹೇಳಿ ನೀನು ಇತ್ತೀಚೆ ಯಾಕೆ ಖಿನ್ನಳಾಗಿ ತೋರುವಿ? ನಿನಗೇನು ಆಗುತ್ತಿದೆ? ನಿನಗೆ ಏನೋ ಮನಸ್ಸು ಕೊರೆಯುತ್ತಿದೆ ಖಂಡಿತ. ನಿನ್ನ ಇಳಿಮೋರೆಯನ್ನು ನೋಡಿ ನನಗೆ ಎಷ್ಟು ಕೆಡುಕೆನಿಸುತ್ತಿತ್ತು! ನನಗೆ ಎತ್ತಲೂ ಮನಸ್ಸು ಹತ್ತುತ್ತಿರಲಿಲ್ಲ. ಆದರೆ ವಸಂತರಿಗಾಗಿ ಹೇಗೂ ನಾನು ಕೆಲಸಮುಗಿಸುತ್ತಿದ್ದೆ. ರಮಾ, ನಿನ್ನ ದುಃಖವನ್ನು ಹೀಗೇ ಒತ್ತಿಡಬೇಕೆನ್ನುವಿಯಾ? ಇತ್ತೀಚೆ ನೀನು ಸೊರಗುತ್ತಲೂ ನಡೆದಿರುವೆ! ನನಗೆ ಹೇಳು ನೋಡೋಣ ನಿನಗೇನಾಗುವದೆಂದು. ನಾನು ವಸಂತರ ಸಹಾಯದಿಂದ ಕೂಡ ನಿನ್ನ ದುಃಖವನ್ನು ಇಲ್ಲದಂತೆ ಮಾಡಲಿಕ್ಕೆ ಸಾಧ್ಯವಿದ್ದಷ್ಟು ಯತ್ನಿಸುತ್ತೇನೆ. ರಮಾ ನಾವು ಇಂದಿನ ವರೆಗೆ ಅಚ್ಚ ಅಕ್ಕತಂಗಿಯರಂತೆ ಇದ್ದೆವು. ಚಿಕ್ಕಂದಿನ ಚಕ್ಕಂದದ ದಿನಗಳಲ್ಲಿ ನಾನು ಎಲ್ಲದರಲ್ಲಿ ನಿನ್ನ ಪಾಲುಗಾರಳಾಗಿದ್ದೆ. ನಾನು ನಿನ್ನ ನಿಜವಾದ ಪ್ರೀತಿಯ ಗೆಳತಿಯಲ್ಲವೇ? ಅಂದ ಮೇಲೆ ನಿನ್ನ ದುಃಖದ ಪಾಲುಗಾರಳಾಗುವ ಅಧಿಕಾರ ನನಗಿಲ್ಲವೇ? ನೀನು ಖಿನ್ನಳಾಗಿರುವಾಗ ನಾನು ಸಂತೋಷದಿಂದ ಇರುವದು ಹೇಗೆ? ನೀನು ನನ್ನಿಂದ ಏನನ್ನೋ ಮುಚ್ಚಿಡುತ್ತಿರುವಿ. ನಾನು ನಿನಗೆ ಈ ವಿಷಯಕ್ಕೆ ಒಂದು ಸಲ ಕೇಳಿದ್ದೆ. ಅದಕ್ಕೆ "ಅದು ಯಾವಾಗಲೂ ಹಾಗೇ, ಮತ್ತಾವಾಗಲಾದರೂ ಹೇಳುತ್ತೇನೆ" ಎಂದು ಹಾರಿಕೆಯ ಉತ್ತರವನ್ನು ಕೊಟ್ಟೆದ್ದೆ. ಅಥವಾ ಉತ್ತರ ಕೊಡುವದು ನಿನ್ನ ಜೀವದ ಸುತ್ತು ಬಂದಿರಬಹುದು. ನನ್ನ ಮನಸ್ಸಿನಿಂದ ಅದು ಮರೆಯಾಗದು. ನಾನು ಸುಖದ ಶಿಖರದಲ್ಲಿರುವಾಗ ನೀನು ಕೊರಗುತ್ತಿರುವದನ್ನು ಹೇಗೆ ನೋಡಲಿ? ವಸಂತರು ಕೂಡ ಒಂದು ದಿನ ಕೇಳುತ್ತಿದ್ದರು. ನಾನೂ ಅವರೂ ನಿನ್ನ ವಿಷಯದಲ್ಲಿ ಏನೇನೋ ಮಾತಾಡುತ್ತಲಿದ್ದೆವು. ನೀನು ಅವರಿಗೆ ಬಹಳ ಸೇರುತ್ತಿಯೆಂದು ಅವರೇ ಸರಳವಾಗಿ ಹೇಳಿದರು. ನಿನ್ನ ಗುಣ, ನಿನ್ನ ವಿಚಾರ, ನಿನ್ನ ನನ್ನ ಪ್ರೇಮ, ಇವುಗಳನ್ನು ಅವರು ಅನುದಿನವೂ ಕೊಂಡಾಡುತ್ತಾರೆ. ಆದರೆ ನೀನು ಈ ವಯಸ್ಸಿನಲ್ಲಿಯೇ ಇಷ್ಟು ಗಂಭೀರೆಯೂ, ವಿಚಾರಿಯೂ ಹೇಗಾದೆಯೆಂಬುದೇ ನಮ್ಮಿಬ್ಬರಿಗೂ ತಿಳಿಯದ ಗುಟ್ಟಾಗಿದೆ. ಹೇಳೆ ನೀನು ಇಷ್ಟು ಯೋಚನಾಪರಳೇಕೆ ಆಗಿರುವಿ? ನಿನ್ನ ಪತಿ ನಿನ್ನನ್ನು ಚನ್ನಾಗಿ ನಡೆಸಿಕೊಳ್ಳುತ್ತಿರುವರಷ್ಟೆ? ಕೋಪಿಸಬೇಡವ್ವಾ! ನನ್ನ ಮನದಲ್ಲಿ ಇಲ್ಲದ ಸಲ್ಲದ ವಿಚಾರಗಳೆಲ್ಲ ಬರುತ್ತಿವೆ. ಆದ್ದರಿಂದ ಒಂದು ಸಲ ಎಲ್ಲ ಸಂಶಯಗಳ ನಿವಾರಣ ಮಾಡಿಕೊಳ್ಳಬೇಕೆಂದಿದ್ದೇನೆ. ಹೀಗೆಲ್ಲ ಬರೆದುದಕ್ಕೆ ನನ್ನನ್ನು ದೂರಬೇಡ ಅಂ! ನಮ್ಮ ಮೆಚ್ಚಿನವರಿಗೆ ಭಾವೋದ್ರೇಕದಿಂದ ಬರೆಯುವಾಗ ಮೈಮರೆತು

ಹೋಗುತ್ತದೆ. ಅದನ್ನು ಯಾರಾದರೂ ಓದಿದರೆ ನಮ್ಮನ್ನು ಹುಚ್ಚರೆನ್ನಬಹುದು ಎಂಬ ಎಚ್ಚರವೂ ಉಳಿಯುವದಿಲ್ಲ. ಆದ್ದರಿಂದ ಅಂಥದೇನಾದರೂ ನನ್ನಿಂದ ಬರೆಯಲ್ಪಟ್ಟಿದ್ದರೆ ನನ್ನನ್ನು ಕ್ಷಮಿಸು. ನನ್ನೆದುರು ಚನ್ನಾಗಿ ಮನಬಿಚ್ಚಿ ಮಾತಾಡು. ನಾನು ಪೂರ್ಣ ನಿನ್ನವಳೇ. ನನ್ನ ಲಗ್ನವಾದುದರಿಂದ ನಾನಿನ್ನು ಬರಿ ವಸಂತರವಳೇ ಎಂದು ನಿನಗೆ ಅನ್ನಿಸುವದೇಕೆ? ಲಗ್ನವಾದರೆ ಹಿಂದಿನ ಪ್ರೀತಿಯ ಸಂಬಂಧಗಳು ಬಿಚ್ಚಿಹೋಗುವವೇ? ಹೀಗೇನಾದರೂ ನೀನು ತಿಳಿದುಕೊಂಡಿದ್ದರೆ ನನಗೆ ಬಹಳ ಖೇದವೆನಿಸುವದು. ನಾನು ನಿನ್ನವಳೇ; ಪೂರ್ಣ ನಿನ್ನವಳೇ. ನೀನು ನನ್ನವಳು. ನಿನ್ನ ತಾಯಿ ತೀರಿದಳೆಂದು ನೀನು ಇಷ್ಟು ಕೊರಗುವೆಯಾ? ರಮಾ, ನಾನು ನಿನ್ನನ್ನು ಹೇಗೆ ಸಮಾಧಾನ ಪಡಿಸಲಿ? ಹೌದು ನಿನ್ನ ತಾಯಿಯೆಂದರೆ ಮಮತೆಯ ಮೂರ್ತಿಯೇ ಸೈ. ನನ್ನ ತಾಯಿಯು ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದರೂ ನಾನು ಮಾತೃಪ್ರೇಮದಿಂದ ವಂಚಿತಳಾಗಿರಲಿಲ್ಲ, ನಿನ್ನ ತಾಯಿಯೇ ನನ್ನ ತಾಯಿಯಾಗಿದ್ದಳು. ನೀನಂತೂ ಅವಳ ನೇತ್ರರದಿಂದಲೇ ಹುಟ್ಟಿ ಬೆಳೆದವಳು, ನಿನಗೆ ಸುಖವಾಗಲೆಂದೇ ಅವಳು ನಿನ್ನನ್ನು ಸಿರಿವಂತರಾದ I. C. S. ಆದವರ ಮನೆಗೆ, ನೀರಿನಂತೆ ದುಡ್ಡು ವೆಚ್ಚ ಮಾಡಿ ಕೊಟ್ಟಳು...........ಊಹೂಂ ನನ್ನ ಸಂಶಯವೇ ತಪ್ಪು; ತೀರಾ ತಪ್ಪು; ಎಂಥ ಹುಚ್ಚಿಯಂಥ ಪ್ರಶ್ನೆ ಕೇಳಿದೆ ನಾನು! ರಮಾ, ಹಾಗಾದರೆ ನಿನಗೆ ಆಗುವದಾದರೂ ಏನು? ನೀನು ನಿನ್ನ ದುಗುಡವನ್ನು ಮರೆತು ನನ್ನವಳಾಗೆ ರಮಾ. ನೀನು ಇಷ್ಟು ಬೇಗ ನಮ್ಮನ್ನು ಬಿಟ್ಟು ಏಕೆ ಹೊರಟು ಹೋದೆ? ನಿಮ್ಮವರ ಅತ್ತಕಡೆಯ ಸೆಳೆತವು ತೀವ್ರವಾಯಿತೆ? ನನಗೆ ಹೇಳಬೇಕೆಂದಿರುವದನ್ನು ಈಗಲೆ ಹೇಳಿಬಿಡು ನೋಡೋಣ. ಆಗಿನಿಂದ ನನ್ನ ಪ್ರತಿಯೊಂದು ನಿಮಿಷವೂ ಬೇಸರದಿಂದ ತುಂಬಿಹೋಗಿದೆ. ನನಗೆ ಸಮಾಧಾನವೇ ಇಲ್ಲ. ಈಗ, ಮಾತ್ರ ಸುಮ್ಮನೆ ಹಾರಿಕೆಯ ಉತ್ತರ ಕೊಡಬೇಡ. ಇಲ್ಲದಿದ್ದರೆ ನಿನ್ನ ಮೇಲೆ ನಾನು ಬಹಳ ಸಿಟ್ಟಿಗೆದ್ದೇನು ನೋಡು!........ ಹೂಂ ನಿನಗೆ ನನ್ನ ಸಿಟ್ಟಿನ ಹಂಗಾದರೂ ಇದೆಯೇ? ನಿನ್ನ ಉತ್ತರಕ್ಕಾಗಿ ಚಾತಕದಂತೆ ಕಾತರಿಸುತ್ತಿರುವ

ನಿನ್ನವಳೇ
'ಉಮಾ'

ಉಮಾ,

ನಿನ್ನ ಪತ್ರ ಓದಿದೆ. ಓದಿ ನನ್ನ ಮನಸ್ಸಿಗೆ ಏನು ಅನಿಸಿತೆಂಬುದನ್ನು ಹೇಗೆ ಹೇಳಲಿ? ಇಷ್ಟು ದಿ... ಭಾವನೆಗಳು ಜ್ವಾಲಾಗ್ನಿಯಂತೆ ಒಮ್ಮೆಲೆ ... ತಡೆದಿಟ್ಟ ಕಂಬನಿಗಳಿಗೆ ಎಡೆಕೊಟ್ಟು ಒಂದು ... ತುಂಬಾ ಅತ್ತುಬಿಟ್ಟೆ, ಮನಸ್ಸು ಹಗುರಾ... ನನಗೆ ಏನು ಕೊರಗು ಹೇಳು ಎಂದು ಕೇಳ... ಹೇಳಲಿ? ಹೇಗೆ ಹೇಳಲಿ? ಹೋಗಲಿ ... ದುಃಖವನ್ನು ಜಗತ್ತಿಗೆ ಹೇಳಿ ಅಳುವದರಿಂ... ಜನ? ಜಗತ್ತು ತನ್ನ ಕೆಲಸಗಳಲ್ಲಿ ತೊ... ಒಬ್ಬ ವ್ಯಕ್ತಿ ಎಲ್ಲಿಯೋ ಸಿಟ್ಟುಸಿರಿಡುವದು. ಅದರ ವಿಷಯಕ್ಕೆ ಕುರುಡಾಗಿ ಬಿಡುವದು. ... ಗಾದರೂ ಈ ದುಃಖವನ್ನು ಹೇಳಿ ನಿನ್ನ ಹ... ಸಲ್ಲೀಕೆ ಕಹಿ ಬೆರಸಲಿ? ಉಮಾ, ನೀನು ನಿ... ಬಿಡುವದಿಲ್ಲ. ತಿರುತಿರುಗಿ ಮೂರು ನಾಲ್ಕು ... ನೀನು ಬರೆದೆ. ನಿನಗೇಕೆ ಸುಮ್ಮನೆ ಹೇ... ಒಂದು ಸಲ ಅನಿಸುವದು. ಆದರೆ ನಿನ್ನ ಪತ್ರ... ನನ್ನ ಎದೆಯು ಶೋಕದಿಂದ ಉಕ್ಕಿ ಬರುವದು... ದರೂ ನನ್ನ ಹೃದಯವನ್ನು ಹಗುರು ಮಾ... ಉಮಾ, ನಿನಗೆ ಬರೆಯದೆ ಇನ್ನಾರಿಗೆ ಬರೆಯ... ನನ್ನ ದುಃಖವನ್ನು ನಿವಾರಣೆಮಾಡುವನೇ... ನೀನೊಬ್ಬ ಹುಚ್ಚಿ. ನನ್ನ ದುಗುಡವನ್ನು ... ಯಾವ ಅದ್ಭುತ ಶಕ್ತಿಗೂ ಕಡಿಮೆ ಮಾಡುವ... ವಿಲ್ಲ. ದುರ್ದೈವದ ಬೇಗೆಯಿಂದ ಒರಟಾದ ... ಆ ದುಗುಡವನ್ನು ಅರಗಿಸಿಕೊಳ್ಳಬಲ್ಲದು. ... ವಸಂತನದು ನಿನ್ನ ಮೇಲೆ ನಿಜವಾಗಿ ಎಷ್ಟು ... ವಿದೆಯೋ! ಅವನು ಕಚೇರಿಯಿಂದ ಬರು... ಸಂಜೆವರೆಗಿನ ವಿರಹವನ್ನೆಲ್ಲ ನಗೆ, ಹರಟೆ, ... ಮರೆಸಿಬಿಡುವಿರಿ! ನಿಜವಾಗಿ ಉಮಾ, ನಿನ್ನ ... ನನಗೆ ಮತ್ಸರವೆನಿಸುವದು. ಅಲ್ಲಿ ನೋಡು ... ಡೊಳಗಿನ ಗಂಡು ಹೆಂಣು ಹಕ್ಕಿಗಳು ತಮ್ಮ ... ನಂದದಲ್ಲಿಯೇ ಮುಳುಗಿ ಹೋಗಿವೆ. ಅವುಗ... ನನಗೆ ಹೊಟ್ಟೆಕಿಚ್ಚು. ಆ ನೋಟವು ನನಗೆ ಸ... ನನಗೆ ಕಿಚ್ಚಿನವಳೆಂದು ಬೇಕಾದರೆ ಅನ್ನು. ... ವಂತರೂ, ಬುದ್ಧಿವಂತರೂ ಆದ ಪತಿ ನಿ... ನೀನೆನ್ನುವಿ. ಜನರಿಂದ ಆಯ್. ಸಿ. ಎಸ್. ... ಕೊಳ್ಳುವದರಲ್ಲಿ ನನಗೆಷ್ಟು ಮಾನ! ನಿಜವಾ... ಕಣ್ಣಲ್ಲಿ ನಾನು ಬಹಳ ಸುಖಿಯೆಂದೇ ಭ... ಇಷ್ಟು ದುಃಖವಿರಬಹುದೇ? ಜಗತ್ತಿಗೇನು ಗೊ...

ಕೊರಗು ? ನನ್ನ ಮೇಲಿನ ನನ್ನ ಪತಿಯ ಪ್ರೇಮವನ್ನು ನೀನು ವಿಚಾರಿಸಿರುವೆ. ನಿಜವಾಗಿ ಅವರದು ನನ್ನ ಮೇಲೆ ಎಷ್ಟು ಪ್ರೇಮವಿತ್ತು ! ನೀನು ಹಿಂದೆ ನಮ್ಮಲ್ಲಿ ಇರಲಿಕ್ಕೆ ಬಂದಾಗ ನನ್ನ ಮತ್ತು ಅವರ ಪ್ರೇಮದ ಮೂಲಕವೇ ನಾನು ಮೈಮರೆತು ಹೋದಾಗ ನೀನು ನನಗೆ ಚೇಷ್ಟೆ ಮಾಡುತ್ತಿರಲಿಲ್ಲವೇ ? ಹೌದು, ಅದು ನನ್ನ ಜೀವನದ ವಸಂತಋತುವಾಗಿತ್ತು. ಅಂಥಹ ಸೌಭಾಗ್ಯಯೋಗವು ಜನ್ಮದಲ್ಲಿ ಒಂದೇ ಸಲ ಬರುತ್ತದೆ. ನನ್ನ ಮನಸ್ಸಿನ ನೋವಿನ ಮೇಲೆ ಬರೆ ಕೊಡಲೆಂದೇ, ಆ ಸವಿದಿನಗಳು ಇಂದು ನೆನಪಿಗೆ ಬರುತ್ತಿವೆ ! ಆ ದಿನಗಳು ಹೋದವು !

ಉಮಾ, ನಿನಗೆ ಹೇಗೆ ಹೇಳಲಿ ? ನನ್ನ ಗಾಡಿ ನಡೆಯುದಂತಾಗಿದೆ. ನನ್ನ ಕೈ ಸೋತು ಹೋಗಿದೆ. ನಮ್ಮವರು ಸಿರಿವಂತರಿದ್ದಾರೆ; ಬುದ್ಧಿವಂತರಿದ್ದಾರೆ. ದೊಡ್ಡ ಕೆಲಸದಲ್ಲಿದ್ದಾರೆ. ಅವರು ಸಿರಿವಂತರೂ, ದೊಡ್ಡ ಕೆಲಸದವರೂ ಆದ್ದರಿಂದಲೇ ಅವರಿಂದ ನನ್ನ ಬಾಳುವೆ ಮಣ್ಣುಗೂಡಿದೆ. ಉಮಾ ನನ್ನ ಮೇಲೆ ನನ್ನ ಪತಿಯ ಪ್ರೇಮವಿತ್ತು; ಆದರೆ ಈಗ ಇದೆಯೇ ? ಅವರು ಸಿರಿವಂತಿಕೆ ಮತ್ತು ಮಾನವಂತಿಕೆಯಲ್ಲಿ ಮೈಮರೆತಿದ್ದಾರೆ. ಅವರ ಕಣ್ಣಿಗೆ ದೊಡ್ಡಸ್ತಿಕೆಯ ಪರದೆ ಬಂದಿದೆ. ಆದರಿಂದ ಅವರಿಗೆ ಅಣ್ಣತಮ್ಮ, ಅಕ್ಕತಂಗಿ, ಪತ್ನಿ, ಸೇವಕ, ಆಪ್ತರೊಬ್ಬರೂ ಕಾಣದಂತಾಗಿದೆ. ಯಾವಾಗಲೂ ಅವರಿಗೆ ಆ ಸೆರೆಯು ಬಾಟ್ಲಿ, ಆ ಸಿಗರೇಟಿನ ಪೆಟ್ಟಿಗೆಯ ಮೇಲೆ ಲಕ್ಷ್ಯ. ಆ ನಿರ್ಜೀವ ವಸ್ತುಗಳೇ ಅವರಿಗೆ ನನಗಿಂತ ಪ್ರಿಯವಾಗಿವೆ. ಅವರ ಮೈಗೆ ಬರುವ ನಾತ! ಅವರಿಗೆ ಮತ್ತೇರಿತೆಂದರೆ ನನಗೆ ಅವರನ್ನು ನೋಡಿದರೆ ಅಂಜಿಕೆಯಾಗುತ್ತದೆ. ಗಾಬರಿಯಾಗಿ ನಾನು ನನ್ನ ಕೋಣೆಯಲ್ಲಿ ಸೇರಿ ಬಾಗಿಲಿಕ್ಕಿ ಒಳಗಿನಿಂದ ಚಿಲಕ ಹಾಕಿಬಿಡುತ್ತೇನೆ. ಇಡೀದಿನ ಕಚೇರಿಯಲ್ಲಿ ದುಡಿದು ಬಂದರೂ ತಮ್ಮ ಗುಂಗಿನಲ್ಲಿಯೇ ಸೈ. ನಾನು ಹೊರಗೆಲ್ಲಿ ಹೋಗಬೇಕಾದರೂ ಕಳವಿನಿಂದಲೇ. ತಮ್ಮ ಮತ್ತಿನಲ್ಲಿ ಅವರು ಒಂದೊಂದು ಸಲ ಹೊಡೆದೂ ಬಿಡುವರು. ತಮ್ಮ ಹುರುಪಿನಲ್ಲಿ ನನ್ನನ್ನು ಒಮ್ಮೆ ಹತ್ತರ ಕರೆದುಕೊಳ್ಳುವರು. ಇತರ ಕಟುಕರಂತೆ ದೂರ ನೂಕಿಬಿಡುವರು. ಅವರು ನನ್ನನ್ನು ತಮ್ಮ ತೋಳಿನಲ್ಲಿ ಬಿಗಿಯಾಗಿ ಹಿಡಿದಾಗ ಅವರ ದರ್ಪವೇ ನನಗೆ ಅಸಹ್ಯವೆನಿಸುವದು. ಆದರೆ ನಾನು ಹೇಂಣು ಹೆಂಗಸು. ಉಮಾ, ಇದನ್ನೆಲ್ಲ ನಾನು ಸಹಿಸುತ್ತಿದ್ದೆ. ಆದರೆ ಹನೆಗೂ ಒಂದು ಮೇರೆಯಿಲ್ಲವೇ? ನಾಲ್ಕು ಜನರು ನೋಡನೋಡುವಾಗಲೇ ನನ್ನನ್ನು ದೂರ ಸರಿಸಿ ತಮಗೆ ಬೇಕೆನಿಸಿದ ಹೆಂಗಸರನ್ನು ಮನೆಯಲ್ಲಿ ತರುತ್ತಾರೆ ! ಆ ವೇಶ್ಯೆಯರನ್ನು ಮೋಟರಿನಲ್ಲಿ ಜೊತೆಗೆ ಕೂಡಿಸಿಕೊಂಡು ತಿರುಗಲಿಕ್ಕೆ ಹೋಗುತ್ತಾರೆ! ಆ ಬೀರಿಯರದು ನನ್ನ ಮೇಲೂ ಒತ್ತಾಯ! ನಾನು ಅವರ ದಾಸಿಯಂತಾಗಿದ್ದೇನೆ! ನನ್ನ ಮನೆಯಲ್ಲಿ ನನಗೆ ಅಧಿಕಾರವಿಲ್ಲ. ರಾತ್ರಿ ಯಾವದೋ ಕ್ಲಬ್ಬಿಗೆ ಹೋಗುತ್ತಾರಂತೆ ! ದೇವಾ, ಗಂಡ ಬಡವನಾಗಿದ್ದರೇನು ಹಾನಿ ? ಇಂಥ ಶ್ರೀಮಂತನಾದರೂ ಮೂರ್ಖ ಮತ್ತು ವ್ಯಸನಿಯಾದ ಗಂಡ ಬೇಡವ್ವಾ ಬೇಡ! ಉಮಾ, ತಾಯಿ....ತಾಯಿಯ ನೆನಪು ಹೇಗೆ ಮಾಸೀತು ? ನನ್ನ ಈ ವೈಭವ ಈ ಮನೆ ನೋಡಿ ಅವಳು ದಂಗುಬಡೆದುಹೋದಳು. ಬಲು ಮಿದುವಾದ ಹೃದಯ ಅವಳದು. ನನ್ನ ಈ ಕೊರಗನ್ನು ನೋಡಿಯೇ ಪಾಪ ಅವಳು ಪ್ರಾಣನೀಗಿದಳು. ಆದರೆ ನನ್ನ ಮನವೆಷ್ಟು ಬಿರುಸು. ನಾನು ಇನ್ನೂ ಏಕೆ ಸಾಯಲೊಲ್ಲೆ. ಅವತ್ತು ಅವ್ವ ಇಲ್ಲಿರುವಾಗಲೆ ಅವರು ನನಗೆ ಎಂಥ ಅಪಮಾನ ಮಾಡಿದರು! ಅವ್ವನು ಅದೇ ಬಂದಿದ್ದಳು. ಅವರು ಎಲ್ಲಿಯೋ ಹೋಗಬೇಕೆಂಬ ಹವಣಿಕೆಯಲ್ಲಿ ಕುರ್ಚಿಮೇಲೆ ಕೂತಿದ್ದರು. ನಾನು ಅವ್ವನು ಬಂದ ಸುದ್ದಿ ಅವರಿಗೆ ಹೇಳಿದರೆ, 'ಬಂದರೆ ಬಂದಳು' ಎಂದೆನ್ನ ಬೇಕೆ ! ಅಲ್ಲಿಗೇ ಮುಗಿಯಲಿಲ್ಲ. ನಾನು ಅವರೊಡನೆ ಅಷ್ಟು ಎಂದೂ ಮಾತನಾಡುವವಳಲ್ಲ. ಅಂದು ಅವ್ವ ಬಂದಾಳೆ; ಅವರು ಹೊರಗೆ ಹೊರಟು ಹೋಗಿಬಿಟ್ಟರೆ ಅವ್ವನಿಗೆ ಸಮಾಧಾನವಾಗಲಿಕ್ಕಿಲ್ಲ ಎಂದೆಣಿಸಿ ನಾನು ಅವರ ಕಾಲು ಹಿಡಿದುಕೊಂಡೆ. " ನನ್ನದಿದೊಂದೇ ಮಾತನ್ನು ಕೇಳಿರಲ್ಲ! " ಎಂದು ವಿನಯದಿಂದ ಅಂದೆ. ಆದರೆ ಅವರು ರೇಗಿ ಕಾಲಿನಿಂದ ನನ್ನನ್ನು ದೂರ ನೂಕಿಬಿಟ್ಟರು. ಅವರ ಬೂಟು ನನ್ನ ಹೊಟ್ಟೆಯಲ್ಲಿ ಚುಚ್ಚಿದ್ದರಿಂದ 'ಅವ್ವಯ್ಯಾ' ಎಂದು ನಾನು ಚೀರಿದೆ. ನಿಜವಾಗಿ ಅವರ ಬೂಟಿನ ನೋವು ನಾನು ಲಕ್ಷಿಸುವವಳಲ್ಲ. ಆದರೆ ನನ್ನ ಹೃದಯಕ್ಕೆ ಎಂಥ ಗಾಯವಾಯಿತು. ಅವ್ವನು ಬಂದುದನ್ನು ನಾನು ನೋಡಿದೆ. ನನಗೆ ಮೂರ್ಛೆಬಂದಿತ್ತು. ನಾನು ನಿಶ್ಚೇಷ್ಟಳಾಗಿ ಬಿದ್ದಿದ್ದೆ. ಎಷ್ಟೊತ್ತಿನ ವರೆಗೆ ಎಚ್ಚರ ಬರಲಿಲ್ಲ ನನಗೆ. ಆಗ ಅವ್ವನಿಗೆ ಹೇಗೆ ಅನಿಸಿರಬಹುದು. ಅವಳು ಒಂದೇಸವನೆ ಮನೆಗೆ ನಡೆಯಂದು ನನಗೆ ಗಂಟು ಬಿದ್ದಿದ್ದಳು. ಮನೆಗೆ ಹೋಗಿಯಾದರೂ ಮಾಡುವದೇನಿದೆ ? ನನ್ನ ಈ ಒಣಮೋರೆಯನ್ನು ದಿನಾಲು ಅವಳಿಗೆ ತೋರಿಸಲಿಕ್ಕೆ ? ಪಾಪ ಅವ್ವನು ನನ್ನ ದುಃಖವನ್ನು ನೋಡಿ ಚಡಪಡಿಸುತ್ತಲೇ ಸತ್ತುಹೋದಳು. ಅವ್ವಾ....! ನನ್ನನ್ನು ನಿನ್ನ ಸಂಗಡವೇ ಏಕೆ ಒಯ್ಯಲಿಲ್ಲ ? ಅವ್ವಾ ನೀನು ಮುದ್ದಿಗೆ

ಮರುಳಾದೆ. ಈ ವಿಚಾರವು ಲಗ್ನದ ಸಮಯಕ್ಕೆ ನಿನ್ನ ತಲೆಯಲ್ಲಿ ಬಂದಿದ್ದರೆ? ಉಮಾ, ಈ ನಾಚಿಕೆಗೇಡಿನ ಬಾಳನ್ನು ಹೇಗೆ ಕೊನೆಮುಟ್ಟಿಸಲಿ ? ಆಯುಷ್ಯ ಮುಗಿಯ ಲಿಲ್ಲ; ಜೀವಕೊಡಲಿಕ್ಕೆ ಧೈರ್ಯವಿಲ್ಲ. ಅದಕ್ಕೇ ಈ ಉರಿ ಬಿಸಿಲಿನಲ್ಲಿ ಬಂಡೆಗಲ್ಲಿನ ಮೇಲೆ ನಡೆದಾಟ. ದೇವರು ದೊಡ್ಡವನಿದ್ದಾನೆ. ಅವನು ಒಂದು ದಿನ ಈ ಬಳಲಿಕೆ ಯಿಂದ ನನ್ನನ್ನು ಬಿಡುಗಡೆ ಮಾಡಲೇಬಹುದು. ಉಮಾ, ನಿನಗೂ, ವಸಂತನಿಗೂ ನನ್ನ ಕೃತಜ್ಞತೆಗಳಿರಲಿ. ನಿಮ್ಮ ಉಪಕಾರವನ್ನು ನಾನು ಹೇಗೆ ತೀರಿಸಲಿ ? ನಾನು ಜೀವ ದಿಂದಿರುವ ವರೆಗೆ ನಿಮ್ಮಿಬ್ಬರ ಸುಖವನ್ನು ಚಿಂತಿಸುತ್ತೇನೆ. ನಿನ್ನಂಥ ಮತ್ತು ವಸಂತನಂಥ ಮಿತ್ರರು, ನನ್ನ ದುಃಖದ ಜೀವನದಲ್ಲಿ ಮೇಲಿಂದ ಮೇಲೆ ಪ್ರೇಮದಿಂದ ಧೈರ್ಯಕೊಡ ಲಿಕ್ಕಿರುವರೆಂಬುದೇ ಒಂದು ಸುಖದ ಸಂಗತಿಯಾಗಿದೆ.

ಎಂದಾದರೂ ನನಗೆ ಏನಾದರೂ ಆದದ್ದನ್ನು ಕೇಳಿ ಬೆಚ್ಚಿಬೀಳಬೇಡ.

ಯಾವಾಗಲೂ ನಿನ್ನವಳೇ ಆದ

'ರಮಾ'

ಸ್ವಪ್ನಸೃಷ್ಟಿ

ಲೇಖಕರು: ಮನೋವಿಜ್ಞಾನಿ

ಒಂದಾನೊಂದು ಕಾಲದಲ್ಲಿ ದೇವರು ಭಕ್ತರ ಕನಸಿನಲ್ಲಿ ಬಂದು ವರಗಳನ್ನು ಕೊಟ್ಟಿದ್ದಾನೆ. ಬಂಜೆಯರಿಗೆ ಗಂಡಂದಿರ ಸಹಾಯವಿಲ್ಲದೆ ಮಕ್ಕಳನ್ನು ಕೊಟ್ಟಿದ್ದಾನೆ. ಕನಸುಗಳೆಂದರೆ ದೇವರ ಮಾತು ಎಂದು ಕಾಡುಜನರು ತಿಳಿಯುತ್ತಿದ್ದರು. ಮಹಾ ಮಹಾ ಶಿಕ್ಷಿತರೂ ಕೂಡ ಸ್ವಪ್ನ ಜ್ಯೋತಿಷಿಗಳೆದುರಿನಲ್ಲಿ ಮೂಗು ತಿಕ್ಕುತ್ತಾರೆ. ಆದರೆ ಬುದ್ಧಿಬಲದ ಅಭಾವವುಳ್ಳ ಮನೋದೃಶ್ಯ ಮತ್ತು ಅಜ್ಞಾತ ಅಂಗಚಲನಗಳಿಂದ ಕೂಡಿದ ನಿದ್ರೆಯೇ ಸ್ವಪ್ನವೆಂದು ವಿಜ್ಞಾನವೆನ್ನುತ್ತದೆ.

... ... ಕನಸೂ ಒಂದು ವಿಧದ ಹುಚ್ಚು. ... ...

ಮನುಷ್ಯನ ಜೀವನದೊಳಗಿನ ಅದ್ಭುತ ಚಮತ್ಕಾರಗಳಲ್ಲಿ ಸ್ವಪ್ನವೂ ಒಂದಾಗಿದೆ. ಯೋಗದಲ್ಲಿ ನಿರ್ಲಿಪ್ತತೆಯೆಂದು ಕರೆಯಲ್ಪಡುವ ಸ್ಥಿತಿಯ ಒಂದು ಮಾದರಿಯನ್ನು ಸ್ವಪ್ನದಲ್ಲಿ ನಾವು ಅನುಭವಿಸುವೆವು. ನಮ್ಮ ಕೃತಿಗಳ ಸುಖ ದುಃಖಗಳನ್ನು ಅನುಭವಿಸಿಯೂ ನಮ್ಮಿಂದ ನಾವು ಬೇರೆಯಾಗಿ ಇರುತ್ತೇವೆ. ನಮ್ಮ ಬಾವುಕುರುಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವಾಗ ನಾವು ಅಂಜುತ್ತೇವೆ. ಆದರೆ ಸ್ವಪ್ನದಲ್ಲಿ ಅನೇಕ ಸಲ ನಮ್ಮ ದೇಹವೇ ತುಂಡು ತುಂಡಾಗಿದ್ದರೂ ನಾವು ಅಳುವದಿಲ್ಲ; ನಮ್ಮ ದೇಹವು ಸತ್ತು ನಿಶ್ಚೇತನವಾಗಿ ಬಿದ್ದಿರುವಾಗಲೂ ನಾವು ದೂರ ನಿಂತು ವಿಚಾರ ಮಗ್ನರಾಗಿರುತ್ತೇವೆ. ನಿಜವಾಗಿ ಇಂತಹ ನಿರ್ಲಿಪ್ತ ಭಾವವು ಸ್ವಪ್ನದಲ್ಲಿರುವದಕ್ಕಿಂತ ಜಾಗೃತಾವಸ್ಥೆಯಲ್ಲಿ ಇರುತ್ತಿದ್ದರೆ?

ಮನುಷ್ಯನು ತನ್ನ ಭಾವನೆಗಳನ್ನು ಪರಸ್ಪರಹೇಳಿಕೊಳ್ಳಲಿಕ್ಕೆ ಸಮರ್ಥನಾದಾಗಿನಿಂದ ಲಕ್ಷಾವಧಿ ವರ್ಷಗಳಿಂದ, ಸ್ವಪ್ನಗಳ ಕಾರಣ ಮೂಲಗಳನ್ನು ಪರಿಶೋಧಿಸುತ್ತಲೇ ಬಂದಿದ್ದಾನೆ. ಪ್ರಾಯೋಗಿಕ ಮನೋವಿಜ್ಞಾನದ ಉದಯವಾಗುವದಕ್ಕಿಂತ ಮೊದಲು ಕನಸೆಂದರೆ ದೇವರ ಮಾತು ಎಂದು ಕಾಡು ಜನರು ತಿಳಿಯುತ್ತಿದ್ದರು. ಪ್ರತಿಯೊಂದು ಕನಸಿಗೂ ಮುಂದಿನ ಬಾಳಿನ ಆಗುಹೋಗುಗಳಿಗೂ ಸಂಬಂಧ ಹಚ್ಚುತ್ತಿದ್ದರು. ಪ್ರತಿಯೊಂದು ಕನಸೂ ಭವಿಷ್ಯಜ್ಜೀವನದ ಸುಖವನ್ನಾಗಲಿ ದುಃಖವನ್ನಾಗಲಿ ತಿಳಿದುಕೊಳ್ಳುವ ಸಾಧನವಾಗಿತ್ತು. ಅನೇಕ ವರ್ಷಗಳ ಹಿಂದೆ ಸತ್ತುಹೋದ ಆಪ್ತಮಿತ್ರರುಕೂಡ ತಮ್ಮ ಇಚ್ಛಾನಿಚ್ಛೆಗಳನ್ನೂ, ಬಯಕೆ ಬೇಡಿಕೆಗಳನ್ನೂ, ಸಂಬಂಧಿಕರ ಕನಸಿನಲ್ಲಿ ಬಂದು ತೀರಿಸಿಕೊಳ್ಳುತ್ತಿದ್ದರು. ಪ್ರತ್ಯಕ್ಷ ದೇವರು ಕಾಣದ ಈ ಕಲಿಯುಗದಲ್ಲಿ ಕೂಡ, ದೇವರು ಭಕ್ತರ ಕನಸಿನಲ್ಲಿ ಕಾಣಿಸಿಕೊಂಡು ವರಗಳನ್ನು ಕೊಟ್ಟಿದ್ದಾನೆ; ಬಂಜೆಯರಿಗೆ ಗಂಡಂದಿರ ಸಹಾಯವಿಲ್ಲದೆ ಮಕ್ಕಳನ್ನು ಕೊಟ್ಟಿದ್ದಾನೆ; ಬೇನಿಗರಾದ ಭಕ್ತರಿಗೆ ಸುಲಭಚಿಕಿತ್ಸೆಗಳನ್ನು ಸೂಚಿಸಿದ್ದಾನೆ.

ಆದರೆ ದೇವರಾಗಲಿ, ಮೃತ ಸಂಬಂಧಿಕರಾಗಲಿ, ಕನಸು ಕಂಡವರಿಗೆ ಅರ್ಥವಾಗುವಂತೆಯೇ ಯಾವಾಗಲೂ ಮಾತಾಡುತ್ತಿದ್ದಿಲ್ಲ. ಬಹುತರವಾಗಿ ಕನಸುಗಳ ಅರ್ಥವೇ ಸ್ಪಷ್ಟವಾಗುತ್ತಿರಲಿಲ್ಲ. ಆದುದರಿಂದ ಕನಸುಗಳಿಗೆ ಅರ್ಥ ಹಚ್ಚುವ ಸ್ವಪ್ನಜ್ಯೋತಿಷಿಗಳಿಗೊಂದು ಸುಕಾಲ ಬಂತು. ಬಡಬಗ್ಗರ ಕನಸುಗಳು ಹೇಳಕೇಳದೆ ಮರೆತುಹೋಗುತ್ತಿದ್ದವು. ಆದರೆ ರಾಜರಾಣಿಯರ, ಗುರುಸ್ವಾಮಿಗಳ, ಕನಸುಗಳ ಅರ್ಥ ಮಾಡುವದಕ್ಕೆ ದೂರದೂರದ ಸ್ವಪ್ನ ಜ್ಯೋತಿಷಿಗಳನ್ನು, ಹೇರಳ ವೆಚ್ಚದಿಂದ ಕರೆಸುತ್ತಿದ್ದರು. ಪೂಜಾರಿ ಪಾದ್ರಿಗಳು ತಮ್ಮ ಆಚಾರೋಪದೇಶಗಳನ್ನು ತರ್ಕಬದ್ಧವಾಗಿ ಹೇಳಲು ಅಸಮರ್ಥರಾದಾಗ, "ಕನಸಿನಲ್ಲಿ ದೇವರು ಬಂದು ಹೀಗೆ ಹೇಳಿದನೆಂ"ದು ಬಿಡುತ್ತಿದ್ದರು.

ಕನಸುಗಳ ವಿಷಯದಲ್ಲಿಯು ಈ ವಿಧದ ನಂಬಿಗೆಗಳು ಈಗಿನ ವೈಜ್ಞಾನಿಕ ಯುಗದಲ್ಲಿಯೂ ಕಡಿಮೆಯಿಲ್ಲ. ಮಹಾ ಮಹಾ ಶಿಕ್ಷಿತರು ಕೂಡ ಸ್ವಪ್ನಜ್ಯೋತಿಷಿಗಳೆದುರಿನಲ್ಲಿ ಮೂಗು ತಿಕ್ಕುತ್ತಾರೆ. ಕನಸಿನ ದೇವರ ವರಕ್ಕನುಸರಿಸಿ ತಾವು ಗರ್ಭಿಣಿಯರಾಗಿರುವೆವೆಂದು ನಂಬಿ ವಾರವಾರವೂ ಹೊಟ್ಟೆಮುಟ್ಟಿ ನೋಡಿಕೊಳ್ಳುವ ಹೆಂಗಳೆಯರಿಗೂ ಕಡಿಮೆಯಿಲ್ಲ. ಯಾವುದೊಂದು ಅಜ್ಞಾತವಾದ ವಿಷಯದಲ್ಲಿ ಜನರಿಗೆ ಈ ವಿಧದ ನಂಬಿಗೆಗಳಿರುವದು ಮನುಷ್ಯಸ್ವಭಾವವೇ ಸೈ.

ಕನಸುಗಳಿಂದ ನಿಜವಾಗಿಯೂ ಮುಂದಿನ ಆಗುಹೋಗುಗಳು ತಿಳಿಯುವವೇ ? ಮನುಷ್ಯನು ಅಷ್ಟು ಸೌಭಾಗ್ಯಶಾಲಿಯೇ ? ಅಥವಾ ಅಸಂಖ್ಯ ರೂಢಭ್ರಮೆಗಳಂತೆ ಈ ಸ್ವಪ್ನಜ್ಯೋತಿಷವೂ ಒಂದು ಹುಚ್ಚೋ ?

ಸ್ವಪ್ನಗಳು ಏಕೆ ಬೀಳುತ್ತವೆ? ಕೆಲವರಿಗೆ ಬಹಳ ಬಹಳ ಕನಸುಗಳೇಕೆ ಬೀಳುತ್ತವೆ? ಕೆಲವರಿಗೆ ಕ್ವಚಿತ್ತಾಗಿ ಏಕೆ ? ಕನಸಿನಲ್ಲಿಯೇ ನಾವು ಎಚ್ಚರಾಗಿರುವದಕ್ಕೆ ಸಾಧ್ಯವಿದೆಯೇ? ಬಹುತರವಾಗಿ ಕನಸುಗಳು ಮರೆತು ಏಕೆ ಹೋಗುತ್ತವೆ? ನಮಗೆ ಬೀಳುವ ಕನಸುಗಳಿಗೂ ನಮ್ಮ ದೇಹಮನಸ್ಸುಗಳ ಸ್ಥಿತಿಗೂ ಏನಾದರೂ ಸಂಬಂಧವಿದೆಯೋ? ಎಂಬ ಅಸಂಖ್ಯ ಪ್ರಶ್ನೆಗಳು ಸ್ವಪ್ನವೆಂಬ ಶಬ್ದವನ್ನು ಉಚ್ಚರಿಸಿದ ಕೂಡಲೆ ಉದ್ಭವಿಸುತ್ತವೆ. ಇವುಗಳಿಗೆ ಉತ್ತರವನ್ನು ಕೊಡಲು ಹವಣಿಸುವ ಮೊದಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸ್ವಪ್ನದಲ್ಲಿ ಆಗುವ ಸ್ಥಿತ್ಯಂತರಗಳನ್ನು ನಾವು ತಿಳಿದುಕೊಳ್ಳುವದು ಅಗತ್ಯವಿದೆ.

ದೈಹಿಕವಾಗಿ ಯೋಚಿಸಿದರೆ ಸ್ವಪ್ನಕ್ಕೂ ನಿದ್ರೆಗೂ ವಿಶೇಷ ವ್ಯತ್ಯಾಸವಿಲ್ಲವೆಂದೆನ್ನಬೇಕಾಗುತ್ತದೆ. ಏಕೆಂದರೆ ಅವೆರಡರಲ್ಲಿಯೂ ದೇಹಭಾನವಿರುವದಿಲ್ಲ. ಜಗತ್ತಿನ ಯಾವ ಬಾಹ್ಯ ಜ್ಞಾನವೂ ದೈಹಿಕವಾಗಿ ಪಂಚೇಂದ್ರಿಯಗಳಿಗೆ ಗೋಚರಿಸುವದಿಲ್ಲ. ಕನಸುಕಾಣುತ್ತಿರುವಾಗ ಆಗುತ್ತಿರುವ ಮುಖಮುದ್ರೆಯ ವ್ಯತ್ಯಾಸಗಳೂ, ಕೈ ಮೈಗಳ ಚಲನವಲನವೂ, ಕನಸಿನಲ್ಲಿಯ ನೋಟಗಳಿಂದ ಮನಸು ಪರಿಣಮಿತವಾಗಿ, ಉತ್ತೇಜಿತವಾಗುತ್ತವೆ.

ಮಾನಸಿಕವಾಗಿ ಯೋಚಿಸಿದರೆ ಸ್ವಪ್ನಕ್ಕೂ ನಿದ್ರೆಗೂ ಒಂದು ವ್ಯತ್ಯಾಸವಿದೆ. ನಿದ್ರೆಯಲ್ಲಿ ಮನುಷ್ಯನು ಯಾವ ಮನೋದೃಶ್ಯಗಳನ್ನೂ ಕಾಣುವದಿಲ್ಲ; ಕನಸಿನಲ್ಲಿ ಮನೋದೃಶ್ಯಗಳನ್ನು ಕಾಣುತ್ತಾನಲ್ಲದೆ, ಆ ದೃಶ್ಯಗಳಲ್ಲಿಯ ಸುಖದುಃಖಗಳ ಪರಿಣಾಮವು ಹಲಕೆಲವುಸಲ ಮರುದಿವಸವೂ ಮನಸ್ಸಿನಮೇಲೆ ಉಳಿದು ಬಿಡುತ್ತದೆ. ಆದರೆ ಕನಸಿನಲ್ಲಿ ಮನೋದೃಶ್ಯಗಳನ್ನು ಕಾಣುತ್ತಿರುವಾಗ ಮನೋಬಲವು ಮಾತ್ರ ಬಹುಮಟ್ಟಿಗೆ ಕುಗ್ಗಿರುತ್ತದೆ. ಕನಸಿನಲ್ಲಿ ನಮಗೆ ಸಂಭವಿಸುವ ಇಷ್ಟಾನಿಷ್ಟಗಳಲ್ಲೆಲ್ಲ ಅಜ್ಞಾತವಾದ ಯಾವದೋ ಒಂದು ಶಕ್ತಿಯೇ ನಮಗೆ ಪ್ರೇರಕವಾಗಿರುತ್ತದೆ. ವಿಶಿಷ್ಟಸಿದ್ಧಿಯನ್ನು ಪಡೆವ ಬಯಕೆಯಿಂದ ಸತತವಾಗಿ ಯತ್ನಿಸಿ, ನಡುವಿನ ಅಡೆತಡೆಗಳನ್ನೆಲ್ಲ ಬುದ್ಧಿಬಲದಿಂದ ಚದರಿಸಿ ಯಶಸ್ಸನ್ನು ಸಂಪಾದಿಸಿದಂತಹ ಕನಸುಗಳು ಕ್ವಚಿತ್ತಾಗಿಯಾದರೂ ಬೀಳುವವೇ ಎಂಬುದು ಸಂದೇಹಾಸ್ಪದವೇ. ಕನಸುಗಳಲ್ಲಿ ಎದ್ದು ಕಾಣು[...]ವೆಂದರೆ ಬುದ್ಧಿಬಲದ ಅಭಾವ. ಈ ಸ್[...] ಜೀವಾಳವಾಗಿ ಹಿಡಿದುಕೊಂಡೇ ಮನೋ[...] ಸ್ವಪ್ನದ ವಿಷಯದಲ್ಲಿ ಅನೇಕ ಮಾತುಗಳ[...]ಯನ್ನು ಮಾಡಿದ್ದಾರೆ.

ಈಗ ನಾವು ದೈಹಿಕವಾಗಿಯೂ ಮಾನಸಿ[...] ಒಂದೇ ಮಾತಿನಲ್ಲಿ ಸ್ವಪ್ನದ ವ್ಯಾಖ್ಯೆಯನ್ನು [...] ಬಹುದು. ಬುದ್ಧಿಬಲದ ಅಭಾವವುಳ್ಳ ಮ[...] ಮತ್ತು ಅಜ್ಞಾತ ಅಂಗಚಲನಗಳಿಂದ [...] ನಿದ್ರೆಯೇ ಸ್ವಪ್ನ.

ಮೇಲಿನ ವಿವರಣೆಯಿಂದ ಸ್ವಪ್ನದಲ್ಲಿ [...] ಬುದ್ಧಿಯ ಸ್ಥಾನವು, ಬಹುಮಟ್ಟಿಗೆ ನಿ[...]ರುತ್ತದೆಂದು ತಿಳಿಯಿತು. ಆದುದರಿಂದಲೇ ಕೆ[...]ಗಳು ಕನಸಿಗರಿಗೂ ಹುಚ್ಚರಿಗೂ ವಿಶೇ[...] ವಿಲ್ಲೆಂದು ಹೇಳುವರು. ಹುಚ್ಚನ ಮಾತುಗಳಿ[...] ಆಧಾರವಿರುವದಿಲ್ಲ. ಕನಸಿನಲ್ಲಿ ಕಂಡ ಬಹು[...]ಗಳೆಲ್ಲ ನಗೆಯನ್ನು ಹುಟ್ಟಿಸಲಿಕ್ಕೂ ಇದೇ ಕಾ[...]

ಶಾರೀರಶಾಸ್ತ್ರಜ್ಞರ ಸ್ವಪ್ನದ ವಿವರಣೆಯ[...] ಕೊಳ್ಳಲು ಸುಲಭವಾಗಿದೆ. ನಮ್ಮ ಮಿದುಳಿ[...] ಅಂಕಣಗಳಿವೆ. ಪ್ರತಿಯೊಂದು ಅಂಕಣಕ್ಕೂ [...] ವಿಶಿಷ್ಟಕಾರ್ಯವಿದೆ. ಅವುಗಳಲ್ಲಿ ಎರಡು [...] ವಿಷಯವು ಸ್ವಪ್ನಕ್ಕೆ ವಿಶೇಷವಾಗಿ ಸಂಬಂಧಿಸಿ[...] ಅಂಕಣವು ಮಿದುಳಿನ ಮಧ್ಯದ ಬುಡದಲ್ಲಿರುತ್ತ[...] ಅನುಭವ ಭಾಂಡಾರವೆಂದು ಈಗ ಕರೆಯೋಣ. ಆಗರ್ಭ ನಮ್ಮ ಅನುಭವಗಳೆಲ್ಲ ಸಂಗ್ರಹಿತವಾ[...] ಅದರ ಉತ್ತೇಜನದಿಂದ ನಮಗೆ ನಡೆದುಹೋ[...]ಗಳು ನೆನಪಿಗೆ ಬರುತ್ತವೆ. ನಮ್ಮ ಸುತ್ತುಮುತ್ತ[...]ಗಳನ್ನು ವಿಶಿಷ್ಟರೀತಿಯಾಗಿಯೇ ನಾವು ಉ[...]ವದಕ್ಕೆ ಅನುಭವ ಭಾಂಡಾರವೇ ಕಾರಣವಾಗಿ[...] ಗಂಧ, ಸ್ಪರ್ಶಾದಿಗಳಿಂದ ಮೊದಲು ಬುದ್ಧಿಯ[...] ಉತ್ತೇಜಿತವಾಗುತ್ತದೆ. ಬುದ್ಧಿಯ ಅಂಕಣ[...]ಭವದ ಅಂಕಣವು ಉತ್ತೇಜಿತವಾಗುತ್ತದೆ. [...] ಮತ್ತು ಅನುಭವದ ಅಂಕಣಗಳು ಸಮರಸ[...] ಮಾಡುವದರಿಂದ, ನಮ್ಮೆಲ್ಲ ಕೆಲಸ ಬೊಗಸೆಗಳ[...] ತೂಕತಪ್ಪದೆ ಮಾಡುವೆವು. ಅನುಭವದ [...] ದುರ್ಬಲವಾದರೆ, ಪ್ರತಿಸಲವೂ ಪ್ರತಿಯೊಂದು[...]ವನ್ನೂ ಹೊಸತಾಗಿ ಕಲಿಯಬೇಕಾಗುವದು.

ಅಂಕಣವು ದುರ್ಬಲವಾದರೆ, ಅನುಭವದ ಅಂಕಣವು ಅಸಂಬದ್ಧವಾಗಿ, ಅಕಾಲಗಳಲ್ಲಿ ದೇಹದ ಚಲನವಲನಗಳನ್ನು ಮಾಡುವದು; ಅನಪೇಕ್ಷಿತವಾಗಿ ಮನೋದೃಶ್ಯಗಳನ್ನು ಹೂಡುವದು. ಮತ್ತು ಹೀಗಾದಾಗಲೇ ಆ ಮನುಷ್ಯನಿಗೆ ಹುಚ್ಚುಹಿಡಿಯಿತೆಂದು ನಾವು ಅನ್ನುವೆವು.

ನಿದ್ರೆಯಲ್ಲಿ ಬುದ್ಧಿಯ ಮತ್ತು ಅನುಭವದ ಅಂಕಣಗಳು ನಿಷ್ಕ್ರಿಯವಾಗುವವು ಕೆಲವು ಕಾರಣಗಳಿಂದ ಬುದ್ಧಿಯ ಅಂಕಣವು ನಿದ್ರಿಸಿರುವಾಗ ಅನುಭವದ ಅಂಕಣವು ಕೆರಳಿತೆಂದರೆ ಕನಸುಗಳು ಬೀಳಹತ್ತುತ್ತವೆ. ನಮ್ಮ ಆಯುಷ್ಯದಲ್ಲಿ ಒಂದೇ ಒಂದುಸಲ ನೋಡಿದ ವಸ್ತು ಕೂಡ ಎಷ್ಟೋ ವರ್ಷಗಳ ನಂತರ ನಮ್ಮ ಕನಸಿನಲ್ಲಿ ಗೋಚರವಾಗಬಹುದು.

ಮೇಲಿನ ವಿವೇಚನೆಯಿಂದ ಕನಸು ಬೀಳುವದಕ್ಕೆ ಕಾರಣವೇನೆಂಬುದು ತಕ್ಕಮಟ್ಟಿಗೆ ತಿಳಿಯಿತು. ವಸ್ತುತಃ ನಿದ್ರೆಯಲ್ಲಿ ಮಿದುಳಿನ ಅನುಭವಾಂಕಣವು ಬುದ್ಧಿಗೆ ತಿಳಿಯದೆ ಮಾಡುವ ಉಪದ್ವ್ಯಾಪಗಳಿಂದಲೇ ಕನಸುಗಳು ಬೀಳುವವೆಂದು ಗೊತ್ತಾಯಿತು. ಇಂತಹ ಬುದ್ಧಿರಹಿತ ಅವ್ಯವಸ್ಥಿತ ಮನೋದೃಶ್ಯಗಳಿಂದ ಜೀವನದ ಮುಂದಿನ ಆಗುಹೋಗುಗಳನ್ನು ಅಳೆಯುವದು ಜಾಣತನವಾಗಬಹುದೋ ?

ರೋಗವಿಜ್ಞಾನದಲ್ಲಿ, ಅಪಚನ, ಮಲಬದ್ಧತೆ, ಮನಸಿನ ಅಸ್ವಾಸ್ಥ್ಯಗಳಿಂದ ಕನಸುಗಳು ಬೀಳುವವೆಂದಿದೆ. ಆಯುರ್ವೇದದಲ್ಲಿ ವಾತಪ್ರಕೃತಿಯವರಿಗೆ ಮತ್ತು ಕ್ಷಯರೋಗಿಗಳಿಗೆ ವಿವಿಧ ಸ್ವಪ್ನಗಳು ಬೀಳುವುದರ ವರ್ಣನೆಯಿದೆ. ಕನಸುಗಳನ್ನು ಚನ್ನಾಗಿ ಅಭ್ಯಸಿಸುವದರಿಂದ ಕನಸಿಗನ ಸ್ವಭಾವವನ್ನು ಗುರುತಿಸಬಹುದೆಂದು ಮನೋವಿಜ್ಞಾನಿಗಳು ಅನ್ನುತ್ತಿದ್ದಾರೆ. ಆದರೆ ಬಿದ್ದ ಕನಸುಗಳ ಆಧಾರದಿಂದ ಭವಿಷ್ಯಜ್ಜೀವನದ ಜ್ಞಾನವು ಹೇಗೆ ಆಗಬಹುದೆಂಬುದನ್ನು ವೈಜ್ಞಾನಿಕವಾಗಿ ಯಾರೂ ಈ ವರೆಗೆ ಸ್ಥಿರಪಡಿಸಿಲ್ಲ.

ನಾನು ಮೈಸೂರಲ್ಲಿ ಒಂದು ಪರೀಕ್ಷೆಗೆ ಕೂತಿದ್ದೆ. ಆ ಪರೀಕ್ಷೆಯ ಪರಿಣಾಮವಾಗುವ ದಿನ ನಾನು ಮಧ್ಯಾಹ್ನ ಉಂಡು ಮಲಗಿದ್ದೆ. ಆಗ ಕನಸಿನಲ್ಲಿ ನನ್ನ ಒಬ್ಬ ಮಿತ್ರನು "ನೀನು ಎರಡನೇ ವರ್ಗದಲ್ಲಿ ಉತ್ತೀರ್ಣನಾಗಿರುವೆ" ಎಂದು ನನಗೆ ಹೇಳಿದನು. ನಾನು ಸಂತೋಷದಿಂದ ಚಪ್ಪಾಳೆ ಹೊಡೆದೆನು. ಚಪ್ಪಾಳೆಯ ಸದ್ದಿನಿಂದ ನನಗೆ ಎಚ್ಚರಾಯಿತು. ಎದ್ದವನೇ ನಾನು ಕಾಲೇಜಿಗೆ ಹೊರಟೆ. ದಾರಿಯಲ್ಲಿಯೇ ನಾನು ಕನಸಿನಲ್ಲಿ ಕಂಡ ಮಿತ್ರನೇ ಬೆಟ್ಟಿಯಾಗಿ ನಿಜವಾಗಿಯೂ ನಾನು ಎರಡನೇ ವರ್ಗದಲ್ಲಿ ಉತ್ತೀರ್ಣನಾದ ಸಂಗತಿಯನ್ನು ತಿಳಿಸಿದನು.

ಅಂದಿನಿಂದ ನನಗೆ ಕನಸುಗಳ ವಿಷಯ ಚನ್ನಾಗಿ ವ್ಯಾಸಂಗ ಮಾಡಬೇಕೆನ್ನುವ ಆಶೆಯುಂಟಾಯಿತು. ಹಲವು ಪುಸ್ತಕಗಳನ್ನು ಓದಿಯೂ ಬಿಟ್ಟೆ. ಆದರೆ ಮುಂದೆ ಬಿದ್ದ ಕೆಲವು ಕನಸುಗಳ, ತೀರ ವಿರುದ್ಧವಾದ ಅನುಭವ ಬಂದುದರಿಂದಲೂ, ಕೆಲವು ತೀರ ಅಸಂಬದ್ಧವಾದುದರಿಂದಲೂ, ಅದೊಂದು ಹುಚ್ಚೆಂದು ನಾನು ನಿರ್ಧರಿಸಿಕೊಂಡೆ.

ಹೀಗೆ ಬರಿ ನಮ್ಮ ಒಂದೆರಡು ಅನುಭವಗಳಿಂದ ಸ್ವಪ್ನಶಾಸ್ತ್ರವನ್ನು ಬರೆಯಲಾಗುವದಿಲ್ಲ. ನನಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸ್ಕಾಲರ್‌ಶಿಪ್‌ನ್ನು ದೊರಕಿಸಬೇಕಿತ್ತು. ಇಲ್ಲದಿದ್ದರೆ ನನ್ನ ಬಡತನವು ಮೈಸೂರಿನಿಂದ ನನ್ನನ್ನು ಹೊರದೂಡುತ್ತಿತ್ತು. ಆಗ ಮೈಸೂರಿನಲ್ಲಿ ಅವನೊಬ್ಬನೇ ನನಗೆ ಮಿತ್ರನಾಗಿದ್ದ. ಇವೆರಡೂ ಕಾರಣಗಳಿಂದ ನನಗೆ ಅಂತಹ ಕನಸು ಬಿದ್ದಿರಬೇಕೆಂದು ನಾನೀಗ ನಿಶ್ಚಯಿಸಿಕೊಂಡಿದ್ದೇನೆ. ವಿಶೇಷ ಕನಸುಗಳು ಬೀಳುತ್ತಿರುವ ಮನುಷ್ಯರ ಜೀವನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವರಿಗೆ ಅಂತಹ ಕನಸುಗಳು ಏಕೆ ಬೀಳುವವೆಂಬುದನ್ನು ಬಹುಮಟ್ಟಿಗೆ ಹೇಳುವದು ಸಾಧ್ಯವಿದೆಯೆಂದು ಮಹಾ ಮನೋವಿಜ್ಞಾನಿಗಳೆನ್ನುತ್ತಾರೆ.

ಸ್ವಪ್ನಪ್ರಪಂಚದಲ್ಲಿ ಎಲ್ಲರೂ ಬಿದ್ದುಕೊಂಡಲ್ಲೆ ಮನೋದೃಶ್ಯಗಳನ್ನು ನೋಡುವದಿಲ್ಲ. ನಿದ್ರೆಯಲ್ಲಿ ಎದ್ದು ದೂರದೂರ ಓಡಾಡಿ ಬರುತ್ತಾರೆ; ಕವನ ಕಟ್ಟುತ್ತಾರೆ; ವ್ಯಾಖ್ಯಾನ ಕೊಡುತ್ತಾರೆ; ಅಳುತ್ತಾರೆ; ನಗುತ್ತಾರೆ; ಹೊಡೆಯುತ್ತಾರೆ; ಅಸಂಬದ್ಧಪ್ರಲಾಪವನ್ನು ಮಾಡುತ್ತಾರೆ; ತಮ್ಮ ಗುಪ್ತಅಪರಾಧಗಳನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಇವೆಲ್ಲವುಗಳ ಮೂಲದಲ್ಲಿರುವ ಕಾರಣಗಳನ್ನು ಇಲ್ಲಿ ಹೇಳಲವಕಾಶವಿಲ್ಲ.

ಒಟ್ಟಿನಲ್ಲಿ ಸ್ವಪ್ನ ಜ್ಯೋತಿಷ್ಯದ ಮೇಲೆ ನಂಬಿಗೆಯಿಟ್ಟು ತಮ್ಮ ಜೀವನವನ್ನು ಕಟ್ಟುವದು ಅಷ್ಟು ಸಮಂಜಸವಾಗಲಾರದೆಂದು ಈಗಿನ ಮಟ್ಟಿಗೆ ವಿಜ್ಞಾನಿಗಳ ಅಭಿಪ್ರಾಯವಾಗಿದೆ.

ತಪ್ಪುದಂಡ

ದಿವಂಗತ ವಿಜಯ ಬೆಟಗೇರಿ

ಶ್ರೀಯುತರು ತಮ್ಮನ್ನೆಳೆದೊಯ್ಯಲು ಬಂದ ಕೊನೆಯ ಕಾಯಿಲೆಯ ಮುನ್ನಾದಿನವೆ ಇದನ್ನು ಬರೆದು ಮುಗಿಸಿದ್ದರು. ಆದುದರಿಂದ ಈ ಕತೆಗೆ ಅಷ್ಟೊಂದು ಹೆಚ್ಚಿನ ಮಹತ್ವವಿದೆ. ಅವರ ಪರಿಣತ ಶೈಲಿಗೆ, ತುಳುಕಾಡುವ ಹಾಸ್ಯಲಹರಿಗೆ, ಮನಮೆಚ್ಚಿಸುವ ಕತೆಗಾರಿಕೆಗೆ ಇದೊಂದು ಸಾಕ್ಷಿ.... ವಸಂತನ ಮರೆಗುಳಿತನವನ್ನು ತುಂಬ ಮಾರ್ಮಿಕವಾಗಿಯೂ ವಿನೋದಯುಕ್ತವಾಗಿಯೂ ಇದು ಚಿತ್ರಿಸುತ್ತದೆ; ವಾಚಕರ ಕುತೂಹಲವನ್ನು ಕೊನೆತನಕ ಎಳೆದೊಯ್ಯುತ್ತದೆ. ಕತೆಗಾರರ ಪರಿಚಯಕ್ಕಾಗಿ 'ಶ್ರದ್ಧಾಂಜಲಿ'ಯನ್ನು ನೋಡಿರಿ.-ಸಂ. ಜ. ಕ.

ನಾಳೆಯೇ ಕ್ರಿಸ್‌ಮಸ್ ಬಿಡುವು. ವಸಂತ ಕನಕನಹಳ್ಳಿಗೆ ಹೋಗಿಯೇ ತೀರುವವನು. ಅವನೊಡನೆ ಚನ್ನಾಗಿ ಹರಟೆ ಹೊಡೆದು ವಿಡಿಸಿ ಬರಬೇಕೆಂದು ಈ ಹೊತ್ತು ಬೇಕೆಂತಲೇ ಎಕ್ಸ್‌ಟೆನ್‌ಶನ್ನದವರೆಗೆ ಮೂರು ಮೈಲುಗಳನ್ನೂ ನಡೆದುಕೊಂಡೇ ಹೋಗಿ ವಸಂತನ - ಚಿಕ್ಕದಾದರೂ ಚೊಕ್ಕಟವಾದ - ಬಂಗಲೆಗೆ ಸಾಯಂಕಾಲ ೫ ಗಂಟೆಗೆ ತಲುಪಿದೆ. ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ; ವಸಂತ ಹೊಸತಾಗಿಯೇ ಇಲ್ಲಿಯ ಹೈಸ್ಕೂಲಿನಲ್ಲಿ ಶಿಕ್ಷಕನಾಗಿದ್ದಾನೆ. ಬರುವ ಸಂಬಳ ಅರವತ್ತಕ್ಕಿಂತ ಹೆಚ್ಚು ಇರದಿದ್ದರೂ ಎಕ್ಸ್‌ಟೆನ್‌ಶನ್ನಿನಲ್ಲಿ ಸೊಗಸಾದ, ಚಿಕ್ಕದಾದ ಬಂಗಲೆಯೊಂದನ್ನು ಬಾಡಿಗೆಹಿಡಿದಿದ್ದಾನೆ. ಸುತ್ತಲಿನ ಕೈತೋಟವನ್ನೂ ಓರಣವಾಗಿ ಇರಿಸಿದ್ದಾನೆ. ಅವನ ಸಂಸಾರದ ಭವಿಷ್ಯಜ್ಜೀವನಗ್ರಂಥಕ್ಕೆ ಸುಂದರವಾದ ಮುನ್ನುಡಿಯೊಂದನ್ನು ಬರೆದಂತೆ ಒಪ್ಪುತ್ತಿದ್ದುವು ಆ ಮನೆ, ಆ ತೋಟ. ಗ್ರಂಥದ ಎಲ್ಲ ಭಾಗಗಳ ಸಿದ್ಧತೆಯಾಗಿದ್ದಿತು. ಅವುಗಳನ್ನೆಲ್ಲ ಒಂದುಗೂಡಿಸಿ ಮುನ್ನುಡಿಯ ಜತೆಗೆ ಸೇರಿಸಿಬಿಟ್ಟರೆ ಅದಕ್ಕೆ ಪೂರ್ಣತೆ ಬರಬೇಕಾಗಿದ್ದಿತು. ಅದಕ್ಕೆ ಇನ್ನೂ ಕೆಲವು ತಿಂಗಳುಗಳು ಅನಿವಾರ್ಯವಾಗಿ ಗತಿಸಬೇಕಾಗಿದ್ದಿತು. ವಸಂತನ ಹೆಂಡತಿ ಕನಕನಹಳ್ಳಿಯಲ್ಲಿ-ತನ್ನ ತೌರುಮನೆಯಲ್ಲಿ-ಚೊಚ್ಚಲು ಬಾಣಂತಿಯಾಗಿದ್ದಳು. ಒಂದು ಕನ್ಯೆಯ ತಾಯಿಯಾಗಿ ಎರಡೂವರೆ ಮೂರು ತಿಂಗಳು ಆಗಿರಬಹುದು. ಆದುದರಿಂದ ಮನೆಯಲ್ಲಿದ್ದವರೆಂದರೆ ವಸಂತ; ಅವನ ಆಳು ಸಿದ್ದನೊಬ್ಬ.

ಗೇಟಿಗೆ ಬರುವುದರೊಳಗೆ ಸಂಗೀತದ ತೆರೆಯೊಂದು ಕಿವಿಗೆ ನುಗ್ಗಿಹೋಯಿತು: "ತುಮನೆ ಮುಝುಕು ಪ್ರೇಮ ಶಿಖಾಯಾ." ಹಾಗೆಯೇ ಗೇಟು ತೆಗೆದು ಬಂಗಲೆಯೊಳಗೆ ನಡೆದೆ; ಆ ತೀರ ಚಿಕ್ಕದಾದ ಮೊಗಸಾಲೆಯಲ್ಲಿ ಯಾರೂ ಇರಲಿಲ್ಲ. ಸಿದ್ದನ ಸುಳಿವೂ ಕಾಣಲಿಲ್ಲ. ನಟ್ಟನಡುವೆ ಸ್ಟೂಲೊಂದು ಮಾತ್ರ ಹೆಣಿಗೆಯ ವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡು ಬರಿದಾದ ಪುಷ್ಪಪಾತ್ರೆ (Flower-pot) ಯೊಂದನ್ನು ಹೊತ್ತುಕೊಂಡು ನಿಂತಿದ್ದಿತು. ನಡುಮನೆಗೆ ಸಾಗಿಹೋದೆ; ಅಲ್ಲಿಯ ಎಡಬದಿಯ ಕೋಣೆಯೇ ವಸಂತನು ಮಲಗುವ ಮನೆ. ಬಾಗಿಲು ಮುಂದೆ ಮಾಡಿದ್ದಿತು. ಒಂದೆರಡು ನಿಮಿಷ ನಿಲ್ಲುವುದರಲ್ಲಿಯೇ ಒಳಗೆ ಅದೆಷ್ಟೊ 'ಗುಣುಗುಣು ಪುಟುಪುಟು'ಗಳು ಪುಟಿದು ಹೋಗಿ "ತುಮನೆ ಮುಝುಕು ಪ್ರೇಮ ಶಿಖಾಯಾದ" ರಭಸದಿಂದ ಹೊರಟ ಧ್ವನಿಯ ಆವೇಗವು ನನ್ನನ್ನು ಕೆಣಕಿತು. ಬಾಗಿಲನ್ನು ಮೆಲ್ಲನೆ ಓರೆಮಾಡಿ ಒಳಸೇರಿದೆ: ಬಿಚ್ಚಿ ಬಿದ್ದ ಹಾಸುಗೆ, ಅಸ್ತವ್ಯಸ್ತವಾಗಿ ಹರಡಿದ ಸಾಮಾನುಗಳು, ಬಾಯ್ದೆರೆದ ಸೂಟಕೇಸು—ಇವೆಲ್ಲವುಗಳನ್ನು ವಸಂತ ಸರಿಪಡಿಸುವುದರಲ್ಲಿದ್ದಾನೆ. ಊರಿಗೆ ಹೋಗುವ ಸಿದ್ಧತೆ ನಡೆದುಬಿಟ್ಟಿದೆ. ನಾನು ಬಾಗಿಲು ತೆರೆದು ಒಳಗೆ ಹೋಗಿ ನಿಂತುದೂ ಅವನಿಗೆ ತಿಳಿದಿಲ್ಲ; ಅಷ್ಟೊಂದು ಪರವಶನಾಗಿಬಿಟ್ಟಿದ್ದಾನೆ. ಯಾವುದನ್ನು ಒಯ್ಯಬೇಕು ಯಾವುದನ್ನು ಬಿಡಬೇಕು ಎಂಬ ಯೋಚನೆಯಲ್ಲಿಯೇ ಮೈಮರೆತಿದ್ದಾನೆ. ಮುಂಗಾಣದವರಂತೆ ಕುಳಿತಿದ್ದ ಅವನ ಬಾಯಿಂದ ಮತ್ತೆ 'ತುಮನೇ'ದ ಪಲ್ಲವಿಯಾಯಿತು.

" ತುಮನೆ ಮುಝುಕೂ ನಹಿ ದೇಖಾಯಾ " ಚೇಷ್ಟೆಯ ಸ್ವರದಲ್ಲಿ ಧ್ವನಿಯೆಳೆದೆ.

" ಎಲ ಎಷ್ಟೊತ್ತಾಯ್ತೊ ಬಂದು ? ನನಗೆ ತಿಳಿಯಲೇ ಇಲ್ಲ ಬಿಡು ! " ಅಚ್ಚರಿಗೊಂಡು ಉದ್ಗರಿಸಿದ.

" ಅದು ಹೇಗೆ ತಿಳಿದೀತಪ್ಪಾ ? ಈ ಮಾಗಿಯಲ್ಲಿ ಕೂಡ ಉನ್ಮತ್ತನಾದ ವಸಂತನಿಗೆ ಕಿವಿಗಳಿದ್ದರೂ ಕೆಲಸ ಮಾಡಬೇಕಲ್ಲವೇ? [illegible]ದ ಮೇಲೆ ಮತ್ತೆ ಸಂಗೀತದ

ಕುಕಿಲು ಬೇಡವೇ ? ವಸಂತ-ಗೀತದಲ್ಲಿ ಪ್ರೇಮವು ಹಣೆ ಯಿಕ್ಕದಿದ್ದೀತೇ ? ಅದನ್ನು ಕಲಿಸಿದವರ ಹತ್ತಿರ ಹೊರಟ ಆತುರವು ಕಿವಿಗಳಲ್ಲಿ ಗಡ್ಡೆಗಟ್ಟಿಕೊಂಡು ಕುಳಿತಿರುವುದೇನು ಮತ್ತೆ ? ಚಳಿಗಾಲವಲ್ಲವೇ ? ''

" ಅಲ್ಲೊ ? ಬರುಬರುವುದರಲ್ಲಿ ಎಷ್ಟು ಮಾತನಾಡಿ ಬಿಟ್ಟೆಯೋ ? ಏನೋ ಯೋಚನೆಯಲ್ಲಿದ್ದುದರಿಂದ ಕೇಳಿ ಸದೇ ಹೋಯಿತು; ಕುಳಿತುಕೊ " ಎಂದು ಅವನು ಹೇಳು ತ್ತಿರುವಾಗಲೇ ಕಾಟನ ಮೇಲೆ ಹೋಗಿ ಕುಳಿತೆ.

ಎದುರಿನ ಸೂಟಕೇಸು ಭರತಿಯಾದಂತಾಯಿತು. ಹಾಸುಗೆಯನ್ನು ಸುತ್ತಿ ಕಟ್ಟಲಾರಂಭಿಸಿದ. ನನಗೆ ಆಚ್ಚರಿ ಯಾಯಿತು. " ಅಲ್ಲೋ ವಸಂತ ಊರಿಗೆ ಹೋಗುವುದು ಇಂದೋ? ನಾಳೆಯೋ ?" ಎಂದು ಪ್ರಶ್ನಿಸಿದೆ.

" ನಾಳೆ ೯|| ಗಂಟೆಯ ಗಾಡಿಗೆ ಹೊರಡಬೇಕು. ಅಂದ ರೆಯೇ ಮುಂದೆ ಹಳ್ಳಿಗೆ ಹೊರಡಲು ಸರ್ವಿಸ್ ಮೋಟಾರಿನ ಅನುಕೂಲತೆಯಾಗುವುದು."

" ನಾಳೆ ಹೊರಡುವುದಾದರೆ, ಪ್ರಾಣಿ, ಹಾಸುಗೆಯನ್ನು ಕಟ್ಟಿ ಸಿದ್ಧನಾಗಿಬಿಟ್ಟಿರುವೆಯಲ್ಲ ?! ರಾತ್ರಿಯೆಲ್ಲ ಜಾಗರಣೆ ಮಾಡುವವನಿರುವಿಯೇನು ಮತ್ತೆ ? ಅಥವಾ ಹೊರಡುವ ಸಿದ್ಧತೆಯೆಲ್ಲವನ್ನೂ ಮಾಡಿ ತಲೆದಿಂಬಿಗೆ ಹಾಸುಗೆಯ ಸುರುಳಿ, ಕಾಲ್ದೆಸೆಗೆ ಸೂಟಕೇಸು ಇಟ್ಟುಕೊಂಡು ಮೈಯಲ್ಲಿ ಕೋಟು ಓವ್ಹರಕೋಟುಗಳನ್ನು ಹಾಕಿಕೊಂಡು ಮಲಗಿ ಕೊಂಡು ಬಿಡುವಿಯೋ ?"

" ಹಾಗೆಲ್ಲ ಏನು ಹೇಳ್ತೀಯೋ ಮನೆಯಲ್ಲಿ...."

" ಮನೆಗೆ ಕೀಲಿಯನ್ನು ಬಿಗಿದು ಸ್ಟೇಶನ್ನಿಗೆ ಹೋಗಿ ಮಲಗಬಾರದೇ ಈಗಾಗಲೇ ? ''

" ಅಲ್ಲೊ, ಮತ್ತೆ ಬೇರೆ ಹಾಸುಗೆ ಇಲ್ಲವೇನೋ ಮನೆ ಯಲ್ಲಿ ? "

"ನಾಳಿನ ರೇಲ್ವೆಟಿಕೇಟು ಇಂದೇ ತೆಗೆದಿದ್ದೀ, ಇಲ್ಲವೋ ಮತ್ತೆ ? ''

"ಮಾತನಾಡು ಎಷ್ಟು ಆಡುತ್ತಿ;.... ನನ್ನದು ಮರೆಯುವ ಸ್ವಭಾವ ನಿನಗೆ ಗೊತ್ತೇ ಉಂಟು...."

" ಅಂತೆಯೆ ನಾಳೆ ಹೋಗುವುದೆಂಬುದನ್ನು ಮರೆತು ಈಗಾಗಲೇ ತಯಾರಿಯೇನು ?

" ಎಷ್ಟು ಹೇಳ್ತೀಯೋ ? ಅವಸರದಲ್ಲಿ ಯಾವಯಾವ ಸಾಮಾನುಗಳನ್ನು ಹಾಕಬೇಕೆಂಬುದು ತಿಳಿಯದೇ ಹೋಗ ಬಹುದು ಎಂದು ಈಗ ಕಟ್ಟಿಬಿಡಲು ಕುಳಿತೆ. '' ಈ ವರೆಗೂ ಅವನು ಹೆಚ್ಚಾಗಿ ಮಾತನಾಡದೆ ನನಗೆ ಸಹಜ ವಾಗಿ ಉತ್ತರಿಸುತ್ತಿದ್ದುದರ ಕಾರಣವ ಉದ್ಯೋಗ. ಇಷ್ಟರಲ್ಲಿ ಹಾಸುಗೆಯ ಸೂಟಕೇಸನ್ನೂ ಒಂದು ಮೂಲೆಯಲ್ಲಿರಿಸಿ ಕುಳಿತ; ನಗೆ, ನಾಚಿಕೆ, ಆನಂದ, ಸ್ನೇಹ, ಮಿಶ್ರಣವು ಅವನ ಮುಖಕ್ಕೆ ಒಂದು ಬಗೆಯ ಗನ್ನು ಕೊಟ್ಟಿದ್ದಿತು.

" ನಾಳೆನಿಂದ ಒಂಬತ್ತು ಹತ್ತು ದಿನಗಳ ಗೃಹವಾಸವೆನ್ನು. ''

" ಅಹುದು ಬಿಡುವನ್ನೆಲ್ಲ ಅಲ್ಲಿಯೇ ಕಳ ವೆನು. ಆದಿತ್ಯವಾರ ಬಂದುಬಿಡುವೆನು."

" ಆದಿತ್ಯವಾರ ಬಂದಮೇಲೆ ಮೊ ಪುಷ್ಪಪಾತ್ರೆಯಲ್ಲಿ ಮುಗುಳುಳ್ಳ ಹೂಗೊ ಪರಿಷ್ಕಾರವಾಗಿ ಇಟ್ಟಿರು. ನೋಡಲಿಕ್ಕೆ ಬರ ಗಳಿಗಾಗಿ ಬಾಯ್ದೆರೆದು ನಿಂತ ಆ ಪಾತ್ರೆ ನಾಲಗೆಯು ಹೊಸತಾದ ಅರಳುಗಳ ಮಧು ಒದ್ದೆಯಾಗಿರಲಿ; ಅಂದರೆಯೇ ನನಗೆ ಸ್ವಾಗ ವುದು. "

"ಮಾಗಿಯಲ್ಲಿ ಹೂಗೊಂಚಲು ಸಿಕ್ಕುವ ಪಾತ್ರೆ ಈಗ ಬರೀ ಪಾತ್ರೆಯಾಗಿ ಉಳಿಯ ವಾರ್ಯವಾಗಿದೆ. ಆದುದರಿಂದ ಆದಿತ್ಯವಾ ನಂತೆಯೇ ಸ್ವಾಗತ. "

"ಮಾಗಿ ಮುಗಿಯುತ್ತ ಬಂದಹಾಗೆಯೇ ಮಾಡಿದರೆ ಹೂ ಸಿಕ್ಕುವುದಿಲ್ಲವೇ? "

" ಇಲ್ಲ, ಸಿಕ್ಕುವಂತಿಲ್ಲ. ಮಾತಿಗೆ ಮಾತ ನಿದೆ? ನೀನು ಸ್ಪಷ್ಟವಾಗಿ ಕೇಳದಿದ್ದರೆ ಅಸ್ಪಷ್ಟ ! "

" ನಿಮ್ಮ ರಾಣಿಯವರ ಸಲುವಾಗಿ ಓಲಗಶಾಲೆಯು ಇನ್ನೆಷ್ಟು ದಿನ ಹೀಗೆ ಬೇಕು ? ''

" ಹೀಗೆ ಕೇಳು. ಇನ್ನು ೨-೩ ತಿಂಗ ಅಲ್ಲಿಯೇ ಇರಬೇಕಂತೆ. ಇಲ್ಲಿ ಬಂದು ಗೆಲಸಕ್ಕೆ ತೊಡಗಿದರೆ ಹೇಗೆ? ಮೊನ್ನೆಯೇ ಮುಗಿಯಿತು. ''

"ಆದುದರಿಂದ ೮-೧೦ ದಿನಗಳೆಲ್ಲವೂ ವವನಲ್ಲವೇ ? ''

"ಹಾಗೇನೂ ಇಲ್ಲ, ಇಲ್ಲಿ ಇದ್ದಾದರೂ ಮಾ

"ಬರಿದಾದ ಪುಷ್ಪಪಾತ್ರೆಯ ಒಡನಾಡಿಯಾಗಿರುವುದು!"

"ಇರಲಿ ಬಿಡು; ಚಹ ತೀರಿಸಿಕೊಂಡು ಪಟ್ಟಣದೊಳಗೆ ಹೊರಡೋಣವೇನು? ಸಿದ್ಧನಿಗೆ ಹೇಳಿ ಹೋಗುವೆನು: ನಾನು ಬರುವವರೆಗೂ ಹೂಗೊಂಚಲೊಂದನ್ನು ತಂದು ಪುಷ್ಪಪಾತ್ರೆಯಲ್ಲಿ ತಂದಿಡಲು ಮರೆಯಬಾರದೆಂದು; ಆಯಿತೇ?"

"ಅಹುದು. ಬಸಂತ ಫಲಪತಿಯನ್ನರಸಿಕೊಂಡು ಹೋದ ಮೇಲೆ ಅದು ಪುಷ್ಪವತಿಯನ್ನಾದರೂ ಆಸರಿಸಬೇಡವೇ?"

"ಇಂದೆಯೇ ಅದರಲ್ಲಿ ಹೂ ಇಡಲು ಮರೆತುದರಿಂದ ಕಪಿಯಾದ ನೀನು ಏನೇನೋ ರೂಪಕಗಳ ಮಳೆ ಸುರಿಸಿಬಿಟ್ಟೆ." ನಾಚಿಕೊಂಡವನಾಗಿದ್ದರೂ ಗಡುಸಾದ ಧ್ವನಿಯಲ್ಲಿಯೇ ನನ್ನನ್ನು ಗದರಿಸಿಬಿಟ್ಟ; ಎದ್ದು ಚಹದ ಸಿದ್ಧತೆಗೆ ತೊಡಗಿದ.

"ಪೇಟೆಯಲ್ಲಿ ಏನಾದರೂ ಖರೀದಿಯಾಗಬೇಕೇನು? ಹಳ್ಳಿಯೂರಿಗೆ ಹೊರಡುವುದು ಪೇಟೆಯ ಸಡಗರವೊಯ್ಯಬೇಕಲ್ಲವೇ!" ಎಂದು ನಾನು ಪ್ರಶ್ನಿಸುತ್ತಲೇ ವಸಂತ ಗಾಬರಿಯಾದಂತೆ ಕಂಡಿತು. ಅವಸರವಾಗಿಯೇ ಚಹ ತೀರಿಸಿಕೊಂಡು ಪಟ್ಟಣದ ದಾರಿಯನ್ನು ಹಿಡಿದೆವು. ಈ ವರೆಗೆ ಮುಗ್ಧಭಾವದವನಾಗಿದ್ದ ವಸಂತನು ಮಾತನಾಡ ತೊಡಗಿದ:

"ಪೇಟೆಯಲ್ಲಿ ಏನಾದರೂ ತೆಗೆದುಕೊಳ್ಳುವದಿದೆಯೇ?— ಎಂದು ನೀನು ಕೇಳಿದ ಮೇಲೆ ನನಗೆ ನೆನಪಾಯಿತು ನೋಡು; ಇಲ್ಲದಿದ್ದರೆ ನಾನು ಸಹಜವಾಗಿಯೇ-ವೇಳೆ ಹೋಗದ್ದರಿಂದ-ಸುತ್ತಾಡಿಕೊಂಡು ಬರೋಣವೆಂದು ಹೊರಟಿದ್ದೆ."

"ಅಹುದು; ನಾಳೆ ೯॥ ಗಂಟೆಯ ವರೆಗೆ ನಿನಗೆ ಹೊತ್ತು ಸಾಗುವದೇ ಅಸಾಧ್ಯವಾಗಿರಬೇಕು! ನಿಮ್ಮಂತಹ ವಿರಹಿಗಳ ಆತುರದೊಡನೆ ವೇಳೆಯೂ ಓಡಲಾರಂಭಿಸಿದರೆ ಪಾಪ, ಮನುಷ್ಯರ ಆಯುಷ್ಯವು ಒಂದು ದಿನವೋ ಒಂದು ಕ್ಷಣವೋ!"

"ನೋಡು, ಜೇಷ್ಟೆ ಒಂದೊಂದು ವೇಳೆಯಲ್ಲಿ ತಲೆ ಹೂಲಿಯೆಬ್ಬಿಸುವುದೆಂಬ ಮಾತು ನನಗೆ ಅನುಭವಕ್ಕೆ ಬರುತ್ತಲಿದೆ ಈಗ." ವಸಂತ ಬೇಸರದ ರಾಗವನ್ನು ಎಳೆದನು.

"ಅದೇನೋ ಇಷ್ಟೊಂದು ಬೇಸರವಾಗಲಿಕ್ಕೆ ಅಂತಹ ಗೂಢ ಚಿಂತೆ? ಹುಟ್ಟಿದುದು ಹೆಣ್ಣು ಎಂದೇ? ಸಮಯ ಬಂದಾಗ ನೋಡಿದರಾಯಿತು ಬಿಡು."

"ನನ್ನ ಚಿಂತೆ ನಿನಗಿದ್ದರೆ ನೀನು ಹೀಗೆ ಮಾತನಾಡುತ್ತಿರಲಿಲ್ಲ. ನನ್ನ ಸಮಸ್ಯೆ ಬಗೆಹರಿಯದಿದ್ದರೆ ನಾಳೆ ಹೋಗುವುದು ನನಗೆ ನೀರಸವೆನಿಸುವುದು!'

"ಅದೆಂತಹದಪ್ಪ ನಿನ್ನ ಸಮಸ್ಯೆ— ಹೇಳಿಯಾದರೂ ಹೇಳಲ್ಲ ನೋಡೋಣ."

"ಹೇಳಿದರೆ ಪಿಸ್ಸೆಂದು ಬಿಡುವವ ನೀನು; ಕೇಳಲಿಕ್ಕೆ ಕ್ಷುಲ್ಲಕವೆನಿಸಿದರೂ ಅದರ ಪರಿಣಾಮ ನನಗೇ ಗೊತ್ತು! ಹೇಗಾದರೂ ನೆನಪಿಗೆ ಬಂದರೆ ಸರಿ, ಇಲ್ಲವಾದರೆ ನನಗೆ ಶಾಂತಿಯಿಲ್ಲ."

"ಅದೇನೆಂಬುದನ್ನು ಹೇಳಿಯಾದರೂ ಹೇಳಬಾರದೇ?" ನಾನೂ ಬೇಸರದಿಂದಲೇ ಕೇಳಿದೆ.

"ಇದು ನೋಡು; ನಾಲ್ಕೈದು ತಿಂಗಳ ಹಿಂದಿನ ಮಾತು. ಅಂದು ಅವಳು ಕನಕನಹಳ್ಳಿಗೆ ಹೋಗುವಾಗ ನನಗೆ ಒಂದು ಪದಾರ್ಥವನ್ನು ತರಹೇಳಿದ್ದಳು. 'ದೀಪಾವಳಿಯ ಬಿಡುವಿನಲ್ಲಿ ಬರುವಾಗ ಮರೆಯುವೇ ತರ್ರಿ. ಮರೀಬೇಡ್ರಿ ಮತ್ತೆ! ಬರೆದಿಟ್ಟುಕೊಳ್ರಿ ಬೇಕಾಗಿದ್ರೆ'— ಎಂದು ಹೇಳಿದಳು. ನಾನು ಅಷ್ಟೊಂದು ಸ್ಮರಣಶಕ್ತಿಯಿಲ್ಲದೆ ಬಿ. ಎ. ಪರೀಕ್ಷೆ ಪಾಸ ಆಗಿಲ್ಲ ಎಂದು ಹೇಳಿದ್ದೆ ಆಢ್ಯತೆಯಿಂದ...."

"ಯಾವ-ಪದಾರ್ಥವದು?" ನಡುವೆಯೇ ನಾನು ಪ್ರಶ್ನಿಸಿದೆ.

"ಅದಾವುದೆಂಬುದು ಗೊತ್ತಿದ್ದರೆ ಇಷ್ಟೆಲ್ಲ ತೊಡಕೇಕೆ? ಅವಳು ಹೇಳಿದುದು ನನ್ನ ಲಕ್ಷ್ಯಕ್ಕೆ ಬರಲಿಲ್ಲ. ಆವೊಡವೆಯ ಹೆಸರು ಅಸ್ಪಷ್ಟವಾಗಿ ಕೇಳಿಸಿದರೂ ನನ್ನಾ ಮನಸ್ಸಿನಲ್ಲಿ ಸುತ್ತುತ್ತಿದ್ದ ಯಾವುದೋ ಒಂದು ಯೋಚನೆಯ ತಿರುಗಣಿಯಲ್ಲಿ ಮುಳುಗಿಹೋಯಿತು. ಅದರ ಕಲ್ಪನೆಯಿಲ್ಲದೆಯೇ ಆಢ್ಯತೆಯಿಂದ ನನ್ನ ಸ್ಮರಣಶಕ್ತಿಯನ್ನು ಕೊಂಡಾಡಿಕೊಂಡೆ. ಆಗ ಆ ಮುಖದಲ್ಲಿ ಮೂಡಿದ ಕೊಂಕುನಗೆ ತುಂಟನೋಟಗಳೊಡನೆ ತೇಲಿಹೋದ ನನ್ನ ಮೈಮನಗಳು ಆವೊಡವೆಯ ಹೆಸರನ್ನು ನನ್ನ ಮೆದುಳಿನಲ್ಲಿ ಮೂಡಿಸದೇ ಹೋದುವು. ಮರೆತೀರಿ ಮರೆತೀರಿ—ಎಂದು ಎಚ್ಚರಿಸಿದಾಗಲೂ ಕೇಳದೇ ಹೋದೆ. ಎಂತಹ ಹುಚ್ಚು, ನನ್ನದು! ಮುಂದೆ ನಾನು ದೀಪಾವಳಿಯ ಬಿಡುವಿನಲ್ಲಿ ಕನಕನಹಳ್ಳಿಗೆ ಹೋದಾಗ ಇದಾವ ಸನ್ನಿವೇಶವೂ ನನಗೆ ಜ್ಞಾಪಕವಿರಲಿಲ್ಲ. ಕೇವಲ ಆತುರಭಾವದವನಾಗಿ ಹೊರಟುಹೋದೆ. ಆದಾಗಲೇ ಕನ್ಯಾರತ್ನವೂ ಅದರ ತಾಯಿಯೂ ಕೋಣೆಯಲ್ಲಿ ಬಂಧಿತರಾಗಿ ೩೦-೩೫ ದಿನಗಳಾಗಿದ್ದುವು. ಏಳೆಂಟು ದಿನಗಳಷ್ಟು ಮಾತ್ರ ನಾನು ಅಲ್ಲಿದ್ದೆ. ಬಾಣಂತಿತನದ ಆಹ್ನಿಕ ವಿಶೇಷಗಳ ಮೂಲಕ ನಮಗೆ ಹರಟುತ್ತ ಕುಳಿತಿರಲು ಸಮಯ ಸಿಕ್ಕುತ್ತಿರಲಿಲ್ಲ. ಊಟವಾದ ಮೇಲೆ ಕೋಣೆಯ

ಒಳಭಾಗದಲ್ಲಿ ಸಿದ್ಧವಾಗಿರುತ್ತಿದ್ದ ತಾಂಬೂಲವನ್ನು ಸ್ವೀಕರಿಸುವಾಗ ಆಗುವ ಸ್ವಾಗತವೇ ಸ್ವಾಗತ; ಒಂದೆರಡು ಮಾತುಗಳು; ಒಂದೊಂದು ದಿನ ಮಗುವಿನಲ್ಲಿ ಕೀಲಿಸಿದ ಕಣ್ಣುಗಳ ವಾತ್ಸಲ್ಯದ ಚಿತ್ರ. ಹೀಗಾಗಿ ಹೊರಡುವ ವರೆಗೂ ನನಗೆ ಅವಳು ತನಗೆ ಬೇಕಾಗಿದ್ದ ವಸ್ತುವನ್ನು ಕೇಳಲಿಲ್ಲ. ತಂದಿದ್ದರೆ ಕೊಟ್ಟೇತೀರುವನೆಂದೋ ಅಥವಾ ಆಗ ಆ ವಸ್ತು ಆವಶ್ಯಕವಿರದುದರಿಂದಲೋ ಅದರ ಪ್ರಸ್ತಾಪವನ್ನೆತ್ತಿರಲಿಲ್ಲ. ಆದರೆ ಇಲ್ಲಿಗೆ ಮರಳಿ ಹೊರಟು ಬರುವ ದಿನ ಬಾಗಿಲಿಗೆ ಬಂದು ನಿಂತವಳು ನನ್ನನ್ನು ಹಠಾತ್ತಾಗಿ ಪ್ರಶ್ನಿಸಿದಳು: 'ನಾನು ಹೇಳಿದುದನ್ನು ತಂದಿದ್ದೀರಾ?' ದಿಗಿಲುಗೊಂಡೆ.

'ಕ್ರಿಸ್‌ಮಸ್ ರಜೆಯಲ್ಲಿ-ಇನ್ನು ಸ್ವಲ್ಪ ದಿನಗಳಲ್ಲಿಯೇ-ಇಲ್ಲಿಗೆ ಬರುವವನೇ ಇದ್ದೇನೆ ಆಗ ಖಂಡಿತವಾಗಿಯೂ ತರುವೆನು' ಎಂದೆ. ಅವಳ ಮುಖದ ಮೇಲೆ ಕೋಪ ಪೂರಿತವಾದ ಆಣಕದ ನಗೆ ಹಾಯ್ದುಹೋಯಿತು. ನನ್ನ ಜತೆಗೆ ಮಾವ ಇದ್ದುದರಿಂದ ನನ್ನನ್ನು ವಿಶೇಷವಾಗಿ ಬೈದು ಬಿಡಲಿಕ್ಕೆ ಅವಳಿಗೆ ಆಸ್ಪದವಿರಲಿಲ್ಲ. 'ಆಗಾದರೂ ತರಬೇಕು ಮತ್ತೆ; ಈಗಿನಂತೆ ಮರೆತು ಬಂದೆಯೆಂದರೆ ಆಗದು!' ಎಂದು ಹೇಳುವಾಗ ಧ್ವನಿಯಲ್ಲಿ ಅನಿವಾರ್ಯವಾಗಿ ಹತ್ತಿಕ್ಕಿದ್ದ ರೋಷವು ಸ್ಪಷ್ಟವಾಯಿತು. 'ಇರಲಿ ಬಿಡೇ ಏನಾದರೊಂದು ನಿನ್ನದು' ಎಂದು ಹಿರಿಯತನದಿಂದ ಹೇಳಿ 'ಹಂ ನಡೆಯಿರಿ ವಸಂತರಾಯರೇ ಮೋಟಾರಿನವರೆಗೆ ನಾನೂ ಬಂದುಬಿಡುವೆನು' ಎಂದು ಮಾವ ಹೇಳಿದರು. ತರಬೇಕಾದ ಒಡವೆಯಾದರೂ ಯಾವುದು?—ಎಂದು ಬಾಯ್ಬಿಚ್ಚಿ ಕೇಳಲು ನಾಚಿಕೆಯಾಯಿತು. ಆದರೂ ಗಟ್ಟಿಮನಸ್ಸು ಮಾಡಿಕೊಂಡು ಕೇಳಬೇಕೆನ್ನುವುದರಲ್ಲಿಯೇ ಮಾವಂದಿರು ಹೀಗೆ ಹೇಳಿದುದರಿಂದ ಸುಮ್ಮನೆ ಅವರನ್ನು ಹಿಂಬಾಲಿಸಿ ಸಾಗಿಹೋದೆ. ದಾರಿಯಲ್ಲಿ ನನ್ನನ್ನು ನಾನೇ ಸಂತಯಿಸಿಕೊಂಡೆ: ಏನು ದೊಡ್ಡ ಮಹತ್ತ್ವದ ವಿಷಯ!-ಎಂದು. ಇಂದು ಅದೇ ದೊಡ್ಡ ಮಹತ್ತ್ವದ ವಿಷಯವಾಗಿದೆ. ಅಸ್ಪಷ್ಟವಾಗಿ ಅಂದು ಕೇಳಿದ ಪದಾರ್ಥದ ಹೆಸರನ್ನು ಇಂದು ಸುಸ್ಪಷ್ಟವಾಗಿ ಜ್ಞಾಪಿಸಿಕೊಳ್ಳಬೇಕೆಂದು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ಆಗಲೇ ಮತ್ತೆ ನೀನು ನೆನಪುಗೊಟ್ಟೆ, ಪೇಟೆಯಲ್ಲಿ ಏನಾದರೂ ತೆಗೆದುಕೊಳ್ಳುವುದಿದೆಯೇ?—ಎಂದು."

"ತಪ್ಪಾಯಿತು ನಾನು ಕೇಳಿದ್ದು ಆಯಿತೇ? ನಿನಗೆ ನೆನಪಿರದಿದ್ದರೆ ನನ್ನ ಮೇಲೆ ನಿನ್ನ ಕೋಪವನ್ನೆಲ್ಲ ಕಾರಬೇಕೆಂದಿರುವೆಯೆಂದು ತೋರುವುದು!"

"ಅಲ್ಲೋ ನೀನು ಕೇಳಿದ್ದು ತಪ್ಪೆಂದು ನಾ[illegible] ಮುಂಗಾಣದವನಾಗಿ ವಸಂತ ನನ್ನನ್ನು ಪ್ರಶ್ನಿ[illegible]ರಲ್ಲಿಯೇ ಪೇಟೆಯನ್ನು ಸಮೀಪಿಸಿದ್ದೆವು. ಜನ[illegible] ನಮ್ಮ ಮಾತುಕತೆಗಳು ಸಾವಕಾಶವಾಗಿ ಸಾಗಿ[illegible]

"ಇಲ್ನೋಡು, ಇನ್ನೇನು ಮಾಡಬೇಕು [illegible] ಹಂಚಿಕೆಯೇನಾದರೂ ತೋರುತ್ತದೆಯೇ ಈ [illegible] ಬಿಡುಗಡೆ ಹೊಂದುವುದಕ್ಕೆ?" ನನ್ನನ್ನು ಸಾ[illegible] ಕೇಳಿದ.

ವಸಂತನಿಗಿದ್ದ ದಿಗಿಲು ನಿಜವಾಗಿಯೂ [illegible] ಹದೆ! ಅದೇನು ಮಹಾ ಗಂಡಾಂತರವೋ [illegible] ತೆನೆಂದು ಹೇಳಲಿಕ್ಕೆ ಆಗುತ್ತಿದ್ದಿತು. ಹಾಗೆ [illegible] ಬಿಟ್ಟು ಮೂರು ಸಲ ಕೇಳಿದರೂ ಅವನ ಹೆಂ[illegible] ಬಹುದಾಗಿದ್ದ ಶಿಕ್ಷೆಯಾದರೂ ಎಂತಹದಿರಬಹು[illegible] ಅದೇನೋ ಪಾಪ ಇಷ್ಟೊಂದು ದುಗುಡಕ್ಕೆ ಈ[illegible] ಆದರೂ ವಸಂತನ ಹೆದರಿಕೆಗೆ ಕಾರಣವಿಲ್ಲದಿರಲಿ[illegible] ದಿನವೇ ಆಕೆ ಹೇಳಿದ ವಸ್ತುವನ್ನು ತೆಗೆ[illegible] ಹೋದರೆ ನಿಜವಾಗಿಯೂ ರಸಭಂಗವಾಗಲಿದ್ದಿತು. [illegible] ದಿನದ ಸಮಾಗಮದಲ್ಲಿ ಎಂತಹ ಕ್ಷುಲ್ಲಕ [illegible] ಮಹತ್ತಾದುದೇ. ಅದರ ಆಭಾಸವು ಅವನು ಕಳೆ[illegible] ಅಲ್ಪಕಾಲವನ್ನು ಸ್ವಲ್ಪವಾದರೂ ದೂಷಿತವಾಗಿ[illegible]ವಾಗಿದ್ದಿತು. ಇದಿಷ್ಟನ್ನೂ ಅವನು ಸಹಿಸಲಾ[illegible] ಸಾಮಾನ್ಯವಾದ ವಸ್ತುವೊಂದನ್ನು ನನ್ನ ಸ[illegible]ದವರು ಇಲ್ಲಿಯವರೆಗೆ ಬಂದುದಾದರೂ [illegible] ಎಂದು ಕೇಳಿಸಿಕೊಳ್ಳುವುದು ಸಾಮಾನ್ಯವಾದ [illegible] ಮುಳಿಸುಹೆಮ್ಮೆಗಳಿಂದ ಕೂಡಿದ ಆ ಚುಚ್ಚು[illegible] ಸಹಿಸುವುದಕ್ಕಾದೀತೇ? ಆ ಮುಖದಲ್ಲಿ ಆವ[illegible] ಸೀನ್ಯವನ್ನು ತಾಳಿಕೊಂಡಿರಬಹುದೇ? [illegible]ಲಿರುವಾಗ ಹೃದಯಗಳು ತೀರ ಹತ್ತಿರವಾಗಲಿ[illegible] ಸುತ್ತಿದ್ದರೂ ಆಕೆಯ ಕೋಪ ಆ ಆತುರ[illegible] ಮುಟ್ಟಿಗಾದರೂ ಹುದುಗಿಸಿತೆಂದರೆ?— ಈ [illegible] ಪ್ರಶ್ನೆಗಳು ವಸಂತನ ತಲೆಯನ್ನು ತಿನ್ನುತ್ತಿ[illegible] ಅದರಲ್ಲಿ ಅವನ ಹೆಂಡತಿ ಸ್ವಲ್ಪ ಅಭಿಮಾನಿ[illegible]ವಾಗಿಯೂ ಮಾನಿನಿ ನೋಡು' ಎಂದು [illegible] ಸಾರೆ ನನ್ನ ಮುಂದೆ ಹೇಳಿದ್ದ. ಅವಳ [illegible] ಎಷ್ಟೋ ಸೂಕ್ಷ್ಮವಾದ ಸಂದರ್ಭಗಳನ್ನು [illegible] ಆದರೆ ಅವೆಲ್ಲ ತೀರ ಗುಟ್ಟಿನ ಮಾತುಗಳು.

ಒಂದನ್ನಾದರೂ ಉಸಿರುವುದು ಸಾಧ್ಯವಿಲ್ಲದಾಗಿದೆ. ಇರಲಿ, ವಸಂತನ ದುಗುಡಕ್ಕೆ ಇನ್ನೊಂದು ಪ್ರಬಲವಾದ ಕಾರಣವೂ ಇದ್ದಿತು. ಎರಡು ಸಲ ಹೇಳಿದ ಪದಾರ್ಥವು ಯಾವು ದೆಂಬುದನ್ನೇ ಅರಿಯದ ಅಭಿಪ್ರಾಣಿ ವಸಂತ ಹೆಂಡತಿಯ ಮುಂದೆ ನಿಜವಾಗಿಯೂ ದೊಡ್ಡ ತಪ್ಪುಗಾರನಾಗಿ ನಿಲ್ಲ ಬೇಕಾಗುತ್ತಿದ್ದಿತು ! ಆದುದರಿಂದಲೇ ನಾಚಿಕೆಯು ಅವನ ಮನಸ್ಸನ್ನು ತಿನ್ನುತ್ತಲಿದ್ದಿತು.

"ಅಲ್ಲೋ, ಸುಮ್ಮನೆ ನಡೆಯುತ್ತಿರುವಿಯಲ್ಲ ಏನಾದರೂ ಹಂಚಿಕೆ ಹೇಳಬಾರದೇ ?" ನನ್ನನ್ನು ಮತ್ತೆ ವಸಂತ ಪ್ರಶ್ನಿಸಿದ.

"ನನಗೂ ಅದೇ ಯೋಚನೆ !....ಹಂ....ನಿನಗೆ ಅಂತಹ ದೊಡ್ಡ ಶಿಕ್ಷೆಯೇನು ಆಗಲಾರದು ವಸಂತ."

"ಇದು ಹಂಚಿಕೆಯೇನು ? ಸಮಾಧಾನ. ಆವೊಡವೆ ನೆನಪಾಗದೇ ಹೋದರೆ ಊರಿಗೆ ಹೋಗುವುದನ್ನು ನಿಲ್ಲಿಸಿ ಬಿಡಬೇಕೆಂದಿರುವೆನು."

"ಅದೇನೋ ನಾಳೆ ಹೋಗುವುದನ್ನು ಬಿಟ್ಟರೆ ಆಗುವು ದೇನು ? ಮಾಡಿದ ಈ ಮಹತ್ಪಾಪದ ಪ್ರಾಯಶ್ಚಿತ್ತವೆಂದು ಒಮ್ಮೆಲೆ ವಾನಪ್ರಸ್ಥ ಸನ್ಯಾಸಾಶ್ರಮಗಳ ದೀಕ್ಷೆಯನ್ನು ತೆಗೆದುಕೊಳ್ಳಬೇಕೆಂದಿರುವಿಯೇನು ಮತ್ತೆ !"

ವಸಂತ ನನಗೆ ಏನನ್ನೂ ಉತ್ತರಿಸದೆ ಮುಂದೆ ಸಾಗಿದ್ದ. ನನಗೆ ಒಂದು ಯೋಚನೆ ಹೊಳೆಯಿತು.

"ಇಲ್ಲಿ ನೋಡು, ಹೆಂಗುಸರಿಗೆ ಬೇಕಾದ ಪ್ರೀತಿಯ ಲವು ವಸ್ತುಗಳನ್ನು ಕೊಂಡೊಯ್ದು ಪ್ರೆಝೆಂಟ್ ಮಾಡಿ ಡು. ನಿಮ್ಮಾಕೆಗೆ ಯಾವ ಪದಾರ್ಥಗಳು ಹೆಚ್ಚು ಷ್ಟವೋ ಅಂಥವುಗಳನ್ನು...."

"ಅಂದರೆ ? ಒಂದನ್ನು ತರಹೇಳಿದರೆ ಬೇರೆ ಹತ್ತೆಂಟು ಡವೆಗಳನ್ನು ಒಯ್ದರೂ ಬೇಕಾದ ವಸ್ತುವು ಬೇಕಾಗಿಯೇ ಳಿಯುವುದಿಲ್ಲವೇ ?"

"ಹೀಗೆ ಮಾಡು; ಹೇಗಾದರೂ ಪೇಟೆಯಲ್ಲಿಯೇ ಬಂದಿ ದ್ದೇವೆ. ಅಲ್ಲಲ್ಲಿ ಕಣ್ಣು ಹೊರಳಿಸಿ ನೋಡುತ್ತಿರು. ಅಂದರೆ ವಸ್ತುವು ಜ್ಞಾಪಕಕ್ಕೆ ಬರಬಹುದು."

"ಸಾಕು ಬಿಡೋ ನಿನ್ನ ಸಿದ್ಧಾಂತ; ನಮಗೆ ಬೇಕಾದ ವಸ್ತುಗಳನ್ನೆಲ್ಲ ದಾರಿಯ ಮೇಲೆಯೇ ಇಟ್ಟಿರುವರೇನು ? ಅಂಗಡಿಯೊಳಗೇ ಹೋಗಬೇಕಾಗುವುದು. ನನಗೊಂದು ಯೋಚನೆ ಹೊಳೆದಿದೆ; ನಿನ್ನ ಯೋಚನೆಯ ಕೊರೋ ರಿಯೇ ಅನ್ನು ಬೇಕಾಗಿದ್ದರೆ. ಒಳ್ಳೇದು. ಇನ್ನು ನೀನು ನನ್ನನ್ನು ಸುಮ್ಮನೆ ಹಿಂಬಾಲಿಸು."

"ಒಳ್ಳೇದು ಅಪ್ಪಣೆ"ಯೆಂದು ಅವನ ಬೆನ್ನ ಹಿಂದೆಯೇ ಸಾಗಿದೆ. ವಸಂತ ದಾರಿಯಲ್ಲಿಯ ಒಂದು ಕಿರಾಣಿ ಅಂಗ ಡಿಯ ಕಡೆಗೆ ಸಾಗಿದ. ಸುಮ್ಮನೆ ಹಿಂಬಾಲಿಸೆಂದು ಅವನು ಹೇಳಿದುದರಿಂದ ನಾನೂ ಸುಮ್ಮನೆ ಹಿಂಬಾಲಿಸಿ ಹೋದೆ.

'ಬರ್ರಿ ರಾಯರೇ !' ಎಂದು ನಮ್ಮನ್ನು ಅಂಗಡಿಯ ಶೆಟ್ಟರು ಆಗ್ರಹದಿಂದ ಅಲ್ಲಿಯೇ ಇದ್ದ ಬೆಂಚೊಂದರ ಮೇಲೆ ಕುಳ್ಳಿರಿಸಿದರು. ತುಸು ಸಮಯದಲ್ಲಿಯೇ ಕಾಗದದ ಪಟ್ಟಿಯೊಂದನ್ನು ಮುಂದಿಟ್ಟುಕೊಂಡು "ಏನೇನು ಸಾಮಾನು ಹೇಳ್ರಿ ರಾಯ್ರೆ"-ಎಂದು ಶೆಟ್ಟಿಯು ನಮ್ಮನ್ನು ಪ್ರಶ್ನಿಸಿದ. ವಸಂತ ನನ್ನೆಡೆಗೆ ನೋಡಿದ; ನಾನು ಅವ ನೆಡೆಗೆ ನೋಡಿದೆ ! ವಸಂತನ ಮುಖ ಹುಚ್ಚಿಟ್ಟದ್ದಿತು: ಒಮ್ಮೆಲೇ ಕಿರಾಣೀ ಅಂಗಡಿಗೆ ಯೋಚನೆಯ ಭರದಲ್ಲಿ ನುಗ್ಗಿ ಬಂದುಬಿಟ್ಟೆವಲ್ಲ ಎಂದು. ಅವನ ಹೆಂಡತಿಗೆ ಬೇಕಾದ ವಸ್ತು ಆ ಅಂಗಡಿಯಲ್ಲಿ ಇರಲೇ ಆರದು ಎಂಬ ಕಲ್ಪನೆಯು ಅವನಿಗೆ ಹೊಳೆದಿರಲಿಕ್ಕಿಲ್ಲ. ಯಾಕೆಂದರೆ ಪಟ್ಟಣದಿಂದ ತನ್ನ ನಲುಮೆಯ ಹೆಂಡತಿಗಾಗಿ ಇಂಗು-ಜೀರಿಗೆಗಳನ್ನು ಒಯ್ಯುವುದಿದೆಯೇ ? ಮತ್ತೆ ಆತುರಭಾವದವನಾಗಿ ನೋಡಿದ ಶೆಟ್ಟಿಗೆ, ಒಂದು ಪಂಛೇರು ಬೆಲ್ಲ ಕೊಟ್ಟುಬಿಡು ಎಂದು ಹೇಳಿದೆ. ಅವನದನ್ನು ಕೊಟ್ಟಮೇಲೆ ತೆಗೆದು ಕೊಂಡು ಸಾಗಿದೆವು.

"ಬೆಲ್ಲ ಯಾತಕ್ಕೆ ತೆಗೆದುಕೊಂಡಿ ?" ವಸಂತನ ಪ್ರಶ್ನೆ.

"ನೀನೇನು ತೆಗೆದುಕೊಳ್ಳಬೇಕೆಂದಿದ್ದಿ ?"

"ಅದು ನನಗೆ ತಿಳಿಯದೇ ಹೋಯಿತು."

"ನಿನಗೆ ತಿಳಿಯದೇ ಹೋದುದು ನನಗೆ ತಿಳಿಯಿತು !"

"ಇನ್ನೇನು ಮಾಡಬೇಕೆನ್ನುವೆ ಇದನ್ನು ?"

"ತಮ್ಮವರಿಗೆ ಕೊಡಬೇಕು ಕ್ರಿಸ್‌ಮಸ್ ಪ್ರೆಝೆಂಟ."

"ಏನು"

"ಬೆಲ್ಲ !"

"ವಸಂತನ ಚಿಂತಾತುರ ಮುಖದಲ್ಲಿ ನಗೆಯು ಸುಳಿಸುಳಿ ಯಾಗಿ ಹರಿದಾಡಿತು. ಮನೆಯಲ್ಲಿ ಬೆಲ್ಲ ತೀರಿತ್ತು. ಆದುದ ರಿಂದಲೇ ತೆಗೆದುಕೊಂಡು ಹೊರಟೆ ಎಂದು ಹೇಳಿದೆ. ಹಾಗೆಯೆ ಹೊರಟಿರುವಾಗ ವಸಂತ ಒಮ್ಮೆಲೇ ಆರ್ಕಿಮಿಡೀ ಸನು ತನ್ನ ತತ್ತ್ವವನ್ನು ಕಂಡು ಹಿಡಿದ ಮೇಲೆ ಆನಂದ ದಿಂದ ಜಿಗಿದ ಆವೇಗದಲ್ಲಿ ಒಮ್ಮೆಲೆ ಹಾಲ್ಬಮಾಡಿ ನನಗೆ ಹೇಳಿದ: "ಇಲ್ಲಿ ನೋಡು; ಯಾವಯಾವ ಅಂಗಡಿಗಳ ಲ್ಲಿಯ ಸಾಮಾನುಗಳನ್ನು ಒಯ್ಯಬೇಕಾಗುವುದೋ ಅಂತಹ ...ಗಳನ್ನು ಸುತ್ತಾಡಿಕೊಂಡು ಬರೋಣ; ನೀನು

ಬೇರೆಬೇರೆ ಅಂಗಡಿಗಳ ಹೆಸರುಗಳನ್ನು ಹೇಳು. ಅವುಗಳಲ್ಲಿ ನಾನು ಸಿಲೆಕ್ಟ (ಆಯ್ಕೆ) ಮಾಡುತ್ತೇನೆ."

"ಚಹದ ಅಂಗಡಿ."

"ಥೂ!"

"ಚುಟ್ಟಾ ಪಾನಪಟ್ಟಿ ಅಂಗಡಿ."

"ಮತ್ತೆ ಜೀಪ್ಸಿಗೆ ಆರಂಭವೇನು? ಅಲ್ಲೂ ಚಹಾ ಚುಟ್ಟಾ ಒಯ್ಯುವುದಿದೆಯೇ ಬೇರೆ?"

"ನೀನು ಎಲ್ಲ ಅಂಗಡಿಗಳನ್ನು ಹೇಳು ಎಂದಕೂಡಲೇ ನಾನು exhaustive list (ಸಂಪೂರ್ಣ ಯಾದಿ) ಕೊಡ ಬೇಡವೇ? ಅದಕ್ಕಾಗಿಯೇ ಆರಂಭಿಸಿದೆ— ಈ ಮೊಸ್ಟ ಪೊಪ್ಯುಲರ ಅಂಗಡಿಗಳಿಂದ. ಇವಾದರೂ ಸಾಮಾನ್ಯವೆಂದು ತಿಳಿದಿರುವೆಯೇನು? ಸ್ವಯಂಬ್ರಹ್ಮನಾದ ಮಾನವನಿಗೆ— ಅರ್ಥಾತ್ ಕೇವಲ ಬ್ರಹ್ಮನಿಗೆ—ಪೂಜಾರ್ಹವಾದ ವಸ್ತು ಗಳನ್ನು ಪೂರೈಸಿ ಕೊಡುವವು ಇವೇ. ಮೊದಲನೆಯದರಲ್ಲಿ ದೀಪವಿದ್ದರೆ ಎರಡನೆಯದರಲ್ಲಿ ಧೂಪವಿದೆ; ಒಂದರಲ್ಲಿ ಪೂಗೀಫಲ (ಅಡಕೆ)ವಿದ್ದರೆ ಇನ್ನೊಂದರಲ್ಲಿ ನೈವೇದ್ಯವಿದೆ; ತೀರ್ಥವಿದೆ; ಮಂಗಲಸ್ನಾನ ಸನ್ನಾಹವಿದೆ; ಆಸನವಿದೆ; ಅರ್ಘ್ಯವಿದೆ; ವ್ಯಜನವಿದೆ. ಎಲ್ಲಕ್ಕೂ ಕೊನೆಯದೆಂದರೆ ಪಾನ ಪಟ್ಟಿಯಂತಹ ದಿವ್ಯತಾಂಬೂಲವಿದೆ. ಬ್ರಹ್ಮಸ್ವರೂಪರೆ ಆದ ಅಂಗಡಿಯ ಮಾಲೀಕರಿಗೆ ಸುವರ್ಣಪುಷ್ಪವಿಲ್ಲದಿದ್ದರೂ ನಿಕೆಲ್‌ಪುಷ್ಪ ದಕ್ಷಿಣೆಯಾದರೂ ಇದೆ."

"ಹೂಂ ನಡೆಯಲಿ ನಿನ್ನ ಉಪನ್ಯಾಸ! ನಿಲ್ಲಿಸಿದಿ ಯೇಕೆ?"

"ಹೋಗಲಿ ಬಿಡು, ಸ್ಟೇಶನರಿ ಅಂಗಡಿ, ಜವಳೀ ಅಂಗಡಿ ಇವೆರಡಕ್ಕೆ ಮಾತ್ರ ಹೋಗಿಬಂದರೆ ಸಾಕು. ಉಳಿದ ಅಂಗಡಿಗಳ ಲಿಸ್ಟ ತೆಗೆದುಕೊಂಡು ಏನು ಮಾಡಲಿರುವೆ?"

"ಹೌದು ಇವೆರಡು ಬಗೆಯ ವಸ್ತುಗಳನ್ನು ಬಿಟ್ಟು ಆವಳು ಇನ್ನಾವುದನ್ನೂ ಹೇಳಿರಲಾರಳು."

ಮಾತನಾಡುತ್ತ ಬಾಬೂಶೇಟರ ದೊಡ್ಡ ಜವಳೀ ಅಂಗಡಿ ಯನ್ನು ಸೇರಿದೆವು. ಅಲ್ಲಿ ನೋಡುತ್ತಲೇ ಹೆಣ್ಮಣಿಗಳಿಗೆ ಉಪಯುಕ್ತವಾದುವುಗಳೆಂದರೆ ವಿವಿಧವಾದ ಪತ್ತಲುಗಳು, ಬ್ಲಾವುಜ ಅರಿವೆಗಳು ಎಂಬುದು ತಿಳಿಯಬಂದಿತು. ಮೊದಲನೆ ಯವುಗಳ ಅವಶ್ಯಕತೆಯೇ ಇಲ್ಲವೆಂದು ಬಿಟ್ಟು ವಸಂತ ಎರಡು ಬ್ಲಾವುಜ್ ಪೀಸುಗಳನ್ನು ತೆಗೆದುಕೊಂಡ ಮೇಲೆ ಹೊರಟೆವು.

"ವ್ಯರ್ಥವಾಗಿ ಇವುಗಳನ್ನು ತೆಗೆದುಕೊಂಡೆವು ನೋಡು; ಅರಿವೆಯ ಮಾತೆತ್ತಿದ ಹಾಗಿಲ್ಲೋ ಅವಳು."

"ಒಳ್ಳೇ ಮಹಾತ್ಮನೇ ಇದ್ದೀ. ಯಾ... ಗೊತ್ತಿಲ್ಲದವನು ಇದಲ್ಲವೆಂದು ಹೇಳಲು ಸಾ... ಇದೇ ಇರಬೇಕು! ಇರಬಾರದೇಕೆ?"

"ಇರಬಹುದು ಅನ್ನು ಬೇಕಾದರೆ;...ಅದ... ಸ್ಟೇಶನರಿ ಸಾಮಾನಿರಬೇಕೋ ಏನಾದರೂ."

"ಅಲ್ಲಿಯೇ ಹೊರಟಿರುವೆವಲ್ಲ? ಕೆ. ಎಸ್. ... ಅಂಗಡಿಗೆ ಹೋಗೋಣ; ಯಾವ ಬಗೆಯ ... ಇಲ್ಲದೆ ಪ್ರಶಸ್ತವಾಗಿ ಕುಳಿತುಕೊಂಡು ವಿವಿ... ಗಳ ಪ್ರದರ್ಶನವನ್ನು ಏರ್ಪಡಿಸಿದ ಮೇಜು... ಗಳಲ್ಲಿ ಬೇಕಾದವುಗಳನ್ನು ಆರಿಸಿಕೋ. ಅ... ನ್ಯೈವ ಗಂತವ್ಯಂ.' ತಿಳಿಯಿತೇ ಮಹಾಶಯ!"

"ಆಗಲಿ ನಡೆ: ಆಕೆ ಹೊರಡುವ ಮು... ಳಲ್ಲ—ಆ ವಸ್ತುವಿನ ಹೆಸರು ಸ್ಪಷ್ಟವಾಗಿ ಕೇ... ಏನೋ ಒಂದು ಆಕೃತಿಯು ಮಾತ್ರ ಕಣ್ಣು... ಯಿತು."

"ಮುಖಕಮಲವಿರಬೇಕೇಳು!...."

ಕೆ. ಎಸ್. ಜಿ.ಯವರ 'ಹೆಲ್ಲೋ!' ಎಂಬ ... ಸ್ವೀಕರಿಸಿ ಅಂಗಡಿಯೊಳಕ್ಕೆ ಸೇರಿದೆವು. ... ಎಷ್ಟೋ ಸಾಮಾನುಗಳನ್ನು ಖರೀದಿ ಮಾಡಿ... ಕನ್ನಡಿಯಾಯಿತು, ಫೇಸ್‌ಪೌಡರಾಯಿತು, ... ಕ್ರೀಮ್, ಹಣಿಗೆ, ಹೆಣಿಗೇಸಾಮಾನುಗಳು, ... ನುಗಳು, ಬೇಬೀಸೂಟುಗಳೆರಡು, ಹೆಂಡತಿ... ಫ್ರಾಕು—ಇವೆಲ್ಲವುಗಳನ್ನು ಪ್ಯಾಕ್‌ಮಾಡಿ... ಮೇಲೆ ವಸಂತ ನಿಶ್ಚಿಂತತೆಯ ನಿಟ್ಟು... "ಇವಿಷ್ಟೂ ಜೀನಸುಗಳು ಉಪಯುಕ್ತವಾ... ಅಲ್ಲ; ಇವುಗಳಲ್ಲಿ ಒಂದಾದರೂ ಆವಳು ಹೇ... ಆಗಿರಬೇಕು".... ನನ್ನ ಕಿವಿಯಲ್ಲಿ ಗುಣುಗು... ಬಿಲ್ಲು ಕೈಗೆ ಬಂದಿತು; ಹದಿನೈದು ರೂಪಾ... ಇದ್ದಿತು. ಹಣವು ಸಾಕಷ್ಟು ಇಲ್ಲದ್ದರಿಂದ ... ಬಾಕಿ ನಿಲ್ಲಿಸಿಯಾಯಿತು. ಅಷ್ಟರಲ್ಲೇ ... ಸಮೀಪಿಸಿದ್ದಿತು. ಪ್ಯಾಕ್ ಕೈಯಲ್ಲಿ ತೆಗೆದುಕೊ... 'ಆಲ್‌ರಾಯಿಟ್! ನಾನು ಎಕ್ಸ್‌ಟೆನ್‌ಶನ್ನಿಗೆ ... ಎಂದು ಎದ್ದ.

"ಈ ಹೊತ್ತು ರಾತ್ರಿ ನಮ್ಮಲ್ಲಿದ್ದು ... ಹೋದರಾಗುವುದಿಲ್ಲವೇ?" ನಾನು ಪ್ರಶ್ನಿಸಿ...

"ಛೇ! ಎಲ್ಲವನ್ನೂ ಸಿದ್ಧಪಡಿಸಬೇಕು. ... ಬಂಗಲೆಗೆ ಹೋಗಿ ಮುಂದೆ ಸ್ಟೇಶನ್ನಿಗೆ ಹೋ...

ತಡೆಯಾಗುವುದು. ಮೇಲಾಗಿ ಸಿದ್ದ ಇಷ್ಟರಲ್ಲಿಯೇ ತಮ್ಮ ಹಳ್ಳಿಯಿಂದ ಬಂದಿರಬಹುದು. ಅದೇತಕ್ಕಾಗಿಯೋ ನಿನ್ನೆ ಹಳ್ಳಿಗೆ ಹೋಗಿದ್ದ. ಅವನಿಗೆ ಹೇಳಬೇಕಾದುದೆಲ್ಲವನ್ನೂ ಹೇಳಿ ಹೊರಡಬೇಕು. ಕ್ಷಮಿಸು" ಎಂದು ಹೊರಟೇಬಿಟ್ಟ. ನಾನು ಬಲವಂತಪಡಿಸಿದಷ್ಟೂ ಅವನ ಕ್ಷಮಾಯಾಚನೆ ಹೆಚ್ಚಾಯಿತು.

"ಒಳ್ಳೇದು ಹೋದೊಡನೆಯೆ ಇಂದು ನಾವು ಪಟ್ಟ ಶ್ರಮದ ರಿಝಲ್ಟು ಏನು ಎಂಬುದರ ಬಗ್ಗೆ ಕಾಗದ ಬರೆ. ಮರೆಯಬೇಡ. ಮರುದಿವಸವೇ ಬರೆದುಬಿಡು....ಏನು?"

"ನಿಶ್ಚಯವಾಗಿಯೂ ಬರೆಯುವೆನು. ರಾಮವಚನ ತಿಳಿಯಿತೇ" ಕೈ ಮುಂದೆ ಮಾಡಿದ ಶೇಕ್‌ಹ್ಯಾಂಡ ಮಾಡಿ ಹೊರಟುಬಿಟ್ಟ. ನಾನೂ ಮನೆಗೆ ಮರಳಿದೆ.

* * *

ವಸಂತ ಕನಕನಹಳ್ಳಿಗೆ ಹೋಗಿ ಇಂದಿಗೆ ಮೂರು ದಿನಗಳು. ಇಂದೆಯೇ ಅವನಿಂದ ಅಪೇಕ್ಷಿಸಿದ ಕಾಗದವೂ ಬಂದಿತು. ಅದನ್ನು ನಾನು ಹತ್ತಾರು ಸಲ ಓದಿಕೊಂಡಿರುವೆನಾದರೂ ನಿಮಗಾಗಿ ಇನ್ನೊಮ್ಮೆ ಓದಿಬಿಡುತ್ತೇನೆ.

"ಪ್ರಿಯ ಮಿತ್ರ,

ನಿನ್ನ ಮಾತನ್ನು ಮೀರಿ ಅಂದು ರಾತ್ರಿ ನನ್ನ ಬಂಗಲೆಗೆ ಹೋದೆ; ಅದಕ್ಕಾಗಿ ಇನ್ನೊಮ್ಮೆ ಕ್ಷಮೆಯನ್ನು ಕೋರುತ್ತೇನೆ. ಅಂದು ನೀನು ನನಗಾಗಿ ಅದೆಷ್ಟೋ ಶ್ರಮವಹಿಸಿದೆ; ಆದರೂ ನಿನ್ನ ಮಾತನ್ನು ತಲೆತಿರುಕತನದಿಂದ ಅಲ್ಲಗಳೆದು ಹೊರಟುಹೋದೆ. ಬಂಗಲೆಗೆ ಹೋದೊಡನೆ ಯೆನಿಸಿತು: ನಿನ್ನ ಆಮಂತ್ರಣವನ್ನು ಸ್ವೀಕರಿಸಿದ್ದರೆ ಚೆನ್ನಾಗಿತ್ತೆಂದು. ಮನೆಗೆ ಹೋಗುವುದರೊಳಗಾಗಿ ಹೋಟಲಿನಿಂದ ಊಟ ಬಂದಿತ್ತು; ಆದರೆ ನನ್ನ ಹೊಟ್ಟೆ ಮಾತ್ರ ತುಂಬಿದಂತಿದ್ದಿತು. ಅಂತೂ ಊಟದ ಶಾಸ್ತ್ರ ತೀರಿಸಿ ಸಾಮಾನೆಲ್ಲವನ್ನೂ ಮತ್ತೊಮ್ಮೆ ಪ್ಯಾಕ್ ಮಾಡಿ ಹಾಸಿಗೆಯ ಮೇಲೆ ಹೊರಳಿಕೊಂಡೆ. ಇಷ್ಟೆಲ್ಲ ಖರೀದಿಯಾದರೂ ಅವಳು ಬೇಡಿದ ಸಾಮಾನು ಇವುಗಳಲ್ಲಿ ಇರದೇ ಹೋದರೆ— ಎಂಬ ವಿಚಾರ ಮತ್ತೆ ತಲೆಯನ್ನು ತಿನ್ನತೊಡಗಿತು. ನಿದ್ದೆ ಬಾರದೇಹೋಯಿತು. ವಿಚಾರಕ್ಕೆ ತಡೆಯೇ ಇಲ್ಲದಾಗಿತ್ತು. ಅವಳು ಹೇಳಿದ ಪದಾರ್ಥದ ಹೆಸರು ಈ ಪ್ರಶಾಂತವಾದ ಸಮಯದಲ್ಲಿ ನೆನಪಿಗೆ ಬರಬಹುದೇನೋ ಎಂಬ ಆಸೆ ಮೂಡಿತು. ಆದರೇನು ಬರೀ ಭ್ರಮೆ! ಅಂದು ವಿಚಾರಶೀಲವಾದ ನನ್ನ ಮೆದುಳನ್ನು ಬೇರೆ ಯಾವುದಾದರೊಂದು ತತ್ವವಿವೇಚನೆಯಲ್ಲಿ ತೊಡಗಿಸಿದ್ದರೆ ಒಂದು ಅಪೂರ್ವವಾದ ಸಿದ್ಧಾಂತವನ್ನೆ ಕಂಡುಹಿಡಿಯುತ್ತಿದ್ದಿತೇನೋ! ಬಗೆಹರಿಯದ ಯೋಚನೆ, ಆತುರ ಕಾತರಗಳಿಂದ ಕೂಡಿದುದರಿಂದ ನಿದ್ರಾದೇವಿಯು ಪ್ರಸನ್ನಳಾಗಲಿಲ್ಲ. ಬೇರೊಬ್ಬಳ ಸಲುವಾಗಿ ವಿಚಾರಗ್ರಸ್ತನಾದ ನನ್ನನ್ನು ಆಕೆಯಾವದರೂ ಆದರಿಸುವುದು ಹೇಗೆ? ಸಿದ್ದ ಹೊರಗೆ ಗೊರಕೆ ಹೊಡೆಯುತ್ತಿದ್ದ. ವೇಳೆಯ ಗತಿಗೆ ಸರಿಯಾಗಿ 'ಟಾಯಿಮ್‌ಪೀಸ್' ತಾಳಹಾಕುತ್ತಿದ್ದಿತು. ನನಗೆ ನಿದ್ದೆ ಬಾರದುದಕ್ಕೆ ಇವೇ ಮಹತ್ಕಾರಣಗಳೆಂದು ಕೋಪವೂ ತಲೆದೋರಿತು. ಈ ಗ್ರಹಿಕೆ ಸರಿಯಾದುದಲ್ಲವೆಂದು ವಿವೇಕದ ಉಪದೇಶವೂ ಆಯಿತು. ಸಿದ್ದನ ಗೊರಕೆಯನ್ನು ಕೇಳಿ ಇದ್ದಕ್ಕಿದ್ದ ಹಾಗೆಯೇ ಯೋಚನೆಯೊಂದು ಹೊಳೆಯಿತು: ಅಂದು ಅವಳನ್ನು ಕನಕನಹಳ್ಳಿಗೆ ಬೀಳ್ಕೊಡುವಾಗ ಸಿದ್ದನೂ ನನ್ನ ಜೊತೆಗಿದ್ದ. ಸಿದ್ದನಿಗೆ ಲಕ್ಷ್ಯ ಬಹಳ. ನನ್ನಾಕೆ ಹೇಳಿದ ಪದಾರ್ಥವು ಅವನಿಗೆ ಗೊತ್ತಿರಲು ಸಾಕು. ಆತುರದ ಅತಿರೇಕದಲ್ಲಿ ಸಿದ್ದಾ! ಸಿದ್ದಾ! ಏ ಸಿದ್ದಾ! ಎಂದು ಹುಚ್ಚಾಬಟ್ಟೆಯಾಗಿ ಕಿರಿಚಿಬಿಟ್ಟೆ. ಸಿದ್ದ ಗಾಬರಿಯಾಗಿ ಟಣ್ಣನೆ ಜಿಗಿದು 'ಏನಾಯ್ತ್ರಿ ಎಪಾ? ಬಂದೆ' ಎನ್ನುತ್ತಲೇ ಒಳಕ್ಕೆ ಬಂದ.

'ಧಣೇರ? ಕನಸಿನೊಳಗಂಜಿದಿರೇನರಿ, ಹೀಂಗ್ಯಾಕ ಕೂಗಿದಿರಿ!'

'ಕನಸಿನೊಳಗೇನು ಅಂಜಿಲ್ಲ, ಮನಸಿನೊಳಗಂಜೀನು ತಿಳೀತ? ಇರಲಿ. ಆಕೆ ಆ ಹೊತ್ತು ಕನಕನಹಳ್ಳಿಗೆ ಹೋದಳಲ್ಲ? ಅಂದು ನನಗೇನೋ ಸಾಮಾನು ತಗೊಂಡು ಬಾ ಅಂತ ಹೇಳ್ಳಿಲ್ಲ?'

'ಹೇಳಿದ್ವಾರ ಧಣೇರ.'

ಹೇಳಿದ್ವಾರು ಎಂಬುದರಿಂದಲೇ ಅವನ ಸಂಶಯಕ್ಕೆ ಆರಂಭವಾದುದರಿಂದ 'ಹೋಗು ಮಲಗಿಕೊ' ಎಂದು ಹೇಳಿ ಅವನನ್ನು ಕಳುಹಿಸಿದೆ.

* * *

'ಅಲ್ಲ ಸೂಟಕೇಸಿನ ಬೀಗದ ಕೈ ಎಲ್ಲಿದೆ? ಇಲ್ಲಿ ಸ್ವಲ್ಪ ಕೊಡತೀರಾ?' ಇಲ್ಲಿ ಬಂದ ದಿನ ರಾತ್ರಿಯೇ ಆಕೆಯಿಂದ ಬಂದ ಈ ಪ್ರಶ್ನೆ ನನ್ನ ಕಿವಿಗಳನ್ನು ಕದಡಿತು.

'ಮಗುವಿಗೆ ನಿದ್ದೆ ಹತ್ತಿತೇನೇ?'

'ಹೌದು ನಿದ್ದೆ ಹತ್ತಿದೆಯಂತಲೇ ಆಕೆ ಸುಮ್ಮನೆ ಬಿದ್ದಿದ್ದಾಳೆ. ಎಲ್ಲಿ ಸ್ವಲ್ಪ ಬೀಗದಕೈ ಕೊಡ್ರಿ!'

'ಅಕ್ಟೋಬರದಲ್ಲಿ ಬಂದಾಗ ನಿನ್ನ ವೇಷಭೂಷಣಗಳನ್ನು ನೋಡಿ ನಿಜವಾಗಿಯೂ ನಗೆ ಬರುತ್ತಿತ್ತು ನೋಡು!'

ನನಗೆ. ಅವೆಲ್ಲ ಡ್ರೆಸ್ಸುಗಳನ್ನು ಸಂಗ್ರಹಿಸಿ ಇಟ್ಟಿರುವೆಯೋ?'

'ಪ್ರಸಂಗ ಬಂದ್ಹಾಂಗ ವೇಷಾ ಹಾಕಬೇಕಾಗತದ, ಇರಲಿ ನಾ ಹೇಳಿದ ಸಾಮಾನು ತಂದಿರೊ, ಇಲ್ಲೋ ?'

'ತರದೇ ಏನೇ ? ಎರಡೆರಡು ಸಲ ಹೇಳಿದರೂ ಮರೆಯುವುದೇ ?'

'ಎಲ್ಲಿ ಅವುಗಳನ್ನು ತೆಗೆದುಕೊಡ್ರಿ. ಕಟ್ಟಿಬಿಟ್ಟೇ ಮಲಗಿ ಕೊಳ್ಳತೇನೆ.'

'ಈಗ ಕಟ್ಟಿತ್ತ ಬಿಚ್ಚುತ್ತ ಕುಳಿತರೆ ನಾನು ತೆಗೆಯುವುದಿಲ್ಲ !'

'ಇಲ್ಲ; ಕೊಡ್ರಿ.'

'ತಂದೀನಂದ್ರೆ ತೀರಿತಲ್ಲ. ಎಲ್ಲ ಮೀಸಲು ಈ ಹೊತ್ತೇ ಮುರಿಯಬಾರದು. ನಿನ್ನ ಸಾಮಾನಿನ ಜೊತೆಗೆ ಇನ್ನೆಷ್ಟೊ ಜೀನಸುಗಳನ್ನು ತಂದಿದ್ದೇನೆ.'

'ಸೂಟಕೇಸಿನೊಳಗ ಮೆತ್ತಗ ಇಟ್ಟೇರಿಲ್ಲೋ ಮತ್ತ ? ಒಡೆದು ಹೋಗಬಹುದು.'

ಒಡೆಯುವುದರ ಬಗ್ಗೆ ವಿಶೇಷ ಹೆದರಿಕೊಳ್ಳಬೇಕಾದ ಪದಾರ್ಥಗಳು ಅಲ್ಲಿ ಯಾವುವೂ ಇರದ್ದರಿಂದ ನನ್ನ ಎದೆಯೊಡೆಯಿತು. 'ಎಲ್ಲ ವ್ಯವಸ್ಥಿತವಾಗಿ ಇಟ್ಟೇನು; ಆದರೆ.... ಹೂಂ....ನಾನು ನೀನು ಹೇಳಿದ ಒಡವೆಯನ್ನು ತಂದಿಲ್ಲ ಅಂತ ತಿಳಕೊ; ಆ ಮೇಲೆ ನೀನು ಮಾಡುವುದೇನು ?' ಅಂಜಂಜುತ್ತಲೇ ಕೇಳಿದೆ.

'ಮಾಡುವದೇನು ? ಸುಮ್ಮನೆ ಬಿದ್ದುಕೊಂಡಿರುವದು !'

ಅಬ್ಬ ! ಸುಮ್ಮನೆ ಬಿದ್ದುಕೊಂಡಿರುವದು ? ಎಂತಹ ಶಿಕ್ಷೆಗಳಲ್ಲಿಯೂ ಅದು ಕಠಿನವಾದ ಶಿಕ್ಷೆ. ಯಂತ್ರದಂತೆ ಹೋಗಿ ಸೂಟಕೇಸು ತೆಗೆದೆ.

'ಇಲ್ನೋಡು ನಿನಗೆ ಬ್ಲಾವುಜ್‌ಪೀಸು.' ಎರಡು ತೆಗೆದಿಟ್ಟೆ.

'ಅಯ್ಯಯ್ಯ ! ಇದೇ ಬಣ್ಣದ ಬ್ಲಾವುಜುಗಳು ನನಗೆ ಆರೇಳು ಇವೆ. ಮತ್ತೆ ಸುಡುಗಾಡು ಇದೇ ಅರಿವೆ !'

'ಈ ಕನ್ನಡಿ ನೋಡು.'

'ಮತ್ತಿಷ್ಟು ನೀವೇ ನೋಡಿಕೊಳ್ರಿ. ನಾನು ಹೇಳಿದ್ದೊಂದು ತಾವು ಕೊಡುವದೊಂದು. ಮಹಾರಾಯನಂಥ ಕನಡೀಪೆಟ್ಟಿಗೆ ಇರುವಾಗ ಇದೆಲ್ಲಾ ಯಾರಿಗೆ ಬೇಕಿತ್ತು ?'

'ಹೋಗಲಿ ಬಿಡು ನನಗೇ ಬೇಕಿತ್ತು ಅಂತ ಇಟ್ಟುಕೊ. ಈ ಫ್ರಾಕು ಮೈಗೆ ಸರಿಹೋಗುವುದೇ ನೋಡು ಹಾಕಿಕೊಂಡು.'

'ಸಾಕು ತಗೀರಿ ಮುಂಗೈತನಕ ಕೋಟ... ತಿರುಗಲಿಕ್ಕೆ ನಾನೇನು ಗಂಡುಬೀರಿಯೇ... ಡೋತರಜೋಡು ರುಮಾಲ ಯಾಕ ತರಲಿ...'

ನನ್ನ ಮುಖ ಕಪ್ಪಿಟ್ಟಿತು. ನಮ್ಮವರಲ್ಲಿ... ಕಾನ್ಸರ್ವೇಟಿವ್ ಎಲಿಮೆಂಟು ಇದ್ದುದು ಇ...ದ್ದೇ... ವಾಗಿ ಎರಡು ವರ್ಷವಾದರೂ ನನಗೆ ತಿಳಿದಿ... ತಿಳಿಯಲಿಕ್ಕೆ ಸಾಧ್ಯವೂ ಇರಲಿಲ್ಲವೆನ್ನು; ನನ್ನ... ಜೀವನವಾಗ.

'ಮತ್ತೆ ಆ ಸೊಟ್ಟು ಬೈತಲೆಯೇಕೆ ! ... ಏಕೆ ?' ನಾನು ವಿಚಾರಿಸಿದೆ.

'ಯಾಕೆಂದರೆ ಹೆಂಗುಸೆಂದು ! ಬೈತಲ... ಕೋಟು ಹಾಕಬೇಕೇನು ? ಮತ್ತ ಚಿಣ್ಣ... ಬೇಕಾದಂಥ ಸಾಮಾನು ಇದ್ದರ ಚಿಂತಿಲ್ಲ. ... ನಾ ಹೇಳಿದ್ದು.'

'ತಗೀತೇನೇ ನಿಲ್ಲು, ನೀ ಹೇಳಿದ್ದ ಜಿ... ಕೆಳಗ ಸಿಕ್ಕದ.'

'ಆಹಾ! ಒಡದು ಹೋಗ್ಯಾವೋ ಏನ... ಹ್ಯಾಂಗ ತಂದ್ರಿ ಆಣೆಗೆ ಆರೋ ಏಳೋ ?'

'ಆಣೆಗೆ ಆರೇಳು ಸಿಕ್ಕುವ ಪದಾರ್ಥಕ್ಕಾ... ರೂಪಾಯಿ ವ್ಯರ್ಥವಾಗಿ ವ್ಯಯವಾದುವಲ್ಲ—... ಯಾಯಿತು. ನಾನು ಸುಮ್ಮನೆ ಕುಳಿತುದ್ದ... ಮತ್ತೆ ಪ್ರಶ್ನಿಸಿದಳು: 'ತುಟ್ಟಿಬಿದ್ದುವೇನು ಮತ್ತೆ ಎಷ್ಟು ?'

'ಏಳು !'

'ಆಯ್ತು ಬೇಕಾದಷ್ಟಾಯಿತು.' ಎಂದು ... ತೊಟ್ಟಿಲಕ್ಕೆ ಕಟ್ಟಿದ್ದ ಗುಬ್ಬಿಯ ಛತ್ತು ಬಿ... ಹೊಚ್ಚಹೊಸತಾದ, ಸುಂದರವಾದ ರೇಷ್ಮೆ... ಆವರಣವುಳ್ಳ ನೂರಾರು ಅರಿವೆಯ ಗುಬ್ಬಚ್ಚಿಗಳು... ಯಾಡುತ್ತಿದ್ದುವು. ಎಲ್ಲಕ್ಕೂ ಮುತ್ತಿನ ... ಅಲ್ಲಲ್ಲಿ ಮುತ್ತಿನ ಗೊಂಚಲುಗಳೂ ಅಂದವಾ... ತ್ತಿದ್ದವು. ಕೂಸಿನ ತೊಟ್ಟಿಲಿಗೆ ಸುಂದರವಾ... ಆ ಛತ್ತು ! ಎಳೆಯ ಗುಬ್ಬಚ್ಚಿಗಳು, ಮೈಗೆ ... ಹೊದಿಕೆ, ಮುಖಕ್ಕೆಲ್ಲ ಮುತ್ತುಗಳು. ಹೆಣ್ಣ... ನಾದ ಒಲವು ತೊಟ್ಟಿಲ ಛತ್ತಿನಲ್ಲಿ ಕೂಡ ... ನಿಂತಂತೆ ಭಾಸವಾಯಿತು.

'ಎಲ್ಲಿವೆ ಕೊಡ್ರಿ; ಈ ನಾಲ್ಕು ... ಒಂದೊಂದು ನಡುವೆ ಒಂದು ಹೀಗೆ ಐದು ಕಾ...

ಗಳು (Glass-globes) ಸಾಕಾಗಿಹೋಗುವವು.' ಎಂದು ಆತುರದಿಂದ ಕೈ ನೀಡಿದಳು. ಆಯ್ಯೋ ಎಂತಹ ಸಾಮಾನ್ಯವಾದ ಜೀನಸು! ಕಾಜಿನ ಗುಳ್ಳೆಗಳು ! ನಾನು ತಿಳಿದುಕೊಂಡದ್ದೇನು ? ತಂದದ್ದೇನು ? ಚಾಚಿದ ಕೈಯನ್ನು ಹಿಡಿದುಕೊಂಡು ಮುಂದಕ್ಕೆ ಸೆಳೆದುಕೊಂಡೆ. ದುಗಡದಲ್ಲಿ ತಡವರಿಸುತ್ತಲೇ ಹೇಳಿದೆ: 'ನಾನು ತಪ್ಪಿತಸ್ಥ; ಕ್ಷಮಿಸುವಿಯಾ? ನೀನು ಹೇಳಿದ ಪದಾರ್ಥವನ್ನು ತರಲು ಆಗಲಿಲ್ಲ.'

'ಸರಿಯಿರಿ ನಿಮ್ಮದು ಇದೇ ಆಯ್ತು ಯಾವಾಗಲೂ' ಎಂದು ಸಿಡಿದೆದ್ದಳು. ದೀರ್ಘನಾಗಿ ಯೋಚಿಸಿದೆ, ನಿನಗಾಗಿ ಪಟ್ಟ ಪಾಡು ಅಷ್ಟಿಷ್ಟಲ್ಲ ಎಂದು ಹೇಳಿದೆ. ನಡೆದ ಸಂಗತಿಯೆಲ್ಲವನ್ನೂ—ಹದಿನೈದು ರೂಪಾಯಿ ದಂಡ ತೆತ್ತ ವಿಚಾರವನ್ನೆಲ್ಲ—ವಿಶದವಾಗಿ ತಿಳಿಸಿದೆ. ಆದನ್ನೆಲ್ಲ ಹೇಳುವಾಗ ಆಕೆಯ ಮುಖದಲ್ಲಿಯ ಮೋಡಗಳು ಒಂದೊಂದೇ ಚದರ ಪ್ರಾರಂಭಿಸಿದುದನ್ನು ನೋಡಿ ಧೈರ್ಯಶಾಲಿಯಾದೆ. ತನ್ನಲುವಾಗಿ ಎಷ್ಟೊಂದು ಹೆದರಿಕೊಂಡು ತೊಂದರೆಪಟ್ಟನಲ್ಲ ಬಡಪಾಯಿ ಎಂದು ಆವಳಿಗೆ ಕನಿಕರವೂ ಎನಿಸಿರಲಿಕ್ಕೆ ಸಾಕು.

'ನನ್ನನ್ನು ಕ್ಷಮಿಸಿದ್ದೇನೆಂದು ಹೇಳಲಾರೆಯಾ ? ಪದಾರ್ಥದ ಹೆಸರನ್ನೇ ಮರೆತೆ !'

'ಮರೆತುದಕ್ಕೆ ತಪ್ಪುದಂಡ ಕೊಟ್ಟಿದ್ದೀರಲ್ಲ ಹದಿನೈದು ರೂಪಾಯಿ ! ಕ್ಷಮೆ ಬೇಡುವುದೇಕೆ ?'

'ಅಲ್ಲ. ಹಾಗಾದರೆ ಕೋಪವು ಆರಿಹೋಯಿತಲ್ಲವೇ?' ಎನ್ನುತ್ತ ಕೈಯಲ್ಲಿ ಹಿಡಿದ ಛತ್ತಿನ ಗುಬ್ಬಿಗಳ ಹಿಂಡನ್ನು ನೋಡಿದೆ. 'ಆ ಕಾಜಿನ ಗುಳ್ಳೆಗಳ ಆವಶ್ಯಕತೆಯೇನು ಇಲ್ಲ. ಈಗ ಇದ್ದುದು ಚನ್ನಾಗಿಯೇ ಇದೆ' ಎಂದೆ.

'ಸಾಕು ಏನಾದರೊಂದು ಸಮಾಧಾನ ಹೇಳುವದು. ಮಾತಿನಲ್ಲಿ ಕೋಪದ ಕೊಂಕಿರಲಿಲ್ಲ; ಒಲವು-ನಗೆ-ಬಿನ್ನಾಣದ ಕಂಪು ಇದ್ದಿತು. ನಾನು ಹೆದರಿಕೊಂಡುದೆಲ್ಲ ಶುದ್ಧ ಪುಚ್ಛತನವೆನಿಸಿತು.

'ಈ ಕಾರ್ಯಕ್ರಮವನ್ನೆಲ್ಲ ಮೂರು ತಿಂಗಳ ರಜೆಯಲ್ಲಿ ಮಾಡಿ ಮುಗಿಸಿದೆಯೆನು ?'

'ಹೂಂ.'

'ನೋಡು, ನೂರಾರು ಮುಖಗಳಿಗೆಲ್ಲ ನೀನು ಮುತ್ತಿಟ್ಟುದನ್ನು ನೋಡಿ ನನ್ನ ಮನಸ್ಸು ತಲ್ಲಣಗೊಂಡಿದೆ.'

'ಏನೂ ?!' ಗಾಬರಿಯಿಂದ ಪ್ರಶ್ನಿಸಿದಳು.

'ಗಾಬರಿಯಾಗಬೇಡ; ಈ ನಿರ್ಜೀವಿಯಾದ ಗುಬ್ಬಚ್ಚಿ ಮುಖಗಳಿಗೆಲ್ಲ ನೀನು ಮುತ್ತಿಡುವುದರಲ್ಲಿ ಆ ತೋಟದಲ್ಲಿರುವ ಸಜೀವ ಗುಬ್ಬಚ್ಚಿಯನ್ನು ಮರೆತಿಲ್ಲವಷ್ಟೇ ? ಅಂತೆಯೇ ನೂರಾರು ಮೈಲುಗಳೂ ನೀರಡಿಸಿ ದಣಿದು ಧಾವಿಸಿಬಂದ ಈ ಚಾತಕವನ್ನು....?'

ಅಪೂರ್ವವಾದ ವರ್ಣಲಹರಿಯೊಂದು ಆ ಮುಖವನ್ನು ರಂಜಿಸಿ ಸೊಗಸನ್ನು ನೂರ್ಮಡಿಸಿತು. ಆ ಕಣ್ಣುಗಳಲ್ಲಿ ಹೊಳೆದ ಮಿಂಚು ಚಾತಕದ ಹೃದಯವನ್ನು ಕದಡಿತು. ಮದಾಂಧವಾದ ಚಾತಕವು ಪೂಸಮುತ್ತುಗಳ ಮಾಲೆಯೊಂದನ್ನು ಕೊಕ್ಕಿಗೆ ಸಿಕ್ಕಿಸಿಕೊಂಡು ಗುಬ್ಬಚ್ಚಿಗಳನ್ನು ಈರ್ಷೆಯಿಂದ ನೋಡಿ ತೂಗಾಡಿತು.

ಪತ್ರವು ಬಲು ದೊಡ್ಡದಾಯಿತು ಕ್ಷಮಿಸು. ಆದಿತ್ಯವಾರ ಸಾಯಂಕಾಲ ನಮ್ಮ ಬಂಗಲೆಯಲ್ಲಿ ನಿನ್ನ ಆಗಮನ ಸ್ವಾಗತಗಳಿಗಾಗಿ ಪುಷ್ಪಪಾತ್ರೆ ದಾರೀಕಾಯುತ್ತಿರುವುದೆಂಬುದನ್ನು ಮಾತ್ರ ಮರೆಯಬೇಡ! ಜಾಣತನವನ್ನು ಮನ್ನಿಸುವೆಯೆಂದು ಆಶಿಸುತ್ತೇನೆ. ಇ. ನಮಸ್ಕಾರ

ನಿನ್ನ ನಚ್ಚಿನ

ವಸಂತ"

ಪ್ರಬುದ್ಧ ಕರ್ಣಾಟಕ

ವಿವಾಹ ಮತ್ತು ಪ್ರೇಮ

ಲೇಖಕರು: ಡಾ. ಎಂ. ಗೋಪಾಲಕೃಷ್ಣರಾವ್, ಸಂಪಾದಕ-ಕಲಿಯುಗ, ಧಾರವಾಡ.

★

ಪ್ರೇಮವು ಜೀವನಕ್ಕೊಂದು ಆಹಾರ; ಕಾಮವು ಫಲಿಸಲಿಕ್ಕೊಂದು ವಿಹಾರ. ಭೂಮಿಯಿಂದ ಆಹಾರಸಾರವು ಮರಗಳಿಗೆ ಪ್ರೇಮರೂಪವಾಗಿದ್ದರೂ ಪೃಥ್ವಿಗೆ ಅದು ಕಾಮ. ಹೂಗಳ ಜಗಕ್ಕೆ ಪ್ರೇಮವಾದರೂ, ಮರಕ್ಕೆ ಹೂಗಳು ಕಾಮವೇ. ಪ್ರೇಮವನ್ನು ಪಡೆದು ಕಾಮ ಸಂಚಯಿಸಿ ಪ್ರೇಮರೂಪದಲ್ಲೆ ಹಂಚಿಹೋಗುವದು ಪ್ರಕೃತಿನಿಯಮ. ವಿಶ್ವದ ವಿರಾಟದೇಹ ಕಾಮಪ್ರೇಮದ ಅಣುಗಳು ನಸುಬಿಡದೆ ಪಸರಿಸಿವೆ. ದಾಂಪತ್ಯವು ಕಾಮ-ಪ್ರೇಮಗಳ ರಂಗ

ವಿಶ್ವದ ಅಣುರೇಣುಗಳಲ್ಲಿಯೂ, ಎಂದೂ ನಿಲ್ಲಲಾರದೊಂದು ನಿಯಮವಿದೆ. ಅದು ಹಗಲಿರುಳೆನ್ನದೆ, ಯುಗ-ಕಲ್ಪಗಳೆನ್ನದೆ ಇದೆ. ನಮ್ಮಂಥ ನುಸಿಗಳ ಕಸಿವಿಸಿ, ಬಿಸಿಯುಸಿರುಗಳಿಂದ ಅದು ಹುಸಿಹೋಗದು. ವೇದಾಂತಿ ಬಾವಾಬೈರಾಗಿಗಳೆಂದು ಅದು ಮೆಚ್ಚುವದಿಲ್ಲ; ಸಂಸಾರಿ ಭೋಗಿಗಳೆಂದು ಕಚ್ಚುವದಿಲ್ಲ. ಜಗದ ಜೀವಿ-ವಸ್ತುಗಳ ಜೀವಸಾವುಗಳು ಆ ವಿಶ್ವನಿಯಮದ ಕಂಣೆವೆಗಳು ತೆರೆದಿಕ್ಕಿದಂತೆ; ಬಾಲ್ಯ, ಯೌವನ, ಜರೆಗಳು ಅದರ ಉಚ್ಛ್ವಾಸ ನಿಃಶ್ವಾಸಗಳಿದ್ದಂತೆ. ನಮ್ಮ ಆಶೆ ನಿರಾಶೆಗಳಿಂದ ಅದರ ಉಸುರು ತಡೆಯಲಾರದು; ನಮ್ಮ ನೀತಿ, ಧರ್ಮಗಳಿಂದ ಅದರ ಕಾಲ್ತೊಡಕಲಾರದು. ಕಾಮ ಪ್ರೇಮಗಳು ನಮಗೆ ಬೇಡವೆಂದರೂ ಅವು ನಮ್ಮ ಕುತ್ತಿಗೆಗೆ ಕಟ್ಟಿದ ಗುದ್ದಿಗಳೇ! ನಿರಂತರ ಸೌಖ್ಯ ಸೌಕರ್ಯಗಳು ನಮಗೆ ಬೇಕೆಂದರೂ ಅವು ಕನಸಿನ ಕೀರ್ತಿಯ ಸುದ್ದಿಗಳೇ ಆಗಬಹುದು.

ಪ್ರೇಮವು ಜೀವನಕ್ಕೊಂದು ಆಹಾರ; ಕಾಮವು, ಫಲಿಸಲಿಕ್ಕೊಂದು ವಿಹಾರ. ಭೂದೇವಿಯ ಪ್ರೇಮಸಾರವನ್ನು ಹೀರಿ ಬೆಳೆದು ಬಲಿತ ಮರವು ಹೂವಾಗಿ ಹರಡುವದೊಂದು ಹುಟ್ಟುಗುಣ. ನಮ್ಮ ಬಾಳಿನ ಮರವು ಹುಲುಸಾಗಿ ಬೆಳೆಯಲು, ಅಗತ್ಯವಾದ ಸೌಕರ್ಯ, ಸಲಕರಣೆಗಳೆಲ್ಲ ಪ್ರೇಮದ ಅಂಗಗಳೇ. ಪರಿಸ್ಥಿತಿಯ ಹೊಟ್ಟೆಯೊಳಗಿಂದ ತನ್ನ ಬೆಳಿಗೆಗೆ ಬೇಕಾದ ತಿನಿಸನ್ನು ಹುಡುಕಿ, ಸೋಸಿ, ಹೀರಿ, ಕರಗಿಸಿ, ಅರಗಿಸಿ, ತನ್ನ ನಾಡಿನಾಡಿಗಳಲ್ಲಿ ಓದು ಹರಿದಾಡುವ ಅನುಭವವನ್ನು ಹೊಂದಿದ ಮೇಲೆ, ಜೀವನ ವೃಕ್ಷಕ್ಕೆ ಕಾಮದ ಹೂಗಳು ಹುಟ್ಟಿ ತಮ್ಮ ಬೆಡಗಿನಿಂದ, ಜಗವನ್ನು ಮರುಳುಗೊಳಿಸುವವು. ಕೊಟ್ಟಷ್ಟೂ ಮುಗಿಯದ, ಬೇಡವೆಂದರೂ ಉಕ್ಕಿಬರುವ ಆಹಾರಕೋಶವಾದ ಭೂದೇವಿಯೂ ಪ್ರೇಮನಿಧಿ; ಬೇರಿನಿಂದ ಹೀರಿ, ಹೂವಾಗಿ ಜಗಕ್ಕೆ ಕಂಪನ್ನು ಬೀರುವ ಮರವೂ ಪ್ರ... ಆಹಾರಸಾರವು ಮರಗಳಿಗೆ ಪ್ರೇಮರೂ... ಪೃಥ್ವಿಗೆ ಅದು ಕಾಮ; ಹೂಗಳ ಕ... ಪ್ರೇಮವಾದರೂ, ಮರಕ್ಕೆ ಹೂಗಳು ... ಅಂದರೆ ಪ್ರೇಮವನ್ನು ಪಡೆದು, ಕಾಮವಾ... ಪ್ರೇಮರೂಪದಲ್ಲೇ ಹಂಚಿ ಹೋಗುವ... ನಿಯಮ. ಮುಗಿಲು ಸ್ವಾರ್ಥದಿಂದ ... ಮೋಡಗಳು ಕಾಮ; ಅವುಗಳಿಂದ ಉರಿವ ... ತಂಪುನೀರು ಪ್ರೇಮ. ಮಳೆಯ ನೀರನ್ನು ... ದಿಂದ ಸಂಗ್ರಹಿಸುವದು ಕಾಮ; ಅದರಿಂದ ... ಹುಲ್ಲು, ಗಿಡಗಳು ಬೆಳೆಸುವದು ಪ್ರೇಮ. ... ಹಳ್ಳಿಗಳ ನೀರನ್ನು ಕೂಡಿಡುವದು ಸಮು... ಬಿಸಿಲಿನಿಂದ ತಪಿಸಿ ಉಗಿಯಾಗುವದು ... ಒಂದೇ ಮಾತಿನಲ್ಲಿ ಹೇಳುವದಾದರೆ ಪ್ರೇ... ಯಾಗಿ, ಕಾಮದಿಂದ ಸ್ಥಿತಿಯನ್ನು ಹೊಂದಿ ... ಲಯವಾಗುವದು.

ಮಗುವು ಪ್ರೇಮ ಪರಿಸ್ಥಿತಿಯಲ್ಲಿ ಬೆಳೆಯು... ತ್ತಿನ ಎಲ್ಲ ವಸ್ತುಗಳಲ್ಲಿಯೂ ಅದಕ್ಕೆ ಪ್ರೇಮ... ಲ್ಲಕ್ಕೂ ಅದರಲ್ಲಿ ಪ್ರೇಮವಿದೆ. ಹೀಗೆ ... ಉಸಿರಾಡಿಸಿ, ಪ್ರೇಮವನ್ನು ಉಂಡ ಮಗುವ... ಗಳಿಂದ ಪುಷ್ಟವಾಗಿ, ಹೃಷ್ಟವಾಗಿ, ಕಾಮದಲ್ಲಿ... ಹರೆತನದ ಹರ್ಷ, ಹಂಬಲಗಳಲ್ಲಿ ಕಾಮವಿದೆ... ಹೆಂಣಾಗಲಿ ಅದರ ಬೆಡಗು, ಒನಪುಗಳಲ್ಲಿ ... ಅದರ ನಗು-ನೋಟಗಳಲ್ಲಿ, ಅರೆದೆರೆದ ... ರೆದ್ದ ಮೃದುಸ್ಪರ್ಶಗಳಲ್ಲಿ, ಸಿಟ್ಟು ಸೆಡವು ... ಗಳಲ್ಲಿ, ಆಶೆ-ಸ್ಪರ್ಧೆ-ಉಲ್ಲಾಸ-ಕಾರ್ಯಗಳ... ನಿಟ್ಟುಸಿರು-ಅಳು-ದಿಗಿಲುಗಳಲ್ಲಿ ಕಾಮವಿದೆ. ... ಗಳಲ್ಲಿ ನಡೆದಿರುವ ಸೂಕ್ಷ್ಮ ಮಾರ್ಪಾಟುಗಳ...

ಹೆಜ್ಜೆಹೆಜ್ಜೆಗೂ ಬೆಚ್ಚಿ, ಮೈಮರೆತು ನಿಟ್ಟುನಿಟ್ಟೆಗೂ ಕಂಣು ಚೆಲ್ಲಿ, ಹುಬ್ಬುಗಂಟಿಕ್ಕಿ, ನಕ್ಕು, ಚಪಲೆಯಾಗಿ ನಲಿದು, ಹೂಬಳ್ಳಿ ಪ್ರಾಣಿಗಳನ್ನು ಪ್ರೀತಿಸುತ್ತ ಮುದ್ದಿಸುತ್ತ ಜಗವನ್ನು ಆಕರ್ಷಿಸುತ್ತಿರುವ ತರುಣಿಯ ಜೀವಾಳದಲ್ಲಿ ಕಾಮವಿದೆ. ಆದೇ ಹುಟ್ಟಿದ ಕರುವಿನಂತೆ ಕುಣಿದು, ಕಂಡಕಂಡವರನ್ನು ಕೆಣಕಿ, ಮೀಸೆ ಹುರಿಮಾಡಿ, ಬೈದು ಬೈಸಿಕೊಂಡು, ಉರಿದು ಮೆರೆದು, ಜಗವನ್ನು ಬೆರಗಿಸುವ ತರುಣನ ಜೀವಾಳದಲ್ಲಿಯೂ ಕಾಮವಿದೆ. ಆ ಕಾಮಶಕ್ತಿಯಿಂದಲೇ ಹರೆತನವು ಜಗವನ್ನು ಆಕರ್ಷಿಸುವದು. ಆ ಆಕರ್ಷಣದಲ್ಲಿ ಐಕ್ಯವಿದೆ; ಏಕೆಂದರೆ ಕಾಮದ ಕಮನೀಯತೆಗೆ ಮನಸೋತ ಜಗವು ಅದಕ್ಕೆ ಮುಗಿಬೀಳುವದು; ...ಂದಾಗುವದು. ಆ ಐಕ್ಯದಲ್ಲೆ ಪ್ರೇಮದ ಬೀಜಗಳಿವೆ. ...ೀಗೆ ಪ್ರೇಮದ ಪಲ್ಲವಿಯುಳ್ಳ ಕಾಮಗೀತವು ವಿಶ್ವದ ನರನರಗಳಲ್ಲಿಯೂ ತುಂಬಿಕೊಂಡಿದೆ.

ವಿಶ್ವದ ವಿರಾಟದೇಹದಲ್ಲಿ ಕಾಮ, ಪ್ರೇಮಗಳ ಅಣು...ಗಳು ನಸುಬಿಡದೆ ಪಸರಿಸಿವೆ. ಮನುಷ್ಯನ ಬುದ್ಧಿನಿರ್ಮಿತ ...ಾಯದೆ, ಕಟ್ಟಳೆ, ಧರ್ಮ, ನೀತಿಗಳ ಕುಂಬುಹಗ್ಗದಿಂದ ...ಶ್ವದ ಮದ್ದಾನೆಯನ್ನು ಕಟ್ಟಬಹುದೇ ! ಆ ಆನೆಯನ್ನು ...ಲು ಮಾಡಲು ಅದರ ದೇಹ ಮನಸುಗಳ ಸ್ವಭಾವ ...ಿದು ಅದನ್ನು ಒಲಿಸಿಕೊಳ್ಳಬೇಕು; ಆಗ ಅದು ನಮ್ಮನ್ನು ...ಾತ್ಸಲ್ಯದಿಂದ ಹೊತ್ತು ಕುಣಿದೀತು; ಅದನ್ನು ಕೆರಳಿಸಿ...ರೆ ನಮ್ಮನ್ನು ತುಳಿದು ಒರೆಸೀತು. ಸಮಾಜ, ಧರ್ಮ, ...ೀತಿಗಳು, ವಿಶ್ವಸಿಯಮದ ಮಹಾಪೂರಕ್ಕೆ ಒಡ್ಡುಗಟ್ಟಿ...ಲೆ, ಅದು ಮೀರಿಮೊರಿ ಹರಿದು, ಅಸಂಖ್ಯ ಹಳ್ಳಿಗಳನ್ನು ...ದು ನುಂಗೀತು. ಆದ್ದರಿಂದ ವಿಶ್ವನಿಯಮಗಳ ಒಲವು, ...ವುಗಳನ್ನರಿತು ಅವುಗಳಿಗೆ ದಿಕ್ಕುತಪ್ಪಿಸುವ ಹುಚ್ಚು...ಪಣಿಕೆಗೆ ಹೋಗದೆ, ಅವುಗಳ ಶಕ್ತಿಯಿಂದ ನಾವೇ ಒಂದು ...ಸೆ ಹಿಡಿದು ದೆಸೆಗಾಣುವ ಹಂಚಿಕೆ ಹುಡುಕಬೇಕು. ...ಮವು ಜೀವನದ ಭೂಪರಾಗದ ಪಂಚಮದಂತಿದೆ. ...ದನ್ನು ತಡೆದಿಡುವ ಹವ್ಯಾಸ ಹಿಡಿಯದೆ, ವ್ಯಕ್ತಿಸಮಾಜ ... ಪ್ರಗತಿಗೆ ಪೋಷಕವಾಗುವಂತೆ, ಅದಕ್ಕೆ ರೂಪು ...ಡಬೇಕು. ಕೊನೆಗೆ ಕಾಮದ ಹೂಕಾಯಿಗಳು ಪ್ರೇಮದ ...ವಂಣುಗಳಾಗುವಂತೆ ಅನುಗೊಳಿಸಬೇಕು.

ಕಾಮಾಂಗಗಳು ಬಲಿತು, ಸರ್ವಾಂಗದಲ್ಲಿಯೂ ತಮ್ಮ ...ಸ್ರಾವವನ್ನು ಹರಿಯಿಸಿದವೆಂದರೆ, ಹರೆತನವು ನಳ...ಸುವದು. ಆಗ ಗಂಡುಹೆಂಣುಗಳಲ್ಲಿ ತಮಗೇ ತಿಳಿಯ...ಥ ಒಂದು ಮನದ ಸೆಳೆತವು ವ್ಯಕ್ತವಾಗುವದು. ಗಂಡಿಗೆ ಹೆಂಣಿನ ವಿಷಯದಲ್ಲಿ, ಮತ್ತು ಹೆಂಣಿಗೆ ಗಂಡಿನ ವಿಷಯದಲ್ಲಿ ಯಾವದೋ ಒಂದು ಸವಿಯಾದ ಒಲವಿನ, ಮೈಮರೆಸುವ ಅನುಭವವಾಗುವದು. ಇಬ್ಬರಿಗೂ, ತಮ್ಮನ್ನು ಯಾರೋ ಹತ್ತರ ಹತ್ತರ ನೂಕುತ್ತಿರುವರೆಂದು ಅನಿಸುವದು. ಹಿರಿಯರ ಉಪದೇಶ, ಧರ್ಮದ ಅಂಜಿಕೆ, ತನ್ನ ಮನಸಿನ ಕೊರೆತಗಳು ಬೇಡಬೇಡವೆಂದರೂ, ಒಬ್ಬರನ್ನೊಬ್ಬರು ನೋಡುತ್ತಲೇ ಇರುವರು; ಕಂಣು ಮುಚ್ಚಿದರೂ ಒಬ್ಬರನ್ನೊರು ಮನದ ಆಕಾಶದಲ್ಲಿ ನಿಚ್ಚಳವಾಗಿ ಕಂಡು ನಲಿಯುತ್ತಿರುವರು. ಎಷ್ಟೋ ಗಂಟೆಗಳ ವರೆಗೆ, ಪರಸ್ಪರ ಸಹವಾಸ ಸ್ವಪ್ನದಲ್ಲಿ ಮೈಮರೆಯುವರು; ಅನೇಕ ಸುಖಕಲ್ಪನೆಗಳಿಂದ ರೋಮಾಂಚಿತರಾಗುವರು. ಮನುಷ್ಯನೊಬ್ಬನನ್ನು ಬಿಟ್ಟು, ಬಹುತರ ಮಿಕ್ಕೆಲ್ಲ ಪ್ರಾಣಿಗಳೂ ಈ ಹರೆತನದ ಹುಮ್ಮಸ್ಸಿನಲ್ಲಿ, ಪರಸ್ಪರ ಸಹವಾಸ, ಸಂಪರ್ಕಗಳನ್ನಪೇಕ್ಷಿಸುತ್ತ ಬೆನ್ನಟ್ಟುತ್ತ ತಿರುಗುವವು.

ಆದರೆ ಮನುಷ್ಯನು ಸಾಮಾಜಿಕ ಜೀವಿಯಾಗಿದ್ದಾನೆ; ಮತ್ತು ಜಗತ್ತನ್ನು ಇದ್ದು ದಿದ್ದಂತೆ ಅನುಭವಿಸದೆ ಅದರಲ್ಲಿ ತನ್ನ ಬುದ್ಧಿಯ ಮಸಾಲೆಯನ್ನು ಕಲಿಸಿ ಸವಿಯುವವನಾಗಿದ್ದಾನೆ. ಲಕ್ಷಾವಧಿ ವರ್ಷಗಳಿಂದ ವಿವಿಧ ನೀತಿ, ಧರ್ಮ, ಕಾಯದೆಗಳಿಂದ, ತನ್ನ ಸ್ವೇಚ್ಛಾಂಗಗಳನ್ನು ಸಮಾಜೇಚ್ಛೆಗೆ ಕಟ್ಟಿಕೊಂಡಿದ್ದಾನೆ. ಇದರಿಂದ ವ್ಯಕ್ತಿಯ ಧ್ಯೇಯ, ಸಾಧನಗಳು ಸಮಾಜಯಜ್ಞದಲ್ಲಿ ಬಲಿಯಾಗುತ್ತ ಬಂದಿವೆ. ಇದರಿಂದ ದಿನೇದಿನೇ ಮಾನವನು ದೇವತ್ವವನ್ನು ಸಮೀಪಿಸುತ್ತಿದ್ದಾನೆಂದು, ಮನುಷ್ಯನು ಎದೆತಟ್ಟಿಕೊಳುತ್ತಿದ್ದಾನೆ. ಇದರ ನಿಜಾನಿಜತ್ವಗಳನ್ನು, ಇತಿಹಾಸವು ಇನ್ನೂ ನಿರ್ಣಯಿಸಬೇಕಾಗಿದೆ. ಆದರೆ ಇಷ್ಟೊಂದು ನಿಜ; ಈಗಿದ್ದ ಪರಿಸ್ಥಿತಿಯಲ್ಲಿ ಮನುಷ್ಯವ್ಯಕ್ತಿಗೆ ಸಮಾಜವೇ ಜೀವವಾಗಿದೆಯೆನ್ನಬಹುದು. ಆದ್ದರಿಂದ ಮನುಷ್ಯನು ತನ್ನ ಸಹಜವಾದ ಕಾಮಪ್ರೇಮಗಳ ಬಯಲುಕುದುರೆಗಳಿಗೆ ಸಮಾಜದ ಲಗಾಮು ಹಾಕಲೇಬೇಕು. ತಾನು ಕಾಮಿಸಿದ ಇಲ್ಲವೇ ಪ್ರೇಮಿಸಿದ ವ್ಯಕ್ತಿಯನ್ನು ಹುಡುಕುವಾಗ ಸಮಾಜತೃಪ್ತಿಯನ್ನೂ ಲಕ್ಷಿಸಬೇಕು. ಆದ್ದರಿಂದ ಸ್ತ್ರೀಪುರುಷರು ತಮ್ಮ ನೈಜಪ್ರವೃತ್ತಿಯಾದ ಕಾಮವನ್ನು ಪೂರೈಸಿಕೊಳ್ಳಲು, ಸಮಾಜ, ಕಾಯದೆಗಳ ಸೂತ್ರಕ್ಕನುಸರಿಸಿ ಒಬ್ಬ ಗಂಡನ್ನೊ ಹೆಂಣನ್ನೊ ಹೊಂದಿ, ಕೆಲಕಾಲದವರೆಗೆ ಕೂಡಿರುವದಕ್ಕೆ ಮದುವೆಯೆನ್ನಬಹುದು.


ಕೂಡಿರಬೇಕಾದರೆ ಸ್ವಭಾವ ಒಂದೇ ಇರಬೇಕು. Likes attract likes ಎಂಬಂತೆ ಸಮಾನ ಸ್ವಭಾವ

ಗಳಲ್ಲಿ ಆಕರ್ಷಣವಿದೆ. ಆದರೆ ಇಡಿ ಜಗತ್ತನ್ನು ಹುಡುಕಿದರೂ, ಸಂಪೂರ್ಣ ಸಮಸ್ವಭಾವವುಳ್ಳ ಇಬ್ಬರು ಸಿಗುವದು ಕಷ್ಟ. ಹಾಗಾದರೆ ಅಸಮಸ್ವಭಾವದವರು ಸಾಯುವ ವರೆಗೆ ಕೂಡಿರುವದು ಹೇಗೆ? ತಾವು ಕೂಡಿರಬೇಕು ಎಂಬ ನಿಶ್ಚಯಮಾಡಿ ಮದುವೆ ಮಾಡಿಕೊಂಡವರು, ತಮ್ಮ ಐಕ್ಯವನ್ನು ಕಾಪಾಡಿಕೊಳ್ಳುವದು ಹೇಗೆ? ಇದಕ್ಕೆ ಒಂದೇ ಉತ್ತರವೆಂದರೆ 'ಪರಸ್ಪರರಲ್ಲಿದ್ದ ಅಸಮಸ್ವಭಾವವನ್ನು ಸಹಿಸುವದು; ಕ್ಷಮಿಸುವದು.' ಬಿಹಾರದಲ್ಲಿ ಭೂಕಂಪವಾಯಿತೆಂದು ಜನರೇನು ಭೂಮಿಯನ್ನು ಒದ್ದರೇ? ಬಿಸಿಲು ಸುಡುವವೆಂದು, ನಾವು ಸೂರ್ಯನಿಗೆ ಸಿಟ್ಟಿನಿಂದ ಉಗುಳುವೆವೇ? ಮಳೆ ಬರಲಿಲ್ಲವೆಂದು, ಮೋಡಗಳನ್ನು ಕಟ್ಟಿಡಲು ಓಡುವೆವೇ? ತಾವು ಬಡವರೆಂದು, ಎಲ್ಲರೂ ಸಿರಿವಂತರನ್ನು ಕೊಲ್ಲಹೋಗುವರೇ? ಮಹಾಪೂರ (ನೆರೆ) ಬಂದ ಹಳ್ಳವು ಹಳ್ಳಿಗಳನ್ನು ಕೊಚ್ಚಿಕೊಂಡು ಹೋಗುವಾಗ, ಅದನ್ನು ಕೈಯಿಂದ ತಡೆಯಹೋಗುವರೇ? ಇಲ್ಲ. ಇವನ್ನೆಲ್ಲ ಸಹಿಸುವರು. ಸಹಿಸುವರಾದ್ದರಿಂದಲೇ ಜಗದ ಈ ಕಸದ ತಿಪ್ಪೆಯಲ್ಲಿ ಒಂದೆರಡು ರತ್ನಗಳನ್ನು ಹೊಂದಿ ಮನುಷ್ಯನು ಸುಖಿಯಾಗುತ್ತಾನೆ. ಇಲ್ಲದಿದ್ದರೆ ನೀಗಲಾರದ್ದಕ್ಕೆ ರೇಗಿದರೆ, ಮಗದ ಬೇಗೆಯೇ ಹೆಚ್ಚಿ, ಬಂದ ಸುಖವೂ ದಕ್ಕದೇ ಹೋದೀತು. ಆದ್ದರಿಂದ ಸಹಿಸುವದು, ಇದ್ದುದರಲ್ಲಿ ತಣಿಯುವದು, ವಿರುದ್ಧ ಗುಣಗಳುಳ್ಳ ವಸ್ತುಗಳ ಸ್ವಭಾವ ತಿಳಿದು, ಅದರ ಉಪಯೋಗ ಮಾಡುವದು, ಇವಿಷ್ಟೇ ಸುಖದ ದಾರಿಗಳೇ ಹೊರತು, ಬೇಡಾದುದರ ವಿರುದ್ಧ ಬಂಡಾಯವಲ್ಲ. ತಾಯಿಮಕ್ಕಳು, ಸ್ವಾಮಿ ಸೇವಕ, ಗೆಳೆಯರು ಗೆಳತಿಯರು, ಪ್ರಾಣಿಗಳು ಮತ್ತು ಪ್ರಕೃತಿ ಇತ್ಯಾದಿಗಳಲ್ಲಿಯ ಸಂಬಂಧ ಸಮಾಯೋಗಗಳ ಸಾರವೇ ದಾಂಪತ್ಯಜೀವನವೆನ್ನಬಹುದು. ಕ್ಷಮೆ, ಸಮಾನತೆ, ಸ್ವಾರ್ಥರಹಿತ ಪ್ರೇಮಗಳ ತ್ರಿಪುಟಿ ಸಂಯಮವೇ ದಾಂಪತ್ಯಜೀವನದ ನೆಲೆಗಟ್ಟು; ದಾಂಪತ್ಯಜೀವನವು ಬೇಕಿದ್ದರೆ, ಅದರಿಂದ ತಮ್ಮನ್ನು ಕಟ್ಟಿಕೊಳ್ಳಲು ಸಿದ್ಧರಾಗಬೇಕಾದರೆ ಈ ಮೂರು ಗುಣಗಳು ಅನಿವಾರ್ಯ. ಅವುಗಳಿಲ್ಲದ ಹುಡುಗ ಹುಡುಗಿಯರನ್ನು, ಸಂಸಾರದ ಕಟ್ಟಡವಿಯಲ್ಲಿ, ಕಣ್ಣುಕಟ್ಟಿ ಬಿಟ್ಟರೆ, ಗೃಹಕಲಹ, ಮನದ ಬೇಗೆ, ಅತೃಪ್ತಿ, ನಿರಾಶೆಗಳ ಹಿಂಸ್ರಪಶುಗಳು, ಹರಿಹರಿದು ತಿಂದಾವು!

ದಾಂಪತ್ಯವೆಂದರೆ ಪ್ರೇಮದ ರಂಗಸ್ಥಳ. ನಟರು ರಂಗಸ್ಥಳಕ್ಕೆ ಬರುವ ಮೊದಲು, ನಟನೆಯನ್ನು ಅಭ್ಯಸಿಸಬೇಕು. ಇಲ್ಲದಿದ್ದರೆ ರಂಗದಲ್ಲಿ ಮಾತುಮರೆತು ದಂಗುಬಡಿದರೆ, ಮಂದಿಯೆಲ್ಲ ಮಂಗನೆಂದಾರು. ಪ್ರೇಮವು ದಾಂಪತ್ಯದ ರಂಕ್ಕೆ ಬರಬೇಕಾದರೆ, ಮೊದಲೇ ಅದರ ... ಬೇಕು. ಅಂದರೆ ಹುಡುಗಹುಡುಗಿಯರು ಮೊದಲೇ ಗಂಡಹೆಂಡಿರಂತೆ ಕೂಡಿರಬೇಕೆ... ದಾಂಪತ್ಯಪ್ರೇಮದ ಅಂಗಗಳಾದ, ಕ್ಷಮೆ... ಸ್ವಾರ್ಥರಹಿತತೆಗಳನ್ನು, ಬಾಲ್ಯದಿಂದಲೇ ... ವಯಸ್ಸಿಗೆ ಬಂದಮೇಲೆ ಕಾಮಾಂಗಗಳ ... ಗಳಿಂದ ದೇಹಮನಗಳ ಮೇಲೆ ಆಗಬಹುದಾ... ಗಳ ವಿಷಯವನ್ನು ಯೋಗ್ಯ ಹಿರಿಯರಿಂದ ... ನಂತರ ತಮ್ಮ ಆಯುಷ್ಯದ ಪಾಲುಗಾರ... ಬಹಳ ಸೂಕ್ಷ್ಮಬುದ್ಧಿಯಿಂದ ಹುಡುಕಿ ... ದಾಂಪತ್ಯದಲ್ಲಿ ಸೇರುವ ಮೊದಲು ಸಾವಿರ... ಬೇಕು. ಅಂದರೆ ಈಗ ಕಂಡು ಬರುವ... ಸಂಕಷ್ಟಗಳು, ತೊಡಕು ಮಿಡುಕುಗಳು, ಮೋಸ, ಆತ್ಮಘಾತ, ಪತಿಪತ್ನೀ ದ್ರೋಹಗಳು, ಜೀವನದಿಂದ ಪಲಾಯನಾದಾವು.

ಮದುವೆಯೆಂದರೆ ಗಂಡಹೆಂಡಿರ ಪವಿತ್ರ... ವಾಗಬೇಕು. ಗಂಡಿನ ಸಾಹಸ, ಬುದ್ಧಿ, ಶಕ್ತಿಗ... ವನ್ನು ಕ್ರಾಂತಿಯ ಕಡೆಗೆ ಎಳೆಯುವವು. ಹೆಣ್ಣಿ... ಸಹಾನುಭೂತಿ, ವಾತ್ಸಲ್ಯಗಳು ಸಮಾಜವನ್ನು ಕಡೆಗೆ ಸೆಳೆಯುವವು. ಸಮಾಜಕ್ಕೆ ಕ್ರಾಂತಿಯು ಶಾಂತಿಯೂ ಬೇಕು. ಶಾಂತಿ ಶಾಂತಿಯೆಂ... ಕೂತರೆ ಕೂಳಿಲ್ಲದೆ ಜೀವವು ಕಾಲನ... ನುಗ್ಗಾಗುವದು; ಕ್ರಾಂತಿ ಕ್ರಾಂತಿಯೆಂದು ... ಇದ್ದರೆ ನರಗಳು ನಿರ್ವೀರ್ಯವಾಗಿ, ಜೀ... ಜ್ವಾಲಾಮುಖಿಯಾಗುವದು.

ಆಹಹ ಮದುವೆಯೆಂದರೆ, ಜಗದ ಜೀವಿಗ... ಪ್ರಕಾಶಗಳನ್ನು ಸುರಿಯುವ ಬೆಳಗು... ಸಂಧ್ಯಾರಾಗದಂತೆ; ತನ್ನ ಮಾಯಾಜಾಲ... ಜಗಕ್ಕೆ ನಿಸ್ತಬ್ಧತೆಯ ಜೋಗುಳ ಹಾಡುವ... ನಡುರಾತ್ರಿಯ ಬೆಳದಿಂಗಳಂತೆ. ಒಂದು ವಿಧದ... ಒಂದು ತರದ ಉನ್ಮತ್ತತೆ; ಒಂದು ರೀತಿಯ... ಬೆಚ್ಚುಗೆ, ಗಾಂಭೀರ್ಯ, ತಡೆದಿಟ್ಟ ಉಲ್ಲಾಸ... ನನ್ನು ಅಪ್ಪಬೇಕೆಂದಿರುವ ತಾಯಿಯ ನೋಟ! ದಾಂಪತ್ಯನಂದನವನ್ನು ಯಾರು ಬಯಸಲಿ... ಯೋಚಿಸಿ, ವಿವೇಚಿಸಿ, ತಿಳಿದು ಬಯಸಿ... ಕೊಂಡ ದಾಂಪತ್ಯದ ಅಮೃತದಲ್ಲಿ, ಪತಿಪ... ಹೊಟ್ಟೆಕಿಚ್ಚು, ವ್ಯಭಿಚಾರಗಳ ಕಾಲಕೂಟ... ಲಾರದಲ್ಲವೇ?



ಜ್ಞಾನ—ವಿಜ್ಞಾನ

ನೊಣಗಳನ್ನು ಹಿಡಿಯುವ ಕಾಗದ

ಈವರೆಗೆ ನೊಣಗಳನ್ನು ಹಿಡಿಯುವ ಕಾಗದಗಳು ಹಳದಿಯಾಗಿರುತ್ತಿದ್ದವು. ಈಗ ವಿಲಿಯಂ ಕೆಲ್ ಎಂಬವನು ಅವಶ್ಯಕ್ಕಾಗಿ ನೀಲಿ ಮತ್ತು ಕೆಂಪು ಬಣ್ಣದ ಕಾಗದಗಳೇ ಪರಿಣಾಮಕಾರಿಯೆಂದು ಪ್ರಯೋಗದಿಂದ ಸಿದ್ಧಪಡಿಸಿದ್ದಾನೆ. ಹೊಸ ಪ್ರಯೋಗದಲ್ಲಿ ಕಾಗದದ ತುಂಬ ಅಂಟು ಪದಾರ್ಥವಿರುವದಿಲ್ಲ. ಹುರುಬರಕಾದ ಕಾಗದದ ಪಟ್ಟಿಗಳು ಒಂದರ ಮೇಲೊಂದು X ಈ ರೀತಿಯಲ್ಲಿ ಅಂಟಿಸಿ, ಕೊನೆಗೆ ಸೂಕ್ಷ್ಮ ಹರಿಗಳುಳ್ಳ ಒಂದು ಹುರುಬರಕಾದ ಕಾಗದವಾಗುವದು. ಅದರ ಮೇಲಿನ ಸೂಕ್ಷ್ಮ ಹರಿ (ತಗ್ಗು) ಗಳೆಲ್ಲ ಕಾಗದದ ಮಧ್ಯಕ್ಕೆ ಇರುವ ಜಿಗುಟು ಪದಾರ್ಥದ ಕಡೆಗೆ ಹೋಗುತ್ತವೆ. ಕೆಲ್ಲನು ನೊಣಗಳಿಗೆ ಮಿಕ್ಕ ಬಣ್ಣಗಳಿಗಿಂತ ನೀಲಿ ಮತ್ತು ಕೆಂಪಿನ ಮೇಲೆ ಹೆಚ್ಚು ಪ್ರೀತಿ ಎಂಬ ಅನುಭವದಿಂದ ತನ್ನ ಪ್ರಯೋಗವನ್ನು ಸಿದ್ಧಿಗೊಯ್ದನು. ನೊಣಗಳಿಗೆ ನುಣುಪಿಗಿಂತ, ಹುರುಬರಕ ಸ್ಥಳವು ಸೇರುತ್ತದೆ. ನೊಣವು ಕಾಗದದ ಬಣ್ಣಗಳಿಂದ ಆಕರ್ಷಿಸಲ್ಪಟ್ಟು ಅದರ ಮೇಲೆ ಕೂಡುತ್ತದೆ. ಅದರಲ್ಲಿ ಹರಿಗುಂಟ ಸರಿಯುತ್ತ ನಡುವಿನ ಅಂಟುವಿಷದವರೆಗೆ ಹೋಗಿ ಸಾಯುತ್ತದೆ.

ಕೂತಲ್ಲಿಂದಲೇ ದೂರದ ಗಾಡಿಗಳ ಮೇಲೆ ಲಕ್ಷ್ಯ

ಪ್ರವಾಸಿಕ ಮೋಟರು ಆಫೀಸಿನಿಂದ ಹೊರಟು ತಿರುಗಿ ಆಫೀಸಿಗೆ ಮುಟ್ಟುವವರೆಗೆ, ಅದು ಎಲ್ಲೆಲ್ಲಿ ಹೋದರೂ ಆಫೀಸಿನಿಂದಲೇ ಅದರ ಸ್ಥಳವನ್ನು ತಿಳಿದುಕೊಳ್ಳುವ ಒಂದು ಯುಕ್ತಿ ಈಗ ಕಂಡುಹಿಡಿಯಲ್ಪಟ್ಟಿದೆ. ಮೋಟರಿನ ಚಪ್ಪರದ ಮೇಲೆ ಒಂದು ವಿಧದ ವಿದ್ಯುತ್ತಿನ ತಂತಿಗಳ ಸುರುಳಿ ಇರುತ್ತದೆ. ಮಾರ್ಗದುದ್ದಕ್ಕೂ ಬೇರೆಬೇರೆ ಕಡೆಗಳಲ್ಲಿ ಮಾರ್ಗಕ್ಕೆ ಅಡ್ಡವಾಗಿ ವಿದ್ಯುತ್ತಿನ ಗ್ರಾಹಕ ತಂತಿಗಳನ್ನು ಹಾಕಿರುತ್ತಾರೆ. ಮೋಟರು ಆಯಾ ತಂತಿಗಳ ಬುಡದಿಂದ ಹಾಯ್ದು ಹೋಗುವಾಗ ಚಪ್ಪರದ ಮೇಲಿನ ತಂತಿಯ ಸುರುಳಿಯಿಂದ ಹೊರಟ ವಿದ್ಯುತ್ತು, ಮಾರ್ಗಕ್ಕೆ ಅಡ್ಡವಾಗಿ ಹಾಕಿದ ತಂತಿಗಳಲ್ಲಿ ಸೇರಿ, ಮೋಟರಿನ ಆಫೀಸಿಗೆ ಮುಟ್ಟುತ್ತದೆ. ಬೇರೆಬೇರೆ ಕಡೆಯ ಅಡ್ಡ ತಂತಿಯಲ್ಲಿ ಬೇರೆಬೇರೆ ವೇಗದ ವಿದ್ಯುತ್ತು ಹುಟ್ಟುವಂತೆ ವ್ಯವಸ್ಥೆಯಿರುತ್ತದೆ. ಆದ್ದರಿಂದ ಆಫೀಸಿಗೆ ಬಂದು ಮುಟ್ಟುವ ವಿದ್ಯುತ್ತಿನ ವೇಗವನ್ನು ಓದಿ ಮೋಟರು ಸರಿಯಾಗಿ ಯಾವ ಸ್ಥಳದಲ್ಲಿದೆಯೆಂದು ಹೇಳಬಹುದು.

ಹೊಗೆಸೊಪ್ಪಿನ ಅನಿಷ್ಟಗಳು

ಹೊಗೆಸೊಪ್ಪು ನಮ್ಮ ದೇಶದಲ್ಲಿ ಅನೇಕ ರೂಪದಲ್ಲಿ ಉಪಯೋಗಿಸಲ್ಪಡುತ್ತದೆ. ಅದರಲ್ಲಿ ನಶ್ಯವೇರಿಸುವಿಕೆ, ತಂಬಾಕನ್ನು ಬಾಯಲ್ಲಿ ಸುರಿಸುವಿಕೆಗಳಿಂದ ಆಯಾ ಜನರಿಗೆ ಮಾತ್ರ ಅಪಾಯವಾಗುವದು. ಆದರೆ ಬೀಡಿ, ಸಿಗರೇಟಗಳ ಹೊಗೆಯಿಂದ, ಸುತ್ತಮುತ್ತು ಕೂತಿರುವವರ ಆರೋಗ್ಯಕ್ಕೆ ಕೂಡ ಅಪಾಯವಾಗುತ್ತದೆ. ಪ್ರತಿಯೊಬ್ಬರಿಗೂ ವಿಷ ತಿನ್ನಲಿಕ್ಕೆ ಅಧಿಕಾರವಿದೆಯೆಂದೇ ತಿಳಿಯುವಾ. ಆದರೆ ಬೇಡವಾದವರಿಗೆ ವಿಷಕುಡಿಸುವ ಕೆಲಸವು ಬಹಳ ಕಾಡುತನದ್ದಾಗಿದೆ. ಜನಸಮುದಾಯದಲ್ಲಿ ಬೀಡಿ ಸಿಗರೇಟು ಸೇದುವ ಎಲ್ಲ ಮಹನೀಯರಿಂದಲೂ ಈ ಕಾಡುತನದ ಅಪರಾಧವಾಗುತ್ತದೆನ್ನಬಹುದು. ಥಿಯೇಟರಿನಲ್ಲಾಗಲಿ, ಉಗಿಬಂಡಿಯಲ್ಲಾಗಲಿ ಒಬ್ಬನು ಸಿಗರೇಟು ಎಳೆಯಹತ್ತಿದನೆಂದರೆ ಸುತ್ತಲಿನ ಅದರ ಅಭ್ಯಾಸವಿಲ್ಲದ ನಿರಪರಾಧಿಗಳೆಲ್ಲ ಆ ಸಿಗರೇಟ ಹೊಗೆ ಕುಡಿದು ಚಡಪಡಿಸುತ್ತಿರಬೇಕು. ಹೊಗೆಸೊಪ್ಪೆಂದರೆ ಮಹಾ ಪಾಪವಸ್ತುವೆಂದು ತಿಳಿದುಕೊಂಡವರಿಗೂ ವ್ಯವಹಾರದಲ್ಲಿ ಇಚ್ಛಾವಿರುದ್ಧವಾಗಿ ಅದರ ವಿಷದ ಹೊಗೆಯನ್ನು ಕುಡಿಯುವ ಒತ್ತಾಯವಾಗುತ್ತಿರುವದು ಇನ್ನೂ ಯಾವ ಸರಕಾರಗಳ ಲಕ್ಷ್ಯಕ್ಕೂ ಬಂದಂತಿಲ್ಲ. ಫ್ರಾನ್ಸದಲ್ಲಿಯ ಕಾನ್ನ ಸಿನ ಮುನಿಸಿಪಾಲಿಟಿಯ ಅಧ್ಯಕ್ಷರು ಅಲ್ಲಿಯ ಪೋಲಿಸ

ಕಮಿಶನರರಿಂದ, ಹೊಗೆಸೊಪ್ಪಿನ ವಿಷಯದ ಒಂದು ಕಾಯದೆಯು ಕಾರ್ಯಕಾರಿಯಾಗುವಂತೆ ೧೯೩೭ರಲ್ಲಿಯೇ ಮಾಡಿದರು. ಆ ಕಾಯದೆಯಲ್ಲಿ ಥೇಟರು, ಗಾನಶಾಲೆ, ನೃತ್ಯಶಾಲೆ, ಸಾರ್ವಜನಿಕ ವಿಹಾರಸ್ಥಳಗಳಲ್ಲಿ ಹೊಗೆ ಸೊಪ್ಪನ್ನು ಸೇದಬಾರದೆಂದು ನಿಯಮವಿದೆ. ಅಲ್ಲಿಯವರು ಆ ನಿಯಮಗಳನ್ನು ಪಾಲಿಸುತ್ತಾರೆ. ಆದರಿಂದ ಅವರ ಸುಖವೂ ಹೆಚ್ಚಿದೆ. ನಮ್ಮ ಪುಣ್ಯಭೂಮಿಯ ಮುನಿಸಿ ಪಾಲಿಟಗಳಿಗೆ ಇದೇಕೆ ಸಾಧ್ಯವಾಗಬಾರದು ?

ಬಿಸಿಹವೆಯಲ್ಲಿ ಗಡ್ಡ ಬೇಗ ಬೆಳೆಯುತ್ತವೆ.

ಡಾ. ಪಾಲ ಈಸ್ಪನರು ಒಂದು ವರ್ಷ ಚನ್ನಾಗಿ ಸಂಶೋಧನೆಮಾಡಿ ಗಡ್ಡಮೀಸೆಗಳು ಉಷ್ಣಹವೆಯಲ್ಲಿ ತೀವ್ರವಾಗಿ ಬೆಳೆಯುವವೆಂದು ಕಂಡು ಹಿಡಿದಿದ್ದಾರೆ. ಅವರು ತಮ್ಮ ಗಡ್ಡವನ್ನೇ ಪ್ರಯೋಗಕ್ಕಾಗಿ ತೆಗೆದುಕೊಂಡಿದ್ದರು. ತಮ್ಮ ಮೋರೆಯ ವಿಶಿಷ್ಟಭಾಗದ ಕೂದಲನ್ನು ದಿನಾಲು ತೆಗೆದು ಅಳೆದು ಇಡುತ್ತಿದ್ದರು. ಅದರಿಂದ ಫೇಬ್ರುವರಿಯಿಂದ ಸಪ್ಟೆಂಬರದ ವರೆಗೆ ತೀವ್ರವಾಗಿ ಗಡ್ಡ ಬೆಳೆದುದು ತಿಳಿದು ಬಂತು. ನಂತರ ಚಳಿಗಾಳಿ ಬಿಟ್ಟ ಕೂಡಲೆ ಬೆಳೆಗೆ ಕುಗ್ಗಹತ್ತಿತು. ಡಾ. ಈಸ್ಪನರ ಪ್ರತಿಯೊಂದು ಗಡ್ಡದ ಕೂದಲು ವರ್ಷಕ್ಕೆ ಆರು ಇಂಚು ಬೆಳೆಯುವದೆಂಧು ಕಂಡುಬಂದಿದೆ.

ವಿದ್ಯುತ್ತಿನ ಇಕ್ಕಳ

ಮೈಯಲ್ಲಿ ಮೊಳೆ, ಸೂಜಿ, ಮುಂತಾದ ಧಾತುವಿನ ತುಂಡುಗಳು ಸೇರಿದಾಗ, ಅನೇಕ ಸಲ ಅವುಗಳನ್ನು ಹುಡುಕಿ ತೆಗೆಯುವಾಗ ತೊಂದರೆಯಾಗುತ್ತದೆ. ಅಗತ್ಯಕ್ಕಿಂತ ಹೆಚ್ಚು ಸ್ಥಳದಲ್ಲಿ ಶಸ್ತ್ರವನ್ನು ಹಾಕಬೇಕಾಗುತ್ತದೆ. ಆದರೆ ಈಗ ಅಂತಹ ಧಾತುವಿನ ತುಂಡುಗಳು ಇರುವ ಸ್ಥಾನವನ್ನು ಕೂಡಲೆ ಕಂಡು ಹಿಡಿಯುವ ವಿದ್ಯುತ್ತಿನ ಇಕ್ಕಳಗಳು ಸಿದ್ಧವಾಗಿವೆ. ಆ ಇಕ್ಕಳಗಳಿಗೆ ವಿದ್ಯುತ್ತಿನ ಬುಡ್ಡಿಗಳಿವೆ. ಶಲ್ಯವೈದ್ಯನು ಗಾಯದಲ್ಲಿ ಮೆಲ್ಲಗೆ ಆ ವಿದ್ಯುತ್ತಿನ ಇಕ್ಕಳವನ್ನು ದೂರುತ್ತ (ನೂಕುತ್ತ) ಹೋಗುವನು. ಇಕ್ಕಳದ ಮೊನೆಗೆ ಒಳಸೇರಿದ ಧಾತುವಿನ ತುಂಡುಗಳು ತಗಲಿದ ಕೂಡಲೆ ಇಕ್ಕಳದ ಹಿಂದೆ ಕೂಡಿಸಿರುವ ವಿದ್ಯುತ್ತಿನ ಬುಡ್ಡಿಯಲ್ಲಿ ದೀಪ ಹತ್ತುತ್ತದೆ. ದೇಹದ ಮಿಕ್ಕ ಯಾವ ಭಾಗವು ತಗಲಿದರೂ ಆ ದೀಪವು ಹೊತ್ತುವದಿಲ್ಲ.

ಆಧುನಿಕ ನಾಗರಿಕತೆಯು ಅನೇಕ ವಿಘ... ಗಿರಣಿಗಳನ್ನು ಹುಟ್ಟಿಸಿದೆ. ದೊಡ್ಡ ದೊಡ್ಡ ...

ಹೊಗೆಯ ಅನಾಹುತ

ಆ ಕಾರಖಾನೆಯ ... ಹೊರಬೀಳುವ ಹೊಗೆ... ಯಿಲ್ಲ. ಹೊಗೆಯು ... ಆಕಾಶದಲ್ಲಿ ಲೀನವಾ... ನಾವು ನಿಶ್ಚಿಂತರಾಗುವಂತಿಲ್ಲ. ಅದು ಕಟ್ಟ... ಕೆಡಿಸುವದು; ಬಟ್ಟೆಗಳನ್ನು ಹೊಲಸು ಮಾ... ಮಾರಾಟದ ಸಾಮಾನುಗಳನ್ನು ಹಸಗೆಡಿಸು... ವನಸ್ಪತಿಗಳಿಗೆ ಅಪಾಯ ತರುವದು; ಸೂರ್ಯ... ವನ್ನು ತಡೆಗಟ್ಟುವದು; ಹೀಗೆ ನಿರಪರಾಧಿ ನಾ... ಆ ಹೊಗೆಯಿಂದ ಬಹಳ ಹಾನಿಯಿದೆ. ... ಆರೋಗ್ಯಶಾಖೆಯವರು, ಈ ಹೊಗೆಯಿಂದ ... ನಾಗರಿಕನಿಗೆ ವರ್ಷಕ್ಕೆ ೪೦-೫೦ ರೂಪಾಯಿಗ... ತಟ್ಟುವದೆಂದು ಲೆಕ್ಕ ಹಾಕಿದ್ದಾರೆ. ಪಟ್ಟಣಗ... ಚಚ್ಚೌಕು ಮೈಲಿನ ಪ್ರದೇಶದಲ್ಲಿ ಹನ್ನೆರಡು ... ೨೦೦೦ ಟನ್ನಿನಷ್ಟು ವಸ್ತುಗಳು ಹೊಗೆಯಿಂದ ... ರುತ್ತವಂತೆ !

ಕಾಜಿನ ಅರಿವೆ

ಬರ್ಮಿಂಗಹ್ಯಾಮದಲ್ಲಿ ಆಗಲಿರುವ ಬ್ರಿಟಿಶ... ಯಿಕ ಪ್ರದರ್ಶನದಲ್ಲಿ ಶುದ್ಧ ಕಾಜಿನಿಂದ ... ವಸ್ತ್ರಗಳು ಪ್ರದರ್ಶಿಸ... ೧೯೩೦ರಲ್ಲಿ ಗ್ಲಾಸ್ಗೊ ವಸ್ತ್ರ... 'ಗ್ಲಾಸ್ ಸಿಲ್ಕ' ನ್ನು ... ದ್ದರು. ಆ ವಿಷಯದ ... ಪ್ರಗತಿ ಬಹಳವಾಗಿದೆ. ಅಚ್ಚ ಕಾಜಿನಿಂದ... ಗಿಂತ ತಿಳುವಾದ ಸೂಲನ್ನು ಈಗ ತೆಗೆಯಬಹುದು... ನೂಲಿನಿಂದ ಅನೇಕ ಶೃಂಗಾರ ವೈಭವದ ... ಗಾಗಿ ಸುಂದರ ವಸ್ತ್ರಗಳನ್ನು ನೇಯಬಹುದು. ... ಸಿದ್ಧವಾಗಿರುವ ಕಾಜಿನ ವಸ್ತ್ರವು ವಿದ್ಯುತ್ ... ವಾಗಿ, ರಸಾಯನ ದ್ರವ್ಯಗಳನ್ನು ಸೋಸಲಿಕ್ಕಾಗಿ ... ಅನೇಕ ಹೊಸ ಕೆಲಸಗಳಿಗೂ ಉಪಯುಕ್ತವಾಗಿ...

ಜಪಾನದಲ್ಲಿ ಶಿಕ್ಷಣ

ಡಾ. ಗೋಡಬೋಲೆಯವರು ಜಪಾನದಿಂ... ಬಂದು ಕಾಶೀ ವಿಶ್ವವಿದ್ಯಾಲಯದಲ್ಲಿ ವ್ಯಾಖ್ಯಾ... ವಾಗ ಜಪಾನದ ಶಿಕ್ಷಣ... ವಿಷಯಕ್ಕೆ ಈ ... ಹೇಳಿದರು:— ನಾವು ಶಾಲೆ ...

ಹೋದಾಗ ಗಂಟೆ ಬಾರಿಸಿದ ಕೂಡಲೆ ಒಂದು ಮಿನಿಟನೊಳಗಾಗಿ ಇಡಿ ಶಾಲೆಯ ಹುಡುಗರು ಒಂದು ಸಾಲಾಗಿ ನಿಂತರು. ಈ ವಿಧದಿಂದ ಜಪಾನದ ಮಕ್ಕಳಿಗೆ ಚಿಕ್ಕಂದಿನಿಂದಲೇ ಶಿಸ್ತಿನ ಶಿಕ್ಷಣವು ಸಿಗುವದು. ಜಪಾನವು ಶಿಕ್ಷಣದ ವಿಷಯದಲ್ಲಿ ಮೊದಲ ಹೆಜ್ಜೆ ೧೮೭೨ರಲ್ಲಿ ಇಟ್ಟಿತು. ಆ ವರ್ಷದಿಂದ ಪ್ರಾಥಮಿಕ ಶಿಕ್ಷಣವು ಒತ್ತಾಯದ್ದಾಗಿ ಮಾಡಲಾಯಿತು. ಸರಕಾರದಿಂದ ಪ್ರತಿವರ್ಷ ಶಿಕ್ಷಣಕ್ಕಾಗಿ ೬ ಲಕ್ಷ ಯೆನ್ (ಒಂದು ಯೆನ್ ಅಂದರೆ ಸುಮಾರು ೧೩ ಆಣೆ) ಖರ್ಚಾಗುತ್ತದೆ. ಅದರಲ್ಲಿ ಅರ್ಧ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ ಸುಮಾರು ಅರವತ್ತು ಸಾವಿರ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಊಟವೂ, ಬಟ್ಟೆಯೂ ಸಿಗುವದು. ಇದರ ಪರಿಣಾಮವಾಗಿ ಜಪಾನದಲ್ಲಿ ನೂರಕ್ಕೆ ೯೯ರಷ್ಟು ಹುಡುಗ ಹುಡುಗಿಯರು ಶಿಕ್ಷಿತರಾಗಿದ್ದಾರೆ. ಪ್ರತಿಯೊಬ್ಬರೂ ೬ನೇ ವರ್ಷದಿಂದ, ಶಾಲೆಗೆ ಹೋಗಿಯೇ ತೀರಬೇಕು. ಜಪಾನದಲ್ಲಿ ಈಗ ೪೫ ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಟೋಕಿಯೋ ಒಂದೇ ಪಟ್ಟಣದಲ್ಲಿ ೧೨—೧೩ ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ೬೧೧೬೨ ವಿದ್ಯಾರ್ಥಿಗಳಿದ್ದಾರೆ. ಪ್ರೊಫೆಸರರ ಸಂಬಳವು ತೀರ ಕಡಿಮೆಯೆಂದರೆ ೧೦೦ ಯೆನ್; ತೀರ ಹೆಚ್ಚೆಂದರೆ ೬೦೦ ಯೆನ್. ಇದರಿಂದ ಅಲ್ಲಿಯ ಶಿಕ್ಷಣಕ್ಕೆ ಹಿಂದುಸ್ತಾನದ ಅರ್ಧದಷ್ಟು ಕೂಡ ಖರ್ಚು ಬರುವದಿಲ್ಲ.

ಮೋಡಗಳೊಳಗಿಂದ ಆಚೆ ನೋಡಬಹುದು.

ಆಕಾಶದೊಳಗಿನ ಗ್ರಹನಕ್ಷತ್ರಗಳ ಉಪಯೋಗವು ವಿವಿಧ ವ್ಯವಸಾಯದವರಿಗೆ ವಿವಿಧರೀತಿಯಲ್ಲಿ ಆಗುತ್ತದೆ. ಹಡಗದವರು ದಿಕ್ಕನ್ನು ನಿರ್ಣಯಿಸಲಿಕ್ಕೆ, ವೈಮಾನಿಕರು ಮುಂಬರುವ ಬಿರುಗಾಳಿಯನ್ನು ತಿಳಿದುಕೊಳ್ಳಲಿಕ್ಕೆ, ಜ್ಯೋತಿಷಿಗಳು ಖಗೋಲ ವಿಜ್ಞಾನಕ್ಕಾಗಿ ಆಕಾಶವನ್ನು ನೋಡುತ್ತಲೇ ಇರಬೇಕಾಗುತ್ತದೆ. ಈವರೆಗೆ ಆಕಾಶದಲ್ಲಿ ಮೋಡಗಳು ಇಲ್ಲದಿರುವಾಗ ಮಾತ್ರ ನೋಡುವದು ಸಾಧ್ಯವಾಗಿತ್ತು. ಆದರೆ ಈಗ ಒಂದು ಹೊಸ ಟೆಲಿಸ್ಕೋಪು, ಇಟಲಿಯ ಪ್ರೊ. ಫಿಲೊಮೆನೊ ಎಂಬವರಿಂದ ಶೋಧಿಸಲ್ಪಟ್ಟಿದೆ. ಅದರ ಬಲದಿಂದ ಮೋಡಗಳೊಳಗಿಂದ ಕೂಡ ನಕ್ಷತ್ರಗಳನ್ನು ನೋಡಬಹುದು. ಇಷ್ಟಕ್ಕೆ ಪ್ರೊಫೆಸರರು ಸುಮ್ಮನೆ ಕೂಡಲಿಲ್ಲ. ಬೇಕಾದಂತಹ ದಪ್ಪ ವಸ್ತುವಿದ್ದರೂ ಅದರೊಳಗಿನಿಂದ ಆಚೆಯ ವಸ್ತುವನ್ನು ನೋಡುವ ಸಾಧನವನ್ನು ಬೇಗ ಶೋಧಿಸುವರೆಂದು ಅವರು ಅನ್ನುತ್ತಿದ್ದಾರೆ.

ಮೊಗಲ ಮಹಿಳೆಯರು

ಬಾಬರನು ಬರೆದ ಆತ್ಮಚರಿತ್ರದಲ್ಲಿ ಮತ್ತು ಹುಮಾಯೂನನಾಮಾ ಗ್ರಂಥದಲ್ಲಿ ಉಲ್ಲೇಖಿಸಿದ ಮೊಗಲ ಸ್ತ್ರೀಯರ ಚರಿತ್ರೆಗಳಿಂದ ಅವರ ದೊಡ್ಡಸ್ತಿಕೆಯು ತಿಳಿದುಬರುತ್ತದೆ. ಮೊಗಲ ಮಹಿಳೆಯರೆಂದರೆ ಬರಿ ಪರದೆಯೊಳಗೆ ಬಚ್ಚಿಟ್ಟ ಸತ್ವಹೀನ ಜೀವಿಗಳೆಂಬ ಸಾಮಾನ್ಯರ ಕಲ್ಪನೆಯು ತಪ್ಪಾದುದಾಗಿದೆ.

ಬಹುತರವಾಗಿ ಮೊಗಲ ರಾಜಕನ್ಯೆಯರಿಗೆ ಒಳ್ಳೆ ಶಿಕ್ಷಣವು ಸಿಗುತ್ತಿತ್ತು. ಅವರು ಕುರಾಣವನ್ನು ಓದುತ್ತಿದ್ದರು. ಹಾಡು ಕಲಿಯುತ್ತಿದ್ದರು. ಆಪ್ತೇಷ್ಟರಿಗೆ ಅವರು ಪತ್ರಗಳನ್ನು ಬರೆಯುತ್ತಿದ್ದರು. 'ಶೇರ, ಗಜಲ್' ಮುಂತಾದ ಕಾವ್ಯಗಳನ್ನೂ ರಚಿಸುತ್ತಿದ್ದರು. ಕುದುರೆ ಏರುತ್ತಿದ್ದರು. ಮನೆಯಲ್ಲಿ ಕೂತು ಆಡುವ ಎಲ್ಲ ಆಟಗಳಲ್ಲಿಯೂ ಅವರು ನಿಪುಣೆಯರಾಗಿರುತ್ತಿದ್ದರು.

ಬಾಬರನ ರಾಣಿಯಾದ ಮಾಹಮ ಬೇಗಮಳು ಯಾವಾಗಲೂ ಅವನ ಸಹಚರಿಯಾಗಿರುತ್ತಿದ್ದಳು. ಬಾಬರನ ಸಂಗಡ ತುಂಬಿದ ದರಬಾರದಲ್ಲಿನ ರಾಜಾಸನದಲ್ಲಿ ಬುರುಕೆಯಿಲ್ಲದೆ ಕೂಡುತ್ತಿದ್ದಳೆಂದು ಅಬುಲ್ ಫಜಲನು ಬರೆದಿದ್ದಾನೆ. ಅವಳು ತನ್ನ ಹೆಸರಿನಿಂದ ಅನೇಕ ರಾಜಾಜ್ಞೆಗಳನ್ನೂ ಹೊರಡಿಸಿದಳು. ಹುಮಾಯೂನನ ಕಾಲದಲ್ಲಿ ಕೂಡ ಬಹುತರ ರಾಜ್ಯಕಾರಭಾರವನ್ನು ಅವಳೇ ಸಾಗಿಸುತ್ತಿದ್ದಳು.

ಬಾಬರನ ಅಜ್ಜಿಯಾದ ಎಹಸಾನ ದೌಲತ ಬೇಗಮಳೂ ಬಾಬರನಿಗೆ ರಾಜ್ಯಕಾರ್ಯದಲ್ಲಿ ಸಲಹೆಗಳನ್ನು ಕೊಡುತ್ತಿದ್ದಳು. ಬಾಬರನು ಅವಳ ವಿಷಯದಲ್ಲಿ ಹೀಗೆ ಬರೆಯುತ್ತಾನೆ: "ಸಲಹೆ ಬೇಕಾದರೆ ನನ್ನ ಅಜ್ಜಿಯನ್ನೇ ಕೇಳಬೇಕು. ಅವಳಂತಹ ಅನುಭವಯುಕ್ತ ಸಮಂಜಸ ಸಲಹೆಗಳನ್ನು ಕೊಡಬಲ್ಲ ಪುರುಷರು ಕೂಡ ವಿರಳ. ಅವಳು ಚುರುಕಬುದ್ಧಿಯವಳೂ ದೂರದೃಷ್ಟಿಯವಳೂ ಇದ್ದಳು. ಅನೇಕ 'ಪ್ರಸಂಗಗಳಲ್ಲಿ ಅವಳ ಸಲಹೆಯೇ ನನ್ನನ್ನು ಉಳಿಸಿತು.''

ಗುಲಬದನ ಎಂಬವಳು ಬಾಬರನಿಗೆ ದಿಲದಾರ ಬೇಗಮಳಿಂದ ಹುಟ್ಟಿದ ಮಗಳು. ತಂದೆ ಸಾಯುವಾಗ ಅವಳು ಏಳು ವರ್ಷದವಳಿದ್ದಳು. ಅವಳು ತನ್ನ ಅರವತ್ತುನಾಲ್ಕನೇ ವಯಸ್ಸಿನಲ್ಲಿ ಕೂಡ ತನ್ನ ಚಿಕ್ಕಂದಿನ ಎಲ್ಲ ಸಂಗತಿಗಳನ್ನು ನೆನಸಿಟ್ಟಿದ್ದಳು. ಅಕಬರನು ದಿನಾಲು ಅವಳ ಹತ್ತರ ಬಂದು "ನನಗೆ ಬಾಬರನ ಮತ್ತು ಅಜ್ಜಂದಿರ ಕಥೆ ಹೇಳು" ಎಂದು ಹಟಮಾಡುತ್ತಿದ್ದನು. ಅವನ

ಇಚ್ಛಾಪೂರ್ತಿಗಾಗಿಯೇ ಗುಲಬದನಳು "ಹುಮಾಯೂನ ನಾಮಾ" ಎಂಬ ಗ್ರಂಥವನ್ನು ಬರೆದಳು.

ನಾವಿರುವ ಭೂಮಾತೆಗೆ ವಯಸ್ಸು ಹೆಚ್ಚಾದಂತೆ ಅವಳ ತೂಕವೂ ಬೆಳೆಯುತ್ತಿದೆ. ಗಂಟೆಗೆ ಒಂದು ಪೌಂಡಿನಂತೆ ಭೂಮಿಯ ತೂಕ ಬೆಳೆಯುತ್ತಿದೆ.

ಭೂಮಾತೆಯ ತೂಕ ಬೆಳೆಯುತ್ತಿದೆ.

ಆ ತೂಕ ಬೆಳೆಸುವದಕ್ಕೆ ಭೂಮಿತಾಯಿಯು ತಿನ್ನುವ ಆಹಾರವೇನು ಬಲ್ಲಿರಾ? ಕಲ್ಲು ಮತ್ತು ಕಬ್ಬಿಣವೇ ಅವಳ ಆಹಾರ. ಅವುಗಳನ್ನು ಭೂಮಿತಾಯಿಯು ಎಲ್ಲಿಂದ ಪಡೆಯುತ್ತಾಳೆ? ಬೀಳುವ ನಕ್ಷತ್ರಗಳಿಂದ ನಕ್ಷತ್ರಗಳು ಬೀಳುತ್ತಿರುವದನ್ನು ನೀವು ನೋಡಿಲ್ಲವೆ? ಬೀಳುವಾಗ ಅವು ಬಹುಭಾಗ ಭಸ್ಮರೂಪವಾದರೂ ಅದರಲ್ಲಿ ಕಲ್ಲು-ಕಬ್ಬಿಣಗಳ ಅಂಶವಿರುತ್ತದೆ. ಈ ರೀತಿಯಲ್ಲಿ ಅಗಂಟೆಯೂ ಪೃಥ್ವಿಯ ತೂಕಕ್ಕೆ ಭಾರ ಸೇರುತ್ತಲೇ ಇದೆ.

ಬೇಸಿಗೆಬಿಸಿಲಲ್ಲಿ ಹೊರಗೆ ಹೋಗುವಾಗ ತಾಪವಾಗ ಬಾರದೆಂದು ಕೊಡೆಯನ್ನು ಹಿಡಿಯುತ್ತೇವೆ. ಆದರೂ ಸೆಕೆಯೇನೂ ತಪ್ಪುವದಿಲ್ಲ. ಮನೆಯಲ್ಲಿ ಬಿಸಿಲು ಬೀಳದ ಸ್ಥಳವಲ್ಲಿ ಕೂತಿದ್ದರೂ ಸೆಕೆ ಇದ್ದೇ ಇರುತ್ತದೆ.

ಬಿಸಿಲನ್ನು ಸೋಸಬಹುದು.

ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ಒಂದು ಹೊಸ ಮಾದರಿಯ ಕಾಜು ಸಿದ್ಧವಾಗುತ್ತಿದೆ. ಆ ಕಾಜನ್ನು ಕಿಡಿಕೆಗಳಿಗೂ ಚಪ್ಪರಗಳಿಗೂ ಹಾಕಿದರೆ, ಅದು ಸೂರ್ಯಪ್ರಕಾಶವನ್ನು ಮಾತ್ರ ಒಳಗೆ ಬಿಟ್ಟು ಬಿಸಿಯನ್ನು ಬಹುಮಟ್ಟಿಗೆ ಕಡಿಮೆಮಾಡಿ ಬಿಡುತ್ತದೆ.

ಕರ್ನಲ್ ಡೋನಾಲ್ಡ್ ರೊಕ್‌ವೆಲ್ ಎಂಬವರು ಅಮೇರಿಕೆಯ ವಾಗ್ಮಿಗಳೂ, ಸಂಪಾದಕರೂ, ಕವಿಗಳೂ, ಸಂಶೋಧಕರೂ, ವಿಜ್ಞಾನಿಗಳೂ, ಚಲಚ್ಚಿತ್ರದಲ್ಲಿ ಪರಿಶ್ರಮವುಳ್ಳವರೂ ಆಗಿದ್ದಾರೆ. ಅವರು ದೀರ್ಘವಾದ ಚಲಚ್ಚಿತ್ರಗಳ ದೋಷಗಳ ವಿಷಯಕ್ಕೆ ಈ ಮಾತುಗಳನ್ನು ಬರೆದಿದ್ದಾರೆ:—

ಚಿಕ್ಕ ಚಲಚ್ಚಿತ್ರಗಳು

ಮೂರು ಗಂಟೆಗಳ ವರೆಗೆ ಚಲಚ್ಚಿತ್ರಗಳನ್ನು ನೋಡಿ ಬೇಸತ್ತು ಹೊರಬೀಳುವ ಪ್ರೇಕ್ಷಕರನ್ನು ನಾನು ನೋಡಿದ್ದೇನೆ. ಅವರು ಮನಸ್ಸಿನಿಂದ ಅರಗಿಸಲಾರದಷ್ಟು ನೋಡಿರುತ್ತಾರೆ. ಒಂದು ಗಂಟೆಯಲ್ಲಿ ಕಂಡು ತಿಳಿದುಕೊಳ್ಳಬಲ್ಲ ಅವರ ಮನಸ್ಸಿನ ಕಸುವು ಮೀರಿದ ದೃಶ್ಯಗಳನ್ನು ಅವರ ಕಣ್ಣಿನ ಮೇಲೆ ಹೇರಲಾಗುವದು. ಚಿತ್ರಗಾ[illegible]ಕರಿಗೆ ಅನೇಕ ವರ್ಷಗಳ ತಮ್ಮ ತಪ್ಪು ಕ[illegible]ತ್ತಿದೆ. ಬಹಳವಾದರೆ ಒಂದು ಗಂಟೆಯವರೆ[illegible] ಉಲ್ಲಸಿತರಾಗಿ ವಾಕ್ಪಟಗಳನ್ನು ಅನು[illegible]ನಂತರ ಚಿತ್ರಗಳು ಎಷ್ಟೇ ಅದ್ಭುತವ[illegible] ಮನಸ್ಸು ಸಡಿಲು ಬೀಳುವದು. ಪ್ರೇಕ್ಷಕರ ಆ[illegible] ಆನಂದಕ್ಕೂ, ಬೇಸರದ ಆಕಳಿಕೆಗೂ ನಡು[illegible] ನಿರ್ಮಾಣಕರು ಲಕ್ಷಿಸಬೇಕಾದ ಒಂದು ಮಹತ್ವ[illegible]ವಿದೆ. ಈ ತೂಕ ತಪ್ಪದಂತಹ ಚಿತ್ರಗಳ [illegible]ವನ್ನು ಅಮೇರಿಕೆಯು ಚಲಚ್ಚಿತ್ರದ ವ್ಯವಸಾ[illegible] ಕಲಿತಿರುವರು. ಪ್ರೇಕ್ಷಕರು ಕೂಡ ಮ[illegible]ವೆನಿಸದ ಚಿತ್ರಗಳ ಮಹತ್ವವನ್ನು ಚನ್ನಾ[illegible]ದ್ದಾರೆ. ಆಕರ್ಷಕವಾಗಿ ಸಂಗ್ರಹಿಸಿ, [illegible] ಪ್ರದರ್ಶಿಸುವ ಶಿಕ್ಷಣಾತ್ಮಕ, ಔದ್ಯೋಗಿಕ, [illegible]ಯಕ ಲಘುಚಿತ್ರಗಳು ಪ್ರೇಕ್ಷಕರಿಗೆ ಹರ್ಷ[illegible]ಸ್ಸಿಗೆ ಬಲ, ಉತ್ಸಾಹಗಳನ್ನೂ ಕೊಡುತ್ತವೆ.

ಭಾರತದಲ್ಲಿ ಈ ವಿಷಯಕ್ಕೆ ಮತ್ತೆಲ್ಲಿಯೂ [illegible] ಅನುಕೂಲತೆಯಿದೆ. ಆದರೆ ಇಲ್ಲಿಯ ವಿಸ್ತಾರ[illegible]ಗಳನ್ನು ಯೋಜಿಸುವವರೇ ದುರ್ಲಭರೆಂದು [illegible] ಚಲಚ್ಚಿತ್ರಗಳಿಗಾಗಿ ರಮಣೀಯ, ವಿಚಿತ್ರ ಸೌಂದರ್ಯವನ್ನು ಹುಡುಕುತ್ತ ಪಂಚಖಂಡ[illegible] ಮೂಲೆಯನ್ನು ನಾನು ಸುತ್ತಿದ್ದೇನೆ. ಪ್ರತಿಯೊ[illegible]ದಲ್ಲಿಯೂ ಒಂದೊಂದು ವೈಶಿಷ್ಟ್ಯವಿದ್ದರೂ, ವ್ಯವಸಾಯಿಗಳಿಗೆ ಪ್ರಿಯವಾದ, ಉಪಯುಕ್ತ[illegible] ಸುಂದರ ದೃಶ್ಯಗಳೂ, ನೈಸರ್ಗಿಕ, ಅದ್ಭುತರ[illegible] ಪ್ರದೇಶಗಳೂ ಹಿಂದುಸ್ತಾನದಲ್ಲಿರುವಷ್ಟು [illegible] ಇಲ್ಲ. ಚಲಚ್ಚಿತ್ರ ನಿರ್ಮಾಣಕರಿಗೆ ಇಲ್ಲಿ [illegible] ನಂದನವನವಿದೆ. ಹಿಂದುಸ್ತಾನದ ಈ ಸಹಜ[illegible] ಹಾಲಿವುಡ್ಡಿನವರಿಗೆ ಕೂಡ ಮತ್ಸರವನ್ನು [illegible] ಬಹುದು. ಮಿಕ್ಕೆಲ್ಲ ದೇಶಗಳಿಗಿಂತ ಲಘುಚ[illegible] ಭಾರತವು ಉತ್ಕೃಷ್ಟ ಅನುಕೂಲ ಪ್ರದೇಶ[illegible] ಇಲ್ಲಿ ಇನ್ನೂ ಏಳು ತಿಂಗಳವರೆಗಿದ್ದು ಸಂಶೋ[illegible] ಬೇಕೆಂದು ನನ್ನ ಬಯಕೆ.

ನಾವೀಗ ದಿನವೂ ಉಪಯೋಗಿಸುತ್ತಿರುವ [illegible] ಕರಣೆ ಯಂತ್ರ, ವಾಹನಗಳು ತೀರ ನಿನ್ನೆ [illegible] ಎಂಬ ಮಾತು ನಮ್ಮಲ್ಲಿ ಅನೇಕರಿಗೆ

ಈಗ ಮೋಟರು, ಟ್ರಾಮುಗಳಿಂದ ತುಂಬಿದ ಮಾರ್ಗದಲ್ಲಿ ನಾವು ನಿರ್ಭೀತರಾಗಿ ಓಡಾಡುತ್ತೇವೆ. ೧೮೪೮ರಲ್ಲಿ ಮಕ್ಕಳ ಗಾಡಿಗಳು ಹುಟ್ಟಿದಾಗ ದಾರಿಕಾರರಿಗೆ ತೊಂದರೆಯಾಗಬಹುದೆಂದು ಜನರು ಅಂಜುತ್ತಿದ್ದರು. ೧೮೯೦ರ ಪೂರ್ವದಲ್ಲಿ ಸಿದ್ಧವಾದ ಫಳಾರದ ಸಾಮಾನುಗಳು ಇರುತ್ತಿದ್ದಿಲ್ಲ. ೧೮೭೦ರ ಪೂರ್ವದಲ್ಲಿ ಹುಡುಗರು ಚಾಕುವಿನಿಂದ ಕೈ ಹೆಚ್ಚಿಕೊಂಡರೆ ಒಳ್ಳೆ ಬ್ಯಾಂಡೇಜುಗಳಿರಲಿಲ್ಲ. ೧೮೬೬ರ ಪೂರ್ವದಲ್ಲಿ ಸೈಕಲುಗಳಿಲ್ಲಿಲ್ಲ ೧೮೯೨ರ ಪೂರ್ವದಲ್ಲಿ ಒಳ್ಳೆ ಮೋಟರು-ಗಾಯಕಲ್ಲುಗಳ ಟಾಯರುಗಳಿರಲಿಲ್ಲ. ೧೯೦೩ರ ವರೆಗೆ ಕೇವಲ ೫೧ ಸೇಫ್ಟಿರೇಜರ ಬ್ಲೇಡುಗಳು ಮಾರಲ್ಪಟ್ಟವು. ೧೮೮೪ರಲ್ಲಿ ಫೌಂಟನ್‌ಪೆನ್ನುಗಳು ಹುಟ್ಟಿದರೂ ೧೮೮೮ರ ವರೆಗೆ ಅವುಗಳು ಈಗಿನಂತೆ ಅನುಕೂಲವಾಗಿರಲಿಲ್ಲ. ೧೮೯೬ರ ಪೂರ್ವದಲ್ಲಿ ಬೆಂಕಿಪೆಟ್ಟಿಗೆಗಳಿರಲಿಲ್ಲ. ನವ ನಾಗರಿಕತೆಯು ಇನ್ನೂ ಚಿಕ್ಕ ಮಗು.

ನವ ನಾಗರಿಕತೆಯ ವಯಸ್ಸು

ದೊಡ್ಡ ತಲೆಯಿದ್ದವರು ಬುದ್ಧಿವಂತರೇ?

ಸಾಮಾನ್ಯವಾಗಿ ದೊಡ್ಡ ತಲೆಯಿದ್ದವರನ್ನು ನೋಡಿ ನಾವು, ಬುದ್ಧಿವಂತರಿರಬೇಕು ಎಂದು ಊಹಿಸುವ ರೂಢಿಯಿದೆ. ಆದರೆ ದೊಡ್ಡ ತಲೆಯಲ್ಲಿ ಮಿದುಳೂ ದೊಡ್ಡದಾಗಿರುವದಿಲ್ಲ. ದೊಡ್ಡ ಮಿದುಳಿದ್ದ ಮಾತ್ರಕ್ಕೆ ದೊಡ್ಡ ಬುದ್ಧಿವಂತರೆನ್ನಲಿಕ್ಕೂ ಬರುವಂತಿಲ್ಲ. ಶಿಕ್ಷಣವೂ, ಬುದ್ಧಿವಂತಿಕೆಯೂ ಸರಿತೂಗುವದಿಲ್ಲ. ಒಬ್ಬನ ಬುದ್ಧಿ ಬಹು ಚುರುಕಾಗಿರಬಹುದು; ಅವನಿಗೆ ಶಿಕ್ಷಣವೇ ಸಿಕ್ಕಿರಲಿಕ್ಕಿಲ್ಲ. ಸಿಕ್ಕ ಶಿಕ್ಷಣದ ಉಪಯೋಗವಾಗಬೇಕಾದರೆ ಒಳಗಿನ ಮಿದುಳು ಚನ್ನಾಗಿರಬೇಕು. ಒಬ್ಬನಿಗೆ ಸಾಧಾರಣ ಸ್ವಯಂಕಲ್ಪನಾ ಶಕ್ತಿಯೇಕಿರಬೇಕು? ಮತ್ತೊಬ್ಬನಿಗೆ ತೀರ ಸಾಮಾನ್ಯ ಬುದ್ಧಿಯೇಕೆ? ಇದಕ್ಕೆ ಈವರೆಗೆ ವೈಜ್ಞಾನಿಕ ಉತ್ತರ ಸಿಕ್ಕಿರಲಿಲ್ಲ. ಪ್ರೊ. ಹೆನ್ರಿ ಡೊನಾಲ್ಡಸನ್ನರು ಅದಕ್ಕೆ ಈಗ ಉತ್ತರವನ್ನು ಶೋಧಿಸಿದ್ದಾರೆ. ಅವರೆನ್ನುತ್ತಾರೆ "ಸಾಮಾನ್ಯವಾಗಿ ಮಿದುಳಿನ ಚಾಲಕಶಕ್ತಿಯು ರಕ್ತದಲ್ಲಿದೆ. ದೇಹದೊಳಗಿನ ಸ್ನಾಯುಗಳು ಚನ್ನಾಗಿ ಕಾರ್ಯಸಮರ್ಥವಾಗಬೇಕಾದ್ದರೆ ಅವುಗಳಿಗೆ ಬೇಕಷ್ಟು ರಕ್ತದ ಪೂರೈಕೆಯಾಗಬೇಕು. ಮಿದುಳಿನ ಚಟುವಟಿಕೆಗೂ ಸಾಕಷ್ಟು ರಕ್ತದ ಪೂರೈಕೆಯಾಗಬೇಕು." ಇವರ ಮೇಲಿಂದ ಯಾರ ದೇಹವ್ಯವಸ್ಥೆಯಲ್ಲಿ ಮಿದುಳಿಗೆ ಸಾಕಷ್ಟು ರಕ್ತದ ಪೂರೈಕೆಯಾಗುವದೋ ಅವರು ಹೆಚ್ಚು ಚುರುಕು ಬುದ್ಧಿಯವರಾಗುವರೆಂದು ಈಗ ಸಿರ್ಧರವಾಗಿದೆ.

ತುರ್ಕಸ್ಥಾನದಲ್ಲಿ ಸ್ತ್ರೀಸೈನ್ಯ

ತುರ್ಕಸ್ಥಾನದಲ್ಲಿಯ ಕ್ರಾಂತಿಯು ದಿನೇ ದಿನೇ ಜಗವನ್ನು ಅಚ್ಚರಿಗೊಳಿಸುತ್ತ ನಡೆದಿದೆ. ಅಲ್ಲಿ ಈಗ ಸ್ತ್ರೀಯರಿಗೆ ಒತ್ತಾಯದ ಸೈನಿಕ ಶಿಕ್ಷಣವು ಕೊಡಲ್ಪಡುತ್ತಿದೆ. ಶೀಘ್ರದಲ್ಲಿಯೆ ಅಲ್ಲಿ ೬ ಲಕ್ಷ ಸ್ತ್ರೀಯರು ಯುದ್ಧದ ಕರ್ತವ್ಯಗಳಿಗೆ ಸಿದ್ಧರಾಗುವರು. ಈವರೆಗೆ ಪರದೆಯ ಹಿಂದೆ ಕೊಳೆಯುತ್ತಿದ್ದ ತುರ್ಕಿಸ್ತ್ರೀಯು ಒಮ್ಮೆಲೆ ಇಷ್ಟು ಮುಂದೆ ಹಾರಿದುದು, ಕೆಮಾಲ ಅತತುರ್ಕನ ಪ್ರಭಾವವನ್ನು ಸೂಚಿಸುತ್ತದೆ.

ಜಪಾನದಲ್ಲಿಯ ಸಿನೇಮಾ ಥಿಯೇಟರು

ಜಪಾನದಲ್ಲಿ ೧೬೨೭ ಸಿನೇಮಾಗೃಹಗಳಿವೆ. ಪ್ರತಿಯೊಂದು ಗೃಹದಲ್ಲಿಯೂ ಒಬ್ಬ ಚಿತ್ರವಿವೇಚಕನಿರುವನು. ಪರದೆಯ ಮೇಲೆ ಚಿತ್ರಗಳು ಮೂಡುತ್ತ ಹೋದಹಾಗೆ ಅದರ ಅರ್ಥ ಸನ್ನಿವೇಶಗಳನ್ನು ತನ್ನ ನಾಟಕೀಯ ಹಾವಭಾವಗಳಿಂದ, ಸ್ಪಷ್ಟ ಮಾತುಗಳಿಂದ ಪ್ರೇಕ್ಷಕರಿಗೆ ತಿಳಿಸಿ ಹೇಳುವದು ಅವನ ಕರ್ತವ್ಯ. ಆ ಕೆಲಸವು ಕಠಿನವಾದುದಿರುತ್ತದೆ. ಆದುದರಿಂದ ಚಿತ್ರದಲ್ಲಿ ಅಭಿನಯಿಸುವವರಿಗಿಂತ ಚಿತ್ರವಿವೇಚಕನಿಗೆ ಜನರು ಹೆಚ್ಚು ಮಹತ್ವ ಕೊಡುತ್ತಾರೆ. ಅವನಿಗೆ ಸಂಬಳವೂ ಬಹಳ ಇರುತ್ತದೆ.

ವಾಕ್ಚಿತ್ರಗಳು ಪ್ರಾರಂಭವಾದಾಗಿನಿಂದ ಚಿತ್ರವಿವೇಚಕನ ಕೆಲಸವು ಮುಗಿಯಿತೆಂದು ಕೆಲವರು ತಿಳಿದಿದ್ದರು. ಆದರೆ ಜನರು ಇನ್ನೂ ಅವನನ್ನು ಅಪೇಕ್ಷಿಸುತ್ತಾರೆ. ಇದರಿಂದ ಜಪಾನಿ ವಾಕ್ಚಿತ್ರಗೃಹಗಳೆಂದರೆ ಹಿಂನೆಲದ ಸಂಗೀತ, ಹೆಂಗಸರ ಅನುನಾಸಿಕ ಉಚ್ಚಾರಗಳು, ಗುಂಪು ಗದ್ದಲದ ಪ್ರತಿಧ್ವನಿ, ಇದರ ಸಂಗಡ ಚಿತ್ರವಿವೇಚಕನ ಉಚ್ಚಸ್ವರದ ಸಂಭಾಷಣೆ ಇವೆಲ್ಲ ಕೂಡಿ ಒಂದು ದೊಡ್ಡ ಸಂತೆಯಂತೆ ಅನಿಸುತ್ತದೆ.

ನೀವು ಕೆಲವರನ್ನುವದನ್ನು ಕೇಳಿರಬಹುದು "ಆಕೆ ಅಷ್ಟೇನೂ ಸುಂದರಳಲ್ಲ; ಆದರೂ ಅವಳಲ್ಲಿ ಏನೋ ಒಂದು ಆಕರ್ಷಣವಿದೆ."

ಆಕರ್ಷಕತೆ ಎಲ್ಲಿದೆ?

ಹತ್ತು ಸಾವಿರ ಜನರು ಎಲ್ಲಿಯಾದರೂ ಒಂದೆಡೆಗೆ ಆಕರ್ಷಣವನ್ನು ಕಂಡರೆ, ಪ್ರತಿಯೊಬ್ಬರೂ

ಆಕರ್ಷಣೆಯ ವ್ಯಾಖ್ಯೆಯನ್ನು ಬೇರೆ ಬೇರೆಯಾಗಿಯೇ ಮಾಡಬಹುದು.

ತರುಣರ ಗುಂಪಿನ ನಡುವೆ ಕುರ್ಚಿಯಲ್ಲಿ ಕುಳಿತ ಬಿಳಿ ಗೂದಲಿನ ಮುದುಕಿಯು ಆಕರ್ಷಕಳಾಗಬಹುದು.

ಚಿಕ್ಕ ಮಕ್ಕಳಲ್ಲಿ ಸಹಜವಾದ ಒಂದು ಆಕರ್ಷಣವಿದೆ. ತೀರ ಸಾದಾ ಅರಿವೆಗಳನ್ನು ತೊಟ್ಟ ಅಲಂಕಾರವಿಲ್ಲದ ಹುಡುಗಿಯೂ ಚಂದಕಾಣಬಹುದು. ಬೇರೆ ಊರಿಗೆ ಹೋದಾಗ ನಿಮ್ಮ ನೆಂಟರ ಮನೆಯ ಯಜಮಾನಿಯು, ನಿಮಗೆ ವಾತ್ಸಲ್ಯದಿಂದ ಉಪಚಾರ ಮಾಡಿದರೆ ಅವಳೆಷ್ಟು ಆಕರ್ಷಕಳಾಗಿ ಕಾಣಬಹುದು.

ಅಪರಿಚಿತರೊಡನೆ ಒಮ್ಮೆಲೆ ಕಲೆತು ತಮ್ಮವರನ್ನಾಗಿ ಮಾಡಿಕೊಳ್ಳಬಲ್ಲ ಸ್ತ್ರೀಪುರುಷರು ಆಕರ್ಷಕರೆಂದು ನಮ್ಮ ಅಭಿಪ್ರಾಯ.

ವಯಸ್ಸು ಸೌಂದರ್ಯಗಳಿಗಿಂತ ಸಹಾನುಭೂತಿಪರ ಸ್ವಭಾವದ ಹೆಂಗಸೇ ನನಗೆ ಹೆಚ್ಚು ಆಕರ್ಷಕಳಾಗಿ ಕಾಣುವಳೆಂದು ಮೊನ್ನೆ ಒಬ್ಬರೆಂದರು.

ಆಕರ್ಷಣವಿಲ್ಲದ ಸೊಬಗು ಸುಗಂಧವಿಲ್ಲದ ಹೂವಿನಂತೆ.

ನಾಲ್ವತ್ತು ವರ್ಷವಾಗಿದೆಯೋ ನಿಮಗೆ?

ಅಮೆರಿಕೆಯ ಅರ್ಥಶಾಸ್ತ್ರದ ಪ್ರೊಫೆಸರರೊಬ್ಬರು ಹೀಗೆ ಅಂದರು "ಗುಂಪುಗೂಡಿ ಯಾಂತ್ರಿಕವಾಗಿ ಬಹಳ ಮಾಲನ್ನು ತಯಾರಿಸುವದರಿಂದ ಕೆಲಸಗಾರರು ಬೇಗ ಮುದುಕರಾಗುತ್ತಾರೆ. ಆದರಿಂದ ಅವರು ಬೇಗ ಕೆಲಸದಿಂದ ನಿವೃತ್ತರಾಗಬೇಕಾತ್ತದೆ."

ಅದನ್ನು ಕೇಳಿದ ಕ್ರೈಷ್ಟಿಯನ ಸಾಯಿನ್ಸ ಮೊನಿಟರನು ಹೆನ್ರೀ ಫೋರ್ಡರ ಆಫೀಸಿಗೆ ನಿಜಸಂಗತಿಯನ್ನು ತಿಳಿಯಲಿಕ್ಕೆಂದು ಒಬ್ಬ ಪ್ರತಿನಿಧಿಯನ್ನು ಕಳಿಸಿದನು. ಅವನಿಗೆ ಕಂಡುಬಂದುದೇನೆಂದರೆ:—

ಫೋರ್ಡ ಫ್ಯಾಕ್ಟರಿಯ ಒಟ್ಟು ಕೆಲಸಗಾರರು			೧೨೩೫೬೨
೪೦	ವರ್ಷಕ್ಕೆ	ಮೇಲ್ಪಟ್ಟವರು	೪೭೧೫೬
೪೫	,,	,,	೨೮೫೭೬
೫೫	,,	,,	೬೩೭೭
೭೦	,,	,,	೧೯೮

ಇಬ್ಬರು ಮಾತ್ರ ೮೪ ವರ್ಷದವರಿದ್ದರು.

ಪುಸ್ತಕದಲ್ಲಿ ನಾವು ಏನನ್ನು ಓದುತ್ತೇವೆ? ಅಕ್ಷರಗಳನ್ನು ಎಂದು ಯಾರಾದರೂ ಉತ್ತರಿಸಬಹುದು. ಆ...

ಜಾಣರ ಹುಚ್ಚುಚ್ಚ ಮಾತುಗಳು!

ಯೋಚಿಸಿದರೆ ನಾ... ರುವದು ಅಕ್ಷರಗಳ... ಕಾಗದವನ್ನು ಎಂ... ತ್ತದೆ. ಅಕ್ಷರಗಳ... ದಾಗಿರುವದರಿಂದ ನಮಗೆ ಕಾಣುವದು ... ವಸ್ತುಗಳು ಕಾಣಬೇಕಾದರೆ, ಆ ವಸ್ತುವಿ... ಕಿರಣಗಳು ಪ್ರತಿಬಿಂಬಿಸಿ ನಮ್ಮ ಕಂಣಿಗೆ ... ಬೇಕು. ಕರಿವಸ್ತುವಿನಲ್ಲಿ ಪ್ರಕಾಶವು ಪ್ರತಿ... ವಾದುದರಿಂದ ಅದು ನಮ್ಮ ಕಂಣಿಗೆ ಕಾ... ಆದರೆ ಕರಿವಸ್ತುವಿನ ಹಿಂದಿರುವ, ಪ್ರತಿ... ಬಿಂಬಿಸಬಲ್ಲ ವಸ್ತುವಿನ ಸಹಾಯದಿಂದ ನಾ... ವಿನ ಕಲ್ಪನೆಗೆ ಮುಟ್ಟುವೆವು. ಅದೇ ... ದಲ್ಲಿಯ ಅಕ್ಷರಗಳ ಸುತ್ತಲಿನ ಬಿಳಿಕಾ... ದಿಂದಲೇ ನಮಗೆ ಕರಿ ಅಕ್ಷರಗಳ ಕಲ್ಪ... ಅಕ್ಷರಗಳನ್ನೇ ನಾವು ನೋಡಬಲ್ಲೆವಾದರೆ ... ಮೇಲೆ ಮುದ್ರಿಸಿದ ಅಕ್ಷರಗಳನ್ನು ಓದಲು ... ರಾಗಬೇಕಿತ್ತು.

ವಾಡಿಕೆಯಾಗಿ ಯುರೋಪಿಯನ್ನರು ... ಜನರೆಂದು ಕರೆದುಕೊಳ್ಳುವರು. ಭಾ...

ಕರಿಜನರಾರು? ಬಿಳಿಜನರಾರು?

ಆಫ್ರಿಕದ ಜನತೆಯ... ವೆಂದು ಎಲ್ಲಿ ಹೋ... ತ್ಯರು ತುಚ್ಛೀಕರಿ... ದಿನವೂ ನಾವು ಕೇಳು... ಜನರು ನಮ್ಮನ್ನು ಬಂಣದ ಜನರು (Colo... ಎಂದು ಕರೆಯುವರು. ಆದರೆ ಬಂಣವು ... ಬಿಳಿಜನರಿಗಿದೆಯೋ ಎಂಬುದನ್ನು ಯೋ... ಜನರೇ ಬಂಣವಿದ್ದವರು, ಕರಿಜನರಿಗೆ ಬಂಣ... ಸ್ಪಷ್ಟವಾಗುವದು. ಏಕೆಂದರೆ ಹಿಂದೆ ಅಕ್ಷ... ವಿವೇಚನೆಯಲ್ಲಿ ಕರಿವಸ್ತುವು ಕಂಣಿಗೆ ಕಾ... ಮತ್ತು ಬಿಳಿಬಂಣವು ಅನೇಕ ಬಂಣಗ... ದಿಂದಾಗುತ್ತದೆ ಎಂಬ ಮಾತು ಈಗ ಎಲ್ಲ... ಆದ್ದರಿಂದ ಬಿಳಿಯರೆಲ್ಲ ಅನೇಕ ಬಂಣಗ... ವಿದ್ದವರು. ಕರಿಯರೆಲ್ಲ ಬಂಣವಿಲ್ಲದವರು... ವಾಗುವದಿಲ್ಲವೇ?

ಇಂಗ್ಲಂಡಿನಲ್ಲಿ ಒಂದು ವಾರಕ್ಕೆ ...

ಸಾಯುತ್ತಾರೆ. ಪ್ರತಿಯೊಬ್ಬ ಮೃತನ ಸ್ಮಶಾನ ಕ್ರಿಯೆಗೆ ಸರಾಸರಿ ೫೦ ಪೌಂಡು ವೆಚ್ಚವಾಗುತ್ತದೆ. ಅಂದರೆ ವಾರಕ್ಕೆ ೫ ಲಕ್ಷ ಪೌಂಡು ಸ್ಮಶಾನಕ್ರಿಯೆಗೆ ವೆಚ್ಚವಾಗುತ್ತದೆ. ಅಷ್ಟು ಹಣವು ಎಷ್ಟು ಉದ್ಯೋಗಗಳಲ್ಲಿ ಹಂಚಿಹೋಗುತ್ತದೆ ಬಲ್ಲಿರಾ? ಸತ್ತವರ ಆಸ್ತಿಯ ಮೇಲೆ ಮರಣಕರ ವಸೂಲಿಗಾಗಿ ೨೫೦ ಜನರುಳ್ಳ ಆಫೀಸಿಗೆ ೧|| ಲಕ್ಷ ಪೌಂಡು ಮುಟ್ಟುತ್ತದೆ. ಸತ್ತವರ ಮರಣ ಸರ್ಟಿಫಿಕೇಟಿಗೆ ೧ ಪೆನಿಯಂತೆ ಅದೆಷ್ಟೋ ಪೌಂಡಾಗುವದು. ಮೃತರ ಸ್ಮಶಾನ ಕ್ರಿಯೆಯನ್ನು ವ್ಯವಸ್ಥಿತವಾಗಿ ನೆರವೇರಿಸಲು ಕಂಪನಿಗಳಿವೆ. ಸತ್ತವರು ಇನ್ಶ್ಯುರನ್ಸ ಮಾಡಿಸಿದ್ದರೆ ಅವರ ಸಂಬಂಧಿಕರಿಗೆ ಕೊಡಬೇಕಾದ ಹಣದ ಲೆಕ್ಕಕ್ಕಾಗಿ ಲಂಡನಿನ ೩೪೨ ವಿಮಾಕಂಪನಿಗಳ ೫೦೦೦೦ ಜನರು ದುಡಿಯಬೇಕು. ಅಂತೂ ಜನರು ಸಾಯುವವರಿಂದಲೂ ಅನೇಕ ಉದ್ಯೋಗಗಳು ನಡೆಯುತ್ತವೆ!

ಸಾವೂ ಒಂದು ದೊಡ್ಡ ಉದ್ಯೋಗವೇ!

ಮದ್ಯದಿಂದ ತಾತ್ಪೂರ್ತಿಕವಾಗಿ ಆಗುವ ದೈಹಿಕ ಮಾನಸಿಕ ಅನವಸ್ಥೆಗಳಲ್ಲದೆ. ಮದ್ಯವನ್ನು ಕುಡಿಯುವವರ ಆಯುರ್ಮರ್ಯಾದೆಯೂ ಕಡಿಮೆಯಾಗುವದು. ಮದ್ಯವನ್ನು ಮಿತವಾಗಿ ಸೇವಿಸುವವರ ಆಯುಷ್ಯವು ಕೂಡ ೪ ವರ್ಷಗಳಷ್ಟು ಕಡಿಮೆಯಾಗುವದು. ಹೆಚ್ಚಾಗಿ ಮದ್ಯಸೇವಿಸುವವರ ಆಯುಷ್ಯವು ಆರೂವರೆ ವರ್ಷಗಳಷ್ಟು ಕಡಿಮೆಯಾಗುವದು. ಆಯುಸ್ಸು ಕಡಿಮೆಯಾದರಾಗಲಿ; ಇದ್ದ ಆಯುಸ್ಸೇ ಸುಖಕರವಾಗಿರುವದೇ? ಇಲ್ಲ. ಮದ್ಯಸೇವನೆ ಮಾಡದಿರುವವರಿಗಿಂತ, ಮದ್ಯಪಾಯಿಗಳು ಮೂರು ಪಾಲು ಹೆಚ್ಚಾಗಿ ಕಾಯಿಲೆಗಳಿಗೆ ಗುರಿಯಾಗುತ್ತಾರೆ. ಅಲ್ಲದೆ ಕುಡುಕರಿಗೆ ಬರುವ ಬೇನೆಗಳು ನಿರ್ವ್ಯಸನಿಗಳಿಗಿಂತ ಎರಡೂವರೆ ಪಾಲು ಹೆಚ್ಚು ದೀರ್ಘವಾಗಿ ಕಾಡುತ್ತವೆ.

ಕುಡುಕರ ಆಯುರ್ಮಾನ

ಕತ್ತೆಯ ಹಾಲನ್ನು ಔಷಧಕ್ಕಾಗಿ ಮತ್ತು ಮಕ್ಕಳ ಆಹಾರಕ್ಕಾಗಿ ಹಿಂದುಸ್ಥಾನದಲ್ಲಿ ಪುರಾತನ ಕಾಲದಿಂದ ಉಪಯೋಗಿಸುತ್ತ ಬಂದಿದ್ದಾರೆ. ಕತ್ತೆಯ ಹಾಲಿನಲ್ಲಿ ಪಚನಶಕ್ತಿಯನ್ನು ಹೆಚ್ಚಿಸುವ ಗುಣವಿದೆ. ಅಲ್ಲದೆ ಮಿಕ್ಕ ಹಾಲುಗಳಿಗಿಂತ ಅದು ಬೇಗ ಪಚನವಾಗುತ್ತದೆ. ಆಕಳ ಹಾಲಿನ ಪಚನಕ್ಕೆ ಬೇಕಾಗುವ ಅವಧಿಯ ೧|| ಪಾಲು ಕಡಿಮೆ ಸಮಯವು ಕತ್ತೆಯ ಹಾಲಿನ ಪಚನಕ್ಕೆ ಸಾಕು. ಅನೇಕ ವಿದೇಶಗಳಲ್ಲಿ ಅಶಕ್ತರ ಮತ್ತು ಮಕ್ಕಳ ಆಹಾರಕ್ಕಾಗಿ ಕತ್ತೆಯ ಹಾಲನ್ನು ಉಪಯೋಗಿಸುತ್ತಿದ್ದಾರೆ.

ಕತ್ತೆಯ ಹಾಲು

ಯುದ್ಧ, ಬೊಂಬೆ, ಮುಷ್ಕರ, ಬಡಿದಾಟ ಮೊದಲಾದ ಗಂಡಾಂತರದ ಪ್ರಸಂಗಗಳಲ್ಲಿಯೂ ಫೋಟೋಗ್ರಾಫರನು ಸುರಕ್ಷಿತವಾಗಿದ್ದು, ನಿಶ್ಚಿಂತವಾಗಿ ಫೋಟೋ ತೆಗೆಯುವ ಯೋಜನೆಯಿದು. ಈ ಛಾಯಾಚಿತ್ರಕಾರನು ವಿಷವಾಯುಪ್ರತಿಬಂಧಕ ಮುಖವಾಡವನ್ನು ಧರಿಸಿರುವನಲ್ಲದೆ, ಸಂಪೂರ್ಣ ಸೈನಿಕ ವೇಷದಿಂದ ಸುಸಜ್ಜಿತನಾಗಿದ್ದಾನೆ. ಅವನ ಕ್ಯಾಮೆರಾ ಕೂಡ ವಿಶಿಷ್ಟ ಪದ್ಧತಿಯದೂ ಅತಿ ಭದ್ರವಾದುದೂ ಇದೆ.

ಯುದ್ಧಭೂಮಿಯಲ್ಲಿಯೂ ಫೋಟೋ ತೆಗೆಯಬಹುದು.



ಸಂಚಯ

ಕಾಫೀ !!!

ಕಾಫಿಯಿಂದ ಹುರುಪುಗೊಳ್ಳುವವನು ಮನುಷ್ಯನಷ್ಟೆ ಅಲ್ಲ. ಕಾಫಿಯ ಎಲೆಗಳನ್ನು ತಿಂದ ಆನೆಗಳೂ ಆಳಿಲುಗಳೂ ಹೆಚ್ಚು ಹುರುಪುಗೊಳ್ಳುತ್ತವೆ; ಹಕ್ಕಿಗಳು ಹಾಡುತ್ತವೆ; ಮಂಗಗಳು ಕಾಫೀ ಬೀಜಗಳನ್ನು ತಿಂದು ಉತ್ಸಾಹಿಗಳಾಗುವವು.

* * *

ಹಾವಿನ ಹೆಡೆ!

ಗಾನದಿಂದ ಹಾವು ಹೆಡೆತೆಗೆದು ಒಲೆದಾಡುವದೆಂದು ನಾವನ್ನುವೆವು. ಆದರೆ ಹಾವುಗಳು ಕಿವುಡಾಗಿರುತ್ತವೆ! ಅವು ತಲೆದೂಗುವದು ಶಬ್ದತರಂಗಗಳ ಸ್ಪರ್ಶದಿಂದ !!

* * *

ಮಿಠಾಯಿ !!

ಇಂಗ್ಲಂಡಿನಲ್ಲಿ ಪ್ರತಿ ಸೆಕಂಡಿಗೆ ೩೫ ಶಿಲಿಂಗಿನ ಮಿಠಾಯಿ ಖರ್ಚಾಗುತ್ತದೆ! ಒಟ್ಟು ವರ್ಷದಲ್ಲಿ ೫|| ಕೋಟಿ ಪೌಂಡುಗಳ ಮಿಠಾಯಿ !!

* * *

ಬೂಟಿಗೆ ಮುದ್ದು !!

ಪರ್ಶಿಯದ ಕೆಲವು ಪ್ರದೇಶಗಳಲ್ಲಿ ಒಬ್ಬ ಹೊಸ ಸ್ತ್ರೀಯ ಪರಿಚಯವಾದ ಕೂಡಲೆ, ಪುರುಷನು ಮೊಣಕಾಲೂರಿ ಅವಳ ಬೂಟಿಗೆ ಮುದ್ದು ಕೊಡುವ ಪದ್ಧತಿಯಿದೆ!

* * *

ನಾಲಿಗೆಯ ನಮಸ್ಕಾರ !!

ತಿಬೇಟದಲ್ಲಿ ಒಬ್ಬರಿಂಗೊಬ್ಬರು ಬೆಟ್ಟಿಯಾದಾಗ ನಾಲಿಗೆಯನ್ನು ಹೊರಗೆ ಚಾಚಿ ಸತ್ಕರಿಸುತ್ತಾರೆ!!

* * *

ಸಂಘದೇವ!!

ಅಮೆರಿಕೆಯಲ್ಲಿ ಪ್ರತಿ ಹತ್ತು ಜನರಲ್ಲಿ ಒಬ್ಬನು ಯಾವದಾದರೊಂದು ಸಂಘಕ್ಕೆ ಸದಸ್ಯನಾಗಿರುವನು. ಗ್ರೇಟಬ್ರಿಟನ್ನಿನಲ್ಲಿ ನಾಲ್ವರಲ್ಲಿ ಒಬ್ಬನಂತೆ ಅದರ ಪ್ರಮಾಣವಿದೆ!

* * *

ಹೃದಯರೋಗ!

ಹೆಂಗಸರಿಗಿಂತ ಗಂಡಸರಲ್ಲಿ ಹೃದಯರೋಗ ಹೆಚ್ಚು; ಮಕ್ಕಳಿಗಿಂತ ಜ್ಯೂಜನರಲ್ಲಿ ಹೆಚ್ಚು; ... ಗಳಿಗಿಂತ ಬಿಳಿಜನರಲ್ಲಿ ಹೆಚ್ಚು; ಕೂಲಿಕಾರರಿಗಿಂತ ... ಗಳಲ್ಲಿ ಹೆಚ್ಚು.

* *

ಗಿಡಗಳಿಗೆ ಜ್ವರ !!

ಗಿಡಗಳಲ್ಲಿ ಗ್ರೀಷ್ಮಋತುವಿನಲ್ಲಿ ಆರವತ್ತು ... ತೆಯು ಇರುತ್ತದೆ. ಅದು ಆರೋಗ್ಯದಲ್ಲಿ ... ಯಲ್ಲಿ ೧೦೦ ಡಿಗ್ರಿ ಬಿಸಿಯಿದ್ದರೂ ಗಿಡಗಳ ... ವದಿಲ್ಲ. ಆದರೆ ಕೆಲವು ಗಿಡಗಳ ರೋಗಗಳಲ್ಲಿ ... ವರೆಗೆ ಜ್ವರವೇರುವದು !!



ಕರ್ನಾಟಕ ದರ್ಶನ: 'ಮಿಂಚಿನ ಬಳ್ಳಿ'ಯ ಮೊದಲ ನೆಯ ಕುಡಿ. ಸಂಪಾದಕರು ಶ್ರೀ. ಬುರ್ಲಿ ಬಿಂದುಮಾಧವರು, ಧಾರವಾಡ. ಪುಟ ಕ್ರಾ. ೩. ೧೯೦. ಬೆಲೆ ೧ ರೂ.

ಈ ಪುಸ್ತಕದಲ್ಲಿ ಕರ್ನಾಟಕಕ್ಕೆ ಸಂಬಧಿಸಿದ ಹತ್ತು ಲೇಖನಗಳಿವೆ. ಅವುಗಳನ್ನು ಬರೆದವರಲ್ಲಿ ಹೆಚ್ಚು ಜನರು ನುರಿತ ಲೇಖಕರಾಗಿದ್ದು ಕನ್ನಡದ ಸಾಹಿತ್ಯ, ರಾಜಕೀಯ ಕ್ಷೇತ್ರಗಳಲ್ಲಿ ಹೆಸರುಹೊಂದಿದವರಾಗಿದ್ದಾರೆ. ಇಂತಹರ ವಿವಿಧ ಲೇಖನಗಳನ್ನೊಳಗೊಂಡ ಕರ್ನಾಟಕ ದರ್ಶನವು ಒಂದು ಹುರುಳುಳ್ಳ ಗ್ರಂಥವೆಂದು ಬೇರೆ ಹೇಳಬೇಕಾಗಿಲ್ಲ.

ಬೇರೆಬೇರೆ ಯಾಗಿರುವ ಹತ್ತು ಲೇಖನಗಳ ಗುಣ ದೋಷಗಳ ವಿಸ್ತೃತಚರ್ಚೆ ಇಲ್ಲಿ ಸಾಧ್ಯವಲ್ಲವಾದರೂ ಅವುಗಳ ವೈಶಿಷ್ಟ್ಯಗಳನ್ನು ಇಲ್ಲಿ ಸೂಚಿಸಬೇಕಾಗಿದೆ. ಗ್ರಂಥವು ಇಂದಿನ ಕನ್ನಡ ಹಿರಿಯರಲ್ಲಿ ಹಿರಿಯರಾದ ಶ್ರೀ. ಆಲೂರ ವೆಂಕಟರಾಯರ ಲೇಖನದಿಂದ ಮೊದಲಾಗಿದೆ. ಈಗ ಸುಮಾರು ೨೦ ವರುಷಗಳ ಹಿಂದೆ ಕನ್ನಡರನ್ನು ಎಚ್ಚರಿಸುವದಕ್ಕಾಗಿ 'ಕರ್ನಾಟಕಾಂತರ್ಗತ ಭಾರತ ಮಾತೆಗೆ ನಮಸ್ಕಾರ' ಎಂದು ಸೂತ್ರರೂಪವಾಗಿ ಹೇಳಿದ ಮಾತನ್ನೇ ಮತ್ತೆ ವೆಂಕಟರಾಯರು ಇಂದು ವಿಶದವಾಗಿ ಹೇಳಿದ್ದಾರೆ. ಈ ಸೂತ್ರದಲ್ಲಿಯ ವೇದಾಂತದ ಪರಿಭಾಷೆಯನ್ನು ಬಿಟ್ಟುಗೊಟ್ಟು ಅರ್ಥವನ್ನು ಅವರ ಭಾಷೆಯಲ್ಲಿಯೇ ಹೀಗೆ ಹೇಳಬಹುದು:— "ಭರತಖಂಡದ ಉದ್ಧಾರಕ್ಕೆ ಕರ್ನಾಟಕವು ಜೀವದಿಂದ ಉಳಿಯುವದು ಅವಶ್ಯವಿರುತ್ತದೆ........ಕರ್ನಾಟಕ ಸಂಸ್ಕೃತಿಯನ್ನು ರಕ್ಷಿಸಿ ಕೊಳ್ಳದೆ ಭಾರತಸೇವೆಯನ್ನು ಮಾಡಲಿಕ್ಕೇ ಬರಲಾರದು-ಮಾಡಬಾರದು." ಈ ವಿಚಾರಜಾಗ್ರತೆ ಇಂದೂ ಕೂಡ—ಭಾರತದ ರಾಜಕೀಯ ಗಲಭೆ ನಡೆದಿರುವಾಗ—ಅವಶ್ಯ ವಾಗಿದೆ. ಕರ್ನಾಟಕದೊಡನೆ ಹದಿನಾರಾಣೆ ತಾದಾತ್ಮ್ಯ ಹೊಂದಿದವರೇ ಭಾರತದ ಸೇವೆಯನ್ನು ಯಥಾರ್ಥವಾಗಿ ಮಾಡಬಲ್ಲರಲ್ಲದೆ ಅರೆಕೇರಿ ಕರ್ನಾಟಕರು ಹಾಗೆ ಮಾಡ ಲಾರರು ಎಂಬ ಎಚ್ಚರಿಕೆ ಸಮಯೋಚಿತವಾಗಿದೆ. ಇದೇ ಉದ್ದೇಶವನ್ನು ಇಂತಹದೇ ಎಚ್ಚರಿಕೆಯನ್ನು ತಮ್ಮ ವಿಶಿಷ್ಟ ಶೈಲಿಯಲ್ಲಿ ಕರ್ನಾಟಕದ ಇನ್ನೊಬ್ಬ ಹಿರಿಯರಾದ ಶ್ರೀ. ಮುದವೀಡು ಕೃಷ್ಣರಾಯರು 'ಕರ್ನಾಟಕದ ರಾಷ್ಟ್ರೀಯ ಜೀವನ' ಎಂಬ ಲೇಖನದಲ್ಲಿ ಹೇಳಿದ್ದಾರೆ. ಕರ್ನಾಟಕ ರಾಷ್ಟ್ರೀಯ ಜೀವನವು ವಿಕಾಸಹೊಂದಿದ ರೀತಿಯನ್ನು ಬಣ್ಣಿಸುವದಕ್ಕೆ ಇಂದು ಅಧಿಕಾರಸಂಪನ್ನರು ಕೃಷ್ಣ ರಾಯರೇ ಎಂಬ ಮಾತಿಗೆ ಸಂದೇಹವಿರಲಾರದು. ಅವರ ಸೂಕ್ಷ್ಮನಿರೀಕ್ಷಣೆಯ ಫಲವಾದ ಘಟನೆಗಳ ಸಂಗ್ರಹ ಹಾಗೂ ನೈಜತೆ, ಅವರ ಬಿಚ್ಚುಗನ್ನಡ ಶೈಲಿಯ ಫಲವಾದ 'ಮನಂಬುಗುವ' ಮಾತುಗಾರಿಕೆ ಈ ಲೇಖನದಲ್ಲಿದೆ. ಭಾರತಕ್ಕೆ ಸಂಯುಕ್ತ ರಾಜ್ಯಪದ್ಧತಿ ಬರಲಿರುವ ಕಾಲದಲ್ಲಿ ಕೃಷ್ಣರಾಯರ 'ಹಿಂದೀರಾಷ್ಟ್ರದ ಘಟನೆಯಲ್ಲಿ ಕರ್ನಾಟಕವೂ ಒಂದು ಸ್ವಯಂಸಮರ್ಥವಾದ, ಸ್ವಯಂಪೂರ್ಣವಾದ ಸ್ವಯಂಪ್ರಕಾಶಿತವಾದ ಅಂಗರಾಷ್ಟ್ರವೇ ಉಳಿಯ ತಕ್ಕದ್ದು' ಎಂಬ ಮಾತನ್ನು ಯಾರೂ ಕಣ್ಮರೆ ಮಾಡು ವಂತಿಲ್ಲ. ೧೯೨೦ಕ್ಕೆ ಈಚಿನ ಕರ್ನಾಟಕದ ರಾಷ್ಟ್ರೀಯ ಜೀವನವನ್ನು ಆ ರಾಜಕೀಯ ಜೀವನದಲ್ಲಿ ಮುಖ್ಯ ಭಾಗ ವಹಿಸಿದ ಶ್ರೀ. ಕರಮರಕರರು ಬರೆದಿದ್ದಾರೆ. ಅದು ಹೆಚ್ಚಾಗಿ ಹಿಂದುಸ್ತಾನದ ರಾಜಕೀಯ ಜೀವನದ ಚರಿತ್ರೆ ಯಾಗಿದ್ದು ಅಲ್ಲಲ್ಲಿ ಕರ್ನಾಟಕದ ಹೆಸರನ್ನು ಸೇರಿಸಿ ದಂತಿದೆ. ಭಾರತ ರಾಷ್ಟ್ರೀಯ ಜೀವನದ ಪಡಿನೆಳಲೇ ಕರ್ನಾಟಕದಲ್ಲಿರುವದರಿಂದ ಅದು ಅನಿವಾರ್ಯವೋ ಏನೋ. ಇತ್ತೀಚಿನ ರಾಜಕೀಯ ಘಟನೆಗಳ ಇತಿಹಾಸ, ಕರ್ನಾಟಕವು ಸಲ್ಲಿಸಿದ ಕಾಣಿಕೆ ಇವುಗಳು ಚೆನ್ನಾಗಿ ನಿರೂಪಿಸಲ್ಪಟ್ಟಿವೆ ಈ ಎರಡು ಲೇಖನಗಳಲ್ಲಿ ಹಾಗೂ ಮುಂದಿನ 'ಕರ್ನಾಟಕದ ಏಕೀಕರಣ' ಎಂಬ ಲೇಖನದಲ್ಲಿ ಕೆಲವು ಮಾತುಗಳ ಪುನರುಕ್ತಿ ಕಂಡುಬರುತ್ತದೆ. ಶ್ರೀ. ಮಂಗಳವೇಢೆಯವರು ಅಧಿಕೃತ ವಸ್ತುಸಂಖ್ಯೆಗಳ ಬಲ ದೊಂದಿಗೆ ಏಕೀಕರಣದ ಪ್ರಶ್ನೆಯನ್ನು ಸಮರ್ಥಿಸಿದ್ದಾರೆ. ಹುರುಳಿಲ್ಲದ ಆಕ್ಷೇಪಣೆಗಳನ್ನು ಖಂಡಿಸಿ ಏಕೀಕರಣದ ಬಗೆಗೆ ಉಪಯುಕ್ತ ಸಂಗತಿಗಳನ್ನು ಹೇಳಿದ್ದಾರೆ. "ನುಡಿಯು ನಾಡಿನ ಉಸಿರು. ಒಂದು ನಾಡಿನ ನುಡಿಗೆ ಅವಕಾಶವಿಲ್ಲದಂತೆ ಮಾಡುವದೆಂದರೆ........ಆ ನಾಡಿನ ಪ್ರಾಣವನ್ನೇ ಹಿಂಡಿದಹಾಗೆ" ಎಂಬ ಮಾತು ಮನನೀಯ ವಾಗಿದೆ.

ಕರ್ನಾಟಕದ ಉದ್ಯೋಗಗಳ ಬಗೆಗೆ ಎಷ್ಟೋ ಸಂಗತಿಗಳನ್ನು ಕಲೆಹಾಕಿ ಪ್ರೊ. ಯಲಬುರ್ಗಿ ಅವರು ಒಂದು ಲೇಖನ ಬರೆದಿದ್ದಾರೆ. ಇದರಲ್ಲಿ ಕರ್ನಾಟಕವು ಕೈಕೊಳ್ಳಬಹುದಾದ ಉದ್ಯೋಗಗಳ ಬಗೆಗೆ ವ್ಯವಹಾರ್ಯ ಸೂಚನೆಗಳಿವೆ. ಕರ್ನಾಟಕದ ದರ್ಶನಕ್ಕೆ ಇಂತಹ ಬರೆಹಗಳೂ ಬೇಕು. ಆದರೆ ಇಂತಹ ಲೇಖನಗಳು ಪ್ರಾಥಮಿಕ ಶಾಲೆಯ ಭೂಗೋಲಗಳಲ್ಲಿ ಬರುವ 'ಸಂತೆಯಾಗುವ ಊರುಗಳು, ಶಾಲೆಯಿದ್ದ ಊರುಗಳು' ಎಂಬಂತಹ ಶುಷ್ಕ ಯಾದಿಯಾಗಬಾರದು. ಭಾರತೀಯರಾದ ಕನ್ನಡಿಗರು ಎಂಬ ಲೇಖನವು ಕೂಡ who is who ಎಂಬ ಪ್ರಕಟನೆಯಂತೆ ಜೀವನದಲ್ಲಿಯ ಘಟನೆಗಳ ಯಾದಿಯಾಗಿರುವಂತಿದೆ. ಅಖಿಲ ಭಾರತೀಯರಲ್ಲಿ ಗಣಿಸಲ್ಪಡುವ ಕನ್ನಡಿಗರ 'ದರ್ಶನ'ವು ಉಪಯುಕ್ತವೇ ಆಗಿದ್ದು ಇನ್ನೂ ಒಂದೆರಡು ಹೆಸರುಗಳನ್ನು ಇಲ್ಲಿ ಸೇರಿಸಬಹುದಾಗಿತ್ತು ಎಂದೆನಿಸುತ್ತದೆ.

ಈ ಗ್ರಂಥದಲ್ಲಿ ಕನ್ನಡಸಾಹಿತ್ಯದ ಬಗೆಗೆ ಮೂರು ಲೇಖನಗಳಿವೆ. ಶ್ರೀ. ಆನಂದಕಂದರು ಸಣ್ಣ ಕತೆ-ಕಾದಂಬರಿಗಳನ್ನು ಕುರಿತು ಶ್ರೀರಂಗರು ನಮ್ಮ ನಾಟಕಗಳನ್ನು ಕುರಿತು ಬರೆದಿದ್ದಾರೆ. ಇವುಗಳಿಂದ ಹಾಗೂ ಶ್ರೀ. ಬೇಂದ್ರೆಯವರ ಲೇಖನದಿಂದ ಆಧುನಿಕ ಕನ್ನಡ ಸಾಹಿತ್ಯದ ಸಂಕ್ಷಿಪ್ತವಾದರೂ ಸ್ಫುಟವಾದ ದರ್ಶನವಾಗುತ್ತದೆ. ಆನಂದಕಂದರ ಲಲಿತಸಾಹಿತ್ಯದ ವ್ಯಾಖ್ಯೆ ವ್ಯಾಪ್ತಿ ಹಾಗೂ ಪ್ರಾಚೀನ ಕರ್ನಾಟಕದ ನಾಟಕಗಳ ಮಾದರಿಯ ಸಂಬಂಧವಾಗಿ ಶ್ರೀರಂಗರ ತರ್ಕ ಮತ್ತು 'ಸ್ತ್ರೀಧರ್ಮ ರಹಸ್ಯ ಮೊದಲಾದ ನಾಟಕಗಳು ಇಂದಿನ ಜೀವನವನ್ನೇ ಅನುಸರಿಸಿ ಬರೆದವು' ಎಂಬ ಮಾತಿನ ಬಗೆಗೆ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಆನಂದಕಂದರು ' ಲಲಿತಸಾಹಿತ್ಯ ' ಹಾಗೂ Light literature ಎಂಬ ಶಬ್ದಗಳು ಸಮಾನಾರ್ಥಕ ಎಂದು ತಿಳಿಯುವದು ಸರಿಯಾಗಲಿಕ್ಕಿಲ್ಲ. ಹಾಗೂ ಅವರ ಅಭಿಪ್ರಾಯಗಳಲ್ಲಿ ಒಮ್ಮೊಮ್ಮೆ ಪರಸ್ಪರ ವಿರೋಧ ಬರಬಹುದು [ಉದಾಹರಣೆ. ಪು. ೧೫೭.....ಮೊದಲಾದ ಇವರ (ವಾಸುದೇವಾಚಾರ್ಯರ) ಕತೆಗಳಂತೂ ಸಣ್ಣ ಕತೆಯ ಎಲ್ಲ ಲಕ್ಷಣಗಳನ್ನು ಒಳಗೊಂಡಿವೆ....ವಾಸುದೇವಾಚಾರ್ಯರು ಕಣ್ಣ ಮುಂದೆ ಇಟ್ಟುಕೊಂಡುದು 'ಸಣ್ಣ ಕತೆ'ಯನ್ನಲ್ಲ, ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿದ್ದ ' ಸಂಪೂರ್ಣ ಗೋಷ್ಠಿ 'ಗಳನ್ನು.] (ದಪ್ಪಕ್ಷರ ನಮ್ಮವು) ಹೀಗಿದ್ದರೂ ಕೂಡ ಕಾದಂಬರಿ, ಸಣ್ಣ ಕತೆ ನಾಟಕಗಳು ಕನ್ನಡದಲ್ಲಿ ಬೆಳೆದು ಬಂದ ರೀತಿಯನ್ನು ನಾವಿಲ್ಲಿ ಕಾಣಬಹುದು. ಶ್ರೀರಂಗರ ಲೇಖನವು ವಾಡಿಕೆಯ[illegible] ವಿಚಾರಗಳನ್ನು ಒಳಗೊಂಡಿದೆ. ಪ್ರಾಚೀನ ಕ[illegible] ನಾಟಕಗಳ ಅಭಾವಕ್ಕೆ ಅವರು ಹೇಳುವ [illegible] ಆಧುನಿಕ ನಾಟಕಗಳ ಬೆಳವಣಿಗೆ (ಇದು ಸಂ[illegible] ರಲಿಕ್ಕಿಲ್ಲ) ಇವುಗಳು ಮಾರ್ಮಿಕವಾಗಿವೆ. '[illegible] ವಾಙ್ಮಯದ ಹಾದಿ'ಯನ್ನು ಕುರಿತು ಶ್ರೀ. ಬೇ[illegible] ಬರೆದಿದ್ದಾರೆ. ಅದರಲ್ಲಿ ಅವರು ಆಧುನಿಕ ಕನ್ನ[illegible] ದಿಗ್ದರ್ಶನವನ್ನು ವಿಮರ್ಶಕ ದೃಷ್ಟಿಯಿಂದ [illegible] ಕಿರಿದು ಮಾತುಗಳಲ್ಲಿ ಹಿರಿದಾದ ಅರ್ಥವನ್ನು[illegible] ಶ್ರೀ. ಬೇಂದ್ರೆಯವರ ಇತ್ತೀಚಿನ ಶೈಲಿಯು [illegible] ಯನ್ನು ತಂದುಕೊಡುತ್ತದೆ. ವಿಚಾರಪ[illegible] ಪಣವುಳ್ಳ ಈ ಲೇಖವು ಇಡಿಯ ಸಂಗ್ರಹದ[illegible] ವೆಂದು ಹೇಳಬಹುದು. ಗದ್ಯದ ಬೆಳವಣಿಗೆ[illegible] ನಮ್ಮ ಸಾಹಿತ್ಯವು ಮುಂದೆ ಹಿಡಿಯಬೇಕಾ[illegible] ಇವುಗಳು ವಿಶೇಷ ಕುಶಲತನದಿಂದ ಬರೆಯ[illegible]

ಈ ಸಂಗ್ರಹದ ಇನ್ನುಳಿದ ಒಂದು ಲೇಖನ[illegible] ಶಂ. ಬಾ. ಜೋಶಿಯವರದು. ಅವರ '[illegible] ಜಾತಿಜನಾಂಗಗಳು' ಎಂಬ ಲೇಖವು ಕರ್ನಾ[illegible] ದೃಷ್ಟಿಯಿಂದ ಮಹತ್ವದ್ದಾಗಿದೆ. ಜಾತಿ, ಜನಾ[illegible] ಇಟ್ಟುಕೊಳ್ಳುವುದು ಹುರುಳಿಲ್ಲದ ಮಾತೇ[illegible] ಜೋಶಿಯವರು ಸೋದಾಹರಣವಾಗಿ [illegible] " ನಮ್ಮ ಧರ್ಮ ವೈಯಕ್ತಿಕವಾಗಬೇಕು, [illegible] ಶಿಕವಾಗಿರಬೇಕು, ಜಾತಿ ಮಾನವರದಾಗಬೇ[illegible] ಹುರುಳುಳ್ಳ ಸಂದೇಶವನ್ನು ಎಲ್ಲರೂ ಗಮನಿ[illegible]

ಇದುವರೆಗಿನ ವಿವೇಚನೆಯಿಂದ ಕರ್ನಾಟ[illegible] ಉಪಯುಕ್ತ ಲೇಖನಗಳ ಸಂಗ್ರಹವೆಂದು [illegible]ತ್ತದೆ. ಆದರೆ ಕರ್ನಾಟಕದ ದರ್ಶನದ [illegible] ಈ ಸಂಗ್ರಹವು ಪರಿಪೂರ್ಣವಾಗಿಲ್ಲ. ಕರ್ನಾಟ[illegible]ವನ್ನು ಇನ್ನೂ ಕೆಲವು ಮುಖಗಳಿಂದ [illegible]ತ್ತದೆ. ಕರ್ನಾಟಕದಲ್ಲಿ ವಿದ್ಯಾಪ್ರಸಾರ, [illegible] ಇತ್ಯಾದಿ ವಿಷಯಗಳ ನಿರೂಪಣೆಯು ಇಲ್ಲ[illegible] ದರ್ಶನವು ಈ ಪುಸ್ತಕದ ಗಾತ್ರಕ್ಕೆ [illegible] ವಿಭಾಗರೂಪವಾಗಿ ಆದನ್ನು ಕೊನೆಗ[illegible] "ಅಖಂಡ ಕರ್ನಾಟಕದ ದೃಷ್ಟಿಯಿಂದ" [illegible] ಕರು ಮೊದಲಿಗೆ ಹೇಳಿದ್ದರೂ ಕೂಡ ವಿವ[illegible] (ಕೆಲವು ಲೇಖನಗಳನ್ನು ಬಿಟ್ಟು), ಲೇಖಕ[illegible] ದುದರಲ್ಲಾಗಲಿ ಇನ್ನುಳಿದ ಕರ್ನಾಟಕದ

ಬಿಟ್ಟಂತಾಗಿರುವದರಿಂದ ಇಲ್ಲಿ ಅಖಿಲಕರ್ನಾಟಕ ದೃಷ್ಟಿಯ ಅಭಾವವಿದೆಯೆಂದು ಒಪ್ಪಬೇಕಾಗುತ್ತದೆ. ಅಲ್ಲದೆ ವಿಚಾರ ಜಾಗೃತಿ, ದರ್ಶನ ಇವುಗಳೇ ಉದ್ದೇಶವಾಗಿರುವ ಇಂತಹ ಪುಸ್ತಕಗಳಲ್ಲಿ ವ್ಯಕ್ತಿಗಳ ಸ್ತುತಿನಿಂದೆಗಳು (ಅವು ನಿಜವಿರ ಬಹುದು) ಸೇರಿರುವದು ಸರಿಯಲ್ಲ.

ಪುಸ್ತಕದ ಅಚ್ಚೂ ಕಟ್ಟೂ ಸುಂದರವಾಗಿವೆ. ಆದರೆ ಕೆಲವು ಮುದ್ರಣದೋಷಗಳು ನುಸುಳಿಕೊಂಡಿವೆ. ಶ್ರೀ. ಬುರ್ಲಿಯವರ ಸಾಹಸ, ಉತ್ಕಟ ಕನ್ನಡಾಭಿಮಾನ ಇವುಗಳ ಫಲವಾದ ಕರ್ನಾಟಕದ ದರ್ಶನವು ಆಧುನಿಕ ಕನ್ನಡ ಸಾಹಿತ್ಯ ಚಟುವಟಿಕೆಗಳಲ್ಲಿ ಹೊಸದೊಂದು ದಾರಿಯಾಗಿದೆ.

—ಎಸ್. ಎಸ್. ಮಾ.

ದೃಷ್ಟಿಲಾಭ: 'ವೈಜಯಂತೀ ಮಾಲೆ'ಯ ಕುಸುಮ. ಕರ್ನಾಟಕ ಪ್ರಕಟನಾ ಮಂದಿರ, ವಿಜಾಪುರ. ಶ್ರೀ. ಖಾಂಡೇಕರ ಅವರ ಎಂಟು ಕತೆಗಳ ಅನುವಾದ. ಅನುವಾದಕರು ಶ್ರೀ. ವಿ. ಎಂ. ಇನಾಮದಾರ ಬಿ. ಎ. (ಆನರ್ಸ). ಕ್ರಾ. ೧/೮ ೬೧+೧೧ ಪುಟಗಳು.

"ನೀವು ಎರಡನೇ ಮೂರನೇ ತರಗತಿಯ ಗ್ರಂಥ ಕರ್ತರ ಕೃತಿಗಳನ್ನು ಭಾಷಾಂತರಿಸುವುದಕ್ಕಿಂತಲೂ ಸ್ವತಂತ್ರ ಕೃತಿಗಳನ್ನು-ಎಷ್ಟೇ ಸಾಧಾರಣ ತರಗತಿಯವಾದರೂ ಅಡ್ಡಿಯಿಲ್ಲ—ರಚಿಸುವುದು ಹೆಚ್ಚು ಶ್ರೇಯಸ್ಕರ" ವೆಂದು ಪ್ರಕೃತ ಅನುವಾದಕರಿಗೆ ಕನ್ನಡದ 'ಹೆಸರು ವೆತ್ತ' ಸಾಹಿತಿಗಳೊಬ್ಬರು ಸೂಚಿಸಿದ್ದರೆ ಅದು ವಿಚಾರಾರ್ಹವಾದುದೇ ಇದ್ದಿರಬೇಕೆಂದು ನಮ್ಮ ಭರವಸೆ. ಏಕೆಂದರೆ ಶ್ರೀ. ಖಾಂಡೇಕರ ಅವರು ಎರಡನೇ ಮೂರನೇ ತರಗತಿಯ ಲೇಖಕರಲ್ಲವೆಂಬುದನ್ನು ಅನುವಾದಕರು ವಿಶದಪಡಿಸಲೆತ್ನಿಸಿದರೂ, ಕೇವಲ ಮರಾಠಿಯ ಅನ್ನದಿಂದಲೇ ಇಂದಿನ ಕನ್ನಡ ಸಾಹಿತ್ಯವು ತನ್ನ ಹೊಟ್ಟೆ ತುಂಬಿಕೊಳ್ಳಬೇಕೆಂದು ನಮ್ಮ ಅನುವಾದಕರು ಸಾರುವುದು (ಸ್ಪಷ್ಟವಾಗಿ ಸಾರದಿದ್ದರೂ ಹಾಗೆ ಧ್ವನಿಸುವಂತೆ ಸಾರಿದ್ದಾರೆಂಬುದರಲ್ಲಿ ಸಂಶಯವಿಲ್ಲ) ಸಮರ್ಪಕ, ಸಬಲವೆನಿಸುವುದಿಲ್ಲ. ಏಕೆಂದರೆ "ಪ್ರಪಂಚದ ಯಾವುದೇ ಹೆಸರುವಾಸಿಯಾದ ಸಾಹಿತ್ಯದ ಇತಿಹಾಸವನ್ನು ಪರಿಶೀಲಿಸಿ ನೋಡಿದರೂ ಅದರ ಜನಕ ಕವಿಗಳು ಪ್ರಾರಂಭಿಸಿದ್ದು ಭಾಷಾಂತರ ಅನುಕರಣಗಳಿಂದಲೇ ಎಂಬುದು ಸ್ಪಷ್ಟವಾಗಿ ತೋರುತ್ತದೆ;" ಆದುದರಿಂದ ನಾವೂ ಇಂದು ಮರಾಠಿಯನ್ನು ಅನುಕರಣಮಾಡಬೇಕೆಂದು ಆಜ್ಞಾಪಿಸುವುದು ಯಾವ ತತ್ವದ ಮೇಲಿಂದ? ಅನುಕರಣದಿಂದ ಸಂಸ್ಕಾರಕ್ಕೆ ಅನ್ನವು ದೊರೆಯಬಹುದಾದರೂ, ಅನುಕರಣವೇ ಅದರ ಜೀವನಸರ್ವಸ್ವವಾಗಬಾರದಲ್ಲವೇ? 'ಇಂದಿನ ಜಗದ್ವ್ಯಾಪಿಯಾದ ಆಂಗ್ಲಸಾಹಿತ್ಯವು' ಫ್ರೆಂಚ್ ಹಾಗೂ ಇಟಾಲಿಯನ್ ಭಾಷಾಕೃತಿಗಳ ಅನುಕರಣದಿಂದ ಪುಷ್ಟವಾಗಿರಬಹುದು, ಒಪ್ಪಿಗೆ. ಆದರೆ ಮರಾಠಿಯ ಅನುಕರಣದಿಂದ ಕನ್ನಡವು ಜಗದ್ವ್ಯಾಪಿ ಆಗುವುದೆಂಬ ಭವಿಷ್ಯದ ಅಭಯವನ್ನು ಅನುವಾದಕರು ಕೊಡಬಹುದೆ? ಒಂದು ಭಾಷೆಯನ್ನು ಜಗದ್ವ್ಯಾಪಿಯಾಗುವಂತೆ ಮಾಡಬೇಕಾದ ಸಾಮರ್ಥ್ಯವು ಫ್ರೆಂಚ್-ಇಟಾಲಿಯನ್ ಭಾಷೆಗಳಲ್ಲಿದ್ದಿರಬಹುದಾದಂತೆ ಮರಾಠಿಯ ಭಾಷೆಯಲ್ಲಿದೆ ಎಂದು ಎದೆತಟ್ಟಿ ಹೇಳುವ ಎದೆಗಾರರಲ್ಲಿ—ಮರಾಠಿಯ ಬಗ್ಗೆ ವಿಶ್ವಾಸಕ್ಕಿಂತ ಅಭಿಮಾನವೇ ಹೆಚ್ಚಿದೆಯೆನ್ನಬೇಕು. ಇಷ್ಟಾಗಿಯೂ ಅನುವಾದದಿಂದಲೇ ಕನ್ನಡ ಸಾಹಿತ್ಯವು ಪರಿಪುಷ್ಟವಾಗಬೇಕಾದಲ್ಲಿ ಇಂಗ್ಲಿಷ್-ಫ್ರೆಂಚ್-ಇಟಾಲಿಯನ್-ಸಂಸ್ಕೃತ ಮೊದಲಾದವುಗಳಿಂದ ಯಾವ ನಿಜವಾದ ಸಂಸ್ಕಾರ ದೊರೆಯಬಹುದೊ ಅಂತಹ ಸಂಸ್ಕಾರವು ಮರಾಠಿಯಿಂದ ದೊರೆಯಬಹುದೇ ಎಂಬ ಬಗ್ಗೆ ನಮಗೇಕೊ ಧೈರ್ಯವಿಲ್ಲ. ಪ್ರಕೃತದಲ್ಲಿ ಅನುವಾದಿಸಲ್ಪಟ್ಟಂತಹ ಕತೆಗಳ ಯೋಗ್ಯತೆಯೂ ತರಗತಿಯೂ ಕನ್ನಡವಲ್ಲಿಯೂ ಇದ್ದಿರಬೇಕೆಂದು ನಮಗಂತೂ ಎನಿಸುತ್ತದೆ. ಅನುವಾದವನ್ನು ಮಾಡಲೇಬಾರದೆಂದು 'ಹುಂಬಾಗುತಿಗೆ'ಯಿಂದ ಹೇಳುವ ಅವಿವೇಕತನಕ್ಕಿಂತ, ಯಾವುದು ಅವಶ್ಯವೆನಿಸುತ್ತದೆಯೋ ಯಾವ ವಿಷಯವು ನಮ್ಮಲ್ಲಿಲ್ಲವೆನಿಸುತ್ತದೆಯೋ ಅದನ್ನು ಅನುವಾದಿಸಬೇಕೆಂದು ಸೂಚಿಸುವ ಜಾಣ್ಮೆಯಿದ್ದವರಾದರೂ ಕನ್ನಡ ಸಾಹಿತ್ಯಕ್ಕೆ ಪ್ರಕೃತ ಅನುವಾದ ಕೃತಿಯಿಂದ ಬೆಲೆಬಾಳುವಂತಹ, ಅಪೂರ್ವ ಸಹಾಯವಾಗಿದೆಯೆಂದು ಹೇಳಲಾರರು. ಇದು "ಸ್ವತಂತ್ರ ಕೃತಿಗಳ ಕರ್ತರ ವಿಪರೀತವಾದ ಅಭಿಮಾನ"ವೂ ಅಲ್ಲ "ಮಾತೃಭಾಷೆಯ ಬಗ್ಗೆ ಸರಿಯಿಲ್ಲದಷ್ಟು ಅತಿಶಯವಾದ (ಅಂದರೇನೊ!) ಆದರ"ವೂ ಅಲ್ಲ, "ನೆರೆಯ ಇನ್ನೊಂದು ಭಾಷೆಯ ವಿಷಯದಲ್ಲಿ ನಿಷ್ಕಾರಣವಾದ ದ್ವೇಷವೂ" ಅಲ್ಲ, "ಇನ್ನಾವುದೊ ಒಂದು ಸ್ತುತ್ಯವಲ್ಲದ ಕಾರಣ"ವೂ ಅಲ್ಲ (ಅದನ್ನು ಹುಡುಕುವ ಅಗತ್ಯವೂ ಇಲ್ಲ) ಆದರೆ ಶುದ್ಧ, ಸಾಧಾರಣ, ಸಾಮಾನ್ಯ ವಿವೇಕವಿದ್ದವರೂ ಕೂಡ ಹೇಳಬಹುದಾದ ಅನುಭವದ ಮಾತು. ಇವೆಲ್ಲ ಮಾತನ್ನು ಹೇಳುವುದು ಯಾವುದೇ ಭಗಿನಿಭಾಷೆಯ ದ್ವೇಷವೇ ಇದ್ದಿರಬೇಕು, ವಿವೇಕದ ಮಾತಲ್ಲ ಎಂದು ತಿಳಿಯುವುದು ಮಾತ್ರ, ತಿಳಿ

ದವರ ವಿವೇಕತನಕ್ಕೆ ತಕ್ಕ ಉತ್ತರವಲ್ಲ. ಮುಖ್ಯವಾಗಿ ಇಲ್ಲಿ ಹೇಳಬೇಕಾದುದೆಂದರೆ, (ಕನ್ನಡ ವಾಙ್ಮಯವು ಮರಾಠಿಯ ಭಾಷೆಗಿಂತ ಪ್ರಾಚೀನತರವಾದುದೆಂಬ ನಿರ್ವಿವಾದವಾದ ಮಾತನ್ನು ಮರೆಯದಿರಬೇಕು). ಕನ್ನಡ ಸಾಹಿತ್ಯವು ಕೋಗಿಲೆಯಂತೆ, ಮೊದಲು ಸಂಸ್ಕೃತದಿಂದಲೂ ಆಮೇಲೆ ಇಂಗ್ಲಿಷಿನಿಂದಲೂ (ಈಗ ಮರಾಠಿಯಿಂದಲೂ) ಪರಪುಷ್ಟವಾಗಿ ಬೆಳೆಯುತ್ತ ಬಂದಿದೆ. ಅದಕ್ಕೆ ವೈಶಾಲ್ಯತೆಯೂ ವಿಶ್ವಸಾಹಿತ್ಯದ ಗಣನೆಯೂ ಬರುವುದು ಯಾವಾಗ? ಅದಕ್ಕೊಂದು ಅವಧಿ ಬೇಡವೆ? ನಮಗೀಗ ನಮ್ಮ ಕನ್ನಡತನವನ್ನು ಕಾಯ್ದುಕೊಳ್ಳುವಂತೆ ಸ್ವತಂತ್ರ ನಿರ್ಮಿತಿಗಳನ್ನು ಪ್ರಸಿದ್ಧಪಡಿಸಬೇಕಾಗಿದೆ. ಅಂತಹ ಬೆಲೆಬಾಳುವಂತಹ ಕಾವ್ಯ-ಕತೆ-ಕಾದಂಬರಿ-ನಾಟಕಗಳು ಸುದೈವದಿಂದ ಇತ್ತೀಚೆಗೆ ಬೆಳೆಯಹತ್ತಿವೆಯೆಂಬುದು ಆನಂದದ ಮಾತಾಗಿದೆ, ಸರಿಯಾದ ಅಭಿಮಾನದ ಮಾತಾಗಿದೆ. ಅನೇಕ ಕನ್ನಡ ಕೃತಿಗಳು ಇನ್ನಿತರ ಭಾಷೆಯಲ್ಲಿ ಪರಿವರ್ತಿಸಲ್ಪಡುವಷ್ಟು ಯೋಗ್ಯತಾಸಂಪನ್ನವಾದುವೂ ಇವೆಯೆಂದು ನಮಗೆನಿಸುತ್ತದೆ. ಆದುದರಿಂದ ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆಯನ್ನು ತರಬೇಕಾದರೆ ಇನ್ನುಮೇಲೆ ಹೆಚ್ಚಾಗಿ ಸ್ವತಂತ್ರ ಕೃತಿಗಳನ್ನೇನಾದರೂ ನಿರ್ಮಿಸಲೇಬೇಕು. ಹಿಂದೆ ಕನ್ನಡಕ್ಕೇ ವಿಶಿಷ್ಟವಾಗಿದ್ದ ವಚನ-ಕೀರ್ತನೆಗಳಂತೆ ನಾವು ಇಂದೂ ಹೊಸಹೊಸ ಹಾದಿಯನ್ನು ಶೋಧಿಸಬೇಕಾಗಿದೆ. ಅಂತೆಯೆ ಮಾನ್ಯಸಾಹಿತಿಗಳೊಬ್ಬರು ಪ್ರಕೃತ ಅನುವಾದಕರಿಗೆ ಆದಷ್ಟು ಸ್ವತಂತ್ರ ಕೃತಿಗಳನ್ನು ನಿರ್ಮಿಸನಂತೆ ಸೂಚಿಸಿರಬೇಕು. ಹಾಗೆ ಸೂಚಿಸಿದ್ದಲ್ಲಿ ಯಾವ ದೋಷವೂ ಇಲ್ಲವಲ್ಲ?

ಶ್ರೀಮಾನ್ ಖಾಂಡೇಕರ ಅವರ ಕತೆಗಳ ವಿಮರ್ಶೆಯನ್ನು ಅನುವಾದಕರು ತಮ್ಮ ಮುನ್ನುಡಿಯಲ್ಲಿಯೇ ಸಾಕಷ್ಟು ಮಾಡಿದ್ದಾರೆ. ಕಥಾಸನ್ನಿವೇಶಗಳನ್ನು ಆಯ್ದುಕೊಳ್ಳುವುದರಲ್ಲಿ ಶ್ರೀ. ಖಾಂಡೇಕರ ಅವರ ಸೂಕ್ಷ್ಮ ನಿರೀಕ್ಷಣ ಶಕ್ತಿಯೂ, ಪ್ರಪಂಚದ ವಾಸ್ತವ ಘಟನೆಗಳಿಂದಲೇ ಜೀವನತತ್ವವನ್ನು ಹುಡುಕಿ ತೆಗೆಯುವ ಅಂತರ್ದೃಷ್ಟಿಯೂ ಸುಸ್ಪಷ್ಟವಾಗಿ ಕಂಡು ಬರುತ್ತಿವೆ. 'ದೃಷ್ಟಿಲಾಭ'ವು ಮೇಲಿನ ಮಾತಿಗೆ ತಕ್ಕ ನಿದರ್ಶನವಾಗಿದೆ. ಕತೆಯ ಶರೀರಕ್ಕೆ ಕಳೆಯನ್ನು ತರುವ ಸೂಚ್ಯತೆ ಇಲ್ಲಿ ಅಷ್ಟು ಕಂಡುಬರದಿದ್ದರೂ ಕಂಡ ವಸ್ತುವಿನಿಂದ ಕಾಣದ ತತ್ವವನ್ನು ಸಾಮಾನ್ಯಪಡಿಸುವ ಅನುಭವದ ಆಳವು ಇಲ್ಲಿ ಕಂಡುಬರುವುದು ಸ್ತುತ್ಯರ್ಹವಾಗಿದೆ. 'ಎರಡು ಚಿತ್ರ' ಹಾಗೂ 'ಕುರುಡನ ಭಾವಬಿದಿಗೆ' ಇವು ಸಣ್ಣ ಕತೆ[...] ಅಪೂರ್ವ ದೃಷ್ಟಾಂತಗಳಾಗಿವೆ. ಇವುಗಳಲ್ಲಿ[...] ತಾತ್ವಿಕ ತಿರುಳೂ ಕೂಡ ತೀರ ಹೊಸದು. [...] ಸಾಹಿತ್ಯದಲ್ಲಿ ಶ್ರೀ. ಖಾಂಡೇಕರ ಅವರಿಗೆ ಮೇ[...] ಸ್ಥಾನ ದೊರೆತಿರಲಿಕ್ಕೆ ಅವರು ಯಥಾಯೋ[...]ರೆಂಬ ಮಾತು ಕತೆಯನ್ನೋದಿದವರಿಗೆಲ್ಲ ಗ[...]ದಿರದು.

ಪ್ರಸ್ತುತ ಅನುವಾದದ ಯುಕ್ತಾಯುಕ್ತ[...]ಚನೆಯನ್ನು ಬದಿಗಿರಿಸಿದರೆ,-ಅನುವಾದದಲ್ಲಿ[...] ದೋಷಗಳು ಕಂಡುಬಂದರೂ—ಸ್ವತಂತ್ರ[...] ಬರೆಯುವುದು ಸಾಧ್ಯವಾಗದಿದ್ದರೂ ಬೇ[...] ಸವಿಯನ್ನೂ ಬೆಡಗನ್ನೂ ಕನ್ನಡಕ್ಕೆ ತಂದಿ[...] ಒಂದು ನವೀನ ವೈವಿಧ್ಯತೆಯನ್ನು ಕಂಡರಿಸಿದ[...] ಸಂಪೂರ್ಣವಾಗಿ ಶ್ರೀಮಾನ್ ವಿ. ಎಂ. [...] ಅವರಿಗೇ ಸಲ್ಲುತ್ತದೆ.

'ಹಂಸ'ದ ಪ್ರೇಮಚಂದ ಸ್ಮೃ[...]

ಸ್ವರ್ಗೀಯ ಪ್ರೇಮಚಂದರ ಸ್ಮಾರಕವಾಗಿ [...] ಈ ವಿಶೇಷಾಂಕದಿಂದ, ಅವರ ನಿಧನದಿಂದ [...]ತ್ಯಕ್ಕೆ ಆದ ಅಪರಿಮಿತ ಹಾನಿಯ ಕಲ್ಪನೆಯು [...] ಹಿಂದೀ ಭಾಷೆಯು ಕಳೆದ ೭೦೦ ವರ್ಷಗಳಿಂದ [...] ಜನರು ಮಾತನಾಡುವ ಭಾಷೆಯಾಗಿದೆ. ಆದ[...] ಮೇಲೆ ಒಂದರಹಿಂದೊಂದು ಆದ ಆಕ್ರಮಣಗ[...] ಸ್ವರೂಪವೇನು,ಎಂತಹದು ಎಂದು ವ್ಯಾಖ್ಯಾನಿ[...] ಇದೀಗ ಬಂದಿದೆ. ಉತ್ತರ ಭಾರತೀಯ ವಿದ್ವಾ[...] ಅರಬ್ಬೀ-ಪಾರ್ಸಿಯಲ್ಲಿ ಇಲ್ಲವೆ ಉರ್ದುವಿನಲ್ಲಿ [...]ಣಿಕೆಯನ್ನು ಪಳಗಿಸುವುದು 'ಫ್ಯಾಶನ್ನಾ'ಗಿ[...] ಸಮಯದಲ್ಲಿ ಸುಂದರ ಉರ್ದು ಬರೆಯು[...]ರಾಯನು ಪಶ್ಚಾತ್ತಪ್ತಪದಗ್ಧನಾಗಿ, ಸ್ವಭಾಷ[...]ಸಿದ ಅನಾದರವನ್ನು ತೊಳೆದುಬಿಡಲು 'ಪ್ರೇ[...]ನೆಂಬ ಹೆಸರಿನಲ್ಲಿ ರಾರಾಜಿಸಿದನು. ಮನುಷ್ಯ[...] ಯಥಾಯೋಗ್ಯ ಚಿತ್ರಣ ಮತ್ತು ಮುತ್ತಿನಂತ[...]ಪಿತಗಳಂತೊಪ್ಪುವ ವಾಕ್ಯಗಳ ದೆಸೆಯಿಂದ ಅವ[...] ವಾಚಕರನ್ನು ಮುಗ್ಧಗೊಳಿಸುತ್ತಿದ್ದವು. [...] ಆಂದೋಲನದ ತರುವಾಯ ರಾಜಕೀಯ [...] ವಿಚಾರಗಳು ಅವರ ಕತೆ-ಕಾದಂಬರಿಗಳಲ್ಲಿ ಹೆ[...] ಬರತೊಡಗಿದುವು. ಈಚೆಗೆ ಸಾಮ್ಯವಾದದ [...]

ಅವರ ಮೇಲೆ ಆದುದರಿಂದ ಅವರ ಲೇಖನದಲ್ಲಿಯೂ ಹೊಸತನವೂ ಆಕರ್ಷಕತೆಯೂ ಬಂದುವು. ಹೃತ್ಸ್ಪರ್ಶಿಯಾದ ವಾಸ್ತವತೆ, ಆದರ್ಶವಾದದ ಪುರಸ್ಕಾರ ಇವುಗಳಿಂದ ಅವರ ಬರೆವಣಿಗೆಯು ತುಂಬ ಪರಿಣಾಮ ಮಾಡುವಂತಹದಾಗಿದೆ. ಹಿಂದೀ ಸಾಹಿತ್ಯದಲ್ಲಿಯ ಲೋಲುಪ-ಅಶ್ಲೀಲ ಪ್ರವೃತ್ತಿಗೆ ಚೆನ್ನಾಗಿಯೆ ತಡೆಯೊಡ್ಡಿದಂತಾಯಿತು. ಅವರ ಲೇಖನವು ಪರಿಪಕ್ವಫಲದಂತೆ ಸವಿಹತ್ತುತ್ತಿರುವ ಸಂದರ್ಭದಲ್ಲಿಯೆ ಆವರು ಕಾಲವಶರಾದರು. ಹಿಂದೀ ಉಪನ್ಯಾಸ (ಕಾದಂಬರೀ) ಸಮ್ರಾಟನ ಸಿಂಹಾಸನವು ಬರಿದಾಯಿತು.

೧೭೫ ಪುಟಗಳುಳ್ಳ ಈ ಸಂಚಿಕೆಯಲ್ಲಿ ಹಲವು ಜನ ವಿದ್ವಾಂಸರ ಲೇಖಗಳಿವೆ. ಅವುಗಳಲ್ಲಿ ಪ್ರೊ. ಧೀರೇಂದ್ರ ವರ್ಮಾ ಅವರ "ಹಿಂದೀ ಸಾಹಿತ್ಯಮೇಂ ಪ್ರೇಮಚಂದ ಕಾ ಸ್ಥಾನ" ಎಂಬುದೂ, ಪ್ರಿಯರಂಜನ ಸೇನರ "ಭಾರತೀಯ ಕೃಷ್ಣಕೋ ಕಾ ಕಂಠಸ್ವರ" ಎಂಬುದೂ, ಮೌಲಾನಾ ಮುಹಮ್ಮದ ಆಕಿಲರ "ಮುನ್ಶೀ ಪ್ರೇಮಚಂದ ಮರಹೂಮ" ಎಂಬುದೂ ಬಹಳ ಚೆನ್ನಾಗಿವೆ. ರೈತರ-ಕೂಲಿಕಾರರ-ಬಂಡವಾಳಗಾರರ ಪ್ರಶ್ನೆಗಳನ್ನು ಹೃದಯಂಗಮವಾಗಿ, ಆದರೆ ಪರಂಪರೆ ಬಿಡದೆ, ನಿರೂಪಿಸುವ (ದಿವಂಗತರು ಮೃತ್ಯುಪೂರ್ವದಲ್ಲಿ ಮುಗಿಸಿದ) "ಗೋದಾನ" ಕಾದಂಬರಿಯನ್ನೆ ಇವರೆಲ್ಲರೂ ವಿಶೇಷವಾಗಿ ಪ್ರಶಂಸಿಸಿದ್ದಾರೆ.

ಶ್ರೀ. ಬಂದೇ ಅಲೀ ಫಾತಮಿಯವರು ಶ್ರೀ. ಪ್ರೇಮಚಂದರ ವರ್ಣನೆಯನ್ನು ಎಂಟೇ ಸಾಲುಗಳಲ್ಲಿ ರಮ್ಯವಾಗಿ ಮಾಡಿದ್ದಾರೆ. ಅದರಲ್ಲಿ ಪ್ರೇಮಚಂದರ ನಿಜವಾದ ಹೆಸರಾದ 'ಧನಪತರಾಯ' ಎಂಬುದೂ ಅವರು ಬರೆದ ಪ್ರಮುಖ ಕಾದಂಬರಿಗಳ ಹೆಸರುಗಳೂ ಬಂದಿವೆ. ಸಂಪಾದಕರಾದ ಶ್ರೀ. ಬಾಬೂರಾವ ಪರಾಡಕರ ಅವರು ಬರೆದ, ದಿವಂಗತರ 'ಗೋದಾನ' ಕಾದಂಬರಿಯ ಸಮಾಲೋಚನವೂ ಶ್ರೀ. ಜೈನೇಂದ್ರಕುಮಾರರ "ಮೈನೆ ಕ್ಯಾ ಜಾನಾ ಔರ ಪಾಯಾ" ಎಂಬ ಲೇಖನವೂ ಚೆನ್ನಾಗಿವೆ. ಈ ಸ್ಮೃತಿ-ಅಂಕದ ವಾಚನದಿಂದ ಹಿಂದೀ ಸಾಹಿತಿಗಳ ವಿಚಾರಪ್ರವಾಹಗಳೂ ಸರಿಯಾಗಿ ಗೊತ್ತಾಗುತ್ತವೆ.



ನಗಬೇಡಿ!

ಅವನು:—ಪ್ರಿಯೇ, ನನ್ನ ಒಲುಮೆಯನ್ನು ನಿನ್ನ ತುಟಿಗಳ ಮೇಲೆ ಮುದ್ರಿಸಲೇ ?

ಆಕೆ:—ಮುದ್ರಿಸಿರಿ; ಆದರೆ ಪ್ರಸಿದ್ಧಿಸಬೇಡಿರಿ.

* * *

ಗಂಡ:—(ಮದುವೆಯ ಮರುದಿನ) ನಿನ್ನೆ ನಿನ್ನ ಇಳಿಮೊಗವನ್ನು ನೋಡಿ ನನ್ನ ಕೃತ್ರಿಮ ಹಲ್ಲುಗಳನ್ನು ನೀನು ನೋಡಿರುವೆಯೆಂದು ನಾನು ಅಂಜಿದ್ದೆ.

ಹೆಂಡತಿ:—ನಿಮ್ಮ ಚಿಂತಾಮುದ್ರೆಯನ್ನು ನೋಡಿ ನನ್ನ ಕೃತ್ರಿಮ ಕಣ್ಣನ್ನು ನೀವು ನೋಡಿರಬಹುದೆಂದು ಅಂಜಿದ್ದೆ.

* * *

ಆತ:—ನನಗೂ ನನ್ನಾಕೆಗೂ ಜಗಳವಾದರೆ ಕೊನೆಗೆ ನನ್ನ ಮಾತೇ ಆಗಬೇಕು. ನಾನೇನೆನ್ನುವೆ ಗೊತ್ತೊ ?

ಈತ:—ಜಗಳವಾಡಿದ್ದು ತಪ್ಪಾಯ್ತು ಅಂತ.

* * *

ಆ ಭಿಕ್ಷುಕನಿಗೆ ಮನೆಯ ಯಜಮಾನಿಯು ರೊಟ್ಟಿ ನೀಡಿದ ಕೂಡಲೆ ಅದನ್ನು ತಕ್ಕೊಂಡು ಅವನು ಕಂಣೀರು ಸುರಿಸಹತ್ತಿದನು. ಆಗ ಯಜಮಾನಿಯು "ಅಯ್ಯೋ ಪಾಪ, ಈ ರೊಟ್ಟಿ ನೋಡಿ ನಿನ್ನ ಮನೆ ನೆನಪಾಗುತ್ತದೇನಪ್ಪಾ ನಿನಗೆ" ಎಂದಳು. ಆದಕ್ಕೆ ಭಿಕ್ಷುಕನು "ಇಲ್ರೆವ್ವಾ, ನನಗೆ ತಿಂಗಳ ಹಿಂದೆ ಜೇಲಿನಲ್ಲಿದ್ದುದು ನೆನಪಿಗೆ ಬಂತು" ಅಂದನು.

* * *

ಯಜಮಾನ:—ಈ ಮನೆಗೆ ಬೆಂಕಿ ಹತ್ತಿರುವಾಗ ಮೊದಲು ಯಾವ ಸಾಮಾನನ್ನು ಹೊರಗೆ ಸಾಗಿಸುವೆ ?

ಆಳು:—ಬಾಗಿಲ ಹತ್ತರ ಇದ್ದದ್ದನ್ನೆಲ್ಲ ಮೊದಲು ಹೊರಗೆ ಹಾಕತೇನಿ ದ್ಯಾವ್ರೂ.

* * *

ಫೌಜದಾರ (ನಮಸ್ಕಾರ ಮಾಡದೆ ಹೋಗುವ ಸಿಪಾಯಿಗೆ):—ಏ ಕತ್ತೆ, ಮೇಲಿನ ಅಧಿಕಾರಿಗಳಿಗೆ ಸಲಾಂ ಮಾಡಬೇಕೆಂದು ಗೊತ್ತಿಲ್ಲನೋ ನಿನಗೆ ?

ಸಿಪಾಯಿ (ಸಿಗರೇಟು ಸೇದುತ್ತ):—ಸ... ದಾರರು ಸಿಗರೇಟು ಬಾಯಲ್ಲಿಟ್ಟುಕೊಂಡು ಸ... ಬಾರದು ಅಂತ ಹೇಳ್ಯಾರ.

* *

ಸಿನೆಮಾದ ನಿರ್ದೇಶಕನು ಅಲಕ್ಷ್ಯದಿಂದ ... ಹೋಗುತ್ತಿರುವಾಗ ಒಬ್ಬ ಬಿಕ್ಕೆ ಬೇಡುವವನು ... "ನಾನೂ ಶ್ರೀಮಂತ ಆಗಿದ್ದೆ. ಮೊದಲು ... ತಾಯಿ ಪ್ಲೇಗಿನಲ್ಲಿ ಸತ್ತರು. ಹೆಂಡತಿ ... ದಿಂದ ತೀರಿದಳು. ಮಕ್ಕಳು...."

ನಿರ್ದೇಶಕ:—ಕಥೆಯನ್ನು ದುಃಖದಲ್ಲಿ ... ನಮ್ಮ ಚಿತ್ರಗಳನ್ನು ನೋಡಲಿಕ್ಕೆ ಯಾರು ... ಅದನ್ನು ಸೌಖ್ಯದಲ್ಲಿ ಮುಗಿಸಿ ಆಫೀಸಿಗೆ ... ಕಥೆಯನ್ನು.

* *

ಹೊಸದಾಗಿ ಮದುವೆಯಾದ ಗಂಡನು ಅನ್ನುತ್ತಾನೆ: "ಇನ್ನು ಮೇಲೆ ನಿನ್ನ ದುಃಖದ... ನೊಬ್ಬನು ಸಿಕ್ಕಂತಾಯಿತೇ ?"

ಹೆಂಡತಿ:—ನನಗೆ ಅಂಥ ದುಃಖಗಳೇನೂ ...

ಗಂಡ:—ಯಾರಿಗೆ ಗೊತ್ತು, ನನ್ನನ್ನು... ಮೇಲೆ ಕಷ್ಟಗಳು ಬಂದರೂ ಬರಬಹುದು.

* *

ಶ್ರದ್ಧಾಂಜಲಿ

ದಿವಂಗತ ವಿಜಯ ಚಿಟಗೇರಿಯವರು

ಶ್ರೀ. ವಿಜಯ ಚಿಟಗೇರಿಯವರ ಅಕಾಲ ನಿಧನದಿಂದ ...ವುಗಾದ ತೀವ್ರ ಪರಿತಾಪವನ್ನು ಇಲ್ಲಿ ಸೂಚಿಸಲಪೇಕ್ಷಿ...ತ್ತೇವೆ. ಕರುಳಿನ ಬೇನೆ (Appendicitis) ಗಾಗಿ ಶಸ್ತ್ರ...ಯೆ ಮಾಡಿಸಿಕೊಂಡು, ಫೆಬ್ರುವರಿ ತಾ. ೨೦ನೆಯ ರವಿ...ರ ದಿನ ಇವರು ಮರಣ ಹೊಂದಿದರು.

...ಯುತರು ತಮ್ಮ ಕೊನೆಯ ಬೇನೆಯ ...ನ್ನಾ ದಿನವೆ ಬರೆದು ಮುಗಿಸಿದ ...ತಪ್ಪುದಂಡ' ಎಂಬ ಕತೆಯನ್ನು ಬೇರೆ ...ಡೆ ಮುದ್ರಿಸಿದ್ದೇವೆ. ಅವರಲ್ಲಿಯ ...ವರ ಪಳಗಿದ ಶೈಲಿಯೂ ಸೂಕ್ಷ್ಮ...ಸ್ಯವೂ ಅವರ ಸಾಹಿತ್ಯ ವ್ಯವಸಾ...ವು ಪರಿಪಕ್ವತೆಯನ್ನು ಮುಟ್ಟಿದು...ಕ್ಕೆ ಸಾಕ್ಷಿಯಾಗಿವೆ. ಸಾಹಿತ್ಯದೇವಿಯ ...ರ್ಪಣೆಗಾಗಿ ಕೊಟ್ಟ 'ತಪ್ಪುದಂಡ' ...ಂತೆನಿಸುವುದು ಅವರ ಈ ಕೊನೆಯ ...ತೆ. ಅದೀಗ ಅವರು ವಿದ್ಯಾರ್ಥಿದಶೆ...ಯನ್ನು ಯಶಸ್ವಿಯಾಗಿ ಮುಗಿಸಿ, ...ಹಿತ್ಯರಂಗದಲ್ಲಿ ಧೀರಗತಿಯಿಂದ ಹೆಜ್ಜೆ ...ಕ್ಕಲಿದ್ದರು; ಅಷ್ಟರಲ್ಲಿಯೆ ಕಾಲನ ...ಯು ಅವರನ್ನು ಸೆಳೆದೊಯ್ದಿತು. ...ವರ ಬಂಧುವರ್ಯರಾದ ಶ್ರೀ. ಚಿಟಗೇರಿ ಕೃಷ್ಣಶರ್ಮರಿಗೆ ... ವಿಯೋಗದಿಂದ ತಮ್ಮ ಬಲಗೈಯನ್ನೆ ಕಳೆದು...ಕೊಂಡಂತೆನಿಸಿದ್ದರೆ ಸೋಜಿಗವಿಲ್ಲ. ಕರ್ನಾಟಕ ಸಾಹಿತ್ಯ...ಮಂದಿರದ ಹೆಬ್ಬಾಗಿಲಿನಲ್ಲಿ ಜಯ-ವಿಜಯರಂತಿದ್ದ ...ಧುದ್ವಯರಲ್ಲಿ ವಿಜಯರು ಮರೆಯಾದರು. ಶ್ರೀ. ಚಿಟ...ರಿ ಕೃಷ್ಣಶರ್ಮರ ಹಾನಿಯು ಅವರ ವೈಯಕ್ತಿಕ ಹಾನಿ ...ಲ್ಲವೆಂಬುದನ್ನು ಅವರು ಅರಿಯಲಿ. ದಿವಂಗತರ ಅನಂತ ...ಹಿತವರ್ಗವೂ ಕನ್ನಡವೂ ಕರ್ನಾಟಕವೂ 'ವಿಜಯ'ರ ...ಯೋಗದಿಂದ ಹಳಹಳಿಸುತ್ತದೆ.

ದಿವಂಗತರ ವಿದ್ಯಾರ್ಥಿಜೀವನವು ಉಜ್ವಲವಾದುದು. ...ಗಾಂವಿಯ ಲಿಂಗರಾಜ ಕಾಲೇಜಿನಿಂದ ಕಳೆದ ವರ್ಷವೆ ...ಬಾ ಯಶಃಶಾಲಿಗಳಾಗಿ ಬಿ. ಎ. (ಆನರ್ಸ) ಪಾಸಾಗಿ...ರು. ಕನ್ನಡದಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೇ ...ದಲನೆಯವರು; ಇಂಗ್ಲಿಷಿನಲ್ಲಿ ಲಿಂಗರಾಜ ಕಾಲೇಜಿಗೆ ...ದಲನೆಯವರು. ಒಟ್ಟು ಫರ್ಸ್ಟ್‌ಕ್ಲಾಸಿಗೆ ೧೦-೧೨ ಗುಣ...ದ ಕಡಿಮೆ. ಈಚೆಗೆ ಧಾರವಾಡದ ಕರ್ನಾಟಕ ಹೈಸ್ಕೂಲಿನಲ್ಲಿ ಸ್ವಲ್ಪಾವಧಿ ಶಿಕ್ಷಕರಾಗಿ ಕೆಲಸಮಾಡುತ್ತ, ಎಂ. ಎ. ಗಾಗಿ ಓದುತ್ತಿದ್ದರು.

ಚಿಕ್ಕಂದಿನಿಂದಲೂ ಶ್ರೀಯುತರಿಗೆ ಸಾಹಿತ್ಯ-ಸಂಗೀತಾದಿ ಕಲಾವ್ಯವಸಾಯದಲ್ಲಿ ತುಂಬಾ ಅಭಿರುಚಿ. ನಾಟಕದಲ್ಲಿ ಕುಲರಸಿಕರು. ಅವರ ಕತೆ-ಕವಿತೆಯೇ ಮೊದಲಾದ ೧೮-೨೦ ಕೃತಿಗಳು ಜಯಕರ್ನಾಟಕದಲ್ಲಿಯೂ ಬೇರೆ ಕಡೆಗೂ ಪ್ರಕಟವಾಗಿವೆ. ನಗೆಗಾರಿಕೆಯೆ ಅವರ ಕತೆಗಳ ವೈಶಿಷ್ಟ್ಯ. ವಿಮರ್ಶಕ ಸಾಹಿತ್ಯದ ಕಡೆಗೆ ಅವರ ಒಲವು ಹೆಚ್ಚಾಗಿತ್ತು. ಶ್ರೀ. ಬಿಂದುಮಾಧವ ಬುರ್ಲಿಯವರ ಸಂಪಾದಕತ್ವದಲ್ಲಿ ಹೊರಡುತ್ತಲಿದ್ದ 'ಮಿಂಚಿನ ಬಳ್ಳಿ'ಯ ೨ನೆಯ ಅರಳೆಂದು 'ಪ್ರಾಚೀನ ಭಾರತೀಯ ಶಿಕ್ಷಣಪದ್ಧತಿ' ಯೆಂಬ ಗ್ರಂಥವನ್ನು ಬರೆಯುವುದರಲ್ಲಿ ಅವರು ತೊಡಗಿದ್ದರು. Bertrand Russel ರವರ "Conquest of the Happiness" ಎಂಬ ಸರ್ವಮಾನ್ಯ ಗ್ರಂಥದಲ್ಲಿಯ ವಿಚಾರಗಳನ್ನು ಸಂಗ್ರಹಿಸಿ ಕನ್ನಡಿಗರಿಗಾಗಿ ಕೊಡಬೇಕೆಂದು, ಅದರ ಟಿಪ್ಪಣಿಗಳನ್ನು ಕಲೆ ಹಾಕುತ್ತಲೂ ಇದ್ದರು. ಹಾಡುಗಾರಿಕೆ-ಕೊಳಲು-ಫಿಡಲ್ ಮೊದಲಾದ ಬಗೆಬಗೆಯ ಸಂಗೀತನೈಪುಣ್ಯವನ್ನು ಅವರು ಸಂಪಾದಿಸಿದ್ದರು. ಲಿಂಗರಾಜ ಕಾಲೇಜಿನ ಸಾಹಿತ್ಯ-ಸಂಗೀತ ಸ್ಪರ್ಧೆಗಳಲ್ಲಿ ಹಲವು ಸಲ ಮೇಲ್ತರಗತಿಯನ್ನು ಪಡೆದಿದ್ದರು; ಅಲ್ಲದೆ ಕಾಲೆಜಿನ ವಕ್ತೃತ್ವವೇ ಮೊದಲಾದ ಸಮಾರಂಭಗಳಲ್ಲಿ ಮೆಡಲ್ಲುಗಳನ್ನು ಪಡೆದಿದ್ದರು. ಚಿಕ್ಕಂದಿನಲ್ಲಿ ಆಟದಲ್ಲಿ ಒಂದು ಕಣ್ಣನ್ನು ಕಳೆದುಕೊಂಡಿದ್ದರು; ಆದರೂ ತಮ್ಮ ವ್ಯಾಸಂಗವನ್ನು ಪರಿಶ್ರಮಪೂರ್ವಕವಾಗಿ ಸಾಗಿಸಿದ್ದರು. ಇದೇ ಜನವರಿ ೧೨ನೆಯ ತಾ.ಗೆ ಅವರಿಗೆ ೨೬ನೆಯ ವರ್ಷವು ತುಂಬಿತ್ತು.



ದಿವಂಗತ ವಿಜಯ ಚಿಟಗೇರಿ

ಅವರ ಸ್ವಭಾವವು ಬಹಳ ಕೋಮಲ; ಯಾರ ಗೋಜಿಗೂ ಹೋಗದಂತಹುದು ಮತ್ತು ಸ್ವೀಕೃತಕಾರ್ಯದಲ್ಲಿಯೆ ಮಗ್ನವಾಗಿರುವಂತಹದು. ನಮಗೆ ತಿಳಿದುಬಂದ ಒಂದು ಸಂಗತಿಯನ್ನು ಇಲ್ಲಿ ಹೇಳೋಣವೇ ? ಅವರು ಜೂನಿಯರ್ ಬಿ. ಎ. ಯಲ್ಲಿದ್ದಾಗಲೆ ಅವರ ಮದುವೆಯಾಗಿದ್ದಿತು. ಅವರ ಪತ್ನಿಯ ಹೆಸರು ಲಲಿತೆ; ಹೆಸರಿಗೆ ತಕ್ಕಂತೆ

ರೂಪ ಲಾವಣ್ಯ ಸದ್ಗುಣಗಳಿಂದಲೂ ಲಲಿತೆ. ದಿವಂಗತರಿಗೆ ಪತ್ನಿಯ ಮೇಲೆ ಹೆಚ್ಚಿನ ಮಮತೆ. ಮದುವೆಯಾದ ಮೇಲೆ ಕೆಲದಿನಗಳಲ್ಲಿಯೇ ನಿಷೇಕಪ್ರಸ್ತವೂ ಆಯಿತು. ಶ್ರೀಯುತರು ೬ ತಿಂಗಳ ಪರೀಕ್ಷೆಗಾಗಿ ಹಳ್ಳಿಯಿಂದ ಬೆಳಗಾಂವಿಗೆ ಹೊರಟುಬಂದರು. ಮೊದಲಿನ ಮಂಗಲಗೌರಿ ಗೇನು ತವರುಮನೆಗೆ ಹುಡುಗಿ ಹೋದವಳು ವಿಷಮಜ್ವರಕ್ಕೆ ತುತ್ತಾಗಿ ಅಕಾಲನಿಧನವನ್ನು ಹೊಂದಿದಳು. ಇತ್ತ ವಿಜಯರು ಲಲಿತೆಯ ಬಗ್ಗೆ ಒಂದು ಕೆಟ್ಟ ಕನಸನ್ನು ಕಂಡರಂತೆ. ಮೊಟಾರಿನಿಂದ ಹೊರಟೇಬಿಟ್ಟರು; ಆದರೆ ದಾರಿಯಲ್ಲಿಯೇ ಪತ್ನಿಗೆ ಆರೈಕೆ ಮಾಡಿದ ಡಾಕ್ತರರಿಂದ ಮೃತ್ಯುವಾರ್ತೆಯು ತಿಳಿಯಿತು. ಶ್ರೀಯುತರ ಮನಸ್ಸಿನಲ್ಲಿ ಈ ಸಂಗತಿಯೊಂದು ಕೊನೆಯ ವರೆಗೂ ಶಲ್ಯದಂತೆ ಅಳುಕುತ್ತಿತ್ತು. ಬೇರೆ ಹೆಣ್ಣುಗಳು ನಡೆದು ಬರುತ್ತಿದ್ದವು; ಆದರೆ ಮದುವೆಯ ವಿಚಾರವೇ ಅವರಿಗೆ ಕಹಿಯಾಗಿತ್ತು. ಅವರ ಕಾಯಿಲೆಯು 'ಕರುಳಿನ ಬೇನೆ' (Appendicitis) ಯೆಂದು ನಿಶ್ಚಿತವಾಗಿ, ಇನ್ನು ಶಸ್ತ್ರಕ್ರಿಯೆಗಾಗಿ ಅವರನ್ನು ಕರೆದುಕೊಂಡು ಹೋಗುವ ಸಮಯದಲ್ಲಿಯೇ ಅವರಿಗೆ ಹೆಣ್ಣುಕೊಡಲೆಂದು ಬಂದವರೊಬ್ಬರು ಮನೆಬಾಗಿಲಿಗೆ ಬರಬೇಕೇ ! ?

'ವಿಜಯ'ರವರ ನಿಧನದಿಂದಾದ ದುಃಖದಲ್ಲಿ ಅವರ ಕುಟುಂಬೀಯರಿಗೆ, ವಿಶೇಷತಃ ಗೆಳೆಯರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರಿಗೆ ನಮ್ಮ ಹೃತ್ಪೂರ್ವಕ ಸಹಾನುಭೂತಿಯನ್ನು ಸೂಚಿಸುತ್ತೇವೆ. ದಿವಂಗತರಿಗೆ ಸದ್ಗತಿ ದೊರೆಯಲಿ!

ಸ್ವರ್ಗೀಯ ಡಾ. ಶರಚ್ಚಂದ್ರ ಚಟರ್ಜಿ

ಇವರು ಬಂಗಾಲಿ ಸಾಹಿತ್ಯದಲ್ಲಿ ನವಯುಗದ ನಿರ್ಮಾಣಕರಲ್ಲಿ ಒಬ್ಬರಾದ ಸುಪ್ರಸಿದ್ಧ ಕಾದಂಬರೀ ಲೇಖಕರು. ಕಳೆದ ಜನೆವರಿ ೧೬ನೇ ತಾರೀಖಿನ ದಿನ ತೀರಿಕೊಂಡರು.

ಶ್ರೀ. ಶರಚ್ಚಂದ್ರರ ಜೀವನವು ಎಲ್ಲ ಬಡ ಸಾಹಿತಿಗಳಿಗೆ ಆದರ್ಶಪ್ರಾಯವಾಗಿದೆ. ಬಾಲ್ಯದಲ್ಲಿ ಬಡತನದ ಬೇಗೆಯಲ್ಲಿ ಬೆಂದುಬೆಂದುಹೋದ ಇವರ ಬಾಳು ೩೬ನೇ ವಯಸ್ಸಿನಲ್ಲಿ ಪುನಃ ಚಿಗಿತು ಸಾಹಿತ್ಯದ ನಂದನವನದಲ್ಲಿ ಕಾದಂಬರಿಯ ನವೋನವವಾದ ಫಲವೃಕ್ಷಗಳನ್ನು ಬೆಳೆಸಿತು. ಇವರು ೧೮೭೬ರ ಸಪ್ಟೆಂಬರ ೧೫ನೇ ತಾರೀಖಿನ ದಿನ ಹುಗಳಿ ಜಿಲ್ಲೆಯಲ್ಲಿ ಹುಟ್ಟಿದರು. ಬಡತನದ ಮೂಲಕ ಇವರಿಗೆ ಉಚ್ಚಶಿಕ್ಷಣಕ್ಕೆ ಅನುವು ದೊರೆಯಲಿಲ್ಲ. ಆದರೂ ಸಹಜವಾದ ಮತ್ತು ಅದಮ್ಯವಾದ ಇವರ ಕಾವ್ಯಹೃದಯದಿಂದ ೧೬ನೇ ವಯಸ್ಸಿನಲ್ಲೆ ಒಂದು ಸುಂದರವಾದ ಲಘು ಕಥೆಯು ಹೊರಹೊಮ್ಮಿತು.

ಹೊಟ್ಟೆಯ ಪಾಡಿಗಾಗಿ ಇವರು ಬ್ರಹ್ಮದೇ[ಶದ] ರಂಗೂನಿನಲ್ಲಿ ಒಂದು ಸರಕಾರಿ ನೌಕರಿಯ[ನ್ನು ಹಿಡಿದರು]. ಆದರೆ ಇವರ ಹೃದಯದಲ್ಲಿ ಆಗಲೇ ಸಾಹಿ[ತ್ಯ] ಪರಂಪರೆಗಳ ಕ್ರೂರತನದಿಂದ ಹೊತ್ತಿಸಲ್ಪಟ್ಟ ಕಿಡಿಗಳು ಚಿಟಿಗುಟ್ಟುತ್ತಿದ್ದವು. ಆ ಒ[ಳ]... ಅವರನ್ನು ಸರಕಾರಿ ನೌಕರಿಯಿಂದ ಬಿಡಿ[ಸಿ] ಮರಳಿಸಿತು. ೧೯೧೬ರಲ್ಲಿ ಅವರು ಮೊದ[ಲ] ... ಯನ್ನು ಬರೆದರು. ಅವರ ಹೊಸ ಬೆಳ[ಕಿನ] ... ಗಳಿಗಾಗಿ ಬಂಗಾಲಿ ವಾಚಕವೃಂದವು ... ತಿತ್ತು. ಏಕೆಂದರೆ ಅವರ ಪ್ರತಿಯೊಂದು ... ವಾಚಕರಿಗೆ ಮೆಚ್ಚಿನದಾಯಿತಲ್ಲದೆ, ಅವ[ರ] ... ನಾಲ್ಕೂ ದಿಕ್ಕಿಗೆ ಬಹುಬೇಗ ಪಸರಿಸಿತು.


ಶರಚ್ಚಂದ್ರರಿಗಿಂತ ಪೂರ್ವದಲ್ಲಿ ಕಾದಂಬ[ರಿ] ... ವೆಂತಲ್ಲ. ಬಂಕಿಮಚಂದ್ರರ ಕಾದಂಬರಿಗಳು ... ಜನಪ್ರಿಯವಾಗಿದ್ದವು. ರವೀಂದ್ರನಾಥ[ರು] ... ಜನತೆಯ ದೃಷ್ಟಿ ಉಚ್ಚಜೀವನ-ಧ್ಯೇಯಗ[ಳ] ... ಳಿತ್ತು. ಆದರೆ ಆ ಇಬ್ಬರ ಕೃತಿಗಳಲ್ಲಿಯೂ ... ಆತ್ಮೀಯತೆಯೆನಿಸುತ್ತಿರಲಿಲ್ಲ. ಬಂಕಿಮಚಂದ್ರ[ರ ಕೃತಿ]ಗಳನ್ನು ಓದಿ ಜನರು ಸುಖಸಾಮ್ರಾಜ್ಯ[ದ] ... ತ್ತಿದ್ದರು; ರವೀಂದ್ರರ ಕೃತಿಗಳನ್ನು ... ಆಧ್ಯಾತ್ಮಿಕ ಧ್ಯೇಯಕ್ಕೆ ಕೈನೀಡುತ್ತಿದ್ದರು. [ಶರ]ಚ್ಚಂದ್ರರ ಕೃತಿಗಳಲ್ಲಿ ವಾಸ್ತವತೆಯಿದೆ. ... ಮುತ್ತಲಿನ ಸಮಾಜದಲ್ಲಿಯ ಬಡವರ, ... ಸ್ತ್ರೀಯರ ಉರಿಬಾಳನ್ನು ಅವು ಚಿತ್ರಿಸ[ುತ್ತವೆ] ... ಉರಿಯಲ್ಲಿಯೇ ತಾಳ್ಮೆ ತಂದುಕೊಳ್ಳುವ ನಿ[ಶ್ಚಯ]... ಅವು ಪ್ರೇರಿಸುತ್ತವೆ. ಅವರ 'ದೇವದಾಸ' ... ಬರಿಯು ವಾಕ್ಚಿತ್ರವಾಗಿ ದೇಶದಲ್ಲೆಲ್ಲ ಶರ[ಚ್ಚಂದ್ರರ] ... ಯಕ್ಕೆ ಪೂಜ್ಯತೆಯನ್ನು ಹುಟ್ಟಿಸಿತು. ಅವ[ರ] ... ಕಾದಂಬರಿಗಳು ದೇಶ, ವಿದೇಶಗಳ ಭಾಷೆಗಳ[ಲ್ಲಿ] ... ಲ್ಪಟ್ಟವೆಯಲ್ಲದೆ ಫ್ರಾನ್ಸದ ರೊಮೆ ರೊಲ[ಾ] ... ಕೂಡ "ವಿಶ್ವಸಾಹಿತ್ಯದಲ್ಲಿ ಗಣ್ಯರಾಗಬೇ[ಕಾದವರು ಶರ]ಚ್ಚಂದ್ರರು" ಎಂದಿದ್ದಾರೆ.

ಇಂತಹ ಭಾರತದ ಜಗತ್ಪ್ರಸಿದ್ಧ ವಾಙ್ಮಯ ... ಅದೃಶ್ಯವಾದುದು ನಮ್ಮ ದುರ್ದೈವ. ... ಗಾಗಿ ಪ್ರತಿಯೊಬ್ಬ ಭಾರತೀಯನೂ ಶ್ರದ್ಧಾ[ಂಜಲಿ] ಅರ್ಪಿಸುವದು ಕರ್ತವ್ಯವಾಗಿದೆ.

ಕನ್ನಡದ ಮುನ್ನಡೆ

'ಶ್ರೀ'ಯವರಿಗೆ ಗೆಲುವಾಗಲಿ!

ಕಳೆದ ತಿಂಗಳು ೨೦ನೇ ತಾರೀಖಿಗೆ ಬೆಂಗಳೂರಿನ ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ, ಕನ್ನಡದ ನವ



ಶ್ರೀ|| ಗಳಾದ ಡಿ. ವಿ. ಜಿ., ಬಿ. ಎಂ. ಶ್ರೀ., ಶ್ರೀನಿವಾಸರು

ಸಾಹಿತ್ಯಾಚಾರ್ಯರಲ್ಲೊಬ್ಬರಾದ ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ೫೫ನೆಯ ವರ್ಷದ ವರ್ಧಂತಿಗಾಗಿ ಸತ್ಕಾರಕೂಟವನ್ನೇರ್ಪಡಿಸಿದ್ದರು. 'ಶ್ರೀ'ಯವರಿಗೆ ಈಗ ಕರ್ನಾಟಕ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷಪದವಿಯು ನಡೆದುಬಂದಿದೆ. ಮೊದಲು ಆ ಸ್ಥಾನದಲ್ಲಿದ್ದ ಶ್ರೀ. ಡಿ. ವಿ. ಗುಂಡಪ್ಪನವರಿಂದ ಪರಿಷತ್ತಿಗೊಂದು ಗಾಂಭೀರ್ಯವೂ ವ್ಯವಸ್ಥೆಯೂ ಮಾನವೂ ಉಂಟಾದವು. ಈಗ ಶ್ರೀಯವರ ಆಡಳಿತದಲ್ಲಿ ಪರಿಷತ್ತು ಅಖಿಲ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯಾಗುವುದೆಂದೂ, ಉತ್ತರ ಕರ್ನಾಟಕಕ್ಕೆ ಒಂದು ಪರಿಷತ್ಶಾಖೆ ಬೇಕೆಂಬ ಇತ್ತಣವರ ಅಪೇಕ್ಷೆ ಸಿದ್ಧಿಗೊಂಡು ದಕ್ಷಿಣೋತ್ತರ ಕರ್ನಾಟಕ ವಾದಗಳ ಪರಿಸಮಾಪ್ತಿಯಾಗುವುದೆಂದೂ ನಾವು ದೃಢವಾಗಿ ನಂಬಿದ್ದೇವೆ. ಶ್ರೀಯವರಿಗೆ ಉತ್ತರೋತ್ತರವಾದ ಗೆಲುವೂ ಆರೋಗ್ಯವೂ ಹೆಚ್ಚಿ ಕರ್ನಾಟಕ ಮಾತೆಯು ಅವರಿಂದ ಇನ್ನೂ ಅನೇಕ ವರ್ಷಗಳ ವರೆಗೆ ಸೇವೆಯನ್ನು ಪಡೆಯಲೆಂದು ಅವರ ವರ್ಧಂತಿಯ ಶುಭಮುಹೂರ್ತದಲ್ಲಿ ಹಾರೈಸುತ್ತೇವೆ.

ಜಯದೇವ ಲ್ಯಾಬೊರೇಟರಿ ಶಂಕುಸ್ಥಾಪನೆ

ಮೈಸೂರಲ್ಲಿ ರೋಗಗಳ ಸಂಶೋಧನಾರ್ಥವಾಗಿ ಪ್ಯಾಥಾಲಾಜಿಕಲ್ ಲ್ಯಾಬೊರೇಟರಿಯನ್ನು ಸರಕಾರದವರು ಕಟ್ಟಿಸಿದ್ದಾರಷ್ಟೇ. ಅದರ ಕಟ್ಟಡದ ಶಂಕುಸ್ಥಾಪನೆಗಾಗಿ ಶ್ರೀಮನ್ಮಹಾರಾಜರು ಚಿತ್ರದುರ್ಗದ ಶ್ರೀ. ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರನ್ನು ಆಮಂತ್ರಿಸಿ ಅವರ ಹಸ್ತದಿಂದ ೨೪-೬-೧೯೩೮ನೇ ದಿನ ವಿಜೃಂಭಣೆಯಿಂದ ಶಂಕುಸ್ಥಾಪನೋತ್ಸವವನ್ನು ನೆರವೇರಿಸಿದರು.

"ವಸ್ತುವಿಜ್ಞಾನಶಾಸ್ತ್ರ, ಪ್ರಾಣಿಶಾಸ್ತ್ರ, ರಸತಂತ್ರ, ಫಾರ್ಮಕೋಲೊಜಿ ಮುಂತಾದವುಗಳೆಲ್ಲ ಚೆನ್ನಾಗಿ ಬೆಳವಣಿಗೆ ಹೊಂದಿ ಅನುಭವದಿಂದ ವಿಸ್ತಾರವಾಗಿವೆ. ಶಸ್ತ್ರಕ್ರಿಯೆಯು ಅದ್ಭುತವಾದ ಸಾಹಸವನ್ನು ಮಾಡಿದೆ. ಮೊದಲು ಇದು ಸ್ವಪ್ನದಲ್ಲಿಯೂ ಸಾಧ್ಯವೆನಿಸಿದ್ದಿಲ್ಲ. ಅಂತೂ ವಿಜ್ಞಾನವು ಮಹತ್ತಾದ ಕೆಲಸವನ್ನು ಮಾಡಿದೆ. ಆರೋಗ್ಯ-ಶುಚಿಶಾಸ್ತ್ರವು ಎಷ್ಟೋ ರೋಗಗಳನ್ನು ಅಂಕೆಗೆ ತಂದಿದೆ. ರೋಗನಿದಾನತಂತ್ರವು ಬಹಳ ಮುಂದೆ ಸಾಗಿದೆ." ಎಂದು ಶ್ರೀಮನ್ಮಹಾರಾಜರು ಶಂಕುಸ್ಥಾಪನೆಯ ಕಾಲದಲ್ಲಿ ಭಾಷಣ ಮಾಡಿದರು. ರೋಗನಿದಾನತಂತ್ರವು ಪ್ರಬಲವಾಗಿ ಬೆಳೆದು, ಗುಣವಾಗದ ರೋಗವೇ ಇಲ್ಲನೆಂಬ ಪರಿಸ್ಥಿತಿಗೆ



ಸದ್ಯಕ್ಕೆ ಬರಲಿದೆ ಎಂದು ಮುಂತಾಗಿಯೂ ತಿಳಿಸಿದರು. ಮಾದರಿ ಮೈಸೂರು ಇನ್ನೂ ಮುಂದರಿಯಲಿ !

ಕನ್ನಡಿಗರಿಗೆ ಮಾನ

ಲಂಡನಿನಲ್ಲಿ ಈಗ ಡೆಪ್ಯುಟಿ ಹೈ ಕಮಿಶನರಾಗಿರುವ ಶ್ರೀ| ಬೆನಗಲ್ ರಾಮರಾವ್ ಐ. ಸಿ. ಎಸ್. ಇವರು ಆಫ್ರಿಕದಲ್ಲಿ ಹಿಂದೀ ಸರಕಾರದ ಏಜಂಟ್ ಜನರಲ್‌ರಾಗಿರುವ ಸರ್ ರಜಾ ಅಲಿಯವರ ಸ್ಥಾನದಲ್ಲಿ ಏಜಂಟ್ ಜನರಲ್‌ರಾಗಿ ನೇಮಕ ಹೊಂದಿರುವರಾಗಿಯೂ ಶ್ರೀ| ರಾಯರು

ಆ ಹುದ್ದೆಯನ್ನು ಸ್ವೀಕರಿಸಿರುವರಾಗಿಯೂ ತಿಳಿದು ಬರುತ್ತದೆ.

ಕನ್ನಡಿಗರು ಹೀಗೆ ಹೆಚ್ಚುಹೆಚ್ಚಿನ ಪದವಿಗಳಿಗೇರಲಿ!

ಕನ್ನಡ ಪುಸ್ತಕಗಳಿಗೆ ಬಹುಮಾನ

ಕನ್ನಡಿಗರೆಲ್ಲರಿಗೂ ಈಗಾಗಲೆ ತಮ್ಮ ಭಾಷಾ ಸಂಶೋಧನಾತ್ಮಕ ನವವಿಚಾರಗಳಿಂದ ಪರಿಚಿತರಾದ ಶ್ರೀ. ಶಂ. ಬಾ. ಜೋಶಿಯವರು ಬರೆದ ಕನ್ನಡನುಡಿಯ ಹುಟ್ಟು, ಕದ ವೀರಕ್ಷತ್ರಿಯರು ಎಂಬೆರಡು ಪುಸ್ತಕಗಳಿಗೆ ... ಸಿನ ಲಿಟರರಿ ಆ್ಯಂಡ್ ಟೆಕ್ಸ್ಟ್ ಬುಕ್ ಕಮಿಟಿ ... ೭೫ ರೂಪಾಯಿಗಳ ಬಹುಮಾನವನ್ನೂ ಶ್ರೀ. ವೆಂಕಟರಾಯರ ಗೀತಾಮಂಜರಿಗೆ ೩೦ ರೂಪಾಯಿ ... ಮಾನವನ್ನೂ ಕೊಟ್ಟಿದ್ದಾರೆ.

ಸಾದರ ಸ್ವೀಕಾರ

೧. **ಸಂಗೀತಾಚಾರ್ಯ (MUSIC—MASTER).** ಲೇಖಕರು—ಶ್ರೀ. ಎಸ್. ಎನ್. ಹರಿದಾಸ. ಪ್ರಕಾಶಕರು: ಸಂಗೀತ ಕಲಾಮಂದಿರ, ಮೂಲ್ಕಿ. ಶ್ರೀ. ಎಸ್. ಎನ್. ಆದ್ಯಂತಾಯರವರ ಮುನ್ನುಡಿ. ಕ್ರೌ. ೧/೮ ದ ೧೫೫ ಪುಟಗಳು. ಬೆಲೆ ೦—೧೦—೦.

೨. **ದಸರೆಯ ಕಾಣಿಕೆ** (ಕವಿತೆ). ಲೇಖಕರು—ಶ್ರೀ. ಜಿ. ಎನ್. ಲಕ್ಷ್ಮಣ ಪೈ. ಪ್ರಕಾಶಕರು—ಹರಿಹರ ಪುಸ್ತಕಾಲಯ, ಪುತ್ತೂರು. ಕ್ರೌ. ೧/೮ ದ ೧೮ ಪುಟಗಳು. ಬೆಲೆ ೦—೨—೦.

೬. **ಯಶೋಮಂದಿರ.** ಲೇಖಕರು—ಶ್ರೀ. ಮಾಧವ ಹರೀಪಂತ ಚಿಟಣೀಸ. ಕ್ರೌ. ೧/೮ ದ ೧೦೧ ಪುಟಗಳು. ಬೆಲೆ ೦—೬—೦.

೧೩. **ಶೂರ ಸುಭಾಸಚಂದ್ರ ಬೋಸ.** ಲೇಖಕರು—ಶ್ರೀ. ಪಾಟೀಲ ಕಲ್ಲನಗೌಡರು, ಬಿ ಎ., ಸೇವಾಪುಷ್ಪ ಗ್ರಂಥಮಾಲೆಯ ೫ನೆಯ ಅರಳು. ಕ್ರೌ. ೧/೮ ದ ೧೪೪ ಪುಟಗಳು. ಬೆಲೆ ೦—೧೨—೦.

೫. **ಲೋಭಿ ಅಥವಾ ಕಾರ್ಪಣ್ಯ** (ಸಾಮಾಜಿಕ ನಾಟಕ). ಲೇಖಕರು—ಶ್ರೀ. ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ. ಕ್ರೌ. ೧/೮ ದ ೯೪ ಪುಟಗಳು. ಬೆಲೆ ೦—೮—೦.

ಪತ್ರಿಕೆಗಳು

೩. **ಕನ್ನಡ ಕೋಗಿಲೆ.** ಸಂಪಾದಕರು— ಶ್ರೀ. ಪಂಚಾಕ್ಷರಿ ಗುರುಪಾದಮಠ. ೧ನೆಯ ಹೂವಿನ ೧ನೆಯ ಎಸಳು. ಕ್ರೌ. ೧/೪ ದ ೨೬ ಪುಟಗಳು. ವಾರ್ಷಿಕ ಚಂದಾ ೧—೮—೦.

೧೦. ಮುದ್ರಣ ಪ್ರಕಾಶ. ಪುಣೆ ಪ್ರೆಸ್ ಓನರ್ಸ್ ಅಸೋಸಿಯೇಶನ್‌ದ ಪರವಾಗಿ ಪ್ರಕಟವಾಗುವ ತ್ರೈ... ಮೊದಲನೆಯ ವರ್ಷದ ಪ್ರಥಮ ಸಂಚಿಕೆ. ಸಂಪಾದಕರು— ಶ್ರೀ. ಶಂಕರ ಬಳವಂತ ಸಹಸ್ರಬುದ್ಧೆ, ಬಿ. ಎ. ... ಶಂಕರ ರಾಮಚಂದ್ರ ದಾತೆ, ಬಿ. ಎ. ಕ್ರೌ. ... ೪೮ ಪುಟಗಳು. ವಾರ್ಷಿಕ ಚಂದಾ ೨—೦—...

೧೧. **INDIAN MARKET**—ಮಾಸಪತ್ರಿಕೆ. ಸಂಪಾದಕರು—ಶ್ರೀ. ಎಚ್. ಜಿ ಮುದಗಲ್ಲ. ... ೨೨ ಪುಟಗಳು. ವಾರ್ಷಿಕ ಚಂದಾ ೫—೦—...

೧೨. **ಪ್ರಭಾತ** (ವಿಶೇಷಾಂಕ). ಕ್ರೌ. ... ೫೪ ಪುಟಗಳು. ಬಿಡಿ ಸಂಚಿಕೆ ಬೆಲೆ ೦—೨—೦.

೧೮. **INNER CULTURE** (California). ... ಕರು ಶ್ರೀ. ಎಲ್. ವ್ಹಿ. ಪ್ರ್ಯಾಟ್. ವಾರ್ಷಿಕ ೨॥ ಡಾಲರು. ಕ್ರೌ. ೧/೮ ದ ೬೬ ಪುಟಗಳು. ಬಿ... ೨೫ ಸೆಂಟುಗಳು

೧೯. **ಆಧುನಿಕ ಭಾರತ**—ರೈತರ ಮತ್ತು ಕಾ... ಪರವಾಗಿ ವಾದಿಸುವ ಪಕ್ಷಪತ್ರಿಕೆ. ಸಂಪಾದಕರು ... ಯಂ. ಎಸ್. ಶೆಟ್ಟಿ. ಡೆ. ೧/೪ ದ ೨೪ ಪುಟಗಳು ... ಚಂದಾ ೨—೦—೦. ಬಿಡಿ ಸಂಚಿಕೆ ೦—೧—...

೨೦. चित्रमयजगत् (स्पेन अंक) ಕ್ರೌ. ... ೬೦ ಪುಟಗಳು.

ಇತರ

೯. **ಕರ್ನಾಟಕ ಒಕ್ಕಲತನದ ಪ್ರದರ್ಶನ** ...

೧೪ **FIRST ANNUAL REPORT** Universal Buddha Society, Shri Krishna ... Road, Bangalore City. ಕ್ರೌ. ೧/೮ ದ ...

ವಿಚಾರ ವೇದಿಕೆ

मरुद्भिरग्न आ गहि

ರಾಷ್ಟ್ರಪತಿಗಳ ಅಧ್ಯಕ್ಷ ಭಾಷಣಸಾರ

೧. ಬಂಡವಾಳದ ರಾಜ್ಯದಿಂದ ಬ್ರಿಟಿಷರೂ ಗುಲಾಮರೇ ಆಗಿದ್ದಾರೆ. ೨. ಹಿಂದುಸ್ತಾನದ ಹೋರಾಟವು ಬ್ರಿಟಿಷರ ಬಿಡುಗಡೆಗಾಗಿಯೂ ಇದೆ. ೩. ಭೇದನೀತಿಯು ಇಷ್ಟು ದಿನ ಬ್ರಿಟಿಷ್ ಸಾಮ್ರಾಜ್ಯಸ್ಥಿತಿಗೆ ಸಾಧಕವಾಗಿತ್ತು, ಅದೀಗ



ಬಾಧಕವಾಗಿದೆ. ೪. ಸಂಸ್ಥಾನೀ ಪ್ರಜೆಗಳ ಹೋರಾಟದಲ್ಲಿ ರಾಷ್ಟ್ರಸಭೆಯು ಭಾಗವಹಿಸಬೇಕು. ೫. ಭಾವೀ ಸ್ವರಾಜ್ಯದಲ್ಲಿ ಸಿರಿವಂತರಿಗೆ ಹಾನಿಯೂ ಬಡವರಿಗೆ ಲಾಭವೂ ಇದೆ. ೬. ಕಾಂಗ್ರೆಸಿನ ಅಧಿಕಾರಗ್ರಹಣವು ಪ್ರಾಯೋಗಿಕವಾಗಿದೆ. ೭. ಸ್ವಾತಂತ್ರ್ಯಪ್ರಾಪ್ತಿಯಾದ ಮೇಲೆ ಸ್ವಾತಂತ್ರ್ಯಪಕ್ಷವೇ ರಾಷ್ಟ್ರೀಯ ಪುನರ್ಘಟನೆಯ ಕಾರ್ಯವನ್ನು ಕೈಕೊಳ್ಳಬೇಕು. ೮. ನಮ್ಮ ಲಿಪಿಯು ರೋಮನ್ ಆಗತಕ್ಕದ್ದು. ೯. ಯಂತ್ರಸಹಾಯದಿಂದ ದೊಡ್ಡದೊಡ್ಡ ಉದ್ಯೋಗಗಳನ್ನು ಬೆಳೆಸಬೇಕು. ೧೦. ಐರ್ಲಂಡು ವರ್ಕಿಂಗ್ ಕಮಿಟಿಗೆ ಆದರ್ಶವಾಗಲಿ. ವರ್ಕಿಂಗ್ ಕಮಿಟಿಯು ಭಾವೀ ಸ್ವರಾಜ್ಯದ ಗುಪ್ತ ಮಂತ್ರಿಮಂಡಲವು. ೧೧. ಸತ್ತೆಯ ಸೂತ್ರಗಳು ಕೈಗೆ ಬಂದಾಗ ಅವನ್ನು ಸರಿಯಾಗಿ ಆಡಿಸುವಂತೆ ವಿವಿಧ ಖಾತೆಗಳ ಜ್ಞಾನವನ್ನು ವ. ಕಮಿಟಿಯ ಸದಸ್ಯರು ಸಂಪಾದಿಸಬೇಕು. ೧೨. ನಿಜವಾದ ಸಂಘರಾಜ್ಯದಲ್ಲಿ ಜನರಿಗೆ ಸ್ವಾಯತ್ತತೆಯು ದೊರೆಯಬೇಕು; ಸ್ವಾತಂತ್ರ್ಯವನ್ನೂ ನಾಗರಿಕ ಹಕ್ಕುಗಳನ್ನೂ ಸಮನಾಗಿ ಉಪಭೋಗಿಸುವ ಘಟಕಗಳಿರಬೇಕು; ಚುನಾವಣೆಯ ಪದ್ಧತಿಯು ಪ್ರಜಾಪ್ರಭುತ್ವದ ತತ್ವಗಳನ್ನು ಅನುಸರಿಸಿರಬೇಕು. ೧೩. ಶಾಸನಭಂಗದ ಅಸ್ತ್ರವನ್ನು ಉಪಯೋಗಿಸಿಯೂ ಈಗಿನ 'ಸಂಘರಾಜ್ಯ'ಯೋಜನೆಯನ್ನು ಮಣ್ಣುಮುಕ್ಕಿಸುವೆವು. ೧೪. ರೈತರ-ಕೂಲಿಕಾರರ ಸಂಘಗಳಿಗೂ ಸಾಮ್ಯವಾದಿ ಪಕ್ಷಕ್ಕೂ ಕಾಂಗ್ರೆಸ್ ಘಟನೆಯಲ್ಲಿ ಸ್ಥಾನವಿದೆ. ೧೫. ಸಾಮ್ಯವಾದವು ಈಗಲೇ ಬಿಡಿಸಬೇಕಾದ ಸಮಸ್ಯೆಯಾಗಿರದಿದ್ದರೂ ಅದರ ಪ್ರಚಾರವು ಅವಶ್ಯ. ಸ್ವಾತಂತ್ರ್ಯಪ್ರಾಪ್ತಿಯ ತರುವಾಯ ಸಾಮ್ಯವಾದಕ್ಕೇ ಪಟ್ಟಗಟ್ಟಬೇಕಾಗಿದೆ. ೧೬. ರಾಷ್ಟ್ರೀಯ ಕಾರ್ಯಕರ್ತರಿಗೆ ಶಿಕ್ಷಣ ಕೊಡುವ ಶಾಲೆಗಳನ್ನು ಸ್ಥಾಪಿಸಬೇಕು. ನಾಝಿಗಳ 'ಕೂಲಿಕಾರರ ಸೇವಾ ಸಂಘ'ಗಳಂತಹ ಸಂಸ್ಥೆಗಳು ಮಾರ್ಗದರ್ಶಿಯಾಗಿವೆ. ೧೭ ಸ್ವಯಂಸೇವಕದಲದ ಸ್ವರೂಪವನ್ನು ವ್ಯಾಪಕವಾಗಿಯೂ ಸಂಘಟಿತವಾಗಿಯೂ ಇಡಬೇಕು. ೧೮. ಸಾಮ್ರಾಜ್ಯದ ಸಂಕಟವೇ ಹಿಂದುಸ್ತಾನದ ಮೋಕ್ಷನಿಮಿಷ. ಇಜಿಪ್ತ ಒಂದೂ ಗುಂಡು ಹೊಡೆಯದೆ ಸ್ವಾತಂತ್ರ್ಯವನ್ನೆಂತು ಸಂಪಾದಿಸಿತು? ೧೯. ಪರರಾಷ್ಟ್ರಗಳೊಡನೆ ಸ್ನೇಹಸಂಬಂಧಗಳನ್ನು ಬೆಳೆಸಬೇಕು; ವಿದ್ಯಾರ್ಥಿಗಳು ನಮ್ಮ ಪರರಾಷ್ಟ್ರೀಯ ವಕೀಲರು. ವ್ಯಾಪಾರಿಗಳು ನಮ್ಮ ಸುಬೇದಾರರು. ಕಲಾತ್ಮಕ-ಸಾಂಸ್ಕೃತಿಕ ಸಂಬಂಧಗಳನ್ನೂ ಹೆಚ್ಚಿಸಬೇಕು. ೨೦. ರಾಜಬಂದಿಗಳ ಮತ್ತು ಸ್ಥಾನಬಂದಿಗಳ ಬಿಡುಗಡೆಯಾಗುವಂತೆ ಭಗೀರಥ ಪ್ರಯತ್ನಗಳನ್ನು ಮಾಡಬೇಕು; ಮುಕ್ತ ರಾಜಬಂದಿಗಳ ಜೀವನದ ವ್ಯವಸ್ಥೆಯನ್ನು ಮಾಡಬೇಕು. ೨೧. ಯುದ್ಧಪ್ರವೃತ್ತ ಹಿಂದೀ ಜನತೆಯ ಮುಖವೇ ರಾಷ್ಟ್ರಸಭೆ. ಸಾಮ್ರಾಜ್ಯವಿರೋಧಕ ಗುಂಪುಗಳೆಲ್ಲ ಕಾಂಗ್ರೆಸ್ ಧ್ವಜದಡಿಯಲ್ಲಿ ಒಂದುಗೂಡಬೇಕು. ೨೨. ಹಿಂದುಸ್ತಾನದ ಉದ್ಧಾರವೆ ಜಗದ ಉದ್ಧಾರವು. ಮ. ಗಾಂಧಿಯವರಿಗೆ ದೀರ್ಘಾಯುಷ್ಯ ಲಭಿಸಲಿ!

ನವನಿರ್ಮಾಣದ ಗೊತ್ತುಗುರಿಗಳು

"ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷವೇ ಅದು ಪ್ರಾಪ್ತವಾದ ಮೇಲೆ ರಾಷ್ಟ್ರೀಯ ಪುನರ್ಘಟನೆಯ ಕಾರ್ಯವನ್ನು ಕೈಕೊಳ್ಳತಕ್ಕದು. ಆ ಪಕ್ಷವು ಸ್ವಾತಂತ್ರ್ಯ ಪ್ರಾಪ್ತಿಯ ತರುವಾಯ ಒಮ್ಮೆಲೆ ಮಾಯವಾದರೆ ದೇಶದಲ್ಲಿ ಗೊಂದಲ ವೆದ್ದೀತು. ಮಹಾಯುದ್ಧೋತ್ತರ ಕಾಲದಲ್ಲಿ ಯುರೋಪ್ ಖಂಡದಲ್ಲಿಯೂ ಇದೇ ಅನುಭವವು ಬಂದಿದೆ. ಈ ಪಕ್ಷವು ಮುಂದೆಯೂ ಪ್ರಬಲವಾಗುಳಿದರೆ ಬೇರೆ ಪಕ್ಷಗಳನ್ನು ಹಿಚುಕಿಹಾಕಬಹುದೆಂಬ ಭೀತಿಯು ಕೆಲವರಿಗಿರುವುದು. ರಶಿಯ, ಜರ್ಮನಿ, ಇಟಲಿಗಳ ಕಡೆಗೆ ಅವರು ಬೊಟ್ಟು ಮಾಡಿ ತೋರಿಸುವರು. ರಾಷ್ಟ್ರಸಭಾಪಕ್ಷವು ಪ್ರಜಾಪ್ರಭುತ್ವ ಪದ್ಧತಿಯನ್ನು ಬಿಡದಿದ್ದರೆ, ಮತ್ತು ಉಳಿದ ಪಕ್ಷಗಳಿಗೆ ಬಾಳಗೊಟ್ಟರೆ, ಈ ಆಕ್ಷೇಪಕ್ಕೆ ಅವಕಾಶವಿರಬೇಕಾಗಿಲ್ಲ. ಸ್ವಾತಂತ್ರ್ಯಪ್ರಾಪ್ತಿಯ ತರುವಾಯದ ನಮ್ಮ ಕಾರ್ಯಕ್ರಮವೆಂದರೆ, ದಾರಿದ್ರ್ಯ, ನಿರಕ್ಷರತೆ, ರೋಗಾದಿಗಳ ಮೂಲೋಚ್ಚಾಟನೆ, ಶಾಸ್ತ್ರೀಯ ಪದ್ಧತಿಯಿಂದ ಸಾಮ್ಯವಾದದ ತಳಹದಿಯ ಮೇಲೆ ಸರಕುಗಳ ಉತ್ಪಾದನೆ-ಪ್ರಸರಣೆ. ನಮ್ಮ ರಾಷ್ಟ್ರೀಯ ಸರಕಾರವು ಪುನರ್ಘಟನೆಯ ನಕ್ಷೆಯನ್ನು ಸಿದ್ಧಪಡಿಸಲು ಒಂದು ಕಮಿಶನನ್ನು ಮೊಟ್ಟಮೊದಲು ನಿಯಮಿಸಬೇಕಾಗುವುದು; ಈ ಯೋಜನೆಯ ಪೂರ್ವಭಾಗವು ತೀವ್ರವೂ ಅಗತ್ಯಪೂರ್ವಕವೂ ಆಗಬೇಕಾದುದು ಮತ್ತು ಉತ್ತರಭಾಗವು ಕ್ರಮವಾಗಿ ಜರುಗಬೇಕಾದುದು. ರಾಷ್ಟ್ರವನ್ನು ತ್ಯಾಗಕ್ಕಾಗಿ ತಯಾರಿಸುವುದು, ಹಿಂದುಸ್ಥಾನದ ಏಕೀಕರಣವನ್ನು ಮಾಡುವುದು ಮತ್ತು ಸ್ಥಾನಿಕ-ಸಾಂಸ್ಕೃತಿಕ ಸ್ವಾಯತ್ತತೆಗೆ ಇಂಬು ಮಾಡಿಕೊಡುವುದು ಆದ್ಯ ಕಾರ್ಯಕ್ರಮವು. ಮಧ್ಯವರ್ತಿ ಪ್ರಭುತ್ವವು ರಾಷ್ಟ್ರದ ಏಕೀಕರಣವನ್ನು ಸಾಧಿಸಿದ ಮೇಲೆ, ನಾವು ಎಲ್ಲ ಜಾತಿಗಳವರಿಗೂ ಪ್ರಾಂತಗಳಿಗೂ ರಾಜಕೀಯ-ಸಾಂಸ್ಕೃತಿಕ ವಿಷಯಗಳಲ್ಲಿ ಸ್ವಾಯತ್ತತೆಯನ್ನು ಕೊಟ್ಟು ಸ್ವಾಸ್ಥ್ಯವನ್ನುಂಟುಮಾಡುವೆವು."

ಸುಭಾಷರ ಧ್ಯೇಯವಾದವು ಉನ್ನತವಾದುದಾದರೂ ಅಷ್ಟೇ ನಿಚ್ಚಳವಾದುದು. ವಿವಿಧ ರಾಜಕೀಯ ದೃಷ್ಟಿಕೋನಗಳನ್ನು ಸಮನ್ವಯಿಸಿ, ಮತ್ತೂ ಹೋರಾಟದ ಅಗ್ರಭಾಗದ ತತ್ವಜ್ಞಾನವನ್ನು ಹೇಳುವ ಅವರ ಚಾತುರಿಯು ಅಸದಳವಾದುದು.

ಬಿಕ್ಕಟ್ಟಿನಿಂದ ಒಕ್ಕಟ್ಟು

ರಾಜಬಂದಿ ವಿಮೋಚನೆಯ ವಿಷಯ... ವಕ್ಕೆ ಸ್ವಾಭಿಮಾನಶಾಲಿಗಳಾದ ಸಂಯುಕ್ತ... ಗಳ ಮಂತ್ರಿಗಳು ರಾಜೀನಾಮೆ ಕೊಟ್ಟ... ವಿಠ್ಠಲನಗರದಲ್ಲಿ ಕಾಂಗ್ರೆಸ್ ಅಧಿವೇಶನ... ವಿಷಯವು ಕವಿದಿದ್ದರೆ ಸೋಜಿಗವಿಲ್ಲ... ಗಳೆರಡರಲ್ಲೂ ರಾಜನೀತಿಯ ಕುಶಲ ಕೈಚಳಕ... ಬಲ್ಲವರು ಗಾಂಧಿಯವರೊಬ್ಬರೇ. ಒ... ಮುಂಗಾಣದವರಾದಾಗ, ಕಳೆದ ಸಲ '... ಬೇಡಿಕೆಯ ತೊಡಕಿನ ಸಮಯದಲ್ಲಿ ಗಾಂಧಿ... ದಿಂದ ಹಾದಿ ತೆಗೆದರು. ಈಗಲೂ ಅ... ಗಳಾದರು. ಬಿಕ್ಕಟ್ಟಿನಿಂದ ಉಗ್ರ-ಮಂದ ಪಕ್ಷ... ಒಗ್ಗೂಡಿದವು; ಕಾಂಗ್ರೆಸ್ಸಿನ ವರ್ಚಸ್ಸ ಬೆಳೆ... ಸ್ರಾಯರು ಶರಣಾಗತರಾದರು. ಕಾಂಗ್ರೆಸ... ಪಾರಜವು ಈಗಿನಷ್ಟು ಎಂದೂ ಏರಿರಲಿಲ್ಲ.

ಅಲುಗಾಡುವ ಅಡಿಗಲ್ಲು ಗಟ್ಟಿಯಾಯಿತು

ಮಂತ್ರಿಗಳು ಅಧಿಕಾರತ್ಯಾಗ ಮಾಡಿ... ಸ್ವೀಕಾರಮಾಡಿದರು—ಇದರಲ್ಲಿ ಕಾಂಗ್ರೆಸ... ತೆಂದು ಕೇಳುವವರಿಗೆ, ಕಾಂಗ್ರೆಸ್ ಬಹಿರಂಗ... ದಲ್ಲಿ ಪಾಸಾದ 'ಬಿಕ್ಕಟ್ಟ'ಗೆ ಸಂಬಂಧಿಸಿದ... ಉತ್ತರ ದೊರೆಯುತ್ತದೆ:

'ರಾಜಬಂದಿಗಳ ಬಿಡುಗಡೆಯ... ದೈನಂದಿನ ಆಡಳಿತಕ್ಕೆ ಸೇರಿದೆ; ಆ ಬಗ್ಗೆ... ರೊಡನೆ ಮತ್ತೆ ಮತ್ತೆ ಚರ್ಚಿಸುವುದು... ವೆಂದು ಕಾಂಗ್ರೆಸಿನ ಮತವಿದೆ. ... ಮಾರ್ಗ ತೋರಿಸುವುದು ಮತ್ತು ಸಲ... ವುದು ಗವರ್ನರರ ಕಾರ್ಯವಾಗಿದ್ದ... ಆಡಳಿತಕ್ಕೆ ಸಂಬಂಧಪಟ್ಟ ಮಂತ್ರಿಗ... ನೀತಿಯಲ್ಲಿ ಕೈಹಾಕುವುದು ಅವರ ಕೆಲಸ...

ಈ ನೀತಿಯನ್ನನುಸರಿಸಿಯೆ ವರ್ಕಿಂಗ್... ಮಂತ್ರಿಗಳಿಗೆ ರಾಜಬಂದಿಗಳನ್ನು ಬಿಡುಗ... ಮತ್ತು ತತ್ಸಂಬಂಧಿಯಾದ ಆಜ್ಞೆಗಳಿಗೆ ಪ್ರತಿ... ದರೆ ಅಧಿಕಾರಕ್ಕೆ ತ್ಯಾಗಪತ್ರ ಕೊಡಲು ಅ... ದ್ದಿತು. ಗವರ್ನರ ಜನರಲ್ಲರು ಕೈಹಾಕಿದು... ಮಂತ್ರಿಗಳು ಹೊರಬಿದ್ದು ಬಂದ ಮೇಲೆ ಹಸ...

ಸಿನಲ್ಲಿ ಬಹಿರಂಗವಾಗಿ ಮೇಲೆ ಹೇಳಿದಂತೆ ಈ ನೀತಿಯನ್ನು ಸ್ಪಷ್ಟಪಡಿಸಲಾಯಿತು ಮತ್ತು ವಾಯಿಸ್ರಾಯರಿಗೆ ಸಂಧಾನದ ಮಾರ್ಗವನ್ನು ತೆರೆದಿಡಲಾಯಿತು:

'ಗವರ್ನರ ಜನರಲ್ಲರು ತಮ್ಮ ನಿರ್ಣಯದ ಮರುವಿಚಾರ ಮಾಡಲಿ; ಮತ್ತು ರಾಜಬಂದಿಗಳ ಬಿಡುಗಡೆಯ ವಿಷಯದಲ್ಲಿ ಗವರ್ನರರಿಗೆ ಶಾಸನಬದ್ಧವಾಗಿ ನಡೆಯಲು ಮತ್ತು ತಮ್ಮ ಮಂತ್ರಿಗಳ ಸಲಹೆ ಕೇಳಲು ಅವಕಾಶ ಕೊಡಲಿ — ಎಂದು ಕಾಂಗ್ರೆಸು ಸೂಚಿಸುತ್ತದೆ.'

ವಾಯಿಸ್ರಾಯರ ಸೌಮ್ಯಪತ್ರಕದ ಫಲವಾಗಿ ಸಂಧಾನ ನಡೆದು, ಎರಡೂ ಪ್ರಾಂತಗಳ ಮಂತ್ರಿಗಳು ಮತ್ತೆ ಅಧಿಕಾರ ಸ್ವೀಕಾರ ಮಾಡಿದರಲ್ಲದೆ, ರಾಜಬಂದಿಗಳನ್ನು ದೊಡ್ಡ ಕಂತುಗಳಲ್ಲಿ ಬಿಡುತ್ತಿದ್ದಾರೆ. ಇದು ಏತರ ನಿದರ್ಶನೆ? 'ರಾಜಬಂದಿಗಳ ವಿಷಯವು ಪ್ರಾಂತಿಕ ಆಡಳಿತಕ್ಕೆ — ಅಂತಲೇ ಮಂತ್ರಿಗಳ ಅಧಿಕಾರಕ್ಷೇತ್ರಕ್ಕೆ ಸಂಬಂಧಿಸಿದುದು' ಎಂಬುದನ್ನು ಗವರ್ನರ ಜನರಲ್ಲರೂ ಆನುಷಂಗಿಕವಾಗಿ ಗವರ್ನರರೂ ಒಪ್ಪಿದಂತಾಯಿತು. ಪ್ರಾಂತಿಕ ಸ್ವಾಯತ್ತತೆಯ ಅಲುಗಾಡುವ ಅಡಿಗಲ್ಲು ಇನ್ನಿಷ್ಟು ಗಟ್ಟಿಯಾಗಿ ಕೂತಿತು.

ಸಾಮ್ರಾಜ್ಯಯುದ್ಧವೂ ಹಿಂದುಸ್ತಾನವೂ

ಹರಿಪುರದ ಯುದ್ಧವಿಷಯಕ ನಿರ್ಣಯದಲ್ಲಿ ಇಂತು ಹೇಳಿದೆ:

'ಇಂತಹ ಸಾಮ್ರಾಜ್ಯವಾದಿ ಯುದ್ಧದೊಡನೆ ಹಿಂದುಸ್ತಾನವು ತನ್ನ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ; ಮತ್ತು ತನ್ನ ಜನಬಲವನ್ನೂ ಬೇರೆ ಸಾಧನಗಳನ್ನೂ ಬ್ರಿಟಿಷ್ ಸಾಮ್ರಾಜ್ಯದ ಶಕ್ತಿವರ್ಧನೆಗಾಗಿ ಉಪಯೋಗಿಸಲು ಕೊಡುವುದಿಲ್ಲ. ಜನತೆಯ ಒಪ್ಪಿಗೆಯಿಲ್ಲದೆ ಯಾವ ಯುದ್ಧದಲ್ಲಿಯೂ ಭಾಗವಹಿಸುವುದಿಲ್ಲ. ಇದಕ್ಕಾಗಿ ಹಿಂದುಸ್ತಾನದಲ್ಲಿ ನಡೆದ ಯುದ್ಧದ ಸಿದ್ಧತೆ ಮತ್ತು ವೈಮಾನಿಕ ಪಾಸಿಗಾಳಗಗಳು—ಇವುಗಳ ಮೂಲಕ ಯುದ್ಧದ ವಾತಾವರಣವನ್ನು ನಿರ್ಮಿಸುವ ಪ್ರಯತ್ನವು ಈ ಸಭೆಗೆ ಸರ್ವಥಾ ಮಾನ್ಯವಿಲ್ಲ. ಇಂತಹ ಯುದ್ಧದಲ್ಲಿ ಹಿಂದುಸ್ತಾನವನ್ನು ಎಳೆಯುವ ಪ್ರಯತ್ನ ಮಾಡಿದರೆ, ಅದರ ಪ್ರತೀಕಾರವನ್ನು ಮಾಡಲಾದೀತು.'

ಇದು ಸರಿಯಾಗಿದೆ. ಬ್ರಿಟನ್ನಿನ ಸಂಕಟವೇ ನಮಗೊಂದು ಸುಸಂಧಿ; ಆ ಹೊತ್ತಿನಲ್ಲಿ ನಾವು ಸಹಕರಿಸದಿರಬೇಕು. ಆದರೆ ಸಾಧ್ಯವಿದ್ದ ಪ್ರಯತ್ನಗಳಿಂದ ನಮ್ಮ ಸಂರಕ್ಷಕ ಸಾಮರ್ಥ್ಯವನ್ನು ಬೆಳಿಸಿಕೊಳ್ಳಬೇಕೆಂಬುದನ್ನು ಮರೆಯಕೂಡದು. ಪ್ರಸಂಗ ಬಂದಾಗ ನಾವು ದುರ್ಬಲರಾಗಿರಕೂಡದು. ಕಾಂಗ್ರೆಸ್ ಮಂತ್ರಿಗಳು ಪ್ರಾಂತಿಕ ಸ್ವಾಯತ್ತತೆಯಲ್ಲಿಯ ಇದ್ದಬಿದ್ದ ಸ್ವಾತಂತ್ರ್ಯವನ್ನೆಲ್ಲ ವಿನಿಯೋಗಿಸಿ, 'ಶಸ್ತ್ರಕಾನೂನು' ರದ್ದಾಗುವಂತೆಯೂ ಸೈನಿಕ ಶಿಕ್ಷಣವು ತರುಣರಿಗೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವಂತೆಯೂ ಪ್ರಯತ್ನಿಸುವುದು ಅಗತ್ಯ.

ಹವಣರಿತು ಹಣಿಯಬೇಕು

ಜಾಗತಿಕ ಪರಿಸ್ಥಿತಿಯ ಲಾಭವನ್ನು ಹಿಂದುಸ್ತಾನವು ತನ್ನ ಸ್ವಾತಂತ್ರ್ಯಕ್ಕಾಗಿ ಬಹಳ ಕುಶಲತನದಿಂದ ಪಡೆದುಕೊಳ್ಳಬೇಕೆಂಬ ಮಾತನ್ನು ಸುಭಾಷರು ತಮ್ಮ ಅಧ್ಯಕ್ಷಭಾಷಣದಲ್ಲಿ ಒಪ್ಪಿದ್ದಾರೆ.

'ಇನ್ನು ಮೇಲೆ ಅಂತರರಾಷ್ಟ್ರೀಯ ಘಟನೆಗಳಿಂದ ಹಿಂದೀ ಸ್ವಾತಂತ್ರ್ಯಸಂಗ್ರಾಮಕ್ಕೆ ತುಂಬಾ ಲಾಭವು ದೊರೆಯಬಹುದಾಗಿದೆ. ಜಗತ್ತಿನ ಪರಿಸ್ಥಿತಿಯ ಸರಿಯಾದ ಅರಿವು ನಮಗಿರಬೇಕು; ಅದರಿಂದ ಪ್ರಯೋಜನ ಹೊಂದುವ ಜ್ಞಾನವೂ ಇರಬೇಕು. ಭೂಮಧ್ಯಸಮುದ್ರದಲ್ಲಿ ಇಟಲಿ-ಇಂಗ್ಲಂಡ್‌ಗಳ ನಡುವೆ ಉಂಟಾದ ತಿಕ್ಕಾಟದ ಲಾಭವನ್ನು ಇಜಿಪ್ತ ತೆಗೆದುಕೊಂಡಿತು;—ಒಂದು ಗುಂಡನ್ನೂ ಹಾರಿಸದೆ ಇಂಗ್ಲಂಡಿನೊಡನೆ ಗೆಳೆತನದ ಸಂಧಾನವನ್ನು ಮಾಡಲು ಶಕ್ತವಾಯಿತು. ಪರರಾಷ್ಟ್ರಗಳೊಡನೆ ಸಂಬಂಧಗಳನ್ನು ತಂದುಕೊಳ್ಳುವಾಗ ಅಲ್ಲಿಯ ಸರಕಾರದ ಸ್ವರೂಪವನ್ನು ನಾವು ಗಮನಿಸಬೇಕಾಗಿಲ್ಲ. ಪ್ರತಿರಾಷ್ಟ್ರದಲ್ಲಿಯೂ ನಮ್ಮ ಸ್ವಾತಂತ್ರ್ಯಯುದ್ಧವನ್ನು ಸಹಾನುಭೂತಿಯಿಂದ ನಿರೀಕ್ಷಿಸುವ ಜನರಿದ್ದೇ ಇರುವರು. ಅವರ ರಾಜಕೀಯ ಮತಗಳು ಏನೇ ಇರಲಿ, ಅವರೊಡನೆ ನಾವು ಬಳಕೆ ಬೆಳಿಸಬೇಕು. ರಶಿಯನ್ ಸರಕಾರವು ಕಮ್ಯುನಿಸ್ಟ್ ಇದೆ; ಆದರೆ ಸಾಮ್ಯವಾದಿಗಳಲ್ಲದ ರಾಷ್ಟ್ರಗಳೊಡನೆಯೂ ಅದು ಸಂಧಾನ ಬೆಳಿಸಿದೆ ಮತ್ತು ಅನುಕೂಲವಿರುವಲ್ಲೆಲ್ಲ ಸಹಾಯ-ಸಹಾನುಭೂತಿಗಳನ್ನು ಸಂಪಾದಿಸಿದೆ. ಪ್ರತಿದೇಶದಲ್ಲಿ ನಮ್ಮ ಹಿತಚಿಂತಕರ ಗುಂಪೊಂದು ಇರಲೇ ಬೇಕು. ಅದಕ್ಕಾಗಿ ವಿದೇಶೀಯ ವೃತ್ತಪತ್ರಿಕೆಗಳು, ಹಿಂದುಸ್ತಾನದಲ್ಲಿ ಬೇಕೆಂತ ತಯಾರಿಸಿದ ವಾಕ್ಪಟಗಳು, ಕಲಾಕೌಶಲ್ಯದ ಪ್ರದರ್ಶನಗಳು--ಇವುಗಳ ಮೂಲಕ ಪ್ರಚಾರ ಮಾಡಬೇಕು. ಕಲಾಪ್ರದರ್ಶನಗಳಿಂದಲೆ ಚೀನೀ ಜನರು ಯುರೋಪಿನಲ್ಲಿ ಲೋಕಪ್ರಿಯತೆಯನ್ನು ಪಡೆದರು.'

ಸಂಯುಕ್ತ ಘಟನೆಯೊಡನೆ ಹೋರಾಟ

ಇದೇ ಇನ್ನು ಮುಂದಿನ ಹಿರಿಹೋರಾಟವು. ಇದು ಕೆಲ ವಿಷಯಗಳಲ್ಲಿಯೇ ಒಡಂಬಡುವುದು ಖಂಡಿತ. ಕಾಂಗ್ರೆಸು ಅವರ

ಸಿದ್ಧತೆ ನಡೆಸಿದೆ; ತನ್ನ ಬಲಾಬಲಗಳನ್ನು ತೂಗಿನೋಡು ತ್ತಿದೆ. ತನ್ನ 'ಹಿಡಿತ'ಗಳನ್ನು ಇನ್ನೂ ಸ್ಪಷ್ಟಗೊಳಿಸಿಲ್ಲ, ಆದರೆ ತನ್ನ ಮಾರ್ಗಸೂಚನೆಯನ್ನು ಇಂತು ಮಾಡಿದೆ:

'...ಪ್ರಾಂತಿಕ ಮತ್ತು ಸ್ಥಾನಿಕ ಕಾಂಗ್ರೆಸ್ ಕಮಿಟಿಗಳು, ಸರ್ವ ಸಾಮಾನ್ಯ ಜನತೆಯು, ಪ್ರಾಂತಿಕ ಸರಕಾರ್ರಗಳು ಹಾಗೂ ಮಂತ್ರಿ ಮಂಡಲಗಳು ಸಂಯುಕ್ತಘಟನೆ ಬರದಂತೆ ನೋಡಿಕೊಳ್ಳಬೇಕು; ಜನಮತವನ್ನು ಧಿಕ್ಕರಿಸಿ ಅದನ್ನು ಹೇರುವ ಪ್ರಯತ್ನ ನಡೆದರೆ ಪ್ರಾಂತಿಕ ಸರಕಾರಗಳು ಮತ್ತು ಮಂತ್ರಿಮಂಡಲಗಳು ಸಹಕರಿಸ ದಿರಬೇಕು. ಅಂತಹ ಬಿಕ್ಕಟ್ಟಿನ ಸಂದರ್ಭ ಬಂದರೆ ಎ. ಐ. ಸಿ. ಸಿ.ಗೆ ತಕ್ಕ ಉಪಾಯವನ್ನು ಕಲ್ಪಿಸಲು ಅಧಿಕಾರವಿದೆ.'

ಪ್ರತಿಪಕ್ಷಿಗಳಿಬ್ಬರೂ ತಂತಮ್ಮ ವ್ಯೂಹರಚನೆಯನ್ನು ಎಂತು ಮಾಡುವರೆಂಬುದನ್ನು ನೋಡುವ ಕಾಲವು ಸಮೀಪ ದಲ್ಲಿಯೆ ಇದೆ.

ಈಗಲೂ ಕಡೆಗಣ್ಣೇ?

ಹರಿಪುರದ ಸಂಸ್ಥಾನ ವಿಷಯಕ ನಿರ್ಣಯವು ಮಾತ್ರ ತುಂಬಾ ವಿಸಂಗತಿಯಿಂದ ಕೂಡಿದುದಾಗಿದೆಯೆಂದು ನಮ್ಮ ಮತ. ಅದೊಂದು 'ನ್ಯೂನಗಂಡ'ವು—ಇನ್ಫೀರಿಯಾ ರಿಟಿ ಕಾಂಪ್ಲೆಕ್ಸ್—ಆಯತ ಹೊತ್ತಿನಲ್ಲಿ ತಲೆಯೆತ್ತಿರ ಬೇಕು; ಇಲ್ಲವಾದರೆ ಇಂತಹ ಅಸಂಬದ್ಧ ನಿರ್ಣಯವನ್ನು ಕಾಂಗ್ರೆಸು ಮಾಡುತ್ತಿರಲಿಲ್ಲ.

ಸಂಸ್ಥಾನದೊಳಗಿನ ರಾಜಕೀಯ ಜಾಗೃತಿಗೆ—ಸ್ವಾತಂ ತ್ರ್ಯದ ಆಕಾಂಕ್ಷೆಗಳಿಗೆ ಮಾನ್ಯತೆ, ಸಾಂಸ್ಥಾನಿಕ-ಬ್ರಿಟಿಷ್ ಹಿಂದುಸ್ತಾನಗಳೆರಡರ ಅವಿಭಾಜ್ಯತೆಯ ಘೋಷಣೆ— ಇದೆಲ್ಲಾ ಸರಿಯಾಯಿತು. ಆದರೆ ಅಲ್ಲಿಯ ರಾಜಕೀಯ ಚಟುವಟಿಕೆಗಳನ್ನು ಕಾಂಗ್ರೆಸಿನ ಹೆಸರಿನಲ್ಲಿ ಸಾಗಿಸಲು ಅಧೈರ್ಯವೇಕೆ? ಕಾಂಗ್ರೆಸಿನ ಹೆಸರಿಗಿದೊಂದು ಕುಂದಕ. ಸಂಸ್ಥಾನಗಳೊಳಗಿನ ಕಾಂ. ಕಮಿಟಿಗಳನ್ನು ರದ್ದುಪಡಿಸ ಬೇಕೆಂಬ ಮುಂಚಿನ ವರ್ಕಿಂಗ್ ಕಮಿಟಿಯ ನಿರ್ಣಯವು ರದ್ದಾದುದೊಂದು ಸಂತೋಷದ ಸಂಗತಿಯೇ. ಆದರೆ ಆ ಕಮಿಟಿಗಳು ಇನ್ನು ಮೇಲೆ ವರ್ಕಿಂಗ್ ಕಮಿಟಿಯ ನೇರ ವಾದ ಅಧೀನದಲ್ಲಿರಬೇಕಂತೆ; ಸಂಸ್ಥಾನದ ಯಾವ ಏರಾಟ ಕೆಯ ಹೋರಾಟದಲ್ಲಿಯೂ ಬೇರೆ ರಾಜಕೀಯ ಚಳವಳಿ ಯಲ್ಲಿಯೂ ಸೇರಬಾರದಂತೆ. ಅದಕ್ಕಾಗಿ ಸ್ವತಂತ್ರ ಸಂಸ್ಥೆ ಗಳನ್ನು ಸ್ಥಾಪಿಸಬೇಕಂತೆ, ಇಲ್ಲವೆ ಇದ್ದವುಗಳ ಮೂಲಕವೆ ಕೆಲಸ ಸಾಗಿಸಬೇಕಂತೆ.

ಸಂಸ್ಥಾನಗಳೊಳಗಿನ ಕಾಂ. ಕಮಿಟಿಗಳು ಕಾಂಗ್ರೆಸಿನ ಕುಂಕುಮ ಹಚ್ಚಿಕೊಂಡು ಬರಿ ಹೂಬತ್ತಿ ಹೊಸೆಯುವ,— ಅಲ್ಲ,—ಖಾದಿ, ಗ್ರಾಮೋದ್ಧಾರ, ಆ... ಮೊದಲಾದ ಕೆಲಸಗಳಲ್ಲಿಯೆ ತೊಡಗಬೇ... ಅರ್ಥವಲ್ಲವೆ? ಸಂಸ್ಥಾನಗಳಲ್ಲಿ ಮೊದಲು ಆ... ರಾಜಕೀಯ ಜಾಗೃತಿ; ತರುವಾಯ ಉಳಿದ...

ಪ್ರಜಾಮಂಡಲದ ವರದಿ

ಹೈದರಾಬಾದ ಸಂಸ್ಥಾನದಲ್ಲಿ ಯಾವ ... ಕೀಯ ಸುಧಾರಣೆಗಳನ್ನು ಪ್ರಚುರಪಡಿಸ... ತಮಗೆ ಶಿಫಾರಸು ಮಾಡಲು ನಿಜಾಂ ಪ್ರಭು... ಸಮಿತಿಯನ್ನು ನಿಯಮಿಸಿದ್ದರು. ಆ ಸಮಿ... ಪರವಾಗಿ ಸೂಕ್ತ ಸಲಹೆಗಳನ್ನು ಕೊಡಬೇ... ಲಾದ 'ಪ್ರಜಾಮಂಡಲ'ವು ತನ್ನ ವ... ಸಿದೆ. ವರದಿಯು ಪ್ರತಿಪುಟವೂ ಅದನ್ನು ... ವರ ಪರಿಶ್ರಮಕ್ಕೂ ಕರ್ತೃತ್ವಕ್ಕೂ ... (ವರದಿಯನ್ನು ತಯಾರಿಸುವುದಕ್ಕೆ ಅತ್ಯಂ... ಸಿದ ಕಾರ್ಯದರ್ಶಿಗಳಲ್ಲಿ ಕನ್ನಡಿಗರೊಬ್ಬ... ಶರ್ಮರ ಉಲ್ಲೇಖಮಾಡುದಕ್ಕೆ ಅವರನ್ನು ... ಲಾರೆವು). ಆದರೆ ವರದಿಯು ಪ್ರಜಾಮಂ... ತಯಾರಿಸಿದುದಾಗಿರದೆ, ಪ್ರಭುತ್ವವೇ ತ... ಪದವಿಯನ್ನು ಭದ್ರಗೊಳಿಸಲು ದಯಪಾಲಿ... ಘಟನೆಯೋ ಎಂಬ ಸಂಶಯ ಬರುವಷ್ಟು ... ಯಾಗಿದೆ.

ಹಾಗಿರದಿದ್ದರೆ 'ಇಮ್ಮನೆ'ಯ ಶಾಸನಸ... ಯನ್ನು (bi-cameral legislature) ... ಕಾಂಕ್ಷಿಗಳು ಏಕೆ ಸೂಚಿಸುತ್ತಿದ್ದರು? ... ನೆ'ಯು ನಮ್ಮತ್ತ ಕಡೆಯ ಮೇಲ್ಮನೆಯಂತಿ... ಪತ್ರಿಕೆ ಮತ್ತು ದುಡ್ಡಿನ ಬೇಡಿಕೆಗಳ ಮೇ... ಅದಕ್ಕಿರುವುದು; ಬರಲಿರುವ ಕೇಂದ್ರ... ಯಲ್ಲಿಯ Council of State ನಂತಹದು ... ದಿಂದ ನಾಮಕರಣ ಹೊಂದಿದ ಸದಸ್ಯರು ... ೧/೬ ಮತ್ತು ಮೇಲ್ಮನೆಯಲ್ಲಿ ೧/೪ರ ... ವರು; ಮೇಲ್ಮನೆಯ ೧/೪ ಸದಸ್ಯರು ಕೆಳ... ಅಪ್ರತ್ಯಕ್ಷರೀತಿಯಲ್ಲಿ ಚುನಾಯಿಸಲ್ಪಡುವ...

ಕಾರ್ಯಕಾರಿ ಮಂಡಲ (Executive Co... ಅರ್ಧಜನರು ಶಾಸನಸಭೆಯ ಲೋಕನಿಯು... ರೊಳಗಿಂದ ಆರಿಸಲ್ಪಟ್ಟವರಾಗಬೇಕು; ... ರಾಷ್ಟ್ರವಿಧಾಯಕ ಖಾತೆಗಳನ್ನು

ಎರಡೂ ಮನೆಯವರು ಸೇರಿ ತಮ್ಮ ಒಟ್ಟು ಸದಸ್ಯಸಂಖ್ಯೆಯಲ್ಲಿ ೪/೫ ಜನರ ಅವಿಶ್ವಾಸನಿದರ್ಶಕ ನಿರ್ಣಯದಿಂದ ತಳ್ಳುವವರೆಗೂ, ಈ ಕಾರ್ಯಕಾರಿ ಮಂಡಲವು ಭದ್ರವಾಗುಳಿಯುವುದು. ಇಂತಿದೆ ಈ ಪ್ರಜಾಮಂಡಲದ ಪ್ರಜಾಕ್ಷೇಮಕಾರಕ ಸೂಚನೆಗಳ ಸಾರ.

ನಾಲ್ವರು ಮುಸಲ್ಮಾನ ಸಭಾಸದರು ಮಂಡಲದ ಸಭಾಸದರಾಗಿದ್ದು ಸಂಪೂರ್ಣವಾಗಿ ಸಹಕರಿಸುತ್ತಿದ್ದವರು, ಕೊನೆಯ ನಿಮಿಷದಲ್ಲಿ ತಮ್ಮ ಜಾತಿಯವರಿಗೆ ಸರ್ವಸಾಮಾನ್ಯ ಮತದಾರಸಂಘಗಳಿಂದ ತುಂಬಲಾಗುವ ಸ್ಥಳಗಳಲ್ಲಿ ೧೦೦ಕ್ಕೆ ೫೦ರಂತೆ ಕಾಯ್ದಿಡಬೇಕೆಂಬ ಹಟ ಹಿಡಿದು, ಮಂಡಲ ಬಿಟ್ಟು ಹೊರಟುಹೋದರು. ಒಟ್ಟು ಜನತೆಯಲ್ಲಿ ಮುಸಲ್ಮಾನರ ಸಂಖ್ಯಾಪ್ರಮಾಣವು ೧:೧೦ರಂತಿದೆ; ಆದರೆ ಮಂಡಲದವರೆ ೧೦೦ಕ್ಕೆ ೩೦ರಂತೆ ಸ್ಥಳಗಳನ್ನು ಕಾಯ್ದಿಡಲು ಸಿದ್ಧರಾಗಿದ್ದರು. ಅರ್ಧಕ್ಕರ್ಧ ಬೇಕೆಂಬ ಮುಸಲ್ಮಾನರ ಬೇಡಿಕೆಯನ್ನು ಪೂರೈಸದಿದ್ದುದೊಂದು ಮಂಡಲದ ಸ್ವಾಭಿಮಾನಪ್ರಿಯತೆಗೆ ಸಾಕ್ಷಿ.

ಸೊತ್ತುಳ್ಳವರ (Vested Interests) ವರ್ಚಸ್ಸವು ಮಂಡಲದ ಮೇಲೆ ಬಹುಭಾರವಾಗಿ ಬಿದ್ದಿರಬೇಕು; ಎಂತಲೆ ಅವರ ಹಿತರಕ್ಷಣೆಗಾಗಿ ಭದ್ರಕವಚಗಳನ್ನು ಅಲ್ಲಲ್ಲಿ ಕಲ್ಪಿಸಿದ್ದಾರೆ. ಅಲ್ಲದೆ ಪ್ರಭುಗಳವರ 'ಅನಿರ್ಬಾಧ ಸಾರ್ವಭೌಮತ್ವ'ವನ್ನು (ನಿಜಾಮರ ಫರ್ಮಾನುಗಳನ್ನೂ ಮೀರಿಸುವಂತೆ) ಅತ್ಯಂತ ಕಾವ್ಯಮಯ ಭಾಷೆಯಲ್ಲಿ ವರ್ಣಿಸಿದ್ದಾರೆ. ಹೆಚ್ಚು ಕೇಳಿದರೆ ಕೊಡಲಿಕ್ಕಿಲ್ಲ ಎಂಬ ಭಾವನೆಯಾಗಲಿ, ಮುಸಲ್ಮಾನರ ಪ್ರಮಾಣಮೀರಿದ ವರ್ಚಸ್ಸವಾಗಲಿ, ಸೊತ್ತುಳ್ಳವರ ಭಿಡೆ-ಭಾರಣೆಯಾಗಲಿ, ಪ್ರಭುತ್ವದ ವಜ್ರಮುಷ್ಟಿಯ ಬೆದರಿಕೆಯಾಗಲಿ ಈ ವರದಿಯ ಬುಡಕ್ಕಿರಬೇಕು. ಈ ಸಂದರ್ಭದಲ್ಲಿ ವರದಿಯಲ್ಲಿಯ ಕೆಳಗಿನ ಅಂಕೆಗಳು ಬೋಧಪ್ರದವಾಗದಿರವು.

ಹಿಂದೂ	....	....	೧೨೨,೦೦೦,೦೦
ಮುಸಲ್ಮಾನ	....	....	೧೫,೩೫೦,೦೦
ಕ್ರಿಶ್ಚನ್	....	....	೧,೫೧೦,೦೦
ಪಾರ್ಸಿ	....	....	೧೮೦೦
ಆ್ಯನಿಮಿಸ್ಟರು	....	....	೫,೪೫೦,೦೦

ನಿಜಾಂ ಸಂಸ್ಥಾನದಲ್ಲಿ ನಾಗರಿಕಾಧಿಕಾರಗಳು

ವರದಿಯನ್ನು ಹೆಚ್ಚಿನ ಸಂಯಮದಿಂದ ಬರೆದಿದ್ದಾರೆ. ಆದರೆ ಸಂಸ್ಥಾನದಲ್ಲಿ ನಾಗರಿಕರ ಮೂಲಹಕ್ಕುಗಳನ್ನು ಒತ್ತಿಕ್ಕಿದುದರಿಂದ ಉಂಟಾದ ಅಸಂತೋಷವು ಇಲ್ಲಿ ಬಾಯ್ದೆರೆಯದೆ ಇಲ್ಲ. ಗಸ್ತಿ ನಂ ೫೩, ೧೩೪೯ ಫಸ್ಲಿಯ ೧೭ನೆಯ ದಾಯಿಯು, ತುಂಬಾ ಹೆಸರಾದುದು. ಸಂಘ-ಭಾಷಣ-ಮುದ್ರಣ ಸ್ವಾತಂತ್ರ್ಯಗಳನ್ನು ಸವರಿಹಾಕಿವ ಕೊಡಲಿಯದು. ಆದರ ಕಠೋರ ಅಂಶಗಳನ್ನು ವಿವರಿಸಿಲ್ಲವಾದರೂ, ವರದಿಕಾರರು ಕೊಟ್ಟ ಉದಾಹರಣೆಗಳು ಆದರ ತೀವ್ರತೆಯನ್ನು ತೋರಿಸಲು ಸಾಕಾಗಿವೆ.

ದುಃಖಪ್ರದರ್ಶಕ ಸಭೆಗಳಿಗೂ ಸರಕಾರದಿಂದ ಮುಂಗಡ ಅನುಮತಿ ಬೇಕು; ಅನುಮತಿ ದೊರೆತರೂ, ಆದು ತುಂಬಾ ಲಂಬಿಸಿದ ಪತ್ರವ್ಯವಹಾರದ ತರುವಾಯ; ಆದು ಬರುವುದರೊಳಗಾಗಿ ಪ್ರಸಂಗದ ಮಹತ್ವವೇ ಹೊರಟುಹೋಗುವುದು....ಸಕಾಲಕ್ಕೆ ಅನುಮತಿ ಬಾರದ್ದಕ್ಕೆ, ಸಾಂಪ್ರದಾಯಿಕವಾಗಿ ನಿರ್ದಿಷ್ಟ ತಿಥಿಗಳಲ್ಲಿ ಆಚರಿಸಬೇಕಾದ ರಥೋತ್ಸವಗಳೇ ಮೊದಲಾದ ಹಬ್ಬಹುಣ್ಣಿಮೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಬೇಕಾಗುವುದು; ಇಲ್ಲವೆ ಬಿಟ್ಟುಕೊಡಬೇಕಾಗುವುದು. ಅರ್ಜಿ-ಬೆಟ್ಟಿ-ಸಂದರ್ಶನಗಳ ಸರಬತ್ತಿಯ ತರುವಾಯ ಅನುಮತಿ ದೊರೆತರೂ, ಆ ಅನುಮತಿಗೆ ಹಾಕಿದ ನಿರ್ಬಂಧಗಳ ಬೇಲಿಯಿಂದ ಉತ್ಸವಗಳ ಕಳೆಯೇ ಹೊರಟುಹೋಗುವುದು.

ಕದನ ಕೊನೆಗಂಡಿತು; ಆದರೆ—

ಮೈಸೂರಿನಲ್ಲಿಯ ರಾಜಕೀಯ ಘರ್ಷಣೆಯು ತಂದೆ-ಮಕ್ಕಳ ಕದನವೆಂದು ನಾವು ಯಾವಾಗಲೂ ಭಾವಿಸಿದ್ದೆವು; ಅಂತೆಯೆ ಅದು ಅಷ್ಟು ಖೇದಜನಕವಾಗಿತ್ತು. ಕೊನೆಗೆ ಈ ಜಗಳವು ನಿಂತುಹೋದಬಗ್ಗೆ ನಾವು ಸಂತೋಷವನ್ನು ಸೂಚಿಸದಿರಲಾರೆವು; ಆದನ್ನು ನಿಲ್ಲಿಸಿ ತನ್ನ ಪ್ರಜಾವಾತ್ಸಲ್ಯವನ್ನು ತೋರಿದ ಬಗ್ಗೆ ರಾಜಶಕ್ತಿಯನ್ನು ಅಭಿನಂದಿಸದಿರಲಾರೆವು. ಕಾಂಗ್ರೆಸಿನ ತರುಣ ನಾಯಕರಾದ ಶ್ರೀ. ಚಂಗಲರಾಯ ರೆಡ್ಡಿಯವರ ಜತೆಗೆ, ಮೈಸೂರಿನ ರಾಜಕೀಯ ಸುಧಾರಣೆಗಳನ್ನು ಸೂಚಿಸುವ ಸಮಿತಿ ಬೇಗನೆ ನೇಮಕ ಹೊಂದುವುದೆಂದೂ ಸರಕಾರವು ಎಲ್ಲಾ ಅಂಶಗಳ ಮೇಲೆ ಅಭಿಪ್ರಾಯ ಕೊಡಲು ಅವಕ್ಕೆ ಅವಕಾಶ ಕೊಡುವುದೆಂದೂ ನಾವು ಆಶಿಸುತ್ತೇವೆ. ದೊಡ್ಡ ದೊಡ್ಡ ಧನೋತ್ಪಾದಕ ಉದ್ಯೋಗಗಳನ್ನು ನಿರ್ಮಿಸಿ ಮೈಸೂರು ಸರಕಾರವು ತನ್ನ ಸಂಸ್ಥಾನವನ್ನು ಆಧುನಿಕ ಸುಧಾರಣೆಯ ಹೆಬ್ಬಾಗಿಲಿಗೆ ಒಯ್ಯುತ್ತಲಿದೆ; ಆದರೆ ಇದು ಸಾಲದು. ಪ್ರಜಾವರ್ಗದ ತೀರ ಕೆಳಗಿನ ತರಗತಿಗಳ ವರೆಗೂ ಈ ಸುಖ-ಸೌಲಭ್ಯ

ಪ್ರಸಾರದ ಆಂದೋಲನವು ಹಬ್ಬಬೇಕು. ಆಗಲೆ ಪ್ರಭುತ್ವದ ಪ್ರಜಾಕ್ಷೇಮ ಕಾರ್ಯವು ಪೂರ್ತಿಗೊಳ್ಳುವುದು.

ಹಣಕಾಸಿನ ಪತ್ರಿಕೆಯೂ ಕರ್ನಾಟಕವೂ.

ಕಳೆದ ವರ್ಷ ಮುಂಬಯಿ ಅಸೆಂಬ್ಲಿಯಲ್ಲಿಕ್ಕೆ ಪಾಸಾದ ನಿರ್ಣಯದ ಮೇರೆಗೆ ಸರಕಾರದವರು ತಮ್ಮ ವಶದಲ್ಲಿದ್ದ ಕಾರವಾರ ಜಿಲ್ಲೆಯ ಕರಬಂದಿ ಚಳವಳಿಗಾರರ ಭೂಮಿಗಳನ್ನು ಕೊಟ್ಟುಬಿಟ್ಟರು. ಆದರೆ ಲಿಲಾವಿನಲ್ಲಿ ಕೊಂಡ ಭೂಮಿಗಳನ್ನು ತಿರುಗಿ ಕೊಡಿಸಲು ಹೋದ ಹಣಕಾಸಿನ ಪತ್ರಿಕೆಯಲ್ಲಿ ವ್ಯವಸ್ಥೆಮಾಡಿರಲಿಲ್ಲ. ಅದು ಈಸಲ ಮಾಡಲ್ಪಟ್ಟಿದೆ.

ಕಾರವಾರ ಮತ್ತು ಬೇರೆಕಡೆಗಳಲ್ಲಿಯ ಕಾಡಿನ ಭಾಗದ ಬಗ್ಗೆ ಈ ಪತ್ರಿಕೆಯಲ್ಲಿ ಒಂದು ಮಹತ್ವದ ಯೋಜನೆಯಿದೆ. ಪ್ರತಿದೊಡ್ಡ ಹಳ್ಳಿಯ ಸುತ್ತಲಿನ ಅರ್ಧ ಮೈಲಿನಷ್ಟು ಭಾಗದಲ್ಲಿಯ ಹಾಗೂ ಪ್ರತಿ ಸಾಗುಭೂಮಿಯ ಸುತ್ತಲಿನ ಕಾಲು ಮೈಲಿನಷ್ಟು ಭಾಗದಲ್ಲಿಯ ಅಡವಿಯನ್ನು ಸರಕಾರದವರು ಇನ್ನು ಮುಂದೆ ಸವರಿಬಿಡುವವರಿದ್ದಾರೆ. ಮುಂದೆ ಆ ಭಾಗದಲ್ಲಿ ಅಡವಿ ಬೆಳೆಯದಂತೆ ಅಲ್ಲಲ್ಲಿಯವರು ಎಚ್ಚರಪಡಬೇಕು. ಇದರಿಂದ ಮಲೇರಿಯಾ ಮತ್ತು ಕಾಡು ಮೃಗಗಳ ಕಾಟವು ತಪ್ಪುವುದಲ್ಲದೆ, ದನಗಳಿಗೆ ಸಾಕಷ್ಟು ಗೋಮಾಳವು ಸಿಕ್ಕುವುದು.

೧೨॥ ಲಕ್ಷ ರೂ.ಗಳನ್ನು ಕಿರಿ ನೀರಾವರಿ ಕೆಲಸಕ್ಕಾಗಿಯೂ ಸಾಕಷ್ಟು ಹಣವನ್ನು ಬೆಳಗಾವಿ, ವಿಜಾಪುರ, ಧಾರವಾಡ, ಜಿಲ್ಲೆಗಳಲ್ಲಿ. ಹಿರಿ ನೀರಾವರಿ ಕೆಲಸಗಳಿಗಾಗಿಯೂ ತೆಗೆದಿಡಲಾಗಿದೆ. ಕೆಲಸಗಾರರು ಎಚ್ಚತ್ತು ಹಳೇ ನೀರಾವರಿ ವ್ಯವಸ್ಥೆಗಳು (ಕೆರೆ ಕಾಲುವೆ ಇ.) ಎಲ್ಲಿದ್ದವು ಎಂಬುದನ್ನು ಗೊತ್ತುಹಿಡಿದು, ಅವುಗಳ ದುರುಸ್ತಿಗಾಗಿ ಅರ್ಜಿ ಮಾಡಬೇಕು.

ಮದ್ಯಪಾನ ಪ್ರತಿಬಂಧಕ್ಕಾಗಿ ಆರಿಸಿದ ಕ್ಷೇತ್ರಗಳಲ್ಲಿ ಅಂಕೋಲಾ ಕುಮಠಾ ತಾಲೂಕುಗಳಿವೆ. ಈ ಪ್ರಯೋಗದ ಕ್ಷೇತ್ರ ಬೆಳೆಸಿ, ಇಡೀ ಕರ್ನಾಟಕದಲ್ಲಿ ಮದ್ಯಪಾನ ನಿರೋಧವು ಸಾಧ್ಯವಾಗುವಂತೆ ಮಾಡುವುದು ಕಾರ್ಯಕರ್ತರನ್ನು ಕೂಡಿದೆ.

ಮುನಿಸಿಪಾಲಿಟಿ-ಲೋಕಲ್‌ಬೋರ್ಡ್‌ಗಳಲ್ಲದೆ ಸ್ವತಂತ್ರವಾಗಿ ಪ್ರಾಥಮಿಕ ಶಿಕ್ಷಣಪ್ರಸಾರ ನಡೆಸುವ ವ್ಯಕ್ತಿ-ಸಂಘಗಳಿಗೆ ೮ ಲಕ್ಷ ರೂ.ಯನ್ನು ತೆಗೆದಿಡಲಾಗಿದೆ. ಈ ಬಗ್ಗೆ ಎಲ್ಲ ಕಡೆಯಿಂದಲೂ ಬೇಡಿಕೆ ಬರಬೇಕು.

ಧಾರವಾಡದಲ್ಲಿ ಕೆಲವು ವಿಷಯಗಳ ವಿಶೇ... ಮತ್ತು ಸಂಶೋಧನಗಳನ್ನು ನಡೆಸುವ ಸಲು... ೧೨೦೦೦ ರೂ. ಮತ್ತು ಈ ವರ್ಷ ಪುಸ್ತಕಾ... ದ್ದಕ್ಕೆ ೮೦೦೦ ರೂ.—ಹೀಗೆ ವ್ಯವಸ್ಥೆ ಮಾ... ಕನ್ನಡ ನಿಘಂಟು, ಪರಿಭಾಷಾ ನಿಘಂಟು, ಪ್ರಾದೇಶಿಕ ಕನ್ನಡಗಳ ವ್ಯತ್ಯಾಸಗಳ ... ಅವುಗಳ ಏಕೀಕರಣದ ಪ್ರಯತ್ನ, ಕನ್ನಡ... ರಣೆ, ಕರ್ನಾಟಕ ಚರಿತ್ರ ಸಂಶೋಧನೆ—... ಹಲವು ಮಹತ್ವದ ಕೆಲಸಗಳನ್ನು ಕೈಕೊ...

(ಶ್ರೀ. ದಿವಾಕರ ರಂಗರಾಯ...

ಸಿಂಗಾಪುರದ ಸೈನಿಕಠಾಣ್ಯ

ಬಹುದಿನಗಳಿಂದ ನಡೆದ ಸಿಂಗಾಪುರದ ... ವಿಕೆಯು ಕೊನೆಗೊಮ್ಮೆ ಮುಗಿಯಿತು. ... ಮಾತುಗಾರಿಕೆ ನಡೆದಾಗ ಈ ಕೆಲಸ ಕೆಲ... ಆದರೆ ಜಪಾನದ ಏರಾಟಿಕೆಯನ್ನು ನೋಡಿ ... ಕೆಲಸವನ್ನು ತ್ವರೆಯಿಂದ ಮುಗಿಸಿ ಕಳೆದ ... ತಾ.ನ ದಿನ ಅದರ ಉದ್ಘಾಟನ ಸಮಾರಂಭ... ಸಿತು. ಇದು ಅತ್ಯಂತ ವಿಸ್ತೀರ್ಣವಾದುದು; ... ಅತಿ ದೊಡ್ಡ ಹಡಗೂ ಲೀಲೆಯಿಂದ ನಿಲ್ಲಬ... ೩ ಕೋಟಿ ಪೌಂಡು ವೆಚ್ಚವಾಗಿದೆ. ೧೮ ಇಂಚಿ... ಗಳನ್ನು ಇಡಲಾಗಿದೆ; ೨೦ ಮೈಲು ದೂರ ... ಒಗೆಯಬಲ್ಲವು. ಏಶಿಯದ ಸಾಮ್ರಾಜ್ಯದ ... ಬ್ರಿಟನ್ನು ಮಾಡಿದ ಈ ಸಿದ್ಧತೆಯು ಅದು... ಏಶಿಯದ ಜಿಬ್ರಾಲ್ಟರ ಎಂದರೂ ಸಲ್ಲುವುದು.

ಹಡಗುಪಡೆಗಳ ಗುಪ್ತಸ್ಪರ್ಧೆ

ಇಂಗ್ಲಂಡ್, ಫ್ರಾನ್ಸ್, ಅಮೆರಿಕೆಗಳು ... ನಕ್ಕೆ 'ನಿಮ್ಮ ಹಡಗುಪಡೆಯನ್ನು ಎಷ್ಟು... ರಿದ್ದೀರಿ?' ಎಂದು ಕೇಳಿದರು. ವಾಶಿಂಗ್ಟನ್... ಕರಾರು ೧೯೩೬ರಲ್ಲಿಯೆ ಮುಗಿದುದರಿಂದ ... ಬಂಧನವೂ ಇರಲಿಲ್ಲ. ಅಮೆರಿಕೆಯಷ್ಟೇ ... ಪಡೆಯಿರಬೇಕೆಂದು ಜಪಾನದ ಮಹತ್ವಾಕಾ... ಇಂಗ್ಲಂಡ್-ಅಮೆರಿಕೆಗಳು ವಿರೋಧಿಸಿದ್ದು... ಪತ್ತು ವ್ಯರ್ಥವಾಯಿತು. ಈಗ ಈ ಪ್ರಶ್ನೆ... ದೊಡನೆ 'ಹೇಳುವುದಿಲ್ಲ' ಎಂದುಬಿಟ್ಟಿ... ಎಲ್ಲರೂ ಸೇರಿ ವಿಚಾರಮಾಡುವುದಾದರೆ ... ತ್ತೇನೆ ಎಂತಲೂ ಹೇಳಿತು. ಹಾಗೆ ಮಾಡ...

ಬೆಳೆಸತೊಡಗಿದರೆ, ಸ್ವಸಂರಕ್ಷಣಕ್ಕಾಗಿ ತಾನೂ ಬೇಕಾದಷ್ಟು ಬೆಳೆಸಬೇಕಾಗಬಹುದೆಂದು ಎಚ್ಚರಿಕೆಯನ್ನೂ ಕೊಟ್ಟಿತು. ಇದೊಂದು ಕೂಟಪ್ರಶ್ನೆ. ಪಾಶ್ಚಾತ್ಯ ರಾಷ್ಟ್ರಗಳು ಮತ್ತೆ ಹಡಗುಪಡೆಯ ಪರಿಷತ್ತನ್ನಾದರೂ ಕರೆಯಬೇಕು: ಇಲ್ಲವೆ ಅದನ್ನು ಬೆಳೆಸುವ ಸ್ಪರ್ಧೆಯ ಪ್ರವಾಹಕ್ಕೆ ಸಿಕ್ಕಿಬಿದ್ದು ಜನತೆಯ ಹಣದ ಹೊಳೆಯನ್ನಾದರೂ ಹರಿಯಿಸಬೇಕು.

ಅಮೆರಿಕೆಯೂ ಸ್ಪರ್ಧೆಯ ಬಲಿ

ವಾಶಿಂಗ್ಟನ್ ಕರಾರಿನ ಪ್ರಕಾರ ಅಮೆರಿಕನ್ ಮತ್ತು ಜಪಾನಿ ಹಡಗುಪಡೆಗಳ ಪ್ರಮಾಣವು ೫:೪ ಇರಬೇಕಿತ್ತು. ಜಪಾನವಂತೂ ಅದನ್ನು ಮೂಲೆಗೊತ್ತಿತು. ಜಪಾನದ ತಯಾರಿಯ ಬಗ್ಗೆ ಅಮೆರಿಕೆಯಲ್ಲಿ ಸಿಕ್ಕಾಪಟ್ಟೆ ಸುದ್ದಿ ಹುಟ್ಟತೊಡಗಿತು. ಪ್ರೆ. ರೂಝುವೆಲ್ಟರೂ ಪ್ರತಿಸಿದ್ಧತೆ ನಡೆಸಿದರು. ಅದರ ವಿವರಗಳನ್ನು ಬಚ್ಚಿಡಲಾಗಿದೆ. ಈ ಬಗ್ಗೆ ಹೊಸದೊಂದು ಬಿಲ್ಲು ಬರತಕ್ಕದ್ದಿದೆ. ಹೊಸ ಯುದ್ಧನೌಕೆಗಳ ಸಂಖ್ಯೆಯನ್ನು ಹೇಳದೆ ಅವುಗಳ ತೂಕವನ್ನು ಮಾತ್ರ ಕೊಡಲಾಗುವದು. ಶಸ್ತ್ರಾಸ್ತ್ರಸಿದ್ಧತೆಯ ದುಷ್ಟ ವರ್ತುಲದಲ್ಲಿ ಇಂಗ್ಲಂಡಿನ ತರುವಾಯ ಅಮೆರಿಕೆಯೂ ಸಿಕ್ಕಿಕೊಂಡಿತು.

ಹಳೆಹಗೆಗಳು ಗೆಳೆಯರಾದರು!

ಇಟಲಿ-ಜರ್ಮನಿಗಳು ಕೂಡಿ ಬ್ರಿಟನ್-ಫ್ರಾನ್ಸ್-ಅಮೆರಿಕೆ ಮೊದಲಾದ ದೇಶಗಳ ರಾಜನೀತಿಯ ವ್ಯೂಹವನ್ನು ಒಡೆಯಲು ವಿಶ್ವಪ್ರಯತ್ನ ನಡೆಸಿವೆ. ಮುಸೊಲಿನಿಯ ಪ್ರಯತ್ನದಿಂದ ಆಸ್ಟ್ರಿಯದ ಚಾನ್ಸೆಲರನಾದ ಡಾ. ಶೂಸ್ನಿಗ್ಗನು ಜರ್ಮನಿಯಲ್ಲಿ ಹೆರ್ ಹಿಟ್ಲರನ ಬೆಟ್ಟಿ ತೆಗೆದುಕೊಂಡನು. ಅದರಿಂದ ಆಸ್ಟ್ರಿಯದಲ್ಲಿಯ ನಾಝಿ ವಿರೋಧಿ ಪ್ರಚಾರವು ಕಡಿಮೆಯಾಗಿದೆ. ಆಸ್ಟ್ರಿಯನ್ ಮಂತ್ರಿಮಂಡಲದಲ್ಲಿ ನಾಝಿಗಳೊಬ್ಬರ ಸೇರ್ಪಡೆಯಾಗಿದೆ. ಮೊದಲೇ ಎದೆಯೊಡೆದುಕೊಂಡಿದ ಇಂಗ್ಲಂಡ್—ಫ್ರಾನ್ಸ್ ದೇಶಗಳಿಗೆ ಈ ಹಳೆ ಹಗೆಗಳ ಗೆಳೆತನವು ಸಿಡಿಗುಂಡಿನಂತಾಗಿದೆ.

ಮುಸೊಲಿನಿಯ ಚಾಣಕ್ಯನೀತಿಗೆ ಗೆಲುವು

ಅಬಿಸೀನಿಯವನ್ನು ನುಂಗಿದಂದಿನಿಂದಲೂ ಅದರ ಮೇಲಿನ ತನ್ನ ಪ್ರಭುತ್ವವನ್ನು ಇಂಗ್ಲಂಡು ಮಾನ್ಯಮಾಡಿರಲಿಲ್ಲ. ಇದಕ್ಕಾಗಿ ಒಳಗೊಳಗೆ ಮುಸೊಲಿನಿ ಕುದಿಯುತ್ತಿದ್ದನು. ಸ್ಪೇನದಲ್ಲಿಯ ಅಂತಃಕಲಹದ ಮೊಟ್ಟೆಯೊಡೆಯಲು ಬೇಕಾದ ಬಿಸಿಯನ್ನೂ ಅವನೇ ಪೂರೈಸಿದನು; ಜಿಬ್ರಾಲ್ಟರ ಸಾಮುದ್ರಧುನಿಯೊಳಗಿಂದ ಹಾಯ್ದು ಹೋಗುವ ಬ್ರಿಟಿಷ್ ಹಡಗುಗಳಿಗೆ ಹೆದರಿಕೆ ಕೊಡುವ ಸಲುವಾಗಿ ಭೂಮಧ್ಯ ಸಮುದ್ರದೊಳಗೆ ಸಂಚರಿಸುವ ಬ್ರಿ. ಹಡಗುಗಳನ್ನು ಮುಳುಗಿಸುವಂತೆ ಸೇನಾಪತಿ ಫ್ರಾಂಕೊನನ್ನು ಅವನೇ ಪ್ರೇರೇಪಿಸಿದನು; ಜಪಾನ-ಜರ್ಮನಿ ಇಟಲಿಗಳ ಸಂಧಾನವನ್ನು ಹೂಡಿ ಏಶಿಯಖಂಡದಲ್ಲಿಯೂ ಬ್ರಿಟಿಷರಿಗೆ ಚಿಂತೆಯುಂಟಾಗುವಂತೆ ಮಾಡಿದನು.

ಇಷ್ಟೆಲ್ಲ ಮಾಡಿದರೂ, ಬ್ರಿಟಿಷ್ ಪರರಾಷ್ಟ್ರ ಮಂತ್ರಿಗಳಾದ ಈಡನ್ನರು ಅವನು ಬಯಸಿದ ಮಾನ್ಯತೆಯನ್ನು ಕೊಡಲಿಲ್ಲ. ಇಟಲಿಯ ಗುಪ್ತ ಸಹಾಯದಿಂದಲೆ ಸ್ಪೇನದ ಅಂತಃಕಲಹದ ಹುಣ್ಣು ಹಬ್ಬುತ್ತಿದ್ದುದರಿಂದ, ಈ ಕಾಯಕವು ನಿಲ್ಲುವ ವರೆಗೂ ಮಾನ್ಯತೆಯನ್ನೂ ಕೊಡುವ ಮಾತನ್ನೆತ್ತಬಾರದೆಂದು ಈಡನ್ನರ ಹಟ. ಇದು ಪ್ರಾಮಾಣಿಕ ವಿಚಾರದವರಿಗೆ ಒಪ್ಪುತ್ತದೆ. ಆದರೆ ಮುಖ್ಯಮಂತ್ರಿಗಳಾದ ಚೇಂಬರ್ಲೇನರಿಗೆ ಈಡನ್ನರೊಬ್ಬರು ಕಂಟಕರಾದರು. ಸಾಮ್ರಾಜ್ಯಕ್ಕೊದಗಿದ ಗಂಡಾಂತರದಿಂದ ಅವರು ಭಯಗ್ರಸ್ತರಾಗಿರಬೇಕು. ಮುಸೋಲಿನಿಯು ಇದನ್ನು ಕಂಡುಹಿಡಿದು ಇಂಗ್ಲಂಡಿನಲ್ಲಿಯ ತನ್ನ ವಕೀಲನ ಮುಖಾಂತರ ಮಾತುಕತೆ ನಡೆಸಿದನು. ಅವನೊಡನೆ ರಾಜಿಮಾಡಿಕೊಳ್ಳುವ ಆತುರದಿಂದ ಚೇಂಬರ್ಲೇನರು ಈಡನ್ನರನ್ನು ಹಾರಿಸಲೂ ತಯಾರಾದರು. ಈಡನ್ನರು ರಾಜೀನಾಮೆ ಕೊಟ್ಟರು. ಅದು ಸ್ವೀಕೃತವೂ ಆಯಿತು. ಇದರಿಂದ ಇಂಗ್ಲಿಷ್ ರಾಜಕೀಯ ರಂಗದಲ್ಲಿ ಕೋಲಾಹಲವೆದ್ದಿದೆ. ಹೊಸ ಸಾರ್ವತ್ರಿಕ ಚುನಾವಣೆಯೂ ನಡೆಯಬೇಕಾಗಿ ಬರಬಹುದೆಂದು ಊಹೆ. ಇನ್ನು ಚೇಂಬರ್ಲೇನ್-ಮುಸೋಲಿನಿಗಳ ಪ್ರಣಯವು ನಿರಾಂತಕವಾಗಿ ಸಾಗಬಹುದಾಗಿದೆ. ಇಟಲಿಯ ಅಬಿಸೀನಿಯನ್ ಸಾಮ್ರಾಜ್ಯಕ್ಕೆ ಇಂಗ್ಲಂಡು ಸಂತೋಷದಿಂದ ಮಾನ್ಯತೆಯೀಯುವುದು; ಅಬಿಸೀನಿಯದಲ್ಲಿ ವಸಾಹತು ಸ್ಥಾಪಿಸಲು ಮುಸೊಲಿನಿಗೆ ಬೇಕಾದ ಸಾಲವನ್ನೂ ಇಂಗ್ಲಂಡು ಅತ್ಯಾನಂದದಿಂದ ಕೊಡುವುದು; ಇದಕ್ಕೆ ಪ್ರತಿಫಲವಾಗಿ ಸ್ಪೇನದ ಅಂತಃಕಲಹವನ್ನು ನಿಲ್ಲಿಸಲು ಮುಸೊಲಿನಿಯ ಸಹಾಯ ಪಡೆಯಲಾಗುವುದು; ಇಂತು ಇಟಲಿಯನ್ನು ಸಮಾಧಾನಗೊಳಿಸಿ, ಇಟಲಿ-ಜರ್ಮನಿ-ಜಪಾನಗಳ ತ್ರಿಕೂಟವನ್ನು ಒಡೆದು, ಯುದ್ಧವಿಲ್ಲದೆ ಬ್ರಿಟಿಷ್ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗುವುದು. ಆದರೆ ಚೇಂಬರ್ಲೇನರ ಸವಿಗನಸುಗಳು ನನಸಾಗುವ ಪೂರ್ವದಲ್ಲಿಯೇ ಹೊಸದೇನಾದರೂ ಸಂಭವಿಸಿದರೆ—???

ಮುಂದಿನ ಸಂಚಿಕೆಯನ್ನು ನಿರೀಕ್ಷಿಸಿರಿ !

- ಕಳೆದ ಕೆಲವು ತಿಂಗಳಿಂದ ಜ. ಕ.ದ ಲೇಖನಗಳಲ್ಲಿ ಕೇವೊಂದು ವೈಶಿಷ್ಟ್ಯವು ವಾಚಕ[ರಿಗೆ] ಬಂದಿರಲು ಸಾಕು. ಇದೀಗ ಆ ಬದಲಾವಣೆಯನ್ನು ಒಂದು ಸ್ಥಿರತೆಗೆ ತಂದು, ಲೇಖನಾದಿಗ[ಳ] ವೈಚಿತ್ರ್ಯ-ವೈವಿಧ್ಯಗಳನ್ನೂ ವಿಪುಲ ಚಿತ್ರಗಳನ್ನೂ ಒದಗಿಸುತ್ತ, ಸಂಚಿಕೆಯ ಅಂತ[ರಂಗ] ಸೌಂದರ್ಯಗಳನ್ನು ಹೆಚ್ಚಿಸಬೇಕೆಂದಿದ್ದೇವೆ.
- ಇನ್ನು ಮುಂದೆ ಪ್ರತಿ ಸಂಚಿಕೆಯಲ್ಲಿಯೂ ಪುಸಃಚಜ್ಞಾನವನ್ನೂ ಇಂದಿನ ನಾಗರಿಕತೆಗೆ [ಕಾ]ರುವ ಸಂಸ್ಕೃತಿಯ ಪರಿಚಯವನ್ನೂ ಆರೋಗ್ಯ-ಭೌತಿಕಶಾಸ್ತ್ರ-ಕಾಮವಿಜ್ಞಾನವೇ ಮೊದ[ಲಾದ] ವಿಷಯಗಳ ತಿಳಿವನ್ನೂ ಹೆಚ್ಚಿಸುವ ಲೇಖನಗಳೂ ವಿಪುಲ ಚಿತ್ರಗಳೂ ಬರುವವು.
- ಕನ್ನಡಿಗರಿಗೆ ಆಧುನಿಕ ಜ್ಞಾನವನ್ನು ಸುಲಭವಾಗಿಯೂ ಲಲಿತವಾಗಿಯೂ ಮನೋರಂಜ[ಕವಾಗಿಯೂ] ಒದಗಿಸುವುದೇ ಜ.ಕ.ದ ಗುರಿ. ಮುಂದಿನ ಸಂಚಿಕೆಗಳಲ್ಲಿ ಇದರ ಪ್ರತಿಬಿಂಬವನ್ನು ಕಾಣ[ಬಹುದು].

ಎಪ್ರಿಲ್ ಸಂಚಿಕೆಯಲ್ಲಿ—

ನಾಯಿಯ ಮೀಮಾಂಸೆ (ವಿನೋದ ಸಿರ್ಬಂಧ)
' ಶ್ರೀರಂಗ '

ಇಂದಿನ ದ್ವಿಭಾಷಾಚಕ್ರವರ್ತಿಗಳು !
ಶಂ. ಬಾ. ಜೋಶಿ

ಜಪಾನಿನಲ್ಲಿಯ ಪ್ರಾಥಮಿಕ ಶಿಕ್ಷಣ (ಸಚಿತ್ರ)
ಕೆ. ಎಲ್. ಸಂಜಪ್ಪ, ಟೋಕಿಯೊ

ಗೌಡರ ಸೊಸಿ (ನೀಳ್ಗತೆ—ಸಚಿತ್ರ)
ಬಸವರಾಜ ಕಟ್ಟೀಮನಿ

ಕಪ್ಪೆಗಳ ಪ್ರಣಯ (ಸಚಿತ್ರ)
'ವಾಸಂತಿಕ'

ಅಲ್ಲದೆ ಪುಟಪುಟಕ್ಕೆ ವಿಷಯವೈವಿಧ್ಯ ಮ[ತ್ತು] ವೈಚಿತ್ರ್ಯ.

ಆಭಾರಮನ್ನಣೆ

ಈ ಸಲ ಅಚ್ಚಾದ ಅ.ಭಾ. ಮಹಿಳಾಪರಿಷ[ತ್ತಿನ]ಗಳ ಪಡಿಯಚ್ಚುಗಳೆರಡೂ 'ಗೃಹಲಕ್ಷ್ಮಿ'[ಪತ್ರಿಕೆ]ಯಿಂದ ಪಡೆದುವಾಗಿವೆ. ಅವುಗಳನ್ನೊದಗಿ[ಸಿದ] ಆ ಕಾರ್ಯಾಲಯದವರಿಗೆ ಕೃತಜ್ಞರಾಗಿದ್ದೇವೆ.




ಸಂಪಾದಕರು —
...ವಿ ರಾಮಚಂದ್ರರಾಯರು
ಬಿ.ಏ.
...ಹಸಂಪಾದಕಿಯರು —
...ಶ್ಯಾಮಲಾದೇವಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾ[ನೆ]

(ಮೈಸೂರು ಸರ್ಕಾರ)

ಭದ್ರಾವತಿ



ಅತ್ಯಂತ ಶ್ರೇಷ್ಠವಾದ

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ, ಸರಳು, ಕಂಬಿ ಮುಂತಾದ ಸಾಮಾನುಗಳು (M. S. Flats, Bars etc.) ಇದ್ದಿಲಿನ ಉಪಯೋಗದಿಂದ ತಯಾರಾಗುವ ಅತ್ಯುತ್ಕೃಷ್ಟವಾದ ಬೀಡು ಕಬ್ಬಿಣ (Charcoal Pig Iron) ಎರಕದ ನೀರಿನ ಕೊಳವೆಗಳು ಅಥವಾ ಪೈಪುಗಳು (Cast Iron Pipes) ಸ್ಪಿರಿಟ್ಸ್ (W. W. Methanol) " ಕ್ರೆಸೋ " ಎಂಬ ಫಿನಾಯಿಲ್ ಎಣ್ಣೆ ("Kreso") ಡಾಮರ್ ಎಣ್ಣೆ (Wood Tar) ಮರದ ಎಣ್ಣೆ (Wood preservative)

.... ಇವೇ ಮುಂತಾದವು ತಯಾರಾಗುತ್ತವೆ. ....

ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ.

ಉಕ್ಕಿನ ಸಾಮಾನುಗಳಿಗೆ—

ಏಜಂಟರು—

ದಕ್ಷಿಣ ಮಹಾರಾಷ್ಟ್ರ ದೇಶಕ್ಕೆ: .... ವಾಲ್ಕಾರ್ಟ್ ಬ್ರದರ್ಸ, ಹು[ಬ್ಬಳ್ಳಿ]

ಮೈಸೂರು ಸಂಸ್ಥಾನದಲ್ಲಿ: .... ಬಿ. ವಿ. ನಾರಾಯಣಸ್ವಾಮಿ ಅಂಡ್ ಕೋ


೪೨ ಅರ್ಕಾಟ್ ಶ್ರೀನಿವಾಸಾಚಾರ್ ಬೀದಿ, ... ಬೆಂಗಳೂರು

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ ಮು[ದ್ರಿಸಿ]
[ರಾ]ಮಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ಸ್ಟೇಶನ ಬಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ ಪ್ರ[ಕಟಿಸಿದರು]

ಪರಿವಿಡಿ

ಏಪ್ರಿಲ ೧೯೩೪
ಸಂಪುಟ ೧೬ : ಸಂಚಿಕೆ ೪

ಮರದುದಿಯಿಂದ (ಮುಖಚಿತ್ರ) ....
ಕವಿ (ಕವನ) ....ಶ್ರೀ. ಸಾಲಿ ರಾಮಚಂದ್ರರಾಯರು ೨೪೫
ಕನ್ನಡಿತಿ (ಗದ್ಯಕಾವ್ಯ-ಸಚಿತ್ರ) .... ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ. ೨೪೬
ಬಾಳಿನ ಸವಿ .... (ಕೆಮಾಲ ಪಾಶಾ ಅವರ ಜೀವನ ತತ್ವಜ್ಞಾನ) ೨೪೮
ನಾಟ್ಯಕಲೆ .... ಶ್ರೀ. ಟಿ. ರಾಘವಾಚಾರ್ಯರು ಬಿ.ಎ., ಬಿ.ಎಲ್. ೨೫೦
ಆರೋಗ್ಯಬಿಂದು ೨೫೩
ಜಪಾನಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ (ಸಚಿತ್ರ) .... ಶ್ರೀ. ಕೆ. ಎಲ್. ನಂಜಪ್ಪ, ಟೋಕಿಯೊ ೨೫೪
ಸುಶೀಲೆಯ ನಿರ್ಧಾರ (ಸಣ್ಣ ಕತೆ) .... ಶ್ರೀ. ಸಂಜೀವ ೨೬೧
"ಗದಾಯುದ್ಧ" ದ ರನ್ನನ ಕಾಲನಿರ್ಣಯದ ಶಾಸ್ತ್ರೀಯ ರೀತಿ (ಐತಿಹಾಸಿಕ) ಶ್ರೀ. ನಾ. ಶ್ರೀ. ರಾಜಪುರೋಹಿತರು ೨೬೪
ಕಂಡದ್ದೇ ನಿಜ (ಹರಟೆ) .... ಶ್ರೀ. ಜಿ. ಎನ್. ಕಲಮದಾನಿ ೨೬೭
ಸಾಹಿತ್ಯವೊ—ಕಲೆಯೊ ? .... "ಈ ಸಾ" ೨೭೦
ವಿಷಮ ದಂಪತಿಗಳು (ಕಾಮವಿಜ್ಞಾನ-ಸಚಿತ್ರ) ಡಾ. ಎಂ. ಗೋಪಾಲಕೃಷ್ಣರಾಯರು, ಸಂ. ಕಲಿಯುಗ ೨೭೧
ಅಣೋರಣೀಯಾನ್ ಮಹತೋ ಮಹೀಯಾನ್ ೨೭೫
ನಾನು-ನೀನು (ಕವನ).... ....ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ ೨೭೬
ಹಸುರು (ಕವನ) .... ಶ್ರೀ. ಜಿ. ವರದರಾಜರಾವ್ ೨೭೭
ಸಂಜೆಯಾಗುವುದೆಂದಿಗೆ ? (ಕವನ) .... ಶ್ರೀ. ಕೆ. ಎಸ್. ನರಸಿಂಹಸ್ವಾಮಿ ,,
ಗೌಡರ ಸೊಸಿ (ಹಳ್ಳಿಗರ ಬಾಳಕತೆ-ಸಚಿತ್ರ) .... ಶ್ರೀ. ಬಸವರಾಜ ಕಟ್ಟೀಮನಿ ೨೭೯
ನಗಬೇಡಿ ! ೨೯೩
ನಾಯಿಯ ಮೀಮಾಂಸೆ (ವಿನೋದನಿರ್ಬಂಧ-ಸಚಿತ್ರ) .... 'ಶ್ರೀರಂಗ' ೨೯೪
ಇಂದಿನ ಉಭಯ-ಭಾಷಾ-ಚಕ್ರವರ್ತಿಗಳು .... ಶ್ರೀ. ಜೋಶಿ ಶಂಕರರಾಯರು ೨೯೮
ಪಂಡಿತವಕ್ಕಿ (ಕವನ) ....'ಪಿ. ಜಿ. ಆರ್.' ೩೦೧
ಕಪ್ಪೆಗಳ ಪುಣಯ (ಪ್ರಾಣಿವಿಜ್ಞಾನ-ಸಚಿತ್ರ) ೩೦೨
ನಿಶೆಯು ಎಲ್ಲೆಲ್ಲೂ (ಸಣ್ಣ ಕತೆ) .... "ಶಂಕರತನಯ" ೩೦೪
ಹಿಟ್ಲರನ ವಿಕ್ರಮ (ಪರರಾಷ್ಟ್ರೀಯ ರಾಜತಂತ್ರ) .... "ನಾಗರಿಕ" ೩೦೭
ಜ್ಞಾನ-ವಿಜ್ಞಾನ ೩೧೩
....ಹಾಲನ್ನು ನಿರ್ಜಂತುಗೊಳಿಸುವುದು—ಅಮೆರಿಕೆಯಲ್ಲಿ ಬೆಡಗಿನ ಬೇಟೆ—ನೀರು ತಾಗದ ಅರಿವೆ—ಫಲಗಳನ್ನು ....
....ಪಕ್ವಗೊಳಿಸುವುದು—ಕುಡಿತವನ್ನು ಅಳೆಯಬಹುದು—ಕಟ್ಟಿಗೆಯಿಂದ ಕಾಜಿನ ನಿರ್ಮಾಣ!—ಕೃತ್ರಿಮ ....
....ರಕ್ತ—ಸಾಮೊಆ ದ್ವೀಪದ ನವವಧು (ಸಚಿತ್ರ) ....
ವೀಣಾವಿತಾನ ....(ಎಸ್. ಎಸ್. ಮ್ಹಾ. ಇತ್ಯಾದಿ) ೩೧೬
ಕನ್ನಡದ ಮುನ್ನಡೆ ೩೧೯
ವಿಚಾರವೇದಿಕೆ ೩೨೧
....ನಮ್ಮ ಹೋರಾಟ—ಮುಸ್ಲಿಂ ಲೀಗಿನ ರಾಜಕೀಯ ತತ್ವಜ್ಞಾನ—ನ್ಯಾಯಮಂದಿರಗಳ ವಿಡಂಬನೆ—ಭಾಪು ....
....ಸರ್ ಸಿಕಂದರ !—ಜಾತೀಯ ದೊಂಬಿಗಳು—ತಿರುವಾಂಕೂರಿನ ತರುವಾಯ ಇಂದೂರು—ಕೂಲಿಕಾರರ ....
....ರಾಜ್ಯದ ಕೊಲೆಗಡಕ ....
ನಮ್ಮ ಮಾತು ೩೨೫
ಪತ್ರವ್ಯವಹಾರ ೩೨೬



ಮರದುದಿಯಿಂದ



ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಯುಗಪ್ರತಿಪದೆ (೧-೪-೧೯೩೮) | ಸಂಚಿಕೆ ೪

ಕವಿ

ಪರಿಮಳದೆ ಪುದಿದು ಬಲ್ಲನೆಯಲರ್ದು ಬಗೆಗೊಳ್ವ |
ನರುಗಂಪನೆತ್ತುಲುಂ ಸೂಸಿ ಕೃತಿಸೂದವೋಲ್ |
ಪರಿಪಕ್ವಮತಿಯುದಾತ್ತಾಶಯಂ ಕವಿ ಸುಜನಮೊಲ್ದೊಲ್ದು ನಲಿಯೆ ಪಾಡಿ ||
ಸರಸಾರ್ಥಸುಭಗ ವಿಮಲೋದಾರ ಭಾವ ಬಂ- |
ಧುರಸೂಕ್ತಿ ಜನಮನದ ಕಳ್ತಲೆಯನಲೆದಟ್ಟಿ |
ಮೆರೆಯೆ ಮೆರೆವಂ ಬೆಳಗಿ ಲೋಕಮಂ ಸುಕೃತಿ ಶರದಮೃತಾಂಶುವಿಶದಕೀರ್ತಿ ||೧||

ಅನುಕಂಪನಂ ಸಹಜಗುಣಮಿವನದೈ ! ನಲಿವ |
ಜನದ ನಲ್ವಿವನ ಹೃದ್ವಲ್ಲಕಿಯ ತಂತ್ರಿಯೊಳ್ |
ಸ್ವನಮನೊದವಿಸದೆ ? ಜನದಳಲಿವನನಳಲಿಸದೆ ಹೃದಯಂ ಬಿರಿಯೆ ತಾಗಿ ? ||
ತನಗೆ ಸೊಗಮಾದೊಡನೆ ತಾಯಂತೆ ಮಕ್ಕಳ್ಗೆ !,
ಮನವೊಲ್ದು ಪಸುಗೆಗುಡುವಂ ಜನಕೆ ! ಜಗಮಿವನ |
ತನ:ವದರ ಪದುಳಮುದರಳಲೆರಡುಮುಪ್ಪುವೀತನವೆಂದೊಡಲ್ತಚ್ಚರಿ ||೨||

ಕವಿ ತತ್ವದರ್ಶಿ, ಸಮದೃಷ್ಟಿ, ಸಮ್ಯಗ್‌ದೃಷ್ಟಿ, |
ಕವಿ ಕಠೋರಂ ವಜ್ರದಂತೆ, ಸುಮದಂತೆ ಮೃದು !|
ಕವಿ ನಿರಂಕುಶನಲ್ಲಮಾದೊಡಂ ಕವಿಗೆ ಪೆರರಂಕುಸಮಿಡಲ್ಕಾರರೈ ! ||
ಕವಿ ನಿತ್ಯಸೌಂದರ್ಯಭೋಕ್ತಾರನಾತನದು |
ನವನವೋನ್ಮೇಷಪ್ರಭಾವಿ ಮತಿಯಪ್ಪುದ- |
ರ್ಣವದಲಂಪೆಂತಂತು ! ಕವಿಯಶಂ ಸುರಪತಿಪ್ರಾರ್ಥ್ಯಮೆಂಬುದು ಸತ್ಯಮೈ ! ||೩||

—ಸಾಲಿ ರಾಮಚಂದ್ರರಾಯ



ಕನ್ನಡಿತಿ

●

[ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ. ಇವರು ರಚಿಸುತ್ತಿರುವ ಕನ್ನಡನಾಡಿನ 'ಮಿಂಚಿದ ಮಹಿಳೆಯ
ಗ್ರಂಥದ ನಾಂದೀಪದ್ಯವಿದು. ಅಹುದು. ಇದರ ಬಹಿರ್‌-ರೂಪವು ಗದ್ಯಾಕೃತಿಯಾಗಿದ್ದರೂ ಇದರ ಹೃದಯವು ಕಾವ್ಯ
ಇದರಲ್ಲಿಯ ಪ್ರತಿಪದವೂ ಸಹೇತುಕವಾಗಿಯೂ ಆಳವಾದ ಅರ್ಥಗರ್ಭಿತವಾಗಿಯೂ ಉಪಯೋಗಿಸಲಾಗಿದೆ. ಮನನಪೂರ್ವಕ
ಇಲ್ಲಿ ಕಲ್ಪಿಸಿದ 'ಕನ್ನಡಿತಿ'ಯ ಭಿನ್ನಭಿನ್ನ ಸ್ವರೂಪಗಳ ಸಾಕ್ಷಾತ್ಕಾರವಾಗಿ, ಈ ಗದ್ಯಕಾವ್ಯದ ಸ್ವಾರಸ್ಯವು ಮನಸ್ಸನ್ನು ಹಿಡಿಯ

ಕನ್ನಡಿತಿ ! ವಿಶ್ವದಲ್ಲಿ ಕನ್ನಡತನವೆಂಬ ರಮ್ಯವಾದ ಜ್ಯೋತಿಯನ್ನು ನಿರ್ಮಿಸಿ ಅದರ ಆಗು
ಗಳನ್ನು ನಿಯಮಿಸುತ್ತಿರುವ ವಿರಾಟ ಶಕ್ತಿ ! ದೇವಿ ! ನಿನಗೆ ತಲೆವಾಗುವೆನು.

* * *

ಕನ್ನಡಿತಿ ! ಪ್ರಪಂಚದ ಅನಂತ ದೇಶಕಾಲಪ್ರವಾಹದಲ್ಲಿ ಹರಿಹರಿದು ಹೊಳೆಯುತ್ತಿರುವ ಕನ್ನಡ
ಕರ್ನಾಟಕ ರಾಷ್ಟ್ರಮೂರ್ತಿ ! ಅಮಿತ ಬಲಸಿಧಿ ! ಮಿಂಚು, ಬೆಳಗು, ಉರಿ. ಮೊಳಗು, ಗುಡುಗು, ಗರ್ಜಿಸು.
ಕನ್ನಡನಾಡಿನ ಅಣುರೇಣುಗಳಲ್ಲಿ ಸ್ಫುರಿಸು. ಸಂತತವಾಗಿ, ಚೈತನ್ಯಮಯವಾಗಿ ಸ್ಫುರಿಸು. ಕನ್ನಡದ
ವನ್ನು ಆಳಿಸು. ಕನ್ನಡತನವನ್ನು ಹೊರಹೊಮ್ಮಿಸು, ಬಲಿಸು, ಬೆಳಸು. ವಿಶ್ವದಲ್ಲಿ ಮಿಗಿಲಾಗಿಸು.

* * *

---

*ಈ ಗ್ರಂಥವು 'ಮಿಂಚಿನ ಬಳ್ಳಿ' ಗ್ರಂಥಮಾಲೆಯ ಮೂರನೆಯ 'ಕುಡಿ' ಯಾಗಿ ಬೇಗನೆ ಪ್ರಕಟವಾಗಲಿದೆ. —ಸಂ. ಪ.

ಕನ್ನಡಿತಿ ! ಕನ್ನಡ ಹುಲಿಯನ್ನು ಹೆತ್ತು ಹೊತ್ತು ಹರಸಿ ಹಿರಿದಾಗಿಸಿದ ಕನ್ನಡ ಮಾತೃಗಣವೆ ! ಈಚೆಗೆ ನಿನ್ನ ಬಸಿರು ಮಸಳಿಸಿದುದೇಕೆ ? ನೀನು ಹುಲಿಯಾದರೆ, ನಿನ್ನ ಒಡಲಿಂದ ನರಿನಾಯಿಗಳು ಹುಟ್ಟಬಲ್ಲವೆ ? ನೆನೆ ತಾಯೆ ! ನೀನು ಹುಲಿ, ಹೆಬ್ಬುಲಿ ಎಂಬುದನ್ನು ನೆನೆ. ನರಿನಾಯಿಗಳಿಗೆ ನನ್ನ ಉದರದಲ್ಲಿ ಇಂಬಿಲ್ಲ ಎಂದು ನಿರ್ಧರಿಸು. ನೀನು ಸಿಂಹಿಣಿಯಾಗು. ಸಿಂಹರನ್ನು ಹೆರು. ನರಸಿಂಹರನ್ನು ಹೆರು. ನಿನ್ನ ನರಸಿಂಹರು ಇನ್ನೊಮ್ಮೆ ಕರ್ನಾಟಕ ಸಿಂಹಾಸನವನ್ನು ಸ್ಥಾಪಿಸಲಿ. ವಿಶಾಲವಾದ ಕನ್ನಡ ಬಾಂಧವ್ಯದ ಎರಕದಲ್ಲಿ ರೂಪುಗೊಂಡ ವಜ್ರಸಿಂಹಾಸನವನ್ನು ಸ್ಥಾಪಿಸಲಿ. ಕನ್ನಡಿಗರ ವೀರಸಂಘವು ಕರ್ನಾಟಕ ಸಿಂಹಾಸನವನ್ನೇರಿ ವಿಶ್ವವನ್ನು ಕಿರಿದಾಗಿಸಲಿ. ಈ ಪಾತ್ರತೆ ನಿನ್ನಲ್ಲಿದೆ ಎಂದು, ತಾಯೆ, ನಾನು ನೆರೆನಂಬಿಹೆನು.

* * * *

ಕನ್ನಡಿತಿ ! ಕನ್ನಡ ಜನಾಂಗದ ಅರ್ಧಾಂಗವೆನಿಸುವ ಪತ್ನೀಕುಲವೆ ! ಒಂದು ಕುಡಿನೋಟ, ಒಂದು ಮೆಲು ನುಡಿ, ಒಂದು ತನಿಸೋಂಕಿನಿಂದ ಅಸಹಾಯಶೂರರಾದ, ಅಸಮಾನಧೀರರಾದ, ಅಸದೃಶಕಲಾಚತುರರಾದ ಕನ್ನಡ ನಲ್ಲರನ್ನು ಪ್ರೇರಿಸುವ ಆ ನಿನ್ನ ಅಸಾಧಾರಣ ತೇಜಸ್ವಿತೆಯು ಈಚೆಗೆ ಎಲ್ಲಿ ಮಾಯವಾಯಿತು ? ಕನ್ನಡ ರಮಣಿ ! ಲೋಕವನ್ನು ಮರುಳುಗೊಳಿಸುವ ಆ ನಿನ್ನ ಲಾವಣ್ಯವು, ಜಗವನ್ನು ಬೆರಗುವಡಿಸುವ ಆ ನಿನ್ನ ಮುಖಕಾಂತಿಯು ಹೀಗೇಕೆ ಕುಂದಿ ಕಂದಿತು ? ನಲ್ಲೆ ! ನೀನು ಬಾಡಿದರೆ ನಾಡ ಬಾಳು ಬಾಡುವುದು; ನೀನು ಅರಳಿದರೆ ನಾಡ ಬದುಕು ಅರಳುವುದು ಎಂಬುದನ್ನು ಅರಿಯೆಯಾ ? ಜಾಣೆ ! ಕಣ್ತೆರೆ, ತೆರೆದು ನೋಡು, ನೀನು ಮೈಮರೆತಿರುವಾಗ ನಿನ್ನ ನೆರೆಯವರು, ಹಿಂದಿನವರು ಎಷ್ಟೊಂದು ಮುಂದುವರಿದಿರುವರು ಎಂಬುದನ್ನು. ಮನದನ್ನೆ ! ಕನ್ನಡದ ಧವಲ ಕೀರ್ತಿಯು ನೀನು. ಉಚ್ಚ ಸಂಸ್ಕೃತಿಯು ನೀನು. ಮಂಗಲೆ ! ಕನ್ನಡಿಗನಿಗೆ ಮಂಗಲೆಯಾಗು. ಭಾಗ್ಯೇಶ್ವರಿ ! ಹಾಡು, ಕನ್ನಡದ ಸೌಭಾಗ್ಯಗೀತವನ್ನು. ಸ್ಫೂರ್ತಿಯ ಮೂರ್ತಿಯೆ ! ದೂಡು, ಮುಂದೂಡು ಕನ್ನಡ ಪುರುಷರನ್ನು ಪುರುಷಾರ್ಥದತ್ತ.

* * * *

ಕನ್ನಡಿತಿ ! ಕನ್ನಡಣ್ಣನಿಗೆ ಬೆಂಬಲವಾಗಿ ಒಡಹುಟ್ಟಿದ ಭಗಿನೀವೃಂದವೆ ! ಅಂದಿನಾ ನಿನ್ನ ಅಕ್ಕರೆಯು ಇಂದೇಕೆ ಕೊರಗಿತು ? ಅಕ್ಕಯ್ಯ ! ನಿನ್ನ ನೆರವಿಗೆ ಎರವಾಗಿ ಕನ್ನಡಿಗನು ಸೊರಗಿಹನು. ತಂಗಿ ! ಕನ್ನಡದ ಏಳಿಗೆಯೆ ನಿನ್ನ ಜೀವನಸರ್ವಸ್ವವು ಎಂಬುದನ್ನು ಮರೆತೆಯಾ ? ಕುಲಜೆ ! ಆಪ್ತವಾದ ನಿನ್ನ ಆಲೋಚನೆಯಿಂದ ನಿಸ್ಸತ್ತ್ವನಾದ ಕನ್ನಡಿಗನಲ್ಲಿ ಚೈತನ್ಯವನ್ನು ತುಂಬು. ಸಖಿ ! ಹಿತವಾದ ನಿನ್ನ ಹಿತವಾದದಿಂದ ಕನ್ನಡಿಗನಿಗೆ ಅಭ್ಯುದಯದ ಮಾರ್ಗವನ್ನು ತೋರು. ಸೋದರಿ ! ಉದಾತ್ತವಾದ ನಿನ್ನ ಉಪದೇಶದಿಂದ ಕನ್ನಡಿಗನನ್ನು ಉನ್ನತಿಗಾಗಿ ಉತ್ಸಾಹಗೊಳಿಸು.

* * * *

ಕನ್ನಡಿತಿ ! ಕನ್ನಡ ಮಾತೃಗಣವೆ, ಪತ್ನೀಕುಲವೆ, ಭಗಿನೀವೃಂದವೆ ! ಕನ್ನಡದ ಅಭ್ಯುದಯಕ್ಕೆ ಕಾರಣವು ನೀನು; ಕನ್ನಡದ ಅಧಃಪತನಕ್ಕೆ ಕಾರಣವು ನೀನು; ಎಂಬುದು ನಿಜವಲ್ಲವೆ ? ಕನ್ನಡದ ಜೀವಾಳವೆ ! ಆಗಿನಾ ಕನ್ನಡಿಗನು ನಿನ್ನನ್ನು ಮನ್ನಿಸುತ್ತ ಕನ್ನಡವನ್ನು ಮಿಗಿಲಾಗಿಸಿದನು, ಮಿಗಿಮಿಗಿಲಾಗಿಸಿದನು. ಈಗಿನೀ ಕನ್ನಡಿಗನು ನಿನ್ನನ್ನು ಕಡೆಗಣಿಸುತ್ತ, ಕನ್ನಡವನ್ನು ಇಳಿಸಿದನು, ಪಾತಾಳಖಾತಕ್ಕೆ ಇಳಿಸಿದನು. ಕನ್ನಡದ ಬಲವೆ ! ಇಂದಿನೀ ಕನ್ನಡಿಗನು ನಿನ್ನನ್ನು ಅಬಲೆಯನ್ನಾಗಿಮಾಡಿದನು, ದುರ್ಬಲೆಯನ್ನಾಗಿಮಾಡಿದನು. ಕನ್ನಡದ ಸಿರಿಯೆ ! ಕ್ಷಮಿಸು; ಕ್ಷಮಿಸಲಾರೆಯಾ ಕನ್ನಡಿಗನು ಎಸಗಿದ ಅಕ್ಷಮ್ಯವಾದ ದ್ರೋಹಗಳನ್ನು ? ಭಗವತಿ ! ಕನ್ನಡ ಭಾಗ್ಯದೇವತೆ ನೀನು ಎಂಬುದನ್ನು ಕನ್ನಡಿಗನು ಸ್ಥಿರವಾಗಿ ಅರಿಯಲಿ. ಅರಿತು ಆದರಿಸಲಿ, ಆದರಿಸಿ ಆಚರಿಸಲಿ.

* * * *

ಕನ್ನಡಿತಿ ! ಜಯವಾಗು; ದಯವಾಗು; ಪ್ರಿಯವಾಗು.

—ದೇಸಾಯಿ ಪಾಂಡುರಂಗರಾಯ

ಬಾಳಿನ ಸವಿ

●

ಒಂದು ಕಾಲಕ್ಕೆ ಅಶ್ವಶಾಲೆಯ ಬಾಲಕನಿದ್ದು ಕ್ರಮೇಣ ಸೇನಾಪತಿಯಾಗಿ ತುರ್ಕಸ್ತಾನದ ಸರ್ವಾಧಿಕಾರಿ ಯಾಗಿ ಹಸಗೆಟ್ಟ ಹಳೆಯವರ ಹುಡಿಯಿಂದಲೇ ಹೊಸ ಜನಾಂಗವನ್ನು ಕಟ್ಟಲಿಕ್ಕೆ ಶಿಕ್ಷಣಪ್ರಸಾರ, ಬಹು ಪತ್ನೀವಿವಾಹದ ನಿರೋಧ, ರೋಮನ್ ಅಕ್ಷರಗಳ ಅನುಸರಣ ಮುಂತಾಗಿ ಧೀರ ಹೆಜ್ಜೆಗಳನ್ನಿಟ್ಟ ಕೆಮಾಲ ಪಾಶಾ ಅವರ ತತ್ವಜ್ಞಾನವಿದು. "ಭಾವೀ ಪ್ರಜೆಗಾಗಿ ಧುಡಿಯಬೇಕೆಂಬ ಹಂಬಲವೇ ಜೀವನ ಸುಖದ ಮೊದಲ ಮೆಟ್ಟಲು. ಸ್ವರಾಷ್ಟ್ರಹಿತಸಾಧನೆಯಲ್ಲಿ ಸರ್ವ ... ರಾಷ್ಟ್ರಗಳ ಹಿತ ಸಾಧಿಸುವಂತಿರಬೇಕು." ...

●

ಜೀವನದ ವಿಷಯಕ್ಕೆ ತತ್ವಜ್ಞಾನಿಗಳ ಅಭಿಪ್ರಾಯ ವೇನೆಂಬುದನ್ನು ತಿಳಿದುಕೊಳ್ಳಲಿಕ್ಕೆಂದು ನಾನು ಒಂದು ಕಾಲಕ್ಕೆ ಅನೇಕ ಪುಸ್ತಕಗಳನ್ನು ಓದಿದೆ. ಅವರಲ್ಲಿ ಕೆಲ ವರು ಪ್ರತಿಯೊಂದರಲ್ಲೂ ಅವಗುಣದ ಅಂಶವನ್ನೇ ನೋಡಿ "ನಮ್ಮ ಆತ್ಯಂತಿಕ ಗತಿಯು ಶೂನ್ಯವಾಗಿರುವವರೆಗೆ, ನಾವೇ ಶೂನ್ಯರಾಗಿರುವವರೆಗೆ ಈ ಜಗತ್ತಿನ ನಶ್ವರ ಜೀವ ನದಲ್ಲಿ ಸುಖಸಮಾಧಾನಗಳು ಸಿಗುವದು ಅಸಂಭವ" ಎಂದಿದ್ದಾರೆ.

ಇವರಿಗಿಂತ ಜಾಣರಾದ ಬೇರೆ ಹಲವರು "ಕೊನೆಯಂತೂ ಶೂನ್ಯವೇ ಆಗಿರುವದರಿಂದ ಜೀವಿಸಿರುವವರೆಗೆ ನಾವು ಹರು ಷಿತರೂ ಸಮಾಧಾನಿಗಳೂ ಆಗಿರೋಣ" ಎಂದಿದ್ದಾರೆ.

ನನಗೆ ಈ ಎರಡನೇ ಗುಂಪಿನವರ ವಿಚಾರವೇ ಹೆಚ್ಚು ಸೇರುತ್ತದೆ.

ಇಡಿ ಮಾನವವರ್ಗದ ಗುರಿಯು ನನ್ನಲ್ಲಿಯೆ ಮೂರ್ತೀ ಭವಿಸಿದೆ ಎಂದು ನಂಬುವವನೇ ದುಃಖಿಯಾಗುವನು. ವ್ಯಕ್ತಿಶಃ ಆ ಮನುಷ್ಯನೂ ನಶ್ವರನೆಂಬುದು ಸ್ವಯಂಸಿದ್ಧ ವಾದುದು. ತನಗಾಗಿಯಲ್ಲ, ಭಾವೀ ಪ್ರಜೆಗಾಗಿ ದುಡಿಯ ಬೇಕೆಂಬ ಹಂಬಲವೇ ಜೀವನಸುಖದ ಮೊದಲ ಮೆಟ್ಟಲು. ವಿವೇಕಿಗೆ ಇದರ ಹೊರತು ಬೇರೆ ದಾರಿಯಿಲ್ಲ. ಮುಂಬರುವ ಪೀಳಿಗೆಯ ಸೌಖ್ಯ ಗೌರವಗಳಿಗಾಗಿ ದುಡಿ ಯುವುದರಿಂದಲೇ ಜೀವನದಲ್ಲಿ ಪೂರ್ಣ ತೃಪ್ತಿ ಸಿಗುವದು.

"ಮುಂದಿನ ಸಂತಾನವು ನನ್ನ ಈ ಧ್ಯೇಯ... ಗಳನ್ನು ಮನ್ನಿಸುವುದೇ? ಗುರುತಿಸುವುದೇ?" ಎಂ... ಕೇಳಬಾರದು. ತಮ್ಮ ಲೋಕಸೇವೆಯು ... ಗಳ ವರೆಗೆ ಅಜ್ಞಾತವಾಗಿಯೆ ಉಳಿಯಲೆಂದು ... ವವರೆ ಹೆಚ್ಚಿನ ಸುಖಿಗಳೆಂದು ನನ್ನ ಅಭಿಪ್ರಾಯ.

ಎಲ್ಲರ ಸುಖದ ದಾರಿಗಳೂ ಒಂದೇ ... ಹಲವರು ಫಲಪುಷ್ಪಗಳ ಸಾಗುವಳಿಯಲ್ಲಿ ... ಕೊಂಡರೆ ಕೆಲವರು ಮನುಷ್ಯರ ಸಾಗುವಳಿಯಲ್ಲಿ ... ಷಿಸುವರು.

ತೋಟದಲ್ಲಿ ಹೂಗಳನ್ನು ಬೆಳೆಸುವವನು ... ಏನು ಬಯಸುವನು? ಮನುಷ್ಯರನ್ನು ಬೆಳೆ... ಅದೇ ಮನೋವೃತ್ತಿಯನ್ನು ಇಟ್ಟುಕೊಳ್ಳ... ಭಾವನೆಯಿಂದ ಕರ್ಮ ಮಾಡುವವ... ಗಳಿಗೂ ಅವುಗಳ ಭಾವೀ ಅಭ್ಯುದಯಕ್ಕೂ ... ವರು. ರಾಷ್ಟ್ರದ ಮತ್ತು ರಾಷ್ಟ್ರೀಯರ ... ಮೊದಲು ಸ್ವಸುಖವನ್ನು ಲಕ್ಷಿಸುವವನು ... ಮನುಷ್ಯನಲ್ಲ. ತಾವು ದೊಡ್ಡವರು, ತಮ್ಮ ದೇಶ... ತಮ್ಮನ್ನೇ ಪೂರ್ಣವಾಗಿ ಆಧರಿಸಿದೆ, ಎಂದು ... ಮಾತ್ರಕ್ಕೆ ರಾಷ್ಟ್ರಸೇವೆಯಾದಂತಾಗಲಿಲ್ಲ. ... ತಕ್ಕಂತೆ ದುಡಿಯುವವರೆ ಭಾವೀ ಜನತೆಯ ... ಅಭ್ಯುದಯಕ್ಕೂ ಅನುವಾಗುತ್ತಾರೆ.

ತನ್ನ ತರುವಾಯ ಪ್ರಗತಿಯೂ ಹೋರಾಟವು ... ಹೋದೀತೆಂದು ಸಂದೇಹಪಡುವದು ಮರುಳುತನ... ನನ್ನ ಮಾತುಗಳು ವಿವಿಧ ಸಮಾಜಗಳಿಗೆ ... ತ್ತವೆ. ಆದರೆ ಇಂದು ಜಗತ್ತಿನ ಎಲ್ಲ ಸಮಾಜ... ಸ್ಪರ ನಿಕಟ ಆಪ್ತತ್ವವನ್ನು ಹೊಂದುತ್ತಿವೆ. ... ನಮ್ಮ ರಾಷ್ಟ್ರದ ಹಿತಸಾಧನೆಯಲ್ಲಿ ಸರ್ವ ... ಹಿತಸಿದ್ಧಿಯಾಗುವಂತಿರಬೇಕು.

ಹೀಗೆ ಉದ್ದೇಶವಿಟ್ಟುಕೊಂಡು ದುಡಿಯು... ಹಾನಿಯೇನೂ ಇಲ್ಲವೆಂದು ಬುದ್ಧಿವಂತರೆಲ್ಲರೂ ... ತ್ತಾರೆ. ಏಕೆಂದರೆ ಇಡಿ ಜಗತ್ತಿನ ಸುಖಕ್ಕಾಗಿ ... ದೆಂದರೆ ಸ್ವರಾಷ್ಟ್ರದ ಸುಖಶಾಂತಿಯ ... ಬೇರೊಂದು ದಾರಿಯಾಗಿದೆ. ವಿವಿಧ ರಾಷ್ಟ್ರಗ... ಸಾಮರಸ್ಯ ಸಹಾನುಭೂತಿಗಳಿರದಿದ್ದರೆ ಯಾವ ... ಸುಖಿಯಾಗಲಾರದು. ಆದುದರಿಂದಲೇ ನನ್ನ ... ಪ್ರಜೆಗಳಿಗೆ ನಾನು ಈ ಹಿತೋಪದೇಶವನ್ನು ...

ದೇಶದ ಮುಂದಾಳುಗಳು ತಮ್ಮ ದೇಶದ ... ಹೋರಾಡುವದು ಸಹಜವಾಗಿದೆ. ಆದರೆ ... ಗಳಿಗೂ ಅದೇ ಕಲ್ಯಾಣವನ್ನು ಅವರು ಹಾರೈ...

ಜಗತ್ತಿನಲ್ಲಿಯ ಎಲ್ಲ ಆಗುಹೋಗುಗಳೂ ಇದೇ ಮಾತನ್ನು ಸಾರುತ್ತವೆ. ಎಲ್ಲೋ ದೂರದಲ್ಲಿ ನಡೆದ ಒಂದು ಸಂಗತಿಯು ಯಾವ ದಿನ ನಮ್ಮ ರಾಷ್ಟ್ರಶರೀರದ ಮೇಲೆಲ್ಲ ಪರಿಣಾಮ ಮಾಡಬಹುದೆಂದು ಹೇಳಲಾಗುವದಿಲ್ಲ.

ತುರ್ಕಸ್ತಾನವೂ ಅದರ ಮಿತ್ರರಾಷ್ಟ್ರಗಳೂ ಸಾಕಷ್ಟು ಬಲಿಷ್ಠವಾಗಿವೆ. ನಮಗೆ ಬೇರೆ ಕಡೆಯಿಂದ ಸಹಾಯದ ಅಗತ್ಯವಿಲ್ಲ. ಆದುದರಿಂದ ನಮಗೆ ಇಡಿ ಜಗತ್ತಿನ ಶಾಂತಿಯ ಕಡೆಗೆ ಲಕ್ಷ್ಯಕೊಡುವ ಅನುಕೂಲತೆಯಿದೆ. ಬೇರೊಂದು ದೇಶದಲ್ಲಿ ಅಶಾಂತಿಯಿದ್ದರೆ ನಮಗೇಕದರ ಚಿಂತೆ! ...ಎಂದು ನಾವು ಅನ್ನಕೂಡದು. ಆ ಅಶಾಂತಿನಿವಾರಣೆಗಾಗಿ ಸ್ವದೇಶದಲ್ಲಿಯ ಅಶಾಂತಿನಿವಾರಣೆಗಾಗಿ ತೋರಿಸುವಷ್ಟೆ ಆಸ್ಥೆಯನ್ನು ತೋರಿಸಬೇಕು.

ಈ ದೃಷ್ಟಿಯಿಂದ ವರ್ತಿಸುವ ದೇಶಗಳೂ ಸರಕಾರಗಳೂ ಮುಷ್ಯರೂ ಸ್ವಾರ್ಥದಲ್ಲಿ ಮುಳುಗುವದಿಲ್ಲ. ವೈಯಕ್ತಿಕವಾದ ಇಲ್ಲವೆ ರಾಷ್ಟ್ರೀಯವಾದ ಸ್ವಾರ್ಥಪರತೆಯು ದುರ್ಗುಣವೆಂದೆಣಿಸಲ್ಪಡಬೇಕು.

ನಮ್ಮ ಸುಖ-ಸೌಕರ್ಯಗಳಿಗಾಗಿ ನಾವು ಯತ್ನಿಸಬೇಕೆಂಬುದು ಸರಿಯೇ. ಆದರೆ ಜಗತ್ತಿನ ಸುಖಸೌಕರ್ಯವೂ ನಮ್ಮ ಗುರಿಯಾಗಿರಬೇಕು.

ನಾನೊಂದು ಉದಾಹರಣೆಯನ್ನು ಕೊಡುತ್ತೇನೆ: ನಾನೊಬ್ಬ ಸೈನಿಕನಾಗಿದ್ದೇನೆ. ಮಹಾಯುದ್ಧದಲ್ಲಿ ನಾನು ಒಂದು ಸೈನ್ಯದ ಮುಂದಾಳಾಗಿದ್ದೆ. ಆಗ ತುರ್ಕಸ್ತಾನದಲ್ಲಿ ಬೇರೆ ಸೈನ್ಯಗಳೂ ಸೇನಾಪತಿಗಳೂ ಇದ್ದರು. ನಾನು ಬರಿ ನನ್ನ ಸೈನ್ಯದಲ್ಲಷ್ಟೇ ಅಲ್ಲ; ಬೇರೆ ಸೈನ್ಯಗಳ ವಿಷಯಕ್ಕೂ ಲಕ್ಷ್ಯಕೊಡುತ್ತಿದ್ದೆ. ಒಂದು ದಿನ ನಾನು ಬೇರೊಂದು ಸೈನ್ಯದ ಚಲನವಲನದ ವ್ಯವಸ್ಥೆಯ ವಿಷಯಕ್ಕೆ ಬಹಳ ಯೋಚಿಸುತ್ತ ಕುಳಿತಿದ್ದೆ. ಆಗ ನನ್ನ ಸಹಾಯಕನು "ಸಂಬಂಧವಿಲ್ಲದ ಸೈನ್ಯಗಳ ವಿಷಯಕ್ಕೆ ಯಾಕೆ ಸುಮ್ಮನೆ ತಲೆ ನೋಯಿಸಿಕೊಳ್ಳುತ್ತೀರಿ?" ಎಂದು ಕೇಳಿದನು.

ನಾನೆಂದೆ "ಬೇರೆ ಸೈನ್ಯಗಳು ಸರಿಯಾಗಿ ಹೇಗೆ ವರ್ತಿಸುತ್ತಿವೆಯೆಂಬುದು ನನಗೆ ತಿಳಿಯದಿದ್ದರೆ ನನ್ನ ಸೈನ್ಯವನ್ನು ನಾನು ಹೇಗೆ ವ್ಯವಸ್ಥೆಗೊಳಿಸಲಿ?"

ರಾಷ್ಟ್ರವನ್ನು ಮುಂದೆ ನಡೆಸಿಕೊಂಡು ಹೋಗುವ ಮತ್ತು ಆಳುವ ಮುಂದಾಳುಗಳು ಇದೊಂದು ಜೀವಮಾತನ್ನು ಮರೆತರೆ ನಡೆಯುವಂತಿಲ್ಲ.

('ಬಾಲ್ಕನ್ ಹೆರಾಲ್ಡ'ದಿಂದ ಸಂಗ್ರಹಿಸಿದುದು)



ನವತುರ್ಕಸ್ತಾನದ ಜನಕ-ಕೆಮಾಲಪಾಶಾ

(ಪಡಿಯಚ್ಚು ಪ್ರಜಾಮತದ ಕೃಪೆಯಿಂದ ಪಡೆದುದು)

ನಾಟ್ಯಕಲೆ

ಲೇ:—ನಾಟ್ಯಪ್ರಪೂರ್ಣ ಶ್ರೀಮಾನ್ ಟಿ. ರಾಘವಾಚಾರ್ಯರು ಬಿ. ಎ. ಬಿ. ಎಲ್.

ನಾಟ್ಯಕುಶಲನಿಗೆ ಶಬ್ದಾಲಂಕಾರಗಳು ಬಂಧನಗಳೆನಿಸುವವು. ಇಂದಿನ ಅಭಿ... ವೆಂದರೆ ನಟನು ಕಣದಲ್ಲಿಳಿದು ಕುಸ್ತಿಯಾಡುವಂತಿದೆ. ಆದಷ್ಟು ಕಡಿಮೆ ... ಮಾತುಗಳ ಸಹಾಯದಿಂದ ಉತ್ಕೃಷ್ಟವಾಗಿ ರಸಪೋಷಣೆಗೊಳಿಸುವುದೇ ... ಕಲೆಯ ತಿರುಳು. ಕ್ಷುಲ್ಲಕ ದಾಸ್ಯಬುದ್ಧಿಗೆ ಬರಿ ಮಾತು ಶಬ್ದಾಲಂಕಾ... ಮೇಲೆ ಹೆಚ್ಚು ಪ್ರೇಮ. ಶಬ್ದ ಸಂಗೀತಗಳು ನಾಟ್ಯಕಲೆಗೆ ಪೂರಕವಾಗಬೇ... ... ... ಮಾರಕವಾಗಬಾರದು. ... ...

ರಂಗಭೂಮಿಯಲ್ಲಿ ಹಾಡು ಮತ್ತು ಮಾತುಗಳು ನಾಟ್ಯಕಲೆಗೆ ಪೂರಕವಾಗಿವೆ. ಬರಿ ಶಬ್ದಜಾಲವು ರಂಗಭೂಮಿಗೆ ಆವಶ್ಯಕವಾದ ಒಂದು ಸದ್ಗುಣವಲ್ಲ. ಆದಷ್ಟು ಕಡಿಮೆ ಮಾತುಗಳ ಸಹಾಯದಿಂದ ಉತ್ಕೃಷ್ಟವಾಗಿ ಪರಿಣಾಮ ಮಾಡುವದೇ ನಾಟ್ಯಕಲೆಯ ತಿರುಳು. ಪ್ರೇಕ್ಷಕರ ಸ್ವಭಾವವನ್ನು ನಾನು ಬಲ್ಲೆನಾದರೂ ಅತ್ಯಾವಶ್ಯಕವೆನಿಸುವ ವರೆಗೆ ಶಬ್ದಗಳನ್ನು ದೂರವಿರಿಸುವದೇ ನಾಟ್ಯಕಲೆಯ ಜೀವಾಳವೆಂದು ನಾನೆನ್ನುತ್ತೇನೆ. ಯಶಸ್ವಿಯಾದ ಕಥಕ್ಕಲಿಯ ನಾಟ್ಯಗಳು ಇದಕ್ಕೆ ಸಾಕ್ಷಿಯಾಗಿವೆ. ಸುರಿತ ಮತ್ತು ಸ್ವಾತಂತ್ರ್ಯಶೀಲ ಮನಸ್ಸಿಗೆ ಸುಲಭತೆಯೂ, ಸ್ಪಷ್ಟತೆಯೂ ಸೇರುತ್ತವೆ. ಕ್ಷುಲ್ಲಕ ದಾಸ್ಯಬುದ್ಧಿಗೆ ಬರಿ ಮಾತು ಮತ್ತು ಶಬ್ದಾಲಂಕರಗಳ ಮೇಲೆ ಹೆಚ್ಚು ಪ್ರೇಮ. ನಾಟ್ಯಕುಶಲನಿಗೆ ಶಬ್ದಾಲಂಕಾರಗಳು ಬಂಧನಗಳೆನಿಸುವವು. ಅಂದರೆ ಗಾನ-ಪದ್ಯಗಳನ್ನು ಪೂರ್ಣವಾಗಿ ಹೊರಗೆ ನೂಕಬೇಕೆಂದು ನನ್ನ ಅಭಿಪ್ರಾಯವಲ್ಲ. ಸಂಗೀತಕ್ಕೆ ಜೀವನದಲ್ಲಿ ಇರುವ ಸ್ಥಾನವೇ ರಂಗಭೂಮಿಯಲ್ಲಿಯೂ ಇರಬೇಕು. ಅನ್ಯಥಾ ಸಂಗೀತವು ರಂಗಭೂಮಿಗೆ ಕೃತ್ರಿಮತೆಯನ್ನು ತರುತ್ತದಲ್ಲದೆ ನಾಟ್ಯಕಲೆಗೆ ಘಾತಕವೂ ಆಗುತ್ತದೆ.


ಸಂಗೀತ ಮತ್ತು ಶಬ್ದಾಲಂಕಾರಗಳು ದಕ್ಷಿಣ ಭಾರತದ ರಂಗಭೂಮಿಯಿಂದ ನಾಟ್ಯಕಲೆಯನ್ನೇ ಓಡಿಸಿ ಬಿಟ್ಟವೆ. ಅಭಿನಯವೆಂದರೆ ನಟನಿಗೆ ಕಣದಲ್ಲಿಳಿದು ಕುಸ್ತಿಯಾಡಿದಂತೆ ಅನಿಸುವದು. ನಾಟಕಕರ್ತರಿಂದ ಸೃಷ್ಟಿಸಲ್ಪಟ್ಟ ಭವ್ಯ, ರಮ್ಯ ಶಬ್ದಾಲಂಕಾರಗಳಿಂದ ಕೂಡಿದ ಒಂದು ದೀರ್ಘ ವ್ಯಾಖ್ಯಾನದಿಂದಲೇ ಅವನ ಅಭಿನಯದ ಆರಂಭವಾಗುವದು. ನಾಟಕಲೇಖಕರನ್ನೂ ದೂಷಿಸುವಂತಿಲ್ಲ. ಭಾರತೀಯರು ಶಬ್ದಪ್ರಿಯರು; ಆದುದರಿಂದ ಲೇಖಕರು ತಮ್ಮ ಭಾಷಾಚಾತುರ್ಯ ಪ್ರಭುತ್ವಗಳನ್ನು ತಮ್ಮ ಕೃತಿಗಳಲ್ಲಿ ತೋರಿಸಲೆತ್ನಿಸುವುದು ಸಹಜ. ನಟನು ಆ ಮಾತು

ಗಳನ್ನು ನುಂಗಬೇಕು, ಪ್ರೇಕ್ಷಕವರ್ಗದ ಮು... ಉಗುಳಿಬಿಡಬೇಕು; ಅಷ್ಟೆ. ಮತ್ತು ಬೆಂಗಳೂ... ಗಳಂತಹ ಪಟ್ಟಣದ ಪ್ರೇಕ್ಷಕರಿಗೆ ಪ್ರತಿಯೊ... ಸ್ವರದ ವಾಕ್ಯಸಮುದಾಯವೂ ಕಲೆಯ... ಭಾಷೆಯೂ ಅಭಿನಯವೂ ಮುಖಮುದ್ರೆಯೂ ... ಭಾವವನ್ನು ಚನ್ನಾಗಿ ವ್ಯಕ್ತಪಡಿಸುತ್ತಿದೆಯೋ ... ಯೋಚಿಸುವವರು ನೂರರಲ್ಲಿ ಒಬ್ಬರೂ ... ಮಾತುಗಳು ಚನ್ನಾಗಿ ಕೇಳಬೇಕು; ಕೃತ್ರಿಮ... ಭಾವವಿರಬೇಕು; ಇಷ್ಟಾದರಾಯಿತು. ನಿದರ್ಶನಕ್ಕೆ ... ರಾಮದಾಸ, ಕಬೀರ ಮುಂತಾದ ಪಾತ್ರಗಳನ್ನು ... ಕೊಳ್ಳುವಾ. ಶಿವಾಜಿಯು ಮಹಮ್ಮದೀಯರನ್ನು ... ಭವ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಮರಾಠ ... ನಮ್ಮ ಪ್ರೇಕ್ಷಕರು ಶಿವಾಜಿಯ ಪಾತ್ರದಲ್ಲಿ ... ಸಂಗತಿಗಳನ್ನು ಕಂಡರೆ ತೃಪ್ತರಾಗಿ ಬಿಡುವರು. ... ಎತ್ತರವಾಗಿ ಗಟ್ಟಿಮುಟ್ಟಾದ ಮೈಕಟ್ಟುಳ್ಳವನು ... ಅವನ ಮೂಗು ಉದ್ದವಾಗಿರಬೇಕು. ಅವನ ... ಸಿಂಹದೃಷ್ಟಿಯಿರಬೇಕು; ಧ್ವನಿಯಲ್ಲಿ ಅಧಿಕಾರ ... ಬೇಕು. ಅವನ ನಡಿಗೆ ಧೀರೋದಾತ್ತವಿರಬೇಕು ... ಹಾಡುಗಳಲ್ಲಿ ರಾಗಗಳ ಎಲ್ಲ ಛಾಯೆಗಳೂ ... ಅಲ್ಲದೆ ಮಹಮ್ಮದೀಯರ ತುಚ್ಛೀಕರಣವು ಕ... ದೇಶಭಕ್ತಿ ಅಭಿಮಾನಗಳಿರಬೇಕು. ಶಿವಾಜಿ... ದಲ್ಲಿಯ ಸೂಕ್ಷ್ಮ ಭಾವಗಳು, ವೃತ್ತಿಗಳ ಮೇಲೆ ... ಅಧಿಕಾರ, ವರ್ಚಸ್ವಿಯಾದ ಅವನ ವ್ಯಕ್ತಿತ್ವ, ... ಭಕ್ತಿ, ಮಾತೃಭಕ್ತಿ—ಇವಾವವೂ ಪ್ರೇಕ್ಷಕರಿ... ವೆನಿಸುವದಿಲ್ಲ.

ಕಬೀರನನ್ನು ತೆಗೆದುಕೊಳ್ಳಿ. ಅವನು ಪ್ರಸಿ... ಭಕ್ತ. ಆದುದರಿಂದ ಅವನು ಯಾವಾಗಲೂ ... ವನ್ನೂ ಜಗದ ನಶ್ವರತೆಯನ್ನೂ ಪರಲೋಕ...

ಉರಿತೇ ಹಾಡಬೇಕು. ಮುಳ್ಳುಗಳಿಂದ ತುಂಬಿದ ಸ್ವರ್ಗದ ಮಾರ್ಗದಲ್ಲೇ ಕಬೀರನು ನಡೆಯುವವನಾದುದರಿಂದ ಅವನು ಸಪ್ರಸನ್ನ ಮುಖಮುದ್ರೆಯಿಂದಲೇ ರಂಗವನ್ನು ಪ್ರವೇಶಿಸಿ ಯಂತ್ರದಂತೆ ನಡೆಯಬೇಕು. ಆದರೆ ಐಹಿಕ ಜೀವನದ ಬಗ್ಗೆ ಇದ್ದ ಕಬೀರನ ಜಾಗರೂಕತೆ, ಅವನ ಕರ್ಮಕೌಶಲ್ಯ, ಜಾತಿ-ರೂಢಿಗಳ ವಿರುದ್ಧವಾದ ಅವನ ಹೋರಾಟ, ಧಾರ್ಮಿಕ ಕಪಟತನದ ವಿರುದ್ಧ ಮತ ಪ್ರಚಾರ, ಅವನ ಮೈಮರೆಯಿಸುವ ಆತ್ಮಾಲೋಚನ ಸಂಗೀತ ಇವುಗಳಾವವೂ ಪ್ರೇಕ್ಷಕರಿಗೆ ಸಂಬಂಧಿಸಿರುವದಿಲ್ಲ. ಯಾವನಾದರೊಬ್ಬ ನಟನು ಉತ್ಸಾಹ, ಧೀರ, ಹಾಸ್ಯಶೀಲ, ಜಾತಿಘಾತಕಿಯಾದ ಕಬೀರನ ನಿಜ ಜೀವನವನ್ನು ಅಭಿನಯಿಸಿದರೆ ಖಂಡಿತವಾಗಿ ಪ್ರೇಕ್ಷಕರು ಮುಖ ಹೊರಳಿಸಿ, ಆಕಾಶದ ರಾಮನ ಶೋಧ ನಡೆಸಿರುವ ಮುಳ್ಳುಹಾದಿಯ ಕಬೀರನನ್ನೇ ಬಯಸುವರು. ಸನಾತನಿಗಳು ಕೂಡ ಇಂತಹ ರಂಗಭೂಮಿಯ ರಾಮಭಕ್ತ ಕಬೀರನನ್ನು ಪ್ರಶಂಸಿಸಿದುದನ್ನು ನೋಡಿ ನನಗೆ ಅನೇಕ ಸಲ ನಗೆ ಬಂದಿದೆ. ಹಾಗೆ ಪ್ರಶಂಸಿಸುವಾಗ ಅವನು ಜಾತಿನಾಶಕನಾಗಿದ್ದನೆಂಬುದನ್ನು ಅವರು ಮರೆಯುತ್ತಾರೆ. ಒಟ್ಟಿನಲ್ಲಿ ನಮ್ಮ ರಂಗಭೂಮಿಯ ಕಬೀರರೂ ಶಿವಾಜಿಗಳೂ ರಾಮದಾಸರೂ ತಮ್ಮ ಉಚ್ಚ ಸ್ವರದ ಮಾತುಗಳಿಂದ, ಸಕಾಲ ಅಕಾಲದ ಹಾಡುಗಳಿಂದ, ನಿರುದ್ದಿಶ್ಯವಾದ ಹಾಸ್ಯ, ಹಸ್ತ-ಪಾದ-ಚಲನಗಳಿಂದಲೇ ಹೊಗಳಿಕೆಗೆ ಪಾತ್ರರಾಗಿ ಬಿಡುತ್ತಾರೆ.

ಈಗ ರಾಮದಾಸನನ್ನು ತೆಗೆದುಕೊಳ್ಳಿ. ಪ್ರೇಕ್ಷಕರು ಅವನೊಬ್ಬ ಮರಿ ಕಬೀರನೆಂದು ತಿಳಿಯುತ್ತಾರೆ. (ಈ ರಾಮದಾಸನೆಂದರೆ ಕಬೀರನಿರುವಾಗಲೇ ಜೀವಿಸಿದ್ದ ಅವನ ಒಬ್ಬ ಶಿಷ್ಯ.) ಅವನ ಮೈತುಂಬ ಪಾವಿತ್ರ್ಯದ ಹೊದಿಕೆಯುಂತಿರುವ ನಾಮ (ಜಾತಿಗುರುತು). ಅವನ ಮೈಮೇಲೆಲ್ಲ ದೈವಿಕತೆಯಿಂದ ಬೆಳೆದ



[illegible] ರಾಘವಾಚಾರ್ಯರು

ಕೂದಲುಗಳಿರಬೇಕು. ಅವನು ಯಾವಾಗಲೂ ಭಕ್ತಿಯಿಂದ ಹಾಡಬೇಕು; ಕುಣಿಯಬೇಕು. ಆದರಲ್ಲಿಯೂ ಪ್ರತ್ಯಕ್ಷ ರಾಮದಾಸನಿಂದಲೇ ಜಗದುದ್ಧಾರಕ್ಕಾಗಿ ರಚಿಸಲ್ಪಟ್ಟ ಹಾಡುಗಳನ್ನು ಒಂದೇಸವನೆ ಹಾಡುತ್ತಲೇ ಇರಬೇಕು. ಇವುಗಳೊಡನೆ ಅವನು ಸೆರೆಯಲ್ಲಿರುವಾಗ ಭಕ್ತಿಯ ಹುಚ್ಚಿನಿಂದ ಮೈಮೇಲಿನ ಕೂದಲುಗಳನ್ನು ಕಿತ್ತುಕೊಳ್ಳುವದೂ ಕೈಕಾಲುಗಳನ್ನೂ ಕಂಣುಗಳನ್ನೂ ಯದ್ವಾತದ್ವಾ ತಿರುಗಿಸುವದೂ ಅವನ ನಟನೆಯಲ್ಲಿ ಮುಖ್ಯವಾದ ವಿಷಯಗಳಾಗಿವೆ. ಅಂದರೆ ಪ್ರೇಕ್ಷಕರು ಅವನಿಗೆ ಅಭಿನವ ರಾಮದಾಸನೆಂಬ ಬಿರುದು ಕೊಡುತ್ತಾರೆ. ಆದರೆ ಸಾಧಾರಣ ಮನುಷ್ಯನಾದ 'ಗೋಪನ್ನ'ನು ಕ್ರಮೇಣ ರಾಮು

ದಾಸನಾದ ಮಹತ್ವದ ವಿಷಯದ ಕಡೆಗೆ ಅವರ ಲಕ್ಷ್ಯ ಹೋಗುವದಿಲ್ಲ. ಸರ್ವಸ್ವವನ್ನು ತ್ಯಾಗಮಾಡಿಯೂ ದೇವರು ಮನುಷ್ಯರ ಮೇಲೆ ಕೋಪಿಸಿಕೊಳ್ಳುವನೆಂಬ ಮೂಢ ನಂಬಿಕೆಯುಳ್ಳ, ದೇವರನ್ನು ಪ್ರತ್ಯಕ್ಷ ನೋಡ ಬೇಕೆಂದು ಚಿಕ್ಕಮಕ್ಕಳಂತೆ ಹಟಹಿಡಿದು ಅಳುವ, ರಾಮ ದಾಸನ ಪಾತ್ರವನ್ನು ಅಭಿನಯಿಸುವದು ಸುಲಭವಲ್ಲ. ನಟ ನಲ್ಲಿ ಈ ಎಲ್ಲ ವಿಷಯಗಳನ್ನು ನೋಡಲು ಎಷ್ಟು ಜನರು ಪ್ರಯತ್ನಿಸುವರು! ರಾಮದಾಸನು ಪೂರ್ಣತೆಗೆ ಮುಟ್ಟಿದ ಭಕ್ತನಲ್ಲ. ಕಬೀರನು ಅವನನ್ನು ಭಕ್ತಿಮಾರ್ಗಕ್ಕೆ ಹಚ್ಚಿ ದನು. ಆ ಮಾರ್ಗದಲ್ಲಿ ನಡೆಯುತ್ತ ಅನೇಕ ಭಯಂಕರ ಸಂದೇಹಗಳಿಂದ ಅವನು ಚಡಪಡಿಸುತ್ತಿದ್ದನು. ನಿಜ ವಾದ ರಾಮದಾಸನು ಪ್ರೇಕ್ಷಕರಿಗೆ ಇನ್ನೂ ಹೊಸಬನೇ ಸೈ.

ದಕ್ಷಿಣ ಭಾರತದ ಕನ್ನಡ, ತೆಲುಗು, ತ[illegible] ಭೂಮಿಗಳಲ್ಲಿ ನಾಟ್ಯಕಲೆಯು ಬರಿ ಶಬ್ದ[illegible] ಗಳಿಂದಲೇ ರೂಪಿಸಲಾಗುತ್ತಿದೆಯೆಂದು ನನ್ನ [illegible] ವಾಗಿದೆ. ಹಾಡು ಮಾತುಗಳು ರಂಗಭೂಮಿಯ[illegible] ವಾಗಿ ಆಕ್ರಮಿಸಿವೆ. ವಿವಿಧ ಮನೋರಂಜ[illegible] ಯಂತಾಗುತ್ತಿದೆ ರಂಗಭೂಮಿ. ದಕ್ಷಿಣ ಭಾ[illegible] ಭೂಮಿಯ ಆಟಗಳಿಗೆ ನಾಟಕವೆನ್ನುವುದೊ[illegible] ಅಲ್ಲಿಯ ನಾಟಕವೆಂದರೆ ಸಂಭಾಷಣೆಯ [illegible] ಒಬ್ಬರಿಗಿಂತ ಹೆಚ್ಚು ಭಾಗವತರಿಂದ ಕೂ[illegible] ಕಾದಂಬರಿಯೆನ್ನಬಹುದು. ನಮ್ಮ ಸುಶಿಕ್ಷಿತ[illegible] ಕಾರಿಗಳೆನಿಸಿಕೊಳ್ಳುವವರು ಕೂಡ ಇಂತಹ [illegible] ಪ್ರೋತ್ಸಾಹಿಸುತ್ತಿರುವದು ದುರ್ದೈವದ ಸಂಗತಿ.

ಆರೋಗ್ಯಬಿಂದು

ಶೀತಬಾಧೆಯ ಕಾರಣ

ಚಳಿಯಿಂದ ರಕ್ಷಿಸಿಕೊಳ್ಳಲಿಕ್ಕೆ ನಾವು ಯತ್ನಿಸಿದಷ್ಟು ಶೀತಬಾಧೆಯು ಹೆಚ್ಚುವದು. ಹವೆಯಲ್ಲಿ ಆಗುವ ಸ್ಥಿತ್ಯಂತರಗಳು ನಮ್ಮ ನರಗಳಿಗೆ ಪರಿಚಿತವಾಗಬೇಕು. ತಡೆಯುವಷ್ಟು ಚಳಿಯಲ್ಲಿ ಕೂಡ ಬೆಚ್ಚಗೆ ಹೊದ್ದುಕೊಳ್ಳುವದರಿಂದ ನರಗಳಿಗೆ ಚಳಿಯ ಪರಿಚಯವಾಗುವದಿಲ್ಲ. ನರಗಳಿಗೆ ಚಳಿಯ ಪರಿಚಯವಾಗಿದ್ದರೆ ಅದರೊಡನೆ ಹೋರಾಡಲೂ ಅವು ಕಲಿಯುವವು. ಆದುದರಿಂದ ತಡೆದಷ್ಟು ಚಳಿಯಲ್ಲಿರುವದು ಒಳಿತು.

* * *

ತೈಲಗಳಿಂದ ತಂಪು ಹುಟ್ಟುವದಿಲ್ಲ

ಬೇಸಿಗೆಯಲ್ಲಿ ವಿವಿಧ ಸುವಾಸಿಕ ತೈಲಗಳನ್ನು ಉಪಯೋಗಿಸುವ ವಾಡಿಕೆಯಿದೆ. ಅದರಿಂದ ಮಿದುಳು ಶಾಂತವಾಗುತ್ತದೆಂದು ಜಾಹಿರಾತುಗಳು ಸಾರುವವು. ಆದರೆ ಮಿದುಳಿನ ತಂಪು ಬಿಸಿಗಳು ತಲೆಯ ಕಡೆಗೆ ಹರಿಯುವ ರಕ್ತದ ಪರಿಮಾಣವನ್ನು ಅವಲಂಬಿಸಿರುತ್ತವೆ. ದೇಹದ ಕೆಳಭಾಗವು ಬಿಸಿಯಾದರೆ ರಕ್ತವು ಅತ್ತ ಹರಿದು ತಲೆಯ ರಕ್ತವು ಕಡಿಮೆಯಾಗಿ ಮಿದುಳು ತಂಪಾಗುವದು. ಆದರೆ ತೈಲಗಳನ್ನು ಹಚ್ಚಿ ತಿಕ್ಕುವದರಿಂದ ಮಿದುಳಿನ ಕಡೆಗೆ ರಕ್ತ ಹೆಚ್ಚಾಗಿ ಹರಿಯುವ ಸಂಭವವಿದೆ. ಬಿಸಿ ನೀರಿನ ಪಾದಸ್ನಾನ ಇಲ್ಲವೆ ಬಿಸಿ ನೀರಿನ ಪಾನಗಳಿಂದ ತಲೆ ತಂಪಾಗುವದು.

* * *

ಕನ್ನಡಕ ಕೊಳ್ಳುವ ಮೊದಲು ಚನ್ನಾಗಿ ನಿದ್ರೆಮಾಡಿರಿ

ಅನೇಕರಿಗೆ ತಮಗೆ ಚನ್ನಾಗಿ ನಿದ್ರೆ ಬಾರದಿರುವದೂ ತಿಳಿಯುವದಿಲ್ಲ. ನಿಷ್ಕಾರಣವಾಗಿ ಮೈಕೈ ನೋವು, ಆಲಸ್ಯ, ಮುಖ್ಯವಾಗಿ ಕಂಣು ಮಂಜಾಗಿ ಕಾಣುವದಕ್ಕೆ ಅನಿದ್ರೆ ಅಲ್ಪನಿದ್ರೆಗಳೇ ಕಾರಣವಾಗಿವೆ. ತಮ್ಮ ಕಂಣು ಕೆಡುತ್ತಿವೆಯೆಂದು ಕನ್ನಡಕಗಳನ್ನು ಕೊಳ್ಳಲಿಕ್ಕೆ ಹೋಗುವವರು ಮೊದಲು ತಮಗೆ ದಿನಾಲು ನಿದ್ದೆ ಚನ್ನಾಗಿ ಬರುತ್ತಿದೆಯೇ ಎಂಬುದನ್ನು ಪರೀಕ್ಷಿಸಿ, ಬರುತ್ತಿರದಿದ್ದರೆ ನಿದ್ರೆ ಬರುವಂತಹ ಉಪಾಯಗಳನ್ನು ಕೈಕೊಳ್ಳಬೇಕು.

* * *

ಮಲಗಿ ಓದಬೇಡಿರಿ

ನೋಟವು ಸರಳರೇಖೆಯಲ್ಲಿದ್ದರೆ ಕಂಣಿನ ನರಗಳ ಮೇಲೆ ಸೆಳೆತ ಬೀಳುವದಿಲ್ಲ. ವಸ್ತುವು ಮೇಲೆ ಕೆಳಗೆ ಇದ್ದರೆ ಅದನ್ನು ನೋಡಲು ಕಂಣ ಸುತ್ತಲಿನ ಸ್ನಾಯುಗಳ ಮೇಲೆ ಸೆಳೆತ ಬೀಳುತ್ತದೆ. ಮಲಗಿ ಓದುವಾಗ ಪುಸ್ತಕವು ಎದೆಯಮೇಲಿರುತ್ತದೆ. ಅದನ್ನು ನೋಡಲಿಕ್ಕೆ ಕಂಣಿನ ಕೆಳಗಿನ ಸ್ನಾಯುಗಳ ಮೇಲೆ ಸೆಳೆತ ಬೀಳುತ್ತದೆ. ಅದೇ ರೂಢಿಯನ್ನಿಟ್ಟರೆ ಆ ಸ್ನಾಯುಗಳು ಕಸುವುಗುಂದಿ ಕ್ರಮೇಣ ಹತ್ತರದ ಅಕ್ಷರಗಳನ್ನು ಓದುವಾಗ ಕಂಣು ನೋಯಹತ್ತುತ್ತವೆ.

* * *

ಊಟವಾದ ಮೇಲೆ ಪೆಪ್ಪರಮಿಂಟ ತಿನ್ನಬಾರದು

ನಮ್ಮ ಆಹಾರದಲ್ಲಿಯ ಪಿಷ್ಟಾಂಶವು ಜೊಲ್ಲಿನೊಡನೆ ಬೆರೆತು ಸಕ್ಕರೆಯಾಗಿ ರಕ್ತಗತವಾಗುತ್ತದೆ. ನಂತರ ಆಹಾರವು ಜಠರ ರಸಯೋಗದಿಂದ ಪಚನವಾಗುತ್ತಿರುತ್ತದೆ. ಜೊಲ್ಲು ಕ್ಷಾರಗುಣವುಳ್ಳದ್ದು; ಜಠರ ರಸವು ಆಮ್ಲಗುಣವುಳ್ಳದ್ದು. ಪೆಪ್ಪರ್‌ಮಿಂಟನ್ನು ತಿನ್ನುವಾಗ ಜೊಲ್ಲು ಹುಟ್ಟಿ ಜಠರಕ್ಕಿಳಿಯುತ್ತದೆ. ಜೊಲ್ಲೂ, ಜಠರರಸವೂ ಪರಸ್ಪರ ವಿರುದ್ಧಗುಣವುಳ್ಳವೆಂದು ಮೇಲೆ ಹೇಳಿದೆ. ಆದುದರಿಂದ ಊಟವಾದ ಮೇಲೆ ಪೆಪ್ಪರ್‌ಮಿಂಟ್ ತಿನ್ನುವದರಿಂದ ಜೊಲ್ಲು ಜಠರಕ್ಕಿಳಿದು ಅಲ್ಲಿಯ ಪಚನಕ್ರಿಯೆಗೆ ತಡೆಯಾಗುತ್ತದೆ.

* * *

ಆರೋಗ್ಯಕ್ಕೆ ಅಲೆದಾಟ

ದಿನಾಲು ಸಂಜೆಗೆ 'ವಾಕಿಂಗ್'ಗೆ ಹೋಗುವವರು ಬಹು ಜನರು. ಆದರೆ ಸರಿಯಾಗಿ ನಡೆಯುವವರು ಬಹು ಕಡಿಮೆ. ನಡೆಯುವಾಗ ಹಣೆ-ಎದೆಗಳೂ, ಹಿಂಭಾಗದಲ್ಲಿ ಭುಜಗಳೂ ಟೊಂಕವೂ ಸರಳರೇಖೆಯಲ್ಲಿರಬೇಕು. ಕೈಗಳನ್ನು ಸಹಜ ರೀತಿಯಲ್ಲಿ ಅನಿರ್ಬಂಧವಾಗಿ ಬೀಸುತ್ತ ಹೋಗಬೇಕು. ಇದರಿಂದ ಪುಪ್ಪುಸಗಳು ವಿಶಾಲವಾಗಿ ಶುದ್ಧಗಾಳಿಯು ಒಳಹೊಕ್ಕು ಬಯಲಲ್ಲಿ ಅಲೆಯಲಿಕ್ಕೆ ಬಂದುದು ಸಾರ್ಥಕವಾಗುವದು.

* * *

ಉರಿಗೆ ಉಪಾಯ

ಸೊಳ್ಳೆಗಳ ಕಡಿತದಿಂದಲೂ ಅದರಿಂದುಂಟಾಗುವ ಉರಿ ಮತ್ತು ಊತದಿಂದಲೂ ತಪ್ಪಿಸಿಕೊಳ್ಳಲು ಬೈಕಾರ್ಬೊನೇಟ್ ಆಫ್ ಸೋಡಾ ಎಂಬ ಉಪ್ಪನ್ನು ನೀರಿನಲ್ಲಿ ಮಂದವಾಗಿ ಕಲಸಿ ಚರ್ಮದ ಮೇಲೆ ಹಚ್ಚಬೇಕು. ಮಕ್ಕಳಿಗೆ ಏಳುವ ಸೀತಾಳೆ ಸಿಡುಬು, ಪಿತ್ತದ ಬೊಬ್ಬೆ ಮುಂತಾದವು ಕಾಣಿಸಿಕೊಂಡಾಗಲೂ ಈ ಚಿಕಿತ್ಸೆಯನ್ನು ಮಾಡಬಹುದು.



ಬಾಲಕ ಬಾಲಿ
ಸಕಲ ಸಲಕರಣೆ
ಚಿತ್ರ ಕೆಲ
ತೊಡಗಿರು

ಜಪಾನಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ

ಲೇ:—ಶ್ರೀಮಾನ್ ಕರಾಚೂರ್ ಎಲ್. ನಂಜಪ್ಪ, ಟೋಕಿಯೋ (ಜಪಾನ್)

ಇಂದು ಜಪಾನಿಗಳು ಬಿಳಿಜನಾಂಗವನ್ನು ಅಣಕಿಸುವಷ್ಟು ಸಾಮರ್ಥ್ಯವನ್ನು ಪಡೆದಿರುವದಕ್ಕೆ ಇಲ್ಲಿಯ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವೇ ಕಾರಣವೆಂದರೆ ಅತಿಶಯೋಕ್ತಿಯಾಗದು. ನಾಗರಿಕವೆನಿಸುವ ಪಾಶ್ಚಾತ್ಯ ದೇಶೀಯರು ಕೂಡ "ಹಳದಿ ರತ್ನದ" ದೇಶಕ್ಕಿಂತ ವಿದ್ಯಾಪ್ರಚಾರದಲ್ಲಿ ಹಿಂದೆ ಬಿದ್ದಿರುವವೆಂದರೆ ಅವರ ನಾಗರಿಕತೆಯು ಹಾಸ್ಯಾಸ್ಪದವಾಗುವದಿಲ್ಲವೇ ? ಆಧುನಿಕ ಪ್ರಪಂಚದಲ್ಲಿ ಪ್ರತಿಯೊಬ್ಬನಿಗೂ ವಿದ್ಯಾರ್ಜನೆಯು ಜನ್ಮಸಿದ್ಧ ಕರ್ತವ್ಯವು. ಅದರ ಅನುಕೂಲತೆಗಾಗಿ ಪ್ರತಿ ಸರ್ಕಾರವೂ ದುಡಿಯಲೇ ಬೇಕು. ಅನ್ಯಥಾ ಅದು ಸರ್ಕಾರವೇ ಅಲ್ಲ. ಯಾವ ನಾಗರಿಕತೆಯ ಸ್ಥಾಪನಕ್ಕಾಗಿ ಪಾಶ್ಚಾತ್ಯರು ಶತಮಾನಗಳಿಂದ ಹೋರಾಡಿದರೋ ಅಂತಹ ಯಾಂತ್ರಿಕ ನಾಗರಿಕತೆಯ ಸ್ಥಾಪನೆಯನ್ನು ಜಪಾನಿಗಳು ೬೦ ವರ್ಷಗಳಲ್ಲಿಯೇ ಮಾಡಿಮುದು ಬಿಳಿ ಜನಾಂಗಗಳಿಗೆ ದಿಗ್ಭ್ರಮೆಯನ್ನುಂಟುಮಾಡಿದೆ. ಇದಕ್ಕೆಲ್ಲ ಕಡ್ಡಾಯದ ಪ್ರಾಥಮಿಕ ವಿದ್ಯಾಭ್ಯಾಸವೇ ಕಾರಣವೆಂದು ಖಂಡಿತವಾಗಿ ಹೇಳಬಹುದು. ಜಪಾ
ಜಪಾನ್ ಸರ್ಕಾರದಲ್ಲಿ ಅನೇಕ ದೋಷಗಳು
ಆದರೆ ವಿದ್ಯಾಭ್ಯಾಸದ ವಿಷಯದಲ್ಲಿ ಇವರ ವಿರು
ಆಕ್ಷೇಪವನ್ನೂ ಎತ್ತುವಂತಿಲ್ಲ. ಇಲ್ಲಿ ಬಡವ—ಬ
ಭೇದವಿಲ್ಲದೆ ಎಲ್ಲರಿಗೂ ಸರಸ್ವತಿಯ ಕೃಪೆ
ಸಮಾಜದ ಎಲ್ಲ ಅಂತಸ್ತಿನ ಸ್ತ್ರೀಪುರುಷರು
ವನ್ನು ಬಲ್ಲವರೇ. ೬ ವರ್ಷಗಳ ಒತ್ತಾಯದ ಶಿಕ್ಷಣ
ವವೇ ಇದು.



ಲೇಖಕರು

೧೮೬೮ರಲ್ಲಿ ಜಪಾನು ಪಾಳೆ
ಬೀಡಾಗಿತ್ತು; ಅಶಾಂತಿ,
ಸಮಾಜಕಲಹಗಳ ತವರು
ಗಿತ್ತು. ವಿದ್ಯೆಯು ಹಣವಂತ
ಯಾಗಿತ್ತು; ಸಾಮಾನ್ಯರಿಗೆ ವಿದ್ಯೆ
ಕನಸಿನ ಗಂಟಾಗಿತ್ತು. ಬೌದ್ಧ
ಗಳು ದೇವಸ್ಥಾನಗಳಲ್ಲಿ ಶಾಲೆ
ದ್ದರು. ಆರ್ಥಿಕ ದುಸ್ಥಿತಿ,
ಉದಾಸೀನತೆಗಳಿಂದ ವಿದ್ಯೆಯು
ನೀರಿನಂತಿತ್ತು. ೧೮೬೮ರಲ್ಲಿ
ವರ್ತಿಗಳ ಪಿತಾಮಹರಾದ ಮೀ


ಜಪಾನಿನಲ್ಲಿ ೬ರಿಂದ ೧೪ ವರ್ಷಗಳೊಳಗಿನ ಪ್ರತಿ ಬಾಲ-ಬಾಲಿಕೆಯು ೬ ವರ್ಷಗಳ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದಲೇಬೇಕೆಂಬ ರಾಜ ವಿಧಿ ಇರುತ್ತದೆ. ವಿದ್ಯೆಯು ಸ್ವತಂತ್ರಜೀವನಕ್ಕೆ ಸಾಧಕವಾದುದೇ ಹೊರತು ಕಚೇರಿಯಿಂದ ಕಚೇರಿಗೆ ತಿರುಗುವ ತಿಮ್ಮಪ್ಪನಾಗಲಿಕ್ಕಲ್ಲ. ವಿದ್ಯಾವಂತ ಜನಾಂಗಗಳಲ್ಲಿ ಜಪಾನಕ್ಕೇ ಪ್ರಥಮ ಸ್ಥಾನ. ಇಲ್ಲಿಯ ಪ್ರಾಥಮಿಕ ಶಾಲೆಗಳ ಕಟ್ಟಡ—ಸಲಕರಣೆಗಳು ಭಾರತದ ಸಲಕರಣೆಗಳನ್ನು ಮೀರಿಸುವವು. ವಿದ್ಯೆಯಷ್ಟೆ ವ್ಯಾಯಾಮಕ್ಕೂ ಅವಕಾಶವಿದೆ. ಒಟ್ಟು ವಿದ್ಯೆಯ ವೆಚ್ಚದಲ್ಲಿ ನೂರಕ್ಕೆ ೬೫ರಷ್ಟು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೋಗುವದು.

ವರ್ತಿಗಳು ಭದ್ರವಾದ ಕೇಂದ್ರ ಸರಕಾರವನ್ನು ಸ್ಥಾಪಿಸಿ ದೇಶವನ್ನು ಪಾಳೆಯಗಾರರ ದೌಲತ್ತಿನಿಂದ ಉಳಿಸಿದರು. ಆಗ ಮೇಜಿ ಚಕ್ರವರ್ತಿಗಳು ದೇಶದ ಪ್ರಗತಿಗಾಗಿ ಜನತೆಯ ಸುಖಜೀವನಕ್ಕಾಗಿ ಅನೇಕಾನೇಕ ಮಹತ ಕಾರ್ಯಗಳನ್ನು ಕೈಕೊಂಡರು. ಈ ರೀತಿ ಕೈಕೊಂಡ ಕಾರ್ಯಗಳಲ್ಲಿ ಕಡ್ಡಾಯದ ವಿದ್ಯಾಭ್ಯಾಸವು ಅತಿ ಮಹತ್ವದ್ದು. ಅವರು ೧೮೯೦ರಲ್ಲಿ ಹೊರಡಿಸಿದ ರಾಜಶಾಸನದಿಂದ ಕೆಲವು ವರ್ಷಗಳೊಳಗೇ ಪ್ರತಿಯೊಬ್ಬರೂ ವಿದ್ಯಾವಂತರಾಗುವಂತಾಯಿತು. ರಾಜಶಾಸನವು ಈ ರೀತಿಯಾಗಿದೆ:—


(Mechanical Civilisation)

"Know ye, our subjects: our Imperial Ancestors have founded our Empire on a basis broad and everlasting and have deeply and firmly implanted virtue; our subjects ever united in loyalty and filial piety have from generation to generation illustrated the beauty thereof. This is the glory of the fundamental character of our Empire, and herein also lies THE SOURCE OF OUR EDUCATION. Ye, our subjects, be filial to your parents, affectionate to your brothers and sisters, as husbands and wives be harmonious, as friends true; bear yourselves in modesty and moderation; extend your benevolence to all; pursue learning and cultivate arts, and thereby develop intellectual faculties and perfect moral powers; furthermore advance public good and promote common interests: always respect the constitution and observe the laws: should emergency arise, offer yourself courageously to the state: and thus guard and maintain the prosperity of our Imperial Throne coeval with heaven and earth. So shall ye not only be our good and faithful subjects, but render illustrious the best traditions of your forefathers."

ಸಾರಾಂಶ:—ಪ್ರಜೆಗಳೇ, ನಮ್ಮ ಪೂರ್ವದ ಸಾರ್ವಭೌಮರು ಸದ್ಗುಣಗಳ ವಿಶಾಲ ನೆಲೆಗಟ್ಟಿನ ಮೇಲೆ ಸಾಮ್ರಾಜ್ಯವನ್ನು ಸ್ಥಾಪಿಸಿದರು. ನಮ್ಮ ಪ್ರಜೆಗಳೂ ಪರಂಪರೆಯಾಗಿ ರಾಜನಿಷ್ಠೆ ಧರ್ಮಗಳಿಂದ ಒಕ್ಕಟ್ಟಾಗಿ ಸಾಮ್ರಾಜ್ಯದ ಗೌರವವನ್ನು ಹೆಚ್ಚಿಸಿದರು. ಇದು ನಮ್ಮ ಸಾಮ್ರಾಜ್ಯದ ವೈಶಿಷ್ಟ್ಯ. ನಮ್ಮ ಶಿಕ್ಷಣದ ಮೂಲವೂ ಇದರಲ್ಲಿದೆ. ಪ್ರಜೆಗಳೇ, ಆಪ್ತಮಿತ್ರರೊಡನೆ ಪ್ರೇಮದಿಂದ ವರ್ತಿಸಿರಿ. ರಾಜ್ಯನಿಯಮಾನುವರ್ತಿಗಳಾಗಿರಿ. ಪ್ರಸಂಗ



ಉಪಾಧ್ಯಾಯನು ಬಾಲಕ ಬಾಲಿಕೆಯರಿಗೆ ಗಣಿತವನ್ನು ಕಲಿಸುತ್ತಿರುವುದು. ಈ ಶಾಲೆಗಳಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳೇ ಕರಿಹಲಿಗೆಯ ಮೇಲಿನ ಕೆಲಸ ಮಾಡುತ್ತಾರೆ.




ವರ್ಗಗಳಲ್ಲಿ ಉಪಾಧ್ಯಾಯರು ಕೊಟ್ಟ ಲೆಕ್ಕಗಳನ್ನು ಮಾಡುತ್ತಿರುವದು. ಇವರು ಉಪಯೋಗಿಸುವ ಕುರ್ಚಿ ಮೇಜುಗಳ ಸೊಬಗನ್ನು ನೋಡಿ.

ಬೇಕಾದುದನ್ನು ತ್ಯಾಗ... ಮಕ್ಕಳ ವಿಷಯದಲ್ಲಿ... ಮಾತುಗಳು ಚೆರ... ಉದಾಹರಣೆಗಾಗಿ (೧) ... ಖಜಾನೆಗಳಿಗಿಂತ ವ... ಭಾಂಡಾರ (೨) ತಾಯಿ... ಮರಿ-ಗಳುಗಳು ಎತ್ತ... ವಂತೆ ನಿಮ್ಮ ಮಗು... ಮೇಲೇರಲಿ (೩) ಕೀ... ಹೊಗಳುವದು ಮೇಲು... ವರ್ಷಗಳ ನಂತರ... ದೂರದ ಊರಿಗೆ ಕಳ್ಳ... ಜೀವನವನ್ನು ಅವರು ಕ... ಒಂದೇ ಮಾತಿನಲ್ಲಿ ಹೇ... ಜಪಾನು ಮಕ್ಕಳ ನ... ಬಹುದು.


ಬಂದಾಗ ದೇಶಕ್ಕಾಗಿ ಪ್ರಾಣ ನೀಡಿರಿ. ನಮ್ಮ ಸಾಮ್ರಾಜ್ಯ ಸಿಂಹಾಸನದ ಗೌರವವನ್ನು ರಕ್ಷಿಸಿರಿ. ಪೂರ್ವಜರ ಧ್ಯೇಯಾನುವರ್ತಿಗಳಾದ ಒಳ್ಳೇ ಪ್ರಜೆಗಳಾಗಿರಿ.

ಜಪಾನಿನ ಪ್ರಾಥಮಿಕ ವಿದ್ಯಾಭ್ಯಾಸವು ನಾಲ್ಕು ಅಂತಸ್ತುಳ್ಳದ್ದಾಗಿದೆ. (೧) ಮನೆ (೨) ನರ್ಸರಿ (೩) ಕಿಂಡರಗಾರ್ಟನ್ (೪) ಶಾಲೆ. ಇವುಗಳಲ್ಲಿ ಮನೆಯ ಶಿಕ್ಷಣವು ಅತಿ ಮುಖ್ಯವಾದುದು. ತಾಯಂದಿರು ವಿದ್ಯಾವತಿಯರಾಗಿದ್ದರೆ ಮಕ್ಕಳ ಶಿಕ್ಷಣವು ಸುಲಭಸಾಧ್ಯವಾಗುವದು. ಆದುದರಿಂದ ತಾಯಂದಿರು ವಿದ್ಯಾವತಿಯರಾಗಬೇಕೆಂಬ ಹಟವು ಹೆಚ್ಚುತ್ತಿದೆ. ಬುನಾದಿಯಿಂದಲೂ ಜಪಾನಿನಲ್ಲಿ ದೇಶಪ್ರೇಮವನ್ನು ಮಕ್ಕಳಲ್ಲಿ ಬಿತ್ತುವದರಲ್ಲಿ ತಾಯಂದಿರೇ ಮುಖ್ಯ ಕಾರಣರಾಗುತ್ತ ಬಂದಿದ್ದಾರೆ. ಹೆಂಣುಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಮಾತೃತ್ವದ ಹೊಣೆಯನ್ನು ತಿಳಿಸಿ ಕೊಡಲಾಗುವದು. ಜಪಾನಿನ ತಂದೆ ತಾಯಂದಿರು ಮಕ್ಕಳ ಏಳ್ಗೆಗಾಗಿ

'ಮಕ್ಕಳ ಶಿಕ್ಷಣಕ್ಕೆ ಮೊದಲು ತಾಯ ಶಿಕ್ಷ... ಮಾತನ್ನು ಮನವರಿತು ಗರ್ಭದಿಂದ ಸಂಸ್ಕಾ... ರಿಗಾಗಿ ವಿಶಿಷ್ಟ ಶಿಕ್ಷಣಕ್ರಮವನ್ನು ಏರ್ಪಡಿ... ನಾಲ್ಕು ಅಂಶಗಳನ್ನು ಒಳಗೊಂಡಿದೆ. (೧) ...



೩ರಿಂದ ೫ ವರ್ಷದ ಮಕ್ಕಳಿಗಾಗಿ ಉಪಾಧ್ಯಾಯಿನಿಯು ಕಲಿಸುತ್ತಿರುವ ಆಟಗ... ಭಾಗದಲ್ಲಿರುವ ಮೂರು ಅಂತಸ್ತಿನ ಶಾಲೆಯನ್ನೂ ಶಾಲೆಯ ಮುಂಭಾಗದಲ್ಲಿರುವ... ವನ್ನೂ ನೋಡಿ. ಭಾರತದ ಅನೇಕ ಹೈಸ್ಕೂಲುಗಳಿಗೂ ಈ ಲಕ್ಷ್ಯ...



ದೇಶರಕ್ಷಕರಾಗುವುದಕ್ಕೆ ದೊಣ್ಣೆವರಸೆಯನ್ನು ಕಲಿಯಲಿಕ್ಕೆಂದು ಸಾಯಕಲ್ಲುಗಳ ಮೇಲೆ ಹತ್ತಿ ಹೋಗುತ್ತಿರುವ ಪ್ರಾಥಮಿಕಶಾಲಾ ವಿದ್ಯಾರ್ಥಿಗಳು. ಶಾಲೆಯಲ್ಲಿಯ ಪ್ರತಿಯೊಬ್ಬ ಬಾಲಕನು ಸೈಕಲ್ ಸವಾರಿ ಮಾಡಬೇಕೆಂಬ ನಿರ್ಬಂಧವಿದೆ.

ಗಳ ಮೂಲಕ, (೨) ಶಿಕ್ಷಕರ ಮೂಲಕ ವಿಶಿಷ್ಟ ಅವಧಿಯ ವರೆಗೆ, (೩) ಶಿಶುಸಂರಕ್ಷಣಕ್ಕಾಗಿ ಉಪಚಾರ ಸಂಶೋಧನ ಗಳ ಮೂಲಕ, (೪) ಮಾತೃತ್ವಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೊಳಗೊಂಡ ಶಾಲೆಗಳ ಮೂಲಕ. ಇದರ ಜೊತೆಗೆ ಪ್ರಮುಖ ವೃತ್ತಪತ್ರಿಕೆಗಳು ಪ್ರತಿದಿನವೂ ಶಿಶುಪೋಷಣೆಗೆ ಸಂಬಂಧಿಸಿದ ಒಂದು ಪುಟವನ್ನು ಪ್ರಕಟಿಸುವವು. ಈ ಲೇಖನಗಳು ಮಕ್ಕಳನ್ನು ಸಾಕಿ ಅರಿತು ನುರಿತ ತಾಯಂದಿರಿಂದಲೇ ಬರೆಯಲ್ಪಡುವವಲ್ಲದೆ ಬರಿ ಬಿರುದಾಂಕಿತ ಬಂಜೆಯರಿಂದಲ್ಲ.

ನರ್ಸರಿ (ಬಾಲಗೃಹ)


ಹಳ್ಳಿಗಳಲ್ಲಿ ಬಾಲಗೃಹಗಳು ಹೆಚ್ಚಾಗಿವೆ. ಸಾಮಾನ್ಯವಾಗಿ ಹಳ್ಳಿಯವರು ಹಗಲು ಹೊಲಗದ್ದೆಗಳಲ್ಲಿ ಕೆಲಸಕ್ಕೆ ಹೋದಾಗ ಮಕ್ಕಳು ಚರಂಡಿಯ ಪಾಲಾಗಬಾರದೆಂದೂ ತಂದೆ ತಾಯಿಗಳ ಕೆಲಸಕ್ಕೆ ಅಡ್ಡಿ ಬರಬಾರದೆಂದೂ ಸರ್ಕಾರದವರು ತಾತ್ಕಾಲಿಕ ಬಾಲಗೃಹಗಳನ್ನು ಸ್ಥಾಪಿಸಿ ಮಕ್ಕಳ ಪಾಲನೆ ಮಾಡುವರು. ಪಟ್ಟಣಗಳಲ್ಲಿಯೂ ಕೂಲಿಕಾರರ ಮಕ್ಕಳಿಗೆ ಇದೇ ಸೌಕರ್ಯವಿದೆ. ಇಂತಹ ಸೌಕರ್ಯವಿರುವದರಿಂದ ತಾಯಂದಿರು ಕೆಲಸಕ್ಕೆ ಹೋಗುವಾಗ ಮಕ್ಕಳಿಗೆ ಅಫೀಮನ್ನು ತಿನ್ನಿಸಿ ನಿದ್ರೆ ಬರುವಂತೆ ಮಾಡದೆ ಸುಖವಾಗಿ ಬಾಲಗೃಹದಲ್ಲಿ ಬಿಟ್ಟು ಹೋಗುತ್ತಾರೆ. ಸರಾಸರಿ ಪ್ರತಿವರ್ಷ ಸರಕಾರದವರು ತಾತ್ಕಾಲಿಕ ೮,೦೦೦ ಬಾಲಗೃಹಗಳನ್ನು ಏರ್ಪಡಿಸುವರು. ಅಲ್ಲದೆ ೧೯೩೬ರಲ್ಲಿ ಶಾಶ್ವತವಾದ ೨೦೦ ಬಾಲಗೃಹಗಳಿದ್ದು ಅವುಗಳಲ್ಲಿ ೫೩,೩೩೭ ಮಕ್ಕಳು ಪೋಷಿಸಲ್ಪಟ್ಟವು.

ಕಿಂಡರ್‌ಗಾರ್ಟನ್ (ಬಾಲವಿನೋದನ)

೪ರಿಂದ ೬ ವರ್ಷಗಳೊಳಗಿನ ಮಕ್ಕಳಿಗಾಗಿ ಸರ್ಕಾರದವರು ಇಡಿ ದೇಶದಲ್ಲಿ ೧೮೦೦ ಬಾಲವಿನೋದನ ಶಾಲೆ



ಹೆಣ್ಣುಮಕ್ಕಳು ಆರೋಗ್ಯಕ್ಕಾಗಿಯೂ ವೀರನಾರಿಯರಾಗುವದಕ್ಕಾಗಿಯೂ ಕಲಿಯುತ್ತಿರುವ ದೊಣ್ಣೆವರಸೆಯ ವ್ಯಾಯಾಮ. ಇವರ ಸಮವಸ್ತ್ರಗಳನ್ನು ನೋಡಿ. ಇದರಿಂದ ಸೀರೆ ಕುಪ್ಪಸಗಳ ಬಗೆಗಿನ [illegible] ಸಮಾನತೆಯು ನೆಲಸುವದು.



"ಜುಡೊ" ಎಂಬ ಆತ್ಮಸಂರಕ್ಷಣೆಯ ವ್ಯಾಯಾಮವನ್ನು ಹುಡುಗರು ಅಭ್ಯಾಸ ಮಾಡುತ್ತಿರುವುದು. ಪ್ರತಿ ಶಾಲೆಯೂ ಜುಡೋಗಾಗಿ ಸಕಲ ಸಲಕರಣೆಗಳನ್ನು ಇಟ್ಟುಕೊಳ್ಳಬೇಕೆಂಬ ಕಟ್ಟಳೆಯಿದೆ.

ಗಳನ್ನು ತೆರೆದಿರುವರು. ಇವುಗಳಲ್ಲಿ ೧,೪೩,೪೬೯ ಮಕ್ಕಳು ಶಿಕ್ಷಣ ಪಡೆಯುತ್ತಿರುವರು. ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರಿ ಮತ್ತು ಖಾಸಗಿ ೫೦ ತರಬೇತು ಶಾಲೆಗಳಿವೆ. ಗರ್ಲ್ಸ್ ಹ್ಯಾಸ್ಕೂಲಿನಲ್ಲಿ ಉತ್ತೀರ್ಣರಾದ ತರುಣಿಯರಿಗೆ ಇಲ್ಲಿ ಒಂದೆರಡು ವರ್ಷ ಶಿಕ್ಷಣ ಕೊಟ್ಟು ಬಾಲವಿನೋದನ ಶಾಲೆಗಳಿಗೆ ಉಪಾಧ್ಯಾಯಿನಿಯರನ್ನಾಗಿ ಮಾಡುವರು. ಈ ಶಾಲೆಗಳಲ್ಲಿ ಮುಖ್ಯವಾಗಿ ಆಟ, ಹಾಡು, ಬುದ್ಧಿ ಬೆಳೆಸುವ ಕೈಕೆಲಸ ಇವುಗಳನ್ನೆ ರೂಢಗೊಳಿಸಬೇಕೆಂಬ ಶಾಸನವಿದೆ. ಆದರೆ ಅವಾವನ್ನೂ ಕಷ್ಟಕರವಾಗುವಂತೆ ಮಾಡುವದಿಲ್ಲ. ಈಚೆಗೆ ಅನೇಕ ವಿದ್ವಾಂಸರು ಮಕ್ಕಳ ಮನೋವಿಜ್ಞಾನವನ್ನು ಅಭ್ಯಸಿಸಿ, ಮಕ್ಕಳ ಶೀಲ ಸ್ವಭಾವ ಸಮಾನತೆಯ ವಿಷಯಗಳಿಗೆ ಚಿಕ್ಕಂದಿನಲ್ಲಿಯೇ ಗಮನ ಕೊಟ್ಟರೆ ಮುಂದೆ ಅವರು ಸತ್ಪ್ರಜೆಗಳಾಗುವರೆಂದು ಬಾಲವಿನೋದನ ಶಾಲೆಗಳಿಗೆ ಹೆಚ್ಚಾಗಿ ಉತ್ತೇಜನ ಕೊಡು

ತ್ತಿರುವರು. ಮಕ್ಕಳಿಗೆ ... ಮೂಕಪ್ರಾಣಿ, ... ತಂದೆತಾಯಿ, ಅಣ್ಣತಮ್ಮ ... ಅಕ್ಕತಂಗಿಯರ ವಿಷ... ತುಂಬ ಪ್ರೀತಿಯಿರುತ್ತ... ವಿಷಯವನ್ನು ಮನ್ನಿ... ಕೊಂಡೇ ಉಪಾಧ್ಯಾಯರ... ಳಿಗೆ ಶಿಕ್ಷಣ ಕೊಡಬೇಕು. ... ಅವರು ದೊಡ್ಡವರಾದ ... ವಿನಯಶಾಲಿಗಳಾದ ಸತ್ಪ್ರ... ಗುವರು.

ಮಕ್ಕಳನ್ನು ಪ್ರೀತಿಸು... ಸುವವರ ಮೇಲೆ ಮಕ್ಕ... ಪ್ರೀತಿ ಹುಟ್ಟುವದಲ್ಲದೆ, ... ಪ್ರಾತನ್ನೂ ಅವು ಕೇ... ಅವುಗಳ ಆರೈಕೆಯನ್ನು ... ಚನ್ನಾಗಿ ಮಾಡಿದರೆ ಕಷ್ಟ... ಆರೈಕೆಯನ್ನು ಮಾಡುವದನ್ನು ಕಲಿಯುವವು. ... ಸರ್ಕಾರದವರು ಬಾಲವಿನೋದನ ಶಾಲೆಗಳಲ್ಲಿ ... ೧೦ ವಿಷಯಗಳನ್ನು ಕಲಿಸಬೇಕೆಂದು ಶಿಕ್ಷಕಶಿಕ್ಷ... ತಿಳಿಸಿರುವರು:— (೧) ಕರ್ತವ್ಯತೆ ಮತ್ತು ...



ಮನೆಗೆ ಬಂದ ಅತಿಥಿಗಳಿಗೆ ಯಾವ ರೀತಿಯಲ್ಲಿ ತಿನಿಸುಗಳನ್ನು ಬಡಿಸಬೇಕೆಂಬ ಬಗ್ಗೆ ಉಪಾಧ್ಯಾಯಿನಿಯು ಬಾಲಿಕೆಯರಿಗೆ ಕಲಿಸುತ್ತಿರುವದು.


(೨) ಪ್ರೀತಿ (೩) ಸಭ್ಯತೆ (೪) ಆಜ್ಞಾಧಾರಕತೆ (೫) ಸಹಾನುಭೂತಿ (೬) ಔದಾರ್ಯ (೭) ಗೆಳೆತನ (೮) ಶ್ರಮಸಹಿತ ಯತ್ನಶೀಲತೆ (೯) ವ್ಯವಸ್ಥೆ (೧೦) ಸ್ಪಷ್ಟವಾದ ಮಾತುಗಾರಿಕೆ ಮತ್ತು ಶಿಷ್ಟಾಚಾರ.

ಟೋಕಿಯೋದಲ್ಲಿ ಇರುವ "ಶೋವಾ ಶೋಕಾಕೊ ಕ್ಯೊಬೇಶೊ" ಎಂಬ ಬಾಲವಿನೋದನ ಶಾಲೆಯಲ್ಲಿ ೩ರಿಂದ ೫ ವರ್ಷದ ೮೦ ಮಕ್ಕಳಿರುವವು. ಇವರ ಮಧ್ಯಾಹ್ನದ ಫಲಾಹಾರಕ್ಕಾಗಿ ಈ ೮೦ ಮಕ್ಕಳ ತಾಯಂದಿರು ಪ್ರತಿ ದಿನವೂ ೪ ಜನರಂತೆ ಶಾಲೆಗೆ ಬಂದು ಅಡಿಗೆ ಮಾಡಿ ಎಲ್ಲ ಮಕ್ಕಳಿಗೂ ಬಡಿಸುತ್ತಾರೆ. ಈ ರೀತಿಯ ಕ್ರಮದಿಂದ ಮಕ್ಕಳಿಗೆ ಸರಿಯಾದ ಆಹಾರ ಸಿಗುವದಲ್ಲದೆ ತಾಯಿತಂದೆಗಳಿಗೆ ಮಕ್ಕಳ ಆರೋಗ್ಯದ ವಿಷಯದಲ್ಲಿ ಚಿಂತೆಯಿರುವದಿಲ್ಲ. ಜಾತಿಭೇದಗಳಿಲ್ಲದೆ ಇರುವ ಜಪಾನಿನಲ್ಲಿ ಈ ಕ್ರಮವು ಸುಲಭ. ಆದರೆ ನಮ್ಮಲ್ಲಿರುವ ಬ್ರಾಹ್ಮಣ ಬ್ರಾಹ್ಮಣೇತರ ಮುಸಲ್ಮಾನ ಕ್ರಿಶ್ಚಿಯನರ ತಿಕ್ಕಾಟದಲ್ಲಿ ಮೇಲ್ಕಂಡ ಮಕ್ಕಳ ಸೌಕರ್ಯವು ರೂಢಿಗೆ ಬರುವುದಾದರೂ ಹೇಗೆ ?

ಪ್ರಾಥಮಿಕ ವಿದ್ಯಾಭ್ಯಾಸ

೧೯೩೫ರಲ್ಲಿ ಇಡಿ-ದೇಶದಲ್ಲಿ ಇದ್ದ ವಿದ್ಯಾಶಾಲೆಗಳ ಸಂಖ್ಯೆ ೪೬,೧೩೮. ಇವುಗಳಲ್ಲಿ ಒಟ್ಟು ೧,೪೦,೩೫,೮೨೩ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ವ್ಯಾಸಂಗ ಮಾಡುತ್ತಿದ್ದರು. ಅದೇ ವರ್ಷದಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೫,೭೭೧ ಇತ್ತು. ಅವುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ೧,೧೨,೩೨,೦೭೬ ಇತ್ತು. ೧೯೩೫ರಲ್ಲಿ ವಿದ್ಯೆಗಾಗಿ ಖರ್ಚಾದ ಒಟ್ಟು ೫೦॥ ಕೋಟಿ ಯೆನ್ನುಗಳಲ್ಲಿ (೧ ಯೆನ್=೧೪ ಆಣೆ), ಪ್ರಾಥಮಿಕ ಶಿಕ್ಷಣಕ್ಕಾಗಿಯೇ ೩೦ ಕೋಟಿ ಯೆನ್ನುಗಳು ವೆಚ್ಚವಾದವು. ೬ ವರ್ಷದಿಂದ ೧೪ ವರ್ಷಗಳೊಳಗಿನ ಮಕ್ಕಳನ್ನು ಯಾವದೊಂದು ಶಾಲೆಗೆ ಪೋಷಕರು ಕಳಿಸಲೇಬೇಕೆಂದು ಸರಕಾರಿ ನಿರ್ಬಂಧವಿದೆ. ಅತಿ ಬಲಹೀನವಾದ ಮಕ್ಕಳು ಮಾತ್ರ ಶಾಲೆಗೆ ಹೋಗದೆ ಮನೆಯಲ್ಲಿ ಉಳಿಯಬಹುದು.

ಜಪಾನಿನ ಪ್ರಾಥಮಿಕ ಶಾಲೆಗಳಲ್ಲಿ ಎರಡು ವಿಧಗಳಿವೆ; ಸಾಮಾನ್ಯ ಮತ್ತು ಹೆಚ್ಚಿನ ತರಗತಿಯದು ಎಂದು. ಮೊದಲನೆಯದರ ಅವಧಿ ೬ ವರ್ಷ. ಈ ೬ ವರ್ಷಗಳಲ್ಲಿ ಮಕ್ಕಳು ನೀತಿಪಾಠ, ಜಪಾನಿ ಭಾಷೆ, ಗಣಿತ, ಜಪಾನಿ ಇತಿಹಾಸ, ಚಿತ್ರಕಲೆ, ಭೂಗೋಲ, ಶಾಸ್ತ್ರೀಯ ಪಾಠ, ಹಾಡು, ಹೊಲಿಗೆ, ಕಸರತ್ತುಗಳನ್ನು ಕಲಿಯುವರು. ಹೆಚ್ಚಿನ ತರಗತಿಯ ಪ್ರಾಥಮಿಕ ಶಾಲೆಗಳಲ್ಲಿ [illegible]



ಶಾಲೆಯ ಅಂಗಳದಲ್ಲಿ ಶರೀರದ ಎತ್ತರವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಒದಗಿಸಿರುವ ಪಾಶ್ಚಿಮಾತ್ಯ ರೀತಿಯ ಏಣಿ ಉಯ್ಯಾಲೆ ಮುಂತಾದವುಗಳು. ಹುಡುಗರು ಈ ರೀತಿ ಕಂಬಗಳನ್ನು ಹತ್ತುವ ಅಭ್ಯಾಸ ಮಾಡುವದರಿಂದ ಅವರ ಕೈಕಾಲುಗಳು ಉದ್ದವಾಗುವವಲ್ಲದೆ ಇಡಿ ಶರೀರವೇ ಬೆಳೆಯುವದು.

ವಿಷಯಗಳ ಜೊತೆಗೆ ಕೈಗಾರಿಕೆ, ವಿಶಿಷ್ಟ ವಿಷಯಗಳು, ಮತ್ತು ಗೃಹವಿಜ್ಞಾನಗಳನ್ನು ಕಲಿಯುವರು. ಪ್ರಾಥಮಿಕ ವಿದ್ಯಾಭ್ಯಾಸದ ಧ್ಯೇಯವು ಮಕ್ಕಳನ್ನು ಸ್ವತಂತ್ರ ಸ್ವಾವಲಂಬಿಗಳನ್ನಾಗಿ ಮಾಡುವದಕ್ಕಲ್ಲದೆ ಕಚೇರಿಯಿಂದ ಕಚೇರಿಗೆ ತಿರುಗುವ ತಿಮ್ಮಪ್ಪನಾಗಲಿಕ್ಕಲ್ಲ.

ಪ್ರಾಥಮಿಕ ವಿದ್ಯಾಭ್ಯಾಸವೇ ದೇಶಾಭ್ಯುದಯದ ಆಧಾರವಾಗಿರುವದರಿಂದ ಸರಕಾರದವರೂ ಖಾಸಗಿ ಸಂಸ್ಥೆಗಳೂ ಅದರ ಕಡೆಗೆ ಹೆಚ್ಚು ಗಮನ ಕೊಡುತ್ತಿವೆ. ಪ್ರತಿಯೊಂದು ಶಾಲೆಯಲ್ಲೂ ೩-೪ ಅಂತಸ್ತುಗಳಿರುವದಲ್ಲದೆ ಒಂದು ಚಿಕ್ಕ ತಮಾಷೆ ಬಂಗಲೆಯೂ ಇರುತ್ತದೆ. ವ್ಯಾಯಾಮ ಶಿಕ್ಷಣಕ್ಕಾಗಿ ಒಂದು ದೊಡ್ಡ ಮೈದಾನವಿರಬೇಕೆಂಬ ಕಾಯದೆಯಿದೆ. ಮಕ್ಕಳ ಆರೋಗ್ಯಕ್ಕೆ ಮಹತ್ವವುಂಟು. ಶಿಕ್ಷಣ

ಕ್ಕಾಗಿ ಆರೋಗ್ಯವನ್ನು ಬಲಿಗೊಡುವದಿಲ್ಲ. ಪ್ರತಿ ಶಾಲೆಯಲ್ಲೂ ಬಲಹೀನ ಮಕ್ಕಳ ಆರೈಕೆಗಾಗಿ ಶಿಕ್ಷಣ ಹೊಂದಿದ ಉಪಚಾರಿಕೆಯರಿರುತ್ತಾರೆ. ಪ್ರತಿಶಾಲೆಯೂ ಆಸ್ಪತ್ರೆಯಂತೆ ೩-೪ ಕಾಯಿಲೆಯ ಹಾಸಿಗೆಗಳನ್ನೊಳಗೊಂಡಿರುತ್ತದೆ. ಮಕ್ಕಳ ಆಹಾರಕ್ಕಾಗಿ ಅಧಿಕಾರಿಗಳು ತಿನಿಸಿನ ಪದಾರ್ಥಗಳನ್ನು ಶಾಲೆಯಲ್ಲೇ ಒಳ್ಳೆ ರೀತಿಯಲ್ಲಿ ತಯಾರಿಸಿ ಸುಲಭ ಬೆಲೆಗೆ ಮಾರುತ್ತಾರೆ. ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಬಾಲಬಾಲಿಕೆಯರ ಸಹಾಭ್ಯಾಸವು ಪ್ರಚಾರದಲ್ಲಿದೆ. ಪ್ರತಿಯೊಬ್ಬರು ನಿರ್ದಿಷ್ಟವಾದ ಒಂದೇ ತರಹದ ಉಡುಪಿನಲ್ಲಿರಬೇಕೆಂದು ಕಾಯದೆಯುಂಟು. ಇದರಿಂ[illegible] ಸಾಹುಕಾರರೆಂಬ ತಾರತಮ್ಯಗಳು ಮಾಯವಾಗಿ [illegible]ಯಿಂದ ಬೆಳೆಯಲು ಅವಕಾಶವಾಗುವದು.

ಕಳೆದ ೧೦ ವರ್ಷಗಳಲ್ಲಿ ವ್ಯಾಯಾಮ ವಿಷಯ[illegible]ಸಿದ ಮಾರ್ಪಾಡುಗಳಿಂದ ವಿದ್ಯಾರ್ಥಿ-ವಿದ್ಯಾ[illegible] ಎತ್ತರವು ೧॥ ಅಂಗುಲದಷ್ಟು ಬೆಳೆದಿದೆ. ಮಕ್ಕ[illegible] ರೀತಿಯಲ್ಲಿ ಮನೆಯಲ್ಲಿ ಬೋಧಿಸಬೇಕೆಂಬುದ[illegible] ತಾಯಿಗಳಿಗೆ ತಿಳಿಸಲು ಪ್ರತ್ಯೇಕ ಸಭೆಗಳನ್ನು [illegible]ವರು.

ಒಂದು ಸಣ್ಣ ಕತೆ

ಸುಶೀಲೆಯ ನಿರ್ಧಾರ

ಲೇ: ಸಂಜೀವ, ಬೆಂಗಳೂರು

ಅವಳಿಗೆ ಮಾಧುವಿನಲ್ಲಿ ಪ್ರೀತಿಯಿತ್ತು; ಆಸಕ್ತಿಯಿತ್ತು. ಆದರೆ ಮಗ್ಗುಲಮನೆ ಕಮಲೆಗೆ ಅದು ತಿಳಿದುದು ಅವಳಿಗೆ ಸರಿಬರಲಿಲ್ಲ. ಆದುದರಿಂದ ಮಾಧುವಿನಿಂದ ದೂರ ಸರಿಯಬೇಕೆಂದು ಅವಳ ನಿರ್ಧಾರ. ಇಂದು ಅವನ ಗೆಳೆತನವನ್ನು ಕಡಿದುಕೊಳ್ಳಬೇಕು. ಇನ್ನು ಅವನೊಡನೆ ಖಂಡತುಂಡಾಗಿ 'ಮಾಧೂ, ನನ್ನ ನೀನು ಸುಶೀ ಗಿಶೀ ಅಂತ ಇನ್ನು ಮೇಲೆ ಕರೀಬೇಡಪ್ಪ' ಎಂದು ಹೇಳಿ ಬಿಡಬೇಕು...ಅಷ್ಟರಲ್ಲಿ ಮಾಧು ಬಂದು, ನನ್ನ ಮದುವೆ ನಿಶ್ಚಯವಾಗಿದೆ ಸುಶೀ, ಅನ್ನುತ್ತಾನೆ. ಸುಶೀಗೆ ಇಲೆಕ್ಟ್ರಿಕ್ ಷಾಕ್ ಹೊಡೆದ ಹಾಗಾಯಿತು!

ಹೆಂಗಸರು ಒಂದು ನಿರ್ಧಾರಕ್ಕೆ ಬರುವುದು ಬಹಳ ಕಷ್ಟವಂತೆ. ಆದರೆ ಸುಶೀ (ಪೂರ್ತಿ ಹೆಸರು ಸುಶೀಲಾ) ಮಾತ್ರ ಅಪರೂಪವಾಗಿ ಇಂದು ಒಂದು ನಿರ್ಧಾರಕ್ಕೆ ಬಂದಿದ್ದಳು. ಮಧ್ಯಾಹ್ನವೆಲ್ಲಾ ಒಬ್ಬಳೇ ಕುಳಿತುಕೊಂಡು ಯೋಚನೆ ಮಾಡಿ ಮಾಡಿ, ಹೀಗೆಯೇ ಮಾಡಬೇಕೆಂದು ಮನಸ್ಸು ಗಟ್ಟಿ ಮಾಡಿಕೊಂಡಿದ್ದಳು. ಮೊದಲನೆಯದಾಗಿ ಮಾಧು ಬಂದ ತಕ್ಷಣವೇ, "ಮಾಧು, ಇನ್ನು ಮೇಲೆ ನನ್ನ ಸುಶೀ ಗಿಶೀ ಅಂತ ಕರೀಬೇಡಪ್ಪ." ಎಂದು ಬಹಳ ಕೋಪದಿಂದ ಹೇಳಬೇಕು. ಎರಡನೆಯದಾಗಿ ಇನ್ನು ಮೇಲೆ ಮಾಧೂ ಜೊತೆಗೆ ಕೇರಂ ಆಡುವುದನ್ನೂ ವಾಕಿಂಗ್ ಹೋಗುವುದನ್ನೂ ನಿಲ್ಲಿಸಬೇಕು. ಸುಶೀಗೆ ಮಾಧು ಮೇಲೆ ಅಷ್ಟು ಕೋಪ ಬಂದಿತ್ತು; ಅದೇಕೆಂದರೆ:—

೧) ಮಗ್ಗುಲಮನೆ ಕಮಲ ಯಾವುದೋ ಮಾತಿಗೆ ಮಾತು ಬಂದು, "ನಿಂಗೆ ಮಾಧೂ ಕಂಡರೆ ಅಷ್ಟೊಂದು ಇಷ್ಟಾ ಏನೆ?" ಎಂದು ಕೇಳಿಬಿಟ್ಟಿದ್ದಳು. ಆಗ ಸುಶೀ ಮುಖವೆಲ್ಲಾ "ಕೆಂಪಡರಿ" ಕಕ್ಕಾಬಿಕ್ಕಿಯಾಗಿ ಉತ್ತರ ಕೊಡದಿದ್ದ ಕಾರಣ, ಆ ಹಾಳು ಕಮಲ ಚಪ್ಪಾಳೆ ತಟ್ಟಿಕೊಂಡು ತನ್ನ ಸ್ನೇಹಿತಗಾರ್ತಿಯರ ಹತ್ತಿರವೆಲ್ಲಾ, "ಇಲ್ನೋಡ್ರೆ, ಸುಶೀಲಂಗೆ ಮಾಧೂ ಕಂಡ್ರೆ ಇಷ್ಟ ಅಂತೆ!" ಎಂದು ಹೇಳಿಕೊಂಡು ಕುಣಿದಾಡುತ್ತಿದ್ದಳು. ಇದರಿಂದ ತನಗೆ ಬಹಳ ಅವಮಾನವಾಗಿ ಎಷ್ಟೆಷ್ಟು ತಡೆದುಕೊಂಡರೂ ಕಣ್ಣಲ್ಲಿ ನೀರು ಬಂದು ಬಿಟ್ಟಿತು. ಇವೆಲ್ಲಾ ಏತರಿಂದ? ಆ ಮಾಧೂನಿಂದಲೇ ಅಲ್ಲವೆ? ಅವನೇಕೆ ಹಗಲೆಲ್ಲಾ ತನ್ನ ಜೊತೇಲಿ ತಿರುಗಾಡುತ್ತಿರಬೇಕು? ಅವನೇಕೆ ತನ್ನ ಹತ್ತಿರ ಅಷ್ಟೊಂದು ಮಾತನಾಡುತ್ತಿರಬೇಕು?....ಇತ್ಯಾದಿ.

೨) ಮತ್ತೂ, ಅದೇ ಕಮಲನ್ನ ಕೇರಂ ಆಡೋಣ ಬಾ ಎಂದು ಕರೆದಾಗ, ಅವಳೇಕೆ ಬಹಳ ವ್ಯೆಯಾರದಿಂದ "ನಮ್ಮನ್ನು ಕರೆದರೆ ಹ್ಯಾಗಮ್ಮ-ಬರೋಕಾಗುತ್ತೆ, ಆ ಮಾಧೂನ ಒಂದು ಸಾರಿ ಕರೀ ಓಡಿ ಬರುತ್ತಾನೆ." ಅಂತ ಏಕೆನ್ನಬೇಕು? ಮಾಧೂನಿಂದಲೇ ಅಲ್ಲವೆ? ಅವನೇಕೆ ತನ್ನ ಜೊತೇಲಿ ಕೇರಂ ಆಡಬೇಕು? ಇನ್ನೊಬ್ಬರ ಕೈಲಿ ಅವಮಾನಪಡಿಸೋಕೆ....ಇತ್ಯಾದಿ.

ಈ ಮೇಲ್ಕಂಡ ಮತ್ತು ಹಲವು ಇನ್ನಿತರ ಸಂಗತಿಗಳು, ಆಗಿಂದಾಗ್ಗೆ ಎಡಬಿಡದೆ, ಎಷ್ಟು ಮರೆಯಲು ಪ್ರಯತ್ನಪಟ್ಟರೂ ಜ್ಞಾಪಕಕ್ಕೆ ಬಂದು ಮುಖವನ್ನು ಬಿಸಿಯಾಗಿಯೂ ಕೆಂಪಾಗಿಯೂ ಮಾಡುತ್ತ ತೊಂದರೆ ಕೊಡುತ್ತಿದ್ದುದರಿಂದ, ಸುಶೀಗೆ ಅವಕ್ಕೆಲ್ಲಾ ಕಾರಣನಾದ ಮಾಧುವಿನ ಮೇಲೆ ಅಗಾಧವಾದ ಕೋಪ ಬಂದಿತ್ತು. ಮಾಧೂನ ಕಂಡರೆ ಸಿಡಿಸಿಡಿ ಅನ್ನುವಷ್ಟು ಸಿಟ್ಟು ಬಂದಿತ್ತು. ಇನ್ನು ಮೇಲೆ ಅವನನ್ನು ಮಾತನಾಡಿಸಕೂಡದು, ನಮ್ಮ ಮನೆಗೆ ಬರಬೇಡ ಅಂತಲೂ ಹೇಳಿ ಬಿಡಬೇಕು ಅನ್ನುವಷ್ಟು ಕೋಪ ಬಂದಿತ್ತು.

ಮಾಧೂ ಹ್ಯಾಗಿದ್ರೂ ಇನ್ನು ಸ್ವಲ್ಪ ಹೊತ್ತಿಗೆ ಬಂದೇ ಬರ್ತಾನೆ. ಅವನಿಗೆ ಬಂದ ತಕ್ಷಣ ಏನು ಹೇಳಬೇಕು, ಯಾವಯಾವ ಪದಗಳನ್ನು ಪಯೋಗಿಸಬೇಕು, ಇನ್ನೊಂದು ಸಾರ್ತಿ ಅವನು ತನ್ನನ್ನ ಮಾತನಾಡಿಸದೇ ಇರುವ ಹಾಗೆ ಹೇಗೆ ಅನ್ನಬೇಕು, ಎಂಬುವೆಲ್ಲವನ್ನೂ ಮನಸ್ಸಿನಲ್ಲಿ ಗಟ್ಟಿ ಮಾಡಿಕೊಂಡಳು. ಒಂದು ಸಾರ್ತಿ ರಿಹರ್ಸಲ್ಲೂ (ಸುಶೀ ಒಂದು ಸಾರಿ ತಮ್ಮ ಹೈಸ್ಕೂಲಿನಲ್ಲಿ ಆದ ನಾಟಕದಲ್ಲಿ ಪಾರ್ಟು ಹಾಕಿದ್ದಳು; ಆಗಲೇ ಮಾಧೂ ಅವಳನ್ನು

ಮೊದಲು ನೋಡಿದ್ದು) ವಾಡಿಬಿಡೋಣವೇ ಅನ್ನಿಸಿ ಬಿಡ್ತು. ಯಾಕೆಂದರೆ ಮಾಧೂ ಹತ್ರ ಕೋಪ ಮಾಡ್ಕೋ ಳೋದು ಸುಲಭವಲ್ಲ. ಅವನು ತನ್ನ ಹತ್ತಿರ ಇರೋ ಕ್ಷೆಲ್ಲಾ ನಗಿಸುತ್ತಲೇ ಇರುತ್ತಾನೆ.......

ಅಷ್ಟು ಹೊತ್ತಿಗೆ ಮಾಧು ಧಡಂ ಅಂತ ಕದ ತೆಗೆದು ಕೊಂಡು ಒಳಕ್ಕೆ ಬಂದ.

"ಸುಶೀ, ಸುಶೀ,........ ನಿಂಗೊಂತವಾಷಿ ಇದೆ ಹೇಳೋದು" ಕಿವಿಕಿಟ್ಟನ್ನೋ ಹಾಗೆ ಅರಚಿದ.

ಸುಶೀಗೆ ಮಾಧೂನ ನೋಡಿ ಆಶ್ಚರ್ಯವಾಯಿತು. ಎಂದೂ ಕ್ರಾಪ್ ಬಾಚದೇ ಇದ್ದೋನು ಇವತ್ತು ಬಾಚಿ ಬಿಟ್ಟಿದ್ದ. ಒಂದು ಪಂಚೆ ದಟ್ಟಿ ಉಟ್ಟು, ಒಂದು ಬನೀನು ತಗುಲಿ ಹಾಕ್ಕೊಂಡು ತಿರುಗಾಡ್ತಿದ್ದೋನು, ಇವತ್ತು ಸೂಟು ಹಾಕಿಟ್ಟಿದ್ದ....ಅವನು ಕ್ರಾಪಾದರೂ ಬಾಚಿ ಕೊಂಡಿರ್ಲಿ, ಸೂಟಾದ್ರೂ ಹಾಕಿಕೊಂಡಿರ್ಲಿ ತನಗೇನು? ಸುಶೀ ತನ್ನ ಆಶ್ಚರ್ಯವನ್ನು ಮರೆಮಾಚಿಕೊಳ್ಳುವುದಕೆ ಪ್ರಯತ್ನಪಟ್ಟಳು. ಮುಖ ಗಂಟು ಹಾಕಿಕೊಂಡಳು (ಅಥ್ವಾ ಹಾಗೆ ಮಾಡಿದೀನಿ ಅಂತ ತಿಳಿದುಕೊಂಡಳು.) ಅವನಿನ್ನೂ ಬರ್‍ತಾ ಇದ್ದ ಹಾಗೇ ಹೇಳಿದಳು, "ಮಾಧು, ಇನ್ಮೇಲೆ ನನ್ನ ಸುಶೀಗಿಶೀ ಅಂತ...."

"ಸುಶೀೀ. ಬಸ್‌ಸ್‌ಸ್....ನಾನು ಪೂರ್ತಿ ಹೇಳೋದು ಕೇಳ್ಬಿಟ್ಟು ಆ ಮೇಲೆ ನೀನೇನಾದ್ರೂ ಸಂಗೀತ ಹೇಳ್ಕೊ.... ಇನ್ನೆಂಟು ದಿವ್ಸಕ್ಕೆ ನನ್ನ ಮದುವೆ?........"

ಸುಶೀಗೆ ಎಲೆಕ್ಟ್ರಿಕ್ ಷಾಕ್ ಹೊಡೆದ ಹಾಗಾಯಿತು. ಮದುವೆ ಅನ್ನೋ ಮಾತು ಕಿವೀಗೆ ಬಿದ್ದ ಕೂಡಲೇ ಹೃದಯ ಒಂದು ಅರ್ಧ ನಿಮಿಷ ಬಡಿಯೋದು ನಿಂತಿತು. ಮಾಧೂ ಮದುವೆ? ಮಾಧೂದು! ಅವಳು ಇದುವರೆ ವಿಗೂ ಮಾಧುವಿನ ಮದುವೆ ವಿಚಾರಾನೇ ಯೋಚನೆ ಮಾಡಿರಲಿಲ್ಲ. ಯಾತಕ್ಕಾದ್ರೂ ಮಾಡ್ಬೇಕು? ತನ್ನ ಮದುವೆ ವಿಚಾರನೂ ಯೋಚನೆ ಮಾಡಿರಲಿಲ್ಲ.

ಮದುವೆ? ಮದುವೆ ಅನ್ನೋದು ಅವಳಿಗೆ ತೀರಾ ಹೊಸ ಪದವಾಗಿತ್ತು. ಆದರೂ ಎಲ್ಲೋ ಬಹಳ ಬಹಳ ದೂರ, ಬಹಳ ಎತ್ತರದಲ್ಲಿ ನಿಶ್ಶಬ್ದವಾಗಿ ಹಾರಾಡ್ತಾ ಇರೋ ಪುಟ ಹಕ್ಕಿಹಾಗೆ, ಒಂದು ಸಣ್ಣ ಯೋಚನೆ ತನ್ನ ಮನಸ್ಸಿನಲ್ಲಿ ಹಾರಾಡ್ತಾ ಇತ್ತು. ಅದರಲ್ಲಿ ತಾನೂ ಮಾಧೂ ಇಬ್ಬರೂ ಇದ್ದರು. ಇಬ್ಬರೂ ಯಾಕೆ? ಅವಳಿಗೆ ಗೊತ್ತಾಗಲಿಲ್ಲ. ಮಾಧೂ? ಮದುವೆ? ಮಾಧೂನ ಮದುವೆ ಜೊತೆಗೆ ಸೇರಿ ಸಿದ ತಕ್ಷಣ ಅವನನ್ನು ಸಮುದ್ರ ದಾಚೆ ನೋವಿನಿಂದು ದೈರಿ

ದೂರ ಆ ಕಡೆ ತಳ್ಳಿದ ಹಾಗಾಯಿತು. ಅ ಹೋದರೆ ತನಗೇನು?....ಅಬ್ಬಾ!....ಸುಶೀ, ಅ ಬಂದ ತಕ್ಷಣವೇ ನಡುಗಿದಳು. ಅದು ಸ್ವಾಧ್ಯವೆಂದು ತಿಳಿದಳು. ಯಾಕೆ, ಯಾ ಅವಳಿಗೆ ಗೊತ್ತಾಗಲಿಲ್ಲ.

ಮಾಧೂ ಮದುವೆ ಆಗಿಬಿಟ್ಟರೆ? ಆ ಜೊತೆಗೆ ಈಗಿನ ಹಾಗೆ ಮಾತನಾಡುತ್ತಿದ್ದಾನೆ ನಷ್ಟವೇನು? ಗೊತ್ತಿಲ್ಲ. ಮಾಧೂ ತನ್ನ ಜೊ ಆಡೋದಿಕ್ಕೆ ಬರುತ್ತಾನೆಯೇ? ಇಲ್ಲ. ಒ ದಿದ್ದರೆ, ಈವಾಗ ಏನು? ಗೊತ್ತಿಲ್ಲ. ಅ ಯಾರ ಜೊತೇಲಿ ಹೋಗುತ್ತಾನೆ? ತನ್ನ ಜೊ ಅಲ್ಲ. ಹಾಗಾದರೆ ತಾನು ಏನು ಮಾಡಬೇಕು

"ಮಾಧು....ಮಾಧು...." ಮುಂದಕ್ಕೆ ಮಾ ಲಿಲ್ಲ. ಕಣ್ಣುಗಳು ದ್ರವಿಸಿದವು. ಅವಳಿ ವಾಯಿತು, ತಾನು ಮಾಧುವನ್ನು ಪ್ರೀತಿಸುತ್ತಿ ಅವನು ತನ್ನವನಲ್ಲದೆ ಬೇರೆಯಾದರೆ ತನ್ನ ಸುಖಸಂತೋಷಗಳನ್ನೇ ಕಿತ್ತುಕೊಂಡು ಹೋ ಎಂದೂ ಅವಳಿಗೆ ಗೊತ್ತಾಯಿತು. ಹೌದು; ಮಾ ತನಗೆ ಅಷ್ಟು ಪ್ರೀತಿಯಲ್ಲವೆ? ಮಾಧೂನ ನೋ ತನ್ನ ಹೃದಯದಲ್ಲಿ ಒಂದು ಹೂವು ಅರ ತ್ತಿತ್ತು. ಅವನು ಮಾತನಾಡಿಸಿದರೆ ತನ್ನ ವೀಣೆ ನುಡಿಸಿದಹಾಗಾಗುತ್ತಿತ್ತು. ಹೌದು, ಮಾ ಯಲ್ಲಿದ್ದಾಗ ತನಗೆಷ್ಟು ಸಂತೋಷ. ಅವನ ನಾಡುತ್ತಿರುವುದೆಂದರೆ ತನಗೆ ಬೇರೆ ಇನ್ನಾವು ತ್ತಿರಲಿಲ್ಲ. ಹಾಗಾದರೆ ಕಮಲ ಹಾಗೆ ಹಾ ತನಗೇಕೆ ಕೋಪಬಂದಿತು?—ಪ್ರೇಮವಿಲ್ಲದಿ ಬರುತ್ತಿತ್ತೆ?—

ಮಾಧೂ ತನ್ನ ಮರೆತುಬಿಟ್ಟನೆ? ಛೆ, ಛೆ, ಹಾಗೂ ಯಾವಾಗಲೋ ಒಂದು ಸಾ "ಸುಶೀ,....ನಿನ್ನ ಬಿಟ್ಟು ಇನ್ಯಾರ್ನೂ ಮದು ಎಂದು. ನಿಜವಾಗೂ, ಮಾಧೂ ತಮಾ ಲಿಕ್ಕಿಲ್ಲ. ಅದನ್ನು ಹೇಳಬೇಕಾದ್ರೆ ಮಾಧು ಲಿಲ್ಲ. ಏನೋ ಯೋಚನೆ ಮಾಡ್ತಾ ಇದ್ದ ಹಾಗೆ ಬಂದು ಸುಶೀ ಕೈಯನ್ನು ತನ್ನ ಕೈಯ ಹೇಳಿದ್ದ. ಇವೆಲ್ಲಾ ಸುಶೀಗೆ ಜ್ಞಾಪಕಕ್ಕೆ ಬ ಹೆಗಲಿನ ಮೇಲೆ ಭಾರವಾಯಿತು. ತಲೆ ಬಳು. ಮಾಧೂ ತನ್ನ ಹೆಗಲಿನ ಮೇಲೆ ಕೈ

ನಿಂತಿದ್ದ. ಮಾಧೂ ಆಶ್ಚರ್ಯದಿಂದ ಸುಶೀ ಮುಖಾನೇ ನೋಡ್ತಾ ಇದ್ದ.

"ಇದ್ಯಾಕೆ ಸುಶೀ ಸುಮ್ಮನಿದ್ದೀಯಾ? ಶಾಮಣ್ಣೋ ಕೈಲಿ (ಸುಶೀ ತಂದೆಯವರು) ನಮ್ಮಣ್ಣ ಎಲ್ಲಾ ಮಾತಾಡಿದ್ರು....ಮುಂದಿನ್ತಿಂಗ್ಳು ಮೂರ್‍ನೆ ತಾರೀಖೇ...."


ತಮ್ಮ ತಂದೆಯವರ ಹತ್ತಿರ? ತಮ್ಮ ತಂದೆಯವರಿಗೂ ಇವನ ಮದುವೆಗೂ ಏನು ಸಂಬಂಧ? ಹಾಗೂ ಕೇಳಿದಳು, ಕಷ್ಟಪಟ್ಟುಕೊಂಡು, "ಮದುವೆ .... ಮದುವೆ .... ಯಾರ್ದು?...."

"ಹ್ಹ ಹ್ಹ! ಅಹ್ಹಹ್ಹ! ಮದುವೆ ಯಾರ್ದು? ಮದುವೆ ಯಾರ್ದಂತೆ! ಇದೇನು ಸುಶೀ ಹೀಗೆ ಕೇಳ್ತೀಯಾ?"

ಸುಶೀಗೆ ಅರ್ಥವಾಗಲಿಲ್ಲ. ಮಾಧು ಹುಚ್ಚನ ಹಾಗೆ ನಗುತ್ತಿದ್ದುದನ್ನು ನೋಡುತ್ತ ನಿಂತಳು. ಮಾಧುಗೆ ಇನ್ನು ಸುಶೀನ ಗುಡುಗಾಡಿಸುವುದು ಸಾಕೆನಿಸಿತು.

"ಅಯ್ಯೋ ಸುಶೀ, ನಿಂಗಿನ್ನೂ ಗೊತ್ತಾಗ್ಲೆ ಇಲ್ವೆ! ಓಹೋ ನನ್ನ ಮದುವೆ ಅಂತ ಹೇಳಿದ್ದಕ್ಕೆ ಗೊತ್ತಾಗಿಲ್ಲವೇನೋ.... ಸಂಸ್ಕೃತದಲ್ಲಿ ಹೇಳಿದ್ರೆ ಅರ್ಥವಾಗುತ್ತೋ ಏನೋ.... ಚಿರಂಜೀವಿ ಸೌಭಾಗ್ಯವತೀ ಹರಿದ್ರಾ ಕುಂಕುಮ ಶೋಭಿತೆ ಸುಶೀಲಾಬಾಯಿಯವರನ್ನು ಚಿರಂಜೀವಿ ರಾಜೇಶ್ರೀ ಮಾಧವ ರಾವ್ ಬಿ. ಏ. ಇವರಿಗೆ ತಂದುಕೊಂಡು ಪಾಣಿಗ್ರಹಣ ಮಹೋತ್ಸವವನ್ನು ಇದೇ — ಅದೆಷ್ಟ್ನೇ ತಾರೀಖೋ ಮರ್‍ತುಹೋಯ್ತು—"....(ಇದೇ ಅವನ ಸಂಸ್ಕೃತ).

ಸುಶೀ ಮುಖ ಅರಳಿತು. ಬಹಳ ನಾಚಿಕೆಯಾಯಿತು. ಇದೇನಪ್ಪ ಇಷ್ಟು ಒರಟು ಈ ಮಾಧು-ಅಲ್ಲ-ಇವರು, ಅನಿಸಿತು. ಹಾಗೇ ತಲೆತಗ್ಗಿಸಿಕೊಂಡು ಹೊರಗೆ ಓಡಿಹೋಗೋಣವೆಂದು ಪ್ರಯತ್ನಪಟ್ಟಳು. ಆದರೆ ಬಾಗಿಲಲ್ಲಿ ಅಡ್ಡವಾಗಿ ಮಾಧೂ ನಿಂತಿದ್ದ........



"ಗದಾಯುದ್ಧ"ದ ರನ್ನನ ಕಾಲನಿರ್ಣಯದ ಶಾಸ್ತ್ರೀಯ ರೀ[illegible]

★

ಲೇ: ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು, ಧಾರವಾ[illegible]

ಗದಾಯುದ್ಧದಲ್ಲಿಯ 'ಶಕ ಸಮುಗತಿಋತು ಯು[illegible] ನಿಕರಾಂಕಂ' ಎಂಬ ಪದ್ಯಭಾಗಕ್ಕೆ ಅರ್ಥಹಚ್ಚಿ[illegible] ಯುದ್ಧ ರನ್ನ'ನ ಕಾಲನಿರ್ಣಯ ಮಾಡಲು ಪಂಡಿತ[illegible] ಶ್ರಮಬಟ್ಟಿದ್ದಾರೆ. ಪ್ರಸ್ತುತ ಲೇಖಕರು ಅವರ ಅ[illegible] ರೀತಿಯನ್ನು ಅಲ್ಲಗಳೆದು, ಗದಾಯುದ್ಧದ ಕಾಲನಿ[illegible] ... ಶಾಸ್ತ್ರೀಯ ರೀತಿಯನ್ನು ವಿವರಿಸಿದ್ದಾರೆ.

★

ಭೂತಕಾಲದ ಸಂಗತಿಗಳನ್ನು ಸೂರ್ಯಪ್ರಕಾಶದಂತೆ ಸ್ಪಷ್ಟಮಾಡಿ ತೋರಿಸುವ ಜ್ಯೋತಿಯೆಂದರೆ ಇತಿಹಾಸವೇ ಸರಿ. ಶಕ ಕಾಲಗಣನೆಯ ಇತಿಹಾಸವೆಂಬ ಜ್ಯೋತಿಯ ಸಾಹಾಯ್ಯವನ್ನು ತೆಗೆದುಕೊಳ್ಳದೆ, ಸ್ವರ್ಗೀಯ ಶ್ರೀಮಾನ್ ಎಮ್. ಎ. ರಾಮಾನುಜೈಯಂಗಾರ್ಯರವರೂ ಕವಿಚರಿತೆಕಾರರೂ "ಗದಾಯುದ್ಧ"ದ ರನ್ನನ ಕಾಲನಿರ್ಣಯವನ್ನು ಮಾಡುವುದಕ್ಕೆ ಹೊರಟು, ಕೈಯಲ್ಲಿ ದೀಪವನ್ನು ಹಿಡಿದುಕೊಳ್ಳದೆ ಕಗ್ಗತ್ತಲೆಯಲ್ಲಿ ಹೊರಟಂಥವರಿಗೆ ಸರಿಯಾದ ಮಾರ್ಗವು ಕಾಣದೆ ಹೋಗಿ, ಅವರು ಹೇಗೆ ತಪ್ಪುಹಾದಿಯನ್ನು ಹಿಡಿದು ತೊಂದರೆಗೆ ಒಳಗಾಗುತ್ತಾರೆಯೋ, ಹಾಗೆಯೇ ಈ ಉಭಯ ಪಂಡಿತರೂ ಅಶಾಸ್ತ್ರೀಯ ಮಾರ್ಗದಲ್ಲಿ ಪ್ರವೇಶಿಸಿ, ತೊಂದರೆಗೆ ಒಳಗಾಗಿದ್ದಾರೆ. ಅದು ಹೇಗೆಂದರೆ,

"ಗದಾಯುದ್ಧ"ದ ರನ್ನನು ತನ್ನ ಗ್ರಂಥರಚನೆಯ ಕಾಲವನ್ನು ಆ ಗ್ರಂಥದ ಕೊನೆಯಲ್ಲಿ ಹೀಗೆ ಹೇಳಿಕೊಂಡಿದ್ದಾನೆ:—

> ಶಕ ಸಮುಗತಿಋತು ಯುಗ ಶಶಿ ।
> ನಿಕರಾಂಕಂ ಚಿತ್ರಭಾನು [ಸಂವತ್ಸರ] ಕಾ ॥
> ರ್ತಿಕ ಸಿತಸಪ್ತಮಿ [ದಿನದೊಳ್] ।
> ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ ॥
>
> (ಗದಾಯುದ್ಧಂ ೧೦।೨೩)

ಶ್ರೀಮಾನ್ ಎಂ. ಎ. ರಾಮಾನುಜೈಯಂಗಾರ್ಯರವರು ಈ ಪದ್ಯದ ವಿಷಯವಾಗಿ ಹೀಗೆ ಬರೆದಿದ್ದಾರೆ:— "ಇಲ್ಲಿರುವ ಶಕಸಂವತ್ಸರಕ್ಕೆ ಅರ್ಥವು ಸ್ಪಷ್ಟವಾಗಿ ಆಗುವಂತಿಲ್ಲ. ಮೊದಲನೆಯ ಮಾತೃಕೆಯ ಪ್ರಕಾರ ಶಕ ಸಂಖ್ಯೆಯನ್ನು ತೋರಿಸಲು 'ಸಮು' ಎಂಬ ಪದವನ್ನು [illegible] ಗತಿ, ಋತು, ಯುಗ, ಶಶಿ ಎಂಬ ನಾಲ್ಕು ಪದ[illegible] ಮಾಡಿದರೆ (ಗತಿ=೪, ಋತು=೬, ಯುಗ=[illegible] ಶಕ ೧೨೬೪ ಎಂದು ಅರ್ಥವಾಗುತ್ತದೆ. [illegible] ೯೪೨ಕ್ಕೆ ಹಿಂದೆಯೇ ಮೃತನಾಗಿರುವನಾದ [illegible] ಪಾಠವು ಅಶುದ್ಧವು; ಅರ್ಥವು ಸರಿಯಾ[illegible] ಮತ್ತೊಂದು ಮಾತೃಕೆಯ ಪಾಠವನ್ನು [illegible] ಅದರ ಪ್ರಕಾರ ಗತಿ, ಸಮು, ಋತು, ಯುಗ, [illegible] ೫ ಪದಗಳಿರುವುದರಿಂದ ಶಕ ಹತ್ತು ಸಾವಿರಕ್ಕೆ[illegible] ಆಪಾತತಃ ಅರ್ಥವಾಗುತ್ತದೆ. ಹಾಗೆ ಅರ್ಥ[illegible] ತಪ್ಪೆಂದು ನಿಸ್ಸಂದೇಹವಾಗಿ ಹೇಳಬಹುದು. [illegible] ಅರ್ಥಮಾಡಬೇಕು ? ಆ ಪಾಠದಲ್ಲಿರುವ [illegible] ಸಮು ಎಂಬುವು ಎರಡು ಸಂಖ್ಯೆಗಳಾಗಿಯ[illegible] ಯುಗ, ಶಶಿ ಎಂಬಿವು ಮೂರೂ ಸೇರಿ, ಒ[illegible] ಯಾಗಿಯೂ ಯೋಜಿಸಿ ಅರ್ಥಮಾಡುವಲ್ಲಿ [illegible] ಯಳ್ಳ ಶಕ ಸಂವತ್ಸರವು ಬರುತ್ತದೆ. ಆಗಲೂ [illegible] ದಕ್ಕೆ ಅರ್ಥವೇನೆಂದು ಯೋಚಿಸಬೇಕಾಗುತ್ತ[illegible] ಎಂಬುದಕ್ಕೆ ಸಮುಸಂಖ್ಯೆಯೆಂದು ಕೆಲವರು [illegible] ವುದುಂಟು. ಆ ಅರ್ಥವನ್ನಿಟ್ಟುಕೊಂಡು, [illegible] ಅರ್ಥಮಾಡುವಲ್ಲಿ ಗತಿ=೪, ಸಮು=೦ ಅಥವಾ [illegible] ಅಥವಾ ಯಾವುದಾದರೂ ಒಂದು ಸಮಸಂಖ್ಯೆ[illegible] ಯುಗ=೨, ಶಶಿ=೧, ನಿಕರ= ಈ ಕೊನೆಯ ಮ[illegible]

---

* ಈ ಪ್ರಬಂಧವನ್ನು ಜಂಬುಖಂಡಿಯ ಸಾಹಿತ್ಯಸಮ್ಮೇ[illegible] ಸ್ಕರ ಬರೆದಿದ್ದೆನು. (ಲೇಖಕ)

ಗಳ ಮೊತ್ತ (ಎಂದರೆ ೬+೨+೧=) ೯ ಎಂದರ್ಥವಾಗಿ ಶಕಸಂಖ್ಯೆ ೯೦೪ ಎಂದು ಅರ್ಥವಾಗುತ್ತದೆ."

(ಗದಾಯುದ್ಧ ಗ್ರಂಥದಲ್ಲಿ ಕವಿಚಕ್ರವರ್ತಿ ಕವಿರನ್ನನ ಜೀವನಚರಿತ್ರ ಪುಟ ೨೩।೨೪)

ಈ ಪದ್ಯದ ವಿಷಯವಾಗಿ ಕವಿಚರಿತೆಕಾರರು ಹೀಗೆ ಬರೆದಿದ್ದಾರೆ:—

"ಈ ಪದ್ಯದ ಅರ್ಥವು ವಿಶದವಾಗಿಲ್ಲ. ವರ್ಷಸಂಖ್ಯೆಯನ್ನು ನೋಡಿದರೆ ನಾಲ್ಕು ಅಂಕಗಳು ಇರುವಂತೆ ತೋರುತ್ತದೆ. ಶಕವರ್ಷವು ಸಾವಿರವೂ ಚಿಲ್ಲರೆಯಾದರೆ ಅಜಿತಪುರಾಣವನ್ನು ಬರೆದ ಶಕ ೯೧೫ಕ್ಕೂ ಇದಕ್ಕೂ ಸಂಬಂಧವೇ ತೋರುವುದಿಲ್ಲ. 'ಶಶಿ' ಎಂಬುದಕ್ಕೆ ಒಂದು ಎಂಬ ಸಂಕೇತವುಂಟು. ಆದರೆ ಈ ಪದ್ಯದಲ್ಲಿರುವ 'ಶಶಿನಿಕರ' ಎಂಬುದಕ್ಕೆ ಏನರ್ಥವೋ ತಿಳಿಯದು. ಈ ಪದ್ಯವು ಸಮಗ್ರವಾಗಿಯೂ ಸುಬದ್ಧವಾಗಿಯೂ ದೊರೆವ ವರೆಗೆ ಇದರ ಅರ್ಥವನ್ನು ನಿಶ್ಚಯಿಸುವುದು ಕಷ್ಟವಾಗಿದೆ. ಚಿತ್ರಭಾನು ವರ್ಷ ಎಂಬುದರಿಂದ ಅಜಿತಪುರಾಣವನ್ನು ಬರೆದ ವಿಜಯ ವರ್ಷದಿಂದ ಈಚೆಯ ಚಿತ್ರಭಾನು ಎಂದು ಊಹಿಸುವ ಪಕ್ಷಕ್ಕೆ ಆ ಗ್ರಂಥವನ್ನು ಬರೆದ ೪೯ ವರ್ಷಗಳ ಮೇಲೆ, ಕವಿಗೆ ೯೩ ವರ್ಷಗಳಾಗಿದ್ದಾಗ, ಈ ಕೃತಿಯನ್ನು ರಚಿಸಿರಬೇಕಾಗುತ್ತದೆ; ಅಲ್ಲದೆ ಆ ಕಾಲದ ರಾಜನೇ ಬೇರೆ; ಆದುದರಿಂದ ವಿಜಯ ವರ್ಷಕ್ಕೆ ಹಿಂದಣ ಚಿತ್ರಭಾನುವಿನಲ್ಲಿ ಎಂದರೆ ಶಕ ೯೦೪ರಲ್ಲಿ (ಕ್ರಿ. ಶ. ೯೮೨ರಲ್ಲಿ) ಯೇ ಈ ಗ್ರಂಥವನ್ನು ಬರೆದಿರಬೇಕು."

(ಕವಿಚರಿತೆ ಸಂಪುಟ ೧, ಪುಟ ೬೧।೬೨)

ಈ ಉಭಯಪಂಡಿತರು * ಈ ಪ್ರಕಾರ ಕಗ್ಗತ್ತಲೆಯಲ್ಲಿ ತಪ್ಪುಹಾದಿಯನ್ನು ಹಿಡಿದು ಎಡವುತ್ತ ಬೀಳುತ್ತ ಹೊರಟಿದ್ದಾರೆ. ಶಕ ಕಾಲಗಣನೆಯ ಇತಿಹಾಸ ಜ್ಯೋತಿಯಿಂದ ಈ ಪದ್ಯದ ಮೇಲೆ ಸ್ವಚ್ಛವಾದ ಪ್ರಕಾಶವನ್ನು ಬೀರಿದರೆ, ಸುಖಕರವಾದ ಎಂದರೆ ಯಥಾರ್ಥವಾದ ಶಾಸ್ತ್ರೀಯ ಮಾರ್ಗವು ದೃಷ್ಟಿಗೋಚರವಾಗಿ ಈ ಕಷ್ಟವೆಲ್ಲ ಪರಿಹಾರವಾಗುವುದು.

ಕ್ರಿಸ್ತಾಬ್ದ ೭೮ರಲ್ಲಿ 'ಶಕ' ಎಂಬ ಉಪನಾಮದ ಒಬ್ಬ ರಾಜನು ತನ್ನ ಪಟ್ಟಾಭಿಷೇಕವಾದಂದಿನಿಂದ ತನ್ನ ಶಕ ಕುಲದ ಹೆಸರಿನಿಂದ ಹೊಸದೊಂದು ಕಾಲಗಣನೆಯನ್ನು ಪ್ರಾರಂಭಮಾಡಿದನು. ಇದೇ ಶಕಕಾಲಗಣನೆಯು. ಆದುದರಿಂದ ಈ ಕಾಲಗಣನೆಗೆ 'ಶಕನೃಪಕಾಲ', 'ಶಕಕಾಲ' ಅಥವಾ 'ಶಕವರ್ಷ' ಎಂಬ ಹೆಸರುಂಟಾಯಿತು. ಈ ಕಾಲಗಣನೆಯು, ಆರಂಭದಿಂದ ಹನ್ನೆರಡುನೂರು ವರ್ಷಗಳ ವರೆಗೆ† ಶಿಲಾಶಾಸನ, ತಾಮ್ರಶಾಸನಗಳಲ್ಲಿಯೂ ಸಂಸ್ಕೃತ ಗ್ರಂಥ-ಕನ್ನಡ ಗ್ರಂಥಗಳಲ್ಲಿಯೂ 'ಶಕವರ್ಷ' ಎಂಬ ಹೆಸರಿನಿಂದಲೇ ನಿರ್ದೇಶಿಸಲ್ಪಟ್ಟಿದೆ. ಇಷ್ಟು ದೂರ ಏಕೆ? 'ಗದಾಯುದ್ಧ'ದ ರನ್ನನ ಸಮಕಾಲೀನನಾದ ಅಥವಾ ಸಮೀಪಕಾಲೀನನಾದ 'ಅಜಿತ ಪುರಾಣ'ದ ರನ್ನ ಕವಿಯೇ ಈ ಕಾಲಗಣನೆಯನ್ನು ಶಕವರ್ಷವೆಂಬ ಹೆಸರಿನಿಂದಲೇ ತನ್ನ ಅಜಿತಪುರಾಣದಲ್ಲಿ ಘಂಟಾಘೋಷವಾಗಿ ಹೀಗೆ ಹೇಳಿದ್ದಾನೆ:—

ಶಕವರ್ಷಂ ಪಂಚದಶಾ।
ಧಿಕ ನವಶತವಾಗೆ ವಿಜಯ ಸಂವತ್ಸರ ಕಾ॥
ರ್ತಿಕನಂದೀಶ್ವರ ದಿನದೊಳ್।
ಪ್ರಕಟಿಸಿದುದು ರತ್ನನಿಂದಮಜಿತಪುರಾಣಂ॥

(ಅಜಿತಪುರಾಣ ೧।೫೪)

ಇಷ್ಟೆಲ್ಲ ವಿವರಣೆಯ ಮಥಿತಾರ್ಥವೇನೆಂದರೆ, ಈ ಶಕ ಕಾಲಗಣನೆಯ ೧೩ನೆಯ ಶತಮಾನಕ್ಕಿಂತ ಮುಂಚೆ ಈ

---

*ಈ ಉಭಯ ಪಂಡಿತರಂತೆಯೇ ಶ್ರೀಮಾನ್ ಎಮ್. ಎ. ದೊರೆಸ್ವಾಮಿ ಅಯ್ಯಂಗಾರ್ಯರವರು ಎಮ್. ಎ. ಬಿ. ಎಲ್. ಇವರೂ ಸಹ ಕಗ್ಗತ್ತಲೆಯಲ್ಲಿ ಹೊರಟು, ತಪ್ಪುಹಾದಿಯನ್ನು ಹಿಡಿದು, ತಮ್ಮ ವಿಚಿತ್ರವಾದ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ:—"ರನ್ನನು ಈ ಅಸಮಗ್ರ ಪದ್ಯವನ್ನು ಬರೆಯಲಿಲ್ಲವೆಂದು ಒಪ್ಪಿಕೊಳ್ಳುವುದು ಸಂಗತವಾಗಿದೆ. ಗದಾಯುದ್ಧದ ಒಂದು ಮಾತೃಕೆಯು ಚಿತ್ರಭಾನು ಶಕ ೧೨೬೪ (ಕ್ರಿ. ಶ. ೧೩೪೨)ರಲ್ಲಿ ಹುಟ್ಟಿರಬೇಕು. ಮಾತೃಕೆಯನ್ನು ಬರೆದವನು ಈ ಪದ್ಯವನ್ನು ಬರೆದು ಸೇರಿಸಿರಬೇಕು. ಕ-ಖ-ಗ ಪ್ರತಿಗಳು ಈ ಮಾತೃಕೆಯ ಮೂಲದಿಂದ ಹುಟ್ಟಿರುವುದರಿಂದ ಅವುಗಳಲ್ಲಿ ಈ ಪದ್ಯವಿದೆ. ತ-ಪ್ರತಿಯು ಅನ್ಯಮೂಲದಿಂದ ಹುಟ್ಟಿರುವುದರಿಂದ ಅದರಲ್ಲಿ ಇದು ಇಲ್ಲ."

(ರನ್ನಕವಿ ಪ್ರಶಸ್ತಿ, ಪುಟ ೧೯)

† ಮುಂದೆ ಈ ಶಕಕಾಲದ ೧೩ನೆಯ ಶತಮಾನದ ಉತ್ತರಾರ್ಧದಿಂದ (ಎಂದರೆ ಶಕವರ್ಷದ ೧೨೫೮ರಿಂದ ಮುಂದೆ) ಅರ್ಥಾತ್ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕಾಲದಿಂದ ಈ ಕಾಲಗಣನೆಯನ್ನು ಉಲ್ಲೇಖಿಸುವಾಗ್ಗೆ, ಶಕ ಶಬ್ದದ ಹಿಂದೆ 'ಶಾಲಿವಾಹನ' ಎಂಬ ಶಬ್ದವನ್ನು ಸೇರಿಸಿ, "ಶಾಲಿವಾಹನ ಶಕವರ್ಷ" ಎಂಬುದಾಗಿ ಬರೆಯಲಾರಂಭಿಸಿದರು. ಮುಂದೆ ೧೮ನೆಯ ಶತಮಾನದಿಂದ 'ವರ್ಷ' ಎಂಬ ಉತ್ತರಪದವನ್ನು ತೆಗೆದುಹಾಕಿ, ಕೇವಲ "ಶಾಲಿವಾಹನ ಶಕ" ಎಂದು ಈ ಕಾಲಗಣನೆಯನ್ನು ಸಂಬೋಧಿಸಲಾರಂಭಿಸಿದರು. ಈ ಅಪಪದ್ಧತಿಯನ್ನು ಅನುಸರಿಸಿ, ಈಗಿನ ಕಾಲದಲ್ಲಿ 'ಕ್ರಿಸ್ತಶಕ', 'ವಿಕ್ರಮ ಶಕ' ಎಂಬ ಅಪಪ್ರಚಾರವು ರೂಢವಾಗಿದೆ.

ಕಾಲಗಣನೆಯನ್ನು "ಶಕವರ್ಷ" ಎಂದು ಸಂಬೋಧಿಸುತ್ತಿದ್ದರೇ ಹೊರತು ಕೇವಲ 'ಶಕೆ' ಎಂದು ಸಂಬೋಧಿಸುತ್ತಿದ್ದಿಲ್ಲ—ಎಂಬುದು ಸ್ಪಷ್ಟವಾಯಿತು.

ಆತಏವ ಗದಾಯುದ್ಧ ಗ್ರಂಥದ ಕೊನೆಯಲ್ಲಿ (೧೦|೨೩) ಉಕ್ತವಾದ "ಶಕಸಮಗತಿಋತು ಯುಗಶಶಿನಿಕರಾಂಕೆಂ" ಎಂಬ ಪದ್ಯಭಾಗದಿಂದ ಗ್ರಂಥರಚನೆಯ ಕಾಲ ನಿರ್ಣಯವನ್ನು ಮಾಡಬೇಕಾದರೆ, "ಶಕವರ್ಷ" ಎಂಬ ಪದವನ್ನು ಬೇರೆ ತೆಗೆದು, ಮಿಕ್ಕ ಶಬ್ದಗಳಿಂದ ಕಾಲಸಂಖ್ಯೆಯನ್ನು ನಿರ್ಣಯಿಸುವುದು ಕ್ರಮಪ್ರಾಪ್ತವಾಗಿದೆ. ಕಿಂಬಹುನಾ ಅಪರಿಹಾರ್ಯವಾಗಿದೆ.

ಈ ಸ್ಥಳದಲ್ಲಿ ರನ್ನಕವಿಯು 'ಶಕವರ್ಷ' ಎಂಬ ಪದಕ್ಕೆ "ಶಕಸಮಗತಿಋತು" ಎಂಬ ಶಬ್ದಸಮುಚ್ಚಯವನ್ನು ಎಂದರೆ ಸಮಾಸಘಟಿತ ಪದವನ್ನು ಯೋಜಿಸಿದ್ದಾನೆ. ಅರ್ಥಾತ್ "ಸಮಗತಿಋತು" ಎಂದರೆ 'ವರ್ಷ' ಎಂದು ಇತ್ಯರ್ಥ. ಅದು ಹೇಗೆಂದರೆ;

ಸಮವಾದ ಗತಿಯುಳ್ಳವು=ಸಮಗತಿಗಳು;

ಸಮಗತಿಗಳಾದ ಋತುಗಳುಳ್ಳದ್ದು=ಸಮಗತಿಋತು=ವರ್ಷ

[ಸಮವೂ ಗತಿಯೂ ಯಾವುವಕ್ಕೊ ಅವು=ಸಮಗತಿಗಳು; ಸಮಗತಿಗಳೂ ಋತುಗಳೂ ಯಾವುದರಲ್ಲಿಯೋ ಅದು ಸಮಗತಿಋತು. (ಎಂದರೆ ವರ್ಷ) ಅಥವಾ ಸಮಗತಿಗಳಾದ ಋತುಗಳು ಯಾವುದರಲ್ಲಿಯೋ ಅದು ಸಮಗತಿಋತು.]

ಇನ್ನು ರನ್ನನು ಪ್ರಾಚೀನ ಭಾರತೀಯ ಶೈಲಿಯಂತೆ ತನ್ನ ಗ್ರಂಥರಚನೆಯ ಕಾಲವನ್ನು ಸಂಖ್ಯಾಸೂಚಕ ಸಾಂಕೇತಿಕ ಶಬ್ದಗಳಿಂದ ಹೇಳಿದ್ದಾನೆ. ಆ ದೃಷ್ಟಿಯಿಂದ ಈ ಶಕವರ್ಷದ ಸಂಖ್ಯೆಯನ್ನು ಕಂಡು ಹಿಡಿಯುವಾ, "ಅಂಕಾನಾಂ ವಾಮತೋ ಗತಿಃ" ಎಂಬುದು ಪ್ರಸಿದ್ಧವಾಗಿಯೇ ಇದೆ. 'ಶಕವರ್ಷ' (=ಶಕಸಮಗತಿಋತು) ಎಂಬ ಪದವನ್ನು ಬೇರೆ ತೆಗೆದ ಬಳಿಕ ಮಿಕ್ಕ ಪದಗಳೆಂದರೆ "ಯುಗಶಶಿನಿಕರಾಂಕಂ"; ಇವುಗಳಲ್ಲಿ 'ಅಂಕ', 'ಶಶಿನಿಕರ', 'ಯುಗ' ಎಂಬ ಮೂರು ಪದಗಳಿವೆ.

'ಅಂಕ' ಎಂದರೆ ೯

'ಶಶಿನಿಕರ' ಎಂದರೆ ೦

'ಯುಗ' ಎಂದರೆ ೪

ಇತ್ಯರ್ಥವೇನೆಂದರೆ, ಶಕವರ್ಷದ ೯೦೪ ಎಂಬುದು ಸಿದ್ಧ.

'ಶಶಿನಿಕರ' ಎಂದರೆ ಶೂನ್ಯ (=0) ಹೇ... ಸ್ಪಷ್ಟ ಮಾಡಿಬಿಟ್ಟರೆ, ನಮ್ಮ ಶಾಸ್ತ್ರೀಯ ರೀತಿ... ದಂತಾಯಿತು.

ಶಶಿಯು (ಎಂದರೆ ಚಂದ್ರನು) ನಮ್ಮ ... ಜ್ಯೋತಿಷಶಾಸ್ತ್ರದಲ್ಲಿ ನವಗ್ರಹಗಳಲ್ಲಿ* ಒಬ್ಬ... (ಎಂದರೆ ಒಂದು ಗ್ರಹವಾಗಿದ್ದಾನೆ.) ಆತಏವ ... ಈ ಸ್ಥಳದಲ್ಲಿ ಉಪಲಕ್ಷಣದಿಂದ 'ಗ್ರಹ' ಎಂ... ವಾಗುತ್ತದೆ. ಅರ್ಥಾತ್

ಶಶಿಗಳ (ಎಂದರೆ ಗ್ರಹಗಳ) ನಿಕರವು ... ದರಲ್ಲಿಯೋ ಅದು=ಶಶಿನಿಕರ=ಆಕಾಶ (=ಶಶಿಗಳ [... ಗ್ರಹಗಳ] ನಿಕರವುಳ್ಳದ್ದು=ಶಶಿನಿಕರ).

'ಆಕಾಶ' ಎಂಬ ಶಬ್ದಕ್ಕೆ ಶೂನ್ಯ (=0) ಸಂಕೇತವಿದ್ದದ್ದು ಪ್ರಸಿದ್ಧವಾಗಿಯೇ ಇದೆ.

---

* (೧) ರವಿ (೨) ಚಂದ್ರ (೩) ಮಂಗಳ (...) (೫) ಗುರು (೬) ಶುಕ್ರ (೭) ಶನಿ (೮) ರಾಹು (೯) ಕೇ... ನವಗ್ರಹಗಳು.

ಸಣ್ಣ ಕತೆ; ಅಲ್ಲ, ಶುದ್ಧ ಹರಟೆ !

ಕಂಡದ್ದೇ ನಿಜ

ಶ್ರೀ. ಜಿ. ಎಸ್. ಕಲಮದಾನಿ, ಧಾರವಾಡ

ಎರಡನೆಯವರ ಲೇಖನಗಳ ಎಂಜಲೆಲೆಗಳ ಮೇಲೆ ಬದುಕುವ ಲೇಖಕನ ಮತ್ತು ಬಿರುದಿಗೆ ಮರುಳಾದ, ನೋಡಿ ನೋಡಿ ಮಣೆಹಾಕುವ .. ಸಂಪಾದಕನ ಸುಂದರ ವಿಡಂಬನಚಿತ್ರ ..

ಎಂಕಣ್ಣನು ಎಂದಿನಂತೆ ತನ್ನ ಕೊಠಡಿಗೆ ಹೋಗಿ ಕುರ್ಚಿಯಲ್ಲಿ ಕುಳಿತನು. ಎದುರಿಗೆ ನೋಡಿದ,—ಮೈಸೂರು ಗವರ್ನಮೆಂಟ ಸೋಪ ಫ್ಯಾಕ್ಟರಿಯ ಗ್ಲಾಸಿಲನೇ ಇಸ್ವಿಯ ಕ್ಯಾಲೆಂಡರು ಗಾಳಿಗೆ ಅಲೆದಾಡುತ್ತಿತ್ತು. "ಇದೇನು ಚಿತ್ರ! ಹೆಣ್ಣಿನ ಚಿತ್ರವೇನೋ ನಿಜ. ಆದರೆ ಎಷ್ಟೂ ಆಹ್ಲಾದಕರ ವಾಗಿಲ್ಲ. ಅರೆನಿದ್ರೆಯಲ್ಲಿರುವಂತಹ ಕಣ್ಣುಗಳು, ಅತಿ ಉದ್ದವಾದ ಬೆರಳುಗಳು........ "

"ಕೇವಲ ಈ ವರ್ಷದ ಕ್ಯಾಲಂಡರಿಗಾಗಿಯೇ ಬೆಂಗಾಲ ದಿಂದ ಈ ಚಿತ್ರವನ್ನು ಬರೆಸಿ ತರಿಸಿದೆ. ಚನ್ನಾಗಿಲ್ಲವೇ ಸಾರ್ ?" ಎಂದು ಆ ಕಂಪನಿಯ ಸೇಲ್ಸಮನ್ನನು ಎಂಕಣ್ಣ ನನ್ನು ಕೇಳಿದ್ದು ಅವನಿಗೆ ನೆನಪಾಯಿತು. "ಭಾಳ ಚಲೋ ಅದ" ಎಂದು ತಾನು ಅವನಿಗೆ ಹೇಳಿದ್ದೂ ನೆನಪಾಯಿತು. ಸಾಹಿತಿಗಳೂ, ಚಿತ್ರಕಾರರೂ, ಎಲ್ಲರೂ ಒಂದೇ. ಒಂದೇ ದೃಷ್ಟಿ. ಒಂದೇ ಬರಹ. ಯಾರಿಗೂ ತಿಳಿಯದಂತೆ ಬರೆ ಯುವದು ಕವಿಗಳ ವೈಶಿಷ್ಟ್ಯ. ಎಲ್ಲರಿಗೂ ಹೇಸಿಕೆಬರುವಂತೆ ಚಿತ್ರಿಸುವದು ಚಿತ್ರಕಾರನ ವೈಶಿಷ್ಟ್ಯ...."ಇಂಥವರ ಸಹ ವಾಸ ಬಯಸುವ ನನ್ನಂತಹನಿಗೇನನ್ನಬೇಕು?" ಎಂದು ಕ್ಷಣಹೊತ್ತು ಯೋಚಿಸಿದ ಎಂಕಣ್ಣ.

ಸಾಹಿತಿಗಳ ಸ್ನೇಹಮಾಡಿದ್ದರಿಂದ ಎಂಕಣ್ಣನೂ ಒಬ್ಬ ಸಾಹಿತಿ ಎಂದು ಎಲ್ಲರೂ ತಿಳಿದಿದ್ದರು. ಅಲ್ಲಲ್ಲಿಯ ಹಳೇ ಪುಸ್ತಕಗಳಲ್ಲಿಯ ಕತೆಗಳನ್ನು ಓದಿ, ಅವುಗಳಲ್ಲಿ ತುಸು ಬದಲಾವಣೆ ಮಾಡಿ, ಸ್ವತಂತ್ರವಾಗಿ ಬರೆದ ಕತೆಗಳೆಂದು ತನ್ನ ಹೆಸರಿನ ಕೆಳಗೆ ಪ್ರಕಟಿಸಿ ಬಿಟ್ಟಿದ್ದನು. B. A. ಆದ ಮೇಲೆ ತಾನು ಓದಿದ ಪುಸ್ತಕಗಳಲ್ಲಿಯ ಕಥಾವಸ್ತು ಗಳನ್ನು ಕನ್ನಡಕ್ಕಿಳಿಸಿ, ಹೆಸರಾದ ಕತೆಗಾರನಾದನು.

ಆ ಮೇಲೆ ಅನೇಕ ಸಂಪಾದಕರು ಪೀಡಿಸಹತ್ತಿದರು; "ರಾಯರೇ ನಮ್ಮ ಪತ್ರಿಕೆಗೆ ಒಂದೇನಾದರೂ ಬರೆದು ಕೊಡಿರಿ" ಎಂದು. ಆದರೆ ಬರೆಯಬೇಕೇನು? ತಲೆಯಲ್ಲಿ ಯಾವ ವಿಚಾರಗಳೂ ಇಲ್ಲ; ಇಲ್ಲದ ಕುಂಟನೆವ ಹೇಳಿ ತಪ್ಪಿಸಹತ್ತಿದನು. ದಿನಗಳು ಹೋದಂತೆ—ಸಂಪಾದಕರ ತೊಂದರೆಯೂ ಹೆಚ್ಚಾಯಿತು. "ನಾನು ಸಾಹಿತಿ ಅಲ್ಲ, ನನ್ನನ್ನು ಕಾಡಬೇಡಿರಿ" ಎಂದು ಹೇಳಿಬಿಡಬೇಕೆಂದು ಯೋಚಿಸಿದನು.

ಆದರೆ ಸಾಹಿತ್ಯಗೋಷ್ಠಿ, ಚರ್ಚೆ ಮತ್ತು ಸಭೆಗಳು ಜರುಗಿದಲ್ಲಿ, ವ್ಯವಸ್ಥಾಪಕರು ಎಂಕಣ್ಣನನ್ನು ಕರೆದೊಯ್ದು, ಮುಂದಿನ ಸಾಲಿನ ಕುರ್ಚಿಯಲ್ಲಿ ಕೂಡ್ರಿಸುವರು. ಆಗ ಎಂಕಣ್ಣನು, ತನ್ನ ಓರಿಗೆಯವರು ಮತ್ತು ಪರಿಚಯ ದವರು ನೆಲದ ಮೇಲೆ ಹಾಸಿದ ಗುಡಾರದ ಮೇಲೆ ಕುಳಿತ ದ್ದನ್ನು ನೋಡಿ, ತನಗೆ ಸಿಕ್ಕ ಘನತೆಗೆ ತಾನೇ ಹೆಮ್ಮೆ ಪಟ್ಟು, ಎದೆಯುಬ್ಬಿಸಿ ಕುಳಿತು, ಒಮ್ಮೆ ಅವರನ್ನೂ ಒಮ್ಮೆ ವ್ಯಾಖ್ಯಾತರನ್ನೂ ನೋಡುವನು. ವ್ಯಾಖ್ಯಾನ ಮುಗಿದ ಮೇಲೆ ವ್ಯವಸ್ಥಾಪಕರು ಬಂದು ತನಗೆ ವ್ಯಾಖ್ಯಾತರ ಪರಿಚಯ ಮಾಡಿಕೊಡುವರು. "ಇವರು ಒಳ್ಳೇ ಕತೆಗಾರರು, ಎಂಕಟೆ ರಾಯರು, ತರುಣರು, ಉತ್ಸಾಹಿಗಳು, ಹಾಗೆ ಹೀಗೆ...." ಎಂದು ನಾಲ್ಕು ದೊಡ್ಡ ಜನರಲ್ಲಿ ತನ್ನ ಕೀರ್ತಿಯನ್ನು ಹಬ್ಬಿಸುವರು. ಇದು ತಪ್ಪಿಹೋಗುವದು.

ಕಡೆಗೆ ಯೊಚಿಸಿದನು ಎಂಕಣ್ಣ, ತನ್ನ ಮೊದಲಿನ ಕಾಯಕವನ್ನೇ ಹೂಡಬೇಕೆಂದು. ಅನೇಕ ಪುಸ್ತಕಗಳನ್ನು ಓದಬೇಕು; ಅವುಗಳಲ್ಲಿಯ ವಸ್ತುವನ್ನು ತೆಗೆದುಕೊಂಡು ಬೇಕಾದಂತೆ ಹೆಚ್ಚುಕಡಿಮೆ ಮಾಡಿ, ಬರೆದು, ಹೊಸಕೃತಿ ಯಿದೆಂದು ಹೇಳಿದರಾಯಿತು; ಯಾರಿಗೆ ಗೊತ್ತಾಗುವದು? ಎಂದು ನಿಶ್ಚಯಿಸಿದನು.

ಬಹು ದೊಡ್ಡ ಪುಸ್ತಕಸಂಗ್ರಹಾಲಯವಿದ್ದ ಒಬ್ಬ ಮಾಸಿಕಪತ್ರದ ಸಂಪಾದಕರಲ್ಲಿ ಎಂಕಣ್ಣನು ಹೊರ ಟನು. ಏಕಂದರೆ ಪುಕ್ಕಟೆಯಾಗಿ ಓದಲು ಪುಸ್ತಕಗಳು ಅವರಲ್ಲಿಯೇ ಸಿಗುವದು! ಸಂಪಾದಕರು ಕುಳಿತ ಕುರ್ಚಿ ಯಿಂದೆದ್ದು ಎಂಕಣ್ಣನನ್ನು ಬರಮಾಡಿಕೊಂಡರು. ಉಚ್ಚಾ ಸನದಲ್ಲಿ ಕುಳ್ಳಿರಿಸಿದರು. ಕುಶಲಪ್ರಶ್ನೆ ಮಾಡುವದರಲ್ಲಿ ದ್ದರು. ಅಷ್ಟರಲ್ಲಿ ಎಂಕಣ್ಣನು:—"Office equipment ಭಾಳ ಛಲೋ ಅದ."

ಸಂಪಾ:—(ದೇಶಾವರಿ ನಗೆಯಿಂದ) ಏನೋ....ಅಹ.... ಹ....ಹ...."

ಎಂಕಣ್ಣನು ಕೋಣೆಯ ಸುತ್ತಲೂ ನೋಡಿದ, ಕರ್ನಾಟಕದಲ್ಲಿ ಹೊರಡುವ ಎಲ್ಲ ವೃತ್ತಪತ್ರಿಕೆಗಳನ್ನು

ಫಾಯಿಲ್ ಮಾಡಿ ನೇತುಬಿಟ್ಟಿರುವರು. ಸಂಪಾದಕರು ಕುಳಿತ ಗೋಡೆಗೆ ಕವಿ ರವೀಂದ್ರರ "ಗುರುಶಿಷ್ಯ" ಎಂಬ ಚಿತ್ರವನ್ನು enlarge ಮಾಡಿಸಿ ತೂಗುಹಾಕಿರುವರು.

ಎಂಕಣ್ಣ :—ಚಿತ್ರಾ ಛಲೋದಾರ್ರಿರಿ!

ಸಂಪಾ:—ರವೀಂದ್ರ ನಾಥ ಠಾಕೂರರದು.

"ನನಗ ಗೊತ್ತದ" ಎನ್ನುತ್ತ ಸಂಪಾದಕರ ಮುಂದಿದ್ದ ವಿಶಾಲವಾದ ಟೇಬಲ್ಲದ ಕಡೆಗೆ ಎಂಕಣ್ಣನು ದೃಷ್ಟಿ ಚೆಲ್ಲಿದನು.

ಎಂಕೆ:—Contributions ಭಾಳ ಬಂದ್ಹಾಂಗ ಕಾಣತ್ತದ.

ಸಂಪಾ:—ಅಯ್ಯೋ! ಅದೊಂದು ಸಂಕಟ. ನನ್ನ ಭಾಗಾದಿಗಳಿಗೆ ಕೂಡ ಈ ಸಂಪಾದಕತ್ವ ಕೊಡಬೇಡ ದೇವರೇ ಎಂದು ಬೇಡಿಕೊಳ್ಳುವೆನು.

ಎಂಕೆ:— ಯಾಕರಿ, ಹಿಂಗ್ಯಾಕ!

ಸಂಪಾ:—ಈ ಜಗದಲ್ಲಿ ಎಲ್ಲಿ ನೋಡಿದರೂ ಕೀರ್ತಿಗಾಗಿ ಹೋರಾಡುವ ಜನರೇ ಬಹಳ. ಯೋಗ್ಯತೆ ಇರಲಿ, ಇಲ್ಲದಿರಲಿ; ತಮ್ಮದೊಂದು ಕೃತಿಯು ಪತ್ರಿಕೆಯಲ್ಲಿ ಪ್ರಕಟವಾದರೆ ಸಾಕು—ಎಂಬ ಆಶೆ ಜನರಿಗೆ........

ಎಂಕಣ್ಣನು ಮೋರೆ ಸಣ್ಣಮಾಡಿ ನೆಲ ನೋಡಹತ್ತಿದನು.

ಸಂಪಾ:—ಒಬ್ಬ ಮಹಾಶಯರು ಒಂದು ಕವಿತೆ ಕಳಿಸಿರುವರು. ಅದರ ಜೊತೆಗೆ ಒಂದು ಪತ್ರ ಬರೆದಿಟ್ಟಿರುವರು. "ಈ ಕವಿತೆ ನೋಡಿರಿ, ನಿಮಗೆ ಸರಿ ಬರದಿದ್ದರೆ ದಯಮಾಡಿ ತಿದ್ದಿ ಪ್ರಕಟಿಸಿರಿ. ಮತ್ತು ನನ್ನ ಕವಿತೆ ಪ್ರಕಟವಾದ ಪ್ರತಿಯನ್ನು ನನಗೆ ವ್ಹಿ. ಪಿ. ಮಾಡಿರಿ.'' ಎಂದು ಬರೆದಿರುವರು. ಇನ್ನು ಈ ಕವಿತೆ ತಿದ್ದಲೇ ಬೇಕು.

ಎಂಕೆ:—ಸಾಹಿತ್ಯ ಸೇವಕರು ಇಂಥಾದಕ್ಕ ಲಕ್ಷ್ಯಗೊಡಬಾರದು. ಕವಿತಾ ಛಲೊ ಇಲ್ದಿದ್ರ ಪ್ರಕಟಿಸಲಿಕ್ಕಾಗೂದಿಲ್ಲ ಅಂತ ಬರದು ಬಿಡಬೇಕು.

ಸಂಪಾ:— ಚಂದಾದಾರರನ್ನು ಕಳೆದುಕೊಳ್ಳಬೇಕಾಗುವದು....ಈಗಿನ ಕಾಲದಲ್ಲಿ ಮನೆಯವರಿಗೆ ಬಂದು ದುಡ್ಡು ಕೊಡುವರಾರು ರಾಯರೇ!

ಎಂಕಣ್ಣ :—ಅದೇನೋ ಖರೆ. ಆದರ ಉತ್ತಮ ಕೃತಿಗೆ ಮೊದಲು ಮರ್ಯಾದಿ ಕೊಡಬೇಕಾಗತದ.

ಸಂಪಾ:—ನಿಜ. ಅಂತಹದೂ ಒಂದು ಉದಾಹರಣೆ ಇದೆ. ಒಬ್ಬ ಹಾಯಸ್ಕೂಲ ವಿದ್ಯಾರ್ಥಿಯು ಒಂದು ಕೃತಿಯನ್ನು ಕಳಿಸಿರುವನು. ಬಹು ಚನ್ನಾಗಿದೆ. ಆದರೆ ಓದುಗರು ಒಪ್ಪಬೇಕಲ್ಲ! ವಿದ್ಯಾರ್ಥಿಗಳು ಬರೆದ ಕೃತಿ ಛಾಪಿಸ ಹತ್ತಿದರೆ ಹೊಸ ಚಂದಾದಾರರು ಬರುವದೊತ್ತಟ್ಟಿಗಿರಲಿ ಇದ್ದವರು ಬಿಡುವ ಹೆದರಿಕೆಯಿದೆ. ಎಷ್ಟು ಚೆನ್ನಾಗಿ ಬರೆದರೇನು, ಅವನು ವಿದ್ಯಾರ್ಥಿ ಸುಳ್ಳೇ! ಕಾರಣ ... ಕೃತಿಯನ್ನು ತಳಮಳಿಸುವ ಮನದಿಂದ ... ಬೇಕಾಗುವದು........

ಎಂಕಣ್ಣನು ಕರುಣಾರ್ದ್ರ ದೃಷ್ಟಿಯಿಂದ ... ರನ್ನು ನೋಡಿದ.

ಸಂಪಾ:—ಏನಾದರೂ ಇರಲಿ. ಸಾಹಿತಿಯು ... ಆಗಿರಬೇಕು ಎಂಬುದು ಲೋಕದ ರೂಢಿಯು ... ಅವನು ಏನೇ ಬರೆಯಲಿ ಜಗತ್ತು ಅವನನ್ನು ... ವದು........

ಎಂಕಣ್ಣನು ಮುಗುಳುನಗೆ ನಕ್ಕನು.

ಸಂಪಾ:—ಅದರಲ್ಲಿಯೂ ತಾವು ಜನರ ಮೆಚ್ಚು... ಹೆಚ್ಚಾಗಿ ಸಂಪಾದಿಸಿರುವಿರಿ. ನಿಜವನ್ನೇ ಹೇಳ... ಒಂದು ಸಂಚಿಕೆಯಲ್ಲಿ ನಿಮ್ಮ ಕೃತಿ ಬರದೇ ... ಎಲ್ಲರೂ ನನ್ನನ್ನು ಕೇಳುವವರೇ—"ಯಾಕ... ರಾಯರ ಕೃತಿ ಈ ಸಾರೆ ಕಾಣಲಿಲ್ಲ" ಎಂದು. ... ಹೇಳಿ ಪಾರಾಗುವೆನು. ಕಾರಣ ದಯವಿಟ್ಟು ... ತಾವು ತಮ್ಮ ಕೃತಿಯನ್ನು ಕಳಿಸಿಕೊಡುವ ... ಬೇಕು........

ದೇಶಾವರೀ ನಗೆ ನಗುವ ಸರತಿ ಈ ಸಾರೆ ... ದಾಯಿತು.

ಆದಿನವೇ ಎಂಕಣ್ಣನು ಕೆಲವೊಂದು ... ಬಂದನು. ತಾನು B. A.; ತಾನು ಬರೆದದ್ದನ್ನು ... ಓದುವದು; ಮೇಲಾಗಿ ತಾನು ಈಗಾಗಲೇ ಜನ... ಯನ್ನು ಪಡೆದಿರುವನು. ಈ ಮಾತಿಗೆ ಆ ಸಂಪಾ... ಸಾಕ್ಷಿ. ಅಂದ ಮೇಲೆ ಸಂಪಾದಕರಿಗೆ Exchange ... ಪುಸ್ತಕಗಳನ್ನು ಅವರಿಂದ ಯಾಚಿಸಿ ಮನೆಗೆ ತಂ... ಗಳನ್ನು ತಿರುವಾಡಿ, ಹೊಸದಾಗಿ ಬರೆಯುವದ... ವಿಲ್ಲ....ಎಂಧು ನಿಶ್ಚಯಿಸಿದನು. ಏನಾದರೊಂದು ... ರಾಯಿತು ಎಂದುಕೊಂಡನು.

* * *

'ಎಂಕಣ್ಣನು ಎಂದಿನಂತೆ ತನ್ನ ಕೊಠಡಿಗೆ ... ಕುರ್ಚಿಯಲ್ಲಿ ಕುಳಿತನು' ಎಂದು ಮೊಟ್ಟಮೊದಲ... ದ್ದರ ಕಾರಣವೇನಂದರೆ, ಈ ತಿಂಗಳಲ್ಲಿ ಹೊರಡುವ ... ಸಂಚಿಕೆಗೆ ಒಂದು ಲೇಖವನ್ನು ತಯಾರಿಸಿ ... ಕೊಡುವೆನೆಂದು ಆ 'ಸಂಪಾದಕ'ರಿಗೆ ಮಾತು ಕೊಟ್ಟಿ...

ಆದರೆ ಅವನ ತಲೆಯಲ್ಲಿ ಯಾವ ವಿಚಾರಗಳೂ ಇಲ್ಲ. ವಿಚಾರಗಳು ಬರುವ ಸಂಭವವೂ ಕಾಣಲಿಲ್ಲ. ಮೈಸೂರು ಗವ್ಹರ್ನಮೆಂಟ ಸೋಪ ಫ್ಯಾಕ್ಟರಿಯ ಕ್ಯಾಲೆಂಡರ ನೋಡಿದ. ಅಲ್ಲಿ ನೋಡಿದ. ಇಲ್ಲಿ ನೋಡಿದ. ಜಂತಿಯ ಕಡೆಗೆ ನೋಡಿದ. ತಲೆಕೆದರಿಕೊಂಡ. ಕಡೆಗೆ ಸಿಟ್ಟಿನಿಂದ ಟೇಬಲ್ಲಿಗೆ ಒಂದು ಮುಷ್ಟಿಪ್ರಹಾರ ಮಾಡಿದ....ಕೈ ನೋವಾಯಿತು ಇಷ್ಟೆ. ಯಾವ ವಿಷಯವೂ ಹೊಳೆಯಲಿಲ್ಲ. ಮುಂಗೈಯಲ್ಲಿಯ ಗಡಿಯಾರ ನೋಡಿದ. ಆರೂವರೆಯಾಗಿ ಹೋಗಿತ್ತು. "ಹೊತ್ತು ಮುಳುಗಿತು. ತಿರುಗಾಡಲು ಹೊರ ಡೋಣ. ಈ ರಾತ್ರಿ ಏನಾದರೊಂದು ಬರೆದೇ ತೀರುವೆನು" ಎಂದು ಏಳುವಷ್ಟರಲ್ಲಿ ಅವನ ಮಿತ್ರನು ಕೋಣೆಯನ್ನು ಮೆಲ್ಲಗೆ ಗಂಭೀರವಾಗಿ ಪ್ರವೇಶಿಸಿದನು. ತನ್ನ ಮಿತ್ರನ ಮುಖವನ್ನು ನೋಡಿ ಎಂಕಣ್ಣ:—"ಏನು ಸ್ವಾಮಿ, ಏಕಿದು ಈ ಮನೋವೃತ್ತಿ?" ಎಂದು ಮೈಸೂರು ಭಾಷಾ ಪ್ರಿಯರಾದ ತನ್ನ ಮಿತ್ರರನ್ನು ಆ ಭಾಷೆಯಲ್ಲಿಯೇ ಕೊಂಕು ಧ್ವನಿಯಲ್ಲಿ ಕೇಳಿದನು.

ಆದಕ್ಕೆ ಉತ್ತರವಿಲ್ಲ. ಮಿತ್ರನು ಅಲ್ಲಿಯೇ ಇದ್ದ ಇನ್ನೊಂದು ಕುರ್ಚಿಯಲ್ಲಿ ಕುಳಿತನು.

ಎಂಕೆ:—ಹಿಂಗ್ಯಾಕ್ರೀ! ಬಲ್ಯಾಬಡದ ಕಲ್ಲಾಗೀರಲ್ಲಾ! ನಿಮಗಾದದ್ದಾದ್ರೂ ಏನು? ಹಳ್ಳಿಗಾಡ್ರ ಜೀವನಚಿತ್ರಾ ಚಿತ್ರಸ್ತಿದ್ರೊ ಏನು?....

ಮಿತ್ರ:—ಜೀವನಚಿತ್ರ ಅಲ್ಲ, ಚಿತ್ರದ ಜೀವನ— ನ್ಯೂ ಥಿಯೇಟರ್ಸದವರ 'ದೇವದಾಸ' ಚಿತ್ರಪಟದ ಕತೆ ತಲೇಲಿ ಸುಳಿತಾ ಇದೆ....ಇಂದು ಬರ್‍ತೀರಾ ನೋಡಲಿಕ್ಕೆ?

ಎಂಕೆ:—"ಛೆ! ವಿಶೇಷ ಸಂಚಿಕೆಗೆ ಲೇಖ ಬರೀಬೇಕ್ರೀ! ಇವತ್ತೇನು ಬರಲಿಕ್ಕಾಗ್ತದ?"

ಮಿತ್ರ:—"ನಿಮ್ಮ ಲೇಖ ಹಾಳಾಗಾ. ನನಗೆ ಗೊತ್ತಿದೆ ನಿಮ್ಮ ಕತೇ ತಂತ್ರ! ಸುಮ್ಮನೆ ಬನ್ನಿ—ಹೋಗೋಣ. ಇಲ್ಲಿದ್ರೆ ಗುಟ್ಟು ರಟ್ಟಾದೀತು!"

ಹೀಗೆಂದು ಮುಂಗೈ ಹಿಡಿದು ಎಳೆದುಕೊಂಡು ಹೋದನು.

ಸಾಹಿತ್ಯವೊ ಕಲೆಯೊ?

★

ಪಾತ್ರಗಳು

೧. ಓದುಗ

೨. ಸಾಹಿತಿ

ಓದುಗ:—ಸಾಹಿತಿಗಳೆ, ಉಪನಿಷತ್ತು ಮೊದಲಾದ ಗ್ರಂಥಗಳು ನಿಮ್ಮ ಸಾಹಿತ್ಯದ ಕೂಟಕ್ಕೆ ಸೇರಬಹುದಲ್ಲವೆ?

ಸಾಹಿತಿ:—ಆಗದು, ಅದೆಂದಿಗೂ ಆಗದು. ರಾಯರೆ, ಅದು ಸಾಹಿತ್ಯವೆ ಅಲ್ಲ. ಅದು ತಿಳಿಯದ ಒಗಟೆ. ತಿಳಿಯುವುದು ಸಾಧ್ಯವೇ ಇಲ್ಲ. ಉಪನಿಷತ್ತುಗಳೆಂದರೇನು? ಆದರಲ್ಲೇನಿದೆ? ಏನು ಒಂದು ಕಲೆಯೆ? ಒಂದು ಹೊಸತನವೇ? ಏನಾದರೂ ಹುರುಳೆ? ಏನಿದೆ ಅದರಲ್ಲಿ?

ಓ:—ಏಕಿಲ್ಲ ಮಹಾಸ್ವಾಮಿಗಳೆ? "ಪೂರ್ಣಮದಃ ಪೂರ್ಣಮಿದಂ ಪೂರ್ಣಾ—"

ಸಾ:—ಸಾಕು ಸಾಕು. ಇದು ಸಾಹಿತ್ಯವಲ್ಲ. ಬೇಕಾದರೆ ಅದಕ್ಕೆ ಧರ್ಮವೆಂದುಕೊಳ್ಳಿ, ಧರ್ಮಶಾಸ್ತ್ರವೆನ್ನಿ, ನೀತಿಶಾಸ್ತ್ರವೆಂದು ಹೇಳಿ, ಶಬ್ದಜಾಲವೆಂದು ಕರೆಯಿರಿ. ಆದರೆ ಅದು ಸಾಹಿತ್ಯವಲ್ಲ, ಸರ್ವಥಾ ಅಲ್ಲ.

ಓ:—ಸರಿ, ಸರಿ, ಅಭಿಪ್ರಾಯವಾಯಿತು. ಇಕೊ ಸ್ವಾಮಿ! ಇದನ್ನು ಸ್ವಲ್ಪ ಕೇಳಿಕೊಂಡು ವಿಮರ್ಶಾತ್ಮಕವಾದ ತಮ್ಮ ಇತ್ಯರ್ಥವನ್ನು ಹೇಳಿ. ಕೇಳಿ:—

"ಶರತ್ ಮೋಹನ್ ಕುರಿತು ನುಡಿದುದು 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್' ಇ."

ಸಾ:—ಇದರಲ್ಲಿ ಶರತ್ ಯಾರು? ಮೋಹನ್ ಯಾರು?

ಓ:—ಅವರಿಬ್ಬರು ಯಾರೊ ಗಂಡಸರು.

ಸಾ:—ಸರಿ, ಹಾಗೇನೋ ಇದಕ್ಕೆ ಸಾಹಿತ್ಯವೆಂದರೆ ಎನ್ನಬಹುದು. ಆದರೆ ಬಹಳ ಕೀಳತರಗತಿಯದು. ಇದರಲ್ಲಿ ಏನಿದೆ? ಬಣ್ಣವೊ? ಬಿನ್ನಾಣವೊ? ಬೆಡಗೊ? ಏನೂ ಇಲ್ಲ!

ಓ:—ಹಾಗಾದರೆ ಇದನ್ನಿಷ್ಟು ಕೇಳಿ ಸ್ವಾಮಿ:—

"ಶರತ್ ಮೋಹನ್ ಕುರಿತು ಅಂದುದು; 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್—' ಇ."

ಇಲ್ಲಿ ಶರತ್, ಮೋಹನ್ ಇಬ್ಬರೂ ಹೆಂಗಳೆಯರು.

ಸಾ:—ಹೆಂ, ಪರವಾ ಇಲ್ಲ. ಆದರೂ ... ಸ್ವಾರಸ್ಯ ಕಡಿಮೆ.

ಓ:—ಸ್ವಾಮಿ, ಇನ್ನೂ ಕೊಂಚ ಕೇ...

"ಶರತ್ ಮೋಹನ್ ಮುಖವನ್ನು ರಭಸ... ಆಲಿಂಗನಕ್ಕೆ ಎಳಸುತ್ತ ಮೆಲ್ಲಮೆಲ್ಲನೆ ... "ಪ್ರಾಣೇಶ್ವರೀ! ನಾನು ಪೂರ್ಣನಾಗಿದ್ದೆ... ಪೂರ್ಣ ಆಗಿದ್ದೀಯೆ. ಪೂರ್ಣದೊಂದಿಗೆ ... ಯದಿದ್ದರೆ ಪೂರ್ಣವು ಅಪೂರ್ಣವಾಗಿ ...

ತೆರೆಯು ...

ಇಲ್ಲಿ ಶರತ್ ಎಂದರೆ ರಸಿಕನಾದ ಒ... ಮೋಹನ್ ಅವನ ಗೆಳೆಯನ ನಲ್ಲೆ!

ಸಾ:—ಭಲೆ, ಭೇಶ್, ಭಾಪು, ಸೈ, ಸೊಗಸು, ಅನುಪಮ, ಸುಂದರ, ಕಲೆ, ಕಲಾಗಾರಿಕೆ, ... ಅಹ! ಇದು ಸಾಹಿತ್ಯ, ಇದು ಕಲೆ, ಇದು ... ಬೆಡಗು, ಇದು ಬಿನ್ನಾಣ, ಇದು ಸರ್ವಸ್ವ!

('ವಿಕಟ...

ವಿಷಮ ದಂಪತಿಗಳು

ಲೇ:— ಡಾ. ಗೋಪಾಲಕೃಷ್ಣರಾಯರು,
ಸಂಪಾದಕ ಕಲಿಯುಗ, ಧಾರವಾಡ

ದಾಂಪತ್ಯದ ಜೀವವು ಸಾಮರಸ್ಯವಲ್ಲದೆ ಬರಿ ವಯೋಸಾಮೀಪ್ಯವಲ್ಲ. ಕಾಮವು ಓಜೋಗ್ರಂಥಿಗಳ ಆರೋಗ್ಯದ ಪರಿಣಾಮವಾಗಿದೆ. ದುಷ್ಟ ಓಜೋಗ್ರಂಥಿಗಳಿಂದ ಸ್ತ್ರೀಪುರುಷರು ಪರಿಮಾಣ ಮೀರಿ ಬೆಳೆದು ರಾಕ್ಷಸರಾದ ಉದಾಹರಣೆಗಳಿವೆ. ವಿಷಮ ದಾಂಪತ್ಯಕ್ಕೆ ವಿವಾಹ ಸಂಸ್ಥೆಯು ಕಾರಣವಲ್ಲ; ದೋಷಾತ್ಮಕ ವಿವಾಹಪೂರ್ವಸಿದ್ಧತೆಯು ಕಾರಣವಾಗಿದೆ.

ವಾಚಕರಲ್ಲಿ ವಿಷಮವಿವಾಹವೆಂಬ ನಾಟಕವನ್ನು ನೋಡದವರು ಇರಲಿಕ್ಕಿಲ್ಲ. ವಿಷಮ ವಿವಾಹವೆಂದ ಕೂಡಲೆ ಮುದುಕ ಗಂಡನಿಗೆ ಹರೆಯದ ಹೆಂಡತಿ ಎಂಬ ಒಂದೇ ಅರ್ಥವು ಬಹುತರವಾಗಿ ಎಲ್ಲರಿಗೆ ಹೊಳೆಯುವದು. ಆದರೆ ದಾಂಪತ್ಯದಲ್ಲಿ ವೈಷಮ್ಯ ಹುಟ್ಟುವದಕ್ಕೆ ವಯಸ್ಸಿನ ವೈಷಮ್ಯವೊಂದೇ ಕಾರಣವಲ್ಲ. ಸಮವಯಸ್ಕರಾದ ತರುಣ ತರುಣಿಯರೂ ಕೆಲವೊಂದು ಕಾರಣಗಳಿಂದ ವಿಷಮ ದಂಪತಿಗಳಾಗಬಹುದು. ವಿಷಮವಯಸ್ಕರಾದ ದಂಪತಿಗಳಲ್ಲಿಯೂ ಕೆಲವೊಂದು ಕಾರಣಗಳಿಂದ ಸಾಮರಸ್ಯ ಹುಟ್ಟಬಹುದು.

ಸಾಮರಸ್ಯವೇ ದಾಂಪತ್ಯದ ಆಧಾರ. ಸಾಮರಸ್ಯವಿಲ್ಲದ ದಾಂಪತ್ಯವು ಕ್ಷಣಿಕವಾದುದು. ಅಲ್ಲಿ ಗಂಡಹೆಂಡತಿಯೆಂಬ ಹೆಸರಿನಿಂದ ದಂಪತಿಗಳು ವರ್ತಿಸುತ್ತಿದ್ದರೂ ಅವರಲ್ಲಿರಬೇಕಾದ ಪ್ರೇಮ ಸಹಾನುಭೂತಿ ಆತ್ಮೈಕ್ಯಗಳು ಕಾಣದಂತಾಗುವವು. ಅಲ್ಲಿ ದಾಂಪತ್ಯಸೌಖ್ಯವೆಂದರೆ ಇಲಿ ಬೆಕ್ಕುಗಳ ಸ್ನೇಹ-ಸುಖವೇ ಸೈ. ಆದುದರಿಂದ ದಾಂಪತ್ಯದಲ್ಲಿ ಸೇರುವ ಪೂರ್ವದಲ್ಲಿ ಸಾಮರಸ್ಯವನ್ನು ಗುರಿಯಾಗಿಟ್ಟುಕೊಳ್ಳಬೇಕಲ್ಲದೆ ಬರಿ ವಯಸ್ಸಿನ ಸಾಮೀಪ್ಯವನ್ನಲ್ಲ. ಹಿಂದಿನ ಕಾವ್ಯ ಕಾದಂಬರಿಗಳಲ್ಲಿ ವಿರಹದ ವರ್ಣನೆಗಳನ್ನು ವಾಚಕರು ಓದಿರಬಹುದು. ಪತಿ ಪತ್ನಿಯರ ವಿರಹದಿಂದ ಮನದಲ್ಲಿ ಹುಟ್ಟುವ ದಿಗುಲು ಉಬ್ಬೆಗಗಳೂ ಸುಖಶೂನ್ಯತೆಗಳೂ ಅವರಲ್ಲಿ ಇರುವ ಆತ್ಮವಿಸ್ಮರಣೀಯ ಪ್ರೇಮದ ಲಕ್ಷಣಗಳಾಗಿವೆ. ಸಮರಸರಾದ ದಂಪತಿಗಳು ಒಂದೆಡೆಗಿರುವವರೆಗೆ ಇಹವೇ ಸ್ವರ್ಗವೆನಿಸುವದು; ವಿಯೋಗವಾಯಿತೆಂದರೆ ಜೀವನವೇ ನೀರಸವೆನಿಸುವದು. ಮನುಷ್ಯನು ಅನೇಕ ಶತಮಾನಗಳ ಅನುಭವದಿಂದ ಕಟ್ಟಿದ ವಿವಾಹ ಸಂಸ್ಥೆಯಲ್ಲಿ ಆ ವೈಮರೆಯಿಸುವ ಸಾಮರಸ್ಯವಿಲ್ಲದೆ ಹೋದರೆ ಸಂಸಾರವು ಒಂದು ಸೆರೆಮನೆಯೆನಿಸದಿರದೆ ?

ಮನುಷ್ಯನ ಹೊರತು ಮಿಕ್ಕ ಪ್ರಾಣಿಗಳಲ್ಲಿ ವಿವಾಹ ಸಂಸ್ಥೆಯಿರುವದಿಲ್ಲ. ಆದರೂ ಅವುಗಳ ಸಂತಾನೋತ್ಪತ್ತಿಯಲ್ಲಿ ಅವ್ಯಕ್ತವಾದ ಯಾವದೋ ಒಂದು ಸಾಮರಸ್ಯ ವಿದ್ದಿರಬೇಕೆಂದು ತೋರುವದು. ಜೇನುನೊಣಗಳಲ್ಲಿ ಸಂಭೋಗ ಸಂಗ್ರಾಮವೇ ನಡೆದಂತಾಗುತ್ತದೆ. ಕೊನೆಗೆ ರಾಣಿ-ನೊಣದೊಡನೆ ಬೆರೆಯುವ ಸೌಭಾಗ್ಯ ಒಂದೇ ಒಂದು ಧನ್ಯ ಮಕ್ಷಿಕೆಗೆ ಸಿಗುವದು. ಒಳ್ಳೆಯ ಸಂತಾನ ಸಂಪಾದನೆಗೆ ಯೋಗ್ಯವಾದ ಗಂಡುನೊಣದೊಡನೆಯೆ ರಾಣಿ ನೊಣವು ಬೆರೆಯುವದು. ಜೇಡಗಳಲ್ಲಿ ಕೂಡ ಗಂಡಿನ ಆರಿಸುವಿಕೆಯು ಕಂಡುಬರುತ್ತದೆ. ದನಗಳಲ್ಲಿ ನಾಯಿಗಳಲ್ಲಿ ಕೂಡ ಬೇಕುಬೇಕಾದ ಗಂಡುಹೆಣ್ಣುಗಳು ಒಂದಾಗುವದಿಲ್ಲ. ಹೆಣ್ಣು ಅನೇಕ ಗಂಡುಗಳನ್ನು ಪೀಡಿಸಿ ಕೊನೆಗೆ ಒಂದರೊಡನೆ ಸಂಯೋಗಿಸುವದು. ಈ ಸಂಯೋಗಗಳಲ್ಲಿ ಆ ಜೀವಿಗಳು ತಮ್ಮ ನೈಸರ್ಗಿಕ ಒತ್ತಾಯದಿಂದಲೇ ಅಜ್ಞಾತವಾಗಿ ತಮಗೆ ಸಮರಸವಾದ ಪ್ರಾಣಿಗಳೊಡನೆಯೆ ಸೇರುವವು.

ಮನುಷ್ಯನ ದಾಂಪತ್ಯವು ಬರಿ ಸಂತಾನೋತ್ಪತ್ತಿಗಾಗಿರುವದಿಲ್ಲ. ದಾಂಪತ್ಯದಲ್ಲಿ ಸಾಧಿಸಬೇಕಾದ ಬೇರೆ ಗುರಿಗಳೂ ಉಂಟು. ಆದರೆ ಸಂತಾನೋತ್ಪತ್ತಿಯೂ ದಾಂಪತ್ಯದ ಮುಖ್ಯ ಗುರಿಗಳಲ್ಲೊಂದು ಎಂಬುದನ್ನು ಮರೆಯುವಂತಿಲ್ಲ. ಮತ್ತು ಸಂತಾನೋತ್ಪತ್ತಿಗೆ ಸಾಧಕವಾದ ಕಾಮಸಂಗಗಳಲ್ಲಿಯ ಪೂರ್ಣತೆ ತೃಪ್ತಿಗಳ ಮೇಲೆಯೆ ದಾಂಪತ್ಯದ ಮಿಕ್ಕ ಗುರಿಗಳ ಸಿದ್ಧಿಯವಲಂಬಿಸಿದೆ. ಗೃಹಸ್ಥರಾಗಿದ್ದೂ ಆಮರಣ ನಿಷ್ಠಾಬ್ರಹ್ಮಚರ್ಯವನ್ನು ಆಚರಿಸಬಲ್ಲೆನೆಂದೆನ್ನುವ ಯೋಗಿಗಳ (?) ಮಾತು ಇಲ್ಲಿ ಬೇಡ. ಸಾಮಾನ್ಯ ದಂಪತಿಗಳು ಸಂತಾನೋತ್ಪತ್ತಿಯ ಕಾರ್ಯದಲ್ಲಿ ತಿಳಿದಾಗಲಿ ತಿಳಿಯದಾಗಲಿ ತೊಡಗಿಯೇ ತೀರುತ್ತಾರೆ. ಆದರೆ ದುರ್ದೈವದಿಂದ ಮಿಕ್ಕ ಪ್ರಾಣಿಗಳಂತೆ ಸುಸಂತಾನ ಜನನ ಕಾರ್ಯದಲ್ಲಿ ಸಮರಸರಾದ ಸ್ತ್ರೀಪುರುಷರೇ ಒಂದು

ಗೂಡುತ್ತಾರೆನ್ನಲಾಗುವದಿಲ್ಲ. ವಿವಾಹಸಂಸ್ಥೆಯು ಮನುಷ್ಯನಿಗೆ ಅನೇಕ ವರಗಳನ್ನು ಕೊಟ್ಟಿದೆ. ಆದರೆ ಸಮರಸಸಂಯೋಗದ ವರವು ಮಾತ್ರ ಇನ್ನೂ ಸಿಕ್ಕಿಲ್ಲವೆಂಬುದು ವಿಷಾದ ಸಂಗತಿಯಾಗಿದೆ. ಅದು ವಿವಾಹ ಸಂಸ್ಥೆಯ ದೋಷವಲ್ಲ; ವಿವಾಹ ಸಿದ್ಧತೆಯ ದೋಷವೆನ್ನಬೇಕು.

ಅನೇಕ ಶತಮಾನಗಳಿಂದ ಸಾಮಾಜಿಕ ನಿಯಮಗಳಿಗೆ ಸ್ವಾರ್ಥವನ್ನು ಬಲಿಗೊಡುವ ಚಟವನ್ನು ಮನುಷ್ಯರು ಕಲಿತಿದ್ದಾರೆ. ಆದರೂ ಮನುಷ್ಯಜೀವಿಯೊಳಗೆ ಗುಪ್ತವಾಗಿರುವ ಪ್ರಾಕೃತಿಕ ಸ್ವಭಾವಗಳ ಸಂವೇದನೆಗಳನ್ನು ಪೂರ್ಣವಾಗಿ ಯಾರೂ ಗೆಲ್ಲಲಿಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಜೀವಿಗಳ ಒಂದು ಸ್ವಭಾವವನ್ನು ನಾವು ತಿಳಿದುಕೊಳ್ಳಬೇಕು. ಮಿಕ್ಕೆಲ್ಲ ವಿಷಯಗಳಲ್ಲಿ ಸ್ತ್ರೀಪುರುಷರ ದೇಹವು ಕೃತ್ರಿಮತೆಯಲ್ಲಿ ವ್ಯೈಮರೆತರೂ ಕಾಮಸಂಗದ ವಿಷಯದಲ್ಲಿ ಅವರ ನರಮಂಡಲಕ್ಕೆ ಸೂಕ್ಷ್ಮವಾದ ಪ್ರೇಮ-ತಿರಸ್ಕಾರಗಳಿವೆಯೆಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ. ಸಮರಸ ದೇಹಗಳ ಸಂಯೋಗದಿಂದ ಮನದ ಶಾಂತಿ, ಬಲ, ಉತ್ಸಾಹಗಳು ಹೆಚ್ಚುತ್ತಲೂ ವಿರಸಿಗಳ ಸಮಾಗಮದಿಂದ ಮನದ ಜಾಡ್ಯ, ಅಶಾಂತಿ, ದೌರ್ಬಲ್ಯಗಳು ಬೆಳೆಯುತ್ತಲೂ ಹೋಗುವವು. ಆದುದರಿಂದಲೇ ಪತಿಪತ್ನಿಯರಲ್ಲಿ ವ್ಯಕ್ತವಾಗಿ ಪ್ರೇಮವೆಷ್ಟಿದ್ದರೂ, ಪರಸ್ಪರರ ಗಳಿಗಾಗಿ ಆತ್ಮಯಜ್ಞ ಮಾಡಲು ಸಿದ್ಧ ರಸ್ಯವೊಂದಿಲ್ಲದಿದ್ದರೆ ದಾಂಪತ್ಯದಲ್ಲಿ ಶಾಂತಿಯಿರುವದಿಲ್ಲ; ಆರೋಗ್ಯವೂ ದಿಲ್ಲ. ಈ ಪರಿಣಾಮಗಳು ಕೆಲವು ವಾಗಿ ಕಾಡಬಹುದು; ಕೆಲವೆಡೆಗಳಲ್ಲಿ ಬಹುದು.

ಆ ಸಾಮರಸ್ಯಕ್ಕೆ ಮುಖ್ಯವಾಗಿ ನಾಲ್ಕು

(೧) ವಯಸ್ಸು:— ಜೀವವಿಜ್ಞಾನಿಗಳ ದಂತೆ ಪುರುಷನಿಗಿಂತ ಸ್ತ್ರೀಯು ಸ್ವಲ್ಪ ಸ್ತ್ರೀಯಲ್ಲಿ ಪುರುಷನಿಗಿಂತ ತೀವ್ರವಾಗಿ ಪರಿಪಕ್ವಾವಸ್ಥೆಗೆ ಮುಟ್ಟುವವು. ವಯಸ್ಕರಾದ ಸ್ತ್ರೀಪುರುಷರ ಕಾಮತ ಕಡಿಮೆಯಾಗಬಹುದು; ದಾಂಪತ್ಯಜೀವನದ ಸ್ತ್ರೀಯು ಮಂದಕಾಮಳಾಗಬಹುದು. ಪುರುಷನಿಗಿಂತ ಅವಳು ಸ್ವಲ್ಪ ಚಿಕ್ಕವಳಾಗಿ

(೨) ದೇಹದ ವಿಷಯ:— ಸ್ತ್ರೀಯು ಪುರುಷನಿಗಿಂತ ಸ್ವಲ್ಪ ಕುಳ್ಳಗಿ ಪ್ರಾಯ ಪಡುತ್ತಾರೆ. ಸಮಾಗಮವು ಅದು ಸಹಾಯಕವಾಗುವದು. ಅಳತೆಯು ವಿಪರೀತವಾಗಿ ಯಾಗಿರಕೂಡದು. ಹಾಗಿದ್ದ ಗಕ್ಕೆ ತೊಂದರೆಯಾಗುವದು ಬಹಳ ಎತ್ತರ ಅಥವಾ ಬಹಳ ವವರ ಓಜೋಗ್ರಂಥಿ (Endoc ದೋಷಯುಕ್ತವಾಗಿರುತ್ತವೆ. ಓಜೋಗ್ರಂಥಿಗಳ ಆರೋಗ್ಯ ವಾದುದರಿಂದ ದುಷ್ಟ ಓಜೋ ಕಾಮವೂ ದೋಷಾತ್ಮಕವಾಗುವ ರಿಂದ ಮದುವೆಯಪೂರ್ವದ



ಓಜೋಗ್ರಂಥಿಗಳ ದೋಷದಿಂದ ಬೆಳೆದ ಒಬ್ಬ ಹೆಂಗಸು. ಮತ್ತು ಸೊರಗಿ ಕಡ್ಡಿಯಾದ ಒಬ್ಬ ಗಂಡಸು ದಂಪತಿಗಳಲ್ಲಿ ಈ ವೈಷಮ್ಯ

ಗ್ರಂಥಿಗಳ ಆರೋಗ್ಯವನ್ನು ಪರೀಕ್ಷಿಸಲೇಬೇಕು. ಕೆಲವರ ಓಜೋಗ್ರಂಥಿಗಳ ರೋಗವು ದಾಂಪತ್ಯದಾರಂಭವಾದ ಮೇಲೆ ಪ್ರಬಲವಾಗುವದು. ಅದರಿಂದ ಆಕಸ್ಮಿಕವಾಗಿ ಬೆಳಗೆ ನಿಂತು ಹೋಗುವದಾಗಲಿ, ಒಮ್ಮೆಲೆ ತೀವ್ರಗತಿಯಿಂದ ಬೆಳೆಯಹತ್ತುವದಾಗಲಿ ಆಗುವದು. ಮದುವೆಯ ನಂತರ ಗಂಡನು ರಾಕ್ಷಸನಂತೆ ಬೆಳೆದ ಅಥವಾ ಓಜೋಗ್ರಂಥಿ ದೋಷದಿಂದ ಸೊರಗಿ ಕಡ್ಡಿಯಾದ, ಒಂದು ಹಡೆದ ನಂತರ ಸ್ತ್ರೀಯು ಪರಿಮಾಣ ಮೀರಿ ಬೆಳೆದ-ಮಂದಕಾಮಿಯಾದ ಉದಾಹರಣೆಗಳಿವೆ. ಅಥವಾ ಒಂದು ಹೆರಿಗೆಯ ನಂತರ ಅವಳ ಓಜೋಗ್ರಂಥಿಯಾದ ಡಿಂಭಕೋಶವು ದುರ್ಬಲವಾಗಿ ಒಣಗಿ ಮಕ್ಕಳು ಹುಟ್ಟದಿರುವ ಉದಾಹರಣೆಗಳಿವೆ. ಇಂತಹ ಸಂದರ್ಭಗಳಲ್ಲಿ ಗಂಡ-ಹೆಂಡಿರಲ್ಲಿ ಸಾಮರಸ್ಯವೆಂತಿರಬೇಕು? ಇದೊಂದು ವಿಷಯವನ್ನಲ್ಲದೆ ಕಾಮಾಂಗಗಳ ಆರೋಗ್ಯ-ಬೆಳೆಗೆಗಳನ್ನೂ, ದೇಹದ ಇನ್ನಿತರ ರೋಗಗಳನ್ನೂ ಪರೀಕ್ಷಿಸಬೇಕು.

(೩) ಕಾಮಸ್ವಭಾವ:—ಕಾಮಾಂಗಗಳು ಪರಿಪಕ್ವಾವಸ್ಥೆಗೆ ಮುಟ್ಟಿದಾಗ ಸ್ತ್ರೀಪುರುಷರ ಕಾಮದ ವೇಗವೂ ನಿಶ್ಚಿತವಾಗುವದು. ಕೆಲವರು ಸಹಜವಾಗಿಯೇ ಮಂದ ಕಾಮಿಗಳಿರುತ್ತಾರೆ. ಕೆಲವರು ಸಹಜವಾಗಿಯೇ ತೀವ್ರ ಕಾಮಿಗಳಿರುತ್ತಾರೆ. ಮಂದಕಾಮಿಗಳಿಗೆ ಅತಿ ಸಂಭೋಗವು ಘಾತಕ. ತೀವ್ರಕಾಮಿಗಳಿಗೆ ಬ್ರಹ್ಮಚರ್ಯವು ಘಾತಕ. ಆದುದರಿಂದ ದಂಪತಿಗಳು ವಿಷಮ ಕಾಮವೇಗವುಳ್ಳವರಾದರೆ ವ್ಯಭಿಚಾರದ ಪ್ರವೃತ್ತಿಯು ಹುಟ್ಟುತ್ತದೆ. ದಂಪತಿಗಳಲ್ಲಿ ಯಾರಾದರೊಬ್ಬರು ದಿನದಿನವೂ ಕಾಮೋನ್ಮತ್ತರಾಗಿ ಮತ್ತೊಬ್ಬರನ್ನು ಪೀಡಿಸಹತ್ತಿದರೆ ಎಷ್ಟು ದಿನ ತಡೆಯಲಾದೀತು! ಮತ್ತು ಆರೋಗ್ಯಾವಸ್ಥೆಯಲ್ಲಿ ನೈಸರ್ಗಿಕವಾಗಿಯೇ ಕಾಮವು ಹೆಚ್ಚಿರುವಾಗ ಅದರ ಆವೇಗವನ್ನು ಪೂರ್ಣವಾಗಿ ಒತ್ತಿಡಲು ಯತ್ನಿಸುವದರಿಂದ ನರಮಂಡಲಕ್ಕೆ ಸಂಬಂಧಿಸಿದ ಅನೇಕ ರೋಗಗಳಾಗುವವೆಂದು ತಜ್ಞರ ಮತವಿದೆ. ಇತ್ತೀಚೆ ಮಿದುಳಿನ ಬುಡದಲ್ಲಿರುವ ಪೀನಿಯಲ್ ಗ್ರಂಥಿಯ ಔಷಧದಿಂದ ಕಾಮವನ್ನು ಕಡಿಮೆ ಮಾಡಬಹುದೆಂದು ಹೊಸ ಪರಿಶೋಧನೆಯಾಗಿದೆ. ಆದರೆ ಅದೆಷ್ಟೆಂದರೂ ಔಷಧವೇ. ಔಷಧದಿಂದ ದೇಹಮನಸುಗಳ ಸಹಜ ವೇಗಗಳ ದಿಕ್ಕನ್ನೇ ಬದಲಿಸುವದು ಈ ವರೆಗೆ ಸಾಧ್ಯವಾಗಿಲ್ಲ; ತಾತ್ಪೂರ್ತಿಕ ಸಮಾಧಾನವಾಗಬಹುದು. ಧಾರ್ಮಿಕ ಅಥವಾ ಸಾಮಾಜಿಕ ನಿರ್ಬಂಧಗಳ ಭಯವು ಬುದ್ಧಿಗಿದ್ದರೂ, ಮನುಷ್ಯಸ್ವಭಾವಕ್ಕಿಲ್ಲ. ಆದುದರಿಂದ ದಾಂಪತ್ಯದಲ್ಲಿ ಸೇರಿ ನಂತರ ಚಡಪಡಿಸುವದಕ್ಕಿಂತ ಮೊದಲೇ ಈ ವಿಷಯಗಳಲ್ಲಿ ಎಚ್ಚರಿಕೆ ತೆಗೆದುಕೊಳ್ಳುವದು ಒಳಿತು.

(೪) ವಿಚಿತ್ರ ಪ್ರವೃತ್ತಿಗಳು:— ಸ್ತ್ರೀಯಲ್ಲಾಗಲಿ ಪುರುಷನಲ್ಲಾಗಲಿ ಸ್ವಾಭಾವಿಕವಾಗಿ ಇಲ್ಲವೆ ಬಾಲ್ಯದ ಅಭ್ಯಾಸಗಳಿಂದ ಕೆಲವು ವಿಚಿತ್ರ ರೀತಿಯಿಂದ ತೃಪ್ತಿ ಹೊಂದುವ ಚಟಗಳು ಬೆಳೆದಿರುತ್ತವೆ. ಆ ಚಟಗಳ ಸಮಾಧಾನವಾಗದೆ ಅವರಿಗೆ ದಾಂಪತ್ಯದಲ್ಲಿ ಪೂರ್ಣ ಸುಖ ಸಿಗಲಾರದು. ಆ ಚಟಗಳಿಂದ ಅವರ ದೇಹದ ವಿಶಿಷ್ಟ ಅವಯವಗಳು ಉತ್ತೇಜನವನ್ನು ಅಪೇಕ್ಷಿಸುವವು. ಅವುಗಳು ಸಾಕಷ್ಟು ಉತ್ತೇಜಿತವಾಗಿ ಶಾಂತವಾದವೆಂದರೇ ಅವರಿಗೆ ತೃಪ್ತಿ. ಉದಾಹರಣಾರ್ಥವಾಗಿ ಜನನೇಂದ್ರಿಯದ ವಿಶಿಷ್ಟ ಭಾಗಗಳು, ತುಟಿ, ಸ್ತನಗಳು ಇತ್ಯಾದಿ. ಈ ಉತ್ತೇಜನ ಕೇಂದ್ರಗಳನ್ನು ಮದುವೆಯ ನಂತರವೂ ಕಂಡು ಹಿಡಿಯುವದು ಸಾಧ್ಯವಿದೆ. ಆದರೆ ಅವನ್ನು ಕಂಡುಹಿಡಿಯುವ ಮನಸ್ಸು ಮಾತ್ರ ಬೇಕು. ಮದುವೆಯಾದವರಿಗೆಲ್ಲ, ಆಗುವವರಿಗೆಲ್ಲ ಸಂಸಾರ-ಸುಖದ ಗುಟ್ಟುಗಳು ತಿಳಿದೇ ಹೋಗುವವೆನ್ನಲಾಗದು. ಈ ವಿಷಯಗಳನ್ನು ಪತಿಪತ್ನಿಯರು ಸ್ಪಷ್ಟವಾಗಿ ಮಾತಾಡುವ ರೂಢಿಯಿಡಬೇಕು. ಸಮಲಿಂಗರತಿ, ಸ್ವರತಿ(Homosexuality, Autosexuality)ಗಳು ಯಾವ ಬಾಲಬಾಲಿಕೆಯರಿಗೆ ಅಭ್ಯಾಸವಾಗಿರುತ್ತವೋ ಅವರು ಮೇಲ್ಕಂಡ ಮೇರೆಗೆ ವಿಶಿಷ್ಟಾಂಗಗಳನ್ನು ಉತ್ತೇಜನಶೀಲವನ್ನಾಗಿ ಮಾಡಿಕೊಳ್ಳುವರು. ಈ ವಿಷಯಗಳನ್ನು ಪತಿಪತ್ನಿಯರು ಪರಸ್ಪರ ಹೇಳಿಕೊಂಡು ತಮಗೆ ಅನುಕೂಲವಾದ ರೀತಿಯಲ್ಲಿ ನಡೆದುಕೊಂಡು ತೃಪ್ತರಾಗಬೇಕು.

ಮೊನ್ನೆ ಒಂದು ಪತ್ರಿಕೆಯಲ್ಲಿ ದಾಂಪತ್ಯವಿಚ್ಛೇದದ ಒಂದು ಸಂಗತಿಯನ್ನು ನಾವು ಓದಿದೆವು. ಒಬ್ಬ ಗಂಡನು, ಹೆಂಡತಿಯು ಮಲಗುವ ಮನೆಗೆ ಬರುವಾಗ ರಬ್ಬರಿನ ತೆಳುವಾದ ಶಾಲನ್ನು ಹೊದ್ದುಕೊಂಡು ಬರಬೇಕೆಂದು ದಿನಾಲು ಹಟಹಿಡಿಯುತ್ತಿದ್ದನು. ಹೆಂಡತಿಗೆ ಅದು ಸೇರಿ ಬರುತ್ತಿರಲಿಲ್ಲ. ಈ ವೈಷಮ್ಯವೇ ಜಗಳವಾಗಿ ಅವರಿಬ್ಬರೂ ದಾಂಪತ್ಯವಿಚ್ಛೇದವನ್ನು ಮಾಡಿಕೊಂಡರು. ಗಂಡನನ್ನು ಪರೀಕ್ಷಿಸಿದ ಒಬ್ಬ ಮನೋವಿಜ್ಞಾನಿಗೆ ಇದರ ಮೂಲವು ತಿಳಿದುಬಂತು. ಅದು ಹೀಗೆ:—ಗಂಡನು ಸ್ವಲ್ಪ ಚಿಕ್ಕವನಿದ್ದಾಗ ಒಬ್ಬ ರಬ್ಬರಿನ ಶಾಲು ಹೊದೆದ ಹುಡುಗಿಯೊಡನೆ ಮಳೆಯಲ್ಲಿ ಒಂದು ದಿನ ಹೋಗುತ್ತಿದ್ದನು. ಹುಡುಗಿಯು ಅವನಿಗೆ ಮಳೆ ತಗಲಬಾರದೆಂದು ರಬ್ಬರಿನ

ಶಾಲಿನಲ್ಲಿ ಅವನನ್ನೂ ಎಳೆದುಕೊಂಡಳು. ಅದೇಕೋ ಅವನಿಗೆ ಬಹಳ ಸುಖಕರವೆನಿಸಿತು. ನಂತರ ರಬ್ಬರಿನ ವಸ್ತುಗಳನ್ನು ಕಂಡರೆ ಅವನಿಗೆ ಮೋಹವೆನಿಸುತ್ತಿತ್ತು.

ಬಯಲಿಗೆ ಬರದ ಇಂತಹ ಅನೇಕ ವಿಚಿತ್ರಾಭ್ಯಾಸಗಳು ಸಮಾಜದ ಮೂಲೆ ಮೂಲೆಯಲ್ಲಿಯೂ ದಾಂಪತ್ಯವನ್ನು ಮಣ್ಣುಗೂಡಿಸುತ್ತಿವೆ. ದಾಂಪತ್ಯಕ್ಕಾಗಿ ಕಲಿಯತಕ್ಕಂತಹದೇನೂ ಇಲ್ಲವೆಂಬ ಮಿಥ್ಯಾಧಾರ್ಮಿಕ ನಾಚಿಕೆಯಿಂದ, ಸರಿಗೊಳ್ಳಬಹುದಾದ ಹಲವು ತೊಡಕುಗಳೂ ಗಡಚಾಗಿ ಹೋಗುತ್ತವೆ. ಆದುದರಿಂದ ವಿಷಮ ದಾಂಪತ್ಯವನ್ನು ನಿರ್ನಾಮಗೊಳಿಸಲಿಕ್ಕೆ ಮೂರು ಮಾರ್ಗಗಳಿವೆ. (೧) ವಿವಾಹಪೂರ್ವದಲ್ಲಿ ಕಾಮವಿಜ್ಞಾನವನ್ನು ಅಭ್ಯಸಿಸಿದ ಭಾವೀ ಪತಿಪತ್ನಿಯರ ದೇಹ ಮನಸುಗಳ ಪರೀಕ್ಷೆಯಾಗಬೇಕು. (೨) ವಿವಾಹವಾದ ನಂತರ ಸಂಸಾರ ಸುಖದಲ್ಲಿ ಪರಸ್ಪರಿಗೆ ಅನಿಸುವ ಅನನುಕೂಲತೆಗಳನ್ನು ಸಹಾ...ಯಿಂದ ಚರ್ಚಿಸಿ ಸುಖದ ಹಾದಿಯನ್ನು ಹುಡು... (೩) ಸಮರಸದಿಂದ ಸಂಸಾರವು ಸಾಗುವದಿ... ದಾಂಪತ್ಯವಿಚ್ಛೇದನವನ್ನು ಮಾಡಿಕೊಳ್ಳ... ಗಳಲ್ಲಿ ಮೊದಲಿನ ಎರಡು ಮಾರ್ಗಗಳೇ ಮೇ... ಮನುಷ್ಯನಿಗೆ ಯೋಗ್ಯವಾದವುಗಳು. ಕಾಮ... ದಾಂಪತ್ಯದ ಪೂರ್ಣೋದ್ದೇಶವಲ್ಲದಿದ್ದರೂ ... ಉದ್ದೇಶಗಳ ಸಿದ್ಧಿಯು ನೈಸರ್ಗಿಕವಾದ ಕಾಮ... ಮೊದಲುಗೊಳ್ಳುತ್ತದೆಯೆಂದು ಇನ್ನೊಮ್ಮೆ ಹೇ...ರಿವು. ಆದುದರಿಂದ ಗಂಡಹೆಂಡಿರು ಸಮ... ಮಾತ್ರಕ್ಕೆ ಅದು ಸುಖದಾಂಪತ್ಯವೆನ್ನದೆ ಅದರೊ...ವಾಗಿರುವ ಒಳಸಂಕಟಗಳ ಬೇರುಗಳನ್ನು ಕಿತ್ತ...ಬೇಕು.

ಅಣೋರಣೀಯಾನ್ ಮಹತೋ ಮಹೀಯಾನ್ !

★

ಬಿ. ಬೀಲ ಎಂಬ ಯಂತ್ರಜ್ಞರು ಒಂದು ಇಲೆಕ್ಟ್ರಿಕ್ ಎಂಜಿನ್ ತಯಾರಿಸಿದ್ದಾರೆ. ಅದರ ತೂಕ ಕಾಲು ಔಂಸು. ಅದರೊಳಗಿನ ಚಕ್ರವು ಮಿನಿಟಿಗೆ ೧೨೦೦೦ ಸುತ್ತು ಹಾಕುವದು !

* * *

ಈವರೆಗೆ ನಿರೋಗಿಯಾಗಿದ್ದು ಎತ್ತರದಲ್ಲಿ ಎಲ್ಲರನ್ನು ಮೀರಿದವನೆಂದರೆ ಅಮೆರಿಕದ ರಾಬರ್ಟ ವ್ಯಾಡ್ಲೊ. ಅವನು ೭ ಫೂಟು ೮ ಇಂಚು ಎತ್ತರವಾಗಿದ್ದಾನೆ! ಇದಕ್ಕೂ ಎತ್ತರವಾಗಿರುವವರಿದ್ದಾರೆ. ಆದರೆ ಅವರು ರೋಗದಿಂದ ಬೆಳೆದಿದ್ದಾರೆ.

* * *

ಈವರೆಗಿನ ಮನುಷ್ಯಪ್ರಾಣಿಗಳಲ್ಲಿ ತೀರ ಚಿಕ್ಕವನಾದ ಮನುಷ್ಯನ ಒಂದು ಅಸ್ಥಿಪಂಜರ ಸಿಕ್ಕಿದೆ. ಅದರ ಮನುಷ್ಯನು ಜೀವಿಸಿರುವಾಗ ಬರಿ ಇಪ್ಪತ್ತು ಇಂಚು ಉದ್ದವಾಗಿರಬೇಕೆಂದು ತೋರುತ್ತದೆ !

* * *

ಬರಿಗಂಣಿಗೆ ಕಾಣಲಾರದಷ್ಟು ಚಿಕ್ಕ ವನಸ್ಪತಿಗಳಿವೆ ! ಅತಿ ದೊಡ್ಡದಾದ ಎಲೆಯೆಂದರೆ ೫ ಫೂಟು ಅಗಲವುಳ್ಳ ರಾಯಲ್ ವಾಟರ್ ಲಿಲಿಯು. ಕೆಲವು ಕೂಸುಗಳು ಅದರ ಮೇಲೆ ನಿಂತರೂ ಬಗ್ಗದಷ್ಟು ಬಲವಾಗಿದೆ ಅದು !

* * *

ಈಗಿನ ಅತಿ ಬಲವಾದ ಸೂಕ್ಷ್ಮದರ್ಶಕ ಯಂತ್ರವು ಒಂದು ಇಂಚಿನ ಒಂದೂವರೆ ಲಕ್ಷಾಂಶದಷ್ಟು ಸಂಣ ವಸ್ತುವನ್ನು ನೋಡಬಲ್ಲದು ! ಆದರೆ ಆ ಯಂತ್ರಕ್ಕೆ ಕೂಡ ಗೋಚರವಾಗದಷ್ಟು ಸಂಣ ರೋಗಜಂತುಗಳಿವೆ ! ಜಗತ್ತಿನ ಮೂಲ ಪರಮಾಣುಗಳಂತೂ ಇನ್ನೂ ೩೦ ಲಕ್ಷ ಪಾಲು ಸಂಣವಾಗಿವೆಯೆಂದು ಊಹಿಸಲಾಗಿದೆ !

* * *

೧೮೮೩ರಲ್ಲಾದ ಕ್ರೆಕ್ಯಾಟೊ ಜ್ವಾಲಾಮುಖಿಯ ಸ್ಫೋಟದ ಸಪ್ಪಳವು ೩೦೦೦ ಮೈಲುಗಳ ವರೆಗೆ ಕೇಳಿಸಿತು ! ಹಂಣುಗಳಲ್ಲಿ ಮಿಸುಕಾಡುವ ಸೂಕ್ಷ್ಮಕ್ರಿಮಿಗಳ ಧ್ವನಿಯು ತೀರ ಸಂಣದು !

* * *

ಭಾರದಲ್ಲಿ ಅತಿ ಭಾರವಾದ ಡ್ಯಾನಿಯೆಲ್ ಲ್ಯಾಂಬರ್ಟನು ೧೮೦೯ರಲ್ಲಿದ್ದನು. ಅವನ ತೂಕವು ೭೩೯ ಪೌಂಡಿದ್ದಿತು.

* * *

ಜಗತ್ತಿನ ಅತಿದೊಡ್ಡ ಪ್ರಾಣಿಯೆಂದರೆ ತಿಮಿಂಗಿಲು. ಅತಿದೊಡ್ಡದಾದ ತಿಮಿಂಗಿಲಿನ ಉದ್ದವು ೯೦ ಫೂಟು ಇರುತ್ತದೆ !

* * *

ನಕ್ಷತ್ರಗಳ ಹಿಂಪಾರ್ಶ್ವದಲ್ಲಿರುವ ಹೊಗೆಬಂಣದ 'ಹಾಲಹರಿ'ಯೆಂಬ ನಕ್ಷತ್ರಸಮುದಾಯದ ಮಂಜನ್ನು ನೀವು ನೋಡಿರುವಿರಾ ? ಬೆಳಕಿನ ಕಿರಣಗಳಿಗೆ ಹಾಲಹರಿಯ ಅಗಲವನ್ನು ದಾಟಲು ೧ ಲಕ್ಷ ವರ್ಷಗಳು ಬೇಕಂತೆ ! ಬೆಳಕಿನ ವೇಗವನ್ನು ನೀವು ಬಲ್ಲಿರಿ; ಒಂದು ಸೇಕಂಡಿಗೆ ೧೮೬೦೦೦ ಮೈಲು !

* * *

ಈಗ ಗೊತ್ತಿದ್ದ ವಸ್ತುಗಳಲ್ಲಿ ತೀರ ಕಹಿಯಾದುದು ಸ್ಟ್ರಿಕ್ನೀನ್. ಅತಿ ಮಧುರವಾದ ಒಂದು ವಸ್ತುವಿದೆ. ಅದು ಕಬ್ಬಿನ ಸಕ್ಕರೆಯ ಎರಡು ಸಾವಿರ ಪಾಲು ಹೆಚ್ಚು ಸಿಹಿಯಾಗಿದೆ. ಅತ್ಯುಗ್ರ ವಾಸನೆಯುಳ್ಳದ್ದು ಕಸ್ತೂರಿ !

* * *

ಸಸ್ತನ ಪ್ರಾಣಿಗಳಲ್ಲಿ ತೀರ ಚಿಕ್ಕದಾದುದು ೨ ಇಂಚು ಉದ್ದವಾಗಿದೆ. ಬೆನ್ನೆಲಬುಳ್ಳ ಪ್ರಾಣಿಗಳಲ್ಲಿ ತೀರ ಚಿಕ್ಕದಾಗಿರುವ ಒಂದು ವಿಧದ ಮೀನು ೩/೮ ಇಂಚಿನಷ್ಟೇ ಉದ್ದವಾಗಿರುತ್ತದೆ !

ನಾನು—ನೀನು

★

೧

ನನ್ನದಿದು ಕೃತಿಯೆಂಬ
ಬರಿಹೆಮ್ಮೆ ಏಕೆ?
ನಿನ್ನವಿವು ಕೃತಿಯೆಲ್ಲ-
ವೆನಲಳುಕದೇಕೆ?

೨

ಕೃತಿಗೆ ಕೀರ್ತಿಯು ಬರಲು
ನನಗೇಕೆ ಹಿಗ್ಗು?
ಅದಕೆ ಅಪಯಶವಡಿಸೆ
ಮೇಣೇಕೆ ಸಿಗ್ಗು?

೩

ವಾಣಿ ಸಾಸಿರಗಳಲಿ
ನುಡಿಯುತಿಹೆ ನೀನು;
ಆ ಸಾಸಿರದೊಳೆನ್ನ-
ದೊಂದ್: ಆದರೇನು?

೪

ನುಡಿಯಿಸುವ ತಾಯ್ ಪ್ರೌಢೆ;
ನುಡಿವ ಶಿಶು ಮುಗ್ಧ!
ಮುಗ್ಧಶಿಶು ನುಡಿವಾಗ
ತೊದಲುವದೆ ಸಿದ್ಧ!

೫

ಶಿಶುವು ನುಡಿಯಲಿ ತೊದಲೆ,
ಅದು ತಾಯ ತಪ್ಪೆ?
ಶಿಶುವ ಲಲ್ಲೆಯು ಕೂಡ
ಹಿರಿಯರಿಗೆ ಒಪ್ಪೆ!

೬

ಬಂದಂತೆ ನುಡಿಯುವೆನು
ನೀ ನುಡಿಸುವನ್ನ:
ನಿನಗೆ ಬೇಸರವಾಗೆ,
ಸುಮ್ಮನಹೆನಮ್ಮ!

೭

ಭಾವ ಸ್ಫುರಿಸದೆ ಇರಲು,
ನಾ ಬರಿದೆ ಕೊಳಲು:
ನೀ ಬೆಸನನೀಯದಿರೆ,
ಕೃತಿಯಹುದೆ ಬಳಿಕೆ?

೮

ಕನ್ನಡದ ಅಳಿವುಳಿವು
ನಿನ್ನಿಚ್ಛೆಯಂತೆ!
ಎನ್ನಿಂದಲಪ್ಪುದದು
ಎಂಬುದದೆ ಭ್ರಾಂತಿ!

೯

ಕೃತಿಯು ಹಸನಿಲ್ಲೆಂದು
ನಗುವವರು ನಗಲಿ!
ನನ್ನ ನಿನ್ನಯ ಪ್ರೇಮ-
ವೆಮ್ಮೊಳಗೆ ಇರಲಿ!

೧೦

ನನ್ನ ವಾಣಿಯ ಹಿಂದೆ
ನಿನ್ನಮರ ವಾಣಿ
ನಾದಗೈವುದು ಅಲ್ತೆ
ಕವಿತೆಯ ಪ್ರಾಣ?

೧೧

ಆ ಪ್ರಾಣನಾಡಿಯನ-
ರಿವುದು ಸಹೃದಯತೆ;
ಅದನುಳಿದು ಇನ್ನೇಕೆ
ಒಣ ವಿಮರ್ಶೆ ವ್ಯಥೆ?

೧೨

ನಾ ನಿನ್ನ ಕೈಯೊಳಾ-
ಡುವ ಸೂತ್ರಬೊಂಬೆ!
ನೀ ಬೆಸಸಿದಂತೆಸಪೆ!
ಬೆಸನೇನನೆಂಬೆ?

— ಟಿ. ಎಸ್. ಶ್ರೀನಿವಾಸ ಮೂರ್ತಿ,

ಹಸುರು

ಹಸುರ ಹೊರೆತ್ತಿದರೆ ಹೊಸ ಹರುಷ
ಹೊಮ್ಮುವದು ಹೃತ್ತುಂಬ ತುಂಬಿ.
ನಾಲ್ಕು ಕಡೆ ನೋಡುತಿರೆ ಪ್ರತಿನಿಮಿಷ
ಉಬ್ಬುವುದು ಎದೆ, ಅದನೆ ನಂಬಿ.

ಸುಂದರ ವಸುಂಧರೆಯು ಸಿರಿಯೆಲ್ಲ
ಬಗೆಬಗೆಯ ಹಸುರಿನಲಿ ಬೆರೆತು
ನಲ್ಮೆಯನು ಸುರಿದಿಹುದು ಜಗಕೆಲ್ಲ
ಶಾಂತಿ, ಸೌಭಾಗ್ಯಗಳ ಹೊಸೆತು.

ಹಸುರ ಹೊರೆ ಹೊತ್ತಿರುವ ಬನಬಯಲ
ಮಡಿಲಿನಲಿ ಮಲಗಿಹುದು ಚೆಲುವು.
ಕಣ್ತುಂಬ ಕಂಡೊಡನೆ, ಹಸುರ ನೆಲ-
ದಿಂದೆದ್ದು ನಿಲ್ಲುವುದು ಸೊಗವು !

ವರುಷಗಳ ಹರುಷಸಿರಿ ಬೆಳೆದು
ಹಸುರಿನಾಳದಲಿ ಹುದುಗಿಹುದು.
ಭೂದೇವಿ ಮೆಚ್ಚಿರುವ ಹಸುರೆ !
ಮುದವ ನೆರೆಯುವುದು ನಿನ್ನ ಹೆಸರೆ!

—ಜಿ. ವರದರಾಜರಾವ್, ಬೆಂಗಳೂರು

ಸಂಜೆಯಾಗುವುದೆಂದಿಗೆ?

"ಒಂದು ಮುತ್ತು, ಕಂಡ ಹುಡುಗನೆ,
ಉರಿಬಿಸಿಲು; ದಣಿದಿರುವೆನು."—
ಈಗ ಆಗದು. ಸಂಜೆಗಿಲ್ಲಿಗೆ
ಬಾರ; ತಪ್ಪದೆ ಕೊಡುವೆನು—
ಮನ್ನಿಸುವುದೀಗೆನ್ನನು.

ಇಲ್ಲಿ ಮಲ್ಲಿಗೆಬನದೊಳಿರುವಳು
ನಲ್ಲೆ; ನಿಲ್ಲಿಸು ನುಡಿಯನು.
ಮೆಲ್ಲನಡಿಯಿಡು; ಬಲ್ಲೆನಡಿಯಿಡು
ಹುಲ್ಲೆಗಣ್ಣಿನ ಸಂಚನು;—
ಬಯಕೆ ಬೀರುವ ಮಿಂಚನು.

ಅಕ್ಕನೂರಿಗೆ ಅವಳ ಕಳುಹಿಸಿ
ಸಂಜೆಗಿಲ್ಲಿಗೆ ಬರುವೆನು.
ಸಿಳ್ಳು ಹಾಕುವೆನಿಲ್ಲಿ ನೆಳಲಲಿ
ನಿಂದು, ನಿನ್ನನೆ ಕರೆವೆನು.—
ತವಕದಲಿ ಕಾದಿರುವೆನು.


ಸಂಜೆಗರಳುವುದಿಲ್ಲಿ ಮಲ್ಲಿಗೆ;
ಮೇಲೆ ತಾರಗೆ ನಗುವುದು;
ಬೀಸುವುದು ತಂಬೆಲರು ಮೆಲ್ಲನೆ;
ಸಂತಸದ ಸಿರಿಗಂಪನು
ಒಲುಮೆ ಸಂಜೆಗೆ ಕೊಡುವುದು.

ಹೊತ್ತು ಮುಳುಗಲಿ, ಮುತ್ತನಿಡುವೆನು;
ಮತ್ತೆ ಬರುವೆಯ ಸಂಜೆಗೆ ?
ಒತ್ತಿ ಕರವನು, ಎತ್ತಿ ಶಿರವನು
ಮುತ್ತನಿಡುವೆನು ಕಣ್ಣಿಗೆ;
ತುಟಿಗೆ, ತಾವರೆಗೆನ್ನೆಗೆ.

—ಮತ್ತೆ ಬರುವೆಯ ಸಂಜೆಗೆ ?
"ಸಂಜೆಯಾಗುವುದೆಂದಿಗೆ ?"

—ಕೆ. ಎಸ್. ನರಸಿಂಹಸ್ವಾಮಿ, ಮಧುಗಿರಿ

ಗೌಡರ ಸೊಸಿ



ಕತೆಗಾರರು :
ಶ್ರೀ. ಬಸವರಾಜ ಕಟ್ಟೀಮನಿ

"ಈ ಜನುಮದಾಗs ಇವನ್ನ ಹಾಕ್ಕೊಂಡು ಮೆರಿಯೂ ದೈವ ಇಲ್ಲ ನನ್ನದು.... ಅದಕ್ಕ ಈ ಗಂಗವ್ವಗs ಅವನ್ನ ಕೊಟ್ಟು ಬಿಟ್ಟೇನ ! ಮುಂದಿನ ಜನುಮದಾಗಾದರೂ ಅವನ್ನು ಹಡಸಿ ಕೊಟ್ಟಾಳು !" ಅನ್ನನತ ಆ ಸರಾ ಹೊಳೀ ಒಳಗ ಹಾರಿಸಿಬಿಟ್ಟಳು. ಪಂಚೀಮ್ಯಾಲಿನ ದಾಳಿಮುಣ್ಣು ತಲೆಗೊತ್ತಿಕೊಂಡು ಹೊಳಿಗೆ ಕೈ ಜೋಡಿಸಿದಳು..... ... (ಪುಟ ೨೮೬)

ಊರಿಗೆ ಹತ್ತಿದ ಹೊಲದಾಗ ನಾನು, ಈಶ್ವರ ಕೂತಿದ್ದೆವು. ಕಬ್ಬು ಎತ್ತುಗೈಮುಟ ಬೆಳೆದಿತ್ತು. ಹತ್ತೀಲೆನs ಆಲಿ. ಕಬ್ಬು ಸುಲಿಸುಲೀತs ಈಶ್ವರ ಮಾತಿಗೆ ಮೊದಲು ಮಾಡಿದ. ಮತ್ಯಾವ ಮಾತು ?....ಗೌಡರ ಮಗ ಮಾದೇವನ ಪಿರೀತೀ ಕತಿ !

*　　　*　　　*

*　　　*　　　*

"ಮಾದೇವಂದು ಆವs ಆಗ ಮದಿವಿ ಆಗಿತ್ತು. ಹದಿನೆಂಟ ವರುಷದ ಹರೇದ ಹುಡುಗ ಮಾದೇವ. ಹಳ್ಳೀ ಊರಾಗ ಗೌಡರ ಮಗಾ ಅಂದರ ,ಏನ ಕೇಳೂದದ ಅಪ್ರಿ !....ಅದರಾಗ ಒಬ್ಬನs ಒಬ್ಬ ಪಿರೀತೀ ಮಗಾ ...ಅಂದಮ್ಯಾಲ ಮಾದೇವನ ಅರ್ಭಾಟ ಏನ ಹೇಳೂದು ! ಅವನ ಡೌಲs ಡೌಲು!....ಅವನ ಜೋಕೇ ಜೋಕು ! ... ಮಾದೇವ ಅಂತಾ ಚೆಲುವ ಚೆಂದ್ರಾಮ ಏನೂ ಇರದಿದ್ದರೂ ಕರೀ ಮೋರೆಯವನಂತೂ ಅಲ್ಲ....ಅದೇ ಅಶ್ಚರ್ಯ ಅನ್ನಿಸಿತ್ತು ಎಲ್ಲರಿಗೂ! ಅಪ್ಪ-ಅಮ್ಮ ಇಬ್ಬರೂ ಕಪ್ಪು ಬಣ್ಣದವರಿರುವಾಗ ಮಗಾ ಹ್ಯಾಗ ಕೆಂಪಾದ ಅಂತ !—ಅವೆಲ್ಲಾ ನಿಜಾ....ಆದರs ಏನೊ ! ಏನೊ ! ಮಾದೇವ ಕೆಂಪಗಾಗಿ ಬಂದ ! ದೊಡ್ಡವನಾದ ಮ್ಯಾಲ ಅವಗೂ ತಿಳಿದಿರಬೇಕು, ಬಣ್ಣದ ಬೆಲಿ ಎಷ್ಟ ಅಂತ !....

ನಾವೆಲ್ಲಾ ಸಣ್ಣವರಿದ್ದಾಗಿಂದಾ ಗೆಳೇರು. ಗೌಡರ ಮಗ....ಮುಂದ ಊರಿಗಿ 'ಗೌಡ' ಆಗುವವ ಅಂತ ಎಲ್ಲಾರೂ ಒಂದುತರದ ಮಾನ ಕೊಡುತಿದ್ದಿವಿ ಮಾದೇವಗ. ಆಗಿನಿಂದ ಮಾದೇವನs ನಮಗ ಮುಖ್ಯ ಆಗುತಿದ್ದ. ಆಟದಾಗೂ ಅವನs— ಎಲ್ಲಾದರಾಗೂ ಅವನs ಮೊದಲು !— ಹೊಳಿಗಿ ಈಜಾಡಲಿಕ್ಕಂತ ಹೋದರ— ಸಿಕ್ಕಾಪಟ್ಟೆ ಜಿಗಿದಾಡೂದು.... ಭೋರಂತ ಹರಿಯೂ ಹೊಳೀ ಇದುರಾಗಿ ಸರಾಸರಾ ಈಜೂದು ಇದೆಲ್ಲಾ ಮಾದೇವಗ— ಆಟದ ಹಾಗಾಗಿದ್ದುವು.

ನಾವೆಲ್ಲಾ ಆರೇಳು ವರುಷದವರಿದ್ದಾಗಿನ ಮಾತು.

> 'ಕಾಕಾ'ನ ಮಗಳ ಮ್ಯಾಲ ಪ್ರೀತಿ!.... ಅದೇನೂ ತಪ್ಪಲ್ಲ.... ಯಾಕಂದರ ಪ್ರೀತಿ ಹ್ಯಾಗ ಹುಟ್ಟತದ ಗೊತ್ತಾಗೋದಿಲ್ಲ. ಯಾರಿಗೂ ಹೇಳಾಕ ಬರೋ ಹಾಗಿಲ್ಲ. ಅದಕ್ಕ ಜಾತಿ ಗೊತ್ತಾಗೋದಿಲ್ಲ. ರೀತಿ ಗೊತ್ತಾಗೋದಿಲ್ಲ.......ನೀತಿಯಂತೂ ಮೊದಲs .. .. ತಿಳಿಯೋದಿಲ್ಲ! .. ..
>
> **" ಗೆಣಿಯಗ ಗೆಣತಿ ಕಾಕಾನ ಮಗಳು ಅವನ ಹೆಂಡ್ತಿ ಹ್ಯಾಗಾಗುವಳು ???"**

ಹಗಲು ಹನ್ನೆರಡು ತಾಸೂ ಬಸವಣ್ಣನ ಗುಡೀಲಿ ಆಡುತಾ ಕೂತಿರೂದೊಂದೇ ಆಗ ನಮ್ಮ ಕೆಲಸವಾಗಿತ್ತು.

ಹೆಣ್ಣೂ—ಗಂಡೂ ಹಿಡಿದು ಹತ್ತು ಹನ್ನೊಂದು ಹುಡುಗರು ! ಅದರಾಗ ಮಾದೇವ ಒಬ್ಬ ! ಬೆಳಗಾವಿ ಪ್ಯಾಟ್ಯಾಗಿನ ರೇಸಿಮೀ ಅರಿವಿಯಿಂದ ಹೊಲಿಸಿದ ಅಂಗಿ ! ಕುತನೀ ಚಣ್ಣ....ಕಾಲಾಗ ಥಳ ಥಳ ಹೊಳಿಯೂ ಕಾಲಗಡಗ !.... ತಲೀಮ್ಯಾಲ ಜರದ ಟೊಪಿಗಿ....ಇವನ್ನೆಲ್ಲಾ ಹಾಕಿಕೊಂಡು ಅತ್ತಿಂದಿತ್ತ....ಇತ್ತಿಂದತ್ತ ಒಽಳೆ ಜೋಕಿನಿಂದ ಓಡಾಡುತಿರೂ ಮಾದೇವನ್ನ ಯಾರು ಬೇಕಾದರೂ ತಟ್ಟನಽ ಹುಡುಕಿ ತಗೀಬಹುದಾಗಿತ್ತು....ಮತ್ತ....ಅವನ ಹತ್ತಿಲೇ ಸುಳಿದಾಡೂ ಗಂಗೀನ್ನ ಕಂಡು ಅನ್ನಬಹುದಾಗಿತ್ತು,—

"ಆಹ್ಹಾ ! ಒಽಳೆ ಜೊತೀ ಕೂಡ್ಯೆತೆಲ್ಲಾ ಇಬ್ಬರದೂಽಽ" ಅಂತ !

ಅವನ ಜೊತೀ ಹುಡುಗಿ ಆಗೂವಷ್ಟು ಯೋಗ್ಯತಾನೂ ಇತ್ತಂತಽ ಹೇಳಬೇಕು ಗಂಗಮ್ಮನದು ! ನೂರರಾಗ ಒಂದ ಹೆಣ್ಣು ಹುಡುಕಿದರೂ ಸಿಗುತಿತ್ತೊ ಇಲ್ಲೊ ಅಂತಾದು ! ಅದೊಂದಽ ಊರಾಗ ಯಾಕ....ಇನ್ನ ಇಪ್ಪತ್ತ ಊರಾಗ ಹುಡುಕಿದರೂ ಸಿಗೂದು ಕಷ್ಟ ಅಂತಽ ಹೇಳಬೇಕು ! ಆ ಗುಲಾಬೀ ಬಣ್ಣದ ಥಳಥಳ ಹೊಳಿಯೂ ಗಲ್ಲ....ದೊಡ್ಡ ದೊಡ್ಡ ನೀರಲಬಣ್ಣದ ಕಣ್ಣು ! ಸರಳ ಸಂಪಿಗೀತೆನೀ ಅಂತಾ ಮೂಗು ! ಅವೆಲ್ಲಾಕ್ಕೂ ಒಪ್ಪ ಹಾಕೂ ಹಾಗಿದ್ದ ಆಕೀ ಮೈಮಾಟ ! ಸಾವಿರ ಜನದಾಗಽ ಇರಲಿ....ಗಂಗಿ ಈಕಿ ಅಂತ ಒಮ್ಮಿಗಿಲೆ ಗುರುತು ಹಿಡೀಬಹುದಾಗಿತ್ತು !

ಅದಽ ಆಗ ಐದುವರುಷದ ಎಳೀಹುಡುಗಿ ಗಂಗಿ ! ಆಗಽ ಅಷ್ಟೊಂದ ಚೆಲುವಿಚೆನ್ನಿ ಆಗಿದ್ದಳು. ಹಟಾಹಟಾ ಮಾಡಿ ಬೆಳಗಾವಿಯಿಂದ ತರಿಸಿದ ಸಣ್ಣ ತಿಳೀನೀಲೀ ದಟ್ಟಿ ಉಟುಕೊಂಡು ರೇಶಿಮಿಾ ಖಣದ ಕುಬಸಾ ತೊಟ್ಕೊಂಡು—ಕಾಲಾಗಿನ ಬೆಳ್ಳೀ ಸರಪಳಿ ಝುಣಝುಣಗುಡುತಿರುವಾಗ ಗಂಗಿ ಅಲ್ಲಲ್ಲಿ ಓಡಾಡೂದು ನೋಡಿ ಎಲ್ಲಿ ತನ್ನ ಮಗಳಿಗಿ ಕಣ್ಣ ಹತ್ತೀತೊ ಅಂತಾ ಅಂಜುತಿದ್ದಳು ಗೌರಮ್ಮ.

ಆಗಿಂದನಽ ಮಾದೇವಂದೂ ಆಕೀದೂ ಒಽಳೆ ಪಿರೀತಿ ಕೂಡಿತ್ತು. ಗಂಗಿಯ ಅಪ್ಪ ಮಾತಿನಾಗ ಮಾದೇವಗ "ಕಾಕಾ" ಆಗಬೇಕು.... ಆದರೇನಾತು !.... ಅವರಿಬ್ಬರ ಪಿರೀತೀ ನೋಡಿ ಎಲ್ಲಾರೂ ನಗೆಮಾತಿನಾಗ ಅನ್ನುವವರಽಽ.... "ಒಽಳೆ ಕೂಡೇದಲ್ಲ ಗಂಡಾ-ಹೆಣ್ತೀ ಜೊತಿ—" ಅಂತ !

ಎಲ್ಲೆಲ್ಲಾ ಗಂಗಮ್ಮ ಮಾದೇವನ ಜೊತೀಲೇ. ಇರಾಕಿ.

ಆಡೂವಾಗಂತೂ ಇಬ್ಬರೂ ಕೂಡೇ ಇರ್ತಿದ್ರು ಊಟ ಮಾಡುವಾಗ ಕೂಡಾ ಇಬ್ಬರೂ ಕೂಡೇ ತಿದ್ರು. ಆಟಾ ಮುಗಿಸಿ ಮಾದೇವ ಮನೀಗೆ ಬಿಟ್ಗೊ ಇಲ್ಲೊ.... ಗಂಗೀನೂ ನಡದ ಹಿಂದಿಂದ !....

ಗೌಡತೀನೂ ಸಣ್ಣ ಮಕ್ಕಳಂದರ ಮಾಡುವಾಕಿ........ಅದರಾಗಽ ಹೆಣ್ಣ ಕಂಡರ ಏನೋ ಮಾಯಾ ಬಂದು ಮಾದೇವನ ಬೆನ್ನ ಮ್ಯಾಲಿನ ಎರಡು ಹೆಣ್ಣು ಹುಟ್ಟಿದ ಕೂಡಲೆ—'ಹರಾ' ಅಂದದ್ದು ಣೇನೊ ಅಪಕ್ಕ !—ಗಂಗಿ ತಮ್ಮ ಮನೀಗಿ ಎತ್ತಿ ಲಟಲಟ ಮುದ್ದು ಕೊಡುತಿದ್ಳು. ಯಾಗಿದ್ದರ ಒಳಗ ಒಯ್ದು ಬಿಸಿನೀರಿನಿಂ ಸೀರೀಸೆರಗಿನಿಂದ ಒರೆಸಿ ಹಸನು ಮಾಡು

ಮಾದೇವನ ಸಂಗಡ ಆಕಿ ಬಂದಾಗೆಲ್ಲಾ ಕೂಡಿಯೇ ಒಂದೇ ತಾಟಿನೊಳಗ ಊಟಕ್ಕ ಅವರಿಬ್ಬರೂ ಒಬ್ಬರನ್ನೊಬ್ಬರು ಕಡೆಗಣ್ಣಿಂದ ಒಂದೊಂದಽ ತುತ್ತು ಬಾಯಾಗ ಇಟ್ಟುಕೊಳ್ಳು ತಿಗೆ ಒಽಳೆ ಮೋಜನ್ನಿಸುತಿತ್ತು. ಆಕೀ ಏನೇನೋ ವಿಚಾರ ಮೂಡಿ ಮಾಯಾಗುತ್ತಿದ್ದ

ನಾವು ದೊಡ್ಡವರಾದಂಗ....ಆದಂಗ.... ಬದಲಾದಂಗ ಕಾಣಿಸುತಿತ್ತು. ಮೊದಲಿನ ಸಂಗಡ ಆಡಾಕ ಬರೂದಂತೂ ಆಕಿ ಬಿಟ್ಟಿ ಆಕಿಗೀಗ ಮನೆಯಲ್ಲಿ ಎಷ್ಟೋ ಕೆಲಸಾ ತ್ತಿತ್ತು. ಹೊತ್ತು ಹೊರಡೂದಽ ತಡ....ಹೋ ನೀರ ಹೊತ್ತರೂವಾಕಿ ಗಂಗಿ....ಅಮ್ಮ ಮಾಡಿ ಕಟಕೊಂಡು ಹೊಲಕ್ಕ 'ನ್ಯಾರೀ' ಒಯ್ಯುವಾ ಅಲ್ಲಿ ಹೊಲದಾಗ ಕಸಾ ತೆಗೆಯೋದು........ ಯೋದು.... ಇನ್ನೂ ಏನೇನೊ ಕೆಲಸಾ ಗುತಿತ್ತು....ಮಧ್ಯಾನ್ಹದ ಮಟಮಟ ಬಿಸಲಾಗ ಅರವಿ ಹೊತ್ತುಕೊಂಡು ಹೊಳೀಗಿ ಒಗ್ಯಾಕ ಬೇಕಾಗುತಿತ್ತು. ಇನ್ನೂ ಏನೇನೋ ಕೆಲಸಾ ದ್ದುವು ಗಂಗಿಗೆ !....ಇಂತಾದರಾಗ ಆಕಿ ಬೇಕೇನು........ಮಾಟಾ ಮಾಡುತಾ ಕೂತಿರ

ನಾವೂ ಆಗ ದೊಡ್ಡವರಾಗಿದ್ದಿವಿ. ಕಾಯಾಕ ಹೋಗಬೇಕಾಗುತಿತ್ತು.... ಹಾಗ ಹೊಟ್ಟೀ ಹೊಡೀ ಬೇಕಾಗುತಿತ್ತು.

ಹೊಲದಾಗ ಕೆಲಸಾ ಮಾಡಬೇಕಾಗುತಿತ್ತು....ಮಾದೇವ ನೆನ್ನಬ್ಬನ್ನ ಬಿಟ್ಟರ ಎಲ್ಲರಿಗೂ ಒಂದಿಲ್ಲೊಂದ ಕೆಲಸ ಕಟ್ಟಿಟ್ಟಂಗs ಇತ್ತು. ಮಾದೇವ ಏನು....ಗೌಡರ ಮಗ....ತನ್ನ ಪಾಲಿನ ಕೆಲಸಾ ಎಲ್ಲಾ ಹುಟ್ಟುವಾಗs ಆಳುಗಳ ಮ್ಯಾಲ ಹೊರಿಸಿ ಬಂದಿದ್ದ! ಅವಗೆಲ್ಲೀ ಕೆಲಸ! ಸುಖವಾಗಿ ಊಟಾ ಮಾಡಿ ತಿರುಗಾಡೂದೊಂದs ಆಗವನ ಕೆಲಸಾಗಿತ್ತು!

ಹದಿನೈದು ಹದಿನೈದೂವರಿ ವರುಷದವ ಇರಬಹುದು ಆಗ ಮಾದೇವ!—ತಿಂದುಂಡು ಮೈ ಬೆಳೆಸಿದ್ದಂತ ಬೇರೆ ಹೇಳಬೇಕs.... ಬರೀ ಹೊಟ್ಟೀ ಉಬ್ಬಿಸಿಕೊಂಡಿರಲಿಲ್ಲ ಈಗಿನ ಪಟ್ಟಣದವರ್ಹಾಂಗ!....ವ್ಯಾಯಾಮ ಮಾಡಿಮಾಡಿ, ಕುಸ್ತೀ ಆಡಿಆಡಿ ಜಟ್ಟೀ ಹಾಂಗ ಆಗಿದ್ದ! ಇನ್ನಾವು ದಾವರೂ ಊರಿಗೆ ಜಾತ್ರಿಗಂತ ಹೋದರ ಅಲ್ಲಿ ಕುಸ್ತೀ ಹಿಡಿಯೂ ಧೈರ್ಯ ಮಾಡುವವ ಮಾದೇವ ಒಬ್ಬನs! ಹಿಡಿದಾಗಂತೂ ಬೀಳುವ ಮಾತs ಇಲ್ಲ! ಹತ್ತು ಹನ್ನೊಂದು ಬಾರಿ ಹಿಡಿದರ ಯಾವಾಗಲೂ ಗೆದ್ದs ಬರೂದು!—ಒಮ್ಮೆ ಇವನ್ನ ನೋಡಿದ ಕೂಡಲೆ ಇವನ ಇದಿರುಹುದ್ದರಿ ಹೆದರಿ—ಒಲ್ಲೆಪ್ಪಾ—ನಾ ಒಲ್ಲೆ—ಅಂತ ಒಂದೇ ಓಟದಾಗ ಓಡಿ ಹೋಗಿ ಬಿಟ್ಟಿದ್ದ. ಆದರಿಂದಂತೂ ನಮ್ಮೂರಾಗ ಮಾದೇವನ ತೂಕ ಇನ್ನೂ ಹೆಚ್ಚಾಯಿತು.

ಆ ವರುಷ ಉಳಿವೀ ಜಾತ್ರಿಗಂತ ನಮ್ಮೂರಾಗಿನ ನಾಲ್ಕೈದು ಬಂಡಿ ಹೋಗೂದು ಗೊತ್ತಾಗಿತ್ತು....ಗೌಡರೂ ಹೊರಟರಂತ ಬೇರೆ ಹೇಳಾಕಬೇಕss! ಒಂದು ಬಂಡಿ ಅದೂ ಇದೂ ಸಾಮಾನು....ಇನ್ನೊಂದು ಬಂಡಿ ಮನಿಯವರೆಲ್ಲಾ ಕೂಡಾಕ....ಅಂತೂ ಅವರವೇ ಎರಡು ಬಂಡಿ ತಯಾರಾದುವು....ಮಾದೇವನ ಹುರುಪs ಹುರುಪು! ಅವ ಎರಡು ಮೂರುದಿನ ಹಾಗs ಒಂದsಸಮನs ಓಡಾಡುತಿದ್ದ. ಬರುವಾಗ ದೊಡ್ಡದೊಡ್ಡವು ಜೊತೆ ಹೋರೀ ತರುತೀನಿ....ಅವನ್ನ ತರುತೀನಿ ಇದನ್ನ ತರುತೀನಿ....ಅಂತ ಎಲ್ಲಾರ ಮುಂದ ಹೇಳೂದs ಹೇಳೂದು!....

ರಾತ್ರಿ ಮಲಗಿ ಎದ್ದ ಬಳಿಕ ಬೆಳಗ್ಗೆ ನಾಲ್ಕು ತಾಸಿರುತ ಬಂಡೀ ಹೂಡಬೇಕಂತ ಮಾಡಿದ್ದರು. ಆ ದಿನ ಮಾದೇವನ ಆರ್ಭಾಟ ಹೇಳಾಕs ಬಾರದು. ಉಬ್ಬಿದ ಎದೀ ಎಲ್ಲಾ ಕಾಣಿಸೂವಂತಾ ತೆಳ್ಳನ್ನ ರೇಶಿಮೀ ಅಂಗೀ....ಸಣ್ಣಂಚಿನ ತೆಳ್ಳನ್ನ ಧೋತರ....ನಾಜೂಕಾದ ಜರತಾರೀ ರುಮಾಲ ಉಟುಕೊಂಡು-ತೊಟುಕೊಂಡು, ಕಾಲಾಗಿನ ಜನಾರೀ ಮೆಟ್ಟು ಜರಗುಡುತಿರುವಾಗ ಮಾದೇವ ಹಕ್ಕಿ ಹಾರಿದಾಂಗ ಹಾರಾಡತಿದ್ದ.

ಮಧ್ಯಾಹ್ನದ ಮಟಮಟ ಬಿಸಿಲು....ಎಂದೂ ಅಷ್ಟ ಬಿಸಿಲಾಗ ಹೊಳೀಕಡೆ ಹೋಗದವ ಅಂದು ಮತ್ತ ಮತ್ತ ಅಲ್ಲೇ ಸುಳದಾಡುತ್ತಿದ್ದ ಮಾದೇವ.... ಬರತಿದ್ದ....ಹೊಳೀಕಡೆ ಮೆಲ್ಲಕs ಇಣುಕಿ ನೋಡುತಿದ್ದ....ಸರ್‌ರನs ಸಾಗಿ ಬಿಡುತಿದ್ದ....ಅಲ್ಲೇ ದನದ ಮೈ ತೊಳೀತಿದ್ದ ನನಗ ಅದರ ಅರ್ಥ ಸ್ವಲ್ಪ ಸ್ವಲ್ಪ ತಿಳದಹಾಗಾಗಿತ್ತು. ಅವ ನಾಲ್ಕೈದು ಸರತಿ ಅಲ್ಲಿ ಬಂದ ಬಂದ ಹೋದ ಬಳಿಕಂತೂ ಸಂಶಯನs ಉಳೀಲಿಲ್ಲ. ಮೋಜು ಮಾಡಬೇಕಂತ ನಾ ಅವನ್ನ ಕೂಗಿ ಕರಿದೆ.

"ಏಯ್ ಮಾದೇವ.ss"

ಅವ ಥಟ್ಟನs ಹೊರಳಿ ನಿಂತ.

"ಹೀಗ್ಯಾಕ ಮಾಡುತೀಯೊ?— ಬರುತೀ....ಹಾಗs ಇಣುಕಿನೋಡುತೀ.... ಹಕ್ಕಿ ಹಾರಿದ ಹಾಗ ಹಾರಿ ಹೋಗುತೀ....ಬಾರೋ ನಿನ್ನ ಮಂಜಾಳ ಹೋಗಾss! ಹಳೀ ಗೆಳೆಯನ್ನ ಮರೆತ ಬಿಟ್ಟಿಯೇನೋ ಇಷ್ಟರಾಗss!"

ಮಾದೇವ ಮನಸಿನಲ್ಲೇ ನಾಚಿಕೊಂಡಿರಬೇಕು!— ಅವ ಮೆಲ್ಲಕs ನನ್ನ ಹತ್ತೀಲಿ ಬಂದ. ದಂಡೀಮ್ಯಾಲಿದ್ದ ದೊಡ್ಡ ಕಲ್ಲಮ್ಯಾಲ ಕೂಡುತಾ ಮಾತಾಡಿದ.

"ದನಾ ಮೈತೊಳೀತೀಯಾ ಈಶ್ವರಾ?"

—ನನಗ ಜೊಕ್ಕನs ನಗೀ ಬಂತು! ತಡಕೊಳ್ಳಾಕs ಆಗಲಿಲ್ಲ....ನೋಡೂದು ನೋಡಿಯೂ— 'ದನಾ ತೊಳೀ ತೀಯಾ?' ಅಂತ ಕೇಳೂದರಾಗs ಅವನ ಮನಸ್ಸು ಎಲ್ಲೆಲ್ಲಿ ಹಾರಾಡತದಂಬೂದು ತಿಳಿಯೂ ಹಾಗಿತ್ತು. ನನಗ ಜೋರಾಗಿ ನಗೀ ಬಂದದ್ದೂ ಅದಕ್ಕs!

ಮಾದೇವ ಕಕ್ಕಬಿಕ್ಕಿಯಾಗಿ ನನ್ನ ಕಡೆ ನೋಡಿದ. ಆ ನೋಟದಾಗ ದೈನ್ಯ ತುಂಬಿ ತುಳುಕುತಿತ್ತು.

ಧೋತರ ಮೇಲೇರಿಸಿ ನಡುನೀರಾಗ ನಿಂತಿದ್ದ ನನ್ನ ಹತ್ತೀಲಿ ಬಂದ. ನನ್ನ ಕೈ ಗಟ್ಟಿಯಾಗಿ ಹಿಡಿದು ಹೇಳ ತೊಡಗಿದ—ಅವನ ಧನಿಯಾಗ ನಡುಕ ಹುಟ್ಟಿದ ಹಾಗಿತ್ತು.

"ಈಶ್ವರಾ....ಈಶ್ವರಾ....ನೀ:::"

"ಹೇಳೋ....ಏನದು ಹೇಳು...." ಸ್ವಲ್ಪ ನಗನಗತ ನಾ ಕೇಳಿದೆ.

ಮಾದೇವ ಮೊದಲುಮಾಡಿದ.

"ಇಲ್ಲಿ ನೋಡು ಈಶ್ವರಾ....ನೀ ಒಬ್ಬನs ನನಗ ಪಿರೀತೀ ಗೆಳೆಯ....ಎಲ್ಲಾ ಬಿಚ್ಚಿ ಬಿಡುತೀನಿ ನಿನ್ನ ಮುಂದ. ನಿನಗ ಕಣ್ಣಿದ್ದರ....ಕಿವಿ ಇದ್ದರ ಹೇಳೂದನ್ನ ಚೆನ್ನಾಗಿ ಕೇಳು.

ನನ್ನ ಎದೀ ಒಡೆದು ತೋರಿಸುತೀನಿ...ಅದನ್ನ ಚೆನ್ನಾಗಿ ನೋಡು...."

ಸ್ವಲ್ಪ ತಡೆದು ನಾಲಗೀ ಕಚ್ಚಿ ಮಾದೇವ ಮುಂದ ಹೇಳತೊಡಗಿದ.

"ಸಣ್ಣಾಗಿದ್ದಾಗಿಂದಾ ನಾ ಗಂಗೀನ್ನ ಮೆಚ್ಚಿದೀನಿ ಅಂಬೂದು ನಿನಗ ಗೊತ್ತs ಅದ. ಆಕಿ ನನಗ 'ಕಾಕಾನ ಮಗಳು' 'ತಂಗಿ' ಆಗುತಾಳಂಬೂದೂ ನನಗ ಪೂರ್ತಿ ಯಾಗಿ ತಿಳಿದದ....ಆದರ ಏನ ಮಾಡೂದು....ಮನಸಿ ಗೆಷ್ಟs ಹೇಳಿದರೂ ಅದು ಕೇಳದಾಗೇದs !—ಅದು ಒಂದ ಮಾತಿನ ಹೊರತು ಮತ್ತೇನನ್ನೂ ಬೇಡುವುದಿಲ್ಲ....ಅದರ ಕಿರಿಕಿರಿ ಒಂದsss !—"ಗಂಗಿ ಬೇಕು ನನಗ ಗಂಗಿ-ಅಂತ!"

ಇಷ್ಟು ಹೇಳಿ ಮಾದೇವ ಯಾಕೋ ತಟ್ಟನೆ ತಡೆದು ಕೊಂಡ. ಬೆದರಿದವನಂಗ ಅತ್ತಿತ್ತ ಹೊರಳಿ ನೋಡಿದ. ನೋಡಿದರsss ಗಂಗಮ್ಮನೇ ಬರುತಿದ್ದಳು....

ಅರ್ಧಾಕ್ಕs ಸೆರಗು ಹಾಯ್ದು ತಲೀಮ್ಯಾಲ ಅರಿವೀಗಂಟು ಇಟ್ಟುಕೊಂಡು ಒಂದೊಂದs ಹೆಜ್ಜಿ ಇಡಲೋ ಬೇಡೊ ಅಂತ ಎತ್ತಿ ಎತ್ತಿ ಇಡುತಾ ಆಕಿ ನಮ್ಮನ್ನ ನಿಟ್ಟಿಸುತಾ ಬರುತಿದ್ದು. ಎಲ್ಲಿ ಮಾದೇವನ ಮಾತೆಲ್ಲ ಆವಳಿಗೆ ಕೇಳಿ ಸಿತೊ ಅಂತ ನಾ ಮನದಾಗs ಬೆದರಿದೆ. ಅವನ ಕಡೆಯು ಶಬ್ದ...."ಗಂಗಿ ಬೇಕು ನನಗ ಗಂಗಿ...." ಇದನ್ನ ಆಕಿ ಎಲ್ಲಾರೇ ಕೇಳಿದ್ದರsss ?

ಅಷ್ಟರಾಗs ಆಕಿ ಬಂದು ಅರಿವೀಗಂಟು ನೀರಲ್ಲೊಗೆ ದಳು. ಬಗ್ಗಿ ಒಂದೊಂದs ಅರಿವೀ ತೆಗೆದು ತೊಯ್ಸಿಸಿ ತೊಯ್ಸಿಸಿ ಕಲ್ಲಿನ ಮೇಲಿಡತೊಡಗಿದಳು.

ಏನ ಮಾಡೂದು ಗೊತ್ತಾಗದs ನಾ ಸುಮ್ಮನs ಆಕೆ ಯನ್ನ ನೋಡುತಾ ನಿಂತಿದ್ದೆ. ಅಷ್ಟರಾಗ ಮಾದೇವ ನನ್ನ ಬಲತೋಳು ಗಟ್ಟಿಯಾಗಿ ಚಿವುಟಿ ಕಣ್ಣಿನಿಂದ ಸನ್ನೆಮಾಡಿ ಹೇಳಿದ....ನಾ ತಟ್ಟನs ದನಾ ಹೊಡೆದುಕೊಂಡು ಹೊಳೀ ಬಿಟ್ಟೆ. ಅಲ್ಲೇ ಬದಿಯಲ್ಲೇ ನಮ್ಮ ತೋಟ....ದನಾ ಎಲ್ಲಾ ಅಲ್ಲಿ ಬಿಟ್ಟು ಸಾವಕಾಶ ಒಂದು ಅರಳೀಗಿಡದ ಬೊಡ್ಡಿಗೆ ಮೈಮರೆಮಾಡಿಕೊಂಡು ನಿಂತೆ. ಹೊಳೀ ದಂಡೀ ಮ್ಯಾಲ ನಡೆಯೂದೆಲ್ಲಾ ಅಲ್ಲಿಂದ ಅಸ್ಪೂಬಿಡದs ಕಾಣಿಸೂಹಾಗಿತ್ತು.

ಅಷ್ಟರಾಗs ಮಾದೇವ ಗಂಗಮ್ಮನ ಹತ್ತೀಲಿ ಹತ್ತೀಲಿ ಬಂದ. ಆಕಿಯೂ ಅರವೀ ಇಡುತ್ತಿರುವಾಗs ಅವನ ಕಡೆ ಕಡೆಗಣ್ಣಿಂದ ನೋಡುತಿದ್ದು. ಇಬ್ಬರಿಗೂ ಮಾತಾಡ ಬೇಕಂತ ಮನಸ್ಸು....ಆದರ ಇಬ್ಬರೂ ಮಂತ್ರದಿಂದ ಮುಗುದಾದವರ ಹಾಗ ಸುಮ್ಮನs ನಿಂತಿದ್ದು ಒಳಿ ಮೋಜಿನದಾಗಿತ್ತು !

ಕೊನಿಗೆ ಮಾದೇವನs ಮಾತಿಗಿ ಮೊದ..

"ಗಂಗಾ."

ಗಂಗಮ್ಮ ತಟ್ಟನs ಮಾರೀ ಎತ್ತಿ ಅವನ್ನ.. ಸ್ವಲ್ಪ ಹೊತ್ತು ಸುಮ್ಮಗಿದ್ದು ಸಾವಕಾಶ ಕೇ..

"ಏನು ?"

ಆಕೀ ಮಾರೀಮ್ಯಾಲ ಅಂಜಿಕಿ ತುಂ.. ಯಾರಾದರೂ ಹತ್ತಿರ ಇದ್ದಾರೋ ಅಂತ .. ಮತ್ತೆಮತ್ತೆ ನಾಲ್ಕೂ ಕಡೆ ಹೊರಳುತಿದ್ದ.. ಇಲ್ಲಂತ ಗೊತ್ತಾದರೂ ಇನ್ನೂ ಸಂಶಯ .. ಆಕಿಗೆ....ಗಟ್ಟಿಸಿ ಕೂಡ ಮಾತಾಡದs ಸಣ್ಣ .. ಆಕಿ ಕೇಳಿದಳು.

"ಏನು ಮಾಧೂ....?"

ಇಷ್ಟೊತ್ತಿನ ಹುರುಪೆಲ್ಲಾ ಎಲ್ಲಿ.. ಹಾ.. ಮಾದೇವನ ಬಾಯಿಂದ ಒಂದೂ ಮಾತು .. ಅವ ಮನಸಿನಾಗ ಏನು ಎಣಿಸುತ್ತಿದ್ದನೋ .. ಹೊತ್ತಿನ ಮ್ಯಾಲ ಮೆಲ್ಲಕs ಹೇಳಿದ.

"ನಿನಗೊಂದ ಮಾತು ಹೇಳಬೇಕಂತ ಬಂ..

ಕಲ್ಲಿನ ಮ್ಯಾಲ ಎಡಗೈ ಊರಿ ಕುಳಿತು ಬಲ.. ಗಲ್ಲಕ್ಕೆ ಆನಿಸಿ ಕೇಳಿದಳು ಗಂಗಮ್ಮ.

"ಏನದು ಹೇಳೋದುsss ?"

"ನಿನಗ ಮೊನ್ನೆ ನಾ ಹೇಳಿದ್ದೆನಲ್ಲ. ಅದ.. ದsನs ?"

"ಇರದs ಏನು ?" ಗಲ್ಲದಾಗs ನಗತ.. ಗಂಗಮ್ಮ.

"ನಾಳೆ ಬೆಳಗಿನಾಗ ನಾವೆಲ್ಲಾ ಜಾತ್ರಿ.. ತೀವಿ. ನಿನ್ನ ಬಿಟ್ಟು ಹೋಗಬೇಕಂದರ ಜೀವ.. ಬಂದsದ—ಗಂಗೂ....ನಿಜಾ ಅಂದರ ನೀವು .. ಜಾತ್ರಿಗೆ ?"

ಸರ್‌ರನs ಗಂಗಮ್ಮನ ಮಾರೀ ಮ್ಯಾಲಿನ .. ಹೋತು. ಆಕಿ ಇಳಿದ ಧನಿಯಲ್ಲಿ ಹೇಳಿದಳು

"ನಾವೆಲ್ಲಿ ಬರುತೀವಿ ಮಾಧೂ....ನಾವೇನು .. ಗೌಡರsss ?— ನಮಗೇನು ನಿಮ್ಮ ಹಾ.. ಅವsನs—ತೋಟ ಅವsನs—ಏನಿವೆ.. ಹೊಲಾ ಮಾಡಿ ಮೈಮ್ಯಾಲ ಹಾಕ್ಕೊಂಡು.. ರೂಪಾಯಿ ಸಾಲಾಮಾಡಿ ಅತಕೋತ ..

ವರುಷಾವರುಷಾ ಬಡ್ಡಿ ಕೊಡೂದು ಕಷ್ಟಾಗೇದ....ಬಡ್ಡೀ ಕೊಡದಿದ್ದರ ಬಿಡುತಾನು ನಿಮ್ಮಪ್ಪ ?—ಬಡ್ಡಿಗಿ ಬಡ್ಡೀ ಬರಿಸಿಕೋತಾನ. ಇಂತಾದರಾಗ ದೇವರೇನು ದಿಂಡರೇನು.... ಎಲ್ಲಾ ಹಾಳುಹಾಳು!....ಹೊಟ್ಟಿತುಂಬದ ಹೊತ್ತು ಇದು.... ಇಂತಾದರಾಗ ಜಾತ್ರಿಗಿ ಏನು ಹೋಗೂದು....ಸುಡಗಾಡ ಗಟ್ಟಿಗೆ ಹೋಗೋದು !....'ಅದೂ ಕೂಡಾ ದೈವದಾಗಿಲ್ಲ' ಅಂತ ಅಳತಿರತಾಳು ಅಮ್ಮ !—"

ಮಾತು ಮುಗೀತಿದ್ದಾಗಲೇ ಗಂಗಮ್ಮನ ಕಣ್ಣಿಂದ ನೀರು ಸುರಿಯಲು ಮೊದಲಾಯಿತು.

ಮಾದೇವ ಇಷ್ಟೊತ್ತು ಸುಮ್ಮಗ ನಿಂತಿದ್ದ. ಆದರ ಆಕಿ ಅಳೂದು ನೋಡಿ ಅವಗ ತಡಿಯಲಾಗಲಿಲ್ಲ. ಅವ ತಟ್ಟನ ಮುಂದಾಗಿ ಆಕೀನ್ನ ಕೈಹಿಡಿದು ಎತ್ತಿದ. ತನ್ನ ರೇಶಿಮಿ ರುಮಾಲಿನ ಸೆರಗಿನಿಂದ ಆಕೀ ಕಣ್ಣೀರು ಒರಿಸಿದ. ಸಂತ ವಿಸೂ ದನಿಯಾಗ ಹೇಳಿದ.

" ಅಳಬೇಡ ಗಂಗಾ...ಸುಮ್ಮನಾಗು....ಅತ್ತರೇನು.... ಮತ್ತೇನು ಮಾಡಿದರೇನು ?....ಬಡತನ ಏನು ಬಿಡು ತದ ? ಬಡತನ! ಅದೊಂದು ದೊಡ್ಡ ರೋಗ!— "

ಅವ ಇನ್ನೂ ಏನೇನು ಹೇಳುತಿದ್ದನೊ! ಆದರ ನನ್ನ ಹಿಂದೆ ಏನೋ ಸಪ್ಪಳಾದ ಹಾಗಾಯಿತು. ತಟ್ಟನ ತಿರುಗಿ ನೋಡಿದರsss !—

ನನ್ನ ಎದಿ ಧಸಕ್ಕೆಂದಿತು !—

ಗಂಗಮ್ಮನ ಒಡಹುಟ್ಟಿದ ಅಣ್ಣ ಬಾಳಣ್ಣ ಅತ್ತs ಓಡಿ ಬರುತಿದ್ದ....ಅವ ಅಲ್ಲೀದೆಲ್ಲಾ ಕಂಡಿದ್ದರ ಏನೇನಾಗು ತಿತ್ತೊ ಆಗುತಿತ್ತು. ಅಷ್ಟರಲ್ಲೆ ನಾ ಸಳ್ಳಂತ ಸಿಳ್ಳು ಹಾಕಿ ಮಾದೇವನ್ನ ಎಚ್ಚರುಗೊಳಿಸಿದೆನಂತ ನೆಟ್ಟಗಾತು. ಮಾದೇವ ಬೆದರಿ ನನ್ನ ಹತ್ತೀಲಿ ಬಂದ. ನನಗೊಂದು ಯುಕುತಿ ಹೊಳೀತು. ಟಣ್ಣನ ಗಿಡಾ ಏರಿ ಮ್ಯಾಲ ಹೋದೆ. ಗಿಡದ ಮ್ಯಾಲ ಮೊದಲs ಮನಿ ಮಾಡಿದ್ದ ಮಂಗಗಳು ಟಣ್‌ಪುಣ್ ಜಿಗಿದಾಡಾಕ ಮೊದಲುಮಾಡಿದವು.

ನಾ ಮ್ಯಾಲಿಂದ ಒದರಿ ಹೇಳಿದೆ.

" ಏಯ್s ಎತ್ತ ನೋಡುತಿದ್ದೀಯೋ....ಕಲ್ಲು ಎತ್ತಿ ಬೀಸಬಾರದೇ ? "

ಅವನೂ ಏನು ಮರುಳ ಹುಡುಗನsss ? ನನ್ನ ಮಾತಿನ ಅರ್ಥಾ ತಟ್ಟನ ತಿಳುಕೊಂಡ. ಕಲ್ಲು ಆರಿಸುವವರ ಹಾಗ ಗಿಡದ ಬುಡಕ್ಕ ಅತ್ತಿತ್ತ ತಿರುಗಾಡತೊಡಗಿದ. ನಾ ಸಾವ ಕಾಶವಾಗಿ ಗಂಗಮ್ಮನ ಕಡೆ ನೋಡಿದೆ. ಆಕೆಯ ಕಣ್ಣು ಗಳಲ್ಲಿ ಉಪಕಾರ ತುಂಬಿದ್ದ ಹಾಗ ಕಾಣಿಸಿತು.

ಆದಾದ ಎಂಟು ಹತ್ತು ದಿನಗಳ ಮ್ಯಾಲಿನ ಮಾತು. ಜಾತ್ರಿಗಿ ಹೋದ ಜನ ಎಂದು ಬರುತಾರಂತ ಗಂಗಮ್ಮಗ ಒಳೆ ಚಿಂತಿ ಹತ್ತಿತ್ತು. ಬಂಡಿ ಬರೂ ಹಾದೀಕಡೇನs ಆಕಿ ಯಾವಾಗಲೂ ಕಣ್ಣಿಡುತಿದ್ಲು. ಅವರ ಮನೀನೂ ಹಾದೀಮ್ಯಾಲs ಇತ್ತು. ಗಾಲೀ ಸಪ್ಪಳಾಗೂದs ತಡ. ಜಾತ್ರೀಬಂಡಿ ಬಂದೂವಂತ ಕೈಯಾಗಿನ ಕೆಲಸಾ ಬಿಟ್ಟು ಹೊರಗ ಬರುತಿದ್ಲು ಗಂಗಮ್ಮ. ಮರುಳ ಹುಡುಗಿ! ಆಕೀನ್ನ ಅಂತಾ ಹೊತ್ತಿನಾಗ ನೋಡಿದಾಗೆಲ್ಲಾ ನನ್ನ ಮನಸ್ಸಿನಾಗ ಕಳವಳ ಉಕ್ಕೇರುತಿತ್ತು. ಮುಂದ ಇವ ರಿಬ್ಬರ ಗತಿ ಏನಂತ ವಿಚಾರ ಬಂದು ಕರಳು ಕೊರೀತಿತ್ತು.

ಆದs ಆಗ ಹರೆಯದಾಗ ಕಾಲಿಡುತಿದ್ಲು ಗಂಗಮ್ಮ. ಆಕೀನ್ನ ನಾ ಏನಂತ ಬಣ್ಣಿಸಲಿ ? — ಮಂದಗಮನಾ ಅನ್ನಲೆ ? ಚಂದರವದನಾ ಅನ್ನಲೆ? ಎಷ್ಟೋ ಮಂದಿ ಹಳ್ಳೀ ಕವಿಗಳು ಹ್ಯಾಗೆಹ್ಯಾಗೋ ಚೆಲುವಿಯರನ್ನು ಹಾಡಿಹಾಡಿ ಹೊಗಳುತಾರೆ.

ಒಬ್ಬ—

" ಎರಳಿಮರಿಯಂತಾ ಹೆಣ್ಣ
ಬುಗರಿಯಂತಾ ಕುಚಾಗಳು
ಕಣ್ಣನೋಟ ತೀಕ್ಷ್ಣಬಾಣ
ಹೆಣ್ಣನೇನ ಹೇಳ್ಲಿ ? "—ಅಂದರ

ಇನ್ನೊಬ್ಬ—

" ಏನ ಹೆಣ್ಣ ಏನ ಬಣ್ಣ
ಕಾಡಿಗಿ ಕಣ್ಣ ನಡ ಸಣ್ಣ
ಕೂಡಿದ ಹುಬ್ಬ ಒಳೆ ತೀಡ್ಯೈತಿ " — ಎಂದೂ

ಮತ್ತೊಬ್ಬ—

" ತಾಂಬೂಲ ಮೆದ್ದ
ಶಾಲ ಹೊದ್ದ
ನಿರಿಗೀ ಒದ್ದ
ಮನಾ ಕದ್ದ
ಹೊಂಟಾಳೆದ್ದ
ಎದೀ ತುಳದ
ಜಗ್ಗಲೇನs ಸೆರಗ ಎಳದ ? " ಅಂತಲೂ

ಎಷ್ಟೆಷ್ಟೋ ತರದಿಂದಾ ಹೆಣ್ಣನ್ನು ಹಾಡಿಹೊಗಳಿದಾರೆ. ಆದರ ಇವರ ಮಾತಿನಾಗ ಹೇಳಬೇಕಾದರ ಗಂಗಮ್ಮ ಏನ ಸಾಮಾನ್ಯಳs? ಆಕೀನ ಬಣ್ಣಿಸೂ ಶಕ್ತಿ ಬರಬೇಕಾದರ ಹೆತ್ತತ್ತೆ ನಾನೆ ತಾಯಿಯಾ ಹೊಟ್ಟೀಲಿ ಹುಟ್ಟಿ ಬರಬೇಕಾಗ

ತಪ. ನಾ ಏನ ಅಂತಾ ಮಹಾಕವಿ ಅಲ್ಲ ಅಂಬೂದು ನಿಜಾನss. ಅದಕs ಒಂದ ಮಾತಿನಾಗ ಹೇಳಿಬಿಡತೇನಲಾ....ಸಾವಿರದಾಗ ಒಬ್ಬಾಕಿ ಚೆಲುವಿ ಗಂಗಮ್ಮ—ಅಂತ !

ಅಂತೂ ಗಂಗಮ್ಮ ದಾರಿಕಾಯೂ ದಿನಾನೂ ಬಂದಿತು. ಜಾತ್ರಿಗಿ ಹೋದ ಬಂಡಿ ತಿರುಗಿ ಬಂದುವು. 'ಬಸವೇಶ್ವರ ಮಹಾರಾಜಕೀ ಜಯ್' ಅಂತ ಊರೆಲ್ಲಾ ಮುಮುದುಮಿಸು ತಿರೂವಾಗ ಗಂಡುಹೆಣ್ಣು ಎಲ್ಲಾ ನೆರೆಯಿತು. ಜಾತ್ರಿಯಿಂದ ಯಾರು ಏನೇನ ತಂದಾರಂತ ಎಲ್ಲಾರ ಕಣ್ಣು ತಿರುಗುತಿದ್ದುವು. ಗಂಗಮ್ಮನೂ ತಮ್ಮ ಮನೀ ಬಾಗಿಲಡಾಗ ನಿಂತು ನೋಡುತಿದ್ಳು.

ಗೌಡರು ಎರಡು ಹೋರೀ ತಂದಿದ್ರು. ಒಂದು ಬಿಳೀದು, ಒಂದು-ಕೆಂಪು. ಅಷ್ಟಷ್ಟs ಕೋಂಬು ಬಂದ ಆ ಸಣ್ಣಸಣ್ಣ ಹೋರಿಗಳು ಕಿವಿ ನಿಗರಿಸುತ್ತ ಜನಾನೆಲ್ಲಾ ಕಡೆಗಣ್ಣಿಲೆ ನೋಡುತ್ತ ಇಷ್ಟು ಜೋಕಾಗಿ ನಿಂತಿದ್ದುವಲ್ಲ—ಎಲ್ಲರೂ ಪಿಳಿಪಿಳಿ ಕಣ್ಣಬಿಡುತ ಅವನ್ನs ನೋಡುತಿದ್ದ ಹಾಗೆ ಕಾಣಿಸಿತು. ಗಂಗಮ್ಮನ ಎದಿ ಅವನ್ನೆಲ್ಲಾ ಕಂಡು ಹುರುಪಿನಿಂದ ಕುಣಿದಾಡಿರಬೇಕು. ಬರೀ ಆ ಹೋರೀ ನೋಡಿ ಅಲ್ಲ!—ಅವೆರಡನ್ನೂ ಹಿಡಿದುಕೊಂಡು ಒಳೆ ಜೋಕಿನಿಂದ ನಿಂತ ಮಾದೇವನ ಬೆಡಗಿನ ಮೂರ್ತೀ ಕಂಡು !

ಮಧ್ಯಾಹ್ನದ ಬಿಸಲಾಗ ದಿನದ ಹಾಗ ಹೊಳಿಯಾಗ ನಾ ದನದ ಮೈ ತೊಳೀತಿದ್ದೆ. ಮಾದೇವ ಬಂದs ಬರತಾನಂತ ನನಗ ಗೊತ್ತs ಇತ್ತು....ಆದಕ್ಕs ಅಲ್ಲಿ ಇನ್ನಾರೂ ಇರದ್ಹಾಂಗ ಮಾಡಿದ್ದೆ. ನನ್ನ ತಮ್ಮ ಸಿಂಗ ನೀರಾಗ ಆಟಾ ಮಾಡುತಾ ಹಾರಾಡತಿದ್ದ—ಮಾದೇವ ಬರೂದು ನೋಡಿ ಅವನ್ನ ಬೆದರಿಸಿ ಕಳಿಸಿಕೊಟ್ಟೆ. ಸಿಂಗ ಕಣ್ಣೀರು ಸುರಿಸುತಾ ಹೊರಟುಹೋದ.

"ಏನಪಾ ಮಾದೇವಾ ಹ್ಯಾಗಾತು ಜಾತ್ರಿ?" ಅವ ಹತ್ತೀಲಿ ಬಂದ ಕೂಡಲೆ ನಾ ಕೇಳಿದೆ.

ಒಳೆ ಉಲ್ಲಾಸದಿಂದಿದ್ದ ಮಾದೇವ ತಟ್ಟನs ಹೇಳಿದ. —"ಹ್ಯಾಗಂದರೇನೊ? ಒಳೆ ಕಡಕಾತು....ಆದರs ಮನಸಿನಾಗ ಮಾತ್ರ ಒಂದಿಷ್ಟೂ ಸೊಗಸಿರಾಕಿಲ್ಲ ನೋಡು! ಬರೀ ಹುರಹುರ ಹತ್ತಿತ್ತು!" ಮಾದೇವನ ಮಾರೀಮ್ಯಾಲ ಏಂತಾದೋ ಕಳೆ ಬಂಧಹಾಗಾತು.

"ಅದೇನು ಹುರಹುರಿಯೊ ಅಂತಾದು?" ಗೊತ್ತಿದ್ದರೂ ಮೋಜು ಮಾಡಬೇಕಂತ ನಾ ಕೇಳಿದೆ.

"ಮತ್ತಮತ್ತ ಕೇಳಬೇಕಂತೀಯೇನು? ಜಾತ್ರಿಗಿ ಹೋಗೂ ದಿನ್ನದ ಹಿಂದಿನ ದಿನ....ಇಲ್ಲೇ....ಈ ಗಂಗೀ ಹತ್ತೀಲೇ....ಆದವ್ವು ನೆನಪಿಲ್ಲೇನು? ಹ್ಯಾಗ... ನೆನಪು !"

"ಛೆ! ಬಿಡೊ! ಮಾದೇವಾ, ಏನು ಏನ..." ಅಂತ ನಾ ಅವನ ಹತ್ತೀಲಿ ಹತ್ತೀಲಿ ಹೋ... ಅಂಗಿಯ ಒಳಕಿಸೆಯಿಂದ ಒಂದ ಕಾಗದದ ... ತೆಗೆದ.

"ನೋಡಿಲ್ಲಿ. ಇದನ್ನ ಯಾತಕ್ಕ... ಹೇಳ್ತಿಯಾ?"

"ಅದೇನಂತ ಮೊದಲs ಗೊತ್ತಿಲ್ಲ ನನಗ... ನ್ಯಾಯತಕ್ಕ ತಂದಿದ್ದಿ—ಅಂಬೂದನ್ನ ಹೇಳ... ಮಂತ್ರಗಾರs? ಮೊದಲದನ್ನ ಬಿಚ್ಚು... ತಿನಂತ ಬೇಕಾದದs!"

ಮಾದೇವ ಸಾವಕಾಶವಾಗಿ ಅದನ್ನ ಬಿಚ್ಚಿ... ನನ್ನ ಕಣ್ಣು ಕುಕ್ಕಿದಂಗಾತು. ಕಣ್ಣ... ದರ....'ಅಬ್ಬಾ' ಅಂತ ಒಮ್ಮೆಲೆ ನನ್ನ ಬಾಯ... ಟತು !

"ಇದೇನೋ ಮಾಧೂ ಇದು?" ನಾ ... ಬೊಟ್ಟಿಟ್ಟುಕೊಂಡು ಕೇಳಿದೆ.

ಇದೇನಂದರs? ಕಾಣಿಸೂದಿಲ್ಲs ಕಣ್ಣಿಗಿ"

"ಎಲಾ....ಇದನ್ನೆಲ್ಲಿಂದ ತಂದಿಯೊ?"

"ಎಲ್ಲಿಂದಂದರ? ಜಾತ್ರಿಯಿಂದ."

"ಜಾತ್ರಿಯಿಂದ?— ಇವನ್ನ ತರಾಕ ... ಯವೂ ನಿನ್ನ ಹತ್ತೀಲಿ?"

"ರೂಪಾಯಿ! ಮಗನs!—ರೂಪಾಯಿ... ನನ್ನ ಹತ್ತೀಲಿ! ನಿನಗೊಂದ ಬೇಕೇನು ... ಹಿಡಿ" ಹೀಗನ್ನುತ—ಕಿಸೆಯುಲ್ಲಿ ಕೈಹಾಕಿ ರೂಪಾ... ಹೊರಗ ತೆಗೆದು—"ತಗೊ. ಹಿಡಿ ಇದನ್ನ" ...

ರೂಪಾಯಿ !

ನನಗ ಹ್ಯಾಗಹ್ಯಾಗೋ ಅನ್ನಿಸಿತು !

ರೂಪಾಯಿ ತಗೊಳ್ಳೋದs? ತಗೊಂಡು ಮು... ಇಡೋದೆಲ್ಲಿ?—ಮಾಡೂದಾದರೂ ಏನು?—... ಹೋಗಿ ಪಟ್ಟಣಾ ನೋಡಿಕೊಂಡು ಬರಬೇಕ... ಮೊಟ್ಟೀ ಗತಿ ಏನು? ಸ್ಟೇಶನಕ ಹೋಗಿ—... ಬರೂದs?—ಒಂದು ರೂಪಾಯಿಯ ಚಾ! ಛೆ!... ಹರಕ ಹುಡುಗಗ ರೂಪಾಯಿ ಎಲ್ಲಿಂದ ಬಂ... ಯಾರಾದರೂ ಹಿಡಿದು ಕೂಡಿಸಿದರೆ? ಬೇಡಪ್ಪ... ಈ ರೂಪಾಯಿ ಗೋಜs ಬೇಡಾ—

ಆದರು ಮಾದೇವ ಎಲ್ಲಿ ಬಿಡುತಾನೆ! ಪಕ್ಕಾ ಹಟಮಾರಿ ಆತ. ನನ್ನ ರುಮಾಲ ಕೊನೀ ಜಗ್ಗಿ ಆ ರೂಪಾಯಿ ಅದರಾಗ ಕಟ್ಟೀಬಿಟ್ಟ....

—"ಇದನ್ನೆಲ್ಲಾ ರೇ ಮುಚ್ಚಿಡು. ಇನ್ನೊಂದು ತಿಂಗಳಿಗಿ ಅಂಕಲಗೀ ಜಾತ್ರಿ! ಹೋಗಿ ಮಜಾಮಾಡಿ ಬರುವಿಯಂತ!"

ನಾ ಹೆದರುತ್ತಾ ಹೇಳಿದೆ.

"ಅಯ್ಯೋ—ನಾ ಒಲ್ಲೆನೋ ಇದನ್ನ!"

"ಗೆಳೆತನ ಬೇಕೋ ಬೇಡೋ?—ಬೇಕಾದರ ಸುಮ್ಮಗs ನಾ ಈಗ ಹೇಳಿದ ಹಾಗ ಮಾಡು. ಇಲ್ಲಾ ಅಂದರ ನಾ ಈಗ ಹೊರಟುಹೋಗುತೀನಿ. ಮತ್ತೊಮ್ಮೆ ನಿನ್ನ ಮಾರೀ ನೋಡಾಕಿಲ್ಲ." ಮಾದೇವ ಸ್ವಲ್ಪ ಬಿರಸುದನಿಯೊಳಗ ಹೇಳಿದ.

ನಿರ್ವಾಹವಿಲ್ಲದs ನಾ ಸುಮ್ಮನಿರಬೇಕಾಯ್ತು. ಮಾದೇವ ಮುಂದ ಹೇಳಿದ.

"ಇದು ನೋಡು....ಇದನ್ನು ಹ್ಯಾಗಾದರೂ ಮಾಡಿ ಆಕಿಗೆ ಮುಟ್ಟಿಸಬೇಕು."

"ಆಕಿಗೆ? ಆಕಿಗೆ ಅಂದರ ಯಾರಿಗೋ?" ನಾನು ನಗುನಗುತ ಕೇಳಿದೆ.

"ಈಗ ನಿನ್ನ ತಲಿ ಆದರೂ ಒಡೀತೀನಿ. ಇಲ್ಲಾ....ನಂದಾದರೂ ಒಡಕೋತೀನಿ...." ಹೀಂಗಂತ ಮಾದೇವ ಮುಂದ ಹೇಳಿದ. "ಆಕಿಗೆಂದರ ಯಾರಿಗ್ಯೋ ಅಂತ....ಆಕಿಗೇ.... ಆ ಆಕಿಗೇss!—ಗೊತ್ತಾತs ನಾ ಹೇಳಿದ್ದು?—ಏನು ಕಿವಿ ಹಿಂಡಬೇಕೊ?"

"ಗೊತ್ತಾತಪಾ ಗೊತ್ತಾತು. ಆದರ ಹ್ಯಾಗ ಕೊಡೋದೊ?" ನಾ ಸ್ವಲ್ಪ ಅಂಜುತಾ ಕೇಳಿದೆ.

"ಹ್ಯಾಗಂದರ? ಆಕೀನ್ನ ಒಬ್ಬಾಕಿ ಇದ್ದಾಗ ನೋಡೋದು. ನಾ ಕೊಟ್ಟೇನಿ ಅಂತ ಹೇಳಿ ಆಕೀ ಕೈಯಾಗಿಟ್ಟು ಬಿಡೋದು. ಮಾಡುತೀಯಾ ಇಷ್ಟು?—ನಾ ಈಗ ಹೋಗುತೀನಿ. ಮನಿಯೊಳಗ ಕೆಲಸ ತುಂಬಿವೆ ಇನ್ನೂ...." ಅನ್ನನತs ನನ್ನ ಕೈಯಲ್ಲಿ ಆ ಪುಡಿಕೀ ಇಟ್ಟು ಮಾದೇವ ಸರ್‌ರನs ಸಾಗಿಬಿಟ್ಟ—ಏ-ಏ-ಏ—ಅಂತ ನಾ ಒದರುತಿದ್ದರೂ ಬಿಟ್ಟ ಬಾಣದ ಹಾಗ ಹೋಗಿಬಿಟ್ಟ. ನಾ ಸುಮ್ಮನs ಅವನ ಬೆನ್ನಬದಿ ನೋಡುತಾ ನಿಂತಿದ್ದೆ. ಅವ ಮರೆಯಾದ ಕೂಡಲೆ ತಟ್ಟನs ನನ್ನ ದಿಟ್ಟಿ ಆ ಕಾಗದದಾಗಿದ್ದ ಸರದ ಮ್ಯಾಲ ಹೋತು. ಆದನ್ನ ತಗದು ಕಿಶೇ



"ಒಂದು ದಿವಸ ಹೊಳೀಗೆ ಹೋಗಿದ್ದೆ. ಅಲ್ಲಿ....ಗಂಗಾ ಅರಸೀ ಬಗಿತಿದ್ಲು. ಅಲ್ಲೇ ಮಡುವಿನಲ್ಲಿ ಮಾದೇವ ಈಜಾಡುತ್ತಿದ್ದ."

(ಪುಟ [illegible])

ದಾಗ ಇಡುತಿಡುತ್ತಾ ನನ್ನ ಮನಸ್ಸಿನಾಗ ವಿಚಾರ ಬರಾಕ ಮೊದಲಾತು.

"—ಗಂಗಮ್ಮಗ ಇದನ್ನ ಕೊಡುದsss—ಕೊಟ್ಟೇನು. ಆದ ರಾಗೇನು?—ಕೊಡೂದಕ್ಕೂ ಹೆದರುತೇನೇ ನಾನು? ಕೊಟ್ಟ ಮ್ಯಾಲ..., ಪಾಪ! - ಇದನ್ನ ಕಾಯ್ಕೊಬೇಕು ಹ್ಯಾಗ ಆಕಿ? —ಮಾದೇವ ಪಿರೀತೀಲೆ ಕೊಟ್ಟದ್ದಂತ ಇದರ ಮ್ಯಾಲ ಆಕೀ ಪಿರೀತೀನೂ ಕೂಡಬಹುದು. ಆದರ ಮನೆಯವರ ಕಣ್ಣುತಪ್ಪಿಸಿ ಆಕಿ ಇದನ್ನ ಹ್ಯಾಗ ಕಾಯ್ದುಕೊಂಡಿರ ಬೇಕು ? ಅಪ್ಪಿತಪ್ಪಿ ಯಾರ ಕಣ್ಣಾದರೂ ಕುಕ್ಕಿದರ ಈ ಸರದಿಂದ ? ಮುಂದ ದೊಡ್ಡ ತೊಂದ್ರಿ ಬಂದೀತಲ್ಲ !— ಮಾದೇವ ಇದನ್ನ ಕೊಟ್ಟ ಅಂತ ಗಂಗಮ್ಮ ಹೇಳಲಾರಳು. ಅದೇನೋ ನಿಜಾ. ಆದರs ಆಕೀಮ್ಯಾಲ ಸುಳ್ಳುಸುಳ್ಳs ಏನಾರೇ ಪೀಕಲಾಟ ಬಂದರ?—ಬಂದರ ಯಾಕ?—ಬರೂ ಹಾಗs ಅದs. ಮಾದೇವ ಎಂತಾ ಹುಚ್ಚ ಅನಬೇಕು? ಇಷ್ಟೂ ತಿಳೀಬಾರದs ಅವಗ?—ಪಿರೀತೀ ಕಾಲಾಗ ಬುದ್ಧಿನೂ ಕಳಕೊಂಡ ಬಿಟ್ಟೊ ಏನೊ! "ಏ-ಏ" ಅನ್ನುತಿರೂವಾಗ ಹೋಗೇ ಬಿಟ್ಟ ಹಾಗsss ! ಈಗ ಮಾಡೋದೇನು?—"

ಹಾಗs ಹೊರಳಿ ನೋಡಿದರ ಗಂಗಮ್ಮ ಬರುತಿದ್ಲು. ನನ್ನ ವಿಚಾರ ಅಷ್ಟಕ್ಕs ನಿಂತಿತು.

ದಿನದ ಹಾಗೆ ಒಂದೆರಡು ಅರಿವಿ ಇದ್ದುವು ಆಕೀ ತಲಿಯ ಮ್ಯಾಲ. ಬಗಲಲ್ಲಿ ಒಂದು ಬಿಂದಗಿಯೂ ಇತ್ತು. ಉದ್ದವಾಗಿ ಹಿಂದೆ ಬಿದ್ದ ಸೆರಗಿನ ಸಂಗಡ ಆಟಾಮಾಡುತಾ ಗಂಗಮ್ಮ ಮೆಲ್ಲಗೆ ಬರುತಿದ್ದಳು.

'ನಾ ತಟ್ಟನ ಮುಂದಾಗಿ ಆ ಸರ ಆಕೀ ಕೈಯಾಗ ಕೊಟ್ಟೆ. ಗಂಗಮ್ಮ ಬೆರಗಾಗಿ ನನ್ನ ಮಾರೀನs ನೋಡ ತೊಡಗಿದಳು.

" ತಗೋ ಗಂಗಮ್ಮಾ. ಇವನ್ಯಾರ ಕೊಟ್ಟಾರಂ ಬುದೂ ನಿನಗ ಗೊತ್ತಾಗಿರಬೇಕು. "

" ಯಾರು ಕೊಟ್ಟಾರ?—" ಗಂಗಮ್ಮ ಕಣ್ಣರಳಿಸುತಾ ಕೇಳಿದಳು.

" ಗೊತ್ತಾಗಲೊಲ್ಲದೇನೂ ಇನ್ನೂ ನಿನಗ ? ಹಾಗಾದರ ಹೇಳುತೀನಿ ಕೇಳು. ಸೀತಾಗ ರಾಮದೇವರು ಉಂಗರ ಕಳಿಸಿದ ಹಾಗ ನಿನ್ನ ರಾಯ ಇದನ್ನ ಕಳಿಸಿಕೊಟ್ಟಾನು. "

ಒಂದs ಚಣಾ....ಗಂಗಮ್ಮನ ಮಾರೀಮ್ಯಾಲ ಎಲ್ಲಿಲ್ಲದ ರಕ್ತ ಏರಿ ಎಲ್ಲಾ ಕೆಂಪಾತು. ನಾಚಿಕೀನಗೀ ಆಕೀ ತುಟಿಮ್ಯಾಲ ಕುಣಿದಾಡತೊಡಗಿತು....

ಮರುಚಣದಾಗs ಗಂಗಮ್ಮ ಚಿಂತೆಯಿಂದ ಕೇಳಿದಳು.

" ಅದೆಲ್ಲಾ ಸರಿ. ಆದರ ಇದನ್ನಿಟ್ಟುಕೊ... ನನ್ನ ಸ್ಥಿತಿಗತಿ ಎಲ್ಲಾ ನಿನಗ ಗೊತ್ತs ಅದ... ಕೊಟ್ಟದ್ದಂತ ಪಿರೀತೀಲೇ ಹತ್ತಿರಿಟ್ಟು... ಮನಸ್ಸಿನಾಗೆಲ್ಲಾ ಇದ್ದರೂ ಇಟ್ಟುಕೊಳ್ಳೊ... —ನೀನs ಹೇಳು. ಅಣ್ಣ ನೋಡಿದರ ... ಉಳಿಸಾಕಿಲ್ಲ. " ಮಾತು ಮುಗೀತಿರುವಾಗ ದೀ... ಉಸಿರ್ಬಾಕಿದಳು ಗಂಗಮ್ಮ.

ಸ್ವಲ್ಪಹೊತ್ತು ಸುಮ್ಮಗಿದ್ದು ಮತ್ತೆ ಹೇಳಿ...

" ನಂದೊಂದು ಮಾತು ಕೇಳು ಅಕ್ಕ... ಅನಬ್ಯಾಡ. ನನ್ನ ಹತ್ತೀಲಂತೂ ಇದು... ಹಾಗಿಲ್ಲ. ಉಳಿದರೂ ಏನೇನು ಗೊಂದಲ... ಆಗುತದ. ಅದಕ್ಕ—ಹೀಗ ಹೇಳುತೇನ್ನ... ಕೇಳು....ಇಲ್ಲ ಅನ್ನಬ್ಯಾಡ....ಇದನ್ನ ನೀನ... ಬಿಡು ! "

ನಾ ಬೆರಗಾಗಿ ಕೇಳಿದೆ.

" ನಾ ಏನ ಮಾಡಲಿ ಅದನ್ನ ತಗೊಂಡು..."

"ಏನಾದರೂ ಮಾಡಲೊಲ್ಲಿಯಾಕ? ತಗೊ..."

" ಅಲ್ಲ ಗಂಗಮ್ಮ, ನಿನ್ನ ಹಾಗs ನಂದೂ... ಹತ್ತೀಲಿ ಒಂದು ಬಿಡಿಗಾಸು ಸಿಕ್ಕರೂ ಮನೆ... ಜೈದು ಜೈದು ಸಾಕುಮಾಡತಾರ. ಇನ್ನ ಇಂತಾ... ಸರಾ ! "

ನಡುವೇ ನನ್ನ ತಡೆದು ಗಂಗಮ್ಮ ಹೇಳಿದಳು...

"ಅಲ್ಲಾ—ನೀ ಏನಾದರೂ ಮಾಡೂಹಾಗಿ... ದರೂ ನೀ ಗಂಡುಗಂಡುಸು. ನೀ ಏನಾರೇ ಮಾ... ಏಸು. ಹೆಣ್ಣುಹೆಂಗುಸು .... ಅದನ್ನಿಟ್ಟುಕೊಳ್ಳೊ... ನೀನೊ—ಏನಾದರೂ ಮಾಡೂಹಾಗಿದ್ದೀ. "

" ಏನು ಮಾಡೋದು ? "

" ಏನಂದರ ಏನು ಹೇಳೋದು ? ಏನಾದರೂ..."

"ಅಂದರs—ಕಳ್ಳ ಅಂತ ಗೊತ್ತಾಗಿ ಹಿಂಡಲಿ... ಹೋಗೋದsss ! "

ಗಂಗಮ್ಮ ಸ್ವಲ್ಪ ಹೊತ್ತು ಏನೋ ಎಣಿಕೆ...

" ಹಾಗಾದರ ತಾ ಇಲ್ಲಿ ಅದನ್ನ. ನನಗೊಂದ... ಹಂಚಿಕಿ ಹೊಳದsದ. ಈ ಜನುಮದಾಗ... ಹಾಕ್ಕೊಂಡು ಮೆರಿಯೂ ದೈವ ಇಲ್ಲ ನನ್ನ... ಈ ಗಂಗವ್ವಗ ಅದನ್ನ ಕೊಟ್ಟುಬಿಟ್ಟರ! ಮುಂದ... ದಾಗಾದರೂ ಅದನ್ನ ಹರಸಿ ಕೊಟ್ಟಾಳು! " ... ಚಕಚಕಿತ್ತು... ಸರಾ ಸರ್‌ರನs ಹೋಗಿ ...

ಬಿಟ್ಟಳು. ದಂಡೀ ಮ್ಯಾಲಿನ ರಾಡಿಮಣ್ಣು ತಲೆಗೊತ್ತಿಕೊಂಡು ಹೊಳಿಗೆ ಕೈಜೋಡಿಸಿದಳು. ನಾ ಏನನ್ನೂ ಮಾತಾಡದs ಆಕೀನ್ನ ಬಿಟ್ಟೂಬಿಡದ ನೋಡುತಿದ್ದೆ.

* * *

"ಹೋಳೀ ಹುಣ್ಣಿವಿ !—ಹಾಯ ಹಾಯ !-ಅದು ನಿಜಾಗಿಯೂ ತನ್ನ ಹೆಸರಿಗಿ ತಕ್ಕ ಹಾಗs ಆ ವರುಷ ಕೆಲಸಾ ಮಾಡಿತು. ನಮ್ಮೆಲ್ಲರ ಜೀವಗಳನ್ನ ಅದು ಹೋಳೀಮಾಡಿ ಬೇಯಿಸಿಬಿಟ್ಟಿತು. ಛೀ ! ಛೀ ! ಏನು ಹೇಳುತೀನಿ ನಾನು !—ಪಾಪ ಆ ಹುಣ್ಣಿವಿ ಏನು ಮಾಡೀತು ? ನಮ್ಮ ಹಳ್ಳೀ ಜನರ ಹುಚ್ಚು....ಹಾಗಾದರೂ ಯಾಕನ್ನಬೇಕು?—ಘತ್ತ ಅನ್ನೂವಾದರೂ ಏನು? ನನಗ ಏನೂ ತಿಳೀದ ಹಾಗಾಗೇದ. ಆ ದಿನಾ ಇಂತಾ ಪ್ರಸಂಗ ಬಂದಿತಲ್ಲ—ನಮ್ಮ ಬದುಕs ಬ್ಯಾರೆ ಆಗಿಹೋತು. ನಾ ಮಾದೇವಗ ಮತ್ತೊಮ್ಮಿ ಮಾರೀ ತೋರಿಸದ ಹಾಗಾಯಿತು. ನನ್ನ ಪಿರೀತೀ ಗೆಳೆಯನ ಸುಕಾ ಎಲ್ಲಾ ಕಸಕೊಂಡು ಅವನ್ನ ಬದುಕಿರೂತನಕಾ ಕೊರಗಿಸೂ ಹಾಗಾಯಿತು....ಗಂಗಿ....ಆಕಿ ನನಗ ಸೋದರ ಮಾವನ ಮಗಳಾಗಬೇಕಂಬೂದನ್ನ ಇಲ್ಲೀ ತನಕಾ ಹೇಳs ಲಿಲ್ಲ.... ಆಕೀದೂ ನಂದೂ ಹೀಗ ಒಂತರದ ಪ್ರೀತಿ ಇತ್ತಲ್ಲ—ಒಂದs ಹೊಟ್ಟೀಲಿ ಹುಟ್ಟಿದ ಅಣ್ಣಾತಂಗಿ ಕೂಡಾ ಅಷ್ಟೊಂದು ಪ್ರೀತಿಯಿಂದಿರಾಕಿಲ್ಲ. ಸಣ್ಣಾಗಿಂದಾ ನಾ ಆಕಿಗೆ ಗಂಗಮ್ಮಾ ಅಂತೋ-ಗಂಗಕ್ಕಾ ಅಂತೋ ಕರೀತಾ ಬಂದಿದ್ದೆ. ಘತ್ತ ಎಷ್ಟೋ ಸರತಿ "ನಿನ್ನ—ಗಂಡ ಯಾರೆ?—ಅವನ ಹೆಸರು ಹೇಳೆ—" ಅಂತ ನಗೆಯಾಟವಾಡಿ ಆಕೀ ಬಾಯಿಂದ 'ಮಾದೇವ' ಅಂತ ಹೆಸರು ಹೇಳಿಸಿಕೊಂಡೇ ಬಿಡುತಿದ್ದೆ. ನನಗ ತಿಳೀತೊಡಗಿದಾಗಿನಿಂದ ಆಕಿ ನನ್ನ ಸೋದರಮಾವನ ಮಗಳು ಅಂತ ಗೊತ್ತಾಗಿದ್ದರೂ ನನ್ನ ಮನಸ್ಸಿನಾಗ ಬೇರೆ ಯಾವುದೊಂದು ವಿಚಾರ ಬಂದಿರಲಿಲ್ಲ. ಇನ್ನ ಮುಂದೂ ಬರೂದು ಶಕ್ಯವಿರಲಿಲ್ಲ. ಆದರs ಆ ದಿನಾ....ಆ ಹೋಳೀಹುಣ್ಣಿವಿ....ಇದರಿಂದ ಎಲ್ಲಾ ಮಣ್ಣುಕೂಡಿಹೋತು. ಗಂಗೀ ಸಂಗಡ ನನ್ನ ಮದಿವಿ ಅಂತ ಗಟ್ಟಿಮಾಡಿಬಿಟ್ಟರು. 'ಬಪ್ಪಿಗಿ' ಅಂದರ ಮದಿವೀ ನಿಶ್ಚಯ—ಅದೂ ಅಂದs ಆಗಿಹೋತು. ಊರೆಲ್ಲಾ ಸಕ್ಕರೀ ತಿಂದು ನಮ್ಮಿಬ್ಬರ ಜೊತೀ ಕೂಡಿದ್ದನ್ನ ತಿಳಿದುಕೊಂಡಿತು. ಮಾದೇವಗ ಕೂಡಾ ಸಕ್ಕರೀ ಕೊಟ್ಟರು. ಆದರs ಆ ಸಕ್ಕರಿ ಅವಗ ಹ್ಯಾಗ ಸೀ ಹತ್ತಿರಬೇಕು....ಅವನ ಗಂಟಲಾಗಿಂದಾದರೂ ಇಳೀತೊ ಇಲ್ಲೊ ಅದು ಯಾರಿಗೆ ಗೊತ್ತು ? ಗಂಟಲಾಗಿಂದ ಇಳಿದರೂ ಹೊಟ್ಟ್ಯಾಗ ವಿಷ್ಟ ಆರಿ ಹತ್ತಿ ಸಿರಬೇಕು ! ಏನ ಹೇಳಲಿ ಅದನ್ನ !"

* * *

* * *

ಈಶ್ವರ ಹೇಳೂದು ಒಮ್ಮೆಲೆ ನಿಂತು ಹೋಯಿತು. ಅವನ ಎರಡೂ ಕೈ ಹಣೆಯಕಡೆ ತಾವಾಗೇ ಹೋದುವು. ಅವನ್ನ ಹಾಗs ಅಲ್ಲೇ ಇರಗೊಟ್ಟು ಆನ ಪೆಪ್ಪ ಬಡಿದವರ ಹಾಗ ಪಿಳಿಪಿಳಿ ಕಣ್ಣಬಿಡುತ ಹಾಗೇ ಕೂತುಬಿಟ್ಟ.

ನನಗ ಸುಮ್ಮನಿರಾಕಾಗಲಿಲ್ಲ. ಕೈಯಾಗಿನ ಕಬ್ಬು ಕೆಳಗೆ ಚಲ್ಲಿಕೊಟ್ಟು ನಾ ಚಟ್ಟನs ಕೇಳಿದೆ—

"ಅಲ್ಲ ಈಶ್ವರಪ್ಪ, ಎಲ್ಲಾಕ್ಕs ಮೊದಲು ಹೇಳಿದೆಯಲ್ಲ ! ಮಹಾದೇವನ ಮದಿವಿ ಆಗಿತ್ತು ಆಗs—ಅಂತ. ಅದನ್ನೆಲ್ಲಾ ಬಿಟ್ಟು 'ಇದನ್ನೆಲ್ಲಾ ಹೇಳುತಾ ಕೂತಿದ್ದೀ....ಅದರದೇನು ಅಂತೀನಿ."

"ಅದs ! ಅದೂ ಒಂದ ದೊಡ್ಡ ರಾಮಾಯಣ ಪುರಾಣs ಅದ ! ಕಬ್ಬು ಯಾಕ ಚಲ್ಲಿಕೊಟ್ಟಿರಿ ?—ತಕ್ಕೊಳ್ಳಿರದನ್ನ. ತಿನ್ನುತ್ತ ತಿನ್ನುತ್ತ ಕೇಳೀರಂತ !"

ಕಬ್ಬಿನಸೊಪ್ಪು ಸುಮ್ಮಸುಮ್ಮಗೆ ಸವರುತ್ತ ಈಶ್ವರ ಮುಂದ ಹೇಳತೊಡಗಿದ.

* * *

* * *

"ಮಾದೇವಗ ಅದs ಆಗ ಹದಿನೆಂಟರಾಗ ಬಿದ್ದಿತ್ತು. ಮಕಮೀಶಿ ಬಂದಾವೊ ಬರುತಾವೊ ಅನ್ನೂ ಹಾಗಿತ್ತು. ಗೌಡರು ಹೆಣ್ಣು ಹುಡುಕಲ್ಕು ಎಂದೋ ಮೊದಲು ಮಾಡಿದ್ದರು. ಅವರಿಗೆ ಹೆಣ್ಣು ಕೊಡುವವರಾದರೂ ಏನು ಕಡಿಮಿ ಅನ್ನಿ ! ಎಷ್ಟೋ ಮಂದಿ ನಾ ಕೊಡುತೀನಿ—ನೀ ಕೊಡುತೀನಿ—ಅಂತ ದುಂಬಾಲ ಬೀಳುತಿದ್ರು. ಮಾದೇವಗ ಇವೆಲ್ಲಾದರ ಸುಳುವs ಇರಲಿಲ್ಲ. ಗೌಡರು ಮೊದಲs ಸ್ವಲ್ಪ ಬಿರಸು ಸ್ವಭಾವದವರು. ಅವರು ಹೆಣ್ಣಿನ ಸುದ್ದಿ ಯಾರಿಗೂ ತಿಳಿಯದ್ಹಾಗ ಇಟ್ಟಿದ್ದರು. ಒಳೆ ಚೆಲುವಿಚೆನ್ನೀನ್ನs, ಆದರ ಚಲೋ ಕುಲವಂತರ ಹೆಣ್ಣನ್ನs ಹುಡುಕಿ ತರಬೇಕಂತ ಅವರು ಪಣಾ ತೊಟ್ಟ ಹಾಗಾಗಿತ್ತು. ಎಷ್ಟೋ ಊರು ತಿರುಗಾಡಿದರು ಆ ನೆವ ಈ ನೆವ ಮಾಡಿ. ಆದರ ಎಷ್ಟ ದಿನಾ ನಡೀಬೇಕು ಹೀಗs ?—ಒಮ್ಮೆ ಗುಟ್ಟೆಲ್ಲಾ ರಟ್ಟಾತು. ಗೌಡರು ಹೋಗಿ ಮಾತುಕತೆಯಾಡಿ ಬಂದ ಹೆಣ್ಣಿನ ಕಡೆಯವರೊಬ್ಬರು ಗೌಡರು ಎಲ್ಲಿಯೋ ಹೋದಾಗ ಬಂದರು. ಆತು....ಊರೆಲ್ಲಾ ಸುದ್ದಿ ಹಬ್ಬಿತು !—ಮಾದೇವಗೂ ಆ ಸುದ್ದಿ ಅವೇ ದಿನ ತಿಳಿದಿರಬೇಕು."

* * *
* * *

ನಾ ಮನಸಿನಾಗs ನಾಲಗೀ ಕಚ್ಚಿಕೊಂಡೆ. ಮಹಾದೇವನ ಗತಿ ನೋಡಿ....ಕರುಣಾನೂ ಬಂತು. ಅಲ್ಲದs ಅವನ ಕತೆ ಒಂದ ಬಿಡಿಸಾಕ ಬರದಂತಾ ತೊಡಕಾಗಿ ಕುಳಿತಿತು. 'ಕಾಕಾ'ನ ಮಗಳ ಮ್ಯಾಲ ಪ್ರೀತಿ....ಅದೇನೂ ತಪ್ಪಲ್ಲ....ಯಾಕಂದರ ಪ್ರೀತಿ ಹ್ಯಾಗ ಹುಟ್ಟತದ ಗೊತ್ತಾಗೋದಿಲ್ಲ. ಯಾರಿಗೂ ಹೇಳಾಕ ಬರೋ ಹಾಗಿಲ್ಲ ಅದು ಹ್ಯಾಗs ಹುಟ್ಟತದ ಅಂತ. ಅದಕ್ಕ ಜಾತಿ ಗೊತ್ತಾಗೋದಿಲ್ಲ. ರೀತಿ ಗೊತ್ತಾಗೋದಿಲ್ಲ....ನೀತಿಯಂತೂ ಮೊದಲs ತಿಳಿಯುವುದಿಲ್ಲ.... ಅಂತ ಎಷ್ಟೋ ಜನ ಅಂತಾರ. ಇದು ನಿಜಾ ಅಂತs ಅನ್ನ ಬೇಕು ಅನ್ನಿಸಿತು ನನಗೆ. ಮಾದೇವನ ಕತೀ ಎಲ್ಲಾ ಮೊದಲಿಂದಾ ನೆನಪು ಮಾಡುತ್ತ ಸ್ವಲ್ಪ ಹೊತ್ತು ಹಾಗs ಕುಳಿತಿದ್ದೆ. ಈಶ್ವರ ಯಾವಾಗ ಎದ್ದನೊ—ಹಾಲು ತಂದನೊ!—ಒಂದೂ ಒಂದೂ ಗೊತ್ತಾಗಲಿಲ್ಲ ನನಗ! ಹಾಲು ಸೋಸಿ ಅದಕ್ಕ ಲಿಂಬೀ ಹುಳಿ ಬೆರಸಿ ಒಂದು ಬಟ್ಟಲಲ್ಲಿ ಅಷ್ಟು ಹಾಕಿ—'ತಗೊಳ್ಳಿ ಹಾಲು' ಅಂದಾಗ ನಾ ಹಾರಿಬಿದ್ದು ಅತ್ತ ನೋಡಿದೆ.

"ಹಾಲು ಕುಡೀರಿ ರಾಯರು ಮೊದಲು. ಹಾಳಾಗಿ ಹೋಗಲಿ ಆ ಕತಿ!"—ಅಂತ ಈಶ್ವರ ಮತ್ತೊಮ್ಮೆ ಅಂದಾಗ ಸುಮ್ಮಗs ಬಟ್ಟಲು ಎತ್ತಿ ಒಂದೊಂದs ಗುಟುಕು ಗುಟುಕರಿಸಲು ಮೊದಲುಮಾಡಿದೆ. ನನ್ನ ಕಣ್ಣಮುಂದ ಆ ಹಳ್ಳೀಕತಿ ಚಿತ್ರಪಟಾ ಆಗಿ ಮತ್ತೆಮತ್ತೆ ಮೂಡಿ ಮಾಯಾಗುತಿತ್ತು. ಕೊನಿಗೆ ನಾ ಒಮ್ಮಿಲೆ ಕೇಳಿದೆ.

"ಮುಂದ ಏನಾತು ಮಾದೇವಂದು?"

* * *
* * *

"ಆಗೂದು ಆಗಿ ಹೋತು. ಅವ ಎಷ್ಟ ಹೇಳಿದ್ರೂ ಕೇಳದs, ಮದಿವಿ ಗಟ್ಟಿ ಆಗಿ ಹೋತು. ಅವನೂ ಜೀವದ ಮ್ಯಾಗs ಬ್ಯಾಸತ್ತವರ ಹಾಗ ಅಕ್ಕೀಕಾಳು ಹಾಕಿಸಿಕೊಂಡ. ಅವನ ಹೆಂಡ್ತಿ ಏನೂ ಕಡಿಮಿರಲಿಲ್ಲ. ಗಂಗೀ ನೆನಪು ಒಮ್ಮಿಲ್ಲೊಮ್ಮಿ ಹೋಗೂ ಹಾಗಿದ್ಳು ಆಕಿ. ಮ್ಯಾಲ ನಾಲ್ಕನೇ ಯತ್ತಾತನಕಾ ಕನ್ನಡ ಕಲಿತಿದ್ಳು. ಮಾದೇವಗ ಹೆಣ್ಣು ಚೆಲೊ ಸಿಕ್ಕಿತಂತ ಊರೆಲ್ಲಾ ಹೊಗಳೂವವರs! ಆದರs ಮಾದೇವನ ತಳಮಳಿಸೂ ಮನಸ್ಸು, ಹ್ಯಾಗ ಗೊತ್ತಾಗಬೇಕು!—

ಊರಾಗಿನ ಮದಿವಿ....ಅದರಾಗ ಗೌಡರ ಮನಿಯ ಮದಿವಿ....ಅಂದಮ್ಯಾಲ ಆಗ ನಮಗೇನ ಕೆಲಸ?—ಮೂರು ಹಗಲೂರಾತ್ರಿ ಅಲ್ಲೇ ಇದ್ದೆ. ಊಟ ಚೆನ್ನಾಗಿ ಗಂಟಲಲ್ಲಿ ಇಳಿದಿದ್ದರ ... ಮಾದೇವಂತೂ ಮೂರುದಿನಾ ಒಂದು ... ತಗೊಂಡಿದ್ದನೊ ಇಲ್ಲೊ ಯಾರಿಗ ಗೊತ್ತು! ಕೂತಾಗೆಲ್ಲಾ ಒಂದಿಷ್ಟು ಉಂಡಹಾಗ ... ಬಿಡುತಿದ್ದ. ಜನಾ ಅಂತಿತ್ತು "ಹೇ... ಒಬ್ಬಗs ಊಟ ಹ್ಯಾಗ ಸಿವಿ ಹತ್ತಬೇಕವ..." ಅದನ್ನ ಕೇಳಿದಾಗೆಲ್ಲಾ ನನ್ನ ಕಿವಿಯಾಗ ... ಸುರುವಿದ ಹಾಗಾಗುತಿತ್ತು.

ಅರಿಸಿನಾ ಆಡೂವಾಗಿನ ಪ್ರಸಂಗ—... ಕೊಬ್ಬರು ಅರಿಸಿನಾ ಹಚ್ಚೂದು....ಆ ... ಹುರುಪಿನಿಂದ ಮಾದೇವನ ಗಲ್ಲ ಗಟ್ಯಾಗಿ ... ಅರಿಸಿನಾ ಒರೆಸಿದರs ಮಾದೇವ ಎಲ್ಲಿ ಕೈತಾ... ಅನ್ನೊ ಹಾಗ ಕೈ ಎಳೀತಿದ್ದ ಆಕೀ ಗಲ್ಲ... ನಿಜಾ ಅಂದರ ಆಗ ಎಲ್ಲಾರಿಗೂ ನಗಿ ಬರಬೇ... ಹೆಂಡ್ತಿ ಇಬ್ಬರೂ ನಾಚುತಾ, ನಾಚುತಾ... ನಕ್ಕೋತ, ಹಚ್ಚುತಿರತಾರ ಅರಸಿನಾ.... ಹೂಂ. ಮಾದೇವನ ಮಾರೀಮ್ಯಾಲ ... ಹಾಗೇ ಇತ್ತು. ಅವ ಒಮ್ಮೆಯೂ ತುಟಿ ... ಇಲ್ಲ....ಕಣ್ಣೆತ್ತಿ ತನ್ನ ಕಡೆ ಪ್ರೀತೀಲೇ ... ನೋಡೂ ಆ ಹುಡುಗೀ ಕಡೆ ಇಣುಕಿ ... ಹುಡುಗಿ. ಏನೆಂದುಕೊಂಡಳೊ....ಆಕೀ ... ಉಲ್ಲಾಸ ಎಲ್ಲಾ ಎಲ್ಲೋ ಹಾರಿ ಹೋತು. ... ಸಿಕ್ಕಾಪಟ್ಟೆ ಆಡತೊಡಗಿದರು.

ಮದಿವ್ಯಾದ ನಾಲ್ಕೈದು ತಿಂಗಳ ಮ್ಯಾಲ ನೆರದಳು. ಆತು. ನೆರದ ಹದಿನೈದs ದಿನಕ್ಕ ಹೋಗಿ ಆಕೀನ್ನ ಕರಕೊಂಡು ಬಂದರು. ... ಅವರ ಸಂಸಾರ ಸುರುಮಾಡೂ ಶಾಸ್ತ್ರ ... ಆ ಸಂಸಾರ ಸುರು ಮಾಡುವವರಿಬ್ಬರೂ ಒಳ್ಳೇ... ತಿದ್ರು.

ನಾಲ್ಕೈದು ತಿಂಗಳಾತು....ಗೌಡತಿ ... ಹುಡುಗೀ ಮೈಯಾಗ ಏನು ಬದಲು ನೋಡಿದ... ಊರೆಲ್ಲಾ ಡಂಗುರಾ ಮಾಡಿಬಿಟ್ಟಳು....ಹೌ... ಇನ್ನೇನು ನಾಲ್ಕಾರು ತಿಂಗಳದಾಗ ಕಾಣಿಸಿಕೊ...

ಆದರ ಏನ ಹೇಳೂದು ನಿಮಗ?—ಈಗ ... ಹೋಗಿ ಒಂದ ವರುಷಾತು. ಇನ್ನೂ ಹೊ... ಸುಳುವs ಇಲ್ಲ. ಜನಾ ಅಂತಾರ—ಇವರು ...

ಪ್ಪಾರ—ಅಂತ. ಆದರ ಒಳಗಿನ ಗುಟ್ಟು ಶಿವನ ಬಲ್ಲ!" ಈಶ್ವರ ಕತಿ ಮುಗಿಸಿ ದೊಡ್ಡ ನಿಟ್ಟುಸಿರು ಬಿಟ್ಟ. ಏನೂ ಮಾತಾಡದೆ ಇಬ್ಬರೂ ಮನೆಗೆ ಬಂದೆವು.

* * *

ಆ ಮಾತು ನಡದು ಎಷ್ಟೋ ದಿನ ಆಯಿತು. ನನ್ನ ಸಾಲೀವಶಿಂದ ನಾನು, ನನ್ನ ತಾಯಿ ಬೆಳಗಾವಿಗೆ ಬಂದಿದ್ದೆವು. ಕೇಳಿದ್ದನ್ನ ಕತೀಮಾಡಿ ನಾನು ಬರಕೋತ ಕೂತಿದ್ದೆ. ಅಷ್ಟರಾಗ ಬಾಗಿಲು ಛಡಕ್ ಅಂತು! ಲೆಕ್ಕಣಿಕೀ ದೂರ ಬಿಸಾಕಿ ಎದ್ದು ಬಾಗಿಲಾ ತೆರೆದ ಕೂಡಲೆ, ನನ್ನ ಬಾಯಿಂದ ಆಶ್ಚರ್ಯದ ಉದ್ಗಾರ ಹೊರಟಿತು.

"ಯಾರು? ಈಶ್ವರ.... ನೀ.... ಇಲ್ಲಿ?"

ಕೈಯಾಗಿದ್ದ ಧೋತರಾ ಕೆಳಕ್ಕಿಡುತಾ ಈಶ್ವರ ಮೆಲ್ಲಗ ಹೇಳಿದ:

"ಹಾಗ ಬಂದೆರಿ. ನಿಮ್ಮ ಮನಿ ಇಲ್ಲೇ ಅಂತ ಯಾರೋ ಹೇಳಿದರು. ಹೋಗುವಾಗ ಹಾಗ ಒಮ್ಮೆ ಬೆಟ್ಟಿಯಾಗಿ ಹೋಗೂನಂತ ಬಂದ ಬಿಟ್ಟೆರಿ."

"ಆಲ್ಲೊ, ನಿನಗೇನ ಕಡಿಮಿ ಆಗಿತ್ತು ಹಳ್ಳೀ ಒಳಗ? ಹಗಲೆಲ್ಲಾ ದುಡಿದು ರಾತ್ರಿ ಅರಸನಂಗ ಊಟಮಾಡಿ ಸ್ವಸ್ಥ ಇರುತಿದ್ದಿಯಲ್ಲ. ಬೇಳೀಗಿಳೀ ಬರಲಿಲ್ಲೇನು ಈ ವರುಷ? ಮಳಿ ಬೇಕಾದಷ್ಟು ಆಗೇದಲ್ಲ!"

"ಮಳಿಬೆಳೀ ಮಾತು ಅಲ್ಲರಿ ರಾಯರ, ನಾ ಮನಿ ಬಿಟ್ಟದ್ದು—ಒಂದು ದೊಡ್ಡ ಕಾರಣ ಆತು ಅಂತ. ಅದನ್ನ ನಿಮಗೀಗ ಹೇಳಿಬಿಟ್ಟು ಹೋಗಬೇಕಂತ ಬಂದಿದ್ದೆ."

"ಮತ್ತೇನಾಯ್ತಪ್ಪ ಅಂತಾದು?" ಕುತುಕಿಯಾಗಿ ನಾ ಕೇಳಿದೆ.

"ಆ ದಿನಾ ನೀವಿತ್ತ ಬಂದ ಕೂಡಲೆ ಅರ್ಧಾಕ್ಕ ನಿಂತ ಹಾಗಿದ್ದ ಆ ಕತೀನ್ನ ಇಂದು ಮುಗಿಸೂ ಹೊತ್ತು ಬಂದದ. ಆ ಮ್ಯಾಲ ನಾಲ್ಕು ತಿಂಗಳಿನ ಮಾತು. ಒಂದಿನಾ.... ನಾ...."

ನಡುವೇ ಯಾಕೋ ತಡೆದು ನಿಂತು ಈಶ್ವರ ಮತ್ತ ಹೇಳ ತೊಡಗಿದ.

* * *

* * *

"ಒಂದಿವಸ ಹೊಳೀಗೆ ಹೋಗಿದ್ದೆ. ಅಲ್ಲಿ.... ಗಂಗಾ ಅರಿವೀ ಒಗೀತಿದ್ದು. ಅಲ್ಲೇ ಮಡುವಿನಲ್ಲಿ ಮಾದೇವ ಈಜಾಡುತಿದ್ದ. ಏನೊ ಕಾಲು ತೊಳೆದುಕೊಂಡು ನೀರು ಕುಡಿದು ಬರಬೇಕಂತ ನಾ ಹೊಳೀಗೆ ಹೋಗಿದ್ದೆ. ಆದರ ಇದನ್ನೆಲ್ಲಾ ನೋಡಿದ ಕೂಡಲೆ ನನ್ನ ಪಿತ್ತ ಎಲ್ಲಿತ್ತೊ ಏನೊ ತಟ್ಟನ ನೆತ್ತಿಗೇರಿತು. ನಾ ಒಮ್ಮೆಲೆ ಮುಂದಾಗಿ ಗಂಗೀನ್ನ ಎಳದು ಕೂಗಿ ಹೇಳಿದೆ.

"ಇಷ್ಟ ಸಾಕು. ಈಗ ಮನೀಗೆ ಹೋಗು. ನಾಳೆ ಬರುವಿಯಂತ ಒಗೀಲಿಕ್ಕೆ!"

ಆಡಿದ ಮಾತು ಆಡಿ ಹೋತು.

ಗಂಗಿ ಮಿಂಚಿನಂಗ ಅಲ್ಲಿಂದ ಕಾಲುಕಿತ್ತಳು. ಸರ್‌ಧನ ಸಾಗಿಹೋದಳು. ಮಾದೇವಗೂ ಸ್ವಲ್ಪ ಆಶ್ಚರ್ಯ ಆಗಿರಬೇಕು. ನನ್ನ ಕಡೆ ಮಿಕಿಮಿಕಿ ನೋಡುತ ಅವ ಈಜಾಡುತಿದ್ದ. ಅವಗ ಹ್ಯಾಗೆಹ್ಯಾಗೋ ಅನ್ನಿಸಿರಬೇಕು. ದಂಡಿಗಿ ಹೋಗಿ ಅರಿವೀ ತೊಟ್ಟುಕೊಂಡ. ನನ್ನ ಕಡೆ ಬೆನ್ನು ಮಾಡಿ ನಿಂತು ಧೋತರ ಹಿಂಡಿಕೊಂಡ. ಅಲ್ಲೇ ಇದ್ದ ತಮ್ಮ ತೋಟದ ಬಾವೀಕಟ್ಟೆ ಏರಿ ಸರಾಸರಾ ಸಾಗಿಬಿಟ್ಟ.

ಅವ ಹೋದ ಬಳಿಕ ಮಾತ್ರ ನನ್ನ ಮನಸ್ಸು ಮೊದಲಿನ ಹಾಗ ಉಳೀಲಿಲ್ಲ. ಅವರಿಬ್ಬರನ್ನೂ ಹಾಗ ಹೊಡೆದು ಹಾಕಿದ್ದಕ್ಕ ನನ್ನ ಮ್ಯಾಲ ನನಗ ಸಿಟ್ಟು ಬಂತು. ಅಲ್ಲೇ ಕಲ್ಲುಮ್ಯಾಲ ಕೂತುಕೊಂಡು ವಿಚಾರ ಮಾಡತೊಡಗಿದೆ. ಹಿಂದಿನ ಪ್ರಸಂಗಗಳೆಲ್ಲಾ ಒಂದಾದ ಮ್ಯಾಲ ಒಂದು ನೆನಪಾದುವು. ಅಲ್ಲೇ ನಾ ಕೂತಲ್ಲೇ ಒಂದು ದಿನಾ ಗಂಗಾ ಅಳುತಿದ್ದಳು.... ಮಾದೇವ ಆಕೀ ಗದ್ದಾ ತುಟೀ ಹಿಡಿದು ಸಮಾಧಾನ ಮಾಡುತಿದ್ದ. ನಾ ಮರೆಗೆ ನಿಂತು ಅದೆಲ್ಲಾ ಕಂಡು ಒಳೊಳಗ ನಗುತ್ತಿದ್ದೆ. ಆದರ ಈಗ?—ಗಂಗಾ ಇಲ್ಲಿ. ಅವ ಅಲ್ಲಿ. ಅಷ್ಟಕ ಇಷ್ಟು ಮಾಡಿ ಇಷ್ಟರ ತನಕಾ ತರಬೇಕು? ನಾ ನಿಜವಾಗಿಯೂ ಬಹಳ ಪಾಪಿ! ಗಂಗೀನ್ನ ಹೀಗ ಹೊಡದ ಹಾಕಲಿಕ್ಕೆ ನಾ ಯಾರು? ಆಕೀ 'ಗಂಡ' ಅಂತ ಊರಾಗ ನನ್ನ ಕರೀತಾರ.... 'ಗಂಡ' ಆದರೇನಾತು?—ನಿಜಾ ಅಂದರ ಮಾದೇವನ ಆಕೀ ಗಂಡ!—ಅವರಿಬ್ಬರೂ ಮನಸ್ಸಿನಿಂದ ಗಂಡಹೆಂಡಿರು!—ಇದರಲ್ಲಿ ನನ್ನದೇನು ನಡೀಬೇಕು? ದೇವರು ಕೂಡಿಸಿದ ಜತಿ ಅದು. ಮಾದೇವನ್ನೊ ಹೊಡದಹಾಕಿ ನನ್ನ ಆಕೀ ಜೊತೇಲಿ ಕೂರಿಸಬೇಕಂತಾರ ಈ ಮನುಷ್ಯರು!.... ಹುಚ್ಚರು!.... ಅಯ್ಯೊ? ಮಾದೇವಂದು ಆಕೀ ಸಂಗಡ ಮದಿವ್ಯಾಗಿದ್ದರ ಎಷ್ಟ ಚೆನ್ನಾಗಿತ್ತಲ್ಲ! ಗೆಳೆಯನ ಗೆಳತೀನ್ನ ನಾ ಕಟ್ಟಕೊಳ್ಳೋದು! ಛೆ! ಛೆ! ಬಹಾಳ ಪಾಪದ ಕೆಲಸ ಅದು!—

ಹಾಗಾದರ ಈಗೇನ ಮಾಡಬೇಕು? ಮಾದೇವನ ಮದಿವಿ ಅಂತೂ ಆಗಿ ಹೋಗಿ ಎರಡು ವರುಷಾತು. [illegible] ಕೊರಗತದ ಮನಸಿನಾಗ!—

ಮನಸಿನಾಗಿನ ಕೊರಗಿನಿಂದ....ಪಾಪ ...ಆದರ ಮೈ ಕೂಡಾ ಕರಗತಾ ನಡದsದ....ಇಲ್ಲಿ....ಗಂಗೀ ಮನಸ್ಸು ತಿಳೀ ಲೊಲ್ತು....ಎರಡು ವರುಷಾತು. ಆಕಿ ಏನೊ ಬೇರೇನs ಆಗಿಬಿಟ್ಟಾಳ. ಯಾರೊಂದಿಗೆ ಚೆನ್ನಾಗಿ ಮಾತಾಡೂ ಹಾಗೂ ಇಲ್ಲ. ಊಟಾನೂ ಚೆನ್ನಾಗಿ ಮಾಡೂಹಾಗಿಲ್ಲ. ಆಪರs ಇಕೀಮ ಮಾದೇವನ ಮ್ಯಾಲ ಮನಸ್ಸು ಆದsನೊ ಇಲ್ಲೊs ಹೇಳಾಕ ಬರೂಹಾಗಿಲ್ಲ. ಇಲ್ಲ ಹ್ಯಾಗ? ಇರಾಕs ಬೇಕು—ಪಿರೀತಿ....ನಿಜವಾದ ಪಿರೀತಿ ಎಂದಾರೆ ಹಾರಿ ಹೋಗ್ತದೇನು?— ಈಗ? ಅಯ್ಯೊ, ಏನೇನು ವಿಚಾರ ಬರುತಾವ ಮನಸ್ಸಿನಾಗ?—ಎಲ್ಲಾ ಒಂದೊಂದು ಮುಳ್ಳು ಗಳು....ಒಂದೊಂದs ಎದೀ ಸೇರಿ ಕೊರೀತಾ ಇದ್ದುವು!— ಮತ್ತ ಆರು ತಿಂಗಳು ಹಾಗs ನಡದಿತ್ತು ಎಲ್ಲಾ!

* * *
* * *

"ಎಲ್ಲಾ ಅಂದರs?—ನಿನ್ನ ಮದಿವಿ ಆದರೂ ಆಗಿತ್ತೊ ಇಲ್ಲೊ ಇಪ್ಪರಾಗ?—"

* * *

"ಮದಿವಿ! ಹಃಹಃ" ಈಪ್ಪರ ಸ್ವಲ್ಪ ನಕ್ಕು ಮುಂದ ಹೇಳಿದ. "ಮದಿವಿ ಅಂದರ ನಮ್ಮಂತವರಿಗೆ ಪುಕ್ಕಟಿ ಆಗೂ ಹಾಗೆಲ್ಲಿ ಆದs?—ಮದಿವಿ ಅಂದರ ಬರೀ ಇಬ್ಬರು ಗಂಡೂ-ಹೆಣ್ಣೂ ಕೂಡೂ ಪ್ರಸಂಗ ಆಗಿದ್ದರ?—ಅಲ್ಲರಿ,— ನಾನೂರು ರೂಪಾಯಿಗಳನ್ನ— ಅವರು ಬೇಡಿದಷ್ಟು ಬಂಗಾರಾನ್ನ ಹೆಣ್ಣಿನವರಿಗೆ ಕೊಡಬೇಕಾಗತದ. 'ತೆರವು' ಅಂತಾರ ಅದಕ್ಕ ನಮ್ಮಲ್ಲಿ!—ಸ್ವಲ್ಪ ಸಿರಿವಂತರಿದ್ದರ ತೆರವು ಸ್ವಲ್ಪ ಕಡಿಮಿ ಆಗತದ. ನಮ್ಮಂತಾ ಹೊಲಾ ಮನೀ ಏನೂ ಇಲ್ಲದ ಗತಿಗೇಡಿಗಳಿಗೆ ಅದು ಇನ್ನೂ ಉಪ್ಪಾಗಿ ಬೆಳೀತದ. ನಾನೂರು ರೂಪಾಯಿ!—ನಾಕು ರೂಪಾಯಿ ಸಿಗದಂತಾ ಹೊತ್ತಿನಾಗ ನಾನೂರು ರೂಪಾಯಿ ಎಲ್ಲಿಂದ ತರೋದ್ರಿ? "ಸಾಲಾ ತಂದು ಮಾಡೂನೇನೋ ಮಗನs ಮದಿವೀ" ಅಂತ ನನ್ನ ಮುದುಕ ತಾಯೀತಂದಿ ಒಂದಿನ ತಡೀಲಾರದs ಕೇಳಿದ್ರು. ನಾ ಚಕ್‌ಚಕ್ ಹೇಳಿಬಿಟ್ಟೆ, "ನನಗೇನೂ ಬೇಕಾಗಿಲ್ಲ ಈಗ ಮದಿವಿ" ಅಂತ. "ಇಪ್ಪತ್ತು ವರುಷದ ಕೋಣಾಗೇದ. ಇನ್ನೂ ಮದಿವೀ ಮಾರೀ ಕಂಡಿಲ್ಲ....ಇವನ ಓರಿಗಿಯವರು ಎರಡೆರಡು ಮಕ್ಕಳಾ ಹೆತ್ತರು" ಅಂತ ಊರಾಗಿನ ಮಂದಿ ನಗೂದೂ ನನ್ನ ಕಿವಿಗಿ ಬಿದ್ದಿತ್ತು. ಆದರ ಮಾಡೂದೇನು?—ಎಲ್ಲಾ ತಾಳಕೋಬೇಕಾತು. ಆದರs ನನ್ನ ಮುದುಕ ತಾಯೀತಂದಿ ಹ್ಯಾಗ ತಾಳಿ… ಮುದುಕರು.... ಅವರಾಗ ಅಭಿಮಾನ ಬೇ… ಗೊತ್ತಾಗದ ಹಾಗs ಗೌಡರ ಬಳಿ ಸಾಲ… ಮದಿವೀ ತಯಾರಿ ನಡದಾಗ ಮಾತ್ರ … ಗೊತ್ತಾತು, ಆಗಿಂದಾಗs ನನ್ನ ತಲೀನ… ಅವರಾಗs ಇನ್ನೊಂದು ದೊಡ್ಡ ಕಾರಣವೂ…

ಅಂದು ಮಾದೇವ ತಮ್ಮ ತೋಟ… ಮೇಯಿಸುತಿದ್ದ. ಅವರ ತೋಟಕ್ಕ … ಕೂಲೀ 'ಹೋಗಿದ್ದಳೇನೋ ಗಂಗಾ!—… ಜೊಡ್ಡಿಗಿ ಹಾಗs ಆಧಾರಾಗಿ ನಿಂತಿದ್ದಳು… ಇಪ್ಪತ್ತು … ಏನೂ ಅಂತರ ಇರಾಕಿಲ್ಲ…

ನಾ ದನಾ ಹೊಡಕೊಂಡು ಹೋಗಿ… ಹೊಳೀಲಿ ನಿಂತರ ಅಲ್ಲೀದೆಲ್ಲಾ ಕಾಣ… ಮಾದೇವ ಒಂದs ಸಮನs ಆಕೀನ ನೋಡ… ನೋಡೂ ಭರದಾಗ ಹೋರಿ ಅವನ ಕಣ್ಣು ತ… ಇದ್ದ ಜೋಳದ ಬೆಳಿಗೆ ಹೊಕ್ಕದ್ದೂ ಅವ… ಇಪ್ಪ ಕಣ್ಣ ಹಚ್ಚಿ ನೋಡುತಿದ್ದ ಆಕೀನ್ನ.

ಗಂಗೀನೂ ಜೊಡ್ಡಿಗಿ ಆತು ನಿಂತಿರೂ ಹಾ… ನೋಡುತಿರೂ ಹಾಗ ಕಾಣಿಸಿತು. ಆತು....ನೋ… ತಿದ್ದ ನನ್ನ ತಲೀಮ್ಯಾಲ ಕೆಂಡಾ ಇಟ್ಟಂಗಾ… ಮೈಮ್ಯಾಲ ನೀರು ಹಾಕುತಾ ವಿಚಾರ ನಡೆ… ಎಲ್ಲಾ ಹಾಳಾಗಿ ಹೋಗಲೊಲ್ತು....ನಾನು … ಬಿಡಬೇಕು—ಅಂತ ಮನಸಿನಾಗ ಬಂತು… ಮನೀ ಬಿಟ್ಟೆ. ಈಗ ನಿಂತೀನಿ ನಿಮ್ಮ ಮುಂ…

* *
* *

ಈಪ್ಪರ ಮುಗಿಸುತ್ತs ಒಂದು ಉಸಿರ… ಒಂದು ಭಾರಿ ಹಣೀ ಹೊಡಕೊಂಡ. ಮ… ಕೂತ ಹಾಗs ನಾ ಅವನ ಕಡೆ ನೋಡುತಿ… ಹಳ್ಳಿಗಳಲ್ಲಿನ ಮಾದರೀ ಮನುಷ್ಯನ ಹಾಗ … ನನಗ. ಚಟ್ಟನs ಕೆಳಗಿಳಿದು ಅವನ ಕೈಹಿಡಿ…

"ಏಳಪಾ, ಹೀಗ ಕೂತರ ಹ್ಯಾಗ?—ನೋ… ಮಾಡು ನಡಿ; ಹಸಿದು ಬಂದಿದ್ದೀ. ಮುಂದಿ… ನೋಡುವಾ ಅಂತ."

ಈಪ್ಪರನ್ನ ಕರೆದುಕೊಂಡು ಅಟ್ಟದ ಮಾ… ನಾ ಕೆಳಗ ಬಂದೆ. ಇನ್ನು ಅಡಿಗೇಮನೆಯ… ಕರೆದೊಯ್ಯುವವನಿದ್ದೆ. ಅಪ್ಪರಾಗs ಈಪ್ಪ…

ಕೊಸರಿಕೊಂಡು ಒಂದs ಓಟಕ್ಕ ಬೀದಿಗೆ ಜಿಗಿದುಬಿಟ್ಟ.

" ಗೆಣಿಯಗ ಗೆಣತಿ ಕಾಕಾನ ಮಗಳು
ಅವನ ಹೆಂಡ್ತಿ ಹ್ಯಾಗಾಗುವಳು ? "

ಅಂತ ಏನೇನೊ ಪುಟಪುಟಿಸುತಾ, ನಾನು—ಏಯ್—ಏಯ್—ಅಂತ ಜಿರಗಾಗಿ ಹೆಚ್ಚನ್ನಾಕ ಬರದs ಕೂಗು ತಿರೋವಾಗ ಎಲ್ಲೋ ಮಾಯವಾಗಿಬಿಟ್ಟ.

* *

ಹೊರಗ ಬಂದು ನೋಡಿದೆ....

ದಿನದ ಹಾಗs ಗಲಾಟೆ ನಡದಿತ್ತು. ಮೋಟಾರು ಭುರ್‌ರ್‌ರ್ ಅಂತ ಸಾಗಿದ್ದುವು. ಟಾಂಗಾ-ಜಟಕಾ-ಬೈಸಿಕಲ್ಲು ಎಲ್ಲಾ ಎಂದಿನಂತೆ ಭರಾಭರಾ ಓಡುತಿದ್ದುವು. ಜನಾ ಎಲ್ಲಾ ತಮ್ಮ ಅವಸರದಲ್ಲೇ ಇದ್ದಂತಿತ್ತು. ದಿಟ್ಟಿ ಹೋಗೂ ವಷ್ಟು ದಾರಿ ನಿಟ್ಟಿಸಿ ನಿಟ್ಟಿಸಿ ನೋಡಿದರೂ ಈಶ್ವರನ ಆ ಚಂದಿರುಮಾಲಿನ ತಲೀ ಸುಳಿವೇ ಇಲ್ಲ !—

ನನ್ನ ಅವಸರ ಕಂಡು ಅಮ್ಮ ಹೊರಕ್ಕೆ ಬಂದಳು. "ಏನೋ ಅದು ಎಷ್ಟ ನೋಡೂದು ಅದು! " ಅಂತ ಕೇಳಿದಳು. ನನ್ನ ಬಾಯಿಂದ ಮಾತಾದರೂ ಹ್ಯಾಗ ಹೊರಡಬೇಕು ಆಗ? ಆಕಾಶದ ಕಡೆ ದಿಟ್ಟೀ ಇಟ್ಟ ಹಾಗs ನಿಂತಿದ್ದೆ.

ಅದಾದ ನಾಲ್ಕಾರು ದಿನಗಳಲ್ಲೆ ನಮ್ಮ ಪರೀಕ್ಷೆ ಪ್ರಾರಂಭಾಗಿತ್ತು. ಮುಗಿಯತ್ತಲೂ ಬಂದಿತ್ತು. ಇನ್ನೊಂದs ವಿಷಯ ಏನೋ ಉಳಿದ ಹಾಗಿತ್ತು. ಅದನೊಂದನ್ನ ಬರದು ಬಿಟ್ಟಿದ್ದರ ಒಂದು ದೊಡ್ಡ ಕುತ್ತಿನಿಂದ ಪಾರಾಗೂ ಹಾಗಿತ್ತು. ಆದರs ಆ ದಿನಾ ಹ್ಯಾಗೊ ಏನೊ....ಎಂದೂ ಕಿಶೆಯಲ್ಲಿನ ಹಣಾಹಾಕಿ ವೃತ್ತಪತ್ರಾ ಓದದವ ಅಂದು—ಸಹಜವಾಗಿಯೆ ಬೀದಿಯಲ್ಲಿ ಕೂಗುತಾ ಹೋಗೋ ಹುಡುಗನ್ನ ಕರೆದು ಒಂದು ಪತ್ರಿಕೆ ತೆಗೆಮಕೊಂಡೆ. ಬೆಳಗಾವಿಯಲ್ಲಿ ಹೊರಡೋ ದಿನಪತ್ರಿಕೆ ಅದು....ತೆರದು ನೋಡಿದೆ. ಒಳಗಿನದೊಂದು ಹಾಳೀ ಮ್ಯಾಲ ದಪ್ಪಕ್ಷರದಾಗ ಅಚ್ಚು ಹಾಕಿಸಿದ್ದರ ಮ್ಯಾಲ ನನ್ನ ದಿಟ್ಟಿ ತಟ್ಟನs ಹೋತು.

"ಕಳ್ಳತನಕ್ಕಾಗಿ ನಾಲ್ಕು ವರುಷ ಶಿಕ್ಷೆ! "

ಕುತುಕಿಯಾಗಿ ಕೆಳಗಿನ ವಿವರ ಎಲ್ಲಾ ನೋಡಿದೆ. ನೋಡುನೋಡುತಾ, ಆಶ್ಚರ್ಯ, ದುಃಖ, ಒಂದರ ಮ್ಯಾಲೊಂದು ಬಂದು ಮುತ್ತಿದುವು. ಈಶ್ವರಗ ನಾಲ್ಕು ವರುಷದ ಶಿಕ್ಷೆ!—ಅದೂ ಕಳ್ಳತನಕ್ಕ !—ಆದೂ ಹತ್ತುರೂಪಾಯಿ ಕದ್ದದ್ದಕ್ಕ! ಬಹಳ ಮಾಡಿ ಮುಂಬಯಿಗಿ ಹೋಗೂ ಹಾದೀ ಖರ್ಚಿಗಂತ ಅವ ಇಂತಾ ಕೆಲಸ ಮಾಡಿರಬೇಕು. ತನ್ನ ತಪ್ಪು ಒಪ್ಪಿಕೋಡ....ಅದೂ ಜನನ್ಮಾದ್ದನ್ನೇ ಮಾಡಿದ ನೆನ್ನಬೇಕು. ನಾಲ್ಕು ವರುಷ ಪುಕ್ಕಟೆ ಊಟಾ ಆದರೂ ಸಿಗುವ ಹಾಗಾತು ಅವಗ!—ಆದರs ಮಾನ?—ಮಾನ!—ಎಲ್ಲೀ ಮಾನ ?—ಎಲ್ಲೀ ಅಪಮಾನ ? ಇಂತಾ ಪರಿಸ್ಥಿತಿಯಲ್ಲಿ ಆದನ್ನೆಲ್ಲಾ ತಕ್ಕೊಂಡ ಕೂಡೂದಂದರ ಹುಚ್ಚುತನಾನ ಅನ್ನಬೇಕು! ಹೌದು! ಶೀರಾ ಹುಚ್ಚುತನ!....ಹೀಗ ಇನ್ನೂ ಏನೇನೋ ವಿಚಾರ ಬಂದುಬಿಟ್ಟು ತಲೀನs ಕೆಟ್ಟು ಹೋತು.

ಪರೀಕ್ಷೆ ಪ್ರಾರಂಭಾಗಿ ಪ್ರಶ್ನಕಾಗದ ಕೈಯಾಗ ಬಂದರೂ ಆ ವಿಚಾರ ನಿಲ್ಲಲಿಲ್ಲ. ಮತ್ತ ಜೋರಾಗಿ ಸುರು ಆತು.

....ಇನ್ನು ಗಂಗಮ್ಮನ ಗತೀ ಏನು?—ಮದಿವೀ ನಿಶ್ಚಯ ಆಗೇದ.... ಮದಿವೀ ತಯಾರಿನೂ ಆಗೇದ.... ಆದರs ಮದಿವೀ ಮಾಡಿಕೋಬೂ ಮದುಮಗ ಇಲ್ಲ....ಸರಕಾರದ ಅನ್ನಛತ್ರದಲ್ಲಿ....ಉಶ್ ಉಶ್....ಏನಿದು ನಮ್ಮ ಹಳ್ಳೀ ಜನರ ಕರುಣಾದ ಕತಿ !—ಅತ್ತ ಮಾದೇವ....ಇತ್ತ ಗಂಗಮ್ಮ. ಇನ್ನೊಂದ ಕಡೆ ಆ ಗೌಡರ ಸೊಸಿ !—ಮತ್ತೊಂದು ಕಡೆ ಈ ಈಶ್ವರ!—ಇದೆಲ್ಲಾನ್ನೂ ನೋಡುತಾ ಅಲ್ಲೇ ಕೂತಿರೂ ಆ ಹಳ್ಳೀ ಜನರು !—ಎಲ್ಲಾ ಹಾಳು ಹಾಳು !—ಹಳ್ಳಿಯವರ ಬಾಳು ಅಂದರ ಹೀಗs ಏನೊ! ಅಂತೂ ಇಂತೂ ಅಂತೆ! ಇನ್ನಮುಂದ ಮಹಾದೇವನ ಮನಸು ಎಲ್ಲಾರೇ ತಿರುಗಿದರs? ಅತ್ತ ಗಂಗಮ್ಮನೂ ಕೆಟ್ಟುಹೋಗೂದು.... ಇತ್ತ ಈ ಗೌಡರ ಸೊಸೀನೂ ಕೆಡೋದು. ಗೌಡರ ಸೊಸಿ!—ಆ ಮ್ಯಾಲ ಇವರಿಬ್ಬರಲ್ಲಿ ಯಾರು "ಗೌಡರ ಸೊಸಿ?"—ಈಶ್ವರನನ್ನ ಈಗ ಹೋಗಿ ಕೇಳಿದರ ಹೇಳಬಹುದಲ್ಲ, 'ಇಬ್ಬರೂ' ಅಂತ. ಈ ಮುಂದಿರುವ ಪ್ರಶ್ನ ಏನು ಕಷ್ಟ ಅಲ್ಲ ಬಿಡಿಸೂದು....ಆದರ ಇದೊಂದು ಬಿಡಿಸಲುಬಾರದ ಪ್ರಶ್ನ ಆಗಿ ಕುಳಿತsದ—ಇನ್ನೂ ಎಷ್ಟೆಷ್ಟೊ ವಿಚಾರ ಸುಳಿದಾಡಿ ಮಾಯವಾದುವು. ಇಂತಾದರಾಗ ಪ್ರಶ್ನಕ್ಕ ಉತ್ತರ ಏನೇನು ಬರೆದೆನೋ.... ಏನೋ!—ಅಂತೂ ಒಮ್ಮೆ ಪರೀಕ್ಷೆ ಮುಗಿಸಿಕೊಂಡು ಮನೀಗೆ ಬಂದದ್ದು ಮಾತ್ರ ನಿಜ.

ಅದಾದ ಒಂದು ತಿಂಗಳ ಮ್ಯಾಲ—ಬರೀತಾ ಕುಳಿತಿದ್ದೆ. ಬೆಳಗಿನಾಗs ಪರೀಕ್ಷೆಯ ಪರಿಣಾಮ ಹೊರಬೀಳೂದಿತ್ತು. ಎಲ್ಲಾರ ಹಾಗ ಒಳಿ ಹುರುಪಿನಿಂದ ಪರಿಣಾಮ ತಿಳಕೊಳ್ಳಾಕ ಹೋಗಬೇಕಾಗಿರಲಿಲ್ಲ. ಗೊತ್ತs ಇತ್ತು ನನಗ ನನ್ನ ಪರೀಕ್ಷೆಯ ಪರಿಣಾಮ!

ಅಷ್ಟರಲ್ಲಿ ಸದಾಶಿವ ಸಾಯಕಲ್ ಗಂಟೀ ಜೋರು ಜೋರಾಗಿ ಹೊಡೀತ ಒಳಗ ಬಂದ.

“ ಮಗನss ! ಫರ್ಸ್ಟ್‌ಕ್ಲಾಸ್ ಪಾಸ್ ! ”

ನನಗ ಒಮ್ಮೆಲೆ ಆಶ್ಚರ್ಯಾತು !

ಫರ್ಸ್ಟ್‌ಕ್ಲಾಸ್‌ದಾಗ ಪಾಸ್ !....ಛೆ! ಛೆ! ಕನಸಿನಾಗ ಪೇನೊ, ಇಲ್ಲ ನಿಜವಾಗಿಯೂ ಸದಾಶಿವನ ಮಾತು ಕೇಳು ತ್ತಿದ್ದೆನೊ ಅನ್ನಿಸಿತು. ಆದರs ಸದಾಶಿವನ ಮಾರಿ ಒಮ್ಮಿಲೆ ಇಳೀತು.

“ ನೀ....ನೀ....ಫೇಲ ಆದಿಯಲ್ಲೋ ? ”

ಈಗ ಮಾತ್ರ ನನಗ ಎಲ್ಲಾ ತಿಳೀತು. “ ಹಾಳಾಗಿ ಹೋಗಲಿ ಬಿಡೋ. ಈಗ ನನ್ನ ಕತಿ ಮುಗಿಸಾಕ ಹೊತ್ತು ಕೊಡು. ದಯಮಾಡಿ ಹೊರಗ ಹೋಗು. ಮತ್ತ ಬಾ ಬೇಕಾದರ, ಫೇಡೇ ತಗೊಂಡು ಹೊಡಿಯೂನಂತ! ”

ನನ್ನ ವಿಚಿತ್ರದಿಟ್ಟಿಯಿಂದ ನೋಡುತಾ ಸದಾಶಿವ ಹೊರಟುಹೋದ.

ಕತೆ ಎಲ್ಲಾ ಮುಗೀತಾ ಬಂದsಧ....ಆದರs ಮನಸ್ಸಿನಲ್ಲಿ ಸೊಗಸs ಇಲ್ಲ....ಸದಾಶಿವಗ ಫೇಡೇ ತಾ ಅಂತ ಒಳೆ ಹುರು ಪಿನಿಂದ ಹೇಳೀನಿ. ಅವ ನಿಜವಾಗಿಯೂ ತಂದುಬಿಟ್ಟರ ಅವನ್ನ ಗಂಟಲಾಗಿಂದ ಇಳಿಸೂದು ಹ್ಯಾಗ ?—ಅಲ್ಲಿ— ಹಿಂಡಲಗೀ ಜೈಲಿನಲ್ಲಿ ಈಶ್ವರ ಕಲ್ಲು ಒಡೀತಿದ್ದಾನ....ಹಳ್ಳಿ ಯಲ್ಲಿ ಅವನ ಮುದುಕ ತಾಯಿತಂದಿ ಮಗನಿಗಾಗಿ ಹೊಳೀ ಹರಿಸುತಿದ್ದಾರ....ಗೌಡರ ಸೊಸೀ ನಂ. ೧ ಮುನ್ಯಾಗ ಕೂತು ಗಲ್ಲಕ್ಕ ಕೈ ಇಟ್ಟು ಕಣ್ಣೀರು ಹಾಕುತಿದ್ದಾಳ. ಮಹಾ ದೇವ ಹೋರೀ ಮೇಯಿಸುತಾ ಗೌಡರ ಸೊಸಿ ನಂ. ೨ ಗಂಗಮ್ಮನ್ನ ಬಿಟ್ಟೂಬಿಡದs ನೋಡುತಿದ್ದಾನ. ಆಕಿ ಕರುಣಾ ತುಂಬಿದ ಕಣ್ಣು ಎಲ್ಲೋ ತಿರುಗಿಸಿಬಿಟ್ಟಾಳ. ತಿಂದುತಿಂದು ಕೊಬ್ಬಿದ ಆ ಹೋರಿ ಅವರನ್ನ ನೋಡಿ ನಗುನಗುತs ಹಸುರಾಗಿ ಬೆಳೆದ ಜೋಳದ ಬೆಳೀ ತಿಂದು ತೇಗತೊಡಗೇದ. ನಾ....?....ಫೇಡೇ ತಿಂತೀನಿ ಫೇಡೇ.... ಹಾಯ್‌ಹಾಯ್ ! ಎಂತೆಂತಾ ವಿಚಿತ್ರ ಪ್ರಸಂಗಗಳಿವು!—

ಕೈಯಾಗಿನ ಲೆಕ್ಕಣಿಕಿ ಯಾವಾಗೋ ಕೆಳಗ ಬಿದ್ದಿತ್ತು. ಆದs ಕೈ ತಲೆಯ ಕಡೆ ಯಾವಾಗೋ ಹೋಗಿತ್ತು. ಅಮ್ಮ ಯಾವಾಗ ಬಂದಳಂಬೂದು ನನಗ ಗೊತ್ತಾಗಿರಲಿಲ್ಲ. ಆಕೆ ಬಂದು ತಲೀಮ್ಯಾಲ ಕೈ ಇಟ್ಟಾಗ ಮಾತ್ರ ಗೊತ್ತಾತು.... ಮೆಲ್ಲಗs ಅಮ್ಮನ ಕಡೆ ಕತ್ತೆತ್ತಿ ನೋಡಿದೆ....ಅಮ್ಮನ ಕಣ್ಣು ತುಂಬಿ ಬಂದಿದ್ದಹಾಗ ಕಾಣಿಸಿತು. ಯಾಕೋ ಏನೊ ನನ್ನ ಕತ್ತು ಒಮ್ಮೆಲೆ ಬಿಗಿದು ಬಂದಿತು— ಅಂತ ಕಿರಚಿದೆ. ನನ್ನನ್ನು ಅಪ್ಪಿಗೆಯಲ್ಲಿ ... ಅಮ್ಮ ಸಂತವಿಸೂ ಸ್ವರದಾಗ ಹೇಳಿದಳು.

“ ಹೋಗಲಿ ಬಿಡೋ ನನ್ನ ಕಂದಾ ! ... ಇಲ್ಲಾದರs ಮುಂದಿನ ವರುಷ ಪಾಸಾದೀಯಂತ! ಯಾತಕ್ಕ ಚಿಂತಿ ? ದೇಶಕ್ಕೆಲ್ಲಾ ನೀ ಒಬ್ಬನ ... ದ್ದೀಯೊ ಏನು ; ಈಗಾದರೂ ನಿನಗ ವಯ... ಅಷ್ಟರಲ್ಲೇ ಆದs !—ಇನ್ನೂ ಎಷ್ಟೋ ... ವಯಸ್ಸು....ಸುಮ್ಮನಾಗಪ್ಪ....ಹೀಗ ಮಾಡಿ... ತಡ್ಯಾಕಾಗಬೇಕು ನನಗ ?— ಕೆಳಗ ನಡಿ... ಮೊಸರೂ ಅವಲಕ್ಕೀ ತಿನ್ನುವಿಯಂತ. ”

ನನಗ ಒಮ್ಮಿಲೆ ನಗೀಬಂತು! ನನಗ ಯಾ... ಆಗೇದ! ಅಮ್ಮ ಏಸಂತಾಳ !

ಹ್ಹಾ ! ಹ್ಹಾ ! ಅಂತ ನಕ್ಕೆ !

ನನ್ನ ನಗು ನೋಡಿ ಅಮ್ಮನ ಮಾರೀಮ್ಯಾ... ನಗೀ ಮೂಡಿತು. ಅಮ್ಮ ನನ್ನ ಕೈ ಹಾಸ... ಲ್ಲಿಟ್ಟುಕೊಂಡು ಕೆಳಗ ಕರತಂದಳು.

ಮಣೆಯ ಮ್ಯಾಲ ಕೂತೆ. ಮತ್ತ ನೊದ... ವಿಚಾರ ಬರೂದು ಪ್ರಾರಂಭಾತು. ಒಂದೊ... ಗಂಟಲಾಗಿಂದಿಳಿಸಬೇಕಾದರ ಹ್ಯಾಗ್ಯಾಗೋ ... ಅಮ್ಮ ಅದೂ ಇದೂ ಏನೇನೋ ಕೇಳುತಿದ್ದ... ಮಾತಿನ ಕಡೆ ನನ್ನ ಲಕ್ಷ್ಯs ಇರಲಿಲ್ಲ. ಏನ... ಡದs ಹಾಗs ಒಂದೊಂದ ಅಗಳು ಬಾಯಾ... ಕೂತಿದ್ದೆ—ಹೂಂ, ಇಲ್ಲ—ಅಂತ.

ನಾ ಕೂತ ಎದುರಿನಲ್ಲೇ ಒಂದು ದೊಡ್ಡ ಕಿ... ಆ ಕಿಟಕಿಯೊಳಗಿಂದ ಸೂರ್ಯ ಮೆಲ್ಲಗ... ನೋಡುತಿದ್ದ. ಅವನ ಕಿರಣ ನನ್ನ ಕಣ್ಣು... ತಡ: ಅವನ ಕಡೆ ನೋಡುತಾ ನಾ ಮನಸಿನಾ...

“ ನೀನಾರೆ ಹೇಳಪ್ಪ, ನಿನಗೂ ಎಲ್ಲಾ ... ಅಂತಾರ ಜನರು. ಹೇಳು....ಗೌಡರ ಸೊ... ಇದರಾಗ ?—ನಂ. ೧? ನಂ. ೨ ?—ಯಾರು... ”

ಮರುಚಣದಾಗs ನನಗ ತಡೀಲಾರದಷ್ಟು ...

“ಯಾಕೋ? ಮ್ಯಾಲಿಂದಮ್ಯಾಲ ನಗುತೀ? ... ಅಂತ ಬಹಾಳ ಆನಂದಾಗೇದೇನು—?” ... ನಗುತಾ ಕೇಳಿದಳು.

ನಾ ಖೊಕ್ಕನs ನಕ್ಕುಬಿಟ್ಟೆ !!!



ನಗಬೇಡಿ!

ಸೆರೆಮನೆಯ ಅಧಿಕಾರಿ (ಸೆರೆಯಾಳುಗಳಿಗೆ):— ನಿಮ್ಮದೇನಾದರೂ ತಕರಾರು ಅದೆ ಏನು ?

ಸೆರೆಯಾಳು:— ಹೌದು. ಬಹಳ ದಿನದಿಂದ.

ಅಧಿಕಾರಿ:— ಏನದು ?

ಸೆರೆಯಾಳು:— ಈ ಜೇಲಿಗೆ ಬಾಗಿಲುಗಳು ಬಹಳ ಕಡಿಮೆ ಅವೆ.

* * *

ಮಳೆ ತರಿಸಲಿಕ್ಕೆಂದು ದೇವರ ಪ್ರಾರ್ಥನೆ ಮಾಡಲಿಕ್ಕೆ ಒಬ್ಬ ಮುದುಕನು ತನ್ನ ಗುಂಪಿನವರನ್ನು ಕರೆದ ಕೂಡಲೆ ಅವರೆಲ್ಲರೂ ಬಂದರು. ಅವರನ್ನೆಲ್ಲ ಸಿಡುಗಣ್ಣಿಂದ ನೋಡುತ್ತ ಮುದುಕನೆಂದನು "ನೀವೆಲ್ಲರೂ ನಾಸ್ತಿಕರು. ದೇವರಿಗೆ ಮಳೆ ಕೇಳಲಿಕ್ಕೆ ಬಂದವರು ಒಬ್ಬರಾದರೂ ಛತ್ರಿಯನ್ನು ತಂದಿದ್ದೀರಾ ?"

* * *

ಡಾಕ್ಟರ:— ಸತ್ತನೆಂದು ತೋರುತ್ತದೆ!

ರೋಗಿ:— ಇಲ್ಲ ಡ್ಯಾಕ್ಟ್ರ, ಇನ್ನೂ ಜೀವದಿಂದ್ದೇನೆ.

ನರ್ಸ:— ಸುಮ್ಮನೆ ಮಲಗೋ, ಮಾತಾಡಬೇಡಂತ ಹೇಳಿಲ್ಲ ನಿನಗ?

* * *

ಪ್ರಿಯ:— ಪ್ರಿಯೇ, ನಿನ್ನ ಚಿತ್ರವು ಯಾವಾಗಲೂ ಕಂಣೊಳಗೇ ಇರುತ್ತದೆ.

ಪ್ರಿಯೆ:— ನಿಮ್ಮ ಕಂಣೊಳಗೆ ಅಷ್ಟು ಸಂಣವಳಾದೆನೆ ನಾನು ?

* * *

ಶಿಕ್ಷಕ:— ಪುಸ್ತಕಗಳು ಎಲ್ಲಿವೆಯೋ ? ಪುಸ್ತಕ ಇಲ್ಲದೆ ಸಾಲೆಗೆ ಬಂದರೆ ಏನೆನ್ನುತ್ತಾರೆ ಗೊತ್ತೊ ?

ವಿದ್ಯಾರ್ಥಿ:— ಹೆಡ್ ಮಾಸ್ತರ ಅನ್ನುತ್ತಾರೆ.

* * *

ಹೊಸಬ:— ಈ ತೋಟದೊಳಗಿನ ಕೆಲವು ಹೂಗಳನ್ನು ಹರಿಯಲೇನಪ್ಪ ?

ತೋಟಗಾರ:— ಓಹೋ !

ಹೊಸಬ:— ಹಾಗಾದರೆ ಹೂ ಹರಿಯಬಾರದೆಂದು ಏನು ನೀಯಮವಿಲ್ಲ.

ತೋಟಗಾರ:— ಯಾಕಿಲ್ಲ ? ಅದ.

ಹೊಸಬ:— ಹಾಗಾದರೆ ಹೂ ಹರಿದರೆ ನೀವು ಹಿಡೀತಿರೇನು ?

ತೋಟಗಾರ:— ಓಹೋ ಹೌದು ಮತ್ತ.

* * *

ಗಿರಾಕಿ:— ನೀವೇನು ಅಂಗಡಿಕಾರರೋ ಸುಲಿಗೆಗಾರರೋ ? ೧೦ ರೂಪಾಯಿ ಕೋಟಿನ ಅರಿವೆ ತೆಗೆದುಕೊಂಡರೂ ಒಂದು ವರ್ಷ ಕೂಡ ತಾಳಿಕೆ ಬರಲಿಲ್ಲ ?

ಅಂಗಡಿಕಾರ:— ಒಂದು ವರ್ಷವಂತೆ! ನೀವು ಕೊಟ್ಟ ಹತ್ತು ರೂಪಾಯಿ ನನಗೆ ಒಂದು ದಿನಕ್ಕೆ ಕೂಡ ಸಾಕಾಗಲಿಲ್ಲ.

* * *

ತಂದೆ:— ರಾಮ್ಯಾ, ಸಾಲೆಗೆ ಯಾಕೆ ಹೋಗುವದಿಲ್ಲವೋ?

ರಾಮ್ಯಾ:— ಮಾಸ್ತರರು ಆಡಿದ ಶಬ್ದಗಳನ್ನು ತಿರುಗಿ ತಕ್ಕೊಳ್ಳದಿದ್ದರೆ ನಾನು ಸಾಲೀವಳಗ ಕಾಲುಹಾಕುವದಿಲ್ಲ.

ತಂದೆ:— ಮಾಸ್ತರೇನೆಂದರೋ ನಿನಗೆ ?

ರಾಮ್ಯಾ:— ನಡೀ ಸಾಲೀ ಬಿಟ್ಟು ಹೊರಗ ಅಂದ್ರು.

* * *


ಪೋಲೀಸ ಖಾತೆಗೆ ಸೇರುವ ಉಮೇದವಾರನಿಗೆ ಪರೀಕ್ಷಕನು ಕೇಳುತ್ತಾನೆ:— ಒಬ್ಬ ಕಳ್ಳನು ತಾಸಿಗೆ ೪೦ ಮೈಲಿನ ವೇಗದ ಮೋಟರಿನಲ್ಲಿ ಕೂತು ನಿನ್ನ ಬೆನ್ನಟ್ಟಿದರೆ ನೀನೇನು ಮಾಡುವೆ ?

ಉಮೇದವಾರ:— ತಾಸಿಗೆ ಐವತ್ತು ಮೈಲು ಓಡುವೆ.

* *

ಡ್ರ್ಯಾಯವರ್:— ಮೋಟರಿನ ವಿಷಯಕ್ಕೆ ನನಗೆ ಗೊತ್ತಿದ್ದ ಸಂಗತಿಗಳಿಂದ ಒಂದು ಪುಸ್ತಕವನ್ನು ಬರೆಯಬಹುದು.

ಪ್ರವಾಸಿ:— ಹೌದು. ಆದರೆ ಗೊತ್ತಿಲ್ಲದ ಸಂಗತಿಗಳಿಂದ ಒಂದು ಆಸ್ಪತ್ರಿಯನ್ನು ತೆರೆಯಬಹುದೆಂದು ತೋರುತ್ತದೆ.



ನಾಯಿಯ ಮೀಮಾಂಸೆ

"ಶ್ರೀಕಂಠ"

ಆ ರಾತ್ರಿ ನಮ್ಮ ನಾಯಿಗೆ ನಿದ್ರೆ ಹತ್ತಲಿಲ್ಲ. ಮಿಕ್ಕ ಗಳಿಗೂ ರಾತ್ರಿ ನಿದ್ರೆ ಇರುವುದಿಲ್ಲ ಎಂಬುದು ಮೊ ಸಲ ಕಂಡುಬಂದಿತು ನಮ್ಮ ನಾಗರಿಕ-ನಾಯಿಗೆ.

'ಸೇವಾ ಶ್ವವೃತ್ತಿರಾಖ್ಯಾತಾ' ಎಂಬ ಸಂಸ್ಕೃತ ವಾಕ್ಯವು ಮನುಸ್ಮೃತಿಯಲ್ಲಿದೆ. ಸ್ಮೃತಿಗಳ ಕಿಡಿಗೇಡಿ ಬುದ್ಧಿಗೆ ಈ ವಾಕ್ಯಕ್ಕಿಂತ ಹೆಚ್ಚು ಸಮರ್ಪಕವಾದ ಉದಾಹರಣೆ ಬೇಕಾಗಿದೆಯೆ? ಜನರನ್ನು ಬಯ್ಯುವುದು, ಅವರಿಗೆ ತಿಳಿಯದಂತೆ ಸಂಸ್ಕೃತದಲ್ಲಿ ಬಯ್ಯುವುದು! ಮೇಲೆ ಯಾರನ್ನು ಬಯ್ಯುವರೋ ಅವರಿಗೆ ಸಂಸ್ಕೃತ ಭಾಷೆಯನ್ನು ಕಲಿಯಲು ಅಧಿಕಾರವಿಲ್ಲೆಂದು ಹೇಳುವುದು! ಆದರೆ ಇಂದಿಲ್ಲ ನಾಳೆ ತಾವು ಬರೆದ ಗ್ರಂಥಗಳನ್ನು ಸುಡಬೇಕೆನುವ ಕ್ರಾಂತಿಕಾರರು ಹುಟ್ಟುವರೆಂಬುದು ತ್ರಿಕಾಲಜ್ಞಾನಿಗಳಾದ ಸ್ಮೃತಿಕಾರರಿಗೆ ತಿಳಿಯದೆ ಹೋಯಿತಲ್ಲವೆ? 'ಸೇವಾ ಧರ್ಮವು ನಾಯಿಯ ವೃತ್ತಿಯಂತೆ'! ತಾವು ತ್ರಿಕಾಲಗಳಲ್ಲಿ ಗತಿಯುಳ್ಳವರೆಂಬ ಹೆಮ್ಮೆಯಲ್ಲಿ, ನಾಯಿಗಳು ನಾಲ್ಕು ಕಾಲುಗಳಲ್ಲಿ ಗತಿಯುಳ್ಳವರು, ತಮಗಿಂತ ಒಂದು ಕಾಲು ಹೆಚ್ಚು ಎಂಬುದನ್ನು ಮರೆತುಬಿಟ್ಟರೇನೋ? ಇಷ್ಟೆ ಅಲ್ಲ, ನಾಯಿಗಳು ಸ್ಮೃತಿಕಾರರಿಗಿಂತ ಪುರಾತನಕಾಲದವರು, ಸನಾತನ ಸಂಬಂಧದವರು ಎಂಬುದೂ ಯಾರ ಲಕ್ಷ್ಯಕ್ಕೆ ಬಂದಂತಿಲ್ಲ. ಯಮರಾಯನ ಸಂಗಡಿಗರಾಗಿದ್ದ ಸೌಭಾಗ್ಯ ನಾಯಿಗಿದೆ, ದತ್ತಾತ್ರೇಯನ ಕಾವಲುಗಾರರಾಗಿದ್ದ ದೈವೀಯತೆಯೂ ನಾಯಿಗಿದೆ, ಜನಮೇಜಯನ ಯಜ್ಞದಲ್ಲಿ ಹಣಕಿಕ್ಕಿದ ಸಾರಮೇಯನ ಸಂಬಂಧವೂ ನಾಯಿಗಿದೆ. ಇಂತಹ ನಾಯಿಯನ್ನು ಮುಟ್ಟುವ ಯೋಗ್ಯತೆ ಕೂಡ ಯಾರಿಗೂ ಇಲ್ಲ, ಹಳಿಯುವುದಂತೂ ದೂರವಿರಲಿ.

ನಿಜವಿದ್ದ ಸಂಗತಿ ಎಂದರೆ ಮಾನವನು ಉನ್ಮತ್ತನಾಗಿದ್ದಾನೆ, ಮದಾಂಧನಾಗಿದ್ದಾನೆ. ಕೃತಘ್ನನಾಗಿದ್ದಾನೆ! "ಇಷ್ಟೇಕೆ ನಿಮಗೆ ಸಿಟ್ಟು?" ಎಂದು ಯಾರಾದರೂ ನಮ್ಮನ್ನು ಕೇಳಬಹುದು. ದಿನಾಲು ರಾತ್ರಿ ಹತ್ತುಗಂಟೆಯ ಸುಮಾರಿಗೆ ನಮ್ಮ ಮನೆಯ ಮುಂದೆ ಬಿದ್ದುಕೊಳ್ಳುವ ನಾಯಿಯನ್ನು ನೋಡಿದಿರೆಂದರೆ ನಿಮಗೂ ಬರಿಯ ಸಿಟ್ಟು ಅಲ್ಲ, ಮಹಾತ್ಮಾ ಗಾಂಧಿಯವರ ಅಹಿಂಸಾತತ್ತ್ವದಲ್ಲಿ ಅವಿಶ್ವಾಸ ಕೂಡ ಬರುವುದು. 'ನಮ್ಮ ಮನೆ... ಬಿದ್ದುಕೊಳ್ಳುವ ನಾಯಿಯ ವೈಶಿಷ್ಟ್ಯವೇನು? ... ಗಳಂತೆ ಅದೂ ಒಂದು ನಾಯಿ' ಎಂದು ನೀ... ಏರಿಸಬಹುದು. ಆ ನಾಯಿಯನ್ನು ನೋಡಿದಾಕ್ಷ... ಮೂಗು ಏರಿಸಬೇಕೆನಿಸುವುದು. ಎಷ್ಟೋ ... ಮುಚ್ಚಬೇಕೆನಿಸುವುದು. ಆದರೇನು? ಮೂ... ದಿದ್ದರೂ ಬಾಯಿ ತೆರೆಯುವಂತಹ ಸೋಜಿಗ... ಆ ನಾಯಿಯದು. ಎಲ್ಲ ನಾಯಿಗಳಂತೆ ಅದು ... ನಾಯಿ ಅಲ್ಲ—ಎಂಬುದೆ ಆ ಕತೆಯ ಸಾರ. ... ಸಹವಾಸಕ್ಕೆ ಮೋಸಬಿದ್ದ ನಾಯಿ ಅದು. ಒ... ಕಾಲದಲ್ಲಿ ಬೆಳ್ಳಿಯ ಬಟ್ಟಲುಗಳಲ್ಲಿ ಹಾಲು ... ಮೆತ್ತನ್ನ ಹಾಸಿಗೆಯ ಮೇಲೆ ಉರುಳಾಡಿ... ಮನೆಯಲ್ಲಿ ಮಲಗಿದೆ; ಕುಳಿತಲ್ಲಿಯೆ ಅನ್ನ ಕಂ... ಕೈಮುಗಿದು ಸನ್ನದ್ಧರಾದ ಸೇವಕರನ್ನು ಕ... ನಲ್ಲಿ ಉದಯರಾಗದ ರಿಕಾರ್ಡನ್ನು ಕೇಳಿದೆ; ಸ... ಸುಂಯ್ಗುಡುವ ಮೋಟಾರ ವಾಹನದಲ್ಲಿ ... ಆಗ ನಾಯಿಯ ಮನೋವೃತ್ತಿ ಎಷ್ಟು ಉದಾತ್ತ... ಎಷ್ಟು ಸುಸಂಸ್ಕೃತವಾಗಿತ್ತು? ಬೀದಿಯಲ್ಲಿ ... ಬೇರೆ ನಾಯಿಗಳನ್ನು ಕಂಡಾಗ ಅದಕ್ಕೆ ... ತ್ತಿತ್ತು. ಒಮ್ಮೊಮ್ಮೆ ಹೃದಯವೂ ಕರಗುತ್ತಿ... ಯಾಗುತ್ತಿತ್ತು, ಒಮ್ಮೊಮ್ಮೆ ನೆಂಟತನದ ... ಮಾಗುತ್ತಿತ್ತು; ತಿರಸ್ಕಾರವೆನಿಸುತ್ತಿತ್ತು, ಒಮ್ಮೆ... ಅದರೆ ... ವರನ್ನು ಸುಧಾರಿಸಬೇಕೆನಿಸುತ್ತಿತ್ತು. ... ವಿರಲಿಲ್ಲ. ಚಿಕ್ಕಂದಿನಿಂದ ಸುಸಂಸ್ಕೃತ ಸ... ವಾಸದಲ್ಲಿ ಬೆಳೆದುದರಿಂದ ತನ್ನ ಭಾಷೆಯೆ ... ಬಾಂಧವ ನಾಯಿಗಳ ಕೂಡ ಮಾತನಾಡುವುದ... ನಾಯಿಗಳಿಗೆ 'ವಾವು' ಎಂದರೆ 'ಹೋಗು', ... 'ಬಾ' 'ವಾವು' ಎಂದರೆ 'ಕೂಡು', 'ವಾವು' ಎ... 'ವಾವು' ಎಂದರೆ 'ಇದು, ಅದು, ಎಲ್ಲ...

> ನಾಯಿಗಳು ಬೀದಿ ಬೀದಿ ಅಲೆಯುವುದು ಕೇವಲ ಸ್ವಾರ್ಥಕ್ಕಾಗಿ ಅಲ್ಲ; ಅದರಲ್ಲಿ ಪರಾರ್ಥವೂ, ಹಾಗೆ ನೋಡಿದರೆ ಪರಾರ್ಥವೆ ಹೆಚ್ಚಾಗಿದೆ. ತಾಯಿಯು ಮಕ್ಕಳಂತೆ ನಾಯಿಗಳು ನಗರವನ್ನು ಕಾಪಾಡುವವು; ಹೆಂಗಸು ಮನೆಯಂತೆ ನಾಯಿಗಳು ಬೀದಿಯನ್ನು ಬಳಿದು ಹಸನು ಮಾಡುವವು. 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ' ಎನುವ ತತ್ತ್ವದಂತೆ ಪೋಲೀಸರು ಕೂಡ ನಿದ್ರಾಪರವಶರಾಗುವಾಗ ನಾಯಿಗಳೆ ನಗರ ... ಸಂರಕ್ಷಣೆಯನ್ನು ಮಾಡುವವು. ...

ಗಿತ್ತು; ಆದರೆ ಈ ನಾಯಿಗೆ ವಿಚಾರದ ಶಕ್ತಿಯಿದ್ದಿತು, ಬೇರೆ ಬೇರೆ ಶಬ್ದಗಳಲ್ಲಿ ಅದನ್ನು ಸ್ಪಷ್ಟವಾಗಿ ಹೇಳುವ ಶಕ್ತಿಯೂ ಇದ್ದಿತು. ಆದರೆ ದುರ್ದೈವದಿಂದ ಈ ನಾಯಿ ಹೇಳಿದ್ದು ಮಾನವರಿಗೆ ತಿಳಿಯುತ್ತಿತ್ತಲ್ಲದೆ ಮಿಕ್ಕ ನಾಯಿಗಳಿಗೆ ತಿಳಿಯುತ್ತಿರಲಿಲ್ಲ. ತಿಳಿಯುವುದಾದರೂ ಹೇಗೆ? ಮಿಕ್ಕ ನಾಯಿಗಳ ಒಂದೇ ಒಂದು ಉದ್ಯೋಗವೆಂದರೆ ಹೊಟ್ಟೆಯ ಆಹಾರಕ್ಕಾಗಿ ಬೀದಿಬೀದಿ ಅಲೆಯುವುದು; ಈ ನಾಯಿಗೆ ಹೊಟ್ಟೆಯ ಪ್ರಶ್ನೆಯೆ ಇದ್ದಿರಲಿಲ್ಲ. ಸುಖದಿಂದ ತಿಂದು ಮುಂಗಾಲ್ಗಳ ಮೇಲೆ ಮುಖವನ್ನಿಟ್ಟು ನಾಲಗೆ ಚಾಚಿ ಅರೆಮುಚ್ಚಿದ ಕಣ್ಣುಗಳಿಂದ ವಿಶ್ರಾಂತಿ ಪಡೆವಾಗ ಸುತ್ತಲೂ ಮಾನವರ ವಿಚಾರವಿನೋದ. "ಶೇಕ್ಸಪೀಯರನು ದೊಡ್ಡವನೋ ಕಾಲಿದಾಸನು ದೊಡ್ಡವನೊ; ಮಹಾತ್ಮಾ ಗಾಂಧಿಯವರ ಸತ್ಯ-ಅಹಿಂಸಾ ತತ್ತ್ವಗಳು ಮಾನವ ಜೀವನದಲ್ಲಿ ಆಚರಿಸತಕ್ಕುವೊ ಮರಣಾಂತರ ಜೀವನದಲ್ಲಿ ಆಚರಿಸತಕ್ಕುವೊ; ಸಮಾಜಸತ್ತಾವಾದಿಗಳೆಂದರೆ ಕಿಡಿಗೇಡಿಗಳಲ್ಲವೆ; ಮುಸೋಲಿನಿಯನ್ನು ಮಣಿಸುವ 'ಮರ್ದ' ನೊಬ್ಬನಿದ್ದರೆ—; ಇತ್ತಿತ್ತಲಾಗಿ ಸುಂದರವಾದ ಸಿನೆಮಾ ಪಟಗಳೆ ಇಲ್ಲ; ಗ್ರೇಟಾ ಗಾರ್ಬೊನಷ್ಟು ಸೆಕ್ಸ ಅಪೀಲ, ಛೆ—; ಚಾರ್ಲಿ ಚಾಪ್ಲಿಲನನಿಗೂ ಹುಂಬರಿಗೂ ಗಂಟು; ಮೊನ್ನೆ ಈಕೆ ಇವನ ಕೂಡ—ಯಾರೊ ಹೇಳುತ್ತಿದ್ದರು; ಜಪಾನ-ಚೀನಾಗಳ ಯುದ್ಧ ಜಗತ್ತಿನಲ್ಲೆಲ್ಲ ಹಬ್ಬಬಹುದು; ಗೋಲ್ಡಫ್ಲೇಕ ಸಿಗರೇಟ ಮೂರಾಣೆಗೆ ಪ್ಯಾಕೆಟ ಆದರೆ—" ಮುಂತಾದ ಉಚ್ಚ ವಿಚಾರಗಳ ಚರ್ಚೆ. ಇಂತಹ ಚರ್ಚೆಯನ್ನು ಕೇಳಿ ಶಿಕ್ಷಣ ಹೊಂದಿದ ನಾಯಿಗೂ ಹುಟ್ಟಬೇಕು ನಾಯಿಗಳಿಗೂ ವಿಚಾರ ಹೊಂದುವುದು ಹೇಗೆ?

ಈ ನಮ್ಮ ನಾಯಿಗೆ ಇನ್ನೂ ಒಂದು ಸಂಗತಿ ಗೂಢವೆನಿಸಿದ್ದಿತು. ತಾನೊಮ್ಮೆ ಮೋಟಾರಿನಲ್ಲಿ ಹೋಗುವಾಗ ಒಂದು ದೃಶ್ಯವನ್ನು ಕಂಡಿದ್ದಿತು. ದೂರದಲ್ಲಿ ಬೀದಿಗುಂಟ ಇನ್ನೊಂದು ನಾಯಿ ಹೊರಟದ್ದಿತು. ಸಾರ್ವಜನಿಕ ಬೀದಿ, ಎಂದ ಮೇಲೆ ಎಲ್ಲರೂ ಹೋಗುವವರು ಎಲ್ಲರೂ ಬರುವವರು. ಆದರೆ ಅಷ್ಟರಲ್ಲಿ ಯಾರೊ ಆ ನಾಯಿಗೆ ಕಲ್ಲನ್ನೆಸೆದರು. ಪಾಪ! ಏಟು ತಪ್ಪಿಸಿಕೊಂಡು ಅದು ಜಾರಿತು. ಮೋಟಾರದ ನಾಯಿಗೆ ಆಶ್ಚರ್ಯ! ತನ್ನನ್ನು ಮೋಟಾರಿನಲ್ಲಿ ಕೂಡಿಸಲು ಸಿದ್ಧನಿದ್ದ ಮನುಷ್ಯನೆ ಇನ್ನೊಂದು ನಾಯಿಯನ್ನು ಬೀದಿಯಗುಂಟ ಹೋಗಗೊಡುವದಿಲ್ಲವಲ್ಲ-ಎಂದು. ಇದರ ರಹಸ್ಯವೇನು—ಎಂದು ವಿಚಾರ ಮಾಡುವಷ್ಟರಲ್ಲಿ ಆ ನಾಯಿ ಮತ್ತೆ ಬೀದಿಯ ಮೇಲೆಯೆ ಬಂದು ನಡೆಯತೊಡಗಿತು. ಮೊದಲಿನ ದಾರಿಗನೆ ಮತ್ತೊಮ್ಮೆ ಕಲ್ಲನ್ನೆಸೆದನು. ಆ ಏಟನ್ನು ತಪ್ಪಿಸಿಕೊಳ್ಳುವಾಗ ನಾಯಿ ಬೀದಿಯನ್ನು ದಾಟಲು ಜಿಗಿಯಿತು. ಅಷ್ಟರಲ್ಲಿ ನಮ್ಮ ನಾಯಿಯ ಮೋಟಾರು ಅದರ ಮೇಲೆ ಅಕಸ್ಮಾತ್ತಾಗಿ ಹಾಯ್ದುಹೋಯಿತು. ಮುಂದೆ ಏನಾಯಿತೆಂದು ತಿಳಿಯಲಿಲ್ಲ, ಮೋಟಾರು ವೇಗವಾಗಿ ನಡೆದಿತ್ತು.

ಆ ರಾತ್ರಿ ನಮ್ಮ ನಾಯಿಗೆ ನಿದ್ರೆ ಹತ್ತಲಿಲ್ಲ. ಮಿಕ್ಕ ನಾಯಿಗಳಿಗೂ ರಾತ್ರಿ ನಿದ್ರೆ ಇರುವುದಿಲ್ಲ ಎಂಬುದು ಮೊದಲನೆಯ ಸಲ ಕಂಡುಬಂದಿತು ನಮ್ಮ ನಾಗರಿಕ-ನಾಯಿಗೆ. ಮನೆಯ ಸುತ್ತಲೆಲ್ಲ, ಓಣಿಯ ತುಂಬೆಲ್ಲ ವಿಲಕ್ಷಣವಾದ ದನಿಯಲ್ಲಿ ಮಿಕ್ಕ ನಾಯಿಗಳ ಕೂಗು ಕೇಳಬರುತ್ತಿದ್ದಿತು. ಅವುಗಳಿಗೆ ಏನಾಗಿರಬಹುದು? ತಿಳಿಯುವಂತಿಲ್ಲ ಹಾಳಾದ್ದು! ಅವುಗಳ ಭಾಷೆಯೆ ತಿಳಿಯುವಂತಿಲ್ಲ. ಕೊನೆಗೆ ತಡೆಯದೆ ಹೊರಬಿದ್ದು ಅಲ್ಲಿಯವರೆಗೆ ಹೋಗಿ ನೋಡಿ ಬರಬೇಕೆಂದು ನಿಶ್ಚಯಿಸಿತು. ಬಾಗಿಲ ವರೆಗೆ ನಡೆದು ಬಂದ ಮೇಲೆ ಬಾಗಿಲು ಮುಚ್ಚಿದ್ದು ಲಕ್ಷ್ಯಕ್ಕೆ ಬಂದಿತು. ಆಳು ಮಲಗಿಕೊಂಡಿದ್ದನು ಅಲ್ಲಿಯೆ. ಅವನನ್ನು ತಿವಿಯತೊಡಗಿತು. ಅವನು ನಿದ್ದೆಗಣ್ಣಿನಲ್ಲಿಯೆ, ಬಲವಾದ ಒಂದು ಏಟನ್ನು ಕೊಟ್ಟನು. ಇದೇನು? ತನಗೆ ಪೆಟ್ಟು! ಅದೂ ಆಳಿನ ಕೈಯಿಂದ! ಅಪಮಾನದಿಂದ ಕೆರಳಿತು. ಆ ದನಿಗೆ ಯಜಮಾನನು ಬಂದನು. ಆಗ ನಾಯಿಗೆ ಒಂದು ಮಾತು ಲಕ್ಷ್ಯಕ್ಕೆ ಬಂದಿತು. ಯಜಮಾನನ—ಮಾನವನ—ಮಾತು ತನಗೆ ತಿಳಿಯುತ್ತಿದ್ದರೂ ತನ್ನ ಮಾತು ಅವನಿಗೆ ತಿಳಿಯುತ್ತಿರಲಿಲ್ಲ! ತಿಳಿಯಲಿಲ್ಲವೆಂದೆ ಕೊನೆಗೆ ಬಾಗಿಲವರೆಗೆ ಎಳೆದುತಂದ ಯಜ

ಮಾನನೂ ಒದಿಕೆಗಳನ್ನಿಟ್ಟನು. ಕೊನೆಗೆ ಬಾಗಿಲನ್ನು ತೆಗೆದು, ತನ್ನನ್ನು ಹೊರಗೆ ಚಲ್ಲಿ, ಬಾಗಿಲು ಮುಚ್ಚಿಕೊಂಡು ನಿದ್ರೆಹೋದನು.

ಹೊರಗಿನ ಚಳಿ ತಾಕಿ ನಮ್ಮ ನಾಯಿಗೆ ಮೈತುಂಬ ಎಚ್ಚರವಾಯಿತು. ಸರ್ವಾಂಗ ನಡುಗಿತು, ಶೀತದಿಂದಲ್ಲ ಸಂತಾಪದಿಂದ. ಸ್ವಾರ್ಥಿ ಮಾನವ! ತನ್ನ ಕೆಲಸಮಾಡಲು ನಾನು, ನನ್ನ ಕೆಲಸ ಅವನು ಮಾಡುವಂತಿಲ್ಲ! ತನ್ನ ಭಾಷೆ ನಾನು ಕಲಿಯಬೇಕು, ನನ್ನ ಭಾಷೆಗೆ ಅವನ ತಿರಸ್ಕಾರ! ನನಗಾಗಿ ಪ್ರೀತಿಯೆ, ಇಲ್ಲವೆ ಇದೆಲ್ಲ ಸ್ವಾರ್ಥ ಸಾಧಿಸುವ ನೀತಿಯೆ? ಸಾಕು—ಮಾನವನ ಸಹವಾಸವೆ ಸಾಕು—ಎನುವಾಗ ಬಾಂಧವ-ನಾಯಿಗಳ ಕೂಗು ಮತ್ತೆ ಕೇಳಬಂದಿತು. ಇದುವರೆಗೆ ಸುಪ್ತವಾಗಿದ್ದ ಜಾತ್ಯಭಿಮಾನವೆಲ್ಲ ನಮ್ಮ ನಾಯಿಯ ಮೈಯಲ್ಲಿ ಆವೇಶದಂತೆ ಸಂಚರಿಸಿತು. ತಾನು ತನ್ನ ಬಾಂಧವರ ಉದ್ಧಾರಕ್ಕಾಗಿ ಇನ್ನು ಹೆಣಗತಕ್ಕದು, ಮುಖವೆತ್ತಿ ಮಾನವನನ್ನು ನೋಡಲಿಕ್ಕಿಲ್ಲ ಎಂದು ಪ್ರತಿಜ್ಞೆ ಮಾಡಿ ಹೊರಟಿತು.

ಮಿಕ್ಕ ನಾಯಿಗಳು ಈ ನಾಗರಿಕ ನಾಯಿಯಲ್ಲಿ ವಿಶ್ವಾಸವನ್ನಿಡಲು ಒಪ್ಪಲಿಲ್ಲ. ಇದನ್ನು ಕಂಡರೆ ದೂರದಲ್ಲಿ ಓಡುತ್ತಿದ್ದುವು. ಮಾನವನ ಸಹವಾಸದಲ್ಲಿದ್ದ ಇದನ್ನು ಪಿಡುಗೆಂದು ತಿಳಿಯತೊಡಗಿದುವು. ಆದರೂ ನಾಗರಿಕ ನಾಯಿಗೆ ಅಧೈರ್ಯವಾಗಲಿಲ್ಲ. ಇಂದಿಲ್ಲ ನಾಳೆ ಇವರ ವಿಶ್ವಾಸವನ್ನು ಸಂಪಾದಿಸಿಯೆ ತೀರುವೆನೆಂಬ ಆತ್ಮವಿಶ್ವಾಸವಿದ್ದಿತು ಇದಕ್ಕೆ. ಇದಲ್ಲದೆ ಬಾಂಧವ-ನಾಯಿಗಳನ್ನು ಹೆಚ್ಚೆಚ್ಚು ನೋಡಿದಂತೆ ಇದರ ಸ್ವಾಭಿಮಾನವು ಹೆಚ್ಚುತ್ತ ಹೋಯಿತು. ನಾಯಿಯ—ನಾಯಿತನದ—ನಿಜವಾದ ಯೋಗ್ಯತೆ ಈಗ ಹೊಳೆಯತೊಡಗಿತು. ನಾಯಿಗಳು ಬೀದಿ ಬೀದಿ ಅಲೆದಾಡುವುದು ಕೇವಲ ಸ್ವಾರ್ಥಕ್ಕಾಗಿ ಅಲ್ಲ, ಹೊಟ್ಟೆಗಾಗಿ ಅಲ್ಲ, ಅದರಲ್ಲಿ ಪರಾರ್ಥವೂ, ಹಾಗೆ ನೋಡಿದರೆ ಪರಾರ್ಥವೆ ಹೆಚ್ಚಾಗಿದೆ ಎಂದು ತಿಳಿಯತೊಡಗಿತು. ನಾಯಿಗಳಿದ್ದಿಲ್ಲವಾದರೆ ಮಾನವನ ಸಂಸ್ಕೃತಿ-ಸುರಕ್ಷಿತತೆಗಳೆ ಉಳಿಯುತ್ತಿರಲಿಲ್ಲ. ತಾಯಿಯು ಮಕ್ಕಳಂತೆ ನಾಯಿಗಳು ನಗರವನ್ನು ಕಾಪಾಡುವುವು, ಹೆಂಗಸು ಮನೆಯಂತೆ ನಾಯಿಗಳು ಬೀದಿಯನ್ನು ಬಳಿದು ಹಸನು ಮಾಡುವುವು; 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ' ಎನ್ನುವ ತತ್ತ್ವದಂತೆ ಪೋಲೀಸರು ಕೂಡ ನಿದ್ರಾಪರವಶರಾಗುವಾಗ ನಾಯಿಗಳೆ ನಗರಸಂರಕ್ಷಣೆಯನ್ನು ಮಾಡುವವು; ಮಾನವನು ಮೂರ್ಖತನದಿಂದ ಮನೆಮುಗ್ಗು ಲಲ್ಲಿಯೆ ಚಲ್ಲಿದ ಎಂಜಲೆಲೆಗಳನ್ನು ... ವವರು ಯಾರು? ಮಾನವನ ಹೊಲಸುಗಳಿಂದ ... ವಿಸುವ ಎಷ್ಟೋ ರೋಗಗಳನ್ನು ಕೂಡ ... ನಿಸ್ವಾರ್ಥಬುದ್ಧಿಯಿಂದ ಮೊದಲು ತಮಗೆ ... ವವು. ಈ ನಿಸ್ವಾರ್ಥಸೇವೆಗೆಲ್ಲ ಮಾನವನ ... ಪ್ರತ್ಯುಪಕಾರವೇನು? ಒದಿಕೆ! ಅಸ್ಪೃಶ್ಯತೆ! ... 'ಇನ್‌ಕಿಲಾಬ ಝಿಂದಾಬಾದ!'* ಎಂದಿತು ...

ಮೊದಲು 'ಇನ್‌ಕಿಲಾಬ' ಆದರೆ ಆ ಮೇಲೆ ... ಬಾದ' ಅಲ್ಲವೆ? ಆದರೆ 'ಇನ್‌ಕಿಲಾಬ' ... ಯಾವ ಕಲಾಪಕ್ಕೂ ನಮ್ಮ ನಾಗರಿಕ-ನಾಯಿ... ನಾಯಿಗಳ ವಿಶ್ವಾಸ ಕೂಡುವಂತಿಲ್ಲ. ಇಷ್ಟೇ ... ವೃತ್ತಿಯನ್ನು ನೋಡಿ ಮಿಕ್ಕ ನಾಯಿಗಳಿಗೆ ... ಹೆಚ್ಚಾಯಿತು. ಇದುವರೆಗೆ ಮಾನವನ ಸಹವಾ... ನಾಯಿ ಹೀಗೆ ಮಾನವನ ವಿರುದ್ಧವಾಗಿ ವಿಷ ... ನೋಡಿ, 'ಇದು ನಮ್ಮನ್ನು ಮೋಸದಿಂದ ... ಎಳೆದು ಆ ಮೇಲೆ ಮಾನವನಿಗೆ ನಮ್ಮನ್ನು ... ಶತ್ರು' ಎಂದು ಅವುಗಳ ಅಭಿಪ್ರಾಯವಾದುದರಲ್ಲಿ ... ವಿಲ್ಲ. ನಾಗರಿಕ-ನಾಯಿಗೆ ಮಾನಸಶಾಸ್ತ್ರದ ... ಬೇಕಾಗಿದ್ದಿತು: ಆದರೆ ಆ ಜ್ಞಾನದ ಉಪಯೋ... ಅದು ಮಾಡಿಕೊಳ್ಳಲಿಲ್ಲ. ಮಿಕ್ಕ ನಾಯಿಗಳ ... ರೇಗಿತು. ಮನಬಂದಂತೆ ಅವುಗಳನ್ನೆ ಆಡಿ... 'ನಿಮ್ಮಲ್ಲಿ ಜೀವವಿಲ್ಲ. ನಿಮಗೆ ಬುದ್ಧಿ ಇಲ್ಲ; ... ಮಾನವನಿಗೆ ನೀವು ಇಷ್ಟು ಹೆದರುವಿರಿ. ನಿಮಗೆ ... ಕಲೆ ಕೂಡ ಗೊತ್ತಿಲ್ಲ. ದಿನಕ್ಕೊಂದಾವರ್ತಿ ಸ್ನಾನ ... ಬೇಕೆಂಬ ಅರಿವು ನಿಮಗಿಲ್ಲ. ಆರೋಗ್ಯಕಾರಕ... ವನ್ನೆ ತಿನ್ನಬೇಕೆಂಬ ಜ್ಞಾನ ನಿಮಗಿಲ್ಲ. ಹೇಸಿಗಳು ... ಹೇಡಿಗಳು' ಎಂದು ಅವುಗಳನ್ನು ಮೂದಲಿಸಿತು. ... ವನು ನಿಮ್ಮನ್ನು ದಾಸರನ್ನಾಗಿ ಮಾಡು... ನಮ್ಮನ್ನು ಮುಟ್ಟದಿರುವುದಾಗಲಿ ಆಶ್ಚರ್ಯವೆ ... ಎಂದು ಹಂಗಿಸಿತು. ಈಗ ಮಾತ್ರ ಮಿಕ್ಕ ... ಸುಮ್ಮನಿರಲಿಲ್ಲ. 'ಮಾನವನ ದಾಸನಾದವನು ... ನಾವೊ ನೀನೊ?' ಎಂದು ಕುಲುಕುಲುನಗೆ... ಯೊಂದು ಕೇಳಿತು. 'ಮಾನವನು ಮುಟ್ಟಿದರೆ ... ಚಿನ್ನದ್ದಾಗುವುದಿಲ್ಲ' ಎಂದು ಹೆಣ್ಣು ನಾಯಿಯೊಂದು ... ಸಿತು. 'ಚಿನ್ನ ಹಾಳಾಯಿತು, ಅವನು ಮುಟ್ಟಿದ ...

---

* ಕ್ರಾಂತಿಗೆ ಜಯವಾಗಲಿ—ಎಂದು ಇದರ ಅರ್ಥ.

ರೋಗಗಳು ಅಂಟುವವು. ಪಾವು!' ಎಂದು ಮತ್ತೊಂದು ಹೆಣ್ಣುನಾಯಿ ಹಂಗಿಸಿತು. 'ನಮ್ಮ ಕೈಯಿಂದ ನಾವು ಗಳಿಸಿದ ಅನ್ನವೆ ನಮಗೆ ಆರೋಗ್ಯಕಾರಕ, ಪಾವು!' ಎಂದು ಗಂಡುನಾಯಿಯೊಂದು ಗಹಿಗಹಿಸಿತು. 'ಪಾಪ! ಹಸಿವೆಂತೆ ಕಾಣುವುದು! ಬೇಕಾದರೆ ನಮ್ಮೊಡನೆ ಊಟಕ್ಕೇಳು' ಎಂದು ಮುದಿನಾಯಿಯೊಂದು ಮಾತಾಡಿತು.

ಈಗ ಮಾತ್ರ ನಾಗರಿಕ-ನಾಯಿಗೆ ಅವಮಾನವಾಯಿತು; ಯಾಕೆಂದರೆ, ಹಸಿವೆಯಾದದ್ದು ನಿಜವಿದ್ದಿತು. ಯಜಮಾನನ ಒದಿಕೆಯ ನಂತರ ಮತ್ತೇನನ್ನೂ ತಿಂದಿರಲಿಲ್ಲ, ಪಾಪ!, ಹಸಿವೆಯಾಗದೆ ಬಿಟ್ಟೀತೆ? ಮೊದಮೊದಲು ತನ್ನ ಕ್ರಾಂತಿವಿಚಾರಗಳ ಆವೇಶದ ಭರದಲ್ಲಿ ಹಸಿವೆಯಾದದ್ದು ಲಕ್ಷ್ಯಕ್ಕೆ ಬಂದಿರಲಿಲ್ಲ. ಆದರೆ ಕೆಲವು ಗಂಟೆಗಳಾದ ಮೇಲೆ ಕ್ರಾಂತಿಗಿಂತಲೂ 'ಕಕ್ರಾಂತಿ'ಯೆ ಹೆಚ್ಚಾಯಿತು. ಆದರೆ ತಿನ್ನುವುದೇನು? ತನ್ನ ರೂಢಿಯ ಬಿಸ್ಕತ್ತುಗಳಿಲ್ಲ; ಮೊಸರನ್ನ ಕಲೆಸಿ ಕೊಡುವವರಿಲ್ಲ; ಮತ್ತೇನನ್ನಾದರೂ ತಿನ್ನೋಣವೆಂದರೆ ಬಾಯಿ ತೆರೆಯಲೊಲ್ಲದು, ಮನಸ್ಸು ಒಪ್ಪಲೊಲ್ಲದು! 'ಅಯ್ಯೋ, ಮಾನವನ ಸಹವಾಸಕ್ಕೆ ಸಿಲುಕಿ ಹಾಳಾದೆನಲ್ಲ! ಹಸಿವೆಯಾದರೂ ಅನ್ನ ದೊರಕಿಸುವ ಯೋಗ್ಯತೆ ಇಲ್ಲದೆ ಹೋಯಿತಲ್ಲ! ಸಿಕ್ಕ ಅನ್ನವನ್ನು ದಕ್ಕಿಸುವ ಶಕ್ತಿ ಇಲ್ಲದೆ ಹೋಯಿತಲ್ಲ!' ಎಂದು 'ಹೋ' ಎಂದು ಗೋಳಿಟ್ಟಿತು. ಇಷ್ಟರಲ್ಲಿ ಹಿಂದಿನಿಂದ ಯಾವುದೊ ಮನೆಯ ಬಾಗಿಲನ್ನು ತೆಗೆದು, ಕಣ್ಣುಗಳನ್ನೊರಸುತ್ತ, ಕರಾಳ ಬರಿಮೈಯ ಕ್ರೂರನೊಬ್ಬನು ಬಂದು 'ಹಾಳಾದ್ದು! ಯಾರದೊ? ಇಲ್ಲಿ ಯಾಕೆ ಒದರುವುದೊ?' ಎಂದು ಕಲ್ಲನ್ನೆಸೆದನು. 'ಕುಂಯ್‌ಕುಂಯ್' ಎಂದು ಒಂದೇ ಸವನೆ ಓಡಿತು. ಒಂದು ಕಡೆ ಹಸಿವೆಯ ಬಳಲಿಕೆ, ಒಂದು ಕಡೆ ಪೆಟ್ಟಿನ ಬಳಲಿಕೆ. ಹೀಗಿರುವಾಗ ಎದುರು ಬರುವ ಯಾವನೊ ಒಬ್ಬ ಬಾಲಕ ಇದನ್ನು ನೋಡಿ 'ಡೊಂಕಬಾಲದ ನಾಯಕರೆ ನೀವೇನೇನೂಟಾ ಮಾಡಿದಿರಿ? | ಹುಗ್ಗಿ ಮಾಡೋವಲ್ಲಿಗೆ ಹೋಗಿ ಬಗ್ಗಿ ತಗ್ಗಿ ನೋಡಿದಿರಿ | ಹುಗ್ಗಿ ಮಾಡೋ ಸೌಟಲಿ ಹೊಡೆವರ ಕುಂಯ್ ಕುಂಯ್ ರಾಗಾ ಮಾಡಿದಿರಿ|| ಡೊಂಕಬಾಲದ ಹುಹುಹುಹು' ಎನ್ನುತ್ತ ಬೆನ್ನಟ್ಟಿದನು. 'ಪಾಪ! ಹಸಿವಂತೆ ಕಾಣುವುದು!' ಎಂದು ಮುದಿನಾಯಿ ಮಾತನಾಡಿದಾಗ ಇವೆಲ್ಲ ಸ್ಮರಣೆಗೆ ಬಂದು ಅವಮಾನವೆನಿಸಿತು ನಮ್ಮ ನಾಯಿಗೆ. ಆದರೆ ಮಾಡುವುದೇನು?

'ಮಾಡುವುದೇನು?' ಎಂದು ಕೇಳುವುದಕ್ಕಾಗಿಯೆ ಅದು ದಿನಾಲು ರಾತ್ರಿ ನಮ್ಮ ಮನೆಯ ಮುಂದೆ ಬಂದು ಕುಳಿತು ಕೊಳ್ಳುವುದು. 'ಇವರು ರಾತ್ರಿ ಮಲಗುವುದಿಲ್ಲ, ಬರೆಯುತ್ತಿರುತ್ತಾರೆ; ಇವರು ಲೇಖಕರು, ಆದುದರಿಂದ ಇವರ ಹೃದಯ ಮೆತ್ತಗಿರಲೇ ಬೇಕು' ಎಂದು ಎಲ್ಲಿಯೊ ಯಾರೊ ಮಾತನಾಡುವುದನ್ನು ಕೇಳಿ ನಮ್ಮ ಕಡೆಗೆ ಬರಬೇಕೆನಿಸಿತಂತೆ!

ಇದೇ ದಿನಾಲು ರಾತ್ರಿ ಹತ್ತುಗಂಟೆಯ ಸುಮಾರಿಗೆ ನಮ್ಮ ಮನೆಯ ಮುಂದೆ ಬಿದ್ದುಕೊಳ್ಳುವ ನಾಯಿಯ ಮೀಮಾಂಸೆ!

ಲೇಖಕರಿಗಿಂತ ಸಂಪಾದಕರು ಮೆತ್ತನ್ನ ಹೃದಯದವರೆಂದೂ, ಕನ್ನಡ ಪತ್ರಿಕೆಗಳನ್ನು ಕೊಂಡು ಓದುವವರಂತೂ ಮೆತ್ತನ್ನ ಹೃದಯದ ಮೂರ್ತಿಗಳೆಂದೂ ಅತ್ತ ನಾಯಿಗೆ ಸಮಾಧಾನ ಹೇಳಿದ್ದೇನೆ, ಇತ್ತ ನಿಮಗೆ ಈ ಸೋಜಿಗದ ಸಂಗತಿಯನ್ನು ಅರಿಕೆ ಮಾಡಿಕೊಂಡಿದ್ದೇನೆ.

ಇಂದಿನ ಉಭಯ-ಭಾಷಾ-ಚಕ್ರವರ್ತಿಗ[ಳು]

ಲೇಖಕರು:— ಶ್ರೀಮಾನ್ ಜೋಶಿ ಶಂಕರರಾಯರು, ಧಾರವಾಡ.

- 'ಉಭಯ ಭಾಷಾ ಚಕ್ರವರ್ತಿ'ತ್ವದ ಮಬ್ಬಿಗೆ ಬೀಳದೆ, ತಮ್ಮ ಭಾಷೆಯ ಬೆಳ ವಣಿಗೆಗೆ ಸಹಾಯಕವಾಗುವಂತೆ ಪರಭಾಷೆಗಳನ್ನು ಅಭ್ಯಸಿಸಬೇಕು. ... ...
- ಇಂದಿನ ಪರಿಸ್ಥಿತಿಯಲ್ಲಿ ಇಂಗ್ಲಿಷು-ಹಿಂದೀ ತಮ್ಮ ಮರ್ಯಾದೆ ಮೀರಿ ನಮ್ಮ ತಲೆ ತಿನ್ನುತ್ತಿರುವಾಗ, ಅವುಗಳ ಅಭ್ಯಾಸಮಾಡಬೇಕಾಗಿ ಬಂದುದು ಒಂದು 'ಅಪವಾದ' ಮಾತ್ರ. ... ...
- ನಾಡಿನ ನುಡಿಗೆ ಗೊಬ್ಬರವಾಗಿ ಅದರ ಹಬ್ಬುಗೆಗೆ ಕಾರಣವಾಗುವಂತೆ ಪರಭಾಷೆ ಗಳನ್ನು ಕಲಿಯುವುದೆ ಸ್ವಾಭಾವಿಕ ನಿಯಮ. ... ...

ಕನ್ನಡ ನಾಡಿನ ಪ್ರಾಚೀನ ಪರಂಪರೆಯನ್ನು ನೆನೆದರೆ 'ಉಭಯ ಭಾಷಾವಿಶಾರದ'ರೂ, 'ಚತುರ್ಭಾಷಾ ಚಕ್ರವರ್ತಿ'ಗಳೂ ಕಾಲಕಾಲಕ್ಕೆ ಹುಟ್ಟಿದುದು ಕಂಡುಬರುತ್ತದೆ. ಕನ್ನಡ ಕವಿಚರಿತೆಯ ಸಂಪುಟಗಳನ್ನು ತಿರುವಿದರೆ ಅದರಲ್ಲಿ ತಾನು, ಉಭಯ (ಭಾಷಾ) ಕವಿಚಕ್ರವರ್ತಿ ಎಂದು ಮುಂತಾಗಿ ಹೇಳಿಕೊಳ್ಳದ ಮಹಾಕವಿಯು ಸಿಕ್ಕುವುದೆ ದುರ್ಲಭ. "ಒಂದು ಭಾಷೆಯನ್ನು ಬಲ್ಲವನು ಬಲ್ಲಿದನೆ ಅಲ್ಲ"ವೆಂದು ಒಂದು ಗಾದೆಯಿದೆ. ಭಾಷೆಯು ಜ್ಞಾನ ಸಂಪಾದನೆಯ ಸಾಧನವು. ಭಾಷೆಗಳು ಬಂದಷ್ಟೂ ತಿಳುವಳಿಕೆಯು ಹೆಚ್ಚುವ ಸಂಭವವಿದೆ. ಒಂದೆ ಭಾಷೆಯನ್ನರಿತವನು ಎಗ್ಗ. ಚತುರನಾಗಬೇಕಾಗಿದ್ದರೆ ನಾಲ್ಕು (ಕನಿಷ್ಠ ಎರಡು) ಭಾಷೆಗಳಾದರೂ ಬರಬೇಕು. ಆದುದರಿಂದಲೆ ನಮ್ಮ ಕವಿಗಳು, ತಾವು ಇಷ್ಟಿಷ್ಟು ಭಾಷಾ-ಚಕ್ರವರ್ತಿಗಳೆಂದು ಹೇಳಿಕೊಳ್ಳುತ್ತಿದ್ದರು.

ನಮ್ಮ ನಾಡಿನ ಉಭಯ-ಭಾಷಾ-ಚಕ್ರವರ್ತಿಗಳ ಈ ಪರಂಪರೆಯು ಇಂದಿಗೂ ಕುಗ್ಗಿಲ್ಲ. ಆದರೆ ದುಃಖದ ಸಂಗತಿಯೆಂದರೆ ಹಲವು ಮಾತಿನ ಈ 'ಚದುರರು' ತಮ್ಮ ಮನೆಮಾತನ್ನೆ ಮರೆತಂತಾಗಿದೆ. ಹಲವು ಭಾಷೆಗಳ ಗಿಳಿಯೋದು ಕೆಲಸಕ್ಕೆ ಬಾರದಾಗಿದೆ. ಗಿಳಿಗಳಿಗೆ 'ಪಂಡಿತ ಪಕ್ಕಿ'ಗಳೆಂಬ ಹೆಸರು ಇಂತಹರ ವಿಡಂಬನೆಗಾಗಿಯೆ ಕನ್ನಡದಲ್ಲಿ ರೂಢವಾಗಿರಲಿಕ್ಕಿಲ್ಲವಷ್ಟೆ ?

ಪರಭಾಷೆಗಳ ಅಭ್ಯಾಸವು ಜ್ಞಾನಸಂಪಾದನೆಗೆ ಶ್ರೇಷ್ಠವಾದ ಸಾಧನವೆಂಬುದು ನಿಜ. ಆದರೆ ತನ್ನ ದೇಶಭಾಷೆಯನ್ನೆ ಮರೆತು ಅಥವಾ ಅದರಲ್ಲಿ ಕೈ ಪಳಗಿಸಿಕೊಳ್ಳದೆ ಪರಭಾಷೆಗಳ ಮೂಲಕವಾಗಿ ಬೇಕಾದಷ್ಟು ಜ್ಞಾನಸಂಪಾದನೆ ಮಾಡಿದ್ದರೂ ಅದು ಬಂಜೆಯ ಸಂಸಾರ. ಇನ್ನೊಂದು ಬಗೆಯಿಂದ ಹೇಳುವುದಾದರೆ [...]ನ್ನೇರುತ್ತಲೆ ಏಣಿಯನ್ನು ಒದ್ದು ನೆಲಕ್ಕುರು[...] ಮೇಲೆಯೆ ಸಿಕ್ಕುಬಿದ್ದು, ಅದರಲ್ಲಿಯೆ [...] ಕೊಂಡು ಕೆಳಗಿನವರನ್ನು ಕೀಳೆಂದು ಬಗೆ[...] ತ್ರಿಶಂಕು-ಪಂಡಿತರೆ ಇಂದು ಹೆಚ್ಚಾಗಿ ಕಾಣಸಿಕ್ಕು[...]ವರು.

ಪರಭಾಷೆಗಳ ಅಭ್ಯಾಸವು ನಮಗೆ ಬೇಕು[...] ಅದಿಲ್ಲದೆ ಗತಿಯಿಲ್ಲ. ಆದರೆ ಅದು ಎಷ್ಟೆಂದ[...] ಭಾಷೆಯೆ ಎಂಬುದರ ಅರಿವು ತಪ್ಪಲಾಗದು. ತ[...] ಪೋಷಕವಾಗುವ ರೀತಿಯಲ್ಲಿ ಮಾತ್ರ ಪರಭಾಷೆ[...]ಸವು ನಡೆಯಬೇಕೆ ಹೊರತು ತನ್ನ ಭಾಷೆಯನ್ನ[...] ಯಾವುದಾದರೂ ಬೇರೆ ಭಾಷೆಯ ಅಭ್ಯಾಸವ[...]ದ್ದರೆ ಅದು ತನ್ನ ಹಾಗೂ ತನ್ನ ನಾಡಿನ ಕೇಡಿ[...]ವಾಗದೆ ಇರಲಾರದು. ಈ ಬಗೆಯಿಂದ ಅಭ್ಯಾ[...]ದವರೂ, ನಡೆಯಿಸುವುದಕ್ಕೆ ನೆರವುಗೊಡುತ್ತ[...] ನಾಡಿನ ಕೇಡಿಗರು-ದೇಶದ್ರೋಹಿಗಳೆಂದು ಎ[...] ಸಮಾಜವು ಅಂತಹರಿಗೆ ಬೇಗನೆ ಬುದ್ಧಿಗಲಿಸ[...] ಮಿಸಿಕೊಳ್ಳಲಾಗದು.

ನುಡಿಯು ನಾಡಿನ ಉಸಿರು. ತನ್ನ ನಾಡಿನ[...] (ಪ್ರಾಣವನ್ನು) ಕುಗ್ಗಿಸುವ ಆವುದೆ ಬಗೆಯ[...]ಯನ್ನು ತಟ್ಟನೆ ಎಚ್ಚತ್ತು ತಡೆದು ಹಿಡಿಯದಿ[...] ಬಹುದಿನ ಬಾಳುವ ಆಸೆಯು ವ್ಯರ್ಥ. ಯಾ[...] ದೇಶದಲ್ಲಿ ದ್ವಿಭಾಷಿಗಳ ಸಂಖ್ಯೆಯು ಹೆಚ್ಚಾ[...] ಜನಸಾ[...] ನಾಡಿನ ದೃಷ್ಟಿಯಿಂದ ಹಿತಕರವಲ್ಲ.

ತನ್ನ ನಾಡಿನ-ನುಡಿಯು ಹೊರತು ಮತ್ತೊಂದು ಬೇರೆ ಭಾಷೆಯನ್ನು ಕಲಿಯಬೇಕೆಂಬ ಲವಲವಿಕೆಯು ಹುಟ್ಟು ವುದು ಯಾವಾಗ? ಹೊಸತಾಗಿ ಕಲಿಯಬೇಕಾದ ಪರ ಭಾಷೆಗೆ ರಾಜಮರ್ಯಾದೆ ಅಥವಾ ಲೋಕಮರ್ಯಾದೆಯು ಸಾಕಷ್ಟು ಇದ್ದು, ಅದರ ಅಭ್ಯಾಸದಿಂದ ಹೊಟ್ಟೆಯ ಚಿಂತೆಯೂ ತಪ್ಪುವುದೆಂಬ ಆಸೆ ಹುಟ್ಟಿ, ನಾಲಗೆಯು ಚಿಗುರ ಲಾರಂಭಿಸಿದಾಗಲೆ ಜನಸಾಮಾನ್ಯರಲ್ಲಿ ಯಾವುದೊಂದು ಪರಭಾಷೆಯ ಪ್ರಸಾರವು ಹೊಸತಾಗಿ ಆಗುವ ಸಂಭವವಿದೆ. ಈ ಬಗೆಯ ಒಂದು ಅಥವಾ ಹಲವು ಕಾರಣಗಳ ಮೂಲಕ ವಾಗಿ ಪರಭಾಷೆಯು ಒಂದು ನಾಡಿನಲ್ಲಿ ಬೇರುಹಿಡಿದು ಮೆಲ್ಲಮೆಲ್ಲನೆ ಜನರ ನಾಲಗೆಯ ಮೇಲೂ ನಲಿದಾಡ ಲಾರಂಭಿಸಿತೆಂದರೆ ರಾಜಮರ್ಯಾದೆಯು ಸಾಕಷ್ಟು ಇಲ್ಲದೆ ಇರುವ, ಹೊಟ್ಟೆಯ ಚಿಂತೆಯನ್ನೂ ಪೂರ್ಣವಾಗಿ ತಪ್ಪಿಸು ವುದಕ್ಕೆ ಆರದ ಮೊದಲಿನ ಭಾಷೆಯು ಕ್ರಮಕ್ರಮವಾಗಿ ಹಿಂದೆಬಿದ್ದು ಆ ಸ್ಥಳವನ್ನು ಆಕ್ರಮಿಸುವುದಕ್ಕೆ ಆ ಪರ ಭಾಷೆಯು ಪ್ರಯತ್ನಿಸುವುದು. ಆದರೆ ಎರಡು ಭಾಷೆಗಳ ಈ ತಿಕ್ಕಾಟದಲ್ಲಿ ಯಾವುದೊಂದು ಭಾಷೆಯೂ ತನ್ನ ಪರಿ ಶುದ್ಧ ರೂಪವನ್ನು ಉಳಿಸಿಕೊಳ್ಳುವ ಸಂಭವವಿಲ್ಲ. ಎರಡರ ಕಲಬೆರಿಕೆಯಿಂದ ಹೊಸದೊಂದು ಹಂಡಬಂಡ ಭಾಷೆಯು ಆ ನಾಡಿನಲ್ಲಿ ತಲೆದೋರುವುದು; ಸಂಸ್ಕೃತಿಯು ಕುಗ್ಗು ವುದು.

ನಾಡಿನಲ್ಲಿ ಕಾಣಬಹುದಾದ ಈ ವ್ಯತ್ಯಾಸಕ್ಕೆ ನೂರಾರು ವರುಷಗಳು ಬೇಕು. ಆದುದರಿಂದ ಮೇಲ್ಕಾಣಿಸಿದ ಮಾತು ಗಳ ಬಗೆಗೆ ಕೆಲವರು ಸಂಶಯಪಡಬಹುದು. ವ್ಯಷ್ಟಿಯಲ್ಲಿ ಕಾಣುವುದೆ ಸಮಷ್ಟಿಯಲ್ಲಿಯೂ ಕಾಲಕ್ರಮದಿಂದ ಬರ ತಕ್ಕುದು. ಆದಕಾರಣ ಮೇಲೆ ವಿವರಿಸಿದ ಮಾತುಗಳನ್ನು ಮನಗಾಣಿಸಿಕೊಳ್ಳುವುದಕ್ಕಾಗಿ ಇಂದಿನ ಆವುದೆ 'ಉಭಯ ಭಾಷಾ ಚಕ್ರವರ್ತಿ'ಯನ್ನು ಹೋಗಿ ನಿರೀಕ್ಷಿಸಬಹುದು.

'ಚಕ್ರವರ್ತಿ' ಎಂಬ ಪದವು ಬಹಳ ಅರ್ಥವತ್ತಾಗಿದೆ. ಪರದೇಶಗಳನ್ನು ಗೆದ್ದು ಆಕ್ರಮಿಸಿ ಆಳುವವನು 'ಚಕ್ರ ವರ್ತಿ.' ತನ್ನ ನಾಡಿನ ಅರಸನಾಗಿದ್ದುಕೊಂಡು ಹೊರ ನಾಡಿನ ಚಕ್ರವರ್ತಿಯಾಗುವುದು ಸ್ವಾಭಾವಿಕ ರೀತಿ. ಆದರೆ ನಮ್ಮಲ್ಲಿ ಉಭಯ-ಭಾಷಾ-'ಚಕ್ರವರ್ತಿ'ಗಳೇ ಎಲ್ಲರೂ! ಯಾವ ಒಂದರ ಮೇಲೆಯೂ ತನ್ನತನದ- ಆತ್ಮೀಯತೆಯ ಸ್ವಾಮಿತ್ವವಿಲ್ಲ; ಬರಿ 'ಚಕ್ರವರ್ತಿತ್ವವೆ.'

ನಮ್ಮ ನಾಡಿನ ಸುಶಿಕ್ಷಿತರು ಈ ವರೆಗೆ ಮುಖ್ಯವಾಗಿ ಅಭ್ಯಸಿಸಿದ್ದುದು ಇಂಗ್ಲಿಷು; ಒಂದು ಕಾಲಕ್ಕೆ ಸಂಸ್ಕೃತ, ಪ್ರಾಕೃತ; ಈಗ ಹಿಂದೀ. ಸುಶಿಕ್ಷಿತರೆನಿಸಿಕೊಳ್ಳುವ ನಮ್ಮ "ಖಾಸಗಿ" ಮಾತುಗಳನ್ನು ಕೇಳಬೇಕು! ಅದು ಏನು ಕನ್ನಡವೊ ದೇವರೆ ಬಲ್ಲ. ಇಂಗ್ಲಿಷು ಅಥವಾ ಹಿಂದೀ ಬೆರೆಸು ವುದನ್ನು ಬಿಟ್ಟರೆ ಮುಂದೆ ಮಾತನಾಡುವುದೆ ಅಸಾಧ್ಯ ವಾಗುವುದು. ಕನ್ನಡದ ಅಭಿಮಾನವಿದ್ದವರು ಅರ್ಧಮರ್ಧ ಕನ್ನಡ ಶಬ್ದಗಳನ್ನಾದರೂ ಸೇರಿಸಲು ಹಾಗೂ ಹೀಗೂ ಪ್ರಯತ್ನಿಸುವರು; ಇಲ್ಲದೆ ಇದ್ದಲ್ಲಿ ಅಲ್ಲಿ ಯಾವ ಅಡೆ ತಡೆಗಳೇ ಇಲ್ಲ! ಬಾಯಿಗೆ ಬಂದುದೆ ಭಾಷೆ. ಅದರಲ್ಲಿಯೆ ಹೆಮ್ಮೆ ಮತ್ತೆ!

ನಾಡಿನಲ್ಲಿ ಇಂತಹ ಸುಶಿಕ್ಷಿತರ ಸಂಖ್ಯೆಯೆ ಹೆಚ್ಚಾಗುತ್ತ ಹೋದರೆ—ಈ ಪ್ರವೃತ್ತಿಗೆ ತಡೆಹಾಕದಿದ್ದರೆ, ಮುಂದೆ ಆ ನಾಡಿನ ನುಡಿಯು 'ಹಂಡಬಂಡ'ವಾಗದೆ ಇದ್ದೀತೆ?

ಇಂತಹ ಉಭಯಭಾಷಾಚಕ್ರವರ್ತಿಗಳ ಬಾಯಿಪ್ರಸಾದ ದಿಂದ ನಾಡಿಗೆ ಹಿತಕ್ಕಿಂತ ಅಹಿತವೆ ಹೆಚ್ಚಾಗುವುದು. ಚಕ್ರವರ್ತಿತ್ವವು ಆಧುನಿಕ ಯುಗದಲ್ಲಿ ಅಪರಾಧವಾಗಿದೆ. ತನ್ನ ಮನೆಯ ಒಡೆಯನಾಗಿರಬೇಕು ಪ್ರತಿಯೊಬ್ಬನೂ. ಹೆರವರ ಮಾತು ಕಿವಿಯಿಂದ ಕೇಳಬೇಕು; ನಾಲಗೆಯಿಂದ ಆಡಬೇಕು ತನ್ನ ಮಾತನ್ನೇ. ಜ್ಞಾನಸಂಪಾದನೆಗಾಗಿ ಇಂಗ್ಲಿಷ್, ಹಿಂದೀ, ಜರ್ಮನ್ ಮೊದಲಾದ ಯಾವುದೇ ಭಾಷೆಯನ್ನಾಗಲಿ ಕಣ್ಣು-ಕಿವಿಯಿಂದ ಕಲಿಯಬೇಕು; ನಾಲಗೆಯನ್ನು ಮಾತ್ರ ಕೆಡಿಸಿಕೊಳ್ಳಲಾಗದು. ನಾಲಗೆಯ ಮೇಲೆ ವರ್ಚಸ್ವಿಯಿರಬೇಕಾದುದು ತನ್ನ ಭಾಷೆಯ ಉಚ್ಚಾರ ಗಳದೇ. ಈಗ ನಮಗೆ ಕನ್ನಡದ ಶುದ್ಧ ಉಚ್ಚಾರಗಳು ಗೊತ್ತಿಲ್ಲ; ಪರಭಾಷೆಯೊಳಗಿನ ಸೂಕ್ಷ್ಮತಮ ಉಚ್ಚಾರ ಭೇದಗಳನ್ನೂ ಆಡಿತೋರಿಸಬಲ್ಲೆವು ನಾವು!

ಪರಭಾಷೆಯ ಉಚ್ಚಾರದ ಪದ್ಧತಿಗಳನ್ನು ಪಾಠಮಾಡು ವುದರಲ್ಲಿ ನಮ್ಮ ನಾಲಗೆಗೆ ಕನ್ನಡದ ಮಾತಿನ ರೀತಿಯೆ ಮರೆತು ಹೋಗುತ್ತಲಿದೆ. ಎರಡು ಭಾಷೆಗಳಲ್ಲಿ ಅಷ್ಟೇ ಪ್ರಭುತ್ವವನ್ನು ನಾನು ಮೆರೆಯಿಸಬಲ್ಲೆನೆಂದು ಯಾರಾದರೂ ಹೇಳುತ್ತಿದ್ದರೆ ಅವನು ತಾನು ಆಡುವ ಮಾತುಗಳ ಅರ್ಥವೆ ತಿಳಿಯದ ಮರುಳನಾದರೂ ಇರಬೇಕು; ಅಥವಾ ಮೋಸ ಗಾರಿಕೆಯ ಕವಡುನುಡಿಗಳನ್ನಾದರೂ ಆಡುತ್ತಿರಬೇಕು. ಒಂದು ಮನೆಗೆ ಇಬ್ಬರು ಯಜಮಾನರು ಇರಲಾರರು, ಅಥವಾ ಇಬ್ಬರು ಯಜಮಾನರನ್ನು ಒಬ್ಬನೇ ಅನುಸರಿಸು ವುದು ಅಸಾಧ್ಯ. ಆವುದೆ ಒಂದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು [illegible]ತೆಯಲ್ಲಿ ಮತ್ತೊಂದನ್ನು ಇರಿಸಬೇಕಾ

ಗುತ್ತದೆ. ಆದುದರಿಂದ 'ಉಭಯ ಭಾಷಾ ಚಕ್ರವರ್ತಿ' ಗಳೆಂಬ ಮಾತು ಅಸಮರ್ಪಕ.

ನಮಗೆ ನಮ್ಮ ನಾಡಿನ ಹಿತವನ್ನು ಮಾಡುವ ಮನ ಸಿದ್ದರೆ 'ಉಭಯ-ಭಾಷಾ-ಚಕ್ರವರ್ತಿ'ತ್ವದ ಹುಚ್ಚಿನ ಮಬ್ಬಿಗೆ ಬೀಳದೆ, ತನ್ಮ ಭಾಷೆಯ ಬೆಳವಣಿಗೆಗೆ ಸಹಾಯಕ ವಾಗುವಂತೆ ನಮ್ಮ ಭಾಷೆಗೆ ಪ್ರಾಶಸ್ತ್ಯವನ್ನಿಟ್ಟುಕೊಂಡೇ ಆವುದೆ ಪರಭಾಷೆಯನ್ನು ಕಲಿಯುವುದು ಕರ್ತವ್ಯವಾಗಿದೆ. ಇಂದಿನ ವಿಚಿತ್ರ ಪರಿಸ್ಥಿತಿಯಲ್ಲಿ ಇಂಗ್ಲಿಷು (ಹಿಂದಿ?) ತನ್ನ ಮರ್ಯಾದೆ ಮೀರಿ ನಮ್ಮ ತಲೆತಿನ್ನುತ್ತಲಿರುವುದು. ಆದರ ಅಭ್ಯಾಸವನ್ನು ಹೆಚ್ಚು ಮಾಡಬೇಕಾಗುವುದು—ಮಾಡಬೇಕೆಂಬುದು ನಿತ್ಯನಿಯಮವೆಂದು ಮಾತ್ರ ತಿಳಿಯ ಲಾಗದು; ಅದು ಈ ಪರಿಸ್ಥಿತಿಯಲ್ಲಿ 'ಅಪವಾದ.' ನಾಡಿನ ನುಡಿಗೆ ಗೊಬ್ಬರವಾಗಿ ಅದರ ಹಬ್ಬುಗೆಗೆ ಕಾರಣವಾಗು ವಂತೆ ಪರಭಾಷೆಗಳನ್ನು ಕಲಿಯುವುದೆ ಸ್ವಾಭಾವಿಕವಾದ ನಿಯಮವು.

ಪಂಡಿತವಕ್ಕಿ

(೨ ವರ್ಷಗಳ ತರುವಾಯ ತಮ್ಮ ಕಾವ್ಯಕೃತಿಗಳನ್ನು ಮತ್ತೆ ಪ್ರಕಾಶಿಸುತ್ತಿದ್ದ ಶ್ರೀ. ಪಾಂಡೇಶ್ವರ ಗಣಪತಿರಾಯರ ಪರಿಚಯವನ್ನು ಹೊಸದಾಗಿ ಮಾಡಿಕೊಡಬೇಕಾಗಿಲ್ಲ. ಅವರು ಲಲಿತಸಾಹಿತ್ಯ ಸೃಷ್ಟಿಯಿಂದ ಜಾರಿದ್ದರ ಕಾರಣವು, ನಾಡಿನ ಆಂದೋಲನವು ಅವರ ಮನಸ್ಸನ್ನು ಸೆಳೆದಿದ್ದೇ. ಈಚೆಗೆ ಅವರು 'ಲೋಕಮತ'ದ ಸಂಪಾದಕವರ್ಗದಲ್ಲಿದ್ದುಕೊಂಡು ಕೆಲಸ ಮಾಡುತ್ತಿದ್ದಾರೆ. 'ಇತ್ತೀಚಿನ ಸಾಹಿತಿಗಳಿಗೆ ನಾನು Rip Van Winkle ನಂತೆ ಅಪರಿಚಿತನಾಗಿರಬೇಕು' ಎಂದು ಅವರು ಬರೆದಿದ್ದಾರೆ. ಅವರ ಭೀತಿಯು ನಿರಾಧಾರವಾದುದೆಂದು ಹೇಳಬಯಸುತ್ತೇವೆ. ೪-೫ ವರ್ಷಗಳ ಹಿಂದೆ ಜ.ಕ.ದಲ್ಲಿ, ತತ್ಪೂರ್ವದಲ್ಲಿ ಬೇರೆಬೇರೆ ಪತ್ರಿಕೆಗಳಲ್ಲಿ ಅಚ್ಚಾಗುತ್ತಿದ್ದ ಅವರಕೃತಿಗಳನ್ನು ಆಸ್ವಾದಿಸಿ, ಯಾರು ಸಂತೋಷಪಟ್ಟಿಲ್ಲ? ಈ ಕವನದಲ್ಲಿ ನವಯುವಕಲೋಕದ ಕುದಿಯನ್ನು ವಾಚಕರು ಕಾಣಬಹುದಾಗಿದೆ. —ಸಂ. ಜ. ಕ.) ....

....

೧

ಮರವೆಯುರಿ ಮುಸುಕಿರುವ
ಕಾಲದಡವಿಯಲಿ
ಗರಿ ಮುದುರಿ ಕುಳಿತು ತೂ-
ಕಡಿಪ ವೇಳೆಯಲಿ,
ಇತಿಹಾಸಸೂತ್ರದಲಿ
ಕೋದ ಮುತ್ತುಗಳ—
ಸತ್ಯಮಿಥ್ಯಗಳ ಸಂ-
ವಾದ ಬಿತ್ತುಗಳ—
ತಿಂದಿನಿಸು ತೃಪ್ತಿಯನು
ತೋರದಿದೆ ಹಕ್ಕಿ;
ಮುಂದಿರುವ ಮೃತ್ಯುವನು
ಕಾಣ ಕಣ್ಣಿಕ್ಕಿ!

೨

ರನ್ನ ಪಂಪಾದಿಗಳ
ಕಾವ್ಯಕಾನನದ
ಉನ್ನತೋನ್ನತ ವೃಕ್ಷ-
ರಾಜಸಂಪದದ
ನಿನ್ನೆಗಳ ನೆನೆನೆನೆದು
ಮರುಳ ಮೌನದಲಿ
ತನ್ನ ತಾನರಿಯದೆಯೆ
ಶುಷ್ಕ ವ್ಯಾಜದಲಿ
ಹಾಡುವುದ ಮರೆತಿಂತು
ಕುಳಿತೆಯೋ ಹಕ್ಕಿ?
ಹಾಡಲರಿಯದೆ ನಾವು
ಅಳುತಿಹೆವು ಬಿಕ್ಕಿ!

೩

ಕಾಲ ಮೀರುತಲಿಹುದು
ಕಳ್ಳ ಹೆಜ್ಜೆಯಲಿ—
ಲೋಲರಾಗಿಹರೆಲ್ಲ
ಸುಳ್ಳು ಬಿಜ್ಜೆಯಲಿ.
ನಮ್ಮ ತೋಂಟದ ಹಕ್ಕಿ-
ಗಿಲ್ಲ ಕೊರಲಿಂಪು,
ಸುಮ್ಮನಾಂತಿಹವೇನೊ
ಹೊರಮೈಯ ಪೆಂಪು.
ಸವಿಗೊರಲ ಕೋಗಿಲೆಯ
ಕುಕಿಲ ಕಲ್ಪನೆಯ
ಕಿವುಡುಗೇಳುವರುಂಟೆ?
ಸಲಿಸು ಕಾಮನೆಯ.

—ಪಿ.-ಜಿ. ಆರ್.

ಕಪ್ಪೆಗಳ ಪ್ರಣಯ

'ವಾಸಂತಿಕ'



ವಸಂತದ ಉದಯವಾಗುತಿದೆ. ಪ್ರಕೃತಿಯಲ್ಲಿ ಹೊಸ ಜೀವನವು ಚಿಗುರುತಿದೆ. ಗಿಡ ಮರಗಳಲ್ಲಿ ಹೂ ಚಿಗುರು ಕಾಯಿಗಳಾಗಿ ವಂಶಾಭಿವೃದ್ಧಿಯನ್ನು ಹೊಂದುವ ಕಾಲವಿದು. ಮನುಷ್ಯರು ಕಾಮದ ಹೋಳಿಮಾಡಿ, ಪ್ರೇಮದ ಓಕುಳಿಯಾಡಿ ದಾಂಪತ್ಯದ ಯುಗಾದಿಯಲ್ಲಿ ಕಾಲಿಟ್ಟಿದ್ದಾರೆ. ನಿಸರ್ಗದ ಕ್ರಿಮಿಕೀಟಕಗಳಲ್ಲಿ ಕೂಡ ವಸಂತಾಗಮನದ ಉಲ್ಲಾಸವು ಹರಿದಾಡುತಿದೆ.

ಕೋಗಿಲೆಗಳು ಕುಕಿಲುತಿವೆ. ವೃಕ್ಷಗಳು ಪುಷ್ಪಿಸಿ, ತಮ್ಮ ಯೌವನದ ಸುಗಂಧಸಾರವನ್ನು ಮಂದಮಾರುತನೊಡನೆ ಬೆರೆಸಿ ದೂರದ ಪ್ರಿಯ ವೃಕ್ಷಗಳಿಗೆ ಸಂದೇಶವನ್ನು ಕಳಿಸುತಿವೆ. ಚೇತನದಲ್ಲೆಲ್ಲ ಉತ್ಸಾಹ ಉಲ್ಲಾಸಗ... ದಾಡುತಿವೆ. ಯಾವುದೋ ಅದೃಶ್ಯ ಸಂಸಾರದ ಅಂದಚಂದಗಳ ಕಡೆಗೆ ಯುವತಿಯರ ಮನ ಸೆಳೆಯುತಿದೆ. ಆಕರ್ಷಣಗಳು ... ವ್ಯಾಪಿಸಿ, ಜೀವಿ... ಪ್ರೇಮ – ಪ್ರಣ... ಸೆಲೆಯೊಡೆಯುತಿ...


ಇಗೋ! ... ಹೊಂಡಗಳಲ್ಲಿ ... ವಸ್ತುಗಳಂತೆ ... ಮೂಡಿ ಬರುತ್ತಿ... ನಿಶ್ಚೇತನ ವಸ್ತು... ಸಚೇತನ ಜೀವಿಗ... ತಿಯ ಮರೆಯಿ... ನದ ರಂಗಕ್ಕೆ



ನಮಗೆ ವಸಂತದ ಅರಿವಾಗುವ ಮೊದಲೆ ಅವುಗಳಲ್ಲಿ ವಸಂತನು ಸುಳಿದಾಡುವನು. ಒಂದು ಮಳೆ ಬಿದ್ದ ಕೂಡಲೆ ಹಸುರು ಹುಲ್ಲು ನವಜನ್ಮವನ್ನು ಹೊಂದಿ ಪೊಡವಿಯನ್ನು ಹಚ್ಚಗೆ ಸಿಂಗರಿಸುವಂತೆ, ವಸಂತನ ಉಸಿರು ತಾಗಿದ ಕೂಡಲೆ ಅತ್ತಲಿತ್ತಲಿನ ಜಲಾಶಯಗಳಲ್ಲಿ ಲಕ್ಷೋಪಲಕ್ಷ ಕಪ್ಪೆಗಳು ಚಿಗಿದು ಬರುವವು. ಚಳಿಯಿಂದ ಗಿಡಮರಗಳ ಎಲೆಗಳುದುರಿ ಬರಿ ಒಣಒಣದಾದ ಪ್ರಕೃತಿಯ ಬೈಲು ಇಂದು ಚಿಗುರು ಹೂಕಾಯಿಗಳಿಂದ, ನವಜೀವಿಗಳ ಜನನದಿಂದ ಸಿಂಗಾರಾಗಿ ನಳನಳಿಸುತಿದೆ.

ಹುಟ್ಟಿನ ಹಿಂದೆಯೇ ಬೆಳಿಗೆಯಿದೆ.(೨) ಅಥವಾ ಹುಟ್ಟು ಬೆಳಿಗೆಯ ಆರಂಭವೆನ್ನಬಹುದು. ಹುಟ್ಟಿದುದೆಲ್ಲವೂ — ಗಂಡಾಗಲಿ ಹೆಂಣಾಗಲಿ — ಬೆಳೆಯಲೇಬೇಕು; ಬೆಳೆಯದಿದ್ದರೆ ಅಳಿಯಬೇಕು. ಹುಟ್ಟಿದಾಗ ಗುಪ್ತವಾಗಿರುವ ಗಂಡುತನ ಹೆಂಣುತನಗಳು ಬೆಳೆಬೆಳೆದಂತೆ ವ್ಯಕ್ತವಾಗುತ್ತ ಬರುವವು. ಸ್ವತಂತ್ರವಾಗಿ, ನಿರ್ಲಿಪ್ತವಾಗಿ ಬೆಳೆವ ಗಂಡುಹೆಂಣುಗಳು ಈಗ ಒಂದನ್ನೊಂದು ಆತ್ಮೀಯತೆಯಿಂದ ನೋಡುವವು. ಸಹವಾಸ ಸಂಸರ್ಗಗಳನ್ನು ಅಪೇಕ್ಷಿಸುವವು. ತಮ್ಮ ಹಾಡುಗಳಿಂದ, ಕುಣಿತಗಳಿಂದ, ಹರೆಯದ ಮೈಬಂಣಗಳಿಂದ ಒಂದನ್ನೊಂದು ಆಕರ್ಷಿಸಲು ಹವಣಿಸುವವು. ನವ ಕುಸುಮ ಪಲ್ಲವಗಳಿಂದ ಅಲಂಕೃತಳಾದ ಪ್ರಕೃತಿಯು ಪ್ರಾಣಿಗಳ ಪ್ರಣಯ ಲೀಲೆಗೆ ಪ್ರೇರಕವೂ ಪೂರಕವೂ ಆಗುವದು. ಇಲ್ಲಿ ನೋಡಿ, ವಿಕಸಿತವಾದ ಕಮಲದ ಸುಗಂಧಮಯ ಪ್ರೇಮ ಛತ್ರದ ಅಡಿಯಲ್ಲಿ ಕುಳಿತು ಕಪ್ಪೆಗಳು ಪ್ರಣಯ ಗೀತೆಯನ್ನು ಹಾಡುತಿವೆ. ನಮ್ಮ ಕಿವಿಗಳಿಗದು ಕರ್ಕಶವಾದರೂ ಆ ಪ್ರಣಯಿಗಳಿಗದರಲ್ಲಿ ಯಾವ ಸಂದೇಶವಿರಬಹುದು! ಎಷ್ಟು ಮಧುರವಿರಬಹುದು! ಎಷ್ಟು ಮೋಹಕವಿರಬಹುದು! ಕೋಗಿಲೆಯ ಕುಕಿಲು, ಭೃಂಗದ ಗುಂಜಾರವ, ಕೀಟಕಗಳ ಕೀಸರು—ಇವುಗಳಲ್ಲಿರುವ ನೈಮುರೆಯಿಸುವ ಮಿಲನದ ಆಶೆಯೇ ಕಪ್ಪೆಗಳ ಟೊರಗುಡುವಿಕೆಯಲ್ಲಿಯೂ ಇದೆ.

ಪ್ರಣಯದ ಆಕರ್ಷಣದಿಂದ ಬಿಡಿಯಾದ ಎರಡು ಸ್ತ್ರೀಪುರುಷ ಜೀವಿಗಳು ಒಂದಾಗಿ, ಇಡಿಯಾಗಿ, ಬುನಾದಿಯಿಂದ ಬಂದ ಜೀವನದ ಅಮರ ಜ್ಯೋತಿಯನ್ನು ರಕ್ಷಿಸುವ ಸಂತಾನಶ್ರೀಗೆ ಕಾರಣವಾಗುವವು.(೩) ಇಲ್ಲಿ ನೋಡಿ, ಒಂದೇ ಸಲಕ್ಕೆ ದಶಸಹಸ್ರ ಸಂಖ್ಯೆಯಲ್ಲಿ ಮೊಟ್ಟೆಯನ್ನಿಟ್ಟು, ಕಾಮದ ಕುಣಿದಾಟಕ್ಕೆ ಪ್ರೇಮದ ತಾಯ್ತ್ತನದ ಕಿರೀಟವನ್ನಿಟ್ಟು ಸಂತಾನಸಂಪತ್ತಿನಲ್ಲಿ ಧನ್ಯತೆಯಿಂದ ಮೆರೆವ ತಾಯಿಗಪ್ಪೆ!



(೩)

ನಿಶೆಯು ಎಲ್ಲೆಲ್ಲೂ

(ಸಣ್ಣಕತೆ)

ನನ್ನನ್ನು ನೀವು ಖಂಡಿತವಾಗಿ ಮದುವೆಮಾಡಿಕೊಳ್ಳಬೇಕು ಎಂದು ಆಕೆ ಹೇಳಿದ್ದುದು, ನಾನು ಒಪ್ಪಿದುದು, ನಮ್ಮಿಬ್ಬರ ಪಗಡೆಯಾಟ, ಪ್ರೇಮ ವಿಷ... ಮುಂತಾಗಿ ಹಿಂದಿನ ಎಲ್ಲ ದೃಶ್ಯಗಳೂ ಕಣ್ಣ ಮುಂದೆ ಕಟ್ಟಿದವು. ... ವಿಷಯವನ್ನು ದಯವಿಟ್ಟು ಇಲ್ಲಿ ಹೇಳಬೇಡಿ' ಎಂಬ ಆಕೆಯ ಚೀಟಿಯನ್ನು ... ... ದೀರ್ಘವಾದ ಬಿಸಿಸುಯ್ಲು ಒಂದು ನನ್ನಿಂದ ಹೊರಟಿತು ...

" ಶಂಕರತನಯ, " ಬೆಂಗಳೂರು

ನಾನೂ ಶಿರೋಮಣಿಯೂ ಒಂದೇ ಸ್ಕೂಲಿನಲ್ಲಿ ಕಲಿತವರು. ಆದರೆ ಅವನು ಬಿ. ಎ. ಪಾಸು ಮಾಡಿಕೊಂಡು ಇದೇ ಊರಿನಲ್ಲಿಯೇ ಕೆಲಸ ಸಿಕ್ಕದ್ದರಿಂದ ಇಲ್ಲಿಯೇ ನಿಂತ. ನಾನಾದರೋ ನನ್ನ ವ್ಯಾಸಂಗವು ಮಧ್ಯದಲ್ಲಿಯೇ ನಿಲ್ಲಬೇಕಾಗಿ ಬಂದುದರಿಂದ ನಮ್ಮ ಹಳ್ಳಿಗೆ ಹೋಗಿ ನಿಲ್ಲಬೇಕಾಗಿ ಬಂದಿತು.

ಆರೇಳು ವರ್ಷಗಳ ವರೆಗೆ ನಮ್ಮಿಬ್ಬರ ಮಿಲನವಾಗಿರಲಿಲ್ಲ. ಪುನಃ ಇಂದು ಆಕಸ್ಮಾತ್ತಾಗಿ ಅವನ ದರ್ಶನವಾಯಿತು.

ಆದರೆ ಅವನನ್ನು ನೋಡಬೇಕೆಂಬ ಅಪೇಕ್ಷೆಯು ನನ್ನಲ್ಲಿರಲಿಲ್ಲ.

ಸ್ಕೂಲಿನಲ್ಲಿ ಓದುವಾಗ ಎಲ್ಲರೂ ಸ್ನೇಹಿತರು, ಸಂಗಡಿಗರು. ಓದು ಮುಗಿದೊಡನೆಯೇ ಜೀವನದ ಸೆಳವಿಗೆ ಸಿಲ್ಕಿ ಒಬ್ಬರನ್ನೊಬ್ಬರು ಅಗಲುತ್ತೇವೆ. ಕ್ರಮವಾಗಿ ಹಿಂದಿನದೆಲ್ಲವೂ ಎಲ್ಲರೂ ಮರೆವಿನ ನೆರಳಿನಲ್ಲಿ ಸೇರಿ ಹೋಗುತ್ತಾರೆ. ಅನೇಕ ಸಮಯಗಳಲ್ಲಿ ನಮ್ಮ ಸಂಗಡಿಗರ ನೆನಪೇ ಇರುವುದಿಲ್ಲ. ಅವರನ್ನು ನೋಡಿದರೆ ಮಾತ್ರ ವ್ಯಾವಹಾರಿಕವಾಗಿ ಮಾತುಕತೆಗಳನ್ನಾಡುತ್ತೇವೆ; ನಡೆದುಕೊಳ್ಳುತ್ತೇವೆ.

ನನ್ನ ಶಿರೋಮಣಿಯ ಸ್ನೇಹದ ಚರಿತ್ರೆಯು ಸಹಾ ಇಂತಹದೇ ಒಂದು ವಿಧವಾದ ಪ್ರಕರಣ.

ಊರು ಬಿಟ್ಟು ಆರೇಳು ವರ್ಷಗಳಾದುದರಿಂದ ಬಹುಶಃ ನನಗೆ ಎಲ್ಲವೂ ಹೊಸದಾಗಿ ಕಾಣುತ್ತಿತ್ತು. ಹಳೆಯ ಸ್ನೇಹಿತರು ಸಿಕ್ಕಿದರೂ ಸಹಾ ಅವರು ಕೆಲವು ವೇಳೆ ಹೊಸಬರಂತೆ ತೋರುತ್ತಿದ್ದರು.

ಸುತ್ತಾಡಿಕೊಂಡು ಪಾರ್ಕಿಗೆ ಹೋಗಬೇಕೆಂದು ಯೋಚಿಸುತ್ತಿರುವ ಸಮಯದಲ್ಲಿ ಶಿರೋಮಣಿಯು ದಾರಿಯಲ್ಲಿ ಸಿಕ್ಕಿದ. ಮೊದಲು ಅವನೇ ನನ್ನನ್ನು ಗುರ್ತಿಸಿದ, ಸರಿ, ಕುಶಲ ವಾರ್ತೆಗಳಾದವು. ನಂತರ ಅವನು "... ಊರಿಗೆ ಹೋಗಬೇಕು ? " ಎಂದು ಕೇಳಿದ.

" ಒಂದೆರಡು ದಿನಗಳು ಇಲ್ಲಿಯೇ ಇ..." ಎಂದು ಉತ್ತರಗೊಟ್ಟೆ.

" ಹಾಗಾದರೆ ನಾಳೆ ನಮ್ಮ ಮನೆಗೆ ... ಬಹುದಲ್ಲ " ಎಂದು ಔತಣ ಬಂದಿತು.

" ಆಗಬಹುದು. ಆದರೆ ನಾಳೆ ನನಗೆ ಬಹ... ಇನ್ನೊಂದು ಸಾರಿ ಯಾವಾಗಾದರೂ ಬರುತ್ತೇ..." ಹೇಳಿದೆ.

" ತೊಂದರೆಯಾಗೋ ಹಾಗಿದ್ದರೆ ಯೋ... ಬೇಡಿ. ಆದರೆ 'ಟೀ'ಗಾದರೂ ಖಂಡಿತ ..." ಎಂದು ಶಿರೋಮಣಿಯು ಒತ್ತಾಯಮಾಡಿದ.

ಆಗಲೆಂದು ಸಮ್ಮತಿಯಿತ್ತು ಆತನ ವಿಳಾಸ... ಹಾಕಿಕೊಂಡೆ.

ಇಬ್ಬರೂ ಹಾಗೆಯೇ ಹೋಗುತ್ತಾ ನಮ್ಮ ಉಪಾಧ್ಯಾಯರು, ಗೆಳೆಯರು ಮತ್ತು ಗೆಳತಿ... ಮೊದಲಾದ ವಿಷಯಗಳನ್ನು ಮಾತನಾಡಿಕೊ... ನಮ್ಮ ಸ್ಥಾನಗಳಿಗೆ ಸೇರಿದೆವು.

*   *

ಭಾನುವಾರವಾದುದರಿಂದ ಶಿರೋಮಣಿಗೆ ...ಲಿಲ್ಲ. ಅದರಿಂದಲೇ ನನಗೆ 'ಟೀ'ಗೆ ಕರೆದಿದ್ದು... ದರೂ ಹೋಗಿ ಸ್ವಲ್ಪ ಕಾಲ ಕಳೆಯಬಹು... ಗೊಂಡು ನಾಲ್ಕು ಗಂಟೆಗೆ ಸರಿಯಾಗಿ ... ಹೋದೆ.

ಬಹು ಆದರದಿಂದ ನನ್ನನ್ನು ಒಳಗೆ ... ಹೋದ ಆತನು.

ಹಾಲಿನಲ್ಲಿ ಒಂದು ಸಣ್ಣ ಕುರ್ಚಿಯ ಮೇ... ಕುಳಿತುಕೊಳ್ಳುವಂತೆ ಹೇಳಿದ. ಅವನೂ ...

ಮತ್ತೊಂದು ಕುರ್ಚಿಯನ್ನು ಎಳೆದುಕೊಂಡು ಕುಳಿತು ಮಾತನಾಡತೊಡಗಿದ.

ನಾವಿಬ್ಬರೂ ಮಾತನಾಡುತ್ತಿದ್ದ ಶಬ್ದವನ್ನು ಕೇಳಿಕೊಂಡು ಸಣ್ಣ ಬಾಲಕನೊಬ್ಬನು ಹೊರಗೆ ಬಂದು ಶಿರೋಮಣಿಯ ಹತ್ತಿರ ಬಂದುನಿಂತ. ನನ್ನನ್ನು ನೋಡಿ "ಯಾರಪ್ಪ ಇವರು?" ಎಂದು ಪ್ರಶ್ನೆ ಮಾಡಿದ.

"ಲೋ, ಇವರು ನಿಮ್ಮ ಮಾವ ಕಣೋ!" ಎಂದು ನನ್ನ ಪರಿಚಯವನ್ನು ಆರೇಳು ವರ್ಷಗಳ ಹುಡುಗನಿಗೆ ಮಾಡಿಕೊಟ್ಟ.

ನಾನೂ ಹುಡುಗನನ್ನು ನೋಡಿದೆ. ನೋಡುವುದಕ್ಕೆ ಮುದ್ದಾಗಿದ್ದ. ಆದರೂ ಏನೋ ಒಂದು ಭಾವನೆಯು ಬಂದಿತು.

ಹುಡುಗನನ್ನು ನೋಡಿ ಯಾರದೋ ನೆನವು ಮಾಸು ಮಾಸಲಾಗಿ ಬಂದಿತು. ಏಕೋ ತಿಳಿಯದು, ಒಂದು ವಿಧವಾದ ಆತ್ಮೀಯತೆಯ ಭಾವವು ಮನದಲ್ಲಿ ಏಳತೊಡಗಿತು.

ಅಷ್ಟರಲ್ಲಿಯೇ ಶಿರೋಮಣಿಯು ಮಗನನ್ನು ಹಾಸ್ಯ ಮಾಡತೊಡಗಿದ. "ಲೋ, ನಿನ್ನ ಹೆಸರು ಗಣೇಶ ಅಲ್ಲವೇನೋ?"

ಹುಡುಗನಿಗೆ ಇದು ಸರಿ ಬರಲಿಲ್ಲ. "ಇಲ್ಲ ನನ್ನ ಹೆಸರು ಶಂಕರ" ಎಂದು ಮಾರುತ್ತರವಿತ್ತ.

ಕಂಠಸ್ವರದಲ್ಲಿ ಎಲ್ಲಿನದೋ ನೆನವು. ಆದರೆ ಎಲ್ಲಿನದೆಂದು ತಿಳಿಯಲಾರದೆ ಮೂಕನಾಗಿದ್ದೆ. ಆದರೂ ಹುಡುಗ ನನ್ನ ಹತ್ತಿರಕ್ಕೆ ಕರೆದು "ಹಾಗಾದರೆ ನಿನ್ನ ಹೆಸರು ಗಣೇಶನಲ್ಲ, ಶಂಕರ" ಎಂದು ಸಮಾಧಾನ ಮಾಡಿದೆ.

ಹತ್ತಿರ ನಿಂತಿದ್ದ ಹುಡುಗನನ್ನು ಚೆನ್ನಾಗಿ ನೋಡಿದೆ; ಮೊದಲಿನ ಭಾವನೆಗಳು ಬಲವಾದವು. ಅಷ್ಟರಲ್ಲಿ ಶಿರೋಮಣಿಯು ಅವನನ್ನು ಕರೆದು "ಟೀ ಆಗಿದೆಯೋ ಇಲ್ಲವೋ ನೋಡಿಕೊಂಡು ಬಾ" ಎಂದು ಅವನಿಗೆ ಹೇಳಿದ.

ಹುಡುಗನು ಹೋಗಲು ಸಮ್ಮತಿಸಲಿಲ್ಲ. ಆದುದರಿಂದ ಶಿರೋಮಣಿಯು ಆ ಕೆಲಸವನ್ನು ಮಾಡಲು ತಾನೇ ಒಳಗೆ ಹೋದ.

ಒಳಗೆ ಮಾತನಾಡುತ್ತಿರುವುದು ಚೆನ್ನಾಗಿ ಕೇಳಿಸುತ್ತಿತ್ತು. ತನ್ನ ಹೆಂಡತಿಯೊಡನೆ ಮಾತನಾಡುತ್ತಿರಬಹುದೆಂದು ಭಾವಿಸಿದೆ.

ಆದರೂ ಒಳಗೆ ಮಾತನಾಡುತ್ತಿದ್ದ ಸ್ತ್ರೀಯ ಧ್ವನಿಯು ಮಾತ್ರ ನನಗೆ ಹೊಸದಾಗಿರಲಿಲ್ಲ. ಚಯದ ಸ್ವರದಂತೆ ಮಾತ್ರ ಮನಸ್ಸಿನಲ್ಲಿ ತೋರಬರುತ್ತಿತ್ತು.

ಮಾತಿನ ಶಬ್ದಗಳು ಹೆಚ್ಚು ಕೇಳಬಂದಂತೆಯೇ ನನ್ನ ಮನಸ್ಸಿನಲ್ಲಿ ಬಂದ ಯೋಚನೆಗಳು ಬದಲಾಯಿಸುತ್ತ ಬಂದವು. ಭಾವನಾ ತರಂಗಗಳು ಎಲ್ಲಿಯೋ ಹೋಗಿ ನಂತರ ಅಲ್ಲೋಲಕಲ್ಲೋಲವಾಗಿ ದಡಕ್ಕೆ ಬಂದು ಹೊಡೆಯುತ್ತಿದ್ದವೆಂದು ನನಗೆ ತೋರಿತು.

ಇಷ್ಟರಲ್ಲಿ ಶಿರೋಮಣಿಯು ಹೊರಗೆ ಬಂದು ಹುಡುಗನನ್ನು ಕುರಿತು "ಶಂಕರ, ನಿಮ್ಮ ಮಾವನಿಗೆ ಟೀ ತಗೊಂಡು ಹೋಗಿ ಕೊಡೋ" ಎಂದು ಹೇಳಿದ.

"ಆಗಲಿ, ತರ್‍ತೀನೆ" ಎಂದು ಹುಡುಗನು ಧಾವಿಸಿ ಒಳಕ್ಕೆ ಓಡಿದ. ಓಡುವಾಗ ಹೊಸ್ತಿಲು ತಗುಲಿ ಮುಗ್ಗುರಿಸಿ ಬಿದ್ದ.

ಬಿದ್ದ ಮಗನನ್ನು ಎತ್ತಲು ಒಳಗಿದ್ದ ತಾಯಿಯು ಹೊರಕ್ಕೆ ಬಂದಳು. ಆಕೆಯನ್ನು ಒಂದುತಡವೆ ನೋಡಿದೆ.

ಆಕೆಯು ನನ್ನನ್ನು ನೋಡಿದಳು.

ಒಬ್ಬರನ್ನೊಬ್ಬರು ಗುರುತು ಹಿಡಿದೆವು.

ಆಕೆಯು ಮಗನನ್ನು ಎತ್ತಿಕೊಂಡು ಒಳಕ್ಕೆ ಹೊರಟುಹೋದಳು. ಶಿರೋಮಣಿಯು "ಟೀ"ಯನ್ನೂ ತಾನೇ ತಂದ. ಇಬ್ಬರೂ ಅದನ್ನು ಕುಡಿದೆವು.

ಆತನ ಮಾತಿನಲ್ಲಿ ಆತನು ಪತ್ನಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕೊಟ್ಟಿದ್ದಂತೆ ಕಾಣಲಿಲ್ಲ.

ನಮ್ಮ ಹಿಂದಿನ ವಿದ್ಯಾರ್ಥಿಜೀವನವನ್ನೂ ಸ್ನೇಹಿತರ ವಿಚಾರವನ್ನೂ ಮಾತನಾಡುತ್ತಿರುವಾಗ ನಮ್ಮ ಸಂಗಡ ಓದುತ್ತಿದ್ದ ಹೆಣ್ಣುಮಕ್ಕಳ ಸುದ್ದಿಯೂ ಬಂದಿತು.

ವೇಳೆಯು ಸ್ವಲ್ಪ ಹೊತ್ತು ಹೀಗೆಯೇ ಕಳೆದು ಹೋಯಿತು. ನನ್ನ ಮನಸ್ಸಿನಲ್ಲಿ ಮಾತ್ರ ಭಯಂಕರವಾದ ಗೊಂದಲ.

ಹುಡುಗನು ಒಳಗಿನಿಂದ ಬಂದು "ಅಪ್ಪಾ, ಯಾಕೋ ಅಮ್ಮ ಕರಿತಾರೆ" ಎಂದು ಹೇಳಿ ಅಪ್ಪನನ್ನು ಒಳಕ್ಕೆ ಕರೆದುಕೊಂಡು ಹೋದ.

ಈ ವೇಳೆಗೆ ಸರಿಯಾಗಿ ಆಫೀಸಿನಿಂದ ಜವಾನ ಶಿರೋಮಣಿಯನ್ನು ಹುಡುಕಿಕೊಂಡು ಬಂದ. ಶಿರೋಮಣಿಯು ಅವನೊಡನೆ ಮಾತನಾಡಲು ಹೊರಗೆ ಹೊರಟುಹೋದ. ಹೋಗುತ್ತ ಹೋಗುತ್ತ "ನೋಡಿರಿ, ಭಾನುವಾರ ಸಹಾ ನಮ್ಮ ಆಫೀಸು ತಪ್ಪೊಲ್ಲ" ಎಂದು ನನಗೆ ಹೇಳಿದ.

ಆದರೆ ನನ್ನ ಮನವು ಬೇರೆ ಲೋಕದಲ್ಲಿ ಮುಳುಗಿ ಬಹು ದಿನಗಳ [illegible] ಹೋಗಿತ್ತು.

ತಟ್ಟನೆ ನನ್ನ ಮುಂದೆ ಚೀಟಿಯೊಂದು ಬಂದು ಬಿದ್ದಿತು. ಅತ್ತಿತ್ತ ನೋಡಿ ಅದನ್ನು ತೆಗೆದುಕೊಂಡು, ಓದಿ ನೋಡಿದೆ.

ಅದರ ಒಕ್ಕಣೆ ಬಹು ಸಣ್ಣದಿತ್ತು.

"ನನ್ನ ವಿಷಯವನ್ನು ದಯವಿಟ್ಟು ಇಲ್ಲಿ ತಿಳಿಸಬೇಡಿ."

ಕಾಗದವನ್ನು ಸುರಳಿಸುತ್ತಿ ಜೇಬಿನಲ್ಲಿ ಸೇರಿಸಿದೆ.

ಶಿರೋಮಣಿಯು ಜವಾನನನ್ನು ಕಳುಹಿಸಿಬಿಟ್ಟು ಒಳಗೆ ಬಂದು "ಕ್ಷಮಿಸಬೇಕು, ಒಬ್ಬರನ್ನೇ ಬಿಟ್ಟಿದ್ದಕ್ಕಾಗಿ. ಆದರೆ ನೋಡಿ, ವಿಧಿಯಿಲ್ಲ." ಎಂದು ನುಡಿದು ಉಪಚಾರಮಾಡಿದ.

ಮನಸ್ಸಿನಲ್ಲಿ ನನಗೆ ಆತನು ಹೊರಗೆ ಹೋದದ್ದು ಒಳ್ಳೆಯದಾಯಿತೆಂದು ಹರ್ಷಗೊಂಡೆ. ಕಾರಣವಿಷ್ಟೆ: ಸಂಶಯವು ರೂಪಿಲ್ಲದಂತೆ ನಿವಾರಣೆಯಾಗಿತ್ತು.

ಸ್ವಲ್ಪ ಹೊತ್ತಿನ ನಂತರ ಹೊತ್ತಾಯಿತೆಂದು ಹೇಳಿ ಹೊರಟೆ. ಶಿರೋಮಣಿಯು ನಿರ್ವಂಚನೆಯಿಂದ ಹೇಳಿದ: "ರಾತ್ರಿ ಇಲ್ಲೇ ಇರಬಹುದು. ಅಡಿಗೆ ಜಾಗ್ರತೆಯಾಗಿ ಆಗುತ್ತೆ"

"ದಯವಿಟ್ಟು ಕ್ಷಮಿಸಬೇಕು. ನಮ್ಮ ಬಂಧುಗಳು ಹಾದಿ ನೋಡುತ್ತಾರೆ." ಎಂದು ಹೇಳಿ ತಪ್ಪಿಸಿಕೊಂಡೆ.

ನಾನಲ್ಲಿ ಅತಿಥಿಯಾಗುವುದು ದಂಪತಿಗಳಲ್ಲಿ ಒಬ್ಬರಿಗೆ ಹಿತವಾದುದಲ್ಲ.

ಶಿರೋಮಣಿಯಿಂದ ಅಪ್ಪಣೆಯನ್ನು ಪಡೆದೆ. "ನಿಮ್ಮ ಮಗನ್ನ ಕರೀರಿ" ಎಂದು ನಾನು ಹೇಳಿದೆ.

ತಂದೆಯು ಹುಡುಗನನ್ನು ಕರೆದ. ಅವನು ಓಡಿಬರುವುದರಲ್ಲಿದ್ದ. ಆದರೆ ತಾಯಿಯು "ಶಂಕರಾ, ಎಡವಿಯೋ ಮತ್ತೆ, ನಿಧಾನವಾಗಿ ಹೋಗು" ಎಂದು ಹೊರಕ್ಕೆ ಅವನನ್ನು ತಂದುಬಿಟ್ಟಳು.

ಹೊರಗೆ ಬಂದವಳು ನನ್ನನ್ನು ಒಂದು ಸಾರಿ ನೆಟ್ಟ ನೋಟದಿಂದ ನೋಡಿದಳು.

ಶಂಕರನನ್ನು ಹತ್ತಿರಕ್ಕೆ ಸೆಳೆದುಕೊಂಡು ಮನೆಯವರಿಗಾಗಿ ತೆಗೆದುಕೊಂಡಿದ್ದ ಸವರನನ್ನು ಅವನ ಕೈಲಿಟ್ಟೆ. ಶಿರೋಮಣಿಯು "ಏನರಿ ಇದು?" ಎಂದು ಕೇಳಿದ.

"ಏನೂ ಇಲ್ಲ" ಎಂದು ಹೇಳಿ ಹುಡುಗನಿಗೆ ಒಂದು ಸಾರಿ ರಮಿಸಿ ಕಳುಹಿದೆ.

ಶಿರೋಮಣಿಯು ಹುಡುಗನನ್ನು ಕರೆದುಕೊಂಡು "ಮಾವನಿಗೆ ನಮಸ್ಕಾರ ಹೇಳು" ಎಂದು ಬುದ್ಧಿಹೇಳಿದ. ನಾನು ಅಲ್ಲಿಂದ ಹೊರಬಿದ್ದೆ.

* * *

ರಾತ್ರಿ ಊಟಮಾಡಿ ಹೊರಗೆ ... ಮೇಲೆ ಕುಳಿತೆ.

ಸ್ನೇಹಿತನ ಮನೆಯಲ್ಲಿ ನಡೆದದ್ದು ... ಸಂಗಡಲೇ ಹಿಂದಿನ ಜೀವನದ ವೃತ್ತಾಂತ... ಬಂದಿತು.

ಕೈಯಲ್ಲಿದ್ದ ಚೀಟಿಯನ್ನು ತೆಗೆದು ...

"ನನ್ನ ವಿಷಯವನ್ನು ದಯವಿಟ್ಟು ಇಲ್ಲಿ ...

ವಿಷಯವೆಲ್ಲವೂ ನೆನಪಿಗೆ ಬಂದಿತು.

"ನನ್ನ ವಿಷಯ" ಆಕೆಯ ಒಬ್ಬಳದೇ ... ನಮ್ಮಿಬ್ಬರ ವಿಚಾರ. ಪಗಡೆಯಾಟ, ... ಪ್ರೇಮವಿಶ್ವಾಸಗಳು ಎಲ್ಲವೂ ಆ ವಿಷಯದಲ್ಲಿ ... ಹೋಗಿದ್ದವು.

"ನನ್ನನ್ನು ನೀವು ಖಂಡಿತವಾಗಿ ಮ... ಕೊಳ್ಳಬೇಕು." ಎಂದು ಆಕೆಯು ಹೇಳಿದ್ದು ...

"ಟಾಯಿಲೆಟ್" ಸಾಮಾನು ನಾನು ಕೊ... ರಪ್ಪನಿಗೆ ವರ್ಗವಾಗಲು ಖಂಡಿತವಾಗಿ ... ಯುವೆನೆಂದು ನನ್ನ ವಿಳಾಸವನ್ನು ತೆಗೆದುಕೊ...

ನಮ್ಮಿಬ್ಬರ ಜೀವನದ ಎಲ್ಲ ದೃಶ್ಯಗಳೂ ... ಸಾಲಾಗಿ ನಿಂತವು. ಬೆಳಕು ಎಲ್ಲಿಯೂ ಕಾಣ...

ನಿಶೆಯು ಎಲ್ಲೆಲ್ಲೂ.

ದೀರ್ಘವಾದ ಬಿಸಿಸುಯ್ಲು ಒಂದು ... ಹೊರಟಿತು. ಆಕಾಶದ ಕಡೆಗೆ ನೋಡಿದೆ. ನಿಶೆಯು ಎಲ್ಲೆಲ್ಲೂ.

ಅಂತೂ—

ನಿಶೆಯು ಎಲ್ಲೆಲ್ಲೂ.

ಹಿಟ್ಲರನ ವಿಕ್ರಮ

"ನಾಗರಿಕ"ರಿಂದ

§ ಸ್ವಜನಸಂಘಟನೆ, ಬೃಹತ್ - ಜರ್ಮನ್ ಸಾಮ್ರಾಜ್ಯದ ಸ್ಥಾಪನೆ, ಹೊಸ ವಸಾಹತುಗಳ ಸಂಪಾದನೆ—ಎಂಬೀ ಮೂರು ಮಹತ್ವಾಕಾಂಕ್ಷೆಗಳಲ್ಲಿ ಎರಡನ್ನು ಬಹುಮಟ್ಟಿಗೆ ಸಾಧಿಸಿದ ಹಿಟ್ಲರನ ವೀರ ವಿಕ್ರಮದ ಅದ್ಭುತ ಕಥೆಯಿದು.

§ ಆಸ್ಟ್ರಿಯದ ಸ್ವಾತಂತ್ರ್ಯಾಪಹಾರದ ಸಿದ್ಧತೆಯು ಬಹಳ ಹಿಂದಿನಿಂದಲೆ ಹೇಗೆ ಸಾಗಿತ್ತು? ಇಟಲಿಯನ್ನು ಒಡೆದುಕೊಂಡು ಹಿಟ್ಲರನು ತನ್ನ ಕಾರ್ಯಕವನ್ನು ಹೇಗೆ ಕೈಗೂಡಿಸಿದನು? ಈ ಕಪಟನಾಟಕದಲ್ಲಿ ಬ್ರಿಟನ್ನಿನ ನೀಚಪಾತ್ರವು ಯಾವ ತೆರನಾಗಿದ್ದಿತು? ಹಿಟ್ಲರನ ಇನ್ನು ಮುಂದಿನ ಗೊತ್ತುಗುರಿಗಳು ಯಾವವು?—ಎಂಬುದನ್ನು ಕೂಲಂಕಷವಾಗಿ, ಅಧಿಕೃತವಾಗಿ, ಅಂಕೆಬದ್ಧವಾಗಿ ವಿವರಿಸುವ ಲೇಖನವಿದು.

★

ವಿಕ್ರಮ ಎಂದರೆ ಹೆಜ್ಜೆ. ಮೂರೇ ಹೆಜ್ಜೆಗಳಲ್ಲಿ ತ್ರಿವಿಕ್ರಮನು ಸ್ವರ್ಗ–ಮೃತ್ಯು–ಪಾತಾಲಗಳನ್ನು ಆಕ್ರಮಿಸಿ, ತ್ರಿವಿಕ್ರಮನಾದುದರ ಕತೆಯು ಪುರಾಣಪ್ರಸಿದ್ಧವಿದೆ. ಅಂತಹದೇ ಒಂದು ಅಭೂತಪೂರ್ವವಾದ ವಿಕ್ರಮವನ್ನು ಮೊನ್ನೆ ಮೊನ್ನೆ ಜರ್ಮನಿಯ ಸತ್ತಾಧೀಶನಾದ ಹಿಟ್ಲರನು ಯುರೋಪಿಯನ್ ರಾಜಕಾರಣದಲ್ಲಿ ಸಾಧಿಸಿ, ಜಗತ್ತನ್ನೆ ಬೆರಗುಗೊಳಿಸಿದ್ದಾನೆ.


ಹಿಟ್ಲರನ ಮೂರು ಮಹತ್ವಾಕಾಂಕ್ಷೆಗಳಲ್ಲಿ ಎರಡು ಬಹುಮಟ್ಟಿಗೆ ಈಡೇರಿದಂತಾಗಿವೆ: ತನ್ನ ದೇಶದಲ್ಲಿ ತನ್ನ ತತ್ವಕ್ಕನುಸಾರವಾಗಿ ತನ್ನ ಜನತೆಯ ಸಂಘಟನೆಯನ್ನು ಮಾಡುವುದು; ಜರ್ಮನಿಯ ಹೊರಗಿನ ಜರ್ಮನ್ ಜನತೆಯನ್ನು 'ಜರ್ಮನ್ ರೀಶ'ದ ಆಧಿಪತ್ಯಕ್ಕೊಳಪಡಿಸುವುದು. ಆಸ್ಟ್ರಿಯವನ್ನು ಒಂದೇ ಏಟಿಗೆ, ರಕ್ತದ ಒಂದೂ ಹನಿ ಹರಿಸದೆ ಸೆಳೆದುದರಿಂದ ಅವನೀ ಎರಡನೆಯ ಉದ್ದೇಶವು ಪೂರ್ತಿಯಾಗಿ ನೆರವೇರುವುದಕ್ಕೆ ತುಂಬಾ ಅನುಕೂಲ ಪರಿಸ್ಥಿತಿಯುಂಟಾಗಿದೆ. ಅವನ ಮೂರನೆಯ ಮಹೋದ್ದೇಶವು, ಪ್ರವರ್ಧಿಸುತ್ತಿರುವ ಜರ್ಮನ್ ಜನಸಂಖ್ಯೆಗೆ ವಸಾಹತುಗಳನ್ನು ದೊರಕಿಸಿಕೊಡುವುದು. ಇದರ ಅನಿವಾರ್ಯತೆಯನ್ನೂ ಹಿಟ್ಲರನು ತನ್ನ ಮಾರ್ಚ ೨೫ರ ಭಾಷಣದಲ್ಲಿ ಘಂಟಾಘೋಷವಾಗಿ ಹೇಳಿದ್ದಾನೆ.

★

ತಾ. ೧೨ ಮಾರ್ಚ್, ೧೯೩೮, ಶನಿವಾರ ದಿನ, ಹಿಟ್ಲರನು ಆಸ್ಟ್ರಿಯವನ್ನು ಜರ್ಮನಿಯ ಅಧೀನರಾಷ್ಟ್ರವಾಗಿ ಮಾಡಿಕೊಳ್ಳಲಾಯಿತೆಂದು ಉದ್ಘೋಷಿಸಿದಾಗ, ಜಗತ್ತೆಲ್ಲ ಆಚ್ಚರಿಯಿಂದ ಬೊಟ್ಟುಕಚ್ಚಿತು. ಆದರೆ ಹಿಟ್ಲರನು ತನ್ನ ಮನದ ಬಯಕೆಯನ್ನು ಎಂದೂ ಮುಚ್ಚುಮರೆಮಾಡಿಲ್ಲ. ಈಮಟ್ಟಿಗಂತೂ ಅವನು ಯುರೋಪಿನ ಬೇರೆ ರಾಜನೀತಿ-ಕೋವಿದರಿಗಿಂತ ಹೆಚ್ಚು ಪ್ರಾಮಾಣಿಕನಾಗಿದ್ದಾನೆ. 'Mein Kamph (ನನ್ನ ಹೋರಾಟ)' ಎಂಬುದು ಅವನ ಪ್ರಸಿದ್ಧ ಗ್ರಂಥ. ತನ್ನ ರಾಷ್ಟ್ರೀಯ ಅಪೇಕ್ಷೆಗಳನ್ನೆಲ್ಲ ಅದರಲ್ಲಿ ವಿವರಿಸಿದ್ದಾನೆ. ಆಸ್ಟ್ರಿಯವನ್ನು ಜರ್ಮನಿಗೆ ಕೂಡಿಸಿಕೊಳ್ಳುವ ಹಿರಿಬಯಕೆಯನ್ನು ಅದರ ಮೊದಲಪುಟದಲ್ಲಿಯೆ ಈ ರೀತಿ ಹೇಳಿದ್ದಾನೆ:—

"ಜರ್ಮನ್-ಆಸ್ಟ್ರಿಯವು ಮಹೋನ್ನತ ಜರ್ಮನ್ ಮಾತೃಭೂಮಿಗೆ ಮರಳಿ ಕೂಡಲೇಬೇಕು. ಆರ್ಥಿಕ ಉದ್ದೇಶವು ಅತಿ ಗೌಣವಾಗಿದೆ...ಒಂದೇ ರಕ್ತದ ಮಾನವವಂಶವು ಒಂದೇ ರೀಶದ ಆಧಿಪತ್ಯದಲ್ಲಿರಲೇಬೇಕು. ಜರ್ಮನ್ ಜನಾಂಗವು ತನ್ನ ಸಂತಾನವನ್ನೆಲ್ಲ ಒಂದೇ ಪ್ರಭುತ್ವದ ಅಂಕೆಯಲ್ಲಿ ತರಲಾರದೆ ಹೋದರೆ, ವಸಾಹತುಗಳನ್ನು ಗಳಿಸುವ ಭಾಷೆಯು ಆದರ ಬಾಯಿಗೊಪ್ಪದು. ರೀಶದ ಆಧಿಪತ್ಯಕ್ಕೆ ಪ್ರತಿಯೊಬ್ಬ ಜರ್ಮನನು ಒಳಪಡುವವರೆಗೂ ಮತ್ತು ರೀಶವು ಅವನನ್ನು ಪೋಷಿಸಲು ಶಕ್ತವಾಗುವವರೆಗೂ ಹೊರನಾಡುಗಳನ್ನು ಪಡೆಯುವ ನೈತಿಕ ಅಧಿಕಾರವು ಅದಕ್ಕಿರಲಾರದು."

★



ಅಸಂತುಷ್ಟ-ರುಷ್ಟ ಜರ್ಮನಿಯೆ ಹಿಟ್ಲರನ ರೂಪದಳೆದು ಬಂದಿದೆಯೆಂದರೆ ತಪ್ಪಾಗದು. ಇಂದು ಯುರೋಪಿನ ಪ್ರಮುಖರಾಷ್ಟ್ರಗಳು, ಜರ್ಮನಿಯ ಅತಿಕ್ರಮಣವು ಪಾಶವ ಶಕ್ತಿಯ ಪ್ರಕಟನವೆಂದೂ ಒಪ್ಪಂದಗಳ ಪವಿತ್ರ ನಿಬಂಧನೆಗಳ ಹೋಮವೆಂದೂ ಕಿರಚುತ್ತಿವೆ; ಶಪಿಸುತ್ತಿವೆ; ಚಿಟುಕು ಮುರಿಯುತ್ತಿವೆ. ಆದರೆ ಮಹಾಯುದ್ಧದಲ್ಲಿಯ ವಿಜಯದಿಂದ ಮದೋನ್ಮತ್ತರಾಗಿ ಜರ್ಮನಿಯ ಮೇಲೆ ಹೇರಿದ ಅಮಾನುಷ ನಿರ್ಬಂಧಗಳ ಅನ್ಯಾಯದ ಫಲವನ್ನೇ ಅವೀಗ ಉಣ್ಣುತ್ತಿವೆ. ವ್ಹರ್ಸಾಯ ಒಪ್ಪಂದವು (Versailles Treaty) ಈ ಘೋರ ಅನ್ಯಾಯದ ಕಲಶವಾಗಿದೆ. ಜರ್ಮನಿಯ ಶಸ್ತ್ರಬಲವನ್ನು ನಿಯಮಿತಗೊಳಿಸಲಾಯಿತು. ಜರ್ಮನಿಯ ಮೇಲೆ ಮಹಾಯುದ್ಧದ ಮಹಾಪರಾಧಕ್ಕಾಗಿ 'ತಪ್ಪುದಂಡ'ವನ್ನು ಹೇರಲಾಯಿತು. ಜರ್ಮನಿಯ ಕೆಲವೊಂದು ಸೀಮೆಯಲ್ಲಿ ಪರದೇಶೀಯ ಸೈನ್ಯವನ್ನು ಇಡಲಾಯಿತು; ಕೆಲವೊಂದು ಪ್ರದೇಶವನ್ನು ನಿಶ್ಶಸ್ತ್ರಗೊಳಿಸಲಾಯಿತು. ಸಂಸ್ಕೃತಿ-ರಕ್ತ-ವಂಶ ಸಂಬಂಧದಿಂದ ಒಂದೇ ಜನಾಂಗವೆನಿಸಿದ ಆಸ್ಟ್ರೋ-ಜರ್ಮನ್ ರಾಷ್ಟ್ರವನ್ನು ಎಂದೂ ಒಂದುಗೂಡದಂತೆ ಇಬ್ಭಾಗಿಸಲಾಯಿತು. ಆಸ್ಟ್ರಿಯ-ಹಂಗರಿಗಳನ್ನು ಬೇರ್ಪಡಿಸಿ, ಆಸ್ಟ್ರಿಯವನ್ನು ದುರ್ಬಲಗೊಳಿಸಲಾಯಿತು. ಜರ್ಮನಿಯ ಸುತ್ತುಮುತ್ತು ಫ್ರಾನ್ಸಿನ ಕುಯುಕ್ತಿಯಿಂದ ಅರಿರಾಷ್ಟ್ರಗಳ ವ್ಯೂಹವನ್ನು ರಚಿಸಲಾಯಿತಲ್ಲದೆ, ಜರ್ಮನಿಗೆ ಮಧ್ಯಯುರೋಪಿನ ಯಾವ ರಾಷ್ಟ್ರದಿಂದಲೂ ಆರ್ಥಿಕ ಸಹಾಯ ಸಿಗದಂತೆ ವ್ಯವಸ್ಥೆಯನ್ನು ಮಾಡಲಾಯಿತು. ಮುಂಚಿನ ಪ್ರಜಾಪ್ರಭುತ್ವಾಭಿಮಾನಿ ಸರಕಾರವು ಈ ಅನ್ಯಾಯವನ್ನು ತೊಡೆದುಹಾಕಲು ಅಸಮರ್ಥವಾದಾಗ, ರೊಚ್ಚಿಗೆದ್ದ ಜರ್ಮನ್ ಜನಾಂಗವು ಹಿಟ್ಲರನನ್ನು ಮುಂದುಮಾಡಿ, ವ್ಹರ್ಸಾಯ ಒಪ್ಪಂದದ ಒಂದೊಂದೇ ಕಲಮನ್ನು ಹರಿದು ಚೂರುಚೂರುಮಾಡಿ ಎಸೆಯಲಾರಂಭಿಸಿತು.

★

ಒಪ್ಪಂದವನ್ನು ಧಿಕ್ಕರಿಸುವ ನೀತಿಯನ್ನನುಸರಿಸಿ ಹಿಟ್ಲರನು ಕೈಗೊಂಡ ಮೊದಲನೆಯ ಕೃತಿಯೆಂದರೆ, ೧೯೩೩ರ ಅಕ್ಟೋಬರ ತಿಂಗಳಲ್ಲಿ ಜರ್ಮನಿಯು ರಾಷ್ಟ್ರಸಂಘಕ್ಕೂ ಶಸ್ತ್ರಸಂನ್ಯಾಸಪರಿಷತ್ತಿಗೂ ಶರಣುಹೊಡೆದು ಹೊರಬಿದ್ದುದು. ಎರಡೇ ವರ್ಷಗಳ ತರುವಾಯ, ಎಂದರೆ ೧೯೩೫ರಲ್ಲಿ, ಒಪ್ಪಂದದ ೫ನೆಯ ಭಾಗವನ್ನು ಧಿಕ್ಕರಿಸಿ, ಜರ್ಮನ್ ನಾಗರಿಕರಿಗೆ ಒತ್ತಾಯದ ಸಾರ್ವತ್ರಿಕ ಸೈನಿಕ ಶಿಕ್ಷಣವನ್ನು (Universal Conscription) ತರಲಾಯಿತು. ೧೯೩೬ರ ಮಾರ್ಚ್ ೭ನೆಯ ... ಲ್ಯಾಂಡನ್ನು ಆಕ್ರಮಿಸಿ, ಜರ್ಮನಿಯು ೪೨-೪೩ನೆಯ ಕಲಮುಗಳನ್ನು ಪ್ರತಿಭ... ವರ್ಷದ ನವಂಬರದಲ್ಲಿ ಒಪ್ಪಂದದನ್ವಯ ... ತೀರ್ಮಾನಿಸಲಾದ ನದಿ-ಸೇತುವೆಗಳನ್ನು ... ವರುಷದ ಜನವರಿಯಲ್ಲಿ ಒಪ್ಪಂದಕ್ಕಿದ್ದ ... ವನ್ನೇ ಅಲ್ಲಗಳೆದು, ಅದು ರದ್ದಾಯಿತೆಂದು ಸಾರಿ ಹೇಳಿತು.

ಇದೆಲ್ಲ ನಡೆದದ್ದು ಬೆಳ್ಳಂಬೆಳಕಿನ... ನಲ್ಲಿಯೇ. Mein Kamph ಗ್ರಂಥದಲ್ಲಿ ಹಿಟ್ಲ... ನಿಸ್ಸಂದೇಹವಾದ ರೀತಿಯಲ್ಲಿ ಹೇಳಿದ್ದಾನೆ: ... ಒಪ್ಪಂದವು "ನಿರ್ಲಜ್ಜತೆಯ—ಮಾನಸಿಕ... ಹಂ"ದೂ "ನಮ್ಮ ರಾಷ್ಟ್ರದ ಧೀಕರ... ಮಾಡಲು" ಹೂಡಿದ ಕಾಯಕವೆಂದೂ ... ದೊಗೆಯುವುದೆ ತನ್ನ ಜೀವಿತದ ಉದ್ದೇಶ... ಹಲವು ವರ್ಷಗಳ ಹಿಂದೆಯೆ ಉಗ್ಗಡಿಸಿದ್ದಾನೆ.

★

ವ್ಹರ್ಸಾಯ ಒಪ್ಪಂದದ ಅತಿ ಮಹತ್ವದ... ಮೆಂದರೆ, ಆಸ್ಟ್ರಿಯದ ಸ್ವಾತಂತ್ರ್ಯವನ್ನು ... ವಾಗಿಡುವುದು. ಇದಕ್ಕೆ ವಿಜಯಿರಾಷ್ಟ್ರಗಳ— ಇಂಗ್ಲಂಡ್, ಫ್ರಾನ್ಸ್, ಇಟಲಿಗಳು ... ಆಸ್ಟ್ರಿಯವನ್ನು ಜರ್ಮನಿಯ ಉಪರಾಷ್ಟ್ರ... ಜರ್ಮನಿಯು ವಿಜಯಿರಾಷ್ಟ್ರಗಳ—ವಿಶೇಷ... ಕೆನ್ನೆಯಲ್ಲಿ ಹೊಡೆದಂತಾಗಿದೆ. ಜರ್ಮನಿಯು ... ಆಕ್ರಮಣನೀತಿಯು ನಿಷೇಧಾರ್ಹವಾಗಿ... ಅದು ಮೂಲಭೂತವಾಗಿ ಅಸಮರ್ಥನೀಯ... ಯದ ಜನಸಂಖ್ಯೆ ೬೫ ಲಕ್ಷ; ಅದರಲ್ಲಿ ... ಜನರು ಜರ್ಮನ್ ಭಾಷೆಯನ್ನಾಡುವರು. ಮ... ತರುವಾಯ ಆಸ್ಟ್ರಿಯಕ್ಕೆ 'ಜರ್ಮನ್ ... ಎಂಬ ಹೆಸರನ್ನು ಕೊಡಲಾಗಿತ್ತು; ಆದರೆ ... ಕುತಂತ್ರದಿಂದ 'ಜರ್ಮನ್' ಶಬ್ದವನ್ನು ... ಬೇಕಾಯಿತು. ಯುದ್ಧೋತ್ತರ ಕಾಲದಲ್ಲಿ ... ಸ್ವಾತಂತ್ರ್ಯವನ್ನು ಕೊಡಲಾದುದು ಆವಸ್ಥೆ... ಗೊಳಿಸಿ, ಉಪವಾಸಗೆಡಹುವ ಉದ್ದೇಶದಿಂದಲೆ... ಮಹಾಯುದ್ಧಪೂರ್ವದ ೫ ಕೋಟಿ ಜನಸಂಖ್ಯೆ...

೧೧ ಲಕ್ಷ ಚದರು ಮೈಲಿನ ಘನ ಆಸ್ಟ್ರಿಯನ್ ಸಾಮ್ರಾಜ್ಯವನ್ನು ಶಕಲಶಕಲವಾಗಿ ಕಡಿದುಹಾಕಿ, ಬರಿ ೬೫ ಲಕ್ಷ ಜನಸಂಖ್ಯೆಯ ಮತ್ತು ೩೨ ಸಾವಿರ ಚದರು ಮೈಲಿನ ಪ್ರದೇಶಕ್ಕೆ ಅದನ್ನು ಇಳಿಸಲಾಯಿತು. ಫಲವತ್ತಾದ ಕೃಷಿಯೋಗ್ಯ ಭಾಗವನ್ನೂ ಸಮೃದ್ಧ ಖನಿಗಳುಳ್ಳ ಭೂಮಿಯನ್ನೂ ಕಸಿದುಕೊಳ್ಳಲಾಯಿತು. ಆಸ್ಟ್ರಿಯವು ಧಾನ್ಯ, ರಬ್ಬರು, ರಾಸಾಯನಿಕ ದ್ರವ್ಯಗಳು, ಕೊಬ್ಬು, ಎಣ್ಣೆ, ಉಣ್ಣೆ, ತಾಮ್ರ, ಕಬ್ಬಿಣ ಮೊದಲಾದ ಪ್ರತಿಯೊಂದು ಮನುಷ್ಯಪೋಷಕ ಮತ್ತು ಕಾರಖಾನೆಗಳಿಗೆ ಉಪಯುಕ್ತವಾದ ಸಾಮಾನುಗಳಿಗೂ ಪರದೇಶಗಳ ಮೇಲೆ ಅವಲಂಬಿಸಬೇಕಾಯಿತು. ಮಹಾಯುದ್ಧೋತ್ತರ ಕಾಲದ ದಾರಿದ್ರ್ಯದಿಂದ ಪರದೇಶದ ಪೇಟೆಗಳಲ್ಲಿ ಆಸ್ಟ್ರಿಯಕ್ಕೆ ಪತ್ತೇ ಉಳಿಯದಾಯಿತು. ಈ ಸಂದುಕಟ್ಟಿನಲ್ಲಿ ಆಸ್ಟ್ರಿಯವು ಜರ್ಮನಿಗಾದರೂ ಸೇರಬೇಕು ಇಲ್ಲವೆ ಹಳೆಯ ಆಸ್ಟ್ರಿಯನ್ ಸಾಮ್ರಾಜ್ಯದೊಳಗಿನ ಕೃಷಿಯೋಗ್ಯ ಮತ್ತು ಖನಿಸಂಪನ್ನ ಪ್ರದೇಶವನ್ನಾದರೂ ಮರಳಿ ಪಡೆಯಬೇಕು—ಎಂಬೆರಡೇ ಮಾರ್ಗಗಳು ಆಸ್ಟ್ರಿಯದ ಮುಂದಿದ್ದವು. ಈ ಅಸಾಹಾಯ ಸ್ವಾತಂತ್ರ್ಯಕ್ಕಿಂತಲೂ ಜರ್ಮನಿಯಲ್ಲಿ ಸೇರ್ಪಡೆಯಾಗುವುದೇ ಲೇಸೆಂದು ಆಸ್ಟ್ರಿಯದಲ್ಲಿಯ ಬಹುಸಂಖ್ಯ ಜರ್ಮನ್ ನಾಗರಿಕರೂ ಹೊಣೆಗಾರ, ಪ್ರಜಾಪ್ರಭುತ್ವವಾದಿ ಮುಖಂಡರೂ ಅಭಿಪ್ರಾಯವನ್ನು ಪ್ರದರ್ಶಿಸಿದ್ದರು. ಹಿಟ್ಲರನ ಅವತಾರಕ್ಕೆ ಮುಂಚಿತವಾಗಿಯೆ ದೂರದರ್ಶಿಗಳಾದ ಆಸ್ಟ್ರಿಯನ್-ಜರ್ಮನ್ ರಾಜನೀತಿವಿಶಾರದರು ಹೇಳಿದ ಹಿತವಾಕ್ಯಗಳನ್ನು ಫ್ರಾನ್ಸ್-ಇಟಲಿಗಳು ಸಂಗೀನಿನ ಮೊನೆ ತೋರಿಸಿ ಹಣಿದುಹಾಕಿದರು. ಅದಂತಿರಲಿ, ಆಸ್ಟ್ರಿಯ-ಜರ್ಮನಿಗಳ ಆರ್ಥಿಕವಿನಿಮಯವನ್ನು ಒಂದು ವ್ಯವಸ್ಥೆಗೆ ತರಲು ಎರಡೂ ರಾಷ್ಟ್ರಗಳ ಸುಂಕದ ಸಂಘಟನೆಯನ್ನು (Austro-German Customs Union) ಮಾಡಬೇಕೆಂದು ೧೯೩೧ರಲ್ಲಿ ಜರ್ಮನಿಯ ಆಗಿನ ಚಾನ್ಸೆಲರನಾದ ಡಾ. ಬ್ರುಯೆನಿಂಗನು ಮಾಡಿದ ಯೋಜನೆಯನ್ನೂ—ಬಗೆಬಗೆಯ ನೆವಹೇಳಿ—ಇಂಗ್ಲಂಡ್-ಫ್ರಾನ್ಸ್‌ಗಳೆಂಬ ಸಾಧುರಾಷ್ಟ್ರಗಳು ಹುಡಿಗೂಡಿಸಿದವು. ಆಸ್ಟ್ರಿಯದ ಸ್ವಾತಂತ್ರ್ಯವೊಂದು ಕೃತಕಸೃಷ್ಟಿಯಾಗಿದ್ದಿತು. ಅದು ಒಳಗಿನಿಂದ ಅರಳಿಬಂದ ಸ್ವಾಯತ್ತತೆಯ ಹೂವಾಗಿರಲಿಲ್ಲ. ಫ್ರಾನ್ಸ್-ಇಟಲಿಗಳ ಅನುಕೂಲತೆಗಾಗಿ, ಬ್ರಿಟನ್-ಅಮೆರಿಕೆಗಳ ಮೂಕಾನುಮತಿಯಿಂದ, 'ಸ್ವಯಂ ನಿರ್ಣಯ (Self-determination)'ದ ಹೆಸರಿನಲ್ಲಿ ಹುಟ್ಟಿಕೊಂಡ 'ಜನಾಂಗಭಂಗ'ವಾಗಿದ್ದಿತು. ಆಸ್ಟ್ರಿಯನ್-ಜರ್ಮನ್ ಜನಾಂಗಗಳೆರಡೂ ಏಕೀಕರಣಕ್ಕಾಗಿ-ಪುನರ್ಮಿಲನಕ್ಕಾಗಿ ಹಸಿದಿದ್ದವು,—ಆಸ್ಟ್ರಿಯದ 'ಅಬಾಧಿತ-ಸ್ವಾತಂತ್ರ್ಯಕ್ಕಾಗಿ ಪರಿಶ್ರಮಿಸುತ್ತಿದ್ದ ಚಾನ್ಸೆಲರ್ ಶುಷ್ನಿಗ್ಗನ ಸಾಹಸವೆಲ್ಲವೂ ಜನತೆಯ ಬೆಂಬಲವಿಲ್ಲದ ದುರ್ಬಲನ ಧಡಪಡಿಕೆಯಾಗಿದ್ದಿತು—ಎಂಬ ಅನುಮಾನಕ್ಕೆ ಸಾಕಷ್ಟು ಪ್ರಮಾಣಗಳು ದೊರೆಯುತ್ತಿವೆ.

★

ಫ್ರಾನ್ಸ್-ಇಟಲಿಗಳ ಪರಸ್ಪರಾನುಕೂಲತೆಯಿರುವ ತನಕ ಆಸ್ಟ್ರಿಯನ್ ಸ್ವಾತಂತ್ರ್ಯರಕ್ಷಣೆಯು ಸುಲಭವಿಷಯವಾಗಿದ್ದಿತು. ಆದರೆ ರೋಮಸಾಮ್ರಾಜ್ಯವನ್ನು ಮರಳಿ ಕಟ್ಟಬೇಕೆಂಬ ಮುಸೊಲಿನಿಯ ಮಹತ್ವಾಕಾಂಕ್ಷೆಯು ಪ್ರಜ್ವಲಿಸಿ, ಅಬಿಸೀನಿಯದ ದಂಡಯಾತ್ರೆ—ಭೂಮಧ್ಯ ಸಮುದ್ರದ ಮೇಲೆ ವರ್ಚಸ್ವಸ್ಥಾಪನೆ—ಸ್ಪೇನದಲ್ಲಿ ಫಾಸಿಸ್ಟ್ ಬಂಡುಗಾರರ ರಾಜ್ಯಸ್ಥಾಪನೆ ಮೊದಲಾದ ಕಾರ್ಯಕಲಾಪಗಳಲ್ಲಿ ಅವನು ತೊಡಗಿದಂದಿನಿಂದ ಫ್ರಾನ್ಸ್-ಇಂಗ್ಲಂಡುಗಳೊಡನಿದ್ದ ಅವನ ಸಲಿಗೆಯು ಕಡಿಮೆಯಾಗಹತ್ತಿ, ಸಮಾನಶೀಲವ್ಯಸನಿಯಾದ ಜರ್ಮನ್ ಸರ್ವಾಧಿಕಾರಿಯೊಡನೆ ಹಸ್ತಾಂದೋಲನವನ್ನು ಮಾಡತೊಡಗಿದನು. ಹಿಂದಕ್ಕೊಮ್ಮೆ ಜರ್ಮನ್-ಆಸ್ಟ್ರಿಯನ್ ಸ್ನೇಹಸಂಧಾನವು ಬಲಿಯತೊಡಗಿದೆಯೆಂದು ಸಂಶಯ ಬಂದೊಡನೆ ಮುಸೊಲಿನಿಯು ತನ್ನ ಸೈನ್ಯವನ್ನು ಬ್ರೆನ್ನರ ಖಿಂಡಿ (ಕಣಿವೆ)ಯ ಬಳಿ ಕೇಂದ್ರೀಕರಿಸಿ, ಜರ್ಮನರ ಹೊಂಚನ್ನು ಹಾಳುಗೆಡಹಿದ್ದನು. (ನಕ್ಷೆ ನೋಡಿರಿ.) ಅವನೇ ಜರ್ಮನಿಯ ಸ್ನೇಹಿತನಾದ ಮೇಲೆ ಹಿಟ್ಲರನಿಗೆ ಅತ್ಯಂತ ಅನುಕೂಲಸಂಧಿಯು ಸಿಕ್ಕಿತೆಂದು ಹೇಳಬಹುದು. ಮತ್ತದನ್ನಾತನು ಹೊತ್ತುನೋಡಿ ಸಾಧಿಸಿಯೇಬಿಟ್ಟನು. ಶುಷ್ನಿಗ್ಗನ ಪೂರ್ವದಲ್ಲಿ ಆಸ್ಟ್ರಿಯದ ಚಾನ್ಸೆಲರನಾಗಿದ್ದು ಕೊಲೆಮಾಡಲ್ಪಟ್ಟ ಡಾ. ಡಾಲ್ಫಸನು ೩ ವರ್ಷಗಳ ಪೂರ್ವದಲ್ಲಿ ಮುಸೊಲಿನಿಯೊಡನೆ ಸಂಧಾನ ನಡೆಸಿ, ಪ್ರಜಾಪ್ರಭುತ್ವಕ್ಕೆ ಅರದಾಳ ಹಚ್ಚಿ, ಕೂಲಿಕಾರಪಕ್ಷದ ಬೆನ್ನೆಲುಬನ್ನೆ ಮುರಿದುಬಿಟ್ಟಿದ್ದನು. ಡಾಲ್ಫಸನ ತರುವಾಯ ಬಂದ ಶುಷ್ನಿಗ್ಗನೂ, ಇತ್ತ ನಾಝಿಗಳನ್ನು ವಿರೋಧಿಸುವ, ಅತ್ತ ಕೂಲಿಕಾರಪಕ್ಷವನ್ನು ಬಗ್ಗುಬಡಿಯುವ ದ್ವಿಮುಖನೀತಿಯನ್ನು ಮುಂದುವರಿಸಿದನು. ಡಾಲ್ಫಸನಂತೆ ಶುಷ್ನಿಗ್ಗನೂ ಮುಸೊಲಿನಿಯ ಬೆಂಬಲವನ್ನೆ ಅವಲಂಬಿಸಬೇಕಾಗಿದ್ದಿತು. ಶುಷ್ನಿಗ್ಗನನ್ನು ತಳ್ಳಿ ಹಿಟ್ಲರನು

ಪದಾರೂಢನಾದುದರಿಂದ ಆಸ್ಟ್ರಿಯನ್ ಜನತೆಗೆ ಹೆಚ್ಚಿನ ಬದಲಾವಣೆಯೇನೂ ಎನಿಸಿರಲಾರದು; ಏಕೆಂದರೆ ಪಕ್ಷೋಪ ಪಕ್ಷಗಳನ್ನು ಕಾಲ್ಕೆಳಗೆ ತುಳಿದೇ ಶುಸ್ನಿಗ್ಗನೂ ತನ್ನ ರಾಜ್ಯ ಭಾರವನ್ನು ನಡೆಸಬೇಕಾಗಿತ್ತು. ಶುಸ್ನಿಗ್ಗನ ದಬ್ಬಾಳಿಕೆಯೂ ಎರವಲಾಗಿ ತಂದುದಾಗಿತ್ತು; ಮುಸೊಲಿನಿಯ ಪ್ರೇರಣೆ ಯಿಂದ ಹುಟ್ಟಿದುದಾಗಿತ್ತು. ಆಸ್ಟ್ರಿಯದ ಬಹುಸಂಖ್ಯ ಜರ್ಮನರ ಮೇಲೆ ಇಟಲಿಯ ಸುಲ್ತಾನನಾದ ಮುಸೊಲಿನಿಯ ನಿಜವಾದ ಪ್ರಭುತ್ವವಿದ್ದಿತು;—ಹಿಂದೀ ಸಂಸ್ಥಾನಿಕರ ಮೇಲೆ ಬ್ರಿಟಿಷರ, ಅಪ್ರತ್ಯಕ್ಷವಾದರೂ ನಿಜವಾದ, ಅಧಿಕಾರ ವಿದ್ದಂತೆಯೆ ಆಸ್ಟ್ರಿಯದ ಸ್ಥಿತಿಯಾಗಿದ್ದಿತು. ಅದಕ್ಕೆ ಬದಲಾಗಿ, ಜರ್ಮನರೇ ಇನ್ನೊಂದು ಜರ್ಮನ್ ಭೂಭಾಗದ ಮೇಲೆ, ಸುಲ್ತಾನೀ ಅಧಿಕಾರವನ್ನೇ ಆಗಲಿ, ನಡೆಸುವ ಈಗಿನ ದೃಶ್ಯವು ಅಷ್ಟು ಲೋಕವಿರುದ್ಧವಾಗಿಲ್ಲ. ಇದೊಂದು ಬಗೆಯಿಂದ ಐತಿಹಾಸಿಕವಾಗಿ ಕ್ರಮಪ್ರಾಪ್ತವೇ ಆಗಿದ್ದಿತೆಂದು ಹೇಳಬಹುದು.

★

ಆಸ್ಟ್ರಿಯವನ್ನು ಜರ್ಮನಿಗೆ ಜೋಡಿಸಿಕೊಳ್ಳುವ ಕಾರ್ಯಕವು ಒಮ್ಮೆಲೆ ಸ್ಫೋಟಗೊಂಡಿತೆಂದು ತಿಳಿಯುವುದು ತಪ್ಪಾಗುವುದು. ೧೧-೭-೩೬ನೆಯ ದಿನವೆ ಆಸ್ಟ್ರಿಯ ಜರ್ಮನಿಗಳ ನಡುವೆಯೊಂದು ಕರಾರಾಗಿತ್ತು. ಆಸ್ಟ್ರಿಯದ ಪೂರ್ಣ ಸ್ವಾತಂತ್ರ್ಯಕ್ಕೆ ಸಮ್ಮತಿಸಬೇಕೆಂಬ ಶುಸ್ನಿಗ್ಗರ ಆಗ್ರಹವು ನಡೆಯದಾಗಿ, ಪೂರ್ಣಸಾರ್ವಭೌಮತೆ (Full Sovereignty)ಗೆ ಮಾತ್ರ ಜರ್ಮನ್ ರಾಜ್ಯ ಭಾರಿಯು ಒಪ್ಪಿದನು. ಈ ಕರಾರಿನ ಫಲವಾಗಿ ಆಸ್ಟ್ರಿಯನ್ ವೃತ್ತಪತ್ರಗಳು ಜರ್ಮನ್ ಸರಕಾರವನ್ನು ಟೀಕಿಸು ವುದನ್ನು ನಿಲ್ಲಿಸಲಾಯಿತು; ನಾಝಿವಿರೋಧಕ ಅಧಿಕಾರಿ ಗಳನ್ನು ತೆಗೆದುಬಿಡಲಾಯಿತು; ಆಸ್ಟ್ರಿಯ-ಜರ್ಮನಿಗಳ ಲ್ಲಿಯ ರಾಜ್ಯಪದ್ಧತಿಯನ್ನು ಸಮಸಮಾನವಾಗಿ ಮಾಡುವು ದಕ್ಕಾಗಿ ಆಸ್ಟ್ರಿಯನ್-ಜರ್ಮನ್ ವರಿಷ್ಠ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಯಿತು; ಇಬ್ಬರು ವಿಶ್ವಸ್ತ ರಾದ ಜರ್ಮನ್ ಮುಂದಾಳುಗಳನ್ನು ಮಂತ್ರಿಮಂಡಲದಲ್ಲಿ ತೆಗೆದುಕೊಳ್ಳಲಾಯಿತು. ತರುವಾಯ ತಾ. ೩-೧೧-೩೬ನೆಯ ದಿನ ಜರ್ಮನ್ ಸರಕಾರಕ್ಕೆ ಅನಿಷ್ಟವೆನಿಸುವ ಮಂತ್ರಿಗಳೆಲ್ಲ ರನ್ನೂ ಕಿತ್ತೊಗೆಯಲಾಯಿತು; ಮಂತ್ರಿಮಂಡಲದಲ್ಲಿಯ ನಾಝಿಗಳ ಕಡೆಗೆ ಪ್ರೆಸಿಡೆಂಟರ ಚುನಾವಣೆ, ಸಾರ್ವತ್ರಿಕ ಮತದಾನ (Referendum)ದ ವ್ಯವಸ್ಥೆ, ನಾಗರಿಕಾಧಿಕಾರ ಪ್ರದಾನ, ಗಡಿನಾಡಿನ ಪ್ರಶ್ನೆಯನ್ನು ಮೊದಲಾದ ರಾಜ್ಯಭಾರಕ್ಕೆ ಸಂಬಂಧಿಸಿದ ಮಹತ್ವದ ವಿಷಯಗಳನ್ನು ಒಪ್ಪಿಸಲಾಯಿತು. ನಾಝಿಗಳಿಗೆ ಕೊಡಲಾದ ಮೇಲೆ ಆಸ್ಟ್ರಿಯನ್ನು ವೆಂಬುದು ಹೇಗೆ, ಯಾವ ರೂಪದಲ್ಲಿ ಉಳಿಯ ಒಡೆಯಲಾರದ ಒಡಪಾಗಿದೆ. ಇದರಿಂದ ಸ್ಪಷ್ಟ ದೆಂದರೆ, ಶುಸ್ನಿಗ್ಗನ ಆಡಳಿತಕ್ಕೆ ಒಳಗಿನಿಂದ ಹತ್ತಿ, ಅದು ಪುಡಿಪುಡಿಯಾಗಿ ಮುರಿದು ಬಿ ಕೂಲ ಸಂದರ್ಭವು ಬಹಳ ಹಿಂದಿನಿಂದ ಹಿಟ್ಲರನು ಗರುಡನಂತೆ ಒಮ್ಮೆಲೆ ಎರಗಿ ಸಂಪೂರ್ಣವಾಗಿ ಶರಣಾಗತವಾಗಬೇಕಾಯಿ

★

ಇತ್ತೀಚೆ ನಡೆದ ವಿದ್ಯಮಾನಗಳು ಸ್ವ ಯಾದರೂ ಅವುಗಳನ್ನು ಸ್ವಲ್ಪದರಲ್ಲಿ ವಿವ ಚಿತವಾಗಲಾರದು. ಫೆಬ್ರುವರಿ ತಾ. ೧ ಜರ್ಮನಿಯಲ್ಲಿಯ ಬರ್ಚಟೆಸ್ ಗ್ಯಾಡನ ಹಿಟ್ಲರನು ಶುಸ್ನಿಗ್ಗನನ್ನು ಒತ್ತಾಯದಿಂ ದನು. ಹಿಟ್ಲರನೊಂದಿಗೆ ಜರ್ಮನಿಯ ಪ್ರ ಗಳೆಲ್ಲರೂ ಇದ್ದರು. ೧೧ ಗಂಟೆಯ ಕಾ ಸಾಗಿತ್ತು. ಶುಸ್ನಿಗ್ಗನು ಕೊಲೆಗಾರನೆಂದೂ ಯೆಂದೂ ಅವನ ಸಮ್ಮುಖದಲ್ಲಿಯೇ ಡಾಲ್ಫಸನನ್ನು ಕೊಂದವರನ್ನೊಳಗೊಂಡು ಎ ರಾಜಬಂದಿಗಳನ್ನು ಬಿಟ್ಟುಬಿಡಬೇಕೆಂದೂ ನಾಝಿಗಳಿಗೆ ರಾಜಕೀಯ ಸ್ವಾತಂತ್ರ್ಯವನ್ನು ಕೆಂದೂ ಹಿಟ್ಲರನ ಹಸ್ತಕನಾದ ಸೈಸ್ ಇ ಪೋಲಿಸದಲದ ಆಧಿಪತ್ಯವನ್ನು ಕೊಡಬೇಕೆ ಲಾಯಿತು. ಶುಸ್ನಿಗ್ಗನು ಮರಳಿಬಂದ ಮೇಲೆ ಮಿಕ್ಲಾಸರೊಡನೆ ವಿಚಾರವಿನಿಮಯಮಾಡಿ ಗಳಿಗೂ ಒಪ್ಪಿಗೆಯಿತ್ತನು. ಕೊನೆಯ ಗಳಿ ಇಂಗ್ಲಂಡ್-ಫ್ರಾನ್ಸುಗಳು ಸಹಾಯಕ್ಕೆ ಅವನ ನಂಬಿಗೆಯು ಹುಸಿಯಾಯಿತು. ಇನ್ನ ಗೊಮ್ಮೆ ಕೇಳಿಕೊಂಡುಬಿಡಬೇಕೆಂದು 'ಸಾ ಗಣನೆ'ಯನ್ನು ಆಜ್ಞಾಪಿಸಿದನು. ಈ ಸಮ ಗಳಿಗೆ ಸಿಕ್ಕ ಸ್ವಾತಂತ್ರ್ಯದಿಂದ ಅವರು ಹು ರಾಣಿ, ರಾಜಕೀಯ ಅತ್ಯಾಚಾರಗಳನ್ನು ಅನ ನಡೆಸಿದ್ದರು. ಪರಿಸ್ಥಿತಿಯು ತುಂಬಾ

ಯೆಂದರಿತು ಹಿಟ್ಲರನು ಸಾರ್ವತ್ರಿಕ ಮತಗಣನೆಯನ್ನು ನಿಲ್ಲಿಸಬೇಕೆಂದು ಕೊನೆಯಪ್ಪಣೆ ಕಳಿಸಿದನು. ಕಾಲ ಇನ್ನೂ ಹಣ್ಣಾಗಿದೆಯೆಂದೆನಿಸಿ, ಹಿಟ್ಲರನು ಇಷ್ಟಕ್ಕೇ ನಿಲ್ಲದೆ ಶುಸ್ನಿಗ್ಗನು ಅಧಿಕಾರತ್ಯಾಗಮಾಡಬೇಕೆಂದೂ ಸೈಸ್ ಇನ್ಕ್ವಾರ್ಟನಿಗೆ ಚಾನ್ಸೆಲರ್ ಪದವಿಯನ್ನು ಬಿಟ್ಟುಕೊಡಬೇಕೆಂದೂ ಕಟ್ಟಪ್ಪಣೆ ಕಳುಹಿದನು. ಕ್ರಮಪ್ರಾಪ್ತವಾಗಿ ಆಸ್ಟ್ರಿಯವನ್ನು ಒಂದೇ ಸೆಳೆತಕ್ಕೆ ಆಕ್ರಮಿಸಿಯೂ ಬಿಟ್ಟನು.

★

ಈ ಕಪಟನಾಟಕದಲ್ಲಿ ಇಂಗ್ಲಂಡಿನ ಪಾತ್ರವೇನಾಗಿದ್ದಿತೆಂಬುದನ್ನು ಸ್ವಲ್ಪ ನೋಡುವಾ. ಆಸ್ಟ್ರಿಯದ ಆಕ್ರಮಣದ ವಾರ್ತೆಯನ್ನು ಕೇಳಿದೊಡನೆ ಇಂಗ್ಲಂಡಿನ ಮಹಾಸಚಿವರಾದ ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ "ಆಸ್ಟ್ರಿಯನ್ ಸ್ವಾತಂತ್ರ್ಯವನ್ನು ಪಾಲಿಸುವುದಾಗಿ ಕೊಟ್ಟ ವಚನವನ್ನು ಜರ್ಮನಿಯು ಮುರಿದು ಅದರ ಮೇಲೆ ದಾಳಿಮಾಡಿದುದು ದರೋಡೆಖೋರರಿಗೆ ಒಪ್ಪುವಂತಹ ಕೃತಿಯಾಗಿದೆ" ಎಂದು ವಿಷಕಾರಿದರು. ಒಂದು ಸಂಸ್ಕೃತ ಸುಭಾಷಿತವನ್ನು ತಿರುವುಮುರುವು ಮಾಡಿ ಹೇಳುವುದಾದಲ್ಲಿ, ನಾಲಿಗೆಯ ಮೇಲೆ ಹಲಾಹಲವಿದ್ದರೂ ಚೇಂಬರ್ಲೇನರ ಹೃದಯದಲ್ಲಿ ಮಧುವೇ ಇದ್ದಿತೆಂದು ಹೇಳಬಹುದಾಗಿದೆ. ಪರರಾಷ್ಟ್ರ ಸಚಿವರಾದ ಕ್ಯಾಪ್ಟನ್ ಏಡನ್ನರು ಅಧಿಕಾರತ್ಯಾಗಮಾಡಿದುದು ಇಟಲಿಯ ಬೆದರಿಕೆಯಿಂದ ಎನ್ನುವುದು ತಪ್ಪು. ನಿಜಸಂಗತಿಯೆಂದರೆ ಜರ್ಮನಿಯ ಹೊಂಚು ಬ್ರಿಟಿಷ್ ಮಂತ್ರಿಮಂಡಲಕ್ಕೆ ಹೆಜ್ಜೆಹೆಜ್ಜೆಗೂ ಗೊತ್ತಾಗುತ್ತಿದ್ದಿತು. ಲಾರ್ಡ ಹ್ಯಾಲಿಫ್ಯಾಕ್ಸರು ಹಿಟ್ಲರನಿಗೆ ಬೆಟ್ಟಿಕೊಟ್ಟು ಆಂಗ್ಲೊ-ಜರ್ಮನ್ ಗೆಳೆತನದ ಪ್ರಸ್ತಾವವನ್ನು ಮಾಡಿದ್ದರು. ಜರ್ಮನಿಯ ಬಯಕೆಯನ್ನು ಸಲ್ಲಿಸಬೇಕೆಂಬ ಮತಪರಿವರ್ತನೆ ಬ್ರಿಟಿಷ್‌ಮಂತ್ರಿಮಂಡಲದಲ್ಲಾಗತೊಡಗಿತ್ತು. ಕ್ಯಾ. ಏಡನ್ನರೊಬ್ಬರು, ಅಂತರರಾಷ್ಟ್ರೀಯ ಕರಾರುಗಳನ್ನು ತುಳಿದು ಹಾಕಿ ಆಸ್ಟ್ರಿಯದ ಆಕ್ರಮಣಕ್ಕೆ ಮೂಕಸಮ್ಮತಿ ಕೊಡುವುದು ಅಪರಾಧವೆಂದು ಅಭಿಪ್ರಾಯಪಟ್ಟು, ಸಿಡಿಮುನಿಸಿತಿದ್ದರು. ಶುಸ್ನಿಗ್ಗನು ಹಿಟ್ಲರನಿಗೆ ಬೆಟ್ಟಿಯಾಗಿ ಬಂದು, ನಾಝಿ ರಾಜಬಂದಿಗಳನ್ನು ಬಿಡುಗಡೆ ಮಾಡಿದಮೇಲೆ ನಾಲ್ಕೇ ದಿನಗಳಲ್ಲಿ ಕ್ಯಾ. ಏಡನ್ನರು ರಾಜೀನಾಮೆ ಕೊಟ್ಟರು. ಜರ್ಮನಿಯ ಒತ್ತಾಯದಿಂದಲೇ ಇದಾಯಿತೆಂಬುದರಲ್ಲಿ ಸಂಶಯವಿಲ್ಲ. ಇಟಲಿಗೆ ಜರ್ಮನಿಯ ಬೆಂಬಲವಿಲ್ಲದಿದ್ದರೆ, ಸ್ಪೇನ್-ಭೂಮಧ್ಯಸಮುದ್ರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಇಂಗ್ಲಂಡು ಇಟಲಿಯನ್ನು ಇನ್ನೂ ಪ್ರತಿಭಟಿಸಬಹುದಾಗಿತ್ತು. ಅಂತೂ ಪ್ರಕಟವಾಗಿ ಇಟಲಿಯ ಒತ್ತಾಯಕ್ಕಾಗಿಯೋ, ಅಪ್ರಕಟವಾಗಿ ಜರ್ಮನಿಯ ಬೆದರಿಕೆಯಿಂದಲೋ, ಇಂಗ್ಲಿಷ್ ಮಂತ್ರಿಮಂಡಲವು ಏಡನ್ನರ ಆಹುತಿ ಕೊಟ್ಟು ಜರ್ಮನಿಯ ಹಾದಿಯನ್ನು ನಿಷ್ಕಂಟಕವಾಗಿ ಮಾಡಿಕೊಟ್ಟಿತು. ಈಚೆಗೆ, ಝೆಕೊಸ್ಲೊವಾಕಿಯದ ಮೇಲೆ ಜರ್ಮನಿಯು ದಾಳಿ ಮಾಡುವುದಾದಲ್ಲಿ ಅದರ ನೆರವಿಗೆ ಬರುವಿರಾ ?—ಎಂದು ಫ್ರಾನ್ಸು ಹಾಕಿದ ಪ್ರಶ್ನೆಗೆ ಇಂಗ್ಲಂಡು ವ್ಯತಿಪ್ತಿಸಿಕೊಳ್ಳುವ ಉತ್ತರವನ್ನೇ ಕೊಟ್ಟಿದೆ. ಸಾರಾಂಶವೆಂದರೆ, ಇಂಗ್ಲಂಡು—ಇದುವರೆಗೆ ಅಪ್ರಕಟವಾಗಿ, ಇದೀಗ ಬಹಿರಂಗವಾಗಿ—ಫಾಸಿಸ್ಟ ರಾಷ್ಟ್ರಗಳಿಗೆ 'ಬಿಳಿ ಕಾಗದ'ವನ್ನು ಕೊಟ್ಟುಬಿಡುತ್ತಲಿದೆ; ಅದೇಕೆ—ಫಾಸಿಸ್ಟ ರಾಷ್ಟ್ರಗಳ ಗುಂಪಿಗೆ ಸೇರಿ, ತಾನೂ ಫಾಸಿಸ್ಟ ನೀತಿಯನ್ನೇ ಅವಲಂಬಿಸಿದುದನ್ನು ಜಗತ್ತಿಗೆ ಸಾರಿಹೇಳುತ್ತಲಿದೆ.


★

ಆಸ್ಟ್ರಿಯವನ್ನು ಆಕ್ರಮಿಸಿದುದರಿಂದ ಜರ್ಮನಿಯ ಗಡಿನಾಡು ಇಟಲಿಗೆ ತಗಲಿದಂತಾಯಿತು; ಜರ್ಮನಿ-ಝೆಕೊಸ್ಲೊವಾಕಿಯಗಳ ಸರ್ವಸಾಮಾನ್ಯ ಗಡಿಸೀಮೆಯು ನೂರಾರು ಮೈಲುಗಳಿಂದ ಬೆಳೆದಂತಾಯಿತು. (ನಕ್ಷೆ ನೋಡಿರಿ.) ಈ ಮೊದಲೇ ಹೇಳಿದಂತೆ ಹಿಟ್ಲರನ ಮಹತ್ವಾಕಾಂಕ್ಷೆಯು ಇಷ್ಟಕ್ಕೇ ತೃಪ್ತಿಹೊಂದಲಾರದು. ಬೃಹತ್-ಜರ್ಮನ್ ಜನಾಂಗದ ಏಕೀಕರಣವೇ ನಾಝಿಗಳ ಗುರಿಯಾಗಿದೆ. ಜರ್ಮನಿಯ ಸುತ್ತಲಿನ ಸೀಮಾಪ್ರದೇಶದಲ್ಲೆಲ್ಲ ಜರ್ಮನರ ಚಿಕ್ಕಚಿಕ್ಕ ವಸತಿಸ್ಥಾನಗಳಿವೆ. ಪಶ್ಚಿಮಕ್ಕೆ ಬೆಲ್ಜಿಯಮ್ಮಿನ ಯುಪೆನ್ ಮತ್ತು ಮಾಲ್ಮೆಡಿಗಳಲ್ಲಿ ೪೯,೫೬೧ ಜರ್ಮನರಿದ್ದಾರೆ; ಫ್ರಾನ್ಸಿಗೆ ಸಂಬಂಧಿಸಿದ ಅಲ್ಸೇಸ್-ಲೊರೇನ್‌ಗಳಲ್ಲಿ ೧,೮೭೪,೦೦೦ ಜರ್ಮನರಿದ್ದಾರೆಂದು ಜರ್ಮನಿಯ ಹೇಳಿಕೆ; ಪೂರ್ವಭಾಗದಲ್ಲಿ ಪೋಲಂಡದ ಪೊಸೇನ್‌ದಲ್ಲಿ ೬೮೧,೦೦೦ ಜರ್ಮನರೂ ಪೋಲಿಶ್ ಕಾರಿಡೊರ್‌ದಲ್ಲಿ ೪೨೬,೪೦೦ ಜರ್ಮನರೂ ಇದ್ದಾರೆ; ಅಪರ್ ಸಿಲೇಸಿಯದಲ್ಲಿ ೩೦೦,೦೦೦, ಡ್ಯಾಂಝಿಂಗ್‌ದಲ್ಲಿ ೩೧೮,೩೦೦, ಮೆಮೆಲ್‌ದಲ್ಲಿ ೧೦೫,೦೦೦, ಉತ್ತರ ಶ್ಲೆಸ್ವಿಗ್ಗಿನಲ್ಲಿ ೪೦,೦೦೦, ಝೆಕೊಸ್ಲೊವಾಕಿಯದಲ್ಲಿ ೩,೧೯೪,೦೦೦, ಇಟಲಿಯ ಟಿರೋಲ್ ಪ್ರಾಂತದಲ್ಲಿ ೩೦೦,೦೦೦೦, ಸ್ವಿಟ್ಝರ್ಲಂಡಿನಲ್ಲಿ ೨,೭೫೦,೦೦೦, ಲಕ್ಸಂಬರ್ಗದಲ್ಲಿ ೨೯೦,೦೦೦,

ಎಸ್ಥೋನಿಯಾ-ಲ್ಯಾಟ್ವಿಯಾಗಳಲ್ಲಿ ೭೭,೦೦೦, ರೂಮಾನಿಯಾ-ಯುಗೊಸ್ಲಾವಿಯಾ-ಹಂಗರಿಗಳಲ್ಲಿ ಕೂಡಿ ಸು. ೨೦ ಲಕ್ಷ, ಸೋವಿಯೆಟ್ ರಸ್ಯದಲ್ಲಿ ಸು. ೧೦ ಲಕ್ಷ—ಇಂತು ಜರ್ಮನ್ ವಂಶೀಯರು ಬೇರೆಬೇರೆ ಕಡೆ ಇದ್ದಾರೆ. ಒಟ್ಟು ಸು. ೧ ಕೋಟಿ ೫೦ ಲಕ್ಷ ಬೃಹತ್ ಜರ್ಮನ್ ಜನಸಂಖ್ಯೆಯಲ್ಲಿ ಸು. ೭೦ ಲಕ್ಷ ಜರ್ಮನರನ್ನು ಆಸ್ಟ್ರಿಯದ ಆಕ್ರಮಣಮಾತ್ರದಿಂದಲೆ ಹಿಟ್ಲರನು ತಾಯ್ನಾಡಿಗೆ ಸಂಧಿಸಿಕೊಂಡಿದ್ದಾನೆ. ಇನ್ನುಳಿದವರಕಡೆ ಅವನು ಕಂಣು ಹೊರಳಿಸುವುದು ಸ್ವಾಭಾವಿಕವೆ ಆಗಿದೆ.

★

ಮೊನ್ನೆಮೊನ್ನೆ ಹಿಟ್ಲರನು ತನ್ನೊಂದು ಭಾಷಣದಲ್ಲಿ (ಫೆಬ್ರುವರಿ ೨೦) ಝೆಕೊಸ್ಲೊವಾಕಿಯದ ನಾಮನಿರ್ದೇಶಮಾಡದೆ ಅಲ್ಲಿಯ ಜರ್ಮನ್ ಪ್ರಜಾಜನರ ಹಿತರಕ್ಷಣೆಯ ಜವಾಬ್ದಾರಿ ತನ್ನಮೇಲೆ ಇರುವುದಾಗಿ ಘೋಷಣೆಮಾಡಿದ್ದಾನೆ. ಆಸ್ಟ್ರಿಯದ ಆಕ್ರಮಣದಿಂದ ಝೆಕೊಸ್ಲೊವಾಕಿಯದಲ್ಲಿ ಕಳವಳ-ಚಳವಳಗಳು ಎದ್ದಿವೆ. ಅಲ್ಲಿಯ ಜರ್ಮನ್ ಪಕ್ಷವು ಸರಕಾರದಿಂದ ಒಡೆದುಹೋಗಿದೆ. ಅಲ್ಲಿಯ ಜರ್ಮನ್ ಪ್ರದೇಶಕ್ಕೆ ಸ್ವಿಟ್ಝರ್ಲಂಡಿನ ಕ್ಯಾಂಟನ್‌ಗಳ ಮಾದರಿಯನ್ನನುಸರಿಸಿ ಸ್ವಾಯತ್ತತೆಯನ್ನು ಕೊಡಬೇಕೆಂದು ಹಿಟ್ಲರನ ಬೇಡಿಕೆ. ಝೆಕೊಸ್ಲೊವಾಕಿಯನ್ ಸರಕಾರವು ಇದನ್ನು ಅರ್ಧಮರ್ಧ ಒಪ್ಪಿದಂತೆಯೆ ಇದೆ. ಅಲ್ಲಿಯ ಪ್ರಭುತ್ವದವರು, ಆಸ್ಟ್ರಿಯದಂತೆಯೆ ತಮ್ಮ ಗತಿಯೂ ಆಗಬಹುದೆಂದು ಚಿಂತೆಗೊಳಗಾಗಿದ್ದಾರೆ. ಫ್ರಾನ್ಸ್-ರಶಿಯಗಳು—ಇಂಗ್ಲಂಡು ಮುಂದಕ್ಕೆ ಬರದಿದ್ದರೂ—ತಾವು ನೆರವಾಗುವುದಾಗಿ ಭರವಸೆಯಿತ್ತರೂ ಅಲ್ಲಿಯ ಸರಕಾರದ ಎದೆಗುದಿ ಅಷ್ಟಕ್ಕೇ ಕಡಿಮೆಯಾಗಲಾರದು. ಝೆಕೊಸ್ಲೊವಾಕಿಯದ ಬೊಹಿಮಿಯಾ ಪ್ರಾಂತದ ಮೇಲೆ ಹಿಟ್ಲರನ ಕಣ್ಣು ಎಂದಿನಿಂದಲೂ ಇದೆ. ಈ ಪ್ರಾಂತವು ಜರ್ಮನಿಗೆ ತಗಲಿದ್ದು, ಮೊದಲು ಅದು ಆಸ್ಟ್ರಿಯನ್ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು. ಈ ಪ್ರಾಂತವು ಜರ್ಮನಿಗೆ ಸೇರಬೇಕೆಂದು ಪ್ರಿನ್ಸ್ ಬಿಸ್ಮಾರ್ಕನೂ ಮಹತ್ವಾಕಾಂಕ್ಷೆಯನ್ನು ತೊಟ್ಟಿದ್ದನು. ಈ ಪ್ರಾಂತದೊಳಗಿಂದ ರಶಿಯದಲ್ಲಿಯ ಯುಕ್ರೇನ್ ಪ್ರಾಂತಕ್ಕೆ ಒಯ್ಯುವ ಹಾದಿಯು ವಶವಾಯಿತೆಂದರೆ, ರಶಿಯದ ಮೇಲೆ ಅಭಿಯೋಗ ಮಾಡಬೇಕೆಂಬ ಹಿಟ್ಲರನ ಜೀವಮಾನದ ಕಾರ್ಯವು ಸಮೀಪಸಾಧ್ಯವಾಗುವುದು. ಝೆಕೊಸ್ಲೊವಾಕಿಯದಿಂದ ರಶಿಯಕ್ಕೆ ಹೋಗುವ ದಾರಿಯು ಪೋಲಂಡದೊಳಗಿಂ[illegible] ಹೋಗುವುದು. ಈಚೆಯ ವರ್ತಮಾನ[illegible] ಪೋಲಂಡು ಜರ್ಮನಿಗೆ ಅನುಕೂಲವಾಗಿದೆ. [illegible] ಜರ್ಮನಿ-ರಶಿಯಗಳಿಗೆ ಕೈಗೆಕೈ ಹತ್ತುವ ಸಮೀಪ ಬಂದಿತೆಂದು ಹೇಳಬಹುದಾಗಿದೆ. [illegible] ಬಂದರೆ ಫಾಸಿಸ್ಟ್-ಕಮ್ಯುನಿಸ್ಟ ಸಂಸ್ಕೃತಿ[illegible] ಸಂಹಾರಕ ಸಂಗ್ರಾಮದಲ್ಲಿ ಯುರೋಪಿ[illegible] ತಿಯೇ ರಸಾತಲವನ್ನು ಕಾಣಬಹುದು. ಕಾ[illegible] ಯಾರು ಪರಿಕಿಸಬಲ್ಲರು ?



ಜ್ಞಾನ—ವಿಜ್ಞಾನ

ಹಾಲನ್ನು ನಿರ್ಜಂತು-ಗೊಳಿಸುವದು

ಹಾಲು ಬಹಳ ದಿನಗಳ ವರೆಗೆ ಕೆಡದಂತಿರಿಸಲು 'ಪಾಶ್ಚರಾಯಿಜ್' ಮಾಡಿ ಡಬ್ಬಿಗಳಲ್ಲಿ ಹಾಕಿಡುತ್ತಾರೆ. ಆದರೆ ಈ ಸಂಸ್ಕಾರದಿಂದ ಹಾಲಿನಲ್ಲಿಯ ಘಟಕಗಳೂ ಪೋಷಕ ಗುಣಗಳೂ ಕಡಿಮೆಯಾಗುವವೆಂದು ಈಗ ಕಂಡುಬಂದಿದೆ. ಆದುದರಿಂದ ಹಾಲನ್ನು ಮೇಲೆ ಹೇಳಿದ ನಿರ್ವಾತ ಡಬ್ಬಿಗಳಲ್ಲಿ ಹಾಕದೆಯೆ ನಿರ್ಜಂತುವಾಗಿಸುವ ಯುಕ್ತಿಯ ಶೋಧವನ್ನು ವಿಜ್ಞಾನಿಗಳು ಮಾಡುತ್ತಲೇ ಇದ್ದರು. ಮೊನ್ನೆ ಮಿ. ಜಿ. ಡಬ್ಲ್ಯು. ರಿಚಾರ್ಡ್ಸ್‌ರು ನಿರ್ಜಂತುಕಾರಿಯಾದ ಒಂದು ಹೊಸ ವಸ್ತುವಿನ ಶೋಧವನ್ನು ಪ್ರಸಿದ್ಧಿಸಿದರು. ಅವರೆನ್ನುತ್ತಾರೆ:—

ಶುದ್ಧವಾದ ಹಾಲು ಮಕ್ಕಳ ಆರೋಗ್ಯಕ್ಕೆ ಅನಿವಾರ್ಯವಾಗಿದೆ. ಕೆಟ್ಟ ಹಾಲನ್ನು ಕುಡಿದ ಮಕ್ಕಳು ಕೂಡ ಹಾಲು ಕುಡಿಯದ ಮಕ್ಕಳಿಗಿಂತ ನಿರೋಗಿಗಳೂ ಬಲಿಷ್ಠರೂ ಆಗುತ್ತಾರೆ. ಹಾಲನ್ನು ಹೆಚ್ಚುದಿನ ಕಾದಿಡುವ ನೆವದಿಂದ ಅದರೊಳಗಿನ ಪೋಷಕವಸ್ತುಗಳನ್ನು ಕಳೆದುಕೊಳ್ಳುವದು ಜಾಣತನವಲ್ಲ. ಸುದೈವದಿಂದ 'ಪಾಶ್ಚರಾಯಿಜ್' ಮಾಡದೆಯೆ ಈಗ ಹಾಲನ್ನು ನಿಷ್ಕ್ರಿಮಿಗೊಳಿಸುವ ವಸ್ತುವಿನ ಶೋಧವಾಗಿದೆ. ಈ ವಸ್ತುವಿನ ಕೆಲವೆ ಹನಿಗಳನ್ನು ಹಾಲಿನಲ್ಲಿ ಹಾಕಿದರೂ ಹಾಲು ಪೂರ್ಣವಾಗಿ ಜಂತುಮುಕ್ತವಾಗುವದು.

ತುರ್ಕಸ್ತಾನದ ಸಮಾಜ ಪ್ರಗತಿ

ಮೊದಲಿನಷ್ಟು ವಿವಾಹವಿಚ್ಛೇದ ಮಾಡಿಕೊಂಡು ಪುನರ್ವಿವಾಹ ಮಾಡಿಕೊಳ್ಳುವ ಹೆಂಗಸರು ಈಗ ಇಲ್ಲ. ಇಸ್ತಾಂಬೂಲಿನಲ್ಲಿಯ ವಿಧುರರೂ ಅವಿವಾಹಿತ ಪುರುಷರೂ ಬಾಲವಿಧವೆಯರನ್ನೇ ಮದುವೆಯಾಗಬಯಸುತ್ತಾರೆ. ಅಲ್ಲಿ ಬಾಲವಿಧವೆಯರ ಸಂಖ್ಯೆಯು ಬಹುದೊಡ್ಡದಿದೆ. ೧೯೩೭ರಲ್ಲಿ ಪ್ರತಿ ನಾಲ್ಕು ವಿವಾಹಿತ ಸ್ತ್ರೀಯರಿಗೆ ಒಬ್ಬ ವಿಧವೆಯಿರುತ್ತಿದ್ದಳು.

ಅರ್ಧಕ್ಕಿಂತ ಹೆಚ್ಚು ತುರ್ಕಿ ಸ್ತ್ರೀಯರು ೧೯ರಿಂದ ೨೪ ವರ್ಷಗಳೊಳಗೆ ಮದುವೆಯಾಗುತ್ತಾರೆ. ಮೊದಲು ಬಾಲ್ಯವಿವಾಹವು ಪ್ರಚುರವಾಗಿತ್ತು. ೨೪ ವರ್ಷಗಳ ನಂತರ ಮದುವೆಯಾಗುವವರು ಕೂಡ ಬೇಕಾದಷ್ಟಿದ್ದಾರೆ. ಪ್ರತಿ ಹತ್ತು ಮದುವೆಗಳಿಗೆ ಒಂದು ವಿವಾಹವಿಚ್ಛೇದವಾಗುತ್ತದೆ. ಲಗ್ನ ವಿಚ್ಛೇದಗಳಲ್ಲಿ ಎರಡುಮೂರಾಂಶದಷ್ಟಕ್ಕೆ ದಂಪತಿಗಳ ಶಾರೀರಿಕ ವೈಷಮ್ಯವೇ ಕಾರಣವಾಗಿರುತ್ತದೆ. ಸಪ್ಟೆಂಬರದಿಂದ ಡಿಸೆಂಬರದ ವರೆಗೆ ತುರ್ಕಸ್ತಾನದಲ್ಲಿ ಮದುವೆಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ಮುಂದೆ ಆಗಸ್ಟದ ವರೆಗೆ ಕಡಿಮೆಯಾಗುತ್ತ ಹೋಗುತ್ತದೆ.

ಅಮೆರಿಕೆಯಲ್ಲಿ ಬೆಡಗಿನ ಬೇಟೆ

ಅಮೆರಿಕೆಯ ಉದ್ಯೋಗಿ ತರುಣಿಯರು ಉದ್ಯೋಗಕ್ಕಿಂತ ಸೌಂದರ್ಯಕ್ಕೆ ಹೆಚ್ಚು ಬೆಲೆ ಕೊಡುವರು. ದೇಹದಲ್ಲಿ ಹೆಚ್ಚು ಕೊಬ್ಬು ಬೆಳೆಯಬಾರದೆಂದು ಅವರು ಮುಂಜಾನೆ ಫಲಾಹಾರಕ್ಕಿಂತ ಮೊದಲು ವ್ಯಾಯಾಮ ಮಾಡುತ್ತಾರೆ. ಸೌಂದರ್ಯ ಸಂಸ್ಕರಣಾಲಯಗಳಲ್ಲಿ ಅವರ ಕೂದಲು, ಉಗುರು, ಚರ್ಮಗಳಿಗೆ ಉಪಚಾರ ನಡೆದಿರುವಾಗಲೇ ಅವರು ಪೌಷ್ಟಿಕ ತಿನಿಸುಗಳನ್ನು ತಿನ್ನುತ್ತಾರೆ.

೧೬ರಿಂದ ೬೦ ವರ್ಷಗಳೊಳಗೆ ಒಬ್ಬ ಅಮೆರಿಕೆಯ ಸ್ತ್ರೀಯು ೩೪೭ ಪೌಂಡು ಮುಖಕ್ಕೆ ಹಚ್ಚುವ ಕ್ರೀಮನ್ನು ಉಪಯೋಗಿಸುತ್ತಾಳೆ. ಅಮೆರಿಕೆಯ ಸಿರಿವಂತ ಹೆಣ್ಣುಮಕ್ಕಳು ಒಬ್ಬೊಬ್ಬರು ಬರಿ ತಮ್ಮ ಸೌಂದರ್ಯೋಪಚಾರಗಳಿಗಾಗಿಯೇ ಐದು ಸಾವಿರ ಡಾಲರುಗಳನ್ನು ವೆಚ್ಚಿಸುತ್ತಾರೆ.

ಮುಖದ ಆಕಾರ, ಚರ್ಮದ ಬಣ್ಣಗಳನ್ನು ಮನಬಂದಂತೆ ಬದಲಿಸುವ 'ಪ್ಲ್ಯಾಸ್ಟಿಕ ಸರ್ಜರಿ' ಅಲ್ಲಿ ಪ್ರಚುರವಾಗು



ಪುರಂದರದಾಸರ ಜಾಣ್ಣುಡಿಗಳು: ಸಂಗ್ರಹಿಸಿದವರು ಉಡುಪಿ ಭೀಮರಾವ ಬೀಡಿ; ವಿಶ್ವಸಾಹಿತ್ಯ ಪ್ರಕಟನಮಂದಿರ, ಧಾರವಾಡ. ಪು. ೩೩. ಬೆಲೆ ೦—೩—೦.

ಕನ್ನಡ ನಾಡಿನ ಅನುಭಾವಿಗಳಲ್ಲೊಬ್ಬರಾದ ಪುರಂದರ ದಾಸರ ಕೀರ್ತನೆಗಳಲ್ಲಿಯ ಸುಭಾಷಿತಗಳಂತಹ ನುಡಿಗಳ ಸಂಗ್ರಹವಿದು. ಗಾದೆಯ ಮಾತುಗಳಂತೆ ಚಿಕ್ಕವಾಗಿರುವ ಹಾಗೂ ಪರಿಣಾಮಕಾರಕ, ನುಡಿಗಳನ್ನು ಇಲ್ಲಿ ಆಯ ಲಾಗಿದೆ. "ಅವರ (ಪುರಂದರದಾಸರ) ಒಂದೊಂದು ಮಾತು ಸಂಸಾರದಲ್ಲಿ ಬೆಂದು ಬೆಂಡಾದವರಿಗೆ ನವಜೀತನ ವನ್ನು ಕೊಡುವ ಗುಟಿಕೆಗಳಾಗಿವೆ, ನಿಜ ತಿಳುವಳಿಕೆಯನ್ನು ಹುಟ್ಟಿಸುವ ಬುದ್ಧಿಯ ಅಕ್ಷಯಪಾತ್ರೆಗಳಾಗಿವೆ, ಗಾದೆ ಗಳಾಗಿವೆ..........ಈ ಅಮೃತ ನುಡಿಗಳನ್ನು ನಡೆಯಲ್ಲಿ ತರಲು ಪ್ರಯತ್ನ ಮಾಡಿದರೆ ನಮ್ಮ ಜೀವಕ್ಕೆ ಎಷ್ಟು ಹಿತವಾಗಬಹುದು" ಎಂದು ಬಿನ್ನಹದಲ್ಲಿ ಹೇಳಿ ಅದೇ ಉದ್ದೇಶದಿಂದ ಸಂಗ್ರಹಕಾರರು ಈ ನುಡಿಗಳನ್ನು ಸಂಗ್ರ ಹಿಸಿದ್ದಾರೆ.

ಸಂಗ್ರಹಕಾರರ ಈ ಪ್ರಯತ್ನವು ಉಚಿತವೇ ಆಗಿದೆ. ಆದರೆ ಪೂರ್ಣವಾಗಿರುವ ಕೀರ್ತನಗಳಲ್ಲಿಯ ಕೆಲವೊಂದು ಭಾಗವನ್ನು ಆಯ್ದುಕೊಂಡು ಈ ಸಂಗ್ರಹ ಮಾಡಬೇಕಾ ಗಿರುವದರಿಂದ ಕೆಲವು ಉಕ್ತಿಗಳು ಅಪೂರ್ಣವೆನಿಸು ವಂತಿವೆ. ಉದಾ: ಅನ್ನಮದ ಅರ್ಥಮದ ಅಖಿಲ ವೈಭ ವದ ಮದವು, ಸೋಗಿಲಿರುವ ಜೋಗಿ ಇತ್ಯಾದಿ.

ಈ ಸಂಗ್ರಹವು ಬುದ್ಧಿಯ ಅಕ್ಷಯಪಾತ್ರೆಯಾಗುವದರ ಜೊತೆಗೆ, ಭಾಷೆಯ ಶುದ್ಧತೆ, ಇಂಪು ಇವುಗಳನ್ನು ಒಳ ಗೊಳ್ಳುವ ಉದ್ದೇಶದಿಂದ ಕೆಳಗಿನ ಕೆಲವು ಪ್ರಯೋಗ ಗಳನ್ನು ಬಿಟ್ಟುಬಿಡಬಹುದಾಗಿತ್ತು. ಉದಾ: ಬಿಕ್ಷವ, ಉದುಕ, ಬಂಥ, ತಾಳಲಿ ಬೇಕು, ಬುದ್ಧೀಲರು, ಬಾಹೋದು. ಹಾಗೂ

> ಇಬ್ಬರ್ಹೆಂಡಿರ ಸಂಗ
> ಇಟ್ಟನೆಂದರೆ ಸೊಟ್ಟ ಕಿವಿಗೆ ಘಟ್ಟಿಮುರುವ ಕಾಣೆ.

ಈ ಜಾಣ್ಣುಡಿಗಳನ್ನು ಸಂಖ್ಯೆಯೊಂದಿಗೆ ಬೇರೆಬೇರೆ ಯಾಗಿ ಮುದ್ರಿಸಿರುವುದು ಸರಿಯಾಗಿದ್ದರೂ ಮುದ್ರಣದ ಅಕ್ಷರಗಳು ಇನ್ನಿಷ್ಟು ದಪ್ಪವಾಗಿದ್ದರೆ ಇಂತಹ ಸಂಗ್ರಹಗಳು 'ಬಾಳ ಕೈದೀವಟಿಗೆ' ಯೆಂಬುದನ್ನು ನಾವು ಒಪ್ಪಲೇಬೇಕು.

—ಎಸ.

ಶರಣಸಾಹಿತ್ಯ: ಮಾಸಪತ್ರಿಕೆ. ಜನೇವರಿ... ರಲ್ಲಿ ಪ್ರಕಟವಾಗುತ್ತಿದೆ. ವಾರ್ಷಿಕ ಚಂದಾ ... ಕರು ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು.

ಹಿಂದೂಧರ್ಮ, ಕನ್ನಡ ಸಾಹಿತ್ಯ, ಲಿಂಗ... ಗಳ ಉನ್ನತಿಗಾಗಿ ಪ್ರಯತ್ನಿಸುವದೇ ಈ ... ಮುಖ್ಯೋದ್ದೇಶ. ಕರ್ನಾಟಕದ ... ಮೂವತ್ತು ಮಂದಿ ವಿದ್ವಾಂಸರು ಈ ಪತ್ರಿಕೆಯ ... ಮಂಡಲಿಯಲ್ಲಿ ಇರುವರು. ಮುಕ್ತಿಯ ... ಧರ್ಮವನ್ನೂ ಇಹದ ಸುಖಸೌಕರ್ಯಗಳಿಗೆ ... ದೇಶಾಭಿಮಾನ—ಭಾಷಾಭಿಮಾನಗಳನ್ನೂ ... ಬೆಳೆಸಲು ಈ ಪತ್ರಿಕೆಯಲ್ಲಿ ಯತ್ನವಾಗುತ್ತಿ... ದದ ವಿಷಯ. ಹೆಸರಿಗೆ ಲಿಂಗವಂತ ಸಂಸ್ಕೃ... ಆದರಲ್ಲಿ ವಿಶ್ವಧರ್ಮದ ಗುಣಗಳನ್ನು ಕಾಣು... ದೃಷ್ಟಿಯು ಸಂಪಾದಕರಿಗಿದೆ. ಪತ್ರಿಕೆಯು ... ವಾಗಲಿ.

ಕಿರಣ: ಮೈಸೂರಿನಲ್ಲಿ ಹೊರಟ ಹೊಸ ಮಾಸ... ಚಂದಾ ೧। ರೂ. ಸಂಪಾದಕರು ಕೆ. ಪ್ರಾಣೇಶಾಚಾರ್ಯ...

ವಾಚಕರನ್ನು 'ಚಿತ್ರದ ಉಪವನದಲ್ಲಿ ... ಪ್ರವಾಹ ತೀರದಲ್ಲಿ, ಉಪನ್ಯಾಸದ ಬೆಳದಿಂಗಳ... ದೊಯ್ಯುವುದೇ ಸಂಪಾದಕರ ಆಶೆ, ... ಕೈಗೂಡುವಂತೆ ಅವರ ಯತ್ನಕ್ಕೆ ಯಶಸ್ಸು ...

ಕನ್ನಡ ಕೋಗಿಲೆ: ಬಹುಶಃ ನರೇಗಲ್ಲಿನ ... ಮಾಸಪತ್ರಿಕೆ. 'ಬಹುಶಃ' ಏಕೆಂದರೆ ಪತ್ರಿಕೆಯ ... ಲಯದ ವಿಳಾಸವು ಎಲ್ಲಿಯೂ ಕಾಣಲಿಲ್ಲ. ... ಮತ್ತು ಪ್ರಕಟನೆಯ ವಿಷಯ ಬರೆಯುವಾಗ ನರೇ... ಬಂದಿದೆ. ವಾ. ಚಂದಾ ೧॥ ರೂ. ಸಂಪಾದಕರು ... ಗುರುಪಾದನುಡರವರು.

ಕೃತ್ರಿಮ ರಕ್ತ !

ಹಿಡಿಯುತ್ತಿದೆ. ಮನುಷ್ಯನಿಗೆ ಯಾವದೊಂದು ಕಾರಣದಿಂದ ಬಲವಾದ ಗಾಯವಾಗಿ ವಿಪರೀತ ರಕ್ತಸ್ರಾವವಾದರೆ ಕೂಡಲೆ ಅವನಿಗೆ ರಕ್ತವನ್ನು ಪೂರೈಸಬೇಕಾಗುತ್ತದೆ. ಈ ಕೆಲಸವನ್ನು ಈಗ ಬೇರೆ ದೇಶಗಳಲ್ಲಿ ಅದಕ್ಕಾಗಿ ನಿಯಮಿಸಲ್ಪಟ್ಟ ಬಲಿಷ್ಠ ಜನರ ಮೈಯ ರಕ್ತದಿಂದ ಪೂರೈಸುತ್ತಾರೆ. ಆದರೆ ವಿಜ್ಞಾನಿಗಳು ಕೃತ್ರಿಮವಾಗಿಯೇ ಮನುಷ್ಯನ ರಕ್ತವನ್ನು ನಿರ್ಮಿಸುವ ಯತ್ನದಲ್ಲಿ ತೊಡಗಿದ್ದಾರೆ. ಅದಕ್ಕಾಗಿ ವಿವಿಧ ಪ್ರಾಣಿಗಳ ರಕ್ತದ ಪರಿಶೋಧನೆಯೂ ನಡೆದಿದೆ. ಡಾ. ವಿಲಿಯಂ, ಲ್ಯಾಂಬರಸನ್ನರು ಅನೇಕ ವರ್ಷಗಳ ಪರಿಶೋಧನಾಂತ್ಯದಲ್ಲಿ ಈಗ ಬೆಕ್ಕಿನ ರಕ್ತವನ್ನು ಕೃತ್ರಿಮವಾಗಿ ತಯಾರಿಸುವದರಲ್ಲಿ ಯಶಸ್ವಿಗಳಾಗಿದ್ದಾರೆ. ಸಹಜ ರಕ್ತದಲ್ಲಿರುವ ಕ್ಲೋರಾಯಿಡ್ ಕ್ಷಾರಗಳ ಬದಲು ಅವರು ಸಲ್ಫೇಟ್ ಕ್ಷಾರಗಳನ್ನು ಉಪಯೋಗಿಸಿದ್ದಾರೆ.



ಸಾಮೊಆ ದ್ವೀಪದ ನೆವವಧು

ಸಾಮೊಆ—ಪ್ಯಾಸಿಫಿಕ್ ಮಹಾಸಾಗರದೊಳಗಿನ ಒಂದು ದ್ವೀಪ. ಅಲ್ಲಿಯ ಮೂಲನಿವಾಸಿಗಳ ನಾಯಕನ ಮಗನು ಯುವಾವಸ್ಥೆಗೆ ಬಂದೊಡನೆ, ಅವನನ್ನು ಮದುವೆಯಾಗಲು ಆರಿಸಿದ ಹುಡುಗಿ ಇವಳು. ಇವಳ ವಿಶಿಷ್ಟ ಅಲಂಕಾರಗಳನ್ನೂ ಮೊಣಕಾಲ ಮೇಲಿನ ಹಚ್ಚೆಯನ್ನೂ .... ನೋಡಿರಿ. ....



ಪುರಂದರದಾಸರ ಜಾಣ್ನುಡಿಗಳು: ಸಂಗ್ರಹಿಸಿದವರು ಉಡುಪಿ ಭೀಮರಾವ ಬೀಡಿ; ವಿಶ್ವಸಾಹಿತ್ಯ ಪ್ರಕಟನಮಂದಿರ, ಧಾರವಾಡ. ಪು. ೨೩. ಬೆಲೆ ೦—೨—೦.

ಕನ್ನಡ ನಾಡಿನ ಅನುಭಾವಿಗಳಲ್ಲೊಬ್ಬರಾದ ಪುರಂದರ ದಾಸರ ಕೀರ್ತನೆಗಳಲ್ಲಿಯ ಸುಭಾಷಿತಗಳಂತಹ ನುಡಿಗಳ ಸಂಗ್ರಹವಿದು. ಗಾದೆಯ ಮಾತುಗಳಂತೆ ಚಿಕ್ಕವಾಗಿರುವ ಹಾಗೂ ಪರಿಣಾಮಕಾರಕ ನುಡಿಗಳನ್ನು ಇಲ್ಲಿ ಆಯ ಲಾಗಿದೆ. "ಅವರ (ಪುರಂದರದಾಸರ) ಒಂದೊಂದು ಮಾತು ಸಂಸಾರದಲ್ಲಿ ಬೆಂದು ಬೆಂಡಾದವರಿಗೆ ನವಜೀತನ ವನ್ನು ಕೊಡುವ ಗುಟಿಕೆಗಳಾಗಿವೆ, ನಿಜ ತಿಳುವಳಿಕೆಯನ್ನು ಹುಟ್ಟಿಸುವ ಬುದ್ಧಿಯ ಅಕ್ಷಯಪಾತ್ರೆಗಳಾಗಿವೆ, ಗಾದೆ ಗಳಾಗಿವೆ............ಈ ಅಮೃತ ನುಡಿಗಳನ್ನು ನಡೆಯಲ್ಲಿ ತರಲು ಪ್ರಯತ್ನ ಮಾಡಿದರೆ ನಮ್ಮ ಜೀವಕ್ಕೆ ಎಷ್ಟು ಹಿತವಾಗಬಹುದು" ಎಂದು ಬಿನ್ನಹದಲ್ಲಿ ಹೇಳಿ ಅದೇ ಉದ್ದೇಶದಿಂದ ಸಂಗ್ರಹಕಾರರು ಈ ನುಡಿಗಳನ್ನು ಸಂಗ್ರ ಹಿಸಿದ್ದಾರೆ.

ಸಂಗ್ರಹಕಾರರ ಈ ಪ್ರಯತ್ನವು ಉಚಿತವೇ ಆಗಿದೆ. ಆದರೆ ಪೂರ್ಣವಾಗಿರುವ ಕೀರ್ತನಗಳಲ್ಲಿಯ ಕೆಲವೊಂದು ಭಾಗವನ್ನು ಆಯ್ದುಕೊಂಡು ಈ ಸಂಗ್ರಹ ಮಾಡಬೇಕಾ ಗಿರುವದರಿಂದ ಕೆಲವು ಉಕ್ತಿಗಳು ಅಪೂರ್ಣವೆನಿಸು ವಂತಿವೆ. ಉದಾ: ಅನ್ನಮದ ಅರ್ಥಮದ ಅಖಿಲ ವೈಭ ವದ ಮದವು, ಸೋಗಿಲಿರುವ ಜೋಗಿ ಇತ್ಯಾದಿ.

ಈ ಸಂಗ್ರಹವು ಬುದ್ಧಿಯ ಅಕ್ಷಯಪಾತ್ರೆಯಾಗುವದರ ಜೊತೆಗೆ, ಭಾಷೆಯ ಶುದ್ಧತೆ, ಇಂಪು ಇವುಗಳನ್ನು ಒಳ ಗೊಳ್ಳುವ ಉದ್ದೇಶದಿಂದ ಕೆಳಗಿನ ಕೆಲವು ಪ್ರಯೋಗ ಗಳನ್ನು ಬಿಟ್ಟುಬಿಡಬಹುದಾಗಿತ್ತು. ಉದಾ: ಬಿಕ್ಷವ, ಉದುಕ, ಬಂಥ, ತಾಳಲಿ ಬೇಕು, ಬುದ್ಧೀಲರು, ಬಾಹೋದು. ಹಾಗೂ

ಇಬ್ಬರ್ಹೆಂಡಿರ ಸಂಗ
ಇಟ್ಟೆನೆಂದರೆ ಸೊಟ್ಟ ಕಿವಿಗೆ ಘಟ್ಟಮುರುವ ಕಾಣೆ.

ಈ ಜಾಣ್ನುಡಿಗಳನ್ನು ಸಂಖ್ಯೆಯೊಂದಿಗೆ ಬೇರೆಬೇರೆ ಯಾಗಿ ಮುದ್ರಿಸಿರುವುದು ಸರಿಯಾಗಿದ್ದರೂ ಮುದ್ರಣದ ಅಕ್ಷರಗಳು ಇನ್ನಿಷ್ಟು ದಪ್ಪವಾಗಿದ್ದರೆ ಇಂತಹ ಸಂಗ್ರಹಗಳು 'ಬಾಳ ಕೈದೀವಿಟ್ಟಿ' ಯೆಂಬುದನ್ನು ನಾವು ಒಪ್ಪಲೇಬೇಕು.

—ಎಸ್.

ಶರಣಸಾಹಿತ್ಯ: ಮಾಸಪತ್ರಿಕೆ. ಜನವರಿ... ರಲ್ಲಿ ಪ್ರಕಟವಾಗುತ್ತಿದೆ. ವಾರ್ಷಿಕ ಚಂದಾ ... ಕರು ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು.

ಹಿಂದೂಧರ್ಮ, ಕನ್ನಡ ಸಾಹಿತ್ಯ, ಲಿಂಗಾ... ಗಳ ಉನ್ನತಿಗಾಗಿ ಪ್ರಯತ್ನಿಸುವದೇ ಈ ... ಮುಖ್ಯೋದ್ದೇಶ. ಕರ್ನಾಟಕದ ... ಮೂವತ್ತು ಮಂದಿ ವಿದ್ವಾಂಸರು ಈ ಪತ್ರಿಕೆ... ಮಂಡಲಿಯಲ್ಲಿ ಇರುವರು. ಮುಕ್ತಿಯ ... ಧರ್ಮವನ್ನೂ ಇಹದ ಸುಖಸೌಕರ್ಯಗಳಿಗೆ ... ದೇಶಾಭಿಮಾನ—ಭಾಷಾಭಿಮಾನಗಳನ್ನೂ ... ಬೆರೆಸಲು ಈ ಪತ್ರಿಕೆಯಲ್ಲಿ ಯತ್ನವಾಗುತ್ತಿ... ದದ ವಿಷಯ. ಹೆಸರಿಗೆ ಲಿಂಗವಂತ ಸಂಸ್ಕೃ... ಆದರಲ್ಲಿ ವಿಶ್ವಧರ್ಮದ ಗುಣಗಳನ್ನು ಕಾ... ದೃಷ್ಟಿಯು ಸಂಪಾದಕರಿಗಿದೆ. ಪತ್ರಿಕೆಯು ... ವಾಗಲಿ.

ಕಿರಣ: ಮೈಸೂರಿನಲ್ಲಿ ಹೊರಟ ಹೊಸ ಮಾಸ... ಚಂದಾ ೧। ರೂ. ಸಂಪಾದಕರು ಕೆ. ಪ್ರಾಣೇಶಾ...

ವಾಚಕರನ್ನು 'ಚಿತ್ರದ ಉಪವನದ... ಪ್ರವಾಹ ತೀರದಲ್ಲಿ, ಉಪನ್ಯಾಸದ ಬೆಳದಿಂ... ದೊಯ್ಯುವುದೇ ಸಂಪಾದಕರ ಆಶೆ ... ಕೈಗೂಡುವಂತೆ ಅವರ ಯತ್ನಕ್ಕೆ ಯಶಸ್ಸು ...

ಕನ್ನಡ ಕೋಗಿಲೆ: ಬಹುಶಃ ನರೇಗಲ್ಲ... ಮಾಸಪತ್ರಿಕೆ. 'ಬಹುಶಃ' ಏಕೆಂದರೆ ಪತ್ರಿಕೆ... ಲಯದ ವಿಳಾಸವು ಎಲ್ಲಿಯೂ ಕಾಣಲಿಲ್ಲ. ... ಮತ್ತು ಪ್ರಕಟನೆಯ ವಿಷಯ ಬರೆಯುವಾಗ ... ಬಂದಿದೆ. ವಾ. ಚಂದಾ ೧॥ ರೂ. ಸಂಪಾದಕರು ... ಗುರುಪಾದಮುಖರವರು.

ಕನ್ನಡ ಸೇವೆಗಾಗಿ ಹೊರಟಿದೆ. ಹಲಕೆಲವು ಲೇಖಕರ ವಿಚಾರಗಳು ಹೊಸ ಯುಗಕ್ಕೆ ಹೊಂದಿಕೊಂಡಿವೆ. ಆದರೆ ಕವಿತೆಗಳ ಆರಿಸುವಿಕೆಯಲ್ಲಿ ವಿಶಿಷ್ಟ ಧ್ಯೇಯವನ್ನಿಟ್ಟುಕೊಳ್ಳುವುದು ಒಳಿತು.

ಆಧುನಿಕ ಭಾರತ: ಇದು ದಾಣಿ:ಬೆನ್ನೂರಿಂದ ಹೊರಡುವ ಪಕ್ಷಪತ್ರಿಕೆ. ಸಂಪಾದಕರು ಶ್ರೀಮಾನ್ ಎಂ. ಎಸ್. ಶೆಟ್ಟಿ. ವಾ. ಚಂದಾ ೩ ರೂ. ಬಿಡಿಸಂಚಿಕೆ ೧ ಆಣೆ.

ರೈತರ ಮತ್ತು ಕೂಲಿಕಾರರ ಪರವಾಗಿ ವಾದಿಸುವ ಮತಾವಾದಿ ಪತ್ರಿಕೆಯಿದು. ಈ ವಿಶಿಷ್ಟ ಉದ್ದೇಶದಿಂದಲೇ ಹೊರಟ ಪತ್ರಿಕೆಯೆಂದರೆ ಇದೇ ಮೊದಲನೆಯದು. ಉದ್ದೇಶಕ್ಕೆ ತಕ್ಕ ಲೇಖನಗಳಿವೆ. ರೈತರ ಮತ್ತು ಕೂಲಿಕಾರರ ಸುಧಾರಣೆಯೊಡನೆ ಅನೇಕ ಶತಮಾನಗಳಿಂದ ದಲಿತರಾದ ಸ್ತ್ರೀಯರ ಪ್ರಗತಿ ಗೌರವಗಳಿಗಾಗಿಯೂ ಸಾಧಕವಾದ ಲೇಖನಗಳು ಇದರಲ್ಲಿ ಬರುತ್ತಿರುವುದು ಸಂಪಾದಕರ ವಿಶಾಲದೃಷ್ಟಿಯ ಲಕ್ಷಣವಾಗಿದೆ. ಮತಾವಾದವು ಬಹು ವಿಸ್ತೃತವಾದ ವಿಷಯವು. ಆದರ ಎಲ್ಲ ಅಂಶಗಳೂ ವೈಜ್ಞಾನಿಕವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಲೆಂದು ಹಾರೈಸುತ್ತೇವೆ.

ಚಿತ್ರಸಮಾಚಾರ್: ಕೊನೆಗೆ 'ರ್' ಎಂಬ ಅಕ್ಷರವನ್ನು ನೋಡಿ ಅದು ಹಿಂದೀ ಪತ್ರಿಕೆಯೊಂದು ತಿಳಿಯಬಾರದು. ಬೆಂಗಳೂರಿನಿಂದ ಹೊರಡುವ, ಪ್ರಾಮುಖ್ಯವಾಗಿ ಚಲಚ್ಚಿತ್ರಗಳಿಗೇ ಸಂಬಂಧಿಸಿದ ಮಾಸಪತ್ರಿಕೆ. ಸಂಪಾದಕರು ಹೆಚ್. ಆರ್. ಕೃಷ್ಣಮೂರ್ತಿ. ವಾ. ಚಂದಾ ೧ ರೂ. ಬಿಡಿ ಸಂಚಿಕೆ ೧ ಆಣೆ.

ಕೇವಲ ಚಲನಚಿತ್ರಗಳಿಗೆ ಸಂಬಂಧಿಸಿದ ಪತ್ರಿಕೆಯೆಂದರೆ ಕನ್ನಡದಲ್ಲಿ ಇದೇ ಮೊದಲನೆಯದು. ಮುದ್ರಣ ಚನ್ನಾಗಿದೆ. ಚಿತ್ರಗಳೂ ಸಾಕಷ್ಟು ಇವೆ. ಆದರೆ ಚಲನಚಿತ್ರ ವ್ಯವಸಾಯಕ್ಕೆ ಸಂಬಂಧಿಸಿದ ತಜ್ಞರ ಲೇಖನಗಳು ಬೇಕಷ್ಟು. ಇಂಗ್ಲಿಷಿನಲ್ಲಿ ಇಂತಹ ಪತ್ರಿಕೆಗಳು ಹಲಕೆಲವು ಹೊರಟು ಚನ್ನಾಗಿ ನಡೆಯುತ್ತಿವೆ. ಅವುಗಳೊಡನೆ ಹೋಲಿಸಿದರೆ ಚಿತ್ರಸಮಾಚಾರದ ಬೆಲೆ ತೀರ ಕಡಿಮೆ. ಬೆಲೆ ಕಡಿಮೆಯೆಂದು ವಿಷಯಗಳೂ ಕಡಿಮೆಯಾಗದಿರಲೆಂದು ಬಯಸುತ್ತೇವೆ. ಚಲನಚಿತ್ರಗಳಿಗೂ ಸಮಾಜಕ್ಕೂ, ಶಿಕ್ಷಣಕ್ಕೂ, ದೇಶದ ಪ್ರಗತಿಗೂ ಸಂಬಂಧಿಸಿದ ವಿವಿಧ ಲೇಖನಗಳು ಈ ಪತ್ರಿಕೆಯಲ್ಲಿ ಹೆಚ್ಚುಹೆಚ್ಚಾಗಿ ಬರುವಂತೆ ಸಂಪಾದಕರು ಪ್ರಯತ್ನಿಸಲಿ.

Inner Culture: ಇದು ಅಮೆರಿಕೆಯ ಕ್ಯಾಲಿಫೋರ್ನಿಯದಿಂದ ಹತ್ತು ವರ್ಷಗಳಿಂದ ಹೊರಡುತ್ತಿರುವ ಭಾರತೀಯ ಆಧ್ಯಾತ್ಮ ವಿಷಯಕ ಇಂಗ್ಲಿಷ್ ಮಾಸಪತ್ರಿಕೆ. ಇದರಲ್ಲಿ ತಜ್ಞರಾದ ತತ್ವಜ್ಞಾನಿಗಳು ಯೋಗ, ಧರ್ಮ, ವಿಜ್ಞಾನಗಳ ವಿಷಯದಲ್ಲಿ ಶಾಸ್ತ್ರೀಯ ಲೇಖನಗಳನ್ನು ಬರೆಯುತ್ತಾರೆ. ಅಮೆರಿಕೆಯಲ್ಲಿ ಈ ಪತ್ರಿಕೆಯು ಭಾರತೀಯ ವಿಶ್ವಸಂಸ್ಕೃತಿಯನ್ನು ಪ್ರಚುರಗೊಳಿಸುತ್ತಿರುವುದು ಹೆಮ್ಮೆಯ ವಿಷಯ.

The Intermediate College Magazine, Bangalore: ಇದರ ಐದನೇ ವರ್ಷದ ಎರಡನೆ ಸಂಚಿಕೆಯು ನಮ್ಮ ಕೈಗೆ ಬಂದಿದೆ. ವಿಜ್ಞಾನಕ್ಕೆ ಸಂಬಂಧಿಸಿದ ತಜ್ಞರ ಇಂಗ್ಲಿಷ ಲೇಖನಗಳು ಇದರಲ್ಲಿವೆ. ಮೊಸಿನ ವಿಷಯದ ಲೇಖನವು ಸಚಿತ್ರವಾಗಿಯೂ ಮನರಂಜಕವೂ ಬೋಧಕವೂ ಆಗಿದೆ. ಕನ್ನಡ ಕವಿತೆ ಕತೆ ಪ್ರಬಂಧಗಳ ಒಂದು ಭಾಗವನ್ನೂ ಇದರಲ್ಲಿ ಸೇರ್ಪಡಿಸಿರುವುದು ಅಭಿಮಾನದ ವಿಷಯವಾದರೂ, ಕನ್ನಡದಲ್ಲಿಯೂ ವೈಜ್ಞಾನಿಕ ವಿಷಯಗಳನ್ನು ಬರೆದು ಪ್ರಸಿದ್ಧಿಸುವ ಪರಿಪಾಠವಿಟ್ಟರೆ ಹೆಚ್ಚು ಸುಸಂಗತವಾಗಬಹುದು.

ಪ್ರಬುದ್ಧ ಕರ್ಣಾಟಕ

ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ, ಈ ಪ್ರಸಿದ್ಧವಾದ ಹಬ್ಬಗಳ ಹೊತ್ತಿಗೆ ಪ್ರಬುದ್ಧಕರ್ಣಾಟಕವು ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ. ಕವನ, ಕತೆ, ಪ್ರಬಂಧ, ವಿಮರ್ಶೆ, ಚರಿತ್ರೆ, ವಿಜ್ಞಾನಶಾಸ್ತ್ರ, ಸಾಹಿತ್ಯ-ಕಲೆಗಳನ್ನು ಕುರಿತು ಲೇಖನಗಳು ಈ ಮೊದಲಾದುವನ್ನು ಪ್ರಕಟಿಸಿ, ನಮ್ಮ ಜನರಿಗೆ ಆಧುನಿಕ ಮತ್ತು ಪ್ರಾಚೀನ ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಡುವುದೇ ಈ ಪತ್ರಿಕೆಯ ಉದ್ದೇಶ. ನಮ್ಮ ನಾಡಿನ ಶ್ರೇಷ್ಠಸಾಹಿತಿಗಳೂ ವಿದ್ವಾಂಸರೂ ಇದರ ಲೇಖಕವರ್ಗದಲ್ಲಿ ಸೇರಿದ್ದಾರೆ.

ಚಂದಾದಾರರಿಗೆ	ರೂ.	೩—೦—೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	,,	೩—೦—೦
ವಿದ್ಯಾರ್ಥಿಗಳಿಗೆ ಮಾತ್ರ	,,	೧—೮—೦

ಚಂದಾಹಣವನ್ನು ಮೈಸೂರು ವಿಶ್ವವಿದ್ಯಾಲಯದ ರಜಿಸ್ಟ್ರಾರರವರಿಗೆ ಪಾವತಿಮಾಡಬೇಕು. ಪತ್ರವ್ಯವಹಾರವನ್ನೆಲ್ಲಾ ಈ ಕೆಳಗಿನ ವಿಳಾಸದೊಂದಿಗೆ ನಡೆಯಿಸಬೇಕು.

ಸಂಪಾದಕ, ಪ್ರಬುದ್ಧ ಕರ್ಣಾಟಕ
ಯುನಿವರ್ಸಿಟಿ ಲೈಬ್ರರಿ, ಮೈಸೂರು

The Dawn of India Life Insurance Co.,

ಬೇಕು!

ದಿ ಡಾನ್ ಆಫ್ ಇಂಡಿಯಾ ಲ್ಯಾಫ್ ಇನ್ಸ್ಯುರನ್ಸ

- ಇವರ ಅತ್ಯಾಕರ್ಷಕ ಮತ್ತು ತುಂಬ ಲಾಭದಾಯಕ ರೆಂಟ್-ಪಾ...
  ಸ್ಕೀಮ್ (" ಬಾಡಿಗೆ ಕೊಡುತ್ತ ಮನೆಮಾಲಕರಾಗುವ ಗೃಹ...
  ಗಾಗಿ ಕೆಲಸ ದೊರಕಿಸಲು ಎಲ್ಲಾಕಡೆ ಆರ್ಗನಾಯಿಜರರು ...
- ದಕ್ಷ, ಕಾರ್ಯಕ್ಷಮ, ಪ್ರಾಮಾಣಿಕ ಕೆಲಸಗಾರರಿಗೆ ಯೋಗ್ಯ ...
  ಕಮಿಶನ್ ಆಗಲಿ ಕೊಡುವೆವು. ....
- ಪ್ರಾಸ್ಪೆಕ್ಟಸ್ಸಿಗಾಗಿ ಮತ್ತು ಏಜನ್ಸಿ ದರಗಳಿಗಾಗಿ ಕೆಳಗಿನ ವಿಳಾ...

ಬ್ರ್ಯಾಂಚ ಸೆಕ್ರೆಟರಿ,

ದಿ ಡಾನ್ ಆಫ್ ಇಂಡಿಯಾ ಲ್ಯಾಫ್ ಇನ್ಸ್ಯುರನ್ಸ ಕಂ.ಲಿ., ಬ್ರ್ಯಾಂಚ ಆಫೀಸ, ...

ದಿ ಕಮರ್ಶಿಯಲ್ ಇನ್ಸ್ಯುರೆನ್ಸ ಆ್ಯಂಡ ಲ್ಯಾಂಡ ಬಿಲ್ಡಿಂಗ ಸೆಕ್ಯುರಿಟಿ ಸೊಸಾಯಿಟಿ ಲಿಮಿಟೆಡ್, ಬೆಳಗಾಂವಿ

ಕಂಪನಿಯ ಊರ್ಜಿತಾವಸ್ಥೆಗೆ ಏಜಂಟರೇ ಮುಖ್ಯ ಕಾರಣ ಮತ್ತು ಅವರ ಕಾರ್ಯಕ್ಕೆ ತಕ್ಕ ... ದೊರೆಯುವದು ಅಷ್ಟೇ ಮಹತ್ವದ್ದಿರುವದರಿಂದ ಸೋಸಾಯಿಟಿಯ ಅಭಿಮಾನವುಳ್ಳ ಏಜಂಟರಲ್ಲಿ ... ಯನ್ನು ಯೋಜಿಸಲಾಗದೆ. ಬರಿ ದುಡ್ಡನ್ನಾಗಲಿ ಇನಾಮಿನ ರೂಪದಿಂದ ಯಾವದಾದರೊಂದು ... ಗಲಿ ಕೊಡುವದರಿಂದ ಏಜಂಟರ ಹಿತವಾಗಲಾರದು. ಆದರೆ ಸ್ಪರ್ಧೆಯ ಕೆಳಗಿನ ನಿಯಮದಂತೆ ... ನಂಬರು ಬಂದವರಿಗೆ ಕಂಪನಿಯ ಕಾಯಂ ಆರ್ಗನಾಯಿಝರರನ್ನಾಗಿ ನಿಯಮಿಸುವದರಲ್ಲಿ ಬಹ...

ಸ್ಪರ್ಧೆಯ ನಿಯಮಗಳು

ಮಾರ್ಚ ತಿಂಗಳ ೧ನೇ ತಾರೀಖಿನಿಂದ ಮೇ ತಿಂಗಳ ಕೊನೆಯೊಳಗೆ ೧೫೦ ನಾವೆಲ್ ಬೋನಸ ... ಫಿಕೇಟುಗಳನ್ನು ಪೂರ್ತಿ ಮಾಡಿ ೧-೨ ನಂಬರು ಬಂದವರಿಗೆ ಕೆಳಗಿನ ಕಾಯಂ ಜಾಗೆಗಳನ್ನು ಕೊಡಲಾ...

೧ ನೇ ನಂಬರಿನವರಿಗೆ:— ತಿಂಗಳಿಗೆ ೪೦ ರೂ. ಪಗಾರ, ದಿನದ ಭತ್ತೆ ೧ರೂ. ಮತ್ತು ಹೋ... ದರ ನಕ್ಕೀ ಖರ್ಚು.

೨ ನೇ ನಂಬರಿನವರಿಗೆ:—ತಿಂಗಳಿಗೆ ೩೦ ರೂ. ಪಗಾರ, ಭತ್ತೆ ೧೨ ಆಣೆ ಮತ್ತು ಹೋಗುಬರು... ಖರ್ಚು.

ಈ ಸ್ಪರ್ಧೆಯಲ್ಲಿ ನಿಯಮಿಸಲ್ಪಟ್ಟ ಆರ್ಗನಾಯಿಝರರಿಗೆ ಮುಂದೆ ಗ್ಯಾರಂಟಿ ಬಿಜಿನೆಸ್ಸು ... ಕಾರಣ ಈ ಸುಸಂಧಿಯನ್ನು ಸೋಸಾಯಿಟಿಯ ಏಜಂಟರು ಕಳೆದುಕೊಳ್ಳಲಾರರೆಂದು ನಮಗೆ ... ಭರವಸೆ. ಇದಲ್ಲದೆ ಹೊಸ ಜನರು ಸಹ ಏಜನ್ಸಿ ತೆಗೆದುಕೊಂಡು ಈ ಸ್ಪರ್ಧೆಯಲ್ಲಿ ಭಾಗವಹಿಸ... ಬಗೆಯ ಅಡ್ಡಿ ಇಲ್ಲ.

ಕನ್ನಡದ ಮುನ್ನಡೆ

ಶ್ರೀಮಾನ್ ಸಿ. ಪಿ. ಹಳಕಟ್ಟಿ ಬಿ. ಎಸ್‌ಸಿ.

ಇವರು ವಿಜಾಪುರದ 'ನವಕರ್ನಾಟಕ'ದ ಸಂಪಾದಕರಾದ ಶ್ರೀಯುತ ಫ. ಗು. ಹಳಕಟ್ಟಿಯವರ ಮಕ್ಕಳು. ಮುಂಬಯಿಯ ವಿ. ಜೆ. ಟಿ. ಇನ್‌ಸ್ಟಿಟ್ಯೂಟ್‌ನಲ್ಲಿ ವ್ಯಾಸಂಗವನ್ನು ಮುಗಿಸಿಕೊಂಡು ಮುಂಬಯಿ ಸರಕಾರದ ಸ್ಕಾಲರ್‌ಶಿಪ್ಪನ್ನು ಪಡೆದು ಮ್ಯಾಂಚೆಸ್ಟರ ವಿಶ್ವವಿದ್ಯಾಲಯದಲ್ಲಿ ಅಲ್ಲಿನ ಕೈಗಾರಿಕೆಯ ಅಭ್ಯಾಸಕ್ಕಾಗಿ ಹೋಗಿದ್ದವರು, ಮೊನ್ನೆಮೊನ್ನೆ ಮಾತೃಭೂಮಿಗೆ ಮರಳಿದ್ದಾರೆ.

ಶ್ರೀ. ಹಳಕಟ್ಟಿಯವರು ಒಳ್ಳೆ ಟೆನಿಸ್ ಮತ್ತು ಕ್ರಿಕೆಟ್ಟಿನ ಆಟಗಾರರಾಗಿದ್ದಾರೆ. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಟೆನಿಸ್ ಟೀಮಿನ ಪ್ರಥಮ ಭಾರತೀಯ ಕ್ಯಾಪ್ಟನ್ನರೆಂದರೆ ಇವರೇ. ಮ್ಯಾಂಚೆಸ್ಟರ ವಿಶ್ವವಿದ್ಯಾಲಯದ ಉತ್ಕೃಷ್ಟ ಸರ್ವಾಂಗೀಣ ವಿದ್ಯಾರ್ಥಿಗಳಿವರಾದುದರಿಂದ ಇವರಿಗೆ ನಾಟಕ ಬಹುಮಾನ 'ಪೂ ಸಿಕ್ಕಿದೆ.

ತರುಣರೂ ಮೇಧಾವಿಗಳೂ ಉತ್ಸಾಹಶಾಲಿಗಳೂ ಆದ ಇವರು ತಮ್ಮ ವಿದ್ಯಾಪ್ರಭಾವದಿಂದ ತಾಯಿನಾಡನ್ನು ಬೆಳಗಲಿ.

ಶ್ರೀಮಾನ್ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರ ಉದಾರ ದಾನ

ಈ ಮಹನೀಯರು ಬೆಂಗಳೂರಿನ ಅಗ್ರಗಣ್ಯರಾದ ಸಮಾಜಸೇವಕರಲ್ಲಿ ಒಬ್ಬರು ಎಂಬುದು ಎಲ್ಲರಿಗೂ ಗೊತ್ತು. ಇವರು ಮೊನ್ನೆ ಬೆಂಗಳೂರಿನ ಮಹಂತಿನ ಮಠದ ಪಟ್ಟಾಧ್ಯಕ್ಷ ಶ್ರೀ|| ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಸಮ್ಮುಖದಲ್ಲಿ ಶ್ರೀಜಗದ್ಗುರು ರೇಣುಕಾರ್ಯರ ಜಯಂತಿ ಮಹೋತ್ಸವದ ಸಮಯದಲ್ಲಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಆ ಕಾಲಕ್ಕೆ ಈ ಮಹನೀಯರು ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲತೆಗಾಗಿಯೂ ಧರ್ಮಾರ್ಥ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವದಕ್ಕೂ ತಾವು ೮೫ ಸಾವಿರ ರೂಪಾಯಿಗಳನ್ನು ಕೊಡುವೆವೆಂದು ತಿಳಿಸಿದರು.

ಬಡವರ ವಿದ್ಯಾವ್ಯಾಸಂಗಕ್ಕೆ ಈ ದಿವಾನಬಹಾದ್ದೂರರು ಮಾಡಿದ ಸಹಾಯವು ಶ್ರೀಮಂತರಿಗೆಲ್ಲ ಅನುಕರಣೀಯವಾದ ವಿಷಯವಾಗಿದೆ.

ಸಾಹಿತ್ಯಪರಿಷತ್ತಿನ ವಸಂತ ಸಾಹಿತ್ಯೋತ್ಸವ

ಕರ್ನಾಟಕ ಸಾಹಿತ್ಯ ಪರಿಷತ್ತಿನವರು-ಈಗ ನಾಲ್ಕು ವರ್ಷಗಳಿಂದ ಬೇಸಿಗೆಯಲ್ಲಿ ಶಿಕ್ಷಕರಿಗೂ ಸಾಮಾನ್ಯರಿಗೂ ಉಪಯುಕ್ತವಾಗುವಂತೆ ಬೆಂಗಳೂರಲ್ಲಿ ವಸಂತ ಸಾಹಿತ್ಯೋತ್ಸವವನ್ನು ನೆರೆಯಿಸಿ ವಿವಿಧ ವಿಷಯಗಳಲ್ಲಿ ವ್ಯಾಖ್ಯಾನಗಳನ್ನು ಏರ್ಪಡಿಸುತ್ತಿದ್ದರಷ್ಟೆ. ಆದರೆ ಅನೇಕ ಮಹನೀಯರು ಈ ವಸಂತೋತ್ಸವವನ್ನು ಕರ್ನಾಟಕದ ಬೇರೆ ಕೆಲವು ಭಾಗಗಳಲ್ಲಿಯೂ ನಡೆಯುವಂತೆ ಏರ್ಪಡಿಸಬೇಕೆಂದು ಪರಿಷತ್ತಿಗೆ ಸಲಹೆಯನ್ನು ಕೊಡುತ್ತ ಬಂದಿದ್ದರು. ಆದ್ದರಿಂದ ಈ ಸಲ ಬೆಂಗಳೂರಿನಲ್ಲಿ ನಾಲ್ಕು ದಿನ, ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮೂರು ದಿನ, ಉತ್ತರಕರ್ನಾಟಕದಲ್ಲಿ ಗದಗಿನಲ್ಲಿ ಮೂರು ದಿನ ವಸಂತೋತ್ಸವವನ್ನು ನಡೆಸಬೇಕೆಂದು ಪರಿಷತ್ತಿನವರು ನಿರ್ಧರಿಸಿದುದು ಅಭಿನಂದನೀಯ ವಿಷಯ; ಈ ವಸಂತೋತ್ಸವದ ಸಂಗಡ ಗ್ರಂಥಪ್ರದರ್ಶನ, ಪತ್ರಿಕಾಪ್ರದರ್ಶನ, ವಿಜ್ಞಾನ ಸಂಶೋಧನ ಶಾಲೆ ಕೈಗಾರಿಕೆ ಶಾಲೆ ಮುಂತಾದವುಗಳು ನಡೆಯುವವು. ಸಾಹಿತಿಗಳು ಈ ಉತ್ಸವದಲ್ಲಿ ಪಾಲುಗಾರರಾಗಿ ಯಶಸ್ವಿಗೊಳಿಸುವದು ಕರ್ತವ್ಯವಾಗಿದೆ.

ಬೆಂಗಳೂರಿನಲ್ಲಿ ಮಹಿಳಾ ವಿದ್ಯಾಪೀಠ


ಬೆಲ್ಜಿಯಮ್ ಮಿಶನ್ನಿನವರು ಬೆಂಗಳೂರಿನಲ್ಲಿ ಅಖಿಲ ಭಾರತೀಯ ಮಹಿಲಾ ವಿದ್ಯಾಪೀಠವನ್ನು ಸ್ಥಾಪಿಸುವ ಯತ್ನದಲ್ಲಿರುವರು. ಈ ವಿದ್ಯಾಪೀಠಕ್ಕೆ ಯೋಗ್ಯವಾದ ಸ್ಥಳವನ್ನೂ ಸಾಕಷ್ಟು ಗ್ರ್ಯಾಂಟನ್ನೂ ಪಡೆಯುವದಕ್ಕಾಗಿ ಮೈಸೂರು ಸರಕಾರದೊಡನೆ ವಿಚಾರವಿನಿಮಯ ನಡೆದಿದೆ.

ಅಪೂರ್ವ ವಿಜಯ

ಮೈಸೂರ ನ್ಯಾಯವಿಧಾಯಕ ಸಭೆಗೆ ಕಾಂಗ್ರೆಸಿನ ಪರವಾಗಿ ಉಮೇದವಾರರಾಗಿ ನಿಂತಿದ್ದ ಸೌ. ಯಶೋಧರಮ್ಮನವರು ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವರು. ಪ್ರತಿಸ್ಪರ್ಧಿಗಳಾದ ರಾವಸಾಹೇಬರ ಠೇವುಹಣವು ಜಪ್ತಾಯಿತು. ಶ್ರೀಮತಿಯವರಿಗೆ ಸಿಕ್ಕ ವಿಜಯವು ಕನ್ನಡ ಮಹಿಳೆಯರಿಗೂ, ಕಾಂಗ್ರೆಸ್ಸಿಗೂ ಸಿಕ್ಕ ಗೌರವವೇ ಸರಿ.

ಮೈಸೂರಲ್ಲಿ ಮಾದಕವಸ್ತು ಪ್ರತಿಬಂಧ

ಬೆಂಗಳೂರು ಜಿಲ್ಲೆಯ ಕ್ಲೋಸಪೇಟೆ ಮತ್ತು ಚನ್ನಪಟ್ಟಣ ತಾಲೂಕುಗಳಲ್ಲಿಯ ಸೆರೆ, ಶಿಂದಿ, ಗಾಂಜಾ ಮತ್ತು ಅಫೀಮಿನ ಅಂಗಡಿಗಳನ್ನು ಮುಚ್ಚಿಬಿಡಬೇಕೆಂದು ಮೈಸೂರು ಸರಕಾರದವರು ಅಪ್ಪಣೆಕೊಟ್ಟಿದ್ದಾರೆ. ಈ ಅಪ್ಪಣೆಯು ೧ನೇ ಜುಲೈಯಿಂದ ಒಂದು ವರ್ಷದ ವರೆಗೆ ಜಾರಿಯಲ್ಲಿರುವದು. ಈ ಪ್ರಯೋಗದ ಪರಿಣಾಮವನ್ನು ಮುಂದೆ ನಿರೀಕ್ಷಿಸಲಾಗುವದು. ಮೇಲಿನ ಸರಕಾರಿ ಹುಕುಮಿನ ಪರಿಣಾಮದೊಡನೆ ಮೈಸೂರು ಸಂಸ್ಥಾನದ ಮದ್ಯಪಾನ ನಿರೋಧಕ ಮಂಡಲದವರ ಪ್ರಚಾರ ಶಿಕ್ಷಣಕಾರ್ಯಗಳೂ ನಡೆಯುವವೆಂದು ಊಹಿಸಲಾಗಿದೆ.



ನಮ್ಮ ಹೋರಾಟ

ಕಳೆದ ತಿಂಗಳು ಕರ್ನಾಟಕದೃಷ್ಟಿಯಿಂದ ಮಹತ್ವಪೂರ್ಣವಾದುದು. ಮಂತ್ರಿಗಳ - ಶಾಸನಸಭಾಸದಸ್ಯರ ಪ್ರಕಟ-ಅಪ್ರಕಟ ಅಸಹಾನುಭೂತಿಯು ಏಕೀಕರಣವಾದಿಗಳನ್ನು ಹೊಡೆದೆಬ್ಬಿಸಿದೆ. ನೂರಾರು ಸಭೆಗಳೂ ಪತ್ರಿಕೆಗಳ ಅಗ್ರಲೇಖನಗಳೂ ಮುಖಂಡರ ಅಭಿಪ್ರಾಯಗಳೂ ಏಕೀಕರಣ ಆಂದೋಲನಕ್ಕೆ ಪುಟಗೊಟ್ಟವೆ. ಏಕೀಕರಣ ಮಹಾಸಭೆಯ ವಿಶೇಷಾಧಿವೇಶನವನ್ನು ಕರೆಯಬೇಕೆಂದು ಧಾರವಾಡದ ನಾಗರಿಕರು ಸಂಕಲ್ಪಿಸಿದ್ದಾರೆ.

ಇದೊಂದು ಶುಭಯೋಗವೆಂದೇ ನಮ್ಮ ಭಾವನೆ. ಕನ್ನಡಿಗರ ಸುಪ್ತ ಅಭಿಮಾನವನ್ನು ಕಾಂಗ್ರೆಸ್ ಅಧಿಕಾರಿವರ್ಗದ ಮತ್ತವರ ಬೆಂಬಲಿಗರ ಉಪೇಕ್ಷಾಭಾವವು ಕೆಣಕಿ, ಪ್ರದೀಪ್ತಗೊಳಿಸಿತು. ಕಾಂಗ್ರೆಸ್-ಕಾಂಗ್ರೆಸ್‌ವಿಭಿನ್ನ ಮೊದಲಾದ ಪಕ್ಷಭೇದಗಳು ಅಡಗಿ, ಏಕೀಕರಣವಾದಿಗಳು-ಏಕೀಕರಣ ವಿರೋಧಿಗಳು ಎಂಬೆರಡೇ ಪಕ್ಷಗಳು ನಾಡಿನಲ್ಲಿ ಕಂಡು ಬರುತ್ತಿವೆ. ಈ ಶುಭನಿಮಿಷದ ಪೂರ್ಣ ಲಾಭವನ್ನು ಪಡೆದುಕೊಂಡು, ಕನ್ನಡಿಗರ ವಜ್ರಸಮಸಂಘಟನೆಯನ್ನು ನಿರ್ಮಿಸುವುದು ಮುಖಂಡರನ್ನು ಕೂಡಿದೆ.

ಆಂಧ್ರರು ೧ ಲಕ್ಷ ರೂ.ಯ ನಿಧಿಯನ್ನೂ ೧೦ ಸಹಸ್ರ ಸ್ವಯಂಸೇವಕರನ್ನೂ ಏಕೀಕರಣಕ್ಕಾಗಿ ಕೂಡಿಸಲು ನಿರ್ಧರಿಸಿದ್ದಾರೆ. ಇದು ಅವರ ದೃಢನಿಶ್ಚಯವನ್ನೂ ಕಾರ್ಯತತ್ಪರತೆಯನ್ನೂ ತೋರಿಸುತ್ತದೆ. ಹಿಂದುಸ್ತಾನದ ಸ್ವಾತಂತ್ರ್ಯಪ್ರಾಪ್ತಿಗಾಗಿ 'ಪ್ರಾಣಯಜ್ಞದಲ'ವನ್ನು ಏರ್ಪಡಿಸುವ ಘೋರಸಂಕಲ್ಪವನ್ನು ಮಹಾರಾಷ್ಟ್ರದ ಸೇನಾಪತಿ ಬಾಪಟರವರು ಮಾಡಿದುದನ್ನು ಕೇಳಿದ್ದೇವೆ. 'ಇಂದಿನ ಸ್ವಯಂಸೇವಕದಲವೇ ನಾಳಿಯ ರಾಷ್ಟ್ರೀಯಸೈನ್ಯವು' ಎಂಬ ಅಭಿಪ್ರಾಯವನ್ನು ರಾಷ್ಟ್ರಪತಿ ಸುಭಾಸರು ವ್ಯಕ್ತಗೊಳಿಸಿದ್ದಾರೆ. ಕನ್ನಡಕ್ಕಾಗಿ—ಕರ್ನಾಟಕ ಏಕೀಕರಣಕ್ಕಾಗಿ—'ಇದ ಪಡೆಯಲು ನಾವ್ ದುಡಿಯಲು ಬದ್ಧರು; ಇದ ಕಾಪಾಡಲು ಮಡಿಯಲು ಸಿದ್ಧರು' ಎಂಬ ವೀರ ಪ್ರತಿಜ್ಞೆಯನ್ನು ಮಾಡಿದ ಕನ್ನಡಬಂಟರ ಪಡೆಯು ಕೂಡಲೆ ಏರ್ಪಡಬೇಕು.

ಹಿಂದೂಕುಲದ ಉದ್ಧಾರಕ್ಕಾಗಿ ಶ್ರೀವಿದ್ಯಾರಣ್ಯರು ಚಿನ್ನದ ಮಳೆ ಕರೆಯಿಸಿದರಂತೆ. ಭುವನೇಶ್ವರಿಯ ಕರ್ನಾಟಕವು ಇಂದು ಬರಡು-ಬಂಜೆಯಾಗಿದೆಯೆ? ಈ ಶುಭಮುಹೂರ್ತದಲ್ಲಿ—ಏಕೀಕರಣದ ಫಲವು ಕಣ್ಣಮುಂದೆ ತೂಗಾಡುತ್ತಿರುವಾಗ—ಕನ್ನಡನಾಡಿನ ಸಿರಿವಂತರು ಕೊಡುಗೈಯಿಂದ ನೆರವಾಗಲಾರರೇ? ಆಂಧ್ರರು ೧ ಲಕ್ಷ ಕೂಡಿಸಲಿರುವರು; ನಾವು ಕೂಡಲೆ ೧೦ ಸಹಸ್ರ ಕೂಡಿಸಲಾರೆವೆ? ಈ ಪುಣ್ಯನಿಮಿಷದಲ್ಲಿ ಯಾವನು ಕೊಡುವನೋ ಅವನೇ ಅಮರಕೀರ್ತಿಯುತನಾಗುವನು.

—ಇಲ್ಲಿ ಕೊಡುವಂಥವನು ಅಲ್ಲಿ ಪಡೆವ!
ಚೊಕ್ಕರಳು ತಾನಳಿದು ಚಿಕ್ಕೆಯಾಗುಳಿಯುವುದು!
ಇಕ್ಕು ಜೀವದ ಬಿಕ್ಕೆ!—ಬಂದ ದೇವ!

ಇದು ನಮ್ಮ ನಾಡಿನ ವಿನೋಚನೆಯ ನಿಮಿಷ. ಮಹಾದೇವನೇ ಕೈಯೊಡ್ಡಿದ್ದಾನೆ. ನಮ್ಮ ಸರ್ವಸ್ವವನ್ನೆ ಹಾಕೋಣ. ನಮ್ಮನ್ನೆ ಅರ್ಪಿಸೋಣ.

ಇಂದ್ರನ ವಜ್ರದ ಹಿಂದೆ ದಧೀಚಿಋಷಿಯ ಆತ್ಮದಾನವಿದೆ. ಏಕೀಕರಣವು ಪ್ರಾಪ್ತವಾಗಬೇಕಾದರೆ ಪ್ರಬಲ ಸ್ವಾರ್ಥತ್ಯಾಗ ಬೇಕು, ಪ್ರಖರ ಆಂದೋಲನ ಬೇಕು. ಸತ್ಯಾಗ್ರಹದ ವರೆಗೆ ಈಗಿನ ಮಂತ್ರಿಮಂಡಲವು ಹೋಗಗೊಡಲಿಕ್ಕಿಲ್ಲವೆಂದು ನಮ್ಮ ಭಾವನೆ; ಹೋಗಗೊಟ್ಟರೆ ಅದಕ್ಕೂ ಸಿದ್ಧರಾಗಿರಬೇಕು.

ಸತ್ಯಾಗ್ರಹವು ಕೊನೆಯ ಅಸ್ತ್ರವು—ನಮ್ಮ ಆಂದೋಲನದ ಕೊನೆಯ ಹೆಜ್ಜೆಯು. ಸತ್ಯಾಗ್ರಹದ ಸಿದ್ಧತೆಯೆಂದರೆ, ಏಕೀಕರಣ ಆಂದೋಲನವು ಪರಿಪಕ್ವತೆಯನ್ನು ಮುಟ್ಟಿದ ಹಾಗೆ, ಆದರ ಸಂಘಟನೆಯು ಪರಿಪೂರ್ತತೆಯನ್ನು ಹೊಂದಿದ ಹಾಗೆ, ಮುಂಚಿನ ಶಾಸನಬದ್ಧ ಚಟುವಟಿಕೆಯ ಭಾಗವೆಲ್ಲವೂ ಮುಗಿದ ಹಾಗೆ. ಆ ಪೂರ್ವಭಾಗವೇ ಇನ್ನೂ ಮುಗಿದಿಲ್ಲವೆಂದು ನಮ್ಮ ಅಭಿಪ್ರಾಯ.

ಆಂಧ್ರರ ೧/೧೦ ಪ್ರಯತ್ನವನ್ನೆ ಈ ಕ್ಷಣಕ್ಕೆ ಮುಂದಿಟ್ಟುಕೊಳ್ಳೋಣ: ೧೦,೦೦೦ ರೂಪಾಯಿ, ೧,೦೦೦ ಏಕೀಕರಣ

ಭಟರು. ಪ್ರಾಂತದ ತುಂಬೆಲ್ಲಾ—ಹಳ್ಳಿಹಳ್ಳಿಯ ವರೆಗೂ ಏಕೀಕರಣ ಸಂದೇಶದ ವಿದ್ಯುತ್ಸಂಚಾರವಾಗುವಂತೆ ಪ್ರಚಾರಕಾರ್ಯವನ್ನು ಕೈಕೊಳ್ಳೋಣ. ಮಂತ್ರಿಗಳು ಮತ್ತೆ ಮತ್ತೆ ಬೆದರುಗುಂಬದೋಪಾದಿಯಲ್ಲಿ ನಿಲ್ಲಿಸುವ ಆರ್ಥಿಕ ವಿಚಾರಣೆಯನ್ನು ನಾವೇ ಕೈಕೊಳ್ಳೋಣ. ಕೊರತೆ ಕಂಡು ಬರಲಾರದು, ಬಂದರೂ ತೀರ ಕಿರಿದಾಗಿ ಕಂಡುಬರ ಬಹುದು,— ಕೊರತೆಯಾಗುವುದೆಂದೇ ತಿಳಿದುಬಂದರೂ, ದಿವಂಗತ ತಿಲಕರೊಂದಿಗೆ ನಾವೂ ಹೇಳಬಲ್ಲೆವು—" ಏಕೀ ಕರಣವು ನಮ್ಮ ಜನ್ಮಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆವು. "

ಕೊನೆಯದಾದರೂ ಮಹತ್ವದ ಸಂಗತಿಯೆಂದರೆ, 'ಶಿಸ್ತು' ಬೇಕು. ನಮ್ಮ ಆಂದೋಲನಕ್ಕೆ ಅಪಪ್ರಚಾರದ ಕಲಂಕವು ತಟ್ಟದಿರಬೇಕು. ಹೆಸರುಗೊಂಡು ಮಾತನಾಡುವುದನ್ನು ಬಿಡಬೇಕು. ಇಂತಹ ಸಂದುಕಟ್ಟಿನಲ್ಲಿ ಗಾಂಧಿಯವರ ನಿಗ್ರಹಬೋಧೆಯನ್ನು ನಾವು ಲಾಲಿಸಲೇ ಬೇಕು. ತುದಿ ನಾಲಿಗೆಯ ವರೆಗೆ ಬರುವ ಮಾತುಗಳನ್ನು ಕಷ್ಟದಿಂದ ಲಾದರೂ ನುಂಗಬೇಕು. ಬಿರುನುಡಿಗಳಿಂದ ಗೆಳೆಯರೂ ಹಗೆಗಳಾಗುವ ಸಂಭವವಿದೆ. ನಾವು ವೈರಿಗಳನ್ನೂ ಮಿತ್ರ ರನ್ನಾಗಿ ಮಾಡಿಕೊಳ್ಳಬೇಕಾಗಿದೆ ಈಗ. ನಮ್ಮ ಸಂಯಮ ದಿಂದ ಹುಟ್ಟುವ ಶಕ್ತಿಯನ್ನೆ ನಮ್ಮ ಸಂಘಟನೆಯನ್ನು ಬಲಪಡಿಸಲು ವಿನಿಯೋಗಿಸಬೇಕು.

ನಾಡಿಗೆ ನಾಡೇ ದಿಗ್ಗೆಂದು ಎದ್ದೇಳುವಾಗ, ಯಾವ ಶಕ್ತಿಯೂ ತಡೆಗಟ್ಟಲಾರದು.

ಮುಸ್ಲಿಂ ಲೀಗಿನ ರಾಜಕೀಯ ತತ್ವಜ್ಞಾನ

ಫೆಬ್ರುವರಿಯ ಕೊನೆಕೊನೆಯ ಭಾಗದಲ್ಲಿ ಮುಂಬಯಿ ಪ್ರಾಂತದ ಮುಸ್ಲಿಂ ಲೀಗಿನ ಪರಿಷತ್ತು ಅಹಮ್ಮದಾಬಾದ ದಲ್ಲಿ ಸೇರಿತ್ತು. ಮುಂಬಯಿ ಅಸೆಂಬ್ಲಿಯ ನಿವೃತ್ತ ಅಧ್ಯಕ್ಷರೂ ಈಗ ಮುಂಬಯಿ ಅಸೆಂಬ್ಲಿಯ ಮುಸ್ಲಿಂ ಲೀಗ್ ಸದಸ್ಯರ ಮುಂದಾಳುಗಳೂ ಆದ ಸರ್. ಅಲಿ ಮಹಮ್ಮದ ದೆಹಲವಿಯವರು ಅಧ್ಯಕ್ಷರಾಗಿದ್ದರು. ಈ ಮುಂಚಿನ ಸಂಚಿಕೆಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಸಂಯುಕ್ತ ಮತ ಪಾರ ಸಂಘವನ್ನು ಏರ್ಪಡಿಸುವುದರ ಕುರಿತು ಮುಂಬಯಿ ಮಂತ್ರಿಮಂಡಲವು ವಹಿಸಿದ ಮೀನಮೇಷವೃತ್ತಿಯನ್ನು ವಿವರಿಸಿದ್ದೇವೆ. ಸರಕಾರದ ಅತಿಸೌಮ್ಯ ಧೋರಣೆಯೂ ಸರ್ ದೆಹಲವಿಯವರಿಗೆ ಪಿತ್ತ ಪ್ರಕ್ಷೋಭೆಯನ್ನು ಮಾಡಿರ ಬೇಕು. ಪರಿಷತ್ತಿನಲ್ಲಿ ತಮ್ಮ ಪಕ್ಷದ ರಾಜಕೀ[illegible] ಕೆಲ ಸೂತ್ರಗಳನ್ನು ಇಂತು ವಿವರಿಸಿದರು:—

ನಂ. ೧. " ಮುಸ್ಲಿಂ ಜನತೆಯನ್ನು 'ಅಲ್ಪ[illegible] ಎಂದು ಕರೆಯುವುದೊಂದು ಪ್ರಮಾದ[illegible] ಸಂಸ್ಕೃತಿ — ಸಾಮಾಜಿಕ ಸಂಘಟನೆ —[illegible] ಧೋರಣೆಗಳುಳ್ಳ ೯ ಕೋಟಿ ಜನಸಂಖ್ಯೆಗೆ 'ಅಲ್ಪ[illegible] ಎಂದು ಹೆಸರಿಟ್ಟು ಹಚ್ಚಿಬಿಡುವುದು ಹುಚ್ಚು[illegible] ಒಂದು ಜಾತಿ-ಒಂದು ವರ್ಗದಲ್ಲಿ ಒಳಪಡಲಾರ[illegible] ಘಟಕಗಳನ್ನು ಒಂದು ವಂಶ-ಒಂದು ಧರ್ಮ[illegible] ಸಂಬೋಧಿಸಿ ಅವರಿಗೆ 'ಬಹುಸಂಖ್ಯಾಕ'ರ [illegible] ವುದೂ ಅಂತಹದೇ ಒಂದು ಮರುಳುತನ."

(ಸರ್ ದೆಹಲವಿಯವರು 'ಬಹುಸಂಖ್ಯಾಕ[illegible] ನಲ್ಲಿ 'ಹಿಂದು'ಗಳನ್ನೇ ನಿರ್ದೇಶಿಸಿದ್ದಾರೆಂದು [illegible] ಬೇಕಾಗಿಲ್ಲ. ಮುಸಲ್ಮಾನರು ಅಲ್ಪಸಂಖ್ಯಾ[illegible] ಅವರಿಗೆ ವಿಶೇಷ ರಕ್ಷಣೆಗಳೇಕೆ? ಈಗಿದ್ದ[illegible] ಸಾಲವೆಂದು ಸರ್. ಸಾಹೇಬರು ಹೇಳುತ್ತಾರೆ!)

ನಂ. ೨. " ಬಹುಸಂಖ್ಯ ಕಾಂಗ್ರೆಸ್ ಪ[illegible] 'ಇನ್ನೇನು, ಯುದ್ಧ ಗೆದ್ದೆವು. ಇನ್ನು ಶಸ್ತ್ರ[illegible] ಗಿಡಲು ಅಡ್ಡಿಯಿಲ್ಲ' ಎಂಬ ಆತ್ಮಸಂತೃಪ್ತಿ[illegible] ಬಂದಂತೆ ಕಾಣುತ್ತಿದೆ. ಪೂರ್ಣ-ಸರ್ವಾಂಗೀ[illegible] ತ್ರ್ಯವೆ ತಮ್ಮ ಗುರಿಯೆಂದು ಹಿಂದುಸ್ತಾನದ ಮು[illegible] ನಿರ್ಧರಿಸಿದ್ದಾರೆ. ತಮ್ಮ ಜತೆಗಾರರು ಹಿಂದು[illegible] ಬಂದರೆ ಒಬ್ಬೊಂಟಿಗರಾಗಿಯಾದರೂ ಅವರ [illegible] ಮತ್ತು ತಮ್ಮ ಅಲ್ಪಸಂತುಷ್ಟ ಬಾಂಧವರಿಗೆ ಸ[illegible] ವನ್ನು ತಂದುಕೊಡುವರು. ಮುಸಲ್ಮಾನರಿಗೆ [illegible] ನದ ಸ್ವಾತಂತ್ರ್ಯವೆಂದರೆ 'ಇಸ್ಲಾಂ'ದ ಸ್ವ[illegible] ಆಗಿದೆ. ಹಿಂದುಸ್ತಾನದ ಮೇರೆಗಳ ಹೊರಗ[illegible] ಧರ್ಮಬಾಂಧವರ ದುಃಖಗಳನ್ನು ನಾವು ಉಪೇಕ್ಷ[illegible] ನಮ್ಮ ಹೋರಾಟವು ಕೇವಲ ಸ್ಥಳೀಯವಲ್ಲ. [illegible] ದಾಹವನ್ನು—ಅದು ಇಂಗ್ಲಿಷ್-ಫ್ರೆಂಚ್-[illegible] ರದೇ ಆಗಲಿ—ಹಿಂದಕ್ಕೆ ಸರಿಸುವುದೇ [illegible] ಅದರ ಪಾಶಗಳಿಂದ ಏಶಿಯ-ಆಫ್ರಿಕಗಳ 'ಜನ[illegible] ಬಿಡಿಸುವುದೇ ನಮ್ಮ ಸಂಕಲ್ಪ." -

(ಸರ್ ಅಲಿ ಮಹಮ್ಮದ ದೆಹಲವಿ! ಹುರ್ರಾSS !!)

ನ್ಯಾಯಮಂದಿರಗಳ ವಿಡಂಬನೆ

ಒಂದು ಕೈಯಲ್ಲಿ ತಕ್ಕಡಿ, ಇನ್ನೊಂದು ಕೈಯಲ್ಲಿ ಖಡ್ಗ—ಈ ಬಗೆಯಾಗಿ ನ್ಯಾಯದೇವತೆಯನ್ನು ಚಿತ್ರಿಸಿದ್ದಾರೆ. ಅವಳು ಅಷ್ಟು ನಿಷ್ಠುರಳು. ದಾಕ್ಷಿಣ್ಯ-ಕಾರುಣ್ಯಗಳನ್ನು ಅವಳು ಅರಿಯಳು. ಎಂತಲೆ ಅವಳ ಪ್ರತಿನಿಧಿಗಳಾದ ನ್ಯಾಯಾಧೀಶರನ್ನು ಎಲ್ಲರೂ ಅಷ್ಟು ಪರಿಯಾಗಿ ಗೌರವಿಸುವುದು.

ಕಾಂಗ್ರೆಸ್ ಮಂತ್ರಿಮಂಡಲಗಳ ಹಲವು ಕೃತ್ಯಗಳನ್ನು ವಿರೋಧಿ ಪಕ್ಷದವರು ಕಟುವಾಗಿ ಟೀಕಿಸಿದ್ದಾರೆ. ನಾವು ಆಕಡೆ — ಅವುಗಳ ಅಪ್ರಾಧಾನ್ಯವನ್ನರಿತು — ಗಮನ ಕೊಟ್ಟಿಲ್ಲ. ಆದರೆ ಈಚೆಗೆ ಮುಂಬಯಿ-ಮಧ್ಯಪ್ರಾಂತಗಳ ಮಂತ್ರಿಗಳಿಬ್ಬರು, ತಮ್ಮ ಸ್ವಂತದ ಅಧಿಕಾರವನ್ನುಪಯೋಗಿಸಿ ಘೋರಾಪರಾಧಮಾಡಿದ ಕೈದಿಗಳನ್ನು ಬಿಡುಗಡೆ ಮಾಡಿದುದು ತುಂಬಾ ನಿಷೇಧಾರ್ಹವಾದುದರಿಂದ, ನಾವೂ ನಮ್ಮ ಖಂಡನೆಯ ಧ್ವನಿಯನ್ನು ಕೂಡಿಸಬೇಕಾಗಿ ಬಂದಿದೆ.

ಮುಂಬಯಿಯ ಶ್ರೀ. ಮುನ್ಶಿಯವರು ಹೈಕೋರ್ಟಿನಿಂದ ಜೂಜಾಟಕ್ಕಾಗಿ ೧೦೦೦ ರೂ. ದಂಡವನ್ನೂ ೬ ತಿಂಗಳ ಸಶ್ರಮ ಶಿಕ್ಷೆಯನ್ನೂ ಹೊಂದಿದ ಇಬ್ಬರು ಶ್ರೀಮಂತ ಅಪರಾಧಿಗಳನ್ನು ೧೫ ದಿನಗಳವರೆಗೆ, ಅವರ ಖಾಸಗಿ ಕೆಲಸಗಳಸಲುವಾಗಿ ಬಿಟ್ಟುಕೊಟ್ಟರು. ಮಧ್ಯಪ್ರಾಂತದ ಶ್ರೀ. ಶರೀಫರು ಇದಕ್ಕೂ ಘೋರತರವಾದ ಕಾರ್ಯವನ್ನು ಮಾಡಿದರು. ಝಾಫರ ಹುಸೇನನೆಂಬ 'ಮುಮ್ಮಡಿ ಪದವೀಧರನು' (Triple Graduate), 'ಖಾನ್‌ಸಾಹೇಬ' ಬಿರುದಾಂಕಿತನು, ಶಾಲಾ-ಇನ್ಸ್‌ಪೆಕ್ಟರನು, ಒಬ್ಬ ನಿಮ್ನವರ್ಗದ ಬಾಲಿಕೆಯ ಮೇಲೆ ಬಲಾತ್ಕಾರ ಮಾಡಿದ ಹೀನ ಅಪರಾಧಕ್ಕಾಗಿ ಅವನಿಗೆ ೩ ವರ್ಷಗಳ ಸಶ್ರಮ ಶಿಕ್ಷೆಯನ್ನೂ ಭಾರಿ ದಂಡವನ್ನೂ ವಿಧಿಸಲಾಗಿತ್ತು. ಯುಸಫ್ ಶರೀಫ ಮಂತ್ರಿವರ್ಯರು ಮಂತ್ರಿಮಂಡಲದ ಯಾವ ಜತೆಗಾರರನ್ನೂ—ಮಂತ್ರಿವರ್ಯ ಖರೆಯವರನ್ನೂ—ವಿಚಾರಿಸದೆ, ಅಪರಾಧಿಯನ್ನು ಬಿಡುಗಡೆಗೊಳಿಸಿದರು. ಕೂಡಲೆ ಆತನು ಮಧ್ಯಪ್ರಾಂತದ ಸೀಮೆಯನ್ನು ದಾಟಿ, ಭೋಪಾಳ ಸಂಸ್ಥಾನವನ್ನು ಸೇರಿ ಅಲ್ಲಿ ಶಿಕ್ಷಣಾಧಿಕಾರಿಯಾಗಿ ನೇಮಕ ಕೂಡ ಹೊಂದಿದನಂತೆ!

ಈ ವಿಷಯಕ್ಕೆ ಜಾತೀಯ ಸ್ವರೂಪದ ಬಣ್ಣ ಬಳಿವುದು ಅಸಾಧ್ಯವಲ್ಲದಿದ್ದರೂ, ಶುದ್ಧ ಮಾನವೀಯ ದೃಷ್ಟಿಯಿಂದಲೇ ನಾವದನ್ನು ಕಾಣುತ್ತೇವೆ. ಇಬ್ಬರು ಮಂತ್ರಿಗಳೂ ಮುಖ್ಯಮಂತ್ರಿಗಳನ್ನು ವಿಚಾರಿಸಲಿಲ್ಲವೆಂಬುದು ವಿಚಾರಣೀಯವಾದ ಸಂಗತಿ. ಅದರಲ್ಲಿ ಎರಡನೆಯವರ ಧೈರ್ಯವಂತೂ ಪರಮಾವಧಿಯದು. ನಾಗಪುರದ ಮಹಿಳಾಲೋಕದಲ್ಲೆಲ್ಲ ಅದ್ಭುತ ಕಳವಳವನ್ನೂ ಕ್ಷೋಭೆಯನ್ನೂ ಇದು ಹುಟ್ಟಿಸಿದ್ದರೆ ಸೋಜಿಗವಿಲ್ಲ. ಮಂತ್ರಿವರ್ಯ ಖರೆಯವರು ಸಾರ್ವಜನಿಕರಿಗೆ 'ಶರೀಫರನ್ನು ಕ್ಷಮಿಸಬೇಕಾ'ಗಿ ಕೇಳಿಕೊಂಡರು. ಕೆಲವು ಮಾತುಗಳನ್ನು ಕ್ಷಮಿಸಲು ಬರುತ್ತದೆ; ಕೆಲವು ಕ್ಷಮೆಯ ಸೀಮೆಯನ್ನೂ ದಾಟಿರುತ್ತವೆ. ಶರೀಫರ ರಾಜಿನಾಮೆಯೆ ಪ್ರಸ್ತುತವಾದುದು.

ಭಾಪು ಸರ್ ಸಿಕಂದರ!

ಶಾಹಿದಗಂಜ ಮಸೀದೆಯ ಮೇಲೆ ಮಹಮ್ಮದೀಯರ ಯಾವ ಹಕ್ಕೂ ಉಳಿದಿಲ್ಲವೆಂಬ ಪಂಜಾಬ ಹೈಕೋರ್ಟಿನ ವಜ್ರಲೇಪಸಮ ನಿರ್ಣಯಕ್ಕೆ ಆರದಾಳ ಹಚ್ಚುವ ಉದ್ದೇಶದಿಂದ ಪಂಜಾಬ ಅಸೆಂಬ್ಲಿಯಲ್ಲಿ ಬರ್ಕತ ಅಲಿಯವರು ಒಂದು ಬಿಲ್ಲನ್ನು ತರಲಿದ್ದರು. ಮುಖ್ಯಸಚಿವ ಸರ್ ಸಿಕಂದರ ಹಯಾತಖಾನರು ತಮ್ಮ ಸ್ಥಾನಮಹತ್ವವನ್ನರಿತು, ಗವರ್ನರರಿಗೆ ಅದಕ್ಕೆ ಸಮ್ಮತಿಕೊಡಬಾರದೆಂದು ಧೀರತನದಿಂದ ಸಲಹೆಯಿತ್ತು, ಹಿಂದೂ-ಶೀಖ-ಮುಸ್ಲಿಂ ತೊಡಕಿನ ಬಿಡುವಳಿಗೆ ದಾರಿತೋರಿದ್ದಾರೆ. 'ಇಂದು ಶಾಹಿದಗಂಜವು ಮುಸಲ್ಮಾನರಿಗೆ ಮರಳಿ ದೊರತರೆ, ಒಂದು ಕಾಲಕ್ಕೆ ವಿಶ್ವೇಶ್ವರ ದೇವಾಲಯದ ಸ್ಥಾನವಾಗಿದ್ದ ಕಾಶಿಯ ಮಸೀದೆಯ ಮೇಲೆ—ಹಾಗೆಯೆ ಬೇರೆ ಕಡೆ—ಹಿಂದುಗಳು ಹಕ್ಕು ಹೇಳದೆ ಬಿಡರೆ?' ಎಂದು ಅವರು ಕೇಳಿದರು.

ಕಾಂಗ್ರೆಸ್-ಹಿಂದೂ ಮಹಾಸಭೆ-ಶೀಖ ಮುಖಂಡರು— ಎಲ್ಲರೂ ಇದನ್ನು ಪ್ರಶಂಸಿಸಿರುವರು. ಹಿಂದೂ ಮಹಾಸಭೆಯ ಅಧ್ಯಕ್ಷರಾದ ಬ್ಯಾ. ಸಾವರಕರರು ಸರ್ ಸಿಕಂದರರಿಗೆ ಬರೆದ ಒಂದು ಪತ್ರದಲ್ಲಿ, "ಬಹುಸಂಖ್ಯಾಕರ ನ್ಯಾಯ್ಯ ಮತ್ತು ಸಮಾನತೆಯ ಹಕ್ಕುಗಳ ಮೇಲೆ ಆಕ್ರಮಣವಾಗದಂತೆ ಅಲ್ಪಸಂಖ್ಯಾಕರ ಹಿತಸಂಬಂಧಗಳನ್ನು ಸಂರಕ್ಷಿಸಬೇಕೆಂದು ತಾವು ಹೇಳಿದ ತಿಳಿವಳಿಕೆಯ ತತ್ವವು ಮುತ್ತಿನಂತಹದಾಗಿದೆ.... 'ರಾಷ್ಟ್ರೀಯ ಐಕ್ಯ'ದ ಮಂದಿರದಲ್ಲಿ 'ಬಿಳಿಚೆಕ್ಕು'ಗಳ (ಅನಿರ್ಬಂಧ ಶರಣಾಗತಿಯ) ಧೂಪದೀಪಗಳನ್ನು ಬೆಳಗುವುದಕ್ಕಿಂತಲೂ, ರಾಷ್ಟ್ರೀಯ ಮತ್ತು ಸಂಕುಚಿತ ದೃಷ್ಟಿಯ ಆಕ್ರಮಣವನ್ನು ಬಂಟತನದಿಂದ ಅಲ್ಲಿಂದಲ್ಲಿಯೆ ಬಗ್ಗುಬಡಿಯುವ ಒಂದೆ ಒಂದು ಪ್ರತ್ಯಕ್ಷ ಉದಾಹರಣೆಯು, ಪರಸ್ಪರರ ವಿಶ್ವಾಸವರ್ಧನೆಗೆ ಖಂಡಿತ ಸಹಕಾರಿಯಾಗುತ್ತದೆ" ಎಂದಿರುವರು.

ಜಾತೀಯ ದೊಂಬೆಗಳು

ಮೊಹರಂ-ಹೋಳೀಹುಣ್ಣಿವೆಗಳು ಕೂಡಿ ಬಂದುದರಿಂದ ಹಿಂದುಸ್ತಾನದಲ್ಲಿ (ವಿಶೇಷತಃ ಮಧ್ಯ-ಉತ್ತರ ಹಿಂದುಸ್ತಾನದಲ್ಲಿ) ಜಾತೀಯ ದೊಂಬೆಗಳಿಗೆ ಸುಗ್ಗಿಯೆ ಬಂದಿದೆ.

ಒಂದು ಕಾಲಕ್ಕೆ ಕಾಂಗ್ರೆಸಿನವರು ಪೋಲೀಸ-ಸೈನ್ಯ ಖಾತೆಗಳ ಸಹಾಯವನ್ನು ನಿಷೇಧಿಸುತ್ತಿದ್ದರು; ಅವರೇ ಅದನ್ನು ಮಿತಿಮೀರಿ ಉಪಯೋಗಿಸಿಯೂ ದೊಂಬೆಗಳನ್ನು ಹತೋಟಿಗೆ ತರದೆ ಹೋದರು. ಜಾತೀಯ ವೈಷಮ್ಯವು ನಮ್ಮ ಜನಜೀವನದಲ್ಲಿ ಅಷ್ಟು ಆಳವಾಗಿ ಬೇರುಬಿಟ್ಟಿದೆ.

ಅಲಹಾಬಾದದಲ್ಲಿಯ ಹಿಂದೂ ವಸತಿಗಳ ಮೇಲೆ ದೊಂಬೆಗಾರರು ಸಂಘಟಿತವಾಗಿ ದಾಳಿಮಾಡಿದರು; ತೆರೆಮರೆಯಲ್ಲಿ ಅತ್ಯಾಚಾರಿಗಳ ಪ್ರಬಲ ಸಂಘಟನೆಯೊಂದಿರಬೇಕೆಂಬ ಅನುಮಾನಕ್ಕೆ ಇದರಿಂದ ಬಲಬರುತ್ತಿದೆ. ಜಬ್ಬಲಪುರದಲ್ಲಿ ದೊಂಬೆಯಾಗುವುದಕ್ಕೆ ೧೫ ದಿನ ಮುಂಚಿತ ಮಧ್ಯಪ್ರಾಂತದ ಪತ್ರಿಕೆಗಳು ಭಯಸೂಚನೆಯನ್ನು ಕೊಟ್ಟಿದ್ದರೂ ಸರಕಾರವು ಅತ್ತಕಡೆ ಗಮನಕೊಡಲಿಲ್ಲ.

ಧರ್ಮಸ್ಥಾನಗಳಲ್ಲಿ ದೊಡ್ಡ ಜನಸಮೂಹಗಳು ಪ್ರಾರ್ಥನೆಯ ನಿಮಿತ್ತದಿಂದ ಕೂಡಿದಾಗ, ತಲೆತಿರುಕ ಉಪದೇಶಕರು ಅವರ ತಲೆಕೆಡಿಸುತ್ತಿರುವುದು ಸಂಭವನೀಯವಿದೆ. ಸರಕಾರವು ಈ ಧಾರ್ಮಿಕ ಸಮ್ಮೇಲನಗಳ ಹಿಂಸ್ರ ಉದ್ದೇಶವನ್ನು ಅರಿತುಕೊಂಡು ತಕ್ಕ ವ್ಯವಸ್ಥೆಯನ್ನು ಸಕಾಲಕ್ಕೆ ಮಾಡುವುದುಚಿತ.

ತಿರುವಾಂಕೂರಿನ ತರುವಾಯ ಇಂದೂರು

ತಿರುವಾಂಕೂರಿನ ಮಹಾರಾಜರ ತರುವಾಯ ಇಂದೂರಿನ ಮಹಾರಾಜರು ತಮ್ಮ ಸಂಸ್ಥಾನದ ದೇವಾಲಯಗಳನ್ನು ಹರಿಜನರಿಗೂ ತೆರೆದಿಡುವ ಪ್ರಕಟನೆ ಹೊರಡಿಸಿದ್ದಾರೆ. ಅವರಿಗೆ ನಮ್ಮ ಅಂತಃಕರಣಪೂರ್ವಕವಾದ ಧನ್ಯವಾದಗಳು. ದೇವಾಲಯಪ್ರವೇಶಕ್ಕೆ ದಲಿತವರ್ಗಗಳಿಗೆ ಆಸ್ಪದ ಕೊಡುವುದು, ಅವರ ಮೇಲೆ ಉಪಕಾರ ಮಾಡಿದಂತಲ್ಲ. ಅದೊಂದು ಅನಿವಾರ್ಯ ಮಾನವೀಯ ಕರ್ತವ್ಯವು. ಹಿಂದುಳಿದುವೆನಿಸಿದ ಸಂಸ್ಥಾನಗಳು ಮೇಲ್ಪಂಕ್ತಿ ಹಾಕಿಕೊಟ್ಟ ಮೇಲೂ ಮಾದರಿ ಮೈಸೂರು ಮುಂದ[illegible]ದೇಕೆ?

ಕೂಲಿಕಾರರ ರಾಜ್ಯದ ಕೊಲೆಗಡಕ

ಕೂಲಿಕಾರರ ರಾಜ್ಯದ ಕರ್ಣಧಾರ ಸ್ಟಾಲಿನ[illegible] ಕೊಲೆಗಡಕನಾಗಿದ್ದಾನೆ! ಒಂದೊಂದಾಗಿ ರಶಿಯ[illegible] ಕಾರಣೀಭೂತರಾದ ವೀರಭಟರನ್ನು ಯಮ[illegible] ತನ್ನ ಪಟ್ಟವನ್ನು ಗಟ್ಟಿಗೊಳಿಸುತ್ತಿದ್ದಾನೆ!

ರಾಕೊವ್‌ಸ್ಕಿ, ರೈಕೊಫ್ ಮತ್ತು ಬು[illegible]ವರು ಅನುಕ್ರಮವಾಗಿ ೫೦, ೪೦, ೩೦ ವರ್ಷ[illegible]ಯದ ಒಳಗೂ ಹೊರಗೂ ಕ್ರಾಂತಿಗಾಗಿ ಕಾರ್ಯ[illegible] ಮಾಡುತ್ತ ಕಳೆದವರು. ಇವರೂ ಇನ್ನುಳಿದ[illegible] 'ಕ್ರಾಂತಿವಿರೋಧಕ, ಫಾಸಿಸ್ಟ್-ರಾಷ್ಟ್ರ-[illegible] ಟ್ರಾಟ್‌ಸ್ಕಿ ಪುರಸ್ಕೃತ' ಚಟುವಟಿಕೆಗಳಲ್ಲಿ [illegible] ಆರೋಪದಿಂದ ಮೊನ್ನೆಮೊನ್ನೆ ಕೊಲ್ಲಲ್ಪಟ್ಟ[illegible] ಮೂವರು ದೀರ್ಘಾವಧಿ ಕಾರಾಗೃಹವಾಸದ [illegible] ಮಾಡಲ್ಪಟ್ಟರು.

ಈಗಲಾದರೂ ಸ್ಟಾಲಿನ್ನನು ಸುರಕ್ಷಿತನಾ[illegible]ತ್ಕಾರವೆ ಪ್ರಾಣವಾಗಿರುವ ರಾಜ್ಯಪದ್ಧತಿಯು [illegible] ಬಾಳಬಲ್ಲದು? 'ಹಿಂದೂ' ಪತ್ರಿಕೆಗೆ ಬರೆದ [illegible] ಲೇಖನದಲ್ಲಿ ಟ್ರಾಟ್‌ಸ್ಕಿಯು ಈ ರೀತಿ ಇದರ [illegible]ಯನ್ನು ಕೊಡುತ್ತಾನೆ:—

"ಇಂತಹ ಒಂದೊಂದು ವಿಚಾರಣೆಯಿಂದಲೂ, [illegible]ಯಲ್ಲಿ ಮಾತ್ರವಲ್ಲ—ಆಳರಸರಲ್ಲಿಯೂ, ಹೆಚ್ಚಿನ ಸಂ[illegible]ತ್ತದೆ. ಈ ಅಸಂತೋಷವನ್ನು ಬಗ್ಗುಬಡಿಯಲು [illegible] ವಿಚಾರಣೆಯ ನಾಟಕವನ್ನು ಹೂಡಬೇಕಾಗುತ್ತದೆ. [illegible]ಟದ ಹಿಂದೆ ಒಂದು ಶಕ್ತಿಯು ರೂಪುಗೊಂಡು [illegible]ರುವುದು ಕಂಡುಬರುತ್ತಿದೆ: ಅದೆಂದರೆ, ಹೆಚ್ಚಿನ ಸ್ವಾ[illegible] ಸಂಸ್ಕೃತಿವಿಕಾಸಕ್ಕೆ ಹೆಚ್ಚು ಅನುಕೂಲವಾದ, [illegible] ಪೂರ್ಣವಾದ ಜೀವನದ ಹಾತೊರೆಯುವಿಕೆ. [illegible] ಜನತೆಯ ನಡುವಿನ ತಿಕ್ಕಾಟವು ಹೆಚ್ಚು ಹೆಚ್ಚು [illegible]ತ್ತಿದೆ. ಈ ಕದನದಲ್ಲಿ ಜನತೆಗೇ ಜಯವು ಸಿದ್ಧ[illegible] ವಿಚಾರಣೆ ಆಳರಸರ ಮರಣವೇದನೆಗಳ ಸೂಚನೆ[illegible] ಹಾಸವು ನಿಷ್ಕರುಣವಾಗಿ ಸ್ಟಾಲಿನನನ್ನು ಸವರಿಬಿಡು[illegible]

ನಮ್ಮ ಮಾತು

ಈ ಸಂಚಿಕೆ

ಕಳೆದ ಕೆಲ ಸಂಚಿಕೆಗಳಲ್ಲಿ ಮಸುಮಸುಕಾಗಿ ಕಾಣುತ್ತಲೂ ಹೋದ ಸಂಚಿಕೆಯಲ್ಲಿ ಸ್ಪಷ್ಟವಾಗಿ ಸೂಚಿತವಾಗಿಯೂ ಇದ್ದ, ನಾವು ಬಯಸಿದ ಬದಲಾವಣೆಯನ್ನು ಈ ಸಂಚಿಕೆಯಲ್ಲಿ ಒಂದು ಸ್ಥಿರತೆಗೆ ತರಲು ಪ್ರಯತ್ನಿಸಿದ್ದೇವೆ. ವಾಚಕರು ಅಲ್ಲಲ್ಲಿಯ ಪುಟಗಳನ್ನು ತಿರುವಿ ಹಾಕಿದರೂ ಇದನ್ನು ಮನಗಾಣದಿರರೆಂದು ನಂಬಿದ್ದೇವೆ.

'ದಿನದಿನಕ್ಕೂ ಮುಂದುವರಿಯುತ್ತಿರುವ ಜಗತ್ತಿನ ನಾಡಿಯನ್ನು ಕಂಡುಹಿಡಿದು, ಆ ಸ್ಪಂದನವನ್ನು ವಿವಿಧ ಲೇಖನಾದಿಗಳ ಮೂಲಕ ಜ.ಕ.ದ ವಾಚಕರಿಗೆ ಅರುಹುಲಿತ್ತಿಸವುದು ನಮ್ಮ ಸಂಪಾದಕೀಯ ನೀತಿಯ ಸೂತ್ರವಾಗಿದೆ' ಎಂದು ಈ ಸಂಪುಟದ ಜನವರಿ ಸಂಚಿಕೆಯಲ್ಲಿ ಹೇಳಿದ್ದೆವು. ಗುರಿಯನ್ನು ಕಂಡುಕೊಳ್ಳುವುದು ಸುಲಭ. ಅದನ್ನು ಸಾಧಿಸುವ ಅನುಷ್ಠಾನವನ್ನು ಕೈಕೊಳ್ಳುವುದು ಬಿಗಿಯಾದ ಕೆಲಸ. ಅದಕ್ಕೆ ತಜ್ಞಲೇಖಕರ ನೆರವು ಬೇಕು. ಜ. ಕ. ಕ್ಕೆ ಇದುವರೆಗೆ ಕೈಕೊಟ್ಟ ಲೇಖಕವೃಂದವು ಈ ನಮ್ಮ ಹೊಸ ದೃಷ್ಟಿಕೋನಕ್ಕೆ ಹೊಂದಿಕೊಂಡು ನೆರವಾಗುವುದೆಂದು ನಮಗೆ ಭರವಸೆಯಿದೆ.

ಲೇಖಕರಂತೆ ಪೋಷಕರ ವರ್ಗವೂ ಬೆಳೆಯಬೇಕು. ಸಂಚಿಕೆಯನ್ನು ಹೆಚ್ಚುಹೆಚ್ಚಾಗಿ ಅಂದಗೊಳಿಸುವ ನಮ್ಮ ಕಾರ್ಯಭಾರಕ್ಕೆ ದುಡ್ಡಿನ ನೆರವು ಇನ್ನೂ ಹೆಚ್ಚಾಗಿ ಬೇಕು. ಜ.ಕ.ವು ದಿನದಿನಕ್ಕೂ ಹೆಚ್ಚುಹೆಚ್ಚು ಉಪಯುಕ್ತವೂ ಮನೋರಂಜಕವೂ ಆಗುತ್ತಿರುವುದು ಗೊತ್ತಾದಂತೆ ಜನತೆಯೂ ಧಾರಾಳವಾಗಿ ಸಹಾಯಮಾಡುವುದೆಂಬುದನ್ನು ಸಾವು ಅರಿತಿರುವೆವು.

ಸಹಸಂಪಾದಿಕೆಯರು

ನಮ್ಮ ಧರ್ಮಪತ್ನಿಯವರು ಜ.ಕ.ಕ್ಕೆ ಸಂಬಂಧಿಸಿದ ಪ್ರತಿ ವಿಷಯದಲ್ಲಿಯೂ ನಮಗೆ ನೆರವಾಗುತ್ತಲೇ ಇದ್ದರು. ಇದೀಗ ಅವರ ಮೇಲೆ ಸಂಪಾದಕೀಯ ಕಾರ್ಯಭಾರದ ಅಂಶವನ್ನೂ ಹೊರಿಸಲು ಬಯಸಿದ ಮೇರೆಗೆ, ಅವರದಕ್ಕೆ ಒಪ್ಪಿಕೊಂಡಿದ್ದಾರೆಂದು ತಿಳಿಸಲು ತುಂಬಾ ಸಂತೋಷಿಸುತ್ತೇವೆ. ಅವರ 'ಸಹಕಾರ್ಯ'ವು ವಾಚಕರಿಗೂ ಸುಖಕರವಾದೀತೆಂಬುದರಲ್ಲಿ ಸಂಶಯವಿಲ್ಲ. ಸ್ತ್ರೀಜೀವನಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಅವರ ನೆರವಿನಿಂದ ವಾಚಕರಿಗೆ ಕೊಡಬೇಕೆಂದು ಅಪೇಕ್ಷೆಯಿದೆ.

ಬರಲಿವೆ !

ಯುರೋಪಿನಲ್ಲಿ ನಮ್ಮ ಭಾರತೀಯರು
ಕುಮಾರಿ ಪದ್ಮಾವತಿ, ಡಿ. ಎಸ್. ಎಸ್. (ಲಂಡನ್)

ಯೋಗಿರಾಜ ಶ್ರೀ ಅರವಿಂದರ ದರ್ಶನ
ಭಾರತಸಂಚಾರಿ ಗೋಸಾವಿ

ಹೈದರಾಬಾದಿನಲ್ಲಿ ರಾಜಕೀಯ ಸುಧಾರಣೆಗಳು
'ಹರಟೆಯಮಲ್ಲ', ಹೈದರಾಬಾದ

ಗಿಳಿಯ ಮೀಮಾಂಸೆ
'ಶ್ರೀರಂಗ'

ದೈವಾಧೀನ (ದಿನಚರಿಯ ಪುಟಗಳು)
'ಹುಚ್ಚಣ್ಣ', ಕೊಪ್ಪಳ

ವರಪ್ರದಾನ (ಸಣ್ಣ ಕತೆ)
ಸಾ. ಶ್ಯಾಮಲೆ

ಅಲ್ಲದೆ ಪುಟಪುಟಕ್ಕೂ ಚಿತ್ರವೈಚಿತ್ರ್ಯ ಮತ್ತು ವಿಷಯವೈವಿಧ್ಯ.

ಪತ್ರವ್ಯವಹಾರ

ಧಾರವಾಡ
೧೮—೩—೩೮

'ಜಯಕರ್ನಾಟಕ'ದ ಸಂಪಾದಕ ಮಹಾಶಯರಲ್ಲಿ
ಮಾಡುವ ವಂದನೆಗಳು

ಈ ಮೂಲಕ ಕೆಳಗಿನ ವಿಷಯವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇವೆ.

ಬೆಂಗಳೂರಲ್ಲಿ ಹೊರಡುತ್ತಿರುವ 'ಸುಬೋಧ' ಮಾಸ ಪತ್ರಿಕೆಯ ಇದೇ ವರ್ಷದ ಮಾರ್ಚ ಸಂಚಿಕೆಯಲ್ಲಿ 'ಕರ್ನಾಟಕದ ದೇವಾಲಯಗಳು' ಎಂಬ ಅಂಕಿತದ ಘನವಾದ ಒಂದು ಲೇಖನವು ಪ್ರಕಟವಾಗಿದೆ. ಇದನ್ನು ಬರೆದವರು ಶ್ರೀ. ಸಿ. ಬಿ. ಸೀತಾರಾಂ, ಮೈಸೂರು, ಇವರು. ತಮ್ಮ ಪತ್ರಿಕೆಯ ಜನವರಿ ಸಂಚಿಕೆಯಲ್ಲಿ 'ಬಾದಾಮಿ ಚಾಲುಕ್ಯರ ಕಾಲದ ಕಲಾಜೀವನ' ಎಂಬ ಹೆಸರಿನ ನನ್ನ ಬರೆಹವೊಂದು ಪ್ರಸಿದ್ಧವಾಗಿದೆಯಷ್ಟೆ. ಮೇಲ್ಕಂಡ ಲೇಖನದಲ್ಲಿ ನನ್ನ ಬರೆಹದೊಳಗಿನ ಕೆಲವು ಸಾಲುಗಳು ಇಡಿಗೆ ಇಡಿಯಾಗಿ ಬಂದುದನ್ನು ಕಂಡು ನನಗೆ ಕುತೂಹಲವು ಉಂಟಾಯಿತು. ಹೆಚ್ಚು ಸೂಕ್ಷ್ಮವಾಗಿ ಪರಿಶೀಲಿಸಿ ನೋಡುವಾಗ, ಹೀಗೆ ನನ್ನ ಬರೆಹದೊಳಗಿಂದ ಅಲ್ಲಲ್ಲಿ ಸೇರಿಸಿದ ಸಾಲುಗಳು ಸುಮಾರು ಅರುವತ್ತರಷ್ಟುವೆ ಎಂದು ಕಂಡುಬಂದಿತು. ಈ ಸಾಲುಗಳಿಗೆ ಲೇಖಕರು ಅಲ್ಲಲ್ಲಿ ಆಧಾರಗಳನ್ನು ಕೊಟ್ಟಿರುವರು ಎಂಬುದು ನಿಜ. ಆದರೆ ಭಾಷೆ ಮತ್ತು ಶಬ್ದಯೋಜನೆಯನ್ನು ಪರೀಕ್ಷಿಸಿ ನೋಡಿದರೆ ಇವು ನನ್ನ ಬರೆಹದಿಂದ ಎತ್ತಿರುವುಗಳೆ ಆಗಿವೆ ಎಂಬುದು ನಿಸ್ಸಂಶಯ. ಈ ಲೇಖಕರು ತಾವು ಹೀಗೆ ಕಡ ತೆಗೆದುಕೊಂಡ ವಿಷಯವನ್ನು ಎಲ್ಲಿಯೂ ಸೂಚಿಸಿಲ್ಲ. ಕೊನೆಗೆ ಈ ಸಾಲುಗಳಿಗೆ ಅವತರಣಿಕೆ ಚಿನ್ಹೆಗಳನ್ನಾದರೂ ಹಾಕಬಹುದಾಗಿತ್ತು. ಅವನ್ನೂ ಅವರು ಮಾಡಿಲ್ಲ! ಸಾಲದುದಕ್ಕೆ ಈ ಮಾತನ್ನು ಮರೆಮಾಡುವಂತೆ, ಒಳ್ಳೆಯ ಚಾತುರ್ಯದಿಂದ ನನ್ನ ಬರೆಹದ ಅಡಿಟಿಪ್ಪಣೆಯಲ್ಲಿ ನಾನು ಕಾಣಿಸಿದ ಸಂದರ್ಭಗಳನ್ನು ಯಥಾವತ್ತಾಗಿ ಇಟ್ಟುಬಿಟ್ಟಿದ್ದಾರೆ. ಇವರಲ್ಲಿ ತಲೆಯೆತ್ತಿದ ಒಂದೆರಡು ಅಚ್ಚಿನತಪ್ಪುಗಳೂ ಹಾಗೆಯೆ ಬಂದುಬಿಟ್ಟಿವೆ ಎಂದು ಸಂಶಯಬರುತ್ತದೆ.

ಈ ವಿಷಯದಲ್ಲಿ ನನಗೆ ಎಷ್ಟೂ ಅಸಮಾಧಾನವೆನಿಸುವುದಿಲ್ಲ. ಎಲ್ಲರಿಗೆ ಉಪಯೋಗವಾಗಲೆಂದು ಪ್ರಕಟಪಡಿಸಿದ ನನ್ನ ಬರೆಹವನ್ನು ನನ್ನ ಪ್ರಿಯಮಿತ್ರರು ಹೀಗೆ ಬಳಸಿಕೊಂಡುದಕ್ಕಾಗಿ ನನಗೆ ತುಂಬಾ ಸಂತೋಷವೆ ಆಗಿದೆ. ಆದರೆ ಕೆಲವರಿಗೆ ಈ ರೀತಿಯು ಸಂಮತವಾಗಲಿಕ್ಕಿಲ್ಲ. ಆದುದರಿಂದ, ಇನ್ನು ಮುಂದೆ ನನ್ನ ಮಿತ್ರರು ಇಂತಹ ವಿಷಯದಲ್ಲಿ ಬಹುಮಾನ್ಯವಾದ ಮಾರ್ಗವನ್ನು ಅನುಸರಿಸಬೇಕಾಗಿ ಪ್ರೇಮದಿಂದ ಪ್ರಾರ್ಥಿಸುವೆನು. ಇದಕ್ಕಾಗಿ ಅವರು ನನ್ನನ್ನು ಕ್ಷಮಿಸುವರಾಗಿ ನಂಬಿದ್ದೇನೆ.

—ದೇಸಾಯಿ ಪಾಂಡುರಂಗರಾಯ

ಜಯಕರ್ನಾಟಕ ಗ್ರಂಥಮಾಲೆ

ಗ್ರಂಥಮಾಲೆಗೆ ೩ ವರ್ಷಗಳು ತುಂಬಿ, ನಾಲ್ಕನೆಯ ವರ್ಷದಲ್ಲಿ ಅದು ಹೆಜ್ಜೆಯಿಟ್ಟಿದೆ. ... ಮನೋರಂಜಕ, ವಿನೋದಾತ್ಮಕ, ಉಪಯುಕ್ತ, ಪ್ರೌಢ ವಿಷಯಗಳ ಮೇಲೆ ಹಲವು ಪುಸ್ತಕಗಳನ್ನು ... ಸಲ್ಲಿಸಲಾಗುವುದು.

ಕ್ರಾ. ೧/೮ ಆಳತೆಯ ಸು. ನೂರಾಇಪ್ಪತ್ತು ಪುಟಗಳುಳ್ಳ ೬ ಗ್ರಂಥಗಳು ಚಂದಾದಾರರ ಕೈಸೇರುವವು ... ಚಂದಾ ಅ. ವೆ. ಸೇರಿ ರೂ. ೩—೪—೦. ಜಯಕರ್ನಾಟಕದ ಚಂದಾದಾರರಿದ್ದವರಿಗೆ ೩—೦—೦ ...

ಈಗ ಗ್ರಂಥಮಾಲೆಯ ಚಂದಾದಾರರಲ್ಲದವರಿಗೆ ಅಂಚೆಯ ವೆಚ್ಚ ಬೇರೆ. ನಡೆಯುವ ಮತ್ತು ಮುಂ... ಚಂದಾದಾರರಾಗಬಹುದು. ಆದರೆ ಹಿಂದಿನ ಪ್ರಕಟನೆಗಳ ಬಗ್ಗೆ ಚಂದಾಸೌಲಭ್ಯವಿಲ್ಲ. ಇಂದಿನ ಚಂದಾ... ಹಿಂದಿನ ಪುಸ್ತಕಗಳ ಬೆಲೆಯನ್ನೂ ಅಂಚೆಯ ವೆಚ್ಚವನ್ನೂ ಸಹಿಸಬೇಕಾಗುವುದು.

ಪ್ರತಿ ಮನೆಯಲ್ಲಿಯೂ ವಾಚನಾಲಯದಲ್ಲಿಯೂ ಸಂಗ್ರಾಹ್ಯವಾದ ಗ್ರಂ...

ಮುಂಚಿನ ಪ್ರಕಟನೆಗಳು

ಹರಟೆಗಳು: ಶ್ರೀ ಬೇಂದ್ರೆಯವರು ಬರೆದ ೫ ಹರಟೆಗಳು; ಪ್ರೊ. ಗೋಕಾಕ ಅವರ 'ಯುಗಾಂತರ' ಎಂಬ ಹಾಸ್ಯಪ್ರಬಂಧ ಸಹಿತ. ೦-೧೦-೦

ಅದೇನೆ ಇರಲಿ: ನೈಜಾಂ ಕರ್ನಾಟಕದ ಶ್ರೀ. ಮನ್ಸಬ್ದಾರರು ಬರೆದ ಸಾಮಾಜಿಕ ನಾಟಕ. ೦-೮-೦

ದರಿದ್ರನಾರಾಯಣ: ಪ್ರೊ. ಜಾಗೀರದಾರ ರಂಗಾಚಾರ್ಯರು ಬರೆದ ಸಾಮಾಜಿಕ ನಾಟಕ. ೧-೧೦-೦

ಜೀವನಸಂಗೀತ: ೧೪ ಲಾವಣಿಗಳು. ೦-೧೦-೦

ಮೂರನೆಯ ವರ್ಷದ ಪ್ರಕಟನೆಗಳು

ಮಾವಿನ ಕೋಪು: ಶ್ರೀಮಾನ್ ಹ. ಪೀ. ಜೋಶಿ, ಬಿ. ಎ. ಅವರು ಬರೆದ ಸಾಮಾಜಿಕ ಕಾದಂಬರಿ. ೦-೧೦-೦

ತರಂಗಿಣಿ: ಶ್ರೀ. ಟೇಂಗ್ಸೆ ಗೋವಿಂದರಾಯರು ಬರೆದ ಕಾವ್ಯಮಯ ನಾಟ್ಯಚಿತ್ರ. ೦-೬-೦

ಬಂಗಾರದ ದಾಬು: ಶ್ರೀಮಾನ್ ಕೆ. ಗೋಪಾಲಕೃಷ್ಣರಾಯರ ಕಥಾಸಂಗ್ರಹ. ೦-೧೦-೦

ಉದಯರಾಗ: ಶ್ರೀ. ಅ. ನ. ಕೃಷ್ಣರಾಯರು ಬರೆದ ಸಾಮಾಜಿಕ ಕಾದಂಬರಿ. ೦-೧೨-೦

ರಾಜವಲ್ಲಭ: ಶ್ರೀ. ಹ. ಪೀ. ಜೋಶಿ ವಿರಚಿತ ಸಂಗೀತ ಪೌರಾಣಿಕ ನಾಟಕ. ೦-೧೦-೦

ಕೆಲವು ನೀಳ್ಗತೆಗಳು: ಹೆಸರು ಪಡೆದ ಕತೆಗಾರರ ಆರು ಕತೆಗಳು. ೦-೧೦-೦

ಮಲ್ಲಿಗೆದಂಡೆ: ಸಂಗ್ರಾಹಕರು: ಶ್ರೀ. ಕಾಪಸೆ ರೇವಪ್ಪನವರು
ಸಾದಾಪ್ರತಿ ೦-೧೨-೦
ಫೇದರವೇಟ ಕಾಗದದ ಕ್ಯಾಲಿಕೋ ಹೊದಿಕೆಯ ಪ್ರತಿ ೧-೨-೦

ನಾಲ್ಕನೆಯ ವರ್ಷದ ಪ್ರಕಟನೆ...

ಪರಿಣೀತಾ: ವಿಶ್ವವಿಖ್ಯಾತ ವಂಗ ... ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ... ಕಾದಂಬರಿ. ಶ್ರೀ. ಗುರುನಾಥ ಜೋಶಿಯವ...

ಹೂಬಿಸಿಲು: ಸೌ॥ ಶ್ಯಾಮಲೆಯವ... ಶ್ರೀ. ಆನಂದಕಂದರ ಮುನ್ನುಡಿಯೊಡನೆ.

ಸಾಲುದೀಪ: ಶ್ರೀಮಾನ್ ಜೈನೇಂದ್ರ ... ಕತೆಗಳು. ಶ್ರೀ. ಗುರುನಾಥ ಜೋಶಿಯವ... ಅನುವಾದಿಸಲ್ಪಟ್ಟಿವೆ.

ಮುಂಬಯಿ ವಿದ್ಯಾಖಾತೆಯವರ ಮ... ಪಡೆದ ನಮ್ಮ ಪ್ರಕಟನೆಗ...

೧ ಉದಯರಾಗ ೨ ಮಲ್ಲಿಗೆದಂಡೆ ...
೪ ತರಂಗಿಣಿ ೫ ಅದೇನೆ ಇರಲಿ ೬ ಪರಿಣೀತಾ ...
೮ ರಾಜವಲ್ಲಭ ೯ ಬಂಗಾರದ ದಾಬು ೧೦ ...

ರಾಜರಹಸ್ಯ (ಭಾಗ ೧): ಶ್ರೀ. ರಾ. ... ಬರೆದ, ಅದ್ಭುತರಸಪೂರ್ಣವಾದ ಈ ಕಾ... ಭಾಗವು ಮಾರಾಟಕ್ಕೆ ಸಿದ್ಧವಾಗಿದೆ. ಪುಟಗಳು...

ಜಯಕರ್ನಾಟಕದ ವಿಜಯನಗರ ...

ವಿಜಯನಗರದ ಸ್ಮಾರಕೋತ್ಸವ ಕಾಲದಲ್ಲಿ ... ಅಧ್ಯಕ್ಷರಾದ ಪ್ರೊ. ಬಿ. ಎಂ. ಶ್ರೀಕಂಠಯ್ಯ... ಪ್ರಕಾಶಿತವಾದ ಈ ಸಂಚಿಕೆಯ ಪ್ರತಿಗಳಿಲ್ಲ ...

ಹುಬ್ಬಳ್ಳಿಯ ನಮ್ಮ ...

ಎಂ. ಆರ್. ಬೆಳ್ಳೇರಿ ...
ಕರ್ನಾಟಕ ...
ದುರ್ಗದ ...


ಜಯಕರ್ನಾಟಕ ಗ್ರಂಥಮಾಲೆಯ ೩೩—೩೪ನೆಯ ಸಂಯುಕ್ತ ಪುಷ್ಪ

(ಸುಮಾರು ೨೦೦ ಪುಟಗಳು .... ಬೆಲೆ ೧ ರೂಪಾಯಿ)



ಸಿದ್ಧ ಹಿಂದೀ ಲೇಖಕರಾದ ಶ್ರೀ. ಜೈನೇಂದ್ರ ಕುಮಾರರ ಲೇಖನಿಯಿಂದ ಬಂದ ೭ ಕತೆಗಳ ಸಂಗ್ರಹವಿದು. ವುಗಳಲ್ಲಿ ೫ ದೀರ್ಘಕತೆಗಳಾಗಿವೆ. ಶ್ರೀಯುತರ ಶೈಲಿ · ಮರುಳುಗೊಳಿಸುವಂತಹದು; ವಿವಿಧರಸಭರಿತ ದುದು; ಪರಿಪಕ್ವವಾದುದು. ಪ್ರಸ್ತುತ ಸಂಗ್ರಹವು ಕರ್ನಾಟಕದ ವಾಚಕರಿಗೊಂದು ಪಕ್ವಾನ್ನದೂಟವಾಗುವು ದು ಭರವಸೆ ಕೊಡಬಲ್ಲೆವು. ಸರಸ–ಸರಲ ಕನ್ನಡದಲ್ಲಿ ಹಿಂದೀ ಜ್ಞಾನಯಾತ್ರಿಮಂಡಲದ ಶ್ರೀ. **ಗುರುನಾಥ** **ಶಿಯವರು** ಈ ಸಂಗ್ರಹವನ್ನು ಅನುವಾದಿಸಿದ್ದಾರೆಂದು ಹೇಳಿದರೆ ಸಾಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ


WEST END WATCH Co
BOMBAY №81 CALCUTTA
.... ಇದೀಗ ....
ಸಿದ್ಧವಾಗಿದೆ.
.... ಕೇಳಿದರೆ ....
ಉಚಿತ ದೊರೆಯುವುದು.
ನಮ್ಮ ಹೊಸ ಉಚಿತ
ಕ್ಯಾಟಲಾಗು ನಿಮ್ಮ
ಕಾಯುತ್ತಿದೆ. ಎಂದಿನಂತೆ,
ಎಲ್ಲರ ಜೇಬಿಗೂ
ವಂತಹ ವಾಚ್, ಟೈಂಪೀಸ್,
ಕ್ಲಾಕುಗಳ ಪ್ರಾತಿನಿಧಿಕ
ಸಂಗ್ರಹವೆ ಆದಾಗಿದೆ. ...
ಬಹುಶಃ ಎಲ್ಲಾ ಮಾದರಿಗಳ ಬೆಲೆಯೂ ಮುಂಚಿನಂತೆ ಎಲ್ಲರಿಗೂ ಪೂರೈಸುವಂತಹದಿದೆ. ಕೆಲವಂತೂ ಮುಂಚಿಗಿಂತ ಅಗ್ಗವಾಗಿವೆ. ಬೆಲೆಗಳನ್ನು ತೂಗಿನೋಡಿ, ಈಗಲೆ ವೆಸ್ಟ ಎಂಡ್ ವಾಚ್ ಒಂದನ್ನು ಕೊಂಡುಕೊಳ್ಳಿರಿ. ....
ವೆಸ್ಟ ಎಂಡ್ ವಾಚ್ ಕಂಪನಿ,
ಮುಂಬಯಿ, ಕಲ್ಕತ್ತೆ
WEST END
WATCH CO.
BOMBAY - - - CALCUTTA



ಸಂಪಾದಕರು—
...ಳಗಾವಿ ರಾಮಚಂದ್ರರಾಯರು
ಬಿ.ಏ.
-ಸಹಸಂಪಾದಕಿಯರು—
ಸೌ: ಶ್ಯಾಮಲಾದೇವಿ.

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢೇಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ
ರಾಮಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ

ಪರಿವಿಡಿ

★

ಮೇ ೧೯೩೮
ಸಂಪುಟ : ೧೬ ಸಂಚಿಕೆ ೫

ಸಿನೇಮಾ ನಟಿ ಲಲಿತಾ (ಮುಖಚಿತ್ರ) ....
ಕಣ್ಣು ಕಟ್ಟು (ಕವನ).... .... 'ಶ್ರೀನಿವಾಸ' ೩೨೬
ಮಹಾದೇವಿಯಕ್ಕನ ಜೀವನ ಕಾವ್ಯ .... ಶ್ರೀಮನ್ನಿರಂಜನ ಮಹಾದೇವಸ್ವಾಮಿಗಳು, ಬೆಂಗಳೂರು ೩೨೮
ಒಕ್ಕಟ್ಟಿನ ಗುಟ್ಟು ೩೩೩
ಯುರೋಪಿನಲ್ಲಿ ನಮ್ಮ ಭಾರತೀಯರು .... ಕುಮಾರಿ ಪದ್ಮಾವತಿ, ಡಿ. ಎಸ್. ಎಸ್. (ಲಂಡನ್) ಕೊಡಗು ೩೩೫
ಮತಿಯೊ ಫಾಲಕೋನ್ ....ಶ್ರೀ. ಮ. ಅ. ಡೊರೆಸ್ವಾಮಿ ಅಯ್ಯಂಗಾರ್, ಎಮ್. ಎ., ಬಿ. ಎಲ್. ೩೪೧
ಆರೋಗ್ಯಬಿಂದು ೩೪೮
ಸತ್ತ್ರಮೇಲಿನ ಜೀವನ (ಸಚಿತ್ರ) .... ಮಂಗೆಬೆಟ್ಟು ವಾಸುದೇವಾಚಾರ್ಯ ೩೪೯
ಹೈದರಾಬಾದಿನಲ್ಲಿ ರಾಜಕೀಯ ಸುಧಾರಣೆಗಳು .... 'ಹರಟೆಯ ಮಲ್ಲ' ೩೫೩
ಗಿಳಿಯ ಮೀಮಾಂಸೆ (ವಿನೋದ ನಿರ್ಬಂಧ) .... 'ಶ್ರೀರಂಗ' ೩೫೫
ಅಣೋರಣೀಯಾನ್ ಮಹತೋ ಮಹೀಯಾನ್ .... ೩೫೯.
ಯೋಗಿರಾಜ ಶ್ರೀಅರವಿಂದರ ದರ್ಶನ (ಸಚಿತ್ರ) .... ಶ್ರೀ. ಭಾರತಸಂಚಾರಿ ಗೋಸಾವಿ ೩೬೧
ಸಾಹಿತಿಗಳ ಊಟ (ಸಚಿತ್ರ) ....'ವಿಶ್ವವಿಹಾರಿ' ೩೬೬
ಕಿರಣವೊಂದೆ (ಕವನ) .... ಶ್ರೀ. ವಾಸುದೇವ, ತುಮಕೂರ ೩೭೦
ಆತ್ಮಸಂದೇಶ (ಕವನ) .... ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ ೩೭೧
ಯಾವ ವೇಷ? (ಕವನ).... .... (ನೌಕಾಕ್ರೀಡನದ) 'ಶ್ರೀಧರ' ೩೭೧
ಕೋಟೆಯಲ್ಲಿ ಗಂಗೂ (ಸಣ್ಣ ಕತೆ) .... ಶ್ರೀ. ನಾ. ಸು. ಕುಂಚೂರ, ಬಿ. ಎ. (ಆನರ್ಸ) ೩೭೨
ನಗಬೇಡಿ! ೩೭೫
ಮಲಶುದ್ಧಿ (ಆರೋಗ್ಯವಿಜ್ಞಾನ-ಸಚಿತ್ರ) .... ಡಾ. ಗೋಪಾಲಕೃಷ್ಣರಾಯರು, ಸಂ. 'ಕಲಿಯುಗ' ೩೭೬
ಜೇಡದ ಜೀವನ (ಸಚಿತ್ರ) .... ಪ್ರೊ. ಎಂ. ಜಿ. ರಾವ್ ೩೮೦
ಪಕ್ಷಪಾತ ಇಲ್ಲವೆ ಅರ್ಧಾಂಗಿಯ ಅರ್ಧಾಂಗವಾತ ....'ತಾರಾದಾಸ' ೩೮೨
ನೀಲದುಂಗುರ (ಕತೆ) .... ಶ್ರೀ. ದತ್ತಾತ್ರೆಯ ಕೆರೂರ ೩೮೬
ಜ್ಞಾನ-ವಿಜ್ಞಾನ ೩೯೪
....ರಶಿಯದ ಸ್ತ್ರೀಯರು!—ಯಾಂತ್ರಿಕ ಸೇವಕ—ರಕ್ತಪೂರೈಸುವ ಸಂಸ್ಥೆಗಳು!—ಸಾವಿನೊಡನೆ ಆಟ— ....
....ಸರ್ಪವಿಷದಿಂದ ಔಷಧ!—ಉತ್ತರ ಮಹಾಸಾಗರ ಬಿಸಿಯಾಗುತ್ತಿದೆ!—ಒಂದು ತಲೆ ಹೋದರೆ ಮತ್ತೊಂದು ....
....ತಲೆ—ಲೋಹದ ಒತ್ತಕರಡು—ನೊಣಗಳಿಗೆ ಬಂಣ ಸೇರುವದಿಲ್ಲ—ಮಿಂಚಿನ ಕಂಣು—ಹಗಲು ರಾತ್ರಿಗಳ ....
....ಜೀವಂತ ಗಡಿಯಾರ—ಪ್ಯಾರಾಶೂಟ್ಸ (ಸಚಿತ್ರ) ....
ವೀಣಾವಿತಾನ ....(ಬ. ಅ. ಕ. ಇತ್ಯಾದಿ) ೪೦೦
ಕನ್ನಡದ ಮುನ್ನಡೆ ೪೦೫
ಸಾದರ ಸ್ವೀಕಾರ ೪೦೬



'ದುನಿಯಾ ಕ್ಯಾ ಹೈ' ಎಂಬ ಹಿಂದೀ ವಾಕ್ಚಿತ್ರದಲ್ಲಿನ

'ಲಲಿತಾ'

ಜಯಕರ್ನಾಟಕ

ಸಂಪುಟ ೧೬ | ಬಹುಧಾನ್ಯ ಸಂವತ್ಸರದ ವೈಶಾಖ ಶುದ್ಧ ೧ (೧—೫—೧೯೩೮) | ಸಂಚಿಕೆ ೫:

ಕಣ್ಣು ಕಟ್ಟು

ಎಲ್ಲವ ನೋಡಿದೆನು ಎಲ್ಲಿಯು
ನಿನ್ನ ನೋಡಲಿಲ್ಲ ‖

ಎಲ್ಲ ರೂಪದ ಸೊಗಸನು ನೋಡಿದ
ಎಲ್ಲ ಗಂಧ ರಸವನು ನೋಡಿದೆ
ಎಲ್ಲ ಸೌಖ್ಯದ ರೀತಿಯ ನೋಡಿದೆ
ಎಲ್ಲವನಾಶಿಸಿ ನಿನ್ನನು ನೋಡದೆ ‖


ಆಹಾ ಎಂದು ಆಶಿಸಿ ಸುಖವಿಲ್ಲ
ಮೋಹವು ಜತೆಯಲಿ ಖೇದವ ತಹುದು
ಮೋಹವನುಳಿದು ನೋಡುವ ಎನ್ನಲು
ಸಾಹಸ ವರ್ತನವಾಗಿದೆ ದೇವ ‖

ಮರೆಯಿಸಿ ನಿನ್ನನು ನಿನ್ನ ಮಹಿಮೆ
ತೆರತೆರನಾಗಿ ಹರಡಿತು ಎಲ್ಲೆಡೆ
ಮರೆಯುಳಿಯದೆ ನೀನಿಂತು ನಿಂತಿರೆ
ಅರಿಯಲಾರೆ ಅರಸಲಾರೆ ‖

—ಶ್ರೀನಿವಾಸ

ಮಹಾದೇವಿಯಕ್ಕನ ಜೀವನ ಕಾವ್ಯ

ಲೇಖಕರು : ಶ್ರೀಮನ್ನಿರಂಜನ ಮಹಾದೇವ ಸ್ವಾಮಿಗಳು,
ಸರ್ಪಭೂಷಣ ಮಠ, ಬೆಂಗಳೂರು.



★

ಸಾಮಾನ್ಯವಾಗಿ ಸಾಹಿತಿಗಳಲ್ಲಿ ಶೃಂಗಾರ-ರಸ, ಜೀವಜೀ... ಹೋರಾಟ, ಲಘು-ಪ್ರಹಸನ, ಇವು ತುಂಬಿ ತುಳುಕುತ್ತವೆ. ನಮ್ಮ ಅಕ್ಕನ ಸಾಹಿತ್ಯದಲ್ಲಿ ಶೃಂಗಾರ ರಸವು ಭಕ್ತಿರಸವಾಗಿ ... ಸಿದೆ. ಜೀವಜೀವರ ಹೋರಾಟವು ಅಡಗಿ, ಜೀವಶಿವರ ಜೋ... ಬೆರೆತಿದೆ. ಮೊದಲನೆಯ ಸಾಹಿತ್ಯವು ಕ್ಷಣಿಕ ಸುಖದಾಯಕ... ಮರುಕ್ಷಣ ವಿರಸವಾಗಿ ನಿಲ್ಲುವಂಥಾದ್ದು. ಇವಳದು ಚಿರಸುಖ... ಸವಿದಂತೆ ಸೊಗಸುವಂತಹದು. ಈ ಸಾಹಿತ್ಯವು ಸಂಪೂರ್ಣ... ಜನಜೀವನವನ್ನು ಉಚ್ಚಸ್ಥಿತಿಗೆ ಒಳ್ಳೇ ಜಾಣ್ಮೆಯಿಂದ ಒಯ್ಯು...

★

ಯಾವ ನಾಡಿನಲ್ಲಿಯೇ ಆಗಲಿ, ಯಾವ ದೇಶದಲ್ಲಿಯೇ ಆಗಲಿ, ಸಾಹಿತ್ಯವನ್ನು ಸೃಷ್ಟಿಸಿ, ಸಾಹಿತಿಗಳಾಗುವವರು ಕಡಿಮೆ. ಅದರಲ್ಲೂ ಸ್ತ್ರೀಯರ ಸಂಖ್ಯೆಯು ತೀರ ಕಡಿಮೆ. ಅದರೊಳಗಂತೂ ನಮ್ಮ ಕನ್ನಡನಾಡಿನೊಳಗೆ ಸ್ತ್ರೀಯರು ಸಾಹಿತ್ಯದಲ್ಲಿ ಬಹಳ ಹಿಂದುಳಿದಿದ್ದಾರೆ. ಗಣನೆಯನ್ನು ಮಾಡಹೊರಟರೆ ಕೈ ಬೆರಳುಗಳನ್ನು ಮಾತ್ರ ಎಣಿಸಬೇಕಾಗುತ್ತದೆ. ಮಹಾದೇವಿಯಕ್ಕ, ಲಿಂಗಮ್ಮ, ನೀಲಮ್ಮ, ಹೊನ್ನಮ್ಮ ಮೊದಲಾದ ನಾಲ್ಕಾರು ವ್ಯಕ್ತಿಗಳನ್ನು ಬಿಟ್ಟರೆ ನಮ್ಮ ಪ್ರಾಚೀನ ಸಾಹಿತಿಗಳ ಪಂತಿಯಲ್ಲಿ ಸೇರುವ ಸ್ತ್ರೀಯರು ಬೇರೆ ಯಾರೂ ಇಲ್ಲ. "ನಾನೃಷಿಃ ಕವಿಃ" ಎಂಬ ಋಷಿ ನಿರ್ಬಂಧಕ್ಕೆ ಹೆದರಿಬಿಟ್ಟರೋ ಇಲ್ಲವೆ ಸಾಹಿತ್ಯಸೇವೆಯು ಕೇವಲ ಪುರುಷರ ಸೊತ್ತೆಂದು ಭಾವಿಸಿಬಿಟ್ಟರೋ ಬೇರೆ ನಾವು ತಿಳಿಯೆವು.

ನಮ್ಮ ಈ ಕನ್ನಡನಾಡಿನಲ್ಲಿ ದೊರೆಯುವ ನಾಲ್ಕಾರು ಮಂದಿ ಸ್ತ್ರೀಸಾಹಿತಿಗಳಲ್ಲಿ ನಮ್ಮ ಅಕ್ಕಮಹಾದೇವಿಯು ಅಗ್ರಗಣ್ಯಳು. ಸ್ತ್ರೀಯರಲ್ಲಿ ಅಷ್ಟೇ ಅಲ್ಲ, ಪುರುಷರಲ್ಲಿಯೂ ಅವಳಿಗೆ ಮೇಲ್ಮೆಯು ದೊರಕಿದೆ. ಅದಕ್ಕೆ ಮೂಲ ಕಾರಣವೇನೆಂದರೆ, ಅವಳು ಕಲಿತು ಕಾವ್ಯವನ್ನು ಬರೆಯಲಿಲ್ಲ. ಕೀರ್ತಿಗಾಗಿ ಗ್ರಂಥಗಳನ್ನು ರಚಿಸಲಿಲ್ಲ. ಅವಳ ಇಡೀ ಜೀವನವೇ ಒಂದು ಕಾವ್ಯಮಯವಾಗಿತ್ತು. ಅವಳ ಅಂತರಂಗ ಸ್ಫೂರ್ತಿಯು ಆ ತೆರನಾಗಿತ್ತು. ಅಂತಹದೊಂದು ಸ್ಥಿತಿಯು ಬಾರದ ವಿನಹ ಒಂದು ವಿಲಕ್ಷಣವಾದ, ಅನುಪಮವಾದ ಕಾವ್ಯಶಕ್ತಿಯು ಅದೆಂದಿಗೂ ಬರಲಾರದು. ಒಂದು ವೇಳೆ ಬಂದರೂ ಅದು ಬಹುಜನರಿಗೆ ಮೆಚ್ಚುಗೆಯಾಗಲಾರದು. ಬಹು ದಿನ ಬದುಕಲಾರದು. ಆದುದರಿಂದ ... ಹರಿಹರನು—

ಕಂದ॥ ಕ್ಷುದ್ರಂಗೆ ಸಕಲ ಸುಜನೋ-।
ಪದ್ರವ ರೂಪಂಗೆ ಪರರ ಕಾವ್ಯಾರ್ಥಮು...
ಛಿದ್ರಿಸುವಂಗತಿ ಶಬ್ದದ-।
ರಿದ್ರಂಗಕ್ಕುಮೆ ನವೀನ ಕಾವ್ಯಾರಂಭಂ।

ಎಂದು ಬಣ್ಣಿಸಿದ್ದಾನೆ, ಬೀರಿದ್ದಾನೆ

ಅಕ್ಕಮಹಾದೇವಿಯು ವಿದುಷ ಶ್ರೇಷ್ಠ... ಕೇವಲ ನಾವು ನಮ್ಮ ಕಲ್ಪನೆಯಿಂದ ಹೇ... ಅವಳೇ ರಚಿಸಿದ ಗ್ರಂಥಗಳಿಂದ ಗೊತ್ತಾಗುವ... ತರ ಕವಿಗಳ ಉಕ್ತಿಗಳಿಂದಲೂ ವ್ಯಕ್ತವಾಗುತ್ತ... ಅಪಾರವಾದ ವೈದುಷ್ಯಕ್ಕೆ ಮೆಚ್ಚಿ ಚನ್ನಬ...

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇ...
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ...
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ...
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗ...
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ...
ಕಾಣಾ ಸಿದ್ಧರಾಮ..."

ಎಂದು ಬಣ್ಣಿಸಿದ್ದಾನೆ. ಹರಿಹರದೇವನು ... ನಿಧಿ" "ಸಕಲ ಕಲಾಕೋವಿದೆ" ಎಂದು ... ಸಿದ್ಧವೀರಣ್ಣೊಡೆಯನು "ಸ್ವಾನುಭವ ಸಾ... ಶಿಖಾಮಣಿ" ಎಂದು ಮುಂತಾಗಿ ಸ್ತುತಿಸಿ... ಳಿದ ಅಕ್ಕಗಳಿಂದಿತ್ತ ಆದ ಚಾಮರಸ ... ಮೊದಲಾದ ಉದ್ದಾಮ ಕವಿಗಳು ತಮ್ಮ ...

ಯಲ್ಲಿ ಅಕ್ಕನನ್ನು ಸ್ಮರಿಸದೆ ಸ್ತುತಿಸದೆ ಬಿಟ್ಟಿಲ್ಲ. ಒಟ್ಟಿನಲ್ಲಿ ಅಕ್ಕನು ತನ್ನ ವೀರ ವಿರತಿಯಿಂದ ಎಲ್ಲರನ್ನೂ ಬೆರಗು ಗೊಳಿಸಿದಂತೆ, ತನ್ನ ಅನುಪಮವಾದ ವೈದುಷ್ಯದಿಂದಲೂ ಎಲ್ಲರನ್ನು ತಲೆದೂಗಿಸಿದ್ದಾಳೆ.

ಮಹಾದೇವಿಯಕ್ಕನು ವಯೋವೃದ್ಧೆಯಾಗಿ ವಚನಗಳನ್ನು ಹೇಳಿರುವದಿಲ್ಲ. ಆಕೆಯು ನವತಾರುಣ್ಯದಲ್ಲಿಯೇ ವೈರಾಗ್ಯವನ್ನು ತಳೆದು ವಚನಗಳನ್ನು ಸನ್ನಿವೇಶಕ್ಕೆ ತಕ್ಕಂತೆ ವಿರಚಿಸಿದಳು. ಆಶಾಪಾಶವನ್ನು ಹರಿಯಲು ತನ್ನ ಮನಸ್ಸಿಗೆ ಒಳ್ಳೇ ಶಿಕ್ಷಣವನ್ನು ಕೊಟ್ಟಳು. ಹೆಣ್ಣು ಮಕ್ಕಳ ಸ್ವಭಾವಕ್ಕನುಗುಣವಾಗಿ ಆಕೆಯೂ ತನಗೆ ಉತ್ತಮನಾದ, ರೂಪ-ಲಾವಣ್ಯ, ತಾರುಣ್ಯ ಧನ-ಕನಕ ವಸ್ತ್ರಾದಿ ಸಕಲ ಸುಖಸಂಪತ್ತಿನಿಂದ ಕೂಡಿದ ರಾಜನನ್ನು ಕೈಹಿಡಿದು ಬಾಳ ಬಹುದಾದರೂ ಅದಕ್ಕೆ ಆಕೆಯು ಮನಸೋಲದೆ, ಬಾಯಿ ನೀರು ಕರೆಯದೆ, "ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ" ಎಂದು ಹೇಳಿ ತನ್ನ ಭಕ್ತಿಯ ಭಾವೋದ್ರೇಕವನ್ನು ಬೀರಿದ್ದಾಳೆ.

ಇದೇ ಮಾರ್ಗದಲ್ಲಿ ರಚಿಸಿದ ಅವಳ ಸಾಹಿತ್ಯವೆಂದರೆ ೧. ವಚನ, ೨. ಯೋಗಾಂಗ ತ್ರಿವಿಧಿ, ೩. ಸೃಷ್ಟಿಯ ವಚನ, ೪. ಅಕ್ಕಗಳ ಪೀಠಿಕೆ, ಹೀಗೆ ನಾಲ್ಕು ಗ್ರಂಥಗಳನ್ನು ಸ್ವತಂತ್ರವಾಗಿ ಬರೆದಂತೆ ಇಂದಿಗೆ ತಿಳಿದುಬಂದಿದೆ. ಇವುಗಳಲ್ಲಿ ಮೊದಲಿನವೆರಡು ಅಚ್ಚಾಗಿ ಹೊರಬಿದ್ದಿವೆ. ಅದರಲ್ಲಿ ಅಕ್ಕನ ವಚನವಂತೂ ಎಲ್ಲರ ಕೈ-ಬಾಯಿಗಳಲ್ಲಿ ನಲಿಯುತ್ತಿದೆ. ಅದರ ಸಹಾಯದಿಂದ ಅನೇಕರು ನಾಟಕ, ಚರಿತ್ರ, ಲಾವಣಿ ಮುಂತಾದ ರೂಪದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ. ಬರೆಯುತ್ತಲೂ ಇದ್ದಾರೆ.

ಅಕ್ಕನ ಸಾಹಿತ್ಯದಲ್ಲಿಯ ಒಂದು ವೈಶಿಷ್ಟ್ಯ

ಸಾಮಾನ್ಯ ಸಾಹಿತ್ಯಗಳಲ್ಲಿ ಶೃಂಗಾರ-ರಸ, ಜೀವ ಜೀವರುಗಳ ಹೋರಾಟ, ಲಘು-ಪ್ರಹಸನ, ಇವು ತುಂಬಿ ತುಳುಕುತ್ತವೆ. ಆದರೆ ನಮ್ಮ ಅಕ್ಕನ ಸಾಹಿತ್ಯದಲ್ಲಿ ಶೃಂಗಾರ ರಸವು ಭಕ್ತಿರಸವಾಗಿ ಪರಿಣಮಿಸಿದೆ. ಜೀವಜೀವರ ಹೋರಾಟವು ಅಡಗಿ, ಜೀವಶಿವರ ಹೋರಾಟವು ಬೆರೆತಿದೆ. ಮೊದಲನೆಯ ಸಾಹಿತ್ಯವು ಕ್ಷಣಸುಖದಾಯಕವಾದದ್ದು; ಮರುಕ್ಷಣ ವಿರಸವಾಗಿ ನಿಲ್ಲುವಂಥಾದ್ದು. ಇವಳದು ಚಿರಸುಖಪ್ರದವಲ್ಲದೆ ಸವಿದಂತೆ ಸೊಗಸುವಂತಹದು. ಈ ಸಾಹಿತ್ಯವು ಸಂಪೂರ್ಣವಾದುದು. ಜನಜೀವನವನ್ನು ಉಚ್ಚಸ್ಥಿತಿಗೆ ಒಳ್ಳೇ ಜಾಣ್ಮೆಯಿಂದ ಒಯ್ಯುವಂತಹದು.

ಶೃಂಗಾರ-ರಸ ಪ್ರಧಾನವಾದ ಸಾಹಿತ್ಯದಲ್ಲಿ ಒಂದು ಜೀವವು ಇನ್ನೊಂದು ಜೀವವನ್ನು ಬೆರೆಯ ಬಯಸುವದು-ಅದು ಒಪ್ಪಚ್ಚಿ ಅಗಲುವ ಸುಖ. ಆ ಗುರಿಯು ನಿಜವಾದುದಲ್ಲ. ಅದು ಆತ್ಮನಿಗೆ ಕ್ಷಣಸುಖದೋರಿದರೂ ಅದೇ ಉನ್ನತಿಗೆ ಕಾರಣವಾಗಲರಿಯದು. ಅದು ಕೇವಲ ಭೋಗ. ಮಾನವನ ಮುಖ್ಯ ಗುರಿಯಲ್ಲ. ಆದರೆ ಅಕ್ಕನ ಸಾಹಿತ್ಯವು ಹಾಗಿಲ್ಲ. ಇದು ಅದೇ ಮಟ್ಟಿನಲ್ಲಿದ್ದೇ ಭಾವವನ್ನು ಬೇರ್ಪಡಿಸುತ್ತದೆ. ಅವೇ ಶಬ್ದಗಳಿಂದಲೇ ಜೀವನವನ್ನು ಪರಿಪೂರ್ತಿಗೊಳಿಸುತ್ತದೆ. ಅದೇ ಶೈಲಿಯಲ್ಲಿಯೇ ಬೇರೊಂದು ಆನಂದವನ್ನು ಹುಟ್ಟಿಸುತ್ತದೆ. ಶೃಂಗಾರರಸದಲ್ಲಿ ಮುಳುಗಿದಂತಹ ವ್ಯಕ್ತಿಯು, ತನ್ನ ಪ್ರೇಮದ ವಸ್ತುವನ್ನು ಅಗಲಿ ಹೇಗೆ ಕಾತರಿಸಬೇಕೋ ಹಾಗೆ ಅಕ್ಕನು ಭಕ್ತಿರಸದಲ್ಲಿ ಮುಳುಗಿ ಹರನ ವಿರಹದಿಂದ ಹಂಬಲಿಸುತ್ತಾಳೆ.ಆದುದರಿಂದ ಅವಳ ಸಾಹಿತ್ಯವು ಸುಂದರವಾಗಿದೆ; ಗಂಭೀರವಾಗಿದೆ. ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ನಾವು ತೋರ ಬಯಸುತ್ತೇವೆ.

ಕವಿಕಾಳಿದಾಸ ವಿರಚಿತವಾದ ವಿಕ್ರಮೋರ್ವಸೀಯ ನಾಟಕದಲ್ಲಿ ನಾಯಕನಾದ ವಿಕ್ರಮನು, ತನ್ನ ಪ್ರಿಯಳಾದ ಉರ್ವಸಿಯನ್ನು ಅಗಲಿ ಆರ್ತನಾಗಿ—

"........ಮಧುಕರ ಮದಿರಾಕ್ಷ್ಯಾಃಶಂಸ ತಸ್ಯಾಃ ಪ್ರವೃತ್ತಿಂ ॥"

ಎಂದು ಭೃಂಗ ಮೊದಲಾದವುಗಳನ್ನು ಮೋಹಮೂಢನಾಗಿ ಕೇಳುವಂತೆ, ನಮ್ಮ ಅಕ್ಕಮಹಾದೇವಿಯು ಜಗದ್ಭರಿತನಾದ ಚನ್ನಮಲ್ಲಿಕಾರ್ಜುನನನ್ನು ಕಾಣದೆ—

"ಅಳಿಸಂಕುಳವೆ, ಮಾಮರವೆ, ಬೆಳದಿಂಗಳೆ, ಕೋಗಿಲೆಯೆ,
ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ,
ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ."

ಎಂದು ಭಾವೋದ್ರೇಕವಾಗಿ ಕೇಳಿದ್ದಾಳೆ. ಹಾರದಲ್ಲಿರುವ ಹೂವುಗಳಲ್ಲೆಲ್ಲಾ ಎಳೆಯು ಹೊಂದಿಕೊಂಡಿರುವಂತೆ, ಶಿವನು ಈ ಭವನಮಾಲೆಯಲ್ಲಿರುವ ಸಮಸ್ತ ಪ್ರಾಣಿಗಳಲ್ಲೆಲ್ಲಾ ವ್ಯಾಪಿಸಿಕೊಂಡಿರುವನು. ಆದುದರಿಂದ ಅವೆಲ್ಲವೂ ಆತನ ಪರಿಚಯವನ್ನು ಕೇಳಲು ಯೋಗ್ಯವಾಗಿವೆಯೆಂಬುದೇ ಅವಳ ಭಾವನೆ. ಈ ಈರ್ವರ ವಿರಹಸಂತಾಪವು ಒಂದೇ ವಿಧವಾಗಿದ್ದರೂ ಭಾವವು ಬೇರೆ ಬೇರೆಯಾಗಿವೆ. ವಿಕ್ರಮನು ಕೇಳುವದು ಮೋಹ ಮೌಢ್ಯದಿಂದ. ಅಕ್ಕನು ಕೇಳುವದು ಜಗದ್ಭರಿತನು ಶಿವನು ಎಂಬ ಜ್ಞಾನದಿಂದ.

ವಿಕ್ರಮನು ಅವುಗಳಲ್ಲಿ ತನ್ನ ಪ್ರೇಮದ ಪ್ರೇಯಸಿಯನ್ನು ಪಡೆಯಲಾರನು. ಅಕ್ಕನು ಅವುಗಳಲ್ಲಿ ಆತನನ್ನು ಪಡೆಯ ಬಲ್ಲಳು. ಹೀಗೆಯೇ ಇನ್ನೊಂದು ದೃಷ್ಟಾಂತವನ್ನು ನೋಡುವ. ಇನ್ನೊಬ್ಬನಾವನೋ ತನ್ನ ಮಡದಿಯ ವಿಯೋಗವನ್ನು ಸಹಿಸದೆ ಸೊಗಸದೆ ಇರುವಾಗ—

"ಚಂದ್ರಶ್ಚಂಡ ಕರಾಯತೇ ಮೃದುಗತಿರ್ವಾತೋऽಪಿ ವಜ್ರಾಯತೇ...."

ಎಂಬುದಾಗಿ ಆತನಿಗೆ ಚಂದ್ರವಾಯುಗಳು ವಿಪರೀತವಾಗಿ ಪರಿಣಮಿಸಿದಂತೆ, ಅಕ್ಕಮಹಾದೇವಿಯಾದರೂ ಆ ಪರ ವಸ್ತುವಿನ ಪ್ರಾಪ್ತಿಯಾಗದೆ—

"....ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವ! ಬೆಳದಿಂಗಳು ಬಿಸಲಾಯಿತ್ತು ಕೆಳದಿ. ಹೊಳಲು ಸುಂಕಿಗನಂತೆ ತೊಳಲುತ್ತಿದ್ದೆನವ್ವಾ!

ಎಂದು ಅದೇ ಬಗೆಯಾಗಿ ಕೊರಗಿ ಮರುಗಿದ್ದಾಳೆ. ಆದರೆ ಅದು ತನ್ನಂತಹ ದುಃಖಭಾಗಿಯಾದ ಮತ್ತೊಂದು ಜೀವ ಕ್ಕಾಗಿಯಲ್ಲ. ತನ್ನನ್ನು ತೀರದ ಸುಖದಲ್ಲಿರಿಸುವ, ತನ ಗಿಂತಲೂ ಉನ್ನತ ಸ್ಥಿತಿಯಲ್ಲಿರುವ ಬೇರೊಂದು ವಸ್ತುವಿ ಗಾಗಿ. ಯಾವಾಗಲೂ ಜೀವನು ಶ್ರೇಷ್ಠವಾದ ಮತ್ತು ಸತ್ಯವಾದ ವಸ್ತುವಿಗಾಗಿ ಹೆಣಗಬೇಕೇ ವಿನಹ ತನ್ನಂತಹ ದುಃಖಮಯವಾದ ವಸ್ತುವಿಗಾಗಿ ಬಳಲಬಾರದು. ಬಡ ವನು ಬಡವನನ್ನು ಬೇಡಿ ಬಲ್ಲಿದನಾಗ ಬಲ್ಲನೆ?

ಇನ್ನೋರ್ವ ಪ್ರೇಯಸಿಯು ತನ್ನ ಪ್ರಿಯನು ತನ್ನನು ಅಗಲಿ ಹೋಗುವಾಗ—

ಗಚ್ಛ ಗಚ್ಛಸಿ ಚೇತ್ ಕಾಂತ! ತತ್ರೈವ ಸ್ಯಾತ್ ಜನಿರ್ಮಮ

(ಎಲೋ ಮನೋವಲ್ಲಭನೆ! ಹೋಗುವದಾದರೆ ಹೋಗು. ನಿನ್ನನಾನಗಲಿರದ ಅಸುಗಳ ಈಡಾಡಿ ಅಲ್ಲಿಗೇನೆ ಬಂದು ಬಿಡುವೆನು.) ಎಂದು ಪ್ರಿಯನೇ ತನ್ನ ಪ್ರಾಣವೆಂಬರ್ಥ ದಲ್ಲಿ ಹೇಳಿರುವಂತೆ, ಅಕ್ಕಗಳಾದರೂ ತನ್ನ ಚನ್ನಮಲ್ಲಿ ಕಾರ್ಜುನನನ್ನು ಕುರಿತು—

"ನಿನ್ನ ಬರುವೆನ್ನ ಅಸುವಿನ ಬರುವು ಬಾರಯ್ಯ!"

ಎಂದು ಹೇಳಿರುವಲ್ಲಿ ಯಾವ ಭಾವ ಕಡಿಮೆಯಿದೆ?

ಮತ್ತೋರ್ವ ಕಾಮಿನಿಯು ಉಡುತೊಡಿಗೆಗಳನ್ನೆಲ್ಲಾ ಧರಿಸಿಗೊಂಡು ಅಲಂಕೃತಳಾಗಿದ್ದು ವೇಳೆಗೆ ಸರಿಯಾಗಿ ತನ್ನ ಪ್ರಿಯನು ಬಾರದಿದ್ದಲ್ಲಿ ಅವಳಿಗೆ ಯಾವ ಕಾತರವು ಹುಟ್ಟಬೇಕೋ, ಯಾವ ಕುತೂಹಲವು ಜನಿಸಬೇಕೋ ಕಾತರ, ಆ ಕುತೂಹಲಗಳು ಅಕ್ಕಗಳಿಗೆ ಚನ್ನ ಕಾರ್ಜುನನಲ್ಲಿ ಜನಿಸಿದುದನ್ನು ಇಲ್ಲಿ ನೋಡಿ!

"ಅರಿಸಿನವನೆ ಮಿಂದು, ಹೊಂದುಡುಗೆಯನೆ ತೊಟ್ಟು ಬಂದಿಹನೆಂದು ಬಟ್ಟೆಯ ನೋಡಿ, ಬಾರದಿರ್ದೊಡೆ ... ಕೊರಗು ತಡವಾದೊಡೆ ಬಡವಾದೆ ತಾಯೆ, ಚನ್ನಮಲ್ಲಿಕಾರ್ಜುನ ... ಅಗಲಿದಡೆ, ತಕ್ಕೆ ಸಡಲಿದ ಜಕ್ಕವಕ್ಕಿಯಂತಾದೆನವ್ವಾ!"

ಹೀಗೆ ಒಂದಲ್ಲ ಎರಡಲ್ಲ. ಶೃಂಗಾರಿಗಳು ಸ್ವಲ್ಪ ಸುಖ ಸಂತಾಪಗೊಳ್ಳುವ ಅವಸ್ಥೆಗಿಂತಲೂ ಮಿಗಿಲಾಗಿ ಕಾರ್ಜುನನ ಕೂಡುವ ಕಡೆಯಿಲ್ಲದ ಸುಖಕ್ಕಾಗಿ ಹಂಬಲಿಸಿದ್ದಾಳೆ. ಅವೇ ಶಬ್ದಗಳಲ್ಲಿಯೇ ತನ್ನ ... ವನ್ನು ಹೆಣದಿದ್ದರೂ ಅವುಗಳಿಗಿಂತಲೂ ... ಯಾವುದೋ ಒಂದು ರಮ್ಯತೆಯನ್ನು ತಂದು ... ದ್ದಾಳೆ. ಅದೇ ರಸವನ್ನೇ ಕೆಳಗಿಟ್ಟು ... ಮಾಡದೆ ಮೇಲಿಟ್ಟು ಮೇರೆಯಿಲ್ಲದೆ ಲೋಕ... ಶೃಂಗಾರರಸವನ್ನೇ ಭಕ್ತಿರಸವನ್ನು ಮಾಡಿ... ಸ್ವಾತ್ಮಸುಖವನ್ನೂ ಸಾಹಿತ್ಯಸೇವೆಯನ್ನೂ ಮಾ... ದೆಂಬ ಹೊಸ ಪಾಠವನ್ನು ಕಲಿಸಿದ್ದಾಳೆ. ಅಬಲೆ... ಸಬಲೆಯರಾಗಬಹುದೆಂದು ಸಾರಿದ್ದಾಳೆ. ಅಂತಹ ... ವಚನದಲ್ಲಿ ಕವಿಗಳು ತಮ್ಮ ಕಾವ್ಯಗಳಲ್ಲಿ ಉಪ... ಸುವ ಯಾವ ಅಲಂಕಾರಗಳಿಗೂ ಕಡಿಮೆಯಿಲ್ಲ. ... ಶೈಲಿಗೂ ಕಮ್ಮಿಯಿಲ್ಲ. ದೃಷ್ಟಾಂತಕ್ಕಾಗಿ—

ಸ್ವಭಾವೋಕ್ತಿ

ಮಾಘಮಾಸವು ಪೋಗಿ। ಮೇಗೆ ಬಂದಿತು ಚೈತ್ರ।
ಬೇಗ ಮಾಮರವು ತಳಿರಿತು ಅದು ಕಂಡು।
ಕೂಗಿ ಕರೆಯಿತು ಕಳಕಂಠ॥

ರೂಪಕ

ಪಶ್ಚಿಮದ ಕೊಳದಲ್ಲಿ। ಅಚ್ಚ ತಾವರೆ ಅರಳೆ।
ನಿಚ್ಚಳ ಗಂಧವೆಸೆಯಲು ಅದು ಕಂಡು।
ಸಚ್ಚಿತ್ತ ಭ್ರಮರವೆಸಗಿತು॥

—ಯೋಗ...

"ಬಂಜೆ ಬೇನೆಯನರಿಯಳು. ಬಲದಾಯಿ ಮುದ್ದು ... ನೊಂದನೋವ ನೋಯದವರೆತ್ತ ಬಲ್ಲರು? ಚನ್ನಮಲ್ಲಿ... ನೀನಿರದಲಗು ಒಡಲಲ್ಲಿ ಮುರಿದು ಹೊರಳುವಳ ನೆತ್ತ... ಎಲೆ ತಾಯಿಗಳಿರಾ?"

ವಚನಗಳಲ್ಲಿ ಇದೊಂದೇ ವಚನ ಸಾಕು. ಇದೊಂದರಲ್ಲಿಯೇ ಉಪಮಾನಾಲಂಕಾರ, ಅರ್ಥಾಂತರನ್ಯಾಸಗಳನ್ನು ತುಂಬಿದ್ದಾಳೆ. ಇದರಂತೆ ಬರೆಯುತ್ತ ಹೋದರೆ ಬೇಕಾದಷ್ಟಿವೆ. ಆದರೆ ಅವನ್ನೆಲ್ಲಾ ಬರೆದು ಬಳೆಸುವದು ಇಲ್ಲಿ ಅನುಚಿತ.

ರಸ-ಭಾವಗಳಿಲ್ಲದ ಸಾಹಿತ್ಯವು ನಿಜವಾದ ಸಾಹಿತ್ಯವಲ್ಲ. ಅದು ಆತ್ಮವಿಲ್ಲದ ಅಂಗದಂತೆ. ಆದರೆ ಆ ರಸ-ಭಾವಗಳ ಗುರಿಯು ವಿರಸವಾದ ವಸ್ತುವಿನಲ್ಲಿ ಪರ್ಯವಸಾನವಾಗಬಾರದು. ಸರಸ-ಸುರಸವಾದ ವಸ್ತುವಿನಲ್ಲಿ ಲೀನವಾಗಬೇಕು. ಅಂತಹ ಸಾಹಿತ್ಯವೇ ಶ್ರೇಷ್ಠಸಾಹಿತ್ಯ. ಅದೇ ಜನಜೀವನವನ್ನು ಮಾರ್ಪಡಿಸುವ ಮಹೋನ್ನತಗೊಳಿಸುವ ಸಾಹಿತ್ಯ. "ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂದು ತೆಗಳಿದ್ದು ಜೀವನನ್ನು ಜವನ ಬಾಯಿಗಿಕ್ಕುವ ನಿರ್ಜೀವ ಸಾಹಿತ್ಯವನ್ನೇ ಹೊರ್ತು ಜೀವನನ್ನು ಶಿವನನ್ನು ಮಾಡುವ ಅಕ್ಕನಂತಹ ಸರಳಸುಂದರ ಸಾಹಿತ್ಯವನ್ನಲ್ಲ.

ಅಕ್ಕನ ಸಾಹಿತ್ಯವು ಧಾರ್ಮಿಕ ಪ್ರವಾಹವಾಗಿಹರದಿದ್ದರೂ ನಮ್ಮನ್ನು ವೇದೋಪನಿಷತ್ತುಗಳಂತೆ ಎಲ್ಲಿಯೋ ಒಯ್ದು ಕಣ್ಣು ಕಾಣದ, ಬಗೆಹರಿಯದ ಗಡುಚಾದ ಸ್ಥಾನದಲ್ಲಿ ನಿಲ್ಲಿಸುವದಿಲ್ಲ. ಯಾವ ವಚನವನ್ನು ಓದಿದರೂ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಸುಲಭ ಶೈಲಿಯಲ್ಲಿ—ಬಳಕೆಯ ಭಾಷೆಯಲ್ಲಿ ಬಾಳಿನ ತಿರುಳನ್ನೂ ಜೀವನದ ಚರಮ ಗುರಿಯನ್ನೂ ಗುರ್ತಿಸಿಕೊಡುತ್ತದೆ. ಆ ಅಕ್ಕನ ಸಾಹಿತ್ಯದಲ್ಲಿ ಎಲ್ಲವೂ ಬೆರತಿದೆ. ಅವಳ ಜಾಣ್ಮೆಯನ್ನು ವಿಹಂಗಮ ದೃಷ್ಟಿಯಿಂದ ಕೊಂಚ ನೋಡಿ.

"ತಿಲದ ಮರೆಯ ತೈಲದಂತೆ, ಮರದ ಮರೆಯ ತೇಜದಂತೆ"
"ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ"
"ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ"
"ಎನಗೇಗಯ್ಯ ಸಾವಪ್ರಪಂಚಿನ ಪುತ್ಥಳಿ ? ಮಾಯಿಕದ
ಮಲಭಾಂಡ; ಆತುರದ ಭವನಿಳಯ."
"ಅಯ್ಯಾ ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ"
"ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ,
ಪವಳದ ಚಪ್ಪರ"
"ಸಿಂಹದ ಮರಿಯು ಸೀಳ್ನಾಯಿತಿಂಬರೆ ಭಂಗವಿನ್ನಾರದೋ?"
"ನಿಮ್ಮ ಮಂಡೆಗೆ ಹೂವ್ವ ತಾಹೆನಲ್ಲದೆ ಹುಲ್ಲ ತಾರೆನು."
"ನಿನ್ನ ನೊಲಿದು ಕೊಂಡಾಡಿದರೆ ಇರುವೆ ರುದ್ರನಾಗದೆ
ಹೇಳಯ್ಯ?"
"ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಚಲುವಂಗಾ
ನೊಲಿದೆನವ್ವಾ"
"ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತು."
"ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗಬೇಕು."
"ತಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವಾ."

ತೆಗೆದುಕೊಳ್ಳಿ. ಇಲ್ಲಿ ಯಾವ ಸಾಹಿತ್ಯ ಬೇಕು, ಯಾವ ತತ್ವಬೇಕು, ಯಾವ ನೀತಿಬೇಕು, ಯಾವ ಶೈಲಿಬೇಕು, ಯಾವ ಸೊಬಗು ಬೇಕು, ಅದೆಲ್ಲವೂ ಇದೆ. ಆದುದರಿಂದ ನಾವು ಒಟ್ಟನಲ್ಲಿ ಹೇಳುವ ಉದ್ದೇಶವೇನಂದರೆ, ಅಕ್ಕನ ಜೀವನವನ್ನು ಯಾವ ದೃಷ್ಟಿಯಿಂದ ನೋಡಿದರೂ ಅದೊಂದು ಕಾವ್ಯಮಯವಾಗಿದೆ. ಅವಳ ವಾಗ್ಝರಿಯು ಯಾವ ಕಾವ್ಯಕ್ಕೆ ಕಡಿಮೆಯಿಲ್ಲ. ಅವಳ ವರ್ತನವು ಯಾವ ಕಾವ್ಯಕ್ಕೆ ಕುಂದಕವಾಗುವಂತಿಲ್ಲ. ಹುಟ್ಟನಿಂದ ಹಿಡಿದು ಶ್ರೀಗಿರಿಯನ್ನು ಮೆಟ್ಟುವ ವರೆಗೂ ಇರುವ ಅವಳ ಜೀವನ ಕ್ರಮವು ಒಂದು ಸುಂದರ ಸಾಹಿತ್ಯವಾಗಿ ಪರಿಣಮಿಸಿದೆ. ಅಂತೆಯೇ ಕವಿಕುಲ ತಿಲಕರು ಆಕೆಯ ಚರಿತ್ರೆಯನ್ನು ಕಾವ್ಯಕಟ್ಟಿ ಹಾಡಿದರು; ಹರುಷಿಸಿದರು. ಕಾರಣ ಕರ್ನಾಟಕದ ಆದಿ ವಿದುಷೆಯಾದ ಆ ಅಕ್ಕನು ಕನ್ನಡಿಗರಿಗೆಲ್ಲ ಅಭಿಮಾನದ ಮೂರ್ತಿಯಾಗಿದ್ದಾಳೆ. ಕನ್ನಡ ದೇವಿಗೆ ಪರಮ ಪ್ರೇಮಾಸ್ಪದಳಾಗಿದ್ದಾಳೆ. ಅವಳ ವಚನ ಸಾಹಿತ್ಯವು ಇಂದಿನ ಮಹಿಳಾಪ್ರಪಂಚವನ್ನು ಎಲ್ಲ ವಿಧದಿಂದಲೂ ಉತ್ಸಾಹಿಸಿ ಉದ್ಧರಿಸಲು ದಿವ್ಯಾಷಧಿಯಾಗಿದೆ. ಅಂತಹ ಅವಳ ಆ ವಾಗ್ದೇವಿಯು ಇಂದಿನ ಕನ್ನಡನಾಡಿನ ಸ್ತ್ರೀಪುರುಷರನ್ನು ಎಚ್ಚರಿಸಿ, ಧ್ಯೇದದತ್ತ ಹೊರಳಿಸಿ, ಸಾಹಿತ್ಯಸೇವೆಯನ್ನು ಮಾಡಹಚ್ಚಲೆಂದು ನಾವು ತುಂಬಾ ಹಾರೈಸುತ್ತೇವೆ.



ಕರ್ನಾಟಕದ ಸಾಹಸ !　　　　ಕರ್ನಾಟಕದ ...


'ಮೈಸೂರು ಇನ್ಶೂರೆನ್ಸ್ ಕಂಪೆನಿ'

ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು ಆಡಳಿತಮಂಡಳಿಗಿರುವ ...

" ಮೈಸೂರು " ಅಭ್ಯುದಯದ ಜೀವಾಳ.

ಮೂರನೇ ವರ್ಷದ ಡೈರೆಕ್ಟರುಗಳಿಂದ ಅಂಗೀಕೃತವಾದ ವ...

ಕೆಲವು ಮುಖ್ಯಾಂಶಗಳು.



(೧) ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ... (೨) ಹೊಸ ಉದ್ಯಮವು ಶೇಕಡ ೬೫ ರಷ್ಟು, ಪೂರ್ಣವಾದ ಉದ್ಯಮ... ೫೩ರಷ್ಟು ಏರಿದೆ. (೩) ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ.

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

" ಮೈಸೂರು " ಮಾದರಿಸಂಸ್ಥಾನದಲ್ಲಿ ತನ್ನ ಸ್ಥಾನವನ್ನು ಭದ್ರ... ಕರ್ನಾಟಕದ ಇತರ ಭಾಗಗಳಲ್ಲೂ ಬ್ರಿಟಿಷ್ ಇಂಡಿಯಾ, ಬರ್ಮಾ, ಸಿ... ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು ! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ ... ಬರ್ಮಾ, ಸಿಲೋನ್‌ಗಳ ಎಲ್ಲ ಪ್ರಾಂತ್ಯಗಳಲ್ಲೂ ಕೇಂದ್ರಸ್ಥಳಗಳಲ್ಲೂ ... ಗಳೂ, ಸ್ಪೇಷಲ್ ಏಜಂಟರುಗಳೂ, ಚೀಫ್ ಏಜಂಟರುಗಳೂ, ಆರ್ಗನೈ... ಬೇಕು. ಪ್ರತಿನಿಧಿಗಳಾಗಲಿಚ್ಛಿಸುವವರು ತಾವು ಕೊಡುವ ಉದ್ಯಮ... ಯನ್ನೂ ಕಾರ್ಯಕ್ಷೇತ್ರವನ್ನೂ ತಿಳಿಸುವುದು.

ಹೆಚ್ಚು ವಿವರಗಳಿಗೆ ಬರೆಯಿರಿ:—

ಜನರಲ್ ಮ್ಯಾನೇಜರ್,

ಮೈಸೂರು ಇನ್ಶೂರನ್ಸ ಕಂಪೆನಿ ಲಿಮಿಟೆಡ್,

" ನಾಗೇಶ್ವರ ಬಿಲ್ಡಿಂಗ್ಸ್ ", ಶ್ರೀನರಸಿಂಹರಾಜಾ ರೋಡ್, ಬೆಂಗಳೂರು ಸಿಟಿ.

ಡಾಕ್ಟರ ಮಹಿಷಿ ಇವರ ಅನುಭವಸಿದ್ಧ ಔಷಧಗಳು

ಅಶೋಕಾ ಕಾರ್ಡಿಯಲ್

ಇದು ಸ್ತ್ರೀಯರ ಮುಟ್ಟಿನ ಹಾಗು ಗರ್ಭಾಶಯದ ಎಲ್ಲ ವಿಕಾರಗಳಿಗೆ ಸಿದ್ಧೌಷಧಿಯು.

ಅಶ್ವಗಂಧಿ ಟಾನಿಕ್

ಅದ್ವಿತೀಯವಾದ ಶಕ್ತಿವರ್ಧಕ ಹಾಗು ಕಾಮೋತ್ತೇಜಕ ಔಷಧಿಯು. ಇದರ ಸೇವನೆಯಿಂದ ಶ... ಬಲಪಟ್ಟು ಸ್ವಪ್ನಾವಸ್ಥೆ, ಇಂದ್ರಿಯ ಶಿಥಿಲತೆ, ನಪುಂಸಕತ್ವ ಮೊದಲಾದವು ಸ್ವಲ್ಪೇ ಅವಧಿಯಲ್ಲಿ ಅತ್ಯ... ವಾಗುವಂತೆ ಗುಣವಾಗುವವು.

ಸಾಯರಪ್ ವಾಸಕ ಮೊದಲಾದವುಗಳು

ಸೂಚನೆ:—ಈ ಔಷಧಗಳ ಹಾಗು ಇನ್ನೂ ಕೆಲವು ಔಷಧಗಳ ಸಂಪೂರ್ಣ ಮಾಹಿತಿಗಾಗಿ ಇಂದೇ ನಮ್ಮ ಕ್ಯಾಟಲಾಗಿ ...

ಮ್ಯಾನೇಜರ,

ಸ್ವಾಸ್ಥ್ಯನಿಲಯ ಫಾರ್ಮಸಿ, ಧಾರವಾಡ

ಒಕ್ಕಟ್ಟಿನ ಗುಟ್ಟು

ಇದು ವಂಗ ವಿಭಜನೆಯ ಕಾಲದಲ್ಲಿ ಪ್ರಕಟಿಸಲ್ಪಟ್ಟ ಲೇಖನ. ಆಗ ಕಲಕತ್ತೆಯಲ್ಲಿ ಹೊರಡುತ್ತಿದ್ದ 'ಬಂದೇ ಮಾತರಂ' ಎಂಬ ಇಂಗ್ಲಿಶ್ ದೈನಿಕ ಪತ್ರಿಕೆಯಲ್ಲಿ ಇದು ಪ್ರಕಟವಾಗಿತ್ತು. ಪತ್ರಿಕೆಗೆ ಮಹರ್ಷಿ ಅರವಿಂದರೇ ಜೀವಾಳದಂತಿದ್ದರು. ಈಗ ಕರ್ನಾಟಕವು ಏಕೀಕರಣಕ್ಕಾಗಿ ಹಂಬಲಿಸುತ್ತಿರುವಾಗ ಈ ಲೇಖನವು ಕನ್ನಡಿಗರಿಗೊಂದು ಕೈದೀಪವಾಗಿ ಕ್ಷುಲ್ಲಕ ಒಳಭೇದಗಳನ್ನು ದೂರಗೊಳಿಸಲು ಸಾಧಕವಾಗುವದೆಂದು ನಂಬಿಕೆ. ಸಂ. ... ...

ಇಂದು 'ರಾಖಿ'ಯ (ರಕ್ಷಾಬಂಧನದ) ದಿನ. ಆಳರಸರು ನಮ್ಮನ್ನು ಪಾಲುಮಾಡಿ ಕಸುವುಗೆಡಿಸಲು ಮಾಡಿದ ಹಂಚಿಕೆಯನ್ನು ಹಸಗೆಡಿಸಲು ನಾವು ಒಂದಾಗಬೇಕೆಂಬುದೇ ಇಂದಿನ ಈ ಉತ್ಸವದ ಉದ್ದೇಶ. ಈ ಉತ್ಸವವು ಹುಟ್ಟಿ ಹಲವು ವರ್ಷಗಳಾದವು. ಆದುದರಿಂದ ಈ ರಕ್ಷಾಬಂಧನದ ಹಬ್ಬವು ನಮ್ಮ ದೇಶಬಂಧುಗಳಲ್ಲಿ ಪ್ರೇಮ, ಸಹಾನುಭೂತಿಗಳನ್ನು ಹುಟ್ಟಿಸಿರುವದೇ ಅಥವಾ ತಾತ್ಪೂರ್ತಿಕವಾಗಿ ಕುಡಿದವರಂತೆ ಕುಣಿವ ಹುಚ್ಚಾಟವೇ ಎಂಬುದನ್ನು ಗೊತ್ತುಪಡಿಸಲು ಇದು ಯೋಗ್ಯ ಸಮಯ. ರಾಷ್ಟ್ರೀಯ ಆಂದೋಲನವೆಂದರೆ ಸತ್ಯ ಮತ್ತು ನ್ಯಾಯಶೀಲತೆಯ ಚಳವಳಿ. ಆ ಆಂದೋಲನದ ಯಶಸ್ಸು ಬರಿ ಉದ್ದೇಶವನ್ನು ತಿಳಿದುಕೊಳ್ಳುವುದರಲ್ಲಿ ಇಲ್ಲ; ಅದನ್ನು ಮನಕ್ಕೆ ಅನಿಸಿಕೊಂಡು ಸಾಕ್ಷಾತ್ಕರಿಸುವುದರಲ್ಲಿದೆ. ಧ್ಯೇಯವೆಂದರೆ ಪ್ರದರ್ಶನದ, ಮೆರೆವಣಿಗೆಯ ಅಲಂಕಾರವಸ್ತುವಲ್ಲ; ತರ್ಕದ ಘಟಪಟನ್ಯಾಯವಲ್ಲ. ಧ್ಯೇಯವು ನಮ್ಮ ಹೃದಯ ಸಾನ್ನಿಧ್ಯದಲ್ಲಿರಬೇಕು. ಅದು ನಮ್ಮ ವಿಚಾರ ವರ್ತನಗಳ ಮೇಲೆ ವರ್ಚಸ್ಸನ್ನು ಕೆಡುಹಬೇಕು. ಅದು ನಮ್ಮ ಬಾಳಿಗೆ ಒಂದು ವಿಶಿಷ್ಟ ಒಲವನ್ನು ಕೊಡಬೇಕು. ಧ್ಯೇಯವೆಂದರೆ ಪರಲೋಕದ ವಸ್ತುವಲ್ಲ. ಧ್ಯೇಯವಿಲ್ಲದ ಮನುಷ್ಯನೆಂದರೆ ಕೂಪಮಂಡೂಕ. ಅದು ತಾತ್ಪೂರ್ತಿಕ ಸುಖಸೌಲಭ್ಯಗಳಿಗೇ ಮೆಚ್ಚಿ ಮೈಮರೆಯುತ್ತದೆ. ಅದಕ್ಕೆ ತನ್ನ ಜನ್ಮದ ಉನ್ನತವಾದ ಉದ್ದೇಶಗಳೂ, ದೈಹಿಕ ಕ್ಷೇತ್ರಕ್ಕಿಂತ ಎತ್ತರವಾದ ಕರ್ತವ್ಯಕರ್ಮಗಳೂ ಗಮನಕ್ಕೆ ಬರುವುದೇ ಇಲ್ಲ. ಧ್ಯೇಯವೇ ನಮ್ಮ ಆಚಾರಗಳನ್ನು ನಿರ್ದೇಶಿಸುತ್ತದೆ. ಸಂಕುಚಿತ ದೃಷ್ಟಿಗೆ ಸರಿಯೆನಿಸಿದ ಕರ್ತವ್ಯಗಳನ್ನು ಸನ್ಯಾಸಿಯು ಪಾಲಿಸುವದಿಲ್ಲ. ತತ್ವಜ್ಞಾನಿಯು ವ್ಯವಹಾರಿಯಂತೆ ಹಿಂದುಮುಂದೆ ನೋಡದೆ ಬೇಕಾದ ಕರ್ಮವನ್ನು ಮಾಡುತ್ತ ಹೋಗುವದಿಲ್ಲ. ಆದುದರಿಂದ ಮನುಷ್ಯನನ್ನು ಅವನ ಧ್ಯೇಯದಿಂದ ಗುರುತಿಸಬೇಕು. ಶಿಕ್ಷಣವು ಜೀವನಕ್ಕೊಂದು ಧ್ಯೇಯವನ್ನು ಒದಗಿಸುವದು; ನಾವು ಬೆನ್ನುಹತ್ತಬೇಕಾದ ಉದ್ದೇಶಗಳನ್ನು ತೋರಿಸುವದು. ಈ ಕಾರಣದಿಂದಲೇ ಶಿಕ್ಷಣವು ಪ್ರತಿಯೊಬ್ಬರಿಗೂ ಆವಶ್ಯಕವಾಗಿದೆ.

ಮನುಷ್ಯರಲ್ಲಿ ಭೇದ ಐಕ್ಯಗಳನ್ನು ಹುಟ್ಟಿಸುವುದರಲ್ಲಿಯೂ ಧ್ಯೇಯವೇ ಮೂಲವಾಗಿರುತ್ತದೆ. ಒಂದೇ ಧ್ಯೇಯವನ್ನು ಇಟ್ಟುಕೊಂಡವರಲ್ಲಿ ಒಂದು ಅಜ್ಞಾತ ಆಕರ್ಷಣವಿದೆ. ಅವರಿಗೆ ವಿಶಿಷ್ಟ ಕರ್ಮಗಳಲ್ಲಿಯೇ ಅಭಿರುಚಿ ಹುಟ್ಟುತ್ತದೆ. ಅವರ ಪ್ರವೃತ್ತಿಗಳಲ್ಲಿ ಐಕ್ಯವಿರುತ್ತದೆ. ಒಂದೇ ಪರಿಸ್ಥಿತಿಯಲ್ಲಿರುವವರು ಪರಸ್ಪರ ಸಹಾನುಭೂತಿಪರರಾಗುತ್ತಾರೆ; ವಿಶಿಷ್ಟ ಉದ್ದೇಶಗಳಿಗಾಗಿ ಹೆಣಗಾಡಲು ಸಿದ್ಧರಾಗುತ್ತಾರೆ. ಹಲವು ದೇಶೀಯರೂ ವಿದೇಶೀಯರೂ, ಭಾರತವೆಂದರೆ ಘೋರವಾಗಿ ವಿಭಕ್ತವಾದ ದೇಶವೆಂದು ಅಂದಿದ್ದಾರೆ. ಆದರೆ ಹಾಗಾಗುವದು ಅಸ್ವಾಭಾವಿಕ. ಪ್ರಾಕೃತಿಕ ಮೇರೆಗಳಿಂದ ಸ್ಪಷ್ಟವಾಗಿ ವಿಂಗಡಿಸಲ್ಪಟ್ಟ ಪ್ರದೇಶದಲ್ಲಿ ವಾಸಿಸುವವರಲ್ಲಿ ಐಕ್ಯದ—ಸೂಕ್ಷ್ಮವಾದರೂ ನಿಶ್ಚಿತವಾದ—ಒಂದು ಎಳೆಯು ಇರಲೇಬೇಕು. ಆ ಪ್ರದೇಶದ ಪವಿತ್ರ ಇತಿಹಾಸವು ಎಲ್ಲರಲ್ಲಿಯೂ ಅದರ ವಿಷಯದಲ್ಲಿ ಪೂಜ್ಯತೆಯನ್ನೂ ಪ್ರೇಮವನ್ನೂ ಹುಟ್ಟಿಸದಿರಲಾರದು. ನಮ್ಮ ಸಂವೇದನೆಗಳು ಸುಸಂಸ್ಕೃತವಾಗಿದ್ದರೆ ಈ ನಿಸರ್ಗಸೀಮಾಬದ್ಧವಾದ ಭಾರತದ ವಿಷಯದಲ್ಲಿ ನಮ್ಮಲ್ಲಿ ಪ್ರೇಮ ಪೂಜ್ಯತೆಗಳನ್ನು ಹುಟ್ಟಿಸಲೇ ಬೇಕು. ವಿಶಿಷ್ಟ ಹವೆ ಮತ್ತು ಪರಿಸ್ಥಿತಿಗಳ ಪ್ರಭಾವದಿಂದ ಒಂದೇ ವಿಧದ ಅಭ್ಯಾಸಗಳೂ ಪ್ರವೃತ್ತಿಗಳೂ ಉಂಟಾಗುವವು. ಮೇಲು ಮೇಲಿನ ಭೇದಗಳಿಷ್ಟಿದ್ದರೂ ಸ್ವದೇಶಿಯರೆನ್ನುವವರೆಲ್ಲರಲ್ಲಿ ಸಾಮ್ಯವುಳ್ಳ ಸಂಗತಿಗಳು ಅಸಂಖ್ಯವಾಗಿವೆ. ಅವುಗಳು ಪರಸ್ಪರರ ಪ್ರೇಮ ಸಹಾನುಭೂತಿಗಳನ್ನು ಆತ್ಮೀಯತೆಯಿಂದ ಬೆಳೆಸುತ್ತವೆ; ನಮ್ಮಲ್ಲಿ ಸ್ವದೇಶವನ್ನು ನೆಮ್ಮದಿಗೊಳಿಸುವ ಕರ್ತವ್ಯದ ಅರಿವನ್ನು ಹುಟ್ಟಿಸುತ್ತವೆ. ಶತಮಾನಗಳಿಂದ ಒಂದೇ ಪ್ರದೇಶದಲ್ಲಿದ್ದುದೂ ಅನೇಕ ಪೀಳಿಗೆಗಳಿಂದ ಒಂದೇ ಸಂಸ್ಕೃತಿಯಲ್ಲಿ ಬೆಳೆದುದೂ, ಐಕ್ಯದ ಅನಿ

ಭೇದ್ಯ ಸೂತ್ರಗಳಾಗಿವೆಯೆಂಬುದರಲ್ಲಿ ಸಂದೇಹವಿಲ್ಲ. ಈ ಸಂಗತಿಯು ನಮ್ಮ ಒಳಭೇದಗಳನ್ನು ಕೊನೆಗಾಣಿಸಿ ಒಂದುತನವನ್ನು ತರಲು ಸಹಾಯಕವಾಗಿದೆ. ಆದುದರಿಂದ ಭಾರತದಲ್ಲಿ ನೆಲಸಿರುವ ವಿವಿಧ ಸಮುದಾಯಗಳಲ್ಲಿ ಆತ್ಮೀಯತೆಯು ಏಕೆ ಹುಟ್ಟಲಾರದು ? ನಾವೆಲ್ಲರೂ ಭಾರತದಲ್ಲಿ ವಾಸಿಸುತ್ತೇವೆ; ಆದರ ಅನ್ನ ಉಣ್ಣುತ್ತೇವೆ; ಆದರ ಪ್ರಾಣವಾಯುವೇ ನಮ್ಮ ಜೀವಾಧಾರ; ಎಂಬ ಸಂಗತಿಗಳೇ ನಮ್ಮಲ್ಲಿ ದೇಶಾಭಿಮಾನವನ್ನು ಹುಟ್ಟಿಸಿ ನಮ್ಮ ದೇಶದ ಹೆಚ್ಚಳಕ್ಕಾಗಿ ಬೇಕಾದ ಬಲಿದಾನವನ್ನು ಮಾಡಲು ನಮ್ಮನ್ನು ಹುರಿದುಂಬಿಸಲು ಸಾಲವೇ? ಭಾರತದ ಯಾವ ಜನಸಮುದಾಯವನ್ನೇ—ಜಾತಿಯನ್ನೇ—ತೆಗೆದುಕೊಳ್ಳಿ, ಎಲ್ಲರೂ ಆಧ್ಯಾತ್ಮಪ್ರವೃತ್ತಿಯುಳ್ಳವರೇ. ನಮ್ಮ ಒಕ್ಕಟ್ಟಿಗೆ ಇದೂ ಒಂದು ಸಾಧಕವಾದ ಮಾತಲ್ಲವೆ ? ಜಗತ್ತಿನ ವಿಷಯಗಳಿಗೆ ಅಷ್ಟಕಷ್ಟೇ ಮಹತ್ವಕೊಡುವ, ದೇಹಕ್ಕಿಂತ ಆತ್ಮಕ್ಕೆ ಅಷ್ಟೇ ಪ್ರಾಶಸ್ತ್ಯ ಕೊಡುವ, ಒಂದೇ ಧ್ಯೇಯವುಳ್ಳ ಜನರು ಒಕ್ಕಟ್ಟಾಗಲೇ ಬೇಕೆಂಬುದು ಅನಿವಾರ್ಯ. ಅವರೆಲ್ಲ ಒಂದಾಗಿ ಬರಿ ಭೌತಿಕವಾದ ಸಂಸ್ಕೃತಿಯ ದಾಳಿಯನ್ನು ಪ್ರತಿಭಟಿಸುವದು ಸ್ವಾಭಾವಿಕವಾಗಿದೆ. ಆದರೂ ನಾವು ಒಮ್ಮನಸ್ಸಿನವರ... ಆಗಲಾರೆವೆಂದು ನಮಗೆ ಮರುಳು ಹೊಕ್ಕಿದೆ... ಕ್ಕಿಂತ ಜಡವನ್ನು ಮೇಲುಗೈಯುವ, ವಿಶ್ವ... ಕಳೆದು ಮಾನವ್ಯವನ್ನು ಅಧರ್ಮಕ್ಕೆಳೆಯುವ... ಗಿಂತ, ತಮ್ಮ ಸಂಸ್ಕೃತಿಯು ಹೆಚ್ಚಿನದೆಂದು... ಜನಾಂಗಗಳು ಮನವರಿತುಕೊಳ್ಳಲೇಬೇಕೀಗ... ಊಟ ಕೊಟ್ಟು ಹಲವರಿಗೆ ಕಾಟಕೊಡುವುದು... ತೆಯ ದುರ್ಗುಣ. ಸ್ವಾರ್ಥವೇ ಆದರ ಜೀ... ಸುಸಂಸ್ಕೃತಿಯನ್ನು ಹರಡಿ ಜಗವನ್ನು ಬದು... ಧ್ಯೇಯವೇ ಪೌರ್ವಾತ್ಯ ಜನಾಂಗಗಳನ್ನು ... ಜಗತ್ತಿನಲ್ಲಿ ಒಂದು ಗಣ್ಯಸ್ಥಾನವನ್ನು ಪಡೆ... ರ್ತಿಸಬೇಕು. ಇದೊಂದು ಧ್ಯೇಯವೇ ಸಾಕ್ಷ... ಬಲಗೊಳ್ಳಲು ಸಾಧಕವಾಗಿದೆ. ಪೌರ್ವಾತ್ಯ... ಕೊಡಬೇಕಾದ ಒಂದು ಅಮೌಲ್ಯವಾದ ಸೇವೆ... ಯಿದೆ. ಅವರು ಶಾಶ್ವತವಾಗಿ ಮೂಲೆಗು... ಇಂತಹ ಉನ್ನತ ಗಂಭೀರ ಧ್ಯೇಯದೆದುರಿನಲ್ಲಿ... ಒಡಕುಗಳೆಲ್ಲ ಕೊನೆಗಂಡು ನಾವು ಒಂದಾಗು... ವುಳ್ಳವರಾಗುವೆವು.



ಯುರೋಪಿನಲ್ಲಿ ನಮ್ಮ ಭಾರತೀಯರು

★

ಕುಮಾರಿ ಪದ್ಮಾವತಿ ಕೊಡಗು. D. S. S. (ಲಂಡನ್)

ಲಂಡನಿನಲ್ಲಿ ವರ್ಣಭೇದದ ಸಮಸ್ಯೆಯು ಹೊಸಬರಿಗೆ ಬಹು ತೀಕ್ಷ್ಣವಾಗಿ ಕಂಡು ಬರುವುದೆಂಬುದು ನಿಜ. ಆದರೆ ದುಡ್ಡಿದ್ದರೆ ಆ ಸಮಸ್ಯೆಯನ್ನು ಬಗೆ ಹರಿಸಬಹುದು. ಏಕೆಂದರೆ ಸಾಮಾನ್ಯ ಭೋಜನಾಲಯಗಳ ಹೊರ್ತಾಗಿ ಇನ್ನೊಂದು ವರ್ಗದವರ ಗೃಹವಸತಿಗಳೂ ಅಲ್ಲಿವೆ. ಅದರ ಯಜಮಾನಿಯರು ಮಧ್ಯಮ ವರ್ಗದವರೂ ಅಂತ ರ್‍ರಾಷ್ಟ್ರೀಯ ವಿಚಾರದವರೂ ಇದ್ದಂತೆ ತೋರಿಸುವರು. ಅವರಲ್ಲಿ ಆಜನ್ಮ ಅವಿವಾಹಿತೆಯರೂ, ವಿಧವೆಯರೂ ಹೆಚ್ಚಾಗಿದ್ದಾರೆ. ಧಾರ್ಮಿಕ ಬುದ್ಧಿಯವರಾದರೂ ನಿಮ್ಮ ತಲೆ ... ... ಬೋಳಿಸುವುದರಲ್ಲಿ ನಿಷ್ಣಾತೆಯರು ... ...

ನಾನು ಲಂಡನ್ನಿನಲ್ಲಿದ್ದಾಗ ಬಹಳ ಮಂದಿ ಮಿತ್ರರು ನನ್ನನ್ನು ಕೆಲವು ವಿಷಯಗಳ ಸಂಬಂಧವಾಗಿ ತಮ್ಮ ಪತ್ರಗಳಲ್ಲಿ ಕೇಳುತ್ತಿದ್ದರು. ಅವುಗಳಲ್ಲಿ ಕೆಲವು ಪ್ರಶ್ನೆಗಳು ಸ್ವಾಭಾವಿಕವಾದವು. ಏಕೆಂದರೆ ಪ್ರತಿಯೊಬ್ಬನೂ ಪರದೇಶದ ಸ್ಥಿತಿಗತಿಗಳನ್ನರಿತು ಕೇಳಲು ಬಯಸುವುದು ಸಹಜ. ಆದರೆ ಕೆಲವು ಪ್ರಶ್ನೆಗಳನ್ನು ಪ್ರಾಯಶಃ ಪ್ರತಿಯೊಬ್ಬರೂ ಕೇಳಿದ್ದರು. ಹಿಂದುಸ್ತಾನಕ್ಕೆ ತಲಪಿದ ನಂತರವೂ, ಬಹಳ ಮಂದಿ ಅದೇ ರೀತಿಯಾಗಿ ಪ್ರಶ್ನಿಸುತ್ತಿದ್ದಾರೆ. ಅವರ ಪ್ರಶ್ನೆಗಳನ್ನು ಸಾರಾಂಶದಲ್ಲಿ ಕೆಳಗೆ ಬರೆಯುತ್ತಿದ್ದೇನೆ—

ಪ್ರಥಮ ಪ್ರಶ್ನೆ—ಇಂಗ್ಲಂಡು ಮತ್ತು ಬೇರೆ ಯುರೋಪೀಯ ದೇಶಗಳಲ್ಲಿ ಭಾರತೀಯರ ಸಂಗಡ ಅಲ್ಲಿಯವರ ವ್ಯವಹಾರ ಹೇಗಿದೆ? ವರ್ಣಭೇದ (Colour Prejudice)ದ ಸಮಸ್ಯೆ ಎಲ್ಲಿ ಹೆಚ್ಚು ಪ್ರಚಾರದಲ್ಲಿದೆ?

ಎರಡನೇ ಪ್ರಶ್ನೆ—ಪಾಶ್ಚಾತ್ಯ ದೇಶದವರ ವೈವಾಹಿಕ ಜೀವನ ಹೇಗಿದೆ? ವಿವಾಹವಿಚ್ಛೇದ(divorce)ದ ವಿಷಯವನ್ನು ಕೇಳುವಾಗ, ಅಲ್ಲಿಯವರ ಪಾರಿವಾರಿಕ ಜೀವನದಲ್ಲಿ ಸುಖವಿಲ್ಲವೆಂದು ತೋರುತ್ತದೆ. ಇತ್ಯಾದಿ.

ಈ ರೀತಿಯಲ್ಲಿ ಇನ್ನೂ ಕೆಲವು ಮುಖ್ಯ ಪ್ರಶ್ನೆಗಳಿವೆ. ಆದರೆ ಈ ಪ್ರಶ್ನೆಗಳ ಸಂಬಂಧವಾಗಿ ಚರ್ಚಿಸುತ್ತ ಹೋದರೆ, ಒಂದು ದೊಡ್ಡ ಗ್ರಂಥ ಬರೆಯಬಹುದು. ಆದುದರಿಂದ ಮೇಲೆ ಬರೆದಿರುವ ಎರಡು ಪ್ರಶ್ನೆಗಳಲ್ಲಿ, ಪ್ರಥಮ ಪ್ರಶ್ನೆಯ ವಿಷಯವಾಗಿ ನನ್ನ ಮೂರು ವರ್ಷದ ಅನುಭವಕ್ಕೆ ಬಂದ ವಿಚಾರಗಳನ್ನು ಪ್ರಕಟಿಸುವೆನು.

ನಾನು ಹಿಂದುಸ್ತಾನದಲ್ಲಿದ್ದಾಗ, ಬಣ್ಣದ ಸಮಸ್ಯೆಯ (Colour bar) ವಿಷಯವಾಗಿ ಬಹಳ ಮಟ್ಟಿಗೆ ಕೇಳಿದ್ದೆನು. ಇಲ್ಲಿಯ ಜನಸಾಧಾರಣದ ಅಭಿಪ್ರಾಯದಂತೆಯೆ ನನ್ನ ಭಾವನೆಯಿತ್ತು.

ವಿದೇಶಕ್ಕೆ ಹೋಗುವವರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ವರ್ಣಭೇದದ ಪ್ರಶ್ನೆ ಕಾಲೇಜು ಮತ್ತು ಸ್ಕೂಲುಗಳಲ್ಲಿ ಇಲ್ಲವೆಂದು ಹೇಳಬಹುದು. ಆದರೆ ಇಂಗ್ಲಿಷ್ ವಿದ್ಯಾರ್ಥಿಗಳು ಹಿಂದುಸ್ತಾನಿ ವಿದ್ಯಾರ್ಥಿಗಳ ಸಂಗಡ ಬಹಳವಾಗಿ ಬೆರೆಯುವುದಿಲ್ಲವೆಂಬುದನ್ನು ಪದೇ ಪದೇ ಕೇಳುತ್ತೇವೆ. ಈ ಸಂಗತಿಯಲ್ಲಿ ಬಹಳ ಮಟ್ಟಿಗೆ ಸತ್ಯಾಂಶವಿದೆ. ಇಂಗ್ಲಿಷ್ ವಿದ್ಯಾರ್ಥಿಗಳು ಕೇವಲ ಹಿಂದುಸ್ತಾನಿ ವಿದ್ಯಾರ್ಥಿಗಳ ಸಂಗಡವೇ ಕೆಲೆಯುವುದಿಲ್ಲವೆಂತಲ್ಲ, ಅವರು ಬೇರೆ ದೇಶಗಳ ವಿದ್ಯಾರ್ಥಿಗಳ ಸಂಗಡ—ಎಂದರೆ ಫ್ರಾನ್ಸ್, ಜರ್ಮನಿ ಮತ್ತು ಅಮೇರಿಕಾ ಮುಂತಾದ ದೇಶಗಳಿಂದ ಬರುವವರೊಡನೆ—ಕೂಡ ಹೆಚ್ಚು ಮಿತ್ರಾಚಾರ ತೋರಿಸುವುದಿಲ್ಲ. ಇದಾದರೋ ನನ್ನ ನಿಜ ಅನುಭವದ ಸಮಾಚಾರ. ಕಾಲೇಜುಗಳಲ್ಲಿ ಪ್ರತ್ಯೇಕ ದೇಶದ ಬೇರೆ ಬೇರೆ ಗುಂಪು ಆಗಿ ಬಿಡುತ್ತವೆ. ಎಂದರೆ ಅಮೇರಿಕಾದವರು ತಮ್ಮದೊಂದು ಗುಂಪು, ಹಿಂದುಸ್ತಾನದವರು ತಮ್ಮದು ಬೇರೆ—ಹೀಗೆ ಪೇಚಾಡುತ್ತಾರೆ. ಇಂಗ್ಲೆಂಡಿನಲ್ಲಿ ಪರದೇಶಗಳ ವಿದ್ಯಾರ್ಥಿಗಳು ಪರಸ್ಪರ ಪ್ರೀತಿ, ವಿಶ್ವಾಸ,

ಸ್ನೇಹವನ್ನು ತೋರಿಸುವಂತೆ, ಆಂಗ್ಲೇಯ ವಿದ್ಯಾರ್ಥಿಗಳು ತೋರಿಸುವುದಿಲ್ಲ. ಒಂದು ದಿವಸ ಹಿಂದುಸ್ತಾನಿ ಗೆಳತಿ ಯೊಬ್ಬಳು—ಅವಳ ಕ್ಲಾಸಿನಲ್ಲಿ ಅವಳ ಸಂಗಡ ಯಾರೂ ಮಾತನಾಡುವುದಿಲ್ಲವೆಂದು ನನಗೆ ಹೇಳಿದಳು. ಅವಳು ಲಂಡನ್ನಿಗೆ ಬಂದು ಕೇವಲ ಮೂರೇ ತಿಂಗಳು ಆಗಿದ್ದರೂ ಮಧ್ಯಾಹ್ನದ ಊಟದ ವೇಳೆಯಲ್ಲಿ ಈ ವಿಷಯವನ್ನು ಕುರಿತು ನಾನು ನನ್ನ ಇಂಗ್ಲಿಷ್ ಸ್ನೇಹಿತರಿಗೆ ಬಿಸಿ ಬಿಸಿ ಬರೆ ಕೊಟ್ಟೆನು. ನಾನು ಹೇಳಿದೆ—"ನಾವು ಭಾರತೀಯರು ಪರದೇಶದವರೆಂದು ನೀವು ಯೋಚಿಸುವಿರೋ? ನಾವು ಎಷ್ಟು ದೂರದಿಂದ ಬಂದಿರುತ್ತೇವೆ? ಈ ಊರಿನಲ್ಲಿ ನಮ್ಮವರೆಂದು ಹೇಳಿಸಿಕೊಳ್ಳಲು ಯಾರೂ ಇಲ್ಲ. ಅಂತಹ ಸಂದರ್ಭದಲ್ಲಿ ನೀವು ನಮ್ಮ ಸಂಗಡ ಸ್ನೇಹಾಚಾರ ತೋರಿಸದಿದ್ದರೆ, ಇಲ್ಲಿ ನಮ್ಮ ದಿವಸ ಹೇಗೆ ಕಳೆದಾವು? ನಾವು ಹಿಂದುಸ್ತಾನಿಗಳು ನಿಮ್ಮ ಸಂಗಡ ನಮ್ಮ ದೇಶದಲ್ಲಿ ಎಂದೂ ಈ ರೀತಿಯ ಕ್ಷುಲ್ಲಕ ವರ್ತನೆ ಮಾಡಲಾರೆವು." ಆದಕ್ಕೆ ಅವರಲ್ಲಿ ಒಬ್ಬರು "ಇಲ್ಲ, ನೀನು ಈ ರೀತಿಯಲ್ಲಿ ಮಾತಾಡಿ ನಮ್ಮನ್ನು ಅಲ್ಲಗಳೆಯಬೇಡ. ನಾವು ವಿದೇಶಿ ವಿದ್ಯಾರ್ಥಿಗಳ ಸಂಗಡ ಮಾತನಾಡಲು ಬಯಸುತ್ತೇವೆ. ಆದರೆ ನಾವಾಗಿ ಅವರ ಹತ್ತಿರ ಹೋಗಿ ಮಾತನಾಡಲು ನಮಗೆ ಸಂಕೋಚವಾಗುತ್ತದೆ." ಎಂದು ನನ್ನ ತರ್ಕವನ್ನು ಖಂಡಿಸಿದರು. ಇದನ್ನು ಕೇಳಿ ನಾನು ದಂಗು ಬಡೆದಂತೆ ಕುಳಿತುಬಿಟ್ಟೆನು. ಇಂಗ್ಲಿಷ್ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳು ಸ್ವಭಾವದಿಂದಲೇ ಸಂಕೋಚ ಪ್ರಕೃತಿಯವರು ಎಂದು ನನಗೆ ಮನವರಿಕೆಯಾಯಿತು. ಇದೇ ಕಾರಣದಿಂದ ಅವರು ಬೇರೆ ದೇಶಗಳ ವಿದ್ಯಾರ್ಥಿಗಳ ಸಂಗಡ ಮೊಟ್ಟ ಮೊದಲು ಮಾತನಾಡಲು ನಾಚುತ್ತಾರೆ. ವರ್ಣಭೇದದ ಭಾವನೆ ಮನಸ್ಸಿನಲ್ಲಿರಬಹುದು; ಆದರೆ ಹೊರಗೆ ತೋರಿಸುವುದಿಲ್ಲ. ಸಾರ್ವಜನಿಕ ನೃತ್ಯದ ಕ್ಲಬ್‌ಗಳಲ್ಲಿ (Dancing Clubs) ಆಂಗ್ಲೇಯ ಸ್ತ್ರೀಯರು ಒಂದೊಂದು ಸಲ ಭಾರತೀಯರ ಸಂಗಡ ಕುಣಿಯಲು ಸಹಕರಿಸುವುದಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಕಾಲೇಜುಗಳಲ್ಲಿ ಜರುಗುವ ನೃತ್ಯ ಕೂಟಗಳಲ್ಲಿ ಅಂತಹ ಪ್ರಸಂಗ ಬರುವುದಿಲ್ಲ.

ಕಾಲೇಜು ಹೋಸ್ಟೆಲ್‌ಗಳಲ್ಲಿ ಭಾರತೀಯರನ್ನು ತೆಗೆದು ಕೊಳ್ಳುತ್ತಾರೆ. ಮತ್ತು ಹೊರಗೆ ಇರುವವರಿಗೆ ಯುನಿವರ್ಸಿಟೀ ಬ್ಯೂರೋದ (University Bureau) ಮನೆಗಳ ಮತ್ತು ಪ್ರಾಯಿವೇಟ (Private) ಬೋರ್ಡಿಂಗ್ ಹೌಸು ಗಳ ವಿಳಾಸಗಳು ಸಿಕ್ಕುತ್ತವೆ. ಈ ಯುನಿವರ್ಸಿ[illegible] ದವರು ಹಿಂದುಸ್ತಾನಿಗಳನ್ನು ತೆಗೆದುಕೊಳ್ಳ[illegible] ಗಳನ್ನು ಸಂಗ್ರಹಿಸಿಟ್ಟಿರುತ್ತಾರೆ. ಇದರಿಂದ [illegible] ರಿಗೆ ಅಪಮಾನ ಸಹಿಸುವ ಸಂದರ್ಭ ಬರು[illegible] ಭಾರತೀಯ ವಿದ್ಯಾರ್ಥಿಗಳೂ ಈ ಬ್ಯೂರೋ[illegible] ಲಿಕ್ಕೆ ಮನೆಗಳನ್ನು ಕಂಡುಹಿಡಿಯು[illegible] ಸಮಾಚಾರ ಪತ್ರಗಳಲ್ಲಿ ನೋಡಿದ [illegible] ವರ್ಣಿಸಿದ ಬೋರ್ಡಿಂಗ್ ಹೌಸು ಅಥವಾ [illegible] ಹೋಗುತ್ತಾರೆ. ಬಾಗಿಲನ್ನು ತಟ್ಟಿದ ನಂತರ [illegible] (Maid) ಬಂದು ಬಾಗಿಲು ತೆರೆಯುತ್ತಾಳೆ. [illegible] ಯಜಮಾನಿಯನ್ನು ಕಾಣಲು ಬಂದಿದ್ದೇನೆ [illegible] ನಿಮ್ಮಲ್ಲಿ ಒಂದು ಕೋಣೆ ಖಾಲಿ ಇದೆ [illegible] ಸಮಾಚಾರ ಪತ್ರದಲ್ಲಿ ಓದಿದೆ" ಎಂದು ನಮ್ಮ[illegible] ಕೇಳುತ್ತಾನೆ. ಮನೆಯ ಯಜಮಾನಿಯಿಂದ [illegible] ಕಲಿತಿದ್ದರೆ, ಆ ಹೆಣ್ಣುಮಗಳು ನುಡಿಯುವ[illegible]- the room is occupied" (ಕ್ಷಮಿಸಿ ಆ ಕೋ[illegible] ವರಿಗೆ ಕೊಡಲ್ಪಟ್ಟದೆ.) ಪಾಪ ನವಾಗ[illegible] ಅರ್ಥ ಹೊಳೆಯುವುದಿಲ್ಲ. ಅವನು ಸತ್ಯ[illegible] ಬಿಡುತ್ತಾನೆ. ಆದರೆ ಮರುದಿವಸವೂ [illegible] ದಲ್ಲಿ ಅದೇ ಮನೆಯ ವಿಳಾಸದ [illegible] ಸೋಜಿಗಪಡುತ್ತಾನೆ. ಆಗ ಗೌರಾಂಗ [illegible] ಕಪ್ಪುಬಣ್ಣದ ಅಸ್ಪೃಶ್ಯದವರನ್ನು ತಮ್ಮ ಮನೆ[illegible] ಲಾರರು ಎಂದು ಅವನಿಗೆ ಗೊತ್ತಾಗುತ್ತದೆ. [illegible] ಸರ್ತಿ ಅಂತಹ ಮಾದರಿಯ ಮನೆಗಳಲ್ಲಿ [illegible] ಒರಟಾಗಿರುತ್ತಾರೆ. ಅವರು ನಮ್ಮವರನ್ನು ನೋ[illegible] "Sorry, we don't take coloured [illegible] (ನಾವು ಬಣ್ಣದ ಮನುಷ್ಯರನ್ನು ತೆಗೆದುಕೊ[illegible] ಕೆಲವು ಸರ್ತಿ ಹೊಸದಾಗಿ ಬಂದಿರುವ [illegible] ಯಜಮಾನಿಯ ಮಂತ್ರತಂತ್ರಗಳಿಂದ [illegible] ಳಾಗಿರುವುದಿಲ್ಲ. ಅವಳು ಯಾವನಾದರೂ [illegible] ಕೋಣೆಯ ವಿಷಯ ಕೇಳಿದರೆ ಸತ್ಯ ಮಾತ[illegible] "ಹೌದು ಕೋಣೆ ಇದೆ. ಕೂತುಕೊಳ್ಳಿರಿ; ನಾನು[illegible] ಯನ್ನು ಕರೆದುಕೊಂಡು ಬರುತ್ತೇನೆ." [illegible] ಮಾನಿಯ ಹತ್ತಿರ ಹೋಗಿ ಬರುವಾಗ [illegible] ಬೇರೆ ಬಣ್ಣವನ್ನು ತಾಳಿರುತ್ತದೆ—"ಕೋ[illegible] ವೆಂದು ಅವರು ಹೇಳುತ್ತಾರೆ." ಕೆಲವು [illegible] ಮಾನಿಯರು ತಮ್ಮ ತಿರಸ್ಕಾರವನ್ನು ಸ್ಪಷ್ಟ[illegible]

ಸಲಿಕ್ಕೆ—" ಕಪ್ಪು ಮನುಷ್ಯರನ್ನು ನಾವು ತೆಗೆದುಕೊಳ್ಳುವು ದಿಲ್ಲ" ಎಂದು ವಿಜ್ಞಾಪನೆಗಳಲ್ಲಿ ಬರೆಯುತ್ತಾರೆ.

ಒಬ್ಬ ಪಾರಸೀ ನವಯುವಕನಿದ್ದನು. ಅವನ ಬಣ್ಣ ಬಿಳುಪಿತ್ತು. ಆವನಿಗೆ ಲಂಡನ್ನಿನ ಫೇಶನೇಬಲ್ ಮೊಹಲ್ಲೆ ಯಾದ ಸಾವುತ್ ಕೆನಸಿಂಗ್ಟನ್ನಿನಲ್ಲಿ (South Kensington) ಇರಬೇಕೆಂದು ಮನಸ್ಸಾಯಿತು. ಅವನು ಸಮಾಚಾರ ಪತ್ರದ ವಿಜ್ಞಾಪನೆಯಂತೆ ಮನೆಯ ಯಜಮಾನಿಯ ಹತ್ತಿರ ಹೋದನು. ಯಜಮಾನಿಯು ಹೇಳಿದಳು—ನಾವು ಹಿಂದು ಸ್ಥಾನೀಯರನ್ನು ಬಾಡಿಗೆಯಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ನೀವು ನಮ್ಮ ಮನೆಯಲ್ಲಿ ಇರಬಹುದು. ಆದರೆ ಮನೆಯಲ್ಲಿರುವ ಬೇರೆ ಜನರು ನಿಮ್ಮನ್ನು ಕೇಳಿದರೆ ನಾನು ಈಜಿಪ್ತ ದೇಶದವ ಅಥವಾ ಬೇರೆ ದೇಶದವನೆಂದು ಹೇಳ ಬೇಕು. ಈ ಶರ್ತಿನಲ್ಲಿ ನೀವು ನಮ್ಮ ಹತ್ತಿರ ಇರ ಬಹುದು." ಆ ಪಾರಸೀ ಯುವಕನ ಹೃದಯದಲ್ಲಿ ಅಲ್ಪ ಸ್ವಲ್ಪ ದೇಶಾಭಿಮಾನ ಉಳಿದಿತ್ತು, ಆದುದರಿಂದ ಅವನು ಆ ಪ್ರಸ್ತಾವಕ್ಕೆ ಒಪ್ಪಲಿಲ್ಲ.

ಒಬ್ಬ ವಿದ್ಯಾರ್ಥಿನಿಯನ್ನು ತನ್ನ ಮನೆಯಲ್ಲಿಟ್ಟು ಕೊಳ್ಳಲು ಮನೆಯ ಯಜಮಾನಿಯು ಒಪ್ಪಿಕೊಂಡಳು. ಆವಳು ಅಲ್ಲಿ ಇರಲು ತೊಡಗಿ ಒಂದು ವಾರ ಸಹಾ ಆಗಲಿಲ್ಲ. ಅಷ್ಟರಲ್ಲಿ ಮನೆಯ ಯಜಮಾನಿಯು "ನೀವು ನಮ್ಮ ಮನೆಯಲ್ಲಿರುವುದು ಇತರ ನಿವಾಸಿಗಳಿಗೆ (lodgers) ಸರಿ ಬೀಳುವುದಿಲ್ಲ. ನೀವು ದಯವಿಟ್ಟು ಮನೆ ಬಿಟ್ಟುಬಿಡಿ" ಎಂದು ಬೇಡಿಕೊಂಡಳು.

ಲಂಡನ್ನಿನಲ್ಲಿರುವವರು ಈ ಪ್ರಕಾರದ ಘಟನೆಗಳಿಂದ ಚೆನ್ನಾಗಿ ಪರಿಚಿತರು. ಕೆಲವು ಸರ್ತಿ ನಮ್ಮವರಿಗೆ ಅನೇಕ ಹೋಟಿಲುಗಳನ್ನು ಸುತ್ತಿ ಸುತ್ತಿ ಸಾಕಾಗುತ್ತದೆ. ಇರಲಿಕ್ಕೆ ನೆಲೆಯಿಲ್ಲ. ಎಲ್ಲ ಕಡೆಗಳಲ್ಲಿಯೂ "ಖಾಲಿ ಇಲ್ಲ (No Vacancy) ಎಂಬ ಉತ್ತರ. ಕೆಲವು ಸರ್ತಿ ಅವರ ಮುಂದೆಯೇ ಅದೇ ಹೋಟಿಲುಗಳಲ್ಲಿ ಗೌರಾಂಗರನ್ನು ಸೇರಿ ಸುತ್ತಾರೆ. ಆದರೆ ಮಾಡುವುದೇನು ?

ಆಕ್ಸಫರ್ಡ ಮತ್ತು ಕೇಂಬ್ರಿಜ್‌ನಲ್ಲಿ ಹಿಂದುಸ್ಥಾನಿ ಗಳನ್ನು ಪ್ರತಿ ಮನೆಯಲ್ಲಿ ಮತ್ತು ಬೋರ್ಡಿಂಗ್ ಹೌಸು ಗಳಲ್ಲಿ ತೆಗೆದುಕೊಳ್ಳುವುದಿಲ್ಲ. ಸ್ಕಾಟ್‌ಲಂಡಿನಲ್ಲಿ ವರ್ಣ ಭೇದದ ಗಾಳಿ ಹೆಚ್ಚು ಬಿರುಸು.

ಆದರೆ ಈ ಉದಾಹರಣೆಗಳಿಂದ ಭಾರತೀಯರ ಜೀವನ, ವಿದೇಶದಲ್ಲಿ ಸುಖಮಯವಾಗಿಲ್ಲವೆಂದು ತಿಳಿಯಕೂಡದು. ಹೆಚ್ಚಾಗಿ ನವಾಗಂತುಕರೇ ಈ ರೀತಿಯ ಅವಮಾನದ ಬಿರುಗಾಳಿಯಲ್ಲಿ ಸಿಕ್ಕುವರು. ಅಲ್ಲಿ ಕೆಲವು ತಿಂಗಳುಗಳ ವರೆಗೆ ಇದ್ದ ನಂತರ ಯಾವ ಕಡೆ ಕೈಚಾಚಬೇಕು; ಯಾವ ಕಡೆ ಸೆರಗೊಡ್ಡಬಾರದು ಎಂಬುದು ಗೊತ್ತಾಗುತ್ತದೆ.

ಹಿಂದುಸ್ಥಾನದವರನ್ನು ತೆಗೆದುಕೊಳ್ಳುವ ಯಜಮಾನಿ ಯರಲ್ಲಿ ವಿಶೇಷವಾಗಿ ಹಣದ ಅವಶ್ಯಕತೆಯಿಂದ ತೆಗೆದುಕೊಳ್ಳುವವರೇ ಹೆಚ್ಚು ಎಂದು ಹೇಳಬೇಕು. ಈ ತರಗತಿಯವರು ಅಧಿಕತಯಾ ಕೂಲಿಗಾರರ ವರ್ಗ ದವರು (working class) ಎಂದರೆ Skilled labourers ಆಗಿರುತ್ತಾರೆ. ಕಟುಗ (butcher), ಕ್ಷೌರಿಕ (hair dresser) ಹೋಟಿಲಿನ ವೇಟರ್ (waiter) ಇಂಥವರ ಮನೆ ಗಳಲ್ಲಿಯೇ ನಮ್ಮ ಭಾರತೀಯರು ಬಹಳ ಮಂದಿ ಇರು ತ್ತಾರೆ. ಹೆಚ್ಚು ಖರ್ಚು ಮಾಡಲಸಮರ್ಥರಾದ ಹಿಂದು ಸ್ಥಾನದವರು ಇಂಥವರ ಮನೆಯಲ್ಲಿರುತ್ತಾರೆ. ಇನ್ನೊಂದು ವರ್ಗದವರು ಧರ್ಮಾತ್ಮರು. ಹೆಚ್ಚಾಗಿ ಅವಿವಾಹಿತರಾದ ಹೆಂಗಸರು (Spinsters) ಅಥವಾ ವಿಧವೆಯರು. ಏಸು ಪ್ರಭುವಿನ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು ಎಂದು ಇವರ ಅಭಿಪ್ರಾಯ. ಈ ಕೋಟಿಯ ಯಜಮಾನಿಯರಲ್ಲಿ (land-ladies) ಮಧ್ಯಮ ವರ್ಗದವರೂ (middle class) ಇರುತ್ತಾರೆ. ಕೆಲವು ಮಧ್ಯಮ ವರ್ಗದ ಸ್ತ್ರೀಯರು ಅಂತ ರ್ರಾಷ್ಟ್ರೀಯ ವಿಚಾರದವರಾಗಿರುತ್ತಾರೆ. ಈ ದೇವಿಯರು ನಮ್ಮ ತಲೆ ಬೋಳಿಸುವುದರಲ್ಲಿ ತುಂಬಾ ಅನುಭವಿಗಳು. ಇದು ನನ್ನ ಸ್ವಂತ ಅನುಭವದ ಮಾತು. ನನಗೆ ಕೆಲವು ವಿಳಾಸಗಳು ಇಂಡಿಯಾ ಹೌಸಿನಿಂದ ಸಿಕ್ಕಿದ್ದವು. ಅವು ಗಳ ಸಹಾಯದಿಂದ ನಾನು ಒಂದು ಮನೆಯ ಮಾಲಿಕಳಿಗೆ ಟೆಲಿಫೋನ್ ಮಾಡಿ, ಅವರನ್ನು ಕಾಣಲು ನಿಶ್ಚಯ ಮಾಡಿದೆ. ಅವಳು ನನ್ನನ್ನು ಆದಿನ ಸಾಯಂಕಾಲದ ಟೀಗೆ ಕರೆದು ತನ್ನ ವಿಶಾಲಹೃದಯದ ಪರಿಚಯ ಕೊಟ್ಟಳು. ನಾನು ಸರಿಯಾದ ಹೊತ್ತಿಗೆ ಅವಳ ಮನೆಗೆ ತಲುಪಿದೆನು. ಅವಳ ಮನೆಯು ಸುತ್ತುಮುತ್ತಲೂ ಬಹಳ ರಮ್ಯವಾಗಿತ್ತು. ಹತ್ತಿರ ಟೆನಿಸ್ ಆಡಲು ಕೋರ್ಟುಗಳಿದ್ದವು. ಅವಳ ಮನೆ ಸುಪ್ರಸಿದ್ಧವಾದ ಹೇಮಸ್ಟೆಡ್ ಹೀತ್ (Hampstead Heath) ನಲ್ಲಿದೆ. ಮನೆಯ ಮಾಲಿಕಳು ಬಹಳ ಚೆನ್ನಾಗಿ ಸತ್ಕರಿಸಿದಳು. ಅವಳು ಸುಶಿಕ್ಷಿತೆ. ಅವರ ಲಾಯಿಬ್ರರಿ ಯಿಂದ ಅವರ ರುಚಿಯ ವಿಷಯ ತಿಳಿದುಕೊಳ್ಳಬಹು ದಾಗಿತ್ತು. ಡ್ರಾಯಿಂಗ್ ರೂಮಿನಲ್ಲಿ ಹಸನಾದ ಚಿತ್ರ ಗಳು ತೂಗುಬಿದ್ದಿದ್ದವು. ಒಂದೆಡೆ ಬಹಳ ಸುಂದರವಾದ ಗ್ರೇಂಡ್ (grand) ಪಿಯಾನೋ ಇತ್ತು. ನಮ್ಮಿಬ್ಬರಿಗೆ

ಬಹಳ ಒಳ್ಳೆ ಟೀ ಕುಡಿಸಿದಳು. (ನನ್ನ ಮಿತ್ರರೊಬ್ಬರು —ಭಾರತೀಯರು ಸಂಗಡ ಇದ್ದರು.) ಆದರ ನಂತರ ಖಾಲಿಯಿರುವ ಕೋಣೆ ತೋರಿಸಿದಳು. ಅದು ಬಹಳ ಚಿಕ್ಕ ಕೋಣೆ. ಅದರಲ್ಲಿ ಒಂದು ಮಂಚಕ್ಕೆ ಮಾತ್ರ ಸ್ಥಳವಿತ್ತು. ನಂತರ ಅವಳು ಅತ್ಯಂತ ಸ್ವಾಭಾವಿಕವಾದ ಧ್ವನಿಯಲ್ಲಿ ನುಡಿದಳು. "ವಾರಕ್ಕೆ ಪಾರ್ಶಲ್ ಬೋರ್ಡಿಗೆ (Partial board) ನಾಲ್ಕುವರೆ ಗಿನ್ನಿ!! ಪಾರ್ಶಲ್‌ಬೋರ್ಡ್ ಎಂದರೆ ಎರಡು ಹೊತ್ತಿನ ಊಟ. ಫುಲ್‌ಬೋರ್ಡ್ ಎಂದರೆ ಮೂರು ಹೊತ್ತಿನ ಊಟ. ಪಾರ್ಶಲ್‌ಬೋರ್ಡಿನಲ್ಲಿ ಬೆಳಗ್ಗಿನ ತಿಂಡಿ ಮತ್ತು ಸಾಯಂಕಾಲದ ಊಟ ಮತ್ತು ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಮಧ್ಯಾಹ್ನಗಳ ಊಟ ಮತ್ತು ಟೀ. ನಾಲ್ಕುವರೆ ಗಿನ್ನಿಯೆಂದ ಕೂಡಲೇ ನನ್ನ ಕಿವಿಗಳು ನೆಟ್ಟಗಾದವು. ನಾವಿಬ್ಬರೂ ಆ ಮನೆಯನ್ನು ಬಿಟ್ಟು ಬಂದೆವು. "ಕೊನೆಗೆ ಆ ಉತ್ಕೃಷ್ಟವಾದ ಕಾರ್ಪೆಟಿನ ಮೇಲೆ ಕಾಲಿಡುವುದಕ್ಕೆ, ಲಾಯಿಬ್ರರಿಯಲ್ಲಿರುವ ಪುಸ್ತಕಗಳನ್ನು ನೋಡುವುದಕ್ಕೆ, ಮತ್ತು ಅವರ ದಿವ್ಯ ಚಿತ್ರಗಳಿಂದ ನೇತ್ರಾನಂದ ಪಡೆಯುವದಕ್ಕಾದರೂ ಅಷ್ಟು ವಸೂಲ ಮಾಡಬೇಕಲ್ಲವೇ ?" ಎಂದು ದಾರಿಯಲ್ಲಿ ನನ್ನ ಮಿತ್ರರು ನುಡಿದರು. ಈ ದೇವಿಯು ಪ್ರತಿಯೊಂದಕ್ಕೂ ದುಡ್ಡು ಕೇಳುತ್ತಿದ್ದಳು. ಹೀಗಾಗಿ ನನ್ನ ಹತ್ತಿರ ಒಂದು ತಿಂಗಳಿಗೆ ಬರುತ್ತಿರುವ ರೊಕ್ಕವೆಲ್ಲವೂ ಮೂರು ವಾರಗಳಲ್ಲಿ ಈ ದೇವಿಗೆ ಅರ್ಪಣವಾಗಬಹುದಾಗಿತ್ತು. ತಿಂಗಳ ನಾಲ್ಕನೇ ವಾರವನ್ನು ಭಿಕ್ಷೆ ಬೇಡುವುದರಲ್ಲಿ ಕಳೆಯಬೇಕಾಗುತ್ತಿತ್ತೋ ಏನೋ ? ನಾನೇನೂ ಪತಿಯಾಲಾ ಮಹಾರಾಜರ ಕನ್ಯೆಯಲ್ಲ. ಈ ರೀತಿಯಲ್ಲಿ ನಮ್ಮ ಮೇಲೆ ತಮ್ಮ ದೊಡ್ಡಸ್ತಿಕೆಯ ಸೊಗಸನ್ನು ಬೀರುವ ಭಾರತೀಯ ಮಹಿಳೆಯರು ಅಲ್ಲಲ್ಲಿ ಇದ್ದಾರೆ.

ಪ್ರಾಯಿವೆಟ ಮನೆಗಳ ಹೊರತು, ಬೋರ್ಡಿಂಗ್ ಹೌಸುಗಳಿವೆ. ಇವುಗಳ ಮಾಲಿಕರೂ ಹೆಚ್ಚಾಗಿ ಹೆಂಗಸರೇ. ಇವರೂ ಪ್ರಾಯಿವೇಟ್ ಹೌಸ್‌ಗಳ ಮಾಲಿಕರಂತೆಯೇ ಇದ್ದಾರೆ.

ಲಂಡನ್ನಿನ ಸುಪ್ರಸಿದ್ಧ ಹೋಟೆಲುಗಳಲ್ಲಿ ವರ್ಣಭೇದದ ಸಮಸ್ಯೆಯಿಲ್ಲ. ಡಾರ್ಚೆಸ್ಟರ್ (Dorchester) Grosvenor House, Savoy Hotel, ಈ ಹೋಟೆಲುಗಳ ಆದಾಯ ನಮ್ಮ ಕೃಪಾನಿಧಿಗಳಾದ ಮಹಾರಾಜಾಧಿರಾಜರಿಂದ ತಾನೇ ಆಗುವುದು. ಈ ಹೋಟೆಲುಗಳಲ್ಲಿ ನಮ್ಮ ರಾಜರಿಗಾಗಿ ಕೋಣೆಗಳು ನಿತ್ಯಕ್ಕಾಗಿ (reserved) ಆಗಿರುತ್ತವೆ. ಸಾಧಾರಣರಾದ ಭಾರತೀಯರು ಇಂತಹ ಸ್ಥಳಗಳಲ್ಲಿ ... ಸಹ ಮಾಡಲಾರರು.

ಮಧ್ಯಮ ವರ್ಗದ ಮತ್ತು ಮಧ್ಯಮ ... middle class)ವರ್ಗಗಳ ಹೋಟೆಲುಗಳಲ್ಲಿ ... ತೊಂದರೆಯಾಗುತ್ತದೆ. ಈ ಹೋಟೆಲುಗಳಲ್ಲಿ ... ಗಳಿವೆ. ಒಂದು ಕೇವಲ ಬಿಳೆ ಜನರಿಗಾಗಿ ... ಮಿಶ್ರಿತರಿಗೆ. ಇಲ್ಲಿಯೇ ಗಡಬಿಡಿಯಾಗುವುದು ... ನಾವೇನು ಮಾಡುವುದು ? ಎರಡು ಹೋಟೆಲು... ನಿಂತಿವೆ. ಒಂದರಲ್ಲಿ ಹಿಂದುಸ್ತಾನದವರನ್ನು ... ಕೊಳ್ಳುತ್ತಾರೆ. ಇನ್ನೊಂದರಲ್ಲಿ ಇಲ್ಲ. ... ಲಂಡನ್ನಿನ ಹೊರಗಡೆ ಹೆಚ್ಚು.

ಇಂಗ್ಲೆಂಡಿನ ಕೆಲವು ಈಜುವ ಕೆರೆಗಳಲ್ಲಿ (... baths) ಕಪ್ಪು ಜನರನ್ನು ಬರಗೊಡುವುದಿಲ್ಲ. ... ಕ್ರಾಸ್ (Charing Cross) ನಲ್ಲಿ ಒಂದು ಕೆ... ಒಂದೂವರೆ ವರುಷದ ಹಿಂದೆ ತುಂಬಾ ಜ... ಕೆಲವು ನೃತ್ಯದ ಮನೆಗಳಲ್ಲಿ ನಮ್ಮವರಿಗೆ ... ಕೆಲವು ಸರ್ತಿ ಗೌರಾಂಗರು ಭಾರತೀಯರ ... ಗಳಲ್ಲಿ ಟ್ರೈನ್‌ಗಳಲ್ಲಿ ಕೂತುಕೊಳ್ಳುವುದಿಲ್ಲ.

ಆದರೆ ಲಂಡನ್ನಿನಲ್ಲಿ ಸ್ನಾನಗೃಹಗಳಿಗೆ ... ಗಳಿಗೆ ಕೊರತೆಯಿಲ್ಲ. ಲಂಡನ್ ಬಹಳ ದೊ... ಎಲ್ಲೋ ಇಂತಹ ಘಟನೆಗಳು ನಡೆದರೂ ನ... ಸರಿ. ಆದರೆ ಲಂಡನ್ನಿನಿಂದ ಹೊರಗೆ ಹೋದರೆ ... ಪಟ್ಟಣಗಳಲ್ಲಿ ಈ ಮಾತುಗಳು ಬಹಳ ಸ್ಪಷ್ಟ... ಗಳನ್ನು ಚುಚ್ಚುವವು. ಚಿಕ್ಕ ಚಿಕ್ಕ ನಗರಗಳ... ಸರ್ತಿ ನಮಗೆ ಅವಮಾನ ಸಹಿಸಬೇಕಾಗಿ ... ಆದರೆ ಯಾವ ನಗರಗಳಲ್ಲಿ ಹಿಂದುಸ್ತಾನದ... ಹೆಚ್ಚು ಸಂಬಂಧವಾಗಿದೆಯೋ, ಅಲ್ಲಿ ಈ ಸ... ಪ್ರಬಲವಾಗಿಲ್ಲ.

ಫ್ರಾನ್ಸಿನಲ್ಲಿ ವರ್ಣಭೇದದ ಪ್ರಶ್ನೆಯೇ ... ಫ್ರೆಂಚ್ ಜನರಿಗೆ ದುಡ್ಡು ಬಹಳ ಪ್ರಿಯಕರ... ಮತ್ತು ಫ್ರಾನ್ಸಿನವರು ಬಹಳ ವರ್ಣಗಳ... ಮತ್ತು ಮೊರಕ್ಕೋದವರ ಸಂಗಡ ಬೆರೆಯು... ದ್ದಾರೆ. ಬಹಳ ಮಂದಿ ನಿಗ್ರೋ ಜನರು ಫ್ರೆ... ಕ್ಕಳನ್ನು ಮದುವೆಯಾಗಿ ಅಲ್ಲಿಯೇ ಇದ್ದಾರೆ ... ದೇಶಸ್ಥರು ಗುಣಗ್ರಾಹಿಗಳು.

ಜರ್ಮನಿಯಲ್ಲಿ ವರ್ಣಭೇದ ಕೆಲವೆಡೆ ಇದೆ ... ವೆಡೆ ಇಲ್ಲ. ಹಿಟ್ಲರನ ಶಾಸನಕಾಲದಿಂದ ...

ಜಾತಿಯ ಅಭಿಮಾನದಿಂದ ಮೈಮರೆಯುತ್ತಿದ್ದಾರೆ. ಆದರೂ ಅವರ ಮನಸಿನಲ್ಲಿ ಹಿಂದುಸ್ತಾನದವರ ವಿಷಯಕ್ಕೆ ತಾತ್ಸಾರದ ಭಾವವಿಲ್ಲ. ಎಷ್ಟಾದರೂ ನಾವು ಆರ್ಯರಲ್ಲವೇ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಈ ಭೇದಭಾವವಿಲ್ಲ. ಚಿಕ್ಕ ನಗರಗಳಲ್ಲಿ ಇರಬಹುದು.

ನಾರ್ವೇ, ಸ್ವೀಡನ್, ಡೆನ್‌ಮಾರ್ಕ್, ಆಸ್ಟ್ರಿಯಾ, ಹಂಗರಿ, ಇಟಲಿ, ಜೆಕೊಸ್ಲೋವೇಕಿಯಾ ಮತ್ತು ಅನ್ಯ ಪೂರ್ವೀಯ ಯುರೋಪದ ದೇಶಗಳಲ್ಲಿ ಈ ಪ್ರಶ್ನೆ ಏಳುವುದಿಲ್ಲ. ದಕ್ಷಿಣ ಮತ್ತು ಪೂರ್ವ ಯುರೋಪಿನ ಜನರು ಉತ್ತರ ಯುರೋಪಿನವರಷ್ಟು ಬೆಳ್ಳಗಿರುವುದಿಲ್ಲ. ದಕ್ಷಿಣ ಇಟಲಿಯವರನ್ನು ನೋಡಿ ಒಂದೊಂದು ಸಲ ನಮಗೆ ಭಾರತೀಯರೆಂಬ ಭ್ರಾಂತಿಯಾಗಬಹುದು.

ಕೊನೆಗೆ ಇಂಗ್ಲಂಡಿನಲ್ಲಿ ಎಲ್ಲ ಕಡೆಗಿಂತ ಹೆಚ್ಚು, ಬಂಣದ ಭೇದಭಾವವಿದೆ ಎಂದು ಹೇಳಬಹುದು. ಈ ಭಾವನೆ ನಾವು ಗುಲಾಮರಾಗಿರುವ ವರೆಗೆ ಇದ್ದೇ ತೀರುವುದು. ಆದರೆ ಇಂಗ್ಲಂಡಿನಲ್ಲಿ ಭದ್ರ ಪುರುಷ ಮತ್ತು ಸ್ತ್ರೀಯರ ಅಭಾವವಿಲ್ಲ. ಕ್ವೇಕರ್ಸ (Quakers) ಮತಸ್ಥರ ವಿಷಯ ಇಲ್ಲಿ ಸ್ವಲ್ಪ ಬರೆಯುವುದು ಅಗತ್ಯವಾಗಿದೆ. ಇವರು ಧರ್ಮಪ್ರಿಯರು, ಶಾಂತಿಪ್ರಿಯರು ಮತ್ತು ಅಂತರ್‌ರಾಷ್ಟ್ರೀಯ ವಿಚಾರದವರು. ಇವರ ಕ್ಲಬ್‌ಗಳು (Friends House) ಎಂಬ ಹೆಸರಿನಿಂದ ವಿಖ್ಯಾತಗೊಂಡಿವೆ. ಇವುಗಳ ಹೊರತು Y. W. C. A., Y. M. C. A. ಮತ್ತು ಬೇರೆ ಅಂತರ್‌ರಾಷ್ಟ್ರೀಯ ವಿಚಾರವುಳ್ಳ ಕ್ಲಬ್‌ಗಳಿಗೆ ಲಂಡನ್ನಿನಲ್ಲಿ ಕೊರತೆಯಿಲ್ಲ.

The Dawn of India Life Insurance Co., L[td.]

ಬೇಕು!

ದಿ ಡಾನ್ ಆಫ್ ಇಂಡಿಯಾ ಲ್ಯಾಫ್ ಇನ್ಸ್ಯುರನ್ಸ [...]

- ಇವರ ಆಕರ್ಷಕ ಮತ್ತು ತುಂಬ ಲಾಭದಾಯಕ ರೆಂಟ್-ಪರ್ಚೇ[ಸ್] ಸ್ಕೀಮ್ ("ಬಾಡಿಗೆ ಕೊಡುತ್ತ ಮನೆಮಾಲಕರಾಗುವ ಗೃಹ[...] ಗಾಗಿ ಕೆಲಸ ದೊರಕಿಸಲು ಎಲ್ಲಾಕಡೆ ಆರ್ಗನಾಯಿಜರರು ಬೇ[ಕು]
- ದಕ್ಷ, ಕಾರ್ಯಕ್ಷಮ, ಪ್ರಾಮಾಣಿಕ ಕೆಲಸಗಾರರಿಗೆ ಯೋಗ್ಯ ಸಂ[...] ಕಮಿಶನ್ ಆಗಲಿ ಕೊಡುವೆವು. ....
- ಪ್ರಾಸ್ಪೆಕ್ಟಸ್ಸಿಗಾಗಿ ಮತ್ತು ಎಜನ್ಸಿ ದರಗಳಿಗಾಗಿ ಕೆಳಗಿನ ವಿಳಾಸಕ್ಕೆ [...]

ಬ್ರ್ಯಾಂಚ ಸೆಕ್ರೆಟರಿ,

ದಿ ಡಾನ್ ಆಫ್ ಇಂಡಿಯಾ ಲ್ಯಾಫ್ ಇನ್ಸ್ಯುರನ್ಸ ಕಂ.ಲಿ., ಬ್ರ್ಯಾಂಚ ಆಫೀಸ, ಬೆ[...]

ದಿ ಕಮರ್ಶಿಯಲ್ ಇನ್ಸ್ಯುರೆನ್ಸ ಆ್ಯಂಡ ಲ್ಯಾಂಡ ಬಿಲ್ಡಿಂಗ ಸೆಕ್ಯುರಿಟಿ ಸೊಸಾಯಿಟಿ ಲಿಮಿಟೆಡ್, ಬೆಳಗಾಂವಿ

ಕಂಪನಿಯ ಊರ್ಜಿತಾವಸ್ಥೆಗೆ ಏಜಂಟರೇ ಮುಖ್ಯ ಕಾರಣ ಮತ್ತು ಅವರ ಕಾರ್ಯಕ್ಕೆ ತಕ್ಕ ಪ್ರ[...] ದೊರೆಯುವದು ಅಷ್ಟೇ ಮಹತ್ವದ್ದಿರುವದರಿಂದ ಸೋಸಾಯಿಟಿಯು ಅಭಿಮಾನವುಳ್ಳ ಏಜಂಟರಲ್ಲಿ ಒಂದು[...] ಯನ್ನು ಯೋಜಿಸಲಾಗಿದೆ. ಬರೆ ದುಡ್ಡನ್ನಾಗಲಿ ಇನಾಮಿನ ರೂಪದಿಂದ ಯಾವದಾದರೊಂದು ಒಡವೆ[...] ಗಲಿ ಕೊಡುವದರಿಂದ ಏಜಂಟರ ಹಿತವಾಗಲಾರದು. ಆದರೆ ಸ್ಪರ್ಧೆಯ ಕೆಳಗಿನ ನಿಯಮದಂತೆ ಗ[...] ನಂಬರು ಬಂದವರಿಗೆ ಕಂಪನಿಯ ಕಾಯಂ ಆರ್ಗನಾಯಿಝರರನ್ನಾಗಿ ನಿಯಮಿಸುವದರಲ್ಲಿ ಬರುವ[...]

ಸ್ಪರ್ಧೆಯ ನಿಯಮಗಳು

ಮಾರ್ಚ ತಿಂಗಳ ೧ನೇ ತಾರೀಖಿನಿಂದ ಮೇ ತಿಂಗಳ ಕೊನೆಯೊಳಗೆ ೧೫೦ ನಾವೆಲ್ ಬೋನಸ್[...] ಫಿಕೇಟುಗಳನ್ನು ಪೂರ್ತಿಮಾಡಿ ೧-೨ ನಂಬರು ಬಂದವರಿಗೆ ಕೆಳಗಿನ ಕಾಯಂ ಜಾಗೆಗಳನ್ನು ಕೊಡಲಾ[...]

೧ ನೇ ನಂಬರಿನವರಿಗೆ:— ತಿಂಗಳಿಗೆ ೪೦ ರೂ. ಪಗಾರ, ದಿನದ ಭತ್ತೆ ೧ರೂ. ಮತ್ತು ಹೋ[...] ದರ ನಕ್ಕೀ ಖರ್ಚು.

೨ ನೇ ನಂಬರಿನವರಿಗೆ:—ತಿಂಗಳಿಗೆ ೩೦ ರೂ. ಪಗಾರ, ಭತ್ತೆ ೧೨ ಆಣೆ ಮತ್ತು ಹೋಗುಬರುವ[...] ಖರ್ಚು.

ಈ ಸ್ಪರ್ಧೆಯಲ್ಲಿ ನಿಯಮಿಸಲ್ಪಟ್ಟ ಆರ್ಗನಾಯಿಝರರಿಗೆ ಮುಂದೆ ಗ್ಯಾರಂಟಿ ಬಿಜಿನೆಸ್ಸು [...] ಕಾರಣ ಈ ಸುಸಂಧಿಯನ್ನು ಸೋಸಾಯಿಟಿಯ ಏಜಂಟರು ಕಳೆದುಕೊಳ್ಳಲಾರರೆಂದು ನಮಗೆ ಸ[...] ಭರವಸೆ. ಇದಲ್ಲದೆ ಹೊಸ ಜನರು ಸಹ ಏಜನ್ಸಿ ತೆಗೆದುಕೊಂಡು ಈ ಸ್ಪರ್ಧೆಯಲ್ಲಿ ಭಾಗವಹಿಸಲು[...] ಬಗೆಯ ಅಡ್ಡಿ ಇಲ್ಲ.

ಮತಿಯೊ ಫಾಲಕೋನ್

★

ಲೇಖಕರು :
ಮ. ಅ. ದೊರೆಸ್ವಾಮಿ ಅಯ್ಯಂಗಾರ್
M. A. LL.B. ಅಡ್ವೊಕೇಟ, ಮೈಸೂರು

★

ಮತಿಯನು ಜಗತ್ತಿನ ದೃಷ್ಟಿಯಲ್ಲಿ ಅಪರಾಧಿ ಆದರೂ ಕಾಡುದೊಡ್ಡಿಯಲ್ಲಿರುವವರಿಗೆಲ್ಲ ಅವನ ವಿಷಯಕ್ಕೆ ಭಯವೂ ಗೌರವವೂ ಇದ್ದುವು. ಅವನು ಪ್ರೀತನಾದರೆ ಮಿತ್ರನಂತೆ; ರೊಚ್ಚಿಗೆದ್ದರೆ ಯಮನಂತೆ. ಗೈನೆಟ್ಟೊ ತನ್ನ ಆಡನ್ನು ಕದ್ದ ಕಳ್ಳನಾದರೂ ಅವನಿಗೆ ಆಶ್ರಯ ಕೊಟ್ಟು ದ್ರೋಹ ಬಗೆದ ತನ್ನ ಮಗನನ್ನು ನೋಡಿ ಮತಿಯನಿಗೆ ಸಹಿಸಲಾರದಷ್ಟು ಸಂತಾಪವಾಯಿತು. ಮಗನ ಹೆಸರು 'ಭಾಗ್ಯವಾನ್' ಎಂದು. ಆದರೆ ಗುಣಕ್ಕೆ ಯಾರು ಹೊಣೆ? .

ಯುರೋಪು ಖಂಡದಲ್ಲಿ ಫ್ರಾನ್ಸಿಗೆ ಸೇರಿರುವ ಕಾರ್ಸಿಕಾ ದ್ವೀಪದಲ್ಲಿ ವೆಚ್ಚಿಯೋ (Vecchio) ಬಂದರನ್ನು ಬಿಟ್ಟು ಸ್ವಲ್ಪ ದೂರ ಒಳಕ್ಕೆ ಹೋದೆವೆಂದರೆ ವಿಸ್ತಾರವಾದ ಗುಡ್ಡಗಾಡು ಪ್ರದೇಶವು ಆರಂಭವಾಗುತ್ತದೆ. ಈ ಗಟ್ಟಬೆಟ್ಟದ ಪ್ರದೇಶದಲ್ಲಿ ದಟ್ಟವಾದ ಗಿಡಬಳ್ಳಿ ಪೊದರುಗಳಿಂದ ತುಂಬಿರುವ ಕಾಡುಗಳು ಅಲ್ಲಲ್ಲಿ ಇರುವುವು. ಈ ಕಾಡುಗಳ ಮಧ್ಯೆ ಕೆಲಕಡೆ ಕಾಡು ಜನರ ದೊಡ್ಡಿಗಳು ಇವೆ. ಈ ಜನರು ಕುರಿ ಮಂದೆಗಳನ್ನು ಇಟ್ಟುಕೊಂಡು ಜೀವಿಸುವರು.

ರಾಜಶಾಸನವನ್ನು ಉಲ್ಲಂಘಿಸುವ ಅಪರಾಧಿಗಳಲ್ಲಿ ಅನೇಕ ಮಂದಿ ಶಿಕ್ಷೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಇಂಥಾ ಕಾಡು ದೊಡ್ಡಿ(Maquis)ಗಳಿಗೆ ಓಡಿ ಬಂದು ಸೇರಿಕೊಳ್ಳುತ್ತಿದ್ದರು. ನೀವೇನಾದರೂ ಒಬ್ಬನನ್ನು ಕೊಲೆ ಮಾಡಿದರೆ ವೆಚ್ಚಿಯೋ ಪಟ್ಟಣಕ್ಕೆ ಸಮೀಪದಲ್ಲಿರುವ ಕಾಡು ದೊಡ್ಡಿಗೆ ಹೋಗಿ ಬಿಡಿ. ಕಂದು ಬಣ್ಣದ ಒಂದು ದಪ್ಪ ನಿಲುವಂಗಿಯನ್ನೂ ಮುಸುಕು-ಟೋಪಿಯನ್ನೂ ಮರೆಯದೆ ತೆಗೆದುಕೊಂಡು ಹೋಗಿ. ಈ ಉಡುಪು ಹಾಸಿಗೆಯೂ ಆಗುತ್ತದೆ, ಅವಿತುಕೊಳ್ಳತಕ್ಕ ತೆರೆಯೂ ಆಗುತ್ತದೆ. ದೊಡ್ಡಿಯ ಜನರು ನಿಮ್ಮ ಆಹಾರಕ್ಕೆ ಹಾಲು ಬೆಣ್ಣೆಗಳನ್ನೂ ಹಣ್ಣುಹಂಪಲುಗಳನ್ನೂ ಕೊಡುವರು. ನೀವು ಒಳ್ಳೆಯದಾದ ಒಂದು ಬಂದೂಕವನ್ನೂ ಸಮೃದ್ಧಿಯಾಗಿ ಮದ್ದುಗುಂಡುಗಳನ್ನೂ ಮಾತ್ರ ಇಟ್ಟುಕೊಂಡಿದ್ದರೆ ಸಾಕು. ಮದ್ದುಗುಂಡು ಮುಗಿದು ಹೋಗಿ ಹೊಸದಾಗಿ ತರಬೇಕೆಂದು ದೊಡ್ಡಿಯನ್ನು ಬಿಟ್ಟು ಊರ ಕಡೆ ಬರುವಾಗ ಹೊರತಾಗಿ ನಿಮಗೆ ದೊಡ್ಡಿಯಲ್ಲಿ ಸರ್ಕಾರದವರಿಂದಾಗಲಿ ಮೃತನ ಬಂಧುಗಳಿಂದಾಗಲಿ ಯಾವ ಅಪಾಯವೂ ಇರುವುದಿಲ್ಲ.

ಕ್ರಿ.ಶ. ೧೮—ರಲ್ಲಿ ನಾನು ಕಾರ್ಸಿಕಾದಲ್ಲಿದ್ದಾಗ ಮತಿಯೊ ಫಾಲಕೋನ (Mateo Falcone) ನು ಈ ಕಾಡು ದೊಡ್ಡಿಗೆ ಅರ್ಧ ಹರದಾರಿ ದೂರದಲ್ಲಿ ಮನೆಮಾಡಿಕೊಂಡಿದ್ದನು. ಆ ದೇಶದ ಸ್ಥಿತಿಗತಿಗಳನ್ನು ನೋಡಿದರೆ ಅವನು ಧನಿಕನೆಂದು ಹೇಳಬೇಕು; ಅವನು ತನ್ನ ಮಂದೆಗಳ ವರಮಾನದಿಂದ ಶ್ರೀಮಂತನಂತೆ—ಎಂದರೆ ಏನೂ ಮಾಡದೆ ಜೀವಿಸುತ್ತಿದ್ದನು. ಈಗ ನಾನು ವಿವರಿಸುವ ಘಟನಾವಳಿಯು ನಡೆದ ಎರಡು ವರ್ಷಗಳ ಮೇಲೆ ಅವನನ್ನು ನಾನು ನೋಡಿದಾಗ ಅವನು ಐವತ್ತು ವರ್ಷದವನಾಗಿ ಕಾಣಿಸಿದನು. ದೇಹ ಸ್ವಲ್ಪ ಕುಳ್ಳು; ಮೈಕಟ್ಟು ದೃಢವಾಗಿತ್ತು; ಕೂದಲು ಅಚ್ಚ ಕಪ್ಪಾಗಿ ಗುಂಗುರು ಕಟ್ಟಿತ್ತು; ಮೂಗು ಉದ್ದ; ತುಟಿಗಳು ತೆಳ್ಳಗಿದ್ದವು; ಕಣ್ಣುಗಳು ಅಗಲವಾಗಿ ಚಂಚಲವಾಗಿದ್ದವು; ದೇಹವು ಹದಕ್ಕೆ ಕೊಟ್ಟ ತೊಗಲಿನ ಬಣ್ಣಕ್ಕಿದ್ದಿತು. ಗುಂಡು ಹೊಡೆಯುವುದರಲ್ಲಿ ಪ್ರಸಿದ್ಧವಾಗಿರುವ ಆ ದೇಶೀಯರಲ್ಲಿ ಇವನು ಬಹು ಸಮರ್ಥನಾಗಿದ್ದನು. ಅವನು ಹಗಲಿನಂತೆಯೇ ಇರುಳಿನಲ್ಲಿ ಸಹ ಸುಲಭವಾಗಿ ಅಸ್ತ್ರವನ್ನು ಪ್ರಯೋಗಿಸಲು ಶಕ್ತನಾಗಿದ್ದನು. ಒಂದು ದೀಪವನ್ನು ಎಂಭತ್ತು ಅಡಿ ದೂರದಲ್ಲಿ ಒಂದು ಕಾಗದ ಮರೆಮಾಡಿ ಇಟ್ಟರೆ ಅವನು ಗುರಿ ತೆಗೆದು ಮೊದಲು ಆ ದೀಪಕ್ಕೆ ಹೊಡೆದು ಆರಿಸಿಬಿಟ್ಟು ಆ ತರುವಾಯ ಕಡುಗತ್ತಲೆಯಲ್ಲಿ ಆ ಕಾಗದದ ಮೇಲೆ ಗುಂಡು ಹಾರಿಸಿ ತೂತು ಮಾಡುತ್ತಿದ್ದನಂತೆ. ಮತಿಯನು ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಪ್ರಸಿದ್ಧನಾಗಿದ್ದನು. ಅವನು ಶತ್ರುವಾದರೆ ಎಷ್ಟು ಭಯಂಕರನಾಗಿದ್ದನೋ ಮಿತ್ರನಾಗಿದ್ದರೆ ಅಷ್ಟು ಸಹಾಯಕನಾಗಿದ್ದನು. ಆ ಪ್ರಾಂತ್ಯದಲ್ಲಿ ಎಲ್ಲರೊಡನೆಯೂ ಅವನು ಸೌಜನ್ಯದಿಂದ ಬಾಳುತ್ತಿದ್ದನು. ಅವನ ಮದುವೆಯ ವಿಚಾರದಲ್ಲಿ ಒಂದು ಕಥೆ ಇದ್ದಿತು. ಅವನು ಮದುವೆಯಾಗಬೇಕೆಂದಿದ್ದ ಹೆಣ್ಣನ್ನು ಮತ್ತೊಬ್ಬ ಪ್ರಬಲ ಪುರುಷನು ಮೆಚ್ಚಿದ್ದನು. ಈ ಪುರುಷನ

ಗೋಜಿಗೆ ಹೋಗಲು ಎಂಥವರೂ ಹೆದರುತ್ತಿದ್ದರು. ಈತನು ಒಂದು ದಿವಸ ತನ್ನ ಮನೆಯ ಕಿಟಕಿಯ ಬಳಿ ಕ್ಷೌರ ಮಾಡಿ ಕೊಳ್ಳುತ್ತಿದ್ದಾಗ ಎಲ್ಲಿಂದಲೋ ಒಂದು ಗುಂಡು ಬಂದು ತಗಲಿ ಅವನು ಮೃತನಾದನು. ಇದಕ್ಕೆ ಮತಿಯನೇ ಕಾರಣ ನೆಂದು ಎಲ್ಲರೂ ನಂಬಿದರು. ಮತಿಯನು ತಾನು ಬಯಸಿದ್ದ ಹೆಣ್ಣನ್ನೇ ಮದುವೆಯಾಗಿ ಅವಳೊಡನೆ ಸಂಸಾರ ಮಾಡಿಕೊಂಡನು. ಗಿಯುಸೆಪ್ಪ (Giuseppa) ಳು ಮೊದಲು ಮೂರು ಹೆಣ್ಣು ಮಕ್ಕಳನ್ನು ಹೆತ್ತಳು. ಇದು ಅವಳ ಗಂಡನನ್ನು ತುಂಬಾ ರೇಗಿಸಿತು. ಕಡೆಗೆ ಅವಳು ಒಂದು ಗಂಡು ಮಗುವನ್ನು ಹೆತ್ತಳು. ಹೆಣ್ಣು ಮಕ್ಕಳೆಲ್ಲರೂ ಅನುಕೂಲವಾದ ಸ್ಥಳಗಳಿಗೆ ಮದುವೆಯಾಗಿ ಗಂಡಂದಿರ ಮನೆಯಲ್ಲಿ ಬಾಳುತ್ತಿದ್ದರು. ಆಪತ್ಕಾಲದಲ್ಲಿ ಮತಿಯನು ಬೇಕೆಂದರೆ ಈ ಅಳಿಯಂದಿರ ಸಹಾಯವು ಸಿದ್ಧವಾಗಿತ್ತು. ವಂಶೋದ್ಧಾರಕನಾದ ಮಗನಿಗೆ ಫಾರ್ಚುನೇಟೊ (Fortunato= ಭಾಗ್ಯವಾನ್) ಎಂದು ಹೆಸರಿಟ್ಟಿದ್ದರು. ಅವನಿಗೆ ಇನ್ನೂ ಹತ್ತೇ ವರ್ಷವಾಗಿದ್ದರೂ ಮುಂದೆ ಮಹಾಪ್ರಸಿದ್ಧಿಗೆ ಬರತಕ್ಕ ಸೂಚನೆಗಳು ಅವನಲ್ಲಿ ಕಂಡುಬರುತ್ತಿದ್ದವು.

ಒಂದು ದಿವಸ ಬೆಳಿಗ್ಗೆ ಹೊತ್ತಿಗೆ ಮುಂಚೆಯೇ ಮತಿಯನು ತನ್ನ ಹೆಂಡತಿಯನ್ನು ಕರೆದುಕೊಂಡು ಕಾಡು ದೊಡ್ಡಿಯ ಆಚೆಗೆ ಇದ್ದ ತನ್ನದೊಂದು ಮಂದೆಯನ್ನು ನೋಡಿಕೊಂಡು ಬರಲು ಹೊರಟನು. ಹುಡುಗನು ತಾನೂ ಜತೆಯಲ್ಲಿ ಬರಲು ಆಶೆಪಟ್ಟನು. ಅದು ಬಹಳ ದೂರವಾಗಿದ್ದುದರಿಂದ ಮತಿಯನು ಕರೆದುಕೊಂಡು ಹೋಗಲಿಲ್ಲ. ಅಲ್ಲದೆ ಮನೆ ನೋಡಿಕೊಳ್ಳಲು ಒಬ್ಬರು ಇರಬೇಕಾಗಿತ್ತು.

ಸ್ವಲ್ಪ ಹೊತ್ತಾದ ಮೇಲೆ ಹುಡುಗನು ಮನೆಯ ಮುಂದುಗಡೆ ಬಿಸಿಲಿಗೆ ಮೈಬಿಟ್ಟು ಬೆಟ್ಟದ ಸಾಲನ್ನು ನೋಡುತ್ತ ಮುಂದಲ ಭಾನುವಾರ ಪಟ್ಟಣಕ್ಕೆ ತನ್ನ ಮಾವನ ಮನೆಗೆ ಊಟಕ್ಕೆ ಹೋಗಬೇಕಾದ್ದನ್ನು ಕುರಿತು ಯೋಚಿಸುತ್ತಾ ಕುಳಿತಿದ್ದನು. ಅಷ್ಟರಲ್ಲಿ ಸಮೀಪದಲ್ಲಿ ಕೋವಿಯ ಶಬ್ದವಾಯಿತು. ಯಾವನೋ ಒಬ್ಬನು ತೊಡೆಗೆ ಗುಂಡಿನೇಟು ಬಿದ್ದು ತನ್ನ ಕೋವಿಯನ್ನು ಊರಿಕೊಂಡು ಮತಿಯನ ಮನೆಯ ಕಡೆಗೆ ಬರುತ್ತಿದ್ದನು. ಇವನು ಒಬ್ಬ ಅಪರಾಧಿಯು; ಪಕ್ಕದ ಕಾಡು ದೊಡ್ಡಿಯಲ್ಲಿ ಬಂದು ಸೇರಿಕೊಂಡಿದ್ದನು. ಮದ್ದನ್ನು ಕೊಂಡುಕೊಳ್ಳಲು ರಾತ್ರಿ ಪಟ್ಟಣಕ್ಕೆ ಹೋಗಿದ್ದವನು ಒಂದು ಸೇನೆಯ ತಂಡದವನರ ಕಣ್ಣಿಗೆ ಬಿದ್ದನು. ಮಹಾಸಾಹಸದಿಂದ ಅವರೊಡನೆ ಹೋರಾಡಿ ತಪ್ಪಿಸಿಕೊಂಡು ಕಾಡುದೊಡ್ಡಿಯ ಕಡೆಗೆ ಓಡಿದನು. ಸೇನೆ... ಗಡೆಯಿಂದ ಗುಂಡೆಸೆಯುತ್ತಾ ಹಿಂಬಾಲಿಸಿ... ಪ್ರತಿಯಾಗಿ ಗುಂಡು ಹೊಡೆಯುತ್ತಾ ಬಂದೆ... ಓಡಿ ಅವಿತುಕೊಳ್ಳುತ್ತಾ ಬರುತ್ತಿದ್ದನು. ... ಗಾಯವಾದ್ದರಿಂದ ದೊಡ್ಡಿಯನ್ನು ಸಮೀ... ಗಾಗಿ ಶತ್ರುಗಳು ಇವನಿಗೆ ಬಹಳ ... ಬಂದರು.

ಅವನು ಮತಿಯನ ಮಗುವನ್ನು ಕಂಡು ... ಮತಿಯನ ಮಗನಲ್ಲವೇ?" ಎಂದು ಕೇಳಿದನು.

"ಹೌದು"

"ನಾನು ಗ್ಯೆನೆಟ್ಟೊ ಸಾಪೀರೋ (Gianetto ...) ಹಳದಿ ಕತ್ತುಪಟ್ಟಿಯವರು ನನ್ನನ್ನು ... ಬರುತ್ತಿದ್ದಾರೆ. ನಾನು ಹೆಚ್ಚುದೂರ ... ಎಲ್ಲಾದರೂ ಬಚ್ಚಿಡು."

"ನನ್ನ ತಂದೆಯ ಅನುಮತಿ ಇಲ್ಲದೆ ... ಅವನೇನು ಹೇಳುವನೋ?"

"ನೀನು ಮಾಡಿದ್ದು ಒಳ್ಳೆಯದು ಎನ್ನು..."

"ನಿನಗೆ ಹೇಗೆ ಗೊತ್ತು?"

"ಜಾಗ್ರತೆ ನನ್ನನ್ನು ಬಚ್ಚಿಡು, ... ಇದ್ದಾರೆ."

"ನನ್ನ ತಂದೆ ಬರಲಿ."

"ನಾನು ಕಾಯಲಾರೆ. ಸರ್ವನಾಶ! ... ನಿಮಿಷಗಳಲ್ಲಿ ಅವರು ಬರುವರು. ... ಬಚ್ಚಿಡು. ಇಲ್ಲದಿದ್ದರೆ ನಿನ್ನನ್ನು ಕೊಂದು..."

ಹುಡುಗನು ಸ್ವಲ್ಪವೂ ತಲ್ಲಣವಿಲ್ಲದೆ ... "ನಿನ್ನ ಕೋವಿಯು ಬರಿದಾಗಿದೆ, ನಿನ್ನ ... ಮಿಕ್ಕಿಲ್ಲ."

"ನನ್ನ ಕೈಗತ್ತಿ ಇದೆ."

"ಆದರೆ ನನ್ನಷ್ಟು ವೇಗವಾಗಿ ನೀನು ..."

ಬಾಲಕನು ಅಲ್ಲಿಂದ ದೂರವಾಗಿ ನೆಗೆದು ... ಕದಂತೆ ನಿಂತನು.

"ನೀನು ಮತಿಯೊ ಫಾಲಕೋನನ ಮಗ... ನಿನ್ನ ಮನೆಯ ಮುಂದೆ ಅವರು ನನ್ನನ್ನು ... ಬಿಟ್ಟುಕೊಡುತ್ತೀಯೋ?"

ಈ ಮಾತು ಮಗುವಿನ ಮನಸ್ಸಿಗೆ ... ಹತ್ತಿರ ಬಂದು "ನಾನು ನಿನ್ನನ್ನು ... ಕೊಡುತ್ತೇನೆ" ಎಂದು ಕೇಳಿದನು.

ಕಿಸೆಯಲ್ಲಿ ಹುಡುಕಿ ಐದು ವರಾಹದ ನಾಣ್ಯವನ್ನು ತೆಗೆದನು. ಮದ್ದನ್ನು ಕೊಂಡುಕೊಳ್ಳಲು ಅವನು ಅದನ್ನು ಕೂಡಿಟ್ಟದ್ದಿರಬೇಕು. ಹುಡುಗನು ಅದನ್ನು ನೋಡಿ ಆನಂದಿಸಿ ಅವನ ಕೈಯಿಂದ ಕಿತ್ತುಕೊಂಡು, "ಭಯಪಡಬೇಡ" ಎಂದನು.

ಬಾಲಕನು ಮನೆಯ ಪಕ್ಕದಲ್ಲಿದ್ದ ಹುಲ್ಲಿನ ಮೆದೆಯಲ್ಲಿ ಒಂದು ಗೂಡಿನಂತೆ ತೋಡಿ ಗೈನೆಟ್ಟೋವನ್ನು ಅದರಲ್ಲಿ ಮರೆಸಿಟ್ಟು ಹುಲ್ಲನ್ನು ಮೊದಲಂತೆ ಸರಿಮಾಡಿಟ್ಟನು. ಕಾಡು ಜನರ ಬುದ್ಧಿಗೆ ಸಹಜವಾದ ಚುರುಕಿನಿಂದ ಹಾಗೆಯೇ ಸ್ವಲ್ಪ ಯೋಚಿಸಿ ಆ ಮೆದೆಯ ಬಳಿ ಮನೆಯ ಬೆಕ್ಕನ್ನೂ ಅದರ ಮರಿಗಳನ್ನೂ ಆಡುತ್ತಿರುವಂತೆ ಇರಿಸಿ, ಮನೆಗೆ ಬರತಕ್ಕ ದಾರಿಯಲ್ಲಿ ಚೆಲ್ಲಿದ್ದ ರಕ್ತದ ಕಲೆಗಳಿಗೆ ಧೂಳೆರಚಿ, ಹಿಂದಲಂತೆ ಏನೂ ಅರಿಯದವನಂತೆ ಮನೆಯ ಮುಂದುಗಡೆ ಒರಗಿ ಕುಳಿತನು.

ಸ್ವಲ್ಪ ಹೊತ್ತಿನಲ್ಲೀ ಹಳದಿಯ ಕತ್ತುಪಟ್ಟಿಯನ್ನೂ ಕಂದು ಬಣ್ಣದ ಉಡುಪನ್ನೂ ಧರಿಸಿದ್ದ ಆರು ಮಂದಿ ಸೈನಿಕರು ತಮ್ಮ ಅಧಿಕಾರಿಯೊಡನೆ ಅಲ್ಲಿಗೆ ಬಂದರು. ಈ ಅಧಿಕಾರಿಯು ಮತಿಯನಿಗೆ ಯಾವುದೋ ಸಂಬಂಧವಾಗಬೇಕು. (ಕಾರ್ಸಿಕದಲ್ಲಿ ಇತರ ಕಡೆಗಳಿಗಿಂತ ಸಂಬಂಧವನ್ನು ಹೆಚ್ಚು ದೂರ ಕೊಂಡಾಡುತ್ತಾರೆ). ಇವನ ಹೆಸರು ಟಿಯೊಡೋರಿ ಗಾಂಬ (Tiodoro Gamba). ಕದ್ದು ಹೋಗಿದ್ದ ಅಪರಾಧಿಗಳಿಗೆ ಇವನನ್ನು ಕಂಡರೆ ಭಯ; ಅವನು ಎಷ್ಟೋ ಜನರನ್ನು ಇವನು ಹಿಡಿದು ಹಾಕಿದ್ದನು.

ಈ ಅಧಿಕಾರಿಯು ಫಾರ್ಚುನೇಟೋವಿನ ಬಳಿ ಬಂದು, "ತಮ್ಮಾ, ಸೌಖ್ಯವಾಗಿದ್ದೀಯಾ ? ನೀನಾಗಲೇ ಎಷ್ಟು ದೊಡ್ಡವನಾಗಿ ಬಿಟ್ಟೆ! ಈ ಮಾರ್ಗವಾಗಿ ಯಾವನಾದರೂ ಹೋದುದನ್ನು ಕಂಡೆಯಾ ?"

ಹುಡುಗನು ಏನೂ ಅರಿಯದವನಂತೆ "ನಾನು ನಿನ್ನಷ್ಟು ದೊಡ್ಡ ಬೆಳೆದಿಲ್ಲ" ಎಂದು ಹೇಳಿದನು.

"ಸ್ವಲ್ಪದರಲ್ಲೇ ಅಷ್ಟು ಉದ್ದ ಆಗುತ್ತೀ. ಈ ಮಾರ್ಗವಾಗಿ ಒಬ್ಬನು ಹೋದುದನ್ನು ನೋಡಲಿಲ್ಲವೇ, ಹೇಳು?"

"ಈ ಕಡೆ ಒಬ್ಬನು ಹೋದುದನ್ನು ನಾನು ನೋಡಿದ್ದೆನೆಯೇ ?"

"ಹೌದು, ಕರಿಟೋಪಿ ಹಾಕಿಕೊಂಡು ಕೆಂಪು ಹಳದಿ ಪಟ್ಟಿಗಳುಳ್ಳ ಎದೆಗವಚವನ್ನು ಧರಿಸಿದ್ದ ಒಬ್ಬನು."

"ಕರಿಟೋಪಿ ಹಾಕಿಕೊಂಡು ಕೆಂಪು ಹಳದಿ ಪಟ್ಟಿಯ ಎದೆಗವಚವನ್ನು ಧರಿಸಿದ್ದವನು ?"

"ಹೌದು, ಬೇಗ ಹೇಳು, ನನ್ನ ಪ್ರಶ್ನೆಗಳನ್ನೇ ಪುನಃ ಹೇಳಬೇಡ."

"ಈ ದಿವಸ ಬೆಳಗ್ಗೆ ಪಾದ್ರಿಯು ಈ ಮಾರ್ಗವಾಗಿ ಕುದುರೆಯ ಮೇಲೆ ಹೋದನು. ನನ್ನ ತಂದೆಯ ಯೋಗಕ್ಷೇಮವನ್ನು ವಿಚಾರಿಸಿದನು. ನಾನು ಹೇಳಿದೆ—"

"ಒಹೋ, ನೀನು ನನ್ನೊಡನೆ ಠಕ್ಕು ಮಾಡುತ್ತಿರುವೆಯಾ! ಗೈನೆಟ್ಟೋ ಯಾವ ಕಡೆ ಹೋದ, ಬೇಗ ಹೇಳು. ನಾವು ಅವನನ್ನು ಅರಸುತ್ತಿದ್ದೇವೆ. ಅವನು ಹೋದುದು ಇದೇ ಮಾರ್ಗವಾಗಿ."

"ಅದಾರಿಗೆ ಗೊತ್ತು ?"

"ಯಾರಿಗೆ ಗೊತ್ತು ! ನೀನು ಅವನನ್ನು ನೋಡಿದ್ದೀ ಎಂದು ನನಗೆ ಗೊತ್ತು."

"ಮಲಗಿರುವಾಗ ಹೋಗಿಬರತಕ್ಕವರನ್ನೆಲ್ಲಾ ಕಾಣುವುದಕ್ಕಾಗುತ್ತದೆಯೇ ?"

"ಪೋಕರೀ, ನೀನು ಮಲಗಿರಲಿಲ್ಲ. ಗುಂಡುಹಾರಿಸಿದಾಗ ನೀನು ಎದ್ದಿರಬೇಕು."

"ಹಾಗಾದರೆ ನಿನ್ನ ಕೋವಿಗಳು ಅಷ್ಟೊಂದು ಶಬ್ದ ಮಾಡುತ್ತವೆ ಎಂದು ಭಾವಿಸುತ್ತೀಯಾ ? ನಮ್ಮ ತಂದೆಯ ಕೋವಿಗಳು ಅವುಗಳನ್ನು ಮೀರಿಸಿವೆ."

"ನೀನು ಹಾಳಾದೆ! ನೀನು ಗೈನೆಟ್ಟೋವನ್ನು ನೋಡಿ ಬಚ್ಚಿಟ್ಟಿರಬೇಕು. ಸೈನಿಕರೇ ಬನ್ನಿ, ಮನೆಯೊಳಕ್ಕೆ ಹೋಗಿ ಹುಡುಕೋಣ. ಕಾಡುದೊಡ್ಡಿಗೆ ಅವನು ಒಂದು ಕಾಲಲ್ಲಿ ಕುಂಟುತ್ತ ಈಗ ಎಂದಿಗೂ ಹೋಗಲಾರನು. ಅಲ್ಲದೆ ರಕ್ತದ ಕಲೆಗಳು ಈ ಮನೆಯ ಬಳಿಗೆ ನಿಂತುಹೋಗಿವೆ."

"ಸರಿ, ತಾನಿಲ್ಲದಾಗ ತನ್ನ ಅನುಮತಿ ಇಲ್ಲದೆ ನೀವು ಮನೆಯೊಳಕ್ಕೆ ನುಗ್ಗಿದ್ದು ತಿಳಿದರೆ ಅಪ್ಪನು ಏನು ಹೇಳುವನು "ಸುಮ್ಮನಿರುವನೇ ?" ಎಂದು ಹುಡುಗನು ಬಹು ತಿರಸ್ಕಾರದಿಂದ ನುಡಿದನು.

ಅಧಿಕಾರಿಯು ಅವನ ಕಿವಿಯನ್ನು ಹಿಂಡುತ್ತಾ, "ಭ್ರಷ್ಟ, ನಿನಗೆ ತಕ್ಕದ್ದು ಮಾಡುತ್ತೇನೆ. ನನ್ನ ಕತ್ತಿಯ ದೊಣ್ಣೆಯಿಂದ ನಿನಗೆ ಇಪ್ಪತ್ತು ಏಟುಗಳನ್ನು ಹಾಕಿದರೆ ನೀನು ಹೇಳಿದಂತೆ ಕೇಳುತ್ತೀಯೆ" ಎಂದನು. ಹುಡುಗನು ಮತ್ತಷ್ಟು ಹೆಚ್ಚಾಗಿ ತಿರಸ್ಕಾರಮಾಡುತ್ತ, "ನನ್ನ ತಂದೆ ಮತಿಯೊ ಫಾಲಕೋನನು" ಎಂದು ಒತ್ತಿ ಹೇಳಿದನು. ಅಧಿಕಾರಿಯು ರೇಗಿ, "ಕಳ್ಳ ಮೂರ್ಖ, ನಿನ್ನನ್ನು ಸೆರೆಮನೆಗೆ ಹಾಕಿ ಕಾಲುಗಳಿಗೆ ಸರಪಣಿ ತೊಡಸಿ ಗಲ್ಲಿಗೆ ಹಾಕುತ್ತೇನೆ" ಎಂದು ಆರ್ಭಟಿಸಿದನು. ಹುಡುಗನು ಕೇಕೆ

ಹಾಕಿ ನಗುತ್ತಾ, "ನನ್ನ ತಂದೆ ಮತಿಯೊ ಫಾಲಕೋನನು" ಎಂದು ಮತ್ತೆ ಹೇಳಿದನು.

ಒಬ್ಬ ಸೈನಿಕನು ಮೆಲ್ಲಗೆ ತನ್ನ ಅಧಿಕಾರಿಗೆ "ಮತಿಯ ನೊಡನೆ ಮಾತ್ರ ನಾವು ದ್ವೇಷಕಟ್ಟಿಕೊಳ್ಳದೆ ಇರೋಣ" ಎಂದು ಎಚ್ಚರಿಸಿದನು. ಅಧಿಕಾರಿಯು ಏನು ಮಾಡುವುದಕ್ಕೂ ತಿಳಿಯದೆ ಸುಮ್ಮನೆ ಯೋಚಿಸುತ್ತಾ ನಿಂತನು. ಮನೆಯನ್ನು ಒಬ್ಬಿಬ್ಬರು ಸೈನಿಕರು ಹೋಗಿ ಹುಡುಕಿಕೊಂಡು ಬಂದಿದ್ದರು. ಒಬ್ಬ ಸೈನಿಕನು ಹಲ್ಲಿನ ಮೆಡೆಯ ಬಳಿ ಬಂದು ಒಂದು ಸಲ ಚುಚ್ಚಿ ನೋಡಿದನು. ಯಾವುದೂ ಕದಲಲಿಲ್ಲ. ಫಾರ್ಚುನೇಟನು ಬೆಕ್ಕನ್ನು ನೇವರಿಸುತ್ತಾ ನಿರಾತಂಕದಿಂದ ಕುಳಿತಿದ್ದನು. ಸೈನಿಕರು ನಿರಾಶರಾಗಿ ಹಿಂತಿರುಗುವ ಸನ್ನಾಹಕ್ಕೆ ತೊಡಗಿದ್ದರು. ಅಧಿಕಾರಿಯು ಮತಿಯನ ಮಗನು ಭಯಕ್ಕೆ ಸಗ್ಗತಕ್ಕವನಲ್ಲವೆಂದು ಮನಗಂಡು ನಯದಿಂದ ಒಂದು ಕಡೆಯ ಪ್ರಯತ್ನವನ್ನು ಮಾಡಿ ನೋಡಿ ಬಿಡಬೇಕೆಂದು ನಿಶ್ಚಯಿಸಿದನು.

"ಮಗು, ನೀನು ತುಂಬಾ ಚತುರನು. ಮುಂದಕ್ಕೆ ಬರತಕ್ಕವನು. ನೀನು ನನ್ನೊಡನೆ ಕಳ್ಳಾಟವಾಡುತ್ತಿರುವೆ. ನಿನ್ನನ್ನು ನಾನು ಸುಲಭವಾಗಿ ಹಿಡಿದು ಕರೆದುಕೊಂಡು ಹೋಗಬಲ್ಲೆನು. ಆದರೆ ನಿಮ್ಮ ತಂದೆಗೆ ಅದರಿಂದ ತೊಂದರೆಯಾದೀತೆಂದು ಸುಮ್ಮನಿದ್ದೇನೆ."

"ಅಯ್ಯೋ! ಪಾಪ!"

"ನಿಮ್ಮ ತಂದೆ ಬಂದ ಮೇಲೆ. ನೀನು ನನಗೆ ಸುಳ್ಳು ಹೇಳಿದೆ ಎಂದು ನಾನು ಹೇಳಿದ್ದೇ ಆದರೆ ನಿನಗೆ ರಕ್ತ ಬರುವ ವರೆಗೂ ಅವನು ಹೊಡೆಯದೆ ಬಿಡನು."

"ಹಾಗಾದರೆ ನನ್ನನ್ನು ಹೊಡೆಯುವನೇ?"

"ನೋಡು ಬೇಕಾದರೆ. ಅದು ಹೋಗಲಿ, ನಿನಗೆ ಒಂದು ಇನಾಮು ಕೊಡುತ್ತೇನೆ."

"ಅಣ್ಣಯ್ಯ, ಇಲ್ಲಿ ನೋಡು, ನಿನಗೆ ಒಂದು ಮಾತು ಹೇಳುತ್ತೇನೆ. ನೀನು ಇಲ್ಲಿ ಇನ್ನೂ ಸಾವಕಾಶ ಮಾಡಿದ್ದೇ ಆದರೆ ಗೈನೆಟ್ಟೋವು ಕಾಡುದೊಡ್ಡಿಗೆ ಹೋಗಿ ಸೇರಿಕೊಂಡು ಬಿಡುತ್ತಾನೆ. ಆಮೇಲೆ ಅವನನ್ನು ಹಿಡಿಯಬೇಕಾದರೆ ಯಾವನಿಗೂ ಆಗುವುದಿಲ್ಲ."

ಅಧಿಕಾರಿಯು ತನ್ನ ಕಿಸೆಯಿಂದ ಒಂದು ಬೆಲೆಯುಳ್ಳ ಗಡಿಯಾರವನ್ನು ತೆಗೆದನು. ಅದನ್ನು ಕಂಡು ಫಾರ್ಚುನೇಟೋವಿನ ಕಣ್ಣುಗಳು ಅರಳಿದವು.

"ನೀನು ಇಂಥಾ ಗಡಿಯಾರವನ್ನು ಕತ್ತಿನಲ್ಲಿ ಹಾಕಿಕೊಂಡು ವೆಚ್ಚಿಯೋ ನಗರದ ಬೀದಿಗಳಲ್ಲಿ ನವಿಲಂತೆ ಮೆರೆಯಬೇಕೆಂದು ಆಶಿಸುತ್ತೀಯಲ್ಲವೇ? ಜನ... ಎಷ್ಟು ಎಂದು ನಿನ್ನನ್ನು ಕೇಳುವರು; ನೀ... 'ನನ್ನ ಗಡಿಯಾರದಲ್ಲಿ ನೋಡಿ' ಎಂದು ಹೇ...

"ನಾನು ದೊಡ್ಡವನಾದ ಮೇಲೆ ನನ್ನ ತ... ಗಡಿಯಾರ ಕೊಡುತ್ತಾನೆ."

"ಇರಬಹುದು. ಆದರೆ ನಿನಗಿಂತಲೂ ... ನಿನ್ನ ಮಾವನ ಮಗನಲ್ಲಿ ಆಗಲೇ ಒಂದು ... ನನ್ನ ಗಡಿಯಾರವು ಅದಕ್ಕಿಂತ ಎಷ್ಟೋ ...

ಮಗುವು ಆಶಾಚಿತ್ತನಾಗಿ ಉಸಿರ್ಗಟ್ಟಿ... ಅಧಿಕಾರಿಯು ಗಡಿಯಾರವನ್ನು ಹುಡುಗನ ... ಮುಂದಕ್ಕೆ ಸುಳಿದಾಡಿಸುತ್ತ ಪರಿಪರಿಯಾ... ಲಾರಂಭಿಸಿದನು. ಹುಡುಗನು ಆಸೆಯು ಬಲ... ಅಧಿಕಾರಿಯು ತನ್ನನ್ನು ಹಾಸ್ಯಮಾಡ... ಸ್ವಲ್ಪ ಸಂಶಯಿಸಿದನು. ಅಧಿಕಾರಿಯು ... ದನು. ಅಧಿಕಾರಿಯು ತನ್ನಿಂದ ಸಂಗ... ಗಡಿಯಾರವನ್ನು ಕೊಡುವೆ ನೆಂಬ... ಕನಿಗೆ ಮತ್ತೆ ಸಂಶಯವು ಸುಳಿಯಿತು. ... ಆಣೆಭಾಷೆ ಇಟ್ಟುಕೊಂಡು ತನ್ನ ಸೈನಿಕ... ವನ್ನು ಅವನಿಗೆ ಕೊಡಿಸಲು ಸಾಕ್ಷಿ... ನಂಬಿಕೆ ಹುಟ್ಟಿಸಿದನು. ಗಡಿಯಾರವನ್ನು ... ತಲೆಗೆ ತಗಲುವಂತೆ ಅಧಿಕಾರಿಯು ಹಿಡಿ... ಸುತ್ತಾ ಬಂದನು. ಹುಡುಗನ ಮನ... ಮರ್ಯಾದಾಬುದ್ಧಿಗೂ ಗಡಿಯಾರದ ... ತುಮುಲ ಯುದ್ಧವು ನಡೆಯಲಾರಂಭಿಸಿ... ಮುಖವು ಬಿಳುಪೇರಿತು, ಎದೆಯು ಉಬ್ಬಿ... ಯಿತು. ಗಡಿಯಾರವು ಅವನ ಕೆನ್ನೆಯನ್ನು ... ಇದ್ದಿತು. ಕಡೆಗೆ ಅವನ ಬಲಗೈ ಕೆನ್ನೆ... ಯಿತು; ಕೈಬೆರಳುಗಳು ಗಡಿಯಾರವನ್ನು ಅಮುಕಿ ಹಿಡಿದುಕೊಂಡವು. ಗಡಿಯಾರವು ... ಅಧಿಕಾರಿಯು ಮಾತ್ರ ಸರಪಣಿಯನ್ನು ... ಕೊಂಡಿದ್ದನು. ಮುಖವು ಕ್ರಮವಾಗಿ ... ತಿರುಗಿತು. ಕಡೆಗೆ ಆಶೆಯೇ ಜಯಿಸಿತು ... ಎಡಗೈಯು ಹಾಗೆಯೇ ಮೇಲಕ್ಕೆ ... ತೋರಿಸಿಬಿಟ್ಟು ಕೆಳಗಾಯಿತು. ಒಡನೆಯೇ ... ಸರಪಣಿಯು ಸರಿದು ಅವನ ಬಲಗೈ... ಹುಡುಗನು ಹುಲ್ಲುಮೆದೆಯಿಂದ ಸ್ವಲ್ಪ ...

ಅಷ್ಟರೊಳಗೆ ಸೈನಿಕರು ಹುಲ್ಲುಮೆದೆಯನ್ನು ಕೀಳಲಾರಂಭಿಸಿದ್ದರು. ಆದರ ಒಂದು ಕಡೆಯಿಂದ ರಕ್ತಸಿಕ್ತನಾಗಿದ್ದ ಗ್ರೈನೆಟ್ಟೊ ತನ್ನ ಕೈಗತ್ತಿಯನ್ನು ಹಿಡಿದುಕೊಂಡು ಹೊರಬಿದ್ದನು. ಆದರೆ ಅವನ ಏಟು ಬಿದ್ದ ಕಾಲು ಬೆರೆತು ಹೋಗಿದ್ದುದರಿಂದ ಅವನು ನಡೆಯಲಾರದೆ ಕೆಳಕ್ಕುರುಳಿದನು. ಕೂಡಲೇ ಸೈನಿಕರೂ ಅಧಿಕಾರಿಯೂ ಕೈಗತ್ತಿಯನ್ನು ಕಿತ್ತುಕೊಂಡು ಅವನನ್ನು ಬಂಧಿಸಿದರು. ಅಪರಾಧಿಯು ಫಾರ್ಚುನೇಟೋವಿನ ಕಡೆ ತಿರುಗಿ ಅತಿ ತಿರಸ್ಕಾರದಿಂದ "—ನ ಮಗನೇ" ಎಂದನು. ಹುಡುಗನು ಅವನು ಕೊಟ್ಟಿದ್ದ ನಾಣ್ಯವನ್ನು ಹಿಂದಕ್ಕೆಸೆದನು. ಆದರೆ ಅವನು ಅದರ ಕಡೆ ನೋಡಲಿಲ್ಲ. ಅಪರಾಧಿಯು ನಡೆಯಲು ಆಗುತ್ತಿರಲಿಲ್ಲವಾದುದರಿಂದ ಸೈನಿಕರು ಅವನನ್ನು ಎತ್ತಿಕೊಂಡು ಹೋಗಲು ಒಂದು ಡೋಲಿಯನ್ನು ಕಟ್ಟುವುದರಲ್ಲಿ ನಿರತರಾದರು.

ಈ ಸಮಯದಲ್ಲಿ ಮತಿಯೊ ಫಾಲಕೋನನು ಪತ್ನಿಸಮೇತ ಅಲ್ಲಿಗೆ ಬಂದನು. ಅವಳು ಹೊರಲಾರದ ಒಂದು ಕಾಯಿಮೂಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬರುತ್ತಿದ್ದಳು. ಮತಿಯನು ಮಾತ್ರ ಒಂದು ಬಂದೂಕವನ್ನು ಹೆಗಲ ಮೇಲೆ ಹಾಕಿಕೊಂಡು ಮತ್ತೊಂದನ್ನು ಕೈಲಿ ಹಿಡಿದು ಜಗ್ಗುಹಾಕುತ್ತ ಬರುತ್ತಿದ್ದನು. ಗಂಡಸರು ಆಯುಧಗಳ ಹೊರತಾಗಿ ಮತ್ತಾವ ಹೊರೆಯನ್ನು ತರುವುದೂ ಸಹ ಅಪಮಾನಕರ. ಮತಿಯನು ತನ್ನ ಮನೆಯ ಮುಂದೆ ಸೈನಿಕರನ್ನು ಕಂಡು, ಹೆಂಡತಿಯನ್ನು ಹೊರೆಯನ್ನು ಒತ್ತಟ್ಟಿಗಿಟ್ಟು ನಿಲ್ಲುವಂತೆ ಹೇಳಿ, ಆಯುಧವನ್ನು ಪ್ರಯೋಗಿಸಲು ಸಿದ್ಧನಾಗಿಟ್ಟುಕೊಂಡು ಜಾಗರೂಕತೆಯಿಂದ ಮನೆಯ ಕಡೆಗೆ ಬರಲಾರಂಭಿಸಿದನು. ಅವನ ಹೆಂಡತಿಯು ಅವನ ಹೆಗಲ ಮೇಲಿದ್ದ ಕೋವಿಯನ್ನು ತಾನು ತೆಗೆದುಕೊಂಡು ಅವನ ಕೋವಿಗೆ ಮದ್ದನ್ನು ಒದಗಿಸಲು ಸಿದ್ಧಳಾಗಿ ಹಿಂಬಾಲಿಸಿದಳು. ಇವರು ಹೀಗೆ ಬರುತ್ತಿರುವುದನ್ನು ಕಂಡು ಸೈನಿಕರು ತುಂಬಾ ಚಿಂತೆಗೀಡಾದರು. ತಮ್ಮ ಬಂದಿಯು ಮತಿಯನಿಗೇನಾದರೂ ಬಂಧುವಾಗಿದ್ದರೆ ಅವನ ಎರಡು ಕೋವಿಗಳೂ ತಮ್ಮ ಮೇಲೆ ಘಾತಮಾಡುವುದು ಸಿದ್ಧವೆಂದು ಅವರು ಬಗೆದರು. ಇಂಥಾ ಸಂಕಟ ಸಂಧಿಯಲ್ಲಿ ಸೇನಾಧಿಕಾರಿಯು ನಯರೀತಿಯಿಂದ ಮತಿಯನನ್ನು ಒಲಿಸಿಕೊಳ್ಳಬೇಕೆಂದು ಅವನನ್ನು ಎದುರ್ಗೊಂಡು ಕುಶಲಪ್ರಶ್ನೆಗೆ ಆರಂಭಿಸಿದನು.

"ನಿನ್ನನ್ನು ನೋಡಿ ಬಹು ದಿನಗಳಾಗಿದ್ದವು. ಈ ದಾರಿಯಲ್ಲಿ ಹೋಗುತ್ತಿದ್ದಾಗ ನಿಮ್ಮನ್ನು ಕಂಡು ಮಾತಾಡಿಸಿ ಹೋಗೋಣವೆಂದು ನಿಂತೆನು. ಈ ದಿವಸ ಒಂದು ದೊಡ್ಡ ಶಿಕಾರಿಯನ್ನು ಹಿಡಿದಿದ್ದೇವೆ. ಈಗ ತಾನೇ ಗ್ರೈನೆಟ್ಟೊ ಸಾಪಿರೋವನ್ನು ಸೆರೆಹಿಡಿದಿದ್ದೇವೆ."

"ದೇವರು ದೊಡ್ಡವನು! ಹೋದವಾರ ಅವನು ನಮ್ಮ ಒಂದು ಆಡನ್ನು ಕದ್ದನು" ಎಂದು ಗಿಯುಸೆಪ್ಪಾ ಹೇಳಿದಳು.

"ಪಾಪ, ಬಡಪಾಯಿ ಹೊಟ್ಟೆಗಿಲ್ಲದೆ ಇದ್ದನು" ಎಂದು ಮತಿಯನು ಹೇಳಿದನು.

ಸೇನಾಧಿಕಾರಿಯು ಹೇಳಿದನು—"ದುರಾತ್ಮನು ಸಿಂಹದಂತೆ ಹೋರಾಡಿದನು. ನಮ್ಮಲ್ಲಿ ಒಬ್ಬ ಸೈನಿಕನನ್ನು ಕೊಂದು ಮತ್ತೊಬ್ಬ ಅಧಿಕಾರಿಯ ಕೈಮುರಿದನು. ಅಲ್ಲಿಂದ ಓಡಿಬಂದು ಪಿಶಾಚಿಗೆ ಸಹ ಗೋಚರಿಸದಂತೆ ಅವಿತುಕೊಂಡಿದ್ದನು. ಫಾರ್ಚುನೇಟೋ ಇಲ್ಲದಿದ್ದರೆ ನಾವು ಅವನನ್ನು ಕಂಡು ಹಿಡಿಯಲಾಗುತ್ತಿರಲಿಲ್ಲ."

"ಫಾರ್ಚುನೇಟೋ!" ತಂದೆ ತಾಯಿಗಳಿಬ್ಬರೂ ಅಂದರು.

"ಹೌದು. ಅಪರಾಧಿಯು ಅಲ್ಲಿರುವ ಹುಲ್ಲು ಮೆದೆಯಲ್ಲಿ ಅಡಗಿದ್ದನು. ಹುಡುಗನು ಅದನ್ನು ತೋರಿಸಿಕೊಟ್ಟನು. ಅವನ ಮಾವನಿಗೆ ನಾನು ಹೇಳಿ ಅವನು ಹುಡುಗನಿಗೆ ಈ ಕೆಲಸಕ್ಕೆ ತಕ್ಕ ಬಹುಮಾನವನ್ನು ಕಳುಹಿಸುವಂತೆ ಮಾಡುತ್ತೇನೆ. ಸರ್ಕಾರಕ್ಕೆ ನಾನು ಕಳುಹಿಸತಕ್ಕ ವರದಿಯಲ್ಲಿ ಅವನ ಮತ್ತು ನಿನ್ನ ಹೆಸರುಗಳನ್ನು ಕಾಣಿಸುತ್ತೇನೆ."

"ಸರ್ವನಾಶ!" ಎಂದು ಮತಿಯೊ ಮೆಲ್ಲಗೆ ಹೇಳಿದನು.

ಇಷ್ಟರಲ್ಲಿ ಗ್ರೈನೆಟ್ಟೊ ಡೋಲಿಯಲ್ಲಿ ಹೊರಡಲು ಅಣಿಯಾಗಿದ್ದಿತು. ಅವನು ಮತಿಯನನ್ನು ಕಂಡು ಅವನ ಮನೆ ಕಡೆಗೆ ಉಗುಳಿ "ದ್ರೋಹಿಯ ಮನೆ" ಎಂದು ಬಯ್ದನು. ಸಾಯಲು ಸಿದ್ಧನಾಗಿದ್ದವನು ಹೊರತು ಮತ್ತಾರೂ ಮತಿಯನಿಗೆ ಈ ರೀತಿ ಅಪಮಾನಿಸಲು ಸಮರ್ಥರಾಗುತ್ತಿರಲಿಲ್ಲ. ಇಂಥಾ ಮಾತು ಕಿವಿ ಹೊಕ್ಕೊಡನೆಯೇ ಅವನ ಕೈಗತ್ತಿಯು ಅವನ ಪ್ರಾಣವನ್ನು ಹರಣ ಮಾಡುತ್ತಿತ್ತು. ಈಗ ಮತಿಯನು ಮತ್ತೇನೂ ಮಾಡದೆ ದಂಗು ಬಡಿದವನಂತೆ ತನ್ನ ಕೈಯನ್ನು ಹಣೆಗೆ ಅಮುಕಿ ಹಿಡಿದುಕೊಂಡನು. ಫಾರ್ಚುನೇಟೋ ತಂದೆ ಬಂದೊಡನೆ ಮನೆಯೊಳಗೆ ಹೊಕ್ಕಿದ್ದವನು ಈಗ ಒಂದು ಪಾತ್ರೆಯಲ್ಲಿ

ಸ್ವಲ್ಪ ಹಾಲನ್ನು ತಂದು ಗೈನೆಟ್ಟೊವಿಗೆ ಕೊಡಲು ಹೋದನು. "ನನ್ನಿಂದ ದೂರ ಹೋಗು!" ಎಂದು ಅವನು ಅರಚಿಕೊಂಡು ತನ್ನ ಶತ್ರುಗಳಾಗಿದ್ದ ಸೈನಿಕರಿಂದ ನೀರು ತೆಗೆದುಕೊಂಡು ಕುಡಿದನು. ಸೇನಾಧಿಕಾರಿಯು ಮತಿಯನಿಗೆ ಅಭಿವಂದಿಸಿ ಬಂದಿಯನ್ನು ಸಾಗಿಸಿಕೊಂಡು ಸೈನಿಕರೊಡನೆ ಹೊರಟು ಹೋದನು. ಅವನ ಅಭಿವಂದನೆಗೆ ಮತಿಯೊ ಉತ್ತರ ಕೊಡಲಿಲ್ಲ.

ಹತ್ತು ನಿಮಿಷಗಳವರೆಗೆ ಮತಿಯನ ಬಾಯಿಂದ ಮಾತು ಹೊರಡಲಿಲ್ಲ. ಮಗುವು, ಭೀತದೃಷ್ಟಿಯಿಂದ, ತಾಯಿಯನ್ನೂ ರೋಷದಿಂದ ತನ್ನನ್ನು ನೋಡುತ್ತಿದ್ದ ತಂದೆಯನ್ನೂ ನೋಡಲಾರಂಭಿಸಿತು.

"ನೀನು ಚೆನ್ನಾಗಿಯೇ ಪ್ರಾರಂಭ ಮಾಡಿರುತ್ತಿ" ಎಂದು ಹುಡುಗನಿಗೆ ಬಹು ಭಯೋತ್ಪಾತಕವಾಗಿ ನುಡಿದನು.

"ಅಪ್ಪಾ!" ಎಂದು ಹುಡುಗನು ಅಳತೊಡಗಿ ತಂದೆಯ ಹತ್ತಿರಕ್ಕೆ ಬಂದನು.

"ದೂರ ಹೋಗು" ಎಂದು ತಂದೆಯು ಆರ್ಭಟಿಸಿದನು. ಹುಡುಗನು ಹೆದರಿ ಹಿಂದಕ್ಕೆ ಸರಿದನು. ಅವನ ಕಿಸೆಯಲ್ಲಿ ಗಡಿಯಾರದ ಸರಪಣಿಯನ್ನು ಕಂಡು ಅವನ ತಾಯಿಯು

"ಈ ಗಡಿಯಾರವನ್ನು ಯಾರು ಕೊಟ್ಟರು?" ಎಂದು ಗದರಿಸಿ ಕೇಳಿದಳು.

"ನಮ್ಮ ಬಂಧುವಾದ ಈಗ ಬಂದಿದ್ದ ಸೇನಾಧಿಕಾರಿ ಕೊಟ್ಟನು."

ಮತಿಯೊ ಗಡಿಯಾರವನ್ನು ಕಿತ್ತುಕೊಂಡು ಬಂಡೆಯ ಮೇಲೆ ಅಪ್ಪಳಿಸಿ ಸಾವಿರ ಚೂರು ಮಾಡಿದನು. ಅನಂತರ ಹೆಂಡತಿಯನ್ನು ಕುರಿತು,

"ಇವನೇನು ನನ್ನ ಮಗನೇ ನಿಜವೇ?" ಎಂದು ಕೇಳಿದನು. ಅವಳು ಕ್ರುದ್ಧಳಾಗಿ ಅವನನ್ನು ಗದರಿಸಿದಳು.

"ಹಾಗಾದರೆ ಈ ಕುಲದಲ್ಲಿ ದ್ರೋಹಾಚರಣೆಗೆ ಕೈ ಹಾಕಲು ಈ ಹುಡುಗನೇ ಪ್ರಥಮನು."

ಹುಡುಗನ ಅಳುವನ್ನು ಲಕ್ಷಿಸದೆ ಮತಿಯೊ ತನ್ನ ಕೋವಿಯನ್ನು ಹೆಗಲಿಗೇರಿಸಿಕೊಂಡು ಹುಡುಗನನ್ನು ತನ್ನ ಹಿಂದೆ ಕರೆದುಕೊಂಡು ಕಾಡುದೊಡ್ಡಿಯ ಕಡೆ ಹೊರಟನು. ಅವನ ಹೆಂಡತಿಯು ಹಿಂದೆಯೇ ಬಂದು ಗಂಡನ ಉದ್ದೇಶವನ್ನು ತಿಳಿಯಲು ಅವನನ್ನು ನಟ್ಟದೃಷ್ಟಿಯಿಂದ ನೋಡುತ್ತ "ಅವನು ನಿನ್ನ ಮಗು" ಎಂದು ಧ್ವನಿಯಿಂದ ಜಾಗರಿಸಿದಳು.

"ನನ್ನನ್ನು ಬಿಟ್ಟು ನಿಲ್ಲು. ನಾನು ... ಎಂದು ಮತಿಯೋ ಗದರಿಸಿದನು. ತಾಯಿ... ವನ್ನು ಒಂದು ಸಲ ಕಟ್ಟಿಕೊಂಡು ಬೀಳ್ಕೊ... ಮನೆಗೆ ಹೋಗಿ ಅಲ್ಲಿದ್ದ ದೇವಮಾತೆಯ ... ಮೌನವಾಗಿ ಪ್ರಾರ್ಥಿಸತೊಡಗಿದಳು.

ಇತ್ತ ಮತಿಯೊ ಮನೆಯಿಂದ ಇನ್ನೂರು ... ಹೋಗಿ ಅಲ್ಲಿದ್ದ ಒಂದು ಕಣಿವೆಯ ಹಳ್ಳಕ್ಕೆ ... ಅಲ್ಲಿ ಕೋವಿಯಿಂದ ನೆಲವನ್ನು ಕುಕ್ಕಿ ನೋಡಿ ... ಮಣ್ಣು ಮೃದುವಾಗಿ ಅಗೆಯಲು ಸುಲಭವಾ... ಗೊತ್ತು ಮಾಡಿದನು.

"ಫಾರ್ಚುನೇಟೋ, ಅಲ್ಲಿರುವ ದೊಡ್ಡ ... ಹತ್ತಿರ ಹೋಗಿ ನಿಲ್ಲು." ಹುಡುಗನು ಹಾಗೆ... ದನು.

"ದೇವತಾ ಪ್ರಾರ್ಥನೆ ಮಾಡು"

"ಅಪ್ಪಾ! ಅಪ್ಪಾ! ನನ್ನನ್ನು ಕೊಲ್ಲಬೇಡ..."

"ಪ್ರಾರ್ಥನೆ ಮಾಡು" ಎಂದು ತಂದೆ... ಧ್ವನಿಯಲ್ಲಿ ಆಜ್ಞೆಮಾಡಿದನು. ಹುಡುಗನು ... ತೊದಲು ದನಿಯಲ್ಲಿ ಎರಡು ಸ್ತೋತ್ರ ಪಾಠಗಳ... ದನು.

"ನಿನಗೆ ಬರತಕ್ಕವು ಇಷ್ಟೇನೋ?"

"ಅಪ್ಪಾ, ಇನ್ನೂ ಎರಡು ಬರುತ್ತವೆ," ಎಂ... ಗಳ ಹೆಸರು ಹೇಳಿದನು.

"ಅವು ಬಹಳ ದೊಡ್ಡವು. ಚಿಂತೆಯಿಲ್ಲ ಹೇಳು..." ಮಗುವು ಹಾಗೆಯೇ ಮಾಡಿತು.

"ಮುಗಿಯಿತೋ?"

'ಅಯ್ಯೊ! ? ಅಪ್ಪಾ, ನನ್ನಲ್ಲಿ ಕರುಣಿಸು! ... ಕ್ಷಮಿಸು! ಇನ್ನು ಮೇಲೆ ಎಂದಿಗೂ ಹೀಗೆ ಮಾಡ... ಗೈನೆಟ್ಟೊವನ್ನು ಮನ್ನಿಸುವಂತೆ ನನ್ನ ... ಬೇಡಿಕೊಳ್ಳುತ್ತೇನೆ." ಹುಡುಗನು ಇನ್ನೂ ಹೇ... ಇದ್ದನು. ಮತಿಯೊ ಕೋವಿಯನ್ನು ಎತ್ತಿ ಗುರಿ...

"ದೇವರು ನಿನ್ನನ್ನು ಮನ್ನಿಸಲಿ!" ಎಂದನು... ತಂದೆಯ ಕಾಲನ್ನು ಹಿಡಿದುಕೊಳ್ಳಬೇಕೆಂದು ... ಬರಲು ಪ್ರಯತ್ನಿಸಿತು. ಆದರೆ ಹಾಗೆ ಮಾಡಲು ... ವಾಗಲಿಲ್ಲ. ಮತಿಯೊ ಗುಂಡನ್ನು ಹಾರಿಸಿದನು. ... ನೇಟೊ ಸತ್ತು ಉರುಳಿದನು.

ಮಗುವಿನ ಶರೀರವನ್ನು ಒಂದು ಬಾರಿ ಸಹ ಕಣ್ಣೆತ್ತಿ ನೋಡದೆ ಮತಿಯೊ ಅದನ್ನು ಹೂಳುವುದಕ್ಕಾಗಿ ಗುದ್ದಲಿ ತೆಗೆದುಕೊಳ್ಳಲು ಮನೆಗೆ ಬಂದನು. ಗುಂಡಿನ ಸದ್ದನ್ನು ಕೇಳಿ ಬೆದರಿ ಅಲ್ಲಿಗೆ ಬರುತ್ತಿದ್ದ ಅವನ ಹೆಂಡತಿಯು ಅವನನ್ನು ಸಂಧಿಸಿ

"ಏನು ಮಾಡಿದೆ ?" ಎಂದು ಕೇಳಿದಳು.

"ನ್ಯಾಯಪರಿಪಾಲನೆ"

"ಅವನೆಲ್ಲಿ ?"

"ಕಣಿವೆಯ ಹಳ್ಳದಲ್ಲಿ ಈಗ ಅವನನ್ನು ಹೂಳುತ್ತೇನೆ. ಅವನು ಧರ್ಮಿಷ್ಠನಾಗಿ ಸತ್ತನು. ಅವನಿಗೆ ಯೋಗ್ಯವಾಗಿ ಸತ್ಕಾರಗಳನ್ನು ನಡೆಸುತ್ತೇನೆ. ನನ್ನ ಅಳಿಯ ತಿಯೊಡೊರೊ ಬಿಯಾಂಚಿ ಬಂದು ನನ್ನೊಡನೆ ವಾಸಮಾಡುವಂತೆ ಹೇಳಿ ಕಳುಹಿಸು."

ಸಣ್ಣ ಕಥೆಗಳನ್ನು ಬರೆವುದರಲ್ಲಿ ಲೋಕದ ಸಕಲ ಜನಾಂಗದವರಲ್ಲೂ ಫ್ರೆಂಚರು ಅದ್ವಿತೀಯರು. ಅವರಲ್ಲಿ ಪ್ರಾಸ್ಪರ್ ಮೇರಿಮೇ (Prosper Merimee 1803-1870) ಎಂಬುವನು ಅದ್ವಿತೀಯನು. ಮೇಲಿನದು ಆತನ ಒಂದು ಪ್ರಸಿದ್ಧವಾದ ಸಣ್ಣ ಕಥೆಯ ಅನುವಾದವು.



ಆರೋಗ್ಯಬಿಂದು

ಗೊರಕೆಗೆ ಮದ್ದು

ಮಲಗಿದಾಗ ಗೊರಕೆ ಹೊಡೆಯುವವರು ಅನೇಕರಿದ್ದಾರೆ. ಆದರೆ ಅವರೆಲ್ಲ ನಿದ್ರೆ ಮುಗಿಯುವ ವರೆಗೆ ಗೊರೆಯು ವದಿಲ್ಲ. ಅವರ ನಿದ್ರಾಕಾಲದ, ಆರಂಭದಲ್ಲಿ ನಡುವೆ ಅಥವಾ ಯಾವಾಗಾದರೊಮ್ಮೆ ಗೊರೆಯುತ್ತಾರೆ. ಆದುದ ರಿಂದ ಗೊರೆಯುವದು ಅವರ ಸ್ವಭಾವವಲ್ಲ; ಅವರು ಮಲಗುವ ರೀತಿಯು ಗೊರಕೆಯನ್ನು ಹುಟ್ಟಿಸುವದೆಂದೆ ನಿಸುವದು. ಉದಾ: ಅಂಗಾತನಾಗಿ ಮಲಗುವದು, ಎದೆಯ ಮೇಲೆ ಕೈಯಿಟ್ಟು ಮಲಗುವದು, ಎತ್ತರವಾದ ತಲೆದಿಂಬಿ ಟ್ಟುಕೊಳ್ಳುವದು ಇವುಗಳಿಂದ ಉಸುರಾಟಕ್ಕೆ ತೊಂದರೆ ಯಾಗಿ ಗೊರಕೆ ಆರಂಭವಾಗುತ್ತದೆ. ಕಾರಣಗಳೇನೇ ಇರಲಿ ಮಗ್ಗಲಾಗಿ ಮಲಗುವದರಿಂದ ಗೊರೆಯುವದು ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಆದನ್ನೇ ಅಭ್ಯಾಸ ಮಾಡಿದರೆ ಗೊರಕೆಯು ನಿಂತೂ ಹೋಗುವದು. ಯಾವಾಗಲೂ ಬಾಯಿ ತೆರೆದಿಡುವ ಸ್ವಭಾವದವರಿಗೂ ಗೊರೆಯುವ ಚಟವಿರುತ್ತದೆ. ಅಂತಹವರು ಮಲಗುವಾಗ ಬಾಯಿಮುಚ್ಚಿ ಮಗ್ಗಲಾಗಿ ಮಲಗಬೇಕು.

* * *

ಕೆಂಗಂಣಿಗೆ ಬೆಚ್ಚಗಿನ ನೀರು

ಕಂಣುಬೇನೆ ಬಂದಾಗ ಮೇಲಿಂದ ಮೇಲೆ ತಂಣೀರನ್ನು ಕಂಣಿಗೆ ಹಚ್ಚಿಕೊಳ್ಳಬೇಕೆನಿಸುವದು. ಆದರೆ ಹಾಗೆ ಮಾಡು ವದರಿಂದ ಪೀಡೆಯು ಹೆಚ್ಚೇ ಆಗುವದು. ಅಂತಹ ಸಮಯ ದಲ್ಲಿ ಕಂಣು ತೊಳೆಯಲಿಕ್ಕೆ ಉಗುರುಬೆಚ್ಚಗಿನ ನೀರನ್ನು ಉಪಯೋಗಿಸುವದೊಳಿತು. ಆದರಿಂದ ಕಣ್ಣೀರಿನ ಸಹಜ ಸ್ರಾವಕ್ಕೆ ತಡೆಯಾಗುವದಿಲ್ಲ. ಮತ್ತು ಮಂದೋಷ್ಣವಾದ ನೀರಿನಿಂದ ಕಂಣಿನ ನರತಂತುಗಳೂ ಬಲಗೊಳ್ಳುತ್ತವೆ.

* * *

ಸೈಕಲ್ಲಿನ ಮೇಲೆ ಬಗ್ಗಿ ಕೂಡಬಾರದು

ಸಹಜವಾಗಿ ಕೂಡುವಾಗಲೂ ಬಗ್ಗಿ ಕೂಡಬಾರದು. ಆದರಿಂದ ಕಸೇರುಕೆಯ (ಬೆನ್ನಿನ) ಕಂಭವು ಡೊಂಕಾಗಿ ಆದರೊಳಗಿನ ಮಿದುಳುಬಳ್ಳಿಗೆ ಒತ್ತಡ ಬರಬರುತ್ತ ಅಲ್ಲಿಯ ನರಗಳು ದುರ್ಬಲ... ಸ್ನಾಯುಗಳ ಸ್ಥಿತಿಸ್ಥಾಪಕ ಗುಣವು ... (ಗೂನು) ಬೆನ್ನಾಗುವದು. ...ಂದ ಮೇಲೆ ... ಕುದುರೆ ಸವಾರಿ ಮಾಡುವಾಗ ಬಗ್ಗಿ ... ಹೆಚ್ಚು ಒತ್ತಡ ಬೀಳುವದು. ಏಕೆಂದರೆ ... ಓಡುವಾಗ ಕೂತವರನ್ನು ಕುಲಕುತ್ತವೆ ... ಬಗ್ಗಿದ ಬೆನ್ನು ಇನ್ನೂ ಹೆಚ್ಚು ಬಗ್ಗಿ ... ಪೀಡೆ ಕೊಡುತ್ತದೆ.

* *

ಕೂಗಣಿ ತೆಗೆಯಬೇಡಿರಿ

ಅನೇಕರಿಗೆ ಯಾವಾಗಲೂ ಕಿವಿಯಲ್ಲಿ ... ಕಾಗದದ ಸುರುಳಿಯನ್ನೊ ಹಾಕಿ ಕೂಗಣಿ(... ಹೊಲಸು)ಯನ್ನು ತೆಗೆಯುವ ಚಟವಿದ್ದು ... ತಕ್ಕ ಕೂಗಣಿ ತೆಗೆಯುವ 'ತಜ್ಞರೂ'(!) ... ತಿರುಗುತ್ತಾರೆ. ಆದರೆ ಕೂಗಣಿಯು ಮಲ... ದಿನಾಲು ವಿಸರ್ಜಿಸಲ್ಪಡಬೇಕಾದ ಹೊಲಸು ... ಕಿವಿಯ ಒಳಭಾಗವನ್ನು ಕ್ರಿಮಿ ಕೀಟ... ದಂತೆ ತಡೆಯುತ್ತದೆ. ಆದನ್ನು ಪೂರ್ಣವಾ... ದರಿಂದ ಕಿವಿಗೆ ಅಪಾಯವೇ ಆಗುತ್ತದೆ ... ಕೂಗಣಿಯನ್ನು ನಮ್ಮ ಪ್ರಕೃತಿಯೇ ... ತಿಳಿಯದಂತೆ ಹೊರಗೆ ಹಾಕುತ್ತದೆ.

* *

ಗಂಜಿ ಕುಡಿಯುವದು ಒಳ್ಳೆ...

ಜ್ವರದಲ್ಲಿ ಬಾಯಿರುಚಿಯಿಲ್ಲದಾಗ ಅಥವಾ ... ಆಹಾರವನ್ನು ಕಚ್ಚಲಿಕ್ಕೆ ಹಲ್ಲುಬೇನೆಯು... ದಾಗ ಅಕ್ಕಿಯ ಗಂಜಿಮಾಡಿ ಕುಡಿಸುವ ... ಆದರೆ ಆ ಕ್ರಮದಿಂದ ಪಾಚನಶಕ್ತಿಯು ... ತ್ತದೆ. ಅಕ್ಕಿಯಲ್ಲಿ, ಜೋಳ್ಳಿನಲ್ಲಿ ಕರಗ... ಬಹಳ ಇರುತ್ತದೆ. ಆದುದರಿಂದ ಬಾ... ಅಕ್ಕಿಯ ಗಂಜಿಯನ್ನು ಕುಡಿದುಬಿಟ್ಟರೆ ... ಅಜೀರ್ಣವಾಗಿಯೇ ಉಳಿದು ಬಾಧೆಯ... ತ್ತದೆ.

* *

ಸತ್ತಮೇಲಿನ ಜೀವನ

ಮೆಂಗೆಬೆಟ್ಟು ವಾಸುದೇವಾಚಾರ್ಯ

★

ಮರಣಾನಂತರವೂ ಜೀವನವಿದೆ. ಸತ್ತವರೊಡನೆ ಮಾತನಾಡಬಹುದು. ಆಪ್ತಮಿತ್ರರು ತೀರಿಕೊಂಡರೆಂದು ಗೋಳಿಡುವ ವಿರಹಿಗಳಿಗೆ ಪರಲೋಕ ವಿದ್ಯೆಯ ಸಹಾಯದಿಂದ ಮೃತಾತ್ಮರ ಸಹವಾಸ ಲಭಿಸುತ್ತಿದೆ. ಅತಿಮಾನವ ಅದ್ಭುತ ಶಕ್ತಿಗಳುಳ್ಳ ವ್ಯಕ್ತಿಗಳಿಗೆ ಪೂರ್ವಜನ್ಮದ ನೆನಪು ಬರುತ್ತಿದೆ. ಮರಣವೆಂದರೆ ಜೀವನದ ರೂಪು ಬದಲಿಸುವ ಒಂದು ಸನ್ನಿವೇಶ.

★

ಮನುಷ್ಯನ ಬಯಕೆಗಳಿಗೆ ಮರಣವೆಂಬ ಒಂದು ಗಡಿಯಿದೆ. ಎಂತಹ ಆಶಾವಾದಿಗಳೂ ಇಹಪ್ರೇಮಿಗಳೂ ತಮ್ಮ ಹಂಚಿಕೆ ಹವಣಿಕೆಗಳಿಗೆ ಸಾವೆಂಬ ಬೇಲಿಯಿದ್ದೇ ಇದೆ ಎಂದು ಅರಿತಿರುವರು. ಮರಣವು ಅನಿವಾರ್ಯ. ನಾವು ಮಾಡುವುದರ ಫಲವನ್ನು ನಾವೇ ಉಂಣುವೆವೆಂದು ಹೇಳಲಾಗದು. ಆದುದರಿಂದ ಮಾಡುವುದನ್ನೆಲ್ಲ ಅರ್ಪಣಬುದ್ಧಿಯಿಂದ ಮಾಡೋಣ; ನಿಸ್ವಾರ್ಥಿಗಳಾಗಿ ಮಾಡೋಣ; ಎಂದು ಮರಣವನ್ನು ಕೂಡ ನೋಡಿ ನಕ್ಕು ಕರ್ಮಯೋಗಿಗಳಾಗುವವರು ಕೆಲವರುಂಟು; ಆದರೆ ಹೇಗೂ ಇಂದಿಲ್ಲ ನಾಳೆ ಸಾವು ತಪ್ಪಿದ್ದಲ್ಲ; ಯಾಕೆ ಸುಮ್ಮನೆ ತೊಂದರೆ ತಕ್ಕೊಳ್ಳುವದು ಎಂದು ಇಹಜೀವನವನ್ನು ಅಸಡ್ಡೆಗೈದು ಸಾಯುವಾಗ ಮನೆಯನ್ನು ಧರ್ಮಶಾಲೆಗಿಂತ ಹೆಚ್ಚು ಹೊಲಸುಮಾಡಿ ಹೋಗುವವರೇ ಹೆಚ್ಚು ಮಂದಿ.

ಈ ಎರಡು ಜಾತಿಯ ಜನರಿಗೂ ಮರಣಾನಂತರವೂ ನಮ್ಮ ಜೀವನವು ಅವಿಚ್ಛಿನ್ನವಾಗಿ ಸಾಗುವುದೆಂಬ ಸತ್ಯವು ಹೆಚ್ಚು ಸುಖ ಸಮಾಧಾನಗಳನ್ನು ಕೊಡಬಲ್ಲದು. ಈ ಜೀವನದಲ್ಲಿ ಮಾಡಿದ ಒಳಿತು ಕೆಡಕುಗಳಿಗನುಸರಿಸಿ ಸತ್ತಮೇಲೆ ಸ್ವರ್ಗವೊ ನರಕವೋ ಸಿಗುವುದೆಂಬ ಕಲ್ಪನೆಯು ಬಹಳ ಹಳೆಯದು. ಮೋಕ್ಷವೆಂಬುದು ಪುನಃ ಜನ್ಮಕ್ಕೆ ಬರದಂತಹ ಸ್ಥಿತಿ. ಅಲ್ಲದೆ ಜೀವಿಗಳು ಸ್ವರ್ಗ ನರಕಗಳಿಗೆ ಮುಟ್ಟುವುದಕ್ಕೆ ಮೊದಲೂ ಅನೇಕ ಮಧ್ಯಂತರ ಅವಸ್ಥೆಗಳಿವೆಯೆಂದು ಮೊದಲಿನವರು ಅರಿತಿದ್ದರು. ವಸ್ತುತಃ ಹಿಂದಿನವರ ಆಚಾರ ವಿಚಾರಗಳಿಗೆ ಒಂದು ರೂಪನ್ನು ಕೊಡುತ್ತಿದ್ದುದು ಮರಣಾನಂತರದ ಜೀವನವೇ ಎನ್ನಬಹುದು. ಈ ಮರಣಾನಂತರದ ಜೀವನದ ವಿಷಯಕ್ಕೆ ಹೆಚ್ಚು ಹೆಚ್ಚಾಗಿ ಅರಿತವರು ಪೌರ್ವಾತ್ಯರೇ. ಆದರೆ ಕಾಲಚಕ್ರಪ್ರಭಾವದಿಂದ ಪಾಶ್ಚಾತ್ಯರ ವಸ್ತುದೃಷ್ಟಿಯು ಪೌರ್ವಾತ್ಯರಿಗೂ ಬಡೆದುಕೊಂಡು ಹಿಂದಿನವರ ಜ್ಞಾನ್ಮೆಯ ವಿಷಯಕ್ಕೂ ಸಂದೇಹಪಡುವ ಪರಿಸ್ಥಿತಿಯು ಹುಟ್ಟಿಕೊಂಡಿತು. ಪರಲೋಕದ ವೈಶಾಲ್ಯ ಮಹತ್ವಗಳ ನೆಲೆಯರಿತ ಭಾರತದಲ್ಲಿಯೂ ಆ ನವನಾಗರಿಕತೆಯು ಹರಡಿ ಮರಣವೆಂದರೆ ಬದುಕಿನ ಅಂತಿಮಾವಸ್ಥೆ; ಸತ್ತಮೇಲೆ ಎತ್ತೂ ಇಲ್ಲ; ಏನೂ ಇಲ್ಲ; ಎಂಬ ಅಭಿಪ್ರಾಯವು ಪ್ರಬಲವಾಗಿ ಭಾರತೀಯ ನವಯುವಕರು ಅನಾದ್ಯನಂತವಾದ ಜೀವನದ ವಿಷಯಕ್ಕೆ ಬಹು ಸಂಕುಚಿತ ದೃಷ್ಟಿಯುಳ್ಳವರಾದರು.




ಮಿಸೆಸ್ ಲ್ಯೋನಾರ್ಡ

ಇವರು ಈಗ ಸದ್ಯಕ್ಕೆ ಪ್ರಪಂಚದಲ್ಲೆಲ್ಲ ಪ್ರಸಿದ್ಧರಾದ ಮಾಧ್ಯಮೆಯರಾಗಿದ್ದಾರೆ

ಆದರೆ ಅಕ್ಕಸಾಲಿಗನು ಕಿವಿಚುಚ್ಚಿದರೆ ನೋಯುವುದಿಲ್ಲ ಎಂಬ ನಾಣ್ಣುಡಿಯಂತೆ, ಪುನಃ ಪಾಶ್ಚಾತ್ಯರಿಂದಲೇ ಮರಣಾನಂತರದ ಜೀವನವೊಂದಿದೆ ಎಂಬ ಸಂದೇಶದಿಂದ ನಮ್ಮವರು ಎಚ್ಚತ್ತರು. ಓಹೋ ಈ ಮಾತು ನಮ್ಮ ಶಾಸ್ತ್ರಗಳ

ಲ್ಲಿಯೂ ಇದೆ ಎಂದು ಎದೆ ತಟ್ಟಿಕೊಳ್ಳುವಂತಾಯಿತು. ಪ್ರಾಕೃತಿಕ ಚಮತ್ಕಾರಗಳ ಮರ್ಮವನ್ನು ಶೋಧಿಸಲು ಹೊರಟ ವೈಜ್ಞಾನಿಕರಲ್ಲಿಯೇ ಹಲವರು ಮರಣಾನಂತರದ ಜೀವನದ ವಾಸ್ತವತೆಯನ್ನೂ ವೈಶಾಲ್ಯವನ್ನೂ ಕಂಡು ಹಿಡಿದರು. ಅವರ ಶೋಧನಕ್ಕೆ ಚಾಲನೆಯು ಭೂತಪಿಶಾಚಿಗಳ ಕಥೆಗಳಿಂದಲೂ ಸಿಕ್ಕಿರಬಹುದು; ಕೆಲವು ಮನುಷ್ಯರಲ್ಲಿ ಕಂಡುಬಂದ ಅತಿಮಾನವ ಶಕ್ತಿಗಳಿಂದಲೂ ಸಿಕ್ಕಿರಬಹುದು. ಅನೇಕ ವೈಜ್ಞಾನಿಕರು ಆ ಚಮತ್ಕಾರಗಳ ಮೂಲ ಶೋಧನೆಗೆ ಯತ್ನಿಸುತ್ತ ಈಗ ಒಂದು ಆಳತೆಯ ಜ್ಞಾನಕ್ಕೆ ತಲ್ಪಿದ್ದಾರೆ.



ಫಾಕ್ಸ್ ಕಾಟೇಜ

ಇದು ಅಮೆರಿಕೆಯ ಒಂದು ಗುಡಿಸಲು. ಇದರಲ್ಲಿ ಫಾಕ್ಸ್ ಎಂಬ ಕುಟುಂಬವಿದ್ದಿತು. ಎಲ್ಲ... ಈ ಮನೆಯಲ್ಲಿ ಮೃತಾತ್ಮರು ಗೋಚರರಾಗಿದ್ದುದರಿಂದ ಈ ಗುಡಿಸಲನ್ನು ಇನ್ನೂ ಕಾಪ...

ವೈಜ್ಞಾನಿಕರ ಈ ಸಂಶೋಧನೆಗಳಲ್ಲಿ ಅನೇಕ ಅದ್ಭುತ ಚಮತ್ಕಾರಗಳು ಕಂಡುಬಂದಿವೆ. ನೂರಾರು ವರ್ಷಗಳ ಹಿಂದೆ ಸತ್ತವರ ಪರಿಚಯವಾಗುತ್ತಿದೆ. ಭೌತಿಕ ದೃಶ್ಯ ದೇಹವನ್ನು ಬಿಟ್ಟುಹೋಗಿರುವ ವೈದ್ಯರೂ ವಿದ್ವಾಂಸರೂ ಮಹಾತ್ಮರೂ ಸದೇಹಿಗಳ ಸಂಕಟಗಳಲ್ಲಿ ಸಹಾಯಮಾಡುತ್ತಿದ್ದಾರೆ. ಮಾನವಲೋಕವು ಬುದ್ಧಿಯ ಹೆಚ್ಚುಗಾರಿಕೆಯ ಭ್ರಮೆಯಿಂದ ಕಲಹ ಸಂಗ್ರಾಮಗಳಲ್ಲಿ ತೊಡಗದಂತೆ ಶಾಂತಿಯ ಸಂದೇಶಗಳು ಪರಲೋಕದಿಂದ ಬರುತ್ತಿವೆ. ಆಪ್ತರು ಇಷ್ಟರು ತೀರಿಕೊಂಡರೆಂಬ ವ್ಯಸನದಿಂದ ಗೋಳಿಡುವ ವಿರಹಿಗಳಿಗೆ ಗತಿಸಿದ ಜೀವಿಗಳ ಸಂದರ್ಶನವಾಗುತ್ತಿದೆ. ಅತಿಮಾನವ ಅದ್ಭುತ ಶಕ್ತಿಗಳುಳ್ಳ ವ್ಯಕ್ತಿಗಳಿಗೆ ತಮ್ಮ ಪೂರ್ವಜನ್ಮದ ಸಂಗತಿಗಳು ಜ್ಞಾಪಕವಾಗುತ್ತಿವೆ. ಒಂದೇ ಮಾತಿನಲ್ಲಿ ಹೇಳುವುದೆಂದರೆ 'ಪರಲೋಕವಾದವು' ವಿವಿಧವಾಗಿ ಲೋಕಕಲ್ಯಾಣದ ಸಂಭವತೆಯನ್ನು ಸೂಚಿಸುತ್ತಿದೆ.


ಮೊದಮೊದಲು ಪರಲೋಕವಾದ (Spi... ಹುಚ್ಚರ ಹರಟೆಯೆಂದೂ ಕಪಟಿ ಸ್ವಾರ್ಥಿ... ಅನ್ನುತ್ತಿದ್ದರು. ಆದರೆ ವೈಜ್ಞಾನಿಕರ ... ಚ್ಛಿನ್ನ ಸಾಧನದಿಂದ ಪರಲೋಕದ ಅನೇ... ಹೊರಬೀಳುತ್ತಿವೆ. ಪರಲೋಕವಾದದ ಮು... ಗಳು ಇಷ್ಟು. (೧) ಮರಣವೆಂದರೆ ಜೀವ... ಬದಲಾಯಿಸುವ ಒಂದು ಸನ್ನಿವೇಶ. ಮ... ನಮಗೆ ದೃಶ್ಯವಾದ ದೇಹವನ್ನು ಬಿಟ್ಟು ... ಮರಣಾನಂತರ ಆತ್ಮವು ಸೂಕ್ಷ್ಮದೇಹದಿ... ತ್ತದೆ. ಜಡದೇಹವನ್ನು ಬಿಟ್ಟಾಗಿನಿಂದ ... ಹೆಚ್ಚಾಗುವುದಲ್ಲದೆ ನಮಗೆ ಅಗಮ್ಯವೆನಿಸು... ಕೂಡ ಪ್ರವೇಶಮಾಡುವ ಶಕ್ತಿಯನ್ನು ... (೩) ಮೃತರ ಆತ್ಮಗಳು ಸದೇಹಿಗಳಿಗೆ ಸ... ಯಲ್ಲಿಲ್ಲ ಸಹಾಯಮಾಡಲು ಪ್ರವರ್ತಿಸುವ... ಆತ್ಮಗಳ ಭಾವಚಿತ್ರಗಳನ್ನು ತೆಗೆಯಬಹು... ಆತ್ಮಗಳನ್ನು ಪ್ರಾರ್ಥನೆಯಿಂದ ಬೇಕಾದ... ಬಹುದಲ್ಲದೆ ನಮ್ಮ ತಲೆಗೆ 'ಹೊಳೆಯದ ... ಉತ್ತರಗಳನ್ನು ಪಡೆಯಬಹುದು.

ಪರಲೋಕ ವಿಜ್ಞಾನಿಗಳು ಮೃತರ ಆತ್ಮಗಳ ಸಂದರ್ಶನಕ್ಕಾಗಿ ಹಲವು ಬಗೆಯ ಸಾಧನ ಕ್ರಮಗಳನ್ನು ಕಂಡುಹಿಡಿದಿದ್ದಾರೆ. ಆತ್ಮರು ಶಾಂತಿಪ್ರಿಯರಾಗಿರುತ್ತಾರೆ. ಅವರನ್ನು ಬರಮಾಡಲೆಳಸುವವರು ಶುದ್ಧಮನಸ್ಕರಾಗಬೇಕು. ವಾತಾವರಣವು ನಿರ್ಮಲವಾಗಿರಬೇಕು. ಆತ್ಮರನ್ನು ಬರಮಾಡಿಕೊಳ್ಳುವ ಉದ್ದೇಶವುಳ್ಳ ಒಮ್ಮನಸ್ಸಿನ ಜನರು ಒಂದೆಡೆಗೆ ಸೇರಿ ತಲ್ಲೀನ ಮನಸ್ಸುಳ್ಳವರಾಗಿರಬೇಕು.

ಆತ್ಮರನ್ನು ಬರಮಾಡಿಕೊಳ್ಳುವುದಕ್ಕಾಗಿ ಪರಲೋಕ ವಿಜ್ಞಾನಿಗಳು ಶಾಂತಪರಿಸ್ಥಿತಿಯಲ್ಲಿರುವ ಒಂದು ಕೋಣೆಯನ್ನು ಗೊತ್ತುಪಡಿಸುತ್ತಾರೆ. ಕೋಣೆಯೊಳಗೆ ಮನಸ್ಸು ಉಲ್ಲಸಿತವಾಗಿರುವುದಕ್ಕೆ ಹೂಬತ್ತಿಗಳ ಸುಗಂಧವನ್ನು ಹರಡಿರುತ್ತಾರೆ. ನಂತರ ಆತ್ಮರನ್ನು ಸಂದರ್ಶಿಸುವ ಉದ್ದೇಶವುಳ್ಳವರು ಆ ಕೋಣೆಯಲ್ಲಿ ಸೇರಿ ಸೊಗಸಾಗಿ ಹಾಸಿದ ನೆಲದ ಮೇಲಾಗಲಿ ಕುರ್ಚಿಗಳ ಮೇಲಾಗಲಿ ಕೂಡುತ್ತಾರೆ. ಒಂದು ಸಲಕ್ಕೆ ಒಬ್ಬ ಆತ್ಮರೊಡನೇ ಸಂಭಾಷಣೆ ಮಾಡಬಹುದು. ಆತ್ಮರು ತಾವು ಪ್ರಾರ್ಥನೆಯನ್ನು ಮನ್ನಿಸಿ ಬಂದಿರುವುದನ್ನು, ಕೋಣೆಯಲ್ಲಿರುವ ಯಾವದಾದರೊಂದು ವಸ್ತುವನ್ನು ಅಂತರಾಳದಲ್ಲಿ ಎತ್ತಿಯಾಗಲಿ, ನೆಲದ ಮೇಲೆ ಮೇಜಿನ ಮೇಲೆ ಸಪ್ಪಳ ಮಾಡಿಯಾಗಲಿ ಸೂಚಿಸುತ್ತಾರೆ.

ಆದರೆ ಪ್ರಾರ್ಥನೆಗೆ ಕೂತವರಲ್ಲಿ ಆತ್ಮರನ್ನು ಆಕರ್ಷಿಸುವ ಮನಸ್ಸಿನ ಶಕ್ತಿಬೇಕು. ಅಥವಾ ಏಕಾಗ್ರತೆಯ ಶಕ್ತಿ ಬೇಕು. ಈ ಶಕ್ತಿಯು ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚಾಗಿದೆಯೆಂದು ಕಂಡುಬಂದಿದೆ. ಆದುದರಿಂದ ಜಗತ್ತಿನ ಬಹುತರ ಎಲ್ಲ ಪರಲೋಕವಾದದ ಸಂಘಗಳಲ್ಲಿಯೂ ಇಂತಹ ಏಕಾಗ್ರಶಕ್ತಿಯುಳ್ಳ ಸ್ತ್ರೀಯರೇ ಪ್ರಮುಖಭಾಗವನ್ನು ವಹಿಸುತ್ತಾರೆ. ಭಾರತದಲ್ಲಿ ಪರಲೋಕವಾದದ ವಿಷಯಕ್ಕೆ ಅಧಿಕಾರವಾಣಿಯಿಂದ ಮಾತಾಡಬಲ್ಲವರು ಶ್ರೀ. ವಿ. ಡಿ. ಋಷಿ ಅವರು. ಅವರು ಆತ್ಮರ ಭಾವಚಿತ್ರಗಳನ್ನು ತೆಗೆಯುವುದು ಸಾಧ್ಯವಿದೆಯೆಂಬುದನ್ನು ಜಗಕ್ಕೆ ಸಾರಿದವರು. ಅವರು ಅನೇಕ ವಿರಹಿ ದುಃಖಿಗಳಿಗೆ ಮೃತಾತ್ಮರ ಸಂದರ್ಶನ ಮಾಡಿಸಿದ್ದಾರೆ. ಅವರ ಧರ್ಮಪತ್ನಿಯರಾದ ಶ್ರೀ. ಪ್ರಭಾವತಿದೇವಿಯವರು ಅದ್ಭುತ ಏಕಾಗ್ರಶಕ್ತಿಯುಳ್ಳವರು. ಶ್ರೀ. ಋಷಿಯವರ ಪ್ರಯೋಗಗಳಲ್ಲಿ ಈದೇವಿಯವರು ಹೆಜ್ಜೆಹೆಜ್ಜೆಗೂ ಸಹಾಯ ಮಾಡುತ್ತಿದ್ದಾರೆ.

ಇಂತಹ ಪರಲೋಕವಾದದ ಸಂಘಗಳಲ್ಲಿ ಆತ್ಮರ್ಕ್ಷೆಬರುವಿಕೆಗೆ ಪ್ರಾರ್ಥಿಸುವವರ ಮಧ್ಯದಲ್ಲಿ ಏಕಾಗ್ರಶಕ್ತಿಯುಳ್ಳ ಸ್ತ್ರೀಯರಾಗಲಿ ಪುರುಷರಾಗಲಿ ಕೂತುಕೊಳ್ಳುವರು. ಅವರಿಗೆ ಮಾಧ್ಯಮ (Medium) ರೆನ್ನುವರು. ವಿಲಾಯತಿಯಲ್ಲಿ ಈಗ ಸುಪ್ರಸಿದ್ಧ ಮಾಧ್ಯಮರೆಂದರೆ ಮಿಸೆಸ್ ಲ್ಯೋನಾರ್ಡ



ಪ್ರಯೋಗಶಾಲೆ

ಮಾಧ್ಯಮನು ತಲೆಬಗ್ಗಿಸಿ ಕುಳಿತಿದ್ದಾನೆ. ಅದೃಶ್ಯ ಆತ್ಮವು ಒಂದು ತುತೂರಿಯಲ್ಲಿ ಅಂತರಾಳದಲ್ಲಿ ಎತ್ತಿ ಅದರ ಮೂಲಕ ಮಾತಾಡುತ್ತಿದೆ.

ಎಂಬ ಸ್ತ್ರೀಯರೂ ಆತ್ಮರನ್ನು ಬರಮಾಡಿಕೊಳ್ಳಲು ಹೀಗೆ ಮಾಧ್ಯಮರ ಸಹಾಯದಿಂದ ಪ್ರಾರ್ಥಿಸುತ್ತಿರುವಾಗ ಆತ್ಮರು ಬಂದು ತಮ್ಮ ಬರುವಿಕೆಯನ್ನು ಶಬ್ದಮಾಡಿ ಇಲ್ಲವೆ ಯಾವ ದಾದರೊಂದು ವಸ್ತುವನ್ನು ಅಲ್ಲಾಡಿಸಿ ಸೂಚಿಸುವರು. ನಂತರ ಪ್ರಾರ್ಥಿಸುವವರು ಬಂದ ಆತ್ಮರ ಹೆಸರುದೆಸೆಗಳನ್ನು ಕೇಳಿ ತಮ್ಮ ಸಮಸ್ಯೆಗಳನ್ನು ಅವರಿಗೆ ತಿಳಿಸುವರು. ಆತ್ಮರು ಅವನ್ನು ಬಿಡಿಸುವ ದಾರಿಗಳನ್ನು ಸೂಚಿಸುವರು. ಕೆಲವು ನುರಿತ ಮಾಧ್ಯಮರು ಪೆಟ್ಟಿಗೆಯಲ್ಲಿ ಕಾಗದ ಪೆನ್ಸಿಲ್ಲುಗಳ ನ್ನಿಟ್ಟು ಮುಚ್ಚಿ ಬೀಗಹಾಕಿ ಪ್ರಾರ್ಥನೆಗೆ ಕೂಡುವರು. ಆತ್ಮರು ಪೆಟ್ಟಿಗೆಯೊಳಗೆ ಬಂದು ಸಂದೇಶಗಳನ್ನು ಬರೆದು ಹೋಗುವರೆಂದು ಅನ್ನುತ್ತಾರೆ. ಈಗ ಬಹುತರವಾಗಿ ಆತ್ಮರು ಮಾಧ್ಯಮರ ಮೈಯಲ್ಲಿ ಬಂದು ಬೇಕಾದುದನ್ನು ಅವರ ಬಾಯಿಂದಲೇ ಯಿದೆ.

ಒಟ್ಟಿನಲ್ಲಿ ಪರಲೋಕವಾದವೆಂದರೆ ಜೀವಿಗಳ ಸ್ಥಿತಿಗತಿಗಳನ್ನು ತಿಳಿಯುವ ಅದಕ್ಕೆ ಈಗ ಸುಪ್ರಸಿದ್ಧ ಓಲಿವರ ಲಾಡ್ ಕರ ಬೆಂಬಲವಿದೆ. ಈ ಪರಲೋಕ ಚಳುವಳಿ ಸಾಧುಗಳೂ ಕಪಟಿಗಳೂ ಹಲವರು ಸುಳ್ಳಲ್ಲ. ಆದರೆ ಕಾಲಕ್ರಮದಲ್ಲಿ ಆ ಲಿಗೆ ಬಿದ್ದು ಪರಲೋಕವಾದವು ನಿರ್ಮೂ ವ್ವದರಲ್ಲಿ ಸಂದೇಹವಿಲ್ಲ.

ಹೈದರಾಬಾದಿನಲ್ಲಿ ರಾಜಕೀಯ ಸುಧಾರಣೆಗಳು

ಲೇ: 'ಹರಟೆಯ ಮಲ್ಲ'

ಹೈದರಾಬಾದು 'ಪಾಪಜ್ಜಿ'ಯ ಪಾತಾಳವಲ್ಲದಿದ್ದರೂ ಭಾರತದ ಪಾತಾಳವೇ ಸರಿ. ಭಾರತದ ಎಲ್ಲ ನುಡಿಗಳೂ ಇಲ್ಲಿ ಇವೆ. ಜಾತಿಗಳೆಲ್ಲಂತೂ ಇಲ್ಲಿಲ್ಲದುದು ಹಿಂದುಸ್ಥಾನದಲ್ಲೆ ಇಲ್ಲ. ಮಂದಪಕ್ಷದ ಆಂಧ್ರರಿದ್ದಾರೆ. ಉಗ್ರವಿಚಾರದ ಮರಾಠರಿದ್ದಾರೆ. ವ್ಯಕ್ತಿತ್ವವೇ ಇಲ್ಲದ ಕರ್ನಾಟಕರಿದ್ದಾರೆ. ಇವೆಲ್ಲದರ ನಡುವೆ ಸಂಘಟಿತ ರಾಷ್ಟ್ರೀಯ ಸ್ವರೂಪದ ಅರಿವುಂಟಾಗುವುದೆಂತು ? ಪ್ರಜಾಮಂಡಲದ ಮುಂದಿನ ಪ್ರಶ್ನೆ ಒಮ್ಮೆನೆ—ಇಮ್ಮನೆಗಳೆದಲ್ಲಃ ಮಂದ-ತೀವ್ರ ಗಮನದ್ದಲ್ಲ; ಒಮ್ಮನದ ಪ್ರಶ್ನೆ. ಮಲೆವುದು ನಿಂತು ... ... ಗಮನದ ಪ್ರಶ್ನೆ. ... ...

ಹೈದರಾಬಾದು ಎಂದರೆ ಹೈದರಲ್ಲಿಯ ಸಂಸ್ಥಾನವೇ ಎಂದು ನಾನು ಮೊನ್ನೆ ಬೆಂಗಳೂರಿಗೆ ಹೋಗಿದ್ದಾಗ ಗೃಹಸ್ಥರೊಬ್ಬರು ಕೇಳಿದರು! ಹೈದರಾಬಾದಿನಲ್ಲಿ ಹಿಂದುಗಳೇನು ಹೆಸರಿಗೆ ಹತ್ತು ಮಂದಿಯಿದ್ದಾರು! ಎಂದು ಒಬ್ಬ ವಿದ್ಯಾವತಿ ತಿಳಿದಂತೆ ಮಾತನಾಡಿದಳು. ಎಲ್ಲಕ್ಕೂ ಹೆಚ್ಚಿನ ಓವರ್-ಬಾಂಡರಿ (over boundary) ನಾನು ಅಚ್ಚು ಮನೆಯಲ್ಲಿ ಪ್ರೂಫ್ ತಿದ್ದುತ ಕುಳಿತಾಗ ಅಲ್ಲಿ ತಮ್ಮ ಕೆಲಸದ ನಿಮಿತ್ತ ಬಂದಿದ್ದ ಒಬ್ಬ ಖಾದೀಧಾರಿ ವರ್ತಕರು ಹೊಡೆದರು. 'ಹೈದರಾಬಾದಿನವರೇನ್ರಿ ನೀವು. ಇಂಗ್ಲೀಷಿನಲ್ಲಿ ರಿಪೋರ್ಟು ಬರೆದಿರಾ ನಿಜವಾಗಿ' ಎಂದರು.

ಹೈದರಾಬಾದು ಬ್ರಿಟಿಷು ಭಾರತಕ್ಕೆ, ಇತರ ಸಂಸ್ಥಾನಗಳಿಗೆ 'ಪಾಪಜ್ಜಿ'ಯ 'ಪಾತಾಳ'ದಂತಿದೆ. ಭಾರತದ ಈ ಶ್ರೇಷ್ಠ ಸಂಸ್ಥಾನದ ಬಗ್ಗೆ ಇಷ್ಟು ವಿಚಿತ್ರ ಅಜ್ಞಾನ ಕವಿದಿದೆ ಹೊರಗಡೆ. ಇದರ ಕಾರಣವನ್ನು ಈಗ ನಾನು ವಿಚಾರಿಸುತ್ತಿಲ್ಲ. ಕೇವಲ ಇದನ್ನು ಸೂಚಿಸಿದೆ, ಅಷ್ಟೆ.

ನಿಜವಾಗಿ ನೋಡಿದರೆ ಹೈದರಾಬಾದು 'ಪಾಪಜ್ಜಿ'ಯ 'ಪಾತಾಳ'ವಲ್ಲದಿದ್ದರೂ ಭಾರತದ ಪಾತಾಳವೇ ಸರಿ. ಇಲ್ಲಿ ಪ್ರಧಾನವಾದ ನಾಲ್ಕು ಭಾಷೆಗಳಿದ್ದರೂ ಭಾರತದ ಎಲ್ಲ ನುಡಿಗಳೂ ಇವೆ. ಹೊರಗಿನ ಅರಬ್ಬೀ ಪಾರ್ಸೀಗಳೂ ಇವೆ. ಜಾತಿಗಳೆಲ್ಲಂತೂ ಇಲ್ಲಿಲ್ಲದುದು ಹಿಂದುಸ್ಥಾನದಲ್ಲೇ ಇಲ್ಲ. ಮಂದ ಪಕ್ಷದ ರಾಜಕೀಯ ವಿಚಾರದ ಆಂಧ್ರ ಪ್ರಾಂತವೊಂದಿದೆ, ಉಗ್ರ ವಿಚಾರದ ಮರಾಠಾ ಪ್ರಾಂತವಿದೆ, ವ್ಯಕ್ತಿತ್ವವೇ ಇಲ್ಲದ ಕರ್ನಾಟಕವೂ ಇದೆ. ಇವೆಲ್ಲದರ ನಡುವೆ ಸಂಘಟಿತ ರಾಷ್ಟ್ರೀಯ ಸ್ವರೂಪದ ಅರಿವುಂಟಾಗುವ ಮಾತು ಬಹಳ ದೂರದ್ದೇ.

ಇವಲ್ಲದೆ ಹೈದರಾಬಾದಿನ ಸಾಂಘಿಕ ಪರಿಸ್ಥಿತಿಯೂ ಸ್ವಲ್ಪ ಏಕಮೇವವಾದದ್ದೇ! ಸಂಸ್ಥಾನದ ವಿಸ್ತಾರದಲ್ಲಿ ಮೂರನೆಯ ಭಾಗ ಹತ್ತೆಂಟು ಜಾಗೀರು ಮನೆತನಗಳದು. ಉಳಿದ ೨ ಭಾಗಗಳಲ್ಲಿ ೧ ಭಾಗದಷ್ಟು ಇನಾಮು, ದೇಶಮುಖಿ, ಮಖ್ತಾ ಇತ್ಯಾದಿ ರೀತಿಗಳಲ್ಲಿ ಕೆಲವು ಮನೆತನಗಳ ಪಾಲಾಗಿದೆ. ಉಳಿದ ಮೂರನೆಯ ಭಾಗವೇ ನಿಜವಾದ ಹೈದರಾಬಾದು. ಅವರೇ ತಳದಲ್ಲಿರುವ ಪ್ರಜೆ.

ಇನ್ನೊಂದು ರೀತಿಯಾಗಿ ವಿಚಾರ ಮಾಡುವ. ಕರ್ನಾಟಕದಲ್ಲಿ ೨ ವರ್ಷಕ್ಕೊಮ್ಮೆ ಬರ. ಮರಾಠವಾಡಿಯಲ್ಲಿ ನೀರಿನ ಸೌಕರ್ಯ ಕಡಿಮೆ. ಆಂಧ್ರ ಪ್ರಾಂತದಲ್ಲಿ ನೀರಾವರಿ ಇದೆ. ಆದರೆ ಭೂಮಿ—ಭಾರಿ ಕುಳಗಳ ಕೈಯಲ್ಲಿ ಸಿಕ್ಕು ಹೋಗಿದೆ. ಪ್ರತಿ ೧೨ ಜನರಿಗೆ ಒಬ್ಬ ಸಾವಕಾರನಿದ್ದಾನೆಂದು ಮೊನ್ನೆ ಒಂದು ರಿಪೋರ್ಟಿನಲ್ಲಿ ತೋರಿಸಿತ್ತು!

ಮುಸಲಮಾನರು ೧೦ರಲ್ಲಿ ಒಂದರಂತೆ ಇದ್ದಾರೆ. ಅವರ ವಸತಿಯೆಲ್ಲ ರಾಜಧಾನಿಯಲ್ಲೇ. ಜಿಲ್ಲೆಗಳಲ್ಲಿ ಸ್ವಲ್ಪವಿದೆ. ಹಳ್ಳಿಗಳಲ್ಲಿ ಏನೂ ಇಲ್ಲ. ಹಳ್ಳಿಯ ಜನರಿಗೆ ಏನು ಅಧಿಕಾರ ಸಿಕ್ಕರೂ ಯಾವ ಹಕ್ಕು ಪ್ರಾಪ್ತವಾದರೂ ಇವರಿಗೆ ಅದರಲ್ಲಿ ಪಾಲಿಲ್ಲ. ಇವರ ರಾಜಕೀಯ ವಿಚಾರಕ್ಕೆ ಪೂರಾ ನಾಗರವರ್ಣ; ಪಟ್ಟಣದವರ ದೃಷ್ಟಿ.

ಇಂಥ ಜನರಲ್ಲಿ ರಾಜಕೀಯ ಸುಧಾರಣೆಗಳ ಮಾತು ಮೊದಲಾಯಿತು. ರಾಜಕೀಯ ಸುಧಾರಣೆ ಬೇಕು ಯಾರಿಗೆ? ಯಾರು ದಲಿತರೋ, ಯಾರಿಗೆ ಸದ್ಯಸ್ಥಿತಿಯಲ್ಲಿ ಪ್ರಗತಿ ವಿಕಾಸ ಸೌಕರ್ಯಗಳಿಲ್ಲವೋ ಅವರಿಗೆ. ಅವರೆಂದರೆ ತಳದಲ್ಲಿರುವ ಪ್ರಜೆ, ಮೊದಲೇ ಹೇಳಿದ್ದೇನೆ. ಉಳಿದ ಎರಡು ಬಣ್ಣದವರಿಗೆ ರಾಜಕೀಯ ಸುಧಾರಣೆ

ಬೇಡ; ಅಂದರೆ ಉದಾಸೀನವೆಂದಲ್ಲ — ನಿಜವಾಗಿಯೂ ಬೇಡ. ಏಕೆ? ಈಗ ಇದ್ದ ಅವರ ಅಪಾರ ಅಧಿಕಾರಕ್ಕೆ ಸಂಚಕಾರ ಬರುತ್ತದೆ ಆದ್ದರಿಂದ.

ಒಂದು ದಿನ ಒಬ್ಬ ದೇಶಮುಖರೊಡನೆ ಮಾತಾಡುತ್ತಿದ್ದೆ. 'ಸಾಲಕೊಟ್ಟವನನ್ನು ಕೇಳುವ ಭರದಲ್ಲಿ ಅವನನ್ನು ಕೊಂದೇ ಬಿಡುವುದೇ? ಏನನ್ಯಾಯ ನಿಮ್ಮದು?' ಎಂದೆ. ಅವರು ತಮ್ಮ ಸಾಲಗಾರನೊಬ್ಬನನ್ನು ಬೂಟುಗಾಲಿನಿಂದ ಒದ್ದರು. ಸ್ಥಳದ ಗುರಿತಪ್ಪಿತು. ಅವನು ಸತ್ತ. ಕಚೇರಿಯಲ್ಲಿ ದೇಶಮುಖರು ನಿರ್ದೋಷಿಗಳಾಗಿಹೋಗಿದ್ದರು. ಅದೇ ದಿನ ಸಾಯಂಕಾಲದ ಮಾತು ಕತೆ. 'ಇಂಥ ಪ್ರಶ್ನೆ ಕೇಳುತ್ತೀರಿ ಅಂತಲೇ ನಿಮಗೆ ಶಾಸನ ಸಭೆ-ಗಿಭೆಗಳು ಸಿಗಬಾರದು. ಎನ್ನುವದು' ಎಂದರು. ಒಬ್ಬ ಮಖ್ತೇದಾರರು ಬರಬಂದಾಗ ತಮ್ಮ ರೈತರಿಗೆ ಎರಡಾಣೆ ಕರ 'ಮಾಫ' ಮಾಡಿದರು. ಹೆಸರು ಪತ್ರಿಕೆಗಳಲ್ಲಿ ಬಂತು. ಕೆಲವು ದಿನಗಳಲ್ಲೇ ಅವರ ರೈತರಿಂದ ಇಲ್ಲಿನ ಪತ್ರಿಕೆಗಳಿಗೆ ಒಂದು ಪತ್ರ ಬಂದಿತ್ತು. ಮಖ್ತೇದಾರರು ರೈತರ ಮೇಲೆ ಹೊರಿಸಿದ ಚಿಲ್ಲರೆ ತೆರಿಗೆಗಳ (ಧರ್ಮಕಾರ್ಯಗಳಿಗಾಗಿ) ಪಟ್ಟಿಯೇ ಒಂದಿತ್ತು ಅದರಲ್ಲಿ. ಶಾಸನ ಸಭೆಗೆ ಇವರು ಹೇಗೆ ಒಪ್ಪಬೇಕು?

ಮುಸಲಮಾನ ಜನರಲ್ಲಿ ಸಾಮಾನ್ಯವಾಗಿ ತಾವೆಲ್ಲ ರಾಜಕುಲದವರೇ ಎಂಬ ಕಲ್ಪನೆ ಇದೆ ಇಲ್ಲಿ. ಹಾಗೆ ಬಹಿರಂಗವಾಗಿ ಹೇಳಿಕೊಳ್ಳುವುದೂ ಉಂಟು. ಅವರಲ್ಲಿ ಅನೇಕರು ನಮಗೆ ರಾಜಕೀಯ ಸುಧಾರಣೆ ಬೇಡ, ಈಗ ಇದ್ದುದೇ ಚೆನ್ನಾಗಿದೆ ಎಂದು ಪ್ರಭುತ್ವಕ್ಕೆ ಬಿನ್ನಯಿಸೇ ಇದ್ದಾರೆ. 'ಈಗಂತೂ ನಮ್ಮದೇ ಸರ್ವಾಧಿಕಾರ. ೧೦೦ಕ್ಕೆ ನೂರೂ ನಮ್ಮದೇ. ಏನೋ ಹೋಗಲಿ ನಿಮಗೆ ೫೦ ಕೊಡುತ್ತೇವೆ. ಸುಮ್ಮನೆ ಮಾತಾಡದೆ ಈ ಚೂರು ತಿಂದು ಸುಖವಾಗಿರಿ' ಎಂಬ ಕೆಲವರು ಉದಾರಿ ಮುಸಲ್ಮಾನರೂ ಇಲ್ಲದೆ ಇಲ್ಲ.

ಹೀಗಾಗಿ, ಸಂಸ್ಥಾನದ ಪ್ರಜೆಗಳು ರಾಜಕೀಯ ಸಂಘಟನೆಗೆ ಮೊದಲು ಇವೆಲ್ಲ ಪಕ್ಷಗಳನ್ನೂ ಒಳಪಡಿಸಿ ಏಕನಿಯಮಕ್ಕೆ ತರಬೇಕು. ಅವರೆಲ್ಲರ ಹಿತಕ್ಕೆ ತೀವ್ರ ವಿರೋಧವಾಗದಂತೆ ತಮ್ಮ ಸುಧಾರಣೆಯ ಮಂಟಪವನ್ನೂ ಕಟ್ಟಬೇಕು. ಹಿರಿಯ ಅಗ್ನಿ ಪರೀಕ್ಷೆ!

ಇಂಥ ಸನ್ನಿವೇಶದಲ್ಲಿ ಹೈದರಾಬಾದ ಪ್ರಜಾಮಂಡಲವೊಂದು ರಚಿತವಾಗಿ ವರದಿಯನ್ನೊಪ್ಪಿಸಿದೆ. ಈ ಮಂಡಲದಲ್ಲಿ ಎಲ್ಲ ನುಡಿಗಳ, ಎಲ್ಲ ಜಾತಿಗಳ, ಎಲ್ಲ ಬಣ್ಣಗಳ, ಎಲ್ಲ ವೃತ್ತಿಗಳ, ಎಲ್ಲ ವಯಸ್ಸುಗಳ, ಎರಡೂ ವರ್ಗಗಳ (ಹೆಣ್ಣುಗಂಡು) ಪ್ರತಿನಿಧಿಗಳು ಇದ್ದಾರೆ.

ಇಂಥ ಮಂಡಲದ ಬೇಡಿಕೆಗಳು ಅತಿಮಂದಗಾಮಿಯಾಗಿರುವುದು ಸಹಜ. ಅಲ್ಲದೆ ಇಂದಿನ ವರೆಗೆ ... ಅನಿರ್ಬಾಧ ಸಾರ್ವಭೌಮತ್ವವು ನಡೆದಿದೆ. ಜನರಿಗೆ ... ಸ್ವಪರಿಪಾಲನೆಯ ರುಚಿಯೂ ಇಲ್ಲ, ರೂಪವೂ ... ಮೂಲಭೂತ ಹಕ್ಕುಗಳ ಅನುಭವವೂ ಇಲ್ಲ. ... ತಿರುಕನು ಬೇಡಬಲ್ಲುದೇನು? ಒಂದು ... ಭವ್ಯ ಪ್ರಾಸಾದವಲ್ಲ.

ವರದಿಯು ಪ್ರಭುತ್ವವೇ ತನ್ನ ಅಧಿಕಾರ ... ಭದ್ರಗೊಳಿಸಲು ದಯಪಾಲಿಸಲಿರುವ ರಾಜ್ಯ... ಸಂಶಯ ಜಯಕರ್ನಾಟಕದ ಸಂಪಾದಕರಿಗೆ ... ಇಂಥ ಸ್ವಪ್ನವಾದರೂ ಸರಕಾರಕ್ಕೆ ಬಿದ್ದರೆ ಇಲ್ಲಿ... ಹಿತವಾದೀತು! ಹೆಚ್ಚು ಕೇಳಿದರೆ ಕೊಡಲಿ... ಭಾವನೆ ಅವರಿಗೆ ಕಂಡು ಬಂದಿದೆ. ಆದರೆ ... ಸ್ಥಿತಿಯನ್ನು ಲಕ್ಷಿಸಿದರೆ ಹೆಚ್ಚು ಕೇಳುವುದೊಂದೇ ... ದೊಂದು ತಂಡವನ್ನು ಏರ್ಪಡಿಸಿಕೊಂಡಂತೆಯೇ ... ಅವರಿಗೆ ತಿಳಿದೀತು.

ಇಮ್ಮನೆಯ ಶಾಸನ ಸಭೆ ಸಾಧಾರಣವಾಗಿ ಪ್ರ... ಯಲ್ಲಿ ತ್ಯಾಜ್ಯ, ಬಹಿಷ್ಕೃತವಿದೆ—ತತ್ವದಲ್ಲಿ. ... ಆಚರಣೆಯ ಬಗ್ಗೆ ಅನೇಕ ಎಡರುಗಳಿವೆ ಎಂಬ ... ಇಲ್ಲಿ ಅವಕಾಶವಿಲ್ಲ. ಇಲ್ಲಿ ಇಷ್ಟೇ—ಈ ಶಾಸ... ದೇವಾಸುರರು ಇದ್ದಾರೆ. ಅವರ ನಡುವೆ ಮಥನ... ಬಹುದು. ಆದರೆ ಆ ಪುರಾಣ ನಡೆದು ಒಂದು ... ಅಮೃತ ಕುಡಿವ ವರೆಗೆ ಈ ವಿಭೇದ ತಪ್ಪಿದ್ದಲ್ಲಿ ... ಯಲ್ಲಿ ಇವರು ನಿಲ್ಲಬೇಕು ಹೇಗೆ? ಮನೆ ... ವಾಗುವ ಸಂಭವವಿಲ್ಲ. ಹಿರಿಯ ಬಣದ ... ಕಡಿಮೆಯಾಗುವ ಸಂಭವವೂ ಇಲ್ಲ. ಕಿರಿಯರಿಗೆ ... ಒಮ್ಮನೆಯಲ್ಲಿ ಕಾಲೂರಲೂ ಸ್ಥಳವಿಲ್ಲ. ತಮ್ಮ ... ತಾವು ಬೆಳೆದು, ಬಲಿತು ನಂತರ ಮುಂದೆ ವಿಚಾರ...

ಪ್ರಜಾಮಂಡಲದ ಮುಂದಿನ ಕೂಟಪ್ರಶ್ನೆ ... ಇಮ್ಮನೆಗಳದಲ್ಲ. ಮಂದಗಮನ — ತೀವ್ರಗಮನ... ಒಮ್ಮನದ ಪ್ರಶ್ನೆ—ಮಲೆವುದು ನಿಂತು ಗಮನ... ಮಂಡಲದ ಸಾಹಸದಿಂದ ವಿಮುಖರು ಇಂದು ... ರಂಗದಲ್ಲಿ ಬಂದಿದಾರೆ, ದಲಿತರಾದ ಹರಿಜನರು ... ದಾರೆ. ಸೊತ್ತುಳ್ಳವರು ಸ್ವಾರ್ಥತ್ಯಾಗ ಮಾಡಿ... ದಾರೆ.

ಇವೆಲ್ಲ ಗಮನಿಸಬೇಕಾದ ಅಂಶಗಳು. ... ಇಷ್ಟು. ಇಷ್ಟೇ ಆದರೂ ದೊರೆತರೆ ಹೈದರಾಬಾ... ವೃತ್ತು ಬೆಳಗೀತು.

ಗಿಳಿಯ ಮೀಮಾಂಸೆ

'ಶ್ರೀರಂಗ'

★

ಮಾನವನಿಗೆ ಅಧಿಕಾರಪ್ರಿಯತೆಯು ಹುಟ್ಟುಗುಣವಂತೆ. ಅರಸನಿಗೆ ಮಂತ್ರಿಗಳು, ಮಂತ್ರಿಗಳಿಗೆ ಮಿಕ್ಕ ಅಧಿಕಾರಿಗಳು, ಶಿಕ್ಷಕನಿಗೆ ವಿದ್ಯಾರ್ಥಿಗಳು, ಗಂಡನಿಗೆ ಹೆಂಡತಿ, ತಂದೆಗೆ ಮಕ್ಕಳು ಹೀಗೆ ಆಯಾ ಜನರ ಅಧಿಕಾರಪ್ರಿಯತೆಯನ್ನು ಬೆಳೆಯಲು ಆಯಾ ಆಟಿಗೆಗಳಂತಹ ವಸ್ತುಗಳಿವೆ. ಆದರೆ ಮೇಲಿನ ಯಾವ ಪದವಿಯೂ ಇಲ್ಲದವನ ಗತಿಯೇನು? ಅಂತಹರಿಗಾಗಿ ದಯಾಳುವಾದ ದೇವನು ಗಿಳಿಗಳನ್ನು ದಯಪಾಲಿಸಿದ್ದಾನೆ. (ಪರಮಾತ್ಮನೆ, ನಿನ್ನ ದೂರದರ್ಶಿತ್ವವನ್ನು ಎಷ್ಟೆಂದು ಹೇಳಲಿ?)

★

ನನಗೊಬ್ಬ ನಿರುದ್ಯೋಗಿ ಗೆಳೆಯನಿದ್ದಾನೆಂಬ ಸಂಗತಿಯು ನಾನು ಆಗಾಗ ಬರೆಯುವ ಲೇಖಗಳಿಂದ ತಮಗೆಲ್ಲರಿಗೂ ಗೊತ್ತಾಗಿರಬಹುದು. ಅವನು 'ನಿರುದ್ಯೋಗಿ' ಎಂಬುದನ್ನು ಮಾತ್ರ ನಾನು ಇದುವರೆಗೆ ಹೇಳಿರಲಿಲ್ಲ; ಈಗ ಮಾತ್ರ ಹೇಳಲೇಬೇಕಾಗಿದೆ. ಅವನ ತೊಂದರೆ ಅಳತೆಗೆಟ್ಟಿದೆ. ಮೊನ್ನೆ ನಾನು ಈ ಲೇಖವನ್ನು ಬರೆಯಲು ಪ್ರಾರಂಭಿಸಿದ್ದೆ. ಹಿಂದೆ ಬಂದು ನಿಂತುಕೊಂಡ. ಹೆಗಲ ಮೇಲಿಂದ (ಹೆಗಲು ನನ್ನದು, ಅವನವಲ್ಲ) ಹಣಿಕಿಕ್ಕಿ ನೋಡತೊಡಗಿದ. ಸ್ಫೂರ್ತಿಯಿಂದ ಏಕಾಗ್ರಚಿತ್ತನಾಗಿ ನಾನು ಬರೆಯುವಾಗ ನನ್ನ ಹೆಗಲ ಮೇಲಿಂದ ಯಾರಾದರೂ ಹಣಿಕಿಕ್ಕಿ ನೋಡಿದರೆ ನನಗೆ ಕೆಂಡದಂತಹ ಕೋಪ. ಯಾಕೆ-ಎನುವಿರಾ? ಹಾಗೆ ಬರೆಯುವಾಗ ನನ್ನ ಮೈಮೇಲೆ ಎಚ್ಚರಿರುವುದಿಲ್ಲ. ಹಣಿಕಿಕ್ಕಿ ನೋಡುವ ಮುಖವು ನನ್ನದೆ ಎಂದು ಎಷ್ಟೋ ಸಲ ತಿಳಿದಿದ್ದೇನೆ. ನನ್ನ ಕೈಯಲ್ಲಿಯ ಸಿಗರೇಟನ್ನು ಎಷ್ಟೋ ಸಲ ಹಣಿಕಿಕ್ಕಿ ನೋಡುವವರ ಬಾಯಿಯಲ್ಲಿಟ್ಟಿದ್ದೇನೆ. ನನಗೆ ಒಂದು ಸಿಗರೇಟಿನ ಮಹತ್ತ್ವವಿಲ್ಲ. ಆದರೆ ಒಮ್ಮೆ ಅಂತಹ ಸಂದರ್ಭದಲ್ಲಿ ಸಿಗರೇಟನ್ನು ಬದಿಯವನ ಬಾಯಿಯಲ್ಲಿಟ್ಟು ಕಡ್ಡಿಯನ್ನು ನನ್ನ ಬಾಯಿಯಲ್ಲಿ ಇಟ್ಟುಕೊಂಡಿದ್ದೇನೆ. ಇದೇನು ಅನಾಹುತವಲ್ಲ—ಎನಬೇಡಿರಿ. ಅದು ಕೊರೆದ ಕಡ್ಡಿಯಾಗಿತ್ತು! ಅಂದಿನಿಂದ ನನಗೆ ಈ ದುರಭ್ಯಾಸವು (ಸಿಗರೇಟು ಸೇದುವುದಲ್ಲ, ಹಣಿಕಿಕ್ಕಿ ನೋಡುವುದು) ತಡೆಯದಂತಾಗಿದೆ. ಈಸಲ ಹುಣ್ಣಿಗೆ ಬರೆ ಕೊಟ್ಟಂತೆ ನೋಡುವುದಲ್ಲದೆ ಮೇಲೆ ಪಿಸಿಪಿಸಿ ನಕ್ಕನು!

'ಹಲ್ಲುಪುಡಿಯ ಜಾಹೀರಾತಿನಂತೆ ಹಲ್ಲನ್ನೇಕೆ ಕಿರಿವೆ?' ಎಂದು ಸಿಟ್ಟಿನಿಂದ ಕೇಳಿದೆ ನಾನು.

'ನಿನ್ನ ಶಿರೋಲೇಖವನ್ನು ನೋಹೋಡಿಹಿಹಿ ಹಿ!!' ಎಂದು ಮತ್ತೂ ಹಲ್ಲು ಕಿರಿದನು!

'ಏನಾಗಿದೆ ಶಿರೋಲೇಖಕ್ಕೆ?'

'ಅದಕ್ಕೆ ಅರ್ಥವೆ ಇಲ್ಲ. ಅಹಹ!'

'ಬುದ್ಧಿಯ ಬದಲು ಬಾಯಿಯನ್ನು ತೆರೆದರೆ ಅರ್ಥವಾಗುವುದು ಹೇಗೆ? ಅರ್ಥವಿಲ್ಲವಂತೆ! ಗಿಳಿಯ ಮೀಮಾಂಸೆ ಇದಕ್ಕೆ ಅರ್ಥವಿಲ್ಲವೆ? ಗಿಳಿ-ಎಂಬುದಕ್ಕೆ ಅರ್ಥವಿದೆ, ಮೀಮಾಂಸೆ-ಎಂಬುದಕ್ಕೆ ಅರ್ಥವಿದೆ—'

'ಆದರೆ ಅವೆರಡನ್ನೂ ಹೀಗೆ ಕೂಡಿಸಿದರೆ ಅರ್ಥವಾಗುವುದಿಲ್ಲ' ಎಂದರು. ನೋಡಿದಿರಾ ಇವನ ಹಟವನ್ನು!

'ಆಗಲಿ ತಮ್ಮ ಪಾಂಡಿತ್ಯಪ್ರದರ್ಶನ!' ಎಂದು ತಡೆಯದೆ ನಾನು ಅಣಕಿಸಿದೆ.

'ಗಿಳಿಗೂ ಮೀಮಾಂಸೆಗೂ ಸಂಬಂಧವಿಲ್ಲ. ಗಿಳಿಗೆ ಗೊತ್ತಿದ್ದ ವಿಷಯ ವೇದಾಂತ, ಮೀಮಾಂಸೆ ಅಲ್ಲ. ಗಿಳಿಗೆ ಮೀಮಾಂಸೆ ಗೊತ್ತಿದ್ದರೆ ಮೂಕನಿಗೆ ಮಂತ್ರಪಾಠ ಗೊತ್ತಿರಬಹುದು!'

ಇಂತಹ ಮನೋವೃತ್ತಿಯ ಗೆಳೆಯನು ನಿರುದ್ಯೋಗಿಯಲ್ಲ ಎಂದು ನಾನು ಹೇಗೆ ಹೇಳದಿರಬಹುದು? ಸ್ವತಃಕ್ಕೆ ವಿಚಾರಮಾಡದವನು ನಿರುದ್ಯೋಗಿ ಎಂದು ನನ್ನ ವ್ಯಾಖ್ಯೆ; ನನ್ನ ಗೆಳೆಯನಾದರೂ ಆ ವ್ಯಾಖ್ಯೆಗನುಸರಿಸಿಯೆ ನಿರುದ್ಯೋಗಿಯಾಗಿದ್ದಾನೆ. ಗಿಳಿಗೆ ಗೊತ್ತಿದ್ದ ವಿಷಯ ವೇದಾಂತ ಎನುವುದು ಅನೇಕರ ವಿಚಾರ, ಅನ್ಯರ ವಿಚಾರ, ಸನಾತನ ವಿಚಾರ, ಸಂಪ್ರದಾಯದ ವಿಚಾರ. ಅದನ್ನೆ ತಾನೂ ಹೇಳುತ್ತಲಿದ್ದಾನೆ. ಇದೇ ಗಿಳಿಯ ಮೀಮಾಂಸೆ—ಎಂದು ಹೇಳಿದೆ ನಾನು. ಅದಕ್ಕೆ ನನ್ನ ಗೆಳೆಯನ ಉತ್ತರವೇನೆಂದು ಕೇಳುವಿರಾ? ಪೋಲೀಸರನ್ನೆ ಕೇಳಿರಿ; ಯಾಕೆಂದರೆ, ಅಂದು ನನ್ನ ಮನೆಬಿಟ್ಟು ಹೋದ ನನ್ನ ಗೆಳೆಯನ 'ಪತ್ತೆ' ಇದುವರೆಗೆ ಆಗಿಲ್ಲ.

ಪ್ರಸಂಗವಿದ್ದಿತೆಂದು ಹೇಳಿದೆ. ಇನ್ನು ಆ ಹಾಳು ಹರಟೆಯ ಗೊಡವೆ ನಮಗೇಕೆ? ಗಿಳಿಗೆ ಗೊತ್ತಿದ್ದ ವಿಷಯ ವೇದಾಂತ ಎಂಬ ಕಲ್ಪನೆಯ ಮೂಲವನ್ನು ಕಂಡು ಹಿಡಿಯೋಣ. ಶುಕ ಎಂಬ ಮುನಿಯ ಹೆಸರನ್ನು ಕೇಳಿದ್ದೀರಾ? ಅದೇ ಈ ಕಲ್ಪನೆಯ ಗೊಂದಲಕ್ಕೆ ಕಾರಣ. ಶುಕನು [illegible] ತನ್ನ ದುರ್ದೈವದಿಂದಲೋ ಆ

ಮುನಿಯ ದುರ್ದೈವದಿಂದಲೋ— 'ಶುಕ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ 'ಗಿಳಿ' ಎಂಬ ಅರ್ಥವೂ ಇದೆ. ಆಯಿತು ಅರ್ಥದ ಅನರ್ಥಕ್ಕೆ ಪ್ರಾರಂಭ! ಶುಕನು ಮಹಾವಿರಕ್ತ, ಎಂಬುದಕ್ಕೆ 'ಗಿಳಿಯು ಮಹಾವಿರಕ್ತ' ಎಂಬ ಅರ್ಥವು ಪ್ರಾಪ್ತವಾಯಿತು. ಶುಕಮುನಿಯನ್ನು ನಾವು ನೋಡಿಲ್ಲ, ಗಿಳಿಯನ್ನು ದಿನಾಲು ನೋಡುತ್ತೇವೆ. ಆದುದರಿಂದ 'ಗಿಳಿಯ ಜೀವನಮಾರ್ಗವೆ ವೈರಾಗ್ಯದ ಮಾರ್ಗ' ಎಂಬುದು ನಮಗೆ ತಟ್ಟನೆ ತಿಳಿಯಿತು, ವೈರಾಗ್ಯಸಾಧನವು ಸುಲಭವೆನಿಸಿತು. ಗಿಳಿಯಂತೆ ಇದ್ದರೆ ನಮಗೂ ವೈರಾಗ್ಯ ಪ್ರಾಪ್ತಿಯಾಗುವುದು. ಗಿಳಿಯು ಇರುವುದು ಹೇಗೆ? ಸ್ಥೂಲ ದೃಷ್ಟಿಯಿಂದ ನೋಡಿದರೆ ಮೊದಲು ಗಿಳಿಯ ಮೂಗು ಕೆಂಪು ಇದೆ ಎಂಬುದು ನಮ್ಮ ಲಕ್ಷ್ಯಕ್ಕೆ ಬರುವುದು. ಗಿಳಿಯಂತೆ ಇರುವುದಾದರೆ ಮೊದಲು ನಮ್ಮ ಮೂಗು ಕೂಡ ಕೆಂಪು ಇರಬೇಕಾಯಿತಲ್ಲ? ಇದ್ದಿಲ್ಲವಾದರೆ ಕೆಂಪು ಆಗುವಂತೆ ಮಾಡಲೇಬೇಕಾಯಿತಲ್ಲ? ಮೂಗನ್ನು ಕೆಂಪು ಮಾಡುವ ವಿದ್ಯೆ ಯಾವುದು? ಅನೇಕರಿಗೆ ನೆಗಡಿಯ ಅನುಭವವಿರಬಹುದು; ನೆಗಡಿ ಬಂದಾಗ ಮೂಗು ಕೆಂಪು ಆಗುವುದು. ಕಾರಣವೇನು? ಅನೇಕಸಲ ಮೂಗನ್ನು ಕೈಯಿಂದ ತಿಕ್ಕುವೆವು. ಆ ಘರ್ಷಣದಿಂದ ಹುಟ್ಟಿದ ಅಗ್ನಿಯೊ ಏನೊ ಎನ್ನುವಂತೆ ಮೂಗು ಕೆಂಪು ಆಗುವುದು. ಅರ್ಥಾತ್, ಕೈಯಿಂದ ಮೂಗನ್ನು ಎಳೆಎಳೆದಂತೆ ಹಿಡಿಹಿಡಿದಂತೆ ಮೂಗು ಕೆಂಪಾಗುವುದೆಂದು ಸಿದ್ಧವಾದಂತಾಯಿತು. ಆದರೂ ಒಂದು ತೊಂದರೆ. ಹೋದಹೋದಲ್ಲಿ, ಬಂದ ಬಂದಲ್ಲಿ, ಕುಳಿತಲ್ಲಿ, ನಿಂತಲ್ಲಿ ಮೂಗನ್ನು ಕೈಯಿಂದ ಎಳೆಯುವುದೆಂದರೆ ನಮಗೂ ತೊಂದರೆ, ನಮ್ಮ ಬದಿಗೆ ನಿಲ್ಲುವವರಿಗೂ ನಮ್ಮ ಸಮೀಪ ಹಾಯ್ದುಹೋಗುವವರಿಗೂ ತೊಂದರೆ. ಆದಕಾಗಿ ದಿನಾಲು ಅದೊಂದು ನಿಯಮಿತ ವ್ಯಾಯಾಮವೆಂದು ತಿಳಿಯಬೇಕು. ವೇದಾಂತದ ಭಾಷೆಯಲ್ಲಿ ಹೇಳಬೇಕಾದರೆ ಮೂರಾವರ್ತಿ ತಪ್ಪದೆ ಸಂಧ್ಯಾವಂದನೆಯನ್ನು ಮಾಡಬೇಕು. ಸಂಧ್ಯಾವಂದನೆಯಲ್ಲಿ ಭಕ್ತಿರಸದ ಆವೇಶದಲ್ಲಿ ಎಳೆದ ಮೂಗಿನಿಂದ ಸಾಯುವುದರೊಳಗಾಗಿ ಕೆಂಪುಮೂಗಿನ ಗಿಳಿ(ಅರ್ಥಾತ್ ಶುಕಮುನಿ)-ಯಾಗುವುದರಲ್ಲಿ ಸಂದೇಹವಿಲ್ಲ. ಇದಾಯಿತು ತುದಿ ಮೂಗಿನ ಮೇಲಿನ ಚರ್ಚೆ. ಇನ್ನು ಮೂಗಿನ ಬಣ್ಣ ಕೆಂಪಾದರೆ ಮೈಬಣ್ಣ ಹಸರು ಇರಬೇಕೆಂಬುದನ್ನು ಮರೆಯುವಂತಿಲ್ಲ. ಆದರೆ ನಮಗೆ- ಭಾರತೀಯರಿಗೆ - ಅದೇನು ಕಠಿಣವೆನಿಸುವ ಮಾತಲ್ಲ. ನಿಸರ್ಗದಿಂದ ನಮ್ಮ ಮೈಬಣ್ಣ ಕಪ್ಪು. ಆದರ ಮೇಲೆ ಬೂದಿಯನ್ನಾಗಲಿ, ... ಬಣ್ಣದ ಮತ್ತಾವ ಪುಡಿಯನ್ನಾಗಲಿ ಕೊಡೆ... ಸಾಡಗಪ್ಪಿನಲ್ಲಿ ಬೂದಿ-ಬಿಳಿ ಕೂಡಿ ಹಸರು ... ವಾಗುವುದು. ಇರುವಾಗಲಾಗಲಿ ಸತ್ತ ಮೇಲಾಗಲಿ ಬೂದಿಗೆ ಕೊರತೆ ಇಲ್ಲ. ಅಂತೂ ಗಿಳಿಯಾಗು... ಯನ್ನು ನಮ್ಮವರು ಚನ್ನಾಗಿ ಸಾಧಿಸಿಕೊಂಡರು, ... ವೈರಾಗ್ಯ ದೊರೆಯುವುದೆಂದು ವಿಶ್ವಾಸವನ್ನಿ... ರೇನು? ನಾನು ಮೇಲೆ ಹೇಳಿದಂತೆ ಇದ್ದ... ಅನರ್ಥ ಮಾಡಿದ ಪರಿಣಾಮ; ಗಿಳಿಯೂ ಶುಕ... ಒಂದೇ ವಸ್ತು ಎಂದು ತಿಳಿದುದರ ಪರಿಣಾಮ; ... ಮೀಮಾಂಸೆ ಗೊತ್ತಿಲ್ಲದುದರ ಪರಿಣಾಮ. ... ಇತಿಯ ವರೆಗೆ ಗಿಳಿಯ ಮೀಮಾಂಸೆಯನ್ನು, ಗಿಳಿ(ತ್ವ)ತನವನ್ನು, ಗಿಳಿಯ ನಿಜಸ್ವರೂಪವನ್ನು ... ಈ ಅನರ್ಥಕ್ಕೆ ನಾವು ಈಡಾಗುತ್ತಿರಲಿಲ್ಲ.

ಹಾಗಾದರೆ ಗಿಳಿಯ ಗಿಳಿತ್ವವೆಂದರೇನು? ... ಗಿಳಿಯು ಹುಟ್ಟಿದ್ದು ಯಾಕೆ? ಎಂಬ ... ಮೊದಲು ಉದ್ಭವಿಸುವುವು. ಅದ್ವೈತಿಗಳ ಪ... ಪರಮಾರ್ಥ ಮತ್ತು ವ್ಯವಹಾರ ಎಂಬ ಎರಡು ... ಗಳನ್ನುಳ್ಳಂತೆ ಗಿಳಿಗೆ ಕಾವ್ಯ ಮತ್ತು ವ್ಯವ... ಎರಡು ಸ್ವರೂಪಗಳಿವೆ; ಆದುದರಿಂದ ಇವೆರಡು... ಗಳಿಂದ ನಾವು ಗಿಳಿಯ ಅಸ್ತಿತ್ವವನ್ನು ಚರ್ಚಿ... ವುದು. ಕಾವ್ಯದ ಜೀವಾಳ ಗಿಳಿ. ಗಿಳಿಯು ... ಲಿಲ್ಲವೆಂದರೆ ಕಾವ್ಯದ ಝರಿಯೆ ಹೊರಬೀ... ಕಾವ್ಯದ ವಿಷಯ ಸುಂದರ ವಸ್ತು; ವಸ್ತುಗಳ... ವಾದುದು ಲಲನೆ; ಈ ಲಲನೆಗೆ ಜೀವವಿದೆ... ಎಂಬುದು ಕಾವ್ಯದ ದೃಷ್ಟಿಯಿಂದ ಅತ್ಯಂತ ... ಪ್ರಶ್ನೆಯಾಗಿರುವುದು. ಲಲನೆಯು ಜೀವವುಳ್ಳ... ಮದಿವೆಯ ಮುಂಚಿತ ಅವಳು ಮಾತನಾಡ... ವುದು. ಮಾತನಾಡುವುದು ಹೇಗೆ? ನನ್ನ... ಮಾತನಾಡಿದರೆ ಅವಳಿಗೆ ಕಾವ್ಯದಲ್ಲಿ ಯೋಗ್ಯ... ಸ್ಥಾನಗಳೆ ಇಲ್ಲ. ಇದಲ್ಲದೆ ಅವಳಿಗೆ ಕತೆಯ... ನನ್ನು ಮದಿವೆಯಾಗುವುದಿದೆ. ಅಂತಹ ... ಮೋಹಗೊಳಿಸುವಂತೆ, ಅವನ ಜೀವನದಲ್ಲಿ ... ಬೆಳ್ದಿಂಗಳನ್ನು ಪಸರಿಸುವಂತೆ ಅವಳು ಮಾತನಾ... ಕವಿಗಳು ಅಂತಹ ಯುಕ್ತಿಯನ್ನು ಅವಳಿಗಾಗಿ ... ದ್ದಾರೆ. ಅವಳು ಆ ಯುಕ್ತಿಯಿಂದ ಮಾ... ನಾಯಕನಿಗೆ ಸಮ್ಮೋಹ-ಸಂತೋಷಗಳನ್ನು ...

ಯೊಬ್ಬ ವಾಚಕನೂ ತನ್ನ ಪ್ರತಿಸ್ಪರ್ಧಿಯಾಗಬಹುದೆಂಬ ಭೀತಿಯೂ ಉಂಟಾಗುವುದು. ಆ ಯುಕ್ತಿ ಯಾವುದು? ಗಿಳಿಯಂತೆ ಮಾತನಾಡುವುದು, 'ಶುಕಾಳಾಪ'ಯಾಗುವುದು.

ಇನ್ನು ವ್ಯವಹಾರದ ದೃಷ್ಟಿಯಿಂದ ವಿಚಾರಮಾಡೋಣ. ಗಿಳಿಯಂತೆ ಮಾತನಾಡುವುದೆಂದರೇನು? 'ಗಿಳಿಗಳ ಚಪ್ಪರಣೆ' ಎಂಬುದೊಂದು ಪ್ರಯೋಗವಿದೆ ಕನ್ನಡ ಕಾವ್ಯದಲ್ಲಿ. ಅದರ ಅರ್ಥವು ಪಂಡಿತರಿಗೆ ಕೂಡ ಹೊಳೆದಿಲ್ಲವೆಂದು ನನ್ನ ಅಭಿಪ್ರಾಯ. ಚಪ್ಪಾಳೆ ತಟ್ಟಿದ ಕೂಡಲೆ ಮಾತನಾಡುವುದು, ಇಲ್ಲವೆ ಚಪ್ಪಾಳೆ ತಟ್ಟುವಂತೆ ಮಾತನಾಡುವುದು—ಇದಕ್ಕೆ ಹಳೆಗನ್ನಡದಲ್ಲಿ ಇಲ್ಲವೆ 'ಸುದ್ದಗನ್ನಡ'ದಲ್ಲಿ 'ಚಪ್ಪರಣೆ' ಎಂಬ ಶಬ್ದವಿದ್ದಿರಬಹುದು. ಕವಿಯು ಚಪ್ಪಾಳೆ ತಟ್ಟುವುದೊಂದೆ ತಡ, ನಾಯಿಕೆಯಾದ ಲಲನೆಯು ಮಾತನಾಡುವಳು. ಅದು ಹೇಗೆ—ಎಂದು ವಾಚಕರಿಗೆ ತೊಡಕು ಬೀಳುವ ಕಾರಣವಿಲ್ಲ. ಎಷ್ಟೋ ವಾಚಕರು ತಮ್ಮ ಮನೆಯಲ್ಲಿಯೆ ಗಿಳಿಗಳನ್ನು ಕಂಡಿರಬಹುದು. ಚಪ್ಪಾಳೆ ತಟ್ಟಿದ ಕೂಡಲೆ ಅವು ಮಾತನಾಡುವುವು. ಯಾವ ಮಾತನ್ನು? ಅರ್ಥಾತ್ ಕಲಿಸಿದ ಮಾತನ್ನು. ನಾಯಿಕೆಯಾದರೂ ಕವಿಯಾಗಲಿ ಕಾಮನಾಗಲಿ ಕಲಿಸಿದ ಮಾತನ್ನಾಡುವಳು. ಈ 'ಚಪ್ಪರಣೆ'ಯ ದೃಷ್ಟಿಯಿಂದ ವ್ಯವಹಾರದಲ್ಲಿ ಗಿಳಿಯ ಮಹತ್ತ್ವವು ಅತ್ಯಂತವಾಗಿದೆ—ಅಥವಾ, ಒಂದೆರಡು ದೃಷ್ಟಾಂತಗಳಿಂದಲೆ ನಮ್ಮ ಮಾತನ್ನು ವಿಶದೀಕರಿಸೋಣ.

ಇತ್ತಿತ್ತಲಾಗಿ ಪರದೇಶಗಳಲ್ಲಿ ಮಾನಸಶಾಸ್ತ್ರ ಎಂಬ ಹೊಸತೊಂದು ಶಾಸ್ತ್ರದ ಪರಿಶೋಧವಾಗಿದೆ. ಪರದೇಶಗಳಲ್ಲಿಯ ಇನ್ನೂ ಅದಕಾಗಿ ಬೇಡಿಕೆ (demand) ಹೆಚ್ಚಾಗಿರುವುದರಿಂದ ನಮ್ಮ ದೇಶದಲ್ಲಿ ಅದಿನ್ನೂ ಮಾರಾಟಕ್ಕೆ ಸಿದ್ಧವಾಗಿಲ್ಲ. ಅದಿರಲಿ. ಮಾನವನು ಅಧಿಕಾರ ಪ್ರಿಯನು— ಎಂಬುದೊಂದು ಈ ಶಾಸ್ತ್ರದ ಸಿದ್ಧಾಂತ. ಅಧಿಕಾರಪ್ರಿಯತೆ ಅವನ ಹುಟ್ಟುಗುಣವಂತೆ, ಸಹಜಪ್ರವೃತ್ತಿಯಂತೆ. ಸಹಜಪ್ರವೃತ್ತಿಗಳನ್ನೆಲ್ಲ ಬೆಳೆಯಗೊಟ್ಟರೆ ಮಾತ್ರ ಮಾನವನು ಶಕ್ತಿಯುತನಾಗಿ ಬೆಳೆಯುವನಂತೆ. ಎಂದಮೇಲೆ ಅಧಿಕಾರ ಪ್ರಿಯತೆಯನ್ನು ಪ್ರೋತ್ಸಾಹಿಸಬೇಕಾಯಿತು. ತಾನು ಹೇಳಿದಂತೆ ನಡೆಯುವ ಕೆಲವು ವಸ್ತುಗಳನ್ನು ಅವನಿಗೆ ಒದಗಿಸಿ ಕೊಡಬೇಕಾಯಿತು. ಚಿಕ್ಕತನದಲ್ಲಿ ಆಟಿಗೆಗಳನ್ನು ಕೊಡುವೆವು. ಬೆಳೆದ ಮೇಲೆ ಸಜೀವ ವಸ್ತುಗಳೆ ಬೇಕೆನಿಸುವುವು. ಅರಸನಿಗೆ ಮಂತ್ರಿಗಳು, ಮಂತ್ರಿಗಳಿಗೆ ಮುಕ್ಕ ಅಧಿಕಾರಿಗಳು, ಶಿಕ್ಷಕನಿಗೆ ವಿದ್ಯಾರ್ಥಿಗಳು, ಗಂಡನಿಗೆ ಹೆಂಡತಿ, ತಂದೆಗೆ ಮಕ್ಕಳು ಹೀಗೆ ಆಯಾ ಜನರ ಸಹಜಪ್ರವೃತ್ತಿಯಾದ ಅಧಿಕಾರ ಪ್ರಿಯತೆಯನ್ನು ಬೆಳೆಸಲು ಆಯಾ ಆಟಿಗೆಗಳಂತಹ ವಸ್ತುಗಳಿವೆ. ಆದರೆ ಯಾವನು ಅರಸು-ಮಂತ್ರಿ-, ಶಿಕ್ಷಕ- ಗಂಡ-ತಂದೆ ಇಂತಹದೊಂದು ಪದವಿಯನ್ನು ಭೋಗಿಸುವುದಿಲ್ಲವೊ ಅವನ ಗತಿಯೇನು? ನಮ್ಮ ದುರ್ದೈವದಿಂದ ಅಂತಹರ ಸಂಖ್ಯೆಯೆ ಜಗತ್ತಿನಲ್ಲಿ ಹೆಚ್ಚಾಗಿದೆ. ಅಂತಹರಿಗಾಗಿ ದಯಾಳುವಾದ ದೇವನು ಗಿಳಿಗಳನ್ನು ದಯಪಾಲಿಸಿದ್ದಾನೆ. (ಪರಮಾತ್ಮನೆ, ನಿನ್ನ ದೂರದರ್ಶಿತ್ವವನ್ನು ಎಷ್ಟೆಂದು ಹೊಗಳಲಿ!) ಮನೆಯಲ್ಲಿ ಒಂದು ಗಿಳಿ ಇದ್ದರೆ ಸಾಕು; ಈ ವಾಕ್ಯವು ಅನೇಕ ಅರ್ಥಗಳುಳ್ಳ ಒಂದು ಸೂತ್ರವಾಗಿದೆ. ನೆರೆಮನೆಯವನು ಹೆಂಡತಿಯ ಮೇಲೆ ಅಧಿಕಾರ ನಡೆಸುವನೆಂಬ ಅಸೂಯೆ ಏಕೆ? ಒಂದು ದೃಷ್ಟಿಯಿಂದ ಹೆಂಡತಿಗಿಂತ ಗಿಳಿಯೆ ಹೆಚ್ಚು ಅನುಕೂಲ. ತನ್ನ ಪೂರ್ವಜನ್ಮದ ಪಾಪವಾಗಲಿ ಈ ಜನ್ಮದ ಪಾಪವಾಗಲಿ ತಡೆಯದಂತಾದರೆ ಒಂದು ವೇಳೆ ಹೆಂಡತಿಯು ಎದುರು ನಿಲ್ಲಬಹುದು, ಮಾತು ಮೀರಬಹುದು; ಆದರೆ ಗಿಳಿ ಇದ್ದರೆ ಅಂತಹ ಅನ್ಯಾಯಗಳಾಗಲಿ ಅಪರಾಧಗಳಾಗಲಿ ಘಟಿಸುವ ಸಂಭವವೆ ಇಲ್ಲ. ಕನಸು-ಮನಸುಗಳಲ್ಲೂ ಶಕ್ಯವಲ್ಲದ ಮಾತು. ಹೆಂಗಸಿನ ಬುದ್ಧಿ ಯಾವಾಗಲೂ ಮೊಳಕಾಲ ಕೆಳಗೆ; ಆದರೆ ಮೊಳಕಾಲೇ ಇರಬಹುದಿಲ್ಲವಾದ್ದರಿಂದ ಗಿಳಿಯ ಬುದ್ಧಿ ಹೆಂಗಸಿಗಿಂತ ಸಾವಿರಪಾಲು ಮೇಲು!

ಹೆಂಗಸಿನದಾಯಿತು, ಇನ್ನು ಹುಡುಗರ ದೃಷ್ಟಾಂತವನ್ನು ನೋಡೋಣ. ಹುಡುಗರಿಗೆ ವಿದ್ಯೆ ಕಲಿಯುವುದೆ ಬಾಲ್ಯದ ಮುಖ್ಯ ಧ್ಯೇಯವಾಗಿರುವುದು. ವಿದ್ಯೆಯನ್ನು ಕಲಿಯಬೇಕಾದರೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು; ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದರೆ ಪುಸ್ತಕಗಳನ್ನು ಪಾಠಮಾಡಬೇಕು; ಯಾವ ಅನುಕ್ರಮದಿಂದ ಪುಸ್ತಕಗಳನ್ನು ಪಾಠ ಮಾಡಲಾಗುವುದೋ ಆ ಅನುಕ್ರಮದಿಂದ ಮುಂದೆ ವ್ಯವಹಾರದಲ್ಲಿ ಅದರ ಉಪಯೋಗವನ್ನು ಮಾಡಿಕೊಳ್ಳಬೇಕಾಗುವುದು. ಉದಾಹರಣಾರ್ಥವಾಗಿ, ಬರೆಯುವುದನ್ನು ಎಲ್ಲಕ್ಕೂ ಮುಂಚೆ ಕಲಿಯುವೆವು; ಅದಕಾಗಿ ವಿದ್ಯೆ ಮುಗಿದ ಮೇಲೆ (ಎಂದರೆ ಕೊನೆಯ ಪರೀಕ್ಷೆ ಉತ್ತೀರ್ಣವಾದ ಮೇಲೆ) ಬರೆಯುವುದರ ಉಪಯೋಗವನ್ನು ಮೊದಲು ಮಾಡಿಕೊಳ್ಳುವೆವು; ಅದಕಾಗಿ ನೂರಾರು ಸಾವಿರಾರು ಅರ್ಜಿಗಳನ್ನು ಬರೆಯುವೆವು. ಕೇವಲ ಅರ್ಜಿಗಳನ್ನು ಬರೆಯುವುದರಿಂದ ಕೆಲಸ ದೊರಕುವುದಿಲ್ಲೆಂದು ನಮಗೆ

ಗೊತ್ತು, ಆದರೂ ಕಲಿತ ವಿದ್ಯೆಯ (ಈ ಸಂದರ್ಭದಲ್ಲಿ, ಬರೆಯುವುದರ) ಉಪಯೋಗವನ್ನು ಮಾಡಿಕೊಳ್ಳುವುದು ನಮ್ಮ ಕರ್ತವ್ಯವೆಂದೇ ನಾವು ಹಾಗೆ ಮಾಡುವೆವು. ಅದರಂತೆಯೆ, ಬರೆಯುವುದಾದ ಮೇಲೆ ಓದುವುದನ್ನು ಕಲಿಯುವೆವು. ಅದರಲ್ಲೂ ಮೊದಲನೆಯ ಪಾಠ ಹೀಗೆ: 'ಮಕ್ಕಳಿರಾ, ಇದನ್ನೆಲ್ಲ ಹುಟ್ಟಿಸಿದವರು ಯಾರು? ದೇವನು. ಅವನಲ್ಲಿ ನಾವು ಭಕ್ತಿಯನ್ನು ತೋರಿಸಬೇಕು, ವಿಶ್ವಾಸವನ್ನಿಡಬೇಕು' ಎಂದು. ಆಯಿತು, ಅರ್ಜಿಗಳನ್ನು ಬರೆದು ಹಾಕಿದ ಮೇಲೆ ಅದೇ ಅನುಕ್ರಮದಲ್ಲಿ ದೇವನಲ್ಲಿ ವಿಶ್ವಾಸವನ್ನಿಡುವೆವು. (ದೇವನಲ್ಲಿ ವಿಶ್ವಾಸವಿಡಬೇಕು— ಎಂಬುದನ್ನು ಕರ್ನಾಟಕ ಸಾಹಿತ್ಯಪರಿಷತ್ತಿನ ಧ್ಯೇಯಪತ್ರದಲ್ಲಿ ಮೊದಲು ಕಾಣಿಸಬೇಕು ಎಂದು ಸಾಹಿತ್ಯಸಮ್ಮೇಳನದ ಅಧ್ಯಕ್ಷರೊಬ್ಬರು ಹೇಳಿದ್ದಾರಂತೆ. ಅದೇನೋ ತಪ್ಪು ಎಂದು ನನ್ನ ಗೆಳೆಯನ ಅಭಿಪ್ರಾಯ. ಆದರೆ ಕನ್ನಡ ಲೇಖಕರಿಗೆ ದೇವನಲ್ಲಿ ವಿಶ್ವಾಸವಿಡುವ ಪ್ರಸಂಗವೆ ಬಂದುದರಿಂದ ಆ ಮಾತು ಯೋಗ್ಯ ಎಂದು ನನ್ನ ಅಭಿಪ್ರಾಯ. ಇರಲಿ.) ಹೀಗೆ ನಾವು ವಿದ್ಯೆಯ ಉಪಯೋಗ ಮಾಡಿಕೊಳ್ಳುವಾಗ ಒಂದು ಅನುಭವವನ್ನು ಕಂಡಿದ್ದೇವೆ. ವ್ಯವಹಾರದಲ್ಲಿ ಕಾಲಿಡುವಷ್ಟರಲ್ಲಿ ನಮ್ಮ ಪಾಠವೆ ನಮಗೆ ಮರೆತಿರುತ್ತದೆ. ಈ ಸಂದರ್ಭದಲ್ಲಿ ನಾವು ಗಿಳಿಯಿಂದ ಬುದ್ಧಿಯನ್ನು ಕಲಿಯಬೇಕಾಗಿದೆ. ಗಿಳಿಯು ನಮ್ಮಂತೆ ಮೊದಲು ಒಂದೇಸವನೆ ಎಲ್ಲ ವಿದ್ಯೆಯನ್ನು ಕಲಿತು ಆ ಮೇಲೆ ವ್ಯವಹಾರದಲ್ಲಿ ಕಾಲಿಡುವುದಿಲ್ಲ. ಹಾಗೆ ಮಾಡಿದರೆ ವಿದ್ಯೆಗೂ ವ್ಯವಹಾರಕ್ಕೂ ಅಂತರವು ದೊಡ್ಡದಾಗುವುದೆಂದು ಅದರ ಅಭಿಪ್ರಾಯ. ಗಿಳಿಯ ಪದ್ಧತಿಯೆ ಬೇರೆ. ಕಲಿತ ವಿದ್ಯೆಯನ್ನು ಕೂಡಲೆ ವ್ಯವಹಾರದಲ್ಲಿ ಉಪಯೋಗಿಸುವುದು, 'ಬಂದಿರಾ?' ಎನುವ ಶಬ್ದವನ್ನು ಗಿಳಿಯು ಕಲಿಯಿತೆಂದರೆ ಬಂದವರಿಗೆಲ್ಲ ಆ ಕ್ಷಣದಿಂದ 'ಬಂದಿರಾ?' ಎಂದು ಕೇಳುವುದು; ಬಿ. ಎ., ಎಮ್. ಎ. ಆಗುವ ವರೆಗೆ ತಡೆಯುವುದಿಲ್ಲ. ಅದರಂತೆಯೆ, '—ಮಗನೆ' ಎಂಬ ಶಬ್ದವನ್ನು ಕಲಿತ ಕ್ಷಣದಿಂದ ಬಂದವರನ್ನೆಲ್ಲ ಹಾಗೆಯೆ ಸಂಬೋಧಿಸುವುದು. 'ಬಂದವರನ್ನು' ಯಾಕೆ, 'ಬಂದವನನ್ನು' ಎನ್ನೋಣ; ಯಾಕೆಂದರೆ, ಆ ಶಬ್ದವನ್ನು ಕೇಳಿದ ಕ್ಷಣ ಬಂದವನು ಗಿಳಿಯ ಕಂಠವನ್ನು ಹಿಚುಕಲು ಯತ್ನಿಸುವನು; ಆದರ ಅಭಿಪ್ರಾಯವಾಗಿ ಗಿಳಿಯೂ ಆ ಶಬ್ದವನ್ನು ಬಿಟ್ಟುಕೊಡುವುದು. ನೋಡಿದಿರಾ ಈ ಪದ್ಧತಿಯ ಅನುಕೂಲ... ವ್ಯವಹಾರಕ್ಕೆ ಉಪಯುಕ್ತವಲ್ಲದ ವಿದ್ಯೆಯನ್ನು ... ಬಿಟ್ಟುಕೊಡಲು ತಿಳಿಯುವುದು. ಹೆಚ್ಚಿಗೆ ಹೇಳುವು... ಇಂದು ನಮ್ಮ ದೇಶದಲ್ಲಿ ಶಿಕ್ಷಣ ಪದ್ಧತಿಯನ್ನು ... ಬೇಕೆಂಬ ಆಗ್ರಹವಿದೆ. ಯಾವ ಕಮಿಟಿಯನ್ನೆ... ಪಡಿಸಲಿ, ಅದರ ಅಧ್ಯಕ್ಷನು ಗಿಳಿ, ಕಾರ್ಯದರ್ಶಿ... (ಬೇಕಾದರೆ ಎರಡನೆಯ ಗಿಳಿ ಎನ್ನಿ) ಆಗುವ... ಬೇಕೆಂದು ಸರಕಾರದವರಿಗೆ ನನ್ನ ಬೇಡಿಕೆ. '... ಹಕ್ಕಿ ಹೇಳತ್ತೈತಣ್ಣ' ಎಂದರೆ ರಿಪೋರ್ಟನ್ನು ... ಎಂದರ್ಥ.

ಕೊನೆಯ ದೃಷ್ಟಾಂತವು ವಿಚಾರವಂತನಾದ... ಸಂಬಂಧಿಸಿದೆ. ಈಗ ನಮ್ಮ ದೇಶದಲ್ಲಿ 'ಸದ್ಯದ ... ಮಹತ್ತ್ವದ ವಿಷಯವಾಗಿದೆ. ಪ್ರತಿಯೊಬ್ಬ ... ನ್ನನು, ದೇಶಭಕ್ತನು ನಮಗೆ ಈ ಸದ್ಯದ ... ಜ್ಞಾನವನ್ನು ಮಾಡಿಕೊಡುತ್ತಲಿದ್ದಾನೆ. ... ಜ್ಞಾನಸಂಪಾದನೆಯ ಮಾರ್ಗವು ಬಹಳ ... ನಮ್ಮ ದೇಶವೊ— ದಾರಿದ್ರ್ಯದಲ್ಲಿ ಮೊದಲ... ಈ ಜನರ ಪ್ರವಾಸದ ವೆಚ್ಚವನ್ನೂ, ಅನುಕೂಲ... ಅಲಾವನ್ಸ (allowance)ನ್ನೂ ಕೊಡುವ ... ಗಿಲ್ಲ, ಕೊಟ್ಟರೂ ಅದು ಅಪವ್ಯಯ. ... ಮಾತನ್ನು ಹೇಳುವಾಗ ಈ ವ್ಯರ್ಥ ವೆಚ್ಚವೇಕೆ! ಹಿಂಡಾಗಿ ಗಿಳಿಗಳನ್ನು ಸಾಕೋಣ. ಅವು ... ಮೋಹಕವಾದ ತಮ್ಮ ಸ್ವರದಲ್ಲಿ ನಮ್ಮ ಮನೆ... ಸಂದೇಶವನ್ನೂ ಜ್ಞಾನವನ್ನೂ ಮುಟ್ಟಿಸುವುವು. ವೆಚ್ಚವಿಲ್ಲ, ಪ್ರವಾಸಕ್ಕೆ ವೆಚ್ಚವಿಲ್ಲ ಮತ್ತು ... ಕಡಮೆ, ಮೆರವಣಿಗೆ ಮೊದಲಾದುವುಗಳಿಂದ ... ಯನ್ನಾಗಲಿ ತಡವನ್ನಾಗಲಿ ಮಾಡುವ ... ಹಿಂದಿನ ಕಾಲದ ಕೊಲೆಗಡಕತನದ ಯುದ್ಧ... ವಾಳಗಳು ಸುದ್ದಿಗಾರರಾಗುತ್ತಿದ್ದುವಂತೆ; ... ಸಾಮಯ ಸ್ವಾತಂತ್ರ್ಯಯುದ್ಧದಲ್ಲಿ ಗಿಳಿಗಳು ... ರಾಗಲಿ. ಇದಲ್ಲದೆ ಪಂಜರದಲ್ಲಿರುವ ... ಸಾಕ್ಷಾತ್ತಾಗಿ ಕಂಡ ಜೀವಿಗಳಿವು. ... ಯೋಗಿ, ಹಸರುಮೈಯ ಭೋಗಿ, ... ರೋಗಿ! ಇದು ಮಾನವನ ವೇದಾಂತವಾ... ಗಿಳಿಯ (ವಿಷಯವಾಗಿ) ಮೀಮಾಂಸೆಯ ...

ಅಣೋರಣೀಯಾನ್ ಮಹತೋ ಮಹೀಯಾನ್

ಕಳೆದ ವರ್ಷ ಇಡಿ ಜಗತ್ತಿನ ಸೈನ್ಯದ ಯಂತ್ರಗಳಿಗೆ ೮೨೮೮೦೦೦ ಟನ್ನಿನಷ್ಟು ಪೆಟ್ರೋಲ ಖರ್ಚಾಗಿದೆ. ಮಿಕ್ಕ ದೇಶಗಳಿಗಿಂತ ಬ್ರಿಟಿಶರೇ ಹೆಚ್ಚು ಖರ್ಚು ಮಾಡಿದ್ದಾರೆ !

* * *

ಆಕಾಶದಲ್ಲಿ ಬರಿಗಂಣಿಗೆ ಸುಮಾರು ಆರು ಸಾವಿರ ನಕ್ಷತ್ರಗಳು ಕಾಣುವವು ! ಆದರೆ ಜ್ಯೋತಿರ್ದರ್ಶನಿಯಿಂದ ಕೋಟ್ಯಾವಧಿ ನಕ್ಷತ್ರಗಳು ಕಾಣುವವು.

* * *

-ಬೆಟೆಲ್‌ಗ್ಯೂಝ್ ಎಂಬ ನಕ್ಷತ್ರವು ಸೂರ್ಯನಿಗಿಂತ ೨॥ ಕೋಟಿ ಪಾಲು ದೊಡ್ಡದಿದೆ !

* * *

ಜರ್ಮನಿಯಲ್ಲಿ ಎರಡು ಸಾವಿರ ವೈಚಿತ್ರ್ಯಾಲಯ (ಮ್ಯೂಜಿಯಮ್) ಗಳಿವೆ! ಬರ್ಲಿನಿನಲ್ಲಿಯೇ ೨೯ ಇವೆ !

* * *

ಗ್ರೇಟ ಬ್ರಿಟನ್ನಿನ ರಸ್ತೆಗಳ ಒಟ್ಟು ಉದ್ದವು ೧ ಲಕ್ಷ ೮೫ ಸಾವಿರ ಮೈಲಾಗುತ್ತದೆ. ಅವುಗಳಲ್ಲಿ ೧ ಕೋಟಿ ಸೈಕಲ್ಲುಗಳು ಓಡಾಡುತ್ತವೆ !

* * *

೧೧೦ ಅಬ್ಜ ವರ್ಷಗಳ ನಂತರ ಪೃಥ್ವಿಯ ತಿರುಗುವಿಕೆಯು ನಿಲ್ಲುತ್ತದಂತೆ! ೧ ಅಬ್ಜ ವರ್ಷದ ನಂತರ ಸೂರ್ಯನು ನಿಸ್ತೇಜನಾಗುವನು !!

* * *

ಇದೇ ವರ್ಷ ಸ್ಯಾನ್ ಫ್ರಾನ್‌ಸಿಸ್ಕೊದಲ್ಲಿ ಒಂದು ಪ್ರದರ್ಶನದಲ್ಲಿ ೧ ಲಕ್ಷ ಡಾಲರುಗಳ (೩ ಲಕ್ಷ ರೂಪಾಯಿ) ನಾಣ್ಯದ ರಾಶಿ ಇಡುತ್ತಾರೆ. ಪ್ರೇಕ್ಷಕರು ಒಂದು ಬಿಲ್ಲಿ ಕೊಟ್ಟು ಆ ರಾಶಿಗೆ ಕೈಹಚ್ಚಬೇಕು !

* * *

ಭಾರತೀಯ ಪಾರ್ಶಿಜನರಲ್ಲಿ ಸಾವಿರಕ್ಕೆ ೭೯೧, ಜ್ಯೂಜನರಲ್ಲಿ ೪೧೩, ಜೈನರಲ್ಲಿ ೩೫೩, ಕ್ರಿಸ್ತರಲ್ಲಿ ೨೭೯, ಸೀಖರಲ್ಲಿ ೯೧, ಬುದ್ಧರಲ್ಲಿ ೯೦, ಹಿಂದುಗಳಲ್ಲಿ ೮೪, ಮುಸಲ್ಮಾನರಲ್ಲಿ ೬೪ ಹೀಗೆ ಸಾಕ್ಷರರಿದ್ದಾರೆ.

* * *

ಈಗ ನಾವು ಚಹಾ ಕಾಫಿ ಕುಡಿಯುವ ಕಪ್ಪು ಬಸಿಗಳನ್ನು ತಯಾರಿಸುವ ಚೀನಿ ಮಂಣನ್ನು ಸಿದ್ಧಗೊಳಿಸುವ ಯುಕ್ತಿಯನ್ನು ಸಂಶೋಧಿಸಿದವರು ಪಾಲಿಸಿ ಮತ್ತು ಪೊಟ್ ಎಂಬ ವಿಜ್ಞಾನಿಗಳು. ಪೊಟನಿಗೊಬ್ಬನಿಗೇ ಆದಕ್ಕಾಗಿ ೩೦೦೦೦ ಪ್ರಯೋಗಗಳನ್ನು ಮಾಡಬೇಕಾಯಿತು.

* * *

ಬ್ರಿಟನ್ನಿನಲ್ಲಿ ಈಗ ೧೭೪೯೦೦೦ ನಿರುದ್ಯೋಗಿಗಳಿದ್ದಾರೆ. ಹಿಂದುಸ್ತಾನದಲ್ಲಿ ?

* * *

ಜರ್ಮನಿಯ ಶಾಲೆಗಳಲ್ಲಿ ಶೈಕ್ಷಣಿಕ ಚಲಚ್ಚಿತ್ರಗಳನ್ನು ತೋರಿಸುವುದಕ್ಕಾಗಿ ೨೨೩೬೦ ಸಿನೆಮಾ ಯಂತ್ರಗಳನ್ನು ಉಪಯೋಗದಲ್ಲಿ ತರಲಾಗಿದೆ. ಒಟ್ಟು ೫ ಕೋಟಿ ಫೂಟು ಫಿಲ್ಮ ತಯಾರಾಗಿದೆ.

* * *

ಹೋದವರ್ಷ ಗ್ರೇಟ ಬ್ರಿಟನ್ನಿನಲ್ಲಿ ಹಾಲಿಗಿಂತ ಹೆಂಡವು ಹೆಚ್ಚು ಖರ್ಚಾಯಿತು. ಹಾಲು ೮೭ ಕೋಟಿ ಗ್ಯಾಲನ್ ಆದರೆ ಹೆಂಡವು ೮೮॥ ಕೋಟಿ ಗ್ಯಾಲನ್ ಖರ್ಚಾಯಿತು.

* * *

ಅಮೆರಿಕೆಯ ಹನ್ನೊಂದುವರೆ ಲಕ್ಷ ಹೊಲಗಳಲ್ಲಿ ಪ್ರತಿಯೊಂದು ವಿಧದ ಕೃಷಿಕಾರ್ಯವು ವಿದ್ಯುತ್ತಿನಿಂದ ನಡೆಸಲಾಗುತ್ತಿದೆ.

* * *

ಯೋಗಿರಾಜ ಶ್ರೀ ಅರವಿಂದರ ದರ್ಶನ

ಲೇಖಕರು : ಭಾರತಸಂಚಾರಿ ಗೋಸಾವಿ

★



ಶ್ರೀ ಅರವಿಂದರ ಜೀವನವು ಸಾಮಾನ್ಯ ಭಾರತೀಯರಿಗೊಂದು ಒಗಟವಾಗಿ ಬಿಟ್ಟಿದೆ. ಈಗ ಸುಮಾರು ೨೮ ವರ್ಷಗಳ ಹಿಂದೆಯೇ ಭಾರತದ ರಾಜಕೀಯ ರಂಗದಿಂದ ಹೊರಬಿದ್ದು ಏಕಾಂತವನ್ನು ಸೇರಿದವರು ಈವರೆಗೂ ಅವರ ಗೊತ್ತುಗುರಿಗಳು ಯಾರಿಗೂ ನಿಚ್ಚಳವಾಗಿ ತಿಳಿಯದಂತಾಗಿವೆ. ಅವರ ಜೀವನದ ವಿಷಯಕ್ಕೆ ಹಲವರು ಹಲವು ವಿಧವಾಗಿ ತರ್ಕಿಸುವವರೇ. ಆದರೆ ಅವರು ಏಕಾಂತಿಗಳಾಗಿದ್ದರೂ ಲೋಕ ಸಾಮಾನ್ಯಕ್ಕಾಗಿ ಅವರು ಮಾಡಿದುದೇನು? ಮಾಡುತ್ತಿರುವುದೇನು? ಎಂಬುದನ್ನು ಕಣ್ಮುಟ್ಟಿ ನೋಡಿ ಹೇಳುವವರು ಕಡಿಮೆ. ಪ್ರಸ್ತುತ ಲೇಖಕರು ತಾವು ಪ್ರತ್ಯಕ್ಷ ಶ್ರೀ ಅರವಿಂದರ ಆಶ್ರಮಕ್ಕೆ ಹೋಗಿ ಅಲ್ಲಿರುವ ಸ್ಥಿತಿಗತಿಗಳನ್ನು ತಿಳಿದುಕೊಂಡು ಜಯ-ಕರ್ನಾಟಕದ ವಾಚಕರ ತಿಳುವಳಿಕೆಗಾಗಿ ಈ ಲೇಖನವನ್ನು .. .. ಬರೆದು ಕಳಿಸಿದ್ದಾರೆ. —ಸಂ. .. ..

★

ಯೋಗಿರಾಜ ಶ್ರೀ ಅರವಿಂದರ ದರ್ಶನಲಾಭವು ಈ ಸಾರೆ ನನಗಾದೀತೆಂದು ಕನಸು ಮನಸಿನಲ್ಲಿರಲಿಲ್ಲ. ಅಲ್ಲಿಗೆ ಹೋಗುವವರು ಒಂದು ತಿಂಗಳಿಗೆ ಮೊದಲೇ ಅರ್ಜಿ ಹಾಕಬೇಕು. ಅರ್ಜಿಯನ್ನು ನೋಡಿ ತಮಗೆ ಯೋಗ್ಯರೆನಿಸಿದವರಿಗೇ ಶ್ರೀ ಅರವಿಂದರು ದರ್ಶನದ ಒಪ್ಪಿಗೆಯನ್ನು ಕೊಡುವರು. ಗುರುಕುಲ ಕಾಂಗಡಿಯ ಆಚಾರ್ಯ ದೇವಶರ್ಮಾಜಿಯವರೊಡನೆ ನಾನು ಪಾಂಡಿಚೇರಿಗೆ ಹೋದೆನು. ಅರ್ಜಿಯನ್ನು ಮೊದಲೇ ಹಾಕಿದ್ದೆ. ಹೋಗಿ ಮೂರು ದಿನಗಳಲ್ಲಿ ಶ್ರೀ ಅರವಿಂದರಿಂದ ನಮಗೆ ದರ್ಶನದ ಅಪ್ಪಣೆ ಸಿಕ್ಕಿತು. ಅಪ್ಪಣೆ ಸಿಕ್ಕ ಮೇಲೆ ನಾನು ನಿತ್ಯವೂ ಧ್ಯಾನಕ್ಕೆ ಹೋಗಿ ಕೂಡುವಂತಾಯಿತು. ಅಪ್ಪಣೆ ಸಿಗದವರಿಗೆ ಧ್ಯಾನ ಮಂದಿರದಲ್ಲಿ ಹೋಗಲು ಅವಕಾಶವಿಲ್ಲ.

ಸುಮಾರು ೨೮ ವರ್ಷಗಳ ಹಿಂದೆಯೇ ಶ್ರೀ ಅರವಿಂದರಿಗೆ ಮೂರು ವಿಧದ ಹುಚ್ಚು ಹಿಡಿದಿದ್ದವೆಂದು ಅವರ ಚರಿತ್ರೆಯಿಂದ ತಿಳಿಯುತ್ತದೆ. ಅವುಗಳಲ್ಲಿ ಮೊದಲನೆಯದು ಭಾರತಮಾತೆ—ಜಗನ್ಮಾತೆಯರಲ್ಲಿ ತಮ್ಮ ಸರ್ವಸ್ವವನ್ನು ಅರ್ಪಿಸುವದು, ಎರಡನೆಯದು ಭಾರತೀಯರನ್ನು ಪಾರತಂತ್ರ್ಯದಿಂದ ಮುಕ್ತಮಾಡುವದು, ಮೂರನೆಯದು ದೇವರ ಸಾಕ್ಷಾತ್ಕಾರ ಮಾಡಿಕೊಳ್ಳುವದು. ಕೊನೆಗೀಗ ಅವರು ಕಡೆಯ ಹುಚ್ಚಿನಲ್ಲಿಯೇ ಮಗ್ನರಾಗಿಬಿಟ್ಟಿರುವರು. ಈ ಹುಚ್ಚೇನು ಸಾಮಾನ್ಯವಲ್ಲ. ಇಂತಹ ಹುಚ್ಚು ಹಿಡಿದವರೇ ಬಲ್ಲರು ಅದರ ಪರಿಚಯ. ಆ ಹುಚ್ಚಿನ ಬಲದಿಂದಲೇ ೨೩ ವರ್ಷಗಳ ಹಿಂದೆ ಯೋಗ ಸಾಧನದಲ್ಲಿ ತೊಡಗಿದವರು ಈವರೆಗೆ ಅವರು ತಮ್ಮ ಸಾಧನ ಕುಟೀರದಿಂದ ಹೊರಬಿದ್ದಿಲ್ಲವೆಂಬುದು ವಾಚಕರಿಗೆ ಆಶ್ಚರ್ಯವನ್ನು ಹುಟ್ಟಿಸಬಹುದು. ದೊಡ್ಡ ಹುಚ್ಚಿನ ಹೊರತು ಹೀಗೆ ಸ್ಥೈರ್ಯ ಸಿಗುವುದು ದುಸ್ತರ. ಅವರು ಯಾವ ಯೋಗಧ್ಯೇಯವನ್ನು ಕುರಿತು ಸಾಧನ ಮಾಡುತ್ತಿದ್ದರೋ ಅದಕ್ಕೆ ೧೯೨೬ ನವಂಬರ ೨೪ನೇ ತಾರೀಖಿನ ದಿನ ಸಿದ್ಧಿಯು ಪ್ರಾಪ್ತವಾಯಿತು. ಅಂದಿನಿಂದಲೇ ಶ್ರೀ ಅರವಿಂದರು ಬೇರೆಯವರಿಗೂ ಯೋಗಾಭ್ಯಾಸವನ್ನು ಕಲಿಸಹತ್ತಿದರು. ಅರವಿಂದ ಯೋಗಾಶ್ರಮವು ಅಂದಿನಿಂದಲೇ ಆರಂಭವಾಯಿತೆನ್ನಬಹುದು. ಅಂದಿನಿಂದ ಅವರು ಪೂರ್ಣ ಏಕಾಂತವಾಸಿಗಳಾದರು. ಆದರೂ ವರ್ಷದಲ್ಲಿ ಮೂರು ದಿನ ಮಾತ್ರ

ದರ್ಶನ ಕೊಡುತ್ತಾರೆ. (೧) ೨೧ನೇ ಫೇಬ್ರುವರಿಯ ದಿನ ಮಾತಾಜಿಯವರ ಜನ್ಮ ದಿನ (೨) ೧೫ ನೇ ಅಗಸ್ಟ, ಶ್ರೀ ಅರವಿಂದರ ಜನ್ಮದಿನ (೩) ೨೪ ನೇ ನವಂಬರ, ಶ್ರೀ ಅರವಿಂದರ ಸಿದ್ಧಿಯ ದಿನ.

ಮಾತಾಜಿಯೆಂದರೆ ಯಾರು ಎಂದು ನೀವು ಕೇಳಬಹುದು. ಮನೆಗೊಬ್ಬ ಮಾತೆಯಿಲ್ಲದಿದ್ದರೆ ಮಕ್ಕಳ ಅವಸ್ಥೆ ಏನಾಗುವದೊ ಅದೇ ಹಾಡು ಮಾತಾಜಿಯವರ ಹೊರತು ಆಶ್ರಮಕ್ಕಾಗುವದು. ಇವಳೊಬ್ಬ ಫ್ರೆಂಚ ಮಹಿಳೆಯು. ಇವಳ ಹೆಸರು ಮೀರಾ(Mirra)ಎಂಬದಾಗಿದೆ. ಆದರೆ ಆಶ್ರಮದಲ್ಲಿ ಎಲ್ಲರೂ ಮಾತಾಜೀ ಅಥವಾ Mother ಎಂತಲೇ ಕರೆಯುತ್ತಾರೆ. ಇವಳ ವಯಸ್ಸು ಸುಮಾರು ೬೫ ಇರಬಹುದು. ಯಾವಾಗ್ಗೆ ಅರವಿಂದರು ಪಾಂಡಿಚೇರಿಯಲ್ಲಿ ಸಾಧನಕ್ಕೆ ಕುಳಿತರೊ ಆಗಿನಿಂದಲೇ ಅನೇಕರು ಇವರ ಸಂಗಡ ಸಾಧನೆ ಮಾಡುವದಕ್ಕಾಗಿ ಇವರ ಸಂಗಡ ಇರಹತ್ತಿದರು. ಆ ದಿನಗಳಲ್ಲಿಯೇ (೧೯೧೪ರ ಸುಮಾರಕ್ಕೆ) ಮಾತಾಜಿಯೂ ಪಾಂಡಿಚೇರಿಗೆ ಬಂದಳು. ಅದಕ್ಕೆ ಮೊದಲು ಇವಳು ಜಪಾನದಲ್ಲಿದ್ದಳು. ಭಾರತಕ್ಕೆ ಬಂದ ಮೇಲೆ ಆಕಸ್ಮಾತ್ ಪಾಂಡಿಚೇರಿಗೆ ಮುಟ್ಟಿದಳು. ಇವಳೂ ಮೊದಲು ಅನೇಕ ವರ್ಷದಿಂದ ಆಧ್ಯಾತ್ಮಿಕ ಸಾಧನೆಯಲ್ಲಿದ್ದಳು. ಅರವಿಂದರ ಹೆಸರು ಕೇಳಿ ಅವರಿಗೆ ಭೆಟ್ಟಿಯಾದ ಮೇಲೆ ಅಲ್ಲಿಯೇ ಸಾಧನೆ ಮಾಡಹತ್ತಿದಳು. ಆದರೆ ೧೯೧೪ರ ಮಹಾಯುದ್ಧದ ಕಾಲಕ್ಕೆ ಇವಳಿಗೆ ಫ್ರಾನ್ಸಕ್ಕೆ ಹೋಗಬೇಕಾಯಿತು. ಯುದ್ಧ ಮುಗಿದ ಕೂಡಲೇ ಪುನಃ ಆಶ್ರಮಕ್ಕೆ ಬಂದಳು. ಇವಳ ಆಗ್ರಹದಿಂದಲೇ 'ಆರ್ಯ' ಪತ್ರವನ್ನು ಅರವಿಂದರು ತೆಗೆದಿದ್ದರು. ಕೆಲವು ದಿನಗಳಲ್ಲಿ ಇವಳ ಆಧ್ಯಾತ್ಮಿಕ ಶಕ್ತಿಯು ಉನ್ನತಾವಸ್ಥೆಗೆ ಮುಟ್ಟಿದ್ದು ಶ್ರೀ ಅರವಿಂದರಿಗೆ ತಿಳಿದು ಬಂತು. ಈಗಂತೂ ಆಶ್ರಮದಲ್ಲಿ ಇಬ್ಬರ ಅವಸ್ಥೆಯೂ ಸಾಧಾರಣ ಒಂದೇ ಸ್ಥಿತಿಗೆ ಮುಟ್ಟಿರುವದೆಂದು ಎಲ್ಲರ ಗ್ರಹಿಕೆ. ಇವಳಿಗೆ ಹೇಳಿದ ಸಂಗತಿಯೆಲ್ಲಾ ಅರವಿಂದರಿಗೆ ತತ್‌ಕ್ಷಣ ಗೊತ್ತಾಗುತ್ತವೆಯಂತೆ. ಅಂತೇ ಆಶ್ರಮದ ಎಲ್ಲ ಹೊರಗಿನ ವ್ಯವಸ್ಥೆಯನ್ನು ಇವಳೇ ಕೈಕೊಂಡಿದ್ದಾಳೆ. ಆಗಿನಿಂದಲೇ ಅರವಿಂದರು ಯಾರ ಸಂಗಡಲೂ ಮಾತಾಡುವದನ್ನಾಗಲಿ ಭೆಟ್ಟಿಯಾಗುವದನ್ನಾಗಲಿ ಬಿಟ್ಟು ಬಿಟ್ಟಿದ್ದಾರೆ. (ಇವಳು ಪಾಲ್ ರಿಚರ್ಡರ ಧರ್ಮಪತ್ನಿ ಎಂದು ಅನೇಕರಿಗೆ ಮೊದಲು ತಪ್ಪು ಗ್ರಹಿಕೆಯಿತ್ತು. ಆದರೆ ಇವಳೊಬ್ಬ ಅವಿವಾಹಿತ ಫ್ರೆಂಚ ಲೇಡಿ ಎಂಬುದು ಸರ್ವ ಸಾಧಾರಣ ತಿಳಿದ ಮಾತಾಗಿದೆ). ಚಕ್ಕರಲ್ಲಿ ಕೆಲವರು ಮಾತಾಜಿಯನ್ನು ಶ್ರೀಅರವಿಂದರ[illegible] ಹೆಚ್ಚು ಗೌರವಿಸುವದನ್ನು ನಾನು ಸ್ವತಃ ನೋಡಿ[illegible] ಇವಳ ನಿತ್ಯ ದರ್ಶನದಿಂದ ಚರಣ ಸ್ಪರ್ಶದಿಂದ [illegible] ಆಧ್ಯಾತ್ಮಿಕ ಉನ್ನತಿಯಾಗಿದೆ. ಇನ್ನು ದರ್ಶನ[illegible] ತಿಳಿಸುವೆನು.

ಯೋಗಿರಾಜರು ವರ್ಷದಲ್ಲಿ ಮೂರೇ ದಿನ ಪ್ರ[illegible] ಹಿತಾರ್ಥವಾಗಿ ಹೊರಗೆ ಬಂದು ದರ್ಶನ[illegible] ಗಳನ್ನು ಕೊಡುತ್ತಾರೆ. ದರ್ಶನಕ್ಕೆ ಅನುಮತಿ [illegible] ಹೆಸರಿನ ಪಟ್ಟಿಯೊಂದನ್ನು ಟಾಯಿಪ ಮಾಡಿ ([illegible] ಕೊಟ್ಟ ವೇಳೆಯನ್ನು ಸಹ) ಅಲ್ಲಿಯ ನೋಟೀಸ [illegible] ಮೇಲೆ ಹಚ್ಚುತ್ತಾರೆ. ಆ ಪ್ರಕಾರ ತಮ್ಮ ಸ[illegible] ವೇಳೆ ಬರುವ ಮೊದಲೇ, ತುಲಸೀ ಮತ್ತು [illegible] ಯೊಂದಿಗೆ ಪ್ರಾರ್ಥನಾ ಮಂದಿರದಲ್ಲಿ ತಯಾ[illegible] ಬೇಕಾಗುತ್ತದೆ. ಅವರ ಸಿದ್ಧಿಯ ದಿನ (೨೪-೧೧-[illegible] ನನಗೂ ದರ್ಶನಲಾಭವಾಯಿತು. ಆದಿನ ಸುಮಾರು[illegible] ರಿದ್ದರು. ಅವರಲ್ಲಿ ಆಶ್ರಮದವರೇ ಸುಮಾರು ೧[illegible] ಇನ್ನು ಹೊರಗಿನ ಪ್ರಮುಖರಲ್ಲಿ ಗುರುಕುಲ [illegible] ರಾದ ಶ್ರೀ. ಪಂ. ದೇವಶರ್ಮಾ, ಹೈದ್ರಾಬಾದ[illegible] ರಾದ ಅಕಬರ ಹೈದರೀ ಮತ್ತು ಅವರ ಪರಿವಾ[illegible] ಹೊರ್ತು ವಿಲಾಯತಿಯಿಂದಲೂ ಅನೇಕ ಸ್ತ್ರೀ[illegible] ಬಂದಿದ್ದರು. ಅವರ ಹಣ್ಣಿನ ರಸ ಸೇವನೆಯ[illegible] ೧೨॥ ಸುಮಾರಿಗೆ ನಾವೆಲ್ಲರೂ ಒಂದು ಸಾಲಿನಲ್ಲಿ [illegible] ವನ್ನೇರಿ ಹೋಗಿ ಒಂದು ಸಣ್ಣ ಹಾಲಿಗೆ ಮು[illegible] ಅಲ್ಲಿಂದಲೇ ಶ್ರೀಅರವಿಂದರ ದಿವ್ಯ ಮೂರ್ತಿಯ[illegible] ವಾಯಿತು. ಮುಂದೆ ಒಂದು ಕೋಣೆಯಲ್ಲಿಯೇ [illegible] ಒಳಬದಿ ದೊಡ್ಡ ಸೋಫಾದ ಮೇಲೆ ಅವರು [illegible] ಕೊಂಡಿದ್ದರು. ಪ್ರತಿಯೊಬ್ಬರು ಅವರ ಚರಣ[illegible] ಮಾಲೆಯನ್ನೇರಿಸಿ ನಂತರ ಅದನ್ನು ಯೋಗ್ಯಸ್ಥ[illegible] ಮಸ್ತಕವನ್ನು ಬಗ್ಗಿಸಿ ಅವರ ಚರಣಗಳ ಮೇಲೆ [illegible] ಗಳ ಮೇಲೂ ಮಕ್ಕಳಂತೆ ಶಿರ ಚಲ್ಲಿ ಪ್ರೇಮ[illegible] ನಿಮಿಷ ದರ್ಶನದ ಆನಂದ ಪಡೆದ ಬಳಿಕ [illegible] ತಮ್ಮ ವರದ ಹಸ್ತವನ್ನು ಪ್ರತಿಯೊಬ್ಬರ ಶಿರದ[illegible] ಆಶೀರ್ವದಿಸಿದ ಮೇಲೆ, ಎರಡನೇ ಪಕ್ಕಕ್ಕೆ [illegible] ಮಾತಾಜೀಯವರ ದರ್ಶನ - ಪಾದಸೇವನೆ [illegible] ರಿಂದಲೂ ಆಶೀರ್ವಾದ ಪಡೆದು ಬೇರೊಂದು [illegible] ಕೆಳಗೆ ಇಳಿದು ಹೋಗಬೇಕಾಗುತ್ತದೆ. ಶ್ರೀ [illegible] ಯವರ ನಂತರ ನನ್ನ ನಂಬರ ಇದ್ದು [illegible]

ಅವರು ಸ್ವಲ್ಪ ಹೆಚ್ಚು ವೇಳೆ ಅವರೆದುರಿಗೆ ಆಸನ ಹಾಕಿ ಕುಳಿತದ್ದರಿಂದ ಅರವಿಂದರ ದಿವ್ಯ ಮೂರ್ತಿಯ ಫೋಟೋ ನನ್ನ ಹೃದಯದಲ್ಲಿ ಮೂಡಲು ಬಹಳೇ ಅನುಕೂಲವಾಯಿತು. ಅವರು ಒಳಗೆ ಬರುವ ಮೊದಲು ನಮ್ಮಂತೇ ಪ್ರತಿಯೊಬ್ಬರನ್ನು ದಿಟ್ಟಿಸಿ ನೋಡುತ್ತಾರೆ. ಅದರಲ್ಲಿಯೇ ಒಂದು ಪ್ರಕಾರದ ದಿವ್ಯ ಶಕ್ತಿಯ ಸಂಚಯವಾಗುತ್ತದೆ. ಆ ಕಾಲದಿಂದಲೇ ದರ್ಶನ ಪಡೆದು ಹೊರಬೀಳುವವರೊಳಗಾಗಿ ಅನೇಕರಿಗೆ ಅನೇಕ ಪ್ರಕಾರದ ಹೊಸ ಅನುಭವಗಳು ಪ್ರಾಪ್ತವಾಗುತ್ತವೆ. ನಾನೂ ಅವರ ಚರಣಗಳ ಮೇಲೆ ಮಾಲೆಯನ್ನೇರಿಸಿ ನನ್ನ ಪ್ರಶ್ನೆಗಳ ಪತ್ರವನ್ನಿಟ್ಟು ಶಿರಬಾಗಿ ಅವರ ಆಶೀರ್ವಾದ ಹೊಂದಿ ಬೇರೊಂದುಹಾದಿಯಿಂದ ಪಾವಟಿಗೆಗಳನ್ನಿಳಿದು ಹೊರಗೆ ಬಂದೆನು. ಅವರ ಭವ್ಯ ಗಂಭೀರ ಮೂರ್ತಿಯನ್ನು ನೋಡಿದ ಪ್ರತಿಯೊಬ್ಬರು ಫೋಟೋದೊಳಗಿನ ಅರವಿಂದರು ಇವರೋ ಬೇರೆಯೋ ಎಂದು ಕೇಳುವಂತಿದೆ. ಮೊದಲಿನ ಫೋಟೋಕ್ಕೂ ಈಗಿನ ಸುವರ್ಣಕ್ಕಿಳಿದ ರೂಪಕ್ಕೂ ಬಹಳೇ ಅಂತರವಿದೆ. ಅವರ ಗಂಭೀರ ಮುಖ-ಮುದ್ರೆ ಉದ್ದನ್ನ ಋಷಿಗಳಂಥ ಗಡ್ಡ ದಿವ್ಯಕಾಂತಿಯನ್ನು ನೋಡಿ ಪ್ರತಿಯೊಬ್ಬನೂ ಗದ್ಗದಿತನಾಗುತ್ತಾನೆ. ಅವರ ಮುಖ್ಯ ಸಂಗಡಿಗರಲೊಬ್ಬರಾದ ಶ್ರೀ. ಪುರಾಣೀ ಎಂಬ ಗುಜರಾಥೀ ಗೃಹಸ್ಥರ ಸಹಾಯದಿಂದ ನಾನು ಆಶ್ರಮದ ಎಲ್ಲ ಕಾರ್ಯಕ್ರಮವನ್ನು ತಿಳಕೊಂಡದ್ದಲ್ಲದೆ ಸ್ವತಃ ಅವರ ಸಂಗಡ ಎಲ್ಲ ಭಾಗವನ್ನೂ ನೋಡಿದೆನು. ಅದನ್ನಷ್ಟು ಇಲ್ಲಿ ಕೊಡುವೆನು.

ಶ್ರೀಅರವಿಂದ ಆಶ್ರಮ

ಆಶ್ರಮವೆಂದ ಕೂಡಲೆ ಅದೊಂದು ಕಾಡಿನಲ್ಲಿ ಒಂದು ದೊಡ್ಡ ಕಟ್ಟಡ ಅಥವಾ ಹುಲ್ಲುಗುಡಿಸಲುಗಳಲ್ಲಿರಬಹುದೆಂದು ಜನರ ಕಲ್ಪನೆಯಾಗುತ್ತದೆ. ಆದರೆ ಅರವಿಂದರ ಆಶ್ರಮವು ಬೇರೆಯಾಗಿ ಕಟ್ಟಿದ್ದಲ್ಲ; ತಾನಾಗಿಯೇ ಆದದ್ದು, ನಗರದ ಮುಖ್ಯ ಮಾರ್ಗದಲ್ಲಿರುವದು. ಅರವಿಂದರಿರುವ ಮತ್ತು ಅದರ ಸುತ್ತುಮುತ್ತಲಿನ ಓಣಿಗಳಲ್ಲಿರುವ ೪೦ ಬೇರೆಬೇರೆ ಕಟ್ಟಡಗಳಲ್ಲಿ ಕೂಡಿ ಸುಮಾರು ೧೫೫ ಆಶ್ರಮವಾಸಿಗಳಿರುತ್ತಾರೆ. ಶ್ರೀಅರವಿಂದ ಮತ್ತು ಮಾತಾಜೀಯವರ ದಿವ್ಯಶಕ್ತಿಯೇ ಇವರನ್ನಿಲ್ಲಿ ಬರಮಾಡಿದೆ. ಬೇರೆ ಬಾಹ್ಯ ಆಡಂಬರಕ್ಕೊಳಗಾಗಿ ಯಾರೂ ಇಲ್ಲಿರುವದಿಲ್ಲ. ಹೊರಗಿನಿಂದ ನೋಡುವವರಿಗೆ ಇಲ್ಲಿಯವರೆಲ್ಲಾ ಸ್ವತಂತ್ರರಿದ್ದಂತೆ ಕಂಡು ಬರುತ್ತಿದ್ದರೂ ಅಂತರಂಗದಲ್ಲಿ ಎಲ್ಲರೂ ಒಂದು ನಿಯಮಕ್ಕೆ ಒಳಗಾಗಿದ್ದಾರೆಂಬದು ಅಲ್ಲಿ ಕೆಲವು ದಿನವಿದ್ದವರಿಗೆ ಕಂಡುಬರುತ್ತದೆ. ಅಲ್ಲಿ ಒಣ ಆಡಂಬರದ ನಿಯಮಗಳಿಲ್ಲ. ಆದರೂ ಯಾರೊಬ್ಬರೂ ಕಾರಣವಿಲ್ಲದೆ ಮಾತಾಜೀಯವರ ಆಜ್ಞೆಯ ವಿನಃ ತಮ್ಮ ತಮ್ಮ ನಿತ್ಯಕಾರ್ಯಕ್ರಮದಲ್ಲಿ ವ್ಯತ್ಯಾಸ ಮಾಡುವಂತಿಲ್ಲ. ಯಾರಿಗೆ ಯಾವ ಕೆಲಸ ಕೊಟ್ಟಿದೆಯೋ ಅದನ್ನು ಅವರು ಸಮಯಕ್ಕನುಸಾರವಾಗಿ ಮಾಡಲೇಬೇಕು. ಮುಖ್ಯವಾಗಿ ಅಲ್ಲಿಯ ಸಾಮೂಹಿಕ ಕಾರ್ಯಕ್ರಮಗಳೆಂದರೆ—ಧ್ಯಾನ, ಪ್ರಣಾಮ ಮತ್ತು ಭೋಜನ. ಇವು ಮೂರನ್ನು ಎಲ್ಲರೂ ಒಂದೆಡೆಗೆ ಕಲೆತು ಮಾಡುತ್ತಾರೆ. ಆಶ್ರಮದಲ್ಲಿ ಹಿಂದೂ, ಮುಸಲ್ಮಾನ, ಈಸಾಯಿ ಎಂಬ ಭೇದವಿಲ್ಲ. ಸಾಧಾರಣ ಎಲ್ಲ ಜಾತಿಯವರೂ ಇದ್ದಾರೆ. ಆದರೆ ಹೆಚ್ಚು ಗುಜರಾಥಿ, ಬಂಗಾಲಿ, ಆಮೇಲೆ ಮದ್ರಾಸಿ ಮತ್ತು ಕೆಲವರು (ಉತ್ತರ) ಹಿಂದುಸ್ಥಾನೀ ಜನರಿರುತ್ತಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಯಾರೂ ಇದ್ದಂತೆ ತೋರಲಿಲ್ಲ. ಒಟ್ಟು ೧೫೫ರಲ್ಲಿ ಸುಮಾರು ೬೦ ಹೆಂಗಸರೂ ಇದ್ದಾರೆ. ಆದರೆ ಇಲ್ಲಿ ಪತಿ-ಪತ್ನಿ ಸಂಬಂಧವಿರದೆ ಅಣ್ಣತಂಗಿಯರಂತೆ ಇರಬೇಕಾಗುತ್ತದೆ. ಇರುವ ವ್ಯವಸ್ಥೆಯೂ ಬೇರೆಬೇರೆಯಿದೆ. ಧ್ಯಾನದಲ್ಲಿ ಅವರ ಕೂಡ್ರುವ ಸ್ಥಳವೂ ಬೇರೆಯಿದೆ. ಸಂಸಾರಿಕ ಆಶೆಗಳನ್ನಿಟ್ಟುಕೊಂಡ ಜನರು ಇಲ್ಲಿಗೇಕೆ ಬರಬೇಕು ? ಎಲ್ಲರೂ ಕಡುತರವಾದ ಬ್ರಹ್ಮಚರ್ಯವನ್ನು ಪಾಲಿಸಬೇಕಲ್ಲದೆ ಪ್ರತಿಯೊಬ್ಬರು ತಂದೆ-ತಾಯಿಗಳಂತಿರುವ ಶ್ರೀಅರವಿಂದ ಮತ್ತು ಮಾತಾಜೀಯವರ ಹೇಳಿಕೆಯಂತೇ ನಡೆಯಬೇಕಾಗುತ್ತದೆ. ಆಶ್ರಮದ ಎಲ್ಲ ಕೆಲಸವನ್ನು ಬಹುಶಃ ಸಾಧಕರೇ ಮಾಡಬೇಕಾಗುತ್ತದೆ. ಸ್ವಚ್ಛತೆ, ಅಡಿಗೆ, ಪಾತ್ರೆ ತೊಳೆಯುವದು, ಆಸನ ಹಾಸುವದು, ಲಾಯಬ್ರರಿ ಕೆಲಸ, ಇಂಜನಿಯರಿಂಗ, ಬಡಿಗತನ, ಕಮ್ಮಾರಕೆಲಸ, ಗೋಶಾಲಾ ತೋಟಪಟ್ಟಿಯ ಕೆಲಸ, ಹಿಟ್ಟು ಬೀಸುವದು, ಟಾಯಿಪ ಮಾಡುವದು, ಚಿತ್ರ ತೆಗೆಯುವದು, ರೋಟ ತಯಾರ ಮಾಡುವದು, ಕವಿತೆ ಮಾಡುವದು, ಪುಸ್ತಕ ಬರೆಯುವದು, ಪಹರೆ ಮಾಡುವದೇ ಮೊದಲಾದ ಅನೇಕ ವಿಭಾಗಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದರೆ ಎಲ್ಲ ಕಾರ್ಯವು ಭಗವದರ್ಪಣ ಬುದ್ಧಿಯಿಂದ ಮಾಡಲ್ಪಡುತ್ತದೆ. ಈ ಕೆಲಸವನ್ನೆಲ್ಲಾ ಅವರವರ ಸಾಧನಾ ಮತ್ತು ಯೋಗ್ಯತೆಗನುಸಾರವಾಗಿ ಒಪ್ಪಿಸುವವರು ಮಾತಾಜಿಯವರು. ಅವರು ಹೇಳದೆ ಯಾರೂ ತಮ್ಮ ಕಾರ್ಯದಿಂದ ನಿವೃತ್ತರಾಗಲು ಬರುವಂತಿಲ್ಲ. ಶ್ರೀ.ಪುರಾಣಿ

ಯವರ ಸಂಗಡ ನಾನು ಈ ಎಲ್ಲ ಕಾರ್ಯವನ್ನು ಸ್ವತಃ ನೋಡಿ ಬಂದ ಮೇಲೆ ಇಲ್ಲಿಯ ಸಾಧಕರು ಹರಿದ್ವಾರ, ಋಷಿಕೇಶದ ಸಾಧುಗಳಂತೆ ಛತ್ರದ ರೊಟ್ಟಿ ತಿಂದು ನಿದ್ರೆ ಮಾಡುವವರಲ್ಲವೆಂದು ಗೊತ್ತಾಯಿತು. ಕೆಲವರಂತೂ ತಮ್ಮ ಕೆಲಸದಿಂದ ಧ್ಯಾನದ ವೇಳೆಗೆ ಮಾತ್ರ ಅದೇ ಕರೀ ಡ್ರೆಸ್ಸಿನಲ್ಲಿಯೇ ಬಂದು ಮೌನವಾಗಿ ಧ್ಯಾನ ಮುಗಿದ ಮೇಲೆ ಹಾಗೇ ಕೆಲಸದ ಮೇಲೆ ಹೋಗುತ್ತಾರೆ. ಹೆಚ್ಚಾಗಿ ಎಲ್ಲರಿಗೂ ೬—೮ ತಾಸು ಕೆಲಸ ಮಾಡಬೇಕಾಗುತ್ತದೆ. ಆದರೆ ಎಲ್ಲವೂ ಆಶ್ರಮದ ಸಲುವಾಗಿಯೆ. ಹೆಚ್ಚಾಗಿ ಅಲ್ಲಿ ಬೇಕಾಗುವ ಪಾತ್ರೆ, ಮರದ, ಕಬ್ಬಿಣ ಹಿತ್ತಾಳಿಯ ಮುರಡು, ಮಳಿ ಮೊದಲಾದ ಸಣ್ಣದೊಡ್ಡ ಎಲ್ಲ ಸಾಮಾನುಗಳನ್ನು ಅವರೇ ತಯಾರು ಮಾಡಿಕೊಳ್ಳುತ್ತಾರೆ. ಆದರೆ ವಸ್ತ್ರದ ಕೆಲಸವು ಮಾತ್ರ ಇನ್ನೂ ಆರಂಭವಾಗಿಲ್ಲ. ಅನೇಕರಿಗೆ ಇಷ್ಟೆಲ್ಲ ಕೇಳಿದ ಮೇಲೆ ಅಲ್ಲಿಯ ಧ್ಯಾನದ ರೀತಿ ಯಾವದು, ಪ್ರಣಾಮ ಹೇಗೆ ಮಾಡುತ್ತಾರೆ, ಮತ್ತು ಮುಖ್ಯವಾಗಿ ಊಟದಲ್ಲಿ ಏನೇನು ಕೊಡುತ್ತಾರೆ, ಮತ್ತು ಯಾವಾಗ್ಗೆ? ಎಂಬದನ್ನು ತಿಳಕೊಳ್ಳುವ ಬಯಕೆಯಾಗಬಹುದು.

ಆಶ್ರಮದಲ್ಲಿ ಧ್ಯಾನ, ಪ್ರಣಾಮ ಮತ್ತು ಭೋಜನದ ವ್ಯವಸ್ಥೆ

ಆಶ್ರಮದಲ್ಲಿರತಕ್ಕ ಸಾಧಕರು ಶ್ರೀಅರವಿಂದಜಿ ಮತ್ತು ಮಾತಾಜೀಯವರಿಗೆ ಬರೆದು ತಮ್ಮ ಪ್ರಶ್ನೆಗಳನ್ನು ಬಿಡಿಸಿಕೊಂಡು ಆದರಂತೆ ತಮ್ಮ ಕೋಣೆಗಳಲ್ಲಿಯೇ ಅವರು ತಿಳಿಸಿದಂತೆ ಯಾವದೊಂದು ಸಾಧನ ಮಾಡುತ್ತಾರೆ. ಇಲ್ಲಿಯ ಸಾಮೂಹಿಕ ಕಾರ್ಯಕ್ರಮದಂತೆ ನಿತ್ಯ ಎರಡು ವೇಳೆ ಧ್ಯಾನವು ನಡೆಯುತ್ತಿದ್ದು ವಾರದಲ್ಲಿ ಎರಡು ದಿನ ಮಾತಾಜಿಯವರಿಗೆ ಪ್ರಣಾಮವೂ ಮತ್ತು ಮೂರು ವೇಳೆ ಅಲ್ಪಾಹಾರವೂ ಮುಖ್ಯವಾಗಿವೆ. ಎಲ್ಲ ಕಾರ್ಯಕ್ರಮಗಳು ಸದ್ದಿಲ್ಲದೆ ಮೌನವಾಗಿ ನಡೆಯುತ್ತವೆ. ಮುಂಜಾನೆ ಉಪಹಾರದ ನಂತರ ಎಲ್ಲರೂ ತಮ್ಮ ಕಾರ್ಯದಲ್ಲಿ ತೊಡಗುವರು. ಸುಮಾರು ೯॥ ಗಂಟೆಗೆ ಧ್ಯಾನದ ವೇಳೆಗೆ ಎಲ್ಲರೂ ಅರವಿಂದರ ಆಶ್ರಮದಲ್ಲಿರುವ ದೊಡ್ಡ ಹಾಲಿನಲ್ಲಿ ಒಟ್ಟುಗೂಡಿ ಧ್ಯಾನ ಮಾಡುವರು. ಆವೇಳೆಗೆ ಮಾತಾಜಿಯವರು ನಿತ್ಯ ಹಾಜರಾಗುವರು. ಅವರು ಉಚ್ಚ ಆಸನದ ಮೇಲೆ ಕುಳಿತು ಎಲ್ಲರಿಗೂ ದಿವ್ಯಶಕ್ತಿಯನ್ನು ಬೀರುತ್ತಾ ಸುಮಾರು ಒಂದು ಗಂಟೆಯ ವರೆಗೆ ಧ್ಯಾನಮಾಡುವರು. ಆನಂತರ ಅವರು ಎದ್ದು ಮೇಲಟ್ಟಕ್ಕೆ ಹೋಗುವಾಗ್ಗೆ ಒಂದು ಕಿಡಿಕೆಯೊಳಗಿಂದ ಎಲ್ಲರನ್ನೂ ಒಮ್ಮೆ ನೋ[illegible]ವರು. ಅವರ ನಗೆ ಮುಖ, ದಿವ್ಯ ಕಣ್ಣಿನ ತೇಜಸ್ಸು ಎಲ್ಲರನ್ನೂ ಒಂದು ಪ್ರಕಾರದ ಆನಂದದಲ್ಲಿ ಮುಳು[illegible]ವವು. ಇದೇ ಪ್ರಕಾರ ರಾತ್ರಿ ೭ ಗಂಟೆಯ [illegible] ನಿತ್ಯ ಧ್ಯಾನವು ನಡೆಯುವದು. 'ನಮಸ್ಕಾರ'ದ [illegible] ದಿನವೂ ಧ್ಯಾನವಾದ ನಂತರ ಪ್ರತಿಯೊಬ್ಬರೂ [illegible] ಚರಣ ಸ್ಪರ್ಶಮಾಡಿ ಅವರಿಂದ ಆಶೀರ್ವಾದ [illegible] ಒಂದು ಪುಷ್ಪವನ್ನು ತೆಗೆದುಕೊಂಡು ಹೋಗಬೇಕಾ[illegible] (ಇದೇ ಪ್ರಕಾರ ದರ್ಶನದ ೩ ದಿನವೂ ಸಂಜೆ [illegible] ಮಾತಾಜಿಯವರು ಎಲ್ಲರಿಗೂ ಪ್ರಸಾದವೆಂದು [illegible] ಹೂಮಾಲೆಗಳನ್ನು ಕೊಡುತ್ತಾರೆ).

ಭೋಜನ ವ್ಯವಸ್ಥೆ

ಭೋಜನಶಾಲೆಯೂ ಪ್ರತ್ಯೇಕ ಒಂದು ದೊಡ್ಡ [illegible]ರತಿನಲ್ಲಿಯೇ ಇದೆ. ಅಲ್ಲಿ ಪ್ರತಿಯೊಬ್ಬರಿಗೂ [illegible] ಆಸನ ಹಾಸಿದ್ದು (ನೆಲದ ಮೇಲೆ) ಮುಂದೆ [illegible]ಯುವ ಮೇಜಿನಂಥಾ) ಮೇಜಿರುತ್ತದೆ. [illegible] ಬಟ್ಟೆ ಹಾಸಿರುತ್ತಾರೆ. ಅವರವರ ಹೆಸರಿನ [illegible] ಕಪಾಟುಗಳ ಸಣ್ಣ ಸಣ್ಣ ಖಾನೆಗಳಲ್ಲಿ ಇನ್ನಾಮ[illegible] ಬಟ್ಟಲುಗಳಿರುತ್ತವೆ. ಅಡಿಗೆ ಮಾಡುವ [illegible] ಸಾಧಾರಣ ಸ್ತ್ರೀಸಾಧಕರದು. ಪ್ರಾತಃಕಾಲದಲ್ಲಿ [illegible] ಪಾವುಸೇರು ಹಾಲು, ಒಂದು ಬಾಳೆಹಣ್ಣು, [illegible] ಡಬಲ್‌ರೊಟ್ಟಿ ಇಷ್ಟೇ. ನಂತರ ೧೧ ಗಂಟೆಗೆ [illegible]ವಾಗರೊಳಿ(ಬಟ್ಟಲ) ಅನ್ನ, ಮಸಾಲೆಯಿಲ್ಲದ [illegible] ಮತ್ತು ಅದೇ ರೊಟ್ಟಿ ತುಂಡು (ನಾಲ್ಕು), [illegible] ಮೊಸರು, ಹಾಗೂ ಎರಡು ಬಾಳೆಹಣ್ಣು. ಪ್ರ[illegible] ಸಂಗಡ ಒಂದೊಂದು ಸಣ್ಣ ಡಬ್ಬಿಯಲ್ಲಿ ಸಕ್ಕರೆ [illegible] ಇಟ್ಟಿರುತ್ತಾರೆ. ಅದನ್ನು ಬೇಕಾದಾಗ ತೆಗೆ[illegible] ಬಹುದು. ಒಂದೇ ಬಾರಿ ಎಲ್ಲವನ್ನೂ [illegible] ಮೌನವಾಗಿ ಭೋಜನ ತೀರಿಸಿಕೊಂಡು ತಟ್ಟೆಗಳ[illegible] ಸಾಧಕರಿಗೆ ಹೊರಗಡೆಗೆ ತೊಳೆಯಲು ಕೊಡ[illegible] ಕಾರ್ಯಕ್ಕೆ ಹೋಗಬೇಕಾಗುತ್ತದೆ. ಪಾತ್ರೆ [illegible]ವವರು ಅವನ್ನು ಮೊದಲು ಸಾಬೂನಿನ ಬಿಸಿನೀ[illegible] ನಂತರ ಪೊಟ್ಯಾಶಮ್ ಪರಮಾಂಗನೇಟಿನ [illegible]ನಲ್ಲಿಯೂ ಆಮೇಲೆ ಶುದ್ಧ ನೀರಿನಲ್ಲಿಯೂ [illegible] ಯೋಗ್ಯ ಸ್ಥಳದಲ್ಲಿಡುತ್ತಾರೆ. ಇದೇ ಪ್ರಕಾ[illegible] ಮುಂಜೆ ೫ ಗಂಟೆಗೆ ಒಂದು ಪಾವು [illegible]

ರೊಟ್ಟಿಯ ಎರಡು ತುಂಡು; ಮತ್ತು ತುಪ್ಪದಲ್ಲಿ ತಯಾರಿಸಿದ ಯಾವದೊಂದು ಪಲ್ಲೆ. ಇಷ್ಟರ ಹೊರ್ತು ನಡುವೆ ಯಾವ ಆಹಾರವೂ ಸಿಗುವದಿಲ್ಲ. ಅಲ್ಲಿಯ ಭೋಜನದ ಸಾಮುಗ್ರಿಗಳನ್ನೂ ನಿಯಮಿತ ಆಹಾರವನ್ನೂ ಮತ್ತು ಶುದ್ಧತೆಯನ್ನೂ ನೋಡಿದವರಿಗೆ ತಾಮಸಿಕ ಆಹಾರದ ವಿಚಾರವೇ ಬರುವಂತಿಲ್ಲ.

ಇಲ್ಲಿಯ ಖರ್ಚು ಹೇಗೆ ನಡೆಯಬಹುದೆಂದು ಅನೇಕರಿಗೆ ಪ್ರಶ್ನೆ ಹುಟ್ಟುವದು ಸ್ವಾಭಾವಿಕ. ಪ್ರತಿತಿಂಗಳು ೪-೫ ಸಾವಿರ ರೂಪಾಯಿ ಖರ್ಚಿದ್ದರೂ ಅರವಿಂದರು ಅಥವಾ ಬೇರೆ ಸಾಧಕರು ಫಂಡು ಕೇಳಲು ಹೋಗುವದಿಲ್ಲ. ಆದರೆ ಇದೆಲ್ಲಾ ಭಗವತ್ಪ್ರೇರಣೆಯಿಂದ ನಡೆದ ಕಾರ್ಯವಾದ್ದರಿಂದ ಎಲ್ಲವೂ ಒದಗಿ ಬರುವದು. ಆಶ್ರಮಕ್ಕೆ ಸೇರಿದ ಸಾಧಕರೆಲ್ಲಾ ತಮ್ಮ ಆಸ್ತಿಪಾಸ್ತಿಗಳನ್ನು ಇಲ್ಲಿ ಒಪ್ಪಿಸುವರು. ಆದರಿಂದ ಸ್ವಲ್ಪ ಸಹಾಯವಾಗುವದು. ಆದರೆ ಮದ್ರಾಸದ ಒಬ್ಬ ವಕೀಲರು ತಮ್ಮ ದುಡಿಮೆಯನ್ನೆಲ್ಲಾ ಇದಕ್ಕಾಗಿಯೇ ಕೊಡುತ್ತಿರುವರು. ಇಂಥ ಅನೇಕ ಭಕ್ತರಿಂದಲೇ ಇದರ ಖರ್ಚೆಲ್ಲಾ ನಡೆಯುತ್ತದೆ. ಇದು ಸಾರ್ವಜನಿಕ ಸಂಸ್ಥೆಯೆಂದಾಗಲಿ ಅಥವಾ ಇದರ ಮೇಲೆ ಜನರ ಉತ್ತರಾಧಿಕಾರವಿರುವದೆಂದಾಗಲಿ ಯಾರೂ ಗ್ರಹಿಸಕೂಡದು. ಪರಮೇಶ್ವರನಿಗೇ ಎಲ್ಲವನ್ನೂ ಒಪ್ಪಿಸಿ ನಿಷ್ಕಾಮಕರ್ಮ ಮಾಡುತ್ತಾ, ಸಾಧನೆ ಗೈಯುವದು ಪ್ರತಿಯೊಬ್ಬರ ಕರ್ತವ್ಯವೆಂದು ಇಲ್ಲಿರುವ ಎಲ್ಲರಿಗೂ ಮನದಟ್ಟಾಗಿದೆ.

ಇನ್ನು ಅರವಿಂದರ ಕಾರ್ಯಕ್ರಮವೆಂದರೆ—ದಿನಾಲು ಹೆಚ್ಚು ವೇಳೆಯನ್ನು ತಮ್ಮ ಏಕಾಂತ ಕುಟೀರದಲ್ಲಿ ಧ್ಯಾನದಲ್ಲಿಯೇ ತೊಡಗಿದ್ದು ೨-೩ ತಾಸು ಮಾತ್ರ ನಿದ್ರೆ ಮಾಡುತ್ತಾರೆ. ಆದರೆ ರಾತ್ರಿ ೧೧ರ ನಂತರ ಸಾಧಕರ ಪ್ರಶ್ನೆಗಳಿಗೆ ಉತ್ತರ ಕೊಡುವದರಲ್ಲಿಯೇ ೫-೬ ತಾಸು ನಿತ್ಯ ತಗಲುತ್ತವೆ. ಈಗ ಕೆಲವು ತಿಂಗಳಿಂದ ಬರೆಯುವದನ್ನು ನಿಲ್ಲಿಸಿದ್ದಾರೆ. ಅವರ ಕಾರ್ಯಕ್ರಮದಲ್ಲಿ ಹೆಚ್ಚುಕಡಿಮೆಯಾದಾಗ್ಗೆ ಅಲ್ಲಿಯ ಬೋರ್ಡಿನ ಮೇಲೆ ಬರೆದು ತಿಳಿಸುತ್ತಾರೆ. ಈ ಪ್ರಕಾರ ಈ ಪರಮಹಂಸರ, ಸಂಕ್ಷಿಪ್ತ ಕಾರ್ಯಕ್ರಮವಿದೆ.



ನಿಸರ್ಗಮಾತೆಯು ಪ್ರೀತಳಾಗಿ ... ತಿಗಳಿಗೆ ಗಿಡದಲ್ಲಿಯೇ ರೊಟ್ಟಿ... ಕೊಟ್ಟಿದ್ದಾಳೆ. ತೆಂಗಿನ ... ಶುದ್ಧವಾದ ಹಾಲೇ ಅವರಿಗೆ ... ತುಪ್ಪ ಹಸುವಿನ ಹಾಲಿಗೆ ... ವಾಗಿದೆ. ತಾಹಿತಿಯ ಔತಣ... ಸ್ವಯಂಸೇವಕಸೇವಿಕೆಯರ ... ಷಕೊಟವಿದ್ದಂತೆ. ಯಜ... ಮನೆಯಲ್ಲಿ ಅತಿಥಿಗಳೇ ಅದ... ಕೆಲಸ ಮಾಡುತ್ತಾರೆ. ... ಮಾಲೆಯು ಅವರ ... ಒ ವೈಶಿಷ್ಟ್ಯ.


ರೊಟ್ಟಿಹಂಣಿನ ಗಿಡ

ತಾಹಿತಿಗಳ ಊಟ

ಲೇ:—ವಿಶ್ವವಿಹಾರಿ

'ತಾಹಿತಿ' ಎಂಬುದು ಪ್ಯಾಸಿಫಿಕ್ ಮಹಾಸಾಗರದೊಳಗಿನ ಒಂದು ನಡುಗಡ್ಡೆ. ಅಲ್ಲಿ ವಾಸಿಸುವವರಿಗೆ ತಾಹಿತಿಗಳೆನ್ನುತ್ತಾರೆ. ಈಗ ಬಹುತರವಾಗಿ ಆ ದ್ವೀಪವಾಸಿಗಳಿಗೆಲ್ಲ ಕ್ರಿಶ್ಚಿಯನ್ ದೀಕ್ಷೆಯಾಗಿಬಿಟ್ಟಿದೆ. ಮಿಕ್ಕೆಲ್ಲ ವಿಷಯಗಳಲ್ಲಿ ಅಲ್ಲಿ ನವನಾಗರಿಕತೆಯು ಕಾಲು ಪಸರಿಸಿದೆ. ಆದರೆ ಅಲ್ಲಿಯವರ ಊಟ ಮಾತ್ರ ಮೊದಲಿನ ಸ್ವರೂಪದಲ್ಲಿಯೆ ಇದೆಯೆನ್ನಬೇಕು. ಕೃತ್ರಿಮವಾಗಿ ಡಬ್ಬಿಗಳಲ್ಲಿ ಕಾದಿಟ್ಟ ಆಹಾರ ಸಾಮುಗ್ರಿಗಳನ್ನು ತಾಹಿತಿಗಳು ಉಪಯೋಗಿಸುವುದೇ ಇಲ್ಲ. ಅವರ ಮೈಗೆ ಒಂಟುವ ನೈಸರ್ಗಿಕ ಆಹಾರ ಸಾಮುಗ್ರಿಗಳು ಆ ದ್ವೀಪದಲ್ಲಿ ವಿಪುಲವಾಗಿ ಬೆಳೆಯುತ್ತವೆ. ತೆಂಗಿನಕಾಯಿ, ಕಲ್ಲಂಗಡಿಯಷ್ಟು ದೊಡ್ಡದಾಗಿ ಬೆಳೆವ ಮಾವಿನಹಂಣು, ರೊಟ್ಟೀಹಂಣು, ತೊಪ್ಪಲಪಲ್ಲೆಗಳು ಮುಂತಾದ ಸಸ್ಯಗಳಲ್ಲದೆ ಹಂದಿ ಮತ್ತು ಮೀನುಗಳನ್ನೂ ಅವರು ಆಹಾರವಾಗಿ ಉಪಯೋಗಿಸುತ್ತಾರೆ.

ರೊಟ್ಟೀಹಂಣು:—ಈಹೆಸರನ್ನೂ ಕೇಳಿ ನೀವು ನಗಬಹುದು. ಆದರೆ ನಿಜವಾಗಿ ನೀವು ಆ ಹಂಣನ್ನು ನೋಡಿದರೆ ತಾಹಿತಿಗಳಿಗೆ ನಿಸರ್ಗಮಾತೆಯು ಪ್ರಸನ್ನಳಾಗಿ ಗಿಡದಲ್ಲಿಯೇ ರೊಟ್ಟಿಯನ್ನು ಕೊಡುವಳೆಂದು ನಿಮಗೆ ಅನಿಸುವದು. ನಿಮ್ಮ ಬ್ರೆಡ್ಡಿನಷ್ಟೆ ಅದು ರುಚಿಕರವಾಗಿರುತ್ತದೆ. ಕಾಯಿಯಾಗಿರುವಾಗಲೇ ಅವನ್ನು ಹರಿದು ಭೂಮಿಯಲ್ಲಿ ಹಂಣಾಗಲಿಕ್ಕೆ ಹೂಳಡುತ್ತಾರೆ. ಹಂಣಾದ ಮೇಲೆ ಹೊರಗೆ ತೆಗೆದು ಅದರ ಕರಿ ಕನಜವನ್ನು ...



ರೊಟ್ಟಿಹಣ್ಣನ್ನು ಸುಲಿಯುವುದು

ಒಳಗಿನ ಇಡಿ ತಿರುಳನ್ನು ತಾಹಿತಿಗಳ ಮರಳಿನ ಒಲೆಯಲ್ಲಿ ಎರಡು ಗಂಟೆಗಳವರೆಗೆ ಬೇಯಿಸುವರು. ಆಗ ಅದು ಚನ್ನಾಗಿ ಬೆಂದು ಇಡ್ಲಿಯ ಹಾಗೆ ಮೆತ್ತಗಾಗಿ ಬೆರಳುಗಳಿಂದ ತಿನ್ನಲು ರುಚಿಕರವಾಗಿರುತ್ತದೆ.

ತಾಹಿತಿಗಳ ಮರಳಿನ ಒಲೆಗೆ ಏನೂ ವೆಚ್ಚವಿಲ್ಲ. ನೆಲದ ಮರಳಿನಲ್ಲಿ ಒಂದು ಚೌಕಾದ ತೆಗ್ಗನ್ನು ತೋಡುವರು. ಅದರಲ್ಲಿ ಒಳಗೆ ಸುತ್ತಲೂ ಚನ್ನಾಗಿ ಕಾಯ್ದ ಕಲ್ಲುಗಳನ್ನು ಗೋಡೆಯಂತೆ ಏರಿಸುವರು. ನಡುವೆ ಬೇಯಬೇಕಾದ ರೊಟ್ಟಿಹಣ್ಣು, ಮೀನು, ಹಂದಿ, ಗೆಣಸು, ಬಾಳೆಹಂಣಿನ ಕೆನೆ, ಎಲ್ಲವನ್ನೂ ರಾಶಿಹಾಕುವರು. ಅದರ ಮೇಲೆ ರೊಟ್ಟಿಗಿಡದ ಎಲೆಗಳನ್ನು ಮುಚ್ಚಿ ಆಹಾರ ಸಾಮುಗ್ರಿಯೆಲ್ಲ ಎರಡು ಗಂಟೆಗಳ ವರೆಗೆ ಉಗಿಯಲ್ಲಿ ಬೇಯಗೊಡುವರು.



ತಾಹಿತಿಗಳ ಮರಳಿನ ಒಲೆ

ತೆಂಗಿನಕಾಯಿ:—ಇದು ತಾಹಿತಿಗಳ ಅಡಿಗೆಯ ಪ್ರಾಣವಿದ್ದಂತೆ. ಅವರ ಎಲ್ಲ ವಿಧದ ಆಹಾರಗಳಲ್ಲಿಯೂ ಒಂದಿಲ್ಲೊಂದು ರೂಪದಲ್ಲಿ ಕಾಯಿಯು ಬೆರೆಯಲೇ ಬೇಕು. ಹಾಲು, ಬೆಣ್ಣೆ, ತುಪ್ಪಗಳ ಸ್ಥಾನದಲ್ಲೆಲ್ಲ ತೆಂಗಿನಕಾಯಿಯೇ ಉಪಯೋಗಿಸಲ್ಪಡುವದು. ತೊಪ್ಪಲ ಪಲ್ಲೆಗಳನ್ನು ಉಗಿಯಲ್ಲಿ ಬೇಯಿಸಿ ರಸತೆಗೆದು ಅದರಲ್ಲಿ ತೆಂಗಿನ ಹಾಲನ್ನು ಬೆರೆಸಿ ಸೇವಿಸುವರು. ಹಾಲೆಂದರೆ ನೀರಲ್ಲ. ತೆಂಗು ಇನ್ನೂ ಎಳತಾಗಿರುವಾಗಲೇ ಅದರೊಳಗಿನ ಮಿದುವಾದ ಕೊಬ್ಬರಿಯನ್ನು ಹೆರೆಯು (ತುರಿಂಯು) ವರು. ಆ ಹೆರೆಯನ್ನು ವಸ್ತ್ರದಲ್ಲಿ ಹಿಂಡಿ ಹಾಲು ತೆಗೆಯುವರು. ಹಾಲು ತೆಗೆದು ಉಳಿದ ಚರಟವನ್ನು, ಹೆರೆಯುವ ಸಪ್ಪಳವನ್ನು ಕೇಳಿ ಓಡಿಬಂದ ನಾಯಿ, ಬೆಕ್ಕು, ಹಂದಿ, ಕೋಳಿಗಳಿಗೆ ಕೊಡುವರು. ಆಹಾರವೇನೇ ಇರಲಿ, ತೆಂಗಿನ ಹಾಲು ಅದರಲ್ಲಿ ಸೇರಲೇಬೇಕು. ಕಾಫಿಯೊಡನೆ ಅದನ್ನು ಕುಡಿಯುವರು; ಪಲ್ಲೆಗಳ ಮೇಲೆ ಸಿಂಪಡಿಸುವರು. ರೊಟ್ಟಿಗಳನ್ನು ಅದರಲ್ಲಿ ಅದ್ದುವರು.



ಮೀನುಗಳನ್ನು ನಿರ್ಮಲಗೊಳಿಸುವ ತಾಹಿತಿ ಹೆಂಗಸು


ಮೀನಗಳನ್ನು ಬೇಯಿಸದೆ ಹಾಗೇ ತಿನ್ನುವ ರೂಢಿಯೇ ಅಲ್ಲಿ ಹೆಚ್ಚಾಗಿದೆ. ಮೀನಿನ ಹೊಲಸು ವಾಸನೆಯನ್ನು ಕಳೆಯಲು ಹಲವು ಗಂಟೆಗಳ ವರೆಗೆ ನಿಂಬೆರಸದಲ್ಲಿ ನೆನೆಸಿಡುವರು. ನಿಂಬೆರಸವೆಂದರೆ ಮೀನುಗಳು ಉಪ್ಪಿನಕಾಯಿ ಹಾಕುವ ದ್ರವವೆನ್ನಬಹುದು. ಸಸ್ಯಾಹಾರಿಗಳು ಮೂಗು ಮುಚ್ಚಿಕೊಳ್ಳಬೇಡಿ. ವಿಶಿಷ್ಟ ಪದ್ಧತಿಯಿಂದ ಕೆಲವು ಗಂಟೆಗಳಲ್ಲಿಯೇ ತಾಹಿತಿಗಳು ಸಿದ್ಧಪಡಿಸಿದ ಉಪ್ಪಿನಕಾಯಿಯನ್ನು ಕಂಣುಮುಚ್ಚಿ



ಸಜೀವವಾದ ಮೀನಿನ ಬಲೆ

ತಿಂದರೆ ಅದು ಮಾಂಸಾಹಾರವೆಂಬ ಕಲ್ಪನೆ ಕೂಡ ಬರುವುದಿಲ್ಲವಂತೆ. ನಿಂಬೆರಸದಲ್ಲಿ ತುಂಡು ಮಾಡಲ್ಪಟ್ಟ ಮೀನುಗಳು ಕೆಲವು ಗಂಟೆ ನೆನೆಯಿಟ್ಟು ನಂತರ ಆ ನೀರನ್ನು ಬಸಿದುಬಿಟ್ಟರೆ ಮೀನಿಗೆ ಹೊಲಸು ವಾಸನೆಯಿರುವುದೇ ಇಲ್ಲ. ಆಮೇಲೆ ಅದಕ್ಕೆ ಕೊಚ್ಚಿದ ನೀರುಳ್ಳಿ ಮತ್ತು ತೆಂಗಿನ ಹಾಲು ಸುರಿದುಬಿಟ್ಟರೆ ಸಿದ್ಧವಾಯಿತು ಉಪ್ಪಿನಕಾಯಿ.

ಸಜೀವ ಮೀನಿನ ಬಲೆ:—ಇಲ್ಲಿ ಮೀನು ಹಿಡಿಯುವ ರೀತಿಯು ಬಲು ಮೋಜಿನದಾಗಿದೆ. ಅದಕ್ಕಾಗಿ ತಾಹಿತಿಗಳು ನೂಲಿನ ಬಲೆಗಳನ್ನು ಉಪಯೋಗಿಸುವುದಿಲ್ಲ. ಸಮುದ್ರ ತೀರದ ಕಡಿಮೆ ಆಳವುಳ್ಳ ನೀರಲ್ಲಿ ಕೈಗೆ ಕೈಕೊಟ್ಟು ಸ್ತ್ರೀಪುರುಷರು ಸಾಲಾಗಿ ನಿಲ್ಲುವರು. ಇಬ್ಬಿಬ್ಬರ ನಡುವೆ ತೆಂಗಿ ನೆಲೆ-ಸೊಪ್ಪುಗಳನ್ನು ಸಿಕ್ಕಿಸಿಕೊಳ್ಳುವರು. ನಂತರ ಇಡಿ ಸಾಲಿನವರು ವರ್ತುಲಾಕಾರವಾಗಿ ದಂಡೆಯ ಕಡೆಗೆ ಸರಿಯುತ್ತ ಹೋಗುವರು. ದಂಡೆಗೆ ಮುಟ್ಟುವುದರೊಳಗಾಗಿ ಕೈಗಳಲ್ಲಿ ಸಿಕ್ಕಿಸಿಕೊಂಡ ಎಲೆ-ಸೊಪ್ಪುಗಳಲ್ಲಿ ಅನೇಕ ಮೀನುಗಳು ಸಿಕ್ಕಿಬೀಳುತ್ತವೆ.




ಬಲೆಯು ದಡಕ್ಕೆ ಸೇರುವುದು

ತಾಹಿತಿಗಳ ಔತಣ:—'ತಾಹಿತಿ'ಯಲ್ಲಿ ಔತಣದೂಟಕ್ಕೆ 'ತಮಾರ್' ಅನ್ನುತ್ತಾರೆ. 'ಇಷ್ಟಮಿತ್ರರಿಗೆ ಔತಣ ಹೇಳಿದರೆ ಅವರ ಆದರ ಸತ್ಕಾರ, ಅಡಿಗೆ ಬಡಿಸುವಿಕೆಗಳನ್ನು ಯಾರು ಬೇಕು ?' ಎಂದು ಕೇಳ ದವರು ಅಂಜಬೇಕಾದ ಏಕೆಂದರೆ ಔತಣ ಸಿಕ್ಕ ಗಳೇ ಔತಣಕೊಟ್ಟ ಮನೆಗೆ ಎಲ್ಲ ಅಡಿಗೆಯ ಗಾಗಿ ಬರುವರು. ಎಲ್ಲರೂ ಹಂಚಿಕೊಳ್ಳುವರು. ಕೆಲವರು ಯಲು, ಕೆಲವರು ರೊಟ್ಟಿ ಗೆಣಸುಗಳನ್ನೂ ಬಾಳೆ ತರಲು, ಕೆಲವರು ಮನೆಯ ಸಲು ಚಿಗುರು ಹೂಗಳ ಹೋಗುವರು. ಎಲ್ಲವನ್ನೂ ಸರು ಒಲೆಯನ್ನು ಕೊಬ್ಬರಿ ಹೆರೆಯುವುದು ಮುಂತಾದ ಅಡಿಗೆಯ ಮಾಡಹತ್ತುವರು. ಹೆಂಗಸರು ಮಾಲೆಕಟ್ಟು ಸಿಂಗರಿಸುವುದು, ಊಟದ ಮೇಜುಗಳನ್ನ ವುದು ಮುಂತಾದ ಕೆಲಸಗಳನ್ನು ಮಾಡಹತ್ತು ಸಿದ್ಧವಾಗುವುದರೊಳಗಾಗಿ ಸಂಜೆಯಾಗುವ ಅತಿಥಿಗಳೆಲ್ಲ ಮನೆಗೆ ಹೋಗಿ ಸುಂದರವಾದ ವಸ್ತ್ರಭೂಷಣಗಳನ್ನು ಧರಿಸಿ ಊಟಕ್ಕೆ ಬರು ಮೊದಲು ಸ್ತ್ರೀಪುರುಷರೆಲ್ಲರೂ ತಾಹಿತಿ ಅಲಂಕಾರ ವೈಶಿಷ್ಟ್ಯವಾದ ಹೂಮಾಲೆಗಳ

ವರು. ಊಟದ ಮೇಜಿನ ಮೇಲೆ ಬಾಳೆಯ ಎಳೆ ಎಲೆಗಳನ್ನು ಹಾಸಿ ಅದರ ಮೇಲೆ ತಟ್ಟೆಗಳನ್ನಿಡುವರು. ಕುಡಿಯುವುದಕ್ಕೆ ಎರಡೆರಡು ತೆಂಗಿನ ಎಳೆನೀರುಗಳನ್ನು ತೂತು ಹೊಡೆದು ಇಟ್ಟಿರುವರು. ಊಟ ಮಾಡುವಾಗ ನಮಗೆ ಅಶ್ಲೀಲವೆನಿಸುವ ಹಾಡುಗಳನ್ನು ಹುರುಪಿನಿಂದ ಹೇಳುವರು. ಬಹುಶಃ ದಿನದ ಎರಡೆರಷ್ಟಾದರೂ ಔತಣದ ದಿನ ಊಟಮಾಡುವರು.

ಊಟದ ನಂತರ ತರುಣ ಸ್ತ್ರೀಪುರುಷರೆಲ್ಲ ನೃತ್ಯ ಮಾಡುವರು. ಮಿಕ್ಕವರು ತೆಂಗಿನ ಹಾಲಿನಿಂದ ಕಾಫಿ, ಕೋಕೋ ಸಿದ್ಧಗೊಳಿಸುವರು. ನೃತ್ಯ ಮುಗಿದ ಮೇಲೆ ಎಲ್ಲರೂ ಅವನ್ನು ಕುಡಿದು ತಮ್ಮ ತಮ್ಮ ಮನೆಗಳಿಗೆ ಹೊರಡುವ ಹೊತ್ತಿಗೆ ಮಧ್ಯರಾತ್ರಿಯಾಗಿರುತ್ತದೆ. ಈ ಔತಣಗಳಲ್ಲಿ ಕಾಫಿ, ಕೋಕೋ, ಸಕ್ಕರೆಗಳಿಗಾಗಿ ಆಗುವ ಖರ್ಚೆ ಖರ್ಚು. ಮಿಕ್ಕ ಎಲ್ಲ ಖರ್ಚು ಕೆಲಸಗಳೂ ಸ್ವಯಂಸೇವೆಯಿಂದಲೇ ನಡೆಯುತ್ತವೆ.



ಕಿರಣವೊಂದೆ

ಆಹಹ! ಕಮಲದರಳ ಕಂಪು
ಅಳಿಯಗಾನವೆನಿತು ಇಂಪು
ಮಲಯ ಪವನ ಮಂದಗಮನ
ನಲಿತವೆನಿತು ಕಂಪಲಾ!

ಮೊದಲು ಉಷೆಯ ಇನಿಸುಲಾಸ್ಯ
ಅದರ ಮೇಲೆ ಇನನ ಹಾಸ್ಯ
ಮುದದಿ ಜರುಗೆ ಕಿರಿದಹ ನಗೆ
ಪಡೆದು ಧರೆಗೆ ಬರುವುದು.

ಎಳೆಯ ಕದಿರ ಜೊಂಪ ಬೀಸಿ
ಇಳೆಯಗಲಕೆ ಕಂಪ ಸೂಸಿ
ತನುವ ಕುಣಿಸಿ ನಲವನುಣಿಸಿ
ಮನವ ತಣಿಸಿ ಪರಿವುದು.

ಕೊಡುವುದು ಖಗಮಿಗಕೆ ರವವ
ದಣಿವು ಕಳೆದ ಮನಕೆ ಜವವ
ಆರ ಬಿಜ್ಜೆ ? ಎನಿತು ಲಜ್ಜೆ
ಇದಕೆ ಹಜ್ಜೆ ಹಜ್ಜೆಗೂ!

ಹಚ್ಚ ಹಸುರ ಮೇಲೆ ಮಲಗಿ
ಹಿಮದ ಹನಿಗಳೊಳಗೆ ಮುಳುಗಿ
ಎನಿತು ಸಣ್ಣ ಬೆಡಗು ಬಣ್ಣ
ಕೊಡುವುದಣ್ಣ ಸೋಜಿಗ!

ಕಾಮಧನುವ ರಚಿಸಲೆಂದು
ಮೊದಲು ಕಲೆಯನಿದನು ಅಂದು
ಬರೆದಬ್ರಹ್ಮ; ವರ್ಣದ ಕ್ರಮ
ಪೇಳಲಮನು ಎನಿಪುದು!

ಬೆಡಗು ವಡೆದ ಬಾಳ ಬೆಳಗಿ
ಸೊಬಗಿನಲೆಯ ಕಲೆಯ ವೊಳಗಿ
ಕಿರಣಸಂಗ ಜಲತರಂಗ
ಚಣಕೆ ಭಂಗ ವಡೆವುದು.

ಆದರೇನು! ಚಣದಬಾಳೆ?
ನೋಡುತಿದ್ದ ಹಾಗೆ ಹಾಳೆ?
ಚಣಕೆ ತ್ರಾಣ ವಳಿವ ಪ್ರಾಣ
ಸೊಬಗು ತಾಣ ವೆನಿಪುದು!

ಲೋಕವೆಲ್ಲವನ್ನು ನೋಡೆ
ನಲಿದು ಒಲಿದು ಆಟವಾಡೆ
ಬಾಳಿನಿಳೆಯ—ಪೊಸತುಕಳೆಯ
ನೀವ ಗೆಳೆಯ ಎನಿಪುದು.

ತರುಲತೆಗಳ ಕೊನರ ಸೋಂಕಿ
ಪಥವನದರ ಮೇಲೆ ನೂಂಕಿ
ಕೆಳಗೆ ಹೊರಳಿ ಕೆಲಕೆ ಮರಳಿ
ಕದಿರ ಸುರುಳಿ ಎನಿಪುದು.

ಏನಿದೇನು ಹೊನ್ನ ಕನಸೊ
ಪೇಳಲರಿದು ಭ್ರಮೆಯನನಸೊ
ಬಿದಿಯ ಆಟ ಏನು ಮಾಟ
ಎಂಥ ನೋಟ ಅಚ್ಚರಿ!

ಇಳೆಯೊಳೆನಿತು ಇದರ ಕಾರ್ಯ?
ತನುವ ನೋಡೆ ಸೌಕುಮಾರ್ಯ!
ಕಿರಣವೊಂದೆ ನಮ್ಮ ಮುಂದೆ
ನಗಿಸಲೆಂದೆ ನಗುವುದು!

—ವಾಸುದೇವ, ಜ...

ಆತ್ಮ ಸಂದೇಶ

ಏಳು, ಮೇಲೇಳೇಳು, ಎನ್ನಾತ್ಮ ಕೇಸರಿಯೆ!
ಯುಗಯುಗದ ಕುಂಭಕರ್ಣ ಸುಷುಪ್ತಿ ನೀಗಿ;
ಏಳು, ನಿದ್ದೆಯ ಸೀಳು; ಪಲ್ಮಸೆದು ಗರ್ಜಿಸಾ:
ಕಂಪಿಸಲಿ ವಿಶ್ವಕಾನನ ರವವು ತಾಗಿ!
ಜಾರಿವೀರ್ಯವದೆಲ್ಲಿ? ಪಂದೆತನವೇಕಿಂತು?
ಯಾವೊಂದು ಮಂತ್ರಬಂಧನ ಗ್ರಸ್ತವಾಗಿ
ಕರ್ತವ್ಯ ವಿಮುಖತೆಯ ನಾಂತಿರುವೆ? ಸಂಸ್ಕೃತಿಯ
ಮಂಕುಬೂದಿಗೆ, ಏನು, ಮರಳುವೋಗಿ?

ಸತ್ಯಕ್ಕೆ, ಸೈಪಿಂಗೆ, ಸತ್ಯೇಶನೊಲವುಂಟು,
ಬಲವುಂಟು, ನೆರವುಂಟು, ಮೇಣ್ ಕೃಪೆಯುಮುಂಟು;
ಎಂಬ ವಿಶ್ವಾಸದಲಿ ಮದಮತ್ತ ದಾನವರು
ಬೀಸಿರುವ ಕಲ್ಲಿ ಕಣ್ಣಿಯ ಕಡಿದು ದಾಂಟು:
ಶಾಂತಿಯಾ ಸೋಗಿನಲಿ ಪಂದೆತನ ಬೆಳೆಯುತಿದೆ;
ಕ್ರಾಂತಿಯೇ, ಬಗೆಯೆ, ಬಹಶಾಂತತೆಗೆ ನೆಲೆಯು:
ಸತ್ಯಸಮರದಿ ಮಿಥ್ಯೆಯನು ಇದಿರಿಸದೆ ಇರಲು,
ಆತ್ಮವಂಚನೆ; ಮತೆ ಸತ್ಯದಾಕೊಲೆಯು!

ಮೊಳಗು, ಮೊಳಗೆಲೆ ವಾಣಿ; ಭೈರವನ ಡಮರುಗವೊ,
ವಿಷ್ಣುವಿನ ಪಾಂಚಜನ್ಯವೊ ಎನಿಸಿ ಮೊಳಗು;
ದರ್ಪಪದದಲಿತ ಕೊಲೆ ಪ್ರಾಣರಾದವರೆದೆಗೆ
ನಚ್ಚಿನುಸಿರನು ಉಸರಿ, ಮೇಣ್ ಮೊಳಗು, ಮೊಳಗು;
ಅಶ್ಲೀಲ ಆಮೋದಕೊಳಗಾದ ದಾನವರು
ಎದೆಗೆಟ್ಟು ದೂರಕೋಡುವ ತೆರದಿ ಮೊಳಗು:
ಸತ್ಯಪಥದಲೆ ನಡೆದು, ಸತ್ಯಕೇತನ ತಳೆದು,
ಸತ್ಯಸಂದೇಶವಾಹಕನಾಗಿ, ಬೆಳಗು!

—ಟಿ. ಎನ್. ಶ್ರೀನಿವಾಸ ಮೂರ್ತಿ,
(ಬಾಲಕನ್ನಡ ಸೇವಾ ಮಂಡಲಿ) ಮೈಸೂರು.

ಯಾವ ವೇಷ?

(ಸಾವೇರಿ)

ಯಾವ ವೇಷವ ಧರಿಸಿ ಕಾಣುವೆನೆ ಇನಿಯನನು।
ಮೆಚ್ಚಿ ಮುದ್ದಿಟ್ಟು ಸಡಗರದೊಳಪ್ಪುವ ನೆನ್ನ ॥ ಪಲ್ಲ ॥

ಬಿಚ್ಚಿ ಮುಡಿಯನು ಹರವಿ ಮಲ್ಲಿಗೆಯ ಅರಳುಗಳು।
ಮುಡಿದು ಬೆಡಗಿನ ನೂತ್ನ ಚಂದ್ರಕಾಳಿಯನುಟ್ಟು ॥
ಮೆಲ್ಲಮೆಲ್ಲನೆ ಒನಪುಒಯ್ಯಾರಗಳ ಬೀರಿ।
ತೆರಳುವೆನೆ ಸಖಿ ಪೇಳೆ ಇರುಳಿನಂತೆ ॥ ೧ ॥

ನೆಯಂತೆ ತಿಳಿಯಾದ ಸಂಪಿಗೆಯ ಸೀರೆಯನು।
ಧರಿಸಿ ಹೊರಡುವೆನೇನೆ ಬೆಳದಿಂಗಳಂತೆ ॥
ಉಕ್ಕಂದದಲಿ ಮೆರೆವ ಹೊಸ ಬೆಳೆಗಳಲ್ಲಡಗಿ।
ನಲಿದಾಡುತಿರುವಂಥ ಗಿಳಿಹಿಂಡಿನಂತೆ ॥ ೨ ॥

ಮಧುಮಾಸದಲಿ ಮೆರೆವ ಸೊಗಸು ವನಸಿರಿಯಂತೆ।
ಜರದ ಮುಡಿಯನು ಧರಿಸಿ ಪೋಗಲದು ಸಾಕೇ ॥
ಕೇದಗೆಯ ನೂಲುಗಳ ಹೆಣೆದು ಮಾಡಿಹ ಚೆಲ್ವ।
ಮಗಮುಗಿಪ ಅರಸಿಣವನುಟ್ಟು ಪೋಗಲೆ ಸಖಿಯೆ ॥ ೩ ॥

—(ನೌಕಾಕ್ರೀಡನದ) ಶ್ರೀಧರ

ಕೋಟೆಯಲ್ಲಿ ಗಂಗೂ

ಗಂಗೂ ಬಡವೆಯಾದರೂ ಅವಳ ಕಂಠ ಕೋಗಿಲೆಯಂತಹದು. ಶಾರದೆ ಸಿರಿ[illegible] ಅವಳಿಗೆ ಒಡವೆಯ ಹೆಚ್ಚುಗಾರಿಕೆ ಸಹಿಸದು. 'ಏ ಗುಂಗಿ ಸಾಮಾನ್ಯವಾಗಿ ಅ[illegible] ಅನ್ನು; ಇಲ್ಲಿದ್ರ ನಡೀ ಹೊರಗ' ಎಂದು ಶಾರದೆಯು ಸೊಕ್ಕಿನಿಂದ ಅ[illegible] 'ಹಳೇ ಹಾಡೇ ಅನ್ಲಿಕ್ಕೆ ನಿನ್ನ ಹಾಂಗ ಛಡ್ಡಿಯಲ್ಲ ನಾನು' ಎಂದು ಬ[illegible] ಅನ್ನುವಳು. ಕೂಡಲೆ ಶಾರದೆಯ ಸಿರಿವಂತಿಕೆಯ ಸೊಕ್ಕು ಗಂಗೂನ ಗಲ್ಲ[illegible] ಮೂಡಿಯೇ ಬಿಟ್ಟಿತು. ಆದರೂ ಜನರು ಗಂಗೂನ ಈಶ್ವರದತ್ತ [illegible] ... ... ಸ್ವರ್ಗೀಯ ಮಧುರವಾಣಿಯನ್ನು ಸ್ತುತಿಸದಿರಲಿಲ್ಲ ...

ಲೇಖಕ:— ನಾ. ಸು. ಕುಂಜೂರ, ಬಿ. ಎ. (ಆನರ್ಸ)

ದೀಪಾವಳಿಯು ದೀವಿಗೆಗಳ ಹಬ್ಬ. ಬಣ್ಣದ ಆಕಾಶ ದೀವಿಗೆಗಳ ಮೆರವಣಿಗೆಯು, ಮುಗಿಲಲ್ಲಿ ಗೆರೆ ಹೊಡೆದ ಹಾಗೆ ಕಾಣುವದು ಇದೇ ಹಬ್ಬದಲ್ಲಿ. ದೀಪಾವಳಿಯ ಸುಖ ವಾರ್ತೆಯನ್ನು ಸ್ವರ್ಗಲೋಕಕ್ಕೆ ತಲುಪಿಸುವ, ಅಂಚೆಯ ಹೊಸ ಶೋಧವೇನೊ ಎನ್ನುವಂತೆ, ಚಿಕ್ಕೆಗಳ ಹಾಗೆ ಕಾಣುವ ಚೊಕ್ಕ ಆಕಾಶಬುಟ್ಟಿಗಳ ಹಾರಾಟವು.

ಮನಬಂದಂತೆ ತಿಂದು, ಆಟವಾಡಿ, ನಿದ್ದೆಗೆಟ್ಟು, ಅಜೀರ್ಣವಾಗಿ ವೈದ್ಯರ ಹೊಟ್ಟೆ ತುಂಬಿಸುವದು ಕಿರಿಯರ ಕರ್ತವ್ಯ. ಹಿರಿಯರಂತೂ ಸುಖಸೀಮೆಯನ್ನು ದಾಟುವದು ಇದೇ ಹಬ್ಬದಲ್ಲಿ. ನರಕಚತುರ್ದಶಿಯ ದಿನ ಮುಂಜಾನೆ ಆರತಿ—ಎಂದೂ ಇಲ್ಲದ ಉಲ್ಹಾಸವು ಮುದುಕರಲ್ಲಿ ಒಡೆದು ಕಾಣುವದು. ಎಲ್ಲರಿಗಿಂತ ಬೇಗ ಏಳುವದು, ದೇವರಿಗೆ ಆರುತಿ, ತಮ್ಮ ಶೃಂಗಾರಾ, ಶೃಂಗಾರವೆಂದರೆ ಮತ್ತೇನು ಅಲ್ಲಾ, ಕೊಂಡವೇಳೆಯಲ್ಲಿ ಆಷ್ಟೇ ಬಿಳುಪಾಗಿದ್ದ ರುಮಾಲನ್ನು ತಲೆಗೆ ಬಿಗಿಯುವದು— ಅಲ್ಲ— ಸುತ್ತುವದು. ಅಂಚಿನ ವಲ್ಲಿಯನ್ನು ಹೊರುವದು ಇಷ್ಟೇ. ಹಾಸಿಗೆ ಮಣೆಗೆ ಬರುವದು— ಎರಡನೇ ಬಾಲ್ಯ! — ಅಭ್ಯಂಗ, ಮೇಲೆ ರಂಗೋಲಿಯಿಂದ (ರಂಗವಲ್ಲಿಯಿಂದಾ) ಸುತ್ತುಗಟ್ಟಲ್ಪಟ್ಟ ಕುಡಿಬಾಳೆಯಲ್ಲಿ ಪೋಳ್ಳು ಕರಚೀಕಾಯಿಗಳ ಚಳಚಳಾಟ, ಚಕ್ಕುಲಿಗಳ ಚಿಕಲಾಟ, ಉಂಡಿಗಳ ಜಿಗಿದಾಟ, ಹತ್ತು ಗಂಟೆಗೆ ಸವಿಯೂಟ, ಮಧ್ಯಾನ್ಹದಲ್ಲಿ ಪಗಡೆಯ ಆಟ, ಹುಡಿಗೆಯರ ಕೋಲಾಟ, ಬಸವನ ಆಟ, ಕೋಟಿಯಲ್ಲಿ ಒಡಿದಾಟ ಎಲ್ಲವೂ ಪ್ರೇಕ್ಷಣೀಯವಾಗಿರುವವು. ಅಳಿಯತನವಿದ್ದವರಲ್ಲಿ ಕೇಳುವದೇನು!

" ಕೋಲಽಽಽ ನಾಡುತ ಬಂಽದ ಕಾವೇಽಽರಿ ರಂಗ .... "

ಎಂದು ಹಾಡುತ್ತ ಬಾಲಿಕೆಯರ ಕೋಟೆಯೊ[illegible] ನೀರು ಕುಡಿಸಿ ನಲಿದಾಡುತ್ತ ಬರುತ್ತ[illegible] ಬಾಲಿಕೆಯರು ಸುತ್ತುಗಟ್ಟಿ ಕೈಬಳ್ಳಿಯ ಮ[illegible]ರನ್ನು ಇರಿಸಿದ್ದಾರೆ. ಕೋಗಿಲೆಯಂತೆ [illegible] ಮಧುರವಾಗಿ ಹಾಡುವವಳೇ ಗಂಗೂ. [illegible] ವಯಸ್ಸು. ಬಣ್ಣ ನಸುಗಪ್ಪು, ಕಣ್ಣು [illegible] ಬಡತನದ ಬಾಳ್ವೆಯನ್ನು ಸೂಚಿಸುವ ಕೂ[illegible] ತುರುಬಿನ ಪಕ್ಕದಲ್ಲಿ ಮಲ್ಲಿಗೆಯನ್ನು ಇಟ್ಟಿರು[illegible]ವದು ಗಂಡಸರ ನೀಲಿಮುಡಿ, ತೊಟ್ಟಿರುವ[illegible] ಕುಪ್ಪಸ.

" ಏ. ಗುಂಗೀ ಸಮಾನ್ಯಾಗಿ ಅಂತಿದ್ರ [illegible] ಹೋಗು ಹೊರಗ. ಬಡವರಿಗೆ ಬ್ಹಾಳ ಸೊ[illegible] ಕೋಟಿಯ ಕಾನೂನುಗಳನ್ನು ಬಲ್ಲ ಶಾರದೆ[illegible] ವಾಣಿಯಿಂದ ನುಡಿದಳು.

" ಯಾಕ, ಹಳೇ ಹಾಡಽ ಅನ್ಲಿಕ್ಕೆ ನಿ[illegible] ಅನ್ನು ಒಂದರ ದೇಶಿ ಕೊಲಿನ ಹಾಡು— [illegible] ಮಹಾತ್ಮಾ ಗಾಂಧಿಽಽ, ಹಿಂದುಸ್ಥಾನ[illegible]

" ಎಷ್ಟು ಸೊಕ್ಕ ನಿನಗ, ಒಂದ [illegible]

" ನಿನ್ಹಂಗ ನಾಯೆನು, ಅಣ್ಣನ ಕ[illegible] ಹೇಳಿಸಿಗೊಂಡು ನೋಡ್ಲಿಕ್ಕೆ ಬಂದಾಗ......

" ಬಾಯಿ ಮುಚ್ಚು ".

" ಮುಚ್ಚುದಿಲ್ಲಾ. ಏನಮಾಡ್ತಿ? [illegible] ದಾರ್ಕಿ ಡೌಲು ತೋಽಸಬ್ಯಾಡ. ಈಗ [illegible] ರಾಜ್ಯ "

" ನಮ್ಮಪ್ಪನ ಸ್ವಾತಂತ್ರ್ಯ. ನಿಮ್ಮ[illegible] ಇಸ್ಪೆಟ ಆಡಿ ಕೋಲಾಽನಿ ಕಳಕೊಂಡ[illegible]

"ಚದರಿ, ಅದಕ್ಕ ೧೪ ವರ್ಷ ಆದರೂ ಲಗ್ನಾ ಕಾಣವಲ್ಲಿ. ಮೊನ್ನೆ ನೋಡ್ಲಿಕ್ಕೆ ಬಂದಾಗ ಇಷ್ಟು ಮಾತಾಡ ಬೇಕಾಗಿತ್ತು. ಹೆಸರು ಕೇಳಿದ್ರ ಹೇಳ್ಳಿಕ್ಕೆ ಬರಲಿಲ್ಲವ್ವಾ .... ಮಾತಾಡ, ಮಾತಿಸಮಲ್ಲಿ .... ಸುಮ್ಮನಾದೆಲ್ಲ .... ಶಾರದಾ ಸೋತ್ಲು ಅಲ್ಯೋ ಪಿಲ್ಯೋ" ಅಲ್ಲಿ ಗಿಂಡಿಯನ್ನು ತೂರಿ ಹಿಡಿದಳು.

ಶಾರದೆಯು ಸಿಟ್ಟನ್ನು ಸಹಿಸದೆ ಗಂಗೂನ ಗಲ್ಲದ ಮೇಲೆ ಎರಡೇಟು ಇಟ್ಟೇಬಿಟ್ಟಳು. ಕೆಲವರು ನಕ್ಕರು, ಕೆಲವರು ಬಡತನದ ಗೋಳನ್ನೂ, ಸಿರಿವಂತಿಕೆಯ ಸೊಕ್ಕನ್ನೂ ನೆನೆದು ಮನದಲ್ಲಿ ಮರುಗಿದರು. ಗಂಗೂ ಎಷ್ಟೆಂದರೂ ಚಿಕ್ಕವಳು, ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅದರೆ ಕೇಳುವರ್‍ಯಾರು. ಅವಳ ಗೆಳತಿಯ ಮನವು ಕರಗಿತ್ತು, ಹರಿಯಿತು, ಕಣ್ಣೀರು ಹೊರಸೂಸಿ ಧುಮುಕಿತು. ಗಂಗೂನನ್ನು ರಮಿಸಿದಳು. ತನ್ನ ಪರಕಾರದ ತುದಿಯಿಂದಾ ಅವಳ ಕಣ್ಣನ್ನು ಒರಸಿ—"ಅಳಬ್ಯಾಡ ಬಿಡ ನಿಮ್ಮನೀ ಬಂತು. (ಜಗಳವನ್ನು ಮರೆಸುವದಕ್ಕೆ) ಅಕ್ಕೋರು (School Mistress) ಮನ್ನೇನು ಹೇಳಿಕೊಟ್ರು?"

"ನೀ ಬಂದಿದ್ದಿಲ್ಲೇನು?" "ಇಲ್ಲಾ."

ಶಾರದೆಯು ತನ್ನ ತಂದೆಗಾಡಿದ ಅಪಮಾನಕರವಾದ ಮಾತುಗಳನ್ನು ನೆನಪಿಗೆ ತಂದುಕೊಂಡು ಪುನಃ ಬಿಕ್ಕತೊಡಗಿದಳು.

"ಗಂಗೂ, ಏ, ಗಂಗೂ, ನಿನ್ನೆ ಸಿಂಪಿಗೇರ ಅಂಗ್ಡ್ಯಾಗ ಯಾಕ ನಿಂತಿದ್ದಿ?"

"ಇವತ್ತ (ಬಿಕ್ಕುವಳು) ಇವತ್ತ ಮುಂಜಾನೆ ಹುಬ್ಬಳ್ಳಿಗೆ ಹೋಗ್ಯಾನ ಅಪ್ಪಾ. ನನಗ (ಕಣ್ಣು ವರಸಿಕೊಳ್ಳುತ್ತಾ) ಪರಕಾರ, ಝುಂಪರು, ಬ್ಲೋಜು ತರತಾನ, ಅದಕ್ಕ ಅಳತಿಗೆ ಹೋಗಿದ್ದೆ. ಈಗ ಬಂದಿದ್ದಾನು".

ಗಲ್ಲದ ಮೇಲೆ ಬಿದ್ದ ಏಟುಗಳನ್ನು ಗಂಗೂ ಮರತೇಬಿಟ್ಟಳು. ಎಲ್ಲರಿಗಿಂತಾ ಮೇಲು ದನಿಯಲ್ಲಿ ಹಾಡತೊಡಗಿದಳು. ಜನರು ಗಂಗೂನ ಈಶ್ವರದತ್ತ, ನೈಸರ್ಗಿಕ ಗೀಯ ಮಧುರವಾಣಿಯನ್ನು ಕೇಳಿ ಸ್ತುತಿಸದಿರಲಿಲ್ಲ. ಬಡತನವು ಬಾಹ್ಯಕಾರಣಗಳಿಂದ ಬಂದುದು, ಅದೊಂದೇ ಅವಳ ಕುಂದು. ಬಡತನವೇ ಸರಸ್ವತಿಯ ವಾಸಸ್ಥಾನವಲ್ಲವೇ?

ತಮ್ಮ ಮನೆಯು ಸಮೀಪಿಸಿದ್ದು ಕಂಡು ಹೊಸ ಅರಿವೆಯನ್ನು ಹಾಕಿಕೊಳ್ಳುವ ಹುರುಪಿನಲ್ಲಿ, ಉಟ್ಟಮಡಿಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು, ಕೈ ಬಳ್ಳಿಯು ಕೋಟೆಯ ಕೆಳಗೆ ಬಗ್ಗಿ, ಗಂಗೂ ಮನೆಗೆ ಜಿಗಿದೇಬಿಟ್ಟಳು. ಹೊಸ ಬಟ್ಟೆಯ ಆನಂದ! ಬಣ್ಣಿಸಲಸಾಧ್ಯ!! ಹೊಸ ಅರಿವೆಗಳನ್ನು ಧರಿಸುವದೆಂದರೆ ಹಿರಿಯರಿಗೂ ಕಿರಿಯರಿಗೂ ಆನಂದವೇ ಆನಂದ. ಹೊಸ ಅರಿವೆಯನ್ನು ತೊಟ್ಟು ಶಾಲೆಗೆ ಮಾತ್ರ ಹೋಗ ಕೂಡದು. ಹೋದರೆ 'ಹೊಸಾ ಅಂಗಿಯ ಗುದ್ದು, ತಿಂದು ತಿಂದು ಬೆನ್ನು ಮುರಗೀಕಾವು ಬೇಡುವದು.

"ಶಾರಕ್ಕಾ, ಗಂಗೂ ಮನೀಗೆ ಹೋದ್ಲು".

"ಎಲ್ಲೆ."

"ಅದೇ."

"ಬೋಕಾಣೆ, ಕೇಳ್ದ ಹೊಂಟ್ಯಾ."

"ಹೋಗೇ ಬಿಟ್ಲು."

"ನಾಯೆಲ್ಲೆ ಬಿಡ್ತೇನಿ ಆಕಿನ್ನ, ಮನೀಗೆ ಹೋಗೋಣು ಬರ್‍ರಿ."

"ಏ. ಒಳಗ ಹೋಗಬ್ಯಾಡ."


"ನಮ್ಮನ್ಯಾಗ ನಾ ಹೋಗಲಿಕ್ಕೆ .... (ತಂದೆಯನ್ನು ಮನೆಯಲ್ಲಿ ನೋಡುವಳು) ಅಪ್ಪಾ ಅರವಿ ತಂದ್ಯಾ?"

ಸರದಾರ (ಪೋಲಿಸ):"ಅವರ ಮಗ್ಳು, ಹೋಗ್ಲಿಬಿಡ್ರಿ"

ಎಲ್ಲೆ ಹೋಗ್ತಿಯ?, ಕೇಳ್ದ ಬಂದಾಳ (ಪೋಲಿಸನನ್ನು ನೋಡಿ) ಇಲ್ಯಾಕೋ?" ಶಾರದೆಯು ಪರಿವಾರದೊಡನೆ ಬಂದು ಗಂಗೂನನ್ನು ಸುತ್ತುಗಟ್ಟಿಬಿಟ್ಟಳು.

"ಇವರ ಮನೀ ಜಪ್ತ ಆಗೇತ್ರಿ."

"ಹಂ, ಹ್ಯಾಂಗ ಅದ ಅಪ್ಪನ ಮಾನ್ಲತಿ?" ಅಣಕಿಸಿ ನಗುವಳು.



ನ ಗ ಬೇ ಡಿ

ಯಜಮಾನಿ (ಹೊಸ ಆಳಿಗೆ) :— ಮನೆಯು ನಿನ್ನದೇ ಎಂದು ತಿಳಿದು ಕೆಲಸ ಮಾಡಬೇಕು ನೋಡು.

ಆಳು:— ಆಗಲಿ ಬಾಯಿಯವರೇ, ಮನೆಯ ಯಜಮಾನರಿಗಿಂತ ಹೆಚ್ಚಾಗಿ ನಡಕೊಳ್ಳುತ್ತೇನೆ.

* * *

ಶಿಕ್ಷಕ:—ಔರಂಗಜೇಬನು ಹುಟ್ಟಿದ್ದೆಂದು? ಸತ್ತದ್ದೆಂದು?

ವಿದ್ಯಾರ್ಥಿ:— ಔರಂಗಜೇಬನು ಮೊದಲನೇ ದಿನ ಹುಟ್ಟಿ ಕಡೆಯ ದಿನ ಸತ್ತನು.

* * *

ಯಜಮಾನ:— ಏ ಮಲ್ಲ್ಯಾ, ನನ್ನ ಕನ್ನಡಕ ಎಲ್ಲಿ ದೆಯೋ ?

ಮಲ್ಲ್ಯಾ:— ದ್ಯಾವ್ರೂ, ನಂದೂ ಮನ್ಯಾಗ ಬಿಟ್ಟ ಬಂದೇನ್ರಿ. ಅದನ್ನು ತಂದು ನಿಮ್ಮದು ಹುಡುಕಬೇಕಾತ್ರಿ.

* * *

ಅಯ್ಯನವರು:— ಏ ಹುಡುಗರಿರಾ! ನಿಮ್ಮ ಪುಸ್ತಕ ಮುಚ್ಚಿ ಮೊದಲಿಂದ ಕಡೆತನಕ ಪ್ರತಿಯೊಂದು ಪಾಠದ ಹೆಸರು ಯಾರು ಹೇಳ್ತೀರಿ ?

ತಿಮ್ಮ:— ನಾ ಹೇಳ್ತೇನ್ರಿ, ೧ನೇ ಪಾಠ, ೨ನೇ ಪಾಠ, ೩ ನೇ ಪಾಠ ....

* * *

ಆಫೀಸರರು:— (ಉಮೇದವಾರನಿಗೆ) ನನಗೊಬ್ಬ ಒಳ್ಳೆ ಗಟ್ಟಿ ಮುಟ್ಟು ಸೇವಕ ಬೇಕಾಗಿದ್ದ. ನೀನು ಸಿಗರೇಟ ಸೇದುವೆಯೇನೋ?

ಉಮೇದವಾರ:— ಇಲ್ಲ ದೇವ್ರೂ. ನಾನು ಚಹಾ, ಕಾಫಿ, ಸೆರೆ ಕುಡಿತೇನೆ. ತಾವು ಹೇಳಿದರೆ ಇನ್ನು ಮೇಲೆ ಸಿಗರೇಟನ್ನೂ ಸುರುಮಾಡ್ತೇನೆ.

* * *

ದೇಶಾವರಿ:— ತಾವು ಧರ್ಮರಾಜನಂತೆ ಇದ್ದೀರಿ ಅಂತ ಜನರು ಕೊಂಡಾಡ್ತಾರೆ.

ಸಾವಕಾರ:— ಹೌದು ಆದ್ದರಿಂದಲೇ ನಾನು ಧರ್ಮ ಮಾಡುವದನ್ನು ನಿಲ್ಲಿಸಿಬಿಟ್ಟಿದ್ದೇನೆ. ಪರೀಕ್ಷೆ ಪಾಸಾದ ಮೇಲೆ ಯಾರಾದರೂ ಅಭ್ಯಾಸ ಮಾಡ್ತಾರೇನು ?

* * *

ನ್ಯಾಯಾಧೀಶ:— ದುಡ್ಡನ್ನು ಕದ್ದು ತೃಪ್ತನಾಗದೇ ಮುತ್ತು ರತ್ನಗಳನ್ನೂ ಕದ್ದೆಯಾ ?

ಕಳ್ಳ:— ಹೌದುಸ್ವಾಮಿ, ಬರಿದುಡ್ಡಿನಿಂದ ಜಗತ್ತಿನಲ್ಲಿ ಸುಖ ಸಿಗದೆಂದು ನನ್ನ ಗುರುಗಳು ಚಿಕ್ಕಂದಿನಲ್ಲಿ ಕಲಿಸಿದ್ದಾರೆ.

* * *

ಸಾವಕಾರ:— ದಿನಾಲು ಬಾಗಲಿಗೆ ಬಂದು ದುಡ್ಡು ಕೇಳಲಿಕ್ಕೆ ನಾಚಿಕೆ ಬರುವದಿಲ್ಲವೇ ನಿನಗೆ?

ಭಿಕ್ಷುಕ:— ಮೊದಲು ನಾಚಿಕೆಯಿಂದ ಕೇಳದೆ ದುಡ್ಡು ತೊಗೊಳ್ಳುತ್ತಿದೆ. ಅದಕ್ಕೆ ಸರಕಾರದೋರು ಒಪ್ಪಲಿಲ್ಲ ಸ್ವಾಮಿ.

* * *

ಕೂಲಿಯಾಕೆ:— ನನ್ನ ಗಂಡ ಕುಡಿಯುವದೂ ಇಲ್ಲ. ಚಿಲುಮಿನೂ ಸೇದುವದಿಲ್ಲ.

ಕೆಲಸದವಳು:— ನನ್ನ ಗಂಡಂದೂ ಅದೇ ಗತಿ ಆಗೇದವ್ವ. ಒಂದು ವಾರದಿಂದ ಎಲ್ಲಿಯೂ ಕೆಲಸ ಸಿಗಲಿಲ್ಲ.

* * *

ಮ್ಯಾನೇಜರ:—ಅಲ್ಲಯ್ಯಾ, ಏಳು ವರ್ಷದ ಬ್ಯಾಂಕಿನ ಅನುಭವ ಇದೆ ಅಂದೆಯಲ್ಲಾ! ಮೊದಲೆಲ್ಲೂ ನೀನು ಬ್ಯಾಂಕಿನಲ್ಲಿರಲಿಲ್ಲ! ಸುಳ್ಳು ಹೇಳ್ತಿಯಾ ?

ಹೊಸಕ್ಲಾರ್ಕ:— ಛೇ ಛೇ ತಾವು ಕಲ್ಪನಾಶಕ್ತಿ ಚುರುಕಾಗಿರುವ ಕ್ಲಾರ್ಕ ಬೇಕೆಂದು ಜಾಹಿರಾತು ಕೊಟ್ಟಿದ್ದೀರಿ ಸ್ವಾಮಿ ....

* * *


ಹುಡುಗ:— ಅಪ್ಪಾ, ಹೊರಗ ಒಬ್ಬ ಬಡವ ಒದರಲಿಕ್ಕೆ ಹತ್ತ್ಯಾನ. ಅವಗ ಕೊಡಲಿಕ್ಕೆ ಒಂದು ದುಡ್ಡು ಕೊಡ್ತೀಯಾ ?


ಅಪ್ಪ:— ಆಗಲಿ! ಏನೆಂದು ಒದರಲಿಕ್ಕೆ ಹತ್ತಿದ್ದಾನವನು ?

ಹುಡುಗ:— ಅಯ್ಸ್‌ಕ್ರೀಮ ಬೇಕೇನು ಅಯ್ಸ್‌ಕ್ರೀಮ ಅಂತ.

* * *

ಬಿಡುವಿನ ಹೊತ್ತನ್ನು ಆನಂದದಲ್ಲಿ ಕಳೆಯಲು GOPAL FLUTE ಮತ್ತು GOPAL PHONE







ಇದಲ್ಲದೆ ಮುಂಬಯಿಯಲ್ಲಿ ದೊರೆಯುವ ಬೇರೆ ಎಲ್ಲ ಬಗೆಯ ಮಾಲನ್ನು ಅಲ್ಪ ಕಮಿಶನ್ನಿನ ಮೇಲೆ

ಅಗ್ಗವಾಗಿ ... ಅತ್ಯಂತ ... ಯಿಂದ ... ಸರಿಯಾಗಿ ...

ಹೆಚ್ಚಿನ ವಿವರಗಳಿಗಾಗಿ ಹೊಸ ದೊಡ್ಡ ೧೦೦ ಪುಟಗಳ ಸಚಿತ್ರ ಮರಾಠಿ ಕ್ಯಾಟಲಾಗನ್ನು, ೨ ಆಣೆಯ ಅಂಚೇಚೀಟಿ ಕಳಿಸಿದಲ್ಲಿ ಉಚಿತವಾಗಿ

ಗೋಪಾಳ ಸಖಾರಾಮ ಮತ್ತು ಕಂಪನಿ,

೩೯೭-೯೯ ಕಾಳಬಾದೇವಿ
ಮುಂಬಯಿ ನಂ. ೨.

ಕರ್ನಾಟಕ ಭಕ್ತವಿಜಯ

ದ್ವಿತೀಯ ಭಾಗ — ರೂ. ೨-೮-೦

೪೫೦ ಪುಟಗಳ ಅಮೌಲ್ಯ ಗ್ರಂಥ
ಗ್ರಂಥಕರ್ತರು: ಬೇಲೂರು ಕೇಶವದಾಸರು

ಇತರ ಗ್ರಂಥಗಳು

ಕರ್ನಾಟಕ ಭಕ್ತವಿಜಯ ಭಾಗ ೧	ರೂ. ೨-೮-೦
ಕನ್ಯಕಾ ಪುರಾಣ	ರೂ. ೧-೦-೦
ಶ್ರೀ ರಾಘವೇಂದ್ರ ವಿಜಯ	ರೂ. ೦-೮-೦

ದೊರೆಯುವ ಸ್ಥಳ:

೧. ಸುಬೋಧ ಪ್ರಕಟನಾಲಯ, ಚಾಮರಾಜ ಪೇಟೆ ಬೆಂಗಳೂರು ನಗರ

೨. ಬೇಲೂರು ಕೇಶವದಾಸರು ಚಾಮರಾಜಪುರಂ ಮೈಸೂರು.

UNEMPLOYME

OF EDUCATED MIDDLE C

is an important item in the

Send a Post Card and le

HOW TO GIVE YOUR A START IN A BUSIN OR, PROFESSION

BOMBAY BAROD ASSURANCE CO., LT

ESTABLISHED 1925. HEAD OFFICE

Wanted immediately Inspectors, Chief Agents, and Dist. sers, most lucrative terms of Salary and sion, throughout Karnataka State.

ಮಲಶುದ್ಧಿ

ಲೇಖಕರು: ಡಾ. ಗೋಪಾಲಕೃಷ್ಣರಾಯರು ಸಂಪಾದಕ
ಕಲಿಯುಗ, ಧಾರವಾಡ

★

ಮುಖದ ಅಂದವನ್ನು ಹೆಚ್ಚಿಸಲಿಕ್ಕೆ ಚರ್ಮದ ಚಂದವನ್ನು ಬೆಳೆಸಲಿಕ್ಕೆ ಸ್ನೋ, ಕ್ರೀಮು, ಸಬ್ಬುಗಳಿಗಿಂತ ಮೊದಲು ಮಲಶುದ್ಧಿಯ ಕಡೆಗೆ ಲಕ್ಷ್ಯಕೊಡಬೇಕು. ದೇಶದಲ್ಲಿಯ ಆತ್ಮಹತ್ಯೆಗಳ ಸಂಖ್ಯೆ ಕಡಿಮೆಯಾಗಬೇಕಾದರೆ ಮಲಶುದ್ಧಿಯ ಪಾವಿತ್ರ್ಯವನ್ನು ಎಲ್ಲರೂ ಮನಗಾಣಬೇಕು. ಏಕೆಂದರೆ ಮಲಬದ್ಧತೆಯು ಉಲ್ಲಾಸದ ವೈರಿಯಾದುದರಿಂದ. ಅದು ಜೀವನದಲ್ಲಿ ಬೇಸರವನ್ನು ಹುಟ್ಟಿಸುವದು. ಯೋಗ್ಯ ಸಮಯದಲ್ಲಿ ದೇಹದ ವಿಷಗಳು ವಿಸರ್ಜಿಸಲ್ಪಡದಿದ್ದರೆ ಅವು ಪುನಃ ರಕ್ತಕ್ಕೆ ಸೇರಿ ದೇಹಾಂಗಗಳನ್ನೆಲ್ಲ ಪೀಡಿಸುತ್ತವೆ. .. ..

★


ಬೆಳಿಗ್ಗೆ ಎದ್ದ ಕೂಡಲೆ ಮೊದಲು ಆಗಬೇಕಾದ ಕೆಲಸವಿದು. ಆಯುರ್ವೇದದಲ್ಲಿ ಮಲಕ್ಕೆ 'ಶರೀರ ಚಿಂತಾ' ಎಂದಿದ್ದಾರೆ. ರಾತ್ರಿ ಮಲಗಿರುವಾಗ ಶರೀರದಲ್ಲಿ ಚಟುವಟಿಕೆ ಕಡಿಮೆ ಇರುತ್ತದೆ. ಬೆಳಗಿನಲ್ಲಿಯೂ ಮಲಶುದ್ಧಿಯಾಗುವವರೆಗೆ ಜಾಡ್ಯವು ದೂರವಾಗುವದಿಲ್ಲ. ಮಿದುಳು ಚುರುಕಾಗಬೇಕಾದರೆ ಕೆಲಸಕ್ಕೆ ಹುರುಪು ಬರಬೇಕಾದರೆ ಮೊದಲು 'ಶರೀರ ಚಿಂತೆ'ಯ ನಿವಾರಣ ಮಾಡಿಕೊಳ್ಳಬೇಕು. ನಂತರ ಈಶ್ವರ ಚಿಂತನ.

ಬೆಳಿಗ್ಗೆ ಎದ್ದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳೂ ಭಜನೆ ಮಾಡುವ ಭಕ್ತರೂ ಮೊದಲು ಶರೀರ ಚಿಂತೆಯ ಕಡೆಗೆ ಲಕ್ಷ್ಯಕೊಡಬೇಕು. ಅದರಿಂದ ಓದು ಮನಸ್ಸಿಗೆ ಹಿಡಿಯುತ್ತದೆ; ಭಜಕರ ಮನಸ್ಸು ತಲ್ಲೀನವಾಗುವದು.

ಮುಖದ ಅಂದವನ್ನು ಹೆಚ್ಚಿಸಲಿಕ್ಕೆ ಚರ್ಮದ ಚಂದವನ್ನು ಬೆಳಸಲಿಕ್ಕೆ ಸ್ನೋ, ಕ್ರೀಮು, ಸಬ್ಬುಗಳಿಗಿಂತ ಮೊದಲು ಮುಂಜಾನಿನ ಮಲಶುದ್ಧಿಯ ಕಡೆಗೆ ಗಮನ ಕೊಡಬೇಕೆಂದು ನನ್ನ ಅಭಿಪ್ರಾಯ. ದೇಶದಲ್ಲಿ ಆತ್ಮಹತ್ಯೆಗಳ ಸಂಖ್ಯೆ ಕಡಿಮೆಯಾಗಬೇಕಾದರೆ ಎಲ್ಲರಿಗೂ ಮಲಶುದ್ಧಿಯ ಪಾವಿತ್ರ್ಯವನ್ನು ಮನಗಾಣಿಸಬೇಕು. ನಮ್ಮ ನಾಡಿನಲ್ಲಿ ವಿಜ್ಞಾನಿಗಳೂ ಮೇಧಾವಿಗಳೂ ಬೆಳೆಯಬೇಕಾದರೆ ಎಲ್ಲರಿಗೂ ಬಾಲ್ಯದಿಂದಲೇ ನಿಯಮಿತವಾಗಿ ಶರೀರ ಚಿಂತೆಯನ್ನು ನಿವರ್ತಿಸುವ ಅಭ್ಯಾಸವಾಗಬೇಕು. ಹೀಗಿದೆ ಮಲಕೋಶಕ್ಕೂ ಜ್ಞಾನಕೋಶಕ್ಕೂ ಸಂಬಂಧ!

ಮಲಶುದ್ಧಿಯಿಂದ ದೀರ್ಘರೋಗಗಳು ಸಡಿಲು ಬೀಳುವವು; ತೀವ್ರರೋಗಗಳು ಬಲಗುಂದುವವು. ದಿನಾಲು ಮಲಶುದ್ಧಿ ಸರಿಯಾಗಿ ಆಗುತ್ತಿದ್ದರೆ ಎಂತಹ ಬೇನೆ ಶರೀರವನ್ನು ಹೊಕ್ಕರೂ ಧೈರ್ಯದಿಂದಿರಬಹುದು. ಬೇನೆಯು ದಿನೇ ದಿನೇ ಕಸುವುಗೊಳ್ಳುತ್ತಿರುವುದರ ಲಕ್ಷಣವೇ ಮಲಬದ್ಧತೆಯಾಗಿದೆ.


ಮನೆಯೆಂದ ಮೇಲೆ ಕಸವಿದ್ದೇ ಇರುತ್ತದೆ. ಆದರೆ ಆ ಕಸವನ್ನು ಹೊತ್ತು ಹೊತ್ತಿಗೆ ಗುಡಿಸಿ ಬುಟ್ಟಿಯಲ್ಲಿ ತುಂಬಿಡಬೇಕು. ದಿನದಿನವೂ ಆ ಬುಟ್ಟಿಯನ್ನು ಹೊರಗೊಯ್ದು ಕಸ ಚಲ್ಲಬೇಕು, ಇಲ್ಲದಿದ್ದರೆ ಕಸವು ಕೂಡಿಬಿದ್ದು ನೊಣಗಳೂ ಇರುವೆಗಳೂ ಹಾವು ಚೇಳುಗಳೂ ಆಗಿ, ಮನೆಯವರ ಸುಖಕ್ಕೆ ಅಡ್ಡಿ ಮಾಡುವವು. ಅದರಂತೆಯೆ ಮೈಯ ಮನೆಗೆ ಮಲಕೋಶವೂ ಒಂದು ಕಸದ ಬುಟ್ಟಿಯಂತೆ. ಅದು ದಿನ ದಿನವೂ ಬರಿದಾಗದಿದ್ದರೆ ವಿವಿಧ



೧. ಜಠರ. ೨. ಉಪಾಂತ್ರ. ೩. ಪಿತ್ತಕೋಶ. ೪. ಸಂಣ ಕರುಳು. ೫. ದೊಡ್ಡ ಕರುಳು. ೬. ಮಲಕೋಶ

ಬೇನೆ ಬೇಸರಿಕೆಗಳು ಹುಟ್ಟಿ ಮನುಷ್ಯರನ್ನು ಕೇಡಿಗೇಡು ಮಾಡುತ್ತವೆ.

ಮಲಕೋಶವೆಂದರೆ ನಮ್ಮ ಆಹಾರ ನಾಳದ ಕೊನೆಯ ಭಾಗವಾಗಿದೆ. ಅಲ್ಲಿ ಮಲಹುಟ್ಟುವದಿಲ್ಲ: ಸಂಗ್ರಹ ವಾಗುತ್ತದೆ. ನಮ್ಮ ಆಹಾರವು ಪಾಚಕಾಂಗಗಳ ವಿವಿಧ ಪಾಚಕ ರಸಗಳೊಡನೆ ಬೆರೆತು ಪಚನವಾಗಿ ಆಯಾ ಸ್ಥಾನ



ಕರುಳಿನ ಸ್ನಾಯುಗಳನ್ನು ಬಲಗೊಳಿಸುವ ವ್ಯಾಯಾಮ

ದಲ್ಲಿ ಸ್ವಲ್ಪ ಅಂಶವು ರಕ್ತಗತವಾಗುತ್ತದೆ. ಕೊನೆಗೆ ಆಹಾರವು ಕರುಳಿಗೆ ಬಂದಾಗ ಅದಕ್ಕೆ ಅರ್ಧದ್ರವರೂಪವು ಬಂದಿರುತ್ತದೆ. ಆ ಪ್ರವಾಹಿಯಾದ ಆಹಾರ ಸಾರವು ಸಂಣ ಕರುಳಿನಲ್ಲಿ ಮತ್ತು ದೊಡ್ಡ ಕರುಳಿನ ಆರಂಭದಲ್ಲಿ ಹೆಚ್ಚು ಪ್ರಮಾಣದಲ್ಲಿ ರಕ್ತಗತವಾಗುತ್ತದೆ. ಹೀಗೆ ರಸ ಭಾಗವು ರಕ್ತಗತವಾದ ಮೇಲೆ ಮಿಕ್ಕ ಕಸಭಾಗವೇ ಮಲ ವಾಗಿದೆ. ನಾವು ತಿನ್ನುವ ಆಹಾರಗುಣಕ್ಕನುಸರಿಸಿ ಮುಖ ದಿಂದ ಮಲಕೋಶದ ವರೆಗೆ ಆಹಾರವು ತಲ್ಪಿ ಮಲರೂಪ ವನ್ನು ಹೊಂದುವದಕ್ಕೆ ೧೮ ರಿಂದ ೨೦ ಗಂಟೆಗಳು ಹಿಡಿ ಯುತ್ತವೆಂದು ಕಂಡು ಬಂದಿದೆ. ಮಲಕೋಶದಲ್ಲಿ ಮಲವು ಸಾಕಷ್ಟು ಸಂಗ್ರಹವಾದ ಕೂಡಲೆ ಅಲ್ಲಿಯ ನರತಂತುಗಳು ಉದ್ರಿಕ್ತವಾಗಿ ಮಲವಿಸರ್ಜನೆಯ ಪ್ರವೃತ್ತಿಯನ್ನು ಹುಟ್ಟಿಸುತ್ತವೆ.


ನಮ್ಮ ದೇಹದೊಳಗಿನ ಎಲ್ಲ ವಿಸರ್ಜನಗಳೂ— ಮಲ, ಮೂತ್ರ, ಬೆವರು, ಉಗುಳು, ಕಫ, ಸಿಂಬಳ— ವಿಶಿಷ್ಟ ಅವಧಿಯೊಳಗಾಗಿ ದೇಹದಿಂದ ಹೊರಗೆ ಹೋಗಲೇ ಬೇಕು. ಅವುಗಳಿಗೆ ಆಯುರ್ವೇದದಲ್ಲಿ ' ವೇಗ ' ಗಳೆನ್ನು ತ್ತಾರೆ. ' ಬಹುತರ ರೋಗಗಳೆಲ್ಲ ವೇಗಧಾರಣದಿಂದಲೇ ಬರುತ್ತವೆ ' ಎಂದು ಆಯುರ್ವೇದವು ಹೇಳುತ್ತದೆ. ಏಕೆಂದರೆ ದೇಹದಲ್ಲಿ ಹುಟ್ಟುವ ವಿವಿಧ ಕಶ್ಮಲಗಳನ್ನು ವಿವಿಧ ಮಾರ್ಗಗಳಿಂದ ಹೊರಗೆ ಹಾಕಿ ದೇಹವು ತನ್ನನ್ನು ರಕ್ಷಿಸಿಕೊಳ್ಳುವದು. ಯೋಗ್ಯ ಸಮಯದಲ್ಲಿ ಆ ವಿಷಗಳು ಹೊರಬೀಳದಿದ್ದರೆ ಅವು ಮರಳಿ ರಕ್ತಕ್ಕೆ ಸೇರಿ ದೇಹಾಂಗ ಗಳನ್ನೆಲ್ಲ ಪೀಡಿಸುತ್ತವೆ.

ಚರ್ಮರೋಗದ ತಜ್ಞರಾದ ಡಾ. ವ[illegible] ' ಮಲಕೋಶವೊಂದನ್ನು ನಿರ್ಮೂಲಗೊಳಿಸಿದರೆ [illegible] ಕೂಡ ತರುಣರಾಗುವರು, ಮಲಶುದ್ಧಿಯಲ್ಲಿ[illegible] ವೃದ್ಧಿಯಿದೆ ' ಎನ್ನುತ್ತಾರೆ. ದಿನ ದಿನವೂ ಕಾ[illegible] ಮೈಕೈಶೂಲೆ, ತಲೆಶೂಲೆ, ನೆಗಡಿ ಕೆಮ್ಮು[illegible] ಮೂಲದಲ್ಲಿ ಮಲಬದ್ಧತೆಯಿರುತ್ತದೆ. " ಬಹು[illegible] ಮಲಕೋಶದಲ್ಲಿ ಕೂಡಿಬಿದ್ದ ಮಲವು [illegible] ಸುತ್ತಿಗೆಯಿಂದ ಒಡೆಯಬಹುದಾದಷ್ಟು ಕಲ್ಲಾ[illegible] ತ್ತದೆ. ಅಷ್ಟು ಕಠಿಣವಾದ ಮಲದ ಒತ್ತಡವು [illegible] ಮೇಲಾಗುವದರಿಂದಲೇ ಭಯಂಕರ ತಲೆಶೂ[illegible] ನಾಶಗಳು ಹುಟ್ಟುತ್ತವೆ " ಎಂದು ಡಾ. [illegible] ಹೇಳುತ್ತಾರೆ.

ಆದುದರಿಂದ ಬೆಳಿಗ್ಗೆ ಎದ್ದ ಕೂಡಲೆ ನೆ[illegible] ಸವು ಮಲಶುದ್ಧಿಯಾಗಬೇಕು. ದೇವ ಪ್ರಾ[illegible] ಮೊದಲು ಮಲಶುದ್ಧಿಯಾಗಬೇಕು. ಪ್ರಾರ್ಥನೆ[illegible] ವಿರುವ ಮನದ ಪ್ರಫುಲ್ಲತೆಯು, ತಲ್ಲೀನತೆಯು [illegible] ಶುದ್ಧಿಯಿಂದಲೇ ಹುಟ್ಟುತ್ತವೆ. ನಿಯಮಿತ ವೇಳೆ[illegible] ಮಾಡುವ ಕೆಲಸಗಳು ಚಟವಾಗುವಂತೆ ಮ[illegible] ನಿಯಮಿತ ವೇಳೆಗೆ ಹೋಗುವದರಿಂದ ಅದೊಂ[illegible] ವಾಗುವದು.

ಮಲಶುದ್ಧಿಯು ಮುಖ್ಯವಾಗಿ ಮೂರು ವಿ[illegible] ಮೇಲೆ ಅವಲಂಬಿಸಿದೆ. (೧) ಆಹಾರದ ಗು[illegible] ಊಟಮಾಡುವ ರೀತಿ (೩) ವ್ಯಾಯಾಮ.

(೧) ಆಹಾರದಲ್ಲಿ ದೇಹಕ್ಕೆ ಪೋಷಕವಾದ [illegible]




ಕರುಳಿನ ಸ್ನಾಯುಗಳನ್ನು ಬಲಗೊಳಿಸುವ ವ್ಯಾ[illegible]

[illegible] ಗ್ರಿಗಳಂತೂ ಇರಲೇಬೇಕು. ಅದರೊಡನೆ [illegible] ಗಳ ನಾರು, ಹಣ್ಣು ಹೆಂಪಲಗಳ ತೊಗಟೆ[illegible] ಸೂಕ್ಷ್ಮ ಕವಚಗಳ ಅಗತ್ಯವೂ ಇದೆ. [illegible] ಗಳನ್ನು ಕವಚ ತೊಗಟೆಗಳೊಡನೆ ಸೇವಿಸಬೇ[illegible] ಕವಚಗಳು ಕರುಳಿಗೆ ಚಲನೆಯನ್ನು ಕೊಟ್ಟು [illegible] ಯನ್ನುಂಟು ಮಾಡುವವು. ಆದುದರಿಂದಲೇ [illegible]

ಧಾನ್ಯವೂ, ಸಿಪ್ಪೆ ಕವಚಗಳನ್ನೆಲ್ಲ ತೆಗೆದೊಗೆದ ಮಿದುವಾದ ಅಂಗಡಿಗಳ ತಿನಿಸೂ ಒಳಿತಲ್ಲ ಎನ್ನುವದು.


(೨) ಕಚ್ಚಿ ತಿನ್ನುವ ಪ್ರತಿಯೊಂದು ಆಹಾರವನ್ನೂ ಚೆನ್ನಾಗಿ ಹಲ್ಲಿನಿಂದ ನುರಿಸದೆ ನುಂಗಬಾರದು. ಹೆಚ್ಚು



ಕರುಳಿನ ಸ್ನಾಯುಗಳನ್ನು ಬಲಗೊಳಿಸುವ ವ್ಯಾಯಾಮ

ಅಗಿಯುವದರಿಂದ ಜೊಲ್ಲು ಸಾಕಷ್ಟು ಪ್ರಮಾಣದಲ್ಲಿ ಹುಟ್ಟಿ ಮಿಕ್ಕ ಪಾಚಕ ರಸಗಳ ಸ್ರಾವವನ್ನು ಉತ್ತೇಜಿಸುತ್ತದೆ. ಪಾಚಕ ರಸಗಳಲ್ಲಿಯೂ ಮಲಶುದ್ಧಿಗೊಳಿಸುವ ಗುಣವಿದೆ.

(೩) ವ್ಯಾಯಾಮವು ದೇಹದ ಮಿಕ್ಕ ಸ್ನಾಯುಗಳನ್ನು ಬಲಗೊಳಿಸುವಂತೆ ಹೊಟ್ಟೆ ಮತ್ತು ಕರುಳಿನ ಸ್ನಾಯುಗಳನ್ನೂ ಬಲಗೊಳಿಸುತ್ತದೆ. ಒಂದೇ ಕಡೆಗೆ ಅನೇಕ ಗಂಟೆಗಳ ವರೆಗೆ ಕೂತು ಕೆಲಸಮಾಡುವ ಪರಿಸ್ಥಿತಿಯಿರುವವರು ತಮ್ಮ ಕೆಳಹೊಟ್ಟೆಗೆ ಚಾಲನೆ ಕೊಡುವ ವ್ಯಾಯಾಮವನ್ನು ಮಾಡಲೇ ಬೇಕು. ಹಲಕೆಲವು ಹಠಯೋಗದ ಆಸನಗಳೂ ಕರುಳಿನ ಶಕ್ತಿವರ್ಧನಕ್ಕೆ ಉಪಯುಕ್ತವಾಗಿವೆ.




ಕರುಳಿನ ಸ್ನಾಯುಗಳನ್ನು ಬಲಗೊಳಿಸುವ ವ್ಯಾಯಾಮ

ಜೇಡದ ಜೀವನ

ಲೇ:— ಪ್ರೊ. ಎ.


ಮಾನವರಲ್ಲಿ ಪುರುಷರು ಮೀಸೆ ಹುರಿ ಮಾಡುತ್ತಾರೆ; ತಾವೇ ಸರ್ವಸ್ವವೆಂದು; ಸ್ತ್ರೀಯು ಅಬಲೆ ನಿರುಪಯುಕ್ತ ಜೀವಿಯೆಂದು. ಆದರೆ ಮಿಕ್ಕ ಅನೇಕ ಪ್ರಾಣಿಗಳಲ್ಲಿ ಸ್ತ್ರೀಯೇ ಸರ್ವಸ್ವವಾಗಿರುತ್ತದೆ. ಗಂಡೇ ನಿರ್ಬಲವಾಗಿ ಸಂಯೋಗದ ನಂತರ ನಿರುಪಯುಕ್ತವಾಗಿರುತ್ತದೆ. ಜೇಡವು ಅಂತಹ ಪ್ರಾಣಿಗಳಲ್ಲೊಂದು. ಹೆಂಣು ಜೇಡದೊಡನೆ ಹೋಲಿಸಿದರೆ ಗಂಡು ಬಲು ಚಿಕ್ಕದು ಮತ್ತು ದುರ್ಬಲವಾಗಿರುವದು.

ನೀವು ತೋಟದಲ್ಲಿ ಹೋದರೆ ಹೆಂಣು ಜೇಡಗಳೇ ನಿಮ್ಮ ಕಂಣಿಗೆ ಬೀಳುವವು. ಆಗಸ್ಟ ಅಥವಾ ಸೆಪ್ಟಂಬರ ಪ್ರಾರಂಭದ ಎರಡು ಮೂರು ವಾರಗಳಲ್ಲಿ ಮಾತ್ರ ಸಂಣ ಗಂಡು ಜೇಡಗಳು ಹೆಂಣು ಜೇಡದ ಬಲೆಯ ಸುತ್ತಲೂ ಅದರ ಮನ ಒಲಿಸಲು ಅಂಜಂಜುತ್ತ ಸುತ್ತು ಹಾಕುತ್ತಿರುವವು. ಗಂಡಿಗೆ ಹೆಂಣಿನಷ್ಟು ಸುಂದರವಾಗಿ ಕಸುವುಳ್ಳ ಬಲೆಯನ್ನು ಕಟ್ಟಲು ಬರುವದಿಲ್ಲವೆಂದು ತೋರುತ್ತದೆ. ಅದು ಹೆಂಣಿನ ಬಲೆಗೇ ಅವ್ಯವಸ್ಥಿತವಾಗಿ ತನ್ನ ಎಳೆಗಳನ್ನು ತಗಲಿಸಿ ಬಲೆಕಟ್ಟುವದು. ಒಂದು ಸಲ ಹೆಂಣಿನೊಡನೆ ಸಂಯೋಗವಾಯಿತೆಂದರೆ ಗಂಡು ನಿರ್ನಾಮವಾಗಿಯೇ ಹೋಗುವದು. ಕೆಲವು ಜಾತಿಯ ಹೆಂಣು ಜೇಡಗಳು ಸಂಯೋಗದನಂತರ ಗಂಡನ್ನು ಕೊಂದು ತಿಂದೇ ಬಿಡುತ್ತವೆ.



ಬಲೆ ಒಡ್ಡಿ ಬೇಟೆಗಾಗಿ ಕಾದಿರುವದು

ಜೇಡಗಳು ಬಲೆ ಕಟ್ಟುವದು ತಮ್ಮ ವಾಸಕ್ಕಲ್ಲ. ತಮ್ಮ ಆಹಾರದ ಬೇಟೆಯನ್ನು ಹಿಡಿಯುವದಕ್ಕೆ. ಬಹುತರವಾಗಿ ರಾತ್ರಿಕಾಲದಲ್ಲಿಯೆ ಜೇಡಗಳು ಬಲೆಕಟ್ಟುವವು. ಮೊದಲು ಮಧ್ಯಬಿಂದುವಿನಿಂದ ಎಲ್ಲ ದಿಕ್ಕುಗಳಲ್ಲಿಯೂ ಸರಳರೇಖೆಯ ಎಳೆಗಳನ್ನು ಅದು ಹಾಕುವದು. ಅವುಗಳ ಮೇಲೆ ವರ್ತುಲಾಕಾರವಾಗಿ ಎಳೆಗಳನ್ನು ಹಾಕಿ ಎಳೆಗಳು ಸಂಧಿಸುವಲ್ಲೆಲ್ಲ ಅಂಟಿನಂತಹ ಒಂದು ಪದಾರ್ಥವನ್ನು ...
ನಂತರ ಬಲೆಯ ಮಧ್ಯದಲ್ಲಿ ಬೇಟೆಯ ...
ಅನೇಕ ಗಂಟೆಗಳವರೆಗೆ ಕೂಡುವದು. ...
ಆ ಅಂಟಿನ ಮೇಲೆ ಕೂತು ಸಿಕ್ಕಿಕೊಂಡ ...
ಧಾವಿಸಿ ಬಂದು ಬೇಟೆಯ ಸುತ್ತಲೂ ...
ಯಂತಹ ಎಳೆಗಳನ್ನು ಸುತ್ತುಹಾಕಿ ಆ ...
ಯವಗಳನ್ನು ಅಲ್ಲಲ್ಲಿಯೇ ಕಟ್ಟಿಹಾಕಿ ...
ವಾಗಿಸುವದು. ಜೇಡಕ್ಕೆ ಮಿಕ್ಕ ಹುಳು...
(ಜಿಟ್ಟೆ)ಯ ಮೇಲೆ ಪ್ರೀತಿ ಹೆಚ್ಚು. ಜಿಟ್ಟೆ...
ಹಾರಬಲ್ಲ ಹುಳುವಾದರೂ ಜೇಡವು ...
ಯಿಂದ ತನ್ನ ...
ಬಂಧಿಸುವದು. ...
ತನ್ನ ಬಲೆ...
ಕೊಳ್ಳಲಾರ...
ಖಂಡಿತವಾ...
ವನ್ನು ಕಟ್ಟಿ ...
ವಾದ ವಿಷ...
ದೇಹಕ್ಕೆ ...
ವಿಷದ ಪ್ರಭಾ...
ವಿನ ಮೈಯ...
ಗಳೆಲ್ಲ ನೀರಾ...
ಜೇಡವು ಆ ...
ಬಲೆಯಿಂದ ...
ಗಿನಿಂದ ...
ಧಾತುರಸವನ್ನು ...
ಹುಳುವಿನ ...
ಬಿಸುಟ ಬಿಡು...
ಸೆಪ್ಟಂಬ...
ಸಿದ ಜೇಡವು ...
ತತ್ತಿಗಳನ್ನಿಟ್ಟು ತನ್ನ ಬಲೆಗೆ ಉಪಯೋ...
ರಿಯ ಎಳೆಗಳಿಂದಲೇ ತತ್ತಿಯ ಗೂಡನ್ನು ...
ಹುಲ್ಲುಗಳ ದೇಟುಗಳಿಗೆ ಈ ಗೂಡುಗಳು ...
ಕಟ್ಟಲ್ಪಡುತ್ತವೆ. ಅದಕ್ಕೆ ಉಪಯೋಗ...
ಜೇಡದ ಹೊಟ್ಟೆಯೊಳಗಿನಿಂದಲೇ ಬರುತ್ತ...
ಗೂಡು ಬಹು ಭದ್ರವಾಗಿರಬೇಕಾದುದ...
ಗೂಡಿಗೆ ಹೆಚ್ಚು ಎಳೆ ಬೇಕಾಗುತ್ತದೆ.



ಬಲೆಗೆಸಿಕ್ಕ ಜಿಟ್ಟೆಯನ್ನು ಬಂಧಿಸುವದು.

ಮುಗಿಯ ಬೇಕಾದರೆ ಜೇಡದ ಹೊಟ್ಟೆಯೊಳಗಿಂದ ಅನೇಕ ನೂರು ಯಾರ್ಡುಗಳಷ್ಟು ಎಳೆಯು ಹೊರಬೀಳುವದು. ಈ ಶ್ರಮದಿಂದ ಗೂಡು ಮುಗಿಯುವುದರೊಳಗಾಗಿ ಅಥವಾ ಮುಗಿದು ಸ್ವಲ್ಪ ಸಮಯದಲ್ಲಿಯೇ ತಾಯಿಜೇಡವು ಸತ್ತು ಹೋಗುವದು.

ತತ್ತಿಗೂಡಿನ ರಚನೆಯು ಬಲು ಚಮತ್ಕಾರಿಕವಾಗಿರುವದು. ಒಂದು ಅಗಲವಾದ ಪಾತ್ರೆಯಲ್ಲಿ ಅದೇ ಆಕಾರದ ಸ್ವಲ್ಪ ಸಣ್ಣ ಪಾತ್ರೆಯನ್ನಿರಿಸಿ ಅವೆರಡರ ಅಂಚುಗಳನ್ನು ಜೋಡಿಸಿದಂತೆ ಗೂಡಿನೊಳಗೊಂದು ಗೂಡು ಇರುವದು. ಒಳಗೂಡು ಬಲು ನಯವಾಗಿ ಬೆಚ್ಚಗಿರುವದು. ಒಳಗೂಡಿನಲ್ಲಿಯೇ ನಾಲ್ಕು ನೂರರಿಂದ ಎಂಟು ನೂರರ ವರೆಗೆ ತತ್ತಿಗಳಿರುತ್ತವೆ. ಗೂಡಿಗೆ ಉಪಯೋಗಿಸಲ್ಪಡುವ ಎಳೆಯು ಜಲ ನಿರೋಧಕವಿರುವದು. ಹಲವು ದಿನಗಳವರೆಗೆ ಆ ಗೂಡನ್ನು ನೀರಿನಲ್ಲಿ ಮುಳುಗಿಸಿಟ್ಟರೂ ಸ್ವಲ್ಪವೂ ಅದು ನೆನೆಯುವದಿಲ್ಲ. ತತ್ತಿಗಳಿಗೆ ಅದರಿಂದ ಮೂರು ನಾಲ್ಕು ತಿಂಗಳುಗಳ ವರೆಗೆ ಒಳ್ಳೆ ರಕ್ಷಣೆ ಸಿಗುತ್ತದೆ. ಆ ತತ್ತಿ ಗೂಡಿನ ಮೇಲೆ ಮಳೆ, ಗಾಳಿ, ಮಂಜುಗಳು, ಗುಡ್ಡಗಾಡಿ ಒಳಗಿನ ತತ್ತಿಗಳನ್ನು ನಸುವೂ ಮುಟ್ಟಲಾರದೆ ಹೊರಟು ಹೋಗುವವು.

ಗೂಡಿನ ಮೇಲೆ ಮಳೆ ನೀರು ಬೀಳುವಾಗ ನೀರಿನ ಆವಿಯಷ್ಟೆ ಒಳಗೆ ಸೇರಿ ತತ್ತಿಗಳ ಬೆಳೆಗೆಗೆ ಸಹಾಯಕವಾಗುತ್ತದೆ. ಹಲವು ವಾರಗಳ ನಂತರ ಮರಿಗಳು ಹೊರಗೂಡನ್ನು ಹರಿದು ಮೆಲ್ಲಗೆ ಹೊರ ಬೀಳುವವು. ಆ ಎಲ್ಲ ಮರಿಗಳೂ ಗುಂಪು ಗುಂಪಾಗಿ ಒಂದೊಂದು ಹುಲ್ಲಿನ ದೇಟಿನ ಬುಡದಿಂದ ಮೇಲೇರುತ್ತ ಹೋಗುತ್ತವೆ. ರಾತ್ರಿಯಾದಾಗ ಎಲ್ಲ ಮರಿಗಳೂ ಒಂದು ಗುಂಪಾಗಿ ಸೇರುವವು. ಬೆಳಗಾದ ಕೂಡಲೆ ಮತ್ತೆ ತಂಮ ಪ್ರವಾಸವನ್ನು ಪ್ರಾರಂಭಿಸುವವು. ಹೀಗೆ ಅವು ಹುಲ್ಲಿನ ತುದಿಯನ್ನು ಮುಟ್ಟಲಿಕ್ಕೆ ೮—೧೦ ದಿನಗಳು ಬೇಕು. ತುದಿಯನ್ನು ಮುಟ್ಟಿದ ಮೇಲೆ ಅವು ಸ್ವತಂತ್ರವಾಗಿ ಬೇರೆ ಬೇರೆಯಾಗಿ ತಮ್ಮ ಜೀವನವನ್ನು ಸಾಗಿಸುವವು.



ತತ್ತಿಗಳ ಗೂಡು

ಪಕ್ಷಪಾತ ಇಲ್ಲವೆ ಅರ್ಧಾಂಗಿಯ ಅರ್ಧಾಂಗವಾ[ತ]

ಲೇಖಕರು: "ತಾರಾದಾಸ"

ಬಿಸಿಲು ಬಿರುಗಾಳಿಗಳಿಂದ ತತ್ತರಿಸುವ ಮಾನವಶಿಶುವಿಗೆ ಕರುಳಿನ ಬೆಚ್ಚಗಿನ ನೆಲೆ ಸಿಕ್ಕಿ[ದ್ದು] ತಾಯಿಯಿಂದ. ಮನೆಯನ್ನು ಸಿಂಗರಿಸಲು ಅವಳಿಂದಲೇ ಕತೆಗಳು ಹುಟ್ಟಿದವು. ಮಕ್ಕ[ಳನ್ನು] ಆಡಿಸಲು, ಹಾಡಿ ಮಲಗಿಸಲು ಕಾವ್ಯ ಹುಟ್ಟಿತು. ಪರಿವಾರ ಪೋಷಣೆಗೆ ಉದ್ಯೋಗವ್ಯವ[ಸಾಯ]ಗಳು ಹುಟ್ಟಿದವು. ಹೀಗೆ ತಾಯಿಯಿಂದ ಆದಿ ಸಮಾಜದ ಬುನಾದಿ ಇಡಲ್ಪಟ್ಟಿತು. [...] ಸ್ವಾತಂತ್ರ್ಯವೆಂದರೆ ಹೊಣೆಗೇಡಿತನವೆಂದು ತಿಳಿದ ಗಂಡು, ಸಮಾಜವನ್ನು ನರಕಕ್ಕೆ ಎಳೆ[...] ಅಂದಿನಿಂದ ಸಮಾಜಕ್ಕೆ ನಾರಿಯೆಂದರೆ ಮಹಾಮಾರಿಯೆನಿಸಹತ್ತಿದಳು; ಅರ್ಧಾಂ[...] ... ಪ್ರೇಮದ ಪಕ್ಕವನ್ನು ಕಳೆದುಕೊಂಡ ಸಮಾಜಕ್ಕೆ ಅರ್ಧಾಂಗವಾತ ಬಡಕೊಂಡಿತು

ಪಕ್ಷಪಾತವೆಂದರೆ ಯಾವದಾದರೊಂದು ಪಕ್ಷಕ್ಕೆ ಸಲ್ಲದ ಔದಾರ್ಯ ಇಲ್ಲವೆ ಅನೌದಾರ್ಯವನ್ನು ತೋರಿಸುವದು. ಅರ್ಧಾಂಗವಾತಕ್ಕೂ ಪಕ್ಷಪಾತವೆಂಬ ಹೆಸರುಂಟು. ಅರ್ಧಾಂಗವಾತದಲ್ಲಿ ಮಿದುಳಿನ ಕೆಲವು ಕೇಂದ್ರಗಳು ಕೆಟ್ಟು, ದೇಹದ ಒಂದು ಪಾರ್ಶ್ವವು ಸಂವೇದನೆ-ಸಂಚಾಲನೆಗಳನ್ನು ಕಳೆದುಕೊಂಡು ಕಸುವುಗೆಡುತ್ತ ನಡೆಯುತ್ತದೆ.

ನಮ್ಮ ಸಮಾಜವು ಸಾಮಾನ್ಯವಾಗಿ ಮನುಷ್ಯ ಶರೀರದಂತಿದೆ. ಸ್ತ್ರೀ-ಪುರುಷರು ಅದರ ಎರಡು ಪಾರ್ಶ್ವಗಳು. ಸಮಾಜದ ನಿರಿಗುರಿಗಳನ್ನು ನಿರ್ಣಯಿಸಿ, ಅದರ ಮುನ್ನಡೆಯ ದಾರಿಯನ್ನು ಕೊರೆದು ತೋರಿಸುವ ಮುಂದಾಳುಗಳೇ ಸಮಾಜದ ಶರೀರಕ್ಕೆ ಮಿದುಳಿದ್ದಂತೆ. ಗುಂಪಿನ ಬಯಕೆಗಳು ಅದರ ಮುಂದಾಳುಗಳಲ್ಲಿ ಕಣಗೂಡಿರುತ್ತವೆ. (Crystalised); ಸಮಾಜದ ವಿವಿಧಾಂಗಗಳ ಕ್ರಿಯಾ ತರಂಗಗಳ ಮೂಲ ಸೆಲೆಯಿರುವದು ಮುಂದಾಳುಗಳ ವ್ಯಕ್ತಿತ್ವದಲ್ಲಿ ಮತ್ತು ಕರ್ತೃತ್ವದಲ್ಲಿ. 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ' ಎಂಬ ಗೀತಾವಚನವು ತಥ್ಯಪೂರ್ಣವಾಗಿದೆ. ಮಾನವ ಸಮಾಜವು ತನ್ನ ಚಿಕ್ಕಂದಿನಲ್ಲಿ ಎಡವರಿಸುತ್ತ ನಡೆದು, ಬೀಳದಂತೆ ಸಾವರಿಸಿಕೊಳ್ಳಲು ತಾನಾಗಿ ಹುಡುಕಿಕೊಂಡ ಉಪಾಯವಿದು. ಆದ್ದರಿಂದ ಸಮಾಜದ ವಿವಿಧಾಂಗಗಳ, ಮುಖ್ಯವಾಗಿ ಸ್ತ್ರೀ-ಪುರುಷರೆಂಬ ಅದರ ಎರಡೂ ಪಾರ್ಶ್ವಗಳ ಸರ್ವಾಂಗೀಣ ಸುಖಸ್ವಾಸ್ಥ್ಯಗಳ ಕಡೆಗೆ ಕಣ್ಣಿಟ್ಟು ಕಾಲೋಚಿತ ಉಪದೇಶಗಳನ್ನು ಕೊಟ್ಟು ಕಾಪಾಡುವದು, ಮುಂದಾಳುಗಳ ಅಪರಿಹಾರ್ಯವಾದ ಕರ್ತವ್ಯವು.

ಮಾನವನ ಇತಿಹಾಸವು ಈ ಮಾತಿಗೆ ಸ[...] ಜಗಳ, ಕಾಳಗ, ಮೇಲಾಟಗಳಿಂದಲೇ [...] ಗುಡುಗಾಡುತ್ತಿದ್ದರೂ, ಅಲ್ಲಲ್ಲಿ ಶಾಂತಿಯ [...] ಸಮೃದ್ಧವಾಗಿ ಸುರಿದುದುಂಟು. ಮತ್ತು [...] ಸಂದರ್ಭಗಳನ್ನೆಲ್ಲ ವಿಶ್ಲೇಷಿಸಿ ನೋಡಿದರೆ, [...] ಮಾತಿನ ಮನವರಿಕೆಯಾಗುವದು. ಗುಂಪು [...]ಗಳಲ್ಲಿ ಅನನ್ಯಶ್ರದ್ಧೆಯನ್ನಿಟ್ಟಿದುದು; ಮತ್ತು [...]ಗಳು, ಗುಂಪಿನ ಹಿತಕ್ಕಾಗಿ ಬಲಿದಾನ[...] ಮಾಡಲು ಸಿದ್ಧರಾದುದು.

ಆದರೆ ಅದೇ ಮುಂದಾಳುಗಳಿಗೆ ಸಮಾ[...] ಸ್ವಾರ್ಥದ ಮೇಲೆ ಹೆಚ್ಚು ಕಣ್ಣಿದ್ದರೆ? ಸು[...] ಸೌಖ್ಯಕ್ಕಿಂತ ಅಧಿಕಾರ, ಪ್ರತಿಷ್ಠೆಗಳ ಕಡೆಗೆ [...] ವಿದ್ದರೆ? ಅಲ್ಲಿಗೆ ಸಮಾಜ ಶರೀರದ ಮಿದು[ಳಿನ ಕೇಂದ್ರ]ಗಳು ಕೆಟ್ಟ ಹಾಗಾಯಿತು! ಪರಿಣಾಮವೆಂದರೆ [...] ಆಗಬಹುದು; ಪಕ್ಷಾಘಾತ (ಅರ್ಧಾಂಗವಾ[ತ]...) ಬಹುದು. ಆದರಿಂದ ಸಮಾಜದ ವಿವಿಧಾಂ[ಗಗಳ ...]ಣೆಯೂ ಆರೈಕೆಯೂ ಚನ್ನಾಗಿ ಸಾಗುವದಿಲ್ಲ [...] ದಾದರೊಂದು ಪಾರ್ಶ್ವವು ಉಪವಾಸ ಬೀಳಹತ್ತಿ [...] ರಥವು ಒಗ್ಗಾಲಿಯಾಗುವದು. ಸ್ವಾಮಿ [...]ರೆನ್ನುವಂತೆ, ಸಮಾಜ ಹಿತದ ನೀತಿಯನ್ನು [...] ಕೈಬಿಟ್ಟೊಡನೆ, ಸಮಾಜದಲ್ಲಿ ಕಾಮ-ವಿಷಯ[...] ದೇವತೆಗಳಾಗಿ, ದುಡ್ಡು ಪೂಜಾರಿಯಾಗಿ, [...] ಬಲಾತ್ಕಾರಗಳು ಹಬ್ಬಗಳಾಗಿ, ಮನುಷ್ಯನ [...] ಯಜ್ಞಪಶುವಾಗಿ ಮಾಡಲಾಗುತ್ತವೆ.'

ಒಂದು ಉದಾಹರಣೆಯನ್ನು ತೆಗೆದುಕೊಳ್ಳುವಾ. ಬಹುಶಃ ಪ್ರಪಂಚದ ಎಲ್ಲ ಭಾಗಗಳ ಮಾನವಸಮಾಜದ ಬೆಳಗೆಯ ಕಡೆಗೆ ನಾವು ಸೂಕ್ಷ್ಮವಾಗಿ ನೋಡಿದರೆ, 'ಮನೆಯಲ್ಲಿ ಹೆಣ್ಣು; ಮನೆಯ ಹೊರಗೆ ಗಂಡು' ಎಂಬ ಮಾತು ಸ್ಪಷ್ಟವಾಗಿ ಎದ್ದು ಕಾಣದಿರದು. ಹೊರಗಿನ ವೇಷ-ಭೂಷಣಗಳೂ, ನೀತಿ-ಕಾಯದೆಗಳೂ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತ ನಡೆದಿದ್ದರೂ, 'ಸಾಹಸದಿಂದ ದುಡಿಯುವವ ಗಂಡಸು; ಪ್ರೇಮದಿಂದ ಸಾಕುವವಳು ಹೆಂಗಸು' ಎಂಬ ಮಾತಿಗೆ ವಿಶೇಷ ವ್ಯತ್ಯಯ ಬರಲೇ ಇಲ್ಲ. 'ಸ್ತ್ರೀಯು ಭಾವಪ್ರಧಾನಳಿದ್ದುದೂ, ಪುರುಷನು ಕಲ್ಪನಾ ಪ್ರಧಾನನಿದ್ದುದೂ ಇದಕ್ಕೆ ಕಾರಣ' ವೆಂದು ದೊಡ್ಡ ದೊಡ್ಡ ಮನೋವಿಜ್ಞಾನಿಗಳ ಮತವಿದೆ. 'Mother's urge is the strongest of human urges' ಎಂದು ಡಾರ್ವಿನ್ನನು ಅನ್ನುತ್ತಾನೆ. ಸರಿ. ವನಿತೆಯರಲ್ಲಿಯ ಈ ಪ್ರಕೃತಿಯನ್ನು ಕಂಡೇ ಹಿಂದಿನ ಸಮಾಜವಿಜ್ಞಾನಿಗಳು ಅವರನ್ನು ಗೃಹದೇವತೆಯರನ್ನಾಗಿ ಮಾಡಿದರು. ಮುಂದಾಳುಗಳು ಮಾತೃತ್ವಕ್ಕೆ ಅನ್ಯಾದೃಶವಾದ ಗೌರವವನ್ನು ಕೊಟ್ಟರು. 'ಮಾತೃದೇವೋ ಭವ' ಎಂದರು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂದರು. ಸಮಸ್ತ ಜಗತ್ತಿನಿಂದ ವಂದಿಸಿಕೊಳ್ಳುವ ಸನ್ಯಾಸಿಯು ತಾಯಿಗೆ ಮಾತ್ರ ತಾನೇ ಸಾಷ್ಟಾಂಗ ಹಾಕಬೇಕು' ಎಂದು ಶಾಸ್ತ್ರ ವಿಧಿಸಿದರು. ಇವೆಲ್ಲವುಗಳಿಂದ ಹುರಿದುಂಬಿದ ವನಿತೆಯ ಮಾತೃಹೃದಯವು ಉಕ್ಕೇರಿ, ಮನೆ ಮಾಡಿಕೊಂಡು ಮಕ್ಕಳನ್ನು ಅಕ್ಕರೆಯಿಂದ ಕಾಯಲು ಅಣಿಯಾಯಿತು. ಬಿಸಿಲು-ಬಿರುಗಾಳಿಗಳಿಂದ ತತ್ತರಿಸುತ್ತಿರುವ ಮಾನವಶಿಶುವಿಗೆ ತಾಯಿಗರುಳಿನ ಬೆಚ್ಚಗಿನ ನೆಲೆ ಸಿಕ್ಕಿತು. ಮನೆಯನ್ನು ಸಿಂಗರಿಸಲು ಕಲೆಗಳು ಹುಟ್ಟಿದವು; ಮಕ್ಕಳನ್ನು ಆಡಿಸಲು, ಹಾಡಿ ಮಲಗಿಸಲು ಕಾವ್ಯವು ಹುಟ್ಟಿತು; ಪರಿವಾರವನ್ನು ಪೋಷಿಸಲಿಕ್ಕೆ ಉದ್ಯೋಗ ವ್ಯವಸಾಯಗಳು ಹುಟ್ಟಿದವು. ಹೀಗೆ ತಾಯಿಯಿಂದ ಆದಿಸಮಾಜದ ಬುನಾದಿ ಇಡಲ್ಪಟ್ಟಿತು. 'Through-out the whole course of human civilization we see men following women and taking up their avocations.' ಅಂದರೆ ಸಕಲ ವ್ಯವಸಾಯಗಳಲ್ಲೂ ಗಂಡಸರ ಆದಿಗುರು ಹೆಂಗಸೇ ಎಂದು ಹ್ಯಾವ್‌ಲೊಕ್ ಎಲಿಸ್‌ರು ಅನ್ನುತ್ತಾರೆ. ಅಂತೂ ಮುಂದಾಳುಗಳು ಸ್ತ್ರೀಗೆ ಸಲ್ಲಿಸುತ್ತಿದ್ದ ಮಾನವು ಅನ್ವರ್ಥಕವೂ, ಹೃತ್ಪೂರ್ವಕವೂ ಆಗಿದ್ದಿತು. ಅದರಿಂದ ಸ್ತ್ರೀಯು ತೃಪ್ತಳಾಗಿ ಮನೆಹಿಡಿದು ಕೂತಳು. ಗಂಡಸು ಮಾಡಿದ ನೀತಿ-ನಿಯಮಗಳಿಗೆ ಮಾತೃಭಾವದಿಂದ ಒಪ್ಪಿ ನಡೆದಳು. ಸಮಾಜವು ಸುಖಿಯಾಗಿತ್ತು; ಪ್ರಗಮನಶೀಲವಾಗಿತ್ತು. ರಾಜ್ಯ—ಧರ್ಮ—ಸಮಾಜಗಳ ಮೇಲು ಮೇಲಿನ ಒಡೆಯ ಗಂಡಸೇ ಎಂದು ತೋರಿದರೂ, ಒಳಗಿನ ಸೂತ್ರಧಾರಿಯು ವನಿತೆಯೇ ಆಗಿದ್ದಳು.

ಆದರೆ! .... ಮನುಷ್ಯನಲ್ಲಿ ಒಂದು ದುರ್ಗುಣವಿದೆ. ಯಾವದೊಂದು ಅಧಿಕಾರವನ್ನಾಗಲಿ, ವಸ್ತುವನ್ನಾಗಲಿ ಅವನ ವಶದಲ್ಲಿ ಕೆಲವು ಸಮಯ ಬಿಟ್ಟರೆ, ಅವನಿಗೆ ಅದರಲ್ಲಿ ಆತ್ಮೀಯತೆ, ಸ್ವಾರ್ಥವು ಹುಟ್ಟುತ್ತದೆ. ನಂತರ ಆ ಅಧಿಕಾರವನ್ನು ಬೇರೊಬ್ಬರಿಗೆ ಬಿಟ್ಟುಕೊಡಲಿಕ್ಕೆ ಅವನ ಮನವು ಒಪ್ಪುವದಿಲ್ಲ. ಅಲ್ಲದೆ ಅದನ್ನು ತನಗೆ ನಿರಂತರವೂ ದಕ್ಕುವಂತೆ ಮಾಡಲು ಅವನು ಹಲವು ದಾರಿಗಳನ್ನು ಹುಡುಕುವನು; ಕೆಲವು ಸಲ ಅದನ್ನು ಸಾಧಿಸುವಲ್ಲಿ ರಕ್ತಪಾತಕ್ಕೂ ಹಿಂಜರಿಯನು. ತನ್ನ ಅಧಿಕಾರದೊಳಗಿದ್ದ ವ್ಯಕ್ತಿಗಳ ಬಗೆಗೆಡಿಸುವನು; ಕಂಗೆಡಿಸುವನು. ಅವರಿಗೆ ಅಜ್ಞಾನದ ಸವಿ ಹತ್ತುವಂತೆ ಮಾಡಿ, ಸ್ವಾತಂತ್ರ್ಯದ ಅಪಾಯಗಳನ್ನು ರಾವುಗನ್ನಡಿಯಲ್ಲಿ ಹಿಡಿದು ತೋರಿಸುವನು. ಅಂದ ಮೇಲೆ ಅವನ ಮಾತೃಭಕ್ತಿಯೊಂದು ಬಕಧ್ಯಾನವಾಗಿ, ಅವನ ಜಾಲದಲ್ಲಿ ಸ್ವತ್ವವನ್ನು ಕಳೆದುಕೊಂಡ ಹೆಣ್ಣಿನ ಮಾತೃಪ್ರೇಮವು, ಬರಿ ತಾಮಸಿಕ ಮೋಹದ ರೂಪ ಹೊಂದುವದರಲ್ಲಿ ಏನಾಶ್ಚರ್ಯ!

ಶ್ರಮವಿಭಜನದೊಡನೆ ಸ್ವಭಾವವಿಶ್ಲೇಷಣದ ನೆಲೆಗಟ್ಟಿನ ಮೇಲೆ ರಚಿಸಲ್ಪಟ್ಟ ಸಮಾಜದ ಗೋಪುರಕ್ಕೆ ಸ್ವಾರ್ಥ, ಪ್ರತಿಷ್ಠೆ, ಸೊಕ್ಕುಗಳ ಗೆದ್ದಲು ಹತ್ತಲಾರಂಭಿಸಿದರೆ, ಗೋಪುರದ ಗತಿ ಏನಾಗಬೇಕು? ಹೊರಗಿನ ಹೆಗ್ಗಣ-ಹಾವುಗಳ ವಿಷನಾಟ್ಯಕ್ಕೆ, ಅದೊಂದು ರಂಗಸ್ಥಲವೇ ಆಗಬಹುದು! ಸಮಾಜದ ಶ್ರೇಷ್ಠ(?) ರು ತಮ್ಮ ಕಾಲ ಮೇಲೆ ತಾವೇ ಕೊಡಲಿ ಹಾಕಿಕೊಂಡ ರೀತಿಯೂ ಇದೇ ಬಗೆಯದಾಗಿದೆ. ಮೊದಲು ಜಗತ್ತು ದೊಡ್ಡದಿತ್ತು; ಜನಸಂಖ್ಯೆ ಸಣ್ಣದಿತ್ತು. ಜೀವನದ ಆವಶ್ಯಕತೆಗಳು ಕಡಿಮೆ ಇದ್ದವು. ಅವುಗಳನ್ನು ಸಾಧಿಸಲು ಅಡ್ಡಿ ಬರದಷ್ಟು, ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳು ಸಡಿಲಾಗಿದ್ದವು. ಅದರೊಡನೆ ಹೆಣ್ಣೂ, ಗಂಡೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಕೈವಾಡದಿಂದ ಸುಖ-ಸೌಕರ್ಯಗಳನ್ನು ಕಲ್ಪಿಸಿಕೊಂಡು ಪರಸ್ಪರವಾಗಿ ಅಣಿಗೊಂಡಿದ್ದವು. ವಿದ್ಯೆ

ಅಧಿಕಾರ, ದುಡ್ಡು, ಮಾನಗಳು ಸಮಾಜದ ಎರಡು ರೆಕ್ಕೆಗಳಿಗೂ ಸಮವಾಗಿ, ಸಮಂಜಸವಾಗಿ ಸಿಕ್ಕು, ಎಲ್ಲೆಡೆಗೂ ನೆಮ್ಮದಿ ನೆಲೆಗೊಂಡಿತ್ತು. ವಿಜ್ಞಾನಿಗಳೂ, ತತ್ವವೇತ್ತರೂ, ಕಡುಗಲಿಗಳೂ, ಸಾಧುಗಳೂ ಗಂಡಸರಲ್ಲಿಯಷ್ಟೇ ಹೆಂಗಸರಲ್ಲಿಯೂ ಹುಟ್ಟಿದರು. ಸಮಾಜಶರೀರವು ಸ್ವಾಸ್ಥ್ಯಪೂರಿತವಾಗಿ ತೂಕತಪ್ಪದೆ ನಡೆದು ತನ್ನ ಶಾಂತಿಗಾನದಿಂದ, ಸುರರನ್ನು ಮರುಳುಗೊಳಿಸುವಂತಾಯಿತು.

ಆದರೆ ರವೀಂದ್ರನಾಥ ಠಾಕೂರರು ಅನ್ನುವಂತೆ

Regarding freedom as irresponsibility & license he (man) footed the fierce path of degradation and destruction. The benefit of his activities has been out-weighed by their mischief.

"ಸ್ವಾತಂತ್ರ್ಯವೆಂದರೆ ಹೊಣೆಗೇಡಿತನವೆಂದು ತಿಳಿದ ಗಂಡು, ಸಮಾಜವನ್ನು ನರಕಕ್ಕೆ ಎಳೆಯಿತು. ಅವನಿಂದಾದ ಸಮಾಜ ಹಿತವು ಅವನ ಹಾರಾಟಗಳ ಭಾರದಿಂದ ನುಗ್ಗುನುಗ್ಗಾಯಿತು."

ಸಮಾಜದ ಸಮರಸ ಸಂಗೀತದಲ್ಲಿ ಗಂಡಸು ಸ್ವೈರ ರೀತಿಯಲ್ಲಿ ತನ್ನ ಅಪಶ್ರುತಿಯನ್ನು ಸೇರಿಸಿದ. ಬಹು ಶತಮಾನಗಳಿಂದ ಮೈಯುಂಡ ಹೊಣೆಗೇಡಿತನದ ಮದ್ಯದಿಂದ ಮೈಮರೆತು, ಮನೆಯ ತಾಯಿಯನ್ನು 'ನಾರೀ ಪ್ರತ್ಯಕ್ಷ ರಾಕ್ಷಸೀ' ಎಂದು ಗಂಡಸು ಹೇಳಲಾರಂಭಿಸಿದ; 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಅವಳನ್ನು ದೊಡ್ಡಿಯಲ್ಲಿ ನೂಕಿ ಬಾಗಿಲು ಮುಚ್ಚಿದ; 'ನಾರಿಯೆಂದರೆ ನರಕಕ್ಕೆ ದಾರಿ,' 'ಸತಿಗೆ ಸ್ವತಂತ್ರವ ಕೊಡದೀರಣ್ಣ' ಎಂದು ಹಗಲಿರುಳು ಹಾಡಿ ಮೀಸೆ ಹುರಿಗೊಳಿಸಿದ.

ಆಯಿತು, ತನ್ನ ಗುಣಗಳ ಕಮನೀಯತೆಯಿಂದ-ಪ್ರೇಮದಿಂದ ಮನೆಗೆ ಕಾಂತಿಯನ್ನು ತಂದ ಕಾಂತೆಯು ಅಂದಿನಿಂದ ಬರಿ ಗಂಡಿನ ಭೋಗಕ್ಕೆ ಬಲಿಬೀಳುವ ಕಾಮಿನಿಯಾದಳು. ಮಹಾಪಂಡಿತರನ್ನು ಕೂಡ ಬಟ್ಟುಕಚ್ಚಿಸುವ ಗಣಿತ, ವೇದಾಂತ, ರಾಜನೀತಿಗಳ ವಿದುಷಿಯು, ರಣಾಂಗಣದ ಸಿಂಹಿಣಿಯು, ಅಬಲೆಯೆನಿಸಿದಳು. ಅಜ್ಜಿಯಾಗಿ ಬಾಳಿ ಬೇರುನಾರು, ಸೊಪ್ಪುತೊಪ್ಪಲುಗಳನ್ನರೆದು ಕಟ್ಟಿ ಬೇನಿಗರನ್ನು ಆಶೀರ್ವದಿಸುವ ಮಾನಿನಿಯು, ಹರೆಯದ ಹೊಸ್ತಿಲಲ್ಲಿಯೇ ಕಣ್ಣುಮುಚ್ಚುವ ಕ್ರಿಮಿಯಾದಳು. ಕಸೂತಿ, ನೇಯಿಗೆ, ಹೆಣಿಗೆ, ಕೈಗಾರಿಕೆಗಳಿಂದ ಬಡತನದ ಗೊಂಡಾರಣ್ಯದಲ್ಲಿ ಕೂಡ ದುಡ್ಡಿನ ಸೆಲೆಯಾಡಿಸಬಲ್ಲ ಕಲಾವತಿಯು, ಸಹಧರ್ಮಿಣಿಯು, ಗೃಹಿಣಿಯು ಹೊಟ್ಟೆ ತುತ್ತಿಗಾಗಿ ಗಂಡಸಿನ ಎಂಜಲುಮೋರೆಯನ್ನ ತೊತ್ತಾದಳು; ಗಂಡಸಿಗೆ ಭಾರವೆನಿಸಿದಳು.

ಏಕೆಂದರೆ ಸ್ತ್ರೀಗೆ, ಅಡಿಗೆಮಾಡುವದು, ಮಕ್ಕಳ ಸುವದು, ಇವೆರಡರ ಹೊರತು ಬೇರೆ ವಿಷ ಗೊತ್ತಿದ್ದ ಸ್ವಲ್ಪಭಾಗವೂ ಈಗಿನ ಶಿಕ್ಷಣ ಹೋಗುತ್ತಿದೆ. ಸೊಕ್ಕಿನ ಗಂಡಸಿಗೆ, ಸ್ತ್ರೀಯ ವತಿಯ ಮಾಡಿ, ಕೈಗಾರಿಕೆಗಳನ್ನು ಕಲಿಸಿ ಹಚ್ಚುವದೆಂದರೆ ಅಧರ್ಮವೆನಿಸುವದು. ಹೆಂಗ ಕಲಾ-ಕೌಶಲ್ಯ, ಕೈಗಾರಿಕೆಗಳು ಕೈಗೂಡ ವೆಂದು, ಆತ್ಮವಿಶ್ವಾಸವನ್ನು ಕಳೆದುಕೊಂಡಿ ಪುರುಷ ಸಮಾಜವು 'ಧನಾರ್ಜನೆಗೆ ಸ್ತ್ರೀಯ ಪಡುವ ಆಗತ್ಯವೇ ಇಲ್ಲ; ನಾವೇ ಗಳಿಸಿ ತ ಜಂಭ ಬಡೆದುದರ ಪರಿಣಾಮವೂ ಅಂತೂ ಗಂಡಸು ಗಳಿಸಿದ್ದು ಸಾಲುವದಿಲ್ಲ. ವಂತಿಲ್ಲ. ಹೀಗಾಗಿ ಸಮಾಜ ಶರೀರಕ್ಕೆ ತಗಲಿ ವಾತವು ಸಮಾಜವನ್ನು ಮರಣೋನ್ಮುಖ ಬಿಟ್ಟಿದೆ. ಮುಂದೆ ಗತಿಯೇನೆಂದು ತಿಳಿಯ ಮುಂದಾಳುಗಳೆಲ್ಲ ದಿಙ್ಮೂಢರಾಗಿದ್ದಾರೆ.

ಇದರ ಪರಿಣಾಮವಾಗಿ ಸಮಾಜಕ್ಕೆ, ಯಿಂದಾದ ಕೆಡಕು ಅಷ್ಟಿಷ್ಟಲ್ಲ. ದೇಶದಲ್ಲಿ ವಾಗಿದ್ದಾಗ, ಕಲಾಕೌಶಲ್ಯಕ್ಕೆ ತಕ್ಕ ರಾಜರಿಂದ ಸಿಗುತ್ತಿದ್ದಾಗ, ಸ್ತ್ರೀಯರ ಅಜ್ಞಾ ಪರಿಣಾಮವು ಅಷ್ಟು ಒಡೆದು ಕಾಣುತ್ತಿ ಈಗ ದುಡ್ಡಿನ ಬರಗಾಲ; ಮಳೆಬೆಳೆಗಳ ಇದ್ದ ದುಡ್ಡಿನ ವ್ಯಸ್ತ ವಿಭಜನ; ಈ ಸಮಾಜದ ಜೀವವು ತತ್ತರಿಸುತ್ತಿರು ಕವಡೆಗೂ ಬೆಲೆಯುಂಟು. ನೂರಾರು ಪುರುಷ ವರ್ಚಸ್ವದ ನೀತಿಯನ್ನು ಸಮಾಜ ಗಂಡಸು ಇಂದು ದುಡಿದುಡಿದು ಹೆಂ ತುಂಡು ರೊಟ್ಟಿ ಸಿಗುವದು ಕಷ್ಟ. ಸರಿ ದೈನಿಕ ಆಯವು ಒಂದಾಣೆಯಂತೆ! ವೈಯಕ್ತಿಕ ಆಯವು ೨ ರೂಪಾಯಿ! ೩ ರೂಪಾಯಿ! ಭಾರತೀಯರ ಜನಸಂಖ್ಯೆ ರಾಜ್ಯವು ಪರಕೀಯರ ಕೈಯಲ್ಲಿ! ಲೋಕಕಲ್ಯಾಣಕ್ಕೆ ವೆಚ್ಚವಾಗಬೇಕಾದ ಗಳಲ್ಲಿಯೋ, ಅಸೆಂಬ್ಲಿಗಳಲ್ಲಿಯೋ,

ಅಪ್ಪಣೆ ಪಡೆಯಬೇಕಾಗುತ್ತದೆ. ಸಾಲದ್ದಕ್ಕೆ ಶಾಲೆ—ಕಾಲೇಜಗಳ ವಿದ್ಯೆಯಿಂದ ನಿರುದ್ಯೋಗವು ಸುಂಕುರೋಗದಂತೆ ಹಬ್ಬುತ್ತಿದೆ. ವಿದೇಶೀಯರ ಯಾಂತ್ರಿಕ ಮೇಲಾಟದಲ್ಲಿ ಬಡವರ ಕೈಗಾರಿಕೆಗಳ ಸೊಂಟ ಮುರಿಯುತ್ತಿದೆ. ಬೆಳೆಯ ಬೆಲೆ ಕಡಿಮೆ; ತೆರಿಗೆ ಹೆಚ್ಚು; ಅಲ್ಲದೆ ಸಾಲ ಬೇರೆ. ಹಿಂದುಸ್ತಾನದ ರೈತರ ಸಾಲ ಸುಮಾರು ೩೦೦ ಕೋಟಿ ರೂಪಾಯಿಯಂತೆ! ಒಂದು ಎಕರೆ ಹೊಲವಿದ್ದವನಿಗೆ ೧೫೦ ರೂ. ಸಾಲವಂತೆ! ಹೀಗಿರುವಾಗ ಗಂಡಸು ತಾನು ಮಾಡಿದ ಕರ್ಮಫಲನನ್ನು ಉಪಭೋಗಿಸುತ್ತಿದ್ದಾನೆಂದು ಅನಿಸದಿರದು.

ಆದರೆ ಕಾರಣವನ್ನು ಶೋಧಿಸಿದ ಮೇಲೆ ಚಿಕಿತ್ಸೆಗೆ ಏಕೆ ತಡವಾಗಬೇಕು! ವಸ್ತುತಃ ಕಲಾಕೌಶಲ್ಯ, ಉದ್ಯೋಗ, ಕೈಗಾರಿಕೆಗಳ ಮೂಲ ಶೋಧಕಳು ಸ್ತ್ರೀಯೆ. 'The mother is the first poet, priest, food bringer, weaver, potter, artist, linguist. Jack of all trades & founder of Society' ಎಂದು ಜೇಂಬರ್ಲೇನನೆಂಬ ಇತಿಹಾಸಜ್ಞನೆನ್ನುತ್ತಾನೆ. ಅಂದರೆ ತಾಯಿಯೇ ಪ್ರಥಮ ಕವಯಿತ್ರಿ, ಪೂಜಾರಿಣಿ, ಆಹಾರಸಂಪಾದಿಕೆ, ನೇಕಾರಳು, ಕುಂಬಾರಳು, ಕಲಾವತಿ, ಭಾಷಾವಿದಳು, ಸಕಲೋದ್ಯಮ ತಜ್ಞೆ ಮತ್ತು ಸಮಾಜದ ಮೂಲ ಸಂಸ್ಥಾಪಕಳು. ಹೀಗಿರಲು ಗುರುವಿಗೇ ತನ್ನ ಕಲೆಗಳಲ್ಲಿ ಅಧಿಕಾರವಿಲ್ಲವೇ ?.... ಮಹಾತ್ಮಾಜಿಯವರ ಪುಣ್ಯಪ್ರಭಾವದಿಂದ, ಭಾರತೀಯರಲ್ಲಿ ಗುಡಿಸಲಿನ ಒಡವೆಗಳಲ್ಲಿ ರುಚಿ ಹುಟ್ಟುತ್ತಿದೆ. ಈ ಸುಸಂಧಿಯನ್ನು ಕಳೆದುಕೊಳ್ಳಬಾರದು. ಜಪಾನಿನಲ್ಲಿ ಸುಮಾರು ೩ ಲಕ್ಷ ಹೆಂಣುಹುಡುಗಿಯರು ಮನೆಯಲ್ಲೇ ಕುಳಿತು ಧನೋತ್ಪಾದಕ ವೃತ್ತಿಗಳನ್ನು ಮಾಡುತ್ತಿದ್ದಾರಂತೆ! ಪ್ರತಿ ವ್ಯಕ್ತಿಗೆ ಜಪಾನಿನಲ್ಲಿ ಸರಾಸರಿ ದೈನಿಕ ಆಯವು ೪॥ ಆಣೆ. ಆದರೆ ಭಾರತೀಯರ ಆಯವು ಕೇವಲ ಒಂದಾಣೆಯಿರುವಾಗ ನಾವು ಸುಮ್ಮನೆ ಕುಳ್ಳಿರಬಹುದೇ? ಮಾನವೀಯ ಮೂಲಧನ—Human Capitalದಲ್ಲಿ ಅರ್ಧಕ್ಕರ್ಧ ನಿರರ್ಥಕವಾಗಿ ಹೋಗುತ್ತಿರುವದು. ದೇಶಕ್ಕೆ ಇದೆಂಥ ಹಾನಿಕಾರಕ ವಿಷಯ!

ಒಂದೇ ಮಾತಿನಲ್ಲಿ ಹೇಳುವದೆಂದರೆ, ಸ್ತ್ರೀಯರು ಪುನಃ ಕಲಾಕೋವಿದೆಯರಾಗಿ, ದೇಶದ ಸಂಪತ್ತನ್ನು ಹೆಚ್ಚಿಸಿ, ಸಮಾಜಕ್ಕೆ ಬಡಿದ ಅರ್ಧಾಂಗವಾಯುವನ್ನು ಉಪಚರಿಸಿ, ನವಚೈತನ್ಯವನ್ನು ಅದರ ಅಂಗಾಂಗಗಳಲ್ಲಿ ಊದಬೇಕು.

ನೀಲದುಂಗುರ

ಗೋಪಾಲನು ಬಿ. ಎ. ಮೊದಲನೆ ತರಗತಿಯಲ್ಲಿ ಪಾಸಾದವ. ಸಿರಿವಂತರ ...
ಆದರೆ ಮನಕ್ಕೆ ಒಪ್ಪುವ ಮನದನ್ನೆಯಿಲ್ಲದಿದ್ದರೆ ಆ ಸಿರಿಯನ್ನೇನು ಸುಡಬೇಕೆ!
ಕಿರಿಯರ ಬಯಕೆಗೆ ತಕ್ಕ ಹಿರಿಯರ ಹರಕೆ ಸಿಕ್ಕೀತೆಂದು ಮಾತ್ರ ನಂಬುವ...
ಭಾರತದಲ್ಲಿ. ಗೋಪಾಲನು ಪ್ರಿಯೆಯ ಸಂಪಾದನಕ್ಕಾಗಿ ಪ್ರಿಯಪಿತನಿಂದ ...
ನಾದ. ದುಡ್ಡಿನಿಂದ ಕಣ್ಣು ಕುರುಡಾದವರಿಗೆ ಕಲಾ—ಪ್ರೇಮಗಳು ಕಂಗೊಳಿಸಲಾ...
ಆದರೆ ನೈಸರ್ಗಿಕವಾದ ಕಲಾ-ಪ್ರೇಮಗಳ ಅನಿರುದ್ಧಪ್ರವಾಹವನ್ನು ದುಡ್ಡಿನ ...
ತಡೆಯಲಿಲ್ಲ. ಗೋಪಾಲ—ಸರಲೆಯರು ತಮ್ಮ ಕಲೆ ಮತ್ತು ಪ್ರೇಮದಿಂದ ...
ನಾಡಿಗೆ ಬೆಳಕು ತಂದು ಬೆಳಗಿದರು.

.. .. ..

ಶ್ರೀ. ದತ್ತಾತ್ರೇಯ ಕೆರೂರ

"ಈ ಫೋಟೊ ನಿಮ್ಮದೇ ಏನು?"

"ಹೌದು ನನ್ನ ಮೋರೆಯ ಗುರುತು ಆದರಲ್ಲಿ ಸಿಕ್ಕುವದಿಲ್ಲವೇನು ತಮಗೆ?"

"ಹಾಗಲ್ಲ, ಇದನ್ನು ನೋಡಿ ಈಗ ನಿಮ್ಮನ್ನು ನೋಡಿದರೆ ನೀವು ಈಗೀಗ ಸಲ್ಲೇಖನವ್ರತ ಕೈಕೊಂಡಿರುವಂತೆ ಕಾಣಿಸುತ್ತದೆ."

"ನಾನೇನು ಜೈನನಲ್ಲ. ಆದರೆ ಮನೆಯೊಳಗೆ ಅನಿಷ್ಟವಾದ ಮುಖಗಳು ಬೇಕಾದಷ್ಟಿರುವದರಿಂದ, ಅವುಗಳ ದಿನಂಪ್ರತಿ ದರ್ಶನದ ಪರಿಣಾಮವಾಗಿ ನಾನು ತಿಂದ ಅನ್ನ ನನ್ನ ಮೈಗೆ ಹತ್ತಲೊಲ್ಲದಾಗಿದೆ. ಆದ್ದರಿಂದ ಸ್ವಲ್ಪ ಕೃಶವಾಗಿರಬಹುದು ಈಗ."

"ಮತ್ತೆ ನಿಮ್ಮ ತಂದೆಯವರಿಗೆ ಸುಮಾರು ಮೂರು ಸಾವಿರದಷ್ಟು ಉತ್ಪನ್ನ ಆದೆ ಅಂತ ಹೇಳುತ್ತೀರಿ; ನೀವೊಬ್ಬರೇ ಬೇರೆ ಇರುವಂತೆ ವ್ಯವಸ್ಥೆಮಾಡಿಕೊಳ್ಳಬೇಕು. ನಿಮ್ಮ ಜೀವದ ಸಲುವಾಗಿ ಇಷ್ಟು ಸಹ ಮಾಡಲಿಕ್ಕಿಲ್ಲವೇನು?"

"ನಮ್ಮ ತೊಡಕು ನಮಗೆ ಬಿಟ್ಟು ಬಿಡಿರಿ ಡೈರೆಕ್ಟರ ಸಾಹೇಬ. ಈಗ ನಾನು ನಿಮ್ಮ ಫಿಲ್ಮ ಕಂಪನಿಯನ್ನು ಸೇರಬೇಕೆಂತ ಬಂದಿದ್ದೇನೆ. ಆದರ ವಿಷಯವಾಗಿ ಸ್ವಲ್ಪ ಮಾತನಾಡಿರಿ. ನೀವು ಇಲ್ಲಿ ನನಗೆ ಪ್ರವೇಶ ದೊರಕಿಸಿ ಕೊಟ್ಟರೆ ನನ್ನ ಕಥೆಯನ್ನು ನಾನು ಹಿಂದಿನಿಂದ ಹೇಳುವೆನು."

"ಬರುವಾಗ ನಿಮ್ಮ ತಂದೆಯವರನ್ನು ಕೇಳಿ ಬಂದಿರುವಿರೊ ಅಥವಾ ಹಾಗೇ ಓಡಿ ಬಂದಿರುವಿರೊ?"

"ಓಡಿ ಬರಲಿಕ್ಕೆ ನಾನೇನೂ ತುಡುಗು ಮಾಡಿಲ್ಲ. ನಾನು ಪ್ರಬುದ್ಧ ಇದ್ದೀನಿ; ವಿಚಾರ ಮಾಡಿ ನೋಡಿದೆ, ಮನೆಯೊಳಗೆ ಸುಖ ಸಿಗುವದಿಲ್ಲವೆಂದು ಕಂಡು ಬ... ರಿಂದ ನನ್ನ ಪಾಡು ನಾನು ಕಂಡುಕೊಳ್ಳ... ಹವ್ಯಾಸದಿಂದ ಮನೆ ಬಿಟ್ಟು ಹೊರಬಿದ್ದೆ. ... ವಿಷಯಕ್ಕೆ ಯಾರಿಗೂ ಚಿಂತೆ ತಟ್ಟದಂತೆ ವ್ಯವ... ಬಂದಿರುವೆ. ಹೇಗಾದರೂ ಬಿ. ಎ. ಆಗಿದೆ, ... ದೈವ ಪರೀಕ್ಷೆಮಾಡಿ ಅಂತ ಹೊರಬಿದ್ದಿದ್ದೇನೆ."

"ನೀವು ಬಿ. ಎ. ಇದ್ದೀರೇನು! ಇದನ್ನು ... ಎಲ್ಲಿಯೂ ತಿಳಿಸಿಲ್ಲವಲ್ಲ. ಕುಳಿತುಕೊಳ್ಳಿರಿ. ಇಷ್ಟು ... ನಿಂತುಕೊಂಡೇ ಮಾತಾಡಿದಿರೇನು? ನೋ... ಹಂ! ಮತ್ತೇನಂದಿರಿ, ಚಿತ್ರಕಲೆಯೂ ಸ್ವಲ್ಪ... ವಾಗಿದೆ ಎಂದಿರಲ್ಲ. ಎಲ್ಲಿ, ನಿಮ್ಮ ಚಿತ್ರಗಳನ್ನು... ಸಿಲ್ಲವಲ್ಲ."

"ನಿಮ್ಮ ಕೈಯಲ್ಲಿಯ ನನ್ನ ಫೋಟೋ ನಾ... ಲಾರ್ಜ ಮಾಡಿದ್ದು."

"ಹಂ! ಚನ್ನಾಗಿದೆ ಎನ್ನಿರಿ. ಇರಲಿ, ... ಯವರಿಗೆ ನೀವಿಲ್ಲಿದ್ದದ್ದು ಗೊತ್ತಾದರೆ?"

"ನಿಮ್ಮ ಮನಸ್ಸಿನಲ್ಲಿ ನನ್ನನ್ನು ಇಟ್ಟು ಕೊಂ... ದರೆ ಬಿಟ್ಟುಬಿಡಿರಿ. ನಿಮ್ಮ ಭುವನೇಶ್ವರಿ ... ಭಾರತದಲ್ಲಿ ಏಕಮೇವ ಪ್ರಖ್ಯಾತ ಕಂಪನಿಯು ... ಪ್ರವೇಶ ದೊರೆತರೆ ನನ್ನ ಲೌಕಿಕವೂ ಸ್ವಲ್ಪ ... ಆಸೆಯಿಂದ ನಿಮ್ಮಲ್ಲಿ ಬೇಡಿ ಬಂದಿದ್ದೇನೆ ... ಏನೆಂಬುದನ್ನು ಹೇಳಿ ಬಿಡಿರಿ."

"ಸಿಟ್ಟಿಗೆದ್ದಿರೇನು ಮತ್ತೆ! ಈಗ ಸದ್ಯಕ್ಕೆ ... ನಮ್ಮಲ್ಲಿ ಅನುಕೂಲ ಮಾಡಿಕೊಡುವದಾಗುವದಿ...

ಎಂದಾದರೂ ಆಗತ್ಯವಿದ್ದಾಗ ನಿಮಗೆ ತಿಳಿಸುವೆವು.'' ಎಂದು ಡೈರೆಕ್ಟರ ಚಂದ್ರುರಾಯರು ಒಡನುಡಿದರು.

ಗೋಪಾಲನು ಡೈರೆಕ್ಟರರಿಗೆ ನಮಸ್ಕಾರ ಮಾಡಿ ಹೊರ ಹೊರಟನು. ಫಿಲ್ಮನಗರಿಯಿಂದ ಊರನ್ನು ಸೇರಿ ಒಂದು ಹಾಟೆಲಿನಲ್ಲಿ ಚಹವನ್ನು ಮುಗಿಸುವಷ್ಟರಲ್ಲಿ ಸಂಜೆಯ ಐದು ಗಂಟೆಯಾಗಿತ್ತು. ಯಜಮಾನನಿಗೆ ಚಹದ ರೊಕ್ಕವನ್ನು ಕೊಟ್ಟು ನೋಡಲು ಇವನ ಹತ್ತರ ಐದು ರೂಪಾಯಿಯ ಒಂದು ಹೊಸ ನೋಟು ಮತ್ತು ಮೇಲೆ ಸ್ವಲ್ಪ ಚಿಲ್ಲರೆ ನಾಣ್ಯಗಳಿದ್ದವು. ಫಿಲ್ಮ ಕಂಪನಿಯಲ್ಲಂತೂ ಪ್ರವೇಶ ದೊರೆಯಲಿಲ್ಲ. ಹತ್ತಿರ ಇದ್ದ ಹಣವು ಇನ್ನೊಂದು ವಾರದ ವರೆಗೆ ಹೇಗಾದರೂ ಸಾಕಾಗಬಹುದು. ಮುಂದೇನು ಗತಿ? ಮನೆಗಂತೂ ಮರಳಿ ಹೋಗುವದಿಲ್ಲವೆಂದು ಮಾಡಿಕೊಂಡಿದ್ದೇನೆ ಎಂದು ವಿಚಾರದಲ್ಲಿ ಮುಳುಗಿ ನಡೆದಿರಲು ಎದುರಿನಿಂದ ಬಂದ ಒಂದು ಬಸ್ಸು ಭೋಂ ಎಂದು ಅವನನ್ನೆಚ್ಚರಿಸಿತು. ಮೇಲೆ ಮುಖವೆತ್ತಿ ನೋಡುವದರೊಳಗಾಗಿ ಆ ಬಸ್ಸು ದಾಟಿಹೋಗಿತ್ತು. ಎದುರಿನ ಗೋಡೆಗೆ ಅಂಟಿಸಿದ "ಈ ದಿನ ಹಗಲು ೪|| ಗಂಟೆಗೆ 'ವಿಚಿತ್ರ ಜಗತ್ತು'" ಎಂಬ ನಾಟಕದ ಜಾಹೀರಾತು ಅವನ ದೃಷ್ಟಿಗೆ ಬಿತ್ತು. ಈ 'ವಿಚಿತ್ರ ಜಗತ್ತ'ನ್ನು ಆಡಿಸುವ ಯಜಮಾನನನ್ನಾದರೂ ಕಂಡು ಬರೋಣವೆಂದು ಥಿಏಟರದ ಹಾದಿ ಹಿಡಿದನು.

ಅಲ್ಲಿ ನಾಟಕ ಕಂಪನಿಯ ಮಾಲಕರಾದ ಕುಲಕರ್ಣಿ ರಾಮರಾಯರೊಡನೆ ಸಾಂಪ್ರದಾಯಿಕವಾದ ನಮಸ್ಕಾರ ಚಮತ್ಕಾರಾದಿಗಳು ಮುಗಿದ ಮೇಲೆ ಇವನು ತಾನು ಬಂದಿದ್ದ ಕಾರಣವನ್ನು ಹೇಳಿದನು.

"ನೀವೆನ್ನುವದೆಲ್ಲ ನಿಜ. ಆದರೆ ಇದುವರೆಗೆ ಎಲ್ಲಿಯೂ ನಿಮ್ಮ ಅಭಿನಯವನ್ನೇ ನೋಡದಿದ್ದ ನಾವು ನಿಮ್ಮನ್ನು ಒಮ್ಮೆಲೇ ಹೇಗೆ ನಮ್ಮ ಕಂಪನಿಯಲ್ಲಿ ಸೇರಿಸಿಕೊಳ್ಳಬಹುದು?'' ಎಂಬ ಆಕ್ಷೇಪವನ್ನೆತ್ತಿದರು.

"ಇದೊಂದೇ ನಿಮ್ಮ ಅಡ್ಡಿ ಇದ್ದರೆ ಇದಕ್ಕೆ ನಾನೊಂದು ಉಪಾಯವನ್ನು ಹೇಳಬಲ್ಲೆ. ಬರುವ ಶನಿವಾರ-ರವಿವಾರ ನೀವು ಮತ್ತೆ ಇದೇ ನಾಟಕವನ್ನಿಟ್ಟದ್ದೀರಿ. ಈ ನಾಟಕದಲ್ಲಿಯ ಅನಂತಪದ್ಮನಾಭಾಚಾರ್ಯರ ಪಾತ್ರವನ್ನು ನನಗೆ ಅಭಿನಯಿಸಲು ಬಿಟ್ಟು ಕೊಡಿರಿ. ನಂತರ ನನ್ನ ಅಭಿನಯದ ವಿಷಯವಾಗಿ ತಮಗೆ ಏನು ತೋಚುವದು ಹಾಗೂ ಸರ್ವಜನತಾಭಿಪ್ರಾಯವು ಹೇಗಿರುವದು ಎಂಬುದನ್ನು ವಿಚಾರಮಾಡಿ ಏನೆಂಬುದನ್ನು ನಿರ್ಧರಿಸಿರಿ.''

"ನೀವು ಬಿ. ಎ. ಇದ್ದೀರಿ. ನಿಮ್ಮ ಬೇಡಿಕೆಯು ಹುಡುಗಾಟಿಕೆತನದ್ದಿರದೆ ನ್ಯಾಯವಾದದ್ದಿದೆಯೆಂದು ನಂಬಿ ನಾನು ಒಪ್ಪುತ್ತೇನೆ. ಈ ನಾಟಕವು ಆದೊಂದೇ ಪಾತ್ರದ ಮೇಲೆ ನಿಂತಿದೆ. ನೀವು ಚನ್ನಾಗಿ ಅಭಿನಯಿಸಬೇಕು. ಈ ನಾಟಕವನ್ನು ನೀವು ಈ ಮೊದಲೆಲ್ಲಿಯಾದರೂ ಆಡಿದ್ದಿರೇನು?''

"ನಮ್ಮ ಕಾಲೇಜಿನ ಹೋದ ಸಲದ ವಾರ್ಷಿಕೋತ್ಸವದ ಕಾಲಕ್ಕೆ ಅಭಿನಯಿಸಿದ್ದೇವೆ. ಅಲ್ಲಿಯೂ ನಾನು ಆಚಾರ್ಯರ ಪಾತ್ರವನ್ನೇ ವಹಿಸಿದ್ದೆ.''

"ಹಾಗಿದ್ದರೇನೂ ಅಡ್ಡಿಯಿಲ್ಲ. ನಾಳೆನಿಂದ ನಮ್ಮ ಬಿಡಾರಕ್ಕೆ ಬಂದು ಬಿಡಿರಿ. ಈಗ ನಮ್ಮ ಜನ ಹೇಗೆ ಅಭಿನಯಿಸುತ್ತಾರೋ ಸ್ವಲ್ಪ ನೋಡೋಣ ನಡೆಯಿರಿ." ಎಂದು ಅವನನ್ನು ರಾಮರಾಯರು ಒಳಕ್ಕೆ ಕರೆದೊಯ್ದರು. ಗೋಪಾಲನು ಮನಸ್ಸಿನಲ್ಲಿ 'ಬದುಕಿಲೆ ಜೀವಾ' ಎಂದಂದುಕೊಂಡನು. ಅವನಿಗೆ ತನ್ನ ನಟನಾಶಕ್ತಿಯಲ್ಲಿ ವಿಶ್ವಾಸವಿದ್ದಿತು. ಅದಕ್ಕೆ ಶಿಕ್ಷಣದ ಸಂಸ್ಕೃತಿಯ ದಿವ್ಯಲಾಭವಾಗಿತ್ತು. ಇನ್ನು ಅವನು ಹೆದರಬೇಕಾದ ಕಾರಣವೇನೂ ಇರಲಿಲ್ಲ. ಈಗ ಅವನಿಗಿದ್ದ ವಿಚಾರವೊಂದೇ. ಶ್ರೇಷ್ಠ ನಾಟಕ ಕಂಪನಿಯಾದ ಇದರಲ್ಲಿಯೇ ಉಳಿಯಬೇಕೋ ಅಥವಾ ಇದರ ಸಹಾಯದಿಂದ ಶ್ರೇಷ್ಠ ಫಿಲ್ಮಕಂಪನಿಯವರ ಮನಮೆಚ್ಚಿಸಿ ಅದನ್ನು ಸೇರಬೇಕೋ ಎಂಬುದೊಂದೇ. ಎರಡನೇದು ಲಾಭಕರವಾದದ್ದಿದ್ದಿತು.

ಉತ್ಸಾಹದಲ್ಲಿ ಎಂಟು ದಿನಗಳು ಒಂದು ಕ್ಷಣದಂತೆ ಉರುಳಿ ಹೋದವು. ಶನಿವಾರ ರಾತ್ರಿ ಮತ್ತೆ 'ವಿಚಿತ್ರ ಜಗತ್ತನ್ನು' ಪ್ರದರ್ಶಿಸಿದ್ದಾಯಿತು. ರಾಮರಾಯರು ನಾಟಕವು ಮುಗಿದೊಡನೆ "ಗೋಪಾಲರಾವ ನಿಮಗೆ ಇಂದಿನಿಂದ ಒಂದು ನೂರು ರೂಪಾಯಿ ಪಗಾರ ಸುರು ಮಾಡಿದ್ದೇವೆ." ಎಂದು ತಾವೇ ತಿಳಿಸಿದರು. ಅಂದಿನ ನಾಟಕವನ್ನು ನೋಡಲು ಬಂದಿದ್ದ ಕರ್ನಲ್ ಸಾಹೇಬರು ಮರುದಿನ ಮತ್ತೆ ನೋಡಲಿಕ್ಕೆ ಬರುವದಾಗಿ ತಿಳಿಸಿದರು. ಗೋಪಾಲನಿಗೆ ಅಪಾರವಾದ ಆನಂದವಾಗಿತ್ತು.

ರವಿವಾರದ ಹಗಲು ನಾಟಕಪ್ರಯೋಗವು ಮುಗಿದ ನಂತರ ಥಿಯೇಟರದ ಕಚೇರಿಯಲ್ಲಿ ಭುವನೇಶ್ವರೀ ಫಿಲ್ಮ ಕಂಪನಿಯ ಡೈರೆಕ್ಟರತ್ರಯರಾದ ಮಿ|| ವ್ಹಿ. ಕೆ. ಆರ್. ಚಂದ್ರರಾವ, ಮಿ|| ಚಿಂತಾಮಣಿ, ಮಿ|| ಕೃಷ್ಣಪ್ಪ ಮತ್ತು ರಾಮರಾಯರೂ ಕೂಡಿ ಗೋಪಾಲನ ಉತ್ಕೃಷ್ಟವಾದ ಅಭಿನಯವನ್ನು ವಿಮರ್ಶಿಸುತ್ತ ಕುಳಿತಿದ್ದರು. ನಡುವೆ

ಮೇಜಿನ ಮೇಲೆ ಕಪ್ಪು-ಬಸಿಗಳು ಹರಡಿದ್ದವು. ಗೋಪಾಲನು ಬಳಿದುಕೊಂಡಿದ್ದ ಬಣ್ಣವನ್ನು ಒರಸಿಕೊಳ್ಳುತ್ತ ಅಲ್ಲಿಗೆ ಬಂದನು.

"ಓಹ್ರೋ ಗೋಪಾಲರಾವ, ನೀವೊಂದು ಅದ್ಭುತ ವ್ಯಕ್ತಿ. ಮೋರೆಯ ಬಣ್ಣ ತೊಡೆದು ಹಾಕಿದಿರೊ ಇಲ್ಲವೋ? ಇಲ್ಲವಾದರೆ-ಆಚಾರ್ಯರ ಮಂತ್ರಪ್ರಭಾವದಿಂದ ನಾವೂ ಓಡಿ ಹೋಗಬೇಕಾದೀತು. ಇಂಥ ಅಭಿನಯವನ್ನು ನೀವೆಲ್ಲಿಂದ ಕಲಿತಿರಿ?" ಎಂದು ಚಂದ್ರರಾಯರೆಂದರು.

"ವರನಟರೇ ಅವರು. ಎಲ್ಲಿಯಾದರೂ ಕಲಿಸಿದರೆ ಹೀಗೆ ಅಭಿನಯಿಸಲು ಬಂದೀತೇ?" ಎಂದು ಚಿಂತಾಮಣಿಯವರು ಉದ್ಗಾರ ತೆಗೆದರು.

"ಸುಮ್ಮನೆ ಹೊಗಳಿ ಯಾಕೆ ನನ್ನನ್ನು ಹುಚ್ಚನನ್ನಾಗಿ ಮಾಡುವಿರಿ. ನಾನೇನೂ ಅಷ್ಟು ಉತ್ತಮ ನಟನಲ್ಲ. ಏನೋ ಹಂಬಲ ಮಾತ್ರ ಆದೆ ಒಳ್ಳೇ ನಟನಾಗಬೇಕೆಂದು."

"ನಿಮ್ಮ ಸಂಗೀತ ಕೂಡ ಚನ್ನಾಗಿದೆ. ಹಾಗೆ ಒಪ್ಪಿಕೊಳ್ಳದಿರೋದು ನಿಮ್ಮ ವಿನಯ ಕಾಣ್ರೀ. ಈಗ ತಾನೇ ಕರ್ನಲ್ ಸಾಹೇಬರು ಕಾಣಿಕೆಯಂತ ಕೊಟ್ಟ ಸುವರ್ಣ ಪದಕ ನೀವು ಜನ್ಮತಃ ನಟರೆಂಬೋದನ್ನ ಸಿದ್ಧಪಡಿಸತದೆ. ಆ ಕರ್ನಲ್ ಸಾಹೇಬರ ವಿಮರ್ಶಾಬುದ್ಧಿ ಬಲು ತೀಕ್ಷ್ಣ. ಅವರ ಸದಭಿಪ್ರಾಯ ಅಂದರೆ ಅದು ದೊರೆತವರಿಗೆ ಗೌರವ ಕಾಣ್ರೀ. ಅಂಥಾ ಮಹಾ ಮನುಷ್ಯನ ಕೈಯಿಂದ ನೀವು ಮೆಡಲ್ ಹೊಡೆದು ಹಾಕಿಬಿಟ್ರೀ; ನಿಮ್ಮ ಭಾಗ್ಯ ಬಲು ದೊಡ್ಡದು." ಎಂದು ಕೃಷ್ಣಪ್ಪನವರು ತಮ್ಮ ವಾಚಾಲಹರಿಯನ್ನು ಹರಿಯಬಿಟ್ಟರು.

"ಇದು ನಿಜವೇ ಇದ್ದದ್ದಾದರೆ ಇಂದಿನ ರಾತ್ರಿಯ ಊಟ ರುಚಿ ಹತ್ತುವದು." ಗೋಪಾಲನೆಂದ.

ರಾಮರಾವ "ನಿಮ್ಮಲ್ಲಿ ನಮ್ಮದೊಂದು ಬೇಡಿಕೆಯಿದೆ." ಎಂದು ಚಂದ್ರರಾಯರು ಪ್ರಸ್ತಾಪಿಸಿದರು.

"ಅವಶ್ಯವಾಗಿ ಕೇಳಬಹುದು. ಕೈಲಾದರೆ ಕೊಡುವೆನು."

"ಈ ಗೋಪಾಲರಾಯರು ನಿಮ್ಮಲ್ಲಿಗೆ ಬರುವದಕ್ಕಿಂತ ಮೊದಲು ನಮ್ಮಲ್ಲಿ ನೌಕರಿಗಾಗಿ ಬಂದಿದ್ದರು. ಅದ್ದರಿಂದ ನೀವು ಅವರನ್ನು ನಮಗೆ ಬಿಟ್ಟುಕೊಡಬೇಕು. ಇದು ನಿಮ್ಮ ಔದಾರ್ಯದ ಪರೀಕ್ಷೆಯಿದೆ."

"ಆಗ ಬಂದಾಗ ಬಿಟ್ಟುಕೊಟ್ಟರೇಕೆ? ನಿಮ್ಮಲ್ಲಿಗೆ ಬರಬೇಕೆಂದು ಈಗೇನೂ ಗೋಪಾಲರಾಯರು ಇಚ್ಛಿಸುತ್ತಿರಲಿಕ್ಕಿಲ್ಲ."

ಸಿಕ್ಕ ಸಂಧಿಯನ್ನು ಕಳೆದುಕೊಳ್ಳಬಾರದೆಂ[illegible] ಲನು "ನನ್ನ ಮನಸ್ಸೇನೋ ಇದೆ. ಮತ್ತೆ ಇಲ್ಲಿ ಇದುವರೆಗೆ ರಾಮರಾಯರೊಡನೆ ಯಾವ [illegible] ನೆಗೂ ಒಳಗಾಗಿಲ್ಲ. ರಾಮರಾಯರು ಒಪ್ಪಿ[illegible] ನನ್ನದೇನೂ ಅಡ್ಡಿ ಇಲ್ಲ" ವೆಂದು ನುಡಿದನು.

"ನಮ್ಮಲ್ಲಿ ಬಂದರೆ ಅವರ ಕಾರ್ಯಕ್ಷೇತ್ರ[illegible] ವಾಗಿ ಅವರ ಕೀರ್ತಿಯು ಹೆಚ್ಚುತ್ತದೆ. ಅವ[illegible] ರನ್ನು ನಮಗೆ ಬಿಟ್ಟುಕೊಡುವದು ಹಿತ[illegible] ಚಿಂತಾಮಣಿಯೆಂದ.

"ರತ್ನವು ಬಡವನಲ್ಲಿರುವದಕ್ಕಿಂತ [illegible] ಹೆಚ್ಚು ಬೆಲೆಯುಳ್ಳದ್ದಾಗುವದೆಂಬುದನ್ನು [illegible] ಆದರೆ ಅನಾಯಾಸವಾಗಿ ಸಿಕ್ಕ ರತ್ನವನ್ನು [illegible] ವಷ್ಟು ಮೂರ್ಖನಾಗಲಿಚ್ಛಿಸುವದಿಲ್ಲ."

ಏಕಕಾಲಕ್ಕೆ ಇಂಥ ಇಬ್ಬರು ದೊಡ್ಡ ಮನ[illegible] ವಷ್ಟು ತನ್ನ ಲೌಕಿಕವು ಇಷ್ಟರಲ್ಲಿಯೇ [illegible] ಗೋಪಾಲನಿಗೆ ಆನಂದವಾಯಿತು.

"ರಾಮರಾವ ಮತ್ತು ಚಂದ್ರರಾವ ನನ್ನ [illegible] ಕೇಳುವಿರಾ? ನಿಮ್ಮಿಬ್ಬರಿಗೂ ಹಾನಿಯಾಗ[illegible] ಮಾರ್ಗವನ್ನು ನಾನು ತೋರಿಸಿಕೊಡುತ್ತೇ[illegible] ಸದ್ಯಕ್ಕೆ ನಾನು ಇವರ ನಾಟಕ ಕಂಪನಿ[illegible] ಫಿಲ್ಮಕಂಪನಿಯನ್ನು ಸೇರಬೇಕು. ಅವರ [illegible] ವರ್ಷಗಳ ವರೆಗೆ ರಾಮರಾಯರ ಕಂಪನಿಯ[illegible] ಇದ್ದಾಗೆಲ್ಲ ನಾನು ಇವರ ನಾಟಕಗಳಲ್ಲಿ [illegible] ಚಂದ್ರರಾಯರೊಪ್ಪಬೇಕು? ಒಪ್ಪಿತವೇ ನಿಮ[illegible]

ರಾಮರಾಯರು ಜಾಣತನದಿಂದ ಈ ಸೂ[illegible] ದರು. ಚಂದ್ರರಾಯರಿಗೆ ಸ್ವರ್ಗವು ಕೈಗೆ [illegible]

"ಗೋಪಾಲರಾವ ನೀವು ಫರ್ಸ್ಟ್‌ಕ್ಲಾಸ [illegible] ಎಲ್ಲಿಯಾದರೂ ನೌಕರೀ ಮಾಡಿ ಸುಖವಾಗ[illegible] ಎಂದು ಚಿಂತಾಮಣಿಯು ಕೇಳಿದನು.

"ನಮ್ಮ ರಿಝಲ್ಟ ನಾಳೆ ಇದೆ; ಇಂದೇ [illegible] ಯಿತು ನಿಮಗೆ?"

"ನನ್ನನ್ನು ನಂಬಿ. ಇದು ಸುಳ್ಳಾದರೆ [illegible] ಒಂದು ಸಾವಿರ ರೂಪಾಯಿ ಕೊಡುವೆನು [illegible] ನೀವು ಫಿಲ್ಮ ಕಂಪನಿ ಸೇರಿದ್ದರ ನಿಜವಾದ [illegible] ಹೇಳಬೇಕು."

"ಆ ಕಾರಣವೇನೂ ಅಷ್ಟು ಗೂಢವಾ[illegible] ಮೊದಲಿನಿಂದಲೂ ನನಗೆ ನಟನೆಯಲ್ಲಿ [illegible]

ಆಸಕ್ತಿ, ಇದೊಂದು ಕಾರಣ. ಇನ್ನೊಂದು ಯಾವದೆಂದರೆ— ನಮ್ಮ ಮನೆಯಲ್ಲಿ ಬೇಕಾದಷ್ಟು ಸಂಪತ್ತಿದ್ದರೂ ನಾನು ಸುಖ-ಸಂತೋಷಗಳನ್ನು ಕಾಣದೆ ಹೋದೆ. ಆದ್ದರಿಂದ ಅವನ್ನು ಬೇರೆಯೆಲ್ಲಿಯಾದರೂ ಪಡೆದು, ಬಯಸಿದವಳ ಕೈಹಿಡಿದು ಆನಂದದಲ್ಲಿ ಬಾಳಿಬದುಕಬೇಕೆಂಬ ಆಸೆ. ಆದ್ದರಿಂದ ನಾನೀಗ ಹೀಗೆ ಅಲೆಯುತ್ತ ಬಂದದ್ದು."

"ಅಂತೂ ರಾಯರ ಕಣ್ಣಿಗೆ ಹೆಣ್ಣಿನ ಹುಚ್ಚು ಹಿಡಿದಿದೆ ಅನ್ನಿರಿ." ಎಂದು ಚಿಂತಾಮಣಿಯು ನುಡಿದು ಗೋಪಾಲನ ಮಾತಿನಿಂದುದ್ಭವಿಸಿದ ಅನಿಷ್ಟವಾದ ಗಂಭೀರ ವಾತಾವರಣವನ್ನು ನಷ್ಟಮಾಡಲೆತ್ನಿಸಿದನು. ಎಲ್ಲರೂ ನಕ್ಕರು.

೨

ಗೋಪಾಲನಿಗೆ ಈಗ ನೂರಾಐವತ್ತು ರೂಪಾಯಿ ಪಗಾರವಿತ್ತು. ಕಳೆದ ನಾಲ್ಕೈದು ತಿಂಗಳುಗಳನ್ನು ಸಿನೇಟೋನದಲ್ಲಿಯ ಎಲ್ಲ ವಿಷಯಗಳ ಸಂಪೂರ್ಣ ಮಾಹಿತಿಯನ್ನು ಮಾಡಿಕೊಳ್ಳುವದಕ್ಕಾಗಿ ಕಳೆದಿದ್ದನು. ಅಲ್ಲದೆ—ಅವನು ನಟಿಸಿದ 'ಬಲಿದಾನ'ವೆಂಬ ಸಾಮಾಜಿಕ ಚಿತ್ರವು ತಯಾರಿಯಲ್ಲಿತ್ತು. ಅದರಲ್ಲಿಯ ತನ್ನ ಪ್ರಗತಿಯಿಂದ ಮನಸ್ಸಿಗೆ ಶಾಂತಿಯುಂಟಾಗಿ ಇತ್ತಿತ್ತಲಾಗಿ ಗೋಪಾಲನು ಸ್ವಲ್ಪ ಸುಖವನ್ನು ಹಚ್ಚಿಕೊಂಡಿದ್ದನು. ಇನ್ನೈದಾರು ದಿನಗಳಲ್ಲಿ ದೀಪಾವಳೀ ಹಬ್ಬದ ಸಲುವಾಗಿ ಒಂದು ತಿಂಗಳ ರಜೆಯು ಸುರುವಾಗುವದರಲ್ಲಿತ್ತು. ಆಗ ಇವನು ಊರಿಗೆ ಹೋಗಿ ಶಕ್ಯವಾದರೆ ತನ್ನ ಚಿರಕಾಮಿನಿಯನ್ನು ಕರೆದುಕೊಂಡು ಬರಬೇಕೆಂದು ಮಾಡಿದ್ದನು. ಗೋಪಾಲನಿಗೆ ಹೋಗಿ ಬರಲಿಕ್ಕೆ ಡೈರೆಕ್ಟರ ಸಾಹೇಬರು ಒಲ್ಲೆಒಲ್ಲೆನುತ್ತ ಪರವಾನಗಿಯನ್ನು ಕೊಟ್ಟರು. ಅವನು ಹೋದರೆ 'ಬಲಿದಾನ'ದ ವಿಷಯವಾಗಿ ವಿಚಾರ ಮಾಡಬೇಕಾಗಿದ್ದ ಕೆಲವು ಅಂಶಗಳು ಹಾಗೇ ಉಳಿಯುವವೆಂದು ಅವರ ಗೊಣಗಾಟ. "ನಿಮ್ಮ ರಾಣಿಯವರನ್ನು ಬಿಟ್ಟು ಬರಬೇಡಿರಿ ಮತ್ತೆ. ನಮಗಷ್ಟು ಅವರ ದಿವ್ಯದರ್ಶನವನ್ನು ಮಾಡಿಸಿರಿ." ಎಂದು ಚೇಷ್ಟೆಮಾಡಿ ಡೈರೆಕ್ಟರರು ಅವನನ್ನು ಬೀಳ್ಕೊಟ್ಟರು.

ದೀಪಾವಳೀ ಪ್ರತಿಪದೆಯು ಇನ್ನೂ ನಾಲ್ಕೈದು ದಿನವಿತ್ತು. ಗೋಪಾಲನು ಬೆಂಗಳೂರನ್ನು ಬಿಟ್ಟು ಒಂದುವಾರವಾಗಿತ್ತು. ಅಂದು ಮುಂಜಾನೆ ಡೈರೆಕ್ಟರ ಚಂದ್ರರಾಯರು ತಮ್ಮ ಕಾರಿನಲ್ಲಿ ಊರನ್ನೆಲ್ಲ ಸುತ್ತಿ ಸುಮಾರು ಹತ್ತೂವರೆ ಗಂಟೆಗೆ ತಿರುಗಿ ಸ್ಟುಡಿಯೋಕ್ಕೆ ಬಂದರು. ಬಾಗಿಲಲ್ಲಿಯೇ—ಗೋಪಾಲನನ್ನು ಕಂಡು ಅವರಿಗೆ ಆಶ್ಚರ್ಯವಾಯಿತು.

"ಓ! ಗೋಪಾಲ, ನೀವು ಇಷ್ಟು ಬೇಗನೆ ಮರಳಿದಿರಿ. ನೀವು ಆನಂದದಿಂದ ಹಬ್ಬವನ್ನು ಮುಗಿಸಿಕೊಂಡು ಬರಬಹುದೆಂದು ಆಶಿಸಿದ್ದೆ."

"ಆನಂದದಿಂದ ಇಲ್ಲಿಯೇ ಹಬ್ಬದ ಸುಖವನ್ನು ಅನುಭವಿಸಬೇಕೆಂದು ಬಂದಿದ್ದೇನೆ."

"ಹಾಗಾದರೆ ನೀವೊಬ್ಬರೇ ತಿರುಗಿ ಬಂದಿಲ್ಲ. ಅಲ್ಲ ಇಷ್ಟು ಸಮೀಪದಲ್ಲಿ ಹಬ್ಬವನ್ನಿಟ್ಟುಕೊಂಡು ನಿಮ್ಮನ್ನು ಹೇಗೆ ಹೋಗಗೊಟ್ಟರು ನಿಮ್ಮ ಮಾವಂದಿರು ?"

"ಇಲ್ಲ, ಅವರು ಹೋಗೆಂದು ಹೇಳಲಿಲ್ಲ. ನಾನೇ ಬಂದು ಬಿಟ್ಟೆ. ಅವರ ಹುಡುಗೆಯನ್ನು ಕರೆದುಕೊಂಡು ಹೋಗುವ ವಿಷಯವಾಗಿ ಮಾತೆತ್ತಿದೆ. ಅವರು ಸಮ್ಮತಿ ಕೊಡಲಿಲ್ಲ. ತಾವು ಬಡವರು, ತಮ್ಮ ಕನ್ಯೆಯನ್ನು ನನಗೆ ಕೊಟ್ಟು ನನ್ನ ಹಿರಿಯರೊಡನೆ ವೈರ ಕಟ್ಟಿಕೊಳ್ಳಲು ತಮ್ಮಿಷ್ಟವಿಲ್ಲವೆಂದು ಹೇಳಿದರು. ನಾನು ಈ ಮಾತಿನಲ್ಲಿ ನಮ್ಮ ತಂದೆಯವರ ಸಮ್ಮತಿಯನ್ನು ಕೇಳಲಿಕ್ಕೆ ಹೋಗುವದಿಲ್ಲವೆಂದೂ, ನಾವಿಬ್ಬರೂ ಸುಖವಾಗಿರುವಷ್ಟು ನಾನು ಈಗ ಸಂಪಾದನೆ ಮಾಡುತ್ತಿರುವೆನೆಂದೂ ಹೇಳಿದೆ. ಫಿಲ್ಮ ಕಂಪನಿಯಲ್ಲಿಯ ನನ್ನ ನೌಕರಿಯ ವಿಚಾರವನ್ನು ಕೇಳಿ ಅವರು ನನ್ನ ಮಾತಿಗೆ ಒಪ್ಪಲೇ ಇಲ್ಲ........"

"ಅಂತೂ ಈಗ ಅವಳನ್ನು ಓಡಿಸಿಕೊಂಡು ಬಂದಿರೇನು ?"

"ನೀರೂ ಹಾಲೂ ಕೂಡಿದರೆ ಬೇರೆ ಮಾಡಬಹುದು ಡೈರೆಕ್ಟರ ಸಾಹೇಬ. ನೀರೂ ನೀರೂ ಕೂಡಿದರೆ ಏನು ಮಾಡಲಿಕ್ಕೆ ಆಗುತ್ತದೆ? ನಾವಿಬ್ಬರೂ ಅಷ್ಟು ಒಂದಾಗಿದ್ದೇವೆ. ಆದ್ದರಿಂದ ಅವರ ಕಣ್ಣಿಗೆ ಇಂಗು ಹಚ್ಚಿ ನನ್ನಾಕೆಯು ತಾಯಿಯ ಆಶೀರ್ವಾದ ಪಡೆದುಕೊಂಡು ಹೊರಟು ಬಂದಿದ್ದೇವೆ. ನಾಳಿನ ಯುಗಾದಿಗೆ ಹದಿನಾರು ವರ್ಷ ತುಂಬುತ್ತವೆ ಸರಲೆಗೆ. ಆದ್ದರಿಂದ ಯಾವ ಉಪಾಧಿಯೂ ಉಪಸ್ಥಿತವಾಗಬಾರದೆಂದು ನಿಮ್ಮೆಲ್ಲರ ಸಾಕ್ಷಿಯಿಟ್ಟು ನಮ್ಮ ರಜಿಸ್ಟ್ರೇಶನ್ ವಿವಾಹವನ್ನು ಅವಳ ಹುಟ್ಟಿದ ದಿನದ ಸುಮುಹೂರ್ತದಲ್ಲಿ ನೆರವೇರಿಸಬೇಕೆಂದು ಮಾಡಿದ್ದೇನೆ. ನಿಮ್ಮ ಸಹಾನುಭೂತಿಯಿದೆಯೆಂದು ನಂಬಿದ್ದೇನೆ."

"ನೀವು ಮಾಡಿದುದೆಲ್ಲ ನನಗೊಪ್ಪಿತ. ಆದರೆ ನೀವು ಭಾರೀ ದಿಟ್ಟರಿದ್ದೀರಿ. ನಿಮಗೆ ಸಮಾಜದ ಹೆದರಿಕೆ ಏನೂ ಇಲ್ಲವೆಂದು ಕಾಣಿಸುತ್ತದೆ."

"ನಿಮ್ಮಲ್ಲಿ ಬರುವದಕ್ಕಿಂತ ಮೊದಲೇ ನನಗೆ ಸಮಾಜದ ಪರಿವೆ ಇರಲಿಲ್ಲ. ಆದರೆ ನೀವು ನನಗೆ ಆಶ್ರಯ

ಕೊಟ್ಟು ಸಮಾಜದ ಅನ್ಯಾಯಗಳನ್ನು ಪ್ರತಿಭಟಿಸುವ ಶಕ್ತಿಯೊಂದನ್ನು ಹೆಚ್ಚಿಗೆ ತಂದು ಕೊಟ್ಟಿರಿ. 'ಮನಃ ಪೂತಂ ಸಮಾಚರೇತ್' ಎಂದು ಮನುವೇ ಹೇಳಿಲ್ಲವೇನು?"

"ನಿಮ್ಮ ತಂದೆಯವರ ಕಿವಿಯ ಮೇಲೆ ಈ ಸಂಗತಿ ಯನ್ನಿಟ್ಟು, ನಿಮ್ಮ ವಿವಾಹವನ್ನು ನಡೆಸಿದರೆ ಉತ್ತಮ ವೆಂದು ನನ್ನ ಮತ."

"ಅದೆಂದಿಗೂ ಕೂಡಿಬರದ ಮಾತು, ನಮ್ಮ ತಂದೆ ಯವರು ತಮ್ಮ ಉತ್ಪನ್ನದಷ್ಟು ವರದಕ್ಷಿಣೆ ಕೊಡುವವರ ಮನೆಯ ಹೆಣ್ಣನ್ನೇ ತರುವದಾಗಿ ಭೀಷ್ಮಪ್ರತಿಜ್ಞೆ ಮಾಡಿದ್ದಾರೆ. ಆ ಹುಡುಗೆ ಕುಬ್ಜೆಯೇ ಆಗಿದ್ದರೂ ಅವರ ಅಡ್ಡಿ ಯಿಲ್ಲ. ಆದ್ದರಿಂದ ನನ್ನ ಸುಖಕ್ಕಾಗಿ ನಾನು ಈ ಉಪ ಧ್ವ್ಯಾಪವನ್ನು ಮಾಡಬೇಕಾಯಿತು."

"ಹಂ! ಅದಿರಲಿ. ನೀವು ಮುಂಜಾನೆ ಎಳೂವರೆಯ ಗಾಡಿಯಿಂದ ಬಂದಂತೆ ತೋರುತ್ತದೆ. ನಮ್ಮಲ್ಲಿಯೇ ಊಟಕ್ಕೆ ನಡೆಯಿರಲ್ಲ."

"ಇಲ್ಲ, ಕ್ಷಮಿಸಿರಿ. ಇಲ್ಲಿ ಬರುವಾಗ ಭಾರತಭುವನ ದಲ್ಲಿ ಎರಡು ತಾಟುಗಳನ್ನು ಹೇಳಿ ಬಂದಿದ್ದೇನೆ. ಮತ್ತೊಂದಿ ಗಾದರೂ ಬರೋಣವಂತೆ. ನಿಮ್ಮನ್ನು ಬಿಟ್ಟು ಇನ್ನೆಲ್ಲಿಗೆ ಹೋಗುತ್ತೇವೆ ನಾವು."

"ನಿಮ್ಮಂಥ ಕಲಾವಂತರು ಎಲ್ಲಿಗೆ ಹೋದರೂ ಕೂಡ ಬಂಗಾರವೇ!"

ಅಂದು ಮಂಗಳವಾರ. ಅಕ್ಕನ ತದಿಗೆಯಾಗಿತ್ತು. ಡೈರೆಕ್ಟರ ಚಿಂತಾಮಣಿಯವರು ತಮ್ಮ ಸಹಕಾರಿಗಳನ್ನೂ, ಮಿಸ್ ಸುಲೋಚನೆಯನ್ನೂ, ಮಿ|| ಗೋಪಾಲ ಮತ್ತು ಸರಲೆಯರನ್ನೂ ತಮ್ಮಲ್ಲಿಗೆ ಮುಂಜಾನೆ ಫರಾಳಕ್ಕೆಂದು ಕರೆದಿದ್ದರು. ದೀಪಾವಳಿಯ ಹಬ್ಬದ ಮೊದಲು ಮೂರು ದಿನಗಳಲ್ಲಿ ಡೈರೆಕ್ಟರತ್ರಯರು ಒಂದೊಂದು ದಿನ ಒಬ್ಬೊಬ್ಬ ರಲ್ಲಿ ಫಲಾಹಾರವನ್ನು ಏರ್ಪಡಿಸುವದು ವಾಡಿಕೆಯಾಗಿ ನಡೆದು ಬಂದಿತ್ತು. ಇಂದು ಎಲ್ಲರೂ ಚಿಂತಾಮಣಿಯವರ ಬಂಗಲೆಯಲ್ಲಿ ಕೂಡಿದ್ದರು. "ಕಾವ್ಯ ಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್" ಎಂದ ಮೇಲೆ ಇಂಥ ಕಲಾವಂತರು ಕೂಡಿದ ಸ್ಥಳದಲ್ಲಿ ನೀರಸತೆಗೆ, ನೀರವಕ್ಕೆ ಅದೆಲ್ಲಿಂದ ಅವಕಾಶವು ದೊರೆಯಬೇಕು. ಫರಾಳವನ್ನು ತಿನ್ನುವಾಗ ಎಲ್ಲರೂ ತಾವು ನಿನ್ನೆ ಮಧ್ಯಾಹ್ನದಲ್ಲಿ ಗೋಪಾ ಲನ ಮನೆಯಲ್ಲಿ ತಿಂದ ಸವಿಯಾದ, ರುಚಿಯಾದ ತಿಂಡಿ ತಿನಸುಗಳನ್ನು ಏಕಮುಖದಿಂದ ಹೊಗಳಿದರಲ್ಲದೆ ಇಷ್ಟು ಚಿಕ್ಕವಳಾಗಿದ್ದ ಸರಲೆಯ ಗೃಹಕಾರ್ಯದಕ್ಷತೆಯು ಅನುಪ ಮೇಯವಾಗಿದೆಯೆಂದು ಒಪ್ಪಿದರು. ಡೈರೆಕ್ಟ ರಾಯರಂತೂ ಸರಲೆಯು ಕಸ್ತೂರಿಯನ್ನು ಬಣ್ಣಿಸಿದರು.

ಎಲ್ಲರೂ ಎದ್ದು ಕೈತೊಳೆದು ತಾಂಬೂಲ ತ್ತಿರುವಾಗ ಸುಲೋಚನೆಯು ಹೋಗಿ ಯಮ್ಮನ್ನು ತೆಗೆದು ನುಡಿಸತೊಡಗಿದಳು.

"ಸುಲೋಚನಾಬಾಯಿ, ಇನ್ನೂ ಹತ್ತು ಯಿದೆ. ಈಗಿನಿಂದಲೇ ಬಲಿದಾನದೊಳಗಿನ ರಾಗವನ್ನು ಕಲಿಯಲಿಕ್ಕೆ ಹತ್ತಿದಿರೇನು?" ನಂದನು.

"ಬೇರೆ ಯಾವದಾದರೊಂದು ಹಾಡು ಹೇಳಿರಿ" ಗೋಪಾಲನೆಂದನು.

"ಮೊದಲು ಸರಲಾ ಒಂದು ಪದವನ್ನು ನಂತರ ನಾನು ನುಡಿಸುತ್ತೇನೆ."

"ನಿಮ್ಮ ಹಾಡುಗಳನ್ನು ನಾನು ಈ ದ್ದೇನೆ. ನಿಮ್ಮೆದಿರು ನಾವು ಹೇಗೆ ನಿಂತೇವು ಮಂತನ ಮುಂದೆ ಹಾರಲೆ ಗುಬ್ಬಿ' ಈ ನಮ್ಮ ಸ್ಥಿತಿ" ಎಂದು ಸರಲೆಯು ದಿಟ್ಟತನ ವನ್ನಿತ್ತಳು.

"ನೀವೇ ಮೊದಲು ಹೇಳಿರಿ. ನಂತರ ಕಡೆಯಿಂದ ಹೇಳಿಸುವೆ" ಗೋಪಾಲನೆಂದ.

ಸುಮಾರು ಕಾಲುಗಂಟೆಯವರೆಗೆ ಸುಲೋ ಸುಧೆಯನ್ನು ಅವಿರತವಾಗಿ ನೀಡಿದಳು. ಆಗ ಸರಲೆಯ ಕಿವಿಯಲ್ಲಿ ಏನೋ ಹೇಳಿದನು. ಲೆಯು ಎದ್ದು ತನ್ನ ಕಂಠದ ಸ್ವರಕ್ಕೆ ಯಮ್ಮನ್ನು ಸರಿಪಡಿಸಿ 'ಶ್ರೀವನಿತೆಯ ರಾಜೀವ' ಎಂದು ಅಸ್ಖಲಿತವಾಗಿ ಕುಮಾರ ವನ್ನು ಸುರು ಮಾಡಿದಳು. ಪ್ರಾರ್ಥನಾ ಪದ್ಯ ದ್ರೌಪದೀ ಸ್ವಯಂವರದ ಕಥೆಯ ಕೆಲವು ಸುಶ್ರಾವ್ಯವಾಗಿ ಶ್ರೀರಾಗದಲ್ಲಿ ಅರ್ಥಗಂಭೀ ತೋರಿಸಿದಳು. ಅವಳು ಅನ್ನುವ ನುಡಿಗಳ ವಾಗಿತ್ತು, ಅರ್ಥ ಸ್ಪಷ್ಟವಾಗಿತ್ತು, ಪೂತವಾಗಿತ್ತು. ಇವೆಲ್ಲವುಗಳ ಸಂಗಮ ಅವರ್ಣನೀಯವಾಗಿತ್ತು. ಎಲ್ಲರೂ ಪ್ರ ಆಲಾಪವನ್ನೇ ಆಲಿಸುತ್ತ ಅಚಲರಾಗಿ ಅವಳ ಆಲಾಪನೆಯು ಮುಗಿದೊಡನೆ ಎಚ್ಚ

"ಧನ್ಯ! ಸರಲಾಬಾಯಿ ಧನ್ಯ!" ಎಂದು ಕೃಷ್ಣಪ್ಪನವರು ಆನಂದಾವೇಶದಲ್ಲಿ ನುಡಿದರು.

"ರತ್ನಾಕರನಲ್ಲಿಯ ರತ್ನಗಳನ್ನು ನಾವು ಎಷ್ಟೆಂದು ತಾನೇ ಹುಡುಕೇವು! ಸರಲಾಬಾಯಿಯಂಥ ರತ್ನವು ಇಷ್ಟು ದಿನಗಳ ವರೆಗೆ ಪ್ರಚ್ಛನ್ನವಾಗಿರಬೇಕೆಂದರೆ ನಮ್ಮ ನಾಡಿನ ದುರ್ದೈವ." ಎಂದು ಚಂದ್ರರಾಯರು ಉಸುರಿದರು.

"ಇಂಥ ಭಾರೀ ಪ್ರತಿಸ್ಪರ್ಧಿಯನ್ನು ನಾನು ಆನಂದದಿಂದ ಬರಮಾಡಿಕೊಳ್ಳುವೆನು" ಸುಲೋಚನೆಯೆಂದಳು.

"ಇವರ ಭಾರತವಾಚನದ ದೃಶ್ಯವೊಂದಿಲ್ಲದೆ ಸಾಮಾಜಿಕ 'ಬಲಿದಾನ'ವು ಪೂರ್ತಿಗೊಳ್ಳಲಾರದು. ಉದಾರ ಹೃದಯಿಗಳಾದ ಗೋಪಾಲರಾಯರು ನಮ್ಮ ವಿನಂತಿಯನ್ನು ಮಾನ್ಯಮಾಡುವರೆಂದು ಆಶಿಸಿದ್ದೇವೆ" ಚಿಂತಾಮಣಿಯವರೆಂದರು.

"ಸರಲೆಯನ್ನೇ ಕೇಳಿಬಿಡಿರಿ. ಅವಳೊಪ್ಪಿದರೆ ನನ್ನದೇನೂ ಅಡ್ಡಿಯಿಲ್ಲ."

"ನೀವೆಲ್ಲರೂ ಕೂಡಿ ಇಷ್ಟು ದೊಡ್ಡ ಮರ್ಯಾದೆಯನ್ನು ಮಾಡುವಿರೆಂದ ಮೇಲೆ ನಾನು ತೆಗೆದುಕೊಳ್ಳಲು ಅಯೋಗ್ಯಳಿದ್ದರೂ ಕೃತಘ್ನಳಾಗಬಾರದೆಂಬ ಇಚ್ಛೆಯಿಂದ ಒಪ್ಪಿಕೊಳ್ಳುತ್ತೇನೆ." ಎಂದು ಸರಲೆಯು ಬಾಲ್ಯಚಾಪಲ್ಯದಿಂದ ನುಡಿದಳು. ಇಂಥ ದೊಡ್ಡ ಜನರು ತನ್ನನ್ನು ಈ ಪರಿಯಾಗಿ ಸ್ತುತಿಸಿದ್ದರಿಂದ ಅವಳಿಗಾದ ಆನಂದವು ಅಪಾರವಾಗಿತ್ತು.

ಗೋಪಾಲನು ತಿರುಗಿ ಮನೆಗೆ ಬರುವದರೊಳಗಾಗಿ ಮನೆಯಲ್ಲಿ ಒಂದು ಪಾಕೀಟು ಬಂದು ಬಿದ್ದಿತ್ತು. ಅದನ್ನು ಒಡೆದು ನೋಡಿದನು. ತಾನು ಓದಿಕೊಂಡು ಸರಲೆಗೆ ಓದಲಿಕ್ಕೆ ಕೊಟ್ಟನು.

ಧಾರವಾಡ
೨—೧೦—೩೩.

ಗೋಪಾಲ,

ನೀನು ಇತ್ತೀಚೆಗೆ ರೀತಿ ನೀತಿಗಳನ್ನು ಬಿಡಹತ್ತಿ ನಮ್ಮ ಮನೆತನದ ಮಾನಹಾನಿಯನ್ನು ಮಾಡುವದನ್ನು ಕಂಡು ನನಗೆ ಮಿತಿಮೀರಿ ಸಂತಾಪವಾಗಿದೆ. ಬಿ. ಎ. ಫರ್ಸ್ಟ್ ಕ್ಲಾಸಿನಲ್ಲಿ ಪಾಸಾದ ನಿನಗೆ ಮುಂದಿನ ಅಭ್ಯಾಸವನ್ನು ನಡೆಸೆಂದು ಹೇಳಿದರೆ ತಂದೆಯ ಮಾತನ್ನು ಅಲ್ಲಗಳೆದು ಸಿನೇಮಾದಂಥ ಹೇಯವಾದ ಉದ್ಯೋಗವನ್ನು ಅಂಗೀಕರಿಸಿ ನಿನ್ನ ಜಾಣತನದ ದಿಗ್ದರ್ಶನವನ್ನು ಮಾಡಿದೆ. ಈಗ ನಾನು ಕೇಳುತ್ತೇನೆ, ನೀನು ನಮ್ಮ ಪಾಟೀಲರ ಕುರೂಪಿ ಸರಲೆಯನ್ನು ಓಡಿಸಿಕೊಂಡು ಹೋಗಿರುವಿಯೆಂದು. ನೀನು ಅವಳನ್ನೇನಾದರೂ ಮದುವೆಯಾದೆಯೆಂದರೆ ನಮ್ಮ-ನಿನ್ನ ಸಂಬಂಧವು ಸಂಪೂರ್ಣವಾಗಿ ಅಳಿಯಿತೆಂದು ತಿಳಿಯಬೇಕು. ನನ್ನ ಎಲ್ಲ ಆಸ್ತಿ-ಪಾಸ್ತಿಯನ್ನು ನಿನ್ನ ತಮ್ಮನ ಹೆಸರಿನಿಂದ ಮಾಡಿ ಇಡುತ್ತೇನೆ. ನೀನು ನಿನ್ನ ಹಿಂದಿನ ಪತ್ರದಲ್ಲಿ ಸಲ್ಲದ ಸಿನೇಮಾಧಂದೆಯನ್ನು ಕಲೆಯ ಸೇವೆಯೆಂದೂ ನಾಡಿನ ಉದ್ಧಾರವೆಂದೂ ಸಿಕ್ಕ ಹಾಗೆ ಬಾಯಿತುಂಬ ಹೊಗಳಿದ್ದೀ. ಆಪರೆ ನನ್ನ ಕೊನೆಯ ಕಟ್ಟಪ್ಪಣೆಯೆಂದು ನೀನು ಸಿನೇಮಾ ಕಂಪನಿಯನ್ನು ಬಿಟ್ಟು, ಆ ಹುಡುಗೆಯನ್ನು ತಿರುಗಿ ಅವರೂರಿಗೆ ಕಳುಹಿಸಿ ಹುಣ್ಣಿವೆಯೊಳಗಾಗಿ ಇಲ್ಲಿ ಬಂದು ಸೇರಬೇಕು. ಇಲ್ಲವಾದರೆ ನೀನು ನನ್ನ ಮಗನಲ್ಲ.

ನಿನ್ನ ತಂದೆ
ರಾವಸಾಹೇಬ ಕೇಶವರಾವ.

ಸರಲೆಯು ಈ ಪತ್ರವನ್ನೋದಿ ಬೆಚ್ಚಿದಳು. ಕಣ್ಣುಗಳಲ್ಲಿ ನೀರು ತುಂಬಿದವು. ಪತ್ರವನ್ನು ತಿರುಗಿ ಕೊಡುವಾಗ ಅದರ ಮೇಲೊಂದು ತೊಟಕು ಬಿದ್ದಿತು. ಗೋಪಾಲನು, ಅದನ್ನು ದೃಷ್ಟಿಸಿ,

"ಹುಚ್ಚಿ, ಅಳಹತ್ತಿದೇನು? ಏನಾಯ್ತು ನಿನಗೆ?" ಎಂದು ಪ್ರೇಮದಿಂದ ಸಂತೈಸಿದನು.

"ಏನೂ ಇಲ್ಲ. ನನ್ನ ಸಲುವಾಗಿ ನೀವು ಪ್ರತ್ಯಕ್ಷ ನಿಮ್ಮ ತಂದೆಯ ದ್ವೇಷ ಕಟ್ಟಿಕೊಳ್ಳಬೇಕಾಯ್ತಲ್ಲ ಎಂದು ಯೋಚಿಸಿದೆ. ನನ್ನ, ತಿರುಗಿ ನಮ್ಮ ಊರಿಗೆ ಕಳಿಸಿಕೊಟ್ಟುಬಿಡಿರಿ. ನನ್ನ ದೈವದಲ್ಲಿ ಇದ್ದದ್ದು ಆಗತದೆ. ನನ್ನ ಸಲುವಾಗಿ ನೀವು ಯಾಕೆ ನಿಮ್ಮ ಊರು-ಮನೆಗೆ ಎರವಾಗಬೇಕು."

"ನಿನಗೇನೂ ತಿಳಿಯುವದಿಲ್ಲ ನೋಡು ಸರಲಾ. ಎಷ್ಟು ವಿರುದ್ಧ ತಿಳಿದುಕೊಳ್ಳುತ್ತೀ ನೀನು. ನಿನ್ನ ಸಲುವಾಗಿ ಅಲ್ಲವೆ ನಾನಿಲ್ಲಿಗೆ ಬಂದದ್ದು. ಈಗ ನೀನೇ ಹೊರಟು ಹೋಗತೀನಿ ಅಂದರೆ 'ಬಲಿದಾನ'ದೊಳಗೆ ಭಾರತ ವಾಚನ ಯಾರು ಮಾಡಬೇಕು? ಇನ್ನೂ ಇದೇ ಈಗ ವಚನ ಕೊಟ್ಟು ಬಂದೀದಿ. ಈಗ ಅಂಥದೇನಾಗಿದೆ ಹೀಗೆ ಹೊರಟು ಹೋಗತೇನಿ ಅಂತ ಹಟ ಹಿಡಿಯಲಿಕ್ಕೆ? ಹಬ್ಬದ ದಿನ ಕಣ್ಣೀರು ಸುರಿಸಬಾರದು ಒರಿಸು."

"ನಿಮ್ಮ ತಂದೆಯವರು ನಿಮ್ಮನ್ನು ಹೊರಗೆ ಹಾಕಿ ನೀವು ಪರದೇಶಿಯಾಗುವದನ್ನು ನೋಡಲಾರೆ."

"ನಾನು ಪರದೇಶಿಯಾಗಬಾರದೆಂದೇ ನಿನ್ನನ್ನು ಕರೆದುಕೊಂಡು ಬಂದದ್ದು. ನನಗೆ ನೀನು, ನಿನಗೆ ನಾನು ಜೋಡಿ. ಈಗ ನಮಗೇನು ದುಃಖ ಆಗಿದೆ ಹೇಳು? ನಾವಿಬ್ಬರೂ ಸುಖವಾಗಿ ಇರಲಿಕ್ಕೆ ಸಾಕಾಗುವಷ್ಟು ನನಗೆ ಪಗಾರವಿದೆ. ಮನಸ್ಸು ಮಾಡಿದರೆ ನೀನು ಇಲ್ಲಿಯೇ ಸ್ವರ್ಗವನ್ನು ನಿರ್ಮಿಸಬಲ್ಲೆ. ಅಂದ ಮೇಲೆ ಬೇರೆ ವಿಚಾರವೇತಕ್ಕೆ? ನಮ್ಮ ಮನೆಯವರು ಈಗ ಇಷ್ಟು ಉದ್ದಾಮರಾದರೂ ಇನ್ನೊಂದೆರಡು ವರ್ಷಗಳಲ್ಲಿ ನಮ್ಮ ದಾರಿಯೇ ಸರಿಯೆಂದು ಅವರೂ ಒಪ್ಪುತ್ತಾರೆ. ಈಗ ಅವರು ಸಿಟ್ಟಾಗಿರುವರೆಂದು ನಾವು ಅಸಮಾಧಾನ ಪಡಲಿಕ್ಕೆ ಏನೂ ಕಾರಣವಿಲ್ಲ. ಹೊಸಮಂದಿಯ ನಡುವೆ ದಿನಗಳು ಸುಖದಲ್ಲಿ ಹೋಗುತ್ತವೆ. ಕಣ್ಣೊರಸು ಹುಚ್ಚು ಹುಡುಗೀ. ನಿಲ್ಲು, ಇದಕ್ಕೆ ಈಗಲೇ ಉತ್ತರವನ್ನು ಬರೆದು ಹಾಕಿಬಿಡುತ್ತೇನೆ." ಎಂದು ಮೇಜಿನೊಳಗಿಂದ ಕಾಗದವನ್ನು ತೆಗೆದು ಏನೇನೋ ಬರೆಯತೊಡಗಿದನು. ಸರಲೆಯು ಅವನ ಹತ್ತಿರವೇ ನಿಂತು ನೋಡುತ್ತಿದ್ದಳು. ಹದಿನೈದು ನಿಮಿಷಗಳಲ್ಲಿ ಬರೆಯುವದನ್ನು ಮುಗಿಸಿ ಸರಲೆಯ ಕೈಯಲ್ಲಿ ನೋಡಲಿಕ್ಕೆಂದು ಕೊಟ್ಟನು.

ಬೆಂಗಳೂರು
೬-೧೦-೩೩.

ಪೂಜ್ಯ ತಂದೆಯವರೇ,

ನಿಮ್ಮ ಪತ್ರವನ್ನು ಓದಿ ನನಗೆ ಆಶ್ಚರ್ಯವಾಯಿತು. ಇದು ವರೆಗೂ ನಾನು ಯಾವ ಅನುಚಿತ ಕೃತ್ಯವನ್ನೂ ಮಾಡಿಲ್ಲವೆಂದು ನಂಬಿದ್ದೇನೆ. ನಾನು ಸರಲೆಯನ್ನು ತ್ಯಜಿಸಿ, ಫಿಲ್ಮ ಕಂಪನಿಯನ್ನು ಬಿಟ್ಟು ಬರಲಿಲ್ಲವಾದರೆ ನಿಮ್ಮ ಉತ್ಪನ್ನವು ನನಗೆ ದೊರಕಲಾರದೆಂದು ಬರೆದಿದ್ದೀರಿ. ಈ ಪೊಳ್ಳು ಬೆದರಿಕೆಯಲ್ಲಿ ಎಳ್ಳಷ್ಟೂ ಅರ್ಥವಿಲ್ಲ. ಈಗ ಸದ್ಯಕ್ಕೆ ನನ್ನ ವಾರ್ಷಿಕ ಉತ್ಪನ್ನವು ಎರಡು ಸಾವಿರವಿದೆ ಎಂಬುದನ್ನು ತಾವು ಮರೆತಂತೆ ಕಾಣುತ್ತದೆ. ನಿಮ್ಮ ಆಪ್ತರಾದ ಸರಲೆಯ ತಂದೆಯನ್ನು ಆಪ್ತರೆಂದು ಹೇಳಿಕೊಳ್ಳಲಿಕ್ಕೆ ಕೂಡ ಮನಸಿಲ್ಲವಲ್ಲವೇ ನಿಮಗೆ? ಸರಲೆಯನ್ನು ನಾನು ಈಗ ಕರೆದುಕೊಂಡು ಬಂದದ್ದೂ ನಿಜ; ಅವಳನ್ನು ಮದುವೆಯಾಗುವದೂ ನಿಜ. ಸರಲೆಯ ಗುಣಗಳನ್ನು ನೀವು ಕಂಡರಿಯಿರಿ. ಅಂತೂ ನೀವು ಮೊನಿಗೆ ಸೀರಿನ ಅಂಜಿಕೆ ತೋರಿಸಿದಂತೆ ಮಾಡಿರುವಿರಿ. ಮತ್ತು ನಿಮಗೆ ಮನೆತನದ ಮಾನದ ವಿಷಯಕ್ಕೆ ಎಷ್ಟು ಅಭಿಮಾನವಿದೆಯೋ ಅದಕ್ಕೂ ಒಂದು ತೂಕ ಹೆಚ್ಚಿನ ಅಭಿಮಾನ ನನ್ನಲ್ಲಿದೆ. ಇಡೀ ಕನ್ನಡ ನಾ... ಕೂಲವೊದಗಿದರೆ ಇಡೀ ಪ್ರಪಂಚವೇ ... ನನ್ನು, ನೀವು ತಿರಸ್ಕರಿಸುವ ಇದೇ ಸ... ತಲೆಯ ಮೇಲೆ ಹೊತ್ತುಕೊಂಡು ಕುಣಿಯ... ವೆನು. ನಾನು ಸರಲೆಯನ್ನು ಕರೆದು ತಂದ... ಧರ್ಮವನ್ನು ಬಿಟ್ಟು ಇಲ್ಲ, ಅದೇಕೆ ಸನಾತ... ಧರ್ಮಕ್ಕೆ ಕೂಡ ಹೊರತಾಗಿಲ್ಲ. ... ಹೆಣ್ಣನ್ನು ನೀವು ಒಪ್ಪದ್ದರಿಂದ ಈ ಹೊಸ ... ಪದ್ಧತಿಯಿಂದ ನಾನು ಹೊಂದಬೇಕಾಯ್ತು ... ತಿಂಗಳು ನೀವು ಇಲ್ಲಿ ಇದ್ದದ್ದಾದ... ಸೊಸೆಯನ್ನು ನೀವಾಗಿ ಕೊಂಡಾಡಿ ... ಈಗ ನಾನೇನೊ ಅಲ್ಲಿಗೆ ಬರುವ ವಿಚಾರವನ್ನು... ದಿಲ್ಲ. ಮುಂದೆ ಎಂದಾದರೂ ರಜೆ ಸಿಕ್ಕಾಗ ... ನಾನೀಗ ಸಂಪೂರ್ಣ ಸುಖಿಯಾಗಿದ್ದೇ... ಗಂಗೂಗೆ ತಿಳಿಸಬೇಕು.

ಅವಳು ಅದನ್ನು ಓದಿಕೊಂಡು ಏನೇ... ಯದೆ ತಿರುಗಿ ಅವನ ಕೈಯಲ್ಲಿ ಕೊಟ್ಟಳು. ... ಅದನ್ನು ಪಾಕೀಟಿನಲ್ಲಿ ಬಂದುಮಾಡಿ ತನ್ನ ... ಅಂಚೇಮನೆಗೆ ಕಳುಹಿಸಿದನು. ನಂತರ ಸ... ಸ್ಸಿನ ಉದ್ವೇಗವನ್ನು ತೊಡೆದುಹಾಕುವದಕ್ಕಾ... ಊಟಕ್ಕೆ ಕರೆದೊಯ್ದನು.

ಹಗಲೆಲ್ಲವೂ ಆವರಿಸಿದ್ದ ದುಗುಡವು ... ರಾತ್ರಿ ಹತ್ತು ಗಂಟೆಯ ವರೆಗೆ ಒಂದು ... ವನ್ನು ವಾಡಿಕೆಯಂತೆ ಹೇಳಿಕೊಟ್ಟ ಮೇಲೆ ... ಸರಲೆಯ ಮನಸ್ಸು ಮತ್ತೆ ಪ್ರಸನ್ನವಾಯಿ... ಗೋಪಾಲನನ್ನು ಕಣ್ಣುಗಳಿಂದಲೇ ವಿನಯ... ನಮಿಸಿ, ತನ್ನ ಕೋಣೆಗೆ ನಿದ್ರಿಸುವದಕ್ಕಾ... ಹೋದಳು. ಗೋಪಾಲನು ಅವಳ ಸುಂದರ ... ಮರೆಯಾಗುವ ವರೆಗೆ ನೋಡುತ್ತ ನಿಂತು ... ಕೋಣೆಗೆ ಹೋದನು.

೩

ಅಂದು ಯುಗಾದಿ. ಭುವನೇಶ್ವರಿಯ... ಚಿತ್ರವು ಕಳೆದ ಹತ್ತು ವಾರಗಳಿಂದ ಬೆಂಗ... ಳೂರು, ಧಾರವಾಡ, ಬೆಳಗಾವಿಗಳಲ್ಲಿ ನಡೆ... ಸ್ಥಳಗಳಲ್ಲಿ ಇನ್ನೂ ಚಿರಕಾಲ ಆ ಚಿತ್ರ...

ಬಹುದೆಂಬ ವಿಶ್ವಾಸವಿದ್ದಿತು. ಭುವನೇಶ್ವರಿಯ ಡೈರೆಕ್ಟರ ತ್ರಯರಿಗಂತೂ ಪ್ರೇಕ್ಷಕರಿಂದ ಬಂದ ಅಭಿನಂದನಪರವಾದ ಪತ್ರಗಳನ್ನು ಓದಿಓದಿ ಅವರಿಗೆ ಈಗ ಅದೊಂದು ಉದ್ಯೋಗವೇ ಆಗಿ ಪರಿಣಮಿಸಿತ್ತು. ದಿನಾಲು ಏನಿಲ್ಲವೆಂದರೂ ಇನ್ನೂರರ ಮೇಲೆ ಪತ್ರಗಳು ಬರಬೇಕು; ಆದರೆ ಅವೆಲ್ಲವೂ ಒಂದೇ ಆಶಯದವೇ. "ನಿಮ್ಮ ಬಲಿದಾನವು ಭಾರತದ ಚಿತ್ರಪಟ ಸೃಷ್ಟಿಯಲ್ಲಿ ಒಂದು ಅಪೂರ್ವವಾದ ಚಿತ್ರ; ಅದರಲ್ಲಿಯೂ ಸರಲಮ್ಮನವರ ಐದೇ ನಿಮಿಷದ ಭಾರತವಾಚನವು ಅನುಪಮೇಯವಾದದ್ದು. ಇನ್ನು ಮುಂದೆ ಶೀಘ್ರದಲ್ಲಿ ನಾವು ಅವರನ್ನು ನಿಮ್ಮ ಚಿತ್ರಗಳಲ್ಲಿ ನಾಯಿಕೆಯೆಂದು ಕಾಣಲು ಆಶಿಸಬಹುದೇ ?" ಎಂಬುದೇ ಆ ಎಲ್ಲ ಓಲೆಗಳ ಒಕ್ಕಣಿಕೆ. ಇದನ್ನು ಓದಿ, ನಿರಾಯಾಸವಾಗಿ ತಮ್ಮ ಪಾಲಿಗೆ ಸರಲೆಯ ರತ್ನವು ದೊರಕಿತಲ್ಲ ಎಂದು ಡೈರೆಕ್ಟರ ತ್ರಯರು ಉಬ್ಬಿಹೋಗಿ ಆನಂದದಲ್ಲಿ ತೇಲಾಡುತ್ತಿದ್ದರು. ಗೋಪಾಲನ ಪಗಾರವು ಕಳೆದ ತಿಂಗಳಿಂದ ಇನ್ನೂರು ರೂಪಾಯಿಯಾಗಿತ್ತು. ಅಲ್ಲದೆ ಸರಲೆಯ ಸ್ವಭಾವಕ್ಕನುಕೂಲವಾಗುವಂಥ ಕಥಾನಕವೊಂದನ್ನು ಚಿಂತಾಮಣಿಯವರು ಬರೆಯತೊಡಗಿದ್ದರು.

ಹೊಸ ವರ್ಷದ ಹೊಸದಿನವು ಹಳೆಯ ಸೂರ್ಯನಿಂದಲೇ ಬೆಳಕನ್ನು ಕಾಣುವಂತೆ ಗೋಪಾಲ-ಸರಲೆಯರ ವೈವಾಹಿಕ ಜೀವನದ ಮೊದಲ ದಿನವು ಅವರ ಹಳೆಯ ಪ್ರೇಮದಿಂದಲೇ ಬೆಳಗಿತ್ತು. ಇಂದಿಗೆರಡು ದಿನ ಮೊದಲೇ ರಜಿಸ್ಟ್ರೇಶನ್ ವಿಧಿಯು ಡೈರೆಕ್ಟರತ್ರಯರ ಸಮಕ್ಷಮದಲ್ಲಿ ಮತ್ತು ಚಿಂತಾಮಣಿಯವರ ಸ್ನೇಹಿತರಾದ ಎನ್. ನಾರಾಯಣ ಮೂರ್ತಿ LL. M. ಇವರ ಸಮಕ್ಷದಲ್ಲಿ ಮುಗಿದಿತ್ತು. ಇಂದು ಸರಲೆಯ ಹುಟ್ಟಿದ ದಿನವಾದ ಯುಗಾದಿಯ ಸುಮುಹೂರ್ತದಲ್ಲಿ ಅವನ ಸ್ನೇಹಿತರಿಗೆಲ್ಲ ಭೋಜನ ಸಮಾರಂಭವು ಏರ್ಪಡಿಸಲ್ಪಟ್ಟಿತ್ತು. ಗೋಪಾಲ ಸರಲೆಯರು ಹೊಸಕಾಲದ....ನವಿಲುಗಳಂತೆ ಕುಣಿದಾಡುತ್ತಿದ್ದರು.

ಭೋಜನಾನಂತರದಲ್ಲಿ ಡೈರೆಕ್ಟರ ಚಿಂತಾಮಣಿಯವರು ಸರಲೆಗೆ ತಮ್ಮ ಫಿಲ್ಮಕಂಪನಿಯಿಂದ ಉಡುಗೊರೆಯೆಂದು ಒಂದು ನೀಲದುಂಗುರವನ್ನು ಕೊಟ್ಟರು. ಅಲ್ಲದೆ ಡೈರೆಕ್ಟರ ತ್ರಯರು ವೈಯಕ್ತಿಕವಾಗಿ ನವದಂಪತಿಗಳಿಗೆ ಭಾರಿಯಾದ ಉಡುಗೊರೆಗಳನ್ನು ಕೊಟ್ಟರು. ಕಡೆಗೆ ಗೋಪಾಲನು ಎದ್ದು ನಿಂತು, "ನನ್ನಾಕೆಯ ತಂದೆಯಂತೆ ನಮ್ಮ ಡೈರೆಕ್ಟರರು ಅವಳನ್ನು ಸಿಂಗಾರ ಮಾಡಿ ನನಗೆ ಸಾಲಂಕೃತ ಕನ್ಯಾದಾನವನ್ನು ಮಾಡಿಕೊಟ್ಟದ್ದಕ್ಕಾಗಿ ನಾನು ಅವರಿಗೆ ಎಷ್ಟೋ ತುಂಬಾ ಋಣಿಯಾಗಿದ್ದೇನೆ. ನಿಮ್ಮೆಲ್ಲರ ವಿಶ್ವಾಸ, ಸಹಾನುಭೂತಿಯ ಫಲವಾಗಿ ನಾನು ಈ ಸುದಿನಗಳನ್ನು ಕಂಡಿದ್ದೇನೆ. ಇದಕ್ಕಾಗಿ ನಾನೂ-ಸರಲೆಯೂ ನಿಮಗೆ ಚಿರಋಣಿಗಳಾಗಿದ್ದೇವೆ. ಇನ್ನು ಮುಂದಾದರೂ ಇದೇ ವಿಶ್ವಾಸದಿಂದ ಈ ಕಿರಿಯನನ್ನು ಕಾಣುವಿರೆಂದು ಆಶಿಸಿದ್ದೇನೆ." ಎಂದು ವಿನಯದಿಂದ ನುಡಿದು ಕುಳಿತುಕೊಂಡನು.

ಅಂದು ರಾತ್ರಿ ಕೃಷ್ಣಪ್ಪನವರ ಮನೆಯಲ್ಲಿ ತಮ್ಮ ಗೌರವಾರ್ಥವಾಗಿ ಕರೆದ ಸಂಗೀತ ಕಚೇರಿಯನ್ನು ಮುಗಿಸಿಕೊಂಡು ಗೋಪಾಲ-ಸರಲೆಯರು ಹನ್ನೆರಡು ಗಂಟೆಗೆ ತಮ್ಮ ಮನೆಗೆ ತಿರುಗಿ ಬಂದರು.

"ಸರಲಾ, ರಾತ್ರಿ ಬಹಳವಾಗಿದೆ. ಇನ್ನು ಸುಖವಾಗಿ ನಿದ್ರಿಸಬಹುದಲ್ಲವೇ ? ಅಥವಾ ನೀನು ಮತ್ತೆ ಹಾರ್ಮೋನಿಯಮ್ ನುಡಿಸುತ್ತ ಕುಳಿತುಕೊಳ್ಳುವವಳೋ ?" ಎಂದು ಗೋಪಾಲನು ಕೇಳಿದ.

"ಸ್ವಲ್ಪ ತಡೆಯಿರಲ್ಲ. ಮೈಮೇಲಿನ ಆಭರಣಗಳನ್ನು ಬಿಚ್ಚಿ ಇಟ್ಟು ಬರುವೆ." ಎಂದು ಮೈಮೇಲಿನ ಎಲ್ಲ ಆಭರಣಗಳನ್ನು ತೆಗೆದು ಒಂದೊಂದಾಗಿ ಟ್ರಂಕಿನಲ್ಲಿ ಇಡತೊಡಗಿದಳು. ಆ ನೀಲದುಂಗುರವನ್ನು ಕೂಡ ತೆಗೆದಿಡಬೇಕೆಂದು ಅವಳು ಅದರ ಡಬ್ಬಿಯನ್ನು ತೆರೆಯಲು ಗೋಪಾಲನು ಅದನ್ನು ಕಸಿದುಕೊಂಡನು. ಆಗ ಅದರೊಳಗಿಂದ ಒಂದು ಚೀಟಿಯು ಹೊರಬಿತ್ತು. ಏನು ಬರೆದಿದೆಯೆಂದು ನೋಡಲಾಗಿ 'ಬೆಲೆ ೪೨೦ ರೂಪಾಯಿಗಳು' ಎಂದಿತ್ತು. ಗೋಪಾಲನು ಸರಲೆಯನ್ನು ನೋಡಿದನು. ಅವಳೂ ಹಸನ್ಮುಖದಿಂದ ಇವನನ್ನು ದೃಷ್ಟಿಸಿದಳು. ಇಷ್ಟು ಭಾರೀ ಕಿಮ್ಮತ್ತಿನ ಉಂಗುರವು ಉಡುಗೊರೆಯಾಗಿ ದೊರೆತದ್ದು ಅವಳಿಗೆ ಆಶ್ಚರ್ಯವಾಗಿತ್ತು. ಅಲ್ಲದೆ ಭುವನೇಶ್ವರಿಯವರು ಕೊಟ್ಟಿರುವದರಿಂದ ಮಾನವೂ ಹೆಚ್ಚಿತ್ತು.


"ಆಯಿತಲ್ಲ ಇನ್ನು" ಎಂದು ಅವನು ಆ ಟ್ರಂಕನ್ನು ಮುಚ್ಚಿದನು.

"ಹಂ! ಇಲ್ಲ, ಇನ್ನೊಂದು ಮಾತು ಕೇಳಬೇಕು."

"ಏನು, ನಾನು ಹೋಗಿ ನಿನ್ನ ಕೋಣೆಯಲ್ಲಿಯ ದೀಪಕ್ಕೆ ಸ್ವಿಚ್ ಕೊಡಬೇಕಲ್ಲವೇ ? ಎಂದು ಹುಸಿಮುನಿಸಿನಿಂದ ನುಡಿದನು.

"ಊಹೂಂ! ಇಂದು ನನ್ನಕೋಣೆಗೆ ಬೀಗವನ್ನು ಹಾಕಿಕೊಂಡು ಬರಬೇಕು" ಎಂದು ನಗುತ್ತ ನುಡಿದಳು.

ಅವನು ಅವಳ ಸುಂದರವಾದ ಮುಖವನ್ನು ನೋಡಿ



ಜ್ಞಾನ—ವಿಜ್ಞಾನ

ರಶಿಯದ ಸ್ತ್ರೀಯರು !

ರಶಿಯದಲ್ಲಿ ಮಿಕ್ಕ ದೇಶಗಳಲ್ಲಿ ಕಾಣದುದೆಷ್ಟೋ ಕಾಣಬರುವದು. ಸಾಮಾನ್ಯವಾಗಿ ಪಾಶ್ಚಾತ್ಯ ಅನೇಕ ದೇಶಗಳಲ್ಲಿ ಸ್ತ್ರೀಯರಿಗೆ ಬಹುಮಟ್ಟಿಗೆ ಸ್ವಾತಂತ್ರ್ಯ ಸಿಕ್ಕಿದೆ. ಆದರೂ ಬಹುತರವಾಗಿ ಗೃಹಿಣೀಪದವನ್ನು ಬಿಟ್ಟು ಸಂಪೂರ್ಣ ಸ್ವತಂತ್ರರಾದವರು ವಿಶೇಷವಾಗಿ ಕಂಡುಬರುವದಿಲ್ಲ. ಅಲ್ಲದೆ ಅಲ್ಲಿ ಸ್ತ್ರೀಯೆಂದರೆ ಇಷ್ಟು ದಿನ ದಾಸಿಯಾದವಳು ಈಗ ಆಲಂಕಾರಿಕ ಗೆಳತಿಯಾಗಿದ್ದಾಳೆ. ಅವಳಿಂದ ದೇಶದ ಸಂಪತ್ತಿನ ಅಥವಾ ಸಾಂಸ್ಕೃತಿಕ ಅಭಿವೃದ್ಧಿಗೆ ಸಾಕಷ್ಟು ಇನ್ನೂ ಸಹಾಯವಾಗುತ್ತಿಲ್ಲ. ಆದರೆ ರಶಿಯದ ಸ್ತ್ರೀಯರ ಮಾತೇ ಬೇರೆ. ಅವರು ಎಲ್ಲ ಉದ್ಯೋಗಗಳಲ್ಲೂ ಹೊಕ್ಕು ಬಿಟ್ಟಿದ್ದಾರೆ. ಅವರಿಂದ ದೇಶದ ಸಂಪತ್ತೂ ಹೆಚ್ಚುತ್ತಿದೆ; ಹೊಸದೊಂದು ಸಂಸ್ಕೃತಿಯೂ ಹುಟ್ಟುತ್ತಿದೆ. ಇಂದು ರಶಿಯದಲ್ಲಿ ೪೨೦೦೦ ಸ್ತ್ರೀ ವೈದ್ಯರಿದ್ದಾರೆ. ಒಟ್ಟು ಡಾಕ್ಟರರ ಅರ್ಧದಷ್ಟಾಯಿತು ಈ ಸಂಖ್ಯೆ! ಅವರಲ್ಲಿ ೪೦೦೦೦ ಸ್ತ್ರೀಯರು ಕ್ರಾಂತಿಯ ನಂತರವೇ ವೈದ್ಯಕೀಯ ಶಿಕ್ಷಣ ಪಡೆದವರಿರುವರು. ೧೧೦೦೦ಕ್ಕಿಂತ ಹೆಚ್ಚು ಸ್ತ್ರೀಯರು ಸಂಶೋಧಕ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವರು. ಇಂತಹ ಸಂಸ್ಥೆಗಳಲ್ಲಿಯ ಒಟ್ಟು ಕೆಲಸಗಾರರಲ್ಲಿ ನೂರಕ್ಕೆ ೭೯ರಷ್ಟು ಸ್ತ್ರೀಯರೇ ಇದ್ದಾರೆ.

ಯಾಂತ್ರಿಕ ಸೇವಕ

ಟೆನೆಸ್ಸಿಯಲ್ಲಿ ಒಂದು ಹೊಸ ಫಲ-ಆಹಾರ ವಸ್ತುಗಳ ಅಂಗಡಿ ತೆರೆಯಲ್ಪಟ್ಟಿದೆ. ಕೊಳ್ಳುವ ಗಿರಾಕಿಗಳಿಗೆ ಒಂದು ಬೀಗದ ಕೈಕೊಡುತ್ತಾರೆ. ಗಿರಾಕಿಯು ತಮಗೆ ಬೇಕಾದ ಹಣ್ಣು ತಿನಿಸುಗಳನ್ನಿಟ್ಟ ಕಾಜಿನ ಕಪಾಟಿನ ಕೆಳಗೆ ಆ ಬೀಗದ ಕೈಯನ್ನು ಹಾಕಿ ತಿರುವಿದರೆ ಒಂದು ಕಾಗದದ ಮೇಲೆ ಆ ತಿನಿಸಿನ ಹೆಸರುಗಳು ನಮೂದಿಸಲ್ಪಡುತ್ತ[illegible] ಕ್ರಮದಲ್ಲಿ ನಮೂದಿಸಿದ ಮೇಲೆ ಅಂಗಡಿಕಾರನು [illegible] ಕೈಯನ್ನು ಒಂದು ಮುಖ್ಯರಂಧ್ರದಲ್ಲಿ ಹಾಕಿ[illegible] ಕೂಡಲೆ ಎಲ್ಲ ಕಪಾಟುಗಳ ನಡುವಿನ ಬಾಗಿಲಿ[illegible] ಬೇಕಾದ ಒಂದೊಂದು ಪದಾರ್ಥವು ಹೊರಬೀ[illegible]

ರಕ್ತ ಪೂರೈಸುವ ಸಂಸ್ಥೆಗಳು !

ಏನಾದರೂ ಭಯಂಕರ ಅಪಾಯವಾಗಿ [illegible] ಸ್ರಾವವಾಗಿ ಪ್ರಾಣಾಪಾಯ ಸಂಭವಿಸುವ [illegible] ಅಥವಾ ರಕ್ತಹೀನರಾ[illegible] ಗಳಿಗೆ ಬೇರೆ ಮನು[illegible] ವನ್ನು ರೋಗಿಯ ದೇ[illegible] ಸುತ್ತಾರಷ್ಟೆ; ಈಗ [illegible] ಮನುಷ್ಯರ ದೇಹದಿಂದ ಉದ್ದೇಶಪೂರ್ವಕ[illegible] ತೆಗೆದು ೧೫ ದಿನಗಳ ವರೆಗೆ ಕಾದಿಡುವ ವ್ಯ[illegible] ಮಾಸ್ಕೋದಲ್ಲಿ ೫೧೪ ರಕ್ತ ಹಂಚುವ ಆಸ್ಪತ್ರೆ[illegible] ಈ ವರ್ಷ ೨೫೦೦೦ ಜನರಿಗೆ ರಕ್ತವನ್ನು [illegible] ವಿಮಾನಿನ ಮೂಲಕ ಅಗತ್ಯವಿರುವ ಕಡೆಗೆ [illegible] ಕಳಿಸುತ್ತಲೂ ಇದ್ದಾರೆ.

ಸಾವಿನೊಡನೆ ಆಟ

ಡಾ. ಮೆಟಾಯಸ್ ಡ್ಯೂಕ ಎಂಬವರು ಹ[illegible] ದಲ್ಲಿಯ ವಿಜ್ಞಾನಿಗಳು. ಅವರು ಇತ್ತೀಚೆ[illegible] ಶೌರ್ಯದ ಕೆಲಸವನ್ನ[illegible] ದ್ದಾರೆ. ಕ್ಯಾನ್ಸರ್ [illegible] ವ್ರಣವು ಭಯಂಕರ[illegible] ಕಡೆಗೆ ಅನಾಹುತವನ್ನ[illegible] ವದು. ಅದರ ಕಾರಣ, ಹರಡುವ ರೀತಿಗಳ[illegible] ಹಿಡಿಯಲು ಅನೇಕ ವಿಜ್ಞಾನಿಗಳು ಶೋಧನ[illegible] ದ್ದಾರೆ. ಮೇಲ್ಕಂಡ ಡಾ. ಮೆಟಾಯಸರು [illegible]

ಆವರು ಕ್ಯಾನ್ಸರಿನ ರಸಿಕೆ ತಾಗಿ ಒಬ್ಬರಿಂದ ಇನ್ನೊಬ್ಬರಿಗೆ ಆ ರೋಗವು ಹರಡುವದೆಂದು ಸಿದ್ಧಾಂತ ಮಾಡಿದ್ದಾರೆ. ಆ ಸಿದ್ಧಾಂತವನ್ನು ಜನರಿಗೆ ಸಿದ್ಧಪಡಿಸಿ ತೋರಿಸಲಿಕ್ಕೆಂದು ಆವರು ಕ್ಯಾನ್ಸರಿನ ರಸಿಕೆಯನ್ನು ತಮ್ಮ ದೇಹಕ್ಕೇ ಚುಚ್ಚಿ ಸೇರಿಸಿಕೊಂಡಿದ್ದಾರೆ. ಡಾಕ್ಟರರ ಸಿದ್ಧಾಂತವು ಸರಿಯಾಗಿದ್ದರೆ ವೈದ್ಯಪ್ರಪಂಚಕ್ಕೆ ಹೊಸ ಶೋಧದ ಲಾಭವಾಯಿತೇನೋ ನಿಜ. ಆದರೆ ಆ ಡಾಕ್ಟರರ ಜೀವದ ಗತಿ?

ಸರ್ಪವಿಷದಿಂದ ಔಷಧ!

ಏನಾದರೊಂದು ಗಾಯವಾದಾಗ ಪ್ರಾರಂಭವಾದ ರಕ್ತಸ್ರಾವವು ನಿಲ್ಲಬೇಕಾದರೆ ರಕ್ತವು ಕರಣೆಗಟ್ಟಬೇಕಾಗುತ್ತದೆ. ಕೆಲವರಲ್ಲಿ ವಿಶಿಷ್ಟ ರೋಗದ ಮೂಲಕ ರಕ್ತವು ಕರಣೆಗಟ್ಟುವದಿಲ್ಲ. ಅಂತಹವರಿಗೆ ರಕ್ತಸ್ರಾವ ಪ್ರಾರಂಭವಾದರೆ ಏನು ಉಪಾಯ ಮಾಡಿದರೂ ನಿಲ್ಲುವದಿಲ್ಲ. ಅದಕ್ಕೆ ಇಂಗ್ರೇಜಿಯಲ್ಲಿ 'ಹಿಮೋಫಿಲಿಯಾ' ಎಂದು ಹೆಸರು. ಸರ್ಪವಿಷದಲ್ಲಿ ರಕ್ತವನ್ನು ಕರಣೆಗಟ್ಟಿಸುವ ಗುಣವಿದೆಯೆಂದು ಕಂಡುಬಂದಿದೆ. ಅದರ ಉಪಯೋಗವನ್ನು ರಕ್ತಸ್ರಾವದ ರೋಗಿಗಳಲ್ಲಿ ಮಾಡಿ ನೋಡಿದುದರಲ್ಲಿ ಅದು ಯಶಸ್ವಿಯಾಗಿದೆ. ಮೊನ್ನೆ ಮೊನ್ನೆ ನ್ಯೂಯಾರ್ಕಿನಲ್ಲಿ ಸ್ಪೇನದ ಹಿಂದಿನ ರಾಜನ ಮಗನ ಹಲ್ಲನ್ನು ಕೀಳುವಾಗ ಸರ್ಪವಿಷದ ಇಂಜೆಕ್ಶನ ಮಾಡಿದುದರಿಂದ ರಕ್ತಸ್ರಾವದ ತೊಂದರೆಯಾಗಲಿಲ್ಲ. ತಂದೆಗೂ ಮಗನಿಗೂ ಆ ರಕ್ತಸ್ರಾವದ ರೋಗವಿತ್ತು. ಆ ರೋಗವು ವಂಶಪರಂಪರೆಯಾಗಿ ಬರುವದೂ ಉಂಟು. ರಶಿಯದ ಹಿಂದಿನ ಝಾರ ಕುಟುಂಬದಲ್ಲೆಲ್ಲ ಈ ರೋಗವಿತ್ತು.

ಉತ್ತರ ಮಹಾಸಾಗರ ಬಿಸಿಯಾಗುತ್ತಿದೆ!

ಉತ್ತರ ಮಹಾಸಾಗರದ ಸುಮಾರು ೧೬೦೦೦ ಮೈಲು ಉದ್ದ ತೀರ-ಪ್ರದೇಶವು ರಶಿಯಕ್ಕೆ ಸೇರಿದೆ. ಆದರೆ ಅಲ್ಲಿಯ ನೀರು ಗಡ್ಡೆಗಟ್ಟಿರುವದರಿಂದ ರಶಿಯಕ್ಕೆ ಅಲ್ಲಿ ನೌಕಾಪ್ರಯಾಣಕ್ಕೆ ಬಹಳ ತೊಂದರೆಯಾಗಿದೆ. ೧೮೯೫ ರಲ್ಲಿ ನ್ಯಾನ್‌ಸೆನನು ಅಲ್ಲಿಯ ಉಷ್ಣತೆಯು ಶೂನ್ಯಕ್ಕಿಂತ ಕೆಳಗಿದೆಯೆಂದು ಪರೀಕ್ಷಿಸಿದ್ದನು. ನೀರಿನ ೬೫೦ ಫೂಟಿನಷ್ಟು ಮೇಲ್ಭಾಗವು ಗಡ್ಡೆಗಟ್ಟಿತ್ತು. ಆದರೆ ಇತ್ತೀಚಿನ ಪರೀಕ್ಷೆಯಿಂದ ಅಲ್ಲಿಯ ನೀರಿನ ಉಷ್ಣತೆಯು ಶೂನ್ಯಕ್ಕಿಂತ ಮೇಲೇರಿದೆಯೆಂದು ಕಂಡುಬಂದಿದೆಯಲ್ಲದೆ ಗಡ್ಡೆಗಟ್ಟಿದ ನೀರಿನ ಗಾತ್ರವು ೩೨೫ ಫೂಟಿಗಿಳಿದಿದೆಯೆಂದು ಕಂಡುಬಂದಿದೆ. ಸುತ್ತಲಿನ ಬಿಸಿಯಾದ ನೀರು ಕೆಳಗೆ ಹರಿದು ಬಂದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಈ ವ್ಯತ್ಯಾಸದಿಂದ ರಶಿಯದಲ್ಲಿ ಆ ಭಾಗದ ನೌಕಾಪ್ರಯಾಣದ ಆಶೆಯು ಸೆಲೆಯೊಡೆಯುತ್ತಿದೆ.

ಒಂದು ತಲೆ ಹೋದರೆ ಮತ್ತೊಂದು ತಲೆ!

ನೆಲದೊಳಗೆ ಜೀವಿಸುವ ಕೆಲವು ಮುಂಡು ಹುಳಗಳಿಗೆ ಗಾಯವಾಗಿ ತಲೆಯು ತುಂಡಾಗಿ ಹೋದರೆ ಅವು ಸಾಯುವದಿಲ್ಲ. ಅಲ್ಲಿ ಮತ್ತೊಂದು ತಲೆಯು ಬೆಳೆದು ಬರುತ್ತದೆ. ಅದರ ತಲೆಯಲ್ಲಿಯ ಮಿದುಳು ಆ ಹುಳಕ್ಕೆ ರುಚಿಯನ್ನು ಕಂಡು ಹಿಡಿಯುವ ಮತ್ತು ಆಹಾರವನ್ನು ಆಗಿಯುವ ಅಂಗಗಳಿಗೆ ಉತ್ತೇಜನ ಕೊಡುತ್ತದೆ. ಈ ಹೊಸ ತಲೆಯು ಹುಟ್ಟುವದಕ್ಕೆ ಕಾರಣವನ್ನು ಶೋಧಿಸಲಿಕ್ಕೆಂದು ಅನೇಕ ವರ್ಷಗಳಿಂದ ಫ್ರಾನ್ಸಿನ ಪ್ರೊ. ಮಾರ್ಸೆಲ್ ಅವೆಲ್ಲರು ಯತ್ನಿಸುತ್ತಿದ್ದಾರೆ. ಅವರಿಗೆ ಈಗ ಆ ಹುಳಕ್ಕೆ ಹುಟ್ಟುವ ಹೊಸತಲೆಯು ಮೊದಲಿನ ಮಿದುಳುಬಳ್ಳಿಗೆ ಸಂಬಂಧಿಸಿರುವದಿಲ್ಲವೆಂದೂ, ಅದರ ದೇಹದ ಮಿಕ್ಕ ಸಾಮುಗ್ರಿಗಳಿಂದಲೇ ಹೊಸದೊಂದು ಮಿದುಳುಳ್ಳ ತಲೆಯು ಹುಟ್ಟುವದೆಂದೂ ಕಂಡುಬಂದಿದೆ. ಈ ಹೊಸ ತಲೆಯೊಳಗಿನ ಮಿದುಳು ಮೊದಲಿನ ನರಮಂಡಲದೊಡನೆ ಹೇಗೆ ಸಂಬಂಧಿಸುವದೆಂಬುದು ಚನ್ನಾಗಿ ತಿಳಿದು ಬಂದರೆ ಮನುಷ್ಯನ ಅಪಾಯಗೊಂಡ ಮಿದುಳಿಗೂ, ನರಮಂಡಲಕ್ಕೂ ಉಪಚಾರ ಮಾಡುವ ತಿಳುವಳಿಕೆಯೂ ಉಂಟಾಗುವದೆಂದು ಆಶಿಸಲಾಗಿದೆ.

ಲೋಹದ ಒತ್ತುಕರಡು

ಒತ್ತುಕರಡಿನ ಕಾಗದದಂತೆಯೇ ಲೋಹದ ಹಾಳೆಗಳಲ್ಲಿಯೂ ಮಸಿ ಇಂಗುವಂತೆ ಮಾಡಬಹುದು. ಲೋಹದಿಂದ ಕಂದೀಲಿನ ಬತ್ತಿಗಳನ್ನೂ ಮಾಡಬಹುದು.

ಆದಕ್ಕಾಗಿ ಮೊದಲು ಲೋಹವನ್ನು ಸೂಕ್ಷ್ಮರಂಧ್ರಮಯವನ್ನಾಗಿ ಮಾಡಬೇಕು. ಒಂದು ವಿಶಿಷ್ಟ ರಸಾಯನ ದ್ರವ್ಯದಿಂದ ಲೋಹವನ್ನು ನುಣಗೆ ಪುಡಿಮಾಡುವರು. ಆ ಪುಡಿಯನ್ನು ತೆಳುವಾಗಿ ಪದರು ಪದರಾಗಿ ಹರಡುವರು.

ಆ ಹರಡಿದ ಪುಡಿಯ ಪ್ರತಿಯೊಂದು ಚಚ್ಚೌಕು ಇಂಚಿನ ಮೇಲೆ ಎಷ್ಟೋ ಸಾವಿರ ಪೌಂಡುಗಳ ಭಾರ ಬೀಳುವಂತೆ ಒತ್ತಡವನ್ನು ಹಾಕುವರು. ಒತ್ತಡದಿಂದ ಸಿದ್ಧವಾದ ಲೋಹದ ಹಾಳೆಯನ್ನು ಕುಲಿಮೆಯಲ್ಲಿ ಚನ್ನಾಗಿ ಕಾಯಿಸುವರು. ಅಲ್ಲಿಗೆ ರಂಧ್ರಲೋಹವು ಸಿದ್ಧವಾಯಿತು. ನೋಡಲಿಕ್ಕೆ ಸ್ಪರ್ಶಕ್ಕೆ ಅದು ಲೋಹದಂತಿದ್ದರೂ ಆದರ ತೂಕವು ಲೋಹಕ್ಕಿಂತ ಹಗುರಾಗಿರುತ್ತದೆ.

ಲೋಹದ ಪುಡಿಯ ಪ್ರತಿ ಎರಡೆರಡು ಕಣಗಳ ನಡುವೆ ಅತಿ ಸೂಕ್ಷ್ಮವಾದ ಅಂತರವಿದ್ದೇ ಇರುತ್ತದೆ. ಮಸಿಯು ಆ ಅಂತರದಲ್ಲಿ ಸೇರಿಕೊಳ್ಳುವದರಿಂದಲೇ ಆ ಲೋಹವನ್ನು ಒತ್ತುಕರಡಿನಂತೆ ಉಪಯೋಗಿಸಲು ಅನುವಾಗಿದೆ. ಆದರ ಒಂದು ತುಂಡನ್ನು ಚಿಮಣಿಎಂಣೆಯಲ್ಲಿ ಅದ್ದಿ ಬತ್ತಿಯಂತೆ ಉಪಯೋಗಿಸುವದಕ್ಕೂ ಬರುತ್ತದೆ.

ನೊಣಗಳಿಗೆ ಬಂಣ ಸೇರುವದಿಲ್ಲ

ನೊಣಗಳಿಗೆ ಬಂಣಗಳನ್ನು ಕಂಡರಾಗುವುದಿಲ್ಲವೆಂಬುದು ಹೊಸ ಪ್ರಯೋಗಗಳಿಂದ ಸಿದ್ಧವಾಗಿದೆ. ಬಂಣಗಳಿಗಂಜಿ ರುಚಿಯಾದ ತಿನಿಸುಗಳನ್ನು ಕೂಡ ಮುಟ್ಟದೆ ಅವು ದೂರ ಹೋಗುವವು. ಆದುದರಿಂದ ಆಹಾರ ಸಂಗ್ರಹಿಸುವ ಕೋಣೆಗಳ ಕಿಡಿಕೆಗಳಿಗೆ ಬಂಣದ ಕಾಜುಗಳನ್ನು ಹಾಕಿದರೆ ನೊಣಗಳು ಅಲ್ಲಿ ಪ್ರವೇಶಿಸಲಿಕ್ಕಿಲ್ಲ.

ಎಲ್ಲ ಬಂಣಗಳ ಪರಿಣಾಮವೂ ಅಷ್ಟೇ ತೀವ್ರವಾಗಿರುವದಿಲ್ಲ. ಕೆಂಪು ಬಂಣವು ನೊಣಕ್ಕೆ ಹಿರಿ ವೈರಿಯೆನ್ನಬಹುದು. ಹಳದಿಯೂ ಕೆಂಪಿನಷ್ಟೆ ಘಾತಕವಾಗಿದೆ. ಹಸರು ನೀಲಿ ಬಂಣಗಳಲ್ಲಿ ಮಾತ್ರ ನೊಣಗಳು ಸ್ವಲ್ಪ ಧೈರ್ಯವನ್ನು ತೋರಿಸುವವು.

ಆದುದರಿಂದ ನೊಣಗಳು ಬರದಂತೆ ಮಾಡಲಿಕ್ಕೆ ಕೆಂಪು ಬಂಣವು ಹೆಚ್ಚು ಸಹಾಯಕವಾಗಿದೆ. ಆದರೆ ಕೆಂಪು ಕಾಜಿನೊಳಗಿಂದ ಪ್ರಕಾಶ ಕಿರಣಗಳು ಸಾಕಷ್ಟು ಬರುವದಿಲ್ಲ. ಆದುದರಿಂದ ಹಳದಿ ಕಾಜುಗಳೇ ಕಿಡಿಕಿಗೆ ಹೆಚ್ಚು ಉಪಯುಕ್ತವಾಗಿವೆ.

ಆದರೆ ನೀವು ಕೂಡುವ ಅಥವಾ ಓದುವ ಕೋಣೆಯಲ್ಲಿ ನೊಣಗಳು ಬರುತ್ತಿದ್ದರೆ ಮೇಲ್ಕಂಡ ಪ್ರಯೋಗವನ್ನು ಮಾಡಬಾರದು. ಏಕೆಂದರೆ ಹಳದಿ ಪ್ರಕಾಶವು ಕಂಣಿಗೆ ಕೆಡುಕು ಮಾಡುತ್ತದೆ! ಹಳದಿ ಪ್ರಕಾಶದಿಂದ ಅ... ಕೆಡುತ್ತದೆ !

ಮಿಂಚಿನ ಕೆಂಣು


ಪಶುಶಾಲೆಗಳಲ್ಲಿ ಹಾಲಿನಿಂದ ಅನೇಕ ... ಗಳನ್ನು ಪಡೆಯುತ್ತಾರೆ. ಹಾಲಿನಲ್ಲಿರುವ ... ಪೋಷಕವಸ್ತುಗಳನ್ನ ... ನೋಡಿಯೆ ನಿರ್ಧರಿ... ವಂತಾಗಬೇಕೆಂದು ... ಯವರು ಬಹುದಿನಗಳಿಂದ ಬಯಸುತ್ತಿದ್ದ... ವಂಶಪರಂಪರೆಯಾಗಿ ಕೆಲವು ಬಂಣಗಳಿರುತ್ತ... ಗಳಿಗೂ ಹಾಲಿನಲ್ಲಿರುವ ಬೆಂಣೆ ಮೊದಲಾ... ಪರಿಮಾಣಕ್ಕೂ ಸಂಬಂಧವಿದೆಯೆಂದು ಕಂಡು... ಆದರೆ ಬರಿಗಂಣಿನಿಂದ ವರ್ಣವೈವಿಧ್ಯವನ್ನು ... ಸುಲಭವಲ್ಲ. ಆದಕ್ಕಾಗಿ ರುಟ್‌ಗರ್ಸ್ ವಿಶ್ವವಿ... ಸಂಶೋಧನ ಶಾಖೆಯವರು ಒಂದು ವಿದ್ಯುತ್ತಿ... (ವರ್ಣವಿಭಜನದ ಸಾಧನ) ಶೋಧಿಸಿ... ಸಹಾಯದಿಂದ ಹಾಲಿನ ಅತಿ ಸೂಕ್ಷ್ಮ ಬಂಣಗ... ವಿಂಗಡಿಸುವದು ಸಾಧ್ಯವಾಗಿದೆಯೆಂದು ಡಾ. ... ಹೇಳುತ್ತಾರೆ. ಆದರಿಂದ ವಿಶಿಷ್ಟ ಪರಿಮಾ... ಯುಕ್ತ ವಸ್ತುಗಳನ್ನುಳ್ಳ ಹಾಲನ್ನು ಕೊಡುವ ... ವಿಂಗಡಿಸಿ ಸಾಕಲಿಕ್ಕೆ ಅನುಕೂಲವಾಗುವದು.


ಹಗಲು ರಾತ್ರಿಗಳ ಜೀವಂತ ಗಡಿಯಾರ

ಕೆಲವು ವಿಜ್ಞಾನಿಗಳು ಮನುಷ್ಯನ ಮಲ... ವಿಕೆಗಳಿಗೂ ಹಗಲು ರಾತ್ರಿಗಳಿಗೂ ಸಂಬಂ... ತ್ತಿದ್ದರು. ಹಗಲು ... ಎಚ್ಚರಿರುವ ... ಏನೂ ಕೆಡುಕಿಲ್ಲ ... ರೆನ್ನುತ್ತಿದ್ದರು. ... ಹಾರ್ವರ್ಡ ವಿಶ್ವವಿ... ವಿಜ್ಞಾನಿಗಳು ಜಗತ್ತಿಗೆ ಹಗಲು ರಾತ್ರಿಗಳಿರು... ದೇಹದ ಒಳಗೂ ಹಗಲು ರಾತ್ರಿಗಳಿವೆ ಎಂದು ... ದಿದ್ದಾರೆ. ಕೆಲವು ಪ್ರಾಣಿಗಳ ನೈಸರ್ಗಿಕ ... ಹಗಲು ಮಲಗುವದು; ಕೆಲವಕ್ಕೆ ರಾತ್ರಿ ... ವದು. ಅವುಗಳ ದೇಹದಲ್ಲಿ ನಮಗೆ ತಿಳಿಯ... ಜಾಗರಗಳ ಅಲೆಗಳು ಬಂದುಹೋಗುತ್ತವೆ ... ವಿಜ್ಞಾನಿಗಳು ಕೆಲವು ಪ್ರಾಣಿಗಳನ್ನು ...

ಕತ್ತಲ ಪಂಜರದಲ್ಲಿ ಹಾಕಿಟ್ಟರು. ಆ ಪಂಜರದಲ್ಲಿಯ ಗಾಳಿಯೂ ಉಷ್ಣತೆಯೂ ಹಗಲಿರುಳೂ ಒಂದೇ ರೀತಿಯಾಗಿ ರುವಂತೆ ವ್ಯವಸ್ಥೆ ಮಾಡಿದರು. ಅಂದರೆ ಹೊರಗಿನ ಯಾವ ವ್ಯತ್ಯಾಸದಿಂದಲೂ ಹಗಲು ರಾತ್ರಿಗಳನ್ನು ಕಂಡು ಹಿಡಿಯಲು ಬರದಂತೆ ಮಾಡಿದರು. ಆದರೂ ಆ ಕತ್ತಲ ಪಂಜರದಲ್ಲಿಯೇ ಆ ಪ್ರಾಣಿಗಳು ಹಗಲಿರುಳುಗಳ ಸರಿಯಾದ ವೇಳೆಗೆ ಮಲಗುವ ಮತ್ತು ಏಳುವ ಪ್ರವೃತ್ತಿಯನ್ನು ತೋರಿದವು. ಇದರಿಂಧ ಕೆಳಗಿನ ಪ್ರಾಣಿಗಳ ಮೇಲೆ ಹೊರಗಿನ ಹಗಲಿರುಳುಗಳ ಪರಿಣಾಮಕ್ಕಿಂತ ಅವುಗಳೊಳಗಿನ ಹಗಲು ರಾತ್ರಿಗಳ ಪ್ರಭಾವವೇ ಹೆಚ್ಚಿದೆಯೆಂದು ತೋರುವದು.

ಪ್ಯಾರಾಶೂಟ್ಸ್





ಸಾಮಾನ್ಯವಾಗಿ ಬಹು ಉನ್ನತವಾದ ಸ್ಥಳದಿಂದ ಕೆಳಗಿಳಿಯಲಿಕ್ಕೆ ಇಲ್ಲವೆ ವಿಮಾನವು ಗತಿಯಲ್ಲಿರುವಾಗಲೇ ಅದರೊಳಗಿನಿಂದ ಕೆಳಗೆ ಹಾರಿಕೊಳ್ಳಲಿಕ್ಕೆ 'ಪ್ಯಾರಾಶೂಟ್' ಎಂಬ ಛತ್ರಿಯಂತಹ ಸಾಧನವನ್ನು ಈವರೆಗೆ ಉಪಯೋಗಿಸುತ್ತಿದ್ದರು. ಆದರೆ ಈಗ ವಿಜ್ಞಾನಿಗಳು ನೆಲದಿಂದ ಆಕಾಶಕ್ಕೇರಿ ವಿಮಾನಕ್ಕೆ ಹೋಗಿ ಮುಟ್ಟುವ ಪ್ಯಾರಾಶೂಟ್ಸ್ ಸಿದ್ಧಗೊಳಿಸಿದ್ದಾರೆ. ಅಂತಹ ಪ್ಯಾರಾಶೂಟಿನ ಸಹಾಯದಿಂದ ಒಬ್ಬನು ಮೇಲಕ್ಕೇರುವದನ್ನು ತೋರಿಸುವ ಚಿತ್ರಗಳಿವು.





ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೭-೦-೦

ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೩-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ ಬೇರೆ.

'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳು ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸುವುದರ ಅಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕಂದರೆ ಅದರಿಂದ ವ್ಯರ್ಥ ವ್ಹಿ. ಪಿ. ವೆಚ್ಚಕ್ಕೆ ಗುರಿಯಾಗುವುದು ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ೧೫ನೆಯ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿಯೂ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಮಾಧ್ಯಮ.

ಜಾಹೀರಾತುದಾರರು ೨೫% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರಕಟನೆ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾಹೀರಾತು ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

	ವರ್ಷ.	೬ ತಿಂಗಳು.	೩ ತಿಂಗಳು.	೧ ಸಾರೆ.
ಒಂದು ಪುಟಕ್ಕೆ	೧೮೦ ರೂ.	೯೫ ರೂ.	೫೦ ರೂ.	೨೦ ರೂ.
ಅರ್ಧ ಪುಟಕ್ಕೆ	೯೫ ,,	೫೦ ,,	೩೦ ,,	೧೨ ,,
೧|೪ ಪುಟಕ್ಕೆ	೫೦ ,,	೩೦ ,,	೨೦ ,,	೭ ,,
೧|೮ ಪುಟಕ್ಕೆ	೩೦ ,,	೨೦ ,,	೧೨ ,,	೪ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ಹೆಚ್ಚಿನ ವಿವರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು.

ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು, ತಮ್ಮ ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಿಕೀಟೊಂದನ್ನು ಇಡಬೇಕು. (೨) ತಮ್ಮ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಿಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖನಗಳನ್ನು ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು ಮಾರ್ಜಿನ್ ಬಿಡಬೇಕು. (೪) ಲೇಖನದ ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಬರುವ ಲೇಖನಗಳು ಜಯಕರ್ನಾಟಕಕ್ಕೊಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗಿರಬಾರದು. ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾಟಕಕ್ಕೆಂದು ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಪತ್ರವ್ಯವಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರವ್ಯವಹಾರವನ್ನು "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ ವ್ಯವಹಾರವನ್ನು "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.



ತುತೂರಿ: ಇದೊಂದು ಕವನಗಳ ಸಂಗ್ರಹ. ಕವಿಗಳು— ಶ್ರೀಮಾನ್ ಪಂಚಾಕ್ಷರಯ್ಯಾ ಹಿರೇಮಠ ಅವರು. ಪ್ರಕಾಶಕರು: ಶ್ರೀ. ಚನ್ನಬಸವಸ್ವಾಮಿ ವಿರುಪಾಕ್ಷಯ್ಯ ಹಿರೇಮಠ, ಸಂಪಾದಕರು "ಕರ್ನಾಟಕ ಬಂಧು" ಗದಗ. ಬೆಲೆ ಎಂಟಾಣೆ

ಕನ್ನಡನಾಡಿನಲ್ಲಿ ಇತ್ತೀಚೆಗೆ ಕ್ರಾಂತಿಯ ಕಹಳೆ ಮೊಳಗುತ್ತಿದೆ. ಕರ್ನಾಟಕದಲ್ಲಿ ನವಚೈತನ್ಯವುಂಟಾದ ಲಕ್ಷಣಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತಿವೆ. ಕನ್ನಡನಾಡಿನ ಕವಿವರರಾದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರೂ—ಶ್ರೀ ಆನಂದಕಂದರವರೂ ಕ್ರಾಂತಿಕಾವ್ಯಗಳನ್ನು ಕಟ್ಟುತ್ತಿದ್ದಾರೆ. ಇಲ್ಲಿ ಗದುಗಿನಲ್ಲಿ ಅದೇ ಕಾರ್ಯವನ್ನು ಹೊಸ ಹರೆಯದ ತರುಣರಾದ ಶ್ರೀ. ಪಂಚಾಕ್ಷರಯ್ಯನವರು ತುತೂರಿಯ ಮೂಲಕ ಮಾಡಿದ್ದಾರೆ.

'ತುತೂರಿ' ಎಂಬುವ ಹೆಸರಿನಲ್ಲೇ ಈ ಸಂಗ್ರಹದ ಸಾರಸರ್ವಸ್ವವೆಲ್ಲವೂ ಅಡಗಿದೆ. ತುತೂರಿ!— ಶಬ್ದ ಕೇಳಿದೊಡನೆ ಮೈ ನವಿರೇಳುತ್ತದೆ. ಅದಕ್ಕೆ ತಕ್ಕುದಾಗಿ ಹುರಿದುಂಬಿಸುವ ಹುಮ್ಮಸ್ಸಿನ ಹಾಡುಗಳೇ ಇವೆ ಈ ಸಂಗ್ರಹದಲ್ಲಿ! ಎಲ್ಲವೂ ತುತೂರಿ— ಕಹಳೆ—ಕೊಂಬು— ಭೇರಿ— ತಮ್ಮಟೆಗಳೇ! ಕರ್ನಾಟಕಕ್ಕೆ ಅಥವಾ ಭಾರತಕ್ಕೆ ಈಗ ಅವಶ್ಯವಿದ್ದುದು ಕ್ರಾಂತಿಸಾಹಿತ್ಯ. ಸಂಧ್ಯಾಸೊಬಗು ನಮಗೆ ಸೇರುವುದಿಲ್ಲವೆಂತಲ್ಲ. ಆದರೆ ಕೇವಲ ಅದಕ್ಕೇ ಮರುಳಾಗಿ ಅದನ್ನೇ ನೋಡುತ್ತ ಕುಳ್ಳಿರುವ ಪರಿಸ್ಥಿತಿ ಸದ್ಯ ನಮ್ಮದಿಲ್ಲ. ನಮಗೀಗ ಉಷಾದೇವಿಯ ಅವಶ್ಯಕತೆ ಇದೆ. ಅರುಣೋದಯ ಬೇಕಾಗಿದೆ. ಹಾಗಾದಾಗಲೇ ಸ್ವಾತಂತ್ರ್ಯ ಸೂರ್ಯನ ದರ್ಶನ ನಮಗಾಗಲಿದೆ.

ಅದಕ್ಕಾಗಿ ನಾವು ಏಕಕಂಠದಿಂದ ಹುರುಪಿನ ಹಾಡುಗಳನ್ನು ಹಾಡುತ್ತ ಸ್ವಾತಂತ್ರ್ಯಸೈನಿಕರಾಗಿ ಮುಂದೆ ಸಾಗಬೇಕಾಗಿದೆ. ಅಂತಹ ಹಾಡುಗಳನ್ನು ನಮಗೊದಗಿಸಿ ಕೊಡುವ ಕವಿಗಳಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಇದಕ್ಕಾಗಿ ನಾವು ಶ್ರೀಮಾನ್ ಪಂಚಾಕ್ಷರಯ್ಯನವರನ್ನು ಅಭಿನಂದಿಸಲೇ ಬೇಕು. ಅವರ—ಕುರುಡನ ಕೂಗು—ಭೂಕಂಪ—ತಾಳೆಯ ಮರದಡಿ—ಧರ್ಮ— ನಾದಭೇದ—ತುತೂರಿ—ಮೊದಲಾದುವು ಮೂರ್ತಿಮಂತ ಕಿಡಿಗಳಾಗಿವೆ—ಅವರ—

"ಘಣಘಣ ನಾದವು ಕೇಳಿಸಿತೆಂದಲ್ಲಿ
ದೇವರ ಪ್ರಾಣವು ಹಾರುವುದು
ಧರ್ಮಕೆ ಬೆಂಕಿಯು ಬೀಳುವುದು

....

ದೇವರು ಸೇವಕನಾಗುವನು

....

ಕುಬೇರ ನೃತ್ಯವ ಗೈಯುವನು

....

ಕಾಲನು ಕಿಂಕರನಾಗುವನು!

—"ತಾಳೆಯ ಮರದಡಿ
ತಪವನು ಗೈಯುವ
ತರುಣನೆ ಏಳಪ್ಪಾ!
ಕಣ್ಣು ಮುಚ್ಚಿ ನೀ
ಕಾಲವ ಕಳೆದರೆ
ಕಾಣುವಿಯೇನಪ್ಪಾ!"—

ಎಂಬುವ ನುಡಿಗಳು ತರುಣರನ್ನು—ಮಲಗಿ... ದವರನ್ನು ಹೊಡೆದೆಬ್ಬಿಸುವ ಹುಮ್ಮಸ್ಸಿನಿಂ... ಕೊಂಡಿವೆ. ಇವರ 'ಭೂಕಂಪ'ದ ... ಬರುವ—

"ಬಡವರ ಒಡಲುರಿ ಹೆಚ್ಚುತಿದೆ
ವಿಧವೆಯ ಶಾಪವು ತಟ್ಟುತಿದೆ
ಭಾರತ ಕಣ್ಣಿಲಿ ಕಾಣುತಿದೆ

....

ಪರಮ ನ್ಯಾಯ

....

ಸಮಾಜಗೋರಿಯ ಕಟ್ಟುವರಾರು?"

ಎಂಬ ನುಡಿಗಳು ಎದೆಯನ್ನು ಹಿಗ್ಗಿಸುವ... ಯನ್ನುಕ್ಕಿಸುವ ಹುರುಪನ್ನು ಹುದುಗಿಸಿಕೊಂ... ಅಂತೂ ಒಂದೊಂದು ಕವಿತೆಯೂ ... ತೊಡೆದುಹಾಕಿ ಸ್ಫೂರ್ತಿಯನ್ನು ಚಿಮ್ಮಿಸಿ ಕಾ...

ರಣ್ಣಾಗಿ ಮಾಡುವಹಾಗಿದೆ. ಹಾಡು ಹೇಳುವಾಗ ದೊಡ್ಡ ದೊಡ್ಡ ಸಂಗೀತಗಾರರೂ ಮಧ್ಯೆ ಮಧ್ಯೆ ಕೆಮ್ಮುವುದುಂಟು. ಹಾಗೆ ಹೃದಯದಿಂದ ಹೊರಹೊಮ್ಮುವ ಭರದಲ್ಲಿ ಈ ಕವನಗಳ ಶಬ್ದ-ರಚನೆ ಮೊದಲಾದುದರಲ್ಲಿ ಹಲಕೆಲವು ಸ್ಖಾಲಿತ್ಯಗಳು ಉಂಟಾಗಿದ್ದರೂ ಅವು ಸಹಜವಾಗಿಎಲ್ಲಿಯೋ ಮಾಯವಾಗಿ ಬಿಡುತ್ತವೆ. ಈ ಕವನಗಳನ್ನು ಅದಕ್ಕೆ ತಕ್ಕ ಹೆಸರನ್ನಿತ್ತು ಪುಸ್ತಕದ, ಮುಖಪುಟದ ಮೇಲೆ ಒಪ್ಪುವ ಚಿತ್ರವನ್ನು ಕೊಟ್ಟು ಕನ್ನಡಿಗರಿಗೆ ನೀಡಿದ ಕವಿಗಳೂ— ಅಚ್ಚಿಗಾಗಿ ಧನಸಹಾಯ ಮಾಡಿದ ಕರ್ನಾಟಕದ ಕೊಡುಗೈ ಕುಬೇರರಾದ ಶ್ರೀ. ಅಂದಾನಪ್ಪ ದೊಡ್ಡಮೇಟಿ. ಎಂ. ಎಲ್. ಎ. ರವರೂ—ಅಂದವಾದ ಮುದ್ರಣ-ಅಚ್ಚುಕಟ್ಟಾದ ಅಚ್ಚು—ಕಟ್ಟು ಇದ್ದರೂ ಇಷ್ಟೊಂದು ಅಲ್ಪ ಬೆಲೆಯಲ್ಲಿ ಇದನ್ನು ಕನ್ನಡಿಗರ ಕೈಗಿತ್ತ ಪ್ರಕಾಶಕರೂ ಅಭಿನಂದನೆಗಳಿಗೆ ಪಾತ್ರರಿದ್ದಾರೆ. ತರುಣ ಕವಿಗಳಾದ ಶ್ರೀ. ಪಂಚಾಕ್ಷರಯ್ಯನವರಿಂದ ಕರ್ನಾಟಕವು ಇನ್ನೂ ಬಗೆಬಗೆಯ ಕೃತಿಗಳನ್ನು ನಿರೀಕ್ಷಿಸುತ್ತಿದೆ. ಆ ರೀತಿಯಲ್ಲಿ ಅವರು ಕಾರ್ಯಪ್ರವೃತ್ತರಾಗಲು ಕನ್ನಡಿಗರು ಅವರಿಗೆ ಸರ್ವವಿಧದಲ್ಲಿಯೂ ಸಹಾಯವನ್ನೀಯುವುದು ಅವಶ್ಯವಾಗಿದೆ.

— ಬ. ಆ. ಕ.

ಸಂಗೀತಾಚಾರ್ಯ: ಬರೆದವರು: ಎಸ್. ಎನ್. ಹರಿದಾಸ, ಪ್ರಕಾಶಕರು: ಸಂಗೀತಕಲಾಮಂದಿರ. ಮೂಲ್ಕಿ. ದ. ಕ. ಬೆಲೆ ಹತ್ತಾಣೆ:

ಇದು ರಾಗದ ಪೆಟ್ಟಿಗೆಯನ್ನು ಬಾರಿಸುವುದನ್ನು ಕಲಿಸುವ ಪುಸ್ತಕ. ಸಾಮಾನ್ಯವಾಗಿ ಈ ವಿಧದ ಪುಸ್ತಕಗಳಲ್ಲಿ ಹಿಂದಿ ಮತ್ತು ಮರಾಠಿ ಹಾಡುಗಳೇ ಹೆಚ್ಚಾಗಿರುತ್ತವೆ. ಆದರೆ ಪ್ರಸ್ತುತ ಲೇಖಕರು ಕನ್ನಡ ಹಾಡುಗಳನ್ನೆ ಆರಿಸಿಕೊಂಡಿರುವದು ಈ ಪುಸ್ತಕದ ವೈಶಿಷ್ಟ್ಯ. ಸಂಗೀತ ಪದ್ಧತಿಯೇನೊ ಉತ್ತರಾದಿಯಾಗಿಯೇ ಇದೆ. ಪ್ರಮುಖವಾದ ಇಪ್ಪತ್ತು ಹಿಂದುಸ್ತಾನಿ ರಾಗಗಳ ವಿವರಣೆಯು ಸಂಕ್ಷಿಪ್ತವಾಗಿದ್ದರೂ ಸ್ಪಷ್ಟವಾಗಿದೆ. ಪಿಯಾನು ಕಲಿಯಬೇಕೆನ್ನುವವರಿಗೆ ಒಳ್ಳೆಯ ಕೈಪಿಡಿ.

ಕಲ್ಯಾಣ: ಇದು ಕನ್ನಡ ಮಾಸಪತ್ರಿಕೆ. ಸಂಪಾದಕರು, ಶ್ರೀ. ಲಿಂಗನಗೌಡ ಪಾಟೀಲ ಮತ್ತು ಮಲ್ಲಿಕಾರ್ಜುನಪ್ಪಾ ಕಲಬುರ್ಗಿ. ವಾ. ಚಂ. ೩—೪—೦ ಬಿಡಿ ಸಂಚಿಕೆ ೫ ಆಣೆ.

ವಿಮರ್ಶೆಗೆ ಬಂದ ಸಂಚಿಕೆಯ ವಿಷಯಗಳನ್ನು ನೋಡಿದರೆ ಈ ಮಾಸಪತ್ರಿಕೆಯು ಪ್ರಾಮುಖ್ಯವಾಗಿ ವೀರಶೈವ ಧರ್ಮದ ವಿವೇಚನೆಯ ಗುರಿಯನ್ನಿಟ್ಟುಕೊಂಡಂತೆ ತೋರುತ್ತದೆ. ಆದರೆ ಮದ್ಯಪಾನ ನಿಷೇಧ, ವ್ಯಾಪಾರದ ಸೂತ್ರಗಳು, ಇವು ನಿಮಗೆ ಗೊತ್ತಿರಬೇಕಲ್ಲವೇ, ಎಂಬ ಇತರ ಉಪಯುಕ್ತ ವಿಷಯಗಳೂ ಹಲವು ಬಂದಿವೆ. ಇದರೊಳಗಿನ 'ಏಸೂಕ್ರಿಸ್ತನು ವೀರಶೈವನಾಗಿದ್ದನು' ಎಂಬ ವಿಷಯವು ಸಂಶೋಧಕರಿಗೆ ಕುತೂಹಲವನ್ನು ಹುಟ್ಟಿಸುವಂತಹದಾಗಿದೆ.

ಕರ್ನಾಟಕ ವಿದ್ಯಾಲಯ ಪತ್ರಿಕೆ: ಇದು ೩೦ ನೆಯ ವರ್ಷದ ೧ ನೆಯ ಸಂಚಿಕೆ.

ಇದರಲ್ಲಿ ಶ್ರೀರಂಗರ 'ಯಯಾತಿ' ಎಂಬ ನಾಟಕ, ಶ್ರೀ. ಪುರಾಣಿಕರ' .ನೀರಡಿಕೆ' ಎಂಬ ನಾಟಕಗಳೂ ಪ್ರೊ. ಮಾಳವಾಡರ 'ಜನ್ನಕವಿ ಪರಿಚಯ' ವೂ, 'ನೂರರ ನೋಟು' 'ಪ್ರೇಮ' 'ನಿರಪರಾಧಿಯ ನಿಶ್ಚಯ, ಮುಂತಾದ ಕವಿತೆಗಳೂ, ಶ್ರೀ. ಜಿ. ಎಲ್. ಪಾಟೀಲರ 'ಕನ್ನಡ ನುಡಿ' ಎಂಬ ಸಂಶೋಧನಾತ್ಮಕ ಲೇಖನವೂ ಇವೆ.

ಟಿಂಬ್ ಟಿಂಬ್ ಟೀಂವಕ್ಕಿ: ಇದು ಬೆಳಗಾಂವಿಯ ಬಾಲಾನಂದ ಗ್ರಂಥಮಾಲೆಯ ೨ ನೇ ಪುಷ್ಪ. ಬೆಲೆ ೫ ಬಿಲ್ಲೆ. ಲೇಖಕ ಶ್ರೀ. ಪ್ರ. ಗೋ. ಕುಲಕರ್ಣಿ.

ಈ ಚಿಕ್ಕ ಪುಸ್ತಕವು ಚಿಕ್ಕಮಕ್ಕಳಿಗಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ಒಂದು ದೊಡ್ಡದು, ಒಂದು ಸಣ್ಣದು ಎರಡು ಕತೆಗಳಿವೆ. ಮಗುವಿನ ಚಮತ್ಕಾರ ಪ್ರಿಯ ಮನಸ್ಸಿಗೆ ತಕ್ಕ ಶೈಲಿಯಲ್ಲಿ ಬರೆದಿದೆ. ಮೂರು ಚಿತ್ರಗಳೂ ಇವೆ ಇದರಲ್ಲಿ.

ಕೆಂಪನ ಕವಿತೆ: ಪ್ರಕಾಶಕರು: ಉಪಾಧ್ಯಾಯ ಸಂಘ ಹಾಸನ. ಬೆಲೆ ಒಂದಾಣೆ.

ಇದು ಚಿಕ್ಕ ಮಕ್ಕಳಿಗಾಗಿ ಬರೆಯಲ್ಪಟ್ಟ ಕವಿತಾ ಸಂಗ್ರಹ. ವಿವಿಧ ಕವಿಗಳು ಬರೆದ ಒಟ್ಟು ೧೮ ಕವಿತೆಗಳಿವೆ. ಇದರಲ್ಲಿ, 'ಕಸಬು' 'ದೀಪ' ಎಂಬ ಒಂದೆರಡು ಸ್ವಲ್ಪ ಗಹನವಾದ ವಿಷಯ ಮತ್ತು ಕಾಕ, ಕೋಕ, ವೈದ್ಯುತ ಎಂಬ ಒಂದೆರಡು ಕಠಿಣ ಶಬ್ದಗಳನ್ನು ಬಿಟ್ಟರೆ ಈ ಪುಸ್ತಕವು ಮಕ್ಕಳಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ವೀರಪಥಿಕ: ಹಲಸಂಗಿಯ ಅರವಿಂದ ಗ್ರಂಥಮಾಲೆಯ ಕಾಣಿಕೆಯ ಕುಸುಮ. ಬೆಲೆ ಆರಾಣೆ. ಬರೆದವರು ಶ್ರೀ. ಪಿ. ಧೂಲಾ.

ಹುಟ್ಟಿದವರೆಲ್ಲರೂ ತಮ್ಮ ತಮ್ಮ ಧ್ಯೇಯದ ಕಡೆಗೆ ಹೋಗುವ ಪಥಿಕರೇ ಸೈ. ಆದರೆ ಪಥಿಕರೆಲ್ಲರೂ ವೀರರಿರುವುದಿಲ್ಲ. ಗುರುಗಳ ಆಶೀರ್ವಾದದಿಂದಲೊ ದೇವರ ಅನುಗ್ರಹದಿಂದಲೊ ದಾರಿ ಸವೆಸುವ ಪಥಿಕರೇ ಹೆಚ್ಚು. ಆದರೆ ಈ ವೀರ ಪಥಿಕರು ಯಾರ ಅನುಗ್ರಹಕ್ಕಾಗಿಯೂ ಕೈಚಾಚುವವರಲ್ಲ. ತಾವು ಹಿಡಿದ ದಾರಿಯು ನ್ಯಾಯವಾದುದರಿಂದ ಗುರಿಯನ್ನು ಮುಟ್ಟಲೇ ಬೇಕು. ದೇವರಿದ್ದರೆ ಅವನು ತಮ್ಮನ್ನು ಅನುಗ್ರಹಿಸುವದು ಅವನ ಕರ್ತವ್ಯವಾಗಿದೆ ಎಂಬ ಧೀರಧ್ವನಿಯು 'ವೀರ ಪಥಿಕ' ದಲ್ಲಿ ಪ್ರತಿಧ್ವನಿಸುತ್ತದೆ. "ವಿಶ್ವಯಾತ್ರೆಗೆ ಹೊರಟ ದಾರಿಗನು ನಿನ್ನಲ್ಲಿ, ಶ್ರದ್ಧೆಯಿಟ್ಟರೆ ತಿಳಿಯಬಾರದೇನು ?" ಎಂದು ಕವಿಗಳು ಪ್ರಾರಂಭದಲ್ಲಿಯೇ ಪ್ರಶ್ನೆ ಹಾಕಿ ಬಿಟ್ಟಿದ್ದಾರೆ. ಕನ್ನಡ ಸಂಸ್ಕೃತಗಳ ಇಂಪಾದ ಬೆರಕೆಯು ಈ ಕವನಗಳಲ್ಲಿ ಸಿಗುವುದು.

ಶೂರ ಸುಭಾಸಚಂದ್ರ ಭೋಸ: ಇದು ಸೇವಾಪುಷ್ಪ ಗ್ರಂಥಮಾಲೆಯ ೫ ನೆಯ ಅರಳು. ಬರೆದವರು: ಪಾಟೀಲ ಕಲ್ಲನಗೌಡರು. ಬಿ. ಎ. ಪುಟ ೧೪೩. ಬೆಲೆ ೧೨ ಆಣೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇಂದಿನ ಅವಧಿಗೆ 'ನವಯೌವನ' ವೆಂದು ನಿರ್ಭಯವಾಗಿ ಹೆಸರಿಡಬಹುದು. ಈ ನವಯುವನಕ್ಕೆ ತಕ್ಕಂತೆ ರಾಷ್ಟ್ರೀಯ ಮಹಾಸಭೆಯ ಅಧಿವೇಶನಕ್ಕೆ ನವಯುವಕರಾದ ಸುಭಾಸಚಂದ್ರರು ಅಧ್ಯಕ್ಷರಾದುದು ವಿಶೇಷವೇನೂ ಅಲ್ಲ. ಭಾರತಿಯ ಸ್ವಾತಂತ್ರ್ಯಕ್ಕಾಗಿ ಜೀವನದ ಸುಖಸಂಪತ್ತುಗಳನ್ನು ತೊರೆದು ಹಗಲಿರುಳೂ ಅನೇಕ ವರ್ಷ ಹೋರಾಡಿದ ತರುಣರಲ್ಲಿ ಶ್ರೀ. ಸುಭಾಸಚಂದ್ರರು ಅಗ್ರಗಣ್ಯರೆಂದು ಬೇರೆ ಹೇಳಬೇಕಾಗಿಲ್ಲ. ಅಂತಹರ ಚರಿತ್ರೆಯನ್ನು ಭಾರತೀಯರಾದ ಪ್ರತಿಯೊಬ್ಬ ಸ್ತ್ರೀ ಪುರುಷರೂ ಅರಿತಿರುವುದು ಅನಿವಾರ್ಯ ಕರ್ತವ್ಯವಾಗಿದೆ. ಅಂತಹ ಚರಿತ್ರವಾಚನಕ್ಕೆ ಅನುಕೂಲವಾಗುವಂತೆ ಸುಭಾಸಚಂದ್ರರ ವಿವಿಧ ಕಾಲದ ಭಾವಚಿತ್ರಗಳೊಡನೆ ಈ ಸುಂದರ ಪುಸ್ತಕವನ್ನು ಓದುಗರಿಗೆ ಒಪ್ಪಿಸಿದ ಶ್ರೀ. ಪಾಟೀಲ ಕಲ್ಲನಗೌಡರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು.

ಮುದ್ರಣ ಪ್ರಕಾಶ

ಇದು ಮುದ್ರಣಕಲೆಯ ವಿವಿಧಾಂಗಗಳ [illegible] ಪುಣೆಯಿಂದ ಹೊಸತಾಗಿ ಹೊರಟ ತ್ರೈ[illegible] ವಾಗಿಯೂ ಇದರ ಸಂಪಾದಕರ ಧೈರ್ಯ[illegible] ಷುಷ್ಕವೆಂದೆನಿಸುವ ಮುದ್ರಣದ ವಿಷಯಕ್ಕೆ [illegible] ಪತ್ರಿಕೆಯನ್ನು ನಡೆಸುವದು ಸುಲಭವಲ್ಲ. ಮು[illegible] ಹೆಚ್ಚು ಕಾರ್ಯಕ್ಷಮವೂ ಅಚ್ಚುಕಟ್ಟಾಗಿಯೂ [illegible] ಪ್ರೆಸ್ ಕಾನೂನುಗಳ ಹಿಡಿತವು ಸಡಿಲಾಗು[illegible] ಸುವುದು ಪತ್ರಿಕೆಯ ಗುರಿಯಾಗಿದೆ.

The Universal Buddha Soc[illegible]

(ವಾರ್ಷಿಕ ವರದಿ)

ಮೇಲ್ಕಂಡ ಸಂಘವು ಬೆಂಗಳೂರಲ್ಲಿ [illegible] ವರ್ಷವಾಯಿತು. ಬೌದ್ಧ ಧರ್ಮದ ವ್ಯಾಸ[illegible] ಜನ ಕೊಡುವುದೂ, ವಿವಿಧ ಧರ್ಮಗಳ [illegible] ದೃಷ್ಟಿಯಿಂದ ಬುದ್ಧಧರ್ಮವನ್ನು ಕಲಿಸು[illegible] ತೆರೆಯುವುದೂ, ಬುದ್ಧತತ್ವಗಳ ಪ್ರಚಾ[illegible] ಸೇವೆಯ ಶಿಕ್ಷಣಕೊಡುವದೂ ಈ ಸಂಘದ[illegible] ಸ್ತುತ್ಯ ಕಾರ್ಯ.

Mysore-Association, Bomb[illegible]

ಬೇರೆಬೇರೆ ಕಾರಣಗಳಿಂದ ತಮ್ಮ ಮಾ[illegible] ಮೈಸೂರನ್ನು ಬಿಟ್ಟು ಮುಂಬಯಿಯಲ್ಲಿ ನೆ[illegible] ಲ್ಲರೂ ಸೇರಿ ಮಾಡಿಕೊಂಡ ಮೈಸೂರು-ಅ[illegible] ನ್ನಿನ ಹನ್ನೊಂದನೇ ವರ್ಷದ ವರದಿಯಿದು, [illegible] ಪ್ರೇಮ ಸಹಾನುಭೂತಿಗಳನ್ನು ಬೆಳೆಸಲು ಇ[illegible] ಗಳು ಅತ್ಯಾವಶ್ಯಕವಾಗಿವೆ. ಆದರೆ ಮೈಸೂರ[illegible] ಯೇಶನ್ನಿನ ವರದಿಯು ಇಂಗ್ಲಿಷಿನಲ್ಲೇಕೆ?

ರಾಷ್ಟ್ರೀಯ ಇತಿಹಾಸ ಪರಿಷತ್ತಿನ ಅಧ್ಯಕ್ಷರ ಭಾಷಣ

ಕಳೆದ ಡಿಸೆಂಬರ ೩೦ನೆಯ ತಾರೀಖಿಗೆ [illegible] ಸೇರಿದ ರಾಷ್ಟ್ರೀಯ ಇತಿಹಾಸ ಪರಿಷತ್ತಿನ [illegible] ಹಿಂದುಸ್ತಾನದ ಸುಪ್ರಸಿದ್ಧ ಐತಿಹಾಸಿಕ ಸಂ[illegible] ಸರ್ ಯದುನಾಥ ಸರಕಾರರ ಭಾಷಣವಿ[illegible] ದಲ್ಲಿಯ ಇತರ ವಿಷಯಗ[illegible]

ಮಹತ್ವದ ಸ್ಥಾನವು ಇತಿಹಾಸಕ್ಕೂ ಇದೆ. ಆದರೆ ಈಗ ಶಾಲೆ ಕಾಲೇಜುಗಳಲ್ಲಿ ಕಲಿಸುತ್ತಿರುವ ಇತಿಹಾಸ ಪಾಠಗಳು ಬಹುಮಟ್ಟಿಗೆ 'ತಮ್ಮ ತಮ್ಮ ಪೂಜಾಂಕರಿಷ್ಯೆ' ಎಂಬ ತತ್ವವನ್ನೆ ಅವಲಂಬಿಸಿವೆ. ವಸ್ತುತಃ ಇತಿಹಾಸಕಾರರಿಗೆ ಈ ಸ್ವಾರ್ಥದೃಷ್ಟಿಯಿರಬಾರದು. ವಿದ್ಯಾರ್ಥಿಗಳು ಇಡಿ ಜಗತ್ತಿನ ಇತಿಹಾಸವನ್ನು ನಿಷ್ಪಕ್ಷಪಾತದೃಷ್ಟಿಯಿಂದ ನೋಡಲು ಕಲಿಯಬೇಕು. ಈ ವಿಷಯದಲ್ಲಿ ಸರ್ ಯದುನಾಥ ಸರಕಾರರ ಮಾತುಗಳು ನಿಜವಾಗಿಯೂ ಮನನೀಯವಾಗಿವೆ. "ಇತಿಹಾಸವೆಂದರೆ ಮೃತ ರಾಜನೀತಿಯಲ್ಲ; ಅದು ಜೀವಂತ ರಾಜಕೀಯ ದರ್ಶನಶಾಸ್ತ್ರವಿದ್ದಂತಿದೆ. ನಮ್ಮ ದುರ್ಗುಣಗಳನ್ನು ಮುಚ್ಚುವುದೆಂದರೆ ರಾಷ್ಟ್ರೀಯ ಇತಿಹಾಸವಲ್ಲ. ದುರ್ಗುಣಗಳನ್ನು ಕಂಡು ಅವು ನಮ್ಮಲ್ಲಿ ಯಾಕೆ ಸೇರಿದವೆಂಬುದನ್ನು ಶೋಧಿಸುವದೇ ಇತಿಹಾಸದ ಗುರಿಯಾಗಿರಬೇಕು. ಇತಿಹಾಸವು ವೈಜ್ಞಾನಿಕವಾಗಿಯೂ ತುಲನಾತ್ಮಕವಾಗಿಯೂ ಆಲೋಚನಾತ್ಮಕವಾಗಿಯೂ ಬರೆಯಲ್ಪಡಬೇಕು."

School of Spiritual Science

ಇದು ಲಂಡನಿನಲ್ಲಿ ಅಧ್ಯಾತ್ಮ ವಿಜ್ಞಾನದ ಪ್ರಚಾರಕ್ಕಾಗಿ ೧೯೩೬ರಲ್ಲಿ ಹೊರಟ ಒಂದು ಸಂಸ್ಥೆ. ಅದರ ಚಟುವಟಿಕೆಗಳ ಸೂಚಿಪತ್ರವು ನಮಗೆ ಬಂದಿದೆ. ಆ ಸಂಸ್ಥೆಯ ಉದ್ದೇಶವು ಅಧ್ಯಾತ್ಮ ವಿಜ್ಞಾನವನ್ನು ಪ್ರಚಾರಗೊಳಿಸಿ ಕಲೆಯಲ್ಲಿಯೂ ಜೀವನದಲ್ಲಿಯೂ ಅದರ ಪ್ರಕಾಶ ಬೀಳುವಂತೆ ಮಾಡುವದಾಗಿದೆ. ಈ ಉದ್ದೇಶಕ್ಕೆ ಸಾಧಕವಾಗುವಂತಹ ಎಲ್ಲ ವಿಷಯಗಳ ವ್ಯಾಸಂಗಕ್ಕೂ ಈ ಸಂಸ್ಥೆಯಲ್ಲಿ ವ್ಯವಸ್ಥೆ ಮಾಡಿದೆ.

ಮೇ ೧೯೩೩ರಲ್ಲಿ ಬೋನಸ್ಸು ಹಂಚಲ್ಪಡುವದು

ತ್ವರೆಮಾಡಿರಿ—

ಲಾಂಗ-ಲಾಯಿಫ ಇನ್ಶೂರೆನ್ಸ ಕಂ.

ಪುಣೆ ೨.

ಇದೇ ಲೋಕಪ್ರಿಯವಾದ ಕಂಪನಿಯಲ್ಲಿ ವಿಮಾ ಇಳಿಸುವದೇ ಯಾವಾಗಲೂ ಲಾಭದಾಯಕವಿರುವದು.

ಈ ಕಂಪನಿಯು ಯೋಗ್ಯ ಮತ್ತು ಹುಷಾರ ಏಜಂಟರಿಗೆ ವಂಶಪರಂಪರ ಕಮಿಶನ್ನು ಕೊ...

ನಮ್ಮ ವೈಶಿಷ್ಟ್ಯ:— (೧) ಹೆಂಗಸರ ದೆಸೆಯಿಂದ ಸ್ವತಂತ್ರ ವಿಮಾ ಕೋಷ್ಟಕಗಳು ಮತ್ತು "... ಬೆನಿಫಿಟ್" (೨) ಚೊಕ್ಕ ಮತ್ತು ಅಲ್ಪ ವೆಚ್ಚದ ಕಾರಭಾರ. (೩) ... ಪ್ರಮಾಣ ತೀರ ಕಡಿಮೆ. (೪) ರಾಷ್ಟ್ರೋದ್ಧಾರ ನಿಧಿಯ ವ್ಯವಸ್ಥೆ.

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ— ಮೆಸರ್ಸ. ಎಸ್. ಎಲ್. ಆಪಟೆ ಆ್ಯಂಡ ...
ಮ್ಯಾನೇಜಿಂಗ ಏಜಂಟರು—
೧೪೦ ಬುಧವಾರ, ಪುಣೆ.

ಲಸ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ, ಬೆಂಗಳೂರು



ಚಿಕ್ಕ ಡಾಕ್ಟರ್, ... **ವೇಪ್ರಿ...**

............ಸ್ವದೇಶಿ ವಸ್ತು,

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ... ಮೂಲವ್ಯಾಧಿ, ಮೆಟ್ಟಿನಘಾಯ ಮುದ್ಧಣ (Pimples) ... ಘಾಯ, ತೊಡವಾಳ, ಗಜಕರ್ಣ ಮಾಯವಾಗುವುವು. ... ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ... ದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತ ಪಡಿಸುವುದು. ನಿಮ್ಮ ... ಇದ್ದರೆ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ... ½ ಔನ್ಸಗೆ ...

¼ ಔನ್ಸ್ ಬಾಟ್ಲು ೧ಕ್ಕೆ ೪ಆ.

ದೊರೆಯುವ ಸ್ಥಳಗಳು :

ಲಸ್ಟರ' ಮ್ಯಾನುಫ್ಯಾಕ್ಚರಿಂಗ ಕಂಪನಿ ಡಿಪೋ ಬೆಂಗಳೂರು ...

ಜಿಲ್ಹಾ ಏಜಂಟ್ಸ:—ಆರ್. ಕೆ. ಕಬ್ಬೂರ, ಕೊಪ್ಪೀಕರ ರೋಡ ....

ಸಬ್ ಏಜಂಟ:—ಯು. ಬಿ. ಬಾಳಿಗಾ, ಕೆಮಿಸ್ಟ ಆ್ಯಂಡ ಡ್ರುಗಿಸ್ಟ ....

ಸಬ್ ಏಜಂಟ:—ಗೋವಿಂದ ಗೋಪಾಳ ಗಾಡಗೀಳ ....

ಬಳ್ಳಾರಿ ಜಿಲ್ಹಾ ಏಜಂಟ್ಸ:—ಆರ್. ಎಸ್. ವೀರಭದ್ರಪ್ಪ ಅಂಡ ಬ್ರದರ್ಸ, ಸ್ವದೇಶಿ ಸ್ಟೋರ ....

ಕನ್ನಡದ ಮುನ್ನಡೆ

ಡಾ. ಎಚ್. ಎಂ. ರಾವ್. ಡಿ. ಡಿ. ಎಸ್. (ಯು. ಎಸ್. ಎ.)


ಈ ತರುಣರು ದಕ್ಷಿಣ ಕನ್ನಡ ಜಿಲ್ಲೆಯ ಹೊಸಬೆಟ್ಟು ಗ್ರಾಮದಲ್ಲಿ ೧೯೦೫ರಲ್ಲಿ ಜನ್ಮವೆತ್ತಿದರು. ಇವರು ಮಂಗಳೂರಲ್ಲಿ ಬಾಲ್ಯದ ಶಿಕ್ಷಣ ಮುಗಿಸಿ ೧೯೨೪ ರಿಂದ ೧೯೨೮ರ ವರೆಗೆ ಮದ್ರಾಸಿನಲ್ಲಿ ವೈದ್ಯ ಶಿಕ್ಷಣ ಹೊಂದಿ L. M. P. ಪದವಿಯನ್ನು ಹೊಂದಿದರು. ದಂತ ಚಿಕಿತ್ಸೆಯು ಇವರೊಲವಿನ ವಿಷಯ. ಇವರಲ್ಲಿ ಹೆಚ್ಚಿನ ಜ್ಞಾನಾರ್ಜನೆಗಾಗಿ ಇವರು ೧೯೩೬ ನೆ ಆಗಸ್ಟಿನಲ್ಲಿ ಯುರೋಪಕ್ಕೆ ಹೋದರು. ವಿಯನ್ನಾ ನಗರದಲ್ಲಿ ಕೂಡಿದ ಜಾಗತಿಕ ದಂತ ವೈದ್ಯ ಪರಿಷತ್ತಿನಲ್ಲಿ ಇವರು ಭಾರತದ ಪ್ರತಿನಿಧಿಗಳಾಗಿ ಭಾಗವಹಿಸಿದರು. ಅಮೇರಿಕೆಯಲ್ಲಿ ೧೦ ತಿಂಗಳಿದ್ದು ಆ ವೃತ್ತಿಯಲ್ಲಿ ಹೆಚ್ಚಿನ ಅನುಭವ ಪಡೆದು ಡಿ. ಡಿ. ಎಸ್. ಪದವೀಧರರಾದರು. ನಂತರ ಇಂಗ್ಲಂಡಿಗೆ ಮರಳಿ ಬರ್ಮಿಂಗ್ಹ್ಯಾಮ ವಿಶ್ವವಿದ್ಯಾಲಯದಲ್ಲಿ ಪೋಸ್ಟ ಗ್ರ್ಯಾಜುಯೇಟ್ ತರಬೇತಿಯನ್ನು ಹೊಂದಿ ದಂತ ಚಿಕಿತ್ಸೆಯಲ್ಲಿ ಗಣ್ಯಸ್ಥಾನಕ್ಕೇರಿದ ಭಾರತೀಯರಲ್ಲೊಬ್ಬರೆನಿಸಿರುವರು. ಇದೀಗ ಮಾತೃಭೂಮಿಗೆ ಬರಲಿರುವರು. ಇವರಿಂದ ಕನ್ನಡ ನಾಡಿಗೆ ಹೆಚ್ಚು ಹೆಚ್ಚಿನ ಸೇವೆ ಸಲ್ಲಲಿ.

ರಾ. ವಿಶ್ವನಾಥ ಬಾಬುರಾವ್ ಶಾನಭಾಗ ಬಿ. ಎ.

ಇವರು ಉತ್ತರ ಕನ್ನಡ ಜಿಲ್ಲೆಯವರು. ಇವರು ಪ್ರಾಥಮಿಕ ಶಿಕ್ಷಣವನ್ನು ಹೊನ್ನಾವರದಲ್ಲಿ ಮುಗಿಸಿ ತಮ್ಮ ೧೯ನೆ ವಯಸ್ಸಿಗೆ ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಿಂದ ಬಿ. ಎ. ಯಲ್ಲಿ ತೇರ್ಗಡೆ ಹೊಂದಿದರು. ಇವರು ಮೇಲಾದ ವಾಕ್ಪಟುಗಳಾಗಿದ್ದಾರೆ. ಮುಂಬಯಿ ಇಲಾಖೆಯ ಕಾಲೇಜ ವಿದ್ಯಾರ್ಥಿಗಳ ವಕ್ತೃತ್ವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹೊಂದಿ ಲಾರ್ಡ ಬ್ರೆಬೊರ್ನ ಪ್ರಶಸ್ತಿ'ಯನ್ನೂ ಕಾಶಿಯಲ್ಲಾದ ಅಂತರ್-ವಿಶ್ವವಿದ್ಯಾಲಯೀನ ಪೇಲಾಟದಲ್ಲಿ ಪ್ರಥಮ ಬಹುಮಾನವನ್ನೂ ಪಡೆದು, ಮುಂಬಯಿ ಹೈಕೋರ್ಟಿನ ಪ್ರಧಾನ ನ್ಯಾಯಮೂರ್ತಿಗಳಾದ ಸರ್ ಜಾನ್ ಬೋಮಂಟ ಮತ್ತು ಪಂ. ಮದನ ಮೋಹನ ಮಾಲವೀಯರಿಂದ ಪ್ರಶಂಸೆಯನ್ನೂ ಪಡೆದಿರುವರು. ಕೆಲವು ವರಗಳ ಹಿಂದೆ ಇಂಡಿಯನ್ ಪೋಲಿಸ ಸರ್ವಿಸ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದ ಅಮೂಲ್ಯ ಬಹುಮಾನವನ್ನು ಪಡೆದರು. ಕಳೆದ ೭-೩-೩೮ ಕ್ಕೆ ರಾ. ಶಾನಭಾಗರಿಗೆ ಮುಂಬಯಿ ಗವರ್ನರರು ಈ ಇಲಾಖೆಯ ಪ್ರೊಬೇಶನರಿ ಅಸಿಸ್ಟಂಟ ಸುಪರಿಂಟೆಂಡೆಂಟರಾಗಿ ನಿಯಮಿಸಿದ್ದಾರೆ.

ಡಾ. ವ್ಹಿ. ಕೆ. ಆರ್. ವ್ಹಿ. ರಾವ್

ನಮ್ಮ ಕರ್ನಾಟಕ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರೊಫೆಸರರಾಗಿದ್ದ ಡಾ. ವ್ಹಿ. ಕೆ. ಆರ್. ವ್ಹಿ. ರಾವ್ ಅವರು ಬೊಂಬಾಯಿ ಸರಕಾರದಿಂದ ಪ್ರಾಂತದ ಆರ್ಥಿಕ ಅಭಿವೃದ್ಧಿ ವಿಚಾರಣಾ ಸಮಿತಿಯ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ.



ಕರ್ನಾಟಕ ಏಕೀಕರಣ

ಶ್ರೀಮಾನ್ ವಿಶ್ವನಾಥರಾವ ಜೋಗರವರು ಮುಂಬಯಿ ಅಸೆಂಬ್ಲಿಯಲ್ಲಿ ಮಂಡಿಸಿದ ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದ ಗೊತ್ತುವಳಿಯು ಬಹುಮತದಿಂದ ಅಂಗೀಕೃತವಾಯಿತು. ಪ್ರತಿಗಾಮಿಗಳ ಕೀಳು ಪ್ರಚಾರಕ್ಕೆ ಕಿವಿಗೊಡದೆ ಧಿಟ್ಟತನದಿಂದ ಅಸೆಂಬ್ಲಿಯಲ್ಲಿ ಏಕೀಕರಣದ ಘಂಟಾಘೋಷವನ್ನು ಮಾಡಿಸಿದುದಕ್ಕಾಗಿ ಶ್ರೀಮಾನ್ ಜೋಗರವರಿಗೂ ಅವರಿಗೆ ಬೆಂಬಲವಿತ್ತ ಮುಂದಾಳುಗಳಿಗೂ ಕರ್ನಾಟಕವು ಋಣಿಯಾಗಿದೆ.

ಶ್ರೀಮಾನ್ ಎಚ್. ಜಿ. ಮುದ್ಗಲರವರ ಸ್ತುತ್ಯ ಉಪಕ್ರಮ.

ಹಿಂದಕ್ಕೆ ಜಯಕರ್ನಾಟಕದಲ್ಲಿ ತಮ್ಮ ಲೇಖನಗಳಿಂದ ವಾಚಕರಿಗೆ ಪರಿಚಿತರಾದ ಶ್ರೀಮಾನ್. ಎಚ್, ಜಿ

ಮುದ್ಗಲ ಅವರು ಈಗ ಮುಂಬಯಿಯಲ್ಲಿ 'ಇಂಡಿಯನ್ ಮಾರ್ಕೆಟ' ಎಂಬ ಇಂಗ್ಲಿಷ್ ಪಾಕ್ಷಿಕ ಪತ್ರಿಕೆಯನ್ನು ಹೊರಡಿಸಿದ್ದಾರೆ. ಇವರು ಮುಂಬಯಿಯಲ್ಲಿ ನಡೆದ ಚತುರ್ಥ ಭಾರತ ವಸ್ತುಪ್ರದರ್ಶನದಲ್ಲಿ ಉತ್ಕೃಷ್ಟ ಪದ್ಧತಿಯಿಂದ ತಮ್ಮ ವಸ್ತುಗಳನ್ನು ಪ್ರದರ್ಶಿಸುವವರಿಗೆ ಒಂದು ಬೆಳ್ಳಿಯ ಕಪ್ಪನ್ನು ಬಹುಮಾನವಾಗಿ ಇಟ್ಟಿದ್ದರು. ಗಣ್ಯರಾದ ಪರೀಕ್ಷಕ ವರ್ಗದಲ್ಲಿ ಶ್ರೀಮಾನ್ ಮುದ್ಗಲರೂ ಒಬ್ಬರಾಗಿದ್ದರು. ಆ ಕಪ್ಪು ಆಧುನಿಕ ಯಂತ್ರಗಳ ಸಹಾಯದಿಂದ ಔಷಧಗಳನ್ನು ತಯಾರಿಸುವ ಸಿಪ್ಲಾ ಕಂಪನಿಯವರಿಗೆ ಸಿಕ್ಕಿತು. ಭಾರತೀಯ ವ್ಯಾಪಾರೋದ್ಯಮಗಳ ಪ್ರಗತಿಗಾಗಿ ಹೆಣಗುವ 'ಇಂಡಿಯನ್ ಮಾರ್ಕೆಟ' ಪತ್ರಿಕೆಗೂ ಉದ್ಯೋಗ ಸಂಸ್ಥೆಗಳಿಗೂ ಗೆಳೆತನ ಬೆಳೆಸುವುದೇ ಈ ಬಹುಮಾನದ ಉದ್ದೇಶವೆಂದು ಶ್ರೀಮಾನ್[illegible] ತಿಳಿಸಿದ್ದಾರೆ.

ಮೈಸೂರಿನಲ್ಲಿ ಕಾಂಗ್ರೆಸ್ಸು

ಈ ವರೆಗಿನ ರಾಷ್ಟ್ರೀಯ ಆಂದೋಲನ[illegible] ವಾಗಿ ಬ್ರಿಟಿಶ್ ಭಾರತದಲ್ಲಿ ನಡೆಯುತ್ತಿದ್ದ[illegible] ಗಳಲ್ಲಿಯ ದೇಶಾಭಿಮಾನಿಗಳೂ ಅವುಗಳಲ್ಲಿ[illegible] ಕಷ್ಟನಷ್ಟಗಳಿಗೆ ಎದೆಗೊಡುತ್ತಿದ್ದರು. ಆದರೆ[illegible] ಸಂಗ್ರಾಮದ ಕಿಡಿಗಳು ಮೈಸೂರು ಸಂ[illegible] ಏಳುತ್ತಿದ್ದುದು ಕರ್ನಾಟಕಕ್ಕೆ ಹೆಮ್ಮೆ[illegible] ಮೊನ್ನೆ ಶಿವಪುರದಲ್ಲಿ ಮೈಸೂರ ಕಾಂಗ್ರೆಸ್ಸಿ[illegible]ನಿಂದ ಈ ವರೆಗೆ ಅನೇಕರು ರಾಷ್ಟ್ರಧ್ವಜ[illegible]ದಿಂದ ಸೆರೆಮನೆಗೆ ಹೋಗಿದ್ದಾರೆ. ಆ ವೀರ[illegible] ಅಭಿನಂದನಕ್ಕೆ ಪಾತ್ರರೇ ಸೈ.

ಸಾದರಸ್ವೀಕಾರ

೨೧. **ಬುದ್ಧಿಯೋಗ ಅಥವಾ ಗೀತೆಯ 'ಗುಹ್ಯ' ಅಧ್ಯಾತ್ಮಶಾಸ್ತ್ರ**, ಲೇಖಕರು: ಶ್ರೀ. ಮಗದಲ ರಾಮಚಂದ್ರ. ಪ್ರಕಾಶಕರು: ವಾಮನ ರಾಮಚಂದ್ರ ಮುಧೋಳಕರ. ಕ್ರೌ. ೧/೮ದ ೩೮೦ ಪುಟಗಳು. ಬೆಲೆ. ೧—೮—೦

೨೪. **ಚಿರಸ್ಮರಣೀಯರಾದ ಚಿರಲಿಂಗ ಸ್ವಾಮಿಗಳು ಕಲಬುರ್ಗಿಮಠ**, ಲೇಖಕರು: ಮ. ಮ. ಮಿರ್ಜಿ. ಪ್ರಕಾಶಕರು: ಗು. ಮ. ಮಿರ್ಜಿ, ಅಡ್ವೊಕೇಟರು ಡೆ. ೧/೮ದ ೨೦ ಪುಟಗಳು. ಬೆಲೆ. ೦—೩—೦.

೨೮. **ಹಳ್ಳಿಯ ವೈದ್ಯ**, ಲೇಖಕರು: ವೈದ್ಯ, ಮ. ವಾ. ಬುರ್ಲಿ. ಪ್ರಕಾಶಕರು: ವೈದ್ಯ ಗಂಗಾಧರ ವಿಷ್ಣುಶಾಸ್ತ್ರಿ ಪುರಾಣಿಕ, ಶ್ರೀ. ಧೂತಪಾಪೇಶ್ವರ ಆಯುರೌಷಧಿ ಕಾರಖಾನೆ ಪನವೇಲ ಕ್ರೌ. ೧/೮ದ ೪೦೦ ಪುಟಗಳು, ಬೆಲೆ ೧—೮—೦

೩೧. **ಕೊಪಣ-ಕೊಪ್ಪಳ**, ಲೇಕಖರು: ದಿವಂಗತ, ಶ್ರೀ. ನಾ. ಭಾ. ಶಾಸ್ತ್ರಿಗಳು ಕೊಪ್ಪಳ. ಪ್ರಕಾಶಕರು: ಕರ್ನಾಟಕ ಸಂಘ ಕಿಲ್ಲೆ, ಕೊಪ್ಪಳ. ಡೆ. ೧/೮ದ ೧೮ ಪುಟಗಳು,

೩೪. **ಮದೋನ್ಮತ್ತ ಜಗದೀಶ**, (ಸಾಮಾಜಿಕ ನಾಟಕ) ಲೇಖಕರು: ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ, ಬಿ. ಎ., ಕ್ರೌ. ೧/೮ದ ೧೦೧ ಪುಟಗಳು. ಬೆಲೆ ೦—೮—೦.

೩೬. **ಗ್ರಹಚಾರ ಅಥವಾ ಮ್ಯಾನೇಜರ ಮುಕುಂದ**, (ಸಾಮಾಜಿಕ ನಾಟಕ) ಲೇಖಕರು: ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ, ಬಿ. ಎ., ಕ್ರೌ. ೧/[illegible]ಗಳು ಬೆಲೆ ೦—೧೨—೦.

೩೭. **ನೂತನ ಸಂಯುಕ್ತ-ರಾಜ್ಯಾಂ[illegible]** ಲೇಖಕರು: ಎನ್. ಎಸ್. ಪದಕಿ, ಪ[illegible] ಮೈಸೂರು. ಕ್ರೌ. ೧/೮ದ ೩೮ ಪುಟಗಳು, ಬೆ[illegible]

೪೦. **ಶ್ರೀವಿವೇಕಾನಂದ ಸ್ವಾಮಿಗಳ[illegible] ಯೋಗ**, ಅನುವಾದಕರು: ವೈ. ಸುಬ್ಬರಾವ[illegible] ಅಧ್ಯಾತ್ಮ ಪ್ರಕಾಶ ಕಾರ್ಯಾಲಯ ಬೆಂಗ[illegible] ಡೆ. ೧/೮ದ ೧೧೧ ಪುಟಗಳು. ಬೆಲೆ ೦—[illegible] ೦—೧೨—೦.

ಪತ್ರಿಕೆಗಳು

೩೯. **ಚಿತ್ರಾ** (ಸಿನೇಮಾ ವೃತ್ತಾಂತ). ಸ[illegible] ಮಾಸ್ತರ ವೆಂಕಣ್ಣ, ಪ್ರಕಾಶಕರು: ಕ[illegible] ಮಂಗಳೂರ. ಡೆ. ೧/೮ದ ೪೯ ಪುಟಗಳು. [illegible] ೦—೧—೦.

೨೨. **ಚಿತ್ರಸಮಾಚಾರ**, ಸಂಪಾದಕರು: [illegible] ಕೃಷ್ಣಮೂರ್ತಿ ಬೆಂಗಳೂರ ಸಿಟಿ, ಕ್ರೌ. ೧/[illegible]ಗಳು. ವಾ. ಚಂ. ೧—೦—೦.

೨೫. **ಬೆಳಗು**, ತ್ರೈಮಾಸಿಕ, ಸಂಚಾ[illegible] ಟಕ ಸಂಘ, ಕಿಲ್ಲೆ ಕೊಪ್ಪಳ, ಕ್ರೌ. ೧/೮ದ [illegible]


ಜಯಕರ್ನಾಟಕ



UNE 1938

ಚಲಚ್ಚಿತ್ರತಾರಕೆ ಮಿಸ್ ಮಾಧುರೀ

NNAS S



ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ

ಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ

ಪರಿವಿಡಿ

★

ಜೂನ್ ೧೯೩೮
ಸಂಪುಟ ೧೬ ಸಂಚಿಕೆ ೬

'ನಂದಕುಮಾರ'ದಲ್ಲಿಯ ಕೃಷ್ಣ (ಮುಖಚಿತ್ರ) ....
ನಿವೇದನ (ಕವನ) .... 'ಶ್ರೀನಿವಾಸ' ೪೦೩
ಪ್ರಾಚೀನ ಆರ್ಯಾವರ್ತದ 'ಮಿಸ್ ಮೇಯೋ' ....ಶ್ರೀ. ಜೋಗಳೇಕರ ಪಾಂಡುರಂಗರಾಯರು ೪೦೮
ನನ್ನ ಕಾಂಗಡಾ ಪ್ರವಾಸ (ಸಚಿತ್ರ) .... ಶ್ರೀ. ಭಾರತಸಂಚಾರಿ ಗೋಸಾವಿ ೪೧೩
ವೀಣೆ (ಸಣ್ಣ ಕತೆ) .... ಅನುವಾದಕರು : ಶ್ರೀಕೃಷ್ಣ, ಶಾರದಾಮಂಡಲ, ವಿಜಯಪುರ ೪೧೯
ಚಂದ್ರಪ್ರವಾಸ (ವೈಜ್ಞಾನಿಕ ಕತೆ- ಸಚಿತ್ರ) .... ಶ್ರೀ. ಎಚ್. ಸೀತಾರಾಮರಾವ್, ಎಂ. ಎಸ್‌ಸಿ. ೪೨೩
ವಸಂತರಾಯನ ಮದುವೆ (ಸಚಿತ್ರ ಕತೆ) .... ಸೌ. ಶ್ಯಾಮಲೆ ೪೩೧
ಅಣೋರಣೀಯಾನ್ ಮಹತೋ ಮಹೀಯಾನ್ ೪೪೦
ಉಂಡಾಡಿಗನ ಮುಂಡಿಗೆ .... 'ಉಂಡಾಡಿ' ೪೪೧
'ಓಂ ಶಾಂತಿಃ ಶಾಂತಿಃ' ಅರ್ಥಾತ್ ಆಂಗ್ಲೋ-ಇಟಾಲಿಯನ್ ಸಂಧಾನ .... 'ನಾಗರಿಕ' ೪೪೪
ಆರೋಗ್ಯಬಿಂದು ೪೪೮
ಪಿಡೋಗ್ರಂಥಿಗಳೂ ಲಿಂಗಭೇದವೂ (ಕಾಮವಿಜ್ಞಾನ-ಸಚಿತ್ರ) ಡಾ. ಗೋಪಾಲಕೃಷ್ಣರಾಯರು, ಸಂ. ಕಲಿಯುಗ ೪೪೯
ಸಾನಿಯ ನಾನು (ಏಕಾಂಕ ರೂಪಕ) .... ಶ್ರೀ. ನಂಜುಂಡರಾವ್, ಪಾವಗಡ ೪೫೩
ನಗಬೇಡಿ! ೪೫೯
ಅಖಿಲ ಕರ್ನಾಟಕ ಮಕ್ಕಳ ಕೂಟ (ಸಚಿತ್ರ) .... 'ನಿರೀಕ್ಷಕ' ೪೬೦
ಹರಿಹರ (ಕವನ) .... ಶ್ರೀ. ಚಂದ್ರಶೇಖರ ದೇವರು, ಅಡ್ನೂರು ೪೬೧
ದರಿದ್ರ (ಕವನ) .... ಶ್ರೀ. ಟಿ. ಎನ್. ಶ್ರೀನಿವಾಸ ಮೂರ್ತಿ ೪೬೨
ಬಸವಣ್ಣನವರ ಬೆಳವಳಿಗೆ (ಸಚಿತ್ರ) .... ಶ್ರೀ. ಅ. ನ. ಕೃಷ್ಣರಾಯರು ೪೬೮
ಜ್ಞಾನ-ವಿಜ್ಞಾನ ೪೭೩
...ಸತ್ತ ಸೈನಿಕರು ದೇವರಾಗುವರು!—ಕಲಕತ್ತೆಯ ಕರಿ ಕೋಣೆಯ ಕಥೆ—ಬೇನೆಗಳನ್ನು ಗುಣಪಡಿಸಲು ....
...ಪುಸ್ತಕಗಳು!—ಯುಗೊಸ್ಲಾವಿಯದ ಮುಸಲ್ಮಾನ ಮಹಿಳೆಯರು—ಹಲ್ಲುನೋವಿನ ಚರಿತ್ರೆ—ಸಾಮುದಾಯಿಕ ....
...ಮನೋವಿಶ್ಲೇಷಣ—ಹೊಗೆ ನುಂಗುವ ಹೊಗೆಗೊಳವೆ—ದಾಂಪತ್ಯವೃದ್ಧಿಯ ಆಹಾರ—ಬರ್ನಾರ್ಡ್ ಶಾ ....
...ಅವರ ಅನುಭವ—ಮೂಗು ಕಿವಿಗಳ ಕತ್ತಿ—ಕಾಮನ ಬಿಲ್ಲಿನ ಸಿಗರೇಟ್! ....
ವೀಣಾವಿತಾನ .... (ಎಂ. ಗೋಪಾಲಕೃಷ್ಣರಾವ; ಸಂ. ಜ. ಕ.) ೪೭೮
ಕನ್ನಡದ ಮುನ್ನಡೆ ೪೮೧
ವಿಚಾರವೇದಿಕೆ ೪೮೩
...ಆಂಗ್ಲೋ-ಐರಿಷ್ ಸಂಧಾನ—ಐರ್ಲಂಡಿನ ಅಧ್ಯಕ್ಷರು—ಜಿನ್ನಾ ಅವರ ಅಪಲಾಪ—ಐಕ್ಯದ ಹೆಸರಿನಲ್ಲಿ ಸಂಕೋಚ ....
...ಲೆಗಳು ಬೇಡ—ಮದರಾಸಿನ ಮುಸ್ಲಿಂ ಹೆಂಗಳೆಯರು—ಗಾಂಧಿ-ಲಿನ್ಲಿಥ್ಗೊ ಭೆಟ್ಟಿ—ಮತಪರಿವರ್ತನೆಯ ....
...ಮುಂಗುರುತು—ಪ್ರೊ. ಡಿ. ಕೆ. ಕರ್ವೆ—ಮೈಸೂರಿಗೆ ಮಂಗಲದಿನಗಳು— ....
ನಮ್ಮ ಮಾತು ೪೮೬

ಬರಲಿವೆ

ಜೇನುಹುಟ್ಟಿನ ಗುಟ್ಟು
ಭಾರತಸಂಚಾರಿ ಗೋಸಾವಿ

ಬೆಂದ ಜೀವಗಳು (ಕತೆ)
ಶ್ರೀ. ಬಸವರಾಜ ಕಟ್ಟೀಮನಿ

ಜೀವನ ಸಂಗ್ರಾಮ (ಪ್ರಕೃತಿವಿಜ್ಞಾನ)
ಪ್ರೊ. ಎಂ. ಬಿ. ರಾವ್

ಬ್ರಹ್ಮಚರ್ಯ (ಕಾಮವಿಜ್ಞಾನ)
ಡಾ. ಗೋಪಾಲಕೃಷ್ಣರಾಯರು

ಸಾಲಿಗೀಲಿ ಬಿಟ್ಟು? (ಹರಟೆ)
'ಉಂಡಾಡಿ'

ವರ್ಧಾ ಶಿಕ್ಷಣಯೋಜನೆ
ಶ್ರೀ. ಕೆ. ಸಂಪದ್ಗಿರಿರಾಯರು ಎಂ. ಎ. ಬೆಂಗಳೂರು



'ನಂದಕುಮಾರ'ದಲ್ಲಿಯ ಕೃಷ್ಣ

ಜಯಕರ್ನಾಟಕ

ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಶುದ್ಧ ೩ (೧—೬—೧೯೩೮) | ಸಂಚಿಕೆ ೬

ನಿವೇದನ

ಜೀವನವಿದ ಸ್ವೀಕರಿಸೈ
ದೇವ ದಿನದಿನವ ನಿನ್ನದೆಂದೆನಿಸಿ ॥

ಸಲಿಗೆಯೊಳೆಲ್ಲಾ ದಿನವನೆನ್ನೊಡನೆ
ಕಳೆಯಲಾಗದೊಡೆ ಕಾರ್ಯದ ಕತದಿ
ಕೆಲಕೆ ಬಂದು ಕ್ಷಣ ನಿಂದು ನಡೆಯೈ
ಜಲಜನಯನ ಇದನಾದರು ಸಲಿಸೈ ॥

ಮನೆಗೆ ಬರಲು ಮನವಿಲ್ಲವಾದೊಡೆ
ಎನಗೆ ಕೇಳ್ವವೊಲು ದೂರದಿಂದಲಿ
ಕನಕರಿಸೊಂದೇ ಸ್ವರವನು ಕೊಳಲಿಂದೆ
ನೆನೆಯುತೆ ಅದನು ದಿನವನು ಕಳೆವೆನು ॥

ಇಂತಾದರು ಎಂತಾದರು ನಿನ್ನಯ
ಚಿಂತೆಯಿಂದೆ ಇರವೆಲ್ಲವ ಸೋಕಿ
ಸಂತತ ನಿನ್ನೊಳು ಬಾಳ್ವವೊಲೆಸಗಿ
ಅಂತರಾತ್ಮ ಎನ್ನ ನಿನ್ನವನೆನಿಸೈ ॥

—ಶ್ರೀನಿವಾಸ

ಪ್ರಾಚೀನ ಆರ್ಯಾವರ್ತದ 'ಮಿಸ್ ಮೇಯೋ'

ಲೇ:— ಶ್ರೀಮಾನ್ ಜೋಗಳೇಕರ ಪಾಂಡುರಂಗರಾಯರು B. A. S. T. C.

★

'ಮದರ ಇಂಡಿಯ'ದಲ್ಲಿ ಮಿಸ್ ಮೇಯೋ ಬರೆದ ವಿಷಯಗಳ ಹಿನ್ನೆಲದಲ್ಲಿ ಭಾರತೀಯ[illegible] ಪ್ರಪಂಚದ ಕಣ್ಣಿನಲ್ಲಿ ತೀರ ಕಾಡು ಕೀಳುಜನಾಂಗವೆಂದು ಚಿತ್ರಿಸುವ ಉದ್ದೇಶವಿತ್ತು. [illegible] ಬರೆದುದರಲ್ಲಿ ವಾಸ್ತವಾಂಶವು ಬೇಕಾದಷ್ಟು ಇದ್ದರೂ ಅವಳ ದುಷ್ಟ ಉದ್ದೇಶವೇ 'ಮ[illegible] ಇಂಡಿಯ'ವನ್ನು ಗಟಾರಗಳ ವರದಿಯನ್ನಾಗಿ ಮಾಡಿಬಿಟ್ಟಿದೆ. ಅವಳಿಷ್ಟೆಂದರೂ ನಮಗೆ [illegible] ನಳು. ಆದರೆ ಪೂಜ್ಯನಾದ ವಾಲ್ಮೀಕಿ ಮಹರ್ಷಿಯ (?) ಕೃತಿಗಳನ್ನು ತಾವು ಪರ್ಯಾಲೋ[illegible] ಚಿಸಿರುವಿರಾ? ಮೊದಲಿನಿಂದ ಭಾರತದಲ್ಲಿಯೇ ಇದ್ದು ಉತ್ತಮ ಸಂಸ್ಕೃತಿಯನ್ನು [illegible] ಕೊಂಡು ಬಂದಿದ್ದ ದಕ್ಷಿಣದ ದ್ರಾವಿಡರನ್ನು 'ಮಂಗಗಳೆ'ಂದು ಆ ಮಹರ್ಷಿಯು ರಾಮಾ[illegible] ದಲ್ಲಿ ಚಿತ್ರಿಸಿಲ್ಲವೇ? ಆರ್ಯರ ಹೊಗಳಿಕೆಗೆ ಅನಾರ್ಯರ ತೆಗಳಿಕೆಯೇ? ಹಾಗಾದರೆ ಆ ಮಹ[illegible] ಯನ್ನೂ ನಾವು ಪ್ರಾಚೀನ ಆರ್ಯಾವರ್ತದ 'ಮಿಸ್ ಮೇಯೋ' ಎಂದು ಏಕೆ ಕರೆಯಕೂಡ[illegible]

★

ಐತಿಹಾಸಿಕ ಕ್ಷೇತ್ರದಲ್ಲಾದಷ್ಟು ಸತ್ಯದ ಕೊಲೆಯು ಬೇರೆ ಯಾವ ಕ್ಷೇತ್ರದಲ್ಲಿಯೂ ಆಗಿರಲಿಕ್ಕಿಲ್ಲ. ಇದ್ದುದನ್ನು ಇದ್ದಂತೆ ಹೇಳುವ ಇತಿಹಾಸಕಾರರಷ್ಟೇ ನಿರ್ವಿಕಾರ ಮನಸ್ಸಿನಿಂದ ಗತಸಂಗತಿಗಳನ್ನು ಅರಿಯಲಿಚ್ಛಿಸುವ ಇತಿಹಾಸಭಕ್ತರೂ ಅಪರೂಪ. ಇತಿಹಾಸವನ್ನು ಪಕ್ಷಪಾತವಿಲ್ಲದೆ ಕಲಿಯಬೇಕೆಂಬ ತತ್ವವನ್ನು ಬಾಯ್ಮಾತಿನಿಂದ ಎಲ್ಲರೂ ಮನ್ನಿಸಿದರೂ ನಿತ್ಯದ ವ್ಯವಹಾರದಲ್ಲಿ ಈ ತತ್ವಕ್ಕೆ ಬಹಳ ಮಾಡಿ ಎಲ್ಲರೂ ಮಣ್ಣು ಕೊಡುತ್ತ ಬಂದಿರುವರು ಎಂಬುದು ಕಂಡ ಮಾತು.

ಅಹಂಕಾರಕ್ಕೀಡಾಗಿ ವಿವೇಕಭ್ರಷ್ಟರಾಗುವವರು, ಕೇವಲ ಜನಸಾಮಾನ್ಯರಷ್ಟೇ ಅಲ್ಲ, ದೊಡ್ಡ ದೊಡ್ಡ ಪಂಡಿತರೂ, 'ತನ್ನತನ'ದ ದುರಭಿಮಾನಕ್ಕೆ ತುತ್ತಾಗಿ, ತರ್ಕಶಾಸ್ತ್ರಕ್ಕೆ ತೀರ ವಿರುದ್ಧವಾದ ಹಾಗೂ ವಸ್ತುಸ್ಥಿತಿಯ ವಿಪರ್ಯಾಸ ಮಾಡುವ ಇತಿಹಾಸಗಳನ್ನು ಬರೆದಿರುವರು. ಉದಾಹರಣಕ್ಕಾಗಿ ಪ್ರಸಿದ್ಧ ಆಂಗ್ಲ ಇತಿಹಾಸಕರ್ತರಾದ 'ಗ್ರ್ಯಾಂಟಡಫ್' ಮೊದಲಾದವರ ಗ್ರಂಥಗಳನ್ನು ಪರಿಶೀಲಿಸಿದರೆ, ನಾವು ಮೇಲೆ ಹೇಳಿದ ಮಾತಿನಲ್ಲಿ ಎಷ್ಟೂ ಅತಿಶಯೋಕ್ತಿಯಿಲ್ಲೆಂಬುದು ಕಂಡು ಬರಬಹುದು. 'ಗ್ರ್ಯಾಂಟಡಫ್' ಸಾಹೇಬರು ಉಳಿದ ಇತಿಹಾಸಕಾರರಂತೆಯೇ ಪೂರ್ವಗ್ರಹದೂಷಿತರಾದವರು! ಜಗತ್ತಿನಲ್ಲಿ 'ಆಂಗ್ಲರೇ ಶ್ರೇಷ್ಠರು, ಅವರಿಗೆ ಅಂಕಿತರಾದ ಭಾರತೀಯರು ಕಾಡು ಇರಲೇ ಬೇಕು,' ಎಂದು ಅವರು ನಂಬಿದ್ದರಿಂದ ಅವರು ಹಿಂದುಸ್ತಾನದ ಬಗ್ಗೆ ಬರೆದ ಯಾವತ್ತೂ ಬರೆಹಗಳಲ್ಲಿ ಭಾರತೀಯ ಸಂಸ್ಥಾನಿಕರನ್ನೂ [illegible]ಗಳನ್ನೂ ಕಾಡಿಗೆಯಿಂದ ಚಿತ್ರಿಸಿ, ತಮ್ಮ [illegible]ರಾದ ಆಂಗ್ಲರನ್ನು ಚೊಕ್ಕ ಬಿಳಿಯ ಬಣ್ಣ[illegible]ಸಿರುವರು. ಸುಪ್ರಸಿದ್ಧ ವಂಗ ಇತಿಹಾಸಕರ್ತ[illegible]ನಾಥ ಸರ್ಕಾರ'ರವರು ಮರಾಟರ ವಿಷಯ[illegible]ಪಾರ್ಯವನ್ನು ತೋರಿಸಿದ್ದಾರೆ. ಅದರಂತೆಯೇ [illegible]ರಿಗೂ ಚಿರಪರಿಚಿತರಾದ 'ಭಾರತಾಚಾ[illegible] ಚಿಂತಾಮಣಿರಾಯರು ತಮ್ಮ 'ಮಧ್ಯಯು[illegible] (Medieval India)ದಲ್ಲಿ ಹಲಕೆಲವು ರಾಜ್ಯ[illegible] ಕನ್ನಡಿಗರಿದ್ದರೂ ಅವರು ಮಹಾರಾಷ್ಟ್ರೀಯರ[illegible] ಪ್ರತಿಪಾದಿಸಿದ್ದಾರೆ. ಇದಕ್ಕೆ ಅವರ 'ಮ[illegible]ರಾಷ್ಟ್ರ'ದ ಹುಚ್ಚು ಮುಖ್ಯ ಕಾರಣವೆಂ[illegible] ಹೇಳಬೇಕಾಗಿಲ್ಲ. ಹಾಗೆಯೇ ನಮ್ಮ [illegible] ಸಂಶೋಧಕರಲ್ಲಿ ಹಲವರು ಜಾತೀಯ[illegible] ಪ್ರಾಂತೀಯ ಭಾವನೆಗಳಿಗೀಡಾಗಿ, ತಮ್ಮ[illegible] ಬಡೆದಿರುವರೆಂಬುದನ್ನು ನಾವೆಲ್ಲರೂ ಎಷ್ಟೋ[illegible]ದ್ದೇವೆ. ಅಲ್ಲದೆ ಅಮೇರಿಕೆಯಿಂದ ಇಲ್ಲಿಗೆ [illegible] ಕಲಕತ್ತೆ, ಲಾಹೋರ, ಮುಂತಾದ ದೊಡ್ಡ [illegible] ಗಳ ನರಕಪ್ರಾಯ ದೃಶ್ಯಗಳನ್ನು ನೋಡಿ [illegible] ಹಾಳು ಹಳ್ಳಿಗಳ ಭೀಕರ ದೃಶ್ಯವನ್ನೂ ನಾ[illegible] ಪ್ರವಾಸ ಮಾಡುವಾಗ ನೋಡಿ, ಎಷ್ಟರ [illegible] ಜ್ಞಾನವಾಗಿರಬಹುದೋ ಅಂಥ ಅಗಾಧ [illegible] ಹದಿಯ ಮೇಲೆ ತನ್ನ 'ಭಾರತ ಮಾತೆ' (M[illegible]

ಎಂಬ ಹೆಸರಿಗೆ ಎಷ್ಟು ಸಲ್ಲದ ಕುತ್ಸಿತ ಗ್ರಂಥವನ್ನು 'ಮಿಸ್ ಮೇಯೋ' ಎಂಬ ಅಮೇರಿಕೆಯ 'ಪ್ರಾಜ್ಞ' ಕುಮಾರಿಯು ಬರೆದುದನ್ನು ನಮ್ಮಲ್ಲಿಯ ಹೆಸುಳೆಗಳೂ ಬಲ್ಲುವು.

ರಾಮಾಯಣವೆಂದರೆ ರಘುಕುಲೋತ್ತಮನಾದ ಶ್ರೀ ರಾಮಚಂದ್ರನ ಕತೆ. ಇದರಲ್ಲಿ ರಾಮಚಂದ್ರನ ಇಡಿಯ ಚರಿತ್ರೆಯೂ ಅಡಕವಾಗಿದೆ; ರಾಮನ ಕಾಲದಲ್ಲಿ ಉತ್ತರ ಭಾರತವು ಅಂದರೆ ಹಿಮಾಚಲ-ವಿಂಧ್ಯಾಚಲಗಳ ನಡು ವಣ ಪ್ರದೇಶವು; ಆರ್ಯಾವರ್ತವು, ಆರ್ಯರ ಆಳಿಕೆಗೆ ಸಂಪೂರ್ಣ ಒಳಪಟ್ಟಿತ್ತೆಂಬುದಾಗಿ ತೋರುತ್ತದೆ. ದಕ್ಷಿಣ ಭಾರತವು ಅಂದರೆ ವಿಂಧ್ಯಾಚಲದಿಂದ ಕನ್ಯಾಕುಮಾರಿಯ ವರೆಗಿನ ಪ್ರದೇಶವು ದ್ರವಿಡ ಹಾಗೂ ಆದಿದ್ರವಿಡರ ವಶ ದಲ್ಲಿದ್ದಂತೆ ತೋರುತ್ತದೆ. ಮುಂದೆ ರಾಮನು ದಕ್ಷಿಣ ಭಾರತದಲ್ಲಿ ಬಂದು ದಕ್ಷಿಣ ಭಾರತವನ್ನು ದ್ರವಿಡ ಹಾಗೂ ಆದಿದ್ರವಿಡರ ನೆರವಿನಿಂದ ಆರ್ಯರ ಆಳಿಕೆಗೆ ಒಳಪಡಿಸಿ ದನೆಂಬುದು ರಾಮಾಯಣದಿಂದ ಸಿದ್ಧವಾಗುತ್ತದೆ. ಆರ್ಯಾ ವರ್ತದಲ್ಲಿ ಅಂದರೆ ಉತ್ತರ ಭಾರತದಲ್ಲಿ ಆರ್ಯರ ಸಂಪೂರ್ಣ ಅಧಿಕಾರ ನೆಲೆಗೊಂಡಿದ್ದು, ಅಲ್ಲಿ ಆರ್ಯಸಂಸ್ಕೃತಿಯು ಬೇರೂರಿತ್ತು. ದಕ್ಷಿಣ ಭಾರತದಲ್ಲಿ, ಅನಾರ್ಯರ ಎಷ್ಟೋ ರಾಜ್ಯಗಳೂ, ತಂಡಗಳೂ ಇದ್ದು, ಅಲ್ಲಿ ಅನಾರ್ಯಸಂಸ್ಕೃತಿ ಗಳು ಪ್ರಚಾರದಲ್ಲಿದ್ದುವು. ಇವೆಲ್ಲ ಸಂಸ್ಕೃತಿಗಳನ್ನು ಪರಿ ಶೀಲಿಸಲಾಗಿ ಆರ್ಯಸಂಸ್ಕೃತಿಯು ಮಿಗಿಲಾದುದೂ ಪ್ರಭಾವಶಾಲಿಯೂ ಆಕ್ರಮಣಶೀಲವೂ ಇದ್ದಿತೆಂಬುದು ಕಂಡುಬರಬಹುದು. ಪರಿಸ್ಥಿತಿಯು ಹೀಗಿರುವಾಗ ಆಗಿನ ಕಾಲದಲ್ಲಿ ಆರ್ಯರಿಗೂ, ಅನಾರ್ಯರಿಗೂ ತೀವ್ರ ವ್ಯತ್ಯಾಸ-ವೈಮನಸ್ಯಾದಿಗಳು ಉಂಟಾಗಿದ್ದುವೆಂಬುದಕ್ಕೆ ಸಂದೇಹವಿಲ್ಲ. ಆರ್ಯರು ಎಷ್ಟು ಸುಸಂಸ್ಕೃತರಿದ್ದರೋ ಅಷ್ಟೇ ಸುಸಂಘ ಟಿತರಾಗಿದ್ದರೆಂಬಂತೆ ತೋರುತ್ತದೆ. ಅನಾರ್ಯರು ಮಾತ್ರ ಗುಂಪುಗುಂಪಾಗಿ ಒಳಜಗಳಕ್ಕೀಡಾಗಿ, ಅಸಂಘಟಿತರಾಗಿ, ಏಕಾಧಿಪತ್ಯವಿಲ್ಲದ ಮೂಲಕ ಸುಸಂಸ್ಕೃತರಾಗಲು ಅಗ ಅಸಮರ್ಥರಾಗಿದ್ದಲ್ಲಿ ಆಶ್ಚರ್ಯವಿಲ್ಲ. ತೆಂಕಣಭಾರತದಲ್ಲಿ ಎಷ್ಟೋ ತಂಡಗಳೂ ಜನಾಂಗಗಳೂ ಇದ್ದುವೆಂದು ಹೇಳ ಬ್ಬಾಯಿತು. ಇವುಗಳಲ್ಲಿ ದ್ರವಿಡ ಜನಾಂಗಗಳು ಮಿಗಿಲಾದ ಸುಸಂಸ್ಕೃತಿಯನ್ನು ಪಡೆದವರೂ ಆಕ್ರಮಣಶೀಲರೂ ಆಗಿರಲಿಕ್ಕೆ ಸಾಕು. ಇವರು, ಅಂದರೆ ದ್ರವಿಡರು ಆದಿ ದ್ರವಿಡಾದಿ ತಮಗಿಂತ ಹೀನ ಸಂಸ್ಕೃತಿಯವರನ್ನು ಫಲ ವತ್ತಾದ ನಾಡಿನೊಳಗಿಂದ ಹೊಡೆದೋಡಿಸಿ ಅವರನ್ನು ದಂಡಕಾರಣ್ಯ, ಸಿಂಹಲದ್ವೀಪ ಮುಂತಾದ ಕಡೆಗೆ ದಬ್ಬಿರ ಲಿಕ್ಕೆ ಸಾಕು.

ಆರ್ಯರು ಅನಾರ್ಯರಿಂದ ಬಹಿರಂಗದಲ್ಲಿಯೂ ಅಂತ ರಂಗದಲ್ಲಿಯೂ ತೀರ ಭಿನ್ನರಾಗಿದ್ದರು. ರಘುವಂಶದಲ್ಲಿ ದಿಲೀಪ ಮುಂತಾದವರ ವರ್ಣನೆಯನ್ನು ಓದಿದರೆ, ಆರ್ಯರ ಕಾಂತಿ, ಮೈಕಟ್ಟು ಮುಂತಾದವುಗಳ ಬಗ್ಗೆ ಯಥಾರ್ಥ ಕಲ್ಪ ನೆಯು ಬರಬಹುದು. ಅವರು ಬಿಳಿಯ ಕಾಂತಿಯುಳ್ಳವರೂ, ಎತ್ತರ ಹಾಗೂ ಅಂದಚಂದವಾದ ಮೈಕಟ್ಟಿನವರೂ ಆಗಿ ರಲಿಕ್ಕೆ ಸಾಕು. ಆದರೆ ತೆಂಕಣ ಭಾರತದ ಅನಾರ್ಯ ಜನಾಂಗಗಳು ಕಪ್ಪುಬಣ್ಣದವರೂ ಮೈಕಟ್ಟಿನಲ್ಲಿ ಚಂದ ಹಾಗೂ ಅಚ್ಚುಕಟ್ಟಾಗಿ ಇರದವರೂ, ಇರಬಹುದೆಂಬುದು ರಾಮಾಯಣದಲ್ಲಿ ವಾಲ್ಮೀಕಿಯವರು ಮಾಡಿದ ವರ್ಣನೆಯ ಮೇಲಿಂದ ಸಿದ್ಧವಾಗುವುದು. ಅಂದಚಂದರಾದ ಆರ್ಯರು ಕಪ್ಪುಬಣ್ಣದ ದ್ರವಿಡ ಹಾಗೂ ಆದಿದ್ರವಿಡಾದಿ ಜನ ರನ್ನು ನೋಡಿ ತಮ್ಮ ಸಾಂಸ್ಕೃತಿಕ ಗರ್ವದ ಮೂಲಕ ತಾವಷ್ಟೇ ಮಾನವರೆಂಬ ಹೆಮ್ಮೆಯಿಂದ ಈ ಅನಾರ್ಯರು ಮಾನವರೋ ಅಥವಾ ಉಳಿದ ಯಾವ ಪ್ರಾಣಿಗಳೋ ಎಂಬ ತಿರಸ್ಕಾರಯುಕ್ತ ಸಂದೇಹಕ್ಕೆ ಈಡಾದಂತೆ ತೋರು ತ್ತದೆ. ಆದುದರಿಂದಲೇ ಮಧ್ಯತೆಂಕಣದ ಅಡವಿಗಳಲ್ಲಿಯೂ, ಸಿಂಹಲದ್ವೀಪದಲ್ಲಿಯೂ,ಮನೆಮಾಡಿಕೊಂಡ ಮಾನವರನ್ನು ವಾಲ್ಮೀಕಿ ಮುನಿನಾಥರವರು ದಾನವರೆಂಬುದಾಗಿ ಬಣ್ಣಿಸಿ ದ್ದಾರೆ. ಒಂದು ವೇಳೆ ಈ ಅರಣ್ಯವಾಸಿಗಳಲ್ಲಿ ಹಲಕೆಲವು ಕನಿಷ್ಠತರಗತಿಯ ತಂಡಗಳು ಆಗ ನರಭಕ್ಷಕರೂ ಆಗಿರ ಲಿಕ್ಕೆ ಸಾಕು. ಆದುದರಿಂದಲೇ ಅವರನ್ನು ದಾನವ ಅಥವಾ ರಾಕ್ಷಸ ಎಂಬ ಶಬ್ದಗಳಿಂದ ನಿರ್ದೇಶಿಸಿರಬಹುದು. ಆದರೆ ಈ ತಂಡಗಳು ಹೀನ ಸಂಸ್ಕೃತಿಯವರೂ ನರಭಕ್ಷಕರೂ ಆರ್ಯರ ರೀತಿ-ನೀತಿಗಳನ್ನು ಅರಿಯದವರೂ ಇದ್ದರೆಂಬು ದನ್ನು ಹೇಳಿದ್ದರೆ ವಾಲ್ಮೀಕಿ ಮುನಿವರ್ಯರಿಗೆ ನಾವು ದೋಷವನ್ನು ಕೊಡುತ್ತಿದ್ದಿಲ್ಲ. ಆದರೆ ಮುನಿವರ್ಯರು ಅಷ್ಟಕ್ಕೆ ನಿಲ್ಲದೆ ಈ ಹಿಂದುಳಿದ ಜನಾಂಗಗಳ ಬಹಿರಂಗ ವನ್ನೂ ಕೂಡ ಮನಬಂದಂತೆ ಚಿತ್ರಿಸಿದ್ದಾರೆ. ರಾಮಾ ಯಣದಲ್ಲಿ ರಾವಣ, ಕುಂಭಕರ್ಣ, ತಾಟಿಕಾ, ಶೂರ್ಪನಖಾ ಮುಂತಾದವರ ವರ್ಣನೆಯನ್ನು ಓದಿದರೆ ವಾಲ್ಮೀಕಿಯವರ ವಿಷಯವಾಗಿ ಇತಿಹಾಸ ದೃಷ್ಟಿಯುಳ್ಳ ಓದುಗರಲ್ಲಿ ವಿಚಿತ್ರ ವಿಕಾರಗಳುಂಟಾಗದೆ ಇರವು. ಐತಿಹಾಸಿಕ ಹಾಗೂ ಭೌಗೋಲಿಕ ಅಜ್ಞಾನದ ಬಗ್ಗೆ ಮುನಿನಾಥರನ್ನು ನೋಡಿ ನಗಬೇಕೋ ಅಥವಾ ಆರ್ಯಸಂಸ್ಕೃತಿಯ ಅಭಿಮಾನಾತಿ

ಕೇಕದಿಂದ ಹಾಗೂ ಅನಾರ್ಯಸಂಸ್ಕೃತಿಯ ತಿರಸ್ಕಾರಾ ತಿರೇಕದಿಂದ ಉನ್ಮತ್ತರಾಗಿ ಮತಿಗೆಟ್ಟ ಮುನಿವರ್ಯರನ್ನು ಕಠೋರ ಶಬ್ದಗಳಲ್ಲಿ ನಿಷೇಧಿಸಬೇಕೋ ತಿಳಿಯದು !

ರಾವಣನ ಜನಾಂಗವನ್ನು ಮುನಿವರ್ಯರು ರಾಕ್ಷಸ ರೆಂಬುದಾಗಿ ಬಣ್ಣಿಸಿದ್ದಾರೆ. ದಿಗ್ವಿಜಯ ಮಾಡಹೊರಟ ಆರ್ಯ ಸಮ್ರಾಟನಿಗೆ—ಶ್ರೀರಾಮಚಂದ್ರನಿಗೆ ಆರ್ಯ ಸಮ್ರಾಜ್ಞಿಯಾದ ಸೀತಾದೇವಿಯನ್ನು ಲಂಕಾಪತಿಯಿಂದ ಬಿಡಿಸಿ ತರುವಲ್ಲಿ ತನುಮನಧನದಿಂದ ನೆರವಿತ್ತ ಸುಗ್ರೀವ, ಹಣಮಪ್ಪ ಮೊದಲಾದ ನಮ್ಮ ದ್ರವಿಡಪೂರ್ವಜರನ್ನು ವಾಲ್ಮೀಕಿಯವರು 'ವಾನರ' ಎಂಬುದಾಗಿ ಚಿತ್ರಿಸಿ ದ್ರವಿಡರು ಆರ್ಯರಿಗೆ ಮಾಡಿದ ಉಪಕಾರಕ್ಕೆ ಅಕ್ಷಮ್ಯ ಅಪಕಾರವನ್ನು ಮಾಡಿದ್ದಾರೆ. ನಾವು ಮೇಲೆ ಉದಾಹರಿಸಿದ 'ಗ್ರ್ಯಾಂಟಡಫ್' ಮೊದಲಾದ ಇತಿಹಾಸಕರ್ತರ ಸತ್ಯಾಘಾತಗಳು ವಾಲ್ಮೀಕಿಯವರ ವಿಪರ್ಯಾಸಗಳ ಮುಂದೆ ಎಲ್ಲಿಯೋ ಅಡಗಿ ಹೋಗುವವು. ಗ್ರ್ಯಾಂಟಡಫ್ ಮೊದಲಾದವರ ವಿಧಾನಗಳು ಈಗ ಬೈಲಿಗೆ ಬಂದದ್ದು, ಅವುಗಳನ್ನು ನಂಬುವವರ ಸಂಖ್ಯೆಯು ತೀರ ಕಡಿಮೆಯಾಗಿದೆ. ಆದರೆ ವಾಲ್ಮೀಕಿಯವರು ಮಾನವರನ್ನು ವಾನರರನ್ನಾಗಿಯೂ ದಾನವರನ್ನಾಗಿಯೂ ಪರಿವರ್ತಿಸಿದ ರಾಮಾಯಣವೆಂಬ ಸುಳ್ಳು ಹೆಸರಿನಿಂದ ತುಂಬಿದ ಯಾವತ್ತು ದ್ರವಿಡ ಜನಾಂಗಗಳಿಗೂ ಆದಿದ್ರವಿಡರಿಗೂ ಅಪಮಾನದಿಂದ ತಲೆ ಕೆಳಗೆ ಹಾಕಹಚ್ಚುವ ಗ್ರಂಥವು ಮಾತ್ರ ಈಗಲೂ ಯಾವತ್ತೂ ಭಾರತೀಯರಿಗೆ—ದ್ರವಿಡ—ಆದಿದ್ರವಿಡರಿಗೂ ಕೂಡ ಪರಮ ಪವಿತ್ರವಾದ ಗ್ರಂಥವಾಗಿ ಉಳಿದಿರುವುದನ್ನು ನೋಡಿದರೆ ನಮ್ಮ ಕನ್ನಡ ತಮಿಳು ಮುಂತಾದ ನಾಡಿನ ಜನಾಂಗಗಳ ಸ್ವಾಭಿಮಾನ ಶೂನ್ಯತೆಯ ಹಾಗೂ ದ್ರಾವಿಡ ಪೂರ್ವಜರ ಬಗ್ಗೆ ಎಳ್ಳಷ್ಟೂ ನಮ್ಮಲ್ಲಿ ಆದರವಿಲ್ಲದುದರ ಬಗ್ಗೆ ಅತ್ಯಂತ ವಿಷಾದವೆನ್ನಿಸುವಂತೆ ಎಷ್ಟೋ ಸಾವಿರ ವರುಷಗಳಾಗಿ ಹೋದರೂ ರಾಮಾಯಣದಲ್ಲಿ ಅನಾರ್ಯರನ್ನು ಕುರಿತು ಮಾಡಿದ ಹಾವಾಡಿಗೆತನವು ಇದುವರೆಗೆ ಅಳಿಯದಂತೆ ಆ ರಾಮನ ಕತೆಯನ್ನು ಬರೆದ ವಾಲ್ಮೀಕಿಯ ಬಗ್ಗೆ ಅದ್ಭುತ ಕೌತುಕವೂ ಎನ್ನಿಸುತ್ತಿದೆ.

ಅಂತೆಯೇ, ವಿಪರ್ಯಾಸಮಾಡಲಿಕ್ಕೆ ವಸ್ತುಸ್ಥಿತಿಯೇ ಇಲ್ಲದಂಥ ಇತಿಹಾಸಗಳನ್ನು ಬರೆದ ಶ್ರೇಷ್ಠ ಇತಿಹಾಸ ಕರ್ತರ ಶಿಖಾಮಣಿಗಳೆಂಬುದಾಗಿ ವಾಲ್ಮೀಕಿ ಮುನಿನಾಥರವರನ್ನು ನಾವು ಮೇಲೆ ಬಣ್ಣಿಸಿದ್ದಾಯಿತು. ಆರ್ಯರ ಬಗ್ಗೆ ಯಾಗಲಿ, ಆರ್ಯರ ಭಾಷೆಯಾದ ಸಂಸ್ಕೃತದ ಬಗ್ಗೆ ಯಾಗಲಿ, ಆರ್ಯರ ಆಚಾರ-ವಿಚಾರಗಳ ಬಗ್ಗೆ ನನ್ನ ಕನ್ನಡ ಬಾಂಧವರಲ್ಲಿ ದ್ವೇಷವುಂಟಾಗಬೇಕೆಂ... ಯನ್ನಿಟ್ಟು ಈ ಚಿಕ್ಕ ಬರೆಹವನ್ನು ಬರೆದಿಲ್ಲ. ... ಲಂಕೆಸಹಿತ ಇಡಿಯ ಭರತಖಂಡವನ್ನು ... ಆರ್ಯರೂ ದ್ರವಿಡರೂ ಕೆಲವಟ್ಟಿಗೆ ಆದಿದ್ರ... ಸ್ಪರರೊಡನೆ ಎಲ್ಲ ಬಗೆಯಿಂದಲೂ ಬಳಿಕ ಪ್ರಾ... ಸಿದರು. ಸದ್ಯಃ ಭರತಖಂಡದಲ್ಲಿ ಶುದ್ಧ ... ಕೇವಲ ದ್ರವಿಡರಾಗಲಿ ಉಳಿದಿಲ್ಲ. ಈಗಿನ ... ಆರ್ಯ ಹಾಗೂ ಅನಾರ್ಯ ನೆತ್ತರಗಳು ಬೆರೆತು... ತೆಂಕಣ ಭಾರತದಲ್ಲಿ ದ್ರವಿಡ ಹಾಗೂ ಆದಿದ್ರಾವಿ... ಹೆಚ್ಚಿನ ಪ್ರಮಾಣದಲ್ಲಿದ್ದು ಬಡಗಣ ಭಾರತದಲ್ಲಿ... ಅಂಶವು ಹೆಚ್ಚಿನ ಪ್ರಮಾಣದಲ್ಲಿ ಇದ್ದಿರಬಹು... ದೇಶದಲ್ಲಿ ಮಂಗೋಲಿಯಸ್ ಅಂಶವೂ ... ನಂಬಲಾಗುತ್ತದೆ. ಅಂತೂ ನಮ್ಮ ನೆತ್ತ... ಸಂಮಿಶ್ರವಾಗಿದೆಯೋ ಹಾಗೆಯೇ ನಮ್ಮ ... ಸಂಸ್ಕೃತಿಯಾದರೂ ಆರ್ಯ ಹಾಗೂ ಅನಾ... ವಿಚಾರಗಳಿಂದ ಸಂಮಿಶ್ರವಾಗಿದೆ. ನಮ್ಮ ... ಸಂಸ್ಕೃತಿಗೆ ಆರ್ಯಸಂಸ್ಕೃತಿಯೆಂದೂ ಅಥವಾ ... ಸಂಸ್ಕೃತಿಯೆಂದೂ ಅನ್ನಲಿಕ್ಕೆ ಬಾರದು. ನಮ್ಮ ... ತಿಗೆ 'ಭಾರತೀಯ ಸಂಸ್ಕೃತಿ'ಯೆಂದೇ ಹೇಳ...

ಆರ್ಯರ ಪಕ್ಷಪಾತಿಯಾದ ವಾಲ್ಮೀಕಿ... ಯಣವನ್ನು ಬರೆಯುವಾಗ ವಸ್ತುಸ್ಥಿತಿಗೆ ಎಷ್ಟು ... ಎಂತೆಂತಹ ವಿಪರೀತ ಸಂಗತಿಗಳನ್ನು ಹೇ... ದನ್ನು ಓದುಗರು ಅರಿತಂತಾಯಿತು. ದಾನ... ಬರೆಯುವಾಗ ಈ ಮಹಾಮುನಿಯು ಒತ್ತ... ಗಡಿಗೆಯನ್ನೂ ಬೇರೆ ಕಡೆಗೆ ಕಾಡಿಗೆಯ ... ಇಟ್ಟುಕೊಂಡು ಆರ್ಯರನ್ನು ಚಿತ್ರಿಸುವಾಗ ... ವನ್ನು ಸುಣ್ಣದಲ್ಲಿ ಎದ್ದುತ್ತಲೂ, ದ್ರವಿಡ... ರನ್ನು ಚಿತ್ರಿಸುವಾಗ ತನ್ನ ಕಸಬರಿಗೆಯನ್ನು ... ಎದ್ದುತ್ತಲೂ ತನ್ನ ದಿವ್ಯಗ್ರಂಥವನ್ನು ರಚಿಸ... ತ್ತದೆ. ಮಹಾಮುನಿಯೆನಿಸಿಕೊಳ್ಳುವವನಾ... ಅಕ್ಷಮ್ಯ ಸಾಂಸ್ಕೃತಿಕ ದುರಭಿಮಾನಕ್ಕೆ ಈ... ಆದರೆ ಇಂತಹ ಮಹಾಮುನಿಯೂ ಸಾಂಸ್ಕೃ... ಕಾರ ತಿರಸ್ಕಾರ ಮುಂತಾದವುಗಳಿಗೆ ತು... ಬಳಿಕ ಸಾಮಾನ್ಯ ಇತಿಹಾಸಕಾರರ ಮೇಲೆ ... ಹಾಗೂ ಜಾತೀಯ ವಿಕಾರಗಳು ಪ್ರಭಾ... ಆಶ್ಚರ್ಯವೇನು ? ರಾಮಾಯಣವು ಆರ್...

ವಲ್ಲಿ ಅತಿಶಯೋಕ್ತಿಯಿಂದಲೂ ಅನಾರ್ಯರ ವಿಷಯದಲ್ಲಿ ಊನೋಕ್ತಿಯಿಂದಲೂ ಕಲಂಕಿತವಾಗಿದ್ದರೂ ಐತಿಹಾಸಿಕ ದೃಷ್ಟಿಯಿಂದ ಅದರ ಮಹತ್ವವು ಇಷ್ಟೇ ಎಂದು ಹೇಳಲು ಬರುವಂತಿಲ್ಲ. ಮಹಾಭಾರತದ ಜೊತೆಗೆ ರಾಮಾಯಣವೂ ಅತ್ಯವಶ್ಯವಾದ ಉದ್ಗ್ರಂಥವು. ಇವೆರಡೂ ಗ್ರಂಥಗಳಿಂದ ಪ್ರಾಚೀನ ಭಾರತದ ನಮ್ಮ ಸಾಮಾಜಿಕ ರಾಜಕೀಯ ಧಾರ್ಮಿಕ ಮುಂತಾದ ಸ್ಥಿತಿಗಳನ್ನು ನಾವು ಅರಿಯಬಹುದಾಗಿದೆ; ಮಾತ್ರ ಅವುಗಳನ್ನು ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಬೇಕು. ಅದರೊಳಗಿನ ಕಾವ್ಯಮಯ ಭಾಗಗಳನ್ನು ಐತಿಹಾಸಿಕ ಜರಡಿಗೆ ಹಿಡಿದು ವಿಂಗಡಿಸಬೇಕು. ಇನ್ನು ಮೇಲೆ ರಾಮಾಯಣದ ಸಂಸ್ಕೃತ ಅಥವಾ ಕನ್ನಡ ಆವೃತ್ತಿಗಳನ್ನು ಪ್ರಕಾಶಿಸುವಾಗ ನಾವು ಈ ಬರೆಹದಲ್ಲಿ ಎತ್ತಿದ ವಿಷಯವನ್ನೂ ಇದೇ ಮಾದರಿಯ ಉಳಿದ ವಿಷಯಗಳನ್ನೂ ಒಳಗೊಂಡ ಒಂದು ಐತಿಹಾಸಿಕ ಮುನ್ನುಡಿಯನ್ನು ಅವಶ್ಯವಾಗಿ ಆ ಗ್ರಂಥಕ್ಕೆ ಕೊಡಬೇಕು. ಅಂದರೆ, ಅನಾರ್ಯರಿಗೆ ತಗಲಿದ ಅವಮಾನವೂ, ಆರ್ಯರ ವಿಷಯವಾಗಿ ಕಂಡುಬರುವ ಗೌರವಾಧಿಕ್ಯವೂ ಓದುಗರಿಗೆ ಸುಲಭವಾಗಿ ಕಂಡು ಬರುವವು.

ವಾಲ್ಮೀಕಿ ರಾಮಾಯಣ ಗ್ರಂಥದಿಂದ ಓದುಗರಲ್ಲಿ ಉಂಟಾಗುವ ವಿಪರೀತ ಜ್ಞಾನವನ್ನು ಹೋಗಲಾಡಿಸುವುದಕ್ಕಾಗಿ ಓರ್ವ ಇತಿಹಾಸ ಪಂಡಿತರಿಂದ ಬರೆಯಲ್ಪಟ್ಟ ತರ್ಕಶುದ್ಧ ಮುನ್ನುಡಿಯನ್ನು ರಾಮಾಯಣಕ್ಕೆ ಹಾಕುವುದಕ್ಕೂ, ಹಾಗೆಯೇ ನಮ್ಮೆಲ್ಲರ ಕಣ್ಣಿಗೆ ಬೀಳುವ ದಕ್ಷಿಣ ಭಾರತದ ಪ್ರಾಚೀನ ಕಾಲದ ದ್ರವಿಡ ದಂಡಿನೊಡೆಯರಾದ ನಮ್ಮ ಹಣಮಪ್ಪನವರ ಮೂರ್ತಿಯಲ್ಲಿಯೂ ಆಮೂಲಾಗ್ರ ಬದಲಾವಣೆಯಾಗಬೇಕು. ವಾಲ್ಮೀಕಿ ಮಹಾಮುನಿಗಳವರ ಕಣ್ಮಸಗಿನ ಮೂಲಕ ಪಾಪ! ನಮ್ಮ ಹಣಮಪ್ಪನವರಿಗೆ ಯಾವ ಗುಡಿಯಲ್ಲಿ ನೋಡಿದರೂ ಕೋತಿಯ ಮೋತಿಯೂ, ಉದ್ದನ್ನ ಬಾಲವೂ ಪ್ರಾಪ್ತವಾಗಿವೆ. ಈ ತರಹದ ಮೂರ್ತಿಯನ್ನು ಎಷ್ಟೋ ಸಾವಿರ ವರುಷಗಳ ವರೆಗೆ ನೋಡಿನೋಡಿ ಹಣಮಪ್ಪನವರ ಈ ತೆರನ ದೃಶ್ಯದಲ್ಲಿ ಕಿಂಚಿತ್ತಾದರೂ ಅಸ್ವಾಭಾವಿಕತೆಯೂ ಇರಬಹುದೆಂಬ ಸಂದೇಹವು ನಮ್ಮಗಳ ಕನಸಿನಲ್ಲಿಯೂ ಬರುವದಿಲ್ಲ. ರೂಢಿಯ ಮಹಾತ್ಮ್ಯವು ಹೀಗಿರುತ್ತದೆ. ದ್ರವಿಡ ಕುಲೋತ್ತಮ ಹಣಮಪ್ಪನವರ ಬಾಲವನ್ನು ಕಡಿದೊಗೆದು, ಅವರ ಮೋತಿ ಮೊದಲಾದವುಗಳಲ್ಲಿ ತೋರ್ಪಡುವ ಕೋತಿಯ ಮೈಬೆಡಗನ್ನೂ ಹೋಗಲಾಡಿಸಿ ಆಗಿನ ಕಾಲದ ದ್ರವಿಡ ಸೇನಾಧಿಪತಿಯ ರೂಪದಲ್ಲಿಯೂ, ಉಡುಪಿನಲ್ಲಿಯೂ ಅವರು ಎದ್ದು ಕಾಣುವಂತೆ ಪ್ರತಿಯೊಂದು ಗುಡಿಯಲ್ಲಿ ಅವರ ಮೂರ್ತಿಯು ಹೊಸಯುಗಕ್ಕನ್ವಯಿಸುವಂತೆ ಎಲ್ಲಿಡೆಗೂ ಏರ್ಪಾಡು ಆಗಬೇಕು. ಅಲ್ಲದೆ ಪ್ರತಿಯೊಂದು ರಾಮನ ಗುಡಿಯಲ್ಲಿ ರಾಮನೆದುರಿಗೆ ಅವನ ದಾಸಾನುದಾಸನಂತೆ ಕೈಜೋಡಿಸಿ ನಿಂತಿರುವ ನಮ್ಮ ಹಣಮಪ್ಪನವರ ಮೂರ್ತಿಗಳನ್ನು ಕಿತ್ತೊಗೆದು ನಾವು ಈಗ ಹೇಳಿದಂತಹ ಅವರ ಮೂರ್ತಿಯನ್ನು ಆರ್ಯರಾಮಚಂದ್ರನ ಬಲಗೈಯಾದ ಅವನ ದ್ರವಿಡಗೆಳೆಯನೆಂಬುದಾಗಿ ಅವರನ್ನು ರಾಮನ ಬಲಕ್ಕೆ ಸ್ಥಾಪಿಸಬೇಕು. ದ್ವಾರಪಾಲಕನಂತೆ ದಾಸಾನುದಾಸನಂತೆ ಬಾಲಸಹಿತ ಕೈಜೋಡಿಸಿ ನಿಂತಿರುವ ಈಗಿನ ರಾಮದೇವರ ಗುಡಿಗಳಲ್ಲಿ ಕಂಡುಬರುವ ಮಾರುತಿಯ ಮೂರ್ತಿಯು ನಮ್ಮ ದ್ರವಿಡಪೂರ್ವಜರ ಸುಳ್ಳು ದಾಸ್ಯತ್ವದ ನಿರಂತರ ಕುರುಹಾಗಿರುವುದೆಂಬುದನ್ನು ನಾವು ಮರೆಯಲಾಗದು. ಆದ್ದರಿಂದ ನಮ್ಮ ದ್ರವಿಡ ಪೂರ್ವಜರ ಬಗ್ಗೆ ಅಭಿಮಾನವನ್ನು ತಾಳುವ ಯಾವತ್ತೂ ಭಾರತೀಯರು ವಿಶೇಷವಾಗಿ ದ್ರವಿಡ ಭಾಷೆಯನ್ನಾಡುವ ನಾವು ಈ ವಿಷಯದ ಕಡೆಗೆ ಶೀಘ್ರವಾಗಿ ಗಮನ ಕೊಟ್ಟು ನಮ್ಮ ಪೂರ್ವಜರಿಗಾದ ಅನ್ಯಾಯವನ್ನು ಸರಿಪಡಿಸಬೇಕಾಗಿ ಓದುಗರಲ್ಲಿ ನಮ್ಮ ಮನವಿ.

[ಹಾವೇರಿಯ 'ಕೆಳೆಯರ ಕೂಟ' ದವರ 'ನನ್ನ ನುಡಿ' ಎಂಬ ಕೈಬರೆಹದ ಮಾಸಪತ್ರಿಕೆಯಿಂದ.]

ನನ್ನ ಕಾಂಗಡಾ ಪ್ರ

★

ಲೇಖಕರು:

ಶ್ರೀ. ಭಾರತಸಂಚಾರಿ ಗೋಸ್ವಾ

★



ಕಾಂಗಡಾ ಗುಡ್ಡಗಾಡಿನ 'ಗದ್ದೀ' ಜನರು

ಕಾಂಗಡಾ ವರ್ಣನೆ

ಹಿಮಗಿರೀಂದ್ರನ ಮುಕುಟಮಣಿಯಾದ ಕಾಶ್ಮೀರದ ದಕ್ಷಿಣ-ಪೂರ್ವಮೂಲೆಯಲ್ಲಿ ಧೌಲಧಾರಾ (ಹಿಮಶಿಖರ)ದ (೧೬೫೦೦ ಫೂ. ಶಿಖರ) ಮಗ್ಗಲಲ್ಲಿ ಕಾಂಗಡಾ ಕೊಳ್ಳ (Valley) ವಿದೆ. ಇದು ಪಂಜಾಬದೊಳಗಿನ ಮುಖ್ಯ ಜಿಲ್ಹೆಗಳಲ್ಲೊಂದಾಗಿದ್ದು, ಜಲಂಧರ, ಹುಶ್ಯಾರಪೂರ ಜಿಲ್ಹೆಗಳ ಉತ್ತರಕ್ಕಿದೆ. ಇದರ ಪೂರ್ವಕ್ಕೆ ಸಿಮ್ಲಾ (ಹಾಗೂ ಬಶಹರ) ಜಿಲ್ಹೆ, ಉತ್ತರಕ್ಕೆ ತಿಬ್ಬತ್ ಮತ್ತು ಕಾಶ್ಮೀರ, ಪಶ್ಚಿಮಕ್ಕೆ ಚಂಭಾ ಸಂಸ್ಥಾನ ಹಾಗೂ ದಕ್ಷಿಣಕ್ಕೆ ಹೋಶಿಯಾರಪೂರ ಜಿಲ್ಹೆಗಳಿವೆ. ಧೌಲಧಾರಾ ಎಂಬ ಉನ್ನತ ಹಿಮಶಿಖರವೂ, ಮಧ್ಯಹಿಮಾಲಯದ ಭಾಗವೂ ಇದರ ಉತ್ತರ ಗೋಡೆಯಂತಿವೆ. ಇವುಗಳ ಕೆಳಬದಿಯಲ್ಲಿಯೇ ಕಾಂಗಡಾ, ಕುಲ್ಲೂ ಕೊಳ್ಳಗಳೂ ಮಂಡಿ ಸಂಸ್ಥಾನವೂ ಇವೆ. ಇದು ೯೯೭೮ ಚೌ. ಮೈಲು ವಿಸ್ತಾರವಾಗಿದೆ. ಈ ಶಿಖರಗಳಿಂದ ಹುಟ್ಟಿ ಹರಿದುಬರುವ ಅನೇಕ ನದಿಗಳೂ, ರೇವೆಯೂ ಈ ಜಿಲ್ಹೆಯನ್ನು ಕಾಶ್ಮೀರದಂತೆ ಫಲವತ್ತಾಗಿ ಮಾಡಿವೆ. ವ್ಯಾಸ, ಪಾರ್ವತಿ, ಉಳಾ, ಬಾಣಗಂಗಾ, ಸರವರಿ, ನಿಗುಲ, ಆವಾ, ತೀರಥನ, ನೈಂಜಾ, ಅಹಲ್ಯಾ, ಗಜ, ಚಕ್ಕಿ, ಬೋಲ ಮೊದಲಾದ ಅನೇಕ ಸಣ್ಣದೊಡ್ಡ ಹೊಳೆಗಳೂ, ಅವುಗಳ ಕಾಲುವೆಗಳೂ ಇಲ್ಲಿಯ ಹೊಲ, ತೋಟಪಟ್ಟಿಗಳಿಗೂ, ಚಹಾ, ಅಕ್ಕಿ, ಹಿಟ್ಟು ಬೀಸುವ ಸಾವಿರಾರು ಕಾರ್ಖಾನೆಗಳಿಗೂ, ಜಗತ್ಪ್ರಸಿದ್ಧವಾದ ಹಾಯಿಡ್ರೋ ಇಲೆಕ್ಟ್ರಿಕ್ ಕಾರಖಾನೆಗೂ ಬಹಳೇ ಉಪಯೋಗಕರವಾಗಿವೆ. ಈ ಭೂಮಿಯಲ್ಲಿ ಅಕ್ಕಿ, ಗೋದಿ, ಗೋವಿನ ಜೋಳ, ರಾಗಿ, ಉದ್ದು, ಹೆಸರು, ಬೇಗವರ್, ತಂಬಾಕು, ರಾಮದಾಣಾ, ಛಲ್ಲಾ, ... (ಕೆಂಪುಧಾನ್ಯ) ಮೊದಲಾದ ಅನೇಕ ಪ್ರ... ಗಳೂ ಸೇಬು, ದಾಳಿಂಬ, ನಾಶಪಾತ, ದ್ರಾಕ್ಷಿ... ಜಪಾನಿಫಲ, ಅಲೂಜೆ, ಚರಿ, ಚೆಸ್‌ನಟ್ಸ್, ... ಛೋತುರೂ, ಮೊದಲಾದ ಹಣ್ಣುಗಳೂ ಬೆಳೆ... ಯುತ್ತವೆ. ಚಹಾ ತೋಟಗಳೂ ಪಾಲನಪೂ... ಭಾಗದಲ್ಲಿ ವಿಶೇಷವಾಗಿವೆ. ಇದರ ಹೊರ... ಉಪ್ಪು, ಸುಹಾಗಾ, ಗಂಧಕ, ಶಿಲಾಜೀತ, ... ಮೊದಲಾದ ಖನಿಜಪದಾರ್ಥಗಳೂ ದೊರೆಯುತ್ತ... ನಲ್ಲಿ ದೇವದಾರು, ಸೋರೆಮರ, (ಟೀಡ) ಕೇಲ್... ಅಕ್ರೋಡ ಮರಗಳು ವಿಪುಲವಾಗಿವೆ. ... ಸಣ್ಣ ಪರ್ವತಗಳಿಂದ ಸುತ್ತಲ್ಪಟ್ಟ ಮೈದಾ... ನೀರು ಇಂಗಿ ಬೆಳೆಗಳು ಉತ್ತಮವಾಗಿ ಬರುತ್ತ... ಸುಂದರ ನಂದನವನದ ಇತಿಹಾಸವನ್ನು ಸ್ವಲ್ಪ...

ಇತಿಹಾಸ

ಮಹಾಭಾರತ (ಯುದ್ಧದಲ್ಲಿ) ಕಾಲದಲ್ಲಿ ... ರಾಜಾ ಸುಸರಮಚಂದನ ಕಾಲದಿಂದಲೂ ... ಮಾನದ ಇಂಗ್ಲೀಷರ ಬಂಡಾಯದ ಕಾಲದಲ್ಲಿ ... ರಾಜಾ ಸಂಸಾರಚಂದನ ವರೆಗೂ ಹಿಂದೂ ರಾ... ಉಳಿದ ಕಾಂಗಡಾವು ಅನೇಕ ವಿಷ್ಯಗಳ ... ಯಾಗಿತ್ತು. ಸತಲಜ, ವ್ಯಾಸ, ಮತ್ತು ... ಮಧ್ಯದಲ್ಲಿದ್ದ ಈ ರಾಜ್ಯಕ್ಕೆ ತ್ರಿಗರ್ತವೆಂತಲೂ ... ಆ ಕಾಲದ ರಾಜಧಾನಿಯಾದ ಕಾಂಗಡಾ ... ಹಳೇ ಕಿಲ್ಲೆಯೂ, ಮಾತಾದೇವಿಯ ಮಂದಿರವೂ ... ಕೀರ್ತಿಯನ್ನು ಹೊಗಳುವಂತಿವೆ. ಐತಿಹಾಸಿಕ...

ಸಂಪೂರ್ಣವಾಗಿ ತಿಳಿಯಬೇಕೆನ್ನುವವರು ಪಾಥಿಯಲ್, ಚೇತ್ರೂಗಳ ೨-೩ನೇ ಶತಮಾನದ ಅನೇಕ ಕುರುಹುಗಳನ್ನೂ, ಹರಿಪುರ, ನೂರಪೂರ, ಕಾಂಗಡಾ, ಬೈಜನಾಥಗಳ ಪುರಾತನ ಇಮಾರತುಗಳನ್ನೂ ನೋಡಬೇಕು. ಬೌದ್ಧ ಕಾಲದ ನಂತರ ೭ನೇ ಶತಮಾನದಲ್ಲಿ ಉತ್ತಮ ಸ್ಥಿತಿಗೇರಿದ ೨೦೦೦ ಬುದ್ಧ ಬಿಕ್ಷುಗಳ ೫೦ ಒಳ್ಳೇ ಸಂಸ್ಥೆಗಳು ಈ ಭಾಗದಲ್ಲಿದ್ದವೆಂದು ಪ್ರಸಿದ್ಧ ಚೀನೀ ಪ್ರವಾಸಿಯಾದ ಹುಯೆನ್‌ತ್ಸಾಂಗನು ಬರೆದಿಟ್ಟಿದ್ದಾನೆ.

ಕಾಂಗಡಾ ಪ್ರವೇಶ

ಕಾಂಗಡಾವನ್ನು ಅನೇಕ ದಿನಗಳಿಂದ ನೋಡಲು ಬಯಸುತ್ತಿದ್ದ ನಾನು ಈ ವರ್ಷ ಸಿಮ್ಲಾದಲ್ಲಿ ನೂಲುವ-ನೇಯುವ ವರ್ಗವನ್ನು ಪ್ರಾರಂಭಿಸಿದಾಗಲೇ ನನ್ನ ಮಿತ್ರ ಅಮರಚಂದ ಸೂದನ ಆಗ್ರಹದಿಂದ ಪಾಲನಪೂರ (ಕಾಂಗಡಾ) ದಲ್ಲಿಯೂ ಇಂಥದೊಂದು ಶಾಲೆಯನ್ನು ಸ್ಥಾಪಿಸುವದು ಗೊತ್ತಾಯಿತು. ಆ ಬಗ್ಗೆ ಅಲ್ಲಿಯ ಪ್ರಸಿದ್ಧ ಖಾದೀ ಭಕ್ತರೂ ಚಹಾ ತೋಟದ ಮಾಲಕರೂ ಆದ ಶ್ರೀ. ಲಾಲಾ ಕನ್ಹಯ್ಯಾಲಾಲರ ಸಂಗಡ ಪತ್ರವ್ಯವಹಾರ ಮಾಡಿ ಸಿಮ್ಲಾದ ಕೆಲಸವು ಮುಗಿದ ಕೂಡಲೇ ಹೊರಡುವದು ನಿಶ್ಚಯವಾಯಿತು. ಆ ಪ್ರಕಾರ ಶ್ರೀಮತಿ ರಾಜಕುಮಾರಿ ಅಮೃತಕೌರ ಇವಳಿಗೆ ಎಲ್ಲ ವೃತ್ತಾಂತವನ್ನು ತಿಳಿಸಿ ಆವಳಿಂದ ಅಪ್ಪಣೆ ಪಡೆದು, ಕಾಂಗಡಾ ಕೊಳ್ಳಕ್ಕೆ ಹೊರಟೆನು. ಸಿಮ್ಲಾದಿಂದ ಮೋಟಾರ ಕಾರುಗಳು ರೇಲ್ವೆಗಿಂತಲೂ ಸುಲಭ ದರದಿಂದ ಕಾಲ್ಕಾಕ್ಕೆ ಮುಟ್ಟಿಸುತ್ತಿದ್ದುದರಿಂದ ಮೋಟಾರ ಕಾರಿನಿಂದಲೇ ಹೊರಟೆನು.

ಮಾರ್ಗದಲ್ಲಿ ಶಿಮಲೆಯ ಸಖಿಯರಾದ ಸೋಲನ್, ಡಕ್ಸಾಯಿ, ಧರಮಪೂರ, ಚೈಲ, ಮತ್ತು ಕಸೌಲಿಗಳ ಸೌಂದರ್ಯವನ್ನು ನೋಡುತ್ತಾ ಸಂಜೆಗೆ ಹಿಮಾಲಯದ ಅಡಿಯಲ್ಲಿರುವ ಕಾಲ್ಕಾ ಪಟ್ಟಣಕ್ಕೆ ಬಂದು ಮುಟ್ಟಿದೆವು. ಇಲ್ಲಿಯವರೆಗೆ ಬ್ರಾಡ್‌ಗೇಜ ರೇಲ್ವೆಮಾರ್ಗವಿದ್ದು ನಿತ್ಯ ಕಲ್ಕತ್ತೆ ಪಂಜಾಬಗಳ (ಮುಂಬಯಿ)ಕಡೆಯಿಂದ ಮೇಲಬಂಡಿಗಳು ಬರುತ್ತವೆ. ನಾನು ರಾತ್ರಿ ಗಾಡಿಯಿಂದಲೇ ಜಲಂಧರಕ್ಕೆ ಹೊರಟು ಎರಡು ದಿನ ಅಲ್ಲಿದ್ದು ಮುಂದೆ ಅಮೃತಸರವನ್ನು ನೋಡಿಕೊಂಡು ಪಠಾಣಕೋಟದ ಮಾರ್ಗವಾಗಿ ಕಾಂಗಡಾವ್ಯಾಲಿ ರೇಲ್ವೆಯಿಂದ ಪಾಲನಪೂರಕ್ಕೆ ಮುಟ್ಟಿದೆನು. (ನನ್ನ ಮಿತ್ರನು ಇಲ್ಲಿಂದ ಮುಂದೆ ಹೋದನು.) ಹಿಂದುಸ್ತಾನದ ಎಲ್ಲ ಖಾದಿಯಂತೆ ಕಾಂಗ

ಡಾಕ್ಕೆ ಬರುವವರಿಗೆ ಇದೇ ಸರಳ ಮಾರ್ಗವು. ಪಠಾಣಕೋಟದ ವರೆಗೆ ಬ್ರಾ. ಗೇ. ರೇಲ್ವೆ ಮಾರ್ಗವೂ ಮುಂದೆ ಮೋಟಾರ ಇಲ್ಲವೆ ಮೀ.ಗೆ. ಉಗಿಬಂಡಿಯ ಮಾರ್ಗದಿಂದ ತಮಗೆ ಬೇಕಾದಲ್ಲಿಗೆ ಹೋಗಬಹುದು. ಆದರೆ ಜ್ವಾಲಾಮುಖಿಗೆ ಹೋಗುವವರು ರೇಲ್ವೆದಿಂದಲೇ ಹೋಗಬೇಕಾಗುವದು. ಯಾಕಂದರೆ ಮೋಟಾರ ಮಾರ್ಗವು ಅತ್ತ ಕಡೆಗೆ ಹೊರಳದೆ ನೆಟ್ಟಗೆ ಕಾಂಗಡಾದ ಕಡೆಗೆ ಹೋಗಿದೆ. ರೇಲ್ವೆ ಮಾರ್ಗವು ಕೇವಲ ಜೋಗೀಂದ್ರನಗರ ವರೆಗೆ ಮಾತ್ರ (೧೦೨ ಮೈ.) ಹೋಗಿದೆ. ಮುಂದೆ ಸುಮಾರು ೨೦೦ ಮೈಲಿನವರೆಗೂ ಈ ಜಿಲ್ಹೆಯ ಹದ್ದಿದೆ. ಪಠಾಣಕೋಟದಿಂದ ವೈಜನಾಥದವರೆಗೆ (೮೨ ಮೈ.) ಮೋಟಾರಿನಿಂದ ಹೋಗುವದೇ ಉತ್ತಮ. ಯಾಕಂದರೆ ರೇಲ್ವೆಯ ಮುಖ್ಯ ಸ್ಟೇಶನ್ನುಗಳಿಂದ ಕಾಂಗಡಾದೊಳಗಿನ ಪಟ್ಟಣಗಳು ಬಹಳೇ ದೂರವಾಗಿವೆ, ಮತ್ತು ಸ್ಟೇಶನ್ನುಗಳಲ್ಲಿ ಕುದುರೆ ಅಥವಾ ಎತ್ತಿನ ಬಂಡಿಗಳೂ ದೊರೆಯುವದಿಲ್ಲ. ಕೂಲಿಗಳು ಕೂಡಾ ಸಿಗುವದು ಅಪರೂಪ. ಜ್ವಾಲಾಮುಖಿ ರೋಡ ಸ್ಟೇಶನ್ನು ಮೋಟಾರ ಮಾರ್ಗದಿಂದ ದೂರವಿದೆ. ಅದಕ್ಕೆ ಹೋಗುವವರು ಕಾಂಗಡಾದಿಂದ ಮೋಟಾರ ಮಾರ್ಗವಾಗಿಯೂ ಬರಬಹುದಾದರೂ ಸುತ್ತಾಗುತ್ತದೆ. ಆದ್ದರಿಂದ ಜ್ವಾಲಾಮುಖಿಯನ್ನು ನೋಡಿಕೊಂಡು ಮುಂದೆ ಕುಲ್ಲೂ-ಮಣಾಲಯವರೆಗೂ ಸುಮಾರು ೧೫೦ ಮೈಲು ಮೋಟಾರಿನ ಮಾರ್ಗವೇ ಉತ್ತಮವಾಗಿದೆ. ಆದರೆ ನಾನು ಹೊಸಬನಾದ್ದರಿಂದ ರೇಲ್ವೆದಿಂದಲೇ ಪಾಲನಪೂರಕ್ಕೆ ಮುಟ್ಟಿದೆನು. ಮೊದಲು ಕಾರ್ಯವನ್ನು ಮುಗಿಸಿಕೊಂಡು ಮುಂದೆ ಕಾಂಗಡಾವನ್ನು ಸುತ್ತುವ ವಿಚಾರದಿಂದಲೇ ಪಠಾಣಕೋಟದಿಂದ ೮ ಮೈಲಿನ ಮೇಲಿರುವ ಮಾರಂಡಾ ಅಥವಾ ಪಾಲನಪೂರ ರೋಡ ಸ್ಟೇಶನ್ನಿಗೆ ಬಂದಿಳಿದು ನಾಲ್ಕು ಮೈಲು ದೂರದಲ್ಲಿರುವ ಶ್ರೀ. ಲಾಲಾ ಕನ್ಹಯ್ಯಾಲಾಲರ ಬಂಡಾಲಾ ಚಹಾ ತೋಟಕ್ಕೆ ಮುಟ್ಟಿದೆನು. (ಈ ತೋಟವು ಧೌಲಧಾರಾದ ಕೆಳಗೆ ನಿಗುಲನದಿಯ ದಂಡೆಗಿದೆ)

ಖಾದೀ ಉದ್ಯೋಗಮಂದಿರ ಹಾಗೂ ಗ್ರಾಮಸೇವಾ ಸಂಘಗಳ ಸ್ಥಾಪನೆಯು

ಶ್ರೀ. ಲಾಲಾ ಕನ್ಹಯ್ಯಾಲಾಲರ ಖಾದೀ ಪ್ರೇಮವು ನನ್ನನ್ನು ಇಲ್ಲಿಗೆ ಬರಮಾಡಿತಲ್ಲದೆ ಅವರ ಇಚ್ಛೆಗನುಸಾರ [illegible] ಹಾಗೂ ಜಮಖಾನಿ, ಶಾಲು,


ಖಾದಿಗಳನ್ನು ನೇಯುವ ಒಂದು ವರ್ಗವೂ ಪ್ರಾರಂಭ ವಾಯಿತು. ಇದರಲ್ಲಿ ೨೫—೩೦ ಜನರು ಜಮಖಾನಿ ನೇಯುವ ವರೆಗೆ ಮೊದಲಿನಿಂದ ಎಲ್ಲವನ್ನೂ ಕಲಿತರು. ಅವರಲ್ಲಿ ಲಾಲಾಜೀಯವರ ಮನೆಯವರು, ಸುತ್ತಲಿನ ಗ್ರಾಮದವರೂ, ಮಿಸೆಸ ಫಿಯರ್‌ಬ್ಯಾಂಕ, ಮಿಸೆಸ ಮಾಸ್ಟಿನ್, ಮ್ಯಾಡಮ್ ಮೆಕಾರ್ಥಿ (ಡಿರೆಕ್ಟರ ಗ್ರೋವ್ಜ ಎಂಡ ಲಂಡನ್) ಹಾಗೂ ಫ್ರೆಂಚ ಲೇಡಿಯೊಬ್ಬಳು, ನೂಲಲು ಪಿಂಜಲು ಕಲಿತರು.

ಶ್ರೀಕನ್ಹಯ್ಯಾಲಾಲರ ಚಹಾ ತೋಟ

ಶ್ರೀಲಾಲಾಜೀಯವರು ಬಹಳೇ ದಯಾಳು ಸ್ವಭಾವ ದವರಾಗಿದ್ದು ಅನೇಕ ವರ್ಷದಿಂದ ಖಾದೀ ಕಾರ್ಯಕ್ಕಾಗಿ ಸಹಾಯ ಮಾಡುತ್ತ ಬಂದಿದ್ದಾರೆ. ಇವರು ಚಹಾ ತೋಟದ ಮಾಲಕರಾಗಿದ್ದು ಪ್ರತಿವರ್ಷ ೮೦ ಸಾವಿರ ಪೌಂಡು ಚಹಾ ತಯಾರಿಸಿ ಹೊರಗೆ ಕಳಿಸುತ್ತಾರೆ. ಧೌಲ ಧಾರಾದ ಸಮೀಪದಲ್ಲಿಯೇ ನಿಗುಲನದಿಯ ದಂಡೆಗೆ ಇವರ ದೊಡ್ಡ ತೋಟವೂ ಚಹಾ ತಯಾರಿಸುವ ಕಾರ್ಖಾನೆಯೂ, ಅದಕ್ಕೆ ಹೊಂದಿಯೇ ಆಶ್ರಮದಂಥ ಸುಂದರ ವಾಸಸ್ಥಳವೂ ಇವೆ. ಇವರು ಇಲ್ಲಿಯ ಶ್ರೀಮಂತ ಹಾಗೂ ಪ್ರತಿಷ್ಠಿತ ವ್ಯಕ್ತಿಗಳಲ್ಲೊಬ್ಬರಾಗಿದ್ದು, ದೇಶಭಕ್ತರೂ ಆಗಿದ್ದಾರೆ.

ಕಾಂಗಡಾ ಜಿಲ್ಹೆಯ ಪ್ರವಾಸ ಸ್ಥಳವರ್ಣನೆ

ಈ ಜಿಲ್ಹೆಯು ಹೋಶಿಯಾರಪೂರದಿಂದ ಉತ್ತರಕ್ಕೆ ಟಿಬೇಟದ ವರೆಗೂ ೯೯೭೮ ಚೌರಸ ಮೈಲಿನಲ್ಲಿ ಹಬ್ಬಿದೆ. ಇದರಲ್ಲಿ ೫೦೦೦ಕ್ಕೆ ಮೀರಿದ ಜನ ಸಂಖ್ಯೆಯುಳ್ಳಂಥ ಯಾವದೊಂದೂ ದೊಡ್ಡ ಶಹರವಿಲ್ಲ. ಕಾಂಗಡಾ ಮತ್ತು ಕುಲ್ಲು ಕೊಳ್ಳಗಳನ್ನು ವಿಂಗಡಿಸುವ ಮಂಡೀ ಸಂಸ್ಥಾನದ ಒಂದು ದೊಡ್ಡ ಪರ್ವತ ಸಾಲು ಮಧ್ಯದಲ್ಲಿದೆ. ಸುಮಾರು ೨೮೫ ಮೈಲುದ್ದ ೪೫ ಮೈಲಗಲ ಪಟ್ಟಿಯೊಂದು ಧವಲಧಾರಾದ ಉನ್ನತ ಶಿಖರಗಳ ಕೆಳಬದಿಯಲ್ಲಿ ಅನೇಕ ಭಾಷೆ, ಜಾತಿಗಳ ಜನರಿಗೆ ಆಶ್ರಯಸ್ಥಾನವಾದ ಸುಂದರ ಕಾಂಗಡಾ ಪ್ರದೇಶವನ್ನು ಅನೇಕ ಪಾಶ್ಚಾತ್ಯ ಪೌರಾತ್ಯರು ನೋಡಿ ಬೆರಗಾಗುವರು. ಈ ಭಾಗದಲ್ಲಿ ಬ್ರಾಹ್ಮಣ, ರಜಪೂತ, ಸೂದ, ಭೋಜಕೀ, ರಾಠೀ, ಘಾರ್ಯ, ... ಜನ, ಗುಸಾಯಿ, ಸಾದಾಕಾರ, ಕಂಗಹಡೆ, ದುಸಾಲೀ, ... ಶಾಲಬಾಫ, ಜುಲಾಹ ಕೋಳೀ, ಗೂಜರ, ... ಗಡ್ಡೀ, ಕಣ್ವಾತ, ಲಾವುಳ, ಬಟವಾಲ, ... ಮತ್ತು ಈಸಾಯಿ ಜಾತಿಯ ಜನರು, ... ಉರ್ದು, ಹಿಂದಿ, ಗಾದಾ, ಹಂಡೋರಿ; ... ಸಪಟ್ಟಿ, ಪಹಾಡಿ, ಲಾಹುಲಿ, ಕುಲ್ಲಬೀ ... ಅನೇಕ ಭಾಷೆಗಳನ್ನಾಡುವ ಜನರು ವಾಸ... ಇವರೆಲ್ಲರ ನಡತೆನಡಾವಳಿಗಳೂ ವಿಚಿತ್ರ... ವನ್ನು ಮುಂದೆ ಕುಲ್ಲೂ ಯಾತ್ರೆಯಲ್ಲಿ ಕೊ... ಕಾಂಗಡಾ ಜಿಲ್ಹೆಯಲ್ಲಿ ಜ್ವಾಲಾಮುಖಿ, ... ಬೈಜನಾಥ, ಕಾಲಿಕಾ, ಮಣಿಕರಣ (ಬಿಸಿನೀ... ಶಿಲೆ) ವಶಿಷ್ಠ, ಭೃಗು, ವ್ಯಾಸಕುಂಡ, ಬಿಜಲಿ... ತ್ರಿಲೋಕೀನಾಥಗಳಂಥ ಪ್ರಸಿದ್ಧ ತೀರ್ಥಕ್ಷೇತ್ರ... ಶಾಲೆ, ಪಾಲನಪೂರ, ಕುಲ್ಲೂ ಮತ್ತು ಮ... ಹವೆ ಬದಲಾಯಿಸುವ ಸ್ಥಾನಗಳೂ ಇ... ಶ್ರೇಷ್ಠವಾದ ಊಳಾನದಿಯ ಹೈಡ್ರೋ ಇಲೆ... ಖಾನೆಯುಳ್ಳ ಜೋಗೀಂದ್ರ ನಗರವೂ ದೇ... ಯಾತ್ರಿಕರನ್ನು ತನ್ನ ಕಡೆಗೆ ಎಳೆದುಕೊಳ್ಳ... ಗಳಲ್ಲಿ ನಾನು ನೋಡಿದ ಕೆಲವು ಮುಖ್ಯ ಸ್ಥ... ಈ ಕೆಳಗೆ ಕೊಡುವೆನು. ಪಠಾಣಕೋಟದಿಂ... ವಸಿಷ್ಠದ ವರೆಗೆ ಮಾರ್ಗದಲ್ಲಿ ಹತ್ತುವ ಎಲ್ಲ... ಗಳನ್ನು ಅನುಕ್ರಮವಾಗಿ ಕೊಡುವೆನು. ಇದ...



ಪಾಲನಪುರದಿಂದ ಕಾಣುವ ಹಿಮಶಿಖರಗಳು

ಮಾಡಬಯಸುವವರಿಗೆ ಬಹಳೇ ಅನುಕೂಲವಾಗುವದು. ಜ್ವಾಲಾಮುಖಿಯಿಂದ ಮುಂದೆ ಮೋಟಾರಿನ ಮಾರ್ಗವೇ ಹೆಚ್ಚು ಅನುಕೂಲವಾಗಿದೆ.

ಜ್ವಾಲಾಮುಖಿ

ಪಠಾಣಕೋಟದಿಂದ ಹರಿಪೂರ, ನೂರಪೂರ ಕಿಲ್ಲೆಗಳನ್ನು ನೋಡಿಕೊಂಡು ಜ್ವಾಲಾಮುಖಿಗೆ ಹೊರಡುವಾ— ಈ ಪ್ರಸಿದ್ಧ ಕ್ಷೇತ್ರವು ಕಾಲೀಧಾರಾ ಎಂಬ ಪರ್ವತದ ಪಾದದಡಿಯಲ್ಲಿದೆ. ಮಂದಿರವು ಪುರಾತನ ಕಾಲದಿಂದಲೂ ಪ್ರಸಿದ್ಧವಾಗಿದ್ದು, ಒಳಗೆ ದೇವಿದೇವತೆಗಳೇನೂ ಇರದೆ ನೆಲ, ಗೋಡೆಗಳೊಳಗಿಂದ ನಾಲ್ಕು ಕಡೆಗಳಲ್ಲಿ ನೈಸರ್ಗಿಕ ಜ್ವಾಲೆಯು ಹೊರಡುತ್ತಿದೆ. ಇಂಥ ವಿಚಿತ್ರ ಸಂಗತಿಯು ಹಿಂದುಸ್ಥಾನದ ಬೇರೆ ಯಾವ ಭಾಗದಲ್ಲಿಯೂ ನೋಡಲು ಸಿಗುವಂತಿಲ್ಲ. ಮಂದಿರದಲ್ಲಿ ಪ್ರವೇಶಿಸಿದ ಕೂಡಲೇ ಎದುರಿಗೊಂದು ದೊಡ್ಡ ಕುಂಡವಿದೆ, ಅದರಲ್ಲಿ ನೆಲದೊಳಗಿಂದ ದೊಡ್ಡ ಜ್ವಾಲೆಯು ಹೊರಬೀಳುತ್ತದೆ. ಮತ್ತೊಂದು ಸಣ್ಣ ಪ್ರಮಾಣದಲ್ಲಿ ಗೋಡೆಯ ಮೂಲೆಯೊಳಗಿಂದ ನೆಟ್ಟಗೆ ಮೇಲೆ ಏರುತ್ತಾ ಹೋಗುತ್ತದೆ. ಇದರ ಹೊರ್ತು ಮಾಡಗಳಲ್ಲಿ ಎರಡು ಜ್ವಾಲೆಗಳು ಸಣ್ಣ ಬತ್ತಿಯ ಆಕಾರದಲ್ಲಿ ಹೊರಡುತ್ತಿವೆ. ಮಂದಿರದ ಹಿಂದುಗಡೆಗೆ ಕೆಲವು ಪಾವಟಿಗೆಗಳನ್ನೇರಿ ಹೋದ ಮೇಲೆ ಒಂದು ಸಣ್ಣ ಮಂದಿರದಲ್ಲಿರುವ ಕುಂಡದಲ್ಲಿ ನೀರು ಫಡಫಡ ಶಬ್ದ ಮಾಡುತ್ತ ಸ್ವಲ್ಪ ಪುಟದು ಬರುತ್ತದೆ. ಇದೇ ಈ ಜ್ವಾಲೆಯು ಹೊರಡುವ ಮುಖ್ಯಸ್ಥಾನವೆಂದು ಹೇಳುವರು. ಇಲ್ಲಿಯೂ ಒಂದು ಕಡೆಯಲ್ಲಿ ಸಣ್ಣ ಜ್ವಾಲೆಯೊಂದು ಉರಿಯುತ್ತಿರುವದು. ಯಾತ್ರಿಕರು ಪೇಡೆ, ಹಾಲು, ತುಪ್ಪಗಳನ್ನು ಇದರಲ್ಲಿ ಆಹುತಿಕೊಡುವರು. ಭೂಕಂಪದ ನಂತರ (೧೯೦೫ರ) ಈ ಜ್ವಾಲೆಯು ಸಣ್ಣ ಪ್ರಮಾಣದಲ್ಲಿ ಬರಹತ್ತಿದೆ. ಮತ್ತು ಅನೇಕ ಸಾರೆ ಕಡಿಮೆಯಾಗುವದು. ಆಗ್ಗೆ ತುಪ್ಪದಿಂದ ಅದನ್ನು ಜಾಗೃತಗೊಳಿಸುವದೂ ಉಂಟು. ಇಲ್ಲಿ ಪ್ರತಿವರ್ಷ ಚೈತ್ರ ಹಾಗೂ ಆಶ್ವಿನ ಮಾಸಗಳ ನವರಾತ್ರಿಯಲ್ಲಿ ಜಾತ್ರೆಯು ನೆರೆಯುತ್ತಿದ್ದು, ಹಿಂದುಸ್ಥಾನದ ಅನೇಕ ಭಾಗಗಳಿಂದ ಸಾವಿರಾರು ಯಾತ್ರಿಕರು ಬರುತ್ತಾರೆ. ಅಕಬರ ಬಾದಶಹನೊಮ್ಮೆ ಇಲ್ಲಿಗೆ ಬಂದಾಗ್ಗೆ ಒಂದು ವಿಚಿತ್ರ ಸಂಗತಿಯು ಸಂಭವಿಸಿತು. ಅದೇನೆಂದರೆ—ಅವನು ಈ ಜ್ವಾಲೆಯು ಮನುಷ್ಯಕೃತವೆಂದು ಅದನ್ನು ಆರಿಸುವ ಹೆಮ್ಮೆ ತೊಟ್ಟನು. ಅತಿ ಭಯಂಕರವಾಗಿ ನೆಲದೊಳಗಿಂದ ಬರುವ ಜ್ವಾಲೆಯ ಮೇಲೆ ಒಂಬತು ಕಬ್ಬಿಣ ತಗಡುಗಳನ್ನು ಹೊದಿಸಿದನು. ಜ್ವಾಲಾಮಾಯಿಯು ಅವುಗಳನ್ನೆಲ್ಲ ಒಡೆದು ಹೊರಬಿದ್ದಳು. ಅದನ್ನು ನೋಡಿ ಮೇಲಿನಿಂದ ಹರಿದು ಬರುವ ಒಂದು ನೀರಿನ ಕಾಲುವೆಯನ್ನು ಅದರಲ್ಲಿ ತಿರುವಿಸಿದನು. ಅದರಿಂದಲೂ ಮೇಲೆ ಹೊರಬಿದ್ದನ್ನು ನೋಡಿ ಭಯಭಕ್ತಿಯಿಂದ ಎರಗಿ ಈ ಮಂದಿರದ ಶಿಖರವನ್ನು ಬಂಗಾರದ ತಗಡಿನಿಂದ ಹೊದಿಸಿದನು. ಅದು ಈಗಲೂ ನೋಡುವಂತಿದೆ.

ಕಾಂಗಡಾ

ಜ್ವಾಲಾಜಿಯಿಂದ ಮೋಟಾರ ಮಾರ್ಗವಾಗಿ ಕಾಂಗಡಾ ೨೪ ಮೈಲು. ಈ ಜಿಲ್ಹೆಯ ಪ್ರಾಚೀನ ರಾಜಧಾನಿಯಾದ ಈ ನಗರವು ಬಾಣಗಂಗಾ ನದಿಯ ದಂಡೆಗೆ ಧೌಲಧಾರಾದ ಕೆಳಬದಿಯಲ್ಲಿದೆ. ಮಾತಾದೇವಿಯ ಮಂದಿರವು ಸಾವಿರಾರು ಹಿಂದೂ ಜನರ ಯಾತ್ರಾಸ್ಥಳವಾಗಿದೆ. ಇದಕ್ಕೆ ವಿಜಯೇಶ್ವರಿ ಎಂತಲೂ ಕರೆಯುವರು. ಈಗಿನ ಮಂದಿರವು ೧೯೦೫ರ ಭೂಕಂಪದ ನಂತರ ಹೊಸದಾಗಿ ನಿರ್ಮಿಸಲ್ಪಟ್ಟಿದೆ. ಕಾಂಗಡಾದಲ್ಲಿ ನೋಡತಕ್ಕ ಮುಖ್ಯಸ್ಥಾನಗಳಲ್ಲಿ ಕೋಟೆಯೇ ಮೊದಲನೇದಾಗಿದೆ. ಇದು ಪಾಂಡವರ ಕಾಲದ್ದೆಂದು ಅನೇಕರ ಗ್ರಹಿಕೆ. ಇಲ್ಲಿ ೧೮ನೇ ಶತಮಾನದಲ್ಲಿ ಆಳಿಹೋದ ಸಂಸಾರಚಂದನು ಈ ಕೋಟೆಯನ್ನೂ ಕಾಂಗಡಾ ಜಿಲ್ಹೆಯನ್ನೂ ಒಳ್ಳೇ ಸ್ಥಿತಿಗೊಯ್ದಿದ್ದನು. ಬ್ರಿಟಿಶರು ಇದನ್ನು ತೆಗೆದುಕೊಂಡ ಮೇಲೆ ೧೮೪೫ರ ವರೆಗೆ ಈ ಕಿಲ್ಲೆಯಲ್ಲಿ ತಮ್ಮ ಸೇನೆಯನ್ನಿಟ್ಟಿದ್ದರು. ಆದರೆ ಈಗ ಯಾರೂ ಇರುವದಿಲ್ಲ. ಕಿಲ್ಲೆಯ ಮೇಲೆ ಹತ್ತಿ ನೋಡಿದರೆ ಧೌಲಧಾರಾದ ಥಳಥಳಿಸುವ ಹಿಮಶಿಖರಗಳೂ, ಆಳವಾದ ಕೊಳ್ಳದಲ್ಲಿ ಗರ್ಜನೆಮಾಡುತ್ತಾ ಅನೇಕ ತೋಟಪಟ್ಟಿ, ಅಕ್ಕಿಯ ಬೀಸುವ, ಗಿರಣಿಗಳಿಗೆ ನೀರನ್ನು ಕೊಡುತ್ತಾ ಹರಿದು ಹೋಗುವ ಬಾಣಗಂಗಾ ನದಿಯ ದೃಶ್ಯವೂ ದರ್ಶನೀಯವಾಗಿವೆ. (ಜನಸಂಖ್ಯೆ ಸುಮಾರು ೪ ಸಾವಿರ)


ಧರ್ಮಶಾಲಾ

ಕಾಂಗಡಾದಿಂದ ೧೧ ಮೈಲು ಧರ್ಮಶಾಲಾ. ಇದು ಕಾಂಗಡಾ ಜಿಲ್ಹೆಯ ಮುಖ್ಯಸ್ಥಳವಾಗಿದ್ದು ಧೌಲಧಾರಾದ ಹಿಮಶಿಖರಗಳ ಬದಿಗೆ—೪೫೦೦ ಫೂ. ಎತ್ತರದ ಮೇಲೆ ಸ್ಥಾಪಿತವಾಗಿದೆ. ಇದರಲ್ಲಿ ಲೋವರ ಮತ್ತು ಅಪರ ಧರ್ಮಶಾಲೆಗಳೆಂದು ಎರಡು ಭಾಗ. ಅಪರ ಧರ್ಮಶಾಲೆಯು ೫೫೦೦ದಿಂದ ೬೦೦೦ದ ವರೆಗೆ ಎತ್ತರವಿದೆ. ಅಲ್ಲಿ ಗುರ್ಖಾ ಸೇನೆಯು ವಾಸವಾಗಿದೆ. ಸೇನಾವಿಭಾಗದ ಎಲ್ಲ ಆಫೀಸುಗಳೂ ಅದಕ್ಕೆ ಹೊಂದಿ ಒಂದು ಪೇಟೆಯೂ

ಅಲ್ಲಿವೆ. ಅಲ್ಲಿಂದ ಕೆಲವು ಫೂ. ಎತ್ತರದ ಮೇಲೆ ಡಲ್ ಎಂಬ ಸಣ್ಣ ಕೆರೆಯೊಂದಿದೆ. ಆ ಸ್ಥಾನದಿಂದ ಈ ಜಿಲ್ಹೆಯ ದೂರದೂರಿನ ಸ್ಥಾನಗಳು ದೃಗ್ಗೋಚರವಾಗುತ್ತಿವೆ. ಆದ ರಿಂದ ಒಂದು ಮೈಲಿನ ಮೇಲೆ ಮೆಕ್‌ಲೋಡಗಂಜವೆಂಬ ಅಷ್ಟೇ ಎತ್ತರ ಸ್ಥಾನದಲ್ಲಿ ಕಟ್ಟಿದ ವಸತಿಸ್ಥಾನವೊಂದಿದೆ. ಇದು ಸುತ್ತೂ ಮರಗಳಿಂದಲೂ ಗಿರಿಶಿಖರಗಳಿಂದಲೂ ಸುತ್ತ ಲ್ಪಟ್ಟದ್ದು ಒಂದು ಉತ್ತಮ ಹಿಲ್ ಸ್ಟೇಶನಿನಂತೆ ಭಾಸವಾಗುತ್ತದೆ. ಇಲ್ಲಿಂದ ಒಂದು ಮೈಲು ಉತ್ತರಕ್ಕೆ ಭಾಗಸುನಾಥವೆಂಬ ಸ್ಥಾನದಲ್ಲಿ ಮಹಾದೇವರ ಮಂದಿರವೂ ನೀರಿನ ದೊಡ್ಡ ಸೆಲೆಗಳೂ ಮತ್ತು ಸುತ್ತಲಿನ ವನಸಿರಿಯೂ ನೋಡುವಂತಿವೆ. ಇಲ್ಲಿಗೆ ಬಂದ ಪ್ರತಿಯೊಬ್ಬನಿಗೆ ಈ ಸ್ಥಾನದಲ್ಲಿ ಕೆಲವು ದಿನ ವಾಸವಾಗಿ ಹೋಗುವ ಇಚ್ಛೆ ಯಾಗುತ್ತದೆ. ಇಂಥ ಏಕಾಂತ ಹಾಗೂ ಮನೋಹರ ಸ್ಥಾನವು ಧರ್ಮಶಾಲೆಯಲ್ಲಿ ಬೇರೊಂದಿಲ್ಲವೆಂದು ಹೇಳ ಬಹುದು. ಇದರ ಸಮೀಪದಲ್ಲಿಯೇ ಎತ್ತರದ ಗುಡ್ಡಗಳಿಂದ ಕೆಳಗೆ ಬೀಳುವ ಜಲಪಾತ (ಜೋಗ)ವೊಂದಿದೆ. ಮಂದಿ ರದ ಹತ್ತರ ಕೆಲವು ವಸತಿಸ್ಥಾನಗಳೂ ನೀರು ನೆಲದೊಳ ಗಿಂದ ಸಿಂಹದ ಮುಖವಾಗಿ ಬೀಳುವ ಒಂದು ಕುಂಡವೂ ಯಾತ್ರಿಕರಿಗೆ ಬಹಳ ಅನುಕೂಲವಾಗಿವೆ. ಇಲ್ಲಿಂದ ೩ ಮೈಲು ಕೆಳಗೆ ಬಂದ ಮೇಲೆ ಲೋವರ ಧರ್ಮಶಾಲೆಯು ಪೇಟೆಯು, ಆರ್ಯಮಂದಿರ, ಸಿನೇಮಾಗೃಹಗಳಿವೆ. ಇದೇ ಇಲ್ಲಿಯ ಮುಖ್ಯ ಪೇಟೆಯು. ಇಲ್ಲಿ ಎಡಬಲಕ್ಕೆ ಆಳವಾದ ಕೊಳ್ಳಗಳಲ್ಲಿ ನೂರಾರು ಸುಂದರ ಇಮಾರತುಗಳು ದೂರದ ವರೆಗೆ ದೃಷ್ಟಿಗೋಚರವಾಗುತ್ತವೆ. ಜಿಲ್ಹೆಯ ಕಚೇರಿಗಳೆಲ್ಲಾ ಮುಖ್ಯ ಪೇಟೆಯಾದ ಕೊತವಾಲಿ ದಿಂದ ೧॥ ಮೈಲು ಕೆಳಗೆ ಡಿಪೋಬಜಾರ ಅಲ್ಲಿಯೇ ಹಾಯಸ್ಕೂಲ, ಇಂಟರಮಿಡಿಯಟ್ ಡೆ. ಕಮಿಶನರ್ ಆಫೀಸ, ಕೋರ್ಟ, ಸೆಶೆ[illegible] ಮೊದಲಾದ ಅನೇಕ ಇಮಾರತುಗಳಿವೆ. ಇವ[illegible] ಫೋರಸಾಯಿಥಗಂಜ, ಸಿವಿಲ್‌ಲಾಯಿನ್, [illegible] ಮೊದಲಾದ ಅನೇಕ ಭಾಗಗಳೂ ದರ್ಶನೀ[illegible] ಕಾಂಗಡಾದಲ್ಲಿ ಇದೇ ಮೊದಲನೇ ಶಹರವಾ[illegible] ವಸತಿಯು ೬—೭ ಸಾವಿರಕ್ಕೆ ಮೀರಿಲ್ಲ.

ಪಾಲನಪೂರ (ಬಂಡಲಾ)

ಧರ್ಮಶಾಲಾದಿಂದ ಪಾಲನಪೂರ ೩೦ ಮೈ[illegible] ತಾಲೂಕಿನ ಮುಖ್ಯಸ್ಥಳವಾಗಿದ್ದು ಧೌಲಧಾರ[illegible] ೪೦೬೦ ಫೂ. ಎತ್ತರದ ಮೇಲಿದೆ. ಈ ಭಾಗ[illegible] ತೋಟಗಳು ಅನೇಕ ಇವೆ. ೧೯೦೫ರ [illegible] ಮೊದಲು ಇವೆಲ್ಲ ಇಂಗ್ಲೀಷ (ಪ್ಲ್ಯಾಂಟ[illegible] ಕೈಯಲ್ಲಿದ್ದವು. ಭೂಕಂಪದಲ್ಲಿ ಇವರಿಗೆ [illegible] ಯಾದ್ದರಿಂದ ಬಿಟ್ಟು ಹೊರಟು ಹೋದರು. ಇವನ್ನು ಇಲ್ಲಿಯ ಶ್ರೀಮಂತ ವ್ಯಾಪಾರಿಗ[illegible] ಜಾತಿಯ (ವೈಶ್ಯ) ಜನರು ಕೊಂಡುಕೊಂಡರು. ನಮ್ಮ ಲಾಲಾಜಿಯವರೂ ಒಬ್ಬರಾಗಿದ್ದಾರೆ. ತೋಟವು ಇವರ ಆಧೀನದಲ್ಲಿದೆ. ಈ ಭಾಗ[illegible] ಕಾದ ಕ್ಯಾನಡಾ ಮಿಶನ ಸಂಸ್ಥೆಯವರು ಕ್ರೈಸ್ತ[illegible] ರವನ್ನು ಜೋಡಿ[illegible] ದ್ದಾರೆ. ಪ್ರತಿ[illegible] ರೂಪಾಯಿ [illegible] ಹಾಯಸ್ಕೂಲ [illegible] ಪ್ರಾಯಮರಿ [illegible] ತೆಗೆದಿದ್ದಾರೆ. [illegible] ತೋಟವೂ, [illegible] ದಂಡೆಗಿರುವ [illegible] ಬೈಲುಗಳೂ ಆನಂದದಲ್ಲಿ ಮು[illegible] ತ್ತವೆ. ಮಿಶನ್[illegible] ಉದ್ಯೋಗಮ[illegible] ತೋಟ ಮತ್ತು



ಜ್ವಾಲಾಮುಖಿ ದೇವಸ್ಥಾನ

ಳನ್ನು ನೋಡಿಕೊಂಡು ಬಂಡಲಾ ಗ್ರಾಮಕ್ಕೆ ತೆರಳುವಾ. ಅಲ್ಲಿವಾಸವಾಗಿರುವ ಗದ್ದೀ ಜನರ ಜೀವನವು ಸ್ವಾತಂತ್ರ್ಯ ಪ್ರಿಯರಾದ ಜನರ ಮನಸ್ಸನ್ನೆಳೆಯುವಂತಿವೆ. ಇವರು ಕುರಿಗಳನ್ನು ಸಾಕಿ, ಅವುಗಳನ್ನು ಮೇಯಿಸುತ್ತಾ ಟಬೇಟದ ವರೆಗೆ ೬ ತಿಂಗಳು ಗುಡ್ಡಗಳಲ್ಲಿ ತಿರುಗಾಡಿ ಚಳಿಯ ದಿನಗಳಲ್ಲಿ ಪುನಃ ಕೆಳಗಿನ ಪ್ರದೇಶಕ್ಕೆ ಬರುತ್ತಾರೆ. ಇವರು ತಾವು ನೇಯ್ದ ಕಂಬಳಿ, ಪಟ್ಟುಗಳನ್ನೇ ಉಡಲು-ಹೊದೆಯಲು ಉಪಯೋಗಿಸುವರಲ್ಲದೆ, ಗುಡ್ಡದಲ್ಲಿ ತಯಾರಾಗುವ (ಖನಿಜ) ಒಂದು ಪ್ರಕಾರದ ಮಣ್ಣುಪ್ಪನ್ನೇ ನೀರು ಬೆರೆಸಿ, ಮೇಲಿನ ತಿಳಿನೀರಿನಿಂದಲೇ (ಉಪ್ಪಿನ) ತಮ್ಮ ಅಡಿಗೆಯನ್ನು ತಯಾರು ಮಾಡುತ್ತಾರೆ. ಅಕ್ಕಿ, ಗೋವಿನ ಜೋಳಗಳನ್ನು ತುಂಡು ಭೂಮಿಗಳಲ್ಲಿ ಬೆಳೆದುಕೊಳ್ಳುವರು. ಪೇಟೆಯ ಜೀವನವು ಇವರಿಗೆ ರುಚಿಸುವದೇ ಇಲ್ಲ, ಮತ್ತು ಯಾರ ಅಧೀನದಲ್ಲಿಯೂ ನೌಕರಿಗಾಗಿ ಇರಲು ಒಪ್ಪುವದಿಲ್ಲ. ತಮ್ಮಲ್ಲಿದ್ದು ಬಿದ್ದುದರಲ್ಲಿಯೇ ಸುಖಮಯ ಸಾದಾ ಜೀವನವನ್ನು ಕಳೆಯುತ್ತಾರೆ. ಇವರ ಉಣ್ಣೆ ಹಿಂಜುವ, ನೂಲುವ, ಹಾಗೂ ನೇಯುವ ಕೆಲಸವು ನೋಡುವಂತಿದೆ. ಇವರಲ್ಲಿ ೩—೬ ರೂ.ಗೊಂದು ಉತ್ತಮ ಕಂಬಳಿ, ಪಟ್ಟುಗಳು ದೊರೆಯುತ್ತವೆ.


ವೈಜನಾಥ

ಪಾಲನಪೂರದಿಂದ ವೈಜನಾಥ ೧೦ ಮೈಲು. ಈ ಪುರಾತನ (ಕ್ಷೇತ್ರವು) ಮಂದಿರವು ಬನುವಾನದಿಯ ದಂಡೆಗೆ ಧೌಲಧಾರ ಕೆಳಗಿದೆ. ಉತ್ತರ ಹಿಂದುಸ್ಥಾನದಲ್ಲಿ ಇಷ್ಟು ಕಲಾ ಕೌಶಲ್ಯಯುಕ್ತ ಮಂದಿರವು ಬೇರೊಂದಿಲ್ಲ. ಪ್ರತಿವರ್ಷ ಶಿವರಾತ್ರಿ ವೇಳೆಗೆ ಸಾವಿರಾರು ಜನರು ದೂರದೂರದಿಂದ ಬರುತ್ತಾರೆ. ಇದರ ಕಿಡಿಕೆ, ಬಾಗಿಲು, ಗೋಪುರಗಳಲ್ಲಿ ಅನೇಕ ಕಲಾಕೌಶಲ್ಯವು ತುಂಬಿದೆ. ಈ ಮಂದಿರವು ಸಾವಿರ ವರ್ಷಕ್ಕಿಂತಲೂ ಮೊದಲು ನಿರ್ಮಿತವಾದದ್ದೆಂದು ಹೇಳಬಹುದು. ಇದರ ಹೊರ್ತು 'ಸಿದ್ಧನಾಥ' ಎಂಬ ಬೇರೊಂದು ಮಂದಿರವು ಬಹಳೇ ಸುಂದರವಾಗಿದೆ. ಭೂಕಂಪದ ಧಕ್ಕೆಯಿಂದ ಅದರ ಹೆಚ್ಚು ಭಾಗವು ಬಿದ್ದುಹೋಗಿದೆ. ಆದರೆ ವೈಜನಾಥ ಮಂದಿರಕ್ಕೆ ಯಾವದೇ ಪ್ರಕಾರದ ಧಕ್ಕೆ ತಗಲಿಲ್ಲ. ಇದರ ಕೆಳಗೇ ಆಳವಾದ ಬಿನುವಾ ನದಿಯ ಕೊಳ್ಳವೂ, ಸುತ್ತಲೂ ಸುಂದರ ಪರ್ವತಗಳೂ, ಉತ್ತರಕ್ಕೆ ಹಿಮಶಿಖರಗಳೂ, ಇದರ ಶೋಭೆಯನ್ನು ಮತ್ತಿಷ್ಟು ಹೆಚ್ಚಿಸಿವೆ. ಇಲ್ಲಿಂದ ಅರ್ಧ ಮೈಲಿನ ಮೇಲೆ ನದಿಯ ದಂಡೆಗೆ ಸೋತ ಎಂಬ ಉತ್ತಮ ನೀರಿನ ಸೆಲೆಯಿದೆ. ಈ ನೀರು ಬಹಳೇ ಆರೋಗ್ಯಕರವೆಂದು ಹೆಸರಾಗಿದೆ. ಇಲ್ಲಿ ಡಾಕಬಂಗ್ಲೆ, ಧರ್ಮಶಾಲೆ, ಪೇಟೆಗಳಿದ್ದು ಅರ್ಧ ಮೈಲಿನೊಳಗೇ ನದಿಯ ಎರಡನೇ ದಂಡೆಗೆ ಪಪ್ರೋಲಾ ಎಂಬ ದೊಡ್ಡ ಗ್ರಾಮವಿದೆ. ಅಲ್ಲಿಂದಲೇ ಕುಲ್ಲೂದ ಟಪಾಲು ಮೋಟಾರಿನಲ್ಲಿ ಬದಲಾಗುತ್ತದೆ. ರೇಲ್ವೆ ಬಂಡಿಗಳೂ ಹೆಚ್ಚಾಗಿ ಇಲ್ಲೇ ನಿಲ್ಲುತ್ತಿದ್ದು ಜೋಗೀಂದ್ರ ನಗರಕ್ಕೆ ಒಂದೇ ಗಾಡಿಯು ಹೋಗಿಬರುತ್ತದೆ. ಇಲ್ಲಿಂದ ೩—೪ ಮೈಲಿನ ಮೇಲೆ ಮಂಡಿ ಸಂಸ್ಥಾನದ ಹದ್ದು ಸುರುವಾಗುತ್ತಿದ್ದರಿಂದ ಪಠಾಣ ಕೋಟದ ಮೋಟಾರುಗಳು ಇಲ್ಲಿಂದಲೇ ಹಿಂದಿರುಗುತ್ತವೆ. ಜೋಗೀಂದ್ರನಗರದ ವರೆಗೆ ಹೆಚ್ಚು ಜನರು ರೇಲ್ವೆದಲ್ಲಿಯೇ ಹೋಗುತ್ತಾರೆ. ಇಲ್ಲಿಗೆ ಕಾಂಗಡಾದ ೫ ತಾಲೂಕುಗಳು ಮುಗಿದಂತಾಯಿತು. ಮುಂದೆ ಮಂಡೀ ಸಂಸ್ಥಾನದ ನಂತರ ೬ನೇ ತಾಲೂಕಾದ ಕುಲ್ಲೂ [ಸಬ್ ಡಿವಿಜನ್] ಇದೆ. ಇನ್ನು ಜೋಗೀಂದ್ರನಗರಕ್ಕೆ ಹೊರಡುವಾ.

ಜೋಗೀಂದ್ರನಗರದ ಹ್ಯಾಡ್ರೋ ಇಲೆಕ್ಟ್ರಿಕ್ ಕಾರಖಾನೆ

'ಜಗತ್ತಿನಲ್ಲೇ ಎಲ್ಲಕ್ಕೂ ದೊಡ್ಡದಾದ ಹ್ಯಾಡ್ರೋ ಇಲೆಕ್ಟ್ರಿಕ್ ಮಂಡಿ ಸ್ಕೀಮ' ಈ ಸ್ಥಾನದಲ್ಲಿ ಸ್ಥಾಪಿತವಾದ್ದರಿಂದ ಈ ಸ್ಥಾನವು ಪ್ರಸಿದ್ಧವಾಗಿದೆ. ಇದಕ್ಕಾಗಿಯೇ ಕಾಂಗಡಾ ವ್ಯಾಲಿ ರೇಲ್ವೆಯೂ ಸುರುವಾಯಿತು. ಈ ಕಾರ್ಯಕ್ಕಾಗಿ ಪ್ರಸಿದ್ಧ ಇಂಜಿನಿಯರರ ಒಂದು ಗುಂಪು ೮—೯ ವರ್ಷಗಳಿಂದ ಇಲ್ಲಿಯ ಬರೋಟ ಎಂಬ ಸ್ಥಾನದಲ್ಲಿ ವಾಸವಾಗಿ ಕೆಲಸನಡಿಸಿದೆ. ಹಿಮಾಲಯದ ಶಿಖರದಿಂದ ೧೬೦೦೦ ಫೂ. ಎತ್ತರದ ಮೇಲೆ ಹುಟ್ಟಿ ಹರಿದು ಬರುವ ಊಳಾ ನದಿಯನ್ನು ೬೦೦೦ ಫೂ. ಮೇಲೆ ಕಟ್ಟಿತಂದು ೩॥ ಮೈಲಿನ ವರೆಗೆ ಒಂದು ಗುಡ್ಡವನ್ನು ಕೊರೆದು ೯ ಫೂಟು ವ್ಯಾಸವುಳ್ಳ ಕೊಳವೆಗಳೊಳಗಿಂದ ಹಾಯಿಸಿತಂದು ೧೮೦೦ ಫೂ. ಕೆಳಗೆ ಬೀಳಿಸಿ ವಿದ್ಯುತ್‌ಶಕ್ತಿಯನ್ನುಂಟು ಮಾಡಿದ್ದಾರೆ. ಇದರಿಂದ ಇಡೀ ಪಂಜಾಬಕ್ಕೆ ದೀಪಗಳನ್ನು ಸುಲಭ ದರದಿಂದ ಕೊಡಬಹುದಾಗಿದೆ. ಜೋಗೀಂದ್ರ ನಗರದಿಂದ ವಿದ್ಯುತ್‌ಶಕ್ತಿಯ ಕಾರ್ಖಾನೆಯು ೧॥ ಮೈಲು ದೂರದಲ್ಲಿದೆ. ಆದರೆ ಇದನ್ನು ಕಟ್ಟಿದ ಸ್ಥಾನವು ಉನ್ನತವಾದ ಗಿರಿಶಿಖರಗಳ ಮೇಲಿದೆ. ಅಲ್ಲಿಗೆ ಪ್ರತಿವಾರದಲ್ಲಿ ಬುಧ, ರವಿವಾರಗಳೆರಡೇ ದಿನ ವಿದ್ಯುತ್‌ಶಕ್ತಿಯಿಂದ ನಡೆಯುವ ಟ್ರಕ್ ಬಂಡಿಗಳಿಂದ ಹೋಗಬಹುದು. ಭಯಂಕರವಾದ ಏರು ಇದ್ದು ಗಾಡಿಗಳು ಸಾಮಾನು ಒಯ್ಯು

ವದಕ್ಕಾಗಿ ತಯಾರಿಸಿದವಾದ್ದರಿಂದ ಹೆದರಿಕೆ ಬರುವಂತಿದೆ. ದುರ್ಗತಿ ಒದಗಿದಲ್ಲಿ ಕಂಪನಿಯವರು ಜವಾಬದಾರರಲ್ಲ ವೆಂಬ ಬಗ್ಗೆ ೮ ಆಣೆಯ ಟಿಕೀಟ ಹಚ್ಚಿ ಸರಕಾರಕ್ಕೆ ಬರೆದು ಕೊಡಬೇಕಾಗುತ್ತದೆ. ಆ ಮೇಲೆ ಬರೋಟದ (ಶಿಖರದ ಮೇಲಿನ) ಕಾರ್ಖಾನೆಯನ್ನು ನೋಡಲು ಪರವಾನಿಗೆ ದೊರೆ ಯುತ್ತದೆ. ಈಗ ತಯಾರಿಸಿದ ಮೊದಲನೇ ಪಾವರ ಹೌಸಿ ನಿಂದ ೩೬೦೦೦ ಕಿಲೋವಿಟ, ಶಕ್ತಿಯು ಉತ್ಪನ್ನವಾಗು ತ್ತದೆ. ಈ ಪಾವರ ಹೌಸಿನಿಂದಲೇ ಸುಮಾರು ಪಂಜಾಬದ ೨೦ ಪಟ್ಟಣಗಳಿಗೆ ಬೆಳಕನ್ನು ಪೂರೈಸಬಹುದು. ಇದರ ಮೊದಲನೇ ತರಗತಿಯ ಕೆಲಸವು ಸಾಧಾರಣ ಮುಗಿಯುತ್ತ ಬಂದಿದೆ. ಎರಡನೇದು ತಯಾರಾದಲ್ಲಿ ಸಿಮ್ಲಾ, ಗುಜರಾನ ವಾಲಾ, ಮೊಂಟಗುಮರಿ ಜಿಲ್ಹೆಗಳಿಗೂ, ಮೂರನೇ ಸ್ಟೇಜ ತಯಾರಾದಲ್ಲಿ ಶಾಹರಂಪೂರ, ಮೇರಠ, ದಿಲ್ಲಿ, ರೋಹತಕ್ಕ ಗಳಿಗೂ ಬೆಳಕನ್ನು ಕೊಡಬಹುದಾಗಿದೆ. ಇದರ ಸಂಪೂರ್ಣ ಕಾರ್ಯವು ಕೊನೆಗೊಂಡರೆ ಇಡೀ ಪಂಜಾಬದಲ್ಲಿ ವಿದ್ಯುದ್ದೀಪಗಳಷ್ಟೇ ಅಲ್ಲದೆ ಹೊಲ ಮನೆ, ಕಾರ್ಖಾನೆಗಳಿಗೂ, ರೇಲ್ವೆ ಬಂಡಿಗಳು ಓಡಾಡುವದಕ್ಕೂ ಶಕ್ತಿಯನ್ನು ಪೂರೈಸಬಹುದೆಂದು ತಜ್ಞರ ಮತ. ಮೊದಲನೇ ಸ್ಟೇಜಿಗೇನೇ ಪಂಜಾಬ ಸರಕಾರದ ೭ ಕೋಟಿ ರೂಪಾಯಿಗಳು ವೆಚ್ಚವಾಗಿವೆ. ಶಾನನ ಎಂಬ ಸ್ಥಾನದಲ್ಲಿ ಮೊದಲನೇ ವಿದ್ಯುತ್ ಕಾರಖಾನೆಯಿದೆ. ಇದರಿಂದ ಟ್ರಕ್ಕಿನಲ್ಲಿ ೫-೬ ಮೈಲು ಬರೋಟದ ವರೆಗೆ ಏರಿಹೋಗಿ ಸ್ವರ್ಗೀಯ ಸೌಂದರ್ಯವನ್ನನುಭವಿಸಬಹುದು. ಅಲ್ಲಿಂದ ರಾತ್ರಿಯಲ್ಲಿ [illegible] ಗಳೂ ಗೋಚರವಾಗುವವಲ್ಲದೆ, ಹಿಮಾಲಯ[illegible] ಬರ್ಫಿನ ಶಿಖರಗಳೂ ಕಾಂಗಡಾ ಕೊಳ್ಳ[illegible] ಕಂಡುಬರುತ್ತದೆ. ಅಲ್ಲಿಂದ ಕೆಳಗಿಳಿದು [illegible] ಮೇಲೆ ಊಳಾ ನದಿಯನ್ನು ಕಟ್ಟಿದ '[illegible] ಅಲ್ಲಿಂದಲೇ ಅದನ್ನು ಬೊಗದೆಯೊಳಗಿಂದ [illegible] ತಂದು ಕೆಳಗೆ ಬಿಟ್ಟಿದ್ದಾರೆ. ಈ ಸ್ಥಾನವನ್ನು [illegible] ಬಂದ ಪ್ರತಿಯೊಬ್ಬನು ನೋಡಿಯೇ ತೀರಬೇ[illegible] ಜೋಗೀಂದ್ರ ನಗರದಿಂದ ಕಾಲುಮಾರ್ಗ[illegible] ಕೊಳ್ಳವನ್ನು ಪ್ರವೇಶಿಸಿ ಬರುವಾಗ್ಗೆ ಮಂ[illegible] ಮೇಲಿಂದ ಹೊರಳಿ ಪಾಲನಪೂರಕ್ಕೆ [illegible] ಮಾರ್ಗವೂ, ಕುಲ್ಲೂ ಯಾತ್ರೆಯೂ ಬಹಳ[illegible] ವಾಗಿವೆ. ಅದನ್ನು ಮುಂದಿನ ಲೇಖನಗಳಲ್ಲಿ [illegible]



ಧರ್ಮಶಾಲೆ ಡಲ್ ಸರೋವರ

ಅವಳ ಜೀವನವು ಸ್ವರ್ಗತುಲ್ಯವಾಗಿತ್ತು. ಪತಿಯು ಮಧುರವಾಗಿ ಕೊಳಲನ್ನು ನುಡಿಸುತ್ತಿದ್ದನು. ಪತ್ನಿಯು ಸರಾಗವಾಗಿ ವೀಣೆಯನ್ನು ಬಾಜಿಸುತ್ತಿದ್ದಳು. ಅನೇಕ ಗಂಟೆಗಳ ವರೆಗೆ ಅವರ ಉತ್ಸಾಹಭಂಗವಾಗುತ್ತಿರಲಿಲ್ಲ. ಈ ಸುಖಮಯ ಸ್ವರ್ಗೀಯ ಜೀವನವು ಕೊನೆಯ ವರೆಗೆ ಸಾಗುವುದೆಂದು ಅವರ ಭಾವನೆ. ಆದರೆ ಕ್ರೂರಮೃತ್ಯುವು ಪತ್ನಿಯನ್ನು ಪ್ರಿಯಪತಿಯಿಂದ ವಿಯೋಗಿಸಿತು! ಮರಣದಿಂದ ಪ್ರಿಯೆಯ ದೇಹವು ದೂರ ವಾದರೂ ಸೈಲನರನಿಗೆ ಅವಳ ವೀಣೆಯಲ್ಲಿ ಸಜೀವ ಗಾನವು ಸದಾಕಾಲವೂ ಕೇಳುತ್ತಿತ್ತು.

ಅನುವಾದಕರು : ಶ್ರೀಕೃಷ್ಣ, ಶಾರದಾಮಂಡಲ, ವಿಜಯಪುರ

ಅವರ ಮದುವೆಯು ಮೊನ್ನೆ ಮೊನ್ನೆ ಆಗಿದ್ದಿತು. ಸ್ವಚ್ಛಂದವಾಗಿ ಹರಿಯುವ ಎರಡು ಶಾಂತಪ್ರವಾಹಗಳು ಕೂಡಿದಂತೆ ಅವರೀರ್ವರೂ ಮಿಲಿತರಾಗಿದ್ದರು. ಅನ್ಯೋನ್ಯವಾಗಿ ಅವರು ನಿಸ್ಸೀಮ ಪ್ರೇಮಿಗಳಾಗಿದ್ದರು. ತಾಯಿ-ತಂದೆಗಳಿಂದ ಬೇರೆಯಾಗಿ, ಸುಂದರವಾದ ಸ್ಥಳದಲ್ಲಿ ಮನೆಯೊಂದನ್ನು ಕಟ್ಟಿಸಿ, ಅಲ್ಲಿ ಅವರೀರ್ವರೂ ವಾಸವಾಗಿದ್ದರು. ಅವರೀರ್ವರಲ್ಲಿ ತಮ್ಮ ಭವಿಷ್ಯವೇನಿದೆಯೆಂಬುದನ್ನು ಯಾರೂ ತಿಳಿದಿರಲಿಲ್ಲ. ಪತಿಯ ಹೆಸರು, 'ಸೈಲನರ' ಹಾಗು, ಪತ್ನಿಯ ಹೆಸರು 'ಜೋಸೆಫಾಯಿನ.'

ಅವರೀರ್ವರೂ ಬಾಲ್ಯದಿಂದಲೇ ಪರಿಚಿತರಾಗಿದ್ದರು. ಆಗಿನ ಅವರ ಸಖ್ಯಭಾವವು ಬರಬರುತ್ತ ಪ್ರೇಮದಲ್ಲಿ ಪರಿಣತವಾಯಿತು. ಕೊನೆಗೆ, ಒಂದು ರವಿವಾರ ದಿನ ಸಮಾಜದ ಸಾಕ್ಷಿಯಿಂದ ಅವರೀರ್ವರೂ ವಿವಾಹಬದ್ಧರಾದರು. ಈ ಇಬ್ಬರ ಮಿಲನದಿಂದ ಒಂದು ಹೊಸ ಪರಿವಾರವೇ ಉಂಟಾಯಿತು. ಮೊದಮೊದಲು, ಕೆಲ ದಿನಗಳ ವರೆಗೆ ಅವರ ಸಂಬಂಧಿಕರೂ, ಮಿತ್ರರೂ, ಅವರ ಅಭಿನಂದನೆಗಾಗಿ ಅವರ ಮನೆಗೆ ಬರುತ್ತಲಿದ್ದರು. ಆದರೆ ಅಲ್ಪ ದಿನಗಳಲ್ಲಿಯೇ ಪರಿವಾರದವರೆಲ್ಲರೂ ತೆರಳಿ, ಅವರೀರ್ವರೇ ಆ ಮನೆಯಲ್ಲಿ ಇರಹತ್ತಿದರು.

ಅವರ ಜೀವನವು ಸ್ವರ್ಗತುಲ್ಯವಾಯಿತು. ಅವರೀರ್ವರೂ ಸರಸ-ಸಲ್ಲಾಪಗಳನ್ನಾಡುತ್ತ ವಿನೋದದಲ್ಲಿ ಕಾಲ ಕಳೆಯುತ್ತಿದ್ದರು. ಹಾಗು ಕೂಡಿಯೇ ಹಾಡುತ್ತಿದ್ದರು. ಒಮ್ಮೊಮ್ಮೆ ಪತಿಯು ಕೊಳಲನ್ನು ಮಧುರವಾಗಿ ನುಡಿಸುತ್ತಿದ್ದನು; ಮತ್ತು ಪತ್ನಿಯು ಅದಕ್ಕೆ ಜತೆಗೂಡಿಸಿ ಸರಾಗವಾಗಿ ವೀಣೆಯನ್ನು ಬಾಜಿಸುತ್ತಿದ್ದಳು. ಎರಡೆರಡು ಗಂಟೆ ಕಳೆದರೂ ಅವರ ಉತ್ಸಾಹಭಂಗವಾಗುತ್ತಿರಲಿಲ್ಲ. ಅವರ ಸುಖಮಯ ಸ್ವರ್ಗೀಯ ಜೀವನವು ಕೊನೆಯ ವರೆಗೂ ಹೀಗೆಯೇ ಸಾಗುವದೆಂದು ಅವರ ಆಸೆಯಿತ್ತು

ಜೋಸೆಫಾಯಿನಳಿಗೆ ತಲೆನೋವು ಇದ್ದಿತು. ಆದರಿಂದ ತನ್ನ ಪತಿಗೆ ದುಃಖವಾದೀತೆಂದು ಆವಳು ಅವನ ಮುಂದೆ ಅದನ್ನು ತಿಳಿಸಿರಲಿಲ್ಲ. ಅವಳ ಈ ಬೇನೆಯು ಅವಳನ್ನು ಹತಾಶಳನ್ನಾಗಿ ಮಾಡುತ್ತಿದ್ದಿತು. ಹಾಗು, ಮೇಲಿಂದ ಮೇಲೆ ಅದು ಹೆಚ್ಚಾಗುತ್ತಿದ್ದಿತು. ಒಂದು ದಿನ ರಾತ್ರಿ ಅವರೀರ್ವರೂ ಬಹಳ ಹೊತ್ತಿನ ವರೆಗೆ ಹಾಡುತ್ತ, ಬಾರಿಸುತ್ತ ಕುಳಿತಿದ್ದರು. ಅವರ ವಾದ್ಯಗಳು ಅವರ ಪೂರ್ಣ ಹೃದಯಗಳಂತೆ ಪರಿಪೂರ್ಣವಾಗಿದ್ದವು. ಅವರೀರ್ವರ ಪ್ರಸನ್ನತೆಗೆ ಕೊನೆಯೇ ಇರಲಿಲ್ಲ. ಅಂದು ಜೋಸೆಫಾಯಿನಳಿಗೆ ತಲೆನೋವು ಹೆಚ್ಚಾಗಿದ್ದಿತು; ಹಿಂದೆಂದೂ ಅನುಭವಿಸಿರದಷ್ಟು ಬಲವಾಗಿದ್ದಿತು. ಗಾಯನ-ವಾದನದಿಂದಲಾದರೂ ತನ್ನ ಆ ಬೇನೆಯು ಕಡಿಮೆಯಾಗಬಹುದೆಂಬ ಕಲ್ಪನೆಯಿಂದ ಅವಳು ಬಹಳ ಹೊತ್ತಿನವರೆಗೆ ಅವುಗಳಲ್ಲಿ ಮಗ್ನಳಾಗಿದ್ದಳು. ಆದರೆ, ಆದರಿಂದೇನೂ ಪ್ರಯೋಜನವಾಗಲಿಲ್ಲ. ಇಂದು, ತನ್ನ ಬೇನೆಯನ್ನು ಗುಪ್ತವಾಗಿಡಲು ಅಶಕ್ತಳಾದಳು. ತನ್ನ ಪತ್ನಿಯು ಯಾವುದೋ ವ್ಯಸನ

ಜರ್ಮನಿಯ ಪ್ರಸಿದ್ಧ ಕತೆಗಾರನಾದ 'ಥೀಓಡೋರ ಕೋರನೋರ'ನು ಬರೆದ ಕತೆಯೊಂದರ ಅನುವಾದವಿದು. ಇವನು ೧೭೯೧ರಿಂದ ೧೮೧೩ರ ವರೆಗೆ ಜೀವಿಸಿದ್ದನು. ಇವನು ಪ್ರಪಂಚದಲ್ಲಿ ಅಧಿಕ ಮಹತ್ವಪೂರ್ಣ, ಹಾಗು, ಪ್ರತಿಭಾಶಾಲಿ ಕಥಾಲೇಖಕನೆಂದು ಪ್ರಸಿದ್ಧಿಯುಂಟು. ಈ ವಿಸ್ಮಯ ಜನಕ ಪ್ರತಿಭಾಶಾಲೀ ಲೇಖಕನ ದುರ್ಭಾಗ್ಯದಿಂದ ಕೇವಲ ೨೨ನೇ ವಯಸ್ಸಿನಲ್ಲಿಯೇ ಈತನ ದೇಹಾಂತವಾಯಿತು. ಆದರೆ ಇವನು ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ತನ್ನ ಅಮರಕೃತಿಗಳಿಂದ ವಿಶ್ವಖ್ಯಾತಿಯನ್ನೇ ಹೊಂದಿದ್ದಾನೆ. ಇಂಗ್ಲೀಷ ಕವನ ಸಾಹಿತ್ಯದಲ್ಲಿ 'ಕೀಟ್ಸ'ನಿಗೆ ಯಾವ ಶ್ರೇಷ್ಠ ಸ್ಥಾನವಿದೆಯೋ, ಅಂತಹ ಸ್ಥಾನವು ಜರ್ಮನಿಯ ಕಥಾ ಸಾಹಿತ್ಯದಲ್ಲಿ 'ಕೋರನೋರ' ನಿಗುಂಟು.

ಬೇಡವೆಂದರೂ ಅವನು
ನಂಬಲಿಲ್ಲ. ಸೈಲನರನು ಡಾಕ್ಟರನು ಸೈಲನರನ ಗೆಳೆ
ಡಾಕ್ಟರನನ್ನು ಕರೆತಂದನು. ಜೋಸೆಫಾಯಿನಳ ಬೇನೆಯೇ ಇವನನ್ನು
ಯನೇ ಆಗಿದ್ದನು. ಆವರಿಸಿದೆ ಎಂದು ಅವನು ಮನಗಂಡನು. ಈಗ ಸೈಲನರನ
ನರಮಂಡಲವು ತೀರ ಕೆಟ್ಟು, ಜ್ವರವು ಅತಿರೇಕವಾಗಿದ್ದಿತು.
ಅವನು ರಾತ್ರಿಯೆಲ್ಲವೂ ಸ್ಮೃತಿಯಿಲ್ಲದೇ ಜೋಸೆಫಾಯಿನಳ
ವಿಷಯವಾಗಿ ಬಡಬಡಿಸುತ್ತಲಿದ್ದನು.

ಮರುದಿನ ಪ್ರಾತಃಕಾಲದಲ್ಲಿ ಅವನ ಜ್ವರವು ಸ್ವಲ್ಪ ಇಳಿ
ದಿತ್ತು. ತಾನು ನೆಟ್ಟಗಾದೆನೆಂದು ಡಾಕ್ಟರನಿಗೆ ಹೇಳಿದನು.
ಆದರೆ ಡಾಕ್ಟರನು ಅವನ ಮಾತಿನ ಕಡೆಗೆ ಲಕ್ಷ್ಯಕೊಡದೇ
ಅದರ ವಿಷಯವಾಗಿ ವಿಚಾರ ಮಾಡುತ್ತಿದ್ದನು. ಸೈಲನರನು
ರಾತ್ರಿ, ತಾನು ಕಂಡದ್ದೆಲ್ಲವನ್ನೂ ಡಾಕ್ಟರನಿಗೆ ತಿಳಿಸಿದನು.
ಡಾಕ್ಟರನು ಇಂತಹ ಚಮತ್ಕಾರಗಳನ್ನು ಸ್ವಲ್ಪವೂ ನಂಬದ
ಮನುಷ್ಯನಾಗಿದ್ದನು. ಇದು ಕೇವಲ ಸೈಲನರನ ಭ್ರಮೆ
ಯಾಗಿದೆಯೆಂದು ಅವನು ತಿಳಿದನು. ಹಾಗೆಯೇ ಅವನಿಗೂ
ಹೇಳಿದನು. ಆದರೆ ಅವನ ವಿಚಾರವನ್ನು ಸೈಲನರನು
ಸ್ವೀಕರಿಸಲಿಲ್ಲ.

ಸಾಯಂಕಾಲದಲ್ಲಿ ಸೈಲನರನು ತೀರ ಅಸ್ವಸ್ಥನಾದನು.
ಸೂರ್ಯನು ಮುಳುಗಿದ ಕೂಡಲೇ 'ನನ್ನನ್ನು ಜೋಸೆ
ಫಾಯಿನಳ ಕೋಣೆಗೆ ಒಯ್ಯಿರಿ' ಎಂದು ಅವನೆಂದನು.
ಅವನನ್ನು ಅಲ್ಲಿ ಒಯ್ದುದೂ ಆಯಿತು.


ಸೈಲನರನು ತನ್ನ ಹಾಸಿಗೆಯ ಮೇಲೆ ಎದ್ದು ಕುಳಿತನು.
ಹಾಗು ಗಂಭೀರಭಾವದಿಂದ ನಾಲ್ಕೂ ನಿಟ್ಟಿನಲ್ಲಿ ನೋಡ
ಹತ್ತಿದನು. ಆಗ, ಆ ಕೋಣೆಯ ಧೂಳಿಯಲ್ಲಿ ಅವನ
ಜೀವನದ ಸಾವಿರಾರು ಮಧುರತಮ ಸ್ಮೃತಿಗಳ ಕಣ
ಗಳು ಅವನಿಗೆ ಗೋಚರಿಸುತ್ತಿದ್ದವು. ಅವೆಲ್ಲವೂ ಒಂದು
ಗೂಡಿ ಅವನ ಎದುರು ನಿಂತವು. ಅವನ ಕಣ್ಣುಗಳಲ್ಲಿ
ನೀರು ತುಂಬಿತು. ಒಂಭತ್ತು ಹೊಡೆದ ಮೇಲೆ ತನ್ನನ್ನು
ಜೋಸೆಫಾಯಿನಳು ಕರೆದೊಯ್ಯುವಳೆಂದು ಅವನು ತಿಳಿ
ದನು. ಅಷ್ಟರೊಳಗಾಗಿ ಅವನು ತನ್ನ ಸಂಬಂಧಿಕರನ್ನೂ,
ಮಿತ್ರರನ್ನೂ ಕರಿಸಿ, ಅವರನ್ನು ಬೀಳ್ಕೊಂಡನು. ಡಾಕ್ಟ
ರನೂ ಅವನ ಹತ್ತಿರವೇ ಕುಳಿತಿದ್ದನು. ಆ ನಿಶಾಂತ
ಸಮಯದಲ್ಲಿ ದುರ್ಗದ ಗಡಿಯಾರದಲ್ಲಿ ಒಂಭತ್ತು ಹೊಡೆ
ದುದೂ ಕೇಳಿಸಿತು. ಇತ್ತ ಸೈಲನರನಲ್ಲಿ ಒಮ್ಮೆಲೇ ಪರಿ
ವರ್ತನೆಯಾಯಿತು. ಅವನ ಅರಿಸಿಣ ಮುಖವು ಹೊಳ
ಪನ್ನು ಹೊರಸೂಸಿತು. 'ಜೋಸೆಫಾಯಿನ! ನಾನು ಈ
ಜಗತ್ತನ್ನು ಬಿಡುವಾಗ ನೀನೊಮ್ಮೆ ಬಂದು ನನ್ನನ್ನು
ಸ್ವಾಗತಿಸು!' ಎಂದು ಅವನು ಗುಣುಗುಟ್ಟ...

ಮರುಕ್ಷಣದಲ್ಲಿಯೇ ಜೋಸೆಫಾಯಿನ...
ತಂತುಗಳಿಂದ ಮಧುರ ಝಣತ್ಕಾರವು ಕೇಳ...
ಸೈಲನರನ ಮುಖವು ವಿಕಸಿತವಾಯಿತು. ...
ಮಾನವಾಯಿತು. ಅವನು ಪ್ರಸನ್ನವದನ...
ಫಾಯಿನ! ನಾನು ಬರುತ್ತಲಿದ್ದೇನೆ! ...
ಲಿದ್ದೇನೆ!!' ಎಂದು ಕೂಗಿದನು.

ಕೂಡಲೇ ಅವನು ಮೂರ್ಛಿತನಾಗಿ ...
ಇತ್ತ ವೀಣೆಯ ಧ್ವನಿಯೂ ಮಂದವಾಗತ್ತ...
ಸೈಲನರನು ನಗೆಮುಖನಾಗಿ ಬಿಕ್ಕಿದನು. ...
ಪ್ರಾಣವೂ ಹಾರಿ ಹೋಯಿತು. ಎಲ್ಲರೂ ...
ದ್ದರು. ಆ ಕ್ಷಣದಲ್ಲಿಯೇ ಜೋಸೆಫಾಯಿನ...
ತಂತುಗಳೂ ತಟತಟನೇ ಹರಿದು ಹೋದವು.

ಡಾಕ್ಟರನು ಭಾವಾವೇಶದಿಂದ ನಡುಗಿ...
ಇದೇನು ನಡೆಯಿತು!' ಎಂದು ಅವನು ...
ವನ್ನು ತೆಗೆದನು. ಅವನ ಹತ್ತಿರವೇ ಸೈಲನ...
ಶರೀರವು ಬಿದ್ದುಕೊಂಡಿದ್ದಿತು. ಆದರ ಕ...
ದಿದ್ದವು. ಡಾಕ್ಟರನು ಕೋಮಲತೆಯಿಂದ ಕ...
ದನು. ತರುವಾಯ ಆ ಕೋಣೆಯಿಂದ ಕ...
ಫಾಯಿನಳ ವೀಣೆಯೊಂದಿಗೆ ಹೊರಬಿದ್ದನು.

ಆ ವೀಣೆಯು ಡಾಕ್ಟರನ ಹತ್ತಿರ ಇನ್ನೂ ...
ಕ್ಷಿತವಾಗಿದೆ.



ಚಂದ್ರ ಪ್ರವಾಸ

ಲೇಖಕರು: ಎಚ್. ಸೀತಾರಾಮುರಾವ್, ಎಂ. ಎಸ್. ಸಿ.

★

ಎಲ್ಲೆಲ್ಲಿಯೂ ಕಲ್ಲಿನ ಮರುಭೂಮಿಯಂತಹ ಬಂಡೆಗಳು. ನೀರಿಲ್ಲ, ಮಂಜಿಲ್ಲ, ಮಂಜುಗಡ್ಡೆಯಿಲ್ಲ. ಸುತ್ತಲೂ ಸ್ಮಶಾನ ಮೌನ. ಅಲ್ಲಿ ಶಬ್ದಗಳಾಗಲಾರವು; ಏಕೆಂದರೆ ಗಾಳಿಯೇ ಇಲ್ಲ. ನೆಲದಿಂದ ಐದು ಗಜಗಳಷ್ಟು ಎತ್ತರ ಹಾರುವದೂ ಅರವತ್ತು ಅಡಿಗಳಷ್ಟು ದೂರ ಹೆಜ್ಜೆಯಿಟ್ಟು ನಡೆಯುವದೂ ಅತಿ ಸುಲಭ. ಆಕಾಶವು ಕರಿ ಜಾಂಡ್ಲೆಯಂತೆ ತೋರುವದು. ಸೂರ್ಯನು ಪ್ರಕಾಶಿಸುತ್ತಿರುವಾಗಲೇ ನಕ್ಷತ್ರಗಳೂ ಸ್ಪಷ್ಟವಾಗಿ ಕಾಣುವವು. ಭೂಮಿಗೆ ಅಮಾವಾಸ್ಯೆಯಾದರೂ ಚಂದ್ರನಿಗೆ ಪೂರ್ಣಿಮೆಯೇ. ನೆಲದ ಮೇಲೆಲ್ಲ ಜ್ವಾಲಾಮುಖಿಗಳ ಬೂದಿ! ಬಿಸಿ ಬಿಸಿ ಸುಡುವ ಬೂದಿ! ಆ ಬೂದಿಯನ್ನು ಕೆದಕಿ ಕೆಳಗೆ ಕೈಹಾಕಿದರೆ ಚಂದ್ರನ ಮಂಜುಗಡ್ಡೆಯಂತೆ ... ಕೊರೆಯುವ ತಂಪಾದ ಬಂಡೆಗಳು! ...

★

ರಾಮಮೋಹನ ಕಂಪೆನಿಯವರ ಪ್ರವಾಸಪಟ್ಟಿಗಳನ್ನು ನೋಡಿನೋಡಿ ಕಡೆಗೆ ಒಂದು ಸಲ ಕಾಶಿ, ಹರಿದ್ವಾರ, ಪ್ರಯಾಗ ಮುಂತಾದವುಗಳನ್ನೆಲ್ಲಾ ನೋಡಿಕೊಂಡು ಬಂದೆವು. ಕಾಶಿಯನ್ನು ನೋಡಿ ಬಂದ ಮೇಲೆ ರಾಮೇಶ್ವರಕ್ಕೂ ಹೋಗಬೇಕಂತೆ. ಅದಕ್ಕೆ ಅನುಕೂಲವಾಗಿ ರಾಮಮೋಹನ ಕಂಪೆನಿಯವರು ತಮ್ಮ ದಕ್ಷಿಣದೇಶಪ್ರವಾಸದ ವಿವರಣ ಪತ್ರವೊಂದನ್ನು ಕಳುಹಿಸಿದರು. ರಾಮೇಶ್ವರವನ್ನೂ ನೋಡಿಬಂದಾಯಿತು.

ಭರತಖಂಡದ ಯಾತ್ರಾಸ್ಥಳಗಳ ಪ್ರವಾಸವು ಸುಲಭವಾಗಿ ದೊರೆಯುವಂತೆ ಮಾಡಿದವರಲ್ಲಿ ರಾಮಮೋಹನ ಕಂಪೆನಿಯವರು ಮೊದಲನೆಯವರು. ಆಗಿನ ಕಾಲಕ್ಕೆ ಅದೇ ದೊಡ್ಡ ವಿಷಯವಾಗಿತ್ತು. ಆದರೆ ಈಚೆಗೆ, ವೈಜ್ಞಾನಿಕರ ಸಹಾಯದಿಂದ ಗ್ರಹಾಂತರ ಪ್ರವಾಸವು ಪ್ರಚಾರಕ್ಕೆ ಬಂದ ಮೇಲೆ ಚಂದ್ರಮೋಹನ ಕಂಪೆನಿಯವರು ತಮ್ಮ ಪ್ರವಾಸಪಟ್ಟಿಯನ್ನು ಕಳುಹಿಸಿದರು. ಅದರಲ್ಲಿ ಚಂದ್ರಮಂಡಲಕ್ಕೆ ಹಾರಲಿರುವ ತಮ್ಮ 'ರಾಕೆಟ್ ಹಡಗು' (rocket-ship) ಹೊರಡುವ ದಿನವನ್ನು ಸೂಚಿಸಿದ್ದರು.

ಸರಿ, ಚಂದ್ರಮಂಡಲವನ್ನೂ ಯಾತ್ರೆಮಾಡಿಕೊಂಡು ಬರುವುದೆಂದು ತೀರ್ಮಾನವಾಯಿತು. ಒಂದು ತಿಂಗಳ ಪ್ರವಾಸ. ಆದರೆ ಚಂದ್ರನ ಮೇಲೆ ಯಾವ ಸ್ಥಳ, ಯಾವ ದೇಶವನ್ನು ನೋಡಿಬರುವುದು? ಚಂದ್ರಮೋಹನ ಕಂಪೆನಿಯವರು ಕಳಿಸಿರುವ ಕೈಪಿಡಿಯಲ್ಲಿ ಅನೇಕ ದೇಶಗಳು, ಸ್ಥಳಗಳು, ನೋಡುವುದಕ್ಕಿವೆಯೆಂದು ಬರೆದಿದೆ. ಸುಮಾರು ನೂರಕ್ಕೆ ಐವತ್ತೊಂಬತ್ತರಷ್ಟು ಚಂದ್ರಮಂಡಲ ಪ್ರದೇಶವು ತಿಳಿದಿದೆ. ನೂರಕ್ಕೆ ೪೧ರಷ್ಟು ಮನುಷ್ಯನ ಕಣ್ಣಿಗೆ ಕಾಣುವಂತಿಲ್ಲ. ಆದರೆ, ಚಂದ್ರನು ತನ್ನ ಜ್ಞಾನವೃದ್ಧವಾದ ಶಿರವನ್ನು ಸ್ವಲ್ಪ ಕದಲಿಸಿ ತನ್ನ ಎಡದ, ಬಲದ, ಕೆಳಭಾಗದ ಮತ್ತು ಮೇಲ್ಭಾಗದ ಕೊಂಚ ಭಾಗವನ್ನು ತೋರಿಸುವುದುಂಟು. (ಇದಕ್ಕೆ libration ಎಂದು ಹೆಸರು). ಚಂದ್ರಮೋಹನ ಕಂಪೆನಿಯವರು ಇದರ ವಿವರವನ್ನೂ ಕೊಡಲು ಸಿದ್ಧರಾಗಿದ್ದಾರೆ. ಅಲ್ಲದೆ ಅವರು ಚಂದ್ರಮುಖದ ಸೊಗಸಾದ ನಕ್ಷೆಗಳನ್ನು ಕೊಡುತ್ತಾರೆ. ಭೂಮಿಯ ಮೇಲೆ ಸಾಧ್ಯವಾಗಿರುವದಕ್ಕಿಂತ ಹೆಚ್ಚಿನ ಎತ್ತರದಿಂದ ತೆಗೆದ 'ಹಕ್ಕಿ ನೋಟದ' ಫೋಟೋಗಳನ್ನು ಕೊಡುತ್ತಾರೆ. ಇದರಿಂದ ಚಂದ್ರನ ವಿಸ್ತಾರವಾದ ಪ್ರದೇಶಗಳನ್ನು ತೋರಿಸಬಹುದು. ಸುಮಾರು ಎಂಭತ್ತೂವರೆ ಲಕ್ಷ ಚದರ ಮೈಲಿಗಳಷ್ಟು, ಎಂದರೆ ಯೂರೋಪುಖಂಡದ ಎರಡರಷ್ಟು ವಿಸ್ತೀರ್ಣವುಳ್ಳ ಪ್ರದೇಶವು ನನ್ನ ಪ್ರಯಾಣಕ್ಕೆ ಅನುವಾಗಿದೆ. ಷ್ಮಿಡ್ಟ್‌ನ (Schmidt) ನಕ್ಷೆಯು ಚಂದ್ರಮುಖದ ಎಲ್ಲ ವಿವರಗಳನ್ನೂ ತೋರಿಸುತ್ತದೆ. ಮೂವತ್ತು ಮೂರು ಸಾವಿರಕ್ಕೂ ಹೆಚ್ಚಾದ ಅಂಶಗಳು ತಿಳಿದುಬರುವವು—ಸಮುದ್ರಗಳು, ಜ್ವಾಲಾಮುಖಿಗಳು, ಪರ್ವತಗಳು, ಕೊರಕಲುಗಳು, ಮುಂತಾದವು ಚಿತ್ರಿಸಲ್ಪಟ್ಟಿವೆ; ಬಹು ಸಣ್ಣದೆಂಬುದು ಅರ್ಧ ಮೈಲಿಗಿಂತ ಹೆಚ್ಚು ಪರಿಮಾಣದ್ದಲ್ಲ. ಚಂದ್ರನ ಮೇಲೆ ಪಟ್ಟಣಗಳಿದ್ದಿದ್ದರೆ ಅವನ್ನು ಈ ನಕ್ಷೆಯ ಮೇಲೆ ಹುಡುಕುವುದು ಒಂದು ಕ್ಷಣಮಾತ್ರದ ಕೆಲಸ. ನನ್ನ ಪ್ರವಾಸದಲ್ಲಿ ಮುಖ್ಯವಾಗಿ ಯಾವುದನ್ನು ನೋಡತಕ್ಕದ್ದು? ಮೇರೆಯೇ ಇಲ್ಲದಷ್ಟು ವಿಸ್ತೀರ್ಣವುಳ್ಳ, ಸಮುದ್ರಗಳೆಂದು ಕರೆಯಲ್ಪಟ್ಟಿರುವ ಬಯಲುಗಳನ್ನೋ? ಅರವತ್ತರಿಂದ ನೂರಿಪ್ಪತ್ತು ಮೈಲುಗಳಷ್ಟು ಅಗಲವಾಗಿ, ವರ್ತುಳಾಕಾರದ ಪರ್ವತಗಳಾದ ಅಗ್ನಿಪರ್ವತಕುಂಡಗಳನ್ನೋ? ಅಥವಾ ಆ ಉನ್ನತ ಪರ್ವತಶ್ರೇಣಿಗಳನ್ನೋ? (ಅಲ್ಲಿನ ಪರ್ವತಗಳು ಇಪ್ಪತ್ತಾರು ಸಾವಿರ ಅಡಿಗಳಷ್ಟು

(Prof. Van Den. Bergh ರ The Universe in Space and Time ಎಂಬ ಪುಸ್ತಕದಿಂದ)

ಎತ್ತರವಾಗಿದ್ದು, ಚಂದ್ರನಿರುವ ಗಾತ್ರಕ್ಕೆ ಭೂಮಿಯ ಮೇಲಿನ ಹಿಮಾಲಯ ಶ್ರೇಣಿಗಳನ್ನೂ ಮೀರಿಸುವ ಪರ್ವತಗಳವು.) ಕೆಲವು ಮೈಲುಗಳಷ್ಟೇ ಅಗಲ, ಆಳವಾದ ಆ ನೂರಾರು ಬಿರುಕು-ಕೊರಕಲುಗಳನ್ನೋ? ಅಥವಾ ಟೈಕೋ (Tycho) ಪರ್ವತದ ಸುತ್ತಲೂ ಕಿರಣಗಳಂತೆ ನೂರಾರು ಮೈಲುಗಳ ವರೆಗೆ ಹಬ್ಬಿರುವ ಆ ವಿಚಿತ್ರ 'ಕಿರಣಮಂಡಲ'ವನ್ನೋ? ಕಡೆಗೆ, ಅಪೆನೈನ್ (Apennine) ಪರ್ವತ ಪ್ರದೇಶವನ್ನು ನೋಡುವುದೆಂದು ತೀರ್ಮಾನ ಮಾಡುವೆವು. ಹೆಸರೂ ಪರಿಚಿತವಾದುದು, ಅದರ ವಿಷಯವಾದ ಪ್ರವಾಸವಿವರವೂ ಆಶಾಪೂರ್ಣವಾಗಿದೆ. ಅಪೆನೈನ್ ಪರ್ವತಗಳು ಚಂದ್ರನ ಮೇಲೆ ಅತಿ ಮುಖ್ಯವಾದ ಪರ್ವತ ಶ್ರೇಣಿ (ಅವೇ ಅತ್ಯುನ್ನತವಾದುವಲ್ಲ). ಅದರ ಉದ್ದ ನಾನೂರೈವತ್ತು ಮೈಲು. ಅದರಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚು ಶಿಖರಗಳಿವೆ. ಅವುಗಳಲ್ಲಿ ಅತ್ಯುನ್ನತವಾದ 'ಹ್ಯೂಜೆನ್ಸ್' ಎಂಬುದು (Huygens) ಮಟ್ಟಪ್ರದೇಶದಿಂದ ಹತ್ತೊಂಬತ್ತು ಸಾವಿರ ಅಡಿಗಳಷ್ಟು ಮೇಲೆದ್ದಿದೆ. ಪರ್ವತಾರೋಹಣಕ್ಕೆ ಸಾಕಾದಷ್ಟು ಅವಕಾಶವಿದೆ.

ಎಲ್ಲಿಗೆ ಹೋಗುವುದೆಂದು ತೀರ್ಮಾನಿಸಿದ ಮೇಲೆ ನಾವು ತೆಗೆದುಕೊಂಡು ಹೋಗುವ ಸಲಕರಣಗಳೇನೆಂದು ಗಮನ ಕೊಡಬೇಕು. ಮೊದಲನೆಯದು ಒಂದು ಪೂರ್ತಿತಿಂಗಳಿಗೆ ಸಾಲುವಷ್ಟು ಆಹಾರ ಸಾಮುಗ್ರಿಗಳಾಗಬೇಕು—ಮೇರು ಪ್ರವಾಸಕ್ಕೆ ಹೊರಡುವಂತೆಯೇ ಅನ್ನಿ. ಅದಕ್ಕೂ ಕೀಳಾದುದಾವುದೆಂದರೆ, ನಮಗೆ ಬೇಕಾದಷ್ಟು ನೀರನ್ನೂ ತೆಗೆದುಕೊಂಡು ಹೋಗಬೇಕು. ಇವಿಷ್ಟೇ ಅಲ್ಲ. ಚಂದ್ರನ ಮೇಲೆ ಆಹಾರವಿಲ್ಲ, ನೀರಿಲ್ಲ, ಗಾಳಿಯೂ ಇಲ್ಲ. ಆದುದರಿಂದ ನಮಗೆ ಸಾಕಾಗುವಷ್ಟು ಆಮ್ಲಜನಕದ ಯಂತ್ರವನ್ನೂ, ತುಂಬಿದ ಕೊಳವೆಗಳನ್ನೂ ತೆಗೆದುಕೊಂಡು ಹೋಗಬೇಕು. ಉಡುಪುಗಳೇನನ್ನು ತೆಗೆದುಕೊಂಡು ಹೋಗಬೇಕೆಂಬುದೊಂದು ಸಮಸ್ಯೆ. ಮಂಜುಗಡ್ಡೆಗಿಂತಲೂ ಇನ್ನೂರು ಡಿಗ್ರಿಗಳಷ್ಟು ಕಡಿಮೆಯಾದ ಚಳಿಯನ್ನು ತಡೆಯಲು ಸಿದ್ಧರಾಗಿರಬೇಕು. ಆದರೆ ಒಂದು ಒಳ್ಳೆಯದೇನೆಂದರೆ ಬಿರುಗಾಳಿಗಳು, ಸಿಡಿಲುಮಳೆಗಳಿಗೆ ಅಂಜಬೇಕಾದುದಿಲ್ಲ. ಏಕೆಂದರೆ ಅವಕ್ಕೆಲ್ಲ ಕಾರಣವಾದ ಗಾಳಿಯೇ ಅಲ್ಲಿಲ್ಲ. ಆದರೆ ಚಳಿಯನ್ನು ತಡೆಯುವುದಕ್ಕೆ ಮಾತ್ರ ಸಿದ್ಧವಾಗಿದ್ದರೆ ಸಾಲದು, ನಮ್ಮನ್ನು ಬೇಯಿಸುವಷ್ಟು ಬಿಸಿಯಾದ ಸುಡುಬಿಸಿಲಿಗೂ ಸಿದ್ಧರಾಗಿರಬೇಕು. ಇವಿಷ್ಟು ಮಾತ್ರವಲ್ಲದೆ ನಮ್ಮನ್ನು ನಾವು ತಕ್ಕ ಕವಚವೊಂದರಲ್ಲಿ ಕೂಡಿಸಿಕೊಳ್ಳಬೇಕು. ಇಲ್ಲದಿದ್ದರೆ ಗಾಳಿಯಿಲ್ಲ... ದಲ್ಲಿ ರಬ್ಬರ್ ಬೆಲೂನು ಒಡೆದುಹೋಗುವ... ಹೋಗುವೆವು. ಇದಕ್ಕೆ ನಾವು ಮಾಡಬೇ... ಚಂದ್ರನೋಹನ ಕಂಪೆನಿಯವರು ಒದಗಿ... ಕವಚ'ವನ್ನು ತೊಟ್ಟುಕೊಳ್ಳುವುದು. ಅ... ಒಳ್ಳೆಯ ಕಂಬಳಿಗಳು ಬೇಕು. ಇವನ್ನು... ಗಳೆರಡನ್ನೂ ತಡೆಯಲು ಉಪಯೋಗಿಸಬ... ಡೇರೆಯೇನೂ ಬೇಕಾಗುವದಿಲ್ಲ—ಅಲ್ಲಿ ... ಲಾರದು, ಹಿಮವು ಬೀಳಲಾರದು, ಗಾಳಿ... ಕಡೆಗೆ, ನಮ್ಮ ಸಾಮಾನುಗಳೆಲ್ಲವೂ ಸಿದ್ಧ... ಹೊರಡಲನುವಾಗುವೆವು.

ಕೆಲದಿನಗಳ ನಂತರ ಚಂದ್ರನಿಗೆ ಗು... ಯಲ್ಪಟ್ಟ 'ರಾಕೆಟ್' ಹಡಗಿನಿಂದ ಇಳಿ... ನನ್ನ ಪೇಟೆಂಟ್ ಚಂದ್ರಕವಚವನ್ನು ತೊ... ಆಮ್ಲಜನಕಯಂತ್ರವು ಬೆನ್ನಿಗೆ ಬಿಗಿಯ... ಡಲು ಗಾಳಿಯನ್ನು ಕೊಡುತ್ತಿದೆ. ಬಿಸಿ... ತಡೆಯುವುದಕ್ಕೆ ನೀಲವರ್ಣದ ಕನ್ನಡಕವ... ಡಿದ್ದೇನೆ. ಏಕೆಂದರೆ, ನಾನು ಪೂರ್ಣಮ... ಮೇಲೆ ಇಳಿದಿದ್ದೇನೆ. ಸೂರ್ಯನು ನೆತ್ತಿ... ಇದ್ದಾನೆ.

ನಾನು ಅಪೆನೈನ್ ಪರ್ವತದ ಬುಡ... ವಾದ ಬಯಲಿನಲ್ಲಿ ಇಳಿದಿದ್ದೇನೆ. ಪರ್ವತ... ನನ್ನ ಎದುರಿಗೆ ದಿಗಂತದಿಂದ ದಿಗಂತದ... ಬಾಗಿ ಹಬ್ಬಿದೆ. ನಾನಿರುವ ಕಣಿವೆಯ... ಸ್ವಲ್ಪಭಾಗ ಮಾತ್ರ ಕಾಣುತ್ತದೆ. ದಿಗಂತ... ಇದೆ, ಭೂಮಿಯ ಮೇಲಿರುವುದರ ... ಮಾತ್ರ. ಉನ್ನತವಾದ ಶಿಖರಗಳಾಚೆ ... ಚೂಪಾದ ಶಿಖರಗಳು ಮೇಲೆದ್ದಿವೆ. ಎಲ್ಲ... ಬಂಡೆಗಳು. ಎಲ್ಲೆಲ್ಲಿಯೂ ಕಲ್ಲಿನ ಮರಭೂಮಿ... ಗಳು. ನೀರಿಲ್ಲ, ಮಂಜಿಲ್ಲ, ಮಂಜುಗಡ್ಡೆಯ... ಸ್ಮಶಾನ ಮೌನ. ಎಲ್ಲೆಲ್ಲಿಯೂ ಶಬ್ದವಿಲ್ಲ ... ಬರಿಯ ಮೌನ, ಶುದ್ಧ ಮೌನ. ಇಲ್ಲಿ ... ರವು. ಏಕೆಂದರೆ, ಗಾಳಿಯಿಲ್ಲದಿರುವುದ... ಶಬ್ದದಲೆಗಳೂ ಇಲ್ಲ. ನನ್ನ ಸುತ್ತ ... ಏನೂ ಇಲ್ಲ. ಪ್ರಪಂಚದಲ್ಲಿ ಸಾವು ಎಂ... ಕರಿಸಬೇಕಾದರೆ ಈ ಅಪೆನೈನ್ ಪರ್ವತದ ... ಬಯಲು ಸಾಕು. ನನ್ನ ಹಿಂದೆ ಆ ಬ...

ವರೆಗೆ ಬೂದುಬಣ್ಣವಾಗಿ, ಮಂಕಾಗಿ ಹಬ್ಬಿದೆ. ನೆಲದ ಮೇಲೆಲ್ಲ ಬೂದಿ ಮುಸುಕಿದೆ, ಜ್ವಾಲಾಮುಖಿಗಳ ಬೂದಿ. ಹಲವು ಸ್ಥಳಗಳಲ್ಲಿ ಜ್ವಾಲಾಮುಖಿಗಳಿಂದ ಬಿಸುಡಲ್ಪಟ್ಟ ದೊಡ್ಡ ಕಲ್ಲುಗಳಿವೆ. ಹಾಗಾದರೆ, ಫ್ರೆಂಚ್ ಖಗೋಳ ಶಾಸ್ತ್ರಜ್ಞನಾದ ಲಿಯೊ (Lyot) ಎಂಬುವನು ಹೇಳಿದುದು ನಿಜವಿರಬೇಕು. ಅವನ ಪರಿಶೋಧನೆಯಿಂದ ಅವನಿಗೆ ಕಂಡುಬಂದುದೇನೆಂದರೆ, ನಾವು ಬೆಳದಿಂಗಳೆನ್ನುವುದು ಆ ಕಲ್ಲುಬೂದಿಗಳ ಮೇಲೆ ಬಿದ್ದ ಬಿಸಲೇ. ಅವನು ಹೇಳಿದಂತೆ, ಚಂದ್ರನ ಮೇಲೆ ಬೊಕ್ಕೆಗಳಂತಿರುವವು ನಿಜವಾಗಿಯೂ ಜ್ವಾಲಾಮುಖಿಗಳು ಮತ್ತು ಅವುಗಳಿಂದ ಹರಿಯುವ ಬಹಳ ದೊಡ್ಡ ಕಾದಕಲ್ಲಿನ ಪ್ರವಾಹಗಳು ಎಂಬುದು ನಿಜವೆಂದು ಸ್ಪಷ್ಟವಾಗುತ್ತದೆ. ನೆಲದ ಮೇಲಿರುವ ಬೂದಿಯು ಏಳು ದಿನಗಳಿಂದಲೂ ಕಾಯುತ್ತಿರುವ ಬಿಸಲಿನಿಂದ ಕಾದು ಸುಡುತ್ತಿದೆ. ನಾನು ಸ್ವಲ್ಪ ಬೂದಿಯನ್ನು ಕೆದರಿದರೆ ಅದರ ಕೆಳಗಿರುವ ಬಂಡೆಯು ಸಿಕ್ಕುತ್ತದೆ—ಅದೋ ಆಣೆಕಲ್ಲಿಗಿಂತ ಹೆಚ್ಚಾಗಿ ಕೊರೆಯುತ್ತದೆ; ಜ್ವಾಲಾಮುಖಿಗಳು ಸುರಿಸುವ ಬೂದಿಗೆ ಉಷ್ಣವಾಹಕ ಶಕ್ತಿಯು ಬಹಳ ಕಡಿಮೆ.

ಹತ್ತಿರಿರುವ ಅಪೆನ್ನೈನ್ ಪರ್ವತದ ಶಿಖರವೊಂದನ್ನು ಹತ್ತಿ ಸುತ್ತಲಿನ ದೃಶ್ಯವನ್ನು ನೋಡುವುದೆಂದು ತೀರ್ಮಾನಿಸುತ್ತೇನೆ. ಹೊರಟಕೂಡಲೇ—ಓಹೋ, ಅದೊಂದು ವಿಚಿತ್ರ ಅನುಭವವುಂಟಾಗುತ್ತದೆ! ಹಾಗಾಗುವುದೆಂದು ತಿಳಿದಿತ್ತು. ಆದರೂ ಅದು ವಿಚಿತ್ರ ಅನುಭವವೇ. ನನ್ನ ಸಾಮಾನುಗಳು, ಯಂತ್ರಗಳು, ಕವಚ ಇವೆಲ್ಲವೂ ತುಂಬ ತೂಕವುಳ್ಳದಾದರೂ ಹಕ್ಕಿಗರಿಯಂತೆ ಹಗುರವಾಗಿ ತೋರುವುದು, ತೇಲಿಕೊಂಡು ಹೋಗುವಂತೆ ತೋರುವುದು. ನೆಲದಿಂದ ಐದು ಗಜಗಳು ಮೇಲಕ್ಕೆ ಹಾರುವುದು ಬಹು ಸುಲಭ. ಅರವತ್ತು ಅಡಿಗಳಿಗೊಂದು ಹೆಜ್ಜೆಯನ್ನಿಟ್ಟುಕೊಂಡು ನಡೆಯಬಹುದು. ಹಾಗೆ ನಡೆಯುವುದು ನಾವು ಭೂಮಿಯ ಮೇಲೆ ಸ್ವಲ್ಪ ಬೇಗ ನಡೆಯುವುದು ಹೇಗೋ ಹಾಗೆ.

[ಚಂದ್ರನ ಮೇಲೆ ಆಕರ್ಷಣ ಶಕ್ತಿಯು ಭೂಮಿಯ ಮೇಲಿರುವುದರ ಆರನೆಯ ಒಂದು ಭಾಗ ಮಾತ್ರ. ಚಂದ್ರನ ಘನ ಪರಿಮಾಣವು ಭೂಮಿಯ ೧/೪೯ರಷ್ಟು. ಭೂಮಿಗಿಂತಲೂ ಚಂದ್ರಗ್ರಹವು ಹಗುರವಾದ ಸಾಮಗ್ರಿಗಳಿಂದ ಮಾಡಲ್ಪಟ್ಟದೆಯೆಂದು ಕಾಣುತ್ತದೆ. ಆ ಸಂಬಂಧವು ...:೧೦೦ಕ್ಕಿರುವಂತೆ. ಆದುದರಿಂದ ಚಂದ್ರನ ತೂಕವು ಭೂಮಿಯ ೧/೮೧ರಷ್ಟು. ಆದುದರಿಂದ ಚಂದ್ರನ ಆಕರ್ಷಣ ಶಕ್ತಿಯು ಭೂಮಿಯದರ ೧/೮೧ರಷ್ಟು ಎಂದಂದುಕೊಳ್ಳಬಹುದು. ಆದರೆ ಅದು ಹಾಗಲ್ಲ. ಒಂದು ಗೋಳಾಕಾರದ ವಸ್ತುವಿನ ಆಕರ್ಷಣ ಶಕ್ತಿಯು ಅದರ ನಡುವೆ ಒಂದು ಬಿಂದುವಿನಿಂದಿದ್ದರೆ ಹೇಗೋ ಹಾಗೆ ವರ್ತಿಸುತ್ತದೆ. ಆಕರ್ಷಣಶಕ್ತಿಯ ಪರಿಮಾಣಕ್ಕೂ ಆಕರ್ಷಿಸಲ್ಪಡುವುದರ ದೂರವನ್ನು ಅದೇ ದೂರದಿಂದ ಗುಣಿಸಿದರೆ ಬರುವ ಲಬ್ಧಕ್ಕೂ ಒಂದು ಸ್ಥಿರ ಸಂಬಂಧವಿದೆ. (ಒಂದು ಹೆಚ್ಚಾದರೆ ಇನ್ನೊಂದು ಕಡಿಮೆಯಾಗುತ್ತದೆ : inverse proportion). ಚಂದ್ರನ ಮೇಲಿರುವಾಗ ನಾವು ಅದರ ಮಧ್ಯದಿಂದ, ಭೂಮಿಯ ಮೇಲಿರುವುದರ ಕಾಲುಪಾಲಷ್ಟು ದೂರಮಾತ್ರವಿರುತ್ತೇವೆ. ಆದುದರಿಂದ ಆಕರ್ಷಣವು ಸುಮಾರು ಹದಿನಾಲ್ಕರಷ್ಟು ಹೆಚ್ಚಾಗಿರುತ್ತದೆ. ಎಂದರೆ, ೧/೮೧ರಷ್ಟು ಕಮ್ಮಿಯಾದ ಶಕ್ತಿಯು ಹದಿನಾಲ್ಕು ಭಾಗದಷ್ಟು ಹೆಚ್ಚಾಗಿದ್ದರೂ ಒಟ್ಟಿನಲ್ಲಿ ೧೪/೮೧, ಎಂದರೆ ಸುಮಾರು ೧/೬ರಷ್ಟಿರುತ್ತದೆ.]

ನಾನು ಬಯಲಿನ ಮೇಲೆ ತೇಲಿಕೊಂಡು ಹೋಗುತ್ತೇನೆ. ಇಷ್ಟು ಸುಲಭವಾಗಿರುವುದು ಅನುಕೂಲ, ಏಕೆಂದರೆ ಅಗ್ನಿಪರ್ವತದಿಂದುಗುಳಲ್ಪಟ್ಟ ಬೂದಿಯು ಮೆತ್ತಗೆ ಮರಳಿನಂತಿರುತ್ತದೆ. ಪರ್ವತ ಶ್ರೇಣಿಯ ತಪ್ಪಲನ್ನು ಬೇಗ ಮುಟ್ಟುತ್ತೇನೆ. ಬೆಟ್ಟವು ಬೋಳಾಗಿ ಕಡಿದಾಗಿದೆ. ಆದುದರಿಂದ ಹತ್ತುವುದು ಸುಲಭವಲ್ಲ. ಆದರೆ ಬಂಡೆಯು ಗಟ್ಟಿಯಾಗಿ ಹಿಡಿತಕ್ಕೆ ಸಿಕ್ಕುವಂತಿದೆ. ಗಾಳಿಮಳೆಗಳಿಲ್ಲದಿರುವುದರಿಂದ ಅದರ ಶಕ್ತಿಯು ಕಡಿಮೆಯಾಗಿಲ್ಲ, ಅದರ ಮೇಲೆ ಜಾರುವಂತೆಯೂ ಇಲ್ಲ. ಉರುಳಿಕೊಂಡು ಬಂದು ತಲೆಯ ಮೇಲೆ ಬೀಳುವಂತಹ ಬಿಡಿಕಲ್ಲುಗಳೂ ಇಲ್ಲ. ಹೆಜ್ಜೆ ಕೈಗಳಿಗೆ ಹಿಡಿದುಕೊಳ್ಳುವುದಕ್ಕೆ ಅಣಿಯಾದ ಸ್ಥಳಗಳನೇಕವಿವೆ. ನನ್ನ ಮೈ ನನಗೆ ಅಷ್ಟು ಹುಗುರಾಗಿ ಎಂದೂ ಕಂಡಿರಲಿಲ್ಲ. ಉನ್ನತ ಶಿಖರಗಳನ್ನೇರುವಾಗ ಆಗುವಂತೆ, ಗಾಳಿ ಸಾಲದೆ ಮೇಲುಸಿರು ಬರುವಂತಿಲ್ಲ. ಏಕೆಂದರೆ ನಾನು ಉಸಿರಾಡುವ ಆಮ್ಲಜನಕವೆಲ್ಲವೂ ನನ್ನ ಬಳಿಯಲ್ಲಿಯೇ ಇದೆ. ಹದಿನಾರು ಸಾವಿರ ಅಡಿ ಎತ್ತರವಿರುವ ಶಿಖರವನ್ನು ಹತ್ತಲು ಐದೂವರೆ ಗಂಟೆಕಾಲ ಮಾತ್ರ ಸಾಕು. ಶಿಖರದ ಮೇಲೇರಿ ಕುಳಿತು ಸುತ್ತಲಿನ ದೃಶ್ಯವನ್ನು ನೋಡುತ್ತೇನೆ. ಪುನಃ ಆ ಸ್ಮಶಾನ ಮೌನವೂ, ಬೆಂಗಾಡೂ ಗೋಚರವಾಗುತ್ತವೆ. ನನ್ನ ಮುಂಭಾಗದಲ್ಲಿ ದೊಡ್ಡ ಮೈದಾನ, ಅದರಿಂದ ಅಪೆನ್ನೈನ್ ಬೆಟ್ಟವು ಕಡಿದಾಗಿ ಮೇಲೇಳುವುದು. ಎಡಗಡೆ ಬಯಲಿನಲ್ಲಿ ಕೆಲವು ತಗ್ಗಾದ

ಗುಡ್ಡಗಳಿವೆ. ಉತ್ತರಕ್ಕೆ ಅದೇ ಬಯಲು ೭೦ ಮೈಲು ದೂರದಲ್ಲಿರುವ ದಿಗಂತದ ವರೆಗೂ ಒಂದೇ ಸಮನೆ ವ್ಯಾಪಿಸಿದೆ. ದಿಗಂತದಿಂದ ಆಕಾಶವು ಸ್ಪಷ್ಟವಾಗಿ ಮೇಲೇಳುತ್ತದೆ. ಮೋಡಮಂಜುಗಳಿಂದ ಅದು ಮಂಕಾಗಿ ಕಾಣುವಂತಿಲ್ಲ. ನನ್ನ ಬಲ ಗಡೆಗೆ ಅಪೆನೈನ್ ಪರ್ವತವು ದಿಗಂತದ ವರೆಗೆ ಹಬ್ಬಿದೆ. ಎಡಗಡೆ, ಬಯಲಿನ ಕೊನೆಯಲ್ಲಿ ಆರ್ಕಿಮೆಡಿಸ್ (Archimedes) ಅಗ್ನಿಪರ್ವತಕುಂಡವು ೧೨೦ ಮೈಲು ದೂರದಲ್ಲಿದ್ದರೂ ಕೊಂಚ ದಿಗಂತದ ಮೇಲೆದ್ದು ಕಾಣುತ್ತಿದೆ. ಒಂದು ದಿನ ಅಲ್ಲಿಗೂ ಹೋಗಿ ೬೦೦೦ ಅಡಿ ಎತ್ತರವಿರುವ ಅದರ ಪಾತ್ರೆಯ ಅಂಚಿನ ಮೇಲೆ ಹತ್ತಿ ನೋಡಬೇಕೆಂದಿದ್ದೇನೆ. ಅದನ್ನು ಹತ್ತಿದಾಗ ೫೦ ಮೈಲಿ ಅಗಲವಿರುವ ಪಾತ್ರೆಯ ಒಳಮೈದಾನವನ್ನೆಲ್ಲ ನೋಡಬಹುದು. ನನ್ನ ಮುಂದಿರುವ ಮೈದಾನದಲ್ಲಿ ೬೦ ಮೈಲು ಉದ್ದವಿರುವ ಬಿರುಕೊಂದಿದೆ. ಅದು ಎಡಗಡೆ ಕೆಲವು ಮೈಲುಗಳಷ್ಟು ಅಗಲವಾಗಿದ್ದು ಬಲಗಡೆಗೆ ಚಿಕ್ಕದಾಗುತ್ತ ಬಂದು ಬಯಲನ್ನು ಸೇರುತ್ತದೆ. ನಾನು ನಿಂತಿರುವೆಡೆಯಿಂದ ಅದರ ಆಳವನ್ನು ಹೇಳುವುದಕ್ಕಾಗುವುದಿಲ್ಲ, ಆದರೆ ಅದು ಕೆಲವು ಮೈಲುಗಳಷ್ಟು ಆಳವಾಗಿರಬಹುದೆಂದು ಕಾಣುತ್ತದೆ. ಈ ಬಿರುಕಿಗೆ ಅಡ್ಡಲಾಗಿ ಮತ್ತೊಂದು ಬಿರುಕು ಆರ್ಕಿಮೆಡಿಸ್ ಕಡೆಗೆ ಹೋಗುತ್ತದೆ. ನನ್ನ ಹಿಂಭಾಗದಲ್ಲಿ ಕೋಚುಕೋಚಾದ ಬೆಟ್ಟದ ಸಾಲು, ಅವುಗಳಲ್ಲಿ ಕೆಲವು ಅಗ್ನಿಪರ್ವತ ಕುಂಡಗಳು. ಇವೆಲ್ಲವೂ ದಿಗಂತದ ಬಳಿ ತಗ್ಗಾಗುತ್ತ ಹೋಗುವುವು.



ಅಪೆನೈನ್ ಪರ್ವತಗಳು ಮತ್ತು 'ಆರ್ಕಿಮೆಡಿಸ್' ಅಗ್ನಿಪರ್ವತ ಕುಂಡ

ನನ್ನ ಕಾಲಬಳಿ ಇರುವ ದೃಶ್ಯವು ಅದು. ಅದರ ವೈಚಿತ್ರ್ಯವನ್ನು ವರ್ಣಿಸಲು ಮಾತುಗಳು ಸಿಕ್ಕವು. ಅದರಲ್ಲಿ ಆಶ್ಚರ್ಯವಿಲ್ಲ; ಏಕೆಂದರೆ ಭೂಮಿಯ ಮೇಲೆ ನಾವಾಡುವ ಮಾತಾವುದೂ ಚಂದ್ರಮಂಡಲದಲ್ಲಿ ಒಪ್ಪುವುದಿಲ್ಲ. ನೀವೇ ಅಲ್ಲಿಗೆ ಹೋಗಿ ಆ ಚಿತ್ರವನ್ನು ಮಂದಟ್ಟುಮಾಡಿಕೊಳ್ಳಬೇಕು. ಅದಕ್ಕೆ ನೀವು ನಿಮ್ಮ ಮನೆಯನ್ನು ಬಿಟ್ಟು ಹೊರಹೋಗಬೇಕಾದುದೂ ಇಲ್ಲ. ಚಿಕ್ಕದೊಂದು ದೂರದರ್ಶಕ ಯಂತ್ರವನ್ನು (telescope) ತೆಗೆದುಕೊಂಡು ಶುಕ್ಲ ಸಪ್ತಮಿಯ ಸುಮಾರಿಗೆ ಚಂದ್ರನ ಕಡೆ ತಿರುಗಿ... ರಾಯಿತು. ಆಗ ಸೂರ್ಯರಶ್ಮಿಯು ಓರೆಯಾ... ದರಿಂದ ಎಲ್ಲವೂ ಎದ್ದುಕಾಣುತ್ತವೆ. ಆ... ದೃಶ್ಯವನ್ನು ನಿಮ್ಮ ಕಾಲಬಳಿಯೇ ನೋಡಬಹು...

ಇದು ವರೆಗೆ ನೆಲದ ದೃಶ್ಯವನ್ನು ನೋಡುತ್ತ... ವಿಚಿತ್ರ ಆಶ್ಚರ್ಯದಲ್ಲಿ ಆಕಾಶದ ಕಡೆಗೆ ... ಲಿಲ್ಲ. ಈಗ ನನ್ನ ಗಮನವನ್ನು ಆ ಕಡೆ ... ಅದು ತಲೆಯ ಮೇಲೆ ದೊಡ್ಡದೊಂದು ಕಪ್ಪು... ಯನ್ನು ಬೋರಲು ಹಾಕಿದಂತಿದೆ. ಹಗಲಾ... ದ್ದರೂ ಆಕಾಶವು ರಾತ್ರಿಯಲ್ಲಿದ್ದಂತೆ ಕಪ್ಪಾ... ತ್ತಿದೆ. ನೆತ್ತಿಯ ಮೇಲೆ ಸೂರ್ಯನು ಪ್ರಕಾ... ಯುತ್ತಿದ್ದರೂ ನಕ್ಷತ್ರಗಳೆಲ್ಲವೂ ಸ್ವಚ್ಛ ಬೆಳ... ಯುತ್ತಿವೆ. ಇಲ್ಲಿ ಗಾಳಿಯಿಲ್ಲ, ವಾಯುಮಂಡ... ದರಿಂದ ಭೂಮಿಯ ಮೇಲಿರುವಂತೆ ನೀಲಿಯ... ಆ ನೀಲವರ್ಣ ಕಾಣುವುದು ವಾಯುಮಂಡಲ... ಧೂಳಿನ ಸೂಕ್ಷ್ಮಕಣಗಳಿಂದ. ನಕ್ಷತ್ರಗಳು ... ಎಡೆಬಿಡದೆ ಹೊಳೆಯುವುವು. ಈ ನಕ್ಷ... ಆಕಾಶವನ್ನು ನೋಡಿದರೆ ಪುನಃ ಭೂಮಿಯ ... ಭಾಸವಾಗುವುದು. ಏಕೆಂದರೆ ನಕ್ಷತ್ರರಾಶಿಗಳ... ತಮ್ಮ ಪರಸ್ಪರ ಸ್ಥಾನಗಳಲ್ಲಿಯೇ ಇವೆ. ... (ಆಕಾಶದಲ್ಲಿ ಬಿಳಿಮೋಡದ ಪಟ್ಟಿಯಂತೆ ಕಾ...

ನಕ್ಷತ್ರ ಸಮುದಾಯ) ಮಸಿಬಣ್ಣದ ಆಕಾಶದಲ್ಲಿ ಬೆಳ್ಳಿಯ ಪಟ್ಟಿಯೆಳೆದಂತೆ ಹಬ್ಬಿರುವುದು. ಅಲ್ಲಿ ನೋಡಿ, ಶುಕ್ರನು ಸೂರ್ಯನ ಎಡಗಡೆಯಲ್ಲಿ ಬಹುದೂರದಲ್ಲಿಲ್ಲ. ದೂರದರ್ಶಕ ಯಂತ್ರದ ಸಹಾಯವಿಲ್ಲದೆಯೇ ಅದನ್ನು ನೋಡಬಲ್ಲೆ; ಅದು ಅರ್ಧಚಂದ್ರನಂತಿರುವುದು. ಮತ್ತು ಸೂರ್ಯನೋ, ಭೂಮಿಯ ಮೇಲೆ ಕಾಣುವುದಕ್ಕಿಂತ ಹೆಚ್ಚು ಉಗ್ರನಾಗಿ ತೋರ್ಪೆಸುತ್ತಿರುವನು. ಸೂರ್ಯನ ಎಡಬಲದಲ್ಲಿ ಬೆಳಕಿನ ಪಟ್ಟಿಗಳಿವೆ (Zodiacal light).

ಸೂರ್ಯನಿಗೆ ಅಡ್ಡಲಾಗಿ ಒಂದು ನಾಣ್ಯವನ್ನು ಹಿಡಿದು ನೋಡಿದರೆ ಅವನ ಸುತ್ತಲಿರುವ ಜ್ವಾಲಾಮಂಡಲವನ್ನು (Corona) ನೋಡಬಹುದು.

ಆದರೆ ನನ್ನ ಹಳೆಯ ಸ್ನೇಹಿತನಾದ ಭೂಮಿಯೆಲ್ಲಿ ? ಎಲ್ಲಿಯೂ ಕಾಣುವುದಿಲ್ಲವಲ್ಲ—ಓಹೊ ಮರೆತಿದ್ದೆ, ಇವತ್ತು ಪೂರ್ಣಿಮೆಯಾದುದರಿಂದ ಚಂದ್ರನಿಗೆ ಅಮಾವಾಸ್ಯೆಯ ಭೂಮಿ. ಸ್ಕೂಲಿನಲ್ಲಿ ಇದನ್ನು ಹೇಳಿಕೊಟ್ಟಿದ್ದರು—ಆದರೆ ನಾನು ಮರೆತೇ ಬಿಟ್ಟಿದ್ದೆನಲ್ಲ. ಚಂದ್ರನಂತೆ ಭೂಮಿಗೂ ತನ್ನ ಸ್ವಂತ ಪ್ರಕಾಶವಿಲ್ಲ (ನಮ್ಮ ಪಟ್ಟಣಗಳ ಇಲೆಕ್ಟ್ರಿಕ್ ದೀಪಗಳು ಅಷ್ಟು ದೂರದಲ್ಲಿ ಅತ್ಯಲ್ಪವಾದುವು. ಬರಿ ಕಣ್ಣಿನಿಂದ ಕಾಣುವಂತೆಯೇ ಇಲ್ಲ). ಚಂದ್ರನು ಭೂಮಿಗೆ ಕಾಣುವಂತೆ ಭೂಮಿಯೂ ಚಂದ್ರನಿಗೆ ಒಂದು ಪಕ್ಷ ವೃದ್ಧಿಯಾಗುತ್ತಲೂ, ಇನ್ನೊಂದು ಪಕ್ಷ ಕ್ಷೀಣಿಸುತ್ತಲೂ, ಹೋಗುವುದು. ಒಂದೇ ವ್ಯತ್ಯಾಸ. ಅಲ್ಲಿ ಪೂರ್ಣಿಮೆಯ ಭೂಮಿಯಾಗಿರುವಾಗ ಭೂಮಿಯ ಮೇಲೆ ಅಮಾವಾಸ್ಯೆಯ ಚಂದ್ರ, ಒಂದೆಡೆ ಶುಕ್ಲಪಕ್ಷವಾದರೆ ಇನ್ನೊಂದು ಕಡೆ ಕೃಷ್ಣಪಕ್ಷ.

ಈಗ ಚಂದ್ರನ ಮೇಲೆ ಅಮಾವಾಸ್ಯೆ. ಸೂರ್ಯನು ದಿಗಂತದಿಂದ ದಿಗಂತದ ವರೆಗೆ ಪ್ರಯಾಣಮಾಡಲು ೧೫ದಿನ ತೆಗೆದುಕೊಳ್ಳುವನು. ಈಗ ನೆತ್ತಿಯ ಮೇಲಿದ್ದಾನೆ. ಓಹೋ ಇದೇನು, ಇದ್ದಕ್ಕಿದ್ದಂತೆ ಅವನ ಬಲಗಡೆ ಒಂದು ಕಪ್ಪು ಚುಕ್ಕೆಯು ಕಾಣಿಸಿಕೊಂಡು, ಕ್ರಮೇಣ ಗೆರೆಯಂತಾಗಿ ಕಡೆಗೆ ಕಪ್ಪು ಕುಲಾವಿಯಂತಾಗುವುದು. ಸೂರ್ಯಗ್ರಹಣ ವೊಂದು ಪ್ರಾರಂಭವಾಗಿದೆ. ಸೂರ್ಯನು ಭೂಮಿಯ ಹಿಂದೆ ಮರೆಯಾಗಿ ಅದೃಶ್ಯನಾಗುವನು. ಭೂಮಿಯು ಕಪ್ಪಾಗಿ ಸೂರ್ಯನಿಗೆ ಅಡ್ಡಲಾಗಿ ಕಾಣುತ್ತಲೇ ಇದೆ. ಸೂರ್ಯನಿಗೆ ಅಡ್ಡಲಾಗಿ ಗೆರೆಯಂತೆ ಕಾಣಿಸಿಕೊಂಡ ದೊಡ್ಡ ವರ್ತುಳದ ಕೊಂಚ ಭಾಗದಿಂದ ಭೂಮಿಯು ಎಷ್ಟು ದೊಡ್ಡದಾಗಿ ಕಾಣುವುದೆಂಬುದನ್ನು ತಿಳಿದೆ. ಸೂರ್ಯನು ಅದೃಶ್ಯನಾದುದರಿಂದ ಎಲ್ಲ ಕಡೆಯೂ ಕತ್ತಲೆಯು ಮುಸುಕಿ ನೆಲವೆಲ್ಲ ತಣ್ಣಗಾಗುತ್ತದೆ. ಪೂರ್ಣಗ್ರಹಣ. ಭೂಮಿಯಿಂದ ಚಂದ್ರನು ಕಾಣುವುದರ ನಾಲ್ಕರಷ್ಟು ದೊಡ್ಡದಾಗಿ ಕಾಣುತ್ತಿದೆ ಭೂಮಿ. ಅದರ ಸುತಲೂ ಕೆಂಪು ಛಾಯೆಯ ಆವರಣ ವೊಂದು; ಅದೇ ಭೂಮಿಯ ವಾಯುಮಂಡಲ. ಈ ಕೆಂಬಣ್ಣದ ಮಂಕು ಬೆಳಕು ನನ್ನ ಸುತ್ತಲೂ ಬಿದ್ದಿದೆ. ಸುತ್ತಲೂ ಮಂಜುಗಡ್ಡೆಗಿಂತಲೂ ಹೆಚ್ಚಾಗಿ ಕೊರೆಯಲು ಸುರುವಾಗಿದೆ. ನನ್ನ ಉಷ್ಣಮಾಪಕ ಯಂತ್ರವನ್ನು (thermometer) ನೋಡುತ್ತೇನೆ. ಗ್ರಹಣಕ್ಕೆ ಮುಂಚೆ ನೀರು ಮರಳುವಷ್ಟು ಶಾಕವನ್ನು ತೋರಿಸುತ್ತಿತ್ತು; ಈಗ ಆನೆಕಲ್ಲಿಗಿಂತ ಕೆಳಗೆ ಸುಮಾರು ೨೦೦ ಡಿಗ್ರಿಗಳಷ್ಟು ತಣ್ಣಗಾಗಿ ಬಿಟ್ಟಿದೆ. ಪೆಟಿಟ್ (Pettit) ಮತ್ತು ನಿಕಲ್ಸನ್ (Nicholson)ರು ತಮ್ಮ ಸೂಕ್ಷ್ಮವಾದ ಸಲಕರಣಗಳಿಂದ ಚಂದ್ರಗ್ರಹಣ ಕಾಲದಲ್ಲಿನ ಉಷ್ಣವ್ಯತ್ಯಾಸಗಳನ್ನು ಕಂಡುಹಿಡಿದಿರುವರು. ಆದರೆ ಅವರಿಗೆ ಅದು ಅಷ್ಟು ಸುಲಭವಾಗಿರಲಿಲ್ಲ, ಈಗ ನನಗಿರುವಂತೆ. ನಾನು ನನ್ನ ಜೇಬಿನಿಂದ ಸ್ಪೆಷಲ್ ಉಷ್ಣಮಾಪಕ ಯಂತ್ರವೊಂದನ್ನು ತೆಗೆದು ನೋಡಿದರೆ ಸಾಕು, ತಿಳಿಯುತ್ತದೆ. ಪೂರ್ಣಗ್ರಹಣವು ಒಂದು ಗಂಟೆಕಾಲ ಮಾತ್ರವಿರುತ್ತದೆ. ಗ್ರಹಣದ ಮಧ್ಯಕಾಲದಲ್ಲಿ ಸೂರ್ಯನ ಸುತ್ತಲಿನ ಜ್ವಾಲಾಮಂಡಲವು (Corona) ಕಾಣುವುದಿಲ್ಲ. ಅದಷ್ಟು ಭಾಗವೂ ಭೂಮಿಯಿಂದ ಮರೆಮಾಡಲ್ಪಟ್ಟಿದೆ. ಆ ಜ್ವಾಲಾಮಂಡಲವನ್ನು ನೋಡಲು ಗ್ರಹಣವಿಲ್ಲದಿರುವಾಗಲೇ ಸುಲಭ [ಭೂಮಿಯಿಂದ ಈ ಜ್ವಾಲಾಮಂಡಲವು ಕಾಣಬೇಕಾದರೆ ಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಮಾತ್ರ. ಆಗ ಅದು ಆಗುವ ಸ್ಥಳಗಳಿಗೆ ವಿಜ್ಞಾನಶಾಸ್ತ್ರಜ್ಞರು ತಮ್ಮ ಸಲಕರಣಗಳನ್ನೆಲ್ಲ ತೆಗೆದುಕೊಂಡು ಹೋಗಿ ಫೋಟೋ ಮುಂತಾದುವನ್ನು ತೆಗೆದುಕೊಳ್ಳುವರು. ಸೂರ್ಯಗ್ರಹಣಕ್ಕಾಗಿ ಹಲವು ವರ್ಷಗಳು ಕಾಯುವರು; ಆಗಲೂ ಮೋಡ ಮಳೆ ಇಲ್ಲದೆ. ಸ್ಪಷ್ಟವಾಗಿ ಕಂಡು ಬಂದರೆ ಅದು ಅವರ ಅದೃಷ್ಟ].

ಸೂರ್ಯಗ್ರಹಣವು ಮುಗಿಯಿತು. ಬಲಗಡೆ ಸೂರ್ಯನ ಒಂದು ಸಣ್ಣ ಭಾಗವು ಕಾಣಿಸಿಕೊಳ್ಳುತ್ತದೆ, ಕಡೆಗೆ ಅರ್ಧ ಗಂಟೆಯ ಮೇಲೆ ಸೂರ್ಯನು ಪೂರ್ಣವಾಗಿ ಕಾಣಿಸಿಕೊಳ್ಳುವನು. ನನ್ನ ಸ್ಪೆಷಲ್ ಉಷ್ಣಮಾಪಕಯಂತ್ರದ ಮುಳ್ಳು ಹಾರುತ್ತ ನೆಗೆಯುತ್ತ ಮೇಲೇರುವುದು.

ಈಗ ಆಕಾಶದಲ್ಲಿ ಭೂಮಿಯಿರುವ ಸ್ಥಳವು ಗೊತ್ತಿರುವೆ ಸೂರ್ಯನು ಅದೃಶ್ಯನಾದುದರಿಂದ ಅಲ್ಲಿಯೇ ದೃಷ್ಟಿಸಿ ನೋಡುವಲ್ಲಿ ಮಸಿಬಣ್ಣದ

ಆಕಾಶದಲ್ಲಿ ಕಪ್ಪು ಬಿಲ್ಲೆಯಂತೆ ಸ್ವಲ್ಪ ಗೋಚರವಾಗುವುದು. ಆದುದರಿಂದ ಅಮಾವಾಸ್ಯೆಯ ಭೂಮಿಯಾದರೂ ಅದರ ಮೇಲೆ ಕೊಂಚವಾದರೂ ಬೆಳಕು ಬಿದ್ದಿರಬೇಕು. ಓಹೋ ಮರೆತಿದ್ದೆ, ಅದು ಭೂಮಿಯ ಮೇಲೆ ಬಿದ್ದಿರುವ ಪೂರ್ಣಚಂದ್ರನ ಬೆಳಕು !

ಬೆಟ್ಟಹತ್ತಿದ ಹೊಸ ಅನುಭವಗಳಿಂದ ನನಗೆ ಆಯಾಸವುಂಟಾಗುತ್ತದೆ. ನಾನು ಬೇಗ ಬೆಟ್ಟದಿಂದಿಳಿದು ಬುಡದಲ್ಲಿ ಒಂದು ಕಡೆ ಮಲಗಿ ನಿದ್ದೆಮಾಡುತ್ತೇನೆ. ನನಗೆ ಬಹಳ ಆಯಾಸವಾಗಿದ್ದಿರಬೇಕು, ಬಹಳ ಹೊತ್ತು ನಿದ್ದೆ ಮಾಡಿದ್ದೆ. ಏನು, ಚಂದ್ರನಲ್ಲಿನ ರೀತಿಗಳಿಗೆ ಆಗಲೇ ಅಭ್ಯಾಸವಾಗಿ ಹೋಯಿತೇ! ಇಲ್ಲಿ ಹಗಲು ರಾತ್ರಿಗಳು ಹದಿನೈದು-ಹದಿನೈದು ದಿನಗಳಾಗುತ್ತವೆ. ಒಂದು ಸಲ ಮಧ್ಯೆ ಎದ್ದು ಸೂರ್ಯನು ಮುಳುಗಿ ಹೋದುದನ್ನು ನೋಡಿದಂತೆ ಜ್ಞಾಪಕವಿದೆ. ಈಗ ರಾತ್ರಿಯ ಸಮಯ. ಭೂಮಿಯು ಸಪ್ತಮಿಯ ಚಂದ್ರನಂತೆ ಕಾಣುತ್ತಿದ್ದುದು ಪುನಃ ನಿದ್ದೆ ಮಾಡೇಳುವಲ್ಲಿ ಪೂರ್ಣಿಮೆಯ ಭೂಮಿಯಾಗಿದ್ದಾನೆ. ಹಾಗಾದರೆ ಸುಮಾರು ಹದಿನೈದು ದಿನಗಳಷ್ಟು ಕಾಲ ನಿದ್ದೆ ಮಾಡೆದ್ದಿದ್ದೇನೆ. ಚಂದ್ರದಿನದ ಮಧ್ಯಾಹ್ನದ ಮೇಲೆ ಮಲಗಿದವನು ಅರ್ಧರಾತ್ರಿಯಲ್ಲಿ ಎದ್ದಿದ್ದೇನೆ.

ನನ್ನ ಸುತ್ತಲೂ ಶೀತಲವಾಗಿ ಕೊರೆಯುತ್ತಿದೆ. ಮಂಜುಗಡ್ಡೆಗಿಂತ ೨೭೦ ಡಿಗ್ರಿ ಕಡಿಮೆಯೆಂದು ನನ್ನ ಉಷ್ಣಮಾಪಕ ಯಂತ್ರವು ತೋರಿಸುತ್ತದೆ ! ಆದರೆ ನನ್ನ ಗಮನವೆಲ್ಲ ಪೂರ್ಣ ಪ್ರಕಾಶದಿಂದ ನೆತ್ತಿಯ ಮೇಲೆ ಹೊಳೆಯುತ್ತಿರುವ ಭೂಮಿಯ ಮೇಲಿದೆ. ಭೂಮಿಯಿಂದ ಚಂದ್ರನು ಕಾಣುವುದರ ನಾಲ್ಕರಷ್ಟು ದೊಡ್ಡದಾಗಿ ಕಾಣುತ್ತಿದೆ ಅದು. ಅಂದರೆ ಅದರ ವ್ಯೆಯ ವಿಸ್ತೀರ್ಣವು ಹದಿನಾಲ್ಕರಷ್ಟಾಗಬೇಕು. ಆಕಾಶಭಾವಣಿಯಲ್ಲಿ ಎಂತಹ ಅದ್ಭುತ ಗೋಳವದು! ನಾನು ಅದನ್ನು ನೋಡಿಯೇ ನೋಡುವೆನು; ಅದರ ಮೇಲೆ ಕಪ್ಪು ಛಾಯೆಯ ಪ್ರದೇಶವೊಂದು ಕಾಣುತ್ತದೆ: ಸಾಗರ. ಅದರ ಆಕಾರದಿಂದ ಪೆಸಿಫಿಕ್ ಮಹಾಸಾಗರವೆಂದು ತಿಳಿಯುತ್ತದೆ. ಉತ್ತರದಲ್ಲಿ ಬೆಳ್ಳಗಿರುವ ಪ್ರದೇಶವೊಂದಿದೆ—ಅದೇ ಉತ್ತರ ಧ್ರುವದ ಹಿಮಮಂಜುಗಡ್ಡೆಗಳು. ಈಗ ಭೂಮಿಯ ಮೇಲೆ ವಸಂತ ಋತು; ಆದುದರಿಂದ ಉತ್ತರ ದಕ್ಷಿಣ ಧ್ರುವಗಳೆರಡೂ ಕಾಣುತ್ತಿವೆ. ಹೌದು, ಅದೇ ಅಂಟಾರ್ಕ್ಟಿಕ್—ದಕ್ಷಿಣ ಶೀತವಲಯ, ಅದರ ಮಂಜುಗಡ್ಡೆಗಳ ಬಿಳುಪಿನಿಂದ ಹೇಳಬಲ್ಲೆ. ಓಹೋ, ಅದೇ ಜಪಾನ್, ಫಿಲಿಪೈನ್ಸ್, ಈಸ್ಟ್ ಇಂಡೀಸ್ ದ್ವೀಪಗಳು. ಅಗೋ ಅದೇ ಪೂರ್ವ ಸೈಬೀರಿಯ, ಅ... ಮಂಜಿನ್ನೂ ಮುಸುಕಿದೆ. ಆದರೆ ಅವೆಲ್ಲ ... ವಾಗಿ ಕಾಣುತ್ತಿಲ್ಲ. ಅಲ್ಲಲ್ಲಿ ಮಂಕುಮಂಕಾಗಿ ... ಗೆರೆಗಳಂತಿವೆ. ಸರಿ, ಅವೇ ಮೋಡಗಳಿರಬೇಕು ... ಆ ಭೂಭಾಗಗಳನ್ನು ನನ್ನ ದೃಷ್ಟಿಯಿಂದ ಮ... ಇವನ್ನೆಲ್ಲ ಕೊಂಚಕಾಲ ನೋಡುತ್ತಿರುವಲ್ಲಿ ... ಸಿದ್ದಂತೆಯೇ—ಆದರೂ ಮೈಯಲ್ಲಿ ವಿಚಿತ್ರ ... ಗುಪಂತೆ—ಕಾಣುತ್ತದೆ: ಭೂಮಿಯು ತನ್ನ ... ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಿದೆ. ಪೂರ್ವ... ಅಂಚಿನಲ್ಲಿ ಪ್ಯಾಸಿಫಿಕ್ ಸಾಗರವು ಮರೆಯಾಗುತ್ತ... ಹಿಂದುಗಡೆಗೆ ಸರಿಯುತ್ತಿದೆ. ಆ ಕಡೆಯೇ ... ಎಡಗಡೆಯ ಅಂಚಿನಲ್ಲಿ ಹೊಸ ಭಾಗಗಳು ಕಾ... ಹಿಂದೂ ಸಾಗರ, ಇಂಡಿಯ, ಮಧ್ಯ ಸೈಬೀರಿಯ, ... ಪರ್ಷಿಯ, ಅರೇಬಿಯ, ಕಡೆಗೆ ಆಫ್ರಿಕ, ... ನನ್ನ ದೂರದರ್ಶಕ ಯಂತ್ರದ ಮೂಲಕ ... ಪತ್ತೆಮಾಡುತ್ತೇನೆ. ಅದು ಯೂರೋಪು... ನಲ್ಲಿ ಕೊಂಚಕೊಂಚ ಕಾಣುತ್ತದೆ.

ಆ ಅಪೂರ್ವ ದೃಶ್ಯವನ್ನು ನೋಡುವುದ... ಗಂಟೆಗಳು ಮಗ್ನನಾಗಿದ್ದೆ. ಈಗ ಅಟ್ಲಾಂಟಿಕ್ ... ಕಾಣುತ್ತಿದೆ, ಇನ್ನು ಕೆಲವು ಗಂಟೆಗಳಲ್ಲಿ ... ಕಾಣುತ್ತದೆ. ಇಲ್ಲಿಂದ ಅಮೆರಿಕವನ್ನು ಕಂಡು... ಒಬ್ಬ ಕೊಲಂಬಸ್ ಬೇಕಾಗಿಲ್ಲ !

ಪೂರ್ಣಿಮಾ ಭೂಮಿಯಾಗುತ್ತ ಬಂತು. ... ಎಡ ಅಂಚಿನ ಕಡೆಯಿಂದ ಒಂದು ಗುಂಡ... ಚುಕ್ಕೆಯು ಅಟ್ಲಾಂಟಿಕ್ ಸಾಗರದ ಮೇಲೆ ... ಅದರ ಅಗಲ 2'ಳಷ್ಟು (ಎರಡು ಮಿನಿಟ್‌ಗಳಷ್ಟು) ಅಂದರೆ ಭೂಗೋಳದ ಅಗಲದ 1/50ರಷ್ಟು ... ಅದು ಜಾಗ್ರತೆಯಾಗಿ ಈಶಾನ್ಯದ ಕಡೆಗೆ ... ಭೂಮಿಯು ತಿರುಗುವುದಕ್ಕಿಂತ ಜಾಗ್ರತೆಯಾಗಿ ... ಚುಕ್ಕೆಯ ಅಂಚು ಸ್ಪಷ್ಟವಾಗಿ ಕಾಣುತ್ತಿಲ್ಲ ... ಸುತ್ತಲೂ ಭೂಮಿಯು ಮಂಕುಮಂಕಾಗಿ ... ಈ ಮಂಕಾದ ಭಾಗವು ಕಪ್ಪಾದ ಮಧ್ಯಭಾಗದ ... ಆವರಿಸಿಕೊಂಡು ಅದರ ಐದರಷ್ಟು ಅಗಲವಾಗಿ ... ನೆರಳು ಯೂರೋಪಿನ ಮೇಲೆ ಹಾಯ್ದು ... ಅಂಚನ್ನು ದಾಟಿ ಅದೃಶ್ಯವಾಗುತ್ತದೆ, ಅಲ್ಲಿ ಡಾ... ವಾಗುವ ಸಮಯದಲ್ಲಿ.

ಅಂತೂ ನಾನು ನನ್ನ ಕಣ್ಣಿನಿಂದ ಪೂರ್ಣ...

ಗ್ರಹಣವೊಂದು ನಡೆಯುತ್ತಿರುವುದನ್ನು ನೋಡಿದಂತಾಯಿತು. ನಾನು ನಿಂತಿರುವ ಈ ಚಂದ್ರನ ನೆರಳು ಭೂಮಿಯ ಮೇಲೆ ಸಾಗಿ ಹೋಗುವುದನ್ನು ನೋಡಿದೆ. ಅದು ಎಷ್ಟು ಹತ್ತಿರವಿದ್ದಂತಿತ್ತು, ಭೂಮಿಯೂ ಚಂದ್ರನೂ ಎಷ್ಟು ಹತ್ತಿರದ ಸಂಬಂಧಿಗಳು !

ಈ ವೈಭವವನ್ನೆಲ್ಲ ನೋಡಿದ ಮೇಲೆ ಪುನಃ ನಿದ್ದೆ ಬರುತ್ತದೆ. ನಾನು ಎದ್ದಾಗ ಬೆಳಗಾಗಿದೆ. ಸೂರ್ಯನು ಆಕಾಶದಲ್ಲಿ ಹೆಚ್ಚು ಏರಿಲ್ಲದಿದ್ದರೂ ಬಹು ಸೆಕೆಯಾಗಿದೆ.

ನಾನು ಪುನಃ ಆಪೆನೈನ ಶಿಖರವನ್ನು ಹತ್ತುತ್ತೇನೆ. ಈಗ ಕಾಣುತ್ತಿರುವ ದೃಶ್ಯವು ಹಿಂದೆ ನೋಡಿದುದಕ್ಕಿಂತ ಎಷ್ಟು ಬದಲಾವಣೆಯಾಗಿದೆ ! ಪರ್ವತದಿಂದ ಉದ್ದುದ್ದವಾದ ಕಪ್ಪು ನೆರಳು ಬಿದ್ದಿದೆ. ಕೆಲವು ಎತ್ತರವಾದ ಪ್ರದೇಶಗಳನ್ನು ನಾನು ಮೊದಲು ಗಮನಿಸದಿದ್ದರೂ ಈಗ ಅವುಗಳು ಉದ್ದವಾದ ನೆರಳಿನಿಂದ ಸ್ಪಷ್ಟವಾಗಿವೆ. ಹೀಗಾಗುವುದೆಂದು ಗೊತ್ತಿತ್ತು: ಭೂಮಿಯಿಂದ ಚಂದ್ರನು ಇನ್ನೂ ಪೂರ್ಣವಾಗಿಲ್ಲದಿರುವಾಗ ಅದರ ಅಂಚನ್ನು ನೋಡಿದರೆ ಎಲ್ಲವೂ ಎಷ್ಟು ಸ್ಪಷ್ಟವಾಗಿ ಕಾಣುತ್ತಿದ್ದುವೆಂಬುದು ತಿಳಿದಿತ್ತು. ಆದೇ, ಪೂರ್ಣಿಮೆಯ ದಿನ, ಅಷ್ಟು ಸರಿಯಾಗಿ ಕಾಣುತ್ತಿರಲಿಲ್ಲ. ಅದನ್ನೆಲ್ಲ ಈಗ ನಾನು ನನ್ನ ಬಳಿಯಲ್ಲಿಯೇ ಕಾಣುತ್ತಿದ್ದೇನೆ.

ಮೇಲೆ, ಭೂಮಿಯು ತನ್ನ ಯಥಾಸ್ಥಾನದಲ್ಲಿರುವುದು ಕಾಣುತ್ತಿದೆ., ಈಗ ಕೃಷ್ಣಪಕ್ಷದ ನಡುಭಾಗ. ಎಡ ಅರ್ಧ ಭಾಗ ಮಾತ್ರ ಕಾಣುತ್ತಿದೆ. ಆದರೂ ಸ್ವಲ್ಪ, ಬಹು ಸ್ವಲ್ಪವಾಗಿ ಬಲ ಅರ್ಧಭಾಗವೂ ಕಾಣುತ್ತಿದೆ, ಏಕೆಂದರೆ ಚಂದ್ರನ ಮಧ್ಯಪಕ್ಷದ ಬೆಳಕು ಆ ಭಾಗದ ಮೇಲೆ ಬಿದ್ದಿದೆ. ನಾನು ಪುನಃ ಬೆಟ್ಟವಿಳಿಯುತ್ತೇನೆ; ನನ್ನ ತಿಂಗಳ ಪ್ರವಾಸವು ಮುಗಿಯುತ್ತ ಬಂತು. ಮನೆಯ ಕಡೆಯ ಪ್ರಯಾಣವು ಸನ್ನಿಹಿತವಾಯಿತು. 'ರಾಕೆಟ್ಟ'ನ ಕೀಲುಗಳಿಗೆ ಎಣ್ಣೆ ಮುಂತಾದುವುಗಳನ್ನು ಹಾಕಿ ಸಿದ್ಧ ಮಾಡುತ್ತೇನೆ. ಚಂದ್ರನನ್ನು ಬಿಡುವ ಮತ್ತು ಭೂಮಿಯ ಮೇಲೆ ಇಳಿಯುವ ಉಪಕರಣಗಳೆಲ್ಲವೂ ಸರಿಯಾಗಿವೆ. ರಾಕೆಟ್ಟಿನ ಪಿರಂಗಿಯನ್ನು ಎರಡನೆಯ ಸಲ ಹೊಡೆಯುವುದು ಮಾತ್ರವಿದೆ........

ಪುನಃ ಭೂಮಿಯುಮೇಲಿಳಿದಿದ್ದೇನೆ. ಬಂದು ಕೆಲವು ವಾರಗಳಾದುವು. ಈಗ ಅದೆಲ್ಲವೂ ಸ್ವಪ್ನದಂತಿದೆ. ಒಂದು ದಿನ ಸಾಯಂಕಾಲ ಊರಹೊರಗೆ ತಿರುಗಾಡಲು ಹೋಗುತ್ತೇನೆ. ಸೂರ್ಯನು ಮುಳುಗಿ ಒಂದು ಗಂಟೆಯಾಗಿದೆ. ಪಶ್ಚಿಮದ ಕಡೆ ದಿಗಂತದ ಮೇಲೆ ಸ್ವಲ್ಪ ಎತ್ತರದಲ್ಲಿ ತದಿಗೆಯ ಚಂದ್ರನು ತೂಗಾಡುತ್ತಿದ್ದಾನೆ. ನನ್ನ ಸ್ವಂತ ಅನುಭವದಿಂದ ತಿಳಿದಿದ್ದೇನೆ, ಭೂಮಿಯ ಬೆಳಕು ಚಂದ್ರನ ಮೇಲೆ ಎಷ್ಟು ಸುಂದರವಾಗಿದೆಯೆಂಬುದನ್ನು. ಅಮಾವಾಸ್ಯೆಯಾಗಿ ಸ್ವಲ್ಪ ಕಾಲವೇ ಆಗಿರುವುದರಿಂದ ಪೂರ್ಣಿಮೆಯ ಭೂಮಿಯು ಚಂದ್ರನಿಗೆ ಬಹಳ ಸುಂದರವಾಗಿ ಕಾಣುತ್ತಿರಬೇಕು. ಸೂರ್ಯನ ಬೆಳಕು ಬೀಳದಿರುವ ಚಂದ್ರ ಭಾಗದ ಮೇಲೆ ಭೂಮಿಯು ತನ್ನ ಬೆಳಕನ್ನು ಸುರಿಯುತ್ತಿದೆ. ಅಲ್ಲಿನ ಬೆಳದಿಂಗಳ ರಾತ್ರಿಯು ನಮ್ಮ ಬೆಳದಿಂಗಳನ್ನು ಬಹುಮಟ್ಟಿಗೆ ಮೀರಿಸುವಂತಹದು.

ಅಲ್ಲಿ ಹಾಗಿರಬೇಕು; ಹಾಗಿರುವುದೆಂದು ನನಗೆ ಗೊತ್ತು. ಪುನಃ ತದಿಗೆಯ ಚಂದ್ರನನ್ನು ನೋಡುತ್ತೇನೆ. ಈಸಲ ಚಂದ್ರನ ಉಳಿದ ಬಾಗವೆಲ್ಲವೂ ಕೊಂಚ ಬೆಳಕಾಗಿ ಕಾಣುವುದು ಗೊತ್ತಾಗುತ್ತದೆ. ಇನ್ನೂ ಪೂರ್ಣಿಮೆಯ ಹತ್ತಿರಿರುವ ಭೂಮಿಯ ಬೆಳಕದು.

ಈ ಬೂದುಬಣ್ಣದ ಮಂಕುಬೆಳಕನ್ನು ಚಂದ್ರನ ಮೇಲಿರುವಾಗ ಭೂಬೆಳದಿಂಗಳೆನ್ನಬಹುದು. ಭೂಮಿಯ ಮೇಲೆಯೇ ಇರುವ ನಾವು, ನಮ್ಮ ಬೆಳಕು ಚಂದ್ರನ ಮೇಲೆ ಬೀಳುವುದನ್ನು ನೋಡುವುದಕ್ಕೆ ಅಲ್ಲಿಗೆ ಹೋಗಬೇಕಾದುದಿಲ್ಲ.

* * *

ಚಂದ್ರಮೋಹನ ಕಂಪೆನಿಯವರು 'ರಾಕೆಟ್' ಹಡಗು ಮತ್ತೆ ಯಾವಾಗ ಹೊರಡುವುದೆಂದು ಅವರಿಗೇ ಬರೆದು ತಿಳಿದುಕೊಳ್ಳಬಹುದು. ಮುಂಗಡವಾಗಿ ಸೀಟ್ ರಿಝರ್ವ್ ಮಾಡುವುದು ಒಳ್ಳೆಯದು.

ಭಿಷಗ್ರತ್ನ ಆಯುರ್ವೇದವಿದ್ವಾನ್ ಬಿ.ವಿ.ಪಂಡಿ

ಶ್ರೀಕರ ಕಸ್ತೂರಿಮಾತ್ರೆ

ಮಕ್ಕಳ ಮತ್ತು ದೊಡ್ಡವರ ಸಮಸ್ತ ಶೀತ ವಾತ ರೋಗಗಳಿಗೂ ಸ

ಬಾಲಸಂಜೀವಿನಿ

ಮಕ್ಕಳಿಗೆ ಸುಖವಾಗಿ ಭೇದಿಮಾಡಿಸಿ ಅಜೀರ್ಣ ಜ್ವರಗಳನ್ನು

(ಸದ್ವೈದ್ಯ ಶಾಲಾ ನಂಜನಗೂಡು)

ಶರಣಸಂದೇಶ

ನೀವು ಹಿಂದುಗಳೋ ?

ಹಾಗಾದರೆ ಜಾಗ್ರತೆ ಚಂದಾದಾರರಾಗಿರಿ !

ಇದು ವಿಚಾರಕ್ರಾಂತಿಯ ವಾರಪತ್ರಿಕೆ

ಸಂಪಾದಕರು:

ಶ್ರೀ. ಹರ್ಡೇಕರ ಮಂಜಪ್ಪನವರು

ಹಿಂದೂ ಸಮಾಜಸುಧಾರಣೆ, ಹಿಂದೂ ಸಂಘಟನೆ, ಧಾರ್ಮಿಕ ಸತ್ಯಸಿದ್ಧಾಂತಗಳ ಪ್ರತಿಪಾದನೆ, ಶ್ರೀ ಬಸವಾದಿ ಪ್ರಮಥರ ತತ್ತ್ವಪ್ರಸಾರಣೆ ಮತ್ತು ರಾಜಕೀಯ ಗುಣದೋಷ ವಿಮರ್ಶನೆ ಇವೇ ಈ ಪತ್ರಿಕೆಯ ಪಂಚಪ್ರಾಣ

ಮ್ಯಾನೇಜರ್, ಶರಣಸಂದೇಶ

ಪೋ. ಆಲಮಟ್ಟಿ, ಜಿ. ವಿಜಾಪೂರ.

ಡಾ. ಜೀ. ಬೀ. ಯವರ


ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧನಶ್ಯದ
ಪಿನಸಿ, ಒಂಟೆತಲೆನೋವು, ಮುಂತಾದ ವ್ಯಾ
ಹಾರವಾಗುವವು.
ಮೇಲ್ಪಟ್ಟ
ಅಡಗಿ,
ಯುವದು.
ನಶ್ಯದ ಸಂಗಡ
ನಶ್ಯದ ಪುಡಿಯ
ಚಿಟಿಕೆಯನ್ನು
ಲ್ಲವೂ ಪರಿಮ
ಅನೇಕರು
ವಾಗಿ ಉಪಯೋ
ಮಾದರಿ
ಕಳಿಸಲಾದೀತು.



ಬುಡ್ಡಿ ೧ ಕ್ಕೆ ರೂ ೦-೪-೦
ವ್ಹಿ. ಪಿ. ೦-೪-೦ ಡಜನ್ ೧ಕ್ಕೆ ಕ್ರಯ
ವ್ಹಿ. ಪಿ. ಚಾರ್ಜ ಆಣೆ

ಗುರುಬಸವ ಆ್ಯಂಡ ಕಂಪನಿ,
ಪೋಷ್ಟ ಬಾಕ್ಸ



ವಸಂತರಾಯನ ಮದುವೆ

ಲೇಖಕಿ: ಸೌ. ಶ್ಯಾಮಲೆ.

ಫೋಟೋಗ್ರಾಫರನಿಗೆ ' ಪೋಜ್ ' ಕೊಟ್ಟು, ನಾಲ್ಕು ಹೆಜ್ಜೆ ಮುಂದೆ ಬಂದು, ಸಿಗಾರು ಬೀಸಾಡುವವ ಅಷ್ಟರಲ್ಲಿ ಒಬ್ಬ ಮುದುಕ ನನ್ನ ಬಳಿಗೆ ಬಂದು ವಂದಿಸಿದ ....

ಈ ಊರಿಗೆ ನಾನು ಬಂದು ಎರಡೇ ತಿಂಗಳಾಗಿದ್ದವು. ಆದೇ ಹೊಸತಾಗಿ ಪ್ರೊಫೆಸರಿಯ ಪಟ್ಟವನ್ನೇರಿದ್ದೆನೆಂದು ಈ ಊರಿಗೆ ಬರುವ ಪ್ರಸಂಗ ಬಂದಿತು; ಇಲ್ಲವಾದರೆ, ಜನ್ಮವೆಲ್ಲವೂ ನನ್ನ ಹುಟ್ಟಿ ಬೆಳೆದ ಊರನ್ನು ಬಿಟ್ಟು ಎಲ್ಲಿಯಾದರೂ ಕಳೆಯಬೇಕೆನ್ನುವಂತಹ ಚಿರಶಾಪವೇ ನನಗೆ ಬಡಿದುಕೊಂಡಿದ್ದಿತು; ಅಂತಹ ಕೆಲಸವನ್ನೇ ಮಾಡಿದ್ದೆನು ನಾನು. ಆದರೆ ಪುನಃ ದೈವದ ಅನುಕೂಲತೆಯಿಂದ, ಗುರುಕುಲವಾಸವೆಂಬ ಅತ್ತೆಮನೆಯ ಕಾಟದಿಂದ ತಪ್ಪಿಸಿಕೊಂಡು, ಪುನಃ ನನ್ನ ತವರು ನಾಡನ್ನು ಸೇರಿದೆನು.

> ವಸಂತರಾಯ ತನ್ನೆಂಜಲ ತಾನೇ ಉಂಡ ! ಪಂಢರಪುರದಲ್ಲಿ ಬಿಟ್ಟು ಬಂದ ಎಂಜಲ .. ಪ್ರಸಾದವನ್ನು ಮತ್ತೆ ಮನೆಗೆ ತಂದ ..
> " ನಕ್ಕು ನಗಿಸಿ ಹೋದ್ರು, ದೂರ ಜಾರಿ ಹೋದ್ರು; ಕಾದು ಕಂದಿ ಹೋದ ಮಲ್ಲೀಗೆ ಬಳ್ಳಿಯ ಮರಳಿ ಅರಳಿಸಿದರು ವಸಂತರಾಯರು ‖ "

ಪ್ರೊಫೆಸರನಾಗುವ ಮೊದಲು ಅಭ್ಯಾಸಕ್ಕಾಗಿ ಊರೂರು ಅಲೆದಾಡುತ್ತಿರುವಾಗ, ಈಗಿನ ತಲೆತಿರುಕ 'ಮಾಡರ್ನ್' ತರುಣರಂತೆ, ನಾನಾದರೂ ಅಲ್ಲಿ ಇಲ್ಲಿ ಭಾಷಣಗಳನ್ನು ಮಾಡುವದು, ಸ್ಪೃಶ್ಯಾಸ್ಪೃಶ್ಯ ಸಹಭೋಜನಗಳಲ್ಲಿ ಮುಂದಾಳಾಗಿ ಕೆಲಸ ಮಾಡುವದು, ಚಿಕ್ಕ-ಪುಟ್ಟ ಲೇಖ-

ಕವನಗಳನ್ನು ಓದುವದು, ಇವುಗಳನ್ನು ನಡೆಸಿಯೇ ಇದ್ದೆನು. ಈ ನನ್ನ ಕೀರ್ತಿಯನ್ನು ಸಾವಿರ ಸಲ ವರ್ತಮಾನಪತ್ರಗಳ ಮೂಲಕ ನಮ್ಮ ಊರವರು ಮೊದಲೇ ಓದಿಕೊಂಡಿದ್ದರೇನೋ ! ಅದರಂತೆ ಊರಿಗೆ ಬಂದು ಎರಡು ತಿಂಗಳಾಗಿರಬೇಕು, ಅಷ್ಟರಲ್ಲಿ ಪತಿತೋದ್ಧಾರ ಸಂಘದವರು, ಹರಿಜನಕೇರಿಯ ಕೂಟದಲ್ಲಿ ಒಂದು ಸಭೆಯನ್ನೇರ್ಪಡಿಸಿ, ನನ್ನನ್ನು ಆಮಂತ್ರಿಸಿದರು,—ಭಾಷಣಕಾರನೆಂದಲ್ಲ, ಅಧ್ಯಕ್ಷನೆಂದು.

ಅಂತೂ ಗೊತ್ತುಪಡಿಸಿದ ವೇಳೆಗೆ ಸರಿಯಾಗಿ ನನ್ನನ್ನು ಕರೆಯಲಿಕ್ಕೆ ಒಂದು ಕಾರು, ಇಬ್ಬರು ಮುಂದಾಳುಗಳೊಡನೆ ಬಂದಿತು. ನಾನೂ ಕಾರಿನಲ್ಲಿ ಕುಳಿತೆನು. ಸಭೆಯಲ್ಲಿ ಜನಸಂದಣಿಯು ಕಿಕ್ಕಿರಿದು ನೆರೆದಿದ್ದಿತು. ಗಂಡಸರ ಅರ್ಧಕ್ಕಿಂತಲೂ ಮಿಗಿಲಾಗಿ ಸ್ತ್ರೀಯರು ನೆರೆದಿದ್ದರು; ಅವರಲ್ಲಿ ಕಿರಿಯರೇ ಹೆಚ್ಚಾಗಿ ಇದ್ದರು; ಶಾಲೆಯ ವಿದ್ಯಾರ್ಥಿನಿಗಳೇ ಹೆಚ್ಚಾಗಿರಬೇಕೆನಿಸಿತು. ಹರಿಜನರು, ಆಬಾಲವೃದ್ಧರು ಮೊದಲ್ಗೊಂಡು, ಸ್ತ್ರೀಪುರುಷರು ನೆರೆದಿದ್ದರು; ಅಂತೂ ಭಾಷಣಕಾರರ ಸ್ಫೂರ್ತಿಯುಕ್ತ ಭಾಷಣವೂ ಆಯಿತು; ಅದೇ ಧ್ವನಿಯಲ್ಲಿ ನನ್ನ ಸಮಾರೋಪ ಭಾಷಣವೂ ಎಲ್ಲರ ಮನ ಮೆಚ್ಚುವಂತೆ ಆಯಿತು. ಭಾಷಣದ ವಿಷಯವನ್ನು ಹೇಳಿದೆನೆಂದ ಮೇಲೆ, ನಾನು ಹೇಗೆ ಮಾತನಾಡಿದೆನೆಂಬುದನ್ನೇನೂ ವಾಚಕರ ಮುಂದಿಡುವ ಅವಶ್ಯವಿಲ್ಲವೆನಿಸುತ್ತದೆ. ಶಿಷ್ಟಾಚಾರಕ್ಕನುಸರಿಸಿ, ದೊಡ್ಡದೊಂದು ಹಾರವನ್ನು ಒಬ್ಬ ಹರಿಜನ ಕಾರ್ಯದ ಮುಖಂಡರು ನನ್ನ ಕೊರಳಲ್ಲಿ ಹಾಕಿ, ಕೈಯಲ್ಲೊಂದು ಸುಂದರವಾದ ತುರಾಯಿಯನ್ನಿತ್ತು ವಂದಿಸಿದರು; ಬಳಿಕ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪರವಾಗಿಯೊಂದು, ಹರಿಜನ ಬಾಲಿಕೆಯರ ಪರವಾಗಿ ಇನ್ನೊಂದು, ಹೀಗೆ ಇನ್ನು ಎರಡು ಹಾರಗಳು ನನ್ನ ಕೊರಳಲ್ಲಿ ತೂಗಾಡಿ ಶೋಭಿಸಹತ್ತಿದವು. ಕೆಲವು ಮುಖಂಡರೊಡನೆ ಆ ಸುದ್ದಿ ಈ ಸುದ್ದಿ ಕೆಲ ಹೊತ್ತು ಹರಟುತ್ತ, ಬಳಿಯಲ್ಲಿದ್ದ ಉಪಹಾರ ಮಂದಿರವನ್ನು ಹೊಕ್ಕೆವು. ಮಾಲೆಗಳನ್ನೆಲ್ಲ ಎಡಗೈಯ ಮೊಳಕೈಗೆ ಇಳಿಬಿಟ್ಟಿದ್ದೆನು. ಫಲಾಹಾರವಾದ ಬಳಿಕ, ಸಿಗರೇಟಿನ ಝುರಿಕೆಯನ್ನೆಳೆಯುತ್ತ ಹೊರಕ್ಕೆ ಬರುವಷ್ಟರಲ್ಲಿ, ಫೋಟೋಗ್ರಾಫರನು ನನಗಾಗಿ ಕಾದಿರುವನೆಂದು ಗೊತ್ತಾಯಿತು; ಸೂರ್ಯ ಮುಳುಗುವನೆಂದು ಅವನು ತ್ವರೆಮಾಡುತ್ತಿದ್ದನೇನೋ. ಅವನಿಗೆ 'ಪೋಜ್', ಕೊಟ್ಟು, ನಾಲ್ಕು ಹೆಜ್ಜೆ ಮುಂದೆ ಬಂದು, ಇನ್ನು ಸಿಗಾರು ಬಿಸಾಡುವವ—ಅಷ್ಟರಲ್ಲಿ ಒಬ್ಬ ಮುದುಕನು ನನ್ನ ಬಳಿಗೆ ಬಂದು ವಂದಿಸಿ, "... ಬರೆ, ತಮ್ಮ ಭಾಷಣವೇನೋ ಉತ್ಕೃಷ್ಟ... ಯಿತು. ನಾನು ಬಹಳ ಖುಷಿಯಾದೆನು. ... ಶಾಬಾಸ್.... ಇಷ್ಟು ಚಿಕ್ಕವರು ಕಾಣುತ್ತೀ... ಬುದ್ಧಿವಂತಿಕೆ, ವಿಚಾರವೆಷ್ಟು!...." ನಡುವೆ... ಹಾಕಿ, "ನಿಮ್ಮ ಮನಸಿಗೆ ಬಂದಿತ್ತೇ ಹಾಗ... ತಹ ಮುದುಕರ ಮನಸಿಗೆ ಇಂತಹ ... ಸರಿದೋರುವದೇ ಅಪರೂಪ. ನಿಮಗೆ ... ಕ್ಕಾಗಿ ನನಗೂ ತುಂಬಾ ಆನಂದವಾಗಿ... ಮುಂದಕ್ಕೆ ಹೆಜ್ಜೆಯಿಟ್ಟೆನು.

ಮುದುಕ ಮತ್ತೆ ದಾರಿಗೆ ಅಡ್ಡವಾಗಿ ... ಕೈಮುಗಿದನು. "ಪ್ರೊಫೆಸರಸಾಹೇಬರೆ, ... ಒಮ್ಮೆ ಕಾಣಬೇಕೆನ್ನುತ್ತೇನೆ.... ಹ್ಞ.... ... ಯಪ್ಪಾ ! ಅಂ.... ರಾವಸಾಹೇಬ, ತಮ್ಮ ... ತಮಗೆ ಯಾವಾಗ ಬಿಡುವು ಸಿಕ್ಕುತ್ತದೆ... ವಿಟ್ಟು ಹೇಳುವಿರಾ ?" ಅವನೊಡನೆ ... ನಾಡಲಿಕ್ಕೆ ನನಗೆ ಆಗ ವಿರಾಮವಿರಲಿಲ್ಲ "... ತ್ತರ ಮೇಲೆ...." ಎಂದು ಬಿಟ್ಟೆ. "ಹಾಗ... ರಾತ್ರಿ ಒಂಭತ್ತರ ಮೇಲೆ, ಒಂಭತ್ತೂವರೆ ... ಎಂದು ಕೇಳಿಯೇ ಬಿಟ್ಟನು, ಆ ಗಟ್ಟಿಗನು! ಎಂದವನೇ ಮುಂದಕ್ಕೆ ಸಾಗಿದೆನು. ನಮ್ಮ ... ವೆಲ್ಲ ಮುಗಿಯಿತು; ಮತ್ತೆ ಅತ್ತಿತ್ತ ... ಕೊಂಡು, ಸರಿಯಾಗಿ ಎಂಟು ಗಂಟೆಗೆ ... ಸೇರಿದೆ.

ಊಟವು ಸಿದ್ಧವಾಗಿತ್ತು; ಆದರೂ ಊ... ಹೊತ್ತು ಆರಾಮಕುರ್ಚಿಯಲ್ಲಿ ಕಣ್ಣು ಮು... ಕೊಂಡು ಯೋಚಿಸತೊಡಗಿದೆನು. "... ಎಷ್ಟು ಧೈರ್ಯಶಾಲಿ ! ಎಷ್ಟೊಂದು ವಿಚಿತ್ರ ... ಕೊರಳಿಗೆ ಸುತ್ತಿದ ಅವನ ಅಂಚಿನ ಸೆಲ್ಲೆಯೇ... ಬಿಗಿದ ಆತನ ಜರಿಯ ರುಮಾಲವೇನು ? ... ತೆರದ ಜೋಡುಗಳೇನು ? ಎಲ್ಲಕ್ಕಿಂತಲೂ ... ಎದ್ದು ಕಾಣುವ ಆತನ ಗೋಪೀಚಂದನದ ... ಹೀಗಿದ್ದು ಅವನಲ್ಲಿ ನವನಾಗರಿಕತೆಯ ... ಹರಿಯುತ್ತಿದೆಯೆ ? ಅವನನ್ನು ನಿಜವಾಗಿ... ಶ್ಯೋದ್ಧಾರ—ಪತಿತೋದ್ಧಾರಗಳನ್ನು ... ಭಾಷಣವು ಮೋಹಗೊಳಿಸಿತೆ ? ಇಷ್ಟೊ... ಇದು ಒಪ್ಪಿತವಾಯಿತೆ ?.... ಹಾಗಿರಲಿಕ್ಕಿಲ್ಲ—

ಲ್ಲಿ ಯಾವನಾದರೊಬ್ಬನ ಪರೀಕ್ಷೆಯ ಪೇಪರಿಗಾಗಿ ನನ್ನ ಮನಸೆಳೆಯಲು ಇಷ್ಟೊಂದು ಬಾಯಿ ತುಂಬ ನನ್ನನ್ನು ಹೊಗಳಬೇಕು....ಅಥವಾ....ಹೇಗೂ ಇರಲಿಕ್ಕಿಲ್ಲ....ಅವನಿಗೆ ಒಬ್ಬ ಉಪವರ ಕನ್ಯೆಯಿರಬೇಕು....ನೋಡಿದರೆ ವೈದಿಕರಂತೆ ಕಾಣುತ್ತಾನೆ; ಬಹುಶಃ ಕಾಡು ಇರುವಳೆಂಬಂತಿದೆ; ಅವನಲ್ಲಿ ಹಣವೂ ಹೆಚ್ಚಾಗಿರಬೇಕೇನೋ ? ಹಾಂ.... ಹೀಗೇ ಇರಬೇಕು ! ಹೇರಳ ವರದಕ್ಷಿಣೆಯ ಆಸೆ ತೋರಿಸಿ, ತನ್ನ ಕಾಡು ಮಗಳ ಗುದ್ದಿಯನ್ನು ನನ್ನ ಕೊರಳಿಗೆ ಕಟ್ಟಬೇಕೆಂದಿದ್ದಾನೆ....ಏನಿದೆಯೋ ತಿಳಿಯದು....ಈಗೇಕೆ ಅದರ ವಿಚಾರ....ಆತ ಬಂದ ಮೇಲೆ ತಿಳಿದೇ ತಿಳಿಯುವದಲ್ಲ...." ಎನ್ನುವಷ್ಟರಲ್ಲಿ, ವಿದ್ಯುದ್ದೀಪಗಳು ಮಂದವಾಗಿ, ಒಂಭತ್ತು ಬಡಿದುದರ ಬಗ್ಗೆ ಎಚ್ಚರಿಕೆಯನ್ನು ಕೊಟ್ಟವು. ಚಟ್ಟನೆದ್ದು ಊಟಮಾಡಿಕೊಂಡು, ಹೆಗಲಮೇಲಣ ವಲಿನಿಂದ ಕೈ-ಬಾಯಿಗಳನ್ನೊರಸಿಕೊಳ್ಳುತ್ತಲಿದ್ದೆನು. ಷ್ಟರಲ್ಲಿ ಆಳುಮಗನು ಬಂದು, ಒಬ್ಬ ವಯೋವೃದ್ಧನು ನನಾಗಿ ಕಾದಿರುವನೆಂದು ಹೇಳಿದನು. ಕೋಣೆಯೊಳಗೆ ಂದು ಗಡಿಯಾರ ನೋಡಿದೆ; ಒಂಭತ್ತೂವರೆಗೆ ಸರಿಯಾಗಿ ಎರಡೇ ಮಿನಿಟು ಇದ್ದಿತು. 'ಎಷ್ಟು ಸಮಯಶೀಲನಾಗಿದ್ದಾನೆ ಮುದುಕ!' ಎನ್ನುತ್ತ ಅವನನ್ನು ಒಳಗೆ ಬಮಾಡಿಕೊಂಡೆನು.

ಸಾಯಂಕಾಲದಂತೆ ಈಗಲೂ ಬಾಗಿ ನನ್ನನ್ನು ವಂದಿಸಿ, ತಮ್ಮ ಉಪನ್ಯಾಸವನ್ನು ಕೇಳಿದಾಗಿನಿಂದಲೂ, ಪ್ರೊಫೆಸರ ಸಾಹೇಬರೆ, ನಿಜವಾಗಿಯೂ ತಮ್ಮ ಬಗ್ಗೆ ನನ್ನಲ್ಲಿಯೊಂದು ಹೊಸಬಗೆಯ ಪೂಜ್ಯಭಾವವು ಒಡಮೂಡಿದೆ. ಎಷ್ಟೊಂದು ಜವು ತಮ್ಮಲ್ಲಾಗ ಮಿನುಗುತ್ತಿತ್ತೆಂದು ಹೇಳಲಿ!...." ನನ್ನನ್ನು ಹೊಗಳುವದರ ಅರ್ಥವೇ ಆಗಲೊಲ್ಲದು. ಮನೆ ಎಲ್ಲರಂತೆ ನಾನೂ ಗದ್ದರಿಸಿ ಕಳುಹಿಸಬಹುದಿತ್ತು; ಆದರೇಕೋ ಸುಮ್ಮನಿದ್ದೆನು. "ಅಂತೂ ತಾವು ಷ್ಟೊಂದು ವಯೋವೃದ್ಧರಾಗಿದ್ದರೂ, ನನ್ನಂಥ ನವ ಜನ—ತಮ್ಮ ದೃಷ್ಟಿಯಲ್ಲಿ ಉಡಾಳನ—ವಿಚಾರಗಳೆಲ್ಲ ಸರಿಹೋದವೆ?....ಒಳ್ಳೇದು, ತಾವು ಬಂದ ಉದ್ದೇಶ ನು?" ಎಂದು ಕೇಳಿದೆನು. "ರಾವಸಾಹೇಬರೆ, ಇದೇ ಯವನ್ನು ಕುರಿತು ಸ್ವಲ್ಪ ತಮ್ಮೊಡನೆ ಚರ್ಚೆ ಮಾಡಲು ದ್ದೇನೆ. ನಿಮ್ಮ ಮೇಲೆ ದೋಷ ಹೊರಿಸುವೆನೆಂದು ಬೇಡಿರಿ. ನೀವು ಬಂದದ್ದು ನಮ್ಮೂರಿನ ಸಭೆಗೆ ವೇ ಮೊದಲು! ಆದರೆ ಇಂದಿನ ಭಾಷಣಕಾರರಂತಹ ರ ಜನರು ಬರುತ್ತಾರೆ, ಸಭೆ ಸೇರಿಸುತ್ತಾರೆ, ಮತ್ತೆ ಹೋಗುತ್ತಾರೆ. ಒಬ್ಬನು ಕೂಡ ಒಬ್ಬ ಹರಿಜನ ಕನ್ಯೆಯನ್ನಾಗಲಿ, ಬಾಲವಿಧವೆಯನ್ನಾಗಲಿ, ಸ್ವಲ್ಪ ಕಾಲು ಜಾರಿಕೊಂಡ ಹುಡುಗಿಯನ್ನಾಗಲಿ ಮದುವೆಯಾಗುವದಿಲ್ಲ....ಇದುವರೆಗಂತೂ ನಾನು ಕೇಳಿಲ್ಲ ನೋಡಿಲ್ಲ. ರಾಯರೇ, ಆಡುವದು ಸುಲಭ, ಮಾಡುವದು ಕಠಿಣವಲ್ಲವೆ?...." ಆಗ ನಾನು, "ಕಠಿಣವೇತರದು ? ನಾಲ್ಕಾರು ಜನರು ಇದಕ್ಕೆ ಗಟ್ಟಿಯಾಗಿ ನಿಲ್ಲಬೇಕು. ನಾಲ್ಕು ಜನರು ಅಂದರೆ ಅನ್ನಿಸಿಕೊಳ್ಳಬೇಕು, ಆಡಿದರೆ ಆಡಿಸಿಕೊಳ್ಳಬೇಕು, ಮತ್ತೆ ಅಂಥವರನ್ನು ಮದುವೆಯಾಗಬೇಕು, ಎಂದರೆ ಮುಂದೇನೂ ತೊಂದರೆಯಾಗದಂತೆ ಕೆಲ ದಿನಗಳ ತರುವಾಯ ಇದು ರೂಢಿಯಲ್ಲಿ ಬಂದೀತು. ಹೀಗೆಂತೂ ನನ್ನ ವಿಚಾರ." ಎಂದೆನು. "ಪ್ರೊಫೆಸರ ಸಾಹೇಬರೇ, ತಮ್ಮ ಮದುವೆಯ ಪ್ರಸಂಗ ಬಂದರೆ, ಇಂಥದರಲ್ಲಿ ಯಾವುದೊಂದು ಕನ್ಯೆಯನ್ನು ವಿವಾಹವಾಗಲು ತಾವು ಒಪ್ಪುವಿರಾ ?.... ಸಿಟ್ಟಾಗಬೇಡಿರಿ, ಏನೋ ಸಹಜವಾಗಿ ಕೇಳುತ್ತೇನೆ." ಎಂದುಬಿಟ್ಟನು ಚಾಣಾಕ್ಷ ಮುದುಕನು.

"ನನ್ನ ಮಾತೇ! ನನ್ನ ಮಟ್ಟಿಗೆ ನಾನು ಇಷ್ಟು ಹೇಳಬಲ್ಲೆನು. ಹರಿಜನರಲ್ಲಿ ಈಗಲೇ ಸುಶಿಕ್ಷಿತ ಕನ್ಯೆಯರು ಸಿಕ್ಕುವದು ಕಷ್ಟ! ಅವರಲ್ಲಿ ಯಾರ ಹಂಗೂ ಹಿಡಿಯದೆ ನಾನು ಊಟ-ಉಪಚಾರ ಮಾಡಬಲ್ಲೆನು. ಅವರಿಗಾಗಿ ಹೆಣಗಾಡುವದನ್ನಂತೂ ನನ್ನ ಆಯುಷ್ಯದ ಧ್ಯೇಯವನ್ನಾಗಿಯೇ ಇಟ್ಟುಕೊಂಡಿದ್ದೇನೆ. ಇನ್ನು ನಮ್ಮ ಜಾತಿಯಲ್ಲಿಯೇ, ನೀವು ಹೇಳಿದಂತೆ ಸುಶಿಕ್ಷಿತ ಬಾಲವಿಧವೆಯಾಗಲಿ, ಸ್ವಲ್ಪ ಕಾಲು ಜಾರಿ ಮತ್ತೆ ಸರಲ ಮಾರ್ಗವನ್ನು ಹಿಡಿದ ಕನ್ಯೆಯಾಗಲಿ ಸಿಕ್ಕರೆ, ನನ್ನ ಮನಸ್ಸಿಗೆ ಒಪ್ಪಿದರೆ ನಾನು ಧೈರ್ಯವಾಗಿ ಅವಳನ್ನು ವಿವಾಹವಾಗಬಲ್ಲೆನು." ಕೂಡಲೆ "ಶಾಬಾಸ್! ತರುಣ ಪ್ರೊಫೆಸರ ಸಾಹೇಬರೆ!" ಎಂದವನೇ ಮುದುಕನು ನನ್ನ ಬೆನ್ನು ಚಪ್ಪರಿಸಿ, "ಹಾಗಾದರೆ ನಿಮಗೊಂದು ಕರುಣ ಕಥೆಯನ್ನು ಹೇಳುತ್ತೇನೆ; ನೀವು ಮೊದಲು ನಿಧಾನವಾಗಿ ಕೇಳಿಕೊಳ್ಳಬೇಕು. ಆ ಬಳಿಕ, ಆ ತೊಡಕಿನೊಳಗಿಂದ ಆ ಕಥಾನಾಯಿಕೆಯ ಬಿಡುಗಡೆಯನ್ನು ಹೇಗೆ ಮಾಡಬೇಕೆಂಬುದನ್ನು ತಾವೇ ತಿಳಿಸಿಕೊಡಬೇಕು." "ಒಳ್ಳೇದು, ಕಥೆಯನ್ನಂತೂ ಹೇಳಿರಿ, ನೋಡುವಾ ?...." ಎಂದು ಕೈಯಲ್ಲೊಂದು ಸಿಗಾರು ತೆಗೆದುಕೊಳ್ಳುತ್ತ ಆತುರತೆಯಿಂದ ಹೇಳಿದೆನು. ಮುದುಕನು ತನ್ನ ಕಥೆಗೆ ನೊದಲು ಮಾಡಿದನು.

* * *

" ನಾನು ಈಗ ನಿಮ್ಮ ಮುಂದೆ ಹೇಳುವದು, ಈ ಊರ ಕಥೆಯನ್ನೇ! ಇದು ನಡೆದು ಹೋದದ್ದು ಸುಮಾರು ಎಂಟು ವರುಷಗಳ ಪೂರ್ವದಲ್ಲಿ!! ನನ್ನ ಕಥಾನಾಯಿಕೆ ಆಗ ಕೇವಲ ಹದಿನೈದು ವರುಷದವಳು. ಒಬ್ಬ ಬಡ ವಿಧವೆಯ ಮಗಳು. ಚಿಕ್ಕವಳಿರುವಾಗಲೇ ತಂದೆ ತೀರಿದ್ದನಂತೆ. ಅವಳಿಗೆ ಒಬ್ಬ ಅಣ್ಣ. ಆತ ಇಂಗ್ಲೀಸು ಓದುತ್ತಿದ್ದನು. ಅದೇ ಕಾಲಕ್ಕೆ ಆ ಅಣ್ಣನ ಗೆಳೆಯನೊಬ್ಬನು, ತನ್ನ ಮುಪ್ಪಿನ ಮಾತಾಪಿತರೊಡನೆ ಅವರ ನೆರೆಮನೆಯಲ್ಲಿರುತ್ತಿದ್ದನು. ಇಬ್ಬರಿಗೂ ಅನ್ಯೋನ್ಯ ಸ್ನೇಹ. ಅವರಲ್ಲಿ ಸಿಹಿ ಊಟವಾದರೆ ಇವರಿಬ್ಬರು ಅಣ್ಣ-ತಂಗಿಯರು ಹೋಗಬೇಕು, ಇವರಲ್ಲಿ ಬೇಳೆಯಲ್ಲಿ ಬೆಲ್ಲ ಬಿದ್ದರೆ ತೀರಿತು, ಅವನು ಬಂದುಬಿಡಬೇಕು. ಹೀಗಾಗಿ ಸ್ವಾಭಾವಿಕವಾಗಿ ಆ ಹುಡುಗಿಯಲ್ಲಿಯೂ ಅವಳ ಅಣ್ಣನ ಸ್ನೇಹಿತನಲ್ಲಿಯೂ ಸಲುಗೆಯುಂಟಾಯಿತು. ಬರುಬರುತ್ತ ಅವರಿಬ್ಬರಲ್ಲಿ ಬೆಳೆದು ಬಂದ ಋಣಾನುಬಂಧವು ಪ್ರೇಮಬಂಧದಲ್ಲಿ ಪರಿಣಮಿಸಿತು. ಹೀಗೆಯೇ ಕೆಲ ದಿನಗಳು ಕಳೆದು ಅವಳು ಇಂಗ್ಲೀಸು ನಾಲ್ಕನೇ ಇಯತ್ತೆಯಲ್ಲಿಯೂ ಅವನು ಮ್ಯಾಟ್ರಿಕ್ನಲ್ಲಿಯೂ ಓದುತ್ತಿರುವಾಗ, ಅವಳಿಗೆ ಮುಟ್ಟುನಿಂತು ಎರಡು ತಿಂಗಳಾಗಿರಬೇಕೆಂದು ಅವಳ ಅಣ್ಣ ಮತ್ತು ತಾಯಿಗೆ ಗೊತ್ತಾಯಿತು. ಅವಳು ಸ್ನೇಹಿತನ ಹೆಸರು ಹೇಳಿಬಿಟ್ಟಳು; ಸ್ನೇಹಿತನಿಗೆ ಇದು ತಿಳಿದ ಕೂಡಲೆ ಮಾರನೇಯ ದಿನವೇ ಆತ ಮನೆಯೊಳಗಿನ ಹಲಕೆಲವು ಅರಿವೆ ಅಂಚಡಿ ಮತ್ತು ಒಡವೆಗಳನ್ನು ತೆಗೆದುಕೊಂಡು, ಮಾತಾಪಿತರಿಗೆ ಹೇಳದೆ ಊರು ಬಿಟ್ಟು ಓಡಿಹೋದನು. ಇಂದಿಗೂ ಆತನ ಸುದ್ದಿಯಿಲ್ಲ. ಇದರಿಂದ ವ್ಯಸನಗೊಂಡು ಅವನ ತಂದೆ-ತಾಯಿಯವರೂ ಊರು ಬಿಟ್ಟು ಯಾವುದೋ ಹಳ್ಳಿ ಸೇರಿದರು. "

ನಡುವೇ ಬಾಯಿ ಹಾಕಿ ನಾನು ಕೇಳಿದೆ: " ಪಾಪ ಮುಂದೆ ಆ ಹುಡುಗಿಯ ಗತಿಯೇನಾಯಿತು ? "

ಮುದುಕನು ಮತ್ತೆ ಮುಂದುವರಿಸಿದನು.

" ಅವಳ ಗತಿಯೇನು ? ತಾಯಿಯೂ ಅಣ್ಣನೂ ಸುಸ್ವಭಾವಿಗಳು, ಒಂದರ ತುಟಿ ಎರಡು ಮಾಡಲಿಲ್ಲ; ಪಂಢರಪುರಕ್ಕೆ ಹೋಗಿ, ಅವಳ ಹೆರಿಗೆಯಾಗುವ ವರೆಗೆ ಅಲ್ಲಿಯೇ ಇದ್ದುಕೊಂಡು—ಹೆಣ್ಣು ಮಗುವನ್ನು ಹೆತ್ತಳಂತೆ—ಆ ಕೂಸನ್ನು ಅಲ್ಲಿಯ ಆಶ್ರಮದವರಿಗೊಪ್ಪಿಸಿ, ಮತ್ತೆ ಒಂದು ವರುಷೆರಡು ವರುಷ ಅಲ್ಲಿಯೇ ಇದ್ದುಕೊಂಡು ಬಂದರು. ಅಣ್ಣ-ತಂಗಿಯರು ತಮ್ಮ ಶಿಕ್ಷಣ ಮುಗಿಸಿದರು. ಆಕೆಯ ಅಣ್ಣನಿಗೆ ಇಲ್ಲಿಯೇ ಶಾಳಾಮಾಸ್ತರರ ಕೆಲಸ ಸಿಕ್ಕಿದ್ದರಿಂದ ಮನೆಯವರೊಂದಿಗೆ ಇಲ್ಲಿಯೇ ಇದ್ದಾನೆ; ಆಕೆ... ಮಾತ್ರ ಇನ್ನೂ ಎಲ್ಲಿಯೂ ಖರ್ಚಾಗಲಿಲ್ಲ... ಒಳ್ಳೆಯ ಹುಡುಗಿ; ಮ್ಯಾಟ್ರಿಕ್ ಪಾಸಾಗಿದ್ದ... ವಿಲ್ಲ, ಸಿಟ್ಟು-ಸೆಡವುಗಳಿಲ್ಲ. ಮನೆಗೆಲಸಗಳ... ಕೊಂಡು ಮರ್ಯಾದೆಯಿಂದ ಕಾಲಹರಣ... ದ್ದಾಳೆ. "

" ಅವಳ ಹೆಸರೇನು ? ನೀವು ಇದೇ ಊ... "

" ಛೇ ! ನಾನೇನು ಈ ಊರಿನವನಲ್ಲ.... ಸುದ್ದಿ ತಿಳಿದು ಬಂದಿತು....ನೀವು ಅವಳ ಹೆ... ಅವಳ ಹೆಸರು ಶಾಲಿನಿ. "

" ಅದೇ ಹುಡುಗನ ಪತ್ತೆ ಹಚ್ಚಿ... ನಿಗೇ ಅವಳನ್ನು ಮದುವೆ ಮಾಡಿಕೊಟ್ಟರೆ... ಕ್ಕಿಲ್ಲವೆ ? "

" ಪ್ರೊಫೆಸರ ಸಾಹೇಬರೆ, ಅದೇ ಹು... ವಾಗಲು ಸಿದ್ಧನಾಗಿದ್ದರೆ, ಅವಳು ಹೀಗೆ... ಯಿಲ್ಲದೆ ಇಷ್ಟು ದಿವಸಗಳ ವರೆಗೆ ಮೂಲೆಗು... ಕೊಳ್ಳುತ್ತಿದ್ದಳು ? ಅಲ್ಲದೆ, ಊರು ಬಿಟ್ಟು... ಫರಾರಿಯಾಗಿದ್ದಾನೆ. ಕಳ್ಳನು! ಮದುವೆಯಾ... ವಿದ್ದರೆ ಹೀಗೆ ಮಾಡುತ್ತಿದ್ದನೆ? ಇನ್ನು... ಆತನ ಪತ್ತೆ ಹತ್ತಿತೆಂದು ತಿಳಿಯಿರಿ; ಹೀ... ಯಾವ ಯಾವ ರೀತಿಯಲ್ಲಿ ನಡೆದುಕೊ... ಈಗ ಹೇಗಿರುವನೋ, ಹೇಗೆ ತಿಳಿಯಬೇ... ಬೊಗಸೆಯಿಲ್ಲದೆ ಆಡ್ಡಾಡುವ ಒಬ್ಬ ಉಡಾಳ... ದ್ದರೆ ? "


" ಸರಿ. ಆದರೆ ಆತ ಒಂದು ವೇಳೆ ಕ... ದಿಂದ ದೊಡ್ಡ ಹುದ್ದೇದಾರನಾಗಿದ್ದರೆ! ... ಹುಡಿಗೆಯನ್ನು ಮಾಡಿಕೊಳ್ಳಲು ಒಪ್ಪಿದರೆ! ... ಆಗಿನ ಹುಡುಗಬುದ್ಧಿಗಾಗಿ ಪಶ್ಚಾತ್ತಾಪ ಪಡು...

" ಪ್ರೊಫೆಸರರೆ, ಇದಕ್ಕೇ ನಾನನ್ನು... ತರುಣರು ಮಹಾ ತಲೆತಿರುಕರೆಂದು!....ಕಾ... ದೇಹವು ಹೋಗುವಂತೆ, ನಿಮ್ಮ ವಿಚಾರಗ... ದತ್ತ ನಿಮ್ಮ ತಲೆಯೂ ಹೊರಳುತ್ತದೆ... ಬೇಕಾದಂತೆ ಮಾತು ಹೊರಳಿಸಬಲ್ಲಿರಿ. "

" ಮತ್ತು ನಿಮ್ಮ ಹುಷಾರಿಗೇನು ಕೊರತೆ... ವರಲ್ಲಿ ' ನಾನು ನೀನೆ 'ಂದು ಹೆಮ್ಮೆ... ಲ್ಲಿಯೂ ನಾನು ಕೇಳಿಲ್ಲ. "

“ಏನೆಂದರೂ ನಾವು ಅಶಿಕ್ಷಿತರು, ಆದರಲ್ಲಿಯೂ ಹಳ ಬಳು. ನಿಮ್ಮ ತಲೆಯು ಹೇಗೆ ಫಲವತ್ತಾದ ಪ್ರದೇಶದಂತಿದೆ! ಆದರಲ್ಲಿಯೂ ನಿಮ್ಮದು ನದಿಯ ದಂಡೆಯ ಮೇಲಣ ರೇವಿನ ಭೂಮಿಯಂತಿದೆ. ಅದಿರಲಿ, ಪ್ರೊಫೆಸರರೆ, ಆ ಹುಡುಗಿಯ ಗತಿಯೇನು ಮುಂದೆ? ಅವಳನ್ನು ಯಾವುದಾದರೊಂದು ಸರಲ ಮಾರ್ಗಕ್ಕೆ ಹಚ್ಚುವ ಉಪಾಯವನ್ನು ತಾವು ಹೇಳಬಲ್ಲಿರಾ? ಇಂದೇ ನೀವು ಆ ದೊಡ್ಡ ಸಭೆಯ ಅಧ್ಯಕ್ಷರಾಗಿದ್ದಿರಿ; ಆದ್ದರಿಂದ ಈ ಬಗ್ಗೆ ಇಂದೇ ತಮ್ಮನ್ನು ವಿಚಾರಿಸಬೇಕೆಂದು ಬಂದೆನು; ನಾಳೆ ಬಂದರೆ ಒಂದೇ ರಾತ್ರಿಯಲ್ಲಿ ತಮ್ಮ ವಿಚಾರಸರಣಿಯಲ್ಲಿ ಎಷ್ಟೋ ಮಟ್ಟಿಗೆ ಬದಲಾವಣೆ ಕಂಡುಬಂದೀತು.”

ನಾನು ಐದು ನಿಮಿಷಗಳ ವರೆಗೆ ಸುಮ್ಮನೆ ಕುಳಿತಿದ್ದೆನು. ಆ ಮುದುಕನಿಗಂತೂ ನಾನು ಯಾರೆಂಬುದು ಇದುವರೆಗಾದರೂ ತಿಳಿದಿಲ್ಲವೆಂದು ಗೊತ್ತಾಯಿತು. ತಿಳಿದಿದ್ದರೆ, ನಿಮಿಷ ನಿಮಿಷಕ್ಕೂ ಮಾತಿನಲ್ಲಿ ನನಗೆ ‘ಪ್ರೊಫೆಸರ ಸಾಹೇಬ’ ಎಂದು ಗೌರವಿಸುತ್ತಿದ್ದನೆ? ಆ ಪತಿವಶೀಕರಣ ನಾಟಕದಲ್ಲಿಯ ರಾಚಿದೇವರಾಯರು ಕೂಡ, ಆಳಿಯನು ಮಾತುಮಾತಿಗೂ ‘ರಾವಸಾಹೇಬ!’ ಎಂದರೆ ಸಿಟ್ಟಾಗುತ್ತಿದ್ದರು; ಆದರೆ ನಾನು ಸಿಟ್ಟಿಗೇಳದಿರುವದರಲ್ಲಿಯೇ ಲಾಭವಿದ್ದಿತು. ಸಿಗರೇಟನ್ನು ಹೊತ್ತಿಸುತ್ತ ನಾನು ಕೇಳಿದೆ, “ಆ ಹುಡುಗಿಯನ್ನು ನಾನು ನೋಡಬಹುದೆ?” “ಓಹೋ, ಮೊದಲು ಅವಳ ಫೋಟೋವನ್ನಾದರೂ ನೋಡಬಹುದಲ್ಲ” ಎಂದು ತನ್ನ ಒಳಜೇಬಿನಲ್ಲಿದ್ದ ಶಾಲಿನಿಯ ಫೋಟೋ



‘ಅನಾಥ ಬಾಲಕಾಶ್ರಮ’ ಕ್ಕೆ ಬಂದೆವು .... ಹತ್ತು ವರುಷದ ಬಾಲಿಕೆಯೊಬ್ಬಳು ಒಳ್ಳೆಯ ಅಚ್ಚುಕಟ್ಟುತನದಿಂದ ಬಂದು, ನಮ್ಮೆಲ್ಲರಿಗೂ ಕೈಮುಗಿದು ನಮಸ್ಕರಿಸಿದಳು.

ತೆಗೆದು ನನ್ನ ಕೈಗಿತ್ತನು. "ಒಳ್ಳೇದು, ಈ ಹುಡುಗಿಯನ್ನು ನಾನೇ ಮದುವೆಯಾಗಬಹುದೇನೆಂಬುದನ್ನು ವಿಚಾರಿಸುತ್ತೇನೆ. ಈ ಚಿತ್ರ ನನ್ನ ಬಳಿಯಲ್ಲಿಯೇ ಇರಲಿ" ಎಂದೆನು. "ವಿಚಾರವೇಕೆ ರಾಯರೆ, ನಾಳೆ ಗೋಧೂಳಿಗೆ ಒಂದಿದೆ ಒಂದಿಲ್ಲವೆಂದು ಹೊಡೆಯಿಸಿ ಬಿಡೋಣ; ಆ ಮೇಲೆ ನಿಮ್ಮ ರಾವಸಾಹೇಬ ಮಂಡಳಿಗೆಲ್ಲಾ ಒಂದು ಚಹಾಪಾರ್ಟಿ ಮಾಡಿದರಾಯಿತು." "ನಿಜ, ಆದರೆ ನಾಳೆ ಮುಂಜಾನೆ ಹತ್ತು ಗಂಟೆಯ ವರೆಗೂ ಯೋಚನೆ ಮಾಡಲಿಕ್ಕೆ ಅವಕಾಶ ಕೊಡಿರಿ. ನೂರರಲ್ಲಿ ಎಂಭತ್ತು ಪಾಲು ನಿಮಗೆ ನಾನು ಒಪ್ಪಬಹುದೆಂಬ ಭರವಸೆ ಕೊಡುವೆನು." ಎಂದುಬಿಟ್ಟೆನು. ಅವನು "ನೋಡಿರಿ, ಇಂತಹ ಸುಶಿಕ್ಷಿತ ಹುಡುಗಿಯನ್ನು ಪಡೆಯಬೇಕಾದರೆ, ಬಹಳ ಪುಣ್ಯಪಡೆದು ಬರಬೇಕಾಗುತ್ತದೆ; ಒಳ್ಳೇದು ನಮಸ್ಕಾರ, ಹೋಗಿಬರುವೆನು; ಬಡವನಿಗೆ ನಿರಾಶೆ ಮಾಡಬೇಡಿರಿ; ನಾನು ಆ ಹುಡುಗಿಯ ಸೋದರಮಾವ; ಈಗೆರಡು ವರುಷಗಳಿಂದಲೂ ಹಳ್ಳಿಯನ್ನು ಬಿಟ್ಟು ಇಲ್ಲಿಯೇ ನನ್ನ ತಂಗಿಗೆ ಆಸರವೆಂದು ಬಂದು ಇರಹತ್ತಿದ್ದೇನೆ. ನಾಳೆ ಹತ್ತು ಗಂಟೆಗೆ ಬರುವೆ" ಎಂದು ಕೈಮುಗಿದು, ಉತ್ತರದ ದಾರಿಯನ್ನು ಸಹ ಕಾಯದೆ ಹೋಗಿಬಿಟ್ಟನು.

ಇಷ್ಟೆಲ್ಲ ಮಾತುಕತೆ ಮುಗಿಯಲು ಹನ್ನೆರಡು ಗಂಟೆ ಯಾಯಿತೆಂಬುದರ ಅರಿವೇ ಇಲ್ಲ ನನಗೆ. ನಿದ್ರೆಯೂ ಓಡಿ ಹೋಗಿತ್ತು; ಎಲ್ಲ ಬಾಗಿಲುಗಳನ್ನು ಭದ್ರವಾಗಿಕ್ಕಿದೆ. ಮುದುಕ ಕೊಟ್ಟಿದ್ದ ಫೋಟೋ ಮೇಜಿನ ಮೇಲಿತ್ತು. ಮೆಲ್ಲಗೆ ನನ್ನ ಟ್ರಂಕು ತೆರೆದು, ಅದರೊಳಗಿನದೊಂದು ಛಾಯಾಚಿತ್ರವನ್ನು ತೆಗೆದೆನು; ಬಲುದಿನಗಳಿಂದಲು ಅದನ್ನು ನಾನು ಜೀವಕ್ಕಿಂತಲೂ ಜೋಪಾನವಾಗಿ ಕಾಯ್ದಿಟ್ಟಿದೆನು. ಜೀವಜೀವಾಳದ ಯಾವ ಗೆಳೆಯನ ಕಣ್ಣಿಗೆ ಸಹ ಒಂದಿನವೂ ಬೀಳದಂತೆ ಜೋಕೆಯಾಗಿದ್ದೆನು. ಆ ಚಿತ್ರದೊಳಗಿನ ಶಾಲಿನಿಗೂ, ಈ ಶಾಲಿನಿಗೂ ಎಷ್ಟು ವ್ಯತ್ಯಾಸ! ಈಗಿನವಳದೆಷ್ಟು ಚಲುವೆ! ಇನ್ನು ನೀವೆನ್ನಬಹುದು, ಆಗಲೇ ಅವಳನ್ನು ವಿವಾಹವೇಕಾಗಲಿಲ್ಲವೆಂದು. ಸಮಾಜದ ತೊಡಕಿದೆಯಲ್ಲ! ಮನಸಿನ ಹೆದರಿಕೆಯಿದೆಯಲ್ಲ! ಅಂತೂ ಏನೋ ಆಗ ಆಗಲಿಲ್ಲ. ನನಗೇ ಗಾಬರಿಯಾದಂತಾಯಿತು; ಈಗ ನಾನು ಪ್ರೊಫೆಸರನಾಗಿದ್ದರೂ, ನನ್ನ ವಿವಾಹವಾಗುವ ವರೆಗೆ-ತಂದೆತಾಯಿಯರ ಪರಸ್ಪರರ ಪರಿಚಯವನ್ನು ಜನರಿಗೆ ತಿಳಿಯಗೊಡುವಂತಿಲ್ಲ. ಹಾಗೆ ಮಾಡಿದರೆ (ನನ್ನ ತಾಯಿ-ತಂದೆಯವರ ದೃಷ್ಟಿಯಿಂದ) ನನಗೆ ಕುಲೀನ ಮನೆತನದ ಕನ್ಯೆ ಸಿಗುವದೆಂತು?....ಅಂತೂ ವಿಚಾರ ಕ[illegible] ಹೊಯ್ದಾಡುತ್ತಿರುವಾಗಲೇ, ದೃಷ್ಟಿಯು ಅವಳ [illegible] ಫೋಟೋದಲ್ಲಿ ನೆಟ್ಟು ಹೋಗಿದ್ದಾಗಲೇ, ಒಮ್ಮೆ [illegible] ಕಳ್ಳನ ಹಾಗೆ ಕೋಣೆಯಲ್ಲೆಲ್ಲ ಸುತ್ತ[illegible] ನೋಡುತ್ತ,....ಒಮ್ಮೆ ಮಾತ್ರ ಫೋಟೋವನ್ನ[illegible]ಯಾಗಿ ಎದೆಗಪ್ಪಿಕೊಂಡೆನು.

ನನ್ನ ಮನೆತನದವರು ಈ ಮಾತಿಗೆ [illegible]ವೆಂಬುದು ನನಗೆ ಗೊತ್ತು. ನಾನೇ ಬಲುಮೆ ಪಡಿ[illegible]ಯನ್ನು ನಾನು ಲಗ್ನಮಾಡಿಕೊಳ್ಳಲು ಒಪ್ಪದಿದ್ದ[illegible] ಹೇಗೆ ಒಪ್ಪಬೇಕು? ಈ ವಿಚಾರವು ಹಳೆಯ[illegible] ರುಚಿಸುವದು? ಮೂಢರೂಢಿಯನ್ನು ಮಾತ್ರ [illegible] ಪರಿಸಬಲ್ಲರು—ಅದರ ಮಾರ್ಗದಲ್ಲಿ ಕೊಳೆಗ[illegible]ಯಿಲ್ಲ — ಅನಾಹುತಗಳು ಸಾಗಿದರೂ [illegible] ಯೋಚನೆ ಮಾಡುತ್ತಲೆ ನಿದ್ರಾಂಗನೆ ಬಂದು ಕ[illegible]ದಳು.

ಮರುದಿನ ಮುಂಜಾನೆಯ ಹತ್ತು ಗಂಟೆಗೆ [illegible] ಬಂದು ನನ್ನ ಮುಂದೆ ಮೂರ್ತಿಮತ್ತಾಗಿ [illegible] ನನ್ನ ಒಪ್ಪಿಗೆಯನ್ನು ಅವನಿಗೆ ತಿಳಿಸಿದೆನು; [illegible]ಜರುಗುವ ವರೆಗೂ ಇದರ ಗಂಧವನ್ನು ಕೂಡ [illegible] ಹತ್ತಗೊಡಬಾರದೆಂದು ಸೂಚಿಸಿದೆನು. ಆಗ[illegible] "ಮಹಾರಾಯರೆ, ರೋಗಿ ಬಯಸಿದ್ದೂ ಒ[illegible] ಕೊಟ್ಟದ್ದೂ ಒಂದೇ ಆಯ್ತು, ನಮ್ಮಪ್ಪಾ, [illegible] ನಿಮಗೆ ಕಲ್ಯಾಣ ಮಾಡಲಿ" ಎಂದು ಹರಸಿದನು; [illegible] ಮುಖವೆತ್ತಿ ಅವನನ್ನು ನೋಡಿದಾಗ ಕಣ್ಣು[illegible] ಲಕಲಕಿಸುತ್ತಿದ್ದವು.

ಮುಂದೆರಡು ದಿನದ ತರುವಾಯ ಒಂದು ಮು[illegible] ಮುಹೂರ್ತಕ್ಕೆ ವಿವಾಹವೆಂದು ಗೊತ್ತಾಯಿತು; [illegible] ರಾತ್ರಿಯಲ್ಲಿ ನಾನೂ ಅವರ ಮನೆಗೆ ಹೋಗಿ ಹುಡು[illegible] ನೋಡಿಕೊಂಡು ಬಂದೆನು; ಆಗ ಅವಳಣ್ಣ ಮನೆ[illegible] ಇದ್ದ. ಹ್ಯಾಟು-ಬೂಟನಲ್ಲಿದ್ದ ನನ್ನನ್ನು ಯಾರ[illegible] ಸಲೇ ಇಲ್ಲವೆಂಬುದನ್ನು ಕಂಡು ನನಗೆ [illegible] ಆಯಿತು, ಆಶ್ಚರ್ಯವೂ ಆಯಿತು.

ನಾನೂ ನನ್ನ ಹೊಸಬರಾದ ಹಲಕೆಲವು [illegible] ಔತಣವಿತ್ತೆ; ನನ್ನ ಎರಡು ತಿಂಗಳ ಸಂಬಳ[illegible] ಮುದುಕನ ಕೈಗೆ ಹಾಕಿ, ಇದರಲ್ಲಿ ಬೇಕಾದ್ದ[illegible]ರೆಂದು ಬಿಟ್ಟೆ. ಅವರಿಗೆ ತಮ್ಮ ಹುಡುಗಿಯ [illegible]

ವಾದರೆ ಸಾಕಿತ್ತು; ನನಗೆ ನನ್ನ ವಿವಾಹವಾದರೆ ಸಾಕಿತ್ತು;—ಮತ್ತದು ಕೂಡ ಶಾಲಿನಿಯೊಡನೆಯೆ!

ಮರುದಿವಸ ನಸುಕಿನಲ್ಲಿಯೇ ನಾಲ್ಕು ಕಾರುಗಳು ಲಗ್ನದ ಸಿದ್ಧತೆಯಿಂದ ಊರಹೊರಗಿನ ಹನುಮಂತದೇವರ ಗುಡಿಗೆ ಬಂದವು; ಇನ್ನೂ ಮಸುಮಸುಕಾಗಿ ಮಂಜು ಬಿದ್ದಿತ್ತು. ಶಾಲಿನಿಯೊಡನೆಯೇ ಅವಳಣ್ಣನನ್ನೂ, ಮಾವನನ್ನೂ ಕರೆದುಕೊಂಡು ಒಂದು ಗಿಡದ ಬಳಿಗೆ ಬಂದೆನು; "ನಾನೀಗ ಆ ಹಿಂದಿನ—ಶಾಲಿನಿಯೊಡನೆ ಪ್ರೇಮ ಬೆಳೆಯಿಸಿದ ವಸಂತನಾಗಿದ್ದರೆ....ನನಗೇ ಅವಳನ್ನು ಕೊಟ್ಟು ಬಿಡುತ್ತಿದ್ದಿರಾ?" ಅಂದುಬಿಟ್ಟೆ. "ಹೆಚ್ಚು ಆನಂದದಿಂದ ಕೊಡುತ್ತಿದ್ದೆ!" ಎಂದು ತಟ್ಟನೆ ಅವಳಣ್ಣ ಪಂಡಿತನು ಉತ್ತರವಿತ್ತನು. "ಹಾಗಾದರೆ, ಆವನೇ ನಾನೆಂದು ನಾನು ಹೇಳಿದರೆ, ನಂಬುವಿಯಾ ಗೆಳೆಯಾ? ನನ್ನ ತಪ್ಪನ್ನು ಮನ್ನಿಸು! ಮಾತ್ರ ಶಾಲಿನಿಗೆ ಸದ್ಯದ ಮಟ್ಟಿಗೆ ಈ ಸುದ್ದಿಯನ್ನು ತಿಳಿಸಬೇಡ! ಪ್ರಸಂಗ ಬಂದಾಗ ಹೇಳೋಣ" ಎಂದೆ. "ಓಹೋ! Hallo, Mr. Vasantrao! ಕಳ್ಳಾ, ಅಂತೂ ಈಗ ಕೈಗೆ ಸಿಕ್ಕುಬಿಟ್ಟೆಯಲ್ಲಾ! ಈಗ ನಿನ್ನ ಮದುವೆ ಇದ್ದಿರಲಿಲ್ಲವಾದರೆ, ನಿನ್ನನ್ನು ಏನು ಮಾಡುತ್ತಿದ್ದೆನೋ ನಾನು? ಇರಲಿ....ನೀನೇ ಇರುವಿ; ನಿನ್ನೊಡನೆಯೆ ಮರಳಿ ನನ್ನ ತಂಗಿ ಕೂಡಿರುವ ಸುಯೋಗವು ಅವಳ ದೈವದಲ್ಲಿದೆಯೆಂಬುದನ್ನು ಅರಿತು ನನಗೆ ನಿಜವಾಗಿಯೂ ಸಂತೋಷವಾಗುತ್ತಿದೆ. ಬೇಗನೆ ಅಕ್ಕೀಕಾಳು ಹಾಕಿಕೊಂಡು ವಿಜೃಂಭಣೆಯಿಂದ ಮೆರವಣಿಗೆಯನ್ನೊಯ್ಯುವಾ." ಎಂದನು.

ಅಕ್ಷತೆ ಬೀಳುವ ಮೊದಲೇ ಹುಡುಗಿಗೂ ಅದೆಂತೋ ಈ ಸುದ್ದಿಯು ತಿಳಿದಿರಬೇಕು; ಅಂತೆಯೇ ಅವಳೂ ಒಳ್ಳೆಯ ಉಲ್ಲಾಸದಲ್ಲಿದ್ದಳು; ಅವಳ ತಾಯಿಯಾದರೋ, ಊಟಕ್ಕೆ ಕುಳಿತಾಗ, "ಏನೇ ಅನ್ನು ವಸಂತಾ, ನೀನು ನನ್ನ ಮಗನನ್ನು ನೀನೇ ಮಾಡಿಕೊಂಡು ನಿನ್ನ ಮತ್ತು ನಮ್ಮ ಮರ್ಯಾದೆಯನ್ನು ಕಾಯ್ದುಕೊಂಡಿ; ಇದರಲ್ಲಿಯೇ ನಿನ್ನ ದೊಡ್ಡ ಮನಸ್ಸು ಕಂಡುಬರುತ್ತದೆ; ನಿನ್ನ ಸಂಸಾರ ಸವಿಯಾಗಲಿ! ಎಲ್ಲೆಲ್ಲೂ ನಿನಗೆ ಗೆಲುವಾಗಲಿ!" ಎಂದು ಹರಸಿದರು. ಸಾಯಂಕಾಲಕ್ಕೆ ಮೆರವಣಿಗೆಯು ಒಳ್ಳೆಯ ವೈಭವದಿಂದ ಶಾಲಿನಿಯ ಬಾಗಿಲಿಗೆ ಬಂದಿತು. ನೆರೆಹೊರೆಯ ಹೆಂಗಸರು ಬಂದಪಲ್ಲ, ಅಳಿಯದೇವರನ್ನು ನೋಡುವ ನಿಮಿತ್ತವಾಗಿ! "ಅವ್ವಯ್ಯಾ, ಎಂಥಾ ಚಂದಿದ್ದಾನಲ್ಲ ನಮ್ಮವ್ವಾ! ಯಾವೂರೊಳಗಿನದೋ ವರಾ...? ಅಂತೂ ಹುಡುಗೀ ನಶೀಬಾ ಒಳ್ಳೇದು....ಹೂಂ....ಅದಸ ಅಂತೇನೀ, ಒಂದು ಹಡದ್ರು ಸಹಾ ಮತ್ತ ಲಗ್ನಾತೂ....ಆದೂ ಸಹಾ ಒಬ್ಬ ಪ್ರೊಫೆಸರನಂಥಾ ದೊಡ್ಡ ಮನುಷ್ಯನ ಸಂಗತೀ.... ಅಕೀ ಮಾವನ ಖಟಪಿಟೀ ಇದೆಲ್ಲಾ...." ಎಂದು ತಮ್ಮ ತಮ್ಮೊಳಗೆ (ಬೇರೆಯವರಿಗೆ ಕೇಳಿಸುವಂತೆ) ಮಾತನಾಡತೊಡಗಿದರು.

ಉರುಟಣೆಯು ನಡೆಯಿತು; ಹುಡುಗಿ ಒಡಪಹಾಕಿ ಹೆಸರು ಹೇಳುವಾಗ, ಅದೇನೋ ಒಂದು ಚಮತ್ಕಾರವಾದ ಒಗಟೆಯನ್ನು ಹೇಳಿದಳು:—

"ನಕ್ಕು ನಗಿಸಿ ಹೋದ್ರು, ದೂರ ಜಾರಿ ಹೋದ್ರು;
ಕಾದುಕಂದಿದ್ದ ಮಲ್ಲೀಗೆ ಬಳ್ಳಿಯ
ಮರಳಿ ಅರಳಿಸಿದರು ವಸಂತರಾಯರು ‖"

ಅಷ್ಟೇ ಅಲ್ಲ, ನನ್ನ ಮಾತಾಪಿತರ ಇತಿಹಾಸವನ್ನೆಲ್ಲ ಹೊರದೆಗೆದು ನನ್ನ ಪರಿಚಯವನ್ನು ಬೈಲಿಗೆಳೆದು ಬಿಟ್ಟಳು. ನನಗೆ ಹರುಷವೂ ಆಯಿತು; ಸ್ವಲ್ಪ ಹೆದರಿಕೆಯೂ ಆಯಿತು. ಕೂಡಲೆ ಮತ್ತೆ ಕೆಲವು ಸುವಾಸಿನಿಯರ ಸುಗಂಧ ಪುಷ್ಪಗಳು ನನ್ನ ಕಿವಿಯ ಮೇಲೆ ಉದುರಿದುವು. "ಆಂ.... ಇಂವನಸ ಆ ವಸಂತೇನು?....ಹಾಂ, ಅದಕಸ ಇಷ್ಟು ಗುಪ್ತ ರೀತೀಲೆ ಲಗ್ನಾಗೇದವ್ವಾ ಹಾಂಗಾರ....ಹೂಂ, ನಮ್ಮಣ್ಣಾ ನಾಳೆ ಊರಿಗ್ಹೋಗಾಂವಿದ್ದಾನ; ಇವನ ತಂದೀ ಮನೀ ಎದುರಿಗೆನಸ ನಮ್ಮ ತವರಮನೀ ಅದ ಹ್ಯಾಂಗೂ....ಇವನ ಅಪ್ಪಾ ಅವ್ವನ ಮುಂದೆ ಹೇಳೀ ಬಿಡಂತ ಕಲಿಸಿ ಕಳಸ್ತೇನಿ ನಿಂದರ್ರಿ....ಇನ್ನೇನು ಉಪಯೋಗಾ? ಹತ್ತು ಸುಳ್ಳಹೇಳಿ ಒಂದು ಕಲ್ಯಾಣಾ ಕಟ್ಟಬೇಕಂತ, ಅಂಥಾದ್ದು ತನ್ನ ಎಂಜಲಾ ತಾನಸ ಉಂಡಾ. ಅದೂ ಒಂದ ಛಲೋದಸ ಆತು ಬಿಡು....ಹಾಂಗಾರ ಪಂಢರಪುರದಾಗ ಬಿಟ್ಟು ಬಂದ ತಮ್ಮೆಂಜಲದ ಪ್ರಸಾದಾ ತರಲಿಕ್ಕೆರಸ ಏನಡ್ಡಿ?" ಏನೇನೂ ಅಡ್ಡಿಯಿಲ್ಲ ನನಗೂ ಅನಿಸಿತು.

ಪ್ರೊಫೆಸರ ಚಾಳಿನಲ್ಲಿ ಮರುದಿನವೇ ಶಾಲಿನಿಯೊಡನೆ ಹೊಸ ಸಂಸಾರವನ್ನು ಹೂಡಿದೆನು. ಮನೆಯಲ್ಲಿ ಯಾವುದಕ್ಕೂ ಕಡಿಮೆಯಿಲ್ಲದೆ, ಆಡಂಬರವಿರದೆಯೂ ಸುಂದರವಾದ ಪ್ರಪಂಚವನ್ನು ಸಾಗಿಸಹತ್ತಿದೆವು. ಒಂದು ವಾರ ಕಳೆದಿರಬಹುದು. ಇಬ್ಬರೂ ಜೊತೆಯಾಗಿಯೇ ತಿರುಗಾಡಿಕೊಂಡು, ಸುಮಾರು ಆರು ಗಂಟೆಗೆ ಮನೆಗೆ ಮರಳಿದೆವು; ಬರುವಷ್ಟರಲ್ಲಿ, ಪಡಸಾಲೆಯೊಳಗೆ ಒಂದೆರಡು ಟ್ರಂಕುಗಳೂ ಗಂಟುಗದಡಿಗಳೂ ಕಂಡವು.

ಇಬ್ಬರೂ ಒಬ್ಬರನ್ನೊಬ್ಬರು ಸಿಳಿಸಿಳಿ ನೋಡಿಕೊಂಡೆವು. ನನ್ನ ತಾಯಿತಂದೆಯವರು ಖಂಡಿತ ಬಂದಿರಬೇಕೆಂದು

ಅನಿಸಿತು. ಮೆಲ್ಲಗೆ ಕೋಣೆಯಲ್ಲಿ ನೋಡಿದೆ: ತಂದೆ, ಪುಷ್ಪಪಾತ್ರೆ, ಕ್ಯಾಲೆಂಡರ, ಮೇಜಿನ ವಸ್ತ್ರಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತ ನಿಂತಿದ್ದರು. ಮೆಲ್ಲಗೆ ಒಳಹೊಕ್ಕೆನು. ತಾಯಿ, ಹಿತ್ತಲಲ್ಲಿ ಗಿಡಬಳ್ಳಿಗಳನ್ನು ನೋಡುತ್ತ ತಿರುಗಾಡುತ್ತಿದ್ದರು. ಶಾಲಿನಿಯನ್ನು ಕರೆದು ದೂರದಿಂದ ತೋರಿಸಿದೆನು. ನಮ್ಮ ತಾಯಿ ತನ್ನಲ್ಲಿಯೇ ವಟಗುಡುತ್ತಿದ್ದಳು: "ಅಂತೂ ತುಳಸೀಗಿಡಾ ಹಚ್ಚಿಟ್ಟಾಳ...." ಬಟ್ಟೆಗಳನ್ನು ಸೆಳೆಯುತ್ತಿದ್ದ ಒಕ್ಕಲಗಿತ್ತಿಗೆ ಗಟ್ಟಿಯಾಗಿ ಕೇಳಿದಳು. "ಏನs ಏ, ನಮ್ಮ ಸೊಸೀ ತುಳಸೀ ಪೂಜೀ ಮಾಡತಾಳೇನು....?" "ಅಯ್ಯ, ಮಾಡದೇನ್ರೀ ಬಾಯಾರ....ತುಳಸವ್ವನ ಪೂಜೀ ಬಿಡಾಕ ಅವರೇನು ಮುಸುಲ್ರs, ಕಿರಿಸ್ತಾನ್ರs? ಕುಂದರ್ರಿ ನಡೀರಿ ಯವ್ವಾ. ಈಗ ಬರ್ತಾರ ನಮ್ಮ ಬಾಯಿಯವರು....ಭಾಳ ಒಳ್ಳೆವರು ನೋಡ್ರಿ, ನೀವು ಭಾಳ ಥಲೋ ಆದೀರಿ ಅಂತ ಹೇಳಿದರ್ರಿ ಮನ್ನೆ....ಬಂದ ಎಂಟ ದಿನಾ ಆದ್ರೂ, ಗುಣಾ ತಿಳ್ಯಾ ಕೇನರೀ, ಒಂದ ಘಳಿಗ್ಯಾಗ ತಿಳದು ಬಿಡತೈತ್ರೀ !...." ನನ್ನ ತಾಯಿ ತನ್ನಲ್ಲಿಯೇ ವಟಗುಡುತ್ತ, ಒಳಕ್ಕೆಂದು ಮರಳಿದಳು, "ನಾ ಒಳ್ಳ್ಯಾಕ್ಯಾಗಿದ್ರ, ನನ್ನ ಬಿಟ್ಟು ಮದಿವ್ಯಾಗತಿತ್ತs?" ಆ ಒಕ್ಕಲಗಿತ್ತಿಯ ಮಾತುಗಳು ಇವಳ ಮನಸಿನ ಮೇಲೆ ಚೆನ್ನಾಗಿ ನಾಟಿರಬೇಕು.

ನಾವೂ ಆಗಲೇ ಹೊರಗಿನಿಂದ ಬಂದವರಂತೆ ನಟಿಸುತ್ತ, ನಮಸ್ಕಾರ ಮಾಡಿದೆವು. ಇಬ್ಬರ ತಲೆಯ ಮೇಲೆ ಕೈಯಿಟ್ಟಳು; ಪಿಟ್ಟೆಂದು ಮಾತನಾಡಲಿಲ್ಲ.

ರಾತ್ರಿಯಲ್ಲಿ ತಾಯಿ-ತಂದೆಯವರಿಗೂ ನನಗೂ ಮಹಾಭಾರತ ಯುದ್ಧವೇ ಆಯಿತೆನ್ನಬಹುದು; ಅದನ್ನಿಲ್ಲಿ ಹೇಳಲಾರೆನು. ಏಕೆಂದರೆ, "ಮನೆಯ ಕದನವನು ಪರರೊಳು ಪೇಳದವ ಜಾಣ"ನಂತೆ. ಕೊನೆಯ ಉತ್ತರವೆಂದು, ಬೇಕಾದರೆ ಮರ್ಯಾದೆಯಿಂದ ನನ್ನ ಬಳಿ ಬಂದು, ಹಿಂದಿನದೆಲ್ಲ ಮರೆತು ಸುಖವಾಗಿರಬಹುದೆಂತಲೂ ಬೇಡವಾದರೆ, ಬೇಡಿದಷ್ಟು ಹಣ ಕಳಿಸುವದಾಗಿಯೂ ಹೇಳಿಬಿಟ್ಟೆ. ಅವರೂ ವಿಚಾರ ಮಾಡಿ, ಬಂದಿರಲಿಕ್ಕೆ ಒಪ್ಪಿದರು; ಸುಖವಾಗಿ ಎಲ್ಲರೊಡನೆ ಒಂದು ವರುಷಾರು ತಿಂಗಳು ಇರುವಾಗ, ಕ್ರಿಸ್‌ಮಸ್ ರಜೆಯಲ್ಲಿ ಪಂಢರಪುರದ ದೇವದರ್ಶನಕ್ಕೆ ಕರೆದುಕೊಂಡು ನಡೆಯೆಂದರು.

ನನ್ನ ಪತ್ನಿಯ ಕುಟುಂಬದವರೂ ಬಂದರು. ತಾಯಿ-ತಂದೆ-ಎಲ್ಲರೂ ಪೂಜೆಯ ನಿಮಿತ್ತವಾಗಿ ಗುಡಿಯಲ್ಲಿ ಮಗ್ನರಾಗಿರುವಾಗ, ನಾನೂ ಶಾಲಿನಿಯ ಅಣ್ಣ ಪಂಡಿತರಾಯನೂ ಬೇರೆ ಯೋಚನೆಯಲ್ಲಿ ತೊಡಗಿದ್ದೆವು.... ವಿಧಾನಗಳೆಲ್ಲ ಮುಗಿದ ಬಳಿಕ ತಿರುಗಾಡುವ... ಹೊರಹೊರಟೆವು.

'ಅನಾಥಬಾಲಿಕಾಶ್ರಮ'ಕ್ಕೆ ಬಂದೆವು.... ಯಲ್ಲಿ....ನೇ ನಂಬರಿನ ಕೋಣೆಯಲ್ಲಿ ಹುಟ್ಟಿದ... ವನ್ನು ಕೊಡಿರೆಂದೆವು. ಹತ್ತು ವರುಷದ ಬಾಲಿ... ಒಳ್ಳೆಯ ಅಚ್ಚುಕಟ್ಟುತನದಿಂದ ಬಂದು ನ... ಕೈಮುಗಿದು ನಿಂತುಕೊಂಡಳು.

ಅಲ್ಲಿಯ ಮೇಲಧಿಕಾರಿಣಿಯಾದ ವೃದ್ಧೆ... ಪಾದ ಎರಡು ಪದಗಳನ್ನು ಅನ್ನಿಸಿದ... ಅಂಕಲಿಪಿಯನ್ನು ಓದಿಸಿದಳು. ಸೂರ್ಯನ... ಐದು ನಮಸ್ಕಾರಗಳನ್ನು ಹಾಕಿಸಿದಳು.

ಹೆಚ್ಚಿನ ಯೋಚನೆಯನ್ನೇನು ಮಾಡದ... ಬರಾಯನ ಗುಡಿಗೆ ಆ ಹುಡುಗಿಯನ್ನು ... ನಡೆದೆನು. ತಾಯಿ ನೋಡಿದಳು. ಸ್ವಲ್ಪ... ಎಲ್ಲರಿಗೂ ಗೊತ್ತಾಯಿತು. ಮನಸಿನಲ್ಲಿ ... ಗಿರಬೇಕು.

"ಏನು ಅವಿವೇಕಿತನಾ ನಡಿಸೀರಿಪ್ಪಾ... ಪುಣ್ಯಸ್ಥಾನಕ್ಕ ಬಂದ್ರೂ ಬಿಡೂದಿಲ್ಲಾ!"

ಆಗ ನಾನು ಮೆಲ್ಲಗೆ, ಕಿವಿಯಲ್ಲಿ ಎಂದೆ "... ನಾನು ಮಾಡಿದ್ದು ಅವಿವೇಕತನವಲ್ಲಾ... ಮಾಡಿದ್ದು ಮಾತ್ರ ಅವಿವೇಕತನಾ... ಬಂದು, ಆ ಅವಿವೇಕತನದ ಪಾಪವನ್ನೆಲ್ಲಾ... ಪುಸೀತಾದೆ....ನೀನs ಹೇಳು, ಈ ಹುಡುಗಿ... ಗಳು ಹೌದೋ ಅಲ್ಲೋ....?"

ಊರಿಗೆ ಬಂದೆವು. ಸಾವಿರ ಜನನು... ಕೊಂಡರು; ನನ್ನಂತಹ ತಲೆತಿರುಕರಿಗೆ ... ಯೋಗ್ಯವೆನ್ನಿಸಿತು,ಸಾಕು. ಉಳಿದ ಜನರ... ಆದೇನೋ ಹೇಳುವರಲ್ಲ, ಗಡಿಗೆಯ ಬಾಯಿ... ದಂತೆ, ಜನದ ಬಾಯಿ ಮುಚ್ಚಲಾಗದು... ಕೆಲ ದಿನಗಳ ವರೆಗೆ ಆ "ಅನಾಥ ಮಕ್ಕಳ... ನೆನಪಾಗಿ ತಳಮಳವಾಯಿತೇನೋ; ... ವರುಷದ ತರುವಾಯ ಸಂಪೂರ್ಣವಾಗಿ ... ನಂಬಿದಳು. ಅನಾಥಬಾಲಿಕಾಶ್ರಮದವರು... ಪಾತ್ರಾ" ಎಂದು ಹೆಸರಿಟ್ಟಿದ್ದರಂತೆ; ... ಹೆಸರಿನಿಂದ ಕರೆಯಬಹುದಾಗಿತ್ತು. ... ಒಂದು ಹತ್ತು ವರುಷದ ತಪವನ್ನೇ ...

ಪಲ್ಲಿ ಕಳೆದಿದ್ದಳು. ಆದರೆ, ಅಲ್ಲಿಯ ಆ ಸಾಕುತಾಯಿಯು ಮರೆವಾಗಲಿಎಂದು ಅಲ್ಲಿಯೇ ಪಂಢರಿನಾಥನ ಪಾದದಲ್ಲಿ ಹರಿಯುತ್ತಿದ್ದ ನದಿಯಾದ ಚಂದ್ರಭಾಗೆಯ ಹೆಸರಿನಿಂದ— 'ಚಂದ್ರಾ' ಎಂಬ ಹೆಸರಿನಿಂದ ಕರೆಯಹತ್ತಿದೆವು.

ಮುಂದೆ ಒಂದೆರಡು ಗಂಡುಮಗುಗಳೂ ಒಂದೆರಡು ಹೆಣ್ಣುಮಗುಗಳೂ ಆಗಿ, ನಿಮ್ಮೆಲ್ಲರಂತೆ ನಾನೂ ಸುಖದಿಂದ ಸಂಸಾರ ಮಾಡುತ್ತಲಿರುವೆನೆಂದು ಬೇರೆ ಹೇಳಬೇಕಾಗಿಲ್ಲವಲ್ಲವೆ?

ಅಣೋರಣೀಯಾನ್ ಮಹತೋ ಮಹೀಯಾನ್

ಹಿಂದುಸ್ತಾನದಲ್ಲಿ ಎಲ್ಲಕ್ಕಿಂತ ದೊಡ್ಡ ಹುಚ್ಚರ ಆಸ್ಪತ್ರೆಯು ರಾಂಚಿಯಲ್ಲಿದೆ. ಆದರಲ್ಲಿ ೧೯೩೬ರಲ್ಲಿ ೧॥ ಸಾವಿರ ಹುಚ್ಚರಿದ್ದರು!

* * *

ಗ್ಲಾಸ್ಗೊದಲ್ಲಿ ನಡೆಯಬೇಕಾದ ಪ್ರದರ್ಶನದ ಸಿದ್ಧತೆಗಾಗಿಯೇ ಈಗಾಗಲೆ ಹದಿಮೂರು ಕೋಟಿ ರೂಪಾಯಿಗಳು ವೆಚ್ಚವಾಗಿವೆ.

* * *

ಲಂಡನ ಪಟ್ಟಣದಲ್ಲಿಯ ೧೪೫ ಆಸ್ಪತ್ರೆಗಳನ್ನು ನಡೆಸುವುದಕ್ಕೆ ಒಂದು ದಿನಕ್ಕೆ ಹದಿನೈದು ಲಕ್ಷ ರೂಪಾಯಿಗಳು ವೆಚ್ಚವಾಗುತ್ತವೆ.

* * *

ಆಫ್ರಿಕೆಯ ವಾಯವ್ಯ ಗಡಿಯ ಗೋಲ್ಡಕೋಸ್ಟಿನಲ್ಲಿ ವಿಶಿಷ್ಟ ವಾರದಲ್ಲಿ ಹುಟ್ಟಿದವರಿಗೆ ವಿಶಿಷ್ಟ ಹೆಸರುಗಳನ್ನೇ ಇಡುತ್ತಾರೆ. ಹೊಸ ಹೆಸರುಗಳು ಅಲ್ಲಿ ಹುಟ್ಟುವಂತಿಲ್ಲ.

* * *

ಟೊಮೆಟೊ ಹಂಣಿನಲ್ಲಿ ವಿಟ್ಯಾಮಿನ್ನುಗಳಿವೆಯೆಂದು ತಿಳಿದಾಗಿನಿಂದ ಆದರ ಕೃಷಿಯೂ ಮಾರಾಟವೂ ಹೆಚ್ಚುತ್ತಿವೆ. ಈಗ ಅದರ ಸಿಪ್ಪೆಯಿಂದ ರಬ್ಬರು ತಯಾರಿಸಲಾಗುವುದೆಂದು ಇಟಾಲಿಯನ್ ವಿಜ್ಞಾನಿಯು ಶೋಧಿಸಿದ್ದಾನೆ. ಸರಿ, ರಸ ಕುಡಿಯುವುದು! ಸಿಪ್ಪೆ ಮಾರುವುದು!

* * *

ನಮ್ಮ ಭೂಮಿಗೆ ತೀರ ಹತ್ತರವಿರುವ ನಕ್ಷತ್ರದ ಹೆಸರು ಅಲ್ಫಾಸೆಂಟಾರಿ. ಅದು ಭೂಮಿಯಿಂದ ೪೧೦ ಅಬ್ಜ ಮೈಲು ದೂರದಲ್ಲಿದೆ.

* * *

ಜಪಾನಿನ ಡಾ. ಮತ್ಸು ಅವರು ಯುದ್ಧ ಸಂದೇಶಗಳನ್ನು ಸ್ವಪ್ರಾಂತಗಳಿಗೆ ಕಳಿಸಲಿಕ್ಕೆ ಜೇನುನೊಣಗಳಿಗೆ ಕಲಿಸುತ್ತಿದ್ದಾರೆ.

೧೯೩೬ರಲ್ಲಿ ಬ್ರಿಟನ್ನಿನಲ್ಲಿ ೧೬ ವಯಸ್ಸಿನ [illegible]ರಿಗೂ ೧೧೭೯ ಹುಡುಗಿಯರಿಗೂ ಮದುವೆ[illegible]

* *

ಪ್ರತಿವರ್ಷ ಅಮೆರಿಕೆಯ ಹತ್ತಿಯ [illegible] ಬಿಡಿಸುವ ಹೊತ್ತಿಗೆ ಮುಂಚೆಯೇ '[illegible] ಹುಳುವಿನಿಂದ ೭೫ ಕೋಟಿ ರೂಪಾಯಿ ಬೆಲೆ[illegible] ಹಾಳಾಗುತ್ತದೆ!

* *

ಪೇಕಿಂಗಿನ ಹತ್ತರದ ಗವಿಗಳಲ್ಲಿ ೫ಲಕ್ಷ [illegible] ಪೃಥ್ವಿಯಮೇಲೆ ಜೀವಿಸಿದ ಐವರು ಮನು[illegible]ಜರಗಳು ಸಿಕ್ಕಿವೆ. ಅವುಗಳ ಹಲ್ಲುಗಳ [illegible] ಅಷ್ಟು ಪೂರ್ವದಲ್ಲಿಯೇ ಮನುಷ್ಯನು ಬೆಂ[illegible]ದಿಂದ ಅಡಿಗೆ ಮಾಡಿ ಉಣುತ್ತಿದ್ದನೆಂ[illegible] ಬರುತ್ತದೆ.

* *

ಒಂದು ಔಂಸು ರೇಡಿಯಮ್ಮಿನ ಬೆಲೆ [illegible] ಕೃತ್ರಿಮವಾಗಿ ತೀರ ಸ್ವಲ್ಪವಾದ ವಿಟ್ಯಾಮಿ[illegible]ಸಲು ೩೦೦೦೦೦೦ ರೂಪಾಯಿಗಳು ವೆಚ್ಚ[illegible]

* *

ಸಾಗರದೊಳಗಿನ ಉಪ್ಪುಗಳೆಲ್ಲವನ್ನೂ ಪೃ[illegible]ವ್ಮೈತುಂಬ ಹರಡಿದ್ದರೆ, ಆ ಉಪ್ಪಿನ ಪದರು [illegible]ದಪ್ಪನಾಗುವದು. ಅಂದರೆ ಸುಮಾರು [illegible] ಮನೆಯ ಎತ್ತರವಾದ ಪದರು!

* *

ಗಾಳಿಯಿಂದ ನಾವು ಉಸುರಾಡಿಸುವ ಪ್ರಾ[illegible] ಒಂದು ಐದನೇ ಅಂಶದಷ್ಟು ಪ್ರಾಣವಾಯು[illegible] ಪ್ರಕಾಶದಲ್ಲಿರುವ ಸಸ್ಯ ವನಸ್ಪತಿಗಳಿಂ[illegible]ದಾಗಿದೆ.

ಉಂಡಾಡಿಗನ ಮುಂಡಿಗೆ

> ವಿದ್ಯಾವಂತರ—ಅಲ್ಲಲ್ಲ ನೌಕರಿವಂತರ—ಸಂದೇಶ ಬಂದಕೂಡಲೆ ಹುಡುಗಿ ಶಾಲೆ ಬಿಡುವಳು. ಸಣ್ಣ ಕುಂಕುಮವು ದೊಡ್ಡದಾಗುವದು. ಅಷ್ಟ ಬೈತಲವು ಮಧ್ಯಕ್ಕೆ ಸರಿಯುವದು. ಭೂಗೋಲ ಇತಿಹಾಸ ಆಟಗಳನ್ನು ಬಿಟ್ಟು ಆರತಿಯ, ಹಸೆಗೆ ಕರೆಯುವ ಹಾಡುಗಳನ್ನು ಕಲಿಯುವಳು. ಆದರೆ ವಿದ್ಯಾವಂತರ ಗ್ರಹವು ದುಡ್ಡಿನ ಆಗ್ರಹಕ್ಕೆ ಆಕರ್ಷಿಸಲ್ಪಟ್ಟು, ಮೋರೆಯು ಬೇರೊಂದು ಕನ್ಯಾವಿಗ್ರಹಕ್ಕೆ ತಿರುಗುವದು. ಸರಿ! ದೊಡ್ಡ ಕುಂಕುಮದ ಕನ್ಯೆಯು ಪುನಃ ಶಾಲೆಯ ಸೋಗನ್ನು ತೊಡುವಳು. ಹೀಗಾಗಿ ಅವಳು ಹಳೆ ನಡತೆ ಹೊಸ ಬೆಡಗುಗಳ ಕಿಚ್ಚಡಿಯಾಗುವಳು.

ಲೇಖಕ: 'ಉಂಡಾಡಿ'

ಏನು ಸುಡತೀರಿ ಓದೋದು ಕಲಿಯೋದು! ಓದಿ ಯಾರೂ ಸಾವು ತಪ್ಪಿಸಿಕೊಂಡಿಲ್ಲ. ಓದಿದವರಿಗೆ ಹಸಿವಿ ನೀರಡಿಕೆ ತಪ್ಪಿಲ್ಲ. ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಅಂತ ನೀವನ್ನಬಹುದು. ಉಹುಂ ಅದೂ ಸುಳ್ಳು. ನಿಜ ಹೇಳೋದಂದರೆ ಈಗ ಹೆಚ್ಚಾಗಿ ಓದಿದವರೇ ಬಿಕ್ಷೆ ಬೇಡಲಿಕ್ಕೆ ಹತ್ತಿದಾರೆ. ನಿರುದ್ಯೋಗ ಕಡಿಮೆ ಮಾಡಲಿಕ್ಕೆ ಜಗತ್ತಿನ ಘಟಾನುಘಟಿಗಳೆಲ್ಲ ಲಾಗಾ ಹಾಕುತ್ತಿದ್ದಾರೆ. ಆದರೂ ಅವರ ಬುದ್ಧಿ ಓಡಲೊಲ್ಲದು. ನಿನ್ನೆ ಮಧ್ಯಾಹ್ನ ಕಂಠಮಟ ಉಂಡು ಗೊರಕೆ ಹೊಡೆಯುವಾಗ ನನ್ನ ಕನಸಿನಾಗ ದೇವರು ಬಂದು ಹೇಳಿದ: ಈ ಜೀವಮಾತು ಜಗಕ್ಕೆಲ್ಲ ಸಾರು. ಸಾಲೆಕಾಲೇಜಿಗೆ ಬೀಗಬಿದ್ದ ದಿನವೇ ಭಾರತೀಯರ ನಿರುದ್ಯೋಗ ಪರಿಹಾರ, ಎಂದು.

ಗಾಂಧಿಯವರಿಗೆ ಮಹಾತ್ಮಾ ಅಂತ ಯಾಕಂತಾರೆ ಗೊತ್ತದೆಯೇನು? ಅವರು ಮೊದಲು ಅಂದದ್ದೇನು? ಸಾಲೆ ಕಾಲೇಜು ಬಿಟ್ಟು ಹೊರಗೆ ಬನ್ನಿರಿ ಅಂತ. ಮತ್ತೆ ಅವರ ಮಾತಿನಂತೆ ಆಗ ನಡೆದವರಲ್ಲಿ ಹೆಚ್ಚು ಮಂದಿಗೆ ಸರಕಾರದ ಧರ್ಮಶಾಲೆಯಲ್ಲಿ ಕೆಲಸವೂ ಸಿಕ್ಕಿತು; ಹೊಟ್ಟೆತುಂಬ ಹಿಟ್ಟೂ ಸಿಕ್ಕಿತು. ಕೆಲವು ದಿನವಾದರೂ ಅವರ ನಿರುದ್ಯೋಗ ತಪ್ಪಿತೋ ಇಲ್ಲಾ?

ಆಗ ಶಾಲೆ ಬಿಟ್ಟವರು ಕೆಲವರು ತಿರುಗಿ ಸಾಲೆಗೆ ಸೇರಿದರು. ದೊಡ್ಡದೊಡ್ಡ ಪರೀಕ್ಷೆ ಪಾಸಾದರು. ಡಿಗ್ರಿ ಪಡೆದರು. ಮನೆಗೆ ಬಂದರು. ತಂದೆತಾಯಿ ಮನೆಯನ್ನು ಮಕ್ಕಳ ಕೊರಳಿಗೆ ಕಟ್ಟಿ ಅನೇಕರು ಪರಲೋಕದ ಹಾದಿ ಹಿಡಿದರು. ಈಗ ಮನೆಯೊಳಗೆ ಕಲಿತವರು, ಅವರ ದೊಡ್ಡ ದೊಡ್ಡ ಪುಸ್ತಕಗಳು, ಚಿಮಣಿ ಎಂಣೆ ಡಬ್ಬಿಗೆ ಪರದೇಶಿ ಬಂಣ ಹಚ್ಚಿ ಬರೆದ ಬೋರ್ಡುಗಳು, ಇವಿಷ್ಟೆ ಹಾಳೂರ ಗೂಗೆಗಳಂತೆ ತೂಕಡಿಸುತ್ತಲಿವೆ. ಪಧವೀಧರರೆಂದ ಮೇಲೆ ಮನೆಯ ಚಾಕರಿಗೊಂದು ಆಳು ಬೇಕು. ಸಂಬಳವಿಲ್ಲದ ತೊತ್ತನ್ನು ತರಬೇಕೆಂದರೆ ಆಸ್ತಿಯಿಲ್ಲ. ಅದೆಲ್ಲ ಪದವೀ ಸಂಪಾದನದಲ್ಲಿ ನಾಸ್ತಿಯಾಗಿದೆ. ಉದ್ಯೋಗವಿಲ್ಲ. ತಮಗೆ ಬಂದ ವಿದ್ಯೆ ತೋರಿಸೋಣವೆಂದರೆ ಅವಕಾಶವೇ ಸಿಗುವದಿಲ್ಲ. ಕ್ಯಾಂಡಿಡೇಟಾಗಿದ್ದು ಹಿರೇಹುದ್ದರಿಗಳ ಮನವೊಲಿಸಿ ಯಾವದಾದರೊಂದು ಸ್ಥಳಕ್ಕೆ ಗಾಳಹಾಕಬಹುದು. ಆದರೆ ಇವರ ಗಾಳಕ್ಕೆ ಮೀನ ಸಿಗುವದರೊಳಗೆ ಕಚೇರಿಯ ಹಿರಿಯ ಹುದ್ದರಿಗಳು ಇವರ ರಕ್ತಮಾಂಸಗಳನ್ನೆ ಹೀರಿ ತಾವು ಕೊಬ್ಬಿರುತ್ತಾರೆ. ಆದರಿಂದ ಅವರ ಆಯುಷ್ಯವಿನ್ನೂ ಬೆಳೆದು ಕಚೇರಿಯ ಕುರ್ಚಿಗಳು ಬೇಗ ತೆರವಾಗುವಂತೇ ಇಲ್ಲ. ಉಮೇದವಾರರು ಕೆಲಸವೆಲ್ಲವನ್ನು ಕಲಿಯುವದರೊಳಗಾಗಿ ಬುದ್ಧಿಯೊಂದೇ ಬೆಳೆದು ದುಡಿಯುವ ಶರೀರವು ಮಾತ್ರ ರೀಡ್ಸ್ ಕಳೆದು ಹೋದ ಪಿಯಾನಿನಂತೆ ಆಗಿಬಿಡುವದು.

ಇಷ್ಟೆಲ್ಲ ಉಪವಾಸ ವನವಾಸವಾದ ಮೇಲೆ ಒಂದು ವೇಳೆ ಸರಕಾರಿ ನೌಕರಿಯ ಸಾಕ್ಷಾತ್ಕಾರವಾಯಿತೆಂದೇ ತಿಳಿಯಿರಿ. ದೇಶದಲ್ಲಿ ದುಡ್ಡೇ ಕಡಿಮೆ. ಆದರಲ್ಲೀಗ ಕಾಂಗ್ರೆಸ್ ಬೈರಾಗಿಗಳ ಸರಕಾರ. ಒಬ್ಬನು ತಿಂಗಳ ಸಂಬಳ ಐನೂರು ಸಾಕೆಂದರೆ ಇನ್ನೊಬ್ಬನು, ಜನರಿಗೆ ಮಿತವ್ಯಯವನ್ನು ಕಲಿಸಬೇಕಾದರೆ ನೌಕರರಿಗೆ ಪೋಲು ವೆಚ್ಚ ಮಾಡಲಿಕ್ಕೆ ಅವಕಾಶವಾಗುವಷ್ಟು ಸಂಬಳ ಕೊಡಲೇ ಬಾರದು; ಒಂದು ಕುಟುಂಬಕ್ಕೆ ೩೦ ರೂಪಾಯಿ ಸಾಕು. ಸರಕಾರಿ ನೌಕರರೆಂದರೆ ನಾಗರಿಕರಿಗೆ ಆದರ್ಶ ವ್ಯಕ್ತಿಗಳಾಗಬೇಕು. ಎಂದು ವ್ಯಾಖ್ಯಾನ ಕೊಡುತ್ತಾನೆ. ಒಳ್ಳೇದು ಸಂಬಳವೆಷ್ಟೆಂದರೂ ಕರ್ಮದಿಂದ ಸಿಗುವ ಫಲ. ಇನ್ನು ದೈವ

ದಿಂದಲೂ ಹಣಸಂಪಾದಿಸುವ ಮಾರ್ಗಗಳಿವೆಯಲ್ಲ! ಹಾಗೆ ಬೆನ್ನ ಹಿಂದೆ ಎಡಗೈಯನ್ನೊಯ್ದು ಬೆಚ್ಚಗೆ ಮಾಡಿಸಿಕೊ ಳ್ಳೋಣೆಂದರೆ ಪುನಃ ಅದೇ ಬೈರಾಗಿಗಳ ಆರ್ಭಟ! ಲಂಚ ಗಿಂಚದ ವಾಸನೆ ಬಂದರೆ ಸಾಕು! ಏಳೇಳು ಜನ್ಮಕ್ಕೊ ನೌಕರಿ ಸಿಗದಂತೆ ಮಾಡೇವು! ಎಂಬ ಗುಡುಗು.

ಆಯಿತು, ಅಂತರಾತ್ಮನ ಸಾಕ್ಷಿಯಿಂದ ಲಂಚಗಿಂಚಕ್ಕೆ ಕೊಂಚವೂ ಮನಗೊಡದೆ ಆ ಏಳೂವರೆ ರೂಪಾಯಿಯ ನೌಕರಿಯನ್ನು ಅಂಗೀಕರಿಸಿದರೆಂದು ತಿಳಿಯುವಾ. ಕಚೇರಿ ಯಲ್ಲಿ ಹಿರಿಯ ಹುದ್ದರಿಗಳ ಶಾಪಾಶೀರ್ವಾದಗಳನ್ನು ಹೊಟ್ಟೆಪಾಡಿಗಾಗಿ ಹೇಗೂ ನುಂಗಿಕೊಂಡು ಹೊರಗೆ ಬಂದ ಮೇಲಾದರೂ ಪದವೀಧರರಂತೆ ಡೀಸೆಂಟಾಗಿ ನಿರುದ್ಯೋಗಿ ಗಳ ಎದೆ ನೋಯುವಂತೆ, ನಿರಕ್ಷರಿಗಳ ಸಲಾಮುಗಳನ್ನೆಳೆ ವಂತೆ ಠೀವಿಯ ಉಡುಪುಗಳನ್ನು ತೊಟ್ಟು ಗಂಗಾಭವನದ ಸ್ಪೆಶಲ್ ಟೀ ಕುಡಿಯಬೇಡವೇ? ಕನಿಷ್ಠ ವಾರಕ್ಕೊಂದು ಸಲವಾದರೂ ಸಿನೇಮಾ ಬೇಡವೇ? ತಿಳಿಯಲಿ ತಿಳಿಯ ದಿರಲಿ ಕೈಯಲ್ಲಿ ಶೋಭಿಸುವಂತೆ ಹಿಡಿದು ತಿರುಗಲಿಕ್ಕೆ ಒಂದು ವೃತ್ತಪತ್ರಿಕೆ ಬೇಡವೇ!

ಮನುಷ್ಯ ಎಷ್ಟೆ ಒಳ್ಳೆಯವನಾದರೂ 'ರಾವ್‌ಸಾಬ್' ಎಂದು ಕರೆಸಿಕೊಳ್ಳಬೇಕೆನಿಸುವದು. ಬಿ. ಎ. ಎಂ. ಎ ಇತ್ಯಾದಿ ಡಿಗ್ರಿಗಳಿಗೆ ಪಟ್ಟಷ್ಟು ಕಷ್ಟವೇನೂ ಇಲ್ಲ ಅನ್ನಿರಿ ರಾವ್‌ಸಾಬ್ ಪದವಿಗೆ. ಗಡಿಬಿಡಿಯಿಂದ ನಡೆಯುತ್ತ ಟಾಂಗಾ ವಾಲಾನ ಕಡೆಗೆ ನೋಡಿದರೆ ಸಾಕು, ನೀವು ಕಾಂಗ್ರೆಸ ಸರಕಾರದ ನೌಕರರಾದರೂ ರಾವ್‌ಸಾಬ್ ಪದವೀ ಸಿಕ್ಕೇ ಬಿಡುತ್ತದೆ. ಹೀಗೆ ಸಂಣಪುಟ್ಟ ಕೆಲಸಗಳಿಗೆ ಒಂದೆರಡು ಬಿಲ್ಲೆ ಖರ್ಚು ಮಾಡಿದರೆ, ರಾಯರೆ, ರಾವ್‌ಸಾಬ್ ಪದವಿ ಗಳ ಸುರಿಮಳೆಯಾಗುವದು. ಆದರೆ ಹಾಗೆ ಅಗ್ಗವಾಗಿ ಪದವೀದಾನ ಮಾಡುವವರಲ್ಲಿ ಒಂದು ಕಗ್ಗ ಗುಣವಿದೆ. ಅದೇಂದರೆ ನೀವು ಅವರನ್ನು ಗೌರವದಿಂದ ಕಾಣಬೇಕೆ ನ್ನುವದು. ತುಸು ಕಾರವಾದ ಮಾತಾಡಿದರೆ, ಅವರು ತಮ್ಮ ಪಾದಮುಟ್ಟಿ ನಿಮಗೆ ಮರ್ಯಾದೆ ಮಾಡದೆ ಬಿಡರು. ಇದು ಮಾತ್ರ ಪದವೀಧರರಿಗೆ ಬೇಡವಾಗಿರುತ್ತದೆ. ಕಚೇರಿಯಲ್ಲಿ ಪಥ್ಯ ಅಪಥ್ಯವಾದುದನ್ನೆಲ್ಲ ನುಂಗಿಕೊಂಡು ಬಂದಿರುತ್ತಾರೆ ಪಾಪ. ಆದುದರಿಂದ ಅವರಿಗೆ ತಾವೇ ತಾವಾಗಿ ಮೆರೆ ಯುವ ಹಂಬಲವೆಷ್ಟಿರಬಹುದು, ನೀವೇ ಯೋಚಿಸಿ. ಆದರೆ ವ್ಯವಹಾರವೂ ಈಗ ಕೆಟ್ಟುಹೋಗಿದೆ. ಸಂಣಪುಟ್ಟ ಪದ ವೀಧರ—ನೌಕರರನ್ನು 'ಬರ್ರಿ, ಕೂಡ್ರಿ' ಎಂದು ಕೂಡ ಅನ್ನುವದಿಲ್ಲ. ಸಲಾಮು ಮಾಡುವದಂತೂ ದೂರವೇ.

ಇನ್ನು ಅವರು ಅಂದದ್ದನ್ನನಿಸಿಕೊಂಡು ... ದಿರುವವರು ಎಲ್ಲಿ ಸಿಗಬೇಕು ಅವರಿಗೆ?

ಅದಕ್ಕೇ ಬುನಾದಿಯಿಂದ ನಮ್ಮ ಹಿಂ... ವಿಲ್ಲದ ತೊತ್ತುಗಳ ವ್ಯವಸ್ಥೆ ಮಾಡಿದ್ದಾರೆ. ... ಏಳೂವರೆ ರೂಪಾಯಿಯಾದರೂ ಸರಕಾ... ಹೌದೋ ಅಲ್ಲೋ ಎಂದು ಇವರ ಮನೆಯಲ್ಲಿ ... ದುಡಿದು, ಸಾಯುವವರೆಗಲ್ಲ ಜನ್ಮಜನ್ಮಾಂತ... ಚಿರಸೇವಿಕೆಯರಾಗಲು, ಹಲವು ಜೀವಿಗಳು ... ಇರುವರು. ಅವರೂ ಬೇಗ ಗಡಬಿಡಿ ... ಬಿಟ್ಟಿರುತ್ತಾರೆ. ಒಂದಿಲ್ಲೊಂದು ದಿನ ... ಬೇರೆಯವರ ಮನೆಗೆ ಹೋಗುವವರೇದ ... ಪೋಷಣೆ ಎಷ್ಟು ಚನ್ನಾಗಿ ಆಗಿರಬಹುದು! ... ಹೋಗುವವಳು ಹುಟ್ಟಿದ ಮನೆ ಕೆಲಸವನ್ನು... ಮಾಡಬಹುದು? ಆದುದರಿಂದ ಮುಂದೆ ... ಎದೆ ಸೀಳಿದಾಗ ಒಳಗೆ ಒಂದೆರಡು ಅಕ್ಷರಗಳಾ... ಯೆಂದು ಹಿರಿಯರು ಶಾಲೆಗೆ ಹಾಕುತ್ತಾರೆ. ... ಹೆಣ್ಣುಮಕ್ಕಳ ಶಾಲೆ. ಅಮಾವಾಸ್ಯೆ, ಹು... ಗಂಗಿ, ಬಿದಿಗಿ, ಚೌತಿಗಳಲ್ಲಿಯೇ ವರ್ಷದ ... ಹೆಚ್ಚು ದಿನಗಳು ಕಳೆಯುತ್ತವೆ. ಇನ್ನುಳಿದ ... ದಿನಗಳಲ್ಲಿ ಅವರು ಶಾಲೆಗೆ ಹೋಗಿ ಕಲಿಯಬೇ... ತ್ತಾರೆ; ಕಲಿಯಲೆತ್ನಿಸುತ್ತಾರೆ. ಆದರೆ ... ಅವರ ಜೀವನ ಉದ್ಧಾರ ಮಾಡುವ ನಮ್ಮ ... ರಂತಹ ಭಾವೀ ಪತಿದೇವರಿಂದ 'ಹುಡುಗಿ... ಬಿಡಿಸಿದರೆ ನಾವು ಅವಳ ಕೈಹಿಡಿಯುತ್ತೇ... ಕನ್ಯಾಪಿತೃಗಳಿಗೆ ಸಂದೇಶಗಳು ಬರುತ್ತಿದ್ದ... ಹೆಂಣಿನ ತಂದೆಯು ಅವಳನ್ನು ಹುಟ್ಟಿಸಿದುದೇ... ದರೂ ಅವಳನ್ನು ಬೇರೆ ಕಡೆಗೆ ಸಾಗು ಹಾಕಲ್ಕೆ ... ವಂತರ—ಅಲ್ಲಲ್ಲ ನೌಕರಿವಂತರ—ಸಂದೇಶ... ಹುಡುಗೆ ಶಾಲೆ ಬಿಡುವಳು. ಈವರೆಗಿನ ... ಸಂಣ ಕುಂಕುಮದ ಬೆಡಗುಗಳನ್ನು ... ಕುಂಕುಮ ಹಚ್ಚಿ, ಭೂಗೋಲ ಇತಿಹಾಸ ... ಮರೆತು ಆರತಿ ಹಾಸಿಗೆಗೆ ಕರೆಯುವ ಹಾ... ಯುವಳು. ಒಂದೆರಡು ಮೂರು ತಿಂಗಳು ... ಆದರೆ ವಿದ್ಯಾವಂತರ ಗ್ರಹವು ದುಡ್ಡಿನ ... ಸಲ್ಪಟ್ಟು ಮೋರೆಯನ್ನು ಬೇರೊಂದು ಕನ್ಯಾ... ತಿರುಗಿಸುವರು. ಈ ದೊಡ್ಡ ಕುಂಕುಮದ ... ಶಾಲೆಗೆ ಹೋಗುವಳು. ಪುನಃ ಮೊದಲಿನ ...

ಗಳು ತಲೆದೋರುವವು. ಹೀಗೆ ವರ್ಷವರ್ಷವೂ ಹಲವು ತಿಂಗಳು ವರಪ್ರತೀಕ್ಷೆಯಲ್ಲಿ ಕಳೆದ ಅವಳ ಮನವು ನೂರಾರು ಸಲ ಹೊಸ ಬೆಡಗು, ಹಳೆ ನಡತೆಗಳ ಕಿಚ್ಚಿಡಿಯಿಂದ ತುಂಬಿರಬೇಕಲ್ಲವೇ? ಇನ್ನು ನಮ್ಮ ವಿದ್ಯೆಯ ಗುಡ್ಡವನ್ನು ಹತ್ತಿ ನೌಕರಿಯ ಕಂದರದಲ್ಲಿ ಧುಮುಕಿದ ಪದವೀಧರರ ಪಾಲಿಗೆ ಸಿಗುವ ಆಮರಣ ಸ್ವಯಂಸೇವಿಕೆಯೆಂದರೆ, ಮೇಲ್ಕಂಡ ಅನೇಕ ವರದೇವರ ಜರಡಿಯಲ್ಲಿಳಿಯದೆ ಉಳಿದ ಕನ್ಯೆಯೇ ಆಗಿರಬಹುದಲ್ಲವೇ?

ವಿದ್ಯೆಯ ಮೃಗಜಲದ ಬೆನ್ನಟ್ಟಿ ನೌಕರಿಯ ಗೊಂಡಾರಣ್ಯಕ್ಕೆ ಮುಟ್ಟಿ ಆಯುಷ್ಯದ ನಡುವಯಸ್ಸಿನಲ್ಲಿ, ಸಂಸಾರ ಸುಖಕ್ಕೆಳಸಿ ಬಾಯಿ ನೀರು ಬಿಟ್ಟರೆ ಅವನ ಕೈಗೆ ಸಿಗುವದು ಯಾರಿಗೂ ಬೇಡವಾದ ಈ ಒಗರು ಹೆಂಣೇ!

ಸಾಕು! ಸಾಕು! ನನಗೆ ಹಸಿವೆ ಆಗಲಿಕ್ಕೆ ಹತ್ತಿತು, ಈ ವಿದ್ಯೆಯ ಪುರಾಣ ಹೇಳಿ. ಮತ್ತೊಂದು ಗಂಗಾಳ ತುಂಬ ಹೊಟ್ಟೆಗಿಳಿಸಿ ಬರುತ್ತೇನೆ. ಏಕೆಂದರೆ ನನ್ನ ಉದ್ಯೋಗವೇ ಅದು. ಸಾಲೆ ಕಾಲೇಜಿನ ಗೆಳೆತನವೇ ನನಗಿಲ್ಲ.

"ಓಂ ಶಾಂತಿಃ ಶಾಂತಿಃ" ಅರ್ಥಾತ್ ಆಂಗ್ಲೋ-ಇಟಾಲಿಯನ್ ಸಂಧಾನ

"ನಾಗರಿಕ"ರಿಂದ

★

ಅಸಹಾಯ ಅಬಿಸೀನಿಯವನ್ನು ಇಟಲಿಯ ಕಟುಕನಿಗೆ ಊಟವಾಗಿ ಕೊಟ್ಟು, ಸ್ಪೇನಿನ ಬೂದಿಯ ಮೇಲೆ ಫ್ರಾಂಕೋನ ಸಿಂಹಾಸನವನ್ನು ಸ್ಥಿರಪಡಿಸಿಟ್ಟು, ಬ್ರಿಟನ್ನು ಸಾಧಿಸಿ ದುದೇನು ?— ತಾತ್ಪೂರ್ತಿಕ ನಿಶ್ಚಿಂತೆ! .... ಎರಡು ಸಾಮ್ರಾಜ್ಯವಾದಿ ರಾಷ್ಟ್ರಗಳು ಕೈಕೈ ಕುಲುಕುತ್ತಿವೆ! ದಲಿತ ರಾಷ್ಟ್ರಗಳೆ! ಹಿಂದುಸ್ತಾನವೆ! ಎಚ್ಚರಿಕೆ!

★

ಎಪ್ರಿಲ್ ಸಂಚಿಕೆಯಲ್ಲಿ ಹಿಟ್ಲರನ ಆಸ್ಟ್ರಿಯ-ಆಕ್ರಮಣವನ್ನು ಕುರಿತು ಬರೆಯುವಾಗ ಇಂಗ್ಲಂಡಿನ ಹೊಸ ಪರರಾಷ್ಟ್ರೀಯ ನೀತಿಯನ್ನು ನಾವು ಈ ರೀತಿ ವಿವರಿಸಿದ್ದೆವು:—"ಇಂಗ್ಲಂಡು....ಫಾಸಿಸ್ಟ್ ರಾಷ್ಟ್ರಗಳ ಗುಂಪಿಗೆ ಸೇರಿ, ತಾನೂ ಫಾಸಿಸ್ಟ್ ನೀತಿಯನ್ನೇ ಅವಲಂಬಿಸಿದುದನ್ನು ಜಗತ್ತಿಗೆ ಸಾರಿಹೇಳುತ್ತಿದೆ." ಮೊನ್ನೆ ಮೊನ್ನೆ ಜರುಗಿದ ಆಂಗ್ಲೊ-ಇಟಾಲಿಯನ್ ಸಂಧಾನವು ಈ ಅಭಿಪ್ರಾಯಕ್ಕೆ ಇನ್ನಿಷ್ಟು ಪುಷ್ಟಿಯನ್ನು ಕೊಡದಿರಲಾರದು.

"ಏನು ಬೇಕಾದ್ದು ತಕ್ಕೊಳ್ಳಿ—ಆದರೆ 'ಶಾಂತಿ'ಯನ್ನು ಕೊಡಿ; ಈ ಜಗಳ ನಿಲ್ಲಿಸಿ; ಕೊಂಚ ಸಮಾಧಾನ ತಾಳಿ; ಓಂ ಶಾಂತಿಃ ಶಾಂತಿಃ" ಎಂಬೀ ಭಾಷೆಯಲ್ಲಿ ಈ ಸಂಧಾನವನ್ನು ಬಣ್ಣಿಸಬಹುದಾಗಿದೆ.

ಮುಸೊಲಿನಿ ಮಹಾ ಚತುರ. ಯುದ್ಧಕ್ಕಿಂತ ಬರಿ ಆರ್ಭಟಿ ಮಾಡುತ್ತಲೆ ತನ್ನ ಕಾರ್ಯವನ್ನು ಸಾಧಿಸುತ್ತ ಬಂದಿದ್ದಾನೆ. ಕೈಕೈ ಕದನದ ಪ್ರಸಂಗ ಬಂದರೆ ಬ್ರಿಟನ್ನಿನೊಡನೆ ತಾನೆಂದೂ ಸಮಕುಸ್ತಿಯಾಗಲಾರನೆಂದು ಅವನು ಬಲ್ಲ. ಆದುದರಿಂದಲೇ ಫ್ರಾಂಕೋನಿಗೆ ಮರೆಯಾಗಿ ನಿಂತು ಬ್ರಿಟನ್ನಿಗೆ ಚಿವುಟುತ್ತಿದ್ದಾನೆ; ಪ್ಯಾಲೆಸ್ಟೈನ್-ಸಿರಿಯಾ-ಅರೆಬಿಯಾ ಮೊದಲಾದ ಕಡೆ ಬ್ರಿಟನ್ನಿಗೆ ವಿರುದ್ಧವಾಗಿ ಅಪಪ್ರಚಾರದ ಝುಂಝೂವಾತವನ್ನೆ ಎಬ್ಬಿಸಿಬಿಟ್ಟಿದ್ದಾನೆ; ಲಿಬಿಯದಲ್ಲಿ ಸೈನ್ಯವನ್ನು ಕೇಂದ್ರೀಕರಿಸಿ, ಇಜಿಪ್ಟಿಗೂ ಭೂಮಧ್ಯ ಸಮುದ್ರದಲ್ಲಿಯ ಬ್ರಿಟಿಷ್ ಹಿತಸಂಬಂಧಗಳಿಗೂ ಆಂಜಿಕೆ ಹಾಕುತ್ತಿದ್ದಾನೆ. ಇಂಗ್ಲಂಡಿಗೆ ಒಂದೇ ಒಂದು ಚಿಂತೆ: ತನ್ನ ವ್ಯಾಪಾರ ಸುರಕ್ಷಿತ[illegible] ತನ್ನ ಸಾಮ್ರಾಜ್ಯದ ಕೂದಲು ಕೊಂಕದಿ[illegible] ಚಿಂತೆ ಇಮ್ಮಡಿಯಾಗುವಂತೆ ಮುಸೊಲಿನಿಯು [illegible] ಕಾಟಗಳನ್ನು ಕೊಡುತ್ತಲೆ ಇದ್ದ; ಪ್ರಕಟವಾ[illegible] ಮಾಡದೆ, ಅಪ್ರಕಟವಾಗಿ ಎಲ್ಲವನ್ನೂ ಮಾಡು[illegible] ದಲ್ಲಿಯ ಯುದ್ಧವನ್ನು ಮುಂದುವರಿಸಿ, [illegible] ಜನ-ಧನಬಲವನ್ನು ಪೂರೈಸಿ, ಭೂಮಧ್ಯ [illegible] ಬ್ರಿಟಿಷ್ ಹಡಗುಗಳನ್ನು ಕಳ್ಳಕಾಯಕದಿಂ[illegible] ಕಡಲಿನ ರಾಣಿಯಾದ ಬ್ರಿಟನ್ನನ್ನು [illegible] ಬಿಟ್ಟಿದ್ದ. ಎಲ್ಲಾ ಕಡೆ ಭೂತ-ಬೇತಾಳಗಳ[illegible] ರೂಪಗಳು ಕಾಣತೊಡಗಿದಾಗ ಎಂತೆಂತಹ[illegible] ಗಾಬರಿಗೊಳ್ಳುತ್ತಿದೆ. ಇಂಗ್ಲಂಡಿಗೆ ತನ್ನ [illegible] ವೆಂತಲ್ಲ. ಆದು ಗಟ್ಟಿಮನಸ್ಸು ಮಾಡಿದ್ದ[illegible] ರಶಿಯಗಳು ಮುಂಗಾವಲಿಗೆ-ಬೆಂಗಾವಲಿಗೆ [illegible] ಸ್ಪೇನದ ಅಂತಃಕಲಹ ಹಳೆಯ ಮಾ[illegible] ಜಗತ್ತಿನ ಶಾಂತಿಸಮಸ್ಯೆಯು ಎಂದೋ [illegible] ತ್ತಿತ್ತು. ಆದರೆ ಜರ್ಮನಿ-ಇಟಲಿ-ಜಪಾನ[illegible] ಕಡೆಯಿಂದ 'ಡುರಕಿ' ಹಾಕತೊಡಗಿದುದ[illegible] ಚಿತ್ತಸ್ಥೈರ್ಯ ತಪ್ಪಿತು; 'ನಿಮಗೆ ಬೇ[illegible] ಕೊಳ್ಳಿ, ನನ್ನ ಹಾದಿಗೆ ಬರಬೇಡಿ' ಎಂದು [illegible]

★

ಈ ಸಂಧಾನದಲ್ಲಿ, ಇಟಲಿಗೆ ಜೀವಜೀ[illegible] ಎರಡು ವಿಷಯಗಳನ್ನು ಎಂತು ಇತ್ಯ[illegible]

ತೆಂಬುದನ್ನು ಕೊಂಚ ನೋಡುವಾ. ಮೊದಲನೆಯದು, ಇಟಲಿಯ ಅಬಿಸೀನಿಯನ್ ಸಾಮ್ರಾಜ್ಯಕ್ಕೆ ಮನ್ನಣೆ ಕೊಡುವ ವಿಚಾರ. ಬರಲಿರುವ 'ರಾಷ್ಟ್ರಸಂಘ'ದ ಸಭೆಯಲ್ಲಿ ಅಬಿಸೀನಿಯದ ವಿಚಾರವನ್ನು 'ಸ್ಪಷ್ಟಗೊಳಿಸಲಾಗುವುದು'—'ನಿಯಮಿತಗೊಳಿಸಲಾಗುವದು' (clarified—regularised). ಎಂತಹ ಸುಂದರ-ಧ್ವನಿಪೂರ್ಣ ಶಬ್ದಗಳು! ಅಬಿಸೀನಿಯದ ಮೇಲಿನ ಇಟಲಿಯ ದೊರೆತನವನ್ನು ಈ ಕರಾರುಪತ್ರದಿಂದ ಮನ್ನಿಸಿದಂತೆಯೆ ಇದೆ; ಇಲ್ಲವಾದರೆ ಸಂಧಾನದ ವಿಚಾರದಲ್ಲಿ ಇಟಲಿಯು ತುಟಿಯೆರಡು ಮಾಡುತ್ತಿರಲೆ ಇಲ್ಲ. ರಾಷ್ಟ್ರಸಂಘದಿಂದ ಶಾಶ್ವತಮುದ್ರೆ ಕೊಡಿಸುವ ಹೊಣೆಯನ್ನು ಇಂಗ್ಲಂಡು ಈ ಮೂಲಕ ಹೊತ್ತಂತೆಯೆ ಇದೆ. ಅದೇಕೆ, ಅಬಿಸೀನಿಯದ ಅಭಿಯೋಗಕ್ಕೆ ಇಟಲಿಯು ಮುಂದರಿದಾಗ ರಾಷ್ಟ್ರಸಂಘವು ಹಾಕಿದ ಹಲಕೆಲವು ಪ್ರತಿಬಂಧಗಳನ್ನು (Sanctions) ಸಡಿಲಿಸುವ—ಬಿಟ್ಟುಬಿಡುವ ಕೆಲಸಕ್ಕೂ ಬ್ರಿಟನ್ನೇ ಮೊಟ್ಟಮೊದಲು ಕೈಹಾಕಿತು.... ಈ ಎಲ್ಲಾ ಮಾತುಗಳ ಹಿಂದೆ ಬ್ರಿಟನ್ನು ಒಂದು ಭೂಮಿಕೆಯನ್ನಿಟ್ಟುಕೊಂಡಿದೆ: ಅದೆಂದರೆ ಇಟಲಿಯು ಅಬಿಸೀನಿಯವನ್ನು ಪೂರ್ತಿಯಾಗಿ ಪಾದಾಕ್ರಾಂತಮಾಡಿ ಹಳಮಾತಾಯಿತು; ಇನ್ನು ಇದ್ದುದನ್ನು ಇದ್ದಂತೆ ಹೇಳುವುದು—ವಾಸ್ತವ ಘಟನೆಗೆ ಔಪಚಾರಿಕ ಮಾನ್ಯತೆಯನ್ನು ಕೊಡುವುದು ಮಾತ್ರ ಉಳಿದಿದೆ. ಆದರೆ ಈ ಮಾತಿಗೆ ಸತ್ಯಸ್ಥಿತಿಯ ಆಧಾರವಿಲ್ಲ. ಅಬಿಸೀನಿಯದ ೨/೩ ಪ್ರದೇಶವು—ಪಶ್ಚಿಮೋತ್ತರ ಭೂಭಾಗವೆಲ್ಲ ಹಬಸಿಗಳ ಅಧೀನದಲ್ಲಿಯೆ ಇದೆಯೆಂದು ತೀರ ಇತ್ತೀಚೆಯ ವಿಶ್ವಸನೀಯ ವರ್ತಮಾನ. ಹಬಸಿಗಳ ಪ್ರತೀಕಾರಶಕ್ತಿಯು ಎಂದಿನಂತೆ ದುರ್ದಮನೀಯವಾಗಿಯೆ ಉಳಿದಿದೆಯಿಷ್ಟೆ ಅಲ್ಲ—ಇಟಲಿಗೆ ತನ್ನ ತೋರಿಕೆಯ ವರ್ಚಸ್ವವನ್ನು ಸಾಗಿಸಿಕೊಂಡು ಹೋಗುವುದೂ ಕಷ್ಟದ ಮಾತಾಗಿದೆ. ೨೧ನೆಯ ಫೆಬ್ರುವರಿ ದಿನ 'ಹೌಸ್ ಆಫ್ ಕಾಮನ್ಸ್'ದಲ್ಲಿ ಮೇಜರ್ ಅಟ್ಲೆಯವರು "ಒಂದು ವರ್ಷಕ್ಕೆ ಹಿಂದೆ ಅಬಿಸೀನಿಯವು ಇಟಲಿಗೆ ಎಷ್ಟರ ಮಟ್ಟಿಗೆ ಶರಣಾಗತವಾಗಿತ್ತೋ, ಅದಕ್ಕೂ ಕಡಿಮೆಯಾಗಿಯೆ ಇಂದಿನ ಮಿತಿಗೆ ಇದೆ" ಎಂದು ಹೇಳಿದರು. ಸರ್ ಜಾನ್ ಹ್ಯಾರಿಸ್ಸರು (ಇವರು ರಾಜತಂತ್ರವಿಶಾರದರಲ್ಲ, ಒಬ್ಬ ಮಾನವಸೇವಾನಿರತರು) ಹೇಳುವಂತೆ, ಇಟಲಿಗೆ ಅಬಿಸೀನಿಯದಲ್ಲಿಯ ತನ್ನ ದೊರೆತನ ನಡೆಸಲು ಪ್ರತಿವರ್ಷ ೨ ಕೋಟಿ ಪೌಂಡು ವೆಚ್ಚ ತಗಲುತ್ತಿದೆ!.... ಅಂತೂ ಇನ್ನೂ ಪರಾಜಿತವಾಗದ ಜನಾಂಗದ ಮೇಲೆ ಇಟಲಿಯ ಸಾರ್ವಭೌಮತೆಯನ್ನು ಇಂಗ್ಲಂಡು—ಒಂದು ಕಾಲಕ್ಕೆ ಸ್ವಾತಂತ್ರ್ಯವಾದಿಗಳಿಗೆ ,ಆಸರೆಯ ನೆಲವೆನಿಸಿದ್ದ ಬ್ರಿಟನ್ನು—ಈ ಒಪ್ಪಂದದಿಂದ ಒಪ್ಪಿಕೊಂಡಂತಾಯಿತು. ಹೀಗೆ ಮಾಡುವಾಗ, ಅಬಿಸೀನಿಯದ ಪ್ರಜೆಗಳ—ಹಬಸಿಗಳ ಹಿತರಕ್ಷಣೆಯ ನಿರ್ಬಂಧಗಳನ್ನು ಏರ್ಪಡಿಸಿದಂತೆ ತೋರಲಿಲ್ಲ. ಉದಾರ ಪಕ್ಷದವರಾದ ಸರ್ ಆರ್ಚಿಬಾಲ್ಡ್ ಸಿಂಕ್ಲೇರ್ ಅವರು ಪಾರ್ಲಿಮೆಂಟಿನಲ್ಲಿ ಹೇಳಿದಂತೆ, ಕನಿಷ್ಠಪಕ್ಷಕ್ಕೆ ರಾಷ್ಟ್ರಸಂಘದ ಸಭೆಯಲ್ಲಿ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ಅಬಿಸೀನಿಯದ ಹಿತಸಂಬಂಧಗಳು ಸರಿಯಾಗಿ ಸಂರಕ್ಷಿಸಲ್ಪಟ್ಟವೆಯೆಂದು ಸದಸ್ಯರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಟ್ಟ ಮೇಲೆಯೆ ಈ ಕರಾರನ್ನು ಮಾಡಬಹುದಾಗಿತ್ತು. ಆದರೆ ಆಂತರರಾಷ್ಟ್ರೀಯ ನ್ಯಾಯದೃಷ್ಟಿಗೆ ಇಂದಿನ ವಿಪ್ಲವ ಯುಗದಲ್ಲಿ ಸಂಚಕಾರ ಬಂದಂತೆಯೆ ಇದೆ. ಇಂಗ್ಲಂಡಿಗೆ ತನ್ನ ನಾಡಿನ ಶೇರುಹೋಲ್ಡರರ ತೇವುಗಳ-ಪಾಲುಗಳ ಕಡೆಗೆ ಕಣ್ಣಿದೆಯಲ್ಲದೆ, ಬೇರೆ ಜನಾಂಗಗಳ ಹಕ್ಕು ಹಂಗುಗಳ ಕಡೆಗಿಲ್ಲ.

★

ಇದೇ ಮಾತು ಸ್ಪೇನಿಗೂ ಅನ್ವಯಿಸುತ್ತದೆ. ಕರಾರುಪತ್ರದಲ್ಲಿ, ಇಟಲಿಯು ಸ್ಪೇನಿನಲ್ಲಿಯ ಯುದ್ಧದಾಹಕ್ಕೆ ಪೂರೈಸುತ್ತಿರುವ ಉರುವಲವನ್ನೂ (ಎಂದರೆ ಯುದ್ಧಸಾಮಗ್ರಿಯನ್ನೂ), ಕೈಕೊಡುತ್ತಿರುವ 'ಸ್ವಯಂಸೇವಕರನ್ನೂ' (ಎಂದರೆ ಸೈನಿಕರನ್ನೂ) ಕೂಡಲೆ ಹಿಂದಕ್ಕೆ ಕರಿಸಿಕೊಳ್ಳಬೇಕೆಂಬ ಬಗ್ಗೆ ಬಿಗಿಯಾದ ನಿರ್ಬಂಧಗಳಿದ್ದಂತಿದೆ. ಆದರೆ ಅವುಗಳಲ್ಲಿ ಹುರುಳಿಲ್ಲ. ಈ ಒಪ್ಪಂದದ ಮೇರೆಗೆ, "ಕಂತುಕಂತಿನಲ್ಲಿ ಸ್ವಯಂಸೇವಕರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ಇಂಗ್ಲಂಡಿನ ಯೋಜನೆಯನ್ನು ಇಟಲಿಯು ಒಪ್ಪುತ್ತದೆ; ತಾಟಸ್ಥ್ಯ ಸಮಿತಿಯವರು (Non-Intervention Committee) ಗೊತ್ತುಪಡಿಸಿದ ನಿಮಿಷದಿಂದ ಈ 'ಹಿಂದೆಗೆಯುವ ಕೆಲಸ'ಕ್ಕೆ ಮೊದಲುಮಾಡಲಾಗುವುದು; ಸ್ಪೇನದಲ್ಲಿಯ ಯುದ್ಧ ಮುಗಿಯುವ ಹೊತ್ತಿಗೆ ಈ ಕೆಲಸ ಪೂರ್ತಿಯಾಗಿ ಮುಗಿಯದಿದ್ದರೆ, ಉಳಿದ 'ಸ್ವಯಂಸೇವಕ'ರನ್ನೂ ಯುದ್ಧಸಾಮಗ್ರಿಯನ್ನೂ ಕೂಡಲೆ ಹಿಂದಕ್ಕೆ ತೆಗೆದುಕೊಳ್ಳಲಾಗುವುದು."

'ಯುದ್ಧ ಮುಗಿಯುವ ಹೊತ್ತಿಗೆ' ಅಂತೆ! ಈಗಲೂ 'ಕಂತುಕಂತಿ'ನ ಕಂತೆ! ಸ್ಪ್ಯಾನಿಷ್ ಯುದ್ಧವು ಮುಗಿದಂತೆಯೆ ಇದೆ. ಸ್ಪೇನದಲ್ಲಿ ಮುಸೊಲಿನಿ ಸಾಧಿಸಬೇಕೆಂದುದು ಸಾಧ್ಯವಾದಂತೆಯೆ ಇದೆ. ಫ್ರಾಂಕೋನ ಸೈನ್ಯ ಈಗಾಗಲೆ

ಸಮುದ್ರತೀರವನ್ನು ಮುಟ್ಟದೆ; ಬಂಡುಗಾರರ ನಾಯಕನು ತನ್ನ ಜೈತ್ರಯಾತ್ರೆಯನ್ನು ಕೊನೆಗಾಣಿಸಿದಂತೆಯೆ ಇದೆ. 'ಕಂತುಕಂತು 'ಗಳಲ್ಲಿ ಇಟಲಿಯ ಸೈನಿಕರು ಹಿಂದೆಗೆಯು ವುದರೊಳಗಾಗಿ ಸ್ಪೇನದ ಪ್ರಜಾಪ್ರಭುತ್ವವು ಧೂಳಿಮುಕ್ಕಿ ಹೇಳಹೆಸರಿಲ್ಲದಂತಾಗುವುದು ಖಂಡಿತವೆಂದೇ ತೋರುತ್ತಿದೆ. ತಾಟಸ್ಥ್ಯಸಮಿತಿಯ ಇದು ವರೆಗಿನ 'ಕಂತುಕಂತಿ 'ನ ಸಭೆ-ಸಮ್ಮೇಲನಗಳನ್ನು ನೋಡಿದರೆ, ಅದು ಕೂಡುವುದೇ ಅಪರೂಪ, ಕೂಡಿದರೂ ಕೂಡದಿದ್ದಂತೆಯೆ ಎಂದು ಹೇಳ ಬಹುದಾಗಿದೆ. ಯುದ್ಧ ಮುಗಿದ ಮೇಲೆ, ಫ್ರಾಂಕೋನಿಗೆ ಜಯ ಸಿಕ್ಕಮೇಲೆ, ಇಟಲಿಯ 'ಸ್ವಯಂಸೇವಕರು' ಅಲ್ಲಿ ನಿಲ್ಲುವುದಾದರೂ ಏಕೆ? 'ಸ್ಪೇನದ ಪ್ರಶ್ನೆ ಇತ್ಯರ್ಥವಾಗುವ ವರೆಗೂ ಆಂಗ್ಲೊ-ಇಟಾಲಿಯನ್ ಸಂಧಾನವು ಜಾರಿಯಲ್ಲಿ ಬರುವುದೇ ಇಲ್ಲ'ವೆಂದು ಕರಾರುಪತ್ರದಲ್ಲಿ ಕಾಣಿಸಿದೆ. ಚಂದ ಮಾತುಗಳಲ್ಲಿ ಮೋಸದ ಮೊಟ್ಟೆಯನ್ನು ಮುಚ್ಚಿಡುವ ರಾಜತಂತ್ರಜ್ಞರ ಕೈಚಳಕಕ್ಕೆ ಈ ಕರಾರುಪತ್ರವು ಒಂದು ಅತ್ಯುತ್ತಮ ಉದಾಹರಣೆಯಾಗಿದೆಯೆಂದರೆ ತಪ್ಪಾಗದು.

ಈ ಒಪ್ಪಂದದಲ್ಲಿ ಬ್ರಿಟನ್ನಿಗೆ ಹಿತಕಾರಕವೆನಿಸುವ ಇನ್ನೊಂದು ಅಂಶವನ್ನು ಸ್ಪಷ್ಟಗೊಳಿಸಲಾಗಿದೆ: ಅದೆಂದರೆ, ಸ್ಪೇನದಲ್ಲಿ ಇಟಲಿಗೆ ಸಾಮ್ರಾಜ್ಯದ, ಆರ್ಥಿಕ ಭದ್ರಸ್ಥಾನದ ಆಸೆಯಿಲ್ಲವಂತೆ; ಬ್ಯಾಲಿಯಾರಿಕ್ ದ್ವೀಪಗಳು, ಮೊರೊಕ್ಕೋ ಮೊದಲಾದ ಕಡೆ ತನ್ನ ಗೃಧ್ರದೃಷ್ಟಿ ಇಲ್ಲವೇ ಇಲ್ಲವಂತೆ. ಇದರಲ್ಲಿ ಹುರುಳಿಲ್ಲ. ಇಟಲಿ-ಜರ್ಮನಿಗಳು ಪ್ರತ್ಯಕ್ಷವಾಗಿ ಈವರೆಗೆ ಮಾಡುತ್ತಿರುವುದನ್ನು ಇನ್ನು ಮೇಲೆ ಫ್ರಾಂಕೋನಿಂದ ಮಾಡಿಸುವುದು ಖಂಡಿತವಾಗಿ ತೋರುತ್ತಿದೆ. Economist ಪತ್ರಿಕೆಯು ಹೇಳುವಂತೆ, ಬ್ಯಾಲಿಯಾರಿಕ್ ದ್ವೀಪಗಳು ಫ್ರಾಂಕೋನ ಕೈಯಲ್ಲಿ ಹೋಗುವುದರಿಂದ ಫ್ರಾನ್ಸ್ ಮತ್ತು ಫ್ರೆಂಚರ ಅಧೀನದಲ್ಲಿರುವ ಉತ್ತರ ಆಫ್ರಿಕಗಳ ನಡುವಿನ ಸಮುದ್ರಮಾರ್ಗವು ಗಂಡಾಂತರಕ್ಕೊಳಪಡುವುದು; ರ್‍ಹೈನ್‌ನದಿ-ಆಲ್ಪ್ಸ ಪರ್ವತಗಳ ಕಡೆಗೆ ಈಗಾಗಲೆ ಸಂಕಟಕ್ಕೀಡಾದ ಫ್ರಾನ್ಸಿನ ಗಡಿನಾಡು ಸ್ಪೇನಿನ ಕಡೆಗೆ ಇನ್ನಷ್ಟು ಅಸುರಕ್ಷಿತವಾಗುವುದು; ಮೊರೊಕ್ಕೋ-ಅಂಡಲೂಸಿಯಗಳು ಫ್ರಾಂಕೋನ ಆಧಿಪತ್ಯಕ್ಕೆ ಹೋಗುವುದರಿಂದ ಭೂಮಧ್ಯ ಸಮುದ್ರದ ಪಶ್ಚಿಮದ್ವಾರವು ಜರ್ಮನಿ-ಇಟಲಿಗಳ ಕೈಗೆ ಹೋದಂತಾಗುವುದು.... ಈ ಸಂಧಾನದಿಂದ ಸ್ಪೇನದ ಸುತ್ತಮುತ್ತಲಿನ ಬ್ರಿಟಿಷ್ ಹಿತಸಂಬಂಧಗಳು ನಿರಾತಂಕವಾಗಿ ಉಳಿಯುವವೆಂದು ಚೇಂಬರ್ಲೇನರು ತಿಳಿದಿದ್ದರೆ, ಅದೊಂದು ಭ್ರಮೆ; ಹುಚ್ಚು ಕನಸು. ಸ್ಪೇನದಿಂದ ಮುಸೊಲ್ಲಿನಿ ಹಿಂದೆಗೆಯಬಹುದು; ಆದರೆ ಅವರು ತಮ್ಮ ಪ್ರತಿನಿಧಿಯನ್ನು-ತಮ್ಮ ನಂಟ ಫ್ರಾಂಕೋನನ್ನು ಬಿಟ್ಟು ಹೋಗುತ್ತಿದ್ದಾರೆ.

ಇಟಲಿ-ಜರ್ಮನಿಗಳಿಗೆ ಸ್ಪೇನದಲ್ಲಿ ಸಾಮ್ರಾಜ್ಯ ದೊರೆತನ ಬೇಕಿಲ್ಲ. ಅವರಿಗೇನು ಬೇಕಾಗಿದೆ? ... ರಾಧ್ಯ (ಕಾಂರ್ಝುರ್ವೇಟಿವ್) ಪಕ್ಷದವರಾದ ಹ್ಯಾರಲ್ಡ್ ನಿಕಲ್ಸನ್ನರು ಏನನ್ನುತ್ತಾರೆ: "ಜರ್ಮನಿ-ಇಟಲಿಗಳಿಗೆ ಸ್ಪೇನದ ನಿಯಂತ್ರಣ ಬೇಕಾಗಿಲ್ಲ. ಮುಖ್ಯಸಚಿವರಾದ ಚೇಂಬರ್ಲೇನರ ಮಾತಿಗೆ ನಾನು ಒಪ್ಪುತ್ತೇನೆ. ಅವರಿಗೆ ಬೇಕಾದುದು ಬೇರೆ. ಜರ್ಮನಿಗೆ ಉತ್ತರ ಸ್ಪೇನದ ... ಸಂಪತ್ತು ಬೇಕಾಗಿದೆ; ಇಟಲಿಗೆ ಜಿಬ್ರಾಲ್ಟರ್ ... ಕಡೆಯ ನಿಯಂತ್ರಣ ಬೇಕಾಗಿದೆ. ಸ್ಪೇನದಲ್ಲಿ ... ಆಡಳಿತ ಸ್ಥಾಪಿಸುವುದು ಇಬ್ಬರಿಗೂ ಬೇಕಾಗಿದೆ ... ಯಾಂತ್ರಿಕ ತಜ್ಞರು (Technicians), ... ಗಳಲ್ಲಿ ಕೆಲವು ಶಸ್ತ್ರಕೇಂದ್ರಗಳು (gun-emp...) ಇವಿಷ್ಟೆ ಅವರ ಬಯಕೆಗಳು. ಈ ಸ್ಥಳಗಳ ... ಜನತೆಯೊಡನೆ ಅವರ ಸಂಪರ್ಕ ಬರುತ್ತಿ... ನೌಕಾದಲದೊಡನೆ...."

ಮುಸೊಲಿನಿ ಹೊರಗಡೆ ತುಂಬಾ ಆರ್ಭಟಿಸುತ್ತಿ ದ್ದರೂ, ಒಳಗೆ ಹಣ್ಣಿಗೆ ಬಂದಿದ್ದನೆಂಬುದಕ್ಕೆ ... ಚರ್ಚಿಲ್ಲರು ಹೇಳುವಂತೆ, ಇಟಾಲಿಯನ್ ... ಗೆಟ್ಟಿತ್ತು; ಸರಕಾರದ ಸರಬರಾಯಿಗಾಗಿ ... ಸೂರೆಗೊಂಡಿತ್ತು; ಕರಭಾರವು ಮಿತಿಮೀರಿತ್ತು ... ವ್ಯವಸ್ಥೆ ಹಾಳಾಗಿತ್ತು; 'ವಿನಿಮಯ'ದ ... ಬೇಕಾದ ಕಚ್ಚಾಮಾಲು ರವಷ್ಟು ಬರುತ್ತಿ... ಸೀನಿಯದ ಹೆಣ ಹೊತ್ತುಹೊತ್ತು ... ಲಾಗಿತ್ತು; ಲಿಬಿಯ-ಸ್ಪೇನ ಮೊದಲಾದ ... ೪೦೦,೦೦೦ ಸೈನಿಕರನ್ನಾದರೂ ಪೋಷಿಸ... ನೀಗಲಾರದುದಾಗಿತ್ತು; ಇನ್ನು ಸ್ವಲ್ಪ ... ಲಿನಿಯ ಸಾಮ್ರಾಜ್ಯದಾಹವು ಸಂಪೂರ್ಣ...

ಕೆಟ್ಟ ಸಂದುಕಟ್ಟಿನಲ್ಲಿ, ಇಟಲಿಯ ... ಇಂಗ್ಲಂಡು ಬೆನ್ನಾಸರಕ್ಕೆ ಬಂದಿತು. ... ದುದೇನು? ತಾತ್ಪೂರ್ತಿಕ ನಿಶ್ಚಿಂತೆ. ... ಕಲ್' ಪತ್ರಿಕೆಯು ಹೇಳುವಂತೆ, "... ಒಪ್ಪಂದವನ್ನೂ ಇನ್ನೊಂದು ಕಿಸೆಯಲ್ಲಿ ...

ಯನ್ ಸ್ನೇಹಸಂಧಾನವನ್ನೂ ಇಟ್ಟುಕೊಂಡು, ಮುಸೊಲಿನಿಯು, ತನಗಿಷ್ಟ ಬಂದಲ್ಲಿ, ಚೇಂಬರ್ಲೇನ-ಹಿಟ್ಲರರ ನಡುವೆ ಜಗಳ ಹಚ್ಚಬಹುದು; ಇವರಿಬ್ಬರ ನ್ಯಾಯದಲ್ಲಿ ತನಗೆ ಆಯವನ್ನು ಮಾಡಿಕೊಳ್ಳಬಹುದು. ಇದು ಸಂಪೂರ್ಣ ಶಾಂತಿಯ ಸಂಧಾನವಲ್ಲ; ತಾತ್ಪೂರ್ತಿಕ ಯುದ್ಧವಿರಾಮ ಕಾಲ (armistice)."

ಸಂಧಾನದಲ್ಲಿ ಇನ್ನು ಕೆಲವು ಅಂಶಗಳಿವೆ. ಒಟ್ಟಿನಲ್ಲಿ, ಭೂಮಧ್ಯ ಸಮುದ್ರ—ಕೆಂಪು ಸಮುದ್ರಗಳಲ್ಲಿ ಇಟಲಿಗೆ ಇಂಗ್ಲಂಡಿನೊಡನೆ ಸಮಾನತೆಯ ಸ್ಥಾನವೂ ಇಟಲಿಗೆ ಅತ್ಯಗತ್ಯವಾಗಿ ಬೇಕಾದ ಆರ್ಥಿಕ ಸಹಾಯವೂ ಸಿಕ್ಕಿವೆ.

ಅಸಹಾಯ ಅಬಿಸೀನಿಯವನ್ನು ಇಟಲಿಯ ಕಟುಕನಿಗೆ ಭಕ್ಷ್ಯವಾಗಿ ಕೊಟ್ಟು, ಸ್ಪೇನದ ಪ್ರಜಾಪ್ರಭುತ್ವದ ಬೂದಿಯ ಮೇಲೆ ಫ್ರಾಂಕೋನ ಸಿಂಹಾಸನವನ್ನು ಸ್ಥಿರಪಡಿಸಿಟ್ಟು, ಈ ಅವಸರದ ಸಂಧಾನವು ಎರಡು ಸಾಮ್ರಾಜ್ಯವಾದಿ ರಾಷ್ಟ್ರಗಳನ್ನು ಗೆಳೆಯರನ್ನಾಗಿ ಮಾಡಿದೆ. ಇದೊಂದು ದಲಿತ ರಾಷ್ಟ್ರಗಳಿಗೆ ಭಯಸೂಚನೆ. ಹಿಂದುಸ್ತಾನವು ಸಕಾಲದಲ್ಲಿ ಎಚ್ಚರಿಯಲಿ !

ಪರರಾಷ್ಟ್ರ ರಾಜತಂತ್ರಕ್ಕೆ ಸಂಬಂಧಿಸಿದ ಈ ಲೇಖನವು ಶ್ರೀ 'ನಾಗರಿಕ' ರಿಂದ ಮೇ ಸಂಚಿಕೆಗೆಂದೇ ಕಳಿಸಲ್ಪಟ್ಟಿತ್ತು. ತಡವಾಗಿ ಬಂದುದರಿಂದ ಹೋದ ತಿಂಗಳು ಹಾಕಲಾಗಲಿಲ್ಲ. ಆದರೆ ಈ ಲೇಖನಕ್ಕೆ ಸಂಬಂಧಿಸಿದ ಪರರಾಷ್ಟ್ರೀಯ ಸನ್ನಿವೇಶಗಳು ಈಗಲೂ ವಿಶೇಷ ವ್ಯತ್ಯಾಸವಾಗಿಲ್ಲವಾದುದರಿಂದ ಈ ತಿಂಗಳು ಅದನ್ನು ಮುದ್ರಿಸಿದ್ದೇವೆ. ಸಂ. ಜ. ಕ.

ಆರೋಗ್ಯಬಿಂದು

ಜಲಶುದ್ಧಿ

ಸನ್ನಿಪಾತಜ್ವರವು (ಟಾಯ್‌ಫಾಯ್ಡ್) ಸಾಂಕ್ರಾಮಿಕವಾಗಿದೆ. ರೋಗಿಯ ಮಲಮೂತ್ರ ಮುಂತಾದ ವಿಸರ್ಜನಗಳಲ್ಲಿಯೂ ಸನ್ನಿಪಾತದ ಕ್ರಿಮಿಗಳಿರುತ್ತವೆ. ಆ ಕ್ರಿಮಿಗಳು ಏನೊಂದು ಕಾರಣದಿಂದ ಕುಡಿಯುವ ನೀರಲ್ಲಿ ಬೆರೆತವೆಂದರೆ ಆ ನೀರು ದುಷ್ಟವಾಗುವದು. ಆ ನೀರನ್ನು ಕುಡಿದವರಿಗೂ ಸನ್ನಿಪಾತವು ಅಂಟಕೊಳ್ಳುವದು. ಆದ್ದರಿಂದ ಸನ್ನಿಪಾತದ ಪಿಡುಗಿದ್ದಾಗ ನೀರನ್ನು ಶುದ್ಧೀಕರಿಸಿ ಕುಡಿಯಬೇಕು. ಅದಕ್ಕಾಗಿ ಗಾಯ ನೋವುಗಳಿಗೆ ಉಪಯೋಗಿಸಲ್ಪಡುವ ಟಿಂಕ್ಚರ್ ಆಯೊಡಿನ್ ಉಪಯುಕ್ತವಾಗುವದೆಂದು ಕಂಡುಬಂದಿದೆ. ೫೦ ತೊಲೆ ನೀರಿಗೆ ಒಂದು ಹನಿ ಆಯೊಡಿನ್ ಹಾಕಿಬಿಟ್ಟರೆ ನೀರು ಶುದ್ಧವಾಗಿ ಪಾನಯೋಗ್ಯವಾಗುವದು.

* * *

ತಂಬಾಕಿನಿಂದ ಕಿವುಡು

ಕ್ವಿನೀನು ಉಪಯೋಗಿಸುವುದರಿಂದ ಕಿವಿಯ ನರಗಳ ಮೇಲೆ ದುಷ್ಪರಿಣಾಮವಾಗುವುದೆಂಬದು ಈಗ ಎಲ್ಲರಿಗೂ ತಿಳಿದುಬಂದಿದೆ. ಅದೇ ಪರಿಣಾಮವು ಇನ್ನೂ ಕೆಲವು ವಸ್ತುಗಳ ಸೇವನದಿಂದ ಉಪಯೋಗದಿಂದ ಉಂಟಾಗುವುದೆಂದು ಕಂಡುಬಂದಿದೆ. ಉದಾ: ತಲೆಶೂಲೆಗಾಗಿ ನುಂಗುವ ಆ್ಯಸ್ಪಿರಿನ್, ಕೂದಲಿಗೆ ಉಪಯೋಗಿಸುವ ಬಂಣ ಇತ್ಯಾದಿ. ಆದರೆ ತಂಬಾಕಿನಿಂದ ಅವೆಲ್ಲವುಗಳಿಗಿಂತ ಹೆಚ್ಚು ದುಷ್ಪರಿಣಾಮವಾಗುವುದೆಂದು ಡಾ. ಟೇಲರರು ಪ್ರಯೋಗದಿಂದ ಸಿದ್ಧಪಡಿಸಿದ್ದಾರೆ. ತಂಬಾಕಿನ ಹೊಗೆಯು ಗಂಟಲಿಗಿಳಿಯುವಾಗ ಎಡಬಲದ ಕಿವಿಯ ನರಗಳನ್ನು ತನ್ನ ವಿಷದಿಂದ ಆವರಿಸುತ್ತದೆ. ಆದುದರಿಂದ ಮೊದಲೆ ಕಿವಿಯ ರೋಗವಿದ್ದವರಂತೂ ಖಂಡಿತವಾಗಿ ತಂಬಾಕು ಸೇದಬಾರದು.

* * *

ಹಾಸಿಗೆ ಹುಂಣು (Bed Sores)

ರೋಗಿಯು ಬಹುದಿನ ಹಾಸಿಗೆ ಹಿಡಿದರೆ ಕಸುವು ಕಡಿಮೆಯಾಗುತ್ತದೆ. ಆಗ ರೋಗಿಯು ಒಂದೇ ಮಗ್ಗಲು ಮಲಗುವ ಸಂಭವ ಹೆಚ್ಚು. ಅದರಿಂದ ಆ… ರಕ್ತನಲಿಕೆಗಳು ಸಂಕುಚಿತವಾಗಿ ಅಲ್ಲಿಯ… ದೇಹದ ಮಿಕ್ಕ ಭಾಗಕ್ಕೆ ರಕ್ತವು ಕಡಿಮೆ… ಣೆಯೂ ಕಡಿಮೆಯಾಗುತ್ತದೆ. ರಕ್ತಸಂಕುಚಿತ… ಗಳಲ್ಲಿ ಬಾವುಗಳೆದ್ದು ಹುಂಣಾಗುತ್ತವೆ. … ಮುಖ್ಯ ರೋಗವು ಗುಣವಾದ ಮೇಲೆ ಈ ಹುಂ… ರೋಗಿಗಳು ಸಾಯುವುದುಂಟು. ಆದುದ… ಗಳನ್ನು ದಿನಕ್ಕೆ ಮೂರು ನಾಲ್ಕು ಸಲವಾದ… ಬದಲಾಯಿಸಬೇಕು. ಮತ್ತು ಭಾರಬಿದ್ದ ಭಾಗ… ತಿಕ್ಕಬೇಕು.

* *

ಮೈಲೀಬೇನೆ

ಮೈಲಿ (ಸಿಡುಬು), ಗಣಜಿಲೆ (ಸಿತಾಳೆ) ಮುಂತಾದ ಬೇನೆಗಳಲ್ಲಿ ಒಳಗಿನ ಗುಳ್ಳೆಗಳು… ಹೊರಗೆದ್ದು ಬರಬೇಕೆಂದು ಅನೇಕ ತಂಪು ಪ… ರೋಗಿಗೆ ತಿನ್ನಿಸಬೇಕೆಂಬ ರೂಢ ಕಲ್ಪನೆ… ಹುರುಳಿಲ್ಲ. ಅನೇಕ ಸಲ ತಂಪಿಗೆಂದು ಕೊ… ಗಳಿಂದ ರೋಗಿಯ ಹೊಟ್ಟೆ ಕೆಟ್ಟು ಸತ್ತ… ಗಳಿವೆ. ತಂಪು ಪದಾರ್ಥ ತಿನ್ನಿಸುವದಕ್ಕಿಂತ… ಕೂಡಲೆ ದಿನಕ್ಕೊಂದು ಸರ್ತಿಯಂತೆ ಮ… ಸ್ನಾನ (Steam Bath) ಮಾಡಿಸುವದು… ರಿಂದ ರಕ್ತಪರಿಚಲನದ ಮಾರ್ಗದಲ್ಲಿಯ ಕೊ… ಗುಳ್ಳೆಗಳು ತೊಂದರೆಯಿಲ್ಲದೆ ಬೀಳುವವು. … ತೆಗೆ ಬರುವದರಿಂದ ತಾಪವೂ ವಿಶೇಷವಾಗು…

* *

ಅವಲಕ್ಕಿಯು ಕೆಟ್ಟ ಆಹಾರ…

ಸಾಮಾನ್ಯವಾಗಿ ಅವಲಕ್ಕಿಯು … ಆಹಾರವೆಂದು ನಮ್ಮನಿಮ್ಮ ತಿಳುವಳಿಕೆಯಲ್ಲಿ… ಅನ್ನಕ್ಕಿಂತ ಅವಲಕ್ಕಿಯು ಹೆಚ್ಚು ಪೌಷ್ಟಿಕ… ವಾಗಿದೆ. ಅವಲಕ್ಕಿಯಲ್ಲಿ ಅಕ್ಕಿಗಿಂತ ಹೆ… ಆಹಾರ ಸತ್ವವಿರುತ್ತದೆ. ಅಲ್ಲದೆ ಕಾಳಿನ… ಸೂಕ್ಷ್ಮವಾದ ಕವಚವು ಅವಲಕ್ಕಿಯಲ್ಲಿ… ಕವಚದಲ್ಲಿ ಕೆಲವು ಉಪಯುಕ್ತ ಖನಿಜಗಳು… ದರಿಂದ ಅವಲಕ್ಕಿಯು ಬಡವರ 'ಟಾನಿಕ್'… ಏನೂ ಅಡ್ಡಿಯಿಲ್ಲ.

* *

ಓಜೋಗ್ರಂಥಿಗಳೂ ಲಿಂಗಭೇದವೂ

ಲೇ:—ಡಾ. ಗೋಪಾಲಕೃಷ್ಣರಾಯರು, ಸಂಪಾದಕ 'ಕಲಿಯುಗ', ಧಾರವಾಡ

★

ಎಷ್ಟೆಂದರೂ ಗಂಡು ಗಂಡೇ; ಹೆಣ್ಣು ಹೆಣ್ಣೇ—ಎಂಬ ಮಾತು ಬುನಾದಿಯಿಂದ ಬಂದುದು. ಆದರೆ ವಿಜ್ಞಾನವು ಈ ಮಾತಿಗಿಂದು ಮಣ್ಣು ಕೊಡುತ್ತಿದೆ. ಓಜೋಗ್ರಂಥಿಶಾಸ್ತ್ರದಲ್ಲಿ ಅನೂಹ್ಯಶೋಧಗಳಾಗುತ್ತಿವೆ. ಪೀನಿಯಲ್ ಗ್ರಂಥಿಯು ದಿವ್ಯ ದೃಷ್ಟಿಯನ್ನು ಕೊಡುತ್ತದೆ. ಥ್ಯಾರಾಯಿಡ್‌ದಿಂದ ಮನೋಬಲ ಬೆಳೆಯುತ್ತದೆ. ಗ್ರಂಥಿಸತ್ವಗಳ ಬಲದಿಂದ ಗಂಡಸು ಕೂಡ ಮಕ್ಕಳಿಗೆ ಮೊಲೆಹಾಲು ಕೊಡಬಹುದು! ಮುದುಕರು ತರುಣರಾಗಬಹುದು. ಸಮಾಜದ .. .. ನೀತಿ ಧರ್ಮಗಳ ರೂಪರೇಷೆಗಳು ಬದಲಾಗಬಹುದು. .. ..

★

ಒಬ್ಬ ಗಂಡಸನನ್ನೂ ಒಬ್ಬ ಹೆಂಗಸನ್ನೂ ಬೇರೆ ಬೇರೆಯಾಗಿ ಮುಸುಕು ಹಾಕಿ ನಮ್ಮೆದುರಿನಲ್ಲಿ ನಿಲ್ಲಿಸಿ ಕೆಲವು ಹೆಜ್ಜೆಗಳನ್ನು ನಡೆಸಿದರೆ ಇಲ್ಲವೆ ಕೆಲವು ಮಾತುಗಳನ್ನು ಆಡಿಸಿದರೆ ಅವರ ಮುಖವನ್ನು ನೋಡದೆಯೆ ಅವರಲ್ಲಿ ಗಂಡಸು ಯಾರು, ಹೆಂಗಸು ಯಾರು ಎಂಬುದನ್ನು ನಾವು ಹೇಳಬಹುದು. ಗಂಡಸಿನ ವೇಷ ಹಾಕಿದ ಸ್ತ್ರೀಯು ಎಷ್ಟೇ ಮರೆಮಾಚಿದರೂ ಅವಳ ಸ್ತ್ರೀತ್ವವು ಸೂಕ್ಷ್ಮದೃಷ್ಟಿಗೆ ಒಡೆದು ಕಾಣುವದು. ಹೆಣ್ಣು ವೇಷ ತೊಟ್ಟ ಗಂಡಸು ಎಷ್ಟೇ ಕೋಮಲತೆಯಿಂದ ನಟಿಸಿದರೂ ಪುರುಷತ್ವವು ಪೂರ್ಣವಾಗಿ ಅದೃಶ್ಯವಾಗಲಾರದು. ಏಕೆಂದರೆ ಸ್ತ್ರೀತ್ವ-ಪುರುಷತ್ವಗಳಲ್ಲಿ ಅಂತಹ ಅದಮ್ಯವಾದ ವೈಶಿಷ್ಟ್ಯಗಳಿವೆ. ಎಷ್ಟೆಂದರೂ ಹೆಣ್ಣು ಹೆಣ್ಣೇ; ಗಂಡು ಗಂಡೇ.




೪೩ ವರ್ಷದ ಹೆಂಗಸಿಗೆ ಮೀಸೆ ಬರುತ್ತಿವೆ.

ಆದರೆ ಪ್ರಕೃತಿಯು ಇಟ್ಟಂತೆಯೇ ಇರುವದು ಮನುಷ್ಯನ ಸ್ವಭಾವವಲ್ಲ. ಅವನ ಕಲ್ಪನೆಯು ಸೃಷ್ಟಿಕರ್ತನ ಪದವಿಗೇರಬೇಕೆನ್ನುವದು. ಹೆಣ್ಣು, ಗಂಡೇಕಾಗಬಾರದು? ಗಂಡು, ಹೆಣ್ಣೇಕಾಗಬಾರದು? ಎಂಬುದು ಅವನ ಕುತೂಹಲ. ಸರಿ ಆ ಕುತೂಹಲವೇ ಹೊಸ ಸಂಶೋಧನೆಗಳ ಉಗಮ. ಪ್ರಾಣಿಗಳಲ್ಲಿ ಇಂತಹ ಅದಮ್ಯವಾದ ಗಂಡುತನ-ಹೆಣ್ಣುತನಗಳ ಲಕ್ಷಣಗಳು ತೋರುವುದಕ್ಕೆ ಏನು ಕಾರಣ? ಎಂಬ ಕುತೂಹಲವನ್ನು ತೃಪ್ತಿಪಡಿಸಲಿಕ್ಕೆಂದು ವಿಜ್ಞಾನಿಗಳು ಅವಿರತವಾಗಿ ಅಸಂಖ್ಯ ಶೋಧ-ಪ್ರಯೋಗಗಳನ್ನು ಮಾಡಿದರು. ಅವುಗಳ ಪರಿಣಾಮವಾಗಿ ಅನೇಕ ಸಿದ್ಧಾಂತಗಳನ್ನು ಕಟ್ಟಿದರು.

ಕೆಲವರು ನರತಂತುಗಳ ರಚನೆಯ ವೈವಿಧ್ಯವೇ ಸ್ತ್ರೀತ್ವ-ಪುರುಷತ್ವಗಳಿಗೆ ಕಾರಣವೆಂದರು. ಬೇರೆ ಕೆಲವರು ಜೀವರಸ (Protoplasm)ದಲ್ಲಿಯ ಜ್ಯೋತಿರ್ವರ್ಣಾಣು (Chromosome)ಗಳ ಪ್ರಮಾಣ ವ್ಯತ್ಯಾಸವೇ ಕಾರಣವೆಂದರು. ಇನ್ನು ಕೆಲವರು ರಕ್ತಕೀಟ (Corpuscles)ಗಳಲ್ಲಿಯ ಚೂರ್ಣಕ್ಷಾರ (Calcium)ದ ಪರಿಮಾಣ ವ್ಯತ್ಯಾಸವೇ ಕಾರಣವೆಂದರು. ಕೊನೆಗೀಗ ಓಜಃಸ್ರಾವವೆ (Hormones) ಸ್ತ್ರೀತ್ವ-ಪುರುಷತ್ವಗಳ ಮೂಲದಲ್ಲಿದೆ ಎಂದು ವಿಜ್ಞಾನಿಗಳೆಲ್ಲ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದಾರೆ. ಆ ಶುಕ್ರಗಳೂ ಅವನ್ನು ಸ್ರವಿಸುವ ಓಜೋಗ್ರಂಥಿಗಳೂ ನಮ್ಮಿಂದ್ಮ ಬರಹದ ವಿಷಯವಾಗಿವೆ.

ಲಾಲಾಗ್ರಂಥಿ, ಜಠರ, ಯಕೃತ್ ಮುಂತಾದ ಅಂಗಗಳು ಪ್ರತ್ಯಕ್ಷವಾಗಿ ಕೆಲವು ರಸಗಳನ್ನು ಜಿನುಗಿಸಿ ಶರೀರಕ್ರಿಯೆಗಳಿಗೆ ಸಹಾಯಕವಾಗುತ್ತಿರುವಂತೆ ಥಾರಾಯಿಡ್, ಪಿಚುಯಿಟರಿ ಮುಂತಾದವುಗಳು ಕಣ್ಣಿಗೆ ಕಾಣುವ ಯಾವ ವಿಧದ ರಸವನ್ನೂ ಜಿನುಗಿಸುವದಿಲ್ಲ-

ಆದರೂ ಅವುಗಳಿಗೇನಾದರೂ ರೋಗ ತಗಲಿದರೆ ದೇಹದ ಅನೇಕ ಕ್ರಿಯೆಗಳಲ್ಲಿ ಅನಿಷ್ಟವಾಗುತ್ತಿರುವುದು ಮಾತ್ರ ಕಂಡುಬರುತ್ತದೆ. ಅವು ನಿರೋಗಿಯಾಗಿ ಪುಷ್ಟವಾಗಿದ್ದರೆ ದೇಹಕ್ರಿಯೆಗಳೂ ಸುಗಮವಾಗಿ ಸಾಗುತ್ತವೆ. ಆದುದ



೧೧ ವರ್ಷದ ಹುಡುಗ ಪಿಚುಯಿಟರಿಯ ಅಕ್ರಮದಿಂದ ಮಿತಿಮೀರಿ ಬೆಳೆದಿದ್ದಾನೆ.

ರಿಂದ ಅವುಗಳು ಅತಿಸೂಕ್ಷ್ಮವಾದ ದ್ರವ್ಯಗಳನ್ನು ಒಳಗೊಳಗೇ ಸ್ರವಿಸಿ ರಕ್ತಪ್ರವಾಹದಲ್ಲಿ ಹರಿಬಿಟ್ಟು ದೇಹಾಭ್ಯಂತರಕ್ಕೂ ಪೋಷಣೆಯನ್ನು ಕೊಡುತ್ತಿರಬೇಕು, ಎಂದು ವಿಜ್ಞಾನಿಗಳು ತರ್ಕಿಸಿದರು. ಆ ತರ್ಕವನ್ನು ಆಧರಿಸಿಯೇ ಆ ಗ್ರಂಥಿಗಳಿಗೆ 'ಎಂಡೊಕ್ರೀನ್ಸ್' ಅರ್ಥಾತ್ ಅಂತಃಸ್ರಾವಿಗಳೆಂದು ಹೆಸರಿಟ್ಟರು.

ಇಂತಹ ಸೂಕ್ಷ್ಮ ಮತ್ತು ಶಕ್ತಿಯುಕ್ತ ದ್ರವ್ಯಗಳ ಕಲ್ಪನೆಯು ಪಾಶ್ಚಾತ್ಯ ವೈದ್ಯರಿಗೆ ೩೦೦ ವರ್ಷಗಳ ಹಿಂದೆಯೇ ಇತ್ತೆಂದು ಡಾರ್ವಿನ್ ವೆಕ್ಸ್‌ಲರನು ಅನ್ನುತ್ತಾನೆ. ಆದರೆ ಆಯುರ್ವೇದದ ಶಾರೀರ ಶಾಸ್ತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಸಾವಿರಾರು ವರ್ಷಗಳ ಪೂರ್ವದಲ್ಲಿಯೆ ಭಾರತೀಯರು ಅದನ್ನು ಬಲ್ಲವರಾಗಿದ್ದರೆಂದು ಸ್ಪಷ್ಟವಾಗಿ ಅನಿಸದಿರದು.

ಆಯುರ್ವೇದದಲ್ಲಿ ಶುಕ್ರವೆಂದರೆ ಬರಿ ... ತ್ತಿಗೆ ಕಾರಣವಾದ ವೀರ್ಯವಲ್ಲ. ಶುಕ್ರವೆಂ... ಸರ್ವಾಂಗಗಳಿಗೂ ಉತ್ತೇಜನ ಪೋಷಣಗಳನ್ನು ಕೊಟದ್ರವ್ಯವಾಗಿದೆ. ಅದು ಬರಿ ವೀರ್ಯ... ಅಲ್ಲ, ದೇಹದ ಮೂಲೆ ಮೂಲೆಗಳಲ್ಲಿಯೂ ... ಶುಕ್ರಗಳು ದೇಹ ಮನಸ್ಸುಗಳಲ್ಲಿ ಓಜಸ್ಸನ್ನು ... ತ್ತವೆ. ಆದುದರಿಂದಲೇ ಶುಕ್ರಗಳನ್ನು ಜನ... ಗಳಿಗೆ ನಾವು ಓಜೋಗ್ರಂಥಿಯೆನ್ನುವದು. ... ನಾಧಾರ, 'ಯನ್ನಾಶೀ ನಿಯತಂ ನಾಶಃ ಯ... ತಿಷ್ಠತಿ' ಅಂದರೆ ಯಾವುದು ನಾಶವಾದರೆ ... ನಿಶ್ಚಿತ; ಯಾವುದು ಸ್ಥಿರವಾಗಿದ್ದರೆ ನಮ್ಮ ... ಸ್ಥಿರ ಎಂಬ ಓಜಸ್ಸಿನ ವರ್ಣನೆಯನ್ನು ... ಸ್ರಾವಿಗಳಿಗೆ ನಾವು ಓಜೋಗ್ರಂಥಿ ಎನ್ನ... ಗೂಢವು ತಿಳಿಯುವದು.

ಒಟ್ಟಿನಲ್ಲಿ ನಮ್ಮ ದೇಹದಲ್ಲಿ ಹಲವು ... ಅವುಗಳ ಸ್ರಾವವು ಅದೃಶ್ಯವಾಗಿದ್ದರೂ ... ಬೆಳಗೆಗಳ ಅದೃಷ್ಟವನ್ನು ಅವು ಆಳುತ್ತವೆ ... ಗಳಿಗೆ ಓಜೋಗ್ರಂಥಿಗಳೆನ್ನುತ್ತಾರೆ (E... ಒಟ್ಟು ಓಜೋಗ್ರಂಥಿಗಳು ಹತ್ತು ಹನ್ನೆ... ಪ್ರತಿಯೊಂದು ಗ್ರಂಥಿಯಿಂದಾಗುವ ಸ್ರಾವ... ಹೇಳಲಿಕ್ಕೆ ಬರದಂತಾಗಿದೆ. ಪ್ರತಿಯೊಂದು ಗ್ರ... ದಿನದಿನಕ್ಕೆ ಹೊಸಹೊಸ ಸ್ರಾವಗಳು ವಿಜ್ಞಾ... ವಾಗುತ್ತಿವೆ. ೧೮೮೬ರಲ್ಲಿ ಡಾ. ಪಾಯರಿ ... ವರು ಪಿಚುಯಿಟರಿ ಗ್ರಂಥಿಯು ದೇಹದ ... ಆಳುವದು ಎಂಬುದನ್ನು ಕಂಡುಹಿಡಿದರು. ... ಈ ವರೆಗೆ ಪಿಚುಯಿಟರಿಯ ವಿಷಯಕ್ಕೆ ... ಗಳಿಂದ ಜೀವವೇ ಪಿಚುಯಿಟರಿಯನ್ನವಲ... ಪನೋ ಎಂಬ ಅನುಮಾನ ಹುಟ್ಟುತ್ತಿದೆ.

ಈವರೆಗಾದ ಓಜೋಗ್ರಂಥಿ ವಿಷಯಕ ... ಗಳಿಂದ ಎರಡು ಮಾತುಗಳು ನಿರ್ದಿಷ್ಟವಾಗಿವೆ ... ಪ್ರಾಣಿಯ ಅಂಗಗಳೆಲ್ಲ ಬೆಳೆದು ಪೂರ್ಣ... ಯುವವು. (೨) ಅಂಗಗಳೆಲ್ಲ ಪೂರ್ಣವಾಗಿ ... ಆ ಪ್ರಾಣಿಯಲ್ಲಿ ಗಂಡಿನ ಇಲ್ಲವೆ ಹೆಣ್ಣಿನ ... ಲಕ್ಷಣಗಳು ಪ್ರಕಟವಾಗಿರುತ್ತವೆ. ಮತ್ತು ... ಗಳೂ ಓಜೋಗ್ರಂಥಿಗಳ ಪ್ರೇರಣೆಯಿಂದಲೆ ... ಈಗ ಅರಿತಿರುವ ಮಟ್ಟಿಗೆ ಮಿದುಳಿನ ತಳ... ಯಿಟರಿ ಎಂಬ ಗ್ರಂಥಿಯೇ ಮಿಕ್ಕೆಲ್ಲ

ಚಾಲನಗೊಳಿಸುವ ಶಕ್ತಿಯುಳ್ಳದ್ದೆನ್ನಬಹುದು. ಇದಲ್ಲದೆ ಮೇಲ್ಭಾಗದಲ್ಲಿ ಪೀನಿಯಲ್, ಕುತ್ತಿಗೆಯಲ್ಲಿ ಥ್ಯಾರಾಯಿಡ್, ಎದೆಯಲ್ಲಿ ಥ್ಯಾಮಸ್, ಪ್ಲೀಹ, ವೃಕ್ಕ (Kidney)ಗಳ ಮೇಲೆ ಡ್ರಿನಲ್ಸ್, ಸ್ತ್ರೀಯರ ಡಿಂಭಾಶಯ, ಪುರುಷರ ಅಂಡಗಳು ಮುಂತಾಗಿ ಇನ್ನೂ ಹಲವು ಓಜೋಗ್ರಂಥಿಗಳಿದ್ದರೂ ಅವೆ ಲ್ಲವುಗಳ ಕಡಿವಾಣವು ಪಿಚುಯಿಟರಿಯ ಕೈಯಲ್ಲಿಯೇ ಇದೆಯೆಂದು ತೋರುವದು. ಅವೆಲ್ಲಕ್ಕೂ ದೇಹದಲ್ಲಿ ಬೇರೆ ಬೇರೆ ಕೆಲಸಗಳಿವೆ. ಆಯಾ ಗ್ರಂಥಿಗಳಿಗೆ ಆಯಾ ಕೆಲಸಕ್ಕೆ ಬೇಕಾಗುವ ಉತ್ತೇಜನವು ಪಿಚುಯಿಟರಿಯ ವಿವಿಧ ವಿಶಿಷ್ಟ ಸ್ರಾವಗಳಿಂದ ಸಿಗುತ್ತದೆ.

ಸ್ತ್ರೀಪುರುಷರ ಡಿಂಭಾಶಯ ಅಂಡಾಶಯಗಳು ಅವರಲ್ಲಿ ಸ್ತ್ರೀತ್ವ-ಪುರುಷತ್ವಗಳನ್ನು ಚನ್ನಾಗಿ ಒಡಮೂಡಿಸುವ ಓಜೋಗ್ರಂಥಿಗಳಾಗಿವೆ. ಸ್ತ್ರೀ-ಲಕ್ಷಣಗಳಾದ ಕೋಮಲತೆ, ಡಿಂಭಾಶಯದ ರೋಗದಿಂದ ವಯಸ್ಸು ಎಷ್ಟಾದರೂ ಹುಡುಗಿಯರು ಹರಯವನ್ನು ಹೊಂದುವದಿಲ್ಲ. ಆದರೆ ಡಿಂಭಾಶಯಕ್ಕೆ ಮೂಲ ಉತ್ತೇಜನವು ಪಿಚುಯಿಟರಿಯಿಂದ ಸಿಗುವದಾದುದರಿಂದ ಡಿಂಭಾಶಯದ ರೋಗಗಳನ್ನು ಸರಿಪಡಿಸಲು ಪಿಚುಯಿಟರಿಯ ಸತ್ವವನ್ನು ಈಗ ಯಶಸ್ವಿಯಾಗಿ ಉಪಯೋಗಿಸುತ್ತಿದ್ದಾರೆ.

ಗಂಡು ಹುಡುಗರಲ್ಲಿಯೂ ವಿಶಿಷ್ಟ ವಯಸ್ಸಿಗೆ ಸಾಕಷ್ಟು ಪರಿಮಾಣದಲ್ಲಿ ಅಂಡಾಶಯವು .ಅಂತಃಸ್ರಾವವನ್ನು ಜಿನುಗಿಸದಿದ್ದರೆ ಗಂಡಿನಲ್ಲಿ ಹೆಂಣುತನವು ತೋರಹತ್ತುವದು. ಮೀಸೆ ಗಡ್ಡಗಳು ಬೆಳೆಯುವದಿಲ್ಲ. ಕೆಲವರಿಗೆ ಸ್ತನಗಳು ದೊಡ್ಡವಾಗಿ ಹಾಲು ಬರುವದೂ ಉಂಟು. ದೇಹದಲ್ಲಿ ಕೋಮಲತೆಯು ಹೆಚ್ಚುವದು. ಮನಸ್ಸೂ ಹೆಂಣಿನಂತೆ ಮೃದುವಾಗುವದು. ಈ ವಿಕಾರಗಳ ಮೇಲೂ ಪಿಚುಯಿ



ಪಿಚುಯಿಟರಿಯ ಆಕ್ರಮದಿಂದ ನಿರೋಗಿಯಾಗಿದ್ದ ಸಾಯಿಯ ತಲೆ ಬೆಳೆದಿರುವದು.

ಸ್ತನವೃದ್ಧಿ, ಋತುಪ್ರಾಪ್ತಿ ಗಡ್ಡ ಮೀಸೆಗಳ ಅಭಾವ ಇವೆಲ್ಲವೂ ಅವಳ ಡಿಂಭಾಶಯದ ಸೂಕ್ಷ್ಮಸ್ರಾವದ ಪರಿಣಾಮವಾಗಿವೆ. ಸುಮಾರು ೪೦ನೇ ವಯಸ್ಸಿಗೆ ಸ್ತ್ರೀಯರಲ್ಲಿ ಮುಟ್ಟು ನಿಲ್ಲುವಾಗ ಡಿಂಭಾಶಯಗಳಲ್ಲಿ ಅವ್ಯವಸ್ಥೆಯಾಗುವ ಸಂಭವವಿದೆ. ಅದರಿಂದ ಅನೇಕ ಸ್ತ್ರೀಯರು ಮುಟ್ಟು ನಿಂತ ಮೇಲೆ ಗಂಡು ಲಕ್ಷಣಗಳುಳ್ಳವರಾಗುವದುಂಟು. ಕೆಲವರಿಗೆ ಮೀಸೆಗಳೂ ಬರುವವು. ಧ್ವನಿಯು ಗೊಗ್ಗರವಾಗಿ ಅದರಲ್ಲಿ ಗಂಡುತನ ಬರುವದು. ಡಿಂಭಾಶಯವು ಬಾಲ್ಯದಿಂದಲೇ ತನ್ನ ಅಂತಃಸ್ರಾವವನ್ನು ನಡೆಸಿರುತ್ತದೆ. ಆದರೆ ತಾರುಣ್ಯದಲ್ಲಿ ಅದರ ಸ್ರಾವವು ಹೆಚ್ಚುವದರಿಂದ ಸ್ತ್ರೀತ್ವದ ಲಕ್ಷಣಗಳು ತೀವ್ರವಾಗಿ ವ್ಯಕ್ತವಾಗಹತ್ತಿ ಮುಟ್ಟು ಪ್ರಾರಂಭವಾಗುವದು. ಪಿಚುಯಿಟರಿಯ ರೋಗದಿಂದ ಇಲ್ಲವೆ ಟರಿಯ ಸತ್ವದ ಉಪಯೋಗವು ಹಿತಕರವಾಗುವದು.

ಗಂಡಿಗೆ ಹೆಂಣಿನಲ್ಲಿ, ಹೆಂಣಿಗೆ ಗಂಡಿನಲ್ಲಿ ಪ್ರೇಮಾನುರಕ್ತಿಗಳು ಹುಟ್ಟುವದು ನೈಸರ್ಗಿಕ ನಿಯಮವಾಗಿದೆ. ಆದರೆ ಪಿಚುಯಿಟರಿ, ಡಿಂಭಾಶಯ, ಅಂಡಾಶಯಗಳ ರೋಗದಿಂದ ಗಂಡಿಗೆ ಗಂಡಿನ ವಿಷಯದಲ್ಲಿಯೇ ಹೆಂಣಿಗೆ ಹೆಂಣಿನ ವಿಷಯದಲ್ಲಿಯೇ ಹೆಚ್ಚು ಆಕರ್ಷಣ ಅನುರಕ್ತಿಗಳು ಹುಟ್ಟುತ್ತವೆ. ಅದಕ್ಕೆ ಸಮಲಿಂಗರತಿಯೆನ್ನುತ್ತಾರೆ. ಅದು ಬಾಲ್ಯ ಸಂಸ್ಕಾರಗಳಿಂದಾಗಿದ್ದರೆ ಅದನ್ನು ತಿದ್ದುವದು ದುಸ್ತರ. ಓಜೋಗ್ರಂಥಿಗಳ ಅವ್ಯವಸ್ಥೆಯಿಂದಾಗಿದ್ದರೆ ಸಮಂಜಸ ಚಿಕಿತ್ಸೆಯಿಂದ ಹಾದಿಗೆ ತರಬಹುದು.

ಮೇಲಿನ ವಿವೇಚನೆಯಿಂದ ಓಜೋಗ್ರಂಥಿಗಳೇ ಲಿಂಗಭೇದದ ಲಕ್ಷಣಗಳಿಗೆ ಕಾರಣಗಳಾಗಿವೆಯೆಂದು ನಮಗೆ ತಿಳಿ

ಯಿತು. ಗಂಡು ಹೆಂಣಿನ ದೇಹ ಮನಸ್ಸುಗಳ ವಿಶಿಷ್ಟ ಗುಣ ಲಕ್ಷಣಗಳು ಯೌವನದಲ್ಲಿ ಪೂರ್ಣತೆಯನ್ನು ಮುಟ್ಟುತ್ತವೆ. ಆ ಪೂರ್ಣತೆಯನ್ನು ಮುಟ್ಟುವ ವರೆಗೆ ಎಲ್ಲ ಓಜೋಗ್ರಂಥಿಗಳೂ ತಮ್ಮ ತಮ್ಮ ಪರಿಯಿಂದ ಬೆಳಿಗೆಗೆ ಸಹಾಯ ಮಾಡುತ್ತಿರುತ್ತವೆ. ಪ್ರತಿಯೊಂದು ಓಜೋ ಗ್ರಂಥಿಗೂ ಅನಿವಾರ್ಯವಾದ ಒಂದೊಂದು ಪ್ರಮುಖ ಕೆಲಸವಿರುತ್ತದೆ.

ಡಾ. ಎಸ್. ಬಿ. ವ್ಹಾಯ್ಟ್‌ಹೆಡ್ಡರು 'ಓಜೋಗ್ರಂಥಿಗಳು ಪಾರ್ಥಿವ ,ಮತ್ತು ವಾಯವ್ಯ ಎಂಬ ಎರಡು ವಿಧದ ಅಂತಃಸ್ರಾವಗಳನ್ನು ಹುಟ್ಟಿಸುತ್ತವೆ. ಪಾರ್ಥಿವ ದ್ರವ್ಯವು ರಕ್ತದಲ್ಲಿ ಬೆರೆದು ಹರಿಯುತ್ತ ದೇಹ ಧಾತುಗಳನ್ನು ಪುನರುಜ್ಜೀವಿಸುತ್ತದೆ. ವಾಯವ್ಯವು ನರತಂತುಗಳಲ್ಲಿ ಪ್ರವಹಿಸಿ ಮಿದುಳಿಗೆ ಬಲವನ್ನು ಕೊಡುತ್ತದೆ' ಎಂದು ಅಂದಿದ್ದಾರೆ. ಆದುದರಿಂದ ಓಜೋಗ್ರಂಥಿಗಳು ಅವೆರಡು ದ್ರವ್ಯಗಳನ್ನೂ ಯೋಗ್ಯಪ್ರಮಾಣದಲ್ಲಿ ಹುಟ್ಟಿಸುವದರಲ್ಲಿಯೇ ನಮ್ಮ ದೇಹ ಮನಸ್ಸುಗಳ ಸರ್ವಾಂಗೀಣ ಅಭಿವೃದ್ಧಿಯಿದೆ.

ಪಿಚುಯಿಟರಿಯು ದೇಹದ ಎಲ್ಲ ಅವಯವಗಳನ್ನು ಸರಿಯಾದ ಪರಿಮಾಣದಲ್ಲಿ ಬೆಳೆಯಲಿಕ್ಕೆ ಉತ್ತೇಜನ ಕೊಡುತ್ತದೆ. - ಹಲಕೆಲವು ಕಾರಣಗಳಿಂದ ಪಿಚುಯಿಟರಿಯು ದುರ್ಬಲವಾದಾಗ ಮನುಷ್ಯನ ಬೆಳಿಗೆಯೇ ನಿಂತು ಹೋಗುವದು. ಅದರಿಂದ ೫೦-೬೦ ವರ್ಷಗಳಾದರೂ ೨-೩ ಫೂಟಿಗಿಂತ ಎತ್ತರವಾಗಿ ಬೆಳೆಯುವದೇ ಇಲ್ಲ. ಆದರೆ ಪಿಚುಯಿಟರಿಯಿಂದ ಬೆಳಿಗೆಯ ಸತ್ವವು ಮಿತಿಮೀರಿ ಸ್ರವಿಸಹತ್ತಿದರೆ ಮನುಷ್ಯರು ರಾಕ್ಷಸರಂತೆ ಬೆಳೆಯುವರು. ಆ ಮಿತಿಮೀರಿ ಬೆಳೆಯುವದರಲ್ಲೂ ಅಕ್ರಮವಾಗುವದುಂಟು. ಕಾಲು ಕೈಗಳು ಇದ್ದಷ್ಟೆ ಇದ್ದು ಬರಿ ಮುಂಡವಷ್ಟೆ ಬೆಳೆಯಬಹುದು. ಬರಿ ಮುಖ, ಅದರಲ್ಲಿಯೂ ಬರಿ ದವಡೆಯಷ್ಟೆ ಬೆಳೆಯಬಹುದು.

ಕುತ್ತಿಗೆಯಲ್ಲಿಯ ಥ್ಯಾರಾಯಿಡ್ ಎಂಬ ಗ್ರಂಥಿಯು ದೇಹ ಧಾತುಗಳಿಗೆ ಪೋಷಕ ವಸ್ತುಗಳನ್ನು ಯೋಗ್ಯ ಪ್ರಮಾಣದಲ್ಲಿ ಮುಟ್ಟಿಸಿ ಪೋಷಕ ವಸ್ತುಗಳಿಗೆ ಧಾತುಗಳ ರೂಪವನ್ನು ಕೊಡುವ ಕೆಲಸಕ್ಕೆ ಸಾಧಕವಾಗಿದೆ. ಅದು ಅಶಕ್ತವಾದರೆ ಆಹಾರಸಾರವು ಧಾತುರೂಪ ಹೊಂದದೆ ದೇಹದಲ್ಲಿ ಅಲ್ಲಲ್ಲಿ ನಿಂತು ಮನುಷ್ಯನು ಸ್ಥೂಲನಾಗುವನು.

ಆದೇ ಥ್ಯಾರಾಯಿಡ್ ದೊಡ್ಡದಾಗಿ, ಹೆಚ್ಚು... ವಾಯಿತೆಂದರೆ ರಕ್ತದಲ್ಲಿಯ ಆಹಾರ ಸಾರ... ಗೊಳಿಸಿ ಮನುಷ್ಯನನ್ನು ಸೊರಗಿಸಿ ಬಿಡುತ್ತ... ರಿಂದ ತೂಕ ಕಡಿಮೆಯಾಗಿ ಸೊರಗಹತ್ತಿ... ರೋಗಿಗೆ ಕ್ಷಯ ತಗಲಿದೆ ಎಂದು ಒಮ್ಮೆ... ಅವನ ಓಜೋಗ್ರಂಥಿಗಳನ್ನು ಪರೀಕ್ಷಿಸುವ... ವಾಗುವದು.

ವೃಕ್ಕಗಳ ಮೇಲಿನ ಟೊಪ್ಪಿಗೆಯಂತ... ಹೃದಯ, ಶ್ವಾಸಕೋಶ ಮತ್ತು ಧಮನಿಗ... ಣಾಮವನ್ನುಂಟುಮಾಡುತ್ತವೆ. ಮಿದುಳಿನ... ಯಲ್ ಗ್ರಂಥಿಯು ಚರ್ಮ ಮತ್ತು ಸ್ನಾ... ಅಧಿಕಾರವುಳ್ಳದ್ದಾಗಿದೆ.

ಹೀಗೆ ಓಜೋಗ್ರಂಥಿಗಳು ದೇಹದ ಮ... ಸ್ಸಿನ ಮೇಲೂ ವಿಚಿತ್ರ ಪರಿಣಾಮಗಳನ್ನು... ತ್ತವೆ. ಪೀನಿಯಲ್ ಗ್ರಂಥಿಯು ಮನುಷ್ಯನನ್ನು... ಯುಳ್ಳವನನ್ನಾಗಿ ಮಾಡುತ್ತದೆ. ಪಾಶ್ಚಾತ್ಯ... ಯಾದ ಡೆಸ್‌ಕಾರ್ಟಿಸನು ಅದನ್ನು ಆತ್ಮದ ... ಕರೆದನು. ಪಿಚುಯಿಟರಿಯು ಸಹನಶೀಲತೆ ... ತನಗಳ ಸೆಲೆಯಾಗಿದೆ. ಥ್ಯಾರಾಯಿಡ್‌ದಿಂದ ... ಬೆಳೆಯುತ್ತದೆ. ಥ್ಯಾಮಸ್‌ದಿಂದ ಆತ್ಮವಿಶ್ವಾ... ವಾದಿತ್ವಗಳು ಹುಟ್ಟುತ್ತವೆ. ಆತ್ಮಹತ್ಯೆ, ... ತನಗಳಿಗೆ ಥ್ಯಾಮಸದ ದೌರ್ಬಲ್ಯವೇ ಕಾರಣ...

ಒಟ್ಟಿನಲ್ಲಿ ನಮ್ಮ ಸ್ತ್ರೀತ್ವ-ಪುರುಷತ್ವಗಳು... -ಮುದುಕತನಗಳೂ ಓಜೋಗ್ರಂಥಿಗಳನ್ನು... ಓಜೋಗ್ರಂಥಿಶಾಸ್ತ್ರದಲ್ಲಿ ದಿನೇ ದಿನೇ ಹೊಸ... ಗಳಾಗುತ್ತಿವೆ. ಅವುಗಳ ಸಮಂಜಸಜ್ಞಾನ... ಚಿಕಿತ್ಸೆಗಳ ವಿಷಯದಲ್ಲೂ, ನೀತಿ-ಧರ್ಮಗಳ... ಅಸೂಹ್ಯವಾದ ಸ್ಥಿತ್ಯಂತರಗಳಾಗಬಹುದು. ... ಸತ್ವಗಳ ಸೇವನದಿಂದ ಗಂಡಸರೂ ಮ... ಹಾಲು ಕೊಡಬಹುದು. ಮತ್ತೊಂದು ಗ್ರಂ... ಮನುಷ್ಯನಲ್ಲಿಯ ಹೊಟ್ಟೆಕಿಚ್ಚು, ಮೋಸ... ಇಲ್ಲದಂತಾಗಿ ಜಗವೆಲ್ಲ ಪ್ರೇಮ ಸಹಾನುಭೂ... ವಾಗಬಹುದು. ಇನ್ನೊಂದರಿಂದ ಮುದುಕ... ಬಹುದು. ಒಳ್ಳೇದು, ಅಲ್ಲಿಯ ವರೆಗೆ ನಾವೂ... ಬಾಳುವಾ!

★ ★ ಸಾನಿಯ ನಾನು ★ ★

....

ಲೇಖಕ:—ಶ್ರೀ. ಕೆ. ನಂಜುಂಡರಾವ್, ಪಾವಗಡ.

—: ರಂಗ ೧ :—

(ಸಾಯಂಕಾಲ ೫ ಘಂಟೆ. ಪೋಲೀಸು ಸ್ಟೇಷನ್ನಿನಲ್ಲಿ ಸಬ್ ಇನ್ಸ್‌ಪೆಕ್ಟರವರು ಕುರ್ಚಿಯ ಮೇಲೆ ಕುಳಿತಿರುತ್ತಾರೆ. ಇನ್ನೂ ತರುಣರು. ಹೊಸದಾಗಿ ಕೆಲಸಕ್ಕೆ ಸೇರಿರುವವರು. ಉನ್ನತ ವಿದ್ಯಾಭ್ಯಾಸಂಗ ಮಾಡಿದ್ದವರು. ಹುರುಪಿನಿಂದ ಕೆಲಸಮಾಡಿ ಮೇಲಿನ ಆಫೀಸರ ಮನಮೆಚ್ಚಿಸಿ, ದೊಡ್ಡ ಹುದ್ದೇಗೇರಬೇಕೆಂದು ಕಾಂಕ್ಷಿತರಾಗಿರುವವರು. ಆದಕ್ಕಾಗಿ ಸದಾ ಕಾರ್ಯಾತುರರಾಗಿಯೇ ಇರುವವರು. ಅವರ ಪಕ್ಕದಲ್ಲಿ ರೈಟರು (Writer) ಕೆಳಗೆ ಕುಳಿತು ಕಾಗದ, ಪತ್ರಗಳನ್ನು ಪರಿಶೀಲಿಸುತ್ತಿರುತ್ತಾನೆ. ಅರಿ, ತೀರಿದವನಂತೆ ಕಾಣುವ ಮುಖಭಾವ. ವಯಸ್ಸು ಸುಮಾರು ೪೦).

ಸಬ್ ಇನ್:—ರೈಟರ್.

ರೈಟರ್:—(ಎದ್ದು ನಿಂತು) ಸ್ವಾಮಿ.

ಸಬ್ ಇನ್:—ಮೊನ್ನೆ ಕೋರ್ಟಿಗೆ ಕೊಟ್ಟಿದ್ದೆವಲ್ಲಾ, ಆ ಕೇಸು....ಯಾವದೂ ಅಂತೀಯ....ಆ ಒಡ್ಡರ ಗಾಡೀಗೆ ದೀಪ ಇರಲಿಲ್ಲ ಎಂದು, ರಿಕಾರ್ಡು ಮಾಡಿದ್ದದ್ದು........

ರೈಟರ್:—(ಮಧ್ಯದಲ್ಲಿಯೇ) ಸ್ಟ್ಯಾಂಡೇ ಆಗಲಿಲ್ಲವಲ್ಲಾ ಸ್ವಾಮಿ, ಆ ಕೇಸು ! ಮೊದಲೇ ನಾ ಹೇಳಲಿಲ್ಲವೇ? ಇವೆಲ್ಲಾ ಮರ್ಯಾದೆ ತರೋ ಕೇಸುಗಳಲ್ಲಾ ಅಂತ!

ಸಬ್ ಇನ್:— ಇನ್ನೆಂಥಾ ಕೇಸುಗಳಿಡೋದಕ್ಕಾಗುತ್ತಯ್ಯಾ, ಮತ್ತೆ ?

ರೈಟರ್:—ದೊಡ್ಡದು....ಭಾರೀ ಕೇಸಾಗಬೇಕು ಸ್ವಾಮಿ, ಕ್ರೆಡಿಟ್ ಪಡೆಯೋಕೆ. ಒಂದು ಖೂನಿ, ಅಥವಾ ಒಂದು ಡಕಾಯ್ತಿ, ಇಲ್ಲದಿದ್ದರೆ ಒಂದು ಅಗಾಧ ಕಳುವು. ಈ ರೀತಿ ಇರೋವು ಸ್ವಾಮಿ.

ಸಬ್ ಇನ್:—ಕಳುವು ಕೇಸು ಪತ್ತೆ ಆಗೋದು ಬಹಳ ಕಷ್ಟ ಕಣಯ್ಯಾ !

ರೈಟರ್:—ಅಂತಹುದನ್ನು ಭೇದಿಸಿದರೇನೆ ಪ್ರಮೋಷನ್ನೋ, ಗಿಮೋಷನ್ನೋ ಸಿಗೋದು.

ಸಬ್ ಇನ್:—ಈ ಸುತ್ತುಮುತ್ತಲೂ ಇಷ್ಟು ಕೊರಚರ ಗ್ಯಾಂಗುಗಳಿವೆಯಲ್ಲಾ, ಒಬ್ಬ ಬಡ್ಡೀಗಂಡನಾದರೂ.... ಊ....ಹು 'ಕಳುವಾಗಿದೆ' ಅಂತ ರಿಪೋರ್ಟು ಕೊಡೋರೆ ಗತಿ ಇಲ್ಲದೇ ಇದ್ರೆ ನಾನೇನಯ್ಯಾ ಮಾಡ್ಲಿ ?

(ಒಬ್ಬ ಕಾನ್‌ಸ್ಟೇಬಲ್ಲನು ಒಳಕ್ಕೆ ಬಂದು ಸಬ್ ಇನ್ಸ್‌ಪೆಕ್ಟರಿಗೆ ಸೆಲ್ಯೂಟ್ ಹೊಡೆದು, ಒಂದು ಕಾಗದವನ್ನು ಕೊಟ್ಟು, ಬಾಗಿಲ ಬಳಿ ಹೋಗಿ ಕಂಭದಂತೆ ನಿಂತುಕೊಳ್ಳುತ್ತಾನೆ.)

ಸಬ್ ಇನ್:—ಇದೇನೋ ಓದು ರೈಟರ್, ಒಂದಿಷ್ಟು.

(ರೈಟರ್ ಆ ಕಾಗದವನ್ನು ಕೈಗೆ ತೆಗೆದುಕ್ಕೊಂಡು ಓದುವನು.)

'....ರೇಂಜ್ ಪೋಲೀಸ್ ಆಫೀಸರವರ ಸನ್ನಿಧಿಗೆ. ಪದ್ಮಾ ಸಾನಿಯು ಬರೆದುಕ್ಕೊಂಡ ರಿಪೋರ್ಟು. ಈ ದಿನ ಸುಮಾರು ೪ ೧/೨ ಗಂಟೆ, ಎಂದರೆ ಮುಕ್ಕಾಲು ಗಂಟೆ ಸುಮಾರಿನ ಹಿಂದೆ ನಾನೂ, ರತ್ನಾಸಾನಿಯೂ ಈ ಊರಿನ ದೊಡ್ಡಾಲದ ಮರದ ಕಟ್ಟೆಯ ಮೇಲೆ ಕುಳಿತು ಮಾತನಾಡುತ್ತಿದ್ದಾಗ ರತ್ನಾಸಾನಿಯು ನನ್ನ ಕೊರಳೊಳಗಿದ್ದ ನಾನಡ್ಡಿಕೆಯನ್ನು ನೋಡಿ, ಮಾಟ ಬಹು ಮುದ್ದಾಗಿದೆ. ನಾನು ನೋಡಬೇಕು. ತೆಗೆದುಕೊಡೆಂದು ಹೇಳಲಾಗಿ, ಈಚೆಗೆ ತೆಗೆದು ಅವಳ ಕೈಲಿಕೊಟ್ಟೆ. ಅವಳದನ್ನು ತೆಗೆದುಕೊಂಡು ಅದರ ಅಚ್ಚ ಬಂಗಾರದ ಬಣ್ಣದ ಮೆರುಗಿಗೆ ಮುಗ್ಧಳಾಗಿ ತನಗೆ ಅಂತಹ ಒಡವೆಯನ್ನು ಪಡೆಯುವ ಭಾಗ್ಯವಿಲ್ಲವೆಂದು ಕೊಂಚ ಪೇಚಾಟಪಟ್ಟಳು. ಆದಾದ ಮೇಲೆ ಆಮಾತು ಈಮಾತುಗಳ ಮಧ್ಯೆ ಅವಳು ಆ ನಾನಡ್ಡಿಕೆಯನ್ನು ಕಟ್ಟೆಯ ಮೇಲಿಟ್ಟಳು. ಇಬ್ಬರ ಸುಖ, ದುಃಖಗಳ ಮಾತುಗಾರಿಕೆಯ ಮಧ್ಯೆ ಆ ನಾಸಿನ ವಿಷಯ ಮರೆತು ಇಬ್ಬರೂ ಎದ್ದು ಹೋದೆವು. ಕೊಂಚ ದೂರ ಹೋಗಿ ನೋಡಿಕೊಳ್ಳಲು ಇರಲಿಲ್ಲ. ಜ್ಞಾಪಿಸಿಕೊಂಡು ಕಟ್ಟೆಹತ್ತಿರ ಬಂದು ನೋಡಲಾಗಿ, ಅಲ್ಲಿಯೂ ನಾನು ಇರಲಿಲ್ಲ. ದಯವಿಟ್ಟು ಅದನ್ನು ಪತ್ತೆಮಾಡಿಸಿ ಕೊಡಬೇಕಾಗಿ ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುತ್ತೇನೆ ಮಹಾಸ್ವಾಮಿ.

ಪದ್ಮಾಸಾನಿ

(ರೈಟರ್ ಓದಿದ ಬಳಿಕ ಸಬ್ ಇನ್ಸ್‌ಪೆಕ್ಟರವರ ಕಡೆ ನೋಡುತ್ತಾ ನಿಲ್ಲುವನು.)

ಸಬ್ ಇನ್:— ಅಲಲಲಲಾ ! ಇನ್ನೇನು, ಮಧ್ಯೇನೆ ಮಾಯವಾಗಿ ಹೋಯ್ತೋ ? ಎಲ್ಲಿ, ಕರಿ ಆಕೇನ.

(ಕಾನ್‌ಸ್ಟೇಬಲನು ಪದ್ಮಾಸಾನಿಯನ್ನು ಒಳಕ್ಕೆ ಕರೆಯುತ್ತಾನೆ. ಆಕೆಯು ಬಂದು ಕಳವಳದಿಂದ ನಿಂತುಕೊಳ್ಳುತ್ತಾಳೆ. ಸಬ್ ಇನ್ಸ್‌ಪೆಕ್ಟರವರು ಆಕೆಯನ್ನು ಕಾಲುಬೆರಳಿನಿಂದ ಹಿಡಿದು ತಲೆಯವರೆಗೂ ಒಂದುಸಲ ನೋಡಿ)

ಸಬ್ ಇನ್:—ನಿನ್ನ ಹೆಸರೇನು ?

ಪದ್ಮಾ:—ಪದ್ಮ, ಸ್ವಾಮಿ. (ತಲೆಬಾಗುವಳು.)

ಸಬ್ ಇನ್:—ನಿಮ್ಮ ತಂದೆಯ ಹೆಸರು ?

ಪದ್ಮ:—ಗೊತ್ತಿಲ್ಲ.

ಸಬ್ ಇ:—ಕುಲ ?

ಪದ್ಮ:—ವೇಶ್ಯಾಕುಲ.

ಸಬ್ ಇ:—ಕಸುಬು ?

ಪದ್ಮ:—(ನಾಚಿಕೆಯಿಂದ ತಲೆತಗ್ಗಿಸಿ, ಕಾಲುಬೆರಳಿನಿಂದ ನೆಲವನ್ನು ಕೆರೆಯುತ್ತಾ) ಕುಲ ಕಸಬು.

ಸಬ್ ಇ:—ಓಹೋ! ಇದೇ ಊರೋ ?

ಪದ್ಮ:—ಹೌದು.

ಸಬ್ ಇ:—ತಂದೆಯಿರುವನೋ ?

ಪದ್ಮ:—......................

ಸಬ್ ಇ:—ತಾಯಿ ?

ಪದ್ಮ:—ಉಂಟು.

ಸಬ್ ಇ:—ಸರಿ, ಸರಿ. ರತ್ನಾಸಾನಿಗೂ ನಿನಗೂ ಸ್ನೇಹವೋ ?

ಪದ್ಮ:—ಹೌದು.

ಸಬ್ ಇ:—ಅವಳಲ್ಲಿ ನಿನಗೆ ಅನುಮಾನವಿಲ್ಲವೋ ?

ಪದ್ಮ:—ಇಲ್ಲ.

ಸಬ್ ಇ:— ಕೊಡುವಾಗಲೂ, ಅದನ್ನು ಕಟ್ಟೆಯ ಮೇಲಿಡುವಾಗಲೂ ನೀನು ನಿನ್ನ ಕಣ್ಣಿನಿಂದಲೇ ಆ ನಾನನ್ನು ನೋಡಿರುವೆಯಾ ?

ಪದ್ಮ:—ನೋಡಿರುವೆನು.

ಸಬ್ ಇ:—ಅದು ಇಲ್ಲದ ಮೇಲೆ ನೀನು ರತ್ನಾಸಾನಿಯನ್ನು ಪರಿಶೀಲಿಸಿದೆಯಾ ?

ಪದ್ಮ:—ಇಲ್ಲ. ಅವಳೇ ನನಗೆ ಅನುಮಾನವಾದೀತೆಂದು ತನ್ನನ್ನು ಪರಿಶೀಲಿಸಿಕೊಂಡಳು.

ಸಬ್ ಇ:—ಆಗಲೂ ಅದು ಅವಳಲ್ಲಿರಲಿಲ್ಲವೋ ?

ಪದ್ಮ:—ಇಲ್ಲ.

ಸಬ್ ಇ:—ಈಗಲೂ ರತ್ನಾಸಾನಿಯ ಮೇಲೆ ನಿನಗೆ ಅನುಮಾನವಿಲ್ಲವೋ ?

ಪದ್ಮ:—ಇಲ್ಲ.

ಸಬ್ ಇ:—ಮತ್ತೆ, ಯಾರ ಮೇಲಿದೆ ?

ಪದ್ಮ:—ಯಾರ ಮೇಲೂ ಇಲ್ಲ.

ಸಬ್ ಇ:—ಹಾಗಾದರೆ ಹೇಗೆ ಕಳ್ಳರನ್ನು ಪತ್ತೆ ಮಾಡಬೇಕು, ನಾವು ? ಯಾರಾದರೂ ನಿನಗೆ ಅನುಮಾನಸ್ಥರಿದ್ದರೆ ಹೇಳಬೇಕು; ಅಥವಾ ನಿನಗೆ ದ್ವೇಷಸ್ಥರ್ಯಾರಾದರೂ ಇದ್ದಾರೆಯೋ ?

ಪದ್ಮ:—ನನಗೆ ತಿಳಿಯದು.

ಸಬ್ ಇ:—(ರೈಟರ್ ಕಡೆ ಮುಖ ತಿ... ಪ್ರವೇಶಮಾಡಬೇಕು ರೈಟರ್ ಈ ಕೇಸಿನಲ್ಲಿ ... ಸುಳೂ ಗೊತ್ತಾಗೋಲ್ಲವೆ ?

ರೈಟರ್:—ಪರಿಶೋಧಿಸಬೇಕು, ಸ್ವಾಮಿ.

ಸಬ್ ಇ:—ಹೇಗೆ ?

ಪದ್ಮ:—ಸ್ವಾಮಿ, ಬಹಳ ಹೊತ್ತಾಯ್ತು.

ಸಬ್ ಇ:—ಆ.... ನಾನೇನು ಮಾಡಲಿ, ... ಇದು ಕಳುವು ಕೇಸು. ಸಾಮಾನ್ಯಾನೆ ?

ರೈಟರ್:—ಸ್ವಲ್ಪ ಸುಧಾರಿಸಬೇಕಮ್ಮ ... ಸ್ಪೆಕ್ಟರವರ ಕಡೆ ಮುಖ ತಿರುವಿ) ಆ ದೊಡ್ಡ ... ಅಜು, ಬಾಜು, ಮನೆಗಳೋರ ಮೇಲೆ ... ಇಟ್ಟಿರಬೇಕು ಸ್ವಾಮಿ.

ಸಬ್ ಇ:—ಮಾಲೇನಾದರೂ ಸಿಕ್ಕಿದರೆ ... ಈಕೇನೂ ಇರಬೇಕಲ್ಲವೇ, ನಮ್ಮ ಜೊತೇಲಿ!

ರೈಟರ್:—ಸ್ವಾಮಿಯವರ ಚಿತ್ತ.

—: ರಂಗ ೨ :—

ಆದೇ ದಿನ.

(ಸಾಯಂಕಾಲ ಸುಮಾರು ೫। ಘಂಟೆ. ... ತಲೆಬಾಗಿಲನ್ನು ದಾಟಿದೊಡನೆಯೇ ದೊಡ್ಡ ... ಬಂಡೆಗಳಿಂದ ಮುಚ್ಚಿದೆ. ರಾಯರ ಹೆಂಡತಿ ಮೀನಾಕ್ಷಮ್ಮ ಮಲ್ಲಮ್ಮನವರೊಡನೆ ಮಾತನಾಡುತ್ತಾ, ಎಲೆ ... ಅಷ್ಟರಲ್ಲಿ 8 ವರ್ಷದ ರಾಯರ ಮಗ ರಾಜನು ... ನಾನಡ್ಡಿಕೆಯನ್ನು ಹಿಡಿದುಕ್ಕೊಂಡು ತಲೆಬಾಗಿಲಿನ ... ಬರುತ್ತಾ)

ರಾಜ:—ಅಮ್ಮಾ-ಅಮ್ಮಾ-ಅಮ್ಮಾ

ಮೀನಾ:—ಏ.... ಏ.... ಏನೋ ?

ರಾಜ:—ಅಮ್ಮಾ, ಒ.... ಡ.... ವೆ. ಸಿಕ್ಕಿ...

ಮೀನಾ:—(ಗಾಬರಿಯಿಂದ ಬೆರೆತ ... ನಾನಡ್ಡಿಕೆಯನ್ನು ನೋಡುತ್ತಾ) ಎಲ್ಲಿತ್ತೋ ... ನೀನೇಕೆ ತಂದೋ ?

ರಾಜ:—ಕಟ್ಟೆ ಮೇಲೆ ಬಿದ್ದಿತ್ತು. ಆದುತ್ತ... ತಂದೆ........

ಮಲ್ಲಮ್ಮ:—ಯಾರಾದರೂ ಕಂಡರೆ ... ಮೀನಾಕ್ಷಮ್ಮನೋರೆ ?

ಮೀನಾ:—ಏತಕ್ರೀ ಅಷ್ಟು ಭಯ ? ... ಏನು ಕದ್ದು ತಂದಿದಾನೋ ? ಸಿಕ್ಕಿದ್ದು ... ಮಾನರು ಬಂದರೆ, ಈ ಸಮಾಚಾರ ಹೇ...

ವೇರಿಗೆ ಒಡವೆ ಸೇರಿಸ್ತಾರೆ. (ಮಗನ್ನ ಕರೆದು) ಎಲ್ಲಿ, ಮಗೂ ನೋಡೋಣ. ಇಲ್ಲಿ ತಾ ಆ ನಾನು. (ಮಗನು ಕೊಡುವನು).

(ಇಷ್ಟರಲ್ಲಿ ನೆರೆಮನೆಯ ಗೋಪು ಪ್ರವೇಶ. ವಯಸ್ಸು ೧೯. ಉದ್ದಕ್ಕೆ ಬೆಳೆದಿದ್ದಾನೆ. ಷರಟು, ಷರಾಯಿ, ಕ್ರಾಪು, ಚಟುವಟಿಕೆ, ಮಾತುಗಾರಿಕೆ, ನಿರುದ್ಯೋಗಿ. ಬಂದವನೇ ಆತುರದಿಂದ)

ಗೋಪು:—ಮಿನಾಕ್ಷಮ್ಮನೋರೆ, ಮೊದಲು ನನ್ನ ಕಣ್ಣಿಗೆ ಕಂಡದ್ದು ಆ ಒಡವೆ. ರಾಜು ಅದರ ಹತ್ತಿರ ಆಡತಾ ಇದ್ದ. ಆದೇನೋ ನೋಡೋ, ನಿನ್ನ ಪಕ್ಕದಲ್ಲಿ ಒಡವೆ ಇದ್ದ ಹಾಗೆ ಇದೆ ಅಂದೆ. ಕೂಡ್ಲೆ ಅದನ್ನು ನೋಡಿ ಎತ್ತಿಕೊಂಡು ಓಡಿ ಬಂದು ಬಿಟ್ಟಿದ್ದಾನೆ. ಇಲ್ಲಿ ಕೊಟ್ಟು ಬಿಡಿ.

ಮಿನಾ:—ಯಜಮಾನರು ಮನೇಲಿಲ್ಲ. ಬಂದ ಮೇಲೆ ಬೇಕಾದರೆ ನೀನೂ ಬಂದು ಮಾತನಾಡಪ್ಪ.

ಗೋಪು:—ಆದೇನ್ರೀ ನಾನು ಮೊದಲು ಕಂಡ ಒಡವೆ, ನನಗೆ ಕೊಡೋಕೆ ಯಜಮಾನ್ರು ಏಕೆ ಬರಬೇಕ್ರೀ?

(ಇಷ್ಟರಲ್ಲಿ ಗೋಪೂನ ಅಕ್ಕ ರಮೆಯು ಸಿಡುಗುಟ್ಟಿಕೊಂಡು ಪ್ರವೇಶಿಸುವಳು.)

ರಮೆ:—ನೀನ್ಯಾಕೋ ಗೋಪು ಬಿಟ್ಟಿದ್ದು?

ಗೋಪು:—ಕೈಗೆ ಸಿಕ್ಕದೆ ಓಡಿ ಬಂದನಕ್ಕಾ.

ರಮೆ:—ಚೆನ್ನಾಗಿದೆ. ಹುಡುಗರಿಗೂ ಒಡವೆ ಅಂದರೆ ಅಷ್ಟು ಆಶೆ ಎಲ್ಲೀ ಕಾಣೆ? ಈಗೇನಂತಾರೆ ಅವರಮ್ಮ.... (ಹೀಗೆಂದು ಮಿನಾಕ್ಷಮ್ಮನವರ ಕಡೆ ತಿರುಗಿ) ಏನ್ರೀ ಗಲಾಟೇಗೆ ಅವಕಾಶ ಕೊಡದೇ ಸುಮ್ಮನೆ ನಾವು ಕಂಡದ್ದು ನಮಗೆ ಕೊಡತೀರೋ, ಅಥವಾ ಹತ್ತೂ ಜನಕ್ಕೆ, ಈ ವಿಷಯ ತಿಳಿಸಿ ನಿಮ್ಮೇಲೆ ಹಾಕೋಣವೋ? ನಮ್ಮ ಗೋಪು ಏನು, ಸೈಕಲ್ ಮೇಲೆ ಕೂತು, ಏರೋಪ್ಲೇನ್ನಲ್ಲಿ ಹೋದ ಹಾಗೆ ಒಂದು ನಿಮಿಷದಲ್ಲಿ ಊರೆಲ್ಲಾ ತಿರುಗಿ ಬಿತ್ತಿ ಬರ್ತಾನೆ ಈ ವಿಷಯಾನ. ನೋಡಿ ಆ ಮೇಲೆ........?

ಮಿನಾ:—ಇದೇನ್ರಮ್ಮಾ, ನಿಮಗೇನು ಹುಡುಗಾಟಿಕೆ? ಒಡವೆ ಯಾರದು? ಏನು ಕಥೆ? ಒಂದು ವೇಳೆ ನಿಮ್ಮ ತಮ್ಮನೇ ನೋಡಿರಬಹುದು. ಆದರೆ ನಿಮಗೆ ಹೇಗೆ ಸೇರುತ್ತೆ, ಒಡವೆ? ಕೊಂಚ ಆದ್ರೂ ಪರಿಜ್ಞಾನ ಬೇಡವೇನ್ರಮ್ಮಾ?

ರಮಾ:—ಓಹೊ! ಹೊ!! ತೆಗೆದುಬಿಟ್ಟರಲ್ಲಮ್ಮಾ, ವೈರಾಗ್ಯಾನ. ಈಗಿನ ಕಾಲದಲ್ಲಿ ಕಣ್ಣಿಗೆ ಕಾಣಿಸಿ, ಕೈಗೆ ಸಿಕ್ಕಿದ್ದೇ ನಮ್ಮದು. ನಮ್ಮ ಗೋಪು ಕೆಲ್ಸ ಇಲ್ಲದೆ ಸುಮ್ಮನೇ ಅಲೀತಾ ಇದಾನೆ. ಅವನಿಗ್ಯಾರು ಕೋಡೋರು? ಅನ್ನ, ಬಟ್ಟೆ-ಬರೆಗೆ?

ಮಿನಾ:—ಸಂಬಂಧವೇನ್ರಮ್ಮಾ? ಒಬ್ಬರು ಯಾಕೆ ಕೊಡತಾರೆ, ನಿಮ್ಮ ಮನೆ ಹುಡುಗರಿಗೆ?

ರಮಾ:—ಸರಿ, ಮತ್ತೆ. ಅವನು ಮೊದಲು ಒಡವೇನ ಕಂಡ ಮೇಲೆ, ಅವನದೇ ತಾನೇ ಅದು? ಅವನು ತಕೊಳ್ಳುತ್ತಿದ್ದ, ಒಡವೆ ತಂಟೆ ನಿಮ್ಮ ಹುಡುಗನಿಗೇಕಿದ್ದೀತು? ಒಪ್ಪೊತ್ತು ಅನ್ನ ಇಲ್ಲಾಂದ್ರೆ ಕೊಡತಾನೋ ನಿಮ್ಮ ಹುಡುಗ? ಅಥವಾ ನೀವು ಕೊಡತೀರೋ?

ಮಿನಾ:—ಏನೋನ್ರಮ್ಮಾ, ನಿಮ್ಮ ಮಾತೇ ನನಗರ್ಥ ವಾಗೋದಿಲ್ಲ!

ರಮಾ:—ಹೇಗಾಗುತ್ತೆ ಹೇಳಿ? ಮುದ್ದಾಗಿ ಮಗ ತಂದ ನಾನು ಹತ್ತರಿಟ್ಟುಕೊಂಡು........

(ಗೋಪೂ ಅತ್ತಿಗೆ ತಾರೆ. ಸುಮಾರು ೧೮ ವಯಸ್ಸು. ಆ ತಿಂಗಳು ಬಸುರು. ಹೊಟ್ಟೆ ಭಾರವನ್ನೆಲ್ಲಾ ಹೊತ್ತು ದಣಿದಂತಹ ಮುಖಭಾವ. ಆಯಾಸದಿಂದ ಮೇಲುಸುರ್ಗರೆಯುತ್ತಾ ಪ್ರವೇಶಿಸುವಳು. ಗೋಪುವನ್ನು ನೋಡಿ ಗದರಿಸುವ ಧ್ವನಿಯಿಂದ)

ತಾರೆ:—ಯಾಕೋ ಗೋಪಿ, ಇನ್ನೂ ತಡ. ಏನಂದಳೋ ಈಕೆ? ಕೊಡತಾಳೋ, ಇಲ್ಲಂತೋ?

ಗೋಪು:—ಕೊಡೋಲ್ಲಂತೆ.

ತಾರೆ:—ನಿನ್ನ ತಲೆ. ನಾಚಿಕೆ ಆಗೋಲ್ಲವೇ ನಿನಗೆ? (ಮಿನಾಕ್ಷಮ್ಮನ ಕಡೆ ತಿರುಗಿ) ಯಾಕೆ ಕೊಡಕೂಡದಮ್ಮಾ? ನೀನು ಸ್ವಂತ ಮಾಡಿಸಿದಂತೆ ಇದೆಯಲ್ಲಾ?

ಮಿನಾ:—(ಎದ್ದುನಿಂತು ಕೊಂಚ ವೇಗವಾಗಿ) ನೀನು ಮಾಡಿಸಿದ್ದೇನಮ್ಮಾ? ಇದೇನೀ ದುರ್ವ್ಯಾಜ್ಯ. ನಮ್ಮ ಯಜಮಾನರು ಬಂದ ಮೇಲೆ ಬಾ ಹೋಗು.

ತಾರೆ:—ಯಜಮಾನರೇನಮ್ಮಾ ಕಂಡಿದಾರಿದೆಲ್ಲಾ? ಸುಮ್ಮನೆ ತಂಟೆಮಾಡದೆ ನಮಗೆ ಬರಬೇಕಾಗಿರೋ ಒಡವೆ, ನಮಗೆ ಕೊಟ್ಟುಬಿಟ್ಟರೆ ಅದರಲ್ಲಿ ನಿನಗೂ ಒಂದು ಸಣ್ಣ ಭಾಗ ಕೊಡುತ್ತೇವೆ. ನೋಡಿ! ನನಗೂ ಬಹಳ ದಿವಸಗಳಿಂದ ನಾನಡ್ಡಿಕೆಯನ್ನು ಹಾಕಿಕೊಳ್ಳಬೇಕೂ ಅಂಬೋ ಬಯಕೆಯಿದೆ.

ಮಲ್ಲಮ್ಮ:—(ನಗುವಳು.)

(ತಲೆಬಾಗಿಲಿನಲ್ಲಿ ತಾರೆಯ ಗಂಡ ಗುಂಡಣ್ಣನು ನಿಂತಿರುತ್ತಾನೆ)

ಗುಂಡಣ್ಣ:—ಏನೇ ಆಕೀಗೆ ಧೈರ್ಯ ಇಲ್ಲಾ ಅಂತ ಕಾಣುತ್ತೆ. ಪರವಾ ಇಲ್ಲ. ನಾನಿದೀನಿ ಅಂತ ಹೇಳು. ಹಾಗೇನಾದ್ರೂ ಒಪ್ಪದೆ ಹೋದ್ರೆ ಪೋಲೀಸಿನೋರಿಗೆ ಹೇಳಿ

ಬಿಟ್ಟು....ಆ ಮೇಲಕ್ಕೆ....ಯೋಚನೆಮಾಡು ಅಂತ ಹೇಳು.

ಮೀನಾಕ್ಷಮ್ಮನು ಕೋಪದಿಂದ, 'ಗಂಡಸರು ಮನೇಲಿ ಇಲ್ಲದಿರೋವಾಗ ಇದೇನು ನಿಮ್ಮೆಲ್ಲರ ಗದ್ದಲ? ಹೇಳೋರು ಕೇಳೋರು, ಯಾರೂ ಇಲ್ಲವೇ ? (ಮಲ್ಲಮ್ಮನ ಕಡೆ ನೋಡಿ) ನೋಡಿದರಲ್ಲೇನ್ರೀ ಮಲ್ಲಮ್ಮನೋರೆ ?'

ಮಲ್ಲ:—ನಿಮ್ಮ ಯಜಮಾನರೂ ಬರಲಿಲ್ಲವೇ ?

ತಾರೆ:—ಮರ್ಯಾದೆಯಿಂದ ಕೊಡತೀರೋ, ಅಥವಾ ನಮ್ಮ ಒಡವೆ ಕದ್ದು ತಂದಿದಾರೆ ಅಂತ ಪೋಲೀಸು ಕಂಪ್ಲೈಂಟ್ ಕೊಡೋಣವೋ ?

ಮೀನಾ:—(ಮತ್ತಷ್ಟು ವೇಗವಾಗಿ) ಕೊಡು ಹೋಗಿ ಭಯವಿಲ್ಲ. ಮಲ್ಲಮ್ಮನವರೆಲ್ಲಾ ಕಂಡೇ ಇದಾರೆ. ನಿಮಗೆ ತಕ್ಕದ್ದೇ ಆಗುತ್ತೆ.

(ಇಷ್ಟು ಹೊತ್ತಿಗೆ ಸಬ್ ಇನ್‌ಸ್ಪೆಕ್ಟರು, ರೈಟರು, ಪದ್ಮಾಸಾನಿ, ಮತ್ತೊಬ್ಬ ಕಾನ್‌ಸ್ಟೇಬಲ್ ಒಳಗೆ ನುಗ್ಗಿ ಬರುವರು.)

ಸಬ್ ಇ:—(ದರ್ಪದಿಂದ) ಬದ್ಮಾಷ್ ಜನಗಳಿರಾ, ಇಲ್ಲೇ ಅಷ್ಟು ಹೊತ್ತಿನಿಂದ ಹೊಂಚಿ ಕೇಳತಾ ಇದೇವೆ, ನಿಮ್ಮ ಮನೆ ಹಾಳು ಮಾತುಗಳನ್ನ. (ರೈಟರ್ ಕಡೆ ತಿರುಗಿ) ಹೊಡಿ, ರೈಟರ್ ಕಂಚಿಯಿಂದ ಇವರನ್ನ.

(ರೈಟರ್ ಗೋಪುವನ್ನೂ, ಅವರಣ್ಣನನ್ನೂ, ಹೊಡೆಯುತ್ತಾನೆ. ಗಲಾಟೆ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಮಾಧವರಾಯರು ಪ್ರವೇಶಿಸಿ, ಮೋರೆಯ ಮೇಲೆ ಬೆರಳಿಟ್ಟು ಬೆಪ್ಪಾಗಿ ನಿಲ್ಲುತ್ತಾರೆ. ಮೀನಾಕ್ಷಮ್ಮನವರು ನಯ, ಭಯಗಳಿಂದ ರಾಯರ ಸಮೀಪಕ್ಕೆ ಬಂದು).

ಮೀನಾ:—ರಾಜಾ ಆಡುತ್ತಿದ್ದಾಗ ಈ ನಾನಡ್ಡಿಕೆ ಸಿಕ್ಕಿತಂತೆ, ಅದನ್ನು ತಂದ. ನೆರೆಮನೆಯ ಇವರೆಲ್ಲರೂ ಬಂದು ನನ್ನನ್ನು ಮುತ್ತಿ ಒಡವೇನ ಕೊಡಬೇಕೆಂದು ಪೀಡಿಸುತ್ತಿದ್ದರು. ಗಲಾಟೆಯನ್ನೂ ಮಾಡಿದರು. ಅಷ್ಟು ಹೊತ್ತಿಗೆ ಪೋಲೀಸಿನವರೂ ಬಂದರು. ನೀವೂ ಬಂದಿರಿ. ಇಗೊಳ್ಳಿ, ಈ ನಾನಡ್ಡಿಕೆ ತೆಗೆದುಕೊಳ್ಳಿ. ಏನು ಬೇಕಾದರೂ ಮಾಡಿಕೊಳ್ಳಿ.

(ಗಂಡನ ಕೈಗೆ ಅದನ್ನು ಕೊಟ್ಟು ರಾಜುವನ್ನು ಕರೆದುಕೊಂಡು; ಮಲ್ಲಮ್ಮನನ್ನೂ ಒಳಕ್ಕೆ ಬರಹೇಳಿ, ಒಳಮನೆಯೊಳಕ್ಕೆ ಹೊರಟು ಹೋಗುವಳು.)

ಮಾಧ:—(ಸಬ್ ಇ.ರವರ ಕಡೆ ನೋಡಿ) ಈ ನಾನಿನ ಸಂಬಂಧವಾದ ರಿಪೋರ್ಟೇನಾದರೂ, ಯಾರಿಂದಲಾದರೂ ತಮ್ಮಲ್ಲಿಗೆ ಬಂದಿದೆಯೆ ?

ಸಬ್ ಇ:—ಬಂದಿದೆ. ಅದಕ್ಕೇ ಇಲ್ಲಿಗೆ ... ನಡೆಸಿದ್ದು. ಮಾಲು ಪತ್ತೆಮಾಡಿದ್ದು.

ಪದ್ಮ:—(ಸಬ್ ಇ.ರೊಡನೆ) ಅದೇ ... ಸ್ವಾಮಿ ನನ್ನದು. ಕೊಡಿಸಿ ಬಿಡಿ, ದಯಮಾಡಿ.

ಸಬ್ ಇ:—ನಿನ್ನದೇ ಅನ್ನೋದಕ್ಕೆ ಗುರ್ತು ಇದೆಯೋ ?

ಪದ್ಮ:—ಇದೇನು ಸ್ವಾಮಿ, ಹೀಗೆ ಕೇಳುತ್ತೀ...

ಸಬ್ ಇ:—ಹೌದು, ಅದು ಕಾನೂನು ... ಜೋಡು. ನಿಮ್ಮ ನಾನು ಎಷ್ಟು ಬಣ್ಣಕ್ಕೆ ...

ಪದ್ಮ:—ಅದೇನು ಬಣ್ಣವೋ (ಮೆಲ್ಲಗೆ) ... ಕಾಣೆ.

ಸಬ್ ಇ:—ರೈಟರ್, ಲಿಂಗಾಚಾರೀನ ... ಇಡಿಸೋಣ.

ರೈಟರ್:—(ಕಾನ್‌ಸ್ಟೇಬಲ್ ಕಡೆ ತಿರುಗಿ) ... ಜಾಗ್ರತೆ ಹೋಗಿ ಅಕ್ಕಸಾಲಿಗರ ಲಿಂಗಾಚಾರಿ... ತಗೊಂಡು ಜಾಗ್ರತೆ ಬರಹೇಳ್ತಾರೆ ಅಂತ ... ಬಾ. (ಕಾನ್‌ಸ್ಟೇಬಲ್ಲನು ಹೋಗುವನು.)

ಸಬ್ ಇ:—(ಗೋಪು ಮೊದಲಾದವ... ತ್ತಾ) ಪಾಲು ಹಂಚಿಕೊಳ್ಳುತ್ತಿದ್ದಿರಲ್ಲವೆ ... ಹಂಚಿಕೊಡುತ್ತೇವೆ. ಹೊರಡಿ, ಎಲ್ಲಾ ...

(ಹೆಂಗಸರೆಲ್ಲಾ ಅಳಲುತೊಡಗುವರು.)

ಮಾಧ:—(ಸಬ್ ಇ.ರೊಡನೆ) ಏನೋ ... ವೇಕಿಗಳು. ಬಿಟ್ಟು ಬಿಡಿ ಸಾರ್.

ಸಬ್ ಇ:—ಇವರಿಗೆ ತಿಳೀವೆ ಇದೇ ... ಆಗಲೇ ಅಗೋ ನೋಡಿ ಆಕೆ (ತಾರೆಯ...) ತನ್ನದೇ ಒಡವೆಯೆಂದು ಪೋಲೀಸಿಗೆ ... ಮಾಡುತ್ತೇನೆ ಅಂತಾಳಲ್ಲಾ. ಆಕೆ ಧೈರ್ಯ ... ಹೇಳ್ತೀರ ?

ಪದ್ಮ:—(ತಾರೆಯನ್ನುದ್ದೇಶಿಸಿ) ನಿಮ್ಮ ... ಮಾಡಿಸಿಕೊಟ್ಟಿದ್ದರೋ, ಅಥವಾ ಇನ್ಯಾರಾ... ಕೊಟ್ಟರೋ, ಆ ನಾನು ?....

ಸಬ್ ಇ:—(ಪದ್ಮಾಸಾನಿಯ ಕಡೆಗೆ ...) ಮಾತನಾಡಬಾರದು.

ತಾರೆಯು ವ್ಯಸನವನ್ನಭಿನಯಿಸುತ್ತಾ ... ಕಾಲಕ್ಕೆ ಲಿಂಗಾಚಾರಿಯು ಒರೆಗಲ್ಲಿನೊಡನೆ ... ಇನ್ಸ್‌ಪೆಕ್ಟರಿಗೆ ನಮಸ್ಕಾರ ಮಾಡುತ್ತಾನೆ ...

ಡ್ಡಿಕೆಯನ್ನು ಆತನ ಕೈಗೆ ಕೊಡಿಸಿ) ಒರೆ ಹಚ್ಚಿ ನೋಡಯ್ಯಾ, ಎಷ್ಟು ಬಣ್ಣ ಬರುತ್ತೋ?

(ಲಿಂಗಾಚಾರಿಯು ಕೈಗೆ ಬಿದ್ದ ನಾನಡ್ಡಿಕೆಯನ್ನು ಹಾಗೆಯೇ ಕೈತೂಕ ಮಾಡಿದಂತೆ ಮಾಡಿ, ಸಬ್ ಇನ್ಸ್ಪೆಕ್ಟರನ್ನು ನೋಡಿ) ಏನು, ಸ್ವಾಮಿ, ತೂಕವೇ ಇಲ್ಲವಲ್ಲಾ?

ಸಬ್ ಇ:—ಒರೆ ನೋಡಯ್ಯಾ ಅಂದ್ರೆ, ಏನೇನೋ ಹೇಳತೀಯೇ?

(ಆಚಾರಿಯು ಒರೆ ಇಡುತ್ತಾ ಇರುವನು.)

ಪದ್ಮ:—ಲಿಂಗಾಚಾರಿ ಹುಷಾರಾಗಿ ಒರೆಯಿಡಪ್ಪಾ, ಹಾಗೆ ತಿಕ್ಕಿದರೆ ಹೇಗೆ?

ಲಿಂಗಾ:—(ತಲೆದೂಗುತ್ತಾ, ಮತ್ತಷ್ಟು ವೇಗವಾಗಿ ತಿಕ್ಕುತ್ತಾ) ಇಲ್ಲಮ್ಮ, ಇಲ್ಲ. ಇದರಲ್ಲೆಲ್ಲಾ ಏನಾಗುತ್ತೆ?

(ಎಂದು ಹೇಳಿ ಒರೆಗಲ್ಲನ್ನು ಪರೀಕ್ಷಿಸುತ್ತಾನೆ. ಅನಂತರ ಮೊರೆಯನ್ನು ಉದ್ದ ಮಾಡಿ, ಒರೆಗಲ್ಲನ್ನು ನೋಡುತ್ತಾ, ಭ್ರಾಂತನಾದಂತೆ ಆಗಿ, ಉಜ್ಜಿದ ಭಾಗದ ನಾನನ್ನು ನೋಡುತ್ತಾನೆ. ಅಲ್ಲಿ ಕೆಂಪು ಬಣ್ಣ ವಿರುತ್ತದೆ. ಗಾಬರಿಯಿಂದ ಲಿಂಗಾಚಾರಿಯು 'ತಾಮ್ರ, ತಾಮ್ರ' ಎಂದು ಒದರುತ್ತಾನೆ. ಸಬ್ ಇನ್ಸ್ಪೆಕ್ಟರರವರೂ, ರೈಟರೂ, ಮಾಧವರಾಯರೂ, ಲಿಂಗಾಚಾರಿಯನ್ನು ಮುತ್ತಿ ಪರಿಶೀಲಿಸುತ್ತಾರೆ. ಅನಂತರ ಸಬ್ ಇನ್ಸ್ಪೆಕ್ಟರರವರು ಪದ್ಮಾ ಸಾನಿಯ ಕಡೆ ತಿರುಗಿ ಆತುರದಿಂದ).

ಸಬ್ ಇ:—ಏನಿದು?

ಪದ್ಮ:—ಏನು ಮಹಾಸ್ವಾಮಿ?

ಸಬ್ ಇ:—ಈ ನಾನು ನಿನ್ನದೇ?

ಪದ್ಮ:—ಹೌದು ಸ್ವಾಮಿ.

ಸಬ್ ಇ:—ಅಚ್ಚ ಬಂಗಾರದ್ದಲ್ಲವೇ ನಿನ್ನ ನಾನು?

ಪದ್ಮ:—ಯಾರು ಹೇಳಿದರು ಸ್ವಾಮಿ, ಹಾಗೆ?

ಸಬ್ ಇ:—(ಬೇಜಾರಿನಿಂದ) ಹಾಗಾದರೆ ನಿನ್ನ ನಾನು ಬಂಗಾರದ್ದಲ್ಲ? ಇನ್ನೆಂಥಾದ್ದು?

ಪದ್ಮ:—ರೋಲ್ಡ್‌ಗೋಲ್ಡಿಂದೇ ಸ್ವಾಮಿ. ನಿಮ್ಮ ಕೈಲಿ ರೋದು.

ಸಬ್ ಇ:—(ಕೋಪದಿಂದ) ಹಾಗಿದ್ದರೆ ರಿಪೋರ್ಟು ಮಾಡಿದ್ದೇಕೆ?

ಪದ್ಮ:—ಪತ್ತೆ ಆಗೋಕೆ ಮಹಾಸ್ವಾಮಿ. ಬಾಯಿ ಮಾತಿನಲ್ಲೂ ರೋಲ್ಡುಗೋಲ್ಡಿಂದೆಂತ ಹೇಳಿದ್ದರೆ ತಾವು ಮೊದಲಲ್ಲೇ ನನ್ನರ್ಜಿ ವಜಾ ಮಾಡುತ್ತಿದ್ದಿರಿ, ಅಂತ ಕಾಣುತ್ತೆ. ಹಾಗಾಗಿದ್ದರೆ ನನ್ನ ಒಡವೆ ಸಿಕತಾ ಇರಲಿಲ್ಲಾ?



ನಗಬೇಡಿ

"ಗುರಾಚಾರ್ಯರು ಸರೋಜೆಯನ್ನು ಮದುವೆಯಾಗುತ್ತಾರಂತೆ. ಕೇಳಿದ್ದೀರೋ ? ಅವಳಿಗೆ ಸೈಕಲ್, ಕುದುರೆ ಸವಾರಿ, ಟೆನಿಸ್, ಫುಟ್‌ಬಾಲ್ ಸಹ ಬರುತ್ತದೆ."

"ಒಳ್ಳೇ ಜೋಡಿಯಾಯ್ತು. ಗುರಾಚಾರ್ಯರಿಗೆ ಅಡಿಗೆ, ವಸ್ತ್ರ ಒಗೆಯುವದು, ಹೊಲಿಗೆಯೂ ಬರುತ್ತವೆ."

o o o o

"ಮ್ಯಾನೇಜರ್ ! ಹೋದ ವರ್ಷ ನಿಮ್ಮ ಕರ್ತೃತ್ವದಿಂದ ನಮಗೆ ಚನ್ನಾಗಿ ಲಾಭವಾಯಿತು. ತಗೊಳ್ಳಿ ಸಾವಿರ ರೂಪಾಯಿ ಚೆಕ್ಕು, ನಿಮಗೆ ಬಹುಮಾನ."

ಮ್ಯಾನೇಜರು ಉಬ್ಬಿಹೋಗಿ "ನೀವು ಬಹು ದಯಾಳು."

"ಹೌದು ಆ ಚೆಕ್ಕು ನಿಮ್ಮಲ್ಲಿರಲಿ. ಮುಂದಿನ ವರ್ಷ ಇದರ ಇಮ್ಮಡಿ ಲಾಭವಾದರೆ ಆ ಚೆಕ್ಕಿಗೆ ನನ್ನ ಸಹಿ ಹಾಕಿ ಕೊಡುವೆನು."

o o o o

ಗಿರಾಕಿ:—ಏನಯ್ಯ ! ಇಂದು ಬೆಳಿಗ್ಗೆ ಕೊಬ್ಬರಿ ಕೊಡೆಂದರೆ ಬೇವಿನೆಂಣೆ ಕೊಟ್ಟದ್ದಿ ?

ಅಂಗಡಿಕಾರ:—ಹೀಗೇನು ! ಹಾಗಾದರೆ ಇನ್ನೆರಡಾಣೆ ಹೆಚ್ಚಿಗೆ ಕೊಡಿ. ಬೇವಿನೆಂಣೆ ಸ್ವಲ್ಪ ತುಟ್ಟಿಯಾಗಿದೆ ಈಗ.

o o o o

ಮಾಸ್ತರ:—ವಿಮಾನವೆಂದರೆ ಪಕ್ಷಿಯ ಹಾಗೆ. ಪಕ್ಷಿ ಏನು ಮಾಡುತ್ತದೆ ?

ಕಿಟ್ಟು:—ತತ್ತಿ ಇಡುತ್ತದೆ.

o o o o

ಮಾಸ್ತರ:—ಮಕ್ಕಳಿರಾ, ನಾನೀಗ ಎಷ್ಟೋ ದೇಶಗಳ ಭೂಗೋಲ ಪಾಠಗಳನ್ನು ನಿಮಗೆ ತಿಳಿಸಿ ಕೊಟ್ಟೆನು. ಅವುಗಳಲ್ಲಿ ಹಿಂದುಸ್ತಾನ, ಬಲೂಚಿಸ್ತಾನ, ತುರ್ಕಸ್ತಾನ, ಇತ್ಯಾದಿಗಳು ಅಲ್ಲವೆ ? ಹಾಗಾದರೆ 'ಸ್ತಾನ' ಎಂಬ ಉಪಪದ ಜೋಡಿಸಿದ ಬೇರೆ ದೇಶಗಳ ಹೆಸರುಗಳನ್ನು ಕೆಲವನ್ನು ಹೇಳಬಲ್ಲಿರಾ ?

ಒಬ್ಬ:—ಅಫಗಾಣಿಸ್ತಾನ ಸರ್.

ಮಾಸ್ತರ:—ಮತ್ತೆ ಯಾರಾದರೂ ಹೇಳಬಲ್ಲಿರಾ ?

ಸಿಂಪಿಗರ ಹುಡುಗ:—ಅಂಗುಸ್ತಾನ ಸರ್.

o o o o

"ಪ್ರಿಯೆ, ನೀನು ನನ್ನನ್ನು ಮೊದಲಿನಂತೆ ಪ್ರೇಮಿಸುವದಿಲ್ಲ. ಬೆಳಿಗ್ಗೆ ಒಲೆ ಹೊತ್ತಿಸಲಿಕ್ಕೆ ನಾನೇ ಮೊದಲು ಏಳಬೇಕಾಗಿದೆ."

"ಛೀ ಛೀ ಪ್ರಿಯಾ, ನೀವು ಮೊದಲೆದ್ದು ಒಲೆ ಹೊತ್ತಿಸಿ ನೀರು ತಂದರೆ ಮೊದಲಿನ ಇಮ್ಮಡಿಯಷ್ಟು ನನಗೆ ಪ್ರೇಮ ಹುಟ್ಟುವದು ನಿಮ್ಮ ಮೇಲೆ."

o o o o

ಮಾಸ್ತರ:—ಒಂದು ಹತ್ತಾಂಶವೆಂದರೇನೋ ತಿಮ್ಮಾ ?

ತಿಮ್ಮ:—ನಂಗೊತ್ತಿಲ್ರಿ.

ಮಾಸ್ತರ:—ತಿನ್ನಲಿಕ್ಕೆಂದು ನಿನ್ನಲ್ಲಿ ಒಂದು ಮಾವಿನ ಹಣ್ಣು ಇದೆ. ನಿನ್ನ ಕೋಣೆಯಲ್ಲಿ ಹತ್ತು ಮಂದಿ ಮಿತ್ರರಿದ್ದಾರೆ. ಆಗ ನೀನೇನು ಮಾಡುತ್ತಿ ?

ತಿಮ್ಮ:—ಅವರೆಲ್ಲರೂ ಹೋಗುವವರೆಗೆ ಸುಮ್ಮನಿದ್ದು ಆ ಮೇಲೆ ತಿನ್ನುತ್ತೇನೆ.

o o o o

ಆತ:—ಇವತ್ತು ಆ ದೊಡ್ಡ ಗಡಿಯಾರ ಸ್ವಲ್ಪ ಲಗು ಬಿದ್ದಿದ್ದರೆ ಕೆಳಗೆ ಕೂತಿದ್ದ ನಮ್ಮ ಅಪ್ಪನ ತಲೆಯೇ ಒಡೆದು ಹೋಗುತ್ತಿತ್ತು !

ಈತ:—ಮತ್ತೆ ನಿಮ್ಮ ಗಡಿಯಾರ ಸಾವಕಾಶ ಅದೆಯೆಂದು ನಿನ್ನೆ ಹೇಳಿದಾಗ ಸಿಟ್ಟಿಗೆದ್ದೆಯಲ್ಲ.

o o o o

ತೀರ ಕುರೂಪವಾಗಿ ಯಾರು ತಮ್ಮ ಮೋರೆಯನ್ನು ವಿಕಾರಗೊಳಿಸಬಲ್ಲರೆಂಬ ಬಗ್ಗೆ ಒಂದು ದಿನ ಸ್ಪರ್ಧೆಯಿಡಲ್ಪಟ್ಟಿತ್ತು. ಸ್ಪರ್ಧಾಳುಗಳು ತಮ್ಮ ಮೋರೆಗಳನ್ನು ವಿವಿಧವಾಗಿ ವಿಕಾರಗೊಳಿಸಿ ತೋರಿಸಿದರು. ಕೊನೆಗೆ ತೀರ್ಪು ಕೊಡುವವನು ಅವರಲ್ಲಿ ಒಬ್ಬನನ್ನು ಹಿಡಿದು 'ನೀವೇ ಈ ಬಹುಮಾನಕ್ಕೆ ಯೋಗ್ಯ' ಎಂದನು. ಆತನು ಗಾಬರಿಯಾಗಿ 'ಇಲ್ಲ ಸ್ವಾಮಿ ನಾನು ನೋಡಲಿಕ್ಕೆ ಬಂದವನು, ಸ್ಪರ್ಧಾಳುವಲ್ಲ' ಎಂದನು.

o o o o

ಈಕೆ:—ಮೋಹನನು ಇಂದು ನನಗೆ ತನ್ನ ಹೃದಯವನ್ನೆ ಅರ್ಪಿಸಿದ್ದಾನೆ.

ಆಕೆ:—ಹೀಗೇನು ! ಹಾಗಾದರೆ ಎಚ್ಚರಿಕೆ ! ಅಂದು ಅವನ ಹೃದಯವನ್ನು ನಾನು ಕದ್ದಿದ್ದೇನೆಂದು ದೂರುತ್ತಿದ್ದ-

ಅಖಿಲ ಕರ್ನಾಟಕ ಮಕ್ಕಳ ಕೂಟ

[ನಿರೀಕ್ಷಕರಿಂದ]



ಮಕ್ಕಳ ಕೂಟದ ಪ್ರಾರಂಭೋತ್ಸವವನ್ನು ಜರುಗಿಸಿ ಯುವರಾಜಕುಮಾರಿಯವರು ಹೊರಗೆ ಬರುತ್ತಿರುವುದು.

ಕಳೆದ ತಿಂಗಳು ಈ ಕೂಟವು ಬೆಂಗಳೂರಿನ ಕನ್ನಡಿಗರ ಕಣಜದ ಆಶ್ರಯದಲ್ಲಿ ಮೂರು ದಿನಗಳು ಅತಿ ವಿಜೃಂಭಣೆಯಿಂದ ನೆರವೇರಿತು. ದೇಶದ ನಾನಾ ಕಡೆಗಳಿಂದ ಮಕ್ಕಳು ಬಂದು ಕಿಕ್ಕಿರಿದು ತುಂಬಿದ್ದರು. ಇಂತಹ 'ಅಖಿಲ ಕರ್ನಾಟಕ ಮಕ್ಕಳ ಕೂಟವು' ನಡೆದದ್ದು ಇದೇ ಮೊದಲು. ಇದರ ಆರಂಭೋತ್ಸವವನ್ನು ರಾಜಕುಮಾರಿ ಶ್ರೀ. ವಿಜಯಲಕ್ಷ್ಮಮ್ಮಣ್ಣಿಯವರು ನೆರವೇರಿಸಿದರು. ಕೂಟವು ವಸ್ತುಪ್ರದರ್ಶನ, ಮಕ್ಕಳ ಕವಿಸಮ್ಮೇಳನ, ವಿವಿಧ ವಿನೋದಗಳು, ಕತೆ-ಕವನಗಳನ್ನೋದುವುದು, ಮಕ್ಕಳ ಸಮ್ಮೇಳನ (Conferance) ಮುಂತಾದ ಮಕ್ಕಳ ಮನರಂಜನೆಗೆ ಸಾಧಕವಾದ ಸರ್ವ ವಿಷಯಗಳನ್ನೂ ಒಳಗೊಂಡಿತ್ತು.

ಇಂದಿನ ಮಕ್ಕಳು ಮುಂದಿನ ಜನಾಂಗ. ಆದ್ದರಿಂದ ಅವರಲ್ಲಿ ಹುದುಗಿರುವ ಎಲ್ಲ ಮಾನವಶಕ್ತಿಗಳನ್ನೂ ಕುದುರಿಸಿ ಅವರನ್ನು ಬಾಳಿಗೆ ಯೋಗ್ಯರನ್ನಾಗಿ ಮಾಡಬೇಕಾದುದು ಇಂದಿನ ಹಿರಿಯರ ಕರ್ತವ್ಯ. ಮಕ್ಕಳನ್ನು ಸುಮ್ಮನೆ ಶಾಲೆಗಳಿಗೆ ಅಟ್ಟಿ, ಪಠ್ಯಪುಸ್ತಕಗಳನ್ನು ಅರೆದು ಕುಡಿಸಿ, ನೀತಿಗಳ ಕಟ್ಟನ್ನು ಹೊರಿಸುವುದರಿಂದ ಮಾತ್ರ ಈ ಕಾರ್ಯವು ನೆರವೇರದು. ಇಷ್ಟಕ್ಕೆ ಹೆತ್ತವರ ಹೊರೆ ತೀರದು. ಅವರ ತಿಳುವಳಿಕೆಯನ್ನೂ, ಉತ್ಸಾಹವನ್ನೂ, ಹರ್ಷವನ್ನೂ ಹೆಚ್ಚಿಸುವ ಸರ್ವ ಪ್ರಯತ್ನಗಳನ್ನೂ ಕೈಗೊಂಡು ಉತ್ತಮವಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕಾದುದು ಹಿರಿಯರ ಪ್ರಥಮ ಕರ್ತವ್ಯ. ಕನ್ನಡ ನಾಡಿನ ಎಲ್ಲ ಕಲಿಗಳನ್ನೂ, ಹುಲಿ ಮರಿಗಳನ್ನೂ ಆಗಾಗ ಒಂದು ಕಡೆ ಸೇರಿಸಿದಲ್ಲಿ ಅವರವರಲ್ಲಿ ಪರಸ್ಪರ ಸ್ನೇಹ, ಪರಿಚಯಗಳುಂಟಾಗಿ ಕನ್ನಡಿಗರು ಒಂದೇ ಸಂಸ್ಕೃತಿಯ ಒಂದೇ ತಾಯಿಯ ಮಕ್ಕಳು ಎಂಬ ಭಾವವು ಅವರಲ್ಲಿ ಉದಯಿಸಿ ಒಗ್ಗಟ್ಟು ವಿಶ್ವಮೈತ್ರಿಗಳುಂಟಾಗುವುವು.

ಹಿರಿಯರು ಇಂತಹ ಕೂಟಗಳಲ್ಲಿ ತಮ್ಮ ಮಕ್ಕಳಲ್ಲಿ ಎಂತಹ ಶಕ್ತಿ-ಸಾಮರ್ಥ್ಯಗಳು ಹುದುಗಿವೆ ಎಂಬುದನ್ನು ಕಣ್ಣಾರ ಕಾಣುವಂತಾಗಿ ಈ ಮೂಲಕ ಕನ್ನಡ ನಾಡಿನ, ಕನ್ನಡ ಮಕ್ಕಳ ಏಳ್ಗೆಯಾಗಲು ಸಹಕಾರಿಯಾಗುವುದು.

ರಾಜಕುಮಾರಿಯವರು ಮಕ್ಕಳ ಕೂಟವು ಕರ್ಣಾಟಕ ದೇಶದ ಮಕ್ಕಳ ಮೇಲ್ಮೆಗೂ, ಅದರ ಮೂಲಕ ದೇಶದ ಏಳಿಗೆಗೂ ಹೇಗೆ ಅನುಕೂಲವಾಗುವುದೆಂಬುದನ್ನು ತಿಳಿಸುತ್ತಾ:

> 'ಈ ರೀತಿಯಲ್ಲಿ ನಮ್ಮ ಕನ್ನಡ ನಾಡಿನ ಮಕ್ಕಳು ಆಗಾಗ್ಗೆ ಸೇರಿ ಐಕವಾಕ್ಯ ಭಾವವನ್ನು ಬೆಳೆಸಿದರೆ, ದೇಶದ ಮೇಲ್ಮೆಗೆ ಸಹಕಾರಿಯಾಗುವುದು ಖಂಡಿತ. ಇಂತಹ ಈ ಕೂಟದ ಆರಂಭೋತ್ಸವವನ್ನು ನೆರವೇರಿಸುವುದು ನಮಗೆ ಸಂತೋಷ. ಈ ಸಂದರ್ಭದಲ್ಲಿ ಇಲ್ಲಿಗೆ ಬಂದು ಮಕ್ಕಳ ವಿನೋದಗಳಲ್ಲಿ ಸೇರುವುದಕ್ಕೆ ಅವಕಾಶ ಸಿಕ್ಕಿದುದಕ್ಕಾಗಿ ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇವೆ.'

ಎಂದು ಕೂಟವ ಆರಂಭೋತ್ಸವವನ್ನು ನೆರವೇರಿಸುತ್ತ ಭಾಷಣ ಮಾಡಿದರು.

ಎರಡನೆಯ ದಿನ ಪ್ರದರ್ಶನದ ಆರಂಭೋತ್ಸವವು ಶ್ರೀ. ಬಿ. ಯಂ. ಶ್ರೀಕಂಠಯ್ಯನವರಿಂದ ನೆರವೇರಿಸಲ್ಪಟ್ಟಿತು. ಮಕ್ಕಳಿಂದಲೇ ಮಾಡಿದ ಅನೇಕ ಪದಾರ್ಥಗಳು ಬಂದಿದ್ದವು. ಮಕ್ಕಳ ಶಕ್ತಿ ಸಾಮರ್ಥ್ಯಗಳು, ಅವರ ಬಾಳಿನ ಆನಂದ ಹರ್ಷಗಳ ಪರಿಚಯವಾಗಬೇಕಾದರೆ ಇಂತಹ ಪ್ರದರ್ಶನಗಳನ್ನು ಹಿರಿಯರು ನೋಡಲೇ ಬೇಕು. ಕೆಲಸಕ್ಕೆ ಬಾರದೆಂದು ನಾವು ಬಿಸುಡಿದ ಸಾಮಾನುಗಳನ್ನು ಸಹ ಮಕ್ಕಳು ಉತ್ತಮವಾದ ಪದಾರ್ಥಗಳನ್ನಾಗಿ ಮಾರ್ಪಡಿಸಿದ್ದವು. ಸಾಬೂನಿನ ಮೇಲೆ ಕೊರೆದಿದ್ದ ನಮ್ಮ ನಾಡಿನ ಭೂಪಟ, ಚಕ್ರವ್ಯೂಹದ ಕೋಟೆ, ಪರಿಕೆ ಕಡ್ಡಿಗಳಿಂದ ಮಾಡಿದ ಬೀಸಣಿಕೆ ಮುಂತಾದ ನೂರಾರು ಹಿರಿಯರನ್ನು ಬೆರಗುಗೊಳಿಸುವಂತಹ ವಸ್ತುಗಳು, ಪ್ರದರ್ಶನಕ್ಕೆ ಬಂದಿದ್ದವು.


ಕವಿಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ. ಶಿವರಾಮ ಕಾರಂತರು ವಹಿಸಿದ್ದರು. ಮಕ್ಕಳು ತುಂಬಾ ಉತ್ಸಾಹದಿಂದ ಕತೆ-ಕವನಗಳನ್ನು ಹೇಳಿದರು. ವಿನೋದಗಳನ್ನು ಮಾಡಿದರು. ಕೆಲವು ಮಕ್ಕಳು ತಾವೇ ಬರೆದು ಕತೆ-ಕವನಗಳನ್ನೂ ಅಂದರು. ಶ್ರೀ. ಶಿವರಾಮ ಕಾರಂತರು ಅಭಿಪ್ರಾಯ ಪಟ್ಟಂತೆ ಮಕ್ಕಳು ತಮಗೆ ಕೋರಿದ ರೀತಿ ತಾವೇ ಕತೆ ಕವನಗಳನ್ನು ಕಟ್ಟುವುದು, ನಾಟಕಗಳನ್ನು ಬರೆಯುವುದು ಮುಂತಾದುವನ್ನು ಅಭ್ಯಾಸಮಾಡುವುದು ಒಳ್ಳೆಯದು. ಈಗ ನಮ್ಮ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಮನೋರಂಜನೆಯನ್ನುಂಟು ಮಾಡತಕ್ಕ ಉತ್ತಮವಾದ ಪುಸ್ತಕಗಳು ತೀರಾ ವಿರಳ. ಹೀಗಿರುವುದರಿಂದ, ಮಕ್ಕಳಿಗೆ ವಾಚನಾಭಿರುಚಿ ಕೆಟ್ಟು ಓದಿನಲ್ಲೆಂದೂ ಸಂತೋಷವಿಲ್ಲವೆಂಬ ದೃಢವಿಶ್ವಾಸವು ಹುಟ್ಟಿದೆ. ಹೀಗಿರುವಲ್ಲಿ

ಅಂದರೆ, ಬಾಲಸಾಹಿತ್ಯದ ಪರಿಚಯವೇ ಇಲ್ಲದಿರುವಲ್ಲಿ ತಾವೇ ಈ ಕಾರ್ಯವನ್ನು ಉಪಕ್ರಮಿಸುವುದು ಹೇಗೆ? ಆದ್ದರಿಂದ ಸಮರ್ಥರಾದವರು, ಮತ್ತು ಹಿರಿಯ ಸಾಹಿತಿಗಳೂ ಈ ಬಾಲಸಾಹಿತ್ಯ ಸರಸ್ವತಿಗೆ ತಮ್ಮ ಕಾಣಿಕೆಗಳನ್ನು ಒಪ್ಪಿಸಬೇಕಾದುದು ಅತ್ಯಗತ್ಯವೆಂಬುದರ ಕಡೆಗೆ ಗಮನ ಕೊಡಬೇಕಾಗಿದೆ.

ಈ ಕೂಟದಲ್ಲಿ ಎಲ್ಲರನ್ನೂ ಮುಗ್ಧರನ್ನಾಗಿ ಮಾಡಿದ ಭಾಗವೆಂದರೆ "ಮಕ್ಕಳ ಸಮ್ಮೇಳನ". ಇದನ್ನು ನೋಡಿದ ಎಂತಹವರಿಗಾದರೂ, 'ಮಕ್ಕಳಿಂದ ನಾವೂ ಕಲಿಯ ತಕ್ಕದ್ದು ಬಹಳವಿದೆ' ಎನ್ನಿಸದೆ ಇರಲಾರದು—ಒಂದು ಮಾತಿನಲ್ಲಿ ಹೇಳುವುದಾದರೆ ಅದು ಒಂದು ಮಕ್ಕಳ ಪಾರ್ಲಿಮೆಂಟ್.

ನಾಡಿನ ನಾನಾ ಕಡೆಗಳಿಂದ ಮಕ್ಕಳು ಪ್ರತಿನಿಧಿಗಳಾಗಿ ಬಂದಿದ್ದರು. ಚಿರಂಜೀವಿ ಶೌರಿ ಎಂಬ ಬಾಲಕನು ಅಧ್ಯಕ್ಷತೆಯನ್ನು ವಹಿಸಿದ್ದನು. ಮಕ್ಕಳ ಶಾಲೆ, ಪಠ್ಯಪುಸ್ತಕಗಳು, ಆಟದ ಬಯಲುಗಳು, ಪುಸ್ತಕ ಭಾಂಡಾರಗಳು, ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕೊಡವುದು, ಸಚಿತ್ರ ಪುಸ್ತಕಗಳ ಆವಶ್ಯಕತೆ, ಮುಂತಾದವುಗಳ ಬಗ್ಗೆ ಗೊತ್ತುವಳಿಗಳು ಮಂಡಿಸಲ್ಪಟ್ಟು ಹಿರಿಯರಿಗಿಂತಲೂ ಉತ್ತಮವಾದ ರೀತಿಯಲ್ಲಿ ಚರ್ಚೆಗಳು ನಡೆದು ಅಂಗೀಕಾರವಾದವು. ಪ್ರೈಮರಿ ಶಾಲೆಗಳಲ್ಲಿ ಕನ್ನಡದ ಜೊತೆಗೆ ಹಿಂದೀ ಕಲಿಸಬೇಕು —ಎಂಬ ಗೊತ್ತುವಳಿಯ ಮೇಲೆ ಉಜ್ವಲವಾದ ಟೀಕೆಗಳು ನಡೆದು ಗೊತ್ತುವಳಿಯು ಬಿದ್ದುಹೋಯಿತು.

ಸಮ್ಮೇಳನದ ಅಧ್ಯಕ್ಷ ಚಿ|| ಶೌರಿಯ ಭಾಷಣವು ಹಿರಿಯರ ಗಮನಕ್ಕೆ ಅರ್ಹವಾಗಿದೆ. ಆದರಿಂದ ಒಂದೆರಡು ಮಾತು



ಕೆಳಗಿನಿಂದ ೨ನೆಯ ಸಾಲಿನಲ್ಲಿ ಬಲಗಡೆಯಿಂದ ೩ನೆಯವ—ಕುಮಾರ ಶೌರಿ— 'ಮಕ್ಕಳ ಸಮ್ಮೇಳನ'ದ ಅಧ್ಯಕ್ಷ. ಇದರ ಹಿಂದಿನ ಸಾಲಿನಲ್ಲಿ ಎಡಗಡೆಯಿಂದ ೨ನೆಯವರು—ಶ್ರೀಮತಿ ಆರ್. ಕಲ್ಯಾಣಮ್ಮನವರು; ಬಲಗಡೆಯಿಂದ ೨ನೆಯವರು—ಶ್ರೀ. ಟಿ. ಎಂ. ಆರ್. ಸ್ವಾಮಿಯಪ್ಪ ರು.

ಗಳನ್ನು ಇಲ್ಲಿ ಉಲ್ಲೇಖಿಸಿದೆ.

"....ನಮ್ಮ ದೇಶ ಪರಾಧೀನದಲ್ಲಿರುವ ... ಜನಾಂಗ ಹಿಂದುಳಿದ ಜನಾಂಗ, ನಮ್ಮ... ಓದು-ಬರಹ ಬಾರದು—ಎಂದು ಅನೇಕರು ... ಅಂತಹ ಜನರ ಮಕ್ಕಳಾದ ನಮಗೆ ... ವಾಗುತ್ತಿದೆ. ಈ ಅನ್ಯಾಯಗಳನ್ನು ... ವುದು ಇಂತಹ ಸಮ್ಮೇಳನಗಳಿಂದ ಸಾಧ್ಯ ... ಸೇರಿ ಈ ಅನ್ಯಾಯಗಳು ... ಒತ್ತಾಯಪಡಿಸಿ ಕೇಳಿಕೊಂಡರೆ, ಹಿರಿಯರು ... ನಮ್ಮ ಕಡೆ ನೋಡುವರು. ನಮ್ಮ ಆಸೆಗಳ್ನ ... ವರು.

ಇದು ನಮ್ಮ ಯುಗ. ನಾವೇ ಮುಂದೆ ... ಜಗತ್ತಿಗೆಲ್ಲ ನಮ್ಮಿಂದ ಉಪಕಾರವಾಗಬೇಕು ... ಈಗಿನ ನಮ್ಮ ಹಿರಿಯರಂತೆ ಆಗಬಾರದು. ... ರಲ್ಲಿ ಈಗ ಎಲ್ಲಿ ನೋಡಿದರೂ ಸ್ವಾರ್ಥ, ... ಸ್ತಾಪ, ಜಗಳಗಳೇ ತುಂಬಿವೆ. ಆದ್ದರಿಂದ ... ತಾಗಬಾರದು. ನಮ್ಮ ಕರ್ತವ್ಯವು ಬೇರೆ. ... ಶಾಂತಿ, ಕಲ್ಯಾಣ. ಅತೃಪ್ತಿ, ಅಸಮಾಧಾನ...

ನಕ್ಕುನಲಿಯುವ ಆಸೆಯಿರುತ್ತದೆ. ಶಾಲೆಗಳಲ್ಲಿಯೂ ನಮಗೆ ಸ್ವಾತಂತ್ರ್ಯ ಬೇಕು. ನಮಗೆ ಶಾಲೆಗೆ ಹೋಗಲು ಸಂತೋಷವಾಗಬೇಕು. ನಾವು ನಾಟಕ, ಹಾವಾಡಿಗ, ಡೊಂಬರರ ಆಟಗಳಿಗೆ ಹೋಗುವಂತೆ ಶಾಲೆಗೆ ಹೋಗುವಂತಾಗಬೇಕು.

ಮನೆಗಳಲ್ಲೊ ತಂದೆತಾಯಿಯರು ತಿಳಿಯದೆ ಮಾಡಿದ ಸಣ್ಣ-ಪುಟ್ಟ ತಪ್ಪುಗಳಿಗಾಗಿ ನಮ್ಮನ್ನು ಕ್ರೂರವಾಗಿ ಶಿಕ್ಷಿಸುವರು. ಅವರ ಚಿಕ್ಕಂದಿನಲ್ಲಿ ಅವರ ತಂದೆತಾಯಿಯರು ಶಿಕ್ಷಿಸಿದಾಗ ಅವರಿಗಾಗುತ್ತಿದ್ದ ವ್ಯಥೆಯು ಈಗ ಮರೆತಂತೆ ಕಾಣುತ್ತದೆ. ಈ ಎಲ್ಲ ಕಷ್ಟಗಳೂ ನಮಗೆ ಈಗ ತಪ್ಪಬೇಕಾಗಿದೆ. ಆದಕ್ಕಾಗಿ ನಾವು ಇಂತಹ ಸಮ್ಮೇಳನಗಳಲ್ಲಿ ಠರಾವುಗಳನ್ನು ಮಂಡಿಸಿ ಕಳುಹಿಸಿದರೆ ಅವರು ನಮ್ಮ ಶಕ್ತಿಯನ್ನೂ, ಒಗ್ಗಟ್ಟನ್ನೂ ನೋಡಿ ಆಶ್ಚರ್ಯಪಟ್ಟು ನಮ್ಮ ಆಸೆಗಳನ್ನು ನೆರವೇರಿಸುವರು. ನಮ್ಮ ಪ್ರಯತ್ನಗಳಿಗೆ ಜಯ ಸಿಗುವುದು— ”


—ಈ ಮಾತುಗಳನ್ನು ಕೇಳಿದ ಯಾವ ತಂದೆತಾಯಿಗಳಿಗೆ ತಾನೇ ತಮ್ಮ ಮಕ್ಕಳ ವಿಷಯದಲ್ಲಿ ಹೆಮ್ಮೆಯಾಗಲಿಕ್ಕಿಲ್ಲ?


ಈ ಕೂಟದ ಪ್ರಯುಕ್ತ ಕಂಠಪಾಠ, ಬರವಣಿಗೆ, ಗುಂಪು ಕವಾಯಿತು, ಹಗ್ಗದಾಟ ಮುಂತಾದ ಅನೇಕ ಸ್ಪರ್ಧೆಗಳು ಏರ್ಪಡಿಸಲ್ಪಟ್ಟಿದ್ದವು. ೪೦-೫೦ ಬೆಳ್ಳಿಯ ಪದಕಗಳೂ, ಒಟ್ಟಲುಗಳೂ, ನೂರಾರು ಮೆಜ್ಹೊಲೆಗಳೂ, ಇತರ ಪದಾರ್ಥಗಳೂ, ಬಹುಮಾನವಾಗಿ ಕೊಡಲ್ಪಟ್ಟವು—

ಮಕ್ಕಳ ಕೂಟದ ಕೊನೆಯ ಕಾರ್ಯಕ್ರಮವಾಗಿ ಸಂತೋಷಕೂಟವೊಂದನ್ನು ಏರ್ಪಡಿಸಲಾಗಿತ್ತು. ಮಕ್ಕಳು ತಮ್ಮ ಆಟಪಾಟಗಳನ್ನೂ ಕವನಪಠನಗಳನ್ನೂ ಪ್ರದರ್ಶಿಸಿದರು. ಹಲವು ಮಹನೀಯರು ಹಿತಸೂಚನೆಗಳನ್ನು ಕೊಟ್ಟರು. ಜಯಕರ್ನಾಟಕದ ಸಂಪಾದಕರಾದ ಶ್ರೀ. ಬೆಳಗಾವಿ ರಾಮಚಂದ್ರರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕೊನೆಯದಾಗಿ ಒಂದೆರಡು ಮಾತುಗಳನ್ನು ಬರೆಯಬೇಕಾದುದು ಅಗತ್ಯವಿದೆ. ಇಂತಹ ಕೂಟಗಳು ಆಗಾಗ ನಡೆಯಬೇಕು. ಇದಕ್ಕೆ ಸಾರ್ವಜನಿಕರ ಹಾಗೂ ಸರ್ಕಾರದವರ ಸಹಾಯ, ಸಹಕಾರ, ಸಹಾನುಭೂತಿಗಳು ಬೇಕು. ಇಂತಹ, ಮಹತ್ಕಾರ್ಯಕ್ಕೆ ಹಣವಿಲ್ಲವೆಂಬುದು ಮಹಾಪರಾಧ. ಹಿರಿಯ ಸಾಹಿತಿಗಳು ಮೂಲ ಸಾಹಿತ್ಯದ ಕಡೆಗೂ ಗಮನ ಕೊಡಬೇಕಾದುದು ಅವಶ್ಯವೆಂದು ನಮ್ಮ ನಂಬಿಕೆ.

ಮೈಸೂರಿನ ಹೊರಗಿನ ಮಕ್ಕಳು ಹೆಚ್ಚಾಗಿ ಕೂಟದಲ್ಲಿ ಭಾಗವಹಿಸಲಿಲ್ಲವೆಂದು ತಿಳಿದುಬಂದಿದೆ. ಇಂತಹ ಕೂಟಗಳು ಒಂದೆರಡು ನಡೆದು ಆದರ ಆವಶ್ಯಕತೆ, ಮುಂತಾದುವು ಹಿರಿಯರ ಗಮನಕ್ಕೆ ಬಂದಲ್ಲಿ ಅದೂ ಸಾಧ್ಯವಾಗುವುದು. ಇಂತಹ ಕಾರ್ಯಕ್ಕೆ ಮೊದಲು ಪ್ರಯತ್ನ ಪಟ್ಟ ಶ್ರೀ|| ಆರ್. ಕಲ್ಯಾಣಮ್ಮನವರಿಗೆ ನಮ್ಮ ಧನ್ಯವಾದಗಳನ್ನರ್ಪಿಸುವೆವು.





ಹರಿಹರ

ಓ ಹರಿಹರದೇವ ! ನೀನೆನ್ನೆದೆಯ ಎಳೆದಂತೆ
ಬೇರಾರು ಎಳೆದಿಲ್ಲ, ಬಾಯ್ನೀರು ಕರಸಿಲ್ಲ ।
ಬಗೆಯ ಮಾರ್ಪಡಿಸಿಲ್ಲ, ಮಿಗೆ ಸೊಗವ ಬೀರಿಲ್ಲ ॥೧॥

ರಗಳೆಯಲಿ ಚಿತ್ರಿಸಿದ ರಮ್ಯನುಡಿಯನು ನೋಡಿ
ಸೊಗಸಿನಲಿ ಹಾಡಿ ಭಾವದಲಿ ತಾನೊಡಮೂಡಿ ॥೨॥

ಸುಕುಮಾರ ಶೈಲಿಯೋಳ್ ಮನವಕ್ಕರಿಂ ಕರಗಿ ।
ಸಕಲ ಸದ್ಭಾವದೊಳ್ ಸಾತ್ವಿಕರಸಂ ಮಸಗಿ ॥೩॥

'ಪಾಲ್ದೊರೆಗೆ ಕೆಸರು ಬೆಲ್ಲವು, ಸಕ್ಕರೆಯೆ ಮಳಲು ।
ತವರಾಜ ನೆರೆತೊರೆಯು, ಜೆರೆದಂತೆ ಇರುತಿರಲು ॥೪॥

ಬೇರೆ ಕಾವ್ಯವನೋದಿ ಸೊಗಸುಗೊಳ್ಳುವ ಚಿಂತೆ ।
ಬೇರೆ ಬಾವಿಯ ತೋಡಿ ಉಪ್ಪುನೀರುಂಬಂತೆ' ॥೫॥

ನಿನ್ನ ರಗಳೆಯ ಕಾವ್ಯ ಕಾವೇರಿ ಹಿರಿಹೊನಲು ।
ಚನ್ನಕನ್ನಡಿಗರಲಿ ಈಗ ಹರಿದಿದೆ ಮಿಗಿಲು ॥೬॥

ಹರಿಹರನೆ, ಕವಿವರನೆ ! ನಿನಗೊಮ್ಮೆ ಬಾಗುವೆನು
ಪರಿಹರಿಸು ಕನ್ನಡದ ದೀನದೌರ್ಭಾಗ್ಯವನು ॥೭॥

ನಿನ್ನ ಭಕುತಿಯೊಳಿಂತು ಪೇಳ್ದೆನ್ನೈ ಚನ್ನ ।
ಇನ್ನುಳಿದ ಪಂಡಿತರು ಹೇಗಾದರೆನಲೆನ್ನ ॥೮॥

—ಶ್ರೀ ಚಂದ್ರಶೇಖರದೇವರು, ಆಡ್ನೂರು.

ದರಿದ್ರ

" ಬಿಕ್ಷೆ ನೀಡಿರಿ ಒಂದು
ಕಾಸು; ದಮ್ಮಯ್ಯ! "

" ಕುಕ್ಷಿಗೇ ಇಲ್ಲ; ಬಿ-
ಕ್ಷೆಯೇ? ಹೋಗಯ್ಯ!

" ಹೊತ್ತಾರೆಯಿಂದ ದೊರೆ-
ತಿಲ್ಲಕ್ಕಿಕಾಳು! "

" ದುಡಿದೊಡಲ್ಲದೆ, ತೊತ್ತೆ!
ದೊರೆಯುವುದೆ ಕೂಳು? "

" ಗೈಯುವೆನು; ಕೆಲಸವಾ-
ದರು ಕೊಡಿರಿ: ಒಡೆಯ! "

" ಕೆಲಸವೆಮಗೇ ಇಲ್ಲ:
ನಿನಗೆಲ್ಲಿ ತರುವ? "

" ಕಣ್ಣಿಲ್ಲ; ಕಾಲಿಲ್ಲ;
ಪರದೇಶಿ, ತಂದೆ! "

" ಈ ಆಟವನ್ನೆಲ್ಲಿ
ನೀ ಕಲಿತುಬಂದೆ?"

" ಹೊಟ್ಟೆಗಿಲ್ಲದೆ, ಮಕ್ಕ-
ಳಯ್ಯೊ, ಸಾಯುವರು!"

" ನಿಮ್ಮವರ ಹೊಟ್ಟೆಯಲಿ
ಹುಟ್ಟಿ ಏಗುವರು? "

" ಒಂದು ಹಿಡಿ ಅಕ್ಕಿಯನು
ಹಾಕಿ, ಮಾರಿ! "

" ಮೊದಲಾಚೆ ನಡೆ, ಹೊಲೆಯ!
ಕಳ್ಳ ಸೋಮಾರಿ! "

* * *


" ಎಂತೆಂತು ಬೇಡಿದರು
ನಿನ್ನ ಸಿರಿಸುತರು

ಕರುಣೆದೋರರು; ಬಡತ-
ನಕೆ, ಕುರುಡರವರು!

" ಓ, ತಂದೆ! ಸಾಕಾಯ್ತು
ಈ ಭವದ ಬಾಳು;

ದೇವ, ಕರಕೊಳ್ಳೆಮ್ಮ:
ಕರುಣೆಯನು ತಾಳು! "

—ಟಿ. ಎಸ್. ಶ್ರೀನಿವಾಸ ಮೂರ್ತಿ; ಮೈಸೂರು.



ಬಸವಣ್ಣನವರ ಬೆಳವಣಿಗೆ

ಲೇಖಕರು : ಶ್ರೀ. ಅ. ನ. ಕೃಷ್ಣರಾಯರು, ಬೆಂಗಳೂ...

●

ಸಿರಿ ಮುದವನ್ನು ಮುರಿಯಲು ಕೇವಲ ದಾ... ವನ್ನೇ ಬಸವಣ್ಣನವರು ಅಪ್ಪಿಬಿಟ್ಟರು. ಪ... ನವು ಕೈಸ್ವಲ್ಲಕವೆಂದು ತಮ್ಮ ದಾಂಪತ್ಯಜೀವನ... ದಿನಗಳಲ್ಲಿಯೇ ಸ್ವತಂತ್ರವಾಗಿ ನಿರಾಡಂಬರ ... ಸಾಗಿಸುತ್ತಿದ್ದರು. ತಮಗೆ ಸಿರಿಪದವಿಗಳು ... ಅವುಗಳನ್ನು ಲಿಂಗ ಜಂಗಮದ ಸೇವೆಗೆ ಸಮರ್ಪಿ... ನಿಷ್ಕಾಮಕರ್ಮವೇ ಅವರ ಜೀವನ ಬೋಧೆಗೆ ... ಬೆಳಕನ್ನು ಕೊಟ್ಟಿರುವುದು. ಜಾತಿ ಕುಲಗಳ ... ಅಧಿಕಾರಗಳ ಹೆಮ್ಮೆ, ಮಡದಿ ಮಕ್ಕಳ ಬಂಧ... ಬುದ್ಧಿಗಳ ಬಡಿವಾರಗಳೆಲ್ಲವನ್ನೂ ಹಟದ ... ಜಯಿಸಿ ಬಸವಣ್ಣನವರು ಕ್ರಾಂತಿ ಪುರುಷ... ... ... ಭಂಡಾರಿಗಳೂ ಆದರು. ...

●

ಬಸವಣ್ಣನವರು ಕ್ರಾಂತಿಪುರುಷರು, ಸೀಮಾಪುರುಷರು, ಭಕ್ತಿಭಂಡಾರಿಗಳು—ಎಲ್ಲಕ್ಕೂ ಹೆಚ್ಚಾಗಿ ಉಜ್ವಲ ಸಾಧಕರು. ಅವರ ಜೀವನದ ಪ್ರಗತಿಯು ಸಾಧನೆಯ ಮೂಲ ಸೂತ್ರವನ್ನೇ ಅರಸಿದೆ. ಸಿಂಗಿರಾಜಾದಿ ಪುರಾಣಕಾರರು ಹೇಳುವಂತೆ ಪರಶಿವನಿಂದ ಶಪಿತರಾಗಿ, ಆಜ್ಞಪ್ತರಾಗಿ ಲೋಕದಲ್ಲಿ ಅವರು ಕಾರಣ ಪುರುಷರಾಗಿ ಹುಟ್ಟಿದರೋ ಅಥವಾ ಕೇವಲ ತಮ್ಮ ಸಾಧನ ಬಲದಿಂದ ಆತ್ಮನ ಉತ್ಕ್ರಾಂತಿಯನ್ನು ಸಾಧಿಸುವ ಸಾಹಸದಿಂದ ಕಾರಣ ಪುರುಷತ್ವವನ್ನು ದೊರಕಿಸಿಕೊಂಡರೋ, ಅಂತೂ ಅವರ ಜೀವನೇತಿಹಾಸವು ವಿಚಾರಣೀಯವೂ, ಅನುಕರಣೀಯವೂ ಆಗಿದೆ.

ಬಸವಣ್ಣನವರದು ಆಧ್ಯಾತ್ಮಿಕ ಜಗತ್ತು. ವೇದಗಳಿಗೂ ವಾದಗಳಿಗೂ ದೂರವಾದ ಬಯಲು. ಹಿರಿದು ಕಿರಿದನ್ನೆಣಿಸದ, ಸರ್ವತಂತ್ರ ಸ್ವತಂತ್ರ ಸೀಮೆ. ಆ ಜಗತ್ತನ್ನು ಜಯಿಸಿ ಅಲ್ಲಿನ ಏಕಚಕ್ರಾಧಿಪತಿಗಳಾಗಿ ಬಸವಣ್ಣನವರು ಮೆರೆದರು. ತಮ್ಮ ಅಜೇಯ್ಯ ಶಕ್ತಿಯನ್ನು ಸ್ಥಾಪಿಸಿ ಲೋಕಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟರು. ಈ ಮಹಾಕಾರ್ಯದಲ್ಲಿ ಬಸವಣ್ಣನವರು ಅನೇಕ ಎಡರು-ತೊಡರುಗಳನ್ನು ಅನುಭವಿಸಬೇಕಾಯಿತು. ಬ್ರಾಹ್ಮಣಜಾತಿ ಹಿರಿದು, ಬ್ರಾಹ್ಮಣನೇ ಶ್ರೇಷ್ಠ ಎಂಬ ಕಲ್ಪನೆ ರೂಢಿಮೂಲವಾಗಿತ್ತು; ಬಸವಣ್ಣನವರು ಶೈವ ಬ್ರಾಹ್ಮಣ... ಈ ಜಾತಿ ಸೂತಕ ಅವರು ಹುಟ್ಟುತ್ತಲೇ ... ತಾರುಣ್ಯದಲ್ಲಿ ಜಾತವೇದಿ ಮುನಿಗಳ ಕೃಪೆ... ದಾಂಗ ಪಾರಂಗತತೆಯೂ, ಚತುಶ್ಶಾಸ್ತ್ರ ... ಸಿತ್ತು. ಕರ್ಮದ ಕೈ ಅಲ್ಲಿಗೇ ನಿಲ್ಲಲಿಲ್ಲ. ಬ... ಮಂತ್ರಿಯ ಅಳಿಯನನ್ನಾಗಿ ಮಾಡಿತು; ... ಮಂತ್ರಿ ಪಟ್ಟಕ್ಕೇರಿಸಿತು. ಆಧ್ಯಾತ್ಮಿಕ ಸ... ಳಾದ ಜಾತಿ ಕುಲಗಳ ಹೆಮ್ಮೆ, ಧನ ಅಧಿ... ಮಡದಿ ಮಕ್ಕಳ ಬಂಧನ, ವಿದ್ಯಾಬುದ್ಧಿಗ... ಲ್ಲವೂ ಬಸವಣ್ಣನವರ ಜೀವನದಲ್ಲಿ ... ಕೊಂಡವು. ಲೋಕಸಂಗ್ರಹಕ್ಕೆ ಹಟ... ಆಧ್ಯಾತ್ಮಶಿಶುವನ್ನು ಇಡೀ ಪ್ರಕೃತಿಯೇ ... ನಲ್ಲಿ ವಿರೋಧಿಸುತ್ತಿದ್ದಂತಿದ್ದಿತ್ತು.

ಪ್ರಕೃತಿಯು ಬಸವಣ್ಣನವರ ಮುಂದೆ ... ಮಹಾಶಕ್ತಿಯಂತೆ ನಿಂತಿತ್ತು. ತನ್ನ ... ವಿಲಾಸದ ಮುಂದೆ ಈ ಅಲ್ಪ ಮಾನವನ ... ಏಡಿಸುತ್ತಿತ್ತು. ಬಸವಣ್ಣನವರು ಈ ... ಧಿಗಳನ್ನು ಎದುರಿಸಲು-ಕಾದಿ ಜಯಿಸಲು ... ದರು. ಅವರಂದು ಆ ಮಹಾಸಮರ...

ನಾವಿಂದು — ಎಂಟು ಶತಮಾನಗಳಾಗಿದ್ದರೂ — ಅವರ ಪವಿತ್ರ ನಾಮವನ್ನು ಜಾನಿಸಿ ಪೂಜಿಸುವುದು.

ಬಸವಣ್ಣನವರು ಮೊದಲು ಜಾತಿಯ ಶ್ರೇಷ್ಠತೆಯನ್ನು ತೊಡೆದು ಹಾಕಬೇಕಾಗಿತ್ತು. ತಾವು ಬ್ರಾಹ್ಮಣ ಜಾತಿಯಲ್ಲಿ ಜನಿಸಿದ್ದರೂ ಆಧ್ಯಾತ್ಮಿಕ ಸಂಪತ್ತಿನಲ್ಲಿ ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ ರೀತಲೂ ಅಧಿಕರಲ್ಲವೆಂಬುದನ್ನು ಕಂಡುಕೊಂಡಿದ್ದರು. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ' ಕಷ್ಟತನದ ಹೊರೆಯ ಹೊರಿಸದಿರಯ್ಯ '—' ಅಸು ಹಾರುವನೆಂದಡೆ ಕೂಡಲ ಸಂಗಯ್ಯ ನಗುವನಯ್ಯ.' ಜಾತಿಮದವನ್ನು ಮುರಿಯಲು ತ್ರಿಕರಣಪೂರ್ವಕವಾಗಿ 'ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ; ನಮ್ಮ ತಾಯಿ ಸಿಂಬಿಯನ್ವೆ, ನಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು' ಎಂದು ನಂಬಿದ್ದರು. ಶಿವನಲ್ಲಿ ನಚ್ಚಿದ ಭಕ್ತಿಯನ್ನಿಟ್ಟವ್ದ ಎಲ್ಲರನ್ನೂ ತಮ್ಮ ಆತ್ಮೀಯರಂತೆ ಸ್ವೀಕರಿಸಿದರು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚರ ಕಡೆಯಾಗಿ ಭವಿಯಾದವರನೆಲ್ಲರನೊಂದೇ ಎಂಬೆ. ಹೀಗೆಂದು ನಂಬುವುದೆನ್ನ ಮನವು' ಎಂದು ತಮ್ಮ ನಿರ್ಣಯವನ್ನು ನಿರ್ದಾಕ್ಷಿಣ್ಯವಾಗಿ ಸೂಚಿಸಿಬಿಟ್ಟರು. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ, ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ಕೂಡಲಸಂಗಮದೇವಾ ಎನಗಿದೇ ದಿಬ್ಯ" ಎನ್ನುವ ವಚನವನ್ನು ತಮ್ಮ ಜೀವನದ ಧ್ರುವತಾರೆಯನ್ನಾಗಿ ಸ್ವೀಕರಿಸಿ, ಪ್ರತಿಯೊಂದು ಹೆಜ್ಜೆಯಲ್ಲಿಯೂ ಕಿರಿತನವ ಸಾರಿ ಹಿರಿತನವ ತೋರುತ್ತಾ ನಡೆದರು.

ಬಸವಣ್ಣನವರನ್ನು ಆದಿಶರಣ, ಶೈವಾಚಾರಸಂಪನ್ನ, ಷಟ್ಸ್ಥಲಸಂಪನ್ನ ಎಂದು ಮೊದಲಾಗಿ ಲೋಕವೆಲ್ಲ ಹೊಗಳುತ್ತಿದ್ದಾಗ, ವೈದಿಕ ಲೌಕಿಕ ಎರಡು ರಂಗಗಳಲ್ಲಿ ಅವರ ಮಾತನ್ನು ವೇದವಾಕ್ಯವೆಂದು ಒಪ್ಪಿಕೊಳ್ಳುತ್ತಿದ್ದಾಗ "ಎನ್ನ ವರೊಲಿದು, ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತ್ತಲ್ಲಾ. ಅಯ್ಯೋ! ನಿಮ್ಮ ಮನ್ನಣೆಯೆ ಮಸದಲಗಾಗಿ ತಾಗಿತ್ತಯ್ಯಾ. ಅಯ್ಯೋ! ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗಳತೆಗಡ್ಡ ಬಾರಾ ಧರ್ಮಿ" ಎಂದು ನೋಯುತ್ತಿದ್ದರು. ತಮ್ಮ ವಿದ್ಯಾಸಂಪತ್ತಿಯನ್ನು ಶ್ಲಾಘಿಸಿದವರಿಗೆ

"ಓದಿದರೇನು, ಕೇಳಿದರೇನು, ಶಿವಪಥವನರಿಯದನ್ನಕ್ಕರ? ಓದಿತ್ತು ಕಾಣಿರೋ ಶುಕನು. ಶಿವಜ್ಞಾನವನ್ನರಿಯದನ್ನಕ್ಕ ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು ಕೂಡಲಸಂಗಮದೇವಾ"

ಎಂದು ಹೇಳುತ್ತಿದ್ದರು. ಮಾತು ಗೀತಗಳನ್ನು ಬಲ್ಲವನು ಜಾಣನಲ್ಲ; ಲಿಂಗವ ನೆರೆನಂಬಿ ಜಂಗಮದ ಸೇವೆಯನ್ನು ಮಾಡುವಾತ ಜಾಣ. ಸಾಕ್ಷಾತ್ ಮೃತ್ಯುವನ್ನು ಯಾವನು ಜಯಿಸುವನೋ ಅವನು ಜಾಣ. ಎಂದು ವಿದ್ಯಾ, ಬುದ್ಧಿ, ಜಾಣತನ ಇವುಗಳಿಗೆ ಹೊಸ ಮಾನದಂಡವನ್ನೇ ನಿರ್ಮಿಸಿದರು.

ಸಿರಿಮದವನ್ನು ಮುರಿಯಲು ಕೇವಲ ದಾರಿದ್ರ್ಯಜೀವನವನ್ನೇ ಬಸವಣ್ಣನವರು ಅಪ್ಪಿಬಿಟ್ಟರು. ಪರಾಶ್ರಯ ಜೀವನವು ಕ್ಷುಲ್ಲಕವೆಂದು ಭಾವಿಸಿ ತಮ್ಮ ದಾಂಪತ್ಯ ಜೀವನದ ಆರಂಭದ ದಿನಗಳಲ್ಲಿಯೇ ಸ್ವತಂತ್ರವಾಗಿ ನಿರಾಡಂಬರ ಜೀವನವನ್ನು ಸಾಗಿಸುತ್ತಿದ್ದರು. ತಮಗೇ ಸಿರಿಪದವಿಗಳು ದೊರೆಯಲು, ಅವುಗಳನ್ನು ಲಿಂಗ ಜಂಗಮದ ಸೇವೆಗೆ ಸಮರ್ಪಿಸಿಬಿಟ್ಟರು. ಸಿರಿಪದವಿಗಳ ಅಸ್ಥಿರತೆಯನ್ನು ಬಸವಣ್ಣನವರು ಚೆನ್ನಾಗಿ ಅರಿತಿದ್ದರು. ಅವುಗಳ ತಾತ್ಕಾಲಿಕ ಪ್ರಭೆಗೆ ಕಣ್ಣುತೆರೆದು ಅಂಧರಾಗುವ ಜನರನ್ನು ಸಮಯದನುವು ದೊರೆತಾಗಲೆಲ್ಲಾ ಎಚ್ಚರಿಸುತ್ತಿದ್ದರು.

"ಹಾವ ತಿಂದವರ ನುಡಿಸಬಹುದು. ಗರ ಹೊಡೆದವರ ನುಡಿಸಲುಬಹುದು. ಸಿರಿಗರ ಹೊಡೆದವರ ನುಡಿಸಲು ಬಾರದು. ಬಡತನವೆಂಬ ಮಂತ್ರವಾದಿ ಹೊಗಲು, ಒಡನೆ ನುಡಿವರಯ್ಯಾ, ಕೂಡಲ ಸಂಗಮದೇವಾ"

"ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾನು ಮರೆದೆನಯ್ಯ! ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ. ಹಡಕಿಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೇ ಕೂಡಲಸಂಗಮದೇವಾ"

ಎಂದು ತಮ್ಮ ಅನುಭವವನ್ನೇ ಜನತೆಯ ಮುಂದೆ ಬಿಚ್ಚಿಟ್ಟಿದ್ದಾರೆ.

ಬಸವಣ್ಣನವರು ಕಪ್ಪಡಿ ಸಂಗಮಕ್ಷೇತ್ರದಲ್ಲಿ ಗುರುಕುಲದಲ್ಲಿದ್ದಾಗಲೇ ಅವರಿಗೆ ಗುರುಗಳ ಮೂಲಕ ವಿವಾಹದ ಕರೆ ಬಂತು. 'ಈ ಮಾಯಾರೂಪಕ್ಕೆ ನನ್ನನ್ನೇತಕ್ಕೆ ತಳ್ಳುವಿರಿ' ಎಂದು ಬಸವಣ್ಣನವರು 'ಗೋಳೋ' ಎಂದು ಅತ್ತರಂತೆ.

ಜಾತವೇದ ಮುನಿಗಳು ಸಂತೈಸುತ್ತಾ 'ನೀನು ಕಾರಣ ಪುರುಷ. ಲೊಗರಂತೆ ವಿವಾಹಿತನಾಗಿ ಲೋಕದ ಹಿತ ವನ್ನು ನೀನು ಸಾಧಿಸಬೇಕಾಗಿದೆ. ನಿನ್ನ ಮಡದಿಯು ನಿನ್ನ ಧರ್ಮಕಾರ್ಯಕ್ಕೆ ನೆರವಾಗುತ್ತಾಳೆ—ಚಿಂತಿಸಬೇಡ' ಎಂದು ಆಶೀರ್ವದಿಸಿದರು. ಸ್ತ್ರೀಜನಾಂಗದ ಬಗ್ಗೆ ತಮ ಗಿದ್ದ ಅಪೂರ್ವ ಗೌರವದಿಂದ ಸ್ತ್ರೀಸಂಕುಲವನ್ನೇ ಬಸ ವಣ್ಣನವರು ಮೇಲಕ್ಕೆತ್ತಿದರು. 'ಪರವಧುವನು ಮಹಾ ದೇವಿ ಎಂದು ಕಾಂಬೆನು' ಎಂದು ಹೇಳಿದುದು ಮಾತ್ರ ವಲ್ಲದೆ ಅಕ್ಕಮಹಾದೇವಿಯೇ ಮೊದಲಾಗಿ ಪ್ರತಿಯೊಬ್ಬ ಸ್ತ್ರೀಯ ವಿಚಾರದಲ್ಲಿಯೂ ಅತ್ಯಂತ ವಿನಯ ಗೌರವ ಗಳಿಂದ ವರ್ತಿಸುತ್ತಿದ್ದರು. 'ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರ ಹೋಗದೆ ಇಪ್ಪ ಇರವು ನಮ್ಮ ಮಹಾದೇವಿ ಯಕ್ಕಂಗಾಯಿತ್ತು' ಎಂದು ಮಹಾದೇವಿಯಕ್ಕನಿಗೆ ಹೆಚ್ಚಿನ ಸ್ಥಾನವನ್ನಿತ್ತಿದ್ದರು.

ತಮ್ಮ ಸಾಧಕವೃತ್ತಿಯಲ್ಲಿ ಬಸವಣ್ಣನವರಿಟ್ಟ ಮತ್ತೊಂದು ಹೆಜ್ಜೆ ಸ್ತ್ರೀಜನಾಂಗಕ್ಕೆ ಅತ್ಯಂತ ಭೂಷಣ ಪ್ರಾಯವಾಯಿತು. ಲಿಂಗವನ್ನೇ ಪತಿಯೆಂದು ಭಾವಿಸಿ ತಾವೇ ಸತಿಯೆಂದು ಬಸವಣ್ಣನವರು ಭಾವಿಸಲಾರಂಭಿಸಿ ದರು.

"ಎಲ್ಲ ಗಂಡರ ಪರಿಯಂತಲ್ಲ, ನೋಡಲೆಗವ್ವ. ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ, ಕೂಡಲಸಂಗಮದೇವ ತನ್ನಲ್ಲೆನ್ನ ಬೈಚಿಟ್ಟನಾಗಿ."

"ಎನ್ನ ಗಂಡ ಬರಬೇಕೆಂದು ಎನ್ನಂತರಂಗವೆಂಬ ಮನೆಯ ತೆರಹುಮಾಡಿ, ಅಷ್ಟದಳ ಕಮಲವೆಂಬ ಜವರಿ ಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ, ಧ್ಯಾನ ಮೌನವೆಂಬ ಮೇಲುಕಟ್ಟು ಕಟ್ಟಿ, ಜ್ಞಾನವೆಂಬ ದೀಪವ ಬೆಳಗಿ, ನಿಷ್ಕ್ರಿಯೆಗಳೆಂಬ ಉಪಕರಣಗಳು ಹರಹಿ ಕೊಂಡು ಪಶ್ಚಿಮದ್ವಾರವೆಂಬ ಬಾಗಿಲ ತೆಗೆದು, ಕಂಗಳೇ ಪ್ರಾಣವಾಗಿ ಹಾರುತಿರ್ದೆನಯ್ಯ. ನಾನು ಬಾರೆನೆಂದು ಉಮ್ಮಳಿಸಿಹೆನೆಂದು ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡಡೆ, ಎನ್ನ ಮನದ ಬಯಕೆ ಸಯವಾಯಿತ್ತು. ಹಿಂದೆ ಹನ್ನೆರಡು ವರ್ಷದಲ್ಲಿ ಚಿಂತೆಯಿಂದ ನಿಶ್ಚಿಂತವಾಯಿತ್ತು. ಕೂಡಲ ಸಂಗವ ದೇವ ಕೃಪಾಮೂರ್ತಿಯಾದ ಕಾರಣ ನಾನು ಬದುಕಿ ದೆನು."

"ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆ ನವ್ವ? ಅಂಗವಿದ್ಯೆಯನೊಲ್ಲ ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ್ಯ. ಕೈದೊಳೆದಲ್ಲದೆ ... ಲೀಯ್ಯ. ಕಾಲುದೊಳೆದಲ್ಲದೆ ಹೊದ್ದಲೀಯ್ಯ. ಸರ್ವಾಂಗ ಸಲೆದೊಳೆದ ಕಾರಣ ಕೂಡಲ ಸಂ... ನೆನ್ನ ಕೂಡಿಕೊಂಡನವ್ವಾ."

"ಅರಸರು ಮಂಚಕ್ಕೆ ಬರಿಸಿ ಎನ್ನ ... ಅನಂಜುವಳೇ? - ಅನು ಸಿರಿಯಕ್ಕನ... ಮುಟ್ಟಿದ ಬಳಿಕ, ಲೋಹವೇ? ಕೂಡಲ... ಎನ್ನನೊಲ್ಲದಡಾನು ಬದುಕುವನೇ?"

ಈ ಮಧುರ ಸಂಬಂಧವು ಅವರ ಆತ್ಮ... ಬಳಿಗೆ ಒಯ್ಯಿತು. ಒಣ ವಿಚಾರ, ತರ್ಕ, ... ಮಾಡದಿದ್ದ ಮಹಾಕೆಲಸವನ್ನು ಈ ಅನುಭಾವ... ಸಿತು. ದೇವರನ್ನು ಹೆಣ್ಣೆಂದು ಭಾವಿಸಿ ಸ...



ಶ್ರೀ ಬಸವೇಶ್ವರರು

* God is the Saqi and The Wine
He Knows what Manner of Lo...
—Jalaluddin Rumi (Saqi = C...

ತಮ್ಮ ಉತ್ಕ್ರಾಂತಿಯನ್ನು ಸಾಧಿಸಿದಂತೆ ಬಸವಣ್ಣನವರು ತಾವು ಹೆಣ್ಣೆಂದೂ ದೇವರು ಗಂಡೆಂದೂ ಭಾವಿಸಿ ಸತಿಪತಿ ರೀತಿಯಿಂದ ಪ್ರೇಮಮೂರ್ತಿಯ ಜಲವನ್ನು ಸಂಪಾದಿಸ ಲೆತ್ನಿಸಿದರು.

ಇಂತು ತಮ್ಮ ಜೀವನದ ಉಪಾಧಿಗಳನ್ನು ತೊಡೆದು ಭಕ್ತಿಯ ಬಾಗಿಲಿನಲ್ಲಿ ನಿಂತರು. ಅಂತರಂಗ ಬಹಿರಂಗ ಶುದ್ಧರಾಗಿ ಈಶನ ಹೃದಯ ಮಂದಿರವನ್ನು ಪ್ರವೇಶಿಸ ಲನುವಾದರು. ತಮ್ಮ ಯೋಗ್ಯತೆಯಲ್ಲಿ ತಮಗೇ ಅಪ ನಂಬಿಕೆ. ಎಷ್ಟೆಷ್ಟು ಅಳೆದು ಸುರಿದರೂ, ಅಂತರಂಗವನ್ನು ಎಷ್ಟೆಷ್ಟು ಶೋಧಿಸಿದರೂ ತೃಪ್ತಿಯಾಗದು, ಆತ್ಮಶೋಧದ ಆಶೆ ಅಡಗದು. "ಆನು ಭಕ್ತನಲ್ಲವಯ್ಯಾ, ವಂಚಕ ನಯ್ಯಾ, ಡಾಂಭಿಕನಯ್ಯಾ." ಸ್ಥೈರ್ಯಸ್ಥಿತಿಗೆ ಬರದೆ ಮರದ ಮೇಲಣ ಮರ್ಕಟನಂತೆ ಅತ್ತಿಂದಿತ್ತ ಹಾರಾಡು ತ್ತಿದ್ದ ಮನಸ್ಸನ್ನು ಹಳಿಯುವರು. ಅದನ್ನು ಹೊರಗೆ ಅಂದವಾಗಿ ಕಂಡು ಒಳಗೆ ಹುಳುವಿನ ಹುತ್ತದಂತಿರುವ ಅತ್ತಿಹಣ್ಣಿಗೆ ಹೋಲಿಸುವರು. ಈ ಭಕ್ತಿಸಾಧನೆಯ ಅನು ಭವವನ್ನು ಹೃದಂಗಮವಾಗಿ ವರ್ಣಿಸಿದ್ದಾರೆ.

"ಭಕ್ತಿಯೆಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು, ಘಟಸರ್ಪನಲ್ಲಿ ಕೈದುಡುಕಿದರೆ ಹಿಡಿವುದು ಮಾಬುದೇ ಕೂಡಲ ಸಂಗಮದೇವಾ."

"ಒಡೆಯರಿಗೊಡವೆಯನೊಪ್ಪಿಸಲಾರದೆ ಮೊರೆ ಇಡುವ ಮಾನವ ನಾನೇನೆಂಬೆ ? ನೆತ್ತಿಯಲ್ಲಿ ಅಲಗು ತಿರುಹು ವಂತಪ್ಪ ವೇದನೆಯಹುದೆನಗೆ. ಕೊಯ್ದ ಮೂಗಿಂಗೆ ಕನ್ನಡಿಯ ತೋರುವಂತಪ್ಪ ವೇದನೆಯಹುದೆನಗೆ. ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ ವೇದನೆಯ ಹುದೆನಗೆ. ಕೂಡಲ ಸಂಗಮದೇವ ಮಾಡಿ ನೋಡುವ ಹಗರಣವ ನಾ ಮಾಡಿಹೆನೆಂದರೆ ಮನಕ್ಕೆ ಮನ ನಾಚದೆ ಅಯ್ಯಾ."


ಅತುಲವಾದ ಈ ವೇದನೆಯ ಜತೆಗೆ ತಾವು ಕುಳಿತಿರುವ ಭಕ್ತಿ ಪರೀಕ್ಷೆಯ ಸ್ವಭಾವಜ್ಞಾನ.

"ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋವೆ ನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವ ನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು, ಇವಕ್ಕೆಲ್ಲಕಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವಾ."

ಈ ಪರೀಷೆಗಳನ್ನು ಕೊಡುವ ವೇಳೆಗೆ ಭಕ್ತನ ಭಕ್ತಿ ಶಕ್ತಿಗಳೆರಡೂ ಉಡುಗೇ ಹೋಗುತ್ತವೆ. ಜಯಶಾಲಿ ಗಳಾಗಿ ಬರುವ ಒಬ್ಬಿಬ್ಬರು ಬಸವಣ್ಣನವರಂತೆ ಲೋಕದ ಆದರ್ಶವ್ಯಕ್ತಿಗಳಾಗುತ್ತಾರೆ. ಈ ಭಕ್ತಿಸಾಧನೆ ಮಾಡುವ ಸಾಧಕನು ಕೋರುವುದೇನನ್ನು ? ಧನ ಕನಕ ವಾಹನ ವನಿತೆಯರನ್ನು ಬೇಡಬಹುದು. ಎಲ್ಲಕ್ಕೂ ಅಮೂಲ್ಯವಾದ ಕೈಲಾಸವನ್ನು ಬೇಡಬಹುದು. ಬಸವಣ್ಣನವರು ಬೇಡು ವುದು

"ಎದೆ ಬಿರಿವನ್ನಕ್ಕ. ನಾಲಿಗೆ ನಲಿನಲಿದೋಲಾಡು ವನ್ನಕ್ಕ ನಿನ್ನ ನಾಮಾಮೃತವ ತಂದಿರಿಸು ಕಂಡಯ್ಯಾ ಎನಗೆ ಎನ್ನ ತಂದೆ. ಬಿರಿ ಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀ ಚರಣದ ಮೇಲೆ ಬಿದ್ದುರುಳುಗೆ ಕೂಡಲ ಸಂಗಮದೇವಾ."

ನಿಷ್ಕಾಮಕರ್ಮವೇ ಬಸವಣ್ಣನವರ ಜೀವನ, ಬೋಧೆಗಳಿಗೆ ಹೆಚ್ಚು ಬೆಳಕನ್ನು ಕೊಟ್ಟಿರುವುದು. ಮಾಲೆ ಗಾರನ ಕೇಳಿ ನನೆಯರಳುವದೇ ಎಂದು ಅವರೇ ಕೇಳಿ ದಂತೆ ಭಕ್ತಿಸಾಧನೆಯು ಗುರಿ ಬದ್ಧವಾದುದಲ್ಲ, ಆಶಾ ಪೂರ್ಣವಾದುದಲ್ಲ, ಲೋಭಮಯವಾದುದಲ್ಲ. ಅದರ ಉದ್ದೇಶ ಬಯಲು, ನಿರವಯವ, ಶೂನ್ಯ. ಬಸವಣ್ಣನವರು ಈ ಗುರಿಯನ್ನು ಮುಟ್ಟಿದರು. ದೇವರು ಮೆಚ್ಚಲಿ, ಮೆಚ್ಚ ದಿರಲಿ, ಒಲಿಯಲಿ ಒಲಿಯದಿರಲಿ ತನ್ನ ಭಕ್ತಿಯನ್ನು ಮಾಣೆ ನೆನ್ನುವಷ್ಟು ಹದನಾದರು. ಅವರ ಮನಸ್ಸು ಹಸನಾದಂತೆ ಲೋಕದ ಮನಸ್ಸನ್ನೂ ಚಿತ್ತವೃತ್ತಿಯನ್ನೂ ಅಷ್ಟೇ ಹಸನು ಮಾಡಬೇಕೆಂದು ಬಯಸಿದರು.



ಜ್ಞಾನ—ವಿಜ್ಞಾನ

ಸತ್ತ ಸೈನಿಕರು ದೇವರಾಗುವರು !

ಜಪಾನಿನಲ್ಲಿ ರಾಷ್ಟ್ರಾಭಿಮಾನವೂ ಒಂದು ಧರ್ಮವೇ ಆಗಿದೆ. ಜಪಾನಿಗಳು ಸ್ವಾತಂತ್ರ್ಯವನ್ನು ಮಿಕ್ಕೆಲ್ಲ ಸುಖಗಳಿಗಿಂತ ಹೆಚ್ಚೆಂದು ಭಾವಿಸಿದ್ದಾರೆ. ಆದುದರಿಂದಲೇ ಅಷ್ಟು ಚಿಕ್ಕ ದೇಶವು ನಿರ್ದಾಕ್ಷಿಣ್ಯವಾಗಿ ದೊಡ್ಡ ದೊಡ್ಡ ರಾಷ್ಟ್ರಗಳ ಮೋರೆಯ ಮೇಲೆ ಹೊಡೆಯುತ್ತಿದೆ. ಸ್ವದೇಶಕ್ಕಾಗಿ ಹೋರಾಡಿ ರಣರಂಗದಲ್ಲಿ ಮಡಿಯುವವರ ವಿಷಯಕ್ಕೆ ಜಪಾನಿಗಳಿಗೆ ತಮ್ಮ ಧರ್ಮಾಧಿಕಾರಿಗಳಿಗಿಂತ ಹೆಚ್ಚು ಗೌರವವೆನಿಸುತ್ತದೆ. ಯುದ್ಧದಲ್ಲಿ ಮಡಿದ ವೀರಯೋದ್ಧರು ದೇವತೆಗಳಾಗುವರೆಂಬಭಾವನೆ ಅವರಿಗಿದೆ. ಈ ಭಾವನೆಯಿಂದ ಪ್ರೇರಿತರಾಗಿಯೇ ಅನೇಕ ಯುವಕರು ಯುದ್ಧದಲ್ಲಿ ಸತ್ತು ದೇವತೆಗಳಾಗಲುಹವಣಿಸುವರು.

'ಕುಂಡನ್' ಎಂಬ ಬೆಟ್ಟದ ಮೇಲೆ ಇಂತಹ ಸೈನಿಕ ದೇವತೆಗಳ ಒಂದು ಮಂದಿರವಿದೆ. ಅದಕ್ಕೆ 'ಶಾಂತಿಮಂದಿರ'ವೆಂದು ಹೆಸರು. ಅದರಲ್ಲಿ ಈ ವರೆಗೆ ೧೩೦೯೬೭ ವೀರರು ದೇವತೆಗಳಾಗಿದ್ದಾರೆ. ಪ್ರತಿವರ್ಷವೂ ಒಂದು ವಿಶಿಷ್ಟ ದಿನ ಈ ದೈವೀಕರಣ ಸಮಾರಂಭವು ನಡೆಯುತ್ತದೆ. ಆಗ ಆ ವರ್ಷದ ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣೆ ಮಾಡಿದ ವೀರರ ಆತ್ಮಗಳನ್ನು ದೇವತೆಗಳನ್ನಾಗಿ ಮಾಡಿ ಈ ಮಂದಿರಕ್ಕೆ ಸೇರಿಸುತ್ತಾರೆ. ಈ ವರ್ಷ ೧೧೪೮ ವೀರ ಆತ್ಮಗಳು ದೇವತೆಗಳಾಗಿವೆ. ಪ್ರಧಾನ ಪೂಜಾರಿಗಳು, ಸೈನ್ಯದ ಪ್ರಮುಖ ಅಧಿಕಾರಿಗಳು, ಮೃತಾತ್ಮರ ಮನೆಯವರು ಇವರನ್ನುಳಿದು ಮಿಕ್ಕವರನ್ನು ಮಂದಿರದೊಳಗೆ ಬಿಡುವದಿಲ್ಲ. ನಾಗರಿಕರೆಲ್ಲ ಆ ದೈವೀಕರಣ ಸಮಾರಂಭದ ದಿನ ಭಕ್ತಿಯಿಂದ ಮಂದಿರ ಮೆಟ್ಟಿಲುಗಳ ವರೆಗೆ ಮೌನವಾಗಿ ನಡೆದು ಬಂದು ದೇವತೆಗಳನ್ನು ಪ್ರಾರ್ಥಿಸಿ ಶಿರಬಾಗಿ ಸಾವಕಾಶವಾಗಿ ಮೂರು ಸಲ ಚಪ್ಪಾಳೆ ತಟ್ಟಿ ದುಡ್ಡು ಕಾಣಿಕೆಗಳನ್ನು ಕೊಟ್ಟು ಹೋಗುವರು.

ಕಲಕತ್ತೆಯ ಕರಿ ಕೋಣೆಯ ಕಥೆ

ಭಾರತೀಯ ಇತಿಹಾಸದ ಪುಸ್ತಕಗಳಲ್ಲೆಲ್ಲ 'ಸಿರಾಜುದ್ದೌಲನು ಕಲಕತ್ತೆಯ ಒಂದು ಸಣ್ಣ ಕರಿಕೋಣೆಯಲ್ಲಿ ೧೪೬ ಯುರೋಪಿಯನ್ನರನ್ನು, ರಾತ್ರಿಯೆಲ್ಲ ಹಾಕಿ ಬೆಳಗುವದರೊಳಗೆ ೧೨೩ ಜನರು ಸತ್ತರು' ಎಂಬ ವಿಷಯವು ತಪ್ಪದೆ ಬರೆಯಲ್ಪಡುತ್ತದೆ. ಭಾರತೀಯ ವಿದ್ಯಾರ್ಥಿಗಳು ಅದನ್ನು ಓದಿ, ಓಂದೆ ಭಾರತದಲ್ಲಿ ಎಂತಹ ಕಾಡು ಅನಾಗರಿಕ ರಾಜರಿದ್ದರೆಂದು ತಿಳಿದುಕೊಂಡು ತಮ್ಮ ದೇಶ, ತಮ್ಮ ಇತಿಹಾಸಗಳ ವಿಷಯಕ್ಕೆ ಅಸಹ್ಯಪಟ್ಟುಕೊಳ್ಳುತ್ತಿದ್ದರು. ಆದರೆ ಈಗ ಆ ಕರಿಕೋಣೆಯ ಕಥೆಯು ತೀರ ಅಸಂಭಾವ್ಯವಾದ ಸುಳ್ಳೆಂದು ಸಿದ್ಧಾಂತವಾಗಿದೆ. ಆ ಕುರಿತು ಪ್ರೊ. ಕಬೀರರು ಬಂಗಾಲ ಕೌನ್ಸಿಲಿನಲ್ಲಿ ಕರಿಕೋಣೆಯ ಸ್ಮಾರಕವನ್ನು ಕಿತ್ತೊಗೆಯುವ ಬಗ್ಗೆ ಒಂದು ಗೊತ್ತುವಳಿಯನ್ನು ಮಂಡಿಸಿದ್ದಾರೆ.

ಆ ಕರಿಕೋಣೆಯ ಕಥೆಗೆ ಮೂಲಕಾರಣನು ಹಾಲವೆಲ್ಲನು. ಅವನು ಆ ಸಂಗತಿಯ ವಿಷಯಕ್ಕೆ ಬರೆದ ಬೇರೆ ಬೇರೆ ಪತ್ರಗಳನ್ನು ನೋಡಿದರೆ ಅವನ ಬುದ್ಧಿಯು ಸ್ಥಿಮಿತವಾಗಿರಲಿಲ್ಲವೆಂದೆನಿಸುವದು. ೮ನೇ ಜುಲೈ ೧೭೫೬ರ ಅವನ ಕಾಗದದಲ್ಲಿ ಸಿರಾಜುದ್ದೌಲನು ಆ ರಾಕ್ಷಸೀ ಕೃತ್ಯವನ್ನು ಮಾಡಿದನೆಂದಿದ್ದಾನೆ. ಆದರೆ ಅದರಲ್ಲಿ ಹೆಂಣು ಮಕ್ಕಳಿದ್ದರೆಂಬುದನ್ನು ಬರೆದಿಲ್ಲ. ಮತ್ತು ೫೦ ಜನರು ಬದುಕಿ ಉಳಿದರೆಂದಿದೆ. ೧೬ನೇ ಜುಲೈಯ ಪತ್ರದಲ್ಲಿ ೧೬ ಜನರೆ ಬದುಕಿರುವರೆಂದಿದ್ದಾನೆ. ಆದರೆ ೩ನೇ ಆಗಸ್ಟಿನ ಪತ್ರದಲ್ಲಿ ಸಿರಾಜುದ್ದೌಲನು ದೋಷಿಯಲ್ಲವೆಂದು ಬರೆಯುತ್ತಾನೆ.

ಅಲ್ಲದೆ ಅದೇ ಸಮಯಕ್ಕೆ ಭಾರತದಲ್ಲಿದ್ದ ಡಚ್ಚರ ೫ನೇ ಮತ್ತು ೭ನೇ ಜುಲೈ ೧೭೫೬ರ ವರದಿಗಳಲ್ಲಿ ಕಲಕತ್ತೆಯ ಪತನದ ವಿಷಯಗಳು ಬರೆಯಲ್ಪಟ್ಟವೆಯಾದರೂ ಅವು

ಗಳಲ್ಲಿ ಆ ರಾಕ್ಷಸೀ ಕೃತ್ಯದ ಸಂಗತಿಯೇ ಇಲ್ಲ. ೧೭ನೇ ಸಪ್ಟೆಂಬರ ೧೭೫೭ರಲ್ಲಿ ಕೋರ್ಟ್ ಡಿರೆಕ್ಟರ್ಸ್ ಬರೆದ ಕಲಕತ್ತೆಯ ವಿಜಯದ ಸಂಗತಿಗಳಲ್ಲೂ ಆ ರಾಕ್ಷಸೀ ಕೃತ್ಯದ ಸುದ್ದಿಯಿಲ್ಲ. ಜನೆವರಿ ೧೭೫೭ರಲ್ಲಿ ಕ್ಲೈವನು ಸಿರಾಜುದ್ದೌಲನೊಡನೆ ಒಪ್ಪಂದ ಮಾಡಿಕೊಳ್ಳುವಾಗಲೂ ಆ ಕೃತ್ಯದ ವಿಷಯಕ್ಕೆ ಯಾವ ಮಾತನ್ನೂ ಎತ್ತಿಲ್ಲ. ಆವನು ಪುನಃ ಕಲಕತ್ತೆಯನ್ನು ವಶಪಡಿಸಿಕೊಂಡಿದ್ದರಿಂದ ಸಿರಾಜುದ್ದೌಲನಿಗೆ—ಆ ರಾಕ್ಷಸೀ ಕೃತ್ಯವು ನಡೆದುದು ನಿಜವಾಗಿದ್ದರೆ—ಚನ್ನಾಗಿ ಬುದ್ಧಿ ಕಲಿಸುತ್ತಿದ್ದನು.

೧೮ ಫೂಟು ಚಚ್ಚೌಕುಳ್ಳ ಆ ಕೋಣೆಯಲ್ಲಿ ೧೪೬ ಜನರನ್ನು ತುಂಬುವುದು ಸಾಧ್ಯವೇ ಇಲ್ಲವೆಂದು ಒಬ್ಬ ಭಾರತೀಯ ಇತಿಹಾಸಕಾರರೆನ್ನುತ್ತಾರೆ. ಅಲ್ಲದೆ ಆ ಕೃತ್ಯವು ನಡೆಯಿತೆಂದು ಹೇಳಲಾಗುವ ೧೭೫೬ನೆ ಜೂನ ೨೦ನೆ ದಿನ ಕಲಕತ್ತೆಯಲ್ಲಿ ೨೫ ಮಂದಿ ಯುರೋಪಿಯನ್ನರು ಕೂಡ ಇರಲಿಲ್ಲ. ಆ ಕರಿಕೋಣೆಯಲ್ಲಿ ಸತ್ತವರಲ್ಲಿ ಲೆಫ್ಟೆನೆಂಟ ಬ್ಲ್ಯಾಗನೂ ಒಬ್ಬನೆಂದು ಹಾಲ್‌ವೆಲ್ಲನೆಂದಿದ್ದಾನೆ. ಆದರೆ ಬ್ಲ್ಯಾಗನು ಆ ದಿನಕ್ಕೆ ಮೊದಲೆ ಯುದ್ಧದಲ್ಲಿ ಸತ್ತುಹೋಗಿದ್ದನೆಂದು ಈಗ ತಿಳಿದುಬಂದಿದೆ. ಆದುದರಿಂದ ಹಾಲ್‌ವೆಲ್‌ನ ಸುದ್ದಿಗಳು ಎಷ್ಟು ಸುಳ್ಳಾಗಿದ್ದವೆಂಬುದು ಸ್ಪಷ್ಟವಾಗುವದು.

ಜೇನೆಗಳನ್ನು ಗುಣಪಡಿಸಲು ಪುಸ್ತಕಗಳು!

ಅಲ್ಬಾಮಾದಲ್ಲಿ ಒಂದು ಆಸ್ಪತ್ರೆ. ಅದರಲ್ಲಿ ಆಶ್ಚರ್ಯಕಾರಕವಾದ ಭಾಗವೆಂದರೆ ವಾಚನಾಲಯದ ಭಾಗ. ಅದರ ಕಾರ್ಯದರ್ಶಿಯಾದ ಮಿಸೆಸ್ ಸಾಡಿ ಪೆಟರ್‌ಸನ್ನಳೇ ಆ ವಾಚನಾಲಯಕ್ಕೆ ಯಶಸ್ಸು ತಂದವಳು. ಅವಳು ಮನೋವಿಜ್ಞಾನಿಯೂ ಆಗಿದ್ದಾಳೆ. ಬಹುತರವಾಗಿ ಶಾರೀರಿಕ ರೋಗಗಳಲ್ಲೆಲ್ಲ ಮನಸ್ಸಿಗೆ ಸಂಬಂಧಿಸಿದ ಅಂಶಗಳೂ ಇರುತ್ತವೆ. ಆ ಅಂಶಗಳನ್ನು ಕಂಡು ಹಿಡಿದು ರೋಗಿಗಳಿಗೆ ಯೋಗ್ಯವಾದ ಪುಸ್ತಕಗಳನ್ನು ಒದಗಿಸಿದರೆ ಅವರು ಉಲ್ಲಸಿತರಾಗಿರುವರು. ಆ ಉಲ್ಲಾಸವು ಅವರನ್ನು ಬೇಗ ಗುಣಮುಖವನ್ನಾಗಿ ಮಾಡುವದು. ಆದುದರಿಂದ ವಾಚನಾಲಯದ ಕಾರ್ಯದರ್ಶಿಯು ರೋಗಿಗಳ ಚರಿತ್ರೆಯನ್ನು ತಿಳಿದುಕೊಂಡು ಆಯಾ ರೋಗಿಗೆ ಯೋಗ್ಯವಾಗುವಂತಹ ಪುಸ್ತಕವನ್ನು ಒದಗಿಸುವಳು. ಉದಾ: ಥೈರಾಯಿಡ್ ಗ್ರಂಥಿಯ ಮಾಂದ್ಯದಿಂದ ಬೇನೆ ಬಿದ್ದ[illegible] ಯನ್ನು ಉತ್ತೇಜಿಸುವ ವಿಷಯಗಳುಳ್ಳ [illegible] ರೋಗಿಗೆ ಕೊಡುವಳು.

ಈ ವಿಧದ ವ್ಯವಸ್ಥೆಯಿಂದ ಅನೇಕ ರೋಗಿಗಳು ಬಹುಬೇಗ ರೋಗಮುಕ್ತರಾಗಿ ಬರುತ್ತಿದ್ದಾರೆ[illegible] ವಾಗಿ ಮನೋವ್ಯಥೆಯಿಂದ ಬೇನೆಬಿದ್ದವರಿಗೆ[illegible] ಗಳ ಚಿಕಿತ್ಸೆಯು ಬಹಳ ಉಪಯುಕ್ತವಾಗುತ್ತಿ[illegible]

ಯುಗೊಸ್ಲಾವಿಯದಲ್ಲಿ ಸುಮಾರು ೧೬ [illegible] ಲಕ್ಷ ಮುಸಲ್ಮಾನ ಮಹಿಳೆಯರಿದ್ದಾರೆ. ಅವರು [illegible] ಮಹಮ್ಮದೀಯ ಸ್ತ್ರೀಯರಂತೆ ಅಂತಃಪುರದಲ್ಲಿ[illegible] ಪರಪುರುಷರಿಗೆ ತಮ್ಮ ಮುಖ ತೋರಿಸಬಾರದು[illegible] ವಿಲ್ಲ. ಅಲ್ಲಿ ಬಹುದಿನಗಳಿಂದ ಸ್ತ್ರೀ ಸ್ವಾತಂತ್ರ್ಯ[illegible] ವರಣವು ಕಸುವುಗೊಳ್ಳುತ್ತಿದೆ. ನಿರಕ್ಷರತೆಯೂ[illegible] ಪುರವಾಸವೂ ಎಂದೋ ದೂರವಾಗಿವೆ. [illegible] ಬೆಳೆಯುತ್ತಿದೆ. ಅವರು ಪ್ರೇಮದ ಮಾತೆ[illegible] ವ್ರತೆಯರಾದ ಪತ್ನಿಯರೂ ಆಗಿರುವರಲ್ಲದೆ [illegible] ರಂತೆ ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳು[illegible] ಅವರ ಆಚಾರ ವಿಹಾರಗಳಲ್ಲಿ ಯಾವ [illegible] ಮಹಮ್ಮದೀಯರಲ್ಲದ ಪುರುಷರೊಡನೆಯೂ [illegible] ಯಿಂದ ವರ್ತಿಸುವರು. ದೇಶಾಭಿಮಾನದ ವಿ[illegible] ಯೋಗ್ಯ ಗಂಡಂದಿರನ್ನು ಹುಡುಕಿಕೊಳ್ಳ[illegible] ಅವರು ಹೆಸರಾಗಿದ್ದಾರೆ. ಕನ್ಯೆಯ ಒಪ್ಪಿಗೆ[illegible] ವೆಯೇ ಆಗುವಂತಿಲ್ಲ. ಮದುವೆಯ ಪೂರ್ವ[illegible] ವಾಗಿ ಗಂಡುಹೆಂಣುಗಳ ಪರಿಚಯವಿರುತ್ತ[illegible] ರಿಂದ ಮಿಕ್ಕ ಮಹಮ್ಮದೀಯ ಸಮಾಜದಲ್ಲಿ[illegible] ಭೇದಗಳು ಅವರಲ್ಲಾಗುವದಿಲ್ಲ. ಸ್ಥಾ[illegible] ಅನಿರ್ಬಂಧವಾಗಿ ಭಾಗವಹಿಸುವರು. [illegible] ಡಲ್ಲಿ ಕುಟುಂಬ ಪೋಷಣೆಯ ಭಾರವನ್ನೆ[illegible] ಹೊತ್ತಿದ್ದರು. ಅದರ ಪರಿಣಾಮವಾಗಿ [illegible] ದರ್ಜೆಯ ಶಿಕ್ಷಣವನ್ನು ಪಡೆಯಲಿಕ್ಕೆ [illegible] ಅವರ ಸ್ವತಂತ್ರ ಸಮಾಜದ ಸಮಿತಿಗಳ[illegible] ಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು [illegible] ತ್ರವಾಗಿ ಚರ್ಚಿಸುತ್ತಾರೆ. ಅಲ್ಲಿಯ ಸ್ತ್ರೀ[illegible] ಸಭೆಯು ಮಹಮ್ಮದೀಯ ಸ್ತ್ರೀಯರನ್ನು [illegible] ಸಮಾನ ತರಗತಿಯವರಾಗುವಂತೆ ಯತ್ನಿ[illegible]

ಹಲ್ಲು ನೋವು ನಿನ್ನೆ ಮೊನ್ನಿನದಲ್ಲ. ಪೂರ್ವಕಾಲದಲ್ಲಿ ಕೂಡ ಹಲ್ಲುಶೂಲೆಯಿಂದ ಬಳಲುವವರು ಬಹುವಾಗಿದ್ದರು.

ಹಲ್ಲುನೋವಿನ ಚರಿತ್ರೆ

ಆದುದರಿಂದ ಹಲ್ಲು ಬೇನೆಗಳು ಆಧುನಿಕ ನಾಗರಿಕತೆಯ ಕೃತ್ರಿಮ ಆಹಾರಗಳ ಪರಿಣಾಮವೆಂದು ಹೇಳಲಾಗದು. ಆದರೆ ಹಲ್ಲುಬೇನೆಗಳು ದಿನೇ ದಿನೇ ಬೆಳೆಯುತ್ತಿವೆಯೆಂಬುದೇನೂ ಸುಳ್ಳಲ್ಲ. ಈಗ ಒಂದು ಲಕ್ಷ ವರ್ಷಕ್ಕೆ ಹಿಂದೆ ಬರಿ ನೂರಕ್ಕೆ ೫—೨೦ ಜನರಲ್ಲಿ ಮಾತ್ರ ಹಲ್ಲು ಬೇನೆಯಿರುತ್ತಿತ್ತು. ಇಪ್ಪತ್ತು ಸಾವಿರ ವರ್ಷಗಳ ಹಿಂದೆ ನೂರಕ್ಕೆ ೨೦ರಿಂದ ೪೫ರ ವರೆಗೆ ಹಲ್ಲು ಬೇನಿಗರಿದ್ದರು. ಐದಾರು ಸಾವಿರ ವರ್ಷಗಳ ಹಿಂದಿನ ಆರ್ಯರಲ್ಲಿ ೭೫ರಿಂದ ೯೦ರ ವರೆಗೆ ಹಲ್ಲಿನ ರೋಗಿಗಳಿದ್ದರು. ಇದೆಲ್ಲ ನಾಗರಿಕತೆಯ ಪರಿಣಾಮವೆನ್ನುವುದಕ್ಕಿಂತ ಮನುಷ್ಯನು ಬಯಲುಗಾಳಿಯನ್ನು ಬಿಟ್ಟು ಮನೆಗೂಳಿಯಾದುದರ ಪರಿಣಾಮವೆನ್ನುವದೇ ಒಳಿತು. ಈ ಲಕ್ಷಾವಧಿ ವರ್ಷಗಳಿಂದ ಬೆನ್ನಟ್ಟಿರುವ ಹಲ್ಲು ಬೇನೆಯಿಂದ ನಾವು ಮುಕ್ತರಾಗಬೇಕಾದರೆ ನಮ್ಮ ಆಹಾರದಲ್ಲಿ ವಿಟೆಮಿನ್ನುಗಳು; ಖನಿಜಕ್ಷಾರಗಳು ಯೋಗ್ಯ ಪರಿಮಾಣದಲ್ಲಿ ಇರುವುದರ ಕಡೆಗೆ ಗಮನವೀಯಬೇಕು.

ಮನಸ್ಸಿಗೆ ಭ್ರಮೆ, ವ್ಯಥೆಯಾದಾಗ ಆ ಮನುಷ್ಯನ ಮನಸ್ಸನ್ನು ಪರೀಕ್ಷಿಸುವದಕ್ಕೆ ಮನೋವಿಶ್ಲೇಷಣವೆನ್ನುತ್ತಾರೆ.

ಸಾಮುದಾಯಿಕ ಮನೋವಿಶ್ಲೇಷಣ

ಅದಕ್ಕಾಗಿ ಮನೋವೈದ್ಯನು ರೋಗಿಯ ಚರಿತ್ರೆಯನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆದ್ದರಿಂದ ಮನೋವೈದ್ಯನಿಗೆ ದಿನಕ್ಕೆ ಒಬ್ಬ ರೋಗಿಯನ್ನು ಕೂಡ ಪೂರ್ಣವಾಗಿ ಅಭ್ಯಾಸಮಾಡಲಾಗುವದಿಲ್ಲ. ಅಲ್ಲದೆ ವೈದ್ಯನು ಪರೀಕ್ಷೆಯ ತರುವಾಯ ಮಾಡಿದ ಸಿದ್ಧಾಂತಗಳು ರೋಗಿಗೆ ತಿಳಿಯುವದಿಲ್ಲ. ರೋಗಿಗೆ ತನ್ನ ಮನಸ್ಸಿನಲ್ಲಿಯ ಯಾವ ಅಸ್ವಸ್ಥೆಯಿಂದ ತನಗೆ ಪೀಡೆಯಾಗುತ್ತಿದೆಯೆಂಬುದು ತಿಳಿದರೆ ಅವನ ಬೇನೆಯು ಅರ್ಧ ಗುಣವಾದಂತೆಯೇ ಸರಿ. ಆದುದರಿಂದ ಮನೋವಿಜ್ಞಾನಿಗಳು ಈಗ ರೋಗಿಗಳಿಗೆ ತಮ್ಮ ಮನದ ವಿಶ್ಲೇಷಣವನ್ನು ತಾವೇ ಮಾಡಿಕೊಳ್ಳುವ ಅನುಕೂಲತೆಯನ್ನು ಕಲ್ಪಿಸುವುದಕ್ಕಾಗಿ ಹೊಸ ಕ್ರಮವನ್ನು ಶೋಧಿಸಿದ್ದಾರೆ. ಅದಕ್ಕೆ ಸಾಮುದಾಯಿಕ ಮನೋವಿಶ್ಲೇಷಣವೆಂದು ಹೆಸರು. ರೋಗಿಗಳೆಲ್ಲ ಒಂದೆಡೆಗೆ ಸೇರುವರು. ಮನೋವೈದ್ಯನೂ ಅವರ ಸಹಾಯಕ್ಕಾಗಿ ಅಲ್ಲಿಯೆ ಇರುವನು. ಪ್ರತಿಯೊಬ್ಬ ರೋಗಿಯೂ ತನ್ನ ಅನುಭವ, ಚರಿತ್ರೆ, ಕನಸುಗಳು, ಚಟಗಳು, ಆಶೆಗಳು ಮುಂತಾಗಿ ಎಲ್ಲವನ್ನೂ ಮಿಕ್ಕ ರೋಗಿಗಳಿಗೆ ಹೇಳುವನು. ಇದರಿಂದ ಎಲ್ಲ ರೋಗಿಗಳಿಗೆ ಸಹಜವಾಗಿ ಅನೇಕ ವಿಧದ ಮನಸ್ಸಿನ ಸ್ವಭಾವಗಳ ಪರಿಚಯವಾಗಿ ತಮ್ಮ ಮನಸ್ಸಿನ ಅತೃಪ್ತಿ, ಅಶಾಂತಿಗಳ ಕಾರಣವು ಸುಲಭವಾಗಿ ಹೊಳೆದು ಸಮಾಧಾನವಾಗುವದು.

ಗಿರಣಿ ಇಲ್ಲವೆ ಕಾರಖಾನೆಗಳ ಹೊಗೆಯು ನಾಗರಿಕರಿಗೆ ಅಪಾಯಕರವಾಗಬಾರದೆಂದು ಅವುಗಳ ಹೊಗೆಗೊಳವೆಗಳನ್ನು ಬಹಳ ಉದ್ದವಾಗಿ ಕಟ್ಟಿರುತ್ತಾರೆ.

ಹೊಗೆ ನುಂಗುವ ಹೊಗೆಗೊಳವೆ

ಆದರೂ ಅಷ್ಟು ಎತ್ತರದಲ್ಲಿ ಹೊರಬಿದ್ದ ಹೊಗೆಯಲ್ಲಿರುವ ಸೂಕ್ಷ್ಮ ವಸ್ತುಗಳು ಮಾರ್ಗಗಳ ಮೇಲೆ ಮನೆಗಳ ಮೇಲೆ ಸೂಕ್ಷ್ಮವಾಗಿ ಬಿದ್ದು ಉಸಿರಾಟದ ಮೂಲಕ ನಾಗರಿಕರ ದೇಹವನ್ನು ಸೇರುವವು. ಇದರಿಂದ ಕಾರಖಾನೆಗಳಿದ್ದ ಊರಿನ ನಾಗರಿಕರ ಆರೋಗ್ಯವು ಅಷ್ಟು ಚನ್ನಾಗಿರುವದಿಲ್ಲ. ಆದ್ದರಿಂದ ಈಗ ಜರ್ಮನಿಯಲ್ಲಿ ಹೊಗೆಯನ್ನು ಒಳಗಿಂದೊಳಗೇ ನುಂಗುವ ಹೊಗೆಗೊಳವೆಗಳನ್ನು ಕಟ್ಟುತ್ತಿದ್ದಾರೆ. ಪ್ರತಿಯೊಂದು ಹೊಗೆಗೊಳವೆಯೂ ಸುಮಾರು ೫೦೦ ಫೂಟು ಉದ್ದವಾಗಿರುತ್ತದೆ. ಹೊಗೆಯೆಲ್ಲ ಆ ಕೊಳವೆಯಲ್ಲಿಯೆ ಹೀರಲ್ಪಡುತ್ತದೆ.

ಹೊಲಿವುಡ್ಡೆಂದರೆ ಚಲಚ್ಚಿತ್ರಗಳ ಊರೆಂದು ಎಲ್ಲರಿಗೂ ತಿಳಿದಿದೆ. ಅಲ್ಲಿ ಪ್ರಣಯ ವ್ಯವಹಾರಗಳೂ ಬೇಕಾದಷ್ಟು ನಡೆಯುತ್ತವೆ.

ದಾಂಪತ್ಯವೃದ್ಧಿಯ ಆಹಾರ ಅನುಭವ

ಅಲ್ಲಿಯ ಒಬ್ಬ ನಟನೂ ಒಬ್ಬ ನಟಿಯೂ ಮೊನ್ನೆ ಮದುವೆಯಾದರು. ಅವರು ಈಗಾಗಲೇ ಐದಾರು ಸಲ ಮದುವೆಯಾಗಿ ವಿಚ್ಛೇದವನ್ನು ಪಡೆದವರಾಗಿದ್ದಾರೆ. ಆದರೆ ಈ ಸಲ ಮಾತ್ರ ತಮ್ಮ ದಾಂಪತ್ಯವು ಕೊನೆಬಾಳಬೇಕೆಂದು ಅವರ ಆಸೆ. ಅದಕ್ಕೆ ಇಬ್ಬರಿಗೂ ಒಮ್ಮತದಿಂದ ಒಪ್ಪಿಗೆಯಾದ ಆಹಾರವನ್ನು ಸೇವಿಸುವದೇ ಉಪಾಯವೆಂದು ಅಭಿಪ್ರಾಯವುಳ್ಳವರಾಗಿದ್ದಾರೆ. ಅದನ್ನು

ಕೇಳಿದ ಸುಪ್ರಸಿದ್ಧ ಸಾಹಿತಿಗಳಾದ ಬರ್ನಾರ್ಡ ಶಾ ಅವರು ಹೀಗೆ ತಮ್ಮ ಅನುಭವವನ್ನು ಹೇಳಿದ್ದಾರೆ:— ಗಂಡ ಹೆಂಡಿರು ಒಂದೇ ವಿಧದ ಊಟವನ್ನು ಉಣಬೇಕೆಂದು ಹಟ ಹಿಡಿಯುವದು ತಪ್ಪು. ನಾನೂ ನನ್ನ ಹೆಂಡತಿಯೂ ಈಗ ೪೦ ವರ್ಷಗಳಿಂದ ದಾಂಪತ್ಯಜೀವನವನ್ನು ಸಾಗಿಸುತ್ತಿದ್ದೇವೆ. ನಮ್ಮಲ್ಲಾವ ಅಸಮಾಧಾನವೂ ಹುಟ್ಟಿಲ್ಲ. ನಾನು ಸಸ್ಯಾಹಾರಿಯಾಗಿರುವೆನಲ್ಲದೆ ಸುರಾಪಾನ ಮಾಡುವದಿಲ್ಲ. ಆದರೆ ನನ್ನ ಹೆಂಡತಿಯು ಸಸ್ಯಾಹಾರಿಯಲ್ಲ; ಮದ್ಯವನ್ನೂ ಸೇವಿಸುತ್ತಿರುತ್ತಾಳೆ. ನನಗೆ ಔತಣ ಹೇಳಿದಾಗ ಈ ವಿಷಯವನ್ನು ತಿಳಿಯದವರು ನನ್ನ ಹೆಂಡತಿಗೂ ನನ್ನ ಆಹಾರವನ್ನೇ ಸಿದ್ಧಗೊಳಿಸುವರು. ಮತ್ತು ನಮ್ಮ ತೃಪ್ತಿಗಾಗಿ ಅಂದು ಕೆಲವರು ತಾವೂ ಸಸ್ಯಾಹಾರವನ್ನೇ ಮನಸ್ಸಿಲ್ಲದಿದ್ದರೂ ಸೇವಿಸುವರು. ನಾವು ಗಂಡಹೆಂಡಿರು ಬೇರೆ ಬೇರೆ ಪ್ರಕಾರದ ಆಹಾರವನ್ನು ಸೇವಿಸುತ್ತಿದ್ದರೂ ನಮ್ಮ ದಾಂಪತ್ಯಕ್ಕೆ ಯಾವ ಕೆರಳಿಕೆಯೂ ಹುಟ್ಟಿಕೊಂಡಿಲ್ಲ.

ಮೂಗು ಕಿವಿಗಳ ಕತ್ತಿ

ಹಳೆ ಪದ್ಧತಿಯಿಂದ ಕ್ಷೌರ ಮಾಡಿಕೊಳ್ಳುವವರು ಮೂಗಿನೊಳಗಿನ ಕೂದಲುಗಳನ್ನು ಚಿಮುಟಗೆಯಿಂದ ಕೀಳಿಸಿಕೊಳ್ಳುವರು. ಮೇಲಿಂದ ಮೇಲೆ ಗಡ್ಡ ಬೋಳಿಸಿಕೊಳ್ಳಲಿಕ್ಕೆ ಈಗ ಸುರಕ್ಷಿತ ಕತ್ತಿಗಳಾಗಿ ಅನುಕೂಲವಾಗಿದೆ. ಆದರೆ ಕೆಲಕೆಲವರಿಗೆ ಮೂಗಿನ ಕೂದಲುಗಳು ಬಹಳ ತೊಂದರೆ ಕೊಡುತ್ತವೆ. ಚಿಮುಟಗೆಯಿಂದ ನೋವಾಗುತ್ತ... ಯಿಂದ ಒಳಗಿನ ವರೆಗೆ ಕತ್ತರಿಸಲಾಗುವದ... ಹೊಸ ಮಾದರಿಯ ಮೂಗು, ಕಿವಿಯ ... ಸಿದ್ಧವಾಗಿವೆ. ಅವು ಪೆನ್ಸಿಲಿನ ಆಕಾರದವಿ... ಕತ್ತಿಯನ್ನು ಮೂಗಿನೊಳಗೆ ಹಾಕಿ ಒಂದು ... ಬಿಟ್ಟರೆ ಸಾಕು. ಕೂದಲೆಲ್ಲ ಹೋಗಿ ಬಿಡು...

ವಿದೇಶಗಳಲ್ಲಿ ಸ್ತ್ರೀಯರೂ ಸಿಗರೇ... ಹೆಚ್ಚುತ್ತಿದೆಯೆಂಬುದನ್ನು ನೀವು ಕೇಳಿರಬ...

ಕಾಮನ ಬಿಲ್ಲಿನ ಸಿಗರೇಟ !

ಅವರು ಬರಿ ಸಿಗ... ಒಗೆಯುವುದರಲ್ಲಿ... ವುದಿಲ್ಲ. ಅದ... ಹೊಗೆ, ... ಕೆಂಬು ಅವರ ಬಯಕೆ. ಅದನ್ನು ಕೈಗೂ... ಓಟೊ. ಎಲ್. ಮಿಲ್ಲರ್ ಕಂಪನಿಯವರು ... ಶೋಧವನ್ನು ಮಾಡಿದ್ದಾರೆ. ಬೇರೆ ಬೇರೆ ... ಹೊರಡಬೇಕಾದರೆ ಬೇರೆ ಬೇರೆ ವಸ್ತು... ಮಾಡಬೇಕಾಗುತ್ತದೆ ಸಿಗರೇಟಿಗೆ. ಸ್ತ್ರೀ... ವಸ್ತ್ರಾಭರಣಗಳ ಬಣ್ಣಕ್ಕೆ ಒಪ್ಪುವ ಹೊಗೆ... ಸುವ ಸಿಗರೇಟನ್ನೇ ಸೇದುವರು. ಕಾಮನ ... ಹೊಗೆಯೂ ಹೊರಡುವ ವ್ಯವಸ್ಥೆ ಮಾಡಲಾ... ಸಿಗರೇಟ ಸೇದುವುದರಿಂದಾಗುವ ಸುಖ... ಯನ್ನು ನೋಡುವುದರಿಂದಾಗುವುದೆಂದು ...

ಲಸ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ, ಬೆಂಗಳೂರು ಸಿಟಿ



ಚಿಕ್ಕ ಡಾಕ್ಟರ್, ...

............ಸ್ವದೇಶಿ ವಸ್ತು, **ವೇಪ್ರಿನ್**

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು ನಾರುಹುಣ್ಣು, ಮೂಲವ್ಯಾಧಿ, ಮೆಟ್ಟನಘಾಯ ಮುದ್ಧಣ (Pimples) ಸುಟ್ಟಘಾಯ, ಕತ್ತಿ ಘಾಯ, ತೊಡವಾಳ, ಗಜಕರ್ಣ ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ಇಂದ್ರಜಾಲದೋಷಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತ ಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲ ಇದ್ದರೆ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ಬಹು ಸುಲಭ.

¼ ಔನ್ಸ್ ಬಾಟ್ಲ ೧ಕ್ಕೆ ೪ಆ. ⅛ ಔನ್ಸಗೆ ೮ ಆಣೆ.

ದೊರೆಯುವ ಸ್ಥಳಗಳು :

ಲಸ್ಟರ' ಮ್ಯಾನ್ಯುಫ್ಯಾಕ್ಚರಿಂಗ ಕಂಪನಿ ಡಿಪೋ:, ಬೆಂಗಳೂರು ಸಿಟಿ

ಜಿಲ್ಹಾ ಏಜಂಟ್ಸ:—ಆರ್. ಕೆ. ಕಬ್ಬೂರ, ಕೊಪ್ಪೀಕರ ರೋಡ .... ಹುಬ್ಬಳ್ಳಿ


ಸಬ್ ಏಜಂಟ:—ಯು. ಬಿ. ಬಾಳಿಗಾ, ಕೆಮಿಸ್ಟ ಆ್ಯಂಡ ಡ್ರಗಿಸ್ಟ .... ಗದಗ

ಸಬ್ ಏಜಂಟ:—ಗೋವಿಂದ ಗೋಪಾಳ ಗಾಡಗೀಳ .... ವಿಜಾಪುರ

ಬಳ್ಳಾರಿ ಜಿಲ್ಹಾ ಏಜಂಟ್ಸ:—ಆರ್. ಎಸ್. ವೀರಭದ್ರಪ್ಪ ಆಂಡ ಬ್ರದರ್ಸ, ... ಬಳ್ಳಾರಿ

ಸ್ವದೇಶಿ ಸ್ಟೋರ .... ಬಾಗಲಕೋಟೆ

SHREENIVAS & CO



THE PREMIER
Karnataka
PHOTO ENGRAVERS

ARTISTS & DESIGNERS.

Beautiful & Faithful - Reproductions
BY
OUR PERFECT LINE, HALF-TONE & COLOUR PROCESS.

— Malamaddi, DHARWAR.



ಹಳ್ಳಿಯ ವೈದ್ಯ: ಲೇಖಕರು ಶ್ರೀ. ಮ. ವಾ. ಬುರ್ಲಿ. ಪ್ರಕಾಶಕರು ವೈದ್ಯ ಗಂಗಾಧರ ವಿಷ್ಣು ಶಾಸ್ತ್ರಿ ಪುರಾಣಿಕ. ಧೂತ ಪಾಪೇಶ್ವರ ಆರ್ಯೌಷಧಿ ಕಾರಖಾನೆ, ಪನವೇಲ. ಪುಟ ೪೦೦. ಬೆಲೆ ೧॥ ರೂಪಾಯಿ. ಸುಪ್ರಸಿದ ಶಸ್ತ್ರಚಿಕಿತ್ಸಕರಾದ ಹುಬ್ಬಳ್ಳಿಯ ಶ್ರೀಮಾನ್ ಡಾ. ಗೋರೆ ಯವರ ಮುನ್ನುಡಿಯಿದೆ.

ಈ ಪುಸ್ತಕವನ್ನು ಬರೆದ ಶ್ರೀ. ಬುರ್ಲಿಯವರು ಹಳ್ಳಿಯ ಕನ್ನಡಿಗರಿಗಷ್ಟೆ ಅಲ್ಲ ಎಲ್ಲ ಕನ್ನಡಿಗರಿಗೂ ದೊಡ್ಡ ಉಪಕಾರ ಮಾಡಿದ್ದಾರೆ. ಸುಶಿಕ್ಷಿತರೆನಿಸುವವರಿಗೂ ತಮ್ಮ ದೇಹದ ರಚನೆಯ ವಿಷಯವೂ ತಿಳಿದಿರುವುದಿಲ್ಲ. ಈ 'ಹಳ್ಳಿಯ ವೈದ್ಯ'ವನ್ನು ಓದಿದರೆ ದೇಹ ರಚನೆಯ ವಿಷಯವೂ ಸಾಮಾನ್ಯ ರೋಗಗಳ ಜ್ಞಾನವೂ ಅವುಗಳಿಗೆ ಉಪಯೋಗಿಸುವ ಔಷಧಗಳ ಪರಿಚಯವೂ ಆಗುವದು. ಈ ಪುಸ್ತಕದಲ್ಲಿ ವಿಶೇಷವಾಗಿ ಆಯುರ್ವೇದದ ದೃಷ್ಟಿಯಿಂದಲೇ ವಿಷಯ ವಿವೇಚನೆಯಿದ್ದರೂ ಪ್ಲೇಗ, ನ್ಯೂಮೋನಿಯಾ, ಇನ್‌ಫ್ಲುಎಂಝಾ ಮುಂತಾದ ಆಧುನಿಕ ರೋಗಗಳ ವರ್ಣನೆಯು ಇದರಲ್ಲಿ ಬಂದುದು ವಿಹಿತವೇ. ಔಷಧಗಳೂ ವಿಶೇಷವಾಗಿ ಸುಲಭವಾಗಿ ದೊರಕಿಸಬಹುದಾದವುಗಳೇ ಆಗಿರುವುದರಿಂದ ಈ 'ಹಳ್ಳಿಯ ವೈದ್ಯ'ನನ್ನು ಹತ್ತರ ಇರಿಸಿಕೊಂಡರೆ ಬಹುಮಟ್ಟಿಗೆ ಪಟ್ಟಣದ ವೈದ್ಯರ ಬಿಲ್ಲಿನ ಕಾಟ ತಪ್ಪಿಸಿಕೊಳ್ಳಲಾಗುವದು. ಮುದ್ರಣವೂ, ಭಾಷಾ ಶೈಲಿಯೂ ಅಚ್ಚುಕಟ್ಟಾಗಿವೆ.

ಎಂ. ಗೋಪಾಲಕೃಷ್ಣರಾವ

ಗಾಳಿಪಟ, ಉಡುಗೊರೆ ಕೂಸುಮರಿ: ಇವು ಮೂರೂ ಬೆಂಗಳೂರಿನ ಕನ್ನಡಿಗರ ಕಣಜದಿಂದ ಪ್ರಕಟವಾದ ಚಿಕ್ಕಮಕ್ಕಳಿಗಾಗಿ ಬರೆಯಲ್ಪಟ್ಟ ಪುಸ್ತಕಗಳು. ಮೊದಲಿನ ಎರಡರ ಬೆಲೆ ಎರಡಾಣೆ. ಮೂರನೆಯದರ ಬೆಲೆ ಒಂದೂವರಾಣೆ, ಮೊದಲಿನೆರಡರಲ್ಲಿ ಬೇರೆಬೇರೆ ಸಾಹಿತಿಗಳ ಕೃತಿಗಳಿವೆ. ಮೂರನೆಯದರಲ್ಲಿ ಟಿ. ಎಂ. ಆರ್‌. ಸ್ವಾಮಿಯವರೊಬ್ಬರ ಕೃತಿಗಳೇ ಇವೆ. ಒಟ್ಟಿನಲ್ಲಿ ಮೂರೂ ಪುಸ್ತಕಗಳಲ್ಲಿ ಟಿ. ಎಂ. ಆರ್‌. ಸ್ವಾಮಿಯವರ ಕೃತಿಗಳೇ ಹೆಚ್ಚು.

ಕನ್ನಡಿಗರ ಕಣಜವು 'ಸರಸ್ವತಿ'ಯ ಸಂಪಾದಿಕೆಯರಾದ ಶ್ರೀ. ಆರ್. ಕಲ್ಯಾಣಮ್ಮನವರ ನೇತೃತ್ವದಲ್ಲಿ ರಾಶಿಯಾಗುತ್ತಿರುವ ಶಿಶುಸಾಹಿತ್ಯ. ಅವರೀ ಪ್ರಕಟನೆಗಳು ಕನ್ನಡ ಮಕ್ಕಳಿಗೆ ಮನರಂಜಕವಾಗಿಯೂ [illegible] ವಾಗಿಯೂ ಆಗುವುದರಲ್ಲಿ ಸಂದೇಹವಿಲ್ಲ. ಮಕ್ಕಳ [illegible] ಕರವಾದ ಉದ್ಯೋಗಗಳಲ್ಲಿ ತೊಡಗದೆ [illegible] ಕೈಕಟ್ಟಿ ಕೂತುಕೊಳ್ಳಬೇಕೆಂದು ಕೆಲವು [illegible] ಅಪೇಕ್ಷಿಸುವರು. ಆದರದು ಮಕ್ಕಳಿಗೆ [illegible] ವಲ್ಲದೆ ಅವರು ಬೆಳೆದ ಮೇಲೆ ಸಾಹಸಹೀನ[illegible] ಆದುದರಿಂದ ಇಂತಹ ಶಿಶುಸಾಹಿತ್ಯಗಳನ್ನು ತರಿಸಿಕೊಟ್ಟು ಮನೆಯಲ್ಲಿಯೇ ಹಾಡು, [illegible] ಗಳ ಏರ್ಪಾಡು ಮಾಡಿದರೆ ಮಕ್ಕಳ [illegible] ದಲ್ಲಿಯೇ ಮಗ್ನವಾಗಿ ಅವರಿಗೆ ಅಪಾಯ[illegible] ಹೊರಗೆ ಓಡುವ ಪ್ರವೃತ್ತಿಯಾಗುವದಿಲ್ಲ. ಕಣಜದಿಂದ ಇನ್ನೂ ಸವಿಯಾದ ಕಾಳುಗಳ[illegible] ಹಾರೈಸುವೆವು.

ಕನ್ನಡ ಕವಾಯಿತು: ಲೇ: ಶ್ರೀ. [illegible] ಪ್ರಕಾಶಕ: ಹುಬ್ಬಳ್ಳಿ ವೀರ ಪುಲಿಕೇಶಿ [illegible] ನಾಲ್ಕಾಣೆ.

ಈ ವರೆಗೆ ಕವಾಯಿತಿನಲ್ಲಿ ಇಂಗ್ಲಿಷ್ [illegible] ಯೋಗಿಸುತ್ತಿದ್ದರು. ಹಿಂದುಸ್ಥಾನೀ ಸೇವಾ[illegible] ಯವಾದ ಮೇಲೆ ಹಿಂದೀಭಾಷೆಯ ಕವಾ[illegible] ಹೆಚ್ಚಾಗಿ ರೂಢಿಯಲ್ಲಿ ಬರುತ್ತಿದೆ. ಕವಾಯಿ[illegible] ವಲನಗಳಲ್ಲಿ ಅಚ್ಚುಕಟ್ಟುತನ ಬರುತ್ತ[illegible] ಆದರೂ ತೀರ ಮೊದಲು ಕವಾಯಿತು [illegible] ವ್ಯವಸ್ಥೆಯಿಂದ ಸೈನ್ಯಚಾಲನೆಗಾಗಿ. ಈಗ[illegible] ದೇಶಗಳಲ್ಲಿ ಕವಾಯಿತಿನಲ್ಲಿ ಸೈನಿಕ ಶಿಕ್ಷಣ[illegible] ಇರುತ್ತದೆನ್ನಬಹುದು. ಆದುದರಿಂದ ಪ್ರ[illegible] ಇಡಿ ರಾಷ್ಟ್ರದವರು ಒಂದಾಗಿ ವ್ಯವಸ್ಥೆ[illegible] ಪ್ರವೃತ್ತರಾಗುವಂತೆ ಪ್ರಾಂತಪ್ರಾಂತಗಳ [illegible] ಗೊಂಡಿರುವುದು ಒಳಿತು. ಈ ದೃಷ್ಟಿಯಿ[illegible] ಎಲ್ಲ ಪ್ರಾಂತಗಳಲ್ಲಿ ಹಿಂದಿಯಲ್ಲಿಯೆ ಇರು[illegible] ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ [illegible] ಯಿತುಗಳನ್ನು ಬೇಕಾದರೆ ಪ್ರಾಂತೀಯ ಭಾ[illegible] ಸಬಹುದು. ಶ್ರೀ. ಕುಬಸದ ಅವರ ಕನ್ನ[illegible]

ಪ್ರತಿಯೊಬ್ಬ ಕವಾಯಿತಿನ ಶಿಕ್ಷಕರೂ ಓದಿ ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿ ಒಂದು ನಿಶ್ಚಯಕ್ಕೆ ಬರಬೇಕು.

परलोक: ಇದು ಮೇರಠಿನಿಂದ ಹೊರಡುವ ಹಿಂದಿ ಮಾಸ ಪತ್ರಿಕೆ. ಸಂಪಾದಕ ಶ್ರೀ. ಕೇದಾರನಾಥ ಶರ್ಮಾ ಮತ್ತು ಶ್ರೀ. ಜಿ. ವಿ. ಸಾತೆ. ವಾ. ಚಂ. ೨॥ ರೂಪಾಯಿ.

'ಪರಲೋಕ'ದಂತಹ ಪತ್ರಿಕೆಯು ಭಾರತದಲ್ಲಿ ಅದೊಂದೇ. ಸತ್ತ ಮೇಲೂ ಜೀವನದ ಅಂತ್ಯವಾಗುವದಿಲ್ಲ; ದೇಹವನ್ನು ಬಿಟ್ಟ ಆತ್ಮರಿಗೆ ಇಹಲೋಕದ ಸಂಬಂಧವು ಕಡಿದುಹೋಗುವದಿಲ್ಲ; ದೇಹಿಗಳಾದ ಮನುಷ್ಯರ ದುಃಖಗಳಲ್ಲಿ ಆ ವಿದೇಹಿಗಳಾದ ಆತ್ಮರು ಬಂದು ಸಹಾಯ ಮಾಡುತ್ತಾರೆ; ಎಂಬ ವಿಚಾರಗಳನ್ನು ಬೋಧಿಸಿ ಜನತೆಗೆ ಪರಲೋಕವಿಷಯಗಳಲ್ಲಿ ಜ್ಞಾನವನ್ನು ಹೆಚ್ಚಿಸುವದೇ ಈ ಪತ್ರಿಕೆಯ ಗುರಿಯಾಗಿದೆ. ದೊಡ್ಡ ದೊಡ್ಡ ವಿಚಾರಿಗಳಿಂದಲೂ ಸಂಶೋಧಕರಿಂದಲೂ ಇದರಲ್ಲಿ ಲೇಖನಗಳು ಬರೆಯಲ್ಪಡುತ್ತವೆ.

ಆರ್ಯವೈದ್ಯ ಕನ್ನಡ ಮಾಸಪತ್ರಿಕೆ. ಸಂಪಾದಕ ವೈದ್ಯ ಶ್ರೀ. ಹಲಸೀಕರ ಹುಬ್ಬಳ್ಳಿ. ವಾ. ಚಂ. ೨ ರೂ. ಪು. ಸಂ. ೩೦. ಪ್ರಕಾಶಕರು ಆಯುರ್ವೇದ ಪ್ರಸಾರಕ ಮಂಡಳ ಹುಬ್ಬಳ್ಳಿ.

ಕನ್ನಡದಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಮಾಸ ಪತ್ರಿಕೆಗಳು ಈಗಾಗಲೆ ಒಂದೆರಡು ಹೊರಟು ಕಂಣು ಮುಚ್ಚಿವೆ. ಆದುದರಿಂದ 'ಆರ್ಯ ವೈದ್ಯ'ಕ್ಕೆ ಮೊದಲು ನಾವು ದೀರ್ಘಾಯುಷ್ಯವನ್ನು ಬಯಸುತ್ತೇವೆ. ಇದೀಗ ಮೊದಲ ಸಂಚಿಕೆ ಹೊರಟಿದೆ. ಆದರೆ ಮೊದಲ ಸಂಚಿಕೆಯು ಇರಬೇಕಾದಷ್ಟು ಪರಿಣಾಮಕಾರಿಯಾಗಿಲ್ಲ. ಲೇಖನಗಳಿಗಾಗಿ ಬೇರ್ಪಡಿಸಿದ ೧೮ ಪುಟಗಳಲ್ಲಿ ಆ. ಪ್ರ. ಮಂಡಳ, ಕನನೇಲ ಕಾರಖಾನೆ ಮುಂತಾದ ವಿಷಯಗಳಿಗಾಗಿಯೇ ೪ ಪುಟಗಳು ಕೊಡಲ್ಪಟ್ಟಿವೆ. ಕೊನೆಯ ೧೮ ಪುಟಗಳನ್ನು 'ರಸ ಚಂಡಾಂಶು'ವಿನ ಅನುವಾದಕ್ಕೆ ಕೊಡಲಾಗಿದೆ. ಹೀಗಾಗಿ ಸಾಮಾನ್ಯ ವಾಚಕರಿಗೆ ವಾಚನೀಯ ವಿಷಯಗಳಿಗೆ ಸಾಕಷ್ಟು ಪುಟಗಳಿಲ್ಲ. ಇಂತಹ ಪತ್ರಿಕೆಗಳು ಬರಿ ವೈದ್ಯರಿಗಲ್ಲ, ಮನೆಮನೆಗೂ ಆಯುರ್ವೇದ ಪ್ರಸ್ಥಾನದಿಂದ ಸ್ವಾಸ್ಥ್ಯರಕ್ಷಣೆ ಮಾಡಿಕೊಳ್ಳುವ ಜ್ಞಾನವನ್ನು ಹರಡಬೇಕು. ಹಾಗಾಗಲು 'ಆರ್ಯವೈದ್ಯ'ವು ಸಾಮಾನ್ಯ ವಾಚಕರಿಗೂ ಉಪಯುಕ್ತವಾದ ವಿಷಯಗಳನ್ನು ಹೆಚ್ಚುಹೆಚ್ಚಾಗಿ ಕೊಡಬೇಕು. ಅನುವಾದದ ಪುಟಗಳನ್ನು ಕಡಿಮೆ ಮಾಡಬೇಕು. ಇಲ್ಲವೆ ಪತ್ರಿಕೆಯ ಪುಟಗಳನ್ನು ಹೆಚ್ಚಿಸಬೇಕು. ಆರ್ಯವೈದ್ಯವು ವೃದ್ಧಿಂಗತವಾಗಲಿ.

—ಆಯುರ್ವೇದವಿದ್ವಾನ್ ಗೋಪಾಲಕೃಷ್ಣರಾವ್

किशोर ಹಿಂದಿ ಮಾಸಪತ್ರಿಕೆ. ಸಂಪಾದಕ ಶ್ರೀ ರಾಮುದಹಿನ ಮಿಶ್ರ. ಪ್ರಕಾಶಕ ಬಾಲಶಿಕ್ಷಾಸಮಿತಿ ಬಾಂಕೀಪೂರ. ವಾ.ಚ. ೩ರೂ.

ಬಾಲಕರಿಗಾಗಿ ಹೊಸತಾಗಿ ಹೊರಟ ಪತ್ರಿಕೆಯಿದು. ಇದರ ತ್ರಿವರ್ಣದ ಹೊದಿಕೆಯು ಮುದ್ದಾಗಿ ಬಾಲಕರಿಗೆ ಪ್ರಿಯವಾಗಿದೆ. ಇದರಲ್ಲಿ ಇತಿಹಾಸ, ವಿಜ್ಞಾನ, ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು ಸುಲಭ ಶೈಲಿಯಲ್ಲಿ ಬರೆಯಲ್ಪಡುತ್ತಿವೆ. ಭಾರತದ ಎಲ್ಲ ಪ್ರಾಂತೀಯ ಭಾಷೆಯ ಲೇಖನಗಳ ಅನುವಾದವೂ ಇದರಲ್ಲಿ ಪ್ರಸಿದ್ಧಿಸಲಾಗುತ್ತಿದೆ. ಪುಟ ಪುಟಕ್ಕೂ ಚಿತ್ರಗಳಿವೆ.

ತರುಣ ತುರ್ಕಸ್ತಾನ ಅರ್ಥಾತ್ ಕಮಾಲಪಾಶಾ ಧಾರವಾಡದ ಶ್ರೀ.ಬುರ್ಲಿ ಬಿಂದುಮಾಧವರ ಸಂಪಾದಕತ್ವದಲ್ಲಿ ಹೊರಡುವ 'ಮಿಂಚಿನ ಬಳ್ಳಿ'ಯ ಎರಡನೆ ಕುಡಿಯಿದು. ಬರೆದವರು 'ವಿಲಾಸಿ'ಗಳು. ಪು. ೧೫೭. ಬೆಲೆ ೧ ರೂ.

ಕಮಾಲ ಪಾಶಾ ಅಂದರೆ ಕುದುರೆಲಾಯದಿಂದ ತುರ್ಕಸ್ತಾನದ ಸರ್ವಾಧಿಕಾರಕ್ಕೇರಿದ ಕ್ರಾಂತಿ ಪುರುಷ. ತುರ್ಕಿ ಮಹಮ್ಮದೀಯ ಜನಾಂಗದಲ್ಲಿ ಅನೂಹ್ಯ ಬದಲಾವಣೆಯನ್ನು ತಂದ ವೀರ, ರೂಢಿಭ್ರಮೆ, ಪಾರಂಪರಿಕತೆಯ ಜಾಳಿಗೆಯಲ್ಲಿ ಕಾಲ್ತೊಡಕಿ ನವಯುಗದಲ್ಲಿ ಮುಂದುವರಿಯದೆ ಮುಗ್ಗರಿಸುವವರಿಗೆ ಕಮಲ ಪಾಶಾನ ಚರಿತ್ರೆಯು ಅಂಶಗಳು ಎಲ್ಲವಲ್ಲದಿದ್ದರೂ ಹಲವಾದರೂ ಉದ್ಬೋಧಕವಾಗುವುದರಲ್ಲಿ ಸಂದೇಹವಿಲ್ಲ. ರಾಷ್ಟ್ರದ ಪ್ರಗತಿಯಿರುವುದು ತರುಣರಲ್ಲಿ. ಅವರೊಮ್ಮೆ ತೊಡೆತಟ್ಟಿ ನಿಂತರೆ ಅಘಟಿತ ಘಟನಾಶಕ್ತಿಯೂ ಅವರಲ್ಲಿ ಬರುವುದೆಂದು ಈ ಪುಸ್ತಕದಲ್ಲಿಯ ವಿಷಯಗಳು ವಾಚಕರಿಗೆ ಮನಗಾಣಿಸುವವು. ಪುಸ್ತಕದ ಅಚ್ಚು-ಕಟ್ಟುಗಳು ಹೆಮ್ಮೆಯನ್ನು ಹುಟ್ಟಿಸುವಂತಿವೆ.

ಜಯಂತಿ:— ಧಾರವಾಡದಲ್ಲಿ ಹೊಸತಾಗಿ ಹೊರಟ ಕನ್ನಡ ಮಾಸಪತ್ರಿಕೆ. ಸಂಪಾದಕರು ಶ್ರೀ. ಪಾಟೀಲ ಮಾಧವರಾಯರು ಮತ್ತು ಬೆಟಗೇರಿ ಶ್ರೀ. ಕೃಷ್ಣಶರ್ಮರು. ಪುಟಗಳು ಡೆ. ೧/೪ ೬೮. ವಾ. ಚಂ. ೩ ರೂ. ಬಿಡಿಸಂಚಿಕೆಗೆ ೪ ಆಣೆ.

ಮೇಲ್ಕಂಡ ಇಬ್ಬರು ಸಂಪಾದಕರಲ್ಲದೆ ಈ ಪತ್ರಿಕೆಯ ಸಂಪಾದಕೀಯ ಮತ್ತು ಸಲಹೆಗಾರ ಮಂಡಲಗಳಲ್ಲಿ

ಹಲವು ಜನ ಮಹನೀಯರು ಸೇರಿದ್ದಾರೆ. ಹಲವು ಲೇಖನಗಳು ಸಚಿತ್ರವಾಗಿವೆ. ಶ್ರೀ. 'ಆನಂದಕಂದ'ರ 'ನಡೆ ಸಾಗು ಜೊತೆಗೂಡಿ' ಎಂಬ ಮೊದಲನೆಯ ಪುಟದಲ್ಲಿಯ ಕವಿತೆಯ ಭಾವದಿಂದ ಈ ಪತ್ರಿಕೆಯು ಸ್ತ್ರೀ-ಪುರುಷರಿಬ್ಬರ ಜೀವನಕ್ಕೂ ಸಂಬಂಧಿಸಿದ ಲೇಖನಗಳಿಗೆ ಹೆಚ್ಚು ಹೆಚ್ಚಾಗಿ ಎಡೆಗೊಡುತ್ತದೆಂದು ಅನಿಸುತ್ತದೆ. ಸಂಪಾದಕೀಯ ಲೇಖನದಲ್ಲಿ ಮಾನ್ಯಸಂಪಾದಕರು 'ಜಯಂತಿಯ ಗೊತ್ತುಗುರಿ'ಗಳನ್ನು ಹೇಳಿದ್ದಾರೆ. ಆದರೂ 'ಜಯಂತಿ'ಯ ವೈಶಿಷ್ಟ್ಯವು ಅಲ್ಲಿ ನಿಚ್ಚಳವಾಗಿಲ್ಲವೆಂದು ನಮ್ಮ ಅಭಿಪ್ರಾಯ. ಪ್ರತಿಯೊಂದು ಪತ್ರಿಕೆಯು ಹೊಸತಾಗಿ ಹೊರಟಾಗ ಆಡಬಹುದಾದ ಮಾತುಗಳ ಅರ್ಥವನ್ನೇ ಇಲ್ಲಿ ಬೇರೆ ಮಾತುಗಳಲ್ಲಿ ಹೇಳಿದಂತಾಗಿದೆ. ಅಲ್ಲಿಯೇ ಸಂಪಾದಕರು 'ಹಿರಿಯರಾದವರು ಯಾವುದೇ ... ರಂಭದಲ್ಲಿ ಆಕ್ಷೇಪಣೆಗಳನ್ನೆತ್ತಿ ... ಸಹಜ! ಏನಾದರೂ ಕಾರ್ಯಮಾಡಿ ಪುರುಷಾರ್ಥ... ಬೇಕೆಂಬ ಬಿಸಿನೆತ್ತರಿನ ತರುಣರು ಅವ... ಗಳನ್ನು ಕಿವುಡುಗೇಳಿ ಕಾರ್ಯಪ್ರವೃತ್ತ... ಸ್ವಾಭಾವಿಕ' ಎಂದು ಹೇಳಿದ್ದಾರೆ. ಈ ಪತ್ರಿಕೆ... ಲೇಖಕ ವರ್ಗವು ಜಯಕರ್ನಾಟಕದ ವಾಚಕ... ಚಿತವಾದುದಲ್ಲ. ಪತ್ರಿಕೆಯ ಇಡಿಯ ರಚನೆ... ಬಗೆಯ ಉತ್ಸಾಹವು ತೋರುತ್ತದೆ. ಹೊದಿಕೆ... ಸ್ತ್ರೀಯ ಚಿತ್ರವು ಮಾತ್ರ ತೀರಾ ಸಪ್ಪೆಯಾ... ಕೆಯು ಅಭ್ಯುದಯವನ್ನು ಹೊಂದಲೆಂದು ಹೃತ್ಪೂರ್ವಕವಾಗಿ ಕೋರುತ್ತೇವೆ.

—...

ಕನ್ನಡದ ಮುನ್ನಡೆ

ಧಾರವಾಡದ ಶ್ರೀ. ಸಾಂಬ್ರಾಣಿಯವರು

ಮುಂಬಯಿ ಇಲಾಖೆಯ ದ್ವಿತೀಯ ಚರ್ಮಕಾರ ಪರಿಷತ್ತಿನ ಸ್ವಾಗತ ಸಮಿತಿಯ ಸಭೆಯು ಶ್ರೀ. ಎಸ್. ಜಿ. ಖಡ್ಡಾರೆಯವರ ಅಧ್ಯಕ್ಷತೆಯಲ್ಲಿ ಸೇರಿ ಮೇ ೨೮,೨೯ನೇ ತಾರೀಖಿನ ದಿನ ಸೊಲ್ಲಾಪೂರ ಜಿಲ್ಲೆಯ ಸಂಗೋಲಾದಲ್ಲಿ ಜರುಗಿಸುವ ನಿರ್ಣಯವಾಯಿತು. ಧಾರವಾಡದ ಶ್ರೀ. ಡಿ. ವೈ. ಸಾಂಬ್ರಾಣಿಯವರನ್ನು ಅಧ್ಯಕ್ಷಪದವಿಗಾಗಿ ಪ್ರಾರ್ಥಿಸಿದ್ದಾರೆ.

ಮಿಶ್ರವಿವಾಹ

ಬೆಣಗಾಲಪೇಟೆಯಲ್ಲಿ ರಾಷ್ಟ್ರೀಯ ಪದ್ಧತಿಯಲ್ಲಿ ಒಂದು ಮಿಶ್ರವಿವಾಹವಾಯಿತು. ವರರು ಶ್ರೀ. ಹಾಲಪ್ಪ ಮಾವಿನತೋಪ ಎಂಬ ವೀರಶೈವ ಧರ್ಮದ ಸಾದಾರಾಧ್ಯ ಒಳಪಂಗಡಕ್ಕೆ ಸೇರಿದವರು. ವಧು ಕುಮಾರಿ ಗಂಗಮ್ಮನು ಪಂಚಮಸಾಲಿ ವರ್ಗಕ್ಕೆ ಸೇರಿದವರು. ಇದೊಂದು ಸಾಮಾಜಿಕ ಕ್ರಾಂತಿಯೇ ಸೈ. ವಿವಾಹ ಸಮಾರಂಭಕ್ಕೆ ಶ್ರೀಗಳಾದ ಹಳ್ಳಿಕೇರಿ ಗುಡ್ಲೆಪ್ಪನವರು, ಸರದಾರ ವೀರನಗೌಡರು, ಕೀರ್ತನಕೇಸರಿ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು, ತಲ್ಲೂರ ರಾಯನಗೌಡರು ಮುಂತಾಗಿ ದೊಡ್ಡ ಜನರು ಸೇರಿ ವಧೂವರರನ್ನು ಹರಿಸಿದರಲ್ಲದೆ ಇಂತಹ ಅಂತರ್ಜಾತೀಯ ವಿವಾಹಗಳ ಮಹತ್ವವನ್ನು ವ್ಯಾಖ್ಯಾನದಲ್ಲಿ ವಿವರಿಸಿದರು.


ಶ್ರೀ ಬಸವಲಿಂಗಸ್ವಾಮಿಗಳು

ನವಲಗುಂದದ ಗವಿಮಠದಲ್ಲಿ ದೇಶಿಕರಾಗಿದ್ದ, ಕನ್ನಡ ನುಡಿಯ ಸೇವೆಯಿಂದ ಕನ್ನಡಿಗರಿಗೆ ಚಿರಪರಿಚಿತರಾಗಿರುವ ಶ್ರೀ ಬಸವಲಿಂಗಸ್ವಾಮಿಗಳವರಿಗೆ, ಮೇ ತಿಂಗಳ ತಾ| ೧೦, ೧೧,೧೨ ಈ ಮೂರು ದಿನಗಳವರೆಗೆ, ನಿರಂಜನ ಚರಾಧಿಕಾರ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ೧೦-೧೫ ಸಾವಿರ ಜನರು ಸೇರಿದ್ದರು. ಒಂದು ಮುಸಲ್ಮಾನ ಭೇದವೆನಿಸದೆ ಎಲ್ಲ ಜಾತಿಯ ಜನರೂ ಭಾಗವಹಿಸಿದ್ದರು. ಮಹೋತ್ಸವಕ್ಕೆ ಬೆಂಗಳೂರಿನ ಸರ್ಪಭೂಷಣಮಠದ ಶ್ರೀ ಮನ್ನಿರಂಜನ ಮಹಾದೇವಸ್ವಾಮಿಗಳು, ವೇ|| ಗಳಾದ ಶ್ರೀ ರೇವಣಸಿದ್ಧ ಶಾಸ್ತ್ರಿಗಳು, ಬಸವರಾಜ ಶಾಸ್ತ್ರಿಗಳು, ಚಂದ್ರಶೇಖರಶಾಸ್ತ್ರಿಗಳು, ರಾಜಶೇಖರಶಾಸ್ತ್ರಿಗಳು ಮುಂತಾದವರಲ್ಲದೆ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಂತಹ ಅನೇಕ ಸಾಹಿತಿಗಳೂ ದಯಮಾಡಿಸಿದ್ದರು.

ಮೈಸೂರು ರಾಜಕುಮಾರರ ವಿವಾಹ

ಕಳೆದ ತಿಂಗಳ ೧೫ನೇ ತಾರೀಖಿನ ದಿನ ಮೈಸೂರು ಯುವರಾಜ ಕುಮಾರರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರ ವಿವಾಹವು ಚರಖಾರಿ ಸಂಸ್ಥಾನದ ಮಹಾರಾಜರ ತಂಗಿಯವರಾದ ರಾಜಕುಮಾರಿ ಸತ್ಯಪ್ರೇಮಾ ದೇವಿಯವರೊಡನೆ ಸಮಸ್ತ ರಾಜವೈಭವದೊಡನೆ ನೆರವೇರಿತು. ಮದುವೆಯ ಮುಹೂರ್ತಕ್ಕೆ ಪ್ರಮುಖ ಸಂಸ್ಥಾನಗಳ ರಾಜ ಮಹಾರಾಜರುಗಳೂ ದಿವಾನರೂ ಕೂಡಿ ಒಟ್ಟು ೩೦೦೦ ಅತಿಥಿಗಳು ಕಲ್ಯಾಣ ಮಂಟಪದಲ್ಲಿ ಸೇರಿದ್ದರು. ಹಿಂದೂ ಸಂಪ್ರದಾಯಕ್ಕನುಸರಿಸಿ ಕಲಾಬತ್ತಿನ ಉಡುಪನ್ನು ಧರಿಸಿ ಸಕಲ ರಾಜಮರ್ಯಾದೆಯೊಡನೆ ಅಂಬಾರಿಯಲ್ಲಿ ಮೆರವಣಿಗೆಯಾಯಿತು. ನಂತರ ವೇದೋಕ್ತವಾಗಿ ವಿವಾಹಮಹೋತ್ಸವವಾದ ಮೇಲೆ ಸಂಗೀತವಾಯಿತು. ಬ್ರಾಹ್ಮಣರಿಗೆ ಚಿನ್ನದ ಲಕ್ಷ್ಮೀಕಾಸುಗಳನ್ನು ಕೊಡಲಾಯಿತು.

ಜಯಕರ್ನಾಟಕವು ಮಾನ್ಯ ವಧೂವರರಿಗೆ ಹೃತ್ಪೂರ್ವಕವಾಗಿ ದೀರ್ಘಾಯುವನ್ನೂ, ಸುಖದಾಂಪತ್ಯವನ್ನೂ ಕೋರುತ್ತದೆ.



ಆಂಗ್ಲೊ-ಐರಿಷ್ ಸಂಧಾನ

ಬ್ರಿಟನ್ನು ಬೇರೆ ರಾಷ್ಟ್ರಗಳೊಡನಿದ್ದ ಮನಸ್ತಾಪಗಳನ್ನೆಲ್ಲಾ ಒಂದೊಂದಾಗಿ ಪರಿಹರಿಸುತ್ತಿದೆ. ಅದಕ್ಕೆ (ಕೆಲದಿನದ್ದಾದರೂ) ಸಂಪೂರ್ಣ ವಿಶ್ರಾಂತಿ ಬೇಕಾಗಿದೆ. ತನ್ನ ರಾಷ್ಟ್ರಸಂಘಟನೆ-ಸಂರಕ್ಷಣೆಯ ಕೆಲಸವನ್ನು ನಿರ್ವಿಘ್ನವಾಗಿ ಮುಂದರಿಸಬೇಕಾಗಿದೆ. ಈಚೆಗೆ (ಎಪ್ರಿಲ್ ೨೫) ನಡೆದ ಆಂಗ್ಲೊ-ಐರಿಷ್ ಒಪ್ಪಂದವೂ ಈ ಬಗೆಯದಾಗಿದೆ.

ಬಹುದಿನಗಳಿಂದಲೂ ಇಂಗ್ಲಂಡ್-ಐರ್ಲಂಡ್‌ಗಳ ನಡುವೆ ಕಿಡಿಹಾರುತ್ತಿದೆ. ಐರಿಷ್ ರಾಷ್ಟ್ರಪತಿ ಡಿ. ವೆಲೆರಾ ತಾನು ಅಧಿಕಾರವಸ್ತ್ರಗಳನ್ನು ತೊಟ್ಟಂದಿನಿಂದಲೂ ಐರ್ಲಂಡಿನ ಸುತ್ತಲಿನ ಬ್ರಿಟಿಷರ ಪಾಶಗಳನ್ನು ಸಡಿಲಿಸತೊಡಗಿದನು. ಬ್ರಿಟಿಷ್ ಸಾಮ್ರಾಜ್ಯದಿಂದ ತನ್ನ ರಾಷ್ಟ್ರವು ಹೊರಬೀಳುವಂತೆ ಮಾಡಿ, ಅದಕ್ಕೆ ಸ್ವತಂತ್ರ ರಾಜ್ಯಘಟನೆಯನ್ನು ಯನ್ನು ಕೊಟ್ಟನು. ಬ್ರಿಟಿಷರು ಸುಮ್ಮನೆ ಕುಳಿತರೂ ಐರ್ಲಂಡು-ಇಂಗ್ಲಂಡುಗಳು ಪರಸ್ಪರ ಆರ್ಥಿಕ ಪ್ರತೀಕಾರಗಳನ್ನು ನಡೆಸಿದವು. ಅಂತೂ ಬಹುದಿನಗಳಿಂದಲೂ ಘರ್ಷಣೆ ನಡೆದಿತ್ತು.

ಇದೀಗ ಆ ಅಳುಕುವ ಮುಳ್ಳನ್ನು ತೆಗೆದುಬಿಡುವ ಪ್ರಯತ್ನಕ್ಕೆ ಕೆಲಮಟ್ಟಿಗೆ ಯಶಸ್ಸು ಬಂದಿದೆ. ಇಬ್ಬರೂ ಒಬ್ಬರಮೇಲೊಬ್ಬರು ಹೇರಿದ ಹೆಚ್ಚಿನ ಸುಂಕಗಳನ್ನು ತೆಗೆದುಬಿಡಲಾಗಿದೆ; ಐರ್ಲಂಡಿನ ಸೈನಿಕ ಠಾಣ್ಯದ ಬಂದರುಗಳನ್ನು ಇಂಗ್ಲಂಡು ಬಹುದಿನಗಳಿಂದ ಹಿಡಿದಿಟ್ಟಿದ್ದಿತು,—ಅವನ್ನು ಅನಿರ್ಬಂಧವಾಗಿ ತಿರುಗಿ ಕೊಡಲಾಗಿದೆ; ೧೯೩೨ರಲ್ಲಾದ ದೋಬೆಯ ಫಲವಾಗಿ ಬ್ರಿಟಿಷ್ ಆಸ್ತಿಪಾಸ್ತಿಗಾದ ಹಾನಿಯನ್ನು ತುಂಬಲು ಪ್ರತಿವರ್ಷ ಕೊಡುತ್ತಿರುವ ೨೫೦,೦೦೦ ಪೌಂಡಿನಷ್ಟು ಹಣವನ್ನು ಐರ್ಲಂಡು ಈಗಲೂ ಕೊಡುತ್ತ ಬರುವುದು.

ಈ ಒಪ್ಪಂದದಲ್ಲಿ, ಉತ್ತರ-ದಕ್ಷಿಣ ಐರ್ಲಂಡುಗಳ ವಿಭಕ್ತೀಕರಣವನ್ನು ರದ್ದುಪಡಿಸುವ ನಿರ್ದೇಶವಿಲ್ಲ; ಅದನ್ನು ಸಾವಧಾನವಾಗಿ ಬಗೆಹರಿಸಲು ಇನ್ನು ಎರಡು ರಾಷ್ಟ್ರಗಳಿಗೂ ಬಿಡುವು ದೊರೆಯುವುದು. 'ಐರ್ಲಂಡಿನ ಏಕೀಕರಣದ ಪ್ರಶ್ನೆಯು ಅಂತರಿಕ್ಷದಲ್ಲಿಯೇ ಉಳಿಯಿತಲ್ಲ! ಬಂದರಗಳು ಯಾರಿಗೆ ಬೇಕಿವೆ?—ನಮಗೆ [illegible] ವೈರಿಗಳಿಲ್ಲಿ ಇದ್ದಾರೆ? ಡಿ. ವೆಲೆರಾ ಏಕೀಕರಣ[illegible]ಯನ್ನು ಗಟ್ಟಿಹಿಡಿಯಬೇಕಾಗಿತ್ತು' ಎಂದು [illegible]ಗಳು ಗೊಣಗುತ್ತಿವೆ. ಆದರೆ ಏಕೀಕರಣ ಪ್ರಶ್ನೆ[illegible]ನಕ್ಕೆ, ಸೈನಿಕ ಮಹತ್ವವುಳ್ಳ ಬಂದರುಗಳನ್ನು [illegible] ಕೊಳ್ಳುವುದು ಡಿ. ವೆಲೆರಾನ ಕೈಯಲ್ಲೊಂದು [illegible] ಆಯುಧವಾಗಿದೆಯೆಂಬುದನ್ನು ಮರೆಯಲಾಗದು. ಬಂದರುಗಳಿಂದ ಬ್ರಿಟಿಷ್ ಸೈನ್ಯವು ಹಿಂದೆ[illegible] ಇಂಗ್ಲಂಡು ತನ್ನ ರಕ್ಷಣೆಗಾಗಿ ಕೆಲಮಟ್ಟಿಗಾದರೂ [illegible]ಮೇಲೆ ಅವಲಂಬಿಸಿದಂತಾಯಿತು; ಏಕೆಂದರೆ [illegible] ಸೈನ್ಯದ ಸುಪ್ರಸನ್ನತೆಯು ಇಂಗ್ಲಂಡಿಗಿನ್ನು [illegible]ವಾರ್ಯವಾಗಿ ಬೇಕಾಯಿತು. ರೌಂಡ್ ಟೇಬಲ್ [illegible] ಹೇಳುವಂತೆ, "ಅಂತರಿಕ್ಷ ಯುದ್ಧದಲ್ಲಿ ಕಡೆ[illegible]ಯಿಂದ, ಬ್ರಿಟಿಷ್ ನಡುಗಡ್ಡೆಗಳ ರಕ್ಷಣೆ[illegible] ಐರಿಷರ ಧೋರಣೆಯನ್ನು ಸ್ಪಷ್ಟಪಡಿಸಿಕೊಳ್ಳ[illegible] ಹೆಚ್ಚಾಗಿ ಅಗತ್ಯವಾಗುತ್ತಿದೆ. ಸಮುದ್ರ[illegible] ಬ್ರಿಟನ್ನಿನ ಅಂಕೆಯು ಸ್ಥಿರವಾಗಿ ಉಳಿದ[illegible] ಪಿಯನ್ ಶತ್ರುರಾಷ್ಟ್ರವೊಂದು ಮನಸ್ಸುಮಾಡಿ[illegible] ಹಾರುವ ಮತ್ತು ವೇಗಶಾಲಿಗಳಾದ ವಿಮಾನ[illegible]ದಿಂದ ಬ್ರಿಟಿಷ್ ಸಾಮುದ್ರಧುನಿ ([illegible] ತುಂಬಾ ಗಂಡಾಂತರದ್ದಾಗುವಂತೆ ಮಾಡು[illegible] ಸಾಧ್ಯವಿದೆ. ಆಗ ಐರಿಷ್ ಸಮುದ್ರ ಮತ್ತು [illegible] ಸುತ್ತು ಹಾಕಿ ಅಟ್ಲಾಂಟಿಕ್ ಮಹಾಸಾಗರ[illegible]ಗಿಂದಲೆ ದಾರಿ ತೆಗೆಯಬೇಕಾಗುವುದು...."

ಐರ್ಲಂಡಿನ ಅಧ್ಯಕ್ಷರು

ಡಿಸೆಂಬರ ೨೯, ೧೯೩೭ನೆಯ ದಿನ ಹೊಸ [illegible] ಘಟನೆಯು ಜಾರಿಯಲ್ಲಿ ಬಂದಿತು. [illegible]ರನ್ನು ಆರಿಸುವ ಕೆಲಸವು ಬಹಳ ಜವಾಬ್ದಾ[illegible] ಡಾ. ಡಗ್ಲಸ್ ಹೈಡ್ ಎಂಬ ವಯೋವೃದ್ಧ[illegible]ವಂತರೂ, ಸಂಸ್ಕೃತಿಯುತರೂ ಆದ [illegible]

ಡಿ. ವೆಲೆರಾ ಅಧ್ಯಕ್ಷಪದವಿಗೆ ಸೂಚಿಸಿದುದಕ್ಕೆ ಕಾಸ್ಗ್ರೇವರ ವಿರುದ್ಧಪಕ್ಷವೂ ಐಕಮತ್ಯದಿಂದ ಸಮ್ಮತಿಸಿದುದರಿಂದ ಈ ತೊಂದರೆಯೊಂದು ಬಗೆಹರಿಯಿತು. ನೂತನ ಘಟನೆಯಲ್ಲಿ ರಾಜರಿಗೆ ಸ್ಥಾನವಿಲ್ಲ; ಎಂತಲೆ ಅವರ ಪ್ರತಿನಿಧಿಯಾದ ಗವರ್ನರ ಜನರಲ್ಲರಿಗೂ ಇಲ್ಲ. ದೇಶದ ಅಂತರ್ಗತ ಆಡಳಿತದಿಂದ ರಾಜತ್ವದ ಅಧಿಕಾರವನ್ನೂ ಪೂರ್ತಿಯಾಗಿ ಒಂದು ವರ್ಷದ ಹಿಂದೆಯೇ ತೆಗೆದುಹಾಕಿದ್ದರೂ, ಪರ ರಾಷ್ಟ್ರೀಯ ವ್ಯವಹಾರದಲ್ಲಿ ಇದ್ದಕ್ಕಿದ್ದಂತೆಯೇ ಮುಂಚಿನ ವ್ಯವಸ್ಥೆಯನ್ನು ಇಡಲಾಗಿತ್ತು. ಹೊಸ ಘಟನೆಯ ಮೇರೆಗೆ, ಪ್ರತ್ಯಕ್ಷ ವ್ಯವಹಾರದಲ್ಲಿ ಯಾವ ಬದಲಾವಣೆಯನ್ನು ಮಾಡಿರದಿದ್ದರೂ ತತ್ವದ ದೃಷ್ಟಿಯಿಂದ ದೊಡ್ಡ ವ್ಯತ್ಯಾಸವುಂಟಾಗಿದೆ. ಇನ್ನು ಮೇಲೆ ಘಟನೆಯಲ್ಲಿ ಯಾವ ಬದಲಾವಣೆಯನ್ನೂ ಮಾಡದೆ, ಬೇರೆ ಕಾನೂನಿನಿಂದಲೆ ರಾಜತ್ವದ ಸಂಬಂಧವನ್ನು ಹೊರಗಿನ ವ್ಯವಹಾರದಲ್ಲಿಯೂ ಕಡಿದುಕೊಳ್ಳಬಹುದಾಗಿದೆ. ಆದರೆ ಅದಕ್ಕೆ ಸಮಯಬೇಕು. ಉತ್ತರ-ದಕ್ಷಿಣ ಐರ್ಲೆಂಡುಗಳ ಏಕೀಕರಣವಾಗದಿರುವುದೆ ಆ ಅಡ್ಡಿಯು.

ಅಧ್ಯಕ್ಷನೆ ಈ ಘಟನೆಯಲ್ಲಿ ಸರ್ವಶ್ರೇಷ್ಠ ಅಧಿಕಾರಿಯು. ಅವನ ಅಧಿಕಾರದ ಅವಧಿ ೭ ವರ್ಷ. ದುರ್ವರ್ತನೆಗಾಗಿ ತಳ್ಳಬೇಕೆಂದು ಯಾವುದೇ ಸಭಾಗೃಹವು ನಿರ್ಣಯಿಸಿ ಎರಡನೆಯ ಸಭಾಗೃಹವು ೨/೩ ಮತಾಧಿಕ್ಯದಿಂದ ಒಪ್ಪಿದರೆ, ಅವನು ಅಧಿಕಾರಪದವಿಯನ್ನು ಬಿಟ್ಟುಕೊಡಬೇಕಾಗುವುದು. ಪ್ರಜೆಗಳ ಮೂಲಭೂತ ಅಧಿಕಾರಗಳನ್ನು ಸಂರಕ್ಷಿಸಲೆಂದೇ ಅವನ ಯೋಜನೆಯಾಗಿದೆ. ವರಿಷ್ಠ ಅಧಿಕಾರಿಗಳನ್ನು (ಉ. ಮುಖ್ಯಮಂತ್ರಿ ಮತ್ತು ಅವನ ಜತೆಗಾರರು, ನ್ಯಾಯಾಧೀಶರು, ಅಟರ್ನಿ-ಜನರಲ್, ಕಂಟ್ರೋಲರ್, ಆಡಿಟರ್-ಜನರಲ್) ನಿಯಮಿಸುವ ಅಧಿಕಾರವು ಆತನದೇ ಆಗಿದ್ದರೂ, ಶಾಸನಗೃಹಗಳ ಮೂಲಕ ವ್ಯಕ್ತವಾಗುವ ಪ್ರಜಾಭಿಪ್ರಾಯಕ್ಕೆ ಮುದ್ರೆಯೊತ್ತುವ ಕೆಲಸವಷ್ಟೆ ಆತನದಾಗಿದೆ. ಅದೇ ಅರ್ಥದಲ್ಲಿ ಸೈನ್ಯದ ಮಹಾನಾಯಕನೂ ಅವನೇ ಆಗಿದ್ದಾನೆ.

ಕೆಲವು ಸಲ ಮುಖ್ಯ ಮಂತ್ರಿಯನ್ನೂ ಅಲ್ಲಗಳೆದು ಶಾಸನಸಭಾಗೃಹಗಳನ್ನು ವಿಸರ್ಜಿಸುವ ಅಧಿಕಾರವನ್ನೂ ಅವನಿಗೆ ಕೊಟ್ಟಿದೆ; ಆದರೆ ಅದೂ ಪ್ರಜಾಧಿಕಾರ ರಕ್ಷಣೆಗಾಗಿಯೆ. ಇಂತಹವೆ ಬೇರೆ ಕೆಲ ವಿಶೇಷಾಧಿಕಾರಗಳೂ ಆತನಿಗಿವೆ. ಅಂತೂ ಇಂಗ್ಲೆಂಡಿನ ಮಗು ಲಿಗಿದ್ದ ಚಿಕ್ಕ ದೇಶವು ಪೂರ್ಣ ಸ್ವರಾಜ್ಯವನ್ನು ಪ್ರತ್ಯಕ್ಷವಾಗಿ ಅನುಭವಿಸುವ ದೃಶ್ಯವು ಕಾಣುತ್ತಲಿದೆ.

ಜಿನ್ನಾ ಅವರ ಅಪಲಾಪ

ಅಖಿಲ ಭಾರತ ಮುಸ್ಲಿಂ ಲೀಗಿನ ವಿಶೇಷಾಧಿವೇಶನವು ಮೊನ್ನೆಮೊನ್ನೆ ಕಲ್ಕತ್ತೆಯಲ್ಲಿ ಬ್ಯಾ. ಜಿನ್ನಾ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಲೀಗಿನ ಧ್ವಜದಡಿಯಲ್ಲಿ ಒಟ್ಟುಗೂಡಬೇಕೆಂಬ ಆಪೇಕ್ಷೆಯು ಮುಸ್ಲಿಂ ಜನತೆಯಲ್ಲಿ ದಿನದಿನಕ್ಕೆ ಹೆಚ್ಚುತ್ತಿದೆಯೆಂದೂ 'ಮೌಲಾನಾ-ಮೌಲ್ವಿ'ಗಳ ಹೆಸರಿನಲ್ಲಿ ಮೆರೆಯುವ ಪ್ರತಿಗಾಮಿ ಜನರ ವರ್ಚಸ್ಸವು ಮೂಲೆಗುಂಪಾಗಿದೆಯೆಂದೂ ಜಿನ್ನಾ ಅವರು ಹೇಳಿದರು. ಸರಿ, ಮುಸ್ಲಿಂ ಜನತೆಯ ಮೇಲಿನ ಧರ್ಮಾಧಿಕಾರಿಗಳ ವರ್ಚಸ್ಸವು ಹಾಳಾಗುತ್ತಿದ್ದರೆ, ಹಿಂದುಸ್ಥಾನಕ್ಕೆ ಅದೊಂದು ಉಪಕಾರವೆ ಆಗಿದೆ. ಆದರೆ ಜಿನ್ನಾ ಅವರು ಪ್ರಕಟಗೊಳಿಸುತ್ತಿರುವ ಅಭಿಪ್ರಾಯಗಳಿಗೆ ಮುಸ್ಲಿಂ ಜನತೆಯು ಬೆಂಬಲವಾಗಿ ನಿಂತಿದ್ದರೆ, ಅವರು ಇನ್ನೊಂದು ಬಗೆಯ 'ರಾಜಕೀಯ ಮೌಲಾನಾ-ಮೌಲ್ವಿ'ಗಳನ್ನು ತಯಾರಿಸಿ, ಅವರ ವಶಕ್ಕೆ ಜನತೆಯನ್ನು ಕೊಡುತ್ತಿದ್ದಾರೆಂದು ಹೇಳಬಹುದಾಗಿದೆ.

ಜಿನ್ನಾ ಅವರ ಕಣ್ಣಿನಲ್ಲಿ ಕಾಂಗ್ರೆಸು ಮುಸಲ್ಮಾನ-ವಿರೋಧಿ ಸಂಸ್ಥೆ; ಹಾಗೆ ತಾನು ಹೇಳುತ್ತಿಲ್ಲವಾದರೂ, ಅದು ಹಿಂದೂಗಳ ಸಂಸ್ಥೆಯಾಗಿದೆ; ಅದು ಮುಸಲ್ಮಾನರ ಧಾರ್ಮಿಕ ಸಾಂಸ್ಕೃತಿಕ ಹಕ್ಕುಗಳನ್ನು ತುಳಿಯುತ್ತಿದೆ, ಆಡಳಿತದ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ; ಆದುದರಿಂದ ಮುಸಲ್ಮಾನರು ಕಾಂಗ್ರೆಸಿಗೆ ವಿರುದ್ಧವಾಗಿ ಧರ್ಮಯುದ್ಧ ಹೂಡಲಿ!

ಜಿನ್ನಾ ಅವರ ೧೪ ಪ್ರಸಿದ್ಧ ಬೇಡಿಕೆಗಳಿಗೆ ಈಚೆಗೆ ಮತ್ತೆ ೭ ಸೇರಿ, ಒಟ್ಟು ೨೧ ಆಗಿವೆ. ಸಮಯಕ್ಕೆ ತಕ್ಕಂತೆ ಅವು ಹೊಸ ಮರಿಗಳನ್ನು ಈಯಬಹುದು. ಈಗಿನ ೭ ಮರಿಗಳಿವು:-

(೧) ಮುಸ್ಲಿಂ ಲೀಗು ಕಾಂಗ್ರೆಸಿನಲ್ಲಿ ಎಂದೂ ಲೀನವಾಗದ ಪ್ರತ್ಯೇಕ ರಾಜಕೀಯ ಸಂಸ್ಥೆಯಾಗಿರಲು ಬೇಕು; (೨) ಕಾಂಗ್ರೆಸು ಮುಸ್ಲಿಂ ಜನತಾಸಂಪರ್ಕದ ಕಾರ್ಯಕ್ರಮವನ್ನು ಬಿಟ್ಟುಕೊಡಬೇಕು; (೩) ಜಾತೀಯ ಪ್ರಶ್ನೆಗಳ ಮೇಲೆ ಮುಸ್ಲಿಂ ಲೀಗಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು; (೪) ಸ್ಥಳೀಯ ಸಂಸ್ಥೆಗಳ ಚುನಾವಣೆಯು ಪ್ರತ್ಯೇಕ ಮತದಾರ ಸಂಘದ ತಳಹದಿಯ ಮೇಲೆಯೇ ಇರಬೇಕು; (೫) ಕಾಂಗ್ರೆಸು ತ್ರಿವರ್ಣಧ್ವಜವನ್ನೂ ಲೀಗಿನ ಅರ್ಧಚಂದ್ರ-ನಕ್ಷತ್ರಧ್ವಜವನ್ನೂ ಸಮನಾಗಿಯೇ ತಿಳಿಯ

ಬೇಕು, ಮತ್ತು ಅವೆರಡೂ ಎಲ್ಲಾ ಸ್ಥಳಗಳಲ್ಲಿ ಜತೆಜತೆಯಾಗಿಯೆ ಹಾರಿಸಲ್ಪಡಬೇಕು; (೬) ವಂದೇ ಮಾತರಂ ಗೀತವನ್ನು ಕಾಂಗ್ರೆಸು ಬಿಟ್ಟುಕೊಡಬೇಕು; (೭) ಕಾಂಗ್ರೆಸು ಹಿಂದೀ ಪ್ರಚಾರವನ್ನು ಪರಿತ್ಯಜಿಸಬೇಕು, ಹಿಂದೀ ಸಾಹಿತ್ಯ ಸಮ್ಮೇಲನದ ಮತ್ತಿತರ ಪ್ರಚಾರಕ ಸಂಸ್ಥೆಗಳ ಸಂಬಂಧವನ್ನು ಕಡಿದುಕೊಳ್ಳಬೇಕು, ಮತ್ತು ಉರ್ದೂ ಪ್ರಚಾರವನ್ನು ಅಪ್ಪೇ ಕಸುವಿನಿಂದ ಕೈಕೊಳ್ಳಬೇಕು. (ಅಲಹಾಬಾದದ 'ಲೀಡರ' ಪತ್ರದಲ್ಲಿ ಪ್ರಕಟವಾದ ಅಂಶಗಳಿವು.)

ಇವನ್ನೆಲ್ಲ ಇದ್ದಕ್ಕಿದಂತೆ ಸ್ವೀಕರಿಸುವುದೆಂದರೆ, ಕಾಂಗ್ರೆಸು ತನ್ನ ಗೊತ್ತು-ಗುರಿಗಳನ್ನೆಲ್ಲ ಬಿಟ್ಟುಕೊಟ್ಟು, ಮುಸ್ಲಿಂ ಲೀಗಿನ ಆಡಿಯಾಳಾಗಬೇಕೆಂದಂತೆಯೆ ಇದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನೂ ಸ್ವತಂತ್ರ ಮತದಾರ ಪದ್ಧತಿಯ ಮೇಲೆಯೆ ಮಾಡಬೇಕೆಂಬುದೂ ಮತಾಧಿಕಾರವನ್ನೂ ಬೇರೆ ತೆರನಾಗಿ ಏರ್ಪಡಿಸಬೇಕೆಂಬುದೂ ತೀರ ಹೊಸ ಬೇಡಿಕೆಯಾಗಿದೆ. ಈ ವಿಶೇಷ ಸೌಕರ್ಯವು ಮುಸ್ಲಿಂ ಜನತೆಗೆ ಮಾತ್ರವೇಕೆ, ಕ್ರಿಸ್ತೀ-ಯಹುದೀ-ಪಾರ್ಸೀ ಮೊದಲಾದ ಜಾತಿಗಳವರಿಗೆ ಯಾಕೆ ಬೇಡ?—ಎಂದು ಬೇರೆ ಜಾತಿಗಳವರು ಕೇಳಬಹುದಾಗಿದೆ. ಆದರೆ ಅವರು ಹಾಗೆ ಕೇಳುತ್ತಿಲ್ಲ.

ಎಲ್ಲಕ್ಕೂ ಅಸತ್ಯವಾದ ಆರೋಪವೆಂದರೆ ಕಾಂಗ್ರೆಸ್ ಜಾತೀಯ ಸಂಸ್ಥೆಯೆಂಬುದು. ಕಾಂಗ್ರೆಸು ಕೈಕೊಂಡ ಕಾರ್ಯಕ್ರಮಗಳೆಲ್ಲ (ಉ: ಮದ್ಯಪಾನ ಪ್ರತಿಬಂಧ, ಶಿಕ್ಷಣ ಪ್ರಸಾರ, ಕೃಷಿಕಾನೂನುಗಳ ಸುಧಾರಣೆ) ಕೇವಲ ಹಿಂದುಗಳ ಉದ್ಧಾರಕ್ಕಾಗಿ ಇವೆಯೆ? ಅವುಗಳಿಂದ ಮುಸ್ಲಿಂರನ್ನೊಳಗೊಂಡ ಇಡಿಯ ಜನತೆಯು ಉಪಕಾರ ಹೊಂದುವುದಿಲ್ಲವೆ?

ತಪ್ಪು ಕಾಂಗ್ರೆಸಿನದಲ್ಲ, ಹಿಂದುಗಳದಲ್ಲ, ಮುಸಲ್ಮಾನರದೇ ಆಗಿದೆ. ಅವರು ಕಾಂಗ್ರೆಸಿನ ನೆರಳಲ್ಲಿ ತಮ್ಮ ಜನತೆಯ ಸುಧಾರಣೆಯನ್ನು ಭರದಿಂದ ಮಾಡಿಕೊಳ್ಳಲಿ. ಕಾಂಗ್ರೆಸು ಎಲ್ಲರಿಗೂ ಆಸರೆ ಕೊಡುವ ಹೆಮ್ಮರ. ಜಾತೀಯ ದ್ವೇಷದ ಭೂತವನ್ನೆಬ್ಬಿಸಿ ನಿಷ್ಕಾರಣವಾಗಿ ಹಿಂದುಗಳನ್ನು ಕೆಣಕದೆ, ತಮ್ಮಲ್ಲಿ ಧಾರ್ಮಿಕ-ಸಾಮಾಜಿಕ ಸುಧಾರಣೆಯನ್ನು ಮಾಡಿಕೊಳ್ಳಲಿ. ತಮ್ಮ ಜನತೆಯನ್ನು ಉಳಿದ ಸುಧಾರಿಸಿದ ಜಾತಿಗಳ ಜತೆಜತೆಗೆ ತರಲಿ. ಹಿಂದುಗಳು 'ಧರ್ಮ ಧರ್ಮ' ಎಂಬ ಬರಡು ಮಂತ್ರವನ್ನೆ ಜಪಿಸುತ್ತ ಕುಳಿತಿದ್ದರೆ, ಅವರೆಂದೂ ಮುಂದುವರಿಯುತ್ತಿದ್ದಿಲ್ಲ. ಹೊಸ ಹೊಸ ವಿಚಾರಗಳ ಘರ್ಷಣೆಯಿಂದಲೆ ಸಾ... ರಣೆಯ ಪಾವನಪಾವಕನು ಹುಟ್ಟುತ್ತಾನೆ. ... ಹಳೆಯ ಆಚಾರ-ವಿಚಾರಗಳ ಕೊಳಚೆಯಿಂದ ... ಜಾಗತಿಕ ವಿಚಾರಗಳ ಹೊಸಗಾಳಿಯನ್ನು ...

(೨೫—೪—೩೮ನೆಯ ...)

ಐಕ್ಯದ ಹೆಸರಿನಲ್ಲಿ ಸಂಕೋಲೆಗಳು ...

ಮೇಲಿನ ಬಿಡಿನುಡಿಯನ್ನು ಬರೆದಾದ ... ಹಿಂದೂ-ಮುಸ್ಲಿಂ ಜಾತೀಯ ಐಕ್ಯಸ್ಥಾಪನ... ಗಳು ಭರದಿಂದ ಸಾಗಿವೆ. ಅವುಗಳಿಗೆ ಯಶ... ಈ ಹಿರಿಸಮಸ್ಯೆಯು ಸರ್ವರಿಗೂ ಸಮಾಧಾನವಂತೆ ತೀರ್ಮಾನವಾಗಲೆಂದು ಕೋರುತ್ತೇವೆ.

"ನನಗೆಲ್ಲೆಲ್ಲಿಯೂ, ಕಗ್ಗತ್ತಲೆ! ಬೆಳಕು ... ಯೋ!" ಎಂದು ಮ. ಗಾಂಧಿಯವರು ತಮ್ಮ... ನಲ್ಲಿ ಮೊರೆಯಿಟ್ಟರು. ದೇವರು ಅವರಿಗೆ ಬೆಳ... ತವರ್ಷವನ್ನೆ ಆವರಿಸಿದ ಈ ಕಾಳ್ಗತ್ತಲೆಯನ್ನು ...

ಒಂದು ಕಡೆ ಕೇವಲ ಸ್ವಾರ್ಥಾಂಧತೆ; ಇ... ಅತ್ಯುನ್ನತ ಧ್ಯೇಯವಾದ—ಎಂಬೀ ದೃಶ್ಯ... ಮುಸ್ಲಿಂ ಲೀಗಿನ ಅಧ್ಯಕ್ಷಪೀಠದಿಂದ ಜಿನ್ನಾ ... ಬೇಡಿಕೆಗಳನ್ನು ಮುಗಿಲೆತ್ತರವಾಗಿ ಗುಡು... "ನಿಮ್ಮ ಬೇಡಿಕೆಗಳನ್ನೆಲ್ಲಾ ಮಾನ್ಯಮಾಡುತ್ತ... ಡನೆ ಸ್ವಾತಂತ್ರ್ಯಯುದ್ಧದಲ್ಲಿ ಸರ್ವಸ್ವ... ಸಿದ್ಧರಿರುವಿರಾ?" ಎಂದು ರಾಷ್ಟ್ರಪತಿ ... ಅವರನ್ನು ಕೇಳಿದರೆಂದು ಪತ್ರಿಕೆಗಳಲ್ಲಿ ... ಇದರಲ್ಲಿ ಸತ್ಯಾಂಶವೆಷ್ಟೋ! ಆದರೆ ಈ ... ಸಂಭಾಷಣೆಗಳಿಂದ ಮುಖಂಡರು ... ಕೊಂಚ ಎಚ್ಚರದಿಂದ ನಡೆದರೆ ಒಳಿತು ... ಲಾರೆವು.

ಕಾಂಗ್ರೆಸಿನ ಬಲ ಬೆಳೆಯುತ್ತಿದೆ; ಅದರ ... ಬ್ರಿಟಿಷರನ್ನೂ ಚಕಿತಗೊಳಿಸುತ್ತಿದೆ. ಇಂಥ... ಅವರಂತಹ ದುರಾರಾಧ್ಯರು. ಒಪ್ಪಂದಕ್ಕೆ ... ಬೇಕು. ತನ್ನ ಆತುರದಲ್ಲಿ ತನ್ನ ಶಕ್ತಿಯನ್ನೆ ... ಭಾವಿಸಿ, ಕಾಂಗ್ರೆಸು ಹಿಂದೂಗಳಿಗೆ ಐಕ್ಯ... ಶಾಶ್ವತ ಸಂಕೋಲೆಗಳನ್ನು ತೊಡಿಸದಿರಲಿ!

'ಜಗ್ಗಿ ಹಿಡಿಯೋಣ; ಸಿಕ್ಕಷ್ಟು ಸಿಗಲಿ' ... ಹಟ ಹಿಡಿಯಬಾರದು. ಅದು ಸಂಧಾನ... ಜಿನ್ನಾ ಅವರು ಇದನ್ನರಿಯಬೇಕು.

ಜಗ್ಗಬೇಡಿರಿ—ಎಂಬುದೇ ನಮ್ಮ ಕೋರಿಕೆ. ಹಠಿಯುವುದರಿಂದ ಯಾರಿಗೂ ಹಿತವಾಗಲಾರದು. ದೇವರು ಜಿನ್ನಾ ಅವರಿಗೆ ಸದ್ಬುದ್ಧಿ ಕೊಡಲಿ!

ಗಾಂಧಿ-ಲಿನ್ಲಿಥ್ಗೊ ಬೆಟ್ಟಿ

ಗಾಂಧಿ-ಇರ್ವಿನ್ನರ ಬೆಟ್ಟಿಯಿಂದ ಆಗಿನ ರಾಜಕೀಯ ವಾತಾವರಣ ತಿಳಿಗೊಂಡಿತ್ತು; ವಿಲಿಂಗ್ಡನ್ನರು ಮತ್ತೆ ಅದನ್ನು ಕದಡಿಸಿದರು—ಆ ಮಾತು ಬೇರೆ. ಆ ಬೆಟ್ಟಿಗೂ ಈ ಬೆಟ್ಟಿಗೂ ಕೆಲವೊಂದು ದೃಷ್ಟಿಯಿಂದ ಅಂತರವಿದೆ. ಆಗ ಗಾಂಧಿಯವರು ಸರಕಾರವನ್ನು ಪ್ರತಿಭಟಿಸುವ ಸತ್ಯಾಗ್ರಹಿಗಳ ನಾಯಕರಾಗಿದ್ದರು; ಇದೀಗ ಅವರು ಅಧಿಕಾರ ಪದವಿಯಲ್ಲಿ ರಾರಾಜಿಸುತ್ತಿರುವ ಕಾಂಗ್ರೆಸ್ ಸಂಸ್ಥೆಯ ಅನಭಿಷಿಕ್ತ ರಾಜರಾಗಿದ್ದಾರೆ. ಇರ್ವಿನರೊಡನಾದ ಮಾತುಕತೆಯಲ್ಲಿ ರಾಜಕೀಯ ವಿಷಯಗಳಿಗೆ ಹೊರತಾಗಿ ಧಾರ್ಮಿಕ ವಿಷಯಗಳೂ ಚರ್ಚಿಸಲ್ಪಟ್ಟವಂತೆ! ಲಿನ್ಲಿಥ್ಗೊ ಅವರು ಆಡಳಿತದ ವಿಚಾರಗಳನ್ನು ಬಿಟ್ಟು ಇನ್ನಾವ ಮಾತುಗಳನ್ನೂ ಚರ್ಚಿಸಿರಲಾರರು. ಈಗ ಗಾಂಧಿಯವರು ಬ್ರಿಟನ್ನಿನ ಮತ್ತು ಹಿಂದುಸ್ತಾನದ ಸರಕಾರಗಳ ದೃಷ್ಟಿಯಲ್ಲಿ, ಇಂಗ್ಲಂಡ್-ಹಿಂದುಸ್ತಾನಗಳ ಋಣಾನುಬಂಧವನ್ನು ಸ್ನೇಹಬಂಧನದಿಂದ ಇನ್ನೂ ಬಿಗಿಯಾಗಿಸಬಲ್ಲ ವಿಶ್ವಸ್ತ ನಾಯಕರು. ಅವರ ಕೈಯಲ್ಲಿ ಹಿಂದುಸ್ತಾನದ ಭವಿತವ್ಯವಿದೆಯೆಂದು ಸರಕಾರವು ಬಲ್ಲುದು. ತೀವ್ರಪಕ್ಷದವರನ್ನು ಕೋಟೆಯಲ್ಲಿಟ್ಟುಕೊಂಡೂ ಅವರ ನ್ಯಾಯ್ಯ ಆಕಾಂಕ್ಷೆಗಳಿಗೆ ಅವಕಾಶವನ್ನೊದಗಿಸುವ ಶಕ್ತಿಯು ಗಾಂಧಿಯವರಲ್ಲಿ ಮಾತ್ರ ಇದೆಯೆಂದು ಅದು ತಿಳಿದಿದೆ. ಆದುದರಿಂದ ಮುಂಬರುವ ಸಂಯುಕ್ತ ರಾಜ್ಯಪದ್ಧತಿಯ ವಿವರವನ್ನು ಇಬ್ಬರೂ ಸೇರಿ ಚರ್ಚಿಸಿದ್ದರೆ ಸೋಜಿಗವಿಲ್ಲ.

ಕಾಂಗ್ರೆಸು ಸಂಯುಕ್ತ ರಾಜ್ಯಪದ್ಧತಿಯನ್ನು ಸ್ವೀಕರಿಸುವದಕ್ಕೆ ಎರಡು ದೊಡ್ಡ ಆತಂಕಗಳಿವೆ. ಸಂಸ್ಥಾನಗಳು ಪದ್ಧತಿಯಲ್ಲಿ ಸಮಸಮನಾಗಿ ಸೇರ್ಪಡೆಯಾಗುವವೆಂದರೆ, ಅವುಗಳ ಅಂತರ್ಗತ ರಾಜ್ಯಪದ್ಧತಿಯು ಬ್ರಿಟಿಷ್ ಹಿಂದುಸ್ತಾನಕ್ಕೆ ಸಮದರ್ಜೆಯದಾಗುವುದು ಅಗತ್ಯ; ಅಲ್ಲಿಯ ಪ್ರಾತಿನಿಧಿಕ ಸಂಸ್ಥೆಗಳು ಅಲ್ಲಿಯೂ ತಲೆಯೆತ್ತುವದು ಅವಶ್ಯಕ. ಅಲ್ಲಿಂದ ಬರುವ ಪ್ರತಿನಿಧಿಗಳು ನಾಮಕರಣ ಹೊಂದಿದವರಾಗಿರದೆ ಬಹುಮಟ್ಟಿಗಾದರೂ ಜನರು ಪ್ರತಿನಿಧಿಗಳಾಗಿರಬೇಕು.

ಇನ್ನೊಂದು ಆತಂಕವೆಂದರೆ ಘಟನೆಗೆ ತೊಡಿಸಲಾದ ವಿವಿಧವಾದ ಭದ್ರ ರಕ್ಷಾಕವಚಗಳು. ಅವು ಕಾನೂನಿನ ಮೇರೆಗೆ ಅಸ್ತಿತ್ವದಲ್ಲಿರುತ್ತಿದ್ದರೂ, ಪ್ರಾಂತಿಕ ಸ್ವಾಯತ್ತತೆಯ ನಾಂದೀವಾಚನದ ಕಾಲದಲ್ಲಿ ಗವರ್ನರರು ಮಂತ್ರಿಗಳಿಗೆ ಭರವಸೆ ಕೊಟ್ಟಂತೆಯೆ ಈ ರಕ್ಷಾನಿರ್ಬಂಧಗಳನ್ನೂ ಸಾಕ್ಷಾತ್ತಾಗಿ ಪ್ರಯೋಗಿಸಲಾಗುವುದಿಲ್ಲವೆಂದು ಲಿನ್ಲಿಥ್ಗೊ ಅವರು ಗಾಂಧಿಯವರಿಗೆ ಆಶ್ವಾಸನವಿತ್ತಿರಬೇಕೆಂದು ಕೆಲವು ಪತ್ರಿಕೆಗಳ ವಾರ್ತಾಹರರು ಹೇಳುತ್ತಿದ್ದಾರೆ. ಇಂತಹ ಆಶ್ವಾಸನವನ್ನು ಕೊಡುವುದು ಬಹಳ ಬಿಗಿಯಾದ ಕೆಲಸ. ಪ್ರಾಂತಿಕ ಸ್ವಾಯತ್ತತೆಗೊಳಪಟ್ಟ ವಿಷಯಗಳಲ್ಲಿ ಬ್ರಿಟಿಷರ ಹಿತಸಂಬಂಧಗಳು ಬಹಳ ಸ್ವಲ್ಪವಾಗಿ ಅಡಕವಾಗಿವೆ; ಆದರೆ ಕೇಂದ್ರ ರಾಜ್ಯಪದ್ಧತಿಗೆ ಸಂಬಂಧಿಸಿದ 'ಹಿಂದುಸ್ತಾನದ ಸಂರಕ್ಷಣೆ, ಆರ್ಥಿಕ ಖಾತೆ, ವ್ಯಾಪಾರ-ವ್ಯವಹಾರಗಳು' ಇ.ಗಳಲ್ಲಿ ಬ್ರಿಟಿಷರ ಹಿತಸಂಬಂಧಗಳು ಆಳವಾಗಿ ಬೇರು ಬಿಟ್ಟಿವೆ. ಈ ಜೀವಜೀವಾಳದ ವಿಷಯಗಳಲ್ಲಿ ಬ್ರಿಟಿಷರು ಭಾರತೀಯ ಮಂತ್ರಿಗಳನ್ನು ನಂಬುವುದು ಅಸಂಭವನೀಯ. ಆದರೂ ಕಾಂಗ್ರೆಸಿನ ಬಲ ಬೆಳೆಯುತ್ತಿದೆ. ಮನಸ್ಸಿಲ್ಲದಿದ್ದರೂ ಅದರೊಡನೆ ರಾಜಿಯಾಗುವುದು ಅನಿವಾರ್ಯವಾಗಿ ಬರಬಹುದು. ಜಾಗತಿಕ ಪರಿಸ್ಥಿತಿಯೂ ಈ ಸಂಧಾನಕ್ಕೆ ಅನುಕೂಲವಾಗಿದೆ. ಕಾಂಗ್ರೆಸಿನ ಶಿಸ್ತಿನಿಂದ, ಗಾಂಧಿಯವರ ಮಂತ್ರಶಕ್ತಿಯಿಂದ ಆಗದಂತಹುದೂ ಆಗಬಹುದು! ಯಾರು ಬಲ್ಲರು?

(೨೫—೯—೩೮)

ಮತಪರಿವರ್ತನೆಯ ಮುಂಗುರುತು

ಮೇಲೆ ಬರೆದುದನ್ನು ಪುಷ್ಟೀಕರಿಸುವ ಅಭಿಪ್ರಾಯಗಳು ಈಚೆಗೆ ಬ್ರಿಟಿಷ್ ಪತ್ರಿಕೆಗಳಲ್ಲೂ ಬರುತ್ತಿವೆ. ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು, ಸಂಯುಕ್ತ ರಾಜ್ಯಘಟನೆಯು ಸೌಮ್ಯತರವಾಗುವಂತೆ ಮಾಡುವುದು ಸಾಧ್ಯವಿದೆಯೆಂದೂ ಹಾಗೆ ಪ್ರಯತ್ನಗಳು ನಡೆದಿವೆಯೆಂದೂ ಹೇಳುತ್ತಿದೆ.

ಪ್ರಾಂತಿಕ ಸ್ವಾಯತ್ತತೆಯ ಅವತಾರಪೂರ್ವದಲ್ಲಿ ಗವರ್ನರರಿಂದ ಪಡೆದಂತಹ ಆಶ್ವಾಸನಗಳನ್ನು ಈಗಲೂ ಕೊಡಬಹುದು; ವೈಸರಾಯರ ಮೀಸಲು ಅಧಿಕಾರಕ್ಷೇತ್ರದಲ್ಲಿ ಕೆಲವಂಶಗಳನ್ನು ಪರಸ್ಪರ ಸಮ್ಮತಿಯಿಂದ ಭಾರತೀಯರಿಗೆ ಬಿಟ್ಟುಕೊಡಲೂಬಹುದು—ಎಂದು ಅದು ಹೇಳುತ್ತಿದೆ. ಆಶ್ವಾಸನಮಾತ್ರದಿಂದ ಬಗೆಹರಿಯುವ ಬಿಕ್ಕಟ್ಟು ಇದಲ್ಲವೆಂದು ಈ ಮೊದಲೇ ಹೇಳಿದ್ದೇವೆ.

ಸಂಸ್ಥಾನಿಕರು ತಮ್ಮ ಆಡಳಿತದಲ್ಲಿ ಹೆಚ್ಚು ಪ್ರಜಾಪ್ರಾತಿನಿಧ್ಯವನ್ನು ದಯಪಾಲಿಸುವಂತೆ, ಅವರನ್ನು ಬ್ರಿಟಿಷ್ ಸರಕಾರದವರು ಪ್ರೋತ್ಸಾಹಿಸುತ್ತಲಿದ್ದಾರೆಂತಲೂ ಈ ಪತ್ರಿ

ಕೆಯು ತಿಳಿಸುತ್ತದೆ. ರಾಜಕೀಯ ಭಾಷಾನಿಘಂಟುವಿನಲ್ಲಿ ಈ ಶಬ್ದದ ಅರ್ಥವನ್ನು ಎಲ್ಲರೂ ಬಲ್ಲರು. ಅಂತೂ ಇದೊಂದು ಒಳ್ಳೆಯ ವರ್ತಮಾನ. ಪ್ರಜೆಗಳ ಅತ್ಯುಗ್ರ ಆಂದೋಲನಕ್ಕಿಂತಲೂ ಬ್ರಿಟಿಷ್ ದೊರೆಗಳ 'ಹಿತಸೂಚನೆ'ಯು ಹೆಚ್ಚು ಸಮರ್ಥವಾಗುವುದರಲ್ಲಿ ಸಂದೇಹವಿಲ್ಲ. ಹಿಂದೀ ಜನತೆಯ ದುರ್ದಮನೀಯ ಸ್ವಾತಂತ್ರ್ಯಾಭಿಲಾಷೆಯ ಸೆಕೆಯು ಬ್ರಿಟಿಷ್ ಆಳರಸರಿಗೆ ತಾಕಿದೆಯೆಂತಲೇ ಇದರರ್ಥ.

ಈ ಸಂದುಕಟ್ಟಿನಲ್ಲಿ ರಾಜಕೀಯ ಪಕ್ಷೋಪಪಕ್ಷಗಳು ಕೈಕೈಕೂಡಿಸಿ, ಕಾಂಗ್ರೆಸಿಗೆ ಬೆಂಬಲವಾಗಿ ನಿಂತುಕೊಳ್ಳುವುದು ಅಗತ್ಯವಿದೆ.

ಮದರಾಸಿನ ಮುಸ್ಲಿಂ ಹೆಂಗಳೆಯರು

ಮದರಾಸು ಪ್ರಾಂತದ ಮುಸಲ್ಮಾನರ ಸ್ತ್ರೀಯರ ಪರಿಷತ್ತು ಕಲ್ಕತ್ತೆಯ ಪುರುಷರ ಪರಿಷತ್ತಿಗಿಂತ ಪ್ರಗತಿಪರವಾಗಿದ್ದುದು ಸಂತೋಷದ ಸಂಗತಿ. ಬೇರೆ ಭಾರತೀಯ ಮಹಿಳೆಯರ ಮತ್ತು ತಮ್ಮ ಹಿತಸಂಬಂಧಗಳು ಒಂದೇ ಆಗಿವೆಯೆಂದೂ ತಾವು ಜಾತಿಪರವಾಗಿ ಪರಿಷತ್ತನ್ನು ನೆರೆಯಿಸುತ್ತಿದ್ದುದು ಗೌಣಪಕ್ಷವಾಗಿದ್ದರೂ ಅನಿವಾರ್ಯವಾಗಿದೆಯೆಂದೂ ಹೇಳಿ, ತಮ್ಮ ಸದ್ಭಾವನೆಗೆ ಸಾಕ್ಷಿಯಾಗಿ ಹಿಂದೂ ಮಹಿಳೆಯರನ್ನು ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಕರೆದರು.

ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಕಕ್ಷೆಯಿಂದ ಮುಸ್ಲಿಂ ಬಾಲಿಕೆಯರನ್ನು ಹೊರತುಪಡಿಸಿದುದಕ್ಕೆ ಪರಿಷತ್ತು ವಿಷಾದವನ್ನು ವ್ಯಕ್ತಪಡಿಸಿತು. ಇದರ ತಪ್ಪು ಶಾಸನ ಸಭಾ ಮಂದಿರಗಳಲ್ಲಿಯ ಅವರ ಪುರುಷ ಪ್ರತಿನಿಧಿಗಳ ಕಡೆಗೆಯೆ ಇದೆ; ಬಾಲಿಕೆಯರಿಗೆ ಶಿಕ್ಷಣ ಕೊಡುವುದು ಘೋರ ಅಪರಾಧವೆಂಬಂತೆ ಅವರು ಮಾತನಾಡುತ್ತಿದ್ದಾರೆ. ವರದಕ್ಷಿಣೆಯನ್ನೂ ವೆಚ್ಚದ ವಿವಾಹ ಸಮಾರಂಭಗಳನ್ನೂ ಪರಿಷತ್ತು ನಿಷೇಧಿಸಿತು. ಇನ್ನೂ ಹಲವು ಸಾಮಾಜಿಕ ಸುಧಾರಣೆಗಳನ್ನೂ ಅದು ಪುರಸ್ಕರಿಸಿತು.

ಮದರಾಸಿನ ಮುಸ್ಲಿಂ ಹೆಂಗಳೆಯರು ಅಖಿಲ ಭಾರತಕ್ಕೇ ದಾರಿದೋರಿದ್ದಾರೆ. ಹಿಂದುಗಳೇ ಮೊದಲಾದ ಬೇರೆ ಜಾತಿಗಳವರು ಅವರೀ ಕಾರ್ಯಕ್ರಮಕ್ಕೆ ಕೈಗೊಡದಿರಲಾರರು.

ಪ್ರೊ. ಡಿ. ಕೆ. ಕರ್ವೆ

ಕಳೆದ ತಿಂಗಳ ೧೮ನೆಯ ತಾ.ನ ದಿನ, ಹಿಂದೀ ಮಹಿಳೆಯರ ಹಿತಕ್ಕಾಗಿ ತಮ್ಮ ಜೀವಮಾನವನ್ನೆಲ್ಲ ಸವೆಸಿದ ಪ್ರೊ. ಕರ್ವೆಯವರ ೮೧ನೆಯ ಜನ್ಮದಿನವು ಸ್ಥಾನದಲ್ಲೆಲ್ಲ ಆಚರಿಸಲಾಯಿತು. ತೀರ ಚಿಕ್ಕ ಹಿಂದೂ ವಿಧವೆಯರ ದುಃಸ್ಥಿತಿಯು ಅವರ ಹೃ ವನ್ನು ಕರಗಿಸಿತು. ಅವರಿಗೆ ಮಾನವೀಯ ಗಳನ್ನು ಕೊಡಬೇಕೆಂಬ ಅವರ ಪ್ರಯತ್ನವು ಯನ್ನು ಕುಕ್ಕಿದಂತೆಯೆ ಆಯಿತು; ವಿಚಾರವಿ ರನ್ನು ರೊಚ್ಚಿಗೆಬ್ಬಿಸಿತು; ಸ್ವೀಕೃತಕಾರ್ಯ ತರದ ಗುಡ್ಡಗಳನ್ನು ತಂದೊಡ್ಡಿತು. ಅ ತನ-ಬಹಿಷ್ಕಾರ—ಎಲ್ಲಾ ಬಂದುವು. ಒಂದಕ್ಕೂ ಸೊಪ್ಪು ಹಾಕದೆ ಧೀರಗತಿಯಿಂ ದರು. ೨೧ ವರ್ಷಗಳ ವರೆಗೂ ಅಜ್ಞಾತ ವಿರೋಧಿಗಳಿಗೆ ಮಾತ್ರ ಜ್ಞಾತವಾಗಿ) ತಮ್ಮ ಸಾಗಿಸಿದರು. ೧೯೧೫ರಲ್ಲಿ 'ಹಿಂದೀ ರಾಷ್ಟ್ರ ಸುಧಾರಕ ಪರಿಷತ್ತಿ'ನ ಅಧ್ಯಕ್ಷಸ್ಥಾನವನ್ನು ಕೊಟ್ಟಾಗ ಮಾತ್ರ ವಿಶಾಲಭಾರತಕ್ಕೆ ಅವ ಅರಿವಾಯಿತು. ಭಾರತೀಯ ಮಹಿಳಾ ವಿಶ್ವ ಸ್ಥಾಪನೆಯು ಅವರ ಮಹಿಳಾಸೇವೆಯ ಶಾ ವಿಟ್ಟಂತಾಯಿತು. ಅವರು ಅಸ್ಪೃಶ್ಯ ಆದರೂ ಡಿಪ್ರೆಸ್ಡ್ ಕ್ಲಾಸಿಸ್ ಮಿಶನ್ನಿಗೆ ೧೦೦ ಕೊಟ್ಟು ದಲಿತ ವರ್ಗದ ಬಗೆಗಿದ್ದ ತಮ್ಮ ವ್ಯಕ್ತಪಡಿಸಿದರು.

ಈಗಲೂ ಅವರ ಮನಸ್ಸು ತಾರುಣ್ಯ ಯನ್ನೂ ಕಾರ್ಯಾಸಕ್ತಿಯನ್ನೂ ಪಡೆದಿ ಸಾಕ್ಷರತಾಪ್ರಸಾರವು ಇದೀಗ ಅವರ ಕಾರ್ಯವು; ಆ ನಿಮಿತ್ತವಾಗಿ ಚುಮುಚು ನಲ್ಲೆದ್ದು ಮನೆಮನೆಗೆ ಅಲೆದಾಡಿ ನಿಧಿಯನ್ನು ಲಿರುವರು. ಮಹಾರಾಷ್ಟ್ರದ ಮುನ್ನಡೆಗೆ ಮಹನೀಯರೇ ಕಾರಣರಾಗಿದ್ದಾರೆ. ಪ್ರೊ. ರಿಗೆ ದೀರ್ಘಾಯುಷ್ಯವನ್ನು ಕೋರುವುದು

ಮೈಸೂರಿಗೆ ಮಂಗಲದಿನಗಳು

ಮೈಸೂರಿನ ರಾಜ-ಪ್ರಜೆಗಳ ನಡುವಿನ ಮಟ್ಟಿಗೆ ಬಗೆಹರಿದ ಶುಭವಾರ್ತೆಯನ್ನು ರ್ವಕವಾಗಿ ಸ್ವಾಗತಿಸುತ್ತೇವೆ. ರಾಷ್ಟ್ರಧ್ವಜ ವುದಕ್ಕೆ ಸರಕಾರವಿನ್ನು ಮೇಲೆ ಅಸಮ್ಮತಿ ರಿನ ಧ್ವಜಕ್ಕೆ ಅದು ಪ್ರತಿಸ್ಪರ್ಧಿಯಾಗ ಯರೂ ಇನ್ನೂ ವರ್ತಿಸುವುದಿಲ್ಲ. ಸುಧಾರ ಕಾಂಗ್ರೆಸಿನವರು ಚುನಾಯಿಸಿದ ಇನ್ನಿ

ಕೊಳ್ಳಲಾಗುವುದು; ಮತ್ತು ಸಮಿತಿಯು ವಿಚಾರಕಕ್ಷೆಯಲ್ಲಿ ಜವಾಬ್ದಾರಿ ಸ್ವರಾಜ್ಯದ ಆಲೋಚನೆಯೂ ಬರುವುದು.

ಈ ಒಪ್ಪಂದಕ್ಕೆ ಪೂರ್ವದಲ್ಲಿದ್ದ ಕ್ಷೋಭೆಯ ಕಾರಣಗಳನ್ನು ಹೇಳುವುದು ಕಷ್ಟದ ಕೆಲಸ. ಧ್ವಜಸತ್ಯಾಗ್ರಹದ ನಿಮಿತ್ತವನ್ನು ಆತತಾಯಿಯಾಗಿ, ಅಕಾರಣವಾಗಿ ಮುಂದಕ್ಕೆ ಮಾಡಿದರೆಂದು ಪ್ರಭುತ್ವದವರ ಆಪಾದನೆ. ಸ್ವರಾಜ್ಯದ ಜವಾಬ್ದಾರಿಯನ್ನು ಹೊರಬಲ್ಲ ಪ್ರಜಾಮುಖಂಡರೂ ವಿರಲರೆಂದು ಅವರ ಅಭಿಪ್ರಾಯ. ಆದರೆ, ಯಾವುದೇ ಸರಕಾರವು—ಅದು ಪ್ರಜಾಕ್ಷೇಮದ ಪೂರ್ತಿ ಜವಾಬ್ದಾರಿಯನ್ನು ಹೊತ್ತಿದ್ದರೂ—ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಾಗಿರದೆ ಅನಿಯಂತ್ರಿತ ಅಧಿಕಾರವುಳ್ಳದ್ದಾಗಿದ್ದರೆ, ಇಂದಿನ ಕಾಲಪರಿಸ್ಥಿತಿಗಳು ಅದಕ್ಕೆ ಅನುಕೂಲವಾಗಿಲ್ಲವೆಂಬುದನ್ನು ಮರೆಯಲಾಗದು. ಮೈಸೂರು ಪ್ರಭುತ್ವವು ಕಾಲಗತಿಯನ್ನು ಸಕಾಲದಲ್ಲಿ ಅರಿತಿದ್ದುದಕ್ಕೆ ನಾವದನ್ನು ಅಭಿನಂದಿಸುತ್ತೇವೆ.

ಗೋರೀಬಿದನೂರಿನ ದುರಂತಕ್ಕೆ ತಾತ್ಕಾಲಿಕ ಕಾರಣರು ಯಾರು ಎಂಬುದನ್ನು ಈಗಲೆ ಊಹಿಸುವುದು ತಪ್ಪಾಗುವುದು; ಏಕೆಂದರೆ ಸರಕಾರದಿಂದಲೂ ರಾಷ್ಟ್ರೀಯರಿಂದಲೂ ವಿಚಾರಣೆಗಳು ನಡೆದಿವೆ. ಆದರೆ ಗೋರೀಬಿದನೂರಿನ ವಿಕಟ ಘಟನೆಗೆ ಜನ್ಮಕೊಡುವಂತಹ ಕಾರಣಗಳು ಪರಿಸ್ಥಿತಿಯಲ್ಲಿ ಬೇಕಾದಷ್ಟು ಅಡಗಿದ್ದುವೆಂದು ಹೇಳಬಹುದು.

ಸಾಮಾನ್ಯ 'ನಾಗರಿಕಾಧಿಕಾರ'ಗಳಿಗೂ ನಿಯಂತ್ರಣವಿದ್ದಿತು; ರಾಜಕೀಯ ಚಟುವಟಿಕೆಯನ್ನು ನಿರ್ಬಂಧಿಸಲಾಗಿತ್ತು; ಪ್ರಜಾಪ್ರಭುತ್ವದ ಭಾಷೆಯೂ ಅಪ್ರಸ್ತುತವೆಂದು ದಿವಾಣರಿಂದ ಹಲವು ಸಲ ಹೇಳಲಾಯಿತು; ಪ್ರಜೆಗಳ ಪ್ರತಿಭಟನೆಯನ್ನು ಕಠೋರವಾಗಿ ಶಿಕ್ಷಿಸಲಾಯಿತು. ಇದೆಲ್ಲ ನಡೆಯಲಿಕ್ಕೆ ಪ್ರಜಾಮುಖಂಡರು ತಮ್ಮ ಕೆಲ ಅಕೃತ್ಯಗಳಿಂದ ಪ್ರಭುತ್ವದವರನ್ನು ರೊಚ್ಚಿಗೆಬ್ಬಿಸಿದುದೇ ಕಾರಣವೆಂದು ಹೇಳುತ್ತಾರೆ. ಇದು ನಿಜವಿರಬಹುದು. ಆದರೆ ರಾಷ್ಟ್ರದ ಹಿತಕ್ಕೆ ಸಂಬಂಧಿಸಿದ ಮಹಾಸಮಸ್ಯೆಗಳನ್ನು ಬಿಡಿಸಲು ತೊಡಗಿದಾಗ, ವ್ಯಕ್ತಿಗಳನ್ನು ಮರೆಯಬೇಕಾಗುವುದು; ಮೂಲಭೂತ ಅಂಶಗಳನ್ನು ಮಾತ್ರ ಗಮನಿಸಬೇಕಾಗುವುದು. ಜನರ ನೆನಪಿನಲ್ಲಿ ದೊಡ್ಡ ಮಾತುಗಳು ಮಾತ್ರ ಉಳಿಯುತ್ತವೆ; ಚಿಲ್ಲರೆಯಾದುವು ಮರೆತುಹೋಗುತ್ತವೆ. ಅಲ್ಲದೆ ಜನತೆಯಿಂದ ಆದ ಹಲವು ಅಕೃತ್ಯಗಳಿಗಿಂತ ಪ್ರಭುತ್ವದವರ ಒಂದು ಅಕೃತ್ಯವು ಹೆಚ್ಚಿನದಾಗಿ ಎಣಿಸಲ್ಪಡುತ್ತದೆ; ಇದು ವಿಚಿತ್ರವಾಗಿ ಕಂಡರೂ ಸತ್ಯವಾದ ಸಂಗತಿ. ಪ್ರಜೆಗಳು ತಪ್ಪು ಮಾಡಬಾರದು; ಪ್ರಭುತ್ವವು ತಪ್ಪು ಮಾಡಕೂಡದು....ಅಂತೂ ಬಿಕ್ಕಟ್ಟು ಪರಿಹರಿಸುವಂತೆ ರಾಜ-ಪ್ರಜೆಗಳಿಬ್ಬರಿಗೂ ಸದ್ಬುದ್ಧಿ ಹುಟ್ಟಿದುದು ಎಲ್ಲ ವಿಚಾರವಂತರಿಗೂ ಹರ್ಷವನ್ನುಂಟುಮಾಡದಿರದು. ಮೈಸೂರು ಈಗಲಾದರೂ ಸುಖ-ಶಾಂತಿ-ಸಮೃದ್ಧಿ-ಸ್ವರಾಜ್ಯಗಳ ದಾರಿಯನ್ನು ತುಳಿಯಲಿ.

ನಮ್ಮ ಮಾತು

ಕೃತಜ್ಞತೆ

ಈ ಸಂಚಿಕೆಯಲ್ಲಿಯ ಮಕ್ಕಳ ಕೂಟದ ಪ್ರಾರಂಭೋತ್ಸವ ದೃಶ್ಯದ ಪಡಿಯಚ್ಚು 'ಸರಸ್ವತಿ'ಯ ಕೃಪೆಯಿಂದಲೂ, ಯುವರಾಜಕುಮಾರಿಯವರ ಪಡಿಯಚ್ಚು 'ತಾಯಿನಾಡಿ'ನ ಕೃಪೆಯಿಂದಲೂ, ಶ್ರೀಬಸವೇಶ್ವರ ಮತ್ತು ಶ್ರೀ. ಅ. ನ. ಕೃಷ್ಣರಾಯರ ಪಡಿಯಚ್ಚುಗಳು 'ವಿಶ್ವವಾಣಿ'ಯ ಕೃಪೆಯಿಂದಲೂ, ಮುಖಚಿತ್ರದ ಪಡಿಯಚ್ಚು ವಿಜಯ ಟಾಕೀಜದವರ ಕೃಪೆಯಿಂದಲೂ ಪಡೆದವುಗಳಾಗಿವೆ.

ವಸಂತ ಸಾಹಿತ್ಯೋತ್ಸವ

ಕಳೆದ ತಿಂಗಳಲ್ಲಿ ಬೆಂಗಳೂರಲ್ಲಿ ಜರುಗಿದ ವಸಂತ ಸಾಹಿತ್ಯೋತ್ಸವಕ್ಕೆ ಸಂಬಂಧಿಸಿದ ಒಂದು ಲೇಖನವು ಈ ಸಂಚಿಕೆಯಲ್ಲಿಯೇ ಬರಬೇಕಾಗಿತ್ತು. ಕಾಲ ವಿಳಂಬವಾದುದರಿಂದ ಅದನ್ನು ಬಿಡಬೇಕಾಯಿತು.

ಬೆಂಗಳೂರಿನಲ್ಲಿ ಜ. ಕ. ಸಂಪಾದಕರು

ವಸಂತ ಸಾಹಿತ್ಯೋತ್ಸವ ಕಾಲಕ್ಕೆ ಜ. ಕ. ದ ಸಂಪಾದಕರು ಬೆಂಗಳೂರಿಗೆ ಹೋದಾಗ್ಗೆ ಅವರಿಂದ ಈ ಕೆಲವು ಸಾರ್ವಜನಿಕ ಕಾರ್ಯಗಳು ಆದವು. ಕ. ಸಾಹಿತ್ಯಪರಿಷತ್ತಿನ ವಸಂತ ಸಾಹಿತ್ಯೋತ್ಸವದಲ್ಲಿ "ಲಾವಣಿಗಳು" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಬಸವಜಯಂತಿಯ ನಿಮಿತ್ತವಾಗಿ, ವೀರಶೈವಸೇವಾ ಸಮಾಜದ ಪರವಾಗಿ, ಜಯದೇವ ಹಾಸ್ಟೆಲಿನಲ್ಲಿ "ಬಸವಣ್ಣನವರ ಭಕ್ತಿ" ಎಂಬ ವಿಷಯವನ್ನೆತ್ತಿ ಮಾತನಾಡಿದರು. ಅ. ಕ. ಮಕ್ಕಳ ಕೂಟದವರ ಸಂತೋಷಕೂಟದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ಮಲ್ಲೇಶ್ವರದ ಕರ್ನಾಟಕ ಸಂಘದ ಪರವಾಗಿ "ಕನ್ನಡಿಗರ ಒಗ್ಗೂಡುವಿಕೆ" ಎಂಬ ವಿಷಯವನ್ನು ಕುರಿತು ಮಾತನಾಡಿದರು.

ಏಳನೆಯ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು

(ಸಂಪಾದಕರಿಂದ)

ಮೇ ತಾ. ೨೪-೨೫ರಲ್ಲಿ ಸೇರಿದ ಈ ಪರಿಷತ್ತು ಸಕಲವಿಧದಿಂದಲೂ ಯಶಸ್ವಿಯಾಯಿತೆಂದು ನೋಟಕರೆಲ್ಲರೂ ಏಕಾಭಿಪ್ರಾಯದಿಂದ ಹೇಳಬಲ್ಲರು. 'ಏಕೀಕರಣ' ವಿಷಯವೊಂದನ್ನೇ ಮುಂದಿಟ್ಟುಕೊಂಡ ಈ ಪರಿಷತ್ತು ನಿಜವಾಗಿಯೂ ಪ್ರಾತಿನಿಧಿಕವಾಗುವುದೋ ಇಲ್ಲವೋ ಎಂಬ ಶಂಕೆ ಮೊದಲು ತಲೆದೋರಿತ್ತು; ಆದರೆ ಪ್ರತ್ಯಕ್ಷ ಪರಿಷತ್ತಿನ ದೃಶ್ಯವು ಆದನ್ನು ಹುಸಿಗೊಳಿಸಿತು. ಕನ್ನಡನಾಡಿನ ಎಲ್ಲಾ ಭಾಗಗಳಿಂದಲೂ ಏಕೀಕರಣದಲ್ಲಿ ನಿಜವಾದ ಆಸಕ್ತಿಯುಳ್ಳ ಮುಖಂಡರನೇಕರು ಬಂದಿದ್ದರು. ಎಲ್ಲರ ಮುಖಗಳಲ್ಲಿಯೂ ಏಕೀಕರಣದ ಬಗ್ಗೆ ತದೇಕನಿಷ್ಠೆಯೂ ಕಾರ್ಯಸಾಧನತತ್ಪರತೆಯೂ ನಿಶ್ಚಲನಿರ್ಧಾರವೂ ಮೂಡಿದ್ದವು.

ಚಿತ್ರದುರ್ಗ ಬೃಹನ್ಮಠದ ಶ್ರೀ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಪರಿಷತ್ತಿನ ಉದ್ಘಾಟನ ಸಮಾರಂಭವನ್ನು ಜರುಗಿಸಲು ಒಪ್ಪಿಕೊಂಡುದರಲ್ಲಿ ಒಂದು ಮಹತ್ವವಿದೆ. ಮನೆ-ಮಠಗಳಲ್ಲಿ ಮೂಲೆ ಹಿಡಿದುಕೊಂಡು ಮೂಗುಮುಚ್ಚಿಕೊಂಡು ಕುಳ್ಳಿರುವುದು 'ಧರ್ಮ'ವಲ್ಲ; ಧರ್ಮಾಧಿಕಾರಿಗಳು ಜನಾಂಗದ ಜ್ವಲತ್ಸಮಸ್ಯೆಗಳಿಗೂ ದಾರಿದೋರಬೇಕು—ಎಂಬ ದೊಡ್ಡ ತತ್ವವನ್ನು ಶ್ರೀಗಳವರು ಆಚರಿಸಿ ತೋರಿಸಿದರು. 'ಕರ್ನಾಟಕ ಏಕೀಕರಣಕ್ಕೆ ನಮ್ಮ ಸಂಸ್ಥಾನದ ಸಂಪೂರ್ಣ ಸಹಾನುಭೂತಿಯುಂಟು' ಎಂದು ಅವರು ಸ್ಪಷ್ಟಶಬ್ದಗಳಲ್ಲಿ ಆಶೀರ್ವದಿಸಿದರು. ಮಾತ್ರವಲ್ಲ, 'ನಮ್ಮ ಕುಲವು ಕನ್ನಡ ಕುಲವು, ನಮ್ಮ ಸಂಸ್ಕೃತಿಯು ಕನ್ನಡ' ಎಂದು ಧಾರಾಳವಾಗಿ ಉದ್ಘೋಷಿಸಿ, ಕರ್ನಾಟಕದ ಜಾನಾಂಗಿಕ, ಸಾಂಸ್ಕೃತಿಕ ಅಭಿನ್ನತೆಯನ್ನು ಎತ್ತಿಹಿಡಿದರು.

ಅಧ್ಯಕ್ಷರಾದ ಶ್ರೀ|| ಕೋ. ರಾ. ಕಾರಂತರಲ್ಲದೆ ಇನ್ನಾರಾದರೂ ಅಧ್ಯಕ್ಷಸ್ಥಾನಕ್ಕೆ ನಿಯೋಜಿಸಲ್ಪಟ್ಟಿದ್ದರೆ, ಪರಿಷತ್ತಿನ ಕೆಲಸವು ಲಲಿತವಾಗಿ ಸಾಗುವುದು ಅಸಾಧ್ಯವಾಗುತ್ತಿತ್ತೆಂದು ಬಲ್ಲವರು ಹೇಳುತ್ತಿದ್ದಾರೆ. ಕರ್ನಾಟಕದ ರಾಜಕೀಯ ಸ್ಥಿತಿಯು ತುಂಬಾ ತೊಡಕಿನದಾಗಿದೆ. ಉತ್ತರಕರ್ನಾಟಕದ ಯಾವ ಮುಖಂಡನೂ ಪರಿಷತ್ತಿನ ಜವಾಬ್ದಾರಿಯನ್ನು ನಿರ್ವಹಿಸಲು ಅಸಮರ್ಥನಾಗುತ್ತಿದ್ದನೆಂಬುದು ಖಂಡಿತ. ಭಾಷೆ-ಜಾತಿ-ವೈಯಕ್ತಿಕತೆ—ಹೀಗೆ ನೂರಾರು ಸ್ಪರ್ಧೆಗಳು ನಮ್ಮ ನಾಡಿನ ಮೊಗಕ್ಕೆ ಮಸಿ ಬಳಿದಿವೆ. ಶ್ರೀ. ಕಾರಂತರನ್ನು ಸ್ವಾಗತಸಮಿತಿಯು ಆರಿಸಿದ್ದುದು ಆದರ ಜಾಣ್ಮೆಗೆ ಸಾಕ್ಷಿಯಾಗಿದೆ. ಅಧ್ಯಕ್ಷರು ನಡೆನುಡಿಗಳಲ್ಲಿ ಶಾಂತರು, ಸೌಮ್ಯರು; ಆದರೆ ನಿರ್ಣಯವನ್ನು ಖಂಡಿತವಾಗಿ, ಅಸಂದಿಗ್ಧವಾಗಿ, ತಟ್ಟನೆ ಕೊಡಬಲ್ಲರು. ಕಾರ್ಯಕಲಾಪಗಳನ್ನು ಹತೋಟಿಯಿಂದ ಸಾಗಿಸಬಲ್ಲರು. ಏಕೀಕರಣ ಹೋರಾಟದ ಅಗ್ರಸೇನಾನಿಯಾಗಲು ಅವರು ತುಂಬಾ ಯೋಗ್ಯರಾಗಿದ್ದಾರೆ. ಏಕೀಕರಣವು

ಅವರು ಸ್ಪಷ್ಟಭಾಷೆಯಲ್ಲಿ ಹೇಳಿದ್ದಾರೆ. ಈ ಪರಿಷತ್ತಿನ ಈಗಲೆ-ಕೂಡಲೆ ಅನಿವಾರ್ಯವೇಕೆಂಬುದನ್ನು ಅವರು ಸ್ಪಷ್ಟಭಾಷೆಯಲ್ಲಿ ಹೇಳಿದ್ದಾರೆ. ಈ ಪರಿಷತ್ತಿನ ನಿಮಿತ್ತದಿಂದ ಏಕೀಕರಣ ಚಳವಳಿಯು ಒಬ್ಬ ಶ್ರೇಷ್ಠ ಮುಖಂಡನನ್ನು ಪಡೆದುಕೊಂಡಿತೆಂದು ಹೇಳಬಹುದು.

ಸ್ವಾಗತಾಧ್ಯಕ್ಷರಾದ ಶ್ರೀ. ಅಂದಾನಪ್ಪ ದೊಡ್ಡಮೇಟಿಯವರು ತಮ್ಮ ಉತ್ಸಾಹ-ಔದಾರ್ಯಗಳನ್ನು ಪ್ರತಿಯೊಂ ದರಲ್ಲಿಯೂ ತೋರ್ಪಡಿಸಿದರು. ಏಕೀಕರಣ ನಿಧಿಯು ೨೦೦೦ ರೂ.ಗೆ ಮೇಲ್ಪಟ್ಟು ಏರಿದುದು ಅವರ ೩೦೧ ರೂ.ಯ ದೇಣಿಗೆ ಯಿಂದಲೆ!

ನಿರ್ಣಯಗಳು ಕೆಲವೇ ಇದ್ದು, ಅಚ್ಚುಕಟ್ಟಾಗಿವೆ. ಏಕೀಕರಣದ ಮುನ್ನಡೆಯನ್ನು ಸ್ಪಷ್ಟವಾಗಿ ಸೂಚಿಸುತ್ತ ಕರ್ನಾಟಕದ ಹಿತದೃಷ್ಟಿಯಿಂದ ಮಾಡಲ್ಪಟ್ಟಿವೆ. ಸಂಯುಕ್ತ ರಾಜ್ಯಾಂಗಯೋಜನೆಯನ್ನು ಪ್ರತಿಭಟಿಸುವ ಕಾಂಗ್ರೆಸ್ಸಿಗೆ ಬೆಂಬಲಕೊಡುತ್ತ, ಸ್ವಾಯತ್ತ-ಸ್ವತಂತ್ರ ಕರ್ನಾಟಕ ಪ್ರಾಂತವನ್ನು ದಯಪಾಲಿಸದ ಯಾವುದೇ ಸಂಯುಕ್ತ ರಾಜ್ಯಾಂಗ ತನಗೆ ಅಮಾನ್ಯವಾಗಿದೆಯೆಂದು ಸಾರಿಹೇಳುವ ನಿರ್ಣಯವು ತುಂಬಾ ಮಹತ್ವವುಳ್ಳದ್ದು. ಕನ್ನಡಿಗರ ಉತ್ಕಟ ಇಚ್ಛೆ ನಿರ್ಧಾರವನ್ನೂ ಅದು ತೋರಿಸುತ್ತದೆ. ಇಂಗ್ಲಿಷ್ ವೃತ್ತಪತ್ರಿಕೆಯನ್ನು ಹೊರಡಿಸಬೇಕೆಂಬ ನಿರ್ಣಯವು ಕಾಲೋಚಿತವಾ ಕಾರಿ ಮಂಡಲವು ಕೂಡಲೆ ಜಾರಿಯಲ್ಲಿ ತರುವಷ್ಟು ಮಹತ್ವದ್ದಾಗಿದೆ. ಅಲ್ಪಸಂಖ್ಯಾಕರಿಗೆ ಅಭಯದಾನವನ್ನು ಮಾಡು ವನ್ನು ಕೈಕೊಂಡುದೂ, ವಿ. ನಿ. ಸಮಿತಿಯ ಸಭೆಯಲ್ಲಿ ಸಂಸ್ಥಾನಗಳನ್ನು ನಿರ್ಮೂಲಗೊಳಿಸಬೇಕೆಂದು ತಂದ ನಿರ್ಣಯ ಆತ್ಯಂತಿಕ ಸ್ವರೂಪದ ನಿರ್ಣಯಗಳನ್ನೂ ಹಿಂದಕ್ಕೆ ತೆಗೆದುಕೊಂಡುದೂ ಪ್ರತಿನಿಧಿಗಳ ಸುಜ್ಞತೆಯನ್ನೂ ಸಮಂಜಸತೆಯನ್ನೂ

ಇನ್ನು ಕೆಲವು ಆಕ್ಷೇಪಣೆಗಳನ್ನು ಸೂಚಿಸದಿದ್ದರೆ, ಕರ್ತವ್ಯಚ್ಯುತಿಯಾಗುವುದು. ನಮ್ಮ ಜನರಿಗೆ ಇನ್ನೂ ಶಿಸ್ತು ಇಲ್ಲ. ವಿಷಯನಿರೂಪಕ ಸಮಿತಿಯ ಚಿಕ್ಕ ಸಭೆಯಲ್ಲಿಯೂ ಗುಡುಗಾಟವೇನು, ಆರ್ಭಾಟವೇನು! ಏಕೀಕರಣದ ಮುಂ ದೆಂದು ಪರಿಷತ್ತಿನಿಂದ ಗೌರವಿಸಲ್ಪಟ್ಟ ಮಾನ್ಯ ವಯೋವೃದ್ಧ ಮುಖಂಡರೊಬ್ಬರು, ಮುನ್ನಾದಿನದ ವಿ. ನಿ. ಸಮಿತಿಯ ತಾಳಲಾರದೆ, ಮರುದಿನದ ಕಾರ್ಯಕಲಾಪಗಳಿಗೆ ಹಾಜರಿರಲಿಲ್ಲವೆಂಬುದನ್ನು ನಾವು ಬಲ್ಲೆವು.


ಏಕೀಕರಣ ಚಳವಳಿಯು ಮೊನ್ನೆಮೊನ್ನೆಯ ವರೆಗೆ ಸಹಾನುಭೂತಿಯ ಅಭಾವದಿಂದ ಸೊರಗಿ ಸಾಯಲಾಗಿತ್ತು. ಆದಕ್ಕೆ ಅಕಸ್ಮಾತ್ತಾಗಿ ಸುತ್ತೂಕಡೆಯಿಂದ ಬೆಂಬಲ ದೊರಕುತ್ತಿದೆ! ಎಲ್ಲರೂ 'ನಾ ಮುಂದೆ ನೀ ಮುಂದೆ' ಎಂದು ಸ್ಕಾರ ಕೊಡುತ್ತಲಿರುವರು. ಇದು ಸಂತೋಷಜನಕವೇ. ಆದರೆ ಈ ನೆರೆಯು ಬಹುಕಾಲ ಬಾಳುವುದೋ ಇಲ್ಲವೋ ಬೇಕಾದ ವಿಷಯ. ರಾಜಕೀಯ ಚಳವಳಿಗಾರರು ಈ ವರೆಗೆ ಅಲಿಪ್ತರಾಗಿದ್ದರು——ಈಗ ತುಂಬಾ ಉತ್ಸಾಹವನ್ನು 'ಸತ್ಯಾಗ್ರಹ'ವು, ಅವರಿಗೆ ಬಹು ಸುಲಭ ಭಾಷೆಯಾಗಿದೆ. 'ಸತ್ಯಾಗ್ರಹದ ಶಸ್ತ್ರವನ್ನು ಹಲವು ಸಲ ಉಪಯೋಗಿಸಿ, ಗಳನ್ನೆಲ್ಲ ನಾವು ಬಲ್ಲವರಾಗಿದ್ದೇವೆ' ಎಂದು ಸುಪ್ರಸಿದ್ಧ ಮುಖಂಡರೊಬ್ಬರು ವಾದಿಸಿದರು; 'ಅದನ್ನು ನಮ್ಮ ಮೂಗು ಕೊಯ್ದುಕೊಳ್ಳಲಿಕ್ಕೆ ಉಪಯೋಗಿಸುವುದಿಲ್ಲ, ಪೆನ್ಸಿಲು ಕೆತ್ತಲಿಕ್ಕೇ ಉಪಯೋಗಿಸುತ್ತೇವೆ' ಎಂದು ಹೇಳಿದರು. ಅವರ ಮಾತು ಈಗ ಕೊಂಚ ಅಪ್ರಸ್ತುತವಾಗಿದೆ. ಅದನ್ನಾಡುವ——ಅಲ್ಲ, ಹೂಡುವ ಸಮಯವು ಮುಂದಿದೆ. ಆಗ ಅದು ಗುವುದು. ಏಕೀಕರಣಕ್ಕೆ ಅಡ್ಡಲಾಗಿದ್ದ ಅಸಾಧ್ಯ ಆತಂಕಗಳನ್ನು ನೋಡಿದರೆ, ಸೌಮ್ಯಭಾಷೆಯೂ ಸಹನೆಯೂ ನಮಗಿನ್ನೂ ಬಹುಕಾಲ ಅಗತ್ಯವೆಂದು ಸ್ಪಷ್ಟವಾಗಿ ಹೇಳದಿರಲಾರೆವು. ಮೈಸೂರಿನಲ್ಲಿಯ ರಾಜಕೀಯ ಜಾಗೃತಿಯನ್ನು ನಿರ್ಣಯವೂ ಅದೇ ದೃಷ್ಟಿಯಿಂದ ಅನಾವಶ್ಯಕವಾಗಿದ್ದಿತೆಂದು ನಮ್ಮ ಅಭಿಪ್ರಾಯ.

ಏಕೀಕರಣ ಸಭೆಯ ಕಾರ್ಯಕಾರಿ ಮಂಡಲವು ಬರಲಿರುವ ಸ್ವತಂತ್ರ ಕರ್ನಾಟಕ ಪ್ರಾಂತದ ಪಾರ್ಲಿಮೆಂಟು ಎಂಬಂತೆ ಕೆಲವರು ಅದರಲ್ಲಿ ಸೇರ್ಪಡೆಯಾಗಲು ಅಸಾಧ್ಯ ಉತ್ಸಾಹವನ್ನು ತೋರ್ಪಡಿಸಿದರು; ಅವನೊಂದು ಮುಕುಟ'ವೆಂಬುದನ್ನು ಅವರು ಅರಿತಂತೆ ತೋರಲಿಲ್ಲ. ರಾಷ್ಟ್ರೀಯತೆಯ ವೇಷ ತೊಟ್ಟುಕೊಂಡು ಜಾತೀಯತೆಯು ಮಾಡುತ್ತಿದ್ದುದು ನಮ್ಮ ದುರ್ಭಾಗ್ಯ. 'ಸಂಸ್ಥಾನಗಳು ಮಣ್ಣುಮುಕ್ಕಲಿ!' ಎಂದು ಆರ್ಭಟಿಸುವ ವೀರರು, ' ಕಣ್ಣುಮುಚ್ಚಲಿ!' ಎಂದು ಗರ್ಜಿಸಲು ತೊಡಗಲಿ!

ತಮ್ಮ ನಿರ್ಯಾಣದ ಪೂರ್ವದಲ್ಲಿ ಏಕೀಕೃತ ಕರ್ನಾಟಕವನ್ನು ಕಾಣುವ ಉತ್ಕಂಠೆಯನ್ನು ಶ್ರೀ. ಗಂಗಾಧರರಾವ್ ತೋರಿಸಿದರು. ಮುಂಬಯಿಯಲ್ಲಿಯ ವಿಜಯನಗರ ಸ್ಮಾರಕೋತ್ಸವ ಸಮ್ಮೇಲನ ಕಾಲದಲ್ಲಿ ಅವರು ಮಾಡಿದ ಯನ್ನು ಇದು ನೆನಪಿಗೆ ತರುತ್ತದೆ. ಈ ಸಂವಾದದೂ ಅವರ ಪ್ರಚಂಡ ಆಂದೋಲನಶಕ್ತಿಯು ಏಕೀಕರಣಕ್ಕೆ ಪರಿಣಮಿಸಲಿ.

ಜಯಕರ್ನಾಟಕ

Y 1938



ಇನಿನೆನಹು

'ಗೃಹಲಕ್ಷ್ಮಿ' ಯ ಕೃಪೆಯಿಂದ

NAS SIX

ಸಂಪಾದಕರು:
ಬೆಳಗಾವಿ ರಾಮಚಂದ್ರರಾಯರು, ಬಿ. ಎ.

ಸಹಸಂಪಾದಿಕೆಯರು:
ಸೌ. ಶ್ಯಾಮಲಾದೇ

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯ
ರಾಮಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯ

ಪರಿವಿಡಿ

ಜುಲೈ ೧೯೩೮
ಸಂಪುಟ ೧೬ ಸಂಚಿಕೆ ೭

ವೇಣುಗೋಪಾಲ (ಮುಖಚಿತ್ರ) ....
ಮಹಾಕಾವ್ಯ (ಕವನ).... .... ಶ್ರೀ. ಸಿಂಪಿ ಲಿಂಗಣ್ಣ ೪೯೧
ಇಂದಿನ ಸಾಹಿತ್ಯ (ಅನುವಾದ) .... ಶ್ರೀ. ಬಿ. ಅಶ್ವತ್ಥನಾರಾಯಣರಾವ್, ಬೆಂಗಳೂರು ೪೯೩
ಚೀನೀಯರ ಜೀವನ (ಸಚಿತ್ರ) .... 'ವಿಶ್ವವಿಹಾರಿ'. ೪೯೭
ಕಲೆಶೂಲಿ (ಚಿಕ್ಕ ಪ್ರಹಸನ) .... ಶ್ರೀ. ವಾ. ಸು. ಅಡಬಡ್ಡಿ ೫೦೨
ಸಾವಿನ ಸಮಸ್ಯೆ .... ಶ್ರೀ. ರಂಗನಾಥ ನೆಗಳೂರ ೫೦೬
ಆರೋಗ್ಯಬಿಂದು ೫೦೯
ದಾಂಪತ್ಯಪ್ರೇಮ (ಸಚಿತ್ರ) .... ಶ್ರೀ. ಕಡೂರು ಶ್ರೀಪಾದ ೫೧೧
ಬೆಂದ ಜೀವಗಳು (ಸಚಿತ್ರ ಕತೆ) .... ಶ್ರೀ. ಬಸವರಾಜ ಕಟ್ಟೀಮನಿ ೫೧೫
ಸಾಲಿಗೀಲಿ ಬಿಟ್ಟು? .... 'ಉಂಡಾಡಿ' ಅ. ಬ. ಕ. ಡ. ೫೨೫
ಅಣೋರಣೀಯಾನ್ ಮಹತೋ ಮಹೀಯಾನ್ ೫೨೮
ಮಾಧುವಿನ ನಿರ್ಧಾರ (ಕತೆ) .... ಶ್ರೀ. ಎನ್. ಸೂರಪ್ಪ ೫೨೯
ಹಳ್ಳಿನ ಆರೋಗ್ಯ (ಆರೋಗ್ಯವಿಜ್ಞಾನ-ಸಚಿತ್ರ) .... ಡಾ. ಗೋಪಾಲಕೃಷ್ಣರಾಯರು, ಸಂ. ಕಲಿಯುಗ ೫೩೩
ವಿಜಯಲಕ್ಷ್ಮಿಯ ಗತವೈಭವ (ಕವನ) .... ಶ್ರೀ. ವಿಠೋಬಾಚಾರ್ಯ ವೈದ್ಯ ೫೩೮
ನಗಬೇಡಿ! ೫೪೦
ಹಾದೀ ಹಾಡು (ಕತೆ) .... ಶ್ರೀ. ಜಿ. ಎನ್. ಕಲಮದಾನಿ ೫೪೧
ಜೀವನಸಂಗ್ರಾಮ (ಸುಲಭವಿಜ್ಞಾನ-ಸಚಿತ್ರ) .... ಪ್ರೊ. ಎಂ. ಜಿ. ರಾವ್, ಅಶ್ವತ್ಥಪುರ ೫೫೦
ಜನಪದ ಸಾಹಿತ್ಯ (ಕಾಳಗದ ಪದ) .... ಶ್ರೀ. ಎಂ. ಕೃಷ್ಣಮೂರ್ತಿ, ಮತಿಘಟ್ಟ ೫೫೨
ಜ್ಞಾನ-ವಿಜ್ಞಾನ ೫೫೩
....ಫ್ರಾನ್ಸಿನ ಗುಪ್ತ ದುರ್ಗಗಳು—ಜರ್ಮನಿಯ ಅಧಿಕಾರಿಗಳು—ಸ್ಪಂಜುಗಳ ಹುಟ್ಟು—ಆಸ್ಟ್ರೇಲಿಯದಲ್ಲಿ ....
....ಭಾರತದ ಕೋಣಗಳು—ಮಾತಿನ ಗಂಡಾಂತರ-ಸೂಚಕ—ಬೆಚ್ಚಗಿನ ತೊಡಿಗೆಗಳು—ಬಲ್ಗೇರಿಯದಲ್ಲಿ ....
....ಸೂರ್ಯೋಪಾಸಕರು—ಶಕ್ತಿಯ ಶೋಧ—ಲಿಂಗ ಪರೀಕ್ಷಕ ಯಂತ್ರ—ಬಿಹಾರಿನಲ್ಲಿ ಸೆರೆಮನೆಯ ಸುಧಾರಣೆ— ....
....ಸುರಕ್ಷಿತತೆಗಾಗಿ ಸೂಚನೆಗಳು ....
ವೀಣಾವಿತಾನ ೫೫೯
ಝೆಕ್-ಜರ್ಮನ್ ಸಮಸ್ಯೆ (ಪರರಾಷ್ಟ್ರೀಯ ರಾಜತಂತ್ರ) .... 'ನಾಗರಿಕ' ೫೬೨
ಕನ್ನಡದ ಮುನ್ನಡೆ. ೫೬೬
ವಿಚಾರವೇದಿಕೆ ೫೬೮
....ಐಕ್ಯಚರ್ಚೆಯ ಆಭಾಸ—ಹಿಂದುಸ್ತಾನದ 'ಆಲ್‌ಸ್ಟರ್'—ಕಾಮ್ರೇಡ್ ಮಸಾನಿಯವರ ಸ್ಪಷ್ಟೋಕ್ತಿ— ....
....ಕೊಚೀನಿನ ಮುಂದಡಿ—ಹಿಂದೀವಿರೋಧಕ ಆಂದೋಲನ—ಸಂಸ್ಥಾನಗಳಲ್ಲಿ ಜಾಗೃತಿ—ಕನ್ನಡ ಸಂಸ್ಥಾನ ....
....ಗಳಲ್ಲಿ ಕನ್ನಡಕ್ಕೆ ಮನ್ನಣೆ—ನಮ್ಮ ಎಂ. ಎಲ್. ಎ., ಎಂ. ಎಲ್. ಸಿ.ಗಳು ಅನುಕರಿಸಬೇಕಾದುದು— ....
....ಜರ್ಮನಿ-ಇಟಲಿಗಳ ಒಳಸಂಚು—ಇಟಲಿ-ಯುಗೊಸ್ಲಾವಿಯಗಳ ಗೆಳೆತನ—ಭೂಮಧ್ಯ ಸಮುದ್ರದಲ್ಲಿ ....
....ಇಟಲಿಗೆ ಮೇಲ್ಗೈ—ಡಿ ವೆಲೆರನ ವಿಜಯ ....
ಧಾರವಾಡದ ಮಲ್ಲಸಜ್ಜನ ವ್ಯಾಯಾಮಶಾಲೆಯ ಹತ್ತನೆಯ ಹುಟ್ಟಿದ ಹಬ್ಬ ೫೭೪
ನಮ್ಮ ಮಾತು ೫೭೫

ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೭-೦-೦ ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೩-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ ಬೇರೆ. ಆಗಸ್ಟದ 'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳ … ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸುವದು …

ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕಂದರೆ ಅದರಿಂದ ವ್ಯರ್ಥ ವ್ಹಿ. ಪಿ. ವೆಚ್ಚಕ್ಕೆ ಗುರಿಯಾಗುವುದು ನನುಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ … ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿಯೂ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಮಾಧ್ಯಮ.

ಜಾಹೀರಾತುದಾರರು ೨೫% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರಕಟನೆ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾಹೀರಾತು ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

ಒಂದು ಪುಟಕ್ಕೆ	ಒಂದು ಸಲಕ್ಕೆ	೨೦ ರೂ
ಅರ್ಧ ಪುಟಕ್ಕೆ	,, ,,	೧೨ ,,
೧|೪ ಪುಟಕ್ಕೆ	,, ,,	೭ ,,
೧|೮ ಪುಟಕ್ಕೆ	,, ,,	೪ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ದೀರ್ಘಾವಧಿ ಜಾಹಿರಾತುಗಳ ದರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು.

ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು, ತಮ್ಮ ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಿಕೀಟೊಂದನ್ನು ಇಡಬೇಕು. (೨) ತಮ್ಮ ಲೇಖನವನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಿಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖನವನ್ನು ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು ಮಾರ್ಜಿನ್ ಬಿಡಬೇಕು. (೪) ಲೇಖನದ ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಬರುವ ಲೇಖನಗಳು ಜಯಕರ್ನಾಟಕಕ್ಕೊಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗಿರಬಾರದು. ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾಟಕಕ್ಕೆ ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಪತ್ರವ್ಯವಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರವ್ಯವಹಾರವನ್ನು "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ ವ್ಯವಹಾರವನ್ನು "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ



ವೇಣುಗೋಪಾಲ

(ಸೋಮನಾಥಪುರದ ಕೇಶವ ದೇವಾಲಯದ ದಕ್ಷಿಣ ಗುಹೆಯಲ್ಲಿಯ ವಿಗ್ರಹ)

(ಮೈಸೂರು ಸರಕಾರದ ಕೃಪೆಯಿಂದ)

ಜಯಕರ್ನಾಟಕ

ಸಂಪುಟ ೧೭ | ಬಹುಧಾನ್ಯ ಸಂವತ್ಸರದ ಆಷಾಢ ಶುದ್ಧ ೪ (೧—೭—೧೯೩೮) | ಸಂಚಿಕೆ ೭

ಮಹಾಕಾವ್ಯ

ಕವಿಕುಲದ ಆದಿಕವಿ ರಚಿಸಿಹನು ವಿಶ್ವಕಾವ್ಯ.

ಒಂದೊಂದು ಅಣುವಿನಲಿ ನವರಸದ ನಿಧಿಯುಂಟು.
ಕಾವ್ಯಕಷಲಿನ ಒಂದು ಹನಿಯ ಸವಿದವರಿಲ್ಲ.

ಕಾಡುಗಳು ನಾಡುಗಳು ಹಕ್ಕಿಗಳು ಹುಲ್ಲೆಗಳು
ಮಾನವರು ದಾನವರು ಮುಗಿಲು ಜಲ ಚಿಕ್ಕೆಗಳು
ಮರಬಳ್ಳಿ ಹೂಕಾಯಿ ಮುಳ್ಕಲ್ಲು ಹುಲ್ಲುಗಳು
ಸರ್ವವೂ ಆ ಮಹಾಕಾವ್ಯದಲಿ ವಸ್ತುಗಳು.

ನೂರು ಓದಿದರೇನು, ಕೋಟಿ ಕೇಳಿದರೇನು ?
ವಿಶ್ವಕಾವ್ಯದ ಒಂದು ಓಲೆಯಲಿ ಒಂದೆರಡು
ಸಾಲುಗಳನೋದುವರೆ—ಜೀವನಕೆ ಸಂಜೀವ.
ತತ್ವಗಳ ಬೊಕ್ಕಸವು, ನವರಸದ ಪೀಯೂಷ.

ಹಳ್ಳಿಯಲಿ ಹೊಳಲಿನಲಿ ಹೆಣ್ಣು ಗಂಡೆನ್ನದಲೆ
ಕವಿಯಾಗಿ ಹಾಡಿದರು, ಕಾವ್ಯಗಳ ರಚಿಸಿದರು.
ಊಳುತಿರೆ ಹೊಲಗಳನು, ಬಿತ್ತುತಿರೆ ಬೀಜಗಳ

ಸುಗ್ಗಿಯಲಿ, ಮಾಗಿಯಲಿ, ಹಂತಿಯಲಿ, ಹೋಳಿಯಲಿ
ಕುಳಿತಲ್ಲಿ ನಿಂತಲ್ಲಿ ಹಾಡಿದನು ಮಾನವನು.
ಬೀಸುಕುಟ್ಟುವ ದಣಿವ ಹಾಡಿ ಮರೆದಳು ತಾಯಿ.
ಜೋಗುಳವ ಪಾಡಿದರು, ಶೋಭನವ ಹಾಡಿದರು.
ಹೆಜ್ಜೆ ಹೆಜ್ಜೆಗು ಹಾಡು, ಜಾವಜಾವಕು ರಾಗ.

ಯುಗಯುಗಗಳಳಿದರೂ ಈ ಬಗೆಯು ಹಾಡು ಹೊಸದು.
ಸೊಲ್ಲುಸೊಲ್ಲಿಗು ಸೊಬಗು, ಚಿತ್ತರದ ಶೃಂಗಾರ.
ಕಾವ್ಯಝುರಿಯಲಿ ಮಿಂದ ಹಕ್ಕಿಗಳು ಮೈಮರೆತು
ಪಂಚಮದ ಕೊಳಲಿನಲಿ, ರಾಗದನುರಾಗದಲಿ
ವಾಲ್ಮೀಕಿ ಮುನಿಯೆದುರು ರಾಮಲಕ್ಷ್ಮಣರಂದು
ಕಾವ್ಯರಾಮಾಯಣವ ಹಾಡಿ ತಣಿಸಿದ ತೆರದಿ
ವಿಶ್ವಕವಿಯನು ಕರೆದು ದಿನದಿನವು ಹಾಡುತಿಹವು.

*   *   *

ಹುಟ್ಟು ಕಾವ್ಯದ ಗರ್ಭ, ಬೆಳೆಗೆ ಕಾವ್ಯದ ಉಸಿರು.
ಜೀವನದ ಕಲಹದಲಿ–ವಿಜಯದಲಿ ಕಾವ್ಯಕಹಳೆ.
ಮೃತ್ಯುಮುಖದಲಿ ಉಂಟು ಕಾವ್ಯಗಾಂಭೀರ್ಯ.
ಕಣ್ತೆರೆಯೆ ಚಿತ್ರಕಾವ್ಯ, ಕಣ್ಮುಚ್ಚೆ ದಿವ್ಯಕಾವ್ಯ.
ಮೂಸಿದರೆ ಕಾವ್ಯಗಂಧ, ಕೇಳಿದರೆ ಕಾವ್ಯನಾದ.
ಮುಟ್ಟಿದರೆ ಅಮೃತಸ್ಪರ್ಶ, ಎಲ್ಲೆಲ್ಲು ಕಾವ್ಯಕಾವ್ಯ !

ಬಡವಬಲ್ಲಿದರೆನದೆ, ಹುಂಬಕಲ್ತವರೆನದೆ
ಸರುವರಿಗು ತೆರೆದಿಟ್ಟ ಕಾವ್ಯವಿದು.
ತಿಳಿಯದೆನ್ನುವ ಛಲವು ಕುರುಡುಹಿಡಿತ.
ತಿಳಿತಿಳಿವ ಸರಳತೆಯು ತುಂಬ ಉಂಟು.

ಅದು ಬಿಡಲಿ—ದನಿಯು ಸವಿ; ಸೊಲ್ಲಿನಲಿ ಮಾಧುರ್ಯ
ಸವಿಗಂಡ ರಸಿಕನಿಗೆ ಮಾನವನ ಕವನಗಳು
ಕವಿಕುವರರಾಡಿರುವ ಹುಡಿಯಾಟ !
ಕಾವ್ಯಮಾಮರದ ಕೆಂಚಿಗುರಿನಂಚು !!

— ಸಿಂಪಿ ಲಿಂಗಣ್ಣ

> ಋಗ್ವೇದ ಕಾಲದಿಂದಲೂ ನವ್ಯಸಾಹಿತ್ಯಕ್ಕೆ ಮೂಗುಮುರಿಯುವವರಿದ್ದೇ ಇರುವರು. ಇದಿೀಗೆ ಪೂಜ್ಯವಾದ ಬ್ರಾಹ್ಮಣಗಳು ಉಪನಿಷತ್ತುಗಳು ಪುರಾಣಗಳು ಒಂದು ಕಾಲಕ್ಕೆ ನವ್ಯಸಾಹಿತ್ಯವೇ ಆಗಿದ್ದವು. ....
>
> * * * *
>
> ಲೋಕಸಂಗ್ರಹಕ್ಕೂ ಅಭಿವೃದ್ಧಿಗೂ ವ್ಯಾವಹಾರಿಕ ಭಾಷೆಯಲ್ಲಿಯೇ ಸಾಹಿತ್ಯ ನಿರ್ಮಾಣವಾಗಬೇಕು. ....
>
> * * * *
>
> ಊರೂರಿಗೆ ವ್ಯಾವಹಾರಿಕ ಭಾಷೆ ಬೇರೆಬೇರೆಯಾಗಿರುತ್ತದೆ. ಆದರದು ಜೀವದ್ಭಾಷೆ. ಆದನ್ನು ಬದಲಿಸಲೆತ್ನಿಸಿದರೆ ಸಾಹಿತ್ಯದ ಜೀವಾಳವೇ ನಾಶವಾಗುತ್ತದೆ.

ಲೇಖಕರು: ರಾವಸಾಹೇಬ್, ಮಹೋಪಾಧ್ಯಾಯ, ವ್ಯಾಕರಣಾಚಾರ್ಯ ಗಿಡಗು ವೆಂಕಟರಾಮಮೂರ್ತಿ ಪಂತಲು ಅವರು
(ಅನುವಾದಕರು : ಶ್ರೀ. ಬಿ. ಅಶ್ವತ್ಥನಾರಾಯಣರಾವ್, ಬೆಂಗಳೂರು)

ನವ್ಯಸಾಹಿತ್ಯಪರಿಷತ್ತೆಂದರೆ ಕೆಲವರು ಕಾರಣ ವಿಲ್ಲದೆಯೇ ಸಿಟ್ಟಿಗೆದ್ದ ಹಾವಿನಂತೆ ಕೆರಳುತ್ತಾರೆ; ನವ್ಯ ಸಾಹಿತ್ಯವೆಂದರೆ ಅರ್ಥವೇನೆಂದು ಕೂಡ ಕೇಳುತ್ತಾರೆ. ಅವರ ಊಹೆಯಲ್ಲಿ ಆ ಶಬ್ದಕ್ಕೆ ಅರ್ಥವಿಲ್ಲ. "ನವ್ಯ ಸಾಹಿತ್ಯ" ಅಂದರೆ ನವ್ಯ=ಈಗಿನ ಸಾಹಿತ್ಯವೆಂದು ನಾನು ಹೇಳುತ್ತೇನೆ. ಕೆಲವರು "ನವ" ಎಂಬ ಶಬ್ದದಿಂದ "ನು" (ನೂತನ) ಬಂದಿದೆಯೆಂದು ಹೇಳುತ್ತಾರೆ. ನಾನು "ನು"ಯಿಂದ "ನವ" "ನೂತನ" ಶಬ್ದಗಳು ಬಂದಿವೆಯೆಂದು ಹೇಳುತ್ತೇನೆ. ಇಂಗ್ಲೀಷಿನಲ್ಲಿ "ನವ್" (Now) ಎಂದರೆ ಈಗ ಎಂದು. "ಕು" ಎಂಬುದು 'ಕವ್' (Cow) ಆದ ಹಾಗೆ "ನು" ಇಂಗ್ಲೀಷಿನಲ್ಲಿ "ನವ್" (Now) ಆಯಿತು. ಆದುದರಿಂದ "ನವ" ಇಲ್ಲವೇ "ನೂತನ" ಎಂದರೆ ಈಗಿನದು ಎಂದು ಅರ್ಥವೆಂದು ಹೇಳಬಹುದು. ಅಂದರೆ ನವ್ಯ ಸಾಹಿತ್ಯವೆಂದರೆ ಈಗಿನ ಸಾಹಿತ್ಯವೆಂದು ಅರ್ಥ. ಇದರಲ್ಲಿ ತಪ್ಪೇನಿದೆ?

ನವ್ಯ, ನೂತನ ಎಂದು ಹೇಳಿದರೆ ಇವರಿಗೆ ಇಷ್ಟು ಕಷ್ಟ ವೇತಕ್ಕೆ? ಋಗ್ವೇದವು ಪ್ರಾಚೀನವಾದುದು ತಾನೇ. ಎಲ್ಲಕ್ಕೂ ಮೊದಲಿನ ಋಕ್ಕಿನಲ್ಲಿ "ಅಗ್ನಿಮೀಳೇ" ಎಂದು ಪ್ರಾರಂಭವಾಗುತ್ತದೆ. ಅದರ ಹಾದಿಯೇ "ಅಗ್ನಿಃ ಪೂರ್ವೇಭಿ ಋಷಿಭಿಃ ಈಡ್ಯೋ ನೂತನೈರುತ" ಎಂದು ಇದೆ. ಇಲ್ಲಿ "ಪೂರ್ವೇಭಿಃ" ಎಂಬ ತೃತೀಯಾ ಬಹುವಚನದಲ್ಲಿ ಪೂರ್ವ ವೈದಿಕ ರೂಪವೂ, "ನೂತನೈಃ" ಎಂಬ ನೂತನ ಸಾಂಸ್ಕೃತಿಕ ರೂಪವೂ ಇವೆ. ಋಷಿಗಳು ಮಂತ್ರದ್ರಷ್ಟರು. ಋಗ್ವೇದ ಕಾಲದಲ್ಲಿಯೂ ಕೂಡ ಪೂರ್ವಋಷಿಗಳು ಹೇಳಿದ ಹಳೆಯ ಋಕ್ಕುಗಳಲ್ಲಿಯೂ ನೂತನ ಋಷಿಗಳು ಹೇಳಿರುವ ನವ್ಯ ಋಕ್ಕುಗಳಲ್ಲಿಯೂ ಅಗ್ನಿಯನ್ನು ಪೂಜಿಸುತ್ತ ಬಂದಿರುತ್ತಾರೆ.

ಹೊಸದರಲ್ಲಿ ನೈರಸ್ಯವೇನೂ ಇಲ್ಲ. ಗತವಾದುದೆಲ್ಲವೂ ಗತವೇ. ಅದು ತಿಳಿಯುವುದಿಲ್ಲ. ನಮಗೆ ಬೇಕಾದುದು ಇಂದಿನದು. ನವ್ಯ ಸಾಹಿತ್ಯಪರಿಷತ್ತು ಕೋರುವುದು ಸಹ ಅದನ್ನೇ. ತಿಳಿಯುವಂತಹ ವಿಷಯಗಳನ್ನು ಇಂದಿನ ಕವಿಗಳು ಬರೆಯುತ್ತಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ. ಮೊದಮೊದಲು ಬಹು ಜನರು ಭಾವಕವಿತ್ವವನ್ನು ಬೈದರು. ಮೊನ್ನೆ ರಾಜಮಹೇಂದ್ರಿಯಲ್ಲಿ ನಡೆದ ಆಂಧ್ರ ಸಾಹಿತ್ಯ ಪರಿಷತ್ತಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಅಲ್ಲಿನ ಆಹ್ವಾನ ಸಂಘಾಧ್ಯಕ್ಷರು ತಮ್ಮ ಸ್ವಾಗತೋಪನ್ಯಾಸದಲ್ಲಿ ಭಾವಕವಿಗಳನ್ನು ಅಂಗೀಕರಿಸುತ್ತಾ ಒಳ್ಳೆಯದಾಯಿತೆಂದು ಹೇಳಿದರು. ಆದುಕಾರಣ ಆಂಧ್ರ ಪರಿಷತ್ತಿನವರು ಕೂಡ ಈಗ ನವ್ಯ ಸಾಹಿತ್ಯವನ್ನು ಅನುಮೋದಿಸಿರುವರೆಂದು ತೋರುತ್ತದೆ.

ಋಗ್ವೇದ ಕಾಲದಲ್ಲಿ ಕೂಡ ನೂತನ-ಋಷಿಗಳು ನವ್ಯ ಋಕ್ಕುಗಳನ್ನು ಹೇಳಿದರು. ಆವೇಳೆಗೆ ಅವು ನವ್ಯ ಸಾಹಿತ್ಯ,

---

೧೯೩೭ನೇ ಇಸವಿಯಲ್ಲಿ ಗುಂಟೂರಿನಲ್ಲಿ ನವ್ಯ ಸಾಹಿತ್ಯಪರಿಷತ್ತಿನ ಪಂಚಮವಾರ್ಷಿಕೋತ್ಸವದ ಸಮಯದಲ್ಲಿ ಶ್ರೀ. ಗಿಡಗು ವೆಂಕಟರಾಮಮೂರ್ತಿ ಪಂತಲು ಅವರ ಅಧ್ಯಕ್ಷ್ಯ ಭಾಷಣದ ಸಾರಾಂಶ. ಪರಿಷತ್ತು ತೆಲುಗಿನದಾದರೂ ವಿಷಯವು ಮಿಕ್ಕ ಭಾಷೆಗಳಿಗೂ ಅನ್ವಯಿಸುವುದಾದುದರಿಂದ ಇಲ್ಲಿ ಕೊಟ್ಟಿದ್ದೇವೆ. —ಸಂ.

ಬಳಿಕ ಬ್ರಾಹ್ಮಣಗಳು ಬಂದವು; ಅನಂತರ ಉಪನಿಷತ್ತುಗಳು ಹುಟ್ಟಿದವು. ಆ ಸಮಯಗಳಲ್ಲಿ ಅವೂ ಕೂಡ ಹೊಸ ಸಾಹಿತ್ಯವೇ. ಅದರ ಹಿಂದೆ ಪುರಾಣಗಳು ಜನಿಸಿದವು. ಆ ಪುರಾಣಗಳೇ ಆಕಾಲದಲ್ಲಿ ನವ್ಯ ಸಾಹಿತ್ಯ. ಕಾವ್ಯಗಳು ಹುಟ್ಟಿದ ದಿನಗಳಲ್ಲಿ ಅವೇ ನವ್ಯ ಸಾಹಿತ್ಯ.

ಯಾವ ವೇಳೆಯಲ್ಲಿಯಾದರೂ ನೂತನ ಸಾಹಿತ್ಯಕ್ಕೆ ಪೆಟ್ಟುಗಳು ಬೀಳುತ್ತಲೇ ಬಂದವು; ಅವುಗಳನ್ನು ಹಿರಿಯರು ನಿರ್ಲಕ್ಷಿಸುತ್ತಲೇ ಬಂದರು. ಎಲ್ಲದಕ್ಕಿಂತಲೂ ಸಾಹಿತ್ಯಕ್ಕೆ ಬಿದ್ದ ಬಹು ದೊಡ್ಡ ಪೆಟ್ಟೆಂದರೆ "ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂಬ ನಿಷೇಧವನ್ನು ತಂದು ಹಾಕಿದ ವೈದಿಕ ಲೋಕದವರಿಂದ. ಅವರ ಮತದಲ್ಲಿ ಕಾವ್ಯಗಳು ವೇದಮೂಲವಲ್ಲದುದರಿಂದ ವರ್ಜ್ಯವೆಂದು. ಆದರೆ ಅಂದಿನ ಕವಿಗಳು ಆ ನಿಷೇಧದಿಂದ ಕಟ್ಟು ಬೀಳದೆ ಕಾವ್ಯಗಳನ್ನು ರಚಿಸಿದರು. ಕಾವ್ಯಗಳಲ್ಲಿ ಶೃಂಗಾರಾದಿ ವರ್ಣನಗಳಿವೆಯೆಂದು ವೈದಿಕರು ಆಕ್ಷೇಪಿಸಿದಾಗ ಆಗಿನವರು ವೇದಗಳಲ್ಲಿರುವ ಸಂಭೋಗ ಶೃಂಗಾರಾದಿ ಕಾವ್ಯಗಳಲ್ಲಿರುವ ಎಲ್ಲ ವಿಷಯಗಳನ್ನು ಎತ್ತಿ ನಿರೂಪಿಸಿ ಅವರನ್ನು ನಿರುತ್ತರರನ್ನಾಗಿ ಮಾಡಿದರು. ಕೆಲನರು ಕಾವ್ಯಗಳು ಆನಂದವನ್ನು ಹುಟ್ಟಿಸುವವು. ಅಂದ ಬಳಿಕ ಕಾವ್ಯಪಠನವು ಯುಕ್ತವಾದುದಲ್ಲವೆಂದು ಆಕ್ಷೇಪಿಸಲು ಕಾವ್ಯದಿಂದ ಲಭಿಸುವ ಆನಂದವು ಬ್ರಹ್ಮಾನಂದಬಂಧುವೆಂದು ನಿರೂಪಿಸಿ ಕಾವಳಿಗಳು ಕಾವ್ಯಸಮ್ಮಿತವಾಗಿ ಉಪದೇಶವನ್ನು ಮಾಡುತ್ತವೆಂದು ನಿರ್ಧಾರವನ್ನು ಮಾಡಿದರು. ಈ ವಿಧವಾಗಿ ಆಗಿನ ಕವಿಗಳು ಕಾವ್ಯಪ್ರಯೋಜನವನ್ನು ಸಾಧಿಸಿದರು. ಇಲ್ಲದಿದ್ದರೆ ಅಂದಿನಿಂದ ಇಂದಿನ ವರೆಗೂ ಒಂದು ಸ್ವಾಧ್ಯಾಯ ಪ್ರವಚನವೇ ಉಳಿದು ಹೋಗುತ್ತಿತ್ತು.

ಆಮೇಲೆ ಮೊದಲು ವಚನಕಾವ್ಯಗಳನ್ನು ಬರೆಯುತ್ತಿದ್ದವರನ್ನು ಆಕ್ಷೇಪಿಸಿದರು. ಆಬಳಿಕ "ವಾಸವದತ್ತ" "ಕಾದಂಬರಿ"ಗಳಂತಹ ಉತ್ತಮವಾದ ವಚನಕಾವ್ಯಗಳು ಹೊರಬಿದ್ದವು. ಅವುಗಳನ್ನು ಹೊಂದಿದಂತೆಯೇ "ಕವೀನಾಮಗಲದ್ದರ್ಪೋ ನೂನಂ ವಾಸವದತ್ತಯಾ" ಎಂದೂ, "ಬಾಣೋಚ್ಛಿಷ್ಟಮಿದಂ ಜಗತ್" ಎಂದೂ ಜನರಲ್ಲಿ ಪ್ರಚಾರವಾದವು.

ಪ್ರಾಕೃತದಲ್ಲಿ ಕಾವ್ಯಗಳನ್ನು ಬರೆಯಬಾರದೆಂದು ಸಾರಿದರು ಕೆಲವು ದಿನಗಳವರೆಗೆ. ಪ್ರಾಕೃತವು ಅಪಭ್ರಂಶ ಭಾಷೆಯೆಂದೂ, ಅದರಲ್ಲಿ ಕಾವ್ಯಗಳನ್ನು ಬರೆದರೆ ನರಕದಲ್ಲಿ ಬೀಳುವರೆಂದೂ ಭಯವಿಟ್ಟರು. ಆದರೂ "ಸೇತುಬಂಧ" 'ಗಾಥಾಸಪ್ತಶತಿ' ಮುಂತಾದ ಕಾವ್ಯಗಳು ಆ ಭಾ... ಭಾಷೆಯಲ್ಲಿ ಹುಟ್ಟಿದವು. ಬೌದ್ಧರ ಮತಗ್ರಂ... ತ್ರಿಪಿಟಕವು ಸಹ ಜೀವದ್ಭಾಷೆಯಾದ ಪಾಲಿ... ಯಲ್ಲಿಯೇ ಇದೆ. ಪಾಲೀ ಭಾಷೆಯಲ್ಲಿ ಅನೇಕ ಗ್ರಂ... ಗಳು ಇವೆ.

ಈ ವಿಧವಾದ ದೋಷಾರೋಪಣೆಯು ನಮ್ಮ ... ಮಾತ್ರ ಕಂಡು ಬರುವುದೆಂದು ಯೋಚಿಸಬಾರದು. ... ಭಾಷೆಗಳಲ್ಲಿಯೂ ಈ ರೀತಿಯ ತೊಂದರೆಗಳು ... ಇದ್ದವು. ಕ್ರೈಸ್ತರ ಮತಗ್ರಂಥವಾದ ಬೈಬಲು ... ಇಂಗ್ಲೀಷಿನಲ್ಲಿರಕೂಡದೆಂದು ಸಾರಿದರು. ವಿಕ್ಲಿ... ಆತನ ಅನುಯಾಯಿಗಳು ವಿವಿಧವಾದ ತೊಂದ... ಕೊಟ್ಟರು. ಗೆಲಿಲಿಯೋವಿಗೂ ಬಗೆಬಗೆಯ ... ಗಳನ್ನುಂಟುಮಾಡಿದರು. ಈಗ್ಗೆ ಸುಮಾರು ನೂ... ಗಳ ಹಿಂದೆ ಆಕ್ಸ್‌ಫರ್ಡ್ ವಿದ್ಯಾಲಯದಂತಹ ವಿ... ದಲ್ಲಿ ಇಂಗ್ಲೀಷು ವಾಙ್ಮಯವನ್ನು ಪ್ರತ್ಯೇಕವಾ... ಹೇಳಲು ಅಧ್ಯಾಪಕರು ಇರಲಿಲ್ಲ. ಅವರ ಕಾ... ಟೆನಿಸನ್, ಷಾ, ವೆಲ್ಸ್ ಮುಂತಾದವರ ಕಾವ್ಯಗಳನ್ನು ... ದಿದ್ದವರನ್ನು ಜನರು ಹೆಂಗಿಸುತ್ತಾರೆ.

'ಸಾಹಿತ್ಯ' 'ಸಾರಸ್ವತ' 'ವಾಙ್ಮಯ' ಎಂ... ಶಬ್ದಗಳನ್ನು ಪರ್ಯಾಯಪದಗಳಾಗಿ ಉಪ... ತ್ತೇವೆ. ಒಂದೇ ಒಂದು ಅರ್ಥದಲ್ಲಿ ಉಪಯೋಗಿ... ಬದಲು ಅರ್ಥಭೇದದಿಂದ ಪ್ರಯೋಗಿಸಿದರೆ ಒಳ್ಳೆ... ವುದು. ಅದರಲ್ಲಿಯೂ "ಸಾಹಿತ್ಯ"ವೆಂಬ ... ಸಾಮಾನ್ಯವಾಗಿ ಇಂಗ್ಲೀಷಿನಲ್ಲಿ "ಕಲ್ಚರ್" ಎಂ... ದಂತೆ ವಿಶಾಲವಾದ ಅರ್ಥದಲ್ಲಿ ಉಪಯೋಗಿಸ... ಯದು. ಈ ಅರ್ಥದಲ್ಲಿ ಲೋಕಸಂಗ್ರಹಾರ್ಥ ಎಂ... ಬಹಳ ಉಪಯೋಗವಾಗುವುದು. ಪ್ರಕೃತದಲ್ಲಿ ... ಕಲೆಗಳಲ್ಲಿ ಬಂದು ಸೇರುವುವು. ನಮ್ಮ ಪೂ... ಯುರೋಪು ಎಂದರೆ ಏನೋ ಎಂದು ಭಾವಿಸಿ... ಈಗ ಶಾಸ್ತ್ರಜ್ಞರು ಲೋಕಪರಿಚಯವನ್ನು ಮಾಡಿ... ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ... ಸಾಗುತ್ತಾರೆ. ಇಷ್ಟೇ ಅಲ್ಲ ಜ್ಯೋತಿಶ್ಶಾಸ್ತ್ರ... ವಿಶ್ವವಿಹಾರವನ್ನು ಮಾಡುತ್ತದೆ. ಇಂದಿನ ... ವ್ಯಾಪ್ತಿಯೆಂದರೆ ಅನಂತವಿಶ್ವವನ್ನು ಆಕ್ರಮಿಸುವ...

ಇಂದಿನ ಲೋಕಕ್ಕೆ ಉಪಕಾರವನ್ನು ಮಾಡುವ... ನೂತನ ಸಾಹಿತ್ಯವು ಬೇಕೇ ಬೇಕು. ಭಾರತ... ನೀತಿಗಳು ಇಂದಿಗೆ ಸರಿ ಹೋಗುವುದಿಲ್ಲ. ಇಂದಿ...

ಸಂಗ್ರಹ, ಕೋಶ, ಪುಸ್ತಕಗಳನ್ನು ಬರೆದರೆ ವ್ಯಾವಹಾರಿಕ ಭಾಷೆಯಲ್ಲಿಯೇ ಬರೆಯಬೇಕು. ಗ್ರಾಂಥಿಕ ಭಾಷೆಯು ಯಾರಿಗೂ ಬರುವುದಿಲ್ಲ. ಅದು ನಮಗೆ ಈಗ ಕೆಲಸಕ್ಕೆ ಬರುವುದಿಲ್ಲ. ಇಂಗ್ಲೆಂಡಿನಲ್ಲಿ ಲೋಕಸಂಗ್ರಹಕ್ಕಾಗಿ ಇತ್ತೀಚೆ ಪ್ರಧಾನವಾಗಿ ನಾಟಕಗಳು, ಜರ್ನಲಿಸಂ ಮುಂತಾದವು ಬಹಳ ಬಳಕೆಯಲ್ಲಿವೆ. ಆದರಂತೆಯೇ ನಮ್ಮ ದೇಶದಲ್ಲಿಯೂ ಕೂಡ ಆಗಬೇಕು, ಆದರೆ ಆಡುವ ಭಾಷೆಯನ್ನು ಉಪಯೋಗಿಸದಿದ್ದರೆ ಕೆಲಸವು ಸಾರ್ಥಕವಾಗುವುದಿಲ್ಲ.

ಈ ಆಡುವ ಭಾಷೆಯು ಒಂದು ರೂಪಾಗಿಲ್ಲವೆಂದು ಕೆಲವರು ಆಕ್ಷೇಪಿಸುತ್ತಾರೆ. ಆದರೆ ಅವರಿಗೆ ಜೀವದ್ಭಾಷೆಯ ರೂಪು ತಿಳಿಯದೆಂದು ತೋರುತ್ತದೆ. ಎಲ್ಲಿಯಾದರೂ ಎರಡು ಸೂರ್ಯೋದಯಗಳು ಒಂದೇ ರೂಪಿನಲ್ಲಿ ಕಾಣಬರುತ್ತವೆಯೇ? ಒಬ್ಬ ಮನುಷ್ಯನಂತಿರುವ ಮತ್ತೊಬ್ಬ ಮನುಷ್ಯನು ಇರುತ್ತಾನೆಯೇ? ಇಲ್ಲ, ಒಬ್ಬ ಮನುಷ್ಯನ ಎರಡು ಕಿವಿಗಳು ಸಹಾ ಒಂದೇ ರೀತಿಯಾಗಿ ಇರುತ್ತವೆಯೇ? ಜೀವದ್ಭಾಷೆಯಲ್ಲಿರುವ ಜೀವಾಳವೇ ಅದು. ಅಚ್ಚಿನಲ್ಲಿ ಹಾಕಿ ,ಸಿದ್ಧಮಾಡಿದ ಸಾಮಗ್ರಿಯಲ್ಲ ಅದು. ವ್ಯಾಕರಣಗಳಿಂದ, ನಿಘಂಟು ಮುಂತಾದವುಗಳಿಂದ ಕಟ್ಟಿಹಾಕಿದುದಲ್ಲ ಅದು. ಅದು ಜೀವದ್ಭಾಷೆ. ಅದು ಬೇಡವಾದರೆ ಉಪಯೋಗಿಸಬಾರದಾದರೆ ನಮ್ಮವರ ನಾಲಿಗೆಯನ್ನು ಕುಯಿದು ಹಾಕಬೇಕಾದೀತು!

ಈ ಯುಗದಲ್ಲಿ ಸ್ಪಿರಿಟ್ ಆಫ್ ಛಾಲೆಂಜ್ (Spirit of Challenge) ಪ್ರಧಾನವಾಗಿದೆ. ಆದರೆ ಈ ಅರ್ಥಕ್ಕೆ ಸರಿಬರುವ ಪದಗಳು ತೆಲುಗಿನಲ್ಲಿರದಿರುವುದರಿಂದ 'ಧಿಕ್ಕಾರ' ಎಂಬ ಶಬ್ದವು ಸ್ವಲ್ಪ ಸಮೀಪಕ್ಕೆ ಬರುತ್ತದೆ. ಆದುದರಿಂದ ನಾನು ಈ ಯುಗವನ್ನು 'ಧಿಕ್ಕಾರದ ಯುಗ' ಎಂದು ಕರೆಯುತ್ತೇನೆ. ಪ್ರಥಮದಲ್ಲಿ ಸ್ವಲ್ಪ ಮಂದಿ ಸ್ವತಂತ್ರರೂ, ಸ್ವಲ್ಪ ಮಂದಿ ಗುಲಾಮರೂ ಇದ್ದರು. ಬಳಿಕ ಗುಲಾಮರು ಸ್ವತಂತ್ರರ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರರಾದರು. ಪೂರ್ವದಲ್ಲಿ ಸ್ತ್ರೀಯರು ವಿದ್ಯೆಯನ್ನು ಕಲಿಯಬಾರದು, ಕೆಲಸ ಮಾಡಬಾರದು ಎಂದು ಹೇಳುತ್ತಿದ್ದರು. ಆದರೆ ಅವರೀಗ ಎಲ್ಲ ಕೆಲಸಗಳನ್ನು ಮಾಡುತ್ತಿರುವರು. ಟರ್ಕಿಯಲ್ಲಿ ಇಂದು ಆರುನೂರು ಮಂದಿ ಸ್ತ್ರೀಯರು ಏರೋಪ್ಲೇನುಗಳನ್ನು ನಡೆಯಿಸಲು ತರಬೇತಾದರು. ಸೈನಿಕದಳದಲ್ಲಿ ಕೂಡ ಸ್ತ್ರೀಯರು ಸೇರಿದರು. ಸ್ತ್ರೀಯರ ರೆಜಿಮೆಂಟುಗಳು ಪ್ರತ್ಯೇಕವಾಗಿವೆ. ಈ ವಿಧವಾಗಿ ಸ್ತ್ರೀಯರು ಪುರುಷರ ಅಧಿಕಾರವನ್ನು ಧಿಕ್ಕರಿಸುತ್ತಿರುವರು. ಮೊದಲಿನ ದಿನಗಳಲ್ಲಿ ರಾಜ್ಯದಲ್ಲಿ ಅಧಿಕಾರವೆಂದರೆ ಧನವಂತರ ಕೈಯಲ್ಲಿಯೇ ಇದ್ದಿತು. ಈಗ ಬಡವರಿಗೂ ಅಧಿಕಾರದಲ್ಲಿ ಭಾಗಬರುತ್ತದೆ; ಧನವಂತರ ಅಧಿಕಾರವನ್ನು ಧಿಕ್ಕರಿಸುತ್ತಿರುವರು.

ಹೀಗಿರುವಾಗ ಇಂದಿನ ಸಾಹಿತ್ಯವನ್ನು ಯಾರಾದರೂ ತಿರಸ್ಕರಿಸಿದರೆ ಆ ವಿಮರ್ಶಕರ ಅವಿವೇಕವು ವ್ಯಕ್ತವಾಗುತ್ತದೆ. ಅಂತಹ ವಿಮರ್ಶಕರಿಂದ ಅಂಜಿ, ನಿರುತ್ಸಾಹಿತರಾಗಬೇಕಾದ ಕಾರಣವಿಲ್ಲ. ಕಾಳಿದಾಸ ಭವಭೂತಿಗಳಿಗೂ ಈ ಆಕ್ಷೇಪಣೆಯು ಬರದೆ ಇರಲಿಲ್ಲ. ಭಾಸನೇ ಮೊದಲಾದ ಹಿಂದಿನ ನಾಟಕಕರ್ತರು ಇರುವಾಗ ಈ ಹೊಸ ನಾಟಕವೇಕೆಂದು ಅಂದಿನ ಕೆಲವು ಅಜ್ಞಾನಿಗಳು ಆಕ್ಷೇಪಿಸಲು ಕಾಳಿದಾಸನು 'ಮಾಲವಿಕಾಗ್ನಿಮಿತ್ರ'ದಲ್ಲಿ

> "ಪುರಾಣಮಿತ್ಯೇವ ನ ಸಾಧು ಸರ್ವಮ್
> ನ ಚಾಪಿ ಕಾವ್ಯಂ ನವಮಿತ್ಯವದ್ಯಮ್
> ಸಂತಃ ಪರೀಕ್ಷ್ಯಾನ್ಯತರದ್ಭಜಂತೇ
> ಮೂಢಃ ಪರಪ್ರತ್ಯಯನೇಯಬುದ್ಧಿಃ"

ಎಂದು ಪ್ರಸ್ತಾವನೆಯಲ್ಲಿ ಹೇಳಿ ನವಕವಿಗಳನ್ನು ಹೇಳನೆ ಮಾಡುವವರನ್ನು ಮೂಢರಿಗಿಂತಲೂ ಕೀಳೆಂದು ಹೇಳಿರುವನು. ಭವಭೂತಿಯು ಕೂಡ ಅಂದಿನವರ ಆಕ್ಷೇಪಣೆಗೆ:—

> "ಯೇ ನಾಮ ಕೇಚಿದಿಹ ನಃ ಪ್ರಥಯನ್ತ್ಯವಜ್ಞಾಂ
> ಜಾನಂತು ತೇ ಕಿಮಪಿ ತಾನ್ಪ್ರತಿ ನೈಷ ಯತ್ನಃ
> ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನಧರ್ಮಾ
> ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ"

ಎಂಬುದಾಗಿ ಹೇಳಿಕೊಳ್ಳಬೇಕಾಗಿ ಬಂದಿತು. ವರ್ಡ್ಸ್‌ವರ್ಥನಂತಹ ಮಹಾಕವಿಯ ಪುಸ್ತಕಗಳು ಮೊದಲು ಹನ್ನೊಂದು ವರ್ಷಗಳಲ್ಲಿ ಹತ್ತು ಪ್ರತಿಗಳು ಮಾತ್ರ ಮಾರಲ್ಪಟ್ಟವು. ತನ್ನ ಪುಸ್ತಕಗಳು ಹೀಗೆ ಮಾರಲ್ಪಡದಿರಲು "This will never do" ಎಂದು ಉದ್ಗಾರ ತೆಗೆದನು. ಬರ್ನಾರ್ಡ್‌ಷಾನ ಪುಸ್ತಕಗಳನ್ನು ಮೊದಲು ಅಚ್ಚುಹಾಕಿಸುವವರು ಸಹ ಇರುತ್ತಿರಲಿಲ್ಲ. ಈಗ ಷಾ ಮಹಾಶಯನ ಪುಸ್ತಕಗಳನ್ನು ಮಾರದಿರುವವರೇ ಕಡಿಮೆಯೆಂದು ಹೇಳಬಹುದು. ಅವನನ್ನು ಯಾರೋ ಒಬ್ಬರು "ನೀವು ಪುಸ್ತಕಗಳನ್ನು ಏಕೆ ಬರೆಯುತ್ತೀರಿ?" ಎಂದು ಕೇಳಲು ಆತನು "ನಾನು ಇಂದಿನವರಿಗಾಗಿ ಬರೆಯುತ್ತೇನೆ; ಇಂದಿನ ಲೋಕಕ್ಕಾಗಿ ಬರೆಯುತ್ತೇನೆ. ಶಾಶ್ವತಲೋಕಕ್ಕಾಗಿ ಅಲ್ಲ." ಎಂದು ಉತ್ತರವಿತ್ತನು.

ಇಂದಿನ ಸಾಹಿತ್ಯವು ಸರ್ವತೋಮುಖವಾಗಿ ವೃದ್ಧಿಯಾಗಬೇಕೆಂದರೆ ವ್ಯಾವಹಾರಿಕ ಭಾಷೆಯಲ್ಲಿಯೇ ಯೂನಿವರ್ಸಿಟಿಗಳಲ್ಲಿ ಎಲ್ಲ ವಿಷಯಗಳಲ್ಲಿಯೂ ಪಾಠಹೇಳಲು ಯೋಗ್ಯವಾದ ಪುಸ್ತಕಗಳನ್ನು ಬರೆಯಬೇಕು. ಸುಮಾರು ೨ ಕೋಟಿ ತೆಲುಗರು ಇದ್ದಾರೆ. ನಮ್ಮ ದೇಶದಲ್ಲಿ ನೂರಕ್ಕೆ ಹತ್ತು ಜನರಿಗೆ ಬರೆಯಲು (ಸಹಿ ಹಾಕಲು) ಬರುತ್ತದೆ. ಈ ಹತ್ತು ಜನರಲ್ಲಿ ಓದಲು ಬರುವವರು ಬಹು ಸ್ವಲ್ಪ ಜನ. ಅವರಲ್ಲಿ ಸಾಹಿತ್ಯ ಗ್ರಂಥವನ್ನು ಅರ್ಥಮಾಡಿಕೊಳ್ಳುವ ಶಕ್ತಿಯುಳ್ಳವರು ಯಾರು? ಓದುವುದಕ್ಕೆ ಬರದವರಿಗೆ ಓದುವವರನ್ನಾಗಿ ಮಾಡಬೇಕಾದುದು ನಮ್ಮ ಕೆಲಸ. ಇಂತಹ ಜನರಿಗೆ ವ್ಯವಹಾರಕ್ಕೆ ಬೇಕಾದ ಓದನ್ನು ಓದುವಷ್ಟು ಸಾಮಗ್ರಿಯನ್ನು ದೊರಕಿಸಲು ಯಾವ ಭಾಷೆಯಲ್ಲಿ ಪುಸ್ತಕಗಳನ್ನು ಬರೆಯಬೇಕು? ಕಾಶೀ ಕೃಷ್ಣಾಚಾರ್ಯರು, ಆಂಧ್ರ ಭಾಷೆಯು ಸಂಸ್ಕೃತದಂತೆಯೇ ಉತ್ತಮವಾದುದು; ತೆಲುಗಿನಲ್ಲಿ ಚೆನ್ನಾಗಿ ಬರೆಯಬೇಕಾದರೆ, ಸಂಸ್ಕೃತವೂ ತೆಲುಗೂ ಪೂರ್ತಿಯಾಗಿ ಬರಬೇಕು ಎಂದು ನುಡಿದರು. ನಾನು ಸಹ ಪೂರ್ವಾಂಧ್ರಭಾಷೆಯನ್ನು ಕಲಿಯಬೇಕೆಂದು ಪ್ರಯತ್ನ ಮಾಡಿದೆನು. ಆದರೆ ಇಂದಿಗೂ ಸಹ ನನಗೆ ಅದರ ಸ್ವರೂಪವು ಪೂರ್ತಿಯಾಗಿ ತಿಳಿದಿಲ್ಲ. ಈ ಸಂದೇಹವನ್ನು ಯಾರಾದರೂ ತೀರಿಸಬಲ್ಲವರಿದ್ದರೆ ದಯವಿಟ್ಟು ನನ್ನೆದುರಿಗೆ ಬಂದು, ನಿಂತು ಹೇಳಿದರೆ ಉತ್ತಮವಾಗುವುದು. ಅಂತಹ ಪೂರ್ವ ಭಾಷೆಯಲ್ಲಿ ಕಾವ್ಯಗಳನ್ನು ಬರೆದರೆ ನಮ್ಮಲ್ಲಿ ಓದುಬರದವರಿಗೆ ಮೊದಲು ಓದನ್ನೂ ನಂತರ ಅದರಿಂದ ಬರತಕ್ಕ ಫಲಗಳನ್ನೂ ದೊರಕಿಸಲು ಸಾಧ್ಯವೇ? ಈ ಮೂರು ಕೋಟಿ ಜನರು ನಿಘಂಟುಗಳನ್ನೂ, ವ್ಯಾಕರಣಗಳನ್ನೂ ಓದಿ ಕಲಿತು ನಂತರ ವಿದ್ಯೆಯನ್ನು ಕಲಿಯಲು ಯತ್ನಿಸಬೇಕೇ? ಗ್ರಾಂಥಿಕ ಭಾಷೆಯಲ್ಲಿ ಕಾವ್ಯಗಳು ಇಲ್ಲ. ಗ್ರಾಂಥಿಕ ಭಾಷೆಯೆಂಬ ಹೆಸರಿನಲ್ಲಿ ಎಲ್ಲರೂ ಕೃತಕ ಭಾಷೆಯಲ್ಲಿ ಬರೆಯುತ್ತಿದ್ದಾರೆ.

ವ್ಯಾವಹಾರಿಕ ಭಾಷೆಯೆಂದರೆ ಇಂದಿನ ಶಿಷ್ಟರಲ್ಲಿ ವ್ಯವಹಾರದಲ್ಲಿರುವ ಭಾಷೆ: ಅದು ನಾವು ಹುಡುಗತನದಲ್ಲಿ ಕಲಿತ ಭಾಷೆ. ಅದು ದೇಶಿ, ಪೂರ್ತಿ ತೆಲುಗು! ಅದು ನಮ್ಮದು. ನಮ್ಮ ಭಾಷೆ. ಕರ್ಪೂರಮಂಜರಿಯಲ್ಲಿ ಸಂಸ್ಕೃತವು ಒರಟು ಭಾಷೆಯೆಂದೂ ಪ್ರಾಕೃತವು ಸುಕುಮಾರವೆಂದೂ ಹೇಳಿದೆ. ಆದರಿಂದಲೇ ಪ್ರಾಕೃತಕಾವ್ಯವು ಹಸುಮಕ್ಕಳ ಮಾತಿನಂತೆ ಅಮೃತಮಯವಾದುದೆಂದು ಹೇಳಿದರು. ಕಾವ್ಯದ ಅಂದವು ಬರಿ ಭಾಷೆ[illegible] ಹಿಂದಿನ ವೃತ್ತಗಳಲ್ಲಿ ಇಂದಿನ ನುಡಿಗಳ [illegible]ದಿಲ್ಲ. ಇಂದಿನ ಭಾಷೆಗೆ ಯೋಗ್ಯವಾದ ವೃತ್ತ[illegible]ಗಳೂ ವಾಡಿಕೆಯಲ್ಲಿ ಬರಬೇಕು.

ವ್ಯಾವಹಾರಿಕ ಭಾಷೆಯು ಅಪರಿಮಿತ [illegible]ವುಳ್ಳದು. ನವ್ಯಸಾಹಿತ್ಯವು ಇಲ್ಲದಿದ್ದರೆ [illegible]ವಾಗುವುದಿಲ್ಲ. ಲೋಕವು ಅಭಿವೃದ್ಧಿ [illegible] ಆದುದರಿಂದ ಉತ್ಸಾಹದಿಂದ ಕೆಲಸ ಮಾಡಿ[illegible] ವಿಜಯವು ತಪ್ಪುವುದಿಲ್ಲ.

ಚೀನೀಯರ ಜೀವನ

ಲೇಖಕರು: ವಿಶ್ವವಿಹಾರಿ




ಚೀನಿ ಸೈನಿಕನು ಬಿಡುವಿನ ಸಮಯದಲ್ಲಿ ಕೊಳಲಿನ ಗಾನದಲ್ಲಿ ಮೈಮರೆವನು.

ಚೀನದ ಹಳ್ಳಿಗರಲ್ಲಿ ಒಂದು ಸ್ವಾಭಾವಿಕ ತೃಪ್ತಿಯಿದೆ. ಹೆಜ್ಜೆಹೆಜ್ಜೆಗೂ ಗಂಡಾಂತರವನ್ನು ಪ್ರತೀಕ್ಷಿಸುವ ಸೈನಿಕನೂ ಬಿಡುವಿನ ಸಮಯವನ್ನು ಗಾನವಾದನಗಳಲ್ಲಿ ಕಳೆಯುವನು. ನಿರಕ್ಷರಿಗಳಾದರೂ ಚೀನಿ ಹಳ್ಳಿಗರು ಕೈಗಾರಿಕೆಗಳಲ್ಲಿ ಬಲು ನಿಪುಣರು. ಅವರ ವಿಶಿಷ್ಟವಾದ ಕಲೆ, ಕೈಗಾರಿಕೆ, ನೃತ್ಯ, ನಾಟಕ, ಆಟಪಾಟಗಳೆಲ್ಲದರಲ್ಲೂ ಅವರ ತೃಪ್ತಿ-ಸಮಾಧಾನಗಳು ಮಿನುಗುತ್ತಿವೆ. ಆದರೂ 'ನವೀನತೆ' 'ಪ್ರಗತಿ' ... ಎಂಬ ಮಾತು ಅಲ್ಲಿ ಕೇಳಿ ಕೂಡ ಬರುವಂತಿಲ್ಲ ... ...

ಜಪಾನ ಚೀನಗಳೆರಡೂ ಪೌರಸ್ತ್ಯ ದೇಶಗಳೇ. ಆದರೂ ಅವೆರಡರಲ್ಲಿ ಎಷ್ಟು ಅಂತರ! ಜಪಾನು ಅತ್ಯಾಧುನಿಕವೆನಿಸುವ ಸಂಸ್ಕೃತಿಯ ಬಣ್ಣ ಬಳಿದುಕೊಂಡು ಯುರೋಪದ ಸಂಗ್ರಾಮ ನೀತಿಯನ್ನು ಅನುಕರಿಸುತ್ತಿದೆ. ಚೀನವು ಪಾರಂಪರಿಕತೆಯ ಕೆಸರಲ್ಲಿ ಇನ್ನೂ ಪೂರ್ವಕಾಲದ ಕನಸನ್ನು ಕಾಣುತ್ತಿದೆ. ಜಪಾನದ ಅರಸು ದೇವವಂಶಜನೆನಿಸಿದರೂ ವ್ಯವಹಾರದಲ್ಲಿ ಆ ದೈವೀಪುರುಷನ ಕೈ ನಡೆಯುವಂತಿಲ್ಲ. ದೇಶದ ಇಹಸುಖವನ್ನು ಆಯುಧಪಾಣಿಗಳಾದ ಸೈನಿಕರೇ ಕೈಯಲ್ಲಿರಿಸಿಕೊಂಡಿದ್ದಾರೆ. ಶಿಕ್ಷಣವು ಬೆಳೆದಂತೆ ಪಾರಂಪರಿಕತೆಯು ಕಡಿಮೆಯಾಗುತ್ತಿದೆ. ಚೀನದಲ್ಲಿಯ ಶಿಕ್ಷಣವು ಹಿಂದುಸ್ತಾನದ ಶಿಕ್ಷಣದ ಪ್ರಮಾಣವನ್ನೇನೂ ಮೀರಿಸಿಲ್ಲ. ಮೂಢ ನಂಬಿಕೆಗಳು, ದೆವ್ವಭೂತಗಳ ಭಕ್ತಿಪೂಜೆಗಳು ಸಹಸ್ರಾವಧಿ ವರ್ಷಗಳಿಂದ ಯಥಾಪ್ರಕಾರವಾಗಿ ಎಡೆಬಿಡದೆ ಸಾಗಿ ಬರುತ್ತಿವೆ. ಹೀಗಿರುವಾಗ ಪಾಶ್ಚಾತ್ಯ ಸಂಸ್ಕೃತಿಯ ಮೋಹದಿಂದ ಮೈಮರೆತ ಯಾರಾದರೂ ಚೀನಕ್ಕೆ ಬಂದಲ್ಲಿ ಅಲ್ಲಿಯವರನ್ನು ಮಹಾ ಕಾಡು ಜನಾಂಗವೆಂದು ಹೆಸರಿಡಲು ಹಿಂದೆಮುಂದೆ ನೋಡಲಾರರು.

ಅತ್ಯಾಧುನಿಕವಾದ ರೀತಿಯಲ್ಲಿ ಸಮ:ರಸ... ಸಿದ್ಧಪಡಿಸಿಕೊಳ್ಳುತ್ತಿದೆ. ಹಾಗೆ ಮಾಡು... ಆಹಾರದ ಕೊರತೆಯಾದರೂ ಅದು ಹಿಂ... ಜನತೆಯಲ್ಲಿ ದೇಶಾಭಿಮಾನ ಹೆಚ್ಚಿ ತನ್ನ ... ಣಕ್ಕೆ ಸಹಾಯವಾಗಬೇಕೆಂದು ಬೇಗ ಬೇಗ ... ಮಾಡುತ್ತಿದೆ; ಗೊಡ್ಡು ಆಚಾರಗಳನ್ನು ... ತ್ತಿದೆ. ಆದರೆ ಚೀನವು ಮೊನ್ನೆಮೊನ್ನೆಯ ... ಗಳಿಂದ ಕುದಿಯುತ್ತಿತ್ತು. ಸಾಮಾನ್ಯ ಜನ... ದೇಶಾಭಿಮಾನಗಳಿಗಿಂತ ಪುಣ್ಯ-ಧರ್ಮಗಳ ... ಇತ್ತೀಚೆ ಸನ್-ಯತ್-ಸೇನ ಮತ್ತು ಚಿ... ದಂಪತಿಗಳ ಶ್ರಮದಿಂದ ಜನತೆಯಲ್ಲಿ ಎ... ಗೃಹಕಲಹ ಕಡಿಮೆಯಾಗುತ್ತಿದೆ. ಆದ... ಭ್ರಮೆಯೂ, ಆಲಸ್ಯವೂ ಸಾಕಷ್ಟು ಕಿ... ವಾಗುತ್ತಿಲ್ಲ. ಅಲ್ಲದೆ ಜಪಾನಿಗಿಂತ ಚೀನ... ಹೆಚ್ಚು ಸುರಕ್ಷಿತವಿದೆ. ಜ್ವಾಲಾಮುಖಿ, ... ಅಂಜಿಕೆ ಜಪಾನಿನಷ್ಟು ಚೀನಕ್ಕಿಲ್ಲ. ಈ ಸ್ಥೈ... ರ್ಯವೂ ಚೀನೀಯರನ್ನು ಆಲಸಿಗಳನ್ನಾ...

ಇವೆಲ್ಲದರ ಪರಿಣಾಮ... ಕೋಟಿ ಜನಸಂಖ್ಯೆ... ದಂತಹ ವಿಶಾಲ ದೇಶ... ಸಾಂಸ್ಕೃತಿಕ ದೃಷ್ಟಿಯಿ... ವರಿಯದೆ, ಅಜ್ಞಾನ... ಕುರುಡು ನಂಬಿಗೆಗಳ ... ತಳಮಳಿಸುತ್ತಿದೆ. ಅ... ನಂಥ ಸಣ್ಣ ದೇಶಕ್ಕೆ ... ಕುವ ಧೈರ್ಯ.



ಚೀನಿಯರ ನೀರೆಳೆವ ಕಟ್ಟಿಗೆಯ ಕಪ್ಪಲಿ. ದುಡಿಯುವವರ ಮೊಗದ ನಗೆಯನ್ನು ನೋಡಿರಿ.

ಇಷ್ಟೆಲ್ಲ ದೋಷಗಳಿದ್ದ... ಹಳ್ಳಿಗರಲ್ಲಿ ಒಂದು ಸ್ವಾ... ಯಿದೆ. ವರುಷದಲ್ಲಿ ... ವರೆಗೆ ಉಪವಾಸ ಬೀಳುವ ಪ್ರಸಂಗ ... ತಪ್ಪನ್ನು ದೈವದ ಮೇಲೆ ಹೊರಿಸಿ ನಿಶ್ಚಿಂತ... ಯಿದೆ; ಅನಂತವಾದ ತಾಳ್ಮೆಯಿದೆ. ನಗು... ಮೊಗದ ಮೇಲೆ ಯಾವಾಗಲೂ ನಲಿದಾಡು... ಪಾಡಿಗಾಗಿ ಹೊಲದಲ್ಲಿ ದಿನವೆಲ್ಲ ದುಡಿ... ಅವರು ನಗುತ್ತಲೇ ಇರುವರು. ಸೈನ್ಯಕ್ಕೆ...

ಜಪಾನ ಚೀನಗಳಲ್ಲಿ ಇಷ್ಟು ವ್ಯತ್ಯಾಸವಾಗುವುದಕ್ಕೆ ಮುಖ್ಯ ಕಾರಣವೇನೆಂದರೆ ಜಪಾನು ಸಣ್ಣ ದೇಶವಾಗಿರುವುದೇ ಎಂದು ಹೇಳಬಹುದು. ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಗೆ ಸುಖವಾಗಿ ಇರಲು ಅನುಕೂಲವಾಗಬೇಕೆಂದು ಜಪಾನು ಸುತ್ತಲಿನವರನ್ನು ಕೆಣಕುತ್ತದೆ. ತನ್ನ ತಂಟೆಗಳಲ್ಲಿ ಸದಾಕಾಲವೂ ಯಶಸ್ಸನ್ನೇ ಪಡೆಯುವುದಕ್ಕಾಗಿ

ಗಂಡಾಂತರದ ಪ್ರತೀಕ್ಷೆಯಲ್ಲಿರುವ ಒಬ್ಬ ಸೈನಿಕನೂ ಕೂಡ ತನ್ನ ಬಿಡುವಿನ ಸಮಯದಲ್ಲಿ ಗಾನವಾದನಗಳಲ್ಲಿಯೇ ಮಿಕ್ಕ ಆಟಪಾಟಗಳಲ್ಲಿಯೇ ಮೈಮರೆತು ಬಿಡುವನು. ಚೀನೀಯರಿಗೆ ಪಕ್ಷಿಗಳನ್ನು ಸಾಕುವ ಹುಚ್ಚಿದೆ. ಮುದುಕರು ದಿನದ ಕೆಲಸ ಮುಗಿದ ಮೇಲೆ ಸಂಜೆಗೆ ನದಿಯ ದಂಡೆಗೆ ಆ ಸಾಕಿದ ಪಕ್ಷಿಗಳೊಡನೆ ಹೋಗಿ ಆಟವಾಡುವುದನ್ನು ನೋಡಿದರೆ ಅಷ್ಟು ವಯಸ್ಸಿನಲ್ಲಿಯೂ ಅವರ ಜೀವನದ ಮೇಲೆ ಪರಲೋಕದ ಪಾಪಪುಣ್ಯಗಳ ಚಿಂತೆಯ ಪರಿಣಾಮವಾದುದು ಕಾಣುವುದಿಲ್ಲ. ಅವರ ನೌಕಾವಿಹಾರಗಳು, ನೃತ್ಯನಾಟಕಗಳು, ಕೊನೆಗೆ ಅವರ ಸ್ಮಶಾನಯಾತ್ರೆಗಳಲ್ಲಿ ಕೂಡ ಒಂದು ಸಹಜ ಸೌಂದರ್ಯವಿದೆ; ಅವರದೇ ಆದ ಒಂದು ಕಲೆಯಿದೆ. 'ಪ್ರಗತಿ' 'ನವೀನತೆ'ಗಳು ಅವರ ಬಾಯಲ್ಲಿ ನೀರೂರಿಸುವುದಿಲ್ಲ. ಇಪ್ಪತ್ತನೆ ಶತಮಾನದಲ್ಲಿಯೂ ಅವರಲ್ಲಿ ಅತಿ ಪುರಾತನ ವಾತಾವರಣವಿದೆ.

ನಿರಕ್ಷರಿಯಾದರೂ ಚೀನೀ ಹಳ್ಳಿಗರು ಕೈಗಾರಿಕೆಗಳಲ್ಲಿ ಬಲು ನಿಪುಣರು. ನಮ್ಮಲ್ಲಿಯಂತೆ ಅವರು ಹೊಲಗಳಿಗೆ ನೀರು ಹಾಯಿಸಲು ಕಪ್ಪಲಿಗಳನ್ನು ಉಪಯೋಗಿಸುವುದಿಲ್ಲ. ಕಾಲಿನಿಂದ ಮೆಟ್ಟಿ ತಿರುಗಿಸಬಹುದಾದ ಒಂದು ಕಟ್ಟಿಗೆ ಗಾಲಿಯ ಸಹಾಯದಿಂದ ಬಾವಿ ನದಿಗಳ ನೀರನ್ನು ಅವರು ಸೆಳೆದು ಹಾಕುತ್ತಾರೆ. ಬೆಳಗಾದ ಕೂಡಲೆ ಒಕ್ಕಲಿಗನು ತನ್ನ ಮನೆಯವರೊಡನೆ ಹೋಗಿ ಆ ಕಾಲು-ಗಾಲಿಯ ಸಹಾಯದಿಂದ ಹೊಲಗಳಿಗೆ ನೀರು ಹಾಯಿಸುವನು. ಅದು ಕಷ್ಟದ ಕೆಲಸವಾದರೂ ಅವನ ಮೊಗದಿಂದ ನಗೆಯು ಎಂದೂ ಮಾಯವಾಗುವದಿಲ್ಲ.



ಕಾರ್ಮೋರಾಂಟ ಪಕ್ಷಿಯ ಸಹಾಯದಿಂದ ಮೀನು ಹಿಡಿಯುವದು.

ಹತ್ತಿ ಮೊದಲಾದ ಕಾಳುಗಳಿಂದ ಎಂಜೆ ತೆಗೆಯಲು ಚೀನೀ ಹಳ್ಳಿಗರು ಗಾಣಗಳ ಬದಲು ಅವಲಕ್ಕಿ ಕುಟ್ಟುವ ಒರಳಿನಂತಹ ಸ್ವನಿರ್ಮಿತವಾದ ಕಟ್ಟಿಗೆಯ ಯಂತ್ರವನ್ನು ಉಪಯೋಗಿಸುತ್ತಾರೆ. ಅದರಲ್ಲಿ ಹತ್ತಿಕಾಳು ಹಾಕಿದರೆ ಸಣ್ಣ ಹುಡುಗರು ಕೂಡ ಕುಟ್ಟಿ ಸುಲಭವಾಗಿ ಎಂಜೆ ಹೊರಡಿಸಬಲ್ಲರು.

ನಮ್ಮಲ್ಲಿ ಗಚ್ಚು (ಗಾರೆ) ತಯಾರಿಸುವುದಕ್ಕೆ ಉಪಯೋಗಿಸುವಂತಹ ಗಾಣವನ್ನು ಅಲ್ಲಿಯ ಮುದುಕಿಯರು ತೆನೆಯ ಕಾಳುಗಳನ್ನು ಬೇರ್ಪಡಿಸಲಿಕ್ಕೆ ಉಪಯೋಗಿಸುತ್ತಾರೆ. ಅದಕ್ಕೆ ಕೋಣವನ್ನು ಹೂಡುತ್ತಾರೆ. ಕಾಳು ಹಾಕುವ ವರ್ತುಲವಾದ ಕಾಲುವೆಯಲ್ಲಿ ಒಂದರ ಮುಂದೊಂದರಂತೆ ಎರಡು ಭಾರವಾದ ಕಲ್ಲಿನ ಗಾಲಿಗಳಿರುತ್ತವೆ. ಅವುಗಳ ಭಾರ ಹೆಚ್ಚಿಸುವುದಕ್ಕೆ ಆ ಗಾಲಿಗಳ ಮೇಲೆ ಮುದುಕಿಗೆ ಕೂಡಲಿಕ್ಕೆ ಅನುಕೂಲವಾಗುವಂತೆ ಮಣೆ ವ್ಯವಸ್ಥೆಯಿರುತ್ತದೆ. ಕೋಣನು ಎಳೆಯುತ್ತಲೆ ಕಲ್ಲಿನ ಗಾಲಿಗಳು ಕಾಳುಗಳ ಮೇಲೆ ಓಡಿ ತೆನೆಯ ಕಣಿಕೆಯಿಂದ ಕಾಳುಗಳು ಬೇರೆಯಾಗುತ್ತವೆ.

ನದಿ ಮತ್ತು ಸಮುದ್ರ ದಂಡೆಗಳಲ್ಲಿ ಮೀನು ಹಿಡಿಯುವುದೆಂದರೆ ಚೀನೀಯರಿಗೆ ಉದ್ಯೋಗವೂ ಆಗಿದೆ, ಆಟವೂ ಆಗಿದೆ. ಅದಕ್ಕಾಗಿ ಚೀನೀಯನ ವಿಚಾರಿ ತಲೆಯು ಅನೇಕ ಯುಕ್ತಿಗಳನ್ನು ಹುಡುಕಿದೆ. ಅವುಗಳಲ್ಲಿ ಗಾಳ, ಕೋಲು-ಬಲೆ, ನೂಲು-ಬಲೆಗಳು ಭಾರತೀಯರಿಗೆ ತಿಳಿಯದವೇನೂ ಅಲ್ಲ. ಆದರೆ ಕೆಲವು ಚೀನೀಯರು 'ನೀರು-ಬೆಕ್ಕು' ಎಂಬ ಪ್ರಾಣಿಯನ್ನು ಮೀನು ಹಿಡಿಯಲಿಕ್ಕೆ ಉಪಯೋಗಿಸುತ್ತಾರೆ. ಆ ಬೆಕ್ಕು ನೀರಲ್ಲಿ ಈಸುತ್ತ ಮೀನಗಳನ್ನು ಓಡಿಸುತ್ತ ಬಲೆಯಲ್ಲಿ ಸಿಕ್ಕಿಸುತ್ತದೆ. ಇನ್ನು ಕೆಲವರು 'ಕಾರ್ಮೊರಾಂಟ' ಎಂಬ ಪಕ್ಷಿಯನ್ನು ಉಪಯೋಗಿಸುತ್ತಾರೆ. ಅದಕ್ಕೆ ಮಾತು ಕಲಿಸುತ್ತಾರೆ. ಅದು ಮೀನಗಾರನ ಅಪ್ಪಣೆಯಂತೆ ಬೇಕಾದಷ್ಟು ದೂರ ಹೋಗಿ ಮೀನ ಹಿಡಿದು ತರುತ್ತದೆ. ಆದರೆ ಅದಕ್ಕೆ, ಹಿಡಿದ ಮೀನನ್ನು ನುಂಗಲಿಕ್ಕೆ ಬರದಂತೆ ಅದರ ಕತ್ತಿಗೆ ಬಿಗಿಯಾದ ಉಂಗುರವನ್ನು ಹಾಕಿರುತ್ತಾರೆ.

ಒಟ್ಟಿನಲ್ಲಿ ನೂಲುವ, ನೇಯುವ, ಬಡಿಗತನದ, ಚಿತ್ರ ಕಲೆಯ ಮುಂತಾದ ಎಲ್ಲ ಕೈಗಾರಿಕೆಗಳಲ್ಲಿಯೂ ಚೀನೀ ಯರದೊಂದು ವೈಶಿಷ್ಟ್ಯವಿದ್ದೇ ಇದೆ. ನದಿಗಳ ದಡದಲ್ಲಿ ಬೆಳೆದ ಮರಗಳನ್ನು ಕಡಿದು ನದಿಯಲ್ಲಿ ತೇಲಬಿಟ್ಟು ಆವು ಗಳ ಮೇಲೆ ಒಬ್ಬಿಬ್ಬರು ಕುಳಿತು, ತಮಗೆ ಬೇಕಾದ ಊರಿಗೆ ತೇಲಿಸಿಕೊಂಡು ಹೋಗುವ ಕಲೆಯು ಮೋಜಿನ ದಾದರೂ ಭಯಂಕರವಾಗಿದೆ. ಕೆಲವು ಸಲ ಅವರ ಕಟ್ಟಿ ಗೆಯ ತೊಲೆಗಳ ಕಟ್ಟು ಒಡೆದು ಪ್ರವಾಹಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗುವದೂ ಉಂಟು. ಆಗ ದಂಡೆ



ಬೀದಿಯಲ್ಲಿ ಅಫುತಿಂದು ಜೂಜಿನಲ್ಲಿ ತೊಡಗಿದ ಚೀನಿ ಕೂಲಿಕಾರರು

ಗಿದ್ದವರಲ್ಲಿ ಹೆಚ್ಚು ಜನರು ಆ ತೊಲೆಗಳನ್ನು ಅಪಹರಿಸು ವುದಕ್ಕೆ ಯತ್ನಿಸುತ್ತಾರೆಯೇ ಹೊರತು ತೇಲಿ ಹೋಗುತ್ತಿ ರುವವರನ್ನು ಬದುಕಿಸುವುದಕ್ಕಲ್ಲ. ತೇಲಿ ಹೋಗುತ್ತಿರುವ ತೊಲೆಗಳ ಮೇಲೆ ಅಪಹರಿಸಿದವರದೇ ಅಧಿಕಾರವೆಂದು ಅಲ್ಲಿಯ ನದೀತೀರದ ನಿಯಮವಿದೆ. ಆದರೆ ಕೊಚ್ಚಿ ಕೊಂಡು ಹೋಗುತ್ತಿರುವವರು ಅಳುವರೆಂದು ಭಾವಿಸಿರು ವಿರಾ? ಇಲ್ಲ. ಜೀವಿತವು ನಶ್ವರವೆಂದು ಅವರು ಈವರೆಗೆ ಬಾಯಿಂದ ಆಡುತ್ತಿರುವುದನ್ನು ಆಗ ಗಂಭೀರರಾಗಿ ಅನು ಭವಿಸಲು ಸಿದ್ಧರಾಗಿರುತ್ತಾರೆ. ಮಿಕ್ಕೆಲ್ಲ ದೃಶ್ಯಗಳಿಗಿಂತ ಚೀನೀಯರ ಈ ದೈವಾವಲಂಬನವು, ವಿದೇಶಿ ಯಾತ್ರಿಕರ ಮೇಲೆ ತೀವ್ರವಾದ ಪರಿಣಾಮವನ್ನುಂಟುಮಾಡುತ್ತದೆ.

ಚೀನೀಯರ ಇಂದಿನ ದುರ್ದೆಸೆಗೆ ಅವರ ... ಚಟವೇ ಮೂಲಕಾರಣವೆಂದು ಈಗ ಜಗತ್ತಿಗೆಲ್ಲ ... ಆ ಚಟವನ್ನು ಬಿಡಿಸಬೇಕೆಂದು ಚೀನದ ದೊಡ್ಡ ... ಮುಂದಾಳುಗಳೆಲ್ಲ ಬಹುವಿಧವಾಗಿ ಯತ್ನಿಸಿದರೂ ... ನಾಶವಾಗಲೊಲ್ಲದು. ಅಫು ತಿನ್ನುವವರಿಗೆ ಕೆಲವು ... ಗಳಲ್ಲಿ ಗಲ್ಲಿನ ಶಿಕ್ಷೆಯನ್ನೂ ಕೊಡಲಾಯಿತು. ... ಗುಟ್ಟಾಗಿ ಬೀದಿಬೀದಿಗಳಲ್ಲಿ, ಹಡಗುಗಳಲ್ಲಿ, ... ಮನೆಗಳಲ್ಲಿ ಅಫುವಿನ ಮಾರಾಟವೂ ಸೇವನವೂ ... ಯಥಾಪ್ರಕಾರ ನಡೆದೇ ಇದೆ. ಅಫುವಿನಷ್ಟೆ ಜೂಜು ... ಚೀನೀಯರನ್ನು ಗೋಳಿಡಿಸುತ್ತಿರುವ ... ಲ್ಲೊಂದು. ದೈವದಲ್ಲಿದ್ದರೆ. ತನಗೆ ಹೆಚ್ಚು ಲಾಭ... ದೆಂಬ ನಂಬಿಕೆಯೂ ಅವರನ್ನು ಜೂಜಾಟಕ್ಕೆ ... ತ್ತದೆ. ಸೋತ ಮೇಲೆ ಅವರ ಸಹಜ ... ಸೋಲಿನ ಅತೃಪ್ತಿಯನ್ನು ದೂರಗೊಳಿಸುತ್ತದೆ.

ಈವರೆಗೆ ತಮ್ಮೊಳಗೆ ಕಾದಾಡುತ್ತಿದ್ದ ಚೀ... ಇಂದು ಜಪಾನಿನ ಆಕ್ರಮಣದ ಫಲವಾಗಿ ... ಡ್ಡಾರೆ. ಅವರಲ್ಲಿ ದೇಶಾಭಿಮಾನ ಹೆಚ್ಚುತ್ತಿದೆ. ... ಹೆಚ್ಚು ಸ್ವಾತಂತ್ರ್ಯವನ್ನು ಪಡೆಯುತ್ತಿದ್ದಾರೆ. ... ಪರಿಣಾಮವಾಗಿ ಶೀಘ್ರದಲ್ಲಿಯೇ ಚೀನವು ತನ್ನ ... ಗಳನ್ನು ಕಳೆದುಕೊಂಡು, ಜಪಾನವನ್ನು ಹಿಂದಿಕ್ಕಿ ... ಅನುಕರಣೀಯ ಪ್ರಜಾಸತ್ತಾತ್ಮಕ ದೇಶ... ಸಿರೀಕ್ಷಿಸುವಾ.

ತಲೆಶೂಲಿ

★

ಬರೆದವರು: ಶ್ರೀ. ವಾ. ಸು. ಅಡಬಡ್ಡಿ

—ಗದುಗಿನ ಪಟ್ಟಣ. ವಕೀಲರ ಮನೆ. ವಕೀಲರು ಚಹ ತಕ್ಕೊಳ್ಳುತ್ತಿದ್ದಾರೆ. ಹೆಂಡತಿ ಬಾಗಿಲಲ್ಲಿ—

★

ಗಂಡ:—ಅಲ್ಲಾ! ನಾನs ನಾಕು ದುಡ್ಡು ತಗೋಂಡು ಬಂದು ಘಟ್ಟ್ಯಾಗಿ ಮನ್ಯಾಗ ಕಾಲ ಹಾಕಿದ್ವೆಂದ್ರ....

ಹೆಂಡತಿ:—(ಆಶ್ಚರ್ಯದಿಂದ) ಅಲ್ಲಾ! ಅಲ್ಲಾ ಯಾಕ.... ಆ ಮುಸಲರ ದೇವರ ಹೆಸರು. ದುಡ್ಡು ತರೂದಿಲ್ಲಾ ಅಂತ ದುಃಖಪಟ್ಟರ ಜ್ಯಾತಿನೂ ತಗದ ಒಗಿ ಬೇಕಂತಿರಾ?

ಗಂಡ:—(ಆವೇಶದಿಂದ) ಆ ಜ್ಯಾತಿ ಕೆಚ್ಚಿನಾಗ ಇಂದು ನಾವು ಸತ್ತುಹೋಗಲಿಕ್ಕೆ ಹತ್ತೀವಿ. ಅದs ಅಲ್ಲಾ! ಅಂತ ನಿಂತಿದ್ದೆನಂದ್ರ ಈ ಸುಟ್ಟ ತಾಲೂಕಿನಾಗ ಯಾಕ ಪಾಟೀ ಕಟ್ಟಿಕೊಂಡು ದುಡ್ಡು ಬರವಲ್ಲದೂ ಅಂತ ಪೇಚಾಡತಿದ್ದೆ. ಈ ಸರಕಾರ ಇರೋ ಮುಂದ ಜಿಲ್ಲಾದಾಗ ಇದ್ದು ಇಷ್ಟೊತ್ತಿನಾಗ ಜಜ್ಜ ಆಗತಿದ್ದೆ.

ಹೆಂಡತಿ:—ಜಜ್ಜ ಆಗಿದ್ದರಂತೂ ಮುಂದಿನ್ನ ಇನ್ನೂ ಎಷ್ಟು ಜಜ್ಜತಿದ್ದಿರೋ ಏನೋ?

ಗಂಡ:—ಮಾತಿಗೆ ಮಾತು ಬೆಳೆಸಬೇಡ. ಆಗಳೇ ಅಲ್ಲಾ- ಅಂದೆ. ಆದಕ್ಕ ಮುಸುಲರ 'ದೇವರು ಯಾಕ ಅಂದಿ. ಈಗ ಜಜ್ಜ ಅಂದರ—ಮುಂದಿನ್ನ ಎಷ್ಟು ಜಜ್ಜತಿದ್ದಿರೋ ಅಂತೀದಿ. ಯಾಕ ಕರ್ನಾಟಕದ ಕವಿಯಿತ್ರಿ ಆಗಬೇಕಂತಿ ಏನು! ಏನು, ಮತ್ತ ನಿಮ್ಮಪ್ಪ ಕರ್ನಾಟಕದೊಳಗಿನ ಇತ್ತಿತ್ತಲಾಗಿನ ಪ್ರಾಸದ ಕವಿಗಳ ಕವಿತಾ ಓದಿಸ್ಯಾನೋ!

ಹೆಂಡತಿ:—ಮತ್ತ ನಮಪ್ಪನ ಮಾತಿಗೆ ಬಂದಿರಾ! "ಆದೊಂದು ಮಾತು ಬಿಡ್ರೀ" ಅಂತ ಈಕೀ ಕಡೆಂದ ದಿನಾ ಹೇಳಿಸಿಕೊಂಡಾಗs ಈಕೀ ಮಾತು ಮುಗಿತೂ, ಅಂತ ತಿಳಕೊಂಡೀರಲ್ಲ—(ಕಣ್ಣೀರು ... ಅಲ್ಲಾ! ಮತ್ತ ನಮ್ಮಪ್ಪನ ಮಾತು ...

ಗಂಡ:—(ವ್ಯಂಗ್ಯವಾಗಿ) ಏನs ಮಂದಿಗೆ ಬುದ್ಧಿ ... ಆಕಿ—ಈಗ ನೀ ಯಾಕ, ಆ ಅಲ್ಲಾನ ... ತಗೊಂಡಿ!'' ನಿನಗೂ ಆ ಸರಕಾರಿ ನೌಕರಿ ... ಹಿಡದದೇನು?

ಹೆಂಡತಿ:—ಇರಲಿ ಬಿಡರಿ. ಮಾತು ಮರೆಯಿಸ... (ಸಂತಾಪದಿಂದ) ನಮ್ಮಪ್ಪನ ಮಾತು ... ತಗೀತಿರಿ ಹೇಳಿರಿ.

ಗಂಡ:—ಇದು ಚಲೋ ಮಾತು. ನೀ... ನಿಮ್ಮಪ್ಪ ಅಂಬೂದೊಂದು, ನಮ್ಮ ವಕೀಲಿ... ಆದು. ಕೋರ್ಟಿನಾಗ ನಿಂತಾಗ "... ಮಾಡಿ ಖರೇ ಹೇಳ್ತಿಯಾ?" ಅಂತ ಕೇಳಿದ ಕೂಡಲೇ ನಮ್ಮ ಪ್ರಶ್ನೆಗೆ ಸು... ಹೆಸರೇನು? ನಿಮ್ಮಪ್ಪನ ಹೆಸರೇನು! ... ಪಕ್ಷಗಾರ ನಿನ್ಹಾಂಗ "ನಮ್ಮಪ್ಪನ ಹೆಸ... ತಗೀತಿರಿ?" ಅಂತ ಕೂತರ ಏನು ಮಾ...

ಹೆಂಡತಿ:—ನಿಮ್ಮ ಆ ಸುಟ್ಟ ಕಛೇರಿ ಸುದ್ದೀ ... ಬ್ಯಾಡ್ರೀ....ಮನೀ ಸುದ್ದೀ ಕಛೇರಿ... ಬ್ಯಾಡ್ರೀ....ಅಂತ ಎಷ್ಟು ಸಾರೆ ನಿಮಗೆ...!

ಗಂಡ:—ಮನೀ ಸುದ್ದಿ ಕಛೇರಿಗೆ ಒಯ್ಯ... ಅಂತ ನಾನಂತೂ ದಿನಾ ದೇವರನ ನೆ... ತೀನಿ. ಆದರ ಮಲಗಿ ಏಳೋದರೊಳ... ಅಂತ ನಿಂತಿರತೀದೆಲ್ಲಾ ಜಗಳಕ್ಕ. ನಿದ್ದೀ... ನೆನಿಸಿದ ದೇವರು ನಿದ್ದೀ ಅಷ್ಟs ಕೊಡತಾನ... ಮುಗದು ಎದ್ದಬಳಿಕಿನ ಜಗಳಾ ಏನ... ಮಾಡವಲ್ಲ. (ನಿರಾಸೆಯಿಂದ) ಆವನ... (Power) ಅಷ್ಟಿದ್ದರ ಯಾರ ಏನು ಮಾ...

ಹೆಂಡತಿ:—ನನಗ ಇಂಗ್ಲೀಷ ಬರೂದಿಲ್ಲಾ... ಕುಂಡಂಗ ಮಾತಾಡಬ್ಯಾಡ್ರಿ. ಮಲಗೋ... ನೆನಸೋದು ಬಿಟ್ಟು, ಎದ್ದ ಕೂಡಲೇ ಆ... ಹೆಸರು ತಗೊಂಡರ ಆಗೂದಿಲ್ಲೇನು?

ಗಂಡ:—ಹೌದು! ಆದೂ ಖರೆ. (ಮತ್ತ ಸಂ... ಆದರ ಕನಸಿನಾಗ ನೀ ಜಗಳಾಡಲಿಕ್ಕೆ ... ದೆಂದ್ರ ಏನು ಮಾಡೋದು! ಇನ್ನ... ದ್ದಾಗ ದೇವರನ ನೆನಿಸಿ ಬಾಯಿ ಮುಚ್ಚ... ನರ ಇರತೀದಿ. ನಿದ್ದ್ಯಾಗ ದೇವರನ ನೆನ... ಹ್ಯಾಂಗ ಆಗಬೇಕು? ಹಾಂಗ ಹತ್ತಿದ ... ಮುಗದರೂ ಮುಗಿಲಿಕ್ಕಿಲ್ಲ.

ಹೆಂಡತಿ:—ಆ ಬಾಯಿ ಮುಚ್ಕೊಂವರು ದೇವರನ ನೆನಿಸಿ ಯಾಕ ಮುಚ್ಚತೀರಿ. ಸತ್ಯ ಮಾತಾಡಕಿ ನಾ—ಆ ದೇವರಿಗೆ ಹೆದರಾಕಿ ಅಲ್ಲಾ. ನೀವು ಬಾಯಿ ಮುಚ್ಚತೀರೀ ಅಂತ ಸುಮ್ನನಾಗತೀನಿ.

ಗಂಡ:—ಅಂದರ.... ನಮ್ಮ ಬಾಯಿ ಮುಚ್ಕೋದಂದರ ನಿನ್ನ ಜಗಳಕ್ಕ ಮಂಗಳಪದ ಇದ್ದಂಗ ಅನ್ನು.

ಹೆಂಡತಿ:—ಏನು ಮಂಗಳೋ.... ಏನು ಅಮಂಗಳೋ.... ನನಗಂತೂ ತಿಳೀಧಂಗ ಆಗೇದ.

ಗಂಡ:—ಈಗ್ಯಾಕ ತಿಳೀಧಂಗ ಆದೀತು ಅದು! ಹೀಂಗ ತಿಳೀಧಂಗ ಆದದ್ದು ನನ್ನ ಮದಿವೀಕಿಂತ ಮೊದಲ ಆಗಿರಬೇಕು. ಅಂತ ಹೇಳಿ ನಿಮ್ಮಪ್ಪ ಈ ಹುಚ್ಚೀನ್ನ ನನ್ನ ಕೊಳ್ಳಿಗೆ ಕಟ್ಟಿದಾ.

ಹೆಂಡತಿ:—(ಆಕ್ನಸದಿಂದ) ಹೌದು. ಹೀಂಗ ತಿಳೀಧಂಗ ಆದದ್ದು, ಸುಡಲಿ ಮದುವೀಕಿಂತ ಮೊದಲಾ ಆಗೇದ. ಇಲ್ಲಾಂದ್ರ ಹಾಂಗ ತಿಳೀತಿದ್ದರ ನಮ್ಮಪ್ಪ ಕೊಡತೀನಿ ಅಂದರೂ ನಿಮ್ಮಂಥಾವರ್ನ ಮದಿವಿ ಆಗತಿದ್ದಿಲ್ಲಾ.

ಗಂಡ:—(ಜಗಳಕ್ಕೆ ಬೆಚ್ಚಿ—ಪ್ರೇಮ ಹೂಡಿ) ನನಗ ಭೀಕಾರ ತಿಳೀಧಂಗ ಆದದ್ದು ನಿನ್ನ ನೋಡಿದ ದಿವಸ ಪ್ರಾರಂಭ ಆತು! (ದೈನ್ಯದಿಂದ ನೋಡತೊಡಗುವನು.)

ಹೆಂಡತಿ:—(ಗಂಡನು ಕೊಟ್ಟ ಮನ್ನಣೆಯಿಂದ ಗಂಟಲುಬ್ಬಿ) ಹುಚ್ಚಿ ಅಂದ್ರೀ.... ಅದಕ್ಕ ಹಾಂಗ ಆಕ್ನಸದ ಮಾತಾಡಿದೆ. ನನಗರ ಏನು? ಸ್ಟೇಶನ್ನ ಹನಮಂತ ದೇವರನ ಸ್ಮರಿಸಿ ಹೇಳ್ತೀನಿ. (ಕಣ್ಣೀರು ತಂದು) ನಿಮ್ಮನ್ನ ನೋಡಿದ ದಿವಸ ಹೀಂಗ ತಿಳೀಧಂಗ ಆದದ್ದು.

ಗಂಡ:—(ನಗುವಿನಿಂದ) ಅಂತೂ ಇಬ್ಬರಿಗೂ ತಿಳೀಧಂಗ ಆದದ್ದು ಒಬ್ಬರನ ಒಬ್ಬರು ನೋಡಿದ ದಿವಸ ಈಧಂಗ ಆತು. ಈ ತಿಳೀದಂಥಾ ಬ್ಯಾನಿಗೆ ತಿಳಿದ ಡಾಕ್ಟರು ಯಾರು ಇದ್ದಾರ ಹುಡುಕಬೇಕು?

ಹೆಂಡತಿ:—ಡಾಕ್ಟರ ಅಂದಕೂಡಲೇ ನೆನಪು ಆತು. ನಿನ್ನೆ ರಾತ್ರೀ ಎದ್ದ ತಲೆಸೂಲಿ ಶೋಡಿ ನಿನ್ನೆ ಬೆಳತನಕಾ ನಿದ್ದೀ ಮಾಡಿಸಿ ಕೊಡಲಿಲ್ಲ. ಹೀಂಗ ಕಣ್ಣಿಗೆ ಕಣ್ಣು ಹತ್ತದಿದ್ದರ ಯಾವುದಾದರ ಬ್ಯಾನಿ ಬಂದು ನೇರೀತು ಅಂದೆ.

ಗಂಡ:—(ವಿಚಾರ ಮಾಡಿ) ತಲೆಸೂಲಿಗೆ ಗೋರೆ ಡಾಕ್ಟರು ಚಲೋ ಇದ್ದಾರ. ಆದರ.... ಕಣ್ಣಿನ ಕೆಲಸ ಬಂದರ.... ಆ ಕಣ್ಣಿಗೆ ಕಣ್ಣು ಹತ್ತಸೋ ಮಾತಿನಾಗ.... ಆ.... ಡೋಳೆ ಡಾಕ್ಟರು ಪ್ರಸಿದ್ಧ ಇದ್ದಾರ.

ಹೆಂಡತಿ:—(ಗೊತ್ತಿದ್ದವಳಂತೆ) ಆ ಡೋಳೆ ಡಾಕ್ಟರ ಮಾತು ನನಗ ಹೇಳಬ್ಯಾಡ್ರಿ. ಮೊನ್ನೆ ಎಲ್ಲಾ ಕೇಳೀನಿ. ಬ್ಯಾನಿ (Patients)ಯವರು ಬರತಲ್ಲರು.... ಅಂತ, ಅವರಿಗೂ ನಾಕು ದಿವಸ ಆತಂತ ಕಣ್ಣಿಗೆ ಕಣ್ಣು ಹತ್ತವಲ್ಲದಂತ.... ನಮ್ಮ ಮುಸುರಿ ಆಕಿ ಭೀಮಿ, ಹೇಳಿದಳು. ಆ ಕಣ್ಣಿಗೆ ಕಣ್ಣು ಹತ್ತೋ ಅವುಷಧ ಗೊತ್ತಿದ್ದರ ತಾವs ತಗೋತಿದ್ದರಲ್ಲಾ!

ಗಂಡ:—ಏನೋ! ಇದೊಂದು ಕಾಲ ಬಂದ ಹೋಗೇದ. ಒಬ್ಬರು ತಲೆಸೂಲಿಗೆ ನೆಟ್ಟಗಿದ್ದರ.... ಮತ್ತೊಬ್ಬರು ಹೊಟ್ಟೆಕಡತಕ್ಕ.... ಇನ್ನೊಬ್ಬರು ಛಳಿಜ್ವರಕ್ಕ ನೆಟ್ಟಗಿರತಾರ.... ಈಗೀನ ಡಾಕ್ಟರು. ನಮ್ಮ ಹಿರೇರ ಕಾಲಕ್ಕ ಒಂದs ಬ್ಯಾನಿ ಬಂದರೂ, ಒಟ್ಟ ಮನುಷ್ಯನಿಗೆ ಇರೋ ಬ್ಯಾನೀ ಎಲ್ಲಾ ಲೆಕ್ಕಾಮಾಡಿ ಒಂದೊಂದು ಬ್ಯಾನಿಗೆ ಒಂದೊಂದು ಪುಡಿ ಕೂಡಿಸಿ ಕಷಾಯ ಕಾಸಿ ಕುಡಿಸತಿದ್ದರು. ಅದರೊಳಗಿನ ಒಂದು ಪುಡೀನರ ಇದ್ದ ಬ್ಯಾನಿಗೆ ಲಾಗೂ ಬೀಳತಿತ್ತು.

ಹೆಂಡತಿ:—(ನೆನಪಿಗೆ ತಂದವಳಂತೆ) "ಲಾಗೂ" ಅಂದ್ರೀ ನನಗ ಆ ಲಾಗೂ ಡಾಕ್ಟರ ನೆನಪು ಆತು. ಅವರ ಆವುಷಧ ಮಾತ್ರ ಬಹಳ ಲಾಗೂ ಅಂತ ನೋಡ್ರಿ. ಈ ಊರಾಗ ನಾಕು ತಿಂಗಳದಾಗ ಪ್ರಸಿದ್ಧ ಆಗ್ಯಾರ.

ಗಂಡ:—ಆ "ಕಾಳೇ" ಡಾಕ್ಟರ ಹೆಸರ ತಗದ್ರು.... ನಮ್ಮನ್ಯಾಗ ನಾವಿಬ್ಬರೂ ಕಾಳೇ (ಕರೆ) ಇಲ್ಲ.... ಆ ಮಾತು ತಗೀಬ್ಯಾಡ್ರೀ ಅಂತ ಅಂತೀದಿ. ಗೋರೆ ಮನಸ್ಸಿಗೆ ಬರಲಿಲ್ಲ. ಇವತ್ತ ಆ ಡೋಳೆಯವರಿಗೆ ಕಣ್ಣಿಗೆ ಕಣ್ಣು ಹತ್ತವಲ್ಲದು ಅಂತೀದಿ. ಅಂತೂ ಇವತ್ತಿನಿಂದ ನಮ್ಮ ಮನೀಗೆ ಲಾಗೂ ಡಾಕ್ಟರು ಲಾಗೂ ಆದರನ್ನು. ಆಗಲಿ. ಅಲ್ಲೇ ಅವುಷಧ ತರತೀನಿ. ಬಾಯೀಸಾಹೇಬರ ಮನಸ್ಸಿಗೆ ಬಂಧಂಗ ಕೆಲಸ ಆಗಬೇಕಲ್ಲ!

ಹೆಂಡತಿ:—(ವ್ಯಂಗ್ಯವಾಗಿ) ನಿಮ್ಮ ಮನಸ್ಸಿಗೇನ ಬಂದಿಲ್ಲೇನು? ನನಗೆಲ್ಲಾ ಗೊತ್ತದ.... ಆ ಲಾಗೂ ಡಾಕ್ಟರು ದಿನಾ ಒಂದ ಆಣೆ ತಗೋತಾರಂಬೂದು. ಈ ಮಾತ್ನ

ನಿಮಗೂ ಗೊತ್ತದ. ಇಲ್ಲಾಂದ್ರ ಆ ಗೋರೆಯವರ ಹೆಸರು ಎತ್ತ ಬೇಕಾಗಿತ್ತು.

ಗಂಡ:—ಇರಲಿ ಹೋಗ! ಈ ಮಾ'ನಾಗ ನಿನ್ನ ತಲೆ ಸೂಲಿ ಹೋದೀತು. ಔಷಧ ತಂದದ್ದು ವ್ಯರ್ಥ ಆದೀತು. ನಿನ್ನ ತಲೆಸೂಲಿ ಹೋಗೋದರೊಳಗ ಔಷಧ ತರತೀನಿ.... ಆತ್ಲೋ....(ಹೋಗಹತ್ತುವನು.)

ಹೆಂಡತಿ:—(ತಡೆದು) ಈಗೇನು ಮಾಡತೀರಿ ಬಿಡ್ರಿ! ಬಿಸಿಲು ಕಾಯಲಿಕ್ಕೆ ಹತ್ತೇದ. ಸಂಜೀಕಡಿಗೆ ತಲೀ ಹೊಡ್ಯೋದು ಕಡಿಮಿ ಆಗದಿದ್ದರ ಹೋಗಿ ಬಂದೀರೆಂತ. ಅಂದರ ನಿಮಗ ನಾಕು ಹೆಜ್ಜೆ ತಿರುಗ್ಯಾಡಿ ಬಂಧಃಗಾದರೂ ಆದೀತು.

ಗಂಡ:—(ಸಂತೋಷಭರಿತನಾಗಿ) ಹೌದು! ಕಾಳಜೀನರ ಇಷ್ಟು ತನಗ. ... ತಾಳ. ಬಿಸಿಲು ಆಗಿದ್ದರ ನಾ ... ಗೊಂಬಿ! ಕರಗಿ ಹೋಗತೀನ! ... ಆ ತಲೆಸೂಲಿ ನನಗಷ್ಟು ಕಾ... ತೀನಿ!

(ಎನ್ನುತ್ತ ಹತ್ತರ ಹೋಗಿ ... ಕೈ ಹಚ್ಚುವನು—ಅವಳು ... ಮೋರೆ ಕೆಳಗೆ ಮಾಡುವಳು—,
(ತೆರೆ ಬೀಳುವದು.)

—ಇಂತು ...

ಓದುಗರಲ್ಲಿ ಬಿನ್ನಹ:—ಈ ಚಿಕ್ಕ ಪ್ರಹಸನ... ರನ್ನೂ ಯಾವ ದುರುದ್ದೇಶದಿಂದಲೂ ತಕ್ಕೊಳ್ಳ...



ಸಾವಿನ ಸಮಸ್ಯೆ

ಲೇಖಕರು: ಶ್ರೀ. ರಂಗನಾಥ ನೆಗಳೂ...

ತಂದೆತಾಯಿಗಳು ಆರೋಗ್ಯದಿಂದ ಇದ್ದು ಆರೋಗ್ಯದ ಎಲ್ಲ ಕಟ್ಟಳೆಗಳನ್ನು ಅನುಸರಿಸಿ ಪಡೆದ ಮಗುವು ಕೆಲವು ವೇಳೆ ಹುಟ್ಟಿದ ಕೂಡಲೆ ಸಾಯುವುದೇಕೆ?

*

ನೆಪೋಲಿಯನ್ನನು ಅನೇಕ ಯುದ್ಧರಂಗಗಳಲ್ಲಿ ಮುಂದಿನ ಸಾಲಿನಲ್ಲಿ ನಿಂತು ಯುದ್ಧ ಮಾಡುತ್ತಿದ್ದರೂ ಒಂದೂ ಗುಂಡು ಅವನಿಗೆ ಬಡಿಯಲಿಲ್ಲ!

*

ಯುಜೇನ್ ಸ್ಯಾಂಡೋ ಜಗತ್ತಿನಲ್ಲಿ ಮಹಾ ಬಲಶಾಲಿಯಾದ ವ್ಯಾಯಾಮಪಟು. ಅವನು ತನ್ನ ಐವತ್ತೆರಡನೆಯ ವರ್ಷಕ್ಕೆ ತೀರಬೇಕೆ? ಆದರೆ ರೋಮರೋಮಕ್ಕೂ ರೋಗವಂಟಿ ಕೊಂಡವರೂ ಹಣ್ಣುಮುದುಕರಾಗುವ ವರೆಗೆ ಜೀವಿಸುವರೇಕೆ?

ಇದೇನು ನಗೆಬರೆಹವಲ್ಲ. ಇದರ ಹೆಸರು ಓದಿದ ಕೂಡಲೆ ತೆನ್ನಾಲಿರಾಮಕೃಷ್ಣನ 'ಸಾವಿನ ಸಮಸ್ಯೆ'ಯ ನೆನಪು ಕೆಲ ಜನರಿಗೆ ಆಗುವುದು. ಇದು ಹಾಗಿರದೆ ನಿಜವಾದ 'ಸಾವಿ'ನಲ್ಲಿ ಕಂಡುಬರುವ ಸಮಸ್ಯೆಯನ್ನು ಪರಿಶೀಲಿಸುವುದಾಗಿದೆ.

ಈ ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ವಸ್ತುವಿಗೂ ಅಂತವು—ಸಾವು ಇದೆ. ಮಾನವನೂ ಒಂದು ವಸ್ತು—ಸಜೀವ ವಸ್ತು. ಇವನಿಗೂ ಸಾವು ಇದೆ—"ಜಾತಸ್ಯ ಹಿ ಧ್ರುವೋ ಮೃತ್ಯುಃ" ಆದರೆ ಸಾವು ದೇಹಕ್ಕೆಂದೂ, ಅದು ಜೀವ—ಆತ್ಮಕ್ಕೆ ಸಂಬಂಧಿಸಿಲ್ಲವೆಂದೂ ಹೇಳುವುದುಂಟು. ಅಂದರೆ ನಮ್ಮ ಕಣ್ಣಿಗೆ ಕಾಣುವ ಮಾನವ ಶರೀರವು ಜಡ ಶರೀರವೆಂದೂ, ನಮ್ಮ ಕಣ್ಣಿಗೆ ಕಾಣದೇ ಇದ್ದ ಇನ್ನೊಂದು ಶರೀರವು ಸೂಕ್ಷ್ಮ ಶರೀರವೆಂದೂ ತಿಳಿಯಲಾಗಿದೆ. ಮೇಲೆ ಹೇಳಿದಂತೆ—ಅಂದರೆ—"ಹುಟ್ಟಿದ ವಸ್ತುವು ಸಾಯಲೇ ಬೇಕು." ಸಾವು ಈ ಜಡ ಶರೀರಕ್ಕೆ ಹತ್ತಿದುದು. ಯಾಕಂದರೆ ಹುಟ್ಟುವುದು ಈ ಜಡ ಶರೀರ. ಮತ್ತು ಸಾವಾದರೂ ಅದಕ್ಕೇನೆ. ಸೂಕ್ಷ್ಮ ಶರೀರವು ಅಂದರೆ—ಆತ್ಮವು ಹುಟ್ಟುವುದೂ ಇಲ್ಲ, ಅದಕ್ಕೆಯೆ ಅದು ಸಾಯುವುದೂ ಇಲ್ಲ. ಆತ್ಮವು ಅನಂತ ಅವಿಚ್ಛಿನ್ನವೆಂದು ಜ್ಞಾನಿಗಳು ಹೇಳುತ್ತಾರೆ. ಶ್ರೀಮದ್ಭಗವದ್ಗೀತೆಯಲ್ಲಿ 'ಆತ್ಮ'ದ ವರ್ಣನೆಯು ಹೀಗೆ ಅದೆ:—

> ಅಚ್ಛೇದ್ಯೋಽಯಂ ಅದಾಹ್ಯೋಽಯಂ ಅಕ್ಲೇದ್ಯೋಽ
> ಶೋಷ್ಯ ಏವ ಚ |
> ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾ...
> ಅವ್ಯಕ್ತೋಽಯಂ ಅಚಿಂತ್ಯೋಽಯಮವಿಕಾರ್ಯೋ...
> ...

ಇದನು ಓದಲಾಗಿ ಆತ್ಮವು ನಿತ್ಯವೆಂದೂ ಜಡ... ಅನಿತ್ಯವೆಂದೂ ಗೊತ್ತಾಗುತ್ತದೆ.

ಇನ್ನು ಈ ಸೂಕ್ಷ್ಮ ಮತ್ತು ಜಡ ಶರೀರಗಳ ... ವೇನೆಂಬುದನ್ನು ನೋಡಬೇಕು. ಈ ನಿತ್ಯವಾದ ... ಶರೀರಕ್ಕೆ ಈ ಜಡದೇಹವನ್ನು ಕಾಲಕಾಲಕ್ಕೆ ... ಜಗತ್ತಿನಲ್ಲಿ ಹುಟ್ಟಿಸಿದಂತೆ ಕಾಣುತ್ತದೆ. ... ಉದಾಹರಣೆಯನ್ನು ಹೇಳುವುದಾದಲ್ಲಿ ಮಾನ... ರವು ಹೇಗೆ ಹೊಲಸಾದ—ಹರಿದ—ಅಂಗಿಯನ್ನು ... ಹೊಸದೊಂದು ಅಂಗಿಯನ್ನು ಧರಿಸುವುದೊ, ... ಈ ಸೂಕ್ಷ್ಮ ಶರೀರವು ಒಮ್ಮೆ ಧರಿಸಿದ ಈ ಜಡದೇ... ಕೆಯು ಕೆಡಲು—ಕೊಳೆಯಲು ಅದನ್ನು ಬಿಟ... ಅಂದರೆ ಈ ಜಡದೇಹವು ಸಾಯುವುದು. ಅದ... ವನ ಅಂತವು. ಗೀತೆಯಲ್ಲಿ ಇದನ್ನೇ ಹೇಳಿದೆ:

> ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
> ನವಾನಿ ಗೃಹ್ಣಾತಿ ನರೋಽಪರಾಣಿ |
> ತಥಾ ಶರೀರಾಣಿ ವಿಹಾಯ ಜೀರ್ಣಾನಿ
> ಅನ್ಯಾನಿ ಸಂಯಾತಿ ನವಾನಿ ದೇಹೀ ||

ಇಷ್ಟು ಸಲ ಕಂಡುದರಲ್ಲಿ ಸಮಸ್ಯೆಯೇನಿದೆ! ... ಕೆಲವರು ಕೇಳಬಹುದು. ಯಾವುದು ತಿಳಿಯಲ... ವುದಿಲ್ಲವೋ, ತಿಳಿಯಲು ಅಸಾಧ್ಯವೋ ಅದುವೆ ... ಈ ಜಗತ್ತಿನಲ್ಲಿಯ ವ್ಯಾಪಾರವನ್ನು ನೋಡಿದರೆ ಮಾ...

ಹುಟ್ಟಿದ ಕ್ಷಣದಿಂದ, 'ಶತಾಯುಷ' ಎಂದು ಹೇಳುವುದು, ನೂರು ವರ್ಷಗಳ ವರೆಗೆ ಬದುಕಬೇಕೆಂಬುದು ರೂಢಿಯ ಲ್ಲಿಯ ಮಾತು. ಆದರೆ ಕಂಡುಬರುವುದೇನೆಂದರೆ ಹುಟ್ಟಿದ ಕೂಡಲೆ ಸಾಯುವವರು ಕೆಲರು, ಮಾರನೆಯ ದಿನ, ಮೂರ ನೆಯ ದಿನ,....ವರ್ಷದ ನಂತರ,೨-೩-೪....ವರ್ಷಗಳ ನಂತರ ಅಂದರೆ ಒಂದು ನಿಶ್ಚಿತ ವೇಳೆಯಿಲ್ಲದೆ ಸಾಯುವ ಜನರನ್ನು ಕಾಣುವುದುಂಟು. ಇದು ಏಕೆ? ಎಂಬುದು ಪ್ರಶ್ನೆ. ಗೊತ್ತಾಗ ದಿರುವುದೆ ಒಂದು ಸಮಸ್ಯೆ. ಆದರೂ ಕಂಡುಬರುವ ಮೃತ್ಯು ವಿನ ಕಾರಣಗಳನ್ನು ನೋಡಿದರೆ ಈ ಸಮಸ್ಯೆಯ ಬಹು ಭಾಗದ ಅರ್ಥವು ಕಂಡುಬರುವುದು.

ಈ ಕಾರಣಗಳನ್ನು ನೋಡುವುದು ಎರಡು ದೃಷ್ಟಿಕೋನ ದಿಂದ. ಒಂದು ವೈದ್ಯಕೀಯ ದೃಷ್ಟಿಯಿಂದ (medical point of view), ಇನ್ನೊಂದು ತತ್ವಜ್ಞಾನದ ದೃಷ್ಟಿಯಿಂದ (spiritual point of view).

ವೈದ್ಯಶಾಸ್ತ್ರದ ಆಧಾರವಾದ ದೇಹರಚನಾಶಾಸ್ತ್ರ (Anatomy) ವನ್ನು ಪರಿಶೀಲಿಸಿದರೆ ಅದರಲ್ಲಿ ಈ ದೇಹಕ್ಕೆ 'ಬಹು ಅಣುಕೋಶಿ' (multi-cellular body) ಎನ್ನು ತ್ತಾರೆ. ಅಂದರೆ ಈ ದೇಹವು ಸಾವಿರಾರು ಅಣುಕೋಶ ಗಳಿಂದ (cells) ಮಾಡಿದುದಾಗಿರುತ್ತದೆ. ಮಾನವನು ಜನ್ಮ ವೆತ್ತಿದ ಕೂಡಲೆ ಈ ಎಲ್ಲ ಅಣುಕೋಶಗಳು ಜೀವವನ್ನು ಧರಿಸುವುವು (alive). ಮತ್ತು ಅಂತ್ಯಕಾಲದವರೆಗೆ ಜೀವಿಸುವುವು. ಅಥವಾ ಎಲ್ಲಿಯ ವರೆಗೆ ಅಣುಕೋಶ ಗಳು ಜೀವಿಸಿರುವುವೊ ಅಲ್ಲಿಯ ವರೆಗೆ ಮಾನವನು ಜೀವ ದಿಂದಿರುವನು ಮತ್ತು ಎಂದು ಈ ಅಣುಕೋಶಗಳು ಜೀವಿ ಸಲಿಕ್ಕೆ ಅಸಾಧ್ಯವಾಗುವುದೊ ಅಂದೆಯೆ ಅವನ ಮೃತ್ಯು.

ಸಾಮಾನ್ಯವಾಗಿ ಆರೋಗ್ಯದಿಂದ ಹುಟ್ಟಿದ ಶಿಶುವು— ಅಂದರೆ ತಂದೆ ತಾಯಿಗಳು ಆರೋಗ್ಯದಿಂದ ಇದ್ದು, ಆರೋ ಗ್ಯದ ಎಲ್ಲ ಕಟ್ಟಳೆಗಳನ್ನು ಅನುಸರಿಸಿ ಪಡೆದ ಮಗುವು ಹುಟ್ಟುವಾಗ ಆರೋಗ್ಯದಿಂದಿರಬೇಕಲ್ಲವೆ ? ಹೀಗಿದ್ದು ಕೆಲವು ವೇಳೆ ಹುಟ್ಟಿದ ಕೂಡಲೆ ಶಿಶುವು ಸಾಯುವುದೇಕೆ? ಇನ್ನು ಬದುಕಿದ ಶಿಶುವು ಸಕಲ ರೀತಿಯಿಂದ ಆರೋಗ್ಯ ದಲ್ಲಿ ಬೆಳೆದು ಬಾಲ್ಯದಲ್ಲಿಯೇ ಸಾಯುವುದೇಕೆ ? ವೈದ್ಯ ಕೀಯ ಚಿಕಿತ್ಸೆಯನ್ನು ಆದರ ಪರಿಮಿತಿಗೆ ಮುಟ್ಟಿಸುವಷ್ಟು ಮಾಡಿದರೂ ಆಗ ಬದುಕುವುದಿಲ್ಲವೇಕೆ ? ಅಲ್ಲದೆ ಅನೇಕ ಜನರು ಕಣ್ಣಿಗೆ ಕಾಣಿಸುವಷ್ಟು ಎಣಿಸುವಷ್ಟು ರೋಗಗಳು ಕಂಡುಬಂದರೂ ಸಾಯುವುದಿಲ್ಲವೇಕೆ ? ನಮ್ಮ ದೇಶದಲ್ಲಿ ಬಡತನದ ದುರ್ದೆಶೆಯ ಮೂಲಕ ಲಕ್ಷಾಂತರ ಜನರು ಅರೆಹೊಟ್ಟೆ ಅರೆಬೆತ್ತಲೆ ಚಳಿ-ಗಾಳಿ-ಮಳೆಗಳ ಪರಿವೆ ಇಲ್ಲದೆ ತಿರುಗಿದರೂ ಸಾಯುವುದಿಲ್ಲವೇಕೆ ? ಮನೆಯಲ್ಲಿ ಸುಖ ರೂಪವಾಗಿದ್ದು, ಸುಭೋಜ್ಯಗಳನ್ನು ತಿಂದು ತೇಗಿ, ಮೆತ್ತನ್ನ ಹಾಸುಗೆಯ ಮೇಲೆ ಮಲಗಿ, ಜಗತ್ತಿನ ಯಾವುದೂ ಚಿಂತೆ ಇಲ್ಲದೆ, ತುಸು ನೆಗಡಿ ಕೆಮ್ಮು ಬಂದಕೂಡಲೆ ವೈದ್ಯರನ್ನು ಡಾಕ್ಟರರನ್ನು ಕರೆಸಿಕೊಂಡು ಸುಖಬಡುವ ಜನರು ಹಾಸುಗೆಯಲ್ಲಿ ಸಾಯುವರೆಷ್ಟು ಮಂದಿ ? ಈ ಹೊತ್ತಿನ ವೈದ್ಯಕೀಯ ವಿಜ್ಞಾನದ ಬೆಳವಣಿಗೆಯನ್ನು ನೋಡಿದರೆ ಯಾವದೇ ತರಹದ ಬೇನೆ ಬೇಸರಿಕೆಯನ್ನು ಹೋಗಲಾಡಿ ಸಲು ಸಾಧ್ಯವಿದೆಯೆಂದು ಹೇಳಬಹುದು. ಆದರೂ ಸಾವನ್ನು ತಡೆಯಲಿಕ್ಕೆ ಆಗುವುದೆ ? ನಮ್ಮ ದೇಶದಲ್ಲಿಯ ವೈದ್ಯ ಕೀಯ ಪಂಡಿತರಿಗಿಂತ ಪಾಶ್ಚಾತ್ಯರು ಹೆಚ್ಚು ಜಾಣರೆಂದು ನಂಬಿ ಇಲ್ಲಿಂದ ದೇಶಾಂತರ ಮಾಡಿದ ಜನರು ಪರದೇಶ ದಲ್ಲಿಯೆ ಸತ್ತವರೆಷ್ಟು ಮಂದಿ ! ಸಾವು ಎಂದರೆ ಅಣುಕೋಶ ಗಳು ನಿರ್ವಿಣ್ಣವಾಗಿ ಬದುಕಲಿಕ್ಕೆ ಅಸಾಧ್ಯವಾಗುವುದು. ಮೊದಲನೆಯ ಬೇನೆಯ ಅಂಶವು ಕಂಡಕೂಡಲೆ ಮಾಡಿದ ವೈದ್ಯಕೀಯ ಚಿಕಿತ್ಸೆಯನ್ನು ಧಿಕ್ಕರಿಸಿ ಕ್ಷಣಕ್ಷಣಕ್ಕೆ ಬೇನೆಯ ರೂಪವು ಬಲಗೊಂಡು ಸಾಯುವರೆಷ್ಟು ಮಂದಿ ! ಇದನ್ನೆಲ್ಲನೋಡಿದರೆ ಸಾವು ಸಮಸ್ಯೆಯಾಗಿ ಕಾಣುವುದಿಲ್ಲವೆ? ಅಂದರೆ ನಿರ್ವಿಣ್ಣವಾಗುವ ಅಣುಕೋಶಗಳನ್ನು ಬಲಪಡಿ ಸಲು ವೈದ್ಯಕೀಯ ಶಾಸ್ತ್ರದ ಸಹಾಯವು ಸಿಕ್ಕುತ್ತಿದ್ದರೂ ಆದರ ಚಿಕಿತ್ಸೆ ಮಾಡಿದರೂ ಸಾವು ಬರುವುದೆಂದ ಮೇಲೆ, ಸಾವಿನ ಕಟ್ಟಳೆಯು ಬೇರೆ ಯಾವುದಾದರೊಂದು ಇರ ಬೇಕೆಂದು ಅನಿಸುತ್ತದೆ. ಈಗ ರೂಢಿಯಲ್ಲಿರುವ ಮಾತು ನಿದರ್ಶನಕ್ಕೆ ಬರುವುದು: "ವೈದ್ಯರೇನು ಆಯುಷ್ಯವನ್ನು ಹಾಕಬಲ್ಲರೇನು ? ಬೇನೆಗೆ ಔಷದ ಮಾತ್ರ ಕೊಡಬಲ್ಲರು." ಅಂದ ಮೇಲೆ ಈ 'ಆಯುಷ್ಯ' 'ಆಯುಷ್ಯ' ಎಂದು ಹೇಳ ಲ್ಪಡುವ ಜೀವನದ ಪರಿಮಾಣವು ಏನು ? ಇದು ಯಾತ ರಿಂದ ಬಂಧಿಸಲ್ಪಟ್ಟಿದೆ ? ಇದಕ್ಕೆ ಕಟ್ಟಳೆ ಕಾನೂನು ಏನಾ ದರೂ ಇದೆಯೆ ?

"ಕಟ್ಟಿ ತುಂಬಿದ ಮೇಲೆ ಕ್ಷಣಮಾತ್ರವಿರಲಿಲ್ಲ" ಎಂಬ ಪುರಂದರದಾಸರ ಉಕ್ತಿಯು ಉತ್ತರವನ್ನು ಸೂಚಿಸುವುದು. ಅಂದರೆ ಮಾನವನು ಈ ಜಗತ್ತಿನಲ್ಲಿ ಒಂದು (Mission) ಕಾರ್ಯಕ್ಕಾಗಿ ಜನ್ಮ ತಾಳು ವನು. ಮತ್ತು ಆದು ಮುಗಿದ ಕ್ಷಣವೆ ಅವನು ಈ ಜಗತ್ತಿನಿಂದ ಮುಕ್ತನಾಗುವನು—ಸಾಯುವನು. ಇದಕ್ಕೆ (Mission Theory of Life) ಎಂದೆನ್ನುತ್ತಾರೆ. ನೆಪೋಲಿ

ಯನ್‌ನು ಅನೇಕ ಯುದ್ಧರಂಗಗಳಲ್ಲಿ ಮುಂದಿನ ಸಾಲಿನಲ್ಲಿ ನಿಂತು ಯುದ್ಧ ಮಾಡಿದಾಗ್ಯೂ ಒಂದು ಗುಂಡಾದರೂ ಅವನಿಗೆ ಬಡಿಯಲಿಲ್ಲ. ಅವನು ಹತ್ತಿದ ಕುದುರೆಗಳೆಷ್ಟೋ ಮಡಿದುವು. ಅವನಿಗೆ ಏನೂ ಆಗುತ್ತಿರಲಿಲ್ಲ. ಅವನು ಆಗಾಗ್ಗೆ ಅನ್ನುತ್ತಿದ್ದ: "No bullet will ever strike me so long as I am destined to live." ಈ ತರಹದ ಜೀವಿಸಬೇಕೆಂಬ ಹಟದಿಂದ ವಾಟರ್ಲೂ ಕಾಳಗದಲ್ಲಿ ಸೇನಾಪತಿ ನೆ(Nay) ಬರುವುದು ೧೦ ನಿಮಿಷ ತಡವಾದ ಕೂಡಲೆ ಅವನಿಗೆ ಮುಂದೆ ಯುದ್ಧ ಮಾಡುವುದು ತರವಲ್ಲವೆಂದೆಣಿಸಿ ಶಸ್ತ್ರಸನ್ಯಾಸವನ್ನೇ ಮಾಡಿದನು. ತಾನು ಜಗತ್ತಿಗೆ ಬಂದು ಕಾರ್ಯವು ಆಯಿತೆಂದು ಅನಿಸಿತು.

ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದುಂಟು: "Karma Theory of Life." ಮಾನವನು ತಾನು ಮಾಡಿದ ಪೂರ್ವಜನ್ಮದ ಕರ್ಮಗಳನ್ನು—ಕರ್ಮದ ಪ್ರತಿಫಲಗಳನ್ನು ಅನುಭೋಗಿಸಲಿಕ್ಕೂ-ಉಪಭೋಗಿಸಲಿಕ್ಕೂ ಜನ್ಮ ತಾಳುವನು. ಅವನು ಅವನ್ನು ಉಪಭೋಗಿಸುವ ಮುಂಚೆ ಯಾವದೆ ಕಾರಣದಿಂದ ಮೃತ್ಯು ಬರಲಾರದು. ಮತ್ತು ಅದು ತೀರಿದ ಕ್ಷಣವೆ ಅವನಿಗೆ ಈ ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲದಾಗುವುದು.

ಇನ್ನೂ ಒಂದು ಬಗೆಯಲ್ಲಿ ಇದರ ಅರ್ಥವನ್ನು ತಿಳಿಸುವರು. ಋಣ ತೀರಿಸಲಿಕ್ಕೆಂದು; ಇದರ ಬಗ್ಗೆ ಚಿಕ್ಕ ಕತೆಯೊಂದಿದೆ.

ಒಂದು ಊರಲ್ಲಿ ಒಬ್ಬ ಗುರುವೂ, ಅವನ ಶಿಷ್ಯನೂ ಇರುತ್ತಿದ್ದರು. ಗುರುವು ಶಿಷ್ಯನಿಗೆ 'ನಾನು ಹೇಳಿದಂತೆ ಮಾಡುತ್ತ ಹೋಗು' ಎಂದನು. ಅದಕ್ಕೆ ಶಿಷ್ಯನು ಒಪ್ಪಿದನು. ಶಿಷ್ಯನಿಗೆ ಒಂದು ಮಗುವು ಹುಟ್ಟಿತು. ಆಗ ಗುರುವು " ಅದನ್ನು ತೆಗೆದುಕೊಂಡು ಮಸಣಕ್ಕೆ ಹೋಗು; ೧ ರೂಪಾಯಿ ಅದರ ಹಣೆಯ ಮೇಲಿಡು" ಎಂದನು. ಹಾಗೆಯೆ ಮಾಡಲಾಗಿ ರೂಪಾಯಿ ಇಟ್ಟಕೂಡಲೆ ಆ ಮಗುವು ಮೃತವಾಯಿತು. ಕೆಲ ಕಾಲ ಗತಿಸಲು ಮತ್ತೊಂದು ಮಗುವು ಹುಟ್ಟಿತು. ಆಗ ಮತ್ತೆ ಗುರುವು " ೫ ರೂ. ಇಡು " ಎಂದನು. ಆಗಲೂ ಅದು ಗತಿಸಿ ಹೋಯಿತು. ಹೀಗೆ ಮೂರು ನಾಲ್ಕು ಮಕ್ಕಳು ಗತಿಸಿದ ಮೇಲೆ ಒಮ್ಮೆ ಶಿಷ್ಯನು ಧೈರ್ಯವನ್ನು ತಂದುಕೊಂಡು ಅದರ ಕಾರಣವೇನೆಂದು ಕೇಳಿದನು. ಆಗ ಗುರುವು: ಮಕ್ಕಳು ತಮ್ಮ ಋಣ ತೀರಿಸಿಕೊಳ್ಳಲಿಕ್ಕೆ ಹುಟ್ಟಿರುತ್ತವೆ. ಮೊದಲನೆಯ ಮಗುವು ನಿನ್ನಿಂದ ೧ ರೂ. ಪಡೆಯಬೇಕಿತ್ತು. ಅದನ್ನು ಕೊಟ್ಟೆ, ಅದು ಹೋಯಿತು. ಎ[illegible] ಆರನೆಯ ಮಗು ಹುಟ್ಟಿದ ಕೂಡಲೆ ಗುರುವು: ಅ[illegible] ಜೋಪಾನ ಮಾಡು ಎಂದನು. ಅದು ಅವನಿ[illegible] ಸಾವಿರ ರೂಪಾಯಿ ಸಲ್ಲಿಸಲಿಕ್ಕೆ ಹುಟ್ಟಿದೆ. ಇದಕ್ಕಾ[illegible] ನಮ್ಮ ಪೂರ್ವಜರು 'ಒಬ್ಬರ ಋಣದಲ್ಲಿರಬಾರದು' ಎ[illegible] ಹೇಳುತ್ತಿದ್ದರೋ ಏನೋ ?

ಇಷ್ಟೆಲ್ಲ ನೋಡಲಾಗಿ ಮಾನವನು, ಕರ್ಮ[illegible]ಯಾಗಲೀ, ಒಂದು ಕಾರ್ಯಕ್ಕಾಗಿಯಾಗಲೀ, [illegible] ವಿನೋಚನೆಗಾಗಿಯಾಗಲೀ, ಕ್ಲೃಪ್ತಕಾಲದವರೆಗೆ ಬ[illegible]ವನೆಂದ ಹಾಗಾಯಿತು. ಈ ಕ್ಲೃಪ್ತ ಕಾಲಕ್ಕೇ 'ಆಯು[illegible]'ವೆಂದು ಅನ್ನುತ್ತಿರಬೇಕು. ಸಾಂಡೊ (Eugene San[illegible])ನಂತಹ ಬಲಶಾಲಿಯೂ ಕೂಡ ತನ್ನ ೫೨ನೆಯ ವ[illegible] ಸತ್ತನೆಂದ ಬಳಿಕ ಅವನು ಜನಿಸಿ ಬಂದ ಕಾರ್ಯವು [illegible] ಮುಗಿಯಿತು ಎಂದ ಹಾಗಾಯಿತು. ಅಥವಾ [illegible] ಆಯುಷ್ಯ ಅಷ್ಟೇ—೫೨—ಇತ್ತು ಎಂದರ್ಥ.

ಅಂದರೆ ಸಾವು ಮಾನವನ ಧ್ಯೇಯಸಾಧನೆ[illegible] ಕೂಡಲೆ ಬರುವುದೆಂದ ಹಾಗಾಯಿತು. ಪ್ರತಿಯೊ[illegible] ಒಂದೊಂದು ಧ್ಯೇಯವಿದ್ದೇ ಇರುವುದು. ಇದನ್ನ[illegible] ಜ್ಞಾನಿಗಳು. ಅದಕ್ಕೆಂದೇ ಉಪನಿಷತ್ತಿನಲ್ಲಿ 'ತನ್ನ[illegible]ರಿಯಬೇಕು' ಎಂದಿದೆ. ತಾನು ಈ ಜಗತ್ತಿನಲ್ಲಿ [illegible] ಕಾರ್ಯವೇನು ಎಂಬುದನ್ನರಿತು ಅದರ ಧ್ಯೇಯ[illegible]ಗಾಗಿ ಹೆಣಗಾಡಿದರೆ ಮಾನವನ ಕರ್ತವ್ಯ[illegible] ಧ್ಯೇಯವು ಸಿಕ್ಕವರಿಗೆ ಅಂದರೆ ಆತ್ಮಜ್ಞಾನ[illegible] ತಮ್ಮ ಸಾವು ತಿಳಿಯುವುದು ಮತ್ತು ತಮ್ಮ ಕಾರ್ಯ[illegible] ಮುಗಿಸಿಕೊಂಡು ಈ ಜಗತ್ತಿನಲ್ಲಿ ಇಲ್ಲದಂತಾ[illegible] ರಾಮಕೃಷ್ಣ ಪರಮಹಂಸರಿಗೆ ಗಂಟಲು ಬೇನೆ[illegible] ಅವರ ಶಿಷ್ಯನೊಬ್ಬನು ಬಂದು ವಿನಯದಿಂದ:

"ಸ್ವಾಮೀ, ನನ್ನ ಜೀವಕ್ಕಿಂತ ತಮ್ಮ ಜೀವವು [illegible] ಈ ಜಗತ್ತಿನಲ್ಲಿ ಆವಶ್ಯಕ; ತಾವು ಇನ್ನೂ ಕೆಲದಿನ [illegible]ದ್ದರೆ ಇನ್ನೂ ಜನರಿಗೆ ಉಪದೇಶ ಮಾಡಿ ಹಾದಿಗೆ [illegible]ವಿರಿ. ಆದು ಕಾರಣ ತಮ್ಮ ವ್ಯಾಧಿಯನ್ನು ನನ್ನ [illegible] ತೆಗೆದುಕೊಳ್ಳಲೆ ? "

" ವತ್ಸಾ ! ನನ್ನ ಕಾರ್ಯವು ಮುಗಿದಿದೆ. [illegible] ನಾನು ಮಾಡಬೇಕಾದ ಕಾರ್ಯವು ಏನೂ ಉಳಿದಿಲ್ಲ. [illegible] ಕಲ್ಯಾಣ ಮಾಡುವವನು ನನ್ನ ಶಿಷ್ಯ ವಿವೇಕಾ[illegible] ನಿದ್ದಾನೆ " ಎಂದರು. ಆದಕ್ಕೇ ಆ ಆತ್ಮಜ್ಞಾನ[illegible] ದುಡಿಯಬೇಕು. ನಮ್ಮ ಕಾರ್ಯದ ಕಲ್ಪನೆಯಾಗು[illegible]

ಆರೋಗ್ಯಬಿಂದು

ಜ್ವರದಲ್ಲಿ ಮಜ್ಜಿಗೆ

ಜ್ವರ ಬಂದಾಗ ಮಜ್ಜಿಗೆ ಕುಡಿಯುವದು ಅಪಾಯಕರ ವೆಂಬುದು ರೂಢಕಲ್ಪನೆಯಾಗಿದೆ. ಆದರೆ ಕೆಮ್ಮು, ಕಫ ಗಳಿಲ್ಲದಿದ್ದರೆ ಜ್ವರದಲ್ಲಿ ಮಜ್ಜಿಗೆಯಂತಹ ರುಚಿಕರ ಪೇಯ ಬೇರೊಂದಿಲ್ಲ. ಮನೆಯಲ್ಲಿಯೆ ಹಾಲಿಗೆ ಹೆಪ್ಪು ಹಾಕಿ ತಯಾರಿಸಿದ ಮೊಸರನ್ನು ಚೆನ್ನಾಗಿ ಕಡೆದು ಬೆಣ್ಣೆಯೆಲ್ಲ ವನ್ನೂ ತೆಗೆದ ತಾಜಾ ಮಜ್ಜಿಗೆ ಒಳ್ಳೇದು. ಕೊಂಚ ಮೊಸರಿಗೆ ನೀರು ಹಾಕಿ ಕಡೆದು ತಯಾರಿಸಿದ, ಬೆಂಣೆ ತೆಗೆಯದಿರುವ ಮಜ್ಜಿಗೆ ಒಳ್ಳೆಯದಲ್ಲ. ಜ್ವರದಲ್ಲಿ ಬಾಯಿಗೆ ರುಚಿ ತಪ್ಪಿ ರುತ್ತದೆ. ಆಗ ಮೆತ್ತಗಿನ ಅನ್ನದ ಗಂಜಿ ಮತ್ತು ಮಜ್ಜಿಗೆಯು ಒಳ್ಳೆ ರುಚಿಕರವಾದ ಆಹಾರವಾಗುವದು. ರುಚಿಯಾಗಿರುವುದರಿಂದ ಜ್ವರರೋಗಿಗೆ ಅನ್ನವನ್ನು ಸುರಿ ಸಿ ನುಂಗುವ ಪ್ರಸಂಗ ಬರುವುದಿಲ್ಲ. ಆದರೆ ಕೆಮ್ಮು ಕಫಗಳಿರುವಾಗ ಮಾತ್ರ ಮಜ್ಜಿಗೆಯನ್ನು ಕೊಡಬಾರದು.

* * *

ವಾಂತಿಯಲ್ಲಿ ಆಹಾರ

ವಾಂತಿಯು ಬೇರೆಬೇರೆ ಕಾರಣಗಳಿಂದ ಆಗುತ್ತದೆ. ಬಹುತರವಾಗಿ ಪಿತ್ತವಿಕಾರ ಮತ್ತು ಜಂತುವಿಕಾರಗಳಿಂದ ವಾಂತಿಯಾಗುತ್ತಿರುತ್ತದೆ. ಪಿತ್ತವು ಜಠರಕ್ಕೆ ಬರುವದ ರಿಂದಾಗುವ ವಾಂತಿಯಲ್ಲಿ ಬಾಯಿ ಕಹಿಯಾಗುವದು. ಸಾಮಾನ್ಯವಾಗಿ ಪಿತ್ತದ ವಾಂತಿಯು ದಿನದಲ್ಲಿ ಅನೇಕ ಸಲ ಆಗುವುದಲ್ಲದೆ ಔಷಧೋಪಚಾರದಿಂದ ಒಮ್ಮೆಲೆ ನಿಲ್ಲು ವುದಿಲ್ಲ; ಔಷಧವೂ, ನೀರೂ ಕೂಡ ವಾಂತಿಯಾಗಿ ಹೋಗಿ ಬಿಡುತ್ತದೆ. ಹೆಚ್ಚು ವಾಂತಿಯಾಗಿ ಶಕ್ತಿನಾಶವಾದೀತೆಂದು ಜನರು ಅನೇಕ ವಿಧದ ಆಹಾರಗಳನ್ನು ಕೊಡುತ್ತಾರೆ. ಆದರೆ ಅವೆಲ್ಲವೂ ವಾಂತಿಯನ್ನು ಹೆಚ್ಚಿಸಲಿಕ್ಕೇ ಕಾರಣ ವಾಗುತ್ತವೆ. ಆದುದರಿಂದ ಓಕರಿಕೆಯು ಪೂರ್ಣವಾಗಿ ನಿಂತು ೮-೧೦ ಗಂಟೆಗಳ ವರೆಗೆ ಯಾವ ಆಹಾರವನ್ನೂ ಕೊಡಕೂಡದು. ಬಾಯಾರಿಕೆಯಾದರೆ ನಿಂಬೆರಸದಲ್ಲಿ ಸ್ವಲ್ಪ ಉಪ್ಪು ಬೆರೆಸಿ ಒಂದೊಂದೆ ಚಮಚೆಯಂತೆ ಚೀಪಲು ಕೊಡಬೇಕು.

* * *

ಬೆಂಣೆಯ ಹೆಚ್ಚುಗಾರಿಕೆ

ಬೆಂಣೆಯು ಎಂಣೆ-ತುಪ್ಪಗಳಂತೆ ದೇಹಕ್ಕೆ ಮೇದಸ್ಸನ್ನು ಒದಗಿಸಿ ಉಷ್ಣತೆಯನ್ನು ಹುಟ್ಟಿಸುತ್ತದೆ. ಆದರೆ ಬೆಂಣೆ ಯಲ್ಲಿ ಒಂದು ಹೆಚ್ಚಿನ ಗುಣವಿದೆ. ಅದೆಂದರೆ 'ಅ' ಆಹಾರಸತ್ವ. ತುಪ್ಪದಲ್ಲಿ ಅದು ಬಹಳ ಕಡಿಮೆಯಿರುತ್ತದೆ. 'ಅ' ಆಹಾರ ಸತ್ವವು ಶ್ವಾಸಕೋಶ ಮತ್ತು ಕಂಣುಗಳ ರೋಗಗಳನ್ನು ನಿರೋಧಿಸುತ್ತದೆ. ಆದುದರಿಂದ ನ್ಯೂಮೋನಿಯಾ, ಉಬ್ಬಸ, ಇನ್‌ಫ್ಲುಎಂಝಾ, ಕ್ಷಯರೋಗಗಳು ಹೆಚ್ಚಾಗಿರುವ ಕುಟುಂಬದವರು ಮತ್ತು ಊರವರು ಮಕ್ಕಳಿಗೆ ಬೆಂಣೆಯ ಅಭ್ಯಾಸವನ್ನು ಮಾಡಿಸಬೇಕು. ಸಂಣ ಪುಟ್ಟ ಕಾರಣಗಳಿಂದಲೇ ಮೇಲಿಂದ ಮೇಲೆ ನೆಗಡಿಯಾಗಿ ತೊಂದರೆಪಡುತ್ತಿರುವವರೂ ಬೆಂಣೆಯನ್ನು ಆಹಾರದಲ್ಲಿ ಸೇರಿಸಿಕೊಳ್ಳುವದು ಒಳಿತು.

* * *

ವ್ಯಾಯಾಮದಿಂದ ಬಾಯಾರಿಕೆ

ವ್ಯಾಯಾಮ ಮಾಡಿದ ಕೂಡಲೆ ಬಾಯಾರಿಕೆಯೆನಿಸು ವದು ಎಲ್ಲರಿಗೂ ಅನುಭವಕ್ಕೆ ಬಂದ ವಿಷಯ. ಆದರೆ ಆಗ ನೀರನ್ನು ಕುಡಿಯಬಾರದೆಂದು ಅನೇಕರ ಗ್ರಹಿಕೆ. ವ್ಯಾಯಾಮದಿಂದ ದೇಹದಲ್ಲಿ ಬಿಸಿ ಹೆಚ್ಚುತ್ತದೆ. ಆದರಿಂದ ರಕ್ತದಲ್ಲಿಯ ಜಲಾಂಶವು ಕಡಿಮೆಯಾಗಿ ಬಾಯಾರಿಕೆಯಾಗುತ್ತದೆ. ಆಗ ರಕ್ತಕ್ಕೆ ನೀರು ಪೂರೈ ಸುವದು ಕೆಡುಕೇನೂ ಅಲ್ಲ. ಆದರೆ ಒಂದೇ ಸಲಕ್ಕೆ ಗಟ ಗಟ ಕುಡಿದರೆ ಬಿಸಿಯಾದ ದೇಹಕ್ಕೆ ಒಮ್ಮೆಲೆ ತಂಪು ತಗಲಿ ಅಪಾಯವಾಗುವ ಸಂಭವವಿದೆ. ಆದ್ದರಿಂದ ತಂಣೀ ರನ್ನೆ ಕುಡಿದರೂ ಬಿಸಿ ಚಹವನ್ನು ಕುಡಿದಂತೆ ಚೀಪಿ ಚೀಪಿ ತುಸುತುಸು ಕುಡಿಯಬೇಕು. ಆದರಿಂದ ನೀರು ಹೊಟ್ಟೆಯನ್ನು ಮುಟ್ಟುವುದರೊಳಗಾಗಿ ಬಿಸಿಯಾಗಿ ಬಿಡು ತ್ತದೆ.

* * *

ದಾಂಪತ್ಯಪ್ರೇಮ

ಲೇಖಕರು:
ಶ್ರೀ. ಕಡೂರು ಶ್ರೀಪಾದ, ಮಿತ್ರಮೇಳ, ಬೆಂಗಳೂರು.

ವಿವಾಹಕ್ಕೆ ಮುಂಚೆ ಗಂಡು ಎಲ್ಲಿಯೊ, ಹೆಣ್ಣು ಎಲ್ಲಿಯೊ ಹುಟ್ಟಿ ಬೆಳೆದು ಜೀವಿಸುತ್ತಿರುವುವು. ಒಬ್ಬರನ್ನೊಬ್ಬರು ಮೊದಲ ಸಲ ನೋಡಿದೊಡನೆ ಇಬ್ಬರ ಮನಗಳೂ ಕಲಕುವುವು. ಒಬ್ಬರಮೇಲೊಬ್ಬರ ಅಂತಃಕರಣ ಮೊದಲಾಗುವುದು. ಅದು ಬೆಳೆದು ಪರಸ್ಪರರಲ್ಲಿ ಮಿಕ್ಕೆಲ್ಲರಿಗಿಂತ ಹೆಚ್ಚಿನ ಅಭಿಮಾನವೆನಿಸುವುದು. ಹೀಗೆ ಮೊದಲು ಅಪರಿಚಿತರಾದ ಎರಡು ವ್ಯಕ್ತಿಗಳನ್ನು ಒಂದಾಗಿಸುವ, ನಮ್ಮ ಕಣ್ಣಿಗೆ ಕಾಣದ ಅಂತರ್ಯಶಕ್ತಿಯೇ ಪ್ರೇಮ. ಇವರಿಬ್ಬರ ಕೂಡಿಕೆಯೆ ಭಗವಂತನೂ ... ... ಜಗತ್ತೂ ಇಚ್ಛಿಸುವ ದಾಂಪತ್ಯ ಮಿಲನ. ....

ಜೀವನವಿಲ್ಲದೆ ಪ್ರೇಮವಿಲ್ಲ; ಪ್ರೇಮವಿಲ್ಲದ ಜೀವನವಿಲ್ಲ! ಪ್ರೇಮವು ಮಾನವನ ಜನ್ಮದೊಂದಿಗೆ ಹುಟ್ಟುವುದು. ಜೀವನ ಸೋಪಾನದ ಒಂದು ಮೆಟ್ಟಿಲಿನಲ್ಲಿ ಗಂಡು-ಹೆಣ್ಣುಗಳೆಂಬ ಎರಡು ಅರ್ಧಗಳು ಬೆರೆತು, ಒಂದು ಪೂರ್ಣವಾಗಿ, ಮಾನವ ಪ್ರಗತಿಗೆ ಆವಶ್ಯಕವಾಗಿದ್ದು, ತಮ್ಮ ಕರ್ತವ್ಯವಾದ ಸಂತಾನಪ್ರಾಪ್ತಿ ಮತ್ತು ಸಂತಾನರಕ್ಷಣೆಗೆ—ಅದರ ಮೂಲಕ ಅಭಿವೃದ್ಧಿಯಾಗುವ ಸಮಾಜಕ್ಕೆ ತಮ್ಮ ಈ ಅತ್ಯುತ್ತಮ ಕರ್ತವ್ಯವನ್ನು ಮನಃಪೂರ್ವಕವಾಗಿ—ಎರಡು ರೂಪದ ಕಾಯ ಒಂದೆ ಮನವಾಗಿ—ಎಸಗಲು ಈ ಪವಿತ್ರ ಪ್ರೇಮವೆಂಬ ಶಕ್ತಿಯೇ ಪ್ರೇರೇಪಿಸುವುದು. ಜಗದ್ವ್ಯಾಪಾರಕ್ಕೆ ಅತ್ಯಾವಶ್ಯಕವಾದ ಈ ಪ್ರೇಮದ ಪೂರ್ಣಸ್ವರೂಪವೇ ವಿಶ್ವಪ್ರೇಮ. ಈ ವಿಶ್ವಪ್ರೇಮವೇ ವಿಶ್ವಪ್ರೇಮಿಯಾದ ಭಗವಂತನ ಸಾನ್ನಿಧ್ಯವನ್ನು ದೊರಕಿಸುವ ಸಾಧನ. ಪ್ರೇಮದ ಪೂರ್ಣಸ್ವರೂಪವಾದ ವಿಶ್ವಪ್ರೇಮದ ಗೊಡವೆ ಬಿಟ್ಟು ಬರೇ ದಾಂಪತ್ಯಪ್ರೇಮದ ವಿಷಯವಾಗಿ ಚರ್ಚಿಸುವುದೇ ನಮ್ಮ ಈ ಬರಹದ ಉದ್ದೇಶ.

ಇದು ಜನತೆಯ ನಿತ್ಯಜೀವನಕ್ಕೆ ಅನ್ವಯಿಸುವ ಸರ್ವಸಾಮಾನ್ಯ ವಿಷಯವಾದರೂ ಇದರ ನಿಜವಾದ ಸ್ವರೂಪದ ತಿಳಿವಿಲ್ಲದೆ, ಹರುಕುಮುರುಕಾಗಿ ತಿಳಿದು ಅನೇಕರು ತಪ್ಪು ದಾರಿಯಲ್ಲಿ ನಡೆಯುತ್ತಿರುವರು. ಅದರ ಪರಿಣಾಮವಾದ ದಾಂಪತ್ಯಜೀವನದ ಅಶಾಂತತೆ, ಅತೃಪ್ತಿ, ಸಮನ್ವಯವಿಲ್ಲದ ಕೂಡಿಕೆ ಇವುಗಳ ದುರಂತ ಪರಿಣಾಮಗಳನ್ನು ನಾವು ದಿನನಿತ್ಯ ನೋಡುತ್ತಿರುತ್ತೇವೆ. ಆದುದರಿಂದ ಈ ದಾಂಪತ್ಯಪ್ರೇಮದ ನೈಜ ಸ್ವರೂಪವನ್ನು ಎಲ್ಲರೂ ತಿಳಿಯುವುದು ಅತ್ಯಾವಶ್ಯಕ. ಈ ಪ್ರೇಮದ ನಿಜವಾದ ಅರ್ಥವೇನು, ಅದು ಹುಟ್ಟುವುದು ಹೇಗೆ, ಬೆಳೆವುದು ಹೇಗೆ, ಅದರ ಅನುಭವವೆಂತು, ಪರ್ಯವಸಾನವೇನು ಎಂಬಿವುಗಳನ್ನು ಒಂದು ಚಕ್ರದ ಹಾಗೆ (A Cycle of Love) ನೋಡೋಣ.

ನಮ್ಮ ಅನುಕೂಲತೆಗಾಗಿ ಬರಹವನ್ನು ಮೂರು ಭಾಗವಾಗಿ ವಿಂಗಡಿಸಿಕೊಂಡಿರುವೆವು.

೧. ಪ್ರೇಮದ ಹುಟ್ಟು ಮತ್ತು ಬೆಳವಣಿಗೆ.
೨. ಜೀವನದಲ್ಲಿ ಪ್ರೇಮಾನುಭವ.
೩. ಪ್ರೇಮದ ಗುರಿ.

ಇವುಗಳನ್ನು ಒಂದೊಂದನ್ನಾಗಿ ಚರ್ಚಿಸುವ.


೧. ಪ್ರೇಮದ ಹುಟ್ಟು ಮತ್ತು ಬೆಳವಣಿಗೆ:

ಮೊದಲು ಜೀವನದಲ್ಲಿ ಪ್ರೇಮವೆಂಬುದು ಎಷ್ಟು ಭವ್ಯವಾಗಿದೆ, ಅದರ ಘನತೆ, ಗೌರವ ಎಷ್ಟು ಎಂಬುದನ್ನು ನೋಡೋಣ. ಸರ್ ವಾಲ್ಟರ್ ಸ್ಕಾಟ್ (Sir Walter Scott) ಎಂಬ ಆಂಗ್ಲ ಕವಿಯೊಬ್ಬನು "ಪ್ರೇಮವೇ ಸ್ವರ್ಗ; ಸ್ವರ್ಗವೇ ಪ್ರೇಮ." (Love is heaven and heaven is Love) ಎಂದಿರುವನು. ವಿಕ್ಟರ್ ಹ್ಯೂಗೋ (Victor Hugo) ಎಂಬ ಫ್ರಾನ್ಸಿನ ಮಹಾಕವಿ "ಜೀವನವೆಂಬ ಪುಷ್ಪದಲ್ಲಿ ಪ್ರೇಮವು ಅಮೃತದ ಬಿಂದು." (Life is a flower of which Love is honey) ಎಂದಿರುವನು. ನಮ್ಮ ಕನ್ನಡ ಕವಿ ಪುಟ್ಟಪ್ಪನವರು "ಪ್ರೇಮದಿಂದಲೇ ಹೊಳೆಯಿತೀ ಮಹಾ ಬ್ರಹ್ಮಾಂಡ, ಪ್ರೇಮದಾಧಾರದಿಂದಲೇ ಬಾಳುತಿಹುದು, ಪ್ರೇಮವಾರಿಧಿಯಲ್ಲೆ ಕಡೆಗೈಕ್ಯವಾಗುವುದು." ಎಂದು ಹಾಡಿರುವರು. ಮಹಾಪುರುಷರ ಈ ದಿವ್ಯವಾಣಿಯನ್ನು ಕೇಳಿ, ಈ ಪ್ರೇಮಸುಧೆಯ ರುಚಿ ಕಂಡು, ಪ್ರೇಮವು ಜನಜೀವನದಲ್ಲಿ ಇಷ್ಟು ಘನತೆ ಹೊಂದಲು

ಈ ಲೇಖನಮಾಲೆಯಲ್ಲಿ ಇದು ಮೊದಲನೆಯ ಬರಹ. ಇನ್ನೆರಡು ಬರಹಗಳು ಮುಂದೆ ಬರಲಿವೆ. ಸಂ.

ಅನೇಕ ಪ್ರಬಲ ಕಾರಣಗಳಿರಬೇಕು ಎನಿಸುವುದು. ಅವು ಗಳೇನೆಂದು ಸೂಕ್ಷ್ಮವಾಗಿ ನೋಡೋಣ.

ಮಹಾತ್ಮಾ ಸಾಕ್ರೆಟೀಸನ ಶಿಷ್ಯನಾದ ಪ್ಲೇಟೋ ಎಂಬ ಪ್ರಸಿದ್ಧ ವಿದ್ವಾಂಸನು ಈ ರೀತಿ ಹೇಳಿರುವನು—"ಮೊದಲು ಒಂದಾನೊಂದು ಕಾಲದಲ್ಲಿ ಗಂಡು-ಹೆಣ್ಣುಗಳೆಂಬ ಎರಡು ಭೇದವಿಲ್ಲದೆ ಇಬ್ಬರೂ ಒಂದೇ ದೇಹದಲ್ಲಿದ್ದರು. ಕೆಲವು ಜನರ ದುರ್ನಡತೆಯನ್ನು ನೋಡಿ ದೇವರು, ನಿಂಬೆಯ



ಜೀವೈಕ್ಯ

ಹಣ್ಣಿನ ಎರಡು ಹೋಳುಗಳ ಹಾಗೆ, ಆ ದೇಹವನ್ನು ಎರಡು ಭಾಗ ಮಾಡಿದನು. ಆ ಹೋಳುಗಳನ್ನು ಬೇರೆಬೇರೆ ಮಾಡಿದಾಗ, ಒಂದು ಹೋಳು ತಾನು ಪೂರ್ಣವಾಗುವ ಆಸೆಯಿಂದ ತನ್ನ ಉಳಿದ ಅರ್ಧ ಹೋಳಿನೊಂದಿಗೆ ಬೆರೆಯಲು ಸದಾ ಹವಣಿಸುವುದು. ಈ ಹವಣಿಕೆಯ ಆಸೆಯೇ ಪ್ರೇಮ; ಕೂಟವೇ ಗಂಡಹೆಂಡಿರ ಮಿಲನ." ನಮ್ಮಲ್ಲಿಯೂ ಕೂಡ "ಸಹಧರ್ಮಿಣಿ" "ಅರ್ಧಾಂಗಿ" ಎಂಬ ಪದಗಳಿವೆ— ಮಾನವ ಧರ್ಮದಲ್ಲಿ ಸಹಧರ್ಮಿಣಿಯೊಂದಿಗೆಸಗುವ ಧರ್ಮವೇ ಸಂಪೂರ್ಣವೆನಿಸುವುದು. 'ಮಾನವ' ಎನ್ನಿಸಿ... ಳ್ಳಲು 'ಅರ್ಧಾಂಗಿ'ಯೂ ಬೆರೆತು ಒಂದು ಪೂರ್ಣ ... ವಾಗಬೇಕು—ಎಂಬ ನಮ್ಮ ಆರ್ಯರ ಶಾಸ್ತ್ರಗಳು ... ಹೆಣ್ಣುಗಳ ಪ್ರೇಮಮಿಲನದ ಪರಿಪೂರ್ಣತೆಯನ್ನು ... ಪಡಿಸುವುವು. ನವದಂಪತಿಗಳಿಬ್ಬರ ಒಂದು ಉದಾಹ... ನೋಡೋಣ. ವಿವಾಹಕ್ಕೆ ಮುಂಚೆ ಗಂಡು ... ಹೆಣ್ಣು ಎಲ್ಲೋ ಹುಟ್ಟಿ ಬೆಳೆದು ಜೀವಿಸುತ್ತಿ... ಮೊದಲು ಒಬ್ಬರನ್ನೊಬ್ಬರು ನೋಡಿದೊಡನೆ ... ಮನಸ್ಸುಗಳೂ ಕಲಕುವುವು. ಒಬ್ಬರಮೇಲೊಬ್ಬ... ಕರಣ ಮೊದಲಾಗುವುದು. ಇದಕ್ಕೇ ಮೊದಲಿನ ನೋ... ಪ್ರೇಮ (Love at first sight) ಎನ್ನುವರು. ಅದು ... ಯಾಗಿ ಅವರಿಬ್ಬರ ವಿವಾಹವಾದರೆ ಅವರಿಬ್ಬರಲ್ಲಿ ... ಇಡದ ಅಭಿಮಾನ ಮೊದಲಾಗುವುದು. ತಂದೆತಾ... ಅಣ್ಣ ತಮ್ಮಂದಿರು, ಅಕ್ಕತಂಗಿಯರು, ಸ್ನೇಹಿತರು ... ಗಿಂತ ಗಂಡಹೆಂಡತಿ ಹೆಚ್ಚಿನವರಾಗುವರು. ಇವರ... ಹೀಗೆ ಒಂದುಗೂಡಿಸುವ, ನಮ್ಮ ಕಣ್ಣಿಗೆ ಕಾ...

ಅಂತರ್ಯ ಶಕ್ತಿಯೇ ಪ್ರೇಮ. ಇವರಿಬ್ಬರ ಕೂಡಿಕೆಯೇ ಭಗವಂತನೂ ಜಗತ್ತೂ ಇಚ್ಛಿಸುವ ದಾಂಪತ್ಯಮಿಲನ.

ಇನ್ನು ಜೀವನದಲ್ಲಿ ಪ್ರೇಮವು ಹೇಗೆ ಜನಿಸಿ ಹೇಗೆ ಹೇಗೆ ಬೆಳೆಯುವುದೆಂಬುದನ್ನು ನೋಡೋಣ. ಪ್ರೇಮವು ನಮ್ಮ ಜನ್ಮದೊಂದಿಗೆ ಹುಟ್ಟುವುದು. ಅಂದಿನಿಂದ ನಾವು ದಾಂಪತ್ಯ ಜೀವನಕ್ಕೆ ಬರುವ ವರೆಗೆ ನಾಲ್ಕು ಅಂಕಗಳಾಗಿ ಬೆಳೆದು, ಕೊನೆಗೆ ದಾಂಪತ್ಯ ಜೀವನದಲ್ಲಿ ನಮ್ಮ ಉಳಿದರ್ಧದೊಡನೆ ಬೆರೆತು, ಪೂರ್ಣವಾಗಿ ತನ್ನ ಗುರಿ ತಲುಪುವುದು. ನಮ್ಮ ಶೈಶವದಲ್ಲಿ ಪ್ರೇಮವು ಈ ಲೋಕದಲ್ಲಿ ನಮ್ಮ ಜನನಕ್ಕೆ ಕಾರಣವಾಗಿ, ಪ್ರಪಂಚದಲ್ಲಿ ನಾವು ಜೀವನಯಾತ್ರೆಯನ್ನು ಹಗುರವಾಗಿ ಜರುಗಿಸಲು ತಕ್ಕ ಶಿಕ್ಷಣವನ್ನೂ ರಕ್ಷಣೆಯನ್ನೂ ಕೊಡುವ ತಂದೆತಾಯಿಗಳು ಸೋದರ ಸೋದರಿಯರಲ್ಲಿ ನೆಲೆಸಿರುವುದು. ಜನ್ಮ ತಾಳಿದ ಶಿಶುವು ಎರಡು ಮೂರು ತಿಂಗಳುಗಳ ವರೆಗೂ ಅಜ್ಞಾನದಲ್ಲಿರುವುದು. ಆಗ ಈ ಪ್ರಾಪಂಚಿಕ ವಿಷಯಗಳ ಯಾವ ಜ್ಞಾನವೂ ಅದಕ್ಕಿರುವುದಿಲ್ಲ. ಮೂರು ನಾಲ್ಕು ತಿಂಗಳುಗಳಾದ ಮೇಲೆ ಪ್ರಕೃತಿ ಪರಿಚಯಕ್ಕೆ ಮೊದಲಾಗುವುದು. ಆಗ ಶಿಶುವಿನ ಪ್ರೇಮವು, ಸದಾ ತನ್ನ ಬಳಿಯಿದ್ದು ತನ್ನ ದೇಹದಲ್ಲಿರುವ ಎದೆಯ ಹಾಲನ್ನೇ ಮಗುವಿಗೆ ಉಣಿಸಿ, ಸರ್ವವಿಧದಲ್ಲಿಯೂ ಅದರ ಆರೈಕೆ ಮತ್ತು ರಕ್ಷಣೆಯಲ್ಲಿ ನೆರವಾಗುವ ತಾಯಿಯಲ್ಲಿ ಹೆಚ್ಚಾಗಿ ನೆಲೆಸುವುದು. ಇದು ಕೆಲವು ವರುಷಗಳ ವರೆಗೂ ನಡೆದು ಬರುವುದು. ಇದು ಮೊದಲನೆಯ ಅಂಕ. ಮಗುವಿಗೆ ೪-೫ ವರುಷಗಳಾದ ಮೇಲೆ ತನ್ನ ಮನೆಯಲ್ಲೇ, ತನ್ನ ಸುತ್ತಮುತ್ತಲಿದ್ದು ತನ್ನ ಒಡನಾಡುವ ತಂದೆ, ಸೋದರಸೋದರಿಯರು, ಒಡನಾಡಿಗಳು ಇವರಲ್ಲಿ ಪ್ರೇಮ ನೆಲೆಸುವುದು. ಆದರೂ ಮಗುವು ಇತರರಿಗಿಂತ ತನ್ನ ತಾಯಿಯನ್ನೇ ಹೆಚ್ಚಾಗಿ ಪ್ರೀತಿಸುವುದು. ಇದು ಸುಮಾರು ೧೦ ವರುಷದ ವರೆಗೂ ಬೆಳೆದು ಬರುವುದು. ಇದು ಎರಡನೆಯ ಅಂಕ. ನಂತರ ಮೂರನೆಯ ಅಂಕದಲ್ಲಿ ಮಗುವಿನ ತಂದೆತಾಯಿಗಳು ಸೋದರಸೋದರಿಯರಿಗಿಂತ ಸ್ನೇಹಿತರು ಹೆಚ್ಚು ಪ್ರಿಯರಾಗಿ ತೋರುವರು. ಗಂಡುಹುಡುಗರು ತಮ್ಮ ಹಾಗೆ ನಡವಳಿಕೆಗಳುಳ್ಳ, ತಮಗೆ ಮೆಚ್ಚುಗೆಯಾದ ಒಡನಾಡಿಯನ್ನು ಹುಡುಕಿ, ಸ್ನೇಹ ಬೆಳೆಸಿ, ಅವನನ್ನೂ ಅವನ ಸಂಗವನ್ನೂ ಹೆಚ್ಚಾಗಿ ಪ್ರೀತಿಸತೊಡಗುವರು. ಹೆಣ್ಣುಹುಡುಗರು ತಮ್ಮ ಅಚ್ಚುಮೆಚ್ಚಿನ ಗೆಳತಿಯರನ್ನು ಆರಿಸಿ ಅವರನ್ನು ಹೆಚ್ಚು ಪ್ರೀತಿಸತೊಡಗುವರು. ಯೌವನವನ್ನು ಪಡೆಯಲು ಹೆಣ್ಣುಹುಡುಗಿಯರಿಗಿಂತ ಗಂಡುಹುಡುಗರು ಸ್ವಲ್ಪ ಹೆಚ್ಚು ಕಾಲ ತೆಗೆದುಕೊಳ್ಳುವವರಾಗಿರುವುದರಿಂದ ಈ ಮೂರನೆಯ ಅಂಕವು ಗಂಡುಹುಡುಗರಲ್ಲಿ ಹೆಣ್ಣುಹುಡುಗಿಯರಿಗಿಂತ ಹೆಚ್ಚು ಕಾಲ ಹಿಡಿಯುವುದು. ನಾಲ್ಕನೆಯ ಅಂಕವು ಯೌವನದ ನಸುಕಿನಲ್ಲಿ ಮೊದಲಾಗುವುದು. ಆಗ ಪ್ರೇಮವು ತನ್ನಿಂದ ಬೇರೆಯಾಗಿರುವ ಅರ್ಧದಲ್ಲಿ (in the opposite sex) ನೆಲೆಸಲು ಹವಣಿಸುವುದು. ಮೊದಲುಮೊದಲು ಹೆಣ್ಣುಹುಡುಗರು ತಮ್ಮ ಸಾಮೀಪ್ಯದ ಗಂಡಸರನ್ನೂ, ಗಂಡುಹುಡುಗರು ತಮ್ಮ ಸಾಮೀಪ್ಯದ ಹೆಂಗಸರನ್ನೂ ಪ್ರೀತಿಸಲುತೊಡಗುವರು. ಸಾಮಾನ್ಯವಾಗಿ ಹೆಣ್ಣುಹುಡುಗರು ತಮ್ಮ ತಂದೆಯಲ್ಲೂ, ಗಂಡುಹುಡುಗರು ತಮ್ಮ ತಾಯಿಯಲ್ಲೂ ಹೆಚ್ಚು ಪ್ರೇಮವಿಡುವರು; ಇದ್ದಂತೆ ಅವರವರಲ್ಲಿ ತಾನು ಕೂಡಬಯಸುವ ಅರ್ಧದ ಗುಣ-ನಡತೆಗಳ ಕುರುಹುಗಳನ್ನು ನೋಡಬಯಸುವರು. ಪ್ರೇಮನಾಟಕದಲ್ಲಿ ತನಗೆ ತಕ್ಕ ಸಂಗಾತಿಯನ್ನು ಹುಡುಕುವ ಈ ನಾಲ್ಕನೆಯ ಅಂಕವೇ ಬಹು ಮುಖ್ಯವಾದುದಾಗಿದೆ. ಈ ಅಂಕದಲ್ಲಿ ತಂದೆತಾಯಿಯರ ಜವಾಬ್ದಾರಿಯೂ ವಿಶೇಷವಾಗಿರುವುದು. ಅವರು ತಮ್ಮ ನಡವಳಿಕೆಯಿಂದ ಮಕ್ಕಳ ಪ್ರೇಮಜೀವನವನ್ನು ತಿದ್ದಬೇಕಾಗುವುದು. ತಂದೆಯು ತನ್ನ ಮಗಳ ಈ ಹವಣಿಕೆಯನ್ನರಿತು ಒಬ್ಬ ಆದರ್ಶ ಪತಿಯು ಹೇಗೆ ನಡೆದುಕೊಳ್ಳಬೇಕೋ ಹಾಗೆ, ತಾನು ತನ್ನ ಸಂಸಾರದಲ್ಲಿ ತನ್ನ ಹೆಂಡತಿಯೊಡನೆ ನಡೆದುಕೊಳ್ಳಬೇಕು. ಬಹು ಚುರುಕಾಗಿ ಬದಲಾವಣೆಯಾಗುತ್ತಿರುವ ತನ್ನ ಮಗಳ ಮನಸ್ಸಿನಲ್ಲಿ ಜೀವನದಲ್ಲಿ ಸುಖವು ದೊರೆಯಬೇಕಾದರೆ ಒಂದು ಆದರ್ಶ ಸಂಸಾರವು ಹೇಗಿರಬೇಕು, ಸತಿಪತಿಯರ ಪ್ರೇಮವು ಸಮಂಜಸವಾಗಿ ಮಿಳಿತವಾಗಿ ಅವರು ಸುಖಪಡಬೇಕಾದರೆ ಹೇಗೆ ನಡೆದುಕೊಳ್ಳಬೇಕು ಎಂಬ ವಿಷಯಗಳನ್ನು ತಮ್ಮ ಆಚರಣೆಯಿಂದ ಅಚ್ಚೊತ್ತಬೇಕು. ತಾಯಿಯೂ ಹಾಗೆಯೆ, ಒಬ್ಬ ಆದರ್ಶ ಸತಿಯು ಹೇಗಿರಬೇಕೆಂಬ ಅಂಶವನ್ನು ತನ್ನ ಮಗನಿಗೆ ತಿಳಿಯುವ ಹಾಗೆ, ತನ್ನ ಪತಿಯೊಡನೆ ವರ್ತಿಸಬೇಕು. ಈ ಅಂಕದಲ್ಲಿ ತಂದೆತಾಯಿಗಳು ಸರಿಯಾಗಿ ತಮ್ಮ ಕರ್ತವ್ಯಗಳನ್ನು ಮಾಡಿದರೆ, ಯುವಕ ಯುವತಿಯರು ದಾಂಪತ್ಯ ಜೀವನವನ್ನು ಪ್ರವೇಶಿಸಿದೊಡನೆ ಅದುವರೆವಿಗೂ ಹುಡುಕಿಹುಡುಕಿ, ಕಡೆಗೆ ದೊರೆತ ತನ್ನ ಉಳಿದರ್ಧದೊಡನೆ (their better halves) ಬೆರೆಯಲು ತಕ್ಕವರಾಗುತ್ತಾರೆ. ಆಗ ತಮ್ಮ ಆಸೆ ಅಳತೆಗೆ ತಕ್ಕ ಸಂಗಾತಿಯನ್ನೇ ಆರಿಸಿಕೊಂಡು, ಅವರಿಗೆ ತಮ್ಮ ಸರ್ವಸ್ವವನ್ನೂ ಧಾರೆಯೆರೆದು

ಎರಡರ್ಧಗಳು ಒಂದು ಪೂರ್ಣವಾಗಿ ಜೀವನದಲ್ಲಿ ಸುಖವನ್ನು ಹೊಂದುವರು. ಈ ನಾಲ್ಕನೆಯ ಅಂಕದಲ್ಲಿ ತಂದೆತಾಯಿಯರು ಹೆಚ್ಚುಕಡಿಮೆಯಾಗಿ ವರ್ತಿಸಿ, ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ, ಯುವಕಯುವತಿಯರ ದಾಂಪತ್ಯಜೀವನದಲ್ಲಿಯೂ ಹೆಚ್ಚುಕಡಿಮೆಯಾಗಿ, ಅವರ ಜೀವನವೂ ದುಃಖಮಯವಾಗುವುದು. ಪ್ರೇಮಭಂಗ, ಅತೃಪ್ತಿ, ಅಸಮಾಧಾನಗಳು ಅವರ ಜೀವನವನ್ನು ಸುಡುವುವು. ಈ ಕರ್ತವ್ಯವನ್ನು ತಂದೆತಾಯಿಯರು ತೃಪ್ತಿಕರವಾಗಿ ಮಾಡಿದರೆ ಯುವಕ[illegible] ಯರ ಮಿಲನವು ಸಮಂಜಸವಾಗಿ ಅವರ [illegible] ಸುಖ-ಶಾಂತಿ-ಪ್ರೇಮಮಯವಾಗುವುದು. ಪ್ರೇಮ[illegible] ಜನ್ಮದೊಂದಿಗೆ ಹುಟ್ಟಿ ಈ ನಾಲ್ಕು ಅಂಕಗಳಲ್ಲಿ [illegible] ದಾಂಪತ್ಯಜೀವನದಲ್ಲಿ ಈ ರೀತಿ ಫಲಿಸುವ[illegible] ಜಾರ್ಜ್. ಕೆ. ಪ್ರಾಟ್ (George. K. Pratt) [illegible] ಶಾಸ್ತ್ರಜ್ಞರ ಅಭಿಪ್ರಾಯ.

ಬೆಂದ ಜೀವಗಳು

★

- ಲಗ್ನ! ಅದೊಂದು ಎರಡಕ್ಷರದ ಶಬ್ದವಾದರೂ ನೂರಕ್ಷರದ ಶಬ್ದಕ್ಕಿಂತ ತೊಡಕಿನದಾಗಿದೆ!
- ನನ್ನನ್ನು ಯಾರೂ ಬಲಾತ್ಕರಿಸಲಿಲ್ಲ. ಸಿರಿವಂತಿಕೆಯ ಆಶೆಯಿಂದ ನಾನೇ ದತ್ತಕಕ್ಕೆ ಒಪ್ಪಿಕೊಂಡೆ. ಅದರ ಪ್ರತಿಫಲವೇ ಈ ಲಗ್ನದ ಒತ್ತಾಯ!
- ಲಗ್ನವೂ ಆಯಿತು! ಒಬ್ಬಳ ಕೊರಳಲ್ಲಿ ಹಾರಕಟ್ಟಿದೆ. ಇನ್ನೊಬ್ಬಳನ್ನು ಅದೇ ದಾರದಿಂದ ಕತ್ತು ಕುಯ್ದು ಕೊಂದುಹಾಕಿದೆ!!



ಕತೆಗಾರರು: ಶ್ರೀ. ಬಸವರಾಜ ಕಟ್ಟೀಮನಿ

"ಎಲ್ಲರಂತೆ ಅವನೂ ಒಬ್ಬ ಕೂಲಿಕಾರ. ಕೂಲಿಯಿಂದಲೆ ಅವನ ಜೀವನ. ಮೂವತ್ತು ವರುಷಗಳಿಂದ ಅವನು ಅದೇ ನಿಲ್ದಾಣದಲ್ಲಿ ಕೂಲಿಕೆಲಸ ಮಾಡುತ್ತಿದ್ದನೆಂದು ಜನವಾರ್ತೆಯಿದ್ದಿತು. ಪ್ರವಾಸಿಕರು—ಇಳಿದುಕೊಳ್ಳುವುದಕ್ಕಾಗಿ ಸಿದ್ಧಪಡಿಸಿದ್ದ ಸ್ಥಳದ ಹುರುಬರುಕು ನೆಲದ ಮೇಲೆ ಬಿದ್ದು ಬಿದ್ದು ಅವನ ದೇಹ ಹಣ್ಣಾಗಿದ್ದಿತು. ಅವನು ಅಲ್ಲಿ ಇರುತ್ತಿದ್ದಾಗಲೆ ಎಷ್ಟೊ ದೀಪಾವಳಿ ಹಬ್ಬಗಳು, ಎಷ್ಟೊ ಕ್ರಿಸ್‌ಮಸ್ ಹಬ್ಬಗಳು ಒಳ್ಳೆ ವೈಭವದಿಂದ ನೆರವೇರಿದ್ದುವು.

ಯಾವುದೊಂದು ಭಾಷೆಯಲ್ಲಿಯೂ ಕ್ವಚಿತ್ತಾಗಿ ಸಿಗದ ಹೆಸರು ಅವನದು. ಆ ಹೆಸರು ಕಿವಿಗೆ ಬಿದ್ದೊಡನೆಯೆ—ಇದು ತಾಯಿತಂದೆ ಇಟ್ಟ ಹೆಸರು ಸರ್ವಥಾ ಅಲ್ಲ—ಎಂದು ಯಾರಾದರೂ ತಟ್ಟನೆ ಹೇಳಿಬಿಡುವ ಹಾಗಿದ್ದಿತು. ಎಷ್ಟೊ ಜನ ಅವನನ್ನು ಆ ವಿಷಯದಲ್ಲಿ ಪೀಡಿಸಿ ಪೀಡಿಸಿ ಮಾತನಾಡಿಸಿದರೂ ಅವನೇನನ್ನೂ ನುಡಿಯುತಿರಲಿಲ್ಲ. ಅವರನ್ನು ತಿರಸ್ಕಾರದಿಂದ ನೋಡುತ್ತ ಅಲ್ಲಿಂದ ಸರ್ರನೆ ಸಾಗಿಬಿಡುತ್ತಿದ್ದನು.

ರಾಮರಾಯರೊಮ್ಮೆ ಬಹಳ ಬಲವಂತ ಮಾಡಿ ಮಾಡಿ ಅವನನ್ನು ಬೇಸರುಗೊಳಿಸಿದರಂತೆ. ಆಗವನು ನಡುಗುವ ಧ್ವನಿಯಲ್ಲಿ ಕೊಂಚ ರೇಗಿನಿಂದಲೆ ನುಡಿದನು.

"ಹುಟ್ಟಿದ ಮಕ್ಕಳ ಹೊಟ್ಟೆಗೆ ಹಾಕಲು ಅಸಮರ್ಥರಾದವರು ಮಕ್ಕಳನ್ನಾದರೂ ಏತಕ್ಕೆ ಹುಟ್ಟಿಸಬೇಕು?—ಉದರವನ್ನು ಕಟ್ಟಿಕೊಂಡ ಜೀವವೊಂದನ್ನು ಈ ಜಗದ ಮೇಲೆ ತರುವುದು; ಅದರ ಉದರ ತುಂಬದ ಹಾಗಾಗಲು ಅದನ್ನಟ್ಟಬಿಡುವುದು: ಇದು ಪಾಪವಲ್ಲವೆ? ಆ ಪಾಪಿಗಳು ಇರಿಸಿದ ಹೆಸರನ್ನಾದರೂ ಧಾರಣ ಮಾಡುವುದೇತಕ್ಕೆ? ಅದು ಬೇಡವೇ ಬೇಡ. ಈ ದೇಹವು ಮಣ್ಣುಪಾಲಾಗುವವರೆಗೆ ಯಾವ ಹೆಸರಿದ್ದರೇನು....ಅದೇ ನನಗೆ ಸಾಕು."

ಝುಬ್ಬು ಎಂಬುದರಷ್ಟು ಕರ್ಕಶವಾದ ಶಬ್ದವು ಇಡೀ ಕನ್ನಡ ಭಾಷೆಯಲ್ಲಿಯೆ ಇನ್ನೊಂದು ದೊರೆಯಲಾರದೆಂದು ರಾಮರಾಯರು ಹಾಸ್ಯವಾಡಿದರು. ಅವರ ಹಾಸ್ಯದ ಮಾತುಗಳನ್ನು ಕೇಳಿಕೊಳ್ಳಲು ಝುಬ್ಬು ಅಲ್ಲಿರಲಿಲ್ಲ. ಅವನು ಆಗಲೆ ಹೊರಟು ನಡೆದಿದ್ದನು.

ಕಾಣಿಸಿಕೊಳ್ಳಲು ಧಷ್ಟಪುಷ್ಟ ಮೈ ಝುಬ್ಬುವಿನದು. ಕಿವಿಗೆ ಏನೆಲ್ಲವೂ ಕೇಳಿಸುವುದು. ಕಣ್ಣಿಗೆ ಏನೆಲ್ಲವೂ ಕಾಣಿಸುವುದು. ಮುದುಕನಾಗಿದ್ದರೂ ಝುಬ್ಬು ಹೀಗೆ ಹರೆಯದವರಂತಿದ್ದನು. ಸ್ವಭಾವ ಅಷ್ಟೊಂದು ವಿಚಿತ್ರ ತರಹದ್ದಾಗಿದ್ದರೂ ಒಂದೊಂದು ಬಾರಿ ಅವನ ಮಾತು ವಿನೋದದ ಹೊಳೆಯಾಗಿ ಹರಿಯುತ್ತಿದ್ದಿತು. ಒಂದು ಸಲ ಝುಬ್ಬುವಿನ ಮಾತು ಕೇಳಿದವರು ಮತ್ತೆ ಆತನನ್ನು ಮಾತನಾಡಿಸದಿರುತ್ತಿರಲಿಲ್ಲ.

ಝುಬ್ಬು ಎಲ್ಲರಿಗೂ ಬೇಕಾದವನು. ಸ್ಟೇಶನ್‌ಮಾಸ್ತರರನ್ನು ಮೊದಲುಮಾಡಿಕೊಂಡು ಪೋರ್ಟರರ ವರೆಗೆ ಎಲ್ಲ ಜನರೂ ಅವನನ್ನು ಆದರದಿಂದ ಕಾಣುವರು. ಉಪಹಾರ ಗೃಹದ ರಂಗಸಾಮಿ ಕೂಡ ಕೆಲಸವಿಲ್ಲದಾಗ ಝುಬ್ಬುವಿನೊಡನೆ ಹರಟೆ ಹೊಡೆಯುವುದರಲ್ಲಿ ಹೊತ್ತು ಹೊಡೆದುಕೊಂಡೊಯ್ಯುತ್ತಿದ್ದನು. ಝುಬ್ಬುವಿಗೆ ಅವನಿಂದ ಪುಕ್ಕಟೆಯಾಗಿ ತಿಂಡಿ ದೊರೆಯುತ್ತಿದ್ದಿತು. ಬೀಡಿ ಸಿಗರೇಟು

ಎಲ್ಲವೂ ಸಿಗುತ್ತಿದ್ದಿತು. ಝುಬ್ಬು ಯಾರೊಡನೆಯೂ ಸಂಕೋಚಭಾವನೆಯಿಂದಿರುತ್ತಿರಲಿಲ್ಲ.—ಕೊಡುವವನು ಆ ದೇವರು....ನಾನು-ನೀನು ಎಂಬುದೆಲ್ಲಾ ಶುದ್ಧ ಸುಳ್ಳು.... ಎಂದು ಅವನ ಹೇಳಿಕೆ. ಯಾರು ಏನನ್ನೆ ಕೊಟ್ಟರೂ ಝುಬ್ಬು ಎಂದೂ ಬೇಡ ಎಂದವನಲ್ಲ. ಚಾ-ತಿಂಡಿ, ಸಿಗರೇಟು— ಬೀಡಿ—ಹಣಕಾಸು—ಉಡುಗೆತೊಡಿಗೆ—ಹೊದೆಯಲು ಕಂಬಳಿ ಅದು ಹರಕಾಗಿರಲಿ, ಕರಕಾಗಿರಲಿ ಝುಬ್ಬು ಸುಮ್ಮನೆ ತೆಗೆದುಕೊಳ್ಳುತ್ತಿದ್ದನು. ಒಂದು ಮಾತು; ಎಂದರೆ ಯಾರ ಹತ್ತಿರವೂ ಏನನ್ನೂ ಮೊದಲಾಗಿಯೆ ಝುಬ್ಬು ಯಾಚಿಸಿದವನಲ್ಲ. ಅವರಾಗಿ ಕೊಟ್ಟರೆ ಹೂಂ—ಎನ್ನುವುದು: ಇಲ್ಲವಾದರೆ ಅವನ ಉದ್ಗಾರ—"ಸಿಕ್ಕರೆ ಶಿಕಾರಿ: ಸಿಗದಿದ್ದರೆ ಭಿಕಾರಿ" ಎಂದು.

ಕೂಲಿಯಿಂದ ಬಂದ ಹಣದಲ್ಲಿ ಕೆಲವು ಪಾಲು ತೆಗೆದು ಝುಬ್ಬು ಕಾರಕೂನ ರಾಮರಾಯರ ವಶದಲ್ಲಿಡುತಿದ್ದನು. ವೃದ್ಧನಾದ ಆ ಕಾರಕೂನರು ಝುಬ್ಬುವಿನ ಸೇವ್ವಿಂಗ್ಸ ಬ್ಯಾಂಕು ಆಗಿದ್ದರೆಂದು ತರುಣ ಪೋರ್ಟರರು ಹಾಸ್ಯವಾಡುತಿದ್ದರು. ಸೇವ್ವಿಂಗ್ಸ ಬ್ಯಾಂಕಿನಂತೆ ವರುಷ ವರುಷಕ್ಕೆ ಅಸಲಿನ ಬಡ್ಡಿಯೇನೂ ಝುಬ್ಬುವಿಗೆ ದೊರೆಯುತಿರಲಿಲ್ಲವಾದರೂ ಅದರಿಂದ ಅವನಿಗೊಂದು ಮಹತ್ವಾದ ಲಾಭವಿದ್ದಿತು. ಝುಬ್ಬುವಿನ ದಿನದ ಕುಡಿತವು ರಾಮರಾಯರ ಹತ್ತಿರ ಹಣ ಇಡುವುದರಿಂದ ತಪ್ಪಿ ಹೋಗುತ್ತಿತ್ತು."

....

ಇಲ್ಲಿಗೆ ಹಾಳೆ ಮುಗಿದು ಹೋಗಿದ್ದುದರಿಂದ ಅವಳ ಓದು ಗಕ್ಕನೆ ತಡೆದು ನಿಂತಿತು. ಉತ್ಸುಕತೆಯು ಉಕ್ಕುವ ಕಣ್ಣುಗಳಿಂದ ಮುಂದಿನ ಹಾಳೆಯನ್ನು ಹೊರಳಿಸಿ ಹೊರಳಿಸಿ ನೋಡಿದಳು. ಆದರೆ ಅಲ್ಲೇನಿದೆ?....ಒಂದು ಕರ್ರಗಿನ ಗೆರೆ ಕೂಡ ಕಾಣಿಸದ ಬೆಳ್ಳನ್ನ ಬಿಳಿ ಹಾಳೆ—ಅಂದಿನಂತಹ ನಿರಾಶೆಯನ್ನು ಅವಳು ಹಿಂದೆ ಎಂದೂ ಅನುಭವಿಸಿರಲಿಲ್ಲ. ಔದಾಸೀನ್ಯವು ಅವಳ ಮೊಗದ ಮೇಲೆ ಮುಸುಕು ಹಾಕಿಕೊಂಡು ಕುಳಿತಿತು. ಅವಳ ಮುಖದಿಂದ ಹೊರಟ ಬಿಸಿಯುಸಿರುಗಳು ಒಂದೊಂದಾಗಿ ಕಿರುಮನೆಯನ್ನು ವ್ಯಾಪಿಸತೊಡಗಿದುವು. ನಿರಾಶೆಯ ಮೂರ್ತಿಮಂತ ಪುತ್ಥಳಿಯಂತೆ ಅವಳು ಕೆಲಕಾಲ ಕುಳಿತಿದ್ದಳು.

ತಟ್ಟನೆ ಎದ್ದಳು....ಮೇಜಿನ ಮೇಲೆಲ್ಲ ಅವಳ ಕೈ ವಾಯುವೇಗದಿಂದ ಓಡತೊಡಗಿತು....ಎಷ್ಟೊ ಹಾಳೆಗಳನ್ನ ವಳು ಹಾಗೆ ಹೀಗೆ ಮಗುಚಿ ಹಾಕಿ ನೋಡಿದಳು. ಎಷ್ಟೊ ಪುಸ್ತಕಗಳನ್ನು ತಿರೆದು ಸೂಕ್ಷ್ಮವಾಗಿ ಶೋಧಿಸಿದಳು ಆ... ಆ ಹಾಳೆ ಅವಳಿಗೆ ದೊರೆಯಲಿಲ್ಲ. ಒಂದೇ ಒಂದು ಹಾಳೆ... ಅಲ್ಲಿಗೆ ಆ ಕತೆ ಮುಗಿದು ಹೋಗಿದ್ದಿತೆಂದು ಅ... ಖಂಡಿತವಾಗಿಯೂ ಗೊತ್ತಿದ್ದಿತು. ಅಲ್ಲಿಗೆ ಒಂದು ... ಗೆರೆ ಹಾಕಿ ಅಂದಿನ ತಾರೀಖನ್ನೂ ಮುಗಿದ ಹೊತ್ತಿನ ... ಯನ್ನೂ ಬರೆದು, ವಸಂತ ಎದ್ದುಬಿಟ್ಟುದನ್ನು ... ಮಂಚದ ಮೇಲೆ ಒರಗಿದ್ದ ಹಾಗೆಯೆ ನೋಡಿದ್ದಳು ... ಳಿಗದು ಚೆನ್ನಾಗಿ ಸ್ಮರಣೆಯಲ್ಲಿದ್ದಿತು. ಆ ಹಾಳೆ ... ಮೇಲೆಯೇ ಇದ್ದುದೂ ಬೆಳಗಿನಲ್ಲಿ ಅವಳ ಕಣ್ಣಿಗೆ ... ದ್ದಿತು. ವಸಂತನಿಗಾಗಿ ಕಾಫಿ ಕಾಯಿಸಿ ತರಲು ... ಹೋದಾಗ ಅದನ್ನು ಹಾಗೆಯೇ ಬಿಟ್ಟಿದ್ದಳು... ಅದು ಅವಳ ಕಣ್ಣಿಗೆ ಬೀಳಲಿಲ್ಲ....ವಿನೋದ ... ಮಾಡುತ್ತ ಕಾಫೀ ಕುಡಿಯುವುದರಲ್ಲಿಯೂ ಚ... ಪಾಟದ ಸರಸ-ಸಮ್ಮೋದದಲ್ಲಿಯೂ ನಡುವಗಲಿನ ... ಹೊತ್ತು ಹೋಗಿದ್ದಿತು. ವಸಂತನು ಹೊರಟು... ಬಳಿಕ ಮನಸ್ಸಿಗೆ ಸೊಗಸೆನ್ನಿಸದಂತಾಗಲು ಅವಳು ತಂ... ಯನ್ನು ತೆಗೆದುಕೊಂಡು ಭೈರವಿಯಲ್ಲಿ ಗೀತವೊ... ನುಡಿಸುತ್ತ ಅದೆಷ್ಟೊ ಹೊತ್ತು ಕುಳಿತುಬಿಟ್ಟಿದ್ದ... ತಂಬೂರಿಗೆ ಮುಸುಕು ಹಾಕಿದಾಗ ಇಳಿಹೊತ್ತು ... ಳಿದು ಹೋಗಿದ್ದಿತು. ಬರುವಹೊತ್ತು ಸನಿಯವಲ್ಲಿ... ತೆಂದು ಮಾಳಿಗೆಯ ಕಿಟಕಿಯಲ್ಲಿ ಆರಾಮಕುರ್ಚಿ ... ಕೊಂಡು ಕುಳಿತಿದ್ದಳು....ಎಷ್ಟೊ ಹೊತ್ತಾದರೂ ... ಬರಲೇ ಇಲ್ಲ. ದಿನವೂ ಐದೂವರೆಗೆ ಸರಿಯಾಗಿ ... ಬರುವವನು ಅಂದು ಅದೇಕೆ ತಡಮಾಡಿದನೊ ... ಚಿಂತಿಸುತ್ತ ಅವಳು ಕುಳಿತಿದ್ದಾಗ ತಟ್ಟನೆ ಕ... ಕತೆಯ ನೆನಪಾಯಿತು. ಕೂಡಲೆ ಎದ್ದು ಮೇಜಿ... ಹೋಗಿ ಅದನ್ನೋದಲು ಮೊದಲುಮಾಡಿದಾಗ ... ಮೊಗದ ಮೇಲೆ ಕುಣಿದಾಡುತ್ತಿದ್ದ ಆನಂದವು ... ವರೆಗೆ ಉಳಿಯಲಿಲ್ಲ. ನಡುವೆಯೆ ಹೀಗಾಯಿತು. ... ಉತ್ಸಾಹಗಳನ್ನು ಹೊಡೆದು ಹಾಕಿ ನಿರಾಶೆಯು ... ಮೊಗದ ಮೇಲೆ ತಳವೂರಿತು. ಅದರೊಂದಿಗೆ ... ರೀತಿಯಿಂದ ಶೋಧಿಸಿದರೂ ಆ ಹಾಳೆ ಸಿಗದಿ... ಒಂದಾಗಿ ಅವಳ ಮೋರೆಯ ಮೇಲಿನ ಕಳೆಯೇ ... ಹೋಯಿತು. ಜಡವಾದ ಹೃದಯವನ್ನು ಹೊತ್ತು... ಅವಳ ದೇಹವು ಮಂಚದ ವರೆಗಾದರೂ ಹೇಗೆ ಬಂ... ಅವಳು ಬಂದಳು....ಮಂಚದ ಮೇಲಿನ ತೆಳುವಾದ ... ಯಲ್ಲಿ ದೇಹವನ್ನೊರಗಿಸಿದಳು.

ಕೊದ್ದುಕೊಂಡು ಬಿಗಿಯಾಗಿ ಮಲಗಿಬಿಡಬೇಕೆಂದು ಬಗೆದು ಶಾಲನ್ನೆಳೆದುಕೊಂಡಳು. ಏನೊ ಸರ್ ಎಂದು ಸಿಡಿದು ಬಂದು ಅವಳ ವಕ್ಷಸ್ಥಲದ ಮೇಲೆ ಬಿದ್ದಿತು. ಬೆಚ್ಚಿಬಿದ್ದು ಅದೇನೆಂದು ಅವಳು ನಿಟ್ಟಿಸಿ ನೋಡಿದಳು....ಅದೊಂದು ಹಾಳೆಗಳ ಕಟ್ಟು....ತಟ್ಟನೆ ಎದ್ದು ಅದನ್ನೆತ್ತಿಕೊಂಡು ನೋಡಿದಳು....ವಸಂತನ ಹಸ್ತಾಕ್ಷರ !–ಓದಿದಳು....“ನಲುಮೆಯ ನಲ್ಲೆ ಸರಳೆಗೆ....ಈ ಕತೆಯನ್ನೆ ಹೂವಾಗಿ ಮುಡಿಸುವೆ-ವಸಂತ” ಓದಿ ಮೊಗದಲ್ಲಿ ಮುಗುಳುನಗು ಮೂಡಿತಾದರೂ ಅದರಲ್ಲಿ ಗೊಂದಲದ ಭಾವ ತಲೆದೋರುತ್ತಿದ್ದಿತು. ಹಾಗೆಯೆ ಕಟ್ಟನ್ನು ಬಿಡಿಸಿ ಹಾಳೆಗಳನ್ನು ಮಗುಚಿ ಹಾಕತೊಡಗಿದಳು—ಮೊದಲ ಹಾಳೆಯ ಮೇಲೆ ದೃಷ್ಟಿ ಚೆಲ್ಲಿದೊಡನೆ....“ಹೂಂ. ಅದೇ....ಎಲ್ಲಾ ಅದೇ....ಅವನೂ ಒಬ್ಬ ಕೂಲಿಕಾರ....ಕೂಲಿಯಿಂದಲೇ ಅವನ ಜೀವನ. ಎಲ್ಲವೂ ಅದೇ....ಅಂತೂ ಇದು ಅದರ ಸುಂದರ ಪ್ರತಿಯಾಗಿ ತೋರುತ್ತದೆ.” ಎಂದುಕೊಂಡು ನಾಲ್ಕೈದು ಹಾಳೆಗಳನ್ನು ಹೊರಳಿಸಿ ನೋಡಿದಳು. ಮೊದಲನೆಯ ಸಾಲಿನ ಮೇಲೆ ದೃಷ್ಟಿ ಬಿದ್ದೊಡನೆ ಅವಳ ಎದೆಯಲ್ಲಿ ಧಸಕ್ಕೆಂದಿತು ....“ಝುಬ್ಬೂಗೆ ಭಯಂಕರವಾದ ಕಾಯಿಲೆ!....ಅವನು ಉಳಿಯುವನೆಂಬ ಭರವಸೆ ಇರಲಿಲ್ಲ. ಒಂದು ದಿನ....ಆ ಒಂದು ದಿನ....ಝುಬ್ಬೂ....”

ಅವಳ ಎದೆಯಲ್ಲಿ ವಿಚಾರಗಳು ತಾಂಡವನೃತ್ಯಕ್ಕೆ ತೊಡಗಿದುವು. ಮೊಗದಲ್ಲಿ ವಿವಿಧ ಭಾವಗಳು ಮೂಡಿ ಮರೆಯಾದುವು. ಮುಂದೆ ಓದಬೇಕೆಂದಿದ್ದ ಉತ್ಸಾಹವು ಎಲ್ಲಿ ಮಾಯವಾಯಿತೊ....ಕೆನ್ನೆಗೆ ಕೈಯಿಟ್ಟುಕೊಂಡು ಕಲ್ಲಿನಲ್ಲಿ ಕಡೆದ ಪ್ರತಿಮೆಯಂತೆ ಅವಳು ಕುಳಿತು ಬಿಟ್ಟಿದ್ದಳು.

ಅಡಿಗೆಯವಳು ಬಂದು ಊಟಕ್ಕೆಬ್ಬಿಸದಿದ್ದಲ್ಲಿ ಅವಳು ಹಾಗೆಯೆ ಎಷ್ಟು ಹೊತ್ತು ಕುಳ್ಳಿರುತಿದ್ದಳೊ....ಗಡಿಯಾರದಲ್ಲಿ ತಾಸಿನ ಮುಳ್ಳು ಎಂಟರ ಮನೆಯನ್ನು ಸಮೀಪಿಸಿದ್ದಿತು. ಸರಿಯಾಗಿ ಎಂಟೂವರೆಗೆ ‘ಧೂಪಛಾಂವ್’ ನೋಡಲು ಹೋಗುವುದೆಂದು ಹೇಳಿಹೋಗಿದ್ದ ವಸಂತನು ಇನ್ನೂ ಅದೇತಕ್ಕೆ ಬರಲಿಲ್ಲವೊ ಎಂದು ಯೋಚಿಸುತ್ತ ಕಿರುಮನೆಯಲ್ಲಿ ಶತಪಥ ಹಾಕತೊಡಗಿದಳು.

ಎಂಟು ಬಾರಿಸಿತು....ಇನ್ನೂ ಅವಳು ಹಾಗೆಯೆ ಶತಪಥ ಹಾಕುತ್ತಿದ್ದಳು. ನಾಲ್ಕು ಹೆಜ್ಜೆ ನಡೆಯುವಳು: ಕಿಟಕಿಯಲ್ಲಿ ಇಣುಕಿ ಕೆಳಗೆ ನೋಡುವಳು. ನಿರಾಶೆಯ ನೀಳವಾದ ಉಸಿರೊಂದನ್ನು ಹೊರಕ್ಕೆ ಹಾಕಿ ಮತ್ತೆ ಹಾಗೆ. ಹೀಗೆ ನಡೆದಾಡುವಳು. ಅಡಿಗೆಯವಳು ಮಧ್ಯೆ ನಾಲ್ಕಾರು ಬಾರಿ ಬಂದು ಊಟದ ಹೊತ್ತಾದುದನ್ನು ಸೂಚಿಸಿ ಹೋದುದು ಅವಳಿಗೆ ತಿಳಿಯಿತೊ ಇಲ್ಲವೊ ತಿಳಿಯದು....ಅಡಿಗೆಯವಳೇ ಅವಳ ಈ ವರ್ತನದಿಂದ ಏನು ಅರ್ಥ ಮಾಡಿಕೊಂಡಳೊ....ಅವಳು ಬಂದ ಹಾಗೆ ಹೊರಟು ನಡೆದಳು.



ವಸಂತನು ಕುಳಿತುಕೊಂಡು ಅವಳನ್ನು ಸಂತವಿಸತೊಡಗಿದನು.

ಅಡಿಗೆಯವಳು ಕೆಳಕ್ಕಿಳಿದು ಹೋಗಿ ನಿಮಿಷ ಅರೆನಿಮಿಷ ಕಳೆದಿರಲಿಲ್ಲ, ವಸಂತನು ಮೇಲಕ್ಕೇರಿ ಬಂದನು. ಬಂದವನೇ ಹುಶ್ಶಪ್ಪ ಎಂದು ಕುರ್ಚಿಯೊಂದರ ಮೇಲೆ ಕುಳಿತುಕೊಂಡನು. ಬಂದವರಾರೆಂದು ತಿಳಿದುಕೊಳ್ಳಲು ಅವಳು ಹೊರಳಿ ನೋಡಲೂ ಇಲ್ಲ. ಕಿಟಕಿಯಲ್ಲಿ ತಲೆಹಾಕಿ ನಿಂತಿದ್ದವಳು ಹಾಗೆಯೇ ನಿಂತಿದ್ದಳು.

“ಸರಳಾss” ವಸಂತನು ಕೂಗಿ ಕರೆದನು.

ವಸಂತನ ಧ್ವನಿ ಕಿವಿಯಲ್ಲಿ ಪ್ರವೇಶಿಸಿದೊಡನೆಯೆ ಸರಳೆಗೆ ಅದೆಷ್ಟು ಆನಂದವಾಯಿತೆಂಬುದು ತಟ್ಟನೆ ಬೇರೆಯಾದ ಅವಳ ಮೊಗದ ಮೇಲಿಂದ ತಿಳಿಯುವಂತಿದ್ದಿತು. ಮೆಲ್ಲಗೆ ಹೆಜ್ಜೆಗಳನ್ನಿಕ್ಕುತ್ತ ಮೇಜಿನ ಬಳಿ ಬಂದು ಎಡಗೈ ಅದರ ಮೇಲೂರಿ ಅವಳು ಮಾತನಾಡಿದಳು.

“ಗಂಡಸರು ನಿಜವಾಗಿಯೂ....ನಿಜವಾಗಿಯೂ ನಂಬುಗೆಗೆ ಅರ್ಹರಲ್ಲ!”

" ಅದೆಲ್ಲಾ ಇರಲಿ. ಸದ್ಯ ಹೊತ್ತಾಗಿ ಹೋಗಿದೆ. ಏಳು ವುದಿಲ್ಲವೆ ?" ಯಾವ ಭಾವವನ್ನೂ ಮೊಗದಲ್ಲಿ ಬರಗೊಡದೆ ವಸಂತನು ಹೇಳಿದನು.

ಸಲುಗೆಯ ರೋಷದಲ್ಲಿ ಸರಳೆಯು ನುಡಿದಳು.

" ಚಿತ್ರಪಟಕ್ಕೆ ಕರೆದೊಯ್ಯುವವರು ಇಷ್ಟು ಹೊತ್ತಿನ ವರೆಗೆ ಎಲ್ಲಿದ್ದಿರಿ? ನಾಲ್ಕು ಗಂಟೆಯಿಂದ ದಾರೀ ಕಾಯ್ದು ಕಾಯ್ದು ಕಾಯ್ದೆ. ಇನ್ನು...."

ಅವಳನ್ನು ಮಧ್ಯದಲ್ಲಿಯೆ ತಡೆದು ವಸಂತನು ಹೇಳಿದನು. ''ಹೊತ್ತಾಯಿತೆಂದು ಹೇಳಲಿಲ್ಲವೆ ಸರಳಾ! ನನ್ನ ತಪ್ಪುಗಳೇ ನಿದ್ದರೂ ಮರೆತುಬಿಟ್ಟು ಸದ್ಯ ಹೊರಡು ನೋಡೋಣ.''

ತಟ್ಟನೆ ಎದ್ದು, ಬದಿಯ ಕಿರುಮನೆಯಲ್ಲಿ ಹೊಗಿ ಒಟ್ಟೆ ಬದಲಾಯಿಸಿಕೊಂಡು ಸರಳೆಯು ಸಿದ್ಧವಾಗಿ ಬಂದಳು. ಮೆರವಣಿಗೆಯಲ್ಲಿ ನಡೆದ ಮದುವಣಗಿತ್ತಿಯ ಹಾಗಿದ್ದ ಆಗಿನ ಆಕೆಯ ವೇಷ ಕಂಡು ವಸಂತನು ಮನದಲ್ಲಿ ಏನನ್ನೊ ಯೋಚಿಸಿದನು. ಮೋರೆ ಹೊರಳಿಸಿ ಒಂದು ನಿಟ್ಟುಸಿರಿಟ್ಟನು.

ಮನೆ ದಾಟಿದರು....ಬೀದಿಯೂ ಕೊನೆಗಂಡಿತು. 'ಧೂಪ ಛಾಂವ್' ಪ್ರದರ್ಶಿಸಲಿದ್ದ ಕೃಷ್ಣ ಸಿನೇಮಾ ಹಿಂದುಳಿಯಿತು. ವಸಂತ ಪಿಟ್ಟೆನ್ನದೆ ಹಾಗೇ ನಡೆಯುತ್ತಲೇ ಇದ್ದನು. ಸರ ಳೆಯು ಮೌನವಾಗಿ ಅವನನ್ನನುಸರಿಸಿದ್ದಳು.

ಊರು ದಾಟಿ ದೂರ ಬಂದೆವೆಂದು ತಿಳಿಯುತ್ತಲೇ ಅವಳು ಆ ಕತ್ತಗಿನ ಕತ್ತಲೆಯಲ್ಲಿ ಕಣ್ಣು ಅತ್ತಿತ್ತ ಹೊರ ಳಿಸಿ ನೋಡಲು ಯತ್ನಿಸಿದಳು. ದೂರಿನಿಂದ ವಿದ್ಯುತ್ತಿನ ದೀವಿಗೆಯ ಕಿರಣಗಳು ಬಂದು ಅವಳ ಕಂಗಳಲ್ಲಿ ಮೂಡಿ ದಾಗ ಮಾತ್ರ ತಾವು ಸಿವ್ಹಿಲ್ ಹಾಸ್ಪಿಟಲ್ಲಿನ ಕಡೆ ನಡೆ ದುದು ಆಕೆಗೆ ತಿಳಿದು ಬಂದಿತು. ಏನೊಂದೂ ಶಬ್ದವನ್ನು ಚ್ಚರಿಸದೆ ಅವಳು ಸಾಗಿದ್ದಳು—ಅವಳಿಗೆ ತಿಳಿಯದಂತೆಯೆ ಅವಳ ನಾಲಗೆ ಗುಣುಗುಣಿಸುತ್ತಲಿದ್ದಿತು. "ತನನ ತನ ನಾನನಾ " ಎಂದು.

ಆಸ್ಪತ್ರೆಯ ಮಹಾದ್ವಾರವನ್ನು ಪ್ರವೇಶಿಸಿದುದೂ, ಅಲ್ಲಿಂದ ರೋಗಿಗಳಿರುವ ಹಾಲಿನ ಅರ್ಧ ಮೈಲಿನ ವರೆಗೆ ನಡೆದು ಹೋದುದೂ ಮೊಗಸಾಲೆಯ ಹತ್ತಾರು ಮೆಟ್ಟಲು ಗಳನ್ನೇರಿ ಒಳಗೆ ನಡೆದು ಸಾಲುಸಾಲಾಗಿದ್ದ ಮಂಚ ಗಳನ್ನು ನಿಟ್ಟಿಸುತ್ತ ಮುಂದೆ ಸಾಗಿದುದೂ ಅವಳ ಸ್ಮರಣೆ ಯಲ್ಲಿದ್ದಂತಿದ್ದರೂ ಸ್ಪಷ್ಟವಾಗಿ ನೋಡಿದ ಹಾಗೆ ಹೊಳೆ ಯುತ್ತಿರಲಿಲ್ಲ. ನಿದ್ರೆಯಲ್ಲಿ ನಡೆಯುವವರಂತೆ ಅವಳು ಅಲ್ಲಿಯವರೆಗೆ ನಡೆದು ಬಂದಿದ್ದಳು. ಆದರೆ ಮಂಚ ವೊಂದರ ಮೇಲೆ ಬಿದ್ದುಕೊಂಡಿದ್ದ ಎಲುವಿನ ಗೂಡಾ... ಮುದುಕನೊಬ್ಬನ ಚಿತ್ರವು ಅವಳ ಕಣ್ಣದೊಂ... ಪ್ರವೇಶಿಸುತ್ತಲೇ ಅವಳಿಗೆಚ್ಚರವಾಯಿತು. ಆದ... ಎಚ್ಚರವು ಅರಕ್ಷಣದ್ದು. "ಅಯ್ಯೋ ನನ್ನ ತಂದೆ... ಎಂದು ಕರುಳನ್ನು ಕೊರೆದು ಹೊರಟ ಧ್ವನಿದ್ದಿ... ಕೊಂಡು ಅವಳು ನೆಲದಮೇಲೆ ಬಿದ್ದುಬಿಟ್ಟಳು.

ಹಾಗಾಗಬಹುದೆಂದು ಮೊದಲೆ ಲೆಕ್ಕ ಹಾಕಿದ್ದ ವ... ತನು ಒಡನೆಯೆ ಅವಳನ್ನೆತ್ತಿಕೊಂಡನು. ಮೆಲ್ಲನೆ ... ಯಲ್ಲಿದ್ದ ಮಂಚದಮೇಲೆ ಮಲಗಿಸಿದನು.

ಕೊಂಚ ಹೊತ್ತಿನಲ್ಲಿಯೆ ಅವಳು ಕಣ್ದೆರೆದಳು.

" ಸರಳಾ....ಸರಳಾ....ಗಾಬರಿಯಾಗಬೇಡ. ಚಿಂ... ಕಾರಣವೇನೂ ಇಲ್ಲ. ನಿನ್ನ ತಂದೆಗೆ ಇನ್ನೂ ಆ... ವಿದೆಯೆಂದು ಡಾಕ್ಟರರು ಹೇಳಿದ್ದಾರೆ. ಅದು ಇ... ಮುಗಿದು ಹೋಗಿಲ್ಲ. ಅವರ ಜೀವನನಾಟಕದ ಕೊ... ಅಂಕವು ಈಗ ತಾನೆ ಪ್ರಾರಂಭವಾಗಿದೆ. ಕೊಂಚ ಧೈ... ತಾಳು. ಅವರು ನಿನಗೆ ಏನೇನನ್ನೊ ಹೇಳತಕ್ಕವ... ನಿಧಾನವಾಗಿ ಅದೆಲ್ಲವನ್ನು ಕೇಳಿಕೊಳ್ಳು. ಇ... ಕುರ್ಚಿಯ ಮೇಲೆ ಕೂಡು " ಹೀಗೆನ್ನುತ್ತ ಒತ್ತಾಯ... ಅವಳನ್ನು ಕುರ್ಚಿಯ ಮೇಲೆ ಕೂರಿಸಿದನು.

ಸರಳೆಯು ಬಾಗಿ ಮುದುಕ ತಂದೆಯನ್ನ ... ನೋಡಿದಳು. ಪ್ರಾಣವು ಕಣ್ಣುಗಳಲ್ಲಿ ಕಾಯ್ದಿರುವ... ಕಂಡು ಅವಳ ಕತ್ತು ಬಿಗಿದು ಬಂದಿತು. ಕ... ಕಾಲುವೆಯಾಗಿ ಹರಿಯದಿದ್ದರೂ, ಒಂದೆರಡು ... ಅವಳ ಕೆನ್ನೆಯ ಮೇಲಿನಿಂದ ಜಾರಿ ಕತ್ತಿನ ಮೇಲೆ ... ಬಿದ್ದುವು. ನಡುಗುವ ದನಿಯಲ್ಲಿ ಅವಳು ಮಾ... ದಳು.

" ಅಪ್ಪಾ........".

ಮುದುಕ ಮಿಸುಗಲಿಲ್ಲ....ತೆರೆದಿದ್ದ ಕಣ್ಣು... ಹಾಗೆಯೆ ಕೊಂಚ ದೊಡ್ಡದಾಗಿ ಮಾಡಿ, ಅವನ... ಯತ್ತ ನಿಟ್ಟಿಸಿದ ಹಾಗೆ ಮಾಡಿದನು. ಸರಳೆಯು... ಯಾಗಿ ನುಡಿದಳು.

" ಅಪ್ಪಾ....ನನ್ನೊಡನೆ ಮಾತನಾಡುವುದಿಲ್ಲವೆ!"

ಕಣ್ಣು ತೆರೆದಿದ್ದ ಹಾಗೆ ಮುದುಕನು ಒಮ್ಮೆ ಅವ... ತೀಕ್ಷ್ಣವಾಗಿ ನೋಡಿದನು. ಅದರಲ್ಲಿ ಜುಗುಪ್ಸೆ ... ತುಂಬಿದ್ದ ಹಾಗೆ ಕಂಡು ಬಂದಿತು. ಸರಳೆಯು ... ಳುತ್ತ ಹೇಳಿದಳು.

" ಅಪ್ಪಾ....ನನ್ನನ್ನು ಕ್ಷಮಿಸಿಬಿಡು....ನನ್ನ ತ...

ನಿದ್ದರೂ ಕ್ಷಮಿಸಿ ನನ್ನೊಂದಿಗೆ ಮಾತನಾಡು.....ಇಲ್ಲವೆ....? ಮಾತನಾಡುವುದಿಲ್ಲವೆ ?"

ಮುದುಕನ ಮೊಗದಲ್ಲಿ ಮರುಕ ಸುಳಿದಾಡಿದ ಹಾಗೆ ಕಂಡುಬಂದಿತು. ಅವನ ಕಿವಿಯ ಬಳಿ ಮುಖವನ್ನೊಯ್ದು ವಸಂತನು ಮಾತನಾಡಿದನು.

"ತಮ್ಮ ಸರಳೆ ಬಂದಿದ್ದಾಳೆ....ತಪ್ಪು ಏನಿದ್ದರೂ ಕ್ಷಮಿಸಿಬಿಡಿ ಎಂದು ಬೇಡುತ್ತಾಳೆ. ಮಧ್ಯಾಹ್ನ ನನಗೆ ಹೇಳಿದಂತೆ ನೀವೀಗ ಅವಳಿಗೆ ಏನೆಲ್ಲವನ್ನೂ ಹೇಳಿಬಿಡಿರಿ. ಬೇಕಾದರೆ ನಾನು ದೂರ ಹೋಗುವೆ" ಹೀಗೆಂದು ಅವನು ಸ್ವಲ್ಪ ದೂರ ಹೋಗಿ ಅಲ್ಲಿ ಕೆಲಸದಲ್ಲಿ ತೊಡಗಿದ್ದ ಆಸ್ಪತ್ರೆಯ ದಾದಿಯೊಂದಿಗೆ ಮಾತನಾಡತೊಡಗಿದನು.

"ಅವರು ಉಳಿಯುವ ಆಶೆ ಇಲ್ಲವೆ ?" ಆಶೆ ಬೆರತ ದನಿಯಲ್ಲಿ ಅವನು ಕೇಳಿದನು.

ದಾದಿಯು ಮೊಗದಿರುಹುತ್ತ ಹೇಳಿದಳು.

"ನನಗಂತೂ ಹಾಗೆ ತೋರುವುದಿಲ್ಲ"

"ಅದು ಯಾಕೆ ?"

"ಅವರ ಮೆದುಳಿಗೂ ದೇಹಕ್ಕೂ ಕೂಡಿಯೆ ಪೆಟ್ಟು ಬಿದ್ದಿದೆ. ಶರೀರವನ್ನು ಸುಧಾರಿಸುವುದು ಶಕ್ಯವಿದ್ದರೂ ಇರಬಹುದು. ಆದರೆ ಮೆದುಳು ಸುಧಾರಿಸುವುದು ಶಕ್ಯ— ಎಂಬ ಶಬ್ದವನ್ನುಳಿದ ಮಾತು. ಆ ಜೀವ ಇನ್ನೇನು ಒಂದೆರಡು ಗಂಟೆ ಈ ಅಸ್ಥಿಪಂಜರವನ್ನು ಕೂಡಿಕೊಂಡಿರಬಹುದು ಅಷ್ಟೆ"

ವಸಂತನ ಮೊಗವನ್ನು ಉದಾಸೀನತೆಯ ಕಾರ್ಮೋಡಗಳು ಮುತ್ತಿಕೊಂಡುವು.

ಕುರ್ಚಿಯೊಂದರ ಮೇಲೆ ಕುಳಿತುಕೊಳ್ಳುತ್ತಿರುವಾಗಲೆ ಸರಳೆಯು ಬಿಕ್ಕುತ್ತ ಬಿಕ್ಕುತ್ತ ಬಂದು ಅವನ ಎದೆಯ ಮೇಲೆ ಕೈಯಿಟ್ಟಳು.

ವಸಂತನು ಹಾರಿಬಿದ್ದು ಎದ್ದುನಿಂತನು. ಅವಳ ಕೈಗಳೆರಡನ್ನು ಗಟ್ಟಿಯಾಗಿ ಹಿಡಿದು ನಡುಗುವ ದನಿಯಲ್ಲಿ ಕೇಳಿದನು.

"ಏನಾಯಿತು ? ಏನಾಯಿತು ಸರಳಾ...."

ಬಿಕ್ಕುಗಳೊಂದಿಗೆ ಮಾತು ಹೊರಕ್ಕೆ ಬಂದಿತು.

"ಅಪ್ಪ ಹೋದರು...."

ಅಪ್ಪ ಹೋದರು....ಹೋದರು....ಎಂತಹ ಮಾತು ಅದು....ಸಿಡಿಲು....ಅದು ಬಾಣವಾಗಿ ವಸಂತನ ಕಿವಿಯನ್ನು ಸೇರಿತು. ಕತ್ತಿಯಾಗಿ ಆತನ ಹೃದಯವನ್ನು ಇರಿಯಿತು. ವಸಂತನು ಹುಚ್ಚನಂತೆ ನಡೆದು ಮಂಚದ ಬಳಿ ಬಂದನು. ಕೈಗಳನ್ನು ಮುಟ್ಟಿಮುಟ್ಟಿ ನೋಡಿದನು. ಎದೆಯನ್ನು ಹಿಡಿದು ಹಿಡಿದು ಪರಿಕಿಸಿದನು. ಹೃದಯದ ಹೊಡೆತವು ಪೂರ್ತಿಯಾಗಿ ನಿಂತು ಹೋಗಿದ್ದುದು ಕಂಡು ಬಂದಿತು.... "ಹೋಯಿತು...." ಎಂಬ ಶಬ್ದದೊಡನೆ ನೀಳವಾದ ಉಸಿರೊಂದನ್ನು ಹೊರಕ್ಕೆ ಹಾಕಿ ದಪ್ಪನೆ ಕುರ್ಚಿಯ ಮೇಲೆ ಕುಳಿತುಕೊಂಡನು. ಸರಳೆಯು ಮೌನವಾಗಿ ಅವನ ಬಳಿಯಲ್ಲಿಯೆ ನಿಂತಿದ್ದಳು.

ಆ ಜೀರ್ಣದೇಹವು ಮಣ್ಣಿನೊಂದಿಗೆ ಬೆರೆತು ಹೋಗಬೇಕಾದರೆ ನೂರು ಗಂಟೆಯಾಗಿದ್ದಿತು. ಔದಾಸೀನ್ಯದ ಪ್ರತಿಮೆಗಳಂತಿದ್ದ ಸರಳಾ ವಸಂತರು ಮೆಲ್ಲಮೆಲ್ಲಗೆ ಹಜ್ಜೆಯಿಕ್ಕುತ್ತ ಹಾಸ್ಪಿಟಲ್ಲಿನ ಮಹಾದ್ವಾರದಿಂದ ಹೊರಬಿದ್ದರು. ಸರಳೆಯು ವಸಂತನ ಕೈಯನ್ನು ಬಿಗಿಯಾಗಿ ಹಿಡಿದಿದ್ದಳು.

"ಇನ್ನು ಹೇಗೆ ಮಾಡುವುದು....ನನ್ನ ತಂದೆಯಂತೂ ನನ್ನನ್ನು ಬಿಟ್ಟು ದೂರ ಹೋದರು. ದೂರ ದೂರ ಹೋದರು...." ಸರಳೆಯು ಗದ್ಗದ ಸ್ವರದಲ್ಲಿ ನುಡಿದಳು.

"ತಂದೆ ಹೋದರೆ ?" ವಸಂತನು ಮೆಲ್ಲಗೆ ಕೇಳಿದನು.

"ನಾನು ಪರದೇಶಿ....ಅನಾಥೆ....ದಿಕ್ಕಿಲ್ಲದವಳಾದೆನಲ್ಲ!" ಸರಳೆಯ ಅಳು ಉಕ್ಕಿ ಬಂದಿತು. ಅವಳು ಬಿಕ್ಕತೊಡಗಿದಳು.

"ತ್ಚ ! ಹುಚ್ಚೀ ! ಹುಚ್ಚಿ ನೀನು ! ಇಷ್ಟಕ್ಕೆಲ್ಲಾ ಅಳುವರೆ ? ನಾನಿಲ್ಲವೆ ನಿನ್ನ ಬೆಂಬಲಕ್ಕೆ....ನನ್ನ ಮೇಲೆ ವಿಶ್ವಾಸವಿಲ್ಲವೆ ನಿನ್ನದು? ಝುಬ್ಬೂ....ಝುಬ್ಬೂರಾಯರು ಹೊರಟು ಹೋದರು....ಮಧ್ಯಾಹ್ನ ಸ್ಟೇಶನ್ನಿನಲ್ಲಿ ಬಂಡಿ ಇಳಿದಾಗಲೆ ನನಗವರ ಗುರುತು ಹತ್ತಿತು. ಅವರೂ ನನ್ನನ್ನು ಗುರುತಿಸಿದರು."

"ನಿಮ್ಮ ಅವರ ಪರಿಚಯವಾದುದು ಹೇಗೆ ?"

"ಅದೊಂದು ದೊಡ್ಡ ಇತಿಹಾಸ. ಹೇಗೋ ಏನೋ ಒಂದು ದಿನ ಕಾರಕೂನ ರಾಮರಾಯರ ಅತಿಥಿಯಾಗಿರುವ ಸಮಯ ಬಂದಿದ್ದಿತು. ಆಗ ಅವರ ಭೆಟ್ಟಿಯಾಗಿದ್ದಿತು. ರಾಮರಾಯರ ಮುಖದಿಂದ ಅಷ್ಟು, ಅವರ ಮುಖದಿಂದ ಅಷ್ಟು ಅಂತೂ ಅವರ ಕತೆ ಬರೆಯುವ ಹೊತ್ತು ಬಂದಿದ್ದಿತು. ಆದರೆ ಆ ಕತೆ ಇನ್ನೂ ಮುಗಿದಿರಲಿಲ್ಲ. "ಮಗಳನ್ನು ಒಮ್ಮೆ ನೋಡಿ ಕಣ್ಣು ಮುಚ್ಚುವೆ" ಎಂದವರು ನನಗಂದು ಹೇಳಿದ್ದರು. ನೀನು ಅವರ ಮಗಳೇ ಎಂದು ನನಗಾಗ ಎಲ್ಲಿ ತಿಳಿದಿದ್ದಿತು? ಇಲ್ಲಿ ಬಂಡಿ ಇಳಿದಾಗ ಅವರು ನಿನ್ನ ಹೆಸರು ಮೊದಲಾದುದನ್ನು ಹೇಳಿ ಭೆಟ್ಟಿ ಮಾಡಿಸಿಕೊಟ್ಟರೆ ಬಹಳ ಉಪಕೃತನಾಗುವೆ ಎಂದು ಹೇಳಿಕೊಂಡ

ದ್ದರಿಂದ ಅವರನ್ನು ಕರೆದುಕೊಂಡು ನೇರವಾಗಿ ನಿನ್ನೆಡೆಗೆ ಬರುತ್ತಿದ್ದೆ. ಆದರೆ ಅವರಿಗೆ ನಡೆಯಲು ಕೂಡ ಬರುತ್ತಿರ ಲಿಲ್ಲ. ಟಾಂಗಾದಲ್ಲಿ ಕೂಡ ಕುಳಿತುಕೊಳ್ಳಲು ಬರದ ಹಾಗಾಗಲು ಅಲ್ಲಿಯೆ ಇದ್ದ ಆಸ್ಪತ್ರೆಗೊಯ್ದು ಮುಟ್ಟಿ ಸಿದೆ....ಆದರೆ ಇಷ್ಟು ಸಮಯದಲ್ಲಿಯೆ ಹೀಗಾಗಿ ಹೋಗುವು ದೆಂದು ನಾನೆಣಿಸಿರಲಿಲ್ಲ. ಸರಳೇ, ಈ ಜನುಮದಲ್ಲಿ ನೀನು ಒಂದು ಮಹಾಪಾಪವನ್ನೆಸಗಿದೆ....ನೀನು ನಿನ್ನ ತಂದೆ ಯನ್ನು ಏತಕ್ಕಾಗಿ ತ್ಯಜಿಸಿದೆ ? ”

ನಡುಗುತ್ತಿರುವ ಧನಿಯಲ್ಲಿ ಸರಳೆಯು ಹೇಳಲು ತೊಡ ಗಿದಳು.

“ ನಾನವನನ್ನು ಬೇಕೆಂತ ತ್ಯಜಿಸಲಿಲ್ಲ. ವಸಂತ, ಆದೇ ತಕ್ಕೊ ಏನೊ ಮೊದಲಿನಿಂದಲೂ ನನಗೆ ಆತನ ಮೇಲೆ ಅಷ್ಟೊಂದು ಮಮತೆ ಇರಲಿಲ್ಲ. ನನ್ನ ತಾಯಿ ತೀರಿಹೋದ ಮೇಲೆ ಅದು ಇನ್ನೂ ಕಡಮೆಯಾಯಿತು. ಅವನನ್ನು ತುಂಬಾ ಅಸಡ್ಡೆಯಿಂದ ಕಾಣುತ್ತಿದ್ದೆ. ಆದೇತಕ್ಕೆಂದರೆ ಅವನೂ ನನ್ನನ್ನು ತುಂಬ ಜುಗುಪ್ಸಾಭಾವದಿಂದ ನೋಡುತ್ತಿದ್ದ. ನಾನು ಉಂಡರೆ ಸೇರುವಹಾಗಿಲ್ಲ; ಉಟ್ಟರೆ ಸೇರುವಹಾಗಿಲ್ಲ. ತಾಯಿ ತೀರಿಹೋಗಿ ಇನ್ನೂ ಎಂಟು ದಿನ ಕೂಡ ಸಂದಿರಲಿಲ್ಲ. ನಾನು ಹಾಯಸ್ಕೂಲಿಗೆ ತರಹೆನ್ನಬೇಕಾಯಿತು. ತಂದೆಯ ಕೈಲಿ ಕಾಸಿಲ್ಲದ್ದೇ ಅದಕ್ಕೆ ಕಾರಣ. ಕುಡುಕರ ಹತ್ತಿರ ಕೊಪ್ಪರಿಗೆ ಹಣವಿದ್ದರೂ ಸಾಲದು ಎಂದು ನೀನೇ ಒಂದು ಕತೆಯಲ್ಲಿ ಹೇಳಿಲ್ಲವೆ? ಹಾಗೇ....ತೀರ ಹಾಗೇ ಆಯಿತು ನನ್ನ ತಂದೆಯ ಗತಿ ! ಎರಡು ತಿಂಗಳಲ್ಲೆ ಎಲ್ಲಾ ಹಣ ವನ್ನೂ ಹೆಂಡದಂಗಡಿಯವನ ಪಾಲು ಮಾಡಿ ಸ್ವಾರಿ ಆದೊಂದು ದಿನ ಎಲ್ಲಿಯೊ ಮಾಯವಾಯಿತು. ಮನೆಯಲ್ಲಿ ಚಿಕ್ಕಾಸೂ ಇರಲಿಲ್ಲ. ವಸ್ತ್ರ-ಒಡವೆಗಳೆಂದರೆ ಇದ್ದು ಬಿದ್ದ ನಾಲ್ಕಾರು ಗಡಿಗೆಗಳು ಹರಕುಕರಕು ಆರಿವೆ ತುಂಡುಗಳು ಇವಿಷ್ಟೆ. ಮುಂದೆ ಹೊಟ್ಟೆಯ ಗತಿ ಏನು ಎಂಬ ಪ್ರಶ್ನೆ.— ವಸಂತಾ, ಇದೇ ನನ್ನನ್ನು ಮನೆ ತ್ಯಜಿಸಲು ಕಾರಣವಾ ಯಿತು—ಆಯಿತು. ಅಂದೇ ಮನೆಬಿಟ್ಟು ಹೊರಟೆ. ಎಲ್ಲಿಗೆ. ಹೋಗುವುದು....ಏನನ್ನು ಮಾಡುವುದು....ಎಂಬ ಯೋಚನೆ ಬಂದಿತು. ಆ ಯೋಚನೆ ಪ್ರತ್ಯಕ್ಷವಾಗಿ ನಾನು ಈ ವೇಷ ತಳೆದೆ. ”

ಅವಳನ್ನು ಮಧ್ಯದಲ್ಲಿಯೆ ತಡೆದು ವಸಂತನು ಕೇಳಿದನು. “ ನಿನ್ನ ತಂದೆಗೆ ಅಷ್ಟು ದುಡ್ಡೆಲ್ಲಿಂದ ದೊರಕಿತ್ತು ಸರಳಾ ? ”

“ ಅದೇ ! ಇಷ್ಟು ದಿನ ನಿನ್ನ ಮುಂದೆ ಒಡನುಡಿಯದ ವಿಷಯವನ್ನು ಈಗ ಹೇಳಿಯೇ ಬಿಡುವೆ. ಬಚ್ಚಿಟ್ಟು ಪ್ರಯೋಜನವಾದರೂ ಏನಿದೆ ?....ಆತನೇ ಹೋಗಿಬಿಟ್ಟ. ವಸಂತ, ಆ ದುಡ್ಡು ಹೇಗೆ ಕೂಡಿತ್ತು ಗೊತ್ತೇ? ಜೂಜಾಡಿ........ವೇಶ್ಯೆಯರ ಕೊಲೆಮಾಡಿ....ಕಳವು.... ಇನ್ನೂ ಇಂತಹವೇ ಎಷ್ಟೆಷ್ಟು ಕೃತ್ಯಗಳಿಂದ ಹಣ.... ಅದನ್ನು ಕೂಡಿಸಿದ್ದ. ಆದರೆ ತಾನು ಹಾಗೆ ಮಾಡಿದ್ದಕ್ಕೆ ಆತನಿಗೆ ಹಿಂದಿನಿಂದ ಪಶ್ಚಾತ್ತಾಪವುಂಟಾಗಿದ್ದಿತು.... ವಾಗಿಯೂ ಹೇಳುತ್ತೇನೆ ವಸಂತ,....ಆತನಿಗೆ ನಿಜವಾಗಿ.... ತನ್ನ ಪಾಪಗಳಿಗಾಗಿ ದಿನವೂ ಪಶ್ಚಾತ್ತಾಪವು.... ದ್ದಿತು. ಆ ಪಾಪದ ಹಣವನ್ನು ಹಾಗೇ ಇಡಕೂಡ.... ಏನೋ....ಅದನ್ನೆಲ್ಲ ಸುರೆಯ ಕಾಲಲ್ಲಿ ಧ್ವಂಸಗೊಳಿ.... ಈಚೀಚಿಗೆ ಅವನಿಗೆ ಹುಚ್ಚಿನ ವಾಸನೆಯೂ ಕೊಂಚ.... ಬಡಿಯುತ್ತಿದ್ದಿತು. ಒಂದೊಂದು ರಾತ್ರಿ ನಿದ್ರೆ.... ಎಚ್ಚತ್ತು ಸಿಕ್ಕಸಿಕ್ಕ ಹಾಗೆ ಮಾತಾಡುತ್ತ ಬುಳ್ಳ.... ನೀನು ಕತೆಯಲ್ಲಿ ಹೇಳಿದ ಹಾಗೆ ತನ್ನ ತಾಯಿ.... ವಿಷಯವಾಗಿ ಇದ್ದದ್ದು ಒಂದು....ಇಲ್ಲದ್ದು ಒಂ.... ಬಡಿಸುತ್ತಿದ್ದ. ನಿಜವಾಗಿಯೂ ನನ್ನ ಅಜ್ಜ ಒಂದು.... ಮನೆತನದವರು. ಅವರಿಗೆ ತಿನ್ನಲು ಉಣ್ಣ.... ಯಿರಲಿಲ್ಲ. ಮೇಲಾಗಿ ನನ್ನ ತಂದೆ ಅವರಿಗೆ.... ಮಗ. ಅತನನ್ನು ಬೇಕಾದಷ್ಟು ಸುಖದಲ್ಲಿಟ್ಟ.... ಚಿಕ್ಕತನದಲ್ಲಿಯೆ ಪೋಲಿಗಳ ಸಹವಾಸಕ್ಕೆ.... ನನ್ನ ತಂದೆ ಅವರು ಕೂಡಿಟ್ಟ ಹಣವನ್ನೆಲ್ಲ.... ಸ್ಥಿಗೆ ಬರುವಷ್ಟರಲ್ಲಿ ಹಾಳುಮಾಡಿಬಿಟ್ಟ. ಮುಂದೆ.... ಕಳವು ಮುಂತಾದ ಕೃತ್ಯಗಳಿಗಾರಂಭವಾಯಿತು.... ಕೊಂಚಕೊಂಚವಾಗಿ ಬುದ್ಧಿ ತಲೆದೋರಿ ಬೇಕಾದ್ದ.... ವನ್ನು ಕೂಡಿಸಿದ. ಅದನ್ನೆ ಯಾವುದಾದರೊಂದು.... ದಲ್ಲಿ ತೊಡಗಿಸಿ ಸುಖವಾಗಿ ಕಾಲಕಳೆಯಬಹು.... ಸುಖವು ನಮ್ಮ ದೈವದಲ್ಲೆ ಇಲ್ಲವೆಂದು ನನ್ನ.... ಎಷ್ಟೋ ವರುಷಗಳ ವರೆಗೆ ಕಣ್ಣೀರು ಕರೆದು.... ಕಣ್ಣೀರಿನಿಂದಲೆ ಅವಳ ರಕ್ತವೆಲ್ಲವೂ ಹರಿದು.... ಅವಳು ಕೊನೆಗೆ ಪ್ರಾಣ ತ್ಯಜಿಸಿದಳು. ”

ಅವಳಿಗೆ ಮುಂದೆ ಹೇಳಲಾಗಲಿಲ್ಲ. ಎಷ್ಟೋ.... ಗಳಿಗೆ ಹಿಂದೆ ಮಾಯವಾದ ಮಮತೆಯ ಮೂರ್ತಿ.... ತನ್ನ ತಾಯಿಯನ್ನು ನೆನಸಿಕೊಂಡು ಅವಳ ದುಃಖ.... ಬಂದುಬಿಟ್ಟಿತು. ಬಿಕ್ಕುಗಳ ರೂಪವಾಗಿ ಅದು.... ಹೊಮ್ಮಲು ಮೊದಲು ಮಾಡಿತು. ವಸಂತನು.... ಸರಳೆಯ ತಂದೆಯ ಕರ್ಮಕತೆಯನ್ನೆಲ್ಲ ಕೇಳಿ.... ಏನೆನ್ನಿಸಿದ್ದಿತೊ, ಅವನು ಮೌನವಾಗಿ ನಡೆಯುತ್ತಿ....

ಇಷ್ಟು ಹೊತ್ತಿಗೆ ಮನೆಯು ತೀರ ಸನಿಯದಲ್ಲಿ ಬಂದು ಬಿಟ್ಟಿದ್ದಿತು.

ಕೈಕೊಟ್ಟು ಸರಳೆಯನ್ನು ಮೆಟ್ಟಲು ಏರಿಸಿ ವಸಂತನು ಮೇಲಕ್ಕೆ ಕರೆತಂದನು. ಇದಿರಿಗಿದ್ದ ನಿಲುವುಗನ್ನಡಿಯ ಮೇಲೆ ತೂರಿದ್ದ ಪೆಟ್ರೊಮ್ಯಾಕ್ಸ ದೀವಿಗೆಯ ಕಿರಣಗಳು ಬಂದು ಅವಳ ಮೋರೆಯ ಮೇಲೆ ಬಿದ್ದಾಗ, ವಸಂತನಿಗೆ ಅವಳ ಗುರುತೇ ಸಿಗಲಿಲ್ಲ. ಇವಳು ಸರಳೆಯೆ ಅಹುದೇನು.... ಎಂಬ ಭ್ರಮೆಯೂ ಅವನಲ್ಲಿ ಕ್ಷಣಕಾಲ ಮೂಡಿ ಮಾಯವಾಯಿತು. ರತ್ನಗಂಬಳಿಗೆ ಕಾಲು ತುಸು ತಾಕಿದುದೇ ತಡ. ಸರಳೆಯು ಅದರ ಮೇಲೆ ದೊಪ್ಪನೆ ಕುಸಿಬಿದ್ದಳು.

ವಸಂತನು ಕುಳಿತುಕೊಂಡು ಅವಳನ್ನು ಸಂತವಿಸತೊಡಗಿದನು. ಬಹಳ ಬಲವಂತ ಮಾಡಿ ಅವಳನ್ನೊಂದು ಬಾರಿ ಮಂಚದ ಮೇಲೊಯ್ದು ಮಲಗಿಸಿದನು. ಭ್ರಾಂತಿ ಬಡಿದುಕೊಂಡವರಂತೆ ಅವಳು ಅಲ್ಲಿ ಬಿದ್ದುಬಿಟ್ಟಳು.'

ಕೋಟಿನ ಜೇಬಿಗೆ ಕೈಹಾಕಿ ವಸಂತನು ಆ ಕಾಗದದ ಕಟ್ಟನ್ನು ಹೊರಕ್ಕೆ ತೆಗೆದನು. ಕುರ್ಚಿಯ ಮೇಲೆ ಕುಳಿತುಕೊಂಡು ಸರಸರನೆ ಬರೆಯತೊಡಗಿದನು.

"ಈ ಕತೆ!....ಅಹುದು....ಇದೊಂದು ಕತೆಯೇ ಆಗಿ ಹೋಯಿತು....ಝುಬ್ಬುವಿನ ಜೀವನ....ಆ ಜೀವನ ಮುಗಿದುಹೋಯಿತು....ಎಷ್ಟೋ ಗೊಂದಲದಿಂದ ಅದು ತುಂಬಿದ್ದರೂ, ಶಾಂತಿಯಿಂದ ಕೊನೆಗಂಡಿತು. ಇನ್ನು ಸರಳೆಯ ಪ್ರಶ್ನೆ....ಅದೊಂದು ಬಿಡಿಸಲಾರದ ತೊಡಕಾಗಿದೆ ನನಗೆ. ಇಂದೇ ಬಂದ ತಂದೆಯ ಓಲೆ ನನ್ನ ಹಾಗೂ ಸರಳೆಯ ಮದುವೆಗೆ ಜೆಂಕಿಹಾಕುತ್ತಲಿದೆ. ಏನು ಮಾಡುವುದು.... ಅಲ್ಲಿ ಲಗ್ನದ ಸಿದ್ಧತೆಯೇ ನಡೆದಿದೆ ಎಂದರೂ ಅಡ್ಡಿ ಇಲ್ಲ. "ಲಗ್ನವಾಗಬೇಕು: ಇಲ್ಲವೆ ದತ್ತಕದ ಹಕ್ಕನ್ನು ಬಿಟ್ಟುಕೊಡಬೇಕು"—ಲಗ್ನ!....ಅದೊಂದು ಎರಡಕ್ಷರದ ಶಬ್ದವಾದರೂ ನೂರಕ್ಷರದ ಶಬ್ದಕ್ಕಿಂತ ಅರ್ಥಪೂರ್ಣವಾಗಿದೆ. ಆ ಲಗ್ನವೆಂಬ ಶಬ್ದದಲ್ಲಿ ಒಂದು ಕಾದಂಬರಿಗಿಂತಲೂ ಹೆಚ್ಚಾಗಬಹುದಾದಷ್ಟು ಅರ್ಥ ತುಂಬಿಕೊಂಡಿದೆ. ಇಂತಹ ಲಗ್ನವನ್ನು ಸಾಮಾನ್ಯವಾಗಿ ಯಾರನ್ನೂ ಕೇಳದೆ—ಯಾರನ್ನು ಏಕೆ?—ಲಗ್ನವಾಗಲಿರುವ ನನ್ನನ್ನು ಕೂಡ ಕೇಳದೆ ನಿಶ್ಚಯಿಸುತ್ತಾರೆ ನನ್ನ ದತ್ತಕಿನ ತಂದೆ! ನಾನು ದತ್ತಕ್ಕೆ ಹೋಗಿ ನನ್ನ ಕೈಯಿಂದಲೇ ನನ್ನ ಕಾಲಲ್ಲಿ ಸಂಕೋಲೆ ಜಡಿದುಕೊಂಡೆನು. ಹಿರಿಯರು ಹೋಗೆಂದರು....ಅಹುದು.... ಅದೂ ನಿಜ. ಆದರೆ ನಾನು ಒಲ್ಲೆ ಎಂದಿದ್ದರೆ ಅವರೇನು ಬಲಾತ್ಕಾರದಿಂದ ನನ್ನನ್ನೀ ಕಾರಾಗೃಹದಲ್ಲಿ ನೂಕುತ್ತಿದ್ದರೇ? ಸಿರಿವಂತಿಕೆ ದೊರೆಯಬೇಕೆಂದು ನಾನೇ ಅದರಲ್ಲಿ ಪ್ರವೇಶಮಾಡಿಕೊಂಡೆನು. ಚಿನ್ನದ ಪಂಜರದಲ್ಲಿ ಬಂಧಿಸಿಟ್ಟಿದ್ದ ಹಕ್ಕಿಯಂತಾಗಿದೆ ಈಗ ನನ್ನ ಬಾಳುವೆ! ಕಾಲೇಜಿನ ನೆವಮಾಡಿ ಇಲ್ಲಿಗೆ ಬಂದೆ. ಆದರೆ ಅದೂ ಒಂದು ರೀತಿಯಿಂದ ನಿರುಪಯೋಗಿಯೇ ಆಯಿತು. ಸರಳೆಯ ಸಹವಾಸ!....ಅಭ್ಯಾಸವಂತೂ ಇಲ್ಲವೆ ಇಲ್ಲ....ಬಿ. ಎ. ಆಗುವ ಲಕ್ಷಣವೂ ತೋರುವುದಿಲ್ಲ....ಇಂತಹದರಲ್ಲಿ ನಾನೀಗ ಏನನ್ನು ಮಾಡಲಿ?....ದತ್ತಕಿನ ಹಕ್ಕು ಬಿಟ್ಟು ಬಿಡಲೇ?—ಬಿಟ್ಟು....? ಮುಂದೇನು ಮಾಡುವುದು....? ಬಿಟ್ಟೊಡನೆ ಕಾಲೇಜಿಗೆ ಶರಣೆನ್ನಬೇಕಾಗುವುದು. ಕೆಲಸವೊಂದನ್ನು ದೊರಕಿಸಬೇಕಾಗುವುದು....'ಕೆಲಸ' ಎಂಬ ಶಬ್ದ ಹೃದಯವನ್ನು ಸೇರುತ್ತಲೆ ಸುರಂಗ ಹೊಕ್ಕಂತಾಗುತ್ತದೆ. ಕೆಲಸ! ಕೆಲಸ! ಎಂದು ಭಾರತದಲ್ಲಿನ ಲಕ್ಷಾವಧಿ ಜನರು ಕೂಗಿ ಕಿರಿಚುತ್ತಿರುವಾಗ ನನಗೆ ಕೆಲಸ ದೊರೆಯುವ ಬಗೆ ಏನು? ನನ್ನ ಹೊಟ್ಟೆ ತುಂಬುವುದೆಂತು?....ನನ್ನನ್ನಾಶ್ರಯಿಸಿರುವ ಈ ಜೀವದ ಹೊಟ್ಟೆ....? ಅವಳಿಗೆ ನಾನು ಏನೇನೊ ವಚನಗಳನ್ನಿತ್ತೆನು. ಪ್ರೇಮದ ದೊಡ್ಡದೊಡ್ಡ ಮಾತುಗಳನ್ನಾಡಿ ಅವಳನ್ನು ನನ್ನವಳನ್ನಾಗಿ ಮಾಡಿಕೊಂಡೆನು. ವೇಶ್ಯಾವ್ಯವಸಾಯವನ್ನು ಉದ್ಯೋಗವನ್ನಾಗಿ ಕೈಕೊಳ್ಳಲಿದ್ದ ಅವಳನ್ನು ತಡೆದು ನನ್ನ "ಜನುಮದ ಜತೆಗಾರ್ತಿ"ಯಾಗಲು ಒಡಂಬಡಿಸಿದೆನು. ಅವಳ ತಂದೆಯು ಹಾಗೇ ಹೇಳಿರಬೇಕು. ಅಂತ್ಯಕಾಲದಲ್ಲಿ ಆತನು ಅದನ್ನೇ.... ನಂಬಿ ಶಾಂತವಾಗಿ ಪ್ರಾಣಬಿಟ್ಟಿರಬೇಕು. ಅವಳನ್ನು ಲಗ್ನವಾಗುವುದೇ? ಬಿಡುವುದೇ?....ಒಂದೂ ನಿಶ್ಚಿತವಾಗಲೊಲ್ಲದು....ಏನು ಮಾಡಲಿ?....ನನಗೆ ಇವೆರಡರಲ್ಲಿ ಯಾವುದು ಸರಿಯೆಂದು ಹೇಳಿಕೊಡುವವರಾರು? ಯಾರು....ಯಾರು.... ಯಾರು?".

ಇಷ್ಟಕ್ಕೆ ಅವನ ಲೆಕ್ಕಣಿಕೆ ತಡೆದು ನಿಂತಿತು. ಉದ್ವೇಗದಿಂದ ಎದ್ದು ಗೋಡೆಗೆ ತೂಗು ಹಾಕಿದ್ದ ದೊಡ್ಡದೊಂದು ಭಾವಚಿತ್ರದ ಮುಂದೆ ಹೋಗಿ ನಿಂತು ತೀವ್ರಸ್ವರದಲ್ಲಿ ಹೇಳತೊಡಗಿದನು....

"ಹೇಳು....ಹೇಳು....ಗಾಂಧೀ, ಮಹಾತ್ಮಾ ಗಾಂಧೀ.... ಹೇಳು ಹೇಳು. ಭಾರತದ ಮಹಾಯೋಗಿಯೆನಿಸಿದ ನೀನು ನನಗಿಷ್ಟು ಮಾರುತ್ತರವೀಯಲಾರೆಯಾ?.... ಗಾಂಧೀ ಅಯ್ಯೋ ಗಾಂಧೀಜೀಽಽ"

ಸರಳೆ ಅತ್ತ ಹೊರಳಿ ನೋಡಿದಳು. ಒಂದೇ ಕ್ಷಣ.... ಇಬ್ಬರ ದಿಟ್ಟಿಗಳು ಕ್ಷಣಕಾಲ ಕೂಡಿದ್ದುವು. ವಸಂತನು

ಧಾವಿಸಿ ಹೋದನು. ಅವಳ ಕೈ ಗಟ್ಟಿಯಾಗಿ ಹಿಡಿದು ಕೊಂಡು ಹೇಳಿದನು.

"ಸರಳಾ....ಪ್ರಿಯ ಸರಳಾ....ನೀನು ಏನೊಂದೂ ಭಾವಿಸಿಕೊಳ್ಳಬೇಡ. ಸುಮ್ಮನೆ....ಸ್ವಸ್ಥವಾಗಿ ಮಲಗಿರು. ನಿನಗೆ ಇಷ್ಟರಲ್ಲೆ ಅತಿಯಾದ ಶ್ರಮವಾಗಿದೆ." ಹೇಳುತ್ತ ಹೇಳುತ್ತ ಶಾಲನ್ನೆಳೆದು ಅವಳ ಮೈಮೇಲೆ ಹೊದ್ದಿಸಲು ಹೋದನು. ಸಹಜವಾಗಿಯೆ ಅವಳ ಎದೆಗೆ ಅವನ ಕೈ ತಾಕಿತು. ವಸಂತನು ಹಾರಿಬಿದ್ದು ಕೇಳಿದನು.

"ನಿನಗೆ....ಸರಳಾ....ಜ್ವರ ತುಂಬಿದೆ ನಿನಗೆ!"

ಸರಳೆಯು ಮೃದುವಾಗಿ ಕ್ಷೀಣವಾದ ನಗು ಬೀರಿದಳು.

"ಬೆಳಗಾಗುತ್ತಿದೆ ನೋಡು ಸರಳಾ....ಈಗಲೆ ಡಾಕ್ಟರನ್ನು ಕರೆದುಕೊಂಡು ಬರುವೆ. ಸ್ವಸ್ಥವಾಗಿ ಮಲಗಿರು ತಿಳಿಯಿತೇ."

ಮಾರುತ್ತರದ ದಾರಿ ನೋಡದೆ ಅವನು ಹೊರಟು ನಡೆದನು.

ಡಾಕ್ಟರನ್ನೊಡಗೊಂಡು ಮನೆಯ ಮೆಟ್ಟಲು ಹತ್ತುತ್ತಿದ್ದಾಗ ಎಂಟು ಗಂಟೆಯಾಗಿದ್ದಿತು. ಏನೇನಾಗಿದೆಯೊ ಎಂಬ ಭೀತಿಯಿಂದಲೇ ದಡದಡನೆ ಮೆಟ್ಟಲು ಏರಿ ಒಳಕ್ಕೆ ಬಂದನು. ಸರಳೆಯು ಯಾವುದೋ ಕಾಗದವನ್ನು ಸರ್ರನೆ ಮುದುಡಿಸಿ ತನ್ನ ಬ್ಲಾವುಜಿನ ಜೇಬಿನಲ್ಲಿ ಸೇರಿಸಿದ ಹಾಗೆ ಭಾಸವಾಯಿತು.

ಡಾಕ್ಟರು ಅವಳನ್ನು ಪರೀಕ್ಷಿಸಿ ಜ್ವರ ಅಷ್ಟೇನೂ ಹೆಚ್ಚಿಗಿಲ್ಲವೆಂದೂ, ಹೆದರುವ ಕಾರಣವೇನೂ ಇಲ್ಲವೆಂದೂ ಹೇಳಿ ಹೊರಟು ಹೋದರು. ಅವರ ಫೀಜಿನ ವ್ಯವಸ್ಥೆ ಮಾಡುವುದಕ್ಕಾಗಿ ವಸಂತನೂ ಅವರೊಡನೆಯೆ ಹೊರಟು ಹೋದನು.

ಸರಳೆಯು ಮೆಲ್ಲಗೆ ಆ ಕಾಗದವನ್ನು ಬಿಚ್ಚಿದಳು. ಒಂದು ಬಾರಿ ಅದರಲ್ಲಿ ಬರೆದಿದ್ದುದೆಲ್ಲವನ್ನೂ ಓದಿದಳು. ಓದುತ್ತಿದ್ದಾಗ ಚಿಂತೆಯ ಭಾವವು ಅವಳ ಮೊಗವನ್ನು ವ್ಯಾಪಿಸಿದ್ದಿತು. ಮಧ್ಯೆ ಮಧ್ಯೆ ಬಿಸಿಯುಸಿರುಗಳೂ ಮೊಗದಿಂದ ಹೊರಬೀಳುತ್ತಿದ್ದುವು.

ಯಾರೋ ಮೆಟ್ಟಲು ಏರಿ ಬರುವುದು ಕೇಳಿಸಿತು. ಪುನಃ ಅದನ್ನು ಮೊದಲಿನ ಸ್ಥಳದಲ್ಲಿರಿಸಿ ಸರಳೆಯು ಮೌನವಾಗಿ ಕುಳಿತಿದ್ದಳು. ವಸಂತ ಅಷ್ಟು ಬೇಗ ಬಂದುದನ್ನು ಕಂಡು ಅವಳಿಗೆ ಆಶ್ಚರಿಯೆನ್ನಿಸಿತು.

"ಇಷ್ಟು ಬೇಗ ಹಿಂತಿರುಗಿದಿರಿ?"

"ನಿನಗೊಂದು ಮಾತು ಹೇಳಬೇಕೆಂದರೆ ಬಹಳೆ ದುಃಖವಾಗುತ್ತಿದೆ ಸರಳಾ! ಆದರೆ ಮಾಡುವುದೇ... ಅದಕ್ಕುಪಾಯವೇ ಇಲ್ಲ....ನನ್ನ ತಂದೆ ಇಲ್ಲಿಗೆ ಬಂ... ದ್ದಾರೆ...."

ಸರಳೆಯು ಅವನ ಮೊಗವನ್ನು ಬಟ್ಟೊಬಿಡದೆ ನೋಡು... ತ್ತಿದ್ದಳು. ವಸಂತನು ಮುಂದೆ ಹೇಳಿದನು.

"ಡಾಕ್ಟರನ್ನು ಇದೇ ತಾನೆ ಕಳುಹಿಸಿ ಹಾಗೆ... ವಾಗಿ ಬರುತ್ತಿದ್ದೆ. ಅಷ್ಟರಲ್ಲಿಯೆ ಕುದುರೆಬಂಡಿಯ... ರಲ್ಲಿ ಕುಳಿತು ಅವರು ಇದಿರಾಗಿ ಬಂದರು.—'... ಹಿಂದೆಯೆ ನಾನೂ ಬಂದು ಬಿಟ್ಟದ್ದಕ್ಕಾಗಿ ಆಶ್ಚರ್ಯ... ಬೇಡ. ಲಗ್ನದ ಸಿದ್ಧತೆ ಜೋರಾಗಿ ನಡೆದಿದೆ. ... ವಸ್ತುಗಳನ್ನು ಕೊಳ್ಳುವುದಕ್ಕಾಗಿ ನಾನಿಲ್ಲಿಗೆ ಬಂದೆ... ನೀನೀಗ ಕಾಲೇಜಿಗೆ ರಜೆಗಾಗಿ ಬರೆದುಕೊಂಡು ... ಹೊರಟು ಬಿಡು.' ಎಂದು ಹೇಳಿದಾಗ....ಸರಳಾ,... ದಾರಿಯಲ್ಲಿದ್ದೇನೊ ಇಲ್ಲವೆ ಬೇರಾವ ಜಗತ್ತಿನಲ್ಲಿ... ಎಂದೆನ್ನಿಸಿತು. ಹಾಗೆಯೆ ಓಡುತ್ತಲೇ ಬಂದೆ... ನಾನೀಗ ಹೊರಡಲೇ ಬೇಕು. ಏನನ್ನಾದರೂ ಮಾ... ಲಗ್ನ ಮುರಿಯಬೇಕು. ಇಲ್ಲವೆ ದತ್ತಕ ಪದಕ್ಕೆ ... ಹೊಡೆದು ಬಿಡಬೇಕು....ಇವೆರಡರಲ್ಲಿ ಯಾವುದನ್ನಾ... ಮಾಡಿ ಇನ್ನೆರಡು ದಿನಗಳಲ್ಲೆ ಬರುವೆ ಆಯಿತೇ! ... ಹೆಚ್ಚು ಹೊತ್ತು ಕುಳ್ಳಿರುವ ಹಾಗಿಲ್ಲ. ... ಬಂಡಿಗೆ ಹೊರಡಲೇಬೇಕೆಂದು ತಂದೆಯವರ ಆಜ್ಞೆ!... ಗೇನನ್ನು ಹೇಳಲಿ? ಈ ಐವತ್ತು ರೂಪಾಯಿ.... ವರೆಗಿನ ಖರ್ಚು ಸಾಲಬಹುದಲ್ಲವೆ?—ಏನೂ ... ಬೇಡ. ನಾನು ಜೇಗನೆ ಬರುವೆ....ಹೋಗಲೇ... ಹೋಗಿ ಬರಲೇ?...."

ಸರಳೆಯು ಮಾತನಾಡಲಿಲ್ಲ. ರೂಪಾಯನ್ನು ... ಕೊಳ್ಳಲಿಲ್ಲ. ವಸಂತನು ಅವನ್ನು ಮೇಜಿನ ಮೇ... ಮತ್ತೊಂದು ಬಾರಿ ಹೇಳಿದನು.

"ನಾನು ಹೋಗಿ ಬರುತ್ತೇನೆ ಹಂ....ಸರಳಾ!"

ಸರಳೆಯು ಮೌನವಾಗಿ ಅವನ ಮೊಗವನ್ನು ... ನೋಡಿದಳು. ವಸಂತನು ಮತ್ತೆ ಹೇಳಿದನು.

"ಹೋಗುತ್ತೇನೆ ಸರಳಾ."

ಮಾರುತ್ತರವೀಯುವಂತಹ ಸ್ಥಿತಿಯಲ್ಲಿ ಅವಳ... ವೆಂದು ತರ್ಕಿಸಿ ಹೊರಹೊರಳಿ ನೋಡುತ್ತ ಅವನು ... ನಡೆದು ಬಿಟ್ಟನು. ಸರಳೆಯು ಇನ್ನೂ ಮೌನ... ಕುಳಿತಿದ್ದಳು. ಅವಳ ದೇಹವು ಕೊಂಚನಾದರೂ ... ತ್ತಿರಲಿಲ್ಲ!

"ಏನನ್ನು ಮಾಡಿದರೂ ಸಾಧ್ಯವಾಗಲಿಲ್ಲ. ನಾಸಿಲ್ಲಿಗೆ ಬರುವುದರೊಳಗಾಗಿ ಏನೆಲ್ಲವೂ ಮುಗಿದು ಹೋಗಿದ್ದಿತು. ನನ್ನ ಹಾಗೂ ಸರಳೆಯ ಅಲ್ಲದೆ ಇನ್ನೊಬ್ಬ ಪ್ರಾಣಿಯ ಜೀವನವನ್ನು ಸುಟ್ಟು ಭಸ್ಮಮಾಡುವ ಬೆಂಕಿ ಸಿದ್ಧವಾಗಿದ್ದಿತು. ಹಳ್ಳಿಯಲ್ಲಿ ಕಾಲಿಡುತ್ತಲೆ ಆದರ ಪ್ರಥಮಸೂಚಕವಾದ ಬ್ಯಾಂಡಿನ ಗಲಾಟೆ ಕಿವಿಗೆ ಬಿದ್ದಿತು. ಊರೊಳಕ್ಕೆ ಪ್ರವೇಶಿಸುತ್ತಲೇ ಉಂಡು ಹೊಟ್ಟೆಯ ಮೇಲೆ ಕೈ ಎಳೆಯುತ್ತ ತಿರುಗುವವರ ಗೊಂದಣವೇ ಗೊಂದಣ! ಇಂತಹದರಲ್ಲಿ ಲಗ್ನ ಮುರಿಯಲು ಸಾಧ್ಯವೇ ಎಂದು ಚಿಂತಿಸುತ್ತ ಮನೆಯೊಳಗೆ ಕಾಲಿಡುತ್ತಲೇ "ಅತ್ತೆ ಮಾವಂದಿರ" ಸ್ವಾಗತಗೀತೆಯನ್ನು ಕೇಳಿ ಹೊಟ್ಟೆಯಲ್ಲಿ ಬೆಂಕಿ ಬಿದ್ದಿತು. ಅವರನ್ನು ಕರೆದು "ಲಗ್ನ ಮುರಿಯಲು ಬಂದಿದ್ದೇನೆ. ಮಾಡಿಕೊಳ್ಳಲಿಕ್ಕಿಲ್ಲ" ಎಂದು ಹೇಳಿದರೆ ಕಾಲಮೇಲೆ ಹೊರಳಾಡಿಗೋಳೋ ಎಂದು ಅಳುತ್ತ—'ನಮ್ಮ ಮಾನ ಉಳಿಸು ಮಹರಾಯಾ' ಎಂದು ಕೂಗಿಕೊಂಡರವರು. ಲಗ್ನವೂ ಆಗಿ ಹೋಯಿತು ...ಒಬ್ಬಳ ಕೊರಳಲ್ಲಿ ದಾರ ಕಟ್ಟಿದೆ. ಇನ್ನೊಬ್ಬಳನ್ನು ಅದೇ ದಾರದಿಂದ ಕತ್ತು ಕುಯ್ದು ಕೊಂದು ಹಾಕಿದೆ....ಹಾಯ್ ಹಾಯ್....ಸರಳಾ....ನನ್ನ ಸರಳಾ....ಅಯ್ಯೋ ಏನು ಮಾಡಲಿ?" ಎಂದು ದುಃಖದಿಂದ ಉದ್ಗಾರ ತೆಗೆಯುತ್ತ ವಸಂತನು ಆ ಗಿಡದ ಬುಡದಲ್ಲಿ ಕುಳಿತಿದ್ದನು.

ಆಕಾಶದಲ್ಲಿ ಚಂದ್ರಮನು ತಾರೆಗಳೊಂದಿಗೆ ಸ್ವೇಚ್ಛಾವಿಹಾರ ನಡೆಯಿಸಿದ್ದನು. ಮುಗಿಲಿನ ಮೇಲಿಂದ ಒಲವಿಗೆ ಹಾಲೆರೆಯುವ ಆಟವನ್ನವರು ಆಡುತ್ತಿದ್ದ ಹಾಗೆ ತೋರಬೇಕಾಗಿದ್ದಿತು. ಅಯ್ಯೊ! ಅವರಾವ ಆಟ ಆಡುತ್ತಿದ್ದಾರೆ! ಎಲ್ಲ ಕತ್ತಲೆಯನ್ನೂ ನನ್ನ ಹೃದಯದಲ್ಲೇ ಹಿಡಿದಿಡುವ ಆಟ ನಡೆದಿರಲಾರದಷ್ಟೆ? ಎಂದು ವಸಂತನಿಗೆನ್ನಿಸಿತು.

ರಾಯರು ಕೂಗುತ್ತ ಕೂಗುತ್ತ ಒಮ್ಮೆಲೆ. ಬಂದುದನ್ನು ಕಂಡು ವಸಂತನ ಕಣ್ಣು ತಟ್ಟನೆ ಅತ್ತ ಹೊರಳಿದುವು.

"ತಂತಿಯೊಂದು ಬಂದಿದೆ....ಸರಳಾ?....ಸರಳಾ ಎಂದರೆ ಯಾರು ವಸಂತಾ....ಆಕೆ....ಆಕೆ ಜ್ವರದಿಂದ...."

"ಏನು....ಸರಳಾ? ಆಕೆ....ಆಕೆಗೆ ಏನಾಯಿತು?" ಎನ್ನುತ್ತ ವಸಂತನು ಸರ್ರೆಂದು ಆ ಕಾಗದವನ್ನು ಕಿತ್ತುಕೊಂಡನು. ಓದಿದನು....ಅವನು ಓದಿದನು....ತನ್ನ ಸರಳೆಯು ತೀರಿಕೊಂಡುದನ್ನು ಅವನು ಅದರಲ್ಲಿ ಓದಿದನು.

ಸಾಲಿಗೀಲಿ ಬಿಟ್ಟು?

ಲೇ:—ಉಂಡಾಡಿ ಆ. ಬ. ಕ. ಡ.

ಜಗತ್ತಿನಾಗ ಹೊಟ್ಟೆ ತುಂಬಿಸಿಕೊಳ್ಳುವವರೆಲ್ಲ ಪರೀಕ್ಷಾ ಪಾಸಾಗ್ಯಾರೇನು ? ಪರೀಕ್ಷಾ ಪಾಸಾದವರಿಗೆಲ್ಲ ನೌಕರಿ ಸಿಕ್ಕದೇನು ? ನೌಕರಿ ಸಿಕ್ಕವರಿಗೆಲ್ಲ ಹೊಟ್ಟೆ ತುಂಬ್ತದೇನು ? ಈ ಮೂರು ಒಡಪಾ ಬಿಡಿಸಪ್ಪಾ ಮತ್ತ ನಿನ್ನ ಓದು ಬರಹಕ್ಕ ಶಾಬಾಸ್ ಅಂದೇನು ?

ಜಯಕರ್ನಾಟಕದ ಮೇ ಸಂಚಿಕೆಯಲ್ಲಿ ನಾನು ಬರೆದ ಲೇಖನವನ್ನು ಓದಿ ಕೆಲವರಿಗೆ ತಲೆತಿರುಗಿತಂತೆ. ಇಂಥ ಉಂಡಾಡಿಗಳ ಲೇಖನಗಳನ್ನೆಲ್ಲ ಪ್ರಸಿದ್ಧಿಸಿದರೆ ಜಯಕರ್ನಾಟಕದ ದರ್ಜೆಯು ಕೀಳಾಗುವದೆಂದು ಯಾರೋ ಸಂಪಾದಕರನ್ನು ಗದರಿಸಿದರಂತೆ. 'ಏನು ಒಂದು ಡಿಗ್ರಿಯೇ? ಪದವಿಯೇ ? ಬಿರುದೇ ? ಬರಿ ಉಂಡಾಡಿ ! ಚನ್ನಾಯಿತು.' ಎಂದರಂತೆ! ಸರಿ, ಸಂಪಾದಕರು ಬಂದು 'ಇನ್ನು ಮೇಲೆ ನಿನ್ನ ಲೇಖನಗಳನ್ನು ಹಾಕಲಾಗುವದಿಲ್ಲಪ್ಪಾ. ದೊಡ್ಡವರೆಲ್ಲ ನಿನಗೆ ಡಿಗ್ರಿಯಿಲ್ಲವೆಂದು ಹೀಯಾಳಿಸುತ್ತಾರೆ' ಎಂದುಬಿಟ್ಟರು. ಸಂಪಾದಕರಿಗೆ ನಾನು ಹೇಳಿದೆ:—ಅಲ್ರೀ, ಉಂಡಾಡಿ ಎಂಬುದೇನು ಸಾಮಾನ್ಯ ಬಿರುದೇ ? ನಾನು ಹುಟ್ಟಿದ ಕೂಡಲೆ ನನ್ನ ಜಾತಕದೊಳಗಿನ ಗ್ರಹನಕ್ಷತ್ರಗಳಿಗೆಲ್ಲ ನನ್ನ ಹೊಟ್ಟೆಯೇ ದೊಡ್ಡದಾಗಿ ಅಡ್ಡ ಬಂದುದರಿಂದ ಏನೂ ವಿಚಾರಮಾಡದೆ ನಮ್ಮ ಪುರೋಹಿತರು ನನಗೆ 'ಉಂಡಾಡಿ' ಎಂದು ಹೆಸರಿಟ್ಟುಬಿಟ್ಟರು. ಅಲ್ಲಿಂದ ಇಲ್ಲಿಯವರೆಗೆ ನಾನು ಆ ಹೆಸರಿಗೆ ತಕ್ಕಂತೆ ನಡೆದುಕೊಂಡು ಬಂದಿದ್ದೇನೆ. ಇತರ ಪದವೀಧರರಂತಲ್ಲ. ಈಗ ನೋಡ್ರಿ, ಬಿ. ಎ. ಎಂ. ಎ. ಅಂತ ಡಿಗ್ರಿ ಪಡೆದವರಲ್ಲಿ ಆ ಡಿಗ್ರಿಗೆ ತಕ್ಕ ಗುಣ ಇದ್ದವರು ಎಷ್ಟು ಮಂದಿ ? ಎಂ. ಎ. ಅಂದರ 'ಮಾಸ್ಟರ್ ಆಫ್ ಆರ್ಟ್ಸ್' ಅಂತ. ಅಂದರ ಕಲೆಗಳ ಒಡೆಯ ಅಂತ. ಸಂಪಾದಕಮಹಾಶಯರೇ, ಈ ಎಂ.ಎ.ಗಳು ಯಾವ ಕಲೆಯ ಒಡೆಯರಾಗಿರುತ್ತಾರೆ ಹೇಳಬಲ್ಲಿರಾ ?.... ಹಾಂ, ಕಲೆಗಳ ಒಡೆಯನೆಂದು ಚಂದ್ರನಿಗೂ ಹೆಸರಿದೆ. ಅವನಿಗೆ ದಿನಕ್ಕೊಂದು ಕಲೆ ಏರುತ್ತದೆ. ಹುಣಿವೆಯ ದಿನ ಆನಂದಪಟ್ಟು ತಾನು ಪೂರ್ಣಕಲೆ—ಎಂ. ಎ—ಆದೆನೆಂದು ನಿದ್ರಿಸಿ, ಬೆಳಗಾಗುವದರಲ್ಲಿ ಒಂದು ಕಲೆ ಕಡಿಮೆಯಾಗಿರುತ್ತದೆ. ಅಮಾವಾಸ್ಯೆಯಷ್ಟೊತ್ತಿಗೆ 'ಹ್ಯಾಗೆ ಹುಟ್ಟೇದಿ ಹಾಗೇ ಬೆಳೆದೀದಿ ಶುಂಠಂಣಾ' ಅಂದ ಹಾಗೆ ಆಗಿಬಿಡುತ್ತಾನೆ. ಎಷ್ಟಂದರೂ ಪರರಿಂದ (ಸೂರ್ಯನಿಂದ) ಪಡೆದ ಬೆಳಕು. ಅದು ಆಗೋದ ಹಾಂಗ.

ಈ ಡಿಗ್ರಿ ಪಡದವರೂ ಮ್ಯಾಟ್ರಿಕ, ಬಿ. ಎ. ಅಂತ ಒಂದೊಂದೆ ಕಲೆ ಕೂಡಿಸಿಕೋತ ಎಂ. ಎ. ಆದಾಗ ತಾವು ಪೂರ್ಣ ಕಲೆಗಳಾದೆವೆಂದು ಅಂತರಿಕ್ಷದಾಗ ಹಾರಾಡತಿರತಾರ. ಆದರ ಮುಂದ ಹೆಚ್ಚಿನ ಉದ್ಯೋಗ ಸಿಗದೇ ಇದ್ದಾಗ ಸಣ ನೌಕರಿ ಮಾಡಲಿಕ್ಕೆ ಮನಸ್ಸಾಗಬೇಕಾದರೆ 'ನಾನು ಎಂ. ಎ. ಅಲ್ಲ; ಬಿ. ಎ. ಅಲ್ಲ; ಮ್ಯಾಟ್ರಿಕ್ ಅಲ್ಲ' ಅಂತ ಒಂದೊಂದೆ ಕಲೆ ಕಡಿಮೆ ಮಾಡಿಕೋತ ಕಡೆಗೆ 'ನಾ ಬ್ರಾಹ್ಮಣಲ್ಲ ಹೊಲೆಯ ಇದ್ದೇನಿ' ಅಂದುಕೊಳ್ಳೋತನಕ ಸರ್ತಿ ಬರತದೆ. ಇಷ್ಟಾದರೂ ಉದ್ಯೋಗ ಸಿಗದಿದ್ದರ ಕಡೆಗೆ ಮೋರೇ ಮೇಲೆ ಅಮಾವಾಸ್ಯೆ ಕಲೆ ಇದ್ದೇ ಇದೆಯಲ್ಲ.

ಹೀಂಗ ಪರಿಸ್ಥಿತಿಯಿದ್ದು ಅವರಿಗೆ ಕಲೆಗಳ ಒಡೆಯ ಅಂತಾರ ಯಾಕೋ! ಅಂಥಾ ಡಿಗ್ರಿ ಪಡಕೊಳ್ಳಲಿಕ್ಕೆ ಅವರು ಆರೋಗ್ಯ, ದುಡ್ಡು, ಆಯುಷ್ಯ ಎಲ್ಲಾ ಕಳಕೊಂಡು ಧಥ ಪಡಸತಾರ ಯಾಕೊ! ಮತ್ತು ಸಂಪಾದಕ ಮಹಾಶಯರೇ ಅಂಥಾ ಡಿಗ್ರೀನs ನನಗೂ ಪಡಕೊಂಡು ಬರಲಿಕ್ಕೆ ನೀವು ಹೇಳತಿದ್ರ ನಿಮಗೊಂದು ನಮಸ್ಕಾರ. ನಮಗ ಆ ಡಿಗ್ರಿನೂ ಬೇಡ. ನೀವು ನಮ್ಮ ಲೇಖನ ಪ್ರಸಿದ್ಧಿಸುವದೂ ಬೇಡ ನಮ್ಮ ಡಿಗ್ರಿ ನಮಗ ಇರಲಿ. ಯಾಕಂದರ ನಮ್ಮ ಡಿಗ್ರಿ ನೋಡಿ ನೌಕ್ರೀ ಯಾರೂ ಕೊಡದಿದ್ದರೂ, ಕೆಲವರಾದರೂ ಭಕ್ರೀ ಹಾಕ್ತಾರ. ನಮ್ಮ ಡಿಗ್ರೀದು ಅರ್ಥ ತಿಳೀತದೆ ಜನರಿಗೆ. ಆ ಡಿಗ್ರೀಗೆ ಬಹುಮಾನ ಕೊಡಲಿಕ್ಕೆ ನಮ್ಮ ಪುಣ್ಯ ಭಾರತದೇಶದೊಳಗ ಇನ್ನೂ ಬೇಕಾದಷ್ಟು ಛತ್ರ, ಧರ್ಮಸಾಲಿ, ಮಠ, ದೇವಸ್ಥಾನ ಅವೆ. ಆದ್ದರಿಂದ ಆ ಡಿಗ್ರಿ ನಮಗೆ ಲಾಭದಾಯಕವೇ. ಅದು ಬಿಟ್ಟು ಎಂ. ಎ, ಬಿ. ಎ, ಆಯ್. ಸಿ. ಎಸ್, ಕೆ. ಸಿ. ಆಯ್. ಈ, ಮುಂತಾಗಿ ಮುಂತಾಗಿ ಡಿಗ್ರಿ ಇಟ್ಟುಕೊಂಡ್ರ ಸಾಮಾನ್ಯ ಜನರಿಗೆ ಏನು ತಿಳೀಬೇಕು ?

ಮೊನ್ನೆ ಪೋಲೀಸರು ಒಬ್ಬನ್ನ ಹಿಡಕೊಂಡು ಹೋಗಿ ಕೋರ್ಟಿನಾಗ ನಿಲ್ಲಿಸಿದರು. ಯಾಕಂದರ ಅವನಿಗೆ ಇಂಗ್ಲಿಶಿನ ಗಂಧ ಇಲ್ಲದಿದ್ದರೂ ತನ್ನ ಹೆಸರಿನ ಬೋರ್ಡಿನ ಮೇಲೆ

ಆಯ್. ಸಿ. ಎಸ್. ಅಂತ ಬರಕೊಂಡಿದ್ದ. ಹಾಗೆ ಯಾಕೆ ಬರಕೊಂಡಿದ್ದೀಯೆಂದು ಕೇಳಿದರೆ ಅವನು ಹೇಳಿದ 'ನಾನು ಇಂಪೀರಿಯಲ್-ಸಿಗರೇಟ-ಸ್ಮೋಕರ್ ಇದ್ದೇನಿ; ಅದರ ಸೋಲ್ ಎಜಂಟನೂ ಇದ್ದೇನಿ; ಬೋರ್ಡ ಬರೆಯುವವನಿಗೆ ಅದನ್ನೆಲ್ಲ ಸಂಕ್ಷೇಪವಾಗಿ ಬರೆ ಅಂದರೆ ಅವನು ಹಾಗೆ ಬರೆದಿದ್ದಾನೆ' ಅಂತ. ಆದ್ದರಿಂದ ಈ ಒಂದಕ್ಕೊಂದು ಅರ್ಥ ಆಗೋ ಡಿಗ್ರಿ ನಮಗೆ ಬೇಡ. ನಾವು ಉಂಡಾಡಿಗಳು. ನಮ್ಮ ಡಿಗ್ರಿ ಉಂಡಾಡಿ ಸ್ಪಷ್ಟ ಅದೆ.

"ಅಲ್ಲೊ, ಓದೋದು ಬರೆಯೋದು ಬಿಟ್ಟು ಸಾಲಿ-ಕಾಲೇಜ ಬಿಟ್ಟು ನಮಗೆಲ್ಲ ಏನು ಮಾಡಬೇಕಂತೀಯಪಾ ನೀನು?" ಅಂತ ನನ್ನ ಹೊಸಗೆಳೆಯನೊಬ್ಬನು ಕೇಳಿದ. ನಾ ಅಂದೆ "ಅಲ್ಲೊ ಸಾಲಿ-ಕಾಲೇಜ ಬಿಡ್ಲಿಕ್ಕ ಹೋದಿ ಯಾಕಪ್ಪ ಅಲ್ಲಿ?"

"ಇದು ಒಳ್ಳೇ ಪ್ರಶ್ನೆ ಪಾ ನಿಂದು! ಯಾಕ ಹೋದಿ ಅಂದರೆ! ಏನಾರೊಂದು ಪರೀಕ್ಷಾ ಪಾಸಾದ್ರ ನೌಕರಿ ಸಿಗತದೆ. ಹೊಟ್ಟೆ ತುಂಬತದೆ. ಅಂತ ಹೋದೆ."

"ಹಾಂ ಸಿಟ್ಟಿಗೇಳಬೇಡ. ನನ್ನ ಪ್ರಶ್ನೆಗೆ ಉತ್ತರ ಕೊಡು ಅಂದರ ತೀರಿತು. ಜಗತ್ತಿನಾಗ ಹೊಟ್ಟೆ ತುಂಬಿಸಿಕೊಳ್ಳೋವರೆಲ್ಲ ಪರೀಕ್ಷಾ ಪಾಸಾಗ್ಯಾರೇನು? ಪರೀಕ್ಷಾ ಪಾಸಾದವರಿಗೆಲ್ಲ ನೌಕರಿ ಸಿಕ್ಕsದೇನು? ನೌಕರಿ ಸಿಕ್ಕವರಿಗೆಲ್ಲ ಹೊಟ್ಟೆ ತುಂಬತದೇನು? ಈ ಮೂರು ಒಡಪ ಬಿಡಿಸಪಾ ಮತ್ತ ನಿನ್ನ ಓದು ಬರಹಕ್ಕ ಶಾಬಾಸ್ ಅಂದೇನು."

"ಅಂದರೆ! ಬರೆ ಉಂಣೋದು ಮಲಗೋದು ಎರಡೇ ಕೆಲಸವೇನು ಮನುಷ್ಯನಿಗೆ ದನಧಾಂಗ? ಜ್ಞಾನಸಂಪಾದನೆ ಮಾಡೋದೇನೂ ಬೇಡಾ?"

"ಇಲ್ಲಿ. ನೋಡು ದನದ ಹೆಸರು ಎತ್ತಬೇಡ? ದನ ಏನೂ ನೌಕರಿ ಹುಡುಕುತ್ತ ತಿರುಗೋದಿಲ್ಲ; ಜಾತಿ ಧರ್ಮದ ಐಕ್ಯ ಅನ್ನೋದಿಲ್ಲ. ಅಜ್ಜ-ಮುತ್ತಜ್ಜಂದಿರ ಹೆಸರು ನೆನಪು ಮಾಡಕೋತ ತಾನು ಉಪವಾಸ ಬೀಳೋದಿಲ್ಲ. ಆದರೆ ತಮ್ಮ 'ಉಂಡು ಆಡುವ' ಗುಣಾನೂ ಬಿಡೋದಿಲ್ಲ. ಓದೋ ಹುಚ್ಚ್ಚ ನಿನಗಿದ್ದರ 'ಶ್ರೀರಂಗ'ರ ಪಶುಪಕ್ಷಿಗಳ ಮೀಮಾಂಸೆ ಓದು; ಅಂದರ ಇದೆಲ್ಲ ತಿಳೀತದ. ಇನ್ನು ಜ್ಞಾನದ ವಿಷಯ. ಅದೇನಪಾ ಹೊಸಾ ಜ್ಞಾನ ಉದಯವಾದದ್ದು ಸಾಲಿಗ ಹೋದ ಮೇಲೆ ನಿನಗ? ನೌಕರಿ ಸಿಗೋದಿಲ್ಲ ಅಂತ? ಕಲ್ತದ್ದೆಲ್ಲ ವ್ಯರ್ಥ ಅಂತ?"

"ಹಾಂಗಾದರ ಸಾಲಿ-ಕಾಲೇಜಿಗೆ ಹೋಗಿ ಕಲ್ತವರ್ನ ಮೂರ್ಖರು ಅನ್ನು."

"ಉಣಲಿಕ್ಕಿದವರು ಉಂಡು, ಆಡಲಿಕ್ಕೆಂದು ಸಾಲಿಗೆ ಹೋಗಿದ್ದರ ಅವರಿಗೆ ನಾನು ಮೂರ್ಖ ಅಂತ ಯಾಕನ್ನಲಿ ಇನ್ನು ಉಣಲಿಕ್ಕಿಲ್ಲದವರು ಸಾಲಿಗ ಹೋಗಿ ಉಪವಾಸ ಕಲಕೊಂಡು ಬಂದರಲ್ಲ, ಅವರಿಗೆ ಏನನ್ನಬೇಕು ಅಂಬೋದನ್ನ ಅವರನ್ನೇ ಕೇಳಿಬಿಡು."

"ಅಲ್ಲೋ, ಸಾಲಿಗ ಹೋದ್ರ ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ, ಜಗತ್ತಿನ ಜ್ಞಾನ ಆಗ್ತಾವ."

"ಹಾಂ, ಹೀಂಗ ಬಾರೋ ತಮ್ಮಾ. ಮೊದಲು ಪರೀಕ್ಷಾ ಪಾಸಾಗಿ ನೌಕರಿ ಮಾಡಿ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಸಾಲಿಗ ಹೋದೆ ಅಂತ. ಈಗಂತ ಇತಿಹಾಸ, ಭೂಗೋಲ, ಜಗತ್ತಿನ ಜ್ಞಾನ ತಿಳಕೊಳ್ಳಲಿಕ್ಕೆ ಅಂತ. ಇದರಾಗ ಯಾವದು ನಿಜ? ಎರಡನೇದs ನಿಜ ಅಂತ ಹಿಡಿಯೋಣ. ಒಳ್ಳೇದು ಆ ಜ್ಞಾನ ಆದರೂ ಎಷ್ಟಾಗತದ ಸಾಲಿಗೆ ಹೋದವರಿಗೆ? ಹಿಂದುಸ್ತಾನದ ಇತಿಹಾಸ ಎಷ್ಟು ಗೊತ್ತಿರತದ? ತಮ್ಮ ದೇಹದ ಜ್ಞಾನ ಎಷ್ಟು ಆಗಿರತದ? ತಮ್ಮ ಊರು ಯಾವ ಅಕ್ಷಾಂಶ ರೇಖಾಂಶದೊಳಗದ ಅಂಬೋದು ಗೊತ್ತಿರತದ? ಇವೆಲ್ಲದರ ಜ್ಞಾನ ಆಗಿದ್ದರಂತೂ ಸರಿಯೆ. ಇದ್ಯಾವದೂ ಜ್ಞಾನ ಇಲ್ಲದಿದ್ದರೂ ಅವರು ಸಾಲಿಗ ಹೋದದ್ದು ತಪ್ಪನ್ನೋದಿಲ್ಲ ನಾನು. ಯಾಕಂದರೆ ಅದು ಉಂಡ ಮೇಲೆ ಆಡಲಿಕ್ಕೆ ಹೋದವರ ಸಂಗತಿಯಾಯಿತು."

"ಅಂತೂ ಈಗ ಏನು ಮಾಡಬೇಕಂತಿಯಪ್ಪಾ ನೀನು? ನಾನು ನಿನ್ನ ಉಂಡಾಡಿ ಸಂಘಕ್ಕ ಸೇರಲಿಕ್ಕ ತಯಾರಿದ್ದೇನೆ."

"ಅದೂ ಏನು ಸುಲಭ ಅದಂತ ತಿಳೀಬೇಡ. ಉಂಡಾಡೋದೂ ಸಹ ಸಾಲ್ಯಾಗಲ್ಲದಿದ್ದರೂ ಮನ್ಯಾಗ ಕಲಿಯಬೇಕಾಗ್ತದ. ಬದುಕಬೇಕೂಂತ ಆಶೆ ಯಾರಿಗಿಲ್ಲ! ಬದುಕ ಬೇಕಾದರ ಉಣಬೇಕು; ಸಿಕ್ಕಸಿಕ್ಕದ್ದು ಉಂಡರೆ ಬದುಕು ಹಾಳಾಗುವ ಬೇನೆ ಬಂದು ಬಿಡತದ. ಆದ್ದರಿಂದ ಉಣ ಬೇಕು ಯಾವದು, ಉಣಬಾರದು ಯಾವದು ಅಂತ ತಿಳಕೋಬೇಕು. ತಿಳಕೊಂಡು ಉಣಬೇಕು. ಉಣಲಿಕ್ಕೆ ಇಲ್ಲದಿದ್ದರೆ ದೊರಕಿಸಬೇಕು. ಅದಕ್ಕಾಗಿ ದುಡೀಬೇಕು. ಚಳವಳಿ ಸಾಗು ಮಾಡಬೇಕು. ಸಿಗದಿದ್ದರೆ ಜಗಳಾಡಬೇಕು. ಉಂಡ ಮೇಲೆ ಹೋಗೋತನಕ ಬಡದಾಡಬೇಕು.

ಕ್ಕೆ. ಮಾತು ಆಡಬೇಕು; ಆಟ ಆಡಬೇಕು. ಮಾತಾಡ ಬೇಕಾದರೆ ತಿಳಕೋಬೇಕು. ಇಗೋ, ಇಲ್ಲಿ ಮಾತ್ರ ನಿನ್ನ ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಬೇಕಾದರ ಕಲಿಸು. ಆದರೆ ಉಂಡ ಮೇಲೆ ಅವೆಲ್ಲ ಬರೋವು.”

“ಅಂತೂ ಛಲೋ ಹೂಡಿದ್ಯಪ್ಪ ಚಳವಳಿ ! ತಲಿ ಬೆಳ ದವ ಅಂದೆ ! ನಿನಗೂ ಒಂದು ಡಿಗ್ರಿ ಬೇಕಾತು. ನಾನs ಕೊಡತೇನಿ. ಅ. ಬ. ಕ. ಡ. ಅಂತ ಹಚ್ಚಿಕೊಂಡು ಬಿಡು ನಿನ್ನ ಮೇಲೆ ಡಿಗ್ರಿ.” ಎಂದು ಹೊರಟು ಹೋದ ನಮ್ಮ ಗೆಳೆಯ ನೆಟ್ಟಗ ಹೋಳಿಗೇ ಮಠದ ಸ್ವಾಮಿಗಳ ಸಮಾರಾ ಧನೆಗೆ.

ಸಂಪಾದಕ ಮಹಾಶಯರೇ, ನನಗೂ ಡಿಗ್ರಿ ಇಲ್ಲ ಅಂತ ತಿಳೀಬ್ಯಾಡ್ರಿ. ಅ! ಬ! ಕ! ಡ! ನನ್ನ ಗುಣ ತಿಳಿದವರು ಕೊಟ್ಟ ಡಿಗ್ರಿ ಇದು. ಉಳಿದ ಬಿರುದುಗಳಂತೆ ಇದರ ಅರ್ಥನೂ ತಿಳಿಯೋದಿಲ್ಲ; ತಿಳಿಯೋದಿಲ್ಲವಾದ್ದರಿಂದಲೇ ಅವೆಲ್ಲಕ್ಕಿಂತ ದೊಡ್ಡ ಡಿಗ್ರಿ ಇದು. ಜಾಣರಾದರೆ ನಿಮ್ಮ ವಾಚಕರು ಹೇಳಲಿ ಇದರ ಅರ್ಥ. ಅಲ್ಲಿಯವರೆಗೆ ಈ ಡಿಗ್ರಿ ಇಟ್ಟುಕೊಂಡು ನಾ ಲೇಖ ಕೊಡ್ಲಿಕ್ಕ ಏನೂ ಅಡ್ಡಿ ಯಿಲ್ಲವಷ್ಟೇ ?

ನಾನು ಈ ತಿಂಗಳೂ ವಾಚಕರ ಸಂಗಡ ಹರಟಲಿಕ್ಕೆ ಬಂದೇನಿ, ಅಂದ ಮೇಲೆ ಸಂಪಾದಕರು ನಮ್ಮ ಡಿಗ್ರಿಗೆ ಮರುಳಾಗಿದ್ದಾರನ್ನಲಿಕ್ಕೇನಡ್ಡಿ ?

ಅಣೋರಣೀಯಾನ್ ಮಹತೋ ಮಹೀಯಾನ್

ಜರ್ಮನಿಯಲ್ಲಿ ೧೯೩೭ರಲ್ಲಿ ಜನರು ೧೧ ಲಕ್ಷ ಖಾಸಗಿ ಮೋಟರುಗಳನ್ನು ಉಪಯೋಗಿಸುತ್ತಿದ್ದರು. ಜನಸಂಖ್ಯೆಯ ದೃಷ್ಟಿಯಿಂದ ೨೪ ಜನರಿಗೆ ಒಂದು ಮೋಟರಿನಂತೆ ಲೆಕ್ಕ ಬಿತ್ತು.

* * *

ಮದ್ಯಪ್ರತಿಬಂಧಕ ಚಳುವಳಿಯಿಂದ ಮುಂಬಯಿ ಸರಕಾರಕ್ಕೆ ೧ ಕೋಟಿ ರೂಪಾಯಿ ಮತ್ತು ಮದ್ಯ ಮಾರುವವರಿಗೆ ೪ ಕೋಟಿ ರೂಪಾಯಿಯೂ ಹಾನಿಯಂತೆ. ಅಂದರೆ ಪ್ರಜೆಗೆ ೫ ಕೋಟಿ ರೂಪಾಯಿ ಉಳಿತಾಯವಲ್ಲವೇ?

* * *

ಉತ್ತರ ಆಸ್ಟ್ರಿಯದ ಮಾರ್ಗದಲ್ಲಿ ವಾಹನಗಳೆಲ್ಲ ಬಲಪಕ್ಕದಿಂದ ದಕ್ಷಿಣ ಆಸ್ಟ್ರಿಯದಲ್ಲಿ ಎಡಪಕ್ಕದಿಂದ ಓಡಾಡಬೇಕೆಂಬ ನಿಯಮವಿದೆ!

* * *

ಇಡಿ ಜಗತ್ತಿನಲ್ಲಿ ಒಂದು ವರ್ಷಕ್ಕೆ ೧೦೦ ಕೋಟಿ ಚಹದ ಪುಡಿ ವೆಚ್ಚವಾಗುತ್ತಿದೆ! ಇಂಗ್ಲಂಡಿನಲ್ಲಿ ಒಬ್ಬನಿಗೆ ವರ್ಷಕ್ಕೆ ೯ ಪೌಂಡು ಚಹದ ಪುಡಿ ಬೇಕು!

* * *

ಝಂಜಿಬಾರದವರು ಭಾರತೀಯ ಬಹಿಷ್ಕಾರಕ್ಕೆ ಏಕೆ ಅಂಜಿದರು? ಅಲ್ಲಿ ಹುಟ್ಟುವ ಲವಂಗದಲ್ಲಿ ನೂರಕ್ಕೆ ೮೦ರಷ್ಟು ಭಾರತದಲ್ಲಿಯೆ ವೆಚ್ಚವಾಗುತ್ತದೆ!

* * *

ಗ್ರೇಟಬ್ರಿಟನ್ನಿನಲ್ಲಿ ಪ್ರತಿವರ್ಷ ತಪ್ಪುದಂಡವೇ ೬೦ ಲಕ್ಷ ರೂಪಾಯಿ ವಸೂಲಾಗುತ್ತದೆ. ಅದರಲ್ಲಿ ೫೦ ಲಕ್ಷ ಮೋಟರಿನವರಿಂದಲೇ ಬರುತ್ತದೆ. ಪೋಲೀಸರ ... ಇಳಿದುದರ ಲೆಕ್ಕ?

* * *

ಹೋದ ವರ್ಷ ಒಂಭತ್ತೇ ತಿಂಗಳಲ್ಲಿ ... ರೂಪಾಯಿಗಳ ಯಂತ್ರಸಾಮಗ್ರಿ ಭಾರತಕ್ಕೆ ... ಹಿಂದಿನ ವರ್ಷಕ್ಕಿಂತ ಒಂದು ಕೋಟಿ ಹೆಚ್ಚು.

* * *

ಮೂವತ್ತು ವರ್ಷಕ್ಕೆ ಮೊದಲು ಗ್ರೇಟಬ್ರಿಟನ್ನಿನ ... ಎರಡು-ಮೂರಾಂಶ ಜನರು ಚಿಲಿಮೆ ಸೇದುತ್ತಿದ್ದರು ... ಏಳೆಂಟಾಂಶ ಜನರು ಸಿಗರೇಟು ಸೇದುತ್ತಾರೆ. ... ಸುಧಾರಿಸಿದುದೇ ಇದಕ್ಕೆ ಕಾರಣವಂತೆ.

* * *

ಇಡಿ ಭಾರತದಲ್ಲಿ ಮೈಸೂರು ಸಂಸ್ಥಾನದ ... ರದ ಖಣಿಗಳಲ್ಲಿ ಸಿಕ್ಕಷ್ಟು ಬಂಗಾರವು ಬೇರೆಲ್ಲಿಯೂ ... ವುದಿಲ್ಲ. ೧೯೩೭ರಲ್ಲಿ ಕೋಲಾರದ ಖಣಿಗಳಿಂದ ... ಔನ್ಸು ಬಂಗಾರ ಹೊರಟಿತು.

* * *

ಮಹಾಯುದ್ಧ ಪೂರ್ವದಲ್ಲಿ ಜರ್ಮನಿಯು ... ಗಳಲ್ಲಿ ೨೫೦೦ ಕೋಟಿ ರೂಪಾಯಿಗಳ ಸಾವಕಾರ ... ಹೋದಿತ್ತು. ಯುದ್ಧ ಮುಗಿದಾಗ ೨೬೦೦ ಕೋಟಿ ... ಗಳನ್ನು ಜರ್ಮನಿಯು ಪರದೇಶಗಳಿಗೆ ಕೊಡಬೇಕಾ...

* * *

ಅಮೆರಿಕೆಯಲ್ಲಿ ಹತ್ತಿಯಿಂದ ಮಾರ್ಗಗಳನ್ನು ... ತ್ತಿದ್ದಾರೆ. ಈಗಾಗಲೆ ೫೭೮ ಮೈಲು ಮಾರ್ಗ... ವಾಗಿದೆ!



ಮಾಧುವಿನ ನಿರ್ಧಾರ

- ನಾಟಕ, ಸಿನೇಮಾಗಳಲ್ಲಿ ಅಭಿಲಾಷೆಯಿರುವ ಯುವಕರಿಗೆ ತಾವು ಮದುವೆಯಾಗುವ ಕನ್ಯೆಯು ರೂಪವತಿಯಾಗಿಯೂ ಅಪ್‌ಟುಡೇಟ್ ಆಗಿಯೂ ಇರಬೇಕೆಂಬ ಅಪೇಕ್ಷೆಯಿರುವುದು ಸಹಜ.
- 'ಅಹಾ! ಅವಳ ಕೂದಲು ಮಾಧುರೀ ಹಾಗಿದೆ; ಕಣ್ಣು ಗ್ರೇಟಾ ಗಾರ್ಬೊ ಹಾಗಿದೆ' ಎಂದು ಭಾವಚಿತ್ರದಲ್ಲಿಯ ಮದ್ರಾಸಿ ಕನ್ಯೆಗೆ ಮೆಚ್ಚಿದ ಮಾಧೂ ಬಾಲ್ಯಸಖಿ ಸುಶಿಯನ್ನು ಅಲ್ಲಗಳೆಯುತ್ತಾನೆ.
- ಸುಶೀ ಸುಂದರಿಯಲ್ಲದಿದ್ದರೂ ಕುರೂಪಿ ಮಾತ್ರ ಅಲ್ಲ. ಆ ಮದ್ರಾಸಿ ಕನ್ಯೆಯಲ್ಲಿ ನೆಟ್ಟ ಮನಸ್ಸು ಸುಶಿಯಲ್ಲಿ ಏನನ್ನು ಕಂಡು ಹಿಂತಿರುಗಿತು?

ಕತೆಗಾರರು: ಶ್ರೀ. ಎನ್. ಸೂರಪ್ಪ.

ಹೆಂಗಸರು ಯಾವುದಾದರೂ ಒಂದು ನಿರ್ಧಾರಕ್ಕೆ ಬರುವುದು ಹೇಗೆ ಕಷ್ಟವೋ, ಹಾಗೆಯೇ ಮದುವೆಯಾಗಬೇಕೆಂದಿರುವ ಯುವಕರು ಒಂದು ಸರಿಯಾದ ನಿರ್ಧಾರಕ್ಕೆ ಬರುವುದು ತುಂಬಾ ಕಷ್ಟವೆಂದು ತೋರುತ್ತದೆ. ಆದರೆ ನನ್ನ ಬಾಲ್ಯಮಿತ್ರ ಮಾಧೂ ಮಾತ್ರ ಇಂದು ಅವನ ಮದುವೆಯ ವಿಷಯದಲ್ಲಿ, ಸರಿಯಾದ ಒಂದು ನಿರ್ಧಾರಕ್ಕೆ ಬಂದಂತೆ ಅವನ ಮುಖಮುದ್ರೆಯೇ ವ್ಯಕ್ತಪಡಿಸುತ್ತಿತ್ತು.

ನಾನೂ ಮಾಧೂ ಬಾಲ್ಯಸ್ನೇಹಿತರೆಂದು ಹೇಳಿದೆನಲ್ಲವೆ, ನಾವು ಬಾಲ್ಯಸ್ನೇಹಿತರು ಮಾತ್ರವೇ ಅಲ್ಲ! ಪ್ರಾಣಸ್ನೇಹಿತರು! ಈ ಅಗಾಧವಾದ ಪ್ರೀತಿಯು ನಮ್ಮಲ್ಲಿ ಸಹಜವಾಗಿಯೇ ಬಂದಿದ್ದಂತೆ ತೋರುತ್ತದೆ. ಮಾಧೂ, ನಾನೂ ಸೀನಿಯರ್ ಇಂಟರ್ ಕ್ಲಾಸಿಗೆ ಬರುವುದಕ್ಕೆ ಎರಡು ವರ್ಷಗಳ ಹಿಂದಿನಿಂದಲೇ, ವಿವಾಹಾತುರರಾದ ಕನ್ಯಾಪಿತೃಗಳು ನನ್ನ ತಂದೆ ಮತ್ತು ಮಾಧುವಿನ ತಂದೆಯನ್ನು ಪೀಡಿಸುತ್ತಲೇ ಇದ್ದರು. ನನಗೇನೋ ಮದುವೆಯಾಗಲು ಸದ್ಯದಲ್ಲಿ ಇಷ್ಟವಿಲ್ಲದೇ ಇದ್ದರೂ ಮಾಧೂ ಮಾತ್ರ ವಿವಾಹ ಮಾಡಿಕೊಂಡು ರೊಮ್ಯಾಂಟಿಕ್ ಆಗಿರಬೇಕೆಂದು ಬಯಸುತ್ತ ಇದ್ದ. ಮಾಧೂ ಮದುವೆಯಾಗುವ ಹಾಗಿದ್ದರೆ ಅವನ ಸೋದರಮಾವನ ಮಗಳಾದ ಸುಶೀಯನ್ನೇ ಗಂಟು ಹಾಕಬೇಕೆಂಬ ಇಷ್ಟ, ಅವನ ತಂದೆತಾಯಿಗೂ ಮೇಲಾಗಿ ನನಗೂ ಇದ್ದಿತು. ಮಾಧೂ, ಸುಶೀ ಸಹಾ ಬಾಲ್ಯದಿಂದಲೇ ಒತ್ತಟ್ಟಿಗೇ ಬೆಳೆದು ಒಬ್ಬರ ಹೃದಯವನ್ನೊಬ್ಬರು ಚೆನ್ನಾಗಿ ಅರಿತವರಾಗಿಯೇ ಇದ್ದರು. ಸುಶೀ ಸಹಾ ಮಾಧುವಿನ ಮೇಲೆ ಅವಿಚ್ಛಿನ್ನ ಪ್ರೇಮವನ್ನಿಟ್ಟು ಅವನೇ ತನ್ನ ಭಾವೀ ಪತಿಯೆಂದು ನಂಬಿದ್ದಳು. ಸುಶೀಯು ಕುರೂಪಿ ಅಲ್ಲದಿದ್ದರೂ, ಮಾಧುವಿನ 'ರೊಮ್ಯಾಂಟಿಕ್' ಸಾಗರದಲ್ಲಿ ಈಜಾಡುತ್ತಿದ್ದ ಅನೇಕ ಹುಡುಗಿಯರ 'ಲೆವೆಲ್ಲಿ'ಗೆ ಬರಲಾರಳು. ಮಾಧುವೇನೋ ದೊಡ್ಡ ಮನುಷ್ಯರ ಪುತ್ರನೇ ಹೌದು. ಹೆಣ್ಣುಗಳೂ ಲೆಕ್ಕವಿಲ್ಲದೇ ಬರುತ್ತಿದ್ದವು. ಬುದ್ಧಿವಂತ ಮತ್ತು ಸುಂದರನಾದ ಹುಡುಗ. ಹೆಣ್ಣುಗಳು ಬರುವುದಕ್ಕೆ ಕಮ್ಮಿಯೇ! ನಾಟಕ, ಸಿನೇಮಾ ಮುಂತಾದುವುಗಳಲ್ಲಿ ಹೆಚ್ಚು ಅಭಿಲಾಷೆಯಿದ್ದ ಮಾಧೂಗೆ, ಅವನು ವಿವಾಹವಾಗುವ ಕನ್ಯೆಯು ಅತ್ಯಂತ ರೂಪವತಿಯಾಗಿಯೂ 'ಮಾಡರ್ನ್' ಆಗಿಯೂ ಇರಬೇಕೆಂಬ ಅಭಿಲಾಷೆ ಈಗಿನ ಎಲ್ಲಾ ಯುವಕರಿಗೂ ಇರುವಂತೆ ಸಹಜವಾಗಿಯೇ ಇದ್ದಿತು.

ಹೀಗೆ 'ರೋಮಾನ್ಸ'ನ್ನೇ ಧ್ಯೇಯವಾಗಿಟ್ಟುಕೊಂಡಿದ್ದ ಮಾಧೂಗೆ ಸರಿಯಾದ ಕನ್ಯೆಯು ಇನ್ನೂ ದೊರಕಿರಲಿಲ್ಲ. ಆದರೆ ಇಂದು ಅವನು ನಿರ್ಧಾರಕ್ಕೆ ಬಂದಿದ್ದಂತೆ ಅವನ ಮಾತುಗಳೂ ಮತ್ತು ವ್ಯಕ್ತಿತ್ವವೂ ತೋರುತ್ತಿತ್ತು. ಮಾಧು ಮಾಡಿದ್ದ ನಿರ್ಧಾರವನ್ನು ತಿಳಿದುಕೊಳ್ಳಲೇಬೇಕೆಂಬ ಆಕಾಂಕ್ಷೆ ನನಗೆ ಹೆಚ್ಚಾಯಿತು. ಅವನನ್ನು ಪ್ರಶ್ನಿಸಿದ ಹಾಗೆಲ್ಲಾ ನನ್ನ ಕೌತುಕವು ಮೀರಿತೇ ವಿನಃ ಅವನಿಂದ ಸರಿಯಾದ ಉತ್ತರವನ್ನು ತೆಗೆದುಕೊಳ್ಳಲಾರದೇ ಹೋದೆ. ಇದಕ್ಕೆ ಮಾಧೂವಿನ ತಂದೆಯವರನ್ನೇ ವಿಚಾರಿಸಿದರೆ ಸರಿಯಾದ ಉತ್ತರವು ಬರಬಹುದೆಂದು ನಾನೂ ಅವನನ್ನು ಹಿಂಬಾಲಿಸಿದೆ. ಮನೆಯಲ್ಲಿ ಸುಬ್ಬರಾಯರು ಸುಖಾಸೀನರಾಗಿ ನಾನಿಯೊಂದಿಗೆ ಮಾತಾಡುತ್ತಾ ಇದ್ದರು. ನನ್ನನ್ನು ನೋಡಿದೊಡನೆಯೇ ಕುಳಿತುಕೊಳ್ಳುವಂತೆ ಹೇಳಿ

ದರು. ಸ್ವಲ್ಪ ಹೊತ್ತು ಆ ಮಾತು ಈ ಮಾತು ಆಡುತ್ತಾ ಇದ್ದು ನನ್ನ ಹೃದಯವನ್ನು ಬಿಚ್ಚಿ ಮಾಧುವಿನ ನಿರ್ಧಾರದ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಸಬೇಕೆಂದು ಬೇಡಿದೆ. ಸುಬ್ಬರಾಯರು, "ನೋಡಯ್ಯಾ, ಇಷ್ಟು ದಿವಸ ನಿನ್ನ ಸ್ನೇಹಿತ, ಮದುವೆ ಈಗ ಬೇಡ, ಈಗ ಬೇಡ, ಅನ್ನುತ್ತಿದ್ದವನು ಮದುವೆ ತಕ್ಷಣ ಮಾಡಲೇಬೇಕೆಂದು ಹಟ ಹಿಡಿದಿದ್ದಾನೆ." ಎಂದರು. ನಾನು ಕೌತುಕದಿಂದ "ರಾಯರೆ ಹಾಗದರೆ, ಕನ್ಯೆ ಯಾರು; ನಮ್ಮ ಸುಶೀ ತಾನೆ" ಎಂದೆ. ರಾಯರು ಒಂದು ವಿಧವಾದ ಮುಖ ಮುದ್ರೆಯಿಂದ "ಮದರಾಸು ಕನ್ಯೆ; ತಂದೆ ದೊಡ್ಡ ವರ್ತಕರು. ಹುಡುಗಿಯೇನೋ ಲಕ್ಷಣವಾಗಿದ್ದಾಳೆ, ಆದರೆ ಸುಶೀಗಿಂತ ಮೇಲೆಂದು ನನಗೇನೋ ತೋರುವುದಿಲ್ಲ. ಮಾಧು ಮಾತ್ರ 'ನಾನು ಆ ಹುಡುಗಿಯನ್ನೆ ಮದುವೆಯಾಗುತ್ತೇನೆ, ಅವಳು ಬಹಳ ಚೆನ್ನಾಗಿದ್ದಾಳೆ,ಫೋಟೊದಲ್ಲಿ ಅವಳ ಮೂಗು ಹಾಗಿದೆ, ಮುಖ ಹೀಗಿದೆ, ಕೂದಲು ಮಾಧುರಿಗೆ ಇದ್ದ ಹಾಗಿದೆ, ಕಣ್ಣು ಗ್ರೇಟ ಗಾರ್ಬೊಗೆ ಇದ್ದ ಹಾಗಿದೆ' ಎಂದು ಏನೇನೊ ಹೇಳುತ್ತಿದ್ದಾನೆ. ನನಗೇನೋ ದಿಕ್ಕೇ ತೋಚದಂತಾಗಿದೆ; ಬಾಲ್ಯದಿಂದಲೂ ಚೆನ್ನಾಗಿ ಅರಿತಿದ್ದ ಸುಶೀಯನ್ನು ಅವನು ಬೇಡವೆಂದು ಹೇಳುತ್ತಾನೆಂದು ನಾನು ಕನಸಿನಲ್ಲಿಯೂ ನಂಬಿರಲಿಲ್ಲ. ಈ ವಿಷಯದಲ್ಲಿ ಸುಶೀ, ಅವಳ ತಾಯಿ ತಂದೆಗಳು ಏನು ತಿಳಿದುಕೊಳ್ಳುತ್ತಾರೋ ?" ಎಂದು ಮಾಧುವಿನ ನಿರ್ಧಾರಕ್ಕಾಗಿ ಪರಿತಪಿದರು. ಮಾಧುವಿನ ವ್ಯತಿರಿಕ್ತವನ್ನು ಕೇಳಿ ನನ್ನ ಮನಸ್ಸೂ ನೊಂದಿತು. ಪುನಃ ಸಂಜೆ ಟೆನಿಸ್ಸಿಗೆ ಹೋಗುವಾಗ ಬರುವೆನೆಂದು ರಾಯರಿಗೆ ಹೇಳಿ ಅವರ ಮನೆಯನ್ನು ಬಿಟ್ಟು ನೇರವಾಗಿ ಸುಶೀ ರೂಮಿಗೆ ಬಂದೆ. ಸುಶೀ ಮಾಧು ಕೇರಂ ಆಡುತ್ತಾ ಕುಳಿತಿದ್ದರು. ನನ್ನನ್ನು ನೋಡಿದೊಡನೆಯೇ ಸುಶೀಯು "ನೋಡಣ್ಣಾ, ಈ ಮಾಧುನ್ನ ನೋಡು, ಎಲ್ಲಾ ತಪ್ಪು ಆಟ ಆಡ್ತಾನೆ. ಗೆದ್ದೆ ಗೆದ್ದೆ ಅಂತ ಜಂಭ ಹೊಡೀತಾನೆ. ಈ ಆಟಕ್ಕೆ ನೀನೇ 'ಅಂಪಾಯರ್' ಆಗಿರು. ಆಗ ಗೊತ್ತಾಗುತ್ತೆ ಮಾಧುವಿನ ಬಂಡವಾಳ" ಎಂದು ಆಟಕ್ಕೆ ಶುರು ಮಾಡಿದಳು. ಸುಶೀಮುಖವನ್ನೇ ನೋಡುತ್ತಿದ್ದ ನನಗೆ "ಅಯ್ಯೊ ಹುಚ್ಚು ಹುಡುಗಿ! ಇನ್ನೆಷ್ಟು ದಿವಸ ಈ ಮಾಧುವಿನೊಂದಿಗೆ ಕೇರಂ ಆಡಬಲ್ಲೆ ? ನಿನ್ನ ಪವಿತ್ರ ಪ್ರೇಮವನ್ನು ಧಿಕ್ಕರಿಸಿ ನಿನಗೆ ಇಷ್ಟರಲ್ಲೆ ಎರಡು ಬಗೆಯುವವನಾಗಿದ್ದಾನೆ" ಎಂದೆನಿಸಿತು. ಆಟವನ್ನು ಸ್ವಲ್ಪ ಹೊತ್ತು ನೋಡುತ್ತಾ ಇದ್ದು "ಮಾಧು, ಮಾಧೂ ಕಾಫಿಯೆಲ್ಲೋ ?"

ಎಂದೆ. ಮಾಧುವು "ಯಾಕೋ ನಿನಗೇನೂ ಬೇಕೆ... ಇಲ್ಲ ಅಂತ ತೋರುತ್ತೆ: ದಿನಕ್ಕೆ ನೂರು ಸಲ ಕಾಫಿ... ಹೊಗ್ಲಿ, ಆದರ ಸಹಸ್ರ ನಾಮಾರ್ಚನೆ ಪುಣ್ಯ... ಕಟ್ಟಿಕೋತೀಯಲ್ಲಾ" ಎಂದು ಕೆಂಪು ... ಚೀಲಕ್ಕೆ ತುಂಬಿದ. ನಾನು "ಅದೆಲ್ಲಾ ಇರ್ಲಿ, ... ಆ ಪುಣ್ಯಯೇನೋ ಬಂದೆ ಬರುತ್ತೆ, ನಿನಗೆ ... ನಿಶ್ಚಯವಾಗಿರುವಾಗ ಸಹಾ ಕಾಫಿ ಬೇಡವೇನೋ! ... ಸ್ನೇಹಿತನಯ್ಯ ನೀನು" ಎಂದೆ. ಈ ಮಾತು ... ಬೀಳುತ್ತಲೇ ಸುಶೀ ಕೈಲಿದ್ದ Striker ದೊಪ್ಪನೆ ... ಬಿದ್ದು ಒಡೆದು ಹೋಯಿತು. ಸ್ವಲ್ಪ ಹೊತ್ತು ... ದಿಟ್ಟಿಸಿ ನೋಡುತ್ತಾ ಇದ್ದು, ಮಾಧೂಗೆ "ಮದುವೆ ... ಯಾವಾಗ ? ಹುಡುಗಿ ಯಾರು ? ಹೇಗಿದ್ದಾಳೆ ?" ... ಅರ್ಥಗರ್ಭಿತವಾದ ಪ್ರಶ್ನೆಗಳ ಸುರಿಮಳೆಯನ್ನು ... ಪ್ರಶ್ನೆಗಳಿಗೆ ನಿಧಾನವಾಗಿ ಉತ್ತರ ಹೇಳುತ್ತಾ ... ಮುದ್ದು ಕಪೋಲಗಳ ಮೇಲೆ, ಅವಳಿಗೆ ಅರಿವಿಲ್ಲ... ಹರಿಯುತ್ತಿದ್ದ ಅಶ್ರುಧಾರೆಗಳನ್ನು ನೋಡುತ್ತಿದ್ದ... ಉತ್ತರಗಳನ್ನು ಹೇಳುವುದರಲ್ಲೇ ಮಾಧು ... ಹೋಗಿದ್ದ. ಈ ಆಕಸ್ಮಿಕ ಘಟನೆಯಿಂದ ಸುಶೀ ... ಕೊಂಡು "ಅಣ್ಣಾ ಮಾಧುವಿನ ಮದುವೆ ವಿಚಾರ ಕೇಳಿ ... ತುಂಬಾ ಸಂತೋಷವಾಯಿತು, ಅವನ ಭಾವೀ ಪತ್ನಿ ... ನನಗಿಂತಲೂ ಮೇಲಾಗಿರುವುದರಿಂದಲೇ ಅವನು ... ಬೇಕು, ನಾನು ಮಾಧುವಿನ ಲೆವೆಲ್ಲಿಗೆ ಬರಲಿಲ್ಲ... ಎಂದು ಚಿಂತಿಸುತ್ತೇನೆಯೇ ಹೊರತು, ಮಾಧು ... ವಿವಾಹವಾಗುತ್ತಾನಲ್ಲಾ ಎನ್ನುವ ಅಸೂಯೆ ... ಈ ವಿಚಾರವನ್ನು ಕೇಳಿ ನನಗೆ ಆದ ಸಂತೋಷವನ್ನು ... ಪಡಿಸಲು ಸಾಧ್ಯವಿಲ್ಲಾ. ಹೇಗಾದರೂ, ಮಾಧೂ ... ದ್ದರೆ ಸರಿ ಈ ವಿಚಾರ ಅವನಿಗೆ ನೀನು ತಿಳಿಸು" ... ಹೇಳಿ, ಸರ್ರನೆ ತನ್ನ ಕೊಠಡಿಯ ಒಳಗೆ ಓಡಿ ಹೋದಳು... ಸುಶೀ ಹೋದ ದಾರಿಯನ್ನೇ ಸ್ವಲ್ಪ ಹೊತ್ತು ನೋಡುತ್ತಾ ... ನಿಂತಿದ್ದು ಮನೆಯ ಕಡೆ ತೆರಳಿದೆ. ಈ ನಿಷ್ಕಲ್ಮಶ ... ಮತ್ತು ಸಹಜವಾದ ಪ್ರೇಮವು ಮಾಧುವಿನ ಹೃದಯವನ್ನು ... ಗೆಲ್ಲಲಾರದೇ ಎಂಬ ತರ್ಕವು ನಾನು ಮನೆಯನ್ನು ... ವರೆಗೂ ಮನಸ್ಸಿನಲ್ಲಿ ಅಲೆದಾಡುತ್ತಲೇ ಇತ್ತು. ಮಾರನೆ ... ದಿವಸ ಮಾಧುವು ಕಾಲೇಜಿಗೆ ನನ್ನನ್ನು ಕರೆಯಲು ... ನಂತೆಯೇ ನಮ್ಮ ಮನೆಗೆ ಬಂದ. ಹಿಂದಿನ ದಿವಸದ ... ಯಿಂದ ಅವನು ಸ್ವಲ್ಪವೂ ಬದಲಾಯಿಸಿರಲಿಲ್ಲ. ... ನೋಡಿ ನಗುತ್ತಾ "ಏಳೋ ಹೋಗೋಣ ...

ಮಿನಿಟ್ಸ್ ಇದೆ" ಎಂದ. ನಾನು ಸಿದ್ಧನಾಗಿ ಅವನೊ ಡನೆ ಹೊರಟೆ. ನನ್ನ ಮನಸ್ಸಿನ ಅಲ್ಲೋಲ ಕಲ್ಲೋಲವು ಮಾಧುವನ್ನು ನೋಡಿದ ಮೇಲಂತೂ ಇಮ್ಮಡಿಸಿತು. ನಾನು ಮಾಧುವನ್ನೇ ಸುಮ್ಮನೆ ದೃಷ್ಟಿಸಿ ನೋಡುತ್ತಾ ಹೋಗು ತ್ತಿದ್ದೆ. ಮಾಧು ಮಾತ್ರ ಈವತ್ತು ಆ ಪಿಕ್ಚರ್ ಬಂದಿದೆ ಈ ನಾಟಕದ ಕಂಪನಿಯಲ್ಲಿ ಹಿರೋಯಿನ್ ಬಹಳ ಚೆನ್ನಾಗಿ ನೃತ್ಯ ಮಾಡ್ತಾಳೆ. ಅಲ್ಲಿ 'ಎಂಟರ್ಟೇನಮೆಂಟ್' ಎಂದು ಹೇಳುತ್ತಾ ಬಂದ. ಅವನ ಮಾತುಗಳು ನನಗೆ ಕೇಳ ಿಯೂ ಕೇಳದಲೇ ಇತ್ತು. ಸಾಯಂಕಾಲ ಟೆನಿಸ್ಸಿಗೆ ಹೋಗು ವಾಗ ಮಾಧುವನ್ನು ಇನ್ನೊಂದು ಸಲ ಸುಶೀ ವಿಷಯದಲ್ಲಿ ಹೆಚ್ಚು ಅಭಿಲಾಷೆಯುಳ್ಳವನಂತೆ ಮಾಡೋಣವೆಂದು ನಿರ್ಧ ರಿಸಿದೆ. ಕಾಲೇಜು ಮುಗಿದ ನಂತರ ಮಾಧೂವೇ ನನ್ನನ್ನು ಎಳೆದುಕೊಂಡು ಹೋಗಿ ಕಾಫಿ ತಿಂಡಿ ಕೊಡಿಸಿದ. ಕಾಫಿ ಯನ್ನು ಕುಡಿಯುತ್ತಾ "ಮಾಧೂ ನಿನ್ನೆ ಕೇಳಿದ್ದಕ್ಕೇನೋ ಇದು" ಎಂದೆ. ಆದಕ್ಕೆ ಮಾಧುವು "ಆ ಸಬ್ಜೆಕ್ಟ್ ಬಂದಾಗ ನೋಡೋಣ: ಅದಕ್ಕೆ ಇಷ್ಟೇ ಅಲ್ಲ ಇನ್ನೂ ಬಹಳ ಆಗುತ್ತೆ" ಎಂದು ನಕ್ಕ. ಇದೇ ಸಮಯವೆಂದು ನಾನು ಸುಶೀ ಹೇಳಿದ್ದ ಮಾತುಗಳನ್ನು ಮೆಲ್ಲಗೆ ಹೇಳಿದೆ. ಹೃದಯದ ನಿಷ್ಕಳಂಕ ಪ್ರೇಮವೇ ಹೊರಗಿನ ಆಡಂಬರ ಕ್ಕಿಂತ ಒಂದು ಸಾವಿರ ಪಾಲು ಉತ್ತಮವೆಂದು ತಿಳಿಸಿದೆ. ಮಾಧುವು ನನ್ನ ಮಾತುಗಳನ್ನು ಸ್ವಲ್ಪ ವ್ಯಂಗ್ಯವಾಗಿಯೇ ಅರ್ಥಮಾಡಿಕೊಂಡು "ಇದೆಲ್ಲಾ ನಿಂಗೆ ಸುಶೀ ಹೇಳಿ ದ್ದಳೇನೋ, ನನ್ನ ಮದುವೆಯ ವಿಷಯ ಕೇಳಿ ಅವಳಿಗೆ ಸಹಿಸದೇ ಹೋಗಿರಬೇಕು. ಸರಿ, ಹಾಗಾದ್ರೆ ಇನ್ನು ಮೇಲೆ ನಾನು ಸುಶೀ ಮನೆಗೂ ಹೋಗೋಲ್ಲ. ಅವಳ ಜತೆಗೆ ಕೇರಂ ಆಡೋದಕ್ಕೂ ಕೂಡೋದಿಲ್ಲ" ಎಂದು ತನ್ನ ಮತ್ತೊಂದು ನಿರ್ಧಾರವನ್ನೂ ಹೇಳಿದ. ಇವನ ಬುದ್ಧಿಯನ್ನು ನೋಡಿ ನನ್ನ ಮನಸ್ಸು ಮರುಗಿತು. ಆದರೂ ಮಾಧುವನ್ನು ಸರಿ ಯಾದ ದಾರಿಗೆ ತರುವುದು ಕಷ್ಟವೆಂದು ನನಗೆ ತೋರಲಿಲ್ಲ. ಇದಾದ ಒಂದು ವಾರದ ಮೇಲೆ ಮಾಧೂ ಹುಡುಗಿಯನ್ನು ನೋಡಲು ಮದರಾಸಿಗೆ ಹೋಗಿ ಬಂದ. ಬಂದ ಮಾರನೆಯ ದಿನವೇ ಸುಶೀ ಮನೆಗೆ ಬರುವುದಾಗಿ ತನ್ನ ತಮ್ಮನೊಡನೆ ಹೇಳಿ ಕಳುಹಿಸಿದ. ಈ ವರ್ತಮಾನವನ್ನು ಕೇಳಿ ನಾನೂ ಅವನು ಬರುವುದಕ್ಕೆ ಮುಂಚೆಯೇ ಸುಶೀ ಮನೆಗೆ ಬಂದೆ. ಸುಶೀ ಖಿನ್ನವಾಗಿಯೇ ಇದ್ದಳು. ಮೊದಲಿದ್ದ ಲವಲವಿ ಕೆಯು ಅವಳಲ್ಲಿರಲಿಲ್ಲ. ಅನಳು ಮಾಧುವು ತನ್ನನ್ನು ವಿವಾಹವಾಗಲಾರನೆಂದೂ, ಮದರಾಸಿನ ಹುಡುಗಿಯನ್ನು ತನ್ನ ಮುಂದೆ ಕೊಂಡಾಡಲು ತನ್ನ ಮನೆಗೆ ಬರುವ ನೆಂದೂ ನಿರ್ಧರಿಸಿದ್ದಳು. ನನ್ನನ್ನು ನೋಡಿದ ಕೂಡಲೆ ಸುಶೀ ತಂದೆಯೂ "ನೋಡಪ್ಪಾ ಈ ಹುಚ್ಚು ಹುಡುಗಿ ರೀತಿ! ಮಾಧುವೇ ಅವಳ ಗಂಡನೆಂದು ತಿಳಿದುಕೊಂಡಿ ದ್ದಳಂತೆ, ಅವನು ಬೇರೆ ಮದುವೆಮಾಡಿಕೊಳ್ಳಲು ನಿರ್ಧ ರಿಸಿರುವುದರಿಂದ ಇವಳಿಗೆ ವಿವಾಹವೇ ಬೇಡವಂತೆ" ಎಂದು ನಿಧಾನವಾಗಿ ಹೇಳಿದರು. ನಾನು ಧೈರ್ಯದಿಂದ "ನೀವೇನೂ ಯೋಚಿಸಬೇಡಿ. ನನ್ನ ತಂಗಿಯಂತಿರುವ ಸುಶೀಯ ಅಭಿಲಾಷೆಯನ್ನು ಆದಷ್ಟು ಮಟ್ಟಿಗೂ ನೆರವೇರಿಸಲು ಪ್ರಯತ್ನಮಾಡುತ್ತೇನೆ. ಆದರೆ ಈಗ ಮಾಧು ಬರೋ ಹೊತ್ತಾಯಿತು. ನಾನು ಮಾತಾಡಿದಕ್ಕೆ ನೀವೆಲ್ಲರೂ ಸಮ್ಮ ತಿಸಬೇಕು" ಎಂದು ಹೇಳಿ ಸುಶೀ ರೂಮಿಗೆ ಬಂದು "ನಾನು ಮಾಧುವಿನ ಮುಂದೆ ಆಡುವ ಮಾತುಗಳಿಗೆ ಪ್ರತ್ಯುತ್ತರ ಹೇಳದೆ ಎಲ್ಲದಕ್ಕೂ ಸಮ್ಮತಿಸು"ವಂತೆ ಹೇಳಿದೆ. ಸ್ವಲ್ಪ ಹೊತ್ತಿನಲ್ಲಿಯೇ ಮಾಧು ಬಂದ. ಮಾಧುವಿನ ರೀತಿಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಎಂದಿನಂತೆ ಸೂಟಿಲ್ಲ, ತಲೆ ಬಾಚಿಕೊಂಡಿಲ್ಲ, ಏನೋ ಒಂದು ತರಹ ಯೋಚನೆ ಯಿಂದ ಕೂಡಿದ್ದ ಮನುಷ್ಯನಂತೆ ತೋರುತ್ತಿದ್ದ. ಅವ ನನ್ನು ಇನ್ನು ಸ್ವಲ್ಪ ದಾರಿಗೆ ಬರುವಂತೆ ಹೇಳೋಣ ವೆಂದು "ಮಾಧೂ ಬಾರಯ್ಯ, ನಿನ್ನನ್ನು ನೋಡಿ ಸಂತೋಷ ವಾಯಿತು. ಈವತ್ತು ಸುಶೀ ನಮ್ಮಿಬ್ಬರಿಗೋಸ್ಕರ ಕಾಫಿ ಮಾಡಿಸಿದ್ದಾಳೆ" ಎಂದೆ. ಮಾಧು ನೇರವಾಗಿ ಬಂದು ನನ್ನ ಎದುರಿಗೆ ಕುರ್ಚಿಯ ಮೇಲೆ ಕುಳಿತುಕೊಂಡ. "ಏನಯ್ಯಾ ಮದರಾಸು ವಿಷಯ" "ಮದುವೆ ಯಾವಾಗ" ಎಂದೆ. "ಮದರಾಸು ವಿಷಯ ಹಾಳಾಯಿತು. ನೀನು ನನ್ನ ರೇಗಿ ಸಬೇಡ" ಎಂದ. ನಾನು "ಅಲ್ಲೋ ಅಷ್ಟು ಕುಣೀತಿ ದ್ದವನು ಆ ವಿಷಯ ಕೇಳಿದ್ರೆ ಹೀಗೆ ಹೇಳುತ್ತೀಯಲ್ಲೊ, ಏನಾಯಿತೋ ಸರಿಯಾಗಿ ಹೇಳು" ಎಂದೆ. "ನೋಡು' ನಾನು ಮದರಾಸಿಗೇನೋ ಹೋಗಿದ್ದೆ; ಆದರೆ ಫೋಟೋ ದಲ್ಲಿರೋ ಹುಡುಗಿಗೂ ಪ್ರತ್ಯಕ್ಷ ಹುಡುಗಿಗೂ ಬಹಳ ವ್ಯತ್ಯಾಸ ಕಣೋ. ಫೋಟೋನ ಎಲ್ಲಾ 'ಟಚ್' ಮಾಡಿಸಿ ತೋರಿಸಿದ್ರು, ನನಗೆ ವೃಥಾ ಶ್ರಮವಾಯಿತು. ನಾನು ಅಲ್ಲಿಯೇ ಮದುವೆಯಾಗಲು ಇಷ್ಟವಿಲ್ಲವೆಂದು ಹೇಳಿ ಬಂದುಬಿಟ್ಟೆ" ಎಂದ. ನಾನು "ಮಾಧು, ಅರಿತನುರಿತ ಸ್ನೇಹಿತರ ಮಾತು ಗಳಿಗೆ ಲಕ್ಷ್ಯವಿಲ್ಲದೆ ಕೆಲಸಮಾಡುವವರಿಗೆ ಇದೇ ಗತಿ. ನಾನು ಮುಂಚೆಯೇ ಹೇಳಲಿಲ್ಲವೇ "ಹೃದಯಪ್ರೇಮ ಬಾಹ್ಯಾಡಂಬರಕ್ಕಿಂತ ಲೇಸೆಂದು", ಎಂದು ಹೇಳಿ "ಸುಶೀ

ಕಾಫಿ ಕೊಡಮ್ಮಾ" ಎಂದು ಕೂಗಿದೆ. ಸುಶಿಯು ಎರಡು ಬಟ್ಟಲುಗಳಲ್ಲಿ ಕಾಫಿ ತಂದು ನಮ್ಮ ಮುಂದೆ ಇಟ್ಟು ಒಳಗೆ ಹೋದಳು. ಮಾಧು "ಇದೇನೋ ಸುಮ್ಮನೆ ಸುಶೀಗೇಕೊ ತೊಂದರೆಕೊಟ್ಟೆ. ಒಳ್ಳೆ ಕಾಫಿ ಮಹಾನುಭಾವನಯ್ಯಾ ನೀನು" ಎಂದು ಹೇಳಿ ಬಟ್ಟಲನ್ನು ಕೈಗೆ ತೆಗೆದುಕೊಂಡ. "ಇಲ್ಲಿ ತಗೊಳ್ಳಯ್ಯಾ ಸುಶೀಗೆ ಅಷ್ಟು ತೊಂದರೆ ಕೊಡಕೂಡದೇ? ಮದುವೆಯಾಗಬೇಕೆಂದು ಹುಡುಗಿ ಫೋಟೋನ ನೋಡಿದ ನೀನೆ ಕಾಫಿ ತಿಂಡಿ ಕೊಡಿಸಿದೆ, ಮದುವೆ ನಿಶ್ಚಯವೇ ಆಗಿರೋ ಸುಶೀ ಬರೀ ಕಾಫೀನೂ ಕೊಡಬೇಡವೇ" ಎಂದು ಮಾಧುವಿನ ಮುಖವನ್ನೆ ನೋಡುತ್ತಾ ಹೇಳಿದೆ. ನನ್ನ ಮಾತುಗಳನ್ನು ಕೇಳಿ ಮಾಧುವು ಬೆಚ್ಚಿಬಿದ್ದ. ರೂಮಿನ ಕಿಟಕಿಯಲ್ಲಿ ಸುಶೀ ನಗುತ್ತಾ ನಿಂತಿರುವುದು ನನಗೆ ಕಾಣಿಸಿತು. ಸುಶೀಗೆ ಸುಮ್ಮನಿರುವಂತೆ ಕೈ ಸಂಜ್ಞೆಮಾಡಿ "ಕುಡಿಯಯ್ಯಾ ಮಾಧು ಕಾಫೀನ, ಸುಶೀ ಮಾಡಿದ ಕಾಫಿ ಎಷ್ಟು ರುಚಿಯಾಗಿದೆ! ಅದು ಮದುವೆಯಾಗುತ್ತೇನಲ್ಲಾ ಎನ್ನುವ ಸಂತೋಷದಿಂದ ಮಾಡಿದ್ದು" ಎಂದು ಕುಚೇಷ್ಟೆಗಾಗಿ ನುಡಿದೆ. ಕಾಫಿ ಮಾಧುಗೆ ಕಹಿಯಾಗೇ ಇದ್ದಿರಬೇಕು. ಅವನು ಪೂರ್ತಿಯಾಗಿ ಕುಡಿಯಲೇ ಇಲ್ಲ. ಅವನ ಹೃದಯದ ದುಃಖವು ಅವನನ್ನು ಮೂಗನನ್ನಾಗಿ ಮಾಡಿತು. ಮಾಧು ಹೆಚ್ಚಾಗಿ ಮಾತಾಡದೇನೇ ಹೋಗೋಣ ಬಾರೋ ಎಂದು ನನ್ನ ಕೈ ಹಿಡಿದು ಹೊರಗೆ ಕರೆದುಕೊಂಡು ಬಂದ. ದಾರಿಯಲ್ಲಿ ಹೋಗುತ್ತಿರುವಾಗ "ಸುಶೀಗೆ ಮದುವೆ ನಿಶ್ಚಯವಾಯಿತೇನೋ, ವರ ಯಾರು?" ಎಂದು ಕೇಳಿದ. ನಾನು ಇನ್ನೂ ಸ್ವಲ್ಪ ಬಿಗಿಯಾಗಿಯೇ ಇರಬೇಕೆಂದು "ಅದೆಲ್ಲಾ ನಿನಗ್ಯಾಕೋ! ನೀನಂತೂ ಸುಶೀನ ಮದುವೆಯಾಗೋಲ್ಲ. ಇನ್ಯಾರಾದರೂ ಆಗಲಿ, ಆ ವಿಷಯ ಕಟ್ಟಿಕೊಂಡು ನಿನ್ಯಾಕೆ ಒದ್ದಾಡಬೇಕು?" ಎಂದೆ. ಅವನು ಖಿನ್ನಮನಸ್ಕನಾಗಿ "ನೋಡೋ ನಾನೆಂತಾ ತಪ್ಪುಮಾಡಿದೆ! ಸುಶೀ ಮನಸ್ಸು ಎಷ್ಟು ನೊಂದಿಸಿದೆ! ನನ್ನ ತಪ್ಪು ನನಗೇ ತಿಳೀತು. ಸುಶೀ ಅಂತ ಪತ್ನಿಯು ನನಗೆ ಸಿಗುತ್ತಾಳೇನೋ!" ಎಂದು ಕರವಸ್ತ್ರವನ್ನು ಮುಖಕ್ಕೆ ಒತ್ತಿಕೊಂಡ. ನಾನು ಊಟಮಾಡಿಕೊಂಡು ಅವನ ಮನೆಗೆ ಬರುವುದಾಗಿ ಹೇಳಿ ನನ್ನ ಮನೆಗೆ ತೆರಳಿದೆ. ಮಧ್ಯಾಹ್ನ ಮಾಧು ಮನೆಗೆ ಹೋಗಿ ಸುಬ್ಬರಾಯರನ್ನು ಕಂಡು, ಮಾಧು ಸರಿಯಾದ ದಾರಿಗೆ ಬಂದಿದ್ದಾನೆ; ಮದುವೆಗೆ ಏರ್ಪಾಡು ಮಾಡಿ ಎಂದು ...

ಮಾಧು ಕೊಠಡಿಗೆ ಹೋದೆ. ಬೆಳಗ್ಗೆ ಯಾವ ... ಯಲ್ಲಿದ್ದನೋ ಅದೇ ರೀತಿಯಲ್ಲಿ ಇದ್ದ. ... ನನ್ನು ನೋಡಿದ ಕೂಡಲೆ ಅವನು ತುಂಬಾ ... ತ್ತಾಪ ಪಟ್ಟಂತೆ ತೋರುತ್ತಿತ್ತು. ನಾನು "ಮಾಧು ... ಲಾದರೂ ನನ್ನ ಮಾತು ಕೇಳು ನಿನಗೆ ತೊ... ಗೋದಿಲ್ಲ. ಸುಶೀ ಹಾಗೇ ಇರೋ ಹುಡುಗೀನೆ ... ದ್ದೇನೆ ನೀನು ಒಪ್ಪಿಕೋ" ಎಂದೆ. "ನೀನು ಹೇಳಿದ ... ಆಗಲೆಯ್ಯಾ, ನಿನ್ನ ಮಾತು ಈ ಸಲ ತೆಗೆದು ಹಾಕ... ಸುಶೀಗಂತು ಒಳ್ಳೆ ವರ ಸಿಕ್ಕಿದನಲ್ಲಾ!" ಎಂದು ಕ... "ಓಹೋ ಒಳ್ಳೆಯ ವರನೆ ಸಿಕ್ಕಿದ ಅವಳಿಗೂ ... ವರನೇ. ನೀನೇನೂ ಯೋಚಿಸಬೇಡ; ಮದುವೆ ... ಶ್ರೇಲ್ಲೆ ಆಗುತ್ತೆ. ಅಷ್ಟರಲ್ಲಿ ನಿನ್ನ ಮದುವೇನೂ ... ನಿನಗೂ ಅನುಕೂಲವಾದ ಕನ್ಯೆಯನ್ನೇ ನೋಡಿ... ನಿನ್ನ ಆಯ್‌ಡಿಯಲ್ ವಾಯ್ಫ್ ಸಿಗತಾಳೆ." ಎಂದ... ವಾಗ ಕೈವಿಾರಿ ನನ್ನ ಮುಖದಲ್ಲಿ ನಗೆಮೂಡಿತು ... ನನ್ನ ಪ್ಲ್ಯಾನ್ ಎಲ್ಲಾ ಯೋಚಿಸಿರಬೇಕು ... ರಿಂದಲೇ ಖೊಳ್ಳೆಂದು ನಕ್ಕು ಎದ್ದು ನನ್ನ ಬೆನ್ನ ... ಆಗಲಯ್ಯಾ ನೀನೆ ನನಗೆ ರೀಯಲ್ ಫ್ರೆಂಡ್ ಎಂದ... ಕೈಕುಲುಕಿದ.

ಮರುದಿವಸವೇ ನನಗೆ ಕಲ್ಕತ್ತೆಗೆ ಹೋಗುವ ... ಬಿತ್ತು. ಮಾಧುವು ನನ್ನನ್ನು ಬಿಡಲಾರದೇ ಬೀಳ್ಕೊ... ನಾನು ಹೊರಟುಹೋದ ಇಪ್ಪತ್ತು ದಿವಸಗಳಲ್ಲಿಯೇ ... ವೆಯೂ ಆಯಿತೆಂದು ಸುಶೀ ಮಾಧೂ ಇಬ್ಬರೂ ... ಬರೆದರು. ಮಾಧುಗೆ ಮದುವೆಯಾದ ಎರಡು ವ... ನಂತರ ಅವನನ್ನು ನೋಡಿಕೊಂಡು ಹೋಗಲು ... ಳೂರಿಗೆ ಬಂದೆ. ಮಾಧು ಈಗ ಸೀನಿಯರ್ ಬಿ. ಎ. ... ಓದುತ್ತಿದ್ದಾನೆ. ಸಂಜೆ ತಮಾಷೆಯಾಗಿ ಮಾತ... ವಾಗ "ಏನೋ ಮಾಧೂ, ನಿನ್ನ ನಿರ್ಧಾರವೇನಾ... ಎಂದೆ. ಈ ಮಾತುಗಳನ್ನು ಕೇಳಿದೊಡನೆಯೆ ಸುಶೀ ... ನಿಂದ ತನ್ನ ಮುದ್ದಾದ ಮಗುವನ್ನು ಎತ್ತಿಕೊಂಡು ... "ಅಣ್ಣಯ್ಯಾ ಅವರ ನಿರ್ಧಾರದ ಫಲ ಇದು" ... ನನ್ನ ಕೈಗೆ ಕೊಟ್ಟಳು. ಮಗು ಬಹು ಚೆನ್ನಾಗಿದೆ. ... ಗುಣ, ಮಾಧು; ರೂಪು ಎರಡೂ ಮೂರ್ತಿವೆತ್ತಂತೆ ...

ಹಲ್ಲಿನ ಆರೋಗ್ಯ

ಲೇಖಕರು :
ಡಾ. ಗೋಪಾಲಕೃಷ್ಣರಾಯರು,
ಸಂಪಾದಕ ಕಲಿಯುಗ, ಧಾರವಾಡ.


ಕಾಡು ಮನುಷ್ಯನ ಹಲ್ಲು ಬಾಯಿಗಳು ನಾಗರಿಕನಿಗಿಂತ ಹೊಲಸಾಗಿರಬಹುದು; ನಾರುತ್ತಿರಬಹುದು. ಆದರೆ ನಾಗರಿಕನ ಹಲ್ಲುಗಳೆ ಹೆಚ್ಚು ಹುಳುಕಾಗಿರುತ್ತವೆಂಬುದು ಅಚ್ಚರಿಯಲ್ಲವೇ ?

ಹುಳುಕು ಹಲ್ಲುಗಳು ಇಡಿ ದೇಹದ ಅಸ್ಥಿರೋಗದ ಲಕ್ಷಣವಾದುದರಿಂದ ಅವನ್ನು ಅಲಕ್ಷಿಸುವದು ಆತ್ಮಘಾತ.

ಹಲವು ಹಲ್ಲುಪುಡಿಗಳಲ್ಲಿ ಇಟ್ಟಂಗಿ-ಹಂಚಿನ ಪುಡಿಗಳು ಇರುತ್ತವೆ. ಅವು ದಂತಕವಚವನ್ನು ಸವೆಸುತ್ತವೆ! ಎಚ್ಚರ!

ಚಂದ ಕಾಣಬೇಕೆಂಬ ಬಯಕೆ ಯಾರಿಗಿಲ್ಲ? ಮುದುಕರಿಗೂ ಇದೆಯಂದರೆ! ಮತ್ತೆ ಕುಂಟ ಕುರುಡರೂ ಸೌಂದರ್ಯ ಸಾಧನೆಯಲ್ಲಿ ಹಿಂದೆ ಬೀಳುವಂತಿಲ್ಲ. ಸೌಂದರ್ಯವನ್ನು ಹೆಚ್ಚಿಸುವ ವಿವಿಧ ಸಾಮುಗ್ರಿಗಳನ್ನು ಒಂದೆಡೆಗೆ ರಾಶಿ ಹಾಕಿದರೆ ಅದರಲ್ಲಿ ಮುಖಸೌಂದರ್ಯದ ವಸ್ತುಗಳೇ ನೂರಕ್ಕೆ ತೊಂಬತ್ತರಷ್ಟಾಗಬಹುದು! 'ಸೌಂದರ್ಯ'ವೆಂದ ಕೂಡಲೆ ನಮ್ಮ ಕಂಣೆದುರು ಮೊದಲು ಬರುವದು ಮುಖ. ಮುಖ ಸೌಂದರ್ಯದ ಬಲದಿಂದ ತರುಣಿಯರು ವೃದ್ಧರಿಗೆ ಮೋಹಿಸಿದ್ದಾರೆ; ರೋಗಿಷ್ಟರೂ ಮದುವೆಯಾಗಿದ್ದಾರೆ.

ಹಲ್ಲಿನ ಆರೋಗ್ಯ, ಅಚ್ಚುಕಟ್ಟುತನಗಳೇ ಮುಖ ಸೌಂದರ್ಯದ ಜೀವಾಳವಾಗಿವೆ. ಸಾಲಾಗಿ, ಬಿರುಕಿಲ್ಲದ ಬಿಳಿ



ಹಲ್ಲುಗಳಿಂದ ಶೋಭಿಸುವ ಮುಖದಲ್ಲಿ ಒಂದು ಮೋಹಕ ಶಕ್ತಿಯಿದೆ. ಅನೇಕ ಕಲಾವಂತರಾದ ಗಾಯಕರೂ, ವಕ್ತ್ರಗಳೂ, ವ್ಯಾಪಾರಿಗಳೂ ಕೆಟ್ಟ ಹಲ್ಲುಗಳಿಂದ ತಮ್ಮ ಹೆಸರು ಕೆಡಿಸಿಕೊಂಡಿದ್ದಾರೆ; ನಿರುದ್ಯೋಗಿಗಳು ನೌಕರಿ ಸಂಪಾದನೆಯಲ್ಲಿ ಅಯಶಸ್ವಿಯಾಗಿದ್ದಾರೆ. ಆದುದರಿಂದ ಚಂದ ಕಾಣಬೇಕೆನ್ನುವವರೂ ವ್ಯವಹಾರದಲ್ಲಿ ಮುಂದೆ ಬರಬೇಕೆನ್ನುವವರೂ ಹಲ್ಲುಗಳ ಆರೋಗ್ಯದ ಕಡೆಗೆ ಗಮನ ಕೊಡಬೇಕಾದುದು ಪ್ರಥಮ ಕರ್ತವ್ಯ.

ಅಲ್ಲದೆ ಬಾಯಿಯೆಂದರೆ ದೇಹರಾಜ್ಯದ ರಾಜದ್ವಾರವಿದ್ದಂತೆ. ಅಲ್ಲಿ ಕೊಳಕು ಹುಳುಕು ಹಲ್ಲುಗಳಿದ್ದರೆ ಇಡಿ ದೇಹವೆ ರೋಗಗಳ ಮುತ್ತಿಗೆಗೆ ಗುರಿಯಾಗಬಹುದು. ನೀರು ಮೊದಲ್ಗೊಂಡು ಎಲ್ಲ ಆಹಾರವೂ ಹಲ್ಲಿನ ಸಂಸರ್ಗದಿಂದಲೇ ಶರೀರ ಪ್ರವೇಶ ಮಾಡುತ್ತವೆ. ಕೆಟ್ಟ ಹಲ್ಲುಗಳಿಂದ ಹಲವರು ಅನೇಕ ವರ್ಷಗಳ ವರೆಗೆ ತಲೆಶೂಲೆಯಿಂದ ತೊಂದರೆ ಪಡುವರು. ಕೆಲವು ಹೊಟ್ಟೆನೋವು, ಚರ್ಮರೋಗ, ವಾತರೋಗಗಳೂ ಕೆಟ್ಟ ಹಲ್ಲುಗಳಿಂದ ಹುಟ್ಟುವವೆಂದು ಶರೀರವಿಜ್ಞಾನಿಗಳಿಗೆ ತಿಳಿದು ಬಂದಿದೆ. ಆದುದರಿಂದ ವ್ಯವಹಾರದ ಸೋಲುಗೆಲವುಗಳನ್ನು ಬದಿಗಿಟ್ಟರೂ ದೇಹದ ಆರೋಗ್ಯರಕ್ಷಣೆಯ ಉದ್ದೇಶದಿಂದಲಾದರೂ ಹಲ್ಲುಗಳ ಆರೋಗ್ಯವನ್ನು ರಕ್ಷಿಸಿಕೊಳ್ಳುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ದೇವರ ಭಜನೆ ಪ್ರಾರ್ಥನೆಗಳನ್ನು ಮಾಡುವವರೂ ತಮ್ಮ ಹಲ್ಲುಗಳನ್ನು ಶುದ್ಧವಾಗಿಟ್ಟುಕೊಂಡರೆ ಅವರ ಭಜನೆ ಪ್ರಾರ್ಥನೆಗಳಿಗೆ ಹೆಚ್ಚು ಪಾವಿತ್ರ್ಯ ಬರುವದು. ಒಟ್ಟಿನಲ್ಲಿ ಸುಂದರವಾದ ಹಲ್ಲುಗಳು ಪ್ರಾಪಂಚಿಕರಿಗೂ ಬೇಕು; ಪಾರಮಾರ್ಥಿಕರಿಗೂ ಬೇಕು. ಮತ್ತು ಹಲ್ಲುಗಳು ಸುಂದರವಾಗಿರಬೇಕಾದರೆ ಅವುಗಳಿಗೆ ರೋಗ ತಗಲದಂತೆ ಆರೈಕೆ ಮಾಡುವದು ಅಗತ್ಯ.

ನಾವೇನೋ ತಿಳಿದಿದ್ದೇವೆ; ಮನುಷ್ಯನು ನಾಗರಿಕನಾದಂತೆ ಅವನ ರೋಗಗಳೂ, ಹೊಲಸೂ ಕಡಿಮೆಯಾಗುತ್ತವೆಯೆಂದು. ಕಾಡು ಮನುಷ್ಯನ ದೇಹದ ಮೇಲೆ ನಾಗರಿ


ಕನಿಗಿಂತ ಹೆಚ್ಚು ಹೊಲಸು ಇದ್ದಿರಬಹುದು. ಆದರೆ ನಾಕರಿಕನಿಗಿಂತ ಕಾಡು ಮನುಷ್ಯನೆ ಹೆಚ್ಚು ನಿರೋಗಿಯಾಗಿದ್ದನೆಂದರೆ ನಾವು ನಾಚಿಕೆಪಡಬಹುದಾದರೂ ಅದು ನಿಜಸಂಗತಿಯಾಗಿದೆ. ಇದೇ ಮಾತನ್ನು ಹಲ್ಲುಗಳ ವಿಷಯವಾಗಿಯೂ ಹೇಳಬಹುದು. ಕಾಡು ಮನುಷ್ಯನ ಹಲ್ಲು ಬಾಯಿಗಳು ನಾಗರಿಕನಿಗಿಂತ ಹೊಲಸಾಗಿರಬಹುದು; ನಾರುತ್ತಿರಬಹುದು. ಆದರೆ ನಾಗರಿಕನ ಹಲ್ಲುಗಳೆ ಹೆಚ್ಚಾಗಿ ಹುಳುಕಾಗಿರುತ್ತವೆಂಬುದು ಆಚ್ಚರಿಯಲ್ಲವೆ! ನಾಗರಿಕತೆಯು ಮನುಷ್ಯನಲ್ಲಿ ಸಮಾಜ ಬುದ್ಧಿಯನ್ನು ಹೆಚ್ಚಿಸಿದೆ; ಒಕ್ಕಟ್ಟನ್ನು ಬೆಳೆಸಿದೆ. ಆದರೊಡನೆಯೆ ಮನುಷ್ಯನನ್ನು ಬೇನೆ ಕೊಳಕನನ್ನಾಗಿಯೂ ಮಾಡಿದೆಯೆಂಬುದು ದುರ್ದೈವದ ಸಂಗತಿ.

ಮನುಷ್ಯನು ನಗರವಾಸಿ (ಗ್ರಾಮವಾಸಿ)ಯಾಗುತ್ತ ನಡೆದಂತೆ ಅವನು ನೈಸರ್ಗಿಕ ಆಹಾರ ವಿಹಾರಗಳನ್ನು ಬಿಡುತ್ತ ಬಂದನು. ಊಟ ಕೃತ್ರಿಮ; ಅರಿವೆ ಕೃತ್ರಿಮ; ಬೆಳಕು ಕೃತ್ರಿಮ; ಗಾಳಿ ಕೃತ್ರಿಮವಾಯಿತು. ತಾನಿನ್ನು ಬುದ್ಧಿಶಾಲಿಯಾದೆನೆಂಬ ಹೆಮ್ಮೆಯಿಂದ ಮಾನವಶಿಶುವು ನಿಸರ್ಗ ಮಾತೆಯಿಂದ ದೂರ ಸರಿದು ಹೋಯಿತು. ಈಗ ಹಿಂದೆ ಮುಂದೆ ತಿಳಿಯದೆ ಪೇಚಾಡುತ್ತಿದೆ. ಶುದ್ಧ ಗಾಳಿ, ಬೆಳಕು, ನೀರುಗಳಿಂದ ದೇಹದಲ್ಲಿ ಸಹಜವಾಗಿ ಹುಟ್ಟುವ ಓಜಸ್ಸಿನಿಂದ ವಂಚಿತನಾದುದರಿಂದ ಆಹಾರವು ಬೆಯಿಸದೆ ಅರಗದಂತಾಯಿತು. ಬೆಂದ ಆಹಾರವು ಸತ್ವಹೀನವಾದುದರಿಂದ ಅದನ್ನು ತಿಂದವನೂ ಸತ್ವಹೀನನಾದ. ಪ್ರಕೃತಿಯಲ್ಲಿ ಸತ್ವಕ್ಕೇ ಸತ್ತೆ (ಅಧಿಕಾರ). ಅಂದ ಮೇಲೆ ಸತ್ವಹೀನವಾದ ಮಾನವ ಶರೀರದ ಮೇಲೆ ವಾತಾವರಣದಲ್ಲಿರುವ, ಆಹಾರ ಪಾನೀಯಗಳಲ್ಲಿರುವ ರೋಗಜಂತುಗಳು ಮುತ್ತಿಗೆ ಹಾಕಿದುದರಲ್ಲಿ ಆಶ್ಚರ್ಯವೇನು ? ನಾಗರಿಕರ ಹುಳುಕು ಹಲ್ಲುಗಳಿಗೂ ಸತ್ವಹೀನವಾದ ಆಹಾರವೇ ಮುಖ್ಯ ಕಾರಣವೆಂದು ಈಗ ಸಿದ್ಧವಾಗಿದೆ.

ಹಲ್ಲುಗಳು ಅಸ್ಥಿಸಾಮಗ್ರಿಯಿಂದ ಸಿದ್ಧವಾದ ಅಂಗಗಳಾಗಿವೆ. ಆಹಾರದಲ್ಲಿ ಅಸ್ಥಿಪೋಷಣೆಯ ವಸ್ತುಗಳು ಕಡಿಮೆಯಾಗಿದ್ದರೆ, ಎಲುಬುಗಳು ಸತ್ವಹೀನವಾಗಿ ಬೇನೆ ಬೀಳುವವು. ಹುಳುಕು ಹಲ್ಲಿನವರು ತಮ್ಮ ದೇಹದೊಳಗಿನ ಎಲುಬುಗಳೆಲ್ಲವೂ ಸುರಕ್ಷಿತವಾಗಿವೆಯೆಂದು ತಿಳಿಯಬಾರದು. ಎಲುಬುಗಳು ರೋಗಿಷ್ಟವಾಗಿರುವುದರ ಹೊರ ಗುರುತೆ ಹುಳುಕು ಹಲ್ಲುಗಳೆಂದು ಖಂಡಿತವಾಗಿ ತಿಳಿದುಕೊಳ್ಳಬೇಕು. ಆದರೆ ಹಲ್ಲುಗಳ ಮೇಲೆ ಬೆಳೆಯುವ ಕಂದಾ (Tar)ಗಲಿ, ಒಸಡಿನ ರೋಗದಿಂದಾದ ಹಲ್ಲಿನ [illegible] ವಾಗಲಿ ಅಸ್ಥಿರೋಗದ ಲಕ್ಷಣಗಳಲ್ಲ. ಅವು ಹಲ್ಲಿನ ಸ್ಥಾನಿಕ ಪೀಡೆಗಳು. ಹುಳುಕು ಹಲ್ಲುಗಳು ಮಾತ್ರ [illegible] ದೇಹದ ಅಸ್ಥಿರೋಗದ ಲಕ್ಷಣಗಳಾದುದರಿಂದ ಅವ[illegible] ಅಲಕ್ಷಿಸುವುದು ಆತ್ಮಘಾತ. ಮನುಷ್ಯನ ಹಲ್ಲು[illegible] ಹುಳುಕು ಆಕ್ರಮಿಸಿದುದು ಅವನು ಕೃತ್ರಿಮ [illegible] ಆಹಾರವನ್ನು ಸೇವಿಸಲು ಆರಂಭಿಸಿದ ದಿನದಿಂದ[illegible]

ಸರಿ ಒಂದು ಸಲ ಮಾನವಲೋಕಕ್ಕೆ ಕಾಲು [illegible] ಹಲ್ಲು ಬೇನೆಗಳು ಪೀಳಿಗೆಯಿಂದ ಪೀಳಿಗೆಗೆ ಇಳಿದು ಬ[illegible] ದವು. ಹಲ್ಲಿನ ಅಚ್ಚುಕಟ್ಟು—ಆರೋಗ್ಯಗಳಿಗಾಗಿ [illegible] ದಷ್ಟು ಆರೈಕೆ ಮಾಡಿಕೊಳ್ಳುತ್ತಿರುವವರಿಗೂ ಹು[illegible] ಹಲ್ಲುಗಳು ಪೀಡಿಸುತ್ತಿರುವುದು, ಆ ರೋಗವು [illegible] ಯಿಂದ ಬಂದುದರ ಲಕ್ಷಣವಾಗಿದೆ. ಆದುದರಿಂದ ಹು[illegible] ಹಲ್ಲಿನವರು ತಮ್ಮ ಹಲ್ಲಿನ ಆರೈಕೆಯನ್ನು ದಕ್ಷತೆ[illegible] ಮಾಡುವುದು ಯೋಗ್ಯವಾದರೂ ಆ ಆರೈಕೆಯಿಂದ [illegible] ಹಲ್ಲಿನ ಹುಳುಕು ಕಡಿಮೆಯಾಗದಿದ್ದರೆ ಅವರು [illegible] ಯಾಗಬಾರದು. ತಾಯಿಗೆ ಹುಳುಕು ಹಲ್ಲುಗ[illegible] ಅವಳು ಬಸುರಿದ್ದಾಗ ಹುಳುಕನ್ನು ನಿರೋಧಿಸುವ [illegible]

ರೋಗಸ್ಥಾನ



ಒಸಡುಹುಂಣ. ದಂತಮೂಲ

ರೋಪಚಾರಗಳನ್ನು ಒಂಬತ್ತು ತಿಂಗಳೂ ಮಾಡಿ[illegible] ಬೇಕು. ಅಲ್ಲದೆ ಮಗು ಹುಟ್ಟಿದಾಗಿನಿಂದ ಏಳು ವರ್ಷ[illegible] ವರೆಗೆ ಆ ಉಪಚಾರವನ್ನು ಸಾಗಿಸುತ್ತಲೇ ಇರಬೇಕು.

ಮಕ್ಕಳ ಹಲ್ಲುಗಳು ಹುಳುಕಾಗುವದಕ್ಕೆ ಇನ್ನೊಂ[illegible] ಗುಪ್ತವಾದ ಕಾರಣವೆಂದರೆ ತಾಯಿಗಿರುವ ಉಪ[illegible] ರೋಗ (ಗರಮಿ). ಗಂಡನ ಹೊರ ಚಾಳಿಯಿಂದ ಹೆ[illegible] ತಿಗೆ ಉಪದಂಶದ ಪ್ರಸಾದ ಸಿಗುತ್ತದೆ. ಆದರೆ ಅವ[illegible]

...ಪದಂಶದ ಲಕ್ಷಣಗಳಾವವೂ ತೋರದೆ ಗುಪ್ತವಾಗಿರಬಹುದು. ಸಗರ್ಭಾವಸ್ಥೆಯಲ್ಲಿ ಅವಳ ದೇಹಶಕ್ತಿಯೆಲ್ಲ ...ಸ್ಥ ಶಿಶುಪೋಷಣೆಗೆ ತೊಡಗುವದರಿಂದ ಆಗ ಉಪ...ವು ಅವಳ ದೇಹಧಾತುಗಳನ್ನು ಪ್ರವೇಶಿಸಬಹುದು. ...ದರಿಂದ ಅವಳ ರಕ್ತಕ್ಕೂ ಎಲುಬುಗಳಿಗೂ ಬೇನೆಯ ...ಸರ್ಗವಾಗಿ ಮಗುವಿಗೂ ಅದು ಹರಡಬಹುದು. ಆದುದ...ದ ಬಸುರಿನ ಪೂರ್ಣ ಕಾಲದಲ್ಲಿಯೂ, ಮಗುವಿನ ಬಾಲ್ಯ...ದಲ್ಲಿಯೂ ಉಪದಂಶನಿರೋಧಕ ಆಹಾರೌಷಧಗಳ ವ್ಯವಸ್ಥೆ ...ಯಾಗಬೇಕು.

ಹಲ್ಲುಗಳು ಅಸ್ತವ್ಯಸ್ತವಾಗಿ ಹುಟ್ಟಿ ಬರುವದರಿಂದಲೂ ...ಮುಖ ಸೌಂದರ್ಯವು ಕೆಡುತ್ತದೆ. ಧನೋಪಾರ್ಜನೆಯನ್ನೆ ...ಮುಖ್ಯೋದ್ದೇಶವನ್ನಾಗಿರಿಸಿಕೊಂಡ ದಂತವೈದ್ಯರು ಮಕ್ಕಳ ...ಹಲ್ಲು ಸ್ವಲ್ಪ ಹುಳುಕಾದ ಕೂಡಲೆ ಅವನ್ನು ಕಿತ್ತುಬಿಡುವ ...ಉಪದೇಶ ಮಾಡುತ್ತಾರೆ. ಅದು ತಪ್ಪು. ಸ್ಥಿರದಂತಗಳು ...ವ್ಯವಸ್ಥಿತವಾಗಿ ಹುಟ್ಟಬೇಕಾದರೆ, ಮಕ್ಕಳ ಕ್ಷೀರದಂತಗಳು ...ಸಾಕಷ್ಟು ಕಾಲ ಒಸಡಿನಲ್ಲಿರುವುದು ಆವಶ್ಯಕ. ಅವನ್ನು ...ಬೇಗನೆ ಕೀಳಿಸಿದರೆ ಒಸಡು ಸಡಿಲು ಬಿದ್ದು ಒಳಗಿನ ...ಸ್ಥಿರದಂತಗಳು ಅಸ್ತವ್ಯಸ್ತವಾಗಿ ಎದ್ದು ಬರುವವು. ...ಮೂಗಿನ ಹಿಂಭಾಗದ ವಿದ್ರಧಿಗಳೂ (Adenoids), ಗಂಟಲ ...ಗ್ರಂಥಿಗಳೂ (Tonsils)ಗಳೂ ಮಕ್ಕಳಿಗೆ ಬಾಯಿಂದ ಉಸು...ರಾಡಿಸಹಚ್ಚುತ್ತವೆ. ಆದರಿಂದ ಅವುಗಳ ಎಳೆ ದವಡೆಗಳ ...ಮೇಲೆ ಸೆಳೆತ ಬಿದ್ದು ಹಲ್ಲುಗಳು ಸೊಟ್ಟಡೊಂಕಾಗಿ ಹುಟ್ಟು...ತ್ತವೆ. ಆದುದರಿಂದ ಮೇಲ್ಕಂಡ ಲಕ್ಷಣಗಳೇನಾದರೂ ...ಕಂಡುಬಂದರೆ ಅವಕ್ಕೆ ಕೂಡಲೆ ಚಿಕಿತ್ಸೆ ಮಾಡಿಸಬೇಕು.

ಹುಳುಕು ಹಲ್ಲುಗಳಿಗೆ ತೀರ ಸಾಮಾನ್ಯವಾದ ...ಇನ್ನೊಂದು ಕಾರಣವೆಂದರೆ ಚಿಕ್ಕಂದಿನಲ್ಲಿ ಬಲು ಉಗ್ರವಾಗಿ ...ಬಂದ ಮೈಲಿ, ಗಣಜಿಲೆ, ಆಮಾಂಶ, ಚಳಿಜ್ವರ ಮುಂತಾದ ...ಬೇನೆಗಳಿಂದ ದೇಹದಲ್ಲಿ ಓಜಸ್ಸು ಕಡಿಮೆಯಾಗಿ ಧಾತು...ಗಳು ಕಸುವುಗುಂದುವವು. ಆದುದರಿಂದ ರೋಗಮುಕ್ತ...ರಾದ ಮಕ್ಕಳ ಎಲ್ಲ ಧಾತುಗಳಿಗೂ ಪೋಷಣೆ ಸಿಗುವಂತಹ ...ಪೌಷ್ಟಿಕಾಹಾರವನ್ನು ಕೊಡುವುದಕ್ಕೆ ತಡ ಮಾಡಬಾರದು. ...ಇನ್ನು ಕೃತ್ರಿಮವಾದ ಆಹಾರವನ್ನು ಸೇವಿಸುವವರು ...ತಮ್ಮ ಹಲ್ಲನ್ನು ಮೇಲಿಂದಮೇಲೆ ಶುದ್ಧಿಗೊಳಿಸದಿದ್ದರೆ ...ಹಲ್ಲಿನ ಮೇಲೆ ಕರಿಗಟ್ಟುವದು, ಹಲ್ಲಿನ ಹೊದಿಕೆಯು ಸವೆ...ಯುವದು, ಹಲ್ಲು ತುಂಡಾಗಿ ಪೊಳ್ಳುಬೀಳುವುದು ಮುಂತಾದ ...ತೊಂದರೆಗಳಾಗುವದು ಎಲ್ಲರಿಗೂ ತಿಳಿದ ವಿಷಯ.

ಈ ವರೆಗೆ ಹಲ್ಲುಗಳು ಕೊಳಕು-ಹುಳುಕಾಗುವುದಕ್ಕೂ, ಸೊಟ್ಟ-ಡೊಂಕಾಗುವುದಕ್ಕೂ ಅನೇಕ ಕಾರಣಗಳನ್ನು ಹೇಳಿದುದಾಯಿತು. ಇನ್ನು ಹಲ್ಲುಗಳ ಆರೈಕೆಯನ್ನು ಸ್ವಲ್ಪ ತಿಳಿದುಕೊಳ್ಳುವಾ. ಆರೈಕೆಯನ್ನು ತಿಳಿಯುವುದಕ್ಕೆ ಹಲ್ಲಿನ ರಚನೆಯನ್ನು ತುಸು ಅರಿತಿರಬೇಕು. ಪ್ರತಿಯೊಂದು ಹಲ್ಲಿನಲ್ಲಿ ದಂತಕವಚ, ದಂತಸಾಮಗ್ರಿ, ದಂತಪಿಂಡ ಎಂದು ಮೂರು ವಿಭಾಗಗಳಿವೆ. ದಂತಕವಚ ಬಲು ಗಟ್ಟಿಯಾಗಿದ್ದು ಎಂತಹ ಕಠಿಣ ವಸ್ತುವನ್ನು ಕಡಿದರೂ ಮುರಿಯುವದಿಲ್ಲ. ಅದು ಹಲ್ಲಿನ ಒಳವಿಭಾಗಗಳನ್ನು ಭದ್ರವಾಗಿ ರಕ್ಷಿಸುತ್ತದೆ. ಕವಚದ ಒಳಗಿರುವುದೇ ದಂತಸಾಮಗ್ರಿ. ಅದು ಅಸ್ಥಿಧಾತುವಿನಿಂದಾಗಿ ಹಲ್ಲಿಗೆ ಸ್ಥೈರ್ಯವನ್ನು ಕೊಡುತ್ತದೆ. ದಂತಸಾಮಗ್ರಿಯ ಒಳಗಡೆ ದಂತಪಿಂಡವಿರುತ್ತದೆ. ಅದರಲ್ಲಿಯೇ ಹಲ್ಲಿಗೆ ಪೋಷಣೆ ಕೊಡುವ ರಕ್ತನಲಿಕೆಗಳೂ ನರಗಳೂ ಇರುತ್ತವೆ. ಅವು ಹಲ್ಲಿನ ಬೇರುಗಳೊಳಗಿನಿಂದ ದಂತಪಿಂಡವನ್ನು ಸೇರುತ್ತವೆ.

ಹಲ್ಲಿನ ರಚನೆ ತಿಳಿದ ಮೇಲೆ ಸ್ವಲ್ಪದರಲ್ಲಿ ಹಲ್ಲು ಬೇನೆಗಳ ಕಾರಣಗಳನ್ನು ಹೀಗೆ ವರ್ಣಿಸಬಹುದು: ಹಲ್ಲಿನ ಬೇರು ಕೆಟ್ಟರೆ ದಂತಪಿಂಡಕ್ಕೆ ಬೇನೆ ತಗಲಿ ಹಲ್ಲುಶೂಲೆಗಳು ಹುಟ್ಟುತ್ತವೆ. ದಂತಸಾಮಗ್ರಿಯು, ಸತ್ವಹೀನವಾದ ಆಹಾರದಿಂದ ಕೆಟ್ಟು ಹಲ್ಲು ಹುಳುಕಾಗುತ್ತವೆ. ದಂತಕವಚವು ಸವೆದರೆ ಆಹಾರ-ನೀರುಗಳ ಸ್ಪರ್ಶಮಾತ್ರದಿಂದಲೇ ಹಲ್ಲು ಚಳಿಯುವದು, ಜುಮ್ಮುಗಟ್ಟುವುದು ಆಗುತ್ತವೆ. ಅಂದ ಮೇಲೆ ಹಲ್ಲುಶೂಲೆಗಳಿಗೆ ದಂತಮೂಲ, ಒಸಡುಗಳ ಶುದ್ಧೀಕರಣ; ಹುಳುಕು ಹಲ್ಲಿಗೆ ಅಸ್ಥಿಧಾತು ಪೋಷಕವಾದ ಆಹಾರ; ಕವಚನಾಶಕ್ಕೆ ಹಲ್ಲುಗಳ ಗಳ ಸ್ವಚ್ಛತೆಯೇ ನಿರೋಧಕವಾದ ಉಪಾಯಗಳು (Preventives) ಎಂದಂತಾಯಿತು.

ಅಸ್ಥಿಧಾತುಪೋಷಕ ಆಹಾರವೆಂದ ಕೂಡಲೆ ಗಾಬರಿಯಾಗಬೇಡಿ. ಅದೇನು ಬಡವರಿಗೆ ಅಪರೂಪವಾದುದಲ್ಲ-ಹೆಚ್ಚು ದುಡ್ಡುಕೊಟ್ಟು ಅದನ್ನೇನೂ ಪರದೇಶದಿಂದ ತರಿಸಬೇಕಾಗಿಲ್ಲ. ಹಾಲು, ಹಣ್ಣು, ಟೊಮೆಟೊ, ತೊಪ್ಪಲ ಪಲ್ಲೆ, ರಾಗಿ, ತತ್ತಿ, ಸೂರ್ಯಪ್ರಕಾಶ, ನೀರುಳ್ಳಿ ಮುಂತಾದ ನಿತ್ಯದ ಆಹಾರದಲ್ಲಿಯೇ ಆ ಅಸ್ಥಿಪೋಷಕವಾದ ಚೂರ್ಣಕ್ಷಾರ (Calcium) ವೂ, ಅ, ಕ, ಡ, ಆಹಾರ ಸತ್ವಗಳೂ ಬೇಕಾದಷ್ಟು ಇರುತ್ತವೆ. ದುರ್ವ್ಯಸನ ಮೂಢಾಚಾರಗಳಿಗೆ ಹಾಳಾಗುವ ಹಣವನ್ನು ಉಳಿಸಿ, ಮಕ್ಕಳಿಗೆ ಮೇಲಿನ ಅಸ್ಥಿ

ಪೋಷಕ ಸಾಮುಗ್ರಿಗಳನ್ನು ಒದಗಿಸುವದನ್ನು ಬಡವರು ಕಲಿತುಕೊಳ್ಳಬೇಕು.

ಇನ್ನುಳಿಯಿತು ಹಲ್ಲಿನ ಆರೈಕೆ. ನಾಗರಿಕತೆಯ ಈ ದಿನಗಳಲ್ಲಿ ದಂತಸೌಂದರ್ಯಸಾಧಕರಿಗೆ ಒಂದು ಎಚ್ಚರಿಕೆಯನ್ನು ಕೊಡದೆ ಇರಲಾರೆವು. ದಿನೇದಿನೇ ದಂತ ಮಂಜನಗಳ ಉಪಯೋಗವು ಬೆಳೆಯುತ್ತಿದೆ. "ಆ ಮಂಜನ—ಪೇಸ್ಟುಗಳಲ್ಲಿ ಹಲ್ಲಿನ ಹುಳುಗಳನ್ನು ನಾಶಿಸುವ ವಸ್ತುಗಳಿವೆ; ಹಲ್ಲುಗಳಿಗೆ ಮುತ್ತಿನ ಗಿಲಾಯಿ ಮಾಡುವ ವಸ್ತುಗಳಿವೆ; ಪಾಯೊರಿಯಾ, ಸ್ಕರ್ವಿ ಮುಂತಾದ ಬೇನೆಗಳನ್ನು ಬಲಿಹಾಕುವ ಔಷಧಗಳಿವೆ" ಎಂದು ವಿವಿಧವಾಗಿ ಮೋಹಕವಾಗಿ ಜಾಹಿರಾತುಗಳು ವೃತ್ತಪತ್ರ-ಪತ್ರಿಕೆಗಳಲ್ಲಿ ಪುಟಪುಟಗಳಲ್ಲಿಯೂ ತುಂಬಿರುತ್ತವೆ. ಅವಕ್ಕೆ ಮೆಚ್ಚಿ ನಮ್ಮ ಬಡದೇಶದ ಜನರು ಪೇಸ್ಟುಗಳಿಗಾಗಿ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಿಸುತ್ತಾರೆ. ಆದರೆ ಪಾಶ್ಚಾತ್ಯರಲ್ಲಿಯೇ ಇತ್ತೀಚೆ ಕೆಲವು ವಿಜ್ಞಾನಿಗಳು ಜಗತ್ತಿನ ಪ್ರಮುಖ ಟೂಥ್‌ಪೇಸ್ಟುಗಳನ್ನೆಲ್ಲ ಕಲೆಹಾಕಿ ರಾಸಾಯನಿಕವಾಗಿ ಅವನ್ನು ವಿಶ್ಲೇಷಿಸಿ ನೋಡಿ "ಈ ಎಲ್ಲ ಪೇಸ್ಟುಗಳೂ ಹಲ್ಲುಗಳನ್ನು ಸ್ವಲ್ಪ ಸ್ವಚ್ಛಮಾಡಿ ತಾತ್ಪೂರ್ತಿಕವಾಗಿ ಬಿಳಿ ಮುಸುಕನ್ನು ತರುತ್ತವೆ. ಇವುಗಳಲ್ಲಿ ಕೆಲವನ್ನು ಸತತವಾಗಿ ಉಪಯೋಗಿಸಿದರೆ ಒಸಡುಗಳಿಗೂ ದಂತಕವಚಕ್ಕೂ ಅಪಾಯವಾಗುವದು ಖಂಡಿತ. ಇದರಲ್ಲಿ ಯಾವ ಪೇಸ್ಟೂ ದಂತರೋಗವನ್ನೂ ನಿರೋಧಿಸುವುದಿಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಸಾರಿ ಬಿಟ್ಟಿದ್ದಾರೆ. ಈ ವಿಷಯವನ್ನು ಚನ್ನಾಗಿ ಮನವರಿತು ಪೇಸ್ಟುಗಳಿಗೆ ದುಡ್ಡುಹಾಕಬೇಕೋ ಹೇಗೆಂಬುದನ್ನು ತಾವೇ ನಿರ್ಧರಿಸಿರಿ.

'ಪೇಸ್ಟು ಬಿಟ್ಟು ಮತ್ತೇನು ಮಾಡಬೇಕಂತೀರಿ?' ಎಂದು ಕೇಳುವಿರಲ್ಲವೇ? ತಮಗೆ ಬೇಸರವಾದರೂ ನಾವು ಆಯುರ್ವೇದದ ಕಡೆಗೇ ಬೆರಳು ತೋರಿಸುವವರು. ಆಯುರ್ವೇದದಲ್ಲಿ 'ಎಕ್ಕ, ಆಲ, ಕಾಚಿನಮರ, ಹುಲುಗಿಲು, ಮತ್ತಿ, ಬೇವು ಮುಂತಾದವುಗಳ ಕಡ್ಡಿಗಳಿಂದ ಒಸಡುಗಳಿಗೆ ನೋವಾಗದಂತೆ ಹಲ್ಲು ತಿಕ್ಕಬೇಕು' ಎಂದು ಹೇಳಿದೆ. ಈ ಕಡ್ಡಿಗಳ ಕುಂಚಗಳಿಂದ ಹಲ್ಲು ನಿರ್ಮಲ[illegible] ಹಲ್ಲು ಸಂದುಗಳ ಕೊಳೆ ಹೋಗುತ್ತದೆ; ಒಸಡುಗಳು [illegible]ಗೊಳ್ಳುತ್ತವೆ; ದಂತಕವಚಕ್ಕೆ ಅಪಾಯ ಮಾಡು[illegible] ಆ ಕಡ್ಡಿಗಳನ್ನು ಹುಡುಕಿಕೊಂಡು ಬರಲು ಸಮ[illegible] ಸಮಯವಿದ್ದವರಿಗೆ ಆಲಸ್ಯವಲ್ಲವೇ? ಹಾಗಾದರೆ [illegible]ವಾಗಿ ಇದ್ದಲಿಪುಡಿಯನ್ನೇಕೆ ಉಪಯೋಗಿಸುವು[illegible] ಕ್ರಿಮಿಹರವೆಂದೂ ಪಾಶ್ಚಾತ್ಯ, ಪೌರ್ವಾತ್ಯ ವಿ[illegible] ಹೇಳಿದ್ದಾರೆ. ಇದ್ದಲಿಪುಡಿ ಹಲ್ಲಿಗೆ ಹಚ್ಚಿ [illegible] ತಿಕ್ಕಿ ನಂತರ ಬೇಕಾದರೆ ಒಂದು ಸಲ ಕುಂಚ[illegible] ವನ್ನು ಆಡಿಸಿ ಬಿಡಿರಿ. ಇದ್ದಲಿಯು ಹಲ್ಲಿಗೆ [illegible] ಕೊಡುತ್ತದೆ. ಪೇಟೆಯಲ್ಲಿ ಮಾರುವ ಕೆಲವು [illegible]ಗಳಲ್ಲಿ ಇಟ್ಟಂಗಿ ಹಂಚಿನ ಪುಡಿಗಳಿರುತ್ತವೆ. [illegible] ದಂತಕವಚ ಸವೆದುಹೋಗುತ್ತದೆ! ಎಚ್ಚರ!


ಏನೇ ಆಹಾರ ಸೇವಿಸಿದರೂ ಬಾಯನ್ನು [illegible] ತೊಳೆದುಕೊಳ್ಳುವ ರೂಢಿಯಿಡಬೇಕು. ಚಹ[illegible] ತಿನಿಸು ತಿನ್ನುವವರು ಈ ಮಾತನ್ನು ಗ[illegible] ಹುಳಿಪದಾರ್ಥಗಳಿಂದ ದಂತಕವಚವು ಸವೆ[illegible] ಆದುದರಿಂದ ಹುಳಿವಸ್ತುವನ್ನು ಸೇವಿಸಿದ ಕೂ[illegible] ಶುದ್ಧಗೊಳಿಸಬೇಕು. ಕನಿಷ್ಠಪಕ್ಷಕ್ಕೆ ಬೆಳಿಗ್ಗೆ [illegible] ರಾತ್ರಿ ಮಲಗುವ ಮುಂಚೆ ಒಂದು ಸಲವಾದ[illegible] ಹಲ್ಲುಗಳನ್ನು ಶುದ್ಧೀಕರಿಸುವುದನ್ನು [illegible]ಬಾರದು.

ಮಕ್ಕಳಿಗೆ ತೀರ ಚಿಕ್ಕಂದಿನಿಂದಲೇ [illegible]ಕೊಳ್ಳುವ ಶಿಕ್ಷಣಕೊಡಬೇಕು. ಆಟದಿಂದ[illegible]ಯಿಂದಲೂ ಕಲಿಸಿದರೆ ಮಕ್ಕಳು ಬೇಗ [illegible] ಬೇರೆ ದೇಶಗಳ ನರ್ಸರಿ ಶಾಲೆಗಳಲ್ಲಿ ಧಾತ್ರಿ[illegible] ಕಲಿಸುವರು. ನಮ್ಮ ದೇಶಗಳಲ್ಲಿ ಈ ವಿಷಯಕ್ಕೆ[illegible] ಅಲಕ್ಷ್ಯವೂ ಬಹಳ. ಮುಂದೆ ತಮ್ಮ ಮಕ್ಕ[illegible]ರಾಗಿ ಬೆಳೆಯಬೇಕೆಂದೂ, ವ್ಯವಹಾರದಲ್ಲಿ [illegible]ರಾಗಬೇಕೆಂದೂ ಬಯಸುವವರು ಬಾಲ್ಯದಲ್ಲಿ[illegible] ಹಲ್ಲಿನ ಆರೈಕೆಯ ದಕ್ಷತೆಯನ್ನು ವಹಿಸಬೇಕು.

ಅಖಿಲ ಭಾರತೀಯ ಪ್ರದರ್ಶನಗಳಲ್ಲಿ ಸುವರ್ಣಪದಕಗಳನ್ನು ಪಡೆದ


ಸಿದ್ಧೇಶ್ವರ ಮತ್ತು ಕಂಪನಿ, ಹುಬ್ಬಳ್ಳಿ

ಹಿಂದುಸ್ತಾನ ಸರಕಾರದಲ್ಲಿ ರಜಿಸ್ಟರ ಆಗಿದೆ.



● ಸಿದ್ಧೇಶ್ವರ ತಿಜೋರಿಗಳು ಯುರೋಪಿಯನ್ ಮತ್ತು ಅಮೆರಿಕನ್ ಕಾರಖಾನೆಗಳಲ್ಲಿ ಬಳಕೆಯಲ್ಲಿರುವ ಅತ್ಯಾಧುನಿಕ ಸುಧಾರಿಸಿದ ಪದ್ಧತಿಯಿಂದ ತಯಾರಿಸಲ್ಪಡುತ್ತವೆ. ....

● ಅಖಂಡ ಉಕ್ಕಿನ ಒಂದೇ ತಗಡಿನಲ್ಲಿ, ಜಾಯಿಂಟ ಮಾಡದೆ, ೫೫೦ ಟನ್ ಪ್ರೆಷರ ಕೊಡುವ ಯಂತ್ರಶಕ್ತಿಯಿಂದ ೧೨ ಮೂಲೆಗಳನ್ನು ಬಾಗಿಸಿ, ತಯಾರಿಸುತ್ತೇವೆ ....



● ಅತ್ಯುತ್ಕೃಷ್ಟ ಪರದೇಶೀ ತಿಜೋರಿಗಳಿಗೆ ಅವು ಸರಿಗಟ್ಟುತ್ತವೆ. ಕದುದರಿಂದ ಹಿಂದುಸ್ತಾನದಲ್ಲೆಲ್ಲಾ ಸರಕಾರಿ ಆಫೀಸುಗಳಲ್ಲಿ, ಬ್ಯಾಂಕು-ಕಚೇರಿಗಳಲ್ಲಿ, ಸರಾಫ-ಸಾಹುಕಾರರಲ್ಲಿ ಹಗಲಿರಳೂ ಉಪಯೋಗಿಸಲ್ಪಡುತ್ತವೆ. ....

● ನಾವು ತಯಾರಿಸುವ ತಿಜೋರಿ, ಉಕ್ಕಿನ ಕಪಾಟು, ಕ್ಯಾಶಬಾಕ್ಸ ಮತ್ತು ಕೀಲಿಕೈಗಳು ಕೈಗಾರಿಕೆಯಲ್ಲಿಯೂ ತಾಳಿಕೆ-ಭದ್ರತೆಗಳಲ್ಲಿಯೂ ಅದ್ವಿತೀಯವಾಗಿವೆ. ....

ವಿಮೆಯಿಳಿಸುವುದೆಲ್ಲಿ ? ?

ಲಾಂಗ್ ಲಾಯಿಫ್

ಇನ್ಶ್ಯೂರನ್ಸ ಕಂ. ಲಿ. (ಪುಣೆ)ಯಲ್ಲಿ !!!

ಪ್ರಥಮ ಮೌಲ್ಯಮಾಪನೆ (Valuation)

ಎಂಡೌಮೆಂಟ್ ರೂ. ೧೦

ಪೂರ್ಣಾಯುಷ್ಯ ರೂ. ೧೨॥

ಬೋನಸ್ಸನ್ನು ಹಂಚಿದ್ದು.

★

ಮುಖ್ಯ ಕಚೇರಿ:— ಲಕ್ಷ್ಮೀರೋಡ್, ಪುಣೆ ನಂ. ೨.

ಶಾಖಾಕಚೇರಿಗಳು:— ದಾದರ, ಮುಂಬಯಿ ನಂ. ೧೪

ಬಂದರರೋಡ್, ಕರಾಚಿ

.... ಯಾಕೆ ??

೧. ಸುಲಭ ವಿಮಾದರಗಳು
೨. ಭದ್ರವಾದ ಆರ್ಥಿಕ ಸ್ಥಿತಿ
೩. ಅತ್ಯಲ್ಪ ಪಾಲಿಸಿಗಳು ರದ್ದಾಗುವಿಕೆ
೪. ಸ್ತ್ರೀವಿಮೆದಾರರಿಗೆ ವಿಶೇಷಸೌಕರ್ಯಗಳು
೫. ರಾಷ್ಟ್ರೋದ್ಧಾರ ನಿಧಿ

ವಿಜಯಲಕ್ಷ್ಮಿಯ ಗತವೈಭವ

ಶ್ರೀಯುತ ಬೇಂದ್ರೆಯವರ 'ಮೂವತ್ತು ಮೂರು ಕೋಟಿ' ಎಂಬಂತೆ.

ಶ್ರೀ. ವಿಠೋಬಾಚಾರ್ಯ ವೈದ್ಯ, ಬಿ. ಎ., ಹೊಸಪೇಟೆ ಅವರಿಂದ ವಿರಚಿತ

[ತಾಳೀಕೋಟೆಯ ಯುದ್ಧವಾದ ನಂತರ ವಿಜಯನಗರ ರಾಜ್ಯಲಕ್ಷ್ಮಿಯು ಹಂಪೆಯಲ್ಲಿರುವ ಎತ್ತರವಾದ ಋಷಿಮುಖ ಪ[illegible] ಶಿಖರದ ಮೇಲೆ ನಿಂತು ಹಾಳು ರಾಜ್ಯದ ಬಾಳನ್ನು ನೋಡಿ ಗೋಳಿಡುತ್ತಿರುವಳು.]

ನನ್ನ ಆ ರಾಜ್ಯವಿದೆಯೇ ನನ್ನ ಆ ನಗರವಿದೆಯೇ
ಚಿನ್ನದಾ ಭುವನಗಳು ರನ್ನದಾ ಕಲಶಗಳು
ಛಿನ್ನವಾಗಿರುವ ಸಿರಿಯೇ, ನಾ ಮೆರೆದ, ನನ್ನ ಆ ರಾಜ್ಯವಿದೆಯೇ !

ಶ್ರೀವಿರೂಪಾಕ್ಷದೇವಾ ಶ್ರೀಚೆಲ್ವರಾಮದೇವಾ
ಹಾಳು ದೇಗುಲದಲ್ಲಿ ತುಂಗೆ ರೋದಿಸುವಲ್ಲಿ
ಗೋಳಿಡುತ ಕುಳಿತಿರುವಿರಾ, ಈ ದಶೆಗೆ, ಗೋಳಿಡುತ ಕುಳಿತಿರುವಿರಾ !

ಹಾ ! ಬೋಳ ಗೋಪುರಗಳೇ ಹಾ ! ಮುಂಡ ಮಂಟಪಗಳೇ
ಬಾಳು ಹಾಳಾಗಿರಲು ಬಾಳುವಿಕೆ ಬಯಸುವಡೆ
ಹೇಳದೇ ಹೂಳಿಕೊಳಿರಿ, ನೆಲದೊಳಗೆ, ಹೇಳದೇ ಹೂಳಿಕೊಳಿರಿ !

ಮುನಿಜನರ ಮಾಲ್ಯವಂತಾ ಸಿರಿಜನರ ಹೇಮಕೂಟಾ
ಅರಸಿಯರ ಅರಮನೆಯು ಮಾನಿಸರ ಮಂದಿರವು
ಬರಿಯದೇ ನಗರದೊಳಗೆ, ಹಾ ! ದೇವ, ಬರಿಯದೇ ನಗರದೊಳಗೆ !

ಬಿರಿಯಿತೇ ವಿಠಲ ಗುಡಿಯೂ ಮುರಿಯಿತೇ ಕಲ್ಲುರಥವೂ
ಬರಿಯದೇ ಗಜಶಾಲೆ ಬರಿಯದೇ ಹಯಶಾಲೆ
ಬರಿಯದೇ ನನ್ನ ಭಾಗ್ಯಾ, ನಿರ್ಭಾಗ್ಯೆ, ಬರಿಯದೇ ನನ್ನ ಭಾಗ್ಯಾ !

ವೀರ ವಿದ್ಯಾರಣ್ಯರೂ ಶೂರ ಹರಿಹರರಾಯನೂ
ವೀರಪಟ್ಟವ ಕಟ್ಟಿ ರಾಜ್ಯಬೀಜವ ಬಿತ್ತಿ
ಭಾರವನು ನೆರೆ ಸಾರ್ದರು, ಕನ್ನಡದ, ಭಾರವನು ನೆರೆ ಸಾರ್ದರು.

ಧೀಮಂತ ದೇವರಾಯಾ ಕಲಿಭೀಮ ಕೃಷ್ಣರಾಯಾ
ಶತ್ರುರಾಜರ ಬಡಿದು, ವಸ್ತ್ರವಡವೆಯ ತೊಡಿಸಿ
ನನ್ನ ಸಿಂಗರಗೈದರು, ಸಿರಿಲಕ್ಷ್ಮಿ, ನನ್ನ ಸಿಂಗರಗೈದರು.

ಕೋಟಿ ಕೊತ್ತಳ ಗುಡಿಗಳೂ ಸಾಲುಮಂಟಪ ಮನೆಗಳೂ
ಭವ್ಯ ಗೋಪುರಗಳೂ ದಿವ್ಯ ಅರಮನೆಗಳೂ
ಬೆರಗುವಡಿಸಿದವು ಜಗವಾ, ಸಿರಿಯಿಂದ, ಬೆರಗುವಡಿಸಿದವು ಜಗವಾ.

ಹಳ್ಳ ತೊರೆ ಕಾಲುವೆಗಳೂ ಕೊಳ್ಳ ಕೆರೆ ಸರ ಝರಿಗಳೂ
ಸಲ್ಲಲಿತ ಬೆಳೆಕೊಡುತ ಮೆಲ್ಲೆಲರ ಸುಖಕೊಡುತ
ಚೆಲ್ವಿನಿಂದಲಿ ಪೊರೆದವು, ಪ್ರಜಗಣವ, ಚೆಲ್ವಿನಿಂದಲಿ ಪೊರೆದವು.

ತೆಂಗು ಮಾವಿನ ಸಾಲ್ಗಳೂ ಬಾಳೆ ಕೇದಿಗೆ ಬನಗಳೂ
ಮಲ್ಲಿಗೆಯ ಲತೆಗಳೂ ಸಂಪಿಗೆಯ ಗಿಡಗಳೂ
ಕರಿನಾಡ ಕರ ಮೆರೆದವು, ಈ ನನ್ನ, ಕರಿನಾಡ ಕರ ಮೆರೆದವು.

ಕವಿವರರು ಶಾಸ್ತ್ರಜ್ಞರೂ ವೇದ ಪೌರಾಣಶ್ರುತರೂ
ಗಾಯಕರು ಗಮಕಿಗಳು ನರ್ತಕರು ವಾದ್ಯಕರು
ನನ್ನ ಸೇವೆಯ ಗೈದರು, ಸಿರಿಲಕ್ಷ್ಮಿ, ನನ್ನ ಸೇವೆಯ ಗೈದರು.

ಆ ನನ್ನ ಸೌಭಾಗ್ಯವೂ ಆ ನನ್ನ ದಿವ್ಯಕಳೆಯೂ
ರಕ್ಕಸರ ದಾಳಿಯನು ವಕ್ರದಲಿ ತುಳಿವಾಗ
ಅಳಿದು ಹೋಯಿತೆ ಎಲ್ಲವೂ, ಒಮ್ಮೆಲೇ, ಅಳಿದು ಹೋಯಿತೆ ಎಲ್ಲವೂ !

ಹಣೆಯ ಕುಂಕುಮ ಕರಗಿತೇ ಕೊರಳ ಮಂಗಳ ಹರಿಯಿತೇ
ಕಡಿಯಿತೇ ಕಂಕಣವು ಕಳಚಿತೇ ತಲೆಮುಕುಟ
ಕೆಳಗೆ ಬಿದ್ದಿತೆ ಪತಾಕೆ, ಕರದಿಂದ, ಕೆಳಗೆ ಬಿದ್ದಿತೆ ಪತಾಕೆ !

ಎಲ್ಲಿ ಚತುರಂಗಬಲವೂ ಎಲ್ಲಿ ಅಷ್ಟೈಶ್ವರ್ಯವೂ
ಎಲ್ಲಿ ಬುಧಸಮುದಾಯ ಎಲ್ಲಿ ಮುನಿಸಮುದಾಯ
ಎಲ್ಲಿ ಆ ಗುರುಗಳವರು, ವಿದ್ಯಾರಣ್ಯ, ಎಲ್ಲಿ ಆ ಗುರುಗಳವರು !

ವೀರ ವಿದ್ಯಾರಣ್ಯರೇ ನನ್ನ ಸಿರಿ ಬೆಳಗಿದವರೇ
ನಿಮ್ಮ ಅಕ್ಕರದಕ್ಕ ಬಿಕ್ಕಿಬಿಕ್ಕ್ಯಳುತಿರಲು
ಕಣ್ಮುಚ್ಚಿ ಕುಳಿತಿರುವಿರಾ, ಕರುಣಿಸದೆ, ಕಣ್ಮುಚ್ಚಿ ಕುಳಿತಿರುವಿರಾ !

ಈ ನನ್ನ ವಿಜಯಭೂಮಿ ಋಷಿವರರ ಪೂಜ್ಯಭೂಮಿ
ಯತಿವರರು ಜನ್ಮಿಸಿದ ಜ್ಞಾನಿಗಳು ರಂಜಿಸಿದ
ಹಿಂದುಗಳ ಪುಣ್ಯಭೂಮಿ, ಜಗವೊರೆದ, ಹಿಂದುಗಳ ಪುಣ್ಯಭೂಮಿ.

ಕನ್ನಡದ ರಾಜ್ಯಂಗಳೂ ಒಂದೊಂದೆ ಕಳಚುತಿರಲೂ
ಸಂದುಗಾಣದಲಾಗಿ ಪೊಂದಿ ಪೊಸರೂಪವನು
ಮುಂಬೀಳ್ದು ಬಂದೆ ನಾನು, ಈ ನೆಲಕೆ, ಮುಂಬೀಳ್ದು ಬಂದೆ ನಾನು.


ಇದು ನನ್ನ ಕಡೆಯ ಸಿರಿಯೂ ಕನ್ನಡದ ಕೊನೆಯ ಗಿರಿಯೂ
ವಾಸಿಸಲು ಸ್ಥಳವಿಲ್ಲ ಜೀವಿಸಲು ಬಲವಿಲ್ಲ
ದುರ್ದೈವಿ ಕನ್ನಡಿಗರೇ ! ಹಾ ! ದೇವ, ದುರ್ದೈವಿ ಕನ್ನಡಿಗರೇ !

[ಎಂದು ಮೂರ್ಛೆ ಹೋದವಳು ಇನ್ನೂ ಎದ್ದಿಲ್ಲ]

ಕಾಲದೇವನ ಗಾಲಿಯೂ ಕಾಣದಲೆ ತಿರುಗುತಿರಲು
ರಾಜ್ಯಗಳು ಮುಳುಗುವವು ರಾಜ್ಯಗಳು ತೇಲುವವು
ಅವರವರ ಸರತಿಯಿಂದಾ, ಕ್ರಮವಾಗಿ, ಅವರವರ ಸರತಿಯಿಂದಾ.

ತಿಪ್ಪೆ ಉಪ್ಪರಿಗೆಯಹುದೂ ಉಪ್ಪರಿಗೆ ತಿಪ್ಪೆಯಹುದೂ
ತಪ್ಪುವುದೇ ನಾಡನುಡಿ, ಅಪ್ಪಅಮ್ಮನ ಮಾತು.
ಒಪ್ಪಿಗೆಯ ಪಡೆದಿರುವದು, ನಮ್ಮೆಲ್ಲರೊಪ್ಪಿಗೆಯ ಪಡೆದಿರುವದು.

ಕನ್ನಡದ ಕಾಲ ಬರದೇ ನಾಣ್ನುಡಿಯ ನಿಜವು ಬಳದೇ
ಕರ್ಬೊಗೆಯು ಕೆಂಪಿಡದೆ ಕನ್ನಡಿತಿ ಕಣ್ಬಿಡಳೆ
ಕರಿನಾಡು ಕಾತರಿಸಲು, ಕರೆಕರೆದು, ಕರಿನಾಡು ಕಾತರಿಸಲು.



ನಗಬೇಡಿ

ಕೈದಿ:—ಈ ಕಿಡಿಕೆಯ ಸಲಾಕೆಗಳು ಗಟ್ಟಿಯಾಗಿವೆಯೋ ?

ಜೇಲಿನ ಅಧಿಕಾರಿ:—ಓಹೋ! ನಿನಗೇನೂ ಅವು ಬಗ್ಗೋದಿಲ್ಲ.

ಕೈದಿ:—ನನಗಲ್ಲ ಸ್ವಾಮಿ! ನನ್ನ ಹೆಂಡ್ತಿ ಅವನ್ನು ಮುರಿದು ಬರಬಹುದೆಂದು ಅಂಜಿದೆ.

o o o o

ಮಾಸ್ತರ್:—ದಿನಾಲು ಸಾಲೆ ಯಾಕೆ ತಪ್ಪಿಸುತ್ತೀಯೋ ಗಂಗ್ಯಾ ?

ಗಂಗ್ಯಾ:—ಯಾವದೇ ಕೆಲಸ ಬಿಟ್ಟು ಬಿಡದೆ ಮಾಡೋದೇ ದೊಡ್ಡಸ್ತಿಕೆ ಎಂದು ನೀವು ಹೇಳಿದ್ದಿರಲ್ಲ ಹೋದ ವರ್ಷ !

o o o o

ಒಂದು ಚಿಕ್ಕಹುಡುಗಿಯು ಮಾರ್ಗದಲ್ಲಿ ಒಂದು ಪೈ ಕಳೆದುದಕ್ಕಾಗಿ ಹುಡುಕುತ್ತ ಅಳುತ್ತಿತ್ತು. ದಾರಿಯಲ್ಲಿ ಹೋಗುವ ಹಿರಿಯನೊಬ್ಬ ಯಾಕೆ ಅಳುತ್ತಿ ಎಂದು ಕೇಳಿದ್ದಕ್ಕೆ, ನನ್ನ ಪೈಯನ್ನು ಹುಡುಕಿಕೊಡುತ್ತೀರಾ ? ಎಂದು ಹುಡುಗಿ ಕೇಳಿದಳು. ಹಿರಿಯನು ಹುಡುಕಲಾರದೆ ತನ್ನ ಕಿಸೆಯಲ್ಲಿದ್ದ ಒಂದು ಪೈಯನ್ನು ತೆಗೆದು ಕೊಟ್ಟ.

ಆಗ ಹುಡುಗಿ:—(ಅವನ ಮುಖವನ್ನು ದಿಟ್ಟಿಸಿ ನೋಡುತ್ತ) ಇಷ್ಟು ದೊಡ್ಡವನಾಗಿದ್ದಿ, ಸಣ್ಣ ಹುಡುಗಿಯ ಪೈಯ ಮೇಲೆ ನಿನಗಾಶೆಯಾಯ್ತೇನು ?

o o o o

ಮಗ:—ನೀತಿ ಅಂದರೇನು ಅಪ್ಪಾ ?

ಅಪ್ಪ:—ಇಲ್ಲಿ ನೋಡು, ನಮ್ಮ ಅಂಗಡಿಗೆ ಒಬ್ಬ ಗಿರಾಕಿ ಒಂದು ರೂಪಾಯಿ ಕೊಡಬೇಕಾದ ವಸ್ತುವಿಗೆ, ಮರೆತು ಎರಡು ರೂಪಾಯಿ ಕೊಟ್ಟು ಹೋಗಿಬಿಡುವನು. ಇಲ್ಲಿ ನೀತಿಯ ಸಂದರ್ಭ ಬಂತು. ಏನಂತೀಯಾ? ... ರೂಪಾಯಿ ಹೆಚ್ಚು ಬಂದದ್ದನ್ನು ನಮ್ಮ ಪಾಲು... ತಿಳಿಸಬೇಕೋ, ತಿಳಿಸಬಾರದೋ ಎಂಬುದೇ ನ... ಪ್ರಶ್ನೆ.

o o o

ಆಕೆ:—ಆ ಗಂಡಹೆಂಡ್ತೀ ಸಂಸಾರ ಸುಸೂತ್ರ... ಹಾಗೆ ಕಾಣಿಸ್ತದೆ.

ಈಕೆ:—ಸಾಗದೆ ಏನು ? ಆಕಿ ಹಿತ್ತಲಬಾಗಲಿ... ಡ್ತಾಳ. ಇವ ಮುಂಚಿಬಾಗಲಿಂದ. ಒಬ್ಬರಿಗೊಬ್ಬರ... ಆದರ ಹೌದೋ ಅಲ್ಲೋ ?

o o o

ಮಾಧವರಾಯರು ದಾರಿಯಲ್ಲಿ ಬರುವಾಗ ಒಬ್ಬ... ಹುಡುಗನನ್ನು ದೊಡ್ಡವನು ಹೊಡೆಯುತ್ತಿದ್ದನು. ... ಅದನ್ನು ಬಿಡಿಸಿ ದೊಡ್ಡವನನ್ನು ಅತ್ತ ಕಳಿಸಿದರು... ಗನು ಕಿಸೆಯೊಳಗಿಂದ ನಾಲ್ಕಾಣೆ ತೆಗೆದು 'ತಗೊಳ್ರಿ... ಕಿಸೆಯಿಂದ ಎಂಟಾಣೆ ಕದ್ದಿದ್ದೆ. ಹೊಡೆತದಿಂದ ಬಿಡಿ... ನಿಮಗೆ ನಾಲ್ಕಾಣೆ ಹಿಡೀರಿ !'

o o o

ಗಿರಾಕಿ:—ಏನಯ್ಯಾ, ಈ ಕಾಫಿಗೆ ಹೆಂಡದ ವಾಸ... ಯಲ್ಲಾ ?

ಅಂಗಡಿಯವ:—ಹೆಂಡದ ವಾಸನೆ! ಛೀ ... ಆ ಹುಡುಗ ತಮಗೆ ಚಹ ಕೊಟ್ಟಿರಬೇಕು. ನಮ್ಮ... ಪೆಟ್ರೋಲಿನ ವಾಸನೆ ಬರುತ್ತದೆ.

o o o

ಆತ:—ಭಲೆ ಭಲೆ ನಿನ್ನ ಸಲಹೆಗೆ ನಾಲ್ಕಾಣೆ... ತೆಗೆದುಕೊ.

ಈತ:—ನಾಲ್ಕಾಣೆ ಅಲ್ಲ. ನಾನು ಎಂಟಾಣೆ... ಕುಡಿದಿದ್ದೇನೆ.

o o o

ನ್ಯಾಯಾಧೀಶ:—ನಿನ್ನ ವಯಸ್ಸೆಷ್ಟು ? ಸುಳ್ಳು... ಬೇಡ.

ಅಪರಾಧಿ:—ಹದಿನೇಳು ವರ್ಷ ಮೇಲೆ ಸ್ವಲ್ಪ...

ನ್ಯಾಯಾಧೀಶ:—ಸ್ವಲ್ಪ ಅಂದರೆ ಎಷ್ಟು ?

ಅಪರಾಧಿ:—ನೂರಾಇಪ್ಪತ್ತೆಂಟು ತಿಂಗಳು ನಾಲ್ಕು... ನೂರು ದಿವಸ !

ಒಂದೇ ಹಾಡು

ಕತೆಗಾರರು :
ಶ್ರೀ|| ಜಿ. ಎನ್. ಕಲಮದಾನಿ, ಧಾರವಾಡ

❁

ಎಂಕಣ್ಣನು ಸಭೆಯಲ್ಲಿ ಉತ್ತಮ ಸಾಹಿತಿಯೆಂದು ಮಾನ ಪಡೆದು ಉಬ್ಬಿ ಮೈಮರೆತು ಮನೆಗೆ ಬಂದನು. ಬಾಗಿಲಲ್ಲಿ ಸ್ಟೇಶನರಿ ಅಂಗಡಿಯ ವಸೂಲಿ ಆಳು ಒಂದು ಪತ್ರವನ್ನು ಕೊಟ್ಟನು. ಅದರಲ್ಲಿ “ ಎಂಟು ರತಲಿ ಪೋಲೀಸ್ಕೇಪು ಹಾಳಿ ಹತ್ತಿ ಛಾಪಿಂದು ೧ (ಒಂದು) ತಮ್ಮ ಖಾತೆಕ್ಕೆ ಹಚ್ಚಿ ಹಸ್ತೆ ಖುದ್ ಒಯ್ದದ್ದು ಇಂದಿಗೆ ಆರು ತಿಂಗಳಾತು........ ಬಾಕಿ ಚುಕ್ತಾ ಮಾಡದ ಹೊರ್ತು ನಮ್ಮ ಆಳು ನಿಮ್ಮ ಬೆನ್ನು ಬಿಡೋಹಾಂಗಿಲ್ಲ. ಅನನ ದಿನದ ಪಗಾರ ವಗೈರೆ ವಗೈರೆ ನಿಮ್ಮ ತಲೀಮೇಲೆ ” ಎಂಬುದನ್ನು ... ಓದಿ ಎಂಕಣ್ಣನಿಗೆ ಏನಾಗಿರಬಹುದು ? ....

❁

ಈ ದಿನದ ಸಭೆಯಲ್ಲಿ ಎಂಕಣ್ಣನಿಗೂ, ಸಂಪಾದಕರಿಗೂ ಅಪೂರ್ವ ಸ್ವಾಗತ, ಮರ್ಯಾದೆಗಳು ಸಂದುವು. ಇಬ್ಬರೂ ಮನೆಗೆ ತೆರಳುತ್ತಿದ್ದಾಗ ಸಂಪಾದಕರು :

“ವೆಂಕಟರಾಯರೇ, ಕರ್ನಾಟಕದಲ್ಲಿ ಸಾಹಿತಿಗಳಿಗೆ ಮಾನ ಸಿಗುವ ವೇಳೆ ಇಷ್ಟು ಬೇಗನೇ ಬಂದೀತೆಂದು ನಾನು ತಿಳಿದಿರಲಿಲ್ಲ....”ಎಂದರು.

ಎಂಕಣ್ಣನು ವಯಸ್ಸಿನಲ್ಲಿ ಚಿಕ್ಕವನು. ಏನೂ ಓದಿಕೊಂಡಿಲ್ಲವೆಂಬುದು ಮನಸ್ಸಿಗಷ್ಟೇ ಗೊತ್ತು. ಕೇವಲ ನಾಲ್ಕು ಜನ ದೊಡ್ಡ ಸಾಹಿತಿಗಳ ಸ್ನೇಹ ಸಂಪಾದಿಸಿದ್ದಕ್ಕೆ ತನಗೆ ಇಷ್ಟು ಮರ್ಯಾದೆ ಸಿಕ್ಕಿತಲ್ಲ ! ಎಂದು ನೆನೆದು, ಸಂಪಾದಕರಿಗೆ ಉತ್ತರವಾಗಿ ಎಂಕಣ್ಣನು ನಸುನಕ್ಕನು. ಪೂರ್ಣತೃಪ್ತಿಯ ನಗೆಯದು. ಇದಕ್ಕಿಂತಲೂ ಹೆಚ್ಚಿನ ಸುಖ ಈ ಜೀವನದಲ್ಲಿ ಸಿಗಲು ಇನ್ನು ಶಕ್ಯವೇ ಇಲ್ಲ ಎಂದು ಸೂಚಿಸುವ ನಗೆಯದು.

ಸಂಪಾದಕರೂ ನಕ್ಕರು. “ ನೀವು ನಕ್ಕ ಮರ್ಮವು ತಿಳಿಯಿತು. ಇಂದು ನಾವಿಬ್ಬರೂ ಕೃತಕೃತ್ಯರಾದೆವು” ಎಂಬ ಧ್ವನಿಯು ಅದರಲ್ಲಿ ತುಂಬಿತು. ಪ್ರತಿಧ್ವನಿಯಾಯಿತು. ಹಸಿಯಲ್ಲಿ ತೆರೆತೆರೆಯಾಗಿ ಹೊರಟು ವಿಶ್ವವನ್ನು ವ್ಯಾಪಿಸಿತು...

ದಾರಿಗಳು ಬೇರೆಯಾದ್ದರಿಂದ “ ಒಂದೇ ಮಾತರಂ ” ಎಂದವರೇ ತಮ್ಮ ತಮ್ಮ ಮನೆಯ ದಾರೀ ಹಿಡಿದರು.

ಎಂಕಣ್ಣನು ಮನೆಗೆ ಬರುತ್ತಲೇ ಬಾಗಿಲಲ್ಲಿ ನಿಂತ ಒಬ್ಬ ಮನುಷ್ಯನು ಅವನ ಕೈಯಲ್ಲಿ ಒಂದು ಪತ್ರ ಕೊಟ್ಟನು. ಮನುಷ್ಯನು ಸ್ಟೇಶನರಿ ಅಂಗಡಿಯ ವಸೂಲಿ ಆಳು. ಅವನನ್ನು ನೋಡಿದ ಕೂಡಲೆ ಎಂಕಣ್ಣನಿಗೆ ಹೇಗೆ ಹೇಗೋ ಆಯಿತು. ಸಭೆಯಲ್ಲಿ ದೊರೆತ ಮಾನ ಮರ್ಯಾದೆಗಳ ಉಬ್ಬು ಕ್ಷಣದಲ್ಲಿ ಮಾಯವಾಯಿತು. ಮೋರೆ ಸಣ್ಣದಾಯಿತು. ನಡುಗುವ ಕೈಯಿಂದ ಪತ್ರ ತೆಗೆದುಕೊಂಡು ತನ್ನ ಕೊಠಡಿಗೆ ಸಾಗಿದನು. ಆಳು ಹೊರಗೆ ಬಾಗಿಲಲ್ಲಿಯೇ ಕುಳಿತನು.

ಎಂಕಣ್ಣನು ಎಂದಿನಂತೆ ತನ್ನ ಕೊಠಡಿಗೆ ಹೋಗಿ ಕುರ್ಚಿಯಲ್ಲಿ ಕುಳಿತನು. ಪತ್ರವನ್ನು ತೆರೆದನು. ಸ್ಟೇಶನರಿ ಅಂಗಡಿಕಾರನ ಪತ್ರವದು. ತುದಿ ಮೊದಲ್ಗೊಂಡು ಓದಿದನು. ಸಿಟ್ಟು ಬಂದಿತು.

ನಿಜ, ಒಂದು ಗಡ್ಡಿ ಕಾಗದ ಉದ್ರಿ ಬರೆಸಿ ಎಂಕಣ್ಣನು ತಂದದ್ದು ನಿಜ. ತಂದು ಆರು ತಿಂಗಳಾದದ್ದೂ ನಿಜ. ಆದರೆ ಬೆಲೆ ಕೊಡದೆ ಎಂಕಣ್ಣನು ಓಡಿ ಹೋಗುವನೇ ! ಈ ಅಂಗಡೀಕಾರರಿಗೆ ಇಷ್ಟೂ ತಿಳಿಯಬಾರದೇ ? ಕಾಗದವನ್ನು ತನ್ನ ಸ್ವಂತದ ಉಪಯೋಗಕ್ಕಾಗಿ ತೆಗೆದುಕೊಂಡಿಲ್ಲ. ಸಾಹಿತ್ಯಸೇವೆಗಾಗಿ ತೆಗೆದುಕೊಂಡದ್ದು. ಕನ್ನಡ ಭಾಷೆಯ ಬೆಳವಣಿಗೆಗಾಗಿ ತೆಗೆದುಕೊಂಡದ್ದು. ಥೂ !. ಅಂಗಡೀಕಾರರಿಗೆ ಮಂದಿಯ ಯೋಗ್ಯತೆಯ ಅರಿವೇ ಇಲ್ಲ. ‘ ಷಾಯಲೋಕ್ ’ ಇದ್ದ ಹಾಗೆ. ಯಾವಾಗಲೂ ರೊಕ್ಕ, ರೊಕ್ಕ. ಉದ್ರಿ ವಸೂಲೀ ಬಿಟ್ಟು ಅನ್ಯಮಾತೇ ಇಲ್ಲ.

ಇಂದು ಎಂಕಣ್ಣನೆಂದರೆ ಸಾಮಾನ್ಯ ವ್ಯಕ್ತಿಯಲ್ಲ. ಆವನೂ ಒಬ್ಬ ಗಣ್ಯಸಾಹಿತಿ, ಸಮಾಜದಲ್ಲಿ ಆವನಿಗೆ ಮಾನವಿದೆ. ಕರ್ನಾಟಕವು ಅವನಿಂದ ಉದಾತ್ತ ಸೇವೆಯನ್ನು ಅಪೇಕ್ಷಿಸುತ್ತಿದೆ. ಅಂಥವನಿಗೆ ಈ ರೀತಿ ಪತ್ರವೇ ! ಕರ್ನಾಟಕದ ಪಂಡಿತರೆಲ್ಲರೂ ಅವನನ್ನು ಆದರಿಸುವರು.

“ ಬಾಕಿ ಚುಕ್ತಾ ಮಾಡದ ಹೊರ್ತು ನಮ್ಮ ಆಳು ನಿಮ್ಮ ಬೆನ್ನು ಬಿಡೋ ಹಾಂಗಿಲ್ಲ. ಅವನ ದಿನದ ಪಗಾರ, ವಗೈರೆ, ವಗೈರೆ, ಎಲ್ಲಾ ನಿಮ್ಮ ತಲೆಯ ಮೇಲೆಯೇ ” ಎಂದು ಬರೆದಿದ್ದಿತು.

ಎಂಕಣ್ಣನು ಇನ್ನೊಮ್ಮೆ ಆ ಪತ್ರ ಓದಿದನು.

ವಿ. ವಿ. ರಾ. ರಾ. ಎಂಕಣ್ಣಾರಾವ ಇವರಿಗೆ ಈ ಪತ್ರದ ಮೂಲ್ಕ ತಿಳಿಸುವದೇನಂದ್ರೆ—

೮ (ಎಂಟು) ರತಲಿ ಪೋಲೀಸ್ಕೇಪು ಹಾಳಿ, ಹತ್ತಿ ಛಾಪಿಂದು, ಗಡ್ಡಿ ೧ (ಒಂದು), ತಮ್ಮ ಖಾತೇಕ್ಕೆ ಹಚ್ಚಿ

ಹಸ್ತೆ ಖುದ್ದ ಒಯ್ದುದ್ದು ಇಂದಿಗೆ ಆರು ತಿಂಗಳಾಯಿತು. ಈ ವರೆಗೂ ಸದರಿ ಮಾಲಿನ ಬಾಬ್ತು ಬಾಕಿ ಚುಕ್ತಾ ಆಗಿಲ್ಲ. ನಮ್ಮ ಆಳು (ಹೆಸರು ನಿಂಗಪ್ಪ) ಈತನು ನಾಕೆಂಟು ಸರ್ತಿ ನಿಮ್ಮ ಕಡೆ ಎಡತಾಕಿದರೂ ನೀವು ಅವನ ಕೈಯಾಗ ಸಿಗಲಿಲ್ಲ. ಕಾರಣ ಈ ಆಳನ್ನು ನಮ್ಮ ಬಾಕಿ ವಸೂಲಿಗಾಗಿ ನೇಮಿಸಿದೆ. ಕಾರಣ ಈ ಆಳಿನ ಕೈಯಲ್ಲಿ ಸದರಿ ರಕಮನ್ನು ಕೊಟ್ಟು ಬಿಡ್ರಿ. ಬಾಕಿ ಚುಕ್ತಾ ಮಾಡದ ಹೊರ್ತು ನಮ್ಮ ಆಳು ನಿಮ್ಮ ಬೆನ್ನು ಬಿಡೋ ಹಾಂಗಿಲ್ಲ. ಅವನ ದಿನದ ಪಗಾರಾ, ವಗ್ಯೆರೆ, ವಗ್ಯೆರೆ, ನಿಮ್ಮ ತಲೀ ಮೇಲೆ. ಅರಿಕೆ ಇರಲಿ, ತಿಳಿಯುವದು.

ಇಂತಿ ವಿ. ವಿ.

ಎಂಕಣ್ಣನು ಓದಿದನು. ತನ್ನ ಮಾನವನ್ನು ಈ ನಾಯಿ—ಅಂಗಡೀಕಾರನು—ರಸಾತಲಕ್ಕೆ ಮೆಟ್ಟಿದನು. ಈಗ ಮನೆಯ ಮುಂದೆ ಬಾಗಿಲಲ್ಲಿ ಒಬ್ಬ ಆಳು ಕುಳಿತಿರುವನು. "ಇಲ್ಲ್ಯಾಕೋ?" ಎಂದು ಇವನನ್ನು ಯಾರಾದರೂ ಕೇಳಿದರೆ, "ಏನ್ರಿ....ಏಸ್ ದಿನಾ ಆದುವು, ನಮ್ಮ ಸಾವ್ಕಾರ್ರ ಬಾಕೀ ಕೊಡೋದ್ಯೆತಿ ಕೊಡಕವಲ್ರು ಈ ಎಂಕಣ್ಣಾವರು, ಅದಕ್ಕ ಅದನ್ನ ವಸೂಲ್ಮಾಡಾಕ ಕುಂತೀನಿ" ಎಂದು ಆ ಆಳು ಒಂದು ಉಪನ್ಯಾಸವನ್ನೇ ಕೊಡುವನು.

ಎಂಕಣ್ಣನ ಮೈ ನಡುಗಿತು. ಎಂಕಣ್ಣನ ಸಭೆಯಲ್ಲಿಯ ಭಾಷಣ, ಪಂಡಿತರಲ್ಲಿ ಮರ್ಯಾದೆ, ಸಾಹಿತ್ಯಸೇವೆ, ತನ್ಮೂಲಕ ಕರ್ನಾಟಕಸೇವೆ, ಎಲ್ಲವೂ ಕ್ಷಣದಲ್ಲಿ ಮಾಯವಾದವು. ತನ್ನಂತಹ ದೊಡ್ಡ ಮನುಷ್ಯನಿಗೆ ಈ ಅಂಗಡೀಕಾರನು ಹೀಗೆ ಪತ್ರಬರೆಯುವನೆಂದು ಅವನಿಗೆ ಎಂದೂ ಅನಿಸಿರಲಿಲ್ಲ. ಪತ್ರವನ್ನಷ್ಟೇ ಬರೆದಿಲ್ಲ; ಉದ್ರೀ ವಸೂಲಿಗಾಗಿ ಆಳು ಬಾಗಿಲಲ್ಲಿ ಕುಳಿತಿರುವನು. ಅಂಗಡಿಕಾರನಿಗೆ ನಿಜವಾಗಿಯೂ ತನ್ನಲ್ಲಿ ಅವಿಶ್ವಾಸವುಂಟಾಗಿದೆ. ಈಗಿಂದೀಗಲೇ ಅವನಿಗೆ ರೂಪಾಯಿಗಳನ್ನು ಕೊಟ್ಟು ಕಳಿಸಬೇಕೆಂದು ಎಂಕಣ್ಣ ನಿಶ್ಚಯಿಸಿದನು.

ಆದರೆ ತನ್ನಲ್ಲಿ ದುಡ್ಡು ಇಲ್ಲ. ತಂದೆಯನ್ನು ಕೇಳಬೇಕೇ! ಶಕ್ಯವೇ ಇಲ್ಲ. ಏಕೆಂದರೆ ಎಂಕಣ್ಣನು ಸಾಹಿತ್ಯ ಸೇವೆಗಾಗಿ ಕುರ್ಚಿಯಲ್ಲಿ ಕುಳಿತು ಬರೆಯತೊಡಗಿದನೆಂದರೆ:

ತಂದೆಯವರು:—ಏಂಕಾ ?

ಎಂಕ:—ಓ....ಯಾಕ....?

ತಂದೆ:—ಏನು ಮಾಡುವಿ ?

ಎಂಕ:—ಏನಿಲ್ಲ, ಬರಕೋತ ಕೂತೀನಿ.

ತಂದೆ:—ಏನದು ಬರೆಯೋದು ?

ಎಂಕ:—ಏನಿಲ್ಲ ಸುಮ್ಮನ....!

ತಂದೆಯವರಿಗೆ ಒಮ್ಮೆಲೇ ತಿಳಿದೇ ಹೋಗುವದು... ಮಗನು ಏನು ಬರೆಯುತ್ತಿರುವನೆಂಬುದು.

ತಂದಿ:—ಕಾಗಿ, ಗುಬ್ಬಿ ಕಥಿ ಬರೆಯೋದಕ್ಕಿಂತ, ... ಅಪ್ಲೀಕೇಶನ್ ಬರದು, ಹೊಟ್ಟೆ ಮಾರ್ಗಾ ಮಾಡ್ಕೊ... ತನಕ ಚಿಮಣೀ ಎಣ್ಣಿ ದೀಪ ಉರಿಸಿ ಬರದು ಕೊಟ್ರ... ಅವ ಏನಾದ್ರೂ ಕೊಡತಾನೇನು ಆ ಸಂಪಾದಕ...

ಎಂತಹ ಅಪಮಾನದ ವಿಷಯವಿದು. ಕೇವಲ ... ತೋಷಕ್ಕಾಗಿ ಎಂಕಣ್ಣನು ಬರೆಯುವನು. ಆ ... ಸಂಪಾದಕನಿಂದ ದುಡ್ಡು ಕೇಳಬೇಕೇ! ತಾನು ... ಆಗಿದ್ದಾನೆ. ವಯಸ್ಸಿಗೆ ಬಂದಿದ್ದಾನೆ. ಅಂದ ಮೇಲೆ ... ದುಡ್ಡು ಬೇಕೆಂದು ಕೇಳಬೇಕೇ! ಅದೂ ಶಕ್ಯವಿಲ್ಲ ... ದರೆ ಈ ಉದ್ರಿ ಮುಟ್ಟಿಸುವ ಬಗೆ ಹೇಗೆ? ಎಂ... ದುಡ್ಡಿನ ಮಹತ್ವ ಈಗ ಗೊತ್ತಾಯಿತು. ಆಗಲೆ ... ಯಿಸಿದನು, ವರ್ತಮಾನಪತ್ರದಲ್ಲಿಯ "Wanted" ... ಉತ್ತರ ಬರೆಯಬೇಕೆಂದು. ಒಂದು ವೇಳೆ ನೌ... ದಿದ್ದರೆ.... ಸಿಕ್ಕರೂ ಈಗಿಂದೀಗಲೇ ಹೇಗೆ ಸಿಕ್ಕೀತು. ... ಎರಡುಮೂರು ತಿಂಗಳಾದರೂ ಬೇಕು. ಅಲ್ಲಿಯ ... ಈ ಆಳು ಬಾಗಿಲಲ್ಲಿಯೇ ಕೂಡ್ರುವನು.

ಎಂಕಣ್ಣನ ತಲೆಯಲ್ಲಿ ವಿಚಾರಗಳ ತೆರೆಗಳು ... ದವು. ಮನದಲ್ಲಿ ಅಧೈರ್ಯದ ಬಿರುಗಾಳಿಯು ... ಹತ್ತಿತು. ವಿಚಾರಗಳ ತೆರೆಗಳು ಒಂದಕ್ಕೊಂದು ... ಹತ್ತಿದವು. ಬಹು ದೊಡ್ಡ ಗೊಂದಲವನ್ನೇ ... ಬಿಟ್ಟವು. ಈ ರಭಸದಲ್ಲಿ ಮಾನ, ವಿವೇಕ, ಧೈ... ಗಳು ಎಲ್ಲಿಯೋ ತೇಲಿ ಹೋಗಿಬಿಟ್ಟವು.

ದುಡ್ಡು ಬೇಕು. ಈಗಿಂದಿಗಲೇ ಬೇಕು. ನೌ... ತಂದೆ ದುಡ್ಡು ಕೊಡುವದಿಲ್ಲ. ಹಾಗಾದರೆ ಸಂ... ಕೊಡುವರೇ! ಕೊಡದೇ ಏನು. ಹಿಂದೆ ತಾನೆಂದೂ ... ಅವರು ಕೊಟ್ಟಿಲ್ಲ. ಇಂದು.... ಕೇಳಿದರೆ ಕೊಟ್ಟೇ ... ವರು. ಸಂಪಾದಕರು ತನಗೆ ತೋರುವ ಪ್ರೀತಿ ಮ... ಗಳು ಎಂಕಣ್ಣನಿಗೆ ನೆನಪಾದವು. ಅವರನ್ನು ... ಬಿಡಬೇಕು. ಅವರಾದರೂ ಸಂತೋಷದಿಂದ ಕೊಡು... ಕೊಟ್ಟೇ ಕೊಡುವರು.

ಎಂಕಣ್ಣನು ಮತ್ತೆ ಪೋಷಾಕನ್ನು ಧರಿಸಿದನು. ... ಬಾಗಿಲಿನಿಂದ ಹೊರಬಿದ್ದನು. ಸಂಪಾದಕರಲ್ಲಿಗೆ ... ಸಾಗಿದನು.

*

ಸಂಪಾದಕರು ಮಾತ್ರ ಮನೆಗೆ ಹೋಗಲಿಲ್ಲ. ಆಫೀಸಿಗೆ ಬಂದು ಬಿಟ್ಟರು. ಟಪಾಲು ಬಂದದ್ದರಿಂದ ಒಂದೊಂದೇ ನೋಡತೊಡಗಿದರು. ಕೆಲವು ಲೇಖಗಳು ಬಂದಿದ್ದವು, ಕೆಲವು ಸಾದಾ ಯೋಗಕ್ಷೇಮದ ಪತ್ರಗಳಿದ್ದವು. ಎಲ್ಲವನ್ನೂ ಬೇರೆ ಬೇರೆ ಫಾಯಿಲಿಗೆ ಸೇರಿಸಿದರು. ಅಷ್ಟರಲ್ಲಿ ಒಬ್ಬ ಳು ಬಂದು ಒಂದು ಪತ್ರ ಕೊಟ್ಟು ಹೊರಟು ಹೋದನು. ಅದು ಪ್ರೆಸ್ ಮ್ಯಾನೇಜರರ ಪತ್ರ ! ಸಂಪಾದಕರು ಅವ ಗೆ ಎರಡು ನೂರು ರೂಪಾಯಿಗಳನ್ನು ಕೊಡತಕ್ಕದ್ದಿತ್ತು. ಕ ಬಗ್ಗೆ ಈ ಪತ್ರ ಬಂದಿತ್ತು. ಸಂಪಾದಕರು ಒಡೆದು ಓದಹತ್ತಿದರು.

ಶ್ರೀಮಾನ್ ರಾ|| ರಾ||................ಗೆ

ಈ ಮೊದಲೇ ತಮಗೆ ತಿಳಿಸಿದಂತೆ ೨೦೦-೪-೯ರ ನಮ್ಮ ಪ್ರೆಸ ಬಿಲ್ ನೀವು ಕೊಡತಕ್ಕದ್ದಿದೆ. ಕಂಪೋಜಿಟರ್ಸ್ಸಿಗೆ ಪಗಾರ ಕೊಡತಕ್ಕದ್ದಿದೆ, ಬಹಳೆ ತೊಂದರೆಯುಂಟಾಗಿದೆ ಯೆಂದು ಈಗ ಹತ್ತು ದಿವಸಗಳ ಕೆಳಗೆ ತಮ್ಮ ಚಿತ್ತಕ್ಕೆ ತಂದುಕೊಟ್ಟದೆ. ಈವರೆಗೂ ಅದನ್ನು ತಾವು ಗಮನಿಸಿ ದಂತೆ ಕಾಣಲಿಲ್ಲ. ಹೋದ ವಾರ ಪ್ರತಿ ಕಂಪೋಜಿಟರ್ಸ್ಸಿಗೆ ಎಂಟಾಣೆಯಂತೆ ಕೊಟ್ಟು ಪಗಾರದ ಕಾಟ ತಪ್ಪಿಸಿ ಸಂತೀ ಸಾಗಿಸಲು ಹೇಳಿದೆನು. ಈ ವಾರ ಅಂದರೆ ನಾಳೆಯೇ ಅವರಿಗೆ ಎಲ್ಲವನ್ನೂ (ಅಂದರೆ ಹೋದ ವಾರ, ಮತ್ತು ಈ ವಾರದ ಪೂರ್ಣ ಪಗಾರವನ್ನು) ಕೊಡಲಿಕ್ಕೇಬೇಕು. ಇಲ್ಲ ದಿದ್ದರೆ ಅವರು ಸಂಪು ಹೂಡಿ ನಮ್ಮ ಪ್ರೆಸ್ ಬಿಟ್ಟು ಹೊರಟು ಹೋಗಬಹುದು. ಮತ್ತು ನಮ್ಮ ಅವ್ಯವಸ್ಥಿತ ಪಗಾರದ ವಿಷಯವಾಗಿ ಉಳಿದ ಪ್ರೆಸ್ಸಿನ ಕಂಪೋಜಟರ್ಸ್ಸಿಗೆ ಹೇಳಬಹುದು; ಆ ಮೇಲೆ ಒಬ್ಬರೂ ನಮ್ಮಲ್ಲಿ ದುಡಿಯಲು ಬರಲಿಕ್ಕಿಲ್ಲ. ಮೇಲಾಗಿ ಪಾಪ ! ಬಡವರವರು. ಪ್ರತಿ ತಿಂಗಳ ಎಂಟು ಅಥವಾ ಹತ್ತು ರೂಪಾಯಿ ಪಗಾರದ ಮೇಲಿರುವವರು, ಈ ರೀತಿ ನಾವು ಪಗಾರ ಕೊಟ್ಟರೆ ಅವರ ಸಂಸಾರವಾದರೂ ಹೇಗೆ ಸಾಗೀತು !

ಈಗ ನಿಮ್ಮದೊಂದನ್ನು ಬಿಟ್ಟು ಉಳಿದ ಎಲ್ಲ ಬಿಲ್ಲುಗಳೂ ಕೇ ಆಫ ಆಗಿವೆ. ಅದಕ್ಕಂತಲೇ ನಿಮಗೆ ಈ ರೀತಿ ಒತ್ತಾಯದ ಪತ್ರ ಬರೆದದ್ದು. ಕಾರಣ ಪ್ರೆಸ್ ಬಿಲ್ಲನ್ನು ನೀವು ಈಗ ಕೊಟ್ಟು ಕಳಿಸಲೇಬೇಕು. ಈಗಾಗದಿದ್ದರೆ, ನಾಳೆ ಮುಂಜಾನೆ ನಾನೇ ಸ್ವತಃ ಬರುವೆನು. ಆಗ ರೂಪಾಯಿಗಳ ವ್ಯವಸ್ಥೆ ಮಾಡಿಟ್ಟಿರಬೇಕು. ಈ ಸಲ ಕಂಪೋಜಿಟರ್ಸ್ಸಿಗೆ ಪೂರ್ಣ ಪಗಾರ ಕೊಡದಿದ್ದರೆ ನಿಮ್ಮ ಪತ್ರಿಕೆ ಹೊರಡುವ ವೇಳೆ ಬಹಳೇ ಮುಂದೆ ಬೀಳಬಹುದೆಂಬ ಅಂಜಿಕೆ ಇದೆ. ಕಾರಣ ದಯವಿಟ್ಟು ರೂಪಾಯಿಗಳನ್ನು ಇಂದೇ ಸಂಜೆಗೆ ಕಳುಹಿಕೊಡುವ ಕೃಪೆಯಾಗಬೇಕು. ನಾನೇ ಬಂದು ಹೋಗುವ ಪ್ರಸಂಗವನ್ನು ತರಬಾರದೆಂದು ಬೇಡುವ

ತಮ್ಮ ಸೇವಕ....

ಸಂಪಾದಕರು ಪತ್ರವನ್ನು ಕೆಳಗೆ ಇಟ್ಟರು. ಇಷ್ಟೆ, ಅವರಿಗೆ ಮತ್ತಾವ ಪರಿಣಾಮವೂ ಆಗಲಿಲ್ಲ. "ಪತ್ರ ಬರೆಯುವದು ಉದ್ರೀ ವಸೂಲು ಮಾಡುವವರ ದಿನದ ಕರ್ತವ್ಯ" ಎಂದಿಷ್ಟೇ ಅಂದುಕೊಂಡರು. ಅವರ ಮೊಗದ ಮೇಲೆ ಅಪಮಾನದ,ಅಥವಾ ಆಶ್ಚರ್ಯದ ಚಿಹ್ನೆಗಳಾವವೂ ಕಾಣಲಿಲ್ಲ. ಆದರೆ ಚಿಂತೆಯು ಅವರ ಮನವನ್ನು ಮೆಲ್ಲನೇ ಆವರಿಸಹತ್ತಿತು. ಅದರ ಛಾಯೆಯು ಮೊಗದ ಮೇಲೂ ಬೀಳತೊಡಗಿತು. ಈ ಸಲ ವೇಳೆಗೆ ಸರಿಯಾಗಿ ಪತ್ರಿಕೆಯು ಹೊರಬೀಳದಿದ್ದರೆ ಅವರ ಅನೇಕ ಕೆಲಸಗಳು ಕೆಡುವ ಭೀತಿಯು ತೋರಹತ್ತಿತು. ಬಿಲ್ಲು ಕೊಟ್ಟು ಬಿಡಬೇಕೆಂದರೆ ದುಡ್ಡು ಎಲ್ಲಿಂದ ತರಬೇಕು ! ಯಾವ ದಿಕ್ಕಿನಿಂದಲೂ ಮನಿ ಯಾರ್ಡರುಗಳು ಬರುವ ಆಶೆಯಿಲ್ಲ; ಎಲ್ಲಿಂದ ತರಬೇಕು ದುಡ್ಡು ? ಯಾರನ್ನು ಕೇಳಬೇಕು ? ಎಲ್ಲಿ ಹೋಗಬೇಕು ? ಏನು ಮಾಡಬೇಕು ?

ಪತ್ರಿಕೆಯನ್ನು ಹೊರಡಿಸಿದಾಗಿನಿಂದ ಸಂಪಾದಕರ ಕೀರ್ತಿಯು ವಿಶ್ವಕರ್ನಾಟಕವನ್ನು ವ್ಯಾಪಿಸಿತು. ಅನೇಕ ಸಭೆಗಳಿಗೆ ಅಧ್ಯಕ್ಷರಾಗುವ ಯೋಗ್ಯತೆ ಬಂದಿತು. ಸಾಮಾಜಿಕ, ನೈತಿಕ, ಭಾಷಾ ಚಳವಳಿಯ ಕಾರ್ಯಕರ್ತರಾಗುವ ಹೊಣೆಗಾರಿಕೆಯೂ ಸಂಪಾದಕರದೇ ಆಯಿತು. ಅದೇಕೆ, ಮೊನ್ನೆ ಧಾರ್ಮಿಕ ಚರ್ಚೆಯಲ್ಲಿಯೂ ಮುಖ್ಯ ಭಾಗವನ್ನು ಸಂಪಾದಕರೇ ವಹಿಸಿದ್ದರಂತೆ. ಮೇಲಾಗಿ ಕನ್ನಡ ಮಾತೆಯ ಪ್ರೀತಿಯ ಪುತ್ರರು, ಉದ್ಧಾರಕರು, ಹಾಗೆ, ಹೀಗೆ, ಎಂಬ ಹೊಗಳಿಕೆಗೆ ಎಳ್ಳಷ್ಟೂ ಕೊರತೆ ಇಲ್ಲ. ಊರಿಗೆ ಯಾವ ಪ್ರತಿಷ್ಠಿತರು, ಪಂಡಿತರು ಬಂದರೂ ಸಂಪಾದಕರ ಅತಿಥಿಗಳೇ ಆಗುವರು. ಅವರ ಆತಿಥ್ಯವನ್ನು ನಾಲ್ಕಾರು ದಿನ ಸ್ವೀಕರಿಸಿ ಸಭೆಯಲ್ಲಿ ಮಾತಾಡುವ ಪ್ರಸಂಗ ಬಂದರೆ ಇದನ್ನು ವಿಶೇಷವಾಗಿ ಆಡಿ ತೋರಿಸಿ ಅತಿಥಿಗಳು ಹೊರಟು ಹೋಗುವರು. ಇದರಿಂದ ಸಂಪಾದಕರ ಕೀರ್ತಿಗೆಷ್ಟು ಕಳೆ ಏರುವದು !

ಪತ್ರಿಕೆ ಹೊರಡಿಸಿದಾಗಿನಿಂದ ತುಸು ಆರ್ಥಿಕ ತೊಂದರೆಗಳು ಮಾತ್ರ ಸಂಪಾದಕರಿಗೆ ಮೇಲಿಂದ ಮೇಲೆ ಬರತೊಡಗಿವೆ ಎಂದೆನ್ನಬಹುದು. 'ಕರ್ನಾಟಕದಲ್ಲಿ ನವಜಾಗೃತಿಯುಂಟಾಗಿದೆ. ಓದುವ ಅಭಿರುಚಿ ಹೆಚ್ಚಿದೆ' ಎಂಬ

ಭಾವನೆಯಿಂದ, ಸಂಪಾದಕರು, ಈ ಜನತಾಜನಾರ್ದನನ ಸೇವೆಯನ್ನು, ಕನ್ನಡ ಭಾಷೆಯ ಉದ್ಧಾರದ ಕಾರ್ಯವನ್ನು, ಅರ್ಥಾತ್ ಮಾಸಪತ್ರಿಕೆ ಹೊರಡಿಸುವದನ್ನು ಕೈಕೊಂಡು ಈಗ ನಾಲ್ಕು ವರುಷಗಳಾದವು.

ಚಂದಾದಾರರಿಗಿಂತ exchange ಮತ್ತು ಕಾಣಿಕೆಗಳಿಗಾಗಿಯೇ ಪ್ರತಿ ತಿಂಗಳು ಹೆಚ್ಚು ಸಂಚಿಕೆಗಳು ಹೋಗುವವು. ಆ ಮೇಲೆ ಬರಹಗಾರರಿಗಾಗಿ, ಒಬ್ಬರ ಒಂದು ಕೃತಿಯು ಪತ್ರಿಕೆಯಲ್ಲಿ ಪ್ರಕಟವಾಯಿತೆಂದರೆ, ಒಂದು ವರುಷದ ವರೆಗೆ ಪುಕ್ಕಟೆಯಾಗಿ ಪ್ರತಿಗಳನ್ನು ಕಳಿಸುವ ಪದ್ಧತಿಯನ್ನು ಸಂಪಾದಕರು ಇಟ್ಟುಕೊಂಡಿದ್ದರು. ಒಬ್ಬನ ಕೃತಿಗಳು ವರುಷದಲ್ಲಿ ನಾಲ್ಕೈದು ಸಲ ಪ್ರಕಟವಾದವೆಂದರೆ, ಅವನು, ತಾನೊಬ್ಬ ಪ್ರಸಿದ್ಧ ಸಾಹಿತಿಯೆಂದು ತಿಳಿದುಕೊಂಡೇ ಬಿಡುವನು. ಮತ್ತು ತನ್ನ ಕೃತಿಗಳಿಗಾಗಿ ಸಂಪಾದಕರಿಂದ honorarium ಕೇಳಿಯೇ ಬಿಡುವನು. ಅದಕ್ಕಾಗಿಯೇ ಸಂಪಾದಕರು ನಿಶ್ಚಯಿಸಿಬಿಟ್ಟಿದ್ದರು, ಒಬ್ಬನ ಕೃತಿಗಳನ್ನು ವರುಷದಲ್ಲಿ ಬಹಳವಾದರೆ ಎರಡಕ್ಕಿಂತ ಹೆಚ್ಚು ಪ್ರಸಿದ್ಧಿಸುವಂತಿಲ್ಲ ಎಂದು. (honorarium ಕೇಳದೇ ಇದ್ದವರು ಇದಕ್ಕೆ ಅಪವಾದಿಗಳು.)

ಖರ್ಚು ಕಡಿಮೆ ಮಾಡಿಕೊಳ್ಳಲು ಸಂಪಾದಕರು ಇಂತಹ ಅನೇಕ ಯೋಜನೆಗಳನ್ನು ಕೈಕೊಂಡಿದ್ದರು. ಆದರೇನು! ಆರ್ಥಿಕ ಪರಿಸ್ಥಿತಿ ಪ್ರತಿ ದಿನ ಕೆಡುತ್ತಲೇ ಇತ್ತು. ಸುಧಾರಿಸುವ ಆಶೆ ಸಹ ತೋರುತ್ತಿರಲಿಲ್ಲ. ಸಂಪಾದಕರ ಹೊಲಮನೆಗಳು ನಾಲ್ಕು ನಾಲ್ಕು ಸಲ 'ಒತ್ತಿ' ಬಿದ್ದು ಹೋಗಿವೆ. ಮನೆಯಲ್ಲಿಯ ಬೆಳ್ಳಿ ಬಂಗಾರವನ್ನು ಬ್ಯಾಂಕಿನಲ್ಲಿಟ್ಟು ಸಾಲ ತೆಗೆದದ್ದೂ ಆಗಿದೆ. ಇನ್ನು ಹೇಗೆ ದುಡ್ಡು ತರುವದು!....

ಅದಕ್ಕೆ ಒಂದೇ ಒಂದು ದಾರಿಯಿದೆ. ಸಂಪಾದಕರ ಹೆಂಡತಿಯು ತೌರುಮನೆಯಿಂದ ಒಂದು ಚಂದ್ರಹಾರ ತಂದಿದ್ದಳು. ಅದೊಂದು ಮಾತ್ರ ಈಗ ದುಡ್ಡು ತರುವ ದಾರಿಯನ್ನು ತೋರುವ ವಸ್ತು. ಆದರೆ ಅದನ್ನು ಸಂಪಾದಕರು ಕೇಳುವಂತಿಲ್ಲ. ಮೊದಲು ಮನೆಯಲ್ಲಿಯ ಬಂಗಾರ ಬ್ಯಾಂಕಿಗೆ ಒಯ್ಯುವಾಗ ತಮ್ಮ ಹೆಂಡತಿಗೆ ಅನೇಕ ಆಶಾದಾಯಕ ವಿಷಯಗಳನ್ನು ಹೇಳಿದ್ದರು. ತನ್ನ ಪತಿಯ ವೈಭವದ ಚಿತ್ರವನ್ನು ಮನದಲ್ಲಿ ಕಟ್ಟಿ ಬೇಗನೇ ಅದು ನಿಜವಾಗಿಯೂ ದೊರಕಬಹುದೆಂಬ ಆಕಾಂಕ್ಷೆಯಿಂದ ಎಲ್ಲ ಒಡವೆಗಳನ್ನು ಕೊಟ್ಟಿದ್ದಳು. ಆದರೆ ಅವಳ ಮನದ ಮಂಡಿಗೆಗಳು ಮಣ್ಣುಗೂಡಿ ಹೋದವು. ಇನ್ನು ತನ್ನ ಯಾವ ಆಭರಣಗಳೂ ತಿರುಗಿ ಬಾರವೆಂದು ತಿಳಿದುಬಿಟ್ಟಳು. "ಆಯಿತು, ಮಾವನವರ ... ಬಂಗಾರವು ಅವರ ಮಕ್ಕಳೇ (ಸಂಪಾದಕರೇ) ... ಕೊಂಡರು, ನಾನೇಕೆ ವ್ಯಥೆಪಡಬೇಕು. ನಾನಿನ್ನ ... ಹೊಟ್ಟೆಬಟ್ಟೆಗೆ ಕಡಿಮೆಮಾಡಬೇಡ ತುಳಸವ್ವಾ" ... ಪ್ರತಿದಿನ ತುಳಸೀ ವೃಂದಾವನಕ್ಕೆ ಪೂಜೆ ಮಾಡಿ ... ಶ್ರೀ ತುಳಸಿಯನ್ನು ಬೇಡಿಕೊಳ್ಳುತ್ತಿದ್ದಳು.

ಇಂಥವಳನ್ನು, ಚಂದ್ರಹಾರ ಕೊಡು ಎಂದು ... ಬೇಕೆ? ಪತ್ನಿಗೆ ಒಂದೇ ಒಂದಾಗಿ ಉಳಿದ ಆಭರಣ ... ತೌರುಮನೆಯಿಂದ ತಂದ ಆಭರಣವದು. ಅದರ ... ಅವಳದೇ ಪೂರ್ಣ ಅಧಿಕಾರ; ಅದನ್ನು ಇಂದು ... ಕರು Press Bill pay off ಮಾಡುವದಕ್ಕಾಗಿ ಕೇಳ...

" ಮಾವನವರು ನಮ್ಮ ಲಗ್ನದಲ್ಲಿ ಹಾಕಿದ ... ನ್ನೆಲ್ಲ ಕೇಳಿದಿರಿ—'ಪಿಟ್' ಎನ್ನದೇ ಕೊಟ್ಟೆನು. ಇ... ಹಾರ, ನನ್ನ ತೌರುಮನೆಯದು. ನನ್ನ ಸ್ವಂತ ... ನಿಮಗೆ ಕೇಳಲಿಕ್ಕೆ ಅಧಿಕಾರವಿಲ್ಲ...." ಎಂದು ... ಅಂದುಬಿಟ್ಟರೆ!....

ಹಿಂದೂ ಧರ್ಮದಲ್ಲಿ, ಈ ಸನಾತನ ಸಮಾಜದಲ್ಲಿ ... ಪತ್ನಿಯು ತನ್ನ ಪತಿಗೆ ನೆರವಾಗಲಿಕ್ಕಿಲ್ಲ! ... ತನ್ನ ಪತಿಯ ಸುಖದುಃಖದಲ್ಲಿ ಸಮಭಾಗಿನಿಯು ... ಕರು ಈಗ ಸಂಕಟದಲ್ಲಿ ಬಿದ್ದಿರುವರು. ಸಮಾಜ... ಭಾಷಾಸೇವೆಗಾಗಿ, ಕರ್ನಾಟಕದಲ್ಲಿಯ ಅಜ್ಞಾನ... ವನ್ನು ಹೊಡೆದೋಡಿಸಲು ಟೊಂಕಕಟ್ಟಿದ್ದಾರೆ. ... ತನು, ಮನ, ಧನಗಳನ್ನು ಅರ್ಪಿಸಿದ್ದಾರೆ; ... ದ್ದಾರೆ. ಯಾವ ದುರ್ನೀತಿಗಾಗಿಯೂ ತಾವು ... ಎಂಬುದು ಇಡೀ ಕರ್ನಾಟಕಕ್ಕೇ ಗೊತ್ತಿದೆ. ... ತಮ್ಮ ಸಮಭಾಗಿನಿಯಾದ ಅರ್ಧಾಂಗಿಯನ್ನು ... ವದಕ್ಕೆ ಯಾವ ಅಭ್ಯಂತರವೂ ಇಲ್ಲ. ಹಿಂದೆಮುಂ... ಡುವದೂ ತಪ್ಪು. "ಆ ಹಾರವನ್ನು ಕೊಡು" ಎಂ... ದರೆ ಹೆಂಡತಿಯು ಅಳಹತ್ತುವಳು. ಅಳುವದು ... ಸ್ವಭಾವವು.. ಮೇಲಾಗಿ ಈಗ ಆದು ದಿನದ ದೃಶ್ಯ ... ಎಂದು ಅವಳ ಮೈಮೇಲಿನ ಆಭರಣಗಳನ್ನು ... ಕರು ಬ್ಯಾಂಕಿನಲ್ಲಿ "ಒತ್ತೀ" ಇಟ್ಟರೋ, ಎಂ... ಆ ವಸ್ತುಗಳು ತಿರುಗಿ ಬರುವ ಆಶೆಯು ತಪ್ಪಿ ಹೋ... ಆ ದಿನದಿಂದಲೇ ಸಂಪಾದಕರ ಪತ್ನಿಯು ... ಅನ್ನ'ವನ್ನು ಉಣ್ಣುತ್ತಿದ್ದಾರೆ. ಈ ಹಾರವನ್ನು ... ಕೊಂಡ ಮೇಲೆ ದಿನಾಲು ಒಂದು ತಾಸು ... ಪತ್ನಿಗೆ ... ಬಹುದು. ಇಷ್ಟೇ. ಉಪಾಯವಿಲ್ಲ.

ಲೆಂದು ಯಾವ ಪತಿಯು ಇಚ್ಛಿಸುವನು ! ಎಲ್ಲವೂ ದೈವಾ ಧೀನ !

ಸಂಪಾದಕರ ವಿಚಾರಗಳು ಕೊನೆಯನ್ನು ಮುಟ್ಟಲಾರ ದಾದವು. ತರ್ಕದ ಮೇಲೆ ತರ್ಕ ಹೂಡಿದರು. ಮಾತಿ ನಲ್ಲಿ ಹೆಂಡತಿಯನ್ನು ಗೆದೆಯುವ ದಾರಿ ತೋರ ದಾಯಿತು.

"ಇನ್ನು ತುಸು ದಿನಗಳಲ್ಲಿಯೇ ಕರ್ನಾಟಕ ಏಕೀ ಕರಣವಾಗುವದಿದೆ. ಆಗ ನನ್ನ ಪತ್ರಿಕೆಗೆ ಒಳ್ಳೇ ಕಾಲ ಬಂದೇ ಬರುವದು. ನಿನಗೆ ಬೇಕಾದಷ್ಟು ಆಭರಣಗಳನ್ನು ಮಾಡಿಸುವೆನು. ಈಗ ಮಾತ್ರ ಆ ಹಾರವನ್ನು ತಾ" ಎಂದು ಪತ್ನಿಗೆ ಕೇಳಬೇಕೆಂದು ಸಂಪಾದಕರು ನಿಶ್ಚಯಿ ಸಿದರು.

ಎದ್ದರು. ಸಂಪಾದಕರು ಮನೆಗೆ ಹೊರಡಲು ಅನುವಾ ದರು.

* * *

ಸಂಪಾದಕರು ಅತ್ಯಾದರದಿಂದ ಎಂಕಣ್ಣನನ್ನು ಬರ ಮಾಡಿಕೊಂಡು, ತಮ್ಮ ಎದುರಿಗೆ ಟಿಬಲ್ಲಿನ ಆಚೆಗಿರುವ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದರು. ಎಂಕಣ್ಣನು ಕುಳಿತನು. ಸಂಪಾದಕರನ್ನು ನೋಡಿದನು. ಏಕೋ ಅವರ ಮೊಗವು ಇಂದು ಕಂದಿಸಂತಿದೆ. ನಗೆನಲಿದಾಡುತ್ತಿರುವ ಅವರ ತುಟಿಗಳು ಇಂದು ಒಣಗಿಹೋಗಿವೆ. ತಾನು ರೂಪಾಯಿ ಗಳನ್ನು ಬೇಡಲು ಈಗ ಬಂದದ್ದು ಅನುಚಿತವಾಯಿತೋ, ಎಂದು ಅನುಮಾನಿಸಹತ್ತಿದನು.

ಸಂಪಾದಕರೂ ಎಂಕಣ್ಣನ ಮೋರೆಯನ್ನು ನೋಡಿ ದರು. ಅದು ಸಣ್ಣಾಗಿದೆ. ಬಹು ಸಪ್ಪಗಾಗಿದೆ. ಮೊಗ ದಲ್ಲಿ ಮುಗುಳುನಗೆಯನ್ನು ತರಲು ಎಂಕಣ್ಣ ಬಹು ಶ್ರಮಬಟ್ಟನೆಂದು ಕೂಡಲೇ ಸಂಪಾದಕರಿಗೆ ಗೊತ್ತಾ ಯಿತು. ಉತ್ಸಾಹದಿಂದ ತುಳುಕುವ ಈ ತರುಣನು ಈ ದಿನ ಹೀಗೇಕಾದನೋ, ಎಂದು ಮನಸ್ಸಿನಲ್ಲಿಯೇ ಸಂಪಾ ದಕರು ಅನುಮಾನಿಸಿದರು.

ಉ—ಮಾತುಗಳಾದವು. ಈ—ವಿಷಯ ಚರ್ಚಿಸಿದ್ದಾ ಯಿತು. ಎಂಕಣ್ಣನಿಗೆ ಅನುವು ಸಿಗಲೊಲ್ಲದು. ವಿಷಯ ವನ್ನು ಪ್ರಾರಂಭಿಸಲು ದಾರಿಯೇ ತೋರದಾಗಿ ಒಮ್ಮೆಲೇ ಮುಂದರಿದು ನುಡಿದನು.

ಎಂಕ:—ನಾನು ಹಗಲೂ ಇರುಳೂ ದುಡಿಯಬೇಕಾಗ ತದ, ಕಥಿ ಕಾದಂಬರೀ ಬರೆಯೋದೇನು ಸಾಮಾನ್ಯ ಅಲ್ಲ....

ಸಂಪಾ:—ನಿಜ, ಸಾಹಿತ್ಯಮಾತೆಯ ಪುತ್ರರಿರುವರ ನೀವು, ಕನ್ನಡಿಗರು ನಿಮಗೆ ಚಿರಋಣಿಗಳು.

ಎಂಕ:—ಇದೆಲ್ಲ ಆತು........

ಸಂಪಾ:—ಸಾಹಿತ್ಯ ಸೇವೆಯೇನು ಸಾಮಾನ್ಯವೇ ? ಎಲ್ಲ ರಿಗೂ ಅದು ಲಭಿಸದು.

ಎಂಕ:—ಅದೇನೋ ಖರೆ. ಆದರೆ ಸೇವೆಗೆ ತಕ್ಕ ಫಲ ಬೇಕಲ್ಲ! (ಇದನ್ನು ಅತಿ ಸಾಹಸದಿಂದ ನುಡಿದನು)

ಸಂಪಾ:—ಜನರೆಲ್ಲರೂ ನಿಮ್ಮ ಕೃತಿಗಳನ್ನು ಆಸ್ಥೆಯಿಂದ ಓದುವರು. ನಿಮ್ಮ ಕೀರ್ತಿಯು ಇಡಿ ಕರ್ನಾಟಕದಲ್ಲಿ ಹಬ್ಬಿರುವದು..........

ಎಂಕ:—ಅದರಿಂದ ನನಗೆಷ್ಟೊ ಸಮಾಧಾನ ಅದ. ಆದರ ಮನಶ್ಯಾ ಅಂದಮ್ಯಾಲೆ ಉದ್ಯೋಗಿಯಾಗಿರಬೇಕು. ಇದು, ಈ ಸಾಹಿತ್ಯ ನನ್ನ Hobby ಆತು. ನನಗ ಉದ್ಯೋ ಗನೇ ಇಲ್ಲ........

ಎಂಕಣ್ಣನ ಈ ರೀತಿಯ ಮಾತುಗಳನ್ನು ಕೇಳಿ, ಇದ ರಲ್ಲಿ ಏನೋ ಗೂಢವಿರಲೇಬೇಕೆಂದು ಚಾಣಾಕ್ಷರಾದ ಸಂಪಾದಕರು ಒಮ್ಮೆಲೇ ತಿಳಿದುಕೊಂಡರು.

ಸಂಪಾ:—ನಿಮ್ಮಂತಹರು ಒಂದು ಮಾತನ್ನು ಲಕ್ಷ್ಯ ದಲ್ಲಿಡಬೇಕು. ದೇವರ ದಯೆಯಿಂದ ನಿಮ್ಮ ತಂದೆಯವರು ಬೇಕಾದಷ್ಟು ಗಳಿಸಿ ಇಟ್ಟಿರುವರು. ಉದರಪೋಷಣೆಯ ಚಿಂತೆಯಿಲ್ಲ. ಕಾರಣ ಉದ್ಯೋಗದ ಗೊಡವೆ ನಿಮಗೇಕೆ ? ಸಾಹಿತ್ಯದಲ್ಲಿ ನಿಮಗೆ ಆಸಕ್ತಿಯಿದೆ. ಅದನ್ನೇ ಹೆಚ್ಚು ಬೆಳೆಸಿಕೊಂಡು, ಕನ್ನಡ ಸಾಹಿತ್ಯಕ್ಕೆ ಹೊಸ ರೂಪನ್ನು ಕೊಟ್ಟು, ಹೆಚ್ಚು ಹೊಳೆಯುವಂತೆ ತಾವು ಪ್ರಯತ್ನಿಸ ತಕ್ಕದ್ದು.

ಎಂಕಣ್ಣನು ನಸುನಕ್ಕನು.

ಎಂಕ:—ಈಗ ಹೊಲದಿಂದ ಅಷ್ಟು ಬರೂದಿಲ್ಲರಿ, ಅಷ್ಟಂ ದರ ಎಷ್ಟೆಷ್ಟೂ ಬರೂದಿಲ್ಲ. ಭಾಳ ತ್ರಾಸಾಗೇದ. ದೇವರು ಏನೋ ಸ್ವಲ್ಪ ಶಾಣ್ಯಾತನ ಕೊಟ್ಟಾನ, ಅದಕ್ಕ ಸಾಹಿತ್ಯವನ್ನ ನನ್ನ ಉದ್ಯೋಗವನ್ನಾಗಿ ಮಾಡಿಕೋ ಬೇಕು ಅಂತ ಮಾಡೀನಿ....ಇದಕ್ಕ ನೀವೇನಂತೀರಿ?

ಸಂಪಾದಕರ ಮೈಮೇಲೆ ಒಂದು ದೊಡ್ಡ ಮರವೇ ಕಡಿದು ಬಿದ್ದಂತಾಯಿತು. ಇವೊತ್ತಿನ ಪ್ರಸಂಗವು ಸಾಧಾರಣವಲ್ಲ, ಪಾರಾಗುವ ಬಗೆಯೇನೆಂಬ ವಿಚಾರದಲ್ಲಿ ಮುಳುಗಿ ಬಿಟ್ಟರು. ಎಂಕಣ್ಣನು ಎದುರಿನಲ್ಲಿ ಕುಳಿತಿದ್ದಾನೆ. ಉತ್ತರವನ್ನು ಈಗಿಂದೀಗಲೇ ಅಪೇಕ್ಷಿಸುತ್ತಾನೆ. ಏನು ಹೇಳಬೇಕು!

ಸಂಪಾ:—ಪರವಾ ಇಲ್ಲ........ಯೋಗ್ಯವಿದೆ.

ಎಂಕಣ್ಣನು ಮುಂದರಿಸಿದನು:—ಅದಕ್ಕ ನಿಮ್ಮನ್ನ ಕೇಳೋದಿಷ್ಟು....

ಸಂಪಾದಕರು ಆತುರರಾಗಿ ಕುರ್ಚಿಯಿಂದ ತುಸು ಮುಂದಕ್ಕೆ ಬಾಗಿದರು.

ಎಂಕ:—ಈಗ ಸುಮಾರು ಎರಡು ವರುಷಾತು. ನಾನು ನಿಮ್ಮ ಪತ್ರಿಕೆಗೆ, ಕಥೀನೋ, ಅದನ್ನೋ, ಇದನ್ನೋ, ಏನೇನೋ ಬರದು ಕೊಟಗೋತ ಬಂದೀನಿ. ಇರಲಿ ಅದು. ಹಿಂದಿಂದು ಇರವಲ್ಲದ್ಯಾಕ. ಇನ್ಮ್ಯಾಲೆ ನಾ ಏನು ನಿಮಗ ಬರದು ಕೊಡತೀನಿ, ಅದಕ್ಕೆಲ್ಲ!ಪಾಣಿಗೆ ದೀಡ ರೂಪಾಯಿ, ಅಥವಾ ಒಂದು ರೂಪಾಯಿ ಹೀಂಗ ನನಗ ನೀವು ಕೊಟ ಗೋತ ಹೋದರ ಛಲೋ ಆಗತದ........

ಮನದಲ್ಲಿದ್ದುದನ್ನೆಲ್ಲ ನುಡಿದು, ಒಮ್ಮೆ ಎಂಕಣ್ಣನು ಪಾರಾದನು. ತಾನು ನುಡಿದದ್ದು ಪ್ರಸಂಗಕ್ಕೆ ಯೋಗ್ಯವಾಯಿತೋ ಎಂಬಂತೆ ಸಂಪಾದಕರನ್ನು ನೋಡತೊಡಗಿದನು. ಯೋಗ್ಯವೇ ಆಗಲಿ, ಅಯೋಗ್ಯವೇ ಆಗಲಿ, ತನ್ನ ಬೇಡಿಕೆಗಳನ್ನು ಸಂಪಾದಕರು ಮನ್ನಿಸುವರೋ, ಎಂಬ ಆಶಾಪೂರಿತ ದೃಷ್ಟಿಯಿಂದ ಸಂಪಾದಕರನ್ನು ನೋಡಹತ್ತಿದನು.

ಸಂಪಾದಕರು ಕುರ್ಚಿಯ ಬೆನ್ನಿಗೆ ಆತು ಬಿದ್ದರು. ನಿಟ್ಟುಸಿರೊಂದನ್ನು ಬಿಟ್ಟರು. ಮೋರೆ ಸಪ್ಪಗೆ ಮಾಡಿದರು.

ಈ ವಾರದಲ್ಲಿ ಅವರ ಗ್ರಹಗಳು ಚನ್ನಾಗಿದ್ದಂತೆ ಕಾಣಲಿಲ್ಲ. ಈಗ ಒಂದು ತಾಸಿನ ಕೆಳಗೆ ಮನೆಯಲ್ಲಿ ಮಹಾಯುದ್ಧವಾಗಿದೆ. ರಗಳೀ ರಾಮಾಯಣವಾಯಿತು, ಪತ್ನಿಯ ಕೊರಳೊಳಗಿನ ಚಂದ್ರಹಾರವು ಸಂಪಾದಕರ ಬಗಲಲ್ಲಿ ಬೀಳಬೇಕಾದರೆ. ಆಫೀಸಿಗೆ ಬಂದು ತುಸು ವಿಶ್ರಮಿಸಬೇಕೆಂದರೆ ಈಗ ಎಂಕಣ್ಣನ ಈ ರೀತಿಯ ಸವಾಲು. "ದೇವಾ ಈ ದುಃಖಮಯ ಸಂಸಾರದಿಂದ ಪಾರು ಮಾಡಪ್ಪ" ಎಂದೆನ್ನುವ ಬುದ್ಧಿಯಾಯಿತು ಸಂಪಾದಕರಿಗೆ.

ಎಂಕಣ್ಣನ ಬೇಡಿಕೆಯನ್ನು ಸಂಪಾದಕರು ಎಂದೂ ನಿರಾಕರಿಸರು; ಅಷ್ಟು ನಿಕಟ ಸಂಬಂಧಗಳಿವೆ ಅವರಿಬ್ಬರಲ್ಲಿ. ಎಂಕಣ್ಣನಿಗೆ honorarium ಕೊಡಬೇಕೆಂದು ಸಂಪಾದಕರ ಇಚ್ಛೆಯೂ ಇದೆ. ಆದರೆ.... ಈಗ ಮಾತ್ರ ಅವರು ಒಂದು ಪೈ ಸಹ ಕೊಡಲಾರರು.

ಸಂಪಾ:—ನೀವು ಕೇಳಿದ್ದಕ್ಕಿಂತಲೂ ಹೆಚ್ಚು ತೆಗೆದುಕೊಳ್ಳಲು ನೀವು ಅರ್ಹರಿರುವಿರಿ. ಆದರೆ ಪತ್ರಿಕೆ ನಡೆಸುವದು ಅತಿ ಕಷ್ಟ. ಅದರಲ್ಲಿಯೂ ಸಾಹಿತ್ಯಾಭಿರುಚಿಯಿಲ್ಲದ ನಮ್ಮ ಕರ್ನಾಟಕದಲ್ಲಿ ನಮ್ಮದು ಬ...
ವ್ಯವಹಾರ.

ಎಂಕ:—ಅಂದಮ್ಯಾಲೆ....

ಸಂಪಾ:—ಇಂತಹದನ್ನೇಕೆ ಕೈಕೊಳ್ಳಬೇಕು ... ನೀವು ಕೇಳಬಹುದು. ಕೇವಲ ಸಾಹಿತ್ಯಸೇವೆಗಾಗಿ, ... ರಾಯರೇ, ಸಾಹಿತ್ಯಸೇವೆಗಾಗಿ ಸಾಹಿತ್ಯಸೇವೆ. ಇಷ್ಟೇ ... ಸಂಪಾದಕತ್ವದ ಉದ್ದೇಶ. ಮತ್ತೇನೂ ಇಲ್ಲ ... ಲ್ಲಿಯೂ ಈಗ ನನ್ನ ಪರಿಸ್ಥಿತಿ ಬಹಳ ಕಷ್ಟದ... ಮೆತ್ತಗಿನ ಸ್ವರದಲ್ಲಿ) ನಿಜವನ್ನೇ ಹೇಳಬೇಕಾದರೆ ... ಎರಡು ತಾಸುಗಳ ಕೆಳಗೆ ಆ ಪ್ರೆಸ್ ಮ್ಯಾನೇ... ಕಡೆಯಿಂದ ಒಂದು ಪತ್ರ ಬಂದಿದೆ, "ಹಿಂದಿನ ... ಬಿಲ್ಲು ಕಳಿಸದಿದ್ದರೆ ತಡೆಯುವಂತಿಲ್ಲ" ಎಂದು ... ಮಾಡಲಿ, ಮನೆಯಲ್ಲಿಯ ತುಸು ಬಂಗಾರ ತಂ... ಅದನ್ನು ಮಾರಿ, ಪ್ರೆಸ್ ಬಿಲ್ ಮುಟ್ಟಿಸುವೆನು. ಇ... ಯಲ್ಲಿ ನಾನಿದ್ದೇನೆ.

ಎಂಕ:—ಹಂಗಾರ, ಸಾಹಿತಿಗಳ ಪರಿಸ್ಥಿತಿ ...

ಸಂಪಾ:—ಸಾಹಿತಿಯು ಸ್ವಸಂತೋಷಕ್ಕಾಗಿ ... ವನೇ ವಿನಾ ಧನಸಂಪಾದನೆಗಲ್ಲ. ಅವನು ... ತತ್ವಜ್ಞಾನಿಯು. ಜಗತ್ತಿಗೆಲ್ಲ ಸಂದೇಶವನ್ನು ... ರನ್ನು ಮುಂದೆತರುವನು. ತಜ್ಞರನ್ನು ಆನಂದ... ಬಿಡುವನು.

ಎಂಕ:—(ಅದೇ ಗತಿ ಮತ್ತು ಸ್ವರದಲ್ಲಿ) ... ತಾನು ಬಡತನದಲ್ಲಿ ಬಳಲುವನು. ಸೌಖ್ಯವನ್ನ... ಸುಖದ ಕನಸುಗಳನ್ನು ಕಟ್ಟುವನು. ಇಂದಿ... ಸುಖ ಸಿಕ್ಕೀತೆಂದು ಬಯಸಿ, ಬಾಯಾರಿ, ಬೇ... ಗೊಂದು ದಿನ....

ಮುಂದೆ ಮಾತಾಡಗೊಡಲಿಲ್ಲ ಸಂಪಾದಕರು ... ಆಸನದಿಂದ ಎದ್ದುಬಂದು ಎಂಕಣ್ಣನ ಭುಜ... ಕೈಯಿಟ್ಟು:

ಸಂಪಾ:—ವೆಂಕಟರಾವ ಶಾಂತರಾಗಿರಿ. ... ನಿಮ್ಮ ಪರಿಸ್ಥಿತಿಯನ್ನು ನೋಡಿದರೆ ತಾವು ಏ... ನೊಂದುಕೊಂಡಿದ್ದೀರಿ ಎಂದು ಅನಿಸುವದು. ಏ... ಚಹ ತೆಗೆದುಕೊಂಡು ಬರೋಣ ನಡೆಯಿರಿ.

ಎಂಕ:-ಇಲ್ಲ, ನಾನು ಈ ಜಾಗಾ ಬಿಟ್ಟು ಕದಲೋ... ಈ ಹೊತ್ತಿನ ಪ್ರಸಂಗನ ಹಾಂಗದ. ಈವತ್ತು ನನಗ... ಅಪಮಾನ ಆಗೇದ, ಸಹಿಸಲಸಾಧ್ಯವಾದಷ್ಟು ... ಆಗೇದ.... ನಾನೂ ನಿಮಗೊಂದು ನಿಜಸ್ಥಿತಿ ಹೇಳ...

ಸ್ಟೇಶನಂ ಅಂಗಡೀಕಾರಗ ನಾನು ಸ್ವಲ್ಪ ರೊಕ್ಕಾ ಕೊಡೋದ. ಅವನ ಆಳು ಅಲ್ಲೇ ನಮ್ಮ ಮನಿ ಬಾಗಲದಾಗ ಕೂತಾನ. 'ರೊಕ್ಕಾ ಕೊಡದ ವಿನಾ ಹೊಗೂದಿಲ್ಲ' ಅಂತ ಅಂತಾನ. ಅದಕ್ಕ ಈಗೊಂದು ಮೂರು ರೂಪಾಯಿ ಬೇಕಾಗ್ಯಾವ. ಅಪ್ಪನು ಊರಾಗಿಲ್ಲ, ಇದ್ದರೆ ಅವನ ಕಡಿಯಿಂದ ಕೊಡಿಸುತ್ತಿದ್ದೆ. ಕಾರಣ ಈಗ ಮೂರು ರೂಪಾಯಿ ಕೊಡಿರಿ. ಅವನ ಉದ್ರಿ ಮುಟ್ಟಸಿದ ಮ್ಯಾಲೆ ನನ್ನ ಮನಸಿಗೆ ಸಮಾಧಾನ. ಅಲ್ಲಿತನಕಾ ಇಲ್ಲಿ....

ಮತ್ತೆ ಸಂಪಾದಕರು 'ಪೇಚಿ'ನಲ್ಲಿ ಬಿದ್ದರು. ಎಂಕಣ್ಣನು 'ಅಪ್ಪ' ಎಂದಕೂಡಲೇ ಸಂಪಾದಕರಿಗೆ ಒಂದು ವಿಷಯ ನೆನಪಾಯಿತು. ಈಗೆಂಟು ದಿವಸಗಳ ಕೆಳಗೆ ಎಂಕಣ್ಣನ ತಂದೆಯವರು ಸಂಪಾದಕರಲ್ಲಿ ಹೋಗಿದ್ದರು. ತಮ್ಮ ಮಗನನ್ನು ಅಡ್ಡದಾರಿಗೆ ಹಚ್ಚಿದರೆಂಬ ಆರೋಪದಿಂದ ಅವರನ್ನು ದೂಷಿಸಿದ್ದರು.

ತಂದೆ:—ಯಾವಾಗಲೂ ಹಾಳು ರಗಟೆಯನ್ನು ಬರೆಯುತ್ತಲೇ ಇರುವನು. ಆದರಿಂದೇನು ಉಪಯೋಗ ? ವೇಳೆ ಹಾಳು, ವ್ಯರ್ಥ ಶ್ರಮ, ಕಾಗದ ಮಸಿ ಹಾಳು, ಒಟ್ಟಗೆ ಜೀವನವೇ ಹಾಳು. ಆದರಿಂದ ಒಂದು ಪೈ ಸಹ ಪ್ರಾಪ್ತಿಯುದೆಯೇ ?

ಸಂಪಾ:—ಅದಕ್ಕೆ ನಾನೇನು ಮಾಡಲಿ ?

ತಂದೆ:—ಅವನ ಕೃತಿಗಳನ್ನು ನೀವು ಇನ್ನು ಮೇಲೆ ಛಾಪಿಸಬೇಡಿರಿ. ಅಂದರೆ ನಿರಾಶನಾಗಿ ಬರೆಯುವದನ್ನೇ ಬಿಡುವನು. ಮತ್ತು ಅವನ ಸ್ನೇಹವನ್ನು ನೀವು ಬಿಡಿರಿ; ನಿಮ್ಮ ಆಫೀಸಿಗೆ ಬರಗೊಡಬೇಡಿರಿ...."

ಸಂಪಾ:—ಅದು ಮಾತ್ರ ಆಗದು. ಆಫೀಸಿಗೆ ಬಂದವರನ್ನು ಸ್ವಾಗತಿಸುವದು ನನ್ನ ಕರ್ತವ್ಯ. ನಮ್ಮಂಥವರ ಸಹವಾಸವನ್ನು ನಿಮ್ಮ ಮಕ್ಕಳು ಮಾಡಬಾರದೆಂದು ನಿಮ್ಮ ಇಚ್ಛೆಯಿದ್ದರೆ, ನೀವೇ ಅವರಿಗೆ ಆರೀತಿ ತಿಳಿಸಿ ಬಿಡಿರಿ.

ತಂದೆ:—ನನ್ನ ಅಧೀನದಲ್ಲಿ ಅವನಿದ್ದಿದ್ದಾದರೆ ನಿಮ್ಮಲ್ಲಿಗೆ ಈ ರೀತಿ ಮಾತಾಡಲು ನಾನು ಬರುತ್ತಿರಲೇ ಇಲ್ಲ....

ಇವೆಲ್ಲವೂ ಸಂಪಾದಕರಿಗೆ ನೆನಪಾದವು. ಎಂಕಣ್ಣನು ಸಾಹಿತಿಯಾಗುವದು ಅವನ ತಂದೆಯ ಮನಸ್ಸಿನಲ್ಲಿಲ್ಲ. ಅಂದ ಮೇಲೆ ಅವನ ತಂದೆಯು ಈ ಉದ್ರಿ ತೀರಿಸಲು ರೂಪಾಯಿಗಳನ್ನು ಎಂಕಣ್ಣನಿಗೆ ಕೊಡುವದಿಲ್ಲ. ಆದುದರಿಂದ. ಸಂಪಾದಕರಲ್ಲಿ ಇಂದು ಎಂಕಣ್ಣನು ರೂಪಾಯಿಗಳನ್ನು ಕೇಳಲು ಬಂದಿದ್ದಾನೆ.

"ಏನೇ ಇರಲಿ, ಕೈಗಡವೆಂದು ಅರ್ಥ ಮಾಡಿದರೂ ಸರಿ, honorarium ಎಂದು ತಿಳಿದರೂ ಸರಿ, ಈಗ ರೂಪಾಯಿಗಳನ್ನು ಎಂಕಣ್ಣನಿಗೆ ಕೊಡುವದು ಒಳಿತು" ಎಂದು ನುಡಿದು ಸಂಪಾದಕರು ಒಳಗಿನಿಂದ ಮೂರು ರೂಪಾಯಿಗಳನ್ನು ತಂದು ಎಂಕಣ್ಣನಿಗೆ ಕೊಟ್ಟರು.

ಎಂಕಣ್ಣನಿಗೆ ಆನಂದವಾಯಿತು. ಹಿಡಿಸಲಾರದಷ್ಟು ಆನಂದವಾಯಿತು. ಆ ಅಂಗಡಿಕಾರನ ಋಣದಿಂದ ಮುಕ್ತನಾಗಿ, ಕೃತಾರ್ಥನಾದೆನೆಂಬದನ್ನು ಸೂಚಿಸುವ ನಗೆ ನಕ್ಕನು. ಸಂಪಾದಕರೂ ನಕ್ಕರು. ಎಂಕಣ್ಣನಿಗೆ ಪ್ರತ್ಯುತ್ತರವೆಂದು ನಕ್ಕರು.

ಎಂಕ:—ಸಂಪಾದಕರೇ, ಜಗತ್ತಿನಲ್ಲಿ ಎಂತಹ ವಿಚಿತ್ರ ಸನ್ನಿವೇಶಗಳು ಜರಗುವವು ನೋಡಿರಿ. ನಮ್ಮದೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಸಭೆಯಲ್ಲಿ ನಮಗೆ ಅಪೂರ್ವ ಮಾನಮರ್ಯಾದೆಗಳು ಸಿಕ್ಕವು. ನಾನು ಮನೆಗೆ ಬಂದೆನು, ಉದ್ರಿ ವಸೂಲಿ ಆಳು ಬಾಗಿಲಲ್ಲಿ ನಿಂತಿದ್ದನು. ನೀವು ಆಫೀಸಿಗೆ ಬಂದಿರಿ, ನಿಮಗೆ ಸಹ ಉದ್ರಿ ವಸೂಲಿಯ ಪತ್ರ ಬಂದಿತು. ನಾನು ನಿಮ್ಮಲ್ಲಿಗೆ ದುಡ್ಡು ಕೇಳುವದಕ್ಕಾಗಿ ಬಂದೆನು. ನೀವು ನಿಮ್ಮ ಪತ್ನಿಯಲ್ಲಿಗೆ ದುಡ್ಡು ಕೇಳಲು ಹೋದಿರಿ. ನನಗೂ ದುಡ್ಡು ಸಿಕ್ಕಿತು. ನಿಮಗೂ ದುಡ್ಡು ಸಿಕ್ಕಿತು. ಕಡೆಗೆ ನಮ್ಮಿಬ್ಬರಿಗೂ ಆನಂದ.

ಸಂಪಾ:—ನಿಜ. ಇದನ್ನೇ ವಸ್ತುವನ್ನಾಗಿಟ್ಟುಕೊಂಡು ಬರೆದರೆ, ಒಂದು ಅತ್ಯುತ್ತಮವಾದ ಏಕಾಂಕ ನಾಟಕವಾಗುವದು.

ಎಂಕಣ್ಣನ ಹೃದಯದಲ್ಲಿ ಈಗ ಮತ್ತೆ ಪ್ರತಿಭೆಯ ಆವೇಗವಾಯಿತು. ಉತ್ಸಾಹದಿಂದ ನುಡಿದನು:—ಇನ್ನು ನಾಲ್ಕೇ ದಿನಗಳಲ್ಲಿ ಬರೆದು ತಯಾರಿಸುವೆನು. ಇದೇ ಸಂಚಿಕೆಯಲ್ಲಿ ಸ್ಥಳ ಕಾಯ್ದು ಇರಿಸಿರಿ.

ಸಂಪಾದಕರು ಎದುರಿಗಿರುವ ಟೇಬಲ್ಲಿನ ಮೇಲೆ ಬಿದ್ದಿರುವ ಒತ್ತುಕರಡಿನಲ್ಲಿ ಏನೇನೋ ಗೀಚುತ್ತ ನುಡಿದರು:—ಈ ಸಂಚಿಕೆಯಲ್ಲಿ ಸ್ಥಳವೇನೂ ಇಲ್ಲ. ಬರೆದು ತಯಾರಿಸಿರಿ. ನೋಡೋಣ. ಸ್ಥಳಾನುಕೂಲವಾದಾಗ ಪ್ರಸಿದ್ಧಿಸೋಣ.

ಸಂಪಾದಕರಿಂದ ಎಂಕಣ್ಣನಿಗೆ ಈ ರೀತಿ ಉತ್ತರ ಸಿಕ್ಕದ್ದು ಇದೇ ಮೊದಲನೆಯ ಸಲ. ಹಿಂದೆ ಎಷ್ಟೋ ಸಲ ಸಂಪಾದಕರೇ ಅನ್ನುತ್ತಿದ್ದರು. "ಪ್ರತಿ ಸಂಚಿಕೆಯಲ್ಲಿಯೂ ನಿಮ್ಮದೊಂದು ಲೇಖವು ಬೇಕೇಬೇಕು" ಎಂದು. ಎಂಕಣ್ಣನ ತಲೆ ಗಿರಿಗಿರಿ ತಿರುಗಿದಂತಾಗಿ ಕಣ್ಣಿಗೆ

ಜೀವನ ಸಂಗ್ರಾಮ


★

ಲೇಖಕರು: ಪ್ರೊ|| ಎಂ. ಜಿ. ರಾವ್,

ಭಾವಾವೇಶದಿಂದ ನಾವು ಒಂದು ಸಲ ಹೇಳಬಹುದು 'ಪರಮಾತ್ಮನು ಶಾಂತಿಪ್ರಿಯನು' ಎಂದು. ಶಾಂತವಾದ ಬೈಲಲ್ಲಿ ಹುಣ್ಣಿಮೆಯ ನಡುರಾತ್ರಿಯಲ್ಲಿ ತಂಗಾಳಿಗೆ ಮೈಯೊಡ್ಡಿ ಹಾಡಬಹುದು 'ಪ್ರಕೃತಿಃ ಶಾಂತಿವಾರಿಧಿಃ' ಎಂದು. ಕೋಗಿಲೆಯ ಕುಕಿಲನ್ನು ಕೇಳಿ ವಸಂತನ ಶೃಂಗಾರ ಗಾನವೆಂದು ವರ್ಣಿಸಬಹುದು. ಶಾಂತಿಯ ಸಾಧಕರು ಹಗೆ ಹೊಗೆಗಳಿಂದ ತುಂಬಿದ ಪ್ರಪಂಚದಿಂದ ದೂರ ಶಾಂತಿ ಸಾಮ್ರಾಜ್ಯದ ಏಕಾಂತಕ್ಕೆ ಹೋಗುವರು. ಹಕ್ಕಿಪಕ್ಕಿಗಳ ಧ್ವನಿಗಳು ಪ್ರೇಮಾಲಾಪವೆಂದು ತಿಳಿಯುವರು. ತಿಳಿನೀರಿನ ಕೊಳಕ್ಕೆ ಶಾಂತಿಸಾಗರವೆಂದು ಹೆಸರಿಡುವರು.

ಹಾಗಾದರೆ ನಿಜವಾಗಿಯೂ ಪ್ರಕೃತಿಯು ಶಾಂತಿನಿಲಯವೇ ? ನಿಸರ್ಗದಲ್ಲಿ ಬರಿ ಪ್ರೇಮ, ಸಹಾನುಭೂತಿ, ದಯೆ, ಮಾರ್ದವಗಳೇ ತುಂಬಿಹವೇ? ಎಂಬ ಪ್ರಶ್ನೆಗಳಿಗೆ ವಸ್ತುಸ್ಥಿತಿಯ ಉತ್ತರ ಕೊಡುವುದಾದರೆ ಒಂದೇ ಮಾತಿನಲ್ಲಿ 'ಪ್ರಕೃತಿಯು ರಣರಂಗ' ವೆನ್ನಬೇಕಾದೀತು. ಪ್ರಕೃತಿಯಲ್ಲಿ ಕಡಿದಾಟ, ಮೇಲಾಟ, ಕೊಲೆ, ಸುಲಿಗೆಗಳು ಹಗಲಿರುಳೆನ್ನದೆ ನಡೆದಿವೆಯೆಂದು ವಿಜ್ಞಾನದ ದೃಷ್ಟಿಯುಳ್ಳವರಿಗೆ ಕಾಣದಿರದು.

ಅತ್ಯಂತ ಶಾಂತ-ಪ್ರಶಾಂತವಾದ ಏಕಾಂತದ ನಿಸರ್ಗದಲ್ಲಿಯೂ ಶಾಂತಿಯ ಉಪದೇಶವನ್ನು ಕೇಳುವ ಒಂದು ಪ್ರಾಣಿಯೂ ಸಿಗದು. ಪ್ರತಿಯೊಂದು ಪ್ರಾಣಿಯು ತಾನು ಬದುಕುವುದಕ್ಕಾಗಿ ಬೇಕಾದ ಪ್ರಾಣಿಯನ್ನು ಬಲಿತೆಗೆದುಕೊಳ್ಳಲು ಸಿದ್ಧವಾಗಿರುತ್ತದೆ. ತನ್ನ ಬದುಕೇ ಅದರ ಜೀವನದ ಗುರಿ. ಜಗತ್ತೆಲ್ಲ ಸತ್ತರೇನು, ತಾನು ಬದುಕಬೇಕು. ಹಲಕೆಲವು ಪ್ರಾಣಿಗಳಲ್ಲಿ ಬದುಕುವ ಶಕ್ತಿಯು ಅಗಾಧವಾಗಿದೆ. ಪ್ರೊ. ಲಿಪ್‌ಮನ್ನ ನೆನ್ನುತ್ತಾನೆ "ಆಕಾಶದೊಳಗಿನ ಹಲಕೆಲವು ಗ್ರಹಗಳಲ್ಲಿ ಅನೇಕ ಸಹಸ್ರ ವರ್ಷಗಳ ಹಿಂದಿನ ಸೂಕ್ಷ್ಮಕ್ರಿಮಿಗಳು ಮಂಜುಗಡ್ಡೆಯಲ್ಲಿ ಇನ್ನೂ ಆಹಾರವಿಲ್ಲದೆ ಟುಕುಟುಕು ಜೀವ ಹಿಡಿದು ಕೂತಿವೆ." ನಾಯಿಗೆ



ಮೂರು ವರ್ಷವಾದರೂ ನಿರಾಹಾರವಾಗಿ ಜೀವಿಸಬಲ್ಲ ನಾಯಿ-ಉಂಣೆ


ಹತ್ತುವ ಉಂಣೆಯನ್ನು ಒಂದು ಸೀಸೆಯಲ್ಲಿ ... ಏನೂ ಆಹಾರವಿಲ್ಲದೆ ಅದು ಮೂರು ವರ್ಷಗಳಿಗಿಂತ ... ಬದುಕುತ್ತದೆ. ಅಷ್ಟು ದಿನದ ವರೆಗೆ ಅದಕ್ಕೆ ... ಸತ್ಯಾಗ್ರಹ ಮಾಡಿಸಿದರೂ ನಾಯಿಯ ಮೈ ... ಕೂಡಲೆ ಅದು ತನ್ನ ರಕ್ತಶೋಷಣದ ... ಆರಂಭಿಸಿಯೇ ಬಿಡುವದು.

ಸಾಮಾನ್ಯವಾಗಿ ಎಲ್ಲ ಪಕ್ಷಿಗಳ ಕೂಗಿನಲ್ಲಿ ... ಸಂಗೀತಕ್ಕಿಂತ ಗರ್ವದ ಇಂಗಿತವೇ ವಿಶೇಷ... ಬದುಕಿನ ಬೇಟೆಯ ಹುಮ್ಮಸ್ಸು ಅವನ್ನು ... ಇಲ್ಲವೆ ಕಾಮ-ಕೂಟದ ಬಯಕೆಯು ಅವನ್ನು ... ತ್ತದೆ. ಆದರೆ 'ಎಲ್ಲವೂ ನಾನು; ಎಲ್ಲರೂ ... ಎಂಬ ಭಾವವೇ ಹೆಚ್ಚಾಗಿ ಅವುಗಳ ಕೂಗಿನಲ್ಲಿ ... ತ್ತದೆ. ಹಲವು ಪ್ರಾಣಿಗಳು ತಮ್ಮ ಭಯ... ಗಳಿಂದ ತಮ್ಮ ಬೇಟೆಯನ್ನು ಅಂಜಿಸಿ ಆಕ್ರ... ನಮಗೆ ಸುಗಂಧದಾಯಕವಾದ ಕಸ್ತೂರಿ ... ಳನ್ನು ಹುಟ್ಟಿಸುವ ಮೃಗಗಳು ಆ ವಾಸನೆಯ ... ತಮ್ಮ ಬೇಟೆಯನ್ನು ಭ್ರಮೆಗೊಳಿಸುತ್ತವೆ.

ಬೇರೆಬೇರೆ ಪ್ರಾಣಿಗಳು ತಮ್ಮ ಆಹಾರವ... ಸುವಾಗ ನೀವು ನೋಡಿ... ಆಗ ಅವು ಬಹಳ ಚಾಂಚ... ಗಡಿಬಿಡಿಯನ್ನೂ ತೋ... ಕಾರಣವೇನು ? ಕ್ಷಣಕ್ಷಣ... ಗೆಯ ಆಗಮನದ ಕಡೆಗೆ ... ಲಕ್ಷ್ಯ. ಅವು ಗಾಬರಿಗೊಳ್ಳದೆ ... ವಿಲ್ಲ.

'ಜೀವೋ ಜೀವಸ್ಯ ಜೀವನ...' ಬುದು ಪ್ರಕೃತಿರಾಜ್ಯದಲ್ಲೆಲ್ಲ ... ಕಾಣುವದು. ಒಂದು ... ನೀರಿನ ಹನಿಯಲ್ಲಿ ಸೂಕ್ಷ್ಮದರ್ಶನಿಯಿಂದ ನೋಡಿ... ಲ್ಲಿಯ ಹುಳುಗಳು ಲಕ್ಷೋಪಲಕ್ಷವಾದ ಜೀವಾಣು... ನುಂಗುವವು. ಆ ಹುಳುಗಳನ್ನು ... ಹಾವು ... ಭಕ್ಷಿಸುವವು. ಹಾವು, ಚೇಳು, ... ತಾವು ...

ಪಕ್ಷಿಗಳು, ಇಲಿಗಳು, ಅಳಿಲುಗಳು ತಿಂದ.ಹಾಕುವವು. ಅಳಿಲುಗಳನ್ನು ಕಾಡು ಮೂಗಿಲಿಗಳು ಫಲಾಹಾರಮಾಡು



ಕಾಡು ಮೂಗಿಲಿಯು ಮಧ್ಯಾಹ್ನದ ಊಟಕ್ಕೆ ಅಳಿಲನ್ನು ಬೆನ್ನಟ್ಟುವದು.


ವವು. ಕಾಗೆ ಹದ್ದುಗಳು ಆ ಇಲಿಗಳನ್ನು ಹಿಡಿಯಲಿ ತ್ನಿಸುವವು. ಹೀಗೆ ಯಾರು ಹಾಳಾದರೇನು? ನಾನು ಬದುಕಲೇ ಬೇಕು ಎಂಬುದೇ ನಿಸರ್ಗರಾಜ್ಯದ ನಿಯಮ ವೆನಿಸುವದು.

ಕೆಲವು ಮೀನಿನ ಜಾತಿಗಳು ತಮ್ಮ ತತ್ತಿಗಳನ್ನು ತಾವೇ ತಿನ್ನುವವು. ಕೆಲವು ಜೀವಿಗಳಲ್ಲಿ ಹೆಂಣುಗಳು ಗಂಡುಗಳನ್ನು ತಿಂದುಹಾಕಿಬಿಡುವವು. ಇದರಿಂದ ಮಾತೃವಾತ್ಸಲ್ಯವೂ ಕೂಡ ಪ್ರಕೃತಿಯಲ್ಲಿ ಸರ್ವವ್ಯಾಪಿಯಾಗಿಲ್ಲವೆಂದು ತೋರುವದು.

ಇನ್ನು ಹಲವು ಪ್ರಾಣಿಗಳು ಪರೋಪಜೀವಿಯಾಗಿವೆ. ಕೊಕ್ಕೆಹುಳು, ನಾರುಹುಳು, ಜಂತುಹುಳುಗಳು ಮನುಷ್ಯನ ದೇಹದೊಳಗೇಶ್ತಿ ತಮ್ಮ ಸುಖಾವಾಸವನ್ನು ಕಲ್ಪಿಸಿಕೊಳ್ಳುವವು. ಚಿಕ್ಕಾಡು, ತಗಣಿ, ಕೂರಿಗಳ ವಿಷಯವನ್ನಂತೂ ಹೇಳಬೇಕಾಗಿಲ್ಲ. ಅವರೆಹುಳು, ಕಂಬಳಿಹುಳುಗಳ ಜಾತಿಯ ಹುಳುಗಳು ಕೆಲವು ವನಸ್ಪತಿಗಳ ಕಾಯಿಗಳ ಹೊಟ್ಟೆಯಲ್ಲಿ ಹುಟ್ಟಿ ಅವನ್ನೇ ತಿಂದು ಅಲ್ಲಿಯೇ ಮೊಟ್ಟೆಗಳನ್ನಿಟ್ಟು ಹೊರಗೆ ಬರುತ್ತವೆ. ಹೊರಗೆ ಬಂದಕೂಡಲೆ ವಿಷನೊಣಗಳು ಅದರ ರಕ್ತಹೀರಿ ಬದುಕಲು ಸಿದ್ಧವಾಗಿವೆ. ಕಡಜೀರಿಗೆಯಂತಹ ಹುಳುಗಳು ಅದರ ಮೈಮೇಲೆ ತನ್ನ ತತ್ತಿಗಳನ್ನಿಟ್ಟು ಅದರ ರಕ್ತಸಾರದಿಂದಲೇ ಅವು ಬೆಳೆಯುವಂತೆ ಮಾಡುತ್ತದೆ. ಜಲಮಂಡಲದಂತಹ ವಿಷಜೇಡದ ಗೂಡಿನಲ್ಲಿಳಿದು ಅದರ ತತ್ತಿಗಳನ್ನೆಲ್ಲ ತಿಂದು ತಾನೇ ಅಲ್ಲಿ ತತ್ತಿಗಳನ್ನಿಡುವ ತಾಯಿ-ಇರುವೆಗಳಿವೆ.

ಈ ಎಲ್ಲ ನಿದರ್ಶನಗಳಿಂದ ಶಾಂತಿಯು ಪ್ರಕೃತಿಯ ತತ್ವವಲ್ಲ. ಬದುಕಿನ ಬಡಿದಾಟವೇ, ಜೀವನ ಸಂಗ್ರಾಮವೇ ಪ್ರಕೃತಿಯ ಚಟುವಟಿಕೆಗಳಲ್ಲಿರುವ ಮರ್ಮ. ಕೋಳಿಯು ಕೂಗುವಾಗ, ಬೆಳಗಾಯಿತೆಂದು ಅದು ಕೂಗುವದಿಲ್ಲ. ಯುದ್ಧಕ್ಕೆ ಬರುವವರಿಗೆ ಅದು ಆಹ್ವಾನ. ಕೆಲವು ಪಕ್ಷಿಗಳಂತೂ ತಮ್ಮೊಳಗೆ ಭೀಕರ ಕಾದಾಟ ನಡೆದಾಗ ಗಾಯ ಹೊಂದಿ ನೆಲಕ್ಕೆ ಬಿದ್ದರೂ ನಮಗೆ ಇಂಪೆನಿಸುವ ಹಾಡುಗಳನ್ನು ಹಾಡುವವು.

ಶಾಂತಿತುಷ್ಟಿಗಳ ಬದಲು ಪ್ರಕೃತಿ ರಾಜ್ಯದಲ್ಲಿ ಹಿಂಸೆ, ಮರಣ, ಪೀಡೆ, ಯುದ್ಧಗಳೇ ತುಂಬಿಕೊಂಡಿವೆ.





ಕಾಳಗದ ಪದ

ಸಂಗ್ರಾಹಕರು: ಶ್ರೀ. ಎಂ. ಕೃಷ್ಣಮೂರ್ತಿ, ಮತಿಘಟ್ಟ

೧

ಅರಸಾನೂರ್ಮನೆಯ ಮುಂದೆ
ಸಿರಿಯಲ್ದೇವರ್ಗುಡಿಯ ಕಟ್ಟೆ,
ವರವ ಪಾಲೀಸೇ ಊರಚಂಗಿ1 ಎಲ್ಲಮ್ಮಾ—ಜೈ
ವರವ ಪಾಲೀಸೇ ಊರಚಂಗಿ ಎಲ್ಲಮ್ಮಾ ‖ ಪಲ್ಲ ‖

೨

ಕಡುಕಡುಗತ್ತಿ ಕೈಯ್ಯಾಗ್ಹಿಡ್ದು
ನಟ್ಟಕತ್ತಿ ಬಗಲಾಗಿಟ್ಟು
ಎಡ್ಕೆ ಬಲ್ಕೆ ಕಟ್ಬಾರಣ್ಣ ಎಳ್ಡಿಳ್ಡಾಯ್ಧವಾ—ಜೈ
ಎಡ್ಕೆ ಬಲ್ಕೆ ಕಟ್ಬಾರಣ್ಣ ಎಳ್ಡಿಳ್ಡಾಯ್ಧವಾ ‖

೩

ಅಣ್ಣಾನ ಮಾತ ಕೇಳದಾಲೆ
ಹನ್ನೆಳ್ಡ್ಸಾವಿರ ದಂಡ ಕಡ್ದು
ತಕ್ಕೊಬೇಕೆಂದ ಜಾಟಂಗಿ ದುರ್ಗವಾ—ಜೈ
ತಕ್ಕೊಬೇಕೆಂದ ಜಾಟಂಗಿ ದುರ್ಗವಾ ‖

೪

ಎಂಕೋಜೆಲ್ಲೋಜಿ ಬಾರೋ
ಮುದುಗುಂಡಿ ಬಾವಾಜಿ ಬಾರೋ
ಎದ್ದುಬಲ್ಲೀರಣ್ಣಾ ನಾಳೆ ಜಬ್ಲುಪೇಟೇಗೇ—ಜೈ
ಎದ್ದುಬಲ್ಲೀರಣ್ಣಾ ನಾಳೆ ಜಬ್ಲುಪೇಟೇಗೇ ‖

೫

ಸಾಬ್ರನೆಲ್ಲ ಬಲ್ಲೀರೆಂದು
ಯೆದಕೆರಪ್ಪನ್ನಾಬೇರೆಂದು
ಜಾಡಿಸ್ತ್ಹಳ್ಳಿ ಮಾರಾರಣ್ಣಾ ಜಗಳೂರ್ ಪೇಟೇ...
ಜಾಡಿಸ್ತ್ಹಳ್ಳಿ ಮಾರಾರಣ್ಣಾ ಜಗಳೂರ್ ಪೇಟೇ...

೬

ನಾಡೆ ಮಂಜು ಮುಚ್ಚೀದಂತೆ
ಜೇನು ಎದ್ದು ಕಚ್ಚೀದಂತೆ
ಹೊಂಟರಣ್ಣ ಭಂಟಾರ್ಕದನಾಕೇ—ಜೈ
ಹೊಂಟರಣ್ಣ ಭಂಟಾರ್ಕದನಾಕೇ ‖

೭

ಹಣವಕಿತ್ತು ಜಗಲೀ ಕಟ್ಟೆ,
ನೆಣವಕಿತ್ತು ಕೋಟೇ ಕಟ್ಟೆ
ಕೋಟೇ ಒಳ್ಗೆ ನುಲ್‌ನುಲ್ದಾಡಿ ಸಂವರಮಾಡಿ...
ಕೋಟೇ ಒಳ್ಗೆ ನುಲ್‌ನುಲ್ದಾಡಿ ಸಂವರಮಾಡಿ...

೮


ಅಪ್ಪನ ಮಾತ ಕೇಳದಾಲೆ
ಇಪ್ಪತ್ಸಾವಿರ ದಂಡ ಕಡಿದು
ನೋಡೂಬೇಕೆಂದ ಮೈಸೂರ್‌ಗಾಜಿನ್ ಕೀಳ್ಳವ್ವಾ2—ಜೈ
ನೋಡೂಬೇಕೆಂದ ಮೈಸೂರ್‌ಗಾಜಿನ್ ಕೀಳ್ಳವಾ ‖

೯

ಎಂಟಾಣೇಗೇ ಕಂಟೀಸರ
ಕಂಟೀ ಒಳ್ಗೆ ಮಿಣಿಮಿಣಿ ಧಾರ
ಭಂಟ್ರುಗೆಲ್ಲ ಚಾಕಲ್ ಮುತ್ತೊಂದ್ದೇರು ಮಾಡಿ...
ಭಂಟ್ರುಗೆಲ್ಲ ಚಾಕಲ್ ಮುತ್ತೊಂದ್ದೇರು ಮಾಡಿ...

---

1. ಊರಚಂಗಿ=ಉಚ್ಚಂಗಿ.
2. ಕೀಳ್ಳವ್ವಾ=ಕಿಲ್ಲೆಯನ್ನು.



ಜ್ಞಾನ—ವಿಜ್ಞಾನ

ಯುರೋಪಿನಲ್ಲಿ ಕ್ಷಣಕ್ಷಣಕ್ಕೂ ಯುದ್ಧಪಿಶಾಚಿಯು ಕುಣಿದಾಡುತ್ತಿದೆಯಷ್ಟೆ. ಪ್ರತಿಯೊಂದು ರಾಷ್ಟ್ರವೂ ಶಸ್ತ್ರ ಸಂಗ್ರಹ ನಡೆಸುತ್ತಿದೆ. ವಿಮಾನಗಳಿಂದ ಸುರಿಸಲ್ಪಡುವ ಬಾಂಬುಗಳ ಮಳೆಯಿಂದ ರಕ್ಷಿಸಿಕೊಳ್ಳಲು ವಿವಿಧ ಯುಕ್ತಿಪ್ರಯುಕ್ತಿಗಳು ನಡೆಯುತ್ತಿವೆ. ಆದರೂ ಬಾಂಬುಗಳಿಂದ ಸಂಪೂರ್ಣವಾಗಿ ಪಾರಾಗುವ ಹಂಚಿಕೆಯು ಯಾರಿಗೂ ಸಿದ್ಧಿಸಿಲ್ಲ. ಮಿಕ್ಕ ನಾಗರಿಕರ ಅವಸ್ಥೆ ಏನೇ ಆಗಲಿ, ಸೈನಿಕರಾದರೂ ಬಾಂಬಿನಿಂದ ಉಳಿಯಬೇಕಲ್ಲವೇ ? ಅದಕ್ಕೆ ಫ್ರಾನ್ಸ ಇಂದು ಎರಡುನೂರು ಮೈಲುಗಳ ವರೆಗೆ ಗುಪ್ತದುರ್ಗಗಳನ್ನು ಕಟ್ಟಿದೆ. ಆ ದುರ್ಗಗಳು ಅತ್ಯಾಧುನಿಕವೆನಿಸುವ ವಿಸ್ಫೋಟಗಳಿಗೂ ಜಗ್ಗುವಂತಿಲ್ಲವಂತೆ !

ಫ್ರಾನ್ಸಿನ ಗುಪ್ತ ದುರ್ಗಗಳು

ಫ್ರಾನ್ಸಿನ ಪೂರ್ವತೀರದ ಮೇಝ್ ಮತ್ತು ವಿಸೆನ್‌ಬರ್ಗನ ನಡುವಿನ ಜಿಲ್ಲೆಯ ಭೂಗರ್ಭದಲ್ಲಿವೆ ಆ ಗುಪ್ತ ದುರ್ಗಗಳು. ಮೇಲಿನಿಂದ ನೋಡುವವರಿಗೆ ಅದೊಂದು ಶಾಂತವಾದ ವ್ಯವಸ್ಥಿತವಾದ ಹಳ್ಳಿಯಂತೆ ತೋರುತ್ತದೆ. ಸುಂದರ ಮಾರ್ಗಗಳು, ಇಬ್ಬದಿಗಳಲ್ಲಿ ಸಾಲುಮರಗಳು, ಅಂಗಡಿಗಳು, ಹೊಲಗಳು, ಕೂಲಿಕಾರರು ಇದಿಷ್ಟು ಆ ದೃಶ್ಯ. ಕಟ್ಟನಲ್ಲಿ ಕಾವಲಿನ ಸಿಪಾಯಿಗಳು. ಆದರೆ ಒಂದು ಹ.ಕುಂಬಿದ ಕೂಡಲೆ ಗಿಡಗಳೆಲ್ಲವೂ ಭೂಗತವಾಗುವವು ! ಅವುಗಳ ಸ್ಥಾನದಲ್ಲಿ ಭಯಂಕರವಾದ ತೋಫುಗಳ ಬಾಯಿಗಳು ವ್ಯಕ್ತವಾಗುವವು ! ಗಿರಣಿಯು ಒಂದು ಸಲ ಕೂಗಿದೊಡನೆಯಿತು ! ಬೇರೆಬೇರೆ ಕೆಲಸಗಳಲ್ಲಿರುವ ವಿವಿಧ ವೇಷದ ಜನರೆಲ್ಲ ಸೈನಿಕರಾಗಿ ಮಾರ್ಪಟ್ಟು ಭೂಗರ್ಭಕ್ಕಿಳಿದು ತಮ್ಮ ನಿಯಮಿತ ಸ್ಥಾನಕ್ಕೆ ಹೋಗಿ ಸಿದ್ಧರಾಗುವರು !

ಆ ಗುಪ್ತದುರ್ಗಗಳು ೧೦೦೦ ಫೂಟಿನಷ್ಟು ಆಳವಾಗಿವೆ. ಒಂದು ನಿಮಿಷದಲ್ಲಿ ಮೇಲಿನ ನೆಲವೆಲ್ಲ ಬರಿ ತೋಫುಗಳ ಬಾಯಿಗಳಿಂದ ಮಾಡಲಾಗಿದೆಯೆಂದು ವ್ಯಕ್ತವಾಗುವದು. ಮತ್ತೊಂದು ನಿಮಿಷದಲ್ಲಿ ಅತ್ತಲಿತ್ತಲಿನ ಗೋಡೆಗಳುರುಳಿ ನೀರಿನ ಪ್ರವಾಹವು ಹರಿದು ನಡೆದುಬರುವ ವೈರಿಸೈನಿಕರನ್ನೂ ಅವರ ಶಸ್ತ್ರಾಸ್ತ್ರ ವಿಷತೈಲಗಳನ್ನೂ ಕೊಚ್ಚಿಕೊಂಡು ಹೋಗುವದು ! ಈ ಗುಪ್ತ ದುರ್ಗದ ರಚನೆಗೆ ಫ್ರಾನ್ಸು ೬ ಕೋಟಿ ಪೌಂಡುಗಳನ್ನು ವೆಚ್ಚಿಸಿದೆ.

ಮೇಲಿನಿಂದ ಬಾಂಬುಗಳ ಮೂಲಕ ಆಗುವ ವಿಷವಾಯುಗಳ ಅನಾಹುತವನ್ನೂ ಬಲು ಯುಕ್ತಿಯಿಂದ ತಡೆಗಟ್ಟುವ ವ್ಯವಸ್ಥೆಯಿದೆ. ನೂರಾರು ಮೈಲುಗಳ ದೂರದಿಂದ ಗಾಳಿಯನ್ನು ಎಳೆದುಕೊಂಡು ಶುದ್ಧೀಕರಿಸಿ ಸೈನಿಕರಿಗೆ ಪೂರೈಸುವ ಶುದ್ಧೀಕರಣ ಯಂತ್ರಗಳೂ ಭೂಗರ್ಭದಲ್ಲಿ ಸ್ಥಾಪಿತವಾಗಿವೆ. ಮತ್ತು ಯಂತ್ರಗಳ ಮೂಲಕವೇ ಭೂಪ್ರದೇಶದ ಗಾಳಿಯ ಒತ್ತಡಕ್ಕಿಂತ ದುರ್ಗಗಳೊಳಗಿನ ಒತ್ತಡವನ್ನು ಹೆಚ್ಚಾಗಿರಿಸುವದರಿಂದ ಹೊರಗಿನ ವಿಷವಾಯುವು ದುರ್ಗವನ್ನು ಪ್ರವೇಶಿಸುವದೇ ಇಲ್ಲ. ದುರ್ಗದ ಮೇಲುಚಪ್ಪರವು ಅತ್ಯಾಧುನಿಕ ವಿಜ್ಞಾನದಿಂದ ಸಿದ್ಧವಾದ ಆರು ಮೊಳ ದಪ್ಪವಾದ ಕಾಂಕ್ರೀಟಿನಿಂದ ಮಾಡಲ್ಪಟ್ಟಿದ್ದು ಎಂಥ ಭಯಂಕರವಾದ ಬಾಂಬಿನಿಂದಲೂ ಒಡೆಯುವಂತಿಲ್ಲ. ದುರ್ಗದಲ್ಲಿ ಪ್ರತಿ ೧೫೦ ಫೂಟಿನ ಅಂತರದಲ್ಲಿ ಅನೇಕ ತಿಂಗಳುಗಳ ವರೆಗೆ ಸಾಲುವಷ್ಟು ಯುದ್ಧಸಾಮಗ್ರಿಗಳ ಸಂಗ್ರಹವಿದೆ. ಅಲ್ಲದೆ ಆಸ್ಪತ್ರೆಗಳೂ, ಆಹಾರ ಸಂಗ್ರಹವೂ, ರೇಲ್ವೆ ಮಾರ್ಗಗಳೂ ಇವೆ.

ಜರ್ಮನಿಯ ಅಧಿಕಾರಿಗಳು

ಬರ್ಲಿನಿನ ಕಥೆಯಿದು. ಇಬ್ಬರು ಇನ್‌ಸ್ಪೆಕ್ಟರರು ಒಂದು ಹೊಲಕ್ಕೆ ಹೋದರು. ಅಲ್ಲಿಯ ಒಕ್ಕಲಿಗನಿಗೆ 'ನಿನ್ನ ಕೋಳಿಗಳಿಗೆ ಏನು ತಿನ್ನಿಸುತ್ತೀಯೋ' ಎಂದು ಕೇಳಿದರು. ಅವನು 'ಕಾಳು' ಎಂದು ಉತ್ತರ ಕೊಟ್ಟದ್ದಕ್ಕೆ ಸಿಟ್ಟಿಗೆದ್ದು ಅವರು 'ನೀನು ರಾಷ್ಟ್ರದ ಆಹಾರಸಾಮಗ್ರಿಯನ್ನು ಹಾಳುಮಾಡುತ್ತೀರಿ. ನಿನಗೆ ೩೦೦ ಮಾರ್ಕ್ಸ್ ದಂಡ !' ಎಂದರು.

ಹದಿನೈದು ದಿನಗಳ ನಂತರ ಅವರು ಅದೇ ಒಕ್ಕಲಿಗನಲ್ಲಿಗೆ ಹೋಗಿ ಅದೇ ಪ್ರಶ್ನೆಯನ್ನು ಕೇಳಿದರು. ಆದಕ್ಕೆ ಅವನು ಜಾಣನಂತೆ 'ಬಟಾಟೆಯ ಸಿಪ್ಪೆಗಳನ್ನು ಕೊಡುತ್ತಿದ್ದೇನೆ' ಎಂದನು. ಇದರಿಂದ ಅವರು ಕೋಪಗೊಂಡು 'ಜರ್ಮನ ಸೈನಿಕರ ಆಹಾರವಾದ ಹಂದಿಗಳನ್ನು ನೀನು ಸೊರಗಿಸುವಿ. ಆ ಹಂದಿಗಳು ಬಟಾಟೆಯ ಸಿಪ್ಪೆಗಳನ್ನೆ ತಿನ್ನುವವು! ೧೦೦ ಮಾರ್ಕ್ಸ್ ದಂಡ' ಎಂದರು.

ಮೂರನೆಯ ಸಲ ಒಕ್ಕಲಿಗನು ಚನ್ನಾಗಿ ಬುದ್ಧಿ ಕಲಿತಿದ್ದ. 'ಈಗ ನಾನು ಕೋಳಿಗಳಿಗೆ ಏನನ್ನೂ ತಿನ್ನಿಸುವದಿಲ್ಲ. ಅವುಗಳ ಹೆಸರಿನಲ್ಲಿ ದಿನಕ್ಕೊಂದು ಮಾರ್ಕಿನಂತೆ ಲೆಕ್ಕದಲ್ಲಿ ಜಮಾ ಹಚ್ಚುತ್ತೇನೆ' ಎಂದನು.

ಸ್ಪಂಜುಗಳ ಹುಟ್ಟು

ಸ್ಪಂಜೆಂದರೆ ಒಂದು ಜಲಪ್ರಾಣಿಯ ಅಸ್ಥಿಪಂಜರವೆಂದರೆ ಸ್ಪಂಜನ್ನು ಉಪಯೋಗಿಸುವವರಿಗೆ ಅಸಹ್ಯವೆನಿಸಬಹುದು. ಆದರೇನು ಮಾಡುವುದು ಅದು ಎಲುಬಿನ ಗೂಡೇ ಎಂಬುದು ನಿಜಸಂಗತಿ. ಗ್ರೀಕ ನಾಗರಿಕತೆಯ ಕಾಲದಲ್ಲಿಯೂ ಸ್ಪಂಜನ್ನು ಉಪಯೋಗಿಸುತ್ತಿದ್ದರು. ರೋಮದ ಸೈನಿಕರು ಅಪಾಯಗಳಿಂದ ತಪ್ಪಿಸಿಕೊಳ್ಳಲಿಕ್ಕೆ ಮೊಣಕಾಲ ಮೇಲೆ ಸ್ಪಂಜನ್ನು ಕಟ್ಟಿಕೊಳ್ಳುತ್ತಿದ್ದರು. ಈಗ ಸ್ನಾನದ ವೇಳೆಯಲ್ಲಿ ಮೈಯುಜ್ಜುವದಕ್ಕೂ ಬೇನಿಗರ ಆರೈಕೆಯಲ್ಲಿ, ಉಡಿಗೆಗಳೊಳಗೆ ತುಂಬುವುದಕ್ಕೂ, ಉಪಯೋಗಿಸುವರು.

ಸ್ಪಂಜು 'ಪೊರಿಫೆರಾ' ಎಂಬ ಜಾತಿಯ ಜಲಪ್ರಾಣಿಯ ಎಲುಬಿನ ಗೂಡಾಗಿದೆ. ಸಮುದ್ರ ತಳದಲ್ಲಿ ಆ ಪ್ರಾಣಿಗಳಿರುತ್ತವೆ. ಅವು ಕಂದುಬಣ್ಣದ ಮಾಂಸದ ಮುದ್ದೆಯಂತಿರುತ್ತವೆ. ಅವುಗಳ ಹೊರಮೈಯಲ್ಲಿ ಅನೇಕ ಉಸುರಿನ ಕೊಳವೆಗಳಿರುತ್ತವೆ. ಸ್ಪಂಜಿನಲ್ಲಿ ಕಾಣುವ ತೂತುಗಳೇ ಆ ಉಸುರು ಕೊಳವೆಗಳು. ಆ ಪ್ರಾಣಿಯು ಚಿಕ್ಕದಿರುವಾಗ ಈಸುತ್ತ ಹೋಗಿ ಗಲಗುಗಳ ಕಡ್ಡಿಗೆ ಇಲ್ಲವೆ ಹವಳದ ಗಡೆಗಳಿಗೆ ಅಂಟಿಕೊಂಡು ಮುಂದೆ ಸಾಯುವ ವರೆಗೆ ಅಲ್ಲಿಯೇ ಇರುತ್ತದೆ. ಅದು ನಿರ್ಜೀವವಾದ ಮೇಲೆ ಸಮುದ್ರದ ಮೇಲ್ಭಾಗದಲ್ಲಿ ತೇಲುತ್ತ ದಡವನ್ನು ಸೇರುವದು. ತೆರೆಗಳ ಹೊಡೆತದಿಂದ ಆ ಪ್ರಾಣಿಯ ಮಿಕ್ಕೆಲ್ಲ ವಸ್ತುಗಳೂ ತೊಳೆದು ಹೋಗಿ ಬರಿ ಅಸ್ಥಿಪಂಜರವಷ್ಟೆ ಉಳಿಯುವದು. ವ್ಯಾಪಾರಿಗಳು ಅವನ್ನು ಸಂಗ್ರಹಿಸಿ ಕೃತ್ರಿಮವಾಗಿ ಅವನ್ನು ಇನ್ನೂ ಹೆಚ್ಚು ಮೃದುವಾಗುವಂತೆಯೂ ಬೆಳ್ಳಗಾಗುವಂತೆಯೂ ಮಾಡುವರು. ಪೂರ್ವಕಾಲದಲ್ಲಿ ಸಮುದ್ರತೀರದಲ್ಲಿ [illegible]ತ್ತಿರುವ ರೂಪದಲ್ಲಿಯೆ ಸ್ಪಂಜುಗಳನ್ನು ಉಪಯೋಗಿಸುತ್ತಿದ್ದರು.

ಆಸ್ಟ್ರೇಲಿಯದಲ್ಲಿ ಭಾರತದ ಕೋಣಗಳು

ಉತ್ತರ ಆಸ್ಟ್ರೇಲಿಯದಲ್ಲಿ ಕೋಣನ ಬೇಟೆ[illegible] ಉದ್ಯೋಗವೇ ಆಗಿದೆ. ಏಕೆಂದರೆ ಅಲ್ಲಿಯ ಒಂ[illegible] ಕೋಣದ ತೊಗಲು [illegible] ೧೨೦ ಪೌಂಡುಗಳಷ್ಟು [illegible]ತ್ತವೆ. ಅದನ್ನು ಮಾ[illegible] ಒಂದು ಪೌಂಡಿಗೆ [illegible] ಸಿಗುತ್ತದೆ! ಆ ಕೋ[illegible] ತೊಗಲು ಓವರ್‌ಕೋಟ, ರಗ್ಗು ಮುಂತಾದ [illegible]ಗಳನ್ನು ನಿರ್ಮಿಸುವುದರಲ್ಲಿ ಉಪಯುಕ್ತವಾಗಿ[illegible]ಲನ್ನು ಹನ್ನೆರಡು ಪದರಾಗಿ ಸೀಳಿದರೂ ದಪ್ಪ[illegible] ರಕ್ಷೆಗಳನ್ನು ಮಾಡಬಹುದು. ಮಿ. ಜೋಸೆಫ [illegible] ಹತ್ತು ವರ್ಷಗಳಲ್ಲಿ ೨೭೦೦೦ ಕೋಣಗಳನ್ನು [illegible] ಇಂದು ಕೋಟ್ಯಾಧೀಶನಾಗಿದ್ದಾನೆ.

ಆ ಕೋಣಗಳೆಂದರೆ ಕಾಡು ಕೋಣಗಳ[illegible] ಕೋಣಗಳೆ. ಆದರೂ ಆಸ್ಟ್ರೇಲಿಯದ ಕಾಡುಗ[illegible] ರಾಜರಿಗಿಂತ ಬಲಿಷ್ಠವಾಗಿವೆ. ಅವು ಗುಂಪಾಗಿ [illegible]ತ್ತವೆ. ಸಾವಿರಾರು ಕೋಣಗಳು ಕೂಡಿ ಓಡಹತ್ತಿ[illegible] ಸುತ್ತಲಿನ ಭೂಮಿ ನಡುಗುತ್ತದೆ; ಅವುಗಳ [illegible] ಗುಡುಗಿನಂತೆ ಕೇಳುವದು. ನಮ್ಮಲ್ಲಿ ಚೆನ್ನಾ[illegible] ಒಂದು ಕೋಣದ ಇಮ್ಮಡಿಗಿಂತ ಅವು ಹೆಚ್ಚಾ[illegible]ವಾಗಿರುತ್ತವೆ! ಒಂದೊಂದು ಕೋಡು ಹತ್ತು [illegible]ಗಳಷ್ಟು ಉದ್ದವಾಗಿರುತ್ತದೆ. ಅವುಗಳನ್ನು ಬೇ[illegible]ವದು ಸುಲಭವಲ್ಲ. ಬಂದೂಕಿನಿಂದಲೇ ಅವನ್ನು [illegible] ರಾದರೂ ಆದಕ್ಕೂ ಕೌಶಲ್ಯ ಬೇಕು. ಸಿಕ್ಕಸಿಕ್ಕ[illegible] ತಗಲಿದರೆ ಅವಕ್ಕೆ ಇರುವೆ ಕಡಿದಷ್ಟು ನೋವಾ[illegible] ಮತ್ತು ಸ್ವಲ್ಪ ಗಾಯವಾಗಿ ಅವೇನಾದರೂ [illegible] ನಿಂತವೋ ಬೇಟೆಗಾರನನ್ನು ಸಾಯುವವರೆಗೆ [illegible] ಇಲ್ಲವೆ ತಾವಾದರೂ ಸಾಯಬೇಕು.

ಇನ್ನು ಆ ಕೋಣಗಳೆಲ್ಲ ನಮ್ಮ ಭಾರತದವ[illegible] ಹೇಳಿದರೆ ಆಶ್ಚರ್ಯವಾಗಬಹುದು. ಈಗ ನೂರ[illegible]ಗಳ ಹಿಂದೆ ಉತ್ತರ ಆಸ್ಟ್ರೇಲಿಯದ ಸಮುದ್ರ [illegible]

ಒಂದು ಆಂಗ್ಲ ಸೈನಿಕರ ಪಾಳೆಯವಿತ್ತು. ಇಲ್ಲಿಗೆ ಭಾರತೀಯ ನಾವಿಕರು ವ್ಯಾಪಾರಕ್ಕಾಗಿ ಬರುತ್ತಿದ್ದರು. ಅವರು ಸೈನಿಕರ ಆಹಾರಕ್ಕಾಗಿ ಕೋಣಗಳನ್ನೂ ತರುತ್ತಿದ್ದರು. ಕೆಲವು ವರ್ಷಗಳ ನಂತರ ಆಂಗ್ಲ ಸೈನಿಕರು ಅಲ್ಲಿಂದ ಹೊರಟು ಹೋಗುವಾಗ ಆ ಕೋಣಗಳನ್ನು ಅಡವಿಗೆ ಹೊಡೆದು ಬಿಟ್ಟರು. ಅವು ಸಾಯುವವೆಂದು ಅವರು ತಿಳಿದಿದ್ದರು. ಆದರೆ ಇಂದಿಗೆ ಅವು ಸಾವಿರಾರು ಪಾಲು ಹೆಚ್ಚಾಗಿ ಬೆಳೆದು ಬಿಟ್ಟಿವೆ.

ಮಾತಿನ ಗಂಡಾಂತರ-ಸೂಚಕ

ನಮ್ಮ ದೇಶದಲ್ಲಿ ಮನೆಗೆ ಬೆಂಕಿ ಹತ್ತಿದ ಕೂಡಲೆ ಪೋಲೀಸರು ತಮ್ಮ ಸೀಟಿಗಳನ್ನು ಊದುತ್ತ ಓಣಿ ಓಣಿಗೆ ಓಡುವರು. ಅದು ಜನರನ್ನು ಸಹಾಯಕ್ಕೆ ಕರೆಯಲಿಕ್ಕೆ. ಒಬ್ಬ ಪೋಲೀಸನ ಗಂಡಾಂತರ ಸೂಚಕ ಸೀಟಿ ಕೇಳಿದ ಇನ್ನೊಬ್ಬ ಪೋಲೀಸನೂ ಹಾಗೇ ಸೀಟಿ ಹೊಡೆಯುವನು. ಇದರಿಂದ ಜನರಿಗೆ ಗಂಡಾಂತರದ ಕಲ್ಪನೆ ಬರುವುದಾದರೂ ಎಲ್ಲಿ ಏನಾಗಿದೆಯೆಂಬುದು ಒಮ್ಮೆಲೆ ತಿಳಿಯುವುದಿಲ್ಲ. ಸೀಟಿಯ ಸೂಚನೆಗಳಲ್ಲಿ ಬೇಕಾದಷ್ಟು ಸುಧಾರಣೆಯಾಗಿದ್ದರೂ ಅನೇಕ ಸಲ ಸೂಚನೆಗಳ ತಪ್ಪು ತಿಳುವಳಿಕೆಯಾಗುವದುಂಟು. ಅದಕ್ಕೀಗ ಸ್ಪಷ್ಟವಾಗಿ ಮಾತಾಡುವ ಒಂದು ಗಂಡಾಂತರ ಸೂಚಕವನ್ನು ಶೋಧಿಸಿದ್ದಾರೆ. ಅದರ ಶೋಧಕನು ಎಂಟು ವರ್ಷಗಳ ಪರಿಶ್ರಮದಿಂದ ಅದನ್ನು ಸಿದ್ಧಗೊಳಿಸಿದ್ದಾನೆ. ಬೆಂಕಿ ತಗಲಿದ ಮನೆಗೆ ಆ ಸೂಚಕವನ್ನು ಹಚ್ಚಿದರೆ ಅದು ಉಚ್ಚ ಸ್ವರದಲ್ಲಿ ಆ ಓಣಿಯ ಮತ್ತು ಮನೆಯ ಹೆಸರನ್ನೇ ಕೂಗಿ ಹೇಳುವದು. ಅದಕ್ಕೆ 'ಲೌಡಸ್ಪೀಕರ್ಸ್' ಹಚ್ಚಿ ಮನೆಯ ಎಲ್ಲ ದಿಕ್ಕುಗಳಿಂದ ಕೂಗು ಹೊರಡುವಂತೆ ಮಾಡಬರುವುದು. ಇದರಿಂದ ಬೆಂಕಿ ಆರಿಸುವ ಯಂತ್ರವನ್ನು ನಿರ್ದಿಷ್ಟ ಸ್ಥಾನಕ್ಕೆ ಬಹು ಬೇಗ ಒಯ್ಯಲು ಅನುಕೂಲವಾಗಿದೆ.

ಬೆಚ್ಚಗಿನ ತೊಡಿಗೆಗಳು

ಹಿಂದಿನಕಾಲದಲ್ಲಿ ದುಡ್ಡಿದ್ದವರು ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಾರೆ. ಒಂದರ ಮೇಲೊಂದರಂತೆ ೩—೪ ಬಟ್ಟೆಗಳನ್ನು ಧರಿಸುವವರೂ ಇದ್ದಾರೆ. ಆದರೆ ಕುಟುಂಬ ದೊಡ್ಡದಾಗಿರುವ ಮನೆಯ ಯಜಮಾನನಿಗೆ, ಪ್ರತಿಯೊಬ್ಬರಿಗೂ ಅಷ್ಟು ಬೆಲೆಯ ಬಟ್ಟೆ ಹೆಚ್ಚಾಗಿ ... ಗಳನ್ನು ಹೊಲಿಸಲಾಗುವುದೇ ! ಕಂಬಳಿ ಹೊದ್ದುಕೊಂಡು ತಿರುಗುವುದು ನಾಗರಿಕತೆಯಲ್ಲ ! ಅದಕ್ಕಾಗಿ ಈಗ ಸ್ವಯಂ ಉಷ್ಣವಾಗಿರುವ ತೊಡಿಗೆಗಳ ವ್ಯವಸ್ಥೆಯನ್ನು ಮಾಡಿದ್ದಾರೆ ವಿಜ್ಞಾನಿಗಳು. ಅಂತಹ ತೊಡಿಗೆಗಳು ಪ್ರಚುರವಾದರೆ ಒಂದೇ ಬಟ್ಟೆ ಹಾಕಿಕೊಂಡರೂ ಚಳಿ ತಗಲುವುದಿಲ್ಲ. ಆ ಬಟ್ಟೆಯೊಳಗೆಲ್ಲ ವಿದ್ಯುತ್‌ಶಕ್ತಿಯ ಸಹಾಯದಿಂದ ಉಷ್ಣತೆ ಹರಡುವ ವ್ಯವಸ್ಥೆಯಿರುತ್ತದೆ. ಬಟ್ಟೆ ತೊಟ್ಟುಕೊಂಡು ವಿದ್ಯುತ್ತಿನ ಗುಂಡಿ ಒತ್ತಿದರಾಯಿತು. ವಿದ್ಯುತ್ ಶಕ್ತಿಯ ಸಂಗ್ರಹವನ್ನು ಜೇಬಿನಲ್ಲೆ ಇಟ್ಟುಕೊಂಡಿರಬೇಕು. ಇದೇನೂ ಅಷ್ಟು ಸೋಜಿಗವಲ್ಲ. ಆದರೆ ವಿತಂತು (wireless) ವಿನಿಂದ ಉಷ್ಣತೆಯನ್ನು ಬೇಕಾದಲ್ಲಿಗೆ ಸಾಗಿಸುವ ಪ್ರಯತ್ನ ನಡೆಸಿದ್ದಾರೆ ವಿಜ್ಞಾನಿಗಳು. ಅದು ಸಾಧಿಸಿತೆಂದರೆ ಇನ್ನೂ ಮೋಜು. ಆಗ ವಿತಂತುವಿನಿಂದ ವಾತಾವರಣದಲ್ಲಿ ಉಷ್ಣತೆಯನ್ನು ಹರಡುತ್ತಾರೆ. ಮನುಷ್ಯರು ತಮ್ಮ ತಲೆಯ ಮೇಲೆ ಒಂದು ಗ್ರಾಹಕ (Receiver) ಇಟ್ಟುಕೊಂಡು ಹೊರಬಿಷ್ಟರಾಯಿತು ! ಗ್ರಾಹಕವು ವಾತಾವರಣದ ಉಷ್ಣತೆಯನ್ನು ಗ್ರಹಿಸಿ ಮನುಷ್ಯನ ದೇಹಕ್ಕೆ ಪೂರೈಸುತ್ತದೆ !

ಬಲ್ಗೇರಿಯದಲ್ಲಿ ಸೂರ್ಯೋಪಾಸಕರು

ಸೂರ್ಯನಮಸ್ಕಾರ-ಪೂಜೆಗಳು ಭಾರತೀಯರು ಸಾವಿರಾರು ವರ್ಷಗಳಿಂದ ಅನುಸರಿಸುತ್ತಿದ್ದ ವಿಷಯ. ಮತ್ತು ಅವುಗಳಿಂದ ಇಹಪರ ಸುಖಗಳೆರಡೂ ಸಾಧಿಸುತ್ತವೆಂದು ಭಾರತೀಯರು ನಂಬುತ್ತಾರೆ. ಸೂರ್ಯನಿಗೆ ಓಷಧೀಶನೆಂದೂ ಅನ್ನುತ್ತಾರೆ. ಅವನ ಉಪಾಸನೆಯಿಂದ ಅನೇಕ ರೋಗಗಳು ನಾಶವಾಗುವವೆಂದು ಅವರ ಅಭಿಪ್ರಾಯ. ಪೂರ್ವದ ಜನಾಂಗಗಳಿಗೆ ಇದೇನೂ ವಿಶೇಷವಲ್ಲ, ಆದರೆ ಇತ್ತೀಚೆ ಸೂರ್ಯೋಪಾಸನೆಯ ಮಹತ್ವವು ಪಶ್ಚಿಮ ದೇಶಗಳಲ್ಲಿಯೂ ಹರಡುತ್ತಿದೆ. ಬಲ್ಗೇರಿಯದಲ್ಲಿ ಈಗಾಗಲೆ [illegible] ಸೂರ್ಯೋಪಾಸನೆಯನ್ನು ಕೈಕೊಂಡಿದ್ದಾರೆ. ಅವರ ಮುಂದಾಳು ಪ್ರೊಫೆಸರ್ ಡ್ಯಾನೊಫ್ ಎಂಬ ವೈದ್ಯನಾಗಿದ್ದಾನೆ. ಅವನು ಸೂರ್ಯೋಪಾಸಕರಿಂದೊಡಗೂಡಿ ಕಾಡಿನಲ್ಲಿ ಸೂರ್ಯದುರ್ಗವೆಂಬ ಸಂಘವನ್ನೆ ಸ್ಥಾಪಿಸಿದ್ದಾನೆ. ಆ ಸಂಘದಲ್ಲಿ ವಿಶೇಷವಾಗಿ ವೈದ್ಯರೂ, ವಕೀಲರೂ, ಶಿಕ್ಷಕರೂ ಇರುವರಲ್ಲದೆ ಗಂಡಸರಿಗಿಂತ ಹೆಂಗಸರೇ ... ಆಶ್ಚರ್ಯಕರ ! ಅವರಲ್ಲಿ ಅನೇ

ಕರು ನಗರಗಳಲ್ಲಿಯೆ ಇರುತ್ತಿದ್ದರೂ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಉಪಾಸನೆಗಾಗಿ ಸೂರ್ಯದುರ್ಗಕ್ಕೆ ತೆರಳು ತ್ತಾರೆ. ಅವರೆಲ್ಲರೂ ಮದ್ಯ, ಮಾಂಸ, ತಂಬಾಕು, ಮತ್ತು ಉತ್ತೇಜಕ ಪೇಯಗಳನ್ನು ಪೂರ್ಣವಾಗಿ ಬಿಟ್ಟವರಾಗಿ ದ್ದಾರೆ. ದೂರ ದೂರ ಹೋಗಬೇಕಾದರೂ ಅವರು ವಾಹನ ಗಳನ್ನೇರದೆ ಕಾಲ್ನಡಿಗೆಯಿಂದಲೆ ಹೋಗುತ್ತಾರೆ. "ಬೆಳಿಗ್ಗೆ ಬೇಗನೆದ್ದು ತಾಲಬದ್ಧವಾಗಿ ಸೂರ್ಯಪ್ರಕಾಶದಲ್ಲಿ ಆದಷ್ಟು ಕಡಿಮೆ ಉಡಿಗೆಯುಳ್ಳವರಾಗಿ ವ್ಯಾಯಾಮ ಮಾಡಿದರೆ ದಿನವೆಲ್ಲವೂ ಸೌಖ್ಯದಲ್ಲಿ ಕಳೆಯುವದು; ನಿದ್ದೆ ಚನ್ನಾಗಿ ಬರುವದು; ಮನಸ್ಸು ಚುರುಕಾಗುವದು; ಬೇನೆ ಬೇಸರಿಕೆ ಗಳು ಎಂದೂ ಬಾರವು; ದೇಹಮನಗಳೆರಡೂ ಸಮರಸವಾಗಿ ಮಡಿಯುವದರಿಂದ ಅವರೆಂದೂ ಕಸುವುಗುಂದುವುದಿಲ್ಲ." ಎಂಬದಾಗಿ ಆ ಸೂರ್ಯೋಪಾಸಕರು ಉಪಾಸನೆಯ ಮಹತ್ವವನ್ನು ವರ್ಣಿಸುವರು. ದಿನಾಲು ಬೆಳಿಗ್ಗೆ ಮೊದಲು ಸೂರ್ಯದೇವನ ಪ್ರಾರ್ಥನೆ; ನಂತರ ವ್ಯಾಯಾಮ; ನಂತರ ಸೂರ್ಯಧ್ಯಾನ ಇವು ಅವರ ನಿತ್ಯ ಉಪಾಸನೆಯ ಕಾರ್ಯ ಗಳಾಗಿವೆ.

ಶಕ್ತಿಯ ಶೋಧ

ಈಗ ಜಗತ್ತಿನ ವಾಹನ-ಯಂತ್ರಗಳ ಶಕ್ತಿಯನ್ನು ಕಲ್ಲಿದ್ದಲು ಎಂಣೆಗಳಿಂದ ಹುಟ್ಟಿಸುತ್ತಿದ್ದಾರೆ. ಇನ್ನು ನೂರು ವರ್ಷಗಳಲ್ಲಿ ಜಗತ್ತಿನ ಆ ಉರವಲಗಳೆ ತೀರಿ ಹೋಗಬಹುದೆಂದು ತಜ್ಞರು ತರ್ಕಿಸುತ್ತಿದ್ದಾರೆ. ಹಾಗಾದರೆ ಮುಂದೇನು ಗತಿ ಎಂಬುದೇ ಈಗ ವಿಜ್ಞಾನಿಗಳ ಸಮಸ್ಯೆ. ಅಮೇರಿಕೆಯ ಸಂಯುಕ್ತ ಪ್ರಾಂತಗಳಲ್ಲಿ ವಿಜ್ಞಾನಿಗಳೆಲ್ಲ ಸೇರಿ ಹೊಸ ಶಕ್ತಿಭಾಂಡಾರಗಳನ್ನು ಶೋಧಿಸುತ್ತಿದ್ದಾರೆ. ಅದಕ್ಕಾಗಿ ಇಪ್ಪತ್ತು ಕೋಟಿ ಪೌಂಡುಗಳನ್ನು ವೆಚ್ಚಿಸಬೇಕೆಂದು ಅಲ್ಲಿಯ ಸರಕಾರಗಳು ನಿಶ್ಚಯಿಸಿವೆ. ಈ ಶೋಧಗಳಿಗೆ ಧಾರಾಳವಾಗಿ ಸಹಾಯ ಮಾಡುತ್ತಿರುವ ವ್ಯಕ್ತಿಯೆಂದರೆ ಜಗತ್ಪ್ರಸಿದ್ಧ ಹೆನ್ರಿ ಫೋರ್ಡನು. ಅವನು ಡೆಟ್ರಾಯಿಟ್ಟನಲ್ಲಿ ಒಂದು ಪ್ರಯೋಗಶಾಲೆಯನ್ನು ಸ್ಥಾಪಿಸಿದ್ದಾನೆ. ಈಗಾಗಲೇ ಶೋಧಗಳು ಬಹುವಾಗಿ ಮುಂದುವರಿದಿವೆ. ಸೋಯಾಬಿನ್ನಿನಿಂದ ಪೆಟ್ರೋಲ ಹೊರಡುವದೆಂದು ಈಗ ಕಂಡುಬಂದಿದೆ. ಹೆನ್ರಿ ಫೋರ್ಡನಂತೆಯೇ ಮಿ. ಚಾರ್ಲಸ್ ಕೆಟರಿಂಗ ಎಂಬ ಮತ್ತೊಬ್ಬ ಮೋಟರ ಕಂಪನಿಯ ಯಜಮಾನನು ಬೇರೊಂದು ಪ್ರಯೋಗಶಾಲೆಯನ್ನು ಹೂಡಿದ್ದಾನೆ. ಹುಲ್ಲು ಹಸುರು ಹೇಗೆ ಆಗುವುದೆಂಬುದನ್ನು ನಾನು ಕಂಡುಹಿಡಿಯಲು ಸಮರ್ಥನಾ[illegible] ಶಾಶ್ವತ ಶಕ್ತಿಭಾಂಡಾರವನ್ನು ನಾನು ಹುಡುಕಿ [illegible] ಬಲ್ಲೆ ಎಂದು ಕೆಟರಿಂಗನು ಅನ್ನುತ್ತಾನೆ. ಏಕೆಂದರೆ [illegible] ಸೂರ್ಯನ ಶಕ್ತಿಯನ್ನು ಆ ಬಂಣದ ರೂಪದಲ್ಲಿ [illegible] ಡಿಸಿ ತನ್ನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಆ [illegible] ನಮಗೆ ತಿಳಿಯಿತೆಂದರೆ ನಾವು ಬೇಕಾದಾಗ [illegible] ನಿಂದಲೆ ಶಕ್ತಿಯನ್ನು ಸಂಗ್ರಹಿಸಿಟ್ಟುಕೊಳ್ಳಬಹುದು.

ಲಿಂಗ ಪರೀಕ್ಷಕ ಯಂತ್ರ

ಸ್ತ್ರೀಯು ಬಸುರಿದ್ದಾಗ ಅವಳ ಹೊಟ್ಟೆಯಲ್ಲಿದು [illegible] ಗಂಡೋ ಹೆಂಣೋ ಎಂಬ ಕುತೂಹಲವು ಆಪ್ತ[illegible] ಗೆಲ್ಲ ಇರುತ್ತದೆ. ಆ ವಿಷ[illegible] ಸಂದಿಗ್ಧವಾದ ಅನೇಕ [illegible] ಚಿಹ್ನೆಗಳನ್ನು ಅಜ್ಞ[illegible] ಹೇಳುವುದುಂಟು. ಅದು[illegible] ಯಾತ್ಮಕವಾಗಿ ಯಾವ ಲಕ್ಷಣಗಳೂ ಇನ್ನೂ ವಿಶ್ವ[illegible] ವಾಗಿಲ್ಲ. ಆದರೆ ಮಿಚಿಗಾನದ ವಿಜ್ಞಾನಿಯಾ[illegible] ವಿಲ್ಲಾರ್ಡ ಫಂಕನು ಈಗ ತತ್ತಿಯೊಳಗಿನ ಪ್ರಾ[illegible] ಗಂಡೋ ಹೆಂಣೋ ಎಂಬುದನ್ನು ನಿರ್ಧರಿಸುವ [illegible] ಸಾಧನವನ್ನು ಪರಿಶೋಧಿಸಿದ್ದಾನೆ. ಅದರಿಂದ [illegible] ದಲ್ಲಿ ತತ್ತಿಯೊಳಗಿನ ಪ್ರಾಣಿಯ ಲಿಂಗವನ್ನು [illegible] ಗೊಳಿಸಲಿಕ್ಕೂ ಬರುತ್ತದಂತೆ. ಆದರಿಂದ ಲಿಂಗ ನಿ[illegible] ಸುಲಭವಾದ ಕೆಲಸ. ಲಿಂಗ ನಿರ್ಣಯಿಸುವ ಯಂತ್ರ[illegible] ಹೊರಟ ತಂತಿಯ ಕೊನೆಗೆ ಒಂದು ಲೋಹದ [illegible] ಯಿದೆ. ಹಿಡಿಕೆಯನ್ನು ತತ್ತಿಗೆ ಮುಟ್ಟಿಸಿದ [illegible] ಯಂತ್ರವು ಲಿಂಗವನ್ನು ನಿರ್ದೇಶಿಸುತ್ತದೆ. ಲಿಂಗ[illegible] ಮಾಡಬೇಕಾದರೆ ತತ್ತಿಗೆ ವಿಶಿಷ್ಟ ರೀತಿಯಿಂದ [illegible] ತ್ತನ್ನು ತಗಲಿಸಬೇಕೆಂದು ಡಾ. ಫಂಕನು ಅನ್ನುತ್ತಾ[illegible]

ಬಿಹಾರಿನಲ್ಲಿ ಸೆರೆಮನೆಯ ಸುಧಾರಣೆ

ಬಿಹಾರಿನಲ್ಲಿ ಹೊಸ ಮಂತ್ರಿಮಂಡಲ ಬಂದಾಗಿನ[illegible] ಮನೆಗಳ ಸುಧಾರಣೆಯನ್ನು ಗುರಿಯಾಗಿಟ್ಟುಕೊಂ[illegible] ಅದರ ಫಲವಾಗಿ ಈ ಕೆಳಗಿನ [illegible] ರಣೆಗಳನ್ನು ಕೂಡಲೆ ಕೈಕೊ[illegible] (೧) ರಾಟಿಯಿಂದ [illegible] ತೆಗೆಯುವ ಉದ್ಯೋಗವು [illegible] ಗಳಲ್ಲಿ ಆರಂಭವಾಗಿದೆ.

(೨) ಅನೇಕ ವರ್ಷಗಳ ಶಿಕ್ಷೆ ಅನುಭವಿಸಿ ದುರ್ಬಲರೂ, ರೋಗಿಗಳೂ ಆದ ಸೆರೆಯಾಳುಗಳನ್ನು ವಿಶಿಷ್ಟ ನಿಯಮಗಳನುಸರಿಸಿ ಬಿಟ್ಟುಬಿಡಬೇಕೆಂದು ಅಪ್ಪಣೆಯಾಗಿದೆ.

(೩) ಸುಶಿಕ್ಷಿತರಾದ ಸೆರೆಯಾಳುಗಳು ಅಶಿಕ್ಷಿತ ಸೆರೆಯಾಳುಗಳಿಗೆ ಶಿಕ್ಷಣಕೊಡುವ ವ್ಯವಸ್ಥೆ. ಇಲ್ಲವೆ ಹೊರಗಿನ ಶಿಕ್ಷಕರಿಂದ ಶಿಕ್ಷಣ ಕೊಡಿಸುವುದು.

(೪) ಗಾಣದಿಂದ ಎಣ್ಣೆ ತೆಗೆಯುವುದು ಮುಂತಾದ ಕಠಿಣ ಕೆಲಸಗಳನ್ನು ನಿಲ್ಲಿಸುವುದು.

(೫) ಸೆರೆಯಾಳುಗಳ ಶಕ್ತಿಗೆ ನೀಗುವಂತಹ ಕೆಲಸಗಳನ್ನೆ ಕೊಡುವುದು.

(೬) ಹತ್ತಿ ಮೊದಲಾದ ಸಾಗುವಳಿಯನ್ನು ಆಧುನಿಕ ರೀತಿಯಲ್ಲಿ ಮಾಡುವುದನ್ನು ಕಲಿಸುವ ವ್ಯವಸ್ಥೆ.

(೭) ಪರ್ವ ದಿನಗಳಲ್ಲಿ ಉಪವಾಸ ಮಾಡಬೇಕೆನ್ನುವ ಸೆರೆಯಾಳುಗಳಿಗೆ ಹಾಲು ಹಣ್ಣು ತುಪ್ಪಗಳನ್ನು ಒದಗಿಸುವುದು.

(೮) ಸೆರೆಮನೆಯ ಅಡಿಗೆಯ ಮೇಲೆ ಸರಿಯಾದ ಮೇಲ್ವಿಚಾರಣೆ ಮತ್ತು ಮೇಲು ಕೀಳೆನ್ನದೆ ಎಲ್ಲರಿಗೂ ಬೇಳೆಯಲ್ಲಿ ಸಾಕಷ್ಟು ಎಣ್ಣೆಯನ್ನು ಪೂರೈಸುವುದು.

(೯) ಸೆರೆಯಾಳುಗಳ ಊಟದ ಸ್ಥಳದ ಮೇಲೆ ಚಪ್ಪರವಿರುವ ವ್ಯವಸ್ಥೆ ಮಾಡಬೇಕು. ಮಳೆಯಲ್ಲಿ ಬಿಸಿಲಲ್ಲಿ ಊಟಕ್ಕೆ ನೀಡುವುದನ್ನು ಕೂಡಲೆ ತಪ್ಪಿಸಬೇಕು.

(೧೦) ಸ್ನಾನಕ್ಕೂ ಒಗೆಯುವುದಕ್ಕೂ ಸಾಕಷ್ಟು ನೀರನ್ನು ಒದಗಿಸಬೇಕು. ಆ ಕೆಲಸಗಳಿಗೆ ಅವರಿಗೆ ಸಾಕಷ್ಟು ಸಮಯವನ್ನು ಕೊಡಬೇಕು.

(೧೧) ತಟ್ಟುಗಳ ಬದಲು ಉಣ್ಣೆಯ ಹೊದಿಕೆಗಳ ವ್ಯವಸ್ಥೆ.

---

(೧) ನಿಚ್ಚಣಿಕೆಗಾಗಿ ಪೆಟ್ಟಿಗೆಗಳನ್ನೂ, ಕುರ್ಚಿಗಳನ್ನೂ ಉಪಯೋಗಿಸಬೇಡಿರಿ.

ಸುರಕ್ಷಿತತೆಗಾಗಿ ಸೂಚನೆಗಳು

(೨) ಆಟಿಗೆಗಳನ್ನು ದಾರಿಯಲ್ಲಿ ಮೆಟ್ಟಲಿನ ಮೇಲೆ ಬಿಡಬೇಡಿರಿ.

(೩) ತಗ್ಗಾಗಿರುವ ಕಿಡಿಕೆಗಳಿಗೆ ತಂತಿಗಳನ್ನು ಬಿಗಿಸಬೇಕು.

(೪) ಮಕ್ಕಳ ಕೈಗೆ ಸಿಗುವಂತೆ ಬೆಂಕಿಪೆಟ್ಟಿಗೆ ಇಡಬಾರದು.

(೫) ಸ್ಟೋವಿನ ಮೇಲೆ ಹಿಡಿಕೆಗಳು ಹೊರಚಾಚುವಂತಹ ಪಾತ್ರೆಗಳನ್ನು ಇಟ್ಟು ಹೋಗಬಾರದು.

(೬) ಅಡಿಗೆ ಮನೆಯನ್ನು ಪರದೆಯಿಂದ ಮರೆಮಾಡಿರಿ.

(೭) ಹಾಸಿಗೆಯಲ್ಲಿ ಬೀಡಿ ಸೇದಬಾರದು.

(೮) ಚಿಂದಿ, ಕಸರುಗಳ ರಾಶಿ ಬೀಳಗೊಡಬೇಡಿರಿ.

(೯) ವಿದ್ಯುತ್ತಿನ ಗುಂಡಿಗಳನ್ನು ಒದ್ದೆಗೈಯಿಂದ ಮುಟ್ಟಬೇಡಿರಿ.

(೧೦) ಚಾಕು ಚೂರಿಗಳು ಮಕ್ಕಳಿಗೆ ಸಿಗುವಲ್ಲಿ ಇಡಬೇಡಿರಿ.

(೧೧) ಕೈಯಲ್ಲಿ ಬಾಯಲ್ಲಿ ಮೊನೆಯಾದ ವಸ್ತುಗಳನ್ನು ಹಿಡಿದು ಮಕ್ಕಳನ್ನು ಓಡಗೊಡಬೇಡಿರಿ.

(೧೨) ಒಂದು ಬೇನೆಗೆ ಬಹುದಿನಗಳ ಹಿಂದೆ ತಂದ ಔಷಧವನ್ನು ಉಪಯೋಗಿಸಬೇಡಿರಿ.



ಗ್ರಹಚಾರ, ವಿಧಿ, ಲೋಭಿ:—ಇವು ಮೂರೂ ನಾಟಕಗಳು. ಬರೆದವರು ಶ್ರೀ. ಬಿ. ಎಸ್‌. ರಾಮಸ್ವಾಮಿ ಆಯ್ಯಂಗಾರ್, ಬಿ. ಎ. ಅವರು. ಬೆಲೆ ಮೊದಲಿನವಕ್ಕೆ ೧೨ ಆಣೆ. ಕೊನೆಯ ಎರಡಕ್ಕೆ ಎಂಟೆಂಟಾಣೆ. ಪ್ರಕಾಶಕರು ನಾಟಕ ಸಾಹಿತ್ಯ ಸಂಘ ೧೨. ಬಿ. ತಂಬುಚೆಟ್ಟಿ ಬೀದಿ ಜಾರ್ಜಟೌನ್‌ ಮದರಾಸು.

ಇವು ಮೂರೂ ಸಾಮಾಜಿಕ ನಾಟಕಗಳಾಗಿವೆ. ಕನ್ನಡದಲ್ಲಿ ಸಾಮಾಜಿಕ ನಾಟಕಗಳು ಆಡುವುವೂ ಕಡಿಮೆ; ಬರೆದುವೂ ಕಡಿಮೆ. ಬರೆದವುಗಳಲ್ಲಿ ಆಡಲಿಕ್ಕೆ ಯೋಗ್ಯವಾದವುಗಳೂ ಕಡಿಮೆ. ಆಡುವವರು ಮನಸು ಮಾಡಿದರೆ ಮೇಲಿನ ಮೂರು ನಾಟಕಗಳೂ ಚನ್ನಾಗಿವೆ. ಲೋಭಿಯೆಂಬ ನಾಟಕವು ಆವಿದ್ಧವಾದರೂ, ಕೊನೆಗೊಂದು ಮದುವೆಯಿಂದ ಅದಕ್ಕೆ ಸುಕುಮಾರತೆ ಬಂದಿದೆ. 'ಗ್ರಹಚಾರ'ವೂ, 'ವಿಧಿ'ಯೂ ಸುಕುಮಾರ ನಾಟಕಗಳಾಗಿವೆ. ಲೇಖಕರ ಶೈಲಿಯಲ್ಲಿ ನೈಜತೆಯೂ, ಭಾವಪೂರ್ಣತೆಯೂ ಇವೆ. ಮೂರೂ ನಾಟಕಗಳಲ್ಲಿ ಶಿರಿವಂತರಲ್ಲಿರುವ ಲೋಭ, ಕಾರ್ಪಣ್ಯ, ವ್ಯಸನ, ಕ್ಷುಲ್ಲಕತನ ಮುಂತಾದ ದುರ್ಗುಣಗಳು ಚನ್ನಾಗಿ ವ್ಯಕ್ತವಾಗುವಂತೆ ಪಾತ್ರರಚನೆಯಾಗಿದೆ. ಮೈ ಮುರಿದು ದುಡಿಯಲಾರದ ಬಡವರ ಪೋಲಿತನ, ಮೋಸ, ಕ್ರೌರ್ಯಗಳೂ ವ್ಯಕ್ತವಾಗಿವೆ. ಅಲ್ಲದೆ ದುಃಖಿತರನ್ನು ನೋಡಿ ಮರುಗುವ, ಕಷ್ಟದಲ್ಲಿಯೂ ತಾಳ್ಮೆಯನ್ನು ತಂದುಕೊಳ್ಳಬಲ್ಲ ಧೀರ ಸ್ತ್ರೀಪುರುಷರೂ ಈ ನಾಟಕಗಳಲ್ಲಿದ್ದಾರೆ. ಇವುಗಳಲ್ಲಿ ಕೆಲವು ಕಡೆ ಅತಿಶಯೋಕ್ತಿಯೂ, ಕೆಲವು ಕಡೆ ಉದ್ದುದ್ದ ಭಾಷಣಗಳೂ ಇವೆ. ಲೇಖಕರು ಮುಂದೆ ಬರೆಯಲಿರುವ ನಾಟಕಗಳಲ್ಲಿ ಈ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಒಳಿತೆಂದು ನಮ್ಮ ಅಭಿಪ್ರಾಯ.

ಪ್ರತೀಕಾರ:—ಚಿಕ್ಕ ನಾಟಕ. ಬರೆದವರು ಶ್ರೀ ಬಿ. ಆರ್‌. ಕಾಮತ್, ಮಂಗಳೂರು. ಪುಟ ೪೫. ಬೆಲೆ. ಐದಾಣೆ.

ಮಹಾಭಾರತ ಯುದ್ಧದಲ್ಲಿ ಕೌರವರು ರಚಿಸಿದ ಚಕ್ರವ್ಯೂಹವನ್ನು ಭೇದಿಸಿ ಅಭಿಮನ್ಯುವು ಶೂರತನದಿಂದ ಹೋರಾಡುತ್ತಿರಲು ಕರ್ಣನು ಮೋಸದಿಂದ ಅವನ ಹೆಬ್ಬೆರಳನ್ನು ಕತ್ತರಿಸಿ ಅವನು ಅಸಮರ್ಥನಾಗಿ ಭೂಮಿಗುರುಳುವಂತೆ ಮಾಡುವನು. ಅಭಿಮನ್ಯುವು ನಿರ್ಬಲನಾಗಿ ಬಿದ್ದಿರುವಾಗ ಜಯದ್ರಥನು ಅವನನ್ನು ಎಡಗಾಲಿನಿಂದ ಒದ್ದು ಅಪಮಾನಗೊಳಿಸುವನು. ಮರಣೋನ್ಮುಖನಾಗಿ ಬಿದ್ದಿದ್ದರೂ ಮರುಗದ ಅಭಿಮನ್ಯುವಿಗೆ ಈ ಅಪಮಾನವನ್ನು ಸಹಿಸುವದಾಗುವದಿಲ್ಲ. ಅತ್ತ ಸಮುಸಪ್ತಕರನ್ನು ನಾಶಗೊಳಿಸಲು ಹೋದ ಅರ್ಜುನನು ತಿರುಗಿ ಬಂದಾಗ ಮಗನಾದ ಅಭಿಮನ್ಯುವಿನ ದುರವಸ್ಥೆಯನ್ನು ಕೇಳಿ ಅವನೆಡೆಗೆ ಧಾವಿಸಿ ಹೋಗುವನು. ಶೂರ ಅಭಿಮನ್ಯುವು ಎಲ್ಲ ದುಃಖವನ್ನು ಮರೆತು ತನ್ನ ಅಪಮಾನದ ಪ್ರತೀಕಾರ ಮಾಡುತ್ತೇನೆಂದು ತಂದೆಯಿಂದ ವಚನ ಪಡೆದು ಶಾಂತಿಯಿಂದ ಸಾಯುವನು. ಮುಂದೆ ಅರ್ಜುನನು ಕೃಷ್ಣನ ಸಹಾಯದಿಂದ ಜಯದ್ರಥನನ್ನು ಕೊಂದು ಮಗನಿಗಾದ ಅಪಮಾನದ ಪ್ರತೀಕಾರಮಾಡುವನು. ಈ ನಾಟಕದ ಕಥೆಯಿದು. ಇದರಲ್ಲಿ ರಸಪೋಷಣೆ ಚನ್ನಾಗಿದೆ. ಅಭಿಮನ್ಯುವು ತನಗೆ ಸಮೀಪಿಸಿರುವ ಮರಣಕ್ಕೆ ಕೂಡ ಅಂಜದೆ, ಅಪಮಾನದ ಪ್ರತೀಕಾರಕ್ಕಾಗಿ ಕಾತರಿಸುವ ದೃಶ್ಯವನ್ನು ಓದುವಾಗ ವಾಚಕರ ಕಣ್ಣಲ್ಲಿ ಖಂಡಿತವಾಗಿ ಆನಂದಾಶ್ರುಗಳು ಬರದಿರವು. ಇದರಲ್ಲಿಯ ಆನಂದ ಮತ್ತು ದುರ್ಮುಖರೆಂಬ ವಾರ್ತಾವಾಹಕರ ಮಾತುಗಳು ಹೆಚ್ಚು ಕೃತ್ರಿಮವಾಗಿ ತೋರುತ್ತವೆ. ಕೆಲವು ಕಡೆ ಕಾವ್ಯಮಯ ಭಾಷೆ ಬಂದಿರುವುದರಿಂದ ಇದು ಶ್ರಾವ್ಯ ನಾಟಕವಾಗಲು ಯೋಗ್ಯವೆಂದೆನಿಸುವದು.

ಪ್ರಪಂಚದ ಕೆಲಸಗಾರ:—ಬರೆದವರು ಶ್ರೀ ದಿನಕರ ದೇಸಾಯಿ ಎಂ. ಎ., ಎಲ್‌ಎಲ್‌. ಬಿ. ಅವರು. ಪ್ರಕಾಶಕರು 'ಸರ್ವಂಟ್ಸ್ ಆಫ್‌ ಇಂಡಿಯಾ ಸೊಸಾಯಿಟಿ ಮುಂಬಯಿ, ಪುಟ ೭೧. ಬೆಲೆ ೪ ಆಣೆ.

ಜಿನೇವದ ಅಂತರರಾಷ್ಟ್ರೀಯ ಕೆಲಸಗಾರರ ಸಂಘದವರು ಈ ಪುಸ್ತಕವನ್ನು ಕನ್ನಡದಲ್ಲಿ ಮುದ್ರಿಸುವ ಭಾರವನ್ನು ವಹಿಸಿದುದು ಕನ್ನಡದ ಸೌಭಾಗ್ಯವೆನ್ನಬಹುದು. ಕನ್ನಡದಲ್ಲಿ ಈ ಮಾದರಿಯ ಪುಸ್ತಕಗಳು ಬಹು ಕಡಿಮೆ. ಪ್ರಪಂಚದ ಸುಖಸೌಕರ್ಯಗಳನ್ನು ಹೆಚ್ಚಿಸುವುದರಲ್ಲಿ ಹಗಲಿರುಳೂ ದುಡಿದು ಹಣ್ಣಾದರೂ ಬಡತನ, ಬೇನೆ, ಅಜ್ಞಾನಗಳಿಂದ ಬಳಲುತ್ತಿರುವ ಕೆಲಸಗಾರರ ಕಷ್ಟನಷ್ಟಗಳನ್ನು ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಸುಲಭ ಶೈಲಿಯಲ್ಲಿ ಲೇಖಕರು ವರ್ಣಿ

ಸಿದ್ಧಾರೆ. ಅಲ್ಲದೆ ಆ ಜರ್ಜರಿತ, ದಲಿತ ಕೆಲಸಗಾರರ ಪರಿಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ೧೯೧೯ರಲ್ಲಿ ಜಿನೀವದಲ್ಲಿ ಸ್ಥಾಪಿಸಲ್ಪಟ್ಟ ಅಂತರರಾಷ್ಟ್ರೀಯ ಕೆಲಸಗಾರರ ಸಂಘವು ಜಗತ್ತಿನ ಎಲ್ಲ ದೇಶಗಳ ಕೆಲಸಗಾರರ ನೆಮ್ಮದಿಗಾಗಿ ಯಾವ ಚಟುವಟಿಕೆಗಳನ್ನು ನಡೆಸುತ್ತಿರುವದೆಂಬುದನ್ನು ತಿಳಿಯುವಂತೆ ವರ್ಣಿಸಿದ್ದಾರೆ. ಶ್ರೀಯುತರು ಕೆಲಸಗಾರರಿಗೆ ಸಂಬಂಧಿಸಿದ ಸಾಹಿತ್ಯವನ್ನು ಇನ್ನೂ ಹೆಚ್ಚಾಗಿ ಕನ್ನಡದಲ್ಲಿ ಬರೆಯಲೆಂದು ಹಾರೈಸುವೆವು.

ರಾಕ್ಷಸ ದೆವ್ವ, ರಾಕ್ಷಸಃ—ಬರೆದವರು ಶ್ರೀ ಮೋಪುಂಡಿ ಮಲ್ಲಾರಿ ಅವರು. ಪ್ರಕಾಶಕರು ಕನ್ನಡಕಂದ ಕಾರ್ಯಾಲಯ ಧಾರವಾಡ. ಬೆಲೆ ೨ ದೂವರೆ ಆಣೆ.

ಇದು ಮೂರು ಚಿಕ್ಕ ಕತೆಗಳ ಸಂಗ್ರಹ. ಚಿಕ್ಕ ಮಕ್ಕಳಿಗಾಗಿ ಬರೆದುದು. ಮಕ್ಕಳಿಗೆ ನೈಜವಾಗಿ ರುಚಿಸುವ ಅದ್ಭುತ ರಮ್ಯತೆಯು ಈ ಕತೆಗಳಲ್ಲಿದೆ. ಶ್ರೀ ಮಲ್ಲಾರಿಯವರ ಶೈಲಿಯೂ ಮಕ್ಕಳಿಗೆ ತಿಳಿವಂತೆ ಸುಲಭ ಸರಳವಾಗಿದೆ. ಕತೆಗಳ ಸಾರಾಂಶವೂ ಮಕ್ಕಳಲ್ಲಿ ಚುರುಕುತನ, ಧೈರ್ಯ ಹೆಚ್ಚಿಸುವಂತಹದಾಗಿದೆ. ಈ ಪುಸ್ತಕದಲ್ಲಿ ಕೆಲವು ಚಿತ್ರಗಳಿದ್ದರೆ ಚನ್ನಾಗಿತ್ತು ಎನಿಸುವುದು.

ಯಶೋಮಂದಿರಃ—ಲೇಖಕರು ಮತ್ತು ಪ್ರಕಾಶಕರು ಶ್ರೀ ಮಾ. ಹ. ಚಿಟಣೀಸ ಅಥಣಿ. ಬೆಲೆ ೬ ಆಣೆ.

ಮನುಷ್ಯನು ಯಶಸ್ವಿಯಾಗಿ ಜೀವನ ಸಾಗಿಸಬೇಕಾದರೆ ಅವನಲ್ಲಿರಬೇಕಾದ ಸತ್ಯ, ಧೈರ್ಯ, ಆತ್ಮವಿಶ್ವಾಸ, ನಿರ್ಲೋಭತೆ, ತ್ಯಾಗ ಮುಂತಾದ ಗುಣಗಳ ವರ್ಣನೆಯನ್ನು ಈ ಪುಸ್ತಕವು ಕಥೆಗಳ ಸಹಾಯದಿಂದ ಮಾಡುತ್ತದೆ. ಈ ಪುಸ್ತಕದಲ್ಲಿ ಮುದ್ರಣ ದೋಷಗಳೂ, ಭಾಷಾದೋಷಗಳೂ ಬಹಳವಾಗಿವೆ. ಸದ್ಗುಣಗಳ ವರ್ಣನೆಯು ಕೂಡ ಹೆಚ್ಚು ವಿವೇಚನಾತ್ಮಕವಾಗಿ ಇಲ್ಲ. ಕಟ್ಟು ಕಥೆಗಳ ಬದಲಾಗಿ ಈಗಿನ, ಪ್ರತ್ಯಕ್ಷ ತಮ್ಮ ಜೀವನದಿಂದ ಜಗತ್ತಿಗೆ ಮಾದರಿಯಾಗಿ ಬಾಳುತ್ತಿರುವ ಸ್ತ್ರೀಪುರುಷರ ಚರಿತ್ರೆಗಳನ್ನು ಉಪಯೋಗಿಸಿದ್ದರೆ ಈ ಪುಸ್ತಕದ ಉದ್ದೇಶವು ಹೆಚ್ಚಾಗಿ ಸಾಧಿಸಬಹುದಿತ್ತು.

ಹಾವಾಡಿಗಃ—ಶ್ರೀ. ಟ. ಎಂ. ಆರ್. ಸ್ವಾಮಿಯವರಿಂದ ಬರೆಯಲ್ಪಟ್ಟ ಬೆಂಗಳೂರಿನ ಕನ್ನಡಿಗರ ಕಣಜದಿಂದ ಪ್ರಕಟವಾದ ಕವಿತಾ ಸಂಗ್ರಹ ಪುಟ ೩೨. ಬೆಲೆ ೨॥ ಆಣೆ.

ಇದರಲ್ಲಿ ೧೩ ಕವಿತೆಗಳಿವೆ. ಚಿಕ್ಕ ಮಕ್ಕಳಿಗೆ ಅಭಿನಯದೊಡನೆ ಹಾಡಲಿಕ್ಕೆ ಯೋಗ್ಯವಾದವುಗಳಾಗಿವೆ. ಲೇಖಕರ ಶೈಲಿ ಸರಳವಾಗಿಯೂ ಜೀವಪೂರ್ಣವಾಗಿಯೂ ಇದೆ. ಮಕ್ಕಳಿಗೆ ಪ್ರಿಯವಾದ ವಿಷಯಗಳನ್ನಾಯ್ದು ... ವೃತ್ತಿಗಳಲ್ಲಿ ಬರೆಯುವದು ಅವರಿಗೆ ಚನ್ನಾಗಿ ... ಇವುಗಳಲ್ಲಿ ಹಾವಾಡಿಗ, ಬುಡಬುಡಿಕೆ, ... ಉಪ್ಪಿಟ್ಟು ಚನ್ನಾಗಿವೆ. ತಂಬೂರಿ, ದೀಪಾವಳಿ ... ಸ್ವಲ್ಪ ಗಂಭೀರವಾಗಿವೆ. ಬಹುತರ ಎಲ್ಲ ಕವಿತೆಗಳು ಸಚಿತ್ರವಾಗಿರುವುದು ಈ ಪುಸ್ತಕದ ಹೆಚ್ಚುಗಾರಿಕೆ.

ಮುದ್ದಣಃ—ಹಾವೇರಿಯ ಕೆಳೆಯರ ಕೂಟದಿಂದ ... ವಾದ ಕೈಬರಹದ ಕವನ ಸಂಗ್ರಹ. ಸಂಪಾದಕರು ... ಗೋವಿಂದರಾಯರು.

ಇದು ಎಕ್ಸ್‌ರ್‌ಸ್ಯಾಯಿಜಿನ ಆಕಾರದ ... ಪುಸ್ತಕ—ಕೈಯಿಂದ ಸುಂದರವಾಗಿ ಬರೆಯಲ್ಪಟ್ಟ ... ರಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಕವಿತೆಗಳಿವೆ. ಶ್ರೀ. ಅರ್ಚಿಕ ವೆಂಕಟೇಶ ಮತ್ತು ... ನಾರಾಯಣ ಮೂರ್ತಿ ಎಂಬ ಇಬ್ಬರು ಬಾಲಕವಿ... ಗಳಿವೆ. ಒಂದೆರಡು ಆಂಗ್ಲ ಕವಿತೆಗಳ ಅನುವಾದ... ಇಬ್ಬರು ಕವಿಗಳಲ್ಲಿಯೂ ದಿವ್ಯಭವಿಷ್ಯದ ಪೂರ್ವ ... ತೋರುತ್ತವೆ. ಅವರ ಭಾವನೆಗಳು ಬಹು ... ರುವುದರಿಂದ ಕೆಲವು ಕಡೆ ಭಾಷೆಯು ... ಕೆಲವು ಕಡೆ ಗದ್ಯದ ಶೈಲಿಯೇ ಬಂದು ... ಅವರಿಬ್ಬರೂ ಉತ್ತರೋತ್ತರವಾಗಿ ಕುಸುರಿನ ... ವರೆಂದು ನಮಗೆ ದೃಢವಾದ ನಂಬಿಗೆ; ... ಸಂದರ್ಭದಲ್ಲಿ "ಇಂತಹ ಕೈಬರಹದ ಹೊತ್ತಿಗೆ ... ಹೊರಡಿಸಿ ಕವನ ಲೇಖನದ ಅಭ್ಯಾಸಮಾಡಿ ... ಮಾಸಪತ್ರಿಕೆಗೆ ತಮ್ಮ ಕವಿತೆಗಳನ್ನು ಮುದ್ರಿಸ... ಸುವ ಯೋಜನೆ ಮಾಡಬೇಕೆ"ಂದು ಜಯಕರ್ನಾಟಕಕ್ಕೆ ... ಕವಿತೆಗಳನ್ನು ಕಳಿಸುತ್ತಿರುವ ನವಕವಿಗಳಿಗೆ ... ಸೂಚಿಸಬಯಸುವೆವು.

ದಸರೆಯ ಕಾಣಿಕೆಃ—ಕವನ ಸಂಗ್ರಹ. ... ಎನ್. ಲಕ್ಷ್ಮಣ ಪೈ. ಪ್ರಕಾಶಕ: ಹರಿಹರ ಪುಸ್ತಕಾಲಯ ... ಪು. ೧೬. ಬೆಲೆ ೨ ಆಣೆ.

ಇದರಲ್ಲಿ ಮೊದಲನೆಯದು 'ಅಮರಲೋಕ'... ಯಿದೆ. ಅದೊಂದು ಕವಿಗಳ ಕನಸು. ... ಪ್ರಾಚೀನ ಕವಿಗಳು ಕನಸಿನಲ್ಲಿ ಬಂದು '... ಯಕ್ಕೆ' ತಮ್ಮ ತಮ್ಮ ಅಭಿಪ್ರಾಯಗಳನ್ನು ... ಎರಡನೆಯದು 'ಯದ್ವಾತದ್ವಾ', ಎಂಬ ಕವಿತೆ ... ಕವಿಗಳು ಈಗಿನ 'ತಿರುವುಮುರುವು' ...

ಬೇಕಾದ 'ತಿರುಗುಮುರುಗು'ಗಳನ್ನು ವರ್ಣಿಸಿದ್ದಾರೆ. ಎರಡೂ ಕವಿತೆಗಳು ವಾಚನೀಯವಾಗಿವೆ.

ಸಂಗೀತ ತಾರಾವಳಿ:—ಇದು ರಾಗತಾಲಯುಕ್ತವಾಗಿ ಹಾಡಲು ಬರುವ ಹೊಸ ಪದಗಳ ಸಂಗ್ರಹವಾಗಿದೆ. ಕೆಲವು ತತ್ವಜ್ಞಾನಕ್ಕೆ ಸಂಬಂಧಿಸಿವೆ. ಹಲವು ದೇವದೇವಿಯರ ಪ್ರಾರ್ಥನೆ ಆರತಿಗಳಾಗಿವೆ. ಕೊನೆಗೆ ಮಾತೃಭೂಮಿಯ ಸ್ತೋತ್ರಗೀತೆಯಿದೆ. ಹಾಡುಗಳು ಸವಿಯಾಗಿವೆ. ಬೆಲೆ ಎರಡಾಣೆ. ಲೇಖಕರ ಸ್ಥಾನದಲ್ಲಿ 'ರಾಮ ಸಂಕಲಿತ' ಎಂದಿದೆ. ಶ್ರೀಮಾನ್ ಬೆನಗಲ್ಲ ರಾಮರಾಯರಿಂದಲೆ ಬರೆಲ್ಪಟ್ಟಿದೆಂದು ಸ್ಪಷ್ಟವಾಗಿ ಕಾಣಿಸಿದ್ದರೆ ಚನ್ನಾಗಿತ್ತು.

ಝೆಕ್ ಜರ್ಮನ್ ಸಮಸ್ಯೆ

ಅರ್ಥಾತ್

ಸಂಸ್ಕೃತಿಗಳ ಕಲಸುಮೇಲೋಗರ

"ನಾಗರಿಕ"ರಿಂದ

★

ಆಸ್ಟ್ರಿಯದ ತರುವಾಯ ಝೆಕೋಸ್ಲೋವಾಕಿಯದ ಪಾಳಿಯೆಂದು ಎಲ್ಲರೂ ತಿಳಿದಿದ್ದರು. ಆ ಸಂಕಟವಿನ್ನೂ ಪೂರ್ತಿಯಾಗಿ ಕಣ್ಮರೆಯಾಗಿರದಿದ್ದರೂ, ಝೆಕ್ಕರ ಸಮಯಜ್ಞತೆಯಿಂದಲೋ, ಬ್ರಿಟಿಷ್-ಫ್ರೆಂಚ್ ಸರಕಾರಗಳ ವಿವೇಕಬೋಧನೆಯಿಂದಲೋ, ಇಲ್ಲವೆ ಹಿಟ್ಲರನ ತಾತ್ಪೂರ್ತಿಕ ಸಮಾಧಾನವೃತ್ತಿಯಿಂದಲೋ—ಸದ್ಯಕ್ಕಂತೂ ಆ ಅಶುಭ ನಿಮಿಷವು ಮುಂದಕ್ಕೆ ತಳ್ಳಲ್ಪಟ್ಟದೆಯೆನ್ನಲಡ್ಡಿಯಿಲ್ಲ.

ಝೆಕೋಸ್ಲೋವಾಕಿಯದ ಪ್ರಶ್ನೆಯು, ಹಿಂದುಸ್ತಾನದ ಅಸ್ವಾಭಾವಿಕ ಪ್ರಾಂತರಚನೆಯಿಂದುಂಟಾದ ಪ್ರಶ್ನೆಯನ್ನು ಬಹುಮಟ್ಟಿಗೆ ಹೋಲುತ್ತಿದೆ. ಈ ನಾಡಿನಲ್ಲಿ ೭೪॥ ಲಕ್ಷ ಝೆಕ್ಕರು, ೩೫ ಲಕ್ಷ ಜರ್ಮನರು, ೨೩ ಲಕ್ಷ ಸ್ಲಾವ್ಹರು, ೭। ಲಕ್ಷಹಂಗೇರಿಯನ್ನರು, ೫॥ ಲಕ್ಷರೂಮಾನಿಯನ್ನರು, ೧ ಲಕ್ಷ ಪೋಲರು, ಅಲ್ಲದೆ ಜ್ಯೂ ಮೊದಲಾದ ಬೇರೆ ಜನಾಂಗಗಳವರು ಇದ್ದಾರೆ. ಬೇರೆಬೇರೆ ಭಾಷೆಗಳ ಮತ್ತು ಸಂಸ್ಕೃತಿಗಳ ಜನಾಂಗಗಳ ಕಿಚ್ಚಡಿಯೇ ಅದಾಗಿದೆಯೆಂದರೆ ತಪ್ಪಾಗದು. ಮಹಾಯುದ್ಧದ ಭರತವಾಕ್ಯದೋಪಾದಿಯಲ್ಲಿ ಹಾಡಿದ 'ಸ್ವಯಂನಿರ್ಣಯ' (Self-determination) ತತ್ವದ ಅಪಪ್ರಯೋಗದ ಫಲವೇ ಝೆಕೋಸ್ಲೋವಾಕಿಯ ರಾಷ್ಟ್ರದ ನಿರ್ಮಾಣವೆಂದು ಹೇಳಬಹುದು. ಹೆಸರಿಗೆ 'ಸ್ವಯಂನಿರ್ಣಯ'—ಆದರೆ ಪರಸ್ಪರವಿಭಿನ್ನ ಸಂಸ್ಕೃತಿಗಳ ತೇಪೆಗಳನ್ನು ಜೋಡಿಸಿ ಈ ಕೃತ್ರಿಮರಾಷ್ಟ್ರವನ್ನು ರಚಿಸಲಾಯಿತು. ಆ ಜನಾಂಗವಿಚ್ಛೇದನದ ಪಾಪದ ಫಲವನ್ನೇ ಯುರೋಪುಖಂಡವು ಇಂದು ಉಣ್ಣುತ್ತಿದೆ.

ಝೆಕೋಸ್ಲೋವಾಕಿಯದ ಪ್ರದೇಶವು ಸು. ೩೦೦ ವರ್ಷ ಆಸ್ಟ್ರಿಯನ್ ಸಾಮ್ರಾಜ್ಯದಲ್ಲಿ ಪ್ರವಿಷ್ಟವಾಗಿತ್ತು. ಸಾಮ್ರಾಜ್ಯದ ಸಾರ್ವಭೌಮರ ಭೇದನೀತಿಯ ಮೇರೆಗೆ, ಅದರಲ್ಲಿಯ ಜರ್ಮನ್ ಪ್ರಜಾವರ್ಗವು ಜರ್ಮನಿಯೊಡನೆ ಏಕಜೀವವಾಗದಂತೆ ಅವರು ನೋಡಿಕೊಳ್ಳುತ್ತಿದ್ದರು. ಒಮ್ಮೆ ಝೆಕ್ಕರ ಪಕ್ಷಪಾತ ವಹಿಸುವುದು, ಒಮ್ಮೆ ಜರ್ಮನರ ನೆತ್ತಿಹಿಡಿಯುವುದು ಅವರ ಕಾಯಕವಾಗಿತ್ತು. ೧೯-೨೦ನೆಯ ಶತಮಾನಗಳಲ್ಲಿ ರಾಷ್ಟ್ರೀಯತೆಯ ಗಾಳಿ [illegible] ತೊಡಗಿದುದರ ಫಲವಾಗಿ, ಸಾಮ್ರಾಜ್ಯವಿಧ್ವಂಸಕ [illegible] ಬಲಗೊಂಡು, ಆದರೊಳಗಿಂದಲೇ ಮಹಾಯುದ್ಧ [illegible] ಹಬ್ಬಿ, ಆಸ್ಟ್ರಿಯದ ಸಾಮ್ರಾಜ್ಯವು ತುಂಡು[illegible] ಹೋಯಿತು. ಯುದ್ಧಸಮಾಪ್ತಿಯ ತರುವಾಯ [illegible]ಯದ ಸೀಮೆಯನ್ನು ಅದರಲ್ಲಿಯ ಚಿಕ್ಕಚಿಕ್ಕ ರಾಷ್ಟ್ರ[illegible] ಹಂಚಿಕೊಳ್ಳುವಾಗ, ಇತಿಹಾಸದ ಬೋಧೆಯನ್ನು [illegible] ವಿಜಾತೀಯರ ಪ್ರಾಂತಗಳನ್ನು ಸೆಳೆದುಕೊಂಡು [illegible] ದೇಶದ ಮೇಲೂ ಜಗತ್ತಿನ ಶಾಂತಿಯ ಮೇಲೂ [illegible]ವನ್ನೆ ತಂದುಕೊಂಡವು. 'ಸ್ವಯಂನಿರ್ಣಯ'ದ ತತ್ವ[illegible] ಸರಿಯಾಗಿ ಆಚರಿಸಿದ್ದರೆ,—ತುರ್ಕ ನಾಯ[illegible] ಕಮಾಲಪಾಶಾನಂತೆ ಅಲ್ಪಸಂಖ್ಯಾಕರನ್ನು [illegible] ಜಾತಿ-ಸಂಸ್ಕೃತಿಗಳನ್ವಯ ವಿನಿಮಯಿಸಿಕೊಂಡಿ[illegible]ದ್ದರೆ, ಈ ಪ್ರದೇಶದಲ್ಲಿ ಸಾಧ್ಯವಿದ್ದಮಟ್ಟಿಗೆ ಏಕ[illegible] ಪ್ರಧಾನ ರಾಷ್ಟ್ರಗಳೆ ನಿರ್ಮಾಣವಾಗುತ್ತಿದ್ದವು. [illegible] ವಿಜಯೋನ್ಮಾದದಲ್ಲಿ ಸಾಮಾನ್ಯವಾಗಿ ದೂರದೃಷ್ಟಿ[illegible]ಕಾಣವೇ ಬಂದಿರುತ್ತದೆ. ಇಂತಹ ಅದೂರದೃಷ್ಟಿ[illegible]ವಾಗಿಯೆ ಸಾವಿರ ಸಂಸ್ಕೃತಿಗಳ ಕಂತೆಯೊ[illegible] ಝೆಕೋಸ್ಲೋವಾಕಿಯದ ಜನ್ಮವಾಯಿತು. [illegible] ಕುತಂತ್ರವೇ ಈ ಘಟನೆಗೆ ಹೆಚ್ಚಾಗಿ ಕಾರಣವಾಗಿ[illegible] ಬೇರೆ ಹೇಳಬೇಕಾಗಿಲ್ಲ.

ಝೆಕೋಸ್ಲೋವಾಕಿಯದಲ್ಲಿ ಜರ್ಮನ್ ಜನರ[illegible] ಸೇರ್ಪಡೆಮಾಡಿದ ಕತೆಯು ಇದನ್ನು ಇನ್ನಷ್ಟು [illegible]ಗೊಳಿಸುವುದು. ಆಸ್ಟ್ರಿಯನ್ ಸಾಮ್ರಾಜ್ಯದಲ್ಲಿಯ [illegible]ಮಿಯಾ ಪ್ರಾಂತದಲ್ಲಿ ಜರ್ಮನ್-ಝೆಕ್ ಜನಾಂಗಗಳ[illegible] ಬಹುಕಾಲ ಜತೆಜತೆಯಾಗಿದ್ದವೆಂಬ ನೆವದಿಂದ, [illegible] ಜರ್ಮನ್ ಜನರನ್ನು ಈ ನವೋದಿತ ರಾಷ್ಟ್ರಕ್ಕೆ [illegible] ಅವರನ್ನು ಮುಕ್ಕಾಲು ಕೋಟಿ ಝೆಕ್ [illegible] ಶಾಶ್ವತ ದಾಸರನ್ನಾಗಿ ಮಾಡಲಾಯಿತು. ಜರ್ಮನ್[illegible]ಗೇಕೆ 'ಸ್ವಯಂನಿರ್ಣಯ'ದ ತತ್ವವನ್ನು ಅನ್ವಯಿಸ[illegible]ಲಿಲ್ಲ? ಝೆಕೋಸ್ಲೋವಾಕಿಯದ ಗಡಿನಾಡು [illegible]

ಬೇಕೆಂಬುದೊಂದೇ ಉದ್ದೇಶವಾಗಿತ್ತೆಂಬುದು ಸ್ಪಷ್ಟವಾಗಿದೆ. ಇದೇ ಕಥೆಯು ಸ್ಲಾವಾಕ್, ಮಗ್ಯಾರ್, ಪೋಲ್ ಮೊದಲಾದ ಜನಾಂಗಗಳಿಗೂ ಅನ್ವಯಿಸುತ್ತದೆ.

ಇಂತು ನಿರ್ಮಾಣವಾದ ಝೆಕೊಸ್ಲೊವಾಕಿಯ ರಾಷ್ಟ್ರವು ಪರಸ್ಪರಸಂಶಯ-ದ್ವೇಷ-ಭೀತಿಗಳನ್ನು ಕಟ್ಟಿಕೊಂಡೇ ಅಡಿಯಿಟ್ಟಿದ್ದರೆ ಸೋಜಿಗವಿಲ್ಲ. ಆಸ್ಟ್ರಿಯನ್ ಸಾಮ್ರಾಜ್ಯವು ಪುಡಿಗೂಡಿಹೋದಮೇಲೆ ಝೆಕೊಸ್ಲೊವಾಕಿಯದ ಘಟನೆಯನ್ನು ತಯಾರಿಸಲು ರಚಿಸಲಾದ ಸಮಿತಿಯಲ್ಲಿ ಝೆಕ್ಕರು ಸ್ಲೊವಾಕ್ ಜನರ ಹೊರತಾಗಿ ಇನ್ನಾವ ಅಲ್ಪಸಂಖ್ಯಾಕರ ಪ್ರತಿನಿಧಿಗಳಿಗೂ ಒಳಗೆ ಬರಗೊಡಲಿಲ್ಲ. ಈ ರಾಷ್ಟ್ರದ ಸಂಜ್ಞೆಯಲ್ಲಡಕವಾದ ಸಮಸ್ತ ಪದಗಳೇ, ಇದು ಆ ಎರಡೇ ಜನಾಂಗಗಳ ರಾಷ್ಟ್ರವೆಂಬುದನ್ನು ಸೂಚಿಸುತ್ತದೆ. ಬರುಬರುತ್ತ ಸ್ಲೊವಾಕ್ ಜನರೂ ಅಸಂತುಷ್ಟರಾಗತೊಡಗಿದರು. ಜರ್ಮನರಿಗಂತೂ ಸರಕಾರಿ ಅಧಿಕಾರಸ್ಥಾನಗಳೆಲ್ಲ ವರ್ಜ್ಯವಾದವು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿಯೂ ಇದೇ ಮಾತು. ಜರ್ಮನರಲ್ಲಿ ಈ ಧೋರಣೆಯ ಮೂಲಕ ನಿರುದ್ಯೋಗವು ಪ್ರಬಲಿಸಿತು. ಧೂರ್ತ ರಾಜನೀತಿಜ್ಞರೆಂದು ಹೆಸರಾದ ಪ್ರೆಸಿಡೆಂಟ್ ಬೆನೆಕರೇ ಇದನ್ನೊಪ್ಪಿದ್ದಾರೆ. ಆರ್ಥಿಕ ಮುಗ್ಗಟ್ಟು ಮತ್ತು ಸರಕಾರದ ಪಕ್ಷಪಾತದ ಧೋರಣೆ—ಎರಡೂ ಮಿಳಿತವಾಗಿ ೫ ಲಕ್ಷಕ್ಕಿಂತ ಅಧಿಕ ಜರ್ಮನರು ಆರೇಳು ವರ್ಷಗಳಿಂದ ನಿರುದ್ಯೋಗಕ್ಕೆ ತುತ್ತಾಗಿದ್ದಾರೆ. ಅಲ್ಲಿಯ ಜರ್ಮನರ ಮುಖಂಡರಾದ ಹೆರ್ ಹೆನ್‌ಲೈನ್ ಅವರು ಹೇಳುವಂತೆ '೩ ಲಕ್ಷ ಜರ್ಮನ್ ಸುಡೆಟನ್ ಪ್ರಾಂತದ ಬಾಲಕರು ಅರೆಹೊಟ್ಟೆಯಿಂದಿರುವರು.' ಸರಕಾರವಾದರೋ, 'ಜರ್ಮನ್ ಶಾಲೆಗಳನ್ನು ಬಿಟ್ಟು ಝೆಕ್ ಶಾಲೆಗಳಿಗೆ ನೀವು ಬರತೊಡಗಿದರೆ, ನಿಮಗೆ ಅನ್ನವಸ್ತ್ರಗಳನ್ನು ಪುಕ್ಕಟೆಯಾಗಿ ಕೊಡಲಾಗುವುದೆ'ಂದು ಆಮಿಷ ತೋರಿಸುತ್ತಿದೆ! ತಮ್ಮ ಬಾಲಕರು ಸ್ವಭಾಷೆಯ ಮೂಲಕ ಪಡೆಯಬೇಕಾದ ಶಿಕ್ಷಣಕ್ಕಾದರೂ ಎರವಾಗಬೇಕು, ಇಲ್ಲವೆ ಕೂಳುನೀರಿಗೆ ಗತಿಯಿಲ್ಲದೆ ಕಾಲ ತಳ್ಳಬೇಕು—ಎಂಬೀ ಪೇಚಿನಲ್ಲಿ ಜರ್ಮನ್ ಪಾಲಕರು ಬಿದ್ದಿದ್ದಾರೆ. ರಾಷ್ಟ್ರಸಂಘದ ಶಾಸನದ ಪ್ರಕಾರ ಝೆಕ್ ರಾಷ್ಟ್ರದ ಅಲ್ಪಸಂಖ್ಯಾಕರ ಸಂಸ್ಕೃತಿ-ಭಾಷೆ ಮೊದಲಾದ ಹಿತಗಳಿಗೆ ತಕ್ಕ ರಕ್ಷಣೆ ಕೊಡಲೇಬೇಕು; ಆದರೆ ವಸ್ತುಸ್ಥಿತಿಯೆಂದರೆ, ೪೦,೦೦೦ ಜರ್ಮನ್ ಜನಸಂಖ್ಯೆಯಿರುವ ಪ್ರಾಗ್ ನಗರದಲ್ಲಿ ಜರ್ಮನ್ ಭಾಷೆಗೆ ಕೋರ್ಟಿನಲ್ಲಿ ಪ್ರವೇಶವಿಲ್ಲ. ಇ. ಸ. ೧೯೩೭ರಲ್ಲಂತೂ ಈ ಅನ್ಯಾಯಕ್ಕೆ ಕಲಶವಿಟ್ಟಂತಾಗಿ, ಜಾಗೃತ ಜರ್ಮನ್ ಜನಾಂಗವನ್ನು ಸದೆಬಡಿಯಲು ದಂಡಿನ ಕಾನೂನಿ (ಮಾರ್ಶಲ್ ಲಾ)ಗೆ ಹೋಲುವ ಉಗ್ರ ದಂಡನೀತಿಯನ್ನು ಅವಲಂಬಿಸಲಾಯಿತು. ರಾಷ್ಟ್ರಸಂಘದ ವರೆಗೆ ಅಲ್ಲಿಯ ಜರ್ಮನರು ಹಲವು ಸಲ ಒಯ್ದ ದೂರುಗಳು ವ್ಯರ್ಥವಾದವು. ಕೊನೆಗೆ ಶಾಸನಬಾಹಿರ ಮಾರ್ಗಗಳನ್ನು ಅವರು ಅವಲಂಬಿಸಿದರು.

ಝೆಕ್ ಸರಕಾರದವರು ಸುಧಾರಣೆಯ ಆಶ್ವಾಸನಗಳನ್ನು ಬೇರೆ ದೇಶಗಳ ಆಳರಸರಂತೆ ಎಷ್ಟೋ ಸಲ ಕೊಟ್ಟರು—ಆದರೆ ಅವೆಲ್ಲ ಹೂರಣವಿಲ್ಲದುವಾಗಿದ್ದವು. ತೋರಿಕೆಗಾಗಿ ಜರ್ಮನ್ ಜಾತಿಯ ಇಬ್ಬರು ಮೂವರು ಮಂತ್ರಿಗಳನ್ನು—ತಮ್ಮ ಜನಾಂಗಕ್ಕೆ ದ್ರೋಹಿಗಳಾದವರನ್ನು—ಮಂತ್ರಿಮಂಡಲಕ್ಕೆ ಸೇರಿಸುವ ಪರಿಪಾಠವನ್ನು ಬಳಕೆಯಲ್ಲಿ ತಂದರು. ಇದೆಲ್ಲದರ ಫಲವಾಗಿ, ಜರ್ಮನರ ನಾಯಕರಾದ ಹೆನ್‌ಲೈನ್ ಅವರು ಜರ್ಮನಿಯಲ್ಲಿಯ ನಾಝಿಪಕ್ಷದ ಮಾದರಿಯನ್ನನುಸರಿಸಿ, ತಮ್ಮ ಜನರ ಸಂಘಟನೆಯನ್ನು ಮಾಡತೊಡಗಿದರು. ಅದು ಕಲ್ಪನೆಮೀರಿ ಯಶಸ್ವಿಯಾಯಿತು. ೧೯೩೫ರ ಮೇ ತಿಂಗಳ ಸಾರ್ವತ್ರಿಕ ಮತಗಣನೆಯಲ್ಲಿ ಹೆರ್ ಹೆನ್‌ಲೈನ್ ಅವರ ಪಕ್ಷಕ್ಕೆ ಬೇರೆ ಯಾವ ಪಕ್ಷಕ್ಕಿಂತಲೂ ಹೆಚ್ಚು ಮತಗಳು ದೊರಕಿ, ಅವರ ಪಕ್ಷದ ೪೪ ಪ್ರತಿನಿಧಿಗಳು ಆರಿಸಿ ಬಂದರು. ಸರಕಾರಕ್ಕೆ ಅನುಕೂಲವಾದ ಜರ್ಮನ್ ಪಕ್ಷಗಳೆಲ್ಲ ಸೇರಿ, ೨೨ ಹುರಿಯಾಳುಗಳು ಮಾತ್ರ ಯಶಸ್ವಿಗಳಾದರು. ಈ ವಿಜಯದ ತರುವಾಯವೂ ಹೆನ್‌ಲೈನರು ನೀಡಿದ ಗೆಳೆತನದ ಕೈಯನ್ನು ತಿರಸ್ಕರಿಸಿ, ಪರಾಜಿತಪಕ್ಷದ ಜರ್ಮನರನ್ನೇ ಮಂತ್ರಿಪದಕ್ಕೆ ಕರೆದುಕೊಳ್ಳಲಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಸುಡೆಟನ್ ಜರ್ಮನರ ನಾಝಿ ಚಟುವಟಿಕೆಯೂ ಇನ್ನಷ್ಟು ಪ್ರಖರವಾಯಿತು. ಇತ್ತ ಝೆಕ್ ಸರಕಾರದವರು ಜರ್ಮನ್ ಜನರ ಒಡೆತನದ, ವಿಶೇಷವಾಗಿ ಜರ್ಮನ್ ಕೆಲಸಗಾರರನ್ನು ಹೆಚ್ಚಾಗಿ ನಿಯಮಿಸುವ ಕಾರಖಾನೆಗಳನ್ನು ಜರ್ಮನ್ ಪ್ರದೇಶದಿಂದ ಒತ್ತಾಯದಿಂದ ಝೆಕ್ ಜನರ ವಸತಿಯು ಹೆಚ್ಚಿರುವಲ್ಲಿ ಸಾಗಿಸತೊಡಗಿದರು. ಈ ಕಾರ್ಯವು ಈಗಲೂ ನಡೆದಿದೆ. ಜರ್ಮನ್ ಕಾರಖಾನೆದಾರರು ಬ್ಯಾಂಕಿನಲ್ಲಿ ಸಾಲ ಬೇಡಿದರೆ ಜರ್ಮನ್ ಕೆಲಸಗಾರರನ್ನು ತೆಗೆದುಹಾಕಬೇಕೆಂದು ಶರ್ತುಗಳನ್ನು ಹಾಕುತ್ತಿದ್ದಾರೆಂತಲೂ ಹೆನ್‌ಲೈನ್ ಪಕ್ಷದ ಕಾರಖಾನೆಗಳಿಗೆ ಸರಕಾರಿ ಕಂತ್ರಾಟುಗಳು ಸಿಗದಂತೆ ಮಾಡುತ್ತಿದ್ದಾರೆಂತಲೂ ಕೇಳಿಕೆಯಲ್ಲಿದೆ. ಝೆಕೊಸ್ಲೊವಾಕಿಯನ್ ಸರಕಾರವು ಈ ದಬ್ಬಾಳಿಕೆಯ

ಪ್ರಖರತೆಯನ್ನು ಕಡಿಮೆ ಮಾಡಬೇಕೆಂದು ಒಂದು ಸಲ ಬಯಸಿದರೂ 'ಝೆಕ್ ರೈತ ಪಕ್ಷ'ವು ಅಲ್ಪ ಸಂಖ್ಯಾಕರಿಗೆ ಯಾವ ಸವಲತ್ತನ್ನೂ ಕೊಡಬಾರದೆಂದು ನಿಷ್ಠುರ ಧೋರಣೆಯನ್ನು ವಹಿಸಿದೆ. ಈ ಪಕ್ಷದ ಒತ್ತಾಯದ ಮುಂದೆ ಸರಕಾರವೂ ಕೈಯೂರಬೇಕಾಗುವುದು. ೧೯೩೭ ರಿಂದ ಸರಕಾರವು ಹಲವು ಆಶ್ವಾಸನಗಳನ್ನು (ನೌಕರಿಗಳಲ್ಲಿ ೨೨% ರಷ್ಟು ಸ್ಥಳಗಳನ್ನು ಜರ್ಮನರಿಗೆ ಕೊಡಬೇಕು ಇ.) ಕೊಡುತ್ತ ಬಂದಿದೆ; ಆದರೆ ಕೃತಿಯಲ್ಲಿ ತಂದುದು ಅರ್ಧ ಮರ್ಧ ಮಾತ್ರ. ಮೊನೆಮೊನ್ನೆ ಆಸ್ಟ್ರಿಯವನ್ನು ಹಿಟ್ಲರನ ಸೆಳೆದಂದಿನಿಂದ ಮಾತ್ರ ಮುಂಚಿನ ಆಶ್ವಾಸನಗಳನ್ನು ಕೃತಿಯಲ್ಲಿಳಿಸುವ ತ್ವರೆಯು ಝೆಕ್ ಸರಕಾರದಲ್ಲಿ ತೋರುತ್ತಲಿದೆ.

ಈಚೆಗಂತೂ ಸುಡೆಟನ್ ಜರ್ಮನ ಪಕ್ಷದ ವಿರೋಧವು ಪ್ರಬಲಿಸಿ, ಪ್ರಕಟ ರೂಪವನ್ನು ತಾಳುತ್ತಿದೆ. ಆದರ ಪ್ರತಿಕಾರ ಶಕ್ತಿಯು ತನ್ನಿಗೆ ಆಸ್ಟ್ರಿಯದಲ್ಲಿಯ ಹಿಟ್ಲರನ ವಿಕ್ರಮವು ಕಾವನ್ನೊದಗಿಸುತ್ತಲಿದೆ. ಝೆಕ್ ಸರಕಾರವು ಸಮಯವರಿತು ೧೯೩೭ರಿಂದಲೆ ಗಡಿನಾಡನ್ನು ಕೋಟೆ ಕೊತ್ತಳಗಳಿಂದಲೂ ಆಧುನಿಕ ಯುದ್ಧಸಾಮಗ್ರಿಯಿಂದಲೂ ಭದ್ರಗೊಳಿಸಿದೆ. ನಡುವೆ ಜರ್ಮನಿಯು ತನ್ನ ನಾಡನ್ನು ಆಕ್ರಮಿಸಿಯೇ ತೀರುವುದೆಂದು ಹುಯಿಲೆದ್ದಾಗ ಝೆಕ್ ಸರಕಾರವು ತನ್ನ ಸೈನ್ಯಶಕ್ತಿಯನ್ನೆಲ್ಲ ಗಡಿನಾಡಿನಲ್ಲಿ ಕೇಂದ್ರೀಕರಿಸಿ ತಾತ್ಪೂರ್ತಿಕವಾಗಿಯಾದರೂ ಹಿಟ್ಲರನ ಕಾರ್ಯಕ್ಕೆ ಮಂಕುಬೂದಿಯನ್ನೆರಚಿತು. ರಶ್ಯ-ಫ್ರಾನ್ಸ್‌ಗಳ ಸಹಾಯವಚನವನ್ನೂ ತನ್ನ ಯುದ್ಧ ಸಿದ್ಧತೆಯನ್ನೂ ನಂಬಿದುದಕ್ಕಿಂತಲೂ, ಕಾಲಗತಿಯನ್ನರಿತು ಜರ್ಮನರೊಡನೆ ಸ್ನೇಹಸಂಧಾನವನ್ನು ಮಾಡುವುದು ಒಳಿತೆಂದು ಸರಕಾರವು ಯೋಚಿಸಿದಂತೆ ಕಾಣುತ್ತದೆ. ಅಲ್ಪ ಸಂಖ್ಯಾಕರ ಭಾಷೆ-ಸಂಸ್ಕೃತಿ ಮುಂತಾದವುಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ಮನ್ನಿಸುವುದು, ಅವರಿಗೆ ಜನಸಂಖ್ಯೆಯ ಮಾನದಿಂದ ಸರಕಾರಿ ಹುದ್ದೆಗಳನ್ನು ಕೊಡುವುದು, ಜರ್ಮನರನ್ನು ಪ್ರಮಾಣೋಚಿತವಾಗಿ ಮಂತ್ರಿಮಂಡಲದಲ್ಲಿ ತೆಗೆದುಕೊಳ್ಳುವುದು, ಒಟ್ಟಿನಲ್ಲಿ ಸ್ವಿಟ್ಝರ್ಲಂಡಿನಲ್ಲಿ ಕ್ಯಾಂಟನ್‌ಗಳ ಪದ್ಧತಿಯಂತೆ ಜರ್ಮನರಿಗೆ ಸ್ವಾಯತ್ತತೆಯನ್ನು ಕೊಡುವುದು, ಇವೇ ಮೊದಲಾದ ಮಹತ್ವದ ಆಶ್ವಾಸನಗಳನ್ನು ಝೆಕ್ ಸರಕಾರವು ಈಚೆಗೆ ಕೊಟ್ಟಿದೆಯೆಂದು ತಿಳಿದು ಬರುತ್ತದೆ.

ಝೆಕೊಸ್ಲೊವಾಕಿಯಾದಲ್ಲಿಯ ಸುಡೆಟನ್ ಜರ್ಮನ್ ಪ್ರಾಂತವ ಈಗಿನ ಪರಿಸ್ಥಿತಿಯು ಹಿಟ್ಲರನ ಆಕ್ರಮಣದ ಪೂರ್ವದಲ್ಲಿಯ ಆಸ್ಟ್ರಿಯವನ್ನು ತಕ್ಕಮಟ್ಟಿಗೆ [illegible] ತ್ತದೆ. ಆಸ್ಟ್ರಿಯದ ಶರಣಾಗತಿಯ ಪೂರ್ವದಲ್ಲಿ [illegible] ಗಳಿಂವಲೆ ಆದರ ಅಂತಃಸ್ವಾಯತ್ತತೆಯನ್ನು [illegible] ವಾಗಿಸಿ, ಸಡಿಲಿಸಿಡುವ ಕಾಯಕವು ನಡೆದಿದೆ; ಇತ್ತ [illegible] ಟನ್ ಜರ್ಮನರಿಗೆ ಇವೊತ್ತು ಸ್ವಾಯತ್ತತೆ [illegible] ನಾಳೆ ಹಿಟ್ಲರನು ಆದರ ಲಾಭವನ್ನು ಪಡೆದು ಆ ಪ್ರಾಂತವನ್ನೆ ನುಂಗಿ ಬಿಡಲು ಸಾಹಸಪಡು[illegible] ಆಶ್ಚರ್ಯವಲ್ಲ. ಆದರೆ ಆಸ್ಟ್ರಿಯದಷ್ಟು ಝೆಕ್ [illegible] ಸುಲಭವಾಗಿ ನುಂಗಬಹುದಾದ ತುತ್ತಲ್ಲವೆಂಬುದು [illegible] ಏಕೆಂದರೆ ಯಾಂತ್ರಿಕ ಯುದ್ಧಸಿದ್ಧತೆಯಲ್ಲಿ [illegible] ತುಂಬಾ ಮುಂದುವರಿದಿದೆ. ಹಳೆಯ ಆಸ್ಟ್ರಿಯ[illegible] ಸಾಮ್ರಾಜ್ಯದಲ್ಲಿಯ ೩/೪ ಕಾರಖಾನೆಗಳು [illegible] ದಲ್ಲಿಯೆ ಇವೆ; ಇಟಲಿಯ ಮುಮ್ಮಡಿ ಯುದ್ಧ[illegible] ಯನ್ನು ಅದು ಈಗಲೂ ತಯಾರಿಸುತ್ತದೆ. ಝೆಕ[illegible] ಸ್ವಾತಂತ್ರ್ಯರಕ್ಷಣೆಗಾಗಿಯಲ್ಲದಿದ್ದರೂ ತಮ್ಮ [illegible] ದೃಷ್ಟಿಯಿಂದಲಾದರೂ ಫ್ರಾನ್ಸ್-ರಶ್ಯಗಳು ಜರ್ಮ[illegible] ಅಡ್ಡಗಟ್ಟದಿರಲಾರವು. ಈ ಎಲ್ಲ ಕಾರಣಗಳ [illegible] ಮೊನೆಮೊನ್ನೆ ನಡೆದ ಮ್ಯುನಿಸಿಪಲ್ ಚುನಾವಣೆಗ[illegible] ತುರುಸಿನವಾಗಿದ್ದವು. ಅವುಗಳ ಪರಿಣಾಮವ[illegible] ಹೊರಬಿದ್ದಿದೆ. ಜರ್ಮನ್ ವಿಭಾಗದಲ್ಲಿಯ [illegible] ನೂರಕ್ಕೆ ೯೮ ರಂತೆ ಮತಗಳು ಸಿಕ್ಕಿದ್ದರೆ, [illegible] ಸಮಗ್ರದೇಶದಲ್ಲಿ ಸರಕಾರ ಪಕ್ಷಕ್ಕೆ ಇದುವರೆ[illegible] ದಿದ್ದ ಬಹುಮತವು ಸಿಕ್ಕಿದೆ. ಇದರಿಂದ ಝೆಕ್ಕ[illegible] ನಿಯ ಆಕ್ರಮಣವನ್ನು ಎದುರಿಸಲು ಈಗಿನಿಂದಲೆ [illegible] ರಾಗಿದ್ದಾರೆಂಬುದು ವ್ಯಕ್ತವಾಗುತ್ತದೆ.

ಅಂತರರಾಷ್ಟ್ರೀಯ ಕಾರಣಗಳಿದ್ದಿರದಿದ್ದರೆ ಝೆ[illegible] ವಾಕಿಯದ ಪಾಡು ಇಷ್ಟರಲ್ಲಿ ಆಸ್ಟ್ರಿಯದಂತೆಯೆ [illegible] ತ್ತೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಎಷ್ಟೇ [illegible] ಗಳಿದ್ದರೂ ಎಷ್ಟೇ ಯುದ್ಧಸಿದ್ಧತೆಯಿದ್ದರೂ, [illegible] ಮಾತುಗಳನ್ನು ಮರೆಯುವಂತಿಲ್ಲ. (೧) ಫ್ರಾನ್ಸ್ [illegible] ಗಡಿನಾಡನ್ನು ಭದ್ರಗೊಳಿಸಲು ಮಾಡಿದ ಸನ್ನಾಹ[illegible] ಸರಕಾರಕ್ಕೆ ಸಾಧ್ಯವೇ ಇಲ್ಲ,—ಆ ಶಕ್ತಿಯೂ ಇಲ್ಲ [illegible] ಅನುಕೂಲತೆಯೂ ಇಲ್ಲ. (೨) ಅಂತಹ ಸನ್ನಾ[illegible] ಮಾಡಲು ಶಕ್ತವಾದರೂ, ಗಡಿನಾಡನ್ನು ಕಾಯು[illegible] ಸೈನಿಕರು ಆದರ ಬಳಿಯಲ್ಲಿಲ್ಲ. ಝೆಕೊಸ್ಲೊವಾಕಿ[illegible] ಗಡಿನಾಡು ಸುಮಾರು ೨—೨॥ ಸಾವಿರ ಮೈಲ [illegible] ವಾಗಿದ್ದು, ಆದರ ಸಿದ್ಧ ಸೈನ್ಯವನ್ನೆಲ್ಲಾ ತಂದಿ[illegible]

ಪ್ರತಿಮೈಲಿನ ರಕ್ಷಣೆಗೆ ನೂರು ಜನರನ್ನು ಕೂಡ ಸಜ್ಜ ಗೊಳಿಸಿಡುವುದು ಸಾಧ್ಯವಿಲ್ಲ. ಝೆಕೊಸ್ಲೊವಾಕಿಯದ ಸಿದ್ಧ ಸೈನ್ಯವು ೨ ಲಕ್ಷಕ್ಕಿಂತ ಕೊಂಚ ಕಡಿಮೆಯೇ ಇದೆ; ಆದರ ಜರ್ಮಾನಿ ಕದಲದಲ್ಲಿ ಸು. ೫೦೦ ವಿಮಾನಗಳಿವೆ. ಯುದ್ಧ ಕಾಲದಲ್ಲಿ ಸು. ೨೦ ಲಕ್ಷ ಸೈನ್ಯವನ್ನೂ ರಣಭೂಮಿಗೆ ತರ ಬಹುದಾಗಿದೆ. ಆದರೆ ಯುದ್ಧಾರಂಭದ ಮೊದಲನೆಯ ದಿನಗಳಲ್ಲಿಯೆ ಜರ್ಮನಿ, ಹಂಗರಿ, ಪೋಲಂಡಗಳು ಕೂಡಿ ಈ ದೇಶವನ್ನು ಆಕ್ರಮಿಸಿಬಿಡುವ ಸಂಭವವಿದೆ; ಯುದ್ಧದ ಮೊದಲ ದಿನವೇ ಜರ್ಮನಿಯ ದಣ್ಣಾಯಕ ನಾದ ಗೋರಿಂಗನ ವಿಮಾನದಲವು ಝೆಕೊಸ್ಲೊವಾಕಿಯದ ಪ್ರತಿಮ ಯುದ್ಧಸಾಮಗ್ರಿಯ ಕಾರಖಾನೆಗಳನ್ನು ಧ್ವಂಸ ಗೊಳಿಸುವ ಸಂಭವವಿದೆ. ಮೇಲೆ ಹೇಳಿದಂತೆ ಜರ್ಮನಿಗೆ ಬೇರೆ ಕಡೆಯ ಭಯವಿರದಿದ್ದರೆ ಅದು ಇಷ್ಟು ಹೊತ್ತು ಸುಮ್ಮನೆ ಕೂಡುತ್ತಿರಲಿಲ್ಲ. ಈಗ ಕೂತಿದ್ದರೂ ಹಲ್ಲು ಮಸೆಯುವುದನ್ನು ಬಿಟ್ಟಿಲ್ಲ. ಮೊನ್ನೆಮೊನ್ನೆ ಹಿಟ್ಲರನ ಪ್ರತಿನಿಧಿಯಾದ ಹೇರ್ ಫಾನ್ ಹೇಸ್ ಎಂಬವನು—'ನಾವು ಶಾಂತರಾಗಿದ್ದೇವೆಂತಲೇ ಯುರೋಪಿನಲ್ಲಿ ಶಾಂತಿ ನೆಲೆಸಿದೆ. ನಮ್ಮ ಶಾಂತತೆಯು ನಮ್ಮ ದೌರ್ಬಲ್ಯದ ಗುರುತೆಂದು ಯಾರಾದರೂ ತಿಳಿದಿದ್ದರೆ, ಅವರಿಗೆ ನಮ್ಮ ಪರಿಚಯ ಸರಿ ಯಾಗಿಲ್ಲವೆನ್ನಬೇಕು. ಝೆಕ್ಕರ ಪುಂಡು ಹೀಗೆ ಸಾಗಿದರೆ ಪರಿಣಾಮವು ಸರಿಯಾಗಲಾರದು!' ಎಂದು ಗುಡುಗಾಡಿ ದ್ದಾನೆ!

ಜನಾಂಗಭಂಗದಿಂದ ಹಿಂದುಸ್ತಾನದಲ್ಲಿಯೂ ಬೇರೆ ಬೇರೆ ಭಾಷೆ-ಸಂಸ್ಕೃತಿಗಳವರ ಸಂಘರ್ಷಣೆಯುಂಟಾಗಿ ಅದೊಂದು ಪ್ರಚಂಡ ಸಮಸ್ಯೆಯಾಗಿಯೆ ಪರಿಣಮಿಸಿದೆ. ಈ ಆಂತರಿಕ ಅಸಂತೋಷವು ದೇಶದ ಪರಪ್ರಭುತ್ವಪ್ರತೀ ಕಾರ ಶಕ್ತಿಯನ್ನೂ ಕೆಲ ಮಟ್ಟಿಗಾದರೂ ಸಡಿಲಿಸದಿರ ಲಾರದು. ಯುರೋಪಿನಿಂದ ಬುದ್ಧಿಗಲಿತು ಕಾಂಗ್ರೆಸು ಈಗಿನ ಪ್ರಾಂತವೈಷಮ್ಯವನ್ನು ಸಕಾಲದಲ್ಲಿ ತೊಡೆದು ಹಾಕದಿದ್ದರೆ, ಈ ದೂರದರ್ಶಿತ್ವದ ದುಷ್ಫಲಗಳನ್ನುಣ್ಣ ಬೇಕು.

ಕನ್ನಡದ ಮುನ್ನಡೆ

★

ದ. ಕನ್ನಡದ ವಿದ್ಯಾವತಿಯರು

ಕಾರ್ಕಳದ ಡಾ। ನಾರಾಯಣರಾಯರ ಪ್ರಥಮ ಪುತ್ರಿ ಕಮಲಾಬಾಯಿಯವರು ಮದ್ರಾಸು ಯುನಿವರ್ಸಿಟಿಯ "ಸಾಹಿತ್ಯಶಿರೋಮಣಿ" ಪರೀಕ್ಷೆಗೆ ನಿಂತು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕರ್ನಾಟಕದ ಎಲ್ಲಾ ಸ್ತ್ರೀ ವರ್ಗಕ್ಕೆ ಈ ಪರೀಕ್ಷೆಯಲ್ಲಿ ಪಾಸಾದವರಲ್ಲಿ ಇವರೇ ಮೊದಲನೆಯವರು.

ಇವರ ತಂಗಿ ಶ್ರೀಮತಿ ಸುಶೀಲಾಬಾಯಿಯವರು ಮದ್ರಾಸು ಯುನಿವರ್ಸಿಟಿಯ ಕನ್ನಡ ವಿದ್ವಾನ್ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ.

ರಾಮದುರ್ಗ ಮತ್ತು ಜಮಖಂಡಿ ಸಂಸ್ಥಾನಗಳ ಘೋಷಣೆಗಳು

ರಾಮದುರ್ಗ ಸಂಸ್ಥಾನದ ಸತ್ಯಾಗ್ರಹವು ಕೊನೆಗೆ ತೃಪ್ತಿಕರವಾಗಿ ಕೊನೆಗಂಡಿತೆಂಬುದು ಸಂತೋಷದ ವಿಷಯ. ಸಂಸ್ಥಾನಾಧಿಪರು ಸತ್ಯಾಗ್ರಹಿಗಳ ಬೇಡಿಕೆಗಳನ್ನು ಬಹು ಮಟ್ಟಿಗೆ ಸಲ್ಲಿಸಲು ಒಪ್ಪಿದುದಲ್ಲದೆ, ಕೋರ್ಟು ಕಚೇರಿಗಳ ಭಾಷೆಯನ್ನು ಕನ್ನಡವನ್ನಾಗಿ ಮಾಡಲು ನಿರ್ಧರಿಸಿರುವರಾಗಿ ಪ್ರಕಟಿಸಿದ್ದಾರೆ.

ಮೊನ್ನೆ ದರಬಾರದ ೧೨ನೆ ವಾರ್ಷಿಕೋತ್ಸವದ ದಿನ (೨೪-೬ ೩೮) ಜಮಖಂಡಿಯ ರಾಜಾಸಾಹೇಬರು ಒಂದು ಘೋಷಣೆಯನ್ನು ಹೊರಡಿಸಿ ಅದರಲ್ಲಿ "(೧) ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವ ಉದ್ದೇಶವಿರುವುದೆಂದೂ (೨) ಸಂಸ್ಥಾನದಲ್ಲಿ ಕನ್ನಡಿಗರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಇನ್ನು ಮೇಲೆ ಕೋರ್ಟು ಕಚೇರಿಗಳ ಭಾಷೆಯು ಕನ್ನಡವೇ ಆಗುವಂತೆ ಕ್ರಮವಾಗಿ ವ್ಯವಸ್ಥೆ ಮಾಡಲಾಗುವದೆಂದೂ" ಪ್ರಾಮುಖ್ಯವಾಗಿ ಹೇಳಿದ್ದಾರೆ. ಸತ್ಯಾಗ್ರಹ ಮನಸ್ತಾಪಗಳು ಹೆಚ್ಚುವ ಪೂರ್ವದಲ್ಲಿಯೇ ರಾಜಾಸಾಹೇಬರು ಹೀಗೆ ಘೋಷಣೆ ಹೊರಡಿಸಿದುದು ಅವರ ದೂರದರ್ಶಿತ್ವದ ಲಕ್ಷಣವಾಗಿದೆ.

ವಸಂತ ಸಾಹಿತ್ಯೋತ್ಸವ

ವಿಶಾಲಕರ್ನಾಟಕದವರ ವಿನಂತಿಯನ್ನು ಮನ್ನಿಸಿ ಸಾಹಿತ್ಯಪರಿಷತ್ತಿನವರು ವಸಂತ ಸಾಹಿತ್ಯೋತ್ಸವಗಳನ್ನು ಬೆಂಗಳೂರಿನ ಹೊರತಾಗಿ ಈಸಲ ಗದಗು ಮತ್ತು ಅನವಟ್ಟಿಯಲ್ಲಿಯೂ ಏರ್ಪಡಿಸಿದುದು ಸ್ತುತ್ಯವಿಚಾರ. ಮೇ ತಿಂಗಳ ಕೊನೆಯ ವಾರದಲ್ಲಿ ಗದಗು ಮತ್ತು ಅನ[ವಟ್ಟಿ]ಯಲ್ಲಿ ವಿಜೃಂಭಣೆಯಿಂದ ವಸಂತ ಸಾಹಿತ್ಯೋತ್ಸವ[ವೂ] ಕುಮಾರವ್ಯಾಸನ ಜಯಂತಿಯೂ ನೆರವೇರಿದ[ವು]. ಉತ್ಸವಗಳಲ್ಲಿ ದಕ್ಷಿಣೋತ್ತರ ಕರ್ನಾಟಕದ ಗಣ್ಯ[ರೂ] ಅನೇಕ ಸಾಹಿತಿಗಳೂ ಭಾಗವಹಿಸಿದ್ದರು. ನಾಟಕ, [...] ಭಾಷಣ, ಗಮಕಾದಿಗಳಿಂದ ಅದೊಂದು ಬಲು ರು[ಚಿಯಾದ] ಸಾಹಿತ್ಯದೂಟವಾಗಿತ್ತು.

ಕನ್ನಡ ವಿದ್ಯಾರ್ಥಿಗಳ ಅಭಿನಂದನೀಯ ಯಶ[ಸ್ಸು]

ಶ್ರೀ ರಾಘವೇಂದ್ರ ರಾಮಾಚಾರ್ಯ ಉಮರ್ಜಿ [...] ಮುಂಬಯಿ ವಿಶ್ವವಿದ್ಯಾಲಯದ ಈ ವರ್ಷದ ಎಂ. [...] ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಉತ್ತೀ[ರ್ಣರಾಗಿ] ಒಂದನೆಯ ನಂಬರ ಬಂದಿರುವರು. ಇವರು ಮ್ಯಾ[ಟ್ರಿಕ್] ಪರೀಕ್ಷೆಯಲ್ಲಿ ಉಚ್ಚತರಗತಿಯಲ್ಲಿ ತೇರ್ಗಡೆಯಾ[ಗಿ ...] ಎಸ್‌ಸಿ. ಪರೀಕ್ಷೆಯಲ್ಲಿಯೂ ವಿಶ್ವವಿದ್ಯಾಲಯಕ್ಕೆ [...]ನೆಯ ನಂಬರು ಬಂದಿದ್ದರು. ಇವರು ಅಚ್ಚಕನ್ನಡಿ[ಗರು]. ತಮ್ಮ ಅನುಪಮ ಯಶಸ್ಸಿನಿಂದ ಕರ್ನಾಟಕಕ್ಕೆ ಭೂ[ಷಣ]ಪ್ರಾಯರಾಗಿರುವರು.

ಇವರು ಬಾಗಲಕೋಟೆಯವರು. ಇವರ ವ[ಯಸ್ಸು] ಕೇವಲ ೨೧ ವರ್ಷ.

ಬೆಳಗಾಂವಿ ಜಿಲ್ಲೆಯ ಖಾನಾಪುರದ ಶ್ರೀಕೃಷ್ಣ[...] ಜೋಶಿಯವರ ಮಕ್ಕಳಾದ ಶ್ರೀ ವೆಂಕಟೇಶ [...] ಈ ವರ್ಷದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಸಂಸ್ಕೃ[ತದಲ್ಲಿ] ೯೭ ಗುಣಗಳನ್ನು ಪಡೆದು ಶಂಕರಶೇಟ ಶಿಷ್ಯವೃತ್ತಿ[ಯನ್ನು] ಸಂಪಾದಿಸಿದ್ದಾರೆ.

ಮುಂಬಯಿ ವಿಶ್ವವಿದ್ಯಾಲಯದ ಈ ಸಲದ [...] ಪರೀಕ್ಷೆಯಲ್ಲಿ ಶ್ರೀ. ಶ್ರೀರಾಮ ಪಾಟೀಲ (ಕಲಾಮ[...] ಬೆಳಗಾವಿ) ಇವರು ಕನ್ನಡ ವಿಷಯದಲ್ಲಿ ಮೊ[ದಲಿಗರಾಗಿ] ಉತ್ತೀರ್ಣರಾಗಿದ್ದಾರೆ ಶ್ರೀ. ಮಧುಮಾಲತಿ ಥೋ[...]ಕರ ಇವರು ಬೆಳಗಾವಿಯ ಇಂಟರ ಆರ್ಟ್ಸ್ [...] ವಿದ್ಯಾರ್ಥಿನಿಯರಲ್ಲಿ ಮೊದಲಿಗರಾಗಿಯೂ, ವಿಶ್ವ[ವಿದ್ಯಾ]ಲಯಕ್ಕೆ ಆರನೆಯವರಾಗಿಯೂ ತೇರ್ಗಡೆಯಾಗಿದ್ದಾರೆ.

ಹುಬ್ಬಳ್ಳಿಯ ಶ್ರೀ॥ ಮಾನೆ ಎಂಬವರು ಮುಂ[ಬಯಿ] ವಿಶ್ವವಿದ್ಯಾಲಯದ ಬಿ. ಈ. ಪರೀಕ್ಷೆಯಲ್ಲಿ ಮೊದಲ[...]

ಮೊದಲಿಗರಾಗಿದ್ದಾರೆ. ಕಾರವಾರ ಹಾಯ್ ಸ್ಕೂಲಿನ ಶ್ರೀ. ಕಸಬೇಕರ ಎಂಬವರು ಮ್ಯಾಟ್ರಿಕ್ಕಿನಲ್ಲಿ ಮೊದಲಿಗರಾಗಿ ಉತ್ತೀರ್ಣರಾಗಿ ಹಿಂದಿನ ಅನೇಕ ವರ್ಷಗಳ ರೆಕಾರ್ಡು ಮುರಿದಿದ್ದಾರೆ.

ಶ್ರೀಯುತ ಎಸ್. ಎ. ಕುಲಕರ್ಣಿಯವರು ನಾಸಿಕದ ಪೋಲೀಸ ಟ್ರೇನಿಂಗ ಸ್ಕೂಲಿನಲ್ಲಿ ಶಿಕ್ಷಣ ಪಡೆದು ಮೊನ್ನೆ ಯಾದ ಪರೀಕ್ಷೆಯಲ್ಲಿ ಯಶಸ್ವಿಯಾಗಿರುವರಲ್ಲದೆ ಸ್ವೋರ್ಡ ಆಫ್ ಆನರ ಎಂಬ ಬಹುಮಾನ ಪಡೆದಿರುವರು. ಇದಲ್ಲದೆ ಪಿಸ್ತೊಲ ಶೂಟಿಂಗದಲ್ಲಿ ೧೦೨ ಗುಣ ಪಡೆದು ಕಳೆದ ೨೦ ವರ್ಷಗಳ ರಿಕಾರ್ಡು ಮುರಿದಿರುವರು. ಅದರ ಬಗ್ಗೆ ಅವರಿಗೆ ಬೆಳ್ಳಿಯ ಕಪ್ಪು ಬಹುಮಾನವಾಗಿ ದೊರೆತಿರುವುದು. ಕರ್ನಾಟಕದಲ್ಲಿ ಈ ಮಾನ ಪಡೆದಿರುವವರಲ್ಲಿ ಇವರೇ ಮೊದಲಿಗರಾಗಿರುವರು.

ಕರ್ನಾಟಕ ಏಕೀಕರಣಕ್ಕೆ ನೀಲಗಿರಿಯ ಪ್ರಯತ್ನ

ಉದಕಮಂಡಲದ ಬಡಗರು, ವೀರಶೈವರು ಹಾಗೂ ಇತರ ಕನ್ನಡಿಗರು ಸಭೆಸೇರಿ ಅಲ್ಲಿ ಒಂದು ಕರ್ನಾಟಕ ಸಂಘವನ್ನು ಸ್ಥಾಪಿಸಿದ್ದಾರೆ. ಕರ್ನಾಟಕ ಸಾಹಿತ್ಯ-ಸಂಸ್ಕೃತಿಗಳನ್ನು ಉಳಿಸುವುದಕ್ಕಾಗಿ ಕರ್ನಾಟಕ ಏಕೀಕರಣಕ್ಕೆ ಸಹಾಯವಾಗುವುದೆ ಅದರ ಗುರಿ. ಈ ಸಂಘವು ಅಲ್ಲಿಯ ಮುನಿಸಿಪಾಲಿಟಿ ಹಾಗೂ ಬೋರ್ಡು ಶಾಲೆಗಳಲ್ಲಿ ಕನ್ನಡ ಕಲಿಸುವ ಏರ್ಪಾಡಾಗುವಂತೆ ಅಧಿಕಾರಿಗಳನ್ನು ಕೇಳಲಿರುವುದು.

ಡಾ. ನಾಗನಗೌಡರು

ಡಾ. ನಾಗನಗೌಡಾ ಎಂ. ಎಸ್‌ಸಿ., ಪಿಎಚ್. ಡಿ ಅವರು ಬಳ್ಳಾರಿ ಡಿ. ಬೋರ್ಡಿಗೆ ಅಧ್ಯಕ್ಷರಾದರು. ಕರ್ತೃತ್ವಶಾಲಿಗಳೂ ರಾಷ್ಟ್ರೀಯಮನೋವೃತ್ತಿಯವರೂ ಪಾಶ್ಚಾತ್ಯ ವಿದ್ಯಾಸಂಪನ್ನರೂ ಆದ ಇವರು ಆರಿಸಿ ಬಂದುದಕ್ಕೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ವಿಚಾರ ಪ್ರವಾಹ

मरुद्भिरग्न आ गहि

ಐಕ್ಯಚರ್ಚೆಯ ಆಭಾಸ

ಬಹು ದಿನಗಳಿಂದ ಗುಪ್ತವಾಗಿ ಸಾಗಿದ ಗಾಂಧಿ-ಜಿನ್ನಾ, ಜವಾಹರ-ಜಿನ್ನಾ, ಸುಭಾಸ-ಜಿನ್ನಾ ಮಾತುಕತೆಗಳ ಸ್ವರೂಪವು ಇದೀಗ ಬಯಲಿಗೆ ಬಿದ್ದಿದೆ. ಯುನೈಟೆಡ್ ಪ್ರೆಸ್ಸಿನ ತಪ್ಪಿನಿಂದಲೆ ಆಗಲಿ, ಜಿನ್ನಾ-ಜವಾಹರ ಪತ್ರವ್ಯವಹಾರವು ಪ್ರಕಟವಾಗಿ ರಾಷ್ಟ್ರಕ್ಕೊಂದು ಉಪಕಾರವೆ ಆಗಿದೆ. ಜಿನ್ನಾ ಅವರ ಅರಾಷ್ಟ್ರೀಯ-ಉದ್ಧತ ಬರೆವಣಿಗೆಗೆ ಉತ್ತರರೂಪವಾಗಿ ಜವಾಹರಲಾಲರು ಧೀರೋದಾತ್ತ ರೀತಿಯಲ್ಲಿ ಸ್ಪಷ್ಟಭಾಷೆಯಲ್ಲಿ ರಾಷ್ಟ್ರೀಯ ಮನೋಭೂಮಿಕೆಯನ್ನು ವ್ಯಕ್ತಗೊಳಿಸಿದ್ದುದು ಅಭಿನಂದನೀಯವಾಗಿದೆ. ಜಿನ್ನಾ ಅವರ ಜೋಳಿಗೆಯಿಂದ ಮುಸಲ್ಮಾನರ ಹೊಸ 'ಮುದ್ದೆ'ಗಳು ಹೊರಬಿದ್ದಿವೆ—ಅವಕ್ಕೆ ಆದಿಯೂ ಇಲ್ಲ, ಅಂತವೂ ಇಲ್ಲವೆಂಬಂತೆ ಕಾಣುತ್ತದೆ. ಇವುಗಳ ರೂಪರೇಷೆಯನ್ನು ಈ ಮುಂಚೆ ನಾವೊಮ್ಮೆ ಸೂಚಿಸಿದ್ದೇವೆ. ಮ. ಗಾಂಧಿಯವರು ಹೆಚ್ಚಿನ ಮಹತ್ವದ ಕಾರ್ಯವನ್ನು ಬಿಟ್ಟುಕೊಟ್ಟು, ಜಿನ್ನಾ ಅವರ ಬೆಟ್ಟಿಗೆ ಮುಂಬಯಿಯ ವರೆಗೆ ಹೋಗಿ ತಮ್ಮ ಈಗಿನ ಸೂಕ್ಷ್ಮ ಆರೋಗ್ಯದ ಸ್ಥಿತಿಯಲ್ಲಿ ತುಂಬಾ ಪರಿಶ್ರಮಪಟ್ಟುದು ವೃಥಾಯಾಸವಾದಂತೆಯೆ ಸರಿ. ಗಾಂಧಿ-ಜಿನ್ನಾ ಪತ್ರವ್ಯವಹಾರದಿಂದ ಜಿನ್ನಾ ಅವರ ಶಾಠ್ಯವು ಮಾತ್ರ ಪ್ರಕಟವಾಗುತ್ತದೆ; ಗಾಂಧಿಯವರ ಸಹಿಷ್ಣುತೆಯನ್ನು ನೋಡಿ ಅಗಾಧವಿಸ್ಮಯವಾಗುತ್ತದೆ. ಅದಂತಿರಲಿ; ಐಕ್ಯದ ಮಾತುಕತೆಗಳು ಮೊದಲಾಗುತ್ತಿರುವ ಸಮಯದಲ್ಲಿಯೆ ಮುಂಬಯಿಯ ಮುಸಲ್ಮಾನರ ಸಾರ್ವಜನಿಕ ಸಭೆಯೊಂದರಲ್ಲಿ ಮಹಾಮಹಾ ಮುಸಲ್ಮಾನ ಮುಖಂಡರ ಮುಕ್ತಾಫಲಗಳು ಇಂತು ಉದುರಿದವು:—

ಸರ್ ಸಿಕಂದರ ಹಯಾತಖಾನರು (ಪಂಜಾಬದ ಮುಖ್ಯಮಂತ್ರಿಗಳು):—ಹಿಂದುಗಳು ನಮ್ಮ ಬೇಡಿಕೆಗಳನ್ನು ಸ್ವೀಕರಿಸಿ ನಮ್ಮ ವಿಶ್ವಾಸವನ್ನು ಸಂಪಾದಿಸಲಿ. ನಾವು ಸಂಧಾನಕ್ಕಾಗಿ ಉತ್ಸುಕತೆಯನ್ನು ತೋರಿಸಿದರೆ, ಹಿಂದುಗಳು ನಮ್ಮನ್ನು ದುರ್ಬಲರೆಂದು ತಿಳಿದಾರು. ನಮ್ಮ ಸಂಘಟನೆಯನ್ನು ಬೆಳೆಸಬೇಕು; ಒಂದು ಪ್ರಾಂತದಲ್ಲಿಯ ಮುಸಲ್ಮಾನರು ತೊಂದರೆಗೀಡಾದರೆ, ಬೇರೆ ಪ್ರಾಂತಗಳ ಮು... ಲ್ಮಾನರು ಅವರ ಸಹಾಯಕ್ಕಾಗಿ ಧಾವಿಸಿ ಹೋಗಬೇ...

ಫಜಲುಲ್ ಹಕ್ಕ (ಬಂಗಾಲದ ಮುಖ್ಯಮಂತ್ರಿಗಳು):—ಈ ದೇಶದಲ್ಲಿ ೮ ಕೋಟಿ ಮುಸಲ್ಮಾನರಿದ್ದಾರೆ. ... ಅವರಲ್ಲಿ ನೀರಿನ ಒಂದು ಹನಿಯಾಗಿದ್ದೇನೆ ... ನಾನೊಂದು ಹೊಂಡದೊಳಗಿನ ಹನಿಯಲ್ಲ,—ಜಗತ್ತಿ... ಹಬ್ಬಿದ ಇಸ್ಲಾಮಿ ಮಹಾಸಾಗರದೊಳಗಿನ ಹನಿ... ದ್ದೇನೆ. ನಮ್ಮ ಬೆಂಗಾವಲಿಗೆ ನಿಖಿಲ ಇಸ್ಲಾಮಿ ಜಗತ್ತಿನ ಶಕ್ತಿಯು ಎದ್ದು ನಿಂತಿದೆ....

ಅಬ್ದುಲ್ ಮಜೀದರು:—"ಲೀಗು ಜಾತೀಯ ಸ... ಯಲ್ಲ, ಅದು ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಹಿಂದು... ಸ್ತಾನದ ಹೊರಗಿನ ಬೇರೆ ಇಸ್ಲಾಮಿ ರಾಷ್ಟ್ರಗಳೊಡ... ಅದು ಸಂಬಂಧವನ್ನು ಕಟ್ಟಿಕೊಂಡು, ಹಿಂದೀ ಮುಸಲ್ಮಾ... ನರ ಬಲವನ್ನು ಅದು ಬೆಳೆಸುವುದು. ಮುಸಲ್ಮಾನ... ಹಿಂದುಸ್ತಾನದಲ್ಲಿಯೆ ಇರುವರು, ಅಲ್ಲಿಯೇ ಸಾಯುವ... ಆದರೆ ಸಕಲ ಹಿಂದುಸ್ತಾನವನ್ನು ವ್ಯಾಪಿಸಿಯ ... ಸಾಯುವರು."

ಹಿಂದುಸ್ತಾನದ 'ಅಲ್‌ಸ್ಟರ'

ಕೆಲ ದಿನಗಳ ಹಿಂದೆ ಮೊಹರಂ-ಹೋಳೀಹುಣ್ಣಿವೆ... ಕೂಡಿ ಬಂದುದರ ಕಾಲದಲ್ಲಿ ಹಿಂದುಸ್ತಾನದ ಹಲ... ಜಾತೀಯ ದೊಂಬಿಗಳು ಜರುಗಿದುವು. ಎಂದಿನಂತೆ ... ಗಳೇ ಅಕಾರಣವಾಗಿ ತೊಂದರೆಗೀಡಾದರು. ಇ... ಹಿಂದೆ ಸಂಘಟಿತ ಸ್ವರೂಪದ ಸಂಚೇನಾದರೂ ಇ... ದೆಂದು ಸಾಧಾರಸಂಶಯವು ಹಲವರ ತಲೆಯಲ್ಲಿ... ಅಹಿಂಸಾ ಮೂರ್ತಿಗಳಾದ ಮ. ಗಾಂಧಿಯವರಿಗೆ ... ತೀವ್ರವೇದನೆಯನ್ನುಂಟುಮಾಡಿತು. 'ಹರಿಜನ'ದಲ್ಲಿ... ಬೇರೆ ಕಡೆಗೂ ಪ್ರಸಿದ್ಧವಾದ ಅವರ ಹೇಳಿಕೆ-ಬರಹ... ಇದಕ್ಕೆ ಸಾಕ್ಷಿಯಾಗಿವೆ. ಅದ್ದರಿಂದ ತಾವಾಗಿಯ... ಹಿಂದೂ-ಮುಸ್ಲಿಂ ಐಕ್ಯದ ಮಾತುಕತೆಗಳಿಗೆ ಸಿದ್ಧರಾದ... ಅದರ ಫಲವೇನಾಯಿತೆಂಬುದು ಎಲ್ಲರಿಗೂ ತಿಳಿದ...

'ಮುಸ್ಲಿಂ ಲೀಗ್' ಸಂಸ್ಥೆಯು ಹಿಂದೀ ಮುಸಲ್ಮಾನ... ಏಕಮಾತ್ರ ಪ್ರತಿನಿಧಿಯು ತಾನೆಂಬ ಅಭಿನಿವೇಶದ...

ಕತ್ರೀಚೆಗೆ ತಾಳತೊಡಗಿದೆ. ಕಾಂಗ್ರೆಸು ತಾನು ಹಿಂದುಗಳ ವಕಾಲತ್ತನ್ನು ಪೂರ್ಣವಾಗಿ ವಹಿಸಿ, ಮುಸಲ್ಮಾನರ ಪರವಾಗಿ ಮಾತನಾಡಲು ಮುಂದೆ ಬಂದಿರುವ ಲೀಗಿನೊಡನೆ ಪೂರ್ತಿ ಜವಾಬ್ದಾರಿಯಿಂದ ಮಾತುಕತೆ ನಡೆಸಬೇಕು—ಎಂಬುದಾಗಿ ಜಿನ್ನಾ ಪ್ರಮುಖ ಲೀಗ್ ಮುಂದಾಳುಗಳ ಅಭಿಪ್ರಾಯವಾಗಿದೆ. ಇದಕ್ಕೆ ಶುದ್ಧ ರಾಷ್ಟ್ರೀಯ ದೃಷ್ಟಿಕೋನವನ್ನಿಟ್ಟುಕೊಂಡ ಕಾಂಗ್ರೆಸು ಎಂದೂ ಒಪ್ಪಿಕೊಳ್ಳಲಾರದು.

ಜಿನ್ನಾ-ಆದಿ ಲೀಗ್ ಮುಖಂಡರು ಈ ಬಗೆಯ ಧಾರ್ಷ್ಟ್ಯವನ್ನು ತೋರಿಸುತ್ತಿದ್ದುದಕ್ಕೆ ತೋರಿಕೆಗಿಂತ ಹೆಚ್ಚಿನ ಕಾರಣಗಳಿರಬೇಕೆಂದು ಈಚೆಗೆ ಹೊರಬಂದ ಕೆಲ ಸಂಗತಿಗಳಿಂದ ತೋರುತ್ತದೆ. ಕಲ್ಕತ್ತೆಯ ಆನಂದಬಝಾರ ಎಂಬ ಬಂಗಾಲಿ ವೃತ್ತಪತ್ರಿಕೆಯು, ಇಂಗ್ಲಂಡಿನ 'ಆಬ್ಜರ್ವರ' ಎಂಬ ವಾರಪತ್ರಿಕೆಯಲ್ಲಿ ಪ್ರಸಿದ್ಧ ಆಂಗ್ಲ ರಾಜಕಾರಣಪಟುಗಳಾದ ಲಾರ್ಡ್ ಲೋದಿಯನ್ನರು ಪ್ರಕಟಗೊಳಿಸಿದ ಒಂದು ಲೇಖನವನ್ನೆತ್ತಿ ಈ ಮಾತನ್ನು ಸಿದ್ಧಪಡಿಸಿದೆ. ಈ ಲೇಖನದಲ್ಲಿ ಲೋದಿಯನ್ ದೊರೆಗಳು, ಸಂಘರಾಜ್ಯವು (ಸಂಯುಕ್ತ ರಾಜ್ಯಾಂಗಘಟನೆಯು) ಅಸ್ತಿತ್ವದಲ್ಲಿ ಬರಬೇಕಾದಲ್ಲಿ ಯಾವಯಾವ ಉಪಾಯುಗಳನ್ನು ಯೋಜಿಸಬೇಕಾದೀತೆಂಬುದನ್ನು ಚರ್ಚಿಸಿದ್ದಾರೆ. ದೊರೆಗಳವರು ಬ್ರಿಟಿಷ ಮಂತ್ರಿಮಂಡಳದ ಆಪ್ತಾಲೋಚಕರಾದುದರಿಂದ, ಅವರ ಬರೆವಣಿಗೆಯಲ್ಲಿ ಬ್ರಿಟಿಷ್ ಸರಕಾರದ ಅಭಿಪ್ರಾಯಗಳೆ ಅಡಗಿವೆಯೆಂದು ತಿಳಿದರೆ ತಪ್ಪಾಗದು. ಅವರೆನ್ನುವರು, "ಕಾಂಗ್ರೆಸಿನ ಸೂತ್ರಧಾರರ ಭಾಷಣಗಳು ಜಾತೀಯ ಭಾವನೆಗಳಿಂದ ಅಲಿಪ್ತವಾಗಿರುತ್ತವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಕಾಂಗ್ರೆಸಿನ ಬಹುಸಂಖ್ಯಾಕ ಸಭಾಸದರು ಹಿಂದೂಗಳಾಗಿದ್ದಾರೆ; ಮತ್ತು ಮಹಮ್ಮದೀಯರ, ಹಾಗು ಇಂಗ್ಲಿಷರ ದೀರ್ಘಕಾಲದ ಆಳಿಕೆಯ ತರುವಾಯ ಈಗ ಹಿಂದೂ ರಾಜ್ಯವನ್ನು ಸ್ಥಾಪಿಸಬೇಕೆಂಬ ಇಚ್ಛೆಯು ಅವರಲ್ಲಿ ಕಲೆದೋರುತ್ತಿದೆಯೆಂಬುದನ್ನು ಮುಸಲ್ಮಾನರೆಂದೂ ಮರೆಯಲಾರರು. ವಾಸ್ತವವಾಗಿ ಹಿಂದುಸ್ತಾನದಲ್ಲಿ ಮುಸಲ್ಮಾನರ ಪಾಡು ಅಲ್‌ಸ್ಟರದಂತೆಯೆ ಇದೆ. ಅಲ್‌ಸ್ಟರದ ನಿವಾಸಿಗಳಂತೆ ಧರ್ಮಭೇದಾತ್ಮಕವಾಗಿ ಮತ್ತು ಧರ್ಮಭೇದದ ಕಲಹದಿಯ ಮೇಲೆಯೆ ಅವರು ತಮ್ಮ ಸ್ವತಂತ್ರ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಯುರೋಪಿನ ಅನುಭವದಿಂದ, ಹಿಂದುಸ್ತಾನದೊಳಗಿನ ಧಾರ್ಮಿಕ ಕಲಹಗಳು ಈ ಮುಂದೆಯೂ ದೀರ್ಘಕಾಲದ ವರೆಗೆ ಸಾಗುವವೆಂದು ಖಂಡಿತವಾಗಿ ಹೇಳಬಹುದು."

ಮುಸಲ್ಮಾನ ಸಮಾಜವನ್ನು ಹಿಂದುಸ್ತಾನದೊಳಗಿನ ಒಂದು ಸ್ವತಂತ್ರ ರಾಷ್ಟ್ರವನ್ನಾಗಿ ಕಲ್ಪಿಸಬೇಕೆಂಬ ಜಿನ್ನಾ ಅವರ ಆಗ್ರಹಕ್ಕೆ ಮಾನ್ಯತೆಯಿತ್ತಂತೆಯೆ ದೊರೆಗಳವರ ಈ ಹೇಳಿಕೆಯಾಗಿದೆ. ಅಥವಾ ಬ್ರಿಟಿಷ್ ಮಂತ್ರಿಮಂಡಲದ ಪೂರ್ವಾಲೋಚನೆಯ ಮೇರೆಗೆ ಜಿನ್ನಾ ಅವರು ಸಡಿನುಡಿಯುತ್ತಿರುವರೆಂತಲೂ ಹೇಳಬಹುದು. ಹಿಂದೀ ಮುಸಲ್ಮಾನ ಸಮಾಜವು ಭಾರತೀಯ ರಾಷ್ಟ್ರಪುರುಷನಿಂದ ಒಡೆದು ಹೊರಬೀಳಬೇಕು; ಹಿಂದೀಯರ ಸ್ವಾತಂತ್ರ್ಯ ಕಾಂಕ್ಷೆಗಳಿಗೆ ಅಡ್ಡಗಾಲಾಗಿ ಪರಿಣಮಿಸಬೇಕು—ಎಂಬುದೆ ಈ ಬರೆವಣಿಗೆಯ ಧೋರಣೆಯಾಗಿದೆ. ಐರಿಷ್ ಸ್ವಾತಂತ್ರ್ಯೇತಿಹಾಸದಲ್ಲಿ ಅಲ್‌ಸ್ಟರವು ವಹಿಸಿದ ಪಾತ್ರವನ್ನೆ ಮುಸಲ್ಮಾನರು ವಹಿಸಬೇಕೆಂದು ಇದರಿಂದ ಸ್ಪಷ್ಟವಾಗುತ್ತದೆ. ಬರಲಿರುವ ಕೇಂದ್ರಸ್ವಾಯತ್ತತೆಯ ಹೋರಾಟದಲ್ಲಿ ಇಂಗ್ಲಿಷರು ಮುಸಲ್ಮಾನರನ್ನು ತಮ್ಮ ಭೇದನೀತಿಯ ಆಯುಧವಾಗಿ ಉಪಯೋಗಿಸಬೇಕೆಂದಿದ್ದಾರೆಂದೇ ಇದರಿಂದ ವ್ಯಕ್ತವಾಗುತ್ತದೆ. ಈ ಸೂಚನೆಯು ಲೋದಿಯನ್ನರ ಲೇಖನದಲ್ಲಿ ಸ್ಪಷ್ಟವಾಗಿ ಇಲ್ಲದಿಲ್ಲ. 'ಫೆಡರೇಶನ್ ನಡೆಸಿಕೊಂಡು ಹೋಗುವ ವಿಚಾರದಲ್ಲಿ ಕಾಂಗ್ರೆಸೊಂದನ್ನೆ ಅವಲಂಬಿಸುವುದು ಸರಿಯಾಗದು. ಬ್ರಿಟಿಷರು, ಸಂಸ್ಥಾನಿಕರು, ಮುಸಲ್ಮಾನರು, ಕಾಂಗ್ರೆಸು—ಈ ನಾಲ್ವರ ಸಹಕಾರದಿಂದಲೆ ಫೇಡರೇಶನ್ನು ವ್ಯವಸ್ಥಿತವಾಗಿಸಾಗೀತು.' ಇದಕ್ಕಾಗಿ ಮುಸಲ್ಮಾನ ಜನತೆಯ ಅಲ್‌ಸ್ಟರ ನಿರ್ಮಾಣವೆ ಉಪಾಯವೆಂದು ಬ್ರಿಟಿಷರು ಮನಗಂಡಿರಬಹುದು. ಈ ಬೆನ್ನಾಸರದ ಬಲದಿಂದಲೆ ಜಿನ್ನಾ ಅವರು ಇಷ್ಟು ಅಶಿಷ್ಟ-ಅವಿನೀತರೀತಿಯಲ್ಲಿ ಸಂಧಾನದ ಮಾತುಕತೆಗಳನ್ನು ಹಣಿದುಹಾಕಿರಬೇಕು. ಈಚೆಗೆ ಭಾರಮಂತ್ರಿಗಳಾದ ಝೆಟ್ಲಂಡರು, ಭಾವೀ ಕೇಂದ್ರಸ್ವರಾಜ್ಯ ಯೋಜನೆಯಲ್ಲಿ ರವಷ್ಟೂ ಬದಲಾವಣೆಯನ್ನು ಮಾಡಲು ಬ್ರಿಟಿಷ್ ಸರಕಾರವು ಇಷ್ಟಪಡುವುದಿಲ್ಲವೆಂದು ಹೇಳಿದುದು ಮೇಲಣ ಮಾತಿಗೆ ಪೂರಕವಾಗಿಯೇ ಇದ್ದಿರಬಹುದೇ ?

ಕಾಮ್ರೇಡ್ ಮಸಾನಿಯವರ ಸ್ಪಷ್ಟೋಕ್ತಿ

ಸಾಮ್ಯವಾದ ತತ್ವಜ್ಞಾನವು (Socialism) ಹಿಂದುಸ್ತಾನದಲ್ಲಿ ಅಷ್ಟು ಬಲವಾಗಿ ಬೇರೂರದಿರಲಿಕ್ಕೆ ಅದರ ಪ್ರಚಾರಕರ ತಪ್ಪುರೀತಿಯೇ ಕಾರಣವಾಗಿದೆ. ಸಾಮ್ಯವಾದದ ಪುರಸ್ಕಾರವನ್ನು ಮಾಡುಮಾಡುತ್ತ, ರಶ್ಯದಲ್ಲಿಯ ಆಡಳಿತದ ಪ್ರಯೋಗವನ್ನು ಮುಗಿಲೆತ್ತರವಾಗಿ ಹೊಗಳುತ್ತ, ಧರ್ಮಸಂಸ್ಕೃತಿಗಳನ್ನು ಮನಸ್ವಿಯಾಗಿ

ಬಯ್ಯುವುದು, ಅದೊಂದು ವ್ಯಾವಹಾರಿಕ ಅರ್ಥಶಾಸ್ತ್ರೀಯ, ಸಮಾಜವ್ಯವಸ್ಥೆಯೆಂಬುದನ್ನು ಮಾತ್ರ ತೋರಿಸಿಕೊಡದೆ ನೂರಾರು ಹೊರಗಿನ ಅಂಶಗಳನ್ನು ತರುವುದು—ಈ ಎಲ್ಲ ರೀತಿಗಳ ಮೂಲಕ ಸಾಮ್ಯವಾದದ ಸಾಧುಸ್ವರೂಪವು ಜನತೆಗೆ ತಿಳಿಯದಾಗಿದೆ.

ರಸ್ಯದಲ್ಲಿ ನಡೆದ ಹತ್ಯಾಕಾಂಡವನ್ನು ಕುರಿತು ಈ ಪೂರ್ವದಲ್ಲಿ ನಾವು ಹಲವು ಸಲ ಬರೆದಿದ್ದೇವೆ. ಸ್ಟಾಲಿನ್ನನ ರುಧಿರಪ್ರಿಯತೆಯು ಈಚೆಗೆ ಹಲವು ಹಿಂದೀ ಸಾಮ್ಯವಾದಿಗಳ ಮನಸ್ಸಿನಲ್ಲಿಯೂ ಜುಗುಪ್ಸೆಯನ್ನು ಹುಟ್ಟಿಸಿದೆ. ಮುಂಬಯಿಯ ಬ್ಯಾ. ಮಸಾನಿಯವರು ಪ್ರಸಿದ್ಧ ತರುಣ ಸಾಮ್ಯವಾದಿ ಮುಖಂಡರು. ಅವರಿಗೂ ಈ ಬಗ್ಗೆ ಓಕರಿಕೆ ಬಂದು ಒಂದು ಎಚ್ಚರಿಕೆಯ ಲೇಖನವನ್ನು ಬರೆದಿದ್ದಾರೆ. ಸುಪ್ರಸಿದ್ಧ ಹಿಂದೀ ಕ್ರಾಂತಿಕಾರರಾದ ಶ್ರೀ. ವೀರೇಂದ್ರನಾಥ ಚಟ್ಟೋಪಾಧ್ಯಾಯರನ್ನು ಸ್ಟಾಲಿನ್ನನ ಸರಕಾರವು ಬಂಧನದಲ್ಲಿರಿಸಿದೆಯೆಂಬ ವರ್ತಮಾನವು ಅವರಲ್ಲಿ ಕಳವಳವನ್ನು ಹುಟ್ಟಿಸಿದೆ. ರಸ್ಯದ ಬಗ್ಗೆ ಇಷ್ಟು ದಿನ ಸತ್ಯಕಥನಕ್ಕೆ ಹಿಂಜರಿಯುತ್ತಿದ್ದೆವು; ಇನ್ನು ಇದು ಸಾಕು—ಎಂದು ಅವರೆನ್ನುತ್ತಿದ್ದಾರೆ. "ನನಗೆ ಸಾಮ್ಯವಾದವು ಪ್ರಿಯವಾಗಿದೆ. ರಸ್ಯದ ಮೇಲೆಯೂ ನನಗೆ ಭಕ್ತಿವಿಶ್ವಾಸವಿದೆ—ಆದರೆ ಅದು ಗೌಣವಾಗಿದೆ. ರಸ್ಯದಲ್ಲಿ ಇದೀಗ ನಡೆದ ಮನುಷ್ಯಯಜ್ಞದಿಂದ ಸಾಮ್ಯವಾದದ ಧ್ಯೇಯದೃಷ್ಟಿಗೆ ಕುಂದು ಬರುವುದರಿಂದ, ಈಗ ನಡೆದುದಕ್ಕೆ ಯಾವ ಹೆಸರಿಟ್ಟರೂ ಅದು ಸಾಮ್ಯವಾದ ಮಾತ್ರ ಖಂಡಿತ ಅಲ್ಲ ಎಂದು ಸ್ಪಷ್ಟವಾಗಿ ಹೇಳುವ ಹೊತ್ತು ಬಂದಿದೆ."...., "ವಾದಿಯ ಪಕ್ಷವೇ ನಿಜವೆಂದೂ ಆರೋಪಿತರ 'ಒಪ್ಪಿಗೆ ಪತ್ರ'ಗಳೇ ಸತ್ಯವಾದುವೆಂದೂ ನಂಬಿದರೆ, ಟ್ರಾಟ್ಸ್ಕಿ, ರಿಕೊವ್ಹ್, ಬುಖಾರಿನ್, ಕಾಮೆನೆವ್ಹ್, ಝಿನೊವ್ಹಿಫ್, ರಾಡೆಕ್, ರಾಕಾವ್ಹಿಸ್ಕಿ, ತುಕಾಚೆವ್ಹಿಸ್ಕಿ ಮೊದಲಾದ ಪ್ರಸಿದ್ಧ ಮುಖಂಡರೂ ೧೯೩೭ರಲ್ಲಿ ಗಲ್ಲಿಗೇರಿಸಲ್ಪಟ್ಟ ೬೦೦೦ ಜನರೆಲ್ಲರೂ 'ಫಾಸಿಸ್ಟ್' ರಾಜ್ಯಕರ್ತರ ಕೈಗೊಂಬೆಗಳೆಂದೂ ದೇಶದ್ರೋಹಿಗಳೆಂದೂ ಎನ್ನಬೇಕಾಗುತ್ತದೆ! ಇವರಲ್ಲಿ ೭೦% ಜನರು ಕಮ್ಯುನಿಸ್ಟ್ ಪಕ್ಷದ ಪ್ರಮುಖ ಸಭಾಸದರಿದ್ದರೆಂಬುದನ್ನು ನೆನೆದ ಮೇಲೆ, ಇವರೆಲ್ಲ ರಸ್ಯದಲ್ಲಿ ಬಂಡವಾಳದವರ ರಾಜ್ಯವನ್ನು ಪ್ರಸ್ಥಾಪಿಸಲು ಇಷ್ಟಪಟ್ಟಿದ್ದರೆಂದು ಒಪ್ಪಿಕೊಳ್ಳಬೇಕಾಗುವುದು. ಕಮ್ಯುನಿಸ್ಟ್ ಪಕ್ಷದ ಪ್ರಸಿದ್ಧ ಪಾಲಿಟ್ ಬ್ಯೂರೊ, ಏಸಿಯದಲ್ಲಿಯ ರಿಪಬ್ಲಿಕನ್ ಮುಂದಾಳುಗಳು, ಉತ್ತಮ ಸೇನಾನಿಗಳು, ವಯೋವೃದ್ಧ ನೌಕಾಧಿಕಾರಿಗಳು, ರಾಜನೀತಿಜ್ಞರು—ಇವರೆಲ್ಲ ತಾವೇ ವಿರುದ್ಧವಾಗಿ ದೊಡ್ಡ ಒಳಸಂಚನ್ನು ಹೂಡಿದ್ದ[...] ಬೇಕಾಗುತ್ತದೆ! ಏಕೆಂದರೆ ಸತ್ತಾಸೂತ್ರಗಳು ಇವರ ಕೈ[...]ಲ್ಲಿಯೇ ಕೇಂದ್ರೀಭೂತವಾಗಿದ್ದವು. ಈ ಒಡಕವನ್ನು [...]ಯುವುದೆಂತು? ದೇಶದಲ್ಲಿಯ ಅತ್ಯಂತ ಬುದ್ಧಿಶಾಲಿ[...] ರಾಜನೀತಿಚತುರರೂ ದಣ್ಣಾಯಕರೂ ತತ್ವಜ್ಞಾನಿಗ[...] ಎಲ್ಲರೂ ದ್ರೋಹಿಗಳೇ! ಲೆನಿನನ ಅತ್ಯಂತ ವಿಶ್ವಾಸ[...] ಗಲ್ಲಿಗೇರಿಸಲ್ಪಟ್ಟರೆಂತು? ಡಾ. ಲೆವ್ಹಿನ್‌ನಂತಹ [...] ವಿಖ್ಯಾತ ಡಾಕ್ಟರನು ಮೆಕ್ಸಿಂ ಗೋರ್ಕಿಯಂತಹ[...]ಯನ್ನು ಪೋಲೀಸ್ ಅಧಿಕಾರಿಗಳ ಹೆದರಿಕೆಯಿಂದ [...]ನೆಂಬುದನ್ನು ನಂಬುವುದೆಂತು? ಪೋಲೀಸರೇ [...] ಕಬೂಲಿಜವಾಬುಗಳನ್ನು ಸಿದ್ಧಪಡಿಸಿಲ್ಲವೆಂದು ಹೇಗೆ [...]ಬೇಕು?"

ಕಾಮ್ರೇಡ್ ಮಸಾನಿಯವರ ನಿಃಸ್ಪೃಹ ಸತ್ಯ[...] ಬೇರೆ ಸಾಮ್ಯವಾದಿ ತರುಣರೂ ಅನುಕರಿಸಬೇಕು[...]

ಕೋಚೀನಿನ ಮುಂದಡಿ

ತ್ರಾವಣಕೋರ ಸಂಸ್ಥಾನವು ಅಸ್ಪೃಶ್ಯರಿಗೆ [...] ಪ್ರವೇಶದ ಅಧಿಕಾರವನ್ನು ಕೊಟ್ಟು ಭಾರತದಲ್ಲಿ[...] ಕೀರ್ತಿಯನ್ನು ಮೊಳಗಿಸಿತಷ್ಟೆ. ಅದೆ ಸಮಯಕ್ಕೆ ಕೋ[...] ಸಂಸ್ಥಾನದಲ್ಲಿ ಅಸ್ಪೃಶ್ಯರಿಗೆ ಮಂದಿರ ಪ್ರವೇಶಕ್ಕೆ [...] ಬೇಕೆಂದು ನಡೆದ ಪ್ರಯತ್ನಗಳೆಲ್ಲ ವಿಫಲವಾಗಲು [...] ಕೋಚೀನವನ್ನು ಹೀಯಾಳಿಸಿತು. ಆದರೆ ಕಳೆದ [...] ೧೭ನೆ ತಾರೀಖಿಗೆ ಕೋಚೀನಿನ ರಾಜಕೀಯ [...] ಒಂದು ಹೊಸ ಮನ್ವಂತರದ ಆರಂಭವಾಗಿ ಮಿಕ್ಕ [...]ಗಳಿಗೆ ಕೋಚೀನು ಮುಂದಾಳುತನವನ್ನು [...]ಸಿತು. ಈ ವರೆಗೆ ಕೋಚೀನಿನಲ್ಲಿ ಅನೇಕ [...] ರಾಜಕೀಯ ಅಧಿಕಾರಗಳು ಮಹಾರಾಜರ ನಿರಂಕು[...]ತ್ವದ ಕೈಯಲ್ಲಿಯೇ ಇದ್ದವು. ೧೫ ವರ್ಷಗ[...] ವಿಧಿಮಂಡಲವಿದ್ದರೂ ರೇಲ್ವೆ-ಬಂದರಗಳ ಮೇಲೆ [...] ಅಧಿಕಾವಿರಲಿಲ್ಲ. ಆದರೆ ಮೊನ್ನೆ ಸಂಸ್ಥಾನದಲ್ಲಿ ದ್ವಿದ[...] ಪದ್ಧತಿಯನ್ನಾರಂಭಿಸಿದಂದಿನಿಂದ ಆ ಅಧಿಕಾರಗ[...] ಮಂಡಲಕ್ಕೆ ಸಿಕ್ಕಿವೆ. ಮೊನ್ನೆ ನಡೆದ ಚುನಾವ[...] ಕಾಂಗ್ರೆಸ್ ಪಕ್ಷದಿಂದ ಆರಿಸಿಬಂದ ಶ್ರೀ. ಅಂಬಟ [...] ಮೇನನ ಅವರಿಗೆ ದಿವಾಣರ ಉಡಿಗೆಗಳನ್ನು [...]ಯಿತು. ಅವರ ಕಡೆಗೆ ಕೃಷಿ, ಆಯುರ್ವೇದ, [...] ಸಂಸ್ಥೆ, ಪಂಚಾಯತಿ, ಆರೋಗ್ಯ, ಉದ್ಯೋಗ [...]

ಯಕ್ಕೆ ಸಂಬಂಧಿಸಿದ ಅಧಿಕಾರಗಳೆಲ್ಲ ಕೊಡಲ್ಪಟ್ಟವು. ಹೊಸ ಯೋಜನೆಯಂತೆ ವಿಧಿಮಂಡಲದ ೬೦ ಸದಸ್ಯರಲ್ಲಿ ೪೮ ಸದಸ್ಯರು ಲೋಕನಿಯುಕ್ತರು. ಸಂಸ್ಥಾನವು ಪ್ರತಿವರ್ಷ ಉತ್ಪಾದಿಸಿ ಕಳಿಸಲಿಕ್ಕೆ ವೆಚ್ಚಿಸುವ ೮೬ ಲಕ್ಷ ರೂಪಾಯಿಗಳಲ್ಲಿ ೯ ಲಕ್ಷ ರೂಪಾಯಿಗಳ ಮೇಲಷ್ಟೆ ವಿಧಿಮಂಡಲದ ಅಧಿಕಾರ ಇಲ್ಲ. ಇದರ ಮೇಲಿಂದ ನವೀನ ಆಡಳಿತ ಯೋಜನೆಯ ಮಹತ್ವವು ಹೊಳೆಯುವುದು. ಮಿಕ್ಕ ಸಂಸ್ಥಾನಗಳಿಗೆ ವಿಶೇಷವಾಗಿ ಈ ವಿಷಯದಲ್ಲಿ ಲಾಂಗೂಲಚಾಲನ ನಡೆಸಿರುವ ತ್ರಾವಣಕೋರ ಸಂಸ್ಥಾನಕ್ಕೆ, ಕೋಚೀನವು ಮೇಲ್ಪಂಕ್ತಿಯನ್ನು ಹಾಕಿದಂತಾಗಲಿಲ್ಲವೇ ?

ಹಿಂದೀವಿರೋಧಕ ಆಂದೋಲನ

ಮದ್ರಾಸದಲ್ಲಿಯ ಹಿಂದೀವಿರೋಧಕ ಸತ್ಯಾಗ್ರಹ ಆಂದೋಲನವು ಕೆಲ ಉಪಾಧ್ಯಾಯರ ಚಟುವಟಿಕೆಯಾಗಿ ದೆಯೆಂದು ತಿಳಿಯುವುದು ತಪ್ಪಾಗುವುದು. ಬ್ರಾಹ್ಮಣ-ಅಬ್ರಾಹ್ಮಣ ವಾದದ ಬಣ್ಣವನ್ನು ಅದಕ್ಕೆ ಬಳಿಯುವುದೂ ಅಷ್ಟೇ ತಪ್ಪಾಗುವುದು. ಒಂದು ವರ್ಷಕ್ಕಿಂತ ಹಿಂದಿನಿಂದಲೂ ಇದರ ಪ್ರತಿಧ್ವನಿಗಳು ಕೇಳಿಸುತ್ತಲೇ ಇದ್ದವು. ಅನ್ನಸತ್ಯಾಗ್ರಹವೇ ಮೊದಲಾದವು ಆ ಅಸಂತೋಷದ ಪರಿಸ್ಫುಟತೆಯನ್ನು ಮಾತ್ರ ತೋರಿಸುತ್ತವೆ.

ಹಿಂದೀಯನ್ನು ರಾಷ್ಟ್ರಭಾಷೆಯಾಗಿ ಸ್ವೀಕರಿಸಬಾರದೆಂದು ಯಾವ ಪ್ರಾಂತಭಾಷಾಭಿಮಾನಿಯೂ ಹೇಳುತ್ತಿಲ್ಲ; ಪ್ರಾಂತಭಾಷೆಗೆ ಗಟ್ಟಿಮುಟ್ಟಿಯಾದ ತಳಪಾಯವು ಹಾಕಲ್ಪಡುವ ವರೆಗೂ ರಾಷ್ಟ್ರಭಾಷೆಯ ಹೆಸರಿನಲ್ಲಿ ಇನ್ನಾವ ದೇಶಭಾಷೆಗೂ ಅವಾಸ್ತವ ಪ್ರಾಶಸ್ತ್ಯ ಸಿಗಬಾರದೆಂಬುದೇ ಅವರ ವಾದದ ತಿರುಳಾಗಿದೆ.

ಈ ಸತ್ಯಾಗ್ರಹದ ಫಲವಾಗಿ, ಮದ್ರಾಸಿನ ಮಂತ್ರಿವರ್ಯ ಶ್ರೀ. ರಾಜಗೋಪಾಲಾಚಾರ್ಯರು ದೇಶಭಾಷೆಗಳ ಸ್ಥಾನವನ್ನು ಕುರಿತು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕಾಯಿತೆಂಬುದೇನೂ ಸಣ್ಣ ಮಾತಲ್ಲ. ಅದರಲ್ಲಿಯ ಮುಖ್ಯಾಂಶಗಳಿವು:—(೧) ಉದಾರ ಶಿಕ್ಷಣ (Liberal Education)ದ ಪರಿಪೂರ್ತಿಗಾಗಿ ಬಹುಸಂಖ್ಯಾಕರು ಮಾತನಾಡುವ ಭಾಷೆಯ ವ್ಯಾವಹಾರಿಕ ಜ್ಞಾನವು ವಿದ್ಯಾರ್ಥಿಗಳಿಗೆ ಆವಶ್ಯಕವಾಗಿದೆ. (೨) ಪ್ರಾಥಮಿಕ ಶಾಲೆಗಳಲ್ಲಿ ಹಿಂದುಸ್ತಾನಿಯನ್ನು ಪ್ರಾರಂಭಿಸಬೇಕೆಂದು ಸರಕಾರದವರು ಇಚ್ಛಿಸುತ್ತಿಲ್ಲ. ಆ ಶಾಲೆಗಳಲ್ಲಿ ತಮಿಳ, ತೆಲುಗು, ಕನ್ನಡ, ಮಲಿಯಾಳಿಗಳೇ ಬಳಸಲ್ಪಡುವವು. (೩) ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮವಾಗಿ ಜಾರಿಯಲ್ಲಿರುವುದು; ಪರಕೀಯ ಭಾಷೆಯನ್ನು ಮಾಧ್ಯಮವನ್ನಾಗಿ ಉಪಯೋಗಿಸಿ ಕಾಲಯಾಪನೆ ಮಾಡಬಾರದಾಗಿ ಶಿಕ್ಷಕರಿಗೆ ಅಪ್ಪಣೆ ಕೊಡಲಾಗುವುದು. (೪) ಮಾತೃಭಾಷೆಯ ಜ್ಞಾನವು ವಿದ್ಯಾರ್ಥಿಗಳಿಗೆ ಸದ್ಯಕ್ಕಿಂತ ಉಚ್ಚ ರೀತಿಯಲ್ಲಿ ದೊರಕಬೇಕೆಂದು ಸರಕಾರವು ತುಂಬಾ ಪ್ರಯತ್ನವನ್ನು ಮಾಡುತ್ತಿದೆ. (೫) ೬ರಿಂದ ೮ನೆಯ ತರಗತಿಯವರೆಗೆ (ಎಂದರೆ ಹೈಸ್ಕೂಲುಗಳಲ್ಲಿ ಮಾತ್ರ) ಈ ಶಿಕ್ಷಣವನ್ನು ಕೊಡಲಾಗುವುದು. (೬) ತಮ್ಮ ಮಾತೃಭಾಷೆಯ ಹೊರತಾಗಿ ಹಿಂದುಸ್ತಾನಿಯ ಶಿಕ್ಷಣ ತೆಗೆದುಕೊಳ್ಳಲು ಯಾರಿಗೂ ಐಚ್ಛಿಕ ಸೌಕರ್ಯವಿಲ್ಲ. (೭) ಶಾಲೆಯಲ್ಲಿಯ ಪ್ರತಿನಿತ್ಯದ ಅಭ್ಯಾಸಕ್ರಮದಲ್ಲಿ ಹಿಂದುಸ್ತಾನಿಯ ಸೇರ್ಪಡೆಯಾಗುತ್ತಿದ್ದರೂ, ಕೆಳಗಿನ ತರಗತಿಯಿಂದ ಮೇಲಕ್ಕೆ ಹೋಗುವಾಗ ಹಿಂದುಸ್ತಾನಿಯಿಂದ ತೊಂದರೆಯಾಗಲಾರದು....ಇ.

ಸರಕಾರಿ ಪತ್ರಕದಲ್ಲಿ 'ಹಿಂದೀ' ಶಬ್ದದ ಬದಲು 'ಹಿಂದುಸ್ತಾನಿ' ಶಬ್ದವನ್ನು ನಿರಪವಾದವಾಗಿ ಪ್ರಯೋಗಿಸಲಾಗಿದೆ. ಉತ್ತರ ಹಿಂದುಸ್ತಾನದಲ್ಲಿಯ ವಾದದ ಪರಿಭಾಷೆಯಲ್ಲಿ, 'ಹಿಂದೀ' ಸುಲಭ ಸಂಸ್ಕೃತ ಪ್ರಚುರವೂ, 'ಹಿಂದುಸ್ತಾನೀ' ಅರಬ್ಬೀ-ಫಾರ್ಸೀ ಪ್ರಧಾನವೂ ಎಂದು ಎಣಿಸಲಾಗಿದೆ. ಮೇಲಣ ಶಬ್ದಪ್ರಯೋಗವು, ಮದ್ರಾಸ ಸರಕಾರದವರ ಉರ್ದೂ ಪಕ್ಷಪಾತವನ್ನು ಸೂಚಿಸುತ್ತಿಲ್ಲವಷ್ಟೇ ?

ಸಂಸ್ಥಾನಗಳಲ್ಲಿ ಜಾಗೃತಿ

ಮೈಸೂರು—ಮಾನ್ಸಾ—ರಾಮದುರ್ಗ—ಜಮಖಂಡಿ! ಕಾಲಗತಿಯು ಎಷ್ಟು ವೇಗದಿಂದ ಚಲಿಸುತ್ತಿದೆ! ರಾಮದುರ್ಗದಲ್ಲಾದ ಅದ್ಭುತ ಪ್ರಜಾಜಾಗೃತಿಯೇ ಜಮಖಂಡಿಯವರು ತಾವಾಗಿ ಪ್ರಜಾಧಿಕಾರಗಳ ಘೋಷಣೆಯನ್ನು ಮಾಡಲು ಪ್ರೇರಿಸಿತೆಂಬುದರಲ್ಲಿ ಸಂದೇಹವಿಲ್ಲ. ರಾಮದುರ್ಗದ ಪ್ರಜಾವರ್ಗಕ್ಕೆ ನಮ್ಮ ಅಭಿನಂದನೆಗಳು!

ರಾಮದುರ್ಗವು ತೋರಿದ ಬೆಳಕು ಬೇರೆ ಉತ್ತರ ಕರ್ನಾಟಕದ ಸಂಸ್ಥಾನಗಳಲ್ಲಿಯೂ ನುಗ್ಗಬೇಕು; ಅಲ್ಲಿಯ ಮಧ್ಯಮಯುಗದ ಅಂಧಕಾರವನ್ನು ಸೀಳಬೇಕು. ಬ್ರಿಟಿಷ್ ಕರ್ನಾಟಕದೊಡನೆ ಸಮಾನತೆಯ ಸ್ಥಾನವನ್ನೊದವಿಸಬೇಕು.

ಕನ್ನಡ ಸಂಸ್ಥಾನಗಳಲ್ಲಿ ಕನ್ನಡಕ್ಕೆ ಮನ್ನಣೆ

ಜಮಖಂಡಿ, ರಾಮದುರ್ಗ, ಮುಧೋಳ, ಮೈಸೂರು, ಸೊಂಡೂರು ಮುಂತಾದವುಗಳು ಅಚ್ಚಕನ್ನಡ ಸಂಸ್ಥಾನಗಳಾಗಿವೆ.

ಮಿರಜಿ, ಕೊಲ್ಹಾಪೂರ, ಸಾಂಗಲಿ, ಕುರುಂದವಾಡ, ಔಂಧ, ಹೈದ
ರಾಬಾದ ಸಂಸ್ಥಾನಗಳಲ್ಲಿಯ ಹಲವು ಭಾಗಗಳು ಕನ್ನಡವಾಗಿ-
ಹೀಗಿದ್ದರೂ ಮೈಸೂರನ್ನೊಂದು ಬಿಟ್ಟರೆ ಉಳಿದ ಸಂಸ್ಥಾನಗಳಲ್ಲಿ
ಕನ್ನಡಕ್ಕೆ ತಕ್ಕ ಮನ್ನಣೆಯಿರಲಿಲ್ಲ, ಇರುವುದಿಲ್ಲ. ಕೋರ್ಟು
ಕಚೇರಿಗಳ ಭಾಷೆ ಕನ್ನಡವಿಲ್ಲ, ಕನ್ನಡ ಸಾಲೆಗಳಿಲ್ಲ, ಗೌಡ ಶ್ಯಾನು
ಭೋಗರ ಕಾಗದಪತ್ರಗಳು ಅನ್ಯಭಾಷೆಗಳಲ್ಲಿ. ಹೀಗಾಗಿ ಕನ್ನಡಿ
ಗರಿಗೆ ಬಗೆಬಗೆಯಿಂದ ತೊಂದರೆಯಾಗುತ್ತಿತ್ತು. ಈ ಅನ್ಯಾಯ
ವನ್ನು ದೂರಮಾಡಬೇಕೆಂದು ಕರ್ನಾಟಕದಲ್ಲಿಯ ಅನೇಕ ಪ್ರಮುಖ
ಸಂಸ್ಥೆಗಳು, ಮಹಾಜನರು, ಕಾಯದೆಮಂಡಳಗಳು ಎಷ್ಟೊಂದು
ಕೇಳಿಕೊಂಡರೂ ಇನ್ನೂ ವರೆಗೆ ಪ್ರಜಾಭಾಷೆಯೆಂಬ ತತ್ವವು ಕೂಡ
ಮನ್ನಿಸಲ್ಪಟ್ಟಿರಲಿಲ್ಲ. ಹಲವು ಸಂಸ್ಥಾನಗಳಲ್ಲಿ ಕನ್ನಡದ ವಿರುದ್ಧ
'ಆರ್ಡಿನನ್ಸ'ಗಳೂ ಹೊರಬಿದ್ದುದು ಸರ್ವಶ್ರುತವಿದೆ. ಆದರೆ
ಕನ್ನಡಿಗರಲ್ಲಿದೀಗ ಆದ ಜಾಗ್ರತಿಯಿಂದ ಸಂಸ್ಥಾನಿಕರು ಸ್ವಲ್ಪ ಎಚ್ಚೆ
ತ್ತಿದ್ದು, ಇನ್ನು ಮುಂದೆ ತಮ್ಮ ಧೋರಣೆಯಲ್ಲಿ ಬದಲಾವಣೆ ಮಾಡ
ದಿದ್ದರೆ ರಾಜ್ಯವು ಸುರಳಿತ ಸಾಗದೆಂಬುದನ್ನು ಕಂಡುಹಿಡಿದಿರುವ
ರಾಮದುರ್ಗ-ಜಮಖಂಡಿ ರಾಜೇಸಾಹೇಬರು ಮೊನ್ನೆ ಮೊನ್ನೆ
ಪ್ರಜೆಗಳೊಡನೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಕನ್ನಡವೇ ಬಹು
ಸಂಖ್ಯಾಕ ಪ್ರಜೆಗಳ ಭಾಷೆಯಾಗಿದೆಂಬದನ್ನೊಪ್ಪಿ, ಅದನ್ನೇ
ಕೋರ್ಟು—ಕಚೇರಿಗಳ ಭಾಷೆಯನ್ನಾಗಿಮಾಡುವ ತತ್ವಕ್ಕೆ ಮನ್ನಣೆ
ಕೊಟ್ಟಿದ್ದಾರೆ. ಮತ್ತು ಕ್ರಮಶಃ ಅದನ್ನು ಜಾರಿಯಲ್ಲಿ ತರಲಾಗುವು
ದೆಂದು ಜಾಹೀರಮಾಡಿದ್ದಾರೆ.

ಕೋರ್ಟು-ಕಚೇರಿಗಳಲ್ಲಿ ಕ್ರಮಶಃ ಕನ್ನಡವನ್ನು ಜಾರಿಯಲ್ಲಿ
ತರಲಾಗುವುದೆಂದು ಜಾಹೀರ ಮಾಡಿದ್ದಾರೆ. ಆದರೆ ಕ್ರಮಶಃ
ಇದರ ಅರ್ಥವೇನು ? ಇಂತಿಷ್ಟೇ ದಿನಗಳಲ್ಲಿ ಸರಕಾರದ ಕಾಗದ
ಪತ್ರಗಳನ್ನೆಲ್ಲ ಕನ್ನಡಮಯ ಮಾಡುವದೆಂದಿಟ್ಟುಕೊಳ್ಳುವ ವರೆಗೆ
ಈ ಕಾರ್ಯವೆಂದಿಗೂ ಸಾಧ್ಯವಾಗಲಾರದು. ಘೋಷಣೆಯು
ಕೇವಲ ಆಶೀರ್ವಾದದ ಸ್ವರೂಪದಲ್ಲಿಯೇ ಉಳಿಯುವದು. ಬಹು
ದಿನಗಳಿಂದ ಮರಾಠೀ ದಪ್ತರವಿದ್ದ ಕೋರ್ಟು ಕಚೇರಿಗಳಲ್ಲಿ ಕೂಡಲೇ
ಕನ್ನಡ ಭಾಷೆಯನ್ನು ಪ್ರಾರಂಭಿಸಲು ಕೆಲವು ಅಡಚಣಿಗಳು ಬರ
ಬಹುದು. ಆದರೆ ಈ ಅಡಚಣಿಗಳನ್ನು ನಿವಾರಿಸಲು ಸಂಸ್ಥಾನ
ಸರಕಾರದವರು ಒಳ್ಳೇ ಆಸ್ಥೆಯಿಂದ ಪ್ರಯತ್ನಿಸಿದರೆ ಬಲು ಬೇಗ
ಅದಕ್ಕೆ ಯಶಸ್ಸು ಸಿಕ್ಕುವದು. ಈ ಸಂಸ್ಥಾನಗಳಲ್ಲಿಯ ಗೌಡ-
ಕುಲಕರ್ಣಿಯರಂತೂ ಶುದ್ಧ ಕನ್ನಡಿಗರೇ ಆಗಿರುವರು. ಅವರಿಗೆ
ಮರಾಠಿ ಭಾಷೆಯೇ ಬರುವದಿಲ್ಲ. ನಿರ್ವಾಹವಿಲ್ಲದೆ ತಮ್ಮ ಹರಕು
ಮುರುಕು ಮರಾಠಿಯಲ್ಲಿ ಹೇಗೆಹೇಗೋ ಕೆಲಸ ಸಾಗಿಸುತ್ತಿರುವರು.
ಆದುದರಿಂದ ಗೌಡ ಕುಲಕರ್ಣಿಯರ ಕಾಗದಪತ್ರಗಳನ್ನೆಲ್ಲ ಕೂಡಲೆ
ಕನ್ನಡದಲ್ಲಿ ಇಡಬೇಕೆಂದು ಹುಕುಮು ಹೊರಡಿಸಿದ್ದಾದರೆ, ಅವ
ರಿಗೂ ಹಿತವಾಗುವದು, ಜನತೆಯ ತೊಂದರೆಯೂ ನಿವಾರಣವಾಗು
ವದು. ಇನ್ನು ಮೇಲಧಿಕಾರಿಗಳಲ್ಲಿ ಹಲವರಿಗೆ ಕನ್ನಡ ಬರಲಿಕ್ಕಿಲ್ಲ.
ಆದರೆ ಅಂಥವರಿಗೆ ಇಂತಿಷ್ಟು ದಿನಗಳಲ್ಲಿ ಕನ್ನಡ ಕಲಿಯಲಿಕ್ಕೆ
ಬೇಕೆಂದು ನಿರ್ಬಂಧಪಡಿಸಿದರೆ ಆ ಅವಧಿಯಲ್ಲಿ ಅವರು ವ್ಯವಹಾರಕ್ಕೆ
ಬೇಕಾಗುವಷ್ಟು ಕನ್ನಡ ಕಲಿಯಬಹುದು....

ರಾಮದುರ್ಗ ಜಮಖಂಡಿ ಸಂಸ್ಥಾನಿಕರು ತತ್ವಶ್ಯಾ[illegible]
ದ್ದುಂಟು. ಆದರೆ ಮುಧೋಳ, ಹೈದರಾಬಾದ, ಸಾಂಗಲಿ, [illegible]
ಔಂಧ ಮೊದಲಾದ ಸಂಸ್ಥಾನಿಕರು ಇನ್ನೂ ತಮ್ಮ ಭಾಷೆ[illegible]
ಒತ್ತಾಯದಿಂದ ಹೇರುತ್ತ ಬಂದಿದ್ದಾರೆ. ತಮ್ಮ [illegible]
ರಾಜರು ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಮನ್ನಿಸಲು [illegible]
ವಾಗ ತಾವು ಹಾಗೆಯೇ ಕೂಡುವದು ಅವರಿಗೆಂದಿಗೂ [illegible]
ಪ್ರಜೆಗಳು ತೀವ್ರವಾದ ಚಳವಳಿಯನ್ನು ಹೂಡುವವರೆಗೆ [illegible]
ಕುಳಿತರೆ ಪ್ರಜೆಗಳಲ್ಲಿ ಕ್ಷೋಭೆಯುಂಟಾಗುವದರಲ್ಲಿ ಸಂದೇ[illegible]
ಆದುದರಿಂದ ಈ ಎಲ್ಲ ಕನ್ನಡ ಸಂಸ್ಥಾನಿಕರು ತಮ್ಮ ಕನ್ನ[illegible]
ದಲ್ಲೆಲ್ಲ ಕನ್ನಡದಲ್ಲಿಯೆ ಎಲ್ಲ ರಾಜಕೀಯ ವ್ಯವಹಾರ [illegible]
ಕೂಡಲೇ ನೋಡಿಕೊಳ್ಳಬೇಕೆಂದು ಒತ್ತಿ ಹೇಳುತ್ತೇವೆ.

—ಸಂಯುಕ್ತ ಕ[illegible]

ನಮ್ಮ ಎಂ.ಎಲ್. ಎ., ಎಂ.ಎಲ್. ಸಿ. ಗಳು

ಅನುಕರಿಸಬೇಕಾ[illegible]

ಆಂಧ್ರ ಪ್ರಾಂತಿಕ ಕಾಂಗ್ರೆಸ ಕಮೀಟಿಯ ವರ್ಕಿ[illegible]
ಕಮೀಟಿಯವರು ಜೂನ್ ೩ನೇ ತಾರೀಖಿನಿಂದ [illegible]
ವರೆಗೆ ಮಚ್ಛಲಿ ಪಟ್ಟಣದಲ್ಲಿ ಸಭೆಸೇರಿ ಅನೇಕ ಮ[illegible]
ಠರಾವುಗಳನ್ನು ಪಾಸುಮಾಡಿದರು. ಅವುಗಳಲ್ಲಿ ಮು[illegible]
ವಾದದ್ದು ಕೆಳಗಿನಂತಿದೆ:—

ಅನೇಕ ಭಾಷೆಗಳಿಂದ ಕೂಡಿದ ಸರಕಾರದ ಅಧೀನ[illegible]
ರಿಗೆ ಯಾವ ರೀತಿ ತೊಂದರೆಯಾಗುತ್ತಿದೆಯೆಂಬುದನ್ನು [illegible]
ನಿದರ್ಶನಕ್ಕೆ ತಂದುಕೊಡಲು ಮತ್ತು ಭಾಷಾನುಗುಣ ಪ್ರಾ[illegible]
ಮಾಡುವದು ಅವಶ್ಯವಿದೆಯೆಂಬುದನ್ನು ಅವರಿಗೆ ಮನವರಿ[illegible]
ಕೊಡಲು ಯಾವತ್ತೂ ಆಂಧ್ರ ಎಂ. ಎಲ್. ಎ. ಮತ್ತು [illegible]
ಎಲ್. ಸಿ. ಗಳು ಕಾಯದೆಮಂಡಳದ ಯಾವತ್ತೂ ಕಾರ್ಯ[illegible]
ಗಳಲ್ಲಿ, ಅಂದರೆ ಭಾಷಣ, ಠರಾವಿನ ನೋಟೀಸು, ಪ್ರಶ್ನೆ, [illegible]
ಪ್ರಶ್ನೆ ಇವೇ ಮೊದಲಾದವುಗಳಲ್ಲಿ ತೆಲುಗನ್ನೇ ಉಪ[illegible]
ಬೇಕೆಂದು ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ. [illegible]
ಅಲ್ಲದೆ ಸರಕಾರಿ ಅಧಿಕಾರಿಗಳು ಮತ್ತು ಮಂತ್ರಿಗಳೊ[illegible]
ವ್ಯವಹಾರ ಮಾಡುವಾಗಲೂ ತೆಲುಗನ್ನೇ ಉಪಯೋಗಿಸ[illegible]

ವರ್ಕಿಂಗ್ ಕಮಿಟೆಯ ಸದಸ್ಯರಾದ ಡಾ. [illegible]
ಯವರು ಕೆಲದಿನಗಳ ಹಿಂದೆ ಇದನ್ನೆ ಧ್ವನಿತಗೊ[illegible]
ರೆಂಬುದನ್ನು ಮರೆಯಕೂಡದು.

ಜರ್ಮನಿ–ಇಟಲಿಗಳ ಒಳಸಂಚು

ಇತ್ತೀಚೆ ಮುಸೊಲಿನಿ-ಹಿಟ್ಲರರಲ್ಲಿ ಒಂದು [illegible]
ಒಪ್ಪಂದವಾಗಿದೆ. ಹಿಟ್ಲರನು ಇಟಲಿಯಿಂದ ಮರಳಿ [illegible]
ಕೂಡಲೆ ಆ ಒಪ್ಪಂದದ ಪ್ರತಿಯನ್ನು ಪ್ರಮುಖ [illegible]

ಗೆ ಕಡೆಗೆ ಕಳಿಸಲಾಯಿತು. ಇದೆಲ್ಲ ಗುಟ್ಟಾಗಿ ನಡೆಯಿತು. ಈ ಒಪ್ಪಂದವು ಕಾರ್ಯರಂಗಕ್ಕಿಳಿದರೆ ಆಂಗ್ಲೊ-ಇಟಾಲಿ ಯನ್ ಒಪ್ಪಂದವು ಮೂಲೆಗುಂಪಾಗುತ್ತಿದೆ. ಈ ಗುಪ್ತ ಒಪ್ಪಂದದ ಕೆಲವು ಅಂಶಗಳಿವು:—(೧) ಜರ್ಮನಿ ಮತ್ತು ಇಟಲಿ ಒಕ್ಕಟ್ಟಾಗಿ ಸ್ಪೇನವನ್ನು ವಶಪಡಿಸಿಕೊಳ್ಳಬೇಕು. ಇದರಿಂದ 'ಇಟಲಿಯು ಸ್ಪೇನಿನಿಂದ ತನ್ನ ಸೈನ್ಯವನ್ನು ತೆಗೆದು ತಕ್ಕೊಳ್ಳಬೇಕು' ಎಂಬ ಆಂಗ್ಲೊ-ಇಟಾಲಿಯನ್ ಒಪ್ಪಂದಕ್ಕೆ ಮಂಣುಬಿತ್ತು. (೨) ಬರ್ಲಿನ್-ರೋಮುಗಳಲ್ಲಿ ಒಪ್ಪಂದದ ವಿರುದ್ಧವಾಗಿ ಒಳಸಂಬಂಧವನ್ನು ಬೆಳೆಸುವುದು. ಇದಕ್ಕಾಗಿ ಪ್ರಾಗ್, ಬೋಹಿಮಿಯಗಳ ಮೇಲೆ ನಿಯಂತ್ರಣ ಇಡುವುದು. ಹಂಗರಿ-ಪೋಲಂಡಗಳ ನಡುವೆ ಸ್ಲೊವಾಕಿಯ ವನ್ನು ಹಂಚುವುದು. ಪೋಲಂಡ, ರುಮಾನಿಯ, ಯುಗೊಸ್ಲಾವಿಯಗಳಿಗೆ ಬಾಲ್ಟಿಕ್ ರಾಜ್ಯಗಳೊಡನೆ ಸಂಧಿಯನ್ನು ಏರ್ಪಡಿಸುವುದು. (೩) ಫ್ರಾನ್ಸಿನ ಮೇಲೆ ದಾಳಿ ಮಾಡಿ ಫ್ರಾನ್ಸಿನ ಆಧಿಪತ್ಯದೊಳಗಿರುವ ಲೋಶೀನ, ಸೇವ್ಹಾಯ್, ಟ್ಯೂನಿಸಿಯ ಪ್ರಾಂತಗಳನ್ನು ಮರಳಿ ಪಡೆಯುವುದು. ಇವನ್ನೆಲ್ಲ ಯುದ್ಧವಿಲ್ಲದಂತೆ ಸಾಧಿಸಬೇಕು; ಸಾಧ್ಯವಾಗದಿದ್ದರೆ ಉಭಯರಾಷ್ಟ್ರಗಳೂ ಒಕ್ಕಟ್ಟಾಗಿ ಇದನ್ನು ಕೈಗೂಡಿಸಲೇಬೇಕು.

ಇಟಲಿ ಯುಗೊಸ್ಲಾವಿಯಗಳ ಗೆಳೆತನ

ಜರ್ಮನಿಯು ಆಸ್ಟ್ರಿಯವನ್ನು ಆಕ್ರಮಿಸಿದುದರಿಂದ ಜೆಕೊಸ್ಲೊವಾಕಿಯದ ಪಶ್ಚಿಮದಿಕ್ಕಿಗೆ ಜರ್ಮನಿಯ ಗಡಿನಾಡಿನ ಮುತ್ತಿಗೆಯಾದಂತಾಗಿದೆ. ಅಲ್ಲದೆ ಜರ್ಮನಿಯ ಗಡಿಯು ದಕ್ಷಿಣಕ್ಕೆ ಇಟಲಿ ಮತ್ತು ಯುಗೊಸ್ಲಾವಿಯಗಳ ವರೆಗೆ ಹಬ್ಬಿಕೊಂಡಿದೆ. ಜೆಕೊಸ್ಲೊವಾಕಿಯದ ಉತ್ತರಕ್ಕೆ ಜರ್ಮನಿಯ ಗೆಳೆತನವುಳ್ಳ ಪೋಲಂಡ್ ಇದೆ. ಯುಗೋಸ್ಲಾವಿಯ ಮತ್ತು ಇಟಲಿಯ ಗಡಿಗಳೂ ಹೊಂದಿಕೊಂಡಿವೆ; ಅವುಗಳೊಡನೆ ಉತ್ತರದಿಂದ ಜರ್ಮನಿಯ ಗಡಿಯೂ ಸೇರಿದೆ. ಈ ಪರಿಸ್ಥಿತಿಯನ್ನು ಲಕ್ಷಿಸಿ ಇಟಲಿಯು ಯುಗೋಸ್ಲಾವಿಯದೊಡನೆ ಹೆಚ್ಚಿನ ಹತ್ತುಗಡೆಯನ್ನು ಬೆಳಿಸುವ ನಿಶ್ಚಯ ಮಾಡಿದೆ. ಯುಗೊಸ್ಲಾವಿಯದ ಮುಖ್ಯ ಪ್ರಧಾನ ಡಾ. ಸ್ಟೊಯಾಡಿನೊವಿಚ ಮತ್ತು ಇಟಲಿಯ ಕೌಂಟ್ ಸಿಯಾನೊ ಇವರಲ್ಲಿ ಮೊನ್ನೆ ತಾನೆ ಕೆಲವು ಮಾತುಕತೆಗಳಾದವು. ಆಗ ಇಟಲಿ-ಯುಗೊಸ್ಲಾವಿಯಗಳ ರಾಜಕೀಯ ಹಾಗೂ ಆರ್ಥಿಕ ಸಂಬಂಧಗಳ ಚರ್ಚೆಯಾಯಿತು. ಆದರಿಂದ ಇಟಲಿಯು ಯುಗೊಸ್ಲಾವಿಯದಿಂದ ಅನೇಕ ವ್ಯಾಪಾರಿ ಸೌಕರ್ಯಗಳನ್ನು ಪಡೆದುದಲ್ಲದೆ ಟ್ರೀಸ್ಟ ಬಂದರದಲ್ಲಿ ಯುಗೊಸ್ಲಾವಿಯಕ್ಕಾಗಿ ಯುದ್ಧನೌಕೆಗಳನ್ನು ಕಟ್ಟಿಕೊಡುವುದನ್ನು ಒಪ್ಪಿಕೊಂಡಿದೆ. ಯುಗೊಸ್ಲಾವಿಯವು ಇಟಲಿಯೊಡನೆ ಸೇರಿದುದರಿಂದ ಯುರೋಪದಲ್ಲಿ ಇಂದು ಎರಡು ಬಣಗಳಾಗಿವೆ. (೧) ಜರ್ಮನಿ, ಇಟಲಿ, ಪೋಲಂಡ್, ಸ್ಪೇನ, ಯುಗೊಸ್ಲಾವಿಯ, ಗ್ರೀಸ; ಮತ್ತು (೨) ಇಂಗ್ಲಂಡ, ಫ್ರಾನ್ಸ್, ಜೆಕೊಸ್ಲೊವಾಕಿಯ ಮತ್ತು ರಶಿಯ. ರುಮಾನಿಯದ ಒಲವು ರಶಿಯದ ವಿರುದ್ಧವಾಗಿಯೆ ಇದೆ.

ಭೂಮಧ್ಯಸಮುದ್ರದಲ್ಲಿ ಇಟಲಿಗೆ ಮೇಲ್ಗೈ

ಇಟಲಿಯು ಲಿಬಿಯನ್ ಯುದ್ಧದಲ್ಲಿ ಡಾಡೆಕ್ಯಾನಿಜ ದ್ವೀಪಸಮೂಹವನ್ನು ಗೆದ್ದನಂತರ ಅಲ್ಲಿಯ ಲೇರಾಸ ದ್ವೀಪವು ನಾವಿಕ ಮತ್ತು ವೈಮಾನಿಕ ಪಾಳಯಕ್ಕೆ ಯೋಗ್ಯವೆಂಬುದನ್ನು ಮನಗಂಡು ಈಗ ಅದನ್ನು ಪ್ರಥಮತರ ಗತಿಯ ಶಸ್ತ್ರಾಸ್ತ್ರಗಳ ಮತ್ತು ವೈಮಾನಿಕ ಪಾಳಯವನ್ನಾಗಿ ಮಾಡಿಬಿಟ್ಟದೆ. ಜಿಬ್ರಾಲ್ಟರಿನ ನಂತರ ಈ ದ್ವೀಪಕ್ಕೆ ಸರಿಜೋಡಿಯಾದುದು ಬೇರೊಂದಿಲ್ಲ. ಈ ದ್ವೀಪವು ಸಾಯಪ್ರಸ್ ದ್ವೀಪದಿಂದ ೩೩೦ ಮೈಲು, ಹೈಫಾದಿಂದ ೫೫೦ ಮೈಲು ಮತ್ತು ಪೋರ್ಟಸೈಯದದಿಂದ ೫೧೦ ಮೈಲು ದೂರವಾಗಿದೆ. ಇಂದಿನ ವಿಮಾನ-ಯುಗದಲ್ಲಿ ಇದೇನೂ ಗಣ್ಯವಾದ ಅಂತರವಲ್ಲ; ಶೀಘ್ರಗತಿಯ ಹಡಗುಗಳಿಗೂ ಇದು ಮಹತ್ವದ ಅಂತರವೇನೂ ಅಲ್ಲ. ಮೊನ್ನೆ ಆದ ಆಂಗ್ಲೊ-ಇಟಾಲಿಯನ್ ಒಪ್ಪಂದದಲ್ಲಿ ಇಂತಹ ಹೊಸ ಪಾಳಯಗಳನ್ನು ಯಾರೇ ಆಗಲಿ ಎಲ್ಲಿಯಾದರೂ ಸ್ಥಾಪಿಸುವ ಮೊದಲೇ ಪರಸ್ಪರರಿಗೆ ಅದನ್ನು ತಿಳಿಸಬೇಕೆಂಬ ಕರಾರೊಂದಿದೆ. ಇಟಲಿಯು ಆ ಪ್ರಕಾರ ಬ್ರಿಟಿಶರಿಗೆ ತಿಳಿಸಲಿಲ್ಲವೆಂದು ವದಂತಿಯಿದೆ. ಭೂಮಧ್ಯಸಮುದ್ರದಲ್ಲಿ ಸಾಯಪ್ರಸ್ ದ್ವೀಪವು ಬ್ರಿಟಿಶರಿಗೆ ಅತಿ ಮಹತ್ವದ ಬಂದರವಾಗಿದೆ.


ಡಿ ವೆಲೆರನ ವಿಜಯ

ಮೊನ್ನೆ ಆಯರ್ಲಂಡಿನಲ್ಲಿ ನಡೆದ 'ಆಂಯರ್' ಚುನಾವಣೆಯಲ್ಲಿ ಎಲ್ಲ ಪಕ್ಷಗಳ ಒಟ್ಟು ಮತಗಳಿಗಿಂತ ಡಿ ವೆಲೇರನ ಪಕ್ಷಕ್ಕೆ ೧೪ ಮತಗಳು ಹೆಚ್ಚಿಗೆ ಬಿದ್ದವು. ಕೂಲಿಕಾರರ ಪಕ್ಷಕ್ಕೆ ಮಾತ್ರ ಗೆಲುವಾಗಲಿಲ್ಲ. ಅವರು ನಿಲ್ಲಿಸಿದ ೩೦ ಉಮೇದವಾರರಲ್ಲಿ ಬರಿ ೫ ಜನ ಆರಿಸಿಬಂದರು. ಆಂಗ್ಲೊ-ಆಯರಿಶ್ ಒಪ್ಪಂದದಿಂದ ಡಿ ವೆಲೆರನ ಲೋಕಪ್ರಿಯತೆ ಹೆಚ್ಚಿದುದೆ ಅವನ ಅಪೂರ್ವ ವಿಜಯಕ್ಕೆ ಕಾರಣವಾಗಿರಬೇಕು.

ಧಾರವಾಡದ ಮಲ್ಲಸಜ್ಜನ ವ್ಯಾಯಾಮಶಾಲೆ


ಹತ್ತನೆಯ ಹುಟ್ಟಿದ ಹಬ್ಬ


☆



ಸಂಚಾಲಕರು:
ಶ್ರೀಮಾನ್ ನಾಡಿಗರ
ಕೃಷ್ಣರಾಯರು

ಈ ಶುಭದಿನದಲ್ಲಿ ಮೇಲ್ಕಂಡ ವ್ಯಾಯಾಮಶಾಲೆಯವರು ಸ... ತಮ್ಮ ಹತ್ತು ವರ್ಷಗಳ ಪ್ರಗತಿಯ ವರದಿಯನ್ನು ಸಚಿತ್ರವಾಗಿ ಒ... ಅದರಲ್ಲಿಯ ಮಲ್ಲರ ಸ್ನಾಯುಗಳನ್ನು, ಬಲಿಷ್ಠ... ಕಟ್ಟನ್ನು ನೋಡಿದ ಪ್ರತಿಯೊಬ್ಬರಿಗೂ ಕರ್ನಾ... ವ್ಯಾಯಾಮಸಂಸ್ಥೆಯ ವಿಷಯಕ್ಕೆ ಹೆಮ್ಮೆಯೆನಿ... ಈ ಸಂಸ್ಥೆಯು ಹತ್ತು ವರ್ಷಗಳಲ್ಲಿ ೧೨೦೦ ... ವ್ಯಾಯಾಮ ಶಿಕ್ಷಣವನ್ನು ಕೊಟ್ಟಿರುವುದು. ದಿ... ವ್ಯಾಯಾಮಶಿಕ್ಷಣವನ್ನು ಹೊಂದುತ್ತಿರುವವರ ಸಂಖ್ಯೆ ೧೨೦. ಕ... ಸಾಮು, ಆಸನ, ಮಲ್ಲಕಂಬ, ಲೋಡು, ಕುಸ್ತಿ, ಭಾರ ಎತ್ತುವುದು, ...





ಬಲಿಷ್ಠ ಸ್ನಾಯುಗಳುಳ್ಳ ಶ್ರೀ. ಕೊಂಗಿ...

ತೋಗುಬಳಿಯ ಆಸರಿಕ್ಷಿನಲ್ಲಿ ಕುಳಿತಿದ ಶ್ರೀ. ಕವಳಿ ರುದ್ರಪ್ಪ

ರಿಂಗ್ ಜಲ್ಲಿಪೆ ಲಾಠಿ, ಕವಾಯಿತು, ಲೇಝಿಮ್, ಜಂಬಿಯಾ ಮುಂತಾದವುಗಳು ಈ ಸಂಸ್ಥೆಯ ತಜ್ಞರಿಂದ ಸಶಾಸ್ತ್ರವಾಗಿ ಕಲಿಸಲ್ಪಡುತ್ತವೆ. ಶ್ರೀಮಾನ್ ನಾಡಿಗರ ಕೃಷ್ಣರಾಯರು ಈ ಸಂಸ್ಥೆಯ ಸಂಚಾಲಕರಾಗಿದ್ದಾರೆ.



ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ. ಅವಧಾನಿ ಬಾಳಾಚಾರ್ಯರು

ಈ ಸಂಸ್ಥೆಯಲ್ಲಿ ಕಲಿತು ಸುರಿತ ವ್ಯಾಯಾಮಶಿಕ್ಷಕರಿಂದ ಕರ್ನಾಟಕದ ಬೇರೆಬೇರೆ ಊರುಗಳಲ್ಲಿಯೂ ಶಿಕ್ಷಣಶಾಲೆಗಳು ತೆರೆಯಲ್ಪಟ್ಟಿವೆ.

ಧಾರವಾಡದ ಕಲೆಕ್ಟರರಾದ ಶ್ರೀ. ಮೋಡಕರವರ ಅಧ್ಯಕ್ಷತೆಯಲ್ಲಿ ಈ ಸಂಸ್ಥೆಯ ವಾರ್ಷಿಕೋತ್ಸವವು ಜರುಗಿತು. ಆಗ ನಡೆದ ಶಕ್ತಿಪ್ರದರ್ಶನವನ್ನು ನೋಡಿ, ಪ್ರೇಕ್ಷಕರು ಹರ್ಷಬಟ್ಟರು ಮಾತ್ರವಲ್ಲ, ಅಧ್ಯಕ್ಷರೂ ಸಂಸ್ಥೆಯನ್ನೂ ಅದರ ಕಾರ್ಯಕರ್ತರನ್ನೂ ಮನವಾರೆ ಕೊಂಡಾಡಿದರು

ಸಂಸ್ಥೆಯು ಕರ್ನಾಟಕದ ವ್ಯಾಯಾಮ ಚಟುವಟಿಕೆಯ ಕೇಂದ್ರವಾಗಲೆಂದು ಕೋರುತ್ತೇವೆ.

ರಾಯಚೂರಿನ ಕಣ್ಣು ಕಮ್ಮರೆಯಾಯಿತು

(ದಿವಂಗತ ಪಿ. ಕೃಷ್ಣರಾಯರು)

ಶ್ರೀ. ಪಿ. ಕೃಷ್ಣರಾಯರು ಕೇವಲ ನಿಜಾಮ ಪ್ರಾಂತ ಕ್ಕೊಂದೇ ಅಲ್ಲ, ಅಖಿಲಕರ್ನಾಟಕಕ್ಕೂ ಪರಿಚಿತರಾಗಿ ದ್ದರು. ಇವರು ಭಾಗವಹಿಸದೆ ಇಲ್ಲಿಯ ಯಾವ ಸಾರ್ವ ಜನಿಕ ಕೆಲಸಗಳೂ ನಡೆಯುತ್ತಿರಲಿಲ್ಲವೆಂದು ನಿಸ್ಸಂಶಯ ವಾಗಿ ಹೇಳಬಹುದು. ಇವರು ಇಲ್ಲಿಯ ಹಮದರ್ದಶಾಲೆಯ, ಶ್ರೀಮಹಾಲಕ್ಷ್ಮೀ ದಕ್ಕನ್ ಬ್ಯಾಂಕಿನ, ಸಹಕಾರಿ ಬ್ಯಾಂಕಿನ ಪ್ರೆಸಿಡೆಂಟರಾಗಿದ್ದರಲ್ಲದೆ, ಕೊಆಪರೇಟಿವ್ ಬ್ಯಾಂಕಿನ, ಮಾರ್ಕೆಟ್ ಕಮಿಟಿಯ ವೈಸ್‌ಪ್ರೆಸಿಡೆಂಟರೂ, ಇನ್ನೂ ಅನೇಕ ಸಂಸ್ಥೆಗಳ ಕಾರ್ಯಕಾರಿಮಂಡಲದ ಸಭಾಸದರೂ, ಲೋಕಲ್‌ಬೋರ್ಡ ಮೆಂಬರರೂ ಇದ್ದರು. ನಿಜಾಮ ಕರ್ನಾಟಕ ಪರಿಷತ್ತಿನ ಅಧ್ಯಕ್ಷರೂ ಇದ್ದರು. ಮೊನ್ನೆ ಮೊನ್ನೆ ನಡೆದ ಆಯುರ್ವೇದ ಸಮ್ಮೇಳನದ ಸ್ವಾಗತಾಧ್ಯ ಕ್ಷರೂ ಇದ್ದರು.

ಇವರು ಸಂಗ್ರಹಿಸಿದ ಸ್ವಂತದ ಲೈಬ್ರರಿಯು ಸುಮಾರು ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಬೆಲೆ ಬಾಳುವ ದೆಂದು ತಿಳಿದುಬಂದಿದೆ. ಇಲ್ಲಿಯ ಹಮದರ್ದಶಾಲೆಯು ಕೇವಲ ಇವರ ಪ್ರಯತ್ನದಿಂದಲೇ ನಡೆಯುತ್ತಿದ್ದಿತು. ಇಲ್ಲಿಯ ಗೋಶಾಲೆಯು ಇವರ ನೇತೃತ್ವದಲ್ಲಿಯೇ ನಡೆ ಯುತ್ತಿದ್ದಿತು. ಅನೇಕ ಜನರಿಗೆ ಇವರು ಆಶ್ರಯದಾತ ರಾಗಿದ್ದರು. ಇವರ ಜೀವಮಾನದಲ್ಲಿ ಒಂದು ಲಕ್ಷ ರೂಪಾಯಿ ಮೇಲ್ಪಟ್ಟು ದಾನ ಮಾಡಿದ್ದಾರೆಂದು ಅನೇಕರು ಹೇಳುತ್ತಿದ್ದಾರೆ.

ಇವರ ಮರಣದಿಂದ ಕೇವಲ ರಾಯಚೂರಿಗೆ ಅಲ್ಲ, ಇಡೀ ನಿಜಾಮಕರ್ನಾಟಕಕ್ಕೆ ದೊಡ್ಡ ಹಾನಿಯಾಯಿತೆಂದು ಹೇಳ ಬಹುದು. ರಾಯಚೂರಿನ ಕಣ್ಣು ಹೋಯಿತೆಂದು ಮರು ಗದ ಜನರೇ ಇಲ್ಲ.

ಇವರು ಸುಮಾರು ಮೂವತ್ತೆರಡು ವರುಷಗಳ ವರೆಗೆ ವಕೀಲಿಯನ್ನು ಮಾಡಿದ್ದಾರೆ. ಈಗ ಇವರಿಗೆ ೭೨ ವಯಸ್ಸಿ ದ್ದಿತು. ಇವರು ತಮ್ಮ ಹಿಂದೆ ಹೆಂಡತಿಯನ್ನೂ ೧೩ ವರ್ಷದ ಮಗನನ್ನೂ ಬಿಟ್ಟು ಹೋಗಿದ್ದಾರೆ. ಇವರ ಆತ್ಮಕ್ಕೆ ಶಾಂತಿಯುಂಟಾಗಲಿ.

—ಸಂಯುಕ್ತ ಕರ್ನಾಟಕ

ಮೈಸೂರು ಇನ್ಶೂರನ್ಸ್ ಕಂಪನಿ ಲಿ.

ಈ ಕಂಪನಿಯ ಪ್ರಗತಿಯನ್ನು ನಿರೀಕ್ಷಿಸುತ್ತ ಬಂದ ವರಿಗೆ, ಕಳೆದ ವರ್ಷದ ವರದಿಯು ಸಂತೋಷವನ್ನುಂಟು ಮಾಡದಿರದು. ೧೯೩೭ರ ಜೂನೆಯ ವರೆಗಾಗುವ ವರ್ಷದ ವರದಿಯಿಂದ, ಕೆಳಗೆ ಕಾಣಿಸಿದ ಸಂಗತಿಗಳು ಒಡೆದು ಕಾಣು ವಂತಿವೆ.

ವರದಿಯ ವರ್ಷದಲ್ಲಿ, ಅದರ ಹಿಂದಿನ ವರ್ಷಕ್ಕಿಂತ ಸುಮಾರು ೧½ ಪಾಲು ಹೆಚ್ಚು ವಿಮೆಯ ಅರ್ಜಿಗಳು ಬಂದಿ ದ್ದವು, ಮತ್ತು ಪೂರ್ತಿಯಾದ ವ್ಯವಹಾರವಾದರೂ ಇದೇ ಪ್ರಮಾಣದಲ್ಲಿದೆ. ಜೀವವಿಮಾನಿಧಿಯು ಹಿಂದಿನ ವರ್ಷ ಕ್ಕಿಂತ ಈ ವರ್ಷ ಇಮ್ಮಡಿಯಾಗಿ ಬೆಳೆದಿದೆ. ಕಂಪನಿಯ ಸ್ಥಾಪನೆಯ ವೆಚ್ಚಕ್ಕೆ ತೆಗೆದಿಟ್ಟ ಹಣ, ಮುರವತ್ತಿನ ಹಣ, ನಿರ್ವಾಹಕ ವೆಚ್ಚ (organising expenses) ಮುಂತಾದವು ಗಳಿಗೆಲ್ಲ ಕೂಡಿ ಸುಮಾರು ರೂ. ೭೦೦೦ ಗಳನ್ನು ವೆಚ್ಚ ದಲ್ಲಿ ತೋರಿಸಿದುದನ್ನು ಮುಂದಕ್ಕೆ ಹಾಕಿದ್ದರೆ, ಜೀವ ವಿಮಾನಿಧಿಯ ಅಂಕೆಯು ಇನ್ನೂ ದೊಡ್ಡದಾಗಬಹು ದಾಗಿತ್ತು.

ಜಾರಿಯಲ್ಲಿದ್ದ ವಿಮೆಯ ಪ್ರಮಾಣವನ್ನು ನೋಡಿದರೆ ಮರಣದ ಪ್ರಮಾಣವು ತೀರ ಕಡಿಮೆಯಾಗಿದೆ. ವೈದ್ಯ ಪರೀಕ್ಷೆಯು ನಿರ್ವಂಚನೆಯಿಂದ ನಡೆದಿರದಿದ್ದರೆ, ಹಾಗು ಏಜಂಟರು ಕಂಪನಿಯ ಹಿತವು ಎಲ್ಲಕ್ಕೂ ಹೆಚ್ಚಿನದೆಂದು ಎಣಿಸಿರದಿದ್ದರೆ, ಇದು ಸಾಧ್ಯವಾಗುತ್ತಿರಲಿಲ್ಲ.

ಬ್ರಿಟಿಷ್ ಇಂಡಿಯಾದಲ್ಲಿ ಕಾರ್ಯವಿಸ್ತಾರವನ್ನು ಮಾಡುವ ಉದ್ದೇಶದಿಂದ ಕಂಪನಿಯು ಈ ಮೊದಲು ರೂ. ೨೫೦೦೦ಗಳನ್ನು ಇಂಡಿಯಾ ಸರಕಾರದಲ್ಲಿ ಠೇವಾಗಿ ಇಟ್ಟಿತ್ತು. ಈ ವರ್ಷ ಮತ್ತೆ ರೂ. ೨೫೦೦೦ಗಳನ್ನು ಇಟ್ಟಿದೆ. ಆದರೆ ಬ್ರಿಟಿಷ್ ಇಂಡಿಯಾದಲ್ಲಿ ವಿಮೆಯ ಸಂಬಂಧವಾಗಿ ಹೊಸ ಕಾಯಿದೆಯು ಪಾಸಾಗಿದ್ದು, ಅದೇ ಮಾದರಿಯ ಒಂದು 'ಬಿಲ್ಲು' ಮೈಸೂರಿನ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಈಗ ಚರ್ಚೆಯಲ್ಲಿದ್ದುದರಿಂದ, ಅದು ಕಾಯಿದೆಯಾಗುವ ವರೆಗೆ ತಡೆಯಬೇಕೆಂದು ಕಂಪನಿಯು ನಿರ್ಧರಿಸಿರುವದಾಗಿ ತಿಳಿಯುತ್ತದೆ.

ಒಟ್ಟಿನಲ್ಲಿ, ಕಂಪನಿಯ ಪ್ರಗತಿಯು ಸಮಾಧಾನಕಾರಕ ವಾಗಿದ್ದು ವಿಮೆದಾರರ ಹಣವು ಕಂಪನಿಯ ಕೈಯಲ್ಲಿ ಸುರ ಕ್ಷಿತವಾಗಿರುವುದೆಂದು ನಮ್ಮ ನಂಬಿಗೆ. ಕಂಪನಿಯು ಸರ್ವ

ತೋಮುಖ ಪ್ರಗತಿಯ ಬಗ್ಗೆ ಮ್ಯಾನೇಜಿಂಗ್ ಏಜಂಟ ರನ್ನು ನಾವು ಅಭಿನಂದಿಸದಿರೆವು.

ಗದುಗಿನಲ್ಲಿ ಸಹಸಂಪಾದಿಕೆಯರು

ಜ. ಕ. ಸಹಸಂಪಾದಿಕೆಯರಾದ ಸೌ. ಶ್ಯಾಮಲಾದೇವಿ ಯವರು, ಕ. ಸಾಹಿತ್ಯ ಪರಿಷತ್ತಿನ ಮತ್ತು ಗದುಗಿನ ಕಾರ್ಯಕರ್ತರ ಔತಣದ ಮೇರೆಗೆ, ಅಲ್ಲಿಯ ವಸಂತಸಾಹಿತ್ಯೋತ್ಸವದಲ್ಲಿ, 'ಹೆಣ್ಣುಮಕ್ಕಳ ಹಕ್ಕುಬಾಧ್ಯತೆಗಳು' ಎಂಬ ವಿಷಯವನ್ನು ಕುರಿತು ಉಪನ್ಯಾಸವಿತ್ತರು.

ಕೃತಜ್ಞತೆ

ಈ ಸಂಚಿಕೆಯಲ್ಲಿ ಉಪಯೋಗಿಸಿದ ಕೆಲವು ಬ್ಲಾಕು ಗಳನ್ನಿತ್ತವರಿಗೆಲ್ಲ ನಾವು ಉಪಕೃತರಾಗಿದ್ದೇವೆ:—

ಇನಿನೆನಹು (ಹೊದಿಕೆಯ ಮೇಲಿನ ಚಿತ್ರ).... .... ಗೃಹಲಕ್ಷ್ಮಿ ಕಾರ್ಯಾಲಯ

ಜೀವೈಕ್ಯ (ಪಕ್ಷಿಯುಗಲದ ಚಿತ್ರ) .... ,, ,,

ವೇಣುಗೋಪಾಲ (ಮುಖಚಿತ್ರ).... ಮೈಸೂರು ಸರಕಾರ

○ ಬರಲಿವೆ ! ○

ಪ್ರಕಾಶವೂ ಸರ್ ಸಿ. ವಿ. ರಾಮನ್ ಅವರ ಶೋಧವೂ
ಎಂ. ಎಸ್. ಕಟ್ಟಿ, ಎಂ. ಎಸ್‌ಸಿ.

ರಾಜು ಹೇಳಿದ ಕತೆ
ಸೋದರಸಂಘದ ಶೇಷು

ಯಹೂದಿಗಳ ಗೋಳಾಟ
ಜೋಗಳೇಕರ ಪಾಂಡುರಂಗರಾಯರು, ಬಿ. ಎ.

ನನ್ನ ಕುಲ್ಲೂ ಕೊಳ್ಳದ ಪ್ರವಾಸ (ಸಚಿತ್ರ)
ಭಾರತಸಂಚಾರಿ ಗೋಸಾವಿ

ಜಯಕರ್ನಾಟಕ



ಚಲಚ್ಚಿತ್ರಚಂದ್ರಿಕೆ ಮಿಸ್ ಅಮೀನಾ

[A]UGUST 1938

[A]NNAS SIX

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ [illegible]
ರಾಮಚಂದ್ರ ಪಾಂಡ.ರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ [illegible]

ಪರಿವಿಡಿ

...ಬೃಹತ್ (ಮುಖಚಿತ್ರ) ....ಬೃಹದಾಕಾರನಾದ ಬಸವಣ್ಣನ ಮುಂದೆ ಭಕ್ತಳ ಕಿರುಮೂರ್ತಿ....'ದೇವರ ದೊಡ್ಡತನ' ಸಾರುವ ಚಿತ್ರಕೃತಿ....

...ಟ್ಟಿಂಗಳಲ್ಲಿ (ಕವನ) .... ಶ್ರೀ. ಸಾಲಿ ರಾಮಚಂದ್ರರಾಯರು ೫೭೭

...ಯಹೂದಿಗಳ ಗೋಳಾಟ .... ಶ್ರೀ. ಜೋಗಳೇಕರ ಪಾಂಡುರಂಗರಾಯರು ೫೭೮

...ನ್ನ ಕುಲ್ಲೂಕೊಳ್ಳದ ಪ್ರವಾಸ (ಸಚಿತ್ರ) .... ಶ್ರೀ. ಭಾರತಸಂಚಾರಿ ಗೋಸಾವಿ ೫೮೩

...ಪಾಲೆವಿಯ ರಾಚೆಲ್ (ಕತೆ) .... ಶ್ರೀ. ಬಸವರಾಜ ಕಟ್ಟೀಮನಿ ೫೮೯

...ಪ್ರಕಾಶವೂ ಸರ್ ರಾಮನ್ ಅವರ ಶೋಧವೂ (ಸಚಿತ್ರ) .... ಶ್ರೀ. ಎಂ. ಎಸ್. ಕಟ್ಟಿ, ಹುಬ್ಬಳ್ಳಿ ೫೯೫

...ಆರೋಗ್ಯಬಿಂದು ೫೯೯

...ದಾಂಪತ್ಯಪ್ರೇಮ .... ಶ್ರೀ. ಕಡೂರ ಶ್ರೀಪಾದ, ಮಿತ್ರಮೇಳ, ಬೆಂಗಳೂರು ೬೦೧

...ನಮಧುವಿನಲ್ಲಿ ವಿಷ (ಸಚಿತ್ರ ಕತೆ) .... ಶ್ರೀಮತಿ ಪುಲಮತಿ ಸುಶೀಲಮ್ಮ, ಬಳ್ಳಾರಿ ೬೦೪

...ಅಣೋರಣೀಯಾನ್ ಮಹತೋ ಮಹೀಯಾನ್ ೬೦೯

...ವಾಲ್ಮೀಕಿ (ವಾದಭೂಮಿ) .... ಶ್ರೀ. ಎಸ್. ವಿ. ಗೋಪಾಲ್, ಶಿಕಾರಿಪುರ ೬೧೧

...ಕ್ಷೆಯಿಲ್ಲದ ದೇಶ .... ಶ್ರೀ. ತಾರಾದಾಸ ೬೧೩

...ರಾಜು ಹೇಳಿದ ಕತೆ (ಸಚಿತ್ರ ಕತೆ) .... 'ಶೇಷು' ಸೋದರಸಂಘ ಶಿವಮೊಗ್ಗ ೬೧೫

...ನಗಡೇಡಿ ೬೨೧

...ಉಂಡಾಡಿಯು ಅಧ್ಯಕ್ಷನಾದುದು .... 'ಉಂಡಾಡಿ' ಅ. ಬ. ಕ. ಡ. ೬೨೩

ಮಲೆನಾಡಿನ ಒಂದು ಹಳ್ಳಿ (ಕವನ) .... ಶ್ರೀ. ಪಾಂಡೇಶ್ವರ ಗಣಪತಿರಾವ್ ೬೨೬

...ಬಾಲ್ಯ (ಕವನ) .... ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ ೬೨೭

...ಬ್ರಹ್ಮಾಂಡ (ಕವನ) .... 'ಶ್ರೀಧರ' ,,

...ನೀಲಕನ್ನಡಕ (ಕತೆ) .... ಕು. ಪದ್ಮಾವತಿ, ಕೊಡಗು ೬೨೮

...ವ್ಯಾಯಾಮ (ಸಚಿತ್ರ ಆರೋಗ್ಯವಿಜ್ಞಾನ) .... ಡಾ. ಗೋಪಾಲಕೃಷ್ಣರಾಯರು, ಸಂ. ಕಲಿಯುಗ ೬೩೩

...ಕೆಂಗಪ್ಪ (ಜನಪದಸಾಹಿತ್ಯ) .... ಸಂಗ್ರಾಹಕರು: ಶ್ರೀ. ಎಂ. ಕೃಷ್ಣಮೂರ್ತಿ, ಮತಿಘಟ್ಟ ೬೩೭

...ಜ್ಞಾನ-ವಿಜ್ಞಾನ ೬೩೮

...ಜಪಾನೀಯರ ಶಾಂತಿಸಾಧನ—ಮನುಷ್ಯೇತರ ಪ್ರಾಣಿಗಳೂ ಯೋಚಿಸಬಲ್ಲವು—ಕೃತ್ರಿಮ ಬೆಳದಿಂಗಳು— ....

...ಮೆಲಾನೇಶಿಯದ ಹೆಂಗಸರು—ಹೃತ್ಸ್ಪಂದನವನ್ನು ಸಾವಿರಾರು ಮೈಲಿನಿಂದ ಕೇಳಬಹುದು—ಅಲ್ಯುಮಿನಂ ....

...ನಿಬ್ಬುಗಳು—ಮಹಾತ್ಮಾ ಮತ್ತು ಶಾ ಅವರ ಸ್ತ್ರೀವಿಷಯಕ ಅಭಿಪ್ರಾಯ—ಪ್ರೇಮವೋ ಕಲೆಯೋ ?— ....

...ಸೋಶಿಯಾಲಿಝುಂ, ಕಮ್ಯುನಿಝುಂ, ಫಾಸಿಝುಂ—ಜೇಡದ ಬಲೆಯ ನೂಲು—ವಿಲಾಯತಿಯ ಸೆರೆಯಾಳು ....

...ಗಳು—ಸಸ್ಯಗಳ ನಿಜಸ್ಥಿತಿ—ಬೊಂಟೊಕ್ ಎಂಬಲ್ಲಿಯ ಪ್ರಣಯರೀತಿಗಳು—ನೊರೆಯ ಕಾಜು—ಚೀನದ ....

...ಭಿಕ್ಷುಕರು—ಒಂದು ಭ್ರಮೆ ....

ವೀಣಾವಿತಾನ .... (ಎಸ್. ಎಸ್. ಮಾ., ಶಂ., ಸಂ.) ೬೪೪

ಕನ್ನಡದ ಮುನ್ನಡೆ ೬೪೮

ವಿಚಾರವೇದಿಕೆ ೬೪೯

...ವರ್ಕಿಂಗ್ ಕಮಿಟಿಯೂ ಏಕೀಕರಣವೂ—ಲಕ್ಷ್ಮಿಯವರಿಗೆ ತಕ್ಕ ಉತ್ತರ ಕೊಡಿರಿ—ಮದ್ರಾಸ ಸರಕಾರವೂ ....

...ಹಿಂದಿ-ವಿರೋಧೀ ಸತ್ಯಾಗ್ರಹವೂ—ನಾಝಿಗಳನ್ನೂ ನಾಚಿಸುವ ನಿಜಾಮರ ನೀತಿ—ಇದು ಸಭಾಸ್ವಾತಂ ....

...ಕ್ಯದ ವಿಸ್ತಾರವೇ?—ಪ್ರಜಾಮಂಡಲದ ಉತ್ತರ—ಯಾರು ?-ಎಲ್ಲಿ ?-ಏನೆಂದರು ?—ಭುಲಾಭಾಯಿಯವರು ....

...ಏನು ಹೇಳಿದರು ?—ಸ್ವೀಕಾರವೋ, ಧಿಕ್ಕಾರವೋ ?—ಮಧ್ಯಪ್ರಾಂತದಲ್ಲಿಯ ಬಿರುಗಾಳಿ—ಸ್ಪಾನಿಷ್ ....

...ಕದನದ ಸಿಂಹಾವಲೋಕನ—ಪ್ಯಾಲೆಸ್ಟಾಯಿನಿನಲ್ಲಿಯ ಗಲಭೆ ....

ಶ್ರದ್ಧಾಂಜಲಿ ೬೫೭

ನಮ್ಮ ಮಾತು ೬೫೮

ಹೂಬಿಸಿಲು

(ಜಯಕರ್ನಾಟಕ ಗ್ರಂಥಮಾಲೆಯ ೨೨ನೆಯ ಪುಷ್ಪ)

ಶ್ರೀ. ಬೆಳಗಾವಿ ರಾಮಚಂದ್ರರಾಯರ ಧರ್ಮಪತ್ನಿಯವರಾದ ಸೌ|| ಶ್ಯಾಮಲೆಯವರ ೧೦ ಸೊಗಸಾದ ವಿವಿಧರಸಭರಿತ ಕತೆಗಳು. ಉತ್ತರ ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಥಮ ಪದಾರ್ಪಣ ಮಾಡುತ್ತಿರುವ ಪ್ರಥಮ ಸ್ತ್ರೀಲೇಖಕರ ಪರಿಪಕ್ವ ಮನೋಜ್ಞ ಶೈಲಿಯ ಸರಸಕೃತಿ. ಸೊಗಸಾದ ಚಿತ್ರವುಳ್ಳ ಹೊದಿಕೆ. ... ಕಾಗದದ ಮೇಲೆ ಮುದ್ದಾದ ಮುದ್ರಣ. ಸು. ೧೨೦ ಪುಟಗಳು. ಬೆಲೆ ೧೦ ಆಣೆ.

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯು ಈ ಕಥಾಸಂಗ್ರಹವನ್ನು ಕುರಿತು ಈ ರೀತಿ ಅಭಿಪ್ರಾಯಪಡುವುದು:—

" ಇದೊಂದು ಉತ್ತಮ ಗ್ರಂಥ; ಹೆಣ್ಣಿನ ಬಾಳಿನ ಬೆಳಕಿನಂತಿದೆ ಎನ್ನಬಹುದು. ಕತೆಗಳಲ್ಲಿ ಕೆಲವು—... 'ನನ್ನನ್ನು ನೋಡಲಿಕ್ಕೆ ಬಂದಾಗ' —ಇವು ನಗುವಿನ ಲಹರಿಯಿಂದ ಹಿತಸಮಾಚಾರಗಳಿಂದ ಹಗುರಾಗಿದ್ದರೆ, 'ಕರುಳ ... 'ದೊಡ್ಡಮ್ಮ ನೋಡಿದ ವರ' ಮುಂತಾದುವು ತೀವ್ರವಾದ ದುಃಖಭಾರದಿಂದ, ಹುಚ್ಚನ ಘೋರಸ್ಥಿತಿಯಿಂದ, '... ಮಗ'ನನ್ನು ವರಿಸಿದ ಬಾಲೆಯ ತಹತಹ ತಳಮಳದಿಂದ, ಓದುಗರ ಮನಸ್ಸನ್ನು ಕೊರಗಿಸುವಂಥವಾಗಿವೆ. 'ಮಹಾ... 'ನಡೆದುಬಂದ ಲಕ್ಷ್ಮಿ' ಈ ಎರಡು ಕಥೆಗಳು ನೀಳ್ಗತೆಗಳಾಗಿದ್ದು, ಪಾತ್ರವೊಂದರ ಜೀವನವನ್ನು ಸುಂದರವಾಗಿ ಹೇಳುವ ... ಚಾರಿತ್ರಾತ್ಮಕವಾಗಿವೆಯೆನ್ನಬಹುದು. 'ನಡೆದುಬಂದ ಲಕ್ಷ್ಮಿ'ಯಲ್ಲಿನ ದಾಂಪಕ್ಕನನ್ನೂ, 'ಚೆಂಗಳಕವ್ವ'ನಂತಿರುವ ... ಅಲಂಕೃತವೇಷವನ್ನೂ, ಮಗನಾದ ಸಹದೇವನು ಬೊಂಬಾಯಿಗೆ ಹೋಗಿ ಸುಧಾರಿಸಿ ಬಂದು ಸೆರೆಮನೆಯಲ್ಲಿದ್ದು ... ಎಲ್ಲ ಗಳಿಕೆಯನ್ನು ಹಾಳುಮಾಡಿದರೂ, ಆತನಲ್ಲಿ, ಆತನ ಪ್ರೇಯಸಿ ದ್ರೌಪದಿಯಲ್ಲಿ ದಾಂವಕ್ಕ ಕರುಣೆ ಸ್ನೇಹ... ತೋರುವುದನ್ನೂ ಯಾರೂ ಮರೆಯುವಂತಿಲ್ಲ."

" ಸೌ|| ಶ್ಯಾಮಲಾ ಅವರಿಗೆ ಕಥನಶಕ್ತಿ ಕಲ್ಪನಾಶಕ್ತಿಗಳೆರಡೂ ಒಲಿದಿವೆಯೆಂದು ಕಾಣುತ್ತವೆ. ಕಥಾಸಂ... ಪಾತ್ರಗಳಿಗೆ ನಿಲ್ದಾಣವಾಗಿ ಮಾಡಿಕೊಂಡು, ಅವುಗಳ ಸ್ವಭಾವಚಿತ್ರಣ ಮಾಡುವುದರಲ್ಲಿ, ಅಂತಸ್ಥ ಯಾತನೆಯನ್ನು ... ಕುವುದರಲ್ಲಿ, ಕಿರಿದರಲ್ಲಿ ಹಿರಿಯ ಭಾವವನ್ನು ಹೇಳುವುದರಲ್ಲಿ ಶ್ರೀಮತಿಯವರು ಬಹು ಕುಶಲರು. ಮುಖ್ಯ... ಕಥೆಗಳೆಲ್ಲ ಪಾತ್ರಗಳ ಬದುಕಿನ ಮಹತ್ವದ ಪ್ರಸಂಗವೊಂದನ್ನು ಸಂಭಾಷಣೆಯಿಂದ ಸೂಚಿಸುತ್ತವೆ. ವಾಚಕರ ಕುತೂಹಲ... ಹೆಚ್ಚಿಸುತ್ತವೆ."

ಔದ್ಯೋಗಿಕ ಶಿಕ್ಷಣ

ಮೊದಲು ಶಿಕ್ಷಣ ಪಡೆದು ಕಲಿತ ವಿಷಯ... ಇರುತ್ತವೆಂಬುದನ್ನು ಒಪ್ಪಿದನಂತರವೇ ನಮ್ಮ ಫೀ... ಬೇಕು. ಮುಂಗಡ ಫೀ ಕೊಡತಕ್ಕದ್ದಿಲ್ಲ.

ಬಡ ವಿದ್ಯಾರ್ಥಿಗಳಿಗೆ ಫೀಯಲ್ಲಿ ರಿಯಾಯಿತಿ ಉಂಟು

ದಿ ಕರ್ನಾಟಕ ಟೈಲರಿಂಗ್ ಅಂಡ್ ಕಟಿಂಗ್ ಕಾಲೇಜ್,

ಬೆಂಗಳೂರು ಸಿಟಿ (ಮೆಜೆಸ್ಟಿಕ್ ಹತ್ತಿರ)


ನಾವು ದೇಶೀ ಮತ್ತು ಇಂಗ್ಲೀಷ್ ಫ್ಯಾಶನ್ನುಗಳ ಅನುಸಾರವಾಗಿ ಬಟ್ಟೆಗಳನ್ನು ಹೊಲೆಯುವ ಮತ್ತು ಕತ್ತರಿಸುವ ... ವನ್ನು ಆರು ತಿಂಗಳುಗಳಲ್ಲಿ ಪೂರ್ಣ ಮುಗಿಸಿ ಕೊಡುತ್ತೇವೆ. ಕಳೆದ ೮ ವರ್ಷಗಳಿಂದ ನಮ್ಮಲ್ಲಿ ನೂರಾರು ವಿದ್ಯಾರ್ಥಿಗಳು ... ಹಿಂದುಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಫರ್ಮುಗಳನ್ನು ಓಪನ್‌ಮಾಡಿ ಸುಖವಾಗಿ ಜೀವನವನ್ನು ಸಾಗಿ... ಇದನ್ನು ಪ್ರತ್ಯಕ್ಷ ನೋಡಿ ಮನಗಂಡು ನಂತರ ನಮ್ಮಲ್ಲಿ ಸೇರಲಿಚ್ಛಿಸಬೇಕು.

ನಾವು ನಮ್ಮ ಕಾಲೇಜಿನಲ್ಲಿ ಲಂಡನ್ ಡಿಪ್ಲೋಮ ಪರೀಕ್ಷೆಯ ಶಿಕ್ಷಣವನ್ನು ಸಹ ಕೊಡುತ್ತೇವೆ. ಸನ್ ... ಪಡೆದು ನಾಲ್ವರು ವಿದ್ಯಾರ್ಥಿಗಳು ಲಂಡನ್ ಡಿಪ್ಲೋಮಾ ಪರೀಕ್ಷೆಗೆ ಕುಳಿತು ನಾಲ್ವರೂ ಪಾಸಾಗಿ ಲಂಡನ್ ಡಿಪ್ಲೋಮಾ ... ಹೆಚ್ಚಿನ ವಿಷಯಗಳ ಬಗ್ಗೆ ಪ್ರಾಸ್ಪೆಕ್ಟಸ್ ಬೇಕಾದಲ್ಲಿ ಒಂದಾಣೆಯ ಪೋಸ್ಟ್‌ಸ್ಟಾಂಪು ಕಳಿಸಬೇಕು. ಅಥವಾ ... ಭೆಟ್ಟಿಯಾಗಬಹುದು.

ಈಗ್ಗೆ ನಮ್ಮಲ್ಲಿ ಸ್ವಲ್ಪ ಸೀಟುಗಳು ಮಾತ್ರ ಖಾಲೀ ...


ಆರ್. ಬಿ. ಮುಧೋಳಕರ್

ಫಸ್ಟ್‌ಕ್ಲಾಸ್ ಡಿಪ್ಲೋಮಿಸ್ಟ್, ಪ್ರಿನ್ಸಿಪಾಲ್



ಬೃಹತ್

'ಗೃಹಲಕ್ಷ್ಮಿ'ಯ ಕೃಪೆಯಿಂದ



ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೬ (೧—೮—೧೯೩೮) | ಸಂಚಿಕೆ ೮

ಬೆಳ್ದಿಂಗಳಲ್ಲಿ

—ಇಂದಿನೀ ಬೆಳ್ದಿಂಗಳೊಳ್ಪಪೂರ್ವಂ ! ಶಾಂತಿ-|
ಯಿಂದಿದರ ಸೊಬಗು ಪೆರ್ಚಿದುದು ! ನಿಶ್ಚಲಚಿತ್ತ-|
ದಿಂದದೇನನೊ ಜಾನಿಸುತುಮಿರ್ಪುದೈ ಸೃಷ್ಟಿ ! ಶಾಂತಿಯೇಕಲ್ಲದೊಡಿದು ? ||
ಎಂದು ಸರಿದುದು ಪಿಂತೆ ಪೊಳ್ತಿಂತು ಮೆಲ್ವೆಜ್ಜೆ-|
ಯಿಂದೆ ! ಸಂತತಗತಿ ಸಮೀರನುಂ ಮಿಸುಕದೆಯೆ |
ನಿಂದನೈ ! ಧ್ಯಾನದೊಳ್ ನಿಂದ ಸೃಷ್ಟಿಯ ಪೆಂಪನೀಕ್ಷಿಸುತೆ ಮೆಯ್ಮರೆದನೈ ! || ೧ ||

—ಆರರೆ ! ಏನಿದು ? ಚಂದಿರನ ಬಳಿಯ ಬೆಳ್ಮುಗಿಲ್ |
ಕಿರಿದಾಯ್ತು ! ಕಿರಿದಾಯ್ತು ! ಮತ್ತಿನಿತರೊಳೆ ಕಣ್ಗೆ |
ಪರೆಯಾಯ್ತು ! ಕಾಣಿಸದ ನಾಲಗೆಯದಾವುದೋ ನೆಕ್ಕಿದುದು ! ಚಿತ್ರಮೆನಿಸಿತೋ !
ಹರಿ ! ನಿನ್ನ ಮಾಯೆ ಪರಮಾದ್ಭುತಂ ! ಸೃಷ್ಟಿಯ-|
ಚ್ಚರಿಯಾಗರಂ ! ತಿಳಿದರಾರಿದಂ ? ನರನೆ, ನೀಂ-|
ನರಿತಿರ್ಪುದಲ್ಪಮತ್ಯಲ್ಪಮೈ ! ನಿನ್ನಳವೆ ಈಯನಂತಮನರಿವುದು ? || ೨ ||

—ಇನಿದಿನಿದು ಬಿರಿವೂಗಳಿಂದೊಗೆವ ಕಂಪು, ಸೊಂ-|
ಪಿನ ಸುಗ್ಗಿ ! ಮಧುರಮೀಮೇಲನಂ ! ಶಾಂತಿ, ತ-|
ಣ್ಪಿನಿಗಂಪು, ನಲ್ಪೆಳಕು ! ಪೆಂಪೆನಿಸಿತೊ ಇಂತು ಸಮ್ಮೇಲನಂ ಮಧುರಮಾಗೆ ! ||
ಧನದಿಂದೆ ಬಂದುದಿಲ್ಲಂ ಸಂತಸಂ ದಿವ್ಯ-|
ಮೆನಗೀಗಳಿಂದು; ನೀಂ ಕಾರುಣ್ಯನಿಧಿಯಕಿಂ-|
ಚನ ಜನನುಮಾಗನ್ನೆ ಬಾಹಿರಂ ನಿನ್ನ ನಲ್ಮೆಗೆ, ದೇವ, ವಿಶ್ವಪಾಲಾ ! || ೩ ||

—ಬಿರುಗಾಳಿಯೊರ್ಮೊದಲೆ ಬೀಸಲೆಸಗಿದುದಾದೊ-|
ಡಿರುಳ ಶಾಂತಿಗೆ ಭಂಗಮಿನಿತುಮಿಲ್ಲೆಂಬುದ-|
ಚ್ಚರಿಯಲ್ತೆ ? ಈ ಮಹಾನಿನದದೊಳ್ ದಿವ್ಯಸಂಗೀತಮೆಂತೊದವಿದಪುದೋ ! ||
ಸರಸಮೀಸಂರಂಭಮಿದನೆಂತು ಹರ್ಷನಿ-|
ರ್ಭರನಾಗಿ ಸವಿಯುತಿರ್ದಪನೊ ಬಿಡು ! ದೇವನ್ನೈ-|
ಸಿರಿಯ ಸೊಬಗಿನ ಬಗೆಯೆ ಬೇರಯ್ಯೆ ! ಸವಿಯಿದಂ, ಮನಮೆ, ನೀಂ ನಮ್ರನಾಗಿ || ೪ ||

ಸಾಲಿ ರಾಮಚಂದ್ರರಾಯ

ಯಹೂದಿಗಳ ಗೋಳಾಟ

ಯಹೂದಿ ಜನಾಂಗವು ಸಂಸ್ಕೃತಿಯಲ್ಲಿಯೂ, ವಿದ್ಯೆಯಲ್ಲಿಯೂ, ಸಂಪತ್ತಿನಲ್ಲಿಯೂ ಯಾವ ಜನಾಂಗಕ್ಕೂ ಹಿಂದೆ ಬೀಳದಂತಹದು; ಪುರಾತನವಾದುದು. ಆದರೂ ಕೆಲವು ಐತಿಹಾಸಿಕ ಕಾರಣಗಳಿಂದ, ಅನಂತರ ವಿಧರ್ಮೀಯರ ರೂಢಿಮೂಢತೆ ಯಿಂದ ಯಹೂದಿಯರು ನಿಲ್ಲಲು ನೆಲವಿಲ್ಲದೆ ದೇಶದೇಶಗಳಿಗೆ ತಿರುಗಬೇಕಾಯಿತು. ಈಗಲೂ ಯಹೂದಿಗಳೆಂದರೆ ಎಲ್ಲರಿಗೂ ಪರದೇಶಿಗಳಾಗಿದ್ದಾರೆ. ಮಾನ್ಯ ಲೇಖ .. ಕರು ಐತಿಹಾಸಿಕವಾಗಿ ಈ ವಿಷಯವನ್ನು ಇಲ್ಲಿ ಚರ್ಚಿಸಿದ್ದಾರೆ. —ಸಂ. ..

ಲೇಖಕರು: ಶ್ರೀ. ಜೋಗಳೇಕರ ಪಾಂಡುರಂಗರಾಯರು ಬಿ. ಎ.

ಜಾಗತಿಕ ಇತಿಹಾಸದಲ್ಲಿ ನಿಜ ತೇಜಸ್ಸಿನಿಂದ ಸನ್ಮಾನ್ಯಸ್ಥಾನವನ್ನು ಗಳಿಸಿದ ಮಾನವಜಾತಿಗಳಲ್ಲಿ ಜ್ಯೂ ಅಥವಾ ಯಹೂದಿ ಜನಾಂಗವನ್ನು ಯಾವಾಗಲೂ ಗೌರವ ದಿಂದಲೇ ಉಲ್ಲೇಖಿಸಬಹುದು. ಈ ಜಾತಿಯ ಕುಲ ಕಥೆಯು ಹೃದಯಂಗಮವಿದ್ದರೂ ಖೇದಜನಕವಿದೆ. ಇದೇ ವಿಯನ್ನಾ ನಗರದ ಮೇಲೆ ಸ್ವಸ್ತಿಕ ನಿಶಾನೆಯನ್ನೇರಿಸಿ, 'ಜರ್ಮನರನ್ನೆಲ್ಲ ಕೂಡಿಸಬೇಕು!' ಎಂಬ ಹಿಟ್ಲರೀ ಮಹಾವಾಕ್ಯದ ವಿಜಯ ಮಹೋತ್ಸವವು ಬೃಹಜ್ಜರ್ಮನಿ ಯಲ್ಲಿ ಒಳ್ಳೇ ಸಡಗರದಿಂದ ನೆರವೇರಿತು. ಆಸ್ಟ್ರಿಯಾ-ಜರ್ಮನಿಗಳ ಐಕ್ಯದಿಂದ ಆಸ್ಟ್ರಿಯನ್ಸ್, ಆದೇಕೆ, ಯಾವತ್ತೂ ನಾಝೀಗಳಿಗೆ ಹಿಡಿಸದಷ್ಟು ಆನಂದ ವಾಯಿತು. ಆದರೆ ಹರ್ ಹಿಟ್ಲರನ 'ಯಹೂದಿಗಳನ್ನಷ್ಟು ತಳ್ಳಬೇಕು' ಎಂಬ ಕಠೋರ ಧೋರಣದಿಂದ ಅಲ್ಲಿಯ ಯಹೂದಿಗಳೆಲ್ಲ ಹೌಹಾರಿ ಹೋದರು. ಮಡಿವಂತ ಸನಾತನಿಗಳಿಗೆ ಹರಿಜನರದೆಂತೋ ಹಾಗೆಯೇ 'ಆರ್ಯ' ಹಿಟ್ಲರನಿಗೆ ಅನಾರ್ಯ ಯಹೂದಿಗಳ ನೆಳಲೂ ಸೇರುವ ದಿಲ್ಲ. ಹಿಟ್ಲರನ ಆಳಿಕೆಗೆ ಮೊದಲಾದೊಡನೆ ಆಸ್ಟ್ರಿಯವೂ ಜರ್ಮನಿಯಂತೆಯೇ ವೇಗದಿಂದ ನಿರ್ಯಹೂದಿಯಾಗ ಲಾರಂಭಿಸಿತು. ಮನೆಮಾರಿಗೂ ಕೆಲಸಬೊಗಸೆಗೂ ಎರವಾದ ಯಹೂದಿಗಳು ದೇಶಾಂತರ ಇಲ್ಲವೆ ಆತ್ಮಹತ್ಯ ಮಾಡಲಾರಂಭಿಸಿದರು.

ಯಹೂದಿಗಳ ಗೋಳಾಟವು ಇದೀಗ ಮತ್ತು ಅದೂ ಹಿಟ್ಲರನ ಕೈಯಿಂದಲೇ ಹೊಸದಾಗಿ ನಡೆಯುತ್ತಲಿದೆಂದು ಮಾತ್ರ ತಿಳಿಯಬಾರದು. ಈ ಜಾತಿಯ ಇದುವರೆಗಿನ ಇತಿಹಾಸವೆಂದರೆ ಒಂದು ದೃಷ್ಟಿಯಿಂದ ಸಾಂಸ್ಕೃತಿಕ ಆರ್ಥಿಕಾದಿ ಸ್ಪರ್ಧೆಯ ಮೂಲಕ, ಎಷ್ಟೋಸಲ ಯಾವ ಕಾರಣವೂ ಇಲ್ಲದೆ, ಮಾನವ ಜಾತಿಗಳು ಒಂದನ್ನೊಂದು ಹೇಗೆ ಪೀಡಿಸುತ್ತ ಬಂದಿರುವವೆಂಬುದರ ಕರು... ಉದಾಹರಣೆಯಾಗಿದೆ. ಸುಮಾರು ನಾಲ್ಕು ಸಾವಿರ... ಗಳಾಚೆಯಲ್ಲಿ ಸೂರ್ಯನ ತಾಪದಿಂದಲೂ ಮಳೆಯ... ದಿಂದಲೂ ಸುಟ್ಟು ಸೀಳಿ ಒಣಮಳಲಾದ ಅರಬ್ಬಸ್ತಾ... ಸೆಮೆಟಿಕ್ ಜಾತಿಯ ಜನರು ಇರುತ್ತಿದ್ದರು. ಕ... ಹವೆಯ ಉಸುಕಿನ ಅರಣ್ಯದಲ್ಲಿ ಅಲ್ಲಲ್ಲಿ ಅಪರೂ... ಹಸುರು ಕಂಡು ಬರುವದುಂಟು. ಈ ಸಜಲ ಹಾಗೂ ... ಸ್ಥಳಗಳೆಂದರೆ ಮಳಲಿನ ಮಹಾಸಾಗರದಲ್ಲಿ ... ಯಾವಾಗಲೋ ಕಂಡುಬರುವ ಹಸುರಿನ ನಡುಗಡ್ಡೆ... ಲಿಕ್ಕೆ ಅಡ್ಡಿ ಇಲ್ಲ. ಇಲ್ಲಿ ಒಂದೆರಡು ಬುಗ್ಗೆಗಳೂ ... ಗಿಡಗಳೂ ಗಿಡ್ಡಹುಲ್ಲೂ ಮುಂತಾದ ಅಪೂರ್ಣ ... ಸಾಮುಗ್ರಿ ಇದ್ದು, ಅಲ್ಲಿ ಬೇಸಾಯ ಹಾಗೂ ದನ... ಮೇಲೆ ಹೊಟ್ಟೆ ತುಂಬಿಕೊಳ್ಳುವ ಅರಬರು ಗುಡಿಸಲ... ಇಲ್ಲವೆ ಗುಮುಟಾಕಾರ ಮನೆಗಳಲ್ಲಿ ಕಂಡು... ಇಂಥ ಈ ಪ್ರದೇಶದಲ್ಲಿರುವ ಆ ಸೆಮೆಟಿಕ್ ಜನ... ಟ್ಟಿಗೆ ಇದ್ದು ಹೊಟ್ಟೆ ತುಂಬಿಸಿಕೊಳ್ಳಲು ಸ... ಮೂಲಕ ಅತ್ತಿತ್ತ ಅಡ್ಡಾಡಲಾರಂಭಿಸಿದರು.

ಹೊಟ್ಟೆಗಾಗಿ ಗುಳೇ ಕಟ್ಟಿಕೊಂಡು ಓಡಾಡು... ತಂಡವು ಅರಬಸ್ತಾನದ ಆಗ್ನೇಯಕ್ಕಿರುವ ಟಾಯ... ಯುಫ್ರೇಟೀಸ ನದಿಗಳ ಮಳೆ ಇಲ್ಲದ, ಆದರೆ ಫಲ... 'ದುಆಬ'ದಲ್ಲಿ ಬಂದು ಕೆಲಕಾಲ ಅಲ್ಲಿಯೇ ತಳ... ಆದರೆ ಕ್ರಮೇಣ ಏತದ್ದೇಶಿಯರ ಆರ್ಥಿಕ ಸ್ಪ... ಮೂಲಕ ಅಲ್ಲಿಂದಲೂ ಗುಡಿಚಾಪೆ ಕಟ್ಟಿಕೊಂಡು ... ಡೆಗೆ ಹೋಗಬೇಕಾಯಿತು. ಯುಫ್ರೇಟೀಸ ನದಿ... ದಾಟಿ ಬಂದ ಮೂಲಕ 'ಹಿಬ್ರೂ' ಎಂಬ ಹೆಸರು... 'ಅಬ್ರಾಹಂ' ಎಂಬವನು ಈ ತಂಡದ ಈಶಪ್ರೇರಿತ... ಬಾಯಬಲ್‌ದಲ್ಲಿ ಉಲ್ಲೇಖಿಸ... ದನೆಂಬದಾಗಿ ...

ಕಂಗೆಟ್ಟ ತಂಡಕ್ಕೆ ಅಬ್ರಾಹಮನು ಪ್ಯಾಲೆಸ್ತಾಯಿನದೊಳಗಿನ
ಜೋರ್ಡನ್ ನದಿಯ ಕೊಳ್ಳದಲ್ಲಿ ನೆಲಸಲು ಎಡೆಗೊಟ್ಟನು.
ಕ್ರಿ. ಪೂ. ೨೦೦೦ ದ ನಂತರ ಆಯುರ್ಯ್ಯಾಕನು ಯಹೂದಿ
ಗಳ ಅಂದರೆ ಈ ಹಿಬ್ರೂಜನರ ಹಿರಿಮಣಿಯಾದನು.
ಆತನಿಗೆ ಏಸೂ ಮತ್ತು ಜೇಕಬ್ ಎಂಬ ಅವಳಿ ಜವಳಿ
ಮಕ್ಕಳಾದರು. ಅವರೀರ್ವರಲ್ಲಿ ಜೇಕಬ್‌ನು ಕರ್ತೃತ್ವದಿಂದ
ಮುಂದಾಳಾಗಿ ಇಝುರೇಲ್ ಎಂಬ ಹೆಸರಿನಿಂದ ಪ್ರಸಿದ್ಧ
ನಾದನು. ಅವನ ತಂಡವು ‘ಇಝುರೆಲಾಯಿಟ್’ ಎಂಬ
ಹೆಸರಿನಿಂದ ಪ್ರಸಿದ್ಧವದೆ. ಏಸೂ ಇವನು ಉತ್ತರದಲ್ಲಿ
‘ಕ್ಯನಾನ್’ ಎಂಬಲ್ಲಿ ಬೀಡುಬಿಟ್ಟನು. ಇವನ ತಂಡಕ್ಕೆ
‘ಇಡೊಮಾಯಿಟ್’ ಎಂಬ ಹೆಸರು ಬಂದಿತು.

ಜೇಕಬ್‌ನ ಹನ್ನೆರಡು ಮಕ್ಕಳಲ್ಲಿ ಜೋಸೆಫ್ ಎಂಬ
ವನು ಬಹಳ ಬುದ್ಧಿಶಾಲಿಯೂ ಕೆಲಸಗಾರನೂ ಇದ್ದನು.
ಮಹತ್ವಾಕಾಂಕ್ಷೆಯುಳ್ಳವರಾದರೂ ಕೈಲಾಗದ ಅವನ
ಅಣ್ಣಂದಿರಿಗೆ ಜೋಸೆಫನ ಬಗ್ಗೆ ಹೊಟ್ಟೆಕಿಚ್ಚೆನಿಸಿ ಇಜಿಪ್ತದ
ಕೂಡ ವ್ಯವಹರಿಸುವ ಓರ್ವ ದೊಡ್ಡ ವರ್ತಕನಿಗೆ ದಾಸ
ನನ್ನಾಗಿ ಅವರು ಅವನನ್ನು ಮಾರಿದರು. ತಿಪ್ಪೆಯ ಮೇಲೆ
ಬಿದ್ದ ಬೆಳಗುವ ಹರಳು ತಜ್ಞ ಮುತ್ತುಗಾರನ ಕಣ್ಣಿಗೆ
ಬೀಳಲು ಅದಕ್ಕೆ ರಾಜಮುಕುಟದ ಮೇಲೂ ಹೊಳೆಯುವ
ಸುಸಂಧಿಯು ದೊರೆಯುವದುಂಟು. ಜೋಸೆಫನ ಗತಿಯೂ
ಇದೇ ರೀತಿಯಾಯಿತು. ತಾನು ಕೊಂಡುಕೊಂಡ ದಾಸನು
ಕತ್ತೆಯಂತೆ ಒಜ್ಜೆಯನ್ನು ಹೊರುವ ಶ್ರಮಜೀವಿಯಾಗಿರದೆ
ರಾಜಕೀಯ ಕಾರಭಾರವನ್ನು ಮಾಡುವ ಬುದ್ಧಿಜೀವಿಯಾಗಿ
ರುವನೆಂಬುದು ಜೋಸೆಫನ ಗುಣಗ್ರಾಹಿ ಯಜಮಾನನಿಗೆ
ಹೊಳೆದೊಡನೆ, ಅವನು ತನ್ನ ತೇಜಸ್ವೀ ದಾಸನ ಬಿಡುಗಡೆ
ಮಾಡಿದ್ದಲ್ಲದೆ ಆತನ ಅಸಾಧಾರಣ ಕರ್ತೃತ್ವಕ್ಕೆ ತಕ್ಕ ಅವ
ಕಾಶ ಸಿಕ್ಕುವಂತೆ ಏರ್ಪಾಡು ಮಾಡಿದನು. ಕ್ರಮೇಣ
ಮುಂದೆ ಆತನು ಇಜಿಪ್ತದ ಮುಖ್ಯ ಮಂತ್ರಿಯಾದನು.
ಮುಂದೆ ಬೇಗನೆ ಪ್ಯಾಲೆಸ್ತಾಯಿನದಲ್ಲಿ ದೊಡ್ಡ ಬರ ಬಿದ್ದು
ಅಲ್ಲಿಯ ಯಹೂದಿಗಳಿಗೆ ಹೊಟ್ಟೆಗಾಗಿ ದೇಶ ಬಿಡುವ
ಪ್ರಸಂಗ ಬಂದಿತು. ಹಸಿವೆಯಿಂದ ಕಂಗೆಟ್ಟ ಈ ಇಝುರೆ
ಲಾಯಿಟರು ನಾಯಿಲ್ ನದಿಯ ಕೊಳ್ಳದಲ್ಲಿ ಅಂದರೆ
ಇಜಿಪ್ತದಲ್ಲಿ ಆಶ್ರಯಕ್ಕಾಗಿ ಬಾಯ್ದೆರೆಯಲಾರಂಭಿಸಿದರು.
ಜೋಸೆಫನು ಕೋಮಲ ಹೃದಯದವನೂ ಕ್ಷಮಾಶೀಲನೂ
ಇದ್ದ ಕಾರಣ ಹಿಂದೆ ತನ್ನನ್ನು ನೋಯಿಸಿದ್ದ ಬಂಧುಗಳನ್ನು
ಕೂಡ ಕೈಲಾದ ಮಟ್ಟಿಗೆ ಸಂತೈಸಲಿಕ್ಕೆ ಅವನು ತನ್ನ ಶಕ್ತಿ
ಮೀರಿ ಯತ್ನಿಸಿದನು.

ಜೋಸೆಫನ ಮೂಲಕ ಇಜಿಪ್ತದಲ್ಲಿ ಯಹೂದಿಗಳ
ಬಾಳ್ವೆಯು ಸರಿಯಾಗಿ ಸಾಗಲು, ಬರಗಾಲ ಮುಗಿದ
ಮೇಲೂ ಪ್ಯಾಲೆಸ್ತಾಯಿನಕ್ಕೆ ಹೊರಳುವ ವಿಚಾರವನ್ನು
ಬದಲಿಸಿ ಫಲವತ್ತಾದ ನಾಯಿಲ್ ಕೊಳ್ಳದಲ್ಲಿಯೆ ಇಝುರೆ
ಲಾಯಿಟರು ನಿರಂತರವಾಗಿ ತಳವೂರಿದರು. ಆದರೆ
ಕ್ರಮೇಣ ಇಝುರೆಲಾಯಿಟರಿಗೂ ಇಜಿಪ್ತದವರಿಗೂ
ಆರ್ಥಿಕ, ರಾಜಕೀಯ ಅಲ್ಲದೆ ಸಾಂಸ್ಕೃತಿಕ ಮೇಲಾಟವು
ತಲೆದೋರಿ ಅದರಲ್ಲಿ ಕೊನೆಗೆ ಯಹೂದಿಗಳು ಪೂರಾ
ಸೋತು ಹೊಲ ಮನೆ ಕಳಕೊಂಡು ದಾಸ್ಯಕ್ಕೂ ತಲೆ ಕೊಡ
ಬೇಕಾಯಿತು. ಹಿಂದಕ್ಕೆ ಇರಾಕದಲ್ಲಿ ಹೇಗೆ ಅಬ್ರಾಹ
ಮನೋ ಹಾಗೆ ಇಲ್ಲಿ ‘ಮೊಝೆಸ್’ ಎಂಬ ಜಾಣ
ಮುಂದಾಳು ಯಹೂದಿಗಳನ್ನು ಸಂಕಟದೊಳಗಿಂದ ಬಿಡಿ
ಸಲು ಮುಂದಾದನು. ಒಡಂಬಡಿಕೆಯು ಸಾಧ್ಯವಿಲ್ಲದ
ಕಾರಣ ಇಜಿಪ್ತಿಗೆ ಶರಣು ಹೊಡೆಯುವ ನಿಶ್ಚಯಮಾಡಿ,
ಪ್ಯಾಲೆಸ್ತಾಯಿನಿಗೆ ಮರುಳುವದೇ ಹಿತಕರ ಎಂಬದಾಗಿ
ಅವನು ತನ್ನ ಜಾತಿಬಾಂಧವರಿಗೆ ಹೇಳಿ ಎಲ್ಲರನ್ನು ಕಟ್ಟಿ
ಕೊಂಡು ತಾಯ್ನಾಡಿಗೆ ಒತ್ತರದಿಂದ ಹೊರಟನು.

ಆದರೆ ಅಷ್ಟರಲ್ಲಿ ಜೋರ್ಡನ್ ನದಿಯ ಆಚೆಗಿರುವ
ಸುಸಂಸ್ಕೃತ ‘ಕ್ಯನನಾಯಿಟ್’ ಜನರು ಪ್ಯಾಲೆಸ್ತಾಯಿನ
ವನ್ನು ವ್ಯಾಪಿಸಿ ಬಿಟ್ಟಿದ್ದರು. ಮೊಝೆಸನು ಕ್ಯನ
ನಾಯಿಟರನ್ನು ಹೊಡೆದೋಡಿಸಿದ್ದಲ್ಲದೆ ಅವರ ಸ್ವದೇಶ
ವಾದ ಕ್ಯನಾನದ ಮೇಲೂ ಏರಿಹೋದನು. ಮೊಝೆಸನ
ಪ್ರಯತ್ನದಿಂದ ಯಹೂದಿಗಳು ಮೆಲ್ಲನೆ ಸುಸಂಘಟಿತ
ರಾದರು. ಮೊಝೆಸನು ಯಹೂದಿಗಳ ಮನುರಾಯನೆ!
ಈತನ ತರುವಾಯ ‘ಜೋಶುಆ’ ಎಂಬವನು ಮಾಡಿದ
ಸಮಾಜಸೇವೆಯು ಶ್ಲಾಘನೀಯವಾದುದು. ಇದುವರೆಗೆ
ಯಹೂದಿಗಳು ಕುರುಬರೂ ಗೌಳಿಗರೂ ನಡುನಡುವೆ
ಬೇಸಾಯ ಮಾಡುವವರೂ ಆಗಿದ್ದರು. ಆದರೆ ಮೊಝೆಸ್
ಮತ್ತು ಜೋಶುಆ ಇವರ ಉಪದೇಶದಿಂದ ಇಝುರೆ
ಲಾಯಿಟ್ ಸಮಾಜವು ಬಗೆಬಗೆಯ ಕಲಾಶಾಸ್ತ್ರ, ಉದ್ಯೋಗ
ಗಳನ್ನು ಆರಂಭಿಸಲು ಸ್ವಲ್ಪ ಕಾಲದಲ್ಲಿಯೇ ಅದು
ಪುರೋಗಾಮಿಯೂ ಪ್ರಭಾವಶಾಲಿಯೂ ಆಯಿತು. ಆಗಾಗ
ಅದಕ್ಕೆ ಫಿಲಿಸ್ಟಾಯಿನ್ ಮೊಬಾಯಿಟ ಮುಂತಾದವರ
ಕೊಂಚ ಉಪದ್ರವವು ಮಾತ್ರ ಆಗುತ್ತಲಿತ್ತು.

ಧರ್ಮಾತ್ಮನಾದ ಸ್ಯಾಮ್ಯುಯೆಲ್ ಇವನ ಕಾಲದಲ್ಲಿ
ಯಹೂದಿಗಳು ಅರಸೊತ್ತಿಗೆಯನ್ನು ಸ್ಥಾಪಿಸಿ ತಂಡದ ಅನಿ
ಯಂತ್ರಿತ ಒಡೆಯನ ಬದಲು ಸಮಾಜನಿಯಂತ್ರಿತ ಅರಸ

ನನ್ನು ಆರಿಸಿದರು. ಸುಪ್ರಸಿದ್ಧ ಸಾಲ್ ಎಂಬವನ ಆಳಿಕೆಯಲ್ಲಿ ಇಝ್ರುರೆಲಾಯಿಟರು ಒಟ್ಟುಗೂಡಿ ಉತ್ತರೋತ್ತರ ಅಭ್ಯುದಯ ಹೊಂದಿದರು. ನಡುವೆ ಒಮ್ಮೆ ಫಿಲಿಸ್ಟಾಯಿನರು ಇವರಿಗೆ ಚಲೋ ಬಡಿತ ಕೊಟ್ಟರು. ಆದಾಗ್ಯೂ ಡೆವ್ಹಿಡನ ಮಗನಾದ ಸುವಿಖ್ಯಾತ ಸಾಲೋಮನ್ ಎಂಬ ಆದರ್ಶ ರಾಜನ ಆಳಿಕೆಯಲ್ಲಿ ಯಹೂದಿಯರು ವೈಭವದ ಶಿಖರವನ್ನೇರಿದರು. ಇವನ ಹಿಂದಿನಿಂದ ಮಾತ್ರ ಹಿಬ್ರೂ ಜನರಲ್ಲಿ ಇಬ್ಬಣಗಳಾಗಿ ಉತ್ತರದಲ್ಲಿ ಇಝ್ರುರೇಲ್ ಮತ್ತು ದಕ್ಷಿಣದಲ್ಲಿ ಜ್ಯೂಡಾ ಹೀಗೆ ಎರಡು ವಿರೋಧಿ ರಾಜ್ಯಗಳು ಉಂಟಾದವು. ಜರೂಸಲೇಮ ಜ್ಯೂಡಾದ ರಾಜಧಾನಿ.

ಮಗ್ಗಲಿನ ಪ್ರಭಾವಿ ಅಸೀರಿಯನ್ ತಂಡವು ಹಿಬ್ರೂಗಳ ಆತ್ಮಘಾತಕ ಒಡಕಿನ ಸಂಧಿಯನ್ನು ಸಾಧಿಸಿ ಉತ್ತರದ ಸಮರಿಯಾ ಎಂಬ ರಾಜಧಾನಿಯನ್ನು ನೆಲಸಮಮಾಡಿ ಇಝ್ರುರೇಲ್ ರಾಜ್ಯವನ್ನು ಮಣ್ಣುಮುಕ್ಕಿಸಿತು (ಕ್ರಿ. ಪೂ. ೭೨೨). ಗೆದ್ದ ಆಸೀರಿಯನ್ನರು ಅಲ್ಲಿಯೇ ಉಳಿದು ಅಲ್ಲಲ್ಲಿ ಉಳಿದ ಇಝ್ರುರೆಲಾಯಿಟ್ ತಂಡಗಳೊಡನೆ ಬೀಗತನ ಮಾಡಲು ಸೈಮೆರಿಟನ್ಸ್‌ಯೆಂಬದಾಗಿ ಹೆಸರಾದ ಸಮ್ಮಿಶ್ರ ಸಮಾಜವು ಉಂಟಾಯಿತು.

ದಕ್ಷಿಣದ ಜ್ಯುಡಾದ ರಾಜ್ಯವು ಕ್ರಿ. ಪೂ. ೭ನೇಯ ಶತಮಾನದ ವರೆಗೆ ಹಾಗೂ ಹೀಗೂ ಜೀವಹಿಡಿದಿದ್ದಿತು. ಆದರೆ ಇಜಿಪ್ತ, ಅಸಿರೀಯವು ಕ್ಯಾಲ್ಡಿಯಾ ಮುಂತಾದವರಿಂದ ಪದೇ ಪದೇ ಆಗುವ ದಾಳಿಗಳಿಂದ ತೀರ ಮುರುಕಳಿಗೆ ಬಂದಿತು. ಕಾಲಾಂತರದಲ್ಲಿ ಪ್ಯಾಲೆಸ್ಟಾಯಿನ ತುಸು ಹೆಚ್ಚು ಕಡಿಮೆ ಹಾಳುಬಿದ್ದಿತು. ಸಾಯರಸ್ ಎಂಬ ಇರಾಣೀ ಅರಸನು ಕ್ಯಾಲ್ಡಿಯಾದ ಬಲವನ್ನು ತಗ್ಗಿಸಿದ ಮೇಲೆ ಪ್ಯಾಲೆಸ್ಟಾಯಿನಿಗೆ ಮರಳಲು ಯಹೂದಿಗಳಿಗೆ ಅಪ್ಪಣೆ ಸಿಕ್ಕಿತು. ಆಗ ಸ್ಕ್ರಾಯಿಬ್ (ಬರೆಯುವವ) ಇಝ್ರುರಾ ಎಂಬಾತನು ಯಹೂದಿಗಳ ತಂಡವೊಂದನ್ನು ಜರುಸಲೇಮಿಗೆ ಹೊರಳಿಸಿದನು. ಜ್ಯುಡಿಯಾದ ರಾಜ್ಯಕರ್ತನಾದ (Governor) ನಿಹೇಮಿಯಾ ಎಂಬವನ ಕಾಲದಲ್ಲಿ ಹಿಬ್ರೂ ಬಾಯಬಲ್ಲದೊಳಗಿನ ಕೆಲ ಭಾಗವು ಸಂಗ್ರಹಿಸಲಾಯಿತಂತೆ!

ಕ್ರಿ. ಪೂ. ಯಹೂದಿಗಳ ಮನೋವೇಧಕ ಕರುಣ ಕಥೆಯು ಇನ್ನು ಮುಗಿಯುತ್ತ ಬಂದಿದೆ. ಪೊಡವಿಗೆಲ್ಲ ಹೆಸರಾದ ಅಲೆಕ್ಝಾಂಡರನ ಅಚಿರ ಆಳಿಕೆಯ ನಂತರ (ಕ್ರಿ.ಪೂ. ೩೩೩) ಇಜಿಪ್ತದ ಟಾಲೆಮಿಕರು ಸುಮಾರು ಒಂದು ಶತಕದ ವರೆಗೆ ಜ್ಯುಡಿಯಾವನ್ನು ಆಳಿದರು. ಅವರ ಹಿಂದಿನಿಂದ ಬಂದ ಸಿರಿಯನ್ ಜನರೊಡನೆ ಹೋರಾಡಿ ಹಿಬ್ರೂಗಳು ಮತ್ತೆ ಸ್ವತಂತ್ರರಾದರು (ಕ್ರಿ.ಪೂ. ೧೩೦). ಆದರೆ [illegible] ಯರಲ್ಲಿ ಫ್ಯರಾಯಸೀಜ್, ಸೇಡ್ಯೂಸೀಜ್ ಮುಂತಾದ [illegible] ಗಳು ಉಂಟಾಗಿ ಅದು ಒಡೆದು ಸಡಿಲಾಗಿ ಹೋ[illegible] ಕೂಡಲೆ ಜ್ಯೂಲಿಯಸ್‌ಸೀಝರನ ಹೆಸರಾದ ಎದು[illegible] ಪಾಂಪಿಯು ಜರುಸಲೇಮ ಕೈವಶಮಾಡಿಕೊಂಡ [illegible] ಪ್ಯಾಲೆಸ್ಟಾಯಿನ್ ರೋಮನ್ ಸಾಮ್ರಾಜ್ಯದಲ್ಲಿ ಸಿ[illegible] ಯಹೂದಿಯರು ಅಲ್ಲಿಂದ ನಿರಂತರವಾಗಿ [illegible] (ಕ್ರಿ. ಶ. ೭೦). ಆಗಿನಿಂದ ಇದುವರೆಗೆ, ಅಂದರೆ [illegible] ವರ್ಷ, ಯಹೂದಿಯರು ದೇಶಭ್ರಷ್ಟರಾಗಿ ಜಗತ್ತಿ[illegible] ಎಲ್ಲಿ ಹೊಟ್ಟೆಸಾಗುವುದೋ ಅದೇ ತಮ್ಮ ದೇಶವೆಂ[illegible] ಸುತ್ತ ಬೇಕಾದ ಹೋರೆಯನ್ನು ಮಾಡುತ್ತ ಬ[illegible]

ಭಾರತದಲ್ಲಿ ನೋಡಿದತ್ತ ಮಾರವಾಡಿಗಳಂತೆ, [illegible] ಬೇಕಾದ ದೇಶದಲ್ಲಿ ಯಹೂದಿಯರು ಕಂಡುಬ[illegible] ಮಾತ್ರ ಮಾರವಾಡಿಗಳು ಕೇವಲ ಕಾಂಚನಭಕ್ತ[illegible] ಯಹೂದಿಯರು ಬಹುರೂಪಿಗಳೂ ಬಹುವ್ಯವಸಾ[illegible] ಇರುವರು.

ಹೀಗೆ ಯಹೂದಿಗಳ ಜನಾಂಗವು ನಷ್ಟವಾದರೂ [illegible] ಯಹೂದಿತ್ವವು ಅಳಿದುಹೋಗಲಿಲ್ಲ. ಬಹುಶಃ ಕ[illegible] ಕವೇ ಯುರೋಪದಲ್ಲಿ, ಆದರಲ್ಲೂ ಮಧ್ಯ ಪತ್ತ[illegible] ಭಾಗದಲ್ಲಿ, ಅವರಿಗೆ ಹೆಚ್ಚಿನ ಪೀಡೆಯಾಗಿರಲಿ[illegible] ಧಾರ್ಮಿಕ ಹಾಗು ಸಾಂಸ್ಕೃತಿಕ ಮತ್ಸರದ [illegible] ಆಯಾ ಊರಲ್ಲಿ ಒಂದು ಹೊಲಸು 'ಗೆಟ್ಟೋ' [illegible] ರಿನ ಕಿಕ್ಕಿರಿದ ವಸತಿಯುಳ್ಳ ಓಣಿಯಲ್ಲಿ ಅವರಿಗೆ [illegible] ಗುತ್ತಿತ್ತು. ಅವರ ಪ್ರಾರ್ಥನಾಮಂದಿರಕ್ಕೆ [illegible] ಎಂದು ಹೆಸರು. ಆಯಾ ದೇಶಗಳಲ್ಲಿ ಅವರನ್ನು ಹೆಚ್ಚುಕಡಿಮೆ ಅಸ್ಪೃಶ್ಯರಂತೆಯೇ ಎಣಿಸಲಾ[illegible] ಆದಾಗ್ಯೂ ಸ್ವಾಭಿಮಾನ, ವಿಶಾಲಬುದ್ಧಿ, ಕಾರ್ಯ[illegible] ಜಿಗಟುತನ ಮುಂತಾದ ಸದ್ಗುಣಗಳು ಅವರಲ್ಲಿ [illegible] ಕೊಂಡ ಮೂಲಕ ಅವರು ಎಲ್ಲಿಯೂ ಅಪ್ರಸಿದ್ಧ[illegible] ಅಥವಾ ಕಂಗೆಟ್ಟವರಾಗಿಯಾಗಲೀ ಬಾಳಲಿಲ್ಲ, [illegible] ವ್ಯಾಪಾರದಲ್ಲಿಯೂ ಬಡ್ಡಿವ್ಯವಹಾರದಲ್ಲಿಯೂ [illegible] ಮೊತ್ತ ಮೊದಲನೆಯ ಸ್ಥಾನವನ್ನು ದೊರಕಿಸಿದ್ದ[illegible] ಕಾರಣದಲ್ಲಿ ಅವರು ಎಷ್ಟೋ ದೇಶಗಳಲ್ಲಿ ಅತ್ಯು[illegible] ವನ್ನು ತಲುಪಿದ್ದಾರೆ. ವ್ಹಿಕ್ಟೋರಿಯಾ ಮಹಾ[illegible] ಹುಜೂರ ಪಕ್ಷದ ಮುಖ್ಯಮಂತ್ರಿಗಳಾದ ಡಿ[illegible] ವರು ಯಹೂದಿಯರು. ಹೋದ ಭಾರತ ಮಂ[illegible] ಮಾಂಟೆಗ್ಯೂ, ವ್ಹಾಯಿಸ್‌ರಾಯ ಅರ್ಲರೀಡಿಂಗ್[illegible]

ಮುಖ್ಯಮಂತ್ರಿ ಗ್ಯಾಂಬೆಟ್ಟಾ ಇವರೆಲ್ಲರೂ ಯಹೂದಿಯರೇ! ಧಾರ್ಮಿಕ ಹಾಗೂ ತಾತ್ವಿಕ ಕ್ಷೇತ್ರಗಳಲ್ಲಿ ಪೂರ್ವದಲ್ಲಿ ಹೇಗೆ ಸ್ಯಾಮ್ಯುಯೆಲ್, ಮೋಝೆಸ್ ಮತ್ತು ಜೊಶುಆ ಇವರು ಶಾಶ್ವತ ಪದವಿಯನ್ನು ಹೊಂದಿದರೋ, ಹಾಗೆಯೇ ಅರ್ವಾಚೀನ ಕಾಲದಲ್ಲಿ ಸ್ಪಿನೋಝಾ, ಹೆನ್ರಿ ಬರ್ಗಸನ್ ಮುಂತಾದವರು ತತ್ವಜ್ಞಾನದಲ್ಲಿ ಹೊಗಳುವಂತಹ ಕಾರ್ಯ ಮಾಡಿದ್ದಾರೆ. ಸಮತಾವಾದದ ಜಗದ್ವಿಖ್ಯಾತ ಜನಕನಾದ ಕಾರ್ಲಮಾರ್ಕ್ಸ್, ವಿಜ್ಞಾನದಲ್ಲಿ ಹೆಚ್ಚಿನ ಸಂಶೋಧನೆಯನ್ನು ಮಾಡಿದ ಮೇಂಡೆಲ್‌ಸನ್ ಮತ್ತು ಹೆನ್ರಿ ಹರ್ಟ್ಜ, ಮನೋವಿಶ್ಲೇಷಣೆಯ (Psycho-analysis) ಸರ್ವಶ್ರುತ ಸಂಶೋಧಕರಾದ ಡಾಕ್ಟರ ಫ್ರಾಯಿಡ್ (Freud) ಇವರೂ ಯಹೂದಿಯರೇ! ಹಾಗೆಯೇ ಸಾಹಿತ್ಯದಲ್ಲಿ ಹೀನ್, ಜೂಂಗವಿಲ್, ಮ್ಯಾಕ್ಸನೊರಡನ್, ಮತ್ತು ಸೆಕ್ಸಪಿಯರನ ಹೆಸರಾದ ಟೀಕಾಕಾರ ಬ್ರ್ಯಾಂಡೀಜ್ ಇವರೆಲ್ಲ ವಿದ್ವನ್ಮಾನ್ಯ ರೆನಿಸಿಕೊಂಡಿದ್ದಾರೆ. ಲಲಿತಕಲೆಯಲ್ಲಿಯೂ ಜೋಆಕಿಮ್, ಬರ್ನಹಾರ್ಡ ಮುಂತಾದ ಕಲೋಪಾಸಕರು ಪಾಶ್ಚಿಮಾತ್ಯ ರಂಗಮಂದಿರಗಳಲ್ಲಿ ಕ್ರಾಂತಿಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಪರಿಚಿತರಾದ ಮುಂಬಯಿಯ ಮರಾಠಿ ಸಾಹಿತಿಗಳಾದ ಕುಮಾರಿ ರಿಬೆಕ್ಕಾ ರುಬೆನ್ ಇವರು ಯಹೂದಿಯರೇ!

ಜಾಗತಿಕ ಸಂಸ್ಕೃತಿಯಲ್ಲಿ ಸಂಸ್ಮರಣೀಯ ಸೇವೆ ಮಾಡಿದ ಅಸಂಖ್ಯ ಯಹೂದಿಗಳಲ್ಲಿ ಹಲಕೆಲವು ಹೆಸರುಗಳನ್ನು ಮಾತ್ರ ಮೇಲೆ ಕೊಡಲಾಯಿತು. ಇಷ್ಟರ ಮೇಲಿಂದಲೂ ಈ ಜಾತಿಯ ಉಜ್ವಲ ಪ್ರಭಾವವು ಕಂಡು ಬರುವದು. ಆದರೆ ಇಂಥ ಈ ಅದ್ವಿತೀಯ ಸಮಾಜಕ್ಕೆ ಮುಂದೆ ಏನು ಗತಿ? ನೊಬೆಲ್ ಪಾರಿತೋಷಕವನ್ನು ಪಡೆದ ವಿಖ್ಯಾತ ಜರ್ಮನ್ ಯಹೂದಿ ಮಿ. ಥಾಮಸ್‌ಮಾನ್ ಇವರು ಇದೇ ಗಡಿಪಾರಾಗಿದ್ದು ಅವರು ಅಮೇರಿಕೆಯ ನಾಗರಿಕತ್ವವನ್ನು ಸಂಪಾದಿಸುವವರಂತೆ. ಅವರು ದೊಡ್ಡ ವಿದ್ವಾಂಸರೆಂಬದಾಗಿ ಅಮೇರಿಕೆಯಲ್ಲಿ ಅವರಿಗೆ ಆಶ್ರಯವು ಸಿಗಬಹುದು. ಆದರೆ ಅವರ ಸಾವಿರಾರು, ಅಲ್ಲ ಲಕ್ಷಾವಧಿ ಬಾಂಧವರು ಹಿಟ್ಲರನ ಹೋಮದಲ್ಲಿ ಬೆಂದು, ಬಳಲಿ ಬೃಹದ್ಜರ್ಮನಿಯೊಳಗಿಂದ ಅಸಹಾಯ ಸ್ಥಿತಿಯಲ್ಲಿ ಕಾಲ್ದೆಗೆಯುತ್ತಿರುವರಲ್ಲ! ಅವರ ಗತಿ ಏನು? ಯಹೂದಿಯರ ಪ್ರಾಚೀನ ತಾಯ್ನಾಡಾದ ಪ್ಯಾಲೆಸ್ತಾಯಿನದಲ್ಲಿ ಅವರು ಮತ್ತೆ ನೆಲೆಸಬೇಕೆಂಬ ಮಹಾಯುದ್ಧೋತ್ತರ ಚಳವಳಿಯು ಸರ್ವಶ್ರುತವೇ ಇದೆ. ಪ್ಯಾಲೆಸ್ತಾಯಿನದ ಯಹೂದೀಕರಣವು ಕಾಣಲಿಕ್ಕೆ ಎಷ್ಟು ಸರಳವಾಗಿದೆಯೋ ಅಷ್ಟೇ ವ್ಯವಹಾರದಲ್ಲಿ ಅದು ಡೊಂಕಾಗಿದೆ. ಎರಡು ಸಾವಿರ ವರ್ಷಗಳಾಚೆಯಲ್ಲಿ ಪ್ಯಾಲೆಸ್ತಾಯಿನ್ ಯಹೂದಿಗಳ ದೇಶವಿದ್ದುದೇನೋ ನಿಜ. ಆದರೆ ಆ ದೇಶವನ್ನು ಅವರು ಸಾವಿರಾರು ವರ್ಷ ನೋಡಿರಲೂ ಇಲ್ಲ. ಹಾಗೂ ಅಲ್ಲಿ ಸಾವಿರಾರು ವರ್ಷಗಳಿಂದ ಅರಬರು ಮನೆಮಾಡಿಕೊಂಡು ಇದ್ದಾರೆ. ಇಂಗ್ಲಂಡ ಇಂಗ್ಲೀಷರದೆಷ್ಟೋ ಅಷ್ಟೇ ಪ್ಯಾಲೆಸ್ತಾಯಿನ ಅರಬರ ತಾಯ್ನಾಡು. ಯಹೂದಿಗಳ ಪುನರಾಗಮನಕ್ಕೆ ಅಲ್ಲಿ ನಿರಂತರ ಹಿತಸಂಬಂಧಗಳುಳ್ಳ ಅರಬರು ತೀವ್ರವಾಗಿ ಅಡ್ಡಿ ಮಾಡುವದು ಅಸ್ವಾಭಾವಿಕವಲ್ಲ. ಹಾಗೆ ನೋಡಿದಲ್ಲಿ, ಸಾವಿರಾರು ವರ್ಷ ತಮ್ಮ ದೇಶಬಾಂಧವರಾಗಿ ನೆಲೆಸಿದ ಯಹೂದಿಗಳನ್ನು ಬಿಳಿ ಜನರು ಮಮತ್ವದಿಂದ, ಕನಿಷ್ಠ ಪಕ್ಷಕ್ಕೆ ಮಾನವರಿಗೆ ಸಲ್ಲುವಂತೆ, ನಡೆಸಿಕೊಳ್ಳಬೇಕು. ಬ್ರಿಟಿಶರು ಮತ್ತು ಫ್ರೆಂಚರು ಅವರನ್ನು ಒಟ್ಟಿನ ಮೇಲೆ ಚನ್ನಾಗಿ ನೋಡಿಕೊಳ್ಳುತ್ತಾರೆ. ಉಳಿದವರೂ ಅವಶ್ಯವಾಗಿ ಅವರ ಅನುಕರಣವನ್ನು ಮಾಡಬೇಕು. ಅದು ಶಕ್ಯವಿಲ್ಲದಲ್ಲಿ ಕಾನಡಾ, ಆಸ್ಟ್ರೇಲಿಯಾ ಮುಂತಾದ ವಸಾಹತಿಗೆ ಬೇಕಾದಷ್ಟು ಸ್ಥಳವುಳ್ಳ ಪ್ರದೇಶಗಳಲ್ಲಿ ಯಹೂದಿಗಳಿಗೆ ಆಸರ ಸಿಗುವುದು ಏಕೆ ಕಠಿಣವಾಗಬೇಕೊ ತಿಳಿಯದು. ಅರಬರಿಗೆ ಅನ್ಯಾಯಮಾಡಿ ಯಹೂದಿಗಳಿಗೆ ನ್ಯಾಯ ನೀಡಹೋಗುವುದು ಅನ್ಯಾಯದ ಪರಮಾವಧಿಯೇ ಸರಿ!

[ಹಾವೇರಿಯ 'ಕೆಳೆಯರ ಕೂಟ' ದವರು ಹೊರಡಿಸುತ್ತಲಿರುವ 'ನನ್ನ ನುಡಿ' ಯೆಂಬ ಕೈಬರಹದ ಮಾಸಪತ್ರಿಕೆಯಿಂದ]



● ೪೨೦೦ಫೂಟು ಎತ್ತರವಾಗಿದೆ ಕುಲ್ಲೂ ಕೊಳ್ಳ. ಅಲ್ಲಿಯ ಹಿಮಾಚ್ಛಾದಿತ ಶಿಖರಗಳಲ್ಲದೆ ಗುಡ್ಡಗಾಡು ವಿಚಿತ್ರ ಉಡಿಗೆ ತೊಡಿಗೆಗಳೂ ಮನೋರಂಜಕವಾಗಿವೆ. ಸರು ಕಂಬಳಿಯನ್ನುಡುತ್ತಾರೆ. ಉದ್ದವಾದ ಟೊಪ್ಪಿಗೆಗೆ ಗಳನ್ನು ಚುಚ್ಚಿಕೊಳ್ಳುತ್ತಾರೆ.

● ಲಗ್ನವಾಗುವ ವರನು ತಂದೆಗೆ ೧೬೦ ರೂಪಾಯಿ ಕೊಡ ಆ ಕನ್ಯೆಯು ಓಡಿಹೋದರೆ ಇಮ್ಮಡಿ ಹಣವನ್ನು ಕನ್ಯಾಪಿತೃ ವರನಿಗೆ ಕೊಡಬೇಕು. ವ್ಯಭಿ ದೋಷವಲ್ಲದಿದ್ದರೂ ವಿಟನ ಲ್ಲಿಯೆ ಇರುವದು ಪಾಪಕರ!

ಕುಲ್ಲೂ ಜಾತ್ರೆಯಲ್ಲಿಯ ನರ್ತಕರು

ನನ್ನ ಕುಲ್ಲೂ ಕೊಳ್ಳದ ಪ್ರವಾಸ

ಲೇಖಕರು : ಶ್ರೀ. ಭಾರತಸಂಚಾರಿ ಗೋಸಾವಿ

ಕಾಂಗಡಾ ಜಿಲ್ಹೆಯ ಉತ್ತರಭಾಗದಲ್ಲಿ ಪರ್ವತ ಪ್ರದೇಶಗಳ ಮಧ್ಯದಲ್ಲಿರುವ ಕುಲ್ಲೂ ಸಬ್‌ಡಿವ್ಹಿಜನ್ (ಕಾಂಗಡಾದ) ಉಣ್ಣೆಯ ವ್ಯಾಪಾರಕ್ಕಾಗಿ ಪ್ರಸಿದ್ಧವಾಗಿದೆ. ಈ ತಾಲೂಕು ಕಾಂಗಡಾದಲ್ಲಿಯೇ ಇದ್ದರೂ ಮಧ್ಯೆ ಮಂಡೀಸಂಸ್ಥಾನವೂ ಉನ್ನತ ಬೆಟ್ಟಸಾಲ್ಗುಗಳೂ ಇದ್ದುದರಿಂದ ಬೇರೊಂದು ಇಲಾಖೆಯಂತೆಯೇ ಇಲ್ಲಿಯವರಿಗೂ ಭಾಸವಾಗುತ್ತದೆ. ಹೆಚ್ಚು ಜನರು ಇದನ್ನು (ಕಾಂಗಡಾದಿಂದ) ಬೇರೆಯಾಗಿಯೇ ಕರೆಯುತ್ತಾರೆ ಕಾಂಗಡಾ ಮತ್ತು ಕುಲ್ಲೂ ವ್ಯಾಲಿಗಳೆಂದು. ಆದರೆ ಇದಕ್ಕೆಲ್ಲಾ ಒಬ್ಬನೇ ಜಿಲ್ಹಾಧಿಕಾರಿಯಿದ್ದು ಸರಕಾರಿ ಮುಖ್ಯಾಧಿಕಾರಿಗಳೆಲ್ಲಾ ಧರ್ಮಶಾಲೆಯಲ್ಲಿರುತ್ತಾರೆ. ಈ ಭಾಗವು ಹೆಚ್ಚು ಮನೋಹರವೂ ತಂಪು ಹವೆಯುಳ್ಳದ್ದೂ ಆಗಿದೆ. ಮತ್ತು ಈ ಭಾಗದಲ್ಲಿ ಕಾಶ್ಮೀರದಂತೆ ಅನೇಕ ಪ್ರಕಾರದ ಹಣ್ಣುಗಳು ವಿಪುಲವಾಗಿ ಬೆಳೆಯುತ್ತವೆ. ಸಿಮ್ಲಾದಿಂದ ೧೫೦ ಮೈಲು ಉತ್ತರ ಪಶ್ಚಿಮ ಮೂಲೆಯಲ್ಲಿರುವ ಈ ಸುಂದರ ಅನೇಕ ಪಾಶ್ಚಾತ್ಯರೂ ಬರುತ್ತಾರೆ. ದಕ್ಕಾಗಿ ಪಠಾಣಕೋಟ, ಕಾಂಗಡಾ, ಪಾಲಮ್ ಜೋಗೀಂದ್ರನಗರಗಳಮೇಲಿಂದ ಉನ್ನತ ಗಿ ಗಿಂದ ಹೋದ ಮೋಟಾರಿನ ಮಾರ್ಗವೇ ಉತ್ತ ಆದರೆ ಮೋಟಾರಿನವರಿಗೆ 'ಮೊನೋಪಲಿ' ಜೋಗೀಂದ್ರ ನಗರದಿಂದ ಮೈಲಿಗೊಂದಾಣೆಯ ತೆಗೆದುಕೊಳ್ಳುತ್ತಾರೆ. ಇಲ್ಲಿಂದ ೮೦ ಮೈಲು ಒಟ್ಟು ೫ರೂ. ಮೋಟಾರ ಬಾಡಿಗೆಯೂ ಪಟ್ಟಿಯೂ ಕೂಡಿ ಕುಲ್ಲೂದವರೆಗೆ ೫-೬-೦ ಇದರ ಹೊರತು ಮೊದಲಿನ ಹಳೇ ಮಾರ್ಗ ಅವುಗಳಲ್ಲಿ ಒಂದು ಲೋಕಲ್‌ಬೋರ್ಡಿಗೆ ಸಂಬಂಧ ಮಾರ್ಗದಿಂದ ೪೬ ಮೈಲು ದೂರದಲ್ಲಿ ಕುಲ್ಲೂ ೧೨ ಮೈಲಿಗೊಂದರಂತೆ ಮುಕಾಂ ಬಂಗ್ಲೆಗ

ಜೋಗೀಂದ್ರನಗರವು ಮಂಡೀ ಸಂಸ್ಥಾನಕ್ಕೆ ಸೇರಿದ್ದು ಅಲ್ಲಿಯ ವಿದ್ಯುತ್ ಕಾರ್ಖಾನೆಯು ಇಡೀ ಜಗತ್ತಿಗೇ ಪ್ರಸಿದ್ಧವಾಗಿರುವದೆಂಬ ಸಂಗತಿಯನ್ನು ಹಿಂದೇ ತಿಳಿಸಿದ್ದೇವೆ. ನಾವು ಹೋಗುವ ಕಾಲುದಾರಿಯಲ್ಲಿಯೇ ಈ ಕಾರ್ಖಾನೆಯೂ, ಅಲ್ಲಿ ನಡೆಯುವ ಅದ್ಭುತ ಕಾರ್ಯವೂ ನೋಡಲು ಸಿಕ್ಕವು. ಒಂದು ಮೈಲಿನ ಮೇಲಿರುವ ವಿದ್ಯುತ್ ಗೃಹವನ್ನು ನೋಡಿಕೊಂಡು ಮುಂದೆ ಸಾಗಿದೆವು. ಸುಮಾರು ಏಳು ಮೈಲು ಸಾಧಾರಣ ಏರಿಯನ್ನೇರಿ ಹೋದಮೇಲೆ ಗುಮ್ಮಾ ಎಂಬ ಮಣ್ಣುಪ್ಪಿನ ಖಣಿಯಹತ್ತಿರ ಮುಟ್ಟಿದೆವು. ಈ ಗುಡ್ಡದಲ್ಲಿ ಒಂದು ದೊಡ್ಡ ಉಪ್ಪಿನ ಖಣಿಯಿದ್ದು ಇತ್ತ ಕಡೆಯ ಬಡ ಜನರೆಲ್ಲಾ ಈ ಕಪ್ಪು ಮಣ್ಣಿನೊಳಗೆ ಬೆರೆತ ಉಪ್ಪನ್ನೇ ಮಡಿಕೆಯಲ್ಲಿ ನೆನೆಯಿಟ್ಟು ಅದರಮೇಲೆ ಸಿಂತ ತಿಳಿನೀರನ್ನೇ ಉಪ್ಪಿನ ಬದಲಾಗಿ ಉಪಯೋಗಿಸುತ್ತಾರೆ. ಮಣ್ಣೆಲ್ಲಾ ತಳಕ್ಕೆ ಕೂಡ್ರುವದು. ಮತ್ತು ಉಪ್ಪು ನೀರಾಗಿ ಮೇಲೆ ಬರುವದು. ಇಲ್ಲಿ ಈ ಹೆಸರಿನ ಹಳ್ಳಿಯೊಂದಿದೆ. ಹೊತ್ತು ಮುಳುಗುತ್ತ ಬಂದಿದ್ದರೂ ನಾವು ಅಲ್ಲಿ ನಿಲ್ಲದೆ ಅತಿ ವೇಗವಾಗಿ ಒಂದು ಕಠಿಣ ಏರಿಯನ್ನು ಗಹನವಾದ ಕಾಡಿನೊಳಗಿಂದಲೇ ದಾಟಿ, ರಾತ್ರಿ ಝುಟಂಗರಿ ಎಂಬ ಹಳ್ಳಿಗೆ ಮುಟ್ಟಿ ವಿಶ್ರಾಂತಿ ಹೊಂದಿದೆವು. ಇದರ ಸಮೀಪದಲ್ಲಿ ೭೦೦೦ ಫೂಟಿನಮೇಲೆ ಮಂಡಿಯ ರಾಜನ ಒಂದು ಸುಂದರ ಅರಮನೆ ಇದ್ದು ಬೇಸಿಗೆಯಲ್ಲಿ ಇಲ್ಲಿ ಆವನು ಬಂದಿರುತ್ತಾನೆ. ದೇವದಾರು ಮರಗಳ ಕಾಡಿನಿಂದ ವನವೆಲ್ಲಾ ತುಂಬಿದ್ದು ಕರಡಿ ಚಿರ್ಚೆ ಮೊದಲಾದ ಕಾಡು ಪ್ರಾಣಿಗಳು ವಾಸವಾಗಿವೆ. ಇಲ್ಲಿ ಮುಶಾಫರ ಬಂಗ್ಲೆಯೂ ಇದೆ. ನಾವು ಒಂದು ಅಂಗಡಿಯಲ್ಲಿ ಅಡಿಗೆ ಊಟ ಮುಗಿಸಿಕೊಂಡು ಅತಿಶಯ ಚಳಿಯಲ್ಲೇ ನಿದ್ರಾದೇವಿಯ ವಶರಾದೆವು.

ನಸುಕಿನಲ್ಲಿಯೇ ೩ರ ಸುಮಾರಿಗೆ ಎಲ್ಲರನ್ನೂ ಎಬ್ಬಿಸಿ ಕಂದೀಲು ಹಚ್ಚಿ ಕಾಡಿನೊಳಗಿಂದ ಸಾಗಿದೆವು. ಯಾಕಂದರೆ ಈ ದಿನ ೩೨ ಮೈಲಿನ ಮಾರ್ಗವನ್ನೂ ಸಾಗಬೇಕಾಗಿತ್ತಲ್ಲದೆ ೩ ಕಠಿಣ ಗುಡ್ಡಗಳನ್ನೂ (೯೫೦೦ಫೂ.) ಏರಿ ಇಳಿಯಬೇಕಾಗಿತ್ತು. ಆದ್ದರಿಂದ ರಾತ್ರಿಯಲ್ಲಿಯೇ ಕಳ್ಳರ ಹಾಗೂ ಕಾಡು ಮೃಗಗಳ ಅಂಜಿಕೆಯನ್ನು ಬದಿಗಿಟ್ಟು ಸಾಗಬೇಕಾಯಿತು. ಸುಮಾರು ಆರುಮೈಲು ಕಠಿಣ ಇಳುಕಲನ್ನಿಳಿದು ಭಯಂಕರವಾದ ಅಮಾವಾಸ್ಯೆಯ ಕತ್ತಲೆಯಲ್ಲಿ ಗಾಢಾರಣ್ಯದೊಳಗನ್ನು ಸೇರಿ, (ವಿದ್ಯುತ್ ಕಾರ್ಖಾನೆಗಾಗಿ ನೀರು ಕಟ್ಟು) ಊಹ್ಲಾನದಿಯ ಪೂಲನ್ನು ದಾಟಿದೆವು. ವಿಶ್ರಾಂತಿ ಹೊಂದುವ ಸ್ಥಳವಾಗಿರದೆ ಲೂಟಿಗಾರರ ಖೂನಿ ಸ್ಥಳವಾದ್ದರಿಂದ ತಡಮಾಡದೆ ಮೂರು ಮೈಲಿನ ಒಂದು ಗುಡ್ಡವನ್ನೇರಿ ಬ್ಯಾಂಗಡೂ ಘಾಟದ ಶಿಖರಕ್ಕೆ ಮುಟ್ಟಿದೆವು. ಇದೇ ಮೊದಲನೇ ಏರಿಯು. ಇಲ್ಲಿಗೆ ಮುಟ್ಟಿದಾಗ್ಗೆ ರಾತ್ರಿಯು ಮುಗಿದು, ಸೂರ್ಯನು ಮಾರ್ಗದರ್ಶಕನಂತೆ ಹೊರಗೆ ಬರುವ ಸಮಯವಾಗಿತ್ತು. ಇವನ ಹೊಂಬಣ್ಣದ ಕಿರಣಗಳು ಎಲ್ಲರ ಹೃದಯದೊಳಗಿನ ಕಳ್ಳರ ಹಾಗು ಕಾಡು ಮೃಗಗಳ ಭೀತಿಯನ್ನೂ ಕತ್ತಲೆಯನ್ನೂ ದೂರುಮಾಡಿದ್ದರಿಂದ ಹೊಸ ಹುರುಪಿನಿಂದ ೯೫೦೦ ಫೂ. ಎತ್ತರವಾದ ಭಬ್ಬುಜ್ಯೋತ (ಪಾಸ್)ವನ್ನು ಏರುವ ಉದ್ದೇಶವಾಗಿ ಜೋರಿನಿಂದ ಸಾಗಿದ್ದೆವು. ಸುಮಾರು ೩ ಮೈಲು ಸರಳ ಮಾರ್ಗ ಸಾಗಿದಮೇಲೆ ಸಿಲಮದಾನಿ ಎಂಬ ಸ್ಥಾನದಲ್ಲಿ ಹತ್ತುವ ಮುಶಾಫರ ಬಂಗ್ಲೆಯಲ್ಲಿ ಉಪಹಾರ ತೀರಿಸಿಕೊಂಡು ಸ್ವಲ್ಪ ವಿಶ್ರಾಂತಿ ಹೊಂದಿ ಪುನಃ ೩ ಮೈಲು ಸಾಧಾರಣ ಇಳುಕಲನ್ನಿಳಿದು ಒಂದೆರಡು ಸಣ್ಣ ಹಳ್ಳಿಗಳನ್ನು ಹಿಂದೂಡಿ ಭಬ್ಬೂದ ತಳಕ್ಕೆ ಮುಟ್ಟಿದೆವು.


ಭಬ್ಬೂಜ್ಯೋತ (ಘಾಟ)ವನ್ನು ಏರಲು ಪ್ರಾರಂಭಿಸಿದಾಗ ಬಿಸಿಲು ಏರಿದ್ದರಿಂದ ಕಾಲುಗಳು ಏಳದಾದವು. ಆದರೂ ಈ ಭಾಗದಲ್ಲಿ ಹಳ್ಳಿಗಳಾಗಲಿ ಅಂಗಡಿಗಳಾಗಲಿ ಇರದ್ದರಿಂದ ಸಂಜೆಯವರೆಗೆ ಕುಲ್ಲೂ ಪಟ್ಟಣಕ್ಕೆ ಮುಟ್ಟೇ ತೀರಬೇಕಾಗಿತ್ತು. ಏರಿಯನ್ನು ನೋಡಿದರೆ ಎದೆಯೊಡೆಯುವಂತಿತ್ತು. ಅಂತೂ ನನ್ನ ಮಿತ್ರನ ಸಹಾಯದಿಂದ ಸಾಮಾನುಗಳನ್ನೆಲ್ಲಾ ಹಂಚಿಕೊಟ್ಟು ಕಡಿದಾದ ಏರಿಯನ್ನು ೨ ತಾಸಿನಲ್ಲಿ ಹತ್ತಿ ೯೫೦೦ ಫೂಟು ಎತ್ತರ ಶಿಖರಕ್ಕೆ ಮುಟ್ಟಿದೆವು. ನಮ್ಮ ಮಿತ್ರ ಮಸ್ತರಾಮನು ಒಂದುಗಂಟೆ ಮೊದಲೇ ಶಿಖರಕ್ಕೆ ಮುಟ್ಟಿ ಹಾದೀ ಕಾಯುತ್ತಿದ್ದನು. ಇವನಷ್ಟು ತೀವ್ರ ಮತ್ತು ದಣುವಿಲ್ಲದೆ ನಡೆಯುವವನನ್ನು ನಾನು ಗುಡ್ಡಗಾಡು ಪ್ರಾಂತದಲ್ಲಿ ನೋಡಿದ್ದಿಲ್ಲ. ಇವನಿಗೆ ಎಷ್ಟೇ ವೇಗವಾಗಿ ಏರಿಯನ್ನೇರಿದರೂ ದಮ್ಮೇರುತ್ತಿದ್ದಿಲ್ಲ. ಮತ್ತು ತಾಸಿಗೆ ೬-೭ ಮೈಲು ನಡೆಯುವ ಅಭ್ಯಾಸ. ಇವನ ಸಂಗಡ ನನ್ನಂಥ ಬಯಲುಸೀಮೆಯವ ಗುಡ್ಡದ ಏರಿಯ ಮಾರ್ಗದಲ್ಲಿ ನಡೆಯುವದೇನೂ ಸಾಧಾರಣಮಾತಲ್ಲ. ಅಂತೂ ಒಂದಾವರ್ತಿ ಬೀಳುತ್ತ ಏಳುತ್ತ ಕಾಲಸ್ವರೂಪದಂತೆ ತೋರುವ ಭಬ್ಬೂಶಿಖರಕ್ಕೆ ಮುಟ್ಟಿದೆವು. ಎಷ್ಟೇ ದಣಿವಾಗಿದ್ದರೂ ಉತ್ತರಕ್ಕೆ ಸಮೀಪದಲ್ಲಿ ಕಾಣುವ ರಿಟಾಂಗಪಾಸಿನ ಉನ್ನತ ಬರ್ಫಿನ ಶಿಖರಗಳು ಹೃದಯಕ್ಕೆ ತಂಪನ್ನುಂಟುಮಾಡಿದವು. ಇಲ್ಲಿಂದ ಸುತ್ತಲೂ ಬಹು ದೂರದವರೆಗೆ ಗುಡ್ಡ, ಕಾಡು, ನದಿಗಳ ಸೌಂದರ್ಯ

ವನ್ನೇನು ವರ್ಣಿಸುವದು! ಹಿಮಾಲಯದ ಸಾಮ್ರಾಜ್ಯ! ತಂಪು ಹವೆ, ನೀರಿನ ಸೇವನೆಯಿಂದಲೇ ಎಲ್ಲರ ಪರಿಶ್ರಮವು ದೂರಾಗಿ ಹೋಯಿತು. ಶಿಖರದಲ್ಲಿ ಹತ್ತು ನಿಮಿಷ ಕೂಡು ವದೂ ಕಠಿಣವಾಯಿತು. ಭಯಂಕರ ತಂಗಾಳಿ ಬೀಸ ತೊಡಗಿದ್ದರಿಂದ ಕಡಿದಾದ ಆರುಮೈಲು ಇಳುಕಲನ್ನಿಳಿದು ಕುಲ್ಲೂ ತಾಲೂಕಿನ ಹದ್ದಿನಲ್ಲಿರುವ ಕಂದೋಣದಲ್ಲಿ ಸ್ವಲ್ಪ ವಿಶ್ರಾಂತಿಹೊಂದಿ ಸರಬರಿ ನದಿಯ ದಂಡೆಗುಂಟ ತರತರದ ಧಾನ್ಯಗಳ ಗಡ್ಡೆಗಳನ್ನು ನೋಡುತ್ತಾ ಸಂಜೆಗೆ ಕುಲ್ಲೂಕ್ಕೆ ಮುಟ್ಟಿದೆವು.

ಈ ಸ್ಥಾನವು ಉನ್ನತ ಗಿರಿ-ಶಿಖರಗಳಿಂದ ಸುತ್ತಲ್ಪಟ್ಟ ಮೈದಾನದಲ್ಲಿ ವ್ಯಾಸ ಮತ್ತು ಸರವರಿ ನದಿಗಳ ಸಂಗಮ ಸ್ಥಾನದಲ್ಲಿದೆ. ಇಲ್ಲಿಯ ಭೂಮಿಯು

ಕುಲ್ಲೂ ಪಟ್ಟಣದ ವರ್ಣನೆ
(ಎತ್ತರ ೪೨೦೦ ಫೂಟು)

ಕಾಶ್ಮೀರದಂತೆ ಅತಿ ಬೆಳೆಯುಳ್ಳದ್ದಾಗಿದ್ದು ಅನೇಕ ಹಣ್ಣು ತೋಟಗಳು (ಕಾಂಗಡಾ ಜಿಲ್ಲೆಯಲ್ಲಿ) ಇದೇ ಭಾಗದಲ್ಲಿವೆ. ಇಲ್ಲಿ ಮ್ಯಾಜಿಸ್ಟ್ರೇಟ, ಅಸಿಸ್ಟಂಟ ಸಬ್‌ಜಜ್ ಕಚೇರಿಗಳೂ, ಹಾಯಸ್ಕೂಲು, ಉಣ್ಣೆ ನೇಯುವ ಶಾಲೆಗಳೂ ಇವೆ. ಈ ಭಾಗದಲ್ಲಿ ನಾಲ್ಕು ತಿಂಗಳು ಬರ್ಫ ಬೀಳುತ್ತಿದ್ದು ಸುತ್ತಲೆಲ್ಲಾ ಹಿಮ ಶಿಖರಗಳಿರುವದರಿಂದ ತಂಪಾಗಿರುತ್ತದೆ. ಪ್ರತಿವರ್ಷ ದಸರಾದಲ್ಲಿ ನೆರೆಯುವ ದೊಡ್ಡ ಜಾತ್ರೆಯಲ್ಲಿ ಲಕ್ಷಾಂತರ ರೂಪಾಯಿಯ ಉಣ್ಣೆ, ಪಶ್ಮಿನಾ, ಪಟ್ಟು, ಕಂಬಳಿ, ಶಾಲು, ಸುಹಾಗಾ, ಲೋಭಾನ, ಶಿಲಾಜಿತ, ಕಸ್ತೂರಿ, ಕುರಿ, ಕುದುರೆ, ಹೇಸರಗತ್ತೆಗಳೇ ಮೊದಲಾದ ಅನೇಕ ವಸ್ತು ಪ್ರಾಣಿಗಳ ವ್ಯಾಪಾರವು ಜರುಗುತ್ತಿದ್ದು ತಿಬೇಟ, ಲದಾಕ, ಸಿಮ್ಲಾ, ಚಂಭಾ, ಲಾವಳ್, ಸುಪಿತ್ತಿಗಳಕಡೆಯ ದೂರದೂರದ ಜನರು ಬರುತ್ತಾರೆ. ಮತ್ತು ಇಲ್ಲಿಂದ ಹಣ್ಣು, ಅನೇಕ ಧಾನ್ಯಗಳು, ಚರ್ಮ, ಉಪ್ಪು, ಬಟ್ಟೆ ಮೊದಲಾದವು ಹೊರಗೆ ಹೋಗುತ್ತವೆ. ಕಾಂಗಡಾ ಜಿಲ್ಲೆಯಲ್ಲಿ ಹೊರಗಿನಿಂದ ಬರುವದಕ್ಕಾಗಿ ೧೩೫೦೦ ಫೂ... ಎತ್ತರವಾದ ರಿಟಾಂಗ್ ಘಾಸ್ ಬಹಳೇ ಅನುಕೂಲ... ವಾಗಿದೆ. ಈ ಜಿಲ್ಲೆಯ ಸರಹದ್ದು ಇಲ್ಲಿಂದ ೧೩೦ ಮೈ... ಗಳ ವರೆಗೆ ಉತ್ತರದಲ್ಲಿರುವ ಲಾವುಲ್ ಭಾಗದ (ಕೇ... ವರೆಗೆ ಹಬ್ಬಿದೆ. ಇಲ್ಲಿ ಒಬ್ಬ ಆನರರಿ ಮ್ಯಾಜಿ... ನಿರುತ್ತಾನೆ. ಇದರ ಹೊರ್ತು ಸಿಮ್ಲಾದ ಕಡೆಗಿರುವ ... ಎಂಬ ಗ್ರಾಮದಲ್ಲಿಯೂ ಒಬ್ಬ ಆನರರಿ ಮ್ಯಾಜಿಸ್ಟ್ರೇ... ತ್ತಾನೆ. ಇವೆಲ್ಲ ಕುಲ್ಲೂ ತಾಲೂಕಿಗೆ ಸೇರಿದವುಗಳು... (ನಾವು ಇತ್ತಕಡೆಯಲ್ಲಿ ಪ್ರಸಿದ್ಧ ಸ್ಥಳಗಳಾದ ... ಮತ್ತು ಮಣಿಕರಣಗಳನ್ನು [ಮಸ್ತರಾಮನ ... ನೋಡಿಕೊಂಡು ಬಂದೆನು.) ಸುತ್ತಲಿನ ಸುತ್ತ... ಗ್ರಾಮಗಳಿಗೂ ಹಿಮಶಿಖರಗಳನ್ನು ದಾಟಿ ಉತ್ತ... ಲಾವುಲ್, ಸುಪಿತ್ತಗಳಿಗೂ ಇದೇ ಮುಖ್ಯ ಸ್ಥಳ... ಈ ಪಟ್ಟಣದಲ್ಲಿ ಅಖಾಡಾಬಜಾರ, ಸುಲ್ತಾ... ಮತ್ತು ಕುಲ್ಲೂ ಎಂದು ಮೂರು ಭಾಗಗಳಿವೆ. ... ಉಣ್ಣೆಯ ಹಾಗೂ ಮುಖ್ಯ ವ್ಯಾಪಾರ ... ಪೇಟೆಯು ಅಖಾ... ರವೇ ಆಗಿದ್ದು, ... ಪುರದಲ್ಲಿ ಹಳೇ ... ಕುಲ್ಲೂ ರಾಜನ ... ಇವೆ. ಮತ್ತು ... ಎಂಬ ಮೈದಾನ... ದಲ್ಲಿ ಮುಖ್ಯ ಕಚೇ... (ಪೋಸ್ಟ, ತಾರು, ... ಇವೆ. ಇದೇ ... ದಸರಾ ಜಾತ್ರೆಯು ... ತ್ತದೆ.



ಕುಲ್ಲೂಕೊಳ್ಳದೊಳಗಿನ ವಸತಿಸ್ಥಾನಗಳು

ಕುಲ್ಲೂ ದಸರಾ ಜಾತ್ರೆ

ಈ ಭಾಗದ... ದಸರಾ ಜಾತ್ರೆಯು... ದೃಷ್ಟಿಯಿಂದಲೂ ... ಗಾಡು ಜನರ ... ದೃಷ್ಟಿಯಿಂದಲೂ ... ವಾಗಿದೆ. ಇದು ... ಮೊದಲು ಒಬ್ಬ ರಾಜ... ಆಧೀನವಾಗಿತ್ತು. ಈ... ಮಾನೋನದವರಿಗೆ ೨೫ ಸಾವಿರ ರೂಪಾಯಿ...

(ಬ್ರಿಟಿಶರು) ಕೊಟ್ಟು ಊರ್ಜಿತಗೊಳಿಸಿದ್ದಾರೆ. ಅವನ ಸಂಬಂಧಿಕನಾದ ಶಾಂಗರಿ ರಾಜನಿಗೂ ಇದೇ ಅಧಿಕಾರವಿದ್ದರೂ ಆ ಮ್ಯಾನಿರುತ್ತಾನೆ. ಇವರ ಪುರಾತನ ಕಾಲದ ರಘುನಾಥ ಮಂದಿರವೊಂದು ಇಲ್ಲೇ ಇದೆ. ಆ ಮಂದಿರಕ್ಕೆ ಅಧೀನವಾದ ೩೬೦ ದೇವಿ, ದೇವತೆಗಳ ಮಂದಿರಗಳು ಸುತ್ತಲಿನ ಗ್ರಾಮಗಳಲ್ಲಿವೆ. ಅವೆಲ್ಲ ದಸರಾದ ಕಾಲಕ್ಕೆ ಈ ಸ್ಥಾನಕ್ಕೆ ಉತ್ಸವದೊಂದಿಗೆ ರಘುನಾಥನ ದರ್ಶನಕ್ಕೆ ಬರಬೇಕು. ಆ ಮೇಲೆ ಈ ರಾಜರೆದುರಿಗೆ ದಸರೆಯ ದಿನ ಮಧ್ಯಾಹ್ನದಲ್ಲಿ ದೊಡ್ಡ ಮೆರವಣಿಗೆಯು ಹೊರಡುವದು. ಆ ಕಾಲಕ್ಕೆ ೩೬೦ (ಅಧೀನ) ಮಂದಿರಗಳಲ್ಲಿ ಯಾರಿಗೆ ಬರುವದಾಗುವದಿಲ್ಲವೋ ಅವರು ಮೊದಲಾಗಿಯೇ ೧೦ ರೂ. ದಂಡ ಕಳಿಸಿ ಯೋಗ್ಯಕಾರಣವನ್ನು ರಾಜನಿಗೆ ಅರಿಕೆಮಾಡಿಕೊಳ್ಳಬೇಕು. ಇಲ್ಲವಾದರೆ ಅವುಗಳ ಜಾಗೀರು ತಿರುಗಿ ತೆಗೆದುಕೊಳ್ಳಲ್ಪಡುವದು. ಅವೆಲ್ಲ ಒಟ್ಟು ರಘುನಾಥನ ಮಂದಿರದಿಂದ ಮೈದಾನದ ವರೆಗೂ ಕುಲ್ಲೂ ಮತ್ತು ಶಾಂಗರಿ ರಾಜರೊಡನೆ ಊದುತ್ತ ಬಾರಿಸುತ್ತ ಮೈದಾನಕ್ಕೆ ಬಂದ ಮೇಲೆ ರಘುನಾಥ ಮೂರ್ತಿಯನ್ನು ಒಂದು ಇಪ್ಪತ್ತು ಗಾಲಿಯ ತೇರಿನಲ್ಲಿ ಕೂಡಿಸುತ್ತಾರೆ. ಅಲ್ಲಿ ಇಬ್ಬರೂ ರಾಜರು ತಮ್ಮ ಇಷ್ಟದೇವತೆಯನ್ನು ಪೂಜಿಸಿದ ಮೇಲೆ ತೇರು ಎಳೆಯಲ್ಪಡುತ್ತದೆ. ಆ ಕಾಲಕ್ಕೆ ಇಲ್ಲಿ ನೆರೆದ ಚಿತ್ರವಿಚಿತ್ರ ಪೋಷಾಕುಗಳ ಗುಡ್ಡುಗಾಡು ಜನರ ಗುಂಪು ನೋಡುವಂತಿರುತ್ತದೆ. ಅವರಲ್ಲಿ ಅನೇಕರು ಉದ್ದನ್ನ ಕಂಬಳಿ ಟೊಪ್ಪಿಗೆ, ಅದರಲ್ಲಿ ನವಿಲುಗರಿಗಳನ್ನು ಧರಿಸಿಕೊಂಡು ನೃತ್ಯಮಾಡುತ್ತಿರುತ್ತಾರೆ. ಹೆಂಗಸರೆಲ್ಲ ಕಂಬಳಿಗಳನ್ನು ಉಡುತ್ತಿದ್ದು ಗಂಡಸರಿಗಿಂತ ಹೆಚ್ಚು ಹುರುಪಿನಿಂದ ಹಾಡುಗಳನ್ನು ಹೇಳುತ್ತಾ ತಿರುಗಾಡುತ್ತಿರುತ್ತಾರೆ. ಈ ಕಾಲಕ್ಕೆ ೩೬೦ ಸಣ್ಣ ಸಣ್ಣ ವಾಹನಗಳಲ್ಲಿ ತರತರದ ಮೂರ್ತಿಗಳು ವಸ್ತ್ರ ಭೂಷಣಗಳಿಂದ ಸಜ್ಜಾಗಿ ತೇರಿನೊಂದಿಗೆ ಹಲಿಗೆ ನಗಾರಿಗಳ ವಾದ್ಯದಲ್ಲಿ ಕುಲ್ಲೂರಾಜನ ತಂಬೂದ ಹತ್ತರವೇ ನಿರ್ಮಿತವಾದ ರಘುನಾಥನ ತಂಬೂದವರೆಗೆ ಹೋಗುತ್ತವೆ. ಅಲ್ಲಿ ೭ ದಿವಸ ಆ ಮೂರ್ತಿಯನ್ನು ಸ್ಥಾಪಿಸಿ ಕಡೆಯ ದಿನ (ವ್ಯಾಸ) ನದಿಯ ಮಧ್ಯದಲ್ಲಿರುವ ಒಂದು ದ್ವೀಪದಲ್ಲಿ ಲಂಕಾ ಪಟ್ಟಣವನ್ನು ನಿರ್ಮಿಸಿ ಪೂರ್ಣಿಮೆಯು ದಿನ ಸುಡುತ್ತಾರೆ. ಅಲ್ಲಿಯವರೆಗೆ ನಿತ್ಯ ರಾಜರಿಬ್ಬರನ್ನೂ ಪಲ್ಲಕ್ಕಿಯಲ್ಲಿ ಕೂಡಿಸಿ ಮೆರೆಸುತ್ತಾ ಕುಲ್ಲೂ ರಾಜನ ಮನೆಯವರೆಗೆ ಒಯ್ಯುವದೂ, ಪುನಃ ಊಟ ಉಪಚಾರವಾದ ಮೇಲೆ ರಾತ್ರಿ ತಂಬೂಗಳಿಗೆ ತರುವುದೂ, ಅವರೆದುರಿಗೆ ಇಡಿ ದಿವಸ ಪದಗಳನ್ನು ಹೇಳುತ್ತಾ ಗಂಡಸರೂ ಹೆಂಗಸರೂ ನೃತ್ಯ ಮಾಡುವದೂ ನೋಡುವಂತಿವೆ. ಈ ಕಾಲಕ್ಕೆ ಈ ಭಾಗದಲ್ಲಿ ತಯಾರಾದ ಶಾಲು, ಕಂಚಳಿ, ಪಟ್ಟು, ರತ್ನಗಂಬಳಿ, ಪಶ್ಮೀನಾ, ಮೊದಲಾದವುಗಳ ವ್ಯಾಪಾರವು ಚನ್ನಾಗಿ ನಡೆಯುತ್ತದೆ. ಈ ಭಾಗದಲ್ಲಿ ಅ. ಭಾರತ ಚರಖಾ ಸಂಘದವರೊಂದು ಶಾಖೆಯನ್ನು ತೆಗೆದಲ್ಲಿ ಕೆಳಗಿನ ಪ್ರದೇಶಗಳಿಗೆ ಶುದ್ಧ ಉಣ್ಣೆಯ ಖಟ್ಟಿಯನ್ನು ಕಾಶ್ಮೀರಕ್ಕಿಂತಲೂ ಅಗ್ಗ ದರದಿಂದ ಪೂರೈಸಬಹುದಾಗಿದೆ. (ಈ ಸಂಗತಿಯನ್ನು ನಾನು ಮರಳಿ ಬರುವಾಗ್ಗೆ ಪಂಜಾಬ ಶಾಖೆಯ ಖಾದೀ ಕೇಂದ್ರವಾದ ಆದಮಪೂರದಲ್ಲಿ ತಿಳಿಸಿ ಬಂದಿದ್ದೇನೆ.) ಇನ್ನೂ ವರೆಗೂ ಯಾರೂ ಇತ್ತ ಲಕ್ಷ್ಯಕೊಟ್ಟಂತೆ ತೋರುವದಿಲ್ಲ. ಇಲ್ಲಿ ಪ್ರತಿಯೊಬ್ಬರು ಉಣ್ಣೆ, ಪಶ್ಮೀವಗಳನ್ನು ನೂಲುತ್ತಿದ್ದು ಸ್ವತಃ ನೆಯಿದು ಧರಿಸುತ್ತಾರೆ. ಆದರೆ ರಾಟೆಗಳೂ, ಬೇರೆ ಉತ್ತಮ ಸಾಧನಗಳೂ ಪ್ರಚಾರದಲ್ಲಿಲ್ಲ. ಅವನ್ನು ಪೂರೈಸಿ ಖಾದೀ ಪ್ರಚಾರ ಮಾಡುವ ಅವಶ್ಯಕತೆಯಿದೆ. ಇತ್ತಿತ್ತ ಗಿರಣಿಯ ಮತ್ತು ಜಪಾನದ ಉಣ್ಣೆಯನ್ನು ಕೂಡಿಸಿ ನೇಯುವ ಕೆಲಸವನ್ನು ಇಲ್ಲಿಯ ನೇಯಿಗೆಯ ಶಾಲೆಯವರು ಪ್ರಚಾರದಲ್ಲಿ ತಂದಿದ್ದಾರೆ. ನಾನು ಈ ಸಂಗತಿಯನ್ನು ಅವರಿಂದಲೇ ತಿಳಿದುಕೊಂಡೆನು. ಪ್ರತಿ ವರ್ಷ ಸರಕಾರಿ ನೇಯಿಗೆಯ ಶಾಲೆಯಿಂದ ಕೆಲವು ವಿದ್ಯಾರ್ಥಿಗಳು ಹೊರಬೀಳುತ್ತಿದ್ದು ಅಲ್ಲಿ ಹಾಸನ್ನು ಪರದೇಶಿ ಉಣ್ಣೆಯಿಂದಲೇ ತಯಾರಿಸುವದನ್ನು ಕಲಿಸುತ್ತಾರೆ. (ಈ ಬಗ್ಗೆ ಅವರಿಗೆ ಎಚ್ಚರಿಕೆ ಕೊಟ್ಟು ಬಂದಿರುವೆನು.) ಅಂತೂ ಈ ಭಾಗದಲ್ಲಿ ನೇಯಿಗೆಯ ಉದ್ಯೋಗವು ಚನ್ನಾಗಿ ನಡೆಯುತ್ತಿದೆ. ಈ ಜಾತ್ರೆಗೆ ಬಂದ ಪ್ರತಿಯೊಬ್ಬರು ಹೊಸದೊಂದು ಪ್ರದೇಶಕ್ಕೇ ಬಂದಂತೆ ಭಾಸವಾಗುತ್ತದೆ. ಯಾಕಂದರೆ ಕೆಲವು ಪುರಾತನ ರೀತಿಗಳು ಇಲ್ಲಿವೆ; ೩೬೦ ದೇವರಲ್ಲಿ ಅನೇಕ ದೇವತೆಗಳು ಮೈತುಂಬಿ ಕುಣಿಯುವದನ್ನೂ, ಗಂಡಸರು ಹೆಂಗಸರು ಭೇದವಿಲ್ಲದೆ (ಒಬ್ಬರಮೇಲೊಬ್ಬರು ಬಿದ್ದುಕೊಂಡು) ಶರೆಕುಡಿದು ಮತ್ತರಾಗಿ ಕುಣಿಯುತ್ತಿರುವುದನ್ನೂ, ಅಂಗಡಿಗಳಿಲ್ಲದೆ ಹೆಚ್ಚು ಸಾಮಾನನ್ನು ಸ್ತ್ರೀಪುರುಷರು ಹೊತ್ತುಹೊತ್ತು ಮಾರುವದನ್ನೂ ನೋಡಿದರೆ ಇಲ್ಲಿಯ ವಿಚಿತ್ರತೆ ಕಂಡುಬರುವಂತಿದೆ. ಈ ಭಾಗದಲ್ಲಿ ಬಂದ ಹೊರದೇಶದವರೆಲ್ಲಾ ಈ ದಸರಾ ಜಾತ್ರೆಗೆ ಬಂದೇತೀರಬೇಕು. ನಾನು ಇಲ್ಲಿ ಅನೇಕ ಹಿಂದೂ, ಯುರೋಪಿಯನ್, ಫ್ರೆಂಚ, ತಿಬ್ಬತಿ ಜನರನ್ನು ನೋಡಿದೆನು. (ಮಳೆಯಾದ್ದರಿಂದ ಸಹುವೇ ಜಾತ್ರೆಯು ಕಡಿಮೆಯಾಯಿತು.)

ಈ ಸ್ಥಾನವು ಕುಲ್ಲೂದಿಂದ ೨೫ ಮೈಲು ದೂರ ಉತ್ತರಕ್ಕೆ ಹಿಮಶಿಖರಗಳಡಿಯಲ್ಲಿದೆ. ಮಣಾಲಿ ವರೆಗೂ ಮೋಟಾರಿನ ಮಾರ್ಗ ಹೋಗಿದೆ.

ಮಣಾಲಿ-ವಸಿಷ್ಠ

ಯಾಕೆಂದರೆ ಈ ಭಾಗದಲ್ಲಿ ಅನೇಕ ಯುರೋಪಿಯನ್, ಹಿಂದೂ ಜನರ ಪ್ರಸಿದ್ಧ ತೋಟಗಳೂ, ಹವೆ ಬದಲಾಯಿಸುವ ಬಂಗ್ಲೆಗಳೂ ಇದ್ದು ಸಾವಿರಾರು ಜನರು ಬೇಸಿಗೆಯಲ್ಲಿ ಬರುತ್ತಾರೆ. ಮಣಾಲಿಯಿಂದ ಸುತ್ತಲೂ ಬರ್ಫಿನ ಶಿಖರಗಳು ಅತಿ ಸಮೀಪದಲ್ಲಿಯೇ ಕಾಣುತ್ತಿದ್ದು, ೬೫೦೦ ಫೂ. ಎತ್ತರವಿರುವದರಿಂದ ಅತಿಶಯ ಚಳಿಯಿದೆ. ವ್ಯಾಸ ನದಿಯ ದಂಡೆಗುಂಟ ಹೋದ ಮೋಟಾರಿನ ಮಾರ್ಗದಲ್ಲಿ ಕಟರಾಯಿ, ನಗರ ಗ್ರಾಮಗಳೂ ಸುತ್ತಲಿನ ವನಸಿರಿಯೂ ದರ್ಶನೀಯವಾಗಿವೆ. ಮಣಾಲಿಯಲ್ಲಿ ಸಣ್ಣ ಪೇಟೆಯಿದ್ದು ಹೊಸದಾಗಿ ತಯಾರಾದ ಅನೇಕ ಬಂಗ್ಲೆಗಳೂ ಇವೆ. ಆದರೆ ಹೊರಗಿನ ಜನರು ಮುಸಾಫರ ಬಂಗ್ಲೆಯಲ್ಲಿ ಅಥವಾ ಬೋರ್ಡಿನವರಿಂದ ಕಟ್ಟಿದ ಕೋಣೆಗಳಲ್ಲಿ ಇಳಿಯಬೇಕಾಗುವದು. ಇಲ್ಲಿಂದ ೨ ಮೈಲಿನ ಮೇಲೆ ವಸಿಷ್ಠವೆಂಬ ಸ್ಥಾನದಲ್ಲಿ ಉಷ್ಣ ಜಲದ ಕುಂಡವೂ ವಸಿಷ್ಠ ಋಷಿಯ ಮೂರ್ತಿಯುಳ್ಳ ಪುರಾತನ ಮಂದಿರವೂ ರಘುನಾಥ ಮಂದಿರವೂ ದರ್ಶನೀಯವಾಗಿವೆ. ಮುಂದೆ ೧೨ ಮೈಲಿನಮೇಲೆ ರಿಟಾಂಗಪಾಸ ಇದೆ. ಇದರ ಮೇಲೆ ಯಾವಾಗಲೂ ಬರ್ಫು ಮುಚ್ಚಿದ್ದು ಭಯಂಕರವಾದ ಬಿರುಗಾಳಿಯು ಬೀಸುತ್ತಿರುತ್ತದೆ. ಇದನ್ನು ದಾಟುವವರು ಮುಂಜಾನೆ ೧೦ರೊಳಗಾಗಿಯೇ ಪಾರಾಗಬೇಕು. ಇಲ್ಲವಾದರೆ ಬಿರುಗಾಳಿಗೆ ಸಿಕ್ಕು ಹಾರಿ ಹೋಗುವದುಂಟು. ಅನೇಕ ಕುದುರೆಗಳೂ, ಸಾಮಾನುಗಳೂ, ಜನರೂ ಎಷ್ಟೋ ಸಾರೆ ಪತ್ತೆಯಿಲ್ಲದೆ ಹೋಗಿದ್ದಾರೆಂದು ಇಲ್ಲಿಯವರ ಹೇಳಿಕೆ. ಅಂಥ ಆಪತ್ತಿಯಿಂದ ಪಾರಾಗಲು ಸರಕಾರದವರು ಇಲ್ಲಿ ಕೆಲವು ಕಲ್ಲಿನ ಮನೆಗಳನ್ನು ಕಟ್ಟಿದ್ದು ಅವರಲ್ಲಿ ಅಡಗಿಕೊಳ್ಳಬಹುದು. ಸಂಜೆಯ ೫ರ ವರೆಗೆ ಗಾಳಿಯು ನಿಲ್ಲುವದಿಲ್ಲ. ... ಇಲ್ಲಿಗೆ ಹೋದಾಗ್ಗೆ "ಬರ್ಫು" ಬಹಳವಾಗಿದ್ದು ... ಮುಂದೆ ಹೋಗಲಾಗಲಿಲ್ಲ. ಈ ಕಾರಣದಿಂದಲೇ ... ದಸರಾ ಉತ್ಸವದಲ್ಲಿ ಟಿಬೇಟ ಲದಾಕಗಳ ... ಹೆಚ್ಚು ಸಾಮಾನುಗಳೂ ಬರಲಿಲ್ಲ. ಈ ... ೧೪೫೦೦ ಫೂ. ಎತ್ತರವಿದೆ. ಇಲ್ಲಿಂದ ... ವರೆಗೆ ಲಾಮಾ ಮತಕ್ಕೆ ಸೇರಿದ ಲಾವುಲ ಜನ... ವಾಗಿರುತ್ತಿದ್ದು ಅದೂ ಕುಲ್ಲೂಕ್ಕೆ ಸೇರಿದೆ. ಕೇ... ಆ. ಮ್ಯಾನಿರುತ್ತಾರೆ. ಇಲ್ಲಿಂದ ಚಂಭಾ ಸಂಸ್ಥಾನ... ಗಿಂದ ಕಾಶ್ಮೀರಕ್ಕೂ ಲದಾಕದೊಳಗಿಂದ ... ಮಾರ್ಗಗಳು ಹೋಗಿವೆ.

ಈ ಪವಿತ್ರ ಕ್ಷೇತ್ರವು ಕುಲ್ಲೂದಿಂದ ... ಮೇಲಿದ್ದು, ನೆಲದೊಳಗಿಂದ ಪುಟಿದು ಬರುವ ... ಬಿಸಿ ನೀರಿನ ಸೆಲೆಗಳು ...

ಮಣಿಕರಣ

ದಲ್ಲಿವೆ. ನನ್ನ ಮಿತ್ರ... ಕೂಡಿ ೬ ಮೈಲಿನ ... ಭೂಂತರ ಹಳ್ಳಿಯ ಸಮೀಪ ವ್ಯಾಸ ನದಿಯನ್ನು ... ಪಾರ್ವತಿ ನದಿಯ ... ಗುಂಟ ಸಾಟ್ಟ ... ಲಾದ ... ಹಳ್ಳಿಗಳ ಮೇಲಿಂ... ಪಾರ್ವತಿಯನ್ನು ... ಮಣಿಕರ್ಣಕ್ಕೆ ... ಈ ಭಾಗದ ... ಗುಡಿಯ ... ಸುಂದರವಾಗಿ... ದು ಕಡೆಗೆ ... ಕಟ್ಟಿದವಿ ... ಒಂದು ರಾತ್ರಿ... ವಾಗ್ಗೆ ಕಾಡು ... ದು ಹಳ್ಳಿಯಲ್ಲಿ ... ಎರಡೂ ಬದಿಗೆ ... ಪವಾಗಿ ... ಸಾಲುಗಳೊಳಗಿಂದ ಪ್ರವಾಸ ಮಾಡುವಾಗ್ಗೆ ... ಆನಂದವನ್ನು ಅಕ್ಷರಗಳಿಂದ ಬರೆಯು... ಅಸಾಧ್ಯ. ಈ ಕ್ಷೇತ್ರವು ಪುರಾತನ ... ಪ್ರಸಿದ್ಧವಾಗಿದ್ದು ಮೊದಲು ಇದಕ್ಕೆ ...



೧೪೦೦೦ ಫೂಟು ಎತ್ತರವುಳ್ಳ ಕುಲ್ಲೂದ ಹಿಮಶಿಖರ

ವೆಂದು ಹೇಳುತ್ತಿತ್ತು. ಇಲ್ಲಿ ಪಾರ್ವತಿಯ ಮಣಿಯು ಉದುರಿ ಬಿದ್ದು ಅದು ಸಿಗದಾಗ್ಗೆ ಆದಿಶೇಷನು ನೆಲದೊಳಗಿಂದ ಫೂಂಕಾರಮಾಡಿ ಹುಡುಕಿ ಕೊಟ್ಟದ್ದರಿಂದ ಪಾತಾಳದಿಂದ ಎಸರುನೀರಿನ ಅನೇಕ ಸೆಲೆಗಳು ಹೊರಬಿದ್ದವೆಂದು ಇಲ್ಲಿಯವರ ಹೇಳಿಕೆ. ಏನೇ ಇರಲಿ; ಈ ಪರ್ವತದಲ್ಲಿರುವ ಈ ಸೆಲೆಗಳು ಬಹಳೇ ಉಗಿಯನ್ನು ಆಕಾಶದಲ್ಲಿ ತೂರುತ್ತಾ ಪುಟಿದು ಬರುವದನ್ನು ನೋಡಿದರೆ ಸಾನಂದಾಶ್ಚರ್ಯವಾಗುತ್ತದೆ. ಇವುಗಳ ಮೇಲೆಯೇ ಇಲ್ಲಿಯ ಜನರು ಪಾತ್ರೆಗಳನ್ನಿಟ್ಟು ಅಡಿಗೆ ಮಾಡುತ್ತಾರೆ. ಒಂದು ಕಡೆಯಲ್ಲಿ ಅನೇಕ ಬಿಸಿ ನೀರಿನ ಸೆಲೆಗಳು ಪುಟಿದು ಬರುತ್ತಿದ್ದು ನೆಲವೆಲ್ಲಾ ಕೆಂಪಾಗಿ ಹೋಗಿದೆ. ನದಿಯಲ್ಲಿ ಕೂಡಿದ ಮೇಲೂ ನೀರು ಸುಡುತ್ತಲೇ ಇರುತ್ತದೆ. ಇಲ್ಲಿಯ ನೂರಾರು ಮನೆಗಳಲ್ಲೆಲ್ಲಾ ಬಿಸಿ ನೀರಿನ ಉತ್ತಮ ಕುಂಡಗಳಿದ್ದು ಸ್ನಾನಮಾಡಲು ಯಾತ್ರಿಕರಿಗೂ ಸ್ಥಳಿಕರಿಗೂ ಬಹಳೇ ಅನುಕೂಲವಾಗಿದೆ. ಇಲ್ಲಿ ಪುರಾತನ ಕಾಲದ ರಘುನಾಥನ ಮಂದಿರವೊಂದು ನೋಡುವಂತಿದೆ. ಇಲ್ಲಿ ಮೂರಾವರ್ತಿ ಸೂರ್ಯದರ್ಶನವಾಗುತ್ತದೆ. ನಸುಕಿನಲ್ಲೊಮ್ಮೆ, ಮಧ್ಯಾಹ್ನದಲ್ಲೊಮ್ಮೆ, ಮತ್ತು ಸೂರ್ಯಾಸ್ತದಲ್ಲೊಮ್ಮೆ. ಸುತ್ತಲೆಲ್ಲಾ ಉನ್ನತ ಶಿಖರಗಳಿದ್ದುದರಿಂದ ನಡುವಿನ ಕೊಳ್ಳದೊಳಗಿಂದ ಪ್ರಕಾಶವು ಬೀಳುತ್ತದೆ. ಇದೂ ವಿಚಿತ್ರ ಸಂಗತಿಗಳಲ್ಲೊಂದಾಗಿದೆ.

ತಿರುಗಿ ಬರುವಾಗ್ಗೆ ನಾನು ಮೋಟಾರಿನಿಂದ ನೆಟ್ಟಗೆ ಬಂದೆನು. ಮಾರ್ಗದಲ್ಲಿ ಓಟ ಎಂಬ ಗ್ರಾಮದ ಎರಡೂ

ಮಂಡಿ


ಬದಿಗೆ ವ್ಯಾಸ ನದಿಯ ದಂಡೆಗುಂಟ ಗೋಡೆಯಂತೆ ಹಬ್ಬಿದ ಉನ್ನತ ಶಿಖರಗಳೂ, ನಡುವೆ ಮೋಟಾರ ಮಾರ್ಗ, ಕೆಳಬದಿಗೆ ಶಬ್ದ ಮಾಡುತ್ತಾ ಹರಿದು ಹೋಗುವ ನದಿಯು ದೃಶ್ಯವೂ ಭಯಾನಕವಾಗಿವೆ. ಓಟದಿಂದ ಸಿಮ್ಲೆಗೊಂದು ಮಾರ್ಗ ಹೋಗಿದೆ. ೧೦೨ ಮೈಲು ಮುಂದೆ ಪಂಡೋ ಗ್ರಾಮದ ಹತ್ತರ ವ್ಯಾಸನದಿಯನ್ನು ದಾಟ ಮಂಡಿ ಶಹರಕ್ಕೆ ಬಂದೆನು. ಇದು ಮುಂಡಕ ಋಷಿಯ ಆಶ್ರಮವೆಂದು ಇಲ್ಲಿಯ ಜನರ ಗ್ರಹಿಕೆ. ಇದು ಇತ್ತ ಕಡೆಯ ದೊಡ್ಡ ಸಂಸ್ಥಾನವಾಗಿದ್ದು ೩—೪ ಲಕ್ಷ ಉತ್ಪನ್ನವಿದೆ. ಇಲ್ಲಿಯ ರಾಜನ ಅರಮನೆಯೂ, ಪೇಟೆಯೂ, ವ್ಯಾಸ ನದಿಯ ಪೂಲೂ ಮತ್ತು ಕೆಲವು ಮಂದಿರಗಳೂ ದರ್ಶನೀಯವಾಗಿವೆ. ಇಷ್ಟು ದೊಡ್ಡ ಶಹರವು (ಈ ಭಾಗದಲ್ಲಿ) ಧರ್ಮಶಾಲೆಯು ಹೊರತು ಬೇರೊಂದಿಲ್ಲ. ಇಲ್ಲಿಂದ ೧೨ ಮೈಲಿನ ಮೇಲೆ ಬಿಳಿ ಪುಡಿಉಪ್ಪಿನ ಕಾರಖಾನೆಯುಳ್ಳ ದರಂಗ ಎಂಬ ಸ್ಥಾನದಿಂದ ಪರ್ವತಗಳ ದೃಶ್ಯವು ನೋಡುವಂತಿದೆ.

ಕುಲ್ಲೂದ ಭಾಗದಲ್ಲಿ ವಿಚಿತ್ರ ಪದ್ಧತಿಗಳು ರೂಢಿಯಲ್ಲಿವೆ. ವಿವಾಹವಾಗುವ ಮೊದಲು ವರನ ಕಡೆಯಿಂದ

ಇತ್ತ ಕಡೆಯ ವಿಚಿತ್ರ ನಡತೆ ನಡಾವಳಿಗಳು

ಕನ್ಯೆಯ ತಂದೆಗೆ ೧೦೭ ರೂಪಾಯಿಗಳನ್ನು ಮುಟ್ಟಿಸಿ ಕಾಗದ ಬರಿಸಿಕೊಳ್ಳುತ್ತಾರೆ. ಆರೇ ತಿಂಗಳಲ್ಲಿ ಲಗ್ನ ಮಾಡಿಕೊಡದಿದ್ದರೆ ಇದರ ಇಮ್ಮಡಿ ಹಣವನ್ನು ಮರಳಿ ಕೊಡಬೇಕು. ತಯಾರಾಗದಿದ್ದರೆ ಹಣವು ಮುಳುಗಿತು. ಮುಂದೆ ಲಗ್ನದ ವೇಳೆಗೆ ೫ ರೂ. ಸ್ಟಾಂಪಿನ ಮೇಲೆ ಪುನಃ ಎರಡೂ ಕಡೆಯವರು ಕಾಗದ ಬರೆಸಿಕೊಳ್ಳುವರು. ಹೆಂಡತಿ ಬೇರೆಯವರ ಸಂಗಡ ಓಡಿಹೋದರೆ ಅವರಿಗೆ ಅವಳನ್ನು (ಲಗ್ನದ ಕಾಲದ ಖರ್ಚಿನ) ಇಮ್ಮಡಿ ಹಣಕ್ಕೆ ಮಾರುವ ಅಧಿಕಾರವು ಗಂಡನಿಗಿದೆ. ಗಂಡನು ಸರಿಯಾಗಿ ನಡಿಸಿಕೊಳ್ಳದಿದ್ದರೆ ಅಥವಾ ಹೊಡೆದರೆ ಅವಳಿಗೂ ಬೇರೆಯವನನ್ನು ಲಗ್ನವಾಗುವ ಅಧಿಕಾರವಿದೆ. ಆದರೆ ಹೆಚ್ಚು ಹೆಂಗಸರು ಕಾಮಿಗಳಾದ್ದರಿಂದ ಈ ಕಡೆಗೆ ಮಾರುವ ಪದ್ಧತಿಯು ಪ್ರಚಾರದಲ್ಲಿದೆ. ವ್ಯಭಿಚಾರಕ್ಕೇನೂ ದೋಷವಿಲ್ಲ. ಆದರೆ ಅವಳು ಅವನ ಮನೆಯಲ್ಲಿಯೇ ಇರಕೂಡದು. ಇರಹತ್ತಿದರೆ ಮಾರಿ ಬಿಡುತ್ತಾರೆ. ಆಗ್ಗೆ ಅವಳ ಮಕ್ಕಳನ್ನು ಬೇಕಾದಷ್ಟು ಸಂಗಡ ಒಯ್ಯುವದು ಬಿಡುವದು ಅವಳ ಅಧಿಕಾರಕ್ಕೆ ಒಳಪಟ್ಟಿದೆ. ಅಗ್ಗದರದಿಂದ ಬೇರೆ ಹೆಂಡತಿಯನ್ನು ಕೊಳ್ಳುವದೂ, ವ್ಯಭಿಚಾರ ಮಾಡುವ ಹೆಂಡತಿಯನ್ನು ತುಟ್ಟಿ ದರದಿಂದ ಮಾರುವದೂ ಜಾರನು ಹಣ ಕೊಡಲು ಒಪ್ಪದಿದ್ದರೆ ೯ಲನೇ ಕಲಮಿನ ಪ್ರಕಾರ ಖಟ್ಲೆ ನಡಿಸುವದೂ ಈ ಕಡೆಯ ಕಚೇರಿ, ಕೋರ್ಟುಗಳಲ್ಲಿ ನಿತ್ಯ ನೋಡಲು ದೊರೆಯುತ್ತವೆ. ಒಟ್ಟಿನ ಮೇಲೆ ಸ್ತ್ರೀಸಾಮ್ರಾಜ್ಯವಿದು. ಅವರೇ ಗಟ್ಟಿಗರು, ಲಾವುಳ ಸುಪಿತ್ತಿಗಳ ಕಡೆಗೆ ೬—೭ ಗಂಡಂದಿರ ಮಧ್ಯ ಒಬ್ಬಳೇ ಹೆಂಡತಿಯನ್ನು ಲಗ್ನವಾಗುವದುಂಟು. ಅಲ್ಲಿ ಲಾಮಾಗಳ ಮತಪ್ರಚಾರವಿದೆ. ಕಾಂಗಡಾ ದೇಶದಲ್ಲಿ ಹೆಚ್ಚು ಬ್ರಾಹ್ಮಣ, ಸೂದ ಜನರು ತಮ್ಮ ಹೆಂಡಿರ ಕೈಯಿಂದ ಅನ್ನ ಬೇಳೆ ತೆಗೆದುಕೊಳ್ಳುವದಿಲ್ಲ. (ಸ್ತ್ರೀಪಾಕ ನಿಷಿದ್ಧ.) ಸೂದ ಜನರಲ್ಲಿ ಹೆಣ್ಣು ಮಕ್ಕಳನ್ನು ಸಾವಿರಾರು ರೂಪಾಯಿಗಳಿಗೆ ಮಾರುವ ರೂಢಿಯಿದೆ. ಆದರೆ ಶ್ರೀಮಂತರಲ್ಲಿಲ್ಲ. ಇತ್ತಿತ್ತ ಕಡಿಮೆಯಾಗುತ್ತ ನಡೆದಿದೆ. ಇಂಥ ನೂರಾರು ವಿಚಿತ್ರ ರೂಢಿಗಳೂ ಪರ್ದಾ ಪದ್ಧತಿಯೂ ಈ ದೇಶದಲ್ಲಿವೆ. ಒಟ್ಟಿನ ಮೇಲೆ ಜಾಹ ವನಶ್ರೀಯು ಬೆಡಗುಳ್ಳ ಕಾಂಗಡಾ ಪ್ರದೇಶವನ್ನು ಪ್ರತಿಯೊಬ್ಬರು ನೋಡಲೇಬೇಕು.

ಅಖಿಲ ಭಾರತೀಯ ಪ್ರದರ್ಶನಗಳಲ್ಲಿ ಸುವರ್ಣಪದಕಗಳನ್ನು ಪಡೆದ




ಸಿದ್ಧೇಶ್ವರ ಮತ್ತು ಕಂಪನಿ, ಹುಬ್ಬಳ್ಳಿ

ಹಿಂದುಸ್ತಾನ ಸರಕಾರದಲ್ಲಿ ರಜಿಸ್ಟರ ಆಗಿದೆ.

● ಸಿದ್ಧೇಶ್ವರ ತಿಜೋರಿಗಳು ಯುರೋಪಿಯನ್ ಮತ್ತು ಅಮೇರಿಕನ್ ಕಾರಖಾನೆಗಳಲ್ಲಿ ಬಳಕೆಯಲ್ಲಿರುವ ಅತ್ಯಾಧುನಿಕ ಸುಧಾರಿಸಿದ ಪದ್ಧತಿಯಿಂದ ತಯಾರಿಸಲ್ಪಡುತ್ತವೆ. ....

● ಅಖಂಡ ಉಕ್ಕಿನ ಒಂದೇ ತಗಡಿನಲ್ಲಿ, ಜಾಯಿಂಟ ಮಾಡದೆ, ೩೫೦ ಟನ್ ಪ್ರೆಷರ ಕೊಡುವ ಯಂತ್ರಶಕ್ತಿಯಿಂದ ೧೨ ಮೂಲೆಗಳನ್ನು ಬಾಗಿಸಿ, ತಯಾರಿಸುತ್ತೇವೆ. ....



● ಅತ್ಯುತ್ಕೃಷ್ಟ ಪರದೇಶೀ ತಿಜೋರಿಗಳಿಗೆ ಅವು ಸರಿಗಟ್ಟುತ್ತವೆ. ಆದುದರಿಂದ ಹಿಂದುಸ್ತಾನದಲ್ಲೆಲ್ಲಾ ಸರಕಾರಿ ಆಫೀಸುಗಳಲ್ಲಿ, ಬ್ಯಾಂಕು-ಕಚೇರಿಗಳಲ್ಲಿ, ಸರಾಫ-ಸಾಹುಕಾರರಲ್ಲಿ ಹಗಲಿರುಳೂ ಉಪಯೋಗಿಸಲ್ಪಡುತ್ತವೆ. ....

● ನಾವು ತಯಾರಿಸುವ ತಿಜೋರಿ, ಉಕ್ಕಿನ ಕಪಾಟು, ಕ್ಯಾಶಬಾಕ್ಸ ಮತ್ತು ಕೀಲಿಕೈಗಳು ಕೈಗಾರಿಕೆಯಲ್ಲಿಯೂ ತಾಳಿಕೆ-ಭದ್ರತೆಗಳಲ್ಲಿಯೂ ಅದ್ವಿತೀಯವಾಗಿವೆ. ....

ವಿಮೆಯಿಳಿಸುವುದೆಲ್ಲಿ ?? ○ ○ ○

ಲಾಂಗ್ ಲಾಯಿಫ್

ಇನ್ಶೂರನ್ಸ ಕಂ. ಲಿ. (ಪುಣೆಯಲ್ಲಿ!!!

ಯಾಕೆ ?

ಪ್ರಥಮ ಮೌಲ್ಯಮಾಪನೆ (Valuation)

ಎಂಡೌಮೆಂಟ್ ರೂ. ೧೦ ಪೂರ್ಣಾಯುಷ್ಯ ರೂ. ೧೨||

ಬೋನಸ್ಸನ್ನು ಹಂಚಿದ್ದು.

★

ಮುಖ್ಯ ಕಚೇರಿ:—
ಲಕ್ಷ್ಮೀರೋಡ್, ಪುಣೆ ನಂ. ೨.

ಶಾಖಾಕಚೇರಿಗಳು:—
ದಾದರ, ಮುಂಬಯಿ ನಂ. ೧೪
ಬಂದರರೋಡ್, ಕರಾಚಿ

....

೧. ಸುಲಭ ವಿಮಾದರಗಳು
೨. ಭದ್ರವಾದ ಆರ್ಥಿಕ ಸ್ಥಿತಿ
೩. ಅತ್ಯಲ್ಪ ಪಾಲಿಸಿಗಳು ರದ್ದಾಗುವಿಕೆ
೪. ಸ್ತ್ರೀವಿಮೆದಾರರಿಗೆ ವಿಶೇಷಸೌಕರ್ಯಗಳು
೫. ರಾಷ್ಟ್ರೋದ್ಧಾರ ನಿಧಿ

ಹಾಲೆವಿಯ ರಾಚೆಲ್

ಲೇಖಕರು: ಶ್ರೀ. ಬಸವರಾಜ ಕಟ್ಟೀಮನಿ

★

- ನ್ಯಾಯಾಧೀಶನಾದ ಬಾಗ್ನಿಗೆ ಹೆಂಡತಿ ಮಕ್ಕಳು ಉರಿವ ಮನೆಯಲ್ಲಿ ಸುಟ್ಟು ಹೋದುದರಿಂದ ಸಂಸಾರದಲ್ಲಿ ವಿರಕ್ತಿ ಹುಟ್ಟಿತು. ಆದರೆ ಅವನ ಜ್ಯೂದ್ವೇಷವೇನೂ ಹಿಂಗಲಿಲ್ಲ. ..
- ಯುವರಾಜ ಲಿಓಪೋಲ್ಡನು ರಾಚೆಲಳನ್ನು ತನ್ನ ಪ್ರೇಮದ ಬಲೆಯಲ್ಲಿ ತೊಡಕಿಸಿಕೊಂಡು ಕೊನೆಗೆ ಅವಳು ಜ್ಯೂ ಎಂಬುದನ್ನರಿತು ನಡುನೀರಲ್ಲಿ ಕೈಬಿಟ್ಟ. .. ..
- ಕ್ರೈಸ್ತ ಕುವರಿಯಾದ ರಾಚೆಲಳನ್ನು ಬೆಂಕಿಯಿಂದ ಉಳಿಸಿ ಮಗಳಂತೆ ಬೆಳಸಿದ ಎಲಿಝಾರನು ಬಾಗ್ನಿಯ ಮೂಢದ್ವೇಷಕ್ಕೆ ಬಲಿಗೊಟ್ಟು ನಂತರ ಅವಳು ಅವನ ಮಗಳೆಂದು ವಸ್ತುಸ್ಥಿತಿಯನ್ನು ಹೇಳಿ ಅವನಿಗೆ ಅಸಹ್ಯ ಯಾತನೆಯನ್ನುಂಟುಮಾಡುವನು! ..

★

ಬಾಗ್ನಿ ರೋಮನಗರದ ಮುಖ್ಯ ನ್ಯಾಯಾಧೀಶನಾಗಿದ್ದ. ಒಂದು ದಿನ ಆತನು ಒಂದು ಜಾಹೀರನಾಮೆಯನ್ನು ಹೊರಡಿಸಿ ರೋಮನಗರದಲ್ಲಿಯ ಎಲ್ಲ ಜ್ಯೂ ಜನರನ್ನೂ ಹೊಡೆದೋಡಿಸಲು ಆಜ್ಞೆ ವಿಧಿಸಿದ. ದುರ್ದೈವಿಗಳೂ, ನಿಸ್ಸಹಾಯಕರೂ ಆದ ಜ್ಯೂ ಜನರಿಗೆ ಎಲ್ಲೆಲ್ಲೂ ಸ್ಥಳದೊರೆಯುತ್ತಿರಲಿಲ್ಲ. ಆದರೆ ಆಪ್ಪಣೆಯನ್ನು ಮನ್ನಿಸದೆ ಗತ್ಯಂತರವಿರಲಿಲ್ಲ. ಒಳ್ಳೆ ಕಷ್ಟದಿಂದ ಅವರೆಲ್ಲರೂ ದೇಶಾಂತರ ಹೊರಡುವ ಸಿದ್ಧತೆಯಲ್ಲಿ ತೊಡಗಿದರು.

ಇದೇ ಸಮಯದಲ್ಲಿ ನಿಆಪೋಲಿಟನ್ ಪಕ್ಷೀಯರಿಗೂ ರೋಮದ ರಾಜ್ಯಾಧಿಕಾರಿಗಳಿಗೂ ಯುದ್ಧ ನಡೆದಿದ್ದಿತು. ಜ್ಯೂ ಜನರೆಲ್ಲ ರೋಮದಿಂದ ಹೊರಹೊರಡುವುದಕ್ಕೆ ಮೊದಲೆ ನಿಆಪೋಲಿಟನ್ ಸೈನ್ಯವು ರೋಮಕ್ಕೆ ಮುತ್ತಿಗೆ ಹಾಕಿತು. ಕೊಂಚಕಾಲದಲ್ಲಿಯೆ ಶಹರವನ್ನು ಸೇರಿ ಲೂಟಿ, ಸುಲಿಗೆಗಳನ್ನಾರಂಭಿಸಿದರು. ಕೆಲವರು ನ್ಯಾಯಾಧೀಶ ಬಾಗ್ನಿಯ ಸುಂದರವೂ ಭವ್ಯವೂ ಆದ ಮನೆಯನ್ನು ಮುತ್ತಿ ಲೂಟಿ ಮಾಡಿ ಬೆಂಕಿಹಚ್ಚಿದರು. ಬಾಗ್ನಿ ಆ ಸಮಯದಲ್ಲಿ ಶಹರದ ಒಂದು ವಿಭಾಗದಲ್ಲಿ ವ್ಯವಸ್ಥೆ ಮಾಡುವುದರಲ್ಲಿ ತೊಡಗಿದ್ದ. ಕೊಂಚಕಾಲದ ನಂತರ ಬಾಗ್ನಿ ಮನೆಗೆ ಬಂದು ಅದರ ಸ್ಥಿತಿಯನ್ನು ಕಂಡು ಎದೆಯನ್ನೊಡೆದುಕೊಂಡ. ಮನೆಯೊಳಗಿದ್ದ ಆತನ ಹೆಂಡತಿಯೂ ಎಳೆವಯಸ್ಸಿನ ಮಗಳೂ ಸುಟ್ಟುಕೊಂಡು ಸತ್ತುಹೋದರೆಂದೇ ಆತನು ಭಾವಿಸಿದ. ಬಾಗ್ನಿ ಈ ದುಃಖದಿಂದ ಹುಚ್ಚನಂತಾಗಿಬಿಟ್ಟ.

ಆದರೆ ವಸ್ತುಸ್ಥಿತಿ ಮಾತ್ರ ಬೇರೆಯಾಗಿದ್ದಿತು. ಆತನ ಹೆಂಡತಿ ಬೆಂಕಿಯ ಬಾಯಿಗೆ ಬಲಿಬಿದ್ದರೂ ಮಗಳು ಇನ್ನೂ ಜೀವಿಸಿದ್ದಳು. ಎಲಿಝಾರ ಎಂಬ ಹೆಸರಿನ ಒಬ್ಬ ಜ್ಯೂ ಆಕೆಯನ್ನೆತ್ತಿ ಒಯ್ದು ಬೆಂಕಿಯ ಬಾಯಿಂದ ಬಿಡುಗಡೆ ಮಾಡಿದ್ದ. ಕೇವಲ ಕನಿಕರದಿಂದಲೆ ಆತನು ಈ ಕೃತ್ಯವನ್ನೆಸಗಿದ್ದರೂ ಆ ಹುಡುಗಿಯನ್ನು ಆಕೆಯ ತಂದೆಗೆ ಮರಳಿಸುವ ಸಾಹಸ ಮಾಡಲಿಲ್ಲ. ತನ್ನ ಇನ್ನಿತರ ಬಾಂಧವ

ಜಾಕ್ವೀಸ್ ಫ್ರಾಂಕಾಯಿಜ ಫ್ರೋಮೆಂಟಲ್ ಹಾಲೆವಿ—ಪಾಶ್ಚಾತ್ಯ ಸಾಹಿತ್ಯದಲ್ಲಿ ಕೀರ್ತಿವೆತ್ತ ನಾಟಕಕಾರನೀತ. ಈ ಸುಪ್ರಸಿದ್ಧ ನಾಟಕಕಾರ ಪ್ಯಾರಿಸ್ ನಗರದಲ್ಲಿ ೧೭೯೯ನೆ ಇಸ್ವಿಯ ಮೇ ತಿಂಗಳಿನ ೨೭ನೆಯ ತಾರೀಖಿನ ದಿನ ಜನ್ಮವೆತ್ತ.

ಚಿಕ್ಕಂದಿನಿಂದಲೂ ಹಾಲೆವಿಗೆ ಸಂಗೀತದ ಗೀಳು ಹಿಡಿದುಕೊಂಡು ಬಂದಿತು. ಪ್ಯಾರಿಸ್ಸಿನಲ್ಲಿನದೊಂದು ಸಂಗೀತ ವಿದ್ಯಾಲಯದಲ್ಲಿ ಪ್ರವೇಶಿಸಿದಾಗ ಆತನ ವಯಸ್ಸು ಕೇವಲ ಹತ್ತು ವರುಷಗಳದಾಗಿದ್ದಿತು. ಕಾನ್ಸಟ್, ಬರ್ಟನ್, ಲ್ಯಾಂಬರ್ಟ ಚಿರುಬಿನಿ ಮೊದಲಾದ ಹೆಸರುವೆತ್ತ ಸಂಗೀತಗಾರರ ಹತ್ತಿರ ಶಿಕ್ಷಣಹೊಂದಿ ನುರಿತ ಹಾಲೆವಿ. ಈತನ ಇಡಿ ಆಯುಷ್ಯವೆಲ್ಲ ಸಂಗೀತಮಯವಾಗಿಯೆ ಕಳೆಯಿತು. ಸಂಗೀತ ನಾಟಕಗಳನ್ನು ಬರೆಯುವುದರಲ್ಲಿ ಹಾಲೆವಿಯ ಕೈವಾಡ ಮಿಗಿಲಾದುದು. ಈತನ ಎಷ್ಟೋ ಸಂಗೀತ ನಾಟಕಗಳು ಇಂದಿಗೂ ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. 'ರಾಚೆಲ್' ಆತನ ಸರ್ವೋತ್ಕೃಷ್ಟ ನಾಟಕ. ೧೮೩೫ನೆಯ ಇಸ್ವಿಯಲ್ಲಿ ಆತನು ಇದನ್ನು ಬರೆದು ಮುಗಿಸಿದ. 'ರಾಚೆಲ್' (La Juive) ನಾಟಕದ ಪ್ರಯೋಗವನ್ನು ನೋಡಲಿಕ್ಕಾಗಿ ಈಗಲೂ ರಸಿಕರು ಮುಗಿಬೀಳುತ್ತಾರೆ. ಇದು ಹಾಲೆವಿಯ ಕಲೆಯನ್ನು ಸ್ಪಷ್ಟಗೊಳಿಸುತ್ತದೆ. ಈ ಸುಪ್ರಸಿದ್ಧ ಕಲಾಕುವರ ೧೮೬೨ರಲ್ಲಿ ನಾಯಿಸ್ ಎಂಬಲ್ಲಿ ದೇಹವಿಟ್ಟ. ಆತನ 'ರಾಚೆಲ್' ನಾಟಕದ ಕಥಾನಕ ತುಂಬಾ ಸ್ವಾರಸ್ಯಪೂರಿತವಾದುದು—ಹೃದಯಂಗಮವಾದುದು. ಅದು[illegible] ಆದನ್ನಿಲ್ಲಿ ಕೊಡಲಾಗಿದೆ.

ರೊಂದಿಗೆ ದೇಶಾಂತರ ಹೊರಟಾಗ ಆಕೆಯನ್ನು ಜೊತೆಯಲ್ಲಿ ಕರೆದುಕೊಂಡೊಯ್ದ.

ಆಕಸ್ಮಾತ್ತಾಗಿ ಬಂದೊದಗಿದ ಮಹಾವಿಪತ್ತುಗಳಿಂದ ಜರ್ಜರಿತನಾದ ಬ್ರಾಗ್ನಿಗೆ ಸಂಸಾರದಲ್ಲಿ ಜುಗುಪ್ಸೆ ಹುಟ್ಟಿತು. ಆತನು ಧರ್ಮೋಪದೇಶಕನ ದೀಕ್ಷೆ ತೆಗೆದುಕೊಂಡು ಚಕ್ರವರ್ತಿ ಸಿಗಿಸ್‌ಮಂಡನ ಹತ್ತಿರ ಇರತೊಡಗಿದ.

☆

ದೇಶಾಂತರ ಹೋದ ಎಲಿಝೂರ ತನ್ನ ಜಾತಿಬಾಂಧವರೊಂದಿಗೆ ಕಾನ್ಸ್ಟನ್ಸ್ ಎಂಬ ಪಟ್ಟಣಕ್ಕೆ ಬಂದ. ಆ ಸಮಯದಲ್ಲಿ ಈ ನಗರವು ಪೋಪನ ಅಧಿಕಾರಕ್ಕೊಳಪಟ್ಟಿದ್ದಿತು. ಎಲಿಝೂರ ಅಲ್ಲಿ ಮನೆಮಾಡಿಕೊಂಡು ಮುತ್ತುರತ್ನಗಳ ವ್ಯಾಪಾರ ಮಾಡತೊಡಗಿದ. ಕೆಲಕಾಲದಲ್ಲಿ ಆ ವ್ಯವಹಾರದಲ್ಲಿ ಆತನಿಗೆ ಹೇರಳವಾದ ಪ್ರಾಪ್ತಿಯಾಗತೊಡಗಿತು. ರೋಮುನಗರವನ್ನು ಬಿಡುವಾಗ ತಂದ ಬ್ರಾಗ್ನಿಯ ಮಗಳನ್ನು ತನ್ನ ಮಗಳ ಹಾಗೆಯೆ ಬೆಳಿಸಿದ ಎಲಿಝೂರ. 'ರಾಚೆಲ್' ಎಂದು ಆಕೆಗೆ ಹೆಸರಿಟ್ಟಿದ್ದ. ರಾಚೆಲ್ ಒಳ್ಳೇ ಮೋಹಕ ಹುಡುಗಿಯಾಗಿದ್ದಳು.

ರಾಚೆಲ್ ಬೆಳೆಬೆಳೆಯುತ್ತ ಬಂದಹಾಗೆ ಅವಳ ಸೌಂದರ್ಯ ಹೆಚ್ಚುಹೆಚ್ಚಾಗುತ್ತ ಬಂದಿತು. ಅವಳೀಗ ಕಿಶೋರಾವಸ್ಥೆಯನ್ನು ದಾಟಿ ಯೌವನದಲ್ಲಿ ಕಾಲನ್ನಿಕ್ಕತೊಡಗಿದ್ದಳು. ಸ್ವರ್ಗಲೋಕದ ಅಪ್ಸರೆಯರನ್ನು ಮೀರಿಸುವಂತಿದ್ದಿತು ರಾಚೆಲಳ ಸೌಂದರ್ಯದ ಸೊಬಗು! ಎಲಿಝೂರನೇ ತನ್ನ ತಂದೆಯೆಂಬುದಾಗಿ ಆಕೆಯ ಭಾವನೆ. ಬ್ರಾಗ್ನಿಯ ವಿಷಯವಾಗಿಯೂ ಬೆಂಕಿಯಲ್ಲಿ ಸುಟ್ಟು ಸತ್ತುಹೋದ ತನ್ನ ತಾಯಿಯ ವಿಷಯವಾಗಿಯೂ ಆಕೆಗೆ ಎಷ್ಟೂ ಗೊತ್ತಿರಲಿಲ್ಲ. ಎಲಿಝೂರನೂ ಆಕೆಗೆ ಈ ವಿಷಯಗಳನ್ನು ತಿಳುಹಿಸುವ ಗೊಡವೆಗೆ ಹೋಗಿರಲಿಲ್ಲ. ಇಬ್ಬರಲ್ಲಿಯೂ ಅನ್ಯೋನ್ಯ ಪ್ರೇಮವಿದ್ದಿತು. ರಾಚೆಲ್ ಎಲಿಝೂರನನ್ನು ತುಂಬ ಮಮತೆ, ಆದರಗಳಿಂದ ಕಾಣುತ್ತಿದ್ದಳು.

ಒಂದು ದಿನ ಕಾನ್ಸ್ಟನ್ಸ್ ಪಟ್ಟಣ ಸ್ವಾಗತೋತ್ಸವದ ಸಿದ್ಧತೆಯಿಂದ ಧುಮುಧುಮಿಸತೊಡಗಿತು. ಯುವರಾಜ ಲಿಓಪೋಲ್ಡನು ದಿಗ್ವಿಜಯದಿಂದ ಮರಳಿ ಬಂದಿದ್ದು ಆತನ ಸ್ವಾಗತಕ್ಕಾಗಿ ಒಳ್ಳೆ ವಿಜೃಂಭಣೆಯಿಂದ ಸಿದ್ಧತೆ ನಡೆದಿದ್ದಿತು. ನಿತ್ಯದ ಉದ್ಯೋಗ ವ್ಯವಹಾರಗಳೆಲ್ಲವನ್ನೂ ಇಂದು ನಿಲ್ಲಿಸಿ ಬಿಡಲು ಆಜ್ಞೆ ವಿಧಿಸಲಾಗಿದ್ದಿತು. ಸಾಯಂಕಾಲ ಚಕ್ರವರ್ತಿ ಸಿಗಿಸ್‌ಮಂಡನ ಸ್ವಾರಿ ತುಂಬ ಸಂಭ್ರಮದಿಂದ ನಗರಪ್ರವೇಶ ಮಾಡಲಿದ್ದಿತು.

ಬೆಳಿಗ್ಗೆ ಪಟ್ಟಣದಲ್ಲಿಯದೊಂದು ಪ್ರಮುಖ ಮಂ[illegible] ಈಶಪ್ರಾರ್ಥನೆಯಾಯಿತು. ಈ ಮಂದಿರದ ಹ[illegible] ಎಲಿಝೂರನ ಅಂಗಡಿಯೂ ಮನೆಯೂ ಇದ್ದವ[illegible] ಎಲ್ಲ ಜನರೂ ತಮ್ಮ ತಮ್ಮ ಉದ್ಯೋಗವ್ಯವಹಾ[illegible] ನಿಲ್ಲಿಸಿ ಹಬ್ಬವನ್ನಾಚರಿಸಬೇಕೆಂದು ರಾಜಾಜ್ಞೆ[illegible] ಎಲಿಝೂರನ ಅಂಗಡಿಯಲ್ಲಿ ಕಾರ್ಯ ನಡೆದ[illegible] ಕಂಡು ಕೋಪದಿಂದ ಜನರು ಆತನ ಅಂ[illegible] ಮುತ್ತಿ ಕೋಲಾಹಲಕ್ಕಾರಂಭಿಸಿದರು.

ಕ್ರೈಸ್ತರ ಹಬ್ಬದಿಂದ ಯಹೂದಿಯರಿಗೇನು!-[illegible] ಕೊಂಡು ಒಳಗೆ ಕಾರ್ಯದಲ್ಲಿ ತೊಡಗಿದ್ದ ಎ[illegible] ಗಲಾಟೆಯನ್ನು ಕಂಡು ಹೊರಕ್ಕೆ ಬಂದ. ಆ[illegible] ರಾಚೆಲ್ ಹಾಗೂ ಇನ್ನೊಬ್ಬ ತರುಣನೂ [illegible] ಬಂದರು.

ರಾಜಾಜ್ಞೆಯನ್ನು ಮನ್ನಿಸದೆ ಅಂಗಡಿಯನ್ನ[illegible] ಅಪರಾಧದಿಂದ ಸಂತಪ್ತರಾದ ಜನರು ಆ ಮ[illegible] ಕೆಳಕ್ಕೆಳೆದು ಹೊಡೆಯಲುದ್ಯುಕ್ತರಾದರು. [illegible] ಧರ್ಮಾಧಿಕಾರಿ ಬ್ರಾಗ್ನಿ ಆ ಸ್ಥಳಕ್ಕೆ ಬಂದು [illegible] ಕೇಳಿಕೊಂಡು ಅವರನ್ನು ಬಿಟ್ಟುಬಿಡಲು ಹೇಳ[illegible] ಝೂರನನ್ನು ಆತನು ಆಗಲೇ ಗುರುತಿಸಿದ್ದರೂ [illegible] ತನ್ನ ಮಗಳಾಗಿರಬಹುದೆಂಬುದರ ಕಲ್ಪನೆಯೇ [illegible]ಲಿಲ್ಲ.

ಯುವರಾಜ ಲಿಓಪೋಲ್ಡ ಒಂದು ದಿನ ರಾಚೆ[illegible] ಕಂಡು ಆಕೆಯ ಸೌಂದರ್ಯಕ್ಕೆ ಮೋಹಿತನಾ[illegible] ಝೂರನ ಹತ್ತಿರ ಕೂಲಿಕಾರನ ವೇಷದಲ್ಲಿ [illegible]ವಾಗಿದ್ದ. ಅಲ್ಪಾವಧಿಯಲ್ಲಿ ರಾಚೆಲಳನ್ನು ತನ್ನ [illegible] ಪಾಶದಲ್ಲಿ ಕೆಡಹಿಕೊಂಡು ಬಿಟ್ಟ. ಆದರೆ ಏನ[illegible] ದರೂ ರಾಚೆಲಳೊಂದಿಗೆ ವಿವಾಹವಾಗುವ ಹ[illegible] ಆದರೆ ರಾಚೆಲಳ ಸುಮನೋಹರ ಮೂರ್ತಿಯು [illegible] ವಾಗಿರಲೂ ಆತನಿಚ್ಛಿಸುತ್ತಿರಲಿಲ್ಲ. ಆ ಕಾಮು[illegible] ಕುಮಾರಿ ಸುಶೀಲಳೂ ಸರಲಹೃದಯಿಯೂ ಆದ [illegible]ಳನ್ನು ತನ್ನ ಬಲೆಗೆ ಕೆಡಹಿಕೊಂಡುಬಿಟ್ಟಿದ್ದ.

ಆದಿನ ಸಾಯಂಕಾಲ ಜ್ಯೂಜನರ ಹಬ್ಬ[illegible] ರಿಂದ ಪ್ರಾರ್ಥನೆಗಾಗಿ ಎಷ್ಟೋ ಜನ ಜ್ಯೂಗ[illegible] ಝೂರನ ಮನೆಯಲ್ಲಿ ಒಟ್ಟುಗೂಡಿದ್ದರು. ಕೂಡಿ[illegible] ದೇಶಾಂತರ ಮಾಡಿದ ಯುವರಾಜ ಲಿಓ[illegible] ಬಂದಿದ್ದ.

ಸಮಾರಂಭವು ಕೊನೆಗಂಡು ಜನರು ತಮ್ಮ ತಮ್ಮ ಮನೆಗಳಿಗೆ ತೆರಳುವ ಸಮಯದಲ್ಲಿ ಯುವರಾಜನ ಭಾವಿ ಪತ್ನಿಯಾಗಲಿದ್ದ ರಾಜಕನ್ಯೆ ಯುಡೋಶಿಯಾ ಬಂದ ವಾರ್ತೆ ತಿಳಿಯಿತು. ಯುವರಾಜ ಲಿಓಪೋಲ್ಡ ತಕ್ಷಣ ಆಕೆಯ ದೃಷ್ಟಿಗೆ ಬೀಳದಂತಹ ಸ್ಥಳದಲ್ಲಿ ಮರೆಯಾದ. ರಾಜಕನ್ಯೆ ಒಳಕ್ಕೆ ಬಂದು ಎಲಿಝಾರನಿಗೆ ಹೇಳಿದಳು.

"ನಾಳೆಯ ದಿನ ದರ್ಬಾರಿನಲ್ಲಿ ನನ್ನ ಭಾವೀಪತಿ ಯುವರಾಜರ ಸನ್ಮಾನ ಸಮಾರಂಭ ನಡೆಯಲಿದೆ. ಆ ಸಮಯದಲ್ಲಿ ಅವರಿಗೆ ಕಾಣಿಕೆಯಾಗಿ ಕೊಡಲು ಒಂದು ರತ್ನಹಾರ ಬೇಕಾಗಿದೆ. ನಾಳೆ ಅರಮನೆಗೆ ತೆಗೆದುಕೊಂಡು ಬನ್ನಿ."

ಇತ್ತ ಈ ವ್ಯಾಪಾರ ನಡೆದಾಗ ರಾಚೆಲ್ ಲಿಓಪೋಲ್ಡನ ಹತ್ತಿರ ಬಂದಿದ್ದಳು. ಲಿಓಪೋಲ್ಡ ಚಿಂತಾಕುಲನಾಗಿದ್ದ. ರಾಚೆಲ್ ಆತನ ಚಿಂತೆಗೆ ಕಾರಣವನ್ನು ಕೇಳಿದಾಗ ಆತನು ತಾನು ಕ್ರೈಸ್ತನಾಗಿದ್ದುದನ್ನು ಹೇಳಿಬಿಟ್ಟ. ತನ್ನ ನಿಜವಾದ ಹೆಸರನ್ನೂ ಉಚ್ಚ ಪದವಿಯನ್ನೂ ಮಾತ್ರ ಆಗ ತಿಳಿಸಿದ. ರಾಚೆಲ್ ಈ ಗೌಪ್ಯಸ್ಫೋಟದಿಂದಾಗಿ ನಡುಗಿದಳು. ಲಿಓಪೋಲ್ಡನನ್ನು ಈ ತರಹದ ವರ್ತನೆಗಾಗಿ ದೂರಿದಳು. ಎಲಿಝಾರ ಈ ಗಲಾಟೆಯನ್ನು ಕೇಳಿ ಅಲ್ಲಿಗೆ ಬಂದಾಗ ಆತನಿಗೂ ಸಮಗ್ರ ವೃತ್ತಾಂತ ತಿಳಿದು ಬಂದಿತು. ಎಲ್ಲವನ್ನೂ ಕೇಳಿದಾಗ ಎಲಿಝಾರನಿಗೆ ಈ ಹೊಸ ಕೆಲಸಗಾರನ ಬಗ್ಗೆ ತುಂಬಾ ಕೋಪ ಬಂದುಬಿಟ್ಟಿತು. ಚೂರಿ ಯನ್ನೆತ್ತಿ ಆತನ ಎದೆಗೆ ಗುರಿಯಿಡುತ್ತಿದ್ದಾಗ ರಾಚೆಲ್ ಎಲ್ಲ ಆವೇಶವನ್ನು ಮರೆತುಬಿಟ್ಟು ಮಧ್ಯದಲ್ಲಿ ಬಂದು ಹೇಳಿದಳು.

"ಅಪ್ಪಾ, ಅಪ್ಪಾ, ನಮ್ಮನ್ನು ಕ್ಷಮಿಸಿ. ನಮ್ಮ ಮೇಲೆ ದಯೆಮಾಡಿ. ನಾವಿಬ್ಬರೂ ವಿವಾಹವಾಗಲು ಸಮ್ಮತಿ ಕೊಡಿ."

ಎಲಿಝಾರ ಯೋಚನಾಮಗ್ನನಾಗಿ ಸುಮ್ಮನೆ ನಿಂತಿದ್ದ. ಆತನ ಅಡಿಗಳನ್ನು ಹಿಡಿದುಕೊಂಡು ರಾಚೆಲ್ ಅಳುತ್ತ ಹೇಳಿದಳು.

"ಅಪ್ಪಾ ದಯೆಮಾಡಿ. ನನ್ನ ಅಪೇಕ್ಷೆ ಪೂರ್ಣಗೊಳಿಸಿ. ಇವರ ಮೇಲೆ ನನ್ನ ಪ್ರೇಮ ವಿಲಕ್ಷಣವಾಗಿದೆ—ನನ್ನನ್ನು-ಇವರನ್ನು ಅಗಲಿಸಿದಲ್ಲಿ—ಇಡೀ ಜಗತ್ತೆಲ್ಲ ನನಗೆ ಶೂನ್ಯವಾಗುವುದು. ಇಲ್ಲ....ಇಲ್ಲ....ಅದು ಕೂಡದು. ನನಗೆ ಒಪ್ಪಣೆ ಕೊಡಿ."

ಎಲಿಝಾರನ ಹೃದಯ ತಿರುಗಿತು. ಆವನಿನ್ನು ಒಪ್ಪುವುದರೊಳಗಾಗಿಯೇ ಲಿಓಪೋಲ್ಡನು 'ಯಹೂದೀಯರ ಹುಡುಗಿಯೊಂದಿಗೆ ನಾನೆಂದಿಗೂ ಲಗ್ನವಾಗಲಾರೆ!' ಎಂದು ಹೇಳುತ್ತ ತಟ್ಟನೆ ಹೊರಟು ಹೋಗಿಬಿಟ್ಟ.

ಆ ತರುಣ ಈರೀತಿಯಾಗಿ ತನ್ನ ಸಾಕುಮಗಳ ಬಾಳುವೆಯನ್ನು ಮಣ್ಣುಗೂಡಿಸಿದುದನ್ನು ಕಂಡು ಎಲಿಝಾರನಿಗೆ ಕೋಪ—ಕಳವಳ—ಉಕ್ಕೇರಿತು. ತಂದೆ ಮಕ್ಕಳಿಬ್ಬರೂ ಕಂಬನಿಗರೆಯತೊಡಗಿದರು.

★

ಮರುದಿನ ಬೆಳಿಗ್ಗೆ ಎಲಿಝಾರ ತನ್ನ ಕನ್ಯೆಯೊಂದಿಗೆ ರಾಜಕನ್ಯೆ ಯುಡೋಶಿಯಗೆ ಕೊಡಬೇಕಾದ ರತ್ನಹಾರವನ್ನು ಕೊಡಲು ದರ್ಬಾರಿಗೆ ಹೋಗಿ ಹಾರವನ್ನು ಆಕೆಗೆ ಕೊಟ್ಟ. ಅಂದಿನ ದರ್ಬಾರದ ಸಂಭ್ರಮ ಅಪೂರ್ವವಾಗಿದ್ದಿತು. ಜನರು ಕಿಕ್ಕಿರಿದು ನೆರೆದಿದ್ದರು. ಮಧ್ಯೇ ಸಿಂಹಾಸನದಲ್ಲಿ ಯುವರಾಜ ಲಿಓಪೋಲ್ಡ ತನ್ನ ಭಾವೀ ಪತ್ನಿಯೊಂದಿಗೆ ಕುಳಿತಿದ್ದ.

ಲಿಓಪೋಲ್ಡ ಇಂದು ಒಳ್ಳೆ ಬೆಡಗಿನ ಬಟ್ಟೆಬರೆ ಮಾಡಿಕೊಂಡಿದ್ದ. ಆದರೂ ರಾಚೆಲ್ ಆತನನ್ನು ಗುರುತಿಸದಿರಲಿಲ್ಲ. ತನ್ನ ಜೊತೆಗೆ ಪ್ರೇಮದ ಕಪಟನಾಟಕವನ್ನಾಡಿ ತನ್ನ ಬಾಳ್ವೆಯನ್ನು ಮಣ್ಣುಗೂಡಿಸಿದ ದುಷ್ಟ ವ್ಯಕ್ತಿ ಈತನೇ ಎಂದು ತಿಳಿದು ಆಕೆಯ ಸೇಡು ಜಾಗೃತವಾಯಿತು. ರಾಜಕನ್ಯೆ ಆತನಿಗೆ ರತ್ನಹಾರವನ್ನರ್ಪಿಸುತ್ತಿರುವಾಗ ಸರ್ರನೆ ಮುಂದಾಗಿ ಅದನ್ನು ಕಿತ್ತುಕೊಂಡು ತುಂಬಿದ ಸಭೆಯಲ್ಲಿ ಯುವರಾಜನ ನೀಚಕೃತ್ಯವನ್ನು ಬಯಲಿಗೆಳೆದಳು. 'ಇವನು ಒಬ್ಬ ಜ್ಯೂ ಕನ್ಯೆಯನ್ನು ಮೋಸಗೊಳಿಸಿ—ಧರ್ಮಕ್ಕೆ ಭಯಂಕರ ಕಲಂಕ ತಂದಿದ್ದಾನೆ—' ಎಂದು ದಿಟ್ಟತನದಿಂದ ಕೂಗಿ ಹೇಳಿದಳು.

ಆ ಸಂತಪ್ತ ಬಾಲಿಕೆಯು ಕ್ರೋಧದಿಂದ ಕಂಪಿಸುವ ಸ್ವರದಲ್ಲಿ ಹೇಳಿದಳು. "ನನ್ನ ಹೆಸರು ರಾಚೆಲ್. ಈ ನರಪಶು ಕಾಮಾಂಧನಾಗಿ ನನ್ನನ್ನು ಭ್ರಷ್ಟಗೊಳಿಸಿದ. ನನ್ನ ಕೌಮಾರ್ಯ ಹರಣಮಾಡಿದ. ಈ ಪಾಪಿ ಪವಿತ್ರಧರ್ಮದ ವಿಡಂಬನೆ ಮಾಡಿದ."

ರಾಚೆಲಳ ಈ ಮಾತುಗಳಿಂದ ಸಭಿಕರೆಲ್ಲ ಸ್ತಂಭಿತರಾದರು. ಎಲ್ಲರ ಹೃದಯಗಳೂ ಹೊಡೆದುಕೊಳ್ಳತೊಡಗಿದವು. ಯುವರಾಜನ ಮೇಲೆ ರಾಚೆಲ್ ಮಾಡಿದ ಆರೋಪ ಆ ಕಾಲದಲ್ಲಿ ಮಹಾಪರಾಧವೆಂದು ಗಣಿಸಲ್ಪಡುತ್ತಿದ್ದಿತು. ಅದಕ್ಕೆ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಲಾಗುತ್ತಿದ್ದಿತು. ಯುವರಾಜ

ನಾದರೂ ತನ್ನ ಮೇಲೆ ಹೊರಿಸಲ್ಪಟ್ಟ ಆರೋಪದ ಬಗ್ಗೆ ಬಾಯಿಬಿಚ್ಚದೆ ಲಜ್ಜೆಯಿಂದ ಮೊಗವನ್ನು ಕೆಳಗೆಹಾಕಿ ಕುಳಿತಿದ್ದ. ಆತನು ಕುಳಿತಿದ್ದ ಬಗೆಯೆ ಆತನ ಅಪರಾಧ ವನ್ನು ಸ್ಪಷ್ಟಗೊಳಿಸಿತು.

ಧರ್ಮಾಧಿಕಾರಿ ಬ್ಯಾಗ್ನಿ ಅಲ್ಲೇ ದರ್ಬಾರಿನಲ್ಲಿ ಸಿಂಹಾಸನದ ಹತ್ತಿರ ಕುಳಿತಿದ್ದ. ಈ ಎಲ್ಲ ವಿವರವನ್ನು ಕಂಡು ಆತನು ಸಂತಪ್ತನಾಗಿ ಎದ್ದುನಿಂತು ಆಜ್ಞೆ ವಿಧಿಸಿದ.

" ಕಟ್ಟಳೆಗನುಸಾರವಾಗಿ ಲಿಓಪೋಲ್ಡ ಮತ್ತು ರಾಚೆಲ್ ಈ ಉಭಯತರಿಗೂ ದೇಹಾಂತಶಾಸನ ವಿಧಿಸಲಾಗಿದೆ. ಅಲ್ಲದೆ ಇವರ ಈ ಕೃತ್ಯಕ್ಕೆ ಎಲಿಝಾರನೂ ಸಹಾಯಮಾಡಿ ರುವನಾದುದರಿಂದ ಆತನಿಗೂ ನಾನು ಅದೇ ಶಿಕ್ಷೆ ವಿಧಿಸು ತ್ತೇನೆ "

ಧರ್ಮಾಧಿಕಾರಿಯ ಆಜ್ಞೆಯಂತೆ ಸೇನಾಪತಿಯ ಶಿಪಾಯಿ ಗಳು ಮುಂದಾಗಿ ಮೂವರೂ ಅಪರಾಧಿಗಳನ್ನು ಹೆಡಮುರಿ ಬಿಗಿದು ಸೆರೆಮನೆಯ ಕಡೆ ಸಾಗಿಸಿದರು.

★

ತನ್ನ ಮನೋರಥಗಳೆಲ್ಲ ಈರೀತಿ ವಿಫಲವಾದುದನ್ನು ಕಂಡು ರಾಜಕನ್ಯೆ ಯುಡೋಶಿಯಗೆ ತುಂಬಾ ಖೇದವಾಯಿತು. ಯುವರಾಜನು ಈತೆರನಾಗಿ ತನ್ನೊಂದಿಗೆ ಪ್ರತಾರಣೆಯನ್ನಾಚರಿಸಿದ್ದರೂ ಆತನ ಮೇಲಿದ್ದ ಆಕೆಯ ಪ್ರೇಮ ಕಡಿಮೆಯಾಗುವ ಹಾಗಿರಲಿಲ್ಲ. ಏನನ್ನಾದರೂ ಮಾಡಿ ಆತ ನನ್ನು ಬದುಕಿಸಬೇಕೆಂದು ಆಕೆ ನಿಶ್ಚಯಮಾಡಿದಳು.

ರಾಚೆಲಳನ್ನು ಸಂದರ್ಶಿಸಲು ಅಪ್ಪಣೆ ಪಡೆದು ಆಕೆ ತಕ್ಷಣ ರಾಚೆಲಳ ಬಳಿ ಹೋದಳು. ರಾಚೆಲಳ ಹತ್ತಿರ ಯುವ ರಾಜನ ಪ್ರಾಣಭಿಕ್ಷೆಗೆ ಯಾಚಿಸಿದಳು. " ರಾಚೆಲ್, ಯುವ ರಾಜನ ಮೇಲೆ ನೀನು ಮಾಡಿದ ಆರೋಪದಲ್ಲಿ—ಆತ ನಿಂದ ನಿಜವಾಗಿಯೂ ಅಪರಾಧವೊದಗಲಿಲ್ಲವೆಂದು ಧರ್ಮಾಧಿಕಾರಿಗೆ ಹೇಳು " ಎಂದು ಬಿನ್ನವಿಸಿದಳು.

ಆದರೆ ರಾಜಪುತ್ರನ ನೀಚಕೃತ್ಯದ ಬಗ್ಗೆ ರಾಚೆಲಳಿಗೆ ತುಂಬ ಜುಗುಪ್ಸೆಯುಂಟಾಗಿದ್ದುದರಿಂದ ಆಕೆ ಮೊದ ಮೊದಲು ಯುಡೋಶಿಯಳ ಮಾತಿಗೆ ಲಕ್ಷ್ಯವೀಯಲಿಲ್ಲ. ಆದರೆ ಯುಡೋಶಿಯು ಆಕೆಯ ಅಡಿಗಳ ಮೇಲೆ ಬಿದ್ದು, ಅತ್ಯಂತ ಕನಿಕರದಿಂದ ಬೇಡಿಕೊಂಡಾಗ ಆಕೆಗೆ ಒಪ್ಪದಿರ ಲಾಗಲಿಲ್ಲ. ಅಲ್ಲದೆ ಆಕೆಯ ಹೃದಯದ ಸ್ಥಿತಿಯೂ ಇಧೀಗ ರಾಜಕನ್ಯೆಯ ಹಾಗೆಯೇ ಆಗಿದ್ದಿತು. ರಾಜಪುತ್ರನ ವಿಷಯ ಕ್ಕಿದ್ದ ಪ್ರೇಮ ಇಂತಹ ಸಮಯದಲ್ಲೂ ಆಕೆಯನ್ನು ಸುಮ್ಮನಿರಗೊಡಲಿಲ್ಲ.

ಧರ್ಮಾಧಿಕಾರಿಯೆದುರಿಗೆ ಪುನಃ ರಾಚೆಲ[illegible] ಯಾದಾಗ ಆತನಿಗೆ ತುಂಬ ಆನಂದವಾಯಿತು. [illegible] ಪುತ್ರನ ಬಿಡುಗಡೆಯಾಯಿತು. ಆದರೆ ಎಲಿಝಾರ[illegible] ರಾಚೆಲರ ಮೇಲೆ ಒಂದು ಹೊಸ ಅಪರಾಧ ಮಾಡಿ[illegible] ಪವನ್ನಿರಿಸಿ ಅವರಿಗೆ ಶಿಕ್ಷೆ ವಿಧಿಸಲಾಯಿತು. ರಾಜಪುತ್ರ[illegible] ಬಲೆಗೆ ಸಿಕ್ಕಿಸಿಕೊಂಡು ಸುಳ್ಳು ವಿಧಾನಗಳನ್ನು ರಚಿ[illegible] ಮಾನ ಕಳೆಯಲಿಕ್ಕೂ ಪ್ರಾಣ ಕಳೆಯಲಿಕ್ಕೂ ಪ್ರ[illegible] ದುದಕ್ಕಾಗಿ, ಕುದಿಯುತ್ತಿರುವ ಎಣ್ಣೆಯ ಕಡಾಯಿ[illegible] ರನ್ನು ಚೆಲ್ಲಿಬಿಡಬೇಕೆಂದು ಬ್ಯಾಗ್ನಿ ಆಜ್ಞೆ ವಿಧಿಸಿದ.

ಶಿಕ್ಷೆ ವಿಧಿಸುವ ಮೊದಲು ಬ್ಯಾಗ್ನಿ ಎಲಿಝಾರಗೆ [illegible]

"ನೀನು ನಿನ್ನ ಧರ್ಮವನ್ನು ತೊರೆದು ಕ್ರೈಸ್ತ[illegible] ಸಮ್ಮತಿಸುತ್ತಿದ್ದರೆ ನಾನು ನಿನ್ನ ಹುಡುಗಿಯನ್ನು [illegible] ಕೊಡುತ್ತೇನೆ. ನೋಡು. ವಿಚಾರಮಾಡು."

ಆದರೆ ಈ ತೆರನಾದ ಕುತ್ಸಿತ ಮಾತುಗಳಿಂದ [illegible] ಮಾನಿ ಜ್ಯೂಗೆ ಏನೂ ಪರಿಣಾಮವಾಗಲಿಲ್ಲ. ಆತ[illegible] ಶಬ್ದಗಳಲ್ಲಿ ಅದನ್ನು ಧಿಕ್ಕರಿಸಿ ಮರಣಕ್ಕೆ ಸಿದ್ಧನಾ[illegible]

ಇಷ್ಟರಲ್ಲಿ ಆತನಿಗೆ ಬ್ಯಾಗ್ನಿಯ ಪೂರ್ವ[illegible] ಸ್ಮರಣೆಯಾಗಿ ಇಷ್ಟೊಂದು ಕಠಿನ ಶಿಕ್ಷೆ ವಿಧಿ[illegible] ಕಠೋರಹೃದಯಿ ಬ್ಯಾಗ್ನಿಯ ಸೇಡು ತೀ[illegible] ಸಾಧನ ತನ್ನ ಹತ್ತಿರದಲ್ಲೇ ಇದೆಯೆಂಬುದು [illegible] ಬಂದು ಆತನ ಮಗಳ ವಿಷಯವನ್ನೆಲ್ಲ ಹೇಳ[illegible] ಹುಡುಗಿ ಸದ್ಯ ಎಲ್ಲಿರುವಳೆಂಬುದನ್ನು ಮಾತ್ರ [illegible] ತನ್ನ ಮಿತ್ರನೋರ್ವನ ಹತ್ತಿರ ಇರುವಳೆಂದು [illegible]

ಎಲಿಝಾರನ ಈ ಮಾತುಗಳನ್ನು ಕೇಳಿ ಬ್ಯಾಗ್ನಿ[illegible] ಯಲ್ಲಿ ಮಗಳ ಸ್ಮರಣೆಯಾಯಿತು. ತನ್ನ [illegible] ಎಲ್ಲಿರುವಳೆಂಬುದನ್ನು ತಿಳುಹಿಸಲು ಆತನನ್ನ[illegible] ಯಾಗಿ ಬಿನ್ನವಿಸತೊಡಗಿದ.

ಆದರೆ ಎಲಿಝಾರ ಬ್ಯಾಗ್ನಿಯ ಆ ಕಠೋ[illegible] ರಾಚೆಲ[illegible] ಯಿಂದ ತುಂಬ ಸಂತಪ್ತನಾಗಿದ್ದ. [illegible] ತ್ರಿನಿಂದ ಮಾಯವಾಗುವವರೆಗೂ ಅದರ [illegible] ನಿಗೆ ಹತ್ತಗೊಡಕೂಡದೆಂದು ಆತ ನಿಶ್ಚಯಿಸಿ[illegible] ವರೆಗೆ ತುಚ್ಛವಾಗಿ ತಿಳಿದಿದ್ದ ಜ್ಯೂವಿಗೆ ಬ್ಯಾಗ್ನಿ [illegible] ಪರಿಯಾಗಿ ಬೇಡಿದ. ಆತನ ಅಡಿಗಳನ್ನು [illegible] ವಿಸಿದ. ಆದರೆ ಆತನ ಇಚ್ಛೆ ಪೂರ್ತಿಯಾಗಲಿ[illegible]

ಕೊನೆಯಲ್ಲಿ ವಧೆಯ ದಿನ ಬಂದಿತು. [illegible] ಒಂದು ದೊಡ್ಡ ಪಂಜರವನ್ನು ತಂದು ಅದರಲ್ಲಿ [illegible] ರಾಚೆಲ[illegible]ನ್ನು [illegible] ನಿಲ್ಲಿಸಲಾಯಿತು.

ಪ್ರಚಂಡ ಕಡಾವಿಗಳನ್ನಿರಿಸಿ ಅದರಲ್ಲಿಯ ಎಣ್ಣೆಯನ್ನು ಕಾಯಿಸಲು ಮೊದಲಾಯಿತು. ಈ ಭಯಾನಕ ದೃಶ್ಯವನ್ನು ಕಂಡು ಎಲಿಝೂರನ ನಿಶ್ಚಯ ಅಲುಗಾಡಿತು. ಇದುವರೆಗೆ ತನ್ನ ಹೊಟ್ಟೆಯ ಮಗಳಂತೆ ಪಾಲನಮಾಡಿದ ಸುಕುಮಾರಿ ರಾಚೆಲಳನ್ನು ಕೇವಲ ಜಾತೀಯ ಸೇಡಿಗಾಗಿ ಬಲಿಗೊಡು ವುದನ್ನು ಸ್ಮರಿಸಿ ಆತನ ಮೈಯಲ್ಲಿ ಮುಳ್ಳೆದ್ದುವು. 'ನೀನು ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿ ಪ್ರಾಣವನ್ನುಳಿಸಿ ಕೊಳ್ಳು,' ಎಂದು ರಾಚೆಲ್‌ಗೆ ಬಿನ್ನವಿಸಿದ.

ಆದರೆ ರಾಚೆಲ್ ಎಂತಹ ಸ್ವಾಭಿಮಾನಿ! ಆಕೆಗೆ ತಂದೆಯ ಈ ಮಾತುಗಳು ರುಚಿಸಲಿಲ್ಲ. ಆಕೆಯು ಶಾಂತ ವಾದ ನಿಶ್ಚಯತುಂಬಿದ ಸ್ವರದಲ್ಲಿ ಮಾತನಾಡಿದಳು:

"ಇದು ವರೆಗೆ ನಾನು ಬೆಳೆದ ಧರ್ಮ, ನಾನು ಮನಮುಟ್ಟಿ ಪ್ರೀತಿಸಿದ ಧರ್ಮ, ನನಗೆ ನನ್ನ ಪ್ರಾಣ ಕ್ಕಿಂತಲೂ ಪ್ರಿಯವಾದುದು. ಅದನ್ನು ತ್ಯಾಗಮಾಡಿ ನಾನೆಂದೂ ಧರ್ಮಾಂತರ ಮಾಡಲಾರೆ."

ಹೇಳುಹೇಳುತ್ತಲೆ ಆಕೆ ಪಂಜರದ ಬಾಗಿಲನ್ನು ಧಡಾರನೆ ತೆರೆದು ನಿರ್ಭಯಾಂತಃಕರಣದಿಂದ ಸಳಮಳಿಸುವ ಎಣ್ಣೆಯ ಕಡಾವಿಯಲ್ಲಿ ಹಾರಿಕೊಂಡಳು.

ಎಲಿಝೂರ ಸೇಡಿನ ಸಮಯ ತಪ್ಪಿಸಲು ಪ್ರಯತ್ನಿಸಿದ. ಆದರದು ಈ ರೀತಿಯಾಗಿ ವಿಫಲವಾಯಿತು. ತನ್ನ ಪ್ರೀತಿಯ ಕನ್ಯೆ ತನ್ನ ಕಣ್ಣೆದುರಿನಲ್ಲಿಯೆ ಶಾಶ್ವತ ಮುಕ್ತಿ ಹೊಂದಿದುದನ್ನು ಕಂಡು ಸಂತಪ್ತನಾದ. ಎಲಿಝೂರನು ಧರ್ಮಾಧಿಕಾರಿ ಬಾಗ್ನಿಯ ಕಡೆ ಹೊರಳಿ ವಿಕಟ ಹಾಸ್ಯ ಬೀರುತ್ತ ಕೂಗಿಹೇಳಿದ.

"ಮಧಾಂಧನಾದ ಬಾಗ್ನಿ, ಕಣ್ದೆರೆದು ನೋಡು. ಇದೋ—ನೋಡು ನಿನ್ನ ಕನ್ಯೆ. ನೀನೀಗ ಆಕೆಯನ್ನು ಶಾಶ್ವತವಾಗಿ ಕಳೆದುಕೊಂಡೆ. ನೋಡು! ಅಧಿಕಾರದಿಂದ ಉನ್ಮತ್ತನಾದ ನರಪಿಶಾಚಿಯೇ, ಚೆನ್ನಾಗಿ ಕಣ್ದೆರೆದು ನೋಡು."

ಪ್ರಕಾಶವೂ ಸರ್ ರಾಮನ್ ಅವರ ಶೋಧವೂ

ಲೇ:—ಶ್ರೀ. ಎಂ. ಎಸ್. ಕಟ್ಟಿ., ಎಂ. ಎಸ್‌ಸಿ., ಹುಬ್ಬಳ್ಳಿ

ನೋಬೆಲ್ ಬಹುಮಾನವನ್ನು ಹೊಂದಿ ಭಾರತಕ್ಕೆ ವಿಜ್ಞಾನಲೋಕದಲ್ಲಿ ಹೆಸರು ತಂದ ಸರ್ ಚಂದ್ರಶೇಖರ ರಾಮನ್ ಅವರು ಪ್ರಕಾಶದ ವಿಷಯ ... ದಲ್ಲಿ ಮಾಡಿದ ಹೊಸ ಶೋಧಗಳ ಸಂಕ್ಷಿಪ್ತ ವರ್ಣನೆಯಿದು. ...

ಸೃಷ್ಟಿಯಲ್ಲಿಯ ಅಗಾಧ ವಿಷಯಗಳ ಗುಟ್ಟನ್ನು ತಿಳಿದು ಕೊಳ್ಳಬೇಕೆಂಬ ಸ್ವಾಭಾವಿಕವಾದ ಲವಲವಿಕೆಯೇ ಮನುಷ್ಯನ ಉತ್ತರೋತ್ತರ ಪ್ರಗತಿಗೆ ಕಾರಣವಾಗಿರುತ್ತದೆ. ಜಗತ್ತಿನಲ್ಲಿಯ ಹೆಸರಾದ ನ್ಯೂಟನ್ ಮೊದಲಾದ ತತ್ವಜ್ಞರು ಈ ಉತ್ಸುಕತೆಯಿಂದಲೇ ಎಷ್ಟೋ ವರ್ಷಗಳ ವರೆಗೆ ಎಡೆಬಿಡದೆ, ಪ್ರಯತ್ನಮಾಡಿ ಮನುಷ್ಯನ ಜ್ಞಾನನಿಧಿಯನ್ನು ಹೆಚ್ಚಿಸಿದ್ದಾರೆ. ಇವರು ದ್ರವ್ಯದ ಇಚ್ಛೆಗಾಗಲಿ, ಹೆಚ್ಚಿನ ಬಿರುದುಗಳನ್ನು ದೊರಕಿಸುವದಕ್ಕಾಗಲಿ ಹೊಸ ಹೊಸ ತತ್ವಗಳನ್ನು ಕಂಡುಹಿಡಿಯಲು, ತಮ್ಮ ಪ್ರಯೋಗ ಶಾಲೆಗಳಲ್ಲಿ ಅನೇಕ ಕಠಿನ ಪ್ರಯೋಗಗಳನ್ನು ಮಾಡುತ್ತಿರುವರೆಂಬ ಸಾಮಾನ್ಯ ಜನರ ತಿಳುವಳಿಕೆಯು ತಪ್ಪು. ಯಾಕಂದರೆ, ಬಹುಶಃ ಎಲ್ಲ ಶೋಧಕರು ಅಜ್ಞಾತ ವಿಷಯಗಳ ಮಹತ್ವವನ್ನು ಕಂಡುಹಿಡಿದವರಲ್ಲಿ ತಾವೇ ಮೊದಲಿನವರು ಎಂಬ ಭಾವನೆಯ ವಿಚಿತ್ರ ಆನಂದವೇ ತಮ್ಮ ಕಾರ್ಯಗಳಿಗೆ ತಕ್ಕ ಪ್ರತಿಫಲವಾಗಿದೆ ಎಂದು ತಿಳಿದುಕೊಂಡಿರುತ್ತಾರೆ.

ಕಳೆದ ಶತಮಾನದ ಕೊನೆಯ ಭಾಗದಲ್ಲಿ ಹರ್ಟ್ಜ್ ಎಂಬ ಶಾಸ್ತ್ರಜ್ಞನು "ರೇಡಿಯೋತರಂಗ"ಗಳನ್ನು ಶೋಧ ಮಾಡಿದನು. ಬರಬರುತ್ತ ಈಚೆಗೆ ಹಿಂದುಸ್ತಾನದ ಸುಪ್ರಸಿದ್ಧ ವೈಜ್ಞಾನಿಕರಾದ ಸರ ಬೋಸರು ಈ ರೇಡಿಯೋ ತರಂಗಗಳನ್ನು ಗುರುತಿಸುವ ಒಂದು ಸೂಕ್ಷ್ಮಯಂತ್ರವನ್ನು ನಿರ್ಮಿಸಿ, ವಿದ್ಯುತ್ತಿನ ಪರಿಣಾಮವು ತಂತಿಗಳ ಸಹಾಯವಿಲ್ಲದೆ ಆ ಯಂತ್ರದ ಸಹಾಯದಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳದ ಮೇಲೆ ಆಗುವದೆಂಬುದನ್ನು ಪ್ರಯೋಗಗಳಿಂದ ಸಿದ್ಧಮಾಡಿ ತೋರಿಸಿದರು. ಇವರಿಂರ್ವರೂ ತಾವು ಹೊಸ ಹೊಸ ವಿಷಯಗಳನ್ನು ಕಂಡು ಹಿಡಿದವರೆಂಬ ಆನಂದದಿಂದಲೇ ತೃಪ್ತರಾದರು. ಆದರೆ ಮುಂದೆ ಸ್ವಲ್ಪ ವೇಳೆಯಲ್ಲಿಯೇ ಮಾರ್ಕೋನಿ ಎಂಬ ಇಟಲಿಯ ಯಂತ್ರಶೋಧಕನು ಹರ್ಟ್ಜನು ಹುಡುಕಿದ ರೇಡಿಯೊ ತರಂಗಗಳನ್ನೂ, ಬೋಸರ ತರಂಗಗಳನ್ನು ಗುರುತಿಸುವ



[illegible] ರಾಮನ್ ಮತ್ತು [illegible] ರಾಮನ್

ಪ್ರಕಾರವನ್ನೂ ಒಟ್ಟುಗೂಡಿಸಿ, ಈಗ ಜಗತ್ಪ್ರಸಿದ್ಧವಾದ ರೇಡಿಯೋ ಯಂತ್ರವನ್ನು ರಚಿಸಿ, ಅಪರಿಮಿತ ದ್ರವ್ಯವನ್ನೂ ಕೀರ್ತಿಯನ್ನೂ ಸಂಪಾದಿಸಿದನು. ದೊಡ್ಡದೊಡ್ಡ ವೈಜ್ಞಾನಿಕರ ಮೂಲಶೋಧಗಳು ಬಹುಶಃ ಭಾವನಾಮಯವಾಗಿರುವದರಿಂದ ಸಾಮಾನ್ಯ ಜನರು ಅವುಗಳನ್ನು ಅಷ್ಟು ಗೌರವಬುದ್ಧಿಯಿಂದ ಲಕ್ಷಿಸದೇ ತಮ್ಮ ಕಣ್ಣೆದುರಿಗೆ ಕಂಡು ಬರುವ ವಾಕ್ಪಟಗಳು, ರೇಡಿಯೋ, ವಿಮಾನ ಇವೇ ಮೊದಲಾದ ಬೇರೆ ಬೇರೆ ವಿಚಿತ್ರ ವಸ್ತುಗಳೇ ವಿಜ್ಞಾನಶಾಸ್ತ್ರದ ಮುಖ್ಯ ಅಂಗಗಳೆಂಬ ತಪ್ಪು ಕಲ್ಪನೆಯನ್ನು ಮಾಡಿಕೊಂಡಿರುತ್ತಾರೆ.

ಅನೇಕ ಪ್ರಸಂಗಗಳಲ್ಲಿ ಒಬ್ಬ ರಸಿಕನು ವಿಶ್ವದಲ್ಲಿಯ ಒಂದು ಸುಂದರವಾದ ಅದ್ಭುತ ನೋಟವನ್ನು ನೋಡಿ ಮೋಹಿತನಾಗಿ, ಅದರ ರಹಸ್ಯದ ಸವಿಯನ್ನು ಸವಿಯಬೇಕೆಂಬ ಉಬ್ಬಿನಿಂದ, ಅದರ ವಿಷಯದಲ್ಲಿ ಎಷ್ಟೋ ಪ್ರಯೋಗಗಳನ್ನು ಎದೆಗುಂದದೆ ಮಾಡಿ ಒಂದು ಅಮೌಲ್ಯವಾದ ತತ್ವವನ್ನು ಶೋಧಿಸಿ, ಮಾನವನ ಜ್ಞಾನನಿಧಿಯನ್ನು ಅಪಾರವಾಗಿ ಹೆಚ್ಚಿಸಿರುವದು ನಮ್ಮ ನಿದರ್ಶನಕ್ಕೆ ಬಂದಿದೆ. ಇಂಗ್ಲಂಡದಿಂದ ತಿರುಗಿ ಬರುವಾಗ ಪ್ರೊ. ರಾಮನ್‌ರು ಸೂರ್ಯಕಿರಣಗಳ ಪ್ರಸರಣದಿಂದುಂಟಾಗುವ ಬಹು ಮನೋಹರವಾದ ಭೂಮಧ್ಯ ಸಮುದ್ರದ ತಿಳಿಯಾದ ನೀಲಿ ಬಣ್ಣವನ್ನು ನೋಡಿದೊಡನೆಯೆ, ಆ ಆನಂದದ ಭರದಲ್ಲಿ ಈ ವಿಷಯವನ್ನು ಅಭ್ಯಾಸಮಾಡಿ ಇದರ ರಹಸ್ಯವನ್ನು ಚೆನ್ನಾಗಿ ಅರಿತುಕೊಳ್ಳಬೇಕೆಂದು ನಿರ್ಧರಿಸಿದರು. ಹಿಂದುಸ್ತಾನಕ್ಕೆ ಬಂದಮೇಲೆ ಸ್ವಲ್ಪಾವಧಿಯಲ್ಲಿಯೆ ಬೇರೆ ಬೇರೆ ಸಂದರ್ಭದಲ್ಲಿ ಪ್ರಕಾಶದ ಪ್ರಸರಣದ ವಿಷಯದಲ್ಲಿ ಎಷ್ಟೋ ಸೂಕ್ಷ್ಮ ಪ್ರಯೋಗಗಳನ್ನು ಮಾಡಿ, ಈಗ ಜಗತ್ತಿನಲ್ಲೆಲ್ಲ "ರಾಮನ್ ಶೋಧ (Raman Effect)"ವೆಂದ ಬಹಳ ಹೆಸರಾದ ತತ್ವವನ್ನು ಕಂಡುಹಿಡಿದುದರಿಂದ ಮಾನವನ ಜ್ಞಾನನಿಧಿಯಲ್ಲದೆ ಭರತಭೂಮಿಯ ಮಾನವಾದರೂ ಬಹಳ ಊರ್ಜಿತಸ್ಥಿತಿಗೆ ಮುಟ್ಟಿತು.

ಸೃಷ್ಟಿಯಲ್ಲಿಯ ಸಂಗತಿಗಳನ್ನು ಸಶಾಸ್ತ್ರ ವಿಮರ್ಶೆ ಮಾಡಿದವರಲ್ಲಿ ಮೊದಲನೆಯವನೂ ಭೌತಿಕಶಾಸ್ತ್ರದ ಜನಕನೂ ಎಂದು ಪ್ರಸಿದ್ಧಿಹೊಂದಿದ ಇಟಲಿಯ ಗ್ಯಾಲಿಲಿಯೊನ ಕಾಲದ ವರೆಗೆ ಮನುಷ್ಯನಿಗೆ ನಿಕಟವಾಗಿ ಸಂಬಂಧಿಸಿರುವ ಪ್ರಕಾಶದ ಘಟನೆಯ ವಿಷಯದ ಶೋಧವು ಸಾಕಷ್ಟು ಮುಂದರಿದಿದ್ದಿಲ್ಲ. ಇದೇ ವಿಷಯವನ್ನು ನ್ಯೂಟನ್‌ನು ಹೆಚ್ಚು ವಿಚಾರಿಸಿ, ಬಿಳಿಯ ಬಣ್ಣದ ಪ್ರಕಾಶವು ಕೆಂಪು ಮೊದಲಾದ ಏಳು ಬೇರೆಬೇರೆ ಬಣ್ಣಗಳ [illegible] ಗೂಡುವಿಕೆಯ ಪರಿಣಾಮವೆಂದು ವಿಯೋಜನ (Ana[illegible]) ಮತ್ತು ಸಂಯೋಜನ (Synthesis) ಪದ್ಧತಿಗಳಿ[illegible] ಮಾಡಿದನು. ಅಲ್ಲದೆ ಅವನು, ಪ್ರಕಾಶವು ಅತ್ಯಂತ ಸ[illegible] ವಾದ ಸ್ಥಿತಿಸ್ಥಾಪಕಧರ್ಮವುಳ್ಳ ಕಣಗಳ [illegible] ಎಂದು ಪ್ರತಿಪಾದಿಸಿದನು. ಮುಂದೆ ಸ್ವಲ್ಪ ಕಾಲದ [illegible] ಅಂತರಾಗಮನ (Interference) ಮೊದಲಾದ ಕೆಲವ[illegible] ದಾಗಿ ಕಂಡುಹಿಡಿದ ಬೆಳಕಿನ ಪರಿಣಾಮಗಳನ್ನು [illegible] ರ್ಥಿಸುವದಕ್ಕೋಸ್ಕರ ನ್ಯೂಟನ್‌ನು ಮಂಡಿಸಿದ ಕಣ[illegible] (Corpuscular theory) ವನ್ನು ಖಂಡಿಸಿ, ಹಾ[illegible] ಮೊದಲಾದವರು ಪ್ರಕಾಶವು ಆಕಾಶತರಂಗಗಳ[illegible] (Ethereal waves) ಹೊಸ ಸಿದ್ಧಾಂತವನ್ನು ಸ್ಥಾಪಿ[illegible] ಆದರೆ ಇತ್ತೀಚಿಗೆ ಅಪ್ರತಿಮ ಮೇಧಾ[illegible] ಪ್ರೊ. ಐನ್‌ಸ್ಟಾಯಿನ್ನನು ನ್ಯೂಟನ್‌ನ ಕಣ[illegible] ವರ್ತಿಸುವ ಅತ್ಯಂತ ಸಣ್ಣಸಣ್ಣ ಪ್ರಕಾಶ[illegible] (Photons or light particles) ಇರುವವೆಂದು [illegible] ದಾಗಿ ಸಿದ್ಧಮಾಡಿರುತ್ತಾನೆ.

ತರಂಗಗಳ ಗುಣಧರ್ಮಗಳು ಮೂರು [illegible] ತರಂಗಾಯಾಮ (Wave length), ಅಗಲ (Amp[illegible]) ಮತ್ತು ಆಕೃತಿ (Profile). ಪ್ರತಿಯೊಂದು ತರಂಗಕ್ಕೆ [illegible] ದಾನ ಭೂತವಾದ (Material) ಒಂದು ಪದಾರ್ಥದ [illegible] ಕತೆಯು ಇರುತ್ತದೆ. ಆದರೆ ಪ್ರಕಾಶತರಂಗಗಳಿಗೆ [illegible] ಗುವ ಈ ಪದಾರ್ಥವು ಅತೀಂದ್ರಿಯವಾದ ಆ[illegible] (Immaterial Ether) ಎಂದು ಶಾಸ್ತ್ರಜ್ಞರು ಕಲ್ಪಿ[illegible] ತ್ತಾರೆ. ನಮಗೆ ಗೊತ್ತಿದ್ದ ಕ್ಷ ಕಿರಣಗಳೂ (X ray[illegible]) ಧೂಮ್ರಕಿರಣಗಳೂ (Ultra-violet) ದೃಶ್ಯಪ್ರಕಾಶ[illegible] ರಕ್ತಕಿರಣಗಳೂ (Infra-red) ಇತ್ತೀಚಿಗೆ ಕಂಡು[illegible] ರೇಡಿಯೊತರಂಗಗಳೂ ಇವೆಲ್ಲವುಗಳೂ ಕೇವಲ [illegible] ದೊಳಗಿನ ತೆರೆಗಳಾದುದರಿಂದ ಎಲ್ಲಕ್ಕೂ ಸಾಮಾನ್ಯ[illegible] ಪ್ರಕಾಶವೆಂದೇ (Radiation) ಕರೆಯಲಾಗುವದು. [illegible] ಗಳ ತರಂಗಾಯಾಮವು ಹೆಚ್ಚುಕಡಿಮೆ ಇರುವದ[illegible] ಅವುಗಳಿಗೆ ಬೇರೆಬೇರೆ ಗುಣಗಳೂ ಹೆಸರುಗಳೂ [illegible] ಇವುಗಳಲ್ಲಿ ಕ್ಷ ತರಂಗಗಳ ಉದ್ದಳತೆಯು ಎಲ್ಲಕ್ಕೂ [illegible] ಮತ್ತು ರೇಡಿಯೋ ತೆರೆಗಳ ಉದ್ದವು ಎಲ್ಲಕ್ಕೂ [illegible] ಇದೆ. ಈ ಉದ್ದಳತೆಯು ಕಡಿಮೆಯಾದಹಾಗೆ ಆಯಾ [illegible] ಗಳ ವೇಧಕ ಶಕ್ತಿಯು (penetrating power) [illegible] ತ್ತದೆ. ಇದರಿಂದಲೇ ಕ್ಷ ಕಿರಣಗಳಿಗೆ ಮಾಂಸ[illegible]

ಹಾಯುವ ಶಕ್ತಿಯಿದೆ. ಆದರೆ ಅವು ಎಲವುಗಳನ್ನು ಭೇದಿಸಲಾರವು. ಇದೇ ತತ್ವಕ್ಕನುಸರಿಸಿ ಮನುಷ್ಯನ ಅವಯವಗಳ ಕ್ಷ ಕಿರಣದ ಛಾಯಾಚಿತ್ರವು (X-ray photograph) ತೆಗೆಯಲ್ಪಡುತ್ತದೆ. ಈ ಚಿತ್ರವು ಅಪಘಾತದಿಂದ ಎಲುವು ಮುರಿದದ್ದನ್ನು ಸೂಜಿ ಮುಂತಾದವುಗಳು ಮಾಂಸದಲ್ಲಿ ಸೇರಿದ್ದನ್ನು ಗೊತ್ತುಹಚ್ಚುವದಕ್ಕೆ ಎಷ್ಟು ಉಪಯೋಗವುಳ್ಳದ್ದಾಗಿರುವದೆಂಬುದು ಎಲ್ಲರಿಗೂ ಗೊತ್ತಾದ ಸಂಗತಿಯೇ ಆಗಿದೆ.

ಇಲ್ಲಿ ಒಂದು ಚಮತ್ಕಾರದ ವಿಷಯವೆಂದರೆ ಪ್ರಕಾಶದ ಸಮಗ್ರ ವಿಸ್ತಾರವನ್ನು ವಿಚಾರಿಸಲಾಗಿ ಅದರಲ್ಲಿಯ ದೃಶ್ಯಭಾಗವು ತೀರ ಕಡಮೆ ಇರುತ್ತದೆ. ಸಮುದ್ರದಲ್ಲಿ ಸುತ್ತುಮುತ್ತಲು ಎಲ್ಲಿ ನೋಡಿದಲ್ಲಿ ನೀರೇ ನೀರಿದ್ದರೂ ನಮಗೆ ಕುಡಿಯಲು ನೀರಿನ ಕೊರತೆಯಿದ್ದಂತೆ ಅಪಾರವಾದ ಬೆಳಕಿನ ಸಮುದ್ರದಲ್ಲಿಯಾದರೂ ಬೆಳಕಿನ ಒಂದೇ ಒಂದು ಕಣವು ಮಾತ್ರ ನಮ್ಮ ಪಾಲಿಗೆ ದೊರೆಯುತ್ತದೆ. ಆದರೆ ಮನುಷ್ಯನ ಕಣ್ಣಿಗೆ ಕಾಣದ ಅವರಕ್ತ (Infra-red) ಕಿರಣಗಳನ್ನಾದರೂ ನೋಡುವ ಶಕ್ತಿಯು ಬೆಕ್ಕು ಮೊದಲಾದ ಕೆಲವು ಪ್ರಾಣಿಗಳಿಗೆ ಇರುವದರಿಂದಲೇ ಅವು ಕಗ್ಗತ್ತಲೆಯಲ್ಲಿ ಕೂಡ ಬೇಕಾದ ಹಾಗೆ ನೋಡಬಲ್ಲವು. ಒಂದು ವೇಳೆ ಈ ಪ್ರಕಾಶಸಮುದ್ರವೇ ನಮ್ಮ ಕಣ್ಣೆದುರಿಗೆ ಪ್ರಕಟವಾಯಿತೆಂದರೆ, ಅಥವಾ ಇದೇ ಕ್ಷಣವೇ ಆ ಸಣ್ಣ ಬೆಳಕಿನ ಕಣವಾದರೂ ಉಳಿದ ಅದೃಶ್ಯ ಸಮುದ್ರದಲ್ಲಿ ಮಾಯವಾಯಿತೆಂದರೆ ಏನಾದೀತೆಂಬುದನ್ನು ವಾಚಕರೇ ಊಹಿಸಬಹುದು.

ಒಂದು ಅಪಾರದರ್ಶಕ ಪದಾರ್ಥವು ತನ್ನ ಮೇಲೆ ಬೀಳುವ ಕಿರಣಗಳನ್ನು ತಿರುಗಿ ಚಲ್ಲುವದೆಂಬುದು ನಮ್ಮೆಲ್ಲರಿಗೂ ಗೊತ್ತಿರುತ್ತದೆ. ಆದರೆ ಅದೇ ಪದಾರ್ಥವು ತೀರ ನುಣುಪಾಗಿದ್ದರೆ ಮಾತ್ರ ಅದರಲ್ಲಿ ಒಂದು ಪ್ರತಿಬಿಂಬವು ಒಡೆದು ಕಾಣುವದು. ಇಲ್ಲದಿದ್ದರೆ ಪರಾವರ್ತನವು ಅನಿಯಮಿತವಾಗಿರುವದರಿಂದ ಬೆಳಕು ಸುತ್ತಲಿನ ಪ್ರದೇಶದಲ್ಲೆಲ್ಲಾ ಹಬ್ಬುತ್ತದೆ. ಮನೆಯ ಒಳಭಾಗದಲ್ಲಿ ನಮಗೆ ಕಂಡು ಬರುತ್ತಿರುವ ಬೆಳಕು ಆಕಾಶದಲ್ಲಿಯ ಅಸಂಖ್ಯ ಧೂಳಿಕಣಗಳ ಮೇಲೆ ಬಿದ್ದ ಸೂರ್ಯನ ಸಾಕ್ಷಾತ್ ಕಿರಣಗಳ ಪಸರಿಸುವಿಕೆಯಿಂದಲೇ ಉಂಟಾಗುತ್ತದೆ. ಇದಲ್ಲದೆ ಇನ್ನೂ ಎಷ್ಟೋ ಕಾರಣಗಳಿಂದ ಈ ಧೂಳಿಕಣಗಳು ಪ್ರಾಣಿಗಳಿಗೆ ಅವಶ್ಯವಿರುತ್ತವೆ. ಚಂದ್ರಮಂಡಲದ ಕೆಲ ಭಾಗದಲ್ಲಿಯ "ಬಿಸಿಲಿನ" ಪ್ರದೇಶದಲ್ಲಿ ಕಣ್ಣು ಕುಕ್ಕಿಸುವ ಹೊಳಪು ಇದ್ದಾಗ್ಯೂ ಉಳಿದ 'ನೆರಳಿನ' ಭಾಗದಲ್ಲಿಯ ಕತ್ತಲೆಗೆ ಅಲ್ಲಿಯ ಆಕಾಶದಲ್ಲಿ ಈ ಧೂಳಿಕಣಗಳು ಇಲ್ಲದಿರುವದೇ ಕಾರಣವಾಗಿದೆ.

ಯಾವದಾದರೊಂದು ಪದಾರ್ಥವು ನಮ್ಮ ಕಣ್ಣಿಗೆ ಕಾಣಬೇಕಾದರೆ ಅದರಿಂದ ಬರುವ ಕಿರಣಗಳು ನಮ್ಮ ಕಣ್ಣಿಗೆ ತಗಲುವದು ಅವಶ್ಯವು. ಆದುದರಿಂದಲೇ ಪರಪ್ರಕಾಶದ (Non-luminous) ಒಡವೆಗಳು ಕತ್ತಲೆಯಲ್ಲಿ ನಮಗೆ ಕಾಣಿಸುವದೇ ಇಲ್ಲ. ಅದರಂತೆ ಜಗತ್ತಿನಲ್ಲಿಯ ಬೇರೆ ಬೇರೆ ಬಣ್ಣದ ಒಡವೆಗಳು ತಮ್ಮ ಮೇಲೆ ಬೀಳುವ ಬಿಳಿಯ ಕಿರಣಗಳ ಘಟಕಗಳಾದ ಉಳಿದ ಎಲ್ಲ ಬಣ್ಣಗಳನ್ನು ನುಂಗಿ, ತಮ್ಮ ಬಣ್ಣದ ಕಿರಣಗಳನ್ನಷ್ಟೇ ಹೊರಚೆಲ್ಲುವದರಿಂದ ಅವು ಬೇರೆ ಬೇರೆ ಬಣ್ಣವುಳ್ಳವುಗಳಾಗಿ ಕಾಣುವವು. ಇದರ ಮೇಲಿಂದಲೇ ಟಿಂಡಿಲ್ ಎಂಬ ಶಾಸ್ತ್ರಜ್ಞನು ಆಕಾಶದಲ್ಲಿ ಕಂಡುಬರುವ ನೀಲಿ ಬಣ್ಣವು ಹವೆಯೊಳಗಿನ ಧೂಳಿಕಣಗಳ ಮೇಲೆ ಬೀಳುವ ಸೂರ್ಯಕಿರಣಗಳ ಪಸರಿಸುವಿಕೆಯಿಂದುಂಟಾಗುವದೆಂದು ಕಂಡುಹಿಡಿದನು. ಮುಂದೆ ಲಾರ್ಡ ರ್‍ಯಾಲೇ ಇವನು ಗಣಿತಶಾಸ್ತ್ರದ ಸಹಾಯದಿಂದ ಕಡಿಮೆ ತರಂಗಾಯಾಮವುಳ್ಳ ಕಿರಣಗಳೇ ಹೆಚ್ಚು ಪ್ರಮಾಣದಿಂದ ಪರಿವರ್ತಿಸಲ್ಪಡುವವೆಂತಲೂ ದೃಶ್ಯ ಪ್ರಕಾಶದಲ್ಲಿ ನೀಲಿ ಕಿರಣಗಳ ತರಂಗಾಯಾಮವು ಕಡಿಮೆ ಇರುವದರಿಂದ ಅದರ ಪ್ರಮಾಣವೇ ಹರವಿದ ಪ್ರಕಾಶದಲ್ಲಿ ಹೆಚ್ಚು ಇರುವದೆಂತಲೂ ಸಿದ್ಧಮಾಡಿದನು. ಪ್ರಯೋಗಶಾಲೆಯಲ್ಲಿಯೂ ಕೂಡ ಬ್ಯೂಟೆಲ್ ನಾಯಟ್ರಾಯಿಟ್ ಮತ್ತು ಹೈಡ್ರೋಕ್ಲೋರಿಕ್ ಆ್ಯಸಿಡ್ ಇವೆರಡರ ಮಿಶ್ರಣದ ಮೇಲೆ ಬಿಳಿಯ ಬೆಳಕನ್ನು ಯೋಗ್ಯ ರೀತಿಯಿಂದ ಕೆಡವಿದರೆ ಆಕಾಶದ ಸುಂದರವಾದ ನೀಲೀ ಬಣ್ಣವು ಮೂಡುವದನ್ನು ಕಣ್ಣಾರೆ ನೋಡಬಹುದು.

ಇತ್ತೀಚೆಗೆ ಪ್ರೊ. ಕೊಂಪ್ಟನ್‌ನು ಕ್ಷ ಕಿರಣಗಳ ಪಸರಿಸುವಿಕೆಯ ಮೇಲೆ ಅನೇಕ ಪ್ರಯೋಗಗಳನ್ನು ಮಾಡಿದನು. ಅವನು ಕೊನೆಗೆ ಹರವಿದ ಕಿರಣಗಳಲ್ಲಿ ಮೊದಲಿನ ತರಂಗಾಯಾಮವಲ್ಲದೆ ಹೆಚ್ಚಿನದಾದರೂ ಇರುವದೆಂದು ಪ್ರಯೋಗದಿಂದ ತೋರಿಸಿದನು. ಇದೇ ಎಲ್ಲ ಕಡೆಯಲ್ಲಿ ಕೊಂಪ್ಟನ್ ಶೋಧ (Compton effect) ವೆಂದು ಹೆಸರಾಗಿದೆ. ಇದರಿಂದಲೇ ಈ ಶೋಧಕನು ಜಗತ್ತಿನಲ್ಲಿ ಶ್ರೇಷ್ಠವಾದ ನೋಬೆಲ್ ಪಾರಿತೋಷಕದ ಗೌರವವನ್ನು ಪಡೆದನು.

ಇದೇ ವಿಷಯದ ಮೇಲೆ ಅತುಲ ಬುದ್ಧಿಶಾಲಿಯಾದ ಸರ್ ರಾಮನ್‌ರು ಕಲಕತ್ತೆಯಲ್ಲಿ ಒಂದು ಹೊಸ ಹಾದಿಯನ್ನೇ ಅನುಸರಿಸಿ ಅನೇಕ ಸೂಕ್ಷ್ಮಪ್ರಯೋಗಗಳನ್ನು ಮಾಡಿದರು. ಅವರು ತಮ್ಮ ಪ್ರಯೋಗಗಳಲ್ಲಿ ಪ್ರಕಾಶವನ್ನು ಪಸರಿಸುವದಕ್ಕಾಗಿ, ಬೇಕಾಗುವ ಪದಾರ್ಥಗಳನ್ನು ರಾಸಾಯನಿಕ ರೀತಿಯಿಂದ ಶುದ್ಧ ಮಾಡಿದ ನಂತರವೇ ಅವುಗಳನ್ನು ಉಪಯೋಗಿಸುತ್ತಿದ್ದರು. ಕೊನೆಯ ಪ್ರಯೋಗಗಳಲ್ಲಿ ಅವರು ದುರ್ಬೀನಿನಿಂದ ಒಟ್ಟುಗೂಡಿಸಿದ ಪ್ರಖರ ಪ್ರಕಾಶವನ್ನು ಬೆಂಝೊಲ್ ಎಂಬ ಶುದ್ಧಮಾಡಿದ ಪ್ರವಾಹಿ ಪದಾರ್ಥದ ಮೇಲೆ ಕೆಡಹಿದರು. ಈ ಪ್ರಕಾಶವನ್ನು ಬೆಂಝೊಲ್‌ವು ಸಾಮಾನ್ಯ ನಿಯಮದಂತೆ ಎಲ್ಲ ಕಡೆಗೆ ಹರವಿತು. ಆದರೆ ರಾಮನ್‌ರು ತೊಂಬತ್ತು ಅಂಶಗಳಷ್ಟೇ ವಕ್ರದ ಮೇಲೆ ಹರಡಿದ ಕಿರಣಗಳನ್ನು ಮಾತ್ರ ಪ್ರಕಾಶವಿಘಟಕ ಯಂತ್ರ (spectrometer)ದೊಳಗಿಂದ ಹಾಯಿಸಿ, ಛಾಯಾಚಿತ್ರದ ಕಾಜಿನ (Photographic plate) ಮೇಲೆ ಕೆಡಹಿದರು. ಈ ಕಾಜನ್ನು ಪರೀಕ್ಷಿಸಲಾಗಿ ಅದರ ಮೇಲೆ ಮೊದಲಿನ ಪ್ರಕಾಶವನ್ನು ತೋರಿಸುವ ಒಂದು ಗೆರೆಯಲ್ಲದೆ, ಆದರ ಎರಡೂ ಬದಿಯಲ್ಲಿ ಬೇರೆ ಬೇರೆ ಪ್ರಕಾಶವನ್ನು ಗುರುತಿಸುವ ಮತ್ತೆ ಕೆಲವು ಗೆರೆಗಳು ಮೂಡಿದ ವಿಚಿತ್ರ ಸಂಗತಿಯು ಕಂಡು ಬಂದಿತು. ಇದೇ ಸರ್ ರಾಮನ್‌ರ ಪ್ರಖ್ಯಾತವಾದ ಮೂಲ ಶೋಧವು (Raman effect). ಕಾಜಿನ ಮೇಲೆ ಎರಡೂ ಕಡೆಯಲ್ಲಿರುವ ಗೆರೆಗಳಿಗೆ ರಾಮನ್ ಗೆರೆಗಳೆಂದು ಹೆಸರು ಬಂದಿರುತ್ತದೆ. ಈ ಶೋಧವನ್ನು ಗೌರವಿಸುವದಕ್ಕೋಸ್ಕರ ಭೌತಿಕಶಾಸ್ತ್ರಶಾಖೆಯ (Physics section) ಸದಸ್ಯರು ಸರ ರಾಮನ್‌ರಿಗೆ ನೋಬೆಲ್ ಪಾರಿತೋಷಕವನ್ನು ಕೊಟ್ಟರು.

ಮೇಲೆ ಹೇಳಿದಂತೆ ಟೆಂಡಲ್ ಶೋಧದಲ್ಲಿ ಹರವಿದ ಬೆಳಕು ಮೂಲ ಬೆಳಕಿನ ಒಂದು ಭಾಗವಾಗಿರುತ್ತದೆ. ಅದರಂತೆ ಕೊಂಪ್ಟನ್ ಪ್ರಯೋಗವು ಕೇವಲ ಕ್ಷ ಕಿರಣಗಳಿಗೆ ಸಂಬಂಧಿಸಿರುತ್ತದೆ. ಆದರೆ ರಾಮನ್ ಶೋಧವು ದೃಶ್ಯ ಕಿರಣಗಳಿಗೂ ಸಂಬಂಧಿಸಿದ್ದಲ್ಲದೆ ಮೂಲ ಬೆಳಕಿನಲ್ಲಿ ಇಲ್ಲಹೇ ಇದ್ದ ಕೆಲವು ಹೊಸ ಕಿರಣಗಳೂ ಹರವಿದ ಬೆಳಕಿನಲ್ಲಿ ಇರುವವೆಂಬ ಬಹಳ ಮಹತ್ವದ ತತ್ವವನ್ನು ತಿಳಿಸುತ್ತದೆ. ಈ ಹೊಸ ಕಿರಣಗಳ ಉತ್ಪತ್ತಿಯು ಪ್ರಕಾಶವನ್ನು ಪಸರಿಸುವ ಪದಾರ್ಥದ ಒಳ ರಚನೆಯ ಮೇಲೆಯೇ ಅವಲಂಬಿಸಿರಲೇಬೇಕೆಂದು ಪ್ರಯೋಗಗಳ ಮೇಲಿಂದ ಸಹಜವಾಗಿ ತಿಳಿಯುತ್ತದೆ. ಸ್ಫಟಿಕಗಳೊಳಗಿನ ಅಣುಗಳ (molecules) ರಚನೆಯನ್ನು ಮತ್ತು ಅವನ್ನು ಒಂದನ್ನೊಂದು ಬಿಗಿದುಹಿಡಿಯುವ ಶಕ್ತಿಯನ್ನು ಕಂಡುಹಿಡಿಯುವಲ್ಲಿ ಈ ಶೋಧವು ಬಹಳ ಸಹಾಯವಾಗುವದೆಂದು ಎಲ್ಲ ಜ್ಞರ ಅಭಿಪ್ರಾಯವಿದೆ. ಇದಲ್ಲದೆ ಇನ್ನೂ ಎಷ್ಟೋ ಸಂದರ್ಭಗಳಲ್ಲಿ ಇದು ಅತ್ಯಂತ ಉಪಯುಕ್ತವಿದ್ದಿ... ಸರ ರಾಮನ್‌ರು ಇತ್ತೀಚೆಗೆ ಧ್ವನಿತರಂಗಗಳ ವಿಷಯ... ಕೆಲವು ಹೊಸ ತತ್ವಗಳನ್ನು ಕಂಡುಹಿಡಿದಿರುವ... ತಿಳಿಯುತ್ತದೆ. ಹೆಚ್ಚು ಸೂಕ್ಷ್ಮವಾದ ಕೇವಲ ಶಾಸ್ತ್ರ... ವಿಷಯಗಳನ್ನು ಇದೇ ಲೇಖದಲ್ಲಿ ಕೊಡಲು ಅವಕಾಶ...

ಸರ್ ಚಂದ್ರಶೇಖರ ರಾಮನ್, ಮೇಘನಾದ ... ಬೋಸ ಮೊದಲಾದ ಮಹನೀಯ ತತ್ವಜ್ಞರು ... ಶೋಧಗಳಿಂದ ಭರತಭೂಮಿಯು ಗೌರವವನ್ನು ಮತ್ತೆ ... ಕಡೆಯಲ್ಲಿ ಹರಡಿದ್ದಕ್ಕಾಗಿ ನಾವೆಲ್ಲರೂ ಅವರಿಗೆ ಕೃ... ರಾಗಿರಬೇಕಾಗಿದೆ.

ಆರೋಗ್ಯಬಿಂದು

ಮೊಲೆಹಾಲು

ಬಾಣಂತಿಗೆ ಮೊಲೆಹಾಲು ಕಡಿಮೆಯಾದರೇನಾಯಿತು, ಕೃತ್ರಿಮವಾದ ಹಾಲನ್ನು ತಯಾರಿಸುವ ವಿಧಾನಗಳು ಈಗ ತಿಳಿದುಬಂದಿವೆಯಲ್ಲವೆ? ಎಂದು ಯಾರಾದರೂ ಕೇಳಬಹುದು. ಕೃತ್ರಿಮ ಹಾಲಿನಲ್ಲಿ ರಾಸಾಯನಿಕವಾಗಿ ತಾಯಿ ಹಾಲಿನ ವಸ್ತುಗಳಿರಬಹುದು. ಆದರೆ ಮೊಲೆಹಾಲು ಕುಡಿವ ಮಕ್ಕಳು, ಕೃತ್ರಿಮ ಹಾಲಿನಿಂದ ಪುಷ್ಟವಾದ ಮಕ್ಕಳಿಗಿಂತ ರೋಗನಿರೋಧದಲ್ಲಿ ಹೆಚ್ಚು ಸಮರ್ಥರಾಗಿ ರುವರೆಂದು ನಿದರ್ಶನಕ್ಕೆ ಬಂದಿದೆ. ಇತ್ತೀಚೆ ಕೆಲವು ವಿಜ್ಞಾನಿಗಳು ಕೆಲವು ಮಕ್ಕಳನ್ನು ಮೂರು ಗುಂಪುಗಳಾಗಿ ವಿಭಾಗಿಸಿ ಒಂದು ಗುಂಪಿಗೆ ಬರಿ ಮೊಲೆಹಾಲನ್ನೂ, ಇನ್ನೊಂದಕ್ಕೆ ಮೊಲೆಹಾಲು, ಕೃತ್ರಿಮ ಹಾಲು ಎರಡನ್ನೂ, ಮತ್ತೊಂದಕ್ಕೆ ಬರಿ ಕೃತ್ರಿಮ ಹಾಲನ್ನೂ ಕೆಲವು ಸಮಯದ ವರೆಗೆ ಕೊಟ್ಟು ಪ್ರಯೋಗ ಮಾಡಿದರು. ಆದರಿಂದ ಎಲ್ಲ ವಿಷಯಗಳಲ್ಲಿಯೂ ಮೊಲೆಹಾಲನ್ನುಂಡ ಮಕ್ಕಳೇ ಮೇಲ್ಮೆಯಿಂದ ಬೆಳೆದುದು ಕಂಡು ಬಂತು. ಆದುದರಿಂದ ರೂಪವಿಕಾರವಾಗುವ ಅಂಜಿಕೆಯಿಂದ ತಾಯಂದಿರು ಮಕ್ಕಳಿಗೆ ಮೊಲೆಯುಣಿಸದೆ ಕೃತ್ರಿಮ ಆಹಾರಗಳನ್ನು ಮುಕ್ಕಿಸುವುದು ಒಳಿತಲ್ಲ.

* * *

ತಲೆಶೂಲೆಯ ಕಾರಣಗಳು

ತಲೆಶೂಲೆ! ಬಾವಕೂಡಲೆ ಆಸ್ಪಿರಿನ್ ನುಂಗುವುದು ಒಳಿತಲ್ಲ. ತಲೆಶೂಲೆಗಳು ಹಲವು ಪಲವು ದೇಹದೊಳಗಿನ ಗುಪ್ತ ಕಾರಣಗಳಿಂದ ಹುಟ್ಟುತ್ತವೆ. ಮಿದುಳಿನ ಹೊದಿಕೆಗಳ ಕೆರಳಿಕೆ, ಒಳಗಿನ ಅವಯವಗಳಲ್ಲಿ ವಿದ್ರಧಿಗಳು (tumours) ಆಗುವುದರಿಂದ ಭಯಂಕರ ತಲೆಶೂಲೆಯೇಳಬಹುದು. ಕೆಲವು ಸುಂಕುರೋಗಗಳ ಪೂರ್ವಲಕ್ಷಣವಾಗಿ ತಲೆ ನೋಯಬಹುದು. ನಿಕೊಟಿನ್, ಮದ್ಯ, ಅಪಚನ, ಕರುಳಿನೊಳಗಿನ ವಿಷ, ವೃಕ್ಕದೋಷ, ಮುಂತಾದ ಕಾರಣಗಳಿಂದಲೂ ತಲೆ ನೋಯಬಹುದು. ಹೆಣ್ಣುಮಕ್ಕಳಿಗೆ ಮುಟ್ಟಿನ ರೋಗಗಳಿಗೆ ಸಂಬಂಧಿಸಿದ ತಲೆಶೂಲೆಗಳೇಳಬಹುದು. ಕಂಣಿನ ಆಯಾಸಗಳಿಂದ ತಲೆ ನೋಯಬಹುದು. ಅಲ್ಲದೆ ಮನೋವ್ಯಾಧಿಗಳಿಂದಲೂ, ಭಾವೋದ್ರೇಕಗಳಿಂದಲೂ ತಲೆಶೂಲೆ ಹುಟ್ಟಬಹುದು. ಆದುದರಿಂದ ಕಾರಣವನ್ನು ತಿಳಿದುಕೊಳ್ಳದೆ ಬರಿ ನರಗಳನ್ನು ಮೊಂಡಗೊಳಿಸುವ ಔಷಧಗಳನ್ನು ಸೇವಿಸುವದರಿಂದ ಕ್ಷಣಿಕವಾಗಿ ತಲೆಶೂಲೆ ಕಡಿಮೆಯಾದರೂ ಅದು ಪುನಃಪುನಃ ಹೆಚ್ಚು ತೀವ್ರತೆಯಿಂದ ಬರಬಹುದು.

* * *

ಬೊಜ್ಜು ಬೆಳೆಯಗೊಡದಿರಿ

ಹೊಟ್ಟೆ ದೊಡ್ಡದಾಗುತ್ತಿರುವುದು ಬಹಳ ಹೊತ್ತಿನ ವರೆಗೆ ಒಂದೇಕಡೆ ವ್ಯಾಯಾಮವಿಲ್ಲದೆ ಕುಳಿತಿರುವುದರ ಲಕ್ಷಣವಾಗಿದೆ. ಗಡುತರವಾಗಲಪೇಕ್ಷಿಸುವವರು ಬರಿ ಹೊಟ್ಟೆ ಬೆಳೆಸಿಕೊಳ್ಳುವ ಉದ್ಯೋಗ ಮಾಡಬಾರದು. ಮನುಷ್ಯನೆಷ್ಟು ಗಡುತರನಾಗಿದ್ದರೂ ಅವನ ಹೊಟ್ಟೆ ತೆಳುವಾಗಿಯೆ ಇರುವುದು ಆರೋಗ್ಯದ ಲಕ್ಷಣ. ಹೊಟ್ಟೆಯ ಮುಂಭಾಗದ ಸ್ನಾಯುಗಳು ದುರ್ಬಲವಾಗುವುದರಿಂದ ಒಳಗಿನ ಜಠರ, ಕರುಳುಗಳು ಬೆಳೆದುಕೊಳ್ಳುವವು. ಇಲ್ಲವೆ ಮುಂಭಾಗದಲ್ಲಿ ಮೇದಸ್ಸು ಬೆಳೆದುನಿಲ್ಲುವುದು. ಬೆಳೆದ ಕೊಬ್ಬು, ಬೆನ್ನೆಲುಬು-ನರಗಳನ್ನು ಜಗ್ಗುವುದಲ್ಲದೆ ಪಾಚಕಾಂಗ ಮತ್ತು ಕ್ರಮೇಣ ಹೃದಯ, ಶ್ವಾಸಕೋಶಗಳನ್ನೂ ಒತ್ತುತ್ತದೆ. ರಕ್ತನಲಿಕೆಗಳು ಕೊಬ್ಬಿನ ಭಾರದಿಂದ ಸಂಕೋಚವಾಗುತ್ತವೆ. ಆದುದರಿಂದ ಹೊಟ್ಟೆಯ ಮೇಲೆ ಬೊಜ್ಜು ಬೆಳೆಯದಂತೆ ಅಂಗಸಾಧನೆ ಮಾಡಬೇಕು.

* * *

ಪಾದದ ಆಕಾರಕ್ಕೆ ತಕ್ಕ ಬೂಟು

ನಮ್ಮ ನಡಿಗೆಯಲ್ಲಿರುವ ಸ್ಥೈರ್ಯ ಧೀರೋದಾತ್ತತೆಯೆಲ್ಲ ಪಾದದಲ್ಲಿರುವ ಎಲುಬುಗಳ ಬಲ ಮತ್ತು ಕುಶಲ ನರ್ತನೆಯ ಮೇಲೆ ಅವಲಂಬಿಸಿದೆ. ನಟನ ನಡಿಗೆಯಲ್ಲಿಯ ಹಾವಭಾವಗಳೂ ಆ ಎಲುಬುಗಳು ಓರಣದಿಂದ ಸರಿದಾಡುವುದರಿಂದ ವ್ಯಕ್ತವಾಗುತ್ತವೆ. ಆ ಎಲುಬುಗಳು ಕಸುವುಗೊಂಡು ನಡಿಗೆಯನ್ನು ಹೆಚ್ಚು ಸ್ಥಿರವಾಗಿ, ಧೀರವಾಗಿ ಮಾಡಬೇಕಾದರೆ ಅವುಗಳ ಸ್ವತಂತ್ರ ಚಲನೆಗೆ ತಡೆಯಾಗಬಾರದು. ಕಾಲಲ್ಲಿ ಭಾರವಾದ ಕಾಲ್ಗಡಗಗಳನ್ನು ತೊಡುವುದರಿಂದ, ಬಿಗಿಯಾದ ಬೂಟುಗಳನ್ನು ಹಾಕುವುದರಿಂದ ಪಾದದ ಎಲುಬುಗಳ ಸ್ನಾಯುಗಳು ಒತ್ತಲ್ಪಟ್ಟು ಅವುಗಳ ಚಲನೆಯು ವಿಕೃತವಾಗುವದು. ಆದರಿಂದ ನಡಿಗೆಯೂ ವಿಕೃತವಾಗುವದು. ಆದುದರಿಂದ ಪಾದದ ಎಲುಬುಗಳ ಸ್ವಾಭಾವಿಕ ವರ್ತನಕ್ಕೆ ತಡೆಯಾಗದಂತಹ ಬೂಟುಗಳನ್ನು ತೊಡುವುದು ಒಳಿತು.

* * *

ದಾಂಪತ್ಯಪ್ರೇಮ

ಲೇಖಕರು :
ಶ್ರೀ. ಕಡೂರು ಶ್ರೀಪಾದ, ಮಿತ್ರಮೇಳ, ಬೆಂಗಳೂರು

- ಯೌವನದಲ್ಲಿ ಪ್ರೇಮವು ಸೌಂದರ್ಯವನ್ನು ಚಿಂತಿಸಿ ಸೌಂದರ್ಯವನ್ನು ಹುಡುಕಿ ಸೌಂದರ್ಯವನ್ನು ಸೃಷ್ಟಿಸುವುದು.
- ಹೆಂಗಸಿನ ಪ್ರೇಮವು ಬರಿ ಕಾಮತೃಪ್ತಿಗಾಗಿ ಹಾತೊರೆಯುವುದಿಲ್ಲ; ತಾಯ್ತನದ ಅಭಿಮಾನದಿಂದ ತುಂಬಿರುವುದು.
- ತರುಣಿಯು ಸುಲಭವಾಗಿ ತರುಣನ ಬಲೆಗೆ ಬೀಳುವುದಿಲ್ಲ; ಆದರೆ ಒಮ್ಮೆ ಒಲಿದಳೆಂದರೆ ಪ್ರೇಮಾಂಧಳಾಗಿ ಅತಿಶಯ ಸುಖವನ್ನು ಕೊಡುವಳು.

೨ ಜೀವನದಲ್ಲಿ ಪ್ರೇಮಾನುಭವ

ಜೀವನದ ಬಾಲ್ಯದಲ್ಲಿ ಚಂಚಲವಾಗಿದ್ದ ಪ್ರೇಮವು ಯೌವನದಲ್ಲಿ ಕಾಲಿಟ್ಟಾಗ ಒಂದು ನೆಲೆಗೆ ಬಂದು ತನ್ನ ಮೊದಲನೆಯ ಅಮರ ವಾಣಿಯನ್ನುಲಿಯುವುದು. ವರ್ಡ್ಸ್‌ವರ್‍ತ್ ಮಹಾಕವಿಯು "ಈ ಪ್ರಪಂಚದಲ್ಲಿ ಮಾನವನಾಗಿ ಜೀವಿಸುವುದೇ ಒಂದು ಆನಂದ. ಅದರಲ್ಲಿಯೂ ಯೌವನ ವಿಲ್ಲಿರುವುದೇ ಸ್ವರ್ಗ" ಎಂದಿರುವನು. ಯೌವನದಲ್ಲಿ ವಿವಾಹವಾದೊಡನೆ ದಾಂಪತ್ಯಪ್ರೇಮವು ತನ್ನ ಸಂಗಾತಿಯಲ್ಲಿ ನೆಲೆಸಿ ಹಿಂದಿನ ಜೀವನದ ಸಂಸ್ಕೃತಿಗೆ ತಕ್ಕಂತೆ ಅವರವರಿಗೆ ಫಲಕೊಡುವುದು. ಈ ಯೌವನವು ಬರುವುದರ ಕುರುಹುಗಳೇನು ಎಂಬುದನ್ನು ಡಾ॥ ವಿಲ್ ಡ್ಯೂರೆಂಟ್ (Dr. Will Durant) ಎನ್ನುವವರು ಹೀಗೆ ವಿವರಿಸಿರುವರು: "ಹೊಸಹೊಸ ಭಾವನೆಗಳೂ ಅನುಭವಗಳೂ ದೇಹವನ್ನೂ ಮನಸ್ಸನ್ನೂ ಮುತ್ತುತ್ತವೆ. ಮನಸ್ಸಿನ ಕುತೂಹಲವು ಎಲ್ಲ ವಿಷಯಗಳನ್ನೂ ತಿಳಿಯಲು ಹಾತೊರೆಯುವುದು. ಆದರೆ ನಾಚಿಕೆಯು ಮನಸ್ಸನ್ನು ಬಿಗಿಹಿಡಿಯುವುದು. ಯುವಕನು ಹೆಂಗಸರ ಮುಂದೆ ನಿಲ್ಲಲಾರದೆ ನಾಚುವನು. ಹುಡುಗಿಯು ಗಂಡಸರನ್ನು ಕಂಡೊಡನೆ ನಾಚಿ ಮುಗುಳುನಗೆ ನಕ್ಕು ಓಡುವಳು. ಮೂಢರಾದ ಮಕ್ಕಳು ತಕ್ಷಣ ಬುದ್ಧಿವಂತರಾಗಬಹುದು. ಮೊದಲು ವಿಧೇಯರಾಗಿದ್ದವರು ಈಗ ದಂಗೆಕಾರರಾಗಬಹುದು. ಸಹವಾಸಿಗಳನ್ನು ಬಿಟ್ಟು ಒಬ್ಬರೆ ಆತ್ಮಯೋಚನೆಯಲ್ಲಿ ಲೀನರಾಗುವರು; ಕಲ್ಪನೆಯ ಸಾಮ್ರಾಜ್ಯದಲ್ಲಿ ತೇಲುವರು. ಕವಿತಾಶಕ್ತಿ ತಾನಾಗಿ ಉಕ್ಕಿಬರುವುದು. ಈ ವಯಸ್ಸಿನಲ್ಲಿ ವಿದ್ಯೆಕಲಿತವರೆಲ್ಲ ಕವಿಗಳಾಗುವರು. ಹಗಲುಗನಸುಗಳನ್ನು ಕಂಡು ಆನಂದಿಸುವರು. ಮನಸ್ಸಿನ ಶಕ್ತಿಯೆಲ್ಲ ಚೇತರಿಸಿಕೊಳ್ಳುವುವು. ಎಲ್ಲ ವಿಷಯಗಳ ಸಮಂಜಸತೆಯನ್ನು ಹುಡುಕಿ ನೋಡುವಂತಾಗುವುದು. ಸಮಂಜಸತೆಯ ತುಲನೆಯೇ ಅಭ್ಯಾಸವಾಗಿ ಮುಂದುವರಿದರೆ ಆ ಮನುಷ್ಯನು ಒಬ್ಬ ವಿಜ್ಞಾನಿಯೋ ವೇದಾಂತಿಯೋ ಆಗಬಹುದು. ಅದು ಬೇಗ ಮುಗಿದರೆ ಅವನು ನಿಜವಾದ ಮನುಷ್ಯನಾಗಿ ಜೀವನದಲ್ಲಿ ಜಯಹೊಂದುವನು.[1]"

ಈ ಪರಿಸ್ಥಿತಿಯಲ್ಲಿ ಪ್ರೇಮವು ತುಂಬಿ ತುಳುಕಿ ಜೀವನ ಸೌಂದರ್ಯಕ್ಕೆ, ದಾಂಪತ್ಯಭಕ್ತಿಗೆ ನೀರೆರೆದು ಪೋಷಿಸುವುದು. ಈ ಕಾಲದಲ್ಲಿ ಪ್ರೇಮವು ಸೌಂದರ್ಯವನ್ನು ಕುರಿತು ಚಿಂತಿಸಿ, ಸೌಂದರ್ಯವನ್ನು ಹುಡುಕಿ, ಸೌಂದರ್ಯವನ್ನು ಸೃಷ್ಟಿಸುವುದು. ಪ್ರೇಮವು ಅಮರತ್ವವನ್ನು ಚಿಂತಿಸಿ, ಅಮರತ್ವವನ್ನು ಹುಡುಕಿ, ಅಮರತ್ವವನ್ನು ಸೃಷ್ಟಿಸಬಲ್ಲದು. ಮಾನವಶಕ್ತಿಯ ವಸಂತಕಾಲವಿದು. ಈ ಶಕ್ತಿಗಳು ಬೆಳೆಯುವ ಕಾಲವಿದು. ಈ ಕಾಲದಲ್ಲಿ ಎಲ್ಲಾ ಉತ್ತಮ ಗುಣಗಳ ಪೋಷಣೆಯಾಗಬೇಕು. ಈ ಕಾಲವು ಜೀವನದ ಪರ್ವಕಾಲ.

ಜೀವನವು ಹೀಗೆ ಮಾರ್ಪಾಡಾಗಿ ಪ್ರೇಮದ ನೆಲೆಗಾಗಿ ಹಸಿದ ಆತ್ಮವು ಕಾತರಿಸಿ ತನ್ನ ಪ್ರೇಮಿಯೊಡನೆ ಬೆರೆತು ಪೂರ್ಣವಾಗುವುದು. ಪ್ರೇಮದ ಈ ಕೃಷಿಯ ಫಲವಾಗಿಯೇ ಗಂಡಹೆಂಡಿರಲ್ಲಿ ಅಷ್ಟು ದೃಢವಾದ ಭಕ್ತಿ, ವಿಶ್ವಾಸ, ಅಭಿಮಾನ ಮೂಡುವುದು. ಪ್ರೇಮವು ದೈಹಿಕ ಸುಖಾಪೇಕ್ಷೆಯಿಂದ ಮೊದಲಾಗಿ ಎರಡು ಆತ್ಮಗಳನ್ನು ಅನನ್ಯ ಭಕ್ತಿ

ಈ ಲೇಖನಮಾಲೆಯಲ್ಲಿ ಇದು ಎರಡನೆಯ ಬರಹ. ಇನ್ನೊಂದು ಬರಹವು ಬರಲಿದೆ. ಸಂ.

1. Dr. Will Durant in Mansions of Philosophy.

ವಿಶ್ವಾಸಗಳಿಂದ ಕೂಡಿಸುವುದು. ಹಿಂದೆ ಕಾಡುಮಲ್ಲಿಗೆ ಯಾಗಿದ್ದ ಪವಿತ್ರ ಪ್ರೇಮವು ಇಂದು ಕವಿಪುಂಗವರ ಅಮರ ವಾಣಿಯಲ್ಲಿ ತೇಲುತ್ತಿರುವುದು.

ಪ್ರಪಂಚದ ಆದಿಯಲ್ಲಿ ಅನಾಗರಿಕ ಕಾಡು ಜನರಿಗೆ ಪ್ರೇಮವೆಂಬುದು ತಿಳಿದಿರಲಿಲ್ಲ. ಜನರಲ್ಲಿ ಕಲ್ಪನಾಶಕ್ತಿಯು ಬೆಳೆದಂತೆ ಪ್ರೀತಿಸುವುದೂ ಬೆಳೆಯಿತು. ಜಾನ್ ಲಬಕ್ (John Lubbock) ಎಂಬವರು "ಯೋರುಬ ಎಂಬ ಕಾಡು ಜನರು ಈಗಲೂ ವಿವಾಹಗಳನ್ನು ಆಡಂಬರವಿಲ್ಲದೆ ಬಹಳ ಉದಾಸೀನತೆಯಿಂದ ಜರುಗಿಸುವರು. ಮದುವೆಯ ಗಂಡು, ಹೆಂಡತಿಯೊಡನೆ ಸೇರುವುದು ತನ್ನ ಹೊಲದ ಕಾಳಿನ ತೆನೆಯನ್ನು ಸುಗ್ಗಿಯಲ್ಲಿ ಕುಯ್ದ ಹಾಗೆ ಸಾಮಾನ್ಯ ಕೆಲಸವೆಂದೆಣಿಸುವನು. ಗಂಡಹೆಂಡಿರಲ್ಲಿ ಪ್ರೇಮ, ಅಭಿಮಾನವೆಂಬುದೇ ಇಲ್ಲ." ಎಂದಿರುವರು. ಮೊದಲು ಜನತೆಯಲ್ಲಿ ಇಷ್ಟು ಅಲಕ್ಷಿತವಾಗಿದ್ದ ಪ್ರೇಮವು ಮಾನವರ ಕಲ್ಪನಾ ಶಕ್ತಿಯೊಡನೆ ಬೆಳೆದು ಈಗ ಜೀವನದಲ್ಲಿ ಮಹತ್ತರವಾದ ಸ್ಥಾನವನ್ನು ಗಳಿಸಿದೆ. "ಪ್ರೇಮವನ್ನನುಭವಿಸುವ ದೇಹಕ್ಕೆ ಜೀವವು ಹೇಗೆ ಅತ್ಯಾವಶ್ಯಕವೋ ಹಾಗೆ ಪ್ರೇಮಿಗೆ ಪ್ರೇಮವು ಒಂದು ಜೀವ.1" "ನಿಜವಾದ ಪ್ರೇಮದಲ್ಲಿ ಆತ್ಮವು ದೇಹವನ್ನು ಆಲಿಂಗಿಸುವುದು.2" ಜನಜೀವನದಲ್ಲಿ "ಪ್ರೀತಿಯು ಜನತೆಯನ್ನು, ರಾಜರನ್ನು, ಸತ್ತವರನ್ನು, ಇಲ್ಲಿಯ ಮತ್ತು ಸ್ವರ್ಗದ ಜನರನ್ನು ಎಲ್ಲರನ್ನೂ ಆಳುವುದು. ಏಕೆಂದರೆ ಪ್ರೀತಿಯೇ ಸ್ವರ್ಗ; ಸ್ವರ್ಗವೇ ಪ್ರೀತಿ.3" ಎಂದು ಮುಂತಾಗಿ ವಿಶ್ವಕವಿಗಳ ಅಮರವಾಣಿಯಲ್ಲಿ ಪ್ರೇಮವು ಬೆಳಗಿದೆ. ಅದೇ ಪ್ರೇಮವಸ್ತುವೇ ಪ್ರಧಾನವಾಗಿರುವ ವಿಶ್ವಕವಿ ಕಾಳಿದಾಸನ 'ಶಾಕುಂತಲ, ಮೇಘದೂತ'ಗಳ ಜಯಭೇರಿಯು ಪ್ರಪಂಚದ ಮೂಲೆಮೂಲೆಗೂ ಕೇಳಿಸಿದೆ. "ಪ್ರೀತಿಯಿಲ್ಲದ ಮಾನವನು ಜೀವನದಲ್ಲಿ ಕಗ್ಗತ್ತಲೆಯಲ್ಲಿ ನಡೆಯುವನು.4" ಎಂದುಕೂಡ ಪ್ಲೇಟೋ ಹೇಳಿಬಿಟ್ಟರುವನು. ನಮ್ಮ ನಾಡಿನ ಹಳ್ಳಿಗಳ ಮುಗ್ಧ ಬಾಲೆಯರ ಬಾಯಿಯಲ್ಲಿ "ಸುಣ್ಣ ಇಲ್ಲದ ಗೋಡಿ, ದೇವರಿಲ್ಲದ ಜಗಲಿ, ಅರಸರಿಲ್ಲದ ಮನೆತನ—ಮಾಡೂದು ಯಾತಾರ ಸುಖವು ಹಡೆದವ್ವ" ಎಂದೂ ಹಾಡಿಸಿದೆ.

ಪ್ರಾಣಿಗಳಲ್ಲಿ ಪ್ರೇಮವು ಕ್ಷಣಿಕವಾದದ್ದು; ಮಾನವರಲ್ಲಿ ಚಿರವಾದದ್ದು. ನೀರಡಿಕೆ ಹಸಿವೆಯಿಲ್ಲದೆ ಮನುಷ್ಯನು ನೀರು ಕುಡಿದು ಆಹಾರವನ್ನು ತೆಗೆದುಕೊಳ್ಳಬಲ್ಲನು; ನಿಯಮಿತ ಕಾಲವೆನ್ನದೆ ಸದಾ ಪ್ರೇಮಿಯನ್ನು ಪ್ರೀತಿಸಲೂ ಬಲ್ಲನು. ಇವೆರಡರಲ್ಲೂ ಮನುಷ್ಯನು ಪ್ರಾಣಿಗಳ ಸ್ವಭಾವಕ್ಕೆ ವಿರುದ್ಧನಾಗಿದ್ದಾನೆ. ಪ್ರೇಮಕ್ಕಾಗಿ [illegible] ಕಾದಾಡುವನು. ಫಲ ದೊರೆತಾಗ ಆನಂದಿಸುವನು.

ಗಂಡಸು-ಹೆಂಗಸರ ಪ್ರೇಮಾನುಭವದಲ್ಲಿಯೂ [illegible] ವ್ಯತ್ಯಾಸಗಳಿವೆ. ಪ್ರೀತಿಸುವುದರಲ್ಲಿ ಹೆಂಗಸರು ಗಂಡಸರಿಗಿಂತ ಚತುರರು. ಏಕೆಂದರೆ ಸಾಧಾರಣವಾಗಿ [illegible] ಆಸೆಗಳು ಆವೇಗದಲ್ಲಿ ಕಡಿಮೆಯಾಗಿದ್ದು, [illegible] ನಿರ್ಧರಿಸಲು ಅವಳಿಗೆ ಅವಕಾಶ ಕೊಡುವುವು. [illegible] ಹೆಂಗಸಿನ ಪ್ರೇಮವು ಬರಿ ಕಾಮತೃಪ್ತಿಗಾಗಿ ಹಾತೊರೆಯುವುದಿಲ್ಲ; ತಾಯ್ತನದ ಅಭಿಮಾನದಿಂದ ತುಂಬಿರುವುದು. "ಹೆಂಗಸಿಗೆ ತನ್ನ ನಲ್ಲನು ತಾನು ಮುದ್ದಿಸಿ ಹಾಲುಣಿಸುವ ಬೇರೆ ಒಂದು ಮಗುವಿದ್ದ ಹಾಗೆ.6" ಸೌಮ್ಯತೆ, [illegible] ಸಮಾಧಾನ ಇವು ಹೆಂಗಸಿನ ಹುಟ್ಟು ಗುಣಗಳು; [illegible] ದುಡುಕು, ಒರಟುತನ ಇವು ಗಂಡಸಿನ ಹುಟ್ಟುಗುಣಗಳು. ಈ ಗುಣಗಳು ಪ್ರೀತಿಸುವುದರಲ್ಲಿಯೂ ತೋರಿಬರುವವು. ಹೆಂಗಸು ನಿಧಾನಿಸಿ, ಗಂಡಸು ಪ್ರೀತಿಸಲು [illegible]

---

1. "Love is the soul of him who lo[ves] what the soul is to the body which it animates."
—La Rochefo[ucauld]

2. "In true love it is the soul that embraces the body."
—Nietzsche

3. "Love rules the camp, the court, the grove and men below and saints above; for Love is heaven and heaven is love."
—Sir Walter Scott

4. "He whom love takes not walks in Darkness"
—P[lato]

5. "Love in a woman, is in its fundamental nature no more than a secondary character of motherhood, and all the feelings of affection that bind woman to man arise not from sexual impulses but from instincts acquired by adaptation—of subordination and self-surrender."
—Lumbroso in "Sexual life of woman"

6. "Every lover is to woman only another child to be comforted and fed."
—Dr. will Durant in "Mansions of Philosophy" P. 1[illegible]

ಮಾಡುವುದನ್ನು ಕಾಯುವಳು. ಅವನಿಂದ ಮೊದಲಾದದ್ದು ಒಮ್ಮೆ ಇವಳನ್ನು ಬಲೆಯಲ್ಲಿ ಕೆಡವಿ ಇವಳಲ್ಲಿ ಪ್ರೀತಿಯು ಬೇರೂರಿತೆಂದರೆ ತನ್ನ ಇನಿಯನನ್ನು ಪ್ರೀತಿಸುವುದರಲ್ಲಿ ತುಂಬಾ ಲೀನಳಾಗಿ ಅವನ ಮುಂದೆ ಉಳಿದ ಪ್ರಪಂಚವನ್ನೇ ಮರೆಯುವಳು. “ತರುಣಿಯು ಸುಲಭವಾಗಿ ತರುಣನ ಬಲೆಗೆ ಬೀಳುವುದಿಲ್ಲ; ಆದರೆ ಒಮ್ಮೆ ಬಿದ್ದಳೆಂದರೆ ಪ್ರೇಮಾಂಧಳಾಗಿ ಅತಿಶಯ ಸುಖಕೊಡುವಳು.[1] ” ಗಂಡಸು ಹಾಗಲ್ಲ. ಪ್ರೇಮದಲ್ಲಿ ಲೀನನಾದರೂ ಇನ್ನಿತರ ಹವ್ಯಾಸಗಳಲ್ಲಿಯೂ ಮನಸ್ಸನ್ನಿಡಬಲ್ಲನು. ಹೆಂಗಸು ಹುಟ್ಟುವಾಗ ಪ್ರಕೃತಿಯಿಂದ ಗಂಡಸಿಗಿಂತ ಹೆಚ್ಚಾಗಿ ಬುದ್ಧಿಶಕ್ತಿ, ಜಾಣ್ಮೆಯನ್ನು ಪಡೆದು ಹುಟ್ಟುವಳು. ಆದರೂ ಒಮ್ಮೆ ಪ್ರೇಮಜಾಲದಲ್ಲಿ, ದಾಂಪತ್ಯ ಜೀವನದಲ್ಲಿ ಸಿಲುಕಿದೊಡನೆ ತನ್ನೆಲ್ಲಾ ಜಾಣ್ಮೆ, ಬುದ್ಧಿಶಕ್ತಿಯನ್ನೂ ಅಲ್ಲಿ ಧಾರೆಯೆರೆದು ತಲ್ಲೀನಳಾಗುವಳು. ಏಕೆಂದರೆ ಪ್ರಪಂಚದಲ್ಲಿ ಇನ್ನಿತರ ಜ್ಞಾನಗಳಲ್ಲಿ ಮೇಧಾವಿಯಾಗಲು ಹೆಂಗಸಿಗೆ ಗಂಡಸಿನಷ್ಟು ಚೈತನ್ಯವಿಲ್ಲ. ವಿಜ್ಞಾನ, ಸಾಹಿತ್ಯ, ವೇದಾಂತ, ಕಲೆ ಮುಂತಾದ ಶಾಖೆಗಳಲ್ಲಿ ಕೀರ್ತಿತರುವ ಕೆಲಸ ಮಾಡಿರುವವರಲ್ಲಿ ಒಬ್ಬಿಬ್ಬರು ಸ್ತ್ರೀಯರನ್ನು ಬಿಟ್ಟರೆ ಉಳಿದವರೆಲ್ಲ ಪುರುಷರೇ ಆಗಿರುವುದು ಈ ಕಾರಣದಿಂದಲೇ. ಪ್ರೇಮಾನುಭವದಲ್ಲಿ ಗಂಡು-ಹೆಣ್ಣುಗಳಲ್ಲಿ ಇಷ್ಟು ವ್ಯತ್ಯಾಸಗಳಿವೆ.

---

1 “The maiden dislikes the idea of being too easily won, and she gives more pleasure also to her lover when once she yields.”

—Prof. H. S. Gambers in “Ideal marriage.”

ಸಣ್ಣ ಕಥೆಯೊಂದು

ನವಮಧುವಿನಲ್ಲಿ ವಿಷ

ಶ್ರೀಮತಿ ಪುಲಮತಿ ಸುಶೀಲಮ್ಮ, ಬಳ್ಳಾರಿ

★

ಕೃಷ್ಣಮೂರ್ತಿಯ ಟೆನ್ನಿಸ್ ಆಟಕ್ಕೆ ಮೆಚ್ಚಿ ತಾರೆಯು ತಂದೆಯ ಮನಸ್ಸಿನ ವಿರುದ್ಧವಾಗಿ ಅವನ ಕೈ ಹಿಡಿದಳು. ಆದರೆ ಅವಳ ಮೆಚ್ಚಿನ ಆಟವೇ ಗಂಡನ ಕೈಮೂಳೆ ಮುರಿಯಿತು. ಮಾನವಂತೆಯಾದ ತಾರೆ ಪ್ರಿಯನ ಆರೈಕೆಗಾಗಿ ಸುಖವಿಲಾಸದ ಹಾಡುಗಾರ್ತಿಯಾದಳು. ಗಂಡನ ಬಾಳಿನ ಬೆಳಕು ಮುಸುಕಾಗುತ್ತಿದ್ದಂತೆ ತಾರೆಯ ಮಾನಸಾಕಾಶಕ್ಕೆ ಮತ್ತೊಬ್ಬ ... ... ಚಂದ್ರನ ಪ್ರವೇಶವಾಯಿತು. ... ...

೧

ಬೊಂಬಾಯಿ ಪಟ್ಟಣದ ಒಂದು ಸಂದಿನ ಮನೆಯ ಕೊಠಡಿಯಲ್ಲಿ ಕೃಷ್ಣಮೂರ್ತಿಯು ನರಳುತ್ತಾ ಹಾಸಿಗೆಯ ಮೇಲೆ ಮಲಗಿದ್ದನು. ಕೈಮೂಳೆ ಮುರಿದಿದ್ದುದರಿಂದ ನೋವು ಬಹಳವಾಗಿತ್ತು. ತಾರೆಯು ಕೆಲಸವನ್ನು ಹುಡುಕುವುದಕ್ಕೆ ಹೋಗಿದ್ದವಳು ಇನ್ನೂ ಬಂದಿರಲಿಲ್ಲ. ಕೃಷ್ಣಮೂರ್ತಿ ತಾರೆಗೆ ಕೆಲಸ ಸಿಕ್ಕಿತೋ ಇಲ್ಲವೋ, ಎಲ್ಲೆಲ್ಲಿ ಒಬ್ಬಳೇ ಸುತ್ತುತ್ತಿದ್ದಾಳೋ ಎಂದು ಯೋಚಿಸುತ್ತಿದ್ದನು. ತಾನು ಹಾಸಿಗೆಯನ್ನು ಹಿಡಿದು ೩ ತಿಂಗಳಾಗಿತ್ತು. ಕೈಲಿದ್ದುದೆಲ್ಲಾ ಖರ್ಚಾಗಿ ಹೋಗಿತ್ತು. ಇನ್ನು ತಾರೆಗೆ ಕೆಲಸ ಸಿಕ್ಕದೇ ಇದ್ದರೆ ಇಬ್ಬರೂ ಉಪವಾಸ ಬೀಳಬೇಕಾಗಿತ್ತು. ಹೀಗೆ ಕೃಷ್ಣಮೂರ್ತಿಯು ಚಿಂತಿಸುತ್ತಿದ್ದಾಗ ತಾರೆಯು ಬಂದಳು.

ಕೃ:—ಏನು! ಬೆಳಿಗ್ಗೆಯೆ ಹೋದವಳು, ಸಾಯಂಕಾಲ ೪ ಘಂಟೆಯಾಯಿತು. ಈಗ ಬರುತ್ತಿದ್ದೀಯೆ?

ತಾ:—ಏನು ಮಾಡಲಿ? ನಿನ್ನೆ ಹೇಳಿದ ಆ ಸುಖವಿಲಾಸದ ಹಾಡುಗಾರ್ತಿಯ ಕೆಲಸವಿನಹ ಇನ್ನೆಲ್ಲಿಯೂ ಸಿಕ್ಕದು. ಯಾವ ಷಾಪುಗಳಲ್ಲೂ ಫ್ಯಾಕ್ಟರಿಗಳಲ್ಲೂ ಜನ ಇದ್ದಾರೆ, ಬೇಡಂತ ಅನ್ನುತ್ತಾರೆ.

ಕೃ:—ನಿನ್ನೆ ನೀನು ಹೇಳಿದಾಗಿನಿಂದ ನನಗೇನೋ ಇನ್ನೂ ಯೋಚನೆ ಜಾಸ್ತಿಯಾಗಿದೆ. ಆ ಸುಖವಿಲಾಸದಲ್ಲಿ ನೀನು ಹಾಡಿ ಸಂಪಾದಿಸುವುದು ನನಗೆ ಇಷ್ಟವಿಲ್ಲ. ಅಂಥಾ ನ್ಯಾಟ್‌ಕ್ಲಬ್ಬಿಗೆ ಬರುವವರೆಲ್ಲಾ ಸಾಧಾರಣವಾಗಿ ವಿಷಯ ಸುಖವನ್ನು ಬಯಸುವವರೇ. ನೀನು ಒಳ್ಳೇ ಗೌರವಸ್ಥರ ಮನೆಯಲ್ಲಿ ಹುಟ್ಟಿ ಈ ಹಾಳು ದುಡ್ಡಿಗೋಸ್ಕರ ಇಂಥಾ ಕೀಳುಕೆಲಸವನ್ನು ಒಪ್ಪಿಕೊಳ್ಳುವುದು ನನಗೆ ಇಷ್ಟವಿಲ್ಲ. ತಾರಾ! ನೀನು ನಿಮ್ಮ ತಂದೆಯು ಬೇಡವೆಂದರೂ ನನ್ನ ಟೆನ್ನಿಸ್ ಆಟಕ್ಕೆ ಮೆಚ್ಚಿ ನನ್ನನ್ನು ಮದುವೆಯಾ[illegible]ರಿಂದಲೇ ನಿನಗೆ ಇಷ್ಟು ಕಷ್ಟ ಬಂತು. ನಾನೊಂದು [illegible] ವಾಗಿ ನಿನ್ನ ತಲೆಯಮೇಲೆ ಬಿದ್ದಿದ್ದೇನೆ. ನಿ[illegible] ವಯಸ್ಸಿಗೇ ಇಷ್ಟೆಲ್ಲಾ ಕಷ್ಟಬಂತು.

ಕೃಷ್ಣಮೂರ್ತಿಗೆ ಇಷ್ಟು ಮಾತಾಡುವ ಹೊತ್ತಿಗೆ [illegible]ರೀತ ದಾಹವಾಯಿತು. ನೀರು, ನೀರು ಎಂದು ಕೂ[illegible] ತಾರೆಯು ಮೆಲ್ಲನೆ ನೀರನ್ನು ಕುಡಿಸುತ್ತಾ, 'ನೀವು [illegible] ಇದ್ದದ್ದನ್ನೆಲ್ಲಾ ಜ್ಞಾಪಿಸಿಕೊಂಡು ಪೇಚಾಡುತ್ತೀರಿ. [illegible]ನದನ್ನೆಲ್ಲಾ ಯೋಚನೆ ಮಾಡುತ್ತಾ ಹೋದರೆ ಪ್ರ[illegible]ಜನವೇನು? ನೀವು ಸ್ವಲ್ಪ ಹೊತ್ತು ಸ್ವಸ್ಥವಾಗಿ ಮಲಗಿ[illegible] ಎಂದಳು.

ಕೃ:—ಬೇಡ, ತಾರಾ! ೫೦ ರೂಪಾಯಿ ಇಲ್ಲದೇ [illegible] ಅಷ್ಟೇ ಹೋಯಿತು. ನಿನ್ನ ರೂಪ, ನಿನ್ನ ಮೃದು[illegible] ಕಂತ ಇವುಗಳನ್ನು ಆ ಹಾಳು ಹಣಕ್ಕೆ ಬಲಿಕೊ[illegible] ಇಬ್ಬರೂ ಉಪವಾಸ ಸಾಯೋಣ.

ತಾ:—ಬೆಳಗಾದರೆ ಕೊಠಡಿ ಬಾಡಿಗೆ, ಡಾಕ್ಟರ್ [illegible] ಅಂಗಡಿಯವನ ಬಾಕಿ ಎಲ್ಲಾ ಕೊಡಬೇಕು. [illegible] ಮರ್ಯಾದೆಗಳನ್ನು ನೋಡುತ್ತಾ ಕೂತುಕೊಂಡರೆ [illegible]ವುದು ಹೇಗೆ? ಅದೂ ಅಲ್ಲದೆ ನಮ್ಮ ಮನಸ್ಸು [illegible] ವಾಗಿದ್ದರೆ ಎಲ್ಲಿ ಕೆಲಸ ಮಾಡಿದರೆ ತಾನೆ ಏನು!

ಕೃ:—ಹೋಗಲಿ! ತಿರುಗಿ ನಿಮ್ಮ ತಂದೆಗೆ [illegible] ನೋಡೋಣವೆ?


ತಾ:—ಒಂದು ಸಲ ಬರೆದು ವರ್ಷವಾದರೂ ಜ[illegible] ತಿರುಗಿ ಬರೆದರೆ ಏನು ಸಹಾಯ ಸಿಕ್ಕುತ್ತದೆ! [illegible] ಅವರು ಬೇಡ ಅಂದರೂ ನಿಮ್ಮನ್ನೇ ಮಾಡಿಕೊಳ್ಳುತ್ತೇ[illegible] ಅಂದಿದ್ದಕ್ಕೆ ಇಷ್ಟು ಹಟ ನನ್ನ ಮೇಲೆ ಸಾಧಿಸುವವ[illegible] ಕಾಗದಪತ್ರಗಳೇಕೆ? ಅವರಿಂದ ಏನೂ ಸಹಾಯ[illegible]ದಿಲ್ಲ ಅನ್ನುವುದು ಖಂಡಿತ ಗೊತ್ತು.

ಕೃ:—ನಮ್ಮ ತಂದೆಯವರು ನಮ್ಮಿಬ್ಬರ ಪ್ರೀತಿಯನ್ನು ನೋಡಿ ಮದುವೆಮಾಡಿದರು. ನಮ್ಮ ದುರದೃಷ್ಟ! ಅವರು ತೀರಿಕೊಂಡರು! ಇದ್ದ ಸ್ವಲ್ಪ ದುಡ್ಡು ಖರ್ಚಾಯಿತು. ಇನ್ನೂ ಈ ಕಾಯಿಲೆ ಬಂದು ನನ್ನನ್ನು ಬಿಡದೆ ಅಂಟಿಕೊಂಡಿದೆ. ನಿನ್ನನ್ನು ಬಿಟ್ಟು ನನಗೆ ಇನ್ನಾರೂ ಗತಿ ಇಲ್ಲ—ಎಂದು ಕಣ್ಣೀರಿಟ್ಟನು.

ತಾರೆಯು ಗಂಡನ ಹತ್ತಿರದಲ್ಲೇ ಇನ್ನೂ ಕೂತಿದ್ದರೆ ಅವನು ಮಾತಾಡಿ ಆಯಾಸಮಾಡಿಕೊಳ್ಳುತ್ತಾನೆಂದು ಕಾಫಿ ಮಾಡುವುದಕ್ಕೆ ಅಡಿಗೆಯ ಮನೆಗೆ ಹೋದಳು.

೨

ಸುಖವಿಲಾಸವು ಬೊಂಬಾಯಿ ಪಟ್ಟಣದಲ್ಲಿಯ ಒಂದು ವಿಷಯಸುಖದ ಭವನ. ಜಯಚಂದನೆಂಬ ಒಬ್ಬ ಮಾರ್ವಾಡಿಯು ಅದನ್ನು ನಡೆಸುತ್ತಿದ್ದನು. ಆ ಭವನವು ರಾತ್ರಿ ೯ ಗಂಟೆಯಿಂದ ಬೆಳಗಿನ ಜಾವ ೫ರ ವರೆಗೂ ತೆರೆದಿರುತ್ತಿತ್ತು. ಇಸ್ಪೀಟು ಆಡುವುದು, ಮದ್ಯವನ್ನು ಕುಡಿಯುವುದು ಮತ್ತು ವಿಷಯ ಸುಖಕ್ಕೋಸ್ಕರವೇ ತಯಾರಾಗಿ ಇಟ್ಟದ್ದ ಹೆಂಗಸರ ಕೈಲಿ ಸಿಕ್ಕಿದ ಹಾಗೆ ರಾತ್ರಿಯೆಲ್ಲಾ ಕುಣಿದಾಡುವುದು, ಇದೇ ಅಲ್ಲಿಗೆ ಬರುತ್ತಿದ್ದ ಗಂಡಸರ ಕಾರ್ಯವಾಗಿತ್ತು. ಏಳೆಂಟು ಜನ ಹೆಂಗಸರು ಆ ಸುಖವಿಲಾಸದಲ್ಲಿ ಕೆಲಸ ಮಾಡುತ್ತಿದ್ದರು. ಅವರಲ್ಲಿ ಕೆಲವರು ಗಾಯಕಿಯರು, ನರ್ತಕಿಯರು ಮತ್ತು ಬರೀ ಶೋಕು ಮಾಡಿಕೊಂಡು ಬರುವ ಜನಗಳ ಮನಸ್ಸನ್ನು ತಮ್ಮ ಬೆಡಗಿನಿಂದ ಮೆಚ್ಚಿಸಿ ದುಡ್ಡು ಸೆಳೆಯುವವರೂ ಇದ್ದರು. ಅಂತೂ ಆ ಭವನದ ಯಜಮಾನನಿಗೆ ಚನ್ನಾಗಿ ಆದಾಯವು ಬರುತ್ತಿತ್ತು. ಅಲ್ಲಿ ಹೆಂಗಸರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕಾದರೆ ಒಂದು ಕಟ್ಟು ಇತ್ತು. ಏನೆಂದರೆ ಮದುವೆಯಾದವರನ್ನು ಸೇರಿಸಿಕೊಳ್ಳಕೂಡದೆಂದು. ಆದ್ದರಿಂದಲೇ ತಾರೆಗೂ ಮೊದಲು ಕೆಲಸಕೊಡುವುದಕ್ಕೆ "ಸುಖವಿಲಾಸ"ದ ಯಜಮಾನನು ಒಪ್ಪಲಿಲ್ಲ. ಇವಳು ತನ್ನ ಗಂಡನಿಗೆ ಬಹಳ ಕಾಯಿಲೆಯೆಂತಲೂ, ಉಪವಾಸ ಸಾಯುತ್ತಿದ್ದೇವೆಂತಲೂ ಬಹಳ ಹೇಳಿಕೊಂಡಿದ್ದರಿಂದ ಕೆಲಸ ಸಿಕ್ಕಿತು. ತಾರೆಯು ಕೆಲಸಕ್ಕೆ ಸೇರಿ, ತಿಂಗಳಾಗುತ್ತ ಬಂತು. ಇವಳ ಮೃದುವಾದ ಕಂಠಕ್ಕೆ ಮೆಚ್ಚಿ ಇನ್ನೂ ಹೆಚ್ಚು ಜನ ಆ ಭವನಕ್ಕೆ ಬರುವುದಕ್ಕೆ ಪ್ರಾರಂಭಿಸಿದರು. ಜಯಚಂದನಿಗೂ ಇವಳಿಂದ ಆದಾಯವು ಹೆಚ್ಚಿದುದರಿಂದ ಇವಳ ಮೇಲೆ ಅಭಿಮಾನ ಹುಟ್ಟಿ ಇನ್ನು ಕೆಲವು ತಿಂಗಳಲ್ಲೇ ಸಂಬಳವನ್ನು ಹೆಚ್ಚಿಸುವೆನೆಂದು ಹೇಳಿದನು. ತಾರೆಯು ಒಟ್ಟು ೩ ಗಂಟೆಗಳ ಕಾಲ ಹಾಡಬೇಕಾಗಿತ್ತು. ಒಂದು ಗಂಟೆ ಹಾಡಿದ ಮೇಲೆ ತಿರುಗಿ ಇವಳ ಸರದಿ ಬರುವುದಕ್ಕೆ ಮಧ್ಯೆ ಒಂದು ಗಂಟೆ ಬಿಡುವಿರುತ್ತಿತ್ತು. ತಾರೆಗೆ ಮೊದಲು ಕೆಲವು ದಿನ ಹಾಡುವಾಗ ವಿಪರೀತ ಭಯ, ನಾಚಿಕೆ, ಏನೋ ಅವಮಾನ ವಾದ ಹಾಗೆ ತೋರುತ್ತಿತ್ತು. ಬರಬರುತ್ತಾ ಒಗ್ಗಿ ಹೋಯಿತು. ತಾರೆಯು ತನ್ನ ಹಾಡಿನ ಸರದಿ ಮುಗಿದ ಕ್ಷಣ ತನಗೆ ಕೊಟ್ಟಿದ್ದ ಕೊಠಡಿಯಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದಳು. ಅಲ್ಲಿಗೆ ಬರುವ ಗಂಡಸರ ಚರ್ಯೆಯನ್ನು ನೋಡಿ ತನಗೆಲ್ಲಿ ಮಾನ ಹಾನಿಯಾಗುವುದೋ ಎಂದು ಭಯಪಡುತ್ತಿದ್ದಳು. ದೇವರ ದಯದಿಂದಲೇ ಏನೋ ಇವಳನ್ನು ನೋಡಿದರೆ ಎಲ್ಲರೂ ಸ್ವಲ್ಪ ಮರ್ಯಾದೆಯನ್ನು ತೋರಿಸುತ್ತಿದ್ದರು. ತಾರೆಯು ಮನೆಯಲ್ಲಿ ಗಂಡನಿಗೆ ಸುಖವಿಲಾಸದಲ್ಲಿ ನಡೆಯುವ ವಿಷಯಗಳೊಂದನ್ನೂ ಹೇಳುತ್ತಿರಲಿಲ್ಲ. ಕೃಷ್ಣಮೂರ್ತಿ ಅಲ್ಲಿಗೆ ಬರುವವರು ಹೇಗೆ ನಡೆದುಕೊಳ್ಳುತ್ತಾರೆಂತ ಕೇಳಿದರೆ, ಎಲ್ಲರೂ ಸಾಧಾರಣವಾಗಿ ಒಳ್ಳೆಯವರೇ ಬರುತ್ತಾರೆಂತ ಹೇಳಿಬಿಡುತ್ತಿದ್ದಳು. ಈನಡುವೆ ಕೃಷ್ಣಮೂರ್ತಿಗೆ ಬಹಳ ಬೇಜಾರಾಗುತ್ತಿತ್ತು. ಮನೆಯಲ್ಲಿ ಒಬ್ಬನೇ ಕೈಲಾಗದವನಾಗಿ ರಾತ್ರಿ ಕಳೆಯುವುದು ಸಾಕಾಗುತ್ತಿತ್ತು. ತಾರೆಗೆ ರಾತ್ರಿ ನಿದ್ರೆ ಇಲ್ಲದ್ದರಿಂದ ಹಗಲು ಬಹಳ



'ತಾರಾ! ನೀನೂ ನನ್ನ ಜೊತೆಗೆ ನಾಗಪೂರಕ್ಕೆ ಬಂದು ಬಿಡು!'

ಹೊತ್ತು ನಿದ್ರೆಯಲ್ಲೇ ಕಳೆಯುತ್ತಿದ್ದಳು. ತಾರೆಯು ತನ್ನ ಸಂಬಳದ ಮುಕ್ಕಾಲು ಹಣವನ್ನು ಖರ್ಚುಮಾಡಿ ಔಷಧಿ ಕೊಡಿಸಿದರೂ ಕೃಷ್ಣಮೂರ್ತಿಗೆ ವಾಸಿಯಾಗಲೇ ಇಲ್ಲ. ಕೆಮ್ಮು ಬೇರೆ ಪ್ರಾರಂಭವಾಯಿತು. ಬಹಳ ಕಾಯಿಲೆಯಿಂದ ಒದ್ದಾಡುತ್ತಿದ್ದನು. ಈಚೆಗೆ ತಾರೆಯು ಕೃಷ್ಣಮೂರ್ತಿಯನ್ನು ಒಂದು ಮಗುವಿನಂತೆ ನೋಡುತ್ತಿದ್ದಳು. ಅವಳಿಗೆ ಇನ್ನು ಇವನು ಮೊದಲಿನಂತೆ ಎದ್ದು ಓಡಾಡುತ್ತಾನೆ ಅನ್ನುವ ನಂಬಿಕೆ ಇಲ್ಲವಾಯಿತು. ತನ್ನ ಕೈಲಾದಷ್ಟು ಅವನಿಗೆ ಔಷಧೋಪಚಾರ ನಡಿಸಿ ಅವನಿಗೆ ಗುಣಪಡಿಸಬೇಕೆಂಬುದೇ ಅವಳ ಆಸೆ.

೩

ತಾರೆಗೆ ಈಮಧ್ಯೆ ಸುಖವಿಲಾಸದಲ್ಲಿ ಒಬ್ಬ ಹೊಸ ತರುಣನ ಪರಿಚಯವಾಯಿತು. ಅವನ ಹೆಸರು ಸುಂದರ. ಅವನಿಗೆ ಬಟ್ಟೆನೇಯುವ ಮಿಲ್ಲಿನಲ್ಲಿ ೪೦೦ ರೂ. ಸಂಬಳವಿತ್ತು. ಅವನು ಬೆಂಗಳೂರಿನವನು. ಬೊಂಬಾಯಿನಲ್ಲೇ ಕೆಲಸಕ್ಕೆ ಸೇರಿ ಅಲ್ಲೇ ನೆಲಸಿದ್ದನು. ತಾರೆಯ ಒಳ್ಳೇ ಹಾಡುಗಾರಿಕೆಯನ್ನು ಕೇಳಿ ಸುಖವಿಲಾಸಕ್ಕೆ ಬರುವುದಕ್ಕೆ ಪ್ರಾರಂಭಿಸಿದವರಲ್ಲಿ ಇವನೂ ಒಬ್ಬನು. ಸುಂದರನು ಇತರರ ಹಾಗೆ ಕುಡಿಯುವುದಕ್ಕಾಗಲಿ ಜೂಜಾಡುವ ತಂಟಿಗಾಗಲಿ ಹೋಗುತ್ತಿರಲಿಲ್ಲ. ತಾರೆಯ ಸಂಗೀತವಾದೊಡನೆಯೆ ಮನೆಗೆ ಹೊರಟುಹೋಗುತ್ತಿದ್ದನು. ಸುಂದರನಿಗೆ ತಾರೆಯನ್ನು ನೋಡಿದಾಗಿನಿಂದ ಇವಳು ಒಳ್ಳೇ ಮನೆತನಸ್ಥರ ಮನೆಯವಳು ಎಂದು ಭಾವಿಸುತ್ತಿದ್ದನು. ಏನೋ ಕಷ್ಟದಿಂದ ಈ ಹಾಡುಗಾರಿಕೆಗೆ ನಿಂತಿದ್ದಾಳೆಂದುಕೊಳ್ಳುತ್ತಿದ್ದನು. ಹೇಗಾದರೂ ಅವಳ ಪರಿಚಯ ಮಾಡಿಕೊಳ್ಳಬೇಕೆಂದು ಒಂದು ದಿನ ತಾರೆಯು ಒಬ್ಬಳೇ ಕೂತಿರುವುದನ್ನು ನೋಡಿ, ತಮ್ಮ ಪರಿಚಯಮಾಡಿಕೊಳ್ಳಬಹುದೇ ಎಂದನು.

ತಾರೆಗೆ ಇತರರ್‍ಯಾರಾದರೂ ಮಾತಾಡಿಸುವುದಕ್ಕೆ ಬಂದಿದ್ದರೆ ಭಯವಾಗುತ್ತಿತ್ತು. ಆದರೆ ಸುಂದರನ ವಿನಯವಾದ ಭಾಷಣದಿಂದ ಭಯವಾಗಲಿಲ್ಲ. ಬನ್ನಿ ! ಈ ಕುರ್ಚಿಯ ಮೇಲೆ ಕುಳಿತುಕೊಳ್ಳಿ, ಎಂದು ಇನ್ನೊಂದು ಕುರ್ಚಿಯನ್ನು ಅವನ ಕಡೆಗೆ ಸರಿಸಿದಳು.

ಸು:—ನಿಮ್ಮ ಸಂಗೀತವು ನನ್ನ ಮನಸ್ಸನ್ನು ಆಕರ್ಷಿಸಿಬಿಟ್ಟಿದೆ. ತುಂಬಾ ಚನ್ನಾಗಿ ಹಾಡುತ್ತೀರಿ. ಎಲ್ಲರಿಗಿಂತ ನೀವೇ ಬಹಳ ಚನ್ನಾಗಿ ಹಾಡುತ್ತೀರಿ. ನೀವು ಬೆಂಗಳೂರಿನವರೆಂದು ಕೇಳಿದೆ. ನಾನೂ ಅಲ್ಲಿಯವನೇ.

ತಾ:—ಅಷ್ಟೇನು ಹೊಗಳಿಸಿಕೊಳ್ಳುವಷ್ಟು ಚನ್ನಾ... ಬರುವುದಿಲ್ಲ.

ಹೀಗೆಯೇ ಇಬ್ಬರೂ ಮಾತಿಗೆ ಪ್ರಾರಂಭಿಸಿದ... ದಿನಾಲೂ ಸುಂದರನು ತಾರೆಯನ್ನು ಮಾತಾಡಿಸದೆ ಹೋ...ತ್ತಿರಲಿಲ್ಲ. ದಿನದಿನಕ್ಕೆ ಸ್ನೇಹವು ಬೆಳೆಯುತ್ತಾ ಬ... ಒಂದು ದಿನ ಒಬ್ಬರನ್ನೊಬ್ಬರು ನೋಡದೇ ಹೋ... ಬಹಳ ಪೇಚಾಡುತ್ತಿದ್ದರು. ಸುಂದರನು ಎಷ್ಟೋ ... ತನ್ನ ಕಾರಿನಲ್ಲಿ ತಾರೆಯನ್ನು ಕೂಡಿಸಿಕೊಂಡು ತಿರು...ದಕ್ಕೆ ಹೋಗುತ್ತಿದ್ದನು. ಅವನೂ ಮನೆಯಲ್ಲಿ ಒ... ಇದ್ದುದರಿಂದ ತನ್ನ ಕೆಲಸವಾದೊಡನೆಯೆ ತಾರೆಯ ಜೊ...ಯನ್ನು ಬಯಸುತ್ತಿದ್ದನು. ತಾರೆಗೂ ಇನ್ನಾರ ಗು... ಇಲ್ಲದೆ ಇದ್ದುದರಿಂದಲೂ ಗಂಡನಿಗೆ ಕಾಯಿಲೆಯಾ...ರಿಂದಲೂ ಸುಂದರನ ಜೊತೆಯಿಂದ ಸಂತೋಷವಾಗುತ್ತಿ... ಇಬ್ಬರಿಗೂ ಸ್ನೇಹವಾಗಿ ನಾಲ್ಕು ತಿಂಗಳ ಮೇಲಾ... ತಾರೆಯು ತನಗೆ ಮದುವೆಯಾಗಿರುವ ಸಂಗತಿ... ಸುಂದರನಿಗೆ ತಿಳಿಸಲೇ ಇಲ್ಲ ಮತ್ತು ತನ್ನ ಮನೆ ಎಲ್ಲಿ... ಸಹ ತಿಳಿಸಲಿಲ್ಲ. ಡಾಕ್ಟರು ಕೃಷ್ಣಮೂರ್ತಿಗೆ ಕಾ... ಹೆಚ್ಚಿದುದರಿಂದ ಪೂನಾಕ್ಕೆ ಹವೆ ಬದಲಾಯಿಸುವ... ಕಳುಹಿಸಬೇಕೆಂದು ಹೇಳಿದರು. ತಾರೆಗೆ ಗಂಡನನ್ನು ಪೂ... ಆಸ್ಪತ್ರೆಯಲ್ಲಿ ಇಡುವುದಕ್ಕೆ ೨೦೦ ರೂಪಾಯಿ ಬೇ...ಗಿತ್ತು. ಸುಂದರನೇ ಆ ದುಡ್ಡನ್ನು ಒದಗಿಸಿದನು. ...ಗಲೂ ಸುಂದರನಿಗೆ ತನ್ನ ಗಂಡನಿಗೋಸ್ಕರ ಬ... ಬೇಕೆಂದು ತಾರೆಯು ಹೇಳಲಿಲ್ಲ. ಏನೋ ಕೆಲ... ಬೇಕೆಂದು ಹೇಳಿಬಿಟ್ಟಿದ್ದಳು. ಕೃಷ್ಣಮೂರ್ತಿಗ... ತಾರೆಗೆ ಸುಂದರನ ಪರಿಚಯವಾಗಿರುವುದು ... ಊರಿಗೆ ಹೊರಡುವಾಗ ಕೃಷ್ಣಮೂರ್ತಿಯು, "ತಾ... ಇನ್ನು ಈ ಜನ್ಮದಲ್ಲಿ ನಿನ್ನನ್ನು ನೋಡುತ್ತೇ... ಇಲ್ಲವೋ ? ನನ್ನಿಂದಂತೂ ನಿನಗೆ ಸ್ವಲ್ಪವೂ ಸುಖ... ಎಂದನು.

ತಾ:—ನನಗೆ ಎಷ್ಟು ಕಷ್ಟವಾದರೂ ಸರಿ, ನೀವು ... ವಾಗಿದ್ದರೆ ಸಾಕು. ಡಾಕ್ಟರರಿಗೆಲ್ಲಾ ಹೇಳಿ ದುಡ್ಡು ... ದ್ದೇನೆ. ನಿಮ್ಮನ್ನು ಸರಿಯಾಗಿ ಕರೆದುಕೊಂಡು ... ಅಲ್ಲಿ ಎಲ್ಲಾ ಏರ್ಪಾಟು ಮಾಡಿ ಬರುತ್ತಾರೆ.

ಕೃ:—ಒಂದು ಸಲ .... ಹತ್ತಿರ ಬಾ, ತಾರಾ ... ನನಗೂ ನಿನಗೂ ಕಡೆ. ಇನ್ನು ನಾನು ಬ... ...ತ್ತೇನೆಂಬ ನಂಬಿಕೆ ಇಲ್ಲ.

ತಾ:—ಹಾಗನ್ನಬೇಡಿ ! ದೇವರಿದ್ದಾನೆ ಎಂದು ಮುದ್ದಿಟ್ಟಳು. ಗಾಡಿ ಬಂದು ನಿಂತಿದ್ದಿದುದರಿಂದ ಸ್ಟೇಶನ್ನಿಗೆ ತಾರೆಯೂ ಹೋಗಿ ಗಂಡನನ್ನು ರೈಲುಬಂಡಿ ಹತ್ತಿಸಿ ಬಂದಳು.

ಗಂಡನು ಹೊರಟುಹೋದ ಮೇಲಂತೂ ತಾರೆಗೆ ದಿನವನ್ನು ಕಳೆಯುವುದು ಬಹಳ ಬೇಜಾರಾಯಿತು. ರಾತ್ರಿಯಾದರೆ ಸಾಕು, ಕೆಲಸಕ್ಕೆ ಹೋಗಬಹುದೆಂತ ಅನ್ನಿಸುತ್ತಿತ್ತು. ಒಂದೊಂದು ಸಲ ಈ ಕೆಲಸವನ್ನು ಬಿಟ್ಟು ಬೇರೆ ಯಾವುದಾದರೂ ಹಗಲುಹೊತ್ತು ದುಡಿಯುವುದನ್ನು ನೋಡಿಕೊಳ್ಳಬೇಕೆಂದು ಯತ್ನಿಸುತ್ತಿದ್ದಳು. ಏತಕ್ಕೆಂದರೆ ಇನ್ನು ಹೆಚ್ಚು ದಿವಸವಿದ್ದರೆ ಸುಖವಿಲಾಸದಲ್ಲಿ ತನ್ನ ಮಾನ ಉಳಿಯುವುದು ಕಷ್ಟವಾಗಿತ್ತು. ಈಚೆಗೆ ಆದರ ಯಜಮಾನನಾದ ಜಯಚಂದನು "ಯಾರ ಹತ್ತಿರದಲ್ಲೂ ಮಾತಾಡದೆ ನಿನ್ನ ಕೊಠಡಿಯಲ್ಲಿ ಕೂತುಕೊಳ್ಳುವುದು ಸರಿಯಲ್ಲ; ಎಲ್ಲರ ಕೈಲಿ ತಮಾಷೆಯಾಗಿ ಇರುತ್ತಾ ಗಂಡಸರ ಜೊತೆಯಲ್ಲಿ ಇರಬೇಕೆ"ಂದು ಪೀಡಿಸುತ್ತಿದ್ದನು. ಪೂನಾದಿಂದಲೂ ಕೃಷ್ಣಮೂರ್ತಿಗೆ ಇನ್ನು ವಾಸಿಯಾಗುವ ಆಶೆ ಇಲ್ಲವೆಂದು ಕಾಗದ ಬಂತು. ಇನ್ನು ಗಂಡನ ಆಶೆಯು ತಾರೆಗೆ ಇಲ್ಲವಾಯಿತು. ಏನಿದ್ದರೂ ಸುಂದರನ ಜೊತೆಯೇ ಅವಳ ಮನಸ್ಸಿಗೆ ಸ್ವಲ್ಪ ಸಂತೋಷವನ್ನುಂಟುಮಾಡುತ್ತಿತ್ತು. ಆದರೆ ಸುಂದರನ ಜೊತೆಯೂ ಕಡಿಯುವ ಪ್ರಸಂಗ ಬಂದಿತು. ಸುಂದರನಿಗೆ ನಾಗಪೂರಕ್ಕೆ ಇನ್ನೂ ಹೆಚ್ಚಿನ ಸಂಬಳದ ಮೇಲೆ ಬಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಹೋಗಬೇಕೆಂದು ಕಂಪನಿಯವರು ಹೇಳಿದರು. ಇದರಿಂದ ಸುಂದರ, ತಾರೆಯರಿಗೆ ಸಂಕಟಕ್ಕಿಟ್ಟುಕೊಂಡಿತು. ಸುಂದರನಿಗಂತೂ ತಾರೆಯನ್ನು ಬಿಟ್ಟು ಹೋಗುವುದು ಸಾಧ್ಯವೇ ಇರಲಿಲ್ಲ. ಅವನು ಅವಳನ್ನು ಅಷ್ಟು ಪ್ರೀತಿಸುತ್ತಿದ್ದನು. ಹೊರಡುವ ಹಿಂದಿನ ದಿನ ಸುಂದರನೂ ತಾರೆಯೂ ಕಾರಿನಲ್ಲಿ ಡ್ರೈವ್ ಹೋದಾಗ ಹೀಗೆ ಸಂಭಾಷಣೆಯು ಜರುಗಿತು.

ಸುಂ:—ತಾರಾ ! ಈ ಕೆಲಸವನ್ನು ಬಿಟ್ಟು ನನ್ನ ಜೊತೆಯಲ್ಲಿ ಬಂದುಬಿಡು. ಒಂದು ದಿನ ನಿನ್ನನ್ನು ನೋಡದೇ ಇದ್ದರೆ ನನ್ನ ಮನಸ್ಸು ನಿಲ್ಲುವುದಿಲ್ಲ.

ತಾ:—ಬಂದು ಏನು ಮಾಡಲಿ ! ದುಡಿಯದೆ ಇದ್ದರೆ ಹೊಟ್ಟೆಯ ಪಾಡೇನು ?

ಸುಂ:—ನಿನಗೆ ಹೊಟ್ಟೆಗೆ ಕಡಿಮೆಯೇ ? ನನ್ನ ಸರ್ವಸ್ವವೂ ನಿನ್ನದೇ ತಾರಾ ! ಹೇಳು ತಾರಾ ! ನಾನು ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತೇನೆ. ನಿನಗೆ ನನ್ನ ಮೇಲೆ ಪ್ರೀತಿ ಇದೆಯೋ ಇಲ್ಲವೋ ? ಇಬ್ಬರೂ ಮದುವೆ ಮಾಡಿಕೊಂಡು ಸುಖವಾಗಿರೋಣ.

ತಾರೆಗೆ ಏನು ಹೇಳಬೇಕೋ ತೋಚದ ಹಾಗಾಯಿತು. ಆಗಲೂ ತನಗೆ ಮದುವೆಯಾಗಿರುವ ಸಂಗತಿಯನ್ನು ಹೇಳಲೋ ಬೇಡವೋ ಎಂದು ಯೋಚಿಸಿದಳು. ಹೇಳಿದರೆ ಸುಂದರನ ಸ್ನೇಹವು ಎಲ್ಲಿ ತಪ್ಪಿ ಹೋಗುವುದೋ ಎಂದು ಅಂಜಿದಳು. ನಾನು ಸುಂದರನನ್ನು ನಿಜವಾಗಿ ಪ್ರೀತಿಸುತ್ತಿದ್ದೇನೆಯೇ ? ಕೃಷ್ಣಮೂರ್ತಿಯ ಮೇಲಿನ ಪ್ರೇಮವು ಹೋಯಿತೇ ? ಮದುವೆಗೆ ಒಪ್ಪಬೇಕೇ, ಬೇಡವೇ ಎಂದು ತರಂಗತರಂಗವಾಗಿ ಪ್ರಶ್ನೆಗಳು ಅವಳಲ್ಲಿ ಏಳುವುದಕ್ಕೆ ಆರಂಭವಾಯಿತು. ಕಡೆಗೆ "ಸುಖವಿಲಾಸದ ಇಂಥ ಕೀಳು ಕೆಲಸದಲ್ಲಿದ್ದವಳನ್ನು ಮದುವೆಯಾಗುತ್ತೀರಾ ?" ಎಂದು ಕೇಳಿದಳು.

ಸುಂ:—ನೀನು ಅಲ್ಲಿ ಕೆಲಸ ಮಾಡುತ್ತಿದ್ದರೂ ನಿನ್ನ ನಡತೆ ಗೌರವವಂತರ ಮನೆಯವರ ಹಾಗೆ ಇದೆಂತ ನನಗೆ ಗೊತ್ತು. ನಿನ್ನನ್ನು ನೋಡಿದಾಗಿನಿಂದ, ನೀನು ಒಳ್ಳೇ ಮನೆತನದವಳು, ಏನೋ ಕಷ್ಟದಿಂದ ಇಂಥಾ ಕೆಲಸಕ್ಕೆ ಸೇರಿದ್ದೀಂತ ಊಹಿಸಿದ್ದೇನೆ. ನಿನ್ನ ಮೇಲೆ ನನಗೆ ಸ್ವಲ್ಪವೂ ಅನುಮಾನವಿಲ್ಲ. ನೀನೊಪ್ಪಿದರೆ ನಾಳೆಯೇ ಬೆಳಗಿನ ಗಾಡಿಗೆ ಹೊರಟು ಹೋಗೋಣ. ಇವತ್ತೇ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಡು.

ಬಹಳ ಹೊತ್ತು ಮಾತು ನಡೆದು ತಾರೆಯು ಹೊರಡುವುದಕ್ಕೆ ಒಪ್ಪಿದಳು. ಅವಳ ಮನಸ್ಸೂ ಸುಂದರನನ್ನು ಪ್ರೀತಿಸುತ್ತಿತ್ತು. ಇನ್ನು ಕೃಷ್ಣಮೂರ್ತಿಯ ಆಶೆಯೂ ಇರಲಿಲ್ಲವಾದ್ದರಿಂದ ಸುಂದರನನ್ನು ಮದುವೆಯಾಗುವುದೇ ಒಳ್ಳೆಯದೆಂದು ಭಾವಿಸಿದಳು. ಇಬ್ಬರೂ ಮರುದಿನ ನಾಗಪೂರಕ್ಕೆ ಹೊರಡುವುದೆಂದು ಗೊತ್ತಾಯಿತು.

ಆದಿನ ರಾತ್ರಿಯೇ ಕೆಲಸಕ್ಕೆ ತಾರೆಯು ರಾಜೀನಾಮೆ ಕೊಟ್ಟಳು. ಇದರಿಂದ ಜಯಚಂದನಿಗೆ ಬಹಳ ಸಿಟ್ಟು ಬಂತು. ಅವನಿಗೆ ಇವಳಿಂದ ಆದಾಯವು ಬೆಳೆದಿತ್ತು. ಇವಳನ್ನು ಯಾರಿಗಾದರೂ ಸೇರಿಸಿ ದುಡ್ಡು ಸಂಪಾದಿಸಬೇಕೆಂದಿದ್ದನು. ಅವನು ಇಷ್ಟು ಜಾಗ್ರತೆ ತಾರೆಯು ಕೆಲಸ ಬಿಡುವುದಕ್ಕೆ ಕಾರಣವೇನೋ ಇರಬೇಕೆಂದು ಊಹಿಸಿದನು. ಸುಂದರನು ತಾರೆಯ ಜೊತೆಯಲ್ಲಿ ಬಹಳವಾಗಿ ಇರುತ್ತಿದ್ದುದು ಜಯಚಂದನಿಗೆ ಗೊತ್ತಿತ್ತು. ಅವನು

ಯಾರೆಂಬುದನ್ನು ಹುಡುಕುವುದಕ್ಕೆ ಆಗಲೇ ಪ್ರಯತ್ನ ನಡೆಸಿದನು.

ಮರುದಿನ ೧೦ ಗಂಟೆಗೆ ಸರಿಯಾಗಿ ಸುಂದರನೂ, ತಾರೆಯೂ ಸ್ಟೇಶನ್ನಿಗೆ ಬಂದರು. ಇಬ್ಬರ ಮುಖದ ಮೇಲೂ ಆನಂದವು ತುಳುಕುತ್ತಿತ್ತು. ಸುಂದರನು ತಾರೆಯ ರೂಪವನ್ನು ನೋಡಿನೋಡಿ ತನ್ನವಳಾದಳಲ್ಲಂತ ಹಿಗ್ಗುತ್ತಿದ್ದನು. ಸೆಕೆಂಡ್ ಕ್ಲಾಸ ಟಿಕೆಟ್ಟು ತೆಗೆದುಕೊಂಡಿದ್ದಾಯಿತು. ಇನ್ನೇನು ರೈಲುಗಾಡಿ ಬರುವುದಕ್ಕೆ ೧೦ ನಿಮಿಷವಿತ್ತು. ಅಷ್ಟರಲ್ಲಿ ಯಾರೋ "ಏನು! ತಾರೆ, ಊರಿಗೆ ಹೊರಟೆಯೇನು? ನಿನ್ನ ಗಂಡನಿಗೆ ವಾಸಿಯಾಯಿತೆ?" ಎಂದು ಕೇಳಿದರು. ತಾರೆಗೆ ಈ ಮಾತು ಕಿವಿಗೆ ಬೀಳುತ್ತ ಶರೀರಾದ್ಯಂತ್ಯವೂ ನಡುಗಿ ಹಿಂತಿರುಗಿ ನೋಡಿದಳು. ಜಯಚಂದನು ನಗುತ್ತಾ ನಿಂತಿದ್ದನು. ತಾರೆಯ ಪಕ್ಕದಲ್ಲಿದ್ದ ಸುಂದರನು "ಏನು! ತಾರಾ! ನಿನಗೆ ಮದುವೆಯಾದೆಯೇ? ಈವರೆಗೆ ಹೇಳದೆ ನನ್ನನ್ನು ನಿನ್ನ ಪ್ರೇಮದಲ್ಲಿ ಸಿಕ್ಕಿಸಿ ಮೋಸ ಮಾಡಿದೆಯಲ್ಲಾ" ಎಂದು ಹಾಗೇ ದಿಗ್ಭ್ರಮೆಯಾಗಿ ನಿಂತುಬಿಟ್ಟನು. ತಾರೆಯುಹೊಸ ಮಧುವನ್ನು ಸವಿಯುವುದರೊಳಗೇ ಜಯಚಂದನು ಅದಕ್ಕೆ ವಿಷಬೆರೆಸಿದ್ದನು.

ಇದರಲ್ಲಿಯ ಕೆಲ ಸಂಗತಿಗಳು ಒಂದು ಇಂಗ್ಲಿಷ ಕಥೆಯಿಂದ ಸೂಚಿತವಾಗಿವೆ.—ಲೇ.

ಅಣೋರಣೀಯಾನ್ ಮಹತೋ ಮಹೀಯಾನ್

ತೀರ ಇತ್ತೀಚೆ ತಯಾರಿಸಲ್ಪಟ್ಟ ಬಾಂಬು ಸ್ಫೋಟ ವಾದೊಡನೆ ೩೦೦೦ ಅಂಶಗಳಷ್ಟು ಉಷ್ಣತೆಯನ್ನು ಕಾರುತ್ತದೆ. ಆದರೆ ಅದರ ತೂಕ ಬರಿ ೧೦ ಔಂಸು. ಆದುದರಿಂದ ಒಂದು ವಿಮಾನು ೬೦೦೦ದವರೆಗೆ ಬಾಂಬುಗಳನ್ನು ಒಯ್ಯಬಲ್ಲದು.

* * *

ಜಗತ್ತಿನಲ್ಲಿ ಹುಟ್ಟಿದ ಜನರಲ್ಲಿ ನೂರಕ್ಕೆ ಮೂವತ್ತರಷ್ಟು 'ಎಡ್ಡ' ರಾಗಿರುತ್ತಾರೆ (Left-handed).

* * *

ಕೆಮಾಲ ಪಾಶನು ತುರ್ಕಸ್ತಾನದ ಸರ್ವಾಧಿಕಾರಿಯಷ್ಟೆ. ಈಮು ತುರ್ಕಸ್ತಾನದಲ್ಲಿ ೨೨೦೦೦ ಕೆಮಾಲನ ಮೂರ್ತಿಗಳು ಸ್ಥಾಪಿತವಾಗಿವೆ.

* * *

ಜರ್ಮನಿಯ ಮಾಜಿ ಅರಸನಿಗೆ ಸ್ವಸ್ತಿಕ ಚಿಹ್ನವನ್ನು ಕಂಡರೆ ಓಕರಿಕೆ ಬರುತ್ತದಂತೆ. ಆದುದರಿಂದ ಜರ್ಮನಿಯಿಂದ ಬಂದ ಪತ್ರಗಳನ್ನು ಅವನಿಗೆ ಮುಟ್ಟಿಸುವ ಮೊದಲು ಸ್ವಸ್ತಿಕದ ಮುದ್ರೆಯನ್ನು ಹರಿದುಕೊಡುವರು.

* * *

ಜೀವವಿಜ್ಞಾನಿಗಳು ಕೆಲವರು ಮನುಷ್ಯನು ಮಂಗ ಜಾತಿಯಿಂದ ಅವತರಿಸಿದನೆನ್ನುವರು. ಈಗ ಮಂಗಗಳ ಬೆರಳಿನ ಮುದ್ರೆ (ಗುರುತು) ಗಳು ಮನುಷ್ಯರ ಬೆರಳ ಗುರುತಿನಂತೆಯೆ ಇರುತ್ತವೆಂದು ಕಂಡುಬಂದಿದೆ.

* * *

ಬ್ರಿಟನ್ನಿನಲ್ಲಿ ಪೋಲೀಸದಲವು ಸಾಕಷ್ಟಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೂ ಪ್ರತಿವರ್ಷ ಬ್ರಿಟನ್ನಿನ ಅಂಗಡಿಗಳಿಂದ ೧॥ ಕೋಟಿ ರೂಪಾಯಿಗಳ ಒಡವೆಗಳು ಕದಿಯಲ್ಪಡುತ್ತವೆ.

* * *

ಚಲಚ್ಚಿತ್ರಗಳಲ್ಲಿ ಮಂದವೇಗದ ಅಭಿನಯವನ್ನು ತೋರಿಸುವ ಫಿಲ್ಮನ್ನು ತೆಗೆಯಲಿಕ್ಕೆ ಅತಿ ತೀವ್ರ ವೇಗದ ಛಾಯಾಯಂತ್ರ ಬೇಕು. ಆದರಿಂದ ಐದು ಸೆಕಂಡುಗಳಲ್ಲಿ ಗ್ರಹಿಸಿದ ಚಿತ್ರವನ್ನು ಪ್ರದರ್ಶಿಸಲಿಕ್ಕೆ ಹತ್ತು ಮಿನಿಟುಗಳು ಬೇಕು.

* * *

ಮೆಕ್ಸಿಕೊದಲ್ಲಿ ೧ ಲಕ್ಷ ಭಿಕ್ಷುಕರು ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಅದೀಗ ತನ್ನ ರಾಜಕೀಯ ಹಕ್ಕುಗಳಿಗಾಗಿ ಸರಕಾರಕ್ಕೆ ಅರ್ಜಿ ಹಾಕಿಕೊಂಡಿದೆ.

* * *

ಜೇನುನೊಣವು ಒಂದು ಸಲಕ್ಕೆ ·೦೦೦೧ ಪೌಂಡು ಹೂಜೇನನ್ನು ಒಯ್ಯಬಲ್ಲದು. ಒಂದು ಪೌಂಡು ಜೇನನ್ನು ಕಲೆಹಾಕಲು ಅದು ೪೦೦೦೦ ಮೈಲು ಅಲೆದಾಡಬೇಕಾಗುವುದು.

* * *

ಮದ್ಯಗಳೆಲ್ಲವೂ ಮತ್ತನ್ನೇ ತರುವುವು. ಆದರೆ ಅವುಗಳ ರುಚಿವಾಸನೆಗಳಿಗನುಸರಿಸಿ ಒಬ್ಬೊಬ್ಬರಿಗೆ ಒಂದೊಂದು ವಿಧದ ಮದ್ಯ ಸೇರುತ್ತದೆ. ಈಗ ಮೇಲಿನ ತರಗತಿಯ ಕುಡುಕರು ಉಪಯೋಗಿಸುವ ಮದ್ಯಗಳಲ್ಲಿ ೮೦೪೬ ಪ್ರಕಾರಗಳಿವೆಯಂತೆ.

* * *

ಚಲಚ್ಚಿತ್ರಗಳನ್ನು ಮೊದಲು ಗ್ರೀಕರು ಕಂಡುಹಿಡಿದಿದ್ದರು. ಅವರು ಒಂದು ಗಡುತರವಾದ ಒಂದು ಕಂಬದ ಮೇಲೆ ಬುಡದಿಂದ ತುದಿಯವರೆಗೆ ಸುತ್ತುಸುತ್ತಾಗಿ ಚಿತ್ರಗಳನ್ನು ಬರೆಯುತ್ತಿದ್ದರು. ಒಂದು ಹಗ್ಗದ ಸಹಾಯದಿಂದ ಕಂಬವನ್ನು ವೇಗವಾಗಿ ತಿರುಗುವಂತೆ ಮಾಡುತ್ತಿದ್ದರು. ಆದರಿಂದ ಚಿತ್ರಗಳು ಕೆಳಗಿನಿಂದ ಮೇಲಕ್ಕೆ ಚಲಿಸುತ್ತ ಹೋದಂತೆ ತೋರುತ್ತಿತ್ತು.

* * *

ಆಫ್ರಿಕದ ಕೆಬ್ರಾ ಎಂಬಲ್ಲಿ ಶಿಯಾ ಎಂಬ ಮರದ ಹಣ್ಣುಗಳಿಂದ ಬೆಂಣೆಯನ್ನು ತಯಾರಿಸುತ್ತಾರೆ. ಆದರ ವಾಸನೆ ರುಚಿಗಳು ಉತ್ತಮವಾದ ಹಸುವಿನ ಬೆಂಣೆಗಿಂತ ಚನ್ನಾಗಿವೆಯಂತೆ.

* * *

ವಾಲ್ಮೀಕಿ

ಲೇಖಕರು : ಎಸ್. ವಿ. ಗೋಪಾಲ್, ಶಿಕಾರಿಪುರ

ಕಳೆದ ಜೂನಿನ ಜಯಕರ್ನಾಟಕದಲ್ಲಿ ಪ್ರಸಿದ್ಧವಾದ 'ಪ್ರಾಚೀನ ಆರ್ಯಾವರ್ತದ ಮಿಸ್ ಮೇಯೋ' ಎಂಬ ಲೇಖನಕ್ಕೆ ಉತ್ತರ ರೂಪವಾಗಿ ಈ ಲೇಖನವು ಬಂದಿದೆ. ಲೇಖಕರು ಬರಿ ಧರ್ಮಮೂಢತೆಯ ದೃಷ್ಟಿಯನ್ನಿಟ್ಟುಕೊಳ್ಳದೆ ವಿವೇಕಕ್ಕೆ ಸರಿಯೆನಿಸುವಂತೆ ಬರೆದಿರುವುದು ಸ್ತುತ್ಯವಾದ ವಿಚಾರ. ಇದೇ ವಿಷಯವನ್ನು ವಿವೇಕ ಸಮ್ಮತವಾಗುವಂತೆ ಖಂಡಿಸಿಯಾಗಲಿ ಮಂಡಿಸಿಯಾಗಲಿ ಬರೆದಿರುವ ಲೇಖನಗಳಿಗೆ ಈ ವಾದಭೂಮಿಯಲ್ಲಿ ಎಡೆಗೊಡುವೆವು. ವೈಯಕ್ತಿಕ ದೂಷಣೆಗೆ ಮಾತ್ರ ಅವಕಾಶವಿಲ್ಲ. ಸಂ.

ಕಳೆದ ಜೂನ ತಿಂಗಳ 'ಜಯಕರ್ನಾಟಕದಲ್ಲಿ' ಶ್ರೀಮಾನ್ ಜೋಗಳೇಕರ ಪಾಂಡುರಂಗರಾಯರು, ಬಿ. ಎ., ಎಸ್. ಟಿ. ಸಿ. ಇವರ "ವಾಲ್ಮೀಕಿ ಮಹರ್ಷಿಯನ್ನು ಪ್ರಾಚೀನ ಆರ್ಯಾವರ್ತದ 'ಮಿಸ್ ಮೇಯೋ' ಎಂದು ಏಕೆ ಕರೆಯಕೂಡದು" ಎಂಬ ಒಂದು ಲೇಖನವು ಪ್ರಕಟವಾಗಿದೆ. ಅವರ ಲೇಖನದಲ್ಲಿ—ಶ್ರೀರಾಮನ ಕಾಲದಲ್ಲಿಯು ಉತ್ತರ ಭಾರತವು ಆರ್ಯರ ಆಳಿಕೆಗೆ ಒಳಪಟ್ಟಿದ್ದು, ದಕ್ಷಿಣ ಭಾರತವು ದ್ರವಿಡ ಹಾಗೂ ಆದಿದ್ರವಿಡರ ವಶದಲ್ಲಿದ್ದರೆಯೂ, ದಕ್ಷಿಣಭಾರತದಲ್ಲಿ ಪ್ರಬಲರಾದ ದ್ರವಿಡರು ಆದಿದ್ರವಿಡರನ್ನು ದಂಡಕಾರಣ್ಯ ಸಿಂಹಳದ್ವೀಪ ಮುಂತಾದ ಕಡೆಗೆ ದಬ್ಬಿರಬಹುದಾದ್ದರಿಂದಲೂ, ಅನಾರ್ಯರ ಸಂಸ್ಕೃತಿಯು ಆರ್ಯ ಸಂಸ್ಕೃತಿಗಿಂತ ಹೀನವಾಗಿದ್ದಿರಬಹುದಾದ್ದರಿಂದಲೂ ದಂಡಕಾರಣ್ಯ, ಸಿಂಹಳದ್ವೀಪವಾಸಿಗಳನ್ನು ದಾನವರೆಂದು ಕರೆಯಲು ಅವಕಾಶವಾಯಿತೆಂದು ಸೂಚಿಸಿದ್ದಾರೆ. ಪ್ರಪಂಚದ ಹವ್ಯಾಸವನ್ನು ತೊರೆದು ಮೋಕ್ಷಸಾಧನೆಯಲ್ಲಿ ನಿರತನಾಗಿದ್ದ ಋಷಿವರ್ಯನಿಗೆ ಆರ್ಯಪಕ್ಷಪಾತಿಯಾಗಲು ಅವಕಾಶವೆಲ್ಲಿದೆ ? ಶ್ರೀರಾಮಚಂದ್ರನ ಕಥೆಯನ್ನು ರಚಿಸಿ ಪ್ರಚಾರಮಾಡುವದಿಷ್ಟೆ ವಾಲ್ಮೀಕಿಯ ಮುಖ್ಯೋದ್ದೇಶ. ಆ ಸಂದರ್ಭದಲ್ಲಿಯ ಸನ್ನಿವೇಶವನ್ನು ಚಿತ್ರಿಸಿದ್ದಾನೆ.

"ಒಂದು ವೇಳೆ ಆ ಅರಣ್ಯವಾಸಿಗಳಲ್ಲಿ ಹಲಕೆಲವು ಕನಿಷ್ಠ ತರಗತಿಯ ತಂಡಗಳು ಆಗ ನರಭಕ್ಷಕರೂ ಆಗಿರಲಿಕ್ಕೆ ಸಾಕು. ಆದುದರಿಂದಲೇ ಅವರನ್ನು ದಾನವ ಅಥವಾ ರಾಕ್ಷಸ ಎಂಬ ಶಬ್ದಗಳಿಂದ ನಿರ್ದೇಶಿಸಿರಬಹುದು. ಆದರೆ ಈ ತಂಡಗಳು ಹೀನಸಂಸ್ಕೃತಿಯುವರೂ ನರಭಕ್ಷಕರೂ ಆರ್ಯರ ರೀತಿನೀತಿಗಳನ್ನು ಅರಿಯದವರೂ ಇದ್ದರೆಂಬುದನ್ನು ಹೇಳಿದ್ದರೆ ವಾಲ್ಮೀಕಿ ಮುನಿವರ್ಯರಿಗೆ ನಾವು ದೋಷವನ್ನು ಕೊಡುತ್ತಿದ್ದಿಲ್ಲ''ವೆಂದು ಶ್ರೀಮಾನ್ ಪಾಂಡುರಂಗರಾಯರು ಹೇಳಿದ್ದಾರೆ.

ನರಭಕ್ಷಕರಾದವರನ್ನು ಯಾವ ಹೆಸರಿನಿಂದ ಕರೆದರೇನು ? ರಾಕ್ಷಸರಿಗಿಂತ ನರಭಕ್ಷರು ಯಾವ ರೀತಿಯಲ್ಲಿ ಉತ್ತಮರು ? ಮಾನವರ ಗುಂಪಿನಲ್ಲಿ ಇವರನ್ನು ಸೇರಿಸಿಲ್ಲವೆಂದು ವಾಲ್ಮೀಕಿಯನ್ನು ಜರೆಯುವುದೇ ? ತನ್ನಂತೆಯೇ ಇರುವ ಒಂದು ಪ್ರಾಣಿಯನ್ನು ಕೊಂದು ತಿನ್ನುವ ಪ್ರಾಣಿಗೆ ನೀತಿ, ನಡೆವಳಿಕೆ, ಸಂಸ್ಕೃತಿಗಳ ಅರಿವು ಇರಬಹುದೇ ? ಅಂತಹ ಪ್ರಾಣಿಗಳ ಗುಂಪಿಗೆ ಸಾಧುತನವನ್ನು ಕಲಿಸಲು ಸಾಧ್ಯವೇ? ಆ ನರಭಕ್ಷಕರಲ್ಲಿ ಸಹಾನುಭೂತಿಯನ್ನು ತೋರಿಸಬೇಕೆ? ಸದಾಚಾರಶೀಲಸಂಪನ್ನನು ಈ ಅತ್ಯಾಚಾರವನ್ನು ಸಣ್ಣದಾಗಿ ಭಾವಿಸಿ ತನ್ನ ಪ್ರೀತಿಯನ್ನು ತೋರಿಸಲಾರನು.

ನಂತರ, "ಶ್ರೀರಾಮಚಂದ್ರನಿಗೆ ಆರ್ಯಸಾಮ್ರಾಜ್ಞಿಯಾದ ಸೀತಾದೇವಿಯನ್ನು ಲಂಕಾಪತಿಯಿಂದ ಬಿಡಿಸಿ ತರುವಲ್ಲಿ ತನುಮನಧನದಿಂದ ನೆರವಿತ್ತ. ಸುಗ್ರೀವ, ಹಣಮಪ್ಪ ಮೊದಲಾದ ನಮ್ಮ ದ್ರವಿಡ ಪೂರ್ವಜರನ್ನು ವಾಲ್ಮೀಕಿಯವರು 'ವಾನರ' ಎಂಬುದಾಗಿ ಚಿತ್ರಿಸಿ, ದ್ರವಿಡರು ಆರ್ಯರಿಗೆ ಮಾಡಿದ ಉಪಕಾರಕ್ಕೆ ಅಕ್ಷಮ್ಯ ಅಪಕಾರವನ್ನು ಮಾಡಿದ್ದಾರೆಂದು" ಅಭಿಪ್ರಾಯ ಪಟ್ಟಿರುವರು.

ಈ ವಿಷಯವನ್ನು ಕೆಲವರು ಸಮರ್ಥಿಸಬಹುದು. ಆದರೆ ನನಗೊಂದು ಅನುಮಾನವಿದೆ. ಬಲಿಷ್ಠರಾದ ಲಂಕಾ ನಿವಾಸಿಗಳನ್ನು ಸೋಲಿಸಲು ಸಹಾಯಮಾಡಿದ ಈ ದ್ರವಿಡರು 'ವಾನರು' ಎಂದು ತಮ್ಮನ್ನು ಕರೆದವರನ್ನು ಸುಮ್ಮನೆ ಬಿಟ್ಟರೆ ? ಒಂದುವೇಳೆ ಇದು ಈಚೆಗಿನ ಕಥೆ, ಸುಗ್ರೀವ ಹನುಮಂತರು ಜೀವಿಸಿದ್ದಾಗ ಅವರನ್ನು ವಾನರರೆಂದು ಕರೆಯುತ್ತಿರಲಿಲ್ಲವೆಂದು ಹೇಳುವವರಿರಬಹುದು. ಇದಕ್ಕೆ ವಾಲ್ಮೀಕಿಯು ರಾಮಾಯಣವನ್ನು ಬರೆದ ಕಾಲವಾವುದೆಂಬುದನ್ನು ನಿರ್ಧರಿಸಬೇಕು. ಶ್ರೀರಾಮಚಂದ್ರನೂ, ಸುಗ್ರೀವ, ಹನುಮಂತರೂ ಜೀವಿಸಿದ್ದಾಗಲೇ ವಾಲ್ಮೀಕಿಯು ರಾಮಾಯಣವನ್ನು ರಚಿಸಿದನೆಂದು ಪ್ರತೀತಿ ಇದೆ. ಇಡಿ ಭರತಖಂಡದಲ್ಲೆಲ್ಲಾ ಪ್ರಚಾರವಾದ ಈ ರಾಮಾಯಣವು ಕಿಷ್ಕಿಂಧೆಯನ್ನು ಮುಟ್ಟಿರಲಿಕ್ಕಿಲ್ಲವೇ ? ಆಗ ವಾನರರಲ್ಲ

ದವರು ವಾನರರೆಂದು ಕರೆಯಿಸಿಕೊಂಡು ಸುಮ್ಮನಿದ್ದರೇ ? ಮನುಷ್ಯರು ಮನುಷ್ಯಾವಸ್ಥೆಗೆ ಬರುವುದಕ್ಕೆ ಮುಂಚೆ ವಾನರಾವಸ್ಥೆಯಲ್ಲಿದ್ದರೆಂದು ಡಾರ್ವಿನ್ನರು ಹೇಳುವುದನ್ನು ಶ್ರೀಮಾನ್ ಪಾಂಡುರಂಗರಾಯರು ನಂಬುವರೇ ? ಅನೇಕ ಕೋಟಿ ವರ್ಷಗಳ ಹಿಂದೆ ವಾನರ ಕುಲವು ಸಂಸ್ಕೃತಿ ದೃಷ್ಟಿಯಿಂದ ಈಗಿರುವುದಕ್ಕಿಂತ ಉತ್ತಮಸ್ಥಿತಿಯಲ್ಲಿತ್ತೆಂದು ಹೇಳಿದರೆ ನಂಬುವುದಕ್ಕಾಗುವುದಿಲ್ಲವೇ ?

ನಮ್ಮ ದೇವಸ್ಥಾನಗಳಲ್ಲಿ ಈಗಿರುವ ಮಾರುತಿಯ ವಿಗ್ರಹಗಳನ್ನು ಕಿತ್ತೊಗೆದು, ಆಗಿನ ಕಾಲದ ದ್ರವಿಡ ಸೇನಾಧಿಪತಿಯ ರೂಪ, ಉಡುಪಿನಲ್ಲಿ, ಶ್ರೀರಾಮನ ಬಲಕ್ಕೆ ಸ್ಥಾಪಿಸುವ ಸೂಚನೆಯಿದೆ. ರಘುಕುಲೋತ್ತಮನಾದ, ಸುಗುಣಸಂಪೂರ್ಣನಾದ ಶ್ರೀರಾಮಚಂದ್ರನೆದುರಿಗೆ ಕೈಜೋಡಿಸಿ ನಿಂತ ಮಾತ್ರಕ್ಕೆ ಮಾರುತಿಯ ಕೀರ್ತಿಗೆ ಕಳಂಕವೇ ? ಆ ಮಾರುತಿಯ ವಿಗ್ರಹವನ್ನು ನೋಡಿದ ಮಾತ್ರಕ್ಕೆ ದೇವಾಂಶಸಂಭೂತನಾದ ಆ ಮಾರುತಿಯಲ್ಲಿ ನಮಗಿರುವ ವಿಶಾಲಭಾವನೆಯ ಆಧಿಕ್ಯವು ಕುಗ್ಗುವುದೇ ? ಎಂದಿಗೂ ಇಲ್ಲ. ವರಕವಿಯಾದ ವಾಲ್ಮೀಕಿ ಋಷಿಯು ಸುಳ್ಳನ್ನು ಸಾಧಿಸಿಲ್ಲ. ಶ್ರೀರಾಮನನ್ನು ಅಷ್ಟು ಉಚ್ಚಸ್ಥಾನದಲ್ಲಿಟ್ಟ ವಾಲ್ಮೀಕಿಮುನಿವರನು ವಾಲಿಸುಗ್ರೀವರ ಕಾಳಗದಲ್ಲಿ ಶ್ರೀರಾಮನು ಮರದ ಮರೆಯಲ್ಲಿ ನಿಂತು ವಾಲಿಯ ಮೇಲೆ ಬಾಣಪ್ರಯೋಗಮಾಡಿ ಕೊಂದನೆಂದು ಹೇಳಿದುದೇಕಿರಬಹುದು? ಆರ್ಯರಾಮಚಂದ್ರನ ಪಕ್ಷಪಾತಿಯು ಶ್ರೀರಾ[illegible] ಶೌರ್ಯವನ್ನು ಹೆಚ್ಚಿಸಲು, ಎದುರಿಗೇ ನಿಂತು ವಾ[illegible] ಸಂಹಾರಮಾಡಿದನೆಂದು ಏಕೆ ಹೇಳಲಿಲ್ಲ? ಶ್ರೀರಾ[illegible]ನಿಗೊಂದು ಕಳಂಕವನ್ನು ತಂದಂತಾಗಲಿಲ್ಲವೇ? [illegible] ವಾಲ್ಮೀಕಿ ಮುನಿನಾಥನ ಉತ್ಪ್ರೇಕ್ಷೆಯೆಂದು ರಾಮಾಯ[illegible]ದಲ್ಲಿಯ ಕೆಲವು ವಿಷಯಗಳನ್ನು ತೆಗೆದುಹಾಕುತ್ತ[illegible] ಶ್ರೀರಾಮನು ಸಪ್ತಸಾಲವೃಕ್ಷಗಳನ್ನು ಭೇದಿ[illegible] ಸಮುದ್ರಲಂಘನ, ಸೇತುಬಂಧನ ಇಂತಹ ಕೆಲವು [illegible]ನುಷ ಕೃತ್ಯಗಳೆಲ್ಲಾ ಸುಳ್ಳೆಂದು ತೆಗೆದುಹಾಕಿ ಒಂದು [illegible] ರಾಮಾಯಣವನ್ನು ನಮಗೆ ತೋರಿದಂತೆ ಬರೆದಿಟ್ಟು[illegible] ಅದನ್ನೇ ನಿಜವೆಂದು ಕರೆಯಬೇಕಾಗಿ ಬರು[illegible] ಶ್ರೀರಾಮಚಂದ್ರನ ಮುಂದೆ ಕೈಜೋಡಿಸಿ ನಿಂತ ಮಾರು[illegible] ವಿಗ್ರಹವನ್ನು ನೋಡಿದ ಆಸ್ತಿಕರು ಮಾರುತಿಯೊಬ್ಬ [illegible]ನೆಂದು ತಿಳಿದು ತಮ್ಮ ಭಕ್ತಿಯನ್ನು ಕಡಿಮೆಮಾಡು[illegible] ದೇವರು ವರಾಹಾವತಾರ ಮಾಡಿದನೆಂದರೆ ಹಂದಿಯ [illegible]ವನ್ನು ಧರಿಸಿದವನು ಶ್ರೇಷ್ಠನಲ್ಲವೆಂಬ ಭಾವನೆ[illegible] ತರಬಹುದೇ ? ಅಥವಾ ಹಾಗೆ ತಿಳಿಸುವ ಇತಿಹಾ[illegible] ಸುಳ್ಳೆಂದು ಕರೆಯಬೇಕೆ? ವಾಲ್ಮೀಕಿಯು ವರಬು[illegible] ರಚಿಸಿದ ಕಾವ್ಯವದು. ವೇದಾಧ್ಯಯನತತ್ಪ[illegible] ವಾಲ್ಮೀಕಿಮುನಿನಾಥನಿಗೂ ಪ್ರಾಪಂಚಿಕ ವ್ಯವಹಾ[illegible] ನಿರತಳಾದ 'ಮಿಸ್ ಮೇಯೋ'ವಿಗೂ ಯಾವ ಹೋಲಿಕೆ[illegible] ಸರಿಹೋಗಲಾರದು.

ತಿಪ್ಪೆಯಿಲ್ಲದ ದೇಶ

> ಜಪಾನು ತಿಳಿದು ಉಳಿಯಬೇಕು ಎಂಬ ತತ್ವಜ್ಞಾನದ ಕಾರ್ಯರಂಗವಾಗಿದೆ. ದೇಶದ ಪ್ರಗತಿ, ಸ್ಥಿರಜೀವನಗಳಿಗೆ ಬೇಕಾದುದು ಬರಿ ದುಡ್ಡಲ್ಲ. ಇದ್ದುದನ್ನೆ ಮುದ್ದಾಗಿಸಿ ಅನುಭೋಗಿಸುವುದು ಕರ್ಮಕೌಶಲ್ಯ. ಕುಶಲ ಕರ್ಮಿಗಳೆ ಕರ್ಮಯೋಗಿಗಳಲ್ಲವೇ? ಸ್ವಚ್ಛತೆಯ ಹೆಸರಿನಿಂದ ಮನೆಯ ಕಸವನ್ನು ತಿಪ್ಪೆಗೆ ಚಲ್ಲಿ ನಮ್ಮ ನಿರ್ಮಲತೆಯ ಜಂಬಕೊಚ್ಚುವವರು ನಾವು. ಕಸವನ್ನು ಕೂಡ ರಸವಾಗಿಸಿ ತಿಪ್ಪೆಯಿಲ್ಲದಿದ್ದರೂ ... ... ನಿರ್ಮಲವಾಗಿರುವ ಜನಾಂಗ ಜಪಾನು. ... ...

ಲೇ:—ಶ್ರೀ. ತಾರಾದಾಸ

ತಿಪ್ಪೆಯಿಲ್ಲದ ದೇಶವೆಂದ ಕೂಡಲೆ ಅದು ಬಹು ಹೊಲಸಾದ ಕೊಳೆ ಕೆಸರಿನಿಂದ ನಾರುವ ದೇಶವಿರಬೇಕೆಂದು ಅರ್ಥವಾಗುವದು. ತಿಪ್ಪೆಯೆಂದರೆ ಊರೊಳಗಿನ ಎಲ್ಲ ಹೊಲಸಿನ ಕುಪ್ಪೆ. ಹೊಲಸನ್ನು ತಿಪ್ಪೆಗೆ ಹಾಕದೆ, ಇದ್ದಲ್ಲಿಯೆ ಉಳಿಯಗೊಟ್ಟರೆ ಮತ್ತೆ ಊರೆಲ್ಲ ನಾರದೆ ಹೇಗೆ ಬಿಟ್ಟೀತು! ಹೌದು, ಆದರೆ ನಾವು ಹೇಳುವ ದೇಶದಲ್ಲಿ ತಿಪ್ಪೆಗಳೇ ಕಡಿಮೆ. ಇದ್ದ ತಿಪ್ಪೆಗಳಲ್ಲಿ ಹೊಲಸೇ ಕಡಿಮೆ! ಆದರೂ ಆ ದೇಶವು ಕೊಳೆಗಳಿಂದ ನಾರುವುದಿಲ್ಲ. ಆರೋಗ್ಯ ಭಾಗ್ಯಗಳಿಂದ ಬೆಳೆಯುತ್ತಿದೆ. ಏಕೆಂದರೆ ಕಸವು ಕೊಳೆತು ಹೊಲಸಾಗಿ ತಿಪ್ಪೆಯ ಹಾದಿ ಹಿಡಿಯದಂತೆ ಅದನ್ನು ಹಸನಾದ ಉಪಯುಕ್ತವಾದ ವಸ್ತುಗಳನ್ನಾಗಿ ಮಾರ್ಪಡಿಸುವ ಕಲೆ ಅವರಿಗೆ ಗೊತ್ತಿದೆ. ಆ ದೇಶವಾವುದೆಂದು ನಾವು ಹೇಳಬೇಕಾಗಿಲ್ಲ. ಚಿಕ್ಕದಾದರೂ ಮಹಾಮಹಾ ರಾಷ್ಟ್ರಗಳನ್ನು ಕೆಣಕುವ ಧೈರ್ಯವುಳ್ಳ ಜಪಾನೇ ಆ ದೇಶವೆಂದು ವಾಚಕರಿಗೆ ಹೊಳೆದಿರಬೇಕು.

ಕಸವನ್ನು ರಸಗೊಳಿಸುವ ಕಲೆಯೇ ಬಡದೇಶಗಳನ್ನು ಭಾಗ್ಯದ ಶಿಖರಕ್ಕೆ ಏರಿಸುತ್ತದೆ. ಭಾರತದಲ್ಲಿ ದಿನದಿನಕ್ಕೂ ಬಡತನದ ಬೆಂಕಿ ಬೆಳೆಯುತ್ತಿದೆ. ಆದರೆ ಇಲ್ಲಿಯ ದರಿದ್ರರ ಮನೆಯಲ್ಲಿ ಸಿಗುವ ಕಸವೇ, ಚಿಂದಿಗಳ ಗಂಟೇ, ಜಪಾನದ ಬಡ ಕುಟುಂಬದ ಕೈಗೆ ಸಿಕ್ಕರೆ ಅವುಗಳಿಂದಲೆ ದುಡ್ಡಿನ ಸೆಲೆ ಹೊರಡುತ್ತದೆ. ಕಸವು ರಾಶಿಯಾಗಿ ಬೀಳುವುದರಿಂದ ಆರೋಗ್ಯದ ವೈರಿಗಳಾದ ಹುಳುಹುಪ್ಪಡಿಗಳಿಗೆ ಬೆಳೆಯಲಿಕ್ಕೆ ಅನುವು ದೊರೆಯುತ್ತದೆ; ಚಿಕ್ಕ ಮನೆಯಲ್ಲಿ ಸ್ಥಳ ಸಂಕೋಚವಾಗುತ್ತದೆ; ಮನೆ ಬಿಟ್ಟು ಹೊಸ ಮನೆಗೆ ಕದಲಬೇಕಾದರೆ ಅದೊಂದು ಭಾರವಾಗುತ್ತದೆ. ಪ್ರತಿಯೊಂದು ಕುಟುಂಬದಲ್ಲಿಯೂ ಜೀನರಾದ ಮುದುಕ ಮುದುಕಿಯರು ಒಬ್ಬಿಬ್ಬರಿರುತ್ತಾರೆ. ಅವರು ಹರಕು ಮುರುಕು ಬಟ್ಟೆ ಒಡವೆಗಳನ್ನು ಸುಮ್ಮನೆ ಪಾಸ್ತಾನ ಮಾಡುತ್ತ ಹೋಗುತ್ತಾರೆ. ಅವರಿಗೆ ಜಪಾನೀಯ ಕಲೆಗಾರಿಕೆ ತಿಳಿದಿದ್ದರೆ?

ಬೆಂಡಿನಿಂದ ಮಾಡಿದ ಬೀಸಣಿಕೆ, ಚಾಪೆಗಳನ್ನು ಮಾರುತ್ತ ತಿರುಗುವ ಜಪಾನಿ ಹೆಂಗಸರನ್ನು ನಮ್ಮ ಬೀದಿಯಲ್ಲಿ ನಾವೆಷ್ಟೋ ಸಲ ನೋಡಿದ್ದೇವೆ. ಕಬ್ಬನ್ನು ಅಗಿದು ರಸವನ್ನು ಹೀರಿ ಬೆಂಡಿನಿಂದ ಕೂತಕೂತಲ್ಲಿಯೆ ಬೀಸಣಿಕೆ, ಕೃತ್ರಿಮ ಹೂಮಾಲೆಗಳನ್ನು ಮಾಡಿ, ಮಾರಿ ದುಡ್ಡು ಗಳಿಸುವ ಜಪಾನೀಯರ ಕತೆಗಳನ್ನು ನಾವು ಹೇಳುತ್ತಿರುತ್ತೇವೆ; ಕೇಳುತ್ತಿರುತ್ತೇವೆ. ನೂರಕ್ಕೆ ೫೦—೬೦ರ ವರೆಗೆ ಸುಂಕವನ್ನು ಕೊಟ್ಟು ಜಗತ್ತಿನ ಸಮಗ್ರ ದೇಶಗಳನ್ನು ಹೊಕ್ಕು ಮಿಕ್ಕದೇಶದ ಒಡವೆಗಳ ಬೆಲೆಯ ಚತುರ್ಥಾಂಶಕ್ಕಿಂತ ಕಡಿಮೆ ಬೆಲೆಯಲ್ಲಿ ತಮ್ಮ ವಸ್ತುಗಳನ್ನು ಮಾರುತ್ತಿರುವ ಜಪಾನೀಯರ ಸಾಹಸವನ್ನು ನೋಡಿ ಬೆರಗಾಗುತ್ತೇವೆ. ಆದರೆ ಈ ಎಲ್ಲ ಚಮತ್ಕಾರಗಳ ಬುಡದಲ್ಲಿ ಜಪಾನೀಯರ ಉದ್ಯೋಗಪ್ರಿಯತೆ, ಕಲೆಗಾರಿಕೆಗಳಿವೆ. ತಿಪ್ಪೆಯ ಕಸದಿಂದ ಮಾಡಿದ ವಸ್ತುಗಳನ್ನು ಉಪ್ಪರಿಗೆಯ ಬೆಡಗುಗಾರರಿಗೆ ಕಡಿಮೆ ಬೆಲೆಯಲ್ಲಿ ಮಾರಲಾಗುವುದು ಸಹಜವಾಗಿದೆ. ಆದರೆ ಕಸವನ್ನು ಬೆಡಗಿನ ವಸ್ತುಗಳನ್ನಾಗಿಸುವ ಕಲೆಯ ಬೆಲೆಯನ್ನು ಯಾರು ಕಟ್ಟಬಲ್ಲರು.

ಈಗ ಒಂದು ಉದಾಹರಣೆ ತೆಗೆದುಕೊಳ್ಳುವಾ. ನಮ್ಮಲ್ಲಿ ಹಾಳಾಗಿ ಮುರಿದು ಹುಳ ಹತ್ತಿ ಹೋದ ಬಾಟ್ಲಯ ಬೂಚುಗಳನ್ನು ನಾವು ತಿಪ್ಪೆಗೆ ಚಲ್ಲುತ್ತೇವೆ. ಆದರೆ ಜಪಾನಿನಲ್ಲಿ ಹುಳ ಹತ್ತಿದ ಬೂಚುಗಳಿಗೂ ಮಾನವಿದೆ. ಈಗ ಜಗತ್ತಿನಲ್ಲಿ ಬಹುಬೇಗ ಬೂಚುಗಳ ಬರ ಬೀಳುವ ಲಕ್ಷಣಗಳು ತೋರುತ್ತಿವೆ. ಆದರಿಂದ ಅವುಗಳ ಬೆಲೆಯೂ ಹೆಚ್ಚುತ್ತಿದೆ.

ನಾಳೆ ಜಗತ್ತಿನಲ್ಲಿ ಬೂಚುಗಳ ಕೊರತೆ ಸಂಭವಿಸಿದರೆ ಅದನ್ನು ಪೂರೈಸುವ ಕೆಲಸವನ್ನು ಜಪಾನೀಯರು ಖಂಡಿತವಾಗಿ ವಹಿಸುವರು. ಓಕಯಾಮಾದಲ್ಲಿ ಒಂದು ಕಾರಖಾನೆಯಿದೆ. ಅಲ್ಲಿ ದೇಶದ ಎಲ್ಲ ಭಾಗಗಳಿಂದಲೂ ಹಾಳಾದ ಬೂಚುಗಳ ಸಂಚಯವಾಗುವುದು. ಊರು ಊರುಗಳಲ್ಲಿ ಕಾರಖಾನೆಯವರು, ಕಸದಲ್ಲಿ ತಿಪ್ಪೆಗಳಲ್ಲಿ ಸಿಗುವ ಬೂಚುಗಳನ್ನು ಕಲೆ ಹಾಕಲು ಆಳುಗಳನ್ನು ನಿಯಮಿಸಿದ್ದಾರೆ. ಕಾರಖಾನೆಯಲ್ಲಿ ಆ ಬೂಚುಗಳನ್ನು ಯಂತ್ರದಿಂದ ನುಣ್ಣಗೆ ಪುಡಿ ಮಾಡುವರು. ಆ ಪುಡಿಗೆ ಒಂದು ಅಂಟುವಸ್ತುವನ್ನು ಬೆರೆಸಿ ವಿವಿಧಾಕಾರದ ಪಡಿಯಚ್ಚುಗಳಲ್ಲಿ ಹಾಕಿ ಒತ್ತುವರು. ಅದರಿಂದ ಹೊಸ ಬೂಚುಗಳೂ ಸಿದ್ಧವಾಗುವವಲ್ಲದೆ ಚಪ್ಪಲಿಗಳೂ, ಹರಿವಾಣಗಳೂ, ಮುಚ್ಚಳಗಳೂ, ಬಚ್ಚಲಮನೆಯ ಚಾಪೆಗಳೂ ತಯಾರಾಗುವವು. ಅವನ್ನು ೪—೫ ಆಣೆಗಳಿಗೆ ಕೊಂಡುಕೊಂಡವರು ತಮ್ಮ ವ್ಯವಹಾರ ಕುಶಲತೆಯನ್ನು ಕೊಚ್ಚಿಕೊಳ್ಳುತ್ತ ಮನೆಗೆ ಬರುವರು.

ಜಪಾನಿ ಕನ್ನಡಿಗಳು ಯಾಕೆ ಅಗ್ಗವಾಗಿವೆಯೆಂಬುದು ನಿಮಗೆ ಗೊತ್ತೋ? ಅವು ಉತ್ತಮ ತರಗತಿಯವಲ್ಲ. ಅವನ್ನು ಫೋಟೋ ಪ್ಲೇಟುಗಳಿಂದ ಮಾಡುತ್ತಾರೆ. ಫೋಟೋ ಪ್ಲೇಟುಗಳಿಗೆ ಕೆಲವು ರಸಾಯನಿಕ ವಸ್ತುಗಳಿಂದ ಹೊಳಪನ್ನು ತರುತ್ತಾರೆ. ಎರಡು ಮೂರು ಪ್ಲೇಟುಗಳನ್ನು ಕೂಡಿಸಿ ಒಂದು ಕನ್ನಡಿ ಮಾಡುತ್ತಾರೆ. ಅಂದರೆ ಅದು ದಪ್ಪವಾಗಿ ಕಾಣುತ್ತದೆ. ಮೇಲೆ ಸುಂದರ ಚಿತ್ರ ರೇಖೆಗಳುಳ್ಳ ಸೆಲ್ಯೂಲಾಯಿಡ್ ಕಟ್ಟನ್ನು ಹಾಕಿ ಬಿಟ್ಟರೆಂದರೆ ಚಂದವಾದ ಕನ್ನಡಿಯು ಸಿದ್ಧವಾಯಿತು. ಬೇರೆ ದೇಶಗಳಲ್ಲಿ ಉಪಯೋಗಿಸಿ ಹಾಳಾದ ಪ್ಲೇಟುಗಳನ್ನು ತಿಪ್ಪೆಗೆಸೆಯುತ್ತಾರೆ. ಜಪಾನಿನಲ್ಲಿ ಅವುಗಳಿಂದ ದುಡ್ಡಿನ ಸೆಲೆ ಯೊಸರುತ್ತದೆ.

ನಮ್ಮ ಕೋಟು ಅಂಗಿಗಳು ಹರಿದರೆ ಬೂಟು ಒರೆಸಲಿಕ್ಕೋ ದೀಪದ ಬುಡ್ಡಿ ಒರೆಸಲಿಕ್ಕೋ ಉಪಯೋಗಿಸಿದರೆ ನಮ್ಮ ಕರ್ಮಕೌಶಲ್ಯದ ಪರಮಾವಧಿಯಾಯಿತು. ಅಥವಾ ಬಡವರಿಗೆ ಕೊಟ್ಟು ಪುಣ್ಯಗಳಿಸಿದರೆ ಧರ್ಮದ ಪರಮಾವಧಿಯಾಯಿತು. ಆದರೆ ಜಪಾನಿ ಗೃಹಿಣಿಯರು ಹರಕು ಬಟ್ಟೆಗಳನ್ನೆಲ್ಲ ಸ್ಥಾನಿಕ ನೇಕಾರರಲ್ಲಿ ಕೈಮಗ್ಗದ ಸಹಾಯದಿಂದ ಪರಿಕರಗಳನ್ನೂ, ಮಫ್ಲರುಗಳನ್ನೂ, ಕುಲಾಯಿ, ಒಳ ಅಂಗಿಗಳನ್ನೂ, ಕಾಲುಚೀಲಗಳನ್ನೂ ಸ್ವಲ್ಪ ವೆಚ್ಚದಿಂದಲೇ ಮಾಡಿಸಿಕೊಳ್ಳುವರು. ... ಬಟ್ಟೆಗಳಿಂದ ೪-೬ ಆಣೆಗಳ ವೆಚ್ಚದಿಂದ ೩-೪ ... ಬೆಲೆಯ ತೊಡಿಗೆಗಳನ್ನು ಮಾಡಿಕೊಳ್ಳುವುದು ... ಯಲ್ಲವೇ? 'ಚಿಂದೀಸೆ ಚಾಂದೀ' ಎಂಬ ರೂಢ... ನಾಣ್ಣುಡಿಯು ಜಪಾನಿನಲ್ಲಿ ಸಾರ್ಥಕತೆಯನ್ನು ಪಡೆ...

ಅಮೇರಿಕೆಯ ಹ್ಯಾಟುಗಳನ್ನು ತಯಾರಿಸುವ ... ಗಳವರು ವ್ಯಾಪಾರಿಗಳಿಂದ 'ಹಳೆ ಹ್ಯಾಟುಗಳ ... ಮಾಡುವದಿಲ್ಲ'ವೆಂದು ವಚನಪತ್ರ ಬರೆಸಿಕೊ... ಅದರಿಂದ ಪ್ರತಿವರ್ಷ ಹಳೆ ಹ್ಯಾಟುಗಳ ಹೋಳಿ... ನಡೆಯುತ್ತದೆ. ಸಿರಿವಂತ ದೇಶಕ್ಕೆ ಅದು ... ಬಹುದು. ಕೊಳ್ಳುವವರಿಲ್ಲವೆಂದು ಪ್ರತಿವರ್ಷ ... ಚೀಲ ಗೋಧಿಯನ್ನು ಸುಡುವ ದೇಶವದು. ಆದ... ಒಂದು ಬಿಲ್ಲೆ ಉತ್ಪನ್ನವುಳ್ಳ ಭಾರತದ ಹ್ಯಾಟು... ಜಪಾನಿಯರಿಂದ ಅವಶ್ಯವಾಗಿ ಪಾಠಕಲಿಯಬೇ... ಜಪಾನಿಗಳು ಹ್ಯಾಟಿನಲ್ಲಿಯ ವಿವಿಧ ಸಾಮಗ್ರಿಗಳಿಂದ ಚಡಾವು (Shoes), ನಡುಪಟ್ಟಿ, (Belt), ... (Hand bags) ಮುಂತಾದ ಅನೇಕ ವಸ್ತುಗಳನ್ನು ... ಗೊಳಿಸುವರು.

ಹೀಗೆ ಕಬ್ಬಿಣದ ಚಪ್ಪಟೆ ಚೂರುಗಳಿಂದ ... ಗುತ್ತವೆ; ಹಳೆಯ ರಬ್ಬರಿನ ತುಂಡುಗಳಿಂದ ... ಪ್ಯಾಡುಗಳೂ ಆಗುತ್ತವೆ; ಉಣ್ಣೆಯ ಚಿಂದಿಗಳಿಂ... ಗಳೂ, ಚಳಿಕೋಟುಗಳೂ (Sweaters) ಆಗುತ್ತವೆ ... ಯುರೋಪ ಅಮೇರಿಕಗಳಂತಹ ಶ್ರೀಮಂತ ... ಪೇಟೆಗಳಲ್ಲಿ ಬಿಟ್ಟು ಕಚ್ಚುವಷ್ಟು ಕಡಿಮೆ ಬೆಲೆಗೆ ... ವಾಗುತ್ತವೆ!

ಜಪಾನು ತಿಳಿದು ಉಳಿಯಬೇಕು ಎಂಬ ತತ್ವ... ಕಾರ್ಯರಂಗವಾಗಿದೆ. ದೇಶದ ಪ್ರಗತಿ, ಸ್ಥಿರ... ಬೇಕಾದುದು ಬರಿ ದುಡ್ಡಲ್ಲ. ಇದ್ದುದನ್ನೆ ... ಅನುಭೋಗಿಸುವುದು ಕರ್ಮಕೌಶಲ್ಯ. ... ಗಳೆ ಕರ್ಮಯೋಗಿಗಳಲ್ಲವೇ? ಸ್ವಚ್ಛತೆಯ ... ಮನೆಯ ಕಸವನ್ನು ತಿಪ್ಪೆಗೆ ಚೆಲ್ಲಿ ನಮ್ಮ ... ಜಂಬಕೊಚ್ಚುವವರು ನಾವು. ಕಸವನ್ನು ... ತಿಪ್ಪೆಯಿಲ್ಲದಿದ್ದರೂ ನಿರ್ಮಲವಾಗಿರುವ ಜನಾಂಗ...

ರಾಜು ಹೇಳಿದ ಕತೆ

ಲೇ:—ಶೇಷು, ಸೋದರ ಸಂಘ, ಶಿವಮೊಗ್ಗ.

★

○ ರುಕ್ಮಿಣಮ್ಮನ ನಳನಳಿಸುವ ಅಗಲವಾದ ಎರಡು ಕಣ್ಣುಗಳೂ ತಿಳಿಯಾಗಿ ಬಾಯಿಂದ ಹೊರಹೊಮ್ಮುವ ನಸುನಗುವೂ ಉದ್ದವಾದ ಕೇಶರಾಶಿಯೂ ನಾರಾಯಣನನ್ನು ಮರುಳುಮಾಡಿದವು.

○ ಸೊಗಸು ಬೆಡಗುಗಳ ಉಪಾಸನೆಯಲ್ಲಿ ಮುಳುಗಿದ ನಾರಾಯಣನಿಗೆ ಬಂದ ಕನ್ಯೆಗಳಲ್ಲೆಲ್ಲ ಒಂದಿಲ್ಲೊಂದು ಕುಂದು ಕಾಣುತ್ತಲೇ ಇತ್ತು.

○ ಆದರೆ ಶ್ರೀನಿವಾಸರಾಯರು ಕನ್ನೆಗೆ ಕೊಟ್ಟ ಬಿಸಿ ಪ್ರಸಾದದಿಂದ ನಾರಾಯಣನಿಗೆ, ಅವರ ಹೆಂಡತಿ ರುಕ್ಮಿಣಮ್ಮನಲ್ಲಿ ತನ್ನ ಮನ ನೆಟ್ಟುದುದು, ಭಾರತೀಯ ಸಮಾಜದಲ್ಲಿ ಅನೀತಿಯೆಂಬುದನ್ನು ಕಲಿತ

★

೧

ರಾಜು ಈಗಾಗಲೇ ಬಹಳ ಬದಲಾಯಿಸಿ ಬಿಟ್ಟಿದ್ದಾನೆ. ಕಾಲೇಜಿನ ಕಾಲದ ಸುಳಿಸುಳಿಯಾದ ಕ್ರಾಪೂ, ಫ್ರೆಂಚ್‌ಕಟ್ ಮೀಸೆಯೂ ಮಾಯವಾಗಿ, ಕಲಾಯದ ತಲೆ, ಕಸಬರಿಗೆ ಮೀಸೆ ಪ್ರಾಪ್ತವಾಗಿವೆ. ಆಗಿನ ಅಗಸರ ಮಡಿಬಟ್ಟೆಗಳು ಕಣ್ಮರೆಯಾಗಿ ಹಳ್ಳಿಗಾಡಿನ ಸಾದಾ ನೇಕಾರ ಬಟ್ಟೆ ಒದಗಿವೆ. "ಏನೋ ಮಗೂ, ನಿನ್ನ, [illegible]!" ಎಂದೆ.

"Be a Roman while you are in Rome" ಎಂದ.

"[illegible] ಯಾಕೆ ಹೀಗೆ ಆದೆಯೋ? [illegible] ವರ್ಷಗಳಲ್ಲಿ ಇಷ್ಟು!"

"ನಿನಗೇನು ಗೊತ್ತೋ! ಹಳ್ಳೀಲಿರೋರಿಗೆ ಆ ಕಷ್ಟ ಗೊತ್ತು. ಬೆಂಗಳೂರಲ್ಲಿ ಕೂತುಕೊಂಡು ಝೋಕು ಮಾಡೋರು ಮಾತಾಡಬಾರದು!"

"ನಿನ್ನ ಹಣೆಯ ಬರೆಹ ನನಗೆ ಗೊತ್ತಿತ್ತು ಬಿಡು. [illegible] ಬಾಲ ಎಂದಿದ್ದರೂ ಡೊಂಕು. (Natural Environments) ಅಂತಾರಲ್ಲ—ಅದು ಒಗ್ಗಿಹೋಗಿದೆ [illegible]!"

ರಾಜೂ ನಕ್ಕ.

"ಯಾಕೆ ನಗ್ತಿಯಾ ರಾಜು?" ಎಂದೆ.

"ಒಬ್ಬನ ವಿಚಾರ ಜ್ಞಾಪಕ ಬಂತು. ಅಪ್‌ಟುಡೇಟು, ಸಿವಿಲೈಸ್ಡ್, ಎಲ್ಲಾ ಸರಿ. ಆದರೆ ಅವನು ಬೇಸ್ತು ತಿಂದ...." ಎಂದ.

"ಹಾಗಾದರೆ ಹೇಳೋ ಮಗು, ಕೇಳೋಣ" ಎಂದೆ ಆದರಲ್ಲೇನೋ ಸ್ವಾರಸ್ಯವಿರಬೇಕಾಗಿತ್ತು. ರಾಜೂನ ಮಾತೆಂದರೆ ಹಾಗೆ. ಇನ್ನೊಂದು ದೋಸೆಗೆ ಆರ್ಡರ್ ಮಾಡಿದೆ. ರಾಜೂ ಕಥೇನ ಬಿಚ್ಚಿದ.

....

೨

ಈ ಕಥೇನ ಎಲ್ಲಿಂದ ಪ್ರಾರಂಭಿಸಬೇಕೊ ಗೊತ್ತಿಲ್ಲ. ಇಲ್ಲಿ ದೂರದಿಂದ ನಿಂತು ನೋಡಿದರೆ ಒಂದು ಒಗಟಿನಂತೆ ತೋರುತ್ತದೆ. ಒಂದು ಕನಸಿನಂತೆ ತೋರುತ್ತದೆ.


ಇದರಲ್ಲಿಯ ಮೊದಲನೆಯ ಪಾತ್ರ, ಪ್ರಪಂಚದಲ್ಲಿ ನಡೆಯುವ ವ್ಯಾಪಾರಗಳಿಗೆಲ್ಲಾ ಮೂಲ—ಈ ಅನಾಹುತ—ಅಲ್ಲ ಅಲ್ಲ, (Tragic comedy)—ಇದಕ್ಕೆಲ್ಲಾ ಮೂಲವು, ನಳನಳಿಸುವ ಅಗಲವಾದ ಎರಡು ಕಣ್ಣುಗಳು, ತಿಳಿಯಾಗಿ ಬಾಯಿಂದ ಹೊರಹೊಮ್ಮುವ ನಸುನಗು, ಉದ್ದವಾದ ತೊಡೆಯವರೆಗೂ ಮುಟ್ಟಬಹುದಾದ ಕೇಶರಾಶಿ,—ಇವುಗಳು, ಆ ಕಣ್ಣುಗಳನ್ನು ನೋಡಿದರೆ ಸಾಕು. ಯಾವಾಗಲೂ ಮುಖದ ಮೇಲೆ ಮಿನುಗುತ್ತಿರುವ ಆ ನಸುನಗುವೇ ಸಾಕು........

ಆ ಕಣ್ಣು, ಆ ಕೇಶರಾಶಿ, ಆ ಬಾಯಿ, ಇವುಗಳ ಮಾಲೀಕಳು ನಮ್ಮ ಊರಿಗೆ ಬಂದೇ ಬಂದಳು—ಊರಿಗೆ ಊರೇ ಸ್ತಂಭೀಭೂತವಾದಂತಾಯಿತು. ಮರುಕ್ಷಣದಲ್ಲಿಯೆ ಎಚ್ಚೆತ್ತು, ಎಲ್ಲೆಲ್ಲಿಯೂ ಓಡಾಟವೇ ಓಡಾಟ! ಗಜಿಬಿಜಿ! ಅವಳಿಗೆ ಅವಷ್ಟೇ ಅಲ್ಲದೆ ದುಂಡಾದ ಮುಖವೂ, ಮುಖಕ್ಕೆ

ಒಪ್ಪುವ ದೇಹವೂ, ಮೈ, ಮುಖ, ಕಣ್ಣುಗಳಿಗೆ ಒಪ್ಪುವ ತನುಕಾಂತಿಯೂ, ಇದ್ದುದರಿಂದ ಅವಳು ರಾಣಿಯಂತೆ ಮೆರೆದಳು. ಸಾಹುಕಾರರು, ಶಾನುಭೋಗರು ಮೊದಲಾದ ದೊಡ್ಡ ಮನುಷ್ಯರ ಮನೆಗಳಿಗೆ ಅವಳು ಹೋಗಿ ಬರುವುದು, ಅವರ ಮನೆಯ ಹೆಂಗಸರು ಅವಳ ಮನೆಗೆ ಹೋಗಿ ಬರುವುದೂ ಸುರುವಾಯಿತು.

೩

ಈ ಕಥೆಯಲ್ಲಿಯ ಎರಡನೆಯ ಪಾತ್ರ—ಅವಳ ಗಂಡ. ಅವಳ ಗಂಡನೆಂಬುದರಿಂದ ಅವನಿಗೆ ಪ್ರಾಶಸ್ತ್ಯ. ರುಕ್ಮಿಣಮ್ಮನ ಗಂಡ ಎಂದು ಅವನಿಗೆ ಊರಲ್ಲೆಲ್ಲಾ ನಾಮಧೇಯ. ಉದ್ದಕ್ಕೆ ತೆಳ್ಳಗಿರುವ ಮೈ,........ಅವನ ಚಿತ್ರವು ಅಪ್ರಕೃತ. ಒಟ್ಟಿನಲ್ಲಿ ರುಕ್ಮಿಣಮ್ಮ-ಶ್ರೀನಿವಾಸರು ಗಂಡ ಹೆಂಡಿರು. ಬೆಳದಿಂಗಳು ಅಮಾವಾಸ್ಯೆಗಳು ಹೇಗೆ ಒಂದುಗೂಡಿದುವೋ ದೇವರಿಗೇ ಗೊತ್ತು—ಬಹುಶಃ ಅವನು M. Sc. ಓದುತ್ತಿದ್ದಾಗ ಗಂಟು ಬಿದ್ದಿರಬಹುದು. ನಮ್ಮೂರಲ್ಲಿ ರೇಂಜರ ಕೆಲಸ ಅವನಿಗೆ.



'ಅವನಿಗೆ ನಾಳೆಯಿಂದ ಇಲ್ಲಿ ಬರಬೇಡವೆಂದು ಹೇಳು' ಇದನ್ನು ಕೇಳಿ ರುಕ್ಮಿಣಿಗೆ ಸಿಡಿಲು ಬಡಿದಂತಾಯಿತು !

ಗಂಡಹೆಂಡಿರು ಪರಸ್ಪರ ಅನ್ಯೋನ್ಯವಾಗಿದ್ದರು. ತುಂಬಾ ಪ್ರೀತಿಸುತ್ತಿದ್ದರು. "ನಿನಗೆ ಹೇಗೆ ಗೊತ್ತು ?" ಎಂತ ಕೇಳೀಯೇ ನೀನು....ನನಗೆ ಗೊತ್ತು. ನಮ್ಮ ಮನೆ, ಅವರ ಮನೆ ನೆರೆಮನೆಗಳು.

ಇಬ್ಬರೇ ಇಸ್ಪೇಟಾಡುವುದು, ವಾಕಿಂಗ್ ಹೋಗುವುದು, ಇಬ್ಬರ ಮುಖದ ಮೇಲೂ ಮುಗುಳು ನಗು ಇರುವುದು—ಇಷ್ಟರಿಂದಲೇಗೊತ್ತು ಮಾಡಬಹುದು.

೪

ನಾರಾಯಣ ಎನ್ನುವವನು ಶಾನುಭೋಗರ ಮಗ. ಮೊನ್ನೆ ತಾನೆ ಎರಡು ವರ್ಷವಾಯಿತು S.S.L.C ಪಾಸಾಗಿ. ಓದಿದ ಹುಡುಗ, ದುಡಿದ್ದ ಶಾನುಭೋಗರ ಹಿರಿಯ ಮಗ—ತುಂಬಾ ಲಾಲನೆ ಪಾಲನೆಯಲ್ಲಿದ್ದವನು. ಹೊರಗಿನ ಪ್ರಪಂಚವನ್ನು ನೋಡಿ ಬಂದಿದ್ದವನಾದ್ದರಿಂದ ಕ್ರಾಪು ತಲೆಯ ಮೇಲೆ ಇದ್ದೇ ಇತ್ತು. ತಂದೆಯವರು "ಇನ್ನೂ ಹುಡುಗ ಹೋಗಲಿ" ಎಂದು ಆ ವಿಷಯಕ್ಕೆ ಕಣ್ಣುಮುಚ್ಚಿದ್ದರು. ಮನೆಯಲ್ಲಿ ಬೇಕುಬೇಕಾದ, ನಾಗರಿಕತೆಯ ... ಗಳಾದ ಕುರ್ಚಿ ಮೇಜುಗಳು, ತಲೆ ಹಾಕಿಕೊಂಡು ...

ಪುಸ್ತಕವೋದುವುದು, ಕಾಫಿ ತಿಂಡಿ, ಊಟ ... ವುದು, ಎರಡು ದಿನಕ್ಕೆ ಮೂರು ದಿನಕ್ಕೊಂದು ... ಬೆಳೆಯದಿರುವ ಗಡ್ಡವನ್ನೇ ಕೆರೆದುಕೊಳ್ಳುವುದು, ... ವಾದ ಬಟ್ಟೆಗಳನ್ನು ಧರಿಸಿ ಸಾಯಂಕಾಲದ ... ಗಂಭೀರವಾಗಿ ವಾಕಿಂಗ್ ಹೋಗುವುದು—ಇಷ್ಟು ... ದಿನಚರಿಯ ಕೆಲಸಗಳು. ಊರವರೆಲ್ಲರೂ ... ಆದರಿಸುತ್ತಿದ್ದರು, ಗೌರವಿಸುತ್ತಿದ್ದರು, ಒಳ್ಳೆಯ ... ಎನ್ನುತ್ತಿದ್ದರು.

೫

ರುಕ್ಮಿಣಮ್ಮ ... ದಿನ—ಹೊಸಬರು, ... ವರು, ಬ್ರಾಹ್ಮಣರು, ... ಇಷ್ಟೆಲ್ಲಾ ಕಾರಣಗಳಿಂದ— ... ಣಮ್ಮ ಮತ್ತು ಅವಳ ... ಶಾನುಭೋಗರಲ್ಲಿಯೇ ... "ಛೀ! ಛೀ! ಎಲ್ಲಿಯ ... ಇವತ್ತು ನಮ್ಮಲ್ಲಿಯೇ ... ವಾಗಬೇಕು....ಅಲ್ಲದೆ, ... ಬ್ರಾಹ್ಮಣ ಮುತ್ತೈದೆಯ ... ಯಾಸವಾಗಿ ಬಂದಿದ್ದ ... ಮುಂತಾಗಿ ಹೇಳಿ ಶಾನು... ಅವರ ಆಕ್ಷೇಪಣೆಗಳನ್ನೆ ... ದರು. ಆಗಲೇ ನಾರಾ... ರುಕ್ಮಿಣಮ್ಮ ಶ್ರೀನಿವಾ... ಚಯವಾದದ್ದು. ... ಸೌಜನ್ಯ, ಮೃದುಸ್ವಭಾವ ... ಲಾದುವು ಅವರನ್ನು ಮುಗ್ಧಗೊಳಿಸಿದುವು. ... ಮ್ಮನ, ಹಿಂದೆ ಹೇಳಿರುವ ಕಣ್ಣು ಮೊದಲಾದ ... ಜತೆಗೆ ಸರಸವಾದ ಸಂಕೋಚವಿಲ್ಲದ ಮಾತು... ನಾರಾಯಣನನ್ನು ಆಕರ್ಷಿಸಿದುವು. ಪದೇಪದೇ ... ಮನೆಗೆ ಬಂದು ಹೋಗುತ್ತಿರಬೇಕೆಂದು ... ಹೇಳಿದರು. ತಾವೂ ಹಾಗೆಯೇ ಎಂದು ... ಉಪಚರಿಸಿದರು.

ಅಂದಿನಿಂದ ನಾರಾಯಣ, ಮತ್ತು ರುಕ್ಮಿಣಮ್ಮ-ಶ್ರೀನಿ... ವಾಸರ ಮೈತ್ರಿ ಬೆಳೆಯಿತು.

೩

ಶ್ರೀನಿವಾಸನಿಗೆ ರೇಂಜರ ಕೆಲಸ. ಕಾಡುಕಾಡು ಅಲೆಯುತ್ತಿರುವುದು. ಮನೆಯಲ್ಲಿ ರುಕ್ಮಿಣಮ್ಮನ ಜತೆಯಲ್ಲಿ ಯಾವಾಗಲೂ ಸರಸವಾಡುತ್ತಾ ಕುಳಿತಿರುವುದಕ್ಕಾಗುತ್ತದೆಯೆ? ಇಲ್ಲದಿದ್ದರೆ ಅವಳಿಗೆ ಬೆಂಗಳೂರಿನಂತೆ ಇಲ್ಲಿ ದೊಡ್ಡ ಮನುಷ್ಯರ ಮನೆಯ ಹೆಂಗಸರು ಹರಟೆಗೆ ಸಿಕ್ಕುತ್ತಾರೆಯೆ? ಆದ್ದರಿಂದ ಆಗಾಗ್ಗೆ ನಾರಾಯಣನಿಗೆ ಹೇಳಿ ಕಳುಹಿಸುತ್ತಿದ್ದಳು.

ನಾರಾಯಣನೂ Cultured ಹುಡುಗ, ಸರಸವಾಗಿ ಮಾತಾಡುವವರು ಇದುವರೆಗೆ ಯಾರೂ ಸಿಕ್ಕಿರಲಿಲ್ಲ. ಮಧ್ಯಾಹ್ನ ಊಟವಾದಮೇಲೆ ನಿದ್ದೆ, ಇಲ್ಲವೆ ಪುಸ್ತಕ ಇವುಗಳಲ್ಲಿ ಯಾವುದಾದರೂ ಒಂದನ್ನು ಅಥವಾ ಒಂದಾದ ಮೇಲೊಂದನ್ನು ಆಶ್ರಯಿಸಬೇಕಾಗಿತ್ತು. ದಿನದಿನವು ಅದೇ ಕೆಲಸವಾದ್ದರಿಂದ ತುಸು ಬೇಜಾರೂ ಆಗಿದ್ದಿತು. ಆದ್ದರಿಂದ ರುಕ್ಮಿಣಮ್ಮನ ಸರಳವಾದ ಮಾತುಗಳನ್ನು ಕೇಳುತ್ತಾ ಕುಳಿತುಕೊಳ್ಳುವುದರಲ್ಲಿ ನಾರಾಯಣನಿಗೆ ಆನಂದವೇ ಉಂಟಾಗುತ್ತಿತ್ತು. ಸ್ತ್ರೀಯರೆಲ್ಲರೂ ಹೀಗೆಯೇ ಮುಂದಕ್ಕೆ ಬಂದರೆ ಒಳ್ಳೆಯದೆಂದುಕೊಂಡನು.

೪

"ನಿಮಗೆ ವಯಸ್ಸೆಷ್ಟು?" ಎಂದಳು ರುಕ್ಮಿಣಮ್ಮ.

"ಇಪ್ಪತ್ತು"

"ಓಹೋ ನನಗೂ ಇಪ್ಪತ್ತೇ!'' ಎಂದು ನಕ್ಕಳು.

"ಸರಿಯೇ?"

"ನನಗೆ ಮದುವೆಯಾಗಿ ನಾಲ್ಕುವರ್ಷವಾಯಿತು.

"ಅಷ್ಟೇನೆ?"

"ಹೌದು, ಆಗ ನನಗೆ ಹದಿನಾರು ವರ್ಷ''

ನಾರಾಯಣ ಸುಮ್ಮನಿದ್ದ.

"ನಿಮಗೆ ಯಾಕೆ ಇನ್ನೂ ಮದುವೆಯಾಗಿಲ್ಲ?''

"ಏನೋ........''

"ನೋಡಿ, ನೀವು ಗಂಡಸರಾದರೆ 'ಏನೋ' ಎಂದು ಬಿಡಬಹುದು. ನಮಗೆ ಹಾಗಾಗುತ್ತದೆಯೆ? ಹಾಳು ಹೆಣ್ಣು ಜನ್ಮ, ಮದುವೆಯಾಗಲೇ ಬೇಕು. ಇಂಥವರು ಅಂತಾರನ್ನದೆ ತಂದೆ ತಂದದ್ದನ್ನು ಒಪ್ಪಬೇಕು."

"ಹೌದು, ಹೌದು........''

"ನಾನೂ ಗಂಡುಮಗನಾಗಿದ್ದಿದ್ದರೆ, ಇಷ್ಟು ಹೊತ್ತಿಗೆ ನಮ್ಮ ತಂದೆ ಬೇಕುಬೇಕಾದಹಾಗೆ ಓದಿಸುತ್ತಿದ್ದರು. ನಾನೂ B. A., M. A. ಪಾಸುಮಾಡುತ್ತಿದ್ದೆ!"

"ಆಮೇಲೆ?"

"ಎಲ್ಲಾದರೂ ದೊಡ್ಡ ಕೆಲಸ ಸಂಪಾದಿಸಿಕೊಂಡು ಇರಬಹುದಾಗಿತ್ತು.''

"ಈಗೇನಾಗಿದೆ ರುಕ್ಮಿಣಮ್ಮ ನಿಮಗೆ? ಸುಖವಾಗಿಲ್ಲವೆ ನೀವು?''

ರುಕ್ಮಿಣಮ್ಮ ದೊಡ್ಡದಾಗಿ ನಕ್ಕಳು!

"ಅಕೋ, ತೆಗೆದಿರಲ್ಲ!........ ನನ್ನ ವಿಷಯಕ್ಕಲ್ಲ ಹೇಳಿದ್ದು, ನಮ್ಮ ಸ್ತ್ರೀಯರ ವಿಷಯ ಹೇಳಿದೆ. ಎಲ್ಲರಿಗೂ ನನ್ನಷ್ಟು ಅದೃಷ್ಟವಿದೆಯೇ ಹೇಳಿ........"

ನಾರಾಯಣ ನಕ್ಕ.

ಅಷ್ಟುಹೊತ್ತಿಗೆ ಶ್ರೀನಿವಾಸ ಬಂದ. ಕಾಡು ಸುತ್ತಿ ಬಂದದ್ದರಿಂದ ಆಯಾಸವಾಗಿ, ಮುಖದಲ್ಲೆಲ್ಲಾ ಬೆವರು ಸುರಿಯುತ್ತಿತ್ತು. ಧೊಪ್ಪನೆ ಆರಾಮ ಕುರ್ಚಿಯಮೇಲೆ ಕುಳಿತು ಬೂಟ್ಸನ್ನು ಬಿಚ್ಚಿ ಒರಗಿದ.

೫

ಶಾನುಭೋಗರ ಮನೆಯಲ್ಲಿ ಊಟಕ್ಕೆ ಕುಳಿತಿದ್ದರು. ಯಾವುದರಲ್ಲಿ ಹೇಗಿದ್ದರೂ ಸುಮ್ಮನಿರುತ್ತಿದ್ದ ಶಾನುಭೋಗರು ಇದೊಂದು ವಿಚಾರದಲ್ಲಿ ಮಾತ್ರ ಕಟ್ಟು-ನಿಟ್ಟು. ಮನೆಯವರೆಲ್ಲ ಒಟ್ಟಿಗೆ ಊಟಕ್ಕೆ ಕೂರಬೇಕು, ಮತ್ತು ಎಲ್ಲರೂ ಮಡಿಯುಟ್ಟುಕೊಂಡೇ ಕೂರಬೇಕು; ನಾರಾಯಣನಿಗೂ ಈ ವಿಷಯದಲ್ಲಿ ರಿಯಾಯತಿ ಇಲ್ಲ.

ಅಂದು ಮಧ್ಯಾಹ್ನ ಊಟ ಸ್ವಲ್ಪ ತಡವಾಗಿದ್ದಿತು. ರುಕ್ಮಿಣಮ್ಮ ಅಲ್ಲಿಗೆ ಬಂದಳು. ಎಲೆಯಡಕೆ ಮೆಲ್ಲುತ್ತಾ ಮಂದಹಾಸದೊಡನೆ ಬಂದಳು. ಬಂದು ಎಲ್ಲರಿಗೂ ಹೊಸ ಉತ್ಸಾಹವನ್ನು ತಂದಳು.

"ಬನ್ನಿಯಮ್ಮ!" ಎಂದರು ಶಾನುಭೋಗರು.

"ಒಳ್ಳೇ ಸಮಯಕ್ಕೇ ಬಂದೆ" ಎಂದಳು ರುಕ್ಮಿಣಮ್ಮ.

"ಇಷ್ಟು ಬೇಗ ಊಟವಾಯಿತೆ?"

"ಆಗದೆ ಏನು ಹೇಳಿ? ಆಯಿತು."

ಎಲ್ಲರ ಊಟವಾಗಿ ಕೈತೊಳೆದು ಎಲೆಯಡಕೆ ಮೆಲ್ಲುತ್ತಾ ಕುಳಿತರು. ಆ ಮಾತು ಈ ಮಾತು ಆಗಿ ರುಕ್ಮಿಣಮ್ಮನು, "ನಾರಾಯಣರಾವ್, ಮಧ್ಯಾಹ್ನ ನಮ್ಮಲ್ಲಿಗೇ ಕಾಫೀಗೆ ಬರಬೇಕು" ಎಂದಳು.

೬

ಶ್ರೀನಿವಾಸ ರುಕ್ಮಿಣಿಯರು ವಾಕಿಂಗ್ ಹೊರಟರು. ಅವರು ವಾಕಿಂಗ್ ಹೊರಡುವುದು ಒಂದು ವಿಶೇಷ ಸಂಗತಿ. ರುಕ್ಮಿಣಮ್ಮನು ಟ್ರಂಕಿನೊಳಗಿಂದ ಸೀರೆಗಳನ್ನು ದಿನ

ಕ್ಕೊಂದರಂತೆ ತೆಗೆದು ಉಡಬೇಕು. ದಿನಕ್ಕೊಂದು ನಮೂನೆಯ ಒಡವೆಗಳನ್ನು ಧರಿಸಬೇಕು. ನಿನ್ನೆಗೂ ಇವತ್ತಿಗೂ ಹೊಸತು ತೋರುವ ರೀತಿಯಲ್ಲಿ ಶೃಂಗಾರ ಮಾಡಿಕೊಳ್ಳಬೇಕು. ಶ್ರೀನಿವಾಸ ಮಾತ್ರ ಒಂದು ಶುಭ್ರವಾದ ದಟ್ಟಿಯುಟ್ಟು, ಬನೀನಿನ ಮೇಲೊಂದು ಒಲ್ಲಿಯನ್ನು ಹೊದೆದು, ಇಬ್ಬರೂ ಹೊರಡಬೇಕು. ಹೀಗಿತ್ತು.

ಮಧ್ಯಾಹ್ನ ನಾರಾಯಣನು, ಆಹ್ವಾನದಂತೆ ಬಂದಿದ್ದನು. ಬಂದಿದ್ದ ಕಾಫಿ ತಿಂಡಿಗಳಾದ ಮೇಲೆ ಮೂವರೂ ಗುಡ್ಡದ ಕಡೆಗೆ ಹೊರಟರು.

ಗುಡ್ಡದ ಪಾದದ ಬಳಿ ಒಂದು ತಿಳಿನೀರಿನ ತೊರೆ. ಸಣ್ಣದು ಅದು. ಕುಣಿಕುಣಿಯುತ್ತಾ, ಇನಿದಾಗಿ ಹಾಡುತ್ತಾ, ಮುಂದು ವರಿದಿತ್ತು. ಗುಡ್ಡವು ಮೌನವಾಗಿ ನಿಂತು ಅದನ್ನಾಲಿಸುತ್ತಿತ್ತು. ತಿಳಿಯಾದ ಗಾಳಿಯು ಮೆಲ್ಲಮೆಲ್ಲನೆ ಬೀಸಿ ತನ್ನ ಮೆಲುದನಿಯನ್ನೂ ಕೂಡಿಸಿತ್ತು. ಅವರು ಮೆಟ್ಟಲ ಮೇಲೆ ಕುಳಿತರು.—ಮಾತು ಸಾಗಿತ್ತು.

"ಹಾಗಾದರೆ ನಿಮ್ಮ Ideals ಏನು?" ಎಂದಳು ರುಕ್ಮಿಣಿ.

"ಯಾವುದರಲ್ಲಿ ?" ಎಂದ ನಾರಾಯಣ.

"ಮದುವೆಯಲ್ಲಿ .... ಎಂಥವಳನ್ನು ಮದುವೆಯಾಗಬೇಕೆಂದಿದ್ದೀರಿ ?"

"ನಾನು ಮದುವೇನೇ ಮಾಡಿಕೊಳ್ಳೊಲ್ಲ."

"ಅದಿರಲಿ, ಮಾಡಿಕೊಂಡರೆ, ಎಂಥವಳನ್ನು ?" ಶ್ರೀನಿವಾಸನೆಂದ.

"ಏನೋ ಕಷ್ಟ ಹೇಳೋದು."

"ಆದರೂ ಹೇಳಿ ನೋಡೋಣ."

"ನೋಡಿ, ಸ್ಫುರದ್ರೂಪಿಯಾಗಿರಬೇಕು...."

"ಹಾಗಂದರೆ ?" ರುಕ್ಮಿಣಮ್ಮನ ನಗುವಿನ ಪ್ರಶ್ನೆ.

"ಅದೇ ಕಷ್ಟ."

"ಸ್ವಲ್ಪ Define ಮಾಡ್ರಿ ಅದನ್ನು."

"ಕಣ್ಣು, ಮೂಗು, ಬಾಯಿ, ತಲೆಗೂದಲು, ಕೈಕಾಲುಗಳು, ಮೈಬಣ್ಣ, ಎಲ್ಲವೂ ಹೊಂದಿಕೆಯಾಗಿರಬೇಕು...."

"ಹಲ್ಲು ಮಾತ್ರ ಉಬ್ಬಿದ್ದರೆ ?"

"........ಮುಖದಲ್ಲಿ ಸದಾ ಮುಗುಳುನಗೆ ಮಿಂಚುತ್ತಿರಬೇಕು. ಕಣ್ಣುಗಳು ಪ್ರಕಾಶವಾಗಿರಬೇಕು. ವಿದ್ಯಾವತಿಯಾಗಿರಬೇಕು. ವಿನಯಸಂಪನ್ನೆಯಾಗಿರಬೇಕು. ಒಟ್ಟಿನಲ್ಲಿ...."

ಶ್ರೀನಿವಾಸ ತಡೆದು "ಇಷ್ಟೆಲ್ಲಾ ಕ್ವಾಲಿಫಿಕೇಷನ್ಸ್ ಇರೋ ಹುಡುಗಿ ಸಿಕ್ಕೋದು ಹ್ಯಾಗ್ರಿ ?"

"ನನ್ನ Ideal ಹೇಳಿದೆ ಅಷ್ಟೆ ?"

"ಅಥವಾ ಸಿಕ್ಕಿದಳೂಂತ ಇಟ್ಟುಕೊಳ್ಳೋಣ. ಆದ್ರೆ ನೀವು ಮದುವೆಯಾದಿರಿ ಅಂತಲೂ ಇಟ್ಟುಕೊಳ್ಳಿ. ಅವಳು ನಿಮ್ಮನ್ನು ಪ್ರೀತಿಸದೇ ಹೋದರೆ?...."

ನಾರಾಯಣನಿಗೆ ಏನು ಹೇಳಲೂ ತೋಚಲಿಲ್ಲ. ರುಕ್ಮಿಣಮ್ಮನೇ "ಸರಿ ಸರಿ, ನಿಮ್ಮ ಮಾತು ಕೇಳಿ ಆಕಾಶ ತಲೆಯ ಮೇಲೆ ಬಿದ್ದರೆ ?" ಎಂದಳು.

ನಾರಾಯಣ ರುಕ್ಮಿಣಮ್ಮನನ್ನು ಕೃತಜ್ಞತೆಯಿಂದ ನೋಡಿದ. ಅವಳೂ ಅವನ ಕಡೆಗೆ ನೋಡಿದಳು. ಶ್ರೀನಿವಾಸ ಇಬ್ಬರನ್ನೂ ನೋಡಿದ........

೧೦

ಮೊದಮೊದಲು ಶ್ರೀನಿವಾಸನಿಗೆ ಯಾವ ಸಂಶಯವೂ ಇರಲಿಲ್ಲ. ಕೊನೆಕೊನೆಗೆ ನಾರಾಯಣ ಮತ್ತು ರುಕ್ಮಿಣಿಯರ ವಿಚಾರದಲ್ಲಿ ಸಂಶಯ ಬಂದಿತು. ನಾರಾಯಣ ಅವನು ಯಾವಾಗಲೂ ತನ್ನ ಮನೆಯಲ್ಲಿರುವುದು, ಅವರ ಮನೆಗೆ ಹೋಗುತ್ತಾ, ಬರುತ್ತಾ ಇರುವುದು, ಅನುಮಾನಕ್ಕೆ ಕಾರಣ. ನಾರಾಯಣನನ್ನು ಕಂಡಾಗ ರುಕ್ಮಿಣಮ್ಮನ ಮುಖವು ಪ್ರಫುಲ್ಲವಾಗುವುದು, ನೋಡಿದಾಗ ನಾರಾಯಣನ ಮುಖವು ಕೆಂಪೇರುವುದು ಅವನ ಅನುಮಾನ ಹೆಚ್ಚಲು ಕಾರಣವಾದುವು.

ಒಂದು ದಿನ ಸಾಯಂಕಾಲ. ಬಲು ಜೋರಾಗಿ ಮಳೆ ಬೀಳುತ್ತಿದೆ. ಹೊರಗಿನಿಂದ ಶ್ರೀನಿವಾಸ ಬಂದ. ಬಂದಾಗ ಒಳಗೆ ನಾರಾಯಣ ರುಕ್ಮಿಣಿಯರು ನಗುತ್ತಾ ಮಾತನಾಡುತ್ತಿರುವುದನ್ನು ನೋಡಿದ. ಇಬ್ಬರ ಮುಖದ ಮೇಲೆ ನಗುವು ಇನ್ನೂ ಇತ್ತು. ರುಕ್ಮಿಣಿಯು ಎದ್ದು ನಿಂತಳು. "ಬನ್ನಿ ಸಾರ್" ಎಂದ ನಾರಾಯಣ. ಮಾತಿಲ್ಲದೆ ಶ್ರೀನಿವಾಸ ಬಂದು ಕುಳಿತ.

ಸ್ವಲ್ಪ ಹೊತ್ತಾಗಿ ನಾರಾಯಣನು ಹೊರಟುಹೋದ ಮೇಲೆ ಶ್ರೀನಿವಾಸನು "ಅವನಿಗೆ ನಾಳೆಯಿಂದ ಇಲ್ಲಿ ಬರಬೇಡವೆಂದು ಹೇಳು" ಎಂದ.

ರುಕ್ಮಿಣಿಯು ಸ್ತಂಭಿತಳಾದಳು. "ಏಕೆ ?" ಎಂದಳು.

"ಯಾಕೊ!....ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತಂತೆ!"

ರುಕ್ಮಿಣಿಗೆ ಸಿಡಿಲುಬಡಿದಂತಾಯಿತು. ನಿಂತಲ್ಲೇ ಉಸ್ಸೆಂದು ಕುಳಿತಳು.

"ಏನೂಂದ್ರೆ ನಿಮ್ಮ ಮಾತು?"

"ಆದರ ತಲೆ ಕೆಟ್ಟಿರೋ ಹಾಗಿದೆ ರುಕ್ಕೂ. ಅದರ ಮುಖ ಚೆನ್ನಾಗಿಲ್ಲ ಈಚೆಗೆ. ಅದೂ ಅಲ್ಲದೆ ಜನ ಏನೆಂದು ಕೊಳ್ತಾರೆ ಇದನ್ನೆಲ್ಲ ನೋಡಿ?"

"ಏನೆಂದುಕೊಳ್ತಾರೆ?"

"ನಿನಗೆ ಇನ್ನೂ ಗೊತ್ತಾಗಿಲ್ಲ.....ಅವನಿಗೆ ಹೇಳು' ನಾನಿಲ್ಲದಾಗ ಬರಬೇಡ ಎಂತ."

"ನಾನು ಹೇಗೆ ಹೇಳಲಿ? ನೀವೇ ಹೇಳಿ."

"ನಾನು ಹೇಳಿದರೆ ಚೆನ್ನಾಗಿಯೇ ಹೇಳ್ತೇನೆ."

ಆ ಮಾತು ಅಲ್ಲಿಗೇ ನಿಂತಿತು.

೧೧

ಶ್ರೀನಿವಾಸನು ಸೂಕ್ಷ್ಮವಾಗಿ ನಾರಾಯಣನಿಗೆ ತಿಳಿಸಿದನು. ನಾಲ್ಕು ಜನ ನೋಡಿ ಏನೆಂದಾರು, ಆದಕ್ಕೋಸ್ಕರ ಎಂದನು. ಆದರೆ ಈ ಮೂಢ ಜನರಿಗೆಲ್ಲ ಹೆದರಿದರೆ ಆಗತ್ತೇ? ನಮ್ಮ ಫ್ರೆಂಡ್‌ಶಿಪ್‌ಗೆ ಅವರದೇನ್ರಿ? ಎಂದ ನಾರಾಯಣ. ಏನೋಪ್ಪ ಎಂದ ಶ್ರೀನಿವಾಸ....

ಕೆಲವು ದಿನ ಹಾಗೇ ಇತ್ತು. ಮತ್ತೆ ನಾರಾಯಣನು ಪುಷ್ಪದ ಬಳಿಯ ದುಂಬಿಯಂತೆ ಅವರ ಮನೆಗೆ ಅಲೆದಾಡ ತೊಡಗಿದ.

೧೧

ಶಾನುಭೋಗರು ಕಣ್ಣುಮುಚ್ಚಿಕೊಂಡು ಕುಳಿತಿರಲಿಲ್ಲ. ಆದರೆ ಪ್ರಾಯದ ಹುಡುಗನಿಗೆ ಹೇಳುವುದು ಹೇಗೆ?

ಒಂದು ದಿನ, "ನಾಣೀ ಬೆಂಗಳೂರಿಗೆ ಹೋಗಿಬಾರೋ, ನಿಮ್ಮ ಅಕ್ಕ ಬರೆದಿದಾಳೆ." ಎಂದರು.

"ಯಾಕಂತೆ?" ಎಂದ.

"ಯಾಕೋ ಹೋಗಿ ಬಾ, ನಿನ್ನ ನೋಡಬೇಕಂತೆ."

ನಾರಾಯಣ ಬೆಂಗಳೂರಿಗೆ ಹೋಗಿ ಒಂದೆರಡು ತಿಂಗಳಿದ್ದರೆ ಸರಿಹೋಗಬಹುದೆಂದು ಅವರ ಯೋಚನೆ.

ಆದರೆ ನಾರಾಯಣ ಒಂದು ವಾರದಲ್ಲಿ ಹಾಜರು. ಜೊತೆಗೆ ಬುಟ್ಟಿಬುಟ್ಟಿಗಳ ತುಂಬಾ ತರತರದ ಹಣ್ಣುಗಳು. ಅವುಗಳಲ್ಲಿ ಅರ್ಧಪಾಲು ರುಕ್ಮಿಣಮ್ಮನಿಗೆ ನೈವೇದ್ಯ.

೧೨

ಊರಲ್ಲೆಲ್ಲಾ ಗುಲ್ಲೋಗುಲ್ಲು; ಅಂಗಡಿಗಳಲ್ಲಿ, ಹೋಟಲಿನಲ್ಲಿ, ಬಸ್ ನಿಲ್ಲುವ ಸ್ಥಳದಲ್ಲಿ, ಎಲ್ಲಿ ನೋಡಿದರೂ ಇವರ ಮಾತೇ.

ಒಂದು ದಿನ ಶ್ರೀನಿವಾಸ ನನ್ನನ್ನು ಕರೆದು ಈ ವಿಷಯವನ್ನು ಪ್ರಸ್ತಾಪಿಸಿದ. ಏನು ಮಾಡುವುದು ಎಂದು ಕೇಳಿದ. ನನಗೆ ಏನು ಹೇಳುವುದಕ್ಕೂ ತೋಚಲಿಲ್ಲ. ಇವತ್ತು ಸಾಯಂಕಾಲ ವಾಕಿಂಗ್ ಬನ್ನಿ. ಇಬ್ಬರೂ ಹೋಗೋಣ. ಆ ಕುನ್ನಿಗೆ ಹೇಳೋಣ ಎಂದೆ.

ನಾರಾಯಣನನ್ನು ಕರೆದುಕೊಂಡು ಹೊರಟೆವು. ಊರ ಹೊರಗೆ ಒಂದು ಬೈಲಿನಲ್ಲಿ ಕುಳಿತೆವು. ನಾನೇ ಈ ಪ್ರಸ್ತಾಪವನ್ನೆತ್ತಿದೆ. ನಾನು ಹೀಗೆ ಹೇಳುತ್ತೇನೆಂದುಕೊಳ್ಳಬೇಡಿ, ಎಂದು ಪ್ರಾರಂಭಿಸಿದೆ. ನಾರಾಯಣ ಕೇಳಿದ, ಕೇಳಿದ. ನಾನು ಹೇಳಿದ್ದನ್ನೆಲ್ಲ ಕೇಳಿದ. ಕೊನೆಗೆ, "ಮದುವೆಯಲ್ಲಿ ಎಷ್ಟು ವಿಧ?" ಎಂದ.

ಆಶ್ಚರ್ಯವಾಗಿ, "ಏನು ಹಾಗೆಂದರೆ?" ಎಂದೆ.

"Love marriage ಎನ್ನೋದನ್ನ ಕೇಳಿದ್ದೀರಾ?" ಎಂದ.

"ಸ್ವಲ್ಪ ಕೇಳಿದ್ದೇನೆ. ಅದೂ ಇಂಗ್ಲೀಷ್ ನಾವಲ್ಲುಗಳಲ್ಲಿ."

"Divorce ಅನ್ನೋದನ್ನೂ ಕೇಳಿದ್ದೀರಾ?" ಎಂದ ಮತ್ತೆ.

ಶ್ರೀನಿವಾಸನಿಗೆಲ್ಲಿತ್ತೋ ಸಿಟ್ಟು, ಎದ್ದ. ಮುಖವು ಕೆಂಪಗಾಯಿತು.—ಕಪ್ಪು ಬಣ್ಣವು ಕೆಂಪಗಾಯಿತು.

"ಏನದು, ಸರಿಯಾಗಿ ಬಗುಳು!" ಎಂದ.

"ಬಗುಳೋದೇನು, ಸರಿಯಾಗಿ ಇನ್ನು?"

"ನಾಯಿ" ಎನ್ನುತ್ತಾ ಫಟೀರನೆ ಒಂದು ಏಟು ಬಿಟ್ಟ ಶ್ರೀನಿವಾಸ. ಕ್ಷಣದಲ್ಲಿ ನನ್ನ ಕೈಮೀರಿ ಹೋಯಿತು. ಹಾಗೂ ಹೀಗೂ ನಾನು ಬಿಡಿಸುವ ವೇಳೆಗೆ ಒಂದು ಡಜನ್ ವರೆಗೆ ತಿಂದಿದ್ದ ನಾರಾಯಣ.

ರಾಜು ನಿಲ್ಲಿಸಿದ.

"ಮಟುಂದೆ?" ಎಂದೆ.

"ಮುಂದೇನು?" ಎಂದ.

"ಏನು?" ಎಂದೆ.

"ಅಲ್ಲಿಗೇ ನಿಂತಿತು. ನಾರಾಯಣನ ತಲೆ ತಣ್ಣೀರಿನಲ್ಲದ್ದಿದಂತಾಯಿತು. ಹುಚ್ಚು ಬಿಟ್ಟಿತು!"

"ರುಕ್ಮಿಣಮ್ಮ?"

"ಶ್ರೀನಿವಾಸ ಬೇರೆ ಕಡೆ ವರ್ಗಮಾಡಿಸಿಕೊಂಡ."

"ಅದೆಲ್ಲ ಸರಿ, ಈ ಕಥೆಗೂ ನಿನ್ನ ಅವತಾರಕ್ಕೂ ಏನು ಸಂಬಂಧ?" ಎಂದೆ

"Be a Roman while you are in Rome" ಎಂದ.

"ಏನು ಹಾಗೆಂದ್ರೆ ನಿನ್ನ ತಲೆ?"

“ಇನ್ನೂ ತಿಳೀಲಿಲ್ವೇನೊ, ಎಲ್ಲೆಲ್ಲಿ ಹೇಗಿರಬೇಕೋ ಹಾಗಿರಬೇಕು. ಆಕಾಶದ ಮೇಲೆ ನಡೆಯಬಾರದು. ನಾವು ಇಂಗ್ಲೆಂಡಿನಲ್ಲಿಲ್ಲ ಈಗ. ಕಥೆ ಕಾದಂಬರಿ ಓದಿಕೊಂಡ ಮಾತ್ರದಿಂದ ಬುದ್ಧಿವಂತರಾಗಲಿಲ್ಲ.”


“ಅದು ಸರಿ, ನೀನು ಯಾಕೆ ಹೀಗೆ ವಿರೂಪವಾಗ ಬೇಕು ?”

“ಹಳ್ಳಿಯ ಮೇಷ್ಟ್ರು ಹೇಗಿರಬೇಕು ಮತ್ತೆ ?”

“ಸೂಟು ಹಾಕಿದರೇನಡ್ಡಿ ?”

“ನಿನಗಿನ್ನೂ ಗೊತ್ತಿಲ್ಲ ಪ್ರಪಂಚ. ಹಳ್ಳೀಗೆ ಬಾ ಗೊತ್ತಾಗತ್ತೆ. ನಿನ್ನ ಸೂಟು, ನಿನ್ನ ವಾಕಿಂಗ್, ನಿನ್ನ Ideal ಎಲ್ಲಾ ಗೊತ್ತಾಗತ್ತೆ. ನಾನು ಎಷ್ಟೆಷ್ಟೋ Ideals ಇಟ್ಟುಕೊಂಡಿದ್ದೆ. ಆದರೆ ಎಲ್ಲವನ್ನೂ ಜೀವನಕ್ಕೆ ಹೊಂದಿಸಿ ಕೋಬೇಕು. ನಾರಾಯಣನ ಹಾಗೆ ಆಗಬಾರದು.” ಎಂದ.

ಅವನ ಚುರುಕು ಬುದ್ಧಿಗೆ ಮೆಚ್ಚಿದೆ. ಪ್ರಪಂಚ ಜ್ಞಾನ ಎಲ್ಲಿ ಕಲಿತ ಇಷ್ಟನ್ನ ಎಂತ ಆಶ್ಚರ್ಯ ನನಗೆ. ಇಷ್ಟು ಬುದ್ಧಿ ಕ್ಲಾಸಿನಲ್ಲಿ ಖರ್ಚುಮಾಡಿದ್ದರೆ ಖಂಡಿತವಾಗಿ B.A.ಲಿ ಮೂರು ಸಲ ಡುಂಕಿ ಹೊಡೀತಾ ಇರಲಿಲ್ಲ !



ನಗಬೇಡಿ

ಆಕೆ:—ಅಲ್ಲೆ! ನಿನ್ನ ಎರಡನೆ ಗಂಡನ ಪರಿಚಯ ಮೊದಲು ನಿನಗೆ ಹೇಗಾಯಿತು?

ಈಕೆ:—ಅದೊಂದು ರಮ್ಯ ಕತೆ. ನನ್ನ ಮೊದಲನೆ ಗಂಡನು ಈ ಎರಡನೆ ಗಂಡನ ಮೋಟರಿನ ಕೆಳಗೆ ಸಿಕ್ಕು ಕೊಂಡನು.

* * *

ಈತ:—ನಿಮ್ಮನ್ನು ದಿಟ್ಟಿಸಿ ನೋಡಿದುದಕ್ಕೆ ಕ್ಷಮಿಸಿ; ನಿಮ್ಮ ಮುಖ ತೀರ—ಮೀಸೆಯೊಂದನ್ನು ಬಿಟ್ಟರೆ—ನನ್ನ ಹೆಂಡತಿಯ ಹಾಗೇ ಇದೆ.

ಆಕೆ:—ನನಗೆ ಮೀಸೆಯಿಲ್ಲವಲ್ಲ!

ಈತ:—ನನ್ನ ಹೆಂಡತಿಗೆ ಸ್ವಲ್ಪ ಮೀಸೆಯಿವೆ.

* * *

ರಂಗ:—ಯಾಕೋ ಕಿಟ್ಟು ಮಂಕಾಗಿದ್ದಿ ಇವತ್ತು?

ಕಿಟ್ಟು:—ಸ್ಯಾಕಲ್ಲು ಹೊಡೆಯುವಾಗ ದಾರಿಯಲ್ಲಿ ಒಬ್ಬನ ಸಂಗಡ ಜಗಳವಾಗಿ ಹೊಡಿಸಿಕೊಂಡೆ.

ರಂಗ:—ಪೋಲೀಸರಿಗೆ ಹೇಳಬೇಕಿತ್ತು!

ಕಿಟ್ಟು:—ಅವನು ಪೋಲಿಸನೇ ಆಗಿದ್ದ.

* * *

ರಮಾ:—ಉಮಾ, ನಿನ್ನ ಗಂಡನಿಗೆ ಇಷ್ಟು ಕೆಲಸದಲ್ಲಿ ಓದಲಿಕ್ಕೆ ಸಮಯವಿದೆಯೆ?

ಉಮಾ:—ನಾನು ಅವರ ಸಂಗಡ ಮಾತಾಡಬೇಕೆಂದು ತಯಾರಾದ ಕೂಡಲೆ ಅವರಿಗೆ ಓದಬೇಕೆಂಬಾಸೆ ಹುಟ್ಟು ತ್ತದೆ.

* * *

ತಂದೆ:—ಮಗು ನೀನು ದೊಡ್ಡವನಾದ ಮೇಲೆ ಯಾವ ಉದ್ಯೋಗ ಮಾಡಬೇಕೆನ್ನುವಿ?

ಮಗ:—ನಾನು ಸೈನಿಕನಾಗುತ್ತೇನೆ.

ತಂದೆ:—ಯುದ್ಧದಲ್ಲಿ ವೈರಿಗಳು ಕೊಂದುಬಿಟ್ಟರೆ?

ಮಗ:—ನಾನು ವೈರಿಗಳ ಸೈನಿಕನೇ ಆಗುತ್ತೇನೆ.

* * *

ನ್ಯಾಯಾಧೀಶ:—ಬಾಯಿಾ, ನಿಮಗೆ ಬಹಳ ಪ್ರಶ್ನೆ ಗಳನ್ನು ಕೇಳಿದೆ; ತ್ರಾಸ ಆಗಲಿಲ್ಲವಷ್ಟೆ?

ಆಕೆ:—ಛೇ ಛೇ! ನಮ್ಮ ಪುಟ್ಯಾ ಇಡೀ ದಿನ ಪ್ರಶ್ನೆ ಕೇಳತಾನ, ನನಗ ಬ್ಯಾಸರ ಬರೋದಿಲ್ಲ.

* * *

ಮಗ:—ಅಪ್ಪಾ, ನಾನೀಗ ಒಳ್ಳೇ ಮಿತವ್ಯಯ ಕಲಿತಿ ದ್ದೇನೆ.

ಅಪ್ಪ:—ಅದೇನಪ್ಪಾ?

ಮಗ:—ನೀನು ನನಗೆ ಸಾಯಕಲ್ಲು ಕೊಡಿಸಿದರೆ ನನ್ನ ಬೂಟು ಸವೆಯುವದು ಕಡಿಮೆಯಾಗುತ್ತದೆ!

* * *

ಒಬ್ಬ ಕೈದಿ:—ನಿನ್ನ ತಲೆ ಇಷ್ಟೇಕೆ ಬೋಳಾಗಿದೆಯೋ?

ಇನ್ನೊಬ್ಬ ಕೈದಿ:—ನನ್ನ ಒಳ್ಳೆಯ ನಡತೆಗಾಗಿ ನನ್ನ ತಾಯಿ ಸಾವಿರಾರು ಸಲ ನನ್ನ ತಲೆಗೆ ತಟ್ಟುತ್ತಿದ್ದಳು.

* * *

ಹೊಸ ಹೆಂಡತಿ:—ನಿಮ್ಮಲ್ಲಿ ದುಡ್ಡು ಬಹಳ ಇದೆಯೆಂದು ದೊಡ್ಡ ಸುಳ್ಳು ಹೇಳಿದಿರಲ್ಲ ಮದುವೆಗೆ ಮುಂಚೆ.

ಗಂಡ:—ನನ್ನಲ್ಲಿ ಬುದ್ಧಿಗಿಂತ ದುಡ್ಡು ಸ್ವಲ್ಪ ಹೆಚ್ಚಿದೆ ಯೆಂದು ಹೇಳಿದ್ದೆ.

* * *


ತೆಂಗಿನಕಾಯಿ ಕದಿಯಲಿಕ್ಕೆ ಮರ ಹತ್ತಿದವನು ಯಜ ಮಾನನು ಬರುತ್ತಿರುವುದನ್ನು ನೋಡಿ ಕೆಳಗೆ ಇಳಿದು ಬರು ವನು. ಯಜಮಾನನು ಗದರಿಸಿ ಕೇಳುವನು:—ತೆಂಗಿನ ಮರವನ್ನೇಕೆ ಹತ್ತಿದೆಯೋ?

ಕಳ್ಳ:—ನಮ್ಮ ದನಕ್ಕೆ ಸ್ವಲ್ಪ ಹುಲ್ಲು ಬೇಕಿತ್ತು.

ಯಜಮಾನ:—ತೆಂಗಿನ ಮರದ ಮೇಲೆ ಹುಲ್ಲು ಸಿಗುತ್ತ ದೇನೋ?

ಕಳ್ಳ:—ಸಿಗಲಿಲ್ಲವೆಂದೇ ಕೆಳಗಿಳಿದು ಬಂದೆ ಸ್ವಾಮಿಾ.




GOPAL SAKHARAM & Co.



ಉಂಡಾಡಿಯು ಅಧ್ಯಕ್ಷನಾದುದು

ಲೇಖಕ:— ಉಂಡಾಡಿ ಅ. ಬ. ಕ. ಡ.

★

ಜಗತ್ತಿನ ಭಾರವನ್ನು ಬೆಳೆಸುವುದೇ ಧರ್ಮ; ಏಕೆಂದರೆ ಅದು ಪ್ರಜೆಗಳ ಹೊಟ್ಟೆಯ ಭಾರವನ್ನು ಬೆಳೆಸುತ್ತದೆ. ನಾವೆಲ್ಲರೂ ಸಾಕೆಷ್ಟು ಭಾರವಾಗಿಲ್ಲವೆಂದೆ ಬಿಹಾರದ ಭೂಕಂಪವಾಯಿತು. ನಮ್ಮ ಪುಣ್ಯಭೂಮಿಯಲ್ಲಿ ಪುರಾತನ ಕಾಲದಿಂದ ಮೈಭಾರ ಬೆಳೆಸುವ ಧರ್ಮವು ವಿಶೇಷವಾಗಿರುವುದರಿಂದಲೇ ಮಿಕ್ಕೆಲ್ಲ ದೇಶಗಳಿಂತ ಇಲ್ಲಿ ಭೂಕಂಪಗಳು ಕಡಿಮೆ. ಜಪಾನಿಗಳು ಮೈಭಾರದ ಧರ್ಮವನ್ನು ದುರ್ಲಕ್ಷಿಸಿದುದರಿಂದಲೇ ಅಲ್ಲಿ ಪುನಃಪುನಃ ಭೂಕಂಪಗಳಾಗುತ್ತವೆ.

★

ಮೊನ್ನೆ ಧಾರವಾಡಕ್ಕೆ ಹೋದಾಗ ಒಂದು ಸಭೆಯಾಯಿತು. ವಿಷಯ ಧರ್ಮ. ಆಷಾಢ ಏಕಾದಶಿಯಾದ್ದರಿಂದ ಫಲಾಹಾರದಿಂದಲೇ ಹೊಟ್ಟೆ ಭಾರವಾಗಿತ್ತು. ಬರಿ ಹೊಟ್ಟೆ ಭಾರವಾದರೆ ಮೈ ಒಗ್ಗಾಲಿಯಾದೀತೆಂದು ತಲೆಯೂ ಸ್ವಲ್ಪ ಭಾರವಾಗಲೆಂದು ಸಭೆಗೆ ನಾನೂ ದಯಮಾಡಿಸಿದೆ. ನೀವು ಏನೇ ಅನ್ನಿರಿ. ನಮ್ಮ ಉಂಡಾಡಿ ಸಂಘದ ನಡಿಗೆಯೇ ಧೀರೋದಾತ್ತವಾದುದು. ನಾನೂ ಆ ಸಂಘದವನೆಂದು ಮೊದಲೆ ಗೊತ್ತಾಗುವಂತೆ ಗುಂಡಿ ಬಿಚ್ಚಿದ ಅಂಗಿಯ ಸಂದಿಯೊಳಗಿಂದ ನನ್ನ ತುತ್ತಿನ ಚೀಲ, ಅಧಿಕಪ್ರಸಂಗಿಯಂತೆ ಹೊರಗೆ ಹಣಿಕಿ ಹಾಕುತ್ತಲೇ ಇತ್ತು. ಬಾಗಿಲಲ್ಲಿ ನಿಂತಿದ್ದ ಸಂಣ ಸ್ವಯಂಸೇವಕ ನನ್ನ ಆ ತುತ್ತಿನ ಚೀಲವೇ ಅತ್ತ ಸರಿಸಿತು.

ಸಾರ್ವಜನಿಕ ವ್ಯಾಖ್ಯಾನ. ಆದರಲ್ಲಿಯೂ ನಾನು ಉಂಡಾಡಿ. ಅಂದ ಮೇಲೆ ಕುರ್ಚಿಗಳನ್ನು ನಮಗಲ್ಲದೆ ಮತ್ತಾರಿಗೆ ಹಾಕುತ್ತಾರೆ! ನಾನು ಹೋಗಿ ಚಂದ ಕಾಣುವ ನಡುವಿನ ಕುರ್ಚಿಯಲ್ಲಿ ವಿರಮಿಸಿದೆ. ಅವನಿಗೇನು ಗ್ರಹಚಾರ ವಕ್ರಿಸಿತ್ತೋ, ಒಬ್ಬ ಲಂಡ ಚಂಣ ಲಂಡ ಅಂಗಿಯ ಲಂಡ ಮನುಷ್ಯನು ಬಂದು 'ಅದು ಅಧ್ಯಕ್ಷರಿಗೆ ಹಾಕಿದ ಕುರ್ಚಿ. ನೀವು ಹಿಂದಿನ ಸಾಲಿಗೆ ಹೋಗಿರಿ' ಎಂತ ಧೈರ್ಯದಿಂದ ಹೇಳಿ ಬಿಟ್ಟ. ನನಗೆ ರೇಗಿತು. ನಾನೆಂದೆ 'ನಾನು ಅಧ್ಯಕ್ಷ ಅಲ್ಲ ಅಂತ ನನ್ನ ಹಣೇ ಮೇಲೆ ಬರೆದಿಯೇನು? ಅಧ್ಯಕ್ಷ ಯಾರಂತ ತಿಳಿದೀದಿ?' ಹೀಗೆಂದು ನನ್ನ ಉಬ್ಬಿದ ಗಲ್ಲದ ಹಿಂದೆ ಹುದುಗಿದ ಕಂಣು ಕಿಸಿದು ನೋಡಿದೆ. ಸ್ವಯಂಸೇವಕ ಬೆದರಿದ. 'ಕ್ಷಮಿಸಿರಿ.... ನನಗೆ ಗೊತ್ತಿರಲಿಲ್ಲ....ಕ್ಷಮಿಸಿರಿ' ಎಂದು ನಡುನಡುಗುತ್ತ ಹೇಳಿ ಹೋಗಿ ಬಿಟ್ಟ.

ಶ್ರೋತೃಗಳು ಬೆಳೆಯುತ್ತ ನಡೆದರು. ನನ್ನಿಂದ ಬೈಸಿಕೊಂಡು ಹೋದ ಸ್ವಯಂಸೇವಕನು, ಅಧ್ಯಕ್ಷರು ಬಂದಿದ್ದಾರೆಂದು ನನ್ನ ಕಡೆಗೆ ಬೆರಳು ತೋರಿಸುತ್ತ ಸಮಾಧಾನ ಪಡಿಸುತ್ತಿದ್ದನು. ನನ್ನ ಮುಂದಿನ ಮೇಜಿನ ಮೇಲೆ ಒಂದು ಗ್ಲಾಸಿನಲ್ಲಿ ಕುಡಿಯುವ ನೀರು ಇಟ್ಟಿದ್ದರು. ನನಗೆ ಹಾಲು ತುಪ್ಪದಲ್ಲಿಯ ಸೀಸಜ್ಜಿಗೆಯ ಫಲಾಹಾರದಿಂದ ನೀರಡಿಕೆ ವಿಶೇಷವಾಗಿತ್ತು. ಸರಿ, ಗ್ಲಾಸು ಎತ್ತಿ ಗಂಟಲಿಗೆ ಬಸಿದು ಬಿಟ್ಟು ಒಬ್ಬ ಸ್ವಯಂಸೇವಕನ ಕಡೆ ನೋಡಿದೆ. ಅವನು ಕೂಡಲೆ ವಿಧೇಯತೆಯಿಂದ ಮತ್ತೊಂದು ಗ್ಲಾಸು ತುಂಬಿ ಇಟ್ಟನು. ಅವನು ಪುನಃ ತನ್ನ ಸ್ಥಳಕ್ಕೆ ಮುಟ್ಟುವದರೊಳಗೆ ಗ್ಲಾಸು ಬರಿದಾದುದನ್ನು ನೋಡಿದ. ಅವನು ಅಲ್ಲಿಯೇ ಓಡಾಡುತ್ತಿದ್ದ ಇನ್ನೊಬ್ಬ ದೊಡ್ಡ ಮನುಷ್ಯರ ಹತ್ತಿರ ಹೋಗಿ ಏನೋ ಹೇಳಿದ. ಮತ್ತೆ ನನ್ನ ಹತ್ತಿರ ಬಂದು 'ತಮಗೆ ಬಹಳ ನೀರಡಿಕೆಯಾದಂತೆ ಕಾಣುತ್ತದೆ. ಸ್ವಲ್ಪ ಬಿಸಿ ಹಾಲನ್ನು ತರಿಸಲೇ?' ಎಂದು ಕೇಳಿದ. ನಾನು 'ಅದಕ್ಕೆ ಸ್ವಲ್ಪ ಬದಾಮಿ ದ್ರಾಕ್ಷಿ ಹಾಕಿ ತಂದರೆ ಒಳ್ಳೇದು. ನನಗೆ ನಿರಾಹಾರ. ಇಲ್ಲದಿದ್ದರೆ ಸ್ವಲ್ಪ ಕಾಫಿ ವಾಸನೆ ಬರುವಂತೆ ಮಾಡಿರಿ. ಆದಾವದೂ ಸಿಗದಿದ್ದರೆ ಒಂದು ಕಪ್ಪು ಬಾಸುಂದಿ ತಗೊಂಡು ಬರ್ರಿ ಅಂದೆ.'

ಸಭಿಕರೆಲ್ಲರೂ ನನ್ನ ಕಡೆಗೆ ಪೂಜ್ಯಭಾವದಿಂದ ನೋಡುತ್ತಿದ್ದರು. ಕೆಲ-ಕೆಲವರು ಮಾತ್ರ ವಿಚಿತ್ರ ರೀತಿಯಿಂದ ನನ್ನ ಕಡೆಗೆ ನೋಡಿ ತಮ್ಮತಮ್ಮೊಳಗೆ ಏನೇನೋ ಪಿಸುಗುಟ್ಟುತ್ತಿದ್ದರು. ಸ್ವಯಂಸೇವಕನು ಕಾಫಿ ತಂದು ಎದುರಿಗಿಟ್ಟ. ನಾನು 'ಬರೆ ಕಾಫಿ ತಂದೆಯಲ್ಲಪ್ಪ! ಒಂದು ಮಸಾಲಿ ದೋಸೆ ತರಬೇಕೆಂಬೋದೂ ತಿಳೀಲಿಲ್ಲ! ಒಳ್ಳೆ ಸ್ವಯಂಸೇವಕರು' ಎಂದು, ಒಂದೇ ಗುಟುಕಿಗೆ ಕಾಫೀ

ಕಪ್ಪನ್ನು ಬರಿದಾಗಿಸಿದೆ. ಸಭಿಕರ ಗದ್ದಲ ಹೆಚ್ಚಾಯಿತು. ಆದರೆ ಈ ವರೆಗೆ ಅಧ್ಯಕ್ಷರೂ, ಸಭೆಯನ್ನು ಕರೆದ ಮಹನೀಯರೂ ಬರಲೆ ಇಲ್ಲ. ಸ್ವಯಂಸೇವಕರು ಏನು ಮಾಡಬೇಕೆಂಬುದು ತಿಳಿಯದೆ ನನ್ನ ಹತ್ತರ ಬಂದು "ಸುಂದರಶಾಸ್ತ್ರಿಗಳು ಅಗತ್ಯದ ಕೆಲಸವಿದ್ದುದರಿಂದ ಹುಬ್ಬಳ್ಳಿಗೆ ಹೋದರು. ಬೇರೆ ಹಿರಿಯರಾರೂ ಬರಲಿಲ್ಲ. ಆದ್ದರಿಂದ ತಾವು ಸಭೆಗೆ ನಾಲ್ಕು ಹಿತೋಪದೇಶಗಳನ್ನು ಹೇಳಲಿಕ್ಕೆ ಇನ್ನು ಆರಂಭಿಸಬಹುದು" ಎಂದರು. ನಾನು "ಓಹೋ ಅದಕ್ಕೇನಂತೆ. ಆದರೆ ನನಗೀಗ ಸ್ವಲ್ಪ ಲಘುಶಂಕೆಗೆ ಹೋಗುವ ಅವಸರವಾಗಿದೆ. ಇಲ್ಲಿ ಅದಕ್ಕೆನೂ ವ್ಯವಸ್ಥೆಯಿಲ್ಲವೇ? ಪರಸ್ಥಳ! ಆಷಾಢ ಏಕಾದಶಿ!" ಎಂದೆ. ಸ್ವಯಂಸೇವಕನು ನನ್ನನ್ನು ಕರಕೊಂಡು ಹೋದ.' ಎಂದೆ.

ತಿರುಗಿ ಸಭೆಗೆ ಬರುವದರೊಳಗೆ ಅಂದು ಅಧ್ಯಕ್ಷರಾಗಬೇಕಾಗಿದ್ದ ಕಾಶೀ ವಿಶ್ವನಾಥಶಾಸ್ತ್ರಿಗಳು ಬಂದು ನಮ್ಮ ಪೀಠದ ಮೇಲೆ ವಕ್ರಿಸಿದ್ದರು. ಈ ಊರಿಗೆ ಅವರೂ ಹೊಸಬರು ಮತ್ತು ದೂರದವರು, ನಾನೂ ಹೊಸಬ ಮತ್ತು ಅಪರಿಚಿತ. ನಮ್ಮಿಬ್ಬರಲ್ಲಿ ಅಧ್ಯಕ್ಷರು ಯಾರೆಂಬುದೆ ಜನರಿಗೆ ತಿಳಿಯದಂತಾಯಿತು. ಶಾಸ್ತ್ರಿಗಳು ಕಾಶ್ಮೀರಿ ಶಾಲನ್ನು ತಲೆಗೆ ಸುತ್ತಿದ್ದರು. ನಾನೂ ಹೊದ್ದುಕೊಂಡಿದ್ದ ಕಂಬಳಿ ತೆಗೆದು ತಲೆಗೆ ಸುತ್ತಿ ಬಿಟ್ಟೆ. ಅಕಸ್ಮಾತ್ತಾಗಿ ಸಿಕ್ಕ ಅಧ್ಯಕ್ಷಪದವನ್ನು ಸುಮ್ಮನೆ ಬಿಟ್ಟು ಕೊಡುವದು ನನಗೆ ಯೋಗ್ಯವೆನಿಸಲಿಲ್ಲ. ಕೂಡಲೆ ಸ್ವಯಂಸೇವಕರನ್ನು ಕರೆದು 'ಅಗೋ ಆ ಶಾಲಿನವರಿಗೆ ಕಾಫಿ ದೋಸೆ ಏನೂ ಕೊಡಬಾರದು. ನೀರು ಸಹ ತೋರಿಸಬೇಡಿರಿ.' ಎಂದೆ,

ನನ್ನ ಗರ್ಜನೆಯನ್ನು ಕೇಳಿ ವಿಶ್ವನಾಥಶಾಸ್ತ್ರಿಗಳು ಗಂಭೀರವಾಗಿ ನನ್ನ ಕಡೆ ನೋಡುತ್ತ ಎದ್ದು ನಿಂತರು. ನನಗೆ ಏಕಾದಶಿಯ ಫಲಾಹಾರವೆಲ್ಲ ತಲೆಗೇರಿತು. ನೆಟ್ಟಗೆ ಅವರಿದ್ದಲ್ಲಿಗೆ ಹೋಗಿ ಮೇಜಿನ ಮೇಲೆ ಹತ್ತಿ ನಿಂತು 'ಏನು ಹೊಡೆಯುತ್ತೀರೇನು? ಆದೂ ಆಗಲಿ ಒಂದು ಕೈ! ಎಷ್ಟೆಂದರೂ ಉಂಡಾಡಿ ಪಂಥದವನಷ್ಟು ಏಕಾದಶಿ ನೀವು ಮಾಡಿರಲಿಕ್ಕಿಲ್ಲ! (ಸಭಿಕರ ಕಡೆಗೆ ತಿರುಗಿ) ಪ್ರಿಯ ಶಿಷ್ಯರೇ, ನಿಮ್ಮ ಅಭಿಪ್ರಾಯವೇನು? ಈ ಸಭೆಗೆ ಯಾರು ಅಧ್ಯಕ್ಷರಾಗಲಿಕ್ಕೆ ಯೋಗ್ಯರು? ಈ ಜೋಟುದ್ದ ಶಾಸ್ತ್ರಿಯೆ, (ಎದೆ ತಟ್ಟಕೊಂಡು) ಈ ಮಾರುದ್ದ ಉಂಡಾಡಿಯೇ? ದೊಡ್ಡವರು; ದೊಡ್ಡ ತಲೆಯವರು; ದೊಡ್ಡ ಮನಸ್ಸಿನವರು ಎಂಬ ಬರಿ ಮಾತೇಕೆ? ಈಗ ನಮ್ಮಿಬ್ಬರನ್ನೂ ಅಳೆದು ನೋಡಿರಿ; ಯಾರು ದೊಡ್ಡವರೆಂಬುದು ತಿಳಿಯುತ್ತದೆ. ನನ್ನ ದೊಡ್ಡ ಮನಸ್ಸಿನ ವಿಷಯಕ್ಕೆ ಬೇರೆ ಉದಾಹರಣೆಯೇ ಬೇಡ. ಇದೇ ಈಗ ಹಾಲು ಬೇಕೆ ಎಂದು ಸ್ವಯಂಸೇವಕರು ಕೇಳಿದಾಗ ನಾನು ಬದಾಮಿ ದ್ರಾಕ್ಷಿ ಕಾಫಿ ಮಸಾಲಿದೋಸೆ ಎಲ್ಲಾ ಬೇಕೆಂದು ಒಂದೇ ಸಲಕ್ಕೆ ಹೇಳಿದ್ದೇನೆ.' (ಸಭಿಕರು ಕೇಕೆ ಹಾಕುತ್ತ ಕೈ ತಟ್ಟಿದರು).

ನನಗಿನ್ನೂ ಹುರುಪು ಬಂದಿತು. "ಇನ್ನು ಇವತ್ತಿನ ವಿಷಯ ಧರ್ಮ. 'ಶರೀರಮಧ್ಯಂ ಖಲು ಧರ್ಮಸಾಧನಂ' ಅಂದರೆ ಶರೀರ ಮಧ್ಯವಾದ ಹೊಟ್ಟೆಯನ್ನು ಬೆಳೆಸುವದೇ ಧರ್ಮಸಾಧನದ ಮರ್ಮ. 'ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ' ಅಂದರೆ ಪ್ರಜೆಗಳ ಭಾರವನ್ನು ಬೆಳೆಸುವದೇ ಧರ್ಮ. ಏಕೆಂದರೆ ಆಹಾರವು ಹೊಟ್ಟೆಯ ಭಾರವನ್ನು ಬೆಳೆಸುತ್ತದೆ; ಸತ್ತೇಲ್ಲೈತಿ ಧರ್ಮಃ? ಅಂದರೆ ಏಕಾದಶಿ, ಅಮಾವಾಸಿ ಉಪವಾಸ ಮಾಡಿ ಸತ್ತರೆ ಎಲ್ಲಿದೆ ಧರ್ಮ. ಆದುದರಿಂದ ನಮ್ಮ ಧರ್ಮಭಕ್ತಿಯಿಂದ ನಮ್ಮ ಭಾರವನ್ನು ಬೆಳೆಸಬೇಕು. ನಾವೆಲ್ಲರೂ ಸಾಕಷ್ಟು ಭಾರವಾಗಿಲ್ಲವೆಂದೇ ಭೂಕಂಪವು. ನಮ್ಮ ಅಧರ್ಮ ಹೆಚ್ಚಿದುದರಿಂದಲೇ ನಾವು ಸಾಕಷ್ಟು ಮೈಭಾರವನ್ನು ಬೆಳೆಸಿಕೊಳ್ಳದ್ದರಿಂದಲೇ ಬಿಹಾರದ ಭೂಕಂಪವಾಯಿತೆಂದು ಮಹಾತ್ಮಾ ಗಾಂಧಿಯವರು ಹೇಳಿದ್ದನ್ನು ನೀವು ಮರೆಯಬಾರದು. ನಮ್ಮ ಪುಣ್ಯಭೂಮಿಯಲ್ಲಿ ಪುರಾತನ ಕಾಲದಿಂದ ಮೈಭಾರ ಬೆಳೆಸುವ ಧರ್ಮವಿದ್ದೇ ಇದೆ. ಆದ್ದರಿಂದ ಬೇರೆ ದೇಶಗಳಿಗಿಂತ ಇಲ್ಲಿ ಭೂಕಂಪಗಳು ಕಡಿಮೆ. ಜಪಾನಿಗಳು ಈ ಮೈಭಾರದ ಧರ್ಮವನ್ನು ಬಹಳ ದುರ್ಲಕ್ಷಿಸಿದ್ದರಿಂದಲೇ ಅಲ್ಲಿ ಭೂಕಂಪಗಳು ಹೆಚ್ಚಾಗುತ್ತಿವೆ. ಆದ್ದರಿಂದ ನಿಮ್ಮೆಲ್ಲರನ್ನು ಧರ್ಮಪರರನ್ನಾಗಿ ಮಾಡಲು ನಾವು ಉಂಡಾಡಿ ಸಂಘವನ್ನು ಹೊರಡಿಸಿದ್ದೇವೆ. ನೀವೆಲ್ಲರೂ ಸದಸ್ಯರಾಗಿ ನಮ್ಮ ಪುರಾತನ ಧರ್ಮವನ್ನು ಉಳಿಸಿರಿ." (ಸಭಿಕರು ಚಪ್ಪಾಳೆ ತಟ್ಟುತ್ತ ಮನೆ ಹಿಡಿದರು.)

ಅಷ್ಟರಲ್ಲಿ ಹುಬ್ಬಳ್ಳಿಯಿಂದ ತಿರುಗಿ ಬಂದ ಸುಂದರಶಾಸ್ತ್ರಿಗಳು ಸಭಿಕರನ್ನು ತಡೆದು ಏನೇನೋ ಹೇಳಿದರು. ಗದ್ದಲದಲ್ಲಿ ಯಾರಿಗೂ ಅದು ಕೇಳಿಸಲಿಲ್ಲ. ನಾನು ಮೇಜಿನಿಂದ ಕೆಳಗಿಳಿದು ನೋಡುತ್ತೇನೆ. ಶಾಲಿನ ... ನಾನು ಬಗ್ಗಿ ಅದನ್ನು ... ಹಾರ ತುರಾಯಿ ಇತ್ತು.

ಕೊಳ್ಳುವವನಿದ್ದೆ. ಒಬ್ಬ ಸ್ವಯಂಸೇವಕನು ಓಡಿ ಬಂದು ಹಾನೇ ಹಾರ ಹಾಕಿ ತುರಾಯಿ ಕೈಗೆ ಕೊಟ್ಟ.

ಮರುದಿನ ಪತ್ರಿಕೆಗಳಲ್ಲಿ "ಕಾಶೀವಿಶ್ವನಾಥ ಶಾಸ್ತ್ರಿಗಳಿಗೆಂದು ಏರ್ಪಡಿಸಿದ ಸಭೆಯಲ್ಲಿ ಯಾರೋ ದೊಡ್ಡ ಹೊಟ್ಟೆಯ ಜಗಳಗಂಟಿಗರು ಬಂದು ಗದ್ದಲವನ್ನೆಬ್ಬಿಸಿದರು" ಎಂದು ಪ್ರಸಿದ್ಧಿಸಿದರು. ಬೆನ್ನ ಹಿಂದೆ ಮಾತನಾಡಿದರೆ ನಾನೇನು ಮಾಡಲಿ ?

---

೦ ಮಲೆನಾಡಿನ ಒಂದು ಹಳ್ಳಿ ೦

೧

ಮೈಸೂರ ಸಿರಿಮುಡಿಯ ಮಲೆನಾಡ ಮೈಸಿರಿಯ
ಕಣ್ಣಾರೆ ಕಂಡ ಕವಿ ಧನ್ಯನತಿಧನ್ಯ.

ಮುಂಗಾರ ಮಳೆ ಹೊಯ್ಯೆ, ಮಲೆನಾಡಿನಿಳೆ ತೊಯ್ಯೆ,
ತೊಯ್ದ ಬಟ್ಟೆಯನುಟ್ಟ ಗಡಸುಗಾತಿಯರಂತೆ
ಉತ್ತುಂಗ ಗಿರಿನಿಕರ ಕಣ್ಗೆ ಸೊಗಸಲ್ತೆ !

ಗುಳುಗುಳಿಸಿ ಹರಿವ ಕಾಳ್ಪುರಗಳಿಕ್ಕೆಲದಡವಿ
ಮುಕ್ತಿಕಾಂತೆಯ ಬೀಡೊ, ಭಾವದೇವಿಯ ಸಾಡೊ,
ಕವಿಕಾಂಬ ರತ್ನ ಪುತ್ಥಳಿಯ ತಳವಲ್ತೆ !

ಹಳ್ಳಿಗಳ ಹಸುರಂಚು, ಬಾಂದಳದ ಬೆಳ್ಮಿಂಚು,
ಕಾನನಾದ್ರಿಯ ರಮ್ಯ ರೂಪರಾಶಿಯ ಸಂಚು,
ಮಲೆನಾಡೊಳಲ್ಲದನ್ಯತ್ರವಿನ್ನೆಲ್ಲಿ ?

ಇಂತೆಸೆವ ಮಲೆನಾಡಿನಂತರಂಗದ ಸವಿಯೊ,
ಪಂಪರನ್ನಾದಿ ಕವಿರತ್ನರಾಡಿದ ದಿವಿಯೊ,
ಕಣಿವೆ, ತೋಟಗಳಲ್ಲಿ ನೆಲೆನಿಂತ ಹಳ್ಳಿ !

೨

ಮಾಲತಿಯ ತೀರದಲಿ ಮಲೆತು ನಿಂತಿದೆ ಬೆಟ್ಟ
ಮಲ್ಲಿಕಾರ್ಜುನನೆಂಬ ಗರುವಿಕೆಯ ಹೆಸರೆತ್ತಿ.
ತುಂಬಿದ ಹಸುರ್ಗಾಡು ನದಿಯಂಚಿನಲಿ ಹರಡಿ
ಗುಯ್ಯೆಂಬ ಹೇರಡವಿಯಾಗಿ ಮುಚ್ಚಿದೆ ಮಲೆಯ.
ಗಿರಿಯೆದೆಯೊಳಲೆದಲೆದು ಮರೆಯಾದ ಕಾಲ್ದಾರಿ
ಎನಿತು ಸುಗ್ಗಿಯ ಸಿರಿಯನೋಲೈಸಿ ನಿಂದಿಹುದೊ !
ಈ ಕೋಡಿನೀ ತುದಿಯೊಳರೆಬಿದ್ದ ದೇಗುಲವೊ
ಆವ ರಾಯನ ಕಾಲದೈಸಿರಿಯ ಸಿರಿಮುಡಿಯೊ !
ಹಗಲಿರುಳೊಳೋರಂತೆ ಆಳವಾದೀ ಮೌನ
ಕಣ್ಮುಚ್ಚಿ ಕುಳಿತಾವ ಕನಸ ಕಾಣುತಲಿಹುದೊ—
ಕಂಡ ಕನಸಿನ ಸ್ವರ್ಣಲತೆಯ ರತ್ನದ ಹೂವೊ
ಉದಯಾರುಣನ ಕಿರಣರಾಶಿ ರಂಜಿಪುದಲ್ಲಿ ?

ಈ ಬೆಳಗಿನೀ ಬೆಟ್ಟ, ಈ ಶಿಲಾದ್ರಿಯ ಶಿಲ್ಪ,
ಮಾಲತಿಯ ಮೃದುತಲ್ಪವೀ ಕಾಡಿನೀ ಚಂದ,
ಕಲ್ಪಕಲ್ಪಗಳಳಿಯಲಿಂತೆ ತಾ ನಿಲ್ಲುವುವು;
ಬಳಿಯ ಜನಮಾತ್ರವಿದನರಿಯದಿಹುದು ಚಿತ್ರ !

೩

ಗಿರಿಸಮೀಪದಲೆ, ಮಾಲತಿಯ ಮಳಲಂಚಿನಲೆ,
ಪೆರ್ಮರದ ಸಂಚಿನಲೆ ಅವಿತು ಕೂತಿದೆ ಹಳ್ಳಿ.
ಅಡಿಕೆ, ಹೊಂಬಾಳೆ, ಮಾದಲ, ನಿಂಬೆ, ದಾಳಿಂಬ
ಮಾವು, ಕಿತ್ತಳೆ, ಕಂಚಿ, ಫಲತರುವೊ ಹೇರಾಳ.
ಸುಳಿವೆಲರ ತಂಪಿಂಗೆ ಮೈಬಿಟ್ಟ ಮಲ್ಲಿಗೆಯ,
ಜಾಜಿ, ಸೇವಂತಿಗೆಯ ಬಣ್ಣಬಣ್ಣದ ಬಳ್ಳಿ
ಸ್ವಾತಂತ್ರ್ಯಲತೆಯಂತೆ ಹರಡಿದ ತಳಿರ್ದೋಟ
ಬಲುಚಂದ, ಬಲುಚಂದವೆನಿಸಿ ತೋರಿದೆ ನಾಡ!

ಮನೆಗಳೋ ನಾಲ್ಕಾರು; ಅದರೊಳೊಂದೆರಡು
ಅರೆಬಿದ್ದ ಕಲ್ಗೋಡೆ, ಸುಳಿವ ಜನವೊಂದಿಲ್ಲ.
ಉಳಿದಲ್ಪಮಂದಿಗಳೆ ಈ ಹಳ್ಳಿಗದೆ ಜೀವ.
ಮೆದ್ದು ಮುಗಿಯದ ಹಣ್ಣು, ಮುಡಿದು ಕಳೆಯದ ಹೂ
ಅಲೆದು ತೀರದ ಅಡವಿ, ನೀರನಿರ್ಮಲ ತಾವು—
ಇದು ಸಮೃದ್ಧಿಯ ಬೀಡು, ಇದು ಸುಖದ ಕಾಣ್ಕೆ
ಈ ತೆರನ ಸಿರಿಯಿಂದಲೀ ಹಳ್ಳಿ ಬೆಳಗುತಿದೆ,
ಜನಜೀವನವದೇಕೊ ಅಳಲಿಂದ ತೊಳಲುತಿದೆ!

೪

ದಂಡೆತ್ತಿ ಪರರಾಜ್ಯದರಸು ಬಂದರೆ ಬರಲಿ,
ಹಿಂಡುಹಿಂಡಾಗಿ ಬೇಸರಿಕೆ ಬೇನೆಗಳಿರಲಿ,
ಅಣುಮಹತ್ತುಗಳ ತುಲನೆಯ ಶಾಸ್ತ್ರ ಕಣ್ತೆರೆದು
ನೂರಾರು ಲೋಕಗಳನೊಂದೆ ನಿಮಿಷದಿ ಸುಡಲಿ.
ಹೆಸರ ಹೋರಾಟ, ಉಣಲಿರದ ಚೀರಾಟ, ಇ-
ನ್ನೆನಿತೆನಿತೊ ಪರಿಪರಿಯ ಪರಿಭವಗಳೇರಾಟ
ಇಳೆಯನೆಲ್ಲವನುಂಗಿ ನೊಣೆದು ಗರ್ಜಿಸುತಿರಲಿ—
ಏನಾದರೇನಂತೆ, ಇಲ್ಲಿಗವು ಬರದಂತೆ,
ಮೂರು ಕಾಲಕು ಒಂದೆರೀತಿ ರೂಪವ ಧರಿಸಿ
ಕದಲದೆಯೆ ಕುಳಿತಿಲ್ಲಿ ತೃಪ್ತಿಯಿಂದಿದೆ ಹಳ್ಳಿ!

೫

ಮಾಲತಿಯ ತಡಿಯೊಳೆತ್ತರದ ಪುಳಿನಸ್ಥಳದಿ
ಬೆಟ್ಟದಿಳಿಜಾರಿನಲಿ, ತುಸು ಚೆದರಿದಿಕ್ಕೆಯಲಿ
ಬೆಚ್ಚಗಿನ ಮನೆಯೊಂದು; ಮನೆಯ ಮುಂಭಾಗದಲಿ
ಶಳಕಿಪ ಹೂದೋಟ, ನದಿಗಿಳಿವ ಸೋಪಾನ

ಅಲ್ಲಿ ಮಾವಿನ ತೋಪು—ತಳಿರ ತಂಪಿನ ತೆಕ್ಕೆ—
ಶೃಂಗಾರ, ವೀರ, ಕರುಣಾದ್ಭುತ ಕಥಾಸಾರ-
ವನಿತೆನಿತೊ ಕುಡಿಕುಡಿದು ಕುಳಿತು ತೂಕಡಿಸುತಿದೆ.
ಹರಯದೇರಿನ ಹುಡುಗ ಹುಡುಗಿಯರ ಕೂಟಕಿದೆ,
ನಲ್ಮೆ ನಗೆ ನೋಟ ಬೇಟದ ಭಾವಬಂಧನಕೆ
ಇದು ಕಲಿವ ಸಾಲೆಯೆನೆ, ತೂಗಿತೊನೆವೀ ಕೊಂಬೆ
ಹೃದಯರಾಗಧ್ವನಿಗೆ ಶ್ರುತಿಯ ಕೂಡಿಸುತಿಹುದು!
ಹುಡುಗರಾಟವ ಕನಲಿ ನೋಳ್ಪ ಮುದುಕರ ಹಾಗೆ
ಮುದಿಗೂಗೆ ಕುಳಿತಿಲ್ಲಿ ಕೋಗಿಲೆಯ ಕೆಣಕುತಿದೆ,
ಅಂದಿನಿಂದಿನ ಸಿರಿಯೊಳಂತರವ ತೋರುತಿದೆ.

ಇದುವೆ ಬ್ರಹ್ಮನ ಕಾನು, ಅದೊ ಮಹೇಶ್ವರನ ಗಿರಿ,
ಇದೊ ನಂದಿಯಾವಾಸ, ಅದೊ ಮಹಂಕಾಳಿ ಗುಡಿ
ಎಂದು ಜನವೆನಿತೆನಿತೊ ರುದ್ರುರಂಗವ ತೋರಿ
ಈ ಕಾಡಬೀಡೆನದೆ ಭಯಕೆಡೆಯ ಮಾಡುವುದೆ
ಕರಿದುಂಬ ಕವಿಲೆಯನೆ ಹುಲಿಯಂತೆ ನೋಡುವುದೆ!
ಅದೊಡೇನಿಲ್ಲೆ ಕವಿ ಕೂತು ಕವನವ ಗೈಯೆ
ಇದು ಕಲ್ಪನಾಲೋಕದಮರರಾಣಿಯ ಶಯ್ಯೆ.

—ಪಾಂಡೇಶ್ವರ ಗಣಪತಿರಾವ್

○ ಬಾಲ್ಯ ○

ಎಳವೆಯೆಂಬ ಬೆಳ್ಳಿಮುಗಿಲ ಹೆಗಲನೇರಿ ತೊಳಲುತ,
ಜಗದೊಳಲ್ಲಿ ನಭದೊಳಿಲ್ಲಿ ಸೊಗವ ಸೂರೆಗೊಳ್ಳುತ,
ನಲುಮೆಯೆಂಬ ತಳಿರುಮನೆಯೊಳಿರುಳುಪಗಲು ಹೊರಳುತ,
ಆಟಿಯ ಕೆಳೆಯ ಸುಳಿಯೊಳಖಿಳ ಜೀವಿಗಳನು ಸೆಳೆಯುತ,

ಹಿಂದುಮುಂದಿನೆಣಿಕೆಯೆಂಬ ಬಲೆಗೆ ಸಿಲುಕಿ ಸೊರಗದೆ,
ಬಂದ ಸೊಗದಿ ಹಿಗ್ಗ ದಡಸಿದಳಲಿಗಾಗಿ ಮರುಗದೆ,
ತನ್ನ ತಾನೆ ಮರೆತು ಮೆರೆದ ಬಾಳ್ವೆಯಿಂದು ಬರತಿದೆ.
ಬಿನ್ನಗಳಲಿ ಬಿನ್ನನಾಗಿ ಮಣ್ಣುಗೂಡತೊಡಗಿದೆ.

ಎಲ್ಲಿ ತಳಿರ ಮುಗುಳ ನೇಹವಡೆದು ಮಿಡಿದ ಭಾವನೆ?
ಎಲ್ಲಿ ಪಕ್ಷಿಪಶುಗಳೊಲವಿನೊಡನೆ ಕಳೆದ ಕಾಮನೆ?

ಮೆಲ್ಲೆಲರಿನ ಕೂಡೆ ತೊಳಲಿ ಬಂದ ಮಧುರಯೋಚನೆ?
ಮಲ್ಲಿಗೆಗಳ ಜಾಜಿ ಸಂಪಿಗೆಗಳ ಸಖ್ಯಯಾಚನೆ?

ಅಂದಿನೊಂದು ಸೊಗವ ನೆನೆದು ಕಣ್ಣನೀರ ಮಿಡಿಯಲೆ?
ಅಂದಿನಖಿಲ ಸಖರನಿಂದು ಕಾಣದಳಲಿ ಬಳಲಲೆ?
ಅಂದಿನಜ್ಞತೆಯನೆ ಕೋರುತಿಂದು ತಾರುತಿರುವೆನೈ.
ಅಂದಿನೊಂದು ಸರಳಭಾವದಿರವನರಸುತಿರುವೆನೈ.

ಬಂದ ಹರೆಯದಿಂದಲೆದೆಯೊಳಂಧಕಾರ ಕವಿದಿದೆ;
ನಂದಿ ಹೋಯ್ತು ಪ್ರೇಮ; ಕಾಮವಿಂದು ಕವಲುಗೊಂಡಿದೆ.
ಅಂದಿನೆನ್ನ ಬಾಳ್ವೆಸಗ್ಗವಿಂದು ನರಕವೆನಿಸಿದೆ.
ಸಂದ ಬಾಲ್ಯದೊಂದು ನೆನಹಿಗಸುವೆ ಮೊಸಲಾಗಿದೆ.

—ಮೊಗೇರಿ ಗೋಪಾಲಕೃಷ್ಣ ಅಡಿಗ

○ ಬ್ರಹ್ಮಾಂಡ ○

ಕನ್ನಡಿಯು ಒಡೆದೊಡೆದು ತುಣುಕಾಗಿ ಕಾಣುತಿದೆ।
ಧೂಳಿ ಜಲ ಬೆಳಕು ಬೆಳ್ದಿಂಗಳಾಗಿ॥
ಹೊನ್ನು ಹಿತ್ತಾಳಿ ಮರ ಪರ್ಣ ಹೂ ಪಕಳೆಗಳ।
ಚಿಕ್ಕೆಗಳ ಹರಿಣಗಳ ಬಳಗವಾಗಿ ॥ ೧ ॥

ಹರಿವಂಥ ಹೊಳೆಗಳೊಳು ಬಿರಿವಂಥ ಮುಗುಳಿನೊಳು।
ಸುರಿವಂಥ ಸಂತಸದ ಧಾರೆಯೊಳಗೆ॥
ಮುರಿವಂಥ ಸಿಡಿಲಿನಲಿ, ನುರಿವಂಥ ಬಗ್ಗದಲಿ।
ಕುಣಿವಂಥ ಪರತತ್ವವಡಗಿ ತೊಳಗೆ ॥ ೨ ॥

ದರ್ಪಣದ ಮುಖದೊಳಗೆ ನೋಡು ಮುಖವನ್ನಿಟ್ಟು।
ನಿನ್ನ ನಾಸಿಕ ನಯನ ಗಲ್ಲ ಹಲ್ಲು॥
ಸರ್ಪದಲಿ ನೋಡು ನೀ ನಿನ್ನ ಮನವನ್ನಿಟ್ಟು।
ನಿನ್ನ ಚಪಲತೆ ಜೀವ ನಲ್ಮೆ ಸೊಲ್ಲು ॥ ೩ ॥

ನನ್ನಿಯಿಂದಲಿ ಜಗದ ಚಿತ್ರರವನೀಕ್ಷಿಸಲು।
ಗೆರೆ ಬಣ್ಣ ರೂಪು ಜೀವನವು ಸೇರೆ॥
ರನ್ನ ಹುಳ ಮಿಂಚು ನೇಸರ ಚಂದ್ರ ನಕ್ಷತ್ರ।
ಕನ್ನಡಿಯ ತುಣುಕುಗಳು, ಬೆಳಕು ಬೇರೆ ॥ ೪ ॥

—ನೌಕಾಕ್ರೀಡನದ 'ಶ್ರೀಧರ'

✤ ಸಣ್ಣ ಕತೆ ✤

ನೀಲಕನ್ನಡಕ

ಲೇ:— ಕು. ಪದ್ಮಾವತಿ, ಕೊಡಗು

★

ನನ್ನ ಭಾವಲೋಕದ ಯುವತಿಯರೆಲ್ಲ ತಿರಸ್ಕಾರದಿಂದ ನನ್ನನ್ನು ನಿರಾಶೆಗೊಳಿಸಿದರು. ನಾನು ಸ್ತ್ರೀಜಾತಿಯ ವೈರಿಯೇ ಆಗುತ್ತಿದ್ದೆ. ಆದರೆ ಕುಮುದಿನಿಯು ತನ್ನ ಭಾವಪೂರಿತ ನೇತ್ರಗಳಿಂದ ಪ್ರೇಮುವನ್ನು ಸೂಚಿಸುತ್ತ ನನ್ನ ಭಾವನಾಕಾಶದಲ್ಲಿ ಉದಯಿಸಿದಳು. ಅವಳ ಪ್ರೇಮದ ಕನಸಿನಲ್ಲಿ ನಾನು ಮೈಮರೆತೆ. ಅವಳನ್ನು ಚರ್ಮಚಕ್ಷುಗಳಿಂದ ನೋಡಲು ಕಾತರಿಸಿದೆ. ಕೊನೆಗೆ ಆ ದಿನವೂ ಬಂದಿತು. ಆದರೆ ಹಾಯ್! ಅವಳ ನೀಲಕನ್ನಡಕವೂ ಕಡ್ಡಿಯಂತಹ ಮೈಯೂ ನನ್ನ ತಲೆಗೆ ತಂಣೀರೆರಚಿತೆಂದು ಅಸಹ್ಯಪಡುವಷ್ಟರಲ್ಲಿ ತನ್ನ ಪ್ರೇಮಪೂರಿತ ನಯನಗಳನ್ನು ಒಮ್ಮೆ .. ಬೀರಿ ಅವಳು ಶಾಶ್ವತವಾಗಿ ತೆರಳಿದಳು. ..

★

ನಾನೀಗ ಮೂವತ್ತೈದು ವರ್ಷದವ. ಯುವಕನಾಗಿದ್ದಾಗ ಇದ್ದಷ್ಟು ನಾನೀಗ ರಸಿಕನಲ್ಲ. ಒಂದು ಸಮಯದಲ್ಲಿ ಚಿಕ್ಕ ಘಟನೆಗಳು ಕೂಡಾ ನನ್ನ ಮನದಲ್ಲಿ ತೆರೆಗಳನ್ನೇಳಿಸುತ್ತಿದ್ದವು. ನನ್ನ ಇಡಿ ಶರೀರವೇ ರೋಮಾಂಚಿತವಾಗುತ್ತಿತ್ತು. ಕಲ್ಪನಾಮಯ ಜಗತ್ತಿನಲ್ಲಿ ವಿಹರಿಸುವುದರಲ್ಲಿ ಸಿಕ್ಕುತ್ತಿರುವ ಆನಂದ ಅಷ್ಟಿಷ್ಟಲ್ಲ. ಆ ಜಗತ್ತಿನಲ್ಲಿ ನಾನೇ ನಾಯಕ, ನಾನೇ ರಾಜ. ಯಾರದೂ ಗೋಜಿಲ್ಲ, ತಂಟಿಯಿಲ್ಲ. ಬೇಕಾದ ಪಾತ್ರರನ್ನು ಇಟ್ಟುಕೊಳ್ಳುವುದು ಮತ್ತು ಬೇಡವಾದವರನ್ನು ನಿರ್ಮೂಲ ಮಾಡುವುದು ನನ್ನದೇ ಕೆಲಸ. ನನ್ನ ಕಲ್ಪನಾರಾಜ್ಯದ ರಾಣಿಯರು ನನ್ನ ಮನವನ್ನು ಸೂರೆಗೊಂಡ ರಮಣಿಯರೇ.

ನಾನು ಬಹಳ ಮಂದಿ ಹೆಣ್ಮಕ್ಕಳಿಗೆ ಪ್ರಣಯಪತ್ರಗಳನ್ನು ಬರೆದಿದ್ದೆ. ಅವರಲ್ಲಿ ನನ್ನ ಪತ್ರಗಳಿಗೆ ಜವಾಬು ಬರೆಯುವವರೇ ಕಡಿಮೆ. ಕೆಲವರು ಜವಾಬು ಬರೆದರೂ ಎರಡು ಮೂರಾವರ್ತಿ ಪತ್ರೋತ್ತರಗಳಾದ ನಂತರ ತಟ್ಟನೆ ನಿಲ್ಲಿಸಿ ಬಿಡುತ್ತಿದ್ದರು. ಮತ್ತೆ ನನ್ನ ಗತಿ ತ್ರಿಶಂಕುವಿನಂತಾಗಿ ಬಿಡುತ್ತಿತ್ತು. ನಾನು ನನ್ನ ಪ್ರೇಯಸಿಯರಲ್ಲಿ ಯಾರನ್ನೂ ನೋಡಿರಲಿಲ್ಲ. ಯಾವಳಾದರೂ ಲೇಖಕಿ ಅಥವಾ ಕವಯಿತ್ರಿಯ ಕೃತಿಗಳನ್ನು ಪತ್ರಿಕೆಗಳಲ್ಲಿ ನೋಡಿದ ಕೂಡಲೆ, ಅವರ ಕಥೆ ನನ್ನ ಮನಸನ್ನು ತಾನಾಗಿ ಎಳೆಯುತ್ತಿತ್ತು. ಇದರಿಂದ ವಿವಾಹಿತರಾದ ಸ್ತ್ರೀಯರ ಮೇಲೆ ಪಾಪದೃಷ್ಟಿಯನ್ನಿಡುತ್ತಿದ್ದೆನೆಂದು ಭಾವಿಸಿಕೊಳ್ಳಬಾರದು. ಹಿಂದಿಯ ಪ್ರಸಿದ್ಧ ಮಾಸ ಪತ್ರಿಕೆಯ ಸಂಪಾದಕರು ನನ್ನ ಪರಮ ಹಿತೈಷಿ ಮಿತ್ರರು. ಅವರು ಸ್ತ್ರೀಸುಧಾರಣೆಯ ಪಕ್ಷಪಾತಿಗಳು ಆದುದರಿಂದ ಅವರ ಪತ್ರಿಕೆಯಲ್ಲಿ ಮಹಿಳಾ ವಿಭಾಗ ವೊಂದಿತ್ತು. ಅದಕ್ಕಾಗಿ ಸ್ತ್ರೀಲೇಖಿಕೆಯರಿಂದ ರಚನೆಗಳು ಬರುತ್ತಿದ್ದವು. ಸಂಪಾದಕರಿಂದ ಕನ್ಯೆಯರ ವಿಳಾಸ ಸಿಕ್ಕುವುದು ಕಷ್ಟವಾಗಿರಲಿಲ್ಲ. ನಾನೂ ಸ್ವರಚಿತ ಕವನ ಮತ್ತು ಕತೆಗಳ ಮುಖಾಂತರ ಜನರಿಗೆ ಪರಿಚಿತನಾಗಿದ್ದೆ.

ಯಾವಳಾದರೂ ಹೊಸ ಲೇಖಿಕೆಯು ಹಿಂದೀ ಸಾಹಿತ್ಯಾಕಾಶದಲ್ಲಿ ಉದಯಿಸಿದರೆ, ಅವಳ ಗೊತ್ತುಗುರಿ ಏನಿದ್ದರೂ ಮೇಲೆ, ನನ್ನ ಅಭೀಷ್ಟ ವಸ್ತುವಾಗಿದ್ದರೆ ಅವಳಿಗೆ ಪತ್ರ ಬರೆಯುವ ಕೆಲಸ ನನ್ನದಾಗಿತ್ತು. ನಾನು ಮೊಟ್ಟಮೊದಲು ಅವಳ ಆಗತಾನೇ ಅಚ್ಚಾದ ಕೃತಿಯನ್ನು ಹೊಗಳಿ ಬರೆಯುತ್ತಿದ್ದೆ. ಅದಕ್ಕೆ ಅವಳು ಬಹಳ ನಮ್ರಭಾವದಿಂದ ಜವಾಬು ಕೊಡುತ್ತಿದ್ದಳು. ನಾನು ಅಷ್ಟಕ್ಕೆ ನಿಲ್ಲದೆ ಪ್ರತ್ಯುತ್ತರ ತಟ್ಟನೆ ಕೊಡುತ್ತಿದ್ದೆ. ಈ ಅವಧಿಯಲ್ಲಿ ನಾನು ಪ್ರೇಮಪಾಶದಲ್ಲಿ ಬದ್ಧನಾಗಿರುತ್ತಿದ್ದೆ. ಅವಳ ವಣಿಗೆಯು ನನ್ನ ತಲೆಗೆ ಮಂಕುಬೂದಿಯನ್ನೆರಚುತ್ತಿತ್ತು. ತನ್ನದೊಂದು ಭಾವಚಿತ್ರ ಕಳುಹಿಸುವಂತೆ ಅವಳನ್ನು ಕೇಳುತ್ತಿದ್ದೆ. ನಾನಾದರೋ ಅವಳಿಗೆ ನನ್ನದೊಂದು ಭಾವಚಿತ್ರವನ್ನು ಅವಳು ಕೇಳದೆ ಕಳುಹಿಸಿ ಕೊಡುತ್ತಿದ್ದೆ. (ಅದರಲ್ಲಿ ನಾನು ಒಬ್ಬ ಭಾವುಕ ಮಂಕನಂತೆ ಕಾಣುತ್ತಿದ್ದೆ ಎಂದು ಈಗ ನನ್ನ ವಿಚಾರ.) ಆಗ ಆ ಚಿತ್ರವು ನನ್ನ ಕಣ್ಣುಗಳಿಗೆ ಸಾಧಾರಣ ಜನರಿಗೆ ಕಾಣಿಸದ, ಕೇಳಿಸದ ಮತ್ತು ಕಲ್ಪನೆಯಿಲ್ಲದ ವಿಷಯಗಳ ಸ್ವಪ್ನಲೋಕದಲ್ಲಿ ರಮಿಸುವ ಕವಿಯಂತೆ ಕಂಡುಬರುತ್ತಿತ್ತು. ಆಗ ನನ್ನ ಕೂದಲು ಹಣೆಯ ಮೇಲೆ ತೆರೆಗಳಾಗಿ ಬೀಳುತ್ತಿದ್ದವು. ನಾನು ಬಹಳ ಕಾತರನಾಗಿ ಪತ್ರದ ದಾರಿ ಕಾಯುತ್ತಿದ್ದೆ. ಆದರೆ ಅವಳಿಂದ ಉತ್ತರ ಬರುತ್ತಿರಲಿಲ್ಲ. ಈ ರೀತಿಯಲ್ಲಿ ನಾನೆಷ್ಟೋ ಕನ್ಯೆಯರನ್ನು ಪ್ರೀತಿಸಲೆತ್ನಿಸಿದೆ. ಅವರ ವಿಷಯದಲ್ಲಿಯ ನನ್ನ ಒಲುಮೆಯನ್ನು ಹೊರಪಡಿಸುವ ತನಕ ಅವರ ಪತ್ರಗಳು ಸರಿಯಾಗಿ ಬರುತ್ತಿದ್ದವು. ಆದರೆ ಯಾವಾಗ ನಾನು ನನ್ನ ಹೃದಯವನ್ನು ಅವರ ಮುಂದೆ ಇಟ್ಟೆನೋ, ಆವಾಗ ಅವರಲ್ಲಿ ಅವರ ವರ್ತನೆಯೇ ಬೇರೆಯಾಗುತ್ತಿತ್ತು.

ನನ್ನ ಚಿತ್ರಗಳನ್ನು ಒಂದು ಅಕ್ಷರವಾದರೂ ಬರೆಯದೆ ಹಿಂತಿರುಗಿ ಕಳುಹಿಸಿಬಿಟ್ಟರು. ಮತ್ತೆ ಕೆಲವರು ನನ್ನ ಪತ್ರಗಳನ್ನು ಅಲಕ್ಷಿಸಿಬಿಟ್ಟರು.

ನಾನು ನಿರಾಶೆಗೊಂಡೆ, ದುಃಖಿತನಾದೆ ಮತ್ತು ಅವಮಾನಿತನಾದೆ. ಇನ್ನು ಮುಂದಕ್ಕೆ ದುಷ್ಟ ನಾರೀಜಾತಿಗೂ ನನಗೂ ಏನೂ ಸಂಬಂಧವೇ ಇಲ್ಲವೆಂದು ನಿರ್ಧರಿಸಿ ಬಿಟ್ಟೆ. ಈ ನಿರಾಶೆಯ ಆಘಾತದಲ್ಲಿ ನರಳುವ ನನಗೆ ಆಗ ಕೇವಲ ಇಪ್ಪತ್ತೊಂದು ಪ್ರಾಯ.

ಕೊನೆಗೆ ನನ್ನ ಮೇಘಾಚ್ಛನ್ನವಾದ ಹೃದಯಾಕಾಶದಲ್ಲಿ ಆಶೆಯದೊಂದು ಮಿಂಚು ಹೊಳೆಯಿತು. ಹಿಂದೀ ಸಾಹಿತ್ಯದಲ್ಲಿ ಒಬ್ಬ ಪ್ರತಿಭಾಶಾಲಿನಿಯಾದ ಹೊಸ ಕವಿಯಿತ್ರಿಯ ಪ್ರವೇಶವಾಯಿತು. ಬಹಳ ಸರ್ತಿ ನಾನು ಅವಳಿಗೆ ಬರೆಯಬೇಕೆಂದು ಹಾರೈಸಿದೆ. ಹಿಂದಿನ ಘಟನಾವಳಿಗಳು ನನಗೆ ಕಹಿ ಪಾಠಗಳನ್ನು ಕಲಿಸಿದ್ದವು. ಇನ್ನು ಮುಂದಕ್ಕೂ ಇದೇ ರೀತಿಯ ಕಹಿ ಮದ್ದು ಕುಡಿಯಲು, ನನ್ನ ಅದೃಷ್ಟದಲ್ಲಿ ಬರೆದಿದೆ ಎಂಬ ದೂರದೃಷ್ಟಿಯುಳ್ಳವನಾಗಿದ್ದರೂ, ಅವಳನ್ನು ಪ್ರೀತಿಸಲಾರಂಭಿಸಿದೆ. ಈ ಸಲವೂ ನಿರಾಶೆಯೇ ನನ್ನ ಪಾಲಿಗೆ ಎಂದು ನನ್ನ ಹೃದಯವು ತಳಮಳಗೊಳ್ಳುತ್ತಿತ್ತು. ಆದರೂ ಈ ಹುಡುಗಿಯ ಪರಿಚಯ ಮಾಡಿಕೊಳ್ಳುವುದರಲ್ಲಿ ಹಾನಿಯಿಲ್ಲ ಎಂದು ನಿಶ್ಚಯಿಸಿಕೊಂಡೆ.

ಅವಳಿಗೆ ಬರೆಯಬೇಕೆಂದು ಕೊನೆಗೆ ನಿಶ್ಚಯ ಮಾಡಿಕೊಂಡೆ. ಆಗ ತಾನೇ ಪ್ರಕಟವಾದ ಅವಳ ಕೃತಿಯ ಮೇಲೆ ಪ್ರಶಂಸೆಯ ಮಳೆ ಸುರಿದು ಬಿಟ್ಟೆ. ಹಿಂದೀ ಪಾಠಕರಿಗಾಗಿ ಅವಳು ಹಿಂದಿಯಲ್ಲಿ ಬರೆಯುವುದನ್ನು ನಿಲ್ಲಿಸಬಾರದೆಂದು ಅರಿಕೆ ಮಾಡಿಕೊಂಡೆ. ಅವಳು ನನಗೆ ತಕ್ಷಣವೇ ಉತ್ತರ ಬರೆದಳು. ನಾನು ಅವಳಿಗೆ ತಿರುಗಿ ಬರೆದೆನು. ಅವಳು ಅದಕ್ಕೂ ಉತ್ತರ ಕೊಟ್ಟಳು. ನಮ್ಮ ಪತ್ರವ್ಯವಹಾರವು ಬೆಳೆಗೆ ಬರುತ್ತಾ ಇದ್ದಾಗೆಲ್ಲಾ ನನ್ನ ಆಶ್ಚರ್ಯಕ್ಕೂ ಸಂತೋಷಕ್ಕೂ ಕೊನೆಯಿರಲಿಲ್ಲ. ಈ ಸಲ ನಾನು ದುಡುಕಲಿಲ್ಲ. ನಾನು ಬಹಳ ಶಾಂತನಾಗಿದ್ದೆ. ಸಾಧನೆಯ ತೃಪ್ತಿಯವರೆಗೆ ಎಷ್ಟೋ ವಿಪತ್ತಿಗಳು ಬರುವ ಸಂದರ್ಭಗಳಿವೆಯೆಂಬುದನ್ನು ನಾನು ಈಸಲ ಮರೆಯಲಿಲ್ಲ. ನಾನು ಅವಳಿಗಾಗಿ ಕಾತರಿಸುತ್ತಿದ್ದೆನಾದರೂ, "ನಿಮ್ಮ ಫೋಟೋ ಕಳುಹಿಸಿಕೊಡಿ" ಎಂದು ನಾನು ಅವಳಿಗೆ ಬರೆಯಲಿಲ್ಲ. ಮೊದಲಿನ ನಿರಾಶೆಯ ಆಘಾತಗಳಿಂದ ಈಗ ನಾನು ಪ್ರೀತಿಯಿಂದ ಚಡಪಡಿಸುವುದಕ್ಕೆ ಕಲಿತೆ. ಈ ರೀತಿಯ ಯಾತನೆಯು ನನ್ನ ಮನಸ್ಸಿಗೆ ಒಂದು ರೀತಿಯ ಆನಂದವನ್ನು ಕೊಡುತ್ತಿತ್ತು.

ಅವಳ ಶಾರೀರಿಕ ದರ್ಶನದ ಹೊರತು ನನಗೆ ಅವಳ ಮಿಕ್ಕ ವಿಷಯ ಎಲ್ಲಾ ಕ್ರಮೇಣ ಗೊತ್ತಾಯಿತು. ಅವಳು ನನ್ನ ಚಿತ್ರ ಕೇಳಲಿಲ್ಲ. ಮತ್ತು ನನ್ನ ಚಿತ್ರ ಕಳುಹಿಸುವ ಸಾಹಸ ನನ್ನಲ್ಲಿ ಬತ್ತಿತ್ತು. ನಾನು ಅವಳ ಮೇಲೆ ಸಾಹಿತ್ಯದ ದರ್ಪವನ್ನು ಬೀರಿದ್ದೆ. ಅವಳಿಗೆ ನಾನು ನನ್ನ ಎಲ್ಲಾ ರಚನೆಗಳನ್ನು ಮತ್ತು ಕವನಗಳನ್ನು ಕಳುಹಿಸಿದ್ದೆ. ಅವಳು ನನಗೆ ಬಹಳ ಮಹತ್ವ ಕೊಟ್ಟಿರುತ್ತಾಳೆಂದು ನನಗೆ ಗೊತ್ತಿತ್ತು. ಅವಳು ನನ್ನನ್ನು ಪ್ರೀತಿಸಲಾರಂಭಿಸಿದ್ದಳು. ಇಡೀ ನಾರೀಜಾತಿಯ ಮೇಲೆ ಮುಯ್ಯ ತೀರಿಸುವುದು ನನ್ನ ಕೈಯಲ್ಲಿತ್ತು ಈಗ. ಇಷ್ಟರ ವರೆಗೆ ನನ್ನ ಪ್ರಣಯವನ್ನು ಅಲ್ಲಗಳೆಯುತ್ತಾ ಬಂದಿದ್ದು ಈಗ ಒಬ್ಬಳು ನನ್ನನ್ನು ಮೆಚ್ಚಿದಳು. ನಾನು ಅವಳನ್ನು ಪ್ರೀತಿಸಲಿಲ್ಲವೆಂತಲ್ಲ. ಅವಳನ್ನು ನಾನು ಬಹಳ ಪ್ರೀತಿಸುತ್ತಿದ್ದೆ. ಆದರೆ ಈ ಸಲ ಇಷ್ಟು ದಿವಸಗಳ ವರೆಗೆ ಹುದುಗಿಕೊಂಡಿದ್ದ ನನ್ನ ಆತ್ಮಗೌರವವು ಮೇಲಕ್ಕೆ ಬಂದು ತನ್ನ ಪೌರುಷವನ್ನು ತೋರಿಸಿತು. ನಾನು ಅವಳ ಮುಂದೆ ಬಾಗಲಿಲ್ಲ. ಅವಳು ಒಬ್ಬ ಹಿಂದೂ ಕನ್ಯೆಯೆಂಬುದನ್ನು ನಾನು ಮುಟ್ಠಾಳ ಆಗ ತಿಳಿಯಲಿಲ್ಲ.

ನಮ್ಮಿಬ್ಬರಲ್ಲಿ ಒಬ್ಬರಾದರೂ ಪತ್ರಗಳಲ್ಲಿ ಪ್ರೀತಿಯನ್ನು ತೋರಿಸಲಿಲ್ಲ. ನಮ್ಮ ಪತ್ರವ್ಯವಹಾರ ಬಹಳ ರಭಸದಿಂದ ಸಾಗಿತ್ತು. ಇಷ್ಟೆಲ್ಲಾ ಕಟು ಅನುಭವಗಳನ್ನುಂಡು, ಕೊನೆಗೆ ನನ್ನ ಮನದ ರನ್ನೆ ಸಿಕ್ಕಳೆಂದು ಭಾವಿಸಿದೆ. ನನ್ನ ಕಲ್ಪನೆಯಲ್ಲಿ ಅವಳ ಮೂರ್ತಿ ಅಷ್ಟೇನೂ ಆದರ್ಶವೂ ಅದ್ಭುತವೂ ಆಗಿರಲಿಲ್ಲ. ಏಕೆಂದರೆ ಈಗ ನಾನು ಬಹಳ ಮಟ್ಟಿಗೆ ತೃಪ್ತಿಶೀಲನಾಗಿ ಬಿಟ್ಟಿದ್ದೆ. ಅವಳ ವಿಚಾರವೇ ನನ್ನ ಮನಸ್ಸಿನ ಮಧುರ ಕಲ್ಪನೆ ಮತ್ತು ಮಾನಸಿಕ ವಿಶ್ರಾಂತಿಯಾಗಿತ್ತು. "ಅವಳು ಬಹಳ ಎತ್ತರವಿಲ್ಲ ಆದರೆ ಕುಳ್ಳೂ ಅಲ್ಲ. ತೆಳ್ಳಗಿದ್ದಾಳೆ" ಎಂದು ಯೋಚಿಸುತ್ತಿದ್ದೆ. ಅವಳ ವಿಷಯ ನಾನು ಯೋಚಿಸುತ್ತಿರುವಾಗಲೆಲ್ಲಾ, ಎರಡು ದೊಡ್ಡ ದೊಡ್ಡ ಕಂಣುಗಳು ನನ್ನ ಮುಂದೆ ಬರುತಿದ್ದವು. ಅವು ಬಹಳ ಸುಂದರವಾದ, ನೀರು ತುಂಬಿದ, ಕಪ್ಪು ರೆಪ್ಪೆಗಳಿಂದ ಕೂಡಿದ ನಯನಗಳು, ಕಂಣುಗಳಲ್ಲಿ ಗೋಚರಿಸುವ ಭಾವಗಳು ನನ್ನನ್ನು ಸೆಳೆಯುವಷ್ಟು, ಅವುಗಳ ಸೌಂದರ್ಯ ಆಕರ್ಷಿಸಲಿಲ್ಲ. ಅವುಗಳಲ್ಲಿ ಸುರೆಯ ಮಾದಕತೆಯಿರಲಿಲ್ಲ. ಅವುಗಳು ವಜ್ರದಂತೆ ಕುಕ್ಕು

ತ್ತಿರಲೂ ಇಲ್ಲ. ಅವುಗಳ ಮೇಲಿನ ಭಾವಭಂಗಿಯು ಬಹಳ ಶಾಂತಿಪೂರ್ಣ, ಭಾವಪೂರ್ಣ ಮತ್ತು ಚಿಂತಾಪೂರ್ಣ ವಾಗಿತ್ತು. ಹೌದು. ಆ ಕಂಣುಗಳು ಕಾತರತೆಯಿಂದಲೂ, ಸಹಾನುಭೂತಿಯಿಂದಲೂ ಮತ್ತು ಮೃದುತೆಯಿಂದಲೂ ತುಂಬಿ ತುಳುಕುತ್ತಿದ್ದವು. ಆ ದೃಶ್ಯವು ನನ್ನ ಮುಂದೆ ಮಿಂಚಿ, ಮಾಯವಾಗುತ್ತಿತ್ತು. ಬಹಳ ಸರ್ತಿ ನನ್ನ ಪ್ರೇಯಸಿಗೆ ಕೇವಲ ಕಂಣುಗಳೇ ಇರುವವೆಂದು ಯೋಚಿಸಿದ್ದೇನೆ.

ಅವಳು ನನಗೆ ತನ್ನ ವಿಷಯ ಬರೆದಿದ್ದಳು. ಅವಳ ತಾಯಿ ತಂದೆ ಅನುಕೂಲ ಸ್ಥಿತಿಯವರು. ಇಂಟರ್‌ಮಿಡಿಯೆಟ್ ಆದ ಮೇಲೆ ಅವಳು ಶಾರೀರಿಕ ಕ್ಷೀಣತೆಯಿಂದ ಮುಂದೆ ಓದಲಿಲ್ಲ. ಅವಳ ಹೆಸರು ಕುಮುದಿನಿ ಎಂದು.

ನನ್ನ ಪರಿಚಯ: ನನ್ನ ಪರಿವಾರ ಧನಿಕ ವರ್ಗಕ್ಕೆ ಸೇರಿದೆ. ತಾಯಿ ತಂದೆಗಳ ಮುದ್ದು ಮಗ ನಾನು. ನಾನು ಕಾಲೇಜಿನಲ್ಲಿ ಆನರ್ಸ್‌ನಲ್ಲಿ ಓದುತ್ತಿದ್ದೆನು.

* * *

ಬೇಸಿಗೆಯು ಬಂತು. ಅಲಹಾಬಾದಿನಲ್ಲಿ ಸೆಕೆ ವಿಪರೀತ. ನನ್ನ ಕುಟುಂಬದವರು ಮಸ್ಸೂರಿಗೆ ಹೋಗಬೇಕೆಂದು ನಿಶ್ಚಯಿಸಿದರು. ಆ ಸ್ಥಳವೆಂದರೆ ನನಗೆ ಕಂಡರಾಗದು. ಪ್ರತಿಯೊಬ್ಬನೂ ಅಲ್ಲಿಗೇ ಹೋಗುತ್ತಾನೆ. ನಾನು ಡಾರ್ಜಿಲಿಂಗಿಗೆ ಹೋಗುತ್ತೇನೆಂದು ತಂದೆಯವರಿಗೆ ಬರೆದೆನು. "ನೀನೂ ನಮ್ಮ ಸಂಗಡ ಬರಬೇಕು" ಎಂದು ತಂದೆಯವರು ಒತ್ತಾಯ ಮಾಡಿದರು. ನಾನು ಹಟ ಹಿಡಿದೆನು. ಸ್ವಲ್ಪ ಚರ್ಚೆಯಾದ ನಂತರ, ನನ್ನ ನಿಶ್ಚಯವೇ ಸಾಧಿಸಿತು. ನಾನು ಡಾರ್ಜಿಲಿಂಗಿಗೆ ಹೋಗಿ ಒಂದು ಬಹಳ ಖರ್ಚಾಗುವ ಹೋಟೆಲಿನಲ್ಲಿ ಉಳಕೊಂಡೆನು. ಅಲ್ಲಿಂದ ನಾನು ಕುಮುದಿನಿಗೆ ಬರೆದೆನು.

ನನ್ನ ಹೋಟೆಲಿನ ಹತ್ತಿರ ಒಂದು ಬಂಗ್ಲೆ ಇತ್ತು. ಒಬ್ಬ ಎಕ್ಸಿಕ್ಯುಟಿವ್ ಇಂಜಿನೀಯರ್ ಅವರು ಮತ್ತು ಅವರ ಕುಟುಂಬ ಇಳಿದುಕೊಂಡಿದ್ದರು. ಒಂದು ದಿವಸ ನಾನು ನನ್ನ ಪ್ರಾತಃಕಾಲದ ಸಂಚಾರದಿಂದ ಹಿಂತಿರುಗಿ ಬರುತ್ತಿದ್ದೆನು. ಆಗ ಆ ಇಂಜಿನೀಯರರ ಭೆಟ್ಟಿಯಾಯಿತು. ಅವರ ಪರಿಚಯ ನನಗಿತ್ತು. ಅವರು ನನ್ನ ತಂದೆಯವರ ಮಿತ್ರರು. ಅವರು ತಮ್ಮ ಮನೆಗೆ ಆ ದಿನ ಸಾಯಂಕಾಲಕ್ಕೆ ಕರೆದರು. ನಾನು ಹೋದೆ. ಅಲ್ಲಿ ಪರಾಗ ಮತ್ತು ವಿಮಲೆ ಎಂಬ ಅವರ ಇಬ್ಬರು ಕನ್ಯೆಯರ ಪರಿಚಯ ನನಗೆ ಮಾಡಿಸಿಕೊಟ್ಟರು.

ನನ್ನ ಸಮಯ ಹೇಗೆ ಕಳೆಯಿತೆಂದು ನನಗೆ ಗೊತ್ತ[illegible] ಅವರಿಬ್ಬರ ಪರಿಚಯವಾದ ನಂತರ, ನಾವು ಮೂರು[illegible] ಯಾವಾಗಲೂ ಒಟ್ಟಿಗೆ ಇರುತ್ತಿದ್ದೆವು. ನಮ್ಮ [illegible] ಮತ್ತು ಬ್ರಿಡ್ಜ್ ಆಟಗಳಿಗೆ ಕೊನೆಯೇ ಇರುತ್ತಿ[illegible] ನಾನು ಬಹಳ ಸುಖಿಯಾಗಿದ್ದೆನು. 'ನಾನು ಅವ[illegible] ಸಹೋದರಿಯರಲ್ಲಿ ಒಬ್ಬಳನ್ನಾದರೂ ಪ್ರೀತಿಸಲಿಲ್ಲ[illegible] ಆಶ್ಚರ್ಯಕರವೇ! ನಾನು ಅವರಿಬ್ಬರನ್ನು ಸ್ನೇಹಿತೆ[illegible] ರಂತೆ ಮತ್ತು ತಂಗಿಯರಂತೆ ಕಾಣುತ್ತಿದ್ದೆ. ಕುಮು[illegible] ಯಾವಾಗಲೂ ನನ್ನ ಹೃದಯದಲ್ಲಿ ನೆಲೆಸಿದ್ದಳು. [illegible] ನನ್ನ ಪ್ರತಿಯೊಂದು ಯೋಚನೆಯ ಒಂದಾದರೂ ಕ[illegible] ಮುಟ್ಟದೆ ಇರುತ್ತಿರಲಿಲ್ಲ.

ಈ ಪ್ರಕಾರ ಎರಡು ವಾರ ಕಳೆದವು. ಒಂದು [illegible] ಸಂಜೆಗೆ ನಾವು ಮೂವರು ಬಹಳ ದೂರದ ವರೆಗೆ [illegible] ತಿರುಗಿ ಮನೆಯ ಕಡೆಗೆ ಬರುತ್ತಿದ್ದೆವು. ಮಾತನಾ[illegible] ದಕ್ಕೆ ಎಷ್ಟೋ ವಿಷಯಗಳಿದ್ದವು. ಕತ್ತಲೆಯು [illegible] ಪರ್ವತಮಾಲೆಗಳನ್ನು ಮೆಲ್ಲಮೆಲ್ಲಗೆ ಆವರಿಸುತ್ತಾ[illegible] ತ್ತಿತ್ತು. ಬೀದಿಗಳಲ್ಲಿ ದೀಪಗಳು ಹತ್ತಿಸಲ್ಪಟ್ಟ[illegible] ಪರಾಗಳ ಬಂಗ್ಲೆಗೆ ಆವಾಗ ಸುಮಾರು ಅರ್ಧ ಮೈಲ[illegible] ಬಹುದು. ಪರಾಗಳ ಹೆಗಲಿನ ಮೇಲೆ ಹಿಂ[illegible] ಯಾರೋ ಕೈ ಇಟ್ಟರು. ಅವಳು ಬೆಚ್ಚಿ ಹಿಂದೆ [illegible] ನೋಡಿದಳು. ನಾವೂ ತಿರುಗಿ ನೋಡಲಾಗಿ ಎರಡು [illegible] ಹುಡುಗಿಯರು ನಿಂತುದು ಕಂಡೆವು. ಪರಾಗಳು ಅ[illegible] ರನ್ನು ನೋಡಿ, "ಏನಿದು, ನಿನ್ನ ಮಂಗಚೇಷ್ಟೆ [illegible] ನೀನು ಎಲ್ಲಿಂದ ಆಕಸ್ಮಾತ್ತಾಗಿ ಬಂದೆ? ಸ್ವರ್ಗದಿಂ[illegible] ವಷ್ಟೇ? ನನಗೇಕೆ ಬರೆಯಲಿಲ್ಲ? ಕನ್ನಡಕವೇ[illegible] ಎಂಬುದಾಗಿ ಎಷ್ಟೊ ಪ್ರಶ್ನೆಗಳ ಮಳೆ ಸುರಿಸಿದ[illegible] ಹಿರಿಯವಳು—ಅವಳ ಪ್ರಾಯ ಪರಾಗಳಷ್ಟಿರಬಹು[illegible] ಹೇಳಿದಳು—(ಅವಳ ವಾಣಿಯು ಮೃದು ಮತ್ತು [illegible] ಗಿತ್ತು)—"ಏನು ಮಾಡುವುದು ಪರಾಗ. ಬರಲೇ[illegible] ಯಿತು. ನನಗೆ ಸೌಖ್ಯ ಕಡಿಮೆ ಎಂದು ಸಾಲ[illegible] ನನ್ನ ಕಣ್ಣುಗಳೂ ತೊಂದರೆ ಕೊಡುತ್ತಿವೆ."

ಪರಾಗಳು ನನ್ನ ಕಡೆಗೆ ತಿರುಗಿ ಹೇಳಿದ[illegible] "ಮಿ. ರಾಜೀವ, ನನ್ನನ್ನು ದಯವಿಟ್ಟು ಕ್ಷಮಿಸಿ. ನನ್ನ [illegible] ತಿಯ ಮೇಲೆ ಮುನಿಸುಗೊಳ್ಳುವ ಸಡಗರದಲ್ಲಿ ನಿಮ್ಮ[illegible] ಮರೆತು ಬಿಟ್ಟೆ. ಈ ಮಹನೀಯಳ ಪರಿಚಯ [illegible] ನೀವಿಬ್ಬರೂ ಸಾಹಿತಿಗಳೆಂದು ನಟಿಸುವವರಾದುದರಿಂ[illegible] ಸ್ಪರ ಪರಿಚಯ ನಿಮಗೆ ಇರಬಹುದು. ಆದರೂ ನ[illegible]

ಕರ್ತವ್ಯ ಮಾಡಿಯೇ ತೀರಬೇಕಲ್ಲವೇ. ಇವರು ಮಿ. ರಾಜೀವ—ಪ್ರಸಿದ್ಧ ಕವಿ ಮತ್ತು ಲೇಖಕರು ಮತ್ತು ಇವರು ಕುಮಾರಿ ಕುಮುದಿನೀದೇವಿಯವರು—"ಉದೀಯಮಾನ ಕವಯಿತ್ರಿ"........

ನನ್ನ ತಲೆಯ ಮೇಲೆ ಸಿಡಿಲು ಬಿದ್ದಂತಾಯಿತು. ಈ ರೀತಿಯಲ್ಲಿ ಆಗುವದೆಂದು ನಾನು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ನಾನು ಅವಳಕಡೆ ನೋಡಿದೆನು. ಅವಳ ತೆಳ್ಳಗಿರುವ ಕೋಮಲ ಗಾತ್ರವಲ್ಲದೆ, ಮತ್ತ್ಯಾವುದೂ ನನಗೆ ಕಂಡುಬರುತ್ತಿರಲಿಲ್ಲ. ನಾವು ದೀಪದ ಕಂಬದ ಹತ್ತಿರ ಬಂದೆವು. ನಾನು ಅವಳನ್ನು ನೋಡಿದೆನು. ಎಂತಹ ತೆಳ್ಳಗಿರುವ ಶರೀರ—ಕುಸುಮದಂತೆ ಸುಕೋಮಲ! ಆದರೆ ನನ್ನ ಸ್ವಪ್ನರಾಜ್ಯದ ರಾಣಿಯಾದ ಆದೇ ಕುಮುದಳಲ್ಲ. ಅವಳು ಕನ್ನಡಕ ಧರಿಸಿದ್ದಳು. ಅವೂ ಬಣ್ಣದವು. ನನ್ನ ಕಲ್ಪನೆಯ ಕಣ್ಣುಗಳು ಅವಳಿಗಿದ್ದರೆ ಇವಳು ನನ್ನ ಕುಮುದಳೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳಬಹುದಾಗಿತ್ತು. ನಾನು ಅವಳನ್ನು ದುರುಗುಟ್ಟಿ ನೋಡಿದೆನು. ಅವಳ ನೇತ್ರಗಳು ನೀಲ ಕನ್ನಡಕಗಳ ಒಳಗೆ ಮಿರಗಬಹುದೆಂಬ ಭಾವನೆಯಿಂದ. ಆದರೆ ಕೊನೆಗೆ ನಿರಾಶೆಯೇ ನನ್ನ ಸೆರಗಿಗೆ ಬಿತ್ತು.

ದಾರಿಯಲ್ಲಿ ನಾವು ಹೆಚ್ಚು ಮಾತನಾಡಲಿಲ್ಲ. ಅವಳು ನನ್ನ ಮುಂದೆ ಭಹಳ ವ್ಯಸ್ತಳಾಗಿದ್ದಾಳೆಂದು ನಾನರಿತೆನು. ನಾನಾದರೋ ಭ್ರಾಂತಿಯುಳ್ಳವನಂತೆ ಬರುತ್ತಿದ್ದೆನು. ಸೌಭಾಗ್ಯದಿಂದ ಪರಾಗ ಮತ್ತು ವಿಮಲೆಯ ಗಮನಕ್ಕೆ ನನ್ನ ವರ್ತನೆಯು ಬರಲಿಲ್ಲ. ನಾವು ಪರಾಗಳ ಮನೆಯ ಹತ್ತಿರಕ್ಕೆ ಬಂದೆವೋ ಇಲ್ಲವೋ ಎನ್ನುವಷ್ಟರಲ್ಲಿ, ಕುಮುದಳು ನಮ್ಮಿಂದ ಬೇರೆಯಾದಳು.

ಮರುದಿವಸ ನನಗೆ ಕುಮುದಳನ್ನು ಹಗಲು ಪ್ರಕಾಶದಲ್ಲಿ ನೋಡುವ ಅವಕಾಶ ಸಿಕ್ಕಿತು. ಅವಳೇಕೋ ಸ್ತಿಮಿತದಲ್ಲಿಲ್ಲ ಎಂಬುದಾಗಿ ಕಂಡುಬರುತ್ತಿತ್ತು. ಅವಳ ಸ್ವರ ಅಸ್ವಾಭಾವಿಕವಾಗಿತ್ತು. ಅದು ಅವಳ ನಿಜರೂಪವಲ್ಲವೆಂದು ತೋರುತ್ತಿತ್ತು. ಅವಳ ಮುಖ ಬಹಳ ಕಂದಿಹೋಗಿತ್ತು. ಅವಳ ಕೈಗಳು ಬಹಳ ತೆಳ್ಳಗಿದ್ದವು. ಅವಳು ನನ್ನನ್ನು ಪ್ರೀತಿಸುತ್ತಿದ್ದಾಳೆಂದು ನಾನರಿತೆನು. ಆದರೆ ಅವಳಿಗಾಗಿ ನನ್ನ ಭಾವನೆ ಆಗ ಏನಿತ್ತೋ ಅದನ್ನು ನಾನು ಹೇಳಲಾರೆ. ನಾನವಳ ಮೃದುವಾಣಿಯನ್ನು ಕೇಳುವಾಗ ಕಿವಿಗೆ ತಂಪಾಗುವ ಹಾಗೆ ಆಗುತ್ತಿತ್ತು. ಪದೇಪದೇ ಅವಳಿಗೆ ಬರುವ ಕೆಮ್ಮು ಅವಳ ಶಾರೀರಿಕ ಕ್ಷೀಣತೆಗೆ ಸಾಕ್ಷಿಯಾಗಿದ್ದವು.

ಅವಳ ಕಂಗಳುಗಳನ್ನು ನೋಡಬೇಕೆಂದು ನಾನು ಬಯಸಿದೆ. ಆದರೆ ಅದೇ ಕನ್ನಡಕ ನಮ್ಮಿಬ್ಬರ ಮಧ್ಯದಲ್ಲಿ ಬಾಧಕವಾಗಿತ್ತು. ಅವಳಲ್ಲಿ ನನಗೆ ನನ್ನ ಕುಮುದಳು ಸಿಕ್ಕಲಿಲ್ಲ. ನಾನು ಅವಳನ್ನು ಮೂರು ನಾಲ್ಕು ಸರ್ತಿ ಕಂಡೆನು. ಅವಳ ಸಂಗಡ ಹೆಚ್ಚು ಮಾತನಾಡಲಿಲ್ಲ. ನಾನವಳ ಸಂಗಡ ಇದ್ದಾಗಲೆಲ್ಲಾ ಅವಳು ಯಾವುದೋ ಒಂದು ಬಗೆಯ ತೀಕ್ಷ್ಣ ಭಾವನೆಯನ್ನು ಅನುಭವಿಸುವಂತೆ ಕಂಡುಬರುತ್ತಿತ್ತು. ಆದುದರಿಂದ ಅವಳ ಮುಖದ ಕಳೆಯೇ ಇಂಗಿ, ಮುಖದ ಲಕ್ಷಣ ಅತ್ಯಂತ ಶೋಕಪೂರ್ಣ ಮತ್ತು ಕುರೂಪಿಯಾಗಿತ್ತು. ಅವಳ ಶಬ್ದಗಳಿಗಿಂತ ಅವಳ ಕಣ್ಣುಗಳು ನನಗೆ ಹೆಚ್ಚು ಅರ್ಥಪೂರ್ಣವಾಗಿದ್ದವು.

ಕುಮುದಳನ್ನು ಕಂಡಂದಿನಿಂದ ನಾನು ಬಹಳ ದುಃಖಿಯಾಗಿದ್ದೆನು. "ನನ್ನ ಸ್ವಪ್ನಗಳನ್ನು ಭಂಗಮಾಡಲು ಅವಳೇಕೆ ಬರಬೇಕಾಗಿತ್ತು! ನನ್ನ ಕಲ್ಪನೆಗೆ ವಾಸ್ತವಿಕ ರೂಪದ ಪರಿಚಯವೇಕೆ ಕೊಟ್ಟಳು? ನಾನು ನನ್ನ ಸ್ವಪ್ನದ ಲೋಕದಲ್ಲಿ ಅವಳನ್ನು ಆರಾಧಿಸುತ್ತಿದ್ದೆ. ನನ್ನ ಹೃದಯದಲ್ಲಿ ಅವಳಿಗಾಗಿರುವ ಪ್ರಣಯವು ಅತ್ಯಂತ ಗಹನವಾಗಿರುವುರಿಂದ, ನನಗೆ ಅವಳ ಭೆಟ್ಟಿಯಾಗುವಾಗ ನಾನು ಅವಳನ್ನು ಪುಸ್ತಕದಂತೆ ಓದಬಲ್ಲೆನೆಂದು ಯೋಚಿಸಿದ್ದೆ. ಆದರೆ ಈಗ ನಾನು ಅವಳನ್ನು ಕಾಣಲು ಸಿದ್ಧನಿಲ್ಲದಿರುವಾಗ ಅವಳು ಬಂದಳು. ಆದರೆ ಯಾವ ರೀತಿಯಲ್ಲಿ? ಅವಳು ಸುಂದರಿಯಲ್ಲವೆಂದು ನಾನು ಮೊದಲೇ ಗ್ರಹಿಸಿದ್ದೆ. ಏನು ನಮ್ಮ ಮೊದಲಿನ ಮಿಳನವು ಆ ಅಸಹ್ಯವಾದ ನೀಲ ಕನ್ನಡಕಗಳಿಂದಲೇ ಆಗಬೇಕೆ? ಅವಳು ಆ ಕನ್ನಡಕಗಳನ್ನು ಕೇವಲ ಒಂದು ನಿಮಿಷಕ್ಕಾದರೂ ತೆಗೆದುಬಿಟ್ಟಿದ್ದರೆ, ಅವಳು ನನ್ನ ಕುಮುದಳೋ ಅಲ್ಲವೋ ಎಂಬುದನ್ನು ತಿಳಿದುಕೊಂಡು ನನ್ನ ಪಾಡಿಗೆ ಹೋಗುತ್ತಿದ್ದೆ. ಈಗ ಸಂಶಯದಲ್ಲಿ ಹೇಗೆ ಇರಲಿ?"

ಅವಳನ್ನು ನಾನು ಕಂಡಾಗಲೆಲ್ಲಾ ಅವಳ ಆ ಸುಟ್ಟು ಕನ್ನಡಕವನ್ನು ಧರಿಸಿಯೆ ಇರುತ್ತಿದ್ದಳು. ಡಾಕ್ಟರರು ಅವುಗಳನ್ನು ತೆಗೆಯಲೇ ಕೂಡದೆಂದು ಕಟ್ಟಾಜ್ಞೆ ಮಾಡಿದ್ದಾರೆ ಎಂದು ತಿಳಿದೆನು. ನಾನು ಏಕಾಂತದಲ್ಲಿ ಒಂದೆರಡು ಸರ್ತಿ ನಿರಾಶೆಯಿಂದ ಅತ್ತೆನು. ಈ ಸಲ ನನಗೆ ಸಂಕಟ ಹೆಚ್ಚಾಗಿತ್ತು. "ನಾನೇಕೆ ಅವಳನ್ನು ಕಂಡೆನು? ನನ್ನ ದೃಷ್ಟಿಯಲ್ಲಿ ಅವಳಿಗೂ, ಬೇರೆ ಹುಡುಗಿಯರಿಗೇನೂ ವ್ಯತ್ಯಾಸವಿಲ್ಲ. ಅವಳಿಗಿಂತ ಹೆಚ್ಚಾಗಿ ನಾನು ಪರಾಗಳನ್ನು ಪ್ರೀತಿಸುತ್ತೇನೆ." ಎಂದು ಹೇಳಿಕೊಂಡೆನು.

ತಿರುಗಿ ಮನೆಗೆ ಹೋಗಲಿಕ್ಕೆ ಮನಸ್ಸು ಮಾಡಿದೆ. ಈಗ ಡಾರ್ಜಲಿಂಗಿನಲ್ಲಿ ನನಗೇನೂ ಆಕರ್ಷಣವುಳಿಯಲಿಲ್ಲ. ಪರಾಗ ಮತ್ತು ವಿಮಲೆಯರು ನನ್ನನ್ನು ಬೀಳ್ಕೊಡಲು ಸ್ಟೇಶನಿಗೆ ಬರಲಿಲ್ಲವೆಂದು ನನಗೆ ಸಂತೋಷವಾಯಿತು. ನಾನು ಸೆಕೆಂಡ್‌ಕ್ಲಾಸಿನ ಟಿಕೆಟನ್ನು ಕೊಂಡುಕೊಂಡೆನು. ನಾನೊಬ್ಬನೇ ಇರಬೇಕೆಂದು ಬಯಸಿದೆನು. ಜನರ ದಟ್ಟಣೆಯು ನನ್ನ ಮನಸ್ಸಿನ ಉಮ್ಮಳವನ್ನು ಹೆಚ್ಚಿಸುತ್ತಿತ್ತು. ಗಾಡಿ ಹೊರಡಲಿಕ್ಕೆ ಇನ್ನು ಎರಡು ಮೂರು ನಿಮಿಷ ಗಳಿದ್ದವು. ಇಡೀ ಒಂದು ಬರ್ಥ್‌ನ ಮೇಲೆ ಆಧಿಪತ್ಯ ಮಾಡಿಕೊಂಡ ನಂತರ ನಾನು ಕಿಟಕಿಯಿಂದ ಹೊರಗೆ ಶೂನ್ಯದೃಷ್ಟಿಯಿಂದ ನೋಡಲಾರಂಭಿಸಿದೆ. ಬಹಳ ಚಿಂತಿಸಿ ನನ್ನ ಮನಸ್ಸು ಬೇಸತ್ತಿತ್ತು. ನನ್ನ ಮನಸ್ಸು ಶೂನ್ಯವಾಗಿತ್ತು.

ನನ್ನ ದೃಷ್ಟಿ ಮೂರನೇ ತರಗತಿಯ ಒಂದು ಡಬ್ಬಿಯ ಹತ್ತಿರ ನಿಂತಿರುವ ಜನರ ಕಡೆ ಹೋಗಿ ಅಲ್ಲಿಯೇ ನಿಂತಿತು. ಹೌದು. ಕುಮುದಳೂ ಅಲ್ಲಿಯೇ ಇದ್ದಳು. ನಾನು ಅವಳ ಬೆನ್ನಿನಿಂದ ಅವಳನ್ನು ಗುರುತಿಸಬಲ್ಲೆ. ಅವಳು ನನ್ನನ್ನು ನೋಡಿರಲಿಲ್ಲ. ನನ್ನ ಮನಸ್ಸು ಕ್ರೋಧಪೂರ್ಣ ದುಃಖದಿಂದ ತುಂಬಿತು. ಪುನಃ ಕುಮುದಳೇ? ನಾನು ಈಗ ಸ್ವಲ್ಪ ನೆಮ್ಮದಿಯಲ್ಲಿದ್ದೆನು. ಆದರೆ ಇವಳು ನನಗೆ ತಿರುಗಿ ಅಶಾಂತಿಯನ್ನು ತುಂಬಲು ಬಂದಿದ್ದಾಳೆ.

ಗಾಡಿಯು ಹೊರಟಿತು. ನಾನು ಹೊರಗೆ ನೋಡಲಾರಂಭಿಸಿದೆ. ಅವಳು ಯಾರೋ ಕಂಪಾರ್ಟ್‌ಮೆಂಟಿನಲ್ಲಿರುವವರಿಗೆ ಕೈಬೀಸುತ್ತಿದ್ದಳು. ಕ್ರಮಶಃ ನನ್ನ ಕಂಪಾರ್ಟ್‌ಮೆಂಟೂ ಅವಳ ಹತ್ತಿರದಿಂದ ಸರಿದುಹೋಯಿತು. ನಾನು ಅವಳನ್ನು ನೋಡಿದೆನು. ಓ ದೇವರೆ! ನಾನು ಯಾರಿಗಾಗಿ ಇಷ್ಟು ದಿವಸಗಳ ವರೆಗೆ ಕೊರಗಿದೆನೋ, ಅವಳು ಅದೇ ಕುಮುದಳು! ಈ ಸಲ ಅವಳು ಕನ್ನಡಕ ಹಾಕಿಕೊಂಡಿರಲಿಲ್ಲ. ಅವಳ ಕಂಣುಗಳಲ್ಲಿ ನನ್ನ ಕಲ್ಪನೆಯ ನೇತ್ರಗಳನ್ನು ನೋಡಬಹುದಾಗಿತ್ತು. ಅವಳೂ ನನ್ನನ್ನು ನೋಡಿದಳು. ಅವಳು ಮುಗುಳುನಗೆ ನಕ್ಕಳು—ಆದರೆ ಅದೆಂತಹ ನಗೆ! ಅವಳ, ಆ ನಗುವಿನಲ್ಲಿ ಅವಳ ಹೃದಯದಲ್ಲಿ ಹುದುಗಿರುವ ನನಗಿರುವ ಪ್ರೀತಿಯು ಅಡಕವಾಗಿತ್ತು—ಮತ್ತು ಅವಳ ಮಾನಸಿಕ ತಾಪ ಮತ್ತು ಚಿಂತನೆಯ ಪ್ರತಿಬಿಂಬವಿದ್ದವು. ಗಾಡಿಯಿಂದ ಹಾರಿಬಿಡಲೋ ಎಂದು ಯೋಚಿಸಿದೆ. ಆದರೆ ಯಾವುದೋ ಒಂದು ಅಜ್ಞಾತ ಶಕ್ತಿಯು ನನ್ನನ್ನು ಹಿಂದಕ್ಕೆಳೆಯಿತು.

ಓಹೋ ಎಂತಹ ವ್ಯಂಗ್ಯ—ನನ್ನ ನಿರಾಶೆಯು ... ತನ್ನ ಚರಮ ಸೀಮೆಯನ್ನು ಕಲಕಿತೋ, ಆವಾಗ ... ಈ ಪುರಸ್ಕಾರ ಸಿಕ್ಕಿತು. ಆದರೆ ಅದೂ ಹೊತ್ತು ... ಮೇಲೆ.

* * *

ಅದರ ನಂತರ ಅವಳ ಕಡೆಯಿಂದ ನನಗೆ ಸಮಾಚಾರ ಸಿಕ್ಕಲಿಲ್ಲ. ನಾನು ಅವಳಿಗೆ ಬರೆದೆ. ಆದರೆ ... ಉತ್ತರವೇ ಇಲ್ಲ. ಡಾರ್ಜಲಿಂಗಿನ ನನ್ನ ವರ್ತನೆ ... ಬೇಡಿದೆ. ಅದಕ್ಕೂ ಉತ್ತರವಿಲ್ಲ.

ಹೀಗೆ ಮೂರು ತಿಂಗಳುಗಳಾದವು. ಅಕ್ಟೋಬರ ... ಸುಂದರ ಪ್ರಭಾತವಾಗಿತ್ತು. ಹಿಂದಿಯ ಮಾಸಿಕ ... ಬಂದಿತ್ತು. ಅಲಕ್ಷ್ಯಭಾವದಿಂದ ಅದರ ಹಾಳೆಗಳನ್ನು ಮಗುಚುತ್ತಾ ಹೋದೆ. ನನ್ನ ಕಂಣುಗಳು ... ಒಂದು ಪುಟದಲ್ಲಿ ಬಿದ್ದವು. ನಾನು ನೋಡಿದೆನು ... ಬರೆದಿತ್ತು:—

ಕುಮಾರಿ ಕುಮುದಿನಿ—ಕವಯಿತ್ರಿ—ಇವರು ... ರೋಗದಿಂದ ಸ್ವರ್ಗಸ್ಥರಾದರು....

ನಾನು ಮುಂದೆ ಓದಲಿಲ್ಲ.


ಅವಳಿಗಾಗಿ ಕಾತರಿಸಲು ಅವಳು ನನ್ನನ್ನು ... ಹೋದಳು. ಅವಳ ತಾಯಿತಂದೆಗಳಿಗೆ ನಾನು ... ಲಿಲ್ಲ. ಅವರ ದುಃಖಕ್ಕಿಂತ ನನ್ನ ದುಃಖವೇನೂ ... ಯಲ್ಲ. ಒಂದು ತಿಂಗಳ ನಂತರ ನಾನು ಪರಾಗಳ ... ದೆನು. ನನ್ನ ಮಾನಸಿಕ ಈ ಸಂತಾಪವನ್ನು ... ಅವಳೊಬ್ಬಳೇ ನನ್ನ ಸ್ನೇಹಿತೆ. ಅವಳೂ ಸಹ ... ಸಹಾನುಭೂತಿಯಿಂದ ವರ್ತಿಸಿದಳು.

ಕುಮುದಳು ನನ್ನನ್ನು ಪ್ರೀತಿಸುತ್ತಿದ್ದಳೆಂದು ... ನನಗೆ ಗೊತ್ತಾಯಿತು. ಡಾರ್ಜಲಿಂಗಿನಲ್ಲಿ ನನ್ನ ... ಮತ್ತು ನಿರ್ದಯ ವರ್ತನೆಯಿಂದ ಅವಳಿಗೆ ಬಹಳ ... ವೇದನೆಯಾಯಿತು. ನಾನು ಡಾರ್ಜಲಿಂಗನ್ನು ... ಕೂಡಲೇ ಅವಳು ಕಾಯಿಲೆ ಬಿದ್ದು ಬಿಟ್ಟಳು ... ಪತ್ರಗಳು ಅವಳಿಗೆ ತಲಪಲೇ ಇಲ್ಲ; ಅವಳನ್ನು ... ಟೋರಿಯುಮಿಗೆ ಕರೆದುಕೊಂಡು ಹೋದರು. ಅಲ್ಲಿ ... ಸತ್ತು ಹೋದಳು. ಅವಳ ತಂದೆ ಅವಳಿಗೆ ನನ್ನ ... ದರೂ ಪತ್ರವನ್ನು ಕೊಡಲಿಲ್ಲ.

ಈಗ ನನಗೆ ಮದುವೆಯಾಗಿದೆ. ಈ ... ನೆನೆಸಿಕೊಂಡಾಗೆಲ್ಲಾ ನನ್ನ ಮನಸ್ಸು ... ತ್ತದೆ. ಆದರೆ ತಪ್ಪುಮಾಡುವುದು ಮಾನವನ ಗುಣ ... ನನ್ನನ್ನು ಸಮಾಧಾನಮಾಡಿಕೊಳ್ಳುತ್ತಿದ್ದೇನೆ.

ವ್ಯಾಯಾಮ

ಲೇ:—ಡಾ. ಗೋಪಾಲಕೃಷ್ಣರಾಯರು, ಸಂಪಾದಕ ಕಲಿಯುಗ, ಧಾರವಾಡ



ಮಲ್ಲಸಜ್ಜನ ವ್ಯಾಯಾಮಶಾಲೆಯ ಸಂಚಾಲಕರಾದ ಶ್ರೀ. ನಾಡಿಗ ಕೃಷ್ಣರಾಯರು

ಸುಲಭವಾದ ವ್ಯಾಯಾಮಗಳನ್ನು ಕೂಡ ಕ್ರಮಬದ್ಧವಾಗಿ ಕೆಲವೇ ಮಿನಿಟುಗಳ ವರೆಗೆ ಮಾಡಿದರೂ .. .. .. ಸ್ನಾಯುಗಳು ಬಲಗೊಳ್ಳುವವು. .. .. ..

ಹೆಚ್ಚು ಶ್ರಮದಿಂದ ಮಾಡಿದ ಚಲನವಲನಗಳು ವ್ಯಾಯಾಮವಲ್ಲ; ದೇಹದೊಳಗಿನ ಅಸ್ಥಿಸ್ನಾಯುಗಳ .. .. ರಚನೆಗನುಸರಿಸಿ ವ್ಯಾಯಾಮವು ಅನುಗೊಳ್ಳಬೇಕು. .. ..

ಶರೀರದ ಎಲ್ಲ ಅಂಗಗಳಿಗೂ ತಕ್ಕಷ್ಟು ಕೆಲಸ ಕೊಡುವುದೆ ವ್ಯಾಯಾಮ. ಬರಿ ಆನೆಗಾತ್ರ ಬೆಳೆಯುವುದು .. .. .. ವ್ಯಾಯಾಮವಲ್ಲ. .. ..

ವ್ಯಾಯಾಮವೆಂದ ಕೂಡಲೆ ಕೆಲವರಿಗೆ ಮೈ ನಡುಗುವದು. ಶರೀರವನ್ನು ಆನೆಗಾತ್ರ ಬೆಳೆಸುವವರಿಗೇ ವ್ಯಾಯಾಮದ ಆವಶ್ಯಕತೆಯಿದೆಯೆಂದು ಅವರ ಕಲ್ಪನೆ. ಈಗ ತೀಕ್ಷ್ಣವಾದ ಮದ್ದಿನ ಅಸ್ತ್ರಗಳೆಲ್ಲ ಇರುವಾಗ ಮೈಕಸ್ಸು ವನ್ನು ಬೆಳೆಸಿ ನಾವು ಯಾರೊಡನೆ ಕುಸ್ತಿಯಾಡಬೇಕಾಗಿದೆ ಎಂದು ಬೇರೆ ಕೆಲವರು ಕೇಳುವರು. ಮೈಕಸುವನ್ನು ಬೆಳೆಸಲು ವ್ಯಾಯಾಮವನ್ನೆ ಏಕೆ ಮಾಡಬೇಕು? ಮಾಂಸವರ್ಧಕವಾದ ಪೌಷ್ಟಿಕ ಆಹಾರವನ್ನು ಸೇವಿಸಿದರೆ ಸರಿ ಎಂದು ಇನ್ನು ಕೆಲವರು ಪ್ರಶ್ನಿಸುವರು. ನನ್ನ ತೂಕವೆ ೧೯೦ ಪೌಂಡು ಇದೆ; ನನಗೆಂದೂ ಕಾಯಿಲೆಯಾಗುತ್ತಿರುವದಿಲ್ಲ; ನಾನೇಕೆ ಸುಮ್ಮನೆ ವ್ಯಾಯಾಮ ಮಾಡಬೇಕು ಎಂದು ಮತ್ತೆ ಕೆಲವರು ಆಕ್ಷೇಪಿಸುವರು. ಹಾಲು, ತುಪ್ಪ, ಗೋಧಿ ಮುಂತಾದ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳುವಷ್ಟು ದುಡ್ಡಿಲ್ಲದ ಮೇಲೆ ನಾವು ವ್ಯಾಯಾಮ ಹೇಗೆ ಮಾಡುವದು ಎಂದು ಬಡವರು ನಿಟ್ಟುಸಿರಿಡುವರು.


ಆದರೆ ಮೇಲಿನ ಎಲ್ಲ ಆಕ್ಷೇಪಣೆಗಳೂ 'ವ್ಯಾಯಾಮ'ದ ಅಪಾರ್ಥ ಮಾಡಿದುದರ ಪರಿಣಾಮಗಳಾಗಿವೆ. ವ್ಯಾಯಾಮವೆಂದರೆ ದೇಹದ ಎಲ್ಲ ಅವಯವಗಳಿಗೂ ತಕ್ಕಷ್ಟು ಕೆಲಸ

ಕೊಡುವದು. ನಮ್ಮ ಕೃತ್ರಿಮ ಜೀವನದ ಮೂಲಕ ನಮ್ಮೆಲ್ಲ ಅವಯವಗಳಿಗೂ ಸಾಕಷ್ಟು ಕೆಲಸ ಸಿಗುತ್ತಿಲ್ಲ. ಸೋಮಾರಿಯಾದ ಅಂಗವು ಸೊರಗಿ ಕಸುವುಗುಂದುವದು ನೈಸರ್ಗಿಕ ನಿಯಮವಾಗಿದೆ. ಹಾಳುಮನೆಯು ಬಳಕೆ ಕಡಿಮೆಯಾದಂತೆ ಬೀಳುಮನೆಯಾಗುವದು ನಮ್ಮ ಅನುಭವದ ವಿಷಯ. ಬಳಕೆಯಲ್ಲಿಲ್ಲದ ದಾರಿಯಲ್ಲಿ ಮುಳ್ಳು ಬೆಳೆಯುವವು. ಬಳಸದ ಬಾವಿಯ ನೀರು ಹಾವುಸೆಗಟ್ಟಿ ಹಾಳಾಗುವದು. ನಮ್ಮ ಶರೀರದಲ್ಲಿ ಕೆಲಸವಿಲ್ಲದ ಅಂಗಗಳ ಅವಸ್ಥೆಯೂ ಅಷ್ಟೆ. ಕೆಲಸವೆ ಕಸುವಿನ ಗುಟ್ಟು.

ನಮ್ಮ ದೇಹದ ಅಣುರೇಣುಗಳಲ್ಲಿಯೂ ಕೆಲಸ ನಡೆದಿದೆ. ಅವುಗಳಲ್ಲಿರುವ ಸೂಕ್ಷ್ಮಾತಿಸೂಕ್ಷ್ಮ ಸಂಕೋಚ ವಿಕಾಸಗಳಿಂದ ಆ ಕೆಲಸಗಳು ನಡೆಯುತ್ತವೆ. ಅವು ಕೆಲಸವನ್ನು ನಿಲ್ಲಿಸಿದ ಕೂಡಲೆ ಅಲ್ಲಿಯ ರಕ್ತಪರಿಚಲನವು ತಡೆಯುತ್ತದೆ. ರಕ್ತವು ಅಣುಗಳ ಜೀವನಾಧಾರ ವಸ್ತುವು. ಅದರ ಧಾರಾಳವಾದ ಪರಿಚಲನಕ್ಕೆ ತಡೆಯಾದ ಕೂಡಲೆ ಅಣುಗಳು ಬಲಗುಂದುವವು. ಅಣುಗಳ ಬಲದ ಮೇಲೆಯೆ ನಮ್ಮ ಸಮಗ್ರ ಶರೀರದ ಬಲಾಬಲಗಳು ಆರೋಗ್ಯ-ಅನಾರೋಗ್ಯಗಳು ಅವಲಂಬಿಸಿವೆ. ಆದುದರಿಂದ ದೇಹದ ಯಾವುದೇ ಭಾಗದ ಸ್ನಾಯುಗಳು ಕೆಲಸಗೇಡಿಯಾದರೆ ಇಡಿ ಅಂಗವು ಕಸುವುಗೇಡಿಯಾಗುವದು.

ಸಂಕೋಚವಾಗುವದು ಸ್ನಾಯುಗಳ ಸ್ವಭಾವ. ನೀರು ತುಂಬಿದ ಸ್ಪಂಜನ್ನು ಹಿಚುಕಿದರೆ ನೀರೆಲ್ಲ ಹೊರಟುಹೋಗುವದು. ಪುನಃ ಅದನ್ನು ನೀರಲ್ಲಿ ಅದ್ದಿದರೆ ನೀರು ಒಳಹೊಗುವದು. ಸ್ನಾಯುಗಳು ಸಂಕೋಚವಾದರೆ ಅವುಗಳಲ್ಲಿರುವ ರಕ್ತನಲಿಕೆಗಳೊಳಗಿನ ರಕ್ತವು ಹೊರಗೆ ಹೋಗುವದು. ಸ್ನಾಯುಗಳು ಹಿಗ್ಗಿದ ಕೂಡಲೆ ಹೊಸ ರಕ್ತವು ಒಳಗೆ ಪ್ರವೇಶಿಸುವದು. ಹೀಗೆ ಬೇಗ ಬೇಗ ಸ್ನಾಯುಗಳು ಸಂಕೋಚ ವಿಕಾಸಗಳನ್ನು ಹೊಂದುವದರಿಂದ ರಕ್ತವು ಬೇಗಬೇಗ ಸ್ನಾಯುಗಳೊಳಹೊಕ್ಕು ಹೊರಹೊರಟು ಹೋಗುವದು. ಆದರಿಂದ ಇಡಿ ದೇಹದ ರಕ್ತವು ತೀವ್ರವಾಗಿ ಪರಿಚಲಿಸುವದು. ವ್ಯಾಯಾಮವೆಂದರೆ ... ಅಗತ್ಯವಿರುವ ಅಂಗಗಳಲ್ಲಿಯ ಸ್ನಾಯುಗಳ ಸಂಕೋ... ವಿಕಾಸಗಳನ್ನು ಉತ್ತೇಜಿಸುವದು. ಒಂದೇ ಅಂಗದಲ್ಲಿ ... ಪರಿಚಲನೆಯು ತೀವ್ರಗೊಂಡರೂ ಅದರ ಪರಿಣಾಮ... ಇಡಿದೇಹದ ಪರಿಚಲನೆಯ ಮೇಲಾಗುವದು.


ನಮ್ಮ ಪೋಷಣೆಯೂ ಬೆಳಿಗೆಯೂ ಆಹಾರದ ... ಅವಲಂಬಿಸಿದೆಯೆನ್ನುವದು ನಿಜವಾದರೂ ಆಹಾರ... ನಾವು ಯಾವ ರೂಪದಲ್ಲಿ ಸೇವಿಸುವೆವೋ ಅದೇ ರೂಪ... ಅದು ದೇಹಧಾತುಗಳಿಗೆ ಮುಟ್ಟುವದಿಲ್ಲ. ಆಹಾರವು ... ವಾಗಿ ರಕ್ತವಾಗುವದು. ರಕ್ತವು ಪ್ರವಹಿಸುತ್ತ ವಿವಿಧ... ಗಳ ಧಾತುಗಳಿಗೆ (Tissues) ಅವಶ್ಯವಾದ ಪೋಷಕ ದ್ರವ್ಯ... ಗಳನ್ನು ಮುಟ್ಟಿಸುತ್ತದೆ. ರಕ್ತವು ಆಯಾ ಧಾತು... ಮುಟ್ಟಬೇಕಾದರೆ ಅಲ್ಲಿ... ಸ್ನಾಯುಗಳು ಸಂಕೋಚ... ಗಳನ್ನು ಹೊಂದಬೇಕು. ಸ್ನಾ... ಗಳ ಸಂಕೋಚ ವಿಕಾ... ವ್ಯಾಯಾಮ ಅಂದರೆ ... ಅಗತ್ಯವಿದೆ. ಅಂದಮೇಲೆ ... ಪೌಷ್ಟಿಕ ಆಹಾರವನ್ನು ... ದರೆ ಸ್ನಾಯುಗಳು ಕಸುವು... ವವೆಂಬುದು ಭ್ರಮೆ.



ಸುಲಭವಾದರೂ ಪ್ರಯೋಜನಕಾರಿಯಾದ ವ್ಯಾಯಾಮ

ಶರೀರವನ್ನು ಅನೇಕ ... ಸುವದು ವ್ಯಾಯಾಮದ ... ವಲ್ಲ. ಮನುಷ್ಯನು ... ದಿಂದ ತನ್ನ ವಿವಿಧಾಂಗ... ಚಮತ್ಕಾರಿಕವಾಗಿ ವಿಕಾಸ... ಬಲ್ಲ. ಕೈಬೆರಳಿನ ಸ್ನಾಯು... ಶಿಕ್ಷಣಕೊಟ್ಟು ವೇಗವಾಗಿ ... ಗಳನ್ನು ಬಾರಿಸಬಲ್ಲ; ಕಾಲುಗಳ ಸ್ನಾಯುಗಳನ್ನು ... ದಲ್ಲಿ ವಿಲಕ್ಷಣವಾಗಿ ಕುಣಿಸಬಲ್ಲ; ಹಾಡುವಾಗ ... ಸ್ನಾಯುಗಳನ್ನು ವಿಚಿತ್ರವಾಗಿ ಕಂಪಿಸಬಲ್ಲ; ... ಸಾಧನದಿಂದ ೮-೧೦ ಅಂಕೆಗಳುಳ್ಳ ಗುಣಾಕಾರವನ್ನು ... ನಿಮಿಷದಲ್ಲಿ ಬಾಯಿಂದಲೆ ಮಾಡಬಲ್ಲ; ನೂರಾರು ... ದೂರ ಹಾರುವ ಹಕ್ಕಿಯನ್ನು ಕವಣೆಕಲ್ಲಿನಿಂದ ... ಹೊಡೆಯಬಲ್ಲ; ಇವೆಲ್ಲವುಗಳಿಂದ ಮನುಷ್ಯನು ... ಚಮತ್ಕಾರಗಳನ್ನು ಮಾಡಬಲ್ಲನೆಂಬುದು ... ಆದರೆ ಅವುಗಳಾವವೂ ಮನುಷ್ಯನ ಆರೋಗ್ಯಕ್ಕೆ

ವಶ್ಯಕವಾದವುಗಳಲ್ಲ. ತನ್ನ ಮನಃಸಂತೋಷಕ್ಕಾಗಿ ಅವನು ಅಂಥ ಚಮತ್ಕಾರಗಳನ್ನು ಸಾಧಿಸುವನು. ಅದ ರಂತೆಯ ವಿಶಿಷ್ಟವ್ಯಾಯಾಮದಿಂದ ತನ್ನ ಮೈಯನ್ನು ಅನೆ



ದಂಡೆಯು (ಸಾಮು) ಬುನಾದಿಯಿಂದ ಬಂದ ವ್ಯಾಯಾಮ


ಗಾತ್ರವಾಗಿಯೂ ಅವನು ಬೆಳೆಸಬಲ್ಲನು. ಆದರೆ ಹಾಗೆ ಬೆಳೆಯುವದು ಆರೋಗ್ಯಕ್ಕೆನೂ ಅಗತ್ಯವಿಲ್ಲ. ಎಲ್ಲ ಸ್ನಾಯು ಗಳಿಗೂ ತಕ್ಕಷ್ಟು ಕೆಲಸಸಿಕ್ಕು ಎಲ್ಲ ಧಾತುಗಳಿಗೂ ಸಾಕಷ್ಟು ಪೋಷಣೆ ಸಿಕ್ಕರೆ ವ್ಯಾಯಾಮದ ಉದ್ದೇಶವು ಸಾಧಿಸಿದಂತಾ ಯಿತು.

ಬಂದೂಕು ಬಾಂಬುಗಳಂತಹ ಮದ್ದಿನ ಅಸ್ತ್ರಗಳು ಹುಟ್ಟಿರುವಾಗ ವ್ಯಾಯಾಮದ ಅಗತ್ಯವೇನು ಎಂಬ ಪ್ರಶ್ನೆಯು ಎಷ್ಟು ತಿಳಿಗೇಡಿತನದ್ದಾಗಿದೆಯೆಂಬುದು ಈಗ ಸಹಜವಾಗಿ ತಿಳಿಯಬಹುದು. ನಾವು ಜಟ್ಟಿಗಳೊಡನೆ ಕುಸ್ತಿಯಾಡುವ ಅಗತ್ಯವಿಲ್ಲದಿದ್ದರೂ, ಅನೇಕ ಬೇನೆಗಳೊ ಡನೆ ಹೋರಾಡಲು ನಾವು ಖಂಡಿತವಾಗಿ ಸಮರ್ಥರಾಗ ಬೇಕಲ್ಲವೆ? ಬೇನೆಗಳು ಧಾತುಗಳನ್ನು ಮುತ್ತುವಾಗ ಅವನ್ನು ಹೊಡೆದೋಡಿಸಲು ಧಾತುಗಳು ಸಮರ್ಥವಾಗ ಬೇಕಾದರೆ ವ್ಯಾಯಾಮದಿಂದ ರಕ್ತಪರಿಚಲನೆಯನ್ನು ಉತ್ತೇಜಿಸಿ ಧಾತುಗಳಿಗೆ ಪುಷ್ಟಿಯನ್ನು ಹಂಚಲೇಬೇಕು.

ಕೆಲವರಿಗೆ, ತೋರಿಕೆಗೆ ತಾವು ನಿರೋಗಿಗಳಾಗಿಯೂ, ಹಲವರು ಪೌಂಡು ತೂಕವುಳ್ಳವರಾಗಿಯೂ ಇರುವದರಿಂದ ವ್ಯಾಯಾಮದ ಅಗತ್ಯವಿಲ್ಲವೆನಿಸಬಹುದು. ಆದರೆ ಅನೇಕ ರಿಗೆ ರೋಗವೆಂದರೇನೆಂಬುದೆ ತಿಳಿಯದು. ಆದರಿಂದ ತಮ್ಮಲ್ಲಿ ಸೂಕ್ಷ್ಮವಾಗಿರುವ ರೋಗಗಳ ಅರಿವು ಅವರಿಗಿರು ವದಿಲ್ಲ. ನಿದ್ದೆ ಸರಿಯಾಗಿ ಬರದಿರುವದು, ಕಮರು ತೇಗು ಗಳು ಬರುತ್ತಿರುವದು, ಸಿಡುಕರಾಗುವದು, ಹೊಟ್ಟೆ ಬೆಳೆಯುವದು ಮುಂತಾದ ಲಕ್ಷಣಗಳು ಒಮ್ಮೆಲೆ ಗೋಚರ ವಾಗದೆ ಕಾಲಾಂತರದಲ್ಲಿ ಯಾವುದಾದರೊಂದು ಭಯಂಕರ ಬೇನೆಯು ಒಡಮೂಡುವ ಸಂಭವವಿದೆ.

ವ್ಯಾಯಾಮ ಮಾಡುವವರು ಅಸಾಧಾರಣವಾದ ಪೌಷ್ಟಿಕಾ ಹಾರವನ್ನು ಸೇವಿಸಲೇ ಬೇಕೆಂಬುದು ತಪ್ಪು ತಿಳುವಳಿಕೆ. ಬಡವರ ಆಹಾರವಾದ ರೊಟ್ಟಿ, ಅನ್ನ, ಗಡ್ಡೆಗೆಣಸುಗಳಿಂದ ಸಾಕಷ್ಟು ಪುಷ್ಟಿಯು ದೇಹಕ್ಕೆ ಸಿಗುತ್ತದೆ. ಹಿಂದೆ ಹೇಳಿ ದಂತೆ ಕೇವಲ ತಮ್ಮ ಮನಃಸಂತೋಷಕ್ಕಾಗಿ ಅನೆಗಾತ್ರ ಮೈ ಬೆಳೆಸಿಕೊಳ್ಳುವವರಿಗೆ ಮಾತ್ರ ವಿಶೇಷ ಪೌಷ್ಟಿಕಾಹಾರ ಗಳ ಅಗತ್ಯವಿದೆ. ಬರಿ ಆರೋಗ್ಯದ ಅಪೇಕ್ಷೆಯಿಂದ ಮಾಡುವ ವ್ಯಾಯಾಮಕ್ಕೆ ಯಾವ ಬೆಲೆಯುಳ್ಳ ಪೌಷ್ಟಿಕ ಆಹಾರವೂ ಅಗತ್ಯವಿಲ್ಲ; ಆದರೆ ದುರ್ವ್ಯಸನಗಳಲ್ಲಿ ವೆಚ್ಚ ವಾಗುವ ದುಡ್ಡನ್ನು ಹಾಲು, ಬೆಂಣೆ, ಹಂಣುಗಳಿಗೆ ವೆಚ್ಚಿ ಸುವದೇನೂ ಕೆಡುಕಲ್ಲ.

ಓಟ್ಟನಲ್ಲಿ ಲೋಡು, ಡಂಬೆಲ್ಸ್, ಮಲಕಂಭ, ಭಾರವಹನ ಮುಂತಾಗಿ ಗರಡಿಮನೆಯ ಕಸರತ್ತುಗಳೇ ವ್ಯಾಯಾಮ ವೆಂದರ್ಥವಲ್ಲ. ಒಂದೇ ಕಡೆ ಕೂತು ಶ್ರಮಿಸುವ ಕಾರ ಕೂನರು, ಕಾರಖಾನೆಯ ಕೂಲಿಕಾರರು, ಶಿಕ್ಷಕರು, ವಿದ್ಯಾರ್ಥಿ ಗಳು, ಅಕ್ಕಸಾಲಿಗರು ಮುಂತಾದವರ, ಕೆಲಸಗೇಡಿಯಾದ ವಿಶಿಷ್ಟ ಅಂಗಗಳಿಗೆ ಕೆಲಸ ಕೊಡುವ ಯಾವುದೇ ಚಲನ ವಲನವೂ ವ್ಯಾಯಾಮವೆಂದೇ ಎಣಿಸಲ್ಪಡುವದು. ಇಂತಹ ದುಡಿಮೆಗಾರರಿಗೆ ಮನರಂಜನೆಯೊಡನೆ ವ್ಯಾಯಾಮವನ್ನು ತೆಗೆದುಕೊಳ್ಳುವ ಏರ್ಪಾಡು ಮಾಡುವದು ಒಳಿತು. ಅದ ಕ್ಕಾಗಿ ಲೇಝಿಮ್, ತಿಳ್ಳಿ, ಖೋಖೋ, ತೀವ್ರವಾಗಿ ನಡೆ ಯುವದು, ಓಡುವದು, ಚಿಣ್ಣಿಕೋಲು, ಚೆಂಡಾಟ, ಹುಡು




ಡಂಬೆಲ್ಸಿನ ಬದಲು ಭಾರವಾದ ಪುಸ್ತಕಗಳ ಉಪಯೋಗ

ಗಿಯರ ಹಗ್ಗದಾಟ ಮುಂತಾದ ವ್ಯಾಯಾಮಗಳು ಅತ್ಯು ತ್ತಮವಾದವುಗಳಾಗಿವೆ. ಅಲ್ಲದೆ ಕ್ರಮಬದ್ಧವಾಗಿ ಕೆಲವೆ ಮಿನಿಟುಗಳವರೆಗೆ ಕೂತೇಳುವದು, ದಂಡೆ (ಸಾಮು)

ಮುಂತಾದ ಸ್ಥಾನಿಕ ವ್ಯಾಯಾಮಗಳೂ ಸ್ನಾಯುಗಳನ್ನು ಬಲಗೊಳಿಸುವವು. ಬಟ್ಟೆ ಒಗೆಯುವದು, ನೀರು ಎಳೆಯುವದು ಮುಂತಾದ ಮನೆಯ ಕೆಲಸಗಳನ್ನು ನಾವೆ ಮಾಡುವದರಿಂದಲೂ ಸಾಕಷ್ಟು ವ್ಯಾಯಾಮವಾಗುವದು. ಡಂಬೆಲ್‍ಗಳನ್ನು ಕೊಳ್ಳಲಾರದವರು ಸಮಭಾರವುಳ್ಳ ಪುಸ್ತಕಗಳನ್ನು ಉಪಯೋಗಿಸಬಹುದು. ಇವೆಲ್ಲ ವ್ಯಾಯಾಮಗಳನ್ನು ದೇಹದ ಸ್ನಾಯು ಮತ್ತು ಅಸ್ಥಿಗಳ ಸ್ಥಿತಿಯನ್ನರಿತುಕೊಂಡು ಕ್ರಮಬದ್ಧವಾಗಿ ಮಾಡುವದರಿಂದ ಹೆಚ್ಚು ಲಾಭವಾಗುವದು.

ವ್ಯಾಯಾಮವನ್ನು ಬೆಳಗ್ಗೆ ಪ್ರಾತರ್ವಿಧಿಗಳನ್ನು ಮುಗಿಸಿದ ಕೂಡಲೆ ಮಾಡುವದು ಒಳಿತು. ಬೇರೆ ಸಮಯದಲ್ಲಿ ಮಾಡುವದಾದರೆ ಊಟವಾಗಿ ಕನಿಷ್ಠ ನಾಲ್ಕು ... ಗಳಾದರೂ ಆಗಿರಬೇಕು. ವ್ಯಾಯಾಮವಾಗಿ ... ಗಂಟೆಯ ವರೆಗಾದರೂ ಆಹಾರವನ್ನು ಸೇವಿಸಬಾರ...

ವ್ಯಾಯಾಮದಿಂದ ಬಹು ಗಡುತರವಾಗಿ ಬೆಳೆದ ... ರನ್ನು ನೋಡಿ ಕೆಲವರು ತಾವೂ ಹಾಗೆ ... ಬೇಕೆಂದು ಮಿತಿಮೀರಿ ಶ್ರಮಿಸುವದುಂಟು. ... ಅನೇಕರಿಗೆ ಅಪಾಯವಾದುದುಂಟು. ತಡೆಯುವಷ್ಟಕ್ಕಿಂತ ಹೆಚ್ಚು ಆಯಾಸವಾಗುವಂತೆ ವ್ಯಾಯಾಮವನ್ನೆಂದೂ ಮಾಡಬಾರದು. ಗಡುತರ ಬೆಳೆಯುವದು ಒಬ್ಬೊಬ್ಬರ ... ಸ್ವಭಾವ. ಎಲ್ಲರೂ ವ್ಯಾಯಾಮ ಮಾಡುವದರಿಂದ ... ಗಡುತರವಾಗುವದಿಲ್ಲ.



ಕೆಂಗಪ್ಪ

ಸಂಗ್ರಾಹಕರು: ಶ್ರೀ. ಎಂ. ಕೃಷ್ಣಮೂರ್ತಿ, ಮತಿಘಟ್ಟ

ತಂದಾನಿ ತಾನಂದರುಳೋ ಜಾಣ,
ಅರುಳೋ ಮರುಳೊಂದರುಳೋ ಜಾಣ ‖ ಪ ‖

ಗದ್ದೂಗೆ ಬಿಟ್ಟೆದ್ದು ಬಾರೋ ಜಾಣ
ಗದ್ದೂಗೆನೇ ಬಿಟ್ಟು ಎದ್ದು ಬಾರೊ ಎಲೆ ಜಾಣ
ಓ, ಗದ್ದೂಗೆಲಿದ್ರೆ ಶಿವುನಾಣೋ ಜಾಣ ‖ ತಂದಾನಿ—

ಗದ್ದೂಗೆಲಿದ್ದಾರೆ ಶಿವುನಾಣೆ ಶಿವರಾತ್ರೆ
ಮಗ್ಗ ಬಂದಾವೆ ಮುಡಿಬಾರೋ ಜಾಣ,
ಮಗ್ಗಳ್ಳಿ ಬಾಯ್ಬಿಡುತಾವೋ ಜಾಣ ‖ ತಂದಾನಿ—

ಮಗ್ಗ ಇಲ್ಲಾವೆಂದೂ ಮಗ್ಗೀಗೆಗ್ಹೋಗಲಿಬ್ಯಾಡ,
ಮಗ್ಗ ಕೆಂಗಪ್ಪನ್ಮನಿ ಹಿಂದೋ ಜಾಣ
ಹೂವು ಕೆಂಗಪ್ಪನ್ಮನಿ ಹಿಂದೋ ಜಾಣ ‖ ತಂದಾನಿ—

ಎಳ್ಳೀನ ಹೊಲದಾಗೇ ಎಳಕಿನ ಟಗರಾ ಸಾಕಿ
ಅಲ್ಲಿ ಬಂದಾವು ಮಕ್ಕೆ ಮುನಿಸೋ ಜಾಣ
ಅಲ್ಲಿ ಬಂದಾವೂ ಮಕ್ಮನಿಸು ಕೆಂಗಪ್ಪ
ಓ ಹತ್ಯಾನು ನಿಲುಗುದುರೇಯಾ ಜಾಣ ‖ ತಂದಾನಿ—

ಹತ್ಯಾನು ನಿಲುಗುದುರೆಯ ಕೆಂಗಪ್ಪ
ಸಾಲ್ಹಿಪ್ಪೆಮರದ್ನೆರಳಾಗೇ ಜಾಣ
ಸಾಲ್ಹಿಪ್ಪೆಯಾ ಮರದಾ ನೆರಳಾಗೆ ಕೆಂಗಪ್ಪ
ಸಣ್ಣ ಜಮಖಾನ ಕೊಡಿವ್ಹಾಸೀ ಜಾಣ ‖ ತಂದಾನಿ—

ಸಣ್ಣ ಜಮಖಾನಾವಾ ಕೊಡಿವ್ಹಾಸಿ ಕೆಂಗಪ್ಪ
ಓ ಅಲ್ಲಿ ಮಾಡಾನು ಸುಖನಿದ್ರೀ ಜಾಣ ‖
ಅಲ್ಲಿ ಮಾಡಾನು ಸುಖನಿದ್ರೆ ಕೆಂಗಪ್ಪ
ಏಳು ಸೂಳೇರು ಕೈಕಟ್ಟೀ ಜಾಣ,

ಏಳು ಸೂಳೇರೂ ಕೈಕಟ್ಟೆ ಕೇಳಾರಲ್ಲೋ
ನೀವ್ಯಾವೂರೊ ಗೌಡ ನೀನ್ಯಾರೋ ಜಾಣ‖ ತಂದಾನಿ—


ಹಳ್ಳಿಕಾರಾನಲ್ಲ, ಹಾದಿಗಾರಾನಲ್ಲ,
ಭದ್ರೆ ಚಿನ್ನಮನ್ಮಗನಲ್ಲೇ ಜಾಣೆ,
ಭದ್ರೆ ಚಿನ್ನಮ್ಮಾನಾ ಮಗನಾದರೇನಾಯ್ತು
ಬಾರಯ್ಯ ನಮ್ಮೂರ ಮನೆಗೋ ಜಾಣ,
ಏಳಯ್ಯ ನಮ್ಮೂರ ಮನೆಗೋ ಜಾಣ ‖ ತಂದಾನಿ—

ಅರಮನೆಗೆ ಬರುವೋದೂ ತರವೇನೆ ಎಲೆ ಜಾಣೆ
ಹಿಂದೆ ಬರುತಾರೆ ಹಿರಿಯೋರೂ ಜಾಣೆ,
ಹಿಂದೆ ಬರುತಾರೆ ಹಿರಿಯೋರು ಎಲೆ ಜಾಣೆ
ದಂಡ ತೆಗೆದಾರು ಕುಲದಲ್ಲೇ ಜಾಣೆ ‖ ತಂದಾನಿ—

ಕಸ್ತೂರಿ ಗಮಾ ಕೊಳ್ಳೋ ನಾಮುದ ಭರಣೀ ಕೊಳ್ಳೋ
ನಿನ ಚಂದೊಳ್ಳೆ ಮುಕ್ಕಳ ಕೊಳ್ಳೋ ಜಾಣ,
ಕಸ್ತೂರಿ ಗಮಾನೊಲ್ಲೇ ನಾಮುದ ಭರಣೀನೊಲ್ಲೆ
ನಿನ ಕೆಟ್ಟ ಮೋರೆಗೆ ಬಡುಕೊಳ್ಳೇ ನಾರಿ‖ ತಂದಾನಿ—

ಹತ್ತು ಕಾಲೇಣೀಯಾ ಹತ್ತಿ ಹೂ ಕೂಯೋನೇ
ಮತ್ತಾರಿಗ್ಹೂ ಕೂಯಿದೀಯೋ ಜಾಣ,
ಮತ್ಯಾರಿಗೇ ಹೂವ ಕುಯಿದೀಯೋ ಎಲೆ ಜಾಣ
ಬ್ಯಾಡರ್ಹುಡಗೀಗೆ ಕುಯಿದೀರೋ ಜಾಣ ‖ ತಂದಾನಿ—

ಬ್ಯಾಡರ್ಹುಡಗೀ ಸಂಗಾ ಬ್ಯಾಡ ಕಾಣೊ ಕೆಂಗಪ್ಪಾ
ಹಾಡ ಕಟ್ಯಾರು ನಿನ ಮೇಲೋ ಜಾಣಾ,
ಹಾಡ ಕಟ್ಯಾರು ನಿನ ಮೇಲೆ ಕೆಂಗಪ್ಪಾ
ಓ ಉಪ್ಪು ಚೆಲ್ಯಾರು ನಿನ ಮೇಲೋ ಜಾಣಾ‖ತಂದಾನಿ—



ಜ್ಞಾನ—ವಿಜ್ಞಾನ

ಜಪಾನೀಯರ ಶಾಂತಿಸಾಧನ

ಜಗತ್ತಿನ ಮಹಾಮಹಾ ಸಾಧುಗಳೆಲ್ಲ ಶಾಂತಿಶಾಂತಿ ಯೆಂದು ಹಂಬಲಿಸುತ್ತಿರುವಾಗ ಜರ್ಮನಿ, ಇಟಲಿ, ಜಪಾನ ಗಳು ಮಾಡುತ್ತಿರುವ ಶಾಂತಿಸಾಧನೆಯು ಎಲ್ಲರಿಗೂ ತಿಳಿದಿದೆ. ಬಲಿಷ್ಠರಿಗೇ ಬದುಕುವ ಅಧಿಕಾರ ಎಂಬ ತತ್ವವು ಅವರ ಗುರಿಯೆಂಬಂತೆ ತೋರುವುದು. ರಕ್ತಪಿಪಾಸಿಗಳಿಗೇ ಅಲ್ಲಿ ಬಹುಮಾನ. ಜಪಾನಿನಲ್ಲಿ ವೈಮಾನಿಕರಿಗೆ ಎಲ್ಲರಿಗಿಂತ ಹೆಚ್ಚಿನ ಮಾನ. ಸೇನಾಧಿಪತಿಗಳಿಗಿಂತ ಮರಣಸಾಧನಗಳನ್ನು ಉಪಯೋಗಿಸಬಲ್ಲ ವೈಮಾನಿಕರಿಗೆ ಹೆಚ್ಚು ಸಂಬಳ. ಈಗ ಚೀನದಲ್ಲಿ ಯುದ್ಧಮಾಡುತ್ತಿರುವ ವೈಮಾನಿಕರಿಗೆ ಸಂಬಳವಲ್ಲದೆ ಮೇಲಿನ ವೆಚ್ಚಕ್ಕಾಗಿಯೆ ದಿನಕ್ಕೆ ೧೮ ರೂಪಾಯಿಗಳು ಕೊಡಲ್ಪಡುತ್ತವೆ. ಒಂದು ಚೀನದ ವಿಮಾನವನ್ನು ನೆಲಕ್ಕುರುಳಿಸಿದ ಬಹದ್ದರನಿಗೆ ಕೂಡಲೆ ೧೦೦೦ ಪೌಂಡುಗಳನ್ನು ಕೊಡಲಾಗುವದು. ಜಪಾನಿ ವೈಮಾನಿಕರು ಚೀನದಲ್ಲಿ ತೋರುತ್ತಿರುವ ಶೌರ್ಯದಿಂದ ಮೆಚ್ಚಿ ಒಬ್ಬೊಬ್ಬ ವೈಮಾನಿಕನಿಗೆ ೧೬-೧೬ ಖಡ್ಗಗಳನ್ನು ಇನಾಮಾಗಿ ಕೊಡಲಾಯಿತು. ಜಪಾನೀಯರಲ್ಲಿ ದೇಶಕ್ಕಾಗಿ ಸತ್ತು ಸ್ವರ್ಗಕ್ಕೆ ಹೋಗುವ ವ್ರತವೂ ಬೆಳೆಯುತ್ತಿದೆ. ಮೊನ್ನೆಮೊನ್ನೆ ೬೦-೭೦ ವರ್ಷದ ಹತ್ತು ಜನ ಮುದುಕರು ಜಪಾನಿನ ಸಮರ-ಕಚೇರಿಗೆ ಒಂದು ಅರ್ಜಿಯನ್ನು ಕಳಿಸಿದರು. ಅದನ್ನು ತಮ್ಮ ರಕ್ತದಿಂದಲೇ ಬರೆದಿದ್ದರು. ಅದರಲ್ಲಿ ತಮಗೆ ಯುದ್ಧಕ್ಕೆ ಹೋಗುವ ಅಪ್ಪಣೆಯನ್ನು ಕೊಡಬೇಕೆಂದು ಬೇಡಿಕೊಂಡಿದ್ದರು.

ಮನುಷ್ಯೇತರ ಪ್ರಾಣಿಗಳೂ ಯೋಚಿಸಬಲ್ಲವು

ಡಾ. ಸರ್ಜ ವೊರೊನೊಫ್‌ನು ಪ್ರಾಣಿಗಳು ಯೋಚಿಸಬಲ್ಲವಲ್ಲದೆ, ಅವುಗಳಿಗೆ ಆತ್ಮವೂ ಇರುವದೆಂದು ಅಭಿಪ್ರಾಯ ಪಡುತ್ತಾನೆ. ಅವನು ಫ್ರಾನ್ಸಿನ ಒಂದು ಕಾಲೇಜದ ಪ್ರಯೋಗಶಾಲೆಯಲ್ಲಿ ಒಂದು ಮಂಗಕ್ಕೆ ತಿರುಗಾಡಲು ಬಿಟ್ಟನು. ಅಲ್ಲಿ ಒಬ್ಬ ಬಡಿಗನು ಒಂದು ಹಲಿಗೆಗೆ ಉಳಿಯಿಂದ ತೂತು ಹೊಡೆಯುತ್ತಿದ್ದನು. ಮಂಗ ಅದನ್ನು ನೋಡಿ ಅವನ ಕೈಯಿಂದ ಸುತ್ತಿಗೆಯನ್ನೂ ಉಳಿಯನ್ನೂ ತೆಗೆದುಕೊಂಡು ತಾನೂ ಹೊಡೆಯಹತ್ತಿತು. ಡಾಕ್ಟರನು ಅದು ಬರಿ ಅನುಕರಣ ಮಾಡುತ್ತಿರಬಹುದೆಂದು ತಿಳಿದನು. ಆದರೆ ಆಶ್ಚರ್ಯಕರವಾದ ಮಾತೆಂದರೆ ಮಂಗ ಹಲಿಗೆಯ ಕೆಳಗೆ ಕೈಹಾಕಿ ತೂತು ಆಚೆಯ ವರೆಗೆ ಬಿದ್ದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಹತ್ತಿತು.

ಇನ್ನೊಂದು ಮಂಗಕ್ಕೆ ಫಲಾಹಾರಕ್ಕೆಂದು ಒಂದು ಚಿಪ್ಪಿ ಯನ್ನೂ, ಒಂದು ಬಾಟ್ಲಿ ಚಾಕೊಲೆಟ್ಟನ್ನೂ ಕೊಟ್ಟರು. ತತ್ತಿಯ ರಸವನ್ನು ಹೀರಿದ ಮೇಲೆ ಚಾಕೊಲೆಟ್ಟಿನ ಬಾಟ್ಲಿ ಯನ್ನು ಬಾಯಿಗೆ ಇಟ್ಟುಕೊಂಡಿತು. ಆದರೆ ಚಾಕೊಲೆಟ್ಟು ಚಲ್ಲಿ ಹೋಗಹತ್ತಿದುದರಿಂದ ಅಲ್ಲಿಯೆ ಇದ್ದ ಮತ್ತೊಂದು ಮಂಗಕ್ಕೆ ಆ ಬಾಟ್ಲಿಯನ್ನೂ ತತ್ತಿಯ ಚಿಪ್ಪನ್ನೂ ಕೊಟ್ಟಿತು. ಆ ಮಂಗಕ್ಕೆ ಏನು ಮಾಡಬೇಕೆಂಬುದು ನೆಟ್ಟಗೆ ತಿಳಿಯಲಿಲ್ಲ. ಮೊದಲಿನ ಮಂಗವು ಬಹಳ ಹಟದಿಂದ ರಿಂದ ಅದು ಚಿಪ್ಪಿನಲ್ಲಿ ಚಾಕೊಲೆಟ್ಟನ್ನು ತುಂಬಿಕೊಟ್ಟಿತು. ಮೊದಲಿನ ಮಂಗವು ಅದನ್ನು ಕುಡಿಯಿತು. ಹೀಗೆ ಚಾಕೊ ಲೆಟ್ ತೀರುವವರೆಗೆ ಮತ್ತೊಂದು ಮಂಗದ ಸೇವೆಯನ್ನು ಅದು ಪಡೆಯಿತು.

ಕೃತ್ರಿಮ ಬೆಳದಿಂಗಳು

ನ್ಯೂಯಾರ್ಕಿನ ಒಬ್ಬ ಎಂಜಿನಿಯರರು ಹೊಸ ... ವೊಂದನ್ನು ಮಾಡಿದ್ದಾರೆ. ಅದರಿಂದ ಮನೆಯಲ್ಲಿ ... ಲ್ಲಿಯೆ ದಂಪತಿಗಳಿಗೆ ಬೆಳದಿಂಗಳ ರಮ್ಯತೆಯನ್ನು ಅನುಭವಿಸಲು ಅನುಕೂಲವಾಗಿದೆ. ಕಾರ್ಬನ ... ದಂತೆಯೆ ನಳಿಕೆಯಿಂದ ... ಡುವ ಗ್ಯಾಸಿನಿಂದ ಅದು ಹೊತ್ತುತ್ತದೆ. ವಿದ್ಯುತ್ ... ದಂತೆಯೆ ಗುಂಡಿಯನ್ನು ಒತ್ತಿದ ಕೂಡಲೆ ಆ ಬೆಳ ... ಅದೇ ರೀತಿಯಲ್ಲಿ ಹಗಲಿ ... ದೀಪವು ಹತ್ತುತ್ತದೆ.

ಕನ್ನು ಕೃತ್ರಿಮವಾಗಿ ಹುಟ್ಟಿಸಲು ಬರುವದೆಂದು ಆ ಸಂಶೋಧಕರು ಹೇಳುತ್ತಾರೆ. ಅವರು ಮತ್ತೂ ಒಂದು ವಿಷವನ್ನು ಶೋಧಿಸಿದ್ದಾರೆ. ಆದರಿಂದ ಗೋಡೆಗಳ ಮೇಲೆ ಬೇಕಾದ ಬಣ್ಣದ ಕಿರಣಗಳನ್ನು ಹರಡಲು ಬರುವದು. ಇಂದು ಮನೆಯೊಳಗಿನ ಗೋಡೆಗಳು ನೀಲಿ ಬಣ್ಣದವಾಗಿ ಕಂಡರೆ ನಾಳೆ ಹಸರು ಬಣ್ಣದವಾಗಿ ಕಾಣವಂತೆ ಮಾಡಲು ಬರುವದು.

ಮೆಲಾನೇಶಿಯದ ಹೆಂಗಸರು

ಮೆಲಾನೇಶಿಯವು ದಕ್ಷಿಣ ಸಮುದ್ರದ ಒಂದು ದ್ವೀಪವು. ಅಲ್ಲಿ ಒಂದು ಗಂಡು ಕೂಸು ಹುಟ್ಟಿದ ಕೂಡಲೆ ತಂದೆಯು ಅದನ್ನು ಎತ್ತಿ ಹಿಡಿದು 'ನೀನು ಕಸುವುಳ್ಳವನಾಗಿ ಬೆಳೆದು ಧನು ರ್ಬಾಣಗಳನ್ನು ಧರಿಸಲು ಸಮರ್ಥ ನಾಗು' ಎಂದು ಆಶೀರ್ವದಿಸುವನು. ಕೂಸು ಹೆಣ್ಣಾಗಿದ್ದರೆ 'ದೊಡ್ಡವಳಾಗಿ ನೇಗಿಲು ಹೊಡೆ ಯುವಷ್ಟು ಕಸುವುಳ್ಳವಳಾಗು' ಎಂದು ಹರಿಸುವನು. ಹುಡುಗಿಯರು ಹತ್ತು ವರ್ಷದವರಾಗುತ್ತಲೆ ದುಡಿಯಲು ಆರಂಭಿಸುವರು. ಮುಂದೆ ಸಾಯುವ ವರೆಗೆ ಅವರಿಗೆ ದುಡಿಮೆ ಬಿಟ್ಟಿದ್ದಲ್ಲ. ಮನೆಯ ಮತ್ತು ಹೊಲದ ಕೆಲಸ ವನ್ನೆಲ್ಲ ಹೆಂಗಸರೆ ಮಾಡಬೇಕು. ಏಕೆಂದರೆ ಗಂಡಸರಿಗೆ ಬೇಟೆಯಾಡುವದು ಮತ್ತು ಪ್ರಾಣಿಬಲಿಗಳಿಗೆ ಸಿದ್ಧತೆ ಮಾಡುವದೇ ಮುಖ್ಯ ಕರ್ತವ್ಯವಾಗಿರುತ್ತದೆ. ಗಂಡಸ ರಿಗೆ ಆಹಾರವನ್ನು ಒದಗಿಸುವವರು ಹೆಂಗಸರು. ಆ ದುಡಿಮೆ ಯಲ್ಲಿ ಅವರಿಗೆ ತಮ್ಮ ಮಕ್ಕಳ ಆರೈಕೆಯ ಕಡೆಗೆ ಲಕ್ಷ್ಯ ಕೊಡಲಾಗುವದಿಲ್ಲ. ಆದುದರಿಂದ ಅವರ ಅನೇಕ ಮಕ್ಕಳನ್ನು ಮೊಸಳೆಗಳು ಎಳೆದೊಯ್ಯುವವು. ಹೆಂಗಸರು ಧಾನ್ಯಗಳನ್ನು ಬೆಳೆಸುವರು; ಹಂದಿಗಳನ್ನು ಸಾಕುವರು, ತೆಂಗಿನಕಾಯಿಗಳನ್ನು ಕೂಡಿಹಾಕುವರು, ಗಂಡಸರಿಗೆ ಅಡಿಕೆ ಯನ್ನು ತಯಾರಿಸಿಕೊಡುವರು. ಅವಿವಾಹಿತ ಸ್ತ್ರೀಯರು ವ್ಯಭಿಚಾರ ಮಾಡಿದರೆ ದೋಷವಿಲ್ಲ. ವಿವಾಹಿತಳು ಅದಕ್ಕೆ ಪ್ರಯತ್ನಪಟ್ಟರೂ ಸಾಕು; ಅವಳನ್ನು ತ್ರಿಶೂಲದಿಂದ ಇರಿದು ಕೊಲ್ಲುವರು.

ರೇಡಿಯೋದ ಮೂಲಕ ಭಾಷಣಗಳೂ ಹಾಡುಗಳೂ ಈಗ ಜಗತ್ತಿನ ಮೂಲೆಮೂಲೆಗೂ ಮುಟ್ಟುವ ವ್ಯವಸ್ಥೆಯಾಗಿದೆ.

ಹೃತ್ಸ್ಪಂದನವನ್ನು ಸಾವಿರಾರು ಮೈಲಿನಿಂದ ಕೇಳಬಹುದು

ಆದರಂತೆ 'ಫೋನೊಸ್ಟೆಥೊಸ್ಕೋಪಿ'ನ ಮೂಲಕ ಎದೆಗುಂಡಿಗೆಯ ಬಡಿತವನ್ನು ಸಾವಿರಾರು ಮೈಲು ದೂರದ ವರೆಗೆ ಕೇಳಿಸು ವಂತೆ ಮಾಡಬಹುದಾಗಿದೆ. ನ್ಯೂಝೀಲಂಡಿನ ಓಟಗಾರ (Runner) ಜ್ಯಾಕ್ ಲವ್‌ಲಾಕನು ಈಗ ಲಂಡನಿನ ಕಿಂಗ್ಸ್ ಕಾಲೇಜ ಹಾಸ್ಪಿಟಲಿನಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ. ಸಲಹೆಗಾಗಿ ಅವನ ಹೃದಯದ ಬಡಿತವನ್ನು ಆಸ್ಟ್ರೇಲಿಯದಲ್ಲಿರುವ ಡಾ. ಮೆಲ್ಬೊರ್ನರಿಗೆ ಕೇಳುವಂತೆ ಮಾಡಲಾಯಿತು. ಆಸ್ಟ್ರೇಲಿಯವು ಲಂಡನಿನಿಂದ ೯೦೦೦ ಮೈಲು ದೂರವಿದೆ.

ಅಲ್ಯೂಮಿನಂ ನಿಬ್ಬುಗಳು

ಈವರೆಗೆ ಲೇಖನಿಯ ಮೊನೆ (ನಿಬ್ಬು) ಗಳನ್ನು ಲೋಹದಿಂದ ತಯಾರಿಸುತ್ತಿದ್ದರು. ಆದರಿಂದ ಪುನಃ ಪುನಃ ಮಸಿಯಲ್ಲಿ ಮೊನೆಯನ್ನು ಅದ್ದಬೇಕಾಗುತ್ತದೆ. ಅದಕ್ಕಾಗಿ ಮಸಿಯನ್ನು ಇಂಗಿಸಿಕೊಂಡಿಡುವ ಮೊನೆಗಳನ್ನು ತಯಾರಿಸುತ್ತಿದ್ದಾರೆ. ಲೋಹದ ಬದಲು ಅಲ್ಯೂಮಿನಂ ಉಪಯೋಗಿಸುತ್ತಾರೆ. ಅದರಿಂದ ಸಿದ್ಧವಾದ ಮೊನೆಗಳ ಕೊನೆಗೆ ವಿದ್ಯುತ್ತಿನ ಸಹಾಯದಿಂದ ಆಮ್ಲಜನಕದ ಸಂಸ್ಕಾರ ಕೊಡುತ್ತಾರೆ. ಅದರಿಂದ ಮೊನೆಗಳು ಮಸಿಯನ್ನು ಇಂಗಿಸಿ ಕೊಳ್ಳುವಂತಹ ಅತಿಸೂಕ್ಷ್ಮ ರಂಧ್ರಗಳುಳ್ಳವಾಗುತ್ತವೆ. ಒಂದು ಸಲ ಮಸಿಯಲ್ಲಿ ಅದ್ದಿದರೆ ಬಹಳ ಹೊತ್ತಿನ ವರೆಗೆ ಬರೆಯಲಾಗುವದು.

ಮಹಾತ್ಮಾ ಮತ್ತು ಶಾ ಅವರ ಸ್ತ್ರೀ ವಿಷಯಕ ಅಭಿಪ್ರಾಯ

ಜಗತ್ಪ್ರಸಿದ್ಧ ಸಾಹಿತಿಯಾದ ಬರ್ನಾರ್ಡ ಶಾ ಅವರು ಅನ್ನುತ್ತಾರೆ "ಸ್ತ್ರೀ ಜಾತಿಯು ಬಲು ಸಹನೆಯುಳ್ಳದು. ಅದು ಸ್ತ್ರೀಯರಿಗೇ ಗೊತ್ತಿಲ್ಲ. ಆದುದರಿಂದಲೆ ಪ್ರತಿಯೊಬ್ಬ ಸ್ತ್ರೀಯು ಒಂದು ಸಲವಾದರೂ ಹೆರಿಗೆಯ ಸಂಕಟದೊಳಗಿನಿಂದ ತೂರಿ ಹೋಗಬೇಕೆಂದು ನನ್ನ ಅಭಿಪ್ರಾಯ. ಆದರಿಂದ ಅವರಿಗೆ ಸ್ವಸಾಮರ್ಥ್ಯದ ಪರಿಚಯವಾಗುತ್ತದೆ. ಹೆಂಗಸರ ಒಡಲಿನಲ್ಲಿ ಮಕ್ಕಳನ್ನು ಪಡೆದು ಬೆಳೆಸುವುದೊಂದು ಅವರಿಗೆ

ಒಳ್ಳೇ ಉದ್ಯೋಗವಾಗುವದು. ೬—೭ ವರ್ಷಗಳಾದ ಮೇಲೆ ಹುಡುಗರು ಶಾಲೆಗೆ ಹೋಗಹತ್ತಿದರೆಂದರೆ ಮುಂದೆ ಅವರು ಸಾಮಾಜಿಕ ಕಾರ್ಯಗಳಲ್ಲಿ ತೊಡೆಗಬಹುದು.”

ಮಹಾತ್ಮಾ ಗಾಂಧಿಯವರು ಅನ್ನುತ್ತಾರೆ “ಹೆಂಗಸು ತನ್ನ ಪೂರ್ವಕಾಲದ ಉದ್ಯೋಗವನ್ನು ಕೈಕೊಳ್ಳದೆ ಅವಳಿಗೆ ಸುಖ ಸಿಗದು. ಅವಳು ತನ್ನ ಕರ್ತವ್ಯವನ್ನು ಬಿಟ್ಟುದರಿಂದಲೆ ದುಃಖಿಯಾಗಿದ್ದಾಳೆ; ಜಗತ್ತನ್ನೂ ದುಃಖಿಯನ್ನಾಗಿಸುತ್ತಿದ್ದಾಳೆ. ಹೆಂಗಸು ನೂಲಬೇಕು, ಮನೆಗೆಲಸ ಮಾಡಬೇಕು; ಗಂಡಸು ಹೊಲ ಸಾಗುಮಾಡಬೇಕು. ಅಂದರೆ ಇಬ್ಬರಿಗೂ ಮಕ್ಕಳನ್ನು ಪೋಷಿಸಲಿಕ್ಕೂ, ಜಗತ್ತನ್ನು ಅಭ್ಯುದಯಗೊಳಿಸಲಿಕ್ಕೂ ಅನುವಾಗುವದು. ನಮ್ಮ ದೇಶದ ಸ್ತ್ರೀಯರು ಪುರುಷರ ಭುಜಕ್ಕೆ ಭುಜ ಹಚ್ಚಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದುದು ಜಗತ್ತಿನ ಇತಿಹಾಸದಲ್ಲಿಯೆ ಹೊಸ ವಿಷಯ. ಮುಂದಾದರೂ ಅವರು ಹೊಲಗಳಿಗೆ ಹೋಗಿ ದುಡಿದು ಗಂಡಸರಿಗಿಂತ ಹೆಚ್ಚು ಕುಶಲತೆಯನ್ನು ತೋರಿಸಬಲ್ಲರೆಂದು ನನಗೆ ನಂಬಿಗೆಯಿದೆ. ಪಟ್ಟಣಗಳು ಅವರ ಸ್ವಭಾವಕ್ಕೆ ಒಗ್ಗದ ಕೆಲಸಗಳನ್ನು ಅವರ ಮೇಲೆ ಹೇರುವುದರಿಂದಲೆ ಅವರು ದುಃಖಿಗಳಾಗಿದ್ದಾರೆ.”

ಪ್ರೇಮವೋ ಕಲೆಯೋ ?

ಕುಮಾರಿ ವಾಣಿ ಮಜುಂದಾರ ಎಂಬ ಭಾರತೀಯ ನರ್ತಕಿಯು ಲಂಡನಿಗೆ ಹೋದಾಗ ಮೇಲಿನ ಪ್ರಶ್ನೆಯು ಅವಳ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿತು. ಅವಳು ನರ್ತನ ಕಲೆಯ ಅಭ್ಯಾಸಕ್ಕಾಗಿ ಸಂಪತ್ತನ್ನೂ, ವಿಷಯ ವಿಲಾಸವನ್ನೂ ತ್ಯಜಿಸಿದ್ದಳು. ಅವಳು ಕಲಕತ್ತೆಯ ವಿಶ್ವವಿದ್ಯಾಲಯದಿಂದ ಶಿಕ್ಷಣ ಪಡೆದ ೧೯ ವರ್ಷದ ಸುಂದರಿ. ರೋಮಿನಲ್ಲಿ ಇಟಲಿಯ ಅರಸುಮನೆತನದ ಎದುರು ತನ್ನ ನರ್ತನವನ್ನು ಪ್ರದರ್ಶಿಸುವಾಗ ಅವಳ ಸೌಂದರ್ಯಕ್ಕೆ ಒಬ್ಬ ಕುಬೇರ ಕುಮಾರನು ಮರುಳುಗೊಂಡ. ಮುಸೊಲಿನಿ ಮೊದಲಾದ ವರಿಷ್ಠ ಅಧಿಕಾರಿಗಳಿಂದ ಪ್ರಶಂಸೆಯನ್ನು ಪಡೆದ ಅವಳ ನರ್ತನವು ಮುಗಿದ ಕೂಡಲೆ ಆ ಸಿರಿವಂತ ತರುಣನು ಅವಳನ್ನು ತನ್ನ ಮನೆಗೆ ಫಲಾಹಾರಕ್ಕೆ ಆಮಂತ್ರಿಸಿದ. ಕೆಲವು ದಿನಗಳ ನಂತರ ಆ ತರುಣನು ವಾಣಿಗೆ ತನ್ನನ್ನು ಮದುವೆಯಾದರೆ ಅವಳನ್ನು ಸಂಪತ್ತು ಸುಖವಿಲಾಸಗಳಲ್ಲಿ ಮುಳುಗಿಸುವೆನೆಂದು ಕೇಳಿಕೊಂಡನು. ವಾಣಿಯು ಒಂದು ದಿನದ ಅವಧಿಯನ್ನು ಕೇಳಿಕೊಂಡಳು. ಮರುದಿನ ತನ್ನ ನಿಶ್ಚಯ... ಹೇಳುವಾಗ ಅವಳಿಗೆ ಅಳು ಬಂದಿತು. “ನನಗೂ ಪ್ರೇ... ಮೋಹವು ಮಿತಿಮೀರಿ ಆವರಿಸುತ್ತಿದೆ. ಆದರೂ ಬಾ... ದಿಂದ ಅಭ್ಯಸಿಸುತ್ತಿರುವ ಕಲೆಯನ್ನು ನಾನು ತ್ಯಜಿಸ...” ಎಂದು ನಿರಾಕರಿಸಿದಳು. ಲಂಡನ್ನಿನಲ್ಲಿ ಲಿನ್... ಮೊದಲಾದವರಿಂದಲೂ, ಭಾರತದ ರವೀಂದ್ರರಿಂ... ಅವಳು ಉಚ್ಚ ಪ್ರಶಂಸೆಯನ್ನು ಪಡೆದಿದ್ದಾಳೆ.

ಸೋಶಿಯಾಲಿಝಂ, ಕಮ್ಯುನಿಝಂ, ಫಾಸಿಝಂ

ಈ ಮೂರು ಶಬ್ದಗಳು ಈಗ ಜಗತ್ತಿನ ವೃತ್ತ... ಪತ್ರಿಕೆಗಳಲ್ಲಿ ವಿಶೇಷವಾಗಿ ಪ್ರಯೋಗಿಸಲ್ಪಡುತ್ತಿವೆ... ಗಳ ಸ್ಪಷ್ಟವಾದ ಅರ್ಥವು ... ಪತ್ರಿಕಾಭ್ಯಾಸಿಗಳಿಗೂ ... ಅವುಗಳ ಅರ್ಥದ ವಿಷಯ... ಒಂದು ಚಿಕ್ಕ ಕಥೆಯು ... ಗುಟ್ಟಾಗಿ ಇಟಲಿಯಿಂದ ಜನ... ಯವರೆಗೆ ಹೇಳಲ್ಪಡುತ್ತಿದೆ. ಅದು ಹೀಗಿದೆ:—

ಒಬ್ಬ ಚಿಕ್ಕ ಬಾಲಕನು “ಅಜ್ಜ, ಈ ಸೋಶಿಯಾ... ಫಾಸಿಝಂ, ಕಮ್ಯುನಿಝಂ ಅಂದರೇನು?” ... ಕೇಳುತ್ತಾನೆ. ಅಜ್ಜಯು ಅದನ್ನು ಹೀಗೆ ವಿವರಿಸುತ್ತಾ... “ಅದೇನು ಸುಲಭ. ಈಗ ನೋಡು ನಮ್ಮಲ್ಲಿ ... ಆಕಳುಗಳಿವೆ. ಸೋಶಿಯಾಲಿಝಂ, ಎರಡು ಆಕಳುಗ... ನಮಗೆ ಬಿಟ್ಟು ಎರಡು ಆಕಳುಗಳನ್ನು ಸಮಾಜ... ತೆಗೆದುಕೊಳ್ಳುತ್ತದೆ. ಕಮ್ಯುನಿಝಂ, ನಾಲ್ಕು ಆಕಳುಗ... ತೆಗೆದುಕೊಂಡು ನಮ್ಮ ದುಡಿಮೆಗೆ ತಕ್ಕ ಕೂಲಿ... ಕೊಡುತ್ತದೆ. ಆ ಆಕಳುಗಳು ದೇಶದ ದೊಡ್ಡ ... ಗುಂಪಿಗೆ ಸೇರುವವು. ಫಾಸಿಝಂ, ನಾಲ್ಕು ಆಕಳುಗ... ನಮಗೇ ಬಿಟ್ಟು ಹಾಲನ್ನೆಲ್ಲ ತಾನು ತೆಗೆದುಕೊಳ್ಳುತ್ತ...

ಜೇಡದ ಬಲೆಯ ನೂಲು

ಮನುಷ್ಯನ ತಲೆಗೂದಲಿಗಿಂತ ಐದುಮಡಿ ಸಣ್ಣ... ವದು ಜೇಡದ ಬಲೆಯ ನೂಲು. ಮನುಷ್ಯನೀಗ ಆ ಸೂ... ನೂಲನ್ನು ಕದ್ದು ವೈಜ್ಞಾ... ಸಾಧನಗಳಿಗೆ ಉಪಯೋಗಿಸು... ದ್ದಾನೆ. ಅದನ್ನು ಟೆಲಿಸ್ಕೋ... ಸೂಕ್ಷ್ಮದರ್ಶನಿಗಳಂತಹ ನಾ... ಕಾದ ಸಾಧನಗಳನ್ನು ತಯಾರುಮಾಡುವದರಲ್ಲಿ ಉಪ... ಗಿಸುತ್ತಿದ್ದಾರೆ. ಅಮೆರಿಕೆಯ ಒಂದು ವಿಜ್ಞಾನ...


ಒಡೆಯನಿಗೆ ತನ್ನ ವೈಜ್ಞಾನಿಕ ಸಾಧನಗಳಮೇಲೆ ಗುಣಾಕಾರದ (X) ಸೂಕ್ಷ್ಮ ಗುರುತನ್ನು ಮಾಡಲು ಜೇಡದ ನೂಲು ಬಹಳ ಉಪಯುಕ್ತವಾಗಿದೆಯೆಂದು ಕಂಡುಬಂದಿದೆ. ಅವನು ಜೇಡಗಳನ್ನು ಬೆಳೆಸುವ ಬೇರೊಂದು ವ್ಯವಸ್ಥೆಯನ್ನೆ ಮಾಡಿದ್ದಾನೆ. ಜೇಡಕ್ಕೆ ನೂಲು ಬಿಡಬೇಕೆಂದು ಪ್ರವೃತ್ತಿಯಾದುದು ಕಂಡುಬಂದಕೂಡಲೆ ಅದನ್ನು ಹಿಡಿದು ನೂಲನ್ನು ಒಂದು ರೀಲಿಗೆ ಅಂಟಿಸಿ, ಹೊಟ್ಟೆಯೊಳಗಿನ ನೂಲನ್ನೆಲ್ಲ ಆದಕ್ಕೆ ಸುತ್ತಿಕೊಳ್ಳುತ್ತಾರೆ. ಒಂದೊಂದು ಜೇಡದ ಹೊಟ್ಟೆಯಿಂದ ಒಂದು ಸಲಕ್ಕೆ ತೆಗೆದ ನೂಲು ೩೫೦ ಫೂಟನವರೆಗೆ ಉದ್ದವಾಗಿರುವದು.

ವಿಲಾಯತಿಯ ಸೆರೆಯಾಳುಗಳು

ಸೆರೆಯಾಳುಗಳು ಯಾವ ಮಹಾಪರಾಧವನ್ನೇ ಮಾಡಿ ಬಂಧಿಸಲ್ಪಟ್ಟಿರಲಿ, ಅವರು ಮನುಷ್ಯರೆಂಬುದರಲ್ಲಿ ಏನೂ ಸಂದೇಹವಿಲ್ಲ. ಸೆರೆಯಾಳುಗಳು ಶಿಕ್ಷೆಯ ಅವಧಿಯನ್ನು ಮುಗಿಸುವುದರೊಳಗಾಗಿ ಅವರಲ್ಲಿ ಸಭ್ಯನಾಗರಿಕರ ಗುಣಗಳನ್ನು ನೆಲೆಗೊಳಿಸುವದು ಅಗತ್ಯವಿದೆಯೆಂದು ಈಗೀಗ ಅನೇಕ ಸರಕಾರಗಳಿಗೆ ಮನವರಿಕೆಯಾಗುತ್ತಿದೆ. ಈ ಅಭಿಪ್ರಾಯ ಬಲದಿಂದಲೇ ಹದಿನಾರು ವರ್ಷಗಳ ಹಿಂದೆಯೆ ಇಂಗ್ಲಂಡದ ಸೆರೆಮನೆಯ ಸುಧಾರಣೆಯು ಕೈಕೊಳ್ಳಲ್ಪಟ್ಟಿತು. ವಾರಕ್ಕೊಂದು ಸಲ ಸೆರೆಮನೆಗೆ, ಅಧಿಕಾರಿಗಳಲ್ಲದ ಸಭ್ಯನಾಗರಿಕರನ್ನು ಬಿಡುವ ವ್ಯವಸ್ಥೆಯಾಯಿತು. ಕೈದಿಯು ಒಬ್ಬ ಮನುಷ್ಯನೆಂದಮೇಲೆ ಅವನಿಗೆ ಮಿತ್ರರು ಬೇಕಲ್ಲವೇ. ಶ್ರೇಷ್ಠ-ಕನಿಷ್ಠತೆಯ ಭಾವನೆಗಳಿರುವಲ್ಲಿ ಮಿತ್ರತ್ವವು ಮೊಳೆಯಲಾರದು. ಕೈದಿಗಳಿಗೆ ಸಮಾಜದ ದೃಷ್ಟಿಯಲ್ಲಿ ಅಧಿಕಾರಿಗಳ ದೃಷ್ಟಿಯಲ್ಲಿ ತಾವು ಪಾಪಿಗಳೆಂದು ಅನಿಸುವದು. ಆ ಭಾವನೆಯನ್ನು ಹೋಗಲಾಡಿಸುವದಕ್ಕಾಗಿ ಸಭ್ಯರೂ ಜ್ಞಾನಿಗಳೂ ಆದ ನಾಗರಿಕರು ಸೆರೆಮನೆಗೆ ಹೋಗುವರು. ನಾಗರಿಕನು ಮೊದಲು ಕೈದಿಯೊಡನೆ ಹಸ್ತಾಂದೋಲನಗೈದು ಅವನ ಹತ್ತಿರವೇ ಕುಳಿತುಕೊಳ್ಳುವನು. ಕೈದಿಯ ಅಪರಾಧಕ್ಕೆ ಯಾವ ರೀತಿಯಿಂದಲೂ ಸಂಬಂಧಿಸದ ವಿಷಯಗಳನ್ನೆತ್ತಿ ಹರಟೆ ಹೊಡೆಯುವನು. ಆಗ ಕೈದಿಯು ತಾನಾಗಿ ಯಾವದರೊಂದು ವಿಷಯವನ್ನು ಪ್ರಾರಂಭಿಸಿದರೆ ಆ ವಿಷಯವನ್ನೇ ಮನಬಿಚ್ಚಿ ಅವನೊಡನೆ ಚರ್ಚಿಸುವನು. ಕೈದಿಗೆ ಯಾವ ವಿಷಯದಲ್ಲಿಯೂ ಉಪದೇಶಿಸಲಿಕ್ಕೆ ಹೋಗುವದಿಲ್ಲ. ಅವನು ಶಿಕ್ಷಣಹೊಂದಿದವನಿದ್ದರೆ ಪುಸ್ತಕಗಳ ವಿಷಯಕ್ಕೆ ಮಾತುಗಳು ಹೊರಡಬಹುದು. ತೀರ ಹತ್ತಿರದ ಆಪ್ತಮಿತ್ರನಂತೆ ಕೈದಿಯ ಮನೆ-ಮಕ್ಕಳ ವಿಷಯಕ್ಕೂ ಹರಟೆ ಹೊಡೆಯುವನು. ಹೀಗೆ ಮಿತ್ರನಂತೆ ವರ್ತಿಸುವದರಿಂದ ಕೈದಿಯ ಜೀವನದ ತೊಡಕು, ತೊಂದರೆಗಳು ಗೊತ್ತಾಗಿ ಅವನು ಮುಂದೆ ಅಪರಾಧ ಮಾಡದಂತೆ ವ್ಯವಸ್ಥೆಗೊಳಿಸಲು ಅನುವಾಗುವದು.

ಸಸ್ಯಗಳ ನಿಜಸ್ಥಿತಿ

ಸಾಮಾನ್ಯವಾಗಿ ಬೇರುಗಳಮೇಲೆ ಸಸ್ಯಗಳ ಜೀವನ ಅವಲಂಬಿಸಿದೆಯೆಂದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ವಸ್ತುತಃ ಎಲೆಗಳೆ ಬೇರುಗಳು ಎನ್ನಬೇಕು. ಆಕಾಶವು ಘನವಾಗಿ, ಭೂಮಿಯು ಆಕಾಶವಾಗಿದ್ದರೆ ನಾವು ಖಂಡಿತವಾಗಿ ಎಲೆಗಳಿಗೆ ಬೇರಿನ ಮಹತ್ವವನ್ನು ಕೊಡುತ್ತಿದ್ದೆವು. ಏಕೆಂದರೆ ಬೇರುಗಳೆಂದರೆ ವೃಕ್ಷದ ಅಮುಖ್ಯಾಂಗಗಳಾಗಿವೆ. ಸಸ್ಯಗಳ ಜೀವಾಳದ ಚಟುವಟಿಕೆಯೆಲ್ಲ ಎಲೆಗಳಲ್ಲಿ ಸಾಗಿರುತ್ತದೆ. ಬೇರುಗಳು ಭೂಮಿಯೊಳ



Amorphophallus Tetanum

ಗಿನ ವಸ್ತುಗಳಿಂದ ಬೆಳೆಯುವದಿಲ್ಲ; ಎಲೆಗಳು ಕಳಿಸಿದ ಪ್ರಾಣವಾಯುವಿನಿಂದ ಬೇರುಗಳ ಬೆಳೆಗೆಯಾಗಬೇಕೆಂದ ಮೇಲೆ ಎಲೆಯ ಪ್ರಾಮುಖ್ಯತೆಯು ಹೊಳೆಯುವದು.

ಬೇರುಗಳು ಕೆಲವು ಉಪ್ಪುಗಳನ್ನು ಭೂಮಿಯಿಂದ ಹೀರಿಕೊಳ್ಳುವುವೆಂಬುದು ನಿಜ. ಆದರೆ ಅದೆಲ್ಲ ನಿರ್ಮಾಣ ಸಾಮಗ್ರಿಯಾಗಬೇಕಾದರೆ ಎಲೆಗಳ ಅಡಿಗೆಮನೆಯಲ್ಲಿಯೇ ಆಗಬೇಕು. ಸಸ್ಯಗಳ ಎಲೆ, ಹೂ, ಕಾಯಿಗಳಿಗೆ ಇರುವ ಆಕಾರಕ್ಕೆ ಬೆಳಕಿನ ಕಿರಣಗಳು ಕಾರಣವೆಂದು ಈಗ ತಿಳಿದು ಬಂದಿದೆ. ಆದುದರಿಂದ ಸಸ್ಯಗಳಿಗೆ ಬೆಳಕಿನ ಸಹಾಯದಿಂದ ಈಗ ವಿವಿಧ ರೂಪಗಳನ್ನು ಕೊಡುತ್ತಿದ್ದಾರೆ.

ಮೇಲಿನದು ನ್ಯೂಯಾರ್ಕಿನ ಸಸ್ಯೋದ್ಯಾನದಲ್ಲಿ ಪ್ರಕಾಶ ಬಲದಿಂದ ಬೆಳೆಸಲ್ಪಟ್ಟ ಜಗತ್ತಿನ ಅತಿ ದೊಡ್ಡ ಹೂವಿನ ಚಿತ್ರವಾಗಿದೆ. ಇದು ದಿನಕ್ಕೆ ಒಂದು ಫೂಟು ಎತ್ತರ ಬೆಳೆಯುತ್ತಿ ಎಂಟೂವರೆ ಫೂಟು ಬೆಳೆದಾಗ ತೆಗೆದ ಚಿತ್ರ.

ಆಫ್ರಿಕೆಯ ಬೊಂಟೊಕ್ ಎಂಬಲ್ಲಿಯ ಕಾಡು ಜಾತಿಯ ತರುಣ ತರುಣಿಯರು ತಮ್ಮ ಮನೆಗಳಲ್ಲಿ ಮಲಗುವದಿಲ್ಲ.

ಬೊಂಟೊಕ್ ಎಂಬಲ್ಲಿಯ ಪ್ರಣಯ ರೀತಿಗಳು

ಇಡಿ ಊರಿಗೆ ಕೆಲವು ಸಾರ್ವಜನಿಕ ಶಯನಾಲಯಗಳನ್ನು ಕಟ್ಟಿಸಿರುತ್ತಾರೆ. ಗಂಡಸರಿಗೆ ಬೇರೆ, ಹೆಂಗಸರಿಗೆ ಬೇರೆ ಶಯನಾಲಯಗಳಿರುತ್ತವೆ. ಹೆಂಗಸರ ಶಯನಾಲಯಗಳು ಸಾರ್ವಜನಿಕವಾಗಿರುವದಿಲ್ಲ. ಮುದುಕ ವಿಧವೆಯರ ಮನೆಗಳೆ ಶಯನಾಲಯಗಳಾಗಿರುತ್ತವೆ. ಒಬ್ಬ ವಿಧವೆಯು ನಾಲ್ಕಾರು ಅವಿವಾಹಿತ ಕುಮಾರಿಯರಿಗೆ ಮಲಗಲಿಕ್ಕೆ ಸ್ಥಳ ಕೊಡುವಳು. ಗಂಡಹೆಂಡಿರು ಮನೆಯಲ್ಲಿಯೇ ಮಲಗುತ್ತಾರೆ. ವಿಧವೆಯರೂ, ವಿಧುರರೂ ಶಯನಾಲಯಗಳಿಗೆ ಹೋಗಬೇಕು. ಮಕ್ಕಳು ಎಂಟುವರ್ಷದವಾದ ಕೂಡಲೆ ಸಾರ್ವಜನಿಕ ಶಯನಾಲಯಗಳಿಗೆ ಹೋಗಬೇಕು. ಮದುವೆಯಾಗುವವರೆಗೆ ದಿನಾಲು ಅಲ್ಲಿಯೆ ಅವರ ಶಯನ. ಅಲ್ಲಿಯ ವಧೂವರರನ್ನು ಆರಿಸಿಕೊಳ್ಳುವ ರೀತಿಯು ಮೋಜಿನದಾಗಿದೆ. ಒಬ್ಬ ತರುಣನು ಉತ್ಸವ, ಜಾತ್ರೆ, ಸಂತೆಗಳಲ್ಲಿ ಒಬ್ಬ ತರುಣಿಯನ್ನು ನೋಡಿ ಮೆಚ್ಚಿದನೆಂದು ತಿಳಿಯುವಾ. ಅವನು ಅವಳ ತಂದೆ ತಾಯಿಗಳನ್ನು ಕೇಳಬೇಕಾಗಿಲ್ಲ. ಅವಳು ಮಲಗುವ ಶಯನಾಲಯವನ್ನು ಹುಡುಕಿ ತೆಗೆಯುತ್ತಾನೆ. ರಾತ್ರಿಯಲ್ಲಿ ಅಲ್ಲಿ ಹೋಗಿ ಅವಳ ವಿಷಯಕ್ಕೆ ಪ್ರಣಯಗೀತೆಯನ್ನು ಹಾಡುವನು. ಆ ತರುಣಿಯೂ ಮೆಚ್ಚಿದ್ದರೆ ಶಯನಾಲಯದಿಂದ ಹೊರಗೆ ಬಂದು ತಾನೂ ಪ್ರಣಯ ಗೀತೆಯನ್ನು ಹಾಡುವಳು. ಹೀಗೆ ದಿನಾಲು ಒಂದು ವರ್ಷದವರೆಗೆ ನಡೆದ ನಂತರ ಅವರ ಮದುವೆಯಾಗುವದು. ಅವರಿಗೆ ಅವರಿಗೆ ತಮ್ಮ ... ಮಾಲೆ, ವಸ್ತ್ರಗಳನ್ನು ಪರಸ್ಪರರಿಗೆ ಮೆಚ್ಚುಗೆ... ಕೊಡುವ ಅಧಿಕಾರವಿದೆ.

ಕೋಣೆಗಳಲ್ಲಿ ಗಾಳಿಬರದಂತೆ ಬೆಳಕನ್ನಷ್ಟೆ ಬಿಡುವ... ಕಾಜಿನ ಕಿಡಿಕೆಗಳನ್ನು ಉಪಯೋಗಿಸುತ್ತಾರೆ. ...

ನೊರೆಯ ಕಾಜು

ಆದರಿಂದ ಸಪ್ಪಳಕ್ಕೆ ಪ್ರ... ಯಾಗುವದಿಲ್ಲ. ಅದಕ್ಕೇ ಗಾ... ಯನ್ನೂ ಬೆಳಕನ್ನೂ ಒಳಗೆ ಬಿ... ಸಪ್ಪಳವನ್ನಷ್ಟೆ ನುಂಗುವ ನೊರೆಯಂತಹ ಕಾಜುಗಳ... ಇಲಿನ್ವಾ ಗ್ಲಾಸ್ ಕಂಪನಿಯವರು ತಯಾರಿಸಿದ್ದಾರೆ. ... ಕಾಜು ಸ್ಪಂಜಿನಂತೆ ಅಸಂಖ್ಯ ಸೂಕ್ಷ್ಮ ರಂಧ್ರಗಳ... ದ್ದಾಗಿದೆ. ಮತ್ತು ಮಿದುವಾಗಿರುವದರಿಂದ ಬೇ... ಆಕಾರಕ್ಕೆ ತಿರುಗಿಸಿ ಬೇಕಾದ ಸ್ಥಳದಲ್ಲದನ್ನು ಕೂಡಿಸ... ಬರುವದು. ಅದಕ್ಕೆ ಬಂಣವು ಸುಲಭವಾಗಿ ಹಿಂ... ರಿಂದ ದಿನಕ್ಕೊಂದು ಬಂಣವನ್ನು ಕೊಟ್ಟು ಅಲಂಕಾ... ವಾಗಿ ಉಪಯೋಗಿಸಲೂ ಬರುವದು. ಅದು ... ಬೆಳಕುಗಳನ್ನು ಸಾಕಷ್ಟು ಒಳಗೆ ಬಿಡುವುದಲ್ಲದೆ ... ಸೂಕ್ಷ್ಮ ರಂಧ್ರಗಳಲ್ಲಿ ಸಪ್ಪಳವು ಇಂಗಿಹೋಗು...

ಮಿಕ್ಕ ವ್ಯವಸಾಯಗಳಂತೆ ಚೀನದ ಭಿಕ್ಷುಕರೂ ... ನಲ್ಲಿ ಬಲವಿದೆ' ಎಂಬ ಮಾತನ್ನು ಮನಗಂಡಿದ್ದಾರೆ. ...

ಚೀನದ ಭಿಕ್ಷುಕರು

ದೇಶಗಳಲ್ಲಿ ಬಿಕ್ಕೆ ಬೇಡು... ಒಂದು ಅಪರಾಧವೆಂದು ಎ... ಡುತ್ತದೆ. ಚೀನದಲ್ಲಿ ... ಧರ್ಮವಿರುವದರಿಂದ ಭಿಕ್ಷೆ ಬೇಡುವದು ಬೌದ್ಧರ ... ಕರ್ತವ್ಯವಾಗಿದೆ. ಅಲ್ಲಿಯ ಭಿಕ್ಷುಕರು ತಮ್ಮದೇ ... ಅನೇಕ ಸಂಘಗಳನ್ನು ಮಾಡಿಕೊಂಡಿದ್ದಾರೆ. ... ಬಲದಿಂದ ಭಿಕ್ಷುಕರು ವ್ಯಾಪಾರಿಗಳನ್ನು ಭಿಕ್ಷೆ ... ಒತ್ತಾಯ ಪಡಿಸಬಲ್ಲರು. ಒಬ್ಬ ಭಿಕ್ಷುಕನಿಗೆ ಯಾ... ಬೈದರೆ ಹೊಡೆದರೆ ಕೂಡಲೆ ನೂರಾರು ಭಿಕ್ಷುಕರು ... ಸೇರಿ ಗೊಂದಲವೆಬ್ಬಿಸುತ್ತಾರೆ. ಒಂದೊಂದು ಸಲ ಸಾ... ರೋಗಿಯನ್ನು ಸಾಹುಕಾರರ ಮನೆಯ ಮುಂದೆ ... ಭಿಕ್ಷೆ ಬೇಡುತ್ತಾರೆ. ಆ ಭಿಕ್ಷುಕರ ಸಂಘಕ್ಕೊಬ್ಬ ... 'ರಾಜ'ನಿರುತ್ತಾನೆ. ಭಿಕ್ಷೆ ಬೇಡಬೇಕಾದರೆ ಅ... ಒಪ್ಪಿಗೆಯನ್ನು ಪಡೆಯಬೇಕು. ಪ್ರತಿಯೊಬ್ಬ ಭಿ... ವಿಶಿಷ್ಟ ಪ್ರದೇಶದೊಳಗೇ ಭಿಕ್ಷೆ ಬೇಡಬೇಕು. ಒಬ್ಬ ...

ಕನು ತೀರಿಕೊಂಡರೆ ಸಂಘದ ಪರವಾಗಿ ಯೋಗ್ಯವಾಗಿ ಅವನ ಅಂತ್ಯಸಂಸ್ಕಾರವಾಗುತ್ತದೆ. ಭಿಕ್ಷುಕರಾಜನು ಲಕ್ಷಾಧೀಶನಿರುತ್ತಾನೆ! ಭಿಕ್ಷುಕರು ಅವನಿಗೆ ಕಾಣಿಕೆ ಕೊಡುವರಾದುದರಿಂದ ಭಿಕ್ಷೆ ಬೇಡದೆ ಅವನ ಹತ್ತರ ಸಾವಿರಾರು ಪೌಂಡಿನ ಆಸ್ತಿಯೂ, ಅಪ್ಸರೆಯರಂತಹ ಸ್ತ್ರೀಯರೂ ಇರುತ್ತಾರೆ. ವುಹ್ಸೂನ್ ಎಂಬ ಭಿಕ್ಷುಕ ರಾಜನು ಮಾತ್ರ ತನ್ನ ಆಸ್ತಿಯನ್ನೆಲ್ಲ ಭಿಕ್ಷುಕರಲ್ಲಿ ವಿದ್ಯೆಯನ್ನು ಪ್ರಸರಿಸಲಿಕ್ಕೆ ವೆಚ್ಚಿಸಿದನು. ೧೮೮೯ರಲ್ಲಿ ಅವನು ಸಾಯುವಾಗ ಅವನ ಸ್ಮಾರಕವಾಗಿ ಮೂರು ಶಾಲೆಗಳು ಚನ್ನಾಗಿ ನಡೆಯುವಂತಾಗಿದ್ದವು.

ಚಳಿ ಹವೆ ಬಿದ್ದಾಗ ನಾವು ಉಣ್ಣೆಯ ಉಡಿಗೆಗಳನ್ನು ಧರಿಸುತ್ತೇವೆ; ಬರಿ ಕಲ್ಲು ಕಬ್ಬಿಣದ ಮೇಲೆ ಕೂಡುವದಿಲ್ಲ. ಏಕೆಂದರೆ ಉಣ್ಣೆಗಿಂತ ಕಲ್ಲು ಕಬ್ಬಿಣಗಳು ತಂಣಗಿವೆಯೆಂದು ನಮ್ಮ ಅಭಿಪ್ರಾಯ. ಸ್ಪರ್ಶಕ್ಕೂ ಉಣ್ಣೆಗಿಂತ ಕಬ್ಬಿಣವೆ ತಂಣಗಿರುವಂತೆ ಅನಿಸುತ್ತದೆ. ಆದರೆ ಅದೊಂದು

ಒಂದು ಭ್ರಮೆ

ಭ್ರಮೆ. ವಸ್ತುತಃ ಒಂದು ಕೋಣೆಯಲ್ಲಿರುವ ಎಲ್ಲ ವಸ್ತುಗಳ ಉಷ್ಣಮಾನವೂ ಒಂದೆ ಪ್ರಮಾಣದಲ್ಲಿರುತ್ತದೆ. ಕಬ್ಬಿಣ—ಉಣ್ಣೆಗಳ ಉಷ್ಣಗ್ರಹಣಶಕ್ತಿ ಮಾತ್ರ ಸ್ವಲ್ಪ ಹೆಚ್ಚುಕಡಿಮೆಯಿರುತ್ತದೆ. ಅಂದರೆ ಕಬ್ಬಿಣವು ಹೆಚ್ಚು ಉಷ್ಣಗ್ರಾಹಿಯಾಗಿದೆ. ಆದುದರಿಂದ ಅದನ್ನು ಮುಟ್ಟಿದ ಕೂಡಲೆ ನಮ್ಮ ಮೈಯೊಳಗಿನ ಉಷ್ಣತೆಯನ್ನು ಅದು ಬಹುಬೇಗ ಗ್ರಹಿಸಿ ಬಿಡುವದು. ಅದಕ್ಕೇ ಆ ಮೈಭಾಗವು ತಂಪಾಗುವದು. ತಂಪಾದುದು ನಮ್ಮ ಮೈ; ಕಬ್ಬಿಣವಲ್ಲ. ಉಂಣೆಯು ಕಡಿಮೆ ಉಷ್ಣಗ್ರಾಹಿಯಾದುದರಿಂದ ಅದು ನಮ್ಮ ಮೈಬಿಸಿಯನ್ನು ಹೆಚ್ಚು ಗ್ರಹಿಸುವದಿಲ್ಲ. ಆದರಿಂದ ಉಂಣೆಯ ಉಡಿಗೆಯಲ್ಲಿ ನಾವು ಬೆಚ್ಚಗಿರುವಂತೆ ಅನಿಸುವದು.



ಕ್ರಾಂತಿಯ ದೀಪ:— ಲೇಖಕರು: ಟಿ. ಎಸ್. ಮಹದೇವಯ್ಯ ಬಿಎಸ್.ಸಿ. ಪ್ರಕಾಶಕರು: ಮಡಿವಾಳಪ್ಪ ಮತ್ತು ಸೋದರರು ಗದಗ. ಪುಟಗಳು ೬೫. ಬೆಲೆ ಮೂರಾಣೆ.

ಕನ್ನಡನಾಡಿನ ಜೀವಜ್ಯೋತಿಯಾದ ಬಸವಣ್ಣನವರ ಜೀವನದ ಒಂದು ಘನವಾದ ಅಂಶವನ್ನು ಆರಿಸಿಕೊಂಡು ಲೇಖಕರು ಮೂರಂಕಿನ ಒಂದು ಕಲಾಪೂರ್ಣ ನಾಟಕವನ್ನು ರಚಿಸಿದ್ದಾರೆ. ಕಲಾವಿದರ ವಾಡಿಕೆಯ ಸ್ವಾತಂತ್ರ್ಯವನ್ನು ವಹಿಸಿ ಬಸವಣ್ಣನವರ ಅಕ್ಕನೆಂದು ನಂಬಲಾದ ನಾಗಲಾಂಬೆಯನ್ನು ಅವರ ತಂಗಿಯನ್ನಾಗಿ ಮಾರ್ಪಡಿಸಿ ಆಕೆಯು ಅಣ್ಣನವರ ಹೋರಾಟದ ಜೀವನದಲ್ಲಿ ಅರ್ಪಿಸಿದ ಸೇವೆಯನ್ನು ಚಿತ್ರಿಸಿದ್ದಾರೆ. ನಾಟಕವು ರುದ್ರಜಾತಿಯನ್ನು ಹೋಲುತ್ತಿದ್ದು ಗಂಭೀರ ವಾತಾವರಣ, ದೈವದ ಆಟ, ಉದಾತ್ತ ಪಾತ್ರ, ಅಪರಿಹಾರ್ಯವಾದ ರಕ್ತಪಾತ ಇವುಗಳಿಂದ ತುಂಬಿ ಹೃದಯಂಗಮವಾಗಿದೆ. ಬಸವಣ್ಣನವರ ಅದ್ಭುತರಮ್ಯ ಜೀವನವನ್ನು ಕಲಾವಿದನ ದೃಷ್ಟಿಯಿಂದ ಚಿತ್ರಿಸಿದ ಗ್ರಂಥಗಳಲ್ಲಿ ಈ ನಾಟಕವು ಮೇಲ್ತರಗತಿಯಾಗಿದೆ. ಭಾಷೆಯು ಕಾವ್ಯಮಯವಾಗಿದ್ದು ನಾಟಕದ ವಾತಾವರಣಕ್ಕೆ ಹೊಂದಿಕೆಯಾಗಿದೆ.

ಶಾಂತಿ, ಅಹಿಂಸೆಗಳ ಪುರಸ್ಕರ್ತರನ್ನು ಕ್ರಾಂತಿಕಾರಕರೆಂದು ಹೇಳುವುದು ಕೆಲ ಜನರಿಗೆ ಸೇರಲಿಕ್ಕಿಲ್ಲ. ಆದರೆ ಕ್ರಾಂತಿಯೆಂದೊಡನೆ ರಕ್ತಪಾತವೆಂದೇ ಅರ್ಥಮಾಡಬೇಕೆಂದಲ್ಲ. ಅದ್ಭುತವಾದ ಸಾಮಾಜಿಕ, ಧಾರ್ಮಿಕ ಬದಲಾವಣೆಯೂ ಕ್ರಾಂತಿಯೇ. ವಿಕಾಸವು ಸಹಜಧರ್ಮ. ಆದರೆ ವಿಕಾಸಕ್ಕೆ ಕೃತ್ರಿಮವಾದ ತಡೆಯುಂಟಾದರೆ ರಭಸದಿಂದ ಬದಲಾವಣೆ ನಡೆದು ಹೋಗುವುದು. ಅದುವೇ ಕ್ರಾಂತಿಯೆಂದು ಕರೆಯಲ್ಪಡುವದು. "ಶಿವಭಕ್ತರಲ್ಲಿ ಜಾತಿ-ಪಂಥಗಳಿಲ್ಲ" ಎಂಬ ತತ್ತ್ವವು ಕಾರ್ಯಕಾರಿಯಾಗುವಂತೆ ಹರಳಯ್ಯ ಮಧುವಯ್ಯರಲ್ಲಿ ಶರೀರಸಂಬಂಧ ನಡೆಯಿಸಿದ ಬಸವಣ್ಣನವರಿಂದ ಸಾಮಾಜಿಕ ಕ್ರಾಂತಿ ನಡೆಯಿತು. ತತ್ಫಲವಾಗಿ ಶಿವಶರಣರ ಕೊಲೆಯಾಯಿತು. ಅದು ಬಿಜ್ಜಳನ ಕೊಲೆಯಲ್ಲಿ ಪರ್ಯವಸಾನವಾಯಿತು. ಇದುವೇ ಈ ನಾಟಕದ ವಸ್ತು. ಮೊದಲನೆಯ ಅಂಕಿನಲ್ಲಿ ಭಾವಪರವಶನಾದ, ಎರಡನೆಯ ಅಂಕದಲ್ಲಿ ಅನೇಕಕಲ್ಯಾಣ ಮಹಾಕಾರ್ಯದ ಚಿಂತೆಯಿಂದ ಕೊರಗುತ್ತಿರುವ, [illegible] ನೆಯ ಅಂಕದಲ್ಲಿ ಒಂದು ಅದ್ಭುತ ಸಾಮಾಜಿಕ [illegible] ವನ್ನು ನಡೆಯಿಸಿ 'ರಕ್ತಪಾತಗೈಯದೆ ಭೂಮಿಯಲ್ಲಿ [illegible] ವನ್ನು ಉಳಿಸಿ ಬೆಳೆಸ' ಬೇಕೆಂದು ಬೋಧಿಸುತ್ತಿ[illegible] ಅನಿವಾರ್ಯವಾಗಿ ರಕ್ತಪಾತ ನಡೆದಾಗ ಆ [illegible] ತನ್ನನ್ನೇ ಬಲಿಕೊಟ್ಟ ಬಸವಣ್ಣನ ಉಜ್ವಲ ಜೀವ[illegible] ನಾವು ಈ ನಾಟಕದಲ್ಲಿ ಕಾಣುತ್ತೇವೆ. ಅಲ್ಲದೆ ಲೇ[illegible] ಬಿಜ್ಜಳನ ಪಾತ್ರವನ್ನು ಹೆಚ್ಚು ಉದಾತ್ತವನ್ನಾಗಿ ಮಾ[illegible] ಡಿಸಿ ತಮ್ಮ ಕಲಾಪ್ರಜ್ಞೆಯನ್ನು ತೋರಿಸಿದ್ದಾ[illegible] ನಾಟಕದ ಬಿಜ್ಜಳನು ಗುಣಗ್ರಾಹಿಯಾಗಿದ್ದು ಮ[illegible] ಬಸವನ ವಿಷಯದಲ್ಲಿ ಗೌರವವನ್ನಿಟ್ಟುಕೊಂಡಿ[illegible] ಆತನ ಬೋಧನೆಯನ್ನು ಗೌರವಿಸಿ ವಿಶಾಲ ಹೃದಯ[illegible] ತೋರಿಸುತ್ತಾನೆ. ಆದರೆ ವಿಧಿ ಆತನನ್ನು ಉದ್ರೇಕ[illegible] ನಿಂದ ಶಿವಶರಣರ ಕೊಲೆಯನ್ನು ನಡೆಯಿಸುತ್ತದೆ. [illegible] ನಿಗೆ ಪಶ್ಚಾತ್ತಾಪವಾದರೂ ಆಗ ಕಾಲ ಮಿಂಚಿ ಹೋ[illegible] ಶಿವಶರಣರ ಪ್ರತಿಕ್ರಿಯೆಯ ಉದ್ರೇಕಕ್ಕೆ ಬಿಜ್ಜಳನು [illegible] ಯಾಗಬೇಕಾಗುತ್ತದೆ. ಈ ಕಥಾಸರಣಿ ರುದ್ರನಾ[illegible] ಬಹು ಚೆನ್ನಾಗಿ ಒಪ್ಪುತ್ತದೆ.

ನಾಟಕವು ಅನೇಕ ಮಾರ್ಮಿಕ ಮಾತುಗಳಿಂದ [illegible] ೧೯, ೨೨, ೩೭, ೫೧ ಇತ್ಯಾದಿ); ಅಲ್ಲಲ್ಲಿ ಬರುವ [illegible] ಲಹರಿಯಿಂದ (೧೮), ವಚನಗಳನ್ನು ಸನ್ನಿವೇ[illegible] ಅಳವಡಿಸಿಕೊಂಡಿರುವ ಜಾಣ್ಮೆಯಿಂದ, ಬಸವಣ್ಣ[illegible] ಅಹಿಂಸೆ, ಶಾಂತಿಗಳ ಬೋಧೆಯಿಂದ (ಪುಟ ೩೨, [illegible] ೫೩) ತುಂಬಿದೆ. ಹರಿಹರ ಕವಿಯು ಚಿತ್ರಿಸಿದ [illegible] ನವರ ವ್ಯಕ್ತಿಸ್ವರೂಪವನ್ನು ಉದ್ಧರಿಸಿಕೊಂಡು [illegible] ದೃಶ್ಯವನ್ನು ಆಯಲಾಗಿದೆ.

ಪುಸ್ತಕವು ಮುದ್ದಾಗಿಯೇ ಮುದ್ರಿತವಾಗಿ[illegible] ಕೆಲವು ಅಚ್ಚಿನ ದೋಷಗಳೂ ಶಬ್ದದೋಷಗಳೂ [illegible] ಕೊಂಡಿವೆ:—

ಚನ್ನಾಗಿ, ಸೌಜನ್ನತೆ, ಹೆಣಗಾಡುತ್ತಿ[illegible] ಯತೇಚ್ಛ, ವ್ಯಾಪನಗೊಳಿಸು, ತುಸ, ಗೂಢಾರ್ಥ, [illegible] ಬಾಪುಟ ಇತ್ಯಾದಿ.

ಬಿಜ್ಜಳನ ಬಿರುದುಗಳನ್ನು ಹೇಳುವಾಗ "ಶನಿವಾರಸಿದ್ಧಿ" ಎಂಬುದಾಗಿ ಶಾಸನಗಳಲ್ಲಿ ಬರುವ ಮಾತನ್ನು ಹೇಳಬೇಕಾಗಿತ್ತು. ಬಿಜ್ಜಳನು ಶಿವಶರಣರನ್ನು ಕೊಲ್ಲಿಸಲು ಉದ್ಯುಕ್ತನಾಗುವ ಸನ್ನಿವೇಶದಲ್ಲಿ ಸಹಜವಾದ ಬೆಳವಣಿಗೆಯಿಲ್ಲ. ಗಂಗಾಂಬೆಯ ಪಾತ್ರರಚನೆಯ ಉದ್ದೇಶವು ಇನ್ನಷ್ಟು ಸ್ಫುಟವಾಗಬಹುದಾಗಿತ್ತು. ಈ ನಾಟಕದ ದೃಶ್ಯಗಳ ಹೊಂದಿಕೆ ರಂಗಭೂಮಿಗಿಂತ ಚಲಚ್ಚಿತ್ರಕ್ಕೆ ಹೆಚ್ಚು ಒಪ್ಪುವಂತಿದೆ.

ಕ್ರಾಂತಿದೀಪವನ್ನು ಬೆಳಗಿಸಿದ ಬಸವಣ್ಣನ ಶಾಂತಿಸಂದೇಶವು (ಪುಟ ೪೮) ಮನನೀಯವಾಗಿದೆ. ಒಟ್ಟಿನಲ್ಲಿ ಈ ನಾಟಕವು ರಮಣೀಯವಾಗಿದೆ.

—ಎಸ್. ಎಸ್. ಮಾ.

Student's Modern Concise Dictionary

(English—English—Kannada) Edited by: D. K. Bharadwaj. Publisher: P. C. Shyabadimatha Book Depot, Gadag. Price Rs. 2.

ಭಾಷಾಭ್ಯಾಸಿಗೆ, ಪಂಡಿತನಾಗಬೇಕೆಂಬವನಿಗೆ ಕೋಶವು ತುಂಬ ಉಪಕಾರಿ. ಆದುದರಿಂದಲೆ 'ಅಮರ'ವನ್ನು ಚಿಕ್ಕಂದಿನಿಂದಲೆ ಗಟ್ಟಿಮಾಡಿಸುವ ಪೂರ್ವಪದ್ಧತಿಯಿದ್ದಿತು. ಆದರೆ ಇದು ಅಚ್ಚುಕೂಟದ ಯುಗವಾದುದರಿಂದ ಸ್ಮರಣಶಕ್ತಿಗೆ ಮೊದಲಿನವರಷ್ಟು ಕೆಲಸ ಕೊಡುವ ಕಾರಣವು ಈಗ ಉಳಿದಿಲ್ಲ. ಸಂಸ್ಕೃತಕ್ಕೆ ಒಂದು ಅಮರಕೋಶವಾಯಿತು. ಉಳಿದ ಭಾಷೆಗಳಿಗೆ ಅಂತಹ ನೆನಪಿಡಲು ಅನುಕೂಲವಾಗುವಂತೆ ಪದ್ಯಾತ್ಮಕ ಕೋಶಗಳು ಎಲ್ಲಿಂದ ಬರಬೇಕು?

ಇಂಗ್ಲಿಷು ಕಲಿವ ವಿದ್ಯಾರ್ಥಿಗಳಿಗೂ ಇಂಗ್ಲಿಷಿನಿಂದ ಭಾಷಾಂತರ ಮಾಡಿಕೊಳ್ಳುವವರಿಗೂ ಅನುಕೂಲವಾಗುವಂತಹ ಒಳ್ಳೆ ಇಂಗ್ಲಿಷ್-ಕನ್ನಡ ಕೋಶದ ಕೊರತೆಯು ಹಲವು ದಿನಗಳಿಂದಲೂ ಉಂಟು. ಈ ಕೊರತೆಯನ್ನು ಹೋಗಲಾಡಿಸಲು ಬಾಸೆಲ್ ಮಿಶನ್ನಿನವರ ಒಂದು ಅಲ್ಪ ಪ್ರಯತ್ನವು ಎಷ್ಟೊ ದಿನಗಳ ಹಿಂದೆ ಆಗಿದೆ. ಈಗ ಮೈಸೂರು ವಿಶ್ವವಿದ್ಯಾನಿಲಯದವರು ಒಂದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಒಂದು ಕೋಶವನ್ನು ಬರೆಯಿಸುತ್ತಲಿದ್ದಾರೆ. ಶ್ರೀಮಾನ್ ಭಾರದ್ವಾಜರ ಸಂಪಾದಕತ್ವದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಒಂದು ಕೋಶವು ಈಗ ಪ್ರಕಟವಾಗಿದೆ.

ಒಂದು ಸಂಪೂರ್ಣ ಕೋಶವನ್ನು ಸಿದ್ಧಪಡಿಸುವುದೆಂದರೆ ಒಂದು ವ್ಯಕ್ತಿಯ ವಿಷಯವಲ್ಲ. ಒಂದು ನಾಡಿನ ನುಡಿಯಲ್ಲಿ ಜಾತಿಜಾತಿಗಳಿಗನುಸರಿಸಿ, ಕಸಬುಕಸಬಿಗೆ ಅನುಸರಿಸಿ, ಒಳನಾಡುನಾಡಿಗೆ ಅನುಸರಿಸಿ, ಲಿಂಗಭೇದ, ವಯೋಭೇದಗಳಿಗೆ ಅನುಸರಿಸಿ ಅನೇಕಾನೇಕ ಸೂಕ್ಷ್ಮ ಭೇದಭಾವಗಳಿರುವುದುಂಟು. ಇವೆಲ್ಲವನ್ನೂ ಒಂದೇ ವ್ಯಕ್ತಿಯು ಅರಿತುಕೊಂಡಿರುವುದಾಗಲಿ, ಅರಿತುಕೊಳ್ಳುವುದಾಗಲಿ ತೀರ ಅಸಾಧ್ಯ. ಆದರೂ ವಿದ್ಯಾರ್ಥಿಗಳಿಗಾಗಿ ಬರೆದ ಪ್ರಸ್ತುತ ಕೋಶದ ಸಂಪಾದಕರಾದ ಶ್ರೀ. ಭಾರದ್ವಾಜರಿಗೆ ಕನ್ನಡ ಕೋಶದ ಕೆಲಸಕ್ಕೆ ಕೈಯಿಕ್ಕಲು ಒಂದು ಬಗೆಯ ಅಧಿಕಾರ ಉಂಟೆಂದು ಹೇಳಬಹುದಾಗಿದೆ. ಅವರ ಹುಟ್ಟು ಉತ್ತರ ಕರ್ನಾಟಕದಲ್ಲಿ; ನಡುಹರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ; ಉತ್ತರ ವಯಸ್ಸು ಮೈಸೂರು ಸೀಮೆಯಲ್ಲಿ. ಪತ್ರಿಕಾ ಪ್ರಪಂಚದಲ್ಲಿ ಕೆಲಸಮಾಡಿದವರು, ರಾಜಕೀಯ ಕೆಲಸದ ಅನುಭವವಿದ್ದವರು, ಸಾಹಿತ್ಯದ ಪರಿಚಯವಿದ್ದವರು, ವೈದ್ಯಕದ ನಿತ್ಯವ್ಯವಸಾಯವನ್ನು ಕೈಕೊಂಡವರು; ಇಷ್ಟೊಂದು ವಿವಿಧ ಕ್ಷೇತ್ರಗಳೊಳಗಿನ ಭಾಷಾಭೇದಗಳ ಪರಿಚಯವಿದ್ದ ಒಂದು ವ್ಯಕ್ತಿಯು ಸಿಕ್ಕುವುದು ಸ್ವಲ್ಪ ಅಪರೂಪ.

ಆದರೂ ಶ್ರೀ. ಭಾರದ್ವಾಜರಿಗೂ ಕೈತುಂಬ ಕೆಲಸಗಳು ಯಾವಾಗಲೂ. ಆದುದರಿಂದಲೆ "ನನಗೆ ಪ್ರಕಾಶಕರಿಂದ ದೊರೆತ ಕಾಲಾವಧಿಯಲ್ಲಿ ನನ್ನಿಂದ ಸಾಧ್ಯವಾದ ಮಟ್ಟಿಗೆ ಇದನ್ನು ಪರಿಷ್ಕರಿಸಿರುವೆನು" ಎಂದು ನಿಜಸ್ಥಿತಿಯನ್ನು ವಿನಯಪೂರ್ವಕವಾಗಿ ಹೇಳಿಕೊಂಡಿದ್ದಾರೆ. ಶ್ರೀಮಾನ್ ಕೊಪ್ಪರು ಮೊದಲು ಬರೆದುದು ಶ್ರೀ. ಭಾರದ್ವಾಜರಿಂದ ಪರಿಷ್ಕರಿಸಲ್ಪಟ್ಟು ಪ್ರಕಟವಾದ ಕೋಶವಿದು. ಶ್ರೀ. ಭಾರದ್ವಾಜರ ಕೈ ಆಡಿರುವುದರಿಂದ ಧಾರವಾಡ, ಮಂಗಳೂರು ಮತ್ತು ಬೆಂಗಳೂರುಗಳ ಮೂರು ಬಗೆಯ ಮಾತಿನ ರೀತಿಗಳ ಪ್ರವೇಶವು ಕೋಶದಲ್ಲಾಗಿದೆ. ಆದರೆ ಕೆಲವೆಡೆಗಳಲ್ಲಿ ಬೆಂಗಳೂರ ಉಚ್ಚಾರಪದ್ಧತಿಗೆ ವಿಶೇಷ ಸ್ಥಾನವು ದೊರೆತಂತೆ ಕಾಣುತ್ತದೆ. ಉದಾ: Earnest ಅರ್ನಿಸ್ಟ (ಅರ್ನೆಸ್ಟ); Eighty ವೈಟಿ (ಏಟಿ); Embark ಇಂಬಾರ್ಕ (ಎಂಬಾರ್ಕ) ಮುಂ.

ಅರ್ಥವನ್ನು ಹೇಳುವಲ್ಲಿ ಒಂದೆರಡು ಕಡೆಗಳಲ್ಲಿ ಸ್ವಲ್ಪ ಕೊರತೆಯುಂಟಾಗಿದೆ. Connote ಮತ್ತು Denote ಎಂಬ ಎರಡೂ ಪದಗಳಿಗೂ ಸೂಚಿಸು, ಧ್ವನಿತಾರ್ಥಕೊಡು ಎಂದು ಅರ್ಥ ಹೇಳಲಾಗಿದೆ. Denoteನಲ್ಲಿ ಧ್ವನಿತಾರ್ಥವಿಲ್ಲ; ಅದು Connoteನಲ್ಲಿ ಮಾತ್ರ.

ಇಂಗ್ಲಿಷು ಶಬ್ದಗಳ ಉಚ್ಚಾರವನ್ನು ಕನ್ನಡದಲ್ಲಿ ಹೇಗೆ ಬರೆಯಬೇಕೆಂಬ ಬಗ್ಗೆ ಈಗ ಚರ್ಚೆಗೆ ಆರಂಭವಾಗಿದ್ದು ಕೆಲಕೆಲವು ಹೊಸ ಬಗೆಗಳೂ ತಲೆದೋರುತ್ತಲಿವೆ. ಇಂತಹ ಸಂದರ್ಭದಲ್ಲಿ ತಮ್ಮ ಪದ್ಧತಿಯೆ ಮಿಗಿಲು ಉಳಿದವರ ರೀತಿ ತಪ್ಪು ಎಂದು ಆಗ್ರಹ ಹಿಡಿಯುವುದು ಸರಿಯಾಗಲಾರದು. ಉಳಿದ ರೀತಿಯಲ್ಲಿ ಬಹಳ ಚೆನ್ನಾಗಿರುವ ಮುನ್ನುಡಿಯಲ್ಲಿ ಶ್ರೀ. ತಾರಾನಾಥರು ಮೈಸೂರು ವಿಶ್ವವಿದ್ಯಾನಿಲಯದವರ ಕೋಶದ ಉಚ್ಚಾರ ಲೇಖನ, ಪದ್ಧತಿಯ ಮೇಲೆ ಸುಮ್ಮನೆ ರೇಗಿ ಅನುದಾರ ಟೀಕೆಮಾಡಿದುದು ತಕ್ಕುದಾಗಿಲ್ಲ.

ಪುಟ X ರಲ್ಲಿ ತಾರಾನಾಥಜೀಯವರ ಉದ್ಗಾರಗಳು:—

" ಕರ್ನಾಟಕದ ಸಾಹಿತ್ಯಕಾರರ ಗಮನವು ಈ ಮುಖ್ಯ ವಿಷಯದ ಕಡೆಗೆ (ಸ್ವರಶಾಸ್ತ್ರ) ಹರಿದಂತೆಯೇ ತೋರುವುದಿಲ್ಲ. ಕವಿತಾ ನಾಟಕಗಳನ್ನೇ ಮಾತ್ರ ಅಪ್ಪಿಕೊಂಡು ಮುದ್ದಾಡುವ ಸಾಹಿತಿಗಳಿಗೆ ಇದೊಂದು ಅನವಶ್ಯಕ ವಿಷಯವೆಂದು ತೋರಿದರೂ ತೋರಬಹುದು....ವ್ಯಂಜನಗಳಿಗೆ ಒತ್ತು ಕೊಟ್ಟು ಅವರು ಅಚ್ಚು ಹಾಕಿಸಿದ್ದನ್ನು ನೋಡಿದರೆ ಸ್ವಲ್ಪವಾದರೂ ಸ್ವರಶಾಸ್ತ್ರದ ಪರಿಮಳವುಳ್ಳವರು ಅಂಥ ನವೀನ ಸ್ವರಶಾಸ್ತ್ರಯುಗ ಪುರುಷರ ಸ್ವಾಭಿಮಾನಗಳನ್ನು ಕಂಡು ಬೆರಗಾಗದಿರರು ! "

ಇಂತಹ ಸಣ್ಣ ಕೊರತೆಗಳು ಅಷ್ಟು ಗಣ್ಯವಾಗಿಲ್ಲ. ಕೋಶವು ಚೆನ್ನಾಗಿದೆ. ವಿದ್ಯಾರ್ಥಿಗಳಿಗೆ ಕೊಳ್ಳಲು ಅನುಕೂಲವಾಗುವಂತೆ ಸ್ವಲ್ಪ ಬೆಲೆಯನ್ನಿಟ್ಟುದು ಒಳ್ಳೆಯದಾಗಿದೆ. ಶಾಲೆಗಳಿಗೂ, ವಿದ್ಯಾರ್ಥಿಗಳಿಗೂ ಬಹಳ ಉಪಯುಕ್ತವಾದ ಪುಸ್ತಕ.

—ಶಂ.

ಸಂಣ ಕತೆಗಳು:— ಮೂವರು ಲೇಖಕರ ೪ ಕತೆಗಳ ಸಂಗ್ರಹವಿದು. ಪ್ರಕಾಶಕರು, ಕರ್ನಾಟಕ ಸಂಘ ಚನ್ನರಾಯಪಟ್ಟಣ. ಬೆಲೆ ೩। ಆಣೆ.

ಈ ಕತೆಗಳಲ್ಲಿ 'ಯಾರಿಗೋಸ್ಕರ ಬದುಕಿರಬೇಕು ?' ಎಂಬುದು ದುಃಖಪರ್ಯವಸಾಯಿಯಾಗಿದೆ. ದಂಪತಿಗಳು ಪ್ರೇಮದಿಂದ ಸಂಸಾರವೃಕ್ಷವನ್ನು ಬಿತ್ತಿ ಬೆಳೆಸಿ ಅದರ ಫಲವನ್ನು ಕಾಣುಕಾಣುವಾಗಲೆ ಕಾಲನ ಸಿಡಿಲು ಅದನ್ನು ಅಪ್ಪಳಿಸಿ ಬಾಳುಗೇಡು ಮಾಡುವ ದಾರುಣ ಚಿತ್ರವು ಇದರಲ್ಲಿದೆ. ಇದನ್ನು ಬರೆದವರು ಶ್ರೀ. ಸಿ. ಕೃಷ್ಣರು. ಇದಕ್ಕಿಂತ ಅವರೆ ಬರೆದ 'ಹೆತ್ತೊಡಲು' ಎಂಬ ಕತೆಯಲ್ಲಿ ಹೆಚ್ಚು ಸಹಜತೆಯೂ, ಕಲೆಗಾರಿಕೆಯೂ ಇದೆ. ತಮ್ಮ ಮಕ್ಕಳ... ಪ್ರೀತಿಸುವವರ ಮೇಲೆ ಸ್ತ್ರೀಯರು ವಾತ್ಸಲ್ಯವುಳ್ಳವರಾ... ರೆಂಬ ಸ್ವಭಾವವು ಇದರಲ್ಲಿ ಚನ್ನಾಗಿ ಚಿತ್ರಿತವಾ... 'ಕರಾಳ ಸರ್ಪ'ದ ಲೇಖಕರಾದ ಶ್ರೀ. ಯೋಗ... ಸ್ವಲ್ಪ ಮಂತ್ರ, ದೈವಗಳ ಕಡೆಗೆ ಒಲವುಳ್ಳವರೆಂದು ... ದರೂ ಕತೆಯು ಒಳ್ಳೇ ರಮ್ಯವಾಗಿದೆ. ಹರೆಯದ ... ನಲ್ಲಿ ಉರಿದ ಡಾಕ್ಟರನಿಗೆ ತನ್ನ ಮಗನೇ ಯಮ... ಸಿಲುಕಿರಲು ಪುತ್ರವಾತ್ಸಲ್ಯದ ಸಾಕ್ಷಾತ್ಕಾರವಾ... 'ಬಾಳು' ಎಂಬುದು ಶ್ರೀ. ಸಿ. ಆರ್. ಶ್ರೀನಿವಾಸ... ಗಾರ್‍ಯರು ಬರೆದ ದುಃಖಾಂತವುಳ್ಳ ಕತೆಯಾಗಿದೆ. ... ಗಾಗಿ ಹಂಬಲಿಸುತ್ತಿರುವಾಗ ಒಬ್ಬ ತರುಣನಿಂದ ... ರ್ಗಕ್ಕೆಳೆಯಲ್ಪಟ್ಟ ಓರ್ವ ತರುಣಿಯು ಪಶ್ಚಾತ್ತಾ... ಆತ್ಮಹತ್ಯ ಮಾಡಿಕೊಂಡ ವಿಷಯವಿದೆ ಆದರಲ್ಲಿ ... ಶಿಕ್ಷಣವನ್ನು ಹೊಂದದ ಹಳ್ಳಿಯ ಹುಡುಗಿಯು ... ಮಾತಿಗಿಂತ ತರುಣನ-ಕಾಮುಕ್ಕಲ್ಲ ಮರುಳು-ಮಾ... ಬಲಿ ಬೀಳುವಳೆಂಬುದು ಅಸಂಭವ. ಆದುದರಿಂದ ... ಅವಾಸ್ತವವೆನಿಸುವದು. ಮೇಲಿನ ಕತೆಗಳೆಲ್ಲ ... ಯಲ್ಲಿ ಬರೆಯಲ್ಪಟ್ಟು ಓದುಗರನ್ನು ಮೈಮ... ವಂತಿವೆ. ಆದರೆ ಎರಡು ದುಃಖಾಂತ ಕತೆಗಳು ... ರಡು ವಿಶೇಷ ಸಂಕಷ್ಟಗಳಿಂದ ತುಂಬಿದುವು ... ರಿಂದ ಪುಸ್ತಕವನ್ನು ಓದಿದ ಮೇಲೆ ವಾಚಕರು ... ಬಿಸಿಯುಸಿರನ್ನು ಬಿಡುವ ಸಂಭವವಿದೆ.

—ಷ...

ಕರ್ಣಾಟಕ ವಿಜಯ, ಮೈಸೂರು ನವ... ಇವೆರಡೂ ಮೈಸೂರಿನ ತರುಣ ಲಾವಣಿ-ಕರ್ತರು ... ಗಾರರೂ ಆದ ಶ್ರೀಮಾನ್ ಎನ್. ವಿಷಕಂಠ... ರಿಂದ ರಚಿಸಲ್ಪಟ್ಟ ಲಾವಣಿಗಳಾಗಿವೆ. ಲಾವಣಿ... ಗಳು ಶ್ರೀಯುತರ ಕಲ್ಪನಾಶಕ್ತಿಯನ್ನು ಸೂಚಿ... ವಿವೆ. ಹೀಜ್ ಮಾಸ್ಟರ್ಸ್ ವ್ಹೊಯ್ಸ್ ಕಂಪನಿ... ಇವರ ಲಾವಣಿಗಳ ರೆಕಾರ್ಡುಗಳನ್ನು ... ದ್ದಾರೆಂದ ಮೇಲೆ ಇವರ ಲಾವಣಿಗಳ ಜನಪ್ರಿಯ... ಬೇರೆ ಹೇಳಬೇಕಾಗಿಲ್ಲ. ಲಾವಣಿಗಳಿಗೆ ... ಶಬ್ದಗಳ ತೊಡಕಿಲ್ಲದ ಹರಿತವು ಇವರಿಗೆ ... ಸಿದೆ. ಬುನಾದಿಯಿಂದ ವಿಷಯ ಮತ್ತು ಶೈಲಿಗ... ವ್ಯತ್ಯಾಸವಿಲ್ಲದೆ ಸಾಗಿಬಂದ 'ಲಾವಣಿ'ಯ ಪ್ರವಾ... ರಿಂದ ಹೊಸ ಒಲವು ಸಿಗಲಿ.

ಚಿಲ್ಲಾ ಹಿಟ್ಟು:—ಬರೆಹಗಾರ ಕು. ವಸಂತ. ಪ್ರಕಾಶಕರು ಮನೋಹರ ಗ್ರಂಥಭಾಂಡಾರ ಧಾರವಾಡ. ಪು. ೩೦. ಬೆಲೆ ೨ ಆಣೆ.

ಕುಮಾರ ವಸಂತನೆಂಬ ೧೨ ವರ್ಷದ ಬಾಲಕನು ಬರೆದ ಕತೆಗಳ ಸಂಗ್ರಹವಿದು. ಮನೋಹರ ಗ್ರಂಥಭಾಂಡಾರದವರು ಇದನ್ನು ಮುದ್ರಿಸಿ ಕನ್ನಡ ಬಾಲಕರಲ್ಲಿ ಲೇಖನದ ಆಸಕ್ತಿಯು ಹುಟ್ಟುವುದಕ್ಕೆ ಅನುವು ಮಾಡಿದ್ದಾರೆ. ಕತೆಗಳು ವಿಶೇಷ ಹೊಸವಾಗಿಲ್ಲವಾದರೂ ಕತೆಹೇಳುವ ರೀತಿಯಲ್ಲಿ ಬಾಲಕರ ವೈಶಿಷ್ಟ್ಯಕ್ಕೆ ತಕ್ಕ ಸರಳತೆಯಿದೆ. 'ಆಚಾರಿ ಮತ್ತು ಅನಾಚಾರಿ' ಎಂಬ ಕತೆ ಹಾಸ್ಯಪ್ರಚೋದಕವಾಗಿದೆ. 'ನಸುಕಿನಲ್ಲಿ' ಎಂಬುದು ಶಿಕ್ಷಣ ಶಾಖೆಯವರಿಗೆಂದು ಒಳಗುದ್ದಿನಂತಿದೆ. ಬಾಲಕರು ಈ ಕತೆಗಳನ್ನು ಓದಿ ತಾವೂ ಲೇಖನಪ್ರೇಮವನ್ನು ಬೆಳಿಸಿಕೊಳ್ಳಲಿ.

ನವಶಕ್ತಿ:—ಉಡುಪಿಯ ಹೊಸ ಮಾಸಪತ್ರಿಕೆ. ಕ್ರೌನ್ ಚತುರ್ಥಾಂಶ ಆಕಾರ, ಪುಟ ೬೪. ಬಿಡಿಸಂಚಿಕೆಗೆ ೪ ಆಣೆ. ವಾ. ಚಂ. ರೂ. ೩. ಸಂಪಾದಕರು ಶ್ರೀ. ಪಿ. ಎನ್. ಬನ್ನಂಜೆ ರಾಮಾಚಾರ್ಯರು.

ವಿಮರ್ಶೆಗೆ ಬಂದ ಎರಡನೆ ಸಂಚಿಕೆಯಲ್ಲಿ ವಿಜ್ಞಾನ, ಆಯುರ್ವೇದ, ರಾಜನೀತಿಗಳಿಗೆ ಸಂಬಂಧಿಸಿದ ವಾಚನೀಯ ಲೇಖನಗಳಿವೆ. ಒಂದು ನಾಟಕವೂ ಮೂರು ಕತೆಗಳೂ ಇವೆಯಲ್ಲದೆ 'ಸಂಗೀತ ಸುಧಾ' ಎಂಬ ವಿಭಾಗವೂ ಇದೆ. ಮಹಿಳಾಲೋಕ, ಹಾಸಪರಿಹಾಸ, ಪತ್ರಿಕಾಪ್ರಪಂಚ ಎಂಬ ಉಪಯುಕ್ತ ವಿಭಾಗಗಳಿಂದ ಈ ಪತ್ರಿಕೆಯು ಬೇಗ ಜನಪ್ರಿಯವಾಗುವುದೆಂದು ನಂಬಿಕೆಯಿದೆ. ಹೊದಿಕೆಯ ಮೇಲಿನ ಚಿತ್ರವು ಇನ್ನು ಹೆಚ್ಚು ಕಲಾಯುಕ್ತವಾದರೆ ಒಳಿತು.

ಚಿತ್ರಾ:—ಬೆಂಗಳೂರಿನಿಂದ ಪ್ರಕಟವಾಗುವ ಹೊಸ ಮಾಸಪತ್ರಿಕೆ. ಸಂಪಾದಕರು ಶ್ರೀಮತಿ ದ್ವಾರಕಾಬಾಯಿ, ವಿ. ಮತ್ತು ಶ್ರೀಯುತ ಗುರುನಾಥ ಜೋಶಿ. ಪ್ರಕಾಶಕರು, ಶಾರದಾ ಎಂಬ್ರಾಯಿಡರಿ ಸ್ಟೋರ್ಸ್ ನಂ. ೬. ನ್ಯೂ ಮಾರ್ಕೆಟ ಬೆಂಗಳೂರು ಸಿಟಿ. ಕ್ರೌನ್ ಚತುರ್ಥಾಂಶ ಆಕಾರ. ಪು. ೩೬. ಬಿಡಿಸಂಚಿಕೆ ೨ ಆ. ವಾ. ಚಂ. ೧ರೂ.

ಕೇವಲ ಸ್ತ್ರೀಯರ ಪ್ರಗತಿಗೆ ಸಾಧಕವಾದ ಪತ್ರಿಕೆಗಳು ಕರ್ನಾಟಕದಲ್ಲಿ ಅಪರೂಪವಾಗಿವೆ. ಆದುದರಿಂದ ವನಿತಾಭ್ಯುದಯವನ್ನೆ ಗುರಿಯಾಗಿಟ್ಟುಕೊಂಡಿರುವ 'ಚಿತ್ರಾ,' ಮಾಸಿಕವು ಆ ಕೊರತೆಯನ್ನು ಪೂರೈಸುವಂತಹದಾಗಿದೆ. ಸ್ತ್ರೀ ಸಂಸ್ಕೃತಿಯ ವೈಶಿಷ್ಟ್ಯವಾದ ಗೃಹಾಲಂಕಾರ, ಕಸೂತಿ, ರಂಗೋಲಿಗಳ ವಿಷಯಕ ಸಚಿತ್ರ ಬರಹಗಳು ಈ ಪತ್ರಿಕೆಯಲ್ಲಿ ಬರುತ್ತವೆ. ಮಿಕ್ಕ ಲೇಖನಗಳೂ, ಕತೆಗಳೂ ಬಹುತರವಾಗಿ ಸಚಿತ್ರವಾಗಿವೆ. ಹೊದಿಕೆಯು ಆಕರ್ಷಕವಾಗಿದೆ. ಕರ್ನಾಟಕದಲ್ಲಿ ಲೇಖಿಕೆಯರಿಗೆ ಕೊರತೆಯಿಲ್ಲ. ಸಂಪಾದಕರು ತಜ್ಞಲೇಖಿಕೆಯರನ್ನು ತಮ್ಮ ಪತ್ರಿಕೆಗೆ ಲೇಖನಗಳನ್ನು ಬರೆಯುವಂತೆ ಮನವೊಲಿಸಿ ಭಾಷಾಂತರಿತ ಲೇಖನಗಳ ಸಂಖ್ಯೆಯನ್ನು ಸ್ವಲ್ಪ ಕಡಿಮೆಮಾಡಿದರೆ ಒಳಿತು. ಸ್ತ್ರೀಯರಿಗೆ ಅತ್ಯಾವಶ್ಯಕವಾಗಿರುವ ಬಾಲಪೋಷಣೆಯ, ಸುಲಭ ಚಿಕಿತ್ಸೆಯ ಮತ್ತು ಆಹಾರವಿಜ್ಞಾನದ ಲೇಖನಗಳನ್ನು ಸಂಗ್ರಹಿಸಲು ಯತ್ನಿಸಬೇಕೆಂದು ನಾವು ಸೂಚಿಸುತ್ತೇವೆ. ಕನ್ನಡಿತಿಯರು 'ಚಿತ್ರಾ'ಯನ್ನು ಪ್ರೇಮದಿಂದ ಪ್ರೋತ್ಸಾಹಿಸಲಿ.

ವಿಮಾವಾಣಿಜ್ಯ (ವಿಶೇಷ ಸಂಚಿಕೆ):—ಕ್ರೌ. ೧/೪. ೧೮೭ ಪುಟಗಳು. ಬೆಲೆ ೪ ಆಣೆ. ಸಂಪಾದಕರು: ಜಿ. ವಿ. ದೊಡ್ಡವೀರಪ್ಪ. ಹೊರಡುವ ಸ್ಥಳ: ಬೆಂಗಳೂರು.

ವಿಮಾವಾಣಿಜ್ಯದ ತೃತೀಯ ಜನ್ಮೋತ್ಸವ ಸಂಚಿಕೆಯು ಈ ಮೊದಲು ಹೊರಡಿಸಿದ ಎರಡೂ ವಿಶೇಷ ಸಂಚಿಕೆಗಳಿಗಿಂತ ಹೆಚ್ಚು ಚಿತ್ತಾಕರ್ಷಕವಾಗಿದೆ. ಸನ್ಮಾನ್ಯ ಮುಂದಾಳುಗಳೂ ವಿಮಾ-ವಾಣಿಜ್ಯಗಳಲ್ಲಿ ನಿಷ್ಣಾತರೂ ಆದ ಹಲವರ ಚಿತ್ರಗಳೂ (ಅವರ ಆಶೀರ್ವಾದಗಳ ಸಹಿತ) ಇವೆ. ಲೇಖಕರ ಬಳಗವು ಪ್ರಾತಿನಿಧಿಕವಾಗಿದ್ದು, ಕಥೆ-ಕವನಗಳು ಸಹ ವಿಮಾ-ವಾಣಿಜ್ಯದ ವಿಶೇಷ ಸಂಚಿಕೆಗೆ ಒಪ್ಪುವಂತಹವಾಗಿವೆ.

ವಿಮಾವಾಣಿಜ್ಯಗಳ ವಿಷಯಕ್ಕೆ ಜನಸಾಮಾನ್ಯರಲ್ಲಿ ಜಾಗ್ರತಿಯನ್ನುಂಟುಮಾಡುವುದು ಸಮಾಜ ಸೇವೆಯ ದೊಡ್ಡ ಅಂಗವಾಗಿದೆ. ವಿಮೋದ್ಯಮಗಳಂತಹ ಕೇವಲ ತಾಂತ್ರಿಕ (Technical) ಪತ್ರಿಕೆಯನ್ನು ಹೊರಡಿಸಿ, ಅದನ್ನು ಯಶಸ್ವಿಯಾಗಿ ನಡೆಯಿಸುತ್ತಿರುವುದು ಸಂಪಾದಕರಾದ ಶ್ರೀ. ದೊಡ್ಡವೀರಣ್ಣನವರ ತ್ಯಾಗವನ್ನೂ ಅವರ ಪ್ರಯತ್ನಶೀಲತೆಯನ್ನೂ ಸೂಚಿಸುತ್ತದೆ; ಅವರಿಗೆ ನಮ್ಮ ಅಭಿನಂದನೆಗಳು. ನಾಲ್ಕಾಣೆಯ ಬೆಲೆಯಾದರೂ ತೀರಾ ಕಡಿಮೆಯೆಂದೇ ಹೇಳಬೇಕು. ಪತ್ರಿಕೆಯು ಹೆಚ್ಚುಹೆಚ್ಚು ಲೋಕಪ್ರಿಯವಾಗಿ, ತನ್ನ ಉಪಯುಕ್ತತೆಯನ್ನು ಬೀರಲೆಂದು ಕೋರುತ್ತೇವೆ.

—ಸಂ

'ಹಳ್ಳಿಯ ವೈದ್ಯ'ದ ಲೇಖಕರಿಗೆ ಬಹುಮಾನ

ಬಾಗಲುಕೋಟೆಯ ವೈದ್ಯ ಮಧ್ವಾಚಾರ್ಯ ಬುರ್ಲಿ ಯವರು ಬರೆದ 'ಹಳ್ಳಿಯ ವೈದ್ಯ' ಎಂಬ ಗ್ರಂಥಕ್ಕೆ ಮೈಸೂರ ದೇವರಾಜ ಬಹದ್ದೂರ ನಿಧಿಯಿಂದ ೨೦೦ ರೂ. ಇನಾಮು ಸಿಕ್ಕಿದೆ.

ಇದಲ್ಲದೆ ಇದೇ ಗ್ರಂಥಕ್ಕೆ ಮದ್ರಾಸದ ಸ್ಕೂಲಬುಕ್ ಮತ್ತು ಲಿಟರೇಚರ ಕಮೀಟಿಯವರು ೫೦ ರೂಪಾಯಿ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ೫೦ ರೂ. ಬಹುಮಾನವಿತ್ತಿರುವರು.

ಕರ್ನಾಟಕ ಕಾಲೇಜಿನಲ್ಲಿ ಕನ್ನಡಕ್ಕೆ ಮನ್ನಣೆ

ಕರ್ನಾಟಕ ಕಾಲೇಜಿನಲ್ಲಿ ಇಷ್ಟು ದಿನಗಳ ವರೆಗೆ ಎಂ. ಎ.ಕ್ಕೆ ಕನ್ನಡ ತೆಗೆದುಕೊಳ್ಳುವವರಿಗೆ ಶಿಕ್ಷಣಕೊಡಲು ಅಪ್ಪಣೆ ಇರಲಿಲ್ಲ. ಈ ಬಗ್ಗೆ ವಿಶ್ವವಿದ್ಯಾಲಯಕ್ಕೆ ಕಳೆದ ಮಾರ್ಚ ತಿಂಗಳಲ್ಲಿಯೇ ಬರೆದುಕೊಳ್ಳಲಾಗಿತ್ತು. ಇದೀಗ ವಿಶ್ವವಿದ್ಯಾಲಯದಿಂದ ಅಪ್ಪಣೆ ಬಂದಿದೆಯೆಂದು ತಿಳಿಯುತ್ತದೆ. ಎಂ. ಎ. ದಲ್ಲಿ ಕನ್ನಡ ಮುಖ್ಯವಿಷಯ ತೆಗೆದುಕೊಳ್ಳುವವರು ಈ ಕಾಲೇಜಿನಲ್ಲಿ ಓದಬಹುದು. ಈ ಕಾಲೇಜಿನ ಜ್ಯುನಿಯರ ಫೆಲೊಗಳಾದ ಶ್ರೀ. ಪಿ. ಕೆ. ಕಟ್ಟಿಯವರು ಬಿ. ಎ.ದಲ್ಲಿ ಕನ್ನಡದಲ್ಲಿ ವಿಶ್ವವಿದ್ಯಾಲಯಕ್ಕೆ ಮೊದಲನೇ ನಂಬರ ಬಂದಿರುವರು.

ಇಲ್ಲಿಯ ಕಾಲೇಜಿನ ಫೆಲೋ ಆಗಿದ್ದ ಶ್ರೀ. ಜಿ. ವ್ಹಿ. ಸೂಳಿಭಾವಿಯವರನ್ನು ಮುಂಬಯಿ ರಾಯಲ್ ಇನ್‌ಸ್ಟಿಟ್ಯೂಟದಲ್ಲಿ ಸಂಶೋಧಕರನ್ನಾಗಿ ಆರಿಸಿದ್ದಾರೆ.

ಉದಾರದಾನ

ಮಲ್ಲೇಶ್ವರದ ಶ್ರೀ. ಅಪ್ಪಯ್ಯನಾಯಿಡು ಅವರು ಒಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಲು ರೂ. ೧೫,೦೦೦ ಸಹಾಯ ಮಾಡುವದಾಗಿ ಮೈಸೂರು ದಿವಾನರಿಗೆ ತಿಳಿಸಿದರೆಂದು ಗೊತ್ತಾಗಿದೆ.

ಮೈಸೂರಿನ ಕೈಗಾರಿಕೆಗಳು

ಮೈಸೂರಿನಲ್ಲಿ ಈಗೀಗ ಕೈಗಾರಿಕೆಯು ಹೆಚ್ಚಾಗಿ, ಸಂಸ್ಥಾನದಲ್ಲಿ ನಿರುದ್ಯೋಗವನ್ನು ಬಹುಮಟ್ಟಿಗೆ ಕಡಿಮೆ ಮಾಡಿರುವದು.

ಓಗಲೇವಾಡಿಯ ಓಗಲೇ ಕಂಪನಿಯವರು ಗಾಜಿನ ಕೈಗಾರಿಕೆಯನ್ನು ಮೈಸೂರಿನಲ್ಲಿ ಸ್ಥಾಪಿಸುವ ಉದ್ದೇಶ ಪಟ್ಟಿರುವುದರಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಆದಕ್ಕೆ ಸರಕಾರದವರ ಸಹಾಯವನ್ನೂ ಅಪೇಕ್ಷಿಸಿದ್ದರು. ಈಗ ಈ ಸಂಸ್ಥೆಯು ಮೈಸೂರು ಗಾಜಿನ ಮತ್ತು ಎನಾಮುಲಿಂಗ ಸಂಸ್ಥೆಯೆಂದು ಕರೆಯಲ್ಪಡುವ... ಸರಕಾರದವರು ಕಟ್ಟಡಕ್ಕೆ ಬೇಕಾಗುವ ನಿವೇಶಕ್ಕೆ ... ೧೦ ಎಕರೆಗಳಷ್ಟು ಸ್ಥಳ ಉಚಿತವಾಗಿ ಕೊಡುವ... ಗುಣವೂ ಬೆಲೆಯೂ ಸರಿಯಾಗಿದ್ದರೆ ಸರಕು... ಕೊಳ್ಳುವರೆಂದೂ ಮತ್ತು ಇನ್ನು ಯಾವ ಸಂ... ಸಂಸ್ಥಾನದಲ್ಲಿ ಬರಲು ಅವಕಾಶ ಕೊಡುವದಿಲ್ಲ... ಭರವಸೆ ಕೊಟ್ಟಿರುವರು. ಅಲ್ಲದೆ ಸಂಸ್ಥೆಯವರು ಮೈ... ಸರಕಾರದಿಂದ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳನ್ನು ... ಯಲ್ಲಿ ತರಪೇತು ಮಾಡಬೇಕೆಂಬದಾಗಿಯೂ ಕೇಳ... ಈ ಸೌಕರ್ಯಗಳು ಒಂದು ವರ್ಷದೊಳಗೆ ಉಪ... ಸಲ್ಪಡದಿದ್ದರೆ, ಅವುಗಳನ್ನು ಹಿಂದಕ್ಕೆ ತೆ... ಳ್ಳುವ ಅಧಿಕಾರ ಪಡೆದಿರುವರು.

ಮೈಸೂರ ರಾಜಕುಮಾರರ ಯಶಸ್ಸು

ರಾಜಕುಮಾರ ಜಯಚಾಮರಾಜೇಂದ್ರ ಒಡೆ... ಸಲ ವಿಶ್ವವಿದ್ಯಾಲಯದಲ್ಲಿ ಬಿ. ಎ. ಪರೀಕ್ಷೆಯಲ್ಲಿ ... ಅರ್ಥಶಾಸ್ತ್ರ ರಾಜನೀತಿಗನ್ನು ಐಚ್ಛಿಕವಾಗಿ ತೆಗೆದು... ಮೊದಲನೇ ತರಗತಿಯಲ್ಲಿ ಉತ್ತೀರ್ಣರಾದುದರಿಂ... ರಿಗೆ ಪಾಚಮನ ಮತ್ತು ದುಂಗಾಜಿಯನರ ಪದ... ಶೇಷಾದ್ರಿ ಪದಕ, ಆಲಮೇಲಮ್ ರಾಮಾನುಜಯ್ಯ... ಪದಕ ಮತ್ತು ಸಕಲೇಶಪುರದ ಸಿದ್ದೇಗೌಡ... ಗಳನ್ನು ಕೊಡುವರೆಂದು ತಿಳಿಯುತ್ತದೆ.

ಮಿರಜಿ ಸಂಸ್ಥಾನಿಕರ ಔದಾರ್ಯ

ಮಿರಜಿ ಸಂಸ್ಥಾನದ ರಾಜೇಸಾಹೇಬರು ಗ... ಬಾಕಿ ಇದ್ದ ೧ ಲಕ್ಷ ರೂಪಾಯಿ ಹಸ್ತೆ ... ತೆಂದೂ, ನೂರಕ್ಕೆ ೨೦ರಂತೆ ಹಸ್ತೆ ಕಡಿಮೆ... ದೆಂದೂ, ಪ್ರಜೆಗಳಿಗೆ ಭಾಷಣ ಸ್ವಾತಂತ್ರ್ಯ ... ದೆಯೆಂದೂ, ಕನ್ನಡವೆ ವಿಶೇಷವಾಗಿದ್ದ ಲಕ್ಷ್ಮೇ... ಕಿನ ಕೋರ್ಟು ಕಚೇರಿಗಳ ಭಾಷೆ ಕನ್ನಡ... ಜಾಹೀರ ಮಾಡಿದ್ದಾರೆ.

ಕನ್ನಡಿಗರ ಅಪೂರ್ವ ಯಶಸ್ಸು

ಪ್ರೊ. ವಿನಾಯಕರಾವ ಗೋಕಾಕ ಇವರು ... ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ... ವಿಷಯವನ್ನು ತೆಗೆದುಕೊಂಡು ಮೊದಲನೇ ... ಯಲ್ಲಿ ಉತ್ತೀರ್ಣರಾದರೆಂದು ಫರ್ಗ್ಯುಸನ್ ... ಪ್ರೊ. ಲಿಮಯೇ ಇವರು ತಂತಿ ಮೂಲಕ ... ಕನ್ನಡಿಗರ ಹೆಚ್ಚಳಕ್ಕೆ ಕಾರಣರಾದ ಪ್ರೊ. ... ಕನ್ನಡಿಗರ ಧನ್ಯವಾದಗಳು.

मरुद्भिरग्न आ गहि

ವರ್ಕಿಂಗ್ ಕಮಿಟಿಯೂ ಏಕೀಕರಣವೂ

ಕ. ಏಕೀಕರಣ ಶಿಷ್ಟಮಂಡಲಕ್ಕೆ ವರ್ಕಿಂಗ್ ಕಮಿಟಿಯ ಸಭಾಸದರು ಕೊಟ್ಟ ಸಂದರ್ಶನದ ಪರಿಣಾಮವಾಗಿ ಕಮಿಟಿಯು ಕೈಕೊಂಡ ನಿರ್ಣಯದಿಂದ, ಕನ್ನಡಿಗರು ಏಕೀಕರಣ ಆಂದೋಲನವನ್ನು ತಾತ್ಪೂರ್ತಿಕವಾಗಿ ನಿಲ್ಲಿಸಬೇಕು ಎಂಬ ಆಶೀರ್ವಾದವು ಮಾತ್ರ ದೊರೆಯಿತು. ಚಳವಳಿಯನ್ನು ಅಖಂಡವಾಗಿ ನಡಿಸಿದುದರ ಫಲವಾಗಿಯೇ ಮುಂಬಯಿ-ಮದ್ರಾಸ ಸರಕಾರಗಳು ಏಕೀಕರಣಕ್ಕೆ ಮಾನ್ಯತೆ ಕೊಟ್ಟವು. ಚಳವಳಿಯನ್ನು ನಿಲ್ಲಿಸುವುದು ಸಾಧ್ಯವೇ ಇಲ್ಲ. ನಿಲ್ಲಿಸಿದರೆ ಕಾಂಗ್ರೆಸು ಮತ್ತೆ ಕಣ್ಣು ಮುಚ್ಚುವುದು ಖಂಡಿತ.

'ಚಳವಳಿ ನಿಲ್ಲಿಸಿರಿ' ಎನ್ನುವುದು ತಾತ್ಪೂರ್ತಿಕ ಉಪಾಯಯೋಜನೆಯಾಗಿದೆ. ಏಕೀಕರಣವನ್ನು ಎಷ್ಟು ಬೇಗನೆ ಕಾಂಗ್ರೆಸು ಸಾಧ್ಯಗೊಳಿಸುವುದೊ, ಅಷ್ಟು ಸಮರ್ಪಕವಾಗಿ ಹಿಂದೀ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಲು ಕರ್ನಾಟಕಕ್ಕೆ ಶಕ್ತಿ-ಯೋಗ್ಯತೆ ಬರುವವು. ಶಿಷ್ಟಮಂಡಲದಲ್ಲಿ ಕಾಂಗ್ರೆಸಿನ ಅಧಿಕಾರಿ ವರ್ಗದ ಹೊರತು ಬೇರೆ (ಕಾಂಗ್ರೆಸಿನ ಹೊರಗಿದ್ದರೂ ಏಕೀಕರಣಕ್ಕಾಗಿ ಮೊದಲಿನಿಂದಲೂ ಹೋರಾಡಿದ) ಮುಖಂಡರನ್ನೂ ಸೇರಿಸಬಹುದಾಗಿತ್ತು; ಅದರಿಂದ ಏಕೀಕರಣದ ಅಗತ್ಯವನ್ನು ಭಿಡೆಭಾರಣೆಯಿಲ್ಲದೆ ಮಂಡಿಸಲು ಅನುಕೂಲವಾಗುತ್ತಿತ್ತು.

ಅದಂತಿರಲಿ; ವರ್ಕಿಂಗ್ ಕಮಿಟಿಯವರಿಗೆ ಎಡತಾಕಿದ್ದರ ಫಲವಾಗಿ, ಒಂದು ಮಾತಾದರೂ ಸ್ಪಷ್ಟವಾಯಿತು. ಮುಂಬಯಿ-ಮದ್ರಾಸ ವಿಧಿಮಂಡಲಗಳಲ್ಲಿ ಕರ್ನಾಟಕ-ಆಂಧ್ರ ಇ. ಪ್ರಾಂತಗಳ ಏಕೀಕರಣದ ನಿರ್ಣಯಗಳು ಚರ್ಚೆಗೆ ಬಂದಾಗ ಎರಡೂ ಸರಕಾರಗಳು ಬೆಂಬಲವಿತ್ತವು. ಪ್ರಾಂತಿಕ ಸರಕಾರಗಳು ಹೀಗೆ ಬೆಂಬಲವಿತ್ತುದು ಪಾರ್ಲಿಮೆಂಟರಿ ಬೋರ್ಡಿನ ಪೂರ್ವಸಮ್ಮತಿಯಿಂದಲೇ ಎಂಬುದನ್ನು ಸ್ಪಷ್ಟಗೊಳಿಸಿ, ಪ್ರಾಂತವಿಭಜನೆಯ ಈ ತತ್ವವು ತನಗೂ ಸಮ್ಮತವಿದೆಯಾಗಿ ವರ್ಕಿಂಗ್ ಕಮಿಟಿಯು ಒಂದು ನಿರ್ಣಯದ ಮೂಲಕ ಸಾರಿ ಹೇಳಿದೆ. ಇನ್ನು ಮೇಲೆ ಏಕೀಕರಣಕ್ಕೆ ರಾಷ್ಟ್ರೀಯ ಸರಕಾರದ (ಎಂದರೆ ಕಾಂಗ್ರೆಸಿನ) ಕಾಗದಪತ್ರಗಳಲ್ಲಿ ಅಧಿಕಾರದ ಸ್ಥಾನ ದೊರೆತಂತಾಯಿತು. ಕೈಯಲ್ಲಿ ಶಕ್ತಿ ಬಂದಾಗ ಪ್ರಾಂತನಿರ್ಮಾಣದ ಕಾರ್ಯವನ್ನು ಕೂಡಲೆ ಕೈಕೊಳ್ಳುವುದಾಗಿ ಕಾಂಗ್ರೆಸು ಅಭಿವಚನವನ್ನಿತ್ತಂತಾಯಿತು.

ಲಕ್ಷ್ಮೆಯವರಿಗೆ ತಕ್ಕ ಉತ್ತರ ಕೊಡಿರಿ

ವರ್ಕಿಂಗ್ ಕಮಿಟಿಯವರು ಏಕೀಕರಣಕ್ಕೆ (ಸದ್ಯಕ್ಕೆ ಅಪ್ರಯೋಜನಕರವೇ ಆಗಲಿ) ಮಾನ್ಯತೆಯನ್ನು ಕೊಡುವಷ್ಟರಲ್ಲಿಯೇ, ಮುಂಬಯಿಯ ಅರ್ಥಸಚಿವ ನಾ. ಲಕ್ಷ್ಮೆಯವರು ಏಕೀಕರಣವು ಅವ್ಯವಹಾರ್ಯವೆಂಬ ಅಭಿಪ್ರಾಯವನ್ನು 'ಟೈಮ್ಸ ಆಫ್ ಇಂಡಿಯಾ' ಪತ್ರಿಕೆಗೆ ತಿಳಿಸಿದ ವಿಷಯವು ಪ್ರಸಿದ್ಧವಾಗಿದೆ. ಇದು 'ಅಕಾಲಿಕ, ಆಗಂತುಕ, ಅಚಾತುರ್ಯದ್ದು, ಅನಿಷ್ಟ' ಎಂದು ಮುಂತಾಗಿ ಶ್ರೀ. ದಾತಾರ, ಜೋಗ ಮುಂತಾದ ಮುಖಂಡರು ಅಭಿಪ್ರಾಯ ಪಟ್ಟಿದ್ದಾರೆ. ಈ ಎಲ್ಲಾ ವಿಶೇಷಣಗಳ ಜತೆಗೆ, ಶ್ರೀ. ಲಕ್ಷ್ಮೆಯವರ ಅಭಿಪ್ರಾಯವು 'ಕಟ್ಟಳೆಗೆ ವಿರುದ್ಧ'ವಾದುದೆಂದೂ ನಾವು ಸೂಚಿಸಲಪೇಕ್ಷಿಸುವೆವು. ಮಂತ್ರಿಮಂಡಲಗಳು ಪಾರ್ಲಿಮೆಂಟರಿ ಬೋರ್ಡಿಗೂ ವರ್ಕಿಂಗ್ ಕಮಿಟಿಗೂ ಇಂಥ ಎಲ್ಲಾ ಮಹತ್ವದ ವಿಷಯಗಳಲ್ಲಿ ಅಧೀನವೆಂಬ ಕಟುಸತ್ಯವು, ಮಧ್ಯಪ್ರಾಂತದ ಗಲಾಟೆಯಿಂದ ಸುತರಾಂ ಸಿದ್ಧವಾಗಿದೆ. ಪಾರ್ಲಿಮೆಂಟರಿ ಬೋರ್ಡಿನಿಂದ ಪೂರ್ವಸಮ್ಮತವಾಗಿ, ವರ್ಕಿಂಗ ಕಮಿಟಿಯಿಂದ ಪುರಸ್ಕೃತವಾದ ಒಂದು ತತ್ವವನ್ನು, ಆವೆರಡಕ್ಕೂ ಅಧೀನ ಸಂಸ್ಥೆಯೆನಿಸಿದ ಪ್ರಾಂತೀಯ ಮಂತ್ರಿಮಂಡಲದ ಸದಸ್ಯನೊಬ್ಬನು, 'ಅವ್ಯವಹಾರ್ಯ' 'ಅಶಿಷ್ಟ' ಎಂದು ಧಿಕ್ಕರಿಸುವುದು ಆ ಎರಡೂ ವರಿಷ್ಠಸಂಸ್ಥೆಗಳಿಗೆ ತನ್ಮೂಲಕ ಕಾಂಗ್ರೆಸಿಗೆ ಅಪಮಾನ, ಅವಿಧೇಯತೆ, ದ್ರೋಹವೇ ಅಲ್ಲವೆ? ಶ್ರೀ. ಲಕ್ಷ್ಮೆಯವರ ವಿರುದ್ಧ 'ಶಿಸ್ತುಭಂಗ'ದ ಉಪಾಯವನ್ನು ಕಾಂಗ್ರೆಸು ಏಕೆ ಪ್ರಯೋಗಿಸಬಾರದು? ಕ. ಪ್ರಾಂ. ಕಾಂ. ಕಮಿಟಿಯ ಅಧ್ಯಕ್ಷರೂ ಬೇರೆ ಕಾಂಗ್ರೆಸ್ ಮುಖಂಡರೂ ಮುಂಬಯಿ ಲೆಜಿಸ್ಲೇಟಿವ್ ಅಸೆಂಬ್ಲಿ-ಕೌನ್ಸಿಲುಗಳ ಕಾಂಗ್ರೆಸ್ ಸಭಾಸದರೂ ಇದನ್ನು ಗಮನಿಸುವರೇ?

ಮದ್ರಾಸ ಸರಕಾರವೂ ಹಿಂದೀ–ವಿರೋಧೀ ಸತ್ಯಾಗ್ರಹವೂ

Pioneer ಪತ್ರಿಕೆಯು ಇಂತು ಬರೆಯುತ್ತಿದೆ:—

"ಕಾಂಗ್ರೆಸ್ ಭಕ್ತರು ಮುಂಚೆ ದಬ್ಬಾಳಿಕೆಯ ಕಾನೂನುಗಳನ್ನು ಉಚ್ಚಸ್ವರದಲ್ಲಿ ನಿಷೇಧಿಸುತ್ತಿದ್ದುದನ್ನು ನೋಡಿದರೆ, ಹಲವು ಪ್ರಾಂತಗಳಲ್ಲಿಯ ಕಾಂಗ್ರೆಸ್ ಸರಕಾರಗಳು ಅವೇ ಕಾನೂನುಗಳನ್ನು ಅತ್ಯಾಸೆಯಿಂದ ಪ್ರಯೋಗಿಸುತ್ತಿದ್ದುದರ ದೃಶ್ಯವು ಸೋಜಿಗವನ್ನುಂಟುಮಾಡದಿರದು. ಮುಂಬಯಿ ಸರಕಾರವು ಇನ್ನೂ ಹೆಚ್ಚಿನ ಅಧಿಕಾರಗಳನ್ನು ಅಂಗೀಕರಿಸಿದೆ; ಕಾಂಗ್ರೆಸ್ ಪಕ್ಷವು ಅಸೆಂಬ್ಲಿಯಲ್ಲಿ ಬಹುಮತದಿಂದ ತಳ್ಳಿದ ಕ್ರಿಮಿನಲ್ ಲಾ ಅಮೆಂಡಮೆಂಟ್ ಆಕ್ಟನ್ನೇ ಹಿಂದೀ ವಿರೋಧಕ ಆಂದೋಲನವನ್ನು ಬಗ್ಗುಬಡಿಯಲು ಮದ್ರಾಸ ಸರಕಾರವು ಧಾರಾಳವಾಗಿ ಉಪಯೋಗಿಸುತ್ತಲಿದೆ. ಮಾಧ್ಯಮಿಕ ಶಾಲೆಗಳಲ್ಲಿ ಪ್ರಥಮ, ದ್ವಿತೀಯ, ತೃತೀಯ ತರಗತಿಗಳಲ್ಲಿ ಹಿಂದೀಯನ್ನು ಕಡ್ಡಾಯವಾಗಿ ಕಲಿಸಬೇಕೆಂದು ಸರಕಾರವು ನಿರ್ಧರಿಸಿದಂದಿನಿಂದಲೂ ಮದ್ರಾಸ ಜನಮತವು ಅದನ್ನು ತೀಕ್ಷ್ಣವಾಗಿ ವಿರೋಧಿಸಿತ್ತು. ಜನತೆಯ ಪ್ರಕ್ಷೋಭವನ್ನು ಮನಗಂಡ ಮಂತ್ರಿವರ್ಯರು ಹಿಂದಿಯ ಬದಲು ಹಿಂದುಸ್ತಾನಿಯನ್ನೂ ಲಿಪಿಯಮಟ್ಟಿಗೆ ಐಚ್ಛಿಕತೆಯನ್ನೂ ಈ ವಿಷಯದಲ್ಲಿ ತೇರ್ಗಡೆಯಾಗದಿರುವುದು ಮೇಲಣ ತರಗತಿಗೆ ಹೋಗಲು ಪ್ರತಿಬಂಧಕವಾಗುವುದಿಲ್ಲವೆಂದೂ ಜಾಹೀರುಗೊಳಿಸಿದರು. ಹೀಗಿದ್ದರೂ ಆಂದೋಲನವು ನಡೆದೇ ಇದೆ: ಇದಕ್ಕೆ ಕಾರಣಗಳೆಂದರೆ, ಹಿಂದಿಯ ಬದಲು ಹಿಂದುಸ್ತಾನಿಗೆ ಪಟ್ಟಗಟ್ಟುವುದರಿಂದ, ಪರಕೀಯ ಭಾಷೆಯೊಂದನ್ನು (ಸ್ವಭಾಷೆಗಿಂತ ಯಾವ ಬಗೆಯಿಂದಲೂ ಸಮೃದ್ಧವಲ್ಲದುದನ್ನು) ಕಡ್ಡಾಯವಾಗಿ ಕಲಿಸುವುದಕ್ಕಿರುವ ವಿರೋಧಕ್ಕೆ ಇದರಿಂದ ಯಾವ ಬಾಧೆಯೂ ಬರುವುದಿಲ್ಲ; ಅಲ್ಲದೆ, ಈಗ ಜಾರಿಯಲ್ಲಿದ್ದ ನಿಯಮಗಳ ಪ್ರಕಾರ, ಯಾವುದಾದರೂ ಒಂದು ವಿಷಯದಲ್ಲಿ ಅಯಶಸ್ವಿಯಾದರೂ ಮೇಲಿನ ತರಗತಿಗೆ ಹೋಗಲು ಬರುತ್ತಿತ್ತು,—ಆದರೆ ಹಿಂದೀಯಲ್ಲಿ ತೇರ್ಗಡೆಯಾಗದಿರುವುದು ಮೇಲಿನದರ ಹೊರತಾಗಿ ಹೆಚ್ಚಿನ ಸವಲತ್ತೋ ಎಂಬುದನ್ನು ಮಹಾಮಾತ್ಯರು ಸ್ಪಷ್ಟಗೊಳಿಸಲಿಲ್ಲ.........

"ನಿಷೇಧಪ್ರದರ್ಶನಗಳು ಮುಗಿದಮೇಲೆ ನಿರೋಧನಕ್ಕೂ (picketting) ನಿರಶನ ಸತ್ಯಾಗ್ರಹಕ್ಕೂ ಆರಂಭವಾಯಿತು. ಇದಕ್ಕೆ ದಬ್ಬಾಳಿಕೆಯ ಕಠೋರ ಉತ್ತರವನ್ನು ಕೊಡ[illegible]ಯಿತು. ಏನಿಲ್ಲೆಂದರೂ ೧೫೦ ಜನರು ಈವರೆಗೆ ಬಂ[illegible]ಲ್ಪಟ್ಟದ್ದಾರೆ; ೫೦ ಜನರಿಗೆ ಬೇರೆ ಬೇರೆ ಅವ[illegible] ಸಶ್ರಮ ಕಾರಾಗೃಹವಾಸವನ್ನು ಕೊಡಲಾಗಿದೆ; ಉಳಿ[illegible] ವಿಚಾರಣೆಯು ಇನ್ನೂ ನಡೆದಿದೆ. ಕ್ರಿ. ಲಾ. ಅ. ಆ[illegible] ಮೇರೆಗೆ ಆಂದೋಲನದ ಒಬ್ಬ ಮುಖಂಡನಿಗೆ ೧ ವ[illegible] ಸಶ್ರಮ ಶಿಕ್ಷೆಯನ್ನು ಕೊಡಲಾಗಿದೆ. ಹಿಂಸೆಯನ್ನು ಪೂ[illegible]ಯಾಗಿ ವರ್ಜಿಸಿದ ಮತ್ತು ಜೀವಿತ-ವಿತ್ತಗಳಿಗೆ [illegible] ನಿರುಪಾಧಿಕವಾದ ಆಂದೋಲನವನ್ನು ಕಾಂಗ್ರೆಸ್ [illegible]ರವು ಬಗ್ಗುಬಡಿಯಲೆತ್ನಿಸುವುದು ಕೌತುಕಾಸ್ಪದವಾ[illegible] ಮೊದಲನೆಯದಾಗಿ, ಹಿಂದುಸ್ತಾನಿಯನ್ನು ಆ[illegible] ಒಂದು ಹುಕುಮಿನನ್ವಯ ಪ್ರವೇಶಗೊಳಿಸಲಾಗಿದೆ, [illegible]ನಿನ ವಿಧಿಯುಕ್ತವಾದ ಬಜಾವಣೆಯ ಮೂಲಕವಲ್ಲ (an administrative order and not by legis[illegible] enactment). ಎರಡನೆಯದಾಗಿ, 'ಸವಿನಯ [illegible]ಭಂಗ'ವೆಂಬುದನ್ನು ಚಳವಳಿಗಾರರು ಎಲ್ಲಿಯೂ ಅ[illegible] ನಿರೋಧನ, ನಿಷೇಧ ಪ್ರದರ್ಶನ, ನಿರಶನಗಳು [illegible]ಜನಿಕ ಅಸಂತೋಷವನ್ನು ಪ್ರಕಟಿಸುವ [illegible] ಮಾರ್ಗಗಳೆಂದು ಕಾಂಗ್ರೆಸ್ಸಿನವರೇ ಒಪ್ಪಿದ್ದಾರೆ.

"ಇದೀಗ ಹೊಣೆಗಾರ ರಾಜ್ಯಪದ್ಧತಿಯಿರುವು[illegible] ಜನತೆಯು ಇಚ್ಛೆಗೆ ಸರಕಾರವು ತಲೆವಾಗುವಂತೆ [illegible] ಸರಕಾರದ ಕಡೆಗಿರುವ ಬಹುಮತವು [illegible] ಮಾಡಲು ಇದೊಂದೆ ಸರ್ವಮಾನ್ಯ ಉಪಾಯ[illegible] ಎಂದ ಮೇಲೆ ಕ್ರಿ. ಲಾ ಅ. ಆಕ್ಟನ್ನು ಪ್ರಯೋಗಿಸು[illegible] —ಸಶ್ರಮ ಶಿಕ್ಷೆಯನ್ನು ವಿಧಿಸುವುದೇಕೆ? ಝು[illegible] ಲವಂಗ ವ್ಯಾಪಾರವನ್ನು ಕಾಂಗ್ರೆಸಿನವರೆ ನಿ[illegible] ವಾಗ ಸುಮ್ಮನಿದ್ದರು; ಹಿಂದೀ ವಿರೋಧಕ ನಿ[illegible] ಅವರಲ್ಲಿಯೂ ಕಾಂಗ್ರೆಸಿನವರಿಗೆ, ಹೆಚ್ಚಿನ ಉಗ್ರಶಿ[illegible] ಕೊಡಲಾಗುತ್ತಿದೆ. ಹಳೆಯ ಆಡಳಿತದಲ್ಲಿ [illegible] ಯನ್ನು ಕೊಡುತ್ತಿದ್ದರೆ, ಈಗ ಕಠಿನ ಶಿಕ್ಷೆಯ[illegible] ಯಾಳುಗಳನ್ನು ನಡೆಸಿಕೊಳ್ಳುವುದರಲ್ಲಿಯೂ [illegible] ವನ್ನು ಮಾಡಲಾಗುತ್ತಿದೆ. ವಿರೋಧವನ್ನು [illegible] ವಾಗಿ ಬಗ್ಗುಬಡಿಯಬೇಕೆಂಬುದೇ ಸ್ಪಷ್ಟ ಉದ್ದೇ[illegible] ಆದರೆ ಮದ್ರಾಸ ಮಂತ್ರಿವರ್ಯರು ಕೈಕೊಂಡ [illegible] ಪಾಯಗಳು, ಅವರು ನಡೆಸುತ್ತಿರುವ ಆಡಳಿ[illegible] ಭೂತವಾಗಿರುವ ಪ್ರಜಾಪ್ರಭುತ್ವದ ತತ್ವ[illegible] ದಾಳ ಹಚ್ಚುತ್ತಿವೆ. ಹಿಂದೀ ವಿರೋಧಕ ಆಂ[illegible]

ಮುಖಂಡರು ತಮ್ಮ ಪ್ರಾಂತದಲ್ಲಿಯ ಶ್ರೇಷ್ಠತಮ ನ್ಯಾಯಾಸನದೆದುರಿಗೆ ಈ ವಿಷಯವನ್ನು ಒಯ್ಯುವಂತಿದೆ. "

ನಾಝಿಗಳನ್ನೂ ನಾಚಿಸುವ ನಿಜಾಮರ ನೀತಿ

ಜರ್ಮನಿಯಲ್ಲಿ ಹಿಟ್ಲರನು 'ಅನಾರ್ಯ'ರೆಂಬ ಹೆಸರಿನಲ್ಲಿ ಯಹೂದಿಗಳಿಗೆ ಚಿತ್ರಹಿಂಸೆ ಕೊಡುತ್ತಿದ್ದುದು ಎಷ್ಟೇ ಗರ್ಹಣೀಯವಾದರೂ, ಧನಸಂಪನ್ನರಾದ ಅಲ್ಪಸಂಖ್ಯಾಕ ವರ್ಗದ ಮೇಲೆ ಬಹುಸಂಖ್ಯಾಕರು ದಬ್ಬಾಳಿಕೆ ನಡೆಸಿದ ದೃಶ್ಯವಾದರೂ ಅಲ್ಲಿ ಕಂಡುಬರುತ್ತಿದೆ. ನಿಜಾಂ ರಾಜ್ಯದಲ್ಲಿಯಾದರೋ, ಬಹುಸಂಖ್ಯಾಕರಾದ ಹಿಂದುಗಳನ್ನು ನಿರ್ವೀರ್ಯರನ್ನಾಗಿ ಮಾಡಿ, ಅಲ್ಪಸಂಖ್ಯಾಕರಾದ ಮುಸ್ಲಿಮರಿಗೆ ಎಲ್ಲಾ ಬಗೆಯಿಂದ ವರ್ಚಸ್ಸು ಬರುವಂತೆ ಪ್ರಯತ್ನಗಳು ನಡೆದಿವೆ.

ಹಿಂದೂ ಮಹಾಸಭೆಯ ಶಿಷ್ಟಮಂಡಲವೊಂದು ನಿಜಾಂ ರಾಜ್ಯದಲ್ಲಿ ತಿರುಗಾಡಿ, ಅಲ್ಲಿಯ ಹಿಂದುಗಳ ಮೇಲೆ ನಡೆದ ಅಸಾಧಾರಣ ಅನ್ಯಾಯವನ್ನೂ ಹಿಂಸೆಯನ್ನೂ ಒಂದು ವರದಿಯಲ್ಲಿ ಚಿತ್ರಿಸಿದ್ದಾರೆ. 'ಕೇಸರೀ' ಪತ್ರಿಕೆಯಲ್ಲಿ ಆ ಬಗ್ಗೆ ೪ ಲೇಖಾಂಕಗಳು ಬಂದಿವೆ. ಆದರ ವಿವರಗಳನ್ನು ಹೇಳಲು ಇಲ್ಲಿ ಸ್ಥಳವೂ ಇಲ್ಲ; ಅದು ಸಾಧ್ಯವೂ ಇಲ್ಲ. ಅದನ್ನು ಸಂಕ್ಷೇಪವಾಗಿ ಬಣ್ಣಿಸುವುದಾದರೆ 'ಒಂದು ಜನಾಂಗದ ಧಾರ್ಮಿಕ-ಸಾಂಸ್ಕೃತಿಕ-ಆರ್ಥಿಕ-ರಾಜಕೀಯ ಕೊಲೆ' ಎಂದು ಹೇಳಬಹುದು.

ನಿಜಾಂ ರಾಜ್ಯದಲ್ಲಿ ಒಂದು ಮಹತ್ವದ ಭಾಗವು ಕನ್ನಡವಾಗಿದ್ದರೂ ಕರ್ನಾಟಕದಲ್ಲಿ ಈ ಬಗ್ಗೆ ಜಾಗೃತಿಯಾಗದಿರುವುದು ಶೋಚನೀಯವು. ಇದ್ದುದರಲ್ಲಿ, 'ವೀರಶೈವ ತರುಣ ಸಂಘಗಳು' ಕರ್ನಾಟಕದಲ್ಲೆಲ್ಲಾ ನಿಷೇಧಪ್ರದರ್ಶನೆಯನ್ನು ನಡಿಸಿದುದು ಅಭಿನಂದನೀಯವಾಗಿದೆ. ಅದೇ ಮೇರೆಗೆ 'ಶರಣಸಂದೇಶ' ಪತ್ರಿಕೆಯ ಮೂಲಕ ಶ್ರೀ. ಹರ್ಡೇಕರ ಮಂಜಪ್ಪನವರು ಮಾಡುತ್ತಿರುವ ಕಾರ್ಯವೂ ಪ್ರಶಂಸನೀಯವಾಗಿದೆ.

ನಮ್ಮದು 'ಕಾಂಗ್ರೆಸ್ ಪ್ರಾಂತ' ಎಂದು ಹೇಳಿಕೊಳ್ಳುವದರಲ್ಲಿ ನಮಗೆ ಆನಂದ. ಹಾಗೆಂದುದಕ್ಕೆ, ನಮ್ಮ ಪ್ರಾಮಾಣಿಕ ಭಾವನೆಯನ್ನೂ ನಾವು ವ್ಯಕ್ತಗೊಳಿಸಲೇ ಬಾರದೇ? ನಿಜಾಂ ರಾಜ್ಯದಲ್ಲಿ ನಮ್ಮ ರಕ್ತ-ಸಂಸ್ಕೃತಿ-ಬಂಧುಗಳಿಗೆ ನಡೆದುದು ನಮಗೆ ನೋವನ್ನುಂಟುಮಾಡುತ್ತಿಲ್ಲವೆ? ನೋವಾಗುತ್ತಿದ್ದರೆ ಅದನ್ನು ವ್ಯಕ್ತಪಡಿಸಬೇಡವೆ? ಬಹುಸಂಖ್ಯಾಕರನ್ನು ಅಲ್ಪಸಂಖ್ಯಾಕರನ್ನಾಗಿ ಮಾಡಲೆಳಸುವ ಸಾಹಸವನ್ನು ಪ್ರತಿಭಟಿಸಬೇಡವೆ?

ಗುಂಜೋಟಿಯಲ್ಲಿ ಪುಂಡ ಮುಸಲ್ಮಾನರ ಕತ್ತಿಗೆ ಆಹುತಿಯಾದ 'ವೇದಪ್ರಕಾಶ'ನೆಂಬ ಆರ್ಯಸಮಾಜದ ಹುತಾತ್ಮನು ಯಾರು? ದಾಸಿಮಯ್ಯ ಎಂಬ ವೀರಶೈವ ತರುಣ! ಕಲ್ಯಾಣದಲ್ಲಿ ತುಂಟರ ಭಾಲೆಗೆ ಬಲಿಯಾದ ನಾಗನಾಥನು ಯಾರು? ನಾಗಪ್ಪನೆಂಬ ವೀರಶೈವ ಯುವಕ! ಈ ವೀರಶೈವ ಹುತಾತ್ಮರ, ಈ ಕನ್ನಡ ಬಂಟರ 'ನೆತ್ತರುಗೊಡುಗೆ'ಯನ್ನು ಕರ್ನಾಟಕವು ಆದರಿಸಬೇಡವೆ? ಸತ್ಕರಿಸಬೇಡವೆ? ಮೊಗಲಾಯಿಯಲ್ಲಿ ಕನ್ನಡಿಗರ ಮೇಲೆ—ಹಿಂದೂಗಳ ಮೇಲೆ ನಡೆದ ಅತ್ಯಾಚಾರಗಳು ಕನ್ನಡಿಗರ ಕಣ್ತೆರೆಯುವುದಿಲ್ಲವೆ?

ಇದು ಸಭಾಸ್ವಾತಂತ್ರ್ಯದ ವಿಸ್ತಾರವೇ?

ನಿಜಾಂ ಹೈದರಾಬಾದ ಸಂಸ್ಥಾನದಲ್ಲಿ, ಸಭಾಸ್ವಾತಂತ್ರ್ಯವನ್ನು ಕೆಲಮಟ್ಟಿಗಾದರೂ ವಿಸ್ತರಿಸುವ ಹೊಸ ನಿಯಮವೊಂದು ಜಾರಿಯಲ್ಲಿ ಬಂದಿದೆಯೆಂದು ವೃತ್ತಪತ್ರಗಳು ಕೆಲ ದಿನಗಳ ಹಿಂದೆ ಪ್ರಕಟಿಸಿದವು. ಮುಂಚಿನ ಗಷ್ತಿ ೫೩ನ್ನು ರದ್ದುಗೊಳಿಸುವ ಹೊಸ ನಿಯಮಗಳ ಪೂರ್ತಿಯಾದ ಪ್ರತಿಯೊಂದು ನಮಗೆ ಬಂದಿದೆ. ಆದರ ಮುಖ್ಯಾಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ. ಮುಂಚಿನ ಸಭಾನಿರ್ಬಂಧಗಳು ಯಾವ ರೀತಿಯಲ್ಲಿ ಕಡಿಮೆಯಾಗಿವೆಯೆಂಬುದನ್ನು ವಾಚಕರೆ ನಿರ್ಣಯಿಸಲಿ:—

ಸಾರ್ವಜನಿಕ ಸಭೆಯನ್ನು ಕರೆಯಲಪೇಕ್ಷಿಸುವವರು, ಹೈದರಾಬಾದ ನಗರದ ಮಟ್ಟಿಗೆ ಪೋಲಿಸ ಕಮಿಶನರರಿಗೆ, ಜಿಲ್ಲೆಗಳ ಮಟ್ಟಿಗೆ ತಾಲೂಕದಾರರಿಗೆ, ಗೊತ್ತುಪಡಿಸಿದ ನಮೂನೆಯ ಮೇರೆಗೆ ಮುಂಚಿತ ತಿಳಿಸಬೇಕು.

ಸಾರ್ವಜನಿಕ ಸಭೆಗಳು ೨ ತೆರನಾಗಿವೆ: (ಅ) ಶುದ್ಧ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯವಿಷಯಕ, ಧರ್ಮಾರ್ಥ ಸ್ವರೂಪದುವು; (ಆ) ಇತರ ಜಾತಿಯವು.

ಸಾರ್ವಜನಿಕ ಸಭೆಯ ವ್ಯಾಖ್ಯೆ: ಯಾವುವರಲ್ಲಿ ಸಾರ್ವಜನಿಕರು ಅಥವಾ ಸಾರ್ವಜನಿಕರಲ್ಲಿಯ ಕೆಲವರು(section) ಅಥವಾ ಒಂದು ಭಾಗವು (part) ಭಾಗವಹಿಸಬಹುದೋ ಅದು, ಖಾಸಗೀ ಸ್ಥಳದಲ್ಲಿ ಕೂಡಿದ್ದರೂ ಟಿಕೆಟುಗಳ ಮೂಲಕ ಅಥವಾ ಟಿಕೆಟುಗಳಿಲ್ಲದೆ ಏರ್ಪಟ್ಟರೂ ಸಾರ್ವಜನಿಕ ಸಭೆಯೆಂದೇ ಗಣಿಸಲ್ಪಡಬಹುದಾಗಿದೆ.

ಮುಂಗಡ ಸೂಚನೆ: (ಅ) ಜಾತಿಯ ಸಭೆಗಳಿಗೆ ಹೈದರಾಬಾದ ನಗರದಲ್ಲಿ ೩ ದಿನ, ಜಿಲ್ಲೆಗಳಲ್ಲಿ ೫ ದಿನ ಮುಂಚಿತ ಸೂಚನೆ ಬೇಕು. ಮೇಲಧಿಕಾರಿಯ ಇಷ್ಟದಂತೆ ಈ ಅವಧಿ ಕಡಿಮೆಯಾಗಬಹುದು. (ಆ) ಜಾತಿಯ ಸಭೆಗಳಿಗೆ ಅನುಕ್ರಮವಾಗಿ ೭, ೧೫ ದಿನಗಳ ಮುಂಗಡ ಸೂಚನೆ ಬೇಕು.

(ಇ) ಜಾತಿಯ ಸಭೆಗಳಿಗಾಗಿ ಅಧಿಕಾರಿಗಳ ಪರವಾನಿಗೆಯ ಸಲುವಾಗಿ ಕಾದಿರಬೇಕಾಗಿಲ್ಲ; ಆದರೆ ಸೂಚನೆ ಪಡೆದ ಮೇಲಧಿಕಾರಿಯಿಂದ ಹಾಗೆ ತಿಳಿಸಲ್ಪಟ್ಟಲ್ಲಿ, ಮುಂಗಡ ಪರವಾನಿಗೆಯನ್ನು ಪಡೆಯಲೇ ಬೇಕಾಗುವುದು. ಸಭೆ ಕರೆದವರು ಮತ್ತು ಅಧ್ಯಕ್ಷರು, ಸಭೆಯು (ಅ) ಜಾತಿಯದೇ ಇರುವಂತೆ ಮತ್ತು ನಿರ್ದಿಷ್ಟ ಉದ್ದೇಶಗಳಂತೆಯೇ ಸಾಗುವಂತೆ ನೋಡಿಕೊಳ್ಳಲು ಜವಾಬ್ದಾರರು.

(ಆ) ಜಾತಿಯ ಸಭೆಗಳಿಗೆ ಸರಕಾರದ ಮುಂಗಡ ಪರನಿಗೆಯು ಅನಿವಾರ್ಯವು. ಮೇಲಧಿಕಾರಿಗಳಿಗೆ ಸೂಚನೆ ಮುಟ್ಟಿದ ಕೂಡಲೆ ಸರಕಾರಕ್ಕೆ ತಿಳಿಸಿ, ಅನುಮತಿ ಪಡೆದ ಕೂಡಲೆ ಸಭಾಸಂಚಾಲಕರಿಗೆ ತಿಳಿಸುವರು. ಸರಕಾರವು ಬೇಕಾದ ನಿರ್ಬಂಧಗಳನ್ನು ಈ ಜಾತಿಯ ಸಭೆಯ ಮೇಲೆ ಹೇರಬಹುದು.

ಸಭೆಯ ಜಾತಿಯ ಪ್ರಕಾರ ಮಾಡಬೇಕಾದ ಏರ್ಪಾಟಗಳಿಗೆ ತಪ್ಪಿದಲ್ಲಿ, ಮುಂಚಿತ ಸೂಚನೆ ಕೊಡುವ ವಿಷಯದಲ್ಲಿ ತಪ್ಪಾದಲ್ಲಿ, ಸಭೆ ಕರೆಯುವವರು ಮತ್ತು ಸಭಾಧ್ಯಕ್ಷರು ತಮ್ಮ ಹೊಣೆಗಾರಿಕೆಯಲ್ಲಿ ತಪ್ಪಿದಲ್ಲಿ, ಆಸಾಫಿಯಾ ಪೀನಲ್ ಕೋಡಿನ ೧೬೪ನೆಯ ಕಲಮಿನ ೧ನೆಯ ಭಾಗದನ್ವಯ ಶಿಕ್ಷೆಹೊಂದುವರು.

(ಈ ಕಲಮಿನ ಮೇರೆಗೆ ಮೇಲಣ ಅಪ್ಪಣೆಯನ್ನು ಮೀರುವವರಿಗೆ ೧ ತಿಂಗಳ ಸಾದಾ ಶಿಕ್ಷೆ, ಇಲ್ಲವೆ ೨೦೦ ರೂ.ಯ ದಂಡ, ಇಲ್ಲವೆ ಎರಡೂ ಕೂಡಿಯೆ ಕೊಡಲ್ಪಡುವವು.)

ಧಾರ್ಮಿಕ ಸ್ವರೂಪದ ಸಭೆಗಳಿಗೆ ಮೇಲಣ ನಿಯಮಗಳು ಅನ್ವಯಿಸುವುದಿಲ್ಲ. ಅವಕ್ಕಾಗಿ ಬೇರೆ ನಿಯಮಗಳು (ಅಥವಾ ನಿರ್ಬಂಧಗಳು) ಇವೆ.

ಪ್ರಜಾಮಂಡಲದ ಉತ್ತರ

ಈ ಮಂಡಲದ ವರದಿಯನ್ನು ಹಿಂದಕ್ಕೊಮ್ಮೆ ಸಮೀಕ್ಷಿಸಿ, ಅದು ಮಂದಸ್ವರೂಪದುದೆಂದು ಟೀಕಿಸಿದ್ದೆವು. ಅದೀಗ ಮೇಲಣ ನಿರ್ಬಂಧಗಳನ್ನು ಕುರಿತು ತನ್ನ ನಿಷೇಧ ಪ್ರದರ್ಶನವನ್ನು ಮಾಡಿದೆ. ಅದರ ಮುಖ್ಯಾಂಶಗಳ... ಇದರಡಿಯಲ್ಲಿ ಕೊಡುತ್ತಿದ್ದೇವೆ. ಪ್ರಜಾಮಂಡಲ... ಇಷ್ಟು ಅಸಂತುಷ್ಟವಾದ ಮೇಲೆ ಉಳಿದ ರಾಷ್ಟ್ರೀಯ ... ಗಳವರು ಯಾವ ಅಭಿಪ್ರಾಯದವರಾಗಿದ್ದಾರೆಂಬು... ಊಹಿಸಬಹುದಾಗಿದೆ:—

ಹೊಸ ನಿಯಮಗಳನ್ನು ಕೂಲಂಕಷವಾಗಿ ಓದಿನೋ... ಮೇಲೆ, ಸರಕಾರದವರ ಉಪಕ್ರಮವು ತೀರಾ ಪ್ರತಿ... ಯಾಗಿದೆಯೆಂದು ಹೇಳಬೇಕಾಗುವುದು. ... ಗಸ್ತಿಯ ವಿರುದ್ಧ ನಡೆದ ಆಂದೋಲನವನ್ನು ಕಂಡ... ಅದನ್ನು ರದ್ದುಗೊಳಿಸಬಹುದು, ಇಲ್ಲವೆ ತುಂಬಾ ... ಲಾಯಿಸಬಹುದು ಎಂದು ಕೋರಲಾಗಿತ್ತು. ಅನ್ನ... ದ್ದಕ್ಕೆ ಪಾಷಾಣ ಕೊಟ್ಟಂತಾಯಿತು. ಸಾರ್ವಜನಿಕ ... ಗಳ ಮೇಲಿನ ಮುಂಚಿನ ನಿರ್ಬಂಧಗಳನ್ನು ಪೂರ್ತಿ... — ಅದಿಲ್ಲದಿದ್ದಲ್ಲಿ ತಕ್ಕಮಟ್ಟಿಗಾದರೂ — ತೆಗೆ... ಬಹುದೆಂಬ ಅಪೇಕ್ಷೆಯು ವ್ಯರ್ಥವಾಗಿ, ಹೊಸ ನಿ... ಗಳನ್ನು ಜಾರಿಯಲ್ಲಿ ತಂದು, ಬ್ರಿಟಿಷ್ ಇಂಡಿಯದ... ರಾಜದ್ರೋಹ ಪ್ರತಿಬಂಧಕ ಕಾನೂನು ನಂ. ೫೦ ... ಕಠೋರ ನಿಬಂಧನೆಗಳನ್ನು (ಅವುಗಳ ಸೌಮ್ಯ ... ನೆಲ್ಲಾ ಹೊರತುಪಡಿಸಿ) ಹೊಸದಾಗಿ ಹೇರಲಾ... ಮುಂಚಿನ ಗಸ್ತಿಯ ಪ್ರಕಾರ ಎಲ್ಲಾ ಸಭೆಗಳ ... ತಿಳುವಳಿಕೆಯನ್ನು ಕೊಡಬೇಕಾಗುತ್ತಿತ್ತು. ಮತ್ತು ... ಕೀಯ ಸ್ವರೂಪದ ಅಥವಾ ರಾಜಕೀಯವಾಗಿ ... ಬಹುದಾದ ಸಭೆಗಳಿಗೆ ಮಾತ್ರ ಮುಂಗಡ ... ಯನ್ನು ಪಡೆಯಬೇಕಾಗುತ್ತಿತ್ತು. ಹೊಸ ... ಗಳ ಮೇರೆಗೆ, 'ಶುದ್ಧ ಸಾಮಾಜಿಕ, ಸಾಹಿತ್ಯ... ಶೈಕ್ಷಣಿಕ ಮತ್ತು ಧರ್ಮಾರ್ಥ' ಎಂದು ಸಭೆಗಳ ... ವನ್ನು ನಿರ್ದಿಷ್ಟಪಡಿಸಿರುವುದರಿಂದ, ಇವುಗಳ... ತಾದ ಸಭೆಗಳಿಗೆಲ್ಲ (ಅವು ರಾಜಕೀಯ ಸ್ವರೂಪ... ಇಲ್ಲದಿರಲಿ) ಪೂರ್ವಾನುಮತಿಯನ್ನು ಅನಿವಾರ್ಯ... ಲಾಗಿದೆ. ಇದರಿಂದ ಪೂರ್ವದ ನಿರ್ಬಂಧವನ್ನು ... ದಂತೆಯೆ ಆಗಿದೆ. 'ಸಾರ್ವಜನಿಕ ಸಭೆ'ಯ ವ್ಯಾ... ಹಿಡಿತದಿಂದ ಯಾವ ಜಾತಿಯ ಸಭೆಯೂ ಪಾರಾಗ... ಮೊನ್ನೆ ಮೊನ್ನೆ ಬಾರ್ ಅಸೋಸಿಯೇಶನ್ನಿನವ... ಶ್ರೀ. ಭುಲಾಭಾಯಿ ದೇಸಾಯಿಯವರು ಮಾಡ... ರುವ ಭಾಷಣಕ್ಕೆ ನಗರಪೋಲೀಸಾಧಿಕಾರಿಗಳು ... ಯೊಡ್ಡಿ, ಈ ನಿರ್ಬಂಧಗಳ ಪೂರ್ವಪ್ರಸಾದವನ್ನು ... ರುವರು. ಇವನ್ನು ಜಾರಿಮಾಡಿ ಸರಕಾರವು ...

ದಬ್ಬಾಳಿಕೆಯ ಯುಗವನ್ನೆ ಪ್ರವರ್ತಿಸಿತೆಂದು ಹೇಳಬೇಕಾಗುತ್ತದೆ. ಅಂತಹ ಉಗ್ರೋಪಾಯಗಳು ದೇಶದಲ್ಲೆಲ್ಲಾ ರಾಜದ್ರೋಹದ ಉಕ್ಕು ಬಂದಾಗ ಇಲ್ಲವೆ ಸರಕಾರದ ಶಾಂತಿಸಮಾಧಾನಗಳಿಗೆ ಸಂಕಟಬಂದಾಗ ಮಾತ್ರ ಸಮರ್ಥನೀಯವಾಗುವವು. ಅಂತಹ ಪರಿಸ್ಥಿತಿಯ ದಿಗ್ದರ್ಶನೆಯೂ ಈಗ ತೋರುವುದಿಲ್ಲ. ಸರಕಾರಕ್ಕೆ ಈ ನಿಯಮಗಳಿಂದ ಉಪಕಾರವಾಗದೆ, ಸ್ವಾಭಿಮಾನಿ ನಾಗರಿಕರ ಸಹಾನುಭೂತಿಯು ಆರಿ ಹಾರಿ ಹೋಗಲಿಕ್ಕೆ ಮತ್ತು ಪ್ರಜೆಗಳ ಅಸಂತೋಷವು ಹೆಚ್ಚುವುದಕ್ಕೆ ಮಾತ್ರ ಕಾರಣವಾಗಿದೆ. ಒಂದು ಬಗೆಯ ಆರ್ಡಿನನ್ಸುಗಳೆ ಆಗಿವೆಯೆಂದರೂ ಸಲ್ಲುವುದು. ಅವುಗಳನ್ನು ಪಾಲಿಸಬೇಕಾದ ರೀತಿಯೂ ಅಪಮಾನಕರವಾಗಿದೆ. ಈ ನಿರ್ಬಂಧಗಳನ್ನು ಕೂಡಲೆ ರದ್ದುಗೊಳಿಸದಿದ್ದರೆ ಸಂಸ್ಥಾನದಲ್ಲೆಲ್ಲಾ ವಡವಾನಲದಂತೆ ಆಂದೋಲನವು ಹುಟ್ಟುವುದು ಖಂಡಿತ.

ಯಾರು ?– ಎಲ್ಲಿ ?– ಏನೆಂದರು ?

....ನಾನಿಲ್ಲ, ನೀನಿಲ್ಲ....ಈಗ ಎಲ್ಲರೂ ಹೇಳುತ್ತಿದ್ದಾರೆ...ಆದರೂ ಸಂಧಾನದ ಸೊಲ್ಲು ಎಲ್ಲಿಯೋ ಕೇಳಿಸುತ್ತಲಿದೆ.

ಕೇಸರಿ' ಪತ್ರಿಕೆಯ ವಿಶೇಷ ಸುದ್ದಿಗಾರನು ಲಂಡನ್ನಿಂದ ಇಂತು ತಿಳಿಸುತ್ತಾನೆ....ಅಂತರರಾಷ್ಟ್ರೀಯ ಪರಿಸ್ಥಿತಿಯು ದಿನೇ ದಿನೇ ಕೆಡುತ್ತಲಿರುವುದು ಬ್ರಿಟಿಷ್ ರಾಜನೀತಿಜ್ಞರಲ್ಲಿ ಕಳವಳವನ್ನುಂಟುಮಾಡಿದೆಯಂತೆ. ಸ್ಪೇನ ಪ್ರಶ್ನೆಯಲ್ಲಿ ಜರ್ಮನಿಯು ಇಷ್ಟು ಆಸಕ್ತಿಯನ್ನು ವಹಿಸಿದ್ದುದು, ಭೂಮಧ್ಯ ಸಮುದ್ರದಲ್ಲಿಯ ಬ್ರಿಟಿಷರ ಮತ್ತು ಫ್ರೆಂಚರ ರಾಜತಂತ್ರದ ಒಳಹಿಡಿತಗಳನ್ನು ಹತ್ತಿರದಿಂದ ಗುಟ್ಟಾಗಿ ತಿಳಿದುಕೊಳ್ಳಲೆಂದೇ ಇದೆಯಂತೆ. ಜರ್ಮನ್ ಅಧಿಕಾರಿಯೊಬ್ಬನು ಬರ್ಲಿನ್ ನಗರಿಯಲ್ಲಿ ಇದನ್ನು ಬಹಿರಂಗ ಸಭೆಯೊಂದರಲ್ಲಿ ಹೇಳಿದನಂತೆ. ಅದೇ ರೀತಿ ಫ್ರೆಂಚ್ ಅಧಿಕಾರಿಯೊಬ್ಬನು, ಜರ್ಮನಿ—ಇಟಲಿಗಳು ಆಫ್ರಿಕೆಯಲ್ಲಿ ನಡೆಸಿದ ಏರಾಟಕೆಯ ಗುರಿಯು ಟುನಿಶಿಯದಿಂದ ಸೈಗೇರಿಯದ ವರೆಗೆ ಹಬ್ಬಿದೆಯೆಂದು ಪ್ರಕಟಗೊಳಿಸಿದ್ದಾನೆ. ಆಂಗ್ಲೋ-ಇಟಾಲಿಯನ್ ಸಂಧಾನದಿಂದ ಮುಸೊಲಿನಿಯು ತೃಪ್ತನಾಗುವ ಸಂಭವವಿಲ್ಲ; ಹಿಟ್ಲರನ ಸಹಾಯದಿಂದ ತನ್ನ ಬೇಡಿಕೆಗಳನ್ನು ಇನ್ನೂ ಹೆಚ್ಚಿಸಬಹುದೆಂತಲೇ ಆ ಅಧಿಕಾರಿಯು ಭಯಪಟ್ಟಿರುವನು. ಇದರ ಅರ್ಥ, ಬ್ರಿಟಿಷ ಮಹಾಮಾತ್ಯ ಚೇಂಬರ್ಲೇನರ ವಿದೇಶನೀತಿಯು ವಿಫಲವಾಗುತ್ತದೆಂದು.

ಈ ಎಲ್ಲ ಕಾರಣಗಳ ಮೂಲಕ ಬ್ರಿಟಿಷರು ನಿಜವಾಗಿಯೂ ಸಂಧಾನೋತ್ಸುಕರಾಗಿದ್ದಾರಂತೆ. "ನಾವು ಹಿಂದೀ ರಾಜ್ಯಘಟನೆಯಲ್ಲಿ ಅಕ್ಷರ ಮಾತ್ರವೂ ಬದಲು ಮಾಡುವುದಿಲ್ಲ" ಎಂದು ಭಾರತ ಮಂತ್ರಿಗಳಾದ ಝೆಟ್ಲಂಡರು ಗುಡುಗು ಹಾಕುತ್ತಿದ್ದರೂ, ಒಳಗೊಳಗೆ ಮೆತ್ತಗಾಗಿದ್ದಾರಂತೆ. ಹಿಂದೀ ರಾಜಕೀಯ ಪ್ರಪಂಚದಲ್ಲಿ ಆಸ್ಥೆಯಿಟ್ಟುಕೊಂಡ ಒಬ್ಬ 'ಲಾರ್ಡ'ರ ಆಮಂತ್ರಣದಿಂದಲೇ ಶ್ರೀ. ಭುಲಾಭಾಯಿ ದೇಸಾಯಿಯವರು ಇಂಗ್ಲಂಡಿಗೆ ಹೋಗಿ ಬಂದರಂತೆ. ಈ ದೊರೆಗಳವರೇ ಪಂಡಿತ ಜವಾಹರಲಾಲರ ಮತ್ತು ಭಾರತ ಮಂತ್ರಿಗಳ ಬೆಟ್ಟಿಯ ಸಂದರ್ಭವನ್ನು ಏರ್ಪಡಿಸಿದರಂತೆ. ಅಂತೂ, ಅದೊಂದು ತೆರ, ಇದೊಂದು ತರ—ಭುಲಾಭಾಯಿಯವರೂ ಜವಾಹರರೂ ಮುಂಬರುವ ಸಂಯುಕ್ತ ರಾಜ್ಯಾಂಗಘಟನೆಯನ್ನೆ ತಂತಮ್ಮ ದೃಷ್ಟಿಕೋನಗಳಿಂದ ಚರ್ಚಿಸಿದರೆಂಬುದರಲ್ಲಿ ಸಂದೇಹವಿಲ್ಲ. ಈ ಎಲ್ಲ ಮಾತುಕತೆಗಳ ಫಲವಾಗಿ ಭಾರತದಲ್ಲಿ ಇನ್ನೊಂದು ವರ್ತುಲ ಪರಿಷತ್ತು ಜರುಗಲಿದೆಯೆಂದು 'ಸುದ್ದೀಸೂರಪ್ಪ'ನು ಹೇಳುತ್ತಾನೆ.

ಭುಲಾಭಾಯಿಯವರು ಏನು ಹೇಳಿದರು ?

ಭುಲಾಭಾಯಿಯವರು ಬ್ರಿಟಿಷ ರಾಜನೀತಿ ಮುಖಂಡರಿಗೆ ಏನೆಂದು ಹೇಳಿದರು ? ಇದೊಂದು ದೊಡ್ಡ ಗುಮ್ಮಾನೇ ಆಗಿದೆ.

ಆ ಮುಖಂಡರಲ್ಲಿ ಒಬ್ಬರು ಸರ್ ಫ್ರೆಡ್ರಿಕ್ ವೈಟ್ ಎಂಬವರು; ಒಂದು ಕಾಲಕ್ಕೆ ಭಾರತೀಯ ಕೇಂದ್ರ ಅಸೆಂಬ್ಲಿಯ ಅಧ್ಯಕ್ಷರಾಗಿದ್ದವರು. ಪಂಡಿತ ಜವಾಹರಲಾಲರು ಸಂಯುಕ್ತ ಘಟನೆಯ ಬಗ್ಗೆ ಹೇಳಿದ ಮಾತುಗಳಲ್ಲಿಯೂ ಭುಲಾಭಾಯಿಯವರು ಹೇಳಿದ ಮಾತುಗಳಲ್ಲಿಯೂ ಅವರಿಗೆ ವ್ಯತ್ಯಾಸವೆನಿಸಿದ್ದರಿಂದ, ಜವಾಹರಲಾಲರಿಗೆ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಯಿತು. "ಒಂದು ಖಾಸಗೀ ಕೂಟದಲ್ಲಿ ಭುಲಾಭಾಯಿಯವರು ತಮಗೂ ಹಿಂದುಸ್ತಾನದಿಂದ ಬಂದ ಬೇರೆ ನಿವೃತ್ತ ಅಧಿಕಾರಿಗಳಿಗೂ ಹೇಳಿದ ಮಾತುಗಳಿಂದ, ಸಂಯುಕ್ತ ಘಟನೆಯನ್ನು ಪ್ರತಿಕರಿಸಲೇಬೇಕೆಂದು ಕಾಂಗ್ರೆಸ್ ನಿರ್ಣಯವಿದ್ದರೂ ಪ್ರಾಂತಿಕ ಸ್ವಾಯತ್ತತೆಯ ವಿಷಯದಲ್ಲಿ ವ್ಯವಹರಿಸಿದಂತೆಯೇ ಈ ಸಂದರ್ಭದಲ್ಲಿಯೂ ಕಾಂಗ್ರೆಸು ವ್ಯವಹರಿಸಲು ಸಿದ್ಧವಿದೆಯೆಂತಲೂ ಸಂಯುಕ್ತ ಘಟನೆಯನ್ನು ನಡೆಸಿಕೊಂಡು ಹೋಗುವುದು ಖಂಡಿತವೆಂತಲೂ ತಮ್ಮ

ಮನಸ್ಸಿನ ಭಾವನೆಯಾಯಿತೆಂದು" ಸರ್ ಫ್ರೆಡ್ರಿಕ್ ಅವರು ಹೇಳಿದರು.

ಸರ್ ಫ್ರೆಡ್ರಿಕರದು ತಪ್ಪು ಕಲ್ಪನೆಯಾಗಿರಬಹುದು. ಆದರೆ ಇವರಂತಹ ತೀಕ್ಷ್ಣಬುದ್ಧಿಯ ನಿರೀಕ್ಷಕರ ಮನಸ್ಸಿನ ಮೇಲೆ ಇಂತಹ ಪರಿಣಾಮವುಂಟಾಗುವಂತೆ ಭುಲಾಭಾಯಿಯವರು ಮಾತನಾಡಿದ್ದುದೂ ಆಶ್ಚರ್ಯವೇ. ಕೂಡಲೆ ರಾಷ್ಟ್ರಾಧ್ಯಕ್ಷರಾದ ಸುಭಾಸರು ಇಂತಹ ಪ್ರಯತ್ನಗಳನ್ನು ತೀವ್ರಶಬ್ದಗಳಲ್ಲಿ ಖಂಡಿಸಿದರು; ಹರಿಪುರದ ಅಸಂದಿಗ್ಧ ನಿರ್ಣಯದತ್ತ ಬೊಟ್ಟುತೋರಿಸಿದರು.

ಇತ್ತ ಸತ್ಯಮೂರ್ತಿಯವರು ಭುಲಾಭಾಯಿಯವರ ಪರವಾಗಿ ವಾದಿಸುತ್ತ, ಬ್ರಿಟಿಷ್ ಸರಕಾರವು ಫೆಡರಲ್ ಯೋಜನೆಯ ಸ್ವರೂಪವು, ಮುಂಚಿನ ಗುರುತೂ ಹತ್ತದಂತೆ ಪೂರಾ ಬದಲಿಸಿದರೆ ತಪ್ಪೇನಾಗುವುದು ?—ಎಂದು ಕೇಳಿದರು. ಈಚೆಗೆ ಭುಲಾಭಾಯಿಯವರು, ಸರ್ ಫ್ರೆಡ್ರಿಕರ ಅಭಿಪ್ರಾಯವಾದಂತೆ ತಾವು ಮಾತನಾಡಲಿಲ್ಲವೆಂದು ಪ್ರಕಟಿಸಿರುವರು; ರಾಷ್ಟ್ರಪತಿಗಳು ಅದನ್ನು ಸ್ವೀಕರಿಸಿರುವರು. ಪ್ರಸಿದ್ಧ ಹರಿಜನ ಮುಖಂಡರಾದ ಡಾ. ಅಂಬೇಡಕರರು ಈಚೆಗೆ ಸುಭಾಸರಿಗೆ ತಮ್ಮ ಪಕ್ಷದ ಬೆಂಬಲವಿತ್ತಿರುವರು.

ಅಂತೂ, ಎಲ್ಲಿಯೋ, ಯಾರೋ, ಸಂಧಾನದ ಮಾತುಗಳನ್ನಾಡುತ್ತಿರುವರೆಂಬುದು ನಿಜ; ಇತ್ತ ಕಾಂಗ್ರೆಸಿನವರಲ್ಲಿಯೇ ಫೆಡರೇಶನ್ ಸ್ವೀಕಾರವೋ ? ಧಿಕ್ಕಾರವೋ ?—ಎಂಬುದಾಗಿ ಎರಡು ಪಕ್ಷಗಳು ಎಲ್ಲಿ ಉಂಟಾಗುವವೋ ಎಂಬ ಶಂಕೆಗೂ ಕೊಂಚ ಆಸ್ಪದ ಸಿಕ್ಕಂತಾಗಿದೆ.

ಸ್ವೀಕಾರವೋ, ಧಿಕ್ಕಾರವೋ ?

ಧಿಕ್ಕಾರವೇ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಕಾಂಗ್ರೆಸ್ಸೊಂದೇ ಏಕಾಂಗವೀರನಾಗಿ ಫೆಡರೇಶನನ್ನು ಧಿಕ್ಕರಿಸುವುದರಲ್ಲಿ ಸೊಗಸಿಲ್ಲ; ಅದು ಪರಿಣಾಮಕಾರಿಯೂ ಆಗದು. ಪ್ರಭುತ್ವವಿರೋಧಕ ಶಕ್ತಿಗಳನ್ನೆಲ್ಲ ಒಟ್ಟುಗೂಡಿಸಬೇಕೆಂದು ಶ್ರೀ. ಸುಭಾಸರು ಹರಿಪುರದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಾರಿದ್ದಾರೆ. ಅದು ನಿಜವಾಗಬೇಕಾದಲ್ಲಿ, ಫೆಡರೇಶನ್ನು ಅನಿಷ್ಟವೆಂದೆನ್ನುವ ಎಲ್ಲ ರಾಷ್ಟ್ರೀಯ ಪಕ್ಷಗಳೂ ಒಗ್ಗೂಡುವಂತೆ ಕಾಂಗ್ರೆಸು ಚಾತುರ್ಯದಿಂದ ವರ್ತಿಸಬೇಕಾದುದು ಅಗತ್ಯ. ಫೆಡರೇಶನ್ ಅನಿಷ್ಟವಾಗಿದ್ದರೂ, ತ್ಯಾಜ್ಯವಾಗಿದೆಯೆಂದು ಹಿಂದೂ ಮಹಾಸಭೆಯೂ ಮಹಾರಾಷ್ಟ್ರದ ಲೋಕಶಾಹೀ ಪಕ್ಷವೂ ಅನ್ನುತ್ತಿಲ್ಲ. ಅವರನ್ನೂ ಎಳೆದುಕೊಳ್ಳುವುದಾದಲ್ಲಿ, ಕೆಲ ಅಂಶಗಳಲ್ಲಿ 'ಆಚಾರ-ವಿಚಾರ-ವಿನಿಮಯ' ನಡೆಯಬೇಕಾಗುವುದು. ಕಾಂಗ್ರೆಸಿನಲ್ಲಿಯೇ ಮಂದ-ಉಗ್ರವೆಂದು, —ಅಥವಾ ವಾದಿ-ಧಿಕ್ಕಾರವಾದಿಗಳೆಂದು ಎರಡು ಪಕ್ಷಗಳಿವೆ. ಹೊರತಾಗಿ ಕಿಸಾನ-ಕೂಲಿಕಾರರ ಅಮೂರ್ತ, ಸಂಘಟನೆಯೊಂದಿದೆ. ಆ ಸುಪ್ತ ಶಕ್ತಿಯನ್ನು ರಿಸಿ ಫೆಡರೇಶನ್-ವಿರೋಧಕ್ಕೆ ಸಜ್ಜುಗೊಳಿಸಬೇಕಾದ್ದು ಅಗತ್ಯ. ಮೊನ್ನೆಮೊನ್ನೆ ಜವಾಹರಲಾಲರನ್ನು ಸಮಾಜಸತ್ತಾವಾದಿಗಳ ಗುಂಪಿನವರು 'ಸಂಯುಕ್ತ ಯನ್ನು ಎದುರಿಸಲು ಸಾರ್ವತ್ರಿಕ ಸಂಪು (General S... ಸಾಧ್ಯವಿಲ್ಲವೇ ?' ಎಂದು ಪ್ರಶ್ನಿಸಿದಾಗ, ಅವರು '... ವ್ಯವಹಾರ್ಯವಿಲ್ಲ; ರೇಲ್ವೆ ಕೂಲಿಕಾರರ ... ಇಂತಹ ಸನ್ನಿವೇಶದಲ್ಲಿ ತುಂಬಾ ಅಗತ್ಯ; ಆದರೆ ಕೂಲಿಕಾರರ ಮುಖಂಡತ್ವವು ಪ್ರತಿಗಾಮಿಗಳ ಕೈಯ್ಯ... ಎಂದು ಹೇಳಿದರು. ಸರ್ವಂಟ್ ಆಫ್ ಇಂಡಿಯಾ ಪತ್ರಿ... ಇದನ್ನು ಪ್ರತಿಭಟಿಸುತ್ತ, 'ಕಾಂಗ್ರೆಸಿನವರಲ್ಲಿ... ಮೇಳವಿಲ್ಲ; ಕೂಲಿಕಾರರ ಸಂಘಟನೆಯು ಸಾಮು... ಪ್ರತಿಕಾರಕ್ಕೆ ಸಿದ್ಧವಾಗಬಹುದು, ಆದರೆ ... ಆಗಲಿಕ್ಕಿಲ್ಲ' ಎಂದು ಅಭಿಪ್ರಾಯಪಟ್ಟಿದೆ. ... 'ಕಾಂಗ್ರೆಸು ಕೂಲಿಕಾರ ಪಕ್ಷದ ಪ್ರತಿಭಟನಾ... ಅರಗಿಸಿಕೊಳ್ಳುವಂತೆ ಚತುರೋಪಾಯಗಳನ್ನು ... ಬೇಕಾಗಿದೆ. ಅದೇ ಮೇರೆಗೆ ದುಡಾರಾಷ್ಟ್ರ ... ಮುಖಂಡರ ಪ್ರಣಯಾರಾಧನೆಯ ಪ್ರಯತ್ನ... ಕೊಟ್ಟು, ರಾಜನೀತಿಯ ಥಳಕುಬೆಳಕಿನ ... ಯದ, ಸರಲಹೃದಯದ ಮುಸಲ್ಮಾನ ಜನತೆಯೊ... ಹೆಚ್ಚಾಗಿ ಸಂಬಂಧವನ್ನು ಕಟ್ಟಿಕೊಳ್ಳಬೇಕು, ... ಕಾಂಗ್ರೆಸಿನ ಅಧಿಕಾರವರ್ಗದ ಮನೋವೃತ್ತಿಯನ್ನು ... ದರೆ, ಅದೊಂದು ಬಗೆಯ ಏಕಾಂಗತೆಯು— ... ಮಡಿವಂತಿಕೆಯು ಕಂಡುಬರುತ್ತಿದೆ. ಈ ಸಂದರ್ಭ... ಈಗಿನ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಎಲ್ಲ... ರಾಷ್ಟ್ರೀಯ ದೃಷ್ಟಿಯ ಪಕ್ಷಪಂಗಡಗಳನ್ನೂ ... ಹಿಡಿದುಕೊಂಡು ಸಾಗುವ ಪ್ರಭಾವಯುತ ಮು... ಬೇಕು. ದೇವರ ದಯೆಯಿದ್ದರೆ, ಭಾರತವು ... ಪಡೆದು ಮುಂದಡಿಯಿಡಬಹುದು.

ಮಧ್ಯಪ್ರಾಂತದಲ್ಲಿಯ ಬಿರುಗಾಳಿ

ಮಧ್ಯಪ್ರಾಂತದಲ್ಲಿಯ ಮಂತ್ರಿಮಂಡಲದ ... ವಿದ್ಯಮಾನಗಳು ಜನತೆಗೆ ಪೂರ್ತಿಯಾಗಿ ... ಆದ್ದರಿಂದ ಅವನ್ನು ವಿವರಿಸಲು ನಾವು ... ಅದರಲ್ಲಿಯ ಮುಖ್ಯ ಅಂಶಗಳನ್ನು ಮಾತ್ರ ...

ಪ್ತಸೋಣ. (ನಿವೃತ್ತ) ಮುಖ್ಯಮಂತ್ರಿಗಳವರು, ಒಮ್ಮೆ ಹೀಗೆ ಒಮ್ಮೆ ಹಾಗೆ ಲಾಗ ಹಾಕಿದರೆಂಬುದು ಸ್ಪಷ್ಟವಿದೆ. ವರ್ಕಿಂಗ್ ಕಮಿಟಿಯ ಸಭೆಯು ಬೇಗನೆ ಜರುಗಲಿದ್ದು ತಾವು ರಾಜಿನಾಮೆಯನ್ನು ಕೊಟ್ಟು, ತಮಗೆ ಬೇಡಾದ ಮಂತ್ರಿಗಳ ರಾಜೀನಾಮೆಯನ್ನೂ ಬೇಡಿ, ಅವರು ಕೊಡಲೊಪ್ಪದೆ ಹೋದಕೂಡಲೆ ಗವರ್ನರರಿಗೆ ಹಾಗೆ ಸಲಹೆ ಕೊಟ್ಟು, ಅವರನ್ನು ಕಿತ್ತೊಗೆಯಿಸಿದರು. ಗಾಂಧಿಯವರ ನೇತೃತ್ವದಲ್ಲಿ ವ. ಕಮಿಟಿಯು ಅಭಿಪ್ರಾಯಪಟ್ಟ ಮೇರೆಗೆ, ಕಾಂಗ್ರೆಸ್ಸಿನ ವರ್ಚಸ್ಸಕ್ಕೆ ಇದರಿಂದ ಧಕ್ಕೆ ತಟ್ಟಿತೆಂಬುದರಲ್ಲಿ ಸಂದೇಹವಿಲ್ಲ. ಇನ್ನೂ 'ಪೂರ್ಣಸ್ವರಾಜ್ಯ'ವು ನಮಗೆ ಪ್ರಾಪ್ತವಾಗಿಲ್ಲವೆಂಬುದನ್ನು ನಾವು ಮರೆಯದಿರಬೇಕು; 'ಪ್ರಾಂತೀಯ ಸ್ವಾಯತ್ತತೆ'ಯು ಆ ಗುರಿಯನ್ನು ತಲುಪಲು ಒಂದು (ಹಾವಸೆಗಟ್ಟಿದ) ಸೋಪಾನ ಮಾತ್ರ. ಬ್ರಿಟಿಷ್ ಆಳರಸರೊಡನೆ ಸಂಬಂಧ ಪೂರ್ತಿಯಾಗಿ ತಪ್ಪುವವರೆಗೂ ಕಾಂಗ್ರೆಸು ತನ್ನ ಪ್ರತಿನಿಧಿಗಳ ಮೇಲೆ ನಿಷ್ಠುರ ನಿಯಂತ್ರಣವನ್ನಿಟ್ಟುಕೊಳ್ಳುವುದು ಉಚಿತವೂ ಅಗತ್ಯವೂ ಆಗಿದೆ. ಖರೆಯವರು 'ಜವಾಬ್ದಾರ ಸ್ಥಾನಗಳಲ್ಲಿರಲು ಅಯೋಗ್ಯರಾಗಿದ್ದಾರೆ'ಂದು ವ. ಕಮಿಟಿಯು ಶರಾ ಹೊಡೆದದ್ದು ಕಠೋರವಾಗಿ ಕಂಡರೂ ಅದು ಅನಿವಾರ್ಯ ಕರ್ತವ್ಯವಾಗಿತ್ತು. ಪಕ್ಷದ ಮುಖಂಡರಾಗಲು ಖರೆಯವರು ಅನರ್ಹರೆಂದು ಅದು ತೀರ್ಮಾನಿಸಿತು; ಆದರೆ ಅಧ್ಯಕ್ಷತೆಯ ಹಕ್ಕಿನಿಂದ ಪಕ್ಷದ ಸಭೆಯ ಅಧ್ಯಕ್ಷರಾಗಿ ಸುಭಾಷರು ಕೆಲಸ ನಡಿಸಿದಾಗ, ವರ್ಕಿಂಗ್ ಕಮಿಟಿಯ ನಿಷೇಧ (ban) ವಿದ್ದರೂ, ಸಭೆಯು ನಿಜವಾಗಿಯೂ ಇಷ್ಟಪಟ್ಟಲ್ಲಿ ಖರೆಯವರನ್ನೆ ಮತ್ತೆ ಪಕ್ಷನಾಯಕಸ್ಥಲಕ್ಕೆ ಆರಿಸಬಹುದೆಂದು ಸ್ಪಷ್ಟವಾಗಿ ಹೇಳಿದರು. ಇದರಿಂದ ಪಕ್ಷದ ಸಭಾಸದರಿಗೆ ನಾಯಕರನ್ನು ಆರಿಸಲು ಇರುವ ಘಟನಾತ್ಮಕ —ಮೂಲಭೂತ ಹಕ್ಕನ್ನು ಯಾವರೀತಿಯಿಂದಲೂ ಕಸಿದುಕೊಂಡಂತಾಗಲಿಲ್ಲವೆಂಬುದು ಸ್ಪಷ್ಟವಿದೆ. ಸುಭಾಷರ ಸ್ಪಷ್ಟೀಕರಣದ ತರುವಾಯ, ಖರೆಯವರ ಹೆಸರನ್ನು ಸೂಚಿಸಿದವರೇ ಅದನ್ನು ಹಿಂತೆಗೆದುಕೊಂಡರೆಂಬುದು ಪ್ರಕಟವಾಗಿದೆ. ಎಂದ ಮೇಲೆ ಪಕ್ಷದ ಸಭೆಯ ಮೇಲೆ ನೇತಾರರನ್ನು ಆರಿಸುವ ವಿಷಯದಲ್ಲಿ ವ. ಕಮಿಟಿಯು ಅನಿಷ್ಟ ವರ್ಚಸ್ಸನ್ನು ಹೇರಿತೆಂಬ ಆರೋಪದಲ್ಲಿ ಹುರುಳೆಲ್ಲಿದೆ? ವ. ಕಮಿಟಿಯ ಖಂಡಿತ ಅಭಿಪ್ರಾಯವನ್ನು ಬಿಚ್ಚು-ಬಿರುಸು ಮಾತಿನಲ್ಲಿ ಹೇಳುವುದು ರಾಷ್ಟ್ರಹಿತೈಸಿಗಳ ಕರ್ತವ್ಯವೆ ಆಗಿತ್ತು; ಇಷ್ಟನ್ನೂ ದೇಶದ ಪ್ರಮುಖ ರಾಜಕೀಯ ಸಂಸ್ಥೆಯ ಪ್ರಮುಖನು ಮಾಡಬಾರದೇ? ಭಾಷಾಭಿಮಾನವನ್ನೋ, ಪ್ರಾಂತಾಭಿನಿವೇಶವನ್ನೋ ನಡುವೆ ತಂದು ಕಾಂಗ್ರೆಸಿನ ಹೆಸರಿನಲ್ಲಿ ಕಲ್ಲೊಡೆಯುವುದು ಘೋರ ಪ್ರಮಾದವಾಗುವುದು. ಕಾಂಗ್ರೆಸು ಪ್ರಾಂತಿಕ ಸ್ವಾಯತ್ತತೆಯನ್ನು ಸ್ವೀಕರಿಸಿದುದು, ಅದನ್ನು ಹೇಗಾದರೂ ಸಾಗಿಸಲಿಕ್ಕೆಂದಲ್ಲ; ಪ್ರಭುತ್ವದೊಡನೆ ಹೋರಾಡಲು ಬೇಕಾದ ಪ್ರತೀಕಾರ ಶಕ್ತಿಯನ್ನು ಕಾಸಿ, ಬಡಿದು, ಮಸೆದು ಹರಿತಗೊಳಿಸಲಿಕ್ಕೆ.

ಸ್ಪಾನಿಷ್ ಕದನದ ಸಿಂಹಾವಲೋಕನ

ಎರಡು ವರ್ಷಗಳು ಮುಗಿದು ಮೂರನೆಯ ವರ್ಷದಲ್ಲಿ ಕಾಲಿಟ್ಟಿದೆ ಸ್ಪಾನಿಷ್ ಅಂತಃಕಲಹ. ಸಾಗುಂತೊ ಮತ್ತು ವ್ಯಾಲೆನ್ಸಿಯಗಳನ್ನು ವಶಪಡಿಸಿಕೊಳ್ಳಲು ಫ್ರಾಂಕೋನ ಸೈನ್ಯವು ಭಗೀರಥಪ್ರಯತ್ನವನ್ನು ನಡೆಸಿದೆ; ಆದರೆ ಇನ್ನೂ ಯಶಸ್ವಿಯಾಗಿಲ್ಲ. ಈ ಎರಡು ವರ್ಷಗಳಲ್ಲಿ ಎರಡೂ ಪಕ್ಷಗಳ ಬಲಾಬಲಗಳೇನು ಎಂಬುದನ್ನು ನೋಡುವಂತಿದೆ.

ಬಂಡುಗಾರರ ನಾಯಕನಾದ ಫ್ರಾಂಕೋನ ವಶಕ್ಕೆ ಸುಮಾರು ೧೯೫,೦೦೦ ಚೌರಸ ಮೈಲಿನಷ್ಟು ಪ್ರದೇಶವು ಬಂದಿದೆ; ಸ್ಪಾನಿಷ್ ಸರಕಾರ ಪಕ್ಷದ ಕಡೆಗೆ ಇನ್ನೂ ಸು. ೧೧೫,೦೦೦ ಚೌ. ಮೈಲು ಪ್ರದೇಶವಿದೆ. ಬಂಡುಗಾರರ ಕಡೆಗೆ, ಕ್ಯಾಟಲೋನಿಯದ ಬಹುಭಾಗದ ಹೊರತಾಗಿ ಸ್ಪೇನದ ಉತ್ತರ ಭಾಗವೂ ಪಶ್ಚಿಮಕ್ಕೆ ಪೋರ್ತುಗಾಲದ ಗಡಿನಾಡಿಗೆ ತಗಲಿ ಪೂರ್ವಕ್ಕೆ ಮಾದ್ರಿದದವರೆಗೆ ಮತ್ತು ಹಾಗೇ ಕೆಳಕ್ಕೆ ದಕ್ಷಿಣ ದಂಡೆಯ ಮೇಲಿರುವ ಮೋತ್ರಿಲದವರೆಗೆ ಹಬ್ಬಿದ ಭೂಭಾಗವೂ ಇವೆ. ಸೇನಾನಿ ಫ್ರಾಂಕೋನ ಹೆಚ್ಚಿನ ಸಾಹಸವೆಂದರೆ, ಪೂರ್ವತೀರವನ್ನು ಮುಟ್ಟಿ ಸರಕಾರ ಪಕ್ಷದ ಕೈಯಲ್ಲಿರುವ ಪ್ರದೇಶದೊಳಗೆ ದಾರಿಯೊಡೆದು, ಬಾರ್ಸಿಲೋನಾ ಮತ್ತು ವ್ಯಾಲೆನ್ಸಿಯಾಗಳ ನಡುವಿನ ರಹದಾರಿಗೆ ಆತಂಕವನ್ನು ತಂದೊಡ್ಡಿದುದು.

ಫ್ರಾಂಕೋನ ದಾಳಿಯಿಂದ ಉಳಿಸಿಕೊಳ್ಳಲು ಸು. ೨,೦೦೦,೦೦೦ ಸ್ಪಾನಿಷ್ ಪ್ರಜೆಗಳು ಮನೆಮಾರು ಬಿಟ್ಟು ಓಡಿ ಹೋಗಿ ಸರಕಾರಪಕ್ಷದ ಸುರಕ್ಷಿತ ಪ್ರದೇಶದಲ್ಲಿ ನೆಲಸಿದ್ದಾರೆ. ಇದರಿಂದ ಒಟ್ಟು ೨೪,೦೦೦,೦೦೦ ಸ್ಪಾನಿಷ್ ಜನಸಂಖ್ಯೆಯು ಎರಡೂ ಪಕ್ಷಗಳ ಕಡೆಗೆ ಸುಮಾರು ಸಮಸಮನಾಗಿಯೇ ಹಂಚಿ ಹೋಗಿದೆ. 'ಸರಕಾರಿ ಸ್ಪೇನ'ದಲ್ಲಿಯ ೧೨,೦೦೦,೦೦೦ ಜನರಲ್ಲಿ ೪,೦೦೦,೦೦೦ ರಷ್ಟು

ಕ್ಯಾಟಲೋನಿಯದಲ್ಲಿಯೆ ಬಿಡು ಬಿಟ್ಟಿದ್ದಾರೆ. ಭೂಗತ ಖನಿಜಸಂಪತ್ತಿಯೂ ಸರಕಾರ ಪಕ್ಷಕ್ಕೇ ಒಲಿದಂತಿದೆ. ಫ್ರಾಂಕೋನ ಕಡೆಗೆ ಅವನು ಮೊದಲನೆಯ ವರ್ಷದಲ್ಲಿ ಗೆದ್ದುಕೊಂಡ ಯುರ್ಝ್‌ಕಾದಿಯ ಕಬ್ಬಿಣದ ಕಣಿಗಳು, ಆಸ್ಟೂರಿಯದ ಕಲ್ಲಿದ್ದಲಿನ ಕಣಿಗಳು ಮತ್ತು ಹುಎಲ್ವದ ತಾಮ್ರದ ಕಣಿಗಳು ಇವೆ; ಸರಕಾರ ಪಕ್ಷದ ಕಡೆಗೆ ಜೆರೋನದ ಕಲ್ಲಿದ್ದಲಿನ ಗಣಿಗಳೂ ಲಿನಾರೆಸ್—ಕಾರ್ಟಾಜೆನಾಗಳ ಸೀಸದ ಗಣಿಗಳೂ ಅಲ್ಮಾಡೆನದ ಪಾರಜದ ಪ್ರದೇಶವೂ ಮೊದಲಿನಿಂದಲೂ ಇವೆ. ಕ್ಯಾಟಲೋನಿಯದಲ್ಲಿಯ ಹೈಡ್ರೋ ಇಲೆಕ್ಟ್ರಿಕ್ ಶಕ್ತಿಸಂಗ್ರಹಾಲಯವು ಪಶ್ಚಿಮ ಯುರೋಪಿನಲ್ಲಿಯೇ ಉತ್ತಮ ತರಗತಿಯದು. ಅಲ್ಲದೆ ಅವರ ವಶದಲ್ಲಿರುವ ಭೂಮಿಯು ಸ್ಪೇನದಲ್ಲಿಯೇ ಫಲವತ್ತಾದುದು; ಅಂಡಲೂಸಿಯದ ಹುಲ್ಲುಗದ್ದೆಗಳನ್ನೂ ಉತ್ತರ ತೀರದ ಚಿಕ್ಕ ಸಾಗುಭೂಮಿಯನ್ನೂ ಬಿಟ್ಟರೆ, ಬಂಡುಗಾರರು ಆಕ್ರಮಿಸಿದ ಪ್ರದೇಶವು ಹೆಚ್ಚಾಗಿ ಮರುಭೂಮಿಯೂ ಗುಡ್ಡಗಾಡೂ ಆಗಿದೆ.

ಎರಡೂ ಪಕ್ಷಗಳು ಯುದ್ಧಸಾಮಗ್ರಿಯನ್ನು ತಯಾರಿಸುವ ಕಾರಖಾನೆಗಳನ್ನು ಭರದಿಂದ ಬೆಳೆಸುತ್ತಲಿವೆ. ಆದರೂ ಸರಕಾರಿ ಪಕ್ಷದ ಬಾರ್ಸಿಲೋನಾದಲ್ಲಿಯ ಕಾರಖಾನೆಗಳೇ ಮೇಲ್ಗೈ ಎಂದು ಹೇಳಬಹುದು; ಅವು ಟ್ಯಾಂಕುಗಳನ್ನೂ ಯುದ್ಧವಿಮಾನಗಳನ್ನೂ ತೆರಪಿಲ್ಲದೆ ಹೊರಡಿಸುತ್ತಲಿವೆ.

ಯುದ್ಧಕಾಲದಲ್ಲೆಲ್ಲಾ ಫ್ರಾಂಕೋನಿಗೇ ದುಡ್ಡಿನ ತುಟ್ಟಾಗ್ರತಿಯೆನಿಸಿದೆ. ಯುದ್ಧವು ಪ್ರಾರಂಭವಾದಾಗ ದೇಶದ ಸುವರ್ಣಸಂಚಯವು ಸರಕಾರ ಪಕ್ಷದ ಕಡೆಗೇ ಇತ್ತು; ಫ್ರಾಂಕೋ, ಬೇಕೆಂತಲೇ ಏರ್ಪಡಿಸಿದ ಯುದ್ಧನಿಧಿಯ ಮೇಲೆ ಮತ್ತು ದೊಡ್ಡದೊಡ್ಡ ಜಮೀನುದಾರರ ಕಾಣಿಕೆಗಳ ಮೇಲೆ ಅವಲಂಬಿಸಬೇಕಾಗುತ್ತಿತ್ತು. ಈಚೆಗೆ ತಾನು ಗೆದ್ದ ಸೀಮೆಯಲ್ಲಿಯ ಕಣಿಗಳ ಉತ್ಪತ್ತಿಯಿಂದ ಹಣ ಗಳಿಸುತ್ತಿದ್ದಾನೆ; ಅದು ಹೇಗೆಂದರೆ, ಪ್ರಾಮಿಸರಿ ನೋಟುಗಳನ್ನು ಬರೆದುಕೊಟ್ಟು ಇಲ್ಲವೆ ಮುದ್ರಿತ ಚಲನ ಕಾಗದಗಳನ್ನು ಕೊಟ್ಟು, ಕಣಿಗಳ ಉತ್ಪತ್ತಿಯನ್ನು ಜಪ್ತು ಮಾಡಿ ಬಿಡುತ್ತಾನೆ. ಈ ಮೊದಲು, ಕಣಿಯೊಳಗಿನ ಭೂನಿಧಿಯನ್ನು, ಇಟಲಿ-ಜರ್ಮನಿಗಳಿಗೆ ಕಳಿಸಿ, ಯುದ್ಧಸಾಮಗ್ರಿಯನ್ನು ಕೊಳ್ಳುತ್ತಿದ್ದನು.

ಸೇನಾಬಲದ ಮಟ್ಟಿಗೂ ಸರಕಾರಪಕ್ಷವೇ ಭಾಗ್ಯಶಾಲಿಯಾಗಿದೆ. ಇತ್ತ ಕಡೆ ಸು. ೭೦೦,೦೦೦ ಸೈನಿಕರಿದ್ದಾರೆ. ಅವರಲ್ಲಿ ಸು. ೨೦,೦೦೦ ಜನರು ಪರದೇಶೀಯರು; ಅಂತರ ರಾಷ್ಟ್ರೀಯ ದಲ (International Brigade)'ಕ್ಕೆ ಸೇರಿದವರು. ಉಳಿದ ಪರದೇಶೀಯರು ಯಾಂತ್ರಿಕ ಯುದ್ಧದಲ್ಲಿ ಪ್ರವೀಣರಾಗಿದ್ದಾರೆ. ಸಾಮಾನ್ಯ ಸೈನ್ಯವು ಉತ್ತಮ ತರಬೇತು ಹೊಂದಿದೆ; ಚಿಕ್ಕ ಅಧಿಕಾರಿಗಳ ಕೊರತೆ ಹೆಚ್ಚಾಗಿದೆ. ಫ್ರಾಂಕೋನ ಕಡೆಗೆ ಸುಮಾರು ... ಸೈನಿಕರಿದ್ದು, ಅವರು ಚೆನ್ನಾಗಿ ಶಿಕ್ಷಣಪಡೆದವರು. ಇವರಲ್ಲಿ ೧/೩ರಷ್ಟು ಪರದೇಶೀಯರಂತೆ. ಈ 'ಸ್ವಯಂಸೇವಕ'ರ ಸಂಖ್ಯೆ ಇಂತಿಷ್ಟೆಂದು ಹೇಳುವುದು ಕಠಿಣ. ಇವರನ್ನೆಲ್ಲ ಹಿಂದಕ್ಕೆ ಕರೆಯಿಸಿಕೊಂಡರೆ ಫ್ರಾಂಕೋ ... ಕ್ಕುರುಳುವುದು ಖಂಡಿತವೆಂದು ತೋರುತ್ತದೆ.

ಮೇಲಣ ಸಂಗತಿಗಳನ್ನು 'ಟೈಮ್ಸ್ ಆಫ್ ...' ದಲ್ಲಿಯ ಒಂದು ಅಗ್ರಲೇಖನದಿಂದ ತೆಗೆದುಕೊಂಡಿದೆ. ಆದುದರಿಂದ ಅವುಗಳ ಸತ್ಯತೆಯನ್ನು ಶಂಕಿಸಬೇಕಾಗಿಲ್ಲ.

ಪ್ಯಾಲೆಸ್ಟಾಯಿನಿನಲ್ಲಿಯ ಗಲಭೆ

ಕಳೆದ ಒಂದೆರಡು ತಿಂಗಳು ಪಾಲೆಸ್ಟಾಯಿನಿನಲ್ಲಿ ... ಅರಬರ ಅತ್ಯಾಚಾರಗಳು ಮೇರೆಮೀರಿವೆ. ಕಳೆದ ... ಗಳಲ್ಲಿ ಸು. ೧೨೦ ಜನರು ಕೊಲ್ಲಲ್ಪಟ್ಟರೆಂದೂ ... ಹೆಚ್ಚು ಜನರು ಗಾಯಗೊಂಡಿರುವರೆಂದೂ ತಿಳಿದು ... ಇಬ್ಬರಲ್ಲಿ ಜ್ಯೂಗಳೇ ಹೆಚ್ಚಿನ ನಷ್ಟಕ್ಕೆ ಈಡಾ... ಈಚೆಗೆ ಜ್ಯೂಗಳೂ ಹಿಂಸಾಕಾರ್ಯದಲ್ಲಿ ಮು... ತೋರುತ್ತದೆ. ಜೂಲೈ ೨೫ನೆಯ ತಾರೀಖಿನ ... ೪೩ ಅರಬರೂ ನಾಲ್ವರು ಯಹೂದಿಗಳೂ ಕೊಲ್ಲ... ಬ್ರಿಟಿಷ್ ಸರಕಾರವು ತನ್ನ 'ಪಾಲಕತ್ವ'ದ ಕರ್ತ... ನಿರ್ದಾಕ್ಷಿಣ್ಯದಿಂದ ನಿರ್ವಹಿಸುತ್ತಿದೆ; ಇಜಿಪ್ತಿನಿಂದ ... ಪಡೆಗಳನ್ನು ಮತ್ತೆ ತರಿಸಿಕೊಂಡಿದೆ; ಹೈಫಾ ... ಯುದ್ಧನೌಕೆಯೊಂದು ಮುಂದಿನ ಘಟನೆಗಳನ್ನು ... ತ್ತಿದೆ.

ಈ ಮುಂಚೆ ಪ್ಯಾಲೆಸ್ಟಾಯಿನಿನ ತೊಡಕಿನ ... ಸಲ ಬರೆದಿದ್ದೇವೆ. ('ಪ್ಯಾಲೆಸ್ಟಾಯಿನಿನ ಸಮಸ್ಯೆ' ಎಂಬ 'ನಾಗರಿಕ'ರ ಲೇಖನವನ್ನು ... ಸಂಪುಟ ೧೫, ಸಂಚಿಕೆ ೧೨.) ಯಹೂದಿಗಳಿಗೆ 'ಹಕ್ಕಿನ ಮನೆ' ಕಟ್ಟಿಸಿಕೊಡಲು ಬ್ರಿಟಿಷ... ವಾಗ್ಬದ್ಧವಾಗಿದೆ. ಇಬ್ಬರ ಜಗಳವು ಬಗೆಹರಿಯದ... ವೆಂದು ತಿಳಿದೊಡನೆ ಪ್ಯಾಲೆಸ್ಟಾಯಿನನ್ನು ... ಹಂಚಿ, ಜರೂಸಲೇಮಿನ ಮತ್ತು ಬೆಥ್ಲೆಹೆಮ... ಕ್ಷೇತ್ರಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ... ಬಿಟ್ಟುಕೊಂಡಿತು. ಇಬ್ಬರಲ್ಲಿಯೂ ಶಾಂತತೆಯನ್ನು ...

ಸನ ಮತ್ತು ಇಬ್ಬರಿಗೂ 'ಸ್ವರಾಜ್ಯ'ದಲ್ಲಿ ಪಾಲುಕೊಡುವ ಅಧಿಕಾರವನ್ನೂ ಸ್ವಾಯತ್ತವಾಗಿಟ್ಟುಕೊಂಡಿತು. ಇದು ಅರಬರಿಗೆ ರುಚಿಸಲಿಲ್ಲ; ಯಹೂದಿಗಳ ಭಯವನ್ನು ನಿವಾರಿಸಲಿಲ್ಲ. ಬ್ರಿಟಿಷ್ ಸರಕಾರವು ತಾನೇ ನಿಯಮಿಸಿದ ಕಮಿಶನಿನ ವರದಿಯನ್ನು ಒಮ್ಮೆಲೆ ಸ್ವೀಕರಿಸದೆ ರಾಷ್ಟ್ರಸಂಘದ ನಿಯೋಗಗೋಷ್ಠಿಯೊಂದರ ವರದಿಯನ್ನು ಎದುರು ನೋಡಿತು. ಆ ವರದಿಯು ಬ್ರಿಟಿಷರ ಯೋಜನೆಯನ್ನು ಒಮ್ಮೆಲೆ ಒಪ್ಪಿಕೊಂಡಿಲ್ಲ. ಅದು ಎರಡು ಸೂಚನೆಗಳನ್ನು ಮಾಡಿದೆ: ೧. ಯಹೂದಿ ಮತ್ತು ಅರಬ್ಬೀ ಎಂದು ಎರಡು ಸ್ವಾಯತ್ತ ಪ್ರಾಂತಗಳನ್ನು (Cantons) ಮಾಡಿ, ಅವು ಬ್ರಿಟಿಷ್ ಮೇಲ್ವಿಚಾರಕ ಆಡಳಿತದೊಡನೆ ಸಂರಕ್ಷಣೆ ಮತ್ತು ಪರರಾಷ್ಟ್ರೀಯ ನೀತಿಗಳ ಮಟ್ಟಿಗೆ ಸಹಕರಿಸುವಂತೆ ಮಾಡುವುದು; ೨. ಯಹೂದಿ—ಅರಬ್ಬೀ ಪ್ರದೇಶಗಳೆರಡನ್ನೂ ವಿಂಗಡಿಸಿ, ಬ್ರಿಟಿಷ್ ಮೇಲ್ವಿಚಾರಣೆ (Mandate)ಗೆ ಒಪ್ಪಿಸಿ, ಅವು 'ಸ್ವರಾಜ್ಯ'ಕ್ಕೆ ಅರ್ಹರಾಗುವ ವರೆಗೂ ಹಾಗೇ ಉಳಿಯಗೊಡುವುದು. ಅಂತೂ ಬ್ರಿಟಿಷರ ಮುಂಚಿನ 'ಪಾಲುಗಾರಿಕೆ'ಯ ಯೋಜನೆಯನ್ನು ಈ ವರದಿಯು ಪೂರ್ತಿಯಾಗಿ ಒಪ್ಪಿಕೊಂಡಿಲ್ಲವೆಂದು ಹೇಳಬಹುದು. ಈ ವರದಿಯ ಶಿಫಾರಸುಗಳನ್ನು ಮನದಂದು, ರಾಷ್ಟ್ರಸಂಘದ ಅನುಮತಿಯಿಂದ ಬ್ರಿಟಿಷ್ ಸರಕಾರವು ಇನ್ನೊಂದು 'ತಜ್ಞರ ಸಮಿತಿ' (Technical Commission)'ಯನ್ನು ನಿಯಮಿಸಲು ಒಪ್ಪಿಗೆ ಪಡೆದು, ಮೇ ತಿಂಗಳಲ್ಲಿ ಆ ಸಮಿತಿಯನ್ನು ಪ್ಯಾಲೆಸ್ಟಾಯಿನಿಗೆ ಕಳಿಸಿದೆ. 'ಪಾಲುಗಾರಿಕೆ'ಯನ್ನು ಮಾಡುವುದಾದಲ್ಲಿ ಅದರಲ್ಲಡಕವಾದ ಆರ್ಥಿಕ ಪ್ರಶ್ನೆಗಳನ್ನು ಬಿಚ್ಚಿಡುವುದು ಎಂದರೆ 'ಪಾಲುಗಾರಿಕೆ'ಯ ಯೋಜನೆಯು ಯಶಸ್ವಿಯಾಗುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದು ಅದರ ಕೆಲಸವಾಗಿದೆ. ಇದೆಲ್ಲಾ ಸರಿಯೆ. ಆದರೆ ಈ ಚರ್ಚೆ-ಪ್ರತಿಚರ್ಚೆಗಳಲ್ಲಿಯ ಅಸ್ಥಿರತೆಯು ಅರಬ-ಜ್ಯೂಗಳಿಬ್ಬರನ್ನೂ ಅಧೀರರನ್ನಾಗಿ ಮಾಡಿ, ಹೆಚ್ಚಿನ ಅತ್ಯಾಚಾರಗಳಿಗೆ ಪ್ರವರ್ತಿಸಿದೆ. ಇಬ್ಬರಿಗೂ ತಪರಾಕಿ ಕೊಟ್ಟು ಇಬ್ಬರಿಗೂ ಅಂಕೆಯಲ್ಲಿಡಲು ಬ್ರಿಟಿಷ್ ಸರಕಾರಕ್ಕೆ ಇದೊಂದು ಸುಸಂಧಿಯೆ ದೊರೆತಂತಾಗಿದೆ.

ಶ್ರದ್ಧಾಂಜಲಿ

ವೈಣಿಕ ವಿದ್ವಾನ್

ಮೈಸೂರ ದರ್ಬಾರದ ಪ್ರಮುಖ ಆಸ್ಥಾನ ಸಂಗೀತ ವಿದ್ವಾಂಸರಾದ ವೈಣಿಕ ಪ್ರವೀಣ ಬಕ್ಷಿ ಸುಬ್ಬಣ್ಣನವರು ಕಳೆದ ೩೧ನೇ ತಾರೀಕಿನ ದಿವಸ ಬೆಳಗು ಮುಂಜಾನೆ ೨ ಗಂಟೆಗೆ ನಿಧನ ಹೊಂದಿದ್ದರಿಂದ ಕರ್ನಾಟಕವು ಒಬ್ಬ ಪ್ರತಿಭಾವಂತ ಕಲೆಗಾರರನ್ನು ಕಳೆದುಕೊಂಡಿತು! ಸುಬ್ಬಣ್ಣನವರು ಮರಣ ಕಾಲಕ್ಕೆ ೮೩ ವರ್ಷದವರಿದ್ದು ಸಂಗೀತ ವಿದ್ಯೆಯಲ್ಲಿ ಹಿಂದುಸ್ತಾನದಲ್ಲೆಲ್ಲ ಕೀರ್ತಿ ಸಂಪಾದಿಸಿದ್ದರು. ಉತ್ತರ ಹಿಂದುಸ್ತಾನದ ಅನೇಕ ಸರದಾರರೂ ಮಹಾರಾಜರೂ ಅವರ ಸಂಗೀತಕ್ಕೆ ಮೆಚ್ಚಿ ಅನೇಕ ವಿಧದಿಂದ ಅವರಿಗೆ ಬಹುಮಾನ ಮಾಡಿದ್ದರು. ಆದುದರಿಂದ ಅವರ ನಿಧನದಿಂದ ಸಮಗ್ರ ಹಿಂದುಸ್ತಾನದ ಓರ್ವ ಸಂಗೀತಜ್ಞರು ಕಣ್ಮರೆಯಾದಂತಾಯಿತು.

ಕೀರ್ತಿಶಾಲಿ ಕನ್ನಡ ನಟವರರು

ಕರ್ನಾಟಕದ ರಂಗಭೂಮಿಯ ಪುರಸ್ಕರ್ತರಲ್ಲಿ ಪ್ರಮುಖರೆಂದೆಣಿಸಲಾಗಿದ್ದ ಶಿರಹಟ್ಟಿ ಮಹಾಲಕ್ಷ್ಮೀ ಪ್ರಾಸಾದಿಕ ನಾಟಕ ಮಂಡಳಿಯ ಒಡೆಯರಾದ ಶ್ರೀಮಾನ್ ಎಚ್. ವೆಂಕೋಬರಾವ ಅವರು ಕಳೆದ ತಿಂಗಳು ತಾ. ೧೫-೭-೩೮ನೇ ದಿನ ಬೆಳಗಿನ ೬ ಗಂಟೆಗೆ ತಮ್ಮ ವಯಸ್ಸಿನ ೫೮ನೇ ವರ್ಷದಲ್ಲಿ ಅರ್ಧಾಂಗವಾಯು ವಿಕಾರದಿಂದ ಕಾಲಾಧೀನರಾದರು. ಅವರು ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ನಾಟಕ ಕಂಪನಿಯನ್ನು ೩೫ ವರ್ಷ ಸುದೀರ್ಘಕಾಲ ಪರ್ಯಂತ ಅತ್ಯುತ್ತಮ ರೀತಿಯಲ್ಲಿ ನಡೆಯಿಸಿಕೊಂಡು ಬಂದು, ಅಖಿಲ ಕರ್ನಾಟಕದಲ್ಲಿ ಕೀರ್ತಿಪಡೆದರು. ಈ ಅವಧಿಯಲ್ಲಿ ಅವರು ತಮ್ಮ ಕಂಪನಿಯಲ್ಲಿ ಅನೇಕ ಜನ ಒಳ್ಳೇ ನಟರನ್ನು ತಯಾರಿಸಿ ಕನ್ನಡ ರಂಗಭೂಮಿಗೆ ವಿಶೇಷ ಗೌರವವನ್ನು ತಂದು ಕೊಟ್ಟರು. ಮೈಸೂರು ಮಹಾರಾಜರೆದುರಿನಲ್ಲಿ ತಮ್ಮ ಕಂಪನಿಯ ಕಲಾನೈಪುಣ್ಯವನ್ನು ಪ್ರದರ್ಶಿಸಿ ಅವರಿಂದ ಬಹುಮಾನಿತರಾದರು. ಅನೇಕ ಜನ ಕನ್ನಡ ಪಂಡಿತರಿಗೆ ಆಶ್ರಯವನ್ನಿತ್ತು ಅವರಿಂದ ಕನ್ನಡದ ಉತ್ತಮೋತ್ತಮವಾದ ನಾಟಕಗಳನ್ನು ಬರೆಯಿಸಿ ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಮಹದುಪಕಾರ ಮಾಡಿದರು. ಅಲ್ಲದೇ ಕರ್ನಾಟಕದಲ್ಲಿನ ಅನೇಕ ಸಂಘ ಸಂಸ್ಥೆಗಳಿಗೆ ಧರ್ಮಾರ್ಥ ನಾಟಕ

ಗಳ ಮೂಲಕ ಧನಸಹಾಯ ಮಾಡಿದರು. ಕನ್ನಡ ರಂಗ ಭೂಮಿಯ ಉಪಾಸಕರಾದ ವೆಂಕೋಬರಾಯರ ನಿಧನ ದಿಂದ ಅವರ ಕುಟುಂಬದವರಿಗಾದ ದುಃಖದಲ್ಲಿ ಅಖಿಲ ಕನ್ನಡಿಗರು ಭಾಗಿಗಳಾಗುವುದು ಸಹಜವಾದ ಮಾತು.

ಮೃತರ ಆತ್ಮಕ್ಕೆ ಶಾಂತಿ ಸಿಗಲಿ.

ಬೆಂಗಳೂರ 'ಪೌರಪಿತಾಮಹ'ರು

ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಬೆಂಗಳೂರಿನವರಾದರೂ ಅವರ ಹೆಸರನ್ನರಿಯದ ಕನ್ನಡಿಗರು ಕಡಿಮೆ. ಸಾಮಾಜಿಕ, ಧಾರ್ಮಿಕ, ರಾಷ್ಟ್ರವಿಷಯಕ ಚಟುವಟಿಕೆಗಳಲ್ಲಿ ತರುಣರನ್ನು ಕೂಡ ನಾಚಿಸುವಂತೆ ತಮ್ಮ ವೃದ್ಧಾಪ್ಯದಲ್ಲಿಯೂ ಅವರು ಪಾಲುಗೊಳ್ಳುತ್ತಿದ್ದುದೆ ಅವರ ವ್ಯಾಪಕವಾದ ಕೀರ್ತಿಗೆ ಕಾರಣವೆನ್ನಬಹುದು. ಅಂತಹ ಆದರ್ಶ ಕನ್ನಡಿಗರು ಕಳೆದ ೩೧ನೆ ತಾರೀಕಿನ ಸಂಜೆಗೆ ತಮ್ಮ ೮೫ನೇ ವಯಸ್ಸಿನಲ್ಲಿ ಶಿವಾಧೀನರಾದರೆಂದು ಕೇಳಿ ಯಾವ ಕನ್ನಡಿಗನ ಕಂಣಲ್ಲಿ ನೀರೂರಲಿಕ್ಕಿಲ್ಲ! ಸಾರ್ವಜನಿಕ ಜೀವನದಲ್ಲಿ ಕರ್ನಾಟಕವು ಅವರಿಗೆ ಪ್ರೇಮದಿಂದ 'ಬೆಂಗಳೂರಿನ ಪೌರಪಿತಾಮಹ' ಎಂಬ ಪೂಜ್ಯಪದವಿಯನ್ನು ಕೊಟ್ಟಿತ್ತು. ಸಿರಿವಂತಿಕೆಯ ಕೊಬ್ಬಿನಲ್ಲಿ [illegible] ರನ್ನು ಬಳಲಿಸುವ ವರ್ಗಕ್ಕೆ ಸೇರಿದವರಲ್ಲ ಈ [illegible] ಪಿತಾಮಹರು. ದುಃಖಿತರಿಗೆ ಅವರು ತನು ಮ[illegible] ಸಹಾನುಭೂತಿಯನ್ನು ತೋರಿಸುತ್ತಿದ್ದುದಲ್ಲದೆ ಧ[illegible] ಲಾದರೂ ಎರಡೂ ಕೈಯಿಂದ ಸಹಾಯ ಮಾಡುವ[illegible] ಅವರು ಅಗ್ರಗಣ್ಯರಾಗಿದ್ದರು. ಲಕ್ಷಾವಧಿ ರೂ[illegible] ಗಳನ್ನು ಅವರು ಸಾರ್ವಜನಿಕ ಕಾರ್ಯಗಳಿಗೆ ದಾ[illegible] ಮಿಕ್ಕ ಸಿರಿವಂತರಿಗೆ ಮೇಲ್ಪಂಕ್ತಿಯನ್ನು ಹಾಕಿಕೊ[illegible] ದಕ್ಷಿಣ ಹಿಂದುಸ್ತಾನದಲ್ಲೆಲ್ಲಾ ಸುಂದರವೂ ವಿಶಾ[illegible] ಆದ ಬೆಂಗಳೂರ ನಗರಭವನದ ಕಟ್ಟಡಕ್ಕೆ [illegible] ೮೦ ಸಾವಿರ ರೂಪಾಯಿ ದಾನವಿತ್ತರು. ವಿಕ್ಟೋ[illegible] ಆಸ್ಪತ್ರೆಯ ಒಂದು ಭಾಗವನ್ನು ಕಟ್ಟಿಸಲು ದ್ರವ್ಯಸ[illegible] ಮಾಡಿದರು. ಮೊನ್ನೆ ಮೊನ್ನೆ ೧ ಲಕ್ಷ ರೂಪಾಯಿ [illegible] ವೀರಶೈವ ಧರ್ಮಾರ್ಥ ವಿದ್ಯಾರ್ಥಿನಿಲಯವನ್ನು [illegible] ದರು. ಇಂತಹ ಕನ್ನಡಿಗಕರ್ಣರು ನಮ್ಮನ್ನು [illegible] ಹೋದುದಕ್ಕೆ ನಮಗಾದ ವಿಷಾದಕ್ಕೆ ಮಿತಿಯಿಲ್ಲ! [illegible] ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬಕ್ಕೆ ಈ [illegible] ದುಃಖವನ್ನು ಸಹಿಸುವ ತಾಳ್ಮೆ ಬರಲಿ.

ನಮ್ಮ ಮಾತು

ಸಹಸಂಪಾದಿಕೆಯರ ಪ್ರಯಾಣ

ಶ್ರೀಮತಿ ಸೌ. ಶ್ಯಾಮಲಾದೇವಿಯವರು ಅ. ಭಾ. ಮಹಿಲಾ ಪರಿಷತ್ತಿನ ಸ್ಟ್ಯಾಂಡಿಂಗ್ ಕಮಿಟಿಯ ಅರ್ಧವಾರ್ಷಿಕ ಸಭೆಗೆ ಹಾಜರಾಗಲು ಬಡೋದೆಗೆ ತೆರಳಿರುವರು.

ನಮ್ಮ ವಿಶೇಷಸಂಚಿಕೆ

ಈ ಸಲದ ವಿಶೇಷ ಸಂಚಿಕೆಯನ್ನು ಬೇಗನೆ ಹೊರಡಿಸುವೆವು. ಅದು ಒಂದೇ ಮಹತ್ವದ ವಿಷಯದ ಮೇಲೆ ಲೇಖನಗಳನ್ನೊಳಗೊಳ್ಳುವುದು. ವಿಪುಲಚಿತ್ರಗಳು; ತಜ್ಞಲೇಖಕರು. ಜ. ಕ. ದ ಸ್ಥಾನಮಾನಕ್ಕೆ ತಕ್ಕಂತೆ ಅದೊಂದು ಅಪೂರ್ವ ಜ್ಞಾನಸಂಗ್ರಹವೆ ಆಗುವುದು. ವಿಷಯವನ್ನೂ ತಿಂಗಳನ್ನೂ ಮುಂದಿನ ಸಲ ತಿಳಿಸುವೆವು.

ಭಾರತೀಯ ಸಂಸ್ಕೃತಿ-ಸಂಶೋಧನ ಮಂದಿರವೊಂದು

ಮಹೆಂಜೊದಾರೊ ಮೊದಲಾದತ್ತ ಕಡೆಯ [illegible] ದಿಂದ ಭಾರತೀಯ ಸಂಸ್ಕೃತಿಯ ಚಾರಿತ್ರಿಕ [illegible] ಇನ್ನೂ ಸಾವಿರಾರು ವರ್ಷ ಪ್ರಾಚೀನವೆಂದು [illegible] ಲಾಯಿತು. ಭಾರತೀಯ ಸಂಸ್ಕೃತಿಯು ಭಾರತ[illegible] ಮಾತ್ರ ಮರ್ಯಾದಿತವಾಗಿಲ್ಲ, ಈ ಮಹಾ [illegible] ಬೇರುಗಳು ಹಿಂದುಸ್ತಾನದ ಹೊರಗೂ,—ಚೀನ, [illegible] ಜಾವಾ, ಸುಮಾತ್ರಾ, ಅಫಗಾನಿಸ್ಥಾನ ಮೊದಲಾ[illegible] ಹಬ್ಬಿದ್ದುವೆಂಬುದನ್ನು ಡಾ. ಕಾಲಿದಾಸ ನಾಗ[illegible] ಲಾದ ಪ್ರಾಚ್ಯವಿದ್ಯಾಸಂಶೋಧಕರು ತೋರಿಸಿ[illegible] ಈಚೆಗೆ ಈ ವಿಷಯವು ಸಂಸ್ಕೃತಿಭಕ್ತರ ಮ[illegible] ಆಕರ್ಷಿಸಿದೆ. ಕಾಮಶೇತದಲ್ಲಿ, ಬರುವ [illegible]

ನೆರೆಯಲಿರುವ ಇತಿಹಾಸಸಪ್ತಾಹದಲ್ಲಿ ಇದರ ಚರ್ಚೆಯಾಗಲಿದೆ. ಪುಣೆಯಲ್ಲಿ ಈ ಮುಂಚೆ ಸೇರಿದ ಇತಿಹಾಸ ಪರಿಷತ್ತು ಈ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಇಷ್ಟರಿಂದಲೆ ಸಾಗದು; ಇದಕ್ಕೇ ಮುಡುಪಾಗಿರುವ ಸಂಶೋಧನಮಂದಿರವೊಂದು ಬೇಕೆಂಬುದನ್ನು ವಂಗಬಂಧುಗಳು ಮನಗಂಡಿದ್ದಾರೆ. 'ಬಂಗಾಲ ವಿದ್ಯಾಪೀಠ' ಎಂಬ ಸಂಸ್ಥೆಯು ಈ ಧ್ಯೇಯಪೂರ್ತಿಗಾಗಿಯೇ ಡಮಡಮ ಎಂಬಲ್ಲಿ ಹೊರಡಲಿದೆ. ಆದಕ್ಕಾಗಿ ಶ್ರೀ. ಹರಿದಾಸ ಮುಜುಮದಾರ ಎಂಬವರು ೧॥ ಲಕ್ಷ ಬೆಲೆಬಾಳುವ ತಮ್ಮ ಸೊತ್ತನ್ನು ಸಮರ್ಪಿಸಿದ್ದು, ಪ್ರತಿವರ್ಷ ೧೦೦೦ ರೂ. ವರಮಾನವುಳ್ಳ ಆಸ್ತಿಯನ್ನು ಪ್ರಾಥಮಿಕ ವೆಚ್ಚಕ್ಕಾಗಿ ದಾನಮಾಡಿದ್ದಾರೆ. ಕಲ್ಕತ್ತಾ ವಿದ್ಯಾಪೀಠವೂ ಹಿಂದೂ ವಿಶ್ವವಿದ್ಯಾಲಯವೂ ಈ ಕೆಲಸವನ್ನು ಈಗಾಗಲೆ ಸಾಗಿಸಿದ್ದರೂ, ಈ ವಿದ್ಯಾಮಂದಿರವು ಕೇವಲ ಈ ಸಂಶೋಧನವನ್ನೇ ಕೈಕೊಳ್ಳಲಿದೆ. ತತ್ವಜ್ಞಾನ, ಇತಿಹಾಸ, ಜ್ಯೋತಿಷ, ರಾಜನೀತಿ, ವಾಣಿಜ್ಯ, ಅರ್ಥಶಾಸ್ತ್ರ ಮೊದಲಾದ ವಿಷಯಗಳಲ್ಲಿ ಪ್ರಾಚೀನ ಭಾರತೀಯರು ಎಷ್ಟು ಪ್ರಾವಿಣ್ಯವನ್ನು ಪಡೆದಿದ್ದರು, ಈಗ ಈ ಶಾಸ್ತ್ರಗಳು ಎಷ್ಟು ಪ್ರಗತಿಯನ್ನು ಹೊಂದಿವೆ—ಎಂಬುದರ ಶಿಕ್ಷಣವನ್ನು ಬಂಗಾಲ ವಿದ್ಯಾಪೀಠವು ಕೊಡಲಿದೆ. ಇಂತಹ ವಿದ್ಯಾಪೀಠಗಳು ಪ್ರಾಂತಪ್ರಾಂತಗಳಲ್ಲಿ ಹೊರಡುವ ಶುಭದಿನವು ಎಂದು ಬಂದೀತು ?

ಬರಲಿವೆ

ಆಧುನಿಕ ಆಂಗ್ಲ ಕವಿತೆ
(ಸಂಗ್ರಹಿಸಿದುದು)

ದೇವತೆಗಳ ಮೇಲೆ ಮಾನವರ ಉಪಕಾರ
ಶ್ರೀ. ಅರ್ಚಕ ವೆಂಕಟೇಶ

ಕನ್ನಡ ವ್ಯಾಕರಣಗಳಲ್ಲಿಯ ತ್ರಿದೋಷ ಚರ್ಚೆ
ಶ್ರೀ. ಬೆಂಗೇರಿ ಹುಚ್ಚರಾಯರು, ಎಂ. ಎ., ಬಿ. ಟಿ.

ಪ್ರೇಮಲಹರಿ (ಕತೆ)
ಶ್ರೀ. ಎಸ್. ಕೆ. ಕರೀಂಖಾನ

ಹುಲಿಬೇಟೆ (ಕತೆ)
ಶ್ರೀ. ಎಂ. ಎಸ್. ಅನಂತಪದ್ಮನಾಭರಾವ್

ಅ. ಭಾ. ಮಹಿಳಾ ಪರಿಷತ್ತಿನ ಅರ್ಧವಾರ್ಷಿಕ ಸಭೆ
ಸೌ. ಶ್ಯಾಮಲಾದೇವಿ

ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೬-೦-೦
ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೩-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ ಬೇರೆ.

'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳು ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸುವುದು ಅಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕಂದರೆ ಅದರಿಂದ ವ್ಯರ್ಥ ವ್ಹಿ. ಪಿ. ವೆಚ್ಚಕ್ಕೆ ಗುರಿಯಾಗುವುದು ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ೧೫ನೆಯ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿಯೂ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಮಾಧ್ಯಮ.

ಜಾಹೀರಾತುದಾರರು ೨೫% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರಕಟಿಸಿ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾಹೀರಾತು ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

ಒಂದು ಪುಟಕ್ಕೆ	ಒಂದು ಸಲಕ್ಕೆ	೨೦ ರೂ
ಅರ್ಧ ಪುಟಕ್ಕೆ	,, ,,	೧೨ ,,
೧/೪ ಪುಟಕ್ಕೆ	,, ,,	೬ ,,
೧/೮ ಪುಟಕ್ಕೆ	,, ,,	೪ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ದೀರ್ಘಾವಧಿ ಜಾಹಿರಾತುಗಳ ದರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು.

ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು, ತಮ್ಮ ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಿಕೀಟೊಂದನ್ನು ಇಡಬೇಕು. (೨) ತಮ್ಮ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಿಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖನಗಳನ್ನು ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು ಮಾರ್ಜಿನ' ಬಿಡಬೇಕು. (೪) ಲೇಖನದ ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಬರುವ ಲೇಖನಗಳು ಜಯಕರ್ನಾಟಕಕ್ಕೆಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗಿರಬಾರದು. ಜಯಕರ್ನಾಟಕಕ್ಕೆಂದು ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾಟಕಕ್ಕೆ ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಪತ್ರವ್ಯವಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರವ್ಯವಹಾರವನ್ನು "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ ವ್ಯವಹಾರವನ್ನು "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ

ಜಯ ಕರ್ನಾಟಕ

EPT. 1938

ANNAS



ಸಿನೇಮಾ ನಟಿ ಮಿಸ್ ಮಾಲತಿ

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢೇಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ ಮುದ್ರಿಸಿ,
...ಚಂದ್ರ ಪಾಂಡುರಂಗ ಬೆಳಗಾಂವಕರ ಇವರು ಧಾರವಾಡದ ರೈಟರ ಓಣಿಯಲ್ಲಿರುವ ಜಯಕರ್ನಾಟಕ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ಪರಿವಿಡಿ

ಮುಖಚಿತ್ರ ....

ಕನ್ನಡಿಗನಿಗೆ (ಕವನ).... .... ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ ೧೬೧

ಇಂದಿನ ಆಂಗ್ಲ ಕವಿತೆ ... . 'ಸಂಕಲಿತ' ೧೬೩

ದೈವಾಧೀನ (ಆತ್ಮಕತೆ) .... ಶ್ರೀ. ಜಿ. ಬಿ. ಶಾಸ್ತ್ರಿ, ಕೊಪ್ಪಳ ೧೬೫

ಜೇನುಹುಟ್ಟಿನ ಗುಟ್ಟು (ಸಚಿತ್ರ) .... ಶ್ರೀ. ಭಾರತಸಂಚಾರಿ ಗೋಸಾವಿ ೧೬೭

ಆರೋಗ್ಯಬಿಂದು ೧೭೯

ದಾಂಪತ್ಯಪ್ರೇಮ .... ಶ್ರೀ. ಕಡೂರು ಶ್ರೀಪಾದ, ಮಿತ್ರಮೇಳ, ಬೆಂಗಳೂರು ೧೮೦

ಅಂತ್ಯಸಂಸ್ಕಾರ (ಸಚಿತ್ರ) .... ಶ್ರೀ. ರಂಗನಾಥ ನೆಗಳೂರ ೧೮೩

ಚಾತುರ್ಮಾಸ್ಯ (ಸಚಿತ್ರ ಏಕಾಂಕ ರೂಪಕ) .... ಶ್ರೀ. ಅರ್ಚಕ "ವೆಂಕಟೇಶ", ಹಾವೇರಿ ೧೮೭

ಕನ್ನಡ ವ್ಯಾಕರಣದಲ್ಲಿಯ ತ್ರಿದೋಷಗಳ ಚರ್ಚೆ .... ಶ್ರೀ. ಬೆಂಗೇರಿ ಹುಚ್ಚರಾಯರು ೧೯೩

ಝೆಕೋಸ್ಲೊವಾಕಿಯದ ಕಸುವೆಲ್ಲಿದೆ? (ಸಚಿತ್ರ) .... 'ವಿಶ್ವವಿಹಾರಿ' ೧೯೬

ನಗಬೇಡಿ.... .... ೨೦೧

ದೂರ....ದೂರ (ಸಚಿತ್ರ ಜಾನಪದ ಪ್ರಣಯಕತೆ) .... ಶ್ರೀ. ಬಸವರಾಜ ಕಟ್ಟೀಮನಿ ೨೦೩

ಸಂಗೀತ ಕಚೇರಿ—ಕನ್ನಡದಲ್ಲಿ (ಸಚಿತ್ರ) .... 'ವಸುಂಧರ' ೨೦೯

ಬೇಗದಿರನು ಬರುವಾಗ (ಕವನ) .... ಶ್ರೀ. ಎ. ಸಿ. ಶಂಕರಭಾರತಿ ೨೧೩

ಜೊನ್ನಿನ ಜೇನಿನ ಸರಿ ಸುರಿದಿತ್ತು (ಕವನ) .... ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ ೨೧೪

ಎಲೆ ನೋವೆ....! (ಕವನ) .... ಶ್ರೀ. ಶಂಕರ ನಾರಾಯಣ ವಿದ್ವಾನ್ ೨೧೫

ಸೂರ್ಯನಮಸ್ಕಾರ (ಸಚಿತ್ರ) .... ಶ್ರೀ. ವಿ. ಆರ್. ಕಣ್ಣಾಸ್ವಾಮಿರಾವ್ ೨೧೭

ಜೀವನರಹಸ್ಯ (ಕವನ).... ....ಶ್ರೀ. ಶಿ ವಿ. ಅಡ್ನಣಗಿ ವಕೀಲರು ೨೧೯

ಜೀವಿಸಲು ಆಸೆ (ಸಚಿತ್ರ ಕತೆ) .... 'ಪಾಂಕಾಲ್' ೨೨೦

ದಪ್ಪಣ್ಣನವರ ತುಪ್ಪದ ಬುದ್ಧಿ .... 'ಉಂಡಾಡಿ' ಅ. ಬ. ಕ. ಡ. ೨೨೬

ಸರ್ವಾಧಿಕಾರಿಗಳ ತೆಕ್ಕೆಯಲ್ಲಿ!— ಅರ್ಥಾತ್ ಆಂಗ್ಲೋ-ಫ್ರೆಂಚ್ ಸಖ್ಯದಲ್ಲಿ ಸಡಿಲು 'ನಾಗರಿಕ' ೨೨೯

ಜ್ಞಾನ-ವಿಜ್ಞಾನ ೨೩೩

....ಮೇಣಬತ್ತಿ ನಂದಿಸುವ ಯುಕ್ತಿ—ಹೊತ್ತಿನ ಹುಚ್ಚು—ಪಶುಗಳಿಗೆ ಕಟ್ಟಿಗೆಯ ಆಹಾರ—ನಾವೆಲ್ಲರೂ ....

....ಹೌದವ್ವ ಇಲ್ಲವೆ ಹೌವಪ್ಪಗಳು—ರೋಗವಾಹಕ ಪ್ರಾಣಿಗಳು—ಸಾಯುವಾಗ ಏನೇನಾಗುತ್ತದೆ!—ಸಸ್ಯ ....

....ಗಳ ಜೀವಸತ್ವ—ಜೊಲಿವಿಯದ ಸ್ತ್ರೀವರ್ಗೀಕರಣ—ಹೊಸ ಮುದ್ರಣ ಯಂತ್ರ ....

ವಿಚಾರವೇದಿಕೆ ೨೩೬

....ಏಕೀಕರಣದ ಅಗತಿಕತೆ—ದಬ್ಬಾಳಿಕೆಯ ಸಹಾಯದಿಂದ ಹಿಂದೀ ಪ್ರಚಾರ—ಮುಸೋಲಿನಿಯ ಮತಾಂತರ ....

ನಮ್ಮ ನೋಟ ೨೩೮

ಬರಲಿವೆ

ಗಡ್ಡಿಯ ಪ್ರೇಮ (ಕತೆ)
ಶ್ರೀ. ಎಚ್. ಎಲ್. ನಾಗೇಗೌಡ, ಪುಣೆ


ಧರ್ಮದ ಹುಡುಗಾಟವೋ? (ಹರಟೆ)
ಶ್ರೀ. ಜೋಗಳೇಕರ ಪಾಂಡುರಂಗರಾಯರು

ದೇವರಿಲ್ಲವೇ?
ಶ್ರೀ. ರಾ. ನ. ಮುಳಗಿ

ಹಸ್ತಸಾಮುದ್ರಿಕ (ಸಚಿತ್ರ ಲೇಖನಮಾಲೆ)
ಶ್ರೀ. ಜಿ. ಎನ್. ಕಲಮದಾನಿ

ಆಫ್ರಿಕದ ಜನಾಂಗಗಳು
ವಿಶ್ವವಿಹಾರಿ

ಹೈದರಾಬಾದದ ...



ದರ್ಯಾ-ದೌಲತ ಬಾಗ

(ಮೈಸೂರು ಸರಕಾರದ ಕೃಪೆಯಿಂದ)

ಜಯಕರ್ನಾಟಕ

ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಭಾದ್ರಪದ ಶುದ್ಧ ೭ (೧—೯—೧೯೩೮) | ಸಂಚಿಕೆ ೯

ಕನ್ನಡಿಗನಿಗೆ

ಕನ್ನಡವೆನ್ನಯ ನಾಡು, ಕನ್ನಡನುಡಿ
ಕನ್ನಡವೆನ್ನದೆಮುಗುಳು.
ಕನ್ನಡವೆನ್ನ ನಲ್ವಗೆಗಳ ಕನ್ನಡಿ
ಕನ್ನಡವೇ ಬಾಳ್ವೆಬೆಳಗು.

ತನುಮನಗಳಲಿ ಕನ್ನಡದ ಕತ್ತುರಿಗಂಪು
ಮನೆಮಾಡಿಕೊಂಡಿರಲೆನ್ನ.
ನನಗೆ ಕನ್ನಡತಾಯ ಮರೆಹಪ್ಪುದುಂಟೆ? ಈ
ತನುವಿನೊಳಸುವಿರುವನ್ನ.

ಕನ್ನಡನಾಡನೊಂದಿಸಿ ಪೂರ್ವವೈಭವ–
ದುನ್ನತಿಕೆಯ ಪೂಸರವನು
ತನ್ನ ತಾಯಿಯ ಕೊರಲಿಗೆ ತುಡಿಸದೆ ಸಾಯೆ–
ನೆಂದು ಬಿತ್ತರಿಸು ಭಾಷೆಯನು.

ಸಾವನು ನೋವನು ಮರೆತು ಮುಂದಕೆ ಬಂದು
ಜೀವನವನು ತಾಯ ಬೆಸಕೆ
ಈವೆನು ಧಾರೆಯನೆರೆದೆಂದು ತರಿಸಂದು
ಸೇವಿಸಿ ಸಲುವುದು ಜಸಕೆ.

ಜಾತಿಮತದ ಭೇದಭಾವಂಗಳನು ಮರೆ–
ದೋತೆಲ್ಲರೊಂದೆ ಕನ್ನಡದ
ಭ್ರಾತರೆಂಬೀ ಭಾವದಿಂದೆಲ್ಲರೊಂದಾಗಿ
ಸೊತ್ತಿಗೀವುದು ಶಾಂತಿಸುಖವ.

ಮೊಗೇರಿ
ಗೋಪಾಲಕೃಷ್ಣ ಅಡಿಗ

ಇಂದಿನ ಆಂಗ್ಲ ಕವಿತೆ

ಅನೇಕ ಶತಮಾನಗಳಿಂದ ಕೊರೆದ ದಾರಿಯಲ್ಲಿ ನಡೆಯುತ್ತಿದ್ದ ಜಗತ್ತಿನ ವಾಙ್ಮಯವು ನವಯುಗದ ಹೊಸಗಾಳಿಯಿಂದ ಹೊಸರೂಪು ಹೊಂದಹತ್ತಿತು. ಸಮ್ಮರ್ದ ವಿರಾಮುಗಳ ಕಾಲದಲ್ಲಿ ಹುಟ್ಟಿದ ಕವಿತೆಯು ಜೀವನ ಸಂಗ್ರಾಮದ ಉರಿಬಿಸಿಲಿಗೆ ಸೇರದಾಯಿತು. ಅದರಿಂದ ಜಗತ್ತಿನ ಸಜೀವವಾದ ಎಲ್ಲ ಭಾಷೆಗಳ ಕಾವ್ಯಪ್ರತಿಭೆಯೂ ಪರಿಸ್ಥಿತಿಗೆ ತಕ್ಕುದಾಗಿ ಅನುಗೊಳ್ಳುತ್ತಿದೆ. ಆಂಗ್ಲ ಕಾವ್ಯವೃಕ್ಷವು ನವಯುಗಕ್ಕೆ ಒಪ್ಪುವಂತೆ ಹೇಗೆ ಬೆಳೆದು ಬಲಗೊಂಡಿತೆಂಬುದನ್ನು ಪ್ರೊ. ಭೂಷಣ ಅವರು ಮರಾಠಾ ಪತ್ರಿಕೆಯಲ್ಲಿ ಬರೆದ ಮಾರ್ಮಿಕವಾದ ಲೇಖನದ ಸಾರಾಂಶವಿದು.

ಸಂಕಲಿತ

ಇಂಗ್ಲಂಡಿನ ಸುಪ್ರಸಿದ್ಧ ರಾಜಕವಿ ಲಾರ್ಡ್ ಟೆನಿಸನ್‌ನು ೧೮೯೨ರಲ್ಲಿ ತೀರಿಕೊಂಡನು. ಆವನ ಮರಣದೊಡನೆಯೆ ಆಂಗ್ಲ ಕಾವ್ಯನದಿಯೂ ಬತ್ತಿಹೋಯಿತೆಂದು ಬಹುಜನರ ಅಭಿಪ್ರಾಯವಾಗಿದೆ. ಆದರದು ತಪ್ಪುತಿಳುವಳಿಕೆ. ಹೊಸ ಕವಿಗಳೂ ಹೊಸ ಕಾವ್ಯ-ಮಾಸಿಕಗಳೂ ಹೊಸ ಕಾವ್ಯಗ್ರಂಥಗಳೂ ಮೆಲ್ಲಮೆಲ್ಲಗೆ ತಲೆದೋರಲಾರಂಭಿಸಿದವು. ೧೯೧೨ರಿಂದ ೧೯೨೨ರೊಳಗಾಗಿ 'ಜಾರ್ಜಿಯನ್ ಕವಿತೆ' ಎಂಬ ಹೆಸರಿನಿಂದ ಐದು ಕಾವ್ಯಗ್ರಂಥಗಳು ಪ್ರಕಟವಾದವು. ಪಂಚಮ ಜಾರ್ಜರ ಜೀವಾವಧಿಯಲ್ಲಂತೂ ಎಂತಹ ದೊಡ್ಡದೊಡ್ಡ ಕವಿಗಳು ಉದಯಿಸಿದರೆಂಬುದು ರಸಿಕರಿಗೆ ತಿಳಿದ ಮಾತಾಗಿದೆ. ೧೯೩೦ರಲ್ಲಿ 'ರಾಜಕವಿ' ಎಂಬ ಪದವಿಯನ್ನು ಹೊಂದಿದ ಜಾನ್ ಮೆಸ್‌ಫೀಲ್ಡ್‌ರ ವಾಸ್ತವದರ್ಶಿ ಹಾಗೂ ಅದ್ಭುತರಮ್ಯವಾದ ಕವನಗಳ ಮೋಹಿನಿಯು ಜನಗಳ ಮನವನ್ನು ವಿಲಕ್ಷಣವಾಗಿ ಮರುಳು ಮಾಡಿತು. ಜಾನ್ ಡ್ರಿಂಕ್‌ವಾಟರ್ ಎಂಬ ಕವಿಗೆ 'ಸರ್' ಎಂಬ ಬಿರುದು ಸಿಕ್ಕಿತು. ಮಹಾಯುದ್ಧ ನಡೆದಾಗ ಕಾವ್ಯ ವ್ಯಾಪಾರಕ್ಕೆ ತುಸು ಮಾಂದ್ಯ ತಗಲಿತ್ತು. ಆದರೆ ಯುದ್ಧಾನಂತರದ ಕವಿಗಳು ಆ ಹಾನಿಯನ್ನು ತುಂಬಿತಂದರು. ಆಂಗ್ಲ ಕಾವ್ಯಪ್ರಪಂಚದಲ್ಲಿ ಮಹಾವಿಪ್ಲವವಾಗುವುದೇನೊ ಎಂಬಂತಹ ಅನೂಹ್ಯ ಪಲ್ಲಟಗಳು ಯುದ್ಧಾನಂತರ ಸಂಭವಿಸಿದುವು. ಕವಿಗಳ ಪ್ರತಿಭೆಯು ಬರಿ ಆಕಾಶಕುಸುಮಗಳಿಗೆ ಕೈನೀಡದೆ ಸ್ವರ್ಗಚುಂಬಕವಾದ ಸ್ವೈರಕಲ್ಪನಾ ಮಂದಿರಗಳನ್ನು ನಿರ್ಮಿಸಹತ್ತಿತು; ಬರಿ ವೇದಾಂತದ ತೂಕಡಿಕೆ ಹೋಗಿ ಮನೋಮೀಮಾಂಸೆಯಲ್ಲಿ ರಮಿಸಹತ್ತಿತು. ದೇವದೇವತೆಗಳಿಗೆ ರಾಜರಾಣಿಯರಿಗೆ ಮುನಿಯೋಗಿಗಳಿಗೆ ಶ್ರದ್ಧಾಂಜಲಿಗಳನ್ನು ಅರ್ಪಿಸುವುದನ್ನು ತೊರೆದು ಆಧುನಿಕ ಕವಿತೆಯು ಪ್ರಾಮಾಣಿಕತೆಯ ಬಿವರಿನಲ್ಲಿ ಗುಟ... ಸರ್ವಸಾಮಾನ್ಯರ ನೈಜಜೀವನದ ವಾಹಕವಾಯಿತು.

ದಂಗೆಗಾರಿಕೆಯು ಆಧುನಿಕ ಆಂಗ್ಲ ಕವಿತೆಯ ವೈ... ವಾಗಿದೆ. ಪರಂಪರೆಯ ವಿರುದ್ಧ, ರೂಢಿಯ ವಿರುದ್ಧ ... ಗಾರಿಕೆ; ವಿಷಯದಲ್ಲಿ, ವರ್ಣನೆಯಲ್ಲಿ, ಭಾಷಾಶೈ... ಎಲ್ಲೆಲ್ಲೂ ದಂಗೆಗಾರಿಕೆ! ಗಂಧರ್ವನಗರಿಯ ಲಲಿತ ... ನೆಯೂ, ಘಟಪಟ ನ್ಯಾಯಗಳ ಒಣವಾದವೂ ... ಬಿದ್ದುವು. ವಾಸ್ತವತೆಯು ಕವಿತೆಯ ಪ್ರಾಣವಾ... ಜೀವನದ ಝುರಿಯೇ ಕವಿಗಳ ಪ್ರತಿಭೆಗೆ ಪೋಷಕವಾ... ಸಾಮಾಜಿಕ ಹಾಗೂ ವೈಜ್ಞಾನಿಕ ಎರಡೂ ಕಾರಣ... ಈ ನವಯುಗಕ್ಕೆ ಪುಷ್ಟಿ ಸಿಕ್ಕಿತು. ವಿಜ್ಞಾನ ಪ್ರಸಾ... ಮನುಷ್ಯನ ತಿಳುವಳಿಕೆ ಹೆಚ್ಚಿತು; ಸಮಾಜ-ಭಾ... ಪ್ರಸಾರದಿಂದ ಮನುಷ್ಯರಲ್ಲಿ ಬಂಧುಭಾವ ಬೆ... ಆದರಿಂದ ದೂರದ ಮಸುಕಾದ ಕಾಲ್ಪನಿಕ ವಿಷಯ... ಪ್ರತ್ಯಕ್ಷ ಅನುಭವದ ವಿಷಯಗಳ ಕಡೆಗೆ ಆಧುನಿಕ ... ಕವಿತೆಯ ಒಲವಾಯಿತು. ಅದಕ್ಕೆ ಶಬ್ದಾಡಂಬರದ ... ಹುಟ್ಟಿತು; ಸಂದಿಗ್ಧತೆಯು ಬೇಡವಾಯಿತು. ಆದು ಸ... ಸರಲವೂ ಆದ ಸ್ವರೂಪವನ್ನು ತಾಳಿತು. ಆದರ ಛ... ಒಂದೆ ಎರಕದಲ್ಲಿ ಹೊಯ್ದುದಲ್ಲ; ಸ್ವತಂತ್ರ... ಯಾದುದು. ಆಕಾಶಕ್ಕೆ 'ನಭೋವಿತಾನ, ಗಗನ... ಮುಂತಾಗಿ ಅಲಂಕಾರಿಕ ನಾಮಕರಣದ ಪ್ರಾವೀಣ್ಯ... ತೋರಿಸದೆ ಆಧುನಿಕ ಕವಿತೆಯಲ್ಲಿ ಆಕಾಶವೆಂದೇ ... ಲಾಗುವುದು. ಆ ರೂಪಕ-ಉತ್ಪ್ರೇಕ್ಷೆಗಳೂ ಅತಿ... ಶಯೋಕ್ತಿಗಳೂ ಈಗ ಆಂಗ್ಲ ಕವಿತೆಯಿಂದ ದೂರ...

ವರ್ಡ್ಸ್‌ವರ್ಥ್ ಮೊದಲಾದ ಪೂರ್ವಕವಿಗಳು ನಿ... ದೊಡನೆ ತಾದಾತ್ಮ್ಯವನ್ನು ಹೊಂದಿ ನಿಸರ್ಗದಿಂದ...

ಯನ್ನು ಪಡೆದು ಅದನ್ನೆ ತಮ್ಮ ಗುರುವನ್ನಾಗಿ ಮಾಡಿ
ಕೊಳ್ಳುತ್ತಿದ್ದರು. ಆ ಯುಗವೀಗ ಕಳೆಯಿತು. ಸೃಷ್ಟಿಯನ್ನು
ಮಾತೆಯೆಂದೂ, ನಿಸರ್ಗವನ್ನು ಶಿಕ್ಷಕನೆಂದೂ ಕರೆಯುವುದು
ಈಗ ಹಳೆ ಪುರಾಣವಾಯಿತು. ವಿಜ್ಞಾನ ಶೋಧಗಳಿಂದ ನಿಸ
ರ್ಗದಲ್ಲಿ ದೇವತ್ವವನ್ನಾಗಲಿ ದಿವ್ಯತ್ವವನ್ನಾಗಲಿ ಕಾಣುವುದು
ಅಸಂಭವವಾಯಿತು. ಈಗಲೂ ಕವಿಗಳು ನಿಸರ್ಗವನ್ನು
ಆಧರಿಸುತ್ತಾರೆ. ಆದರದು ವಿಶ್ರಾಂತಿಗಾಗಿ, ಸ್ಫೂರ್ತಿಗಾಗಿ;
ಜ್ಞಾನಕ್ಕಾಗಿಯಲ್ಲ. ಪಟ್ಟಣಗಳ ಗುದುಮುರಿಗೆಯಿಂದ
ಬಿಡುಗಡೆ ಹೊಂದುವುದಕ್ಕಾಗಿ ಅವರು ನಿಸರ್ಗದ ಆಶ್ರಯ
ವನ್ನು ಹೊಂದುವರು. ನಗರಗಳಲ್ಲಿ ಗಿರಣಿಗಳ ಹೊಗೆ
ಯಿಂದ ನೀಲಾಕಾಶವು ನೋಡಸಿಗುವುದಿಲ್ಲ; ಬಯಲು
ಗಾಳಿಯು ವಿದ್ಯುತ್ತಂತ್ರಿಗಳಿಂದ ಬಂಧಿಸಲ್ಪಟ್ಟಿರುತ್ತದೆ;
ಸಾಲದುದಕ್ಕೆ ವಿಮಾನಗಳ ಘರಘರಾಟ! ಇರುಳಲ್ಲಿ ಮಿಂಚು
ದೀಪಗಳು 'ಚಂದ್ರಿಕಾಜಗತ್ತ'ನ್ನು ಮರೆಯಿಸುವುವು. ನದಿ
ಗಳ ಮನೋಹರ ಪ್ರವಾಹಗಳೆಲ್ಲ ಕಾರಖಾನೆಗಳ ಸಹಾಯಕ್ಕೆ
ತೆರಳುತ್ತಿವೆ. ನೋಡಿದೆಡೆಯಲ್ಲೆಲ್ಲ ಯಾಂತ್ರಿಕತೆಯು ಬಾಯ್ದೆ
ರೆದು ನಿಂತಿದೆ. ಇಂತಹ ಸ್ಥಿತಿಯಲ್ಲಿ ಮನದ ದಣಿವು ಕೊಂಚ
ಕಳೆಯಲೆಂದು ಕವಿಗಣವು ನಿಸರ್ಗದ ಕಡೆಗೆ ಒಲೆಯು
ತ್ತಿದೆ. ಆದರೂ ನೈಸರ್ಗಿಕ ಚಮತ್ಕಾರಗಳಿಂದ ನೀತಿ
ಉಪದೇಶಗಳನ್ನು ಪಡೆಯಲು ಅದು ಹಾತೊರೆಯುವುದಿಲ್ಲ.

ನಿಸರ್ಗವಿಷಯಕ ಪರಿವರ್ತನವು ಪ್ರಣಯಕ್ಷೇತ್ರ
ದಲ್ಲಿಯೂ ಇದೆ. ಆ 'ಸ್ವರ್ಗೀಯ ಪ್ರೇಮ'ವು ಕಾವ್ಯಲೋಕ
ದಿಂದ ಇಂದು ಮರೆಯಾಗುತ್ತಿದೆ. ಧರ್ಮಭಾವನೆಯ
ಗತಿಯೂ ಅದೇ. ಏನಾದರೂ ಉಪದೇಶಿಸಬೇಕು; ಯಾವು
ದಾದರೊಂದು ನೀತಿತತ್ವವನ್ನು ಹೇಳಬೇಕೆಂಬ ಪ್ರವೃ
ತ್ತಿಯು ಆಧುನಿಕ ಆಂಗ್ಲ ಕವಿಗಳಲ್ಲಿಲ್ಲ. 'ಈಶ್ವರನೆಂಬುದು
ಒಂದು ವಸ್ತುವಲ್ಲ; ಅದೊಂದು ತತ್ವ' ಎಂಬ ನಿರ್ಗುಣ
ಜೋಪಾಸನೆಯನ್ನು ಆಧುನಿಕ ಕವಿತೆಯು ಮಾಡುತ್ತಿದೆ
ಯೆಂದರೂ ಸರಿ. ಕ್ರಿಸ್ತನ ವಿಷಯದಲ್ಲಿ ವಿಶೇಷ ಕವಿತೆ
ಗಳು ರಚಿಸಲ್ಪಡುತ್ತಿವೆಯೆಂಬುದು ನಿಜ. ಆದರೆ ಅವುಗಳ
ಲ್ಲಿಯೂ ಆತನ ಮನುಷ್ಯಪ್ರೇಮ, ಆತನು ಮನುಷ್ಯರಿಗಾಗಿ
ಮಾಡಿದ ಆತ್ಮವಿಸರ್ಜನದ ವಿಷಯವೆ ವಿಶೇಷವಾಗಿರುತ್ತದೆ.
ಎ. ಈ. ಎಂಬ ಹೆಸರಿನಿಂದ ಕವಿತೆ ರಚಿಸುತ್ತಿದ್ದ
ಜಾರ್ಜ ರಸೆಲ್‌ನ ಸ್ಫೂರ್ತಿಗೆ ನಮ್ಮ ಉಪನಿಷತ್ತುಗಳು
ಉರವಲನ್ನು ಕೊಟ್ಟವೆ. ಹಿಂದೂ ಧರ್ಮಶಾಸ್ತ್ರದಲ್ಲಿಯೆ
ಅವನ ಗೂಢಾನ್ವೇಷಿ ಮತ್ತು ತತ್ವಜಿಜ್ಞಾಸುವಾದ ಬುದ್ಧಿಗೆ
ಶಾಂತಿ ಮತ್ತು ಸಮಾಧಾನ ಸಿಕ್ಕವು.

ಆಧುನಿಕ ಆಂಗ್ಲ ಕವಿತೆಯ ಎದ್ದುಕಾಣುವ ಸ್ವಭಾವ
ವೆಂದರೆ ವೀರವೃತ್ತಿ. ಮಹಾಯುದ್ಧಕಾಲದ ಕವಿತೆಗಳಿ
ಗಂತೂ ಆ ವೃತ್ತಿಯು ಜೀವಜ್ಯೋತಿಯಾಗಿತ್ತು. ಯುದ್ಧವು
ನಡೆದಾಗಲೂ, ಮುಗಿದನಂತರವೂ ಆ ವಿಷಯದ ಕವಿತೆ
ಗಳಿಗೆ ನೆರೆಬಂದಿತ್ತು. ರೂಡ್‌ಯಾರ್ಡ್ ಕಿಪ್ಲಿಂಗ್, ಥಾಮಸ್
ಹಾರ್ಡಿ ಮೊದಲಾದವರು ಮಾತೃಭೂಮಿಯ ದೊಡ್ಡ
ಸ್ತಿಕೆಯ ಗುಣಗಾನ ಮಾಡುತ್ತ ಜನತೆಯಲ್ಲಿ ರಣವೀರ್ಯ
ವನ್ನು ಹೆಚ್ಚಿಸುತ್ತಿದ್ದರು. ಅಲಿಪ್ತಭಾವದಿಂದ ದೇಶಭಕ್ತಿ
ಯನ್ನು ರಸಪೂರ್ಣವಾಗಿ ವರ್ಣಿಸಿದ ಕವಿಗಳದೊಂದು
ವರ್ಗವನ್ನು ಕಲ್ಪಿಸಬಹುದು.

> Who stands if freedom fall ?
> Who dies if England live ?

ಇಂತಹ ಉತ್ಸಾಹಪ್ರೇರಕ ಪ್ರಶ್ನೆಗಳನ್ನು ಅವರು
ಕೇಳುತ್ತಿದ್ದರು. ರೂಪರ್ಟ್ ಬ್ರೂಕ್, ಜುಲಿಯನ್ ಗ್ರೇನ್
ಫೆಲ್, ರಾಬರ್ಟ್ ನಿಕೊಲ್ಸ್, ಎಡಮಂಡ್ ಬ್ಲಂಡನ್
ಮುಂತಾದ ಕವಿಗಳಂತೂ ಒಂದು ಕೈಯಿಂದ ಲೇಖನಿಯನ್ನೂ
ಇನ್ನೊಂದು ಕೈಯಿಂದ ಪಿಸ್ತೂಲನ್ನೂ ನಡೆಸಿದರು. ಜಗ
ತ್ತಿನ ಇತಿಹಾಸದಲ್ಲಿಯೆ ಇಷ್ಟು ಜನ ಕವಿಯೋಧರು
ಒಮ್ಮೆಲೆ ಉದಯಿಸಿದುದು ಇದೇ ಮೊದಲು. ತಾಯಿನಾಡಿನ
ಸೇವೆಯನ್ನು ಅಂಗೈಯಲ್ಲಿ ಧರಿಸಿ, ಸಾವಿನೆದುರು ತೊಡೆ
ತಟ್ಟಿ, ರಣಯಜ್ಞದಲ್ಲಿ ಹಾರಲು ಸಿದ್ಧರಾದ ಕವಿಗಳ ವೀರ
ಕಾವ್ಯಗಳಲ್ಲಿ ಎಂತಹ ಜೀವ, ಎಂತಹ ಯಥಾರ್ಥಭಾವನೆ,
ಎಂತಹ ನೈಜಚಿತ್ರಗಳು ಮೂಡಿರಬಹುದೆಂಬುದನ್ನು ಬೇರೆ
ಹೇಳಬೇಕೆ ?

'I am hit ! I am kicked!' ಎಂಬ ಕೂಗುಗಳನ್ನು ರಣ
ಭೂಮಿಯಲ್ಲಿ ಕಿವಿಯಾರೆ ಕೇಳಿದವರ ಲೇಖನಿಯಿಂದು
ರುಳಿದ ಶಬ್ದಗಳು ಓದುವವರ ಹೃದಯಕ್ಕೆ ಒಮ್ಮೆಲೆ ಹೇಗೆ
ಅಪ್ಪಳಿಸಬಹುದು ! ಸಮರಾಂಗಣದಲ್ಲಿ ದೇಹವಿಟ್ಟ ಗ್ರೇನ
ಫೆಲ್‌ನು—

> And he is dead who will not fight.
> And who dies fighting has increased.

ಎಂಬ ಸಿದ್ಧಾಂತವನ್ನು ಸಾರಿದಾಗ ಇಂಗ್ಲಂಡಿನ ಜನತೆ
ಯಲ್ಲಿ ಸಾಯುವ ಹುಚ್ಚು ಹರಡಿದುದರಲ್ಲಿ ಆಶ್ಚರ್ಯವೇನು?
ವೀರಕವಿಗಳ ಕೃತಿಗಳಲ್ಲಿಯ ಈ ಜೀವಂತಿಕೆಯಿಂದಲೆ ಅವು
ಅಷ್ಟು ಮೆಚ್ಚುಗೆಯಪಡೆದುವು. ಮುಂದೆ ಸಮರಾಗ್ನಿಯು
ಆರುತ್ತ ನಡೆಯಿತು; ಅನೇಕರ ಆಕಾಂಕ್ಷೆಗಳು ಬೂದಿಗಂಡವು;

ಮನೆಗಳು ಮಂಣುಗೂಡಿದವು; ಬಾಳು ಬರಿದಾಯಿತು; ರಣದೇವತೆಗೆ ಆಪಾದಮಸ್ತಕವೂ ರಕ್ತಾಭಿಷೇಕವಾಯಿತು. ಹೀಗೆ ಜನರಿಗೆ ಅನಿಸಹತ್ತಿತು. ಯುದ್ಧದ ವಿಷಯಕ್ಕೆ ಓಕರಿಕೆ ಹುಟ್ಟಿತು. ಈ ಭಾವನೆಗಳ ದನಿಯೂ ಕಾವ್ಯಗಳಲ್ಲಿ ಮಾರ್ದನಿಗೊಂಡಿತು. ಸಹಾನುಭಾವಿ ಪ್ರೇಕ್ಷಕ, ಅಂಶಭಾಗಿ ಕಾರ್ಯಕರ್ತೃ ಮತ್ತು ಪಶ್ಚಾತ್ತಪ್ತ ಯುದ್ಧದ್ವೇಷ್ಟೃವೆಂದು ಮೂರು ವರ್ಗಗಳ ಕವಿಗಳೀಗ ಕಾಣಬರುತ್ತಾರೆ. ಅವರೆಲ್ಲರ ಕೃತಿಗಳಲ್ಲಿ ಸತ್ಯಪೂರ್ಣತೆ, ಪ್ರಾಂಜಲತೆ, ಜೀವಂತಿಕೆಗಳು ತುಂಬಿತುಳುಕುತ್ತಿವೆ.

ದೈವಾಧೀನ

ಲೇಖಕರು: ಶ್ರೀ|| ಜಿ. ಬಿ. ಶಾಸ್ತ್ರಿ, ಕರ್ನಾಟಕ ಸಂಘ, ಕೊಪ್ಪಳ

ಕನ್ನಡ ಸಾಹಿತ್ಯವನದಲ್ಲಿ ಚಿಗುರಿ ಬೆಳೆಯುತ್ತಿದ್ದ ಒಬ್ಬ ಸಾಹಿತಿಗಳ ಮರಣಕಾಲಕ್ಕೆ ಅವರ ಕುಟುಂಬದಲ್ಲಿ ತಾಂಡವವಾಡಿದ ರೋಗದೇವತೆಯ ಮತ್ತು ಆ ಜ್ವಾಲೆಯಲ್ಲಿ ಬೆಂದು ಬದುಕಿದ ಒಬ್ಬ ಸಹೋದರನ ಮನಃಕ್ಷೋಭೆಯ ರೋಮಾಂಚಕಾರಿಯಾದ ವಾಸ್ತವ ಚಿತ್ರವಿದು. ಆತ್ಮೀಯರ ಅಳಿಯುವಿಕೆಯಿಂದ ಉಕ್ಕಿಬರುತ್ತಿದ್ದ ದುಃಖವನ್ನು 'ಆಗುವುದೆಲ್ಲ ದೈವಾಧೀನ' ವೇದಾಂತದಿಂದ ಹತ್ತಿಕ್ಕಿಡುವುದು ಎಷ್ಟು ಕಠಿನವೆಂಬುದು ಈ ಲೇಖನದಲ್ಲಿ ನಿಚ್ಚಳವಾಗಿದೆ. 'ಜೀವನಸ್ಮೃತಿ' ಲೇಖನರೂಪಕ್ಕೆ ಇದೊಂದು ಒಳ್ಳೆಯ ಮಾದರಿ.

— ಸೃಷ್ಟಿ —

ಹಿರಿತನವನ್ನು ಸಂಪಾದಿಸಬೇಕೆಂಬ ಆಶೆಯಿಂದ ಹಡೆದೂರಿನಿಂದ ಹೊರಬಿದ್ದ ನಾವು ಹೈದರಾಬಾದದಲ್ಲಿ ನೆಲೆಯಾಗಿ ನಿಂತೆವು. ನಮ್ಮದಾಗ ದೊಡ್ಡ ಬಳಗ. ಐದಾರು ಮಂದಿ ಅಣ್ಣತಮ್ಮಂದಿರು, ಮಕ್ಕಳು-ಮೊಮ್ಮಕ್ಕಳಿಂದ ಮನೆಯು ಗಿಜಗರೆಯುತ್ತಿತ್ತು. ನೆಲೆಯಾಗಿ ನಿಂತ ಕೆಲವು ದಿನಗಳ ನಂತರ ನಮ್ಮ ಹಿರಿಯಾಶೆಗೆ ಕಾಲಮಾನಗಳ ಆಸರದಿಂದ ಕಳಸವೇರತೊಡಗಿದ್ದಿತು. ಹಿರಿಯರ-ಹುಡುಗರ ಹೃದಯಗಳು ಹರವಾಗಹತ್ತಿದವು. 'ಆದರ್ಶ' ಮನೆತನವೆಂಬ ಮುದ್ರೆ ಬಿದ್ದಿತು ನಮ್ಮ ಮನೆಗೆ. ಕೆಲಸ....ಕಲೆಯ ಕೈಕೆಲಸ. ಹೊತ್ತುಳಿದಾಗ ಸಾಹಿತ್ಯಸೇವೆಯ ಕಾರ್ಯ. ಕೆಲವು ದಿನಗಳೊಳಗಾಗಿ ನಮ್ಮ ಕಾರ್ಯರಂಗವು ರಂಗಿಗೇರಿತು. ಜನರ ಮನವನ್ನು ಸೆಳೆದಿತು. ಬರಬರುತ್ತ ಆ ಹಿರಿತನವನ್ನು ಸಂಪಾದಿಸುವ ಹವ್ಯಾಸಾಂದೋಲನವು ಮನೆಯವರನ್ನೆಲ್ಲ ಕಲೋಪಾಸಕರನ್ನಾಗಿ ಮಾಡಿತು. ಹುಡುಗ ಕವಿ; ಹಿರಿಯ ಕವಿ. ಹೆಣ್ಣೂ ಕವಿ; ಗಂಡೂ ಕವಿ. 'ಅದು ಕಾವ್ಯದೇವಿಯ ಬಳಗ' ಎಂದು ನಮ್ಮ ವಿಷಯಕ್ಕೆ ಜನರ ತಿಳುವಳಿಕೆಯು ಮೂಡಹತ್ತಿತು. ಜನರ ಪ್ರೀತ್ಯಾದರಗಳು ದೊರಕಹತ್ತಿದವು.

— ಪ್ರಳಯ —

"ಅಯ್ಯಯ್ಯೋ ಶ್ರೀಪಾದಾಽಽ! ನಿನ್ನೂ ಈ ಊರಿಗೆ ಆಹುತಿ ಕೊಡ್ಲಿಕ್ಕ ಬಂದಿದ್ವೇನಽ, ಅಯ್ಯಯ್ಯೋ ದೇವ್ರು ಮುದಕ್ರು ಇಟ್ಟು ಹರಕಿ ಹೊತ್ನೆಲ್ಲೋ, ನಿನ್ನ ಕಲ್ಲೆದಿ ಕರಗ್ದು ಹೋಯ್ತಽ" ಎಂದು ಹಣೆ ಹಣೆ ಬಡಿದುಕೊಂಡು ಗೋಳಾಡಿ ಅಳುವ ನಿಡಿದಾದ ಧ್ವನಿಯು ಕರ್ಣರಂಧ್ರವನ್ನು ಹೊಕ್ಕಾಗ ನನಗೇನೂ ತಿಳಿಯಲಿಲ್ಲ. ಸ್ಮೃತಿಯನ್ನೆಲ್ಲ ಒಟ್ಟಾರೆ ಸಂಗ್ರಹಿಸಿಕೊಂಡು ಕಿವಿ, ಹೃದಯ ಎಲ್ಲವನ್ನು ತೆರೆದು ಕುಳಿತುಕೊಂಡೆ. ಹತ್ತೆಂಟು ಬೇರೆ ಬೇರೆ ಧ್ವನಿಗಳು! ನಡುನಡುವೆ ಬೊಬ್ಬೆ!! ಶಂಖ!!! ಆ ತಾಯ್ಗರುಳಿನ ಚೀರಾಟ—ಎಲ್ಲವನ್ನು ಮಿಕ್ಕಿತ್ತು! ನನಗೆ ಮಲಗಲಾಗಲಿಲ್ಲ! ತತ್ತರಿಸಿದೆ....ಏಳಲು ಬರಲಿಲ್ಲ! ಹದಿನೆಂಟು ದಿನಗಳಿಂದ ಭೀಕರವಾದ ವಿಷಮಜ್ವರದ ದವಡೆಯಲ್ಲಿ ಸಿಕ್ಕು ಸವೆದುಹೋದ ನನ್ನ ಶಕ್ತಿ ಸಹಾಯಕ್ಕೆ ಬರಲಿಲ್ಲ. ಎಬ್ಬಿಸಿ ಕೂಡ್ರಿಸಲು ಬಿದ್ದಲ್ಲಿಯೇ ಬಿದ್ದುಕೊಂಡೆ. ಮನಸ್ಸು 'ಆದದ್ದೇನು?' ಎಂಬುದನ್ನು ತಿಳಿಯಲು ತವಕಿಸಹತ್ತಿತು. ಅಳುವು ಇಳಿತಕ್ಕೆ ಬಂದ ಸಮಯದಲ್ಲಿ, ಅನಾಥರಾಗಿ ಬಿದ್ದುಕೊಂಡಿದ್ದ ನಮಗೆ ಸಹಾಯಮಾಡಲು ಟೊಂಕಕಟ್ಟಿದ ಸದಾಶಿವರಾಯರು ಡಾಕ್ಟರರೊಂದಿಗೆ ಬಂದರು. ಅವರುಗಳನ್ನು ಕಂಡು ಅಳುವು ಅಂಕೆಮೀರಿತು. "ಅಯ್ಯಯ್ಯೋ ಸದಾಶಿವರಾಯ್ರಽ! ನೋಡ್ಬರ್ರಿ ನನ್ಮಗನ್ನಽ! ಬಾಯಿ ಸೊಟ್ಟಾಗಿ ಹೋಗೇದ ಕೈಕಾಲು ಕಟಗಿ ಆಗ್ಯಾವಽ! ಡಾಕ್ಟರ್ನ ಕರಕೊಂಡು ಬಂದ್ರೀ....ಅವ್ರಽ ನನ್ಮಗನ್ನ ಕೊಂದಿಟ್ರೊ" ಎಂದು ತಾಯಿಯು ಹಾಡಾಡಿಕೊಂಡು ಅಳುವುದು ಕಿವಿಗೆ ಕೇಳಿಸಿದಾಗ ಅನಿಸಿದ್ದನ್ನು ಬರೆಯಬಲ್ಲೆನೆ! ನನ್ನ ಕಣ್ಣುಗಳಿಂದಲೂ ನೀರು ಹರಿಯಹತ್ತಿತು. ಆಗ ನನ್ನ ಆರೈಕೆಗೆ ಕುಳಿತ ಆಪ್ತಸ್ನೇಹಿತರು ಪರಿಪರಿಯಿಂದ ಸಮಾಧಾನ ಹೇಳಿದರು. 'ಏನೂ ಆಗಿಲ್ಲ. ಶೀತದಿಂದ ಹಾಗಾಗಿತ್ತು, ಈಗ ಗುಣವಾಗಿದೆ. ನಾಯಡು ಡಾಕ್ಟರ ಬಂದಿದ್ದ; ಎಲ್ಲ ಸರಿಹೋಗುತ್ತದೆ. ನೀನು ಗಾಬರಿಯಾಗಬೇಡ. ಇಳಿತರಕ್ಕೆ ಬಂದ ನಿನ್ನ ಜ್ವರ ಮತ್ತೆ ಹೆಚ್ಚಬಹುದು. ಅಳಬೇಡ, ಗಾಬರಿಯಾಗಬೇಡ' ಎಂದು ತಲೆಯ ಮೇಲೆ ಕೈಯಾಡಿಸುತ್ತ ಹೇಳಿದರು. ಆದರೇನು; ಅದನ್ನು ತಡೆಯುವವರಾರು! ಹೃದಯವೇದನೆಯಿಂದ ಹೊರಬಿದ್ದ ಆ ದುಃಖಪ್ರವಾಹ ಹೆಚ್ಚಿತೇ ಹೊರತು ಕಡಿಮೆಯಾಗಲಿಲ್ಲ. ಇದನ್ನು ನೋಡಿ ನನ್ನ ಉಪಚಾರಕರು ಎದ್ದು ಹೋಗಿ ಒಂದು

ಮೂಲೆಯಲ್ಲಿ ನಿಂತು 'ಗುಜು-ಗುಜು' ಮಾಡಹತ್ತಿದರು. ಅದು ನನಗೆ ಕೇಳಿಸದೇ ಇರಲಿಲ್ಲ. "ಬಹಳ ಅಶಕ್ತನಾಗಿ ದ್ದಾನೆ. ಇಲ್ಲಿಯೇ ಹೀಗೆಯೇ ಬಿಟ್ಟರೆ ಒಂದ್ಹೋಗಿ ಒಂದಾ ದೀತು; ಡಾಕ್ಟರರ ಹೇಳ್ಕೆಯಂತೆ ಬೇರೆಡೆಗೆ ಬೇಗನೇ 'ಶಿಫ್ಟ್' ಮಾಡುವುದೊಳಿತು" ಎಂದು ತನ್ನ ಅಭಿಪ್ರಾಯವನ್ನು ಮಂಡಿಸಿದ ಒಬ್ಬ. ಉಳಿದವರು ಅನುಮೋದಿಸಿದರು. ಆದರೆ ಅದನ್ನು ಕಾರ್ಯದಲ್ಲಿ ತರುವ ಬಗೆ ಹೇಗೆ? ಯಾರ ಮನೆಗೆ ಕರೆದೊಯ್ಯಬೇಕೆಂಬ ಪ್ರಶ್ನೆ ಅವರಲ್ಲಿ ಉದ್ಭವಿಸಿ ಬಹಳ ಹೊತ್ತು ಕಾಡಿಸಿರಬೇಕು. ಅದೇ ಹೊತ್ತಿಗೆ ಜಡ್ಡು ಜೋರಾಗಿದೆ ಎಂದು ಸುದ್ದಿಯನ್ನು ಕೇಳಿದ ನೆರೆಹೊರೆ ಯವರು ಒಬ್ಬೊಬ್ಬರಾಗಿ ಬರತೊಡಗಿದರು. ಅವರು ಬಂಹ ಹಾಗೆಲ್ಲ ಮನೆಯಲ್ಲಿಯ ರಂಭಾಟ ಹೆಚ್ಚಹತ್ತಿತು. ನನ್ನನ್ನೂ ದಿಙ್ಮೂಢನನ್ನಾಗಿಮಾಡಿತು. ದುಃಖ ಮೇರೆ ಮೀರಿ ಹರಿಯಹತ್ತಿತು. ನನ್ನೆಡೆಗೆ ಕುಳಿತ ಗೆಳೆಯ "ಉ-ಹೂ! ಏನಾಗಿದೆ ಈಗ. ಹೀಗೆ ದುಃಖಿಸಬಾರದು. ಡಾಕ್ಟರರು ಬಂದಿದ್ದಾರೆ. ಇಲಾಜು ನಡೆದಿದೆ. ಮೊದಲಿ ಗಿಂತ ಈಗ ತುಸು ಗುಣಮುಖವಾಗಿದೆ. ಈಗ ನಾವು ಏನು ಮಾಡುವಂತಿದ್ದೇವೆ; ನೋಡು ಸುಬ್ಬೂ ಎಲ್ಲ ದೈವಾಧೀನ; ಅಜ್ಞಾನಿ ಮಾನವನ ಕರ್ತವ್ಯವೆಂದರೆ ಮಿಡಕುವುದು ಕೊರಗುವುದು. ಅಲ್ಲಾ ಹೀಗೆ ದುಃಖಿಸಬಾರದು. ನಿನ್ನ ಜ್ವರವೂ ಹೆಚ್ಚಿಗಿಚ್ಚ್ಯಾವು" ಎಂದು ಡಿಗ್ರಿಯನ್ನು ಬಾಯ ಲ್ಲಿಟ್ಟುಕೊಳ್ಳಲು ಸನ್ನೆ ಮಾಡಿ ಹೇಳಿದ. ಇಟ್ಟುಕೊಂಡೆ. ಜ್ವರವನ್ನು ನೋಡಿ ಮಾತನ್ನೂ ಕೂಡ ಆಡದೆ ಬಿಸಿಯುಸಿ ರೊಂದನ್ನು ಬಿಟ್ಟು ಹೊರಹೊರಟು ಹೋದ.

ಆ ಗೆಳೆಯ ಸ್ವಲ್ಪ ಹೊತ್ತಿನ ತರುವಾಯ ಡಾಕ್ಟರರನ್ನು ಕರೆದುಕೊಂಡು ಬಂದ. ಡಾಕ್ಟರರು ಎಲ್ಲವನ್ನು ಪರೀಕ್ಷಿಸಿ 'ಬಹಳ ನಿತ್ರಾಣನಾಗಿದ್ದಾನೆ. ಟೆಂಪರೇಚರ ಹೆಚ್ಚಾಗ ಹತ್ತಿದೆ. ಆದಕ್ಕಾಗಿ ಈತನನ್ನು ಬೇರೆಡೆಗೆ ಆದಷ್ಟು ತೀವ್ರ ಒಯ್ಯುವುದು ಉತ್ತಮ' ಎಂದಂದು ಹೋಗಿಬಿಟ್ಟರು.

ಮತ್ತೆ ನೆರೆದಿತು ಆಲೋಚನಾಸಭೆ ಆ ಮೂಲೆಯಲ್ಲಿ. ಪ್ರತಿಯೊಬ್ಬರಿಗೂ ಎದೆಯೊಡಿಕೆ. ಗಾಬರಿ ಗಾಬರಿ! ಅದೇ ಮೂರು ನಾಲ್ಕು ದಿನಗಳ ಹಿಂದೆ ಜಾವಳಕ್ಕೆಂದು ಸಿದ್ಧ ವಾದ ಒಬ್ಬ ಮೊಮ್ಮಗನ ಆಕಸ್ಮಾತ್ ಮರಣದ ಸುದ್ದಿ ಯನ್ನು ಕೇಳಿದ್ದರು ಆ ಆಲೋಚನಾ ಮಂಡಲದವರು. ಆದಕ್ಕಾಗಿ ಅವರಿಗಷ್ಟು ಭಯ. ಆದರೆ ಒಬ್ಬರಿಗೂ 'ನನ್ನ ಮನೆಗೆ ಕರೆದೊಯ್ಯುವೆ' ಎನ್ನುವ ಎದೆಯಿಲ್ಲ. ಇರ ಬಹುದು. ಆದರೆ ಹಿಂದುಗಡೆಯಿಂದ ಅಪವಾದ ಬರುವ ಹಾಗಾದರೆ—ಎಂಬ ಅಂಜಿಕೆ. ಅದಕ್ಕಾಗಿ ಒಬ್ಬರೂ ಎಂದಿರಲಿಲ್ಲ. ಸುಮ್ಮನೇ ಒಟಗುಟ್ಟುತ್ತಿದ್ದರು. ಹೋಗುವ ದೆವ್ವವನ್ನು ಸುಮ್ಮನೇ ನಾವಾಗಿ ಹೊಗಿಸಿಕೊಳ್ಳಬೇಕು? ತಾನಾಗಿ ಕೊಕ್ಕರೆ ವಂತೆ. ಬಿಡುಗಡೆಯಿಲ್ಲ, ಅನುಭೋಗಿಸಬೇಕು, ಸೋಣ ಎಂದು ಆದೆಷ್ಟೋ ಸಲ ಯೋಚಿಸಿ, ತುದಿಯವರೆಗೆ 'ನಾ ಕರೆದುಕೊಂಡು ಹೋಗುವೆ' ಬಂದದ್ದನ್ನು ನಾಲಿಗೆ ಕಡಿದುಕೊಂಡು ಅದನ್ನು ಹತ್ತಿಕ್ಕಿ ಹಾಕುತ್ತಿದ್ದರು.

ಇಂತು ಇವರುಗಳ ಮಾನಸ ಸರೋವರದ ಆಂದೋಲನವೆದ್ದಾಗ ಆಪ್ತಸ್ನೇಹಿತನೊಬ್ಬ 'ಜೋಶಿ ಜೋಶಿ' ಎಂದು ಆಲೋಚನಾ ಓಡಿತು. ಅತ್ತ ಹಾಡಾಡಿಕೊಂಡು ಅಳುವುದರ ಮೀರಿತು. ನನ್ನ ಹೃದಯದಲ್ಲಿ ತಳಮಳ ಹೆಚ್ಚಿತು. ವೆದ್ದಿತು. ಕಣ್ಣೀರಪ್ರವಾಹಕ್ಕೆ ಮಹಾಪೂರ

ಸ್ವಲ್ಪ ಹೊತ್ತು ಹೀಗೇ ಕಳೆಯಿತು. ಆ ಜೋಶಿಯು ಬಂದು ನನ್ನ ತಲೆಯ ಮೇಲೆ ಕೈಯ್ಯಾಡಿಸಿ "ಸುಬ್ಬೂ ದುಃಖಿಸಬೇಡ. ನೋಡು ಯಾರು ಮಾಡುವಂತಿದ್ದೇವೆ? ದೇವರು ತಂದದ್ದನ್ನು ಭೋಗಿಸಬೇಕು. ಅಳಬೇಡ ಸುಬ್ಬೂ—ಅತ್ತರೆ ಹೆಚ್ಚುತ್ತವೆಯೆಂದು ಡಾಕ್ಟರರ ಹೇಳಿಕೆ! ಇಲ್ಲಿಯ ನೆಟ್ಟಗೆ ಇಲ್ಲವಂತೆ. ಹೇಳಿ ಕಳಿಸಿದ್ದೇನೆ. ಈಗ ಬರುತ್ತದೆ ನಮ್ಮ ಮನೆಗೆ ಹೋಗುವಾ. ಅಲ್ಲಿಯ ಮಾಡಸ್ತೀನಿ. ನಮ್ಮದನ್ನು ನಾವು ಮೊದಲು ಕೊಳ್ಳಬೇಕು ಸುಬ್ಬೂ. ಆ ಮೇಲೆ ಶಕ್ತಿ ಇದ್ದರೆ ಮಿಡುಕಬೇಕು" ಎಂದಂದು ಮೈಮೇಲೆ ಕೈಯ್ಯಾಡಿಸ ಹತ್ತಿದ.

ಈ ಮಧ್ಯೆ ನನಗೆ ಮಬ್ಬು ಮುಸುಕಿದ್ದಿತು. ಜ್ವರ ಎಚ್ಚರವಿರಲಿಲ್ಲವೆಂದೇ ಇದರ ಅರ್ಥ. ಆದರೆ ನನ್ನ ತಲೆಬಾಗಿಲಲ್ಲಿ ಕುಳಿತು ಮಿಡಿಯುತ್ತಿರುವ ಆ ಶಬ್ದ—ಆ ತಾಯ್ಗರುಳಿನ ಗೋಳಾಟ—ಮತ್ತ ಒಳಹಾಯಗೊಡುತ್ತಿರಲಿಲ್ಲ. ಕಾವಲಾಗಿ ಕುಳಿತು ವಾಗಿ ಮನದಲ್ಲಿ ಮುದುಡಿಕೊಂಡು ಕುಳಿತ ದುಃಖ ಸೌದೆಯನ್ನು ಸ್ವಾಹಾಕರಿಸುತ್ತಿದ್ದಿತು. ಆದರ ಅಂತಃಕರಣ ಕರಗಿ ನೀರಾಗಿ ಎಷ್ಟು ತಡೆದರೂ ನಿಲ್ಲದೆ ಹರಿಯುತ್ತಿದ್ದವು ಕಣ್ಣೀರು.

ಸಂಜೆ-ರಾತ್ರಿಯಾದ ಹಾಗೆಲ್ಲ ಜ್ವರದ ಜೀಕ ಇಳಿತರಕ್ಕೆ ಬರಹತ್ತಿತು. ಹಗಲೆಲ್ಲ ಜೀಕಿ ಜೀಕಿ ಜಂತಿಮುಟ್ಟದ ಆ ಜ್ವರದ ಜೋಕಾಲಿಗೇ ತಲೆ ತಿರುಗಿರಬೇಕು. ಇನ್ನು ಮುಂದೆಂದೂ ಜೀಕುವುದಿಲ್ಲ ಇದು ಕೊನೆಯ ಸಲ ಎಂದೇ ಅದು ಅಪ್ಪು ಮೇಲೆ ಹೋಗಿರಬೇಕು. ಮೂರಕ್ಕೇರಿದ ಜ್ವರ ನೂರಕ್ಕಿಳಿದವು. ಆಗ ಡಾಕ್ಟರರೊಂದಿಗೆ ಗೆಳೆಯ ಬಂದ. ನನಗೆ ಆಗ ಸ್ಮೃತಿಯು ಸಂಪೂರ್ಣ ಬಂದಿತ್ತು. ಕಣ್ಣು ತೆರೆದಾಗ ನಿರೀಕ್ಷಿಸಿದ ನೋಟವು ನನಗೆ ವಿಚಿತ್ರ ವೆನಿಸಿತು. ಆ ಮನೆ! ಆ ಡಾಕ್ಟರ !! ಎಲ್ಲವೂ ಏನೂ ತಿಳಿಯದಾಯಿತು. ಹಿಂದಿನದು ನೆನಪಿಡಲಿಕ್ಕಹತ್ತಿತು. ಮತ್ತೆ ಕಣ್ಣಿಗೆ ಮಹಾಪೂರ. ಅದನ್ನು ನೋಡಿದ ಡಾಕ್ಟರ:— "ಇದೇನು ಸುಬ್ಬೂ ನಿನ್ನಣ್ಣನಿಗೆ ಏನೂ ಆಗಿಲ್ಲ. ಗಾಬರಿ ಯಾಗಿ ಸುಮ್ಮನೇ ಆಯಾಸ ಮಾಡಿಕೊಳ್ಳಬೇಡ. ಈಗ ನಿನ್ನ ಜ್ವರ ಇಳಿದಿವೆ" ಎಂದು ಸಮಾಧಾನ ಹೇಳಿ ನನ್ನ ಗೆಳೆಯ ನಿಗೆ ಈಗ "ಜ್ವರ ಇಳಿದಿದೆ. ಎಲ್ಲವೂ ಒಳಿತಿದೆ. ಇನ್ನು ಅಡ್ಡಿ ಇಲ್ಲ" ಎಂದು ಹೇಳಿ ಹೋಗಿಬಿಟ್ಟರು.

ಯಾರು ಏನನ್ನು ಹೇಳಿದರೇನು, ಮನಸ್ಸಿಗೆ ಹೊರಗಣ ಹೇಳಿಕೆ ಕೇಳಿಕೆ ನಂಬಿಕೆಯಾಗದು. ಒಳಗೆ ತನ್ನ ಅಂತಃ ಕರಣ ತನ್ನವರ ಅಂತಃಕರಣದೊಂದಿಗೆ ಕೂಡಿಸಿದ ಅಶರೀರ ವಾಣಿಯೊಂದಿದೆ. ಇಲ್ಲಿಯ ಸ್ಥಿತಿಯನ್ನು ಅಲ್ಲಿ, ಅಲ್ಲಿಯದನ್ನು ಇಲ್ಲಿ ತನ್ನ ಸ್ವರಹೀನ ವಾಕ್ಕಿನಿಂದ ಚುಚ್ಚಿ ಚುಚ್ಚಿ ಹೇಳುತ್ತಿದೆ. ಇಂತಹ ಸೌಕರ್ಯ ಅದಕ್ಕಿರುವಲ್ಲಿ ಇವರ ಹೇಳಿಕೆಯನ್ನಾರು ಕೇಳುವರು! ಇವರು ಸಮಾಧಾನ ಗೊಳಿಸಿದ ಹಾಗೆಲ್ಲ ಅಸಮಾಧಾನ ಹೆಚ್ಚಿತು. ಸಂಶಯ ಬೆಳೆಯಿತು. ದುಃಖದ ದಡ ಒಡೆಯಿತು: "ಉಹೂ. ಇದೇನು ಸುಬ್ಬು ಮುಂದಿನದನ್ನು ಚಿಂತಿಸಹೋಗಬೇಡ. ಅದನ್ನು ನನಗಾಗಿ ಬಿಡು. ನಾನಿದ್ದೇನೆ. ನಾನಿರಲು ನಿನಗೇಕಪ್ಪಾ ಅದರ ಚಿಂತೆ ! ಎಲ್ಲವನ್ನೂ ನಾ ನೋಡಿ ಕೊಂಡು ಹೋಗುವೆ" ಎಂದಂದು ಹೊರಗೆ ಹೋಗಿ ಬಿಟ್ಟ ಜೋಶಿ. ಆತ ಹೋದ ಮೇಲೆ ನನ್ನ ಆರೈಕೆಗೆಂದು ಆಹ್ವಾನಿಸಿಕೊಂಡು ಬಂದ ನನ್ನ ಗೆಳೆಯನ ಗೆಳೆಯ: "ದುಃಖಿಸಬಾರದು, ಹೀಗೆ ಮನಸ್ಸಿನಲ್ಲಿ ಯಾವ ಬಗೆಯ ಕೆಟ್ಟ ಕಲ್ಪನೆಯನ್ನೂ ತರಬೇಡ ನೋಡು, ಸುಬ್ಬು ದೈವೇ ಚ್ಛೆಯ ಮುಂದೆ ಮಾನವಪ್ರಯತ್ನಕ್ಕೇನು ಬೆಲೆ ? ಆದರೆ ಮಾನವರು ಮನದ ಸಂಕಟಕ್ಕಾಗಿ ತನ್ನ ಕೈಲಾದ ಮಟ್ಟಿಗೆ ಆದಷ್ಟನ್ನು ಮಾಡಬೇಕು. ನಮ್ಮ ಬಾಳೆಲ್ಲ ದೈವಾಧೀನ. ದೈವ ತುತ್ತು ಮಾಡಿಕೊಡುತ್ತದೆ; ನಾವು ತಿನ್ನಬೇಕು. ಕಹಿ ಇದ್ದರೂ ಕುಡಿಯಬೇಕು. ನುಣ್ಣಗಿಲ್ಲದಿದ್ದರೂ ನುರಿಸಬೇಕು ದೇವರ ಮೇಲೆ ಭಾರ ಹಾಕಿ" ಎಂಬ ತನ್ನ ತತ್ವಪೂರಿತ ಭಾಷಣದಿಂದ ನನ್ನ ಸಂಶಯವನ್ನು ಸರಿಪಡಿ ಸಲು ಸಾಹಸಬಟ್ಟ. ಆದರವರ ಸಾಹಸ, ಹರಿಯುವ ಹೊಳೆ ಯಲ್ಲಿ ಹುಳಿ ತೊಳೆದ ಹುಚ್ಚನಂತಾಯಿತು. ಅವರು ಸಂತೈ ಸಿದ ಹಾಗೆಲ್ಲ ನನ್ನ ಸಂಕಟ ಹೆಚ್ಚಿತೇ ಹೊರತು ಶಮನ ವಾಗಲಿಲ್ಲ. ಆಗ ಹೊರಗೆ ಹೋದ ಗೆಳೆಯ ಜೋಶಿ 'ಎನಿಮಾ'ದೊಂದಿಗೆ ಮರಳಿದ. "ಜೋಶಿ ನನ್ನನ್ನೇಕೆ ಇಲ್ಲಿಗೆ ಕರೆತಂದಿರಿ ? ಶ್ರೀಪಾದಣ್ಣ ಇನ್ನುಳಿದವರ ಗತಿ ಏನು ? ಅವ್ವ ಅವರು ಹಾಗೇಕೆ ಹಾಡಾಡಿಕೊಂಡು ಅಳುತ್ತಿ ದ್ದರು !! ಇಲ್ಲ ಜೋಶೀ ನನ್ನನ್ನಲ್ಲಿಗೆ ಕಳಿಸಿ ಬಿಡು." ಎಂದು ದುಃಖಿಸಹತ್ತಿದೆ. ಆಗ ಆತ "ಇದೇನು ಸುಬ್ಬೂ ಸಣ್ಣ ಹುಡುಗ ಮಾಡಿದ ಹಾಗೆ ಮಾಡುವೆಯಲ್ಲ. ಡಾಕ್ಟರರು ಹೇಳಿರುವರು ಎಲ್ಲರನ್ನೂ ಒತ್ತಟ್ಟಿಗೇ ಇಡಬೇಡಿ ಎಂದು. ಅಲ್ಲಿಯ ಹವೆ ಕೆಟ್ಟಿದೆ, ಎಲ್ಲರನ್ನೂ ಆ ಮನೆ ಬಿಡಿಸಬೇಕಾ ಗಿದೆ. ಸುಮ್ಮನೆ ದುಃಖಿಸಿ ಆಯಾಸ ಮಾಡಿಕೊಳ್ಳಬೇಡ. ಚಿಂತಿಸುವುದನ್ನು ನನಗೆ ಬಿಟ್ಟುಕೊಡು. ಮಿಡುಕುವುದ ರಿಂದ ಆಗುವುದು ನಿಲ್ಲುತ್ತದೇನು ? ಮಿಡುಕು ಮನದ ಮರುಕಕ್ಕೆ ಮದ್ದಲ್ಲ, ಮಾನವನ ಮಮತೆಯೊಂದು ಮೂರ್ಖತನ. ಆಗುವುದು ಆಗಬೇಕಾದಂತೆ ಆಗುತ್ತಿರು ತ್ತದೆ. ನಮ್ಮ ಕೈಯಲ್ಲಿ ಏನಿದೆ ನೋಡು ಸುಬ್ಬೂ—ಎಲ್ಲ ದೈವಾಧೀನ" ಎಂದಂದು ಚಿಂತಿಸದೆ ಮಲಗಿಕೊಳ್ಳಲು ಹೇಳಿ, 'ಬೆಡ್‌ಲ್ಯಾಂಪ'ನ್ನು ಹಚ್ಚಿ ತನ್ನ ಶಯ್ಯಾಗೃಹಕ್ಕೆ ಹೊರಟ.

ಆ ಸಮಯ ಮಧ್ಯರಾತ್ರಿ ಪ್ರಶಾಂತವಾದ ಹೊತ್ತು. ಎಲ್ಲೆಲ್ಲಿಯೂ ನಿಃಶಬ್ದತೆಯ ರಾಜ್ಯ. ಆಗ ಈಗ ತಾಸಿಗೊಮ್ಮೆ ಕ್ಲಾಕ್‌ಟಾವರಿನ ಘಂಟೆಯ ಹೊರತು ಮತ್ತೇನೂ ಕೇಳುತ್ತಿ ರಲಿಲ್ಲ. ಮಗ್ಗುಲಲ್ಲಿ ಮಲಗಿದ ಗೆಳೆಯನ ಗೊರಕೆ ನನ್ನ ವಿಚಾರಸಮಾಧಿಯನ್ನು ಸಡಲಿಸಲು ಸಾಹಸಪಡುತ್ತಿರಲಿಲ್ಲ. ಹುರುಪೀಯುವ ತಾಳದಂತೆ ಒಂದು ನಾದ ಹಿಡಿದು ಸಾಗಿ ದ್ದಿತು. ಬೆಳಕು ಮುಸುಕಾಗಿತ್ತು. ಮುಸುಕನ್ನು ಹೊದೆಯದೆ ಜಂತಿಯನ್ನೇ ದಿಟ್ಟಿಸುತ್ತ ವಿಚಾರೋನ್ಮತ್ತತೆಯಲ್ಲಿ ಬಿದ್ದು ಕೊಂಡೆ—"ಆ ! ಅಯ್ಯಯ್ಯೋ ಶ್ರೀಪಾದ !! ನಿನ್ನನ್ನೂ ಈ ಊರಿಗೆ ಆಹುತಿ ಕೊಡ್ಲಿಕ್ಕ ಬಂದಿದ್ದೇನs !!" ಆಹುತಿ! ಯಾರ ಆಹುತಿ? ಅಯ್ಯೋ ನನ್ನ ಅಶಕ್ತವಾದೀ ಎದೆ ಒಡೆ ಯುವುದೆಂದು ನನ್ನನ್ನೀಮುಂದಿ ಇಲ್ಲಿಗೆ ಕರೆತಂದಿತು. ಅದ ರಿಂದ ಮರೆಮಾಡಿದರು. ಅಯ್ಯೋ ಕಲ್ಲೆದೆಯೇ, ನೀನು

ಶಕ್ತಿಹೀನವಾಗಿರುವೆಯಂತಲ್ಲ. ಹಾಗಾದರೆ ಒಡೆಯದೇ ಉಳಿದುಕೊಂಡಿರುವೆಯೇಕೆ? ಇನ್ನೂ ಆ ಮುಂದಿನ ಹೊರೆ ಹೊರಲು ಶಕ್ತಿ ಇದೆಯೋ ನಿನ್ನಲ್ಲಿ? ಉಹೂ. ನನ್ನಿಂದಾಗದು. ಇನ್ನೇತಕ್ಕೆ ಹೇಗೆ ಬಾಳುವುದು! ಬೇಡ! ಒಡೆ. ಓ ಪಾಷಾಣ ಹೃದಯವೇ! ಒಡೆಯುವುದಿಲ್ಲವೇ! ನಿನ್ನಲ್ಲಿ ಭ್ರಾತೃಪ್ರೇಮವಿಲ್ಲವೇ? ಓ! ನನ್ನ ಸ್ವಾರ್ಥಪರ ಜೀವನವೇ ನಿನಗೆ ಈ ಹಾನಿಯಿಂದ ಹಿಗ್ಗೇ!! ಎಲ್ಲವೂ ನನ್ನದಾಯಿತು. ಪಟ್ಟಾಭಿಷೇಕ ನಾಳೆ ನನಗೆ, ಹಾಗೆ ಮಾಡಬೇಕು ಹೀಗೆ ಮಾಡಬೇಕು, ಎಲ್ಲವನ್ನೂ ನನ್ನದನ್ನಾಗಿಸಿಕೊಂಡು ಮೆರೆಯಬೇಕು ಎಂದು ವಿಚಾರಿಸುವೆಯಾ? ಆದರೆ ಮುಂದೇನು? ಸ್ವಲ್ಪ ಚಿಂತಿಸಿನೋಡು. ಓ! ನನ್ನ ವಿಷರೂಪ ಜೀವನವೇ ಇದು ಒಳಿತಲ್ಲ. ನಿನ್ನನ್ನೇ ನೀನು ಕೇಳಿಕೊ 'ಆಮೇಲೇನು?' ಎಂದು. ಸಿಕ್ಕಿತೇ ಉತ್ತರ? ಇಲ್ಲ. ನಿನ್ನ ಜೀವದ ಜೀವಕ್ಕೆ ಹೇಳಲು ಬಾಯಿ ಇಲ್ಲ. ಅದೋ ಅಲ್ಲಿ ನೋಡು. ಅತ್ತ ಬೆರಳುಮಾಡಿ ತೋರಿಸುತ್ತ ಏನನ್ನೋ ಹೇಳುತ್ತಿದೆ ಕೇಳು. ಅದೇ ನಿನ್ನ ಸ್ಥಿತಿ. ಆ! ಅದೇನು!! ಶ್ರೀಪಾದಣ್ಣಾನು ಅಂತ್ಯಯಾತ್ರೆಗೆ ಹೊರಟ! ಅಂತ್ಯದೃಶ್ಯ!! ಅಯ್ಯಯ್ಯೊ ಎಂದು ಚೀರಿಬಿಟ್ಟೆ. ಕನಸೊಡೆಯಿತು. ಕಂಣ್ಣುಬಿಟ್ಟೆ, ಮತ್ತದೇ ದೃಶ್ಯ ಕಣ್ಣೂಡಿತು! ತಲೆಕೊಡಹಿ ಎದ್ದು ಕುಳಿತೆ. ಎದೆ ಹೊಡೆದುಕೊಳ್ಳಹತ್ತಿತು. ಜೊಶಿ, ಇನ್ನಿತರ ಗೆಳೆಯರ ಮಾತುಗಳು ನನ್ನ ಸ್ಮೃತಿಪಥದಲ್ಲಿ ಸುಳಿದಾಡಹತ್ತಿದವು: "ಮುಂದಿನದನ್ನು ಚಿಂತಿಸಬೇಡ!" ಆ! ಚಿಂತಿಸಿದರೇ ಎದೆ ಒಡೆಯುತ್ತಿದೆಯೋ! ಜೀವ ಹಾರುವುದೇ? ಹಾರುವಿಯಾ ಜೀವವೇ? ಹಾ! ನೀನೇಕೆ ಸತ್ತೀ. ಹಾಲು ಅನ್ನಾ ಉಂಡು ಸಾಯಲೀ ಜೀವಾ ಅಂದರೆ ....ತಿಂದಾದರೂ ಬದಕತೀನೀ ಎನ್ನುವುದು ನಿನ್ನ ಕುಲ!

ಇಂತೆಯೇ ದಿನಗಳ ಮೇಲೆ ದಿನಗಳು ಕಳೆದವು. ನನ್ನ ದೈವ ಕಾಲಪುರುಷನೊಂದಿಗೆ ಹೋರಾಡಿ—ವಾದಮಾಡಿ ನನ್ನ ಜೀವವನ್ನು ಉಳಿಸಿಕೊಂಡು ಬಂದಿತು. ಜ್ವರದ ಜೀಕ ಪೂರ್ಣ ನಿಂತಿತು. ಚೀಟಿ ಹಿಂದೆ ಹೋಯಿತೆಂದು ಹಿಗ್ಗು ನನ್ನ ಆರೈಕೆಯ ಜನಕ್ಕೆ. ಅಪಕೀರ್ತಿಯೆಲ್ಲಿ ಬರುವುದೋ ಎಂದು ಬಾಡಿದ ಜೋಶಿಯ ಮೊಗವು ಹಿಗ್ಗಿತು. ಆದರವರ ನಡತೆ ಅಳುನುಂಗಿ ನಕ್ಕಂತೆ. ಅರ್ಥವಾಗುತ್ತಿರಲಿಲ್ಲ ನನಗೆ ಪೂರ್ಣ.

"ಶೀತದಿಂದ ಗಾಬರೀಮಾಡಿದ್ದ. ಈಗ ಗುಣವಾಗಿದೆ." ಆಗಿರಬಾರದೇಕೆ! ಡಾಕ್ಟರ ನಾಯಡು ಅಂದರೆ ಸಾಮಾನ್ಯನಲ್ಲ. ಹೋದ ಜೀವವನ್ನು ಹಿಡಿದು ತರುವ ಶಕ್ತಿ ಇದೆ ಅವನಲ್ಲಿ. ಆದರೆ ನನ್ನ ಮನಸ್ಸು ಇಂತೇಕೆ ಚಿಂತಿಸು... ದುಃಸ್ವಪ್ನ! ದುಷ್ಕಲ್ಪನೆ!! ಓ! ನನ್ನ ಮನಸ್ಸೇ ... ವೆಂದರಲ್ಲವೇ ನಿನಗೆ! ಚಿಂತಿಸುವುದೇ ಆದರೆ, ಕಲ್ಪಿಸು... ಆದರೆ ಕೆಡಕೇಕೆ? ಒಳಿತಿಲ್ಲವೇ? ಆಗುಹೋಗು... ನಮ್ಮ ಮನಸ್ಸಿನ ಮಂಡಿಗೆಗಳು. ಬಯಸು, ಒಳಿ... ಬಯಸು. ಒಳಿತನ್ನೇ ಉಣ್ಣುವಿ. ಥೂ! ಮತ್ತೆ ಅ... ಅದೇ ದೃಶ್ಯ!! ಕೆಡಕನ್ನು ಕಲ್ಪಿಸಿಕೊಂಡು, ಕನಸು ... ಕೊಂಡು ನೋಡಿ, ಬೆದರಿ, ನಿನ್ನ ಭವಿತವ್ಯವನ್ನು ... ಕೊಳ್ಳಬೇಡ. ದೂರಾಗು ಏ ದೃಶ್ಯವೇ. ಕನಸೇ ... ಇದೆಂಥ ಕನಸು! ಕಂಣು ಮುಚ್ಚಬಲೆ! ತಲೆಕೊಡಹಿ ... ಕುಳಿತೆ. ಎರಡು ಹೊಡೆದ ಗಂಟೆ ಕೇಳಿಸಿತು. ... ಗಳ ಮೇಲೆ ಸಿಟ್ಟುಬಂತು. ಇನ್ನು ಮುಂದೆ ವಿಚಾ... ಕೂಡದೆಂದುಕೊಂಡು ಗಟ್ಟಿಯಾಗಿ ಕಣ್ಣುಮುಚ್ಚಿ... ಕೊಂಡೆ. ನಿದ್ದೆಯನ್ನು ಪ್ರಾರ್ಥಿಸಿ ಬೇಡಿಕೊಂಡು ... ನಿಸಿದೆ. ಒಪ್ಪಿಗೆಯ ಉತ್ತರ ಬರಲಿಲ್ಲ. ಮನಸ್ಸು ... ಲೋಕಕ್ಕೋಡಿತು. ಮತ್ತೆ ಅದೇ ದೃಶ್ಯ! ಅದೇ ... ಅದೇ ರಂಭಾಟ!!! "ನಿದ್ದೆ ಮಾಡುವಿಯಾ? ನಿನ್ನ... ಗೊಳೋ ಎಂದು ಅಳುತ್ತಿರಲು ನೀನು ಅದನ್ನು ... ನಗಲು ಪ್ರಯತ್ನಿಸುವಿಯಾ? ನೀನು ಅಜ್ಞಾನಿ ... ಸರ್ಪದ ನೆರಳಲ್ಲಿದ್ದು ಸುಖಬಯಸುವ ಕಪ್ಪೆ ನೀನು... ಹ್ಹ!! ಹ್ಹ!!!" ಎಂದು ಯಾವುದೋ ಒಂದು ... ಶಕ್ತಿಯು ಅಸ್ಪಷ್ಟ ಧ್ವನಿಯಿಂದ ಹೇಳಿತು. ... ಕೇಳದಾಯಿತು. ಮನಸ್ಸು ಹುಚ್ಚಾಯಿತು. ... ಎದ್ದು ಕುಳಿತೆ. ಅಂದು ಮತ್ತೆ ನಿದ್ದೆಯೇ ಹತ್ತ...

ಮರುದಿನ ಕಂಣುತೆರೆಯುತ್ತಲೇ ಜೋಶಿಯನ್ನು ... "ಅಂಣ್ಣ ಅವರು ಹೇಗಿದ್ದಾರೆ" ಎಂದು. "... ನಿನಗೇಕೆ? ನಾವೆಲ್ಲ ಇಲ್ಲವೇ! ಅವರದೂ ... ವಾಗಿದೆ. ಇನ್ನೂ ನಾರ್ಮಲ್ಲಿಗೆ ಬರಲೊಲ್ಲವು ... ಸ್ವಲ್ಪ ಶಕ್ತಿ ಬಂದಿತೆಂದರೆ ಡಾಕ್ಟರರು ಮನೆಗೆ ... ಹೇಳಿದ್ದಾರೆ. ಏನನ್ನೂ ಚಿಂತಿಸಬೇಡ."

"ಅಲ್ಲ ಜೋಶಿ ತಿಂಗಳಾಯಿತು ನನ್ನ ಜ್ವರ ... ಬಂದು. ಈಗ ನನಗೆ ಗುಣವಾಗಿದೆ, ಮನೆಗೆ ಕಳಿಸು..."

"ಮನೀ ಮನೀ ಅಂತ ಹೀಗೇಕೆ ... ಇದೂ ಮನೆಯಲ್ಲವೇ? ನಾವೆಲ್ಲ ನಿನ್ನವರಲ್ಲವೇ? ... ಚಾರದಲ್ಲಿ ಏನಾದರೂ ಹೆಚ್ಚುಕಮ್ಮಿಯಾಗಿದ್ದರೆ ... ಮಾಡಿಸಿಕೋ. ಸಂಕೋಚಪಟ್ಟುಕೊಳ್ಳಬೇಡ. ... ಮೀರಿ ನೀನು ಹೋಗುವೆಯೆಂದರೆ ನೀನೇನು ...

ಮಾಡುವ ಹಾಗಿರುವೆ ?" ಎಂದಂದು ಹೋಗಿಬಿಟ್ಟ. ಅಂದಿನ ಆತನ ಮಾತಿನಲ್ಲಿ ಅರಿಯದ ಒಂದು ಅರ್ಥವಿತ್ತು.

ಮನೆಯಂದೇ ಮರುದಿನದಿಂದ ಇರಹತ್ತಿದೆ. ಆತನ ಅಂತಃಕರಣ, ಆತನ ಆಚಾರ, ಆತನ ಉಪಚಾರ, ಕನಿಕರ, ನನ್ನಲ್ಲಿ ಆತನಿಗಾಗಿ ಪೂಜ್ಯಬುದ್ಧಿಯನ್ನು ಹುಟ್ಟಿಸಿತು. ಆತನ ಮಾತೆಂದರೆ ಬ್ರಹ್ಮವಾಕ್ಯವೆಂದಿದ್ದ ನನ್ನ ಕಲ್ಪನೆಯು ಮತ್ತಿಷ್ಟು ದೃಢವಾಯಿತು. ನನ್ನ ಮನಸ್ಸಿನಿಂದ ಆ ಕೆಟ್ಟ ಕಲ್ಪನೆಯನ್ನು ಕಿತ್ತಲು ಶ್ರಮಬಟ್ಟೆ; ಪೂರ್ಣ ಮರೆಯಲೂ ಶ್ರಮಬಟ್ಟೆ. ಆದರೆ ಶಕ್ಯವಾಗಲಿಲ್ಲ; ಸಂಶಯರೂಪದಲ್ಲಿ ನೆಲಸಹತ್ತಿತು ಆ ದುರ್ವಿಚಾರ ನನ್ನಲ್ಲಿ.

ತಿಂಗಳಾಯಿತು. ಒಂದೂವರೆ ತಿಂಗಳೂ ಕಳೆಯಿತು. ಆದರೂ ನನ್ನ ವರೆನ್ನುವವರ ಒಂದು 'ಪಿಳ್ಳೆ'ಯದಾದರೂ ದರುಶನವಿಲ್ಲ! ನನ್ನ ಉಪಚಾರಕರಿಗೆಲ್ಲ "ಹೀಗೇಕೆ?" ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ ಎಡಚೆಡಚು, ತೊದಲುತೊದಲು, ಏನನ್ನೋ ಹೇಳಿ ಮರೆಯಿಸಿಬಿಡುತ್ತಿದ್ದರು. ಹೀಗಾಗಲು ನನ್ನ ಸಂಶಯ ಹೆಚ್ಚುತ್ತಿತ್ತು. ಮತ್ತೆ 'ಆ' ವಿಚಾರಗಳು! ನನ್ನ ಮನಸ್ಸು ಇವುಗಳ ಮಧ್ಯೆ ಸಿಲುಕಿ ನೆಗ್ಗಿದ ನುಗ್ಗಿಯಕಾಯಿಯಾಗಿದ್ದಿತು. ಮನೆಗೆ ಹೋಗಬೇಕೆಂಬ 'ಆಶೆ' ಬಲವತ್ತರವಾಗಹತ್ತಿತು. ಆದರೆ ಹೇಗೆ ಹೋಗುವುದು! ಯಾರಿದಿರೂ ಹೇಳುವ ಹಾಗಿಲ್ಲ. ಹೇಳಿದರೆ ಬಿಡುತ್ತಿರಲಿಲ್ಲ. ಒಂದು ಸಲ ಕೇಳಿದ್ದಕ್ಕೆ 'ಹೂ! ಹೋಗುವಿಯಂತೆ. ಸ್ವಲ್ಪ ಕಾಲದಲ್ಲಿ ಶಕ್ತಿ ಬರಲಿ, ಆಡ್ಡಾಡಲು ತ್ರಾಣ ಬರಲಿ. ನಿತ್ರಾಣ ಬಹಳ ಆಗಿರುವಿ. ಡಾಕ್ಟರರು ಹೇಳಿದ್ದಾರೆ, ಅನಕಾ ಆತನ ದೇಹಕ್ಕೂ, ಮಿದುಳಿಗೂ, ಮನಸ್ಸಿಗೂ ತ್ರಾಸವಾಗಕೂಡದು ಎಂದು. ಸ್ವಲ್ಪ ನಿಧಾನಿಸು' ಎಂದು ಸಮಾಧಾನ ಮಾಡುತ್ತಿದ್ದರು. ಆದಕ್ಕಾಗಿ ಅವರಿಗೆ ಹೇಳುವ ಹಾಗಿಲ್ಲ. ನಾನೇ ಶ್ರಮಪಡಹತ್ತಿದೆ ಶಕ್ತಿಯನ್ನು ಸಂಗ್ರಹಿಸಿಕೊಳ್ಳಲು. ಎಲ್ಲರೂ ಮಲಗಿದ ನಂತರ ಗೋಡೆಯನ್ನು ಹಿಡಿದುಕೊಂಡು ಆಡ್ಡಾಡುವ ಅಭ್ಯಾಸ ಸುರುವಾಯಿತು. ಮೊದಮೊದಲು ತ್ರಾಸ ಬಹಳಾಯಿತು. ತ್ರಾಣಗೆಟ್ಟ ದೇಹ ಜೋರಿ ಹೊಡೆಯುತ್ತಿದ್ದಿತು. ಕಾಲು ನಡುಗುತ್ತಿದ್ದವು. ಒಂದೆರಡು ಸಲ ಬಿದ್ದೆ—ಮತ್ತೆ ಎದ್ದೆ—ಆಗ್ಗೆ ಆಗುತ್ತಲಿದ್ದ ಆಯಾಸ ಮುಂದೆ ಬರಲಿರುವ ಆನಂದದ ನೆನವಿನಿಂದ ಮರೆಯುತ್ತಿತ್ತು. ಜೋಶಿಗೆ ತೋರಿಸಬೇಕು ಶಕ್ತಿ ಬಂದಿದೆ ಎಂದೆಂಬ ಆಶೆಯೆ ಇನ್ನುಳಿದ ನಿರಾಶೆಗಳನ್ನು ನುಂಗಿಬಿಡುತ್ತಿತ್ತು.

ಒಂದು ದಿನ ಜೋಶಿಯನ್ನು ಮತ್ತೆ ಕೇಳಿದೆ. ತೋರಿಸಿದೆ ಅಡ್ಡಾಡಿ. ಅದಕ್ಕೆ ಆತ "ಸುಬ್ಬೂ ಡಾಕ್ಟರರು ಎದ್ದು ಕೂಡ್ರಿಸಲು ಅಪ್ಪಣೆ ಕೊಟ್ಟಿಲ್ಲ. ನೀನು ಎದ್ದು ಓಡಾಡಲು ಪ್ರಾರಂಭ ಮಾಡಿದಿಯಾ? ಹೀಗೆ ಉಲಕೋಚಿತನ ಮಾಡಿದರೆ ಒಂದ್ಸೋಗಿ ಒಂದಾದೀತು! ಬಹಳ ತ್ರಾಣ ಗೆಟ್ಟಿದೆ ದೇಹ! ಸ್ವಲ್ಪ ದಿನ ತಾಳು. ಅಲ್ಲಿಯವರಿಗೆಲ್ಲ ಗುಣವಾಗಲಿ, ಆ ಮೇಲೆ ಹೋಗುವ ವಿಚಾರ" ಎಂದಂದು ಹೋಗಿ ಬಿಟ್ಟ. ಅದನ್ನು ಕೇಳಿ ನನಗೆ, ಪೂರ್ಣ ಭರವಸೆ ಇದ್ದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಅಪಜಯ ಅಂಟಿಕೊಂಡ ಸುದ್ದಿಯನ್ನು ಕೇಳಿದರಾಗುವಂತಹ ಸಂಕಟವಾಯಿತು. ಆ ಹಾದಿ ಬಿಟ್ಟು ಎರಡನೆಯ ದಾರಿಯನ್ನು ಹುಡುಕಲು ಉದ್ಯುಕ್ತನಾದೆ.

ಚಿಂತಿಸಿದೆ, ಚಿಂತಿಸಿದ ಹಾಗೆಲ್ಲ ನಿರಾಶೆಯೇ ಚಿರಂಜೀವಿಯಾಗುಳಿಯಿತು. ದಾರಿಗಳಿಗೆಲ್ಲ ಬೇಲಿ. ಹೊರಗೆ ಹೋದರೆ ಹಿಂದೆ ಕಾವಲು! ರಾತ್ರಿ ಎಲ್ಲರೂ ಮಲಗಿದ ಮೇಲೆ ಹೇಳದೆ ಕೇಳದೆ ಹೋಗಿ ನೋಡಿ ಬರಬೇಕೆಂದು ನಿರ್ಧರಿಸಿಕೊಂಡೆ. ಹೊರಟೆ, ಶಕ್ತಿ ಇನ್ನೂ ಬಂದಿರಲಿಲ್ಲ! ಆಸರದಿಂದ ಅಷ್ಟು-ಇಷ್ಟು ಹೋಗಲು ಬರುತ್ತಿತ್ತೇ ಹೊರತು ಆಸರ ತಪ್ಪಿದರೆ ಬರುತ್ತಿರಲಿಲ್ಲ!! ಆದರೂ ಹೊರಟೆ. ಆಗ ಸುಮಾರು ಹನ್ನೆರಡು, ಹನ್ನೆರಡೂವರೆಯಾಗಿರಬಹುದು. ಮನೆಗಳ ಗೋಡೆಯ ಆಸರದಿಂದ ಒಂದೆರಡು ಮನೆ ದಾಟಿದ್ದೆ. ಇಷ್ಟಕ್ಕೇ ಆಯಾಸ ಅಂಕೆ ತಪ್ಪಿತ್ತು. ಉಸಿರು ಅತ್ತ ಇತ್ತ ಅವಸರದಿಂದ ಅಂಡಲೆಯುತ್ತಿತ್ತು. ಕೈಗಳು ಆಸರಕ್ಕಾಗಿ ಸಿಕ್ಕದ್ದನ್ನು ಹಿಡಿದುಕೊಂಡು ಥರಥರ ನಡುಗುತ್ತಲಿದ್ದ ಕಾಲಿಗೆ ಸಹಾಯ ಮಾಡಬೇಕೆಂದು ಶ್ರಮಿಸುತ್ತಿದ್ದವು. ಇದೇ ಹೊತ್ತಿಗೆ ಬರಗಾಲದಲ್ಲಿ ಅಧಿಕ ಮಾಸದ ಹಾಗೆ 'ಚೌರಸ್ತೆ' ಬಂದಿತು. ನಡೆದೆ. ಜೋಲಿ ಜಾರಿತು. ಕಂಣು ಕತ್ತಲುಗೂಡಿದವು. ಮೊಣಕಾಲು ಮುದುಡಿಕೊಂಡವು. ಉರುಳಿತು ದೇಹ ನೆಲಕ್ಕೆ!!

"ಏ ಸುಬ್ಬೂ" ಎಂದೋಡಿ ಬಂದ ಒಬ್ಬ. ಧ್ವನಿಯ ಮೇಲಿಂದ ಮಸುಮಸುಕಾಗಿ ಗುರುತು ಸಿಕ್ಕಿತು ಪೂರ್ಣ ಸ್ಮೃತಿ ಬಂದ ಮೇಲೆ. ನೋಡಿದೆ. ಗೆಳೆಯನ—ಗೆಳೆಯ.

"ಎಲ್ಲಿಗೆ ಹೊರಟದ್ದೀ! ಅಯ್ಯೋ ಪಾಪ ಘಾಯ ಬಹಳವಾಗಿದೆ. ಯಾರನ್ನಾದರೂ ಕರೆದುಕೊಂಡು ಬರಬಾರದಿತ್ತೇ. ಶಕ್ತಿ ಇಲ್ಲ ಎಂಬುದು ಗೊತ್ತು. ಒಬ್ಬನನ್ನೇ ಹೇಗೆ ಕಳಿಸಿದರು?" ಎಂದು ಗಾಯಗಳನ್ನೆಲ್ಲ ಸರಿಪಡಿಸುತ್ತ ಕೈಹಿಡಿದು ಕರೆದುಕೊಂಡು ನಡೆದ.

"ಎಲ್ಲಿಗೆ ಹೊರಟದ್ದೀ?" ಎಂದಂದ ಮತ್ತೆ.

"ಎಲ್ಲೂ ಇಲ್ಲ—ಇಲ್ಲೆ ಸುಮ್ನೆ ಆಡ್ಡಾಡಲು ಬರುತ್ತದೋ ಇಲ್ಲವೋ ನೋಡಲು. ಆದಿರಲೀ ನಮ್ಮ ಮನೆಯ ಕಡೆ ಹೋಗಿ ಬರೋಣ ನಡೀ" ಎಂದೆ.

"ಈಗ ಬೇಡ, ಹೊತ್ತು ಬಹಳವಾಗಿದೆ" ಎಂದು ಜೋಶಿಯ ಮನೆಗೆ ಕರೆದೊಯ್ದ. ದಾರಿಯಲ್ಲಿ ನಾನು ಅವ ನೊಂದಿಗೆ ಆಗ ನಡೆದ ಸಂಗತಿಯನ್ನು ಯಾರಿಗೂ ಹೇಳ ಬಾರದೆಂಬಂತೆ ವಚನ ತೆಗೆದುಕೊಂಡೆ. ಆಗ ಆತ ನಕ್ಕ. ಆ ನಗೆಯಲ್ಲಿ ನನ್ನ ಮನಸ್ಸಿನ ಮುಚ್ಚಳ ತೆಗೆದಿದ್ದರ ಪಡಿನೆರಳು ಕಾಣಿಸಿಕೊಂಡಿತು.

ಮರುದಿನದಿಂದ ನನ್ನನ್ನು ಕಾಯುವುದು ಮತ್ತಿಷ್ಟು ಬೆಳೆಯಿತು. ಸದಾಕಾಲ ನನ್ನಲ್ಲಿ ಒಬ್ಬ ಇರಹತ್ತಿದ. ನನಗೆ ಇದರರ್ಥ ಹೊಳೆಯಲಿಲ್ಲ! ಅಷ್ಟು-ಇಷ್ಟು ಅಡ್ಡಾಡಿ ದಿನ ನೂಕುವುದು ಕಠಿಣವಾಯಿತು. ಆ-ಈ ವಿಚಾರಗಳು ತಲೆಯಲ್ಲಿ ನುಗ್ಗಬಾರದೆಂದು ಜೋಶಿ ಪುಸ್ತಕ ಓದಲು ಹೇಳಿದ. ತಾನೂ ಒಳಿತಾದ ಕವನಗಳನ್ನು ಅಂದು ತೋರಿ ಸುತ್ತಿದ್ದ. ಹರಟೆ ಹೊಡೆಯುತ್ತಿದ್ದ. ಮನೆಯ ವಿಷಯ ತೆಗೆದೊಡನೆಯೆ ದಿನದುತ್ತರ. "ಹಗಲೆಲ್ಲ ಏಕೆ ಕೇಳುವೆ ಸುಬ್ಬೂ ನಾವೆಲ್ಲ ಇಲ್ಲವೇ? ಆದರ ಚಿಂತೆ ಬೇಡ ನಿನಗೆ. ಆರಾಮಾಗಿರು" ಎಂದು ಸ್ವಲ್ಪ ಧ್ವನಿಯೆಳೆದು ಹೇಳಿದ್ದ ಒಂದು ಸಲ.

"ಗುಣವಾಗಿದೆ." ಗುಣವಾದರಾಯಿತು. ಕುರುಡ ಬೇಡುವುದೇನು. ಅವೇ ಎರಡು ಕಣ್ಣುಗಳಲ್ಲವೇ! ಥೂ ಮತ್ತೆ ಅದೇ ವಿಚಾರ! ಓ! ದುಷ್ಟ ವಿಚಾರವೇ ನನ್ನ ಬುದ್ಧಿಯ ಬಯಲಲ್ಲಿ ನಿನಗೆ ಸ್ಥಳವಿಲ್ಲ. ಹೋಗು ಹೋಗು. ಇಂದಿನಿಂದ ನಾನು ಸುವಿಚಾರಕ್ಕೆ ಎಡೆಗೊಟ್ಟಿರುವೆ. ಹೆ! ಹೋಗು ಅಣಕಿಸುತ್ತೀ ಏನು? ಗೊಣಗುಟ್ಟುವಿಯಾ! ಏನೆಂದು? ಆ? 'ನನ್ನನ್ನು ನಂಬು. ಸುವಿಚಾರದ ಮೋಹ ಪಾಶದಲ್ಲಿ ಬೀಳಬೇಡ' ಎನ್ನುವಿಯಾ? ಇಲ್ಲ ಜೋಶಿಯು ಹೇಳಿದ್ದಾನೆ ಅಣ್ಣನಿಗೆ ಗುಣವಾಗಿದೆಯಂತೆ. ಸ್ವಲ್ಪ ದಿನಗಳಿಗಾಗಿ 'ನೀಲಗಿರಿ'ಗೆ ಹೋಗಿ ಬರುವೆವು. ಆ ಮೇಲೆ ಮತ್ತೆ ನಮ್ಮ ಜೀವನೋಪಾಯ. ಓ ದೇವ! ಮತ್ತೆ ನಮ್ಮ ಕುಣಿಯುವ ಕಾಲಿಗೆ ಅಡ್ಡಗಾಲು ಹೊಡೆಯಬೇಡ. ನಿನ್ನ ಹಿಂದಿನ ಏಟನ್ನು ಸಹಿಸಿ ಸುದೃಢರಾಗಬೇಕಾದರೆ ಸವೆದು ಹೋಯಿತು ನೀನಿತ್ತ ಅರ್ಧ ಆಯುಷ್ಯ. ಇನ್ನುಳಿದರ್ಧದಲ್ಲಿ ಪೂರ್ಣತ್ವವನ್ನು ಪಡೆಯುವಷ್ಟು ಶ್ರಮ ಪಡಬೇಕು. ಹೀಗಿದ್ದೂ ನೀನು ಅಡ್ಡಗಾಲಿಕ್ಕಿದರೆ ಮತ್ತೆ ನಮ್ಮದೆಲ್ಲ ವ್ಯರ್ಥ. ದೇವಾ ಹಾಗೆ ಮಾಡಬೇಡ [illegible] ಕೈಮುಗಿದು ಬೇಡಿಕೊಳ್ಳುವೆ. ನಮ್ಮ ಇನ್ನುಳಿದ [illegible] ವನ್ನು ಯಾವ ಆತಂಕವಿಲ್ಲದೆ ಕೊನೆಗಾಣುವಂತೆ [illegible] ದೇವಾ. ಓ! ಕುಲದೇವತೆಯೇ ನೀನೂ [illegible] ಎಂದು ಪ್ರಾರ್ಥಿಸಿ ಕೈಮುಗಿದೆ. ಕಂಣು ಮುಚ್ಚಿ [illegible]

ಮರುದಿನ ಮುಗುಳೊಡೆಯುತ್ತಲೇ ಜೋಶಿಗೆ [illegible] "ಹವೆ ಬದಲಾಯಿಸಬೇಕಂತಲ್ಲ; ಯಾವ [illegible] ಹೋಗುವುದನ್ನು ಠರಾಯಿಸಿದ್ದಾರೆ?" ಎಂದು [illegible] ಆದಕ್ಕೆ ಆತ 'ನೀಲಗಿರಿ' ಎಂದವನೆ ಹೊರಹೊ[illegible] ಇಲ್ಲಿ ನಿಲ್ಲುತ್ತಿರಲೇ ಇಲ್ಲ. ಅದೇನಿದ್ದರೂ ಇಂದಿನ [illegible] ಮಾತಿನಿಂದ ನನ್ನ ಸೊರಗಿದ ಅವಯವಗಳ[illegible] ಕೊಂಡವು. ಹೃದಯ ಹರವಾಯಿತು. ಮಿದುಳು [illegible] ದನ್ನು ಕಟ್ಟಿ ಕಂಡು ಆನಂದಬಡಹತ್ತಿತು.

ವಿಷಮುಜ್ವರದ ನಂತರ ಹೃದಯದ ಹಳೆ [illegible] ಹರಿದು ಹೋಗಿ ಹೊಸತೊಂದು ಊಟೆಯ [illegible] ವಾಗುವುದಂತೆ. ನಮ್ಮ ಹೃದಯವೀಗ ಬರಿದಾಗಿ[illegible] ಮುಂದೆ ತುಂಬುವುದು ನವ್ಯ—ಭವ್ಯವಾಗಿದೆ. [illegible] ನಿಸರ್ಗ ದೇವತೆಯ ಉದ್ಯಾನವೇ! ತತ್ವ[illegible] ಶಾಂತನಿಕೇತನವೇ!! ಕವಿಗಳ ಮುನಿಗಳ [illegible] ಸವೇ!!! ನಾವೆಲ್ಲರು ನಿನ್ನಲ್ಲಿ ಬರುತ್ತಲಿರುವೆವು [illegible] ಸ್ವಲ್ಪ ನೆರವಾಗು. ನೋಡು ಆ ಮೇಲೆ ನಮ್ಮ [illegible] ಅಣ್ಣ ತನ್ನ ಭಾವಕೋಗಿಲೆಯನ್ನು ಬಿಡಿದ[illegible] ಮನದಣಿ ಗಿರಿ ಕಂದರಗಳ ಮಧ್ಯೆ ಹಾಡಿ [illegible] ಕೊಳ್ಳಲಿ. ನಾನು ನನ್ನ ಮಾನಸ ಸರೋ[illegible] ಬಾಯ್ಬಿಡಲಿರುವ ಬಾಲವಿಚಾರಗಳನ್ನು ಅಣ್ಣನ [illegible] ಕಿರಣಗಳಿಂದ ಅರಳಿಸಿಕೊಂಡು ಅವುಗಳ [illegible] ಬಾಯ್ಬಿಡುವಂತೆ ಮಾಡುವೆ ಜನವನ್ನು!

ಮನೆಗೆ ಹೋಗುವ ದಿನ ಬಂದಿತು. [illegible] ಆನಂದವನ್ನು ಬಣ್ಣಿಸಲಳವಲ್ಲ! ಜೋಶಿ [illegible] ಯನ್ನು ಮಾಡಿಸಿದ್ದ ಅಂದು. ಅಂದು ನನ್ನ[illegible] ಊಟಕ್ಕೆ ಬಂದಿದ್ದರು. ಎಲ್ಲರೂ "ನಮ್ಮ ಧೈ[illegible] ಬಗ್ಗೆ" ತಮ್ಮ ತಮ್ಮ ವ್ಯಸನವನ್ನು ವ್ಯಕ್ತಪಡಿಸಿ [illegible] ಕಾಡಿದ್ದೇ ಸಾಕು. ಇನ್ನು ಮುಂದಿನ ಜೀವನವು [illegible] ವಾಗಲಿ" ಎಂದು ಎಲ್ಲರೂ ಕೂಡಿ ಆ ಪರಮಾ[illegible] ಬೇಡಿದರು. ಮಿಠಾಯಿ ಎಲ್ಲರ ಬಾಯನ್ನು [illegible] ಮಾಡಿತು.

ಕಾರು ಬಂದೊಡನೆಯೆ ಎಲ್ಲರಿಗೂ ನಮಸ್ಕರಿಸಿ ಆಶೀರ್ವಾದದ ಹೊರೆ ಹೊತ್ತು ಕಾರಿನಲ್ಲಿ ಕುಳಿತೆ. ಬಿಟ್ಟಿತು ಕಾರು. ನನ್ನ ಮನಸ್ಸು ವಿಚಾರಸಮಾಧಿಯಲ್ಲಿದ್ದಿತು. ಮನಸ್ಸಿನಲ್ಲಿಯೇ ಭವಿತವ್ಯದ ಗುಡಿ-ಗೋಪುರ ಕಟ್ಟಿ ನೋಡಿ ನಲಿದಾಡುತ್ತಿದ್ದೆ.

ಮನೆ ಬಂತು.

ಇಳಿದು ಹತ್ತಿದೆ ಮೇಲೆ, ಅಣ್ಣನನ್ನು ಹುಡುಕುವ ಆವೇಗದಿಂದ.

"ಎಲ್ಲ ದೈವಾಧೀನ! ಯಾರು ಏನನ್ನು ಮಾಡುವಂತಿದ್ದೀತೆ ಸುಬ್ಬೂ ನಾವು ಮಾಡುವುದನ್ನೆಲ್ಲ ಮಾಡಿದೆವು. ಆಗಲಿಲ್ಲ. ನಿನಗಾಗ ಹೇಳಿದರೆ ನಿನ್ನ ಅಶಕ್ತ ಎದೆ ಎಲ್ಲಿ ಒಡೆಯುವುದೋ ಎಂದು ಮುಚ್ಚಿಟ್ಟೆವು. ಇಂದಿಗೆ ತಿಂಗಳಾಯಿತು ನಿಮ್ಮ ಮನೆ ಮುಳುಗಿ. ವಿಹ್ವಲನಾಗಬೇಡ ಸುಬ್ಬೂ! ಧೈರ್ಯ ತಂದುಕೋ. ದೇವರ ಚಿತ್ತವನ್ನು ದೇವರಿಗೆ ಬಿಟ್ಟುಕೊಡಬೇಕು ಸುಬ್ಬೂ. ವಿಷವನ್ನೇ ಕುಡಿದು ಅಮೃತದ ಸವಿ ತಂದುಕೊಳ್ಳಬೇಕು ಜೀವನದಲ್ಲಿ. ಇಲ್ಲಿ ಒದಗುವ ಕುಂದುಕೊರತೆಗಳನ್ನೆಲ್ಲ ನುಂಗುವುದನ್ನಲ್ಲದೆ ಮತ್ತೇನನ್ನು ಕಲಿಯುವುದು! ಇದುವೇ ನಮ್ಮ ಜೀವನದ ಆವಿರ್ಭಾವ! ಮಾನವನಿಗೆ ಸಾಧ್ಯವಿದ್ದ ಸಾಕ್ಷಾತ್ಕಾರ!! ನುಂಗೋಣ; ತಡೆಯೋಣ; ಅನುಭೋಗಿಸೋಣ. ಮುಂದೊಂದು ದಿನ ಈ ಎಲ್ಲ ಪ್ರಸಂಗಗಳ ರಹಸ್ಯವನ್ನು ಕೇಳೋಣವಂತೆ ದೇವರಿಗೆ" ಎಂದು ಹೇಳಿ ಹೋಗಿಬಿಟ್ಟ ಗೆಳೆಯ.

* * *

ದಂಡೆ ಕೈನಿಲುಕುವಂತಿರಲು ಜೀವಿಗಳೆಲ್ಲ ತಳ ಕಂಡವು, ದಡವಲ್ಲ! ಆಗ ಆ ದೇವದೇವನಾದ ಪರಮಾತ್ಮನಿಗೆ, ಎಲ್ಲ ನಾಶವಾದರೆ ತನ್ನ ಹೊತ್ತು ನೂಕಲು ಆಡುವುದು ಯಾರೊಡನೆ ಎಂದೆನಿಸಿರಬೇಕು. ಅದಕ್ಕಾಗಿಯೇ ತಳ ಕಂಡ ನನ್ನನ್ನು ದಂಡೆಗೆ ತಂದೊಗೆದ. ನನ್ನ ದೇಹವಾಗ ನಗ್ನ ನಗ್ನಾಗಿದ್ದಿತು. ಅಲ್ಲಿ ಇಲ್ಲಿ ಅವಯವಗಳು ಹರಿದು ಹೋಗಿದ್ದವು. ರಕ್ತ ಸುರಿಯುತ್ತಿತ್ತು. ಸುತ್ತೆಲ್ಲ ನೋಡಿದೆ, ಯಾರೂ ನನ್ನವರಿರಲಿಲ್ಲ. ಅಟ್ಟಂ ಅಟ್ಟಂ ಅರಣ್ಯ. ಆಗ ಒಬ್ಬೊಬ್ಬರಾಗಿ ಬಂದು ನನ್ನ ಸ್ಥಿತಿಗತಿಯ ಐತಿಹ್ಯವನ್ನು ಕೇಳಿ 'ದೇವರು ದೊಡ್ಡವ. ನೀನೂ ಒಬ್ಬ ಹೋಗಿದ್ದರೆ ಮನೆ ಮುಳುಗುತ್ತಿತ್ತಲ್ಲ. ಕುಲದೀಪಕನಾಗಿ ಉಳಿದುಕೊಂಡೆ' ಎಂಬ ಉದ್ಗಾರದೊಂದಿಗೆ ಮರುಗಿ ನಿಟ್ಟುಸಿರು ಬಿಟ್ಟು ಬೀಳ್ಕೊಳ್ಳುತ್ತಿದ್ದರು. ಅಶಕ್ತಿಯು ಬಹಳವಾಗಿದೆ. ಬಿಸಿಯುಸಿರು ಬಾಯಿಂದ ಬುಸುಗುಟ್ಟುತ್ತಿದೆ. "ಅಯ್ಯೋ ದೇವಾ ಅದೃಶ್ಯವಾದ ಜೀವಿಗಳೊಂದಿಗೆ ನನ್ನನ್ನೂ ಮುಳುಗಿಸಿ ಬಿಡಬಾರದಿತ್ತೇ. ಈ ನೋವನ್ನು ನಾನು ತಡೆಯಲಾರೆ" ಎಂದು ಬಳಲಿದ ಜೀವದ ಪಲ್ಲವಿ! "ಒಳ್ಳಿತಾಗುವುದೆಲ್ಲ ಬೇವು ತುದಿಯಲಿ ಬೆಲ್ಲ" ಎಂದು ಬೆಳೆದು ನಿಂತ ಬುದ್ಧಿಯ ಬುದ್ಧಿವಾದ.

ಜೇನುಹುಟ್ಟಿನ ಗುಟ್ಟು

ಲೇಖಕರು : ಶ್ರೀ. ಭಾರತಸಂಚಾರಿ ಗೋಸಾವಿ

"ನೀವು ಪ್ರೇಮಕಲೆಯ ಉಪಾಸನೆ ಮಾಡಬಯಸಿದಲ್ಲಿ; ಉದಾರ ಮತ್ತು ವಿವೇಕಿಗಳಾಗಲು ಇಚ್ಛಿಸಿದಲ್ಲಿ; ಮನಸ್ಸು, ಬುದ್ಧಿ ಮತ್ತು ಕೈಗೆಲಸವನ್ನು ವಿಕಾಸಗೊಳಿಸುವುದಾದಲ್ಲಿ; ಅಥವಾ ನಿಜವಾದ ಅರ್ಥದಲ್ಲಿ ಸಭ್ಯರಾಗಲು ಬಯಸಿದಲ್ಲಿ ಜೇನ್ನೊಣಗಳನ್ನು ಸಾಕಲು ಕಲಿಯಿರಿ. ಈ ನೊಣಗಳ ಜೀವನ ಮತ್ತು ನಡತೆ ನಡಾವಳಿಗಳ ಅವಲೋಕನ ಹಾಗೂ ಮನನದಿಂದ ಮನುಷ್ಯನಿಗೆ ವ್ಯವಸ್ಥೆ, ಸಹಯೋಗ, ಸ್ವಾಮಿಭಕ್ತಿ, ಉದ್ಯಮ ಮತ್ತು ಸಂಯಮದಂಥ ಅತ್ಯಂತ ಮಹತ್ವದ ವಿಷಯಗಳಲ್ಲಿ ಶಿಕ್ಷಣವು ದೊರೆಯುತ್ತದೆ."

—ಶ್ರೀ. ಸಿ. ರಾಜಗೋಪಾಲಾಚಾರ್ಯ

ಭಾರತಖಂಡದಲ್ಲಿ ವೇದಕಾಲದಿಂದಲೂ ಜೇನ್ನೊಣಗಳ ಹಾಗೂ ಜೇನುತುಪ್ಪದ ಮಹತ್ವವು ಎಲ್ಲರಿಗೂ ಗೊತ್ತಿತ್ತೆಂಬದನ್ನು ಪ್ರಾಚೀನ ಗ್ರಂಥಗಳಿಂದ ತಿಳಕೊಳ್ಳಬಹುದು. (ಅಥರ್ವದ ೯—೧—೧೯.) ಪಂಚಾಮೃತಾದಿ ಅಭಿಷೇಕದಲ್ಲಿಯೂ, ಆಯುರ್ವೇದದ ಅನೇಕ ಔಷಧಿಗಳಲ್ಲಿಯೂ ಇದರ ನಿತ್ಯ ಉಪಯೋಗವಿರುವದು ಪ್ರತಿಯೊಬ್ಬರಿಗೂ ಗೊತ್ತಿದ್ದ ಸಂಗತಿ. ಆ ಬಗ್ಗೆ ಇದರ ಇತಿಹಾಸ ಬರೆಯುವ ಆವಶ್ಯಕತೆಯು ಸದ್ಯ ಅನಾವಶ್ಯಕ. ಜೇನಿನ ಆವಶ್ಯಕತೆಯು ಬಹುವಾಗಿದ್ದರೂ ಅದರ ಪ್ರಾಪ್ತಿಯು ಅಧಿಕವಾಗಿರದ್ದರಿಂದ ಕಾಕಂಬಿ ಸಕ್ಕರೆಪಾಕದ ಸಮ್ಮಿಶ್ರಣವಿಲ್ಲದ ಶುದ್ಧ ತುಪ್ಪ ದೊರೆಯುವದು ಅಪರೂಪ. ಅದಕ್ಕಾಗಿಯೇ ಹಿಂದುಸ್ಥಾನದಲ್ಲಿ ಈ ವ್ಯವಸಾಯವನ್ನು ಒಳ್ಳೇ ರೀತಿಯಿಂದ ಸಾಗಿಸಲು ಸುಮಾರು ೪೦ ವರ್ಷಗಳಿಂದ ಪ್ರಯತ್ನ ನಡೆದಿದೆ; ಮತ್ತು ಕೊಡಗು, ತ್ರಾವಣಕೋರ, ನೀಲಗಿರಿ, ಕೊಯಿಮತ್ತೂರ ಮೊದಲಾದ ದಕ್ಷಿಣ ಭಾರತದ ಭಾಗದಲ್ಲಿ ಅನೇಕರ ಪರಿಶ್ರಮವು ಸಫಲವಾಗುತ್ತ ನಡೆದಿದೆ.


ಪಾಶ್ಚಾತ್ಯ ದೇಶಗಳಲ್ಲಿ ಇದರ ಶೋಧವು ೧೦೬ ವರ್ಷಗಳಿಂದ ನಡೆದಿದ್ದು, ಸದ್ಯ ಅಮೇರಿಕಾ, ನ್ಯೂಝೀಲಂಡ, ಜರ್ಮನಿ ಮತ್ತು ಆಸ್ಟ್ರೇಲಿಯಾಗಳಲ್ಲಿ ಲಕ್ಷಾಂತರ ಜನರು ಜೇನ್ನೊಣ ಸಾಕಿ ತಮ್ಮ ಉಪಜೀವನವನ್ನು ಸಾಗಿಸುತ್ತಿದ್ದಾರೆ. ಒಂದೇ ಅಮೇರಿಕಾದಲ್ಲಿ ಪ್ರತಿವರ್ಷ ಇದರಿಂದ ೬—೭ ಕೋಟಿ ರೂಪಾಯಿಗಳ ಲಾಭ ದೊರೆಯುತ್ತಿದ್ದು, ಅದರಿಂದ ತೋಟಪಟ್ಟಿ (ಹೊಲ)ಗಳಿಗೆ ೯೦ ಕೋಟಿ ರೂಪಾಯಿಗಳ ಲಾಭವೂ ಪ್ರತಿಫಲವಾಗಿ ದೊರೆಯುತ್ತಿದೆ.

ಅವರ ಒಂದೊಂದು (Bee-farm) ಮಧು-ವಾ[...] ಸುಮಾರು ೩—೪ ಸಾವಿರ ಪೆಟ್ಟಿಗೆಗಳಿರುತ್ತಿದ್ದು [...] ಪೆಟ್ಟಿಗೆಯಿಂದ ೨೦೦ ಪೌಂಡಿಗಿಂತ ಹೆಚ್ಚಿಗೆ ತುಪ್ಪ ದೊ[...]ತ್ತಿದೆ. ಅದನ್ನು ತೆಗೆಯಲು ವಿದ್ಯುತ್ತಿನ ಶಕ್ತಿಯನ್ನು [...]ಯೋಗಿಸುತ್ತಾರೆ. ಮತ್ತು ಜೇನುತುಪ್ಪವನ್ನು [...]ಗಳಲ್ಲಿ ತೂಗುತ್ತಾರೆ. ಸಕ್ಕರೆ-ಬೆಲ್ಲಗಳ ಸ್ಥಳದಲ್ಲಿ [...] ಉಪಯೋಗವೂ ದಿನ ದಿನಕ್ಕೂ ಹೆಚ್ಚುತ್ತ [...] ಒಂದು ಗುಡ್ಡದ ತುದಿಯಲ್ಲಿರುವ ಮಧುವಾ[...] ಬೈಲು ಪ್ರದೇಶಕ್ಕೆ ಜೇನುತುಪ್ಪವನ್ನು ಮುಟ್ಟಿಸ[...] ನಳ (ಪ್ಯಾಪು)ಗಳನ್ನು ಹಾಕಿದ್ದಾರೆ. ಇದರ [...] ಅವರಲ್ಲಿ ಜೇನುತುಪ್ಪವು ಎಷ್ಟಾಗುವದೆಂಬ[...] ಬರುವಂತಿದೆ. (ಈ ಬಗ್ಗೆ ಹೆಚ್ಚಿನ ಸಂಗತಿಯನ್ನು [...] A. B. C. & X. Y. Z. of Bee-culture [...] ಎಂಬ ಪುಸ್ತಕದಿಂದ ತಿಳಕೊಳ್ಳಬಹುದು. ಇದು [...]ನಲ್ಲಿ ದೊರೆಯುತ್ತದೆ.) ಆದರೆ ಭಾರತದೇಶದಲ್ಲಿ [...] ಜನರ ಲಕ್ಷ್ಯವು ಇನ್ನೂ ಹೆಚ್ಚಾಗಿ ಹೋದಂತೆ [...]ದಿಲ್ಲ. ಹಿಮಾಲಯದಲ್ಲಿ ಕಾಶ್ಮೀರದಿಂದ ಆಸಾಮ[...] ವಿಂಧ್ಯಾಚಲ, ಪಶ್ಚಿಮಘಟ್ಟ, ಪೂರ್ವಘಟ್ಟಗಳ[...] ಕುಮಾರಿಯವರೆಗೂ ಜೇನು ಸಾಕಲು ಒಳ್ಳೇ [...]ಸ್ಥಾನಗಳಿವೆ. ದಕ್ಷಿಣ ಭಾರತದಲ್ಲಿ ತ್ರಾವಣಕೋ[...] ಈ ಕೆಲಸವು ಪ್ರಾರಂಭವಾಗಿ ಕೊಯಿಮತ್ತೂರ, [...] ಕೊಡಗು, ಮೈಸೂರ ವರೆಗೂ (೧೦—೧೨ ವರ್ಷ[...]) ಹಬ್ಬಿತು. ಹಿಮಾಲಯದಲ್ಲಿಯೂ ದರ್ಜಿಲಿಂಗ [...] ಕುಲ್ಲೂ, ಪುಸ್ಸಾ ಮೊದಲಾದ ಕಡೆಗೆ ಸರಕಾರ[...]

ದಿಂದ ಕಾರ್ಯ ಪ್ರಾರಂಭವಾಗಿದ್ದರೂ ಇನ್ನೂ ಬೆಳಕಿಗೆ ಬರುವಷ್ಟು ಒಳ್ಳೇ ಕೆಲಸ ಮಾಡಿಲ್ಲ. (ನಾನು ಈ ವರ್ಷ ಹಿಮಾಲಯ ಮಧುಮಕ್ಷಿಕಾ ಪಾಲನ ಸಂಘವೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದು ಅದಕ್ಕೆ ಯು. ಪಿ. ಸರಕಾರದ ಸಹಾಯ ಹೊಂದಲೂ ಪ್ರಯತ್ನ ನಡೆದಿದೆ.)

ಜೇನು ಸಾಕುವ ಗೃಹೋದ್ಯೋಗ

ಮಹಾತ್ಮಾ ಗಾಂಧಿಯವರ ಗ್ರಾಮೋದ್ಯೋಗ ಸಂಘವು ಸ್ಥಾಪನೆಯಾದ ಮೇಲೆ ವರ್ಧಾದ ಮಗನಬಾಡಿಯಲ್ಲಿ ಇದರ ಪ್ರಯೋಗವು ಪ್ರಾರಂಭವಾಯಿತು. ಅದೇ ವರ್ಷ ಲಖನೌದಲ್ಲಿ ನೆರೆದ ಅ. ಭಾ. ಕಾಂಗ್ರೆಸಿನ ಕಾಲಕ್ಕೆ ಅ. ಭಾ. ಗ್ರಾಮೋದ್ಯೋಗ ಪ್ರದರ್ಶನದಲ್ಲಿ ಇದೊಂದು ಗ್ರಾಮೋ



ಹಿಮಾಲಯ ಮಧುಶಾಲಾ (ಹಿಮಾಲಯ ಮಧುಮಕ್ಷಿಕಾಪಾಲನಸಂಘ) ಡೇಹರಾಡೂನ್

ದ್ಯೋಗವೆಂಬದನ್ನೂ ಅವರು ಬೆಳಕಿಗೆ ತಂದರು. ಅಂದಿನಿಂದ ಈ ಗೃಹೋದ್ಯೋಗದ ಪ್ರಚಾರವು ಅನೇಕರನ್ನು ಆಕರ್ಷಿಸಿತು. ಆದರೆ ಈ ವಿದ್ಯೆಯನ್ನು ಕಲಿಯುವದಕ್ಕಾಗಿ ಇಲ್ಲಿ ಒಂದಾದರೂ ಮಧುಮಕ್ಷಿಕಾಪಾಲನ ಶಿಕ್ಷಣಾಲಯ ಇಲ್ಲದ್ದರಿಂದ ಉತ್ತರದವರೆಲ್ಲಾ ತ್ರಾವಣಕೋರ, ಕೊಯಿಮತ್ತೂರಗಳಿಗೆ ಹೋಗಬೇಕಾಗುತ್ತಿತ್ತು. ಆದರೆ ಈ ವರ್ಷ ಅನೇಕ ಪ್ರಾಂತಿಕ ಸರಕಾರಗಳ ಲಕ್ಷವು ಇತ್ತ ಕಡೆಗೆ ಹೋದದ್ದರಿಂದ ಪಂಜಾಬ, ವಾ. ಸ. ಪ್ರಾಂತ, ಯು. ಪಿ. ಮತ್ತು ಒರಿಸಾಗಳಲ್ಲಿ ಈ ಉದ್ಯೋಗದ ಶಿಕ್ಷಣಾಲಯವನ್ನು ಜೇಗನೆ ಸ್ಥಾಪನೆ ಮಾಡುವ ವಿಚಾರ ನಡೆದಿದೆ. ಪಂಜಾಬದಲ್ಲಿ ಆರಂಭವಾಗಿದೆ. ಅತ್ತ ಸಿ. ಪಿ., ಮುಂಬೈ ಮತ್ತು ಮದ್ರಾಸ ಸರಕಾರದವರೂ ಈ ಬಗ್ಗೆ ಜೇಗನೆ ಕಾರ್ಯಾರಂಭಮಾಡುವ ವಿಚಾರದಲ್ಲಿದ್ದಾರೆಂದು ಕೇಳಿಕೆಯಲ್ಲಿದೆ. ಅಂತೂ ಈ ವರ್ಷ ಅಲ್ಲ ಮುಂದಿನ ವರ್ಷದೊಳಗಾಗಿ ಅನೇಕ ಕಡೆಗೆ ಇದರ ಶಾಲೆಗಳು ಪ್ರಾರಂಭವಾಗಲಿವೆ. ಈ ಉದ್ಯೋಗದ ಪ್ರಚಾರವು ಗ್ರಾಮುಗಳಲ್ಲಿ ಬರಲು ೮-೧೦ ವರ್ಷ ಕಾಲ ಸರಕಾರವೂ, ಸತತ ಪರಿಶ್ರಮಪಡುವ ದೇಶ ಸೇವಕರೂ ಪ್ರಯತ್ನಪಡಬೇಕಾಗಿದೆ. ತ್ರಾವಣಕೋರ, ಕೊಯಿಮತ್ತೂರ, ಕೊಡಗುಗಳಲ್ಲಿ ಅನೇಕ ಗ್ರಾಮಸ್ಥರು ಹೊಸ ಪದ್ಧತಿಯಿಂದ ಜೇನು ಸಾಕುವದನ್ನು ಪ್ರತಿಯೊಬ್ಬರೂ ನೋಡಬಹುದು.

ಹಿಂದುಸ್ಥಾನದಲ್ಲಿ ಮನುಷ್ಯ ಸಮಾಜಕ್ಕೆ ಉಪಯೋಗವುಳ್ಳ ಮೂರು ಹುಳುಗಳಿವೆ: ರೇಶಿಮೆ ಹುಳ, ಅರಗಿನ ಹುಳ ಮತ್ತು ಜೇನ್ನೊಣ. ಪ್ರಸ್ತುತ ಲೇಖದಲ್ಲಿ ಜೇನಿನ ಪರಿಚಯ ಕೊಟ್ಟಿದೆ. ಜೇನ್ನೊಣವು ಹಾರಾಡುವ ಸಣ್ಣ ಪ್ರಾಣಿಯಾಗಿದ್ದರೂ ಮನುಷ್ಯರಿಗೆ ಇದರ ಉಪಯೋಗವು ಎಷ್ಟಿದೆ ಎಂಬುದನ್ನು ಪ್ರತಿಯೊಬ್ಬರೂ ಬಲ್ಲರು. ಆದರೆ ಅದನ್ನು ಸಾಕಿ ತುಪ್ಪ ಪಡೆಯುವದೆಂದರೆ ಅನೇಕರಿಗೆ ಸೋಜಿಗದ ಸಂಗತಿಯಾಗಿರಬಹುದು. ನಿಜವಾಗಿಯೂ ನಮ್ಮ ದೇಶಕ್ಕೆ ಈ ಸಂಗತಿಯು ಹೊಸದಿದ್ದರೂ ತಿಂಗಳೊಪ್ಪತ್ತಿನಲ್ಲಿ ಇದರ ಪರಿಚಯ ಮಾಡಿಕೊಂಡು ಕಾರ್ಯ ಪ್ರಾರಂಭ ಮಾಡಿದ ಮೇಲೆ ಇದೊಂದು ಸಾಧಾರಣ ಗೃಹೋದ್ಯೋಗವೆಂಬದು ಪ್ರತಿಯೊಬ್ಬರಿಗೂ ತಿಳಿಯದೆ ಇರಲಾರದು.

ಜೇನು ಸಾಕುವ ಹಳೇ ಪದ್ಧತಿ

ನಮ್ಮ ದೇಶದಲ್ಲಿ ಈಗಲೂ ಈ ಉದ್ಯೋಗವು ಎಷ್ಟರ ಮಟ್ಟಿಗೆ ಪ್ರಚಾರದಲ್ಲಿದೆ ಎಂಬುದನ್ನು ನೋಡಬಯಸುವವರು [illegible] ಮತ್ತು ತ್ರಾವಣಕೋರಗಳಲ್ಲಿ ಹಾಗೂ ಹಿಮಾಲಯದಲ್ಲಿ ಕಾಶ್ಮೀರ, ಕಾಂಗಡಾ, ಕುಲ್ಲು,

ಸಿಮ್ಲಾ, ಗಢವಾಲ, ಡೇಹರಾಡೂನ್, ನೈನಿತಾಲ, ಅಲ್ಮೋರಾ, ನೇಪಾಳ, ದಾರ್ಜಿಲಿಂಗ ಮತ್ತು ಆಸಾಮು ಗಳಲ್ಲಿ ಅಡ್ಡಾಡಿ ಪರಿಚಯ ಪಡೆಯಬಹುದು. ದಕ್ಷಿಣದಲ್ಲಿ ಗಡಿಗೆ-ಮಡಿಕೆಗಳಲ್ಲಿಯೂ, ಉತ್ತರದಲ್ಲಿ ಗೋಡೆಗಳ ಮಾಡ ಗಳಲ್ಲಿಯೂ ಸಾಕುತ್ತಾರೆ. ಮಲಬಾರ, ತಮಿಳನಾಡು ಗಳಲ್ಲಿ ಹೆಂಡ ತೆಗೆಯುವ ಹಳೇ ಮಡಿಕೆಗಳನ್ನು ಮರಗಳಲ್ಲಿ ತಲೆ ಕೆಳಗಾಗಿ ಕಟ್ಟುತ್ತಾರೆ. ಅವುಗಳ ತಳದಲ್ಲಿ ಅಂಟಿ ಕೊಂಡ ಸವಿರಸದ ಆಶೆಗಾಗಿ ಜೇನುನೊಣಗಳು ಬಂದು ವಾಸವಾಗುತ್ತವೆ. ತುಪ್ಪ ತುಂಬಿದ ಮೇಲೆ ನೊಣಗಳನ್ನು ಹಾರಿಸಿ ಗಡಿಗೆ ಒಡೆದು ಜೇನು ತೆಗೆದುಕೊಳ್ಳುತ್ತಾರೆ. ಈ ಪ್ರಕಾರದ ಗಡಿಗೆಗಳು ಅಲ್ಲಿ ಮಾರಾಟಕ್ಕೆ ಸಿಗುತ್ತವೆ. ಅವನ್ನು ತಂದು ಸಾಕುವವರು ಪೆಟ್ಟಿಗೆಯಲ್ಲಿ ಬದಲಾಯಿಸು ತ್ತಾರೆ. ಇದು ಒಂದು ಉದ್ಯೋಗವಾಗಿದೆ. ಇದೇ ಪ್ರಕಾರ ಕೊಡಗಿನಲ್ಲಿ ದೊಡ್ಡ ಗಡಿಗೆಗಳ ಕಂಠದಲ್ಲಿ ಕೆಲವು ತೂತು ತೆಗೆದು ಒಂದು ಹಲಿಗೆಯ ಮೇಲೆ ಡಬ್ಬಾಗಿ ಇರಿಸು ತ್ತಾರೆ. ಆದರಲ್ಲಿ ಜೇನು ತುಂಬಿದ ಮೇಲೆ ಮತ್ತೊಂದು ಗಡಿಗೆಯನ್ನೇರಿಸುತ್ತಾರೆ. ಈ ಪ್ರಕಾರ ಗಡಿಗೆಗಳನ್ನೇರಿಸು ವಾಗ್ಗೆ ಮೇಲ್ಭಾಗದಲ್ಲಿ ಒಂದು ದೊಡ್ಡ ತೂತು ಮಾಡು ತ್ತಾರೆ. ಇದರಿಂದ ಅವು ಒಂದರಿಂದ ಮತ್ತೊಂದಕ್ಕೆ ಏರಿ ಹೋಗಿ ಜೇನು ಸಂಗ್ರಹಿಸುತ್ತವೆ. ತುಂಬಿದ ನಂತರ ಹೊಗೆ ಮಾಡಿ ಹಾರಿಸಿ ತುಪ್ಪ ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ತುಪ್ಪ ತೆಗೆಯುವ ಕೆಲವರಲ್ಲಿ ೧೧೬ ಗಡಿಗೆಗಳನ್ನು ಭಾಗಮಂಡಲ (ಬೇಂಗನಾಡು), ನಾಪೊಕ್ಕಲ, ಸೋಮವಾರ ಪೇಟೆಗಳಲ್ಲಿ ನೋಡಬಹುದು. ಇದೇ ಪ್ರಕಾರ ಹಿಮಾ ಲಯದ ಗ್ರಾಮುಗಳಲ್ಲಿ ೨॥ ಫೂಟ ಉದ್ದಗಲವುಳ್ಳ ಗೋಡೆ ಗಳ ಮಾಡಗಳಲ್ಲಿ ಹೊರಗಿನ ಮಗ್ಗಲು ಬರಹೋಗಲು ಒಂದು ತೂತು ಬಿಟ್ಟು ಒಳಗಿಂದ ಹಲಿಗೆ ಬಂದು ಮಾಡಿ ಅದನ್ನು ಸಾಕುತ್ತಾರೆ. ಅವು ತುಂಬಿದ ಮೇಲೆ ಜ್ಯೇಷ್ಠ, ಆಷಾಢ ಹಾಗೂ ಕಾರ್ತಿಕ ಮಾಸಗಳಲ್ಲಿ ಹಲಿಗೆ ತೆಗೆದು ಹೊಗೆ ಹಾಕಿ ತೂತಿನಿಂದ ನೊಣಗಳನ್ನು ಹೊರಗೆ ಹಾರಿಸಿ ಎಲ್ಲ ಹುಟ್ಟುಗಳನ್ನು ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ಸಾಕಿದ ನೊಣಗಳನ್ನು ಮದುವೆಯ ಕಾಲಕ್ಕೆ 'ಕಾಣಿಕೆ ಯಾಗಿ ಮದುಮಕ್ಕಳಿಗೆ ಸಂಗಡ ಕೊಟ್ಟು ಕಳಿಸುವ ರೂಢಿಯೂ ಕೆಲ ಭಾಗದಲ್ಲಿದೆ. ಇದರಿಂದಲೇ ಕಬ್ಬು ಬೆಳೆ ಯದ ಈ ದೇಶದಲ್ಲಿ ಎಲ್ಲ ಕೆಲಸವು ಸಾಗುತ್ತದೆ. ಇವರು ತಮ್ಮ ಸೀತಿಂಡಿಗಳನ್ನು ಇದರಿಂದಲೇ ತಯಾರ ಮಾಡು ತ್ತಾರೆ.

ಹಳೇ ಪದ್ಧತಿಗಳಿಂದಾಗುವ ಹಾನಿಗಳು

ಈ ಪ್ರಕಾರ ಜೇನು ತೆಗೆದು ಮಾರುವವರು ಕಾಕಂಬಿ, ಸಕ್ಕರೆಪಾಕ ಇಲ್ಲವೆ ಬೆಲ್ಲದ ಪಾಕವನ್ನು ಮಾರುವದನ್ನು ಎಲ್ಲರೂ ಬಲ್ಲರು. ಆದರೆ ಇದಕ್ಕೂ ಅನ್ಯಾಯಗಳು ಗೂಡಿನಿಂದ ಜೇನು ತೆಗೆಯುವಾಗ್ಗೆ ವಿಸುತ್ತವೆ. ಅವಾವೆಂದರೆ:—ಹುಟ್ಟುಗಳನ್ನು ವಾಗ್ಗೆ ಹೊಗೆ ಅಥವಾ ಉರಿಮಾಡುವದರಿಂದ ಮರಿ ಮತ್ತು ತತ್ತಿಗಳೆಲ್ಲಾ 'ನಾಶವಾಗುತ್ತವೆ. ಕೆಳಬದಿಗೆ ತತ್ತಿಮರಿಗಳೂ ಮತ್ತು ಮೇಲ್ಬದಿಗೆ ತುಪ್ಪವೂ ಇರುವದರಿಂದ ಇಡೀ ಹುಟ್ಟುಗಳನ್ನೇ ಯದ ವಿನಃ ತುಪ್ಪ ತೆಗೆಯುವದು ಅಸಾಧ್ಯ. ಮರಿದು ಅವನ್ನು ಹಿಂಡಿ ತುಪ್ಪವನ್ನು ಹುಟ್ಟಿನಿಂದ ಮಾಡುವಾಗ್ಗೆ ಆದರಲ್ಲಿ ತತ್ತಿ ಮರಿಗಳೂ ಹಿಂಡಲ್ಪಡುತ್ತ ಈ ಪ್ರಕಾರ ತೆಗೆದ ತುಪ್ಪವು ಹುಳಿಹುಟ್ಟಿ ಬೇಗನೆ ಹೋಗುತ್ತದೆ. ಇದರ ಹೊರತು ತುಪ್ಪವೂ ಪ್ರಮಾಣದಲ್ಲಿ ದೊರೆಯುತ್ತದೆ. ಅಹಿಂಸೆಯ ರಾದ ನಾವು ಇಂಥ ಹೇಸಿ ಜೇನನ್ನು ಪಂಚಾಮೃತ ಅಭಿಷೇಕದಂಥ ಪವಿತ್ರ ಕಾರ್ಯದಲ್ಲಿಯೂ ಯಾವ ವಿಚಾರವಿಲ್ಲದೆ ಉಪಯೋಗಿಸಲು ಹಿಂದೆಮುಂದೆ ವದಿಲ್ಲ. ಇದೇ ಪ್ರಕಾರ ವೈದ್ಯರು ಚ್ಯವನಪ್ರಾಶಾದಿ ಲೇಹಗಳಲ್ಲಿಯೂ ಬೇರೆ ಅನೇಕ ಭಸ್ಮ-ರಸಾದಿಗಳ ಡಲೂ ನಿರ್ಬಂಧವಿಲ್ಲದೆ ಸೇವಿಸಲು ಉಪದೇಶಿಸುತ್ತಾ ಇದರ ಗುಟ್ಟನ್ನರಿತವರು ಎಂದಿಗೂ ಇಂಥ ತುಪ್ಪ ಸೇವಿಸಲಿಕ್ಕಿಲ್ಲ. ಈ ಮೇಲೆಬಣ್ಣಿಸಿದ ಜೇನುತುಪ್ಪ ಔಷಧಿಯೊಂದಿಗೆ ಆರೋಗ್ಯ ಹೊಂದುವದಕ್ಕಾಗಿ ವವರು ಅನಾರೋಗ್ಯ ಹೊಂದುತ್ತಾರೆ. ಮತ್ತು ಹೊಂದುವದಕ್ಕಾಗಿ ಸೇವಿಸುವವರು ನಿಶ್ಶಕ್ತರಾಗುತ್ತಾ ಆದ್ದರಿಂದ ಜೇನುತುಪ್ಪವನ್ನು ಸೇವಿಸುವ ಪ್ರತಿಯೊ ಅದರ ಶುದ್ಧತೆಯನ್ನರಿಯುವದು ಅವಶ್ಯವಾಗಿದೆ. ಗ್ರಿಕ ಹುಟ್ಟುಗಳಿಂದಲೂ ಶುದ್ಧ ತುಪ್ಪವನ್ನು ತೆಗೆ ಬರುತ್ತದೆ. ಆದರೆ ಅದರ ಮರ್ಮವನ್ನರಿತವರೇ ಬಲ್ಲರು. ಇದು ಪ್ರತಿಯೊಬ್ಬರಿಗೂ ತುಪ್ಪದ ಹುಟ್ಟುಗಳನ್ನೇ ಬೇರೆಯಾಗಿ ತೆಗೆದು ವಾದ ಬಟ್ಟೆಯಲ್ಲಿಟ್ಟು ಒಂದು ಕಾಜಿನ ಅಥವಾ ಪಾತ್ರೆಯ ಮೇಲ್ಬದಿಯಲ್ಲಿ ಕಟ್ಟಿ ಬಿಸಿಲಲ್ಲಿಟ್ಟರೆ ಗಿಯೇ ಕೆಳಗಿಳಿಯುತ್ತದೆ. ಆದರೂ ಜೇನು ಸಾಕ ತೆಗೆಯುವದೇ ಎಲ್ಲಕ್ಕೂ ಒಳ್ಳೇ ಉಪಾಯವಾಗಿದೆ.

ಜೇನು ಸಾಕುವ ಹೊಸ ಪದ್ಧತಿ ಮತ್ತು ಅದರಿಂದಾಗುವ ಲಾಭ

ಈ ಮೇಲಿನ ದೋಷಗಳನ್ನ ರಿತೇ ಹೊಸ ಪದ್ಧತಿಯು ಪ್ರಚಾರದಲ್ಲಿ ಬಂದಿದ್ದು, ಹೆಚ್ಚು ಜನರು (ಪಾಶ್ಚಾತ್ಯರು) ಆರ್ಥಿಕ ಲಾಭ ಹೊಂದುವದಕ್ಕಾಗಿಯೇ ಜೇನು ಸಾಕುತ್ತಾರೆಂಬುದು ತಿಳಿದ ಮಾತಾಗಿದೆ. ಅದೇ ಉದ್ದೇಶವನ್ನಿಟ್ಟುಕೊಂಡು ಸುರುಮಾಡಿದರೂ ಆರ್ಥಿಕಲಾಭದ ಹೊರತು ಶುದ್ಧ ಜೇನೂ ದೊರೆಯುತ್ತದೆ. ಆದ್ದರಿಂದ ಅ. ಭಾ. ಗ್ರಾಮೋದ್ಯೋಗ ಸಂಘದವರು ನಮ್ಮ ದೇಶದ ಉನ್ನತಿಗಾಗಿ ಖಾದೀ, ಕಾಗದಗಳನ್ನು ಪ್ರಚಾರದಲ್ಲಿ ತಂದಂತೆ ಜೇನು ಸಾಕುವದನ್ನೂ ಗ್ರಾಮೋದ್ಯೋಗಗಳಲ್ಲಿ ಎಣಿಸಿದ್ದಾರೆ. ಇದರಿಂದ ಆಗುವ ಲಾಭಗಳು ಅನೇಕವಿದ್ದರೂ ಕೆಲವನ್ನು ಇಲ್ಲಿ ಕೊಡುವೆನು. ಸಾಲಾಗಿ ಹುಟ್ಟುಗಳನ್ನು ತಯಾರ ಮಾಡಲು ಬೇರೆಬೇರೆ ೭-೮ ಚೌಕಟ್ಟುಗಳುಳ್ಳ ಅಂತಸ್ತಿನ ಈ ಹೊಸ ಪದ್ಧತಿಯ ಪೆಟ್ಟಿಗೆಯಲ್ಲಿ ಜೇನು ಸಾಕುವದರಿಂದ ನೈಸರ್ಗಿಕ ಹುಟ್ಟುಗಳಲ್ಲಿ ದೊರೆಯುವ ಜೇನಿಗಿಂತ ೪-೬ ಪಾಲು ಹೆಚ್ಚು ತುಪ್ಪವು ದೊರೆಯುವದಲ್ಲದೆ ಅದರ ಅಂಶವು ನಾಶವಾಗುವದಿಲ್ಲ. ಈ ಪೆಟ್ಟಗೆಯ ಕೆಳಗಿನ ಅಂತಸ್ತಿನಲ್ಲಿ ತತ್ತಿ, ಮರಿಗಳಿರುತ್ತಿದ್ದು, ಮೇಲಂತಸ್ತಿನಲ್ಲಿ ಶುದ್ಧ ಜೇನು ಬೇರೆ ಚೌಕಟ್ಟುಗಳಲ್ಲಿ ಸಂಗ್ರಹವಾಗಿರುತ್ತದೆ. ಆದ್ದರಿಂದ ಮರಿಗಳಿಗೆ ಕೈ ಹಚ್ಚದೇನೇ ತುಪ್ಪದ ಪೆಟ್ಟಿಗೆಯನ್ನು ವಿಂಗಡಿಸಬಹುದು. ಇದರಲ್ಲಿದ್ದ ತುಪ್ಪವನ್ನು ಮಧು ನಿಸ್ಸಾರಕ ಯಂತ್ರ (Extractor) ವನ್ನು ತಿರುಗಿಸಿ ಹುಟ್ಟು ಮುರಿಯದೆ ಜೇನನ್ನು ಮಾತ್ರ ತೆಗೆದು ಹುಟ್ಟನ್ನು ಪುನಃ ಮೊದಲಿದ್ದಂತೇ ಇದ್ದಲ್ಲಿ ಇಡಬಹುದಾಗಿದೆ. ಇದರಿಂದ ಅವಕ್ಕೆ ಪುನಃ ಹುಟ್ಟನ್ನು ತಯಾರ ಮಾಡುವ ಪರಿಶ್ರಮ ಬೀಳುವದಿಲ್ಲ; ಮತ್ತು ಕೂಡಲೇ ಬರಿದಾದ ಹುಟ್ಟನ್ನು ತುಂಬಲು ಅನುಕೂಲವಾಗುತ್ತದೆ. ಇದರಿಂದ ಹೂಗಳಿರುವ ಋತುವಿನಲ್ಲಿ ತಿಂಗಳೊಪ್ಪತ್ತಿನಲ್ಲಿ ೩-೪ ಸಾರೆ ಜೇನು ತೆಗೆಯಬಹುದಾಗಿದೆ. (ಒಂದು ಪೌಂಡು ಹುಟ್ಟು ತಯಾರ ಮಾಡಲು ೧೦ ಪೌಂಡು ಜೇನು ತಿನ್ನಬೇಕಾಗುತ್ತದೆ.) ಈ ಪೆಟ್ಟಿಗೆಯಲ್ಲಿ ಮಳೆ, ಬಿಸಿಲು, ಚಳಿಗಳಿಂದ ನೊಣಗಳನ್ನು ರಕ್ಷಿಸಬಹುದಲ್ಲದೆ, ಇರುವೆ, ಹಲ್ಲಿ, ಪಕ್ಷಿ, ಮೇಣದಹುಳ, ಮತ್ತು ಬೇರೆ ಅನೇಕ ಶತ್ರುಗಳಿಂದ ಅವನ್ನು ಕಾಪಾಡಬಹುದು. ಜೇನುತುಪ್ಪವಂತೂ ಹೆಚ್ಚು ದೊರೆಯುವದು. ಇದರವಿನಃ ಎಲ್ಲಕ್ಕೂ ಹೆಚ್ಚಿನ ಲಾಭವೆಂದರೆ ತೋಟ-ಪಟ್ಟಿಗಳ ಉತ್ಪನ್ನವು ಹೆಚ್ಚುವದು. ಇದರ ಪ್ರಯೋಗವನ್ನು ಜರ್ಮನಿ ಅಮೇರಿಕೆಗಳಲ್ಲಿ ಅನೇಕ ಸಾರೆ ಮಾಡಿದ್ದಾರೆ. ಹೂವಿನಿಂದ ಹೂವಿಗೆ ಹಾರುತ್ತಾ ರಸ ಮತ್ತು ಪರಾಗಗಳನ್ನು ಸಂಗ್ರಹಿಸುವಾಗ್ಗೆ ನೊಣವು ಸ್ತ್ರೀಕೇಸರ ಮತ್ತು ಪುಂಕೇಸರಗಳನ್ನು ಬೆರಸುತ್ತದೆ. ಇದರಿಂದ ಯಾವ ಗಿಡದಲ್ಲಿ ಹಣ್ಣಾಗುವದಿಲ್ಲವೋ ಅವು ಕೆಲವು ದಿನಗಳಲ್ಲಿ ಹಣ್ಣು ಬಿಡಹತ್ತಿವೆಯೆಂದು ತಜ್ಞರ ಅನುಭವ. (ಈ ಪ್ರಯೋಗವನ್ನು ತ್ರಾವಣಕೋರ, ನೀಲಗಿರಿ, ಕೊಡಗುಗಳಲ್ಲಿಯೂ ಕೆಲವರು ಮಾಡಹತ್ತಿದ್ದಾರೆ.) ಅಮೇರಿಕ ಜರ್ಮನಿಗಳಂತೂ ಸಾರಿಹೇಳುವಷ್ಟು ಆಧಾರಗಳನ್ನು ಕಂಡುಹಿಡಿದಿವೆ. ಆದ್ದರಿಂದ ಆ ಬಗ್ಗೆ ಹೆಚ್ಚಿಗೆ ಬರೆಯುವ ಆವಶ್ಯಕತೆಯಿಲ್ಲ. ಆದರೂ ಜೇನು ಸಾಕಿ ಇದರ ಪ್ರತ್ಯಕ್ಷ ಅನುಭವ ಪಡೆಯುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಈ ಸಣ್ಣ ಸಾಧು ಮತ್ತು ಸಾಮಾಜಿಕ ಪ್ರಾಣಿಯಿಂದ ಕರ್ತವ್ಯದ ಗುರುತ್ವ, ಸಮಯದ ಬೆಲೆ, ಸೇವೆಯ ಮಹತ್ವ, ಒಕ್ಕಟ್ಟಿನ ಗುಟ್ಟು ಮೊದಲಾದ ಅನೇಕ ಗುಣಗಳು ಕಲಿಯತಕ್ಕವುಗಳಾಗಿವೆ. ಸಾಕುವ ಮೊದಲು ಅವುಗಳ ಪರಿಚಯಮಾಡಿಕೊಳ್ಳುವದು ಅವಶ್ಯವಾಗಿದೆ. ಸಾಕತಕ್ಕ ನೊಣವು ಇಂಥದೇ ಎಂದು ಗೊತ್ತಾಗದ ವಿನಃ ಈ ಕಾರ್ಯವನ್ನು ಪ್ರಾರಂಭಿಸಕೂಡದು. ಆದಕ್ಕಾಗಿ ಈ ಕೆಳಗೆ ಅವುಗಳ ಅಲ್ಪ ಪರಿಚಯ ಮಾಡಿಕೊಡುವೆನು.

ಹಿಂದುಸ್ಥಾನದಲ್ಲಿರತಕ್ಕ ನೊಣಗಳ ನಾಲ್ಕು ಪ್ರಕಾರಗಳು

(೧) ತೊಗರಿಜೇನು (ಹೆಜ್ಜೇನು—Rock Bee):— ಇದು ಜಗತ್ತಿನಲ್ಲಿಯೇ ಎಲ್ಲಕ್ಕೂ ದೊಡ್ಡ ಹಾಗೂ ಹೆಚ್ಚು ತುಪ್ಪ ಸಂಗ್ರಹಿಸುವ ಜೇನೆಂದು ಗೊತ್ತಾಗಿದೆ. ಆದರೆ ಪರದೇಶದವರೂ ಇದನ್ನು ಸಾಕಲು ಪ್ರಯತ್ನಪಟ್ಟು ನಿರಾಶರಾಗಿದ್ದಾರೆ. ಇದು ಬಹು ರೊಚ್ಚಿನ ಹಾಗೂ ಕಾಡು ಸ್ವಭಾವದ ಪ್ರಾಣಿಯು. ತಡವಿದವರ ಸೇಡು ತೀರಿಸಿಕೊಳ್ಳದೆ ಬಿಡದು. ಇದರ ಕಡಿತದಿಂದ ಅನೇಕರು ಮರಣಕ್ಕೀಡಾಗಿದ್ದಾರೆ. ಇದರ ಸ್ವಭಾವವು ಆಗಾಗ್ಗೆ ಸ್ಥಾನ ಪರಿವರ್ತನಮಾಡುವದು; ಮತ್ತು ಮರಗಳ ತುದಿಯಲ್ಲಿ ದೊಡ್ಡ ಕಟ್ಟಡಗಳ ಚಪ್ಪರಗಳಲ್ಲಿ ಒಂದೇ ಹುಟ್ಟನ್ನಿಟ್ಟು ಸ್ವತಂತ್ರವಾಗಿರುವಹಾಗಿದೆ. ಇದನ್ನು ಪೆಟ್ಟಿಗೆಯಲ್ಲಿಟ್ಟು ಸಾಕುವದು ಅಸಾಧ್ಯ ಮಾತು. ಇದು ಎಲ್ಲಕ್ಕೂ ಹೆಚ್ಚು ತುಪ್ಪವನ್ನು ಸಂಗ್ರಹಿಸುತ್ತಿದ್ದರೂ, ಒಂದೇ ಹುಟ್ಟಿನಲ್ಲಿ ಕೆಳಬದಿಗೆ ಇರುವ ಮರಿಗಳನ್ನು ಹಿಂಸೆಪಡಿಸದೆ ಇದರ ತುಪ್ಪ ತೆಗೆಯುವುದು ಅತಿ ಕಠಿಣವಾಗಿದೆ, ಮತ್ತು ಇದರ

ತುಪ್ಪವು ಅಷ್ಟು ಆರೋಗ್ಯಕರವೂ ಅಲ್ಲ. ಇದರ ಹೊಟ್ಟೆಯು ದೊಡ್ಡದಾದ್ದರಿಂದ ಎಲ್ಲ ಪ್ರಕಾರದ ಹೂವುಗಳಿಂದ ರಸ ಸಂಗ್ರಹಿಸುತ್ತದೆ. ಅಂತೂ ಇದನ್ನು ಸಾಕುವದು ಅಸಾಧ್ಯವಾದ್ದರಿಂದ ಇದರ ಗೊಡವೆಯನ್ನೆ ಬಿಟ್ಟುಬಿಡುವಾ.

(೨) ತುಡುವಿ ಜೇನು (Indian Bee):—ಇದೇ ಸಾಕತಕ್ಕ ಜೇನು. ಇದು ಹೆಜ್ಜೇನಿನಿಂತ ಆಕಾರದಲ್ಲಿ ಸಣ್ಣದೂ ಬೆನ್ನ ಮೇಲೆ ಹಳದೀ ಕಪ್ಪು ರೇಷೆಗಳಿಂದ ಕೂಡಿದ್ದೂ ಆಗಿದೆ. ಇದು ಮರಗಳ ಹೊದರಿನಲ್ಲಿ, ಹಾಳು ಗೋಡೆಗಳ ಪೊಳ್ಳು ಸ್ಥಳದಲ್ಲಿ, ಉಪಯೋಗಿಸದ ಪೆಟ್ಟಿಗೆ, ಕಪಾಟು, ಟ್ಯಾಪರ‍್ಯಾಟರ, ಗಡಿಗೆಗಳಲ್ಲಿ, ಗೆದ್ದಲಿಯ ಹುತ್ತು ಅಥವಾ ಕತ್ತಲೆಯುಳ್ಳ ಮನೆಗಳ ಚಪ್ಪರ, ಕಿಡಿಕಿಗಳ ಮೇಲ್ಭಾಗದಲ್ಲಿ ೧೦-೧೫ ಹುಟ್ಟುಗಳಲ್ಲಿ ವಾಸವಾಗಿರುತ್ತದೆ. ಕತ್ತಲೆಯಲ್ಲಿ ಅರ್ಧ ಇಂಚಿಗೊಂದರಂತೆ ಸಮಾನಾಂತರದ ಮೇಲೆ ಹುಟ್ಟನ್ನಿಟ್ಟು ಆನೇಕ ವರ್ಷ ಒಂದೇ ಸ್ಥಳದಲ್ಲಿರುವದರಿಂದಲೇ ಇದನ್ನು ಪೆಟ್ಟಿಗೆಯಲ್ಲಿಟ್ಟು ಪಾಲನ ಮಾಡಲು ಸಾಧ್ಯವಿದೆ. ಇದರ ಸ್ವಭಾವವೂ ಬಹು ಸೌಮ್ಯ. ಆದರೆ ಸುಮ್ಮನೆ ತಡವಿ ದುಃಖ ಕೊಟ್ಟಲ್ಲಿ ಅದೂ ತನ್ನ ಶಸ್ತ್ರವಾದ ಕೊಂಡಿಯನ್ನು ಪಯೋಗಿಸಿ ಕಷ್ಟಕ್ಕೀಡು ಮಾಡುವದು. ಆದರೆ ಒಮ್ಮೆ ಯಾರಿಗಾದರೂ ಕಡಿದ ಮೇಲೆ ಅದರ ಜೀವನವೂ ಮುಗಿದಂತಾಗುವದು. ಮುಂದೆ ತುಸು ವೇಳೆಯಲ್ಲಿಯೇ ಸಾಯುವದು. ಇದರ ಮುಖ್ಯ ಸ್ವಭಾವವೆಂದರೆ ಕತ್ತಲೆಯಲ್ಲಿ ಯಾರಿಗೂ ಕಾಣದಂತೆ ವಾಸವಾಗಿರುವದು ಮತ್ತು ಅನೇಕ ಹುಟ್ಟುಗಳನ್ನು ತಯಾರಿಸಿ ಜೇನು ಸಂಗ್ರಹಿಸುವದಾಗಿದೆ. ಈ ನೊಣಗಳು ನಮ್ಮ ಕರ್ನಾಟಕದಲ್ಲಿ ಕೊಡಗು, ಕಾರವಾರ, ಮಂಗಳೂರು, ಮೈಸೂರು, ಧಾರವಾಡ, ಬೆಳಗಾಂವಿ ಜಿಲ್ಲೆಗಳ ಪರ್ವತ ಪ್ರದೇಶಗಳಲ್ಲಿವೆ. ಇದೇ ತುಪ್ಪವು ಶ್ರೇಷ್ಠ.

ಚಿಕ್ಕಜೇನು (Little Bee):— ಇದಾದರೂ ಹೆಜ್ಜೇನಿನಂತೆ ಒಂದೇ ಹುಟ್ಟನ್ನಿಟ್ಟು ಆಗಾಗ್ಗೆ ಸ್ಥಳ ಬದಲಾಯಿಸುತ್ತಾ ತಿರುಗುವ ಸ್ವಭಾವದ್ದಾಗಿದೆ. ಇದು ತುಡುವಿ ಜೇನಿಗಿಂತ ಸಣ್ಣದಾಗಿಯೂ ಬಿಳಿ ಕಪ್ಪು ರೇಷೆಗಳುಳ್ಳದ್ದಾಗಿಯೂ ಇದೆ. ಇದರಲ್ಲಿ ತುಪ್ಪವೂ ಅತಿ ಸ್ವಲ್ಪ ದೊರೆಯುವದು, ಮತ್ತು ಸಾಕಿದರೆ ಒಂದೆಡೆ ನಿಲ್ಲಲಾರದ್ದೂ ಇದ್ದದರಿಂದ ಇದರ ಗೊಡವೆ ನಮಗೇಕೆಂದು ಎಲ್ಲರೂ ಬಿಟ್ಟುಕೊಟ್ಟಿದ್ದಾರೆ. ಆದರೆ ಇದರ ತುಪ್ಪವು ರುಚಿಕರವಾಗಿದೆ. ಸಣ್ಣ ಪೊದೆಗಳ, ಅಥವಾ ಕಂಟಿಗಳ ಗುಂಪಿನಲ್ಲಿ ಮುಚ್ಚು ಮರೆಯಾದ ಕಸಕಡ್ಡಿಗಳ ಗುಂಡಿಗಳಲ್ಲಿ ಇಲ್ಲವೆ ಸಣ್ಣ ಮರಗಳಲ್ಲಿ ಟೊಂಗೆಗಳಲ್ಲಿ ಇದು ಹುಟ್ಟನ್ನಿಡುತ್ತ... ಇದನ್ನು ಸಾಕಿ ಪ್ರಯೋಜನವಿಲ್ಲ.

ಪುಟ್ಟ ಜೇನು (Dammer Bee):—ಇದು ನೊಣ... ಗಳಿಗಿಂತ ತುಸು ದೊಡ್ಡದಾಗಿ ಕಪ್ಪು ಬಣ್ಣದ್ದಿದೆ. ಇ... ದರೂ ಕತ್ತಲೆಯ ಸ್ಥಳದಲ್ಲಿ ಅಂಟನಂಥ ಒಂದು ಪದಾ... ದಲ್ಲಿ ತತ್ತಿ ಜೇನುಗಳನ್ನು ಸಂಗ್ರಹಿಸುತ್ತದೆ. ... ಮಾವಿನ ಮರದ ಹೊದರಿನಲ್ಲಿ ಇಲ್ಲವೆ ಮನೆಗಳ ಗೋ... ಗಳ ಛಿದ್ರಗಳಲ್ಲಿ ಅಥವಾ ಯಾವದೊಂದು ಪೊಳ್ಳು ಸ್ಥ... ಲೆಯ ಸ್ಥಳದಲ್ಲಿ ನೋಡಬಹುದು. ಆದರೆ ಜೇನುತುಪ್ಪ... ೩—೪ ತೊಲೆಗಿಂತ ಹೆಚ್ಚಿಗೆ ಸಿಗುವದು ಅಪರೂಪ. ... ರಿಂದ ಇದನ್ನು ಸಾಕುವವರು ಅತಿ ವಿರಳ. ಆ... ಕೊಡಗಿನಲ್ಲಿ ಸಾಕಿದ್ದಾರೆ. ಇದರ ತುಪ್ಪವು ಕಣ್ಣಿಗ... ಒಳ್ಳೇ ಔಷಧಿಯಾಗಿದೆ. ಅದಕ್ಕಾಗಿ ಇದನ್ನು ಆನೇ... ಸಂಗ್ರಹಿಸುತ್ತಾರೆ. ಇದು ನಮ್ಮ ಪೆಟ್ಟಿಗೆಯ ಚಪ್ಪರ... ಬಹುದು. ತುಡುವಿಯ ಸಂಗಡಲೇ ಇದನ್ನು ಸಾಕ...

ಜೇನು ಸಾಕುವ ಹೊಸ ಸಾಧನಗಳು

ಸಾಕಲು ಯೋಗ್ಯ ನೊಣವು ತುಡುವಿಯ... ಗೊತ್ತಾದ ಮೇಲೆ ಅದನ್ನು ಸಾಕಲು ಬೇಕಾಗುವ ಸಾ... ಗಳ ಪರಿಚಯ ಮಾಡಿಕೊಳ್ಳುವದು ಅವಶ್ಯ... ಅದನ್ನು ಹಿಡಿದು ತರುವ ಮೊದಲು ಈ ಕೆಳಗಿನ ... ಸಾಮುಗ್ರಿಗಳನ್ನೆಲ್ಲಾ ಸಂಗ್ರಹಿಸಬೇಕಾಗುವದು:—

(೧) ಪೆಟ್ಟಿಗೆ (Bee Hive)—ಇದರಲ್ಲಿ ... ಹುಟ್ಟನ್ನಿಡಲು ೭-೮ ಚೌಕಟ್ಟುಗಳಿರುತ್ತಿದ್ದು ... ಯೊಂದರ ನಡುವೆ ನೊಣಗಳು ಹೋಗಿ ಬರುವಷ್ಟು ... ಳಿಯಷ್ಟು ಸ್ಥಳವಿರುತ್ತದೆ. ಇದೇ ಪ್ರಕಾರ ಮೇಲೆ... ಪೆಟ್ಟಿಗೆಗಳನ್ನು ಗುಂಪು ಬೆಳೆದಂತೆ ಏರಿಸುತ್ತಾ ... ಬೇಕಾಗುತ್ತದೆ. ಇದರ ಅಳತೆಯ ವಿವರ ಹೀಗೆ—

(೧) ತೀರ ಮೇಲೆ ಮಳೆ ಬಿಸಿಲು ತಗಲದ... ಅದಕ್ಕೊಂದು ಜಾಳಿಗೆಯ ಕಿಡಿಕೆ ಗಾಳಿಯಾಡು... (೨) ಮೇಲ್ಚಪ್ಪರದ ಕೆಳಗೊಂದು ಚೌಕಾಕಾರ ಪೊಳ್ಳು ... ವನ್ನಿಡಬರುವದು. (೩) ಅದರ ಕೆಳಗೆ ಜೇನು... ಪೆಟ್ಟಿಗೆ. ಇದರಲ್ಲಿ ೭—೮ ಚೌಕಟ್ಟುಗಳನ್ನು ... ಹಾಕುವುದಕ್ಕೆ ಅನುಕೂಲವಾಗಿರುತ್ತದೆ. ನೊಣ... ಇದರಲ್ಲಿಯೆ ಜೇನನ್ನು ಸಂಗ್ರಹಿಸುತ್ತವೆ. (೪) ... ಕೆಳಗೆ ತತ್ತಿ-ಮರಿಗಳ ಪೆಟ್ಟಿಗೆ. ಇದರಲ್ಲಿ ತತ್ತಿ... ಡುವ ರಾಣಿಯೂ, ಮರಿಗಳೂ ವಾಸವಾಗಿರುತ್ತವೆ.

ಲಿಂದ ನಾವು ಜೇನು ತೆಗೆಯುವುದಿಲ್ಲ. ಇದರ ಗೋಡೆಯ ಬುಡದಲ್ಲಿ ಜೇನುನೊಣಗಳು ಓಡಾಡುವುದಕ್ಕೆ ಒಂದು ಕಿಂಡಿಯಿರುತ್ತದೆ. ಜೇನಿನ ಪೆಟ್ಟಿಗೆಗೂ ಮರಿಗಳ ಪೆಟ್ಟಿಗೆಗೂ ಅರ್ಧ ಇಂಚು ಅಂತರವಿರುತ್ತದೆ. (೫) ಎಲ್ಲಕ್ಕೂ ಕೆಳಗೆ ಒಂದು ಹಲಿಗೆಯು ಸುತ್ತಲೂ ೨ ಇಂಚಿನಷ್ಟು ಇಳಿಜಾಡಾಗಿ ಇರುವುದು.

(೨) ಮಧುನಿಸ್ಸಾರಕ ಯಂತ್ರ— ಇದು ಟಿನ್ ಶೀಟಿನಿಂದ ಮಾಡಿದ ಒಂದು ಡಬ್ಬಿಯಿದ್ದು ಒಳಗಡೆ ಕಡೆಗೋಲಿನಂತೆ ತಿರುಗುವ ಜಾಳಿಗೆಯಿಂದ ತಯಾರಿಸಿದ ಒಂದು ಚೌಕಾದ ಜರಡಿ ಇರುತ್ತದೆ. ಇದರಲ್ಲಿ ಮೇಲಿನ ಪೆಟ್ಟಿಗೆಯೊಳಗಿನ ಜೇನು ತುಂಬಿದ ಚೌಕಟ್ಟುಗಳನ್ನು ನೊಣ ಜಾಡಿಸಿ ಬರಿದಾಗಿಸಿ ಹಾಕಿ ತಿರುವಿದಲ್ಲಿ ಜೇನು ತುಪ್ಪವು ಮಾತ್ರ ಕೆಳಗೆ ಬಿದ್ದು ಅದರ ಹುಟ್ಟುಗಳಿಗೆ ಧಕ್ಕೆ ತಗಲುವದಿಲ್ಲ. ಅವನ್ನು ಬರಿದಾಗಿಮಾಡಿ ಪುನಃ ಹಾಗೇ ಪೆಟ್ಟಿಗೆಯಲ್ಲಿಟ್ಟರೆ ನೊಣಗಳು ೮—೧೦ ದಿವಸಗಳಲ್ಲಿ ಪುನಃ ಅವನ್ನು ತುಂಬಲು ಅನುಕೂಲವಾಗುತ್ತದೆ. ಆದ್ದರಿಂದ ಮೇಲಿನ ಪೆಟ್ಟಿಗೆಯಷ್ಟೇ ಇದರ ಆವಶ್ಯಕತೆ ಇದೆ. (ಆದರೆ ಪ್ರತಿ ಮನೆಗೊಂದು ಬೇಕಾಗಿಲ್ಲ. ಊರಿಗೊಂದೆರಡು ಇದ್ದರೆ ಸಾಕು.)

(೩) ಹೊಗೆ ಬಿಡುವ ತೊಗಲಿನ ತಿದಿಯುಳ್ಳ ಡಬ್ಬಿ ಇದರ ಒಳಗಡೆ ಕುಳ್ಳು, ತಟ್ಟು ಅಥವಾ ತೆಂಗಿನ ಜುಬ್ಬರಕ್ಕೆ ಉರಿ ಹಚ್ಚಿಟ್ಟು ತಿದಿಯನ್ನು ಒತ್ತುವದರಿಂದ ಹೊಗೆ ಮೇಲಿನ ಮುಖದಿಂದ ಹೊರಡುತ್ತದೆ. ಇದು ನೊಣ ಹಿಡಿಯಲು ಅವಶ್ಯವಾಗಿ ಬೇಕಾಗುತ್ತದೆ. ಇದರ ಹೊರತು ಕೈಚೀಲ, ಚಾಕು, ಕತ್ತರಿ, ಬಾಳೆಯ ನಾರು, ಮೋರೆಗೆ ಜಾಳಿಗೆಯ ಟೊಪ್ಪಿಗೆ ಮೊದಲಾದ ಸಂಗಡ ಒಯ್ಯಬೇಕಾದ ಸಾಮಾನುಗಳು ಬೇಕು

ಆರೋಗ್ಯಬಿಂದು

ಸ್ನಾನಕ್ಕೆ ಸಾಬೋನು

ಸಾಬೋನನ್ನು ದಿನಾಲು ಸ್ನಾನಕ್ಕೆ ಉಪಯೋಗಿಸ ಬಹುದೋ ಕೂಡದೋ ಎಂದು ಅನೇಕರು ಪ್ರಶ್ನಿಸುವರು. ನಾವು ಏನೂ ಉದ್ಯೋಗ ಮಾಡದೆ ಮನೆಯಲ್ಲಿ ಕೂತರೂ ವಾತಾವರಣದಲ್ಲಿಯ ಧೂಳಿಯೆ ನಮ್ಮ ಮೈಯನ್ನು ಹೊಲಸು ಮಾಡಲಿಕ್ಕೆ ಸಾಕಾಗಿರುತ್ತದೆ. ಮಳೆಗಾಲದಲ್ಲಿ ಹವೆಯ ಧೂಳು ವಿಶೇಷವಾಗಿಲ್ಲದಿದ್ದರೂ ನಮ್ಮ ಚರ್ಮರಂಧ್ರಗಳಿಂದ ಸೂಕ್ಷ್ಮವಾಗಿ ಹೊರಡುವ ವಿಷಪೂರಿತ ವಾಯುವಿನಿಂದಲೂ ಮೈಯು ಹೊಲಸಾಗುವದು. ಆದುದರಿಂದ ಚರ್ಮವನ್ನು ಶುಚಿಗೊಳಿಸುವ ರೀತಿಯಲ್ಲಿ ಸ್ನಾನದ ಪರಿಕರಗಳಿರಬೇಕೆಂಬುದಂತೂ ಸರಿಯೆ. ಸಾಬೋನಿನ ಅವಶ್ಯಕತೆಯು ಚರ್ಮರಂಧ್ರದೊಳಗಿನ ಹೊಲಸನ್ನು ವಿರಲಗೊಳಿಸಿ ಹೊರಗೆ ಹಾಕುವುದಕ್ಕಾಗಿದೆ. ಆದಕ್ಕಾಗಿ ಸಾಬೋನಿನಲ್ಲಿ ದಾಹಕ ಕ್ಷಾರಗಳು ಮಿಶ್ರವಾಗಿರುತ್ತವೆ. ಅವು ಮಿತವಾಗಿದ್ದರೆ ರೋಮರಂಧ್ರಗಳು ಶುದ್ಧವಾಗುವವಲ್ಲದೆ ಚರ್ಮಕ್ಕೇನೂ ಅಪಾಯವಾಗಲಾರದು. ಆದರೆ ಹಲಕೆಲವು ಸಾಬೋನುಗಳಲ್ಲಿ ಮಿತಿಮೀರಿ ದಾಹಕ ಕ್ಷಾರಗಳಿರುತ್ತವೆ. ಅವುಗಳಿಂದ ಚರ್ಮಕ್ಕೆ ಬಹಳ ಅಪಾಯವಾಗುವದುದರಿಂದ ಸಾಬೋನಿನ ಘಟಕಗಳನ್ನು ಪೂರ್ಣವಾಗಿ ತಿಳಿಯದೆ ಉಪಯೋಗಿಸಬಾರದು. ಮುಖಕ್ಕೂ ಕೈಗಳಿಗೂ ದಿನಕ್ಕೆ ಒಂದೆರಡು ಸಲಕ್ಕಿಂತ ಹೆಚ್ಚಾಗಿ ಒಳ್ಳೆ ಸಾಬೋನನ್ನು ಕೂಡ ಉಪಯೋಗಿಸಬಾರದು. ಏಕೆಂದರೆ ಆದರಿಂದ ಚರ್ಮದಲ್ಲಿ ಎಣ್ಣೆಯು ಕಡಿಮೆಯಾಗಿ ಚರ್ಮವು ಬಿರುಸಾಗುವದು. ಸ್ನಾನದ ಕಾಲಕ್ಕೆ ಸ್ವಲ್ಪ ಸಾಬೋನು ಹಚ್ಚಿ ಅಂಗೈಯ ಕಸುವಿನಿಂದ ಮೈಯನ್ನು ಶುಚಿಗೊಳಿಸಬೇಕಲ್ಲದೆ ಸಾಬೋನಿನ ಒಡೆಯನ್ನೆ ಹಚ್ಚಿ ತಿಕ್ಕಿಕೊಳ್ಳಬಾರದು.

ಓದುವಾಗ ದೀಪದ ಪ್ರಕಾಶ

ಪೂರ್ವಕಾಲದಲ್ಲಿ ಔಡಲ, ಹೊನ್ನಿ, ಕುಸುಬಿ ಎಣ್ಣೆಗಳಿಂದ ಹಣತಿಯಲ್ಲಿ ದೀಪಹಚ್ಚಿ ರಾತ್ರಿ ಮನೆಗಳನ್ನು ಬೆಳಗಿಕೊಳ್ಳುತ್ತಿದ್ದರು. ಈಗಂತೂ ವಿದ್ಯುದ್ದೀಪಗಳು ಸರ್ವವ್ಯಾಪಿಯಾಗುತ್ತಿವೆ. ಕತ್ತಲಲ್ಲೂ, ಹಗಲ ಬೆಳಕಿನಲ್ಲೂ ನೋಡುವಾಗ ಕಂಣುಗೊಂಬೆಯು ದೊಡ್ಡದೂ ಸಂಣದೂ ಆಗುವದು. ಒರಿ ಕತ್ತಲಲ್ಲಿ ಕೆಲವು ದಿನವಿದ್ದರೆ ನಂತರ ಬೆಳಕು ಕಂಣಿಗೆ ಸಹಿಸದಾಗುವದು; ಬೆಳಕಿನಲ್ಲಿಯೆ ಬಹುದಿನ ವಿದ್ದರೆ ಕತ್ತಲಲ್ಲಿ ಕಾಣುವದು ಕಷ್ಟವಾಗುವದು. ಏಕೆಂದರೆ ಕಂಣುಗೊಂಬೆಗೆ ಹಿಗ್ಗುವ ಕುಗ್ಗುವ ವ್ಯಾಯಾಮವೇ ಸಾಕಷ್ಟು ಸಿಗುವದಿಲ್ಲ. ಆದುದರಿಂದ ನೇತ್ರವಿಜ್ಞಾನಿಗಳು ವಿದ್ಯುದ್ದೀಪಗಳ ಮೂಲಕ ರಾತ್ರಿಯನ್ನು ಹಗಲಾಗಿ ಮಾರ್ಪಡಿಸುವ ನಾಗರಿಕತೆಯಿಂದ ಕಂಣುಗಳ ಮೇಲೆ ದುಷ್ಪರಿಣಾಮವಾಗುವದೆಂದು ಅಭಿಪ್ರಾಯಪಡುತ್ತಾರೆ. ರಾತ್ರಿ ಓದುವ ಚಟವನ್ನು ಬಿಡುವದು ಒಳಿತು. ಅನಿರ್ವಾಹಪಕ್ಷದಲ್ಲಿ ಓದುವದಾದರೆ ತಡೆಯುವಷ್ಟು ಮಂದ ಪ್ರಕಾಶದಲ್ಲಿ ಅಲ್ಪವಾಗಿ ಓದುವ ರೂಢಿಯಿಟ್ಟರೆ ಕಂಣಿನ ಸ್ನಾಯುಗಳಿಗೆ ಸರಿಯಾದ ವ್ಯಾಯಾಮ ಸಿಗುವದು.

ಊಟದಲ್ಲಿ ನೀರು

'ಊಟಕ್ಕೆ ಕೂತಾಗ ನೀರನ್ನು ಕುಡಿಯಲೆಬಾರದು' ಎಂದು ಆಹಾರವಿಜ್ಞಾನಿಗಳೆಲ್ಲ ಹೇಳುತ್ತಾರೆ. ಏಕೆಂದರೆ (೧) ನೀರಿನಿಂದ ಪಾಚಕರಸಗಳು ವಿರಲವಾಗುವುದರಿಂದ ಆಹಾರ ಪಚನವು ಸರಿಯಾಗಿ ಆಗುವದಿಲ್ಲ. (೨) ನೀರನ್ನು ಹೆಚ್ಚಾಗಿ ಕುಡಿಯುವುದರಿಂದ ಆಹಾರವು ಹೆಚ್ಚು ತೆಳ್ಳಗಾಗಿ ಜಠರಕ್ಕೆ ಚನ್ನಾಗಿ ಸಂಕೋಚಗೊಂಡು ಚಲನಹೊಂದುವುದಕ್ಕೆ ಅನುವಾಗುವುದಿಲ್ಲ. (೩) ಜಠರಕ್ಕೆ ಬಂದ ನೀರಿನ ಬಹುಭಾಗವು ರಕ್ತಗತವಾಗುವವರೆಗೆ ಜಠರದಲ್ಲಿ ಪಚನಕ್ರಿಯೆಯೆ ಆರಂಭವಾಗುವದಿಲ್ಲ. ಪಚನವು ತಡವಾಗುವುದರಿಂದ ಆಹಾರವು ಕೆಡಹತ್ತಿ ವಾಯು ಉತ್ಪನ್ನವಾಗುತ್ತದೆ. ಇದೆಲ್ಲ ನಿಜವಾದರೂ ಊಟದ ಮಧ್ಯದಲ್ಲಿ ನೀರು ಕುಡಿಯದೆ ಸಮಾಧಾನವೇ ಅನಿಸುವದಿಲ್ಲ. ಅದು ಚಟದ ಪ್ರಭಾವ. ಆದುದರಿಂದ ಊಟಕ್ಕೆ ಕುಳಿತಾಗ ನೀರನ್ನು ಕುಡಿಯಲೇ ಬೇಕಾಗಿದ್ದರೆ ಸ್ವಲ್ಪ ಸ್ವಲ್ಪ ಚೀಪಿ ಕುಡಿಯಬೇಕು. ಮತ್ತು ನೀರಿನ ಆವಶ್ಯಕತೆಯನ್ನು ಹೆಚ್ಚಿಸುವ ಮಸಾಲೆಗಳನ್ನು ಅಡಿಗೆಯಲ್ಲಿ ಕಡಿಮೆಮಾಡಬೇಕು. ಮತ್ತು ಊಟವಾಗಿ ಮೂರು ಗಂಟೆಗಳ ನಂತರ ಬೇಕಾದಷ್ಟು ನೀರನ್ನು ಕುಡಿಯಬಹುದು.

ದಾಂಪತ್ಯಪ್ರೇಮ

ಲೇಖಕರು:
ಶ್ರೀ. ಕಡೂರು ಶ್ರೀಪಾದ, ಮಿತ್ರಮೇಳ, ಬೆಂಗಳೂ[illegible]

ಗಂಡಸು ಸ್ವಾಭಾವಿಕವಾಗಿ ತನ್ನ ಕೆಳದಿಯಲ್ಲಿ ಸೌಂದರ್ಯ, ಕೋಮಲತೆ, ಶಾಂತತೆ, ತಿಳಿಯೊಲವುಗಳೆನ್ನು ನೋಡಬಯಸುವನು. ಹೆಂಗಸು ತನ್ನಿನಿಯನಲ್ಲಿ ತನ್ನನ್ನೂ ತನ್ನ ಸಂಸಾರವನ್ನೂ ರಕ್ಷಿಸಲು ಬೇಕಾದ ಸಾಹಸ, ಧೈರ್ಯ, ಉತ್ಸಾಹ, ದ್ರವ್ಯಾನುಕೂಲಗಳೆನ್ನು ಕಾಣಬಯಸುವಳು.

ಗಂಡು ಹೆಣ್ಣುಗಳ ಹುಟ್ಟಿನೊಡನೆ ಹುಟ್ಟಿದ ಪ್ರೇಮವು ವಯಸ್ಸಿನೊಡನೆ ಬೆಳೆದು— ಎರಡು ರೂಪದ ಕಾಯವೊಂದೆ ಮನಸಾಗಿ— ಸಂಗಾತಿಗಳು ಬೆರೆತು ಪ್ರೇಮದೇವತೆಯ ಆರಾಧನೆ ಮಾಡಿ ಮಕ್ಕಳ ಹಾಲುಗೆನ್ನೆಗಳ ಮುಗುಳುನಗೆಯಲ್ಲಿ ತಮ್ಮ ಬಾಳಿನ ಗುರಿಯನ್ನು ಕಾಣುವಂತೆ ಮಾಡುವದು.

ದಾಂಪತ್ಯ ಜೀವನದ ಗುರಿ ಸಂತಾನ ಪ್ರಾಪ್ತಿಎಂಬುದು ಎಲ್ಲರರಿತ ವಿಷಯ. ದಾಂಪತ್ಯಪ್ರೇಮದ ಗುರಿಯೂ ಅದೇ. ದಾಂಪತ್ಯಪ್ರೇಮದ ಬೆಳವಣಿಗೆ ಮತ್ತು ದಾಂಪತ್ಯ ಪ್ರೇಮಾನುಭವಗಳಲ್ಲಿ ಗಂಡಸು ಹೆಂಗಸರಿಗೆ ಅನೇಕ ವ್ಯತ್ಯಾಸಗಳಿದ್ದಂತೆ ಪ್ರೇಮದ ಪರ್ಯವಸಾನದಲ್ಲಿಯೂ ಇಬ್ಬರಿಗೂ ವ್ಯತ್ಯಾಸಗಳಿವೆ. ಗಂಡಸು ತಾನೊಲಿದ ಪ್ರೇಯಸಿಯೊಡನೆ ಪ್ರಣಯದಾಟವನ್ನಾಡಿ, ತನ್ನ ಪ್ರೇಮದ ಉದ್ವಿಗ್ನತೆಯನ್ನು ಆಕೆಗರುಹಿ, ಜೀವಾತ್ಮಗಳೊಂದಾಗಿ ಆಕೆಯೊಡನೆ ಬೆರೆಯುವುದರಲ್ಲಿಯೇ ಪ್ರೇಮಲೀಲೆಯ ಪರಮಾವಧಿಯನ್ನು ಕಂಡುಬಿಡುವನು. ಆದರೆ ಹೆಂಗಸಿಗೆ ಆಗಿನ್ನೂ ಪ್ರೇಮಲೀಲೆಯು ಮೊದಲಾಗುವುದು. ಅದನ್ನನುಭವಿಸಿ, ಗರ್ಭ ಧರಿಸಿ, ತಮ್ಮೀರ್ವರ ಮಿಲನದ ಮುಗುಳನ್ನು ಪಡೆದು, ಅದನ್ನು ಆರೈಕೆಮಾಡಿ, ಲಲ್ಲೆಮಾಡಿ ಮುದ್ದಿಸಿ ನಲಿಸಿ ಆನಂದಪಡುವುದರಲ್ಲಿ ಪ್ರೇಮವೃಕ್ಷದ ಫಲವನ್ನನುಭವಿಸಿ, ಅದರ ಉತ್ತರೋತ್ತರ ಅಭಿವೃದ್ಧಿಯಲ್ಲಿ ಪರ್ಯವಸಾನವನ್ನು ಕಾಣುವಳು. ಈ ಪ್ರೇಮಮಯ ವಾತಾವರಣವು ಹೆಂಗಸಿಗೆ ಬಹಳ ಕಾಲ ವ್ಯಾಪಿಸುವುದರಿಂದ ಅದರ ತಳಹದಿಯೂ ನಿಧಾನವಾಗಿಯೇ ಪ್ರಾರಂಭವಾಗಿ ಆಕೆಯು ಬೇರೆ ಯಾವ ಹವ್ಯಾಸಗಳಿಗೂ ಮನಗೊಡದಂತೆ ಅದರಲ್ಲೇ ತಲ್ಲೀನಳನ್ನಾಗಿ ಮಾಡಿ ಬಿಡುವುದು. ಈ ಚಿತ್ರವನ್ನು ನಮ್ಮ ಜನಜೀವನದಲ್ಲಿ ದಿನವೂ ನಾವು ನೋಡುತ್ತಿರುತ್ತೇವೆ. ಒಬ್ಬ ತಾಯಿಗೆ ತನ್ನ ಗಂಡ, ತನ್ನ ಮಕ್ಕಳು, ತನ್ನ ಸಂಸಾರನಿರ್ವಹಣ ಇವುಗಳನ್ನು ಬಿಟ್ಟರೆ ಬೇರೆ ಯಾವ ಹವ್ಯಾಸವೂ ರುಚಿಸುವುದಿಲ್ಲ. ಆದ ಕಾರಣವೇ ಅನೇಕ ಶಾಸ್ತ್ರಜ್ಞರು, "ಹೆಂಗಸಿಗೆ ತಾಯ್ತನ ಗೃಹಕೃತ್ಯ ನಿರ್ವಹಣ ಇವೆರಡು ಅತ್ಯುತ್ತಮವಾದ ಜವಾಬ್ದಾರಿಯಾಗಿದೆ. ಅದರಲ್ಲಿ ಸಮರ್ಥ[illegible] ಕರ್ತವ್ಯವೆಸಗಿ ಉತ್ತಮರೆನಿಸಿಕೊಂಡರೆ ಸಮಾಜಕ್ಕೆ [illegible] ಮಹದುಪಕಾರಮಾಡಿದಂತಾಗುವುದು" ಎಂದಿ[illegible]

ಆದರೆ ಗಂಡಸು ಬೇರೆಡೆ ಬಹುಬೇಗ ಗಮನಕೊಡು[illegible] ಗೃಹಕೃತ್ಯದಲ್ಲಿ ಅವನು ಹೆಚ್ಚಾಗಿ ತಲೆಹಾಕಬೇಕಾ[illegible]ದಿಲ್ಲ. ಸಂಸಾರನಿರ್ವಹಣದಲ್ಲಿ ಬರೇ ಆರ್ಥಿಕ ಪರಿಸ್ಥಿತಿ[illegible] ಸರಿಪಡಿಸಿಕೊಂಡರೆ ಸಾಕು. ಕೆಲವು ವೇಳೆ ಗಂಡಸು ಸ[illegible] ಅನ್ಯಮನಸ್ಕನಾಗಲೂ ಬಹುದು. ಆಗ ಸಂಸಾರಸ್ಥೆ[illegible]ಳಾದ ಹೆಂಗಸು ಬಹು ಚಾತುರ್ಯದಿಂದ ಅವನ ಮ[illegible] ಬದಲಾಯಿಸಿ ಸಂಸಾರರಕ್ಷಣೆಯ ಜವಾಬ್ದಾರಿಯನ್ನ[illegible]ವಂತೆ ಮಾಡಬಲ್ಲಳು. ಒಡನೆ ಗಂಡಸು ಉಳಿದೆಲ್ಲ [illegible]ಗಳನ್ನೂ ಮರೆತು ದುಡುಕಿ, ಆವೇಶಗೊಂಡು, [illegible] ಬಲೆಗೆ ಬಿದ್ದು ಪ್ರಣಯದ ಪರಮಾವಧಿಯನ್ನು [illegible] ತನ್ನ ಪ್ರೇಯಸಿಗೆ "ನಿನಗಾಗಿ ಪ್ರಪಂಚವನ್ನೇ [illegible] ನನ್ನ ಸರ್ವಸ್ವವನ್ನೂ ನಿನಗರ್ಪಿಸುವೆನು" ಎ[illegible] ಮುಂದೆ ಸ್ವಲ್ಪ ಕಾಲ ಹಾಗೆ ನಡೆದೂ ನಡೆಯುವನು. [illegible] ಅಂತಹ ಉಗ್ರತೆಯ ದುಡುಕಿನ ಒರಟು ಗಂಡಸನ್ನು [illegible] ತುಂಬಾ ಕಷ್ಟಪಡಬೇಕಾಗಿಲ್ಲ. ಅದಕ್ಕೆ ಧೈರ್ಯ, [illegible] ಶಕ್ತಿ ಬೇಕಾಗಿಲ್ಲ. ಶಾಂತತೆಯ ಹಟಮಾರಿತನ, [illegible]ವಾದ, ಇಲ್ಲವೆ ಪರಮಾವಧಿಯಲ್ಲಿ ಕಂಬನಿ, ಈ [illegible] ಪ್ರಯೋಗದಿಂದ ಎಂತಹ ಸಿಂಹಪರಾಕ್ರಮಿಯನ್ನ[illegible] ಸೋಲಿಸಿ ಶರಣಾಗತನನ್ನಾಗಿ ಮಾಡಬಲ್ಲಳು. ಯು[illegible] ಅನೇಕ ರಾಷ್ಟ್ರಗಳನ್ನು ಗೆದ್ದು ಇಡೀ ಪ್ರಪಂ[illegible] ನಡುಗಿಸಿದ ನೆಪೋಲಿಯನ್ನನೂ ಕೂಡ ತನ್ನ [illegible]

ಈ ಲೇಖನಮಾಲೆಯಲ್ಲಿ ಇದು ಕೊನೆಯ ಬರಹ. ಸಂ

ಯನ್ನು ಆಳಲಾರದೆ ಸೋತು "ನನ್ನ ದೃಢವಾದ ಆತ್ಮ ಶಕ್ತಿಯನ್ನು ಅನೇಕರು ಕೊಂಡಾಡಿದ್ದಾರೆ. ಆದರೆ ನಮ್ಮ ಸಂಸಾರದಲ್ಲಿ ನನ್ನನ್ನು ಏನೂ ಕೈಲಾಗದ ಹಸುಮಗುವಿನಂತೆ ಕಾಣುವರು. ಆದು ಅವರಿಗೆ ತಿಳಿದಿತ್ತು. ನಮ್ಮ ಗಂಡಹೆಂಡಿರ ಜಗಳದಲ್ಲಿ ಪ್ರಾರಂಭದ ಬಿರುಗಾಳಿ ಮುಗಿದೊಡನೆ ನನ್ನ ಹೆಂಡತಿಯ ಹಟಮಾರಿತನವು ಯಾವಾಗಲೂ ನನ್ನನ್ನು ಗೆಲ್ಲುತ್ತಿತ್ತು. ನಾನು ಸೋತು ಮೆದುವಾದಾಗ ಅವಳು ನನ್ನನ್ನು ಹೇಗೆ ಬೇಕಾದರೂ ಆಡಿಸುತ್ತಿದ್ದಳು."1 ಎಂದಿರುವನು. ಮೇರಿಯ ಲೋವಿಸ (Maria Lovisa) ಎಂಬುವಳು "ನನಗೆ ಯಾವ ಪದಾರ್ಥವನ್ನಾದರೂ ಪಡೆಯುವ ಆಸೆಯಾದರೆ ನನ್ನ ಪ್ರಿಯನೆದುರು ಎರಡು ಬಾರಿ ಅತ್ತುಬಿಟ್ಟರೆ ಅದು ನನಗೆ ಸುಲಭವಾಗಿ ಸಿಗುತ್ತಿತ್ತು."2 ಎನ್ನುವಳು. ಕಾರಣ ಬುದ್ಧಿವಂತಳಾದ ಗೃಹಿಣಿಯು ಪ್ರಣಯಕಲಹದಲ್ಲಿ "ಮೊದಲ ಮುನಿಸಿಗೆ ಜಯ ದೊರೆಯದಿದ್ದರೆ ಇನ್ನೊಮ್ಮೆ ಅಳು" ಎಂಬುದನ್ನೇ ಅಜೇಯವಾದ ಆಯುಧವನ್ನಾಗಿ ಉಪಯೋಗಿಸುವಳು. ಈ ವಿವಿಧ ಪ್ರಕೃತಿಗಳ ಪರಿಣಾಮವಾಗಿ ಗಂಡಸು ಸ್ವಾಭಾವಿಕವಾಗಿ ತನ್ನ ಕೆಳದಿಯಲ್ಲಿ ಸೌಂದರ್ಯ, ಕೋಮಲತೆ, ಶಾಂತತೆ, ಕೀಲಿಯೊಲವುಗಳನ್ನು ನೋಡಬಯಸುವನು. ಹೆಂಗಸು ಕನ್ನಿನಿಯನಲ್ಲಿ ತನ್ನನ್ನೂ ತನ್ನ ಸಂಸಾರವನ್ನೂ ರಕ್ಷಿಸಲು ಬೇಕಾದ ಸಾಹಸ, ಧೈರ್ಯ, ಉತ್ಸಾಹ, ದ್ರವ್ಯಾನುಕೂಲಗಳನ್ನು ಕಾಣಬಯಸುವಳು.

ಈ ರೀತಿ ಪ್ರೇಮದ ಅನುಭವವಾಗಿ ಅದರ ಪರ್ಯವಸಾನವು ಗಂಡುಹೆಣ್ಣುಗಳ ಮಿಲನದಲ್ಲಿ ಅರಳಿದ ಮುಗುಳು! ಅನೇಕ ವರುಷಗಳ ಇವರೀರ್ವರ ಪ್ರೇಮದ ಬೆಳವಣಿಗೆಯು ಇವರ ಮಗುವಿನಲ್ಲಿ ಒಂದುಗೂಡಿರುತ್ತದೆ. ಇಬ್ಬರೂ, ಒಮ್ಮನಸ್ಸಿನ ಇಬ್ಬರ ಪ್ರೇಮವೂ ಬೆರೆತ, ದ್ವಿಗುಣ ಪ್ರೇಮದಿಂದ ಆ ಮಗುವನ್ನು ಪ್ರೀತಿಸುತ್ತಾ ಆರೈಕೆಮಾಡಿ, ಯೋಗ್ಯ ಶಿಕ್ಷಣ ಕೊಟ್ಟು, ಜೀವನದಲ್ಲಿ ಪರಾವಲಂಬನೆಯಿಲ್ಲದೆ ತನ್ನ ಕರ್ತವ್ಯವನ್ನು ತಾನು ಮಾಡಲು ಯೋಗ್ಯನಾಗುವಂತೆ ತಯಾರು ಮಾಡುವುದರಲ್ಲಿ ಆಸಕ್ತಿಗೊಳ್ಳುವರು. ಈ ತಮ್ಮ ಪ್ರಯತ್ನವು ಫಲಿಸಿ, ತಮ್ಮ ಮಗುವು ಪ್ರವರ್ಧಮಾನಕ್ಕೆ ಬಂದು, ತನ್ನ ಜೀವನವನ್ನು ನಡೆಸಲು ಯೋಗ್ಯ ಸಂಗಾತಿಯನ್ನು ಕೂಡಿ, ಅವರೀರ್ವರ ದಾಂಪತ್ಯ ಪ್ರೇಮಾನುಭವವು ಸುಖಮಯವಾಗಿ ಅವಂಗೆ ಮಕ್ಕಳಾಗುವುದನ್ನು ನೋಡಿ ನಲಿಯುವುದರಲ್ಲಿ—ಈ ರೀತಿ ತಮ್ಮ ಪೀಳಿಗೆಯು ಮುಂದುವರಿಯುವುದರಲ್ಲಿ (Evolution of race)— ತಮ್ಮ ದಾಂಪತ್ಯಪ್ರೇಮದ ಪರ್ಯವಸಾನವನ್ನು ಕಾಣುವರು. ಇಲ್ಲಿಗೆ ಪ್ರೇಮದ ಒಂದು ವೃತ್ತವು (A cycle of Love) ಪೂರ್ಣವಾಗುವುದು. ಪ್ರಾಣಿಗಳ ಮತ್ತು ಹಕ್ಕಿ ಪಕ್ಕಿಗಳ ಕೂಡುವಿಕೆಯಲ್ಲಿ ಕಂಡು ಬಂದ ಕ್ಷಣಿಕ ಪ್ರೇಮವು ಅನಾಗರಿಕರ ಒರಟು ಪೈಶಾಚಿಕ ಭೋಗದಲ್ಲಿಯೂ, ತುಂಬುಜವ್ವನದ ಯುವಕ ಯುವತಿಯರ ಹೆಸಿಗಣ್ಣಿನ ಸೆಳೆತದಲ್ಲಿಯೂ, ಎಲ್ಲೆಯಿಲ್ಲದ ಪ್ರಣಯದ ಹುಚ್ಚು ಹಿಡಿದ ಉದ್ದಾಮ ಕವಿಗಳ ಪ್ರೇಮಗೀತೆಗಳಲ್ಲಿಯೂ ಹಾಯ್ದು ಬಂದು, ಇಂದಿನ ಜನತೆಯಲ್ಲಿ ಒಂದು ಅತ್ಯುತ್ತಮವಾದ, ಗೌರವಯುತವಾದ, ಅಸಾಧಾರಣ ಸ್ಥಾನವನ್ನು ಪಡೆದಿದೆ. ಗಂಡು ಹೆಣ್ಣುಗಳ ಜನ್ಮದಿಂದ ಪ್ರಾರಂಭವಾಗಿ, ಅವರೊಡನೆ ಬೆಳೆದು, ವಯಸ್ಸಿಗೆ ಮತ್ತು ಅನುಭವಕ್ಕೆ ತಕ್ಕಂತೆ ಮಾರ್ಪಾಟಾಗಿ,—ಎರಡು ರೂಪದ ಕಾಯವೊಂದೆ ಮನಸಾಗಿ—ತನ್ನ ಸಂಗಾತಿಯಲ್ಲಿ ಬೆರೆತು, ಪ್ರೇಮ ಜೀವನದ ಸುಗ್ಗಿಯನ್ನು ಸುಮಾರು ಅರ್ಧ ಶತಮಾನಗಳ ವರೆಗೆ ಅನುಭವಿಸಿ, ಪ್ರೇಮದೇವತೆಯ ಆರಾಧನೆಮಾಡಿ, ಅದರ ಫಲವಾಗಿ ಪಡೆದ ಮಕ್ಕಳು ಮೊಮ್ಮಕ್ಕಳ ಹಾಲುಗೆನ್ನೆಗಳ ಮುಗುಳು ನಗೆಯಲ್ಲಿ ತಮ್ಮ ಗುರಿಯನ್ನು ಕಂಡು ನಲಿಯುವ ಮುದಿ ಗಂಡಹೆಂಡಿರ ಪ್ರಣಯ ದೇವಾಲಯದ ಭವ್ಯ ಶೃಂಗದಲ್ಲಿ ಪರ್ಯವಸಾನವಾಗುವುದು. ಕಾಲಚಕ್ರದ ಹಾಗೆ ಇದು ಪ್ರೇಮಚಕ್ರ!

ಇದಿಷ್ಟು ದಾಂಪತ್ಯಪ್ರೇಮದ ಸಂಕ್ಷಿಪ್ತ ಇತಿಹಾಸವು. ಪವಿತ್ರ ದಾಂಪತ್ಯಜೀವನವು ಉದಾಸೀನ ಮಾಡುವಂತಹ

---

1. "My force of character has often been praised; yet to my own family I was nothing but a weakling, and they knew it. The first storm over their perseverence, their obstinacy, always carried the day; and from sheer fatigue they did what they liked with me."

—Napoleon.
Quoted in "Mansions of Philosopy"

2. "I received always what I wanted from my lover if I wept for it twice."

—Maria Lovisa.
Ibid.

ದಲ್ಲ. ಆ ಜೀವನದಲ್ಲಿ ಮಾನವನು ದೈವನಿಯಮದಂತೆ ತನ್ನೊಂದು ಪವಿತ್ರ ಕರ್ತವ್ಯವನ್ನು ಮಾಡಬೇಕಾಗಿದೆ. ಆ ಜೀವನದ ಫಲಾನುಭವದಲ್ಲಿ ನಮ್ಮದು ವಿಶೇಷ ಜವಾಬ್ದಾರಿಯಿದೆ. ಆ ಜೀವನದ ಮರ್ಮವನ್ನು ಸರಿಯಾಗಿ ತಿಳಿದು ಅನುಭವಿಸಿದರೆ ಅದು ಸುಂದರ ಜೀವನ. ಆನಂದಮಯವಾದ, ಸುಖಮಯವಾದ ಪವಿತ್ರ ಜೀವನ.

ಅಂತ್ಯ ಸಂಸ್ಕಾರ

ಲೇಖಕರು: ಶ್ರೀ. ರಂಗನಾಥ ನೆಗಳೂರ

★

- ಕಾಡುಸ್ಥಿತಿಯಲ್ಲಿ ಮನುಜನಿದ್ದಾಗ ಪಯಣಶೀಲನಾಗಿದ್ದುದರಿಂದ ಅವನ ಶವವು ಕಾಡಿನ ಪಾಲಾಗುತ್ತಿತ್ತು.
- ಸಾವೆಂದರೆ ಬಹುವರ್ಷಗಳ ನಿದ್ರೆಯೆಂದು ನಂತರದ ಹಲವು ಜನಾಂಗಗಳ ಅಭಿಪ್ರಾಯವಿತ್ತು. ಅದುದರಿಂದ ಜೀವ ಹೋದಮೇಲೂ ದೇಹವನ್ನು ವಿವಿಧೋಪಾಯಗಳಿಂದ ಅವರು ಕಾದಿಡುತ್ತಿದ್ದರು.
- ದೇಹವು ಆತ್ಮದ ನಶ್ವರವಾದ ಹೊದಿಕೆ ಎಂಬ ಅಭಿಪ್ರಾಯವುಳ್ಳವರು ಶವಗಳನ್ನು ಸುಡಹತ್ತಿದರು.
- ಸತ್ತಮೇಲೂ ಪರೋಪಕಾರವಾಗಲಿ ಎಂಬ ಭಾವನೆಯುಳ್ಳವರು ಪ್ರೇತಗಳನ್ನು ಪಕ್ಷಿಗಳಿಗೆ ಆಹಾರವಾಗಿ ಅರ್ಪಿಸಹತ್ತಿದರು.

★

ಈ ಜಗತ್ತಿನ ಮೇಲೆ ಹುಟ್ಟಿದ ಮತ್ತು ಹುಟ್ಟುವ ಪ್ರತಿಯೊಂದು ವಸ್ತುವು ನಾಶವಾಗುತ್ತದೆ—ಸಾಯುತ್ತದೆ. ಸಜೀವವಿರಲಿ ನಿರ್ಜೀವವಿರಲಿ ಅದರ ಅಂತವು ಕಟ್ಟಿಟ್ಟಂತೆ. ನಿರ್ಜೀವ ವಸ್ತುವು ನಾಶವಾದರೆ, ಅದರ ಆಕಾರ ಮಾನ ಗುಣವಿಶೇಷಾನುಸಾರವಾಗಿ ಮುರಿಯಿತು, ಹರಿಯಿತು, ಕೆಟ್ಟಿತು ಎಂದು ಅನ್ನುತ್ತೇವೆ. ಸಜೀವ ವಸ್ತುವು ನಾಶವಾದರೆ ಅದಕ್ಕೆ ಸತ್ತಿತು ಎಂದು ಅನ್ನುವುದು ರೂಢಿ. ಸಜೀವ ವಸ್ತುಗಳಲ್ಲಿಯೂ ಆಆ ಜೀವಿಗಳು ವಾಸಮಾಡುವ ಸ್ಥಾನದಿಂದ, ಪಶು, ಪಕ್ಷಿ, ಮತ್ತು ಜಲಚರ ಎಂದು ವಿಭಾಗ ಮಾಡಬಹುದ.—ಈ ಎಲ್ಲ ಜೀವಿಗಳೂ ತಮ್ಮ ತಮ್ಮ ಕಾಲಾನುಸಾರ ಸಾಯುತ್ತವೆ—ಸಾಯಲೇಬೇಕು. ಮಾನವನೂ ಒಂದು ಪ್ರಾಣಿಯು. ಅವನೂ ಈ ಕಟ್ಟಳೆಗೆ ಅಧೀನನು—ಅವನೂ ಸಾಯುವನು. ಆದರೆ ಸತ್ತನಂತರ....ಸತ್ತನಂತರ....ಸತ್ತನಂತರ....ಈ ಮೃತ ಮಾನವದೇಹದ ಗತಿಯೇನು? ಪ್ರಾಣಿಗಳಲ್ಲಿ ಕೆಲವುಗಳ ಮೃತದೇಹವು ಉಪಯೋಗ ಬೀಳುತ್ತದೆ: ಆಕಳು, ಎಮ್ಮೆ, ಕೋಣ, ಆಡು, ಕುರಿ, ಚಿಗರಿ ಮುಂತಾದವುಗಳ ಚರ್ಮವು ಮಾನವನ ಸೌಕರ್ಯಕ್ಕೆ ಉಪಯೋಗ ಬೀಳುತ್ತದೆ. ಈ ರೀತಿ ಮಾನವನ ದೇಹದ ಉಪಯೋಗ ವಾಗುವುದೆ? ಅಥವಾ ಉಪಯೋಗ ಮಾಡುವರೆ? ಇತ್ತೀಚಿನ ಶಾಸ್ತ್ರೀಯ ಕಾಲದಲ್ಲಿ ಮಾತ್ರ ಮಾನವನ ಮೃತದೇಹದ ಉಪಯೋಗವು ಆಗಹತ್ತಿದೆ. ದೇಹದ ರಚನೆಯನ್ನು ಅಭ್ಯಸಿಸುವುದಕ್ಕೆ ಪ್ರಯೋಗಶಾಲೆಯಲ್ಲಿ ಅದರ ಉಪಯೋಗ ಮಾಡುತ್ತಾರೆ,—ಆದರೆ ಅದೂ ಬಹು ವಿರಳ. ಈ ಮೃತಮಾನವನ ಶರೀರವನ್ನು ಏನು ಮಾಡುತ್ತಾರೆ?

ಆಯಾ ಧರ್ಮ ಜಾತಿ ಮತ ಪಂಥಗಳಿಗನುಸಾರವಾಗಿ ಕೆಲವರು ಸುಡುತ್ತಾರೆ, ಕೆಲವರು ಹುಗಿಯುತ್ತಾರೆ, ಇನ್ನೂ ಕೆಲವರು ಪಶುಪಕ್ಷಿಗಳಿಗೆ ತಿನ್ನಲೂ ಬಿಡುತ್ತಾರೆ. ಇದುವೆ ಅಂತ್ಯಸಂಸ್ಕಾರ. ಈ ಸಂಸ್ಕಾರದ ರೂಢಿಯು ಮಾನವನು ಒಂದೆಡೆಯಲ್ಲಿ ಮನೆಮಾರು ಕಟ್ಟಿಕೊಂಡು ನೆಲೆಸಿದ ನಂತರ ಬಂದದ್ದು. ಎಷ್ಟೆ ಕಾಡುಸ್ಥಿತಿಯ ಸಾಮಾಜಿಕ ಜೀವನವನ್ನು ಅನುಭವಿಸುತ್ತಿದ್ದರೂ ಇದು ಮಾನವನ ಸಾಮಾಜಿಕ ಜೀವನದಲ್ಲಿ ಹುಟ್ಟಿದ್ದು. ಒಂದು ಸಮಾಜವಾಗಿ ಅಥವಾ ಸಂಗಡವಾಗಿ ನೆಲೆಸುವ ಪೂರ್ವದಲ್ಲಿ ಅಂದರೆ ಹೊಟ್ಟೆಯ ಸಲುವಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುವ ಸ್ಥಿತಿಯಲ್ಲಿದ್ದಾಗ ತಮ್ಮ ಗುಂಪಿನಲ್ಲಿ ಯಾರಾದರೂ ಸತ್ತರೆ ಅವರನ್ನು ಹಾಗೆಯೆ ಒಂದೆಡೆಗೆ ಎಸೆದುಬಿಟ್ಟು ಮುಂದಕ್ಕೆ ತೆರಳುತ್ತಿದ್ದರು. ಮಸಣಭೂಮಿಯು ನೆಲೆಸಿದ ಸಾಮಾಜಿಕ ಜೀವನದಿಂದ ಬಂದದ್ದು—ಸಮಾಜದ ಆರೋಗ್ಯವನ್ನು ಕಾಯಲಿಕ್ಕೆ.


ಹಳೆಯ ಕಾಲದಲ್ಲಿ ಸತ್ತ ಮನುಷ್ಯನ ದೇಹವನ್ನು ಹುಗಿಯುವುದೇ ರೂಢಿಯಾಗಿತ್ತು. ೫-೬ ಸಾವಿರ ವರ್ಷಗಳ ಇತಿಹಾಸವನ್ನು ಹೇಳುವ ಇಜಿಪ್ತದ ಪಿರಾಮಿಡ್‌ಗಳೇ ಇದಕ್ಕೆ ಸಾಕ್ಷಿ. ಆ ಕಾಲದಲ್ಲಿ ಮಾನವನ ವಿಚಾರ ಶಕ್ತಿಯು ಇನ್ನೂ ಬೆಳೆಯುವುದರಲ್ಲಿ ಇತ್ತು. ಈಗಿನ ಕಾಲದ ತರ್ಕ, ತತ್ವಜ್ಞಾನ ಶಾಸ್ತ್ರಗಳು ಆ ಕಾಲದಲ್ಲಿ ಸಾಕಷ್ಟು ಬೆಳೆದಿದ್ದಿಲ್ಲ. ಜಗತ್ತಿನ ಅನೇಕ ವ್ಯಾಪಾರಗಳನ್ನು ತಿಳಿಯದೆ ವಿಸ್ಮಯಗೊಂಡು ನೋಡುವವರಾಗಿದ್ದರು. ಅವರಿಗೆ ಮಾನವನ 'ಸಾವು' ತಿಳಿದಿರಲಿಲ್ಲ. ಸತ್ತ ಮನುಷ್ಯನು ಸತ್ತನೆಂದು ತಿಳಿಯದೆ ಅದು ಒಂದು ದೀರ್ಘ ನಿದ್ರೆಯ ಅವಸ್ಥೆಯೆಂದೂ, ಪ್ರತಿದಿನ ರಾತ್ರಿ ನಿದ್ರೆಹೋಗಿ ಬೆಳಗಿನಲ್ಲಿ ಎದ್ದೇಳುವಂತೆ, ಮುಂದೆ ಅವನೂ ಹಾಗೆಯೆ ಎಂದಾದರೂ ಏಳುವನೆಂದು ಅವರ ಕಲ್ಪನೆಯಾಗಿತ್ತು. ಅಂತೆಯೆ ಇಂದು ಆ ಪಿರಾಮಿಡ್‌ಗಳಲ್ಲಿ ಇಣಿಕಿ ನೋಡಿದರೆ ಅಲ್ಲಿ ಮಾಡಿಟ್ಟ ವ್ಯವಸ್ಥೆಯು ಅಲ್ಲಿ ವಿಚಾರವನ್ನು ಹೇಳುವುದು. ಪಿರಾಮಿಡ್

ಗಳನ್ನು ಕಟ್ಟಿಸುವುದು ಸಾಮಾನ್ಯ ಜನರ ಕೆಲಸವಾಗಿ ರಲಿಲ್ಲ; ದುಡ್ಡುಳ್ಳವರದು—ಅರಸರದು. ಅರಸರು ತಮ್ಮ ಜೀವಮಾನದಲ್ಲಿ ತಮ್ಮ ಗೋರಿಗಳನ್ನು ಕಟ್ಟಿಸಿಟ್ಟುಕೊಳ್ಳುತ್ತಿದ್ದರು. ಸತ್ತನಂತರ ಇಜಿಪ್ತದಲ್ಲಿ ಆ ಮೃತದೇಹಕ್ಕೆ ಅನೇಕ ತರದ ಎಣ್ಣೆಗಳನ್ನು ಸವರಿ ಅಲ್ಲಿ ಮಾಡಿದ್ದ ಗೋರಿಯಲ್ಲಿ ಮಲಗಿಸುತ್ತಿದ್ದರು. ಆ ಸವರಿದ ಎಣ್ಣೆಯಲ್ಲಿ ದೇಹವನ್ನು ಬಹುಕಾಲದ ವರೆಗೆ ಹಾಗೆಯೆ — ಅಂದರೆ ಕೊಳೆಯಗೊಡದೆ ಇಡುವ ಗುಣವಿರುತ್ತಿತ್ತು,—ನಿದ್ರೆಯಿಂದ ಎಚ್ಚತ್ತ ಮೇಲೆ ಆ ದೇಹದ ಉಪಯೋಗಮಾಡಲಿಕ್ಕೆಂದು. ಆ ಅರಸನ ವೃತದೇಹದ ಜೊತೆಗೆ ಆ ಅರಸನು ಎಚ್ಚತ್ತರೆ ಬೇಕಾಗಬಹುದಾದ ಸೇವಕರನ್ನು ಕೂಡ ಕೊಂದು ಅಲ್ಲಿ ಅವರನ್ನು ಸ್ಥಾನಬದ್ಧರಾಗಿರಿಸುತ್ತಿದ್ದರು. ಅಲ್ಲದೆ ಅರಸನಿಗೆ ಪ್ರತಿದಿನ ಬೇಕಾಗುವ ತಿನಿಸುಗಳು, ಕುಡಿಯುವ ಪದಾರ್ಥಗಳು....ಒಟ್ಟಿನಲ್ಲಿ ಜೀವಿಸಿರುವಾಗ ಯಾವ ಯಾವ ಪದಾರ್ಥಗಳ ಆವಶ್ಯಕತೆ ಇತ್ತೋ ಅವೆಲ್ಲವನ್ನೂ ಅಲ್ಲಿ ಇಟ್ಟಿರುತ್ತಿದ್ದರು. ಈ ರೀತಿ ಇಡುವುದು ಅವರ ಕಲ್ಪನೆಗನುಸಾರವಾಗಿ ಇತ್ತು. ಅವರು ಸಾವನ್ನು ಸಾವೆಂದು ತಿಳಿಯದೆ ದೀರ್ಘನಿದ್ರೆಯೆಂದು ತಿಳಿದವರೂ ಆ ನಿದ್ರೆಯಿಂದ ಮರಳಿ ಏಳಬಹುದೆಂಬ ಆಸೆಯುಳ್ಳವರೂ ಆಗಿದ್ದರು. ಸಾವನ್ನು ಅವರು ನಿದ್ರೆಯೆಂದು ತಿಳಿದವರಾದ್ದರಿಂದ ಪ್ರತಿದಿನ ಮಲಗುವ ರೀತಿಯಲ್ಲಿಯೇ ಅಂದರೆ ಕೈಕಾಲ ಚಾಚಿಕೊಂಡ ಸ್ಥಿತಿಯಲ್ಲಿ ಮಲಗಿಸುತ್ತಿದ್ದರು. ಇದರಂತೆಯೆ ಸಾಮಾನ್ಯ ಜನರೂ ಸಣ್ಣ ಪ್ರಮಾಣದಲ್ಲಿ ಮಾಡುತ್ತಿದ್ದರು. ಆದರೆ ಆ ಕಾಲದ ಸಾಂಸ್ಕೃತಿಕ ಜೀವನದ ಕುರುಹೆಂದು ಪಿರಾಮಿಡ್‌ಗಳು ಮಾತ್ರ ಗತಿಸಿದಕಾಲದ ಪರಿವೆ ಇಲ್ಲದೆ, ಗಾಳಿಮಳೆಗಳ ಹೊಡೆತಕ್ಕೆ ಹಣಿಯದೆ ಇಂದಿಗೂ ಅಚ್ಚಳಿಯದೆ ನಿಂತಿರುತ್ತವೆ. ಇಂಥ ಕುರುಹುಗಳಿಂದಲೇ ಆಯಾ ಕಾಲದ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ತಿಳಿದುಕೊಳ್ಳುವುದು.

ಹುಗಿಯುವುದು ಹಳೆಯ ಕಾಲದ ಸಾಮಾನ್ಯ ರೂಢಿಯಾಗಿದ್ದರೂ ಹೆಣವನ್ನು ಗೋರಿಯಲ್ಲಿ ಅಥವಾ ತಗ್ಗಿನಲ್ಲಿ ಇಡುವ ರೀತಿ ಕೆಲವೆಡೆಯಲ್ಲಿ ಭಿನ್ನವಾದದ್ದು ಕೇ... ತ್ತದೆ. ಇತ್ತೀಚಿನ ಸಾಂಸ್ಕೃತಿಕ ಸಂಶೋಧನೆಯಲ್ಲಿ ಕೆ... ಎಲುಬಿನ ಹಂದರಗಳು ಸಿಕ್ಕಿವೆ. ಅವು ಕೂಸು ಗ... ಶಯದಲ್ಲಿ ಕುಳಿತಿರುವ ರೀತಿಯಲ್ಲಿವೆ. ಮಾನವೇತಿ... ಆ ಕಾಲಕ್ಕೆ, ಸತ್ತನಂತರ ಮಾನವನು ತಿರುಗಿ ಬಂದ ... ಯಲ್ಲಿಯೇ ಹೋಗಬೇಕೆಂದು ಅವರ ಕಲ್ಪನೆಯಾಗ್ಗ... ಅವರು ಸತ್ತ ದೇಹವನ್ನು ಗರ್ಭಾಸನದ ರೀತಿಯಲ್ಲಿ ... ಯುತ್ತಿದ್ದರು.

ಇಂದಿಗೂ ಜಗತ್ತಿನ ಬಹುಭಾಗದಲ್ಲಿ ಸತ್ತ ದೇಹ... ಹುಗಿಯುವುದನ್ನು ಕಾಣುತ್ತೇವೆ. ಇಂದು ಹುಗಿಯು... ಆ ಕಾಲದಂತೆ ಸಾವು ತಿಳಿಯದ ಕಾರಣಕ್ಕಲ್ಲ. ಇಂದ... ಒಂದು ಸಂಸ್ಕಾರವಾಗಿ ಪರಿಣಮಿಸಿದೆ. ಮಾನವನ... ವಿಚಾರವಾಗಿದೆ. ಭಿನ್ನಭಿನ್ನವಾದ ಧರ್ಮಗಳಲ್ಲಿ ... ವನ ಜೀವಿತದ ಇ... ಕಲ್ಪನೆಯು ಭಿನ್ನ... ಗಿಯೆ ಇದೆ. ಅದ... ಣವಾದ ರೀತಿಯಲ್ಲಿ... ಹದ ಅಂತ್ಯಸಂ... ಗುವುದು. ಕ್ರಿಶ್ಚಿ... ಹುಗಿಯುತ್ತಾರೆ ... ಮ್ಮದೀಯರೂ ... ತ್ತಾರೆ. ಕ್ರಿಶ್ಚಿಯನ... ದವರು ಹುಗಿಯು... ಣವೇನೆಂದರೆ ... 'ಮೆಸಾಯಾ'ನು ... ವಿಚಾರ ಮಾಡುವುದಕ್ಕೆ. ಆವನು ಬರುವವರೆಗೆ ಕಾದಿರಬೇಕಾಗಿ ದೇಹಗಳನ್ನು ... ತ್ತಾರೆ. ಒಂದು ಒಳ್ಳೆಯ ಪೆಟ್ಟಿಗೆಯನ್ನು ಮಾಡಿ ... ಸತ್ತ ದೇಹವನ್ನು ಇಟ್ಟು ಅದನ್ನು ತಗ್ಗಿನಲ್ಲಿ ... ಇವರೆಲ್ಲರೂ ಆ ತೀರ್ಮಾನಿನ ದಿನಕ್ಕಾಗಿ ಕಾದಿರ...

ಮಹಮ್ಮದೀಯರಲ್ಲಿಯೂ ಈ ತೀರ್ಮಾನಿ... ಕಲ್ಪನೆ ಇದೆ. ಮಹಮ್ಮದೀಯ ಧರ್ಮದ ... ಕ್ರಿಶ್ಚಿಯನ್ ಧರ್ಮದ ಪ್ರಭಾವವೂ ಇಜಿಪ್ತದ ಸಂ... ಪ್ರಭಾವವೂ ಆಗಿವೆ. ೭ನೆ ಶತಮಾನದಲ್ಲಿ ಹು... ಧರ್ಮವು ಆದೇ ಬೆಳೆಯುತ್ತಲಿದ್ದ ಕ್ರಿಶ್ಚಿಯನ್ ... ಬಳಕೆಯಲ್ಲಿಯೆ ಬೆಳೆದಿದೆ. ಅರಬ್ಬೀ ದೇಶ... ಪ್ತಕ್ಕೂ ಅಷ್ಟೇನು ದೂರ ಇಲ್ಲ. ಸಂಸ್ಕೃತಿಯ... ಸ್ಥಳದ ಮತ್ತೊಂದು ಸ್ಥಳಕ್ಕೆ ಹೋಗುತ್ತ...



ಇಜಿಪ್ತದ ಪಿರಮಿಡ್ ಮತ್ತು ಸ್ಫಿಂಕ್ಸ್

ಕಾಲದ ಇಜಿಪ್ತಕ್ಕೂ, ಪೂರ್ವಕಾಲದ ಅರಬ್ಬೀ ದೇಶಕ್ಕೂ ನಿಕಟ ಸಂಬಂಧವಿರಲಿಕ್ಕೆ ಸಾಕು. ವ್ಯಾಪಾರ ಮೊದಲಾದ ಬೇಸಾಯದ ದೃಷ್ಟಿಯಿಂದ ಸಾಂಸ್ಕೃತಿಕ ಜೀವನದ ವಿನಿಮಯ ಆಗುವುದು ಸಹಜ, ಅಲ್ಲದೆ ಮುಹಮ್ಮದೀಯ ಧರ್ಮವಾದರೂ ವಾತಾವರಣವನ್ನವಲಂಬಿಸಿದೆ. ಅಂತೆಯೆ ಇಜಿಪ್ತದಲ್ಲಿ ಕಾಣುವ ಕೆಲವು ಪದ್ಧತಿಗಳನ್ನು ಈಗಲೂ ಮುಹಮ್ಮದೀಯರಲ್ಲಿ ಕಾಣುವೆವು. ಇಜಿಪ್ತದವರಂತೆ ಸತ್ತ ಮೇಲೆ ದೇಹವನ್ನು ತೊಳೆದು ಅದಕ್ಕೆ ಇಂದಿಗೂ ಸುಗಂಧದ ಎಣ್ಣೆಯನ್ನು ಹಚ್ಚುತ್ತಾರೆ. ಇವರು ಹಚ್ಚುವ ಎಣ್ಣೆಯಲ್ಲಿ ದೇಹವನ್ನು ಕೊಳೆಯಗೊಡದೆ ಇಡುವ ಗುಣವಿರದಿದ್ದರೂ ಹಚ್ಚುವುದನ್ನು ಬಿಟ್ಟಿಲ್ಲ. ಎಣ್ಣೆ ಹಚ್ಚುವುದು ಇಜಿಪ್ತದ ಪ್ರಭಾವವಾಗಿದ್ದರೆ, ತೀರ್ಮಾನಿನ ದಿನದ ಸಲುವಾಗಿ ದಾರಿಕಾಯುವುದು ಕ್ರಿಶ್ಚಿಯನ್‌ರಿಂದ ಬಂದುದು. ಆ ಕಾಲಕ್ಕೆ ಮಾನವನು ಸಾವನ್ನು ನಿದ್ರೆಯೆಂದು ತಿಳಿಯುವಷ್ಟು ದಡ್ಡನಿರಲಿಲ್ಲ.

ಈ ತೀರ್ಮಾನಿನ ದಿನದ ಕಲ್ಪನೆಯು ಕ್ರಿಶ್ಚಿಯನ್ನರಲ್ಲಿಯೇ ಹುಟ್ಟಿತೇ? ಎಂದು ಸಂಶಯ ಬರುವುದು. ಏಕೆಂದರೆ ಸಿಂಧ ಪ್ರಾಂತದಲ್ಲಿ ಅಗಿದು ತೆಗೆದ ಮೊಹೆಂಜೊದಾರೊವಿನಲ್ಲಿಯ ಶಿಲಾಲೇಖದಲ್ಲಿ ' ಕದಬುಲ್ ಪಗಲ್ ' ಎಂದು ಸಿಕ್ಕುತ್ತದೆ. ' ಕದಬುಲ್ ಪಗಲ್ ' ಎಂದರೆ The Day of Judgement ಎಂದು ಫಾದರ ಹೆರಾಸರು ಓದುತ್ತಾರೆ. ಇದನ್ನು ನೋಡಲಾಗಿ ತೀರ್ಮಾನಿನ ಕಲ್ಪನೆಯು ಬಹು ಪ್ರಾಚೀನವಾದದ್ದೆಂದೂ, ಉತ್ತರ ಸಿಂಧದ ಸಂಸ್ಕೃತಿಯು ಹಾಳಾದ ಮೇಲೆ ಅದರ ಕುರುಹುಗಳು ಪಶ್ಚಿಮದೇಶದಲ್ಲಿ ಹುಟ್ಟಿದ ಕ್ರಿಶ್ಚಿಯನ್ ಧರ್ಮದಲ್ಲಿ ಅಡಕವಾಗಿರಬಹುದೆಂದೂ ಹೇಳಬಹುದು.

ಇನ್ನು ಸುಡುವುದು ಮತ್ತೊಂದು ತರಹ. ಅದಕ್ಕೆ ಅನೇಕ ಕಾರಣಗಳುಂಟು. ಎಲ್ಲಕ್ಕೂ ಹೆಚ್ಚಿನ ಕಾರಣವು—ಜೀವಿತದ ಇತ್ಯರ್ಥದ ಕಲ್ಪನೆ. ಈ ಜನರು ದೇಹವು ಅನಿತ್ಯವೆಂದೂ ಆತ್ಮವೇ ನಿತ್ಯವೆಂದೂ ಆ ಆತ್ಮವೂ ಒಂದೆ ಇದ್ದು ಕಾಲಕಾಲಕ್ಕೆ ದೇಹಗಳನ್ನು ಧಾರಣಮಾಡಿ ಆ ದೇಹದಿಂದ ಮಾಡಿಸಬೇಕಾದ ಕಾರ್ಯ ಮಾಡಿಸುತ್ತದೆಂದೂ ತಿಳಿದಿರುವರು. ಆ ರೂಪದಲ್ಲಿ ಕಾರ್ಯಮಾಡುವುದು ಮುಗಿದ ಬಳಿಕ ಆ ದೇಹದ ಉಪಯೋಗವೇನು ? ಆ ದೇಹದ ಉಪಯೋಗವಿಲ್ಲದಿದ್ದರೆ ಅದನ್ನು ಇಡುವುದೇಕೆ ? ಎಂಬ ಕಲ್ಪನೆಯುಳ್ಳವರು ಮೃತದೇಹವನ್ನು ಸುಡುತ್ತಾರೆ. ಈ ಕಲ್ಪನೆಯುಳ್ಳವರಲ್ಲಿಯೂ ಕೆಲವರನ್ನು ಹುಗಿಯುತ್ತಾರೆ. ಹಿಂದುಗಳಲ್ಲಿ ಬಹುಶಃ ಎಲ್ಲರೂ ಸುಡುವ ರೂಢಿಯನ್ನು ಪಾಲಿಸುತ್ತಾರೆ. ಆದರೆ ಹಿಂದು ಸಾಧುಸಂತರನ್ನು, ಸ್ವಾಮಿಯವರನ್ನು ಹುಗಿಯುತ್ತಾರೆ. ಅದಕ್ಕೆ ಕಾರಣವೂ ಇದೆ. ಉಳಿದ ಸಾಮಾನ್ಯ ಜನರಂತೆ ಸ್ವಾಮಿಯವರ ಜೀವನವಿರುವುದಿಲ್ಲ. ಅವರು ಜಗತ್ತಿಗೆ, ಅವತಾರ ತಾಳಿ ಕಾರ್ಯತತ್ಪರರಾಗಿ ಬಂದಿರುತ್ತಾರೆ. ಅವರು ಸಾಯುವುದೇ ಇಲ್ಲವೆಂದು ಕಲ್ಪನೆ. ಅವರು 'ಸಮಾಧಿ' ಸ್ಥಿತಿಯಲ್ಲಿಯೆ ಇರುವರೆಂದೂ ಕಲ್ಪನೆ ಇದೆ. ಈ ಸಮಾಧಿ ಸ್ಥಿತಿಯ ಕಲ್ಪನೆಗನುಸಾರವಾಗಿ ಅವರನ್ನು ಆ ' ಸಮಾಧಿ ' ಆಸನದಲ್ಲಿಯೆ ಹುಗಿಯುತ್ತಾರೆ. ಮೇಲೆ ಕಟ್ಟಿದ ಕಟ್ಟಿಗೆ ಸಮಾಧಿ ಎನ್ನುತ್ತಾರೆ.

ಈ ಸುಡುವವರಲ್ಲಿಯೂ ಪೂರ್ವಕಾಲದ ಸಂಸ್ಕೃತಿಯ ಕುರುಹನ್ನು ಕಾಣಬಹುದು. 'ಎಣ್ಣೆ ಬೆಣ್ಣೆ'ಯ ಋಣವೆಂಬ ಭಾವನೆಯಿಂದ ಸತ್ತ ದೇಹಕ್ಕೆ ನೀರನ್ನೂ ಎಣ್ಣೆಯನ್ನೂ ಹಾಕುತ್ತಾರೆ. ಇದು ಅಳಿದುಳಿದ ಕುರುಹು.

ಇನ್ನೂ ಒಂದು ರೀತಿಯಲ್ಲಿ ಅಂತ್ಯಸಂಸ್ಕಾರವನ್ನು ಮಾಡುತ್ತಾರೆ. ಝೋರಾಸ್ಟ್ರಿಯನ್ ಪಂಥದವರು ಪಾರಸೀಕರು. ಸುಡುವುದೂ ಇಲ್ಲ. ಹುಗಿಯುವುದೂ ಇಲ್ಲ. ಅವರ ಜೀವಿತದ ಇತ್ಯರ್ಥದ ಕಲ್ಪನೆಯೇನೆಂದರೆ, ಮಾನವನು ಜೀವಿಸಿರುವಾಗಲೂ ಎರಡನೆಯವರಿಗೆ ಉಪಯೋಗ ಬೀಳಬೇಕು—ಉಪಕಾರಿಯಾಗಿರಬೇಕು. ಸತ್ತ ಮೇಲೆಯೂ ಕೂಡ ಉಪಯೋಗಿಯಾಗಿರಬೇಕು.—ಸದಾ ಉಪಯೋಗ ಬೀಳುವ ವಸ್ತುವಾಗಬೇಕು ಮಾನವನು ಎಂಬುದೇ ಅವರ ಆಶಯ. ಅದಕ್ಕನುಗುಣವಾಗಿ ಅವರು ಮೃತದೇಹವನ್ನು ಪಶುಪಕ್ಷಿಗಳಿಂದ ತಿನ್ನಿಸುತ್ತಾರೆ. ಜೀವಿಸಿರುವವರೆಗೆ ಕೊಡುಗೈಯಿಂದ ದಾನಧರ್ಮ ಮಾಡಿ ಜನರಿಗೆ ಸಹಾಯ ಮಾಡಿ ತನ್ನ ದೇಹದ ಉಪಯೋಗ ಎರಡನೆಯವರಿಗೆ ಮಾಡಿ ಕೊಡಬೇಕು. ಸತ್ತ ಮೇಲೆ ಪಕ್ಷಿಗಳಿಗೆ ಆಹಾರವಾಗಿ ಆ ರೀತಿಯಿಂದ ಉಪಯೋಗ ಬೀಳಬೇಕು. ಅದಕ್ಕಂದೇ ಪಾರಸೀಗಳು ದಾನಮಾಡುವರು. ಸಾಧಾರಣವಾಗಿ ಸಾರ್ವಜನಿಕ ಸಂಸ್ಥೆಗಳಿಗೆ ಹೆಚ್ಚು ದುಡ್ಡು ಸಲ್ಲಿಸುವವರು ಪಾರಸೀಗಳೇ—ಆ ದುಡ್ಡಿನ ಗಳಿಕೆ ಯಾವುದೇ ರೀತಿಯಲ್ಲಿ ಆಗಿರಲೊಲ್ಲದು.

ಮೇಲಿನ ಈ ಎಲ್ಲ ರೀತಿಗಳನ್ನು ನೋಡಲಾಗಿ ಮಾನವನ ಅಂತ್ಯಸಂಸ್ಕಾರವು ಅವನ ಜೀವಿತದ ವಿಷಯಕ್ಕೆ ಅವನಿಗೆ ಇದ್ದ ಕಲ್ಪನೆಯ ಮೇರೆಗೂ ಧರ್ಮದ ತತ್ವಗಳ

ಮೇರೆಗೂ ಇದೆಯೆಂದು ತೋರುವುದು. ಕೆಲವರು ಆರೋಗ್ಯ ದೃಷ್ಟಿಯಿಂದ ಸುಡುವುದೇ ಒಳ್ಳೆಯದೆಂದು ಹೇಳುತ್ತಾರೆ. ಇದು ವಿವಾದಾಸ್ಪದ ವಿಷಯ. ಯಾಕಂ ದರೆ ಇಂದಿನ ಈ ಶಾಸ್ತ್ರೀಯ ಯುಗದಲ್ಲಿ ಜಗತ್ತಿನ ಬಹು ಜನರು ಮೃತದೇಹಗಳನ್ನು ಹುಗಿಯುವ ರೂಢಿಯನ್ನು ಪಾಲಿಸುತ್ತಾರೆ. ಸುಡುವವರು ಸ್ವಲ್ಪ ಮಂದಿ. ಅದಕ್ಕೂ ಸ್ವಲ್ಪ, ಪಕ್ಷಿಗಳಿಂದ ತಿನ್ನಿಸುವವರು. ಮಹಾರೋಗಿ, ಕುಷ್ಠ ರೋಗಿಗಳನ್ನು ಸುಟ್ಟರೇ ಒಳಿತೆಂದು ಕೆಲವರ ಮತವಿದೆ. ಆದರೂ ಆರೋಗ್ಯದ ಕಲ್ಪನೆಗಿಂತ ಧಾರ್ಮಿಕ ಕಲ್ಪನೆಯು ಹೆಚ್ಚು ನೆಲೆಯೂರಿ ತಲೆಯೆತ್ತಿ ನಿಂತಿರುವುದು. ಸತ್ತ ದೇಹವನ್ನು ವಿಸರ್ಜನೆ ಮಾಡಲಿಕ್ಕೆ ಇಷ್ಟೊಂದು ವಿಚಾರವೇ! ಇದೇ ವಿಚಾರ ನರಿ ನಾಯಿ ಸತ್ತರೆ ಮಾಡುವ[illegible] ಮಾನವನಿಗೆ ವಿಚಾರ ಶಕ್ತಿಯಿದೆ. ಆ ವಿಚಾರ ಶಕ್ತಿಯಿಂ[illegible] ತನ್ನ ಜೀವಿತದ ಕಲ್ಪನೆಗನುಸಾರವಾಗಿ ತನ್ನ ಸಮಾ[illegible] ರಚನೆಯನ್ನು, ತನ್ನ ಧರ್ಮದ ಕಟ್ಟಳೆಗಳನ್ನು ಮಾ[illegible] ಕೊಂಡಿರುವ ಮಾನವನು, ತಾನು ಉತ್ಕ್ರಾಂತಿ ಹೊಂ[illegible] ವಂತೆ ಅವನ ವಿಚಾರವಾದರೂ ಉತ್ಕ್ರಾಂತಿ ಹೊಂದುತ್ತ ಲಿದೆ. ಮೊದಲು ಸಾವನ್ನು ದೀರ್ಘನಿದ್ರೆಯೆಂದು ತಿಳಿ[illegible] ವನು, ಇಂದು ಸಾವನ್ನು 'ಸಾವೆ'ಂದು ತಿಳಿದು ಸತ್ತ ದೇಹದ ಉಪಯೋಗವಿಲ್ಲೆಂದು ತಿಳಿದಿರುವನು. ಇದೇ[illegible] ಯಲ್ಲಿ ಮುಂದೆ ಏನೇನು ವಿಚಾರ ಬಂದು ಯಾವ [illegible] ರೀತಿಯಲ್ಲಿ ಬದಲಾವಣೆಯಾಗುತ್ತದೋ ನೋಡಬೇಕು.

ಏಕಾಂಕ ನಾಟಕ

ಚಾತುರ್ಮಾಸ್ಯ!

ಬರೆದವರು : ಶ್ರೀ. ಅರ್ಚಕ "ವೆಂಕಟೇಶ," ಹಾವೇರಿ

ಪಾತ್ರವರ್ಗ

ರುಕ್ಮಿಣೀಬಾಯಿ: ಓರ್ವ ವಯಸ್ಸಾದ ಹೆಣ್ಣುಮಗಳು. ದೇವ-ಧರ್ಮ-ಪುರಾಣಗಳಲ್ಲಿ ಶ್ರದ್ಧೆಯುಳ್ಳವಳು.

ಕಮಲಾ: ಓದುಬರೆಹ ಬಲ್ಲ ತರುಣಿ. ಸುಧಾರಣೆಗೋಸುಗ ಹೆಣಗಾಡುವ ಸ್ವಭಾವದವಳು. ಲೀಲಾ, ಶಾಲಿನಿ, ಮಾಲಿನಿ ಮುಂತಾದವರೆಲ್ಲರೂ 'ಹಳೆಯದೆ ಹೊನ್ನು' ಎನ್ನುವ ಬುದ್ಧಿಯವರು.

ವಿಮಲಾ: ಸುಧಾರಕಳಾದ ಕಮಲೆಯ ವಿಚಾರಕ್ಕೆ 'ಹೌದು' ಎನ್ನುವ ತರುಣಿ.

★

[ರಂಗಭೂಮಿಯಲ್ಲಿ ಕಾಣಿಸುವದು ರುಕ್ಮಿಣೀಬಾಯಿಯ ಮನೆಯ ಮುಂಭಾಗ. ರುಕ್ಮಿಣೀಬಾಯಿಯು ರಂಗಕ್ಕೆ ಪ್ರವೇಶಿಸುವ ಮುಂಪೆ ಕೈಯ್ಯಲ್ಲಿ ರಂಗೋಲಿಯ ತಂಬಿಗೆಯನ್ನೂ ಅರಿಷಿಣ-ಕುಂಕುಮದ ಪೇಲೆಯನ್ನೂ ಹಿಡಿದು ಕೊಂಡಿರುವಳು. ರಂಗಕ್ಕೆ ಪ್ರವೇಶಿಸಿದ ಕೂಡಲೇ "ಎಲ್ಲಿ ಪೋಪನೇ ರಾಮನು ಸೀತಾಪತಿಯು" ಎಂದು ಹಾಡುತ್ತ ತುಲಸಿಯ ವೃಂದಾವನದ ಹತ್ತಿರ ಕುಳಿತು ರಂಗವಲ್ಲಿಯನ್ನು ಹಾಕಹತ್ತುವಳು. ಇಷ್ಟರಲ್ಲಿ ರಂಗದ ಇಬ್ಬದಿಯಿಂದಲೂ ವಿಮಲಾ, ಶಾಲಿನಿ, ಮಾಲಿನಿ, ಲೀಲಾ ಇವರು ಪ್ರವೇಶಿಸುವರು.]

ರುಕ್ಮಿಣೀಬಾಯಿ:—ಆಯ್ಯs! ಆಯ್ಯ! ಬರ್ರೀ ಹುಡುಗರ್‍ಯಾ! ವಿಮಲಾ—ಲೀಲಾ—ಶಾಲಿ! ಇದೇನೂ ಅಂತೇನಿ! ಬರ್ರಿ! ಬರ್ರಿ! ಕೂತುಗೊಳ್ರಿಲ್ಲಾ (ಮಾಲಿನಿಯ ಕಡೆಗೆ ನೋಡಿ) ಯಾಕs ನಿನಗ ಬ್ಯಾರೆ ಹೇಳಬೇಕೇನು? [ಎಲ್ಲರೂ ಕುಳಿತುಕೊಳ್ಳುವರು]

ವಿಮಲಾ:—ರುಕ್ಮಿಣೀಬಾಯರs ಇದೇನು ನಡಿಸೀರಿ ಅಂದೆ! ಹೊಸದು ಕಾಣಸತದ.

ರುಕ್ಮಿಣೀಬಾಯಿ:—(ಆಶ್ಚರ್ಯದಿಂದ) ಹೊಸದು? ಛೇ! ಈಗ ಚಾತುರ್ಮಾಸಲ್ಲs! ಅದಕ ಗೋಪಾದ ಹಾಕೋ ವ್ರತ ಹಿಡದೇನಿ. ಯಾಕೋ ಆ ಕಮ್ಮಾ ಬರಲಿಲ್ಲ? ಹೋಗಿದ್ದಾಳು ಎಲ್ಲ್ಯಾರ ಸಭಾಗಿಭಾಕ್ಕ! ಇಲ್ದೇ ಇದ್ರ ಹಿಂದೂಸಂಘಟನಾದ ಜಾತ್ರಿಗೆ! ಮತ್ತೇನದ ಉದ್ಯೋಗ! ಯಾರು ಕೇಳೋರು ಆಕಿನ್ನ!

ವಿಮಲಾ:—ಹಿಂದೂಸಂಘಟನದ ಕೆಲಸಾ ಮಾಡೋದು ಅಂದ್ರ ಕೆಟ್ಟ ಅಂತಿರೇನು ರುಕ್ಮಿಣೀಬಾಯರs? ನಿಮ್ಮಕಿಂತ ಆ ಕಮಲಾ ವಯಸ್ಸಿನಿಂದ ಸಣ್ಣಾಕೇನೋ ಖರೆ, ಆದರ ಆಕಿ ವಿಚಾರ ಎಷ್ಟು ಉಚ್ಚ ತರಗತೀವು ಅವ ಗೊತ್ತದss? (ವಿಷಯಾಂತರಿಸಿ) ಅಲ್ಲರೀ ರುಕ್ಮಿಣೀಬಾಯರ ನಿಮಗೆಷ್ಟು ವರ್ಷ ಆಗಿದ್ದಾವು?

ರುಕ್ಮಿಣೀಬಾಯಿ:— (ಯೋಚಿಸಿ) ನಮ್ಮದು ತೊಗೊಂಡು ಏನು ಮಾಡತೀ? ಮೊನ್ನಿನ [illegible] ವಿಗೆ ಆರವತ್ತು ತುಂಬಿತು ನೋಡು. ಅಂದಮ್ಯಾಲ ಈಗ ಎಷ್ಟನೇ ವರ್ಷ ನಡೀತಿದ್ದೀತು ನನಗ!

ವಿಮಲಾ:-- ೬೧ ವರ್ಷೇನ್ರೀ ನಿಮಗ!

ರುಕ್ಮಿಣೀಬಾಯಿ:—ಯಾಕ! ನಾ ಇನ್ನೂ ಕೂಸು ಅಂತ ತಿಳಕೊಂಡಿ ಏನು?

ವಿಮಲಾ:—ಛೇ! ಅಷ್ಟು ವಯಸ್ಸಾಧಾಂಗ ಕಾಣೂದಿಲ್ಲ ಆದಕಂದೆ. (ಒಮ್ಮೆಲೆ ರಂಗದ ಬಲಕ್ಕೆ ತಿರುಗಿ ನೋಡಿ) ಬಂದ್ಲು ನೋಡ್ರಿ ಕಮ್ಮಾ! ಎಷ್ಟು ನೆನಸತಿದ್ರಿ. (ಕಮಲಾ ಪ್ರವೇಶಿಸುವಳು. ಅಚ್ಚುಕಟ್ಟಾದ ವೇಷಭೂಷಣಗಳು. ಕೈಯ್ಯಲ್ಲಿ ವರ್ತಮಾನಪತ್ರವೊಂದನ್ನು ಹಿಡಿದು ಕೊಂಡಿರುವಳು.) ಬಾ, ಹೀಂಗ ಬಾರಲ್ಲ.

ಕಮಲಾ:—ಎನು ರುಕ್ಮಿಣಿಬಾಯರs ಏನು ನಡದದ? ಪ್ರಕೃತಿ ನೆಟ್ಟಗದನ?

ರುಕ್ಮಿಣೀಬಾಯಿ:—ನೆಟ್ಟಗಿರದ ಏನು ಧಾಡಿ ಆತು! ಅಲ್ಲs ಕಮ್ಮ ಚಾತುರ್ಮಾಸ್ಯ ಬಂದದ ಅಂಬೋದು ಸಹಿತ ಲಕ್ಷ್ಯಿಲ್ಲೇನು ನಿನಗ? ಇರವಲ್ದ್ಯಾಕ ಬಿಡು. ಈ ಚಾತುರ್ಮಾಸ್ಯ ನಾಲ್ಕು ತಿಂಗಳದಾಗ ಗೋಪದ್ಮ ಹಾಕೋ ವ್ರತ ಹಿಡಿಯೋದು ಭಾಳ ಪವಿತ್ರಂತ! ದಿನಾ ಮುಂಜಾನೆ ತುಳಸೀಕಟ್ಟೆ ಮುಂದ ಮಡೀಲೆ ರಂಗೋಲೀಲೆ ೧೦೮ ಗೋಪದ್ಮ ಹಾಕಿ ಅರಿಷಿಣ-ಕುಂಕಮ ಏರಿಸಿ ನಮಸ್ಕಾರ ಹಾಕಬೇಕು. ಮಧ್ಯಾನ್ನದಾಗ ಸವಿ-ಸವಿ ಅಡಿಗಿ

ಮಾಡಿ ಕುಡಿಬಾಳಿ ಎಲಿಯೊಳಗ ಎಲ್ಲಾ ಅಡಿಗಿ ಬಡಿಸಿ ಆಕಳದ್ದತ್ರರ ಒಯ್ದು ಅದಕ್ಕ ಅರಿಷಿಣ-ಕುಂಕಮ ಹಚ್ಚಿ ಮಾಲಿ ಹಾಕಿ ಕೈಮುಗಿದು ಆ ಬಡಿಸಿದೆಲಿ ಅದರ ಮುಂದ ಇಡಬೇಕು. ಆಕಳ ಎಲ್ಲಾ ತಿಂತೂ ಅಂದ್ರ ನಾವು ಮನಿಗೆ ಬಂದು ಆ ಮ್ಯಾಲ ಊಟಾ ಮಾಡಬೇಕು. ಹೀಂಗ ನಾಲ್ಕು ತಿಂಗಳು ದಿನಾ ೧೦೮ ಗೋಪದ್ಮ ಹಾಕಿದರ ಗೋಲೋಕ ಅಂಬೋ ಸ್ವರ್ಗ ಸಿಗತದಂತ. ಅಷ್ಟs ಯಾಕ ಆ ಸ್ವರ್ಗದ ಸುಖಾನ ೧೦೮ ವರ್ಷ ಅನುಭೋಗಿಸ ಲಿಕ್ಕೆ ಬರತsದಂತ! ನಮ್ಮ ವ್ರತ ಮುಗೀತೂ ಅಂದ್ರ ಕನಿಷ್ಠ ಪಕ್ಷಕ್ಕ ಒಂದ್ಹತ್ತು ಮಂದಿ ಭ್ರಾಂಬರಿಗೆ ಊಟಕ್ಕ ಹೇಳಿ ಪ್ರತಿಯೊಬ್ಬರಿಗೆ ಒಂದೊಂದು ಭಂಗಾರದ ಗೋಪದ್ಮಾ ಮಾಡಿಸಿ ದಾನಾ ಕೊಡಬೇಕು. ಇಲ್ವೇ ಇದ್ರ ಸ್ವರ್ಗ ಸಿಗೂದಿಲ್ಲಂತ! ಅಲ್ಲs ಕಮ್ಮಾ ನಿನಗೇನೂ ವ್ರತಾ ಹಿಡಿಯೋದು ಬೇಕಾಗಿಲ್ಲ ಕಾಣತಧ! ಮಾಸ್ತರ ಆಗೀದಿ ಅಂತ ತೀರಾ ಏನು ಅತೀನs ಮಾಡತೀಯಲ್ಲ! ದೇವರೂ—ಭ್ರಾಂಬರ ಸೇವಾ ಮಾಡಿದ್ರ ಕೆಟ್ಟ? ಪುಣ್ಯದ ಕೆಲಸಾ ಅನ್ನು! ನೀನೂ ಈ ಗೋಪದ್ಮ ಹಾಕೋ ವ್ರತಾನs ಹಿಡಿದುಬಿಡೂ ಅಂತೇನಿ.

ಕಮಲಾ:—ಅಲ್ರೀ! ರಂಗೋಲೀಲೆ ೧೦೮ ಗೋಪದ್ಮ ಹಾಕಿ ಭ್ರಾಂಬರಿಗೆ ಊಟಕ್ಕ ಹಾಕಿ ದಾನಾ ಕೊಟ್ರ ಎನು ದೇವರ ಸೇವಾ ಆಧಂಗ ಆತು? ಧರ್ಮ ಅಂದ್ರ ಪರೋಪಕಾರ ಮಾಡೋದು. परोपकारः पुण्याय। ಈಗಿನ ದಿನದಾಗ ಪ್ರತ್ಯಕ್ಷ ಪರೋಪಕಾರ ಮಾಡೋ ಕೆಲಸನs ಧರ್ಮಕಾರ್ಯ! ಅದs ಧರ್ಮ ಅಂತ ತಿಳಕೊಂಡು ಅದನ್ನ ಸಾಧಿಸಲಿಕ್ಕೆ ಪ್ರಯತ್ನಮಾಡೋದು ನೆಟ್ಟಗ. ಜನೋಪಕಾರದ ಕೆಲಸಾ ಮಾಡಿದ್ರ ಅದು ಧರ್ಮ ಅಲ್ಲಾ ಅಂತಿರೇನು?

ರುಕ್ಮಿಣೀಬಾಯಿ:—(ತಿರಸ್ಕಾರದ ದನಿಯಲ್ಲಿ) ಸುಡು ಮಾಡಿದ್ಲು! ಎಲ್ಲ್ಯೋ ನಾಲ್ಕು ಇಂಗ್ರೇಜಿ ಅಕ್ಷರ ಹೊಟ್ಯಾಗ ಹೊಕ್ಕಾವೋ ಇಲ್ಲೋ—ದೇವ್ರು—ಭ್ರಾಂಬರ ಮ್ಯಾಲ ವಿಶ್ವಾಸ ಇಲ್ಲದ ಹರಿಟೇನ. (ಗಟ್ಟಿಯಾಗಿ) ಕಮ್ಮಾ ಆಕಳ ಸೇವಾ ಮಾಡೋದು ಅಂದ್ರ ದೇವರ ಸೇವಾ ಮಾಡಿಧಾಂಗ! ಆಕಳ ಹೊಟ್ಯಾಗ ಅದೆಷ್ಟೋ ದೇವತೆಗಳಿದ್ದಾರಂತ! ಅದಕ ಆಕಳಾ ಅಂದ್ರ ಅಂತ ನಂಬಿ ಭಕ್ತಿಯಿಂದ ಪೂಜೀ ಮಾಡಿ ಮೋಕ್ಷ ದಿಸೋ ಕೆಲಸಾ ಮಾಡಬೇಕೂ ಅಂತ ಪುರಾಣ ಹೇಳೇದ.

ಕಮಲಾ:—(ಸಹಾನುಭೂತಿಯಿಂದ) ಅಲ್ಲಾ! ಬಾಯರs ಎಂಥಾ ಹುಚ್ಚರು ನೀವೂ ಅಂತೇನಿ. ಅಂಥಾ ಮೂಕ ಪ್ರಾಣಿಯೊಳಗ ಭಕ್ತಿ ಇಟ್ರ ಒಲಿಯೋ ಹಂಗ ಇದ್ರ ಹಿಂದೂ ರಾಷ್ಟ್ರದಾಗ ಅಣ್ಣ-ತಂಗಿಯರ ಮ್ಯಾಲ ಇಟ್ರ ದೇವರು ತೃಪ್ತ ಆಗೂ ನರನ ಸೇವೆಯೇ ನಾರಾಯಣ ಸೇವೆ! ಅಂಬೂದು ಪುರಾಣ ಅದ!



ನಾನಂತೂ ಲಕ್ಷ ಬತ್ತಿ ವ್ರತಾ ಹಿಡದೇನಿ

ವಿಮಲಾ:—ಬರಾಬರಿ! ಲಾ ನೀ ಅಂಬೋದು ನಿಜ! ನಾ ಅಂತೂ ವ್ರತಾನs ಹಿಡಿತೇನಿ. ಮಾಡೋ ಅಂಥಾ ದೇವರ ಮತ್ತ್ಯಾವದೂ ಇಲ್ಲ

ಕಮಲಾ:— (ವಾಣಿಯಿಂದ) ಇದು ವಿಮಲಾ! ಮೊನ್ನಿನ ಭೂಕಂಪದ ಸುದ್ದೀ ಇಲ್ಲೋ? ಅಲ್ಲಿಯ ಭಯಂಕರ ಯೊಳಗಿದ್ದಂಥಾ ಮೂರು-ನಾಲ್ಕು ಸಾವಿರ ಮಕ್ಕಳನ್ನ ಮುಸಲ್ಮಾನರು-ಮಿಶನರಿ ಜನರು ಹೋಗಿ ಅವರಿಗೆ ತಿನ್ಲಿಕ್ಕೆ ಉಣಲಿಕ್ಕೆ ಕೊಟ್ಟು ದೊಡ್ಡವರ್ನ ಮಾಡಲಿಕ್ಕೆ ಹತ್ಯಾರಂತ. ಅದs ಹುಡುಗರs ದೊಡ್ಡವರಾಗಿ ನಮ್ಮ ಹಿಂದೂ ಭಯಂಕರ ವೈರಿಗಳಾಗಿ ಪರಿಣಮಿಸಿ ಬಿಡತಾರ! ದೇನು ಮಾಡೋವರು ನೀವು? ಅದಕ ಖರೇ ಸೇವಾ ಅಂದ್ರ ಮತ್ತ ಧರ್ಮ ಸಾಧಿಸೋದು ಹೀಂಗ ಅನಾಥರಾದಂಥಾ ಹಿಂದೂ ಹುಡುಗ ಕೂಡಿಸಿ ಅವರಿಗೆ ಅನಾಥಾಲಯ ಕಟ್ಟಿಸಿ ಅದರಾಗ

ಇಟ್ಟು ಒಳ್ಳೇ ರೀತಿಯಿಂದಾ ಬೆಳಸಬೇಕು. ಅಂದ್ರ ಅದು ದೇವರ ಸೇವಾ ಆಧಂಗ ಆತು.(ರುಕ್ಮಿಣೀಬಾಯಿಯ ಕಡೆಗೆ) ಯಾಕ್ರಿ ರುಕ್ಮಿಣೀಬಾಯರ ಸಣ್ಣ ಹುಡುಗರೂ ಅಂದ್ರ ದೇವರು ಇದ್ಧಾಂಗ ಅಂತೀರೋ ಇಲ್ಲೋ ನೀವು ? (ವಿಮಲೆಯ ಕಡೆಗೆ) ಮತ್ತ ನಮಗ ಸ್ವತಃ ದ್ರವ್ಯದಿಂದ ಸಹಾಯ ಮಾಡೋದು ಆಗೂದಿಲ್ಲ ಅಂದ್ರ ಆ ಕೆಲಸಕ್ಕ ಯಾರು ಹಣ ನೀಡತಾರ ಅವರಿಗೆ ಸಹಾಯ ಮಾಡಬೇಕು. ಈಗ ಹಿಂದೂ ಸಂಘಟನಾ ಮಹಾಸಭೆಯವರು ಈ ಕಾರ್ಯಕ್ಕ ಕೈಹಾಕ್ಯಾರ ಅಂಬೋದು ಗೊತ್ತದನೋ ಇಲ್ಲೊ ? ಅಲ್ಲಿ ಹೋಗಿ ದೇಹಶ್ರಮ ಮಾಡಿದರಾತು. ಅದೂ ಒಂದು ದೇವರ ಸೇವಾನs. ಮತ್ತು ಅದೂ ಒಂದು ತಪಸ್ಸs. ಇದs ಉದ್ದೇಶದಿಂದ ನಾವಂತೂ ಮೂರು ನಾಲ್ಕು ಮಂದಿ ಕೂಡಿ ದಿನಾ ಮುಂಜಾನೆದ್ದು ಆ ಹಿಂದೂ ಮಹಾಸಭೆಯ ಅನಾಥಾಲಯಕ್ಕ ಹೋಗತೇವಿ. ಅಲ್ಲಿಯ ಹುಡುಗರ ಮೈತೊಳಿಯೋದು, ಅವಕ್ಕ ಊಟಕ್ಕ ಹಾಕೋದು, ಆ ಹುಡುಗರ ಅಂಗೀ ಒಗಿಯೋದು ಇಂಥಾ ಕೆಲಸ ಮಾಡತೇವಿ. ಮತ್ತ ಪ್ರತಿ ಆದಿತ್ಯವಾರ ಆ ಹುಡುಗರಿಗೆ ನಮ್ಮ ಹಿಂದೂ ಮಹಾಪುರುಷರಾದಂಥಾ ಅಶೋಕ, ಗೌತಮಬುದ್ಧ, ತಿಲಕ, ಗಾಂಧಿ, ನೆಹರೂ, ಇಂಥವರ ಚರಿತ್ರ ಹೇಳತೇವಿ. ಆಡಲಿಕ್ಕೆ ವಿಜ್ಞಾನಶಾಸ್ತ್ರಜ್ಞರು ತಯಾರ ಮಾಡಿದಂಥಾ ಟೆಲಿಫೋನು, ಗಾಡಿ, ಮೋಟಾರು, ವಿಮಾನ ಇಂಥಾ ಆಟಗಿ ಕೊಡತೇವಿ. ಇದರಿಂದ ಆ ಹುಡುಗರ ಜ್ಞಾನ ಹೆಚ್ಚೋದಲ್ಲದ ಅವರು ಒಂದಿಲ್ಲೊಂದು ದಿನ ಮಹಾಪುರುಷರs ಆಗತಾರ. ಇದಕ್ಕೇನಂತಿ ವಿಮಲಾ ! ದೇವರ ಸೇವಾ ಅಂತಿಯೋ ? ಧರ್ಮ ಅಂತಿಯೋ ? ಅಥವಾ ಅಧರ್ಮ ಅಂತಿಯೋ ? (ರುಕ್ಮಿಣೀಬಾಯರ ಕಡೆ ನೋಡಿ) ಯಾಕ ರುಕ್ಮಿಣೀಬಾಯರs ಏನಂತೀರಿ ?

ರುಕ್ಮಿಣೀಬಾಯಿ:-ಥೂ! ಇದೇನು ಕೆಲಸರೇ ನಮ್ಮವ್ವ. ಅಸ್ಯಂ! ಯಾವ ಹುಡುಗರೋ ಏನೋ ! ಜಾತಿಯೆ ಕೆಟ್ಟತಿಯೆ! ಏನದ !! ಸುಡಗಾಡು ಒಕ್ಕಲಿಗಿತ್ತೇರ್ಥಂಗ ಅಲ್ಲಿ ಹೋಗಿ ದುಡಿಯೋದು ನಮಗೇನೂ ಛಂದ ಕಾಣಸೂದಿಲ್ಲ. ನಮ್ಮನಿಯವರಿಗಂತೂ ಸೇರೂದೇ ಇಲ್ಲ ಇಂಥಾ ಹುಚ್ಚುಚ್ಚಾರ. ಹೀಂಗ ನಾವೂ ಮಾಡಲಿಕ್ಕೆ ಹತ್ತಿದ್ರ ಮನೀಬಿಟ್ಟು ಒದ್ದು ಹೊರಗ ಹಾಕತಾರ ನಮ್ಮನಿಯವರು.

ವಿಮಲಾ:—ಅಲ್ರೀ ರುಕ್ಮಿಣೀಬಾಯರ ನಿಮ್ಮ ಹುಡುಗರ ಅಂಗೀ ಒಗಿತೀರೋ ಇಲ್ಲೋ ?? ನಿಮ್ಮಮನ್ಯಾಗ ಮುಸರಿ, ಉಪಗಾರಣಿ, ಕಸ, ಹಾಸಿಗಿ ಮಾಡತೀರೋ ಇಲ್ಲೋ ? ಅಂದಮ್ಯಾಲ ನೀವು ನಿಮ್ಮ ಮನಿ ಒಕ್ಕಲಗಿತ್ತಿ ಹೌದೊ ಅಲ್ಲೋ ? ಹಂಗsರೆವ್ವ ಅವೂ ನಿಮ್ಮ ಮಕ್ಕಳು ಇದ್ಧಂಗ! ಅಂದಮ್ಯಾಲ ಹೇಸಿಗಿ ಯಾತರದು ? ಹಿಂದೂ ರಾಷ್ಟ್ರ ಅಂಬೋದು ಒಂದು ಕುಟುಂಬ. ಅದರೊಳಗಿನ ಹುಡುಗರು ನಿಮ್ಮ ಮಕ್ಕಳು ಇದ್ಧಂಗs ಅನ್ರಿ ! ಏನs ಇರಲಿ, ಹೇಳು ಕಮಲಾ, ನಾ ಅಂತೂ ಆ ಹಿಂದೂಸಂಘಟನಾದ ಕೆಲಸಾ ಹಿಡಿಯೋಕಿ. ಹೇಳು ಆ ಅನಾಥಾಲಯದ ಸಲುವಾಗಿ ಯಾವ ಕೆಲಸಾ ಮಾಡ್ಲಿ ?

ಕಮಲಾ:—ವಿಮಲಾ ನಿನಗ ಹೊಲೀಲಿಕ್ಕೆ ಬರತದಲ್ಲ?

ವಿಮಲಾ:—ಓಹೋ ! ಬೇಕಾದ್ದು ಹೊಲೀತೇನಿ. ಇಷ್ಟ್ಯಾಗಿ ಮನ್ಯಾಗ ರಾಟಿ ಸಹಿತ ಅದ.

ಕಮಲಾ:—ನೆಟ್ಟಗs ಆತಲ್ಲ. ಈ ಚಾತುರ್ಮಾಸದೊಳಗ ಕನಿಷ್ಠ ಒಂದು ನೂರು ಅಂಗಿ ಧರ್ಮಾರ್ಥ ಹೊಲದು ಕೊಡು ಆ ಅನಾಥಾಲಯಕ್ಕ ಅಂದ್ರ ಆ ಸಂಸ್ಥಾಕ್ಕ ಎಷ್ಟೋ ಸಹಾಯ ಮಾಡಿಧಾಂಗ ಆದೀತು! ಇದs ಒಂದು ವ್ರತಾ ಅಂತ ತಿಳಕೋ !

ವಿಮಲಾ:—ಹೊಲ್ದು ಕೊಡಬಹುದು ಬಿಡು ಎನು ಥೊಡ್ಡಮಾತು. ಆದ್ರ ಅರಿಬಿ ಎಲ್ಲಿಂದ ಬರಬೇಕು ನನ್ನತ್ರ? ರೊಕ್ಕs ರುಜೀನs ! ಏನದ !

ರುಕ್ಮಿಣೀಬಾಯಿ:—(ಸಹಾನುಭೂತಿಯ ದನಿಯಲ್ಲಿ) ವಿಮಲಾ ನಾ ಅರಿಬಿ ಕೊಡತೇನಿ ಮತ್ತೇನದ. ೧೦೮ ಗೋಪದ್ಮ ಹಾಕಿ ವ್ರತಾ ಮುಗಿಸಿ ೧೦೮ ಹುಡುಗರಿಗೆ ಅಂಗೀ ಅರಿಬಿ ಧರ್ಮಾರ್ಥ ಕೊಡತೇನಿ ಆ ಮೇಲಾದರೂ ಒಲಿತಾನೋ ಇಲ್ಲೋ ಆ ನಿನ್ನ ಹಿಂದೂಸಂಘಟನಾದ ದೇವ ? (ಎಲ್ಲರೂ ನಗುವರು.) ಯಾಕ್ರೇ ನಗತೀರಿ ನನಗೇನೂ ತಿಳಿಯೂದಿಲ್ಲ ಅಂತ ಮಾಡಿರೇನು ? ಹಳೇ ಹೆಣಮಗಳೇನೋ ಖರೇ ! ಆದ್ರ ನಿಮ್ಮ ಹೊಸ ಕಲ್ಪನಾ ಏನವ ಅಲ್ಲಾ ಅವನ್ನ ನಮ್ಮ ಹಳೇ ಮಾತಿನ್ಯಾಗ ಹೇಳಿದರ ತಿಳದಾವೂ ಅನ್ರಿ. ಇಲ್ದೇ ಇದ್ರ ಬರೇ ಲಚ್ಚೇರು ಹೇಳಿಧಾಂಗ ಹೇಳಿದ್ರ ಏನು ತಿಳೀಬೇಕು ಮಣ್ಣು ! ನಾ ಅಂತೂ ೧೦೮ ಗೋಪದ್ಮ ಹಾಕಿ ೧೦೮ ಹುಡುಗರಿಗೆ ಅಂಗೀ ಹೊಲಿಸಿ ಕೊಡೋದಂತೂ ಠರಾವs ! ಆದ್ರ ಇಷ್ಟಕ್ಕ ನನ್ನ ವ್ರತಾ ಮುಗಿಲಿಲ್ಲ ಮತ್ತ. ಭ್ರಾಂಬರಿಗೆ ಊಟಕ್ಕ ಹೇಳೋದ— ದಾನಾ ಕೊಡೋದ, ಗೋಗ್ರಾಸ ಹಾಕೋದ—ಯಾಕ ಏನಂತೀಯೋ ಕಮ್ಮಾ ?

ಕಮಲಾ:—ಭಾಳ ಪುಣ್ಯಾ ಬರತಽದ ನೋಡ್ರಿ ರುಕ್ಮಿಣೀ ಬಾಯರ ನಿಮಗ. ನಿಮ್ಮಂಥಾ ಹಿರೇರ ಆಶೀರ್ವಾದ ಸಿಕ್ಕರ ಏನು ಕೇಳತೀರಿ! ದುಡ್ಡು ಕೊಟ್ಟದರಕಿಂತಾ ಹೆಚ್ಚಾತು. (ಉಳಿದವರ ಕಡೆ ತಿರುಗಿ) ಲೀಲಾ, ಶಾಲಿನಿ, ಮಾಲಿನಿ ನೀವು ಯಾವಯಾವು ವ್ರತಾ ಹಿಡಿದೀರಿ ?

ಲೀಲಾ:—ನಾ ಅಂತೂ ಈ ವರ್ಷ ಲಕ್ಷ ಬತ್ತಿ ವ್ರತಾ ಹಿಡದೇನಿ. ದಿನಾ ಮುಂಜಾನೆ-ಸಂಜಿಗೆ ಕೂಡಿ ನೂರಿನ್ನೂರು ಬತ್ತಿ ಕಕ್ಕಡಾ ಮಾಡಿ ದೇವರ ಮುಂದ ಹಚ್ಚತೇನಿ. ಹೀಂಗಽ ಹಚಿಗೋತ ಹೋಗಿ ಲಕ್ಷ ಬತ್ತೀ ವ್ರತಾ ಮುಗಿತು ಅಂದ್ರ ಒಂದ್ಹತ್ತ ಮಂದಿ ಭ್ರಾಂಬರಿಗೆ ಊಟಕ್ಕ ಹೇಳಿ ಒಬ್ಬೊಬ್ಬರಿಗೆ ಒಂದೊಂದು ಭಂಗಾರದ ಬತ್ತೀ ಮಾಡಿಸಿ ದಾನಾ ಕೊಡಬೇಕೂ ಅಂತೇನಿ. (ಎಲ್ಲರೂ ಸ್ವಲ್ಪ ನಗುವರು.)

ಕಮಲಾ:—ಆಚಾರು-ಭಟ್ಟರ ಮನ್ಯಾಗ ಭಂಗಾರದ ಬತ್ತಿ ಹಚ್ಚತಾರೇನು ದೇವರ ಮುಂದ ? ಲೀಲಾ ಹಿಂದಿನ ಕಾಲಕ್ಕ ಚಿಮಣೀಯಣ್ಣಿ ಇದ್ದಿದ್ದಿಲ್ಲ, ಗ್ಯಾಸು ಇಲೆಕ್‌ಟ್ರಿಕ್ ದೀಪ ಇದ್ದಿದ್ದಿಲ್ಲ, ಅದಕ ಮನಿಯೊಳಗ ದೇವಾಲಯ ದೊಳಗ ಬತ್ತಿಽ ಹಚ್ಚಿ ಬೆಳಕು ಮಾಡತಿದ್ದರು. ಆಗಿನ ಕಾಲಕ್ಕ ಆ ಬತ್ತಿಯ ದೀಪ ಉಪಯೋಗ ಬೀಳತಿತ್ತು. ಆದರ ಈಗ ಬೇಕಾದಷ್ಟು ಕಂದೀಲು ಹಚ್ಚಬಹುದು—ಗ್ಯಾಸ ಹಚ್ಚಬಹುದು—ವಿದ್ಯುದ್ದೀಪಾ ಹಚ್ಚಬಹುದು. ಆ ನಿಮ್ಮ ಬತ್ತೀ ದೀಪದಕಿಂತ ವಿದ್ಯುದ್ದೀಪದ ಬೆಳಕು ಹೆಚ್ಚಿಗಿ ಆದೀತೂ ಅಂತೀರೋ? ಏನು ಇಲ್ಲೋ? ಇಂಥ ಅತ್ಯುತ್ತಮ ದೀಪದ ಉಪಯೋಗ ಮಾಡಿಕೊಳ್ದ ಒಂದು ಲಕ್ಷ ಬತ್ತಿ ಮಣಗಟ್ಲೆ ತುಪ್ಪದಾಗ ಎದ್ದಿ ಸುಟ್ರ ಬರೋದೇನು? ಘಾಳಿ ಗುದ್ದಿ ನೋವು ಮಾಡಿಕೊಂಡ್ಹಂಗಽ ಸೈ! ಆದ್ರ ಅದಽ ಮಣಾ ತುಪ್ಪಾಽ ಆ ಅನಾಥಾಲಯಕ್ಕಾದರೂ ಕೊಟ್ರ ಒಂದು ಉಪಕಾರ ಮಾಡಿಧಾಂಗಾರಾ ಆದೀತು. ನಿಮಗ ಪುಣ್ಯಾನೂ ಬಂದೀತು! ಮುಂಜಾನ್ನಿಂದದು ಸಂಜೀತನಕ ಬತ್ತೀಮಾಡಿ ಅವನ್ನ ಉರಿಸಿ ಬೆಳಕು ಮಾಡೋದರಾಗ ನಮ್ಮ ರಾಷ್ಟ್ರದಲ್ಲಿಯ ದಾಸ್ಯ, ಬಡತನ, ದುಷ್ಕಾಳ, ದುರ್ದೆಶೆ ಹೆಚ್ಚಿಸಿದರ ಯಾಪ ಕೆಲಸ ಮಾಡಿಧಾಂಗ ಆತು? ಆದರ ವೈಜ್ಞಾನಿಕ ವಿಚಾರದ ಜ್ಞಾನದ ಬತ್ತಿ ಉರಿಲಿಕ್ಕೆ ಹಚ್ಚಿದರ ದೇಶಕ್ಕ ಕಲ್ಯಾಣನೂ ಆದೀತು! ದೇವರಿಗೆ ತೃಪ್ತಿನೂ ಆದೀತು.

ವಿಮಲಾ:—ಪ್ರಾಣದಾನ ದೇವರಿಗೂ ಹೆಚ್ಚಾಗಿ ಸೇರ ತಽದಂತ ಕೇಳೇನಿ. ಪ್ರಾಣದಾನಾ ಮಾಡಿದವರಿಗೆ ಅದೆಂಥಾದೋ ಮೋಕ್ಷ ಅದಽ ಅಂತಲ್ಲಾ ಅದು ಸುಳ್ಳು [illegible] ತದಂತ! ಎಲ್ಲಾ ಹುಡುಗರೂ ದೇವರ ಮಕ್ಕಳ [illegible] ಅವಕ್ಕ ನಾವು ಹೊಟ್ಟೆ ತುಂಬ ಆಹಾರ ಹಾಕಿದ್ರ [illegible] ನಮಗ ಮೆಚ್ಚತಾನ. ಅದಕ ಮಣಗಟ್ಲೆ ತುಪ್ಪಾನ [illegible] ಧ್ವಂಸಮಾಡೋದರಕಿಂತಾ ಆ ಅನಾಥ ಮಕ್ಕಳಿ [illegible] ಯೋಗ ಆಗಲಿಕ್ಕೆ ಕೊಟ್ರ ಒಂದು ಹಾದಿ ಆಧಂಗ [illegible] ಇದರಂಥಾ ಪುಣ್ಯದ ಕೆಲಸ ಮತ್ತ್ಯಾವದು ಅದಽ [illegible] ಈ ಕೆಲಸ ಮಾಡಿದ್ರ ಇಹಲೋಕದ ಪ್ರತ್ಯಕ್ಷ [illegible] ಆತು! ಪರಲೋಕದ ಪುಣ್ಯ ಸಾಧಿಸಿಧಾಂಗ [illegible]

ಶಾಲಿನಿ:—ನಾ ಮಾತ್ರ ಚಾತುರ್ಮಾಸ್ಯ ನಾಕು [illegible] ದಾಗ ಬಾಳೀಯಲಿಯೊಳಗ ಉಂಬೋ ವ್ರತಾ [illegible] ನಾಲ್ಕು ತಿಂಗಳು ಬಾಳಿಯಲ್ಯಾಗ ಉಂಡು ವ್ರತಾ [illegible] ಅಂದ್ರ ಒಂದೈದು ಮಂದಿ ಭ್ರಾಂಭರಿಗೆ ಊಟಕ್ಕ [illegible] ಆ ಮ್ಯಾಲ ಬೆಳ್ಳಿ ಬಾಳಿಯಲಿ ಮಾಡ್ಸಿ ದಾನಾ ಕೊಡ [illegible] ಅಂತ ಮಾಡೇನಿ.

ಮಾಲಿನಿ:—ನಾ ಅಂತೂ ಭೆಂಡೀ ವ್ರತಾ [illegible] ನ್ರೆವ್ವಾ! ಚಾತುರ್ಮಾಸ್ಯ ಇರೋತನಕ ಭೆಂಡೀ [illegible] ಪಲ್ಯಾ ತಿಂಬೋಹಂಗ ಇಲ್ಲ. ಕಡೀಕೆ ವ್ರತಾ [illegible] ಅಂದ್ರ ಒಂದನಾಲ್ಕು ಮಂದಿ ಆಚಾರ್ಗೆ ಊಟಕ್ಕ [illegible] ಬೆಳ್ಳೀ ಭೆಂಡೀಕಾಯಿ ಮಾಡ್ಸಿ ದಾನಾ ಕೊಡ [illegible] ಅಂತೇನಿ. ಈಗ ಬೆಳ್ಳೀ ಭೆಂಡೀಕಾಯಿ [illegible] ಸತ್ತ ಮ್ಯಾಲೆ ನಮಗೆ ಸ್ವರ್ಗದಾಗ ಭಂಗಾರದ ಭೆಂಡೀ [illegible] ತಿನ್ಲಿಕ್ಕೆ ಕೊಡತಾರಂತ ಮೊನ್ನೆ ಪುರಾಣ [illegible] ಮುಂದ ಧೀರೇಂದ್ರಾಚಾರು ಅಂದ್ರು.(ಎಲ್ಲರೂ ಸ್ವ[illegible] ವರು.) ಯಾಕ್ರೆ ನಗತೀರಿ? ಸುಳ್ಳು ಅಂತ ತಿಳಿ[illegible]

ರುಕ್ಮಿಣೀಬಾಯಿ:— ನಗಡಽ ಏನು ಮಾತ [illegible] ನನ್ನಂಥಾ ಮುದಿಕಿನ್ನ ಕೇಳಿದ್ರ ಆಚಾರಂಥಾ [illegible] ಗಿರಿ ಸೇರೂದಿಲ್ಲ!

ವಿಮಲಾ:—ಅದ್ಯಾಕ್ರಿ ಅಜ್ಜಿ ಇಷ್ಟೊತ್ತ ನ[illegible] ಡಿದ್ರಿ. ಎಲ್ಲಿ ಹೋತು ಆ ದೇವರೂ-ಭ್ರಾಂಬರ [illegible] ವಿಶ್ವಾಸ!

ರುಕ್ಮಿಣೀಬಾಯಿ:—ಈಗ ತಿಳಿತಲ್ಲ! ಕಮ್ಯಾ [illegible] ಮ್ಯಾಲ ಎಲ್ಲಾ ತಿಳೀತು. ಯಾವ ಯಾವ ಆಚಾರ[illegible] ಲುಚ್ಚಾ ಇರತಾನಽ ಅಂಬೋದು. ಇರಲಿ— [illegible] ಧೀರೆಂದ್ರಾಚಾರಿ ಅಂದ್ರ? ಅಂ ಅವನಽ ತಿಳೀ[illegible] ಲಕ್ಷ್ಮೇಶ್ವರದ ಹೆಂಗಸಿನ್ನ ಇಟ್ಟಾನ ಅವನಽ [illegible] ಒಳ್ಳೇ ಆಚಾರಿನ್ನ ನಂಬೀರಿ ಹಂಗಾರ. ಅಷ್ಟ [illegible]

ಳಗಿನ ಹಾಲು ಮಸರು ಮಾರತಾನವ ಎಮ್ಮಿ ಕಟ್ಟಿ. ಯಾವ ಬ್ರಾಹ್ಮಣ ಹಾಲು ಮಸರು ಮಾರತಾನ ಅವ ಆಗಿಂದಾಗs ಪತಿತ ಆಗತಾನಂತ! ಅಂತೂ ಧೀರೇಂದ್ರಾಚಾರಿ ಪತಿತ ಆಗ್ಯಾನ. ಅವನ ಮಗಾ ಆ ಗುಂಡ್ಯಾ ಇದ್ದಾನಲ್ಲ ಅವ ಏನೋ ಪೋಲಿಸ ಖಾತೇದಾಗ ಇದ್ದಾನಂತ! ಐಲೀಕಡೆ ಮನಿ ಎಂಥಾದು ಕಟ್ಟಿಸ್ಯಾನ ಗೊತ್ತದನs? ಅತ್ತಲಾಗ ನಮ್ಮ ಹಿಂದೂ ಅನಾಥ ಹುಡುಗರ್ನ ಮಿಶನರಿಗಳೂ-ಮುಸಲ್ಮಾನರೂ ಕರಕೊಂಡು ಹೋಗಿ ಅವರ್ನ ದೊಡ್ಡವರ್ನ ಮಾಡಿ ತಿರುಗಿ ನಮ್ಮ ಹಿಂದೂ ಜನರ ವಿರುದ್ಧ ಬಡದಾಡ ಲಿಕ್ಕೆ ಹಚ್ಚತಾರ. ಅದs ಹಿಂದೂ ಹುಡುಗರs ಅವರ ಮಾತು ಕೇಳಿ ಜಾತಿಭ್ರಷ್ಟರಾಗಿ ಹಿಂದೂ ಜನರ ತಲೀನ ತಿಂಬಾರ. ಈ ಮಾತು ಈಗ ನಮಗ ಗೊತ್ತಾಗೇದೋ ಇಲ್ಲೊ? ಅಂದ್ರ ಸಹಿತ ಇದರ ವಿಚಾರ ಸ್ವಲ್ಪೂ ಮಾಡದ ಮಣಗಟ್ಲೆ ತುಪ್ಪಾ—ಹತ್ತಿ ಬತ್ತಿ ಸುಟಗೋತ ಕೂತೇವಿ. ಎಂದ ನಾವು ಕಣ್ಣು ತಗಿಯೋದದು? ಭ್ರಾಂಬರಿಗೆ ಬೆಳ್ಳಿ ಯಲಿ ಮಾಡಿಸಿ ಕೊಡೋದು, ಭಂಗಾರದ ಭೆಂಡೀಕಾಯಿ ಮಾಡಿಸಿ ಕೊಡೋದು ಇವs ಧರ್ಮ ಅಂತ ತಿಳದೇವಿ. ಎಂಥಾ ಮೂರ್ಖತನ. ಇದೆಂದಿಗೂ ಧರ್ಮ ಅಲ್ಲ. ಅಧರ್ಮ!! ಖರೇ ಅಂದ್ರೂ ಅಧರ್ಮ!!! (ಕಮಲೆಯ ಕಡೆಗೆ) ಕಮ್ಮಾ ನಿನ್ನ ಮಾತು ಬರಾಬರಿ ಆದ! ಈ ಧೀರೇಂದ್ರಾಚಾರಿ ತೀರಾ ಲುಚ್ಚಾ ಇದ್ದಾನ! ಹೆಂಗಸರು ಭೋಳೇ ಪ್ರಾಣಿಗಳು. ಅವರ್ಗೆಷ್ಟು ಏನರ ಹೇಳಿ ದೇವರ ಹೆಸರಿನಿಂದ ಬೆಳ್ಳಿ ಭಂಗಾರ ಗಳಿಸೋ ಯುಕ್ತಿ ಹ್ಯಾಂಗದ ನೋಡೂ ಅಂತೇನಿ!

ವಿಮಲಾ:— ಛೀ! ಛೀ!! ರುಕ್ಮಿಣೀಬಾಯರs ಲಕ್ಷ್ಮೀs ಹೇಳಿದ್ರೆಲ್ಲಾ ಅಂತೇನಿ. ಅಂತೂ ನೀವು ಹಳೇ ಮಂದ್ಯಾದ್ರೂ ಹೊಸ ವಿಚಾರಕ್ಕ ಒಪ್ಪಿಧಾಂಗ ಆತು!

ರುಕ್ಮಿಣೀಬಾಯಿ:— ಆಧರಾಗೇನದ— ಯಾವದು ಛಲೋ ಆದನೋ ಅದಕ್ಕ ಛಲೋ ಅನ್ನಲಿಕ್ಕೇ ಬೇಕು.

ಕಮಲಾ:—ರುಕ್ಮಿಣಿಬಾಯರ ನೀವಂಬೋದೆಲ್ಲಾ ಖರೇ ಆದ. ಆದ್ರ ಎಲ್ಲಾ ದೋಷ ಬರೇ ಆಚ್ಯಾರ ಮ್ಯಾಲ—ಭಟ್ಟರ ಮ್ಯಾಲ ಹಾಕಿದ್ರ ಆದೇನು ಯೋಗ್ಯ ಅಲ್ಲ. ಆಚಾರ ಹೇಂಡಂದ್ರೂ ಸಹಿತ ನಮ್ಮ ನಿಮ್ಹಂಗ ಪ್ಯಾರೇ ಆಚ್ಯಾರ್ರಿಗೆ ಊಟಕ್ಕ ಹೇಳಿ ಬೆಳ್ಳಿ-ಭಂಗಾರಾ ದಾನಾ ಕೊಡತಾರ. ಆ ಆಚಾರಾದ್ರೇನಾತು! ಅವರೂ ನಮ್ಮ ಅಣ್ಣ ತಮ್ಮಂದಿರಲ್ಲs! ಅವರ್ನೂ ಸುಧಾರಿಸಬೇಕು. ಎಲ್ಲಾ ದೋಷ ನಮ್ಮ ಕಡೀನs ಅದ. ಆಚಾರ್ರಿಗೆ ಊಟಕ್ಕ ಹೇಳದಿದ್ರ ನಮ್ಮನಿಗೆ ಡೊಣ್ಣಿ ತೊಗೊಂಡು ಬಂದು ನಮಗ ಇಂಥಾ ದಾನಾನs ಕೊಡ್ರಿ, ನಮಗ ಇಂಥಾ ಉಂಡಿ ಸೇರ ತಾವ, ಅದಕ ಅಂಥಾ ಉಂಡೀನs ಮಾಡಿ ಹಾಕ್ರಿ ಅಂತ ಹೆದರಸತಾರೇನು? ನಾವು ಕರೀತೇವಿ ಅಂತ ಬರತಾರ ಅನ್ರಿ! ಇಲ್ದೇ ಇದ್ರ? ನಾವs ದಾನಾ ಕೊಡತೇವಿ ಅಂತ ಅವರಾಟ ಸಾಗತsದ! ನಾವs ಕೊಡದಿದ್ರ? ಒಟ್ಟಿನ ಮ್ಯಾಲ ಎಲ್ಲಾ ದೋಷ ನಮ್ದು ಅದ. ನಾವು 'ಪುರಾಣದಾಗ ಏನು ಹೇಳೇದ! ಧರ್ಮಶಾಸ್ತ್ರದೊಳಗ ಏನು ಹೇಳೇದ! ಯಾವುದು ಸತ್ಯ! ಯಾವುದು ಸುಳ್ಳು' ಅಂಬೋ ವಿಚಾರ ಮಾಡಿದ್ರ ನೆಟ್ಟಗ. ಸುಮ್ನ ಮತ್ತೊಬ್ಬರ್ನ ಹೀಯಾಳಿಸಿದರ ಏನು ಮಾಡಿಧಾಂಗ ಆತು! (ಸೀತಾಬಾಯರ ಕಡೆಗೆ ತಿರುಗಿ) ಏನು ಸೀತಾಬಾಯರs ನೀವು ಯಾವ ವ್ರತಾ ಹಿಡದೀರಿ?

ಸೀತಾಬಾಯಿ:—ನಾ ಏನು ವ್ರತಾ ಹಿಡಿಬೇಕು! ನನ್ನ ಮಕ್ಕಳಿಗೆ ಒಂದು ತುಣುಕು ಭಕ್ಕರಿ ಸಿಕ್ಕರ ಸಾಕು. ದಿನಾ ಮಾಧುಕರಿ ಮಾಡತೇನಿ ಗೊತ್ತಿಲ್ಲ? ರೊಕ್ಕಿಲ್ಲದ ಭಕ್ತಿ ರೆವ್ವಾ ನಮ್ಮದು. ಹೋದ ವರ್ಷ ತೇರಬೀದಿ ಹನಮಪ್ಪಗ ಲಕ್ಷ ಪ್ರದಕ್ಷಿಣಿ ಹಾಕಿದೆ. ಆದರ ಈ ವರ್ಷ ಮಾತ್ರ ಕರ್ಚೀಕಾಯಿ ಮಾಡಿ ಆಕಳಿಗೆ ತಿನಸಬೇಕೂ ಅಂತೇನಿ. ಈಗಾಗಲೆ ಈ ವ್ರತಾ ಹಿಡದು ಬಿಟ್ಟೇನಿ ಮತ್ತ ಕಳವು ಯಾಕ ಆದರಾಗ! ಪ್ರತಿ ಸೋಮವಾರ ಬೆಲ್ಲದ ಕರ್ಚೀಕಾಯಿ ಮಾಡಿ ೮ ಕರ್ಚೀಕಾಯಿ ಆಕಳಿಗೆ ತಿನಸತೇನ್ರಿ, ಒಂದು ಕರ್ಚೀಕಾಯಾಗ ನನ್ನ ಎಲ್ಲಾ ಮಕ್ಕಳಿಗೂ ಹಂಚಿ ಕೊಡತೇನಿ. ನಾ ಮಾತ್ರ ಅವತ್ತ ಉಪಾಸ ಮಾಡತೇನಿ. ಹಿಂಗ ೧೬ ಸೋಮವಾರ ಮಾಡಬೇಕೂ ಅಂತೇನಿ. ಹ್ಯಾಂಗ ತೊಗೊತಾನೋ ಏನ್ರೆವ್ವ ಬಡವಿ ಕೈಲೆ ಸೇವಾನ ದೇವರು?

ವಿಮಲಾ:—ಯೋಗ್ಯ! ಮೂರ್ಖತನ ಎಷ್ಟು ಬೇಕು ಅಷ್ಟು ಅದ ಈ ವ್ರತದಾಗ! ಅಲ್ಲರೀ ಸೀತಾಬಾಯರs ಒಂದು ತುಣುಕು ಭಕ್ಕರಿ ಸಿಗುದಿಲ್ಲಾ ಅಂತೀರಿ, ಮತ್ತ ಮಾಧುಕರೀ ಮಾಡತೇನಿ ಅಂತೀರಿ, ಇಷ್ಟಾದರೂ ಬೆಲ್ಲದ ಕರ್ಚೀಕಾಯಿಯ ವ್ರತಾ ಹಿಡದೀರಾ? ಎಂಥಾ ಹುಚ್ಚತನ ನಿಮ್ಮದೂ ಅಂತೇನಿ! ಅಲ್ಲಾ ಪಶೂ ಅದು ಆಕಳು ಅಂದ್ರ! ಅದಕ್ಕ ೮ ಕರ್ಚೀಕಾಯಿ, ಆದ್ರ ಹೊಟ್ಟೆಲೇ ಹುಟ್ಟಿದ ಮಕ್ಕಳಿಗೆ ಒಂದರಾಗ ಹಂಚಿಕೊಡೋದು. ಕಷ್ಟ ಬಟ್ಟು ಮಾಡಿದ ನೀವು ಉಪಾಸ ಇರೋದು. ಉತ್ತಮ ವ್ರತಾ ಹಿಡದೀರಿ! ನಿಮಗ ಆಕಳ ಮ್ಯಾಲ ಖರೇ

ಭಕ್ತೀನ ಇದ್ರ ಅದಕ್ಕ ಹುಲ್ಲು ಸೊಪ್ಪಿ-ಹತ್ತೀಕಾಳು-ಹುರುಳಿ ಹಾಕ್ರೆಲ್ಲಾ. ಕರ್ಚೀಕಾಯಿ ಮಕ್ಕಳಿಗೆ ಕೊಡ್ರಿ. ಆಕಳೇನೋ ದೇವರೂ ಅಂತ ಬಡದಾಡಿ ಇಲ್ಲದ ಮೋಕ್ಷಕ್ಕ ಕೈಹಾಕಿ ಹಡೆದ ಮಕ್ಕಳ ಬಾಯಿಯ ಮ್ಯಾಲ ಹೊಡಿಯೋದರಕಿಂತ ಅನ್ಯಾಯ ಯಾವದದ? ಆಕಳೇನೋ ದೇವ್ರಾತು ಆದರ ಮಕ್ಕಳು ದೆವ್ವ-ಗಿವ್ವ ಏನು ಹಂಗಾದರ?

ಲೀಲಾ:—(ತಿರಸ್ಕಾರದ ದನಿಯಲ್ಲಿ) ಅಲ್ಲs ಗಾಣದ ಎತ್ತಿನ್ಹಂಗ ಗುಡೀ ಸುತ್ತಮುತ್ತಲೂ ಪ್ರದಕ್ಷಿಣಿ ಹಾಕತಾರಲ್ಲ! ಆ ಪ್ರದಕ್ಷಿಣಿ ವ್ರತದಿಂದ ಏನು ಪ್ರಯೋಜನ?

ಸೀತಾಬಾಯಿ:—ಏನೋರಿವ್ವ—ನಿಮ್ಮಂಥಾ ನಾಕು ಮಂದಿ ಕೂಡಿ ಆಗ್ರಹ ಮಾಡಿದ್ರೂ ಅಂತ ಹಿಡದೆ. ನನಗೆಲ್ಲಿ ಬೇಕಾಗಿತ್ತು ಈ ವ್ರತ. ನಮ್ಮದs ನಪುಗ ಸಾಕಾಗಿ ಹೋಗೇದ.

ರುಕ್ಮಿಣೀಬಾಯಿ:—(ಹಾಸ್ಯದಿಂದ) ನೀವೆಲ್ಲಾರೂ ಕೂಡಿ ಕಮ್ಮಾನ ಪಟ್ಟದ ಶಿಷ್ಯರು ಆಗಬೇಕೂ ಅಂತೀರಿ ಕಾಣತದ.

ವಿಮಲಾ:—ಮತ್ತ ನೀವು?........

ರುಕ್ಮಿಣೀಬಾಯಿ:—ಮತ್ತ ನಮ್ಮದಾದರೂ ಏನು ಸುಡತದ? ಏನs ಆಗಲಿ ಕಮ್ಮಾನ ಮಾತಿನ್ಯಾಗ ಅರ್ಥ ಅದ. ಯಾವದನ್ನ ಮಾಡೋದರಿಂದ ಆತ್ಮಹಾನಿ ಆಗೂದಿಲ್ಲ ಮತ್ತು ಪರೋಪಕಾರ ಆಗತsದ ಅದ ನಿಜವಾದ ಧರ್ಮ. ಸುಮ್ನ ಲಕ್ಷ ಬತ್ತಿ ಸುಡೋದು, ಲಕ್ಷ ನಮಸ್ಕಾರ-ಚಮತ್ಕಾರ ಹಾಕೋದು, ಇಂಥಾ ಪಲ್ಯಾನs ತಿನಬೇಕು— ಇಂಥಾ ಪಲ್ಯಾ ತಿನಬಾರ್ದು, ಕಟ್ಟು ಅನ್ನ ಉಣಬೇಕು ಇಂಥಾವೆಲ್ಲ ಸುಳ್ಳು. ಇವನ್ನೆಲ್ಲಾ ಮಾಡಿಕೋತ ದೇಹದಂಡನ ಮಾಡಿದರ ಏನು ಉಪಯೋಗ? ದೇಹದಂಡನ ಮಾಡಿದ್ರ ತಪಸ್ಸು ಸಾಧಿಸಬೇಕು, ರಾಷ್ಟ್ರಸೇವಾ ಆಗಿರಬೇಕು, ಅಂದ್ರ ಸಾರ್ಥಕ ಆಧಂಗಾತು! ಅದಕ ನಿಮಗೆಲ್ಲಾರಿಗ್ಯೂ ಒಂದು ವ್ರತಾ ಹೇಳತೇನಿ ಕೇಳ್ರಿ (ಎಲ್ಲರೂ ಏಕಚಿತ್ತರಾಗಿ ಕೇಳಹತ್ತುವರು.) ರೊಕ್ಕ ಬ್ಯಾಡ! ರುಜಿ ಬ್ಯಾಡ!! ನನ್ನ ಹಿತ್ತಲ ಬೇಕಾದಷ್ಟು ದೊಡ್ಡದು ಅದ. ಆ ಜಾಗಾ ಸ್ವಚ್ಛಮಾಡ್ರಿ. ಅಲ್ಲೇ ಗೊಬ್ಬರ. ಅದನ್ನ ಆ ಜಾಗಾಕ್ಕ ಹಾಕ್ರಿ. ಬದನಿ, ಮೆಣಸಿನಕಾಯಿ, ಕೋತಂಬ್ರಿ, ಭೆಂಡಿ, ಹೀರಿ, ಸವತಿ ಇವನ್ನೆಲ್ಲಾ ಬೆಳಸರಿ. ಬೇಕಾದಷ್ಟು ಪಲ್ಯಾ ಬೆಳಿತದ. ಅದನ್ನೆಲ್ಲಾ ಆ ಅನಾಥಾಲಯಕ್ಕ ಕೊಡ್ರಿ. ಅಂದ್ರ ... ಉಪಕಾರ ಮಾಡಿಧಂಗ ಆತು? ಇದರಕಿಂತ ... ಪುಣ್ಯಾ ಎಲ್ಲೈದ ಅಂತೇನಿ!

ಕಮಲಾ:— ಯೋಗ್ಯ! ಯೋಗ್ಯ!! ... ಸುಮ್ನ ಲಕ್ಷ ಬತ್ತಿ ಸುಡೋದು ಬಿಟ್ಟು, ಲಕ್ಷ ನಮ... ಹಾಕೋದು ಬಿಟ್ಟು, ಗೋಪದ್ಮಾ ಹಾಕೋದು ... ಇನ್ನೂ ಇಂಥಾ ಎಷ್ಟೆಷ್ಟೋ ಮೂರ್ಖತನ ಎಲ್ಲಾ ... ಈ ಸತ್ಕಾರ್ಯ ಮಾಡಿದರ ನಮ್ಮ ಕಣ್ಣ-... ರಾದ ಅನಾಥರನ್ನ ತೃಪ್ತಿಬಡಿಸಿ ರಾಷ್ಟ್ರಸೇವಾದಾಗ ... ಸವಿಸಿದರ ಅದs ಪುಣ್ಯ! ಅದs ಧರ್ಮಾ... ಪಶುಪೂಜಾದಿಂದ ದೇವ ಸಂತೃಪ್ತ ಆಗೋ... ನರಸೇವಾದಿಂದ ತೃಪ್ತ ಆಗಲಿಕ್ಕೇ ಬೇಕು! ... ಇದ್ನೋಡ್ರೀ ರುಕ್ಮಿಣೀಬಾಯರಂತೂ ... ಗರಿಗೆ ಹಿಡಿಯೋ ಅಷ್ಟು ಅಂಗೀ ಅರಿಬಿ ಕೊ... ವಿಮಲಾಬಾಯಿ ಅಂಗಿ-ಝುಬಲಾ ಹೊಲದು ಕೊ... ನೀವು ಮಣಾ ತುಪ್ಪಾ ಕೊಡ್ರಿ, ಉಳದವರೆಲ್ಲಾ ... ನಾಲ್ಕೈದು ತಿಂಗಳಿಗೆ ಸಾಲೋ ಅಷ್ಟು ಪಲ್ಯಾ ... ಕೊಡ್ರಿ. ಇದರಿಂದ ಎಷ್ಟು ಪುಣ್ಯಾ ಬರತsದ ... ಗೊತ್ತದನs? ಇದರಕಿಂತ ಹೆಚ್ಚಿನ ಪ... ಯಾವದು? ಇದs ವ್ರತಾನs ಹಿಡಿರಿ ಎಲ್ಲಾ...

ಎಲ್ಲರೂ ಕೂಡಿ:—ನಾವೆಲ್ಲಾರೂ ಈ ಚಾ... ದೊಳಗ ಇದs ವ್ರತಾನs ಹಿಡೀತೇವಿ. ಇದು ... ಖರೇ! ತುಳಸಾದೇವಿ ಸನ್ನಿಧಾನದಾಗ ಮಾ... ವ್ರತ! (ಕಮಲೆಯ ಕಡೆ) ಕಮಲಾಬಾಯಿ ... ಅನಾಥಾಲಯದ ಸಂಚಾಲಕರಿಗೆ ಈ ನಮ್ಮ ... ತಿಳಿಸಿಬಿಡ್ರಿ.

ಕಮಲಾ:—(ಆನಂದದಿಂದ) ಈ ಸಂಕಲ್ಪ... ಕೇಳಿ ಆ ಸಂಚಾಲಕರಿಗೆ ಎಷ್ಟು ಆನಂದ ಆಗ... ಮಾಡೀರಿ? ಅದನ್ನ ನಾ ಶಬ್ದದಾಗ ಹೇಳಲಾ... ಇವತ್ತಿನ ತನಕ ಬಳಿಕಿಯೊಳಗ ಇಲ್ಲದ ಈ ... ಸ್ಯದ ಹೊಸ ವ್ರತ ಬಳಿಕಿಯೊಳಗ ಬಂತು ... ಅತ್ಯಂತ ಆನಂದ ಆಗತsದ....

[ಎನ್ನುವಾಗ ತೆರೆ]*

—: ಮುಗಿದುದು :—

[*ಬ್ಯಾ. ಸಾವರಕರ ಅವರ ...

ಕನ್ನಡ ವ್ಯಾಕರಣದಲ್ಲಿಯ ತ್ರಿದೋಷಗಳ ಚರ್ಚೆ

ಲೇಖಕರು: ಶ್ರೀ. ಬೆಂಗೇರಿ ಹುಚ್ಚರಾಯರು, ಎಂ. ಎ. ಬಿ. ಟಿ.

●

ವ್ಯಾಕರಣವೆಂದರೆ ಭಾಷೆಯ ಸ್ಪಷ್ಟವಾದ ಅರ್ಥಾಭಿವ್ಯಕ್ತಿಗೆ ಸಾಧಕವಾದ ನಿಯಮಗಳ ಸಮುದಾಯವೆನ್ನಬಹುದು. ಮನುಷ್ಯನ ಅನುಭವವೂ ಭಾಷೆಯೂ ಬೆಳೆದಂತೆ ವ್ಯಾಕರಣವೂ ಬೆಳೆದು ಅನುಗೊಳ್ಳಬೇಕಾಗುತ್ತದೆ. ಕನ್ನಡ ವ್ಯಾಕರಣದಲ್ಲಿಯ 'ರೂಢ' ನಾಮವು ಶತಮಾನಗಳಿಂದ ಅಲುಗಾಡದೆ ಕುಳಿತುಬಿಟ್ಟಿದೆ. ಮಾನ್ಯ ಲೇಖಕರು ಅರ್ಥಾಭಿವ್ಯಕ್ತಿಯ ಸೌಕರ್ಯಕ್ಕಾಗಿ 'ರೂಢ'ನಾಮದಲ್ಲಿ ಮಾಡಬಹುದಾದ ವಿಭಾಗಗಳನ್ನು ... ... ಸಕಾರಣವಾಗಿ ಸೂಚಿಸಿದ್ದಾರೆ. ಸಂ. ... ...

●

ಕನ್ನಡ ವ್ಯಾಕರಣ ಪರಂಪರೆಯು ನೃಪತುಂಗನ 'ಕವಿರಾಜಮಾರ್ಗ'ದಿಂದ ಆರಂಭವಾಗಿ ಇಂದಿನ ವರೆಗೆ ಸಾಗಿದೆ. ಅಂದರೆ. ೯ನೆಯ ಶತಮಾನದಿಂದ (ಇದಕ್ಕೆ ಹಿಂದೆ ಇರಬಹುದಾದ ಗ್ರಂಥಗಳು ಬೆಳಕಿಗೆ ಬಂದಿಲ್ಲ) ಇಪ್ಪತ್ತನೆಯ ಶತಮಾನದ ವರೆಗೆ ಬಂದಿದೆ. ಪರಂಪರೆಯಲ್ಲಿ ನೃಪತುಂಗನ 'ಕವಿರಾಜಮಾರ್ಗ' (೮೨೫), ನಾಗವರ್ಮನ ಶಬ್ದಸ್ಮೃತಿ (ಕನ್ನಡ) ಕರ್ನಾಟಕ ಭಾಷಾಭೂಷಣ (ಸಂಸ್ಕೃತ) (೧೦೫೦), ಕೇಶಿರಾಜನ ಶಬ್ದಮಣಿದರ್ಪಣ (೧೨೫೦), ಭಟ್ಟಾಕಲಂಕದೇವನ ಕರ್ನಾಟಕ ಶಬ್ದಾನುಶಾಸನ (ಸಂಸ್ಕೃತ—೧೬೦೪), ಇವಲ್ಲದೆ ಉತ್ತರ ದಕ್ಷಿಣ ಕರ್ನಾಟಕಗಳಲ್ಲಿ ೧೮೭೦ ರಿಂದ ಇಂದಿನ ವರೆಗೆ ಬಲ್ಲಿದರು ಹೊಸಗನ್ನಡ ವ್ಯಾಕರಣಗಳನ್ನು ಬರೆದು ಭಾಷೆಯ ಶುದ್ಧತೆಗೆ ಬಹಳ ಸಹಾಯ ಮಾಡಿದ್ದಾರೆ. ಇವುಗಳಲ್ಲಿ ಪ್ರಾಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಶಬ್ದಾದರ್ಶ, ನುಡಿಗನ್ನಡಿ, ನುಡಿಗಟ್ಟು, ಬಾಲವ್ಯಾಕರಣ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕರ್ನಾಟಕ ವ್ಯಾಕರಣ, ಕರ್ನಾಟಕ ವ್ಯಾಕರಣಸಾರ, ಕನ್ನಡ ಕೈಪಿಡಿ ಇವುಗಳ ಸಮಾವೇಶವಾಗುತ್ತದೆ. ಇವೆಲ್ಲವುಗಳಲ್ಲಿ ಮೇಲೆ ಹೇಳಿದ ಪ್ರಮಾಣಗ್ರಂಥಗಳಾದ ವ್ಯಾಕರಣಗಳಿಂದ ಬಹುಭಾಗಗಳು ಕಂಡುಬರುತವಲ್ಲದೆ, ಹೊಸಗನ್ನಡಕ್ಕೆ ಅನುಕೂಲವಾಗುವಂತೆ ಹೊಸ ನಿಯಮಗಳು ಕೂಡಿಸಲ್ಪಟ್ಟಿವೆ. ಇವುಗಳ ಹೊರತಾಗಿ ಹೊಸಗನ್ನಡ ವ್ಯಾಕರಣಗಳಲ್ಲಿ 'ವಾಕ್ಯವಿಭಜನೆ' ಯೆಂಬುದೊಂದು ಹೊಸ ಪ್ರಕರಣವು ಕಂಡುಬರುತ್ತದೆ. ಇದು ಪಾಶ್ಚಾತ್ಯರಿಂದ ವಿಶೇಷತಃ ಇಂಗ್ಲೀಷ ವ್ಯಾಕರಣದಿಂದ ತೆಗೆದುಕೊಂಡ ಭಾಗವೆಂಬುದು ನಿರ್ವಿವಾದ ಮಾತು. ಖಂಡಾನ್ವಯ, ದಂಡಾನ್ವಯ ಎಂಬ ಎರಡು ಅನ್ವಯಪದ್ಧತಿಗಳಿದ್ದರೂ 'ವಾಕ್ಯವಿಭಜನೆ'ಯ ರೂಪವು ಪರಕೀಯರದು. ಮುಂಬೈ ಕರ್ನಾಟಕದಲ್ಲಿ ಇದು ಮೊದಲು 'ನುಡಿಗಟ್ಟಿ'ನಲ್ಲಿ ಸೇರಿತು. ಅದೇ, ನುಡಿಗನ್ನಡಿಯಲ್ಲಿ ಅಲ್ಪಸ್ವಲ್ಪ ಹೆಚ್ಚುಕಡಿಮೆಯಾಗಿ ಸಾಗಿಬಂದಿದೆ. 'ಕವಿರಾಜಮಾರ್ಗ'ದಲ್ಲಿ ಷಷ್ಠಿ, ದ್ವಿತೀಯೆ ಇವುಗಳ ಪ್ರಯೋಗ ಚರ್ಚೆ ಕಾಣಬರುವದರಿಂದ ಇದನ್ನು ವ್ಯಾಕರಣ ಪರಂಪರೆಯಲ್ಲಿ ಸೇರಿಸಿದ್ದಾಗಿದೆ.

ಈ ಬರೆಹದಲ್ಲಿ ನಾಮಪದ ವಿಭಾಗವನ್ನೇ ನಾನು ಚರ್ಚೆಗೆ ಇಟ್ಟುಕೊಂಡಿರುವದರಿಂದ ಉಳಿದ ಭಾಗಗಳು ತಾವಾಗಿಯೇ ಹೊರಗಾಗಿವೆ.

ಶಬ್ದಮಣಿದರ್ಪಣಸೂತ್ರ ೭೬ ಅಧ್ಯಾಯ ೨ರಲ್ಲಿ ನಾಮಪದಗಳು ಮೂರು ಪ್ರಕಾರಗಳಾಗಿ ವಿಭಾಗಿಸಲ್ಪಟ್ಟಿವೆ. ಅವು 'ರೂಢ' 'ಅಂಕಿತ' 'ಅನ್ವರ್ಥ'. ಇದೇ ಭಾಗವನ್ನೇ ಮುಂದಿನ ವ್ಯಾಕರಣಕಾರರು ತೆಗೆದುಕೊಂಡುದರಿಂದ ಆಯಾ ವ್ಯಾಕರಣಗಳ ನಿರ್ದೇಶವು ಇಲ್ಲಿ ಸಮಂಜಸವಾಗಲಾರದು. ಮರಾಠಿ ವ್ಯಾಕರಣದಲ್ಲಿ ಇದಕ್ಕೆ ಕೆಲಮಟ್ಟಿಗೆ ಸರಿಸಮಾನವಾದ ಮೂರೇ ಭಾಗಗಳು ಕಂಡುಬರುತ್ತವೆ. 'ಸಾಮಾನ್ಯ' 'ವಿಶೇಷ' 'ಭಾವ' ನಾಮಗಳೆಂಬುವೇ ಅವು. ಮೊದಲಿನ ಎರಡು ಭಾಗಗಳು ಅಂದರೆ, 'ರೂಢ' 'ಅಂಕಿತ'ಗಳು ಮರಾಠಿಯ (ಇದು ಆರ್ಯಭಾಷೆಯಾದರೂ ಹೋಲಿಕೆಯ ದೆಸೆಯಿಂದ ಇಲ್ಲಿ ನಿರ್ದೇಶಿಸಲ್ಪಟ್ಟಿದೆ) 'ಸಾಮಾನ್ಯ' 'ವಿಶೇಷ' ಗಳನ್ನು ಸಂಪೂರ್ಣವಾಗಿ ಹೋಲುತ್ತವೆ. ಮೂರನೆಯದಾದ ಅನ್ವರ್ಥವು ಮಾತ್ರ ಮರಾಠಿಯಲ್ಲಿರದೆ 'ಭಾವ' ನಾಮವೆಂಬ ಇನ್ನೊಂದು ಭಾಗವು ಕಂಡುಬರುತ್ತದೆ. ಇದು ಶಬ್ದಮಣಿದರ್ಪಣ ಮೊದಲಾದವುಗಳಲ್ಲಿ ಇಲ್ಲ. ಈ ಭಾವ

ನಾಮ ನಿರ್ದೇಶವು ನಮ್ಮ ಪ್ರಾಚೀನ ವ್ಯಾಕರಣಗಳಲ್ಲಿ ಶಬ್ದಶಃ ಕಾಣಿಸುವದಿಲ್ಲ. ತತ್ವತಃ ಇದ್ದೇ ಇರುತ್ತದೆ. ಇದು ಸರಿಯಾಗದಿರುವದರಿಂದ ಉತ್ತರಕರ್ನಾಟಕದಲ್ಲಿ ಮೊಟ್ಟ ಮೊದಲು ಇಂಗ್ಲೀಷ ಭಾಷೆಯಂತೆ ನುಡಿಗಟ್ಟಿನಲ್ಲಿ ನಾಮ ಪದಗಳು 'ವಸ್ತುವಾಚಕ' 'ಭಾವವಾಚಕ'ಗಳೆಂಬ ಎರಡು ಹೊಸ ವಿಭಾಗಗಳು ಕಂಡುಬರುತ್ತಿವೆ. ಇದೇ ಭಾಗವನ್ನೇ ಶ್ರೀ. ಶಂ. ಬಾ. ಜೋಶಿಯವರು ತಮ್ಮ 'ಕನ್ನಡನುಡಿಯ ಹುಟ್ಟಿ'ನಲ್ಲಿ ಎತ್ತಿಹಿಡಿದಿದ್ದಾರೆ. ಅಂತೂ ಈ ತತ್ವವು ವ್ಯಾಕರಣವನ್ನು ತಿಳಿಮಾಡುವದಕ್ಕೆ ಬಹುಮಟ್ಟಿಗೆ ಸಹಕಾರಿಯಾಗಿದೆ ಎಂಬ ಮಾತನ್ನು ಎಲ್ಲರೂ ಒಪ್ಪುವಂತಿದೆ.


ಮೇಲಿನ ಮೂರೂ ಭಾಗಗಳ ಪದ್ಧತಿಯು ಸದೋಷವಾಗಿದೆ ಎಂಬುದು ಸ್ವಲ್ಪ ವಿಚಾರ ಮಾಡಿದರೆ ತಿಳಿಯುವಂತಿದೆ. ಇವುಗಳಲ್ಲಿ ರೂಢನಾಮವೆಂಬುದು ಜಗತ್ತಿನ ಬಹುಭಾಗವನ್ನೇ ನುಂಗುತ್ತದೆ. ರೂಢನಾಮಗಳಲ್ಲಿ ಎಷ್ಟೋ ಜಾತಿಗಳು ಕಂಡುಬರುತ್ತಿವೆ. ಅವನ್ನೇ ವಿಂಗಡಿಸಿ ಆದಷ್ಟು ತಿಳಿಮಾಡುವದು ಅಗತ್ಯವಾಗಿದೆ. ಇದಲ್ಲದೆ ಅನ್ವರ್ಥಕ ಭಾಗವು ರೂಢನಾಮದ ಭಾಗವೇ ಆದರೂ ಅದರಲ್ಲಿ ಅರ್ಥಾನುರೂಪ, ಗುಣಾನುರೂಪವೆಂಬ ಎರಡು ಭಾಗಗಳು ಕಾಣುತ್ತಿವೆ. ಇವುಗಳನ್ನು ವಿಂಗಡಿಸುವದು ಎಷ್ಟು ಕಠಿಣವಾಗಿದೆಯೆಂಬುದನ್ನು ಸ್ವಲ್ಪದರಲ್ಲಿ ತಿಳಿಸಬಹುದು. 'ದಾನಿ'ಯೆಂಬುದು ಗುಣಾನುರೂಪ; 'ಗುಳ್ಳಿಗಣ್ಣ'ನೆಂಬುದು ಅರ್ಥಾನುರೂಪ. ಇವುಗಳಲ್ಲಿಯ ಭೇದವು ತಾತ್ವಿಕ ದೃಷ್ಟಿಯಿಂದ ಸರಿಯಾಗಿಲ್ಲವೆಂಬುದನ್ನೇ ಒಂದೇ ಒಂದು ಪ್ರಶ್ನೆಯಿಂದ ತಿಳಿಸಬಹುದು. ಓದುಗರಿಗೆ ನೀವು ಹೇಗೆ ಇವುಗಳನ್ನು ಬಿಡಿಸಿ ತೋರಿಸುವಿರಿ? 'ಗುಳ್ಳಿಗಣ್ಣ'ನು ಎದ್ದು ಕಾಣಬಹುದು. ಆದರೆ 'ದಾನಿ'ಯು? ಹೊರಗಿನಿಂದ ನೋಡುವವರಿಗೆ 'ದಾನಿ'ಯ ಗುರುತೇ ಹತ್ತ[illegible] 'ದಾನಿ'ಯೇ 'ಗುಳ್ಳಿಗಣ್ಣ'ನಾದರೆ ಮೂರನೆಯ [illegible]ವನ್ನು ಅನ್ವರ್ಥಕದಲ್ಲಿ ಹೊಸದಾಗಿ ಸೇರಿಸಬೇಕಾಗ[illegible] ಇದಲ್ಲದೆ ಇಲ್ಲಿ ವ್ಯಕ್ತಿಯಿಂದ ಜಾತಿಯ ಅನುಮಾನ [illegible]ಲಿಕ್ಕೆ ಅನುವು ಇರುವದು. ಆದುದರಿಂದ ಈ ಭಾಗ[illegible] ತೆಗೆದು 'ರೂಢ'ದಲ್ಲಿ ಕೂಡಿಸಿದರೆ ಏನೂ ವ್ಯತ್ಯಾಸ[illegible]ವದಿಲ್ಲ. 'ಅಂಕಿತ'ವು ವ್ಯಕ್ತಿವಾಚಕವಾಗಿರುವುದು. [illegible] ಅರ್ಥವನ್ನು ಬೇರೆ ವಿಂಗಡಿಸಬೇಕಾಗಿಲ್ಲ.

ಈ ನಾಮಪದವಿಭಾಗವನ್ನೇ ಇಂಗ್ಲೀಷ ವ್ಯಾಕ[illegible]ದಂತೆ ವ್ಯವಸ್ಥಿತ ರೀತಿಯಿಂದ ಕಾಣಿಸಿದರೆ ಓದುಗ[illegible] ಅಭ್ಯಾಸಿಗರಿಗೂ ಬಹಳ ಹಗುರಾಗುವದೆಂಬುದು [illegible] ಅನುಭವ. ಇಂಗ್ಲೀಷ ವ್ಯಾಕರಣದ ವಿಮರ್ಶಾತ್ಮಕ [illegible] ಓದುಗರಿಗೇನೂ ಹೊಸತಲ್ಲ. ಇದಲ್ಲದೆ ಈಗಾಗಲೇ '[illegible] ವಿಭಜನೆ' ಮತ್ತು 'ನಾಮಪದ ಮೂಲ' ಎಂದೆರಡು [illegible]ಗಳನ್ನು ನಾವು ಕಡ ತೆಗೆದುಕೊಂಡಿದ್ದೇವೆ. ಅಂದ[illegible] ಈ ಭಾಗವನ್ನು ಏಕೆ ತೆಗೆದುಕೊಳ್ಳಬಾರದು?

Row and Webb's "Hints on the study of English" ಎಂಬುದು ಇಂಗ್ಲೀಷಿನಲ್ಲಿ ಒಂದು ಉತ್ತ[illegible] ವ್ಯಾಕರಣವು. ಅದರಲ್ಲಿಯ ನಾಮಪದ ಭಾಗಗಳನ್ನು [illegible] ತೋರಿಸಿದೆ.*

ಈ ಭಾಗಗಳ ಸಮಂಜಸತೆಯನ್ನು ಸಾಧ್ಯವಾದ ಮ[illegible] ವಿಂಗಡಿಸಲು ಪ್ರಯತ್ನಿಸುತ್ತೇನೆ.

ಮೊಟ್ಟಮೊದಲು ನಾಮಪದದ ಭಾಗ ೧,೨. ಇವು[illegible] ಮೊದಲನೆಯದು ವಸ್ತು ಅಥವಾ ಪದಾರ್ಥವನ್ನು ತೋ[illegible]ಸುವದು. ಎರಡನೆಯದು ಭಾವವನ್ನು ತೋರಿಸು[illegible] ಕನ್ನಡದಲ್ಲಿ ಗುಣಸ್ಥಿತಿಗಳನ್ನು ವಿಂಗಡಿಸುವ ಪ್ರ[illegible]



ಬೇರೆಬೇರೆಯಾಗಿರದೆ ಒಂದೇ ಇರುತ್ತವೆ. ಉದಾ: 'ಮೆ', 'ತನ', ಇವುಗಳನ್ನು ವಿಂಗಡಿಸುವದು ಅಗತ್ಯವಿದೆ. 'ಮೆ' ಪ್ರತ್ಯಯಾಂತಗಳು ತಮಿಳಿನಲ್ಲಿರುವಂತೆ ವಿಸ್ತೃತವಾಗಿಲ್ಲ. ಆದರೂ ಇವುಗಳನ್ನು ಗುಣದರ್ಶಕವೆಂತಲೂ 'ತನಂತ' ಗಳನ್ನು ಸ್ಥಿತಿದರ್ಶಕಗಳೆಂತಲೂ ಮಾಡಿಕೊಳ್ಳಬಹುದು. ೪ ಮೇಲೆ ವಸ್ತುವಾಚಕಗಳಲ್ಲಿ ಎರಡು ಭಾಗಗಳು. ೧ ಜಾತಿವಾಚಕ, ೨ ವ್ಯಕ್ತಿವಾಚಕ. ಇವುಗಳಲ್ಲಿ ಮೊದಲನೆಯದು ವ್ಯಕ್ತಿಯ ಗುಣದಿಂದ ಜಾತಿಯನ್ನು ಗುರುತಿಸುವದು. ಇದರಲ್ಲಿ ಗುಂಪಿನ ಮಹತ್ವವಿಲ್ಲ. ಎರಡನೆಯದು ವ್ಯಕ್ತಿವಾಚಕ ಅಥವಾ ಅಂಕಿತ. ಕೇವಲ ವ್ಯಕ್ತಿಗಳನ್ನು ಗುರುತಿಸುವದು ಇದರ ತತ್ವ.

ಜಾತಿವಾಚಕ ಅಥವಾ ರೂಢಗಳಲ್ಲಿ ಮತ್ತೆ ಎರಡು ಭೇದಗಳು. (೧) ಸಂಘವಾಚಕ. ಇದರಲ್ಲಿ ವ್ಯಕ್ತಿಗೆ ಸ್ಥಾನವಿಲ್ಲ. ಗುಂಪಿನ ದೃಷ್ಟಿಯೇ ಇದರ ತತ್ವ. ವ್ಯಕ್ತಿಗಳಿಂದ ಗುಂಪಾಗಿದ್ದರೂ ವ್ಯಕ್ತಿಗಳು ಗುಂಪಿನಲ್ಲಿ ಅಡಗಿದ್ದಾರೆ. ಆದರೆ ಜಾತಿವಾಚಕಗಳಲ್ಲಿ ವ್ಯಕ್ತಿಯೇ ಹೆಚ್ಚು. (೨) ಪದಾರ್ಥವಾಚಕ, ಅಂದರೆ ಪ್ರಯೋಜನ ದೃಷ್ಟಿಯಿಂದ ವಿಭಾಗಿಸುವದು ಇದರ ಉದ್ದೇಶ. ಅಂದರೆ, ಇಲ್ಲಿ ವ್ಯಕ್ತಿ, ಜಾತಿ, ಗುಂಪುಗಳ ವಿಚಾರವಿರದೆ ಆ ವ್ಯಕ್ತಿಗಳ ಉಪಯೋಗವೇ ಒಂದು ಅಳತೆಗೋಲು. ಅಂತು ಪ್ರತಿಯೊಂದು ವಿಭಾಗವು ಸ್ವತಂತ್ರವಾಗಿಯೂ ಅರ್ಥವ್ಯಕ್ತಿಗೆ ಸಹಕಾರಿಯಾಗಿಯೂ ಇರುವದು. ನಮ್ಮ ವ್ಯಾಕರಣಗಳಲ್ಲಿಯ ರೂಢನಾಮವು ಇವೆಲ್ಲವುಗಳನ್ನು ನುಂಗಿ ಬೆಳೆದು ಕುಳಿತಿದೆ. ಇದರಿಂದ ಅರ್ಥವ್ಯಕ್ತಿಗೆ ಎಷ್ಟು ತೊಂದರೆಯಾಗುತ್ತದೆಂಬುದು ವ್ಯಾಕರಣವನ್ನು ಕಲಿಯುವವರಿಗೆ ಅರಿಯದ ಮಾತಲ್ಲ. ಮೇಲಾಗಿ ಅನ್ವರ್ಥವೆಂಬುದು ನಮ್ಮ ವ್ಯಾಕರಣಗಳಲ್ಲಿ ಅನರ್ಥ. ಇದರಲ್ಲಿ ಎರಡಲ್ಲದೆ ಮೂರನೆಯ ವಿಭಾಗವನ್ನೂ ಕಲ್ಪಿಸಬಹುದು.

ಅಂತೂ ನಮ್ಮ ವ್ಯಾಕರಣದಲ್ಲಿ ನಾಮಪದವಿಭಾಗವು ಸದೋಷವೂ ಅತರ್ಕಶುದ್ಧವೂ ಆಗಿರುವದರಿಂದ ಬಲ್ಲವರು ಇದನ್ನು ವಿಚಾರಿಸುವರೆಂದು ನಾನು ನಂಬಿದ್ದೇನೆ.

ವಿ. ಸೂ. ೧೯೩೪ರಲ್ಲಿ ಬರೆದ 'Matriculation English Grammar' ಎಂಬ ಪುಸ್ತಕವು Tipping (ಟಿಪಿಂಗ್) ಇವರಿಂದ ಬರೆಯಲ್ಪಟ್ಟದೆ. ಇದರಲ್ಲಿ ನಾಮಪದಗಳು ಒಂದೇ ತಲೆಬರೆಹದ ಕೆಳಗೆ ತರಲ್ಪಟ್ಟವೆ. ಭಾವನಾಮಗಳು ಎರಡನೆಯ ಭಾಗ. ವ್ಯವಸ್ಥಿತ ರೀತಿಯನ್ನು ವಿಚಾರಿಸಿದರೆ, 'Row and Webb' ಇವರು ಕೊಟ್ಟ ಪದ್ಧತಿಯೇ ಮೇಲಾಗಿದೆ.

(ಹಾವೇರಿಯ 'ಕೆಳೆಯರ ಕೂಟದ' 'ನನ್ನನುಡಿ' ಯೆಂಬ ಕೈಬರೆಹದ ಮಾಸಪತ್ರಿಕೆಯಿಂದ)



ಸೊಕೋಲ್ ತರುಣಿ
ಯರು ಆಟಗಳಿಗೆ
ಹೋಗುತ್ತಿರುವು

ಝೆಕೊಸ್ಲೊವಾಕಿಯದ ಕಸುವೆಲ್ಲಿದೆ?

ಲೇಖಕರು:— ವಿಶ್ವವಿಹಾರಿ

ಹಿಟ್ಲರನು ಆಸ್ಟ್ರಿಯವನ್ನು ನುಂಗಿದ ಮತ್ತಿನಲ್ಲಿಯೆ ಝೆಕೊಸ್ಲೊವಾಕಿಯವನ್ನೂ ಗಂಟಲಿಗಿಳಿಸುವೆನೆಂದು ಗರ್ಜಿಸಿದನು. ಆದರೆ ಝೆಕ್ಕರು 'ಬಾಯನ್ನಂತೂ ತೆರೆ ನಿನ್ನನ್ನು ಬಾಯಿಂದಲೆ ಸೀಳಿ ಒಗೆಯುವೆವೆ'ಂದು ಪ್ರತಿಗರ್ಜಿಸಿದರು. ಅಂದರೆ ಇಂದೆ ಝೆಕ್ಕರಿಗೂ ಜರ್ಮನಿಗೂ ಕುಸ್ತಿಯಾದರೆ, ಮಿಕ್ಕವರಾರೂ ಅಧಿಕಪ್ರಸಂಗ ಮಾಡದಿದ್ದರೆ ಬೀಳುವವರಾರು? ಗೆಲ್ಲುವವರಾರು? ಎಂಬುದನ್ನು ಈಗಲೆ ಹೇಳಲಿಕ್ಕೆ ಸಾಧ್ಯವಿದೆಯೆಂತಲ್ಲ. ಈಗಿನ ಸಂಗ್ರಾಮವ್ಯೂಹಗಳಲ್ಲಿ ಗೆಲುವು-ಸೋಲುಗಳನ್ನು ಮೊದಲೆ ಹೇಳುವುದು ಕಠಿನ. ಆದರೆ ಝೆಕ್ಕರು ಜರ್ಮನರ ಕೆಂಗಣ್ಣಿಗೆ ಸೊಪ್ಪು ಹಾಕುವ ಹೇಡಿಗಳಲ್ಲ.

ರಾಷ್ಟ್ರದ ಜೀವವಿರುವುದು ತರುಣ ತರುಣಿಯರಲ್ಲಿ. ಸಾವಿಗೆ ಕೈನೀಡಿದ ಹಿರಿಯರಲ್ಲಿಯ ಪಂಥ ಪಂಗಡಗಳ ಸಿಟ್ಟು ಹೊಟ್ಟೆಕಿಚ್ಚುಗಳ ರೊಚ್ಚು ಎಷ್ಟಿದ್ದರೂ ತರುಣರು ಆ ವೃತ್ತಿಯನ್ನಿಂದು ಮನ್ನಿಸುವಂತಿಲ್ಲವೆಂಬುದು ಜಗತ್ತನ್ನು ತಿಳಿಗಂಣಿನಿಂದ ನೋಡಿದರೆ ತಿಳಿಯದಿರದು. ಇಟಲಿ ಜರ್ಮನಿಗಳಂತಹ ರಕ್ಕಸವೃತ್ತಿಯವರ ಸಹಾಯವನ್ನು ಪಡೆದೂ ಫ್ರಾಂಕೋನಿಗೆ ಎರಡು ವರ್ಷಗಳವರೆಗೂ ಸ್ಪೇನನ್ನು ಜಯಿಸಲಾಗಲಿಲ್ಲ. ಇದರ ಗುಟ್ಟೆಲ್ಲಿದೆ? ಸ್ಪೇ... ತರುಣ ತರುಣಿಯರ ಒಕ್ಕಟ್ಟಿನಲ್ಲಿದೆ. ಜಪಾನಿನ ... ಚಿಕ ಹಾವಳಿಯಿಂದಲೂ ಮಣಿಯದೆ ಇಂದು ... ಭಾವೀ ಗೆಲುವಿನ ಆತ್ಮವಿಶ್ವಾಸವನ್ನಿಟ್ಟುಕೊಂ... ಗುಟ್ಟೆಲ್ಲಿದೆ? ಚೀನೀ ತರುಣ ತರುಣಿಯರ ಒ... ನಲ್ಲಿದೆ. ಜಾತಿ ಮತಗಳ ಜಂಜಾಲದಿಂದ ... ಗಳಿಂದ ಜಾರುತ್ತ ಬಂದ ಭಾರತ ರಾಷ್ಟ್ರದಲ್ಲಿ ... ನಂತಹ ಏಕಮೇವಾದ್ವಿತೀಯವಾದ ಬಲಿಷ್ಠ ... ರಾಷ್ಟ್ರವನ್ನು ಪ್ರಗತಿಪಥಕ್ಕೆಳೆದುದರ ಗುಟ್ಟೆಲ್ಲಿದೆ! ... ತನ ರೂಢಿಯ ಬೇಡಿಗಳನ್ನು ಕಡಿದೊಗೆದ ತರುಣ ... ಣಿಯರ ಒಕ್ಕಟ್ಟಿನಲ್ಲಿದೆ.

ಹಾಗೆಯೆ ಇಂದು ಝೆಕೊಸ್ಲೊವಾಕಿಯದ ... ಚಟುವಟಿಕೆಗಳಲ್ಲೂ ಜನಾಂಗಭೇದಗಳನ್ನೆಣಿಸದೆ ... ವ್ಯದ ಹೆಚ್ಚಳಕ್ಕಾಗಿ ಸೊಂಟ ಕಟ್ಟಿದ ತರುಣ ತರು... ಒಕ್ಕಟ್ಟಿನ ಒಮ್ಮತದ ಬೆನ್ನೆಲುಬಿದೆ. ನರೆಗೂದ... ವಿಚಾರ ಹೇಗೇ ಇರಲಿ; ಝೆಕ್ ತರುಣ ತರುಣಿಯ... ಸಕಲ ಭೇದಗಳಿಗೆ ಮಣ್ಣು ಕೊಟ್ಟು ರಾಷ್ಟ್ರಸ್ವಾತಂ... ಜೀವನದ ಗುರಿಯ... ...ಗಳನ್ನೆ ತಮ್ಮ


ತಂಗಳ ತುತ್ತಿಗೆ ಕೈನೀಡುವ ಹಲವು ಜರ್ಮನರು ಹಿಟ್ಲರ ಪಕ್ಷೀಯರಿಗೆ ಮತಕೊಟ್ಟ ಮಾತ್ರಕ್ಕೆ ಝೆಕೊಸ್ಲೊವಾಕಿಯದ ಜರ್ಮನರೆಲ್ಲರೂ ಹಿಟ್ಲರನ ಪುಂಗಿಯನ್ನನುಸರಿಸಿಯೆ ಕುಣಿಯುತ್ತಾರೆಂಬುದು ಭ್ರಮೆ. ಸೊಕೊಲ್ ಸಂಸ್ಥೆಯ ಬಿಸಿನೆತ್ತರದ ಹರೆಯದವರು ಜನಾಂಗಭೇದಕ್ಕೆಂದೂ ನೀರೆರೆಯುವವರಲ್ಲ. ವಯೋಲಿಂಗಜಾತಿಭೇದಗಳಿಲ್ಲದೆ ಒಕ್ಕಟ್ಟಿನಿಂದ ಸೊಕೊಲ್ ತರುಣ ತರುಣಿಯರು ಲಕ್ಷಾವಧಿಯಾಗಿ ಕಾಂಗ್ರೆಸಿನ ವ್ಯಾಯಾಮ ಕಸರತ್ತುಗಳಲ್ಲಿ ಪಾಲುಗೊಳ್ಳುತ್ತಿರಲು ಪ್ರೇಕ್ಷಕರ ಎದೆಯಲ್ಲಿ ಸ್ವಾತಂತ್ರ್ಯದ ಜ್ವಾಲೆಯು ಉರಿದೇಳುವುದರಲ್ಲಿ ಸಂದೇಹವಿಲ್ಲ.

ಕೊಂಡಿದ್ದಾರೆ. ಆದುದರಿಂದ ಹಿಟ್ಲರನ ಜಂಭದ ಮಾತುಗಳು ಕನಸಿನ ಬಡಬಡಿಕೆಗಳೆನಿಸುವವು.

ಝೆಕೊಸ್ಲೊವಾಕಿಯದ ಹರೆಯದವರೆಲ್ಲ ಸೊಕೊಲ್ ಎಂಬ ಸಂಸ್ಥೆಯ ಧ್ವಜದ ಕೆಳಗೆ ೧೮೬೨ರಲ್ಲಿಯೆ ಒಂದಾಗಿದ್ದಾರೆ. ಡಾ. ಮ್ಯಾರೊಸ್ಲಾವ್ ಎಂಬವರು ಆ ಸಂಸ್ಥೆಯ ಮೂಲ ಸಂಸ್ಥಾಪಕರು. ಅದರ ಮೂಲ ಉದ್ದೇಶವು, ಝೆಕೊಸ್ಲೊವಾಕ್ ನಾಂಗವನ್ನು ಶಾರೀರಿಕ ಮತ್ತು ನೈತಿಕ ಕ್ಷೇತ್ರಗಳಲ್ಲಿ ಉಚ್ಚಸ್ಥಾನಕ್ಕೆ ಮುಟ್ಟಿಸುವುದಾಗಿದೆ. ಈ ಉದ್ದೇಶಕ್ಕೆ ಝೆಕ್ ತರುಣರು ಎಷ್ಟರಮಟ್ಟಿಗೆ ಬೆಂಬಲವನ್ನಿತ್ತಿದ್ದಾರೆಂಬುದು ಒಂದೇ ಮಾತಿನಿಂದ ತಿಳಿದುಬರುವುದು. ೧೮೮೨ರಲ್ಲಿ ಆ ಸಂಸ್ಥೆಗೆ ಬರಿ ೭೨೦ ಸಭಾಸದರಿದ್ದರು; ಆದರೀಗ ೭॥ ಲಕ್ಷ ಯುವಕ ಯುವತಿಯರು ಅದರಲ್ಲಿದ್ದಾರೆ! 'ಸೊಕೊಲ್' ಎಂದರೆ ತನ್ನ ಶಕ್ತಿ-ವೇಗಗಳ ವಿಷಯದಲ್ಲಿ ಎಲ್ಲರಿಗೂ ಪರಿಚಿತವಾದ ಗಿಡಗ ಪಕ್ಷಿಯಾಗಿದೆ. ಸೊಕೊಲ್ ಸಂಸ್ಥೆಯು ತನ್ನ ಶಕ್ತಿಯಲ್ಲಿಯೂ, ಪ್ರಗತಿ ವೇಗದಲ್ಲಿಯೂ ಅಪ್ರತಿಮವಾಗಬೇಕೆಂಬುದೇ ಅದರ ಸಂಸ್ಥಾಪಕರ ಉದ್ದೇಶ.

ಝೆಕೊಸ್ಲೊವಾಕಿಯವು ಮಹಾಯುದ್ಧದ ಪೂರ್ವದಲ್ಲಿ ಆಸ್ಟ್ರಿ-ಹಂಗೇರಿಯನ್ನರ ದಾಸ್ಯದಲ್ಲಿ ಕೊಳೆಯುತ್ತಿತ್ತು. ಅದರ ದಾಸ್ಯಶೃಂಖಲೆಗೆ ಜರ್ಮನಿಯ ಕುತಂತ್ರಗಳೂ ಹೆಚ್ಚು ಹೆಚ್ಚಾದ ಗೊಣಸುಗಳನ್ನು ಸೇರಿಸುತ್ತಿದ್ದವು. ರಾಷ್ಟ್ರದಲ್ಲಿ ಕುನುಸು ಒಡಕುಗಳಿಗಂತೂ ಲೆಕ್ಕವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜನತೆಯನ್ನು ಸ್ವಾತಂತ್ರ್ಯದ ಮಾರ್ಗಕ್ಕೆಳೆಯಬೇಕಾದರೆ ಅವರಲ್ಲಿ ನೈತಿಕ ಐಕ್ಯವನ್ನೂ ಸ್ವಸಾಮರ್ಥ್ಯದಲ್ಲಿ ವಿಶ್ವಾಸವನ್ನೂ ಹುಟ್ಟಿಸುವುದು ಅಗತ್ಯವಾಗಿತ್ತು. ಮತ್ತು ಸೊಕೊಲ್ ಸಂಸ್ಥೆಯು ಅಂತಹ ಭಯಂಕರ ದಿನಗಳಲ್ಲಿಯೂ ಝೆಕೊಸ್ಲೊವಾಕಿಯರ ಎದೆಯಲ್ಲಿ ಸ್ವಾತಂತ್ರ್ಯದ ಅನಿರುದ್ಧವಾದ ಬಯಕೆಯನ್ನು ಬೇರೂರಿಸಿದುದಲ್ಲದೆ ಇಂದಿಗೆ ಅದಕ್ಕೆ ಸ್ವತಂತ್ರರಾಷ್ಟ್ರವಾಗಿ ಎದೆಸೆಟೆಸಿ ನಿಲ್ಲುವ ಕೆಚ್ಚನ್ನೂ ಕೊಟ್ಟಿತು.


ಆರು ವರ್ಷಗಳಿಗೊಂದು ಸಲ ಇಡಿ ಝೆಕೊಸ್ಲೊವಾಕಿಯದ 'ಸೊಕೊಲ್ ಕಾಂಗ್ರೆಸ್' ಸೇರುವುದು. ಆ ಸಮಯಕ್ಕೆ ಲಕ್ಷಾವಧಿ ತರುಣ ತರುಣಿಯರು ಅನೇಕ ವಿಧದ ವ್ಯಾಯಾಮ, ಆಟ, ಕಸರತ್ತುಗಳಲ್ಲಿ ಪಾಲುಗಾರರಾಗುವರು. ಆ ಆಟ ಕಸರತ್ತುಗಳ ಕ್ರಮವು ದೇಹದ ಸರ್ವಾವಯವಗಳಿಗೂ ವ್ಯಾಯಾಮವನ್ನು ಕೊಟ್ಟು ಸೌಂದರ್ಯ



ಸೊಕೊಲ್ ಆಟದ ಬೈಲಿನ ಒಂದು ಮೂಲೆಯ ನೋಟ—ಸಾಮುದಾಯಿಕ ಗೋಪುಹೆಣೆಯುವ ಕುಣಿತ

ಶಕ್ತಿಗಳನ್ನು ನಿರ್ದುಷ್ಟವಾಗಿ ಬೆಳೆಸುವಂತೆ ಏರ್ಪಟ್ಟಿದೆ. ಮೊದಮೊದಲು ಸೊಕೊಲ್ ವ್ಯಾಯಾಮವೆಂದರೆ ಬರಿ ಜಟ್ಟಿಯ ಅಂಗಸಾಧನೆಯಾಗಿತ್ತು. ಆದರೀಗ ದೇಹ ಮನಸ್ಸುಗಳ ಸರ್ವಾಂಗ ಸುಂದರ ಬೆಳೆಗೆಗೂ ಅನುಕೂಲಿಸುವ ಆಟ, ಕುಣಿತ, ಮೋಜು, ಕಸರತ್ತುಗಳೂ ಸೊಕೊಲ್ ಚಟುವಟಿಕೆಗಳಲ್ಲಿ ಸಮಾವೇಶವಾಗಿವೆ. ಆದುದರಿಂದಲೆ ಇಡಿ ರಾಷ್ಟ್ರದ ತರುಣ ತರುಣಿಯರಿಗೆ ಆ ಸಂಸ್ಥೆಯ ವಿಷಯಕ್ಕೆ ಬಹುವಾದ ಅಭಿಮಾನವೆನಿಸುತ್ತದೆ.

ಪ್ರತಿಯೊಬ್ಬ ಸೊಕೊಲ್‌ಸಭಾಸದನೂ ತನ್ನ, ನೆರೆಹೊರೆಯವರ, ದೇಶದ ಮತ್ತು ಇಡಿ ಮಾನವಸಮಾಜದ ವಿಷಯಕ್ಕೆ ತನ್ನ ಕರ್ತವ್ಯವೇನೆಂಬುದನ್ನು ಚನ್ನಾಗಿ ಬಲ್ಲನು. ಮನುಷ್ಯಮಾತ್ರರೆಲ್ಲರೂ 'ಒಂದು' ಎಂಬ ಭಾವನೆಯೆ ಸೊಕೊಲ್ ಸಂಸ್ಥೆಯ ಕಸುವಿನ ಜೀವಾಳವಾಗಿದೆ. ಆದುದರಿಂದ ಆ ಸೊಕೊಲ್ ಬರಿ ವ್ಯಾಯಾಮದ ಸಂಸ್ಥೆಯಲ್ಲವೆಂಬುದು ಸ್ಪಷ್ಟವಾಗುತ್ತದೆ. ವಯೋಲಿಂಗ ಜಾತಿಭೇದಗಳಿಲ್ಲದೆ ಸೊಕೊಲ್ ಸಭಾಸದರು ಒಕ್ಕಟ್ಟಾಗಿ ರಾಷ್ಟ್ರೀಯ ವಿಚಾರಗಳಲ್ಲಿ ಒಮ್ಮತವುಳ್ಳವರಾಗಿರುವುದೇ ಆ ಸಂಸ್ಥೆಯ ವೈಶಿಷ್ಟ್ಯವಾಗಿದೆ. ಝೆಕ್, ಸ್ಲೊವಾಕ್, ಜ್ಯೂ, ಹಂಗೇರಿಯನ್, ಪೊಲಿಶ್, ಜರ್ಮನ್ ಮುಂತಾದ ಎಲ್ಲ ಜನಾಂಗಗಳೂ ಸೊಕೊಲ್‌ದಲ್ಲಿ ಒಮ್ಮನಸ್ಸಿನಿಂದ ಕಲೆ-



ನಾಲ್ಕು ಲಕ್ಷ ಸೊಕೊಲ್ ತರುಣಿಯರ ಕ್ರಮಬದ್ಧ ವ್ಯಾಯಾಮ.

ತಿದ್ದಾರೆಂದ ಮೇಲೆ ಆ ಸಂಸ್ಥೆಯ ಸಾಮರ್ಥ್ಯವೆಷ್ಟೆಂ- ದನ್ನು ಬೇರೆ ಹೇಳಬೇಕೇ? ತಂಗಳ ತುತ್ತಿಗೆ ಕೈಸೋಕ್ಕ ಹಲವು ಜರ್ಮನರು ಮತಗಣನೆಯಲ್ಲಿ ಹಿಟ್ಲರಪಕ್ಷೀಯ- ರಿಗೆ ಮತ ಕೊಟ್ಟರೆಂದ ಮಾತ್ರಕ್ಕೆ ಝೆಕೊಸ್ಲೊವಾಕಿಯದ ಜರ್ಮನರೆಲ್ಲರೂ ಹಿಟ್ಲರನ ಪುಂಗಿಯ ನಾದಕ್ಕೆ ತಕ್ಕಂತೆ ಕುಣಿಯುತ್ತಾರೆಂಬುದು ಭ್ರಮೆ. ಸೊಕೊಲ್‌ದ ಬಿಸಿಸ್ನೇಹ- ರಸ ಹರಿಯುದವರು ಜನಾಂಗಭೇದಕ್ಕೆಂದೂ ಸೋಲುವ- ವವರಲ್ಲ.

ಸೊಕೊಲ್‌ದ ಅನೇಕ ಸಭಾಸದರು ಇಂದು ಇಡಿ ಜಗ- ತ್ತಿನ ವ್ಯಾಯಾಮ, ಕಸರತ್ತುಗಳಲ್ಲಿ ಮೊದಲಿಗರೆಂಬ ಮಾನ ಪಡೆದಿದ್ದಾರೆ. ಆ ಸಂಸ್ಥೆಯ ಉಪಯುಕ್ತತೆಯನ್ನು ಮನಗಂಡ ಪ್ರಗತಿಶೀಲ ದೇಶಗಳು ಸೊಕೊಲರನ್ನು ಕರೆದು ತಮ್ಮ ದೇಶಗಳಲ್ಲೂ ಅವರ ವ್ಯಾಯಾಮ ಕಸರತ್ತುಗಳ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ.

ಕಳೆದ ಗ್ರೀಷ್ಮಋತುವಿನಲ್ಲಿ ಪ್ರಾಗಿನಲ್ಲಿ ವಿಜೃಂಭಣೆ- ಯಿಂದ ನೆರವೇರಿದ ಸೊ- ಕೊಲ್ ಕಾಂಗ್ರೆಸ್ಸು ಪರ- ದೇಶಗಳಿಂದ ಕಿಕ್ಕಿರಿದು ಬಂದ ಪ್ರೇಕ್ಷಕರ ಕಣ್ಣು- ಗಳನ್ನು ತಣಿಸಿತಲ್ಲದೆ ಆ ದಿನ ಝೆಕೊಸ್ಲೊವಾಕಿ- ಯದ ಒಕ್ಕಟ್ಟು ಮತ್ತು ಕಸುವುಗಳ ಮನವರಿಕೆ ಮಾಡಿಕೊಟ್ಟಿತು. ನವ- ಯುಗದ ಸ್ವಾತಂತ್ರ್ಯದ ಪ್ರಾಣವಾಯುವನ್ನು ಹೊ- ದಣಿ ಉಂಡ ಸೊಕೊಲ್ ತರುಣ ತರುಣಿಯರು ಊರ್ಧ್ವವದನರಾಗಿ ಕಾಂ- ಗ್ರೆಸ್ಸಿನ ಆಟಪಾಟ ಕಸರತ್ತು ವ್ಯಾಯಾಮಗ- ಳಲ್ಲಿ ಪಾಲುಗೊಳ್ಳುತ್ತಿದ್ದುದನ್ನು ಭಾರತೀಯರು ನೋಡಿದ್ದರೆ ಖಂಡಿತವಾಗಿಯೂ ಅವರ ಹೃದಯದಲ್ಲಿ ಸ್ವಾತಂತ್ರ್ಯದ ಪ್ರಖರಜ್ವಾಲೆಯು ಉರಿದೇಳದಿರುತ್ತಿರಲಿಲ್ಲ. ಜರ್ಮನ ಗುಡುಗಾಟವಾದಂದಿನಿಂದ ಸೊಕೊಲರ ಒಕ್ಕಟ್ಟು ಇನ್ನೂ ಗಟ್ಟಿಮುಟ್ಟಾದುದು ಮೊನ್ನಿನ ಕಾಂಗ್ರೆಸ್ಸಿನಲ್ಲಿ ಕಾಣುತ್ತಿತ್ತು.

ಝೆಕೊಸ್ಲೊವಾಕಿಯದ ಸೊಕೊಲ್ ತರುಣ ತರುಣಿಯರು ಕಾಂಗ್ರೆಸಿನ ಉತ್ಸವಗಳಲ್ಲಿ ಪಾಲುಗೊಳ್ಳಲು ಪ್ರಾಗಿನ ಮಾರ್ಗಗಳಲ್ಲಿ ಸಾಲುಗೊಂಡು ಹೆಜ್ಜೆ ಹಾಕುತ್ತ ನಡೆದಿರಲು ಅವರ ಚಿತ್ರ ವಿಚಿತ್ರ ಬಂಣದ ಉಡಿಗೆಯು ಪ್ರೇಕ್ಷಕರನ್ನು ಉತ್ಸಾಹಾನಂದಗಳಲ್ಲಿ ಮುಳುಗಿಸುತ್ತಿತ್ತು. ಅವರ ಮೊಗಗಳಲ್ಲಿ ಉಲ್ಲಾಸವು ನಲಿದಾಡುತ್ತಿತ್ತಲ್ಲದೆ 'ಜರ್ಮನರು ನಮ್ಮ ತಾಯ್ನಾಡಿಗೆ ಕೈಹಚ್ಚಬಾರದು' ಎಂದು ತಮ್ಮ ಪ್ರಜಾಧಿಪತ್ಯದ ಸರ್ವಾಧಿಕಾರಿಯ ಜಯಜಯಕಾರವನ್ನು ಹೆಜ್ಜೆ ಹೆಜ್ಜೆಗೂ ಮಾಡುತ್ತಿದ್ದರು. ಪ್ರಾಗಿನ ಹರವಾದ ಬೈಲಲ್ಲಿ ಒಂದೇ ಸಲಕ್ಕೆ ನಾಲ್ಕು ಲಕ್ಷ ಸೊಕೊಲರು ವಿವಿಧ ವ್ಯಾಯಾಮ, ಆಟ ಕಸರತ್ತುಗಳಲ್ಲಿ ಭಾಗ ವಹಿಸುತ್ತಿದ್ದ ನೋಟವು ಎಂತಹ ಜೆರಗು, ಎಂತಹ ಹುರುಪು, ಎಂತಹ ಸ್ವಾತಂತ್ರ್ಯದ ಬಯಕೆಯನ್ನು ಹುಟ್ಟಿಸುತ್ತಿತ್ತೆಂಬುದು ಅನುಭವದಿಂದಲೆ ತಿಳಿಯಬೇಕಾದುದು.

ನಮಗೂ ಸ್ವಾತಂತ್ರ್ಯ ಬೇಕು! ಭಾರತೀಯರಿನ್ನು ಹೆಚ್ಚು ಕಾಲ ಸ್ವರಕ್ಷಣೆಗಾಗಿ ವಿದೇಶೀಯ ಸ್ನಾಯುಗಳ ಕಸುವನ್ನು ಆಧರಿಸರು! ಜಾತಿ ಜನಾಂಗಗಳ ಭೇದದ ಭ್ರಮೆಯು ಈಗ ಚದರಬೇಕು! ಭಾರತೀಯರೆಲ್ಲ ಒಂದು!—ಎಂಬ ಭಾವನೆಯು ದೃಶ್ಯಪ್ರಪಂಚಕ್ಕಿಳಿಯಬೇಕಾದರೆ ನಮ್ಮಲ್ಲಿಯೂ ಒಂದು ಅಖಿಲ ಭಾರತೀಯ ಸೊಕೊಲದಂತಹ ಸಂಸ್ಥೆ ಬೇಕು. ನೈತಿಕ ಜೀವನ, ರಾಷ್ಟ್ರಸ್ವಾತಂತ್ರ್ಯದ ಹೆಗ್ಗುರಿಗಳನ್ನಿಟ್ಟುಕೊಂಡು ನಾವೂ ಮನುಷ್ಯರೆಂದು ಜಗಕ್ಕೆ ಸಿದ್ಧಪಡಿಸಿ ತೋರಿಸಬೇಕಾದರೆ ನಮ್ಮೆಲ್ಲರನ್ನು ಆತ್ಮೀಯರಂತೆ ಒಂದಾಗಿ ಪೋಣಿಸುವ, ನಮ್ಮ ಸಾಮರ್ಥ್ಯ, ಆತ್ಮವಿಶ್ವಾಸಗಳನ್ನು ಹೆಚ್ಚಿಸುವ ಒಂದು ಸಂಸ್ಥೆ ಬೇಕು.

ಜಾನಪದ ಪ್ರಣಯಕಥೆ ○ **ದೂ-ರ...ದೂ-ರ** ○ ಶ್ರೀ. ಬಸವರಾಜ ಕಟ್ಟೀಮನಿ

"ನಾ ಸಂಗಪ್ಪನ್ನ ಮಾಡಿಕೊಳ್ಳೂದಿಲ್ಲಾ" ಅಂತ ನೀಲಮ್ಮ ರಂಭಾಟ ಮಾಡಿದರ ಕೇಳೂವರು ಯಾರು? ಹಳ್ಳೀ ಹುಡುಗಿಗೆ ಹಕ್ಕು ಎಷ್ಟು ಇರತದಂಬೋದು ಎಲ್ಲರಿಗೂ ಗೊತ್ತು. ಆದರ ಹಳ್ಳೀ ಹುಡುಗಿಗೆ ಪ್ರೀತಿಯ ಮನಸ್ಸೂ ಇರತದಂಬೋದು ಆಕಿ ಮದವಿ ದಿವಸನs ಎಲ್ಲರಿಗೂ ತಿಳೀತು. ಸಂಗಪ್ಪ ಇತ್ತ ಸಿಂಗಾರಾಗಿ ಕುಂತ! ಅತ್ತ ಚನ್ನ-ನೀಲಿ ಎಲ್ಲಿ .. .. ಮಟಾಮಾಯವಾದರು? .. ..

★

ಶಂಕ್ರಪ್ಪನವರ ಆ ಮಾತು ಕೇಳಿದ ಕೂಡಲೆ ಚೆನ್ನನ ತಲೀ ಗರಾಗರಾ ತಿರುಗಿದಂಗಾತು. ಎದುರಿಗಿ ಸೂರ್ಯ ಕಣ್ಣು ಕುಕ್ಕು ಹಾಗ ಹೊಳೀತಿದ್ದರೂ ಅವನ ಕಣ್ಣಿನ ಮುಂದ ಕರೀ ಕತ್ತಲೆ ಕವಿದ ಹಾಗಾತು. ಎಂಟೂ ದಿಕ್ಕೂ—ಬವ್‌ವ್‌ವ್‌ವ್—ಅಂತ ಅಣಕಿಸಿದ ಹಾಗನ್ನಿಸಿತು ಚೆನ್ನಗ.


"ನೀಲಾನ ಸಂಗಡ ಇನ್ನೊಮ್ಮೆ ಮಾತಾಡಬ್ಯಾಡಾsss!"

"ಅಯ್ಯೋsss" ಅಂತ ಮನಸ್ಸಿನಲ್ಲೇ ಅತ್ತುಬಿಟ್ಟ ಚೆನ್ನ.

ಕೆಳಗ ಹಾಕಿದ ಮೋರೆ ಹಾಗs ಕೆಳಗs ಇತ್ತು. ಚೆನ್ನ ಮಾರೀ ಎತ್ತಿ ಶಂಕ್ರಪ್ಪನವರನ್ನ ನೋಡೂ ಧೈರ್ಯೇ ಮಾಡಲಿಲ್ಲ.

ಶಂಕ್ರಪ್ಪನವರು ಖಡಾಖಡಾ ಆಡುತ್ತಲೇ ಇದ್ದರು. "ನೀಲಾನ ಸಂಗಡ ಇನ್ನೊಮ್ಮೆ ಮಾತಾಡಬ್ಯಾಡಾsss!—ಆಕೀನ್ನ ಇನ್ನೊಮ್ಮೆ ಕಣ್ಣಹಚ್ಚಿ ನೋಡಬ್ಯಾಡಾsss!— ಆಕೀನ್ನ ಕಂಡು ಮಂಗ್ಯಾನ ಹಾಗ ಹಲ್ಲು ಕಿರೀಬ್ಯಾಡಾsss! ಏನಂದೆ? ತಿಳೀತೋ ಇಲ್ಲೋ ನಾ ಹೇಳಿದ್ದು?"

ಚೆನ್ನಗ ಅದು ಕೇಳಿಸಿತೊ ಇಲ್ಲೊ ಯಾರಿಗೆ ಗೊತ್ತು? ಕೇಳಿಸಿದ್ದರೂ ಅದರರ್ಥ ಅವನಿಗಾಗಿರಬೇಕಂತ ಯಾರು ಹೇಳೋರು?—ಮೂಕನ ಹಾಗ ಶಂಕ್ರಪ್ಪನವರ ಮಾತು ಗಳನ್ನೆಲ್ಲಾ ಕೇಳುತಾ ಕೆಳಗ ಮೋರೆ ಮಾಡಿ ನಿಂತಿದ್ದ.



ಅವರು ದೂರುವ ಜನರಿಂದ ದೂರ....ದೂರ ಹೋದರು.

"ನೀಲಾನ ಸಂಗಡ ಸಲಗೀ ಮಾಡಬ್ಯಾಡ. ಇಷ್ಟೇ ನಾ ನಿನಗ ಹೇಳೋದು!—ಈಗ ಆದದ್ದೆಲ್ಲಾ ಆಗಿ ಹೋತು. ಅದನ್ನೆಲ್ಲಾ ಮರತು ಬಿಡತೀನಿ. ಮೊದಲಿನ ಹಾಗs ನನ್ನ ಮನಿಯೊಳಗ ಇಟ್ಟುಕೋತೀನಿ. ಉಣ್ಣಾಕ-ತಿನ್ನಾಕ ಉಡಾಕ-ತೊಡಾಕ ಯಾವದಕ್ಕೂ—ಬ್ಯಾಡ—ಅನ್ನಾಕಿಲ್ಲ. ಆದರsss ಆದರsss ಇದೊಂದs ನಾ ನಿನಗ ಹೇಳೋದು. ನೀಲಾನ ಸಂಗಡ ಸಂಬಂಧ ಇಡಬ್ಯಾಡಾ—ಅಂತ!"

ಚೆನ್ನ ನಿಂತವ ಹಾಗs ನಿಂತಿದ್ದ. ಕೆಳಗಿಳಿಸಿದ ಮಾರೀ ಶಂಕ್ರಪ್ಪನವರು ಅಲ್ಲಿಂದ ಹೋಗುವವರೆಗೂ ಎತ್ತಲಿಲ್ಲ.

ಕಾಲಾಗಿನ ಮೆಟ್ಟು ಧಪ್ಪ್-ಧಪ್ಪ್—ಅಂತ ಅಪ್ಪಳಿಸುತಾ ಶಂಕ್ರಪ್ಪನವರು ಒಳಗ ಹೋದಾಗ ಸಾವಕಾಶವಾಗಿ ಮಾರೀ ಎತ್ತಿ ನೋಡಿದ ಚೆನ್ನ. ಅವನ ದಿಟ್ಟೀ ಒಳಗ ಕರುಣಾ ತುಂಬಿ ತುಳುಕುತಿತ್ತು.

"ನೀಲಾನ ಸಂಗಡ ಸಲಿಗೀ ಮಾಡಬ್ಯಾಡಾsss" ಹಾಯ್—ಅಂತ ಉಸಿರ್ಬಾಕಿದ ಚೆನ್ನ.

"ನೀಲಾನ ಸಂಗಡ ಮಾತಾಡಬ್ಯಾಡಾ .... ನೀಲಾನ ಸಂಗಡ ನಗಬ್ಯಾಡಾ....ಆಕೀನ್ನ ಇನ್ನೊಮ್ಮೆ ಕಣ್ಣ ಹಚ್ಚಿ, ನೋಡಬ್ಯಾಡಾ...ಮಂಗ್ಯಾನ ಹಾಗ ಹಲ್ಲ ಕಿರೀಬ್ಯಾಡಾ...sss"

ಎರಡೂ ಕಣ್ಣು ಎಲ್ಲಿಯೋ ಬಿಟ್ಟು ಚೆನ್ನ ಉದ್ಗಾರತೆಗೆದ.

" ಯಾಕ ? ಯಾಕ ? ಯಾಕ ? "

ಆದರು ಆವಗ ಉತ್ತರ ಕೊಡಾಕ ಅಲ್ಲಿ ಯಾರಿದ್ದರು?—ಅತ್ತ ಇತ್ತ ಹೊರಳಿ ನೋಡಿದ. ಹಳ್ಳೀ ಮಂದಿ ಎಲ್ಲಾ ತಮ್ಮತಮ್ಮ ಗಡಿಬಿಡಿಯಲ್ಲಿದ್ದರು. ಸುಗ್ಗೀ ಕಾಲ. ಯಾರು ಎತ್ತು ಹೊಡೆದುಕೊಂಡು ಹೊಲಕ್ಕ ಹೋಗುತಿದ್ದರ—ಇನ್ನಾರು ಜೋಳದ ಬೆಳೆ ಕೊಯ್ಯಲಿಕ್ಕಂತ ಕುಡುಗೋಲು ತೆಗೆದುಕೋಡು ಸಡಗರದಿಂದಾ ನಡೆದಿದ್ದರು. ಸಣ್ಣ ಹುಡುಗಿ ಒಂದು ಒಽಳೆ ಹುರುಪಿನಿಂದ ರೊಟ್ಟೆಗಂಟು ತಕ್ಕೊಂಡು ಹೊಲಕ್ಕ ಹೋಗುತಿತ್ತು. ಹೋಗುಹೋಗುತಾ ಉತ್ಸಾಹ ತಡೀದಽ ಆಕೀ ಬಾಯಿಂದ ಹಾಡೊಂದು ಹೊರಕ್ಕ ಬರುತ್ತಿತ್ತು.

" ಎಂಟದಿನಾ ಆತು ಈಗ
ನಾರಿನ್ನ ನಾರಿರಿರಿ....
ಇನ್ನ ಎಂಟು ದಿನಾ ಆದ್ರ
ಜೋಳಽಽದ ರಾಶಿಽಽ—
ನಾರಿನ್ನ ನಾರಿರಿರಿರಿ....ಽಽ
ಜೋಳಾದ ರಾಶಿಯಾದ್ರ
ಕೆಡಬಿನ ಊಟ....
ಹೋಳಿಗಿ ತುಪ್ಪ....
ಬೆಳಗಾವಿ ದಟ್ಟಿ
ಬಣ್ಣದ ಕುಬಸಾ !....
ನಾರಿನ್ನ ನಾರಿರಿರಿಽಽಽಽಽ "

ಚೆನ್ನ ಆಕೀ ಕಡೆ ನೋಡಿದ. ಎಷ್ಟೊಂದು ಆನಂದ ದಿಂದ ಹಾಡುತಾ ಹೋಗುತಿತ್ತು ಆ ಹುಡುಗಿ! ಆ ಹಾಡು ಆದರೂ ಆಕಿಗೆ ಯಾರು ಕಲಿಸಿದ್ದರೊ? ಹುರುಪೇ ಹಾಡಾಗಿ ಹೊರಬರುತಿತ್ತು ಆ ಹಳ್ಳೀ ಹುಡುಗೀ ಬಾಯಿಂದ! ಆಗಾಗ ಆಕಿ—"ನಾರಿನ್ನ ನಾರಿರಿರಿ...." ಅಂತ ತಾನಾ ಹೊಡಿಯೂವಾಗಂತೂ ಉಲ್ಲಾಸ ಆಕೀ ತುಟೀಮ್ಯಾಲ ಕುಣಿದಾಡುತಿತ್ತು. ಚೆನ್ನ ನಿಟ್ಟುಸಿರು ಹಾಕಿದ.

ಹಳ್ಳಿ ಎಲ್ಲಾ ಹುರುಪಿನಿಂದ ಹಾರಾಡೂ ಹಾಂಗಿತ್ತು. ಆದರಽ ಚೆನ್ನ? ಆತನ ಹೃದಯದಾಗ ಕಳವಳಾನಽ ಕಳವಳಾ ತುಂಬಿತ್ತು! ಬಸವಣ್ಣನ ಗುಡೀ ಮುಂದಿನ ಕಟ್ಟೀಮ್ಯಾಲ ಕೂತುಕೊಂಡಿದ್ದ ಹಾಗ ಚೆನ್ನಗ ತನ್ನ ಹಿಂದಿನ ಒಂದೊಂದಽ ಸಂಗತಿ ನೆನಪಾಗಿ ಕಣ್ಣೀರುದುರತೊಡಗಿದುವು.

—ತಾನು....ತನ್ನ ತಾಯಿ....ಆಗ ಎಷ್ಟೊಂದು ಸುಖ ದಾಗಿದ್ದೆವಲ್ಲ ತಾವಿಬ್ಬರು? ತಮ್ಮಿಬ್ಬರಿಗೂ ತಿಂದುಂಡು ಸುಖದಿಂದಿರುವಷ್ಟು ಇಟ್ಟು ಸತ್ತುಹೋಗಿದ್ದ ಅಪ್ಪ. ಅವ್ವ ತನ್ನ ಒಽಳೆ ಪ್ರೀತಿಯಿಂದ ಸಾಕಿ ಬೆಳೆಸಿದಳು. ಆದರ ಇನ್ನೂ ತಾನು ಎಂಟು ವರುಷದವನಿದ್ದಾಗಲೇ—ಹರಾ—ಅಂದುಬಿಟ್ಟಳು. ತಾ ಪರದೇಶಿಯಾದ....ಸೋದರಮಾವನ ಮನೀಹಿಡದ....ಸೋದರಮಾವ....ಸಾವಕಾರ ಶಂಕ್ರಪ್ಪ—ಆತನ ಮಗಳು ಆ ಚೆಲುವಿ ನೀಲಾ....

ಚೆನ್ನನ ವಿಚಾರ ಇನ್ನೊಂದು ರೀತಿಯಲ್ಲಿ ಸುರುವಾತು.

" ನೀಲಾ ಎಷ್ಟು ಚೆಲುವಿ ಹುಡುಗಿ! ಆಕಿಯ ಚೆಲ ವಿಗೂ ಗುಣಗಳಿಗೂ ಒಳ್ಳೆ ಜೋಡೀ ಕೂಡೇದಽ!—ಜೋಡಿ....ನನ್ನ ಮತ್ತ ನೀಲಾನ ಜೋಡೀ ಯಾಕ ಕೂಡ ಬಾರದು ?—ಹಾಯ ಹಾಯ! ಹ್ಯಾಗ ಕೂಡಬೇಕು, ಆ ದರಿದ್ರ! 'ಆಕಿ ಸಾವಕಾರನ ಮಗಳು' !—"

" ನೀಲಾನ್ನ ಕಣ್ಣಹಚ್ಚಿ ನೋಡಬ್ಯಾಡಽಽ—ಆಕೀ ಕೂಡಾ ಮಾತಾಡಬ್ಯಾಡಽಽಽ " ಅಂತ ಕಠೋರವಾಗಿ ಹೇಳಿ ಬಿಟ್ಟ ಶಂಕ್ರಪ್ಪಮಾವ! ಮಾವನೇ ಆವ?—ಸೋದರ ಮಾವನಂತೆ! ನೀಚ ಹೊಲೆಯ! ಆವಗ ಮನುಷ್ಯ ಆದರೂ ಅನ್ನಬೇಕೊ ಇಲ್ಲೊ ತಿಳೀದಾಗೇದಽ ನನಗ. ನೀಲಾನ—ಮತ್ತ—ನನ್ನ ಜೊತೀ ಹ್ಯಾಗ ಒಽಳೆ ಜೋಕಾಗಿ ಕೂಡ ತದಽ! ಆದರಽ ಆ ಮುದುವಗ ತೆರವಿನ ಆಶೆ ಗಂಟು ಬಿದ್ದಽದ. ಇಂದೋ ನಾಳೆಯೊ—ಹರಾ—ಅಂತ ಹೋಗಿ ಬಿಡೂ ಆ ಮುದುಕ ಆ ಸಂಗನ ಕಡಿಂದ ಎಂಟ್ನೂರು ರೂಪಾಯಿ 'ತೆರವ' ತಗೊಂಡು ನೀಲಾನ್ನ ಮಾರಬೇಕ ಬೇಕಂತಾನ! ಅಯ್ಯೊ, ಏನು ಮಾಡಲಿ? ಎಂಟ್ನೂರು ರೂಪಾಯಿ? .... ಒಂದಲ್ಲ .... ಎರಡಲ್ಲ .... ಮೂರಲ್ಲ—ಎಂಟ್ನೂರಽ ರೂಪಾಯಿ? ಎಲ್ಲಿಂದ ತರೂದು ಅಷ್ಟು ರೂಪಾಯಿಗಳನ್ನ? ತಂದರೂ ನೀಲಾನ್ನ—ನನಗ ಕೊಟ್ಟಾನಽ ಶಂಕ್ರಪ್ಪಮಾವ? "

ಒಂದು ಕ್ಷಣಾ ತಡದು ನಿಂತು ಏನೋ ಯೋಚಿಸಿದ ಚೆನ್ನ. ಮರುಕ್ಷಣದಾಗಽ ಖೊಖ್ಖೊ ಅಂತ ನಕ್ಕು ಬಿಟ್ಟ.

" ಒಂದು ಪೈ ಇಲ್ಲದ ಸ್ಥಿತಿ ನನ್ನದು! ಅಪ್ಪ ಗಳಿಸಿದ ಆಸ್ತಿ ಎಲ್ಲಾ ಅವ್ವ ಸತ್ತಾಗಲೇ ಹಾಳಾಗಿ ಹೋತು. ಹೀಗ ನಾನು ?....ಪರದೇಶಿ.... ಪರದೇಶಿ....ಗತಿಯಿಲ್ಲದ ಭಿಕಾರಿ! ನಿರ್ಗತಿಕ—ಹೊಟ್ಟೆಗಾಗಿ ಸೋದರಮಾವನ ಬೆನ್ನುಬಿದ್ದ ನಿರ್ಗತಿಕ—ಛಿ! ಸುಡಲಿ ನನ್ನ ಬಾಳುವೆ!—ನಾನು ಮೆಚ್ಚಿದ ಹೆಣ್ಣಿನ್ನ ಮದುವೆಯಾಗಬೇಕಂದರ ಆಗವೊಲ್ತು? ಸೋದರ ಮಾವನಽ ತನ್ನ ಅಳಿಯನಾದ ನನಗ ಮಗಳನ್ನ ಕೊಡದ ಇನ್ನಾರಿಗೋ ಕೊಡಬೇಕಂತಾನ. ಹಾಳಾಗಲಿ!....ಎಲ್ಲಾ

ಹಾಳು ಹಾಳು....ನಾನೇ ಇಲ್ಲಿ ಇರಬಾರದು....ಎಲ್ಲಾ ದ್ಭೂರ ಹೊರಟು ಹೋಗಿ ಬಿಡಬೇಕು. ದೂರ....ದೂರ....ಹೋಗಬೇಕು...."

ಒಳಿ ಆವೇಶದಿಂದ ಎದ್ದು ಬಿಟ್ಟ ಚೆನ್ನ. ಆದರ ಎಲ್ಲಿಗಿ ಹೋಗಬೇಕು, ಏನು ಮಾಡಬೇಕು—ಅಂಬೂದು ತಿಳೀಲಿಲ್ಲ ಅವಗ. ನೆತ್ತೀ ಮ್ಯಾಲ ಉರೀತಿದ್ದ ಸೂರ್ಯನ ಕಡೆ ತೀಕ್ಷ್ಣ ದಿಟ್ಟೀ ಬಿಟ್ಟು ಒಂದು ನಿಟ್ಟುಸಿರು ಹಾಕಿದ. ಮೆಲ್ಲಮೆಲ್ಲಗ ಹೆಜ್ಜೀ ಕಿತ್ತಿ ಕಿತ್ತಿ ಇಡತಾ ಮೊಟ್ಟೀ ಬಾವಿ ಕಡೆ ಸಾಗಿದ.

ತೋಟದಾಗ ಕಬ್ಬು ಎತ್ತುಗೈಮುಟ ಬೆಳೆದಿತ್ತು. ಬದಿಯಲ್ಲೇ ಮೊಟ್ಟೀಬಾವಿ. ಮಾವಿನ ಗಿಡದ ನೆರಳಾಗ ಎತ್ತುಗಳು ಶಾಂತವಾಗಿ ಮೆಲುಕು ಹಾಕುತಾ ನಿಂತಿದ್ದುವು. ಚೆನ್ನ ಅವುಗಳ ಹತ್ತಿರ ಹೋಗಿ ಮೆಲ್ಲಗss ಅವುಗಳ ಮೈಸವರುತಾ ಮೂಕಸ್ವರದಾಗ ಮಾತನಾಡಿದ.

"ಬಸವಣ್ಣನ ಅವತಾರ ಅಂತಾರ ನಿಮುಗ! ಬಸವಣ್ಣಗಳಿರಾ, ಹೇಳ್ರಿ! ನನಗೂ ನೀಲಾಗೂ ಒಳೆ ಚೆಲೊ ಜೋಡೀ ಕೂಡೇದss—ನಾ ಯಾಕ ಆಕೀನ್ನ ಮದುವೀ ಮಾಡಿಕೋಬಾರದು? ನೀಲಾ ನನ್ನಾಕೆ ಯಾಕ ಆಗಬಾರದು? ಹೇಳ್ರಿ! ಯಾಕ? ಯಾಕ?...."

ಎತ್ತುಗಳಿಂದ ಅವನ ಮಾತಿಗೆ ಉತ್ತರ ಸಿಗಲಿಲ್ಲ. ಚೆನ್ನ ಮೌನವಾಗಿ ಹರಿಯುತ್ತಿದ್ದ ಹಳ್ಳದ ಕಡೆ ದಿಟ್ಟಿ ಹಾಕಿದ. ಏಕೊ ಏನೊ ಅವನ ಮನಸ್ಸಿನಲ್ಲಿ ಎಲ್ಲಿಲ್ಲದ ಹುರುಪು ತುಂಬಿತು.

ಬಾವಿಗೆ ನೀರು ತಿರುಗಿಸಬೇಕಂತ ದೊಡ್ಡ ಒಡ್ಡು ಹಾಕಿತ್ತು ಹಳ್ಳಕ್ಕ. ನೀರೆಂನೋ ಬಾವಿಗೆ ಬರುತ್ತಿದ್ದರೂ ಒಡ್ಡು ಒಡೆದು ಒಡೆದು ಹರಿದು ಹೋಗಬೇಕಂತ ಪ್ರಯತ್ನ ನಡಿಸಿಯೇ ಇತ್ತು!

ಹಾ! ಅಂತ ಆನಂದ ತುಂಬಿದ ಉಸಿರ್ಲಾಕಿದ ಚೆನ್ನ. ನೀಲಾನ್ನ ಯಾರು ಕರದೊಯ್ತಾರ ನೋಡ್ತೀನಿ!—ನಮ್ಮಿಬ್ಬರ ಪಿರೀತಿಗೆ ಯಾರು ಒಡ್ಡು ಹಾಕ್ತಾರೊ ಹಾಕಲಿ....ಅವರನ್ನೆಲ್ಲಾ ಹೀಂಗs ಹೊಡೆದು ಹಾಕಿ........"

ಆವೇಶದಿಂದ ಚೆನ್ನ ತನ್ನ ಎದೀ ತಟ್ಟಿಕೊಳ್ಳಲಿಕ್ಕೂ ಒಡ್ಡಿನ ನಡುವೆ ಸಣ್ಣ ತೂತು ಬಿದ್ದು ನೀರು ಭರಾಭರಾ ಹರಿದು ಹೋಗಲಿಕ್ಕೂ ಗಂಟೀ ಬಿತ್ತು! ಚೆನ್ನ ಹಾಗs ನೋಡುತಾ ನಿಂತಿದ್ದ. ನೀರೆಲ್ಲಾ ಹರಿದು ಹೋಗುತಿತ್ತು. ಸಂಜೆಗೆ ಮೊಟ್ಟೆ ಹೊಡೀಬೇಕಾದದ್ದ ನೀರು ಸಿಗುವಂತಿರಲಿಲ್ಲ. ಶಂಕ್ರಪ್ಪನವರು ತನ್ನನ್ನ ಏನೂ ಉಳಿಸಾ

ಕಿಲ್ಲ....ಸಲಿಕೀ ತಗೊಂಡು ಮತ್ತ ಒಡ್ಡ ಕಟ್ಟಬೇಕಂತ ಒಮ್ಮೆ ಅವನ ಮನಸ್ಸಿನಲ್ಲಿ ಬಂತು. ಆದರ ಅದೆಷ್ಟು ಹೊತ್ತು! ಮರುಕ್ಷಣಕ್ಕss ಅದು ಹಾರಿ ಹೋತು. ಅವನ ಮನಸಿನಾಗ ಎಂತೆಂತಾ ಸುಖದ ವಿಚಾರಗಳು ಸುಳಿದು ಹೋಗುತಿದ್ದುವೂ ಅವಗs ಗೊತ್ತು. ನಿಂತವ ಹಾಗs ನೆಟ್ಟ ದಿಟ್ಟಿಯಿಂದ ಭೋರಂತ ಹರೀತಿದ್ದ ನೀರು ನಿಟ್ಟಿಸುತ್ತಾ ನಿಂತು ಬಿಟ್ಟಿದ್ದ.

[೨]

"ನೀಲಾನ ಸಂಗಡ ಮಾತಾಡಬ್ಯಾಡಾ" ಅಂತ ಶಂಕ್ರಪ್ಪನವರು ಕಟ್ಟುನಿಟ್ಟಾಗಿ ಹೇಳಿದ್ದರೂ ಹಳ್ಳಕ್ಕ ನೀರಿಗಂತ ನೀಲಾ ಬಂದಾಗ ದನದ ಮೈ ತೊಳೀತಿದ್ದ ಚೆನ್ನ ಆಕೀನ ಕಂಡವನss ಮಾತಿಗಿ ಮೊದಲು ಮಾಡಿದ.

"ನೀಲಾ, ನೀಲಾ."

ಬಗಲಾಗಿದ್ದ ಕೊಡಾ ಹಾಗs ಇಟುಕೊಂಡು ಬಲಗೈ ಬೆರಳು ಗಲ್ಲದ ಮ್ಯಾಲ ಕುಣಿಸುತಾ ಕೇಳಿದಳು ನೀಲಾ.

"ಏನು ಚೆನ್ನಾ?"

"ಏನಂತ ಕೇಳ್ತೀಯಾ ನೀಲಾ! ನಿನ್ನೆ ನಡೆದ ಸಂಗ್ತಿ ನಿನಗಿನ್ನೂ ಗೊತ್ತಾಗಿಲ್ಲss ಹಾಗಾದರss?"

ಕೊಡಾ ತೆಗೆದು ಕಲ್ಲಿನ ಮೇಲಿಡುತಾ ನೀಲಮ್ಮ ಹೇಳಿದಳು.

"ಗೊತ್ತಾಗದೇನು ಮಾಡೀತು? ಅಪ್ಪ ಬಾಗಿಲನಾಗ ನಿಂತು ಖಡಾಖಡಾ ಆಡಿದ್ದೆಲ್ಲಾ ಮರೀಗೆ ನಿಂತು ಕೇಳಿದೆ ನಾನು. —ನನ್ನ ಗೂಡ ಮಾತಾಡಬಾರ್ದು. ಕಣ್ಣ ಹಚ್ಚಿ ನೋಡಬಾರ್ದು—ಸಲಿಗೀ ಮಾಡಬಾರ್ದು—ಇಷ್ಟ ಸಿಟ್ಟು ಬಂದಿತ್ತ ನನಗ ಅಪ್ಪನ ಮ್ಯಾಲ! ಆಗss ಮನೀ ಬಿಟ್ಟು........"

ನೀಲಾ ಯಾಕೋ ತಡದು ನಿಂತಳು. ಆಗss ಮನೀ ಬಿಟ್ಟು!....

ಛೇ! ಇಂತಾ ಮಾತು ಆಡಬಾರದಾಗಿತ್ತು ತಾನು ಅಂತ ನಾಲಗೀ ಕಚ್ಚಿಕೊಂಡಳು....!

ಸುತ್ತಮುತ್ತ ಯಾರಾದರೂ ಇದ್ದಾರೋ ಅಂತ ದಿಟ್ಟೀ ಬಿಡುತಾ ಚೆನ್ನ ಮೆಲ್ಲಗss ಕೇಳಿದ....

"ಆಗss ಮನೀ ಬಿಟ್ಟು....? ಏನ ಮಾಡಬೇಕಂತ ಮಾಡಿದ್ದೆ?"

ಅವನ ದನಿಯಾಗ ನಡುಕ ತುಂಬಿದ ಹಾಗಿತ್ತು. ಯಾವುದೋ ಒಂದು ಸಂಶಯ ಆತನ ಮನಸಿನಾಗ ಬಂದು ಎದೀನ್ನ ನಡುಗಿಸಿ ಬಿಟ್ಟಿತು.

" ಮತ್ತೇನಿಲ್ಲ ಚೆನ್ನಾ....ನೀ ಏನೂ ತಿಳುಕೋ ಬ್ಯಾಡ....ಆದರsss....ಆದರsss ..."

" ಏನು ಹೇಳು ನೀಲಾ....ಹೇಳು....ಆದರss ಏನು ? " ಚೆನ್ನ ಕಾತರನಾಗಿ ಕೇಳಿದ.

" ಏನೂ ಅಂದರಽsss " ನೀಲಾ ಮತ್ತ ತಡದು ನಿಂತಳು. ಆಕಿಯ ನಾಲಗಿ ಏನೋ ಹೇಳಬೇಕಂತ ಬಹಳ ಇಚ್ಛಿಸುತಿತ್ತು. ಆದರs ಉಕ್ಕಿ ಬಂದ ಆವೇಗ ಅದನ್ನ ಒಳ ಒಳಗs ತಡೀತಿತ್ತು....ನೀಲಾನ ಕಣ್ಣುಗಳಿಂದ ಒಂದೆ ರಡು ಹನಿ ನೀರುಗಳೂ ಉದುರಿದುವು. ಆಕೆ ಒಳ್ಳೆ ಕಷ್ಟ ದಿಂದ ಹೇಳಿದಳು.

" ಚೆನ್ನಾ, ನಿನಗ ನನ್ನ ಕೊರಳಾಣೆ. ನನ್ನ ಬಿಟ್ಟು ನೀ ಎಲ್ಲಿಗೂ ಹೋಗಬ್ಯಾಡಾss ! ಏನೇ ಆದರೂ ಇಬ್ಬರೂ ಒಬ್ಬರೊಬ್ಬರನ್ನ ಬಿಟ್ಟು ಇರೂದು ಬ್ಯಾಡ....ಮತ್ತsss.... ಅಂತಹಾ ಪರಸಂಗ ಬಂತೂ ಅಂದರ....ಇವರನೆಲ್ಲಾ ಒದ್ದು ದೂರ ಹೋಗೋಣ. ದೂರ ದೂರ ದೂರ ಹೋಗೋಣ.... ಆದರs ಅಲ್ಲೀ ತನಕಾ ನೀ ನನ್ನ ಬಿಟ್ಟು ಎಲ್ಲಿಗೂ ಹೋಗ ಬ್ಯಾಡಾ....ಹೇಳು....ಹೋಗೂದಿಲ್ಲ ?....ಇಲ್ಲ ?.... "

ಚೆನ್ನ ಉತ್ತರ ಕೊಡುವಂತಾ ಸ್ಥಿತಿಯಲ್ಲಿ ಎಲ್ಲಿದ್ದ ? ಆದರs ಆಕೀನ್ನ ಸೆಳದು ತೋಳಿನಾಗ ಹಿಡಿದು ಗುಲಾಬೀ ಬಣ್ಣದ ಗಲ್ಲದ ಮ್ಯಾಲ ಮೆಲ್ಲಗs ಒಂದ ಮುತ್ತು ಕೊಟ್ಟ. ನಾಲ್ಕೂ ಕಣ್ಣು ಒಂದs ಕಡೆ ಸೇರಿದುವು. ಎರಡೂ ದೇಹ ಒಂದs ಕಡೆ ಸೇರಿದುವು.

ಒಬ್ಬರು ಇಬ್ಬರಾದರು. ಇಬ್ಬರು ಒಂದಾದರು.

ಹಳ್ಳ ಭೋರಂತ ಹರಿದು ಹೋಗುತಿತ್ತು....

ಸಣ್ಣ ಸಣ್ಣ ಸುಂದರ ಮೀನುಗಳು ಇವರಿಬ್ಬರು ಒಂದಾ ಗೂದನ್ನ ಕಂಡು ಆನಂದದಿಂದ ಹಾರಾಡುತ್ತಿರೂ ಹಾಗ ಕಾಣಿಸುತಿತ್ತು. ದೂರದಾಗ ಹಸಿರು ಹುಲ್ಲು ಮೇಯುತಾ ನಿಂತಿದ್ದ ಆಕಳಕರ ಒಂದು ಇದs ಕಾಲಕ್ಕs ಮೇಯೂ ದನ್ನ ಬಿಟ್ಟು ಇತ್ತs ನೋಡಿ ಕಣ್ಣರಳಿಸುತಿತ್ತು.

ಆಗ ತಾನs ಮುಗಿಲಿಗೇರಿ ಮೋಡಗಳನ್ನೆಲ್ಲಾ ಚದರಿಸು ತಿದ್ದ ಸೂರ್ಯಾ ಇವರ ಕಡೆ ನೋಡಿ ಮುಗುಳು ನಗೀ ನಗುತಿದ್ದ ಹಾಗಿತ್ತು !

[೩]

ಕೊನೀಗೆ ಆ ದಿನಾನೂ ಬಂದೇ ಬಿಟ್ಟಿತು. ನೀಲಮ್ಮ— ನಾ ಸಂಗಪ್ಪನ್ನ ಮಾಡಿಕೊಳ್ಳೂದಿಲ್ಲ—ಅಂತ ಅತ್ತು ಕರೆದು ರಂಭಾಟ ಮಾಡಿದರೂ ಕೇಳೋರಾರು ? ಹಳ್ಳಿ ಯಲ್ಲಿ ಹೆಣ್ಣುಹುಡುಗಿಗೆ ಎಷ್ಟು ಹಕ್ಕು ಇರತದಂಬೋ ಎಲ್ಲಾರಿಗೂ ಗೊತ್ತs ಅದ ! ಆದರಾಗ ಶಂಕ್ರಪ್ಪನಂ ರಂತಾ ಕಠೋರ ಹೃದಯದ ಮನುಷ್ಯನ ಮಗಳು ನೀಲಾ ! ಪಾಪ ! ಆಕೀದೇನು ನಡೀಬೇಕು ? ಆಕೆ ಗಾಗಿ ಆರಿಸಿದ್ದ ಗಂಡನೊ ಗಂಡುಸೇ ಆಗಿರಲಿಲ್ಲ. ಗಂಡುಸಂತ ಕರೆಯೂ ಅವರೂ ಮೂರ್ಖರಂತs ಬೇಕು ! ಜಟ್ಟಿ ಹಾಗಿದ್ದ ಚೆನ್ನ ! ಡೊಳ್ಳುಗಡದಂತ ಸಂಗಣ್ಣ—ಚೆಂದ್ರಾಮನ ಹಾಗಿದ್ದ ಚೆನ್ನ ! ಡೊಂಕು ಮೂಗಿನ ಉಬ್ಬಿದ ಬಾಯಿಯ ಕಡ್ಡಿಯಂತಹ ಕೈಕಾಲಿನ ಸಂಗಣ್ಣ ! ಬರೀ ರೂಪವನ್ನs ನೋಡುತ್ತಿರಲಿಲ್ಲ ನೀಲಾ ಆದರs ಗಂಡೆ ಅಂದ ಬಳಿಕ ಅವ ಗಂಡುಸಾದರೂ ಬೇಕೋ ಇಲ್ಲವೋ ? ಅದೂ ಇಲ್ಲ. ಗುಡೀ ಮುಂದ ಇಟ್ಟಿದ್ದ ಒಂದು ಸಣ್ಣ ಗುಂಡು ಎತ್ತಲಾಗಲಿಲ್ಲ ಒಂದು ರೊಟ್ಟೀ ತಿನ್ನಬೇಕಾದರ ಸಾಕುಸಾಕು ಹೋಗೂದೂ ಅವಗ ! ಗೌಡರ ಮನೆಯ ನಾಯಿ ದನ್ನ ಕೇಳಿದ·ಈ ಬಹಾದ್ದೂರ ಮನೀ ಬಿಟ್ಟು ಬೇಕಾದರ ಹೆದರಿದ ! ಇಂತವನ್ನ ಮದುವೀ ಕೊಳ್ಳೋದು ! ಒಲ್ಲೆನಮ್ಮಾ ಒಲ್ಲೆ ಅಂತ ನೀಲಾ ಹೇಳಿದರೂ ಯಾರೂ ಕೇಳಲಿಲ್ಲ. ನೀಲಾ ಸುಮ್ಮನ ದಕ್ಕೂ ಒಪ್ಪಬೇಕಾತು. ಮನಸಿನಾಗs ಆಕಿ ಯೋಚನಾ ಮಾಡಿಟ್ಟಿರಬೇಕು ! ಎಲ್ಲಾದಕ್ಕೂ ವಾಗಿ ಸಿದ್ಧಳಾಗಿದ್ದಳು. ಅಕ್ಕೀಕಾಳು ಬೀಳುವ ....ಊರಾಗ ಒsಳೆ ಗಲಾಟೆ ನಡೆದಿತ್ತು. ಸುತ್ತಮುತ್ತ ಹತ್ತು ಹಳ್ಳೀ ಜನಾ ಎಲ್ಲಾ ಸೇರಿತ್ತು. ಹೋಳಿಗಿ ಶಾವಿಗಿ ಪಾಯುಸ, ಒಂದೊಂದs ಜೀನಸು ತಯಾರಾ ತಿತ್ತು—ಸಾವಿರಾರು ಮಂದಿ ಉಂಡುತಿಂದು ತೇಗುತ್ತ ಆದರs ಚೆನ್ನ?....ಅವ ದನದ ಹಕ್ಕೀ ಒಳಗ ದಿನ್ನೆ ಸ್ಥಳದಾಗ ಹರಕು ಗೋಣೀ ತಟ್ಟಿನ ಚೀಲ ಬಿದ್ದವ ಹಾಗs ಬಿದ್ದಿದ್ದ. ಹೊರಗ ಮದಿವೀ ದಾಗ ಸಂಭ್ರಮ ನಡದಿದ್ದರ ಇವನ ಹೊಟ್ಯಾಗ ಕುದೀತಿತ್ತು. ಹೊರಗ ಬಜಂತ್ರಿ ಬಾರಿಸಿದಾಗೆಲ್ಲಾ ಎದೀ ಗಡಗಡ ನಡುಗತಿತ್ತು.—ನೀಲಾ ನನ್ನ ಕೈಬಿಟ್ಟ ಆಕಿ ಇನ್ನ ಬೇರೆಯವರ ' ಆಕಿ ' ಆದಳss!— ವಿಚಾರ ಆದರೂ ಅದs ನೂರಾರು ಸೋಗು ಎದೀ ಇರೀತಿತ್ತು....ಜನಾ ಓಡಾಡುತಿತ್ತು. ಮಂದಿ ಉಂಡುತಿಂದು ತೇಗಿ ತಮಾಷಾ ಮಾಡು ಆದರs ಇವನ್ನ ಮಾತಾಡಿಸೋರು ಯಾರೂ

ಒಬ್ಬನs ಒಬ್ಬ!....ಆ ಹಕ್ಕೀ ಒಳಗ ಬಿದ್ದಿದ್ದ. ಇಲ್ಲಾಂದರs ಮಲುಕು ಹಾಕುತಿದ್ದ ಆ ಮೂಕಪ್ರಾಣಿಗಳಷ್ಟು !

—ಜಗತ್ತಿನಾಗ ತನ್ನವರನ್ನೂ ಅವರು ಯಾರೂ ಇಲ್ಲ?—ಇಲ್ಲ? ಇಲ್ಲ ?—

ಚೆನ್ನನ ಕಣ್ಣಿಂದ ನೀರುರುಳುತಿದ್ದುವು ಈ ವಿಚಾರದ ಜೊತೆಗೆ. ಅವನ್ನ ತನ್ನ ಹರಕು ರುಮಾಲಿನ ಸೆರಗಿನಿಂದ ಒರೆಸಿಕೊಂಡು ಚೆನ್ನ ಮತ್ತ ವಿಚಾರ ಮಾಡತಿದ್ದ.

"ಇಲ್ಲ ?....ಛೆ ! ಇದಾರ ಇದಾರ...."

ಆಶೆಬುರುಕ ಮನಸ್ಸು ಸಾವಕಾಶ ಹೇಳುತಿತ್ತು. "ನೀಲಾ ! ಎಲ್ಲಾರೂ ನಿನ್ನ ಕೈಬಿಟ್ಟರೂ ಆಕಿ ಬಿಡೋದಿಲ್ಲಾ! ನೀಲಾ! ನಿನ್ನ ನೀಲಾ! ಆಕೆ ನಿನ್ನಾಕೇ ಆಗುತಾಳ! ಮರೀಬ್ಯಾಡಾ.... ಅಂದು ಹಳ್ಳದ ದಂಡ್ಯಾಗ ನೀಲಾ ಅಳುತಳುತಾ ಹೇಳಿದ ಸಂಗತಿ....ಏನೇ ಆದರೂ ಇಬ್ಬರು ಕೂಡೇ ಇರೋದು ! ಊಂ...."

ಚೆನ್ನಗ ನಗೀ ಬಂತು !

—ಇಂದs ಬೀಳೋದು ಅಕ್ಕೀಕಾಳು !—ಇಂತಾದರಾಗ ಏನು ಸಿಗತಾಳು ನನಗ ನೀಲಾ ?—ಮನಿಯಾಗ ಜನರ ಗಲಾಟೀನೇ ಗಲಾಟಿ ! ಇಂತಾದರಾಗ ಆಕಿ ನನ್ನ ಹತ್ತರ ಬರೋದು ಹ್ಯಾಗ ? ನಾವಿಬ್ಬರೂ ಕೂಡೋದು ಹ್ಯಾಗ ? ದೂರ—ದೂರ—ಹೋಗೋದು ಹ್ಯಾಗ? ಹೋಗಿ ಮಾಡೂದೇನು ? ಪೋಲೀಸರು ಹಿಡಿದುಬಿಟ್ಟರs ಆ ಮ್ಯಾಲ ಎಲ್ಲಾ ಫಟ್‌ಫಜೀತಿ !....ಹುಚ್ಚು ವಿಚಾರ ಆತು ಎಲ್ಲಾ ! "

ವಿಚಾರದ ಕೊನಿಯಲ್ಲೇ ಒಂದು ದೊಡ್ಡದಾದ ನಿಟ್ಟುಸಿರು ಹಾಕಿದ ಚೆನ್ನ.

ಇಲ್ಲಿ....ಈ ದನದ ಹಕ್ಕೀಲಿ ಹೀಂಗ ಈತ ನಿಟ್ಟುಸಿರು ಹಾಕುತಿದ್ದರ....

ಅಲ್ಲಿ....ಒಳಗ ಹೊಸಾ ಸೀರಿ ಉಟ್ಟು ಬಂಗಾರದ ಆಭರಣಾ ಹಾಕಿಕೊಂಡು ಹೂವಿನ ದಂಡೀ ಕಟಕೊಂಡು ಅರಿಸಿಣಾ ಬಳಿದುಕೊಂಡು ನೀಲಾ ನಿಟ್ಟುಸಿರು ಬಿಡುತಾ ಕೂತಿದ್ದಳು ಹೆಂಗುಸರ ಗುಂಪಿನೊಳಗ.

ಹೆಣಕ್ಕ ಶೃಂಗಾರ ಮಾಡಿದ ಹಾಗ ತನ್ನ ಶೃಂಗಾರ ಮಾಡಿ ಇನ್ನ ಸುಡುಗಾಡಗಟ್ಟಿ ಸಂಗಪ್ಪನ ಗೋರಿಗಿ ಒಯ್ಯುತಾರ—ಅಂತ ನಡುಗತಿದ್ದಳು ನೀಲಾ. ಆದರೂ ಎಂತಹದೋ ಒಂದು ವಿಚಾರ ಆಗಾಗ ಸುಳಿದಾಡಿ ಬಾಡಿ ಬತ್ತಿ ಹೋದ ಆಕೀ ಮೊಗದ ಮ್ಯಾಲ ಸ್ವಲ್ಪ ಉಲ್ಲಾಸ ಕುಣೀತಿತ್ತು.

[೪]

ಸರಿರಾತ್ರಿಯಾಗಿತ್ತು...ಮದುವಿಗಿ ಬಂದ ಮಂದಿ ಎಲ್ಲಾ ಸಿಕ್ಕಸಿಕ್ಕಲ್ಲೇ ಮಲಗಿ ನಿದ್ರಾದೇವಿಯನ್ನಪ್ಪಿಕೊಂಡು ಬಿಟ್ಟಿದ್ದರು....

....ಒಮ್ಮಿಂದೊಮ್ಮೆಲೆ ಗಲಾಟೆಯಾಯಿತು. ಮದುವಣಗಿತ್ತಿ ಇಲ್ಲಾ ಅಂತ !....ಹಾ....ಹಾ...ಹಾ...ಅನ್ನುದರಾಗ ಎಲ್ಲಾ ಜನರೂ ನಿದ್ರಾದೇವಿನ್ನ ದೂರ ಸರಿಸಿ ಎದ್ದುಬಿಟ್ಟರು. ಮದಿವೀ ಮಂಟಪದಾಗೆಲ್ಲಾ ಹಾಹಾಕಾರಕ್ಕ ಮೊದಲಾತು—ನೀಲಾ....ಇಲ್ಲ....ನೀಲಾ ಇಲ್ಲ....ಅಂತ ಬೊಬ್ಬೆ ! ನೀಲಾ ಎಲ್ಲಿ ಹೋದಳು ? ಏನಾದಳು ?.... ಯಾರಿಗೂ ಅದರುತ್ತರಾ ಕೊಡಾಕಾಗಲಿಲ್ಲ. ಬಾವಿ-ಕೆರೆ ಹಳ್ಳ-ಕೊಳ್ಳ ಎಲ್ಲಾ ತಿರುವಿಹಾಕಿದರು. ನೀಲಾ ಇಲ್ಲ.... ಶಂಕ್ರಪ್ಪನವರೂ ಅವರ ಹೆಂಡ್ತಿಯೂ ಎದೀ ಬಡಕೊಂಡರು. ಮದುವಿ ಅಲ್ಲಿಗೇ ಮುಗಿದುಹೋಯಿತು. ಸಂಗಪ್ಪ ಇವರನೆಲ್ಲಾ ಉದ್ಧಾರ ಮಾಡುತಾ ಮರುದಿನ ಬೆಳಗಾಗುತ್ತಲೇ ಊರಿಗೆ ನಡೆದುಬಿಟ್ಟ ತನ್ನ ಜನರ ಜೊತೆಗೆ....ಸುದ್ದಿ ಎಲ್ಲಾ ಕಡೆಗೂ ಹಬ್ಬಿತು. ನೀಲಾ ಮಟಾಮಾಯವಾದಳು ಅಂತ ಊರೂರಿಗೆ ಸುದ್ದಿ ಹಬ್ಬಿದ ಹಾಗ ಶಂಕ್ರಪ್ಪನವರ ಎದೀ ಕುದಿತ ಹೆಚ್ಚೆಚ್ಚಾಗುತ್ತ ಹೋತು. ಪೋಲೀಸರಿಗೆ ತಿಳಿಸಬೇಕು ಅಂತಲೂ ಅವರ ಮನಸ್ಸಿನಾಗ ಬಂದಿತ್ತು ಆದರೂ ಅದರಿಂದ ಮರ್ಯಾದೆ ಇನ್ನೂ ಕಳದುಹೋಗಬಹುದು ಅಂತ ಅಷ್ಟಕ್ಕs ಬಿಟ್ಟುಕೊಟ್ಟರು. ಎಲ್ಲಾರ ಸಂಶಯವೂ ಚೆನ್ನನ ಮ್ಯಾಲs ಇತ್ತು. ಚೆನ್ನನೂ ಅದs ರಾತ್ರಿ ಮಟಾಮಾಯಾಗಿಬಿಟ್ಟಿದ್ದ.

ಊರಾಗಿನ ಹೆಂಗುಸರಿಗೆ ನಾಲ್ಕಾರು ತಿಂಗಳ ವರೆಗೆ ಒಂದs ವಿಷಯ ಹರಟೆಗೆ ಸಾಕಾಗಿತ್ತು.

—ಶಂಕ್ರಪ್ಪಸಾವಕಾರ್ರ ನೀಲಿ, ಚೆನ್ನನ ಜೊತಿಗೆ ಓಡಿ ಹೋದಳು !—ಇದs ಆ ವಿಷಯ.

* * *

ಚೆನ್ನ-ನೀಲಾ—ಎಲ್ಲಿ ಹೋದರು ? ಏನ ಮಾಡುತಿದ್ದರು?....

ಅದೆಲ್ಲ ಯಾತಕ್ಕ ಬೇಕು ನಮಗ ?—

ಅಂತೂ—ಆ ದಿನ ಹಳ್ಳದ ದಂಡೀಮ್ಯಾಲ ನೀಲಾ ಆಡಿದ ನುಡಿ ನಿಜಾ ಆತು !....

ಅವರಿಬ್ಬರೂ ತಮ್ಮನ್ನ ದೂರಮಾಡುತಿದ್ದ ಜನರನ್ನ ಒದ್ದು — ದೂರ ಹೋದರು ! ದೂರ ದೂರ ದೂರ ಹೋದರು !—

ಸರಿ !—ಅಷ್ಟು ಸಾಕು ನಮಗ !—

* * *

ಇತ್ತೀಚಿಗೆ ಶಂಕ್ರಪ್ಪನವರ ಮನಸಿನಲ್ಲಿ ಸಾವಿರಸಲ ಬರುತ್ತಿತ್ತು.

“ ಚೆನ್ನ ಎಷ್ಟ ಚೆಲೋ ಹುಡುಗ ! ಅದರಾಗ ಅಳಿಯ ಬ್ಯಾರೆ! ನಾ ಮೂರ್ಖತನಾ ಮಾಡಿದೆ. ದುಡ್ಡಿನಾಶೆಗೆ ಬಿದ್ದೆ! ಮುತ್ತಿನಂತಹ ಮಗಳನ್ನ ಕಳಕೊಂಡೆ ! ಅಲ್ಲದೆ ಆನೆಯಂತಹ ಮಾನಾ ಕಳಕೊಂಡೆ ! ಚೆನ್ನಗ ನೀಲಾನ್ನ ಕೊಟ್ಟಬಿಟ್ಟಿದ್ದರs ಇಷ್ಟೆಲ್ಲಾ ಯಾಕಾಗುತಿತ್ತು ? ಇನ್ನು ಸಿಕ್ಕಾರs ನನಗ ಅವರು ! ಸಿಕ್ಕರsss ಆಹಾ ! ಎಷ್ಟು ಚೆಲೋ ಆದೀತಲ್ಲ ! ”

* * *

ಆದರsss !

ಸಟ್ಟನs ಸಿಕ್ಕುಬಿಡಾಕ ಅವರೇನು ಸಂಗಪ್ಪನಂತವರs ?

ಅವರು ದೂರ ಹೋಗಿದ್ದರು !

ದೂರ—ದೂರ ಹೋಗಿದ್ದರು.

ಸಂಗೀತ ಕಚೇರಿ—ಕನ್ನಡದಲ್ಲಿ

ಲೇಖಿಕೆಯರು: 'ವಸುಂಧರ', ಬೆಂಗಳೂರು



ಕನ್ನಡದಲ್ಲಿ ಸಂಗೀತ ಕಚೇರಿ! ಎಂಬ ಮಾತು ಕೇಳಿದೊಡನೆಯೆ ಕೆಲವರಿಗೆ ಆಶ್ಚರ್ಯವಾಗಬಹುದು. ಮತ್ತೆ ಕೆಲವರು ಪರಿಹಾಸ್ಯಮಾಡುವರು. ಆದರೆ ಕೆಲವರಿಗಾದರೂ ಆನಂದದಿಂದ ರೋಮಾಂಚನವಾಗುವುದು. ಇದು ನನ್ನ ಅನುಭವದ ಮಾತು. ನಾನು ಹಿಂದೆ ಸಂಗೀತನಡೆಸಿದ ಕರ್ಣಾಟಕಸಂಘಗಳಲ್ಲೆಲ್ಲಾ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ ಮೊದಲಿನಿಂದ ಕಡೆಯ ವರೆಗೆ ಕನ್ನಡದಲ್ಲಿಯೇ ಸಂಗೀತವೆಲ್ಲ ನಡೆಯಬೇಕೆಂದು ಅವರ ಬಯಕೆ. ಈ ಆಶೆಯನ್ನು ಅವರು ಮುಚ್ಚುಮರೆಮಾಡದೆ ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಪ್ರಕೃತ ಸಂಗೀತಗಾರರು ಈ ಆಶಯವನ್ನೆಷ್ಟರಮಟ್ಟಿಗೆ ತೃಪ್ತಿಗೊಳಿಸಬಹುದೆಂಬುದನ್ನು ವಿವರಿಸಲು ಸಾಧ್ಯವಿಲ್ಲ. ಆದರೂ ಈ ಸಮಸ್ಯೆಯನ್ನು ವಿಮರ್ಶಿಸಿ ಪರಿಹರಿಸದಿರುವುದು ಅನಿವಾರ್ಯ. ಆದುದರಿಂದ ಈ ವಿಷಯದ ಸಾಧ್ಯಾಸಾಧ್ಯಗಳನ್ನೂ ಅಡ್ಡಿ ಆತಂಕಗಳನ್ನೂ ಸ್ವಲ್ಪಮಟ್ಟಿಗೆ ವಿವರಿಸುವೆನು.

ಹಾಡುಗಾರಿಕೆಯ ಕ್ರಮ: ಸಂಗೀತ ಕಚೇರಿಗಳು ಸುಮಾರು ಮೂರು ನಾಲ್ಕು ಗಂಟೆಗಳ ಕಾಲ ನಡೆಯುವುವು. ಸಾಮಾನ್ಯವಾಗಿ ದಕ್ಷಿಣಾದಿ ಪದ್ಧತಿಯ ಸಂಗೀತಗಾರರೆಲ್ಲರೂ ಹಾಡುವುದರಲ್ಲಿ ಒಂದು ಕ್ರಮವನ್ನು ಅನುಸರಿಸುತ್ತಿರುವರು. ಈ ಕ್ರಮವು ಸಂಗೀತಗಾರರಿಗಿರುವ ಪ್ರೌಢಿಮೆಯನ್ನೂ ತಮ್ಮ ಸಂಗೀತಪದ್ಧತಿಯಲ್ಲಿರುವ ವೈವಿಧ್ಯವನ್ನೂ ವ್ಯಕ್ತಗೊಳಿಸಿ ಜನರನ್ನು ಆನಂದಗೊಳಿಸಲು ಅನುಕೂಲವಾಗಿರುವುದು. ಸಂಗೀತ ಕಚೇರಿಗಳಿಗೆ ಬರುವ ಜನರು ಆನಂದಕ್ಕಾಗಿಯೆ ಬರುವರು. ಈ ಆನಂದವನ್ನು ಅವರು ಸವಿಯಾದ ಗಾನ, ಸಾಹಿತ್ಯದ ಭಾವ, ತಾಳದಲ್ಲಿಯ ಜಾತಿಗಳ ಚತುರತೆ, ಸ್ವರಗಳ ಸಂಯೋಗವಿಧಾನ ಇವುಗಳಲ್ಲೆಲ್ಲ ಅನುಭವಿಸುವರು. ಇಷ್ಟು ಮಾತ್ರವಲ್ಲ. ರಾಗಗಳ ಆಲಾಪನೆಯಲ್ಲಿ ಆಯಾ ರಾಗಗಳ ಲಕ್ಷಣಗಳಿಗನುಸಾರವಾಗಿ ಜಾರುಸ್ವರ, ತಾನಗಳ ವಿಸ್ತಾರ ಮತ್ತು ಕಾಲ ವ್ಯತ್ಯಾಸ ಇವುಗಳೆಲ್ಲಾ ಸಭಿಕರನ್ನು ಆನಂದಗೊಳಿಸುವ ಸನ್ನಿವೇಶಗಳು. ಇವುಗಳಲ್ಲಿ ಸಂಗೀತದ ಸಾಹಿತ್ಯವು ಒಂದಲ್ಲದೆ ಅದೇ ಪ್ರಧಾನವಾದುದಲ್ಲ. ಈ ಗುಟ್ಟಿನ್ನ ರಿತೆ ನಮ್ಮ ಈ ಕ್ರಮವು ಏರ್ಪಟ್ಟಿದೆ. ಈ ಕ್ರಮದ ಸಂಗೀತ ಕಚೇರಿಯು ವರ್ಣದಿಂದ ಆರಂಭವಾಗುವುದು. ವರ್ಣದ ಹಾಡುವಿಕೆಯು ಸಂಗೀತಗಾರನ ಅಂತಸ್ತನ್ನು ತೋರಿಸಿಕೊಡುವಂತಹುದು. ನಂತರ ಒಂದೆರಡು ಮಧ್ಯಮ ಕಾಲದ ಕೀರ್ತನೆಗಳನ್ನು ಹಾಡುವರು. ಸಾಮಾನ್ಯವಾಗಿ ಈ ಕೀರ್ತನೆಗಳಲ್ಲಿ ಬಗೆಬಗೆಯ ಸಂಗತಿಗಳು, ನೆರವಲ್‌ಮಾಡಿ ಬೇರೆಬೇರೆ ಕಾಲಗಳಲ್ಲಿ ಸ್ವರ ಹಾಕುವುದು ಮತ್ತು ತಾಳದಲ್ಲಿನ ಜಾತಿಗಳ ಚಮತ್ಕಾರ ತೋರುವುದು ಇವೇ ಪ್ರಧಾನವಾದುವು. ತ್ಯಾಗರಾಜರ ಕೀರ್ತನೆಗಳಲ್ಲಿ ಸಾಹಿತ್ಯವು ಬಹು ಸ್ವಲ್ಪ. ಸಂಗೀತ ಕಚೇರಿಗಳಲ್ಲಿ ಕಾಲ ಮತ್ತು ಪರಿಸ್ಥಿತಿಗನುಸರಿಸಿ ಕೀರ್ತನೆಗಳನ್ನು ಆರಿಸಿಕೊಳ್ಳಬೇಕಾಗುವುದು. ಪ್ರತಿಯೊಬ್ಬ ಸಂಗೀತ

ಈಗ ಸದ್ಯಕ್ಕೆ 'ಕರ್ನಾಟಕ' ಪದ್ಧತಿಯ ಸಂಗೀತವನ್ನು ಸಮೃದ್ಧವಾಗಿ ಕೇಳಬೇಕೆಂದರೆ ಮೈಸೂರಿಗೇ ಹೋಗಬೇಕು. ಆದರೆ ಮೈಸೂರಿನ ಸಂಗೀತ ಕಚೇರಿಗಳಲ್ಲಿ ತೆಲುಗು ಸಾಹಿತ್ಯವೆ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವುದು ದುರ್ದೈವದ ಸಂಗತಿ. ಬಹಳವಾದರೆ ಕೊನೆಗೆ ಒಂದೆರಡು ಕನ್ನಡ ದಾಸರ ಪದಗಳನ್ನು ಹೇಳಿಬಿಟ್ಟರೆ ಅವರ ಭಾಷಾಭಿಮಾನದ ಪರಮಾವಧಿಯಾಯಿತು. ಇದಕ್ಕೆ ಅಲ್ಲಿಯ ಸಂಗೀತಗಾರರ ಭಾಷಾಭಿಮಾನಶೂನ್ಯತೆಯು ಕಾರಣವಾಗಿರದೆ ಕನ್ನಡ ಹಾಡುಗಳಿಗೆ ಸಮಂಜಸವಾದ ಸ್ವರ ಪ್ರಸ್ತಾರಗಳನ್ನು ಸಿದ್ಧಪಡಿಸದಿರುವುದೆ ಕಾರಣವೆಂದು ಮಾನ್ಯ ಲೇಖಿಕೆಯರು ಅಭಿಪ್ರಾಯ ಪಡುತ್ತಾರೆ. ಅವರು ಸ್ವತಃ ದಕ್ಷಿಣಾದಿ ಗಾಯನ ತಜ್ಞೆಯರಿರುವರಲ್ಲದೆ ಅವರು ಮದ್ರಾಸಿನಲ್ಲಿ ಅನೇಕಾವರ್ತಿ ರೇಡಿಯೋದಲ್ಲಿ ಹಾಡಿರುವರೆಂದ ಮೇಲೆ ಅವರೀ ಲೇಖನವು ವಾಚನೀಯವಾಗಿದೆಯೆಂದು ಬೇರೆ ಹೇಳಬೇಕೆ? - ಸಂ.

ಗಾರನೂ ಯಾವುದಾದರೂ ಕೆಲವು ರಾಗಗಳಲ್ಲಿ ಮಾತ್ರ ಹೆಚ್ಚು ಆಸಕ್ತಿ ತೋರಿ ಅಭ್ಯಾಸಮಾಡಿರುವನು. ಆಯಾ ಸಮಯಕ್ಕನುಸರಿಸಿ ಒಂದೆರಡು ರಾಗಗಳನ್ನು ಆರಿಸಿ ಕೊಂಡು, ತನ್ನ ಮನೋಭಾವಕ್ಕನುಸರಿಸುವಂತೆ ವಿಸ್ತರಿಸಿ ಜನರಂಜನೆ ಮಾಡುವನು. ಸಾಮಾನ್ಯವಾಗಿ ಈ ರಾಗಾ ಲಾಪನೆಯು ಹದಿನೈದು-ಇಪ್ಪತ್ತು ನಿಮಿಷಗಳ ಕಾಲವನ್ನಾ ಕ್ರಮಿಸುವುದು. ಕೆಲವರು ಗಂಟೆಗಳ ಕಾಲವನ್ನು ಕೂಡ ತೆಗೆದುಕೊಳ್ಳುವುದುಂಟು.

ಸ್ತ್ರೀ ಗಾಯಿಕೆಯರು ಶೃಂಗಾರರಸಭರಿತವಾದ ಪದ ಜಾವಳಿಗಳನ್ನು ಹಾಡಿದರೆ, ಪುರುಷರು ಪಲ್ಲವಿಯಲ್ಲಿ ತಮ್ಮ ಪ್ರೌಢಿಮೆಯನ್ನು ತೋರಿಸುವರು. ಪಲ್ಲವಿಯ ಹಾಡು ಗಾರಿಕೆಯಲ್ಲಿ ತಾಳದ ಲೆಕ್ಕಾಚಾರವೇ ಪ್ರಧಾನವಾದುದು. ಇದು ಗಾಯಕನ ಸಾಮರ್ಥ್ಯಕ್ಕೂ ಕೇಳುವವರ ಅಭಿರುಚಿಗೂ ಅನುಸರಿಸಿ ಕಾಲವನ್ನು ತೆಗೆದುಕೊಳ್ಳುವುದು. ಇಲ್ಲಿಯ ವರೆಗೆ ಸಂಗೀತಕಚೇರಿಯ ಸಾಹಿತ್ಯವೆಲ್ಲ ಬಹುತರವಾಗಿ ಈಗ ತೆಲುಗಿನಲ್ಲಿಯೆ ನಡೆಯುವುದು. ನಂತರ ದೇವರ ನಾಮವು ಕಡೆಯಲ್ಲಿ ಬರುವುದು. ಈ ದೇವರ ನಾಮಗಳಲ್ಲಿ ಪ್ರಧಾನವಾದುದು ಸಾಹಿತ್ಯ ಮತ್ತು ಭಾವ. ಜನರ ಮನಸ್ಸು ಸಂಗೀತದಲ್ಲಿ ತಲ್ಲೀನವಾಗಿ ಆನಂದಪಟ್ಟಿರುವಾಗ ಉತ್ತಮ ಸನ್ನಿವೇಶಗಳನ್ನು, ಬಗೆಬಗೆಯ ಭಾವಗಳನ್ನು ಬೇರೆ ಬೇರೆಯ ರೂಪಗಳಲ್ಲಿ ಜನರ ಮನದಲ್ಲಿ ಮೂಡುವಂತೆ ಮಾಡುವುದೇ ದೇವರ ನಾಮಗಳ ಮುಖ್ಯ ಗುರಿ. ದೇವರ ನಾಮಗಳನ್ನು ಹಾಡುವಾಗ ಮಧ್ಯೆಮಧ್ಯೆ ರಾಗಾಲಾಪನೆ, ನೆರವಲ್ ಮತ್ತು ಸ್ವರಹಾಕುವುದು, ಇವೆಲ್ಲವುಗಳಿಂದ ಸಾಹಿತ್ಯದ ಭಾವಕ್ಕೆ ಕುಂದು ಬರುವುದು.

ಈ ಮೇಲಿನ ಕ್ರಮವನ್ನು ಸೂಕ್ಷ್ಮವಾಗಿ ವಿಚಾರಿಸಿ ನೋಡುವುದಾದರೆ ಈಗ ರೂಢಿಯಲ್ಲಿರುವ ದೇವರ ನಾಮ ಗಳಿಂದಲೇ ಸಂಗೀತ ಕಚೇರಿ ನಡೆಸುವುದು ಅಸಂಭವ. ಒಂದು ವೇಳೆ ಹಾಗೆ ನಡೆಸಿದರೂ ಅದು ಎಲ್ಲರ ಅಭಿರುಚಿ ಯನ್ನೂ ತೃಪ್ತಿಗೊಳಿಸುವುದೆಂದು ಹೇಳಲಾಗುವುದಿಲ್ಲ. ಒಂದು ಸಂದರ್ಭದಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಉತ್ಸವದಲ್ಲಿ ದಿವಂಗತರಾದ ಬಿಡಾರಂ ಕೃಷ್ಣಪ್ಪನವರನ್ನು ಆಹ್ವಾನಿಸಿ ಇಂದಿನ ಸಂಗೀತವೆಲ್ಲ ಕನ್ನಡದಲ್ಲಿಯೇ ನಡೆಯ ಬೇಕೆಂದು ಪ್ರಾರ್ಥಿಸಿದರಂತೆ. ಕೂಡಲೆ ಆ ವಿದ್ವಾಂಸರು ಬೆಹಾಗ್ ರಾಗವನ್ನು ಅರ್ಧ ಗಂಟೆ ಕಾಲ ಆಲಾಪನೆ ಮಾಡಿ "ಎಲ್ಲಿರುವೆ ತಂದೆ ಬಾರೊ ಮಾರುತಿ" ಎಂಬ ದೇವರ ನಾಮವನ್ನು ಹಾಡಿ ಮುಗಿಸುವ ವೇಳೆಗೆ ಒಂದು ಘಂಟೆಯ ಮೇಲಾಯಿತಂತೆ. ಇದು ಮಹಾವಿದ್ವಾಂಸರ ಮಾತು. ಅಲ್ಲದೆ ಕರ್ಣಾಟಕ ಸಂಘಗಳಲ್ಲಿ ಮಾತ್ರ ಈ ಬಗೆಯ ಸಂಗೀತ ಸಾಧ್ಯವಾದೀತು. ಬೆಂಗಳೂರಿನಲ್ಲಿ ಸಾಹಿತ್ಯ ಪರಿ ಷತ್ತಿನಲ್ಲಿ ನಡೆದ ದೇವರ ನಾಮಗಳ ಕಚೇರಿ ಕೇಳಲು ಹೋಗಿದ್ದೆನು. ಯಾವುದಾದರೊಂದು ರಾಗದಲ್ಲಿ, ಎಂಬಂತೆ —ಪದ್ಧತಿಯ ಹಾದಿ ಹಿಡಿದು ದೇವರ ನಾಮಗಳನ್ನು ಓದುವುದರಲ್ಲಿಯೇ ಅಂದು ದಾಸರು ತೃಪ್ತರಾಗುತ್ತಿದ್ದರು. ಸಂಗೀತ ಕೇಳಲು ಬರುವವರು ಉತ್ತಮ ಸಂಗೀತ ಸಾಹಿತ್ಯ ಶ್ರವಣದಿಂದಲೇ ತೃಪ್ತರಾಗುವರೆಂದು ತಿಳಿದಿದ್ದರೆ ಅದು ತಪ್ಪು ಭಾವನೆ. ಸಂಗೀತಾಭಿರುಚಿಯುಳ್ಳವರು ಸಂಗೀತ ಸಾಹಿತ್ಯಗಳೆರಡನ್ನೂ ಪ್ರೀತಿಸುವರಾದುದರಿಂದ ಸಂಗೀತ ಕಚೇರಿಗಳಲ್ಲಿ ಕನ್ನಡವನ್ನೆ ಉಪಯೋಗಿಸ ಬೇಕೆಂಬ ಹಟವುಳ್ಳವರು ಬರಿ ದೇವರ ನಾಮಗಳನ್ನಲ್ಲದೆ ವರ್ಣಗಳನ್ನೂ ಕೀರ್ತನೆಗಳನ್ನೂ ಕನ್ನಡದಲ್ಲಿ ಒದಗಿಸಲು ಯತ್ನಿಸಬೇಕು.

ಕನ್ನಡಿಗರ ಈ ಅಭಿಮಾನವನ್ನರಿತ ಕೆಲವರು ಉತ್ತಮ ತೆಲುಗು ಕೀರ್ತನೆಗಳ ಧಾಟಿಯಲ್ಲಿ ಕನ್ನಡ ಪದಗಳನ್ನು ಜೋಡಿಸಿ ಕನ್ನಡ ಸಂಗೀತವೆಂದು ಹಾಡುವ ಪದ್ಧತಿ ಯೊಂದು ಹುಟ್ಟಿಬರುತ್ತಿದೆ. ಈ ಎಂಬಂತೆ—ಪದ್ಧತಿ ಕನ್ನಡ ಸಂಗೀತಕ್ಕೆ ಒಂದು ಅವಮಾನವೆಂದು ಹೇಳಬಹುದು ಲಾರೆ. ಏಕೆಂದರೆ ಕೀರ್ತನೆಕಾರರು ತಮ್ಮ ಕೀರ್ತನೆಗಳ ಅರ್ಥಭಾವಗಳಿಗನುಸಾರವಾಗಿ ಸ್ವರ ಸ್ಥಾನಗಳಿಂದ ಸಂಗತಿ ಗಳನ್ನು ಸೇರಿಸಿರುವರು. ರಾಗ ತಾಳಗಳೂ ಅರ್ಥವನ್ನನು ಸರಿಸಿಯೇ ಗೊತ್ತು ಮಾಡಲ್ಪಟ್ಟಿವೆ. ಹೀಗಿರುವಲ್ಲಿ ಬೇರೊಂದು ಭಾವನೆಯ ಯಾವುದೋ ಒಂದು ಕೃತಿಗೆ ಅರ್ಥ-ಭಾವ ಸಂಬಂಧವಿಲ್ಲದ ಕೀರ್ತನೆಗಳ ಮಾದರಿಯ ಸ್ವರಗಳನ್ನು ಜೋಡಿಸಿ ಹಾಡಿದರೆ ಅದು ನಿಜವಾಗಿಯೂ ಶೋಭಿಸಲಾರದು. ಈ ಎಂಬಂತೆ—ಪದ್ಧತಿಯ ಸಂಗೀತ ಗ್ರಾಮೋಫೋನ್ ಸಂಗೀತಕ್ಕೆ ನಮ್ಮ ಕನ್ನಡ ಪದ ಗಳನ್ನು ಜೋಡಿಸಿ ಹಾಡುವ ವ್ಯಾಧಿಯೊಂದು ಕಡೆ ಪ್ರಬಲ ವಾಗುತ್ತಿದೆ. ಇಂದು ಸೈಗಲ್ ಹಾಡಿನ ಧಾಟಿಯನ್ನೇ ಕದ್ದು ತಂದ ಕನ್ನಡ ಹಾಡುಗಳನ್ನು ಕೇಳಬಹುದು. "ಶಿವದೀಕ್ಷಾಪರು" ಎಂಬ ಶೃಂಗಾರ ರಸಭರಿತವಾದ ಕುರಂಜಿ ರಾಗದ ಪದದ ಧಾಟಿಯಲ್ಲಿ ಭಕ್ತಿರಸಭರಿತವಾದ ದೇವರ ನಾಮವನ್ನು ಹಾಡಿದರೆ ಅದು ರಂಜಿಸುವ ಬಗೆ ಯೆಂತು!

ಸಂಗೀತಪ್ರೇಮಿಗಳು ಕನ್ನಡದ ಭಾಷೆಯ ಅಭಿಮಾನ ದಲ್ಲಿ ಮೈಮರೆತು, ತಪ್ಪು ದಾರಿಯಲ್ಲಿ ಕಾಲಿಡದಿರಲೆಂದು ಇಷ್ಟೊಂದು ಹೇಳಬೇಕಾಯಿತು. ಆದರೆ ಈ ಪರಿಸ್ಥಿತಿ ಯಲ್ಲಿಯೂ ಆಶಾದಾಯಕವಾದ ಸೂಚನೆಗಳು ಕಂಡು ಬರುತ್ತಿವೆ.

ಶ್ರೀ|| ಬೇಂದ್ರೆಯವರು, ವಿ. ಸೀತಾರಾಮಯ್ಯನವರು, ಶ್ರೀ|| ಗುಂಡಪ್ಪನವರು ಅನೇಕ ಭಾವಭರಿತ ಗೀತೆಗಳನ್ನು ಬೆಳಕಿಗೆ ತಂದಿದ್ದಾರೆ. ಕನ್ನಡಿಗರೂ ದೇವರ ನಾಮಗಳಲ್ಲಿ ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಬೆಂಗಳೂರಿನ ಶ್ರೀ|| ಎಂ. ರಾಮರಾಯರು, ಮಂಗಳೂರಿನ ಶ್ರೀ|| ಪಾವಂಜೆ ಗುರುರಾಯರು ಅನೇಕ ದೇವರ ನಾಮ ಗಳನ್ನು ಸಂಗ್ರಹಿಸಿ ಅಚ್ಚು ಹಾಕಿಸಿದ್ದಾರೆ. ಆದರೇನು! ಅವುಗಳನ್ನು ಸಂಗೀತಗಾರರು ಧಾರಾಳವಾಗಿ ಉಪ ಯೋಗಿಸಿಕೊಳ್ಳುವಂತಿಲ್ಲ. ಈ ಕಾರ್ಯಗಳಲ್ಲಿ ಸಂಗೀತ ಸಾಹಿತ್ಯ ಪ್ರವೀಣರಾದ ಮಹಾವಿದ್ವಾಂಸರುಗಳ ಸಹಾ ಯವೂ ಕಲಾಭಿಮಾನಿಗಳಾದ ಶ್ರೀಮನ್ಮಹಾರಾಜರ ಮತ್ತು ಉದಾರಿಗಳಾದ ಶ್ರೀಮಂತರುಗಳ ಬೆಂಬಲವೂ ಅತ್ಯಗತ್ಯ.

ಮುಖ್ಯ ಕೆಲಸ: ಕನ್ನಡ ನಾಡಿನ ಸಂಗೀತಗಾರರು ಕನ್ನಡ ಕೀರ್ತನೆಗಳನ್ನೂ ದೇವರ ನಾಮಗಳನ್ನೂ ಹೆಚ್ಚು ಹೆಚ್ಚಾಗಿ ಹಾಡುವಂತೆ ಮಾಡಲು, ಪ್ರಕೃತದಲ್ಲಿ ದೊರೆತಿರುವ ದೇವರ ನಾಮಗಳನ್ನು ಸರಿಯಾದ ಧಾಟಿಯಲ್ಲಿ ಹಾಡುವು ದಕ್ಕೆ ಅನುಕೂಲಿಸುವಂತೆ ಸ್ವರಗಳನ್ನು ಹಾಕಿಸಿ ಪ್ರಕಟಿಸ ಬೇಕು. ನನ್ನ ಗುರುಗಳಾದ ಸಂಗೀತ ಸಾಹಿತ್ಯ ವಿದ್ವಾನ್ ಶ್ರೀಮಾನ್ ವಿ. ಕೃಷ್ಣಮಾಚಾರ್ಯರವರು ಈ ಕಾರ್ಯ ದಲ್ಲಿ ಅಪಾರವಾದ ಆಸಕ್ತಿಯನ್ನು ತೋರುತ್ತಿರುವರು. ತೆಲುಗಿನ "ತ್ಯಾಗರಾಜ ಹೃದಯ" ಎಂಬ ಸ್ವರಸಹಿತ ಪುಸ್ತಕ ಪ್ರಕಟನೆಯಲ್ಲಿ ಇವರ ಸಹೋದರರಾದ ಶ್ರೀ|| ಕೆ. ವಿ. ಶ್ರೀನಿವಾಸಯ್ಯಂಗಾರ್ಯರವರಿಗೆ ವಿಶೇಷ ಸಹಾಯ ಮಾಡಿ ಅಪಾರವಾದ ಅನುಭವ ಪಡೆದಿದ್ದಾರೆ. ಪುರಂದರ ದಾಸರ ಕೀರ್ತನೆಗಳನ್ನೂ ಈ ರೀತಿಯಲ್ಲಿ ಪ್ರಕಟಿಸ ಬೇಕೆಂಬ ಅವರ ಆಶೆಗೆ ಕನ್ನಡಿಗರು ಉತ್ತೇಜನ ಕೊಡ ಲೆಂದು ಆಶಿಸುವೆನು. ಇದಲ್ಲದೆ ಬಗೆಬಗೆಯ ಭಾವಗಳನ್ನೂ ಹೊಸ ಹೊಸ ಅಭಿಪ್ರಾಯಗಳನ್ನೂ ಕನ್ನಡ ಕೀರ್ತನೆಯ ರೂಪದಲ್ಲಿ, ಪದಗಳ ರೀತಿಯಲ್ಲಿ ಸೃಷ್ಟಿಸಿ ಸ್ವರ ಸಹಿತ ಪ್ರಕಟಿಸುವ ಆವಶ್ಯಕತೆಯುಂಟು. ಈ ರೀತಿಯಲ್ಲಿ ಪರಿ ಸ್ಥಿತಿಯನ್ನು ಉತ್ತಮಗೊಳಿಸದೆ ಕನ್ನಡದಲ್ಲಿಯೇ ಹಾಡ ಬೇಕೆಂದು ಸಂಗೀತಗಾರರನ್ನು ನಿರ್ಬಂಧಪಡಿಸಿದರೆ ಪ್ರಯೋಜನವಿಲ್ಲ. ಕನ್ನಡಾಭಿಮಾನಿಗಳ ಈ ಆಕಾಂಕ್ಷೆಗೆ ಸಂಗೀತಗಾರರು ಗಮನ ಕೊಡದಿದ್ದರೂ ಪರಿಸ್ಥಿತಿಯು ಹದಗೆಟ್ಟು ಇದ್ದ ಹತ್ತಾರು ಜನ ಸಂಗೀತ ಪ್ರೇಮಿಗಳೂ ಇಲ್ಲದಂತಾಗುವರು. ಅಂದರೆ ತತ್ಫಲವಾಗಿ ಸಂಗೀತಕ್ಕೆ ಮತ್ತೊಂದು ದೊಡ್ಡ ಧಕ್ಕೆ ತಗಲಿದಂತಾಗುವುದು.

ಮುಖ್ಯ ಕನ್ನಡನಾಡಿನ ಕೀರ್ತಿಯು ಬೆಳೆಯಬೇಕಾದರೆ ನಮ್ಮ ನಾಡಿನ ಘನತೆಗೆ ತಕ್ಕಂತೆ "ಕನ್ನಡ ಸಂಗೀತ ಸಾಹಿತ್ಯ"ವು ವೃದ್ಧಿಯಾಗಬೇಕು. ಇರುವ ದೇವರ ನಾಮಗಳಿಗೆಲ್ಲ ಸರಿಯಾಗಿ ಸ್ವರ ಹಾಕಿ ರಂಜಕವಾಗಿಯೂ ರಸವ್ಯಂಜಕವಾಗಿಯೂ ಹಾಡಲು ಅನುಕೂಲಿಸುವಂತೆ ಪ್ರಕ ಟಿಸಬೇಕು. ಅನುಭವಿಗಳೂ, ಅರಿತು ನುರಿತ ಸಂಗೀತ ವಿದ್ವಾಂಸರೂ ಈ ಮುಖ್ಯ ಕಾರ್ಯದಲ್ಲಿ ಸಹಾಯಕರಾಗ ಬೇಕು. ಸಂಗೀತಗಾರರು ಮತ್ತಷ್ಟು ಶ್ರಮಬಟ್ಟು ತೆಲುಗ್ಗು ಸಾಹಿತ್ಯದ ಜೊತೆಗೆ ಹೆಚ್ಚು ಹೆಚ್ಚು ಕನ್ನಡ ಸಾಹಿತ್ಯವನ್ನೂ ಸಂಗ್ರಹಿಸಬೇಕು. ಏಕೆಂದರೆ ಸಂಗೀತಗಾರನು ಒಂದೇ ಪ್ರಾಂತದವನೆಂದು ತಿಳಿಯುವುದರಿಂದ ದೊಡ್ಡ ಅಪಾಯ ವುಂಟು. ಸಂಗೀತಗಾರನು ತಾನು ಅಖಿಲ ರಾಷ್ಟ್ರಕ್ಕೆ ಸೇರಿದವನು. ಆತನು ತನ್ನ ಸೇವೆಯನ್ನು ಯಾವ ಪ್ರಾಂತಿಕ ಅಡ್ಡಿ ಆತಂಕಗಳೂ ಇಲ್ಲದಂತೆ ಮಾಡಲು ಜನರು ನೆರವಾಗಬೇಕು. ಈಗಲಾದರೂ ಕನ್ನಡ ಸಂಗೀ ತಜ್ಞರು ಎಚ್ಚೆತ್ತು ಕಾರ್ಯತತ್ಪರರಾಗುವರೇ!

ಬೆಂಗದಿರನು ಬರುವಾಗ

★

೧

ಪಸುಕಂದನ ಮನದಂದದಿ
ತಿಳಿಯಾಗಿದೆ ಬಾನು.
ಮಿನುಮಿನುಗದೆ ಉಡುಗಡಣವು
ಮರೆಯಾಗಿದೆ ತಾನು.

ಸೆರೆಸಿಕ್ಕಿಹ ತಸ್ಕರನೊಲು
ಕಳೆಗುಂದಿಹ ಶಶಿಯು.
ತ್ವರೆಯಿಂದಲಿ ನಿದ್ದೆಯನುಳಿ-
ದೇಳುತಲಿದೆ ತಿರೆಯು !

೨

ಬಿತ್ತರವಹ ಬುವಿಯೆಲ್ಲವ
ತುಂಬಿರುವುದು ತಮವು.
ಮೌಕ್ತಿಕದಾ ಮಳೆಯಂದದಿ
ಸ್ರವಿಸುತ್ತಿದೆ ಹಿಮವು

ಮಂದಾನಿಲನಾನಂದದಿ
ಬೀಸುತಲಿಹ ಸುಳಿದು.
ನೀರವತೆಯ ಹೊನಲೆತ್ತಲು
ಚಿಮ್ಮುತಲಿದೆ ನಲಿದು !

೩

ಉದಯಾದ್ರಿಗು ಮುಗಿಲೋಳಿಗು
ಬಳೆಯುತ್ತಿದೆ ನಣ್ಪು.
ಬಾನ್ವೆಣ್ಣಿನ ಕೆಂದುಟಿಯೊಲು
ಪುಟ್ಟುತಲಿದೆ ಕೆಂಪು.

ಆಮೋದದ ಅರ್ಣವದಲಿ
ತೇಲುತಲಿದೆ ಧರಣಿ.
ಕಿರಣಂಗಳನೆರಚುತ್ತಲಿ
ಮೂಡುತಿಹನು ತರಣಿ !

೪

ಎಳವಿಸಿಲಲಿ ತಳಿಸುತಲಿರೆ
ಹಿಮಮಣಿಗಳು ತೃಣದಿ
ಸುಣ್ಗೊರಲಿಂ ಖಗಸಂಕುಲ
ಉಲಿಯುತಲಿರೆ ಮುದದಿ

ಬಗೆದಾವರೆ ಮಲರುವವೊಲು
ಹೊಂಗದಿರ್ಗಳ ಚೆಲ್ಲಿ
ಮೇಲೇರುತಲಿನ ಬರ್ಪನು
ಅಂಬರತಲದಲ್ಲಿ !

೫

ಶೋಭಿಸುತಿದೆ ಮನದಳಲನು
ಕಳೆದೊಸೆಯಿಪ ಶಾಂತಿ.
ಭೂವನಿತೆಯ ಸಿಂಗರಿಸಿದೆ
ಬೆಂಗದಿರನ ಕಾಂತಿ.

ಪೊಳ್ತರೆಯಾ ನೋಟಗಳಿಂ
ಕಣ್ಗೆಡ್ಡವು ನೋಡು,
ಸೊಗವೀಯುವ ರವಿದೇವಗೆ
ಸ್ವಾಗತವನು ಮಾಡು !

—ಎ. ಸಿ. ಶಂಕರಭಾರತಿ, ಮೈಸೂರು

ಜೊನ್ನಿನ ಜೇನಿನ ಸರಿ ಸುರಿದಿತ್ತು

★

೧

ಜೊನ್ನಿನ ಜೇನಿನ ಸರಿ ಸುರಿದಿತ್ತು;
ಹೊನ್ನಿನ ಬಿಂಬವು ಮೂಡಿತ್ತು:
ಇರುಳಿನ ಕಾವಳ ಕೆಲಸಾರಿತ್ತು;
ಎತ್ತಲು ನೀರವವಾಳಿತ್ತು!

ಸುಳಿಯುವ ತಂಬೆಲರಿಗೆ ಮೈ ಚಾಚಿ,
ನಡೆದಿದ್ದೆನು, ಸುರಿದಿರೆ ಶಶಿರೋಚಿ!
ಬಾನ್ಗಡಲಲಿ ಬೆಳ್ಮುಗಿಲಿನ ವೀಚಿ
ಲಲಿತ ಸುಲಾಸ್ಯವನಾಡಿತ್ತು;
ಕವಿಮನ ತಣಿಸಿತ್ತು!

೨

ತರುಶಿರ ಪರ್ಣದ ಜಾಲದ ರಂಧ್ರದೆ,
ತಂಗದಿರಿಳೆಯನು ಸೇರಿತ್ತು;
ತರುತಲ ಛಾಯಾ ಜಾಲದೆ, ಇಂದುಮ-
ರೀಚಿಯ ಹಾಸದು ಹೊಕ್ಕಿತ್ತು!

ನಡೆದಿದ್ದೆನು ನಾನಾ ಸಮಯದಲಿ;
ಹೊಳಲಂಚಿನ ದೂರದ ಬಯಲಿನಲಿ:
ತೇಲುತ್ತಿರೆ ಮನ್ಮನಮುಲ್ಲಸದಲಿ,
ಕವಿ-ಕಲ್ಪನೆ ಸಾಮ್ರಾಜ್ಯದಲಿ;
ಭಾವರಾಜ್ಯದಲಿ!

೩

ಇಂತಿರಲೊಯ್ಯನೆ ಎನ್ನೆದುರೊರ್ವಳು
ನಡೆತಂದಳು ಗೊಲ್ಲರ ಬಾಲೆ;
ಹಾಲಿಂ ತುಂಬಿದ ಹಿರಿತಪ್ಪಲೆಯ-
ನ್ನಾನುತೆ ತಲೆ ಶಿಂಬಿಯ ಮೇಲೆ!

ಬರುತಿದ್ದಳು ಬಾಲೆಯು ಕಣ್ಮುಚ್ಚಿ;
ಮೆಲ್ಲನೆ ಹಜ್ಜೆಗೆ ಹಜ್ಜೆಯ ಹಚ್ಚಿ;
ನಡೆವಂತುಟಿ ಎಚ್ಚರುತಲೆ ಬೆಚ್ಚಿ,
ಜೋಲುತೆ ನಿದ್ದೆಯ ಜೋಂಪಿನಲಿ;
ನಿದ್ರಾಸ್ವಪ್ನದಲಿ.

೪

ಹಳ್ಳಿಯೊ? ಗ್ರಾಮವೊ? ಕೊಪ್ಪಲೊ? ಆಕೆಯ
ತಾಣವದಾವುದೊ ನಾನರಿಯೆ;
ಗಾವುದವೋ? ಹರದಾರಿಯೊ? ಮೈಲಿಯೊ?
ದೂರವದೆನಿತೋ, ಅದನರಿಯೆ!

ಆಕೆಗೆ ದೂರದ ಯೋಚನೆ ಇಲ್ಲ;
ಒಂಟಿಯಾಗಿ ಬರೆ ಶಂಕೆಯುಮಿಲ್ಲ;
ತಲೆಹೊರೆಭಾರದ ಬೇನೆಯುಮಿಲ್ಲ;
ನಿದ್ರೆಯೊಂದೆ ಮರಸಿತ್ತೆಲ್ಲ;
ಮನಮುಮ್ಮಳವೆಲ್ಲ!

೫

ಪಡೆಯೇ ಕೊಟ್ಟಿಲ ತೂಗಾಯಿತು, ಮೇ-
ಣೆಲರೇ ಜೋಗುಳ ಪಾಡಿತ್ತು;
ಗಿರಿ, ಬನ, ಬುವಿಯಾಚ್ಛಾದಿತ ಚಂದ್ರಿಕೆ
ಬಾಲೆಗೆ ಹೊದ್ದಿಕೆಯಾಗಿತ್ತು!

ಬಾಲೆಯ ಕನ್ಯಕೆ ನೆರೆ ಮನ ಮರುಗಿ,
ಪ್ರಕೃತಿಯಮ್ಮನು, ತಾ, ಎದೆಕರಗಿ,
ಅಮೃತಹಸ್ತಸ್ಪರ್ಶದೊಳಪ್ಪಿದಳು;
ತೋಳತೆಕ್ಕೆಯೊಳಗಪ್ಪಿದಳು:
ತಾ ಬಿಗಿದಪ್ಪಿದಳು!

೬

ಕಂಡಿದ, ಪ್ರಕೃತಿಗೆ ಮನ್ಮನ ಮಣಿದಿತು;
ಮೇಣೆನ್ನುರ ನೊರೆದಿತು ಇಂತು:—
"ದೀನಗೆ, ಮಾನವಕೃಪೆ ಇರದಿರಲೇನ್?
ದೇವನ ಕೃಪೆ ತಾನಿಹುದೆಂತು!"

ಪ್ರಕೃತಿಯ ಔದಾರ್ಯಕೆ ನೆರೆ ಹಿಗ್ಗಿ;
ಮನುಜನ ಕೃಪಣತೆಗುರೆ ಮೇಣ್ ಸಿಗ್ಗಿ;
ಆ ಬಾಲೆಯ ಸೌಖ್ಯವ ನಾ ಬಯಸಿ,
ಪ್ರಕೃತಿಯ ಸುಖಚುಂಬನಕೆಳಸಿ,
ಮರಳಿದೆ ಮನೆಗೆಳಸಿ!

—ಟಿ. ಎಸ್. ಶ್ರೀನಿವಾಸಮೂರ್ತಿ, ಬಾಲಕನ್ನಡ ಸೇನಾಮಂಡಲಿ, ಮೈಸೂ[illegible]

ಎಲೆ ನೋವೆ....!

★

ಎಲೆ ನೋವೆ!
ನೀನೋವ-
ದಿಹ ಸುಕೃತಿಯಿರನೇ ?

೧

ತನ್ನೊಂದದೃಶ್ಯವಹ
ದುರ್ದಮ್ಯ ಶಕ್ತಿಯಿಂ
ಚೇತನಾತ್ಮಕ ದೇಹಿ-
ಗಳನದುಮಿ ನಿಂದು,
ಪ್ರಾಚುರ್ಯದಲಿ ತಾನೆ
ತಾಣಾಗಿ ನೆರೆ ಸಂದು,
ಸಾರ್ವತ್ರಿಕ ಪ್ರಗತಿ-
ಯಲಿ ಮೆರೆಯುವೆ !

ಧನಿಕರನು ಸೋಲಿಸುವೆ;
ಬಡವರನು ಗೆಲುವೆ;
ಕನಿಕರವನುಳಿದಿರುವೆ:
ದಯೆಯ ದಾಟಿರುವೆ.

೨

ಕಣ್ಣಿಗೆಟಕದೆ ಜೀವ-
ವನು ಕೊರೆದು ಕೊನೆಯುತಿಹ
'ಕಣ್ಣು-ಕಟ್ಟ'ನ್ನರಿತ
ನೀ ವಜ್ರಕೀಟ !
ಮೃತ್ಯುವಿನ ಸಹಚರನೆ,
ನಿನ್ನಥಟ ನಾನರಿಯೆ;
ಶಾಂತಿ-ಸುಖಗಳ ನಿತ್ಯ
ಶತ್ರುವೇ ನೀನು ?

ಆದರೊಂದೊಳ್ಗುಣವು
ನಿನ್ನೊಳಾಶ್ರಯವು:—
ಧನಿಕ-ದೀನರೊಳೆಲ್ಲ
ಸಮಭಾವವಿಹುದು !

೩

ನೋವೆ, ನೀನಿಲ್ಲದಿರೆ
ಏರಿಳಿತ-ಸುಖದುಃಖ
ಮೊದಲಾದ ದ್ವಂದ್ವಗಳ
ಅಸ್ತಿತ್ವವಿತ್ತೇ ?
ನಿನ್ನಿಂದ ವಿಶ್ವದಲಿ
ವಿವಿಧತೆಯು ನುನೆಮಾಡಿ,
ಸೊಗದ ಮೌಲ್ಯಕೆ ಬಂತು—
ಹಿರಿಯತನವು.

ಆದರಿಂದ ಸೃಷ್ಟಿಯಲಿ
ನಿನಗಿರುವುದು:—
ಚ್ಯುತಿಯಿರದ, ಆದರೇಂ !
ನುತಿಹೀನದಿರವು !

—ಶಂಕರ ನಾರಾಯಣ, ವಿದ್ವಾನ್,
ಕನ್ನಡ ಸೇವಾಸಂಘ,
ಅಮ್ಮೆಂಬಳ (ದ. ಕ.)

ಸೂರ್ಯನಮಸ್ಕಾರ

ನಿಯಮಾನುಸಾರವಾಗಿ ಪ್ರಾತಃಕಾಲದಲ್ಲಿ ಸೂರ್ಯನಮಸ್ಕಾರವನ್ನು ನಿತ್ಯವೂ ಮಾಡಿದರೆ, ದೇಹದಲ್ಲಿಯ ವ್ಯಾಧಿಗಳು ನಿರ್ಮೂಲವಾಗುವ ವಲ್ಲದೆ, ವಜ್ರಕಾಯವೂ ಮೇಧಾಶಕ್ತಿಯೂ ಖಂಡಿತವಾಗಿ ಲಭಿಸುವವು.

ಲೇ—ಶ್ರೀ. ವಿ. ಆರ್. ಅಪ್ಪಾಸ್ವಾಮಿರಾವ್, ಬೊಂಬಾಯಿ

ಸೂರ್ಯನಿಗೇಕೆ ಇಷ್ಟು ಪ್ರಾಶಸ್ತ್ಯ?

ಸೂರ್ಯನು, ಪ್ರಪಂಚದ ಸೃಷ್ಟಿ-ಸ್ಥಿತಿ-ಲಯವೆಂಬ ಕಾಲತ್ರಯಕ್ಕೆ ಕಾರಣಭೂತನಾದ ಪರಮೇಶ್ವರನ ಅಷ್ಟ ಮೂರ್ತಿಗಳಲ್ಲಿ ಆದಿಮೂರ್ತಿ. ಚಂದ್ರನಿಗೆ ಪ್ರಕಾಶವನ್ನು ದಾನಮಾಡುವವನು. ಖಗೋಳದಲ್ಲಿ ಸಂಚರಿಸುವ ಗ್ರಹ ನಕ್ಷತ್ರಗಳಿಗೆ ರಾಜನು. ವೇದಗಳಲ್ಲಿ ಅನೇಕ ಪ್ರಕಾರ ವಾಗಿ ಸ್ತೊತ್ರಮಾಡಿಸಿಕೊಳ್ಳುವವನು. ಪ್ರಪಂಚದಲ್ಲಿರುವ ಆಬ್ರಹ್ಮ ಕೀಟಪರ್ಯಂತವಾಗಿ ಸಮಸ್ತ ಪ್ರಾಣಿಗಳೂ ಸೂರ್ಯರಶ್ಮಿಯ ಆಧಾರದಿಂದಲೇ ಜೀವಿಸುತ್ತಲಿವೆ. ಇಂತಹ ಸೂರ್ಯರಶ್ಮಿಯು ಇಲ್ಲದೆ ಹೋದರೆ ಯಾವ ಜೀವ ರಾಶಿಯೂ ಖಂಡಿತವಾಗಿ ಬದುಕಲಾರದು, ಮತ್ತು ಅಂತರಿಕ್ಷ ದಲ್ಲಿ ಯಾವ ಗ್ರಹನಕ್ಷತ್ರಗಳೂ ಸಂಚರಿಸಲಾರವು. ಆದು ದರಿಂದ ಪ್ರಪಂಚದ ಚಟುವಟಿಕೆಗಳ ಜೀವಾಳವೇ ಸೂರ್ಯ ನಿಗೆ ಸೇರಿರುವುದು. ಈ ಕಾರಣಗಳಿಂದಲೇ ನಮ್ಮ ಮಹ ರ್ಷಿಗಳು ಸೂರ್ಯನಮಸ್ಕಾರಕ್ಕೆ ಇಷ್ಟು ಪ್ರಾಶಸ್ತ್ಯವನ್ನು ಕೊಟ್ಟಿರುವುದು. ಸೂರ್ಯನಮಸ್ಕಾರವನ್ನು ನಿಯ ಮಾನುಸಾರವಾಗಿ ಪ್ರಾತಃಕಾಲದಲ್ಲಿ ಮಾಡಿದರೆ, ದೇಹದಲ್ಲಿರುವ ವ್ಯಾಧಿಗಳು ನಿರ್ಮೂಲವಾಗುವು ವಲ್ಲದೆ, ವಜ್ರಕಾಯವೂ ಪ್ರಖರವಾದ ಮೇಧಸ್ಸೂ ಖಂಡಿತವಾಗಿ ಲಭಿಸುವುದು.

ಆಧುನಿಕ ವ್ಯಾಯಾಮ

ಇಂತಹ ಅಮೂಲ್ಯವಾದ ವೆಚ್ಚವಿಲ್ಲದ ಅಂಗ ಸಾಧನೆಯನ್ನು ಶೋಧಿಸಿ ತನ್ಮೂಲಕ ಮೇಧಾಶಕ್ತಿ ಯನ್ನು ಬೆಳೆಸುವ ದಾರಿಯನ್ನು ನಮ್ಮ ಹಿರಿಯರು ತೋರಿಸಿದ್ದರೂ, ಈಗಿನ ತರುಣ ತರುಣಿಯರು, ಪಾಶ್ಚಾತ್ಯರ ದುಡ್ಡು ವೆಚ್ಚಿಸುವ ಆಡಂಬರದ ವ್ಯಾಯಾಮಗಳಿಗೂ ಅದರ ಸಲಕರಣೆಗಳಿಗೂ ಮೋಹಿತರಾಗಿ ತಮ್ಮ ಸಮಯ, ಧನಗಳನ್ನೆಲ್ಲಾ ಅರ್ಪಿಸುತ್ತಿರುವುದು ಶೋಚನೀಯವಾದ ವಿಷಯ.




ಮೊನ್ನೆ ತಾನೆ ಬೊಂಬಾಯಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕಟ್ಟಿರುವ ಕ್ರಿಕೆಟ್ ಸ್ಟ್ಯಾಡಿಯಮ್ ಆದರೂ ಎಷ್ಟು ಜನಗಳಿಗೆ ಆರೋಗ್ಯಭಾಗ್ಯವನ್ನೀಯುವಂತಿದೆ? ಹಾಗೆಯೆ, ಟೆನಿಸ್, ಬ್ಯಾಡ್‌ಮಿನ್‌ಟನ್, ಹಾಕಿ, ಚೆಂಡಾಟ ಮುಂತಾದ ಆಟಗಳು ಎಲ್ಲರಿಗೂ ಸಾಧ್ಯವಾಗಿವೆಯೆ? ಇವು ಗಳಿಂದ ಸಾಕಷ್ಟು ಗುಣ ಕಾಣದ ಪಾಶ್ಚಿಮಾತ್ಯರೂ ಈಗ ದೇಹಾರೋಗ್ಯಕ್ಕಾಗಿ ನೂತನವಾದ ಸನ್ ಬಾತ್ ಅಂದರೆ ಬತ್ತಲೆಯ ದೇಹವನ್ನು ಸೂರ್ಯರಶ್ಮಿಗೆ ಒಡ್ಡಿ ಅಂಗ ಸಾಧನೆ ಮಾಡಿದಲ್ಲಿ ಯೌವನವು ಬರುವುದಲ್ಲದೆ ರೋಗ ಗಳೂ ನಿವಾರಣೆಯಾಗುವುವೆಂದು ಸಹಸ್ರಾರು ಜನಗಳು (ಗಂಡಸರೂ ಹೆಂಗಸರೂ) ಇದನ್ನು ಅನುಸರಿಸುತ್ತ ಲಿಲ್ಲವೆ?

ಚಿಕ್ಕಮಕ್ಕಳ ಬಾಲಕ್ಷಯಕ್ಕೂ (Rickets) ಕ್ಷಯರೋಗ ಗ್ರಸ್ತರಿಗೂ ವೈದ್ಯರು ಪ್ರಾತಃಕಾಲದ ಸೂರ್ಯರಶ್ಮಿಗೆ ಬತ್ತಲೆಯ ದೇಹವನ್ನು ಬಿಟ್ಟು ವ್ಯಾಯಾಮಮಾಡುವಂತೆ ಹೇಳುವರು ಕ್ಷಯವನ್ನೇ ನಿವಾರಿಸುವ ಸೂರ್ಯನ ರಶ್ಮಿಯು, ಇತರ ರೋಗಗಳನ್ನೂ ಹೋಗಲಾಡಿಸಿ, ವಜ್ರಕಾಯ ವನ್ನು ಕೊಡುವುದರಲ್ಲಿ ಸಂಶಯವೇನಿದೆ? ಪಾಶ್ಚಿ ಮಾತ್ಯರು ಈಗ ಅನುಸರಿಸುತ್ತಿರುವ ಸನ್ ಬಾತ್ ಎಂಬ ವ್ಯಾಯಾಮವೂ ನಮ್ಮ ಹಿರಿಯರು ನಿಯಮಿ ಸಿದ ಸೂರ್ಯನಮಸ್ಕಾರವೂ ವಿಧಾನದಲ್ಲಿ ಒಂದೇ ಆದರೂ ಗುಣದಲ್ಲಿ ಬಹಳ ವ್ಯತ್ಯಾಸವಿದೆ. ಅಲ್ಲದೆ ಪಾಶ್ಚಿಮಾತ್ಯರು ಸನ್ ಬಾತ್ ಮಾಡುವಾಗ ಗಂಡಸರು ಹೆಂಗಸರು ಸಹ ಕಲೆಯುವುದರಿಂದ ನೀತಿಗೆ ವಿರುದ್ಧ ವಾಗುವುದೆಂದು ಭಾರತೀಯರಿಗೆ ಅನಿಸುವುದಲ್ಲದೆ ಅದರಿಂದ ಮನಃಶುದ್ಧಿಗೆ ಆತಂಕವಾಗುತ್ತದೆ. ನಮ್ಮ

೧. ಪೂರ್ವಾಭಿಮುಖವಾಗಿ ನಿಂತುಕೊಂಡು, ಪಾದಗಳನ್ನು ಜೋಡಿಸಿ, ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಸೂರ್ಯನನ್ನು ವಂದಿಸಿರಿ.


ಸೂರ್ಯನಮಸ್ಕಾರವಾದರೋ ದೇಹಾರೋಗ್ಯಕ್ಕೂ ಪಾವಿ ತ್ರ್ಯಕ್ಕೂ ಅತ್ಯುತ್ತಮವಾದ ಸಾಧನೆಯಾಗಿದೆ ಎಂದು ಹೇಳಿದಲ್ಲಿ ಅತಿಶಯೋಕ್ತಿಯಾಗಲಾರದು. ಈ ಕಾರಣ



೩. ಪಾದಗಳನ್ನು ಅಗಲಿಸದೆಯೆ, ಮಂಡಿಯನ್ನು ಮಡಿಸದೆ, ಬಗ್ಗಿ, ಶಿರಸ್ಸನ್ನು ತಗ್ಗಿಸಿ ಎರಡು ಕೈಗಳಿಂದಲೂ ಭೂಮಿಯನ್ನು ಮುಟ್ಟಿರಿ.

ಗಳಿಂದಲೇ ನಮ್ಮ ಪೂರ್ವಜರು ಪ್ರತಿಯೊಬ್ಬರೂ ದಿನಾಲು ಸೂರ್ಯನಮಸ್ಕಾರ ಮಾಡಲೇಬೇಕೆಂದು ನಿಯಮಿಸಿದರು.

ಆದುದರಿಂದ ಸೂರ್ಯನಮಸ್ಕಾರ ಮತ್ತು ಪತಂಜಲಿಯ ಯೋಗಸೂತ್ರಾನುಸಾರವಾಗಿ ಸಕಲರೂ ಅಭ್ಯಾಸಮಾಡ ಬಹುದಾದ ಆಸನ, ಪ್ರಾಣಾಯಾಮ ಇವುಗಳ ನಿಯಮ, ವಿಧಾನ ಮತ್ತು ಉಪಯೋಗಗಳ ವಿಷಯವಾಗಿ ಸಚಿತ್ರ ಲೇಖನಗಳನ್ನು ಜಯಕರ್ನಾಟಕದ ವಾಚಕರ ಉಪ ಯೋಗಕ್ಕಾಗಿ ಈ ಅಂಕದ ಮೊದಲುಗೊಂಡು ಮುಂದಿನ ಎರಡು ಅಂಕಗಳಲ್ಲಿಯೂ ಪ್ರಕಟಿಸಬೇಕೆಂದಿದ್ದೇವೆ. ಅನಾದಿ ಯಾದ ಈ ಅಂಗಸಾಧನೆಗಳಿಗೆ ಪುನರುಜ್ಜೀವನ ಕೊಟ್ಟು, ತನ್ಮೂಲಕ ಜನಗಳಿಗೆ ಸುಲಭವಾಗಿ ರೋಗನಿವಾರಣೆಯ ಮಾರ್ಗ ತೋರಿಸಬೇಕೆಂಬುದೇ ಈ ನಮ್ಮ ಲೇಖನದ



೪. ಹಸ್ತಗಳ ಮೇಲೆ ದೇಹಭಾರ ವನ್ನು ಹಾಕಿ, ಕಾಲುಗಳನ್ನು ನೀಡಿ, ಭೂಮಿಯ ಮೇಲೆ ಚಿತ್ರದಲ್ಲಿರುವ ಹಾಗೆ ಮಲಗಿ, ನಂತರ ಮುಗಿದ ಹಾಗೆಯೆ ಹಸ್ತವನ್ನು ಜೋಡಿಸಿ ದಂಡ ಪ್ರಣಾಮವನ್ನು ಮಾಡತಕ್ಕದ್ದು.

ಮುಖ್ಯ ಉದ್ದೇಶ. ಈ ಧ್ಯೇಯವನ್ನು ಪ್ರಚಾರಮಾಡಲು ಸಹಾಯಕೊಟ್ಟ ಪತ್ರಿಕೆಯ ಸಂಪಾದಕರಿಗೆ ನಾವು ಋಣಿ ಯಾಗಿದ್ದೇವೆ.

ಸೂರ್ಯನಮಸ್ಕಾರದ ವಿಧಾನ

ಜಯಕರ್ನಾಟಕದ ಈ ಪುಟಗಳಲ್ಲಿ ತೋರಿಸಿರುವ [illegible] ಚಿತ್ರಗಳು ಸೇರಿ ಒಂದು ಸೂರ್ಯನಮಸ್ಕಾರವೆನಿಸುತ್ತ[illegible]



೬. ನೆಲಕ್ಕೆ ತಾಕಿರುವ ಪಾದ ಸೊಂಟಗಳನ್ನು ಬಿಟ್ಟು ಮಿಕ್ಕ ಭಾಗವನ್ನು ಚಿತ್ರದಲ್ಲಿ ಕಂಡಂತೆ ಮೇಲಕ್ಕೆ ಎತ್ತಿ ಸೂರ್ಯನನ್ನು ನೋಡಿರಿ.

ಪ್ರತಿಯೊಬ್ಬರು ಐದು ನಮಸ್ಕಾರಗಳಿಂದ ಆರಂಭಿಸ[illegible] ದೇಹಶಕ್ತಿಗನುಸರಿಸಿ ೧೦೮ ನಮಸ್ಕಾರಗಳವರೆಗೂ ಹೆಚ್ಚಿ[illegible] ಬೇಕು. ಆಧುನಿಕ ವ್ಯಾಯಾಮದ ಹಾಗೆ ಸೂರ್ಯನ[illegible] ಸ್ಕಾರವನ್ನು ಉಡುಪಿನೊಂದಿಗೆ ಎಲ್ಲಿ ಬೇಕಲ್ಲಿ, [illegible] ಮಾಡಲಾಗದು. ಪ್ರಾತಃಕಾಲದಲ್ಲಿ ಎದ್ದು, ಸ್ನಾನಮಾ[illegible] ಚಿತ್ರದಲ್ಲಿ ತೋರಿಸಿರುವಂತೆ ಒಂದು ಸಣ್ಣ ವಸ್ತ್ರದೊ[illegible] ಶುಚಿಯಾದ ಬಯಲು ಅಥವಾ ತೋಟದಲ್ಲಿ, [illegible] ಹೊಟ್ಟೆಯಲ್ಲಿರುವಾಗ, ಸೂರ್ಯಾಭಿಮುಖವಾಗಿ [illegible] ಕೊಂಡು ನಮಸ್ಕಾರಗಳನ್ನು ಮಾಡಬೇಕು. [illegible] ವಾದ ಮನಸ್ಸು ಮತ್ತು ದೇಹವು ಅತ್ಯಾವಶ್ಯಕವಾ[illegible] ಪ್ರಾತಃಕಾಲದಲ್ಲಿ ಮಾಡುವುದರಿಂದ ವೈಯೊಲೆಟ್ [illegible]



೫. ಕೈಗಳನ್ನು ಮೇಲಕ್ಕೆ ಎತ್ತದೆ ಶಿರಸ್ಸನ್ನು ಬಗ್ಗಿಸಿ ಕಾಲುಗಳನ್ನು ಹತ್ತಿರ ತಂದು ಸೊಂಟವನ್ನು ಮೇಲಕ್ಕೆ ಎತ್ತಿ ದರೆ ಚಿತ್ರದಲ್ಲಿರುವ ಆಕಾರ ಹೊಂದಬಹುದು.

(Violet Rays) ಎಂಬ ಸೂರ್ಯರಶ್ಮಿಗಳು ದೇಹ[illegible] ಅನೇಕ ರೋಗಗಳನ್ನು ನಾಶಮಾಡುವುವಲ್ಲದೆ [illegible] ರೋಗ್ಯವನ್ನು ಸಹ ಉಂಟುಮಾಡುತ್ತವೆ. ಈ ನಮ[illegible]

ಗಳನ್ನು ನಿಯಮದಿಂದ ಮಂತ್ರಪೂರ್ವಕವಾಗಿ ಮಾಡಿದಲ್ಲಿ ವಿಶೇಷ ಫಲವೂ, ಇಷ್ಟಾರ್ಥಸಿದ್ಧಿಯೂ ಲಭಿಸುವುದೆಂಬುದು ಹಿರಿಯರ ಅನುಭವವಾಗಿದೆ.

ಉಪಯೋಗಗಳು

ಸೂರ್ಯನಮಸ್ಕಾರ ಮಾಡುವುದರಿಂದ, ಹೃದಯ ಮತ್ತು ಶ್ವಾಸಕೋಶಗಳ ಜೀವಮಾನವು ಹೆಚ್ಚುವುದಲ್ಲದೆ, ದೇಹದಲ್ಲಿ ರಕ್ತವು ಶುದ್ಧವಾಗಿ, ತಾರುಣ್ಯವು ಪ್ರಾಪ್ತವಾಗುತ್ತದೆ. ಅಜೀರ್ಣ, ಕ್ಷಯ ಮುಂತಾದ ರೋಗಗಳು ಮಾಯವಾಗುವವು. ಬುದ್ಧಿಯು ತೀಕ್ಷ್ಣವಾಗುವುದು. ಯಾವ ವಿಧದಿಂದ ನೋಡಿದರೂ ಸೂರ್ಯನಮಸ್ಕಾರವು ಮಾನವನಿಗೆ ವಿಶೇಷ ಲಾಭದಾಯಕವಾಗಿದೆ.

ಜೀವನರಹಸ್ಯ

ಜೀವಿಗಳೆಲ್ಲವು ಹುಟ್ಟಿಹವಣ್ಣಾ !
ಜೀವನಕಾಗಿಯೆ ಕೂಡಿಹವಣ್ಣಾ !
ಜೀವಿಗಳನ್ನೇ ಹಡೆದಿಹವಣ್ಣಾ !
ಜೀವಿಸುವದಕೇ ಹೆಣಗುವವಣ್ಣಾ ॥ ೧ ॥


ಜೀವದಿ ಜೀವವು ಬೆರೆತಿಲ್ಲಣ್ಣಾ !
ಜೀವದ ಜೀವವು ಬಿಟ್ಟಿಲ್ಲಣ್ಣಾ !
ಜೀವದ ಗುಟ್ಟನು ತಿಳಿಯದ ಮುನ್ನ,
ಜೀವವ ಜಯಿಸಲು ಹೊರಟಿಹವಣ್ಣಾ ! ॥ ೨ ॥

ಜೀವದಿ ಜೀವವು ಬೆರೆಯದ ಮುನ್ನ,
ಜೀವದ ಜೀವನ ನಡೆವುದೆ ಅಣ್ಣ ?
ಜೀವವೆ ಜೀವನವಾಗದ ಮುನ್ನ,
ದೇವನ ಕಾಂಬುದು ಹೇಗಣ್ಣಾ ? ॥ ೩ ॥

—ಶಿ. ವಿ. ಅಡ್ಡಣಗಿ ವಕೀಲರು, ಬೆಳಗಾವಿ

ಜೀವಿಸಲು ಆಸೆ

ಲೇಖಕರು: 'ಮಂಕಾಲ್' ಮೈಸೂರು



"ಬೆಳಗಿನ ಹತ್ತರಿಂದ ಸಂಜೆಯ ಐದರ ವರೆಗೆ ಮೂಕಪ್ರಾಣಿಯಂತೆ ಅನೇಕ ವರ್ಷಗಳ ವರೆಗೆ ದುಡಿದರೆ ಬಂದ ಭಾಗ್ಯವೇನು? ಐವತ್ತೈದು ರೂಪಾಯಿ ಸಂಬಳ ಸಿಕ್ಕರೂ ತುಂಬಿದ ಕುಟುಂಬದ ಪೋಷಣೆಯಲ್ಲಿಯೆ, ಅದೆಲ್ಲ ವೆಚ್ಚವಾಗುತ್ತದೆ. ಹೀಗೆ ಎಲ್ಲಿಯವರೆಗೆ ದುಡಿಯುವುದು! ಇದಕ್ಕೆ ಕೊನೆಯೆಲ್ಲಿ? ನನ್ನ ಬಾಳಿನಲ್ಲಿ ಎಂದಾದರೂ ಹೊಸತನದ ಸೆಲೆಯೊಡೆಯಬಹುದೇ?........ಅಸಂಭವ!" ಎಂದು ನಿಟ್ಟುಸಿರುಗರೆದ ಭಾಸ್ಕರನು ತಾನಾಗಿಯೇ ತನ್ನ ಬಾಳನ್ನು ಕೊನೆಗಾಣಿಸುವ ನಿಶ್ಚಯ ಮಾಡಿದನು. ಆದರೆದು ಅವನಿಗೆ ಸಾಧ್ಯವಾಯಿತೆ!

ಬೀದಿಯಲ್ಲಿ ಕಾಲಿಟ್ಟು ಈಗ 'ಪರವಾಯಿಲ್ಲ, ನಾನೊಬ್ಬನೆ ಇದ್ದೇನೆ; ಯಾವರೀತಿ ಆತ್ಮಹತ್ಯ ಮಾಡಿಕೊಳ್ಳಲಿ?" ಎಂದು ಯೋಚಿಸಿದ.

"ಟ್ರಿಕ್, ಟಕ್ ಟಕ್....ಟಕ್ ಟಕ್....ಟಕ್ ಟಕ್....ಕ್ಲಂಗ್"

ಈ ವಿಕಾರಧ್ವನಿಯು ತನ್ನ ಜೀವನದ ಅಂತ್ಯದ ವರೆಗೆ—ಅಲ್ಲ, ಪ್ರಪಂಚದ ಅಂತ್ಯದ ವರೆಗೆ—ಇರುತ್ತದೆಯೋ ಏನೋ, ಎಂದು ಭಾಸ್ಕರನು ಆಶ್ಚರ್ಯಪಟ್ಟನು. ಆಯಾಸ ಹೊಂದಿದ ಅವನ ಬೆರಳುಗಳು, ಟೈಪ್‌ರೈಟರಿನ ಮೇಲೆ ಆಡುತ್ತಿದ್ದಾಗ, ಅವನ ಮನಸ್ಸು ತನ್ನ ವ್ಯರ್ಥ ಜೀವನದ ಬಗ್ಗೆ ದೀರ್ಘವಾಗಿ ಆಲೋಚಿಸುತ್ತಿತ್ತು.

ಅವನ ಸುತ್ತಲು ಗುಮಾಸ್ತೆಗಳೂ, 'ಟೈಪಿಸ್ಟ್'ಗಳೂ, ನೇಗಿಲಿಗೆ ಹೆಗಲನ್ನು ಕೊಟ್ಟಿರುವ ಮೂಕಜೀವಿಗಳಂತೆ ಬಗ್ಗಿಕೊಂಡು ಕೆಲಸಮಾಡುತ್ತಿದ್ದರು. ಅವರ ಮಿಷನುಗಳು ಒಂದು ವಿಧವಾದ ಅವಿಲಕ್ಷಣ ಧ್ವನಿಯನ್ನು ಮಾಡುತ್ತಿದ್ದುವು.

"ಟಕ್....ಟಕ್....ಟಕ್‌ಟಕ್....ಟಕ್‌ಟಕ್....ಕ್ಲಂಗ್"

ಹೊರಗೆ ವಿಪರೀತ ಮಳೆ. ಆ ಮಟಮಟ ಮಧ್ಯಾಹ್ನದಲ್ಲೂ ಸಹ ಆ ಆಫೀಸಿನಲ್ಲಿ ದೀಪಗಳನ್ನು ಹತ್ತಿಸಿದ್ದರು. ಆದರೆ, ಆ ದೀಪಗಳ ಬೆಳಕು, ಪ್ರಕಾಶಮಾನವಾದ ಸೂರ್ಯನ ಬೆಳಕಿಗೆ ಸರಿಸಮಾನವಾಗದೆ, ಮಸಕುಮಸಕಾಗಿ, ಆಫೀಸನ್ನು ಮಂಕುಮಾಡಿತ್ತು. ಆಗಾಗ ಹೊರಗಿನಿಂದ ಬಿರುಸಾಗಿ ಗಾಳಿ ಬೀಸಿ, ಕಿಟಕಿ ಬಾಗಿಲುಗಳನ್ನು ಗೋಡೆಗೆ ಬಡಿದು, ಮಳೆ ಹನಿಗಳನ್ನು ಒಳಗೆ ದೂಡಿ, ನೇತಾಡುತ್ತಿರುವ ದೀಪಗಳನ್ನು ತೂಗಾಡಿಸಿ, ಕೆಲಸ ಮಾಡುತ್ತಿರುವ ಗುಮಾಸ್ತೆಗಳ ನೆರಳು ಚಿತ್ರವಿಚಿತ್ರವಾಗಿ ನೆಲದ ಮೇಲೆ ಬೀಳುವಂತೆ ಮಾಡುತ್ತಿತ್ತು. ಆದರೆ ಅವರಿಗೆ ಈ ಚಿತ್ರವಿಚಿತ್ರಗಳನ್ನು ನೋಡಿ, ಆನಂದಿಸಲು ಅವಕಾಶವಿಲ್ಲ. ಗಾಳಿಯು ಕಾಗದಗಳನ್ನು ಹಾರಿಸಿಕೊಂಡು ಹೋಗುವುದೆಂದು ತಿಳಿದಾಗ ಮಾತ್ರ ಅವರು ತಮ್ಮ ಕೆಲಸಗಳನ್ನು ಬಿಟ್ಟು, ಕಾಗದಗಳನ್ನು ಮಡಿಸಿ, ಒಂದುಗೂಡಿಸಿ ಜೋಡಿಸಿ, ಇಡುತ್ತಿದ್ದರು. ಇಲ್ಲದಿದ್ದಲ್ಲಿ ಅವರ ಬೆರಳುಗಳು ಟೈಪ್‌ರೈಟರಿನ ಮೇಲೆ ಓಡಾಡುತ್ತಿದ್ದುವು. ಸ್ವಾಧೀನ ಸ್ಥಾನದ, ವ್ಯವಹಾರಗಳ ನೂರಾರು ಕಾಗದಪತ್ರಗಳ ನೂರಾರು ನಕಲುಗಳನ್ನು ಮಾಡಲಾಗುತ್ತಿತ್ತು. ಒಂದು ಕಡೆ, ಒಬ್ಬ ಲಕ್ಷಾಧೀಶ್ವರನ ಆಸ್ತಿಯನ್ನು ... ಲಾಗುತ್ತಿತ್ತು. ಅಲ್ಲಿ ಒಬ್ಬ ಹೆಂಗಸು, ತನ್ನ ಮೋಸಗಾರ ಪ್ರಣಯಿಯಿಂದ, ಪರಿಹಾರರೂಪವಾಗಿ ಅಗಾಧವಾದ ... ವನ್ನು ಕೇಳುತ್ತಿದ್ದಳು. ಇನ್ನೊಂದು ಕಡೆ, ಒಬ್ಬ ... ವೆಯು, ದತ್ತುಸ್ವೀಕಾರವನ್ನು ರದ್ದುಪಡಿಸಲು ಪ್ರಯತ್ನಿಸುತ್ತಿದ್ದಳು. ಜೀವವನ್ನು ಮುಳುಗಿಸುವ ಕಾ... ಕೆಲಸಗಳು "ಕಾರ್ಬನ್ ಕಾಪಿಗಳು—ಇನ್ನೂ ... 'ಟೈಪಿಸ್ಟ್'ಗಳಿಗೆ ಹೇಳಿ, ಎಂದೂ ಕಾಪಿಗಳು" ಎಂದು ... ಮುಗಿಯದ, ಕಿವಿಯನ್ನು ತೂತು ಮಾಡುವ, ... ವಾದ ಧ್ವನಿಯಲ್ಲಿ ಅವರನ್ನು ಮುಳುಗಿಸುತ್ತಿದ್ದುವು.

"ಟಿಕ್‌ಟಿಕ್....ಟಕ್‌ಟಕ್....ಟಕ್‌ಟಕ್....ಟಕ್‌ಟಕ್.... ಕ್ಲಂಗ್."

ಭಾಸ್ಕರನ ಬೆರಳುಗಳು ನೋಯುತ್ತಿದ್ದುವು; ಮೆದುಳು ಮುರಿಯುತ್ತಿತ್ತು. ಮಳೆಯ ಭೀಕರ ಶಬ್ದವೂ ಸಹ, ಆ ವಿಕಾರ ಧ್ವನಿಯಲ್ಲಿ ಅಡಗಿ ಹೋಯಿತು. ಇತ್ತೀಚಿಗೆ, ಆ ವಿಚಿತ್ರ ಧ್ವನಿಯು ಆ ದೊಡ್ಡ ಕಟ್ಟಡವನ್ನು ಮಾತ್ರ ಆವರಿಸದೆ, ಇಡೀ ಪ್ರಪಂಚವನ್ನೇ ಆವರಿಸಿತೆಂದು ಭಾಸ್ಕರನ ಭಾವನೆ. ಅದು ಕಷ್ಟಕರವಾದ ತನ್ನ ಜೀವನದ ಹೆಗ್ಗುರುತೆಂದು ಅವನು ಹೇಳುತ್ತಿದ್ದನು.

ಒಂದೊಂದು ವೇಳೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದ: "ನಾವೇಕೆ ಜೀವಿಸುತ್ತೇವೆ? ನಾವೇಕೆ ಸಾಯುವುದಿಲ್ಲ? ಈ ಗೋಳೆಲ್ಲಾ ಏಕೆ?....ಏಕೆ?....ಎಲ್ಲರೂ ಇನ್ನೂ ಜೀವಿಸಬೇಕೆಂದು ಆಸೆಪಡುವುದರಲ್ಲಿ ಅರ್ಥವೇನು?...."

ಅವನು ಆ ಕಚೇರಿಯಲ್ಲಿ ಕಳೆದ ಮೂರು ವರ್ಷಗಳಿಂದ ಕೆಲಸಮಾಡುತ್ತಿದ್ದಾನೆ. ಅವನಿಗೆ ಎರಡಾವರ್ತಿ 'ಬಡ್ತಿ' ಸಿಕ್ಕಿ, ಈಗ ಅವನು ತಿಂಗಳಿಗೆ ಐವತ್ತೈದು ರೂಪಾಯಿ ಸಂಬಳ ಪಡೆಯುತ್ತಿದ್ದಾನೆ. ಮಾತುಂಗದ ಒಂದು ಮನೆಯಲ್ಲಿ ಕೊಠಡಿಯನ್ನು ಮಾಡಿಕೊಂಡು, ಒಂದು ಅಗ್ಗವಾದ ಹೋಟಲಿನಲ್ಲಿ ಊಟಮಾಡುತ್ತಾನೆ. ಆದಾಗ್ಯೂ ಬಹು ಕಷ್ಟದಿಂದ ಅವನು, ತಿಂಗಳಿಗೆ ಇಪ್ಪತ್ತು ರೂಪಾಯಿಗಳನ್ನು ಹಳ್ಳಿಯಲ್ಲಿರುವ ತನ್ನ ಸಂಸಾರಕ್ಕೆ—ತನ್ನ ತಾಯಿ ತಂದೆಗಳು, ಇಬ್ಬರು ತಂಗಿಯರು, ನಾಲ್ವರು ತಮ್ಮಂದಿರು— ಕಳುಹಿಸುತ್ತಾನೆ.

ಅವನು ಬೆಳಿಗ್ಗೆ ಹತ್ತರಿಂದ, ಸಂಜೆ ಐದರ ವರೆಗೆ ತನ್ನ ಕಚೇರಿಯಲ್ಲಿ ದುಡಿಯಬೇಕು. ದಿನದ ಇತರ ಭಾಗವನ್ನು ಹೇಗೆ ಕಳೆಯುತ್ತಾನೆನ್ನುವುದು ಅವನಿಗೇ ತಿಳಿಯದು. ಅವನು, ತನ್ನ ಬೆರಳುಗಳು ಸೋತು ತನ್ನ ಮೆದುಳು ಮುರಿಯುವ ವರೆಗೂ 'ಟೈಪ್‌ರೈಟರ'ನ್ನು ಕುಟ್ಟಿ, ಬೂದಿಯಂತಿದ್ದ ಆಹಾರವನ್ನು ತನ್ನ ಹೊಟ್ಟೆಗೆ ತುಂಬಿ, ತೆಳುವಾದ ತನ್ನ ಹಾಸಿಗೆಯ ಮೇಲೆ ಕೆಲವು ಕಾಲ ಉರುಳಿಕೊಂಡಿದ್ದು, ಬೆಳಗಿನ ಜಾವದಲ್ಲೆದ್ದು ತನ್ನ ಕೆಲಸಕ್ಕಾಗಿ ಕಚೇರಿಗೆ ಓಡುತ್ತಾನೆ. ಇದಿಷ್ಟೆ ಅವನಿಗೆ ಗೊತ್ತಿದ್ದುದು. ಪ್ರತಿನಿತ್ಯವೂ ಕೆಲಸವು ಅವನನ್ನು ಕೊಲ್ಲುತ್ತಿತ್ತು. ಒಂದು ಹಿಡಿ ಅನ್ನ, ಮೂರ್ಛೆಯಂತಿದ್ದ ಕೆಲವು ಗಂಟೆಗಳ ನಿದ್ದೆಯು, ಅವನನ್ನು ಕೊಲೆಗೆ ಪುನಃ ಸಿದ್ಧಗೊಳಿಸುತ್ತಿದ್ದುವು. ಹೀಗೆ ಅವನ ಜೀವನಚಕ್ರವು ಸುತ್ತುತ್ತಿತ್ತು.

ಪ್ರತಿನಿತ್ಯವೂ ಹತ್ತು ಗಂಟೆಗೆ ಅವನು ಕಚೇರಿಗೆ ಬಂದಾಗ ಅವನ ಶರೀರದಾದ್ಯಂತವೂ ನಡುಕವುಂಟಾಗುತ್ತಿತ್ತು. ತನ್ನ ಶಕ್ತಿಯನ್ನೆಲ್ಲಾ ಸಂಗ್ರಹಿಸಿ, 'ಟೈಪ್‌ರೈಟರಿ'ನ ಮುಚ್ಚಳವನ್ನು ತೆಗೆದು, 'ಟೈಪ್‌ರೈಟರಿ'ನ ಮೇಲೆ ತನ್ನ ಬೆರಳುಗಳನ್ನಾಡಿಸುತ್ತಾ, 'ಸಂಗೀತ'ವನ್ನಾರಂಭಿಸುವನು.

"ಟಿಕ್‌ಟಿಕ್...ಟಿಕ್‌ಟಿಕ್...ಟಿಕ್‌ಟಿಕ್...ಕ್ಲಿಂಗ್"

ಆಗಾಗ್ಗೆ ಅವನು ತನ್ನ ಸುತ್ತಲೂ ಇರುವ, ತನ್ನ ಸಹೋದ್ಯೋಗಿ 'ಟೈಪಿಸ್ಟ್'ಗಳ ಸೈನ್ಯವನ್ನು ನೋಡಿ, ಯೋಚನೆ ಗಾರಂಭಿಸುವನು.

ಜೀವನವು ಅವರಿಗೆ ಭಾರವಲ್ಲವೆ? ತನ್ನಂತೆಯೇ ಅವರಿಗೂ ಕಮ್ಮಿ ಸಂಬಳ; ಕೆಲಸ ಹೆಚ್ಚು. ಅವರಿಗೂ ಪೋಷಣೆಗಾಗಿ ಸಂಸಾರವು ಗಂಟುಬಿದ್ದಿತ್ತು...ತಂದೆತಾಯಿ ಎಲ್ಲರೂ ಇದ್ದಾರೆ. ಅವರೂ ಆಯಾಸದಿಂದ ನರಳಬೇಕು. ಅವರಿಗೂ ಹಸಿವು, ನೀರಡಿಕೆಗಳು ತಿಳಿದಿರಬೇಕು. ಅವರೇಕೆ ಜೀವಿಸಿದ್ದರು? ಎಲ್ಲರೂ ಹುಚ್ಚರು! ಈ ಉಪಯೋಗವಿಲ್ಲದ ಕೆಲಸವು ಅವರಿಗೆ ಬೇಸರವನ್ನುಂಟುಮಾಡಿಲ್ಲವೆ? ಅವರು ಈ ಜೀವದ ಜ್ವಾಲೆಯನ್ನೇಕೆ ಆರಿಸಲಿಲ್ಲ? ವಿ...ಚಿ...ತ್ರ.

"ವಿ.../ಚಿ...ತ್ರ!" ಇದನ್ನು ಪುನಃ ಪುನಃ ತನ್ನಲ್ಲಿಯೇ ಹೇಳಿಕೊಳ್ಳುತ್ತಾನೆ. ಅವನ ದೀರ್ಘವಾದ, ಕಂಗೆಟ್ಟ ಆಲೋಚನೆಯು ಇದನ್ನೇ ಅಂತ್ಯವಾಗಿ ನಿರ್ಧರಿಸಿರುವಂತೆ ಕಾಣುತ್ತದೆ.

ಅದರಂತೆಯೇ ಈ ದಿನವೂ ಅವನು ಅವರ ಕಡೆ ನೋಡಿದಾಗ ಈ ಪದವನ್ನು ತನ್ನಲ್ಲಿ ಹೇಳಿಕೊಂಡ.

ಅವರೆಲ್ಲರೂ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು.

"ಟಿಕ್‌ಟಿಕ್...ಟಿಕ್‌ಟಿಕ್...ಟಿಕ್‌ಟಿಕ್....ಟಿಕ್‌ಟಿಕ್....ಕ್ಲಿಂಗ್"

ತನ್ನ ಚಿಕ್ಕವಯಸ್ಸಿನಲ್ಲಿ ಭಾಸ್ಕರನು ಒಂದು ನೇಯ್ಗೆಯ ಕಾರ್ಖಾನೆಗೆ ಹೋಗಿದ್ದು ಅಲ್ಲಿನ ನೂರಾರು ಕೆಲಸಗಾರರು, ಮೂಗರಂತೆ ಮಾತಿಲ್ಲದೆ ಕೆಲಸಮಾಡುವುದನ್ನು ನೋಡಿದ್ದನು. ಈಗ ಇದ್ದಕ್ಕಿದ್ದಂತೆಯೇ ಕಾರ್ಖಾನೆಯನ್ನು ಜ್ಞಾಪಿಸಿಕೊಂಡ. ಅದರಿಂದ ಅವನು ಇನ್ನೂ ಮಂಕನಾದ.

"ಈ ಹೇಡಿಗಳು ಬೇಕಾದರೆ, ಜೀವಕ್ಕೆ ಅಂಟಿಕೊಂಡಿರಲಿ. ನಾನು ಇವರಂತೆಯಲ್ಲ. ಈ ಕ್ರೌರ್ಯವನ್ನೆಂದಿಗೂ ನಾನು ಸಹಿಸಲಾರೆ. ನಾನು ಧೈರ್ಯವಾಗಿರುತ್ತೇನೆ. ನಾನು ನನ್ನ ಜೀವನವನ್ನು ಈ ದಿನ ಕೊನೆಗಾಣಿಸುತ್ತೇನೆ."

ಅವನಿಗೆ ಆತ್ಮಹತ್ಯದ ಭಯವು ತಪ್ಪಿ ಬಹುಕಾಲವಾಗಿತ್ತು. ಇರಬಹುದು...ಏಕೆಂದರೆ, ಜೀವನವು ಅವನಿಗೆ ಅತಿ ಬೇಸರವನ್ನುಂಟುಮಾಡಿತ್ತು. ಹೇಗಾದರೂ ಇರಲಿ, ಜೀವನವನ್ನು ಕೊನೆಗಾಣಿಸಲು ಭಾಸ್ಕರನು ಧೃಢವಾಗಿ ನಿಶ್ಚಯಿಸಿದ್ದನು.

ಕಚೇರಿಗೆ ಬರಲು ನಾಳೆಯ ದಿನ ಅವನು ಜೀವಿಸಿರುವುದೇಯಿಲ್ಲ. ಅವನು ಸತ್ತುಹೋಗಿರುತ್ತಾನೆ. ಹೌದು! ಅವನು ಸತ್ತೇಹೋಗಿರುತ್ತಾನೆ.

ಅವನು ಈ ರೀತಿ ನಿಶ್ಚಯಿಸಿದಾಗ ಅದು ವಿಚಿತ್ರವಾಗಿ ಕಂಡಿತು. ಮೇಜಿನ ಮೇಲೆ ಕಾಗದಗಳನ್ನು ಜೋಡಿಸಿ, 'ಟೈಪ್‌ರೈಟರ'ನ ಗುಂಡಿಗಳನ್ನೊತ್ತಲು ಮೊದಲುಮಾಡಿದನು. ಅಭ್ಯಾಸವೆಂಬ ಆ ಕ್ರೂರಿಯು "ನೀನು ನಾಳೆ ಸತ್ತುಹೋಗುತ್ತೀಯೆ. ನಿಜವೇನು? ಆಗಬಹುದು. ಆದರೆ ನಾಳೆ ಇನ್ನೂ ಬಂದಿಲ್ಲ. ಈ ದಿನವೇ ನಿನ್ನ ಕೆಲಸಕ್ಕೆ ಕಡೆಯ ದಿನವಾದರೂ, ಈ ದಿನದ ಕೆಲಸವನ್ನು ಪೂರ್ತಿಯಾಗಿ ಮಾಡಬೇಕು." ಎಂದು ಹೇಳಿದಂತೆ ಆಯಿತು.

ಅವನು ಈ ರೀತಿ ಎಷ್ಟು ಹೊತ್ತು ಕೆಲಸ ಮಾಡಿದನೋ ತಿಳಿಯದು. ಅವನ ಬೆರಳುಗಳು ಕೆಲಸ ಮಾಡುತ್ತಿದ್ದಾಗ, ಅವನ ಮನಸ್ಸು ಯೋಚಿಸುತ್ತಿತ್ತು: "ಜೀವನವನ್ನು ಕೊನೆಗಾಣಿಸಬೇಕು...ಹೇಗೆ?...ಇದನ್ನು ಯಾರೂ ಹೇಳಿ, ಅಭ್ಯಾಸಮಾಡಿಸುವುದಿಲ್ಲ."

ಅವನು ತಾನು ಓದಿದ, ಕೇಳಿದ, ಆತ್ಮಹತ್ಯಮಾಡಿಕೊಳ್ಳುವ ಎಲ್ಲಾ ವಿಧಾನಗಳನ್ನೂ ಜ್ಞಾಪಿಸಿಕೊಂಡನು. ವಿಷ, ಬೆಂಕಿ, ನೀರು, ಹಗ್ಗ—ಇವೇ ಮೊದಲಾದ ಹಲವಾರು ಬಗೆಗಳಿವೆ. ಭಾಸ್ಕರನು ದೀರ್ಘವಾಗಿ ಆಲೋಚನೆ ಮಾಡಿದ. ಆದರೆ ಯಾವುದೂ ಸುಲಭವೆಂದು ತೋರಲಿಲ್ಲ. ಬಹಳ ಕಾಲ ಯೋಚಿಸಿ ಕಡೆಗೆ, ಆಫೀಸಿನಲ್ಲಿ ಕೆಲಸಮಾಡಿದ ಮೇಲೆ, ಅಲ್ಲಿಂದ ತಪ್ಪಿಸಿಕೊಂಡು, ಸಂಜೆ ನಿಧಾನವಾಗಿ ಯೋಚಿಸಬೇಕೆಂದು ನಿರ್ಧರಿಸಿದ.

ಅವನು ಮತ್ತೆ ಕೆಲಸಕ್ಕಾರಂಭಿಸಿದ. ಅವನ ಪ್ರಪಂಚವು ಆ ವಿಕಾರಧ್ವನಿಯಲ್ಲಿ ಲೀನವಾಯಿತು.

"ಟಕ್‌ಟಕ್...ಟಕ್‌ಟಕ್...ಟಕ್‌ಟಕ್...ಟಕ್‌ಟಕ್...ಕ್ಲಿಂಗ್."

ಕಡೆಗೆ ಆಫೀಸು ಮುಗಿಯಿತು. ಅವನು ಯಾರಿಗೂ ತಿಳಿಯದಂತೆ ಜಾರಿಕೊಳ್ಳಲು ಪ್ರಯತ್ನಿಸಿದ. ಆದರೆ ಬ್ಯಾನರ್ಜಿ ಅವನ ಪಕ್ಕದಲ್ಲೇ ಇದ್ದವನು, ಅವನನ್ನು ಕರೆದ.

"ಬನ್ನಿ, ಇಬ್ಬರೂ ಸ್ವಲ್ಪ ಟೀ ಕುಡಿಯೋಣ."

"ಬೇಡ, ಥ್ಯಾಂಕ್ಸ್" ಭಾಸ್ಕರನು ಸಿಡುಕಿನಿಂದ ಹೇಳಿ[illegible]

"ಹೋಗಲಿ, ಐಸ್‌ಕ್ರೀಂ ತೆಗೆದುಕೊಳ್ಳೋಣವೆ?"

"ಥ್ಯಾಂಕ್ಸ್, ಬೇಡ."

"ಏನ್ರೀ ನನಗೆ ಗೊತ್ತು. ಟೀ ಐಸ್‌ಕ್ರೀಂ ಎಲ್ಲಾ ಬಹಳ ಕಮ್ಮಿ. ಆದರೆ ದಯವಿಟ್ಟು ಹಾಗೆ ಹೇಳಬೇಡಿ. ಯಾರಿಗೆ ಗೊತ್ತು? ನಾಳೆ ನಾನೇ ನಿಮ್ಮನ್ನು ತಾಜ್‌ಮಹಲ್ ಹೋಟಲಿಗೆ ಕರೆದುಕೊಂಡು ಹೋಗಬಹುದು."

"ನಿಜವಾಗಿಯೂ?"

"ತಮಾಷೆಯಲ್ಲರೀ! ನಾಳೆಯ ದಿನ ಈ ವೇಳೆ ನಾನು ಲಕ್ಷಾಧೀಶನಾಗಿರಬಹುದು."

"ಅದು ಹೇಗೆ?"

"ಇಷ್ಟೇ. ನನ್ನಲ್ಲಿ ಒಂದು ಡರ್ಬಿ ಟಿಕೆಟ್ಟಿದೆ. ನ[illegible]ಗೇನೋ ಬಹಳ ನಂಬಿಕೆ—ನನಗೇ ಮೊದಲನೆಯ ಬ[illegible]ಮಾನ....ಅದು ಸರಿ....ನೀವೇಕೆ ಟಿಕೆಟ್ ತೆಗೆದುಕೊ[illegible]ಲಿಲ್ಲ?"

ಆ ಕರೀ ಸ್ಥೂಲದೇಹಿಯು, ತನ್ನ ದೇಹವನ್ನೇ [illegible]ಲಾರದೆ, ಕನ್ನಡಕದ ಗಾಜಿನ ಹಿಂದೆ, ಸಣ್ಣ ಸಣ್ಣ ಕಣ್ಣುಗಳನ್ನು ಪಿಳಪಿಳನೆ ಆಡಿಸುತ್ತಾ, ಕೊಳೆತುಂಬಿದ [illegible]ಗಳನ್ನು ಕೆರಿಯುತ್ತಾನೆಂದು ಭಾಸ್ಕರನಿಗೆ ಆಶ್ಚರ್ಯ.

ಅವನು ತಕ್ಷಣವೇ "ನಾನು ಒಂದು ಭಾರೀ ಟಿಕೆಟ್ ಈ ದಿನ ತೆಗೆದುಕೊಳ್ಳುತ್ತೇನೆ."

"ಈ ದಿನ, ಅದು ಹೇಗೆ? ಕಾಲಾತಿರೇಕವಾಯಿತಲ್ಲ" ಬ್ಯಾನರ್ಜಿಯು ನಗುವಿನಿಂದ ಹೇಳಿದ.

ಭಾಸ್ಕರನು ಅವನೊಡನೆ ಮಾತನಾಡದೆ ಹೊರಟು ಹೋದ.

ಬೀದಿಯಲ್ಲಿ ಕಾಲಿಟ್ಟು, "ಈಗ ಪರವಾಯಿಲ್ಲ. ನಾನೊ[illegible]ಬ್ಬನೇ ಇದ್ದೇನೆ. ಯಾರೂ ನನ್ನನ್ನು ಅಡ್ಡಿಪಡಿಸಲಾ[illegible] ಈಗ ಕಾಲ ಕಳೆಯದೆ, ಯಾವ ರೀತಿ ಆತ್ಮಹತ್ಯ ಮಾಡಿಕೊಳ್ಳಬೇಕೋ ನಿರ್ಧರಿಸುತ್ತೇನೆ."

ಆತ್ಮಹತ್ಯ ಮಾಡಿಕೊಳ್ಳಲು ಯಾವ ವಿಷವನ್ನ[illegible] ಯೋಗಿಸುತ್ತಾರೆ? ಆ ವಿಚಾರವನ್ನು ಅವನು ಅನೇ[illegible] ವೃತ್ತಿ ಕಾದಂಬರಿಗಳಲ್ಲೂ ಪತ್ರಿಕೆಗಳಲ್ಲೂ ಓದಿದ್ದ. ಆ[illegible] ಜ್ಞಾಪಕಕ್ಕೆ ಬರಲಿಲ್ಲ. ಬಂದರೂ ಅವುಗಳನ್ನು ಪಡೆ[illegible] ಬಗೆ ತಿಳಿಯಲಿಲ್ಲ. ಜನರು ಅಫೀಮಿನ ಅಂಗಡಿಗೆ ಹೋ[illegible] ಒಂದೆರಡು ತೊಲಾ ಅಫೀಮನ್ನು ತರುತ್ತಾರೆಯೆ? ಅಥ[illegible] ಔಷಧಿ ಅಂಗಡಿಗೆ ಹೋಗಿ Arsenic ತರುತ್ತಾರೆಯೇ?

ಕೆಲಸವನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ಮಾಡಲು ಸಾಧ್ಯವಿಲ್ಲವೆ? ಅಂಗಡಿಯವರು ಕೇಳಿದರೆ ಏನು ಹೇಳಬೇಕು? ಅವನಿಗೆ ಅನುಮಾನ ಉಂಟಾದರೆ?........

ಯೋಚನೆ ಬಗೆಹರಿಯಲಿಲ್ಲ. ಸಾಯಲು ಸಿದ್ಧವಾಗಿದ್ದರೂ, ಸಾಯುವ ಬಗೆ ಹೊಳೆಯದೆ, ಈ ರೀತಿ ಅಡ್ಡಿ ಆತಂಕಗಳನ್ನು ತಂದೊಡ್ಡಿರುವುದು ಆಶ್ಚರ್ಯ.

ಸುತ್ತಲೂ ನೋಡಿದ; ಪ್ರತಿಯೊಬ್ಬನೂ ತನ್ನ ಜೀವವನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಿದ್ದ. ಮೋಟಾರು, ಲಾರಿ, ಟ್ರಾಂ ಮೊದಲಾದ ನೂರಾರು ಯಮದೂತರು ಜನರನ್ನು ಅಡ್ಡ ಹಾಕುತ್ತಿದ್ದರು. ಜನರೆಲ್ಲರೂ ಬುದ್ಧಿವಂತಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಅಲ್ಲಿ ಒಂದು ದೊಡ್ಡ ಲಾರಿಯು ವೇಗವಾಗಿ ಬರುತ್ತಿತ್ತು.

ಆ ಮುದಿ ಕುರುಡನು ಲಾರಿಗೆ ಸಿಕ್ಕು ಅಜ್ಜಿ ಬಜ್ಜಿಯಾಗುತ್ತಾನೆಂದು ಭಾಸ್ಕರನು ಊಹಿಸಿದ. ಮುದುಕನಿಗೂ ಲಾರಿಗೂ ಒಂದೇ ಮೊಳ ಬಿಟ್ಟಿದೆ. ಆ ಭೀಕರ ದೃಶ್ಯವನ್ನು ನೋಡಲಾರದೆ, ಅವನು ಕಣ್ಣು ಮುಚ್ಚಿಕೊಳ್ಳುವುದರಲ್ಲಿದ್ದ. ಲಾರಿಯ ಬ್ರೇಕುಗಳು ಅರೆಯುವಂತೆ ಶಬ್ದ ಮಾಡಿದುವು. ಆ ಮುದುಕನು ಛಂಗನೆ ಪಕ್ಕಕ್ಕೆ ಹಾರಿದ. ಆಶ್ಚರ್ಯ ಆಶ್ಚರ್ಯ; ಆ ಮುದುಕನ ಪ್ರಾಣವುಳಿಯಿತು!

ಭಾಸ್ಕರನು ಅವನಲ್ಲಿಗೆ ಹೋದ. ಆ ಮುದುಕನಿಗೆ ತೊನ್ನು ಮತ್ತು ಕುಷ್ಠರೋಗ. ಮೂಗೆಲ್ಲಾ ತಿಂದು ಹೋಗಿತ್ತು.

ಆದರೂ ಆ ಮುದುಕನಿಗೆ ಜೀವಿಸಿರಲು ಆಸೆ. ಅವನಿಗೆ ತನ್ನ ಪ್ರಾಣವು ಅತಿ ಬೆಲೆಯುಳ್ಳದ್ದು. ಏಕೆ? ಎಲ್ಲರಿಗೂ ಜೀವಿಸಲು ಆಸೆಯಿರಲು ಕಾರಣವೇನು?........

ವೇದಾಂತಕ್ಕೆ ಈಗ ಅವಕಾಶವಿಲ್ಲ. ಹೇಗೆ ಪ್ರಾಣ ಕಳೆದುಕೊಳ್ಳಬೇಕೋ ಬೇಗ ನಿಶ್ಚಯಿಸಬೇಕು.

ಅವನು ಸ್ಟೇಶನ್‌ಗೆ ಬಂದು ರೈಲು ಹತ್ತಿದಾಗ, ಇದ್ದಕ್ಕಿದ್ದಂತೆಯೇ ಒಂದು ಅಭಿಪ್ರಾಯವು ಹೊಳೆಯಿತು.

ರೈಲಿಗೆ ಸಿಕ್ಕು ಪ್ರಾಣವೇಕೆ ಬಿಡಬಾರದು?....ಏನೂ ಕೊಳ್ಳಬೇಕಾಗಿಲ್ಲ. ಯಾರ ಪ್ರಶ್ನೆಗೂ ಉತ್ತರ ಬೇಕಾಗಿಲ್ಲ. ದೀರ್ಘಕಾಲ ನರಳಬೇಕಾಗಿಲ್ಲ. ಒಂದು ಘಳಿಗೆ ಧೈರ್ಯವಾಗಿ ಮಲಗಿದರೆ ಸಾಕು. ದೇಹವು ನುಚ್ಚು ನೂರಾಗುತ್ತದೆ....ಅದ್ಭುತವಾದ ಅಭಿಪ್ರಾಯ!

ಯಾವಾಗ? ಎಲ್ಲಿ? ಯಾರಿಗೂ ಪತ್ತೆಯಾಗಕೂಡದು. ....ರೂಮಿನಿಂದ ಹತ್ತು ನಿಮಿಷ ನಡೆದರೆ ರೈಲು [illegible]ತ್ತದೆ. ಅಲ್ಲಿ ಜನಗಳ ಗಲಾಟೆಯೂ ಇಲ್ಲ. ಪ್ರತಿನಿತ್ಯವೂ ರಾತ್ರಿ ಹನ್ನೊಂದಕ್ಕೆ ವೇಗವಾಗಿ ರೈಲೂ ಹೋಗುತ್ತದೆ.

ಆ ರೈಲಿಗೆ ಸಿಕ್ಕಿ ಪ್ರಾಣ ಬಿಡಬೇಕೆಂದು ಭಾಸ್ಕರನು ನಿಶ್ಚಯಿಸಿದ.

ಸುತ್ತಲೂ ನೋಡಿದ. ಸುತ್ತಲೂ ಸಾಲು ಸಾಲಾಗಿ ಜನರು ಸುಸ್ತಾಗಿ ಮೂರನೆ ತರಗತಿಯ ಗಾಡಿಯಲ್ಲಿ ಕೂತಿದ್ದರು. ಅವರ ಎದುರುಗಡೆ ಕೂತಿದ್ದ ಮನುಷ್ಯ ಆಗಿನಿಂದಲೂ ಸುಮ್ಮನೆ ಪೇಪರನ್ನು ಓದುತ್ತಿದ್ದವನು "ನೋಡ್ರೀ! ಏನು ಆಶ್ಚರ್ಯ! ನೀವೇನಾದರೂ ಊಹಿಸಬಲ್ಲಿರಾ?"

"ಏನು?" ಯಾರೋ ಕುತೂಹಲದಿಂದ ಕೇಳಿದರು.

"ಆಗಲೇ ಹೇಳಲಿಲ್ಲವೆ? ಅತಿ ಆಶ್ಚರ್ಯ. ಜರ್ಮನಿಯವರು ಹೊಸ ಬಂದೂಕವನ್ನು ಕಂಡುಹಿಡಿದಿದ್ದಾರಂತೆ. ಆದರಿಂದ ಬಾಂಬ್ ಹಾಕಿ ಹತ್ತೇ ನಿಮಿಷಗಳಲ್ಲಿ ಲಂಡನ್ನನ್ನು ಸುಟ್ಟು ಬೂದಿಮಾಡಬಹುದಂತೆ."

"ನಿಜವಾಗಿಯೂ? ಅತಿ ರೋಮಾಂಚಕವಾದುದು?"

ಭಾಸ್ಕರನು 'ಜರ್ಮನರು ದೀರ್ಘಾಯುಗಳಾಗಲಿ,' ಎಂದು ಮನಸ್ಸಿನಲ್ಲಿಯೇ ಹರಸಿದ.

ಅವನು ಮಾತುಂಗದಲ್ಲಿಳಿದಾಗ ಮಳೆಯಿನ್ನೂ ಬೀಳುತ್ತಲೇ ಇತ್ತು. ಅವನು ದೊಡ್ಡ ಟಾರ್‌ರಸ್ತೆಯನ್ನು ದಾಟಿ, ತನ್ನ ಗಲ್ಲಿಗೆ ತಿರುಗಿದ. ಅಲ್ಲಿ ವಿಪರೀತ ಮಳೆ ಬಿದ್ದಿತ್ತು. ರಸ್ತೆಯಲ್ಲಿ ಚರಂಡಿಗಳಿಲ್ಲ. ರಸ್ತೆಯಲ್ಲಿ ಮೊಣಕಾಲುದ್ದ ನೀರು. ನೀರು ಎಲ್ಲಾ ವಿಧವಾದ ಹೇಸಿಗೆಯನ್ನೂ ಕೊಚ್ಚಿಕೊಂಡು ಹೋಗುತ್ತಿತ್ತು. ಜನರು ಬಟ್ಟೆಯನ್ನು ಎತ್ತಿಹಿಡಿದು ನೀರಿನಲ್ಲಿ ಹಾಯ್ದು ಹೋಗುತ್ತಿದ್ದರು. ಆ ಅಲ್ಪಬೆಳಕಿನಲ್ಲಿ ಬಿದ್ದ ನೆರಳು ನೀರಿನಲ್ಲಿ ಅಲುಗಾಡಿ, ಛಿದ್ರಛಿದ್ರವಾಗುತ್ತಿತ್ತು. ಕೊಳಕು ಹೋಟಲುಗಳಲ್ಲಿ ತಿಂಡಿ ಮಾಡುತ್ತಿದ್ದರು. ಬೀದಿಯಲ್ಲಿ ಘಾಟುಹೊಗೆ ತುಂಬಿಹೋಗಿತ್ತು. ಅಲ್ಲಿ ಒಂದು ಹಿಟ್ಟುಮಾಡುವ ಯಂತ್ರಶಾಲೆಯಿತ್ತು. ಅದರ ಬಾಗಿಲಲ್ಲಿ ಇಬ್ಬರು ತೆಳ್ಳನೆಯ ಹುಡುಗರು, ತಮ್ಮ ಮೈಯೆಲ್ಲವನ್ನೂ ಹಿಟ್ಟುಮಾಡಿಕೊಂಡು ಕೂತಿದ್ದರು. ಸ್ವಲ್ಪ ಮುಂದೆ ಒಬ್ಬ ಹಾಲುಮಾರುವವನು ಬರೀ ಮೈಯಲ್ಲಿ ಪಾತ್ರೆ ತೊಳೆಯುತ್ತ, ಹರಿಯುತ್ತಿದ್ದ ನೀರಿಗೆ ಎಲೆ ಅಡಿಕೆಯ ರಸವನ್ನುಗುಳುತ್ತಿದ್ದ.

ಇದೆಲ್ಲಾ ಅತಿ ಬೇಜಾರುಪಡಿಸುತ್ತಿತ್ತು. ಅಹಾ! ಆ ಜರ್ಮನರು ತಮ್ಮ ಹೊಸ ಬಂದೂಕದೊಡನೆ ಅಲ್ಲಿಗೆ ಬಂದು, ಆ [illegible] ಜಾಗವನ್ನು ನಾಶಪಡಿಸಿದರೆ ಎಷ್ಟು ಚೆನ್ನಾಗಿರುತ್ತದೆ! ಅಹಾ! ಎಷ್ಟು ಬಡತನ! ಎಷ್ಟು ಕೊಳಕು!

ಅದೇ ಒಂದು ಸರಳ! ಅವರೆಲ್ಲಾ ದೇಹಕ್ಕೆ ಇನ್ನೂ ಏಕೆ ಅಂಟಿಕೊಂಡಿದ್ದರು? ಅವರು ಸಾವನ್ನೇಕೆ ಹರಸಲಿಲ್ಲ! ಅವರು ಹರಸದಿದ್ದರೆ ಇನ್ನೊಬ್ಬರು ಅವರನ್ನು ಕೊಂದರೆ ತಪ್ಪೇ?

ಭಾಸ್ಕರನು ಕಾಲು ತೊಳೆದುಕೊಂಡು ರೂಮಿಗೆ ಬಂದು ಹಾಸಿಕೆಯ ಮೇಲೆ ಉರುಳಿಕೊಂಡ. ಸ್ವಲ್ಪ ಹೊತ್ತಾದ ಮೇಲೆ ಹೋಟಲಿಗೆ ಹೋಗಿ ಊಟಮಾಡಬೇಕೆನ್ನಿಸಿತು.... ಆದರೆ ಅದಕ್ಕೆ ಅಡ್ಡಿ ಬಂತು. ಅವನು ಊಟ ಮಾಡಲೇ ಬೇಕೆ? ಬಹಳ ಶೀಘ್ರದಲ್ಲೇ ಅವನು ಇದನ್ನೆಲ್ಲಾ ಕೊನೆಗಾಣಿಸುವನು. ಶೀಘ್ರವಾಗಿ, ಅತಿ ಶೀಘ್ರವಾಗಿ.

ಆದರೂ ಹೋಗಬೇಕೆನ್ನಿಸಿತು. ಅಂಗಿಯನ್ನು ಬಿಚ್ಚಿ ಭುಜದ ಮೇಲೆ ಟವಲನ್ನು ಹಾಕಿಕೊಂಡು ಹೊರಟನು. ಹೋಟಲಿನಲ್ಲಿ ಊಟಮಾಡಿ, ಆರಾಮವಾಗಿ ರೈಲುಹಾದಿಗೆ ನಡೆದುಕೊಂಡು ಹೋಗಿ, ಅಲ್ಲಿ ಪ್ರಾಣಬಿಡಬೇಕೆನ್ನಿಸಿತು.

ಹೋಟಲಿನ ಚಿಕ್ಕ ಅಂಗಳದಲ್ಲಿ ಅನೇಕ ಸಣ್ಣಪುಟ್ಟ ಹಳ್ಳಗಳನ್ನು ಹಾಯಬೇಕಾಯಿತು. ಆ ಹಳ್ಳಗಳಲ್ಲಿ ಕಪ್ಪೆಗಳು ವಟಗುಟ್ಟುತ್ತಿದ್ದುವು. ಆ ಕತ್ತಲಲ್ಲಿ ಅವನು ಒಂದು ಕಪ್ಪೆಯನ್ನು ತುಳಿಯುತ್ತಿದ್ದ. ಆದರೆ ಆ ಚಿಕ್ಕ ಪ್ರಾಣಿಯು ತಪ್ಪಿಸಿಕೊಂಡು, ಎರಡಾವೃತ್ತಿ ಕುಪ್ಪಳಿಸಿ ನೀರಿನೊಳಕ್ಕೆ ಹೋಯಿತು.

ಆ ಕೊಳಕು ಪ್ರಾಣಿಯೂ ಸಹ ಸಾಯಲು ಒಪ್ಪಲಿಲ್ಲ. ಎಲ್ಲೆಲ್ಲೂ ಜೀವದ ಆಸೆಯೇಕಿತ್ತೆನ್ನುವುದು ಆಶ್ಚರ್ಯಕರವಾಗಿ ತೋರಿತು.

ಕೇವಲ ಯಂತ್ರದಂತೆ ಊಟಮಾಡಿ, ಹೊರಟ. ಮಳೆ ಪೂರ್ತಿ ನಿಂತಿತ್ತು. ಮೋಡಗಳು ಚದುರಿದ್ದುವು. ವಿಶಾಲವಾದ ಆಕಾಶದಲ್ಲಿ ಅಲ್ಲಲ್ಲಿ ನಕ್ಷತ್ರಗಳು ಮಿನುಗುಟ್ಟುತ್ತಿದ್ದುವು.

ರೈಲುಹಾದಿಯನ್ನು ತಲುಪಲು ಅವನು ಅನೇಕ ರಸ್ತೆಗಳನ್ನು ಹಾದುಹೋಗಬೇಕಾಗಿತ್ತು. ಎರಡು ಚೌಕಗಳನ್ನು ಹಾಯ್ದು ಮೂರನೆಯ ಚೌಕವನ್ನು ಹಾಯುತ್ತಿದ್ದಾಗ ಒಂದು ಬಂಗಲೆಯ ಮುಂದೆ ಜನರ ಒಂದು ಗುಂಪನ್ನು ಕಂಡ. ಮನೆಯಲ್ಲಿ ಪ್ರಕಾಶಮಾನವಾದ ದೀಪಗಳು ಉರಿಯುತ್ತಿದ್ದವು. ಹತ್ತಿರ ಹೋಗಲು ಸಂಗೀತವು ಕೇಳಿಸುತ್ತಿತ್ತು.

ಗುಂಪಿನೊಳಗೆ ಒಬ್ಬನ ಭುಜವನ್ನೆಳೆದು "ಏನು ಸಮಾಚಾರ?" ಎಂದು ಕೇಳಿದ.

"ಹುಶ್.... ಸದ್ದು!" ಎಂದು ಆತನು ಜಪಾಟಿಸ್ತ ಸಂಗೀತವನ್ನು ಕೇಳಲು ಕೊರಳನ್ನು ಕೊಂಕಿಸಿದ.

ಭಾಸ್ಕರನು ಇನ್ನೊಬ್ಬನನ್ನು ಅದೇ ರೀತಿ ಪ್ರಶ್ನಿಸಿದ.

"ಏನು ಸಮಾಚಾರ?"

"ಹುಶ್.... ದಯವಿಟ್ಟು ಸುಮ್ಮನಿರಿ!" ಅದೇ ಅವನಿ... ಬಂದ ಉತ್ತರ. ಎಲ್ಲರೂ ಸಂಗೀತವನ್ನು ಕೇಳುವುದರಲ್ಲಿ ಮಗ್ನರಾಗಿದ್ದರು. ಭಾಸ್ಕರನೂ ಅಲ್ಲಿ ಸ್ವಲ್ಪ ಕಾಲ ನಿಂತ.

ಅವನಿಗೆ ತಿಳಿಯದೆಯೇ ಅವನೂ ಗುಂಪಿನಲ್ಲಿ ಐಕ್ಯವಾ... ಸಂಗೀತವು ಅವನನ್ನು ಮರೆಯಿಸಿತು.

ಅವನಿಗೆ ಸಂಗೀತದ ಗಂಧವೇ ಇರಲಿಲ್ಲ. ರಾಗ, ತಾಳ ಲಯ ಜ್ಞಾನವೇ ಇರಲಿಲ್ಲ. ಆದರೂ ಅವನು ಆ ಮಧು... ಧ್ವನಿಯನ್ನು ಬಿಟ್ಟು ಅಲುಗಲಾರದೆ ಹೋದ.

ಆ ಮನೆಯಿಂದ ಬಂದ ಸಂಗೀತವನ್ನು ಕೇಳುವು...ಕ್ಕಿಂತಲೂ ಆಪ್ಯಾಯಮಾನವಾದ ಕೆಲಸವು ಬೇರೆ ಇ... ನೂರಾರು ಸಂಗೀತದ ಬಣ್ಣಬಣ್ಣದ ಬುಗ್ಗೆಗಳು ... ತ್ತಿದ್ದುವು.

ಭಾಸ್ಕರನಿಗೆ ತಾನು ಅಲ್ಲಿ ಎಷ್ಟು ಕಾಲ ನಿಂತನೆಂಬ... ಅರಿವಾಗಲಿಲ್ಲ. ಸಂಗೀತವು ನಿಂತು ಗುಂಪು ಚದುರಿ... ಅರಿವಾಯಿತು. ಆಗ ತಾನು ಮಾಡಬೇಕಾದ ಕಾರ್ಯ... ಜ್ಞಾಪಕಕ್ಕೆ ಬಂತು.

ರೈಲುಹಾದಿಗೆ ಹೋಗಿ ರೈಲಿನ ಕೆಳಗೆ ಮಲಗಬೇಕು... ಒಬ್ಬರು ಇನ್ನೊಬ್ಬರನ್ನು "ಎಷ್ಟು ಗಂಟೆ" ಎಂ... ಕೇಳಿದರು.

"ಹನ್ನೊಂದೂವರೆ"

ಭಾಸ್ಕರನು ನಡುಗಿದ.

ಹನ್ನೊಂದುವರೆ? .... ಹಾಗಾದರೆ ರೈಲೂ ಹೊ... ಹೋಗಿದೆ—ತನ್ನ ಪಾಲಿನ ಯಮದೂತ ಹೊ... ಹೋದನೆ?—ಅದೇ ಕಡೆಯ ರೈಲು.... ಈಗೇನು ಮಾ... ಬೇಕು?....

ಈ ಪ್ರಶ್ನೆಗಳು ಉದ್ಭವಿಸಿದರೂ ಅವುಗಳಲ್ಲಿ ಗಾ... ಅರ್ಥವಿರಲಿಲ್ಲ.

ಅವನ ಮನಸ್ಸಿಗೆ ಖೇದವಾಗುವುದರ ಬದಲು ... ವಾಯಿತು. ಏಕೆನ್ನುವುದು ಅವನಿಗೆ ತಿಳಿಯದು. ... ಪ್ರಾಣಬಿಡಬೇಕೆಂಬ ನಿರ್ಧಾರವು ಅವನಿಂದ ... ಬೇರ್ಪಟ್ಟಿತು.

ಆದರ ಉತ್ಸಾಹವೂ ಸ್ಫೂರ್ತಿಯೂ ಹೋಯಿತು. ... ನಿರ್ಧಾರವನ್ನು ತಾನು ಮಾಡಲಿಲ್ಲವೆಂದೂ ಯಾಕೋ ...

ಕರು ಅನೇಕ ವರ್ಷಗಳ ಹಿಂದೆ ಮಾಡಿದಂತೆಯೂ, ಭಾಸ್ಕರನಿಗೆ ಭಾಸವಾಯಿತು.

* * *

ಮಾರನೆಯ ದಿನ ಹವೆಯು ಪೂರ್ಣವಾಗಿ ಬದಲಾಯಿಸಿತು. ಆಕಾಶವು ಶುಭ್ರವಾಗಿತ್ತು. ಕ್ಯಾಲೆಂಡರು ಜೂಲೈ ತಿಂಗಳನ್ನು ತೋರಿಸುತ್ತಿರುವುದನ್ನು ನಂಬಲು ಆಗುತ್ತಿರಲಿಲ್ಲ. ಪ್ರಕಾಶಮಾನವಾದ ಸೂರ್ಯನ ಬೆಳಕು ಹರ್ಷವನ್ನುಂಟುಮಾಡಿತು. ಗಾಳಿಯು ತನ್ನ ವೇಗವನ್ನು ತಗ್ಗಿಸಿ, ಮಂದವಾಗಿ ಬೀಸುತ್ತಿತ್ತು. ಬೀದಿಯ ಕೊಳಕೆಲ್ಲವು ಕೊಚ್ಚಿ ಹೋಗಿತ್ತು. ಎದುರು ಮನೆಯಲ್ಲಿ ಗಂಧದ ಸೌದೆಯನ್ನು ಸುಡುತ್ತಿದ್ದರು. ಅದರ ಸುವಾಸನೆಯು ಭಾಸ್ಕರನನ್ನೆಬ್ಬಿಸಿತು.

ಭಾಸ್ಕರನು ಎಂದಿನಂತೆ ಕಾಲಕ್ಕೆ ಸರಿಯಾಗಿ ಆಫೀಸಿಗೆ ಹೋಗಿ 'ಟೈಪ್‌ರೈಟರಿ'ನ ಮುಚ್ಚಳವನ್ನು ತೆಗೆದ.

ಸಹೋದ್ಯೋಗಿಯೊಬ್ಬನು ಬಂದು, ಭಾಸ್ಕರನನ್ನು "ಏನ್ರೀ ಸಮಾಚಾರ ಕೇಳಿದಿರಿ ?"

"ಏನ್ರೀ ಎಂಥಾ ಸಮಾಚಾರಾ ?"

"ಬ್ಯಾನರ್ಜಿ ಸತ್ತುಹೋದ...."

ಮಿಷನ್ನಿನ ಮೇಲೆ ಕೈಯಿಟ್ಟುಕೊಂಡೇ ಭಾಸ್ಕರನು ಪ್ರತಿಭಟಿಸಿದ. "ಸುಳ್ಳು. ನಿನ್ನೆ ಸಂಜೆ ನನ್ನ ಕೈಲಿ ಮಾತನಾಡಿದ!"

"ಹೌದು. ಆರೋಗ್ಯವಾಗಿಯೇ ಇದ್ದ."

"ಹಾಗಾದರೆ ಎಂದು ಸತ್ತ ?"

"ಈ ಬೆಳಿಗ್ಗೆ ಸತ್ತುಹೋದ."

"ಆತ್ಮಹತ್ಯವೇ ?"

"ಹುಚ್ಚರಂತೆ ಮಾತಾಡಬೇಡಿ. ಆತ್ಮಹತ್ಯ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ."

"ನನಗೆ ಗೊತ್ತು" ಎಂದು ಭಾಸ್ಕರನು ಹೇಳಿದ.

"ಹಾಗಾದರೆ ಅವನು ಹೇಗೆ ಸತ್ತ"

"ಅವನಲ್ಲಿ ಒಂದು ಡರ್ಬಿ ಟಿಕೆಟ್ ಇತ್ತು. ಒಂದು ಲಕ್ಷ ರೂಪಾಯಿ ಬಹುಮಾನ ಬಂತೆಂದು ಈ ದಿನ 'ಕೇಬಲ್‌ಗ್ರಾಂ' ಬಂತು....ಅವನಿಗೆ ಅತಿ ಸಂತೋಷವಾಯಿತು. ಹೃದಯದ ಚಲನೆಯು ನಿಂತು ಸತ್ತುಹೋದ. ಅವನು ಸ್ಥೂಲದೇಹಿ. ಮೊದಲಿನಿಂದಲೂ ಉಬ್ಬಸಪಡುತ್ತಿದ್ದ."

ಭಾಸ್ಕರನು ಅವನನ್ನು ಇನ್ನು ಪ್ರಶ್ನಿಸಲಿಲ್ಲ. ಅವನ ತಲೆ ಚಿಟುಗುಟ್ಟಿ ಹೋಗಿತ್ತು.

ಆಶ್ಚರ್ಯ! ಅತಿ ಆಶ್ಚರ್ಯ!! ಅದೂ ಒಂದು ಆಟ!

ಇನ್ನೂ ಹೆಚ್ಚುಕಾಲ ಬದುಕಬೇಕೆನ್ನುವ ಆಸೆಯು ಹುಟ್ಟಿದಾಗಲೇ ಬ್ಯಾನರ್ಜಿ ಸತ್ತುಹೋದ.

ನಿನ್ನೆಯ ದಿನ ಪ್ರಾಣಬಿಡಲು ಸಿದ್ಧನಾಗಿದ್ದ ಭಾಸ್ಕರ ಈ ದಿನ ಎಂದಿನಂತೆ ಆರೋಗ್ಯವಾಗಿ ಕೆಲಸಮಾಡುತ್ತಿದಾನೆ.

ಅವನಿಗಿಂತಲೂ ಅತಿ ಕಷ್ಟದಲ್ಲಿದ್ದುಕೊಂಡು, ಅನೇಕ ಹಿಂಸೆಗಳನ್ನು ಅನುಭವಿಸುತ್ತಿರುವ ಲಕ್ಷಾಂತರ ಜನರಿದ್ದಾರೆ. ಅವರೆಲ್ಲರಿಗೂ ಇನ್ನೂ ಜೀವಿಸಬೇಕೆಂಬ ಆಸೆಯಿದೆ.

ಜನರೇಕೆ ಸಾಯುತ್ತಾರೆ ?

ಕೇಳುವುದೇ ಶುದ್ಧ ಮೌಢ್ಯ !....ಬಹುಶಃ ಅದು ಅವರ ಶಕ್ತಿಗೆ ಮೀರಿರಬಹುದು.

ಜನರೇಕೆ ಬದುಕುತ್ತಾರೆ ?

ಅದೂ ಅವರ ಶಕ್ತಿಗೆ ಮೀರಿರಬಹುದು. ಇದಕ್ಕೆ ಉತ್ತರ ಕೊಡುವವರಾರು ?

ಭಾಸ್ಕರನು ಮಿಷನ್ನಿನ ಮುಚ್ಚಳವನ್ನು ತೆಗೆದ. ಕಾಗದಗಳ ರಾಶಿಯನ್ನು ಸರಿಪಡಿಸಿ, ತನ್ನ ಕೆಲಸವನ್ನಾರಂಭಿಸಿದ.

"ಟಿಕ್‌ಟಿಕ್....ಟಿಕ್‌ಟಿಕ್....ಟಿಕ್‌ಟಿಕ್....ಟಿಕ್‌ಟಿಕ್...ಕ್ಲಿಂಗ್"

ಪ್ರೊ. ಎನ್. ಎಸ್. ಫಡ್ಕೆ ಎಂ. ಎ. ಅವರು ಬರೆದಿರುವ The Will to Live ಎಂಬ ಕಥೆಯ ಅನುವಾದ.

ದಪ್ಪಂಣಿನವರ ತುಪ್ಪದ ಬುದ್ಧಿ

ಲೇಖಕರು : 'ಉಂಡಾಡಿ' ಅ. ಬ. ಕ. ಡ.

★

- ತತ್ವದ ಮೇಲಿನ ನಮ್ಮ ಪ್ರೀತಿ, ಪೋಲೀಸನ ಮೇಲೆ ಕಳ್ಳನ ಪ್ರೀತಿಯಿದ್ದಷ್ಟೆ.
- ಹಾಗಾದರೆ ನಾವು ಒಂದಾಗಬೇಕೆಲ್ಲಿ ? ಒಬ್ಬ ದೇವರ ಸುತ್ತಲೂ ! ಗುಂಡುಗಡಿಗೆಯ ಸುತ್ತಲೂ ! ಜನಿವಾರದ ಸುತ್ತಲೂ ! ಗಡ್ಡದ ಸುತ್ತಲೂ !
- ಜಾತಿಯಿದ್ದಲ್ಲಿ ದೇವರಿದ್ದಾನೆ; ದೇವರಿದ್ದಲ್ಲಿ ಹೋಳಿಗಿಹುಗ್ಗಿಗಳ ಸುಗ್ಗಿ. ಉಂಡಾಡಿಗೆ ಮತ್ತೇನು ಬೇಕು ! ಏಕೀಕರಣದ ಬದಲು ಕೇಕೀಕರಣ ಸಾಗಿರುವವರೆಗೆ ಉಂಡಾಡಿಗಳ ಹೊಟ್ಟೆಗೇನೂ ಬರಗಾಲವಿಲ್ಲ.
- ಭಲರೆ ದಪ್ಪಂಣಾ ಉಂಡಾಡಿಗಳೆ ! ಎಲ್ಲರೂ ಒಂದಾಗೋದೆಂದರೆ ನಮ್ಮ ನಿಮ್ಮ ಕೊಳು ಒಂದಾಗೋದು ಅಂತ ನನಗೆ ಗೊತ್ತದೆ.

★

'ಸಮಾನಶೀಲವ್ಯಸನೇಸು ಸಖ್ಯಂ' ಎನ್ನೋದು ದಶರಥರಾಯನ ಕಾಲದ ಮಾತು. ಆದರೆ ಇಂದಿಗೂ ಆ ಮಾತಿನ ಸತ್ಯತೆಯೇನೂ ಹಾಳಾಗಿಲ್ಲ. ಹಿಂದಿನವರ ಮಾತಂದರೇ ಹಾಗೆ. ಒಂದು ಮಾತು ಆಡಿದರೆಂದರೆ ಸಾವಿರಾರು ವರ್ಷಗಳ ವರೆಗೆ ಅದು ಅಲುಗಾಡುವ ಹಾಗಿಲ್ಲ. ಅದಕ್ಕೇ, ಈಗ ಜನರು ವಿಶೇಷ ಗುಡಿಗೆ ಹೋಗದಿದ್ದರೂ ದೇವರು ತೊಗಲಬಾವಲಿಗಳ ಗೆಳೆತನದಲ್ಲೇ ಸುಖಪಡುತ್ತ ಕತ್ತಲೆಯೊಳಗೇ ಹಟ ಹಿಡಿದು ಕೂತಿದ್ದಾನೆ. ಅವನ ಸತ್ಯಾಗ್ರಹದ ಮುಂದೆ ಗಾಂಧಿಯವರ ಉಪ್ಪಿನ ಸತ್ಯಾಗ್ರಹ ಯಾವ ಟೆಕ್ಸ್ಟ್ಬುಕ್ಕಿನ ಹಾಳೆ ! ಯಾಕಂದರೆ ಆರು ನೂರು ವರ್ಷ ತೀರ ಕಟ್ಟುಗ್ರ ಸತ್ಯಾಗ್ರಹ ಮಾಡಿದ್ದಕ್ಕೆ ಹಂಪಿಯ ದೇವರುಗಳಿಗೆ ಕನ್ನಡಿಗರೆಲ್ಲ ಒಂದು ಸರ್ತಿ ಓಡಿ ಹೋಗಿ ಹಣ್ಣುಕಾಯಿ ಮಾಡಿ ಬಂದರು. 'ನಾವು ದೇಶಾಭಿಮಾನದಿಂದ ಹೋದೆವೇ ಹೊರತು ದೇವಭಕ್ತಿಯಿಂದಲ್ಲ' ಎಂತ ಅವರು ಅನ್ನಬಹುದು. ಆದರೆ ದೇವರಿಲ್ಲದ ದೇಶ ಎಲ್ಲಿದೆ ? ಮುದುಕರ ಹೆಂಡಂದಿರಿಗೆ, ಗಂಡನಿಗೆ ಜಡ್ಡಾದಾಗ ಪತಿಭಕ್ತಿ ಹೆಚ್ಚಾಗುತ್ತದಂತೆ ! ಹಾಗೆ ದೇವರಿಗೂ ದಾರೀ ಬಿಟ್ಟು ಹೋಗುವ ಮನುಷ್ಯರ ಮೇಲೆ ಒಮ್ಮೊಮ್ಮೆ ಮಮತೆ ಹುಟ್ಟತದೆ. ಹೇಗಾದರೂ ಮಾಡಿ ಅವರಿಂದ ಪೂಜಾ ಪಡೀತಾನೆ. ಎಲ್ಲರ ಕಡೆಯಿಂದ ನಮಸ್ಕಾರ ಮಾಡಿಸಿಕೊಳ್ಳಬೇಕೆಂಬುವವರು ಮಾರ್ಗದಲ್ಲಿ ನಡೆಯುವಾಗ ಸರಕ್ಕನೆ ಕೈಯೆತ್ತಿ ಮೂಗು ತುರಿಸಿಕೊಳ್ಳಹತ್ತುವರು. ಎದುರಿಗೆ ಬರುವವರು ಗಾಬರಿಯಾಗಿ ಗುರುತಿಲ್ಲದಿದ್ದರೂ ನಮಸ್ಕಾರ ಮಾಡಿಬಿಡುವರು. ಹಾಗೆ ದೇವರು ಬಲು ಬೆರ್ಕಿ. ಜನರ ದೇಶಭಕ್ತಿ, ಭಾಷಾಭಿಮಾನ ಮೊದಲು ಹೆಚ್ಚಿಸಿ ಮಾಡಿ ಕಡೆಗೆ ತನ್ನ ಹತ್ತರ ಓಡಿ ಬರುವ ಹಾಗೆ ಮಾಡಿ ಬಿಡುತ್ತಾನೆ. ಅವನ ಲೀಲೆ ಅಗಾಧ!

ಇಲ್ಲಿಗೇ ಮುಗೀಲಿಲ್ಲ. ಹೊಲೆ ಹದಿನೆಂಟು ಜಾತಿಗೆ ಒಬ್ಬೊಬ್ಬ ದೇವರಿದ್ದಾನೆ. ಹೆಚ್ಚಿನ ಸಂಬಳದ ಲಂಚದ ಹುಚ್ಚು ಹೆಚ್ಚಿರುವಂತೆ ಎಲ್ಲಾ ದೇವರಿಗೆ ಪೂಜಾ ಕಾಣಿಕೆಗಳ ಆಶೆ ತಪ್ಪಿದ್ದಲ್ಲ. ಕನ್ನಡಿಗರು ಹೋಗಿ ಹಂಪೀ ದೇವರಿಗೆ ಹಣ್ಣುಕಾಯಿ ಮಾಡಿದ ಮೇಲೆ ಉಳಿದ ಕುಲದೇವರುಗಳು ಯಾಕೆ ಸುಮ್ಮನೆ ಕೂತಾವು ? ಅವು ತಮ್ಮ ತಮ್ಮ ಮಂಡಳಿಯ ಕೆಲಸಕ್ಕೆ ಹತ್ತಿದವು. 'ಇಗೊ ಹಂಪಿಯ ವಿರೂಪಾಕ್ಷ ಲಿಂಗಾಯತ ದೇವರು ! ಕರ್ನಾಟಕದ ಅಭಿಮಾನಿ ಬ್ರಾಹ್ಮಣರೆಲ್ಲ ಹೋಗಿ ಲಿಂಗಾಯತ ದೇವರಿಗೆ ಕೊಂಡರೆ, ನಾಳೆ ಕೆಟ್ಟ ಕಂಣಿನ (ವಿರೂಪ-ಅಕ್ಷ) ಕೊಟ್ಟು ಕರ್ನಾಟಕವನ್ನು ಲಿಂಗಾಯತರ ವಶಕ್ಕೆ ಕೊಡುವನು ಎಚ್ಚರ !' ಎಂದು ಕಾಶೀ ವಿಶ್ವನಾಥ ಗರ್ಜಿಸಿದ. ಕೂಡಲೆ ಶ್ರೀಶೈಲದ ಮಹಾರುದ್ರನೇನು ಸುಮ್ಮನೆ ಕೂತ ವನೇ ? 'ಇಕಾ ಮೊದಲೆ ಹೇಳಿಟ್ಟಿರತೇನ; ಹಂಪೀ ದೇವರು ಲಿಂಗಾಯತ ಆದರೂ ಬ್ರಾಹ್ಮಣ ಪೂಜಾರಿಗಳ ಕೈಯಾಗ ಸಿಕ್ಯಾನೆ ! ಅವರು ಬೆರ್ಕಿಯವರು;

ಒಯ್ದು ಕೊಟ್ಟ ಹಂಣು ಕಾಣಿಕಿ ಎಲ್ಲಾ ಬ್ರಾಹ್ಮಣರವೇ ಎಂದು ವಿರೂಪಾಕ್ಷನಿಗೆ ಹೇಳಿ ಬಿಡತಾರೆ. ನಾಳೆ ಕರ್ನಾಟಕವನ್ನು ಬ್ರಾಹ್ಮಣರ ಪಾಲು ಮಾಡಿಬಿಟ್ಟಾನು ವಿರೂಪಾಕ್ಷ!' ಎಂದು ಗುಡುಗಿ ಬಿಟ್ಟನು. ಸರಿ. ಭರಮಪ್ಪ, ಪ್ಯಾಮವ್ವ, ದುರ್ಗವ್ವ, ಎಲ್ಲಾ ಜಾತೀ ದೇವರೂ ಶುದ್ಧ ಕನ್ನಡ ಭಾಷೆಯಲ್ಲೆ ತಮ್ಮ ತಮ್ಮ ಭಕ್ತರಿಗೆ ಎಚ್ಚರ ಕೊಟ್ಟರು. ಸ್ವದೇವಭಕ್ತರೆಲ್ಲ ಸ್ವಜಾತಿಯ ಜಯಜಯಕಾರ ಮಾಡುತ್ತ ಕೇಕೆ ಹೊಡೆಯಹತ್ತಿದರು. ಕರ್ನಾಟಕ ಏಕೀಕರಣಕ್ಕೆ ಕೂಡಿದ ಮಹಾಶಯರೂ ಕರ್ಣಕೇಕೀಕರಣ ಮಾಡಿದರು. ಹಾಗಾದರೆ ವಾಚಕರೇ ಈಗ ಹೇಳಿರಿ; ದೇವರು ಈವರೆಗೆ ಇವರಲ್ಲಿ ಹುಟ್ಟಿಸಿದ್ದು ದೇಶಭಕ್ತಿಯನ್ನೋ ದೇವ(ಜಾತಿ)ಭಕ್ತಿಯನ್ನೋ ?

ಒಂದು ಜಾತಿಯವರಿಗೆ ಮತ್ತೊಂದು ಜಾತಿಯವರನ್ನು ಎಷ್ಟು ಬೈದರೂ ಬಾಯ್ತುಂಡಿ ತೀರದು. ಹಾಗೇ ದೇವರಿಗೆ ಬೆರ್ಕಿ ಅಂತ ಎಷ್ಟು ಸರ್ತಿ ಅಂದರೂ ಸಾಲದು. ಅವನಿಗೆ ಗೊತ್ತು—ಜನರಲ್ಲಿ ಜಾತಿಭಕ್ತಿ ಬೆಳೆದರೆ ದೇವಭಕ್ತಿ ಬೆಳೆಯಲೇ ಬೇಕು—ಎಂದು. ಯಾಕಂದರೆ ಒಂದಾಗಬೇಕಾದರೆ ಮಧ್ಯಸ್ತಿಕೆಯು ಮಾಕೊಂದು ಬೇಕು. ತತ್ವದ ಮಧ್ಯಸ್ತಿಕೆಯಿಂದ ನಾವೇನೂ ಒಂದಾಗುವ ಹಾಗಿಲ್ಲ. ತತ್ವದ ಮೇಲಿನ ನಮ್ಮ ಪ್ರೀತಿ ಪೊಲೀಸನ ಮೇಲಿನ ಕಳ್ಳನ ಪ್ರೀತಿಯಿದ್ದಷ್ಟೆ. ಹಾಗಾದರೆ ನಾವು ಒಂದಾಗಬೇಕೆಲ್ಲಿ ? ಒಬ್ಬ ದೇವರ ಸುತ್ತಲೂ; ಗುಂಡುಗಡಿಗೆ ಸುತ್ತಲೂ; ಜನಿವಾರದ ಸುತ್ತಲೂ; ಗಡ್ಡದ ಸುತ್ತಲೂ. ನೋಡಿರಿ ಜಾತೀ ಹಿಡಿದರೆ ಧರ್ಮ ಬಂತು ! ಧರ್ಮದ ಹಿಂದೆ ದೇವರು ಬಂದ ! ಅದಕ್ಕೇ ನಾನಂದದ್ದು ಸಮಾನಶೀಲವ್ಯಸನೇಷು ಸಖ್ಯಂ ಎಂತ. ದೇಶಾಭಿಮಾನ, ಭಾಷಾಭಿಮಾನ ಅಂತ ಹೊರಹೊರಗೆ ಬೇಕಾದ್ದು ಆಡಿಕೊಳ್ಳಿರಿ. ಒಳಗೆ ಜಾತೀ ಬೇರು ಗಟ್ಟಿಯಾಗಿರ್ಲಿ ತೀರಿತು ! ಯಾಕಂದರೆ ಜಾತಿಯಿದ್ದಲ್ಲಿ ದೇವರಿದ್ದಾನೆ ! ದೇವರಿದ್ದಲ್ಲಿ ಹೋಳಿಗಿ ಹುಗ್ಗಿಗಳ ಸುಗ್ಗಿ ! ಉಂಡಾಡಿಗೆ ಮತ್ತೇನು ಬೇಕು ?

ವಾಚಕರೇ ಮೇಲಿನ ನನ್ನ ಮೀಮಾಂಸೆ ಓದಿಕೊಂಡು ಇಷ್ಟು ಹೊರಡಿರಿ; ದೇಶಭಕ್ತರು, ಭಾಷಾಸೇವಕರು ಅಂದುಕೊಳ್ಳುವ ಉಂಡಾಡಿಗಳನ್ನು ನಮ್ಮ ಪಂಥಕ್ಕೆ ಸೇರಿಸಿಕೊಳ್ಳಲಿಕ್ಕೆ. ಮೊನ್ನೆ ದಪ್ಪಂಣನವರು (ಅವರನ್ನು ಲಕ್ಷ್ಮಂಣನವರು ಎಂದೂ ಕರೆಯುತ್ತಾರೆ) ಕರ್ನಾಟಕ ಏಕೀಕರಣದ ಸುದ್ದಿ ಎತ್ತಿದರೆ ನನಗೆ ತಲೆಸೂಲಿ ಏಳುತ್ತದೆ ಅಂತ ಅಂದರಂತೆ. ಅದಕ್ಕೇ ಆ ಸುದ್ದಿ [illegible]

ಬಾರದು ಅಂತ ನಾನು ಮಹಾರಾಷ್ಟ್ರಕ್ಕೆ ಓಡಿ ಹೋಗುತ್ತೇನೆ ಅಂದರಂತೆ. ಬರೋಬರಿ ಅದೆ ಅಂತೇನೆ ನಾನು. ವಾಂತಿ ಆಗೋ ಮೊದಲು ತಲೆಸೂಲಿ ಏಳತದಂತೆ. ವಾಂತಿ ಆಗಬೇಕಾದರೆ ಅವರು ತುತ್ತಿನ ಚೀಲ ಕಿಕ್ಕಿರಿದು ತುಂಬಿರಬೇಕು. ಸರಿ. ಅಂದಮೇಲೆ ಅವರೂ ಉಂಡಾಡಿಗಳೇ ಇರಬೇಕು. ನೋಡಿರಿ ದೇಶಾಭಿಮಾನದ ಹೆಸರು ತಗೊಂಡರು ಮೊದಲು; ಪರದೇಶಿ ಪಾವಡಾ ತೆಗೆದು ಒಗೆದು ಗಾಂಧೀ ಟೊಪ್ಪಿಗಿ ಹಾಕಿಕೊಂಡರು. ಜನರು ಅವರಿಗೆ ಹೋಳಿಗಿ ಹುಗ್ಗಿ ಬಡಿಸಿದರು. ತಿಂಬೋದು ತಿಂದು ಈಗ ಜನರ ಮಾತು ಕೇಳಿದರ ವಾಂತಿ ಬರತದಂತೆ. ಲಗೂ ಮಹಾರಾಷ್ಟ್ರಕ್ಕೆ ಹೋಗಿ ವಾಂತಿ ಮಾಡಿಕೊಳ್ಳಲಿ ಅಂತ ಜನರೂ ಆ ದಪ್ಪಂಣನವರನ್ನು ಆಡಿಕೊಳ್ಳಲಿಕ್ಕೆ ಆರಂಭಿಸಿದ್ದಾರೆ. ಆದರೆ ನಾನು ಮಾತ್ರ, ಭಲರೆ ಉಂಡಾಡಿ! ಅನ್ನುತ್ತೇನೆ.

ಇನ್ನೂ ಸರಕಾರ ಜನರ ಕೈಗೆ ಬಂದಿಲ್ಲ. ಅದು ಬರೋತನಕಾ ಜನರು ಹೇಳಿದ ಹಾಗೆ ಕೇಳಬೇಕು; ಸರಕಾರ ಹೇಳಿದ ಹಾಗೆ ಕುಣಿಯಬೇಕು. ಅಂದರೆ ಉಂಡಾಡಿ ಧರ್ಮಕ್ಕೆ ಬಾಧೆಯಿಲ್ಲ. ವಾಚಕರು ಸ್ವಲ್ಪ ಸೂಕ್ಷ್ಮವಾಗಿ ವಿಚಾರ ಮಾಡುತ್ತಿದ್ದರೆ—ಉಂಡಾಡಿಯ ಲೇಖನಗಳನ್ನು ಓದಿ ನಿಮ್ಮ ಬುದ್ಧಿ ಸೂಕ್ಷ್ಮ ಆಗಿರಲೇಬೇಕು. ಆದ್ದರಿಂದ—ಅವರಿಗೆ ಕರ್ನಾಟಕ ಏಕೀಕರಣವು ಉಂಡಾಡಿ ಧರ್ಮಕ್ಕೆ ಘಾತಕವಾದದ್ದು ಎಂಬೋದನ್ನು ತಿಳಕೊಳ್ಳಲಿಕ್ಕೆ ಹೆಚ್ಚು ಹೊತ್ತು ಹಿಡಿಲಿಕ್ಕಿಲ್ಲ. ಉಂಡಾಡಿಗೆ ಸೂಕ್ಷ್ಮಬುದ್ಧಿ ಅಂದದಕ್ಕೆ ಆಶ್ಚರ್ಯ ಪಡಬೇಡಿರಿ. ಸೂಕ್ಷ್ಮಬುದ್ಧಿಯಿಂದರೇನು ? ವಿಚಾರಗಳೆಲ್ಲ ಮುದ್ದೆಮುದ್ದೆಯಾಗಿ ಇಡಿಯಾಗಿ ತಲೆಯಲ್ಲಿ ಬರುವದಕ್ಕೇ ಸೂಕ್ಷ್ಮಬುದ್ಧಿ ಅನ್ನುತ್ತಾರೆ. ಉಂಡಾಡಿಯ, ಹೆತ್ತುಪ್ಪ ತಿಂದ ಬದ್ಧಿಗೆ ಆ ಶಕ್ತಿಯಿಲ್ಲವೇ ? ತುಪ್ಪವನ್ನೂ ಎಣ್ಣೆಯನ್ನೂ ನೀರಿನ ಮೇಲೆ ಹಾಕಿ ನೋಡಿರಿ. ತುಪ್ಪವು ಮುದ್ದೆಯಾಗುತ್ತದೆ! ತುಪ್ಪ ತಿಂದ ಬುದ್ಧಿಯೂ ಅಷ್ಟೆ. ತಿಳಿಯಾದ ಬುದ್ಧಿಯೆಂತ ಇನ್ನು ಮೇಲೆ ಅನ್ನಬಾರದು; ಮುದ್ದೆಯಾದ ಬುದ್ಧಿ ಅನ್ನಬೇಕು; ಆಗೋ ಪ್ರಾಸೂ ಕೂಡಿತು. ಉಂಡಾಡಿಯು ಕವಿಯೂ ಆಗಬಲ್ಲನು. ಇರಲಿ.

ಈಗ ಕರ್ನಾಟಕ ಏಕೀಕರಣದಿಂದ ಉಂಡಾಡಿ ಧರ್ಮಕ್ಕೇನು ದ್ರೋಹವಾಗುವದೆಂಬುದನ್ನು ಸ್ವಲ್ಪ ನೋಡೋಣ. ಧರ್ಮದಲ್ಲಿ ಕೈಹಾಕಬಾರದು ಎಂಬ ಮಾತಂತೂ ಎಲ್ಲ[illegible] ಗೊತ್ತದೆ. ಅಲ್ಲಾ ನೂರಾಐವತ್ತು ವರ್ಷಗಳಿಂದ

ದೇಶವನ್ನೆಲ್ಲ ಸುಲಕೊಂಡು ಹೋಗುವ ಪರದೇಶಿಗಳು ಸಹ ಧರ್ಮಕ್ಕೆ ಕೈಹಚ್ಚುವ ಪಾಪ ಮಾಡಲಿಲ್ಲ. ನಿನ್ನೆ ಮೊನ್ನೆ ಕಂಣುತೆರೆದ ಈ ಭಾಷಾಭಕ್ತರು ಯಾಕೆ ನಮ್ಮ ಉಸಾಬರಿಗೆ ಬರಬೇಕು? ಕರ್ನಾಟಕ ಏಕೀಕರಣ ಅಂದರೇನು? ಕನ್ನಡ ಮಾತಾಡೋವರೆಲ್ಲ ಒಂದಾಗೋದು. ಒಂದಾದೆವೆಂದರೆ ಹೊಲೆ ಹದಿನೆಂಟು ಜಾತಿಯವರು ಎಲ್ಲಾ ಒಂದಾಗತಾರೆ. ಪೂರ್ವಜನ್ಮದ ಪಾಪದಿಂದ ಬಡವರು, ತಿರುಕರು ಆಗಿ ಹುಟ್ಟಿದವರು ಸಹ ನಾಳೆ ಏಕೀಕರಣ ಆಯಿತೆಂದರೆ ಉಂಡಾಡಿಯ ಉಂಡಿಗೆ ಕೈಹಾಕುವವರೇ! ನಮ್ಮನಮ್ಮೊಳಗೆ ಬಡಿದಾಡುತ್ತಲೇ ಇದ್ದರೆ, ದೊಡ್ಡ ತಲೆಯವರ ಗತಿ ಏನಾದರೂ ಆಗಲಿ, ದೊಡ್ಡ ಹೊಟ್ಟೆಯವರು ಮಾತ್ರ ಸಡ್ಡು ಹೊಡೆಯಲಿಕ್ಕೇನೂ ಅಡ್ಡಿಯಿಲ್ಲ. ನಾವು ಏಕೀಕರಣದ ಬದಲು ಕೇಕೀಕರಣ ಸಾಗಿಸುವ ವರೆಗೆ ಸರಕಾರದವರು ಉಂಡಾಡಿಗಳ ಹೊಟ್ಟೆಯನ್ನೇನೂ ಕರಗಿಸಲಿಕ್ಕಿಲ್ಲ. ಭಪ್ಪರೆ ದಪ್ಪಂಣಾ ಉಂಡಾಡಿಗಳೇ! ನೀವು ಮಹಾರಾಷ್ಟ್ರಕ್ಕೆ ಓಡಿ ಹೋಗಿರಿ; ನಾನು ಇಲ್ಲೇ ಇದ್ದು ಜನರಲ್ಲಿ ಜಾತಿಯ ಕೋತಿಯನ್ನು ಬಿಚ್ಚಿಬಿಡುತ್ತೇನೆ. ಅವರು ಜಾತಿಯನ್ನು ಸುಧಾರಿಸುವದರೊಳಗೆ ನಾನು ನನ್ನ ಬುತ್ತಿಯನ್ನು ಸುಧಾರಿಸುತ್ತೇನೆ. ಎಲ್ಲರೂ ಒಂದಾಗೋದೆಂದರೆ ನಮ್ಮನಿಮ್ಮ ಕೂಳು ಬಂದಾಗೋದು ಎಂತ ನನಗ ಗೊತ್ತದೆ.

ಸರ್ವಾಧಿಕಾರಿಗಳ ತೆಕ್ಕೆಯಲ್ಲಿ !

ಅರ್ಥಾತ್

ಆಂಗ್ಲೋ-ಫ್ರೆಂಚ್ ಸಖ್ಯದಲ್ಲಿ ಸಡಿಲು

"ನಾಗರಿಕ" ರಿಂದ

★

ಬ್ರಿಟನು ಫಾಸಿಸ್ಟ್-ನಾಝಿ ಗೆಣೆಯರೊಡನೆ ಪ್ರಣಯಕ್ರೀಡೆಯಾಡಲು ಉದ್ಯುಕ್ತವಾಗಿದೆ ! ಸಾಗರಸಮ್ರಾಜ್ಞಿ ಸರ್ವಾಧಿಕಾರಿಗಳ ತೆಕ್ಕೆಯಲ್ಲಿ ಸಿಕ್ಕಿಬೀಳುತ್ತಿದ್ದಾಳೆ ! ಇದು ಬೆಂಕಿಯ ಗೆಳೆತನವೆಂಬುದು ಕಾಲಕ್ರಮದಲ್ಲಿ ತಿಳಿದುಬರುವಂತಹ ಸಂಗತಿ.

★

ಇಂಗ್ಲಂಡ್-ಫ್ರಾನ್ಸ್‌ಗಳ ಸಖ್ಯವು ಚರಿತ್ರಪ್ರಸಿದ್ಧವಾದುದು. ಮಹಾಯುದ್ಧದಲ್ಲಿ ಅದರ ಸತ್ತ್ವಪರೀಕ್ಷೆಯಾಯಿತು ಮಾತ್ರವಲ್ಲ, ತದನಂತರವೂ ಅದು ಕಾಲನ ಒರೆಗಿಳಿದು ಬಂದಿದೆ.

ಆದರೆ ಈಚೆಗೆ—ಯುರೋಪಿನ ಪರಿಸ್ಥಿತಿ ತುಂಬಾ ತೊಡಕಿನದಾಗಿದಂದಿನಿಂದ—ಈ ಗೆಳೆತನದಲ್ಲಿ ಸಡಿಲು ಹುಟ್ಟಿದೆ. ಇಂಗ್ಲಂಡಿಗೆ ಎದೆಯೊಡಿಕೆ—ತನ್ನ ಸಾಮ್ರಾಜ್ಯ—ಅಲ್ಲ, ತನ್ನ ಚಿಕ್ಕ ನಡುಗಡ್ಡೆಯ ಪ್ರಜೆ—ಈ ವರೆಗೆ ಹಾಯಾಗಿದ್ದುದು—ಎಲ್ಲಿ 'ಹಾಯ್ ! ಹಾಯ್ !' ಎನ್ನಬೇಕಾಗಿ ಬರುವುದೋ ಎಂದು.

★

ತಮ್ಮಿಬ್ಬರ ಇತಿಹಾಸಪ್ರಸಿದ್ಧ ಸಖ್ಯದ ಮೇಲೆ ಮತ್ತೊಮ್ಮೆ ಮುದ್ರೆಯನ್ನೊತ್ತಬೇಕೆಂದು ಫ್ರಾನ್ಸಿನ ಅಧ್ಯಕ್ಷರು ಜಾರ್ಜ ಚಕ್ರವರ್ತಿಗಳನ್ನು ರಾಜವೈಭವದಿಂದ ಬರಮಾಡಿಕೊಂಡರು. ಎರಡೂ ರಾಷ್ಟ್ರಗಳ ಪ್ರಜೆಗಳು-ಪತ್ರಿಕೆಗಳು ಏಕಗ್ರೀವವಾಗಿ 'ಸುವ್ವಿ-ಸುವ್ವಿ' ಎಂದವು. ಈ ಸಂದರ್ಭದಲ್ಲಿಯೆ ಬ್ರಿಟಿಷ್ ಯುದ್ಧಮಂತ್ರಿಗಳೂ ವಿದೇಶಮಂತ್ರಿಗಳೂ ಫ್ರೆಂಚ್ ಅಧಿಕಾರಿವರ್ಗದೊಡನೆಯೂ ಸೇನಾಧಿಕಾರಿಗಳೊಡನೆಯೂ ಮಹತ್ವದ ಮಾತುಕತೆಗಳನ್ನಾಡಿದರು. 'ಇನ್ನೊಮ್ಮೆ ಮಹಾಯುದ್ಧದ ಪ್ರಸಂಗ ಬಂದರೆ, ನಿಮ್ಮ ಸೈನ್ಯವನ್ನು ನಮ್ಮ ನೆರವಿಗೆ, ನಾವು ಕೇಳಿದೊಡನೆ, ಕಳಿಸುವಿರಾ?' ಎಂದು ಫ್ರೆಂಚ್ ಅಧಿಕಾರಿಗಳು. ಯುದ್ಧಮಂತ್ರಿ ಹೋರ ಬೆಲಿಶಾ ಅವರಿಗೆ ಕೇಳಿದರಂತೆ. ಯುರೋಪಖಂಡದಲ್ಲಿ ನಮ್ಮ ಸೈನ್ಯವನ್ನು ಕಳಿಸಲೇಬಾರದಾಗಿ ಈಚೆಯ ನಮ್ಮ ಧೋರಣೆಯಾಗಿದೆಯೆಂದು ಬ್ರಿಟಿಷ್ ಯುದ್ಧಮಂತ್ರಿಗಳು ಹೇಳಿದರಂತೆ. ಫ್ರಾನ್ಸಿನಲ್ಲಿ ಇದರಿಂದ ತುಂಬಾ ನಿರಾಶೆಯುಂಟಾಯಿತು.

★

೧೯೩೬ರಲ್ಲಿ ಜರ್ಮನಿಯು ಲೊಕಾರ್ನೊ ಒಪ್ಪಂದವನ್ನು ಕಾಲ್ಕೆಳಗೆ ತುಳಿದು ರ್‍ಹಾಯಿನ್ ನದೀತೀರದ ಪ್ರದೇಶವನ್ನು ಆಕ್ರಮಿಸಿದಾಗಲೆ, ಫ್ರೆಂಚ್ ಸರಕಾರವು, ಮತ್ತೆ ಯುದ್ಧ ಪ್ರಾರಂಭವಾದರೆ ಮುಂಚಿನಂತೆ ಬ್ರಿಟನ್ನು ತನ್ನ ನೆರವಿಗೆ ಸೈನ್ಯ ಕಳಿಸುವ ಯೋಜನೆಯನ್ನು ಮುಂಚಿತವಾಗಿಯೆ ನಿರ್ಧರಿಸಬೇಕೆಂದು ಬ್ರಿಟಿಷ್ ಸರಕಾರಕ್ಕೆ ಕೇಳಿಕೊಂಡಿತು. ಎರಡೂ ದೇಶಗಳ ಸೇನಾಧಿಕಾರಿಗಳ ಸಂಯುಕ್ತ ಸಮಿತಿಯನ್ನು ನಿಯಮಿಸಲು ಬ್ರಿಟಿಷ್ ಸರಕಾರವೂ ಒಪ್ಪಿಕೊಂಡಿತು. ಸಮಿತಿಯ ಕೆಲಸವು ತುಂಬಾ ಮಂದಗತಿಯಿಂದ ಸಾಗಿತು. ಮುಂದೆಮುಂದೆಯಂತೂ ಲಂಡನ್ ಟೈಮ್ಸ್ ಪತ್ರಿಕೆಯು, ಫ್ರಾನ್ಸಿನಲ್ಲಿ ಬ್ರಿಟಿಷ್ ಸೈನ್ಯವನ್ನು ಕಳಿಸಬೇಕೆಂಬ ತತ್ವಕ್ಕೇ ತನ್ನ ವಿರೋಧವನ್ನು ಪ್ರದರ್ಶಿಸಿತು. ದೊಡ್ಡ ದೊಡ್ಡ ಯುದ್ಧಶಾಸ್ತ್ರಜ್ಞರು ಈ ವಿಚಾರಸರಣಿಯನ್ನು ಎತ್ತಿಹಿಡಿದರು. ಇದರಿಂದ ಇಂಗ್ಲಂಡಿನಲ್ಲಿ ದೊಡ್ಡ ಕೋಲಾಹಲವೆ ಉಂಟಾಯಿತು. ಏಕೆಂದರೆ ಲಂಡನ್ ಟೈಮ್ಸ್ ಪತ್ರಿಕೆಯು ಪ್ರಬಲ ರಾಜಕೀಯ ಪಕ್ಷದ ಮುಖಪತ್ರವಾಗಿದೆ; ಮತ್ತು ಮತಪರಿವರ್ತನೆ ಮಾಡುವುದರಲ್ಲಿ ಅದ್ಭುತ ಶಕ್ತಿಯುಳ್ಳದ್ದಾಗಿದೆ. ಈಚೆಗೆ ಜರ್ಮನಿ-ಝೆಕೊಸ್ಲೊವಾಕಿಯಗಳ ತಿಕ್ಕಾಟ ಪ್ರಾರಂಭವಾದಾಗ ಜನಮತವು 'ಫ್ರಾನ್ಸಿನ ನೆರವಿಗೆ ಬ್ರಿಟನು ಧಾವಿಸಿ ಹೋಗಬೇಕೆ'ಂಬತ್ತ ಕಡೆಗೆ ಒಲಿಯುವ ಚಿಹ್ನಗಳು ಕಂಡೊಡನೆ, ಈ ಪತ್ರಿಕೆಯು ಮೊನ್ನೆ ಮೊನ್ನೆ (ಜೂನ್ ೧೭) ಮತ್ತೊಮ್ಮೆ ಇಂಗ್ಲಂಡಿನ ಯುದ್ಧಧೋರಣೆಯನ್ನು ಅಧಿಕಾರಯುತವಾಗಿ ವಿವರಿಸಿತು.

ಟೈಮ್ಸ್ ಪ್ರಣೀತ ಬ್ರಿಟಿಷ್ ಯುದ್ಧನೀತಿ ಮೀಮಾಂಸೆಯನ್ನು ಈ ರೀತಿಯಾಗಿ ವಿವರಿಸಬಹುದು. ಯುರೋಪಿನ ಗೊಂದಲದಲ್ಲಿ ಕೈಹಾಕಬಾರದೆಂಬುದು ಇಂಗ್ಲಂಡಿನ ಪರಂಪರಾಗತ ನೀತಿ. ಬ್ರಿಟನಿನ ಮತ್ತು ಬ್ರಿಟಿಷ್ ಸಾಮ್ರಾ

ಜ್ಯದ ರಕ್ಷಣೆಯೆ ಅದರ ಮುಖ್ಯ ಗುರಿ. ಯುದ್ಧಕಾಲದಲ್ಲಿಯೂ ಯುದ್ಧ ಮುಗಿದ ಮೇಲೂ ತನ್ನ ಶಕ್ತಿ ಅಚ್ಚಳಿಯದುಳಿಯಬೇಕೆಂಬುದೆ ಅದರ ಸಮರನೀತಿಯ ಸೂತ್ರ. ನೆರೆಹೊರೆಯವರ ಜಗಳದಲ್ಲಿ ಅಲಿಪ್ತವಾಗಿಯೆ ಇರತಕ್ಕದ್ದಾಗಿ ಬಂಧನವಿರದಿದ್ದರೂ ಭೂಯುದ್ಧದಲ್ಲಿ ಶಕ್ಯವಿದ್ದಮಟ್ಟಿಗೂ ಭಾಗ ವಹಿಸದಿರುವುದು ಒಳಿತು. ಇನ್ನೊಂದು ವಿಷಯವೆಂದರೆ, ಇಂಗ್ಲಂಡು ಸೈನ್ಯದಲಕ್ಕಿಂತ ನೌಕಾದಲ ವಿಮಾನದಲಗಳನ್ನು ಹೆಚ್ಚಿಸುವ ಕಡೆಗೇ ತನ್ನ ಲಕ್ಷ್ಯವಿತ್ತಿದೆ; ಎಲ್ಲಾ ಕಡೆಗೂ ದೃಷ್ಟಿಯಿಟ್ಟು ಎಲ್ಲಾ ಯುದ್ಧಾಂಗಗಳೂ ಸಮನಾಗಿ ಬೆಳೆಯುವಂತೆ ನೋಡಿಕೊಳ್ಳುವುದು ಯಾರಿಗೆ ಸಾಧ್ಯ?

ಲಂಡನ್ ಟೈಮ್ಸ್ ಪತ್ರಿಕೆಯ ಜೂನ್ ೧೭ರ ಲೇಖನವು ಮಹತ್ವಪೂರ್ಣವಾದುದು. ಅದರ ಯುಕ್ತಿವಾದವು ಗಮನಾರ್ಹವಾಗಿದೆ. 'ಯಾವ ದಿಕ್ಕಿನಿಂದ ನೋಡಿದರೂ ಫ್ರಾನ್ಸಿಗೆ ಇಂಗ್ಲಂಡಿನ ಸೈನ್ಯಸಹಾಯವು ಅಗತ್ಯವಿಲ್ಲ. ಯಾಕೆಂದರೆ ಝೆಕೊಸ್ಲೊವಾಕಿಯದ ಮೇಲೆ ಜರ್ಮನಿಯು ಆಕ್ರಮಣ ಮಾಡಿದ ಸಂದರ್ಭದಲ್ಲಿ ಫ್ರಾನ್ಸಿಗೆ ಜರ್ಮನಿಯ ಮೇಲೆ ಏರಿ ಹೋಗಬೇಕೆಂದು ಬಯಕೆಯಾದರೆ, ಈ ಏರಾಟಕೆಯಲ್ಲಿ ಪ್ರಾರಂಭದಿಂದಲೆ ಭಾಗ ವಹಿಸಲು ಬ್ರಿಟಿಷ್ ಸೈನ್ಯಕ್ಕೆ ಸಾಧ್ಯವಿಲ್ಲ. ಇಂಗ್ಲಂಡಿನಿಂದ ಯುದ್ಧ ಕ್ಷೇತ್ರಕ್ಕೆ ತಲುಪಲಿಕ್ಕೇ ೧೫ ದಿನಗಳು ಬೇಕು; ಈ ಅವಧಿಯಲ್ಲಿ ಫ್ರಾನ್ಸ್ ದೇಶದ ರಾಜಕೀಯ ಮತ್ತು ಯುದ್ಧವಿಷಯಕ ಪರಿಸ್ಥಿತಿಯಲ್ಲಿ ಎಷ್ಟೊಂದು ಅಕಲ್ಪನೀಯ ಘಟನೆಗಳು ನಡೆಯುವವೊ ಹೇಳುವುದಸಾಧ್ಯ. ಅಲ್ಲದೆ, ಆಧುನಿಕ ಸಮರಶಾಸ್ತ್ರದ ನಿಯಮದಂತೆ ದಾಳಿ ಹೂಡುವ ಸೈನ್ಯವು ಸಂರಕ್ಷಣಪ್ರವೃತ್ತ ಸೈನ್ಯದ ಐದುಮಡಿಯಷ್ಟಾದರೂ ಇರತಕ್ಕದ್ದು; ಫ್ರೆಂಚ್ ಸೈನ್ಯವಾದರೋ ಜರ್ಮನಿಯ ಮುಕ್ಕಾಲುಪಾಲಿನಷ್ಟೂ ಇಲ್ಲ. ಆದುದರಿಂದ ಫ್ರಾನ್ಸು ಜರ್ಮನಿಯ ಮೇಲೆ ಏರಿ ಹೋಗುವುದು ಸಾಧ್ಯವಿಲ್ಲ. ಬ್ರಿಟಿಷ್ ಲೋಕಮತವು ಇತ್ತೀಚೆಗೆ ಯುದ್ಧಕ್ಕೇ ಪ್ರತಿಕೂಲವಾಗುತ್ತ ನಡೆದಿದೆ; ಜರ್ಮನಿಯ ಮೇಲೆ ಯುದ್ಧ ಸಾರಲು ಅದೆಂದೂ ಸಮ್ಮತಿಸದು. ಇನ್ನು ಜರ್ಮನಿಯು ಫ್ರಾನ್ಸಿನ ಮೇಲೆ ಏರಿ ಬಂದರೆ, ಫ್ರಾನ್ಸಿನ ಅಭೇದ್ಯ ದುರ್ಗರಚನೆಯ ಮೇಲೆ ಅಪ್ಪಳಿಸಿ ಹಣೆಯೊಡೆದುಕೊಳ್ಳುವುದು ಖಂಡಿತ; ಫ್ರಾನ್ಸಿನ ಸೈನ್ಯಸನ್ನಾಹವು ಈ ದುರ್ಗಶ್ರೇಣಿಯನ್ನು ರಕ್ಷಿಸಲು ಪೂರ್ಣ ಸಮರ್ಥವಿದೆ.'

ಮೇಲಣ ವಿಚಾರಸರಣಿಯು ದೋಷಪೂರ್ಣವಾದುದೆಂಬುದು ಕೊಂಚ ವಿಚಾರ ಮಾಡಿದರೆ ಹೊಳೆಯುವುದು. ಜರ್ಮನ್-ಫ್ರೆಂಚ್ ಗಡಿನಾಡುಗಳನ್ನು ವಿಂಗಡಿಸು Maginot Line ಎಂದು ಹೆಸರಾದ—ದುರ್ಗಶ್ರೇಣಿ ಅಜಯ್ಯವಾಗಿದೆಯೆಂದೇ ಭಾವಿಸಿದರೂ, ಬರ ಫ್ರಾಂಕೋ-ಜರ್ಮನ್ ಯುದ್ಧವು ಉತ್ತರ ಸಮುದ್ರ ಭೂಮಧ್ಯ ಸಮುದ್ರದವರೆಗೆ ಫ್ರಾನ್ಸಿನ ಎಲ್ಲಾ ಪ್ರಾಂತಗಳಲ್ಲೂ ಒಮ್ಮೆಲೆ ನಡೆಯುವ ಸಂಭವವು ಜರ್ಮನಿಗೆ ಇಟಲಿಯ ಜೊತೆಯು ದೊರೆಯುವುದು ವಿಲ್ಲ. ಇದನ್ನು ಫ್ರಾನ್ಸು ಅರಿಯದೆ ಇಲ್ಲ. ಅದು ಸಂಕಟಕಾಲದಲ್ಲಿ ಬ್ರಿಟನನ್ನು ನಂಬಿತ್ತು. ಬ್ರಿಟನು ಈ ರೀತಿ ಹಾರಿಸಿಕೊಂಡಿತು. ಇದರಿಂದ ಡುವ ಅನುಮಾನವೊಂದೇ: ಜರ್ಮನಿ-ಇಟಲಿಗಳ ಕ್ರಮಣನೀತಿಗೆ ಇಂಗ್ಲಂಡು ಮೂಕಸಮ್ಮತಿಯನ್ನಿ ಯೆಂದು. ನಾವು ಹಲವು ಸಲ ನಮ್ಮ ಪರರಾಷ್ಟ್ರೀ ಲೇಖನಗಳಲ್ಲಿ ಬರೆದಿದ್ದೇವೆ—ಬ್ರಿಟನು ಫ್ಯಾಸಿಸ್ಟ್-ನಾ ಗೆಣೆಯರೊಡನೆ ಪ್ರಣಯಕ್ರೀಡೆಯಾಡಲು ಉದ್ಯುಕ್ತವಾ ಯೆಂದು. ಅದು ನಿಜ. ಕಡಲರಾಣಿ ಸರ್ವಾಧಿಕಾ ತೆಕ್ಕೆಯಲ್ಲಿ ಸಿಕ್ಕಿ ಬೀಳುತ್ತಿದ್ದಾಳೆ. ಇದು ಬೇಂಕಿ ತನವೆಂಬುದು ಕಾಲಕ್ರಮದಲ್ಲಿ ತಿಳಿದು ಬರು ವಿಷಯ.

★

ಬ್ರಿಟಿಷರ ಈ ನೀತಿಯು ಫ್ರಾನ್ಸಿಗೆ ಈಗಾಗಲೆ ವಾಗಿದೆ. ಈ ಬಗ್ಗೆ ಫ್ರಾನ್ಸಿನಲ್ಲಿ ಅತೃಪ್ತಿಗೆ ಬಾಯಿ ಇದುವರೆಗೂ ಶಾಂತಿಸಮರಗಳೆರಡರಲ್ಲೂ ಇಂಗ್ಲ ನಂಬುವುದೇ ಫ್ರಾನ್ಸಿನ ಧೋರಣೆಯಾಗಿತ್ತು. ಸ್ಪಾ ಕದನದಲ್ಲಿ ಬ್ರಿಟನು ವಹಿಸಿದ ಮೀನಮೇಷ ಫ್ರಾನ್ಸಿಗೆ ಸರಿಬರದಿದ್ದರೂ ಅದು ಇಂಗ್ಲಂಡಿನ ಪಕ್ಷ ಕಟ್ಟಿತು. ಫ್ರೆಂಚ್ ಸರಕಾರ (ಅದು ಎಷ್ಟೇ ಸ್ಥಿ ಗಳನ್ನು ಪಡೆಯುತ್ತಿದ್ದರೂ) ಮತ್ತು ಜನಮತ ಸ್ಪ ಸರಕಾರಪಕ್ಷಕ್ಕೇ ಮೊದಲಿನಿಂದಲೂ ಅನುಕೂಲ ಆದರೂ ಇಂಗ್ಲಂಡಿನ ಮಾತು ಕೇಳಿ ತನ್ನ ಪೈರೆನೀ ಗಡಿನಾಡನ್ನು ಮುಚ್ಚಿಬಿಟ್ಟು, ಸ್ಪಾನಿಷ್ ಸರಕಾರಕ್ಕೆ ಸಾಹಿತ್ಯವಾಗಲಿ ಆಹಾರಸಾಮಗ್ರಿಯಾಗಲಿ ತಲು ಫ್ರಾನ್ಸು ವ್ಯವಸ್ಥೆ ಮಾಡಿತು. ಈ ರೀತಿ ಇಂ ಫ್ರಾನ್ಸಿನ ಕಡೆಯಿಂದ ಸ್ಪಾನಿಷ್ ಸರಕಾರಕ್ಕೆ ಬಾ ತುರುಕಿಸಿ, ಕ್ಲೀಬತೆಯೆ ಮೂರ್ತಿವೆತ್ತಂತಿರುವ ' ಸಮಿತಿ'ಯೊಂದನ್ನು ರಚಿಸಿ, ಅತ್ತ ಕಡೆ ಹಿಟ್ಲರ್ ಲಿನಿಗಳು ಸ್ಪಾನಿಷ್ ಬಂಡುಗಾರರಿಗೆ ಪ್ರಕಟವಾ

ವಾಗುವುದಕ್ಕೆ ತನ್ನ ತರ್ಜನಿಯನ್ನೂ ಎತ್ತಲಾರದೆ ಹೋಯಿತು. ಸ್ಪಾನಿಷ್ ಸರಕಾರವು ಈ ವಿಪರೀತ ಅನ್ಯಾಯವನ್ನು ಎಷ್ಟೋ ಸಲ ಪ್ರತಿಭಟಿಸಿ, ಸುಮ್ಮನೆ ಕೂಡಬೇಕಾಯಿತು. 'ಆಂಗ್ಲೊ-ಇಟಾಲಿಯನ್' ಸಂಧಾನದ ಪೂರ್ವನಿರ್ಬಂಧವೆಂದು 'ಇಟಾಲಿಯನ್ ಸ್ವಯಂಸೇವಕ' ರನ್ನು ಹಿಂದಕ್ಕೆ ಕರೆಸಿಕೊಳ್ಳುವ ಜವಾಬ್ದಾರಿಯನ್ನು ಮುಸೊಲಿನಿಯು ಸಾಧ್ಯವಿದ್ದಷ್ಟು ಮುಂದಕ್ಕೆ ತಳ್ಳತೊಡಗಿದನು. ಅಲ್ಪಾವಧಿಯಲ್ಲಿ ಫ್ರಾಂಕೋನಿಗೆ ಜಯವು ದೊರೆಯುವುದೆಂಬ ಆವನ ಅನುಮಾನವು ಸುಳ್ಳಾಯಿತು. ಸರಕಾರ ಪಕ್ಷವು ಇನ್ನೂ ಹಣಿಯದೆ ನಿಂತುದನ್ನು ನೋಡಿ, ಇಂಗ್ಲಂಡು ಫ್ರಾಂಕೋನಿಗೂ, ತನ್ನ ತಾಟಸ್ಥ್ಯ ಯೋಜನೆಯನ್ನು ಮತ್ತು 'ಸ್ವಯಂಸೇವಕ 'ರನ್ನು ಕಂತುಕಂತಿನಲ್ಲಿ ಹೊರಕ್ಕೆ ಕಳಿಸುವ ಕ್ರಮವನ್ನು ತಿಳಿಸಿತು. ಅವನ ಉತ್ತರವು ನಿರಾಶಾದಾಯಕವಾಗಿದೆ. ಇದೇ ಸಂಧಿಯನ್ನು ಸಾಧಿಸಿ ಮುಸೊಲಿನಿ ತನ್ನ ಸಹಾಯಸರ್ವಸ್ವವನ್ನಿತ್ತು, ಫ್ರಾಂಕೋ ಜಯಶಾಲಿಯಾಗುವಂತೆ ಪ್ರಯತ್ನದ ಪರಮಾವಧಿಯನ್ನು ನಡೆಸಿದ್ದಾನೆ. ಇದು ಫ್ರೆಂಚರಲ್ಲಿ ಕಳವಳವನ್ನುಂಟುಮಾಡಿದೆ. ಪೈರೇನಿಯನ್ ಸೀಮೆಯನ್ನು ಫ್ರೆಂಚ್ ಸರಕಾರವು ಮುಚ್ಚಬೇಕೆಂದು ಎತ್ತುಗಡೆ ನಡೆಸಿದಾಗ ಪ್ರತಿಭಟಿಸಿದ ಉಗ್ರಮತವಾದಿಗಳಿಗೆ ಸಮಾಧಾನದ ಸಲಹೆಯಿತ್ತ—ಆಗ ಮುಖ್ಯ ಮಂತ್ರಿಗಳಾಗಿದ್ದ—ಬ್ಲಂ ಸಾಹೇಬರವರೇ, ಆದಷ್ಟೇಗ ತೆರೆದುಬಿಡಬೇಕೆಂದು ವಾದಿಸುತ್ತಿದ್ದಾರೆ. ಫ್ರಾನ್ಸಿನಲ್ಲಿಯ ಈ ಮತಪರಿವರ್ತನೆಯು ಅರ್ಥಪೂರ್ಣವಾಗಿದೆ.... ಇತ್ತ ಬಾರ್ಸಿಲೋನಾಕ್ಕೆ ಬಂದ ಬ್ರಿಟಿಷ್ 'ಶಾಂತಿಸಮಿತಿ'ಯ ಮೂಗಿಗೆ ನೇರವಾಗಿಯೇ, ಇಟಾಲಿಯನ್ (ಇಲ್ಲ, ಫ್ರಾಂಕೋನ) ವಿಮಾನಗಳು ಬ್ರಿಟಿಷ್ ಹಡಗುಗಳ ಮೇಲೆ ಸಿಡಿಗುಂಡುಗಳನ್ನು ಚೆಲ್ಲಿ, ಅವನ್ನು ಪುಡಿಪುಡಿ ಮಾಡುತ್ತಿವೆ!

★

ಇನ್ನೊಂದು ಆಧಾರವನ್ನು ಉದಾಹರಿಸಿ ಮುಗಿಸುವೆವು. ಬೊಂಬಾಯಿಯ ನಮ್ಮ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು, 'ಬ್ರಿಟಿಷ್ ಸರಕಾರವು ಹಿಟ್ಲರನಿಗೆ ಹೆದರಿದೆಯೆನ್ನುವಿದಾ" ಎಂದು ಆವೇಶದಿಂದ ಆಕ್ರೋಶಮಾಡುತ್ತ ಝೆಕೊಸ್ಲೊವಾಕಿಯಕ್ಕೆ ಬ್ರಿಟಿಷರ ಶಾಂತಿದೂತರಾಗಿ ಹೋದ ರನ್ಸಿಮನ್‌ದೊರೆಗಳ ಸಂಧಾನಕಾರ್ಯದ ಯಶಸ್ವಿತೆಯನ್ನೂ ಝೆಕ್ ಸರಕಾರವೂ ಅಲ್ಲಿಯ ನಾಝಿ ಪಕ್ಷವೂ ಅವರ ತಿಳುವಳಿಕೆಯ ಮಾತುಗಳಿಗೆ ತಲೆದೂಗುತ್ತಿರುವುದನ್ನೂ ಬಣ್ಣಬಣ್ಣಗಳಲ್ಲಿ ಚಿತ್ರಿಸುತ್ತಿರುವುದು. ರನ್ಸಿಮನ್ನರ ರಾಯಭಾರವು ಗಂಡು ಹಡೆಯುವುದೋ, ಹೆಣ್ಣು ಹಡೆಯುವುದೋ ಈ ಮುಂದೆ ತಿಳಿಯಬೇಕಾಗಿದ್ದರೂ, ಅದೇ ಪತ್ರಿಕೆಯ ಪ್ರಾಗದ ಸುದ್ದಿಗಾರನು, ಝೆಕೊಸ್ಲೊವಾಕಿಯದ ಜನತೆಯು ರನ್ಸಿಮನ್ನರ ದೌತ್ಯವನ್ನು ಯಾವ ಕಣ್ಣಿನಿಂದ ನೋಡುತ್ತಿದೆಯೆಂಬುದನ್ನು ತನ್ನೊಂದು 'ಬಾತ್ಮಿ'ಯಲ್ಲಿ ಬಹಳ ಮಾರ್ಮಿಕವಾಗಿ ತಿಳಿಸಿದ್ದಾನೆ. ಬ್ರಿಟಿಷರ ಹೊಟ್ಟೆಯೊಳಗಿನ ಗುಟ್ಟನ್ನೇ ಅವನ ಪತ್ರವು ಹೊರಗೆಡಹುತ್ತಿದ್ದುದರಿಂದ, ಅದನ್ನು ಸಾರೋದ್ಧಾರವಾಗಿ ಇಲ್ಲಿ ಕೊಡುತ್ತಿದ್ದೇವೆ:—

ಕಾಣದ ದೆವ್ವಕ್ಕಿಂತ ಕಂಡ ದೆವ್ವ ಲೇಸು....ರನ್ಸಿಮನ್ನರ ರಾಯಭಾರದ ಸುದ್ದಿಯು ಝೆಕ್ಕರಲ್ಲಿ ನಡುಕವನ್ನೆ ಹುಟ್ಟಿಸಿದೆ; ಅವರು ತಮ್ಮ ಕೈಕಾಲುಗಳನ್ನೆ ಕಳೆದುಕೊಳ್ಳುವಂತೆ ಮಾಡಿದೆ.

ಲಂಡನ್ನು, (ಮತ್ತು ಅದರ ಅನುರೋಧದಿಂದ) ಪ್ಯಾರಿಸು, ಝೆಕೊಸ್ಲೊವಾಕಿಯದಲ್ಲಿ ಜರ್ಮನರಿಗೆ ಕೊಡಬೇಕಾದ "ಸೌಕರ್ಯ"ಗಳ ಮಾತನ್ನೆ ಅತಿಯಾಗಿ ಎತ್ತುತ್ತಿವೆ; ಆ ಪ್ರಮಾಣದಲ್ಲಿ ಈ ದೇಶದ "ಸ್ವಾತಂತ್ರ್ಯ-ಸ್ವಾಯತ್ತತೆ"ಗಳ ರಕ್ಷಣೆಯ ಸುದ್ದಿಯೆ ಕೇಳಬರುವುದಿಲ್ಲ.

ಜರ್ಮನಿ ನುಗ್ಗಬೇಕೆನ್ನುತ್ತಿದೆ—ಅದರ ಶಕ್ತಿಯನ್ನಾರೂ ತಡೆದು ಹಿಡಿಯಲಾರರು; ಝೆಕೊಸ್ಲೊವಾಕಿಯವು ಅಚಲವಾಗಿ ನಿಂತಿದೆ. ಈ ಜಗ್ಗಾಟದಲ್ಲಿ ಹಗ್ಗವಾರಕಡೆಗೆ ಸರಿಯುವುದೆಂಬುದೇ ಪ್ರಶ್ನೆಯಾಗಿದೆ.

ಜರ್ಮನಿಯು ಮುಂದೊತ್ತುವುದೆ?—ಲಂಡನ್ ತನ್ನ ಹೃದಯಾಂತರಾಳದಿಂದ ಹರಕೆಯನ್ನಿತ್ತುಬಿಟ್ಟಿದೆ—'ತಥಾಸ್ತು!'

ಡಾನ್ಯೂಬಿನ ದಂಡೆಗುಂಟ—ಝೆಕೊಸ್ಲೊವಾಕಿಯ-ಹಂಗರಿ-ರೂಮಾನಿಯಗಳನ್ನು ಹಿಂದಕ್ಕೊಗೆದು—ರಶಿಯದ ಯುಕ್ರೇನ್ ಪ್ರದೇಶದ ಫಲವತ್ತಾದ ಬೈಲುಭೂಮಿಯನ್ನು ಸೆಳೆದು—ಜರ್ಮನರನ್ನು ಅಲ್ಲಿ ನೆಲೆಗೊಳಿಸುವುದು !....ಅಹುದು; ಜರ್ಮನಿಯ ಈ ಮಹತ್ವಾಕಾಂಕ್ಷೆಗೆ ಬ್ರಿಟನು 'ಸೈ' ಎಂದಿದೆ.

ಜರ್ಮನಿಯ ಕಾಟ ಆಯತ ತಪ್ಪಿತು; ಆ ಶನೈಶ್ಚರನ ಪಶ್ಚಿಮದ ಕಡೆಯ ದೃಷ್ಟಿ ಪೂರ್ವಕ್ಕೆ ತಿರುಗಿತು; ಇಂಗ್ಲಂಡಿನ ನಿದ್ದೆಗೆಡಿಸುತ್ತಿದ್ದ ಆ ಕರಾಲದೃಶ್ಯ ಕಣ್ಮರೆಯಾಯಿತು !

ಮೇ ೨೦—೨೧ಕ್ಕೆ, ಜರ್ಮನಿಯು ಒಳನುಗ್ಗಬೇಕೆಂದಾಗ, ಝೆಕ್ ಸರಕಾರವು ತನ್ನ ಸೈನ್ಯಸಿದ್ಧತೆಯನ್ನೆಲ್ಲಾ ಗಡಿನಾಡಿನಲ್ಲಿ ಕೇಂದ್ರೀಕರಿಸಿ ತಕ್ಕ ಉತ್ತರವನ್ನಿತ್ತಿತು. ಯುರೋಪ್ ಖಂಡವೇ ಬೆರಳು ಕಚ್ಚಿತು. ಅಂದಿನಿಂದ ಜರ್ಮನಿಯ ಕೆಣಕಾಟದ ಫಲವಾಗಿ ಸುಡೇಟನ್ ಜರ್ಮನರು ತಮ್ಮ ಬೇಡಿಕೆಗಳನ್ನು ಒಂದೊಂದಾಗಿ ಮುಂದೊತ್ತತೊಡಗಿದರು. ಪೂರ್ಣ ಸ್ವಾಯತ್ತತೆ ತಮಗೆ; ಹಣಕಾಸು, ಸೈನ್ಯ, ವಿದೇಶನೀತಿಗಳ ವಿಚಾರ ಪ್ರಾಗದ ಕೇಂದ್ರ ಸರಕಾರದ ಕಡೆಗೆ—ಎಂಬುದೇ ಅವುಗಳ ತಿರುಳಾಗಿತ್ತು. 'ಗೆರೆ ಹಾಕಿ ತಮ್ಮ ಸೀಮೆಯನ್ನು ಗೊತ್ತುಪಡಿಸಬೇಕು; ಅಲ್ಲಿ ಅಂತಃಸ್ವಾ[illegible]ವನ್ನು ಸ್ವಂತದ ಪಾರ್ಲಿಮೆಂಟನ್ನೂ ಕೊಡಬೇಕು; ಪೋಲೀಸ ಮೊದಲಾದ ಅಧಿಕಾರಗಳನ್ನೂ ದಾನಮಾಡಬೇಕು'—

ಎಂಬ ಅವರ ವಿಸ್ತೃತ ಬೇಡಿಕೆಗಳನ್ನು ಸರಕಾರವು ಮನ್ನಿಸದೆ ಹೋಯಿತು. ಜನತೆಯ ಸ್ವಾಸ್ಥ್ಯದೃಷ್ಟಿಯಿಂದ ಬೇಕಾದಷ್ಟು ಸ್ವಾಯತ್ತತೆಯ ಹಕ್ಕುಗಳನ್ನು ಕೊಡಲೊಪ್ಪಿತು, ಆದರೆ ಈ ಹಿರೇತನದ ಅಧಿಕಾರವನ್ನು ಕೊಡಲು ಹಿಂದೆ ಮುಂದೆ ನೋಡಿತು.


ಎರಡು ಮೊನ್ನೆಮೊನ್ನೆಯ ಉದಾಹರಣೆಗಳು ಅದರ ಮುಂದೆ ನೇತಾಡುತ್ತಿದ್ದವು: (೧) ೧೯೩೩ರಲ್ಲಿ, ಜರ್ಮನಿಯಲ್ಲಿ, ಪ್ರಸಿಯನ್ ಪೋಲೀಸರ ಆಧಿಪತ್ಯದ ಸಹಾಯದಿಂದ ಜನರಲ್ ಗೋರಿಂಗನು, ರೀಚ್ ಸಭಾಮಂದಿರಕ್ಕೆ ಗೂಢ ರೀತಿಯಲ್ಲಿ ತಗಲಿದ ಬೆಂಕಿಯ ನೆವ ಮಾಡಿ, (ನಾಝೀತರ ವಯಸ್ಕ ಮುಂದಾಳುಗಳು ರೀಚ್ ಮಂತ್ರಿ ಮಂಡಲದಲ್ಲಿ ಬಹುಮತವುಳ್ಳವರಾಗಿದ್ದರೂ) ಜರ್ಮನಿಗೆ ಜರ್ಮನಿಯನ್ನೆ ಹಿಟ್ಲರನ ನಾಝೀಪಾಶಕ್ಕೆ ಒಪ್ಪಿಸಿದನು. (೨) ಆಸ್ಟ್ರಿಯದ ಚಾನ್ಸೆಲರನಾದ ಶೂಸ್ನಿಗ್ಗನು ಹಿಟ್ಲರ ಬೆದರುಗುಂಡಿಗೆ ತುತ್ತಾಗಿ, ಸೆಸ್-ಇನ್ಕ್ವಾರ್ಟನಿಗೆ ಪೋಲೀಸದಲದ ಸ್ವಾಮಿತ್ವವನ್ನು ಒಪ್ಪಿಸಿದುದರ ಫಲವಾಗಿ, ೫ ವಾರಗಳಲ್ಲಿಯೆ ಆಸ್ಟ್ರಿಯವನ್ನು ಕಳೆದುಕೊಂಡನು.

ಝೆಕ್ ಸರಕಾರವು ಪಾರ್ಲಿಮೆಂಟಿನಲ್ಲಿ ತನಗೆ ಬೇಕಾದ ಹಾಗೆ ಕಾನೂನು ಮಾಡಿಕೊಂಡು, ಸುಡೇಟನ್ ಜರ್ಮನರಿಗೆ ಕೊಡಬೇಕಾದುದನ್ನು ಕೊಟ್ಟು, ಯುರೋಪಿಯನ್ ರಾಷ್ಟ್ರಗಳ ದ... ಮುಚ್ಚಬಹುದಾಗಿತ್ತು. ಇದು ಲಂಡನ್-ಪ್ಯಾರಿಸುಗಳಿಗೆ ಬೇ... ದ್ದಿತು; ಕೂಡಲೆ ಮಧ್ಯಸ್ಥಿಕೆಗಾಗಿ ರನ್ಸಿಮನ್ನರನ್ನು ಕಳ...

ಬ್ರಿಟಿಷರಿಗೆ ಸಮಯ ತಳ್ಳಲು ಸಿಕ್ಕಿತು. ವೈಟಹಾಲಿ... ಸಂಧಿಯ ಮಾತುಗಳನ್ನಾಡಲು ಒಮ್ಮೆ ಪ್ರಾರಂಭಿಸಿದರೆ ... ಆ ಚಕ್ರಬಿಂಬನ ಕೋಟೆಯೊಳಗಿಂದ ಹೊರಬಿದ್ದವನೇ ... ಅಂತೆಯೆ ಹಿಟ್ಲರನು ಇಂಗ್ಲಿಷರ ಸಾಮೋಪಚಾರವನ್ನು ... ವನು; ಒಂದೇಟಿನಿಂದ ಎರಡು ತುಂಡೆಂಬುದೇ ಅವನ ನೀತಿ.

ಅಂತೂ ಅಬಿಸೀನಿಯ—ಬಾಸ್ಕನ—ಆಸ್ಟ್ರಿಯಗಳ ಹಜಾಬ... ಝೆಕೊಸ್ಲೊವಾಕಿಯದ್ದೂ ಆಗುವುದೆಂಬುದು ಖಂಡಿತ. ... ಗುರಿ— ಗೋದಿ-ಕಲ್ಲಿದ್ದಲುಗಳ ನಾಡುಗಳಾದ ಹಂಗರಿ, ರು... ನಿಯಾ !

ಜರ್ಮನಿಯ ಎದುರಿಗೆ ಸಡ್ಡು ಹೊಡೆದು ನಿಂತರೆ, ಪ್ರ... ರಾಷ್ಟ್ರಗಳ ಸಹಾನುಭೂತಿ ಹೋಗುವುದು; ರನ್ಸಿಮನ್ನರ ... ಗೊಪ್ಪಿದರೆ ಅಕ್ರಮಣಶೀಲ ಸು.ಜರ್ಮನರಿಗೆ ಝೆಕ ದ... ವನ್ನು ಬಲಿಗೊಡಬೇಕಾಗುವುದು—ಎಂಬೀ ತೊಡಕಿನಲ್ಲಿ ... ಸರಕಾರವು ಬಿದ್ದಿದೆ.



ಜ್ಞಾನ—ವಿಜ್ಞಾನ

ಮೇಣಬತ್ತಿ ನಂದಿಸುವ ಯುಕ್ತಿ

ಉರಿಯುತ್ತಿರುವ ಮೇಣಬತ್ತಿಯನ್ನು ಮುಟ್ಟದೆ ಗಾಳಿ ಹಾಕದೆ ನಂದಿಸಲು ಬರುವುದೆಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಹಾಗೆ ಮಾಡಲು ಒಂದು ಯುಕ್ತಿಯಿದೆ. ಸಣ್ಣ ಮಕ್ಕಳ ಯಕ್ಷಿಣಿ ಆಟದಲ್ಲಿ (ಜಾದೂ) ಇದನ್ನು ತೋರಿಸಬಹುದು. ಒಂದು ತಾಮ್ರದ ತಂತಿಯನ್ನು ತೆಗೆದುಕೊಳ್ಳಿ. ಅದನ್ನು ಮೇಣಬತ್ತಿಗಿಂತ ಹೆಚ್ಚಿನ ವರ್ತುಲವುಳ್ಳ ಒಂದು ಗುಂಡು ಕಟ್ಟಿಗೆಗೆ ಸುತ್ತಿ ಒಂದು ಸ್ಪ್ರಿಂಗ್ ತಯಾರಿಸಿರಿ. ಆ ಸ್ಪ್ರಿಂಗಿನ ಉದ್ದಳತೆಯು ಮೇಣಬತ್ತಿಗಿಂತ ಉದ್ದವಾಗಿರಬೇಕು. ಸ್ಪ್ರಿಂಗನ್ನು ಉದ್ದವಾಗಿ ಹಿಡಿದು ಉರಿಯುತ್ತಿರುವ ಮೇಣಬತ್ತಿಯ ಮೇಲಿನಿಂದ ಕೆಳಗೆ ಮೆಲ್ಲಗೆ ಇಳಿಸಿ ಇಡಿರಿ. ಈಗ ಮೇಣಬತ್ತಿಯು ಸ್ಪ್ರಿಂಗಿನ ನಡುವೆ ಇದೆ. ಸ್ಪ್ರಿಂಗು ಬತ್ತಿಗಿಂತ ಎತ್ತರವಾಗಿದೆ. ನೋಡಿರಿ ಮೇಣಬತ್ತಿಯು ಮೆಲ್ಲಗೆ ಮಂದವಾಗಹತ್ತಿ ಕೊನೆಗೆ ಆರಿಹೋಯಿತು! ಬತ್ತಿಯಿಂದ ಹೊರಡುವ ಉಷ್ಣತೆಯನ್ನೆಲ್ಲ ತಂತಿಯು ನುಂಗುವದಾದುದರಿಂದ ದೀಪವು ಬತ್ತಿಯನ್ನು ಉರಿಸಲಾರದೆಂಬುದೆ ಬತ್ತಿಯು ಆರುವದಕ್ಕೆ ಕಾರಣವಾಗಿದೆ.

ಹೊತ್ತಿನ ಹುಚ್ಚು

ಪ್ರತಿಯೊಂದು ಕೆಲಸದಲ್ಲಿ ಸಮಯಶೀಲತೆ ಬೇಕೆಂಬುದು ಸರಿಯೆ. ಆದರೆ ಜಗತ್ತಿನ ಆಗುಹೋಗುಗಳೆಲ್ಲ ನಮ್ಮ ಅಧೀನವಲ್ಲವಾದುದರಿಂದ ಹೊತ್ತಿನಲ್ಲಿ ಯಾವುದೊಂದು ಕಾರ್ಯವನ್ನು ಸಾಧಿಸುವ ಹಟದಿಂದ ನಮ್ಮ ಶಕ್ತಿಗಳನ್ನೆಲ್ಲ ಹಾಳುಗೊಳಿಸುವದು ಯೋಗ್ಯವಾಗಲಾರದು. ಲಕ್ಷಾವಧಿ ಜನರು ಗಡಿಯಾರದ ಮುಳ್ಳಿಗೆ ತಮ್ಮನ್ನು ನೇಣುಹಾಕಿಕೊಂಡು ಸಂಕಟಪಡುತ್ತಾರೆ. ಹತ್ತು ವರ್ಷಗಳಲ್ಲಿ ಹತ್ತು ಸಾವಿರ ರೂಪಾಯಿ ಕೂಡಿಸಿಡಬೇಕೆಂಬ ಹಟದಿಂದ ಕೆಲವರು ಹೊಟ್ಟೆತುಂಬ ತಿನ್ನಲಾರದೆ, ಮಿತಿ ಮೀರಿ ದುಡಿದು ಆರಲಾರದ ದಣಿವನ್ನು ತಂದುಕೊಂಡು ಹತ್ತು ಸಾವಿರ ಕೂಡಿದಾಗ ಅದನ್ನು ಉಪಭೋಗಿಸುವ ಸೌಭಾಗ್ಯವಿಲ್ಲದೆ ಕಣ್ಣುಮುಚ್ಚಿಬಿಡುವರು. ಜಗತ್ಪ್ರಸಿದ್ಧ ಧನಿಕನಾದ ಹೆನ್ರಿ ಫೋರ್ಡನು ಅನ್ನುತ್ತಾನೆ 'ಜಗತ್ತಿನ ಅನುಭವವನ್ನು ಕನಿಷ್ಠ ನಾಲ್ವತ್ತು ವರ್ಷಗಳವರೆಗಾದರೂ ಪಡೆಯದೆ ದುಡ್ಡನ್ನು ಕೂಡಿಡಲು ಯಾರೂ ಯತ್ನಿಸಬಾರದು. ಹೊತ್ತಿನ ಕಟ್ಟಿನಿಂದ ಬಿಗಿಯಲ್ಪಟ್ಟ ಬುದ್ಧಿಯು ಮಂಕಾಗುವದರಿಂದ ಅಪಯಶಸ್ಸು ಮೇಲಿಂದ ಮೇಲೆ ನಮ್ಮನ್ನು ಅಂಜಿಸುವದು. ಹೊತ್ತಿನ ಕಟ್ಟಿನಿಂದ ಕಟ್ಟಿಕೊಳ್ಳುವದಕ್ಕಿಂತ ಪ್ರತಿಯೊಂದು ಕಾರ್ಯವನ್ನು ಏಕಾಗ್ರಬುದ್ಧಿಯಿಂದ ಆತ್ಮವಿಶ್ವಾಸದಿಂದ ಮಾಡುತ್ತ ಹೋದರೆ ಕಾರ್ಯವೂ ಬೇಗ ಆಗುವದಲ್ಲದೆ ಆದ ಕೆಲಸದಿಂದ ಮನಕ್ಕೆ ತೃಪ್ತಿಯೂ ಶಾಂತಿಯೂ ಹೆಚ್ಚು ಶಕ್ತಿಯೂ ಬೆಳೆಯುವದು.'

ಪಶುಗಳಿಗೆ ಕಟ್ಟಿಗೆಯ ಆಹಾರ

ಮನುಷ್ಯನು ಅನೇಕ ಪಶುಗಳನ್ನು ಆಹಾರಕ್ಕಾಗಿ ಉಪಯೋಗಿಸುವನು. ಆದರೆ ಪಶುಗಳಿಗೆ ಆಹಾರವನ್ನು ಒದಗಿಸುವದು ಹಲವು ಸಲ ಮಳೆ ಬೆಳೆಗಳ ಅಕ್ರಮದಿಂದ ಅಸಾಧ್ಯವಾಗುವದು. ಆಗ ಮನುಷ್ಯನು ತನ್ನ ಆಹಾರಕ್ಕಿಂತ ಪಶುಗಳ ಆಹಾರವ್ಯವಸ್ಥೆಯನ್ನು ಮೊದಲು ಮಾಡಬೇಕಾಗುವದು. ಜರ್ಮನಿಯ ವಿಜ್ಞಾನಿಗಳು ಈ ಸಮಸ್ಯೆಯನ್ನು ಈಗ ಬಿಡಿಸಿದ್ದಾರೆ. ಅವರು ಹಂದಿಗಳಿಗೂ ಆಡು-ಕುರಿಗಳಿಗೂ ಕಟ್ಟಿಗೆಯ ಪುಡಿಯಿಂದ ಆಹಾರವನ್ನು ತಯಾರಿಸುತ್ತಿದ್ದಾರೆ. ಆದರಿಂದ ಆ ಪ್ರಾಣಿಗಳು ಹೆಚ್ಚು ಪುಷ್ಟವಾಗಿ ಬೆಳೆಯುತ್ತಿವೆಯಂತೆ. ಜರ್ಮನಿಯಲ್ಲೆಲ್ಲ ಇನ್ನು ಮೇಲೆ ಕಟ್ಟಿಗೆಯ ಮೇವನ್ನೆ ಪ್ರಚಾರಗೊಳಿಸುವ ಪ್ರಯತ್ನ ನಡೆದಿದೆ. ಹಂದಿಗಳಿಗೆ ಕಟ್ಟಿಗೆಯ ಪುಡಿಯ ಸಂಗಡ ಸಿಹಿಯಾದ ಪದಾರ್ಥ

ವನ್ನು ಸೇರಿಸಿ ಹಿಂಡಿಯ ರೂಪದಲ್ಲಿ ತಿನ್ನಿಸುತ್ತಾರೆ. ಕುರಿಗಳಿಗೆ ಹಿಟ್ಟಿನ ರೂಪದಲ್ಲಿ ಕೊಡುತ್ತಾರೆ.

ಆಜ್ಞಾಧಾರಕ ಸ್ವಭಾವದವರ ಮೇಲೆ ಅಧಿಕಾರಿಗಳ ಕೃಪೆ ವಿಶೇಷವಾಗಿರುತ್ತದೆಂಬುದು ನಮಗೆ ಗೊತ್ತಿದೆ. ಹೇಳಿದಂತೆ ಕೇಳುವವರು ಬುದ್ಧಿವಂತರಲ್ಲವೆಂದು ಪ್ರಸಿದ್ಧರಾದ

ನಾವೆಲ್ಲರೂ ಹೌದವ್ವ ಇಲ್ಲವೆ ಹೌದಪ್ಪಗಳು

ಅನೇಕ ವ್ಯಕ್ತಿಗಳೂ ಹೌದಪ್ಪಗಳ ಜಾತಿಗೇ ಸೇರಿದವರಿರುತ್ತಾರೆಂದು ಡೊನಾಲ್ಡ್ ಎ. ಲೇರ್ಡ್ ಎಂಬ ಮನೋವಿಜ್ಞಾನಿಯು ಹೇಳುತ್ತಾನೆ. ಒಬ್ಬನು ಹೇಳಿದುದನ್ನೆಲ್ಲ ಚರ್ಚಿಸದೆ ನಂಬುವ ಸ್ವಭಾವವುಳ್ಳವರಿಗೆ ಹೌದಪ್ಪ ಇಲ್ಲವೆ ಹೌದವ್ವ ಎಂದು ಹೆಸರು. ಬುದ್ಧಿಯನ್ನು ಉಪಯೋಗಿಸದೆ ಹೌದೆನ್ನುವ ಸ್ವಭಾವವು, ಹುಟ್ಟಿದೊಡನೆಯೆ ಬರುತ್ತದೆಂದು ಲೇರ್ಡನ ಅಭಿಪ್ರಾಯ. ಜನರು ಪತ್ರಿಕೆಗಳನ್ನು ಕೊಳ್ಳುವಾಗ, ರೈಲಿನ ಯಾವುದೊಂದು ಡಬ್ಬಿಯನ್ನು ಹತ್ತುವಾಗ, ಸರ್ಕಸ್ಸಿನಲ್ಲಿಯ ಕೌಶಲ್ಯವನ್ನು ವರ್ಣಿಸುವಾಗ, ನಾಟಕನೃತ್ಯಗಳಲ್ಲಿ ತಮ್ಮ ಅಭಿಮತವನ್ನು ವ್ಯಕ್ತಪಡಿಸುವಾಗ ಸ್ವತಂತ್ರವಾದ ಅಭಿರುಚಿಯನ್ನು ವ್ಯಕ್ತಗೊಳಿಸುವದು ತೀರ ಅಪರೂಪ. ಯಾರೋ ಹೊಗಳಿದರೆಂದು ನಾವೂ ಹೊಗಳುವದು; ಬೇರೆಯವರು ಕೊಳ್ಳುತ್ತಾರೆಂದು ನಾವೂ ಆ ಪತ್ರಿಕೆಯನ್ನು ಕೊಳ್ಳುವದು ಈ ವೃತ್ತಿಗಳಿಗೆ ಹೌದಪ್ಪ ಹೌದವ್ವಗಳ ವೃತ್ತಿಯೆನ್ನಬಹುದು. ಆದರೆ ನಮ್ಮ ಅಭಿಪ್ರಾಯುಗಳು ಕೈಗಡದವು ಎಂಬುದನ್ನು ಮಾತ್ರ ಒಪ್ಪುವಷ್ಟು ವಿನಯವು ನಮ್ಮಲ್ಲಿರುವದಿಲ್ಲ. ಇದು ನನ್ನ ಸ್ವತಂತ್ರವಾದ ಅಭಿಪ್ರಾಯವೆಂದು ಹೆಚ್ಚು ಸೊಕ್ಕಿನಿಂದ ಹೇಳುವವರು ಬಹುತರವಾಗಿ ಗುಪ್ತವಾದ ಹೌದಪ್ಪಗಳೇ ಆಗಿರುವರೆಂದು ಲೇರ್ಡನ ಅಭಿಪ್ರಾಯ.

ಬೆಕ್ಕು, ನಾಯಿ, ಮೊಲ, ಪಾರಿವಾಳಗಳನ್ನು ಸಾಕುವ ಮೋಹವು ಎಲ್ಲ ದೇಶಗಳಲ್ಲಿಯೂ ಕಂಡು ಬರುತ್ತದೆ. ಸಾಕು ಪ್ರಾಣಿಗಳೊಡನೆ ಚಿಕ್ಕ

ರೋಗವಾಹಕ ಪ್ರಾಣಿಗಳು

ಮಕ್ಕಳು ಅಪ್ಪಿಕೊಳ್ಳುವದು ಮುದ್ದಿಡುವದು ಮುಂತಾದ ಆಟಗಳನ್ನು ಆಡುವರು. ಆದರೆ ಆ ಪ್ರಾಣಿಗಳು ನಿರೋಗಿಗಳಾಗಿಯೆ ಇರುವವೆಂದು ಹೇಳಲಾಗದು. ಅವುಗಳಿಗಿರುವ ರೋಗಗಳು ಮಕ್ಕಳಿಗೆ ಅಂಟಿಕೊಳ್ಳುವ ಸಂಭವವೂ ಇದೆ. ಬ್ರಿಟಿಶ್ ಮೆಡಿಕಲ್ ... ನವರು ಒಂದೂವರೆ ವರ್ಷದ ಒಂದು ಹೆಣ್ಣುಕೂಸು ... ವಾಳದೊಡನೆ ಆಡುತ್ತಿರುವಾಗ 'ಹನುಸ್ತಂಭ' ... ತಗಲಿಕೊಂಡಿತೆಂದು ಪ್ರಸಿದ್ಧಿಸಿದ್ದಾರೆ. ಕೆಲವು ... ದೇಹದಲ್ಲಿ ರೋಗಜಂತುಗಳಿದ್ದರೂ ತೋರಿಕೆಗೆ ... ನಿರೋಗಿಗಳಾಗಿಯೇ ಇರುವವು. ಆದರೆ ... ಸಂಪರ್ಕದಿಂದ ಬೇರೆಯವರಿಗೆ ಮಾತ್ರ ರೋಗ... ಬಿಡುವದು! ನ್ಯೂಯಾರ್ಕ ಪಟ್ಟಣದಲ್ಲಿ ಟ್ಯಾಫಾ... ಮೇರಿ ಎಂಬ ಹೆಸರಿನ ಒಬ್ಬ ಅಡಿಗೆಯಾಕೆಯಿದ್ದ... ಅವಳು ನಿರೋಗಿಯಾಗಿಯೆ ತೋರುವಳು. ಆದರೆ ... ಕೈಯ ಅಡಿಗೆಯನ್ನುಂಡ ೫೦ ಜನರಿಗೆ ವಿಷಮ ... ಪಾತಜ್ವರ (ಟ್ಯಾಫಾಯ್ಡ್) ಬಂತಂತೆ. ಆದ್ದರಿಂದಲೆ ... ಟ್ಯಾಫಾಯ್ಡ್ ಮೇರಿ ಎಂಬ ಹೆಸರು ಬಿತ್ತು. ... ಆರೋಗ್ಯಶಾಖೆಯವರು ಅವಳ ಮೇಲೆ ನಿರ್ಬಂಧ... ಟ್ಟುದರಿಂದ ಅವಳಿಂದ ಈಗ ಯಾರಿಗೂ ಅಪಾಯ... ದಂತಾಗಿದೆ.

ಪ್ರಾಣಿಗಳು ಉಸಿರಾಟವನ್ನು ನಿಲ್ಲಿಸಿದ ಕೂಡಲೆ ... ಅವುಗಳ ಹೃದಯಸ್ಪಂದನವು ನಿಂತ ಕೂಡಲೆ ... ವೆಂದು ನಾವು ತಿಳಿಯುತ್ತೇವೆ.

ಸಾಯುವಾಗ ಏನೇನಾಗುತ್ತದೆ?

ಈಗ ಅವೆರಡೂ ನಿಂತ ... ಕೂಡ ಕೆಲವು ಸಮಯದ... ದೇಹದ ವಿವಿಧ ಭಾಗಗಳಲ್ಲಿ ... ವಿರುವದೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ... ರಿಂದಲೆ ಸತ್ತ ಪ್ರಾಣಿಗಳನ್ನು ಪುನಃ ಬದುಕಿಸುವ ಪ್ರಯೋಗ... ವನ್ನು ನಡೆಸುತ್ತಿದ್ದಾರೆ. ಏಕೆಂದರೆ ದೇಹಕ್ಕೆ ಮರಣ... ಒಮ್ಮೆಲೆ ಬರುವದಿಲ್ಲ. ಹೃದಯ ಶ್ವಾಸಕೋಶಗಳ ... ನಿಂತ ಮೇಲೂ ದೇಹಧಾತುಗಳಲ್ಲಿ ಜೀವವಿದ್ದೆ ಇರುತ್ತದೆ. ... ಸಾವು ತೀರ ಮೊದಲು ಯಕೃತ್ (ಲಿವರ್) ಮತ್ತು ... ಳನ್ನು ಆಕ್ರಮಿಸುವದು. ನಂತರ ಹೃದಯದ ಸ್ನಾಯು... ವದು. ನಿಂತ ಹೃದಯವನ್ನು ಕೂಡಲೆ 'ಆಡ್ರಿನ್ಯಾಲಿನ್' ... ಇಂಜೆಕ್ಶನ್ನಿನಿಂದ ಕ್ಷಣಿಕವಾಗಿ ಪ್ರಾರಂಭಿಸ... ವಿದ್ಯುತ್‌ಸೂಚಿಗಳಿಂದ ತಾತ್ಪೂರ್ತಿಕವಾಗಿ ಹೃದಯ... ಉತ್ತೇಜಿಸಬಹುದು. ಹೃದಯದ ನಂತರ ... ಸ್ನಾಯುಗಳು, ಜಠರ, ಕರುಳು, ಮೂತ್ರಪಿಂಡ, ಎಲುಬು... ಮತ್ತು ತೀರ ಕೊನೆಗೆ ಚರ್ಮ ಈ ಕ್ರಮದಲ್ಲಿ ಸಾವು... ಆಕ್ರಮಣವಾಗುವದು. ಸತ್ತ ಮೇಲೆ ಉಗುರು ...

ಕೂದಲು ಬೆಳೆಯುವವೆಂಬ ಒಂದು ಮೂಢ ನಂಬಿಕೆಯಿದೆ. ಆದರೆ ಸತ್ತ ಮೇಲೆ ಚರ್ಮವು ಸಂಕೋಚ ಹೊಂದುವದರಿಂದ ಅವು ಬೆಳೆದಂತೆ ತೋರುತ್ತವೆ ಅಷ್ಟೆ.

ಸಸ್ಯಗಳ ಜೀವಸತ್ವ

ಮನುಷ್ಯನ ದೇಹದಲ್ಲಿ ಹಲವು ಓಜೋಗ್ರಂಥಿಗಳಿವೆ. ಅವುಗಳಿಂದ ಉತ್ಪನ್ನವಾದ ಜೀವಸತ್ವಗಳು (Hormones) ದೇಹದ ಆರೋಗ್ಯ ಬೆಳಿಗೆಗಳಲ್ಲಿ ವಿವಿಧ ರೀತಿಯಿಂದ ಉಪಯುಕ್ತವಾಗುತ್ತವೆ. ಪಿಚುಯಿಟರಿಯ ಸತ್ವದಿಂದ ಬೆಳಿಗೆಯಾಗುವ ಕ್ರಮದ ವಿಷಯವು ಹಿಂದೆ ಜಯಕರ್ನಾಟಕದಲ್ಲಿ ವಿವರಿಸಲ್ಪಟ್ಟಿದೆ. ಈಗ ಸಸ್ಯಗಳಲ್ಲಿಯೂ ವಿಜ್ಞಾನಿಗಳು ಜೀವಸತ್ವಗಳನ್ನು ಶೋಧಿಸುತ್ತಿದ್ದಾರೆ. ಇತ್ತೀಚೆ ಡಾ. ಅಲ್ಬರ್ಟನು ಕೊಲ್‌ಶಿಸಿನ್ ಎಂಬ ಸಸ್ಯಜೀವಸತ್ವವನ್ನು ಪರಿಶೋಧಿಸಿದ್ದಾನೆ. ಅದನ್ನು ಸಸ್ಯಗಳ ಮೇಲೆ ಉಪಯೋಗಿಸಿದರೆ ಅವುಗಳ ಬೆಳಿಗೆಯು ತೀವ್ರವಾಗುತ್ತದೆ. ತಂಬಾಕು, ಸೋರೇಕಾಯಿ, ನೀರುಳ್ಳಿ, ಮುಂತಾದ ಹಲವು ಸಸ್ಯಗಳಲ್ಲಿ ಕೊಲ್‌ಶಿಸಿನ್ ಉಪಯೋಗಿಸಲಾಗಿ ಅವುಗಳಲ್ಲಿಯ ಜ್ಯೋತಿರ್ವರ್ಣಾಣುಗಳು ಹೆಚ್ಚಿದುದು ಕಂಡುಬಂತು. ಕಲಮು ಮಾಡಿ ಹುಟ್ಟಿಸಿದ ಗಿಡಗಳು ಯಾವದೊಂದು ಕಾರಣದಿಂದ ಬಂಜೆಯಾದರೆ ಕೊಲ್‌ಶಿಸಿನ್ ಆ ಬಂಜೆತನವನ್ನು ಹೋಗಲಾಡಿಸಲಿಕ್ಕೆ ಒಳ್ಳೆ ಮದ್ದೆಂದು ಡಾ. ಅಲ್ಬರ್ಟನೆನ್ನುತ್ತಾನೆ.

ಬೊಲಿವಿಯದ ಸ್ತ್ರೀವರ್ಗೀಕರಣ

ನಮ್ಮ ದೇಶದಲ್ಲಿ ಸ್ತ್ರೀಯರನ್ನು ಸುಂದರ ಕುರೂಪಿ, ಉದ್ದ ಕುಳ್ಳ, ತಿಳುವು ಗಡುತರ ಎಂದು ನಾವು ವರ್ಗೀಕರಿಸುವೆವಾದರೂ ಅವರ ಗುಣ ಮತ್ತು ಸಾಂಪತ್ತಿಕ ಸ್ಥಿತಿಯನ್ನು ಆ ವರ್ಗೀಕರಣದಿಂದ ತಿಳಿಯುವದು ಸಾಧ್ಯವಿಲ್ಲ. ಹಿಂದೆ ಅನೇಕ ದೇಶಗಳಲ್ಲಿ ನೀತಿವಂತರಾದ ಸ್ತ್ರೀಯರಿಗೆ ವಿಶಿಷ್ಟ ಉಡಿಗೆಗಳು, ಕುಲಟಿಯರಿಗೆ ವಿಶಿಷ್ಟ ಉಡಿಗೆಗಳೆಂಬ ಕಾಯದೆ ನಿಯಮಗಳಿರುತ್ತಿದ್ದವು. ಸ್ತ್ರೀಶಿಕ್ಷಣ ಸ್ವಾತಂತ್ರ್ಯಗಳು ತಲೆದೋರಿದಂತೆಲ್ಲ ಆ ನಿಯಮಗಳು ಮೂಲೆಗುಂಪಾಗಿ ಹೋದವು. ಆದರೆ ಬೋಲೀವಿಯದ ಸ್ತ್ರೀಯರಲ್ಲಿ ಆ ವಿಧದ ವರ್ಗೀಕರಣಗಳಿಂದಿಗೂ ಇವೆ. ಅಲ್ಲಿಯ ಕುಲೀನರಾದ ಇಂಡಿಯನ್ ಸ್ತ್ರೀವರ್ಗದವರು ತಿಳುವಾದ ತುಪ್ಪಳದ ಹ್ಯಾಟುಗಳನ್ನು ಧರಿಸುವರು. ಸ್ವಲ್ಪ ಮಿಶ್ರರಕ್ತದ ಸ್ತ್ರೀಯರು ಬಿರುಸಾದ ಉದ್ದವಾದ ಬಿಳಿ ಹ್ಯಾಟು ಧರಿಸುವರು. ಮಿಕ್ಕವರೆಲ್ಲರೂ 'ಯುರೋಪಿಯನ್ ಫ್ಯಾಶನ'ನ್ನು ಅವಲಂಬಿಸಿದ್ದಾರೆ. ಈ ಕಾಯದೆಯನ್ನು ಅಲ್ಲಿಯ ಜನರು ಮಿಕ್ಕೆಲ್ಲ ನೀತಿನಿಯಮಗಳಿಗಿಂತ ಹೆಚ್ಚು ಶ್ರದ್ಧೆಯಿಂದ ಪಾಲಿಸುತ್ತಾರೆ. ಯಾವುದೊಂದು ಕಾರಣದಿಂದ ಅವರ ಸಾಮಾಜಿಕ ದರ್ಜೆಯಲ್ಲಿ ಹೆಚ್ಚುಕಡಿಮೆಯಾದಾಗ ತಾಯಿಯು ತುಪ್ಪಳ ಹ್ಯಾಟನ್ನೂ, ಮಗಳು ಉದ್ದನ್ನ ಬಿಳಿ ಹ್ಯಾಟನ್ನೂ ಧರಿಸುವ ಪ್ರಸಂಗ ಬರಬಹುದು.

ಹೊಸ ಮುದ್ರಣ ಯಂತ್ರದ ಶೋಧ

ಪುಸ್ತಕಗಳಲ್ಲಿಯ ತ್ರಿವರ್ಣ ಚಿತ್ರಗಳು ನೋಡಲಿಕ್ಕೆ ಕಣ್ಣಿಗೆ ಸುಖದಾಯಕವಾಗಿವೆ. ಆದರೆ ಅವನ್ನು ಅಚ್ಚುಕಟ್ಟಾಗಿ ಸುಂದರವಾಗಿ ಮುದ್ರಿಸಬೇಕಾದರೆ ಬಹಳ ಶ್ರಮ ತಗಲುವದು. ಒಂದೊಂದು ಬಣ್ಣಕ್ಕಾಗಿ ಒಂದೊಂದು ಪ್ರತ್ಯೇಕ ಪಡಿಯಚ್ಚಿನ ಅಗತ್ಯವಿರುವುದಲ್ಲದೆ ಎಷ್ಟು ಬಣ್ಣಗಳಿರುವವೋ ಅಷ್ಟು ಸಲ ಮುದ್ರಣವನ್ನು ಮಾಡಬೇಕಾಗುತ್ತದೆ. ಅದರಿಂದ ಪಂಚವರ್ಣ ಇಲ್ಲವೆ ಅನೇಕ ವರ್ಣಗಳ ಚಿತ್ರವಿದ್ದಾಗ ಮುದ್ರಣವು ಬಹು ಕಷ್ಟದಾಯಕವಾಗುತ್ತದೆ. ಆದರೀಗ ಜಪಾನಿನಲ್ಲಿ ಪಂಚವರ್ಣದ ಚಿತ್ರಗಳನ್ನು ಸುಲಭವಾಗಿ ಶೀಘ್ರವಾಗಿ ಮುದ್ರಿಸುವಂತಹ ಒಂದು ಹೊಸ ಮುದ್ರಣಯಂತ್ರವು ಪರಿಶೋಧಿತವಾಗಿದೆ. ಅದರ ಸಹಾಯದಿಂದ ಕಾಜು, ಬಾಟ್ಲ, ರಬ್ಬರ್ ಚಂಡು, ತಗಡಿನ ದುಂಡು ಡಬ್ಬಿ ಮುಂತಾದವುಗಳ ಉಬ್ಬಿರುವ ಪ್ರದೇಶದಲ್ಲಿಯೂ ಸುಲಭವಾಗಿ ವರ್ಣಚಿತ್ರಗಳನ್ನು ಮುದ್ರಿಸಲಾಗುವದಂತೆ! ಪಂಚವರ್ಣದ ಪಡಿಯಚ್ಚುಗಳೂ ಅರ್ಧ ಸೆಕಂಡಿಗೊಂದು ಸಲದಂತೆ ಒಂದು ಗಂಟೆಯಲ್ಲಿ ೭೦೦ ಚಿತ್ರಗಳನ್ನು ಮುದ್ರಿಸಬಹುದಂತೆ.

ವಿಚಾರ ವೇದಿಕೆ

मरुद्भिरग्न आ गहि

ಏಕೀಕರಣದ ಅಗತಿಕತೆ

ಶ್ರೀ. ಲಕ್ಮೈಯವರ ಹೇಳಿಕೆಯನ್ನು ಸಾರ್ವಜನಿಕರೂ ಕ. ಪ್ರಾಂ. ಕಾಂಗ್ರೆಸ್ ಕಮಿಟಿಯೂ ಏಕೀಕರಣ ಸಭೆಯ ಕಾರ್ಯಸಮಿತಿಯೂ—ಎಲ್ಲರೂ ನಿಷೇಧಿಸಿದರು. ಇಷ್ಟರಲ್ಲಿ ಮದ್ರಾಸ ಸರಕಾರವು ಆಂಧ್ರಪ್ರಾಂತ ರಚನೆಯ ಬಗ್ಗೆ ಮುಂದಿನ ಪ್ರಯತ್ನಗಳನ್ನು ಕೈಕೊಳ್ಳುತ್ತಿರುವ ವಿಷಯವೂ, ಕ. ಏಕೀಕರಣದಿಂದ ಆ ಆಡಳಿತಕ್ಕೆ ಹಾನಿಯೇ ವಿನಾ ಲಾಭವಿಲ್ಲವೆಂಬ ಅದರ ಅಭಿಪ್ರಾಯವೂ ನಾ. ರಾಜಾಜಿಯವರ ಮುಖದಿಂದ ಹೊರಬಿದ್ದವು. ಈಚೆಗೆ ಸರದಾರ ಪಟೇಲರು, ಶ್ರೀ. ಲಕ್ಮೈಯವರ ವೈಯಕ್ತಿಕ ಅಭಿಪ್ರಾಯಗಳಿಗೆ ಮಹತ್ವ ಕೊಡಬೇಕಾಗಿಲ್ಲ, ಹೊತ್ತು ಬಂದಾಗ ಎಲ್ಲಾ ತಾನೇ ಸರಿಯಾಗುತ್ತಿದೆ, ಕೊಂಚ ತಡೆಯಿರಿ ಎಂಬರ್ಥದ ಮಾತುಗಳನ್ನು ಹೇಳಿರುವರು....ಏಕೀಕರಣವಾದಿಗಳು ಒಂದು ಮಾತನ್ನು ಮನದಟ್ಟು ಮಾಡಿಕೊಳ್ಳುವ ಹೊತ್ತು ಬಂದಿದೆ,—ಅದೆಂದರೆ ಸಾವಿರ ವಾಚಿಕ ಆಶ್ವಾಸನಗಳಿಂದ ಉಪಯೋಗವಿಲ್ಲ; ಸಂದಿಗ್ಧ ಆಶ್ವಾಸನಗಳಿಂದ ಅಸಂದಿಗ್ಧ ಅರ್ಥವನ್ನು ಎಳೆದುತರುವುದೂ ಸರಿಯಲ್ಲ. ಕರ್ನಾಟಕದ ಪ್ರಶ್ನೆಯು ಜಂಗುತಿನ್ನುತ್ತ ಮೂಲೆಗುಂಪಾಗಿ ಬಿದ್ದಿತು; ಆಂಧ್ರರ ಪ್ರಶ್ನೆಯು ಮುನ್ನಡೆಯಿತು—ಇದಕ್ಕಿಂತ ಪ್ರತ್ಯಕ್ಷ ಆಧಾರ ಮತ್ತೇನು ಬೇಕು? ತೀರ ಈಚೆಗೆ, ಸರದಾರ ಪಟೇಲರೂ ಕರಾಚಿಯಲ್ಲಿಯ ತಮ್ಮ ಭಾಷಣದಲ್ಲಿ, ಆಂಧ್ರಪ್ರಾಂತವು ಬೇಗನೆ ಸ್ವತಂತ್ರವಾಗುವುದೆಂದು ತಮ್ಮ ಆಶೆಯನ್ನು ವ್ಯಕ್ತಪಡಿಸಿರುವರು. (ಯುನೈಟೆಡ್ ಪ್ರೆಸ್—ತಾ. ೨೫-೮-೩೮) ಇದು ಏತರ ದ್ಯೋತಕ? ಆಂಧ್ರಪ್ರಾಂತ ಒಂದೇ ಏಕೆ? ದೊಡ್ಡವರ ಸಂದರ್ಭವಿರದಿದ್ದರೆ, ಇದು ವಚನಭಂಗವೆಂದೇ ಅನ್ನಬೇಕಾಗುತ್ತದೆ. ನಮ್ಮ ಏಕೀಕರಣ ಮುಂದಾಳುಗಳು ಈ ಕಾಲದಲ್ಲಿಯೆ ತಕ್ಕ ಧೋರಣೆಯಿಂದ ಚಳವಳಿಯನ್ನು ಮುಂದರಿಸಬೇಕು; ಇಲ್ಲವಾದರೆ ತರುಣಕರ್ನಾಟಕವು ಅಂಕೆ ಮೀರಿ ಹೋಗಬಹುದಾಗಿದೆ. ಮೇಲಣವರು ಹೇಳುವುದಕ್ಕಿಂತ ಹೆಚ್ಚಾಗಿ ತಿಳಿದುಕೊಳ್ಳುವ ಚಟವು ನಮ್ಮ 'ಮಾನ್ಯ ಮುಖಂಡ'ರಿಗೆ ಹತ್ತಿದಂತೆ ತೋರುತ್ತದೆ. ವ. ಕಮಿಟಿಯು ದೇಶದ ಪ್ರಾತಿನಿಧಿಕ ಸಂಸ್ಥೆಯ ಪ್ರತಿನಿಧಿಯಾಗಿದ್ದರೆ, ನಮ್ಮ ಮುಖಂಡರು ಮುಂಗೈ ಹಿಡಿದು ಕೇಳಲಿಕ್ಕೆ ಹಿಂದೆಮುಂದೇಕೆ ನೋಡುತ್ತಾರೆ? ಏಕೀಕರಣದ ಚಳವಳಿಗಾರರಲ್ಲಿಯೂ ಅದೊಂದು ಸಲ್ಲದ ಮಡಿವಂತಿಕೆಯು ತೋರಿಬರುತ್ತಲಿದೆ; 'ಸತ್ತಾಧೀಶ'ರ—High Command ದ—ಮುಖ ನೋಡಿ ಮಣೆಹಾಕುವ ಪ್ರವೃತ್ತಿಯು ನಮ್ಮ ಹಿರಿಯರಲ್ಲಿಯೂ ತಲೆದೋರುತ್ತಿರುವಂತಿದೆ. ಮೇಲಿನ ಮಿಟಿಮಿಟಿ ಸ್ವರ್ಗವನ್ನು ನೋಡುವುದಕ್ಕಿಂತಲೂ ಅವರು ತಮ್ಮ ಸುತ್ತುಮುತ್ತು ನೋಡಲಿ; ನಾಡಿನ ಹೋರಾಟದ ಶಕ್ತಿಗಳನ್ನೆಲ್ಲ ಒಟ್ಟುಗೂಡಿಸಲಿ; ಆ ವಜ್ರಸಮ ಐಕ್ಯದ ಶಕ್ತಿಯೊಂದೇ ಸಾಕು— ನಮ್ಮ ಈಪ್ಸಿತವನ್ನು ಈಡೇರಿಸಲಿಕ್ಕೆ.

ಆದುದರಿಂದ ನಮ್ಮ ಕರ್ತವ್ಯವೆಂದರೆ, ಕರ್ನಾಟಕ ಪ್ರಾಂತರಚನೆಯ ಮುಂದಿನ ಕೆಲಸವನ್ನು ಕೂಡಲೆ ಕೈಕೊಳ್ಳುವಂತೆ ಮುಂಬಯಿ-ಮದ್ರಾಸ ಮಂತ್ರಿಮಂಡಲಗಳಿಗೆ ವ. ಕಮಿಟಿಯು ಸ್ಪಷ್ಟವಿಧಿ (mandate) ಕೊಡುವಂತೆ ಕೇಳಿಕೊಳ್ಳುವುದು,—ಅಲ್ಲ ಒತ್ತಾಯಪಡಿಸುವುದು; ಕೊಡದಿದ್ದರೆ ಕರ್ನಾಟಕವು ತಕ್ಕ ಉತ್ತರವನ್ನು ಕೊಡಬೇಕಾಗುವುದು. ಆಗ ಆಗುವುದು ನಮ್ಮ 'ಮಾನ್ಯಮುಖಂಡ'ರ ಸತ್ವಪರೀಕ್ಷೆ;—ಏಕೀಕರಣ ಪರಿಷತ್ತಿನಲ್ಲಿ 'ಸತ್ಯಾಗ್ರಹ'ದ ಉಚ್ಚಾರವನ್ನು ಉಚ್ಚಧ್ವನಿಯಲ್ಲಿ ಮಾಡಿದ ಕಾಂಗ್ರೆಸ್ ಮುಂದಾಳುಗಳ ಕೃತಿಸಾಮರ್ಥ್ಯಪರೀಕ್ಷೆ.

ದಬ್ಬಾಳಿಕೆಯ ಸಹಾಯದಿಂದ ಹಿಂದೀ ಪ್ರಚಾರ

ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು 'ಭಲೆ!' ಎಂದ ಕೂಡಲೆ ನಾವೆಲ್ಲಿಯೋ ತಪ್ಪುತ್ತಿರಬೇಕೆಂದು ಅನಿಸುತ್ತದೆಂದು ದಿವಂಗತ ಫಿರೋಜಶಹಾ ಮೆಹತಾ ಅವರು ಹೇಳುತ್ತಿದ್ದರು! ದಿವಂಗತ ತಿಲಕರವರೂ ಟೈಮ್ಸ್ ಪತ್ರಿಕೆಯನ್ನು ಮೊಟ್ಟಮೊದಲು ಓದುತ್ತಿದ್ದರಂತೆ—ತಪ್ಪಿ ಎಲ್ಲಿಯಾದರೂ ಸ್ತುತಿಪರ ಲೇಖನ ಬಂದಿದೆಯೇ ಎಂದು! ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟಿನಂತಹ ಕ್ರೂರ ಕಾನೂನನ್ನು ನಾ. ರಾಜಾಜಿಯವರು ಮದ್ರಾಸ ಅಸೆಂಬ್ಲಿ

ಯಲ್ಲಿ ಧೀರವಾಗಿ ಸಮರ್ಥಿಸಿದುದಕ್ಕೆ ಟೈಮ್ಸ್ ಪತ್ರಿಕೆಯು ಅವರ ಡುಬ್ಬ ಚಪ್ಪರಿಸಿದೆ. ಎಂದ ಮೇಲೆ ರಾಜಾಜಿಯವರು ತಪ್ಪಿದರೆಂದು ಧಾರಾಳವಾಗಿ ಹೇಳಬಹುದು.

'ಹಿಂದೀ ವಿರೋಧಕರ ಚಳವಳಿಯ ಒಳಗಿನ ಉದ್ದೇಶವೇನಿದೆಯೆಂಬುದನ್ನು ತಿಳಿದುಕೊಳ್ಳಿರಿ! ಸರಕಾರವನ್ನು ಬುಡಮೇಲು ಮಾಡಬೇಕೆಂಬುದೇ ಅವರ ಆಂತರಿಕ ಇಚ್ಛೆ! ಈ ಆಂದೋಲನವು ಒಂದು ಅನುಕೂಲ ಆಯುಧ ಮಾತ್ರ. ಇಂಥವರನ್ನು ಬಗ್ಗು ಬಡಿಯಲು—ಎಷ್ಟೇ ಕೆಟ್ಟದಿದ್ದರೂ—ಕ್ರಿ. ಲಾ ಅ. ಆಕ್ಟಿನಂತಹ ಶಸ್ತ್ರವು ಬೇಕೇಬೇಕು!' ಎಂದು ರಾಜಾಜಿಯವರು ವಾದಿಸಿದರು. 'ಉದ್ದೇಶವು ಪವಿತ್ರವಾಗಿರಬೇಕು ಮಾತ್ರವಲ್ಲ, ಸಾಧನವೂ ನಿರ್ಮಲವಾಗಿರಬೇಕು' ಎಂಬ ತಮ್ಮ ಪರಮಪೂಜ್ಯ ಗುರುಗಳಾದ ಗಾಂಧೀಜಿಯವರ ಉಪದೇಶವನ್ನು ಅವರ ಪಟ್ಟಶಿಷ್ಯರಾದವರೆ ಪಟ್ಟಪ್ರಧಾನಪದವಿಯನ್ನೇರಿದ ಕೂಡಲೆ ಮರೆಯಬೇಕೆ?

ತೀವ್ರ ಮತಭೇದಕ್ಕೆ ಎಡೆಗೊಟ್ಟಿರುವ 'ಹಿಂದೀ ಕಡ್ಡಾಯ ಶಿಕ್ಷಣ'ದಂತಹ ವಿಷಯವನ್ನು, ಪ್ರಜೆಗಳ ಪ್ರೀತಿ ವಿಶ್ವಾಸಗಳ ಮೇಲೆಯೆ ಅಧಿಷ್ಠಿತವಾದ ಕಾಂಗ್ರೆಸ್ ಸರಕಾರವು ಇಂತಹ ದುಷ್ಟ ಸಾಧನಗಳಿಂದ ಸಾಧಿಸಲೆಳಸುವುದ ಸರಿಯಾಗಿಲ್ಲವೆಂದೇ ನಮ್ಮ ಅಭಿಪ್ರಾಯ. ಪ್ರಾಂತೀಯ ಭಾಷೆಗಳಿಗೆ ಅಗ್ರಮರ್ಯಾದೆಕೊಟ್ಟು, ಪ್ರಾಂತಗಳಲ್ಲಿ ಅವುಗಳ ಆಸನವನ್ನು ಸ್ಥಿರೀಕರಿಸಿದ ಮೇಲೆಯೆ ರಾಷ್ಟ್ರಭಾಷೆಯ ವಿಷಯವನ್ನು ಕೈಕೊಳ್ಳಬೇಕೆಂತಲೂ ನಾವು ಸೂಚಿಸುತ್ತೇವೆ.

ಮುಸೊಲಿನಿಯ ಮತಾಂತರ

೬ ವರ್ಷಗಳ ಹಿಂದೆ—ಎಮಿಲ್ ಲಡ್ವಿಗ್ ಎಂಬ ಗ್ರಂಥಕರ್ತನು ಮುಸೊಲಿನಿಗೆ ಒಂದು ಸೂಚಕ ಪ್ರಶ್ನೆಯನ್ನು ಕೇಳಿದನು — ಜನಾಂಗದ ಅಸಂಮಿಶ್ರತೆಯು (racial unity) ರಾಷ್ಟ್ರೀಯ ಆಕಾಂಕ್ಷೆಗಳ ವೀರ್ಯವಂತಿಕೆಗೆ ಅನಿವಾರ್ಯವಾಗಿ ಬೇಕೇ?—ಎಂದು. ಮುಸೊಲಿನಿಯ ಉತ್ತರವಿಂತು ಇದ್ದಿತು: 'ಶುದ್ಧವಂಶಗಳೆಂಬವು ಉಳಿದಿಲ್ಲ; ಯಹೂದಿಗಳ ರಕ್ತವು ಕೂಡ ಸಂಕರವಾಗದೆ ಇಲ್ಲ. ಉಚಿತವಾದ ರಕ್ತಸಂಕರವು ರಾಷ್ಟ್ರದ ಶಕ್ತಿ-ಸೌಂದರ್ಯಗಳನ್ನು ಹೆಚ್ಚಿಸಿದುದು ಕಂಡುಬಂದಿದೆ. ವಂಶ! — ಅದೊಂದು ಭಾವನೆ; ಸತ್ಯವಲ್ಲ;—ಅದರಲ್ಲಿ ನೂರಕ್ಕೆ ೯೫ ಪಾಲು ಬರಿ ಭಾವನೆಯೆ ಆಗಿದೆ. ಜೀವಶಾಸ್ತ್ರ ದೃಷ್ಟಿಯಿಂದ ಅಪ್ಪಟ ಶುದ್ಧವಿರಬಹುದಾದ ವಂಶಗಳು ಇದ್ದಿರಬಹುದೆಂದು ನಾನೆಂದೂ ನಂಬಲಾರೆ. ಈ ಇಟಲಿಯಲ್ಲಂತೂ ಇಂತಹ ವಿಚಾರಕ್ಕೆ ಸ್ವಾಗತ ದೊರೆಯಲಾರದು. ದೇಶಾಭಿಮಾನಕ್ಕೆ ಜನಾಂಗದ ಶುದ್ಧತೆಯ ಅಂಧಭಾವನೆಯ ನೆರವು ಬೇ[illegible]ಗಿಲ್ಲ. ಯಹೂದಿ-ದ್ವೇಷವು ಇಟಲಿಯಲ್ಲಿಲ್ಲ. ಯಹೂದಿ[illegible] ಹೊಟ್ಟೆಯಲ್ಲಿ ಹುಟ್ಟಿದ ಇಟಾಲಿಯನ್ನರು, ತಾವು ಒಳ್ಳೆ[illegible] ನಾಗರಿಕರಾಗಬಲ್ಲರೆಂಬುದನ್ನು ತೋರಿಸಿಕೊಟ್ಟಿದ್ದಾ[illegible] ಕಳೆದ ಮಹಾಯುದ್ಧದಲ್ಲಿ ತಮ್ಮ ಯೋಗ್ಯತೆಯನ್ನು ಚೆನ್ನಾಗಿಯೆ ಪ್ರದರ್ಶಿಸಿದರು. ವಿಶ್ವವಿದ್ಯಾಲಯ, ಸೈನ್ಯ, ಬ್ಯಾಂ[illegible]ಗಳಲ್ಲಿ ದೊಡ್ಡದೊಡ್ಡ ಹುದ್ದೆಗಳನ್ನು ಪಡೆದಿದ್ದಾರೆ.'

೬ ವರ್ಷಗಳ ತರುವಾಯ:—'ಆರ್ಯನ್' ಜರ್ಮನಿ[illegible] ಗೆಳೆತನವಾದಂದಿನಿಂದ ಇಟಲಿಯಲ್ಲಿಯೂ 'ಫಾಸಿಸ್ಟ ವಂ[illegible] ಶುದ್ಧಿ'ಯ ಚಟುವಟಿಕೆಯು ತಲೆಯೆತ್ತಿದೆ! ವಿಶ್ವವಿ[illegible] ನಿಲಯದ ಪ್ರಾಧ್ಯಾಪಕರು ವಂಶಶುದ್ಧಿಯ ಮೇಲೆ ದೊ[illegible] ದೊಡ್ಡ ಗ್ರಂಥಗಳನ್ನು ಬರೆಯುತ್ತಿರುವರು! ಈ ಮುಂಚೆ[illegible] ಒಳ-ಆಡಳಿತದ ವಿಷಯದಲ್ಲಿ ಮುಸೊಲಿನಿಯು ಸ್ವತಂ[illegible] ಬುದ್ಧಿಯಿಂದ ವ್ಯವಹರಿಸುತ್ತಿದ್ದ; ಇದೀಗ ಹಿಟ್ಲರನ [illegible]ಯಣ್ಣತನವನ್ನು ಒಪ್ಪಿದಂದಿನಿಂದ ಪರಕೀಯರ [illegible] ವ್ಯಾಪಾರಗಳಿಗೆ ಮಾರುವೋಗುತ್ತಿರುವ ಚಿಹ್ನಗಳು ತೋ[illegible]ತ್ತಿವೆ. ಯಹೂದಿಗಳಿಗೆ ಇಟಲಿಯಲ್ಲಿಯೂ ಆಸರೆ ದೊ[illegible]ಯಲಾರದೆಂದು ಪರಿಸ್ಥಿತಿ ಹೇಳುತ್ತಿದೆ.

ನಮ್ಮ ಮಾತು

ನಮ್ಮ ವಿಶೇಷಸಂಚಿಕೆ

ಈ ಸಲದ ಡಿಸೆಂಬರ ಸಂಚಿಕೆಯೆ ವಿಶೇಷಸಂಚಿಕೆಯಾಗಿ ಹೊರಡುವುದು. ಶಿಕ್ಷಣಾಂಕವೆಂದು ಅದರ ಹೆಸರು. ಶಿಕ್ಷಣದ ವಿವಿಧಾಂಗಗಳ ಬಗ್ಗೆ ತಜ್ಞರ ಅಧಿಕಾರಯುತ ಲೇಖನಗಳನ್ನೊಳಗೊಳ್ಳುವುದು. ಅದೊಂದು ಅತ್ಯುತ್ತಮ ಸಂದರ್ಭ ಗ್ರಂಥವಾಗುವುದರಿಂದ ಶಿಕ್ಷಣಾಭಿಮಾನಿಗಳೂ ಶಿಕ್ಷಕ-ವಿದ್ಯಾರ್ಥಿಗಳೂ ಈಗಿನಿಂದಲೆ ಆರ್ಡರುಗಳನ್ನು ಕೊಡುವುದು ಒಳಿತು. ಸಾದಾಸಂಚಿಕೆಗಿಂತ ತುಂಬ ದೊಡ್ಡದಾಗುವುದಾದರೂ ಬೆಲೆ ೬ ಆಣೆಯೇ ಇರುವುದು. ವರ್ಧಾ ಯೋಜನೆ, ಅದರ ಅಂಗಪ್ರತ್ಯಂಗಗಳು, ಶಿಕ್ಷಣದ ವಿವಿಧಾಂಗಗಳು, ಶಿಕ್ಷಣವು ಜೀವನಸ್ಪರ್ಶಿಯಾಗಲು ಮಾಡಬೇಕಾದ ಎತ್ತುಗಡೆಗಳು—ಇವೇ ಮೊದಲಾದ ಹಲವು ವಿಷಯಗಳು ಚರ್ಚಿಸಲ್ಪಡುವವು.

ತಿದ್ದುಪಡೆ

೬೬೪ನೆಯ ಪುಟದಲ್ಲಿದ್ದ ಶ್ರೀಮಾನ್ ಹರಿಕೃಷ್ಣ ಶ್ಯಾನಭಾಗ ಇವರ ಜಾಹಿರಾತಿನಲ್ಲಿ 'ಸಿಗುವ ಸ್ಥಳ'ದ ಕೆಳಗೆ,' ನ್ಯಾಶನಲ್ ಕನ್ನಡ ನ್ಯೂಜ್ ಏಜನ್ಸಿ, ಬುಕ್‌ಸೆಲ್ಲರ್ಸ್, ಪಬ್ಲಿಷರ್ಸ್ ಎಂಡ ಸ್ಟೇಶನರ್ಸ್ ಫೋರ್ಟ್ ಬೊಂಬೈ; ಹರಿ ಕೃಷ್ಣ ಶ್ಯಾನಭಾಗ ಪೋ. ಬೋ. ನಂ. ೨೮ ಪಣಜಿ ಗೋವಾ ಎಂದು ಓದಬೇಕು.

ಗೀತಾಜಯಂತಿ

ಕಳೆದ ತಿಂಗಳ ೧೯ನೆಯ ತಾರೀಖಿನಿಂದ ಮೂರು ದಿನಗಳ ವರೆಗೆ ನಂಜನಗೂಡಿನ ಧನ್ವಂತರಿ ವಿಲಾಸದಲ್ಲಿ ಗೀತೋಪನ್ಯಾಸಮಾಲೆಯ ವಾರ್ಷಿಕೋತ್ಸವವಾಯಿತು. ಆಗ ವೇ॥ ಬ್ರ॥ ಶೇಷಾಚಾರ್ಯರವರು ಭಗವದ್ಗೀತೆಯ ವಿಷಯದಲ್ಲಿ ಉಪನ್ಯಾಸ ಮಾಡಿದರು.

"ಕೀರ್ತಿವೆತ್ತ ಕನ್ನಡಿಗ"

ಮೊನ್ನೆ ಮೊನ್ನೆ ಅಮೇರಿಕೆಯಿಂದ ಬಂದ ಬೆಳಗಾವಿಯ ಕೀರ್ತಿಮಾನ್ ಕನ್ನಡಿಗರಾದ ಶ್ರೀಮಾನ್ ಸಿ.ಜಿ.ಕುಲಕರ್ಣಿಯವರಿಗೆ ಮುಂಬಯಿ ವಿಧಿಮಂಡಲದ ಕಾಂಗ್ರೆಸ ಪಕ್ಷದ ಕಾರ್ಯದರ್ಶಿಗಳೂ ಮತ್ತು ಅವರ ಸಹಾಧ್ಯಾಯಿಗಳೂ ಆದಂಥ ಶ್ರೀ. ಕೇಶವರಾವ ಗೋಖಲೆ ಎಂ. ಎಲ್. ಎ. ಅವರು ಸತ್ಕಾರಕೂಟವನ್ನೇರ್ಪಡಿಸಿದ್ದರು. ಶ್ರೀ. ಕುಲಕರ್ಣಿಯವರು ೧೯೨೦ರ ಜೂನ್ ತಿಂಗಳಲ್ಲಿ ಸ್ವದೇಶಬಿಟ್ಟು ಹೋದರು. ಹೋಗಿ ಸ್ವಲ್ಪ ದಿವಸಗಳ ಮೇಲೆ ಅವರಿಗೆ ರೊಕ್ಕದ ಅಡಚಣಿ ಬಹಳವಾಯಿತು. ಆ ಕಾಲಕ್ಕೆ ಅವರು ೬ ತಿಂಗಳ ವರೆಗೆ ಹೊಲದಲ್ಲಿಯ ಕೂಲಿ ಕೆಲಸಮಾಡಿ ನಿರ್ವಾಹ ಸಾಗಿಸಬೇಕಾಯಿತು. ಮುಂದೆ ೧೯೨೫ರಲ್ಲಿ ಅವರು ಒಕ್ಕಲತನದ ಡಿಗ್ರಿ ಎಸ್. ಬಿ. (ಅಗ್ರಿಕಲ್ಚರಲ್) ಯನ್ನು ಸಂಪಾದಿಸಿದರು. ಅಲ್ಲಿ ಅವರು ನೂರಕ್ಕೆ ೭೪ ಗುಣಗಳನ್ನು ಪಡೆದು ೧ನೇ ನಂಬರ ಬಂದರು. ಸ್ಕಾಲರಶಿಪ್ ಮತ್ತು ಪಾರಿತೋಷಕಗಳನ್ನು ಸಂಪಾದಿಸಿದರು. ನಂತರ ವಿ/ ಚಲಿನ್ ಸ್ಟೇಟ ಕಾಲೇಜದ ಎಂ. ಎಸ್. ಸಿ., ಪಿ. ಎಚ್. ಡಿ. ಡಿಗ್ರಿಯನ್ನು ಪಡೆದರು. ಅವರು ನಂತರ ವೈದ್ಯಕೀಯ ವಿದ್ಯಾಭ್ಯಾಸ ಮಾಡಬೇಕೆಂದು ಅಮೇರಿಕೆಯಲ್ಲಿ ಹೆಸರಾದ ಹಾಪರೆನ್ಸ ಯುನಿವ್ಹರ್ಸಿಟಿಯಲ್ಲಿ ಸೇರ್ಪಡೆಯಾದರು. ಅದರಲ್ಲಿ ಉತ್ತಮತರಗತಿಯಲ್ಲಿ ತೇರ್ಗಡೆಯಾಗಿ ಈಗ ಅಲ್ಲಿಯೆ ಪ್ರೊಫೆಸರರಾಗಿ ಆರಿಸಲ್ಪಟ್ಟಿದ್ದಾರೆ.

ದಿವಂಗತ ಶ್ರೀ. ಇ. ಎ. ಭಾಸ್ಕರರಾಯ ಜ್ಞಾಪಕ ಸ್ಪರ್ಧೆ

ದಿವಂಗತ ಶ್ರೀ॥ ಇ. ಎ. ಭಾಸ್ಕರರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪ್ರೋತ್ಸಾಹದ ಒಂದು ಏರ್ಪಾಟನ್ನು ನಡಸಬೇಕೆಂಬ ಉದ್ದೇಶದಿಂದ ಶ್ರೀ॥ ಭಾಸ್ಕರರಾಯರ ತಾಯಿ ಶ್ರೀಮತಿ ಎ. ಶೇಷಮ್ಮನವರು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಕೊಟ್ಟ ಒಂದು ಜ್ಞಾಪಕ ನಿಧಿಯ ಸಂಬಂಧದಲ್ಲಿ ಈ ವರ್ಷ ಕನ್ನಡ ಸಾಹಿತ್ಯ ವಿಚಾರ ಪ್ರಬಂಧದ ಸ್ಪರ್ಧೆಯನ್ನು ಏರ್ಪಡಿಸತಕ್ಕದೆಂದು ನಿಶ್ಚಯವಾಗಿದೆ.

ನಿಯಮಗಳು

೧. ಕನ್ನಡ ಸಣ್ಣ ಕಥೆಯ ಸ್ವರೂಪ ಎಂಬ ವಿಷಯವಾಗಿ ಒಂದು ಪ್ರಬಂಧವನ್ನು ಅಥವಾ ಕನ್ನಡ ಸಾಹಿತ್ಯ ವಿಚಾರಕ್ಕೆ ಸಂಬಂಧಪಟ್ಟ ಮೂರು ಸ್ವತಂತ್ರ ಪ್ರಬಂಧಗಳನ್ನು ಕಳುಹಿಸಬೇಕು.

೨. ಪ್ರಬಂಧವು ಅಥವಾ ಪ್ರಬಂಧಗಳು ಫೂಲ್ಸ್‌ಕ್ಯಾಪ್ ಆಕಾರದ ೨೦ ಪುಟಗಳ ಪರಿಮಿತಿಯಲ್ಲಿ ಇರಬೇಕು; (ಸ್ವತಂತ್ರ ಪ್ರಬಂಧಗಳು ಮೂರೂ ಸೇರಿ ಒಟ್ಟು ೨೦ ಪುಟಗಳನ್ನು ಮೀರಿರತಕ್ಕದ್ದಲ್ಲ); ಮತ್ತು ಅದನ್ನು ಕಾಗದದ ಒಂದೇ ಪಕ್ಕದಲ್ಲಿ, ಶಾಯಿಯಲ್ಲಿ, ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು.

೩. ೧೯೪೮ನೆಯ ಇಸವಿ ಸಪ್ಟೆಂಬರ್ ತಿಂಗಳು ೩೦ನೆಯ ತಾರೀಖಿನೊಳಗಾಗಿ ಪರಿಷತ್ತಿನ ಕಚೇರಿಗೆ ಪ್ರಬಂಧವು ತಲಪಬೇಕು.

೪. ಅತ್ಯುತ್ತಮವೆಂದು ಪರೀಕ್ಷಾಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೨೦ ರೂಪಾಯಿಗಳ ಬೆಲೆಯುಳ್ಳ ಬಹುಮಾನವನ್ನು ಕೊಡಲಾಗುವುದು.

೫. ಬಹುಮಾನ ಪಡೆದ ಪ್ರಬಂಧವನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ.

೬. ಬಹುಮಾನಕ್ಕೆ ಅರ್ಹವಾದ ಪ್ರಬಂಧ ಬಾರದಿದ್ದಲ್ಲಿ ಬಹುಮಾನವನ್ನು ಕೊಡದೆ ಇರುವ ಹಕ್ಕೂ ಪರಿಷತ್ತಿಗಿದೆ.

೭. ಸಾಕಷ್ಟು ಸಂಖ್ಯೆಯಲ್ಲಿ ಪ್ರಬಂಧಗಳು ಬಾರದಿದ್ದರೆ ಸ್ಪರ್ಧೆಯನ್ನು ನಿಲ್ಲಿಸಿದರೂ ನಿಲ್ಲಿಸಬಹುದು.

[ವಿಶೇಷ ಸೂಚನೆ: ಈ ಸ್ಪರ್ಧೆಗೆ ಯಾರು ಬೇಕಾದರೂ ಲೇಖನವನ್ನು ಕಳುಹಿಸಬಹುದು. ಹಾಗೆ ಬಂದ ಲೇಖನಗಳನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ತಮ್ಮ ಲೇಖನದ ಒಂದು ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳಬೇಕೆಂದು ಪ್ರಾರ್ಥನೆ.]

ಪ್ರಬಂಧಗಳನ್ನೂ ಸ್ಪರ್ಧೆಯ ವಿಚಾರದ ಕಾಗದಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು:

ಎಸ್. ವಿ. ರಂಗಣ್ಣ, ಎಂ. ಎ.,
ಗೌರವ ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಪರಿಷತ್ತು,
ಬೆಂಗಳೂರು ಸಿಟಿ.

೧ನೆಯ ಜುಲೈ, ೧೯೩೮.

ಅಖಿಲ ಕರ್ನಾಟಕ ಮಕ್ಕಳಕೂಟ, ಬೆಂಗಳೂರು

ಮಕ್ಕಳ ತಿಳುವಳಿಕೆ-ಆನಂದ-ಹರ್ಷಗಳನ್ನು ಹೆಚ್ಚಿಸುವುದರ ಮೂಲಕ ಅವರಲ್ಲಿ ಹುದುಗಿರುವ ಎಲ್ಲ ಮಾನವ ಶಕ್ತಿಗಳನ್ನೂ ಹೊರಹೊಮ್ಮುವಂತೆ ಮಾಡಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡಲು "ಮಕ್ಕಳ ಕೂಟಗಳು" ತುಂಬ ಸಹಾಯಕಾರಿಯಾಗುವವು. ಮೊನ್ನೆ ಬೇಸಿಗೆಯಲ್ಲಿ ರಾಜಕುಮಾರಿ ವಿಜಯಲಕ್ಷ್ಮಮ್ಮಣ್ಣಿಯವರ ಅಧ್ಯಕ್ಷತೆಯಲ್ಲಿ ಕೂಟವನ್ನು ಯಶಸ್ವಿಯಾಗಿ ನಡೆಸಿದ "ಕನ್ನಡಿಗರ ಕಣಜ"ದವರು ಇದನ್ನು ಚಿರಂತನವಾಗಿ ನಡೆಸಲು ಯೋಚಿಸಿ ಹಿರಿಯರ ಸಭೆಯೊಂದನ್ನು ೩—೮—೩೮ನೇ ತಾರೀಖಿನ ದಿನ ಸಂಜೆ ೪ ಘಂಟೆಗೆ ಮೈಸೂರು ಇನ್‌ಶ್ಯೂರೆನ್ಸ್ ಕಚೇರಿಯ ... ಶ್ರೀಮಾನ್ ದೊಡ್ಡವೀರಪ್ಪನವರ ಅಧ್ಯಕ್ಷತೆಯಲ್ಲಿ ಸೇ... ದ್ದರು. ಬೆಂಗಳೂರಿನ "ಅಖಿಲ ಕರ್ನಾಟಕ ಮಕ್ಕ... ಕೂಟವು" ಕೇಂದ್ರಸಂಸ್ಥೆಯಾಗಿದ್ದು ಸಾಧ್ಯವಾದ ... ಗಳಲ್ಲೆಲ್ಲಾ ಶಾಖೆಗಳನ್ನು ಸ್ಥಾಪಿಸುವುದೆಂದು ತೀರ್ಮಾ... ವಾಯಿತು. ಕಾರ್ಯಕಾರಿ ಮಂಡಲಿಯ ರಚನೆಯಾಯಿ... ಶ್ರೀಮತಿ ಆರ್. ಕಲ್ಯಾಣಮ್ಮನವರು (ಬೆಂಗಳೂರು ... ಸಭೆಯ ಉಪಾಧ್ಯಕ್ಷರು) ಇವರನ್ನು ಅಧ್ಯಕ್ಷರನ್ನಾಗಿ... ಶ್ರೀ. ಜಿ. ವಿ. ದೊಡ್ಡವೀರಪ್ಪನವರು (ಸಂಪಾದ... "ವಿಮಾವಾಣಿಜ್ಯ") ಇವರನ್ನು ಉಪಾಧ್ಯಕ್ಷರನ್ನಾಗಿ... ಶ್ರೀ. ಟಿ. ಎಂ. ಆರ್. ಸ್ವಾಮಿ ಮತ್ತು ಶ್ರೀ. ಕ... ಶ್ರೀಪಾದರಾಯರನ್ನು ಕಾರ್ಯದರ್ಶಿಗಳನ್ನಾಗಿಯೂ ಶ್ರೀ... ತರುಗಳಾದ ಸಿ. ಎನ್. ನರಸಿಂಗರಾಯರು ಬಿ.ಎ.ಬಿ.ಎಲ್... ಪಿ. ಶಿವಶಂಕರ್ ಬಿ. ಎ. ಬಿ. ಎಲ್., ಡಿ. ಸಿ. ... ರಾಯಪ್ಪ ಬಿ. ಎ. ಬಿ. ಎಲ್., ಬಿ. ಶ್ರೀಕಂಠಯ್ಯ... (ವ್ಯವಸ್ಥಾಪಕರು ದೇಶೀಯ ವ್ಯಾಯಾಮಶಾಲೆ—... ಳೂರು), ಪಿ. ಆರ್. ರಾಮಯ್ಯ (ಸಂಪಾದಕರು "... ನಾಡು", ಕುಮಾರಿ ಶಾರಿಯವರು, ಸೌ. ಎಚ್. ... ಸರಸ್ವತಮ್ಮನವರು, ಸೌ. ಜಿ. ಆನಂದವಲ್ಲಿಯಮ್ಮ ... ಇವರುಗಳನ್ನು ಮಂಡಲಿಯ ಸದಸ್ಯರುಗಳನ್ನಾಗಿ... ಸುಪ್ರಸಿದ್ಧ ನರ್ತಕರಾದ ಶಾಂಪೂರ್ ಗುರುಮೂರ್ತಿ... ರನ್ನು ಕೋಶಾಧ್ಯಕ್ಷರನ್ನಾಗಿಯೂ ಚುನಾಯಿಸಲಾಯಿ...

ಇದಲ್ಲದೆ ಬೆಂಗಳೂರಿನಿಂದ ಇಬ್ಬರನ್ನೂ ಕರ್ನಾ... ನಾನಾ ಪ್ರಾಂತಗಳಿಂದ ಒಟ್ಟು ಆರು ಮಂದಿಯ... ಆರಿಸಿಕೊಳ್ಳತಕ್ಕದ್ದೆಂದು ತೀರ್ಮಾನವಾಯಿತು.

ಬೇರೆ ಬೇರೆ ಕಡೆಗಳಲ್ಲಿ ಮಕ್ಕಳ ಕೂಟಗಳನ್ನು ... ಸಲೂ ಸಲಹೆಗಳನ್ನು ಕೊಡಲೂ ಇವರು ಬರಲು ... ರಾಗಿರುವುದಾಗಿಯೂ ಆಹ್ವಾನಿಸುವವರು ಒಂದು ... ಮುಂಚಿತವಾಗಿ ತಿಳಿಸಬೇಕೆಂದೂ ಈ ಬಾಲಗೋ... ಸೇವೆಯಲ್ಲಿ ಆಸಕ್ತರಾಗಿರುವವರು ಮುಂದೆ ಬರಬೇಕೆ... ಸಾರ್ವಜನಿಕರು ಈ ಕಾರ್ಯಕ್ಕೆ ದ್ರವ್ಯಸಹಾಯ ... ಬೇಕೆಂದೂ ಕಾರ್ಯದರ್ಶಿಗಳ ಬೇಡಿಕೆ.

ಜಯ ಕರ್ನಾಟಕ

T. 1938

NAS SIX



ಸಿನೇಮಾ ನಟಿ ಮಿಸ್ ನಾಸಿನು

ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) **ಒಳದೇಶ ೪-೮-೦; ಪರದೇಶ ೭-೦-೦**

ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೩-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ ಬೇರೆ.

'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳ ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸುವುದರ ಅಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕಂದರೆ ಅದರಿಂದ ವ್ಯರ್ಥ ವ್ಹಿ.ಪಿ ವೆಚ್ಚಕ್ಕೆ ಗುರಿಯಾಗುವುದು ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ೧೫ನೆಯ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿಯೂ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಸಾಧ್ಯಮ.

ಜಾಹೀರಾತುದಾರರು ೨೫% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರಕಟನೆ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾಹೀರಾತು ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

ಒಂದು ಪುಟಕ್ಕೆ	ಒಂದು ಸಲಕ್ಕೆ	೨೦ ರೂ
ಅರ್ಧ ಪುಟಕ್ಕೆ	,, ,,	೧೨ ,,
೧/೪ ಪುಟಕ್ಕೆ	,, ,,	೭ ,,
೧/೮ ಪುಟಕ್ಕೆ	,, ,,	೪ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ದೀರ್ಘಾವಧಿ ಜಾಹಿರಾತುಗಳ ದರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು.


ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು, ತಮ್ಮ ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಿಕೀಟೊಂದನ್ನು ಇಡಬೇಕು. (೨) ತಮ್ಮ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಿಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖನಗಳನ್ನು ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು ಮಾರ್ಜಿನ' ಬಿಡಬೇಕು. (೪) ಲೇಖನದ ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಬರುವ ಲೇಖನಗಳು ಜಯಕರ್ನಾಟಕಕ್ಕೆಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗಿರಬಾರದು. ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾಟಕಕ್ಕೆ ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಪತ್ರವ್ಯವಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರವ್ಯವಹಾರವನ್ನು "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ ವ್ಯವಹಾರವನ್ನು "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ



ದಸರಾ ಮೆರವಣಿಗೆಯ ಒಂದು ರಥ

(ಮೈಸೂರು ಸರಕಾರದ ಕೃಪೆಯಿಂದ)



ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಆಶ್ವೀಜ ಶುದ್ಧ ೮ (೧—೧೦—೧೯೩೮) | ಸಂಚಿಕೆ ೧೦

ಶ್ರೀಶಂಕರಾಚಾರ್ಯರಿಗೆ—

ಇಳೆಯೊಡೆಯನಮಲ ಬುದ್ಧಿಪ್ರಕಾಶವೆ ರೂಪು-
ದಳೆದು ಬೆಳಗಿದುದು ಮೂಲೋಕಗಳನು;
ತಿಳಿವುಹೂವಿನ ಮಧುರ ಮಕರಂದರಸವೆ ಕೆಳ-
ಗಿಳಿದು ಕಳೆದುದು ಕರ್ಮಪಾಕಗಳನು;
ಮನುಜತೆಯು ಪಾಕದಿಂದೊಗೆದ ಕೆಂದಾವರೆಯು
ತನಗಿಂಪಿಗಿಲ್ಲ ದೊರೆಯೆಂಬ ತೆರದಿ,
ಜನಿಸಿದಿರಿ ಜಗದೊಳಜ್ಞಾನ-ದೀನತೆಗಳಿಗೆ
ಕೊನೆಗಾಲವೇ ಬಂದುದೆನಲು ಭರದಿ.

ಕರಣಿಯುದಿಸಲು ತಿರೆಯನೆಚ್ಚರಿಸಬೇಕೆ ? ಹೊಸ
ಹರೆಯವೇರಲು ಸಾಹಸಕ್ಕೆ ಕರೆಯೆ ?
ಅರಲು ಬಿರಿಯಲು ಸುಗಂಧಕ್ಕೆ ಹರಿಕಾರನೇ ?
ಸಿರಿಯ ಬರವಿಗೆ ವಂದಿಮಾಗಧಿಗಳೇ ?
ಏಕಾಂತದಲಿ ಕಂಡ ತತ್ವಸಾರಂಗಳನು
ಲೋಕಾಂತದಲಿ ತೋರಿಪೊಂದು ಬಲುಹು
ಸಾಕಾರಮಾಗಿ ಬಂದಿರಲು ಗುರುವರ್ಯನಲಿ
ಲೋಕಲತೆ ಕೊನರಿಡಲದೇನು ತಳುವು ?

ಅಧ್ಯಾತ್ಮರಾಜ್ಯದಧಿರಾಜ ! ನಿಮ್ಮದ್ವೈತ-
ಸಿದ್ಧಾಂತವೇ ಚರಮತತ್ವವೆಂದು
ಶ್ರದ್ಧಾಲುವಾಗುತಿದೆ ದೇಶದೇಶಾಂತರದೊ-
ಳಭ್ಯತನಮೆನಿಪ ಸುವಿಚಾರಿಜನವು.
ದಿನದಿನಕೆ ನಿಮ್ಮ ಜಸ ಬೆಳೆಯುತಿದೆ ನಿಮ್ಮ ಜೀ-
ವನದ ಮಹಿಮೆಗೆ ಹಿಗ್ಗುತಿದೆ ಲೋಕವು.
ಘನವಾದ ನಿಮ್ಮ ಜನಸೇವೆಯನು ಮನ್ನಿಸಲು
ತನಗೆ ಸೈಪಿಲ್ಲೆನ್ನುತಿದೆ ನಾಕವು.

ವಿಮಲಗಂಗಾವಾರಿಗೆಲ್ಲಿಹುದು ಸಾಟಿ ? ಸೂ-
ರ್ಯಮರೀಚಿಗುಂಟೆ, ಬೇರೊಂದು ಸರಿಯು ?
ಅಮೃತಕಿಂತಧಿಕವೆನಿಪಾಹಾರವುಂಟೆ ? ಸ್ವ-
ರ್ದ್ರುಮಕುಂಟೆ ದಾತೃತ್ವದಲ್ಲಿ ದೊರೆಯು ?
ನಿಮಗೆ ಸಮರಿಲ್ಲ ಕಾಲತ್ರಯಂಗಳಲಿ ನಿ-
ಮ್ಮಮಲ ಬುದ್ಧಿ ಜ್ಞಾನ ವೈರಾಗ್ಯಕೆ
ಸಮನಿಲ್ಲವೆನ್ನ ಗುರುವರ್ಯ ! ನಿಮ್ಮಡಿಗಳಿಗೆ
"ನಮಃ" ಎಂಬುದೆ ಮುಕ್ತಿಪಥ ಲೋಕಕೆ.

ನಮ್ಮ ವೈದಿಕ ಸನಾತನಧರ್ಮವಂದೆನಿತೊ
ದುರ್ಮತಗಳಿಂ ಗಾಸಿಹೊಂದುತಿರಲು,
ನಿಮ್ಮಾತ್ಮರವಿಯುದಿಸಿ ಪ್ರಜ್ವಲಿಸಲೊಡನೆಮ್ಮ
ಧರ್ಮಕ್ಕೆ ಸಮನಿಸಿತು ಹೊಸತು ಬೆಳಗು.
ಶ್ರೀಶಂಕರಾಚಾರ್ಯ ! ನಿಮ್ಮಡಿಗಳಲಿ ಕೆಡೆದು
ದಾಸೋಹಮೆಂದು ನುತಿಸುವೆನು ಗುರುವೆ !
ಆ ಸಮತ್ವದ ವಿಮಲಬುದ್ಧಿಯನು ಕರುಣಿಸುತ-
ಲಾಶೀರ್ವದಿಸಿ ಮುಂದೆ ಕಳುಹು, ವಿಭುವೆ !

—ಮೊಗೇರಿ ಗೋಪಾಲಕೃಷ್ಣ ಅಡಿಗ

ದೇವರಿಲ್ಲವೆ?

§ ಮರ ಗಿಡ ಪ್ರಾಣಿಗಳಿಂದ ಪುನಃ ಮರ ಗಿಡ ಪ್ರಾಣಿಗಳು ಉದಿಸುವುದು, ವಸ್ತುವು ಸರ್ವನಾಶವನ್ನು ಹೊಂದದೆ ಬರಿಯ ರೂಪಾಂತರವನ್ನು ಹೊಂದುವುದು, ಚಳಿ ಮಳೆ ಬೇಸಿಗೆಗಳು ವರುವರುಷವೂ ಬರುವುದು, ಕಾಲಕ್ಕೆ ಸರಿಯಾಗಿ ಹೂ ಕಾಯಿ ಹಣ್ಣುಗಳಾಗುವುದು—ಮೊದಲಾದವುಗಳಿಂದ ವಿಶ್ವದಲ್ಲಿ ಎಲ್ಲೆಲ್ಲಿಯೂ ನಿತ್ಯ ನಿಯಮ ಹಾಗೂ ಕ್ರಮವಿರುವುದು ಸ್ಪಷ್ಟವಾಗುವುದು.

§ ಈ ಉದ್ದೇಶ, ಈ ಕ್ರಮ, ಈ ನಿತ್ಯನಿಯಮ, ಈ ಕೌಶಲ್ಯ, ಈ ಹಿತ ಬುದ್ಧಿ,—ಇವುಗಳು ಈ ವಿಶ್ವವು ತನ್ನಿಂದ ತಾನೇ ಆಗಿರಲು ಸಾಧ್ಯವೇ ಇಲ್ಲನೆಂದೂ, ಮಹಾಬುದ್ಧಿ ಶಕ್ತಿಯುಳ್ಳ ದೇವನು ಇರುವನೆಂದೂ ಸಾರಿ ಹೇಳುವುವು.

ಲೇಖಕರು: ಶ್ರೀ. ರಾ. ಸ. ಮಳಗಿ

ಈ ಮಹಾವಿಶ್ವದ ರಚನೆಯಲ್ಲಿ ಕಂಡುಬರುವುದೇನು? ಎಲ್ಲೆಲ್ಲಿಯೂ ಕ್ರಮವಿದೆ, ಕೌಶಲ್ಯವಿದೆ, ಉದ್ದೇಶವಿದೆ. ನಿತ್ಯನಿಯಮವಿದೆ.

ಈ ವೈಚಿತ್ರ್ಯದ ಮರ್ಮವೇನು? ಕುರುಡು ವಸ್ತು ಶಕ್ತಿಗಳ ಸೇರುವಿಕೆಯಿಂದ ಇಂತಹ ಸುಂದರ ಭೀಕರ ಕುಶಲವಾದ ವಿಶ್ವವು ಸಾಧ್ಯವೇ?

ಈ ವಿಶ್ವವು ಆಕಸ್ಮಿಕವಾಗಿ ಅನೇಕ ಕುರುಡು ಶಕ್ತಿ ವಸ್ತುಗಳ ಸಂಯೋಗದಿಂದ ಈ ರೀತಿಯಲ್ಲಿ ಆಗಿರುವುದೇ?

ಒಬ್ಬನು ಲೋಹದ ಅಕ್ಷರಗಳನ್ನು ಚೀಲದಲ್ಲಿ ತುಂಬಿಕೊಂಡು, ಸುಂದರ ಷಟ್ಪದಿ ಅಥವಾ ಉತ್ತಮ ವಚನ ವಾಗುವಂತೆ ನೆಲದ ಮೇಲೆ ಅವುಗಳನ್ನು ಎಸೆಯಲು ಸಾಧ್ಯವೇ? ಈ ವಿಶ್ವವು ಆಕಸ್ಮಿಕ ಸಂಯೋಗದಿಂದ ಆಯಿತೆನ್ನುವಂತೆ, ಆಕಸ್ಮಿಕ ಅಕ್ಷರಸಂಯೋಜನದಿಂದ ಈ ಲೇಖನವೂ ಮೈದೋರಿತೆಂದು ತರ್ಕಮಾಡಬಹುದಷ್ಟೇ?

ಮನಬಂದ ರೀತಿಯಲ್ಲಿ ಅದೆಷ್ಟೋ ಕಾಲದ ವರೆಗೆ ವಿವಿಧ ವರ್ಣಗಳನ್ನು ಕುಂಚದಿಂದ ಪರದೆಯೊಂದರ ಮೇಲೆ ಚಿಮುಕಿಸುತ್ತಿದ್ದರೂ ಸಹ, ಉದ್ದೇಶಿಸುವವನಿಲ್ಲದಿದ್ದರೆ ಸುಂದರಿಯ ಮೋಹಕ ರೂಪವು ಅಲ್ಲಿ ಮೈದೋರಲು ಸಾಧ್ಯವೇ? ಈ ಚಿತ್ರವಾಗುವುದು ಹೇಗೆ ಸಂಭವವಲ್ಲವೋ ಹಾಗೆಯೇ ಆಕಸ್ಮಿಕವಾಗಿ ಚರಾಚರಗಳಾಗಿರುವುದು ಸಂಭವ ವಲ್ಲ.

ಲಕ್ಷಾಂತರ ಕುರುಡರನ್ನು ವಿವಿಧ ಪ್ರದೇಶಗಳಿಂದ ಅದೆಷ್ಟೋ ವರುಷಗಳ ವರೆಗೆ ಮನಬಂದತ್ತ ಹೋಗಲು ಬಿಟ್ಟುಬಿಟ್ಟರೆ, ಅವರೆಲ್ಲರೂ ಸೇರಿ ಕವಾಯಿತುಮಾಡಲು ಸೈನಿಕರಾಗಿ ಸಂಖ್ಯಾನುಕ್ರಮವಾಗಿ ಬಂದು ನಿಲ್ಲಲು ಸಾಧ್ಯವೇ? ಈ ಪತ್ರಿಕೆಯ ಅಸಂಖ್ಯ ಹಳೆಹೊಸ ಸಂಚಿಕೆ ಗಳನ್ನು ಪುಟಪುಟಗಳಾಗಿ ಹಾರಿಸಿಬಿಟ್ಟರೆ ಅವುಗಳು ಕ್ರಮವಾಗಿ ಕೂಡಿಕೊಂಡು ನಿಲ್ಲಬಲ್ಲವೇ?

ಒಂದುವೇಳೆ ಇವುಗಳು ಸಾಧ್ಯವೆಂದು ಅಂದರೂ ಅನ್ನ ಬಹುದು; ಆದರೆ ಇಂತಹ ಅತಿ ವಿಚಿತ್ರತಮ ವಿಶ್ವ ಕುರುಡು ಶಕ್ತಿ ಮತ್ತು ಹಣಗಳ ಆಕಸ್ಮಿಕ ಸೇರು ಯಿಂದಾಯಿತೆನ್ನುವುದು ಸರ್ವಥಾ ಒಪ್ಪತಕ್ಕ ಮಾತೇ ಇದು ಕಲ್ಪನಾತೀತ ಯೋಜನೆಯಾಗಿರುವುದು.

ವಿವಿಧ ಶಕ್ತಿಗಳು ಕೆಲಸಮಾಡುವುದನ್ನು ನಾವು ನೋಡು ತ್ತಿದ್ದೇವೆ. ಅವು ಮೇಳಗೂಡಿ ಸಹಕರಿಸಿ ನಡೆಯು ದನ್ನು ನೋಡಿದೊಡನೆ, ಆದಾವುದೋ ಬುದ್ಧಿಶಕ್ತಿ ಉದ್ದೇಶಪೂರ್ವಕವಾಗಿ ಅವುಗಳನ್ನು ಹೀಗೆ ಆಳು ರುವುದೆಂದು ಅನುಮಾನಿಸಬೇಕಾಗುವುದು. ಇದಲ್ಲದೆ ಶಕ್ತಿಗಳು ಅನಂತಕಾಲದಿಂದಲೂ ಅನಂತ ಪ್ರದೇಶ ಹಿತಫಲವನ್ನು ಕೊಡುವಂತೆ ನಡೆದುಕೊಳ್ಳುವುದನ್ನು ಕೂಡಲೇ ಮಾನವಕಲ್ಪನಾತೀತ ರೀತಿಯಲ್ಲಿ ಪರಮಾ ಇರುವನೆಂಬ ಅಂಶವು ಸ್ಪಷ್ಟವಾಗುವುದು.

ಇದಲ್ಲದೆ ಪ್ರತಿಯೊಬ್ಬನೂ ಪ್ರಕೃತಿಯು ತನ್ನ ಕೃತಿಯನ್ನಿಟ್ಟಿರುವುದನ್ನು ಕಂಡುಕೊಳ್ಳಬಹುದು.

ತಾತ್ವಿಕ ಚರ್ಚೆಯನ್ನು ಬೇಕೆಂತಲೇ ಬದಿಗಿಟ್ಟು, ಜನಸಾಮಾನ್ಯ ರನ್ನು ಉದ್ದೇಶಿಸಿ ಕೆಲವಂಶಗಳನ್ನು ಮಾತ್ರ ಕಥಾಸರಣಿಯಲ್ಲಿ ಬರೆ ಚಿಕ್ಕ ನಿಬಂಧವಿದು—ಲೇಖಕ.

ನಾವಿಕನು ಜಲಚರಗಳಿಂದಲೇ ತನ್ನ ವಿದ್ಯೆಯನ್ನು ಅರಿತನು. ಜಾಡನಿಂದಲೇ ಜೇಡರು ನೇಯಿಗೆಯನ್ನು ಕಲಿತರು. ಭ್ರಮರದಿಂದಲೇ ರಸಾಯನ ಶಾಸ್ತ್ರದ ಸಂಶೋಧನವಾಯಿತು—ಇತ್ಯಾದಿ.

ಕುರುಬರು ಕುರಿಮಂದೆಗಳನ್ನು ಕ್ರೂರಜಂತುಗಳಿಂದ ರಕ್ಷಿಸಲು ನಾಯಿಯ ಸ್ವಭಾವಜ್ಞಾನವನ್ನರಿತು ಅದನ್ನು ಸಾಕುವರು. ಇಂತಹ ಉದಾಹರಣೆಯಲ್ಲದೆ ಪ್ರಾಣಿಗಳ ಇನ್ನೊಂದು ಚಮತ್ಕಾರದ ಪರಿಯಿದೆ. ಅವು ತಮ್ಮ ಬಣ್ಣದ ವಾತಾವರಣದಲ್ಲಿದ್ದುಕೊಂಡು ಬರಬಹುದಾದ ಅಪಾಯಗಳನ್ನು ತಪ್ಪಿಸಿಕೊಳ್ಳುವುವು. ಮಣ್ಣುಮುಕ್ಕುಹಾವು, ಮಳೆಹುಳ, ಇವುಗಳ ಬಣ್ಣ ನೆಲದ ಬಣ್ಣ; ಗಿಳಿಯದು ಎಲೆಯ ಬಣ್ಣ; ಹುಲಿಯದು ಸುತ್ತಲಿನ ವನರಾಜಿಯ ವರ್ಣ; ಹೆಬ್ಬಾವಿನದು ಬಡ್ಡೆಯ ಬಣ್ಣ; ಇದರ ಮರ್ಮವನ್ನರಿತ ಬೇಟೆಗಾರರು ಆಯಾ ಪರಿಸ್ಥಿತಿಗನುಗುಣವಾದ ಬಣ್ಣದ ಬಟ್ಟೆಗಳನ್ನು ಧರಿಸಿ ಪ್ರಾಣಿಗಳನ್ನು ಮೋಸದಿಂದ ಕೊಲ್ಲಲು ಕಲಿತಿರುವರು.



ಪರಿಸ್ಥಿತಿಗೆ ತಕ್ಕ ಮೈಬಂಣದ ಹಕ್ಕಿ

ಪೃಥ್ವಿಯ ಆಯಾ ವಲಯಗಳಲ್ಲಿಯ ನೆಲದ ಬಣ್ಣಕ್ಕನುಗುಣವಾಗಿ ಅಲ್ಲಿಯ ನೀರಿನಲ್ಲಿ ತೇಲುವ ಜಲಚರಗಳ ಬಣ್ಣವಿರುವುದೂ, ಅಲ್ಲಿಯ ಸಸ್ಯಗಳಿಗನುಸಾರವಾಗಿ ವನ್ಯ ಜಂತುಗಳ ಬಣ್ಣವಿರುವುದೂ, ಗಂಡಾಂತರದಿಂದ ಪಾರಾಗಲು ಯೋಗ್ಯ ಹಂಚಿಕೆಯಿಂದ ನೆಲಜಲಚರಗಳು ವರ್ತಿಸುವುದೂ, ಅವುಗಳ ಜೀವನವು ಸುಸೂತ್ರವಾಗಿ ಸಾಗುವಂತೆ ಅವುಗಳ ಅಂಗರಚನೆಯಾಗಿರುವುದೂ—ಇವೇ ಮೊದಲಾದುವು ಏನನ್ನು ಸೂಚಿಸುತ್ತವೆ? ಉದ್ದೇಶಪೂರ್ವಕವಾಗಿ ಕೆಲಸ ಮಾಡುವ ಬುದ್ಧಿಶಕ್ತಿಯೊಂದು ಇರುವುದೆಂದಲ್ಲವೇ? ಚಿತ್ರಪತ್ರಗಳಲ್ಲಿ ನೆಲೆಸುವ ಪಕ್ಷಿಗಳ ಗರಿಗಳ ವಿಚಿತ್ರಪರಿಯ ವರ್ಣಗಳನ್ನು ಮಾಡಿರುವುದು ಉದ್ದೇಶಪೂರ್ವಕವಾಗಿಯೆ ಅಲ್ಲವೆ? ಮಂಜು ಮುಸುಕಿರುವ ಶೀತವಲಯದಲ್ಲಿ ಕಾಗೆಗಳ ಬಣ್ಣವೂ ಸಹ ಬಿಳಿಯದಾಗಿರುವುದನ್ನು ನಾವು ಬಲ್ಲೆವಷ್ಟೇ! ಇದರಿಂದ ಉದ್ದೇಶಪೂರ್ವಕವಾಗಿ ಸೃಷ್ಟಿಯಾಗಿರುವುದು ಇನ್ನೂ ಹೆಚ್ಚು ಸ್ಫುಟವಾಗಿ ಕಾಣುವುದು. ಶಿಲ್ಪಿಯು ಮಾತ್ರ ಇನ್ನೂ ದೂರ ನೋಡಬಲ್ಲನು! ಅವನು ಸಸ್ಯದ ದಂಟು, ಪ್ರಾಣಿಗಳ ಮೂಳೆ ಇವುಗಳು ಶಿಲ್ಪಶಾಸ್ತ್ರ ಪ್ರವೀಣನ ಕೆಲಸವೆನ್ನುವನು. ಹೆಚ್ಚು ಭಾರವು ಬೀಳುವಲ್ಲಿ ಅವು ದಪ್ಪನಾಗಿವೆ ದೊಡ್ಡವಾಗಿವೆ; ಇದಿಲ್ಲದಲ್ಲಿ ತೆಳುವಾಗಿವೆ ಚಿಕ್ಕವಾಗಿವೆ; ಗಿಡವು ಬೇರು ಬಿಡುವ ವಿಧಾನವನ್ನರಿತು ಶಿಲ್ಪಿಗಳು ಮನೆಯ ನೆಲಗಟ್ಟು ಮಾಡುವುದನ್ನು ಕಲಿತರು. ಇದರಿಂದಲೇ ತಮ್ಮ ಕಲೆಯ ಅಭಿವೃದ್ಧಿಯಾಯಿತೆಂದು ಮಹಾಶಿಲ್ಪಿಯಾದ ಸ್ಮೀಟನ್‌ನು ಒಪ್ಪಿಕೊಂಡಿದ್ದಾನೆ! ತೂಗಾಡುವ ಸೇತುವೆಗಳನ್ನು ಮಾಡಿದವನು ಆ ಕಲೆಯ ಮರ್ಮವನ್ನು ಕಮಲದಿಂದಲೇ ಕಲಿತನಂತೆ.

ಪ್ರತಿಪ್ರಾಣಿಯ ಅವಯವ ರಚನೆಯೂ ಆಯಾ ಅಂಗಗಳು ಮಾಡತಕ್ಕ ಕಾರ್ಯಕ್ಕೆ ತಕ್ಕಂತಿರುವುವೆಂದು ಶರೀರ ಶಾಸ್ತ್ರಜ್ಞರು ಒಪ್ಪಿದ್ದಾರೆ. ಇದರಲ್ಲಿ ಒಂದು ಕ್ರಮವಿದೆ. ಇದು ಸಕಲ ಕಾಲದಲ್ಲಿಯ ಸಕಲ ಜೀವರಾಶಿಗೆ ಅನ್ವಯಿಸುತ್ತದೆ. ಹೀಗೆ ಒಂದೇ ತೆರನಾಗಿ ನಡೆದುಬರುವುದನ್ನು ವಿಚಾರಿಸಿ ನೋಡಲು, ದೇವನ ಇಚ್ಛೆಯು ಹೀಗಿದೆಯೆನಿಸುವುದು. ಹಲ್ಲಿನ ವಿಚಾರವನ್ನು ಉದಾಹರಣೆಗಾಗಿ ತೆಗೆದುಕೊಳ್ಳಿರಿ—ಮಾಂಸ ತಿನ್ನುವ ಪ್ರಾಣಿಗಳದು ಒಂದು ವಿಧ; ಸಸ್ಯಾಹಾರಿಗಳದು ಇನ್ನೊಂದು ವಿಧ. ಇದಲ್ಲದೆ ಪಕ್ಷಿಗಳಿಗೆ, ಅತಿ ದೂರದೃಷ್ಟಿಯಿರುವ ವನ್ಯಜಂತುಗಳಿಗೆ ರಾತ್ರಿಯಲ್ಲಿ ಕಣ್ಣು ಕಾಣಿಸುವ ಕಾರಣವೇನು?

ಊರಿನಲ್ಲಿ ನಲ್ಲಿ (ನಳ)ಗಳಿಲ್ಲವೇ? ಅದೆಷ್ಟು ಚತುರತೆಯಿಂದ ಅವು ಇಡೀ ಊರಿಗೇ ನೀರನ್ನು ಕೊಡುವುವು!! ಇದರ ಕೋಟಿಪಾಲು ಚಮತ್ಕಾರವಿದೆ ಜಾಡನ ಬಲೆಯಂತೆ ದೇಹದಲ್ಲೆಲ್ಲಾ ಹಬ್ಬಿರುವ ರಕ್ತನಾಳಗಳ ರಚನೆಯಲ್ಲಿ; ಕೆಳಗಿನಿಂದ ನೀರನ್ನು ಮೇಲಕ್ಕೇರಿಸುವ ಬುದ್ಧಿ-ಶಕ್ತಿಗಿಂತಲೂ ಭೂಗರ್ಭದಲ್ಲಿನ ಜಲವನ್ನು ಗಗನತಳದಲ್ಲಿನ ಮರದ ತುದಿಗೆ ಸಾಗಿಸುವ ಬುದ್ಧಿಶಕ್ತಿಯು ಕಲ್ಪನಾತೀತ ರೀತಿಯಲ್ಲಿ ಮಿಗಿಲಾದುದು. ಇದು ಯಂತ್ರದ ಯುಗವು. ಯಂತ್ರವು ಮಾನವನು ಮಾಡುವ ಮತ್ತು ಮಾಡಲಾಗದ ಕೆಲಸವನ್ನು ಮಾಡಿ ತೋರಿಸುತ್ತದೆ. ಅಂತಹ ಯಂತ್ರವನ್ನು ರಚಿಸಿದವನ ಸಮಾನನು ಯಾರು? ಈ ಯಂತ್ರವನ್ನು ರಚಿಸಿದವನನ್ನು ರಚಿಸಿದವನಿಗೆ ಸರಿ

ಸಮಾನವಸ್ತು ವಿರುವುದು ಎಂದಿಗಾದರೂ ಸಾಧ್ಯವೇ? ಅಂತಹವನು ಇಲ್ಲದಿದ್ದರೆ ಇಂತಹವನು ಹುಟ್ಟುವುದು ಸಹ ಸಾಧ್ಯವಾಗುತ್ತಿತ್ತೇ?

ಇದರಿಂದ ತಿಳಿದುಬರುವ ಇನ್ನೊಂದು ತತ್ವವಾವು ದೆಂದರೆ ನಮ್ಮ ಅಗಾಧ ಅಜ್ಞಾನ. ಏಕೆಂದರೆ ಪ್ರಕೃತಿ ಯಲ್ಲಿನ ಹಲವು ಸಂಗತಿಗಳನ್ನು ಸುಸಂಬದ್ಧ, ತರ್ಕಶುದ್ಧ, ಯೋಗ್ಯವೆಂದು ನಾವಿನ್ನೂ ನಿಶ್ಚಯಿಸಿ ಹೇಳಲಾರದ ಸ್ಥಿತಿ ಯಲ್ಲಿದ್ದೇವೆ. ಆದರೂ ಸಹ ಉದ್ದೇಶವಿಲ್ಲದೆ ವಿಶ್ವವಾಗಿಲ್ಲ ವೆಂದೀಗ ತೋರಿಬಂದಿರುವುದರಿಂದ ಉದ್ದೇಶಕ್ಕೆ ಆಶ್ರಯ ಭೂತನಾದ ಒಬ್ಬನಿರುವುದು ಸಂದೇಹಾಸ್ಪದವಲ್ಲ. ಆ ಒಬ್ಬನೇ ದೇವನು. ಮೇಲೆ ನೋಡಿದರಂತೂ ಮಾತೇ ಮುಗಿಯಿತು! ಅಲ್ಲಿ ನಕ್ಷತ್ರಗಳು ಎಲ್ಲೆಲ್ಲಿಯೂ ಅಸಂಖ್ಯ ವಾಗಿ ಕೊನೆಯಿಲ್ಲದೆ ಹಬ್ಬಿವೆ. ನಕ್ಷತ್ರಗಳ ಮುಂದೆ ಸೂರ್ಯನು ಕಃಪದಾರ್ಥ. ಸೂರ್ಯನ ಮುಂದೆ ಭೂಮಿಯು ಕಃಪದಾರ್ಥ. ಈ ತಾರಾಮಂಡಲವು ಪರಸ್ಪರಾ ಕರ್ಷಣ ಶಕ್ತಿಯಿಂದ ಪರಸ್ಪರ ಬಡಿದಪ್ಪಳಿಸದೆ ಬಿಗಿಯಾಗಿ ನಿಂತಿದೆ; ಅದೂ ಅನಂತಕಾಲದಿಂದ. ಇಲ್ಲದಿದ್ದರೆ ಅದೆಂದೋ ಅಲ್ಲೋಲಕಲ್ಲೋಲವಾಗುತ್ತಿತ್ತು. ಒಂದು ನಕ್ಷತ್ರವು ಬೇರೆಡೆಗೆ ಅಲ್ಪಮಾತ್ರ ಸರಿಯಬೇಕಾದರೆ ಗಣಿತಶಾಸ್ತ್ರದ ಲೆಕ್ಕದಂತೆ ಇಡೀ ತಾರಾಗಣವೇ ಅತ್ತಿತ್ತ "ಡ್ರಿಲ್" ಮಾಡಿದಂತೆ ಸರಿದಾಡಬೇಕಾಗುತ್ತದೆ. ಗಡಿ ಯಾರದಂತೆ ವಿಶ್ವದ ಕಾರ್ಯವು ನಡೆದಿದೆ. ಈ ಪರಸ್ಪರಾವ ಲಂಬನತ್ವವು ಬರಿಯ ಗಗನವನ್ನಷ್ಟೇ ಅಲ್ಲ, ನೆಲವನ್ನೂ ಸಹ ಒಳಗು ಮಾಡಿಕೊಂಡಿರುವ ನಿಯಮ. ಅದಕ್ಕೇ ಕವಿಯೊಬ್ಬನು ಹೇಳುವನು—


You cannot stir a flower without troubling a star.

(ಇತ್ತೊಂದು ಹೂ ಅಲುಗಾಡಿದರೆ ಅತ್ತೊಂದು ತಾರೆಯೂ ಅಲುಗಾಡುವುದು—ಎಂಬ ಭಾವ).

ಡಾರ್ವಿನ್ ಎಂಬ ವಿಜ್ಞಾನಜ್ಞಾನಿಯು ಸುಂದರವಾಗಿ ಹೀಗೆ ಈ ತತ್ವವನ್ನು ವಿವರಿಸುತ್ತಾನೆ. ಬೆಕ್ಕುಗಳು ಸಂಪೂರ್ಣವಾಗಿ ನಾಶವಾದರೆ ರೆಡ್ ಕ್ಲೋವ್ಹರ್ ಎಂಬ ಅಡವಿಯ ಹೂವೂ ನಾಶವಾಗುವುದಂತೆ. ಹೇಗೆಂದರೆ ತುಂಬಿಗಳು ಹೆಚ್ಚಾದರೆ ಅವು ಈ ಹೂಗಳ ಪರಾಗವನ್ನು ಬಹಳವಾಗಿ ಬೀರುತ್ತವೆ. ಈ ಬೀರುವಿಕೆಯಿಂದ ಆ ಹೂ ಸಂತತಿಯು ವಿಶೇಷವಾಗಿ ಹೆಚ್ಚಾಗುತ್ತದೆ. ಅತ್ತ ಜೇನಿನ ಹುಟ್ಟೂ ಬೆಳೆಯುತ್ತದೆ. ಅಡವಿಯ ಇಲಿಗಳು ಈಗ ಹೆಚ್ಚು ಸಂಖ್ಯೆಯ ಹುಟ್ಟುಗಳನ್ನು ಲೂಟಿ ಮಾಡುವವು. ಇದರಿಂದ ಇಲಿಗಳೂ ವಿಶೇಷವಾಗಿ ಅಭಿವೃದ್ಧಿಸುವವು. ಇಲಿಗಳ ಮೇಲೆ ಜೀವಿಸುವ ಬೆಕ್ಕುಗಳಿಗೆ ಈಗ ಹೆಚ್ಚು ಆಹಾರವು ದೊರೆಯಲು ಅವೂ ಹೆಚ್ಚಾಗುವವು. ಇತ್ತ ರೆಡ್‌ಕ್ಲೋವ್ಹರ್ ಹೂ ಹೆಚ್ಚಾದರೆ ಇತ್ತ ಬೆಕ್ಕುಗಳು ಹೆಚ್ಚಾಗುವುವು. ಒಂದು ವೇಳೆ ಬೆಕ್ಕುಗಳೆಲ್ಲವೂ ಇಲ್ಲ ದಂತಾದರೆ ಆ ಹೂಗಳೂ ಮಾಯವಾಗುವವು!! "ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ" ಎಂಬುದರಿಂದ "ಗಗನವು ವಿಸ್ತಾರವಾಗುತ್ತಿದೆ" ಎಂಬುದರವರೆಗೆ ಹಲವು ನಿತ್ಯ ನಿಯಮಗಳಿವೆ. ಇಂತಹ ಇಡೀ ವಿಶ್ವಕ್ಕೆ ಹತ್ತುವ ನಿಯಮಗಳನ್ನು ವಿಜ್ಞಾನಶಾಸ್ತ್ರವೇ ಮೊದಲಾದವು [illegible] ಯಲು ಯತ್ನಿಸುತ್ತಿವೆ.

ಅಯೋಗ್ಯವಾದ ತಿನಿಸು ಕುಡಿತ ಮೊದಲಾದವುಗಳಿಂ ಬಿಟ್ಟೂಬಿಡದೆ ಅನಾರೋಗ್ಯವು ಸಂಭವಿಸುವುದು, ಆಕಾಶ ದಿಂದ ಅಧಃಪತನವಾಗುವುದು, ಮರ ಗಿಡ ಪ್ರಾಣಿಗಳು ಪುನಃ ಮರ ಗಿಡ ಪ್ರಾಣಿಗಳು ಉದಿಸುವುದು, ವಸ್ತು ಸರ್ವನಾಶವನ್ನು ಹೊಂದದೆ ಬರಿಯ ರೂಪಾಂತರವನ್ನು ಹೊಂದುವುದು, ಚಳಿ ಮಳೆ ಬೇಸಿಗೆಗಳು ವರುಷವರುಷ ಬರುವುದು, ಕಾಲಕ್ಕೆ ಸರಿಯಾಗಿ ಹೂಕಾಯಿ ಹಣ್ಣುಗಳಾ ವುದು—ಮೊದಲಾದುವುಗಳಿಂದ ವಿಶ್ವದಲ್ಲಿ ಎಲ್ಲೆಲ್ಲಿಯೂ ನಿತ್ಯನಿಯಮ ಹಾಗೂ ಕ್ರಮವಿರುವುದು ಸ್ಪಷ್ಟವಾಗುವುದು.

ಈ ಉದ್ದೇಶ, ಈ ಕ್ರಮ, ಈ ನಿತ್ಯನಿಯಮ, ಈ [illegible] ಕೌಶಲ್ಯ, ಈ ಹಿತಬುದ್ಧಿ,—ಇವುಗಳು ಈ [illegible] ತನ್ನಿಂದ ತಾನೇ ಆಗಿರಲು ಸಾಧ್ಯವೇ ಇಲ್ಲವೆಂದೂ, [illegible] ಬುದ್ಧಿಶಕ್ತಿಯುಳ್ಳ ದೇವನು ಇರುವನೆಂದೂ [illegible] ಹೇಳುವುವು.



ಹುಲಿ ಬೇಟೆ

ಲೇಖಕರು :
ಎಂ. ಎಸ್.
ಅನಂತಪದ್ಮನಾಭರಾವ್,
ಮಡಿಕೇರಿ

ಯುವರಾಜನ ಕೋವಿಯಿಂದ ಗುಂಡು ಹಾರಿಯೇ ಬಿಟ್ಟಿತು !

ರೆಸಿಡೆಂಟ್ ಫಾಕ್ಸ್ ಸಾಹೇಬರು ಬೇಟೆ ಕೈಗೆ ಸಿಕ್ಕಿದಾಗ ಬೆದರಿ ವೇದಾಂತವನ್ನು ಹೇಳಿದರು. ಬಿಸಿನೆತ್ತರಿನ ಯುವರಾಜನಿಗೆ ಅದು ಸೇರಲಿಲ್ಲ. ನರಿ ತೋಳಗಳನ್ನು ಬೇಟೆಯಾಡುವುದಕ್ಕಿಂತ ಹಿರಿಯ ಹೆಬ್ಬುಲಿಯೊಂದನ್ನು ನೆಲಕ್ಕುರುಳಿಸಬೇಕೆಂಬುದು ಅವನ ಬಯಕೆ. ಆದುದರಿಂದಲೇ ಅಷ್ಟು ಎದೆಯುಬ್ಬಿಸಿಕೊಂಡು ಆ ಮಂಜುಬೆಳಕಿನ ಕಾಡಿನಲ್ಲಿ ಅವನು ಮುಂದುವರಿದ. ಪ್ರಾಣದಾಸೆಬಿಟ್ಟ ಆ ಹುಲಿಯು ಮೈಮೇಲೆ ನೆಗೆಯುವಾಗ ಮಾತ್ರ ಬೇಟೆಗೆ ಬಂದುದು ಪ್ರಮಾದವಾಯಿತೆಂದು ಒಂದು ನಿಮಿಷ ಯುವರಾಜನಿಗೆ ಅನಿಸದಿರಲಿಲ್ಲ.

ಬಸವನಿಗೂ ಕರಿಯನಿಗೂ ಬೇಟೆಯೆಂದರೆ ಪ್ರಾಣ. ಆ ದಿವಸ ಊಟವನ್ನೇ ಮಾಡುವುದಿಲ್ಲ. ....ಯವರಿಗೂ ಬೇಟೆಯಲ್ಲಿ ತುಂಬಾ ಆಸಕ್ತಿ. ಬಸವ ಕರಿಯರು ತಮ್ಮ ಯಜಮಾನರ ಮಗನಾದ ....ಯವರನ್ನು ಯುವರಾಜನೆಂದು ಕರೆಯುವರು. ಈ ಯುವರಾಜನು ಬೇಟೆಯಲ್ಲಿ ಬಹು ನಿಪುಣ. ಒಂದು ಫರ್ಲಾಂಗು ದೂರದಲ್ಲಿ ಓಡುತ್ತಿರುವ ಮೊಲವನ್ನಾದರೂ ಗುಂಡಿನ ಬಾಯಿಗೆ ತುತ್ತು ಮಾಡಿ ಬಿಡುವನು. ಬಸವ ಕರಿಯರ ಜೊತೆಗೂಡಿಯೆ ಕಾಡನ್ನು ನಿರ್ಭೀತಿಯಿಂದ ಪ್ರವೇಶಿಸುವನು. ಒಬ್ಬೊಬ್ಬರೂ ಬರಿಯ ಇಂಗಿತದಿಂದಲೇ ಮೃಗಗಳ ನೆಲೆಯನ್ನು ಕಂಡು ಹಿಡಿಯಬಲ್ಲರು. ಯಾವ ಮೃಗವು ಎಲ್ಲಿಂದ ಎಲ್ಲಿಗೆ ಹೋಗಿದೆಯೆಂಬುದನ್ನು ಬರಿಯ ವಾಸನೆಯಿಂದಲೇ ಹೇಳಿ ಬಿಡುವರು. ಯುವರಾಜನಾದರೂ ತನ್ನ ಬಹುಮಾನ ಗೌರವಗಳನ್ನು ಬದಿಗೊತ್ತಿ ಅವರೊಡನೆ ಬಹು ಸಲಿಗೆಯಿಂದ ನಡೆದುಕೊಳ್ಳುವನು. ಅವನು ಎಷ್ಟೋ ಚಿರತೆ ಸಾರಗಗಳ ಬೇಟೆಯಾಡಿರುವನು. ಅವೆಷ್ಟೋ ಕಾಡುಕೋಣಗಳನ್ನು ಕೊಂದಿರುವನು. ಇದುವರೆಗೆ ಐದಾರು ಆನೆಗಳನ್ನೂ ಮಣ್ಣುಮುಕ್ಕಿಸಿರುವನು. ಆದರೆ ಈತನಕ ಒಂದು ಹುಲಿಯೂ ಅವನ ಕೋವಿಗೆ ತುತ್ತಾಗಿರಲಿಲ್ಲ. ಇದೊಂದು ಕೊರತೆ ಅವನನ್ನು ಬಾಧಿಸುತ್ತಿದ್ದಿತು.

ಒಮ್ಮೆ ರೆಸಿಡೆಂಟ್ ಫಾಕ್ಸ್ ಸಾಹೇಬರು ನಮ್ಮ ಸೀಮೆಗೆ ಬೇಟೆಯ ವ್ಯಸನದಿಂದ ಬಂದು ಕ್ಯಾಂಪು ಮಾಡಿದರು. ಯುವರಾಜರೂ ಫಾಕ್ಸ್ ಸಾಹೇಬರೂ ಕೂಡಿಯೇ ಬೇಟೆಯಾಡಲು ಅಧಿಕಾರಿಗಳು ನಿಶ್ಚಯಿಸಿದರು. ಫಾಕ್ಸ್ ಸಾಹೇಬರೂ ಹುಲಿಬೇಟೆಗಾಗಿಯೇ ಬಂದಿದ್ದರು. ಹುಲಿ ಬರಬೇಕೆಂದು ಒಂದು ಹೆಗ್ಗಾಡಿನಲ್ಲಿ ಐದಾರು ಹಸುಗಳನ್ನೂ ಕಟ್ಟಿಹಾಕಿದ್ದರು. ಎರಡು ಮರಗಳಿಗೆ ತಗಲಿಸಿ ಮರದ ಅಟ್ಟಣೆಗಳನ್ನೂ ಬಹು ಎತ್ತರದಲ್ಲಿ ಕಟ್ಟಿದ್ದರು. ಈ ಅಟ್ಟಣೆಯ ಮೇಲಿನಿಂದ ಫಾಕ್ಸ್ ಸಾಹೇಬರು ಹಸುವನ್ನು ತಿನ್ನುವಾಗ ಹುಲಿಯನ್ನು ಹೊಡೆಯುವ ಏರ್ಪಾಡು. ಉಷಃಕಾಲಕ್ಕೆ ಮುಂಚಿತವಾಗಿಯೇ ಫಾಕ್ಸ್ ಸಾಹೇಬರೂ ಯುವರಾಜರೂ ಆ ಅಟ್ಟಣೆಯನ್ನೇರಿದರು. ಹಾಹೂ ಎನ್ನುವಷ್ಟರಲ್ಲಿ ನಾಲ್ಕೈದು ಹೆಬ್ಬುಲಿಗಳು ಪ್ರವೇಶಿಸಿದುವು. ಹಸುಗಳನ್ನು ಕಂಡು ಆ ಹುಲಿಗಳಿಗೂ ಪರಮಾನಂದವಾಗಿರಬೇಕು. ಯಥೇಷ್ಟವಾಗಿ ಭೋಜನ ಮಾಡಿದುವು.

ಕ್ಷಣಮಾತ್ರದಲ್ಲಿ ಗೋಮಾಂಸ ಭಕ್ಷಣೆಯನ್ನು ತೀರಿಸಿ ಅಟ್ಟಣೆಯಕಡೆ ನೋಡುತ್ತಾ ಕುಳಿತವು.

ಯುವರಾಜನು ಫಾಕ್ಸ್ ಸಾಹೇಬರನ್ನು ಎಚ್ಚರಿಸಿದನು. ಒಂದೇ ಹುಲಿಯಾದರೆ ಕೆಡಹಬಹುದು. ಇಷ್ಟೊಂದು ಹುಲಿಗಳಿರುವಾಗ ಒಂದನ್ನು ಮಾತ್ರ ಕೊಲ್ಲುವುದು ಅಪಾಯಕರ. ಎಲ್ಲವನ್ನೂ ಹೊಡೆಯುವುದು ಆಗದ ಮಾತು. ಆದುದರಿಂದ ಸಾಹೇಬರು ಹೆದರಿದರು. ಯುವರಾಜನು ಏನೂ ಭಯವಿಲ್ಲ ಹೊಡೆಯಿರೆಂದನು. ಇಷ್ಟರಲ್ಲಿ ಔತಣದ ಮತ್ತಿನಿಂದ ಎದುರಿಗಿದ್ದ ಹುಲಿಯು ಒಮ್ಮೆ ಘಟ್ಟಯಾಗಿ ಗರ್ಜಿಸಿತು. ವನದಲ್ಲಿನ ತನ್ನ ಅಧಿಕಾರ ದರ್ಪದಿಂದ ಯಾರನ್ನೂ ಲಕ್ಷ್ಯಕ್ಕೆ ತಾರದ ಅಲಕ್ಷ್ಯಭಾವದಿಂದ ಆಕಡೆ ಈಕಡೆ ನೋಡುತ್ತಾ ಕುಳಿತಿತ್ತು. ಔತಣದ ತೃಪ್ತಿಯನ್ನು ಸೂಚಿಸುತ್ತಾ ನಿಮಗೆ ಕೃತಜ್ಞನಾಗಿರುವೆನೆಂದು ಹೇಳುವ ರೀತಿಯಲ್ಲಿ ತುಟಿಗಳನ್ನು ನೆಕ್ಕಿಕೊಳ್ಳುತ್ತಿತ್ತು.

ಫಾಕ್ಸ್ ಸಾಹೇಬರಿಗೆ ಏನು ಮಾಡುವುದಕ್ಕೂ ತೋರಲಿಲ್ಲ. ಇದಿರಿಗಿದ್ದ ಕೋವಿಯನ್ನು ಎತ್ತಲು ಪ್ರಯತ್ನಪಟ್ಟರು. ಅದು ಶಿವಧನುಸ್ಸಿಗಿಂತಲೂ ಭಾರವಾಗಿತ್ತು. ಹುಲಿಯೆಂದರೆ ಅದು ಬೆಕ್ಕಿನಷ್ಟೇ ಗಾತ್ರದ ಸಣ್ಣ ಪ್ರಾಣಿಯಿರಬಹುದೆಂದು ಅವರ ಊಹೆಯಾಗಿತ್ತೋ ಏನೋ! ಆದರೆ ಇಲ್ಲಿನ ಹುಲಿಗಳು ದೊಡ್ಡವಾಗಿವೆ. ನೋಡಿದೊಡನೆಯೇ ಎದೆನಡುಕ ಬರುವುದು. ಯುವರಾಜನು ಸಾಹೇಬರನ್ನು ತ್ವರೆಪಡಿಸಿದನು. ಇಷ್ಟು ಸಮೀಪದಿಂದ ಹೊಡೆದರೆ ಅದು ಅಟ್ಟಣೆಯ ಮೇಲಕ್ಕೇ ಹಾರಿ ತಮ್ಮ ಬಲಿಯನ್ನು ತೆಗೆದುಕೊಳ್ಳದೆ ಇರದೆಂದು ಭಯಪಟ್ಟರು. "ನಿನಗೆ ಧೈರ್ಯವಿದ್ದರೆ ನನ್ನನ್ನು ಕೊಲ್ಲು ನೋಡೋಣ" ಎಂದು ಹೇಳುವಂತೆ ಆ ಹುಲಿಯು ಒಂದಾವರ್ತಿ ದೊಡ್ಡ ಗರ್ಜನೆಯನ್ನು ಮಾಡಿತು. ಫಾಕ್ಸ್ ಸಾಹೇಬರು ಹೆದರಿ ಅಲ್ಲಿಯೇ ನಿಶ್ಚೇಷ್ಟಿತರಾದರು. ಅವರೊಡನೆ ಬೇಟೆಗೆ ಬಂದುದು ತನ್ನ ತಪ್ಪೆಂದು ಯುವರಾಜನು ಮರುಗಿದನು. ತಾನಾಗಿಯೇ ಹುಲಿಯನ್ನು ಕೊಂದರೆ ರೆಸಿಡೆಂಟರಿಗೆ ಅವಮಾನ ಮಾಡಿದಂತಾಗುವುದು. ಇದರ ಮೇಲೆ ಸಾಹೇಬರು ಗುಗ್ಗುಗಳಾಗಿ ಹೋಗಿದ್ದಾರೆ.

ಯುವರಾಜನಿಗೆ ಸಾಹೇಬರ ಮೇಲೆ ತುಂಬಾ ಅಸಮಾಧಾನವುಂಟಾಯಿತು. ಆದರೆ ಆ ಅಸಮಾಧಾನವನ್ನು ತಾನೇ ನುಂಗಿಕೊಳ್ಳಬೇಕಾಯಿತು. ಮರುದಿವಸ ತಾನೊಬ್ಬನೇ ಬಂದು ಹುಲಿಬೇಟೆಯಾಡುವೆನೆಂದು ನಿಶ್ಚಯಿಸಿದ. ಅಂತೂ ಸಾಹೇಬರು ಬೆಳಗಾಗುವತನಕ ಅಲ್ಲಿಯೇ ಬೇಕಾಯಿತು. ಹುಲಿಗಳು ಸೂರ್ಯೋದಯ ಸಮ ರಿತು ಒಂದೊಂದಾಗಿ ಹೊರಟು ಹೋದುವು. ಇಳಿದು ವಾಪಸು ನಿಜಸ್ಥಾನಗಳನ್ನು ಸುರಕ್ಷಿತವಾಗಿ ಕೊಂಡರು. ಮತ್ತೆ ಫಾಕ್ಸ್ ಸಾಹೇಬರು ಮಾತನ್ನೇ ಎತ್ತಲಿಲ್ಲವಂತೆ.

ಬಸವ ಕರಿಯರ ಜೊತೆಯಲ್ಲಿ ಯುವರಾಜ ದ್ದಾನೆ. ಏನು ಸದ್ದಾದರೂ ಹುಲಿಯಿರಬಹುದೆಂದೇ ಭ್ರಾಂತಿ. ಅವನ ಕಣ್ಣಿಗೆ ಹುಲಿಯೊಂದೇ ಬೇಕಾಗಿ ಬೇರೆ ಏನೂ ಇಲ್ಲ. ರಾತ್ರಿ ಸ್ವಲ್ಪ ಮಳೆ ಬೇಟೆಗೂ ಅನುಕೂಲವಾಯಿತು. ಕಾಡಿನಲ್ಲಿ ನಡೆ ಒಣಗಿದ ಎಲೆಗಳ ಪರಪರ ಶಬ್ದವಿಲ್ಲ. ಪೂರ್ಣ ಚಂದ್ರನು ಕಾಡಿನೊಳಹೊಗಲಾರದೆ ಅಲ್ಲಿ ಇಲ್ಲಿ ನೋಡುತ್ತಿದ್ದನು. ಆ ಹೆಗ್ಗಾಡಿನ ನಡುವೆ ಮೌನದಿಂದ ನಡೆದರು. ಬಸವನು ಒಂದು ಕರಿಯನು ಒಂದು ಸಣ್ಣ ಚಿರತೆಯನ್ನೂ ಯುವರಾಜನು ಇವೊಂದರಮೇಲೂ ಕೈಯೆತ್ತಲಿಲ್ಲ. ಈಸಲದ ಬೇಟೆ ಹುಲಿಬೇಟೆ. ಒಂದೋ ಹುಲಿಯನ್ನ ಬೇಕು. ಇಲ್ಲವೆ ಹುಲಿಯ ಕೈಯಿಂದ ಸಾಯ ರಾಜನ ಕೋವಿಯು ಬಯಸುತ್ತಿದ್ದುದೂ ಹುಲಿಯ ಹೊತ್ತು ಹುಲಿಬೇಟೆ ದೊರೆಯದಿದ್ದರೆ ಇನ್ನು ಎಂದೂ ಬೇಟೆಯನ್ನೇ ಆಡುವುದಿಲ್ಲವೆಂದು ಆದರೆ ಹುಲಿಯ ಸುಳಿವೆಲ್ಲಿ..........?

ಮೂವರೂ ಕಾಡಿನಲ್ಲಿ ಹೋಗುತ್ತಿದ್ದರು. ಮರೆಯಲ್ಲಿ ನಿಂತು ಹುಲಿಯ ಬರವನ್ನೇ ಕಾಯುತ್ತ ಹಾಗೆಯೇ ಬಹಳ ಹೊತ್ತು ನಡೆದರು. ಬಸವನು ತಡೆದನು. ಮುಂದಿಟ್ಟ ಹೆಜ್ಜೆಯನ್ನು ಹಾಗೆಯೇ ಇಟ್ಟನು. ಕರಿಯನೂ ಅವನ ಹಿಂದೆಯೇ ನಿಂ ಬಸವನು ಯುವರಾಜನಿಗೆ ಕೈಬೆರಳ ಏನನ್ನೋ ತೋರಿಸಿದನು. ಕರಿಯನೂ ನೋ ರಾಜನು ಪೊದರೊಳಗೆ ಏನನ್ನೋ ಕಂಡನು. ಮಸುಕಾದ ಆ ಸಮಯದಲ್ಲಿ ಆ ಪ್ರಾಣಿಯು ಯಾ ಗೊತ್ತಾಗಲಿಲ್ಲ. ಎರಡು ಕಣ್ಣುಗಳು ಮಾತ್ರ ಹೊಳೆಯುತ್ತಿವೆ. ಒಮ್ಮೆ ಅದು ಚಿರತೆಯಿರಬ ತೋರಿತು. ಇನ್ನೊಮ್ಮೆ ಅದು ಸಾರಗವಿರಬ ಹೊಳೆಯಿತು. ಪೊದರಿನೊಳಗೆ ಸಾರಗವು ಇ ವಾಗಿ ಇರಲಾರದು. ಬೇರೆ ಯಾವುದೋ ಮೃಗ

ಇರಲಿ ಬಂದುದಕ್ಕೆ ಹುಲಿ ಬೇಟೆಯೂ ಆಗಲಿಲ್ಲ. ಈ ಒಂದು ಮೃಗವನ್ನಾದರೂ ಹೊಡೆಯುವೆನೆಂದು ಯೋಚಿಸಿದ ಯುವರಾಜ. ಕೇವಲ ಎರಡು ಮಾರು ದೂರದಲ್ಲೇ ಮಲಗಿದೆ. ಆ ಮೃಗವೂ ಇವರನ್ನು ನೋಡಿರಬೇಕು. ಆದರೂ ಅಲ್ಲಿಂದ ಅದು ಅಲುಗಾಡಲಿಲ್ಲ. ಉಲ್ಲಾಸದಿಂದ ಎರಡು ಕೈಗಳನ್ನೂ ಮುಂದಕ್ಕೆ ನೀಡಿ ಅವುಗಳ ಮೇಲೆ ತಲೆಯನ್ನಿರಿಸಿಕೊಂಡು ಮಲಗಿದೆ.

ಯುವರಾಜನು ಕೋವಿಗೆ ಕೈಹಾಕಿದನು. ಒಂದೇ ಏಟಿಗೆ ಅದನ್ನು ಮೂಲೆಗೂಡಿಸುವೆನೆಂದು ಬಗೆದನು. ಆದರೆ ಅದು ಹುಲಿಯಾದುದೇ ಆದರೆ ಅಷ್ಟು ಹತ್ತಿರದಿಂದ ಅದನ್ನು ಹೊಡೆಯುವುದು ಅಪಾಯ. ಅದು ಹುಲಿಯಲ್ಲ. ಒಂದು ವೇಳೆ ಆಗಿದ್ದರೆ? ಅದನ್ನು ಈಗ ಕೊಲ್ಲದಿದ್ದರೆ ಇನ್ನಾವಾಗ ತನ್ನ ಹಟವು ಸಾಧಿಸುವುದು ? ಇವಿಷ್ಟೂ ಒಂದು ಕ್ಷಣದ ಯೋಚನೆ. ಆದುದಾಗಲಿ ಎಂದು ಕೋವಿಯನ್ನು ಮೇಲ ಕ್ಕೆತ್ತಿದ. ಗುಂಡು ಹಾರಿಯೇ ಬಿಟ್ಟಿತು. ಆ ಮೃಗವು ಯುವರಾಜನ ಹತ್ತಿರಕ್ಕೆ ಒಂದೇ ನೆಗೆತ ನೆಗೆಯಿತು. ಆ ಗುಂಡಿಗೆ ಅದು ಸಾಯಲಿಲ್ಲ. ಅದೊಂದು ದೊಡ್ಡ ಹೆಬ್ಬುಲಿ. ಕ್ಷಣಕಾಲ ಮೂವರೂ ಹೆದರಿದರು. ಬಸವನು ಯುವರಾಜನನ್ನು ದೂರಕ್ಕೆ ತಳ್ಳಿ ತಾನೂ ತಪ್ಪಿಸಿಕೊಂಡನು. ಮೂವರಿಗೂ ಯಾವ ಅಪಾಯವೂ ಆಗಲಿಲ್ಲ. ಹುಲಿಯೂ ಮಹಾ ರೋಷದಿಂದ ಸುತ್ತಲೂ ನೋಡಿ ಯಾರನ್ನೂ ಕಾಣಲಿಲ್ಲವೋ? ಏನೋ ಮೈಗಾಯದಿಂದ ನೋಯುತ್ತ ದಿಕ್ಕುಗಾಣದೆ ಅಲ್ಲಿಂದ ಓಡಿತು.

ಹುಲಿಯು ಸಾಯದೆ ಬದುಕಿಕೊಂಡಿತು. ಅದನ್ನು ಪತ್ತೆ ಮಾಡಿ ಕೊಲ್ಲಲೇ ಬೇಕೆಂದು ಅವನ ಛಲವಾಯಿತು. ಬಸವ ಕರಿಯರು ನಾಳೆ ಆಗಲೆಂದರು. ಅವನು ಆ ಮಾತನ್ನು ಮನ್ನಿಸಲಿಲ್ಲ. ಅವನ ಆಗ್ರಹಕ್ಕೆ ಆ ಇಬ್ಬರೂ ಒಳಗಾಗಲೇ ಬೇಕಾಯಿತು. ಪುನಃ ಹುಲಿಯ ಮಾರ್ಗ ವನ್ನೇ ಅನುಸರಿಸಿದರು. ಸ್ವಲ್ಪ ದೂರ ಮಾತ್ರ ಸೋರಿದ ರಕ್ತದ ಗುರುತು ಇತ್ತು. ಆ ಮೇಲೆ ಅದೂ ಇಲ್ಲ. ಕರಿ ಯನು ಒಂದು ದೊಡ್ಡ ಮರವನ್ನೇರಿ ನೋಡಿದನು. ಹುಲಿಯ ಸುಳಿವಿಲ್ಲ. ಆದರೂ ಮೂವರೂ ಆ ಹುಲಿಯ ಜಾಡನ್ನನುಸರಿಸುತ್ತ ಬಹು ಜಾಗರೂಕರಾಗಿ ಕಾಡಿನಲ್ಲಿ ಅಲೆಯು ತ್ತಿದ್ದರು. ತಿರುಗಿ ತಿರುಗಿ ಯುವರಾಜನಿಗೂ ಆಯಾಸ ವಾಗಹತ್ತಿತು.

ಕರಿಯನು ಇದ್ದಕ್ಕಿದ್ದ ಹಾಗೆ ನಿಂತು ಬಿಟ್ಟನು. ಅವನ ಬೆಟ್ಟನ್ನು ತಿಳಿದ ಬಸವನೂ ನಿಂತು ಬಿಟ್ಟನು. ಏನೋ ಕಾರಣದಿಂದ ಕರಿಯನು ಮುಂದೆ ಹೋಗುವುದು ಬೇಡ ವೆಂದನು. ಹಿಂದಕ್ಕೆ ಹೋಗುವುದೂ ಅಪಾಯವೆಂದನು ಬಸವ. ರಾಜಣ್ಣಾ ಈಗಲೇ ಮರವನ್ನೇರು—ಇಲ್ಲದಿದ್ದರೆ ಆನೆಗೆ ಎರವಾಗಬೇಕಾಗುವುದು. ಮುಂದೆ ಹೆಜ್ಜೆ ಇಡುವು ದಕ್ಕೇ ಅವರು ಒಪ್ಪಲಿಲ್ಲ. ಈಗ ಯುವರಾಜನ ಮಾತನ್ನು ಅವರು ಕೇಳದಾದರು.

" ಮುಂದೆ ಆನೆಗಳು ಹೋಗಿವೆ. ಈ ಕಡೆಯೂ ಆನೆ ಗಳಿರಬೇಕು. ಈಗ ತಾನೆ ಹಿಂಡೊಡೆದು ಆನೆಗಳು ಈ ಮಾರ್ಗವಾಗಿ ಹೋಗಿವೆ. ಬೆಳಗಾಗುವವರೆಗೂ ಇಲ್ಲಿಯೇ ಅಡಗಿದ್ದು ಆ ಮೇಲೆ ಹೋಗೋಣ."

ಈ ಮಾತನ್ನು ಯುವರಾಜನು ನಂಬಲಿಲ್ಲ. ಬಸವನು ಮತ್ತೊಮ್ಮೆ ಸುತ್ತಲೂ ನೋಡಿದ.

" ಅಗೋ ಅಲ್ಲೊಂದು ಗಂಡಾನೆ. ಕರಿಯಣ್ಣಾ ಈ ಕಡೆ ನೋಡೆಲಾ ಹೆಣ್ಣಾನೆ ಮರಿಯೊಡನೆ ನಿಂತಿದೆ......... ಓಡೆಲಾ. ಯುವರಾಜಾ ನಿನ್ನ ಕ್ಷೇಮವನ್ನು ನೋಡಿಕೋ ಮರವ ಹತ್ತು ಇಲ್ಲವೆ ಪೊದರೊಳಗೆ ಸೇರಿಕೋ........ "

ಎನ್ನುವಷ್ಟರಲ್ಲಿ ಇಬ್ಬರೂ ಮರೆಯಾದರು. ಯುವರಾ ಜನು ಒಬ್ಬಂಟಿಗನಾದನು. ಆನೆಯು ಒಂದೇ ಬಂದರೂ ಕಷ್ಟ. ಹಿಂಡಾಗಿ ಬಂದರಂತೂ ಕೆಲಸ ಮುಗಿಯಿತು. ಇಷ್ಟಕ್ಕೂ ಈಗ ಕೈಯಲ್ಲಿರುವ ಕೋವಿಗೆ ಆನೆಯು ಮಣಿಯದು.

ಯುವರಾಜನು ನೋಡಿದನು. ಇನ್ನು ಹೆದರಿ ಪ್ರಯೋ ಜನವಿಲ್ಲ. ಯಾವ ಉಪಾಯಚಿಂತನೆಗೂ ಈಗ ಸಮಯ ವಿಲ್ಲ. ಆನೆಗಳು ಸಮೀಪಿಸಿದುವು. ತನ್ನನ್ನು ಯುವರಾ ಜನೆಂದು ಮನ್ನಿಸಿದ ಬಸವ ಕರಿಯರಿಬ್ಬರೂ ಕೈಬಿಟ್ಟರು. ತನ್ನನ್ನು ನುಂಗುವುದಕ್ಕೆ ಕಾದಿದ್ದ ವಿಪತ್ತನ್ನು ಒಮ್ಮೆ ನೆನೆದನು. ಈಗ ಆ ಕಾರ್ಗಾಡನ್ನು ಪ್ರವೇಶಿಸಿದರೆ ಹುಲಿ ಚಿರತೆಗಳು ಎಲ್ಲಿ ಮಲಗಿರುವುವೋ? ಹೆಬ್ಬಾವು ಸರ್ಪಗಳು ಎಲ್ಲಿ ಇರುವುವೋ ? ಪೊದರುಗಳೊಳಗೆ ಯಾವ ಪ್ರಾಣಿ ಗಳು ಮನೆಮಾಡಿಕೊಂಡಿರುವುವೋ ? ಇವೆಲ್ಲವೂ ಒಂದು ಕ್ಷಣದ ಭಯ. ಮತ್ತೆ ಧೈರ್ಯೋದಯವಾಯಿತು. ಅತ್ತಿತ್ತ ನೋಡುವುದರೊಳಗೆ ಗಂಡಾನೆಯು ಸಮೀಪಿಸಿತು. ರಾಜನು ಸಮೀಪದ ದೊಡ್ಡ ಮರದ ಮರೆಯಲ್ಲೇ ನಿಂತುಕೊಂಡನು ಕೋವಿಯನ್ನು ಸಜ್ಜಾಗಿರಿಸಿಕೊಂಡನು. ಗಂಡು ಹೆಣ್ಣಾನೆ ಗಳೆರಡೂ ಮರಿಯನ್ನು ಆಡಿಸುತ್ತಾ ಆ ಮರದ ಸಮೀ ಪಕ್ಕೇ ಬಂದುವು. ಗಂಡಾನೆಯು ರಾಜಶೀವಿಯಿಂದ ಆಗಾಗ ಆದರೂ ಗಮನವೆಲ್ಲಾ

ತನ್ನ ಮಗುವಿನಮೇಲೆ. ಆ ಮರಿಯ ಲಾಲನೆಯಲ್ಲಿ ಅದು ಪ್ರಪಂಚವನ್ನೇ ಮರೆತಿದ್ದಂತೆ ತೋರಿತು. ಅಷ್ಟು ದೊಡ್ಡ ಪ್ರಾಣಿಯಾದರೂ ಆ ಆನೆಯೂ ಕೂಡ ಮಾಯಾ ಸಂಸಾರದ ಸುಖದಲ್ಲಿ ಆನಂದಗೊಳ್ಳುತ್ತಿತ್ತು. ಮರಿಯು ಹೋದ ಕಡೆ ಆ ಎರಡು ಆನೆಗಳೂ ಹೋಗುವುವು. ಆ ಹಾಳು ಮರಿಯೂ ಆ - ಮರದ ಸಮೀಪಕ್ಕೇ ಬಂದು ಬಿಟ್ಟಿತು. ಆನೆಗಳು ಹಾಗೆಯೇ ನೋಡುತ್ತ ನಿಂತುವು.

ಅಷ್ಟರಲ್ಲಿ ಇನ್ನೊಂದು ಕಡೆಯಿಂದ ಮತ್ತೊಂದು ಗಂಡಾನೆಯ ಇಳಿಯಿತು. ಈ ಹೆಣ್ಣಾನೆಯನ್ನು ಕಂಡು ಅದಕ್ಕೆ ಅಸೂಯೆಯೇರಿತು. ತನ್ನ ದರ್ಪವನ್ನು ತೋರಲು ಹೆಣ್ಣಾನೆಯ ಬಳಿ ನಿಂತಿತು. ಮೊದಲಿನ ಗಂಡಾನೆಗೆ ಇದು ಸಹನೆಯಾಗಲಿಲ್ಲ. ಅದು ಬಂದು ಸೊಂಡಿಲಿನಿಂದ ಹೆಣ್ಣಾನೆಯನ್ನು ಎಳೆಯಿತು. ಹೆಣ್ಣಾನೆಯು ಅದರ ಜೊತೆಯಲ್ಲಿ ಹೋಗುವುದನ್ನು ಕಂಡು ಹೊಸ ಆನೆಗೆ ಇನ್ನೂ ರೇಗಿತು. ಕೋಪದಿಂದ ಅದನ್ನು ತಡೆದು ಹಳೆಯ ಆನೆಯನ್ನು ಅಡ್ಡಗಟ್ಟಿತು. ಎರಡಕ್ಕೂ ಸ್ವಲ್ಪ ಹೊತ್ತು ಗುದ್ದಾಟವಾಯಿತು. ಯಾವುದೂ ಸೋಲಲಿಲ್ಲ. ಮೊದಲಿನ ಗಂಡಾನೆಗೆ ಇದು ಸರಿಹೋಗಲಿಲ್ಲ. ಹೊಸ ಆನೆಯೂ ಮಹಾಕ್ರೋಧದಿಂದ ಮೇಲೆ ನುಗ್ಗಿ ಬಂತು. ಹಳೆಯ ಗಂಡಾನೆಗೆ ಬಲ ಕುಗ್ಗಿತೋ ಏನೋ. ಕೆಸರು ಮೊದಲಾದುವನ್ನು ತುಂಬಿಕೊಂಡು ಬರಲು ಅರಣ್ಯವನ್ನು ಹೊಕ್ಕಿತು. ಹೊಸ ಆನೆಯು ಮರದ ಕೆಳಗಿದ್ದ ಕಲ್ಲಿನ ಮೇಲೆ ದಾಡೆಯನ್ನು ತಿಕ್ಕುತ್ತಿತ್ತು.

ಮರೆಯಲ್ಲಿದ್ದ ಯುವರಾಜನಿಗೆ ಇಂದಿಗೆ ತನ್ನ ಆಯುಷ್ಯವು ಮುಗಿಯಿತೆಂದು ತೋರಿತು. ಭಯವೂ ತಲೆದೋರಿತು........ಆನೆಯಾದರೇನಾಯಿತು. ಕಣ್ಣು ಬಹು ಸಣ್ಣದು. ಯುವರಾಜನು ಅದರ ದೃಷ್ಟಿಗೆ ಬೀಳಲಿಲ್ಲ. ಆ ಆನೆಯು ಹಿಂದಕ್ಕೂ ಮುಂದಕ್ಕೂ ಹೋಗುತ್ತಿದ್ದರೂ ಹೆಣ್ಣಾನೆಯ ಮೇಲಿನ ವ್ಯಾಮೋಹದಿಂದ ಬೇರಾವುದೂ ಅದರ ಗಮನಕ್ಕೆ ಹೋಗಲಿಲ್ಲ.

ಯುವರಾಜನಿಗೆ ಬಸವ ಕರಿಯರ ಮೇಲೆ ಒಂದಾವರ್ತಿ ಕೋಪವು ಬರುವುದು. ಇದಿರಿಗಿದ್ದಿದ್ದರೆ ಈಗಲೇ ಅವರನ್ನು ಗುಂಡಿನ ಬಾಯಿಗೆ ಎರವುಮಾಡಿಬಿಡುವಷ್ಟು ಕೋಪವು ಅವನನ್ನು ಆವರಿಸಿತು. ತನ್ನನ್ನು ನಿರ್ದಯರಾಗಿ ಆನೆಯ ಬಾಯಿಗೆ ತುತ್ತುಮಾಡಿ ಓಡಿಹೋಗಿರುವರಲ್ಲಾ. ಕಾಡಿನಲ್ಲಿ ಸುಲಭವಾಗಿ ಓಡಿಹೋಗುವಂತೆಯೂ ಇಲ್ಲ. ಈ ಸಾರಿ ಬದುಕಿಹೋದರೆ ಬೇಟೆಗಾರರ ಪಡೆಯನ್ನು ನೆರೆಯಿಸಿ ಆನೆಗಳ ಬೇಟೆಯಾಡಬೇಕೆಂದು ನಿಶ್ಚಯಿಸಿದನು. ... ಈಗ ಇಲ್ಲಿಂದ ಪಾರಾಗುವ ಬಗೆ........?

ದೂರದಿಂದ....ಎಲ್ಲಿಂದಲೋ ನಗುವ ಶಬ್ದ. ಚಪ್ಪಾಳೆ ಶಬ್ದ. ಮನಬಂದಂತೆ ಕೂಗುವ ಧ್ವನಿ. ಯುವರಾಜ... ಆಲಿಸಿದನು. ಹಾಡುವ ಸ್ವರ. ಆಹಾ! ಬಸವ ಕರಿಯರ ಧ್ವನಿಯೇ ಅದು. ಕತ್ತೆತ್ತಿ ನೋಡಿದನು. ಆಚೆ ಕಡೆ ... ಮೇಲೆ ಇಬ್ಬರೂ ಇದ್ದಾರೆ. ಯುವರಾಜನು ಕ್ಷೇಮ... ಇರಬಹುದೆಂದು ಅವನಿಗೆ ದಾರಿತೋರಿಸಬೇಕೆಂದು ... ಕೂಗುತ್ತಿದ್ದಾರೆ.

" ಕಾಡಿನಲ್ಲಿ ಇದೇ ಮಾರ್ಗವಾಗಿ ಹಿಂದಹಿಂದಕ್ಕೆ ... ದರೆ ಅಲ್ಲೊಂದು ಕಾಲುದಾರಿಯನ್ನು ಸೇರುವೆ. ... ನಮ್ಮನ್ನು ಕಾಣುವೆ. ಜಾಗ್ರತೆ ನಡೆ "ಯೆಂದು ... ಹೇಳುತ್ತಿದ್ದಾರೆ. ಈಗ ಯುವರಾಜನಿಗೂ ಒಂದು ... ಸಿಕ್ಕಿದಂತಾಯಿತು. ಒಡನೆಯೇ ಅಲ್ಲಿಂದ ಹೊ... ಪ್ರಯತ್ನಮಾಡಿದನು. ಸದ್ದಾದರೆ ಆನೆಯ ದೃಷ್ಟಿಗೆ ... ವನು. ಬಸವ ಕರಿಯರಿಗೋ ಮರದಿಂದ ಮರಕ್ಕೆ ಹಾ... ಉಪಾಯವೆಲ್ಲಾ ಗೊತ್ತು. ಅವಶ್ಯಬಿದ್ದರೆ ಅವರು ... ಗಳ ಮೇಲೆಯೆ ಇದ್ದು ಬಿಡಬಲ್ಲರು. ಅವರಿಬ್ಬರೂ ... ರಾಜನ ಮಾರ್ಗವನ್ನೇ ಮರದ ಮೇಲಿನಿಂದ ... ಸಿದರು.

ಇನ್ನೇನು ಯುವರಾಜನಿಗೆ ಅವರು ಹೇಳಿದ ಕಾಲು... ಸಿಕ್ಕಿತು ಎನ್ನುವಾಗ ಅಲ್ಲೇ ಒಂದು ಹುಲಿ ಮಲಗಿ... ನರಳುವ ಶಬ್ದ ! ಯುವರಾಜನ ಸುಳಿವನ್ನು ಕಂಡು ... ತಲೆಯೆತ್ತಿತು. ರೆಪ್ಪೆ ಹೊಡೆಯದೆ ಅವನನ್ನೇ ನೋಡು... ಯುವರಾಜನೂ ಹಾಗೆಯೇ ರೆಪ್ಪೆ ಹೊಡೆಯದೆ ... ನೋಡುತ್ತಿದ್ದಾನೆ. ಹುಲಿಯೂ ಬಿಸಿಬಿಸಿಯಾಗಿ ... ಬಿಡುತ್ತಾ ಮಹಾಕೋಪದಿಂದ ದುರುದುರನೆ ನೋ... ರಾಜನು ರೆಪ್ಪೆ ಹೊಡೆದರೆ ಸಾಕು ಮೇಲೆ ಬೀಳ... ಹೊಂಚುಹಾಕುತ್ತಿದೆ. ಅಲೆದಲೆದು ಬೆಂಡಾಗಿ ಮಾ... ಬರುತ್ತಿರುವಾಗ ಹಠಾತ್ತಾಗಿ ಹುಲಿಯು ಇದಿರಿಗೆ ...

ದೂರದಿಂದಲೇ ಬಸವ ಕರಿಯರು ಈ ದೃಶ್ಯವನ್ನು ... ದರು. ಮೊದಲು ರಾಜನ ಕೈಯಿಂದ ಗುಂಡಿನೇಟು ... ಓಡಿದ ಅದೇ ಹುಲಿ, ನೋವಿನಿಂದ ಏಳಲಾರದೆ ... ಯುವರಾಜನು ತನ್ನ ನೋಟವನ್ನು ತಿರುಗಿಸಿ... ನನ್ನು ಕೊಂದುಬಿಡುವೆನು ಎಂದು ಹೇಳುವಂತೆ ... ನೋಟ.

ಚಮತ್ಕಾರಿಯಾದ ಯುವರಾಜನು ಹೆದರಲಿಲ್ಲ. ಮೆಲ್ಲಗೆ ಕೋವಿಯನ್ನು ಕೈಗೆತ್ತಿಕೊಂಡನು. ಹುಲಿಯನ್ನು ಹೊಡೆದರೆ ಒಂದು ವೇಳೆ ತಾನು ಬದುಕಲೂಬಹುದು. ಇಲ್ಲವೇ ಆ ಹುಲಿಯೇ ತನ್ನನ್ನು ಬಾಯಿಗೆ ಹಾಕಿಕೊಳ್ಳದೆ ಬಿಡದು. ಗುಂಡು ಹೊಡೆಯುವುದೇ ಸರಿಯೆಂದು ತರ್ಕಿಸಿದನು. ಕ್ಷಣಮಾತ್ರದಲ್ಲಿ ಹುಲಿಯ ಹಣೆಯು ಒಡೆದುಹೋಯಿತು. ಯುವರಾಜನು ಆ ಕಡೆ ಹಾರುವಷ್ಟರಲ್ಲೇ! ಹುಲಿಯು ಘನಘೋರ ಗರ್ಜನೆಯನ್ನು ಮಾಡುತ್ತಾ ಅವನ ಬಲದ ಭುಜವನ್ನು ಅಪ್ಪಳಿಸಿ ಬಿಟ್ಟಿತು. ರಾಜನ ಸಹಿತ ಅದೂ ಕೆಳಕ್ಕುರುಳಿತು.

ಬಸವ ಕರಿಯರು ಓಡಿಬಂದರು. ಬಸವನು ಯುವರಾಜನನ್ನು ತೊಡೆಯ ಮೇಲೆ ಮಲಗಿಸಿಕೊಂಡನು. ಕರಿಯನು ಕಾಡು ಸೊಪ್ಪನ್ನು ತಂದು ಅರೆದು ರಸವನ್ನು ಕುಡಿಸಿದನು. ಬೇರೆ ಮೂಲಿಕೆಯನ್ನು ರಸತೆಗೆದು ಗಾಯವನ್ನು ಕಟ್ಟಿದನು. ಮೂಗಿಗೇನನ್ನೋ ಹಿಂಡಿದನು.

ಸ್ವಲ್ಪ ಸಮಯದ ನಂತರ ಯುವರಾಜನು ಕಣ್ತೆರೆದನು. ಇದಿರಿಗೆ ಹುಲಿಯು ಸತ್ತು ಮಲಗಿದೆ. ಇಂದಿಗೆ ತನ್ನ ಜನ್ಮ ಸಾರ್ಥಕವಾಯಿತೆಂದು ಅವನು ಬಗೆದ. ಹಲವು ದಿವಸಗಳಾಸೆ ಇಂದಿಗೆ ಫಲಿಸಿತು. ಆದ? ಹುಲಿಯಿಂದ ತನ್ನ ಮರಣವಾದರೂ ಚಿಂತೆಯಿಲ್ಲ.... ಜೇಬಿನಿಂದ ಚಿನ್ನದ ನಾಣ್ಯಗಳನ್ನು ತೆಗೆದ—ಇಬ್ಬರಿಗೂ ಸಂತೋಷದಿಂದ ಕೊಟ್ಟ.

ಆ ಕಾಣಿಕೆಯಿಂದ ಅವರು ತೃಪ್ತರಾದರೇ! ಗಾಯದಿಂದ ನೊಂದಿದ್ದಾನೆ. ಅವನ ಸುಖವೇ ಅವರಿಗೆ ಕಾಣಿಕೆ. ಬಸವನು ಯುವರಾಜನನ್ನು ಬೆನ್ನಿನ ಮೇಲೆ ಹಾಕಿಕೊಂಡನು. ಕರಿಯನು ಮುಂದೆ ಹೊರಟನು.

ಆದರೂ ವಿಷಘಳಿಗೆಯು ಅವರನ್ನು ಬಿಡಲಿಲ್ಲ. ಆಗಲೇ ಸೋತ ಗಂಡಾನೆಯು ಮತ್ತೆ ಕಾಳಗಕ್ಕೆ ಸಜ್ಜಾಗಿ ಬರುತ್ತಿದೆ. ಬಹು ರೋಷದಿಂದಲೂ ವೇಗದಿಂದಲೂ ಬರುತ್ತಿದೆ. ಆತುರದಿಂದ ಬರುತ್ತಿರುವಾಗ ಇವರನ್ನು ಸಂಧಿಸಿಬಿಟ್ಟಿತು. ಈಗ ಬಸವಕರಿಯರು ಯುವರಾಜನನ್ನು ಬಿಟ್ಟು ಓಡುವಂತಿಲ್ಲ. ಬಿಟ್ಟರೆ ಬದುಕುವಂತಿಲ್ಲ. ರಾಜನೂ ಈಗ ತನ್ನ ನೋವನ್ನು ಮರೆತನು. ಇಂದಿನ ಬೇಟೆಯು ಜೀವಕ್ಕೆ ಕಂಟಕಪ್ರಾಯವಾಯಿತು. ಈ ಸಂಘಟನೆಗಳಿಂದ ತಾವು ಮೂವರೂ ಯಮಪಾಲಾಗುವುದೇ ನಿಜವೆಂದು ನೆನವಾಯಿತು. ಹಾಗಾದ ಮೇಲೆ ಏನಾದರೇನು? ಇನ್ನು ಹೇಗಾದರೂ ಸತ್ತಹಾಗೆಯೇ. ಆನೆಯು ಬಹು ರೋಷದಿಂದ ಬರುತ್ತಿದೆ. ದಾರಿಯಲ್ಲಿ ತನಗೆ ಅಡ್ಡ ಸಿಗುವ ಗಿಡ ಮರ ಕೊಂಬೆಗಳೊಂದನ್ನೂ ಉಳಿಸುವಂತಿಲ್ಲ. ಕಿತ್ತುಕಿತ್ತು ಬಿಸಾಡುತ್ತಿದೆ. ಇನ್ನು ಇದಿರಿಗೆ ಮನುಷ್ಯರು ಸಿಕ್ಕಿದರೆ? ಕರಿಯನು ಆಪತ್ತನ್ನು ನೆನೆದನು. ಯುವರಾಜನ ಕೈಯಲ್ಲಿದ್ದ ಕೋವಿಯನ್ನು ಸೆಳೆದುಕೊಂಡನು. ಆನೆಯ ಕಣ್ಣಿಗೂ ಹಣೆಗೂ ಗುರಿಯಿಟ್ಟು ಹೊಡೆದೇ ಬಿಟ್ಟನು. ನೋವನ್ನು ತಾಳಲಾರದೆ ಓಡಿತು. ಬಸವನು ಅದರ ಕೈಯಿಂದ ತಪ್ಪಿಸಿಕೊಂಡರೂ ಯುವರಾಜನು ಓಡಲಾರದೆ ಬಿದ್ದುಬಿಟ್ಟನು.

ಸೊಂಡಿಲಿನಿಂದ ಯುವರಾಜನನ್ನು ಆನೆಯು ಎತ್ತಿಕೊಂಡಿತು. ಇನ್ನೇನು ಮಾಡಿಬಿಡುವುದೋ ಎಂದು ಬಸವನು ಬೆದರಿದನು. ಅಷ್ಟರಲ್ಲಿ ಕರಿಯನು ಇದಿರಾದನು ಯುವರಾಜನನ್ನು ಬಿಟ್ಟು ಕರಿಯನನ್ನು ಬೆನ್ನಟ್ಟಿತು. ಈಗ ಯುವರಾಜನಿಗೆ ಎಂದೂ ಇಲ್ಲದ ಶಕ್ತಿಯು ಬಂದಂತೆ ತೋರಿತು. ಅಲ್ಲೇ ಇದ್ದ ಕೋವಿಯನ್ನು ಕೈಗೆತ್ತಿಕೊಂಡು ಕೂತಹಾಗೆಯೇ ಇನ್ನೊಂದು ಗುಂಡನ್ನು ಹಾರಿಸಿದನು ಆನೆಯು ಕೆಳಗುರುಳಿತು.*

---

*ನಡೆದ ಕೆಲವು ಸಂಗತಿಗಳ ಆಧಾರದ ಮೇಲೆ ಈ ಕಥೆಯನ್ನು ಬರೆದಿದೆ—ಲೇ.

ದೇವತೆಗಳ ಮೇಲೆ ಮಾನವನ ಉಪಕಾರ

ಪಶುಗಳಿಗೆ ಬುದ್ಧಿ ಇಲ್ಲ; ಮಾನವನಿಗಿದೆ. ಆದರೆ ಮಾನವನು ಇದ್ದ ಬುದ್ಧಿಯನ್ನು ದೇವನಿಗೆ ಒತ್ತಿ ಹಾಕಿ ಪಶುಗಳಿಂದ ಅಧೋಗತಿಯನ್ನು ಹೊಂದುತ್ತಿದ್ದಾನೆ. ಮಾನವನಿಂದಲೇ ಜನ್ಮವೆತ್ತಿದ ದೇವ ಈವೊತ್ತು ಬಲಾಢ್ಯನಾಗಿ ತನಗೆ ಜನ್ಮಕೊಟ್ಟವನ ತಲೆಯ ಮೇಲೆಯೇ ಮೆಣಸು ಅರೆಯುತ್ತಿದ್ದಾನೆ. ಅಲ್ಲದೆ ಜೀವವಿರುವ ವರೆಗೆ ತನಗೆ ಅಂಕಿತನಾಗಿ, ದಾಸಾನುದಾಸನಾಗಿ ಹೆದರಿ ನಡೆಯುವ ಕಿರ್ತ್ತಿಯನ್ನು ತೀಡಿಸಿದ್ದಾನೆ.

ಅನುವಾದಕರು: ಶ್ರೀ. ಅರ್ಚಕ "ವೆಂಕಟೇಶ", ಹಾವೇರಿ.

★

ದೇವತೆಗಳ ಮೇಲೆ ಮನುಷ್ಯನ ಅಗಣಿತ ಉಪಕಾರವಾಗಿದೆ; ಆದ್ದರಿಂದ ದೇವತೆಗಳು ಮಾನವರಿಗೆ ಋಣಿಯಾಗಿರಲೇಬೇಕು! ಆದರೆ ಹೊಲದ ರಕ್ಷಣೆಗೋಸುಗ ಹಚ್ಚಿದ ಬೇಲಿಯೇ ಹೊಲವನ್ನು ಮೇಯಲಾರಂಭಿಸಿತೆನ್ನುವ ಶಾಸ್ತ್ರದಂತೆ ಮಾನವನಿಂದ ಉಪಕೃತರಾದ ದೇವತೆಗಳು ಕೃತಘ್ನರಾಗಿ ಮಾನವನನ್ನೇ ಪಾದಾಕ್ರಾಂತ ಮಾಡಿಕೊಂಡು ಕಲ್ಪನೆಗೆ ನಿಲುಕದಂಥ ಕತೆಗಳನ್ನು ಇಂದು ಹೇಳುತ್ತಿವೆ.

ಮೂವತ್ತುಮೂರು ಕೋಟಿ ದೇವತೆಗಳೊತ್ತಟ್ಟಿಗಿರಲಿ!! ಬೇರೆ ಬೇರೆ ಜಾತಿಯ ಎಷ್ಟೋ ದೇವತೆಗಳನ್ನು ಮನುಷ್ಯನೇ ನಿರ್ಮಾಣ ಮಾಡಿದ್ದಾನೆ! ಮಾನವೋತ್ಪತ್ತಿಯ ಪೂರ್ವದಲ್ಲಿಯೇ ಉತ್ಪನ್ನವಾದ ಜಡ ಮತ್ತು ಅಚೇತನ ಸೃಷ್ಟಿಗೆ ದೇವನನ್ನು ಸೃಷ್ಟಿಸಲು ಸಾಧ್ಯವಾಗಲಿಲ್ಲ. ಆದರೆ ಮಾನವನೇ ದೇವನಿಗೆ ಜನ್ಮ ಕೊಟ್ಟವನು; ಅವನಿಗೋಸ್ಕರವಾಗಿ ಸ್ವರ್ಗವನ್ನು ಸೃಷ್ಟಿಸಿದನು, ಅಪ್ಸರೆಯರನ್ನು ಉಪಭೋಗಕ್ಕಾಗಿ ನಿರ್ಮಿಸಿದನು, ಅನವರತವೂ ಅಮೃತವನ್ನು ಕುಡಿದು ಸುಖಸಾಗರದಲ್ಲೀಜಲು ಅವಕಾಶ ಕೊಟ್ಟವನು! ತಾನು ಮರ್ತ್ಯನಾಗಿದ್ದರೂ ದೇವನನ್ನು ಅಮರನನ್ನಾಗಿ ಮಾಡಿದನು. ಇಷ್ಟೆಲ್ಲ ಉಪಕಾರವು ಮಾನವನಿಂದಲೇ ದೇವನಿಗಾದದ್ದು! ಭಗವಂತನ ಕೃಪೆ ಇದ್ದರೆ ನರನು ನಾರಾಯಣನಾಗಬಹುದೆನ್ನುತ್ತಾರೆ; ಆದರೆ ಮಾನವನ ಕೃಪೆಯಿಂದ ಕಲ್ಲು, ಮಣ್ಣು, ವೃಕ್ಷ, ಹೆಂಟಿ ಮುಂತಾದ ಜಡವಸ್ತುಗಳೂ, ಆಕಳು, ನಾಯಿ, ಕುದುರೆ, ಇಲಿ, ಮಂಗ ಇತ್ಯಾದಿ ದ್ವಿಪಾದ ಚತುಷ್ಪಾದ ಪಶುಪಕ್ಷಿಗಳೂ ಕೂಡ ದೇವತೆಗಳಾಗಿ ಪರಿಣಮಿಸಿವೆ. ಮಾನವನ ಕರ್ತೃತ್ವ ಶಕ್ತಿ ಎಂತಹದು!

ಮನುಷ್ಯನು ತನಗೆ ಇರಲು ಮುರಕ ಗುಡಿಸಲು ಇಲ್ಲದಾಗಲೂ ದೇವತೆಗಳಿಗಾಗಿ ಎಷ್ಟೋ ಹಣ ವೆಚ್ಚ ಮಾಡಿ ಭವ್ಯದೇವಾಲಯಗಳನ್ನು ಕಟ್ಟಿದ. ತನ್ನ ಹೆಂಡತಿಯ ಕಿವಿಯಲ್ಲಿ ಒಡಕು ಬಂಗಾರದ ಗುಂಡು ಇಲ್ಲದಾಗಲೂ ದೇವನ ದೇಹವನ್ನು ಬೆಳ್ಳಿ-ಬಂಗಾರ-ವಜ್ರ-ವೈಡೂರ್ಯಗಳಿಂದ ಅಲಂಕರಿಸಿದ! ದೇವನ ಆಡಂಬರವನ್ನೂ ಹೆಚ್ಚಿಸಿದ. ಆದರೂ ಕೃತಘ್ನನಾದ ದೇವರು:

> इष्टान् भोगान् हि वो देवा दास्यन्ते यज्ञभाविताः।
> तैर्दत्ता न प्रदायैभ्यो यो भुंक्ते स्तेन एव सः॥

ಎಂದು ನುಡಿಯಲು ಸಿದ್ಧನಾದ.

ಯಾವ ಬುದ್ಧಿಯಿಂದ ಮಾನವನು ಈ ಕೃತ್ಯ... ಜಾತಿಯ ದೇವನನ್ನು ನಿರ್ಮಾಣ ಮಾಡಿದನೋ ... ದೇವನೇ ಇವತ್ತು ಮಾನವನ ಬುದ್ಧಿಯನ್ನು ಕೆಡಿಸಿ... ದ್ದಾನೆ. ಹುಟ್ಟುವಾಗ ತಾಯಿಯ ಹೊಟ್ಟೆಯನ್ನು ... ಹುಟ್ಟುವ ಹುಳದ ಜಾತಿಯೊಂದಿದೆ; ಅದರ ... ಯಂತೆಯೇ ಇದೆ ಈ ನಮ್ಮ ದೇವನ ಜಾತಿ! ... ಜಾತಿಯ ದೇವನನ್ನು ನಿರ್ಮಾಣ ಮಾಡಿದ ಮೇಲೆ ... ಕರ್ತುಮಕರ್ತುಂ ಶಕ್ತಿಯನ್ನು ಅವನ ಅಧೀನಮಾಡಿ... ಬುದ್ಧಿಯನ್ನೇ ಆ ದೇವನಲ್ಲಿ ಮನುಷ್ಯ ಒತ್ತಿ ಇಟ್ಟು...

'ಆಗುವುದೆಲ್ಲವೂ ದೇವರ ಕೃಪೆಯಿಂದಲೇ'! ... ಸೂತ್ರವನ್ನೂ ಮಾನವನು ಪಾಠಮಾಡಿದ. ಆದ್ದರಿಂದ ... ಪ್ರತಿಕಾರ್ಯದಲ್ಲಿ ತನ್ನ ಕಾರ್ಯಸಾಧನೆ ಹೇಗಾಯಿತು ... ಎಂಬ ವಿಚಾರ ಮಾನವನಿಗೆ ತಿಳಿಯದಾಯಿತು. ... ಇದ್ದ ಬುದ್ಧಿಯ ಉಪಯೋಗವನ್ನು ದೇವ ಮನಸಿಗೆ ...

ಹಾಗೆ ಮಾಡಹತ್ತಿ ಮನುಷ್ಯನನ್ನು 'ಥಕಥೈ' ! ಎಂದು ಕುಣಿಸಲಾರಂಭಿಸಿದ.

ಇಷ್ಟು ಬುದ್ಧಿಯ ಒತ್ತಿಯು ದೇವನಿಗೆ ದಕ್ಕಲು, ಐಹಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗದ ಪ್ರತಿಯೊಂದು ಕಾರ್ಯದಲ್ಲಿಯೂ ಮನುಷ್ಯ ಹಿಂದೆ ಬಿದ್ದ. ತನ್ನ ಕಲ್ಪನೆಯಿಂದ ಹುಟ್ಟಿಸಿದಂಥ ಪರಮಾರ್ಥವು ಆನನಿಗೆ ಎಷ್ಟರ ಮಟ್ಟಿಗೆ ಸಾಧಿಸಿತೋ ಇದನ್ನು ತಿಳಿಯುವುದಕ್ಕೆ ಯಾವ ಮಾರ್ಗವೂ ಉಪಲಬ್ಧವಿಲ್ಲದ ಕಾರಣ ಅದರ ಆಳತೆ ಮತ್ತು ಪ್ರತ್ಯಕ್ಷಫಲ ಇವು ತಿಳಿಯದಾದವು. ಯಾರು ತಮ್ಮ ಬುದ್ಧಿಯನ್ನು ದೇವನಲ್ಲಿ ಒತ್ತಿ ಇಡದ ದಿನಾಲು ಯೋಗ್ಯ ಉಪಯೋಗಕ್ಕೆ ಹಚ್ಚಿದ್ದಾರೋ ಅವರೆಲ್ಲರೂ ಇವತ್ತು ಜಗತ್ತಿನಲ್ಲಿ ಮಹಾಪುರುಷರಾಗಿದ್ದಾರೆ.

ಜಗತ್ತಿನಲ್ಲಿ ಮನುಷ್ಯನ ಉತ್ಪತ್ತಿಯಾಗದಿದ್ದರೆ ಈ ದೇವನ ಸ್ಥಿತಿ ಹೇಗಾಗಬಹುದೆಂಬ ವಿಚಾರವನ್ನು ಮಾಡದಿರುವದೇ ವಿಹಿತ ! ಶ್ವಾಸ ಶೂಕರಗಳೂ ಅವನನ್ನು ಲಕ್ಷ್ಯಕ್ಕೆ ತರುವುದಿಲ್ಲ !!!

ಉಪಕಾರಕ್ಕೆ ಅಪಕಾರ ಮಾಡುವುದು ನಿಸರ್ಗ ನಿಯಮ. ಈ ನಿಯಮಕ್ಕೆ ದೇವನಾದರೂ ಹೇಗೆ ಅಪವಾದವಾದಾನು ? ಒತ್ತಿ ಬಿದ್ದಿರುವ ನಮ್ಮ ಬುದ್ಧಿಯನ್ನು ಬಿಡಿಸಿಕೊಳ್ಳಲೇ ಬೇಕು. ಅಂದರೆ ನಮ್ಮ ಉನ್ನತಿ ದೂರವಿಲ್ಲ. ಸ್ವಂತದ ಉದರಂಭರಣಾರ್ಥವಾಗಿ ಮಾನವ ಜಾತಿಯಲ್ಲಿಯ ಒಂದು ಜಾತಿಯು ದೇವನ ಹೆಸರಿನ ದೊಳ್ಳು ಬಡಿದು ತನ್ನ ಯೋಗಕ್ಷೇಮವನ್ನು ಪ್ರಯಾಸವಿಲ್ಲದೆ ನೋಡಿಕೊಂಡು ಜೀವನವನ್ನು ಸುಗಮವಾಗಿ ಸಾಗಿಸಬೇಕೆನ್ನುತ್ತಿದೆ ! ಆ ಜಾತಿಯು ನೀಡಿರುವ ಜಾಲದಲ್ಲಿ ಯಾರೂ ಸಿಕ್ಕಿಕೊಳ್ಳಬೇಕಿಲ್ಲ !!

वृक्ष, पाषाण, मृत्तिका । चित्रलेप, काष्ठ देखा
तेथे देव कैचा मूर्खा ? । भ्रांति पडलि ॥ १ ॥



ಮಾನವನಿಂದಲೆ ಜನ್ಮ ವೆತ್ತಿದ ದೇವ

.......देवांचे मांडले बंड ।
भूतांदेवतांचे थोतांड । एकचि झाले ॥ २ ॥

ಮಹಾರಾಷ್ಟ್ರೀಯರ ಗುರುಗಳಾದ ಶ್ರೀ ಸಮರ್ಥರು ಈ ದೇವತೆಗಳ ಬಂಡು ಮುರಿಯಲು ಈ ಉಪದೇಶವನ್ನು ಮಾಡಿದರು. ಯತ್ನದೇವತೆಯ ಉಪಾಸನೆಯನ್ನು ಪ್ರಾರಂಭಿಸಿದರು ! ಸ್ವರಾಜ್ಯ ಸ್ಥಾಪನೆ ಮಾಡಿದರು !!

ಅನುದಿನವೂ ಸೂರ್ಯನು ಪೂರ್ವದಲ್ಲಿ ಉದಯಿಸುತ್ತಾನೆ. ಇವತ್ತು ವಿಜ್ಞಾನ ಸೂರ್ಯನು ಪಶ್ಚಿಮದ ಕಡೆಗೆ ಉದಯಿಸಿದ ! ಅಜ್ಞಾನಯುಗ ಮುಗಿಯಿತು! ದೇವತೆಗಳಿಗೆ ಈ ವಿಜ್ಞಾನಸೂರ್ಯನ ಪ್ರಕಾಶ ಸಹನವಾಗುವದಿಲ್ಲ. ಅಂತೆಯೇ ದೇವತೆಗಳು ಮನುಷ್ಯನನ್ನು ಅಣಕಿಸಲು ಚೀರುತ್ತಿವೆ. ದೇವತೆಗಳಲ್ಲಿ ಒತ್ತಿ ಬಿದ್ದ ಬುದ್ಧಿಯನ್ನು ಬಿಡಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿ ನಮ್ಮ ಪೂರ್ವಜರು ನಿರ್ಮಿಸಿದ ಈ ನಿರುಪಯೋಗಿ ನಿರುತ್ಸಾಹಕಾರಿ ದೇವತೆಗಳನ್ನೊಮ್ಮೆ ಬುದ್ಧಿವಂತರಾದ ನಾವೆಲ್ಲರೂ ಕೂಡಿ ಅವುಗಳ ಮೊದಲಿನ ಸ್ಥಳಕ್ಕೆ ಇನ್ನೊಮ್ಮೆ ಇಲ್ಲಿಗೆ ಬರದಂತೆ ಮಾಡಿ ಓಡಿಸೋಣ ! ಅಂದರೆ ಆ ದೇವತೆಗಳಿಗೆ ತಿಳಿಯುವುದು — ಈಗಿನ ಮನ್ವಂತರ ಬದಲಾಗಿದೆ ಎಂಬುದು ! ಮತ್ತು ನಮ್ಮ ಬುದ್ಧಿ ನಮ್ಮ ಸ್ವಾಧೀನವಾಗಲು ಅದರ ಯೋಗ್ಯ ಉಪಯೋಗದಿಂದಲೂ ವಿಜ್ಞಾನಸೂರ್ಯನ ಪ್ರಕಾಶದಿಂದಲೂ ನಮ್ಮ ಉತ್ಕರ್ಷಗಾಗಿ ಹೆಣಗಾಡಲಿಕ್ಕೆ ಸುಸೂತ್ರವಾದರೂ ಆಗುವುದು !!

(ಮನೋಹರದಿಂದ)

[ಹಾವೇರಿಯ 'ಕಳೆಯುರ ಕೂಟ'ದ 'ನನ್ನ ನುಡಿ'ಯೆಂಬ ಕೈಬರೆಹದ ಮಾಸಪತ್ರಿಕೆಯಿಂದ]

ಆರೋಗ್ಯಬಿಂದು

ಔಷಧಕ್ಕಿಂತ ವಿಶ್ರಾಂತಿ ಮಿಗಿಲು

ನಮ್ಮ ದೇಹಮನಸ್ಸುಗಳ ಬಹುತರ ಬೇನೆಗಳಿಗೆಲ್ಲ ಅತ್ಯಾಯಾಸವೇ ಕಾರಣವಾಗಿರುತ್ತದೆ. ಬಹಳ ಓದಿದರೆ; ಮಂದಪ್ರಕಾಶದಲ್ಲಿ ಓದಲೆತ್ನಿಸಿದರೆ ಕಂಣುಗಳಿಗೆ ಆಯಾಸವಾಗುವದು. ಅಕಾಲದಲ್ಲಿ ಅಮಿತವಾದ ಆಹಾರ ಸೇವಿಸಿದರೆ ಪಾಚಕಾಂಗಗಳಿಗೆ ಆಯಾಸವಾಗುವದು. ಅತಿಯಾಗಿ, ಅಕ್ರಮವಾಗಿ ವಿಚಾರಮಾಡಿದರೆ ಮಿದುಳಿಗೆ ಆಯಾಸವಾಗುವುದು. ಅಸ್ತವ್ಯಸ್ತವಾಗಿ ಮಿತಿಮೀರಿ ದುಡಿದರೆ ಸ್ನಾಯುಗಳಿಗೆ ಆಯಾಸವಾಗುವದು. ಯಾವದೊಂದು ಅಂಗಕ್ಕೆ ಅತಿ ಆಯಾಸವಾದರೆ ಅದು ಕಸುವುಗುಂದುವದು. ಕಸುವುಗೇಡಿಯಾದ ಅಂಗವನ್ನೇ ಬೇನೆಗಳು ಮುತ್ತುವವು. ದೇಹಾಂಗಗಳನ್ನು ಬಲಗೊಳಿಸುವುದೆ ಉತ್ತಮವಾದ ರೋಗನಿರೋಧಕ ಉಪಾಯವಾಗಿದೆ. ಅಂಗಗಳ ಬಲಗೊಳ್ಳುವಿಕೆಗೆ ವಿಶ್ರಾಂತಿಯೆ ಹೆದ್ದಾರಿ. ವಿಶ್ರಾಂತಿಯಿಂದ, ಸವೆದು ಹೋದ ದೇಹಧಾತುಗಳ ಪುನರುಜ್ಜೀವನಕ್ಕೆ ಸಾಕಷ್ಟು ಅವಕಾಶ ಸಿಗುವದು. ವಿಶ್ರಾಂತಿಯೆಂದರೆ ನಿತ್ಯದ ಉದ್ಯೋಗವನ್ನು ಬಿಟ್ಟು, ಬೇರೆ ಆಟಪಾಟಗಳಲ್ಲಿ ಮಗ್ನವಾಗುವದಲ್ಲ. ದೇಹಮನಸ್ಸುಗಳಿಗೆ ಪೂರ್ಣ ವಿಶ್ರಾಂತಿ ಸಿಗಬೇಕಾದರೆ ಕಂಣು, ಕಿವಿಗಳಿಗೂ ವಿಶ್ರಾಂತಿಯನ್ನು ಕೊಡಬೇಕು. ಹಾಗಾಗ ಬೇಕಾದರೆ ಶಾಂತವಾದ ಏಕಾಂತದಲ್ಲಿ ಕೆಲವುದಿನವಿರುವುದು ಅಗತ್ಯವಿದೆ. ಮನಸ್ಸಿಗೆ ಯಾವ ವಿಧದ ಯೋಚನೆಯೂ ಸರ್ವಥಾ ಇರಕೂಡದು. ಪಂಡಿತ ಮದನಮೋಹನ ಮಾಲವೀಯರಿಗೆ ಕಾಯಕಲ್ಪ ಚಿಕಿತ್ಸೆಯಿಂದ ಸಿಕ್ಕ ಪ್ರಯೋಜನಕ್ಕೆ ಅವರು ಅಷ್ಟುದಿನ ಪೂರ್ಣವಾಗಿ ಪಡೆದ ವಿಶ್ರಾಂತಿಯೇ ಕಾರಣವೆಂದು ತಜ್ಞರ ಮತವಾಗಿದೆ. ಔಷಧಕ್ಕಿಂತ ವಿಶ್ರಾಂತಿಯೆ ಮೇಲಾದ 'ಟಾನಿಕ್' ಆಗಿದೆ.

* * *

ಮಜ್ಜಿಗೆಯ ಉಪಯೋಗ

ಕರುಳಿನಲ್ಲಿ ಅನೇಕ ವಿಧದ ಅತಿಸೂಕ್ಷ್ಮ ಜಂತುಗಳಿರುತ್ತವೆ. ಅವುಗಳಲ್ಲಿ ಬಹುವಾಗಿ ಆಹಾರ. ಶೋಷಣಕ್ಕೂ, ರೋಗ ಜಂತುಗಳ ನಾಶನಕ್ಕೂ ಸಹಾಯಕವಾಗಿವೆ. ಆ ಜಂತುಗಳು ಬಲಿಷ್ಠವಾಗಿರುವವರೆಗೆ, ರೋಗಜಂತುಗಳು ರಕ್ತಪ್ರವೇಶಮಾಡುವ ಪೂರ್ವದಲ್ಲಿಯೆ ಅವುಗಳನ್ನು ನಾ[illegible] ಗೊಳಿಸಿ ಬಿಡುತ್ತವೆ. ಅವಕ್ಕೆ 'ಅಂತ್ರಜಂತು'ಗಳೆನ್ನುತ್ತಾ[illegible] ಆದುದರಿಂದ ಅಂತ್ರಜಂತುಗಳನ್ನು ಹೆಚ್ಚಿಸುವ ಆಹಾರಗಳು ಆರೋಗ್ಯದಾಯಕವಾಗಿವೆ. ಮಜ್ಜಿಗೆಯಿಂದ ಅಂತ್ರ ಜಂತುಗಳು ಸಮೃದ್ಧವಾಗಿ ಹುಟ್ಟುವವಾದುದರಿಂದ ಅದು ಒಳ್ಳೆ ರೋಗನಿರೋಧಕ ಪೇಯವೆಂದು [illegible] ಜಪಾನಿ ವಿಜ್ಞಾನಿಯು ಹೇಳುತ್ತಾನೆ. ಆಮಶಾಂಚವು ಒಂದು ವಿಧದ ಸೂಕ್ಷ್ಮ ಜಂತುವಿನಿಂದ ಹುಟ್ಟುತ್ತದೆ. ಅಂತ್ರ ಜಂತುಗಳು ಸಾಕಷ್ಟು ಕಸುವುಳ್ಳವಾಗಿದ್ದರೆ ಆಮಶಾಂಚದ ಜಂತುಗಳು ಬದುಕಲಾರವು. ಆದುದರಿಂದ ದಿನಾಲು ಬೇಕಾದಷ್ಟು ಮಜ್ಜಿಗೆಯನ್ನು ಉಪಯೋಗಿಸುವವರಿಗೆ ಆಮಶಾಂಚ ರೋಗವು ಬರುವದಿಲ್ಲ. ಅಲ್ಲದೆ ಮಜ್ಜಿಗೆಯಲ್ಲಿ ನ[illegible] ಪೋಷಕವಾದ 'ರಂಜಕ' ವಿರುವದರಿಂದ ದಣಿದ ನರಗಳಿಗೆ ಮಜ್ಜಿಗೆಯು ಒಳ್ಳೆ ಪುಷ್ಟಿದಾಯಕವಾಗಿದೆ.

* * *

ವಾಹನಗಳ ದುಷ್ಪರಿಣಾಮ

ಅಸಂಖ್ಯ ಪ್ರಕಾರದ ವಾಹನಗಳು ಈಗ ಜಗತ್ತಿನಲ್ಲಿ ಕಂಡುಬರುತ್ತಿವೆ. ವೇಗದಲ್ಲಿ ಒಂದನ್ನೊಂದು ಹಿಂದೆ ಹಾಕಲು ಯತ್ನಿಸುತ್ತಿವೆ. ಆದರೆ ಅವುಗಳಿಂದ ಮನುಷ್ಯನ ಆರೋಗ್ಯ ಸುಖಗಳ ಮೇಲಾಗುವ ಪರಿಣಾಮವನ್ನು ಯೋಚಿಸುವವರು ಕಡಿಮೆ. ವಾಹನಗಳು ಹೆಚ್ಚಿದಂತೆ ಮನುಷ್ಯನ ಕಾಲಿನ ಕಸುವು ಕಡಿಮೆಯಾದುದಂತೂ ತಿಳಿದ ವಿಷಯ. ವಾಹನಗಳ ಅಡಿಗೆ ಬಿದ್ದು ಸಾಯುವುದಂತೂ ದಿನ[illegible] ಕತೆಯಾಗಿದೆ. ಅವುಗಳ ಗಲಾಟೆಯಿಂದ ಮನುಷ್ಯನ ನರಮಂಡಲವೆಲ್ಲ ನುಗ್ಗಾಗುತ್ತಿರುವುದು. ಇವುಗಳ[illegible] ಇನ್ನೊಂದು ಅತಿ ದಾರುಣವಾದ ದುಷ್ಪರಿಣಾಮವೆಂದರೆ ಮಾನಸಿಕ ಚಾಂಚಲ್ಯ. ತೀವ್ರವಾದ ವಾಹನಗಳಲ್ಲಿ ಪ್ರಯಾಣ ಮಾಡುವಾಗ ಪ್ರಕೃತಿಯ ದೃಶ್ಯಗಳು [illegible] ವಾಗಿ ಕಂಣಮುಂದಿನಿಂದ ದಾಟ ಹೋಗುವವು. ಆ[illegible] ಯೊಂದು ದೃಶ್ಯದ ಜ್ಞಾನಕ್ಕಾಗಿ ಪಂಚೇಂದ್ರಿಯವು [illegible] ವಾಗುವಷ್ಟರಲ್ಲಿ ಹೊಸ ಹೊಸ ದೃಶ್ಯಗಳು ಬಂದು [illegible] ಬಿಡುವವು. ಇದರಿಂದ ಮನುಷ್ಯನು ಏಕಾಗ್ರ ಶಕ್ತಿಯನ್ನು ಕಳೆದುಕೊಳ್ಳುವನು. ಈಗ ಜಗತ್ತಿನಲ್ಲಿ ಕಂಡು[illegible] ಜಗಳ ಜಂಜಾಲಗಳಿಗೆ ಮನಶ್ಚಾಂಚಲ್ಯವೇ ಕಾರಣವಾ[illegible] ಆದುದರಿಂದ ಅನಾವಶ್ಯಕವಾಗಿ ವಾಹನಗಳಲ್ಲಿ ಪ್ರ[illegible] ಮಾಡಬಾರದು.

* * *

ಹೆಂಣು ಮಂಣೇ?

(ತಂಗಿಯರಿಗೆ ಒಂದು ಪತ್ರ)

★

ಶ್ರೀಮಾನ್ 'ತಾರಾದಾಸ'ರು ತಮ್ಮ ವೈಜ್ಞಾನಿಕ ಮತ್ತು ರಂಜಕ ಲೇಖನಗಳಿಂದ ಈಗಾಗಲೆ ಜ.ಕ.ದ ವಾಚಕರಿಗೆ ಚೆನ್ನಾಗಿ ಪರಿಚಿತರಾಗಿದ್ದಾರೆ. ಅವರು ಸ್ತ್ರೀಸ್ವಾತಂತ್ರ್ಯ ಪಕ್ಷಪಾತಿಗಳು. ಹಲಕೆಲವು ಸ್ತ್ರೀಸಂಸ್ಥೆಗಳಲ್ಲಿ ಅವರು ಸಾಕಷ್ಟು ಸಮಯ ಶಿಕ್ಷಕರಾಗಿದ್ದು ಸ್ತ್ರೀಯರ ಸ್ವಭಾವ ಪರಿಚಯವನ್ನು ಚನ್ನಾಗಿ ಮಾಡಿಕೊಂಡಿದ್ದಾರೆ. ಅವರು ಜ.ಕ.ದ ವಾಚಕವೃಂದದ ಅಕ್ಕ ತಂಗಿಯರ ಶಿಕ್ಷಣ ಪ್ರಗತಿಗಳಿಗಾಗಿ ಒಂದು ಲೇಖನಮಾಲೆಯನ್ನು ಕೊಡುವ ವಚನ ಕೊಟ್ಟದ್ದಾರೆ. ಇದು ಮೊದಲನೆಯ ಲೇಖನ. ವಾಚಕ ಭಗಿನಿಯರು ಇದನ್ನು ಓದಿ ತಮ್ಮ ಅಭಿಪ್ರಾಯವನ್ನು ಜ. ಕ. ಕಾರ್ಯಾಲಯಕ್ಕೆ ತಿಳಿಸಿದರೆ ಮುಂದಿನ ಲೇಖನಗಳನ್ನು ಅಣಿಗೊಳಿಸಲಿಕ್ಕೆ ಅನುವಾಗುವದು. ವೈಜ್ಞಾನಿಕವಾದರೂ ರುಚಿಸುವ ರೀತಿಯಲ್ಲಿ ಸ್ತ್ರೀಯರ ಬಾಲ್ಯ ಮೊದಲುಗೊಂಡು ವೃದ್ಧಾವಸ್ಥೆಯ ವರೆಗಿನ ಜೀವನವಿಕಾಸದ ವಿವೇಚನೆಯು ಈ ಲೇಖನಮಾಲೆಯ ಗುರಿಯಾಗಿದೆ. ಸಂ.

★

ತಂಗೀ

ನೀನು ಎಷ್ಟೋ ಸಲ ಮನಸ್ಸಿನಲ್ಲಿ ಅಂದುಕೊಂಡಿರಬಹುದು: 'ಅಯ್ಯೋ ನಾನು ಹೆಣ್ಣಾಗಿ ಏಕೆ ಹುಟ್ಟಿದೆ?' ಎಂದು. ಮತ್ತು 'ನಾರಿಯೆಂದರೆ ಮಹಾಮಾರಿ' ಎಂದು ನಾಲ್ಕು ನಿಟ್ಟಿನಿಂದ ಹೊರಡುವ ಹಾಡಿಗೆ ನೀನೂ ಎಷ್ಟೋ ಸಲ ಧ್ವನಿಗೂಡಿಸಿರಬಹುದು. ಅಹಹ! ಕಾವ್ಯ, ಪುರಾಣ, ಶಾಸ್ತ್ರ, ನೀತಿ, ಕಾಯದೆಗಳಲ್ಲಿ ಎಲ್ಲೆಲ್ಲೂ ಆಗುತ್ತಿರುವ ಹೆಣ್ತನದ ಮಾನಭಂಗವನ್ನು ಕಂಣಾರೆ ಕಂಡು, ಕಿವಿಯಾರೆ ಕೇಳಿ, ಮನವಾರೆ ನೀನೇ ಎಷ್ಟೋ ಸಲ ತಲೆದೂಗಿರಬಹುದು. ಹೆಂಣಾಗಿ ಹುಟ್ಟಿರುವೆ. ನಿನ್ನ ಹೃದಯವು ಹೆಂಣು. ನಿನ್ನ ಮಿದುಳು ಹೆಂಣು. ನಿನ್ನ ನಡೆ ಹೆಂಣಿನದು. ನಿನ್ನ ನುಡಿ ಹೆಂಣಿನದು. ಸಾಯುವವರೆಗೆ ಹೆಣ್ತನವು ನಿನ್ನ ಕುತ್ತಿಗೆಗೆ ಕಟ್ಟಿದ್ದು. ಹೆಣ್ತನವು ನಿನಗೆ ಸೇರದಿದ್ದರೂ, ಅದನ್ನು ನೀನು ಮೀರಲಾರೆಯೆಂಬದನ್ನು ಒಂದು ಸಲವಾದರೂ ಯೋಚಿಸಿರುವೆಯಾ? ಹೆಣ್ತನವು 'ಸುಟ್ಟರೂ ಹೋಗದ', ನಿನ್ನ "ಹುಟ್ಟುಗುಣ"; ನಿನ್ನ ಪ್ರಕೃತಿ.

ತಂಗೀ

'ಪ್ರಕೃತಿ' ಎಂದರೇನು ಬಲ್ಲೆಯಾ? ಸುಡುವದು ಬೆಂಕಿಯ ಪ್ರಕೃತಿ. ಭಾರವಾದ ಪದಾರ್ಥಗಳಿಗೆ ನೀರಲ್ಲಿ ಮುಳುಗುವದೇ ಪ್ರಕೃತಿ. ಗಾಳಿಯಿಲ್ಲದಿದ್ದರೆ ಸಾಯುವದು ಪ್ರಾಣಿಗಳ ಪ್ರಕೃತಿ. ಕೇಳುವದು ಕಿವಿಯ ಪ್ರಕೃತಿ. ಕಾಣುವದು ಕಂಣಿನ ಪ್ರಕೃತಿ. ಬೆಂಕಿಯು ತಂಪೆನಿಸದು. ನೀರು ಉರಿ ಹಚ್ಚದು. ಕಿವಿಯು ನೋಡಲಾರದು. ಕಂಣ ಕೇಳಲಾರದು. ಇದರರ್ಥವೇನು? ವಿವಿಧ ವಸ್ತು ಪ್ರಾಣಿಗಳ ವಿಶಿಷ್ಟ ಗುಣ ಶಕ್ತಿಗಳೇ "ಪ್ರಕೃತಿ" ಎಂದು ಇದರರ್ಥವಲ್ಲವೇ. ಪ್ರಕೃತಿಯನ್ನು ಬದಲಿಸುವದೆಂದರೆ ವಿಕೃತಿಯನ್ನು ಹುಟ್ಟಿಸುವದೇ ಸರಿ. ಜಗತ್ತಿನ ಅತಿ ದೊಡ್ಡ ವಿವೇಕಿಗಳು, ವಿಚಾರಿಗಳು ಮತ್ತು ವಿಜ್ಞಾನಿಗಳು ಪ್ರಕೃತಿ ದೇವಿಯೆದುರಿಗೆ ದೀರ್ಘದಂಡ ನಮಸ್ಕಾರ ಹಾಕಿದ್ದಾರೆ. ವಿಜ್ಞಾನಿಗಳ ಸಂಶೋಧನಗಳೂ, ಸತತ ಯತ್ನಗಳೂ ಪ್ರಕೃತಿದೇವಿಯ ನಿಯಮಗಳನ್ನು ತಿಳಿದುಕೊಳ್ಳಲಿಕ್ಕೆ; ಅವುಗಳನ್ನು ತಪ್ಪದಂತೆ ತಮ್ಮ ಬಾಳನ್ನು ಸರಿಗೊಳಿಸಲಿಕ್ಕೆ; ಹುರಿಗೊಳಿಸಲಿಕ್ಕೆ. 'ಬೆಂಕಿಯು ಸುಡುವದು' ಎಂದು ಗೊತ್ತಾದ ಮೇಲೆ ಅದರಿಂದ ತನ್ನನ್ನೇ ರಕ್ಷಿಸಿಕೊಳ್ಳಲು ಯತ್ನಿಸುತ್ತಾನೆ ಮನುಷ್ಯ. 'ಮಳೆಯು ತೊಯಿಸುವದು' ಎಂದು ಗೊತ್ತಾದ ಮೇಲೆ ಅದರಿಂದ ದೂರ ಇರಲು ಕೊಡೆ ಹಿಡಿಯುತ್ತಾನೆ. ಆದರೆ ಮಳೆಯ 'ತೊಯಿಸುವ ಗುಣ'ವನ್ನೂ ಬೆಂಕಿಯ 'ಸುಡುವ ಗುಣ'ವನ್ನೂ ಕಳೆಯಲು ಮನುಷ್ಯನು ಯತ್ನಿಸುವದಿಲ್ಲ.

ತಂಗೀ

ಮೇಲಿನ ವಿವರಣೆಯಿಂದ ಏನು ಹೊಳೆಯುವದು? ಪ್ರಕೃತಿಯನ್ನು ಬದಲಿಸುವದು ಅಸಾಧ್ಯ. ಅಸಾಧ್ಯವಾದ

ದ್ದನ್ನು ಸಾಧಿಸಲು ಯತ್ನಿಸುವದು ಹುಚ್ಚುತನ. ಹಗಲು, ರಾತ್ರಿಗಳನ್ನು ನಮ್ಮ ಇಚ್ಛೆಗೆ ಬಂದಂತೆ ಬದಲಿಸುವದು ಸಾಧ್ಯವಿಲ್ಲ; ಆದರೆ ಹಗಲು, ರಾತ್ರಿಗಳ ನಿಯಮುಗಳನ್ನು ತಿಳಿದು, ನಮ್ಮ ಕೆಲಸಗಳನ್ನು ವ್ಯವಸ್ಥೆಗೊಳಿಸಬಹುದು. ಮಳೆ ಬಿಸಿಲುಗಳು ನಮ್ಮ ಅಧೀನದಲ್ಲಿಲ್ಲ; ಆದರೆ ಮಳೆ ಬಿಸಿಲುಗಳ ಒಲವು ಸಮಯಗಳನ್ನರಿತು, ಉತ್ತುವದು ಬಿತ್ತುವದು ನಮ್ಮ ಅಧೀನದಲ್ಲಿದೆ. ಹೆಣ್ತನ-ಗಂಡ್ತನಗಳು ನಮ್ಮ ಅಳವು ಮೀರಿವೆ; ಆದರೆ ಹೆಣ್ತನ-ಗಂಡ್ತನಗಳ ತತ್ವಗಳನ್ನು ಶೋಧಿಸಿ ಅವುಗಳ ಸಹಾಯದಿಂದಲೇ, ಸಮಾಯೋಗದಿಂದಲೇ ಜೀವನವನ್ನು ಸಾರ್ಥಕಗೊಳಿಸುವದು ನಮ್ಮ ಅಳವಿನಲ್ಲಿದೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ, ಸಾಗದುದಕ್ಕಾಗಿ ರೇಗುವದಕ್ಕಿಂತ, ಇಲ್ಲದುದಕ್ಕಾಗಿ ತಲ್ಲಣಿಸುವದಕ್ಕಿಂತ, ಇದ್ದುದರಲ್ಲೇ ತಿದ್ದಿಕೊಂಡು ಮುಪ್ಪಾಗಿರುವದರಲ್ಲೇ ಸುಖವಿದೆ; ಶಾಂತಿಯಿದೆ. ಜಗತ್ತಿನ ಅತಿ ಶ್ರೇಷ್ಠ ಮುನಿಮಹನೀಯರು ಮಾಡಿದುದೂ ಇದನ್ನೇ; ಯೋಗಿಗಳು, ರಾಜಭೋಗಿಗಳು ಮಾಡಿದುದೂ ಇದನ್ನೇ. ಅವರೆಲ್ಲರೂ ಏಕಕಂಠದಿಂದ ಸಾರಿದ್ದಾರೆ "ಪ್ರಕೃತಿಯ ಕಟ್ಟಳೆಯ ಕೋಟೆಗಳನ್ನು ಭೇದಿಸುವದು ಯಾರಿಂದಲೂ ಸಾಧ್ಯವಿಲ್ಲ" ಎಂದು. ಈಗಿನ ವಿಜ್ಞಾನಿಗಳೂ ಚೀರುತ್ತಿದ್ದಾರೆ "ಪ್ರಕೃತಿಸಾಗರದ ದಂಡೆಗಳನ್ನು ಯಾರೂ ಕಂಡವರಿಲ್ಲ" ಎಂದು.

ಹಾಗಾದರೆ ತಂಗೀ

ನಿನ್ನ ಹೆಣ್ತನಕ್ಕಾಗಿ ನೀನು ಯಾರನ್ನು ಶಪಿಸುವೆ? ಯಾರ ಮೇಲೆ ಕೋಪಿಸುವೆ? ಎಷ್ಟು ಯುಗಗಳಿಂದು ತಪಿಸುವೆ? ತಮ್ಮ ರಟ್ಟೆಯ ಕಸುವಿನಿಂದ ನಡುಗಿಸಿ, ತಮ್ಮ ಸೇವಾಯೋಗದಿಂದ ಎದೆ ಕರಗಿಸಿ, ತಮ್ಮ ಬುದ್ಧಿಯ ಮಿಂಚಿನಿಂದ ವಿಶ್ವವನ್ನು ಬೆರಗಿಸಿದ ಮಹಾತ್ಮರಿಗೂ ಇಲ್ಲದ ಧೈರ್ಯ ನಿನಗೆಲ್ಲಿಂದ ಬಂತು? ಹತ್ತಿಯಿಂದ ವಸ್ತ್ರ ಮಾಡಿ ಕುಪ್ಪಸ ಹೊಲಿಯುವದನ್ನು ಕಲಿಯಲು, ಜಗತ್ತು ಎಷ್ಟು ಸಾವಿರ ವರ್ಷ ಯತ್ನಿಸಬೇಕಾಯಿತು ಗೊತ್ತಿದೆಯೇ? ಇಷ್ಟಾದರೂ ತಂಗಾಳಿಯಲ್ಲಿ ಹಳದಿ ಹೂಗಳಿಂದ ಕೂಡಿ ಹೆಮ್ಮೆಯಿಂದ ಬಳಕುವ ಹತ್ತೀಗಿಡದ ಸಹಸ್ರ ... ಚೈತನ್ಯಗಳು, ಗೆರೆ ಕೊರೆದು ಕತ್ತರಿಸಿ ... ನಿರ್ಜೀವಗೊಳಿಸಿದ ಕುಪ್ಪಸದಲ್ಲಿ ಕಂಡುಬರುವ... ಹೀಗಿದ್ದು ನೀನು ಹೆಂಣಾಗಿರುವವಳು ಗಂಡಾಗಲು ... ಲಕ್ಷ ವರ್ಷ ಹೆಣಗುವೆ?

ಸಾಕು! ಸಾಕು ಮಾಡು!!— ನಿನ್ನ ಈ ಹುಚ್ಚು... ನಿನ್ನ ಸುತ್ತು ಮುತ್ತು ನೋಡಿಕೋ. ಜಗತ್ತಿನ ಎಲ್ಲ... ಗಳೂ ತಮ್ಮ ಜನ್ಮಕ್ಕಾಗಿ ಗರ್ವಪಡುತ್ತಿವೆ. ಗಂಡ... ತನ್ನ ಸೌಭಾಗ್ಯ ಶ್ರೇಯಸ್ಸು ಶಕ್ತಿಗಳ ನಗಾರಿಯನ್ನು... ಧರ್ಮ, ಶಾಸ್ತ್ರ, ಕಾವ್ಯಗಳೆಲ್ಲದರಲ್ಲೂ ಪ್ರಕೃತಿಯ... ಚಿಕ್ಕುಪಂತೆ ಹೊಡೆದುಕೊಂಡಿದ್ದಾನೆ. ಹೀಗೆ... ಸಾಮ್ರಾಜ್ಯದಲ್ಲಿ ಎಲ್ಲರೂ ತಮ್ಮ ತಮ್ಮ ಸ್ವಭಾವ... ಮಹಾತ್ಮ್ಯಗಳ ತುತೂರಿ ಬಾರಿಸುತ್ತಿರಲು, ನೀನು... ತನ್ನ ಹುಟ್ಟನ್ನೇ ಹಳಿದುಕೊಂಡು ಮುಳು ಮುಳು... ವದರಿಂದ ಯಾರ ಎದೆ ಕರಗೀತವ್ವ!

ಹಾಗಲ್ಲ ತಂಗೀ, ಏಳು! ಎದೆ ಗಟ್ಟಿಮಾಡು... ನವು ನಿನ್ನ ತಪ್ಪಲ್ಲ; ಅದು ನಿನ್ನ ಜೀವನದ... ಪ್ರಕೃತಿದೇವಿಯು ನಿನ್ನನ್ನು ಹೆಂಣಾಗಿಸಿದ್ದಕ್ಕಾಗಿ... ಪಡು. "ಹೆಂಣಿಲ್ಲದಿದ್ದರೆ ವಿಶ್ವವೆಲ್ಲ ಮಂಣುಗೂಡು... ನಿಶ್ಚಯ"ವೆಂದು ಗರ್ವದಿಂದ ಹಾಡಿಕೋ. ... ಗುಣಗಳನ್ನು ತಿಳಿದು. ಅವುಗಳನ್ನು ಹೆಂಣಾಗಿ... ಬಾಳನ್ನು ಸಾರ್ಥಕಗೊಳಿಸು. ಮುಂದೆ ಜನ್ಮ... ದಲ್ಲಿಯೂ, "ನನಗೆ ಹೆಂಣು ಜನ್ಮವನ್ನೇ ಕೊಟ್ಟು... ಸೇವೆಯನ್ನು ಮಾಡಿಸು ದೇವೀ" ಎಂದು ಹೃತ್ಪೂ... 'ಪ್ರಕೃತಿ'ಯನ್ನು ಬೇಡಿಕೋ. ಹೆಣ್ತನದ ಮಹ... ಮುಂದೆ ಎಂದಾದರೂ ಬರೆದು ತಿಳಿಸುವೆನು. ... ಪತ್ರವನ್ನು ಹಲವು ಸಲ ಓದಿ, ನಿನ್ನ ಅಕ್ಕತಂಗಿ... ಓದಿ ತೋರಿಸಿ ಅವರ ಕಂಣೀರು ಒರಸು.

ನಿನ್ನ ಪ್ರೀತಿ...
ಶಾಂ...

ದಿ ಬಾಂಬೆ ಲೈಫ್ ಅಶ್ಯೂರನ್ಸ ಕಂಪನಿ, ಲಿ.

(ಸ್ಥಾಪನೆ : ೧೯೧೦)

ಕಚೇರಿಗಳು :

೧. ರಥಬೀದಿ, ಮಂಗಳೂರು
೨. ಪುತಿಯಾರಾ, ಕಾಲಿಕತ್ತ
೩. ಪೋ.ಬಾ. ೩೩೭, ಮೌಂಟ್‌ರೋಡ, ಮದ್ರಾಸ (ಫೋನ್ ನಂ. ೮೨೪೫)
೪. ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ (ಫೋನ್ ನಂ. ೨೧೮೨)
೫. ಗೌತಮನಿವಾಸ, ಚರ್ನಿರೋಡ, ಗಿರಗಾಂವ, ಮುಂಬಯಿ (ಫೋನ್ ನಂ. ೨೬೩೧೪)

ಮೇಲ್ವಿಚಾರಕ ಕಚೇರಿಗಳು:

೬. ಒಟ್ಟಾಪಲಂ, ದಕ್ಷಿಣಮಲಬಾರ
೭. ಸೆಂಟ್ರಲ್ ಸ್ಟೇಶನ್‌ರೋಡ್, ತ್ರಿವೆಂಡ್ರಮ್

ಮದ್ರಾಸ ಶಾಖಾ ಕಾರ್ಯದರ್ಶಿಗಳು :

ಕೊಚ್ಚೀಕರ ಬ್ರದರ್ಸ ಲಿಮಿಟೆಡ್,

(ಈ ಸಂಸ್ಥೆಯು ಕೊಚ್ಚೀಕರ ಬ್ರದರ್ಸರನ್ನು ಒಳಗೊಂಡಿದೆ)

ರಜಿಸ್ಟರ್ಡ ಕಚೇರಿ: ಉಡುಪಿ

ವಿಮಾಕ್ಷೇತ್ರದಲ್ಲಿಯ ಅತಿ ನೂತನ ಮತ್ತು ಅತ್ಯಾಧುನಿಕ ಸೌಕರ್ಯಗಳನ್ನೊದಗಿಸುವ ಆದರ್ಶ ಜೀವವಿಮಾ ಸಂಸ್ಥೆ.


ಪ್ರಗತಿಯೆ ಜನಪ್ರಿಯತೆಯ ಪ್ರತೀಕ

೧೯೩೨ ರಲ್ಲಿಯ ಹೊಸ ಉದ್ಯಮ	ರೂ. ೧,೪೦,೦೪,೭೩೫
ಪ್ರಿಮಿಯಂ ಉತ್ಪನ್ನ	ರೂ. ೩೦,೦೦,೦೦೦ ಕ್ಕಿಂತ ಹೆಚ್ಚು
ಒಟ್ಟು ಆಸ್ತಿ	ರೂ. ೧,೦೦,೦೦,೦೦೦ ಕ್ಕಿಂತ ಹೆಚ್ಚು
ಒಟ್ಟು ಕ್ಲೇಮುಗಳನ್ನು ಕೊಟ್ಟದ್ದು	ರೂ. ೫೦,೦೦,೦೦೦ ಕ್ಕಿಂತ ಹೆಚ್ಚು

ಪ್ರಾಮಾಣಿಕರೂ ವರ್ಚಸ್ವಿಗಳೂ ಆದ ಸ್ತ್ರೀಪುರುಷರಿಂದ ಏಜನ್ಸಿಗಳಿಗಾಗಿ ಅರ್ಜಿಗಳನ್ನು ಅಪೇಕ್ಷಿಸುತ್ತೇವೆ. ಧಾರಾಳ ಪ್ರತಿಫಲ ದೊರೆಯುವುದು.

ಹೆಚ್ಚಿನ ವಿವರಗಳಿಗಾಗಿ ಬರೆಯಿರಿ:

KOCHIKAR BROTHERS Ltd.,
Bombay Life Building, Central Office: UDIPI



ಚಿಕ್ಕ ಡಾಕ್ಟರ್ ....ಸ್ವದೇಶಿ ವಸ್ತು

ವೇಪ್ರಿನ್

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರುಹುಣ್ಣು ಮೂಲವ್ಯಾಧಿ, ಮೆಟ್ಟಿನ ಘಾಯ, ಮುದ್ಧಣ (Pimples), ಸುಟ್ಟಘಾಯ, ಕತ್ತಿ ಘಾಯ, ತೊಡವಾಳ, ಗಜಕರ್ಣ ಮಾಯುವಾಗುವುವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲ ಇದ್ದರೆ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ಬಹು ಸುಲಭ.

¼ ಔನ್ಸ್ ಬಾಟ್ಲು ೧ಕ್ಕೆ ೪ ಆ. ½ ಔನ್ಸಗೆ ೮ ಆಣೆ.

ದೊರೆಯುವ ಸ್ಥಳಗಳು :

ಲಸ್ಟರ್ ಮ್ಯಾನ್ಯುಫ್ಯಾಕ್ಚರಿಂಗ ಕಂಪನಿ ಡಿಪೋ, ಬೆಂಗಳೂರು ಸಿಟಿ

ಜಿಲ್ಲಾ ಏಜಂಟ್ಸ್:—ಆರ್. ಕೆ. ಕಬ್ಬೂರ, ಕೊಪ್ಪೀಕರ ರೋಡ .... ಹುಬ್ಬಳ್ಳಿ
ಸಬ್ ಏಜಂಟ:—ಯು. ಬಿ. ಬಾಳಿಗಾ, ಕೆಮಿಸ್ಟ ಆ್ಯಂಡ ಡ್ರುಗಿಸ್ಟ .... ಗದಗ
ಸಬ್ ಏಜಂಟ:—ಗೋವಿಂದ ಗೋಪಾಳ ಗಾಡಗೀಳ .... ವಿಜಾಪುರ
ಬಳ್ಳಾರಿ ಜಿಲ್ಲಾ ಏಜಂಟ್ಸ್:—ಆರ್. ಎಸ್. ವೀರಭದ್ರಪ್ಪ ಆಂಡ ಬ್ರದರ್ಸ, ... ಬಳ್ಳಾರಿ
ಸ್ವದೇಶಿ ಸ್ಟೋರ .... ಬಾಗಲಕೋಟ

ಮಧ್ಯ ಆಫ್ರಿಕದ ಜನಾಂಗಗಳು

ಲೇಖಕರು:— ವಿಶ್ವವಿಹಾರಿ

ಬಹುಪತ್ನೀ ವಿವಾಹವು ಮಧ್ಯ ಆಫ್ರಿಕದ ಸಮಾಜಧರ್ಮವಾಗಿದೆ. ಒಂದೊಂದು ಪಂಗಡದ ಒಡೆಯನಿಗೆ ಎರಡುನೂರರ ವರೆಗೆ ಹೆಂಡಿರಿರುತ್ತಾರೆ. ಅವನು ಸತ್ತನೆಂದರೆ ಅವನ ಹೆಂಡಂದಿರನ್ನು ಅವನ ಸಹೋದರರು ಹಂಚಿಕೊಳ್ಳುತ್ತಾರೆ. ಸಹೋದರರಿಲ್ಲದಿದ್ದರೆ ಬೇರೆ ಹಕ್ಕುದಾರರು ಹಂಚಿಕೊಳ್ಳುವರು. ಒಬ್ಬಳನ್ನೇ ಮದುವೆಯಾಗುವವನು ಜಾತಿಭ್ರಷ್ಟನಾಗುತ್ತಾನೆ. ಒಬ್ಬಳನ್ನು ಮದುವೆಯಾಗುವ ಮುಂಚೆ ಕನ್ಯಾದಕ್ಷಿಣೆಯ ಬದಲು ತಮ್ಮ ಅಕ್ಕ, ತಂಗಿ ಅಥವಾ ಮಗಳನ್ನು ಕನ್ಯೆಯ ಗುಂಪಿನವರಿಗೆ ಒಪ್ಪಿಸಬಹುದು. ಹಾಗೆ ಒಪ್ಪಿಸಿದ ಹುಡುಗಿಯು ಸತ್ತರೆ ... ಮಾಡಿಕೊಂಡ ಕನ್ಯೆಯನ್ನು ಪುನಃ ಆ ಪಂಗಡಕ್ಕೇ ತಿರುಗಿ ಕಳಿಸಬೇಕು! ...

ಈಗ ನಾಗರಿಕತೆ ಇರುವ ಕಡೆಗಳಲ್ಲೆಲ್ಲ ವಿದ್ಯಾಭ್ಯಾಸವು ಮಕ್ಕಳ ಬಹು ಚಿಕ್ಕ ವಯಸ್ಸಿನಲ್ಲಿಯೆ ಪ್ರಾರಂಭವಾಗುತ್ತದೆ. ಆದುದರಿಂದ ಕಾಡು ಜನಾಂಗಗಳಿಗಿಂತ ನಾಗರಿಕ ಜನಾಂಗಗಳ ಮಕ್ಕಳಿಗೆ ಶ್ರಮ ಹೆಚ್ಚು ಎಂದು ಹಲವು ಅಭಿಪ್ರಾಯವುಳ್ಳವರಾಗಿರುವರು. ಆದರೆ ಮಧ್ಯ ಆಫ್ರಿಕದ ಜನಾಂಗಗಳ ಪರಿಚಯವಿದ್ದವರು ಆ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕಾದೀತು. ಮಧ್ಯಆಫ್ರಿಕದ ಕಾಡು ಜನಾಂಗಗಳಲ್ಲಿ ಮಕ್ಕಳಿಗೆ ತೀರ ಚಿಕ್ಕಂದಿನಲ್ಲಿಯೆ ಶರೀರಶ್ರಮದ ಭಾರಬೀಳುತ್ತದೆ. ಗಂಡಾಗಲಿ ಹೆಣ್ಣಾಗಲಿ, ಬಡವನಾಗಲಿ ಗುಂಪಿನ ಒಡೆಯನಾಗಲಿ ದುಡಿಮೆಯು ಯಾರಿಗೂ ತಪ್ಪಿದ್ದಲ್ಲ.

ಒಟ್ಟಿನಲ್ಲಿ ಅವರ ಜೀವನವೆ ಬಹುಬೇಗ ಪ್ರಾರಂಭವಾಗುವದೆಂದೆನ್ನಬಹುದು. ಹುಡುಗಿಯರು ತೀರ ಚಿಕ್ಕವರಿರುವಾಗಲೆ ಅವರ ಮದುವೆಯ ಮಾತುಗಳೆದ್ದು ಬಿಡುತ್ತವೆ. ಹುಡುಗನ ಕುಟುಂಬ ಹಾಗೂ ಹುಡುಗಿಯ ಕುಟುಂಬದ ನಡುವೆ ಮಾತುಕತೆಗಳು ನಡೆಯುತ್ತವೆ. ಹೆಣ್ಣುಕೂಸು ಹುಟ್ಟಿದ ಕೂಡಲೆ ಮದುವೆಯ ನಿಶ್ಚಯವಾಗುವದೂ ಉಂಟು. ಅವರಲ್ಲಿ ಕನ್ಯಾದಕ್ಷಿಣೆಯ ವಾಡಿಕೆಯು ವಿಶೇಷವಾಗಿದೆ. ಮದುವೆ ನಿಶ್ಚಿತವಾದ ಕೂಡಲೆ ಕನ್ಯೆಯ ತಂದೆತಾಯಿಗಳಿಗೆ ಅರ್ಧ ದಕ್ಷಿಣೆಯನ್ನು ಕೊಟ್ಟು ಬಿಡುತ್ತಾರೆ.

ಕೂಸು ಹುಟ್ಟಿದ ಕೂಡಲೆ ಮದುವೆಯ ಮಾತೆಂದರೆ ನೀವು ಆಶ್ಚರ್ಯಪಡಬಹುದು. ಆದರೆ ಕೂಸು ಹುಟ್ಟುವದಕ್ಕಿಂತ ಮೊದಲು ಕೂಡ ಮದುವೆಯ ನಿಶ್ಚಯವಾಗುವದೂ ಉಂಟೆಂದರೆ ಬೆಚ್ಚಿಬೀಳಬೇಡಿ. ಅರಬರ ವರ್ಚಸ್ಸಿನಲ್ಲಿರುವ ಕೆಲವು ಕಡೆಗಳಲ್ಲಿ ತಾಯಿ ಗರ್ಭಿಣಿಯಾಗಿರುವಾಗಲೆ ಅವಳ ಹೊಟ್ಟೆಯಲ್ಲಿಯ ಹೆಣ್ಣುಕೂಸನ್ನು ಯಾವನಾದರೊಬ್ಬನಿಗೆ ವಾಗ್ದತ್ತ ಪತ್ನಿಯನ್ನಾಗಿ ನಿಶ್ಚಯಿಸಿ ಬಿಡುತ್ತಾರೆ. ಹೆಣ್ಣೇ ಹುಟ್ಟುವದೆಂದು ಹೇಗೆ ಕಂಡುಹಿಡಿಯುತ್ತಾರೆಂದು ಕೇಳುವಿರಾ? ಅದಕ್ಕೇನಂತೆ! ನಮ್ಮಲ್ಲಿರುವಂತೆ ಅವರಲ್ಲಿಯೂ ಅಜ್ಜಮ್ಮನ ಲಕ್ಷಣಶಾಸ್ತ್ರವಿದೆ. ಹೆಣ್ಣು ಹುಟ್ಟುವದೆಂದು ನಂಬಿಕೊಂಡು ಕೂತಮೇಲೂ ಗಂಡುಕೂಸು ಹುಟ್ಟಿದರೆ? ಆ ಗಂಡು ಹುಡುಗನು ಕನ್ಯಾದಕ್ಷಿಣೆ ಕೊಟ್ಟ ಕುಟುಂಬಕ್ಕೆ ಸಾಯುವ ವರೆಗೆ ನಂಬಿಗಸ್ತನಾದ ಗೆಳೆಯನಾಗಿರುವನು.

ಇತ್ತೀಚೆ ಪುರುಷರ ಅಧಿಕಪ್ರಸಂಗದಿಂದ ನಮ್ಮಲ್ಲಿ ವರದಕ್ಷಿಣೆಯ ಪರಿಪಾಠ ಬಿದ್ದಿದೆ. ಇಲ್ಲಿ ಕೂಡ ಕನ್ಯಾದಕ್ಷಿಣೆಯೆ ರೂಢವಾಗಿತ್ತು. ಆಫ್ರಿಕದ ಕನ್ಯಾದಕ್ಷಿಣೆಗೆ ಅಲ್ಲಿಯವರು ಮೂರು ಕಾರಣಗಳನ್ನು ತೋರಿಸುತ್ತಾರೆ. ಕನ್ಯೆಗೆ ದಕ್ಷಿಣೆಯನ್ನು ಕೊಡುವದರಿಂದ ಅವಳ ವಿಷಯದಲ್ಲಿ ಪವಿತ್ರಭಾವನೆಯು ಹುಟ್ಟುವದು. ಕನ್ಯೆಯ ಕುಟುಂಬಕ್ಕೆ, ಹುಡುಗಿಯನ್ನು ನಾವು ಚನ್ನಾಗಿ ನಡೆಸಿಕೊಳ್ಳುವೆವೆಂದು ಹುಡುಗನ ಕುಟುಂಬದವರು ವಚನ ಕೊಟ್ಟಂತಾಗುವದು. ಮತ್ತು ಕನ್ಯಾಕುಟುಂಬದಲ್ಲಿ ಒಬ್ಬ ದುಡಿಯುವ ಹುಡುಗಿಯು ಕಡಿಮೆಯಾದುದರಿಂದ ಉಂಟಾದ ಹಾನಿಯನ್ನು ಕನ್ಯಾದಕ್ಷಿಣೆಯಿಂದ ತುಸು ಮಟ್ಟಿಗೆ ತುಂಬಿ ಕೊಟ್ಟಂತಾಗುವದು.

ಕನ್ಯಾದಕ್ಷಿಣೆಯೆಂದರೆ ಹಣವನ್ನೆ ಕೊಡಬೇಕೆಂದಿಲ್ಲ. ಹುಡುಗಿಯರನ್ನೂ ಕೊಡಬಹುದು. ಈಗ ಒಬ್ಬನಿಗೆ ಇನ್ನೊಂದು ಗುಂಪಿನ ಒಬ್ಬ ಹುಡುಗಿಯನ್ನು ಮದುವೆಯಾಗಲು ಇಚ್ಛೆಯುಂಟಾದರೂ ಕನ್ಯಾದಕ್ಷಿಣೆ ಕೊಡಲು ಅವನು ಅಸಮರ್ಥನಿದ್ದಾನೆಂದು ತಿಳಿಯುವಾ. ಆಗ ಅವನು ತನ್ನ ಒಬ್ಬ ತಂಗಿಯನ್ನು ಕನ್ಯೆಯ ಗುಂಪಿಗೆ ಕೊಟ್ಟು ಬಿಡುವನು. ಎರಡನೆ ಮದುವೆಮಾಡಿಕೊಳ್ಳ ಲಿಚ್ಛಿಸುವ ಗಂಡಸು ತನ್ನ ಮಗಳನ್ನು ಕನ್ಯಾದಕ್ಷಿಣೆಯ ಬದಲಾಗಿ ಕೊಡಲಿಕ್ಕೂ ಸಿದ್ಧನಾಗಿರುವನು. ತನ್ನ ತಂಗಿಯನ್ನು ಕನ್ಯೆಯ ಗುಂಪಿನವರಿಗೆ ಕೊಟ್ಟು ಆ ಕನ್ಯೆಯನ್ನು ಒಬ್ಬನು ಮದುವೆಯಾದ ನಂತರ ಅವನ ತಂಗಿಯು ಸತ್ತರೆ ತನ್ನ ಹೆಂಡತಿಯನ್ನು ಅವಳ ಗುಂಪಿಗೆ ತಿರುಗಿ ಒಪ್ಪಿಸಬೇಕಾಗುವದು; ಇಲ್ಲವೆ ಮತ್ತೊಬ್ಬ ತಂಗಿಯನ್ನು ಆ ಗುಂಪಿನ ಸ್ವಾಧೀನ ಮಾಡಬೇಕಾಗುವದು.

ಆಫ್ರಿಕದ ಹೆಂಗಳೆಯರು ಕಪ್ಪೆಂದು ತಾತ್ಸಾರಮಾಡಬೇಡಿರಿ. ಸೌಂದರ್ಯವು ಬರಿ ಕರಿ-ಬಿಳಿಗಳಲ್ಲಿಲ್ಲ. ಕಪ್ಪಾದರೂ ಆಫ್ರಿಕೆಯ ಯುವತಿಯರು ಸೊಬಗುಳ್ಳವರೂ ಸಹಜವಾದ ಒಂದು ಆಕರ್ಷಣವುಳ್ಳವರೂ ಆಗಿದ್ದಾರೆ. ಸಂಜೆಯ ಹೊಂಬಿಸಿಲಲ್ಲಿ ಅಲ್ಲಿಯ ಕಾಡಿನೊಳಗಿಂದ ಸಾಲುಗೊಂಡು ಆ ಸೊಬಗುಗಾರ್ತಿಯರು ತಲೆಯ ಮೇಲೆ ನೀರು ತುಂಬಿದ ಕೊಡಗಳನ್ನು ಹೊತ್ತು ಒಲೆದಾಡುತ್ತ ಮನೆಯಕಡೆಗೆ ಹೋಗುತ್ತಿರುವುದನ್ನು ನೋಡಿದರೆ ಗೊತ್ತಾಗುವದು ಅವರ ಬೆಡಗು. ತೀರ ತೆಳುವೂ ಗಡುತರವೂ ಅಲ್ಲದ ಮೈ; ಕೋಮಲವಾದ ಕೈಕಾಲುಗಳು. ಆದರೆ ಅವರ ಪಾದಗಳು ಮಾತ್ರ ಬಹಳ ಅಗಲವಾಗಿ ಅವರ ಸೊಬಗಿಗೆ ತುಸು ಕುಂದನ್ನು ತರುತ್ತವೆ. ಅವರ ಹಲ್ಲುಗಳು ಸಾಲಾಗಿ ಸುಂದರವಾಗಿವೆ. ನಮ್ಮಲ್ಲಿಯೂ ಸುಂದರಿಯರಿದ್ದಾರೆ. ಆದರೂ ವಿವಿಧಾಭರಣಗಳ[illegible] ಹಾಕಿಕೊಂಡು ಸೌಂದರ್ಯವನ್ನು ಹೆಚ್ಚಿಸಿಕೊ[illegible] ಯತ್ನಿಸುವದಿಲ್ಲವೇ? ಹಾಗೆಯೆ ಆಫ್ರಿಕೆಯ [illegible] ಯರೂ ಅನೇಕ ಕೃತ್ರಿಮ ಆಭರಣಗಳನ್ನು ಧರಿಸ[illegible]

ಆಫ್ರಿಕೆಯ ಅಲೌರ ಎಂಬ ಪಂಗಡದ ಹೆಂ[illegible] ತಲೆಯನ್ನು ನುಣಗೆ ಬೋಳಿಸಿಕೊಳ್ಳುತ್ತಾರೆ. [illegible] ಗಳನ್ನೂ, ಹುಬ್ಬುಗಳನ್ನೂ ಕೂಡ ತೆಗೆದು ಬಿಡು[illegible] ಅವರು ಋತುಮತಿಯರಾಗುವ ವಯಸ್ಸಿನಲ್ಲಿ [illegible] ಮರ್ದಕ ದಂತಗಳನ್ನು ಕಲ್ಲಿನಿಂದ ಕುಟ್ಟಿ ಕೆಡಹು[illegible] ಹೆಂಗಸರು ಕಷ್ಟಸಹಿಷ್ಣುಗಳಹುದೋ ಅಲ್ಲವೋ [illegible] ದನ್ನು ಪರೀಕ್ಷಿಸಲಿಕ್ಕೆ [illegible] ವಾಡಿಕೆಯಿದೆಯಂತೆ. [illegible] ವಯಸ್ಸಿನಲ್ಲಿ ಅವರ [illegible] ತೂತುಹೊಡೆದು ಅದಕ್ಕೆ [illegible] ದಕ್ಕೈ, ಮೊಳೆ ಮು[illegible] ಗಳನ್ನು ತೂಗುಹಾ[illegible] ಮೂಗನ್ನು ಕೊರೆದು [illegible] ಹುಲ್ಲಿನ ಹುರಿಯನ್ನು [illegible] ವರು. ಇವಲ್ಲದೆ ಸೋ[illegible] ಚಿಪ್ಪು, ಹವಳಗಳು [illegible] ಹಾಕಲ್ಪಟ್ಟ ಒಂದೆರಡು [illegible] ಉಡಿದಾರಗಳು, ಮ[illegible] ಮುಂಗಾಲುಗಳಲ್ಲಿಯೂ [illegible] ಹವೇ ಆಭರಣಗಳು, ಇ[illegible] ಅಲೌರ ಹೆಂಗಸಿನ ವಸ್ತ್ರ[illegible] ವಾದಂತಾಯಿತು.



ಆಫ್ರಿಕೆಯ ಅಲಂಕೃತ ಯುವತಿ

ಆದರೂ ನಾವು ಯಾ[illegible] ಸುಖಜೀವನವನ್ನು ನೆನ[illegible] ಆ ಕಾಡುಜನಾಂಗಗಳ[illegible] ವದು ಕಷ್ಟ. ಬತ್ತಲೆಯಾಗಿ ಕಟ್ಟಿಗೆಯ [illegible] ಹೊದ್ದುಕೊಂಡು ಮೇಲೆ ಬಾಳೆಯೆಲೆಗಳನ್ನು [illegible] ಮಲಗುತ್ತಾರೆ. ಉಷ್ಣಪ್ರದೇಶದ ಎಲ್ಲತರದ [illegible] ಚಳಿಗಳ ಸ್ಥಿತ್ಯಂತರಗಳಿಗೂ ಅವರು ಬತ್ತಲೆಯಾ[illegible] ಗುರಿಯಾಗುತ್ತಾರೆ. ಅವರು ಜೀವನದಲ್ಲಿ [illegible] ವಿಶ್ರಾಂತಿ ಎಂಬುದರ ಕನಸು ಕೂಡ ಕಾಣು[illegible] ಆದರೂ ಅವರ ಆರೋಗ್ಯವು ಅಷ್ಟೇನೂ ಕೆಟ್ಟ[illegible]

ನಗೆಗಾರಿಕೆಯೂ ಅವರಲ್ಲಿ ಬೇಕಾದಷ್ಟಿದೆ. ಅವರು ಮಹಾ ಧೈರ್ಯಶಾಲಿಗಳಿರುವರಲ್ಲದೆ, ದೈಹಿಕ ಪೀಡೆಗಳನ್ನು ಸಹಿಸುವುದರಲ್ಲಿ ಹೆಮ್ಮೆಯನ್ನು ತೋರಿಸುತ್ತಾರೆ.

ಬಹುಪತ್ನೀ ವಿವಾಹಗಳು ಆಫ್ರಿಕೆಯಲ್ಲಿ ವಿಪುಲವಾಗಿ ನಡೆಯುತ್ತವೆ. ಅದಕ್ಕೆ ಕಾರಣಗಳೂ ಇವೆ. ಅಲ್ಲಿ ಗಂಡುಗಳಿಗಿಂತ ಹೆಣ್ಣುಗಳೇ ಹೆಚ್ಚು. ಹುಟ್ಟುವವು. ಆದುದರಿಂದ ಹುಡುಗಿಯರು ಬಹುಪತ್ನೀಕ ಸಂಸಾರದಲ್ಲಿಯಾದರೂ ಸೇರಬೇಕು; ಇಲ್ಲವೆ ಸೂಳೆತನವನ್ನಾದರೂ ಕೈಕೊಳ್ಳಬೇಕು. ಅಲ್ಲಿ ಬಹುಬೇಗ ಮದುವೆಯಾಗುವ ರೂಢಿಯಿರುವದರಿಂದ ಹುಡುಗಿಯರು ಸಂಸಾರಿಗರಾಗುವದನ್ನೆ ಹೆಚ್ಚಾಗಿ ಅಪೇಕ್ಷಿಸುವರು. ಅಲ್ಲಿಯ ಒಂದು ಕುಟುಂಬದ ಮಾನ, ಧನ, ಅಧಿಕಾರಗಳು ಅದರ ಒಡೆಯನಿಗಿರುವ ಹೆಂಡಂದಿರ ಸಂಖ್ಯೆಯಿಂದ ಅಳೆಯಲ್ಪಡುತ್ತವೆ. ಗುಂಪಿನ ಒಡೆಯನು ನೂರುಗಟ್ಲೆ ಹೆಂಡದಿರನ್ನು ಮಾಡಿಕೊಳ್ಳುವನು. ಅಝೂಂಡಿ ಪಂಗಡದ ಒಡೆಯನಿಗೆ ಎರಡುನೂರು ಹೆಂಡಂದಿರಿದ್ದಾರೆ. ಮಿಕ್ಕ ಹಿರಿಯರಿಗೆ ಮೂವತ್ತು ನಾಲ್ವತ್ತರ ವರೆಗೆ ಹೆಂಡಂದಿರಿರುತ್ತಾರೆ.

ಗಂಡನು ಸತ್ತಮೇಲೂ ಹೆಂಡಂದಿರು ಸ್ವತಂತ್ರರಾಗುವದಿಲ್ಲ. ಗಂಡನ ಸಹೋದರರು ಅವರೆಲ್ಲರನ್ನೂ ಹಂಚಿಕೊಳ್ಳುತ್ತಾರೆ. ಆದರೆ ಅಲ್ಲಿಯ ಮಹಮ್ಮದೀಯ ಜನಾಂಗಗಳಲ್ಲಿ ಕುರಾಣದ ಉಪದೇಶವನ್ನನುಸರಿಸಿ ಮೊದಲಿನ ನಾಲ್ಕು ಹೆಂಡಂದಿರನ್ನು ಬಿಟ್ಟು ಮಿಕ್ಕವರನ್ನು ಹಂಚಿಕೊಳ್ಳುತ್ತಾರೆ. ಸಹೋದರರಿಲ್ಲದಿದ್ದರೆ ಮಿಕ್ಕ ಹಕ್ಕುದಾರರು ಹಂಚಿಕೊಳ್ಳುತ್ತಾರೆ.

ಬಹುಪತ್ನೀ ವಿವಾಹವು ಆಫ್ರಿಕೆಯ ಕಾಡು ಸಮಾಜಗಳಲ್ಲಿ ಒಂದು ಧರ್ಮವೆ ಆಗಿದೆಯೆನ್ನಬಹುದು; ಏಕೆಂದರೆ ಯಾವನಾದರೂ ಒಬ್ಬಳೆ ಹೆಂಡತಿಯುಳ್ಳವನಿದ್ದರೆ ಅವನು ಕೂಡಲೆ ಜಾತಿಭ್ರಷ್ಟನಾಗುತ್ತಾನೆ. ಮತ್ತು ಅವನ ಹೆಂಡತಿಗೂ ಅದರಿಂದ ಬಹಳ ನಾಚಿಕೆಯೆನಿಸುವದಂತೆ. ಆದುದರಿಂದ ಸಮಾಜದ ದಾಕ್ಷಿಣ್ಯಕ್ಕಾದರೂ ಒಬ್ಬನು ಹೆಚ್ಚು ಹೆಂಡಂದಿರನ್ನು ಮದುವೆಯಾಗಬೇಕಾಗುವದು. ತಂದೆಗೆ ಹೆಚ್ಚು ಹೆಂಡಂದಿರಿದ್ದು ಮಗನು ಕಡಿಮೆ ಹೆಂಡಂದಿರನ್ನು ಮಾಡಿಕೊಂಡರೆ ತಂದೆಮಕ್ಕಳ ತುಲನೆ ಮಾಡಿ ಜನರು ಟೀಕೆ ಮಾಡುವರು. ಮತ್ತು ಹೆಂಗಸರಿಗೆ ಕೆಲಸಗಳೂ ಬಹಳವಾಗಿರುವದರಿಂದ ಮೊದಲಿನ ಹೆಂಡತಿಯು ಇನ್ನೂ ಅನೇಕ ಹೆಂಡಂದಿರನ್ನು ಮಾಡಿಕೊಳ್ಳಲಿಕ್ಕೆ ಗಂಡನನ್ನು ಪ್ರೋತ್ಸಾಹಿಸುವಳು.

ನಿಗ್ರೋಗಳಲ್ಲಿ ಪ್ರೇಮವೆಂಬುದರ ಮಾತನ್ನೆತ್ತುವಂತಿಲ್ಲ. ಉಪಯುಕ್ತತೆಯೆ ಮದುವೆಯ ಗುರಿ. ಹೆಂಡಂದಿರನ್ನು ಮಾಡಿಕೊಳ್ಳುವದೆಂದರೆ ಮನೆಯನ್ನು ಸಾಗಿಸುವದಕ್ಕೆ; ಮಕ್ಕಳನ್ನು ಬೆಳೆಸುವದಕ್ಕೆ; ಆಹಾರವನ್ನು ಸಿದ್ಧಗೊಳಿಸುವದಕ್ಕೆ; ಎಂದು ಅವರ ಅಭಿಪ್ರಾಯ. ಹೆಂಡತಿಯು ಈ ತತ್ವಗಳಿಗೆ ಬಾಧೆ ಬರುವಂತೆ ನಡೆದರೆ ಅವಳಿಗೆ ಚನ್ನಾಗಿ ಶಿಕ್ಷೆಯಾಗುವದು.

ನಮ್ಮಲ್ಲಿಯಂತೆ ಭದ್ರವಾದ ಮನೆಗಳನ್ನು ಕಟ್ಟುವ ಕಲೆಯು ಅಲ್ಲಿ ಇನ್ನೂ ಬೆಳೆದಿಲ್ಲ. ಮಿಂಚು, ಸಿಡಿಲು, ಭೂಕಂಪಗಳಿಂದ ಅವರು ಮೇಲಿಂದ ಮೇಲೆ ತೊಂದರೆಪಡುತ್ತಾರೆ. ಆದರೆ ಅವುಗಳಿಂದ ರಕ್ಷಿಸಿಕೊಳ್ಳಲು ಅವರು ಬುದ್ಧಿಗಿಂತ ಮಂತ್ರ ತಂತ್ರಗಳನ್ನೆ ಹೆಚ್ಚಾಗಿ ಅವಲಂಬಿಸುತ್ತಾರೆ. ಅವುಗಳನ್ನೆಲ್ಲ ಸಮಾಜದ ವೈದ್ಯರು ಮಾಡುತ್ತಾರೆ. ವೈದ್ಯರು ಸಿಟ್ಟುಗೊಂಡರೆ ಪ್ರಕೃತಿದೇವಿಯು ಭೀಕರರೂಪ ತಾಳುವಳೆಂದು ಅವರ ಭಾವನೆ; ಆದುದರಿಂದ ವೈದ್ಯರ ಅಧಿಕಾರವು ಸಮಾಜದಲ್ಲಿ ಗುರುವಿನಂತೆ ನಡೆಯುತ್ತದೆನ್ನಬಹುದು. ಬಿಳಿ ಜನರು ಆಫ್ರಿಕೆಯಲ್ಲಿ ಕಾಲಿಡುವ ವರೆಗೆ ವೈದ್ಯನೇ ಸಮಾಜವನ್ನು ತನ್ನ ಹಿಡಿಯಲ್ಲಿಟ್ಟುಕೊಂಡಿದ್ದನು. ಈಗಲಾದರೂ ಅವನ ಹಿರಿಯತನವು ಪೂರ್ಣ ಕುಗ್ಗಿಲ್ಲ.

ಸಣ್ಣ ಕತೆ

ಪ್ರೇಮಲಹರಿ

ಲೇಖಕರು :
ಶ್ರೀ. ಎಸ್. ಕೆ. ಕರೀಂಖಾನ, ಸಕಲೇಶಪುರ

★

● "ರಾಜ, ಒಮ್ಮೆಯಾದರೂ ಯಾವುದೊಂದು ದುಷ್ಕಾರ್ಯಪ್ರವೃತ್ತಿಗಳಾಗದಿದ್ದಾಗ್ಯೂ ಅಶುದ್ಧಳೆಂದು ಪರಿಗಣಿಸಲ್ಪಟ್ಟಿರುವ ನನ್ನಂತಹ ಪತಿತಳ ಅಪವಿತ್ರ ಬಾಳನ್ನು ತಬ್ಬಲೆಳಸುವ ನಿನ್ನ ಪರಿಶುದ್ಧವಾದ ಜೀವನಕ್ಕೆ ಪಾಪಿ ಸಮಾಜದ ಶಾಪ ಬಡಿಯದಿರಲಿ." .. .. ..

● "ಏನೆಂದೆ ಲೀಲಾ ! ಪವಿತ್ರ ಪ್ರೇಮದಿದಿರಲ್ಲಿ ಈ ಕ್ಷುದ್ರ ಸಮಾಜದ ಪ್ರಾಬಲ್ಯವೇ ? ನಡೆ ಈ ನಾಗರಿಕತೆಯಿಂದ ಕುರುಡಾದ ಸಮಾಜವನ್ನೆ ಬಿಟ್ಟು ನಾವು ದೂರಾಗುವಾ." .. ..

★

"ಲೀಲೆ, ಲೀಲೆ, ಇಲ್ಲಿ ಬಾ ಇಲ್ಲಿ."

"ಯಾಕೆ ? ಏನಾಗ್ಬೇಕೋ !"

"ಏನೂ ಇಲ್ಲ; ಇಲ್ಲಿ ಕೊಂಚ ಬಾ ಅಂದೆ."

"ಬರೋಲ್ಲ ಹೋಗು."

"ಬರೋಲ್ಲ ತಾನೇ ?"

"ಇಲ್ಲ ಖಂಡಿತವಾಗಿಯೂ ಬರೋಲ್ಲ."

"ಹಾಗಾದರೆ ಹೋಗು. ನೀನು ಬರುವುದೂ ಬೇಡ, ಇನ್ನೊಮ್ಮೆ ನನ್ನೊಡನೆ ಮಾತನಾಡುವುದೂ ಬೇಡ."

"ಥೂ, ಹೋಗಪ್ಪ ರಾಜ, ನಿರುದ್ಯೋಗಿಯಾಗಿ ಮನೆಯಲ್ಲಿ ಕೂತಿರೋದು ನನ್ನ ಗೋಳಾಡ್ಸಿ ಕಾಲಕಳೆಯೋದಕ್ಕಲ್ವೇ ? ಅಲ್ಕೇಳು ಅಜ್ಜಿಯ ಕೂಗು. ತಡವಾಗಿ ಹೋದರೆ ನನ್ನ ಜನ್ಮ ತೊಳೆದುಹಾಕುತ್ತಾಳೆ."

"ಅವರ ಕೂಗಾಟ ಇದ್ದೇ ಇದೆ. ಅದಿರ್ಲಿ ಲೀಲೆ ನೀನು ಬಂದಾರಭ್ಯದಿಂದಲೂ ನೋಡುತ್ತಿದ್ದೇನೆ, ನಿನ್ನ ತಲೆಯಲ್ಲಿ ಹೂವಿನ ಒಂದು ಎಸಳಾದರೂ ಕಾಣುವುದಿಲ್ಲವಲ್ಲ! ಹೂವನ್ನು ಮುಡಿದುಕೊಂಡರೆ ನಿನಗೆ ತಲೆ ನೋಯುವುದೆ ?"

"ಹಾಗೇನೂ ಇಲ್ಲ. ಆದರೆ ನನಗಾಗಿ ತಂದುಕೊಡುವವರು ಯಾರು? ತಂದುಕೊಡಬೇಕೆಂಬ ಅಭಿಲಾಷೆ ನಿನಗಾದರೂ ಉಂಟಾಯಿತೆ ?"

"ಉಂಟಾದ್ದರಿಂದಲೇ ಅಲ್ಲವೆ ನಿನಗಾಗಿ ಈ ಸೊಗಸಾದ ಗುಲಾಬಿಯ ಹೂವುಗಳನ್ನು ತಂದಿರುವುದು. ಇದೋ ತೆಗೆದುಕೋ."

ಹೂವುಗಳನ್ನು ತೆಗೆದುಕೊಂಡು ಲೀಲೆಯು ತನ್ನ ಕಣ್ಣುಗಳಲ್ಲಿ ಉದ್ಭವಿಸುತ್ತಿದ್ದ ಪ್ರೇಮಪೀಯೂಷವನ್ನು ರಾಜಣ್ಣನ ಮೇಲೆ ಪ್ರೋಕ್ಷಿಸಿ ಆತನು ತಣಿಯುವಷ್ಟರ ಮುಂಚೆಯೆ ಆ ರೂಪುರಾಶಿಯು ಮಾಯವಾದಳು. ಲೀಲೆಯ ಮನೆಯವರು ಇಂದಿಗೆರಡು ವರುಷಗಳಿಂದ ರಾಜಣ್ಣನ ಮನೆಯವರಾಗಿ ವಾಸಿಸತೊಡಗಿದರು. ಅಂದಿನಿಂದ ರಾಜಣ್ಣನ ಸ್ನೇಹವು ಲೀಲೆಯೊಡನೆ ಬೆಳೆಯುತ್ತ ಪ್ರೇಮ ಕಲಹಗಳಲ್ಲಿ ಬಲಗೊಳ್ಳಲಾರಂಭಿಸಿತು.

* * *

"ಅದೇಕೆ ರಾಜ ಕರೆದೆಯಲ್ಲಾ ?"

"ತುಂಬಾ ಬೇಸರವಾಗುತ್ತೆ. ಅದಕ್ಕಾಗಿ ಮಾತಾಡುತ್ತ ಕೂರೋಣವೆಂದು ಕರ್ದೆ."

"ನಿನಗೆ ಯಾವಾಗಲೂ ಬೇಸರವೆ. ನಿನ್ನ ಬೇಸರಿಕೆಯನ್ನು ಕಳೆಯುವುದಕ್ಕಾಗಿ ನಾನಿಲ್ಲಿ ಕುಳಿತರೆ ಮನೆಯಲ್ಲಿ ಕತ್ತೆಯಂತೆ ದುಡಿಯುವವರ್ಯಾರು? ನೋಡು ನಮ್ಮ ಅಜ್ಜಿಯ ಮುಂದೆ ಒಂದು ಘಳಿಗೆಯಾದರೂ ವಿರಾಮವಾಗಿ ಕುಳಿತಿರಬಾರದು. ಮನೆಕೆಲಸವನ್ನೆಲ್ಲಾ ನಾನೇ ಮಾಡಬೇಕಂತೆ. ನನ್ನ ಮೇಲಿನ ಪ್ರೇಮವನ್ನು ಪ್ರತಿಯೊಂದು ಬೈಯುವಿಕೆಯಿಂದ ವ್ಯಕ್ತಗೊಳಿಸುತ್ತಾಳೆ. ನಿಮ್ಮಂಥವರನ್ನು ಚನ್ನಾಗಿ ದುಡಿಸಿ ಶರೀರದ ಸೊಕ್ಕನ್ನು ಮುರಿಯಬೇಕು ಎನ್ನುತ್ತಿರುತ್ತಾಳೆ. ಬೆಳಗಿನಿಂದ ಸಾಯಂಕಾಲದವರೆಗೂ ದುಡಿಯುವುದಕ್ಕೆ ನಾನೇನು ಗಾಣಿಗನ ಎತ್ತೇ?"

"ಆ ಮುದಿಗೊಡ್ಡುಗಳ ಬೆದರಿಕೆಗೆ ತತ್ತರಿಸಿಹೋಗುವ ನಿನ್ನ ನಾಗರಿಕತೆಗೆ ಬೆಂಕಿಹಾಕಿತು. ಬಿಸಿಲಿನ ಝಳ ಹೆಚ್ಚಾಗಿದೆ. ಬಾ, ರೂಮಿನಲ್ಲಿ ಹೋಗಿ ಕುಳಿತುಕೊಳ್ಳೋಣ."

"ನಾನೊಲ್ಲೆ. ನೀನು ನನ್ನೊಡನೆ ಸರಳವಾಗಿ ಮಾತಾಡುವುದನ್ನು ನಿಮ್ಮ ತಾಯಿಯವರೇನಾದರೂ ನೋಡಿದರೆ ನನ್ನನ್ನು ನುಂಗ್ಹಾಕಿಯೇ ಬಿಡುತ್ತಾರೆ."

"ನಾನಿರುವಾಗ ನಿನಗೆ ಅವರದೇನು ಭಯ. ನಮ್ಮ ಚಿಕ್ಕಪ್ಪನ ಮನೆಗೆ ಹೋಗಿದ್ದಾರೆ. ಬರಬೇಕಾದರೆ ಬಹಳ ಹೊತ್ತಾಗುತ್ತೆ."

* * *

ಲೀಲೆಯು ರಾಜನ ಮೇಜಿನಿಂದ ಒಂದೊಂದೇ ಸಾಮಾನುಗಳನ್ನು ತೆಗೆದು ಶೋಧಿಸುತ್ತ "ಇದು ಯಾರ ಫೋಟೋ ರಾಜ ? ಬಹಳ ಮುದ್ದಾಗಿದೆ."

"ಇದೇ, ನನ್ನ ಭಾವೀ ಪತ್ನಿಯದು. ನೋಡು ಲೀಲೆ, ಅವಳು ನಿನ್ನನ್ನೇ ಹೋಲುವಂತಿಲ್ಲವೆ?"

"ಹೌದು, ನನ್ನ ಹಾಗೆಯೇ ಯಾವುದೊಂದು ಒಡವೆಯನ್ನೂ ಧರಿಸದೆ ಅಲಂಕಾರರಹಿತಳಾಗಿದ್ದಾಳೆ. ಕಲ್ಲು ಬೆಂಚಿನ ಮೇಲೆ ದೀನವದನೆಯಾಗಿ ಕುಳಿತಿದ್ದಾಳೆ. ಬಾವಿಯ ಕಂಭವು ಒಂದು ಕಡೆ ಒಗ್ಗಿದೆ. ಮುರಿದ ಕೊಟ್ಟಿಗೆಯ ಮೇಲೆ ಹಾಲುಸೋರೆಯ ಬೀಳು. ಈಗ ಸಿಕ್ಕಿತು ಗುಟ್ಟು. ಕಳ್ಳ! ನನ್ಫೋಟೋನ ನಿನ್ನ ಕ್ಯಾಮ್ರಾದಿಂದ ತೆಗೆದಿಟ್ಟು ಕೊಂಡಿದ್ದೀಯಾ?"

"ನಿನಗೇನು ಹುಚ್ಚೋ! ಆ ಫೋಟೋ ನಿನ್ನದೇ? ತಾ ಇಲ್ಲಿ" ಎಂದು ಕಿತ್ತುಕೊಳ್ಳುವನು.

"ನಾಚಿಕೆಯಾಗೋಲ್ವೇ ಸುಳ್ಳಾಡೋದಕ್ಕೆ?"

ಎಂದು ಪುನಃ ಶೋಧನೆ ನಾರಂಭಿಸಿ "ಓಹೋ, ಏನು ವಿಚಿತ್ರ ಪುರುಷನಾಗಿ ಹೋಗಿರುವೆ ರಾಜ! ಈ ಬಳೆಗಳನ್ನೇಕೆ ಇದರಲ್ಲಿ ಇಟ್ಟಿರುವೆ?"

"ಮರೆತಿದ್ದೆ ಲೀಲೆ, ನಿನ್ನ ಬರಿಗೈಗಳನ್ನು ನೋಡಿ ಆ ಬಳೆಗಳನ್ನು ನಿನಗಾಗಿ ತಂದಿದ್ದೇನೆ. ನೀನು ಅವನ್ನು ತೆಗೆದುಕೊ."

"ನಾನೊಲ್ಲೆ. ನೀನಾವತ್ತು ಹೂ ಕೊಟ್ಟೆಯಲ್ಲ ರಾಜ, ಅವನ್ನು ಮುಡಿದುಕೊಂಡು ಹೋದುದನ್ನು ನೋಡಿದಾಕ್ಷಣವೇ, ಅಮ್ಮನು ದುಃಖವನ್ನು ತಡೆಯಲಾರದೆ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಳು. ಅಜ್ಜಿಯು ಸಿಟ್ಟಿನಿಂದಬಂದು ಈ ಹಾಳ್ತಲೇಗೆ ಹೂ ಬೇರೆ ಎನ್ನುತ್ತ ಕಿತ್ತು ಬಿಸಾಕಿಬಿಟ್ಟಳು. ಅದಕ್ಕಾಗಿ ಬೇಡಪ್ಪ."

"ಸರಿ; ಅಳು, ನಗು, ಸಿಟ್ಟು ಇವೆಲ್ಲ ಸ್ತ್ರೀಯರ ಸ್ವಾಭಾವಿಕ ಹುಟ್ಟುಗುಣಗಳು. ಕಾರಣವಿಲ್ಲದೆಯೂ ಇವು ಆಗಾಗ ಬರುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಅದಿರಲಿ ನಿನಗೊಂದು ವಿಷಯವನ್ನು ಹೇಳಬೇಕೆಂದಿರುವೆನು. ಕೇಳುವಿಯಾದರೆ....!"

"ಅದೇನು ಹೇಳು."



ಅಷ್ಟರಲ್ಲಿಯೆ ಧಡಾರೆಂದು ಬಾಗಿಲ ತೆರೆದು........

"ಅದೇ, ನಿನ್ನ ಸಮಾನವಸ್ಕರಾದ ಹುಡುಗಿಯರೆಲ್ಲರೂ ವಿವಿಧ ವಸ್ತ್ರಾಭರಣ ಭೂಷಿತೆಯರಾಗಿ ದೇವಕನ್ನಿಕೆಯರಂತೆ ವಿರಾಜಿಸುತ್ತಿರುವಾಗ, ನೀನು ಮಾತ್ರ ಯಾವುದನ್ನೂ ಬಯಸದ ಸನ್ಯಾಸಿನಿಯಂತಿರುವೆಯಲ್ಲಾ! ಅದಕ್ಕಾಗಿ ನೀನು ಅಲಂಕೃತೆಯಾದರೆ ಹೇಗೆ ಕಾಣುವಿಯೋ ನೋಡಬೇಕೆಂಬ ಅಭಿಲಾಷೆ."

"ಅದೇನೋ ನಿಶ್ಚಯ; ಆದರೆ ನನಗಲಂಕಾರ ಮಾಡುವವರು ಯಾರು?"

"ನಾನು."

"ಓಹೋಹೋ, ನನಗಲಂಕಾರ ಮಾಡುತ್ತಾನಂತೆ! ನನಗಲಂಕಾರಮಾಡಲು ನೀನೇನು ಸಿಂಗರಿಗನೆ? ಆಗಲಿ ಹೇಗೆ ಅಲಂಕಾರಮಾಡುವಿ ಹೇಳು ನೋಡೋಣ?"

"ಹೇಗೆ ಅಲಂಕಾರವನ್ನು ಮಾಡುವುದೇ? ನಿನ್ನ ತಲೆಗೆ ಸುಗಂಧ ತೈಲವನ್ನು ಲೇಪಿಸಿ, ನನ್ನ ಕೋಂಬಿನಿಂದ ನಿನ್ನ ತಲೆಗೂದಲನ್ನು ನಾನೇ ಅಂದವಾಗಿ ಬಾಚುವುದು; ಅದಕ್ಕೆ ಈ ಮನೋಹರವಾದ ಗುಲಾಬಿಯ ಹೂವನ್ನು ಹೀಗೆ ಮುಡಿಸುವುದು, ನನ್ನ ಚೈನಿನಿಂದ ನಿನ್ನ ಕೊರಳಿಗಲಂಕಾರವನ್ನೀಯುವುದು, ಹಣೆಯನ್ನು ಮುದ್ದಾದ ತಿಲಕದಿಂದ ಹೀಗೆ ರಂಜನೆಗೊಳಿಸುವುದು, ಕಾಂತಿಯುತವಾದ ಈ ಬಳೆಗಳಿಂದ ನಿನ್ನ ಕೈಗಳಿಗೆ ಧನ್ಯತೆಯನ್ನರ್ಪಿಸುವುದು, ಅನಂತರ ಶೃಂಗಾರ ರಸಭರಿತಳಾದ ನಿನ್ನನ್ನು ನೋಡಿ ನಲಿಯುವುದು."

"ನಿನ್ನಿಷ್ಟ ರಾಜ."

"ಲೀಲಾ, ಈ ನಿಲುವುಗನ್ನಡಿಯಲ್ಲಿ ನೋಡು; ಈಗ ನೀನೆಷ್ಟು ಮನೋಹರಳಾಗಿ ಕಂಗೊಳಿಸುತ್ತಿರುವೆ! ನಿನ್ನ ಕಪೋಲಗಳ ಶೋಭೆಯು ನನ್ನನ್ನು ಮುಗ್ಧನನ್ನಾಗಿ ಮಾಡುತ್ತಿರುವುದು. ನನ್ನ ಹೃದಯವು ನಿನ್ನ ಕಾಂತಿಮಯ ಮೂರ್ತಿಯಿಂದ ಹರ್ಷಿತವಾಗುತ್ತಿರುವುದು. ಯಾವ ಮಹಾನುಭಾವನು ಉಕ್ಕಿ ಹರಿಯುತ್ತಿರುವ ನಿನ್ನ ಈ ನವಯೌವನ [illegible] ಮನದಣಿ [illegible]ಯುವನೋ; ಯಾವಾ

ತನು ನಿನ್ನ ರೂಪಾಮೃತವನ್ನು ಪ್ರಾಶನಗೈಯುವನೋ, ಅವನೇ ಈ ಜಗತ್ತಿನಲ್ಲಿ ಸುದೈವಿಯು."

"ರಾಜ, ನಿನ್ನ ನಿರುಪಮ ತೇಜಸ್ಸಿನ ಮುಂದೆ ನಾನೋರ್ವ ರೂಪಿಣಿಯೆ? ನನ್ನ ಮನಮೋಹಕ ಮೂರ್ತಿಯೇ! ನಿನ್ನೀ ರೂಪನಿಧಿಯನ್ನು ಯಾವ ಪುಣ್ಯಾತ್ಮಳು ಸೂರೆಗೊಳ್ಳುವಳೋ ಆಕೆಯ ಬಾಳು ಪುನೀತವಾದುದು."

ಮೊದಲೇ ಆಕೆಯಲ್ಲಿ ಅನುರಕ್ತನಾಗಿದ್ದ ರಾಜನು ಆಕೆಯ ಮನವು ತನ್ನಲ್ಲಿ ಲೀನವಾಗಿದೆ ಎಂಬುದನ್ನು ಅರಿತೊಡನೆಯೆ ಆ ಸರ್ವಾಲಂಕೃತೆಯನ್ನು ತನ್ನೆಡೆಗೆ ಸೆಳೆದನು. ಆಕೆಯು ಸುಲಭವಾಗಿ ಆತನ ವಶಳಾದಳು. ರಾಜನು ಆಕೆಯನ್ನು ತನ್ನ ಬಾಹುಪಾಶದಿಂದ ಬಂಧಿಸಿದನು. ಅಷ್ಟರಲ್ಲಿಯೇ ಧಡಾರೆಂದು ಬಾಗಿಲನ್ನು ತೆರೆದು ವ್ಯಕ್ತಿಯೊಂದು ಒಳಗೆ ಬಂದಿತು. ಇಬ್ಬರೂ ಬೆಚ್ಚಿ ದೂರಸರಿದರು. ಈ ದೃಶ್ಯವನ್ನು ಕಂಡ ಆ ವ್ಯಕ್ತಿಯು ಒಮ್ಮಿಂದೊಮ್ಮೆ ರೌದ್ರಾಕಾರವನ್ನು ತಾಳಿತು. ಸಂತೋಷದಿಂದ ಪ್ರಫುಲ್ಲಿತವಾಗಿದ್ದ ಲೀಲೆಯ ವದನವು ಬಿಸಿಲಿನ ತಾಪಕ್ಕೆ ಬಾಡಿ ಮುದುಡಿದ ಹೂವಿನಂತಾಯಿತು!

....

"ಥೂ, ನಾಚಿಕೆಕೆಟ್ಟವಳೇ ಹೋಗು. ಬದ್ಕೊ ಬಾಳೋ ಹುಡುಗರ್ನೆಲ್ಲಾ ಹಾಳ್ಮಾಡೋದಕ್ ಬರ್‍ತಿಯಾ...! ಈ ನಾಯಿಬಾಳು ಬಾಳೋದಕ್ಕಿಂತ ಆ ನದೀಲಾದ್ರೂ ಬಿದ್ದು ಪ್ರಾಣ ಕಳ್ಕೊಬಾರ್ದೇ?"

....

"ಎನ್ಮೋಡ್ತಾ ಇದ್ದೀಯಾ? ಹೊರ್ಡ್ತೀಹೊರ್ಡ್ಡೀ. ಅಯ್ಯೋ! ಅಯ್ಯೋ! ನಿನ್ನಲಂಕಾರ್‍ವೇ? ಮದ್ವೇಹೆಣ್ಣಾಗ್ಹೋಗಿದ್ದೀಯಲ್ಲೇ!" ಎಂದು ನಿಶ್ಚೇಷ್ಟಿತಳಾಗಿ ನಿಂತಿದ್ದ ಆಕೆಯನ್ನು ಹೊರಗೆಳೆದು ತಂದು ರಾಜಣ್ಣನ ಕೌಶಲ್ಯವನ್ನು ನಿರ್ಮೂಲಗೊಳಿಸಿ "ನನ್ನ ಮನೇ ಮೆಟ್ಲಗೆ ಇನ್ನೊಂದು ಸಲ ಕಾಲಿಟ್ಟೆ ನೋಡು ಮಾನ್ಗೆಟ್ಟವಳೆ! ನಡಿಯಾಚೆ" ಎಂದು ನೂಕಿದಳು.

ಲೀಲೆಯು ತಡವರಿಸುತ್ತ ತನ್ನ ಮನೆಯ ದಾರಿಯನ್ನು ಹಿಡಿದಳು. ಬಾಳನ್ನು ಹಿಂಬಾಲಿಸುವ ಸಾವಿನಂತೆ ಆ ಉಗ್ರ ವ್ಯಕ್ತಿಯು ನೋಟ ಆಕೆಯನ್ನು ಹಿಂಬಾಲಿಸಿತು. ರಾಜನು ನಿರಾಶಾಭರಿತವಾದ ಕಣ್ಣುಗಳಿಂದ ಲೀಲೆಯ ಮನೆಯ ಕಡೆಗೆ ನೋಡತೊಡಗಿದನು. ಆತನು ಆಲಿಸುತ್ತಿದ್ದಂತೆಯೆ ಅವಳ ಮನೆಯಲ್ಲಿ ಬಲವಾಗಿ ಹಾಸಿಗೆಯನ್ನು ಬಡಿಯುವಂತಹ ಶಬ್ದವೂ, "ಹೊಡೆಯಬೇಡಿ; ಸ... ಬೀಳುತ್ತೇನೆ. ವಿಷತಿಂದು ಸಾಯುತ್ತೇನೆ" ಎಂಬ ಧ... ಆರ್ತನಾದವೂ, "ಬಾಯಿಮುಚ್ಚು" ಎಂಬ ... ದನಿಯೂ ಒಂದರ ಹಿಂದೊಂದಾಗಿ ಕೇಳಿಬಂದು ರಾ... ಯಲ್ಲಿ ಜ್ವಾಲೆಯನ್ನು ಹತ್ತಿಸಿದುವು.

* * *

ತಮದ ಭೈರವರೂಪು ಜಗತ್ತನ್ನು ಆಕ್ರಮಿಸಿದೆ. ... ನಾಯಕನಿಲ್ಲದ ತಾರಾವಿತಾನವು ಪ್ರತಿಭಟಿಸಿ ... ಹೊಂದುತ್ತಿದೆ. ಸಾವಧಾನವಾದರೆ ಪ್ರಮಾದವಾದೀತೆ... ಬಗೆದು ತರುಣಿಯೊರ್ವಳು ಮನೆಯಿಂದ ಹೊ... ನಿರಾತಂಕವಾಗಿ ಸಾಗಹತ್ತಿದಳು. ಹೀಗಾದೀತು... ಕ್ಷಣೆಯಲ್ಲಿದ್ದ ತರುಣನು ಆಕೆಯನ್ನು ದೂರದಿಂದ ... ಲಿಸಿದನು. ಸುಧಾಕರನು ಕ್ಷಿತಿಜದಲ್ಲಿ ಕಾಣಿಸಿಕೊ... ಆದುವರೆಗೆ ತರುಣಿಯು ಕಾವೇರಿ ನದಿಯ ತಟವನ್ನು ... ದ್ದಳು. ಅವಳ ಹಿಂಬಾಲಿಗನು ಪಕ್ಕದ ಪೊ... ಅವಿತುಕೊಂಡನು. ಗಂಭೀರವಾಗಿ ಹರಿಯುತ್ತಿದ್ದ ... ನಿರ್ಮಲ ಜಲದಲ್ಲಿ ಚಂದ್ರಬಿಂಬವು ವಜ್ರದ ಹರಳು... ನರ್ತಿಸುತ್ತಿದ್ದಿತು. ಎಲ್ಲೆಲ್ಲೂ ನಿಶ್ಶಬ್ದತೆಯು ವ್ಯಾಪ್ತ...

"ದೇವಿ, ಲೋಕಪಾವನೆ! ಪತಿತಳೂ, ಸಕಲಜನನಿಂ... ಆದ ನನಗೆ ನೀನಾಸರೆಯನ್ನಿತ್ತೆ ಎಂದು ಜನ... ಮೇಲೆ ಹೊರಿಸುವ ಅಪವಾದಕ್ಕಾಗಿ ನನ್ನನ್ನು ... ಇದೋ, ಈ ಪಾಪಮಯ ದೇಹವು ನಿನಗರ್ಪಿತವಾ..."

"ಲೀಲಾ! ಲೀಲಾ! ಬೇಡ ನೀನೋರ್ವಳೇ ... ವೆಯಾ? ನಿನಗಿಂತಲೂ ಅಧಿಕವಾಗಿ ನೊಂದಿ... ಜೀವಿಯು ನಿನ್ನ ನೆನಹಿನ ಕೊರಗಿನಲ್ಲೆ ನಿನ್ನನ್ನು ... ಲಿಸಲೆಂದು ಆಶಿಸಿರುವೆಯಾ?"

"ರಾಜ, ಬಿಡು; ನನ್ನನ್ನು ತಡೆಯದಿರು. ... ದುರ್ಭಾಗ್ಯಳಾಗಿರುವ ನನ್ನ ಬಾಳಿನ ಮೇಲೆ ... ಮತ್ತಷ್ಟು ವಿಷವನ್ನು ಕಾರುವಂತೆ ಮಾಡದಿರು."

"ಹಾಗೆಂದರೇನು ಲೀಲಾ?"

"ರಾಜ, ದುರ್ದೈವದಿಂದ ನಾನು ತಿಳಿ... ವುದಕ್ಕೆ ಮೊದಲೇ ನನ್ನನ್ನು ಓರ್ವ ರೋಗಿಷ್ಠ ... ತನ್ನ ಶ್ರೀಮಂತಿಕೆಯ ಬಲದಿಂದ ವಿವಾಹವಾದ... ಪಾಪಕ್ಕೆ ಸಾವೇ ಶಿಕ್ಷೆಯನ್ನು ಕೊಟ್ಟಿತು. ಆ... ಪ್ರಾಯಶ್ಚಿತ್ತವಾಗಿ ಆತನು ನಮ್ಮ ತಂದೆಯವರ... ತನ್ನ ಐಶ್ವರ್ಯವನ್ನೆಲ್ಲ ಬಿಟ್ಟು ಹೋದ. ನಾನು...

ಯಾದೆ. ರಾಜ! ನಿನ್ನ ಮೇಲಿನ ಮೋಹದಿಂದ ಈ ವಿಷಯವನ್ನು ನಿನ್ನಿಂದ ಮುಚ್ಚಿಟ್ಟಿದ್ದೆ. ಕ್ಷಮಿಸು, ನಾನಿನ್ನು ಹೋಗುವೆನು ಬಿಡು."

"ಲೀಲೆ! ಸಾಯಲು ನಿನಗೆ ಅಂಜಿಕೆಯಾಗುವುದಿಲ್ಲವೇ?"

"ರಾಜ, ನನಗೇತರ ಭಯ? ಇಂದಿನ ನನ್ನ ದುಷ್ಪ್ರವರ್ತನೆಯಿಂದ ಸಮಾಜದಲ್ಲಿ ಓರ್ವ ಭಿಕಾರಿಣಿಗಿರುವ ಸ್ಥಾನವೂ ಕೂಡ ನನಗೆ ಲಭಿಸದು. ದುಃಖಾವಮಾನ ಗಳಿಂದಾವೃತವಾಗಿರುವ ಈ ಸಮಾಜದಲ್ಲಿದ್ದು ನಾನೇನು ಸುಖವುಂಣಬೇಕಾಗಿದೆ?"

"ಲೀಲಾ, ನೀನು ನನ್ನನ್ನು ಬಿಟ್ಟು ಹೋಗುವೆಯಾ?"

"ರಾಜ, ಸಾಯುವುದಕ್ಕೆ ಸಿದ್ಧಳಾಗಿದ್ದರೂ ಅದೇಕೋ ನಿನ್ನನ್ನು ಅಗಲುವುದೆಂದರೆ ಹೃದಯದಲ್ಲಿ ಅಸಹ್ಯಯಾತನೆ ಯಾಗುತ್ತಿದೆ. ಆದರೆ ಜೀವಿಸಿದ್ದರೆ ನನಗಾಗಿ ಕಾದಿರುವ ಸಮಾಜದ ರಾಕ್ಷಸೀ ಶಿಕ್ಷೆಯನ್ನು ಸ್ಮರಿಸಿದ ಮಾತ್ರದಿಂದ ನನಗೆ ಧೃತಿಗೆಡುತ್ತಿದೆ."

"ಅಳಬೇಡ ಲೀಲಾ, ಏಳು ಹೋಗೋಣ. ನಮ್ಮ ತಾಯಿಯವರು ವ್ಯರ್ಥವಾಗಿ ನಿನ್ನ ಮೇಲೆ ಈ ಆರೋಪಣೆ ಯನ್ನು ಹೊರಿಸಿದರೆಂದೂ, ನೀನು ಪರಿಶುದ್ಧಳೆಂದೂ ನಿಮ್ಮ ತಂದೆಯವರಿಗೆ ನಾನು ಮನವರಿಕೆ ಮಾಡಿಕೊಡುವೆನು.

ಅಯ್ಯೋ! ಪರಿಣಾಮವನ್ನು ಲಕ್ಷಿಸದೆ ನಿನ್ನನ್ನು ಪ್ರೇಮ ಪಾಶದಲ್ಲಿ ಬಂಧಿಸಿಕೊಂಡಿದ್ದ ನಾನು ನಿನ್ನ ಸರ್ವನಾಶಕ್ಕೂ ಕಾರಣನಾದೆನಲ್ಲ!"

"ರಾಜ, ಸರ್ವರಿಂದಲೂ ತಿರಸ್ಕೃತಳಾದ ನನ್ನ ಪೂಜೆ ಯನ್ನು ಪ್ರೀತಿಯಿಂದ ಸ್ವೀಕರಿಸುವ ನನ್ನ ಹೃದಯೇಶ್ವರನೇ ನೀನಲ್ಲದೆ ನನ್ನ ನಾಶಕನಲ್ಲ. ಇನ್ನು ಮನೆಗೆ ಬರುವ ವಿಷಯದಲ್ಲಿ ನನ್ನನ್ನು ಬಲಾತ್ಕರಿಸದಿರು. ಅಲ್ಲಿ ನನಗೆ ಸುಖಾಗಮನವನ್ನು ಬಯಸುವವರು ಯಾರೂ ಇಲ್ಲ. ಒಮ್ಮೆಯಾದರೂ ಯಾವುದೊಂದು ದುಷ್ಕಾರ್ಯಪ್ರವೃತ್ತಳಾಗದಿದ್ದಾಗ್ಯೂ ಅಶುದ್ಧಳೆಂದು ಪರಿಗಣಿಸಲ್ಪಟ್ಟಿರುವ ನನ್ನಂತಹ ಪತಿತಳ ಅಪವಿತ್ರ ಬಾಳನ್ನು ತಬ್ಬಲೆಳಸುವ ನಿನ್ನ ಪರಿಶುದ್ಧವಾದ ಜೀವನಕ್ಕೆ ಪಾಪಿ ಸಮಾಜದ ಶಾಪ ಬಡಿಯದಿರಲಿ."

"ಏನೆಂದೆ? ಲೀಲಾ, ಪ್ರೇಮದಿದಿರಲ್ಲಿ ಈ ಕ್ಷುದ್ರ ಸಮಾಜದ ಪ್ರಾಬಲ್ಯವೆ? ನೀನು ಸಮಾಜದ ದುಷ್ಟರಿಗಾಗಿ ಭಯಪೀಡಿತಳಾಗುವುದಾದರೆ ನಾಗರಿಕತೆಯ ಸೊಕ್ಕಿನಿಂದ ಕುರುಡಾದ ಸಮಾಜವನ್ನೆ ತಿರಸ್ಕರಿಸಿ ಪರಿಶುದ್ಧ ಹೃದಯಿಗಳಿಂದ ಕೂಡಿರುವ ಹಳ್ಳಿಗಳನ್ನು ಸೇರಿ ಸುಖಿಸೋಣ. ಅಲ್ಲಿ ನಮ್ಮ ಜೀವನನದಿಯು ಅನಿರುದ್ಧ ಪ್ರೇಮಲಹರಿ ಯೊಡನೆ ಸಾಗಲಿ ನಡೆ" ಎಂದು ಆಕೆಯ ಕಂಬನಿಯನ್ನೊರಸುತ್ತ ಲೀಲೆಯನ್ನು ಎಬ್ಬಿಸಿ ಅವಳ ಹೆಗಲ ಮೇಲೆ ಕೈಯಿಟ್ಟು ಮುಂದೆ ನಡೆದನು.

ಉಪಮಾತೀತ ವಾಲ್ಮೀಕಿ!

ಲೇಖಕರು : ಶ್ರೀ. ಬಂಕಾಪುರ ದತ್ತರಾಯರು, ಸಂಪಾದಕ 'ನನ್ನನುಡಿ' ಹಾವೇರಿ

★

- ವಾಲ್ಮೀಕಿಯು ಆದಿದ್ರವಿಡ ಪಂಗಡಕ್ಕೆ ಸೇರಿದವನೆಂದು ನಾನು ಊಹಿಸುತ್ತೇನೆ. ಒಡಕು ಬೀರುವುದರಲ್ಲಿ ನಿಪುಣರಾದ ಆರ್ಯ ನಾರದರ ಕುಯುಕ್ತಿಯಿಂದ ಅವನು ಆರ್ಯರ ಪಕ್ಷಪಾತಿಯಾದನು.
- ಡಾರ್ವಿನ್ನನ ತತ್ವವನ್ನನುಸರಿಸಿಯೂ ವಾಲಿ ಸುಗ್ರೀವರು ಕಪಿಗಳಾಗಿದ್ದರೆಂದು ಹೇಳುವುದು ಎದೆಗಾರಿಕೆಯೇ ಸರಿ. ರಾಮಾಯಣದ ಕಾಲವು ಬಹಳವಾದರೆ ಕ್ರಿ. ಶ. ಪೂ. ೩೦೦೦ ಎಂದು ಹಿಡಿದರೂ ಐದು ಸಾವಿರ ವರ್ಷಗಳಲ್ಲಿಯೆ ಕಪಿಗಳಾಗಿದ್ದವರು ಇಂದು ಮನುಷ್ಯರೂಪಕ್ಕೆ ಉತ್ಕ್ರಾಂತರಾದರೆಂದು ಸಾಧಿಸುವುದೂ ಸಾಹಸವೇ!

★

ಕಳೆದ ಆಗಸ್ಟ ತಿಂಗಳ 'ಜಯಕರ್ನಾಟಕ'ದಲ್ಲಿ ಶ್ರೀ. ಎಸ್. ವಿ. ಗೋಪಾಲ ಶಿಕಾರಿಪುರ ಇವರ 'ವಾಲ್ಮೀಕಿ' ಎಂಬ ಲೇಖನವು ಶ್ರೀ. ಜೋಗಳೇಕರ ಪಾಂಡುರಂಗರಾಯರ 'ಪ್ರಾಚೀನ ಆರ್ಯಾವರ್ತದ ಮಿಸ್ ಮೇಯೋ' ಎಂಬ ಲೇಖನಕ್ಕೆ ಉತ್ತರರೂಪವಾಗಿ ಪ್ರಕಟವಾಗಿದೆಯಷ್ಟೇ? ಲೇಖಕರು ತಮ್ಮ ಲೇಖನದಲ್ಲಿ 'ಪ್ರಪಂಚದ ಹವ್ಯಾಸವನ್ನು ತೊರೆದು, ಮೋಕ್ಷಸಾಧನೆಯಲ್ಲಿ ನಿರತನಾಗಿದ್ದ ಋಷಿವರ್ಯನಿಗೆ ಆರ್ಯ ಪಕ್ಷಪಾತಿಯಾಗಲು ಅವಕಾಶವೆಲ್ಲಿದೆ? ಶ್ರೀರಾಮಚಂದ್ರನ ಕತೆಯನ್ನು ರಚಿಸಿ, ಪ್ರಚಾರಮಾಡುವುದಿಷ್ಟೇ ವಾಲ್ಮೀಕಿಯ ಮುಖ್ಯೋದ್ದೇಶ. ಆ ಸಂದರ್ಭದಲ್ಲಿಯ ಸನ್ನಿವೇಶಗಳನ್ನೂ ಚಿತ್ರಿಸಿರುತ್ತಾನೆ.' ಎಂದು ಹೇಳಿದ್ದಾರೆ.

'ವಾಲ್ಮೀಕಿಯಲ್ಲಿ ಪಕ್ಷಪಾತವಿಲ್ಲ, ಇರಲು ಅವಕಾಶವೂ ಇಲ್ಲ' ಎಂಬುದು ಶ್ರೀಯುತರ ಮತ. 'ವಾಲ್ಮೀಕಿಯಲ್ಲಿ ಪಕ್ಷಪಾತವಿಲ್ಲ' ಎಂದು ಸಾರುವ ಮೊದಲು 'ವಾಲ್ಮೀಕಿಯು ಯಾರು?' ಎಂಬುದರ ಬಗ್ಗೆ ಶ್ರೀ. ಗೋಪಾಲರವರು ವಿಚಾರ ಮಾಡಿರುವರೋ? ಅವನು ಆರ್ಯನೋ? ದ್ರವಿಡನೋ? ಆದಿದ್ರವಿಡನೋ? ಮೊದಲು ಅವನೊಬ್ಬ ವ್ಯಾಧ, ವನೇಚರ, ಮಾಂಸಾಶನಿ, ಹಿಂಸಾವ್ಯಸನಿ, ಕ್ರೂರ, ಭಯಂಕರಾಕಾರ! ಇವನ ಕ್ರೂರ ಕೃತಿಗಳು ರಾಮಾಯಣದಲ್ಲಿ ಬೀಭತ್ಸ ರಸೋತ್ಪಾದನೆಗೆ ಉತ್ತಮ ವಸ್ತುಗಳು. ಅಂದ ಮೇಲೆ ಇವನು ಸುಸಂಸ್ಕೃತರಾದಂಥ, ಸುರೂಪಿಗಳಾದಂಥ, ಸುಸಂಘಟಿತರಾದಂಥ ಆರ್ಯರ ಪಂಗಡಕ್ಕಂತೂ ಸಂಬಂಧಿಸಿದವನು ಅಲ್ಲವೇ ಅಲ್ಲ ಎಂದು ಧಾರಾಳವಾಗಿ ಹೇಳಬಹುದು. ಇನ್ನು ಸಂಸ್ಕೃತಿಯಲ್ಲಿ ಆರ್ಯರಷ್ಟಲ್ಲದಿದ್ದರೂ ಆದಿದ್ರವಿಡರಿಗಿಂತಲೂ ಮುಂದಡಿಯಿಟ್ಟಂಥ, ಸುಸಂಘಟಿತರಾದಂಥ, ಉತ್ತಮ ನಾಗರಿಕರಾದಂಥ ದ್ರವಿಡ ಪಂಗಡಕ್ಕೂ ಸೇರಿದವನಲ್ಲ. ಅಂದ ಮೇಲೆ ಇವನು ಆದಿದ್ರವಿಡರ ಪಂಗಡಕ್ಕೆ ಸೇರಿದವನೆಂದು ನಾನು ಊಹಿಸುತ್ತೇನೆ. ದ್ರವಿಡ ಮತ್ತು ಆದಿದ್ರವಿಡ ಪಂಗಡಗಳ ಮಧ್ಯೆ ಯಾದವೀ ಕಲಹವು ನಡೆದೇಇತ್ತು. ದ್ರವಿಡರನ್ನು ಮುರಿಬಡಿಯುವುದಂತೂ ಆರ್ಯರ ಆದ್ಯ ಹೇತು. ಅಲ್ಪಸಂಖ್ಯಾಕರೂ ಅಸಂಸ್ಕೃತರೂ ಆದ ಆದಿದ್ರವಿಡರನ್ನು ತಮ್ಮ ಆಧಿಪತ್ಯದಲ್ಲಿಟ್ಟುಕೊಂಡು ಬಿಟ್ಟರೆ ತಮ್ಮ ಉದ್ದೇಶವು ಬಹುಬೇಗನೆ ಸಾಧಿಸುವುದೆಂದು ಆರ್ಯರು ಬಗೆದರು. ಆದರಂತೆಯೆ ವ್ಯಾಧನ (ವಾಲ್ಮೀಕಿಯ) ವನಕ್ಕೆ ಆರ್ಯರ 'ರಾಯಭಾರಿ'ಯಾದ, ಒಡಕು ಬೀರುವುದರಲ್ಲಿ ಅಗ್ರಗಣ್ಯರಾದ ನಾರದರು ಬಂದರು. ಅವನಿಗೆ ರಾಮಮಂತ್ರವನ್ನು ಬೋಧಿಸಿದರು, ಅಂದರೆ ಆರ್ಯರಾಜನಾದ ರಾಮನ ಪರಿಚಯ ಮಾಡಿಕೊಟ್ಟರು. ಆರ್ಯರ ಪಂಗಡವನ್ನು ಕೂಡಿಕೊಳ್ಳಲು ಪ್ರೇರೇಪಿಸಿದರು. ಅವನು ದೀರ್ಘತಪಶ್ಚರ್ಯೆಯನ್ನು ಮಾಡಲು ಕುಳಿತುಕೊಂಡ ಮೇಲೆ ಅವನ ಮೇಲೊಂದು ವಲ್ಮೀಕವು ಮುಸುಕಿದ ಮೂಲಕ 'ವಾಲ್ಮೀಕಿ'ಯೆಂಬ ಹೆಸರು ಅವನಿಗೆ ಬಂದಿತೆಂದು ರಾಮಾಯಣದಲ್ಲಿಯ 'ಹರಟೆ'. ಬಹಳಮಾಡಿ, ವಸ್ತುಸ್ಥಿತಿಯು ಹೀಗಿರಲಿಕ್ಕೆ ಸಾಕು; ಇವನು ಕಾಡುಮನುಷ್ಯನಿದ್ದುದರಿಂದ ಗವಿಯಂತೆ ಕಂಡ ವಲ್ಮೀಕದಲ್ಲಿ ವಾಸಮಾಡಿರಲಿಕ್ಕೆ ಸಾಕು. ಆದರಿಂದಲೇ ಇವನಿಗೆ 'ವಾಲ್ಮೀಕಿ'ಯೆಂಬ ಸಾರ್ಥಕ ಹೆಸರು ಬಂದಿರಬಹು

ದೆಂಬ ಊಹೆ ಹೆಚ್ಚು ಸಯುಕ್ತಿಕವಾದುದು. ಅಂದ ಮೇಲೆ ದ್ರವಿಡದ್ವೇಷಿಯಾದ ಆದಿದ್ರವಿಡನೊಬ್ಬನು ಆರ್ಯರ ಪಂಗಡಕ್ಕೆ ಸೇರಿದುದು ಅಪರಾಧವಲ್ಲವೆ? ಆರ್ಯರ ಕಡೆಗೆ ಒಡಕೊಂಡ ಆದಿದ್ರವಿಡನು ಪಕ್ಷಪಾತವನ್ನು ಮಾಡಿಲ್ಲವೆಂದು ಹೇಳುವುದಾದರೂ ಹೇಗೆ? ಹೊಸದಾಗಿ ಕ್ರಿಸ್ತಮತವನ್ನು ಅಂಗೀಕರಿಸಿದ ಓರ್ವ ಹಿಂದೂ ಅಂತ್ಯಜನು ಮುಂಚಿನಿಂದಲೂ ಕ್ರಿಸ್ತಮತದಲ್ಲಿರುವವರಿಗಿಂತ ಹೆಚ್ಚು ಧರ್ಮಮೂಢತೆಗೀಡಾಗಿ ಹಿಂದೂ ಧರ್ಮವನ್ನು ಮನ ಬಂದಂತೆ ಆಡಿಕೊಳ್ಳುವುದಿಲ್ಲವೇ? ಆರ್ಯದೀಕ್ಷೆಯನ್ನು ಪಡೆದ ವಾಲ್ಮೀಕಿಯು ಇದೇ ರೀತಿಯಾಗಿ ಸ್ವಜನದ್ರೋಹವನ್ನು ಮಾಡಿರಲಿಕ್ಕೆ ಸಾಕು.

ಆದರೆ ಶ್ರೀಗೋಪಾಲರವರು 'ಬಲಿಷ್ಠರಾದ ಲಂಕಾನಿವಾಸಿಗಳನ್ನು ಸೋಲಿಸಲು ಸಹಾಯಮಾಡಿದ ಈ ದ್ರವಿಡರು 'ವಾನರರು' ಎಂದು ತಮ್ಮನ್ನು ಕರೆದವರನ್ನು ಸುಮ್ಮನೆ ಬಿಟ್ಟರೇ?....ಆಗ ವಾನರರಲ್ಲದವರು 'ವಾನರ'ರೆಂದು ಕರೆಯಿಸಿಕೊಂಡು ಸುಮ್ಮನಿದ್ದರೇ?' ಎಂದು ಪ್ರಶ್ನಿಸಿ, ರಾಮಾಯಣದೊಳಗಿನ ಮಂಗಗಳು ಮಂಗಗಳೇ ಇದ್ದುವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೆ ತಮ್ಮ ಅಭಿಪ್ರಾಯವನ್ನು ಸಮರ್ಥಿಸಲಿಕ್ಕೆ ಡಾರ್ವಿನ್‌ರ ತತ್ವವನ್ನು ತಬ್ಬಿಕೊಂಡಿದ್ದಾರೆ. ಶ್ರೀಗೋಪಾಲರವರು ಡಾರ್ವಿನ್‌ರ ತತ್ವವನ್ನು ಚೆನ್ನಾಗಿ ಪರ್ಯಾಲೋಚಿಸಿದಂತೆ ತೋರುವುದಿಲ್ಲ; ಏಕೆಂದರೆ, ನಮ್ಮ ದ್ರುವಿಡ ಪೂರ್ವಜರಾದ ಆಗಿನ ವಾಲಿ ಸುಗ್ರೀವಾದಿ 'ವಾನರ'ರು ವಾನರರಾಗಿಯೇ ಇದ್ದರೆಂದು ಹೇಳುವುದು ಹೆಚ್ಚಿನ ಎದೆಗಾರಿಕೆಯೇ ಸರಿ. ಯಾಕಂದರೆ, ಒಂದು ಪ್ರಾಣಿಯ ಶಾಖೆಯು ಮತ್ತೊಂದು ಉಚ್ಚತರಗತಿಯ ಶಾಖೆಯಲ್ಲಿ ಉತ್ಕ್ರಾಂತಿಸಲು ಕೋಟ್ಯವಧಿ ವರುಷಗಳ ಅವಧಿಯು ಅವಶ್ಯ. ರಾಮಾಯಣದ ಕಾಲವು ನಮಗೆ ತಿಳಿದ ಮಟ್ಟಿಗೆ ಕ್ರಿ. ಶ. ಪೂ. ೧೫೦೦ (?) ಬಹಳವಾದರೆ ಕ್ರಿ.ಶ. ಪೂ. ೩೦೦೦ ಎಂದು ಹಿಡಿಯೋಣ. ಅಂತೂ ಸರಾಸರಿ ೫೦೦೦ ವರುಷಗಳಲ್ಲಿ ರಾಮಾಯಣದ ಕಾಲದ ಸುಗ್ರೀವಾದಿ ಕಪಿಗಳಿಗೆ ಶ್ರೀ. ಗೋಪಾಲರಂಥ ಮತ್ತು ನಮ್ಮಂಥ ಉಳಿದ ದ್ರವಿಡ ವಂಶಜರು ಹೇಗೆ ಪ್ರಾಪ್ತರಾದರು? ಎಂಬ ಸಮಸ್ಯೆಯನ್ನು ಅವರೇ ಬಿಡಿಸಲಿ. ಇದರ ಮೇಲಿಂದ 'ವರಕವಿಯಾದ ವಾಲ್ಮೀಕಿ ಋಷಿಯು ಸುಳ್ಳನ್ನು ಸಾಧಿಸಿಲ್ಲ' ಎಂಬ ಮಾತಿನಲ್ಲಿಯೇ ನಾವು ಸುಳ್ಳಿನ ಪರಾಕಾಷ್ಠೆಯನ್ನು ಕಾಣಬಹುದಲ್ಲವೇ?

ಅಲ್ಲದೆ, ನಮ್ಮ ಕನ್ನಡ ಕವಿ 'ನಾಗಚಂದ್ರ'ನು ತನ್ನ 'ರಾಮಚಂದ್ರ ಚರಿತ ಪುರಾಣ'ದಲ್ಲಿ ರಾಮಾಯಣದೊಳಗಿನ ಸುಗ್ರೀವಾದಿ ವಾನರರು ವಾನರರಲ್ಲ ವಾನರಧ್ವಜರು ಎಂದು ಸಾರುತ್ತಾನೆ. ಅವರಿಗೆ ಬಾಲವು ಇದ್ದಿಲ್ಲವೆಂದು ಹೇಳುತ್ತಾನೆ. ಮಹಾಭಾರತದಲ್ಲಿಯೂ ಮಧ್ಯಮ ಪಾಂಡವನು ಕಪಿಧ್ವಜನಾಗಿರಲಿಲ್ಲವೇ? ಶ್ರೀಕೃಷ್ಣನು ಗರುಡಧ್ವಜನಲ್ಲವೇ? ಮಯೂರಧ್ವಜ, ಮರಾಳಧ್ವಜ, ಮುಂತಾದ ಇನ್ನೂ ಅನೇಕ 'ಧ್ವಜ'ಗಳು ಮಹಾಭಾರತದಲ್ಲಿ ಬರುವದಿಲ್ಲವೇ? ತಮ್ಮ ಪತಾಕೆಯ ಮೇಲೆ ತಮಗೆ ಇಷ್ಟವಾದ ಪ್ರಾಣಿಯ ಅಥವಾ ಪಕ್ಷಿಯ ಚಿತ್ರವನ್ನು ಬರೆಸಿಕೊಳ್ಳುವುದು ಆಗಿನ ರಾಜರಲ್ಲಿಯ ರೂಢಿಯಿದ್ದಿತು. ಶ್ರೀಕೃಷ್ಣನು ಗರುಡಧ್ವಜನಾದ ಮಾತ್ರಕ್ಕೆ ಅವನು ಗರುಡನೇ ಎಂದು ಹೇಳಲಿಕ್ಕೆ ಬರುವುದೇ? ಹಾಗೆಯೇ ವಾನರಧ್ವಜರನ್ನಾದರೂ 'ವಾನರ'ರೆಂದೇ ನಿರ್ದೇಶಿಸಲಾದೀತೇ?

'ದಕ್ಷಿಣಭಾರತದ ಅಡವಿಗಳಲ್ಲಿ ಹಲಕೆಲವು ಕನಿಷ್ಠ ಶ್ರೇಣಿಗತಿಯ ನರಭಕ್ಷಕ ತಂಡಗಳಿರಲಿಕ್ಕೆ ಸಾಕು' ಎಂದು ಶ್ರೀ. ಜೋಗಳೇಕರ ಪಾಂಡುರಂಗರಾಯರು ತಮ್ಮ ಲೇಖನದಲ್ಲಿ ಹೇಳಿರುವರು. 'ನರಭಕ್ಷಕರನ್ನು ಯಾವ ಹೆಸರಿನಿಂದ ಕರೆದರೇನು?' ಎಂದು ಶ್ರೀ ಗೋಪಾಲರವರು ಪ್ರಶ್ನಿಸಿರುವರು. ನಿಜ. ನರಭಕ್ಷಕರಿಗೆ ರಾಕ್ಷಸರೆಂದರೂ ಅಷ್ಟೇ, ಭೂತಪಿಶಾಚಗಳೆಂದರೂ ಅಷ್ಟೇ. ರಾವಣನು ಯಾವ ಆದಿದ್ರವಿಡ ಪಂಗಡದೊಡೆಯನಾಗಿದ್ದನೋ ಆ ಪಂಗಡದವರು ನರಭಕ್ಷಕರಿದ್ದರೆಂದು ಶ್ರೀ. ಪಾಂಡುರಂಗರಾಯರು ಹೇಳಿಲ್ಲ. ಲಂಕೆಯ ಮತ್ತು ಲಂಕಾನಿವಾಸಿಗಳ ರಾಮಾಯಣದೊಳಗಿನ ವರ್ಣನೆಯನ್ನು ನೋಡಿದರೂ ರಾವಣನಾಗಲಿ ಅವನ ಪಂಗಡವಾಗಲಿ ನರಭಕ್ಷಕರಾಗುವಷ್ಟು ಹೀನ ಸಂಸ್ಕೃತಿಯವರು ಇದ್ದಿಲ್ಲವೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ವಾಲ್ಮೀಕಿಯ 'ರಾವುಗನ್ನಡಿ'ಯಲ್ಲಿ ಲಂಕೇಶ್ವರನು ರಾಕ್ಷಸನಾಗಿ ಕಾಣುವುದೇನೋ ನಿಜ. ಆದರೆ ಅದು ದೋಷವು ಲಂಕಾಪತಿಯದಲ್ಲ. ರಾವುಗನ್ನಡಿಯನ್ನು ಹಿಡಿದ ವಾಲ್ಮೀಕಿ ಮುನಿವರ್ಯರದು. ಆರ್ಯರ ಎದುರಾಳಿಗಳಾದ ಮೂಲಕ ದ್ರವಿಡರು ವಾಲ್ಮೀಕಿಯ ಗ್ರಂಥದಲ್ಲಿ ಹೇಗೆ ಕಪಿಗಳಾದರೋ ಹಾಗೆಯೇ ರಾಮನಿಗೆ 'ತ್ರಾಹಿ ತ್ರಾಹಿ' ಎನಿಸಿದ ರಾವಣಾದಿಗಳು ರಾಕ್ಷಸರಾದುದೂ ಸಹಜವೇ.

'ವೇದಾಧ್ಯಯನತತ್ಪರನಾದ ವಾಲ್ಮೀಕಿ ಮುನಿಗೂ ಪ್ರಾಪಂಚಿಕ ವ್ಯವಹಾರದಲ್ಲಿ ನಿರತಳಾದ '...ಮೇಯೋ'ವಿಗೂ ಯಾವ ಹೋಲಿಕೆಯೂ ಸರಿ ಹೊಂದ...

ಲಾರದು' ಎಂದು ಶ್ರೀ. ಗೋಪಾಲರವರು ಸಾರಿದ್ದಾರೆ. ವೇದಾಧ್ಯಯನತತ್ಪರನಾಗಿದ್ದ ಮಾತ್ರಕ್ಕೆ ವಾಲ್ಮೀಕಿಯು ದೋಷಾತೀತನೆಂದು ಹೇಗೆ ಹೇಳುವುದು ? ಪ್ರಾಪಂಚಿಕ ವ್ಯವಹಾರದಲ್ಲಿ ನಿರತಳಾದ ಮಾತ್ರಕ್ಕೆ 'ಮಿಸ್ ಮೇಯೋ' ಳ ಯೋಗ್ಯತೆಗೆ ಭಂಗವೇನಿದೆ ? ಮುನಿನಾಥರಾದ ವಾಲ್ಮೀಕಿಯವರು ಮನುಷ್ಯರು ತಾನೇ ? ತಪ್ಪುಮಾಡುವುದು ಮನುಷ್ಯ ಸ್ವಭಾವ. ವಾಲ್ಮೀಕಿ ಮುನಿವರ್ಯರು ನಮ್ಮ-ನಿಮ್ಮಂಥವರಿಗಿಂತಲೂ ಯೋಗ್ಯತೆಯಲ್ಲಿ—ಸತ್ವದಲ್ಲಿ ಹೆಚ್ಚಿನವರು, ಮಹಾತ್ಮರು ಎಂದು ಹೇಳಬಹುದು. ಎಲ್ಲರಿಗೂ ಇರುವಂತೆ ನಮ್ಮ ಕಾಲಕ್ಕೆ ಸತ್ಯಮೂರ್ತಿಗಳಾದ ಗಾಂಧಿಜಿಯವರಿದ್ದಾರೆ. ಅವರು ಮಹಾತ್ಮರು; ಪೂಜ್ಯರು, ಪ್ರಾತಃಸ್ಮರಣೀಯರು. ಭಾರತೀಯರಿಗೊಬ್ಬರೇ ಏಕೆ ಅಖಿಲ ಪ್ರಪಂಚಕ್ಕೂ ಮಾನ್ಯವ್ಯಕ್ತಿಗಳು. ಆದರೆ ಅವರೂ ಮನುಷ್ಯರು. ಸ್ವತಃ ಅವರೇ ತಮ್ಮ ಬಾಯ್ದೆರೆಯಿಂದಲೇ 'ನಾನು ಹಿಮಾಲಯದಂತಹ ಎಷ್ಟೋ ದೊಡ್ಡ ತಪ್ಪುಗಳನ್ನು ಮಾಡಿದ್ದೇನೆ.' ಎಂದು ನುಡಿದಿದ್ದಾರೆ. ಅಂದ ಮೇಲೆ ತಪ್ಪು ಮಾನವನನ್ನೂ ಮುಪ್ಪಿನಂತೆ ಬೆಂಬತ್ತಿದೆಯೆಂದು ಹೇಳಬಹುದು. ವಾಲ್ಮೀಕಿಯವರೂ ತಮ್ಮ ರಾಮಾಯಣದಲ್ಲಿ ಎಷ್ಟೋ ತಪ್ಪುಗಳನ್ನು ಮಾಡಿದ್ದಾರೆ. ವಸ್ತುಸ್ಥಿತಿಯ ವಿದ್ರೂಪಗೊಳಿಸಿದ್ದಾರೆ. 'ಪ್ರಾಪಂಚಿಕ ವ್ಯವಹಾರದಲ್ಲಿ ನಿರತಳಾದ' 'ಮಿಸ್ ಮೇಯೋ'ಳು ವಸ್ತುಸ್ಥಿತಿಯ ವಿಪರ್ಯಾಸ ಮಾಡಿದರೆ 'ವೇದಾಧ್ಯಯನ ತತ್ಪರರಾದ ವಾಲ್ಮೀಕಿ ಮುನಿನಾಥರು' ವಿಪರ್ಯಾಸ ಮಾಡಲು ವಸ್ತುಸ್ಥಿತಿಯೇ ಇಲ್ಲದಂತಹ ಇತಿಹಾಸವನ್ನು ಬರೆದ ದೋಷಕ್ಕೆ ಗುರಿಯಾದುದು ಅತೀವ ಶೋಚನೀಯವಾದ ಸಂಗತಿ. ಪರರಾಷ್ಟ್ರೀಯಳಾದ 'ಮಿಸ್ ಮೇಯೋ'ಳು ತನಗೆ ಪರಕೀಯರಾದವರ ಮೇಲೆ ಕುತ್ಸಿತ ದೃಷ್ಟಿಯನ್ನಿಟ್ಟರೆ, ಏತದ್ದೇಶೀಯನಾದ ಆದಿದ್ರವಿಡ ವಾಲ್ಮೀಕಿಯು ಪರಕೀಯರಿಗೆ'ಫಿತೂರಿ'ಯಾಗಿ,ತನ್ನ ರಾಮಾಯಣದಲ್ಲಿ ಸ್ವಬಾಂಧವರಾದ, ಸ್ವಕೀಯರಾದ ದ್ರವಿಡಾದಿ ದ್ರವಿಡ ಜನಾಂಗಗಳ ಸಂಪೂರ್ಣ ಅವಹೇಳನೆಯನ್ನು ಮಾಡಿದ್ದಾನೆ. ಇದು ಪಕ್ಷಪಾತದ ಪರಾಕಾಷ್ಠೆಯಲ್ಲದೆ ಸ್ವಜನ ದ್ರೋಹದ ಪರಮಾವಧಿಯೂ ಅಹುದು. ಅಂದಮೇಲೆ ವಾಲ್ಮೀಕಿಯವರಿಗೆ ಶ್ರೀ. ಪಾಂಡುರಂಗರಾಯರು ಕೊಟ್ಟ ಹೋಲಿಕೆಯೊಂದೇ ಏಕೆ ಯಾವಹೋಲಿಕೆಯೂ ಸರಿ ಹೋಗಲಾರದು; ಏಕೆಂದರೆ ಇತಿಹಾಸ ಪ್ರಪಂಚದಲ್ಲಿ ಅಕ್ಷಮ್ಯ ಅಪರಾಧವನ್ನು ಮಾಡಿದ ಮಹನೀಯರಲ್ಲಿ ವಾಲ್ಮೀಕಿಯವರು 'ಉಪಮಾತೀತ'ರೇ ಇದ್ದಾರೆ.

[ಹಾವೇರಿಯ 'ಕೆಳೆಯರ ಕೂಟ'ದ 'ನನ್ನನುಡಿ' ಎಂಬ ಕೈಬರೆಹದ ಮಾಸಪತ್ರಿಕೆಯಿಂದ]

ಪ್ರಪಂಚ ಪರಿಚಯ

ತಲೆಗಿಂತ ಕಾಲು ಹೆಚ್ಚು !

ಮೊನ್ನೆಮೊನ್ನೆಯ ವರೆಗೆ ಯುರೋಪದ ಒಕ್ಕಲಿಗರು ತಲೆಗಲ್ಲ, ಕಾಲಿಗೆ ದಿಂಬನ್ನು ಇಟ್ಟುಕೊಂಡು ಮಲಗುತ್ತಿದ್ದರು ! ತಲೆಗಿಂತ ಕಾಲಿನ ದುಡಿಮೆ ಹೆಚ್ಚಾದುದರಿಂದ ಅದಕ್ಕೆ ಹೆಚ್ಚಿನ ಸೌಖ್ಯ ಕೊಡಬೇಕೆಂಬುದು ಅವರ ಅಭಿಪ್ರಾಯ.

* * *

ಮನುಷ್ಯನಿಗೂ ಅಷ್ಟು ಕಸುವಿದ್ದರೆ ?

ಗೊಬ್ಬರದ ಹುಳವು ತನ್ನ ತೂಕದ ೮೫೦ ಪಾಲು ಹೆಚ್ಚಿನ ಭಾರವನ್ನು ಹೊರಬಲ್ಲದು! ಮನುಷ್ಯನಿಗೂ ಅಷ್ಟೆ ಪ್ರಮಾಣದ ಕಸುವಿದ್ದರೆ ಎಪ್ಪತ್ತು ಟನ್ನಿನ ಭಾರವನ್ನು ಅವನು ಸಹಜವಾಗಿ ಹೊರಬಹುದಿತ್ತು.

* * *

ಗಂಡನಾದ ಮೇಲೆ ದರ್ಶನ !

ಕೋರಿಯದಲ್ಲಿ ಮದುವೆಯಾಗಿ ಎರಡು ದಿನಗಳ ವರೆಗೆ ಮದುಮಗಳು ವರನನ್ನು ನೋಡುವಂತಿಲ್ಲ. ಮದುಮಗಳು ಉತ್ಸುಕತೆಯಿಂದ ಎಲ್ಲಿಯಾದರೂ ಕದ್ದು ನೋಡಿಯಾಳೆಂದು ಮದುವೆ ನಡೆಯುವ ಎರಡು ದಿನಗಳೂ ಅವಳ ರೆಪ್ಪೆಗಳನ್ನು ಅಂಟನಿಂದ ಗಟ್ಟಿಯಾಗಿ ಅಂಟಿಸಿಬಿಡುತ್ತಾರೆ.

* * *

ಗಂಡಸರು ಅಂತಃಪುರದಲ್ಲಿ !

ಮ್ಯಾಲೇಶಿಯದ ಸಮಾಜಗಳಲ್ಲಿ ಹೆಂಗಸರೆ ಹಿರಿಯತನ ನಡೆಸುವವರು. ಅಲ್ಲಿಯ ದೈವುಳ್ಳ ಪ್ರದೇಶಗಳಲ್ಲಿ ಹೆಂಗಸರು ಗಂಡಂದಿರನ್ನು ಅಂತಃಪುರಗಳಲ್ಲಿಡುವುದೂ ಉಂಟು !

* * *

ಸರ್ವಾಧಿಕಾರಿಗಿಂತ ನಾಯಿ ಹೆಚ್ಚೇ ?

ಇಟಲಿಯ ಆಲ್‌ಬ್ರಿಘಿಯೆಂಬಲ್ಲಿ ಒಂದು ಪ್ರಕಟನಾಲಯದ ಅಧಿಕಾರಿಯು ತನ್ನ ನಾಯಿಯನ್ನು ಹೊಗಳುತ್ತ 'ನಿಜವಾಗಿ ಮುಸೊಲಿನಿಗಿಂತ ಈ ನಾಯಿಯ ಮೇಲೆ ನನ್ನ ಪ್ರೀತಿ ಹೆಚ್ಚು' ಅಂದು ಬಿಟ್ಟ. ಅದಕ್ಕೀಗ ಅನುಭವಿಸುತ್ತಿದ್ದಾನೆ ಐದು ವರ್ಷದ ಕಠಿನ ಶಿಕ್ಷೆ!

* * *

ಗಿಡ್ಡ ಜಪಾನಿಗಳ ದೊಡ್ಡ ಪಟಗಳು !

ಪ್ರತಿ ಬೇಸಿಗೆಯಲ್ಲಿ ಜಪಾನದ ಹಳ್ಳಿಗಳು ದೊಡ್ಡ ದೊಡ್ಡ ಪಟಗಳನ್ನು ಹಾರಿಸುವದರಲ್ಲಿ ಸ್ಪರ್ಧೆ ನಡೆಸುತ್ತಾರೆ. ಒಂದೊಂದು ಪಟವು ೩೦೦೦ ಚೌರಸ ಫೂಟು ದೊಡ್ಡದಾಗಿರುತ್ತದೆ. ಅದರ ಬೆಲೆ ಸುಮಾರು ೩೦೦೦ ರೂಪಾಯಿ! ಅದನ್ನು ಹಾರಿಸಲು ೨೦೦ ಮಂದಿ ಹಗ್ಗವನ್ನು ಹಿಡಿಯಬೇಕು.

* * *

ಪೃಥ್ವಿಗೂ ಏರಿಳಿವುಗಳಿವೆ !

ಸಮುದ್ರದ ಏರಿಳಿವುಗಳನ್ನು ನಾವು ಬಲ್ಲೆವು. ಹಾಗೆಯೆ ಪೃಥ್ವೀತಲವೂ ಏರಿಳಿಯುವುದನ್ನು ಮಾಡುತ್ತದಂತೆ! ಮುಂಬೈಯಿಂದ ಕಲ್ಕತ್ತೆಯ ನಡುವಿನ ಪ್ರದೇಶವು ದಿನಕ್ಕೆ ಎರಡಾವರ್ತಿ ೯ ಇಂಚು ಏರಿಳಿಯುವುದಂತೆ !

* * *

ದಿನಕ್ಕೆಷ್ಟಾಯಿತು ?

ಅಮೆರಿಕೆಯ ಜನರಲ್ ಮೋಟಾರ ಕಾರ್ಪೊರೇಶನ್ನಿನವರು ೪|| ಅಬ್ಜ ರೂಪಾಯಿಗಳ ಮೋಟಾರಗಳನ್ನು ಕಳೆದ ವರ್ಷ ಮಾರಿದರು. ಅದರಲ್ಲಿ ೫೦ ಕೋಟಿ ರೂಪಾಯಿ ಲಾಭವಂತೆ. ಒಟ್ಟು ೨೧ ಲಕ್ಷ ೧೭ ಸಾವಿರ ಮೋಟಾರಗಳು ಮಾರಲ್ಪಟ್ಟವು. ದಿನಕ್ಕೆಷ್ಟಾಯಿತು ?

* * *

ಕುಡುಕರ ಪ್ರಗತಿ !

ಕಳೆದ ವರ್ಷ ಇಡಿ ಜಗತ್ತಿನಲ್ಲಿ ಒಟ್ಟು ೪೫ ಅಬ್ಜ ಪೌಂಡಿನಷ್ಟು ಮದ್ಯದ ಮಾರಾಟವಾಯಿತು. ಇದು ಹಿಂದಿನ ವರ್ಷಕ್ಕಿಂತ ಮೂರು ಅಬ್ಜ ಹೆಚ್ಚಾದಂತಾಯಿತು. ಇದಲ್ಲವೆ ಪ್ರಗತಿ ?

ಧರ್ಮದ ಹುಡುಗಾಟ

ಧರ್ಮದ ಪರದೆಯ ಹಿಂದೆ ನಡೆವ ಸಾಮಾಜಿಕ ಅನಾಚಾರಗಳ ಚಿತ್ರವಿದು. ಸ್ಪಷ್ಟವಾಗಿಯೂ ಇದೆ; ನಿಷ್ಠುರವಾಗಿಯೂ ಇದೆ; ಆದರೆ ಅಸಂಭವನಿಯವಾದುದಲ್ಲ. ವಿವೇಕವಿದ್ದವರಿಗೆ ಸಮಾಜದ ಮೂಲೆ ಮೂಲೆಗಳಲ್ಲಿಯೂ ನೀತಿಗಳು ಸತ್ತು ಕೊಳೆತು ನಾರುತ್ತಿರುವದು ಕಂಡುಬರದಿರದು. ಈ ಹರಟೆಯಲ್ಲಿಯ ಮಾತುಗಳು ಬಿರುಸೆಂದು ಹಳಿಯಬೇಡಿ, ಅವುಗಳಲ್ಲಿ ಅಡಗಿರುವ ಸ್ವಸಮಾಜ ಸುಧಾರಣೆಯ ಪವಿತ್ರ ಬಯಕೆಯನ್ನು ಮನಗಂಡು ಮಾತಿನ ಬಿರುಸನ್ನು ನುಂಗಿರಿ. ಆದರೆ ಈ ಹರಟೆ ಹೊಡೆದವರ ಸಿಗರೇಟಿನ ಹೊಗೆಯನ್ನು ನುಂಗಿರೆಂದು ಅವರೂ ಅನ್ನುವದಿಲ್ಲ.

ಲೇಖಕರು: ಶ್ರೀ. ಜೋಗಳೇಕರ ಪಾಂಡುರಂಗರಾಯರು

ಅಥಾತೋ ಧರ್ಮಜಿಜ್ಞಾಸಾ !

ಮೊನ್ನೆ ಸುಭದ್ರಾಹರಣ ನಾಟಕ ನೋಡಲಿಕ್ಕೆ ಹೋಗಿದ್ದೆ. ನಾಟಕ ಮೊದಲಾಗಲಿಕ್ಕೆ ಇನ್ನೂ ತಡವಿತ್ತು. ಮುಂದಿನ ಸಾಲಿನಲ್ಲಿ ಕುಳಿತುಕೊಂಡು ಗೋಲ್ಡ್ ಫ್ಲೇಕ ಸಿಗರೇಟು ಹಚ್ಚಿ ಹೊತ್ತು ಕಳೆಯಹತ್ತಿದೆ. ಆ ಮೇಲೆ ನಾಟಕದ ಎಚ್ಚರಗಂಟೆಯಾಯ್ತು. ನೋಡುಗರು ಒಬ್ಬೊಬ್ಬಂಟಿಗರಾಗಿಯೂ, ಜೊತೆಯಾಗಿಯೂ, ತಂಡತಂಡವಾಗಿಯೂ ಬರಹತ್ತಿದರು. ನನ್ನ ಎಡಕ್ಕೆ ಬಂದು ಕುಳಿತರು—ದೀಕ್ಷಿತರು. ಅವರ ಜೊತೆಯಲ್ಲಿದ್ದರು—ಆಚಾರ್ಯರು. ನಾನು ಸಿಗರೇಟಿನ ಸುಗಂಧ ಹೊಗೆಯ ಕಾರ್ಮೋಡಗಳನ್ನು ಬಿಡಹತ್ತಿದೆ (?) ಪ್ರಾರಂಭಿಸಿದೆ. ಎಡದ ದೀಕ್ಷಿತರೂ ಆಚಾರ್ಯರೂ, ಬಲದ ನಮ್ಮ ಅರ್ಧಾಂಗಿಯವರೂ ನನ್ನ ಬಾಯಿಪ್ರಸಾದ ಪುನೀತ ಧೂಮದ ಮುಸುಕಿನಲ್ಲಿ ಉಸುರುಗಟ್ಟಿದವರಂತೆ ತಳಮಳಿಸಹತ್ತಿದರು. 'ಬೇಗೆ ಹತ್ತಲಿ ನಿಮ್ಮ ವ್ಯಸನಕ್ಕೆ' ಅಂದರು ನಮ್ಮ ಅರ್ಧಾಂಗಿಯವರು. ನಾನು ಉತ್ತರಿಸಿದೆ, 'ಬೇಗೆ ಹತ್ತಿಯೇ ಇದೆ ನಮ್ಮ ವ್ಯಸನಕ್ಕೆ,' ಹೀಗೆಂದು ಸುಡುವ ಸಿಗರೇಟು ಮುಂದೆ ಹಿಡಿದೆ. 'ನನ್ನ ಜೊತೆಗೆ ನೀನೂ ಸಿಗರೇಟು ಸೇದಲಿಕ್ಕೆ ಹತ್ತು, ಅಂದರೆ ಈ ಹೊಗೆ ನಿನಗೆ ಅಸಹ್ಯವಾಗಲಿಕ್ಕಿಲ್ಲ. ಅಂದರೆ ನನ್ನಂತೆ ನೀನೂ ಆದನ್ನು ಕಡುಪ್ರೀತಿಯಿಂದ ನುಂಗುವೆ' ಎಂದೆ. 'ಸಾಕು ನಿಮ್ಮ ಹುಡುಗಾಟ,' ಎಂಬ ನಿತ್ಯದ ಉತ್ತರ ಸಿಕ್ಕಿತು ನನಗೆ. ಝುಣ್ ಝುಣಲ್ ! ಝುಣ್ ಝುಣಲ್ !

ನಮ್ಮಿಬ್ಬರ ಸಲಿಗೆಯ ಸಂವಾದ ಕೇಳಿ ವಿಪ್ರದ್ವಯರಿಗೆ ಮುಗುಳ್ನಗೆ ಬಂದಿತು. ಅವರಿಗೂ ನನಗೂ ಬಹಳ ಸಲಿಗೆ. ಸನಾತನಿಗಳಾದರೂ ಅವರಿಗೆ ನನ್ನಂಥ ನವಮತವಾದಿಗಳ ವಿಷಯಗಳಲ್ಲಿ ಸಹಿಷ್ಣುತೆ ! "ರಾಯರೇ, ಇನ್ನೇನು ! ಹೆಣ್ಣುಮಕ್ಕಳು ಸಿಗರೇಟು ಸೇದುವದೊಂದು ಉಳಿದಿದೆ. ಗಂಡಸರು ಮಾಡುವದೆಲ್ಲವನ್ನೂ ಅವರು ಮಾಡುತ್ತಿದ್ದಾರೆ. "ಕಾಲಾಯ ತಸ್ಮೈ ನಮಃ !" ಅಂದರು ದೀಕ್ಷಿತರು. ಕೂಡಲೆ ಆಚಾರ್ಯರು ಪ್ರತ್ಯುತ್ತರಿಸಿದರು, "ರಾಯರೇ, ಈ ಸೇದುವ ಚಟವನ್ನು ಮಾತ್ರ ಆದಷ್ಟು ಬೇಗ ಬಿಡಬೇಕು ನೀವು. ತಾವು ಅಧ್ಯಾಪಕರು. ಗುರುಗಳಂತೆ ವಿದ್ಯಾರ್ಥಿಗಳು. 'ಯದ್ಯದಾಚರತಿ ಶ್ರೇಷ್ಠಃ ತತ್ತದೇವ ಇತರೋ ಜನ:' ಬಿಡುವದಾಗದಿದ್ದರೆ ಕದ್ದುಮುಚ್ಚಿಯಾದರೂ ಸೇದಬೇಕು" ಎಂದರು. ಸುವಾಸಿಕ ಹೊಗೆಯ ಪ್ರಚಂಡ ಮೋಡವೊಂದನ್ನುರುಳಿಸಿ ನಾನು ಆಚಾರ್ಯರಿಗೆ ಅಂದೆ, 'ದುಶ್ಚಟವನ್ನು ಬಿಡಬೇಕೆನ್ನುವ ನಿಮ್ಮ ಉಪದೇಶ ಯೋಗ್ಯವೆ ! ಆದರೆ, ಆದನ್ನು ಬಿಡಲಿಕ್ಕೆ ಆಗದಿದ್ದರೆ ಕನಿಷ್ಠ ಕದ್ದುಮುಚ್ಚಿಯಾದರೂ ಸೇದಬೇಕು ಎಂದು ನೀವು ಮಾಡುವ ಉಪದೇಶ ಮಾತ್ರ ನನಗೆ ಸರಿದೋರದು. ಮುಚ್ಚುಮರೆ ನನಗೆ ಸೇರುವುದಿಲ್ಲ. ಸಾಧಿಸುವುದೂ ಇಲ್ಲ. ಮೇಲಾಗಿ ಧೂಮ್ರಪಾನದ ವ್ಯಸನವನ್ನು ಬಚ್ಚಿಡುವದು ಅಸಾಧ್ಯ ! ನೋಡಿ, ಆಚಾರ್ಯರೇ, ಹಲವು ಚಟಗಳು ದೃಶ್ಯವಾದವುಗಳು, ಹಲವು ಚಟಗಳು ಅದೃಶ್ಯವಾದವುಗಳು. ಧೂಮ್ರಪಾನವು ಕಣ್ಣಿಗೆ ಕಾಣುವ ಚಟವು. ಕಣ್ಣಿಗೆ ಕಾಣದ, ಕಾಣಲಿಕ್ಕೆ ಬರದಂತೆ ಮಾಡಬಹುದಾದ ದುಶ್ಚಟಗಳೆಂದರೆ ನಸ್ಯ, ಮದ್ಯಪಾನ, ವ್ಯಭಿಚಾರ ಮುಂತಾದವುಗಳು. ನಸ್ಯವು ದುಶ್ಚಟಗಳಲ್ಲಿ ಶಿಷ್ಟವಾದುದು. ಮದ್ಯಪಾಯಿಗಳು ರಾತ್ರಿ ಕೋಣೆಯಲ್ಲಿ ಕುಡಿದು ಕಾಡು ಕೋಣನಂತೆ ಕಾದಾಡಿದರೂ, ಹಗಲು ಒಳ್ಳೇ ಸಂಭಾವಿತರಂತೆ ಮೆರೆಯುವರಲ್ಲವೇ ? ಇನ್ನು ವ್ಯಭಿಚಾರ ! ವ್ಯಭಿಚಾರದಲ್ಲಿ ಎರಡು ಮುಖ್ಯ ವಿಧ: ಗುಪ್ತ ಮತ್ತು ವ್ಯಕ್ತ ಎಂಬುದಾಗಿ. ವ್ಯಕ್ತವು ಬೇಗ ಬೈಲಿಗೆ ಬರುವಂತಹದು; ಗುಪ್ತವು

ಮಾತ್ರ ಬೇಗನೆ ಬೈಲಿಗೆ ಬೀಳುವದಿಲ್ಲ. ಯಾಕಂದರೆ ಅದನ್ನು ಮುಚ್ಚಲಿಕ್ಕೆ ಸನಾತನ ಧರ್ಮದ ಜರದ ಶಾಲು ಇರುತ್ತದೆ ಆ ವಿಷಯಲಂಪಟರಿಗೆ. ಶ್ರೀಕೃಷ್ಣನ ಶೃಂಗಾರ ಚೇಷ್ಟೆಗಳನ್ನು ಸ್ವಾರಸ್ಯವಾಗಿ ಬಾಲವಿಧವೆಗಳಿಗೆ ಬಣ್ಣಿಸಿ, ಅವರ ಶೃಂಗಾರಪ್ರವೃತ್ತಿ ಸಮಾಗಯನ್ನು ಕದ್ದು ಮುಚ್ಚಿ, ತಾವು ಉಪಯೋಗಿಸಲಿಕ್ಕೆ ಬೇಕಾದಷ್ಟು ಆಸ್ಪದ ವಿದೆ ಹಲವು ಪುರಾಣಿಕರಿಗೆ! ಇದರಿಂದ ಗರ್ಭ ನಿಂತರೆ ಪಾಪ ಹಲವರು ಕೆರೆಬಾವಿ ಬೀಳುವರು. ಹಲವರು ವಿಠ್ಠಲ ದರ್ಶನಕ್ಕೆಂದು ಪಂಢರಪುರಕ್ಕೆ ಹೋಗಿ ಹೊತ್ತ ಗರ್ಭವನ್ನು ಯಾರಿಗೂ ತಿಳಿಯದಂತೆ, ಮಾತ್ರ ವಿಠ್ಠಲನ ಸಾಕ್ಷಿಯಾಗಿ, ಇಳಿಸಿ ಮತ್ತೆ ಪುರಾಣಿಕರ ಸನ್ನಿಧಾನಕ್ಕೆ ಮರಳುವರು; ಮತ್ತೆ ಮಡಿನೀರು, ಮಡಿಅಡಿಗೆ, ಪುರಾಣಶ್ರವಣಾದಿಗಳಲ್ಲಿ ತೊಡಗುವರು. ಆಚಾರ್ಯರೇ, ಇಂಥ ಅದೃಶ್ಯ ದುಶ್ಚಟಗಳು ನನ್ನಂಥ ಬಿಚ್ಚು ಮಾತಿನ ಬಿಚ್ಚು ನಡತೆಯ ಹೊಸಬನಿಗೆ ನೀಗವು. ಜರದ ಶಾಲು ನನಗೆಲ್ಲಿದೆ? ತಣ್ಣಗಾದರು ಆಚಾರ್ಯರು. ದೇಶಾವರಿ ನಗೆ ನಕ್ಕರು ದೀಕ್ಷಿತರು. ಝುಣ್ ಝುಣಲ್. ಏರಿತು ಮೇಲಕ್ಕೆ ತೆರೆ.



ಅರ್ಜುನ ಸನ್ಯಾಸಿ

ಕಾಡಿಗ್ಗಪ್ಪಾದ ಮುಖಕಾಂತಿಯನ್ನು ತಿಳಿ ಹಳದೀ ಬಣ್ಣದಿಂದ ಮುಚ್ಚಿಕೊಂಡ ಸೂತ್ರಧಾರನು ಯಥಾವಿಧಿ ನಾಂದೀ ಗೀತವನ್ನು ಅಂದು, ಸ್ವಾಭಾವಿಕವಾಗಿ ಗಂಡಸಿದ್ದರೂ ಆಗ ನಟಿಯಂತೆ ನಟಿಸುವ ತನ್ನ ಗೆಳೆಯನೊಡನೆ 'ಪ್ರಿಯೆ, ತೆರೆಯೊಳಗಿನ ಕೆಲಸವು ತೀರಿದ್ದಾದರೆ ಇತ್ತ ಬಾ—'ಇತ್ಯಾದಿ ಅಸಂಬಂಧ್ಧ ಹಳಸಿದ ಮಾತು ನಡೆಸಿದ. ನಾಟ್ಯಗೃಹದಲ್ಲಿ ಇನ್ನೂ ಹರಟೆ ನಡೆದೇ ಇತ್ತು. ದೀಕ್ಷಿತರಿಗೆ ನಾನೆಂದೆ, 'ನೋಡಿ ದೀಕ್ಷಿತರೇ, ಕವಿಶ್ರೇಷ್ಠ ಶೇಕ್ಸಪಿಯರನು ಅನ್ನುವದು ಸುಳ್ಳಲ್ಲ. ಇಡಿಯ ಪ್ರಪಂಚವೇ ಒಂದು ಪ್ರಚಂಡ ರಂಗಮಂದಿರವು. ನಾವು ನೀವುಗಳೆಲ್ಲರೂ ಆಯಾ ಭೂಮಿಕೆಗಳನ್ನು ಹೊತ್ತ ನಟರು. ಅಹುದಲ್ಲೋ! ನೋಡಿ! ಈಗ ನಮ್ಮ ಮುಂದೆ ರಂಗಭೂಮಿಯ ಮೇಲೆ ನಡೆವ ಕ್ಷಣಿಕ ನಾಟಕಕ್ಕೂ, ಇಡಿಯ ಪ್ರಪಂಚದಲ್ಲಿ ಸದಾ ಸರ್ವ ಕಾಲಕ್ಕೂ ನಡೆವ ನಾಟಕಕ್ಕೂ ಯಾವ ಹೆಚ್ಚು ಕಡಿಮೆ ಇದೆ? ನಮ್ಮೆದುರಿಗಿನ ಈ ನಟಿಯನ್ನು ನೋಡಿ. ಇರುವದು ಗಂಡಸು ತೋರುವುದು ಹೆಣ್ಣಿನಂತೆ. ಇರುವುದೊಂದು ತೋರುವುದೊಂದು.. ಅದೇ ರೀತಿ ಪ್ರಪಂಚದಲ್ಲಿ. ನಿಜವಾಗಿ ಇರುವುದು ಪಾಖಂಡಿಗಳಂತೆ, ನೀತಿಶೂನ್ಯರಂತೆ: ತೋರುವುದು ಭಾವಿಕರಂತೆ, ನೀತಿವಂತರಂತೆ! ರೂಢಿವಿರುದ್ಧವೆಂಬುದಾಗಿ ವಿಧವಾವಿವಾಹಕ್ಕೆ ಮಾತಿನಲ್ಲಿ ವಿರೋಧ ಮಾಡುವರು. ಮುಚ್ಚುಮರೆಯಲ್ಲಿ ಆ ಅಸಹಾಯ ಪ್ರಾಣಿಗಳ ಮೇಲೆ ಗರ್ಭಧಾರಣೆಯ ವರದ ಹಸ್ತವಿಟ್ಟು, ಊರು ಸುಟ್ಟರೂ ಹನುಮಪ್ಪ ಹೊರಗೆ ಎಂಬಂತೆ, ತಮ್ಮ ವಂಚನೆಗೀಡಾದ ಆ ಬಡ ಪ್ರಾಣಿಗಳನ್ನು ಮನ ಬಂದಂತೆ ಹಳಿಯಲಿಕ್ಕೂ ಹೇಸುವದಿಲ್ಲ ಈ ಢಾಂಭಿಕರು. ಕದ್ದು ಮುಚ್ಚಿ ವಿಧವಾ ಸಮಾಗಮ ಮಾಡಿದರೆ ಕೆಡುವದಿಲ್ಲ ನಿಮ್ಮ ಸನಾತನ ಧರ್ಮ; ಮುರಿಯುವದಿಲ್ಲ ನಿಮ್ಮ ಪರಂಪರಾಗತರೂಢಿ! ಹಕ್ಕ ಹಗಲಿನಲ್ಲಿ, ಬಟ್ಟ ಬಯಲಲ್ಲಿ ವಿಧವೆಯನ್ನು ಮದುವೆಯಾಗಿ, ಅವಳ ಸಮಾಗಮದಿಂದ ಜನಿಸುವ ಅಪತ್ಯಗಳನ್ನು ಅಕ್ಕರದಿಂದ ಸಲುಹಲು ಸಿದ್ಧರಾಗುವ ಬಿಚ್ಚು ಮಾತಿನ, ಬಿಚ್ಚು ನಡತೆಯ ಗಂಡೆದೆಯ ನವಮತವಾದಿಗಳ ವಿಧವಾವಿವಾಹದಿಂದ ಮಾತ್ರ ಕೆಡುವದು ನಿಮ್ಮ ಸನಾತನ ಧರ್ಮ! ಹೇಗಿದೆ ನಿಮ್ಮ ಸನಾತನಿಗಳ ನಾಟಕ? ನಾಟಕದೊಳಗಿನ ನಟರಂತೆ ನೀವೂ ಇರುವಂತೆ ಎಂದೂ ತೋರುವವರು ಆಡುವಂತೆ ಮಾಡುವವರಲ್ಲ! ನಿಮ್ಮ ಸನಾತನ ಧರ್ಮದ ರಹಸ್ಯವನ್ನು ಸಾರರೂಪವಾಗಿ ಹೀಗೆ ಹೇಳಬಹುದಲ್ಲವೇ? ರೂಢಿಗೆ ವಿರುದ್ಧವಾದುದನ್ನು ಕೈಯಿಂದ

ಮಾಡುತ್ತಿದ್ದರೂ ಮಾಡಬಹುದೆಂದು ಬಾಯಿಂದ ಎಂದೂ ನುಡಿಯಬೇಡಿ. ಮಾಡಿದರೂ ಮಾಡಿದೆವೆಂದು ಒಪ್ಪಬೇಡಿ. ಅದೇಕೆ ಕೃತಿಯಲ್ಲಿ ರೂಢಿಯನ್ನು ಮುರಿದರೂ, ಮಾತಿನಲ್ಲಿ ಮಾತ್ರ ರೂಢಿಯನು ಎಂದಿಗೂ ಮುರಿಯಬಾರದೆಂಬ ಡಂಗುರವನ್ನು ಸಾರಲಿಕ್ಕೆ ಮರೆಯಬೇಡಿ. ಸಾರಾಂಶ 'ಶಾಸ್ತ್ರಂವದ ಆಧರ್ಮಂಚರ ಧರ್ಮಃ ಸನಾತನಃ' ಅಹುದಲ್ಲವೋ ಈ ನಿಮ್ಮ ಸನಾತನ ಧರ್ಮದ ಮರ್ಮ?'

ನಾಟಕವು ನಡೆದೇ ಇದ್ದಿತು. ಅಂಕಿನ ತೆರೆ ಬಿದ್ದಾಗ ನಮ್ಮ ಸಂವಾದ ನಡೆದಿದ್ದಿತು. ವಿಪ್ರವರ್ಯರು ನಾಟಕವನ್ನು ನೋಡುವಲ್ಲಿ ಮಗ್ನರಾದಂತೆ ತೋರಿದರು. ಮನೋರಂಜನಕ್ಕಾಗಿ ನಾಟಕಕ್ಕೆ ಬಂದು, ವಾದವಿವಾದ ಮಾಡಿ ಮನಸ್ತಾಪ ಮಾಡಿಕೊಳ್ಳಬಾರದಾಗಿ ಎಚ್ಚರಿಸಿದರು ನನ್ನ ಅರ್ಧಾಂಗಿಯವರು. ಅದು ಸಲಿಗೆಯ ಸಂವಾದ, ಗಂಭೀರವಾದ ಜಗಳವಲ್ಲವೆಂದು ನಾನು ಸಮಾಧಾನ ಹೇಳಿದೆ. "ಮುನಿವೃತ್ತಿಗೆ ಎಷ್ಟೂ ಸಲ್ಲದ ಚಾಡಿಗಾರಿಕೆಯಲ್ಲಿ ಪದೇ ಪದೇ ಭಾಗವಹಿಸುವ ನಾರದ ಮುನಿಗಳು ಸುಭದ್ರಾಹರಣಕ್ಕಾಗಿ ತ್ರಿದಂಡೀ ಸನ್ಯಾಸವನ್ನು ತಾಳಬೇಕಾಗಿ ಬೋಧಿಸಿದರು ಅರ್ಜುನನಿಗೆ" ಎಂದೆ ದೀಕ್ಷಿತರಿಗೆ. "ಪುರಾಣದೊಳಗಿನ ಕಲಹತೀರ್ಥ ನಾರದರ ಈ ಸನಾತನ ಗುಣವನ್ನು ಅಸಂಖ್ಯ ಸನಾತನಿಗಳು ಈ ಪ್ರಪಂಚ ನಾಟಕದಲ್ಲಿ ಮುಂದುವರಿಸುತ್ತಿರುವರಲ್ಲವೇ? ಕಂಡ ಮನೆಯಲ್ಲಿ ಕಾಲಿಟ್ಟು, ಅಲ್ಲಲ್ಲಿ ಒಡಕಿನ ಬೀಜ ಬಿತ್ತುವದು. ರೂಢಿಮೂಢ ಹೆಂಡಂದಿರನ್ನು ತಮ್ಮ ಕಡೆ ಒಡೆದುಕೊಂಡು ಗಂಡಂದಿರನ್ನು ಕಾಡಿಸುವದು, ಅವರ ದ್ರವ್ಯಹರಣ ಮಾಡುವದು, ಮುಂದೆ ಭಲಾ ಎಂದು ಹಿಂದೆ ನಿಂದಿಸುವದು, ಉಚ್ಚಾರದಲ್ಲಿ 'ನಾರಾಯಣ' 'ನಾರಯಣ,' ಆಚಾರದಲ್ಲಿ ಸ್ವಾರ್ಥಪರಾಯಣ! ನಮ್ಮ ನಾಟ್ಯಕಲಾವಿಶಾರದ ಸನಾತನ ತಂಡದಲ್ಲಿ ಅಸಂಖ್ಯಾತರು ಈ ಭೂಮಿಕೆಯನ್ನು ಹೊತ್ತವರಲ್ಲವೇ ದೀಕ್ಷಿತರೇ?" "ಅಯ್ಯೋ ಬೇಕಾದಷ್ಟು ಜನ ನಾರದರ ಸಂಪ್ರದಾಯ ನಡೆಸುವರು ನಮ್ಮಲ್ಲಿ" ಆಚಾರ್ಯರು ಅಂದರು. "ಸುಭದ್ರಾಹರಣಕ್ಕಾಗಿ ಖೊಟ್ಟಿ ಸನ್ಯಾಸವನ್ನು ಹೊತ್ತ ಈ ಅರ್ಜುನನ ಬಗ್ಗೆ ನಿಮ್ಮದೇನು ಅಭಿಪ್ರಾಯ?" ಎಂದು ನಾನು ಕೇಳಲು, "ಅದೇನು ಕೇವಲ ವಿನೋದ. ಶ್ರೀಕೃಷ್ಣನ ಸಹಕಾರದಿಂದಲೇ ಹೂಡಿದ ಒಂದೊಂದು ಕಪಟ ನಾಟಕ" ಅಂದರು ಆಚಾರ್ಯರು. ದೀಕ್ಷಿತರು ಅವರನ್ನು ಅನುಮೋದಿಸಿದರು. 'ವರನಾ... ಯಣರ ಪ್ರಣಯಲೀಲೆಗಳವು." ನಾನಂದೆ "ಸುಭದ್ರೆಯನ್ನು ಮದುವೆಯಾಗುವ ಇಚ್ಛೆಯನ್ನಿಟ್ಟುಕೊಂಡೇ ಅರ್ಜುನನು ಸುಳ್ಳು ಸನ್ಯಾಸ ತಾಳಿದನಷ್ಟೇ? 'ಅರ್ಜುನ ಸನ್ಯಾಸ'ವು ಅಕ್ಷಮ್ಯವಲ್ಲ! ಒಬ್ಬ ವಿಧವೆಯನ್ನು ವಿವಾಹಿಸುವ ಉದ್ದೇಶದಿಂದ ಅವಳ ಪ್ರಣಯಾರಾಧನೆಯನ್ನು ಮಾಡಿದರೆ, ನಾನೇನೂ ದೋಷ ಹೊರಿಸಲಿಕ್ಕಿಲ್ಲ—ಅವನ ಮೇಲೆ; ಆದರೆ, ವಿಧವೆಗಳ ವಿವಾಹವು ಶಾಸ್ತ್ರವಿರುದ್ಧ! ರೂಢಿ ವಿರುದ್ಧ! ಬ್ರಾಹ್ಮಣ-ಅಬ್ರಾಹ್ಮಣ ವಿವಾಹವು ನಿಷಿದ್ಧವಂತೆ! ಆದರೆ, ದೀಕ್ಷಿತರೇ ನೀವೇ ಹೇಳಿ, ಬ್ರಾಹ್ಮಣ-ಅಬ್ರಾಹ್ಮಣರ ಗುಪ್ತ ಆದೇಕೆ ಪ್ರಕಟ ವ್ಯಭಿಚಾರ ಮಾತ್ರ ರೂಢಿಮೂಢರಿಗೆ ನಿಂದ್ಯವೆನಿಸುವದಿಲ್ಲ! ಇದಕ್ಕೇನೆನ್ನಬೇಕು? ಇದೇನು ನೀತಿಯ ನಾಟಕವೋ? ಅಥವಾ ನಾಟಕದ ನೀತಿಯೋ? ಇದೇನು ಧರ್ಮದ ಹುಡುಗಾಟವೋ ಅಥವಾ ಹುಡುಗಾಟದ ಧರ್ಮವೋ?"

ಸುಭದ್ರೆಯನ್ನು ಓಡಿಸಿಕೊಂಡು ಹೋಗಿ ಬಿಟ್ಟ ಅರ್ಜುನ. ಸಿಟ್ಟುಗೆದ್ದ; ದವಡೆ ಕಚ್ಚಿದ; ಗದ್ದರಿಸಿದ ಬಲರಾಮ. ಒಳಸಂಚಿನಲ್ಲಿ ಸೂತ್ರಧಾರನಾದ ಶ್ರೀಕೃಷ್ಣನು ಹಾಗೂ ಹೀಗೂ ರಮಿಸಿದ ಸಂತಪ್ತ ಬಲರಾಮನನ್ನು. ತೆರೆ ಬಿದ್ದಿತು. ಎಲ್ಲರೂ ಸುಖಾಂತ ನಾಟಕದ ಕೊನೆಯ ಆನಂದದಿಂದ ನಲಿದಾಡುತ್ತ ಆಟದ ಮನೆ ಬಿಟ್ಟರು. ನಾವೂ ಹೊರಟೆವು. ಒಜ್ಜೆಗಾಲಿನಿಂದ ಮನೆಗೆ ಮರುಳುವ ಕೆಲವು ಖಿನ್ನ ಬಾಲವಿಧವೆಯರನ್ನು ಕಂಡು, ಅವರನ್ನು ಅಂಥ ಅಸಹ್ಯಗತಿಗೀಡುಮಾಡಿದ ದುಷ್ಟ ರೂಢಿಯ ಬಗ್ಗೆ ನನಗೆ ಹೆಚ್ಚಿನ ಸಂತಾಪವಾಯಿತು! ಆ ವಿಧವೆಗಳಲ್ಲಿ ದೀಕ್ಷಿತರ ಮಗಳೂ ಇದ್ದಳು. ನಾನೆಂದೆ ಅವರಿಗೆ—"ದೀಕ್ಷಿತರೇ, ಈ ಬಡ ವಿಧವೆಯರ ಸ್ಥಿತಿಗತಿಗಳನ್ನು ವಿಧವೆಗಳ ಕಣ್ಣಿನಿಂದ ತುಸು ನೋಡಿರಿ! ನಿಮ್ಮ ಕಠೋರ ರೂಢಿಯಿಂದ ಪರೆ ಬಂದ ಕಣ್ಣಿನಿಂದ ನೋಡಬೇಡಿರಿ. ನೀವು ಐವತ್ತನೆಯ ವರುಷದಲ್ಲಿ ಮತ್ತೆ ಮದುವೆಯಾದಿರಿ; ಬೇಕಾದಷ್ಟು ಸಂಸಾರ ಸುಖಪಡೆದು, ನಾಲ್ಕೆಂಟು ಮಕ್ಕಳನ್ನು ಹಡೆದರೂ, ಐವತ್ತನೆಯ ವರ್ಷದಲ್ಲಿ ಒದಗಿದ ವಿಧುರಾವಸ್ಥೆ ನಿಮಗೆ ತಾಳಲಾಗಲಿಲ್ಲ; ಆದರೆ, ಪತಿಸಂಯೋಗವನ್ನು ಐವತ್ತೇ ದಿನ ಅನುಭವಿಸಿ ಗಂಡನನ್ನು ಕಳಕೊಂಡ ಆ ಚಿಕ್ಕ ಪ್ರಾಯದ ಹೆಣ್ಣುಮಗಳು ಇನ್ನೂ ಐವತ್ತು ಅರವತ್ತು ವರುಷಗಳನ್ನು ಹೇಗೆ ಕಳೆಯಬೇಕು, ಅವಿವಾಹಿತ ದೆಸೆಯಲ್ಲಿ? ಅವಳಿಗೇನು ವಿಷಯವಾಸನೆಯೇ ಇಲ್ಲವೋ? ಅವಳು ನಮ್ಮ ಹಾಗೆ ಮಾನವಳೇ ಅಲ್ಲವೋ? ಪಾಪ!

ಅವಳನ್ನು ದುಡಿಸುವವರೇ ಎಲ್ಲರೂ. ಆದರೆ, ಅವಳ ಸುಖ ದುಃಖಗಳ ವಿಚಾರ ಮಾಡುವ ಒಬ್ಬನಾದರೂ ಸಹೃದಯನು ಇರುವನೇ, ನಿಮ್ಮ ರೂಢಿ ಮೂಢರ 'ದಡ್ಡಿ'ಯಲ್ಲಿ? ರೂಢಿಯಂತೆ, ಶಾಸ್ತ್ರವಂತೆ! ಗಂಡಸರ ಪಕ್ಷಪಾತಿಯಾದ, ಉಚ್ಚವರ್ಣೀಯರ ಪಕ್ಷಪಾತಿಯಾದ! ನಿಮ್ಮ ಶಾಸ್ತ್ರಕ್ಕೆ ಬೇಗೆ ಹಚ್ಚಬೇಕು ಆದಷ್ಟು ಬೇಗ."

ಆಚಾರ್ಯರಿಗೆ ತುಸು ಹುರುಪು ಬಂದಿತು. ನಮ್ಮ ಅರ್ಧಾಂಗಿಯವರೂ ತಮ್ಮ ಗೆಳತಿಯರೊಡನೆ ಮಾತಾಡುತ್ತ ಹಿಂದುಳಿದಿದ್ದರು. ನಮ್ಮ ಸಮೀಪದಲ್ಲಿ ಯಾರೂ ಇದ್ದಿಲ್ಲ. ಆಚಾರ್ಯರಂದರು, "ಎಲ್ಲಿಯ ಶಾಸ್ತ್ರ ಎಲ್ಲಿಯ ಪುರಾಣ, ರಾಯರೇ, ಯಾರ ನಂಬಿಗೆ ಇದೆ ಇವುಗಳಲ್ಲಿ? ಬರಿಯ ಸೋಗು ಇದೆಲ್ಲ. ನಮ್ಮ ದೀಕ್ಷಿತರನ್ನೇ ನೋಡಿರಿ, ಐವತ್ತನೆಯ ವರ್ಷಕ್ಕೆ ಮತ್ತೆ ಹದಿನೈದು ವರ್ಷದ ಹೊಸ ಹೆಂಡತಿಯನ್ನು ಮಾಡಿಕೊಂಡು, ಸಾಲದಾಗಿ ಮೇಲೆ ಒಂದು 'ಕಕ್ಷ' ಇಟ್ಟಿದ್ದಾರೆ—ಕಟಕರ ಓಣಿಯಲ್ಲಿ ಐವತ್ತು ವರ್ಷದ ಈ ಮುದುಕರಿಗೆ, ಮದುವೆಯ ಹೆಂಡತಿ ಬೇಕು! ಮೇಲೊಂದು ....ಬೇಕು! ಅದೇ ಶೋಭನವಾಗಿ ಎರಡೇ ತಿಂಗಳೊಳಗಾಗಿ ವಿಧವೆಯಾದ ಇವರ ಮಗಳು ಜೋಗಿಯಂತೆ ವೈರಾಗ್ಯವನ್ನು ತಾಳಿ, ಇಡೀ ಜೀವನ ಕಳೆಯಬೇಕಂತೆ! ರಾಯರೇ, ನೀವು ಹೇಳುವಂತೆ ಇದೆಲ್ಲ ಒಂದು ಕಪಟನಾಟಕ ನಮ್ಮದು. ಮತ್ತೆ ಇವೆಲ್ಲ ಡಾಂಭಿಕತನ, ದುರಾಚಾರ, ನಮ್ಮ ಸಮಾಜಕ್ಕೆ ಗೊತ್ತಿಲ್ಲವೆಂತಲ್ಲ. ಅದೊಂದು ಎಲ್ಲರಿಗೂ ಗೊತ್ತಿದ್ದ ಗೌಪ್ಯವು. ಆದರೂ ಗೊತ್ತಿಲ್ಲದವರಂತೆ ಸೋಗು ಮಾಡುತ್ತಾರೆ ಎಲ್ಲರೂ. ನೋಡಿರಿ, ನಮ್ಮಿಂದಲೂ ಹಲಕೆಲವು ಸಲ ಅಚಾತುರ್ಯವಾಗಿದೆ. ನೀವೂ ಬಲ್ಲಿರಿ ಅದನ್ನು; ಆದರೂ, ಶ್ರಾದ್ಧ ಪಕ್ಷಕ್ಕೆ ನಮ್ಮಂತಹರನ್ನು ನೀವು ಕರೆದು, ನಿಮ್ಮ ಪಿತೃಗಳ ಪ್ರತಿನಿಧಿಗಳೆಂಬುದಾಗಿ, ನಮಗೆ "ಸುಖೇನೈವ ಭೋಕ್ತವ್ಯಂ" ಎಂದು ನಮ್ಮ ಪಾದ ಹಿಡಿದು ವಂದಿಸುವಿರಿ. ನೋಡಿರಿ ರಾಯರೇ, ನೀವೆಲ್ಲ ಹಾಗೆ ಮಾಡುವಾಗ ನಮಗೆ ನಿಜವಾಗಿ ನಾಚಿಕೆ ಬರುತ್ತದೆ."

ನಾನು ಕೂಡಲೇ ಕೇಳಿದೆ, "ಎಷ್ಟು ದಿನ ನಡೆಯಬೇಕು ಈ ಕಪಟ ನಾಟಕ ನಮ್ಮ ಸಮಾಜದಲ್ಲಿ? ನಮ್ಮೆಲ್ಲರಿಗೂ ಗೊತ್ತಿದ್ದ....ರಾಯರ ಮಾತೇ ತಕ್ಕೊಳ್ಳಿ. ಅವರು ವಿಧುರರಾದ ಕೂಡಲೇ, ಅಬ್ರಾಹ್ಮಣ ವಿಧವೆಯೊಬ್ಬಳನ್ನು ಮನೆಯಲ್ಲಿ ತಂದಿಟ್ಟುಕೊಂಡು, ಅವಳಿಂದ ನಾಲ್ಕು ಮಕ್ಕಳನ್ನು ಹಡೆದರು. ಅವರ ಮೇಲೆ ಯಾರಾದರೂ ಬಹಿಷ್ಕಾರ ಹಾಕಿದರೇ? ಇದೇ ನಮ್ಮ ದೀಕ್ಷಿತರೇ ನೂರು ರೂಪಾಯಿ ತಕ್ಕೊಂಡು, ಬ್ರಾಹ್ಮಣರೂ ಅಲ್ಲ, ಅಬ್ರಾಹ್ಮಣರೂ ಅ[ಲ್ಲ] ಅಂತಹ ಅವರ ಇಬ್ಬರೂ ಕನ್ಯೆಯರ ವಿವಾಹವನ್ನು ದ[...] ನಾಸೆಗೆ ಬಿದ್ದ ಬ್ರಾಹ್ಮಣ ತರುಣರಿಬ್ಬರ ಕೂಡ ಸ[...] ವಿಧಿಯಂತೆ ವಿವಾಹ ಮಾಡಿ ಬಂದರು! ಆ ಕನ್ಯೆಯ[...] ಬಗ್ಗೆ ನನಗೆ ತುಂಬಾ ಸಹಾನುಭೂತಿ. ಪಾಪ! ಅ[...] ದೇನು ತಪ್ಪು? ಆದರೆ ತಂದೆಗೆ ತಂದೆಯೆಂದು ಕ[...] ಹುಡಿಗೆಯರು ಅನ್ನುವಂತಿಲ್ಲ; ಮತ್ತು ಅವರಿಗೆ ತ[...] ಮಕ್ಕಳೆಂದು ನಾಲ್ವರೆದುರಿಗೆ ತಾನೂ ಅನ್ನುವಂತಿಲ್ಲ! ಇಂತ[...] ತಿರಸ್ಕರಣೀಯ ಆಚರಣವನ್ನು ಮಾಡುವ....ರಾಯ[...] ಯಥಾಪ್ರಕಾರ ಮರ್ಯಾದೆ! ಅವರ ಬಾಲ ಬಡಿಯು[...] ವೈದಿಕರಿಗೂ ದೊಡ್ಡ ಮರ್ಯಾದೆ ನಮ್ಮ ಸಮಾಜದಲ್ಲಿ! ಅವರು ಬಹಿಷ್ಕೃತರೂ ಅಲ್ಲ, ಪಂಕ್ತಿಬಾಹ್ಯರೂ ಅಲ್ಲ ಆದರೆ, ಪರದೇಶಕ್ಕೆ ಹೋಗಿ ವಿದ್ಯಾರ್ಜನೆಮಾಡಿ ಮರ[...] ವಿದ್ಯಾವಂತರಿಗೆ ಮಾತ್ರ ಬಹಿಷ್ಕಾರ. ಚಂಡಿಕೆಯು[...] ದುರಾಚಾರಿಗಳಿಗೆ 'ಬಹಿಷ್ಕಾರ'ವಿಲ್ಲ. 'ಕ್ರಾಪು' ಬೆ[...] ಸದಾಚಾರಿಗಳಿಗೆ ಮಾತ್ರ ಬಹಿಷ್ಕಾರ. ಏನು ನಮ್ಮ ಶಾಸ್ತ್ರ, ಏನು ನಮ್ಮ ಶಾಸ್ತ್ರಿಗಳು, ಏನು ನಮ್ಮ ಧರ್ಮ ಗುರುಗಳು! ಮೂರ್ತಿಪೂಜಕರಾದ ನಮ್ಮ ಧರ್ಮಗು[ರು]ಗಳ ಸಂಚಾರದ 'ಹಾವಳಿ'ಯನ್ನು ನೋಡಿದರಂತೂ ಮಧ್ಯಯುಗದ ಮೂರ್ತಿಭೇದಕ ಘಜನೀ ಮಹಮ್ಮದ[ನ] ದಾಳಿಯ ನೆನಪು ಆಗುವುದು. ಶಿಷ್ಯರ ಸುಲಿಗೆ, ದುಷ್ಟ[...] ಪೋಷಣೆ! ಎಲ್ಲರೂ ಕಳವಳಗೊಂಡೇ ದುಡ್ಡು ಕೊಡು[...]ತ್ತಾರೆ. ಆದರೂ, ಎಲ್ಲರೂ ಭಾವಿಕರ ಭೂಮಿಕೆಯನ್ನು ಹೊತ್ತು ಕುಣಿಯುತ್ತಾರೆ. ಇಡಿಯ ಪ್ರಪಂಚವೇ ಒ[...] ಪ್ರಚಂಡ ನಾಟಕ! 'ಧರ್ಮದ ಹುಡುಗಾಟ' ಆಡು[...] ಆಟದ ಮನೆ. ನೀತಿಯ ನಾಟಕ ನಡೆವ ನಾಟ್ಯಗೃಹ! ಮಹಾರಾಷ್ಟ್ರದಲ್ಲಿ 'ಬುವಾಬಾಜಿ', ಕರ್ನಾಟಕದ[ಲ್ಲಿ] 'ಸ್ವಾಮೀಬಾಜಿ,' ರಾಜಕೀಯ ಕ್ಷೇತ್ರದಲ್ಲಿಯೂ 'ದೇ[...] ಬಾಜಿ.' ಅತ್ತ ನೋಡಿದರೆ ನಾಟಕ, ಇತ್ತ ನೋಡಿದ[ರೆ] ನಾಟಕ. ನೋಡಿದತ್ತ ನಾಟಕವೇ ನಾಟಕ. ಎ[...] ಬೀಳುವುದೋ ಈ ಕಪಟ ನಾಟಕದ ಕೊನೆಯ ಅ[...] ಕೊನೆಯ ನೋಟದ ಕೊನೆಯ ತೆರೆ!"

ಇತಿ, 'ಧರ್ಮಾಧರ್ಮ ಪುರಾಣೇ ಯಾವುದೋ ಕಾ[...] ಆದಷ್ಟನೆಯ ಅಧ್ಯಾಯಕ್ಕೆ ಮಂಗಲಮಸ್ತು.'

[ಹಾವೇರಿಯ 'ಕೆಳೆಯರ ಕೂಟ'ದ 'ನನ್ನನುಡಿ' ಎ[...] ಕೈಬರಹದ ಮಾಸಪತ್ರಿಕೆಯಿಂದ]

ಹಸ್ತಸಾಮುದ್ರಿಕ

ಬರೆದವರು:—ಶ್ರೀ. ಜಿ. ಎನ್. ಕಲಮದಾನಿ, ಧಾರವಾಡ

ಹಸ್ತಸಾಮುದ್ರಿಕವು ಎಲ್ಲಕ್ಕೂ ಮೊದಲು ಹಿಂದುಸ್ಥಾನದಲ್ಲಿಯೇ ಹುಟ್ಟಿತು. ಇಲ್ಲಿಂದಲೇ ಜಗತ್ತಿನಲ್ಲೆಲ್ಲ ದಿಕ್ಕಿಗೂ ಪ್ರಸಾರವಾಯಿತು. ಅಮೇರಿಕೆಯ "ಕೀರೋ" ಎಂಬ ಸಾಮುದ್ರಿಕ ತಜ್ಞನೂ ತನ್ನ ಪುಸ್ತಕದಲ್ಲಿ ಇದನ್ನು ಸಮರ್ಥಿಸಿದ್ದಾನೆ. ಹಿಂದುಸ್ಥಾನದ ಬ್ರಾಹ್ಮಣರಿಂದ ಮತ್ತು ಸಾಧುಗಳಿಂದ ಈ ಶಾಸ್ತ್ರವನ್ನು ತಾನು ಕಲಿತನೆಂದು ಅವನು ಹೇಳಿರುವನು. ಈಗ ಈ ಶಾಸ್ತ್ರವನ್ನು ನಮಗಿಂತ ಪಾಶ್ಚಾತ್ಯರೇ ಹೆಚ್ಚು ಬಲ್ಲವರಾಗಿದ್ದಾರೆ. ಈ ಶಾಸ್ತ್ರವನ್ನು ಜನಕ್ಕೆ ತಿಳಿಯುವಂತೆ ಬರೆಯಲು ಯತ್ನಿಸಿದ ಶ್ರೇಯಸ್ಸು. ಅಮೇರಿಕೆಗೇ ಸಲ್ಲುವದು. .. ..
ನಾನು ಕೂಡ ಆ ಪಾಶ್ಚಾತ್ಯರು ಬರೆದ ಪುಸ್ತಕಗಳನ್ನೋದಿಯೆ ಕನ್ನಡದಲ್ಲಿ ಇದನ್ನು ಬರೆದಿದ್ದೇನೆ. ಈ ವಿಷಯವನ್ನರಿಯದವರಿಗೂ ಸುಲಭವಾಗಿ ತಿಳಿಯಲಿಕ್ಕೆ ಅನುಕೂಲವಾಗುವಂತೆ ಈ ವಿಷಯವನ್ನು ಹಿಂಜಿದ್ದೇನೆ. —ಲೇಖಕ .. ..

ಲೇಖನ ೧

ಹಸ್ತಾಕೃತಿ

ಹಸ್ತಸಾಮುದ್ರಿಕವೆಂದರೆ ಅಂಗೈಯನ್ನು ಪರೀಕ್ಷಿಸುವದು; ಇಲ್ಲಿಯ ಗೆರೆಗಳ ಗತಿಯನ್ನು ನೋಡುವದು. ಆದರೆ ಅದಕ್ಕೂ ಮೊದಲು ಹಸ್ತದ ಆಕೃತಿಯನ್ನು ಅವಲೋಕಿಸಬೇಕು. ಈ ಆಕೃತಿಗಳು ಸಾಮಾನ್ಯವಾಗಿ ಏಳು ತೆರನಾಗಿರುವವು. ಪ್ರತಿಯೊಬ್ಬನ ಜೀವನ ಸ್ಥಿತಿ, ಅವನ ರೀತಿ, ಸ್ವಭಾವಗಳನ್ನು ಅವನ ಹಸ್ತದ ಆಕೃತಿಯಿಂದ ತಿಳಿಯಬೇಕು. ಆ ಮೇಲೆ ಹಸ್ತದಲ್ಲಿಯ ರೇಖೆಗಳಿಗೆ ಅರ್ಥ ಹೇಳುತ್ತ ಹೋಗಬೇಕು. ಹೆಚ್ಚು ಶಾರೀರಿಕ ಶ್ರಮದಿಂದಾಗಲಿ, ವ್ಯಾಯಮದಿಂದಾಗಲಿ, ಹಸ್ತದ ಚರ್ಮವು ಬಿರುಸಾಗಿ, ಅದು ಹೆಚ್ಚು ಕಡಿಮೆ ಕಾಣಬಹುದು. ಆದರೆ ಹಸ್ತವು ಯಾವ ಪ್ರಕಾರದ್ದಿರುವದೆಂಬುದು ಮಾತ್ರ ಒಡೆದು ಕಾಣುವದು.

ಹಸ್ತದ ಆಕೃತಿಯಲ್ಲಿ ಏಳು ವರ್ಗಗಳನ್ನು ಮಾಡಬಹುದು.

೧ ಅಸಂಸ್ಕೃತ ಹಸ್ತ
೨ ಚೌಕಾಕೃತಿಯ ಹಸ್ತ
೩ ಭಾವಿಕ ಹಸ್ತ
೪ ಬೌದ್ಧಿಕ ಹಸ್ತ
೫ ಸ್ಫೂರ್ತಿ ಹಸ್ತ
೬ ಆದರ್ಶ ಹಸ್ತ
೭ ಮಿಶ್ರ ಹಸ್ತ

ಅಸಂಸ್ಕೃತ್ ಹಸ್ತ

ಈ ಹಸ್ತವು ಎಲ್ಲಕ್ಕೂ ಕೀಳುತರಗತಿಯದು. ಇಂತಹ ಹಸ್ತವುಳ್ಳವನು ಎಲ್ಲ ರೀತಿಯಿಂದ ಪಶುವಿಗಿಂತ ತುಸು ಮಾತ್ರ ಮೇಲು. ಈ ಹಸ್ತವು ತೀರ ಗಿಡ್ಡ ಇರುವದು. ತೊಗಲು ಬಲು ಬಿರಸು. ನೋಡಲು ತೀರ ಒರಟು (ಚಿ. ೧). ಹಸ್ತವು ಎಷ್ಟೆಷ್ಟು ಗಿಡ್ಡವಾಗಿರುವದೋ ಮತ್ತು ತೊಗಲು ಎಷ್ಟೆಷ್ಟು ಬಿರುಸಾಗಿರುವದೋ, ಅಷ್ಟಷ್ಟು ಪಶುಸ್ವಭಾವಕ್ಕೆ ಸಮೀಪಿಸಿರುವ ಗುಣಗಳು ಆ ಮನುಷ್ಯನಲ್ಲಿ ಕಾಣುವವು. ಹಸ್ತದಲ್ಲಿ ಉತ್ತಮವಾದ ರೇಖೆಗಳಿದ್ದರೂ ವ್ಯರ್ಥವೇ ಸರಿ.

ಈ ಹಸ್ತವುಳ್ಳ ಮನುಷ್ಯರಲ್ಲಿ ಜ್ಞಾನಾಭಿವೃದ್ಧಿಯು ತೀರ ಕಡಿಮೆ; ಅವರು ಯೋಗ್ಯತಾಹೀನರು; ಕೂಲಿಕೆಲಸ, ಅಥವಾ ಅದಕ್ಕೂ ಹೀನವಾದ ಉದ್ಯೋಗದಿಂದ ಜೀವಿಸುವರು.


ಇವರು ಹುಂಬರು; ಶೀಘ್ರಕೋಪಿಗಳು; ಇಂದ್ರಿಯದಾಸರು; ಮಂದವಿಚಾರಿಗಳು; ಕಠಿನಹೃದಯರು; ಕಲ್ಪನಾಶಕ್ತಿಹೀನರು; ಮತ್ತು ಭಾವನಾರಹಿತರು. ಇವರ ರಕ್ತನಾಳಗಳು ಕೂಡ ಬಲಿತಿರುವದಿಲ್ಲ. ಗಾಯವಾದರೆ ಪಶುವಿನಂತೆ ಸಹನಮಾಡಿಕೊಳ್ಳುವರು. ಊಟ, ನಿದ್ರೆ, ಇಷ್ಟಿದ್ದರೆ ಸಾಕು. ಇನ್ನೇನೂ ಇವರಿಗೆ ಬೇಡ. ಅಸಂಸ್ಕೃತ ಹಸ್ತದಲ್ಲಿ ಹೆಬ್ಬೆರಳು ತೀರ ಗಿಡ್ಡವಾಗಿದ್ದು ಹಸ್ತದ ಕೆಳಗಿನ ಸೀಮೆಗೆ ಅಂಟಿದಂತೆ ಕಾಣುವದು.

ಚೌಕಾಕೃತಿಯ ಹಸ್ತ

ಈ ಹಸ್ತವು ಚೌಕಾಕಾರದ್ದಿರುವದು(ಚಿ. ೧). ಮಣಿಕಟ್ಟಿನ ಹತ್ತರ ಹಸ್ತದ ಅಗಲಳತೆಯು ಬೆರಳುಗಳಲ್ಲಿಯ ಅಗಲಳತೆಯಷ್ಟೇ (ಸರಾಸರಿ) ಇರುವದು. ಬೆರಳುಗಳನ್ನು ಸ್ವಾಭಾವಿಕವಾಗಿ ತೆರೆದುಹಿಡಿದಾಗ ಹಸ್ತವು ಚೌಕಾಗಿ ಕಾಣುವದು. ಹೆಬ್ಬೆಟ್ಟು ಸುಮಾರು ಉದ್ದವಾಗಿದ್ದು, ನೋಡಲು ಸುಂದರವಾಗಿರುವದು. ಅದು ಹಸ್ತದ ಮೇಲ್ಬದಿಗಿದ್ದು ಬೆರಳುಗಳಲ್ಲಿ ಶ್ರೇಷ್ಠಸ್ಥಾನವನ್ನಾಕ್ರಮಿಸಿರುವದು.

ಇಂತಹ ಹಸ್ತವುಳ್ಳವರು ವ್ಯವಹಾರಿಗಳು; ಸತತೋದ್ಯೋಗಿಗಳು; ತಾರ್ಕಿಕರು; ಜಗತ್ತಿಗೆ ಸಂಬಂಧಪಟ್ಟ ವಿಚಾರಗಳನ್ನಷ್ಟೇ ನೋಡುವರು. ಈ ಜಗದ ಸುಖವೇ ಶಾಶ್ವತವೆನ್ನುವರು. ಕಲ್ಪನಾಶಕ್ತಿ ಮತ್ತುಆದರ್ಶ ವಿಚಾರಗಳು ಇವರಲ್ಲಿ ತೀರ ಕಡಿಮೆ. ಇವರು ಸಾಹಸಿಗಳು. ಪ್ರತಿಯೊಂದು ಕೆಲಸವನ್ನು ವ್ಯವಸ್ಥಿತ ರೀತಿಯಲ್ಲಿ ಹೆಚ್ಚು ಶ್ರಮಕ್ಕಂಜದೇ ಮಾಡುವರು. ತಮ್ಮ ವಿಚಾರ ಅಥವಾ ಸಿದ್ಧಾಂತಗಳಿಂದಲೇ ಯಾವುದಾದರೊಂದು ಹೇಳಿಕೆಯನ್ನು ನಂಬುವರು. ಇವರು ಧರ್ಮಿಷ್ಠರು; ಅಂಧಶ್ರದ್ಧೆಯುಳ್ಳವರು; ನಿಶ್ಚಿತ ಅಭಿಪ್ರಾಯಿಗಳು; ಮತ್ತು ಹಟಮಾರಿಗಳು. ಹೆಬ್ಬೆರಳು ಉದ್ದವಾಗಿದ್ದು ಅದರ ಮೊದಲನೆಯ ಗಣ್ಣು ಬಿರುಸಾಗಿದ್ದರೆ, ಇವೆರಡೂ ಗುಣಗಳು ಇದ್ದೇ ಇರುವವು.

ಕಲ್ಪನಾಶಕ್ತಿ ಮತ್ತು ಶೋಧನಶಕ್ತಿಗಳು ಬೇಕಾಗದ ಎಲ್ಲ ಕೆಲಸಗಳಲ್ಲಿ ಇವರು ಯಶಸ್ವಿಯಾಗುವರು. ವ್ಯಾಪಾರ, ವಕೀಲಿ, ವೈದ್ಯಕಿ, ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ನಿಪುಣರಾಗುವರು. ಕಾರಣ ಈ ತರದ ಹಸ್ತವುಳ್ಳವರು ಮೇಲೆ ಹೇಳಿದ ಉದ್ಯೋಗಗಳನ್ನು (ತಮ್ಮ ಅಭಿರುಚಿಗನುಸರಿಸಿ) ಆರಿಸಿಕೊಳ್ಳುವದೇ ಒಳಿತು.



(ಚಿತ್ರ ೧.) ೧ ಅಸಂಸ್ಕೃತ ಹಸ್ತ. ೨ ಚೌಕಾಕೃತಿ ಹಸ್ತ. ೩ ಭಾವಿಕ ಹಸ್ತ. ೪ ಬೌದ್ಧಿಕ ಹಸ್ತ.

ಭಾವಿಕ ಹಸ್ತ

ಈ ಹಸ್ತವು ಅಂಕುಡೊಂಕಾಗಿಯೂ, ಅಸ್ತವ್ಯಸ್ತ... ವಾಗಿಯೂ ಇರುವದು. ಬೆರಳುಗಳ ತುದಿಯು ಮೊನ... ಮತ್ತು ಗಡುತರವಾಗಿರುವದು. ಇಂತಹ ಹಸ್ತವುಳ್ಳವ... ಒಂದು ವಿಷಯದ ಬಗ್ಗೆಯೆ ಯಾವಾಗಲೂ ತಲ್ಲೀನ... ಬಿಡುವರು. ಶ್ರಮದ ಕೆಲಸಕ್ಕೆ ಹಿಂಜರಿಯರು. ... ಉತ್ಸಾಹಿಗಳು. ಶೋಧಕ ಮತ್ತು ಕಲ್ಪನಾಶಕ್ತಿಗಳು ಇ... ಹುಟ್ಟುಗುಣ.

ಇವರು ಸಂಶೋಧಕರು; ಪೂರ್ವಾಪರ ಪದ್ಧತಿಯ... ನಂಬದವರು; ಸ್ವಯಂಸ್ಫೂರ್ತಿಯುಳ್ಳವರು; ಮತ್ತು ತಮ್ಮ... ರೀತಿಯ ನಡಾವಳಿಯ... ಪೂರ್ಣಶ್ರದ್ಧೆಯುಳ್ಳವ... ಸ್ವಭಾವದಲ್ಲಿ ಚೌಕಾಕೃ... ಹಸ್ತವುಳ್ಳ ವ್ಯಕ್ತಿಗೆ ... ವಿರುದ್ಧ ಗುಣವುಳ್ಳ... ವರು. ಭಾವಿಕ ಹಸ್ತ... ವರೂ ಚೌಕಾಕೃತಿಯ ಹ... ವುಳ್ಳವರೂ ಪರಸ್ಪರ ... ವಾಗುವದು ಎಂದೂ ... ವಲ್ಲ.

ಈ ಹಸ್ತವು ಮಣಿಕಟ್ಟಿನ ಹತ್ತರದ ಅಗಲಳತೆ... ಬೆರಳುಗಳ ಹತ್ತರ ಹೆ... ಅಗಲವಿರಬಹುದು. ಹಾಗಿ... ಆ ವ್ಯಕ್ತಿಯು ಹೆಚ್ಚು ... ಹಾರಿಯಿದ್ದು, ವಿಚಾರ... ಕಾರ್ಯ ಕೈಕೊಳ್ಳುವನು. ... ಲಳತೆಯು ಕಡಿಮೆಯ... ಹುರುಪಿನಲ್ಲಿದ್ದಾಗಷ್ಟೇ ... ಮಾಡುವನು. ಹೆರರ ಸ್ವಭಾವ, ಮಾತು ಮತ್ತು ... ಇವುಗಳು ಇವನ ಮನಸ್ಸಿಗೆ ಸರಿಬರದಿದ್ದರೆ ಒಮ್ಮೆಲೆ ... ಹಾಯುವನು.

ಬೌದ್ಧಿಕ ಹಸ್ತ

ಈ ವರ್ಗಕ್ಕೆ ಸೇರಿದ ಹಸ್ತವು ಉದ್ದವಾಗಿಯೂ, ... ವಾಗಿಯೂ ಇದ್ದು ಕೈಯೆಲುಬು ಹಾಯ್ದಂತೆ ಕಾಣು... ಬೆರಳುಗಳು ಗಂಟುಗಂಟಾಗಿರುವವು. (ಚಿತ್ರ ೧)

ಈ ಹಸ್ತವು ಬಡಕಾಗಿರುವದು. ಇಂಥ ಹಸ್ತವುಳ್ಳವರು ಯಾವಾಗಲೂ ಅಭ್ಯಾಸದಲ್ಲಿಯೆ ವೇಳೆ ಕಳೆಯುವರು. ಸಾಹಿತ್ಯದ ಕಡೆಗೆ ಒಲವು ವಿಶೇಷವಿರುವದು. ಕುಳಿತಲ್ಲಿಯೇ ಮಾಡುವ ಕೆಲಸಗಳಲ್ಲಿ ಬಹು ಆಸಕ್ತರು. ಏಕಾಂತದಲ್ಲಿ ಋವದೂ, ಸನ್ಯಾಸಿಯಂತೆ ಜೀವಿಸುವದೂ ಇವರಿಗೆ ಬಲು ಸೇರುವದು. ಆದುದರಿಂದಲೇ ಇಂಥವರು ಪೂಜಾರಿ, ಸನ್ಯಾಸಿ ಗಳಾಗಿ ಧರ್ಮಪ್ರಚಾರಕಾರ್ಯ ಕೈಕೊಳ್ಳುವರು.

ಆದರೆ ಈಗ ಬೌದ್ಧಿಕ ಹಸ್ತದಲ್ಲಿ ತುಸು ವ್ಯತ್ಯಾಸವನ್ನು ಕಾಣುವೆವು. ಹಸ್ತವು ಚೌಕು ಇದ್ದು ಅದರ ಬೆರಳುಗಳು ಮಾತ್ರ ಬೌದ್ಧಿಕ ವರ್ಗಕ್ಕೆ ಸೇರಿರುವವು. ಹೀಗಿದ್ದರೆ ವ್ಯವಹಾರವನ್ನೇ ತಳಹದಿಯಾಗಿಟ್ಟುಕೊಂಡು ಆ ವ್ಯಕ್ತಿಯು ತನ್ನ ಅಭ್ಯಾಸವನ್ನು, ಧರ್ಮಾಚರಣೆಯನ್ನು, ಸಾಹಿತ್ಯಾ ಭಿವೃದ್ಧಿಯನ್ನು, ಅಥವಾ ಶಾಸ್ತ್ರೀಯ ವಿಷಯದಲ್ಲಿಯ ಶೋಧನ ಕಾರ್ಯವನ್ನು ಮಾಡುವನು.

ಬಹುಶಃ ಈ ಹಸ್ತದಲ್ಲಿ ಜ್ಞಾನರೇಖೆಯು ಕ್ರಮೇಣ ಕೆಳಗಿಳಿಯುವದು. ಒಂದು ವೇಳೆ ಈ ರೇಖೆಯು ನೆಟ್ಟಗೆ ಸಾಗಿದ್ದರೆ, ಸತತಾಭ್ಯಾಸವು ಆ ವ್ಯಕ್ತಿಯ ವ್ಯಾವಹಾರಿಕ ಯೋಜನೆಯನ್ನವಲಂಬಿಸಿರುವದು. ಬೌದ್ಧಿಕ ಹಸ್ತವುಳ್ಳ ವರು ದ್ರವ್ಯಸಂಚಯ ಮಾಡಲಾರರು. ಆದರೆ ಇವರ ಬುದ್ಧಿಯ ಬೆಳವಣಿಗೆಯು ಪರಿಪೂರ್ಣತೆಯನ್ನು ಮುಟ್ಟಿರು ವದು. ದ್ರವ್ಯಸಂಚಯಗುಣವು ಚೌಕಾಕೃತಿಯ ಹಸ್ತ ವುಳ್ಳವರಲ್ಲಿ ಕಾಣುವೆವು.

ಸ್ಫೂರ್ತಿ ಹಸ್ತ


ಈ ಹಸ್ತವು ನೋಡಲು ಭವ್ಯವಾಗಿರುವದು. (ಚಿ. ೨) ಬೆರಳುಗಳು ದುಂಡಾಗಿ, ನೀಟಾಗಿ ಬೆಳೆಬರುತ್ತ ಸಣ್ಣಾಗುತ್ತ ಹೋಗು ವವು. ಇಂತಹ ಹಸ್ತವುಳ್ಳ ವನು ಚಿತ್ರಕಾರನಾಗಲಿ, ಸುಂದರ ವಸ್ತುಗಳನ್ನು ಮಾಡುವವನಾಗಲಿ, ಆಗಬಹುದೆಂದಲ್ಲ. ಅವನಲ್ಲಿ ಕಲಾ ಪ್ರೇಮವೂ, ಸುಂದರ ವಸ್ತುಗಳಲ್ಲಿ ಆಸಕ್ತಿಯೂ, ಅಥವಾ ಇಂತಹ ವಾತಾ ವರಣದಲ್ಲಿರಲು ಬಯಸುವ ಹೃದ ಯವೂ ಇರಬಹುದು. ಸ್ಫೂರ್ತಿ ಹಸ್ತದಲ್ಲಿಯ ಜ್ಞಾನರೇಖೆಯನ್ನು ಲಕ್ಷಿಸಬೇಕು; ಆದರಿಂದ ಅಚ್ಚು ಕಟ್ಟುತನ, ಗಾಯನದಲ್ಲಿ ಅಥವಾ ಉಳಿದ ಕಲೆಗಳಲ್ಲಿ ಮೇಲ್ಮೆಯನ್ನು ಪಡೆಯುವದು ತಿಳಿಯಬಹುದು.

ಈ ಹಸ್ತವು ಮಾಂಸ ತುಂಬಿಕೊಂಡು ಗುಂಡಾಗಿಯೂ ಮೃದುವಾಗಿಯೂ ಇರುವದು. ಈ ಹಸ್ತವುಳ್ಳವರು ಸೋಮಾರಿಗಳಿದ್ದುದರಿಂದ, ಇವರಿಂದ ಆಗಬೇಕಾದ ನಿಜ ವಾದ ಕೆಲಸವು ಆಗಲಾರದು. ಪ್ರತಿಭಾವಂತರೆಲ್ಲ ಸೋಮಾರಿ ಗಳೇ ಇರುವರು. ಅನೇಕರು ಕಲಾವಿಮರ್ಶೆಯಲ್ಲಿ ವೇಳೆ ಕಳೆಯುವರಲ್ಲದೆ ಅದರ ಸೃಷ್ಟಿಗೆ ಪ್ರಯತ್ನಿಸುವದಿಲ್ಲ. ಈ ಹಸ್ತವು ಎಲ್ಲ ಗುಣದಿಂದಲೂ ಸ್ಫೂರ್ತಿವರ್ಗಕ್ಕೆ ಸೇರಿದ್ದರೆ ಆ ವ್ಯಕ್ತಿಯು ನಿಜವಾಗಿಯೂ ಕಲೆಯಲ್ಲಿ ಹೊಸ ಜೀವನ ವನ್ನು ತುಂಬುವನು.

ಆದರ್ಶ ಹಸ್ತ

ಈ ಹಸ್ತವುಳ್ಳ (ಚಿ. ೨) ವ್ಯಕ್ತಿಯ ಜ್ಞಾನ ಮತ್ತು ಬುದ್ಧಿಯು ಪರಿಪೂರ್ಣ ಸ್ಥಿತಿಯಲ್ಲಿರುವದು. ಆದರೆ ವ್ಯವ ಹಾರದಲ್ಲಿ ಅವನು ತೀರ ಕೀಳು; ಹಗಲುಗನಸಿಗನು; ಆದರ್ಶ ವಾದಿಯು; ತನ್ನ ಜೀವನ ಸಾಗಿಸಲು ಇವನಿಗೆ ಅತಿ ತೊಂದರೆಯಾಗುವದು. ಉಪವಾಸದ ದಿನಗಳು ಇವನ ಜೀವ ನದಲ್ಲಿ ಎಷ್ಟೋ ಬರುವವು.

ಈ ಹಸ್ತವುಳ್ಳವನು ಯಾವ ಕೆಲಸವನ್ನೂ ಮಾಡ ಲಾರನು. ದೈವವೆಳೆದತ್ತ ಸಾಗುವನು. ಜೀವನದಲ್ಲಿ ಸಹಜ ವಾಗಿರತಕ್ಕ ಕಷ್ಟನಷ್ಟಗಳನ್ನು ಸಹ ಎಳ್ಳಷ್ಟೂ ಸಹಿಸ ಲಾರನು. ಇವನು ಪರಾಶ್ರಿತನಾದರೆ ಅಥವಾ ಪೂರ್ವಾ ರ್ಜಿತ ಆಸ್ತಿ ಇದ್ದರೆ ಅರ್ಥಾತ್ ಹೊಟ್ಟೆಬಟ್ಟೆಯ ಚಿಂತೆ ತಪ್ಪಿದರೆ, ಬಹು ಸುಖಿಯಾಗಿದ್ದು, ಆದರ್ಶಮಯವಾಗಿರುವ



೧ ೨ ೩

(ಚಿತ್ರ ೨.) ೧ ಸ್ಫೂರ್ತಿ ಹಸ್ತ. ೨ ಆದರ್ಶ ಹಸ್ತ. ೩ ಮಿಶ್ರ ಹಸ್ತ.

ಅತಿ ಚಮತ್ಕಾರವಾದ ದೃಶ್ಯಗಳನ್ನು, ತನ್ನ ಜೀವನದಿಂದ ಜಗತ್ತಿಗೆ ತೋರುವನು. ಸಂಸಾರದ ಹೊರೆಯು ಇವನ ಮೇಲೆ ಬಿದ್ದರೆ ಇವನಂಥ ದುಃಖಿಯು ಇವನೇ. ಆದರ್ಶ ಹಸ್ತವುಳ್ಳವರು ದೈಹಿಕಬಲಹೀನರಾಗಿದ್ದು ದುಃಖಪಡುವರು.

ಮಿಶ್ರ ಹಸ್ತ

ಹಸ್ತದ ಎಲ್ಲ ಆಕೃತಿಗಳ ಮಿಶ್ರಣದಿಂದಲೇ ಈ ವರ್ಗದ ಉತ್ಪತ್ತಿಯಾಗಿದೆ. (ಚಿ. ೨) ಈ ಹಸ್ತದ ಬೆರಳುಗಳು ಅನೇಕ ಆಕೃತಿಯವಿರುವವು. ಅಥವಾ ಹಸ್ತವು ಒಂದು ಜಾತಿಗೆ ಸೇರಿದ್ದು ಬೆರಳುಗಳು ಮಿಶ್ರವರ್ಗದವಿರುವವು.

ಇಂಥವರು ಬೇಕಾದಾಗ ಬೇಕಾದ ಉದ್ಯೋಗ ಕೈಕೊಂಡು ಯಶಸ್ವಿಯಾಗುವರು. ಆದರೆ ಅವರ ಚಂಚಲ ವೃತ್ತಿಯ ಮೂಲಕ ಯಾವ ಕೆಲಸವನ್ನೂ ಪೂರ್ಣ ಮಾಡರು; ಮತ್ತು ಅವರ ಬುದ್ಧಿ ಮತ್ತು ಶ್ರಮಕ್ಕೆ ತಕ್ಕ ಫಲ ಸಿಗಲಾರದು. ಇವರು ತಮ್ಮ ಜ್ಞಾನಕ್ಕೆ ಹೊಳೆವ ಎಲ್ಲ ವಿಷಯವನ್ನೂ ಚರ್ಚಿಸಬಲ್ಲರು. ಆದರೆ ಶ್ರೋತೃಗಳ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಾರರು.

ಈ ಹಸ್ತದಲ್ಲಿ ಜ್ಞಾನರೇಖೆಯು ಸ್ಪಷ್ಟವಾಗಿ ಸೀಳಾಗಿ ಹೊರಟಿದ್ದರೆ, ಆ ವ್ಯಕ್ತಿಯ ಚಾಂಚಲ್ಯವು ತುಸು ಕಡಿಮೆಯಾಗಿ ಒಂದೇ ಕೆಲಸದಲ್ಲಿ ತನ್ನ ಆಯುಷ್ಯದ ಬಹುಭಾಗವನ್ನಾದರೂ ಕಳೆಯಬಹುದೆಂಬ ಆಶೆಯಿದೆ.

ಹಸ್ತಾಕೃತಿಯ ವಿಷಯವಾಗಿ ಈಗ ಇಷ್ಟು ಹೇಳಿದ್ದು ಸಾಕು. ಮುಂದಿನ ಲೇಖನವನ್ನು ಬೆರಳುಗಳ ವಿಷಯವಾಗಿ ಬರೆಯುವೆನು.

ವಿ. ಸೂ:— ಈ ಶಾಸ್ತ್ರವನ್ನು ಹೇಳುವ ರೀತಿಯಲ್ಲಿ ಸ್ತ್ರೀ ಪುರುಷರೆಂಬ ಭೇದವಮಾಡಿಲ್ಲ. ಸ್ತ್ರೀಯರಲ್ಲಿ ಸಹ ಬಲಗೈಯನ್ನು ನೋಡಬೇಕು. ಎಡಗೈ ಪರೀಕ್ಷಿಸಬಾರದು. ಇದರ ಕಾರಣವನ್ನು ಆ ಮೇಲೆ ಬರೆಯುವೆನು. 'ಅವನು' ಎಂಬ ಪದ ಉಪಯೋಗಿಸಿದಲ್ಲಿ 'ಅವಳು' ಎಂದು ಓದಿಕೊಂಡು ಹೆಂಗಸರ ಹಸ್ತಜ್ಞಾನ ಮಾಡಿಕೊಳ್ಳಬೇಕು.

ಇದಾವ ಪಾಪದ ಫಲ!

ಲೇಖಕರು:—ಶ್ರೀ. ಜಿ. ಟಿ. ಮಯ್ಯಾ

★

ತಪ್ಪನ್ನು ಮಾಡಿರಬಹುದು. ನಡೆಯುವವರು ಎಡಹುವುದು ಸ್ವಭಾವಜನ್ಯವಾಗಿದೆ. ತಪ್ಪನ್ನು ಮಾಡಿದೆನೆಂದು ಜೀವಗೊಲೆ ಮಾಡಿಕೊಳ್ಳುವದೇ? ಧರ್ಮವೀರರೆಂದೆನಿಸಿಕೊಂಡ ಹಲವು ವ್ಯಕ್ತಿಗಳ ಮುಂಚಿನ ಜೀವನದ ವಿಷಯಗಳನ್ನು ಯೋಚಿಸು. ಕೃತ ದುಷ್ಕರ್ಮಗಳನ್ನು ನೆನೆದು ಪರಿಶುದ್ಧಾಂತಃಕರಣದಿಂದ ಪಶ್ಚಾತ್ತಾಪಪಟ್ಟರೆ ಪತಿತನೂ ಪಾವನನಾಗುವನು. ಹಿಂದೆ ಆದುದರ ಪ್ರಕಾಶದಲ್ಲಿ ನಡೆದರೆ ಎಂತಹ ಬಹಿಷ್ಕೃತ ವ್ಯಕ್ತಿಯೂ ಪೂಜ್ಯನಾಗುವನು.

★

"ಇದೇಕೆ, ನಿನ್ನ ಮೊಗವು ಚಿಂತಾಕ್ರಾಂತವಾಗಿದೆ. ಮನೆಯಲ್ಲಿ ಏನಾದರೂ ಅಸಂಗತ...."

"ಏನೂ ಇಲ್ಲ."

"ಹಾಗಾದರೆ ವ್ಯಾಕುಲತೆಗೆ ಕಾರಣ!"

"...." ಉತ್ತರವನ್ನೀಯದೆ ಸೂಟ್‌ಕೇಸನ್ನು ಕೈಯಲ್ಲಿ ಹಿಡಿದುಕೊಂಡು ರಸ್ತೆಯ ಕಡೆ ಹೊರಟ. "ಯಾವಾಗಲೂ ಉತ್ಸಾಹಭರಿತನಾಗಿರುವ ಗೋಪುವು ಇಂದು ಉತ್ಸಾಹರಹಿತನಾದುದೇಕೆ?" ಎನ್ನುವ ಪ್ರಶ್ನೆಗೆ ಉತ್ತರವನ್ನು ಯೋಚಿಸುತ್ತ ನಾನೂ ಅವನನ್ನು ಹಿಂಬಾಲಿಸಿದೆ. ಇಬ್ಬರೂ ಮನೆಯನ್ನು (ಹೊಸ್ಟೆಲ್) ಸೇರಿದೆವು. ಹೆಚ್ಚಿನ ಮಾತು ಕತೆಗಳೇ ಇಲ್ಲ. ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡುತ್ತಿದ್ದನಲ್ಲದೆ ಅದೂ ನಿರುತ್ಸಾಹದಿಂದ. ಅವನಾಗಿ ಯಾವ ವಿಷಯವನ್ನೂ ಹೇಳಲಿಲ್ಲ. ಒಂದೆಡೆ ಆಶ್ಚರ್ಯವೂ ಮಗುದೊಂದೆಡೆ ಚಿಂತೆಯೂ ನನ್ನನ್ನು ಆವರಿಸಿತು. ಬಲವಾದ ಕಾರಣವಿಲ್ಲದೆ ಅವನು ಹೀಗಾಗಿರಲಾರನು ಎನ್ನುವದು ನಿಸ್ಸಂಶಯವಾದ ಯೋಚನೆ. ಆದರೆ ಅವನ ಇಂದಿನ ನಿರುತ್ಸಾಹಕ್ಕೆ, ಚಿಂತೆಗೆ ಕಾರಣವೇನೆಂಬುದು ತಿಳಿಯದು.

ನಾನು ಸಿಟ್ಟುಗೊಂಡರೂ ಕರೆದು ಕರೆದು ನನ್ನನ್ನು ಮಾತನಾಡಿಸುವ ಸ್ವಭಾವವವನದು. ಅವನಂತೆ ಇನ್ನಾರೂ ನನ್ನ ಹೃದಯವನ್ನು ಒಲಿಸಿಕೊಂಡವರಿಲ್ಲ. ಅವನ ಮತ್ತು ನನ್ನ ಗೆಳೆತನವನ್ನು ಲೇಖನಿಯಿಂದ ಬರೆದು ವರ್ಣಿಸಲಾರೆ. ಹಿಂದಿನ ಕವಿಗಳು "ಕಾವ್ಯಕಾವ್ಯಕ್ಕೆ ಲಕ್ಷಣಂ" ಎಂದಂತೆ ಗೋಪುವು 'ಸ್ನೇಹಿತನಂತೆ ನನ್ನ ಸ್ನೇಹಿತ' ನಾಗಿದ್ದನೆಂದು ಮಾತ್ರ ಹೇಳಬಲ್ಲೆ.

ಅಲ್ಲದೆ ನಮ್ಮಿಬ್ಬರ ಗೆಳೆತನವು ಬಹಳ ದಿನಗಳಿಂದ ನಡೆದು ಬಂದುದು. ಮಿಡ್ಲ್ ಸ್ಕೂಲ್ ಬಿಟ್ಟು ಯಾವ ದಿವಸ ನಾವು ಹೈಸ್ಕೂಲಿನ ಮೆಟ್ಟಲನ್ನು ಮೆಟ್ಟಿದೆವೋ ಅಂದೇ ನಮ್ಮ ಗೆಳೆತನವು ಮೊದಲಾದುದು. ಅಂದಿನಿಂದ ಇಂದಿನವರೆಗೂ ನಾವಿಬ್ಬರೂ ಒಂದಾಗಿ ಒಂದೇ ರೂಮಿನಲ್ಲಿ ವಾಸಿಸುತ್ತಿದ್ದೇವೆ. ಒಂದೇ ಕ್ಲಾಸಿನಲ್ಲಿ ಕಲಿಯುತ್ತಿದ್ದೇವೆ. ಹೆಚ್ಚುಕಡಿಮೆ ಇಬ್ಬರದು ಒಂದೇ ಮಾದರಿಯ ಆಚಾರ ವ್ಯವಹಾರ ಮತ್ತು ಸ್ವಭಾವ—ಅಂತರ್ಯದಲ್ಲಿ ಸ್ವಲ್ಪ ವ್ಯತ್ಯಾಸವಿರುವುದಾದರೆ ಪರಸ್ಪರ ತಿಳಿದಿಲ್ಲವೆಂದು ಭಾವಿಸುತ್ತೇನೆ. ಈರ್ವರದೂ ಸಮವಯಸ್ಸು. ಆಟಕೂಟಗಳಿಗೆ ಇಬ್ಬರೂ ಕೂಡಿಕೊಂಡು ಹೋಗುತ್ತಿದ್ದೆವು. ನಾಟಕ, ಸಿನೆಮಾಗಳಿಗೆ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಹೋಗಲಾರೆವು.


ಆದರೆ ಒಂದು ವಿಷಯದಲ್ಲಿ ಮಾತ್ರ ನನಗೂ ಅವನಿಗೂ ಬಹಳ ಅಂತರ. ಆದರಿಂದ ಆಗಾಗ ಜಗಳ. ಅವನು ಪ್ರಣಯರಾಜ್ಯದ ಪತಂಗ. ಕತೆ ಕಾದಂಬರಿಗಳಲ್ಲಿಯ ಪ್ರಣಯ ಲೀಲೆಗಳನ್ನು ಅಡಿಗಡಿಗೆ ಓದುವ ಹುಚ್ಚು ಅವನನ್ನು ಆವರಿಸಿಕೊಂಡಿದೆ. ಓದುತ್ತಿರುವಾಗ ಕಥಾನಾಯಕನು ಪ್ರಣಯಮೂರ್ತಿಯಾಗಿದ್ದನೆನ್ನುವುದನ್ನು ಮರೆತುಬಿಡುವನು. ತಾನೇ ಅವನ ಜಾಗೆಯಲ್ಲಿರುವೆನೆಂದು ತಿಳಿಯುವನು. ಆ ಆನಂದೋನ್ಮಾದದಲ್ಲಿ ಮೈಮರೆತುಬಿಡುವನು. ನಾನು ಅದೇ ರೂಮಿನಲ್ಲಿರುವೆನೆನ್ನುವುದನ್ನೂ ಮರೆತುಬಿಡುವನು. ಒಮ್ಮೊಮ್ಮೆ ಅವನ ಮನೋಭಾವನೆಯು ಅವನ ದೇಹವನ್ನು ತುಂಬಿ ತುಳುಕಿ ಅಶ್ರುಮೂಲಕವಾಗಿಯಾಗಲಿ ಉದ್ಗಾರಪೂರ್ವಕವಾಗಿಯಾಗಲಿ ಹೊರಸೂಸತೊಡಗುವುದು. ಅಂತಹ ಸಮಯದಲ್ಲಿ ನನಗೆ ಅವನ

ಮೇಲೆ ರೇಗಿಬೀಳುವ ಪ್ರಸಂಗವೇ ಬರುತ್ತಿತ್ತು. ಸಿಟ್ಟಿನಿಂದ ರಾಕ್ಷಸನಂತಾಗುತ್ತಿದ್ದೆ. ಬಾಯಿಗೆ ಬಂದಂತೆ ಬಯ್ಯುತ್ತಿದ್ದೆ. ನಾನು ಈ ರೀತಿಯಲ್ಲಿ ವರ್ತಿಸುವೆನಾದರೂ ಅವನು ಮಾತ್ರ ಪ್ರತಿಕೋಪವನ್ನು ತೋರಿಸಲಾರನು. ನನ್ನನ್ನು ಪರಿಹಾಸ ಮಾಡತೊಡಗುವನು. "ನೀನೀ ಪುಸ್ತಕವನ್ನೊಮ್ಮೆ ಓದುವೆ ಯಾದರೆ ನನ್ನ ಮೇಲೆ ರೇಗಿಬೀಳಲಾರೆ. ದಯವಿಟ್ಟು ಒಮ್ಮೆ ಓದು." ಎಂದು ಹೇಳಿ ಪುಸ್ತಕವನ್ನು ನನ್ನ ಕೈಗೆ ಕೊಡುವನು. ಪುಸ್ತಕವನ್ನು ಅವನ ಕೈಯಿಂದ ಕಸಿದು ಕೊಂಡು ಮೂಲೆಗೆಸೆಯುತ್ತಿದ್ದೆ. ಯೋಚನಾವಿಹೀನನಾಗಿ ಮನಬಂದಂತೆ ಬಯ್ಯುತ್ತಿದ್ದೆ. ನನ್ನೀ ಅಸಭ್ಯತೆಯು ಅವನನ್ನು ಕೋಪಿಯಾಗಿ ಮಾಡಲಾರದು. "ಇದಾವ ಪಾಪ ಫಲ" ಎನ್ನುವ ಹಾಡನ್ನು ಹಾಡುವುದಕ್ಕೆ ಪ್ರಾರಂಭಿಸುವನು. ಇದರಿಂದಲೂ ನಾನು ಶಾಂತನಾಗದಿದ್ದರೆ ಮೆಲ್ಲನೆ ರೂಮನ್ನು ಬಿಟ್ಟು ಹೊರಡುವನು.

ರೂಮನ್ನು ಬಿಟ್ಟು ಅವನು ಹೋದನೆಂದರೆ, ನನ್ನ ಸಿಟ್ಟು ಇಳಿಯುತ್ತಿತ್ತು. ಅವನ ಅವ್ಯಾಜ ಗೆಳೆತನದ ನೆನಪಾಗುತ್ತಿತ್ತು. ಕಾರಣವಿಲ್ಲದ ಮೊಂಡತನಕ್ಕೆ ನಾನು ಪಶ್ಚಾತ್ತಾಪ ಪಡತೊಡಗುತ್ತಿದ್ದೆ. ಅವನು ಮರಳಿ ಬಂದೊಡನೆಯೇ ಕ್ಷಮೆಯನ್ನು ಬೇಡಿಕೊಳ್ಳುವೆನೆಂದು ಯೋಚಿಸುತ್ತಿದ್ದೆ.

'ಕಾರಣವಿಲ್ಲದ ನನ್ನ ಮೊಂಡುತನವೆಂದೆನಲ್ಲವೇ ?' ಹೌದು. ನಿಜವಾಗಿಯೂ ಅವನ ಮೇಲೆ ಕೋಪಿಸಿಕೊಳ್ಳಲು ಕಾರಣವಿಲ್ಲ. 'ಪ್ರಣಯ ವಿರೋಧಿಯು ನಾನಲ್ಲ'ವೆನ್ನುವುದೇ ಕಾರಣ. ಮೂಸೆಯಲ್ಲಿ ಅಡಗಿರುವ ಅಗ್ನಿಯಂತೆ ನನ್ನ ಹೃದಯದಲ್ಲಿ ಪ್ರಣಯವು ಅಡಗಿಕೊಂಡಿದೆ. ಅದನ್ನು ಪರರಿಗೆ ತಿಳಿಯಪಡಿಸುವುದು ಒಂದು ತರದ ಅಸಭ್ಯತೆಯೆಂದು ನನ್ನ ಭಾವನೆ. "ಹೂವಾದರೆ ನೀ ಬಾಡುವೆ ಬಾಲೆ! ಮುಗುಳಾಗಿರೆ ನೀನೆನಗದೆ ಲೀಲೆ" ಎಂದು ಕವಿಯೊಬ್ಬನು ಹಾಡಿದಂತೆ ಪ್ರಣಯವು ಅರಳದೆ ನನ್ನ ಹೃದಯದಲ್ಲಿ ಮುಗುಳಾಗಿದ್ದರೇ ನನಗೆ ಸಂತೋಷ. ಕಲ್ಪನಾಪಕ್ಷಿಗಳನ್ನು ನನ್ನ ಭಾವನಾರಾಜ್ಯದಲ್ಲಿ ಹಾರಾಡಲು ಬಿಟ್ಟು ನಲಿಯುವುದು ನನ್ನ ಸ್ವಭಾವ. ಅಲ್ಲದೆ ನಾನು ಅದ... ಸಂಪ್ರದಾಯಿಯೆಂದು ಹೇಳಿದರೆ, ಅತ್ಯುಕ್ತಿಯಾಗಲಾರದು. ವೆಂಕಟಾಚಾರ್ಯರ 'ದೇವಿ ಚೌಧುರಾಣಿ', ಕಾದಂಬರಿ... ಚೌಧುರಾಣಿ, ದ್ವಿಜೇಂದ್ರಲಾಲ ರಾಯರ 'ಮೇವಾಡ ಪತನ'ದ ಮಾನಸಿ, 'ಜೀನ್ ಕ್ರಿಸ್ಟೋಫೆ'ಯ ಎಂಟೋ... ಯಟ್ ಮೊದಲಾದವರು ನನ್ನ ಮನೋರಾಜ್ಯದಲ್ಲಿ ರಾಣಿಯರು, ಗೆಳತಿಯರು. ಈ ಪುಸ್ತಕವನ್ನು ಓದುತ್ತಿರುವಾಗ ಅಮಿತ ಸಂತೋಷವನ್ನನುಭವಿಸುತ್ತಿದ್ದೆನಲ್ಲದೆ ಮಾಡ... ಬೇಕಾದ ಕೆಲಸಗಳನ್ನೂ ಮರೆಯುತ್ತಿದ್ದೆ. ನನ್ನ ಈ ಸ್ವಭಾವವು ಗೋಪುವಿಗೆ ತಿಳಿದೇ ಇದೆ. ಆದರೂ ಅವನು ನಾನೆಷ್ಟು ಸಿಟ್ಟುಗೊಂಡು ಅವನನ್ನು ತೆಗಳಿದರೂ ಮರಳಿ ನನ್ನನ್ನು ದೂಷಿಸಲಾರ; ಹಂಗಿಸಲಾರ.

ಅವನು ಮರಳಿ ಬರುವ ವರೆಗೂ ಪರಿತಪಿಸುತ್ತಿದ್ದು, ಬಂದ ನಂತರ ಶಾಂತಿ ಹೊಂದುತ್ತಿದ್ದೆ. ನನ್ನ ತಪ್ಪಿಗೆ ಕ್ಷಮೆಯನ್ನು ಕೇಳಲು ಆತುರಪಡುತ್ತಿದ್ದೆ. ಆದರೆ ಅಹಂಭಾವವು ಈ ಕೆಲಸಕ್ಕೆ ಅಡ್ಡ ಬರುತ್ತಿತ್ತು. ಈ ಮಾನಸಿಕ ವಿಪ್ಲವದಲ್ಲಿ ನಾನು ಗತಿ ಕಾಣದವನಾಗಿ, ಶೂನ್ಯದೃಷ್ಟಿಯುಳ್ಳವನಾಗಿ ಒಂದು ಮೂಲೆಯಲ್ಲಿ ಕುಳಿತುಕೊಳ್ಳುತ್ತಿದ್ದೆ. ಆಗ ಗೋಪುವೇ ತಾನಾಗಿಯೇ ನನ್ನ ಬಳಿಗೆ ಬಂದು ಸಮಾಧಾನ ವಚನಗಳನ್ನು ನುಡಿದು ನನಗೆ ಮನಃಶಾಂತಿಯನ್ನುಂಟು ಮಾಡುತ್ತಿದ್ದನು.



ಅವಳು ಸ್ಫುರದ್ರೂಪಿ.

ಈ ರೀತಿಯಲ್ಲಿ ನನ್ನೊಡನೆ ಜಗಳಾಡುವ ಜೀವಿಯವನು. ನನ್ನಲ್ಲಿ ಯಾವ ವಿಷಯವನ್ನೂ ಮರೆಮಾಚುವುದಿಲ್ಲ. ಆವ ವಿಷಯವನ್ನಾದರೂ ನನಗೆ ಹೇಳದಿದ್ದಲ್ಲಿ ಪ್ರಾಯಶಃ ಅವನಿಗೆ ನಿದ್ರೆಯೇ ಬರದು. ಒಂದು ತಿಂಗಳ ಹಿಂದೆ ಅವನು ಊರಿಗೆ ತೆರಳುವ ವರೆಗೆ ಈ ರೀತಿಯಲ್ಲಿದ್ದವನು ಈಗ ಬದಲಾಯಿಸಿದುದು ಆಶ್ಚರ್ಯಕರವಲ್ಲದೆ ಮತ್ತೇನು! ಒಂದು ತಿಂಗಳಂತರದಲ್ಲಿ ಅವನ ವರ್ತನೆಯು ಈ ... ಮಾರ್ಪಾಡಾಗಲು ಕಾರಣ? ನನ್ನ ಸ್ನೇಹವು ಅವನಿಗೆ ಬೇಡವೇ! ಹಾಗಿದ್ದಲ್ಲಿ ತಾನು ಬರುವೆನೆಂದೂ ಸ್ಟೇಷನ್ನಿಗೆ ಬಾಯೆಂದೂ ಬರೆದುದೇಕೆ?.... ಯೋಚಿಸಿದಷ್ಟೂ

ಸ್ವೆಯು ಗೂಢವಾಗುತ್ತಿತ್ತು. ಯಾವಾಗಲೂ ಅವನು ಹಾಡುತ್ತಿದ್ದ "ಇದಾವ ಪಾಪ ಫಲ" ಎನ್ನುವ ಗೀತವು ನನ್ನ ಹೃದಯದಲ್ಲಿ ಧ್ವನಿಗೈಯತೊಡಗಿತು.

ಅವನ ವ್ಯಾಕುಲತೆಗೆ ಕಾರಣವನ್ನು ತಿಳಿದ ವಿನಃ ನನ್ನ ಮನಸ್ಸಿಗೆ ಶಾಂತಿಯೆನ್ನುವ ಮಾತು ಅಶಕ್ಯ. ನಾನೆಷ್ಟು ಹಲಿಯಿಂದ ಆಲೋಚಿಸಿದರೂ ತಿಳಿಯಲಾರದೆ ಹೋದೆ. ಇನ್ನು ಅವನನ್ನೇ ಕೇಳಿ ತಿಳಿಯುವುದೇ ಕೊನೆಯ ಉಪಾಯವೆಂದು ಅವನು ಮಲಗಿದ ಮಂಚದೆಡೆಗೆ ಹೋಗಿ ಅವನ ಸ್ನೇಹದ ಮೇಲೆ ಕೈಯಾಡಿಸಿದೆ. ಒಮ್ಮೆಗೇ ವಿದ್ಯುತ್ಪ್ರವಾಹವು ಶರೀರದಲ್ಲಿ ಪ್ರವಹಿಸಿದಂತೆ ಬೆಚ್ಚಿಬಿದ್ದ. ಮುಖವನ್ನು ನನ್ನೆಡೆಗೆ ಹೊರಳಿಸಿದ. ಕಣ್ಣುಗಳನ್ನು ತುಂಬಿ ಅಶ್ರುಜಲವು ಕಪೋಲಗಳ ಮೇಲೆ ಧಾರೆಯಾಗಿ ಹರಿಯುತ್ತಿತ್ತು. ಅವನ ಈ ಸ್ಥಿತಿಯನ್ನು ನೋಡಿ, ನನ್ನ ಕಣ್ಣುಗಳಿಂದಲೂ ಅಶ್ರುಜಲವು ಹರಿಯತೊಡಗಿತು. ಮೆಲುದನಿಯಿಂದ "ಗೋಪು" ಎಂದೆ.

"ಏನು?" ಈ ಎರಡಕ್ಷರಗಳ ಶಬ್ದದಲ್ಲಿ ಅವನ ದುಃಖವು ಅಡಕವಾಗಿದ್ದಂತೆ ತೋರಿತು.

"ನಿನ್ನೀ ಶೋಚನೀಯ ಸ್ಥಿತಿಯೇತರಿಂದ ?" ಕೆಲವು ಕ್ಷಣಗಳ ವರೆಗೆ ಮಾತನಾಡಲೇ ಇಲ್ಲ. ಕೊನೆಗೆ ನಿಡುಸುಯ್ಲನ್ನು ಸುಯ್ದು,

"ನನ್ನ ಈಗಿನ ವರ್ತನೆಯು ನಿನಗೆ ಶೋಚನೀಯವಾಗಿ ತೋರಲು ನಾನು ದುಷ್ಕರ್ಮಿಯಾದುದೇ ಕಾರಣವೆಂದು ಹೇಳಲು ಸಂಕೋಚಪಡದೆ ಇರಲಾರೆನು. ಈ ಹಿಂದೆ ನಾನು ಯಾವಾಗಲೂ "ಇದಾವ ಪಾಪ ಫಲ" ಎನ್ನುವ ಕೀರ್ತನೆಯನ್ನು ಹಾಡುತ್ತಿದ್ದೆನಲ್ಲವೇ? ಆಗ ನಾನು ಅದರರ್ಥವನ್ನು ಮನಸಾರೆ ತಿಳಿಯದೆ ಹಾಡುತ್ತಿದ್ದೆ. ಆದರೆ ಇಂದು ದಾರುಣ ವೇದನೆಯಿಂದ ಬೆಂದ ನನ್ನ ಹೃದಯವೇ ಆ ಹಾಡನ್ನು ಹಾಡುತ್ತಿದ್ದೆ.... ನಾನು ಹೀಗೆ ಹೇಳತೊಡಗಿದರೆ ನಿನಗೊಂದೂ ತಿಳಿಯಲಾರದು. ನನ್ನ ಜೀವನದ ದುರಂತ ಘಟನೆಯೊಂದನ್ನು ಹೇಳುತ್ತೇನೆ. ನನ್ನ ಸನ್ಮಿತ್ರನು ನೀನಾಗಿರುವದರಿಂದ ನಿನ್ನೆದುರಿನಲ್ಲಿ ಆವ ವಿಷಯವನ್ನೂ ಮರೆಮಾಚತಕ್ಕದ್ದಿರುವುದಿಲ್ಲ.

"ಆರೇಳು ವರ್ಷಗಳಿಂದ ನಿನ್ನೊಡನೆ ಬೆಳೆದವನಿದ್ದುದರಿಂದ ನನ್ನ ಜೀವನದ ಧ್ಯೇಯವು ಆವ ಮಾದರಿಯದೆಂದು ನಾನು ಪ್ರಸ್ತುತ ಹೇಳಬೇಕಾಗಿಲ್ಲ. ಕೆಲವೊಂದು ಸಮಯಗಳಲ್ಲಿ ನೀನು ನನ್ನನ್ನು ಟೀಕಿಸಿರುವುದಾದರೂ, ಈ ದೇಹವು ಕಳಂಕರಹಿತವಾದುದೆಂದು ನೀನು ತಿಳಿದಿರುವಿ. ಮನಸ್ಸಿನಿಂದ ಪ್ರೇಮಮೂರ್ತಿಯಾಗಿದ್ದರೂ ಕೃತಿಯಿಂದ ಆರನ್ನೂ ಕಾಮಿಸಿ, ಪ್ರೇಮಿಸಿ 'ಪ್ರೇಮಮೂರ್ತಿ'ಯೆನ್ನುವ ಹೆಸರನ್ನು ಗಳಿಸಿಲ್ಲ. ಇರಲಿ.

"ಅಂದು ನಿನ್ನನ್ನು ಬೀಳ್ಕೊಂಡು ಊರಿಗೆ ಹೊರಟೆನಷ್ಟೆ. ಅಂದು ಗಾಡಿಯಲ್ಲಿ ವಿಶೇಷ ಜನಸಂದಣಿ. ಸರಿಯಾಗಿ ಕುಳಿತುಕೊಳ್ಳಲೂ ಎಡೆಯಿರಲಿಲ್ಲ. ನಿದ್ರೆಗೆಟ್ಟೇ ಮಂಗಳೂರಿನವರೆಗೆ ಪ್ರಯಾಣ ಮಾಡಬೇಕಾಯ್ತು. ಅಲ್ಲಿಯ ಹೋಟೆಲೊಂದರಲ್ಲಿ ಇಳಿದು, ಸ್ನಾನ ಫಲಾಹಾರಗಳನ್ನು ಮುಗಿಸಿದೆ. ದೇಹವು ಬಳಲಿದ್ದರೂ, ನಿದ್ರೆ ಮಾಡಲಿಚ್ಛಿಸದೆ ಊರನ್ನು ಸುತ್ತಿಬರಲು ಹೊರಟೆ. ದಾರಿಯಲ್ಲಿ ಪೂರ್ವ ಪರಿಚಿತನೊಬ್ಬನೂ ದೊರಕಿದನು. ಈರ್ವರೂ ಸೇರಿ ಟಾಂಗಾದಲ್ಲಿ ಊರೆಲ್ಲಾ ಸುತ್ತಿದೆವು. ಗೆಳೆಯನನ್ನು ಬೀಳ್ಕೊಂಡು ಹೋಟೆಲಿಗೇ ಮರಳುವವನಿದ್ದೆ. ಆದರೆ, "ಹೋಟೆಲಿನ ರೂಮುಗಳಲ್ಲಿ ತಗಣೆಗಳಿಗೆ ಬರಗಾಲವಿಲ್ಲದುದರಿಂದ ನಿದ್ರೆ ಬರುವುದು ಅಸಂಭವ" ಎಂದು ಎಣಿಸಿ ಸಮುದ್ರದ ಕಡೆಗೆ ತಂಗಾಳಿಯನ್ನು ಸೇವಿಸಲೆಂದು ಹೊರಟೆ. ಮುಳುಗುವ ನೇಸರಿನ ಸೌಮ್ಯ ಕಿರಣಗಳಿಂದಾಚ್ಛಾದಿತವಾದ ಸಮುದ್ರ; ಸಮುದ್ರ ತೀರ; ತೆಂಗಿನ ಗರಿಗಳೊಡನೆ ಲೀಲೆಗೈಯುತ್ತೆ, 'ಸುಯ್ ಸುಯ್' ಎಂದು ತನ್ನ ಆನಂದೋದ್ಗಾರಗಳನ್ನು ವ್ಯಕ್ತಪಡಿಸುತ್ತ ಚಲಿಸುವ ಮಂದಮಾರುತ; ನಾನಾ ತರದ ವೇಷಭೂಷಣಗಳಿಂದ ಭೂಷಿತರಾದ ರಸಿಕ ರಂಜಿತರು; ವಿಧವಿಧದ ಅಲಂಕಾರಗಳಿಂದ ಅಲಂಕೃತರಾದ, ಹಾವಭಾವ ವಿಲಾಸಗಳಿಂದ ಮೋಹಿತರಾದ ಸ್ತ್ರೀ ಜನರು—ಇವುಗಳೆಲ್ಲವನ್ನೂ ಒಂದೊಂದಾಗಿ ಅವಲೋಕಿಸುತ್ತಿರುವಾಗ ಮಾನವಕೋಟಿಯ ಉದ್ವಿಗ್ನ ಮನಸ್ಸು ಶಾಂತಿ ಸಮಾಧಾನವನ್ನು ಹೊಂದುವುದಲ್ಲವೇ! ಎಲ್ಲವನ್ನೂ ಮರೆತು ಬಿಟ್ಟು, ಮನೋರಾಜ್ಯದಲ್ಲಿ ವಿಹರಿಸುತ್ತ ನಾನು ಆನಂದೋನ್ಮುಖನಾಗಿದ್ದೆ.

"ನನಗೆ ಹತ್ತಿಪ್ಪತ್ತುಮಾರು ದೂರದ ದಿನ್ನೆಯಲ್ಲಿ ಹೆಣ್ಣುಮಗಳೊಬ್ಬಳು ಕುಳಿತಿದ್ದಳು. ಅವಳು ಸ್ಫುರದ್ರೂಪಿ. ಅಲ್ಲದೆ ಅವಳ ಮನಮೋಹಕ ಶರೀರವು ಬಾಲ್ಯಾವಸ್ಥೆಯನ್ನು ದಾಟಿ ಯುವಾವಸ್ಥೆಯಲ್ಲಿ ಕಾಲಿಟ್ಟಿತ್ತು. ಸೌಷ್ಠವವಾದ ಅಂಗಾಂಗಗಳು ಉಟ್ಟಿರುವ ಪತ್ತಲವನ್ನು ಭೇದಿಸಿ ಹೊರದೋರುತ್ತಿದ್ದುವು. ಚಪಲತೆಯಿಂದ ಕೂಡಿದ ಅವಳ ಅಕ್ಷಿದ್ವಯಗಳು ರಾತ್ರಿಯಲ್ಲಿ ರಾಜಿಸುವ ತಾರೆಗಳಂತೆ ಅವಳ ಮುಖಮಂಡಲದಲ್ಲಿ ಎದ್ದು ತೋರುತ್ತಿದ್ದುವು. ಆ ಶೋಭಿತ ಸ್ತ್ರೀಮೂರ್ತಿಯನ್ನು ನೋಡದಿರಲು ಆರಿಂದಲೂ

ಸಾಧ್ಯವಿಲ್ಲವೆಂದು ತಿಳಿಯುತ್ತೇನೆ. ಅವಳತ್ತ ನೋಡಿದೆ. ಸಂಯೋಗವಶಾತ್ ಅವಳ ಕಣ್ಣುಗಳು ನನ್ನ ಕಣ್ಣುಗಳಲ್ಲಿ ನೆಟ್ಟವು. ನನ್ನ ಶರೀರದಲ್ಲಿ ವಿದ್ಯುತ್ಪ್ರವಾಹವು ಒಮ್ಮೆಗೆ ಸಂಚರಿಸಿದಂತಾಯ್ತು. ಆದರೂ ನನ್ನ ಕಣ್ಣುಗಳು ಅವಳ ಮೊಗವನ್ನು ಬಿಟ್ಟು ಕದಲಲಾರದಂತಿದ್ದುವು. ಅವಳ ಸುಂದರವದನಾರವಿಂದದಲ್ಲಿ ಲಾಸ್ಯ ಮಾಡುವ ಮುಗುಳ್ನಗೆಯು ನನ್ನನ್ನು ಮೋಹಸಾಮ್ರಾಜ್ಯಕ್ಕೊಯ್ಯಲು ಯತ್ನಿಸಿತು. ನಾನರಿಯದಂತೆಯೇ ನನ್ನ ತುಟಿಗಳು ಮಂದಸ್ಮಿತದಿಂದ ಕೂಡಿತು.... ಸ್ವಲ್ಪ ಹೊತ್ತಿನಲ್ಲಿ ಹೋಟಲಿಗೆ ಹಿಂತಿರುಗುವೆನೆಂದು ಯೋಚಿಸಿದೆನಾದರೂ ಅಲ್ಲಿಂದೇಳಲಾರದಾದೆ. ಕಾಲುಗಳು ಶಕ್ತಿಗುಂದಿದಂತಿದ್ದುವು. ಆದರೆ ಮನಸ್ಸು ಕಲ್ಪನಾಪ್ರಪಂಚದಲ್ಲಿ ಅಪರಿಮಿತ ವೇಗದಿಂದ ಸಂಚರಿಸುತ್ತಿತ್ತು. ಮತ್ತೊಂದರ್ಧ ಘಂಟೆಯವರೆಗೆ ಅಲ್ಲಿಯೇ ಕುಳಿತೆ. ಅವಳೂ ತನ್ನ ಸ್ಥಳದಲ್ಲಿ ಕುಳಿತೇ ಇದ್ದಳು, ಸಮುದ್ರ ಕಡೆಯಿಂದ ಹಿಂತಿರುಗುವ ಆಲೋಚನಾರಹಿತಳಂತೆ.

"ಕತ್ತಲಾಗುತ್ತ ಬಂತು. ಮನಸ್ಸಿನ ಕಲ್ಪನೆಗಳನ್ನು ಸ್ವಲ್ಪ ಹಿಂದೊತ್ತಿ ಹೋಟಲಿನತ್ತ ಹೊರಡಲುದ್ಯುಕ್ತನಾದೆ. ಸ್ವಲ್ಪ ದೂರ ಹೋಗಿದ್ದಾಗ ಇನ್ನೊಂದು ಯೋಚನೆಯಾಯ್ತು.... ಕಾದಂಬರಿಗಳಲ್ಲಿ ಅನೇಕಾನೇಕ ಪ್ರಣಯಲೀಲೆಗಳನ್ನು ಅರಿತವನಿದ್ದುದರಿಂದ ಅವಳೊಡನೆ ಹೇಗೆ ವರ್ತಿಸಲೆಂದು ಹೆಚ್ಚು ಆಲೋಚನಾಪರನಾಗಬೇಕಾಗಿದ್ದಿಲ್ಲ. ಕುಲೀನೆಯಾಗಿದ್ದಲ್ಲಿ ನನ್ನ ಅವಮಾನವಾಗಬಹುದೆಂಬ ಯೋಚನೆಯಿಲ್ಲದೆ ಪುನಃ ಹಿಂತಿರುಗಿದೆ. ಆಗ ಅವಳು ಎದ್ದು ತನ್ನ ಸೀರೆಯ ನೀರಿಗೆಯನ್ನು ತೀಡಿಕೊಳ್ಳುತ್ತಿದ್ದಳು. ಹೋದವನೇ ಅವಳ ಕೈಯನ್ನು ಹಿಡಿದುಕೊಂಡೆ. ನನ್ನ ಈ ವರ್ತನೆಗೆ ಅವಳ್ಯಾವ ಪರಿಯಿಂದಲೂ ಅಸಮ್ಮತಿಯನ್ನು ತೋರಿಸಲಿಲ್ಲ. ಮುಗುಳ್ನಗೆ ನಕ್ಕಳು. ಅವಳ ಕೈಯನ್ನು ಹಿಡಿದಾಗ ನನ್ನ ದೇಹಸ್ಥಿತಿಯನ್ನು ಈಗ ವರ್ಣಿಸಲಾರೆ. ದೇಹಾದ್ಯಂತವೂ ಬೆವರಿನಿಂದ ತೊಯ್ದು ಹೋಯಿತು; ಕಂಪಿಸತೊಡಗಿತು. ಹೃದಯದ ಬಡಿದಾಟವು ಒಮ್ಮೆಗೆ ದ್ವಿಗುಣಿತವಾಯಿತು. ಆದರೂ ಅಧೈರ್ಯವುಂಟಾಗಲಿಲ್ಲ. ಕಾರಣ: ಮಾನವನನ್ನು ಭಸ್ಮೀಭೂತವಾಗಿ ಮಾಡುವ ವಿಷಯಲಾಲಸೆಯು ನನ್ನನ್ನು ಆವರಿಸಿಕೊಂಡಿತ್ತು. ವಿಷಯತೃಷ್ಣೆ — ದಿನ, ತಿಂಗಳು, ವರುಷಗಳನ್ನು ಅಂಧಕಾರಮಯವಾಗಿ ಮಾಡುವ ವಿಷಯತೃಷ್ಣೆಯು ನನ್ನನ್ನು ದಾಸಪದವಿಯಲ್ಲಿ ಸೇರಿಸಿಕೊಂಡಿತ್ತು. ವಿವೇಕಶೂನ್ಯನಾಗಿ ನಾನು ಅದರ ದಾಸತ್ವವನ್ನು ಸ್ವೀಕರಿಸಿದ್ದೆ. ಮುಂದೆ, ಅವಳೊಡನೆ ಅವ[illegible] ಮನೆಗೆ ಹೋದೆ.... ಮಾಯಾ ಮೋಹಗಳಲ್ಲಿ ಮುಳುಗಿ[illegible] ಭವನವದು. ಸುಸಜ್ಜಿತವಾದ ಕೋಣೆ. ಇಬ್ಬರೂ ಕುಳಿತು[illegible] ಕೊಳ್ಳಲನುವಾದ ಸೋಫವೊಂದು, ಮಲಗುವ ಮಂಚ[illegible] ವೊಂದು, ಸುಗಂಧ ದ್ರವ್ಯಗಳಿಂದ ಕೂಡಿದ ಮೇಜೊಂದು— ಇವುಗಳು ಓರಣವಾಗಿ ಆ ಕೋಣೆಯಲ್ಲಿ ಶೋಭಿಸುತ್ತಿ[illegible] ಗೋಡೆಗಳು ಫೋಟೋಗಳಿಂದ ಅಲಂಕೃತವಾಗಿವೆ. [illegible] ಫೋಟೋಗಳಲ್ಲಿ ಅರ್ಧ ನಗ್ನ ಕೆಲವು; ಪೂರ್ಣ ನ[illegible] ಅವಸ್ಥೆಯಲ್ಲಿ ಉಳಿದವುಗಳು. ಬರುವವರ ಮನಸ್ಸ[illegible] ವಿಷಯವಾಸನೆಯಿಂದ ಕೆರಳಿಸಲು ಅನುಕೂಲವಾ[illegible] ಶೃಂಗರಿಸಲ್ಪಟ್ಟಿವೆ. ರೂಮನ್ನು ಪ್ರವೇಶಿಸಿ, ನನ್ನ[illegible] ಸೋಫಾದ ಮೇಲೆ ಕೂಡಿಸಿದಳು. ಮಂತ್ರಮು[illegible] ನಂತೆ ಅವಳೆಂದಂತೆ ನಡೆಯಲು ಸಿದ್ಧನಾಗಿ[illegible] ತಾನೂ ಕುಳಿತುಕೊಂಡು "ಆಯಾಸವಾಗಿಲ್ಲವೇ? ಸ್ವ[illegible] ಹಾಲನ್ನು ತರಿಸುತ್ತೇನೆ ಬಾಯಾರಿಕೆಗೆ" ಎಂದುಪಚರಿ[illegible] ಮೊದಲಿಟ್ಟಳು. ನನ್ನುತ್ತರವನ್ನು ನಿರೀಕ್ಷಿಸದೆ "ಮಾಲ[illegible] ಒಂದು ಲೋಟ ಹಾಲು" ಎಂದು ಸ್ವಲ್ಪ ದೊಡ್ಡ ಧ್ವನಿ[illegible] ಲ್ಲೆಂದಳು. ಇನ್ನೊಂದು ನಿಮಿಷದಲ್ಲಿ ೧೪-೧೫ ವ[illegible] ಪ್ರಾಯದ ಹೆಣ್ಣುಮಗಳೊಬ್ಬಳು ಒಂದು ಬೆಳ್ಳಿಯ ಲೋ[illegible] ದಲ್ಲಿ ಹಾಲನ್ನು ತಂದು ಮೇಜಿನ ಮೇಲಿಟ್ಟು, ನ[illegible] ನಮಸ್ಕಾರ ಮಾಡಿ ಹೊರಟುಹೋದಳು. ಹಾಲನ್ನು ನ[illegible] ಕೊಡಲು "ಬಾಯಾರಿಕೆಯಿಲ್ಲ, ಬೇಡ"ವೆಂದೆ. ಕುಡಿಯ[illegible] ಬೇಕೆಂದು ಒತ್ತಾಯಪಡಿಸಿದಳು; ಕುಡಿದೆ. ಆ ಮೇ[illegible] ಒಂದೊಂದಾಗಿ ನನ್ನ ವಿಷಯಗಳನ್ನು ಕೇಳತೊಡಗಿ[illegible] ಹೇಳಿದೆ. ಒಂದರ್ಧ ಘಂಟೆಯ ವರೆಗೆ ಮಾತುಕ[illegible] ನ್ನಾಡುತ್ತಿದ್ದು, ನಂತರ "ಬಹಳ ಬಳಲಿದಂತಿದೆ; [illegible] ಮಲಗಿಕೊಳ್ಳಿ" ಎಂದು ಹೇಳಿ ಪಲ್ಲಂಗದೆಡೆಗೆ ನನ್ನ ನ[illegible] ಮಲಗಬಿಟ್ಟಳು. ಮಲಗಿದೆ. ಸ್ವಲ್ಪ ಸಮಯದಲ್ಲಿ ಅವ[illegible] ಬಂದು ಮಲಗಿಕೊಂಡಳು. ಘಂಟೆ, ದಿನ, ತಿಂಗಳು, ವ[illegible] ಗಳಿಂದ ಬೆಳೆಯಿಸಿದ್ದ ನನ್ನ ಲಾಲಸೆಯನ್ನು....

"ಹೋಟಲಿಗೆ ಮರಳುವಾಗ ನಡುರಾತ್ರಿಯಾಗಿತ್ತು[illegible] ದಾರಿಯುದ್ದಕ್ಕೂ ಹಿಂದಿನದೆಲ್ಲಾ ಪುನರಪಿ ಪುನಃ ಯೋ[illegible] ಸಿದೆ. ಯೋಚಿಸಿ ಸಂತೋಷಗೊಂಡೆ. ಆದರೆ ಈ ಸಂತೋ[illegible] ಚಿರವಾಗಿ ನನ್ನ ಹೃದಯದಲ್ಲುಳಿಯಲಿಲ್ಲ. ಈ ಸಂತೋ[illegible] ಅಂತರಾಳದಲ್ಲಿ ಹುದುಗಿಕೊಂಡಿದ್ದ ಅಸಂತೋಷವು [illegible] ಗೊಂಡಿತು. ಯೋಚಿಸಿದೆ ಭವಿತವ್ಯತೆಯನ್ನು— "[illegible] ಸಂತೋಷವು ರೋಗದ ಬಿತ್ತಾದರೆ!.... ಕೊಳಕು [illegible]

ಅಯ್ಯೋ! ಎಂಥ ದಾರುಣ ವೇದನೆ! ಎಂತು ಸಹಿಸಲಿ....ಒಮ್ಮೆ ಈ ಬೇನೆಯ ವೇದನೆಯನ್ನು ಸಹಿಸಬಲ್ಲೆನಾದರೂ, ತಂದೆಯವರು ಕೇಳಿದರೆ ನಾನೇನುತ್ತರ ಕೊಡಲಿ? ಧಿಕ್ಕರಿಸು ವರಾದರೆ ಮುಂದಿನ ಗತಿ! ಹುಟ್ಟಿದಂದಿನಿಂದ ಇಲ್ಲಿಯವರೆಗೂ ತಂದೆಯು, ಆ ನನ್ನ ಮಲತಾಯಿಯು ಅದೆಷ್ಟು ತಾತ್ಸಾರದಿಂದ ನನ್ನನ್ನು ನೋಡುತ್ತಿದ್ದರೂ, ನಾನೇ ಅವರ ಸರ್ವಸ್ವವೆಂದು ತಿಳಿದು, ನನ್ನ ಹಿತಕ್ಕಾಗಿ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಿ ವಿದ್ಯಾಭ್ಯಾಸವನ್ನು ಕೊಡಿಸಿ ನನ್ನನ್ನು ಪೊರೆದ, ಪೊರೆಯುವ ಜನ್ಮದಾತನಿಗೆ ತೋರಿಸುವ ನನ್ನ ಕೃತಜ್ಞತೆಯಿದೆಯೇ! ಕ್ಷುಲ್ಲಕ ಸುಖಕ್ಕಾಗಿ ಮುಂದಿನದೆಲ್ಲ ವನ್ನೂ ಸೂರೆಗೊಂಡೆನಲ್ಲಾ! ಆಗ, ಅವಳನ್ನು ನೋಡುವಾಗ ನನ್ನ ವಿವೇಕವೆಲ್ಲಿತ್ತು? ಹೃದಯವು ಶೂನ್ಯವಾದುದೇಕೆ? ಮುಂದಿನ ಬಾಳು—ಜನ್ಮವನ್ನು ಧಿಕ್ಕರಿಸುವ ತಂದೆ, ಸಿಡಿ ಮಿಡಿ, ಬಾಯಿಗೆ ಬಂದಂತೆ ಬೈಯ್ಯುವ ಮಲತಾಯಿ, ಚುಚ್ಚಿ ನಿಂದು ಹಾಸ್ಯಮಾಡುವ ಗೆಳೆಯರು ಮತ್ತು ಪರಿ ಚಿತರು, ಇವರೊಡನೆ, ಇವರ ಮಧ್ಯೆ ಹೇಗೆ ಜೀವಿಸಿ ಕೊಂಡಿರಲಿ! ಭಗವಂತ! ನಾನು ಗತಿಗೇಡಿಯಾಗಬೇ ಕೆಂದೇ ಸಿನ್ನಿಚ್ಛೆಯೆ!....'' ಈ ವಿಚಾರಗಳ ಯೋಚನೆ ಯಿಂದ ದೇಹವು ಕಂಪಿಸಿತು. ಬೆವರ್ವನಿಗಳು ಸರ್ವಾಂಗ ವನ್ನೆಲ್ಲಾ ಮೂಡಿದುವು. ಅಕ್ಷಿದ್ವಯಗಳಿಂದ ಅಶ್ರುಜಲವು ಧಾರಾಕಾರವಾಗಿ ಹರಿಯತೊಡಗಿತು. ನಡೆಯಲು ಕಾಲು ಗಳ ಭೂಮಿಯಿಂದ ಏಳಲಾರವು. ಹೇಗೋ ಹೇಗೋ ಹೋಟೆಲನ್ನು ಸೇರಿದೆ. ಜಾಗ್ರದಾವಸ್ಥೆಯಲ್ಲಿಯೇ ರಾತ್ರಿ ಯನ್ನು ಕಳೆದೆ.

ಪ್ರಾತಃಕಾಲ ಎದ್ದಾಗ ಮೈಕೈಗಳಲ್ಲೆಲ್ಲ ನೋವು ಉಂಟಾ ಗಿತ್ತು. ಸ್ವಲ್ಪ ಜ್ವರವೂ ಇತ್ತು. ಊರಿಗೆ ಹೊರಟೆ. ಊರನ್ನು ಸೇರುವುದರೊಳಗಾಗಿ ವಿಪರೀತ ಜ್ವರ ಬಂದಿತ್ತು. ವೋಟ ರಿನಿಂದಿಳಿದು ಮನೆಗೆ ಹೋಗಲೂ ತ್ರಾಣವಿಲ್ಲವಾಗಿತ್ತು. ಅತ್ಯಂತ ಪ್ರಯಾಸದಿಂದ ನನ್ನ ಮನೆಯನ್ನು ಸೇರಿದೆ. ನಾನು ಬಂದೆನೆಂದು ಎಲ್ಲರೂ ಸಂತೋಷಾತುರರಾದರು. ತಂದೆ ಯವರಂತೂ ಉತ್ಸಾಹದಿಂದುಬ್ಬಿಹೋದರು. ದೇಹಾ ರೋಗ್ಯ ಪರೀಕ್ಷೆ ಮತ್ತು ನಿನ್ನ ವಿಷಯವಾಗಿ ಎಲ್ಲವನ್ನೂ ಕೇಳಿದರು. ನಿರುತ್ಸಾಹದಿಂದ ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನೀಯುತ್ತಾ ಬಂದೆ. ನನ್ನ ನಿರುತ್ಸಾಹವನ್ನು ಅವರು ಕಂಡುಹಿಡಿಯದಿರಲಿಲ್ಲ "ಸ್ವಲ್ಪ ಜ್ವರ ಬಂದಿದೆ; ಬೇರೆ ಏನೂ ಬೇರೇನೂ ಇಲ್ಲವೆಂದೆ." ಚಿಕ್ಕಮ್ಮನಿಗೆ ಹೇಳಿ ಕಷಾಯವನ್ನು ಮಾಡಿಸಿ ಕುಡಿಯುಗೊಟ್ಟರು.

ಮರುದಿನ ಜ್ವರವು ಮತ್ತೂ ಹೆಚ್ಚಾಯ್ತು. ತಂದೆ ಯವರು ಗಾಬರಿಗೊಂಡರು. ಪಂಡಿತರನ್ನು ಕರೆತಂದರು. ನನ್ನ ಹಿತಕ್ಕಾಗಿ ಅವರು ಈ ರೀತಿ ದಣಿಯುತ್ತಿರುವುದನ್ನು ನೋಡಿ ಮನಸ್ಸಿಗೆ ಶಾಂತಿಯಿಲ್ಲದಾಯ್ತು. "ನನ್ನ ತಪ್ಪನ್ನೊಪ್ಪಿ ಕ್ಷಮೆಯನ್ನು ಯಾಚಿಸಲೇ?" ಎಂದು ಯೋಚಿಸಿದೆ. "ಸಾಧಾರಣ ಜ್ವರವಿದ್ದರೂ ಇರಬಹುದು. ಇಂದಿಲ್ಲ ನಾಳೆಯಾದರೂ ವಾಸಿಯಾಗಬಹುದು" ಎಂದಂದು ಕೊಂಡು ಸುಮ್ಮನಿದ್ದೆ. ಪಂಡಿತರು ದೇಹಪರೀಕ್ಷೆಮಾಡಿ ಔಷಧವನ್ನು ಕಳುಹಿಸುತ್ತೇನೆಂದು ತೆರಳಿದರು. ಅವರು ತೆರಳುವಾಗ ತಂದೆಯವರು ಏತರ ಬೇನೆಯೆಂದು ಕೇಳಿದರು. ಪಂಡಿತರು ಮತ್ತೆ ಹೇಳುವೆನೆಂದರು. ನನ್ನ ಸಂಶಯವು ಬಲವಾಯ್ತು.

ದಿನದಿಂದ ದಿನಕ್ಕೆ ಬೇನೆಯು ಹೆಚ್ಚಾಗುತ್ತಾ ಬಂತು. ಸ್ತ್ರೀಸಂಬಂಧ ಕಾಹಿಲೆಯೆಂದು ತಂದೆಯವರಿಗೆ ತಿಳಿಯಿತು. ನಾನು ಆಲೋಚಿಸಿದಂತೆಯೇ ನನ್ನ ಬಾಳನ್ನು ಧಿಕ್ಕರಿಸಿ ದರು. ತನ್ನ ಮಗನಲ್ಲವೆಂದರು. ಮನೆಯಲ್ಲಿ ಇರಲು ಅಯೋಗ್ಯನೆಂದರು. ಅವಮಾನಕರವಾದ ಬಾಳನ್ನು ಬಾಳು ವದಕ್ಕಿಂತ ಮರಣವೇ ಲೇಸೆಂದರು....ಇವನ್ನೆಲ್ಲಾ ತಿಳಿದು ನನ್ನ ಎದೆಯೊಡೆಯಿತು. ತಂದೆಯವರ ಹೃದಯವನ್ನು ಬಲ್ಲೆ; ನಿಜವಾಗಿಯೂ ಅವರು ಕಠಿಣಾತ್ಮರಲ್ಲ. ನನ್ನ ವಿಪರೀತ ವರ್ತನೆಯು ಅವರನ್ನು ಕೆರಳಿಸಿದುದರಿಂದ ನನ್ನನ್ನು ಧಿಕ್ಕ ಸಿದರು. "ಪತಿತನು ನನ್ನ ಮಗ"ನೆಂದು ಆವ ತಂದೆಯು ಗರ್ವಿಸುವನು? ಅವರ ಶ್ರೇಯಸ್ಸಿಗೆ ನಾನು ಅಡ್ಡಬಂದೆ. ಆದರಿಂದವರು ಕುಪಿತರಾದರು. ಇದು ನನ್ನ ಪಾಪದ ಫಲ! ೧೫-೨೦ ದಿವಸಗಳಲ್ಲಿ ಕಾಹಿಲೆಯು ಗುಣವಾಗುತ್ತಾ ಬಂತು. ಮತ್ತೊಂದು ವಾರದಲ್ಲಿ ಕಳೆದುಕೊಂಡ ಶಕ್ತಿಯು ಕೂಡಿ ಬಂತು. ಮುಂದೆ ಆ ಊರಲ್ಲಿರಲಿಕ್ಕೆ ನನ್ನಿಂದಾಗ ಲಿಲ್ಲ. ಪರಿಹಾಸ್ಯಮಾಡುವವರೇ ಎಲ್ಲರು. ನನ್ನನ್ನು ನೋಡಿ ದಾಗ ಅಡ್ಡಮೋರೆಯನ್ನು ಮಾಡಿಕೊಂಡು ಹೋಗುವ ವರೇ. ಮೂರ್ನಾಲ್ಕು ಜನರು ಸಂಧಿಸಿದಾಗಲೆಲ್ಲ ನನ್ನ ವಿಷಯದ ಮಾತುಗಳೇ ಅವರ ಪ್ರಮುಖ ಮಾತುಕತೆ ಗಳಾದುವು. ಇವೆಲ್ಲವನ್ನು ತಿಳಿದು ಊರನ್ನು ತೊರೆಯಲು ಯೋಚಿಸಿದೆ. ತಂದೆಯವರಿಗೊಂದು ಪತ್ರವನ್ನು ಬರೆ ದಿಟ್ಟು ಗೃಹವನ್ನು ಪರಿತ್ಯಜಿಸಿದೆ. ಇನ್ನು ಈ ಕಲುಷಿತ ಮೋರೆಯನ್ನು ನನ್ನ ತಂದೆಯವರಿಗೆ ತೋರಿಸಲು ಇಷ್ಟ ವಿಲ್ಲ. ಪತ್ರದಲ್ಲಿ ಬರೆದಂತೆ ಅವರು ನನ್ನ ತಪ್ಪನ್ನು ಮನ್ನಿಸು ವರಾದರೆ ಅದೇ ನನ್ನ ಭಾಗ್ಯ...

"ಇದೇ ನನ್ನ ಕಥೆ; ನನ್ನ ವ್ಯಾಕುಲತೆಗೆ ಕಾರಣ. ತನ್ನ ಅವಿವೇಕದಿಂದ ನನ್ನ ಬಾಳನ್ನು ಬಲಿಗೊಟ್ಟೆ. ತಂದೆಯವರಿಗೆ ಬೇಡವಾದೆ. ಸಮಾಜದೆದುರಿನಲ್ಲಿ ನೀಚನಾದೆ. ಗೆಳೆಯರಿಗೆ ಪರಿಹಾಸ್ಯ ವ್ಯಕ್ತಿಯಾದೆ. ನಿನಗೂ....


"ಗೋಪು ನೀನು ಹೇಳಬೇಕೆಂದಿರುವುದನ್ನು ನಾನು ಗ್ರಹಿಸ ಬಲ್ಲೆ. ಆದರೆ ನೀನು ಹಾಗೆ ತಿಳಿಯುವಿಯಾದರೆ ಇಲ್ಲಿಯತನಕ ಗೆಳೆಯನಾಗಿ ಬಾಳಿದುದರ ಫಲವೇನು? ತಪ್ಪನ್ನು ಮಾಡಿರಬಹುದು. ನಡೆಯುವವರು ಮಾರ್ಗದಲ್ಲಿ ಮುಗ್ಗರಿಸುವದು ಸ್ವಭಾವ ಜನ್ಯವಾಗಿರುತ್ತದೆ. ತಪ್ಪನ್ನು ಮಾಡಿದೆವೆಂದು ಜೀವಗೊಲೆಮಾಡಿಕೊಳ್ಳುವುದೇ? ಹಾಗೆ ಮಾಡಿದರೆ ಹಿಂದಿನ ತಪ್ಪನ್ನು ತಿದ್ದಲು ಮತ್ತೊಂದು ತಪ್ಪನ್ನು ಮಾಡಿದಂತಾಗುವುದಿಲ್ಲವೇ? .... ಅಲ್ಲದೆ ಧರ್ಮವೀರರೆನಿಸಿಕೊಂಡಿರುವ ಹಲವು ವ್ಯಕ್ತಿಗಳ ಜೀವನದ ಹಿಂಬದಿಯಲ್ಲಿರುವ ವಿಷಯಗಳನ್ನು ವಿಚಾರಿಸು. ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರ ಅನಾಚಾರಗಳಿಲ್ಲವೇ? ಇವನ್ನೆಲ್ಲಾ ಯೋಚಿಸಿ ನೋಡು. ಇಂದು ಪತಿತನೇ ನೀನಾಗಿರು. ಆದರೆ ಆ ಪಾತಕವನ್ನು ಹರಿದೋಡಿಸುವ ಸಾಧನೆಯೇ ಇಲ್ಲವೆಂದು ತಿಳಿದೆಯಾ? ಇದೆ. ಆ ಮಹಾನುಭಾವ ಜೇಸುವು ಅದನ್ನು ತನ್ನ ಅನುಯಾಯಿಗಳಿಗೆ ಬೋಧಿಸಿದನಲ್ಲವೇ?

ಕೃತದುಷ್ಕರ್ಮಗಳನ್ನು ಪುನಃ ಪುನಃ ನೆನೆದು, ಪರಿಶುದ್ಧಾಂತಃಕರಣದಿಂದ ಪಶ್ಚಾತ್ತಾಪಪಟ್ಟು ಸನ್ಮಾರ್ಗ ಪ್ರವೃತ್ತರಾದರೆ ಅದೇ ನಮ್ಮ ಭಾಗ್ಯ; ಏಳ್ಗೆಯ ಪ್ರಥಮ ಸೋಪಾನ. ಇದನ್ನು ಯೋಚಿಸಿ ನೀನು ಮುಂದೆ ನಿನ್ನ ಜೀವಿತವನ್ನು ವ್ಯಯಿಸುವುದರಿಂದ ನಿನ್ನ ಜೀವನವು ಸಮಾಜದಲ್ಲಿ ಗಣ್ಯಜೀವನವಾಗುವುದು. ಇದರಿಂದಲೇ ಬಹಿಷ್ಕೃತ ವ್ಯಕ್ತಿಯೂ ಪೂಜಿತ ವ್ಯಕ್ತಿಯಾಗುವದು .... ಇದಕ್ಕಿಂತ ಹೆಚ್ಚು ಹೇಳಲಾರೆ. ಹಿಂದೆ ನೀನು ಹೇಗೆ ನನ್ನ ಮಿತ್ರನಾಗಿದ್ದಿಯೋ ಹಾಗೆಯೇ ಇಂದೂ ನೀನು ನನ್ನ ಮಿತ್ರನಾಗಿರುವಿ. ನಿನ್ನ ಸುಖದುಃಖಗಳು ನನ್ನ ಸುಖದುಃಖಗಳು. ಅಂತೆಯೇ ನನ್ನ ಈ ಬೋಧನೆಯನ್ನು ಲಕ್ಷ್ಯದಲ್ಲಿಡು.

* * *

ಗೋಪುವನ್ನು ಸಮಾಧಾನಗೊಳಿಸಿದೆನೇನೋ ಸರಿ. ಆದರೆ ನನ್ನ ಮನಸ್ಸು ಮಾತ್ರ ಸಮಾಧಾನ ಹೊಂದಲಿಲ್ಲ. ಅಂತರಂಗವು "ವಿವೇಕ ಯುಕ್ತನಾದ ಮನುಷ್ಯನೇ ಕೆಲವು ಸಮಯಗಳಲ್ಲಿ ಜ್ಞಾನಶೂನ್ಯನಾಗಿ ದುಷ್ಪ್ರವೃತ್ತಿಯನ್ನಾಚರಿಸುವುದೇಕೆ?" ಎಂದು ಕೇಳತೊಡಗಿತು. ಅದಕ್ಕುತ್ತರವನ್ನು ಹುಡುಕತೊಡಗಿದೆ.

ಈ ಕಥೆಯ ಶಿರೋಲೇಖನವೇ ನನ್ನಂತರಂಗದ ಪ್ರಶ್ನೆ. ಅದಕ್ಕುತ್ತರವನ್ನು ಹೇಳಲು ನಾನು ಜ್ಞಾನ ಪೂರ್ಣನಲ್ಲ. ತಾವೇ ತಮ್ಮ ವಿಜ್ಞಾನಶಕ್ತಿಯಿಂದ ತಿಳಿಯಿರೆಂದು ನಿವೇದಿಸುವೆ.



ನಗಬೇಡಿ

ಒವನ ಹೆಂಡತಿಯು ಅವನಿಗೆ ಹೀಗೆ ಬೈಯಹತ್ತಿದಳು: 'ನಿಮಗೆ ನಾಚಿಕೆಯಿದೆಯೋ ? ನಿಮಗಿಂತ ಒಂದು ಕತ್ತೆಗೆ ಬುದ್ಧಿ ಹೆಚ್ಚಿದೆ '.... ಅಷ್ಟರಲ್ಲಿ ಅವನ ಮಿತ್ರರು ಹಿಂದಿನಿಂದ ಬಂದು ಕೇಳಹತ್ತಿದರು. ಆಗ ಗಂಡನು ಹೆಂಡತಿಗೆ "ಶಾಬಾಸ್ ಒಳ್ಳೇದು. ಇನ್ನೂ ಏನೇನು ಬೈದೆ ಆ ಮೂರ್ಖನಿಗೆ ? " ಎಂದನು.

* * *

ಅಧ್ಯಾಪಕ:—ಶೀನಾ, ಹೋದ ಸಲ ನಾನು ಯಾವ ಪಕ್ಷಿಯ ವಿಷಯವನ್ನು ಕಲಿಸಿದೆ ?

ಶೀನ:—ನೀವೂ ಮರೆತುಬಿಟ್ಟಿರಿ ಹಾಗಾದರೆ !

* * *

ಒವನು ತಾನು ಕಳ್ಳತನ ಮಾಡಿಲ್ಲವೆಂದು ಸಾಧಿಸುತ್ತಿದ್ದ.

ನ್ಯಾಯಾಧೀಶರು:—ನಿನ್ನ ಪರವಾಗಿ ಸಾಕ್ಷಿಗಳಿದ್ದಾರೇನು ?

ಕಳ್ಳ:— ಒಳ್ಳೆ ನ್ಯಾಯಾಧೀಶರು ! ಕಳ್ಳರು ಸಾಕ್ಷಿಗಳ ಸಂಗಡ ಹೋಗುತ್ತಾರೆಯೋ ಕದಿಯುವುದಕ್ಕೆ ?

* * *

ಮಾಸ್ತರ:—ನಿನ್ನೆ ನೀನು ಅಭ್ಯಾಸಮಾಡಿಲ್ಲವೆಂದು ಬರೆದುಕಳಿಸಿದ್ದೆ. ನಿಮ್ಮ ತಂದೆ ಹೊಡೆದರೋ, ಬೈದರೋ ?

ವಿದ್ಯಾರ್ಥಿ:—ಹೊಡೆಯಲೂ ಇಲ್ಲ. ಬೈಯಲೂ ಇಲ್ಲ.

ಮಾಸ್ತರ:—ಅವರು ಬಹು ಸೌಮ್ಯವೆಂದು ತೋರುತ್ತದೆ.

ವಿದ್ಯಾರ್ಥಿ:—ಇಲ್ಲ; ಅಪ್ಪ ಮೂಕ ಮತ್ತು ಅವನಿಗೆ ಬಲಗೈಯಿಲ್ಲ.

* * *

ಪ್ರೇಕ್ಷಕ:—ಹೆಂಡದ ಮೇಲಿನ ಪ್ರೀತಿಯು ನಿನ್ನನ್ನು ಈ ಸೆರೆಮನೆಗೆ ತಂದಿತೆ ?

ಸೆರೆಯಾಳು:—ಸರಿ ! ಸರಿಯಾಗಿ ನೀರು ಸಿಗುವದಿಲ್ಲ ಇಲ್ಲಿ ! ಇನ್ನು ಹೆಂಡ ಸಿಗುವದೆ ?

* * *

ಆತ:—ನೀನು ಬಹಳ ಜಾಣಳೆಂದು ತೋರುತ್ತಿ. ನಾವಿಬ್ಬರೂ ಮದುವೆಯಾಗೋಣ.

ಆಕೆ:—ಬೇಡ ! ಬೇಡ ! ನಾನು ಜಾಣಳೆಂದು ತೋರುವದಷ್ಟೆ ಅಲ್ಲ; ನಿಜವಾಗಿ ಜಾಣೆಯಾಗಿದ್ದೇನೆ.

* * *

ಹೆಂಡತಿ:—ಈಗ ನೀವು ಪೂರ್ಣ ಸಾಲದಿಂದ ಮುಕ್ತರಾಗಿದ್ದೀರಾ ?

ಗಂಡ:—ಓಹೋ ! ನಿನ್ನ ತಂದೆ ನನಗೆ ಒಂದು ಸಾವಿರ ರೂಪಾಯಿ ಕೈಗಡ ಕೊಟ್ಟಿದ್ದಾನೆ.

* * *

ಮುನಿಸಿಪಾಲಿಟಿ ಅಧ್ಯಕ್ಷರು ರಾತ್ರಿ ಮಾರ್ಗದಲ್ಲಿ ನಡೆಯುವಾಗ ಒಂದು ತಗ್ಗಿಗೆ ಬಿದ್ದರು. ಪಕ್ಕದಿಂದ ಒಬ್ಬ ಮುನಿಸಿಪಾಲಿಟಿ ಸೇವಕ ಹೋಗುತ್ತಿದ್ದ. ಅವನನ್ನು ಕರೆದು ತನ್ನನ್ನು ಮೇಲೆಬ್ಬಿಸೆಂದು ಹೇಳಿದರು. ಅವನು ' ಇವತ್ತು ಆದಿತ್ಯವಾರ ರಾಯರೆ. ಸಾಮ್ಯವಾದದ ದೊಡ್ಡ ಮಾತಾಡುವ ನೀವೂ ರಜೆಯ ದಿನದಲ್ಲಿ ನಮಗೆ ಕೆಲಸಕೊಡುತ್ತೀರಾ ? ' ಎಂದ.

* * *

ಆಕೆ:—ನಾನು ನಿಮ್ಮನ್ನು ಲಗ್ನವಾಗುವದಿಲ್ಲ. ಏಕೆ ಗೊತ್ತೇ ?

ಆತ:—ಏನೋ ನನ್ನ ತಲೆಗೆ ಹೊಳೆಯುವದೆ ಇಲ್ಲ !

ಆಕೆ:—ಅದಕ್ಕೇ.

* * *

ತಂದೆ:—ನಾನ್ಯಾ, ಈಗ ಒಂದು ತಿಂಗಳ ಹಿಂದೆ ಪೋಸ್ಟಿಗೆ ಹಾಕಲಿಕ್ಕೆ ಕೊಟ್ಟ ಪತ್ರ ಇನ್ನೂ ನಿನ್ನ ಜೇಬಿನಲ್ಲೆ ಆದೆಯಲ್ಲೋ !

ಮಗ:—ಆ ಕೋಟಿಗೆ ಗುಂಡಿ ಹಚ್ಚಿಕೊಡು ಎಂದು ಕೊಟ್ಟದ್ದು ಇನ್ನೂ ನಿನ್ನ ಹತ್ತರವೇ ಇಟ್ಟುಕೊಂಡಿಯಲ್ಲ !

* * *

ಧರ್ಮಿಷ್ಠ:—ನಾಸ್ತಿಕ ಅಂತ ಯಾರಿಗಂತಾರೆ ಗೊತ್ತಿದೆಯೇನು ?

ನಾಸ್ತಿಕ:—ಧರ್ಮ, ದೇವರ ಹೆಸರಿನಿಂದ ನಾಯಿಗಳಂತೆ ಯಾರು ಜಗಳಾಡುವದಿಲ್ಲವೋ ಅವರಿಗೆ.

ಯೋಗಾಸನಗಳು

ಲೇ:—ಶ್ರೀ. ವಿ. ಆರ್. ಅಣ್ಣಾಸ್ವಾಮಿರಾವ್, ಬೊಂಬಾಯಿ

ಅತಿ ಚಂಚಲವಾದ ಮನಸ್ಸನ್ನು ಆತ್ಮನ ಕಡೆಗೆ ಎಳೆಯುವುದೇ ಯೋಗದ ಮೊದಲನೆಯ ಸೋಪಾನ. ಮನಸ್ಸನ್ನು ಅಧೀನವಾಗಿಡಲು ದೇಹಸ್ವಾಧೀನತೆಯು ಅತ್ಯಾವಶ್ಯಕವಾದುದರಿಂದ, ನಮ್ಮ ಹಿರಿಯರು ಅನೇಕ ಆಸನಗಳನ್ನು ನಿಯಮಿಸಿರುವುದು. ಆಸನಗಳು ಬಹುವಾದರೂ, ಎಲ್ಲವನ್ನೂ ಒಂದೇ ಸಲ ಮಾಡಲು ಸಾಧ್ಯವೂ ಇಲ್ಲ. ಕಾರ್ಯಸಾಧನೆಗಾಗಿ ಅವರವರ ದೇಹ ಸ್ಥಿತಿಯನ್ನನುಸರಿಸಿ ಹತ್ತಾರು ಆಸನಗಳನ್ನು ನಿಯಮದೊಂದಿಗೆ ಅನುಸರಿಸಿದಲ್ಲಿ ದೇಹದಲ್ಲಿಯ ಅನೇಕಾನೇಕ ರೋಗಗಳು ನಶಿಸಿ ಹೋಗುವವಲ್ಲದೆ, ಆಯುಷ್ಯವು ವೃದ್ಧಿಯನ್ನೈದುವುದು.

“ಆಸನ ಪ್ರಾಣಾಯಾಮಗಳಿಂದ ಆತ್ಮಜ್ಞಾನವು ಲಭಿಸುವುದು. ಕರ್ಮಭೂಮಿಯಲ್ಲಿ ಇದ್ದೂ ಅದರ ಸಂಪರ್ಕವಿಲ್ಲದೆ ತಾವರೆಯೆಲೆಯ ಮೇಲಿನ ನೀರ್ಗುಳ್ಳೆಯಂತೆ ದುಃಖಸಂಪರ್ಕವಿಲ್ಲದೆ ಆಯುರಾರೋಗ್ಯ, ಮೋಕ್ಷಾದಿಗಳನ್ನು ಪಡೆಯಬಹುದು.

ಆತ್ಮಶಕ್ತಿಯೇ ಬೇರೆ, ಮನಸ್ಸೇ ಬೇರೆ. ಮನಸ್ಸು ಸಂಸ್ಕಾರ, ಕಾರ್ಯಕಾರಣ ಬಂಧನೆಗಳಿಗೆ ಅಧಿಷ್ಠಾನವಾದರೂ ಆತ್ಮಕ್ಕೆ ಅದು ಉಪಕರಣಮಾತ್ರ ವಾಗಿರುತ್ತದೆ. ಜೀವಾತ್ಮನು ಅದರ ಸೆಳೆತಗಳಿಗೆ ಅಧೀನನಾದಲ್ಲಿ ತನ್ನ ಸ್ವರೂಪವನ್ನು ಅಭಿವ್ಯಕ್ತಪಡಿಸಲಾರನು. ಮನಸ್ಸು ವಾಯುವಿನಂತೆ ಸ್ವೇಚ್ಛಾಪ್ರವೃತ್ತಿಯುಳ್ಳದ್ದು; ಬಿರುಗಾಳಿಗೆ ಸಿಕ್ಕು ಕೊಚ್ಚಿಹೋಗುವ ನಾವೆಯಂತೆ ಪರಾಧೀನವಾದದ್ದು. ಇಂಥ ಚಂಚಲವಾದ ಮನಸ್ಸನ್ನು ಸಹ ಯೋಗಾಭ್ಯಾಸ, ವೈರಾಗ್ಯಗಳಿಂದ ಸ್ವಾಧೀನಪಡಿಸಿಕೊಳ್ಳಬಹುದೆಂದು ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಉಪದೇಶ ಮಾಡಿರುತ್ತಾನೆ.


ಮಹಾನುಭಾವರಾದ ಋಷಿಗಳು ವೇದಾದಿ ಶಾಸ್ತ್ರಗಳನ್ನೆಲ್ಲಾ ಚೆನ್ನಾಗಿ ವಿಮರ್ಶಿಸಿ ಮನುಷ್ಯನ ಸುಖಸಾಧನೆಗೆ ಹಲವು ಪ್ರಯತ್ನಗಳನ್ನು ಕಂಡುಹಿಡಿದಿದ್ದಾರೆ; ಅವುಗಳಲ್ಲಿ ಆಸನ, ಪ್ರಾಣಾಯಾಮಗಳು ಮುಖ್ಯವಾದವುಗಳು. ಇವುಮಾನವನಿಗೆ ಮುಖ್ಯವಾದ ಆರೋಗ್ಯ, ಮೋಕ್ಷಪದವಿಗಳನ್ನು ಕೊಡುತ್ತವೆ.

ಆಧುನಿಕ ವ್ಯಾಯಾಮದರ್ಶಿಗಳಂತೆ ನಮ್ಮ ಪೂರ್ವಜರ, ಮುಖ್ಯ ಧ್ಯೇಯವು ಕೇವಲ ಐಹಿಕ ಸುಖವಾಗಿರಲಿಲ್ಲ, ಅಥವಾ ಸ್ವರ್ಗಾದಿ ಪಾರತ್ರಿ[illegible] ಕ್ಷಣಿಕ ಸೌಖ್ಯಗಳೂ ಅಲ್ಲ. ದುಃಖಸಂಪರ್ಕವೇ ಇಲ್ಲ[illegible] ನಿರಂತರ ಸುಖವೇ ಅವರ ಗುರಿಯಾಗಿತ್ತು.

ಇಂಥ ಅತ್ಯುತ್ತಮವಾದ, ಆರೋಗ್ಯ ಮೋಕ್ಷಪ್ರದ[illegible]ವಾದ ಯೋಗಸಾಧನೆಯನ್ನು ನಮ್ಮ ಹಿರಿಯರು ನಮಗ[illegible] ತೋರಿಸಿದ್ದರೂ ನಾವು ಇನ್ನೂ ಈ ಪ್ರಪಂಚದ [illegible] ದುಃಖಗಳಿಗೆ ತುತ್ತಾಗಿರುವುದು ಬಹಳ ಶೋಚನೀಯವಾ[illegible] ವಿಷಯ! ಪ್ರತಿಯೊಬ್ಬ ಮನುಷ್ಯನಲ್ಲಿಯೂ ಅಮೋಘವಾ[illegible] ಆತ್ಮಶಕ್ತಿಯಿರುವುದು.

ಈ ಶಕ್ತಿಯಿಂದಲ್ಲವೇ ವಿಶ್ವಾಮಿತ್ರರು ದೇವ[illegible] ಎನ್ನಿಸಿಕೊಂಡುದು? ಹಿರಿಯರಿಗೆ ಮಾತ್ರ ಈ ಶಕ್ತಿಯಿ[illegible] ನಮಗದು ಸಾಧ್ಯವಿಲ್ಲೆನ್ನುವ ಆಧು[illegible] ಯುವಕರು ಮಹಾತ್ಮಾ ಗಾಂಧಿಯವರ[illegible] ಮೇಲ್ಪಂಕ್ತಿಯಾಗಿಟ್ಟುಕೊಳ್ಳಲಿ. ಮಹಾ[illegible]ರಿಗೆ ದೊರಕಿರುವ ಲೋಕಪೂಜ್ಯತೆಯು [illegible] ಆತ್ಮಬಲದಿಂದಲ್ಲವೇ?

ದೀರ್ಘ ನಿದ್ರಾವಸ್ಥೆಯಲ್ಲಿರುವಂಥ [illegible] ಆತ್ಮಶಕ್ತಿಯನ್ನು ಆಸನ, ಪ್ರಾಣಾಯಾ[illegible] ಆತ್ಮಶುದ್ಧಿ, ಇಂದ್ರಿಯ ನಿಗ್ರಹ, [illegible] ನಡತೆಗಳಿಂದ ಕ್ರಿಯಾಪ್ರಪಂಚಕ್ಕೆ [illegible] ಅದರ ಉಪಯೋಗವನ್ನು ನಾವೂ ಪಡೆ[illegible]



೧. ಸರ್ವಾಂಗಾಸನ

ವಿನ್ಯಾಸ, ನಿಬಂಧನೆಗಳನ್ನನುಸರಿಸಿ ರೇಚಕ [illegible] ಗಳೊಂದಿಗೆ ಮಾಡಿದಲ್ಲಿ ಹೊಟ್ಟೆಯಲ್ಲಿಯ [illegible] ರೋಗಗಳು ದೂರವಾಗಿ, ಆರೋಗ್ಯವೂ [illegible] ನವೂ ಉಂಟಾಗುತ್ತವೆ.



೨. ಯೋಗನಿದ್ರಾಸನ

ವಿನ್ಯಾಸ ನಿಬಂಧನೆಗಳನ್ನನುಸರಿಸಿ ಮಾಡತಕ್ಕದ್ದು. ಈ ಆಸನವು ಕ್ಷಯ, ಉಬ್ಬಸ, ಜಲೋದರ ವ್ಯಾಧಿಗಳನ್ನು ಗುಣಪಡಿಸುವುದಲ್ಲದೆ, ಧೀರ್ಘಾಯುಷ್ಯವನ್ನು ಕೊಡುವುದು.

ಬಹುದು. ಬಾಲ್ಯದಿಂದಲೂ ನಮ್ಮ ಹಿರಿಯರು ನಮ್ಮನ್ನು ಬಾಹ್ಯಪ್ರಪಂಚದ ಕಡೆಗೇ ಪ್ರವರ್ತಿಸುವಂತೆ ಬೆಳೆಸಿರುವುದರಿಂದ, ಅಂತರಾತ್ಮನನ್ನು ತಿಳಿಯುವ ಶಕ್ತಿಯು ನಮಗೆ ಇಲ್ಲದೆ ಹೋಗಿದೆ. ಮನಸ್ಸಾದರೋ ಅತಿ ಚಂಚಲವಾಗಿ, ಹೆಚ್ಚಿನ ವಿಷಯಾಭಿಲಾಷೆಗಳಿಂದ ನಮ್ಮನ್ನು ಬಹಳ ಕಷ್ಟಕ್ಕೆ ಗುರಿಮಾಡಿರುವುದು. ಇದಕ್ಕೆಲ್ಲಾ ಮನಸ್ಸು ಅಧೀನವಾಗದಿರುವುದೇ ಕಾರಣ.

ಮನಸ್ಸು

ಮನಸ್ಸು ದೇಹದಲ್ಲಿಯ ಅದೃಶ್ಯವಾದ ವಸ್ತು. ದೇಹಕ್ಕೂ ಮನಸ್ಸಿಗೂ ನಿಕಟ ಸಂಬಂಧವಿದೆ. ಆದುದರಿಂದಲೇ ಕಾಯಿಲೆ ಮನುಷ್ಯನಿಗೆ ಬುದ್ಧಿಭ್ರಮೆಯುಂಟಾಗುವುದು. ದೇಹಾರೋಗ್ಯವಿಲ್ಲದವನಿಗೆ ಮನಸ್ಸು ಎಂದಿಗೂ ಅಧೀನವಾಗುವುದಿಲ್ಲ.

ಮನಸ್ಸನ್ನು ಸ್ಥಿರಪಡಿಸಿ, ತನ್ಮೂಲಕ ಆತ್ಮನನ್ನು ನೋಡಲು ನಾವು ಸಮರ್ಥರಾದರೆ ಆತ್ಮನು ಶಾಶ್ವತ ಜನನಮರಣಗಳಿಲ್ಲದವನು ಮತ್ತು ಇಹಲೋಕದ ಸುಖದುಃಖಗಳು ಕ್ಷಣಿಕವೆಂದು ಜ್ಞಾನವುಂಟಾಗಿ ನಾವು ಕರ್ಮಭೂಮಿಯಲ್ಲಿದ್ದರೂ ಅದರ ದುಃಖ ಸಂಪರ್ಕವಿಲ್ಲದೆ ತಾವರೆ ಎಲೆಯ ಮೇಲಿನ ನೀರ್ಗುಳ್ಳೆಯಂತೆ ಇರಬಹುದು.

ಆಸನ


ಅತಿ ಚಂಚಲವಾದ ಮನಸ್ಸನ್ನು ಆತ್ಮನ ಕಡೆಗೆ ಎಳೆಯುವುದೇ ಯೋಗದ ಮೊದಲನೆಯ ಸೋಪಾನ. ಮನಸ್ಸು ಅಧೀನವಾಗಿಡಲು ದೇಹಸ್ವಾಧೀನತೆಯು ಅತ್ಯಾವಶ್ಯಕವಾದುದರಿಂದ, ನಮ್ಮ ಹಿರಿಯರು, ಅನೇಕ ಆಸನಗಳನ್ನು ನಿಯಮಿಸಿರುವರು. ಆಸನಗಳು ಬಹುವಾದರೂ, ಎಲ್ಲವನ್ನೂ ಒಂದೇ ಸಲ ಮಾಡಲು ಸಾಧ್ಯವೂ ಇಲ್ಲ, ಆಗತ್ಯವೂ ಇಲ್ಲ. ಕಾರ್ಯಸಾಧನೆಗಾಗಿ ಅವರವರ ದೇಹಸ್ಥಿತಿಯನ್ನನುಸರಿಸಿ ಹತ್ತಾರು ಆಸನಗಳನ್ನು ನಿಯಮದೊಂದಿಗೆ ಅನುಸರಿಸಿದಲ್ಲಿ ದೇಹದಲ್ಲಿಯ ಅನೇಕಾನೇಕ ರೋಗಗಳು ನಶಿಸಿ ಹೋಗುವುವಲ್ಲದೆ, ಆಯುಷ್ಯವು ವೃದ್ಧಿಯನ್ನೈದುವುದು.

ಈ ಪುಟಗಳಲ್ಲಿರುವ ಯೋಗಾಸನಗಳು, ಮೈಸೂರು ಶ್ರೀಮನ್ಮಹಾರಾಜರ ಆಶ್ರಯದಲ್ಲಿರುವ ಶ್ರೀಯೋಗಶಾಲೆಯಲ್ಲಿ ತೇರ್ಗಡೆಹೊಂದಿದ ಪ್ರತಿಭಾಶಾಲಿಗಳಾದ ಶ್ರೀಯುತ ಸಿ. ಮಹಾದೇವಭಟ್ಟರು ಬೊಂಬಾಯಿಯಲ್ಲಿರುವ ಮ|| ವಿ. ಆರ್. ಅಣ್ಣಾಸ್ವಾಮಿರಾಯರ ಗೃಹದಲ್ಲಿ, ವೃತ್ತಪತ್ರಿಕಾ ಪ್ರಕಟನೆಯ ಸಲುವಾಗಿ ಪ್ರದರ್ಶಿಸಿದವುಗಳ ಚಿತ್ರಗಳಾಗಿವೆ.

ಆಹಾರ


ಯೋಗಸಾಧನೆಗೆ ಆಹಾರನಿಯಮಗಳೇ ಮುಖ್ಯವಾದ ಅಂಗ. 'ಪ್ರಕೃತಿಯ ದೆಸೆಯಿಂದ ಹುಟ್ಟಿದ ಸತ್ವ ರಜ ತಮ ಎಂಬ ಗುಣಗಳು, ನಾಶವಿಲ್ಲದ ಆತ್ಮನನ್ನು ಸಹ ದೇಹದಲ್ಲಿ ಕಟ್ಟಿ ಹಾಕುವುವು' ಎಂಬ ಭಗವದ್ವಚನದಿಂದ ಯೋಗಸಾಧನೆಗೆ ಆಹಾರನಿಯಮಗಳು ಎಷ್ಟು ಮುಖ್ಯವೆಂಬುದನ್ನು ನಾವು ಅರಿಯಬಹುದು. ಆಹಾರನಿಯಮವಿಲ್ಲದೆ ಯೋಗವು ಖಂಡಿತವಾಗಿಯೂ ಸಿದ್ಧಿಸಲಾರದು.

ನೀರುಳ್ಳಿ, ಬೆಳ್ಳುಳ್ಳಿ, ಮೂಲಂಗಿ, ಕಡಲೆ, ಉದ್ದು ಮುಂತಾದುವುಗಳನ್ನು ಬಿಟ್ಟು ಮಿಕ್ಕ ಗಡ್ಡೆಗೆಣಸು, ಹಣ್ಣುಗಳು ಮತ್ತು ಹಸುವಿನ ಹಾಲು ಸತ್ವಗುಣವುಳ್ಳವುಗಳು. ಆಹಾ



೩. ಕೌಂಡಿನ್ಯಾಸನ

ಮೂಲಾಧಾರ ಶುದ್ಧಿಗೆ ಇದು ಅತ್ಯುತ್ತಮವಾದ ಆಸನ.



೪. ಉಭಯ ಪಾದಾಂಗುಷ್ಠಾಸನ
ವಿನ್ಯಾಸ ನಿಬಂಧನೆಗಳಿಂದ ಮಾಡಿದರೆ, ಮೂಲವ್ಯಾಧಿ, ಅಜೀರ್ಣ, ವ್ಯಾಧಿ, ಹುಡಿಗೆಮ್ಮು, ಅಂಡವಾಯುಗಳೆಲ್ಲಾ ಮಾಯುವಾಗುವುವು.

ರವು ಮನೋಹರವಾಗಿಯೂ, ದೇವರಿಗೆ ನಿವೇದನ ಮಾಡು ವಂತಹದೂ ಆಗಿರಬೇಕು. ಒಳ್ಳೇ ಆಹಾರ, ನಿರ್ಮಲ ವಾದ ಗಾಳಿ, ನೀರು, ಸುವಾಸನೆಯಾದ ತುಪ್ಪ ಇವುಗಳನ್ನು ಸೇವಿಸುವುದರಿಂದ ಆಯುಷ್ಯವು ವೃದ್ಧಿಯಾಗುವುದು. ಶಾರೀರಿಕ ಮತ್ತು ಮಾನಸಿಕ ಬಲಗಳೂ ಅಭಿವೃದ್ಧಿ ಯಾಗುತ್ತವೆ.

ಅತಿ ಕಾರವೂ, ಕಹಿಯೂ, ಕೊಳೆತಿರುವುದೂ, ಉಪ್ಪೂ, ಬಿಸಿಯೂ ಮತ್ತು ಕರಳನ್ನು ಕತ್ತರಿಸುವ, ರಕ್ತವನ್ನು ಹೀರುವ, ಬಾಯಾರಿಕೆಯನ್ನುಂಟುಮಾಡುವ ಆಹಾರವು ರಾಜಸಗುಣವುಳ್ಳದ್ದು. ಇವುಗಳ ಸೇವನೆಯಿಂದ ದುಃಖ, ರೋಗ, ಕಾಮವಿಕಾರ, ಸೋಮಾರಿತನಗಳು ಉಂಟಾಗು ತ್ತವೆ.

ತಾಮಸಗುಣವು ಎಲ್ಲ ಪ್ರಾಣಿಗಳನ್ನೂ ಮೋಹಗೊಳಿಸು ವಂತಹದು. ಮರೆವೂ, ಆಲಸ್ಯವೂ, ನಿದ್ರೆಯೂ, ಇವುಗಳಿಂದ ಜೀವವು ಕಟ್ಟಲ್ಪಡುವುದು. ರಸವಿಲ್ಲದ, ಹಳಸಿದ, ದುರ್ಗಂಧ ವಾದ, ಮತ್ತೊಬ್ಬರು ತಿಂದು ಮಿಕ್ಕಿರುವ, ಕಣ್ಣಿಗೆ ಅಸಹ್ಯ ವಾದ, ತಂಗಳು ಮತ್ತು ಮದ್ಯಮಾಂಸಗಳು ತಾಮಸಾಹಾರ ವೆನಿಸುತ್ತವೆ. ಇವುಗಳನ್ನು ಸೇವಿಸುವುದರಿಂದ ದುಷ್ಟ ಸ್ವಭಾವ, ಕಠಿಣಮನಸ್ಸು, ಮುಂಗೋಪ, ರೋಗ, ಮನೋ ವಿಕಾರ, ಅಜ್ಞಾನಗಳು ಉಂಟಾಗುತ್ತವೆ.

ಸಾತ್ವಿಕಾಹಾರವು ಸುಖವನ್ನೂ, ರಾಜಸವು ಕಾಮವನ್ನೂ ತಾಮಸಿಕವು ಅಜ್ಞಾನವನ್ನೂ ಹುಟ್ಟಿಸುವುದರಲ್ಲಿ ಪ್ರಸಿದ್ಧ ವಾಗಿವೆ. ದೇಹದಲ್ಲಿ ಹುಟ್ಟಿದ ಈ ಮೂರು ಗುಣಗಳನ್ನು ತ್ಯಜಿಸಿದವನು ಹುಟ್ಟು, ಸಾವು, ಮುಪ್ಪು, ದುಃಖಗಳಿಂದ ಬಿಡಲ್ಪಟ್ಟು ಅಮೃತವನ್ನುಣ್ಣುವನು.

ಯೋಗಾಭ್ಯಾಸವು ಚಿತ್ತಶುದ್ಧಿಗೆ ಕಾರಣವಾದುದರಿಂದ, ಅದರ ಸಾಧನೆಗೆ ಸಾತ್ವಿಕ ಆಹಾರ, ಸಾತ್ವಿಕ ಕರ್ಮ, ಸಾತ್ವಿಕ ದಾನಗಳು ಅತ್ಯವಶ್ಯಕ. ಅಲ್ಲದೆ ಆಸನ ಪ್ರಾಣಾಯಾಮ ಗಳು ಸಿದ್ಧಿಸಬೇಕಾದರೆ ನಮ್ಮ ಇಂದ್ರಿಯಗಳ ವ್ಯಾಪಾರ ಸ್ವಾಧೀನತೆಯೂ ಆವಶ್ಯಕ. ಅದಕ್ಕಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಎಂಟು ನಿಯಮಗಳಿವೆ. ಇವು ಯೋಗದ ಎಂಟು ಅಂಗಗಳು.

ಆಸನವನ್ನು ವಿನ್ಯಾಸಸಹಿತವಾಗಿ ಅಭ್ಯಾಸಮಾಡಿದರೆ ನಮ್ಮ ಶರೀರದಲ್ಲಿ ರಕ್ತವು ಸರಿಯಾದ ರೀತಿಯಿಂದ ಸಂಚ ರಿಸಿ, ದೇಹದಲ್ಲಿಯ ರೋಗಗಳನ್ನು ನಿರ್ಮೂಲಮಾಡು ವುದಲ್ಲದೆ, ಶರೀರದಾರ್ಢ್ಯವನ್ನು ಕೊಟ್ಟು, ಆಯುಷ್ಯವನ್ನು ಅಭಿವೃದ್ಧಿಮಾಡುವುದು. ದೇಹದ ಪ್ರತಿಯೊಂದು ಭಾಗವೂ ಆತ್ಮನ ಸ್ವಾಧೀನಕ್ಕೆ ಬರುವುದಲ್ಲದೆ, ಅದ್ವಿತೀಯವಾದ ತೇಜಸ್ಸು ಉಂಟಾಗುವುದು.

ವಿನ್ಯಾಸ, ನಿಯಮಗಳನ್ನು ಬಿಟ್ಟು ಆಸನಗಳನ್ನು ಮಾಡು ವುದು ಹಿತಕರವಲ್ಲ. ನಿಯಮಗಳನ್ನು ಅನುಸರಿಸದ ಯಾವ ಕೆಲಸವೂ ಫಲವನ್ನೀಯಲಾರದು ಎಂದು ಖಂಡಿತವಾಗಿ ತಿಳಿಯಬೇಕು. ಆಸನಗಳನ್ನು ಅಭ್ಯಾಸಕ್ಕೆ ತರಲು ಇಷ್ಟ ವುಳ್ಳ ವಾಚಕರು, ಕೋ-ಆಪರೇಟಿವ್ ಹೌಸ್, ಟಿಲಕ್ ಗೋಡ, ಮಾತುಂಗ ೧೯ ಬೊಂಬಾಯಿ ಈ ವಿಳಾಸಕ್ಕೆ ಬರೆ ದಲ್ಲಿ ಎಲ್ಲ ಆಸನಗಳ ವಿನ್ಯಾಸ, ರೇಚಕ ಕುಂಭಕಗಳ ವಿಷಯ ತಿಳಿಸುವುದಲ್ಲದೆ, ಉಪಯುಕ್ತವಾದ ಗ್ರಂಥ ಮತ್ತು ಹತ್ತಿರ ದಲ್ಲೇ ಇರತಕ್ಕ ಯೋಗಶಾಲೆಗಳನ್ನೂ ತಿಳಿಸುತ್ತೇವೆ.



೫. ಊರ್ಧ್ವ ಕುಕ್ಕುಟಾಸನ
ಇದು ಆಸನಗಳಲ್ಲೆಲ್ಲಾ ಅತ್ಯುತ್ತಮವಾದದ್ದು. ಹತ್ತು ಆಸನಗಳ ಫಲ ಈ ಒಂದು ಆಸನದಿಂದಲೇ ಉಂಟಾಗುವುದು. ಸಂಧಿ ನಿರೋಧಕ್ಕೆ ಅತ್ಯುತ್ತಮವಾದ ವ್ಯಾಯಾಮ.

★

೧

ಕಾಡುಮಲ್ಲಿಗೆ ನೋಡೆ ನಿನ್ನನು
ದುಗುಡ ಮುಸುಕುವುದೆದೆಯನು,
ನಿನ್ನ ಬಾಳಿನ ಗತಿಯ ನೋಡೆ
ನೀರು ತೊಳೆವುದು ಕಣ್ಣನು.

೨

"ಕೇಳಿ, ಸೊಬಗಿಗೆ ಚ್ಯುತಿಯೆ ಇಲ್ಲ"
ಎಂದು ಕೆಲವರು ನುಡಿವರು.
"ಗಾಳಿ ಎದುರಿನ ದೀಪ ಸೊಬಗು,"
ಎಂದು ಹಲವರು ಮಿಡಿವರು.

೩

ಆಹ, ನಿಜ ನಿಜ, ಕಾಲದೆದುರಲಿ
ಸೊಬಗು ಗಾಳಿಯ ದೀಪವು;
ಅಲ್ಲದಿರೆ ಈ ಹೂಗಳೇತಕೆ
ಬಾಡಿ ನೆಲದಲಿ ಬೆರೆವುವು ?

೪

ಸೂರ್ಯ ಮೂಡಲ ಬಾನಿನೊಳಗೆ
ಹೊನ್ನ ಕಿರಣವ ಬೀರುತ,
ಜಗವ ನಲಿಸುತ ಬರುತಲಿರಲು
ನಿಂದೆ ನಿನ್ನನು ನೋಡುತ.

೫

ಚಂದ್ರನುದಯಕೆ ಮೊದಲು ನೀಲಿಯು
ಬಿಡದೆ ಮುಸುಕಿದ ಚುಕ್ಕಿಯ
ಗುಂಪಿನಂದದಿ ಹಸಿರು ಬೀಲಿಯ
ಮೇಲೆ ನಲಿದಿಂತಳಿದೆಯ ?

೬

ಹಸಿರು ರೇಶ್ಮೆಯ ಮೆತ್ತೆಯೊರಗಿ
ಮುಗುದೆ ಚನ್ನೆಯದೋರ್ವಳು,
ಯೌವನದ ಸುಳಿಗಾಳಿ ಸೋಕಲು,
ಬಯಕೆ ಬೆಳೆಯಲು ಮನದೊಳು.

೭

ತನ್ನ ಮನಸಿನ ನುಡಿಗೆ ನಾಚುತ
ಸುತ್ತ ಕಣ್ಣನು ಚಲಿಪಳು.
ಲಜ್ಜೆ ಬೆಳಗಲು ಮೊಗದ ಮೇಲೆ
ಮುತ್ತು ಬೆವರಿನ ಹನಿಗಳು !

೮

ಅವಳ ಸೊಬಗನು ಮೀರಿ ಮೆರೆಯಿತು
ನಿನ್ನ ಬೆಳಗಿನ ಚಲುವದು;
ಮಂಜು ಹನಿಗಳು ನಿನ್ನ ಮುತ್ತಿಡೆ
ತೋರದೆಲ್ಲಿಯು ಸೊಬಗದು.

೯

ಹತ್ತಿರದ ನೇರಿಲದ ಮರದಲಿ
ಕೋಗಿಲೆಯು ಸರಗೈದಿತು.
ಎಂದಿನಂತದು ಕೊರಗಲಿಲ್ಲ—
ಸಂತಸದಿ ಬೀಗಿದ್ದಿತು.

೧೦

ಈಗ ನೋಡುವೆನದರ ಕಂಠವ
ದುಃಖ ಬಿಗಿಯುತಲಿರುವುದ;
ನೋಡೆ ದುಃಖವೆ, ನಿನಗು ಕೋಗಿಲೆ,
ಹೂವುಗಳು ಇಂತಳಿವುದ ?

೧೧

ನಾವು ಬದುಕಿಯು ಅಳುತಲಿಹೆವು,
ಹೂವು ನಗುತಿದೆ ಬಾಡುತ.
ಬಂದು ನಕ್ಕಿತು, ನಗುತ ಬಾಡಿತು,
ವಿಧಿಯ ನಿಯಮಕೆ ಮಣಿಯುತ.

೧೨

ಹೂವೆ, ಕಲಿಸೆನಗಿನಿತು ನಿನ್ನಯ
ಕೊರಗನರಿಯದ ಮುದವನು.
ದುಗುಡವಿಲ್ಲದೆ ನಗುತ ಬಿಡುವೆನು
ಆಗ ನಾನೀ ಜಗವನು.

—ಎಂ. ಕೃಷ್ಣಮೂರ್ತಿ, ಮತಿಘಟ್ಟ.

೦ ನೆನಪು ೦

೧

ಎನ್ನ ಬಾಳಿನ ಸಾರವಳಿದುದೆ !
ಎನ್ನ ಜೀವಾಧಾರವು !
ಎನ್ನೆದೆಯನೊಡಗೂಡಿ ಹರಿದಾ
ಒಲುಮೆ ಹೊಳೆ ! ಬೇರಾದೆಯ ?

೨

ಬಾಳಲಾರೆನು ನಿನ್ನನಗಲಿ !
ತಾಳಲಾರೆನು ಶೋಕವ !
ಜನುಮನೀಗುವತನಕ ನಿನ್ನಯ
ನೆನಪು ಕೊರೆವುದು ಹೃದಯವ !

೩

ನಿನ್ನ ಚಲುವಿಕೆ ! ನಿನ್ನ ಚದುರತೆ !
ನಿನ್ನೊನಪು ! ಒಯ್ಯಾರವು !
ನಿನ್ನ ಪ್ರೇಮದ ತುಂಬು ನೋಟವು !
ನಿನ್ನ ರಸಿಕತೆ ಜಾಣ್ಮೆಯು !

೪

ನಿನ್ನ ನಿಶ್ಚಲ ಪ್ರೇಮ ಭಾವವು
ನಿನ್ನ ಸರಳತೆ ಸದ್ಗುಣ !
ವೆನ್ನ ಮನವನು ನಾಟಿ ಬಯಸಿತು
ಬಾಳಗೆಳೆತನದಾಟಕೆ !

೫

ಸರಸದಾಟವ ಸಲ್ಲನೊಡಗೂ-
-ಡಾಡುವಿನಿಯಳ ನೋಡಲು
ಭರದಿ ನಿನ್ನಾ ನೆನಪಿನಾ ಸರ-
-ಳಿರಿವುದೆನ್ನಯ ಹೃದಯವ !

೬

ತಳಿರನುಂಡಾ ಮತ್ತ ಕೋಗಿಲೆ
ಹಾಡೆ, ನುಣ್ಸರ ಕೇಳಿಸೆ,
ಕಾಡಿ ಹಾಡಿಸಿ ನಲಿದ ದಿನದಾ-
-ನೆನಪು ಕೊರೆವುದು ಹೃದಯವ !

೭

ಅಂದು ನಿನ್ನೊಡಗೂಡಿ ಸವಿದಾ
ಬನದ ಸುಂದರ ಸೊಬಗದು !
ಅಂದಚಂದದ ಹರುಷದಾಟದ
ನೆನಪು ಕೊರೆವುದು ಹೃದಯವ !

೮

ಇಂದು ನಾ ಬನದಂದ ನೋಡಲು
ನೊಂದು ನುಡಿವುದು—:
" ಬೆಂದ ಹೃದಯದಿ ತಿರೆಯ ಸಿರಿಯನು
ಸವಿಯೆ ನೀರಸವಲ್ಲವೇ ?

೯

" ಮರುಳ ! ಮರಳೆಲೆ ! ಭಾವರಸವದು
ಹೃದಯದೊಲುಮೆಯ ಸಾರವು
ಬರಿದೆ ಬನ ಬೆಳುದಿಂಗಳಂದವು
ಹರುಷವೀವುದೆ ? ಕೊರೆಯದೆ !

೧೦

ನೀನೆ ಪೆಣ್ಮಣಿ ! ಯೆನ್ನ ಹೃನ್ಮಣಿ !
ಯೆನ್ನ ಮನದಾನಂದವು !
ನಿನ್ನ ನಗಲಿದ ನನ್ನ ಜನುಮವು
ಜೀವವಳಿದಿಹ ತನುವದು !

೧೧

ನಿನ್ನೊಲುಮೆಯಾ ನೆನಪಿನಾಸೆಯು
ಬಾಳ ನೂಕುತ ನಲಿವುದು !
ನೀನು ಹೊಕ್ಕಿಹ ಹೊಳಲ ಹಾದಿಯ
ಬಯಸಿ ಹೋಗಲು ಒಲಿವುದು !

—ಟಿ. ಕೆ.

"ಬನಾರಸ್ ಸೀರೆ"

ಲೇಖಕರು:—ಶ್ರೀ. ಎಂ. ಎ. ಪಾರ್ಥಸಾರಥಿರಾವ್

ಆ ಸೀರೆಯ ಬೆಲೆ ನೂರಿಪ್ಪತ್ತೆಂದು ಅವಳಿಗೆ ಒಪ್ಪಿಸಬೇಕಾದರೆ ನನ್ನ ಗಣಿತಶಾಸ್ತ್ರವನ್ನೆಲ್ಲ ವೆಚ್ಚಿಸಿದೆ. ಅಷ್ಟು ಬೆಲೆಯ ಸೀರೆ ತನಗೆ ಸಿಕ್ಕಿದ್ದಕ್ಕಾಗಿ ಅವಳಿಗೆ ಬಹಳ ಸಂತೋಷವಾಯಿತು. ಆದರೆ ಕಬ್ಬನ್ ಪಾರ್ಕಿನಲ್ಲಿ ಅದನ್ನುಟ್ಟು ಮೆರೆಯುವಾಗ ಗುಪ್ತ ಪೋಲೀಸನ ವಿಚಾರಣೆಯಿಂದ ಅವಳು ಕಕ್ಕಾವಿಕ್ಕಿಯಾದಳು. ಅದೂ ನನಗೆ ಗಾಬರಿಯನ್ನುಂಟುಮಾಡಲಿಲ್ಲ. ಆದರೆ ಚಿಕ್ಕ ಪೇಟೆಯ ಅಂಗಡಿಯಲ್ಲಿ ಸೀರೆಯ ನಿಜವಾದ ಬಿಲ್ ಆರೂವರೆ ರೂಪಾಯಿಯೆಂಬುದನ್ನು ನೋಡಿ ... ... ಅವಳು 'ಡಂಗ್' ಆದಳು. ... ...

ನನ್ನಾಕೆ ತ್ರಿಪುರಸುಂದರಿ ಅಲ್ಲದೇ ಹೋದರೂ ಕುರೂಪಿಯಲ್ಲ. ಏನೋ ಇರುವುದರಲ್ಲಿ "ಪರವಾಗಿಲ್ಲ, ಕಾಲತಳ್ಳಬಹುದು" ಎನ್ನುವ ಹಾಗೆ ಇದ್ದಾಳೆ. ಆದರೂ ಪ್ರೆಯ ಸ್ಟ್ರೀಟ್ ಬೀದಿಯಲ್ಲಿ ಹೋಗುವಾಗ, ಸ್ವಲ್ಪ ಚೆನ್ನಾಗಿ ಇತ್ತಿರುವವರು ಹೋಗುತ್ತಿರುವುದನ್ನು ನೋಡಿದರೆ ನನಗೆ "ಅಯ್ಯೋ! ಇಂತಹವರನ್ನೆಲ್ಲಾ ಬಿಟ್ಟು, ಅವಳನ್ನು ಮದುವೆ ಮಾಡಿಕೊಂಡೆನಲ್ಲಾ" ಎನ್ನಿಸುತ್ತದೆ. ಆದರೇನು ಮಾಡುವುದಕ್ಕಾಗುತ್ತೆ? ಕಟ್ಟಿಕೊಂಡದ್ದನ್ನು ಅನುಭವಿಸಿಯೇ ತೀರಬೇಕು.

ಮೊನ್ನೆ ಸಾಯಂಕಾಲ ನಾನು ಆಫೀಸಿನಿಂದ ಸ್ವಲ್ಪ ಮುಂಚೆಯಾಗಿಯೇ ಮನೆಗೆ ಬಂದೆನು. "ನಾನು ಆಫೀಸಿಗೆ ಹೋಗಿರುವಾಗ ಇವಳು ಒಬ್ಬಳೇ ಮನೆಯಲ್ಲಿ ಹೇಗೆ ಕಾಲ ಕಳೆಯುತ್ತಾಳೆ?" ಎಂಬುದನ್ನು ತಿಳಿದುಕೊಳ್ಳಬೇಕೆಂದು ನನಗೆ ಬಹಳ ಆಸೆ ಇತ್ತು. ಆದ್ದರಿಂದ ಮೆಲ್ಲನೆ ಸ್ವಲ್ಪ ಮುಚ್ಚಿದ್ದ ಬಾಗಿಲನ್ನು ಸದ್ದಾಗದಂತೆ ಹಿಂದಕ್ಕೆ ತಳ್ಳಿ, ಮೆಲ್ಲನೆ ಕುತೂಹಲದಿಂದ ಇಣಿಕಿ ನೋಡಿದೆನು. ಅವಳು ಕನ್ನಡಿಯ ಕಡೆಗೆ ತಿರುಗಿ ನಿಂತುಕೊಂಡು ತನ್ನ ಸೌಂದರ್ಯವನ್ನು ತಾನೇ ಹೊಗಳಿಕೊಳ್ಳುತ್ತಿದ್ದಳು.

ನನಗಂತೂ ಕಕ್ಕಾಬಿಕ್ಕಿಯಾಗುವಷ್ಟು ಆಶ್ಚರ್ಯವಾಯಿತು. "ಎಂದೂ ಇಷ್ಟು ಅಲಂಕಾರ ಮಾಡಿಕೊಳ್ಳದವಳಿಗೆ ಇವತ್ತೇನು ಬಂತು! ಎಂದು ಈ ಅಲಂಕಾರವೆಲ್ಲಾ ನನಗಾಗಿಯೇ ಹೌದೋ, ಅಲ್ಲವೋ "ಎಂದು ಒಂದು ಸಂದೇಹವೂ ಬಂದಿತು. ಆಗಲಿ, ನೋಡೋಣ, ಎಂದು ಒಳಗೆ ಹೋಗಿ, ಕೋಟು ರುಮಾಲುಗಳನ್ನು ತೆಗೆದು ಕೈ, ಮುಖ, ಕಾಲುಗಳನ್ನು ತೊಳೆದುಕೊಂಡು ಒಳಕ್ಕೆ ಬಂದೆನು.

ಮೆಲ್ಲನೆ ಅವಳ ಹಿಂದೆ ಹೋಗಿ, ಅವಳ ರೂಪನ್ನು ನೋಡುತ್ತಾ ನಿಂತುಕೊಂಡೆನು. ಬಹಳ ಸಂತೋಷವಾಯಿತು.

"ಇದೇನು! ದೇವಿಯವರು ಇವತ್ತು ಇಷ್ಟು ಅಲಂಕಾರ ಮಾಡಿಕೊಂಡಿದ್ದಾರೆ?" ಎಂದೆನು.

ಅವಳು ಹಾಗೆಯೇ ಸ್ವಲ್ಪ ಓರೆಗಣ್ಣನ್ನು ಮಾಡಿ "ಏನೂ ಇಲ್ಲ! ಇವತ್ತು ಏಕೋ ಬಹಳ ಬೇಜಾರಾಯಿತು. ಅದಕ್ಕೆ ಹೊತ್ತು ಹೋಗೋದಕ್ಕೆ ಇದೆಲ್ಲಾ ಮಾಡಿಕೊಂಡೆ" ಎಂದಳು.

ನನಗೆ ಅವಳ ಓರೆಗಣ್ಣನ್ನು ನೋಡಿ ಸ್ವಲ್ಪ ಹತ್ತಿರ ಹೋಗೋಣವೆನಿಸಿತು. ಮೆಲ್ಲನೆ ಅವಳ ಭುಜದ ಮೇಲೆ ಕೈಯಿಟ್ಟೆನು. ಅವಳು ಯಾರೋ ಅಪರಿಚಿತರು ಮುಟ್ಟಿದ್ದಕ್ಕಿಂತಲೂ ಹೆಚ್ಚಾಗಿ "ಸರಕ್" ಎಂದು ಮಣಿಚಿಕೊಂಡು ಹೋಗಿ ಪಕ್ಕದಲ್ಲಿದ್ದ ಒಂದು ಕಿಟಕಿಯಿಂದ ಹೊರಗೆ ನೋಡುತ್ತಾ ನಿಂತುಕೊಂಡಳು. ಆದರೂ ನಾನು ಬಿಡಲಿಲ್ಲ. ಅವಳ ಹತ್ತಿರಕ್ಕೆ ಹೋಗಿ,

(ದೈನ್ಯದಿಂದ):— ಎಲ್ಲಮ್ಮಾ! ಸ್ವಲ್ಪ ಈ ಕಡೆ ತಿರುಗು!

ಅವಳು (ಸಿಡುಕಿನಿಂದ):— ಇಲ್ಲ! ತಿರುಗುವುದಿಲ್ಲ.

ನಾನು:—ಏಕೆ?

ಅವಳು:—ನಾನು ನಿಮ್ಮ ಕಡೆಗೆ ತಿರುಗಿದರೆ ನೀವು ಮಾಡುವುದು ನನಗೆ ಗೊತ್ತು.

ನಾನು:—ನಾನು ಏನು ಮಾಡುತ್ತೇನೆ? ಹೇಳು, ನೋಡಾದ್ರೂ ನೋಡೋಣ.

ಅವಳು ಮಾತನಾಡಲಿಲ್ಲ. ಸುಮ್ಮನೆ—ತನ್ನ ಕತ್ತಿನಲ್ಲಿದ್ದ ಮುತ್ತಿನ ಹಾರವನ್ನು ತೆಗೆದುಕೊಂಡು ಅದರಲ್ಲಿದ್ದ ಒಂದು ಮುತ್ತನ್ನು ತೋರಿಸಿದಳು.

ನಾನು:—ಇಲ್ಲವೆ ಹಾಗಾದರೆ ?

ಅವಳು ತಲೆ ಅಲ್ಲಾಡಿಸಿ "ಇಲ್ಲ" ಎಂಬುದನ್ನು ಸೂಚಿಸಿದಳು.

ನನಗಾಗ ರೇಗಿ ಹೋಯಿತು. ಏನು ಮಾಡಲಾಗುತ್ತೆ—ಆಗಲಿ! ಒಂದು ದಿವಸ ಅಲ್ಲ, ಇನ್ನೊಂದು ದಿವಸ ಇವಳಿಗೆ ಮಣ್ಣು ತಿನ್ನುವ ಹಾಗೆ ಮಾಡುತ್ತೇನೆ ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿಕೊಂಡೆನು.

೨

ಎಂಟು ದಿನಗಳ ಮೇಲೆ ಒಂದು ದಿನ ಸಾಯಂಕಾಲ ಆಫೀಸಿನಿಂದ ಮನೆಗೆ ಬರುವಾಗ, ಒಂದು ಹಳೆಯ ಪೇಪರಿನಲ್ಲಿ ಸುತ್ತಿದ್ದ ಒಂದು ಪೊಟ್ಟಣವನ್ನು ತಂದೆನು. ಅವಳು ಒಂದು ಚಾಪೆಯ ಮೇಲೆ ಕೂತುಕೊಂಡು ಯಾವುದೋ ಒಂದು "ಡಿಸೈನ್" ಹಾಕುತ್ತಾ ಇದ್ದಳು. ನಾನು ಒಳಕ್ಕೆ ಹೋಗಿ ಅವಳ ಮುಂದಕ್ಕೆ ಬೀಳುವ ಹಾಗೆ ಆ ಪೊಟ್ಟಣವನ್ನು ಎಸೆದೆನು.



ಅವಳು ಕನ್ನಡಿಯ ಮುಂದೆ ನಿಂತು ವಸ್ತ್ರಾಲಂಕಾರವನ್ನು ಮಾಡಿಕೊಳ್ಳುತ್ತಿದ್ದಳು.

ಅವಳು ಅದನ್ನು ಆತುರದಿಂದ ತೆಗೆದುಕೊಂಡಳು. ಅದರೊಳಗೇನಿದೆಯೋ ಎಂದು ನೋಡಲು ಬಹಳ ಕುತೂಹಲ;ಅದಕ್ಕೋಸ್ಕರ "ಪರ್, ಪರ್" ಎಂದು ಹೆಂಗಸರು ಪೊಟ್ಟಣಗಳನ್ನು ಬಿಚ್ಚುವ ಹಾಗೆ, ಆ ಕಾಗದವನ್ನು ಹರಿದು ಅದರೊಳಕ್ಕೆ ನೋಡುತ್ತಾಳೆ! ಒಳಗೆ ಅಂಜೂರದ ಬಣ್ಣದ, ಥಳಥಳಿಸುವ ರೇಶ್ಮೆ ಸೀರೆಯೊಂದು ಚಕಚಕಿಸುತ್ತಿತ್ತು. ಅವಳ ಸಂತೋಷವನ್ನೂ ಆಶ್ಚರ್ಯವನ್ನೂ ಅವಳಿಗೆತಡೆಯಲಾಗಲಿಲ್ಲ.

"ಅಯ್ಯೋ! ಎಷ್ಟು ಚೆನ್ನಾಗಿದೆ ? ಇದನ್ ಯಾರಿಗೋಸ್ಕರ ತಂದಿರಿ! ಎಷ್ಟ್ರೀ ಇದಕ್ಕೆ ? ಎಲ್ಲೀದ್ರೀ ಇದು ? ನೀವು ಒಬ್ರೇ ಇದನ್ನ ತಂದ್ರೇನ್ರಿ ?" ಎಂದು ಪ್ರಶ್ನೆಗಳ ಮಳೆಯನ್ನೇ ಸುರಿಸಿ ಬಿಟ್ಟಳು.

ನನಗಂತೂ ಈ "ತಮಾಷೆ ಹುಡುಗಿ"ಯನ್ನು ನೋಡಿ ಬಹಳ ನಗು ಬಂದಿತು. ಆದರೂ ನಗುವನ್ನು ಸಹಿಸಿಕೊಂಡು ಹೇಳಿದೆನು.

"ಅಲ್ಲಾ ಕಣೇ! ಇಂತಹ ಸೀರೇನ ನಿಂಗಲ್ಲದೆ ಇನ್ನಾರಿಗಾದರೂ ನಾನು ತರ್‍ತೀನಾ? ಅಥವಾ, ಒಂದು ವೇಳೆ ತಂದರೆ ಕೂಡ ನಿನಗೆ ತೋರಿಸುತ್ತೇನಾ? ಕಂತೆ ನೋಡು, ಒಪ್ಪಿದೆಯೋ ಇಲ್ಲವೋ? ಅಷ್ಟು ಹೇಳು ಸಾಕು."

"ಅಲ್ಲಾಂದ್ರೇ ? ಇಷ್ಟು ಒಳ್ಳೇ ಸೀರೇನಾ ಒಪ್ಪೋದಿಲ್ಲ ಅಂತಾರ್‍ಯೆ ? ಅಲ್ಲಾ, ಎಷ್ಟ್ರೀ ಇದಕ್ಕೆ ?"

"ಅಯ್ಯೋ ? ಇದರ ಬೆಲೆ ಕಟ್ಟಿಕೊಂಡು ನಿನಗೇನಾಗಬೇಕಾಗಿದೆ? ಸುಮ್ಮನೆ ಉಟ್ಟುಕೋ, ಸಾಕು."

"ನಿಮ್ಮ ದಮ್ಮಯ್ಯ! ಹೇಳ್ರೀ. ಏನು ಸುಮ್ಗೆ ಗೋಳ್ ಹುಯ್ದುಕೊಳ್ತೀರೊ? ನಾನು ಸಾಳೆ ಇದನ್ನು ಉಟ್ಟುಕೊಂಡ್ರೆ ನನ್ನ ಸ್ನೇಹಿತರೆಲ್ಲಾ 'ಇದಕ್ಕೆಷ್ಟು?' ಅಂದರೆ ನಾನೇನ್ಹೇಳ್ಲಿ ? — ನೋಡಿದ್ರಾ ಹೇ....ಳೊ....ಲ್ವಾ ?"—ಎಂದು ಒಂದು ವಿಧವಾಗಿ ಕಣ್ಣನ್ನು ಮಿಟುಕಿಸಿದಳು.

ನಾನಂತೂ ಎಂತೆಂತಹ ಸಮಯದಲ್ಲಿ ಮರುಳಾಗದೇ ಹೋದರೂ ಕೂಡ ಆ ಓರೆಗಣ್ಣಿನ ನೋಟವನ್ನು ನೋಡಿದ ಕೂಡಲೇ ಅದಕ್ಕೆ ಸೋತು ಬಿಡುತ್ತೇನೆ.—ಇದು ಅವಳಿಗೂ ಗೊತ್ತು ಎಂದು ಕಾಣುತ್ತೆ. ಅದಕ್ಕೇ ಅವಳು ಹಾಗೆ ಮಾಡಿದ್ದು.

"ಇದರ ಬೆಲೇನ ಏನಂತ ಹೇಳ್ಲಿ! ನಾನು ಹೇಳಿದರೆ ನಂಬೋಲ್ಲಾ ನೀನು. ಇದೇನೋ ಒಂದು ಸ್ಪೆಷಲ್ ಬನಾರಸ್ ಸೀರೆಯಂತೆ. ಇದರ ಬೆಲೆ ನೂರ ನಲವತ್ತು ರೂಪಾಯಿ ಆಯಿತು." ಎಂದು ನಿಧಾನವಾಗಿ ಹೇಳಿದೆ.

"ಆಂ" ಎಂದು ಬೆಚ್ಚಿ ಬಿದ್ದಳು—ಅವಳು.

"ಅಯ್ಯೋ ? ಅಷ್ಟು ಬೆಚ್ಚಿಕೊಳ್ಳಬೇಡ! ಇದರ ಬೆಲೆ ಯೇನೋ ನೂರನಲವತ್ತು ರೂಪಾಯಿ—ನಿಜ.

ಆ ಅಂಗಡಿಯವನು ನನ್ನ ಸ್ನೇಹಿತ. ಅದೂ ಅಲ್ಲದೆ ನಾನು ನಗದು—ಕ್ಯಾಶ್——ಕೊಟ್ಟುಬಿಟ್ಟೆ. ಆದರಿಂದ 'ಡಿಸ್ಕೌಂಟ್' ಅಂತ ಒಂದು ಇಪ್ಪತ್ತು ರೂಪಾಯಿ ಹೋಗಿ ಈ ಸೀರೆಗೆ ಸರಿಯಾಗಿ ನೂರಿಪ್ಪತ್ತು ರೂಪಾಯಿ ಆಯಿತು. ಅಷ್ಟನ್ನೂ ಕೊಟ್ಟುಬಿಟ್ಟು ಇದನ್ನೂ ತೆಗೆದುಕೊಂಡು ಬಂದೆ."

ಅವಳ ಆಶ್ಚರ್ಯವು ಸ್ವಲ್ಪ ಕಡಿಮೆಯಾದ ಹಾಗೆ ಆಗಿ, ಅಷ್ಟಕ್ಕೇ ನಿಂತಿತು.

"ಅಲ್ಲಾರೀ ? ನೀವು ಅಷ್ಟು ದುಡ್ಡನ್ನು ಹೇಗೆ ಕೂಡಿಟ್ರಿ ?—ಅದೂ ನನಗೆ ಗೊತ್ತಿಲ್ಲದೇನೇ ?—ಅದೂ ನೋಡೋಣ: ನಿಮಗೆ ಬರೋದೇ ತಿಂಗಳಿಗೆ ಮುವ್ವತ್ತು ರೂಪಾಯಿ ಸಂಬಳ. ಮನೆ ಖರ್ಚು, ಅದಕ್ಕೆ ಇದಕ್ಕೆ ಅಂತ ಒಂದಿಪ್ಪತ್ತೈದು ರೂಪಾಯಿಗಳು ಖರ್ಚಾಗಿ ಹೋಗಿ ಜಾಸ್ತಿ ನಿಮ್ಮ ಕೈಲಿ ಒಂದೈದು ರೂಪಾಯಿ ಸಿಲ್ಕಾ ಇತ್ತು. ನಿಮಗೆ ಕೆಲಸ ಆಗಿ ಈಗ ಏಳು ತಿಂಗಳಾಯಿತು. ಏಳೈದ್ಲ ಮುವ್ವತ್ತೈದು. ಆದ್ರೂ, ಸೀರೆ ಲೆಕ್ಕಕ್ಕೆ ಇನ್ನೂ ಎಂಭತ್ತೈದು ರೂಪಾಯಿ ಕಮ್ಮಿ. ಥು, ನಂಗೇನೋ ಒಂದೂ ಅರ್ಥಾನೇ ಆಗೊಲ್ಲ." ಎಂದು ಲೆಖ್ಖಶಾಸ್ತ್ರವನ್ನೇ ತಿರುವಿ ಹಾಕಿ ಬಿಟ್ಟಳು.

ನನಗೆ "ಅಬ್ಬಾ" ಎನ್ನಿಸಿತು. "ಇವಳೇನು ! ಗಾಬರಿ ಬಿಲ್ಲಿರುವಾಗಲೇ ಇಷ್ಟು ಮಾತನಾಡುತ್ತಾಳಲ್ಲಾ !" ಎಂದು ಆದರೂ ನಿಧಾನವಾಗಿ ವಿವರಿಸಿ ಹೇಳಿದೆನು. "ಅಲ್ಲಾ ಕಣೇ! ಅದೇನೂ ಅರ್ಥವಾಗದೇ ಇರುವಷ್ಟು ಕಷ್ಟವಲ್ಲ,—ತಿಂಗಳಿಗೆ, ನಿನಗೆ ಗೊತ್ತಾಗದೇನೇ ಕಷ್ಟಪಟ್ಟು ಹತ್ತು ರೂಪಾಯಿಗಳ ಹಾಗೆ ಕೂಡಿಡುತ್ತಾ ಬಂದೆ, 'ಯಾವತ್ತಾದರೂ ಸಮಯಕ್ಕೆ ಉಪಯೋಗ ಆಗುತ್ತೆ' ಎಂದು. ಏಳ್ ಹತ್ತ ಎಪ್ಪತ್ತು. ಅದಲ್ಲದೆ ಮೊದಲೇ ಒಂದು ಐವತ್ತು ರೂಪಾಯಿ ಯಾರೋ ಕೊಡಬೇಕಾಗಿತ್ತು, ಇವತ್ತು ಕೊಟ್ಟರು. ಎಲ್ಲಾ ಸೇರಿಸಿಬಿಟ್ಟು ! ನಿನಗೆ ಒಂದು ಒಳ್ಳೇ ಸೀರೇನ ತೆಗೆದುಕೊಂಡು ಬಂದೆ.—ಈವಾಗ ಅರ್ಥಾ ಆಯಿತಾ ?"

ಅವಳಿಗೆ ಬಹಳ ಸಂತೋಷವಾಯಿತೆಂದು ಕಾಣುತ್ತೆ. ಹೆಂಗಸರಿಗೆ ಯಾವಾಗಲೂ ಹಾಗೆಯೇ. ಅವರಿಗೆ ಸೀರೆ ಯನ್ನೋ, ಇನ್ನಾವುದಾದರೂ ಅವರಿಗೆ ಬೇಕಾದ ಸಾಮಾನನ್ನೋ ತಂದು ಕೊಟ್ಟರೆ, ಆಗ ಮಾತ್ರ ಅವರಿಗೆ ಎಂದೂ ಇಲ್ಲದ ಪ್ರೀತಿಯು ಬಂದು ಬಿಡುತ್ತದೆ. ಹಾಗೆ ತಂದು ಕೊಟ್ಟವರನ್ನು ಅವರು ಸುಮ್ಮನೆ ಬಿಡುವುದೇ ಇಲ್ಲ, ಅದಕ್ಕೇ ಅವಳು ನನ್ನ ಹತ್ತಿರಕ್ಕೆ ಬಂದು ನನ್ನ ಮುಂದೆ ನಿಂತುಕೊಂಡಳು. ಆ ಮೇಲೆ......

ಅಂದು—ಅಂದರೆ ಮೂರು ದಿನಗಳಾದ ಮೇಲೆ—ಕಡೇ ಶನಿವಾರಕ್ಕೆ ಹಿಂದಿನ ಶನಿವಾರ, ಎಂದು ನನಗೆ ರಜಾ. ಊಟ ಆದ ಮೇಲೆ ಆರಾಮ ಕುರ್ಚಿಯ ಮೇಲೆ ಹಾಯಾಗಿ, ಕಾಲುಚಾಚಿಕೊಂಡು, ಮೆಲಕು ಹಾಕುತ್ತಾ ಕೂತುಕೊಂಡಿದ್ದೆನು. ಪಕ್ಕದಲ್ಲಿ ಅವಳು ಎಲೆಅಡಿಕೆಯನ್ನು ಮಡಿಸಿಕೊಡುತ್ತಾ, ಮಂಡಿಯನ್ನು ನೆಲದ ಮೇಲೆ ಊರಿಕೊಂಡು, ಅರ್ಧ ಕೂತು ಅರ್ಧ ನಿಂತುಕೊಂಡ ಹಾಗೆ ಇದ್ದಳು.

ಅವಳೇ ಮೆಲ್ಲನೆ ಮಾತಿಗೆ ಶುರು ಮಾಡಿದಳು, "ಈವತ್ತೇನ್ರಿ ! ನಿಮಗೂ ರಜಾ ಇದೆ; ನನಗೂ ಏಕೋ ಬಹಳ ಬೇಜಾರಾಗಿದೆ. ಅದೂ ಅಲ್ಲದೆ ಶನಿವಾರ ನಿಮಗೆ ರಜಾ ಬರೋದೇ ಅಪರೂಪ. ಅದಕ್ಕೋಸ್ಕರ ನಾವಿಬ್ಬರೂ ಹಾಗೇ ಸಾಯಂಕಾಲ, ಪುರುಸೊತ್ತಾಗಿ ಸುತ್ತಿಕೊಂಡು ಬರೋಣ. ಇವತ್ತು ಕಬ್ಬನ್ ಪಾರ್ಕ್‌ನಲ್ಲಿ ಬೇಂಡ್ ಬೇರೆ ಇದೆ—ಹೌದು; ನಾವು ಹೊಗ್ಲೇಬೇಕು."

ನನಗಂತೂ ಅವಳ ಮಾತಿಗೆ ಎದುರು ಮಾತಾಡಲು ಶಕ್ತಿಯೇ ಇರಲಿಲ್ಲ. ಅಥವಾ ಒಂದು ವೇಳೆ ಧೈರ್ಯ ಮಾಡಿಕೊಂಡು ನಾನು "ಬೇಡ" ಎಂದು ಹೇಳಿದ್ದರೂ ನನ್ನ ಮಾತು ಅವಳೆದುರಿಗೆ ನಡೆಯುತ್ತಿರಲಿಲ್ಲವೆಂದು ನನಗೆ ಗೊತ್ತು. ಅದೂ ಅಲ್ಲದೆ ಅವಳಿಗೆ ತನ್ನ ಸೀರೇನ ಊರಿನವರಿಗೆಲ್ಲಾ ತೋರಿಸಿಕೊಳ್ಳಬೇಕೆಂಬ ಆಸೆ ಬಹಳ ಬಲವಾಗಿತ್ತು. ಆದ್ದರಿಂದ ನಾನು "ಹುಂ" ಎಂದು ಒಪ್ಪಿಗೆಯನ್ನು ಕೊಡಬೇಕಾಯಿತು.

ಕೂಡಲೆ ಅವಳು ಎದ್ದು ಒಳಕ್ಕೆ ಹೋದಳು. ನಾನು "ಹುಂ" ಎಂದಿದ್ದಕ್ಕೋಸ್ಕರ ನನಗೆ ಒಂದು ಲೋಟಾ ಕಾಫಿಯನ್ನು ತಂದು ಕೊಡುತ್ತಾಳೆ ಎಂದು ಹತ್ತು ನಿಮಿಗಳು ಕಾದು ನನಗೆ ಬೇಜಾರಾಯಿತು; ಅವಳ ಸುಳಿವೇ ಕಾಣಲಿಲ್ಲ. ಸಮಾಚಾರ ಒಳಗೆ ಏನಿದೆಯೋ ನೋಡೋಣವೆಂದು ಒಳಗೆ ಹೋಗಿ ನೋಡಿದೆ. ಆಶ್ಚರ್ಯವಾಯಿತು—ಅವಳು ಆಗಲೇ ತನ್ನನ್ನು ಅಲಂಕಾರಮಾಡಿಕೊಳ್ಳುವುದಕ್ಕೆ ಶುರು ಮಾಡಿಬಿಟ್ಟಿದ್ದಳು.

"ಏನೆ ? ಸಾಯಂಕಾಲ ಐದು ಗಂಟೆಗೆ ಹೊರಡೋದಕ್ಕೆ ಇವಾಗಲೆ ಅಲಂಕಾರಮಾಡ್ಕೊಳ್ಳೋದಕ್ಕೆ ಶುರು ಮಾಡ್ಬಿಟ್ಟೆಯಲ್ಲ ? ಇನ್ನೂ ಈವಾಗ್ತಾನೆ ಹನ್ನೆರಡು ಗಂಟೆ!' ಎಂದೆನು.

ನನ್ನ ಮಾತು ಅವಳ ಕಿವಿಗೆ ಬೀಳಲೇ ಇಲ್ಲವೆಂದು ಕಾಣುತ್ತೆ. ಮಾತನಾಡದೆ ಸುಮ್ಮನೆ ಕನ್ನಡಿಯ ಹತ್ತರಕ್ಕೆ ಹೋದಳು.

ನನಗಾಗ ರೇಗಿಹೋಯಿತು. ಮತ್ತೆ ಹೋಗಿ ರೂಮಿನಲ್ಲಿದ್ದ ಆರಾಮ ಕುರ್ಚಿಯ ಮೇಲೆ ಮಲಗಿಕೊಂಡು ಯೋಚನೆಮಾಡುವುದಕ್ಕೆ ತೊಡಗಿದೆನು. ಹತ್ತು ನಿಮಿಷಗಳೊಳಗೆ ನನಗೆ ತಿಳಿಯದೆಯೇ, ನಿದ್ರಾದೇವಿಯ ಬಲೆಗೆ ಒಳಗಾದೆನು.

* * *

ನನ್ನನ್ನು ಅವಳು ಜೋರಾಗಿ ಅಲ್ಲಾಡಿಸಿ ಎಬ್ಬಿಸಿದಾಗ ನಾನು ಕಣ್ಣು ಬಿಟ್ಟೆನು.

"ಎಷ್ಟು ಹೊತ್ತು ಮಲಗೋದು ? ಹೊತ್ತಾಗಿ ಹೋಯಿತು. ಇನ್ನೂ ನೀವೇನು ಬೇಂಡೆಲ್ಲಾ ಮುಗಿದು ಹೋದಮೇಲೆ ಅಲ್ಲಿಗೆ ಹೋಗ್ತೀರೇನೋ ? ನಾನ್ನೋಡಿ, ಎಷ್ಟು ಚುರುಕಾಗಿದೇನೆ ? ನಿಮ್ಗೇನು ? ರಜಾ ಬಂತೂ ಅಂದ್ರೆ ಸಾಕು. ಸುಮ್ಮನೆ ನಿದ್ದೆ ಮಾಡೋದು ! ಏಳಿ, ಬೇಗ ಹೋಗ್ಬೇಕು,' ಎಂದು ಅಷ್ಟಕ್ಕೇ ಮಾತನ್ನು ನಿಲ್ಲಿಸಿದಳು.

ಐದು ಗಂಟೆಯೋ ಆರುಗಂಟೆಯೋ ಆಗಿಹೋಗಿರಬೇಕೆಂದು ಗಡಿಯಾರದ ಕಡೆಗೆ ತಿರುಗಿನೋಡಿದೆನು. ಇನ್ನೂ ಮೂರೂವರೆ. "ಇಷ್ಟೇನೇ ಇನ್ನೂ" ಎಂದುಕೊಂಡು ತಿರುಗಿ ತೂಕಡಿಸಿಲು ಮೊದಲು ಮಾಡಿದೆ. ಆದರೆಲ್ಲಿ ಅವಳ ಕಾಟ ತಡೆಯೋದು ? ಎದ್ದು ಮುಖವನ್ನು ತೊಳೆದುಕೊಂಡು, ಬಂದು ಕುರ್ಚಿಯಮೇಲೆ ಕುಳಿತುಕ್ಕೊಂಡು ಒಂದು ಪುಸ್ತಕವನ್ನು ಓದಲುತೊಡಗಿದೆನು.

ನಾಲ್ಕೂವರೆಗಂಟೆ ಆಗುವತನಕ ಅವಳು ನನ್ನನ್ನು ಪೀಡಿಸಲಿಲ್ಲ; ತನ್ನ ಅಲಂಕಾರದಲ್ಲೇ ಮಗ್ನಳಾಗಿದ್ದಳೆಂದು ಕಾಣುತ್ತೆ; ಅದಕ್ಕೇ ಬರಲಿಲ್ಲ.

ನಾಲ್ಕೂವರೆ ಗಂಟೆಗೆ ನನ್ನ ರೂಮಿಗೆ ಬಂದು ಗುಡುಗಿನ ಹಾಗೆ ಅರ್ಭಟಿಸಿದಳು. "ಏನಿನ್ನೂ ಹಾಗೇ ತೂಕಡಿಸ್ತಾ ಕೂತಿದ್ದೀರಿ ? ಬೇಗೆದ್ಬಿಟ್ಟು ಸೂಟೋ ಗೀಟೋ ಇದ್ರೆ ಹಾಕ್ಕೊಳ್ಳಿ. ಆವಾಗಲೇ ತುಂಬ ಹೊತ್ತಾಗಿ ಹೋಯಿತು." ಎಂದು ಹೇಳಿ, ನನ್ನ ಭದಲುತ್ತರಕ್ಕೆ ಕಾಯದೇನೆಯೆ, ತಿರುಗಿ ತನ್ನ ರೂಮಿಗೆ ಓಡಿಹೋದಳು — ಕನ್ನಡಿ ಮುಂದಕ್ಕೆ.

"ಹೇಗಿದ್ದರೂ ಇವಳ ಕಾಟ ತಡೆಯೋದಕ್ಕಾಗೊಲ್ಲ" ಎಂದುಕೊಂಡು ನಾನೂ ನನ್ನ 'ಅಗಸನ ಮಡಿ' ಪಂಜೆಯನ್ನು ಕಚ್ಚೆ ಹಾಕಿಕೊಂಡು, ಒಂದು ಕೋಟು ಹಾಕಿಕೊಂಡು ಹೊರಡುವುದಕ್ಕೆ ಸಿದ್ಧನಾಗುವ ಹೊತ್ತಿಗೆ ಸಾಕಷ್ಟು ಮುಕ್ಕಾಲು ಗಂಟೆ ಆಯಿತು.

ಇನ್ನೂ ಅವಳ ಅಲಂಕಾರ ಮುಗಿದಿರಲಿಲ್ಲ. ನಾನೇ ಅವಸರಪಡಿಸಿ ಅವಳೊಂದಿಗೆ ಹೊರಗೆ ಹೊರಟಾಗ ಐದು ಗಂಟೆಯಾಗಿತ್ತು.

ನನಗೇನೋ ಅವಳ ಜೊತೆಯಲ್ಲಿ ಬೀದಿಯಲ್ಲಿ ಹೋಗಿ ಅಭ್ಯಾಸವೇ ಇರಲಿಲ್ಲ. ಮನಸ್ಸಿಗೆ ಹೇಗೆ ಹೇಗೋ ಆಯಿತು. ಅದಕ್ಕೋಸ್ಕರ ಒಂದು ಜಟಕಾಮಾಡಿದೆ ಕಬ್ಬನ್ ಪಾರ್ಕಿಗೆ. ಅವಳಿಗೆ ಅದು ಇಷ್ಟ ಆಗಲಿಲ್ಲ. "ಸಾಯಂಕಾಲ ನಾಳೆ ನಡೆಯೋದು ಬಿಟ್ಟು, ಜಟಕಾಲಿ ಹೋಗೋದಾ ? ಎಂಥ ಬುದ್ಧೀನೋ ನಿಮ್ಮದು !" ಎಂದಳು.—ಮುಖ್ಯ ಅವಳ ಗುಟ್ಟು, ತನ್ನ ಸೀರೆಯನ್ನು ಊರಿನವರಿಗೆಲ್ಲಾ ತೋರಿಸಿ ಕೊಳ್ಳಬೇಕೆಂದು. ನಾನೂ ಏನೇನೋ ಸಮಾಧಾನ ಹೇಳಿ ಕೊನೆಗೆ, ಅವಳನ್ನು ಕಬ್ಬನ್ ಪಾರ್ಕಿಗೆ ಜಟಕಾದಲ್ಲಿಯೆ ಕರೆದು ಕೊಂಡು ಹೋದೆನು.

ನಾವು ಅಲ್ಲಿಗೆ ಹೋದಾಗ "ಬೇಂಡು" ಶುರುವಾಗಿ ಹೋಗಿತ್ತು. ಜನಗಳೆಲ್ಲಾ ಆ ಸಂಗೀತವನ್ನು ಕೇಳುತ್ತಾ ಆಕಡೆ ಈಕಡೆ ನೋಡುತ್ತಾ, ನಿಧಾನವಾಗಿ ಹೆಜ್ಜೆಗಳನ್ನು ಹಾಕುತ್ತಾ ತಿರುಗಾಡುತ್ತಿದ್ದರು. ಅಲ್ಲೇನು ? ಎಷ್ಟೋ ಜನರು ಹೆಂಡತಿಯರ ಜೊತೆಗೆ ಧೈರ್ಯದಿಂದ ಓಡಾಡುತ್ತಿರುವಾಗ ನಾನೇಕೆ ಸಂಕೋಚಪಟ್ಟುಕೊಳ್ಳಬೇಕು ! — ಎಂದು ಯೋಚನೆಮಾಡಿಕೊಂಡು "ಬೇಂಡ್ ಮಂಟಪದ" ಸುತ್ತಲೂ ಸುತ್ತುವುದಕ್ಕೆ ಹೊರಟೆನು. ಅವಳೋ ಬ್ಯೇಂಡಿನ ಗಮನವನ್ನೇ ಪೂರ್ತಿ ಮರೆತುಬಿಟ್ಟಳು. ತನ್ನ ಸೀರೆಯನ್ನೇ ತಾನು ಹೊಗಳಿಕೊಳ್ಳುತ್ತಿದ್ದಳು; ಯಾರ್ಯಾರು ತನ್ನ ಸೀರೆಯನ್ನು ನೋಡಿ ಮೆಚ್ಚುವರೆಂದು ಆಕಡೆ ಈಕಡೆ ನೋಡುತ್ತಿದ್ದಳು.

ನಾವಿಬ್ಬರೂ ಹಾಗೆಯೇ ಸುಮಾರು ಹತ್ತು ಹದಿನೈದು ನಿಮಿಷಗಳವರೆಗೂ ನಿಧಾನವಾಗಿ ಸುತ್ತಿದೆವು. ನಾನೊಬ್ಬನೇ ಬಂದಿದ್ದರೆ ನನ್ನಿಷ್ಟ ಬಂದ ಕಡೆ ನೋಡುತ್ತಾ ನಿಂತುಕೊಳ್ಳಬಹುದಾಗಿತ್ತು. ಆದರೆ ಈಗ ಹೆಂಡತಿ ಪಕ್ಕದಲ್ಲಿದ್ದುದರಿಂದ ಅದು ಕಷ್ಟವಾಗಿತ್ತು; [illegible] ನನ್ನನ್ನು ನೋಡಿ ಏನಾದರೂ ತಿಳಿದುಕೊಳ್ಳುತ್ತಾರೆ [illegible] ಸುತ್ತಿ ಸುತ್ತಿ ಬೇಸರವಾಗಿದ್ದರಿಂದ ಅಲ್ಲೇ ಹುಲ್ಲಿನ ಮೇಲೆ ಸ್ವಲ್ಪ ಹೊತ್ತು ಕೂತುಕೊಳ್ಳೋಣವೆಂದು [illegible] ಕೊಂಡೆನು.

ನಾವು ಕೂತುಕೊಂಡು ಇನ್ನೂ ಐದು ನಿಮಿಷಗಳು ಕೂಡ ಆಗಿರಲಿಲ್ಲ, ಅಷ್ಟರಲ್ಲಿಯೇ ಯಾರೋ ಒಬ್ಬರು, ಸೂಟ್ ಹಾಕಿಕೊಂಡಿದ್ದವರು ನನ್ನ ಕಡೆಗೆ ನೋಡುತ್ತಾ ಹತ್ತಿರಕ್ಕೆ ಬರುವಹಾಗೆ ಕೈಸನ್ನೆ ಮಾಡಿದರು. ನನ್ನನ್ನೇ ಹೌದೋ ಅಲ್ಲವೋ ಎಂದು ನನಗೆ ಯೋಚನೆ ಬಂತು. ಅಷ್ಟರಲ್ಲಿ ಅವರೇ ಹತ್ತಿರಕ್ಕೆ ಬಂದರು. ಬಂದು ಅವರೇ ಮಾತಿಗೆ ಶುರುಮಾಡಿದರು.

"ಕ್ಷಮಿಸಿ, ಸಾರ್! ಒಂದೇ ಒಂದು ನಿಮಿಷ ನಿಮ್ಮ ಜೊತೆಗೆ ಮಾತನಾಡಬೇಕಾಗಿದೆ..........ಅಲ್ಲಾ ಸಾರ್, ಮತ್ತೇ—ಇವರು ಉಟ್ಟುಕೊಂಡಿರುವ ಸೀರೆ ಯಾರದು ಸಾರ್?"

ನನಗೆ ಆಶ್ಚರ್ಯವಾಯಿತು; ಇದೇನು, ಹೀಗೆ ಕೇಳುತ್ತಾರಲ್ಲ! ಎಂದು. ಆದರೂ ನನ್ನ ಹೆಂಡತಿಯ ಮುಂದೆ ನನ್ನ ದರ್ಪವನ್ನು ತೋರಿಸಿಕೊಳ್ಳಬೇಕು, ಎಂದು ಸ್ವಲ್ಪ ಜೋರಾಗಿಯೇ ಕೇಳಿದೆನು.

"ಅಲ್ಲಾ ಸಾರ್, ಅವೆಲ್ಲಾ ಕೇಳೋದಕ್ಕೆ ನಿವ್ಯಾರು? ನಾನ್ಯಾರೂಂತ ತಿಳ್ಕೊಂಡು ಬಿಟ್ಟು ಹಾಗ್ಮಾತಾಡ್ತೀರಿ? ನಿಮ್ಗೇನು ತಲೇಲಿ ಬುದ್ಧಿಗಿದ್ಧಿ—"

ಅಷ್ಟರಲ್ಲಿಯೇ ಅವರು ಜೇಬಿಗೆ ಕೈಹಾಕಿ ಅವರ "ವಿಸಿಟಿಂಗ್ ಕಾರ್ಡ್"ನ್ನು ಹೊರಕ್ಕೆ ತೆಗೆದು ತೋರಿಸಿದರು. ಅದರಲ್ಲಿ ಇಂಗ್ಲೀಷಿನಲ್ಲಿ ಹೀಗೆ ಬರೆದಿತ್ತು:

ಗೋಣೋಜಿರಾವ್ ಸಿಂಧ್ಯ,
ಸಿ. ಐ. ಡಿ. (ಗುಪ್ತ ಪೋಲಿಸರ ಇಲಾಖೆ)
ಬೆಂಗಳೂರು.

ಅವರ ಕಾರ್ಡನ್ನು ನೋಡುತ್ತಲೂ ನನ್ನ ಮಾತು ಅರ್ಧಕ್ಕೇ ನಿಂತು ಹೋಯಿತು. "ಆಗಲಿ! ಒಳ್ಳೆಯ ಮಾತಿನಲ್ಲಿಯೇ ಹೋಗೋಣ" ಎಂದುಕೊಂಡು ನಿಧಾನವಾಗಿಯೇ ಕೇಳಿದೆನು.

"ನಿಮಗೂ ಈ ಸೀರೆಗೂ ಏನು ಸಾರ್ ಸಂಬಂಧ? ಅದು ಹೇಳಿದ ಮೇಲೆ ನಾನು ನಿಮಗೆ ಬದಲು ಹೇಳ್ತೀನಿ ಸಾರ್?"

ಅವರು ಹೇಳಿದರು: "ಒಂದು ವಿಚಾರ ಆಗಿದೆ. ಈಗ ನಮ್ಮ ಡೆಪ್ಯೂಟಿ ಕಮ್ಮೀಷನರ ಸೀರೆ ಒಂದು ಕಳುವಾಗಿ ಹೋಗಿದೆ. ಅದಕ್ಕೇನೋ ನೂರೈವತ್ತು ರೂಪಾಯಂತೆ. ಇವರು ಉಟ್ಟುಕೊಂಡಿರುವ ಸೀರೆಯೂ ಅಂತಹುದೇ. ಆದುದರಿಂದ ನಿಮ್ಮನ್ನು ಗುಮಾನಿನ ಮೇಲೆ ಹಿಡಿಯಲು ನನಗೆ ಹಕ್ಕಿದೆ."

ನನಗೆ ಗಾಬರಿಯಾಯಿತು. "ಏನೋ ಒಂದು ದಿವಸ ಸ್ವಲ್ಪ ಸಂತೋಷವಾಗಿರೋಣ, ಎಂದು ಬಂದರೆ ಇದು ಬೇರೆ ಒಂದು ಗಲಾಟೆ ಬಂತಲ್ಲಾ!" ಎಂದುಕೊಂಡೆನು. ಅವಳ ಕಡೆಗೆ ನೋಡಿದೆನು. ಅವಳು ಪೆಚ್ಚು ಮುಖ ಹಾಕಿಕೊಂಡು ತನ್ನ ಸರ್ವಸ್ವವೂ ಹೋದ ಹಾಗೆ ಆಗಿದ್ದಳು. ಅವಳೂ ಹಾಗೆ ಆಗಿಬಿಟ್ಟ ಮೇಲೆ ನಾನೇ ಧೈರ್ಯಮಾಡಿ ನಮ್ಮ ಮಾನವನ್ನು ಉಳಿಸಿಕೊಳ್ಳಬೇಕೆಂದು ಮನಸ್ಸು ಮಾಡಿದೆನು. ಅವರಿಗೆ ವಿನಯದಿಂದಲೇ ಹೇಳಿದೆನು:

"ನೀವು ತಿಳಿದು ಕೊಂಡಿರುವುದು ಶುದ್ಧ ತಪ್ಪು. ಏಕೆಂದರೆ ಈ ಸೀರೆಯನ್ನು ನಾನು ಮೊನ್ನೆ ತಾನೇ ಚಿಕ್ಕಪೇಟೇಲಿ, ನನ್ನ ಕೈಯಿಂದಲೇ ದುಡ್ಡು ಕೊಟ್ಟು ಕೊಂಡುಕೊಂಡು ಬಂದಿದ್ದೇನೆ. ಆದ್ದರಿಂದ ಈ ಸೀರೇಗೂ, ನಿಮ್ಮ ಕಳುವಾಗಿರುವ ಸೀರೇಗೂ ಏನೂ ಸಂಬಂಧವಿಲ್ಲ."

ಅವರು ಕೇಳಿದರು: ನೀವು ಇದನ್ನು ನಿಜವಾಗಲೂ ಕೊಂಡುಕೊಂಡಿದ್ದರೆ ಇದರ 'ಬಿಲ್' ತೋರಿಸಿ."

ನನ್ನ ಹತ್ತಿರ ಆಗ ಬಿಲ್ ಇರಲಿಲ್ಲ. ಹೀಗೆ ಆಗುತ್ತೆಂದು ನನಗೆ ತಾನೇ ಹೇಗೆ ತಿಳಿದಿರಬೇಕು?

ಅವರೇ ಇನ್ನೊಂದು ಸಲಹೆಯನ್ನು ಕೊಟ್ಟರು: "ಇಲ್ದೇ ಇದ್ದರೆ ಇನ್ನೊಂದು ಕೆಲಸ ಮಾಡೋಣ! ನೀವು ಕೊಂಡುಕೊಂಡ ಅಂಗಡೀಗೇ ಹೋಗಿ ಬಿಟ್ಟು ಅಲ್ಲೇ ವಿಚಾರಿಸೋಣ. ನೀವು ಹೇಳಿದ ಮಾತು ನಿಜವಾಗಿದ್ದರೆ ನಿಮ್ಮನ್ನು ಸುಮ್ಮನೆ ಬಿಟ್ಟು ಬಿಡುತ್ತೇನೆ. ಇಲ್ಲದೆ ಇದ್ದರೆ ಗೊತ್ತೇ ಇದೆ!"

ನಾನೂ ಬೇರೆ ಉಪಾಯವಿಲ್ಲದೆ "ಹುಂ, ಹಾಗೇ ಆಗಲಿ" ಎಂದೆನು.

ನಾನು, ನನ್ನ ಹೆಂಡತಿ ಮತ್ತು ಆ "ಪತ್ತೇದಾರಿ" ಮೂವರೂ ಒಂದು "ಟ್ಯಾಕ್ಸಿ" ಮಾಡಿಕೊಂಡು ಆ ಚಿಕ್ಕಪೇಟೆಯ ಅಂಗಡಿಗೆ ಹೋದೆವು. ನಮ್ಮಿಬ್ಬರನ್ನೂ ಅಂಗಡಿಯೊಳಗೆ ನಿಲ್ಲಿಸಿ ಆ ಪತ್ತೇದಾರಿಯವರು ಮಾತ್ರ ಆ ಅಂಗಡಿಯ ಸಾವುಕಾರರ ಬಳಿಗೆ ಹೋಗಿ ಏನೇನೋ ವಿಚಾರಿಸಿದರು. ಕೂಡಲೇ ಆ ಅಂಗಡಿಯಲ್ಲಿದ್ದ ನನ್ನ ಸ್ನೇಹಿತರು ಬಂದು ನೋಡಿ, ಒಂದು ಬಿಲ್ಲು ಬುಕ್ಕನ್ನು ತಂದು ಅದರಲ್ಲಿ ನನಗೆ ಕೊಟ್ಟಿದ್ದ ಸೀರೆಯ ಬಿಲ್ಲನ್ನು ತೋರಿಸಿದರು. ಆ ಪತ್ತೇದಾರಿಸಾಹೇಬರು ಅದನ್ನು ನೋಡಿ ಆಶ್ಚರ್ಯಪಟ್ಟು, ಸುಮ್ಮನಾದರು.

ನನ್ನ ಹೆಂಡತಿ ನನ್ನ ಗತಿಯನ್ನು ನೋಡಿ ಪೆಚ್ಚು ಮುಖ ಹಾಕಿಕೊಂಡಿದ್ದರೂ ಕೂಡ, ಅಂಗಡಿಯ "ಬಿಲ್",

ಹೇಗಿರುತ್ತದೋ ನೋಡಬೇಕೆಂಬ ಕುತೂಹಲದಿಂದ ಕೈನೀಡಿ ಆ ಬಿಲ್ ಬುಕ್ಕನ್ನು ಕೈಗೆ—ನಾನು ಅದನ್ನು ಕಿತ್ತುಕೊಳ್ಳುವಷ್ಟರಲ್ಲೆ—ತೆಗೆದುಕೊಂಡುಬಿಟ್ಟಳು. ಮತ್ತು, ಸೀರೆಯ ಬೆಲೆಯನ್ನು ನೋಡಿ "ಡಂಗ್" ಆದಳು. ಏಕೆಂದರೆ ಆ 'ಬಿಲ್'ನಲ್ಲಿ ಹೀಗೆ ಬರೆದಿತ್ತು.

ಲೂಧಿಯಾನಾ ಸಿಲ್ಕ್ ಸೀರೆ — ಒಂದು — ರೂ. ೬—೮—೦

ಇದನ್ನು ನೋಡಿ ನನ್ನ ಹೆಂಡತಿಯು ನನ್ನನ್ನು ರೋಷದಿಂದ ದುರುಗಟ್ಟಿ ನೋಡಿ, ತತ್‌ಕ್ಷಣವೇ ಮುಗುಳು ನಗೆ ನಗುತ್ತಾ ತಲೆ ತಗ್ಗಿಸಿಕೊಂಡು ಬಿಟ್ಟಳು.

ಆ ಪತ್ತೆದಾರಿಯವರು ಅದೇ ಮೋಟಾರ್ "ಟ್ಯೇಕ್ಸಿ" ಯಲ್ಲಿಯೇ ನಮ್ಮನ್ನು ನಮ್ಮ ಮನೆಯ ಬಳಿಗೆ ಕರೆದುಕೊಂಡು ಬಂದು ಇಳಿಸಿ "ಅನ್ಯಾಯವಾಗಿ ನಿಮಗೆ ತೊಂದರೆ ಕೊಟ್ಟೆ; ತಪ್ಪಾಯಿತು, ಕ್ಷಮಿಸಿ" ಎಂದು ಹೇಳಿ ಹೊರಟು ಹೋದರು.

ನನಗೆ ಮನೆಯ ಒಳಗೆ ಹೋಗುವಾಗಲೇ ಭಯವಾಯಿತು: "ಆವಳು ಆ ಸೀರೆಯ ಬೆಲೆಯನ್ನು ನೋಡಿ ನನ್ನ ಮೋಸವನ್ನರಿತಿದ್ದರಿಂದ. ನನ್ನನ್ನು ಏನು ಮಾಡಿಬಿಡುವಳೋ !—"ಎಂದು.

ಆದರೆ—ನಾವು ಮನೆಗೆ ಹೋದಾಗ ಇನ್ನೂ ಮನೆಯಲ್ಲಿ ಒಂದು ದೀಪವನ್ನೂ ಹತ್ತಿಸಿರಲಿಲ್ಲ. ಮೆಟ್ಟಲಿನ ಬಳಿಗೆ ಬರುವಾಗಲೇ ನನ್ನನ್ನು ಅವಳು ಘಟ್ಟಿಯಾಗಿ ಅಪ್ಪಿಕೊಂಡು "ಆ ಸೀರೆಯ ಬೆಲೆ ಎಷ್ಟಾದರೂ ಆಗಲಿ. ಸಧ್ಯ ನಾವು ಆ ಪೋಲೀಸಿನವರ ಕೈಯ್ಯಿಂದ ತಪ್ಪಿಸಿಕ್ಕೊಂಡು ಬಂದೆವಲ್ಲಾ, ಅಷ್ಟೇ ಸಾಕು !" ಎಂದು ಹೇಳಿ ನನಗೆ ಬೇಕಾದುದನ್ನು ಸಂತೋಷವಾಗಿ........ಕೊಟ್ಟಳು.

ಲೇಖಕರಿಗೆ

ಲೇಖನಗಳನ್ನು ಕಳಿಸುವವರು ದಯವಿಟ್ಟು ಜಯಕರ್ನಾಟಕದ ನಾಲ್ಕು ಪುಟಗಳಿಗೆ ಮಿಕ್ಕದಷ್ಟೇ ವಿಷಯವನ್ನು ಬರೆದಿರಬೇಕು. ಲೇಖನವು ಚನ್ನಾಗಿದ್ದರೂ ದೊಡ್ಡದಾದುದರಿಂದ ಪ್ರಕಟಿಸದೆ ಬಿಡುವ ಪ್ರಸಂಗವು ಹಲವು ಸಲ ಬರುತ್ತದೆ. ಸಂ.

ಜಯಕರ್ನಾಟಕ
ಶಿಕ್ಷಣಾಂಕ

★

ಡಿಸೆಂಬರ ೧ನೆಯ ತಾರೀಖಿಗೆ ಹೊರಡುವ ವಿಶೇಷಸಂಚಿಕೆ

ವಿಚಾರಗಳ ಸುಗ್ಗಿ **ಚಿತ್ರಗಳ ಸೂರೆ**

ಗರ್ಭಸ್ಥಶಿಶು ಸಂಸ್ಕರಣ, ಬಾಲಶಿಕ್ಷಣ, ಪ್ರಾಥಮಿಕ ಶಿಕ್ಷಣ, ಗುರುಕುಲ ಶಿಕ್ಷಣ, ವರ್ಧಾ ಶಿಕ್ಷಣಯೋಜನೆ, ವ್ಯವಸಾಯ ಶಿಕ್ಷಣ, ಕಲಾಶಿಕ್ಷಣ, ವಿಜ್ಞಾನಶಿಕ್ಷಣ, ರಾಷ್ಟ್ರೀಯ ಶಿಕ್ಷಣ, ಶಾರೀರಿಕ ಶಿಕ್ಷಣ, ದುರ್ವೃತ್ತಿಯನ್ನು ತಿದ್ದುವ ಶಿಕ್ಷಣ, ಸಹ ಶಿಕ್ಷಣ, ದಾಂಪತ್ಯ ಶಿಕ್ಷಣ, ದೇಶವಿದೇಶಗಳೊಳಗಿನ ಶಿಕ್ಷಣ, ಧಾರ್ಮಿಕ ಶಿಕ್ಷಣ, ಮುಂತಾಗಿ ಮಾನವನ ಅಂತಃ ಶಕ್ತಿಗಳು ಬೆಳೆದು ಪೂರ್ಣಾವಸ್ಥೆಯನ್ನು ಪಡೆಯಲು ಮಾಡಬೇಕಾದ ಅನೇಕ, ವಿವಿಧ ಶಿಕ್ಷಣ ಸಂಸ್ಕರಣಗಳ ವಿಷಯದಲ್ಲಿ ತಜ್ಞರಿಂದ ಅನುಭವಿಗಳಿಂದ ಅಧಿಕಾರವಾಣಿಯಿಂದ ಬರೆಯಲ್ಪಟ್ಟ ಲೇಖನಗಳು ಬರುವವು.

ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ ತುಂಬಾ ಸಂಗ್ರಾಹ್ಯವಾದ ಸಂದರ್ಭಗ್ರಂಥ.


(**ಲೇಖಕರಿಗೆ ಸೂಚನೆ:**—ಶಿಕ್ಷಣದ ಸಮಸ್ಯೆಗಳ ವ್ಯಾಸಂಗಮಾಡಿದವರು ಜ.ಕ.ದ ೩ ಪುಟಗಳಿಗೆ ಮಿಕ್ಕದಂತೆ ಯಾವುದೊಂದು ಸೂಕ್ತ ವಿಷಯವನ್ನು ತೆಗೆದುಕೊಂಡು ಸಂಗ್ರಹವಾಗಿ ಬರೆದು ಕಳಿಸಬೇಕು.)

ಸಂಚಿಕೆಯು ೧೦೦ ಪುಟಗಳನ್ನು ಮಿಕ್ಕುವುದು; ಆದರೂ ಬೆಲೆ ಆರೇ ಆಣೆ


ಬಿಡಿ ಪ್ರತಿಗಳನ್ನು ಪಡೆಯಲಿಚ್ಛಿಸುವವರು ಆರ್ಡರು ದಾಖಲುಮಾಡಬೇಕು; ಜಾಹೀರಾತುದಾರರಿಗೆ ತಮ್ಮ ಸರಕುಗಳ ಪ್ರಚಾರಮಾಡಲು ಸುವರ್ಣಸಂಧಿ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ




GOPAL SAKHARAM
& Co.





ಜ್ಞಾನ—ವಿಜ್ಞಾನ

ದೇಹದ ಸ್ನಾಯುಗಳು ವ್ಯಾಯಾಮದಿಂದ ಬಲಗೊಳ್ಳುತ್ತವೆ. ಅವುಗಳನ್ನು ಕೆಲಸಗೇಡಿಯಾಗಿ ಉಳಿಯಗೊಟ್ಟರೆ ಅವು ಕಸುವುಗೇಡಿಗಳಾಗುವವು.

ಮನಸ್ಸೂ ಸ್ನಾಯುಗಳಂತೆಯೆ

ಹಾಗೆಯೆ ಮನಸ್ಸಿಗೂ ಅಭ್ಯಾಸಗಳೆಂಬ ಸ್ನಾಯುಗಳಿವೆ. ವ್ಯಾಯಾಮದಿಂದ ಸ್ನಾಯುಗಳು ಬಲಗೊಳ್ಳುವಂತೆ ಸಾಧನದಿಂದ ಮನಸದ ಸದಭ್ಯಾಸಗಳೂ ಬೆಳೆಯುವವು. ಮನಸ್ಸಿಗೆ ಕೆಲಸವೆ ಇಲ್ಲದಿದ್ದರೆ ಅದು ದುರ್ಬಲವಾಗುವದು. ಮನಸ್ಸನ್ನು ಹೆಚ್ಚುಹೆಚ್ಚಿನ ಸದಭ್ಯಾಸ (Habits)ಗಳಿಂದ ದುಡಿಸಿದರೆ ಮನಸ್ಸು ಬಲಿಷ್ಠವಾಗುವದು. ಚಂಚಲ, ಗುರಿಗೇಡಿ, ಹಗುರು ವಿಚಾರಗಳ ಕ್ಷಿಯೆ ಬಿಚಿಗಂಡ ಮನಸ್ಸು ಏಕಾಗ್ರಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆದರಿಂದ ಮನಸ್ಸಿಗೆ ಜ್ಞಾನದ ರುಚಿಯು ಕಡಿಮೆಯಾಗುವದು. ರಕ್ತಪೂರಿತ ಪುಷ್ಟ ಸ್ನಾಯುವು ಸಾಹಸದ ಕೆಲಸಗಳಿಗೆ ಹುರಿಗೊಳ್ಳುವಂತೆ, ಪುಷ್ಟವಾದ ಮನಸ್ಸು ಯಾವಾಗಲೂ ಹುರುಪಿನಿಂದ ಹೊಸ ಹೊಸ ಕಲ್ಪನೆಗಳನ್ನು ಕಟ್ಟಲು ಸಮರ್ಥವಾಗುತ್ತದೆ. ನಾವು ಕ್ಷುಲ್ಲಕ ಪತ್ರಿಕೆಗಳನ್ನು ಓದುವದರಿಂದ, ಸತ್ವಹೀನ ಸಿನೆಮಾ ನಾಟಕಗಳನ್ನು ನೋಡುವದರಿಂದ, ಮನಸ್ಸಿಗೆ ಬೇಕಷ್ಟು ವ್ಯಾಯಾಮ ಸಿಗದೆ ಆದು ದುರ್ಬಲವಾಗುವದು.

ಹಾಸ್ಯರಸದ ಸಾಹಿತ್ಯವನ್ನು ರಚಿಸುವವರು ಪ್ರೇಕ್ಷಕರ ಇಲ್ಲವೆ ಶ್ರೋತೃಗಳ ಮನೋರಚನೆಯನ್ನು ತಿಳಿದಿರುವದು ಅವಶ್ಯವಾಗಿದೆ.

ವಯೋನುಕ್ರಮದಲ್ಲಿ ಹಾಸ್ಯರಸ

ಗ್ರಹಣಶಕ್ತಿಯ ಸ್ವಭಾವವು ವಯೋನುಕ್ರಮದಲ್ಲಿ ವ್ಯತ್ಯಾಸವಾಗುವದು. ಅವರವರ ವಯಸ್ಸಿಗನುಸರಿಸಿ ಸಾಹಿತ್ಯಕೃತಿ ರಚಿಸಬೇಕು. ಈ ಉದ್ದೇಶದಿಂದ ಒಬ್ಬ ಅಮೆರಿಕದ ಮನೋವಿಜ್ಞಾನಿಯು ಕೆಲವು ವಿಷಯಗಳನ್ನು ಪರಿಶೋಧಿಸಿದ್ದಾನೆ—ಚಿಕ್ಕಮಕ್ಕಳಿಗೆ ಶಾರೀರಿಕ ಚಲನವಲನಗಳಿಂದ ನಗು ಹುಟ್ಟುತ್ತದೆ. ಉದಾ: ಬಾಳೆಸಿಪ್ಪೆಯ ಮೇಲೆ ಕಾಲಿಟ್ಟು ಜಾರಿ ಬೀಳುವದು ಇತ್ಯಾದಿ. ಸುಮಾರು ಏಳನೆ ವರ್ಷದ ನಂತರ ಶಬ್ದಗಳ ಕಡೆಗೂ ಮಕ್ಕಳ ಲಕ್ಷ್ಯ ಹರಿಯುವದು. ಗಂಡುಮಕ್ಕಳು ಮುಖ್ಯವಾಗಿ ಸಿನೆಮಾ ಮತ್ತು ಯಕ್ಷಿಣಿ ಕಥೆಗಳನ್ನು ಹೆಚ್ಚಾಗಿ ಮೆಚ್ಚುವರು. ಹುಡುಗಿಯರು ಒಗಟಗಳ ಕಡೆಗೆ ಮನಸ್ಸು ಹಾಕುವರು. ಅವರು ಯೋಚಿಸಿ ನಗಬಲ್ಲರು. ಎಂಟನೆ ವರ್ಷಕ್ಕೆ ಚಿಕ್ಕವರ ತಪ್ಪುಗಳನ್ನು ನೋಡಿ ನಗುವ ಪ್ರವೃತ್ತಿಯು ಹುಟ್ಟುತ್ತದೆ. ಒಂಭತ್ತನೆ ವರ್ಷಕ್ಕೆ ನಗುವಿನ ಕಥೆಗಳನ್ನು ಹೆಚ್ಚಾಗಿ ಪ್ರೀತಿಸುವರು. ಪರರ ದುರ್ದೈವದ ಮೇಲೆ ಕಟ್ಟಿದ ನಗುವಿನ ಕೃತಿಗಳಿಂದ ಅವರ ಊಹಾಶಕ್ತಿಯು ಬೆಳೆಯುವದು. ಚಾರ್ಲಿ ಚಾಪ್ಲಿನ್ನಿನಂತಹ ಜಗತ್ಪ್ರಸಿದ್ಧ ಹಾಸ್ಯಗಾರನು ತನ್ನ ದುರ್ದೈವದ ಸಂಗತಿಗಳ ನಟನೆಯಿಂದಲೆ ಹೆಚ್ಚಾಗಿ ನಗಿಸುವನು.

ಸೊಳ್ಳೆ ಕಚ್ಚಿದರೆ ಮಲೇರಿಯಾ ಬರುತ್ತದೆಂದು ಒಂದು ರೂಢ ಕಲ್ಪನೆಯಿದೆ. ವಸ್ತುತಃ ಮಲೇರಿಯಾ ಕ್ರಿಮಿಗಳನ್ನು ತನ್ನ ದೇಹದಲ್ಲಿರಿಸಿಕೊಂಡ

ಅರ್ಧಾಂಗ ವಾಯುವಿಗೆ ಗುಂಗಾಡಿನ ಚಿಕಿತ್ಸೆ

ಸೊಳ್ಳೆ ಕಚ್ಚಿದರೆ ಮಾತ್ರ ಮಲೇರಿಯ ಬರುತ್ತದೆ. ಆದುದರಿಂದ ಸೊಳ್ಳೆಗಳನ್ನು ನಾಶಪಡಿಸಿದರೆ ಮಲೇರಿಯಾ ಹರಡಲಾರದೆಂದು ಆರೋಗ್ಯಶಾಖೆಯವರು ಪ್ರಕಟಿಸುತ್ತಾರೆ. ಆದರೆ ಸೊಳ್ಳೆಯು ಒಂದು ರೀತಿಯಿಂದ ಜನರಿಗೆ ಉಪಕಾರಿಯಾಗಿಯೂ ಇರುತ್ತದೆಂಬು ಈಗ ತಿಳಿದುಬಂದಿದೆ. ಅರ್ಧಾಂಗವಾಯುವಿನ ರೋಗಿಗಳಿಗೆ ಮಲೇರಿಯದ ಸೊಳ್ಳೆಗಳು ಕಚ್ಚಿದರೆ, ಆ ವಾಯುರೋಗವು ಗುಣಪಡುವದೆಂದು ಕೆಲವು ಉದಾಹರಣೆಗಳಿಂದ ಕಂಡು ಬಂದಿದೆ. 'ಹಾರ್ಟನ್ ಎಪ್ಸೊಮ್' ಎಂಬಲ್ಲಿ ೨೭೦೦೦ ಭಯಂಕರ ಮಲೇರಿಯದ ಸೊಳ್ಳೆಗಳನ್ನು ಸಾಕಿದ್ದಾರೆ. ವಿಶಿಷ್ಟವಾಗಿ

ಹುಚ್ಚುಹಿಡಿದವರ ಅರ್ಧಾಂಗವಾಯುವಿಗೆ ಅವುಗಳ ಕಡಿತವು ಒಳ್ಳೇ ಗುಣಕಾರಿಯಾಗಿದೆಯಂತೆ. ಹೊಸತಾಗಿ ಹುಟ್ಟಿದ ಸೊಳ್ಳೆಯನ್ನು ಒಬ್ಬ ಮಲೇರಿಯದ ರೋಗಿಯ ಮೈಮೇಲೆ ಮೇಯಬಿಟ್ಟು ಅದನ್ನು ಮಲೇರಿಯ ಕ್ರಿಮಿಗಳಿಂದ ತುಂಬುತ್ತಾರೆ. ಅರ್ಧಾಂಗವಾಯುವಿನ ರೋಗಿಗಳನ್ನು ಚಿಕಿತ್ಸಿಸಲಿಕ್ಕೆಂದು ವೈದ್ಯರಿಗೆ ಆ ಸೊಳ್ಳೆಗಳನ್ನು ಕಡವಾಗಿ ಕೊಡುತ್ತಾರೆ. ಮಲೇರಿಯ ಕ್ರಿಮಿಯ ಸಹಾಯದಿಂದ ಹುಚ್ಚರ ಅರ್ಧಾಂಗವಾಯುವನ್ನು ಉಪಚರಿಸುವದು ಈಗ ಎಲ್ಲೆಲ್ಲಿಯೂ ಬೆಳೆಯುತ್ತಿದೆ. ಈ ವರೆಗಿನ ಪ್ರಯೋಗಗಳಿಂದ ನೂರಕ್ಕೆ ೪೯ರಷ್ಟು ರೋಗಿಗಳಿಗೆ ಒಳ್ಳೆ ಲಾಭವಾಗಿದೆಯಂತೆ.

ತಿಬೇಟದಲ್ಲಿ ಅಂತ್ಯಸಂಸ್ಕಾರ

ಮರಣಾನಂತರ ಪಾರ್ಸಿಗಳ ಶವವನ್ನು ಎತ್ತರವಾದ ಗೋಪುರದಲ್ಲಿಟ್ಟು ಪಕ್ಷಿಗಳಿಗೆ ಆಹಾರವನ್ನಾಗಿ ಮಾಡುವರೆಂಬುದು ನಮಗೆ ಗೊತ್ತಿದೆ. ಇದೇ ಪದ್ಧತಿಯು ತಿಬೇಟದಲ್ಲಿ ಕೆಲವು ಜಾತಿಗಳಲ್ಲಿಯೂ ಇದೆ. ಅಲ್ಲದೆ ಅಲ್ಲಿ ಇನ್ನೊಂದು ವಿಚಿತ್ರ ವಾಡಿಕೆಯಿದೆ. ರಾಗಾ ತೊಂಗ್ಡೆನ್ ಎಂಬ ಜಾತಿಯ ಭಿಕ್ಷುಕರು ಕೆಲವು ಜಾತಿಯ ಶವಗಳ ಅಂತ್ಯಸಂಸ್ಕಾರವನ್ನು ಮಾಡುತ್ತಾರೆ. ಅವರ ನಿತ್ಯ ಉದ್ಯೋಗವು ಭಿಕ್ಷೆಯೇ. ಅವರು ಅಂತ್ಯಸಂಸ್ಕಾರಕ್ಕೆ ಉಪಯುಕ್ತರಾಗುವರಾದುದರಿಂದ ಅವರಿಗೆ ಭಿಕ್ಷೆಯನ್ನೂ ಸಾಕಷ್ಟು ನೀಡುತ್ತಾರೆ. ಆದ್ದರಿಂದ ಅವರು ಸಿರಿವಂತರೂ ಆಗಿರುತ್ತಾರೆ. ಅವರಿಗೆ ಯಾರಾದರೂ ಭಿಕ್ಷೆ ನೀಡದಿದ್ದರೆ "ಒಳ್ಳೇದು ನಿನಗೂ ಒಂದು ಕಾಲ ಬಂದೀತು! ಆಗ ನಿನ್ನ ಹೆಣದ ಕುತ್ತಿಗೆಗೆ ಹಗ್ಗಹಾಕಿ ಎಳೆದೊಯ್ದು ನಾಯಿಗಳಿಗೆ ತಿನ್ನಲಿಕ್ಕೆ ಹಾಕುತ್ತೇವೆ" ಎಂದು ಅಂಜಿಸುತ್ತಾರೆ. ತಿಬೇಟದಲ್ಲಿ ಬಡವರ ಹೆಣಗಳನ್ನೆಲ್ಲ ರಾಗಾ ತೊಂಗ್ಡೆನ್‌ರ ನಾಯಿಗಳಿಗೆ ತಿನ್ನಿಸುವ ವಾಡಿಕೆಯಿದೆ. ಈ ಹೆದರಿಕೆಯು ಸಿರಿವಂತರಿಗೆ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ಏಕೆಂದರೆ ಶ್ರೀಮಂತರ ಶವಗಳನ್ನು ಹಾಗೆ ನಾಯಿಗಳಿಗೆ ಕೊಡುವದಿಲ್ಲ. ಊರ ಹೊರಗೆ ಪ್ರತ್ಯೇಕವಾಗಿರುವ ಒಂದು ದಿಬ್ಬಕ್ಕೆ ದೈವುಳ್ಳವರ ಶವಗಳನ್ನು ಹೊತ್ತೊಯ್ದು ಮಾಂಸವನ್ನು ಸಂಹಾಗಿ ಕತ್ತರಿಸುವರು; ತಲೆಬುರುಡೆ, ಎಲಬುಗಳನ್ನು ಕಲಬತ್ತಿನಲ್ಲಿ ಕುಟ್ಟಿ ಚನ್ನಾಗಿ ಪುಡಿಮಾಡುವರು; ನಂತರ ಹದ್ದುಗಳನ್ನು ಆಕರ್ಷಿಸುವುದಕ್ಕೆಂದು ಹೊಗೆ ಹಾಕುತ್ತಾರೆ. ಹೊಗೆ ನೋಡಿದ ಕೂಡಲೆ ಹದ್ದುಗಳು ಬಂದು ಶ್ರೀಮಂತರ ಶವ ಭಾಗಗಳನ್ನೆಲ್ಲ ಧ್ವಂಸಗೊಳಿಸುವವು.

ಕೆಸುವಿನ ಗಡಿಗೆಗಳು !

ಮನುಷ್ಯನು ತೀರ ಮೊದಲು ಕಲ್ಲು, ಕಟ್ಟಿಗೆ, ಮ... ಗಳ ಪಾತ್ರೆಗಳನ್ನು ಉಪಯೋಗಿಸುತ್ತಿದ್ದನು. ಆದ... ಅವೆಲ್ಲವೂ ಒಡೆದು, ಮು... ಹೋಗುವವಾದುದರಿಂದ ಧಾತುಗಳಿಂದ ಪಾತ್ರೆಗಳನ್ನು ಮಾ... ಕೊಳ್ಳಹತ್ತಿದನು. ಅದರಲ್ಲಿಯೂ ಅನೇಕ ಅತೃಪ್ತಿಕರ ಸಂಗತಿಗಳು ಕಂಡು ಬಂದಿವೆ. ಅಲ್ಯು... ಮಿನಂ, ತಾಮ್ರ, ಹಿತ್ತಾಳೆಗಳ ಪಾತ್ರೆಗಳಿಂದ ಆರೋಗ್ಯ... ಕೆಡುವದೆಂಬು ಕಂಡು ಬಂತು. ಆದರಿಂದ ಎನ್ಯಾಮಲ್... ಪಾತ್ರೆಗಳು, ಚೀನಿ ಮಂಣಿನ ಪಾತ್ರೆಗಳು ಪುನಃ ಹೆಚ್ಚು ಪ್ರಚಾರಕ್ಕೆ ಬಂದವು ಅವುಗಳೂ ಬೇಗ ಒಡೆದು ಹೋಗು... ವಾದುದರಿಂದ ಹೆಚ್ಚು ವೆಚ್ಚವನ್ನು ಸಹಿಸಬೇಕಾಗಿ ಬ... ತ್ತದೆ. ಮಂಣಿನ ಪಾತ್ರೆಗಳು ಆರೋಗ್ಯಕ್ಕೇನೂ ಹಾನಿ... ವಲ್ಲ. ಆದುದರಿಂದ ಅವನ್ನೆ ಒಡೆಯದಂತೆ ಅವಕ್ಕೇನಾದ... ಸಂಸ್ಕಾರ ಮಾಡಬೇಕೆಂದು ವಿಜ್ಞಾನಿಗಳು ಯತ್ನಿಸು... ದ್ದರು. ಈಗ ಆ ಯತ್ನವು ಸಿದ್ಧಿಸಿದೆ. ಓಸಾಕಾದ ... ನಗಾಜಾ ಹಯಾವಿೂ ಎಂಬ ಜಪಾನಿ ವಿಜ್ಞಾನಿಯು ಕ... ಕಸುವುಳ್ಳ ಮಂಣಿನ ಪಾತ್ರೆಗಳನ್ನು ತಯಾರಿಸುವ ವಿಧಾ... ವನ್ನು ಹುಡುಕಿ ತೆಗೆದಿದ್ದಾನೆ. ಆ ವಿಧಾನಕ್ಕನುಸರಿಸಿ ತಯಾ... ಸಿದ ಮಂಣಿನ ಪಾತ್ರೆಗಳು ಲೋಹದ ಪಾತ್ರೆಗಳಷ್ಟೇ ಬಾ... ಬರುವವಲ್ಲದೆ ನಿರಪಾಯಕಾರಿಯಾಗಿಯೂ, ಅಗ್ಗವಾಗಿಯೂ ಇರುತ್ತವೆ. ಆ ವಿಶಿಷ್ಟ ರಸಾಯನಿಕ ಸಂಸ್ಕಾರದಿಂದ ಗಟ್ಟಿ... ಗೊಂಡ ಮಂಣಿನಿಂದ ಪಾತ್ರೆಗಳನಲ್ಲದೆ ಮೊಳೆಗಳನ್ನೂ ಚಾಕುಗಳನ್ನೂ, ಕೊಳಿವೆಗಳನ್ನೂ ಇನ್ನೂ ಕೆಲವು ಯಂತ್ರ... ಸಾಮುಗ್ರಿಗಳನ್ನೂ ತಯಾರಿಸಬಹುದಂತೆ.

ಕೃತ್ರಿಮ ಹೃದಯ !

ವೈದ್ಯವಿಜ್ಞಾನವು ದಿನೇ ದಿನೇ ಬೆಳೆಯುತ್ತಿದೆ. ಒಂದು ಕಡೆಯಿಂದ ರೋಗನಿರೋಧವನ್ನು ಮಾಡಿ ದೇಹಾಂಗಗಳನ್ನು ಸವೆಯದಂತೆ ಕಡ... ನಿರೋಧಿಸುವ ಪ್ರಯತ್ನ ನಡೆಯುತ್ತಿದೆ. ಇನ್ನೊಂದು ಕಡೆಯಿಂದ ಸವೆದ, ನಾಶಪಟ್ಟ ಅಂಗಗಳನ್ನು ದೇಹದಿಂದ ತೆಗೆದುಹಾಕಿ ಸಾಧ್ಯವಾದಷ್ಟು ಕೃತ್ರಿಮ ಅಂಗಗಳನ್ನು ಒದಗಿಸುವ ಪ್ರಯತ್ನವೂ ನಡೆಯುತ್ತಿದೆ. ...

ಜೀವಾಳದ ಅಂಗಗಳಾದ ಹೃದಯ, ಶ್ವಾಸಕೋಶ, ಮೂತ್ರಪಿಂಡಗಳನ್ನು ಕೃತ್ರಿಮವಾಗಿ ನಿರ್ಮಿಸುವ ಪ್ರಯತ್ನವನ್ನು ವಿಜ್ಞಾನಿಗಳು ನಡೆಸಿರುವರಾದರೂ ಅದು ಇನ್ನೂ ಸಿದ್ಧಿಗೆ ಮುಟ್ಟಿಲ್ಲ. ಪ್ರೊ. ಅಲೆಕ್ಸಸ್ ಕ್ಯಾರೆಲ್ ಎಂಬವರು ಒಂದು ಯಂತ್ರವನ್ನು ತಯಾರಿಸಿದ್ದಾರೆ. ಅದರ ಸಹಾಯದಿಂದ ದೇಹಧಾತುಗಳಿಗೆಲ್ಲ ರಕ್ತವನ್ನು ಪೂರೈಸುವದು ಸಾಧ್ಯವಿದೆ. ಅಂದರೆ ಯಾವದೊಂದು ಕಾರಣದಿಂದ ಹೃದಯವು ದುರ್ಬಲವಾಗಿ ನಿಂತುಬಿಟ್ಟು ದೇಹಧಾತುಗಳು ರಕ್ತವಿಲ್ಲದೆ ಸಾಯುವ ಪ್ರಸಂಗ ಬಂದಾಗ ಆ ಯಂತ್ರದ ಸಹಾಯದಿಂದ ರಕ್ತಪರಿಚಲನವನ್ನು ಸಾಗಿಸಿ ಧಾತುಗಳನ್ನು ಸಜೀವವಾಗಿಡಲು ಬರುವದು. ಆಪಘಾತದಿಂದ ಭಯಂಕರ ರಕ್ತಸ್ರಾವವಾಗಿ ಧಾತುಗಳು ಉಪವಾಸ ಮಾಡಬೇಕಾಗಿ ಬಂದಾಗ ಈ ಯಂತ್ರದ ಉಪಯೋಗವಾಗಲಾರದು. ಏಕೆಂದರೆ ರಕ್ತವೇ ಕಡಿಮೆಯಾಗಿರುವಾಗ ಪರಿಚಲನವನ್ನು ಹೇಗೆ ಪ್ರೇರಿಸಬೇಕು ? ಅದುದರಿಂದ ಅದೇ ಫ್ರೋಫೆಸರರೇ ರಕ್ತದಂತಹದೆ ಒಂದು ಕೃತ್ರಿಮ ದ್ರವವನ್ನು ತಯಾರಿಸಿದ್ದಾರೆ. ಅದರಲ್ಲಿ ದೇಹಧಾತುಗಳಿಗೆ ಅವಶ್ಯಕವಾದ ಪೋಷಣೆಯೆಲ್ಲ ಇರುತ್ತದೆ. ರಕ್ತಸ್ರಾವವಾದಾಗ ಆ ದ್ರವವನ್ನು ಉಪಯೋಗಿಸಿ ಮೇಲ್ಕಂಡ ಯಂತ್ರದ ಸಹಾಯದಿಂದ ಪರಿಚಲನವನ್ನು ಉತ್ತೇಜಿಸಲಾಗುವದು.

ಇಲಿಯ ಬಲೆ

ಇಲಿಗಳಿಂದ ಅನೇಕ ರೋಗಗಳು ಹರಡುತ್ತವೆ. ಆದುದರಿಂದ ಅವನ್ನು ಹಿಡಿಯಲಿಕ್ಕೆ ವಿವಿಧ ಪ್ರಕಾರದ ಬಲೆಗಳಾಗಿವೆ. ಆದರೂ ಒಂದು ಇಲಿಯು ಬಲೆಯಲ್ಲಿ ಬಿದ್ದಿರುವಾಗ ಮತ್ತೊಂದು ಇಲಿಯು ಅಲ್ಲಿಗೆ ಬರಲಂಜುವದು ಸ್ವಾಭಾವಿಕ. ರೋಯ್. ಸಿ. ಬರ್ನ್ಸ್ ಎಂಬವನು ಒಂದು ಹೊಸ ಮಾದರಿಯ ಬಲೆಯನ್ನು ನಿರ್ಮಿಸಿದ್ದಾನೆ. ಆ ಬಲೆಯ ಬಾಗಿಲಲ್ಲಿ ಇಲಿಗೆ ರುಚಿಸುವಂತಹ ವಸ್ತುವಿನ ಮಧುರವಾಸನೆಯನ್ನು ರಾಸಾಯನಿಕವಾಗಿ ತಯಾರಿಸಿ ಹಚ್ಚಿಡಿಸಿದರೆ ಇಲಿಯು ಮರುಳಾಗಿ ಬಲೆಯೊಳಕ್ಕೆ ಓಡುವದು. ಅದು ಒಳಕ್ಕೆ ಹೋದಕೂಡಲೆ ಸುತ್ತುಮುತ್ತಲಿನ ಕನ್ನಡಿಗಳಲ್ಲಿ ಅದರ ಪ್ರತಿಬಿಂಬವು ಅದಕ್ಕೆ ಕಾಣುವದು. ವಾಸನೆಯಷ್ಟೆ ಮೂಗಿಗೆ ತಗಲುವದಲ್ಲದೆ ವಸ್ತುವು ಬಾಯಿಗೆ ಸಿಗದ್ದರಿಂದ ಇಲಿಯು ತಿನಸನ್ನು ಒಂದೇಸವನೆ ಹುಡುಕತ್ತಿರುತ್ತದೆ. ಬಲೆಯ ಹೊರಗಿನ ಬೇರೊಂದು ಇಲಿಗೆ ಒಲೆಯಲ್ಲಿ ಅನೇಕ ಇಲಿಗಳ ಪ್ರತಿಬಿಂಬ ಕಾಣುವದರಿಂದಲೂ ಅವೆಲ್ಲವೂ ತಿನಸನ್ನು ಹುಡುಕುವಂತೆ ತೋರುವದರಿಂದಲೂ ತಾನೂ ಒಳಗೆ ನುಗ್ಗುವದು. ಹೀಗೆ ಒಂಧರ ಹಿಂದೊಂದರಂತೆ ಅನೇಕ ಇಲಿಗಳು ಒಂದೇ ಬಲೆಯಲ್ಲಿ ಸಿಕ್ಕಬೀಳುವವು.

ಆಧುನಿಕ ಜರ್ಮನಿಯಲ್ಲಿ ಸ್ತ್ರೀ

ಪಾಶ್ಚಾತ್ಯ ಸ್ತ್ರೀಯರು ಸುಶಿಕ್ಷಿತರಾಗಿ ಪುರುಷರ ಎಲ್ಲ ವ್ಯವಹಾರಗಳಲ್ಲಿಯೂ ನುಗ್ಗುತ್ತಿದ್ದಾರೆ. ಆದರೆ ಹಿಟ್ಲರನ ಆಳಿಕೆಯಲ್ಲಿ ಜರ್ಮನಿಯ ಸ್ತ್ರೀಯರು ಅಡಿಗೆಮನೆಯನ್ನು ಸೇರಬೇಕಾಯಿತೆಂದು ನಾವೆಲ್ಲರೂ ತಿಳಿದಿದ್ದೇವೆ. ವಸ್ತುತಃ ಶಿಕ್ಷಣದ ದೃಷ್ಟಿಯಲ್ಲಿ ಜರ್ಮನಿಯ ಸ್ತ್ರೀಯರು ಯಾರಿಗೂ ಹಿಂದೆ ಬೀಳುವಂತಿಲ್ಲ. ಜರ್ಮನ್ ಸ್ತ್ರೀಯರ ಶಿಕ್ಷಣ ಪ್ರಗತಿಗಳಿಗಾಗಿ 'ಜರ್ಮನ್ ಗರ್ಲ್ಸ್ ಲೀಗ್' ಎಂಬ ಸಂಸ್ಥೆಯಿದೆ. 'ಜರ್ಮನ್ ತರುಣಿಯರು ದೈಹಿಕ, ಮಾನಸಿಕ ಮತ್ತು ಆತ್ಮಿಕ ಉನ್ನತಿಯನ್ನು ಪಡೆದು ವೀರಯೋಧರನ್ನು ಮದುವೆಯಾಗುವುದಕ್ಕೆ ಯೋಗ್ಯರನ್ನಾಗಿಸುವುದೆ ಈ ಸಂಸ್ಥೆಯ ಧ್ಯೇಯವಾಗಿದೆ.' ಈ ಸಂಸ್ಥೆಯಲ್ಲಿ ಸೇರಲು ಹುಡುಗಿಯರನ್ನು ಉತ್ತೇಜಿಸುವದಕ್ಕಾಗಿ ಈ ವರ್ಷ ಹದಿನಾರು ವರ್ಷಕ್ಕೆ ಮೇಲ್ಪಟ್ಟ ತರುಣಿಯರ ಉತ್ಸಾಹ ಸಾಮರ್ಥ್ಯಗಳಿಗಾಗಿ ಬೆಳ್ಳಿಯ ಪದಕ ಕೊಡುವ ನಿರ್ಣಯ ಮಾಡಿದ್ದಾರೆ. ಆ ಪದಕವನ್ನು ಪಡೆಯಲಿಚ್ಛಿಸುವ ಹುಡುಗಿಯು ಆರೋಗ್ಯಶಿಕ್ಷಣವನ್ನೂ, ವಿಮಾನಾಘಾತಗಳಿಂದ ದುರ್ಬಲರನ್ನು ಸಂರಕ್ಷಿಸುವ ಶಿಕ್ಷಣವನ್ನೂ ಹೊಂದಿರಬೇಕಲ್ಲದೆ ಸಾಮಾಜಿಕ ಅತಿಥಿ ಸತ್ಕಾರಗಳನ್ನು ಉತ್ಕೃಷ್ಟ ರೀತಿಯಿಂದ ಮಾಡುವ ಶಿಕ್ಷಣವನ್ನೂ ಪಡೆದಿರಬೇಕು. ಹದಿನೇಳು ವರ್ಷಗಳೊಳಗಾಗಿ ಇವನ್ನು ಕಲಿಯಬೇಕಲ್ಲದೆ ರೋಗಿಗಳ ಮತ್ತು ಶಿಶುಗಳ ಆರೈಕೆಯನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ೧೮ ರಿಂದ ೨೧ ವರ್ಷದ ತರುಣಿಯರು ಸೌಂದರ್ಯ ಮತ್ತು ದೇಹಸಾಮರ್ಥ್ಯದ ಪಂದ್ಯಾಟಗಳಲ್ಲಿ ಪ್ರತಿಯೊಬ್ಬಳೂ ಪಾಲುಗೊಳ್ಳಲೇ ಬೇಕು. ಅದೇ ಅವಧಿಯಲ್ಲಿ ಅವರು ನೃತ್ಯಕಲೆಯನ್ನು ಕಲಿಯಬೇಕು. ಮತ್ತು ಒಂದು ವರ್ಷದ ವರೆಗೆ ದೇಹಶ್ರಮವನ್ನೊಳಗೊಂಡ ಸಾಮಾಜಿಕ ಸೇವೆಯನ್ನು ಮಾಡಲೇಬೇಕೆಂಬ ಕಡ್ಡಾಯದ ನಿಯಮವಿದೆ. ಆದರಿಂದ ಅವರಲ್ಲಿ ಸ್ವದೇಶಜ್ಞಾನವೂ ಅಭಿಮಾನವೂ ಬಲಿತುಕೊಳ್ಳುವವು. ಆ ಅವಧಿಯಲ್ಲಿ ಅವರು ಒಕ್ಕಲಿಗರ ಹೊಲಗೆಲಸಗಳಲ್ಲಿಯೂ,

ಕಾರಖಾನೆಗಳ ಕೂಲಿಗಳ ಕೆಲಸದಲ್ಲಿಯೂ ನೆರವಾಗುವರು. ಮೇಲಿನ ಎಲ್ಲ ಕೆಲಸಗಳನ್ನೂ ವ್ಯವಸ್ಥಿತವಾಗಿ ಕುಶಲತೆಯಿಂದ ನೆರವೇರಿಸಲು ಮೇಲ್ಕಂಡ ಲೀಗು ಜರ್ಮನ್ ಹುಡುಗಿಯರಿಗೆ ಆ ಎಲ್ಲ ಕೆಲಸಗಳಲ್ಲಿಯೂ ವೈಜ್ಞಾನಿಕ ಶಿಕ್ಷಣವನ್ನು ಕೊಡುವದು.

ನರಭಕ್ಷಕರು!

ಅಮೇರಿಕೆಯ ದೂರ ದಕ್ಷಿಣದಲ್ಲಿ ಪುಟುಮಾಯೊ ಮತ್ತು ಕ್ಯಾಕ್ವೇಟಾ ಎಂಬ ನದಿಗಳ ಮಧ್ಯಪ್ರದೇಶದಲ್ಲಿ ಒಂದು ಕಾಡು ಇಂಡಿಯನ್ ಜನಾಂಗವಿದೆ. ಅದು ಈ ೨೦ ನೆ ಶತಮಾನದಲ್ಲಿಯೂ ನರಭಕ್ಷಕರಾದ ಮನುಷ್ಯರನ್ನೊಳಗೊಂಡಿದೆ. ರುಚಿಗಾಗಿ ಇಲ್ಲವೆ ಹಸಿವೆಗಾಗಿ ಅವರು ಮನುಷ್ಯರನ್ನು ತಿನ್ನುವದಿಲ್ಲ. ಆದರೆ ಅವರ ಕೆಲವು ಧರ್ಮಕಾರ್ಯಗಳಲ್ಲಿ ನರಭಕ್ಷಣವನ್ನು ಮಾಡಲೇಬೇಕೆಂಬ ನಿಯಮವಿದೆ. ಮೊನ್ನೆ ಮೊನ್ನೆ ಒಬ್ಬ ನಾಗರಿಕನು ತನ್ನ ಹೆಂಡತಿಯೊಡನೆ ಆ ಕಾಡಿನಲ್ಲಿ ರಬ್ಬರ್ ಮರಗಳನ್ನು ಬೆಳೆಸಲಿಕ್ಕೆ ಯೋಗ್ಯವಾದ ಪ್ರದೇಶವನ್ನು ಹುಡುಕುತ್ತ ತಿರುಗುವಾಗ ಮೇಲ್ಕಂಡ ಕಾಡು ಇಂಡಿಯನ್ನರು ಅವರನ್ನು ಹಿಡಿದೊಯ್ದರು. ಮೊದಲು ಗಂಡನನ್ನು ಬಲಿಕೊಡಬೇಕೆಂದು ನಿಶ್ಚಯವಾಯಿತು. ಅವನನ್ನು ಬಲತ್ಕಾರದಿಂದ ಅಂಗಾತನಾಗಿ ಮಲಗಿಸಿದರು. ಅವನ ಎದೆಯ ಮೇಲೆ ಭಾರವಾದ ಒಂದು ಮರದ ಬೊಡ್ಡೆಯನ್ನಿಟ್ಟು ಅದರ ಮೇಲೆ ಎಲ್ಲರೂ ಹೆಚ್ಚು ಹೆಚ್ಚು ಭಾರ ಹಾಕುತ್ತ ಹೋದರು. ಆ ಸಮಯಕ್ಕೆ ಅಲ್ಲಿಯ ಕಾಡು ಹೆಂಗಸರು ಮೈತುಂಬ ಭಯಂಕರವಾದ ಬಣ್ಣಗಳನ್ನು ಬಡೆದುಕೊಂಡು ಆ ಬಲಿಯ ಸುತ್ತಲೂ ವಿಲಕ್ಷಣವಾದ ರಣನೃತ್ಯವನ್ನು ಮಾಡಿದರು. ಅವನ ಪ್ರಾಣಹೋದ ಮೇಲೆ ಅವನನ್ನು ತುಂಡುತುಂಡಾಗಿ ಕತ್ತರಿಸಿ ಬೇಯಿಸಿ ಅದನ್ನು ಅವನ ಹೆಂಡತಿಗೆ ತಿನ್ನಲಿಕ್ಕೆ ಕೊಟ್ಟರು. ಈ ಭಯಂಕರ ದೃಶ್ಯಗಳನ್ನು ನೋಡಿದ ಆಕೆಗೆ ಮೂರ್ಛೆ ಬಂದುದರಿಂದ ಅವಳ ಆರೈಕೆಗಾಗಿ ಒಬ್ಬ ಮುದುಕಿಯನ್ನಿಟ್ಟರು. ಸುದೈವದಿಂದ ಆ ಮುದಕಿಯ ಹೃದಯದಲ್ಲಿ ಕರುಣೆ ಹುಟ್ಟಿ ಆ ಸ್ತ್ರೀಯನ್ನು ಸಂಕಟದಿಂದ ಪಾರುಮಾಡಿದಳು.

ಮೊದಲಿನಂತೆ ವಿವಾಹವು ಒಂದು ಆಮರಣ ಬಂಧನವಾಗಬಾರದೆಂದು ದಾಂಪತ್ಯವಿಚ್ಛೇದದ ಕಾಯದೆಗಳಾಗಿವೆ. ಕಾಯದೆಗಳ ಆಧಾರದಿಂದ ಮಕ್ಕಳಿಗೆ ತುಸು ರಕ್ಷಣೆ ಸಿಕ್ಕುತ್ತದೆ. ಆದರಿದು ಬರಿ ನಾಗರಿಕರ ಜಾಣ್ಮೆಯ... ಹೊರಟ ವ್ಯವಸ್ಥೆಯಲ್ಲ. ಕೆಲವು ಕಾಡು ಜನಾಂಗಗಳಲ್ಲಿಯೂ...

ದಾಂಪತ್ಯ ವಿಚ್ಛೇದವೋ ಗೃಹ ವಿಚ್ಛೇದವೋ

ದಾಂಪತ್ಯವಿಚ್ಛೇದದ ಸಾಮಾಜಿ... ನಿಯಮಗಳಿವೆ. ಆದರೆ ದಾಂಪ... ವಿಚ್ಛೇದವೆಂದರೆ ಹೆಂಡತಿಯು ತ... ಬರದಂತೆ ತವರುಮನೆಗೆ ಹೋ... ವದೆಂದಷ್ಟೆ ಅವರ ಅಭಿಪ್ರಾಯ... ತ್ತದೆ. ಬರ್‌ಬಡೋಸದ ಕರಿ... ರಲ್ಲಿ ಮಾತ್ರ ಒಂದು ವಿಚಿತ್ರ ದಾಂಪತ್ಯವಿಚ್ಛೇದದ ಪ... ಯಿದೆ. ಅವರಲ್ಲಿ ದಾಂಪತ್ಯವಿಚ್ಛೇದವಾಯಿತೆಂದರೆ ಗೃ... ವಿಚ್ಛೇದವೂ ಆಗಿಬಿಡಬೇಕು. ಮದುವೆಯು ಅವ... ಒಂದು ಬಿಡಿಸಲಾರದ ಬಂಧನವಲ್ಲ. ಆದರೆ ಗಂಡು ಹೆ... ಗಳು ಒಪ್ಪಿ ಒಂದುಸಲ ಮದುವೆಯಾದ ಮೇಲೆ ಮನೆ... ಇಬ್ಬರಿಗೂ ಸೇರಿದ ವಸ್ತುವಾಗುವದು. ಆದ್ದರಿಂದ ಅವ... ದಾಂಪತ್ಯವಿಚ್ಛೇದ ಮಾಡಿಕೊಳ್ಳಲಪೇಕ್ಷೆಯಾದರೆ ಇಬ್ಬ... ಯಾರಾದರೂ ಒಬ್ಬರು ಮನೆಬಿಟ್ಟು ಹೋಗುವದಿಲ್ಲ. ... ಚೋಟುದ್ದ ಮನೆಯಲ್ಲಿಯೆ ಎರಡು ಭಾಗಗಳನ್ನು ಮಾ... ವರು. ಅದರಲ್ಲಿ ಅವರು ತಮ್ಮ ತಮ್ಮ ಕುಟುಂಬಗಳ... ಸ್ಥಾಪಿಸಿ (ಹೊಸತಾಗಿ ಮದುವೆಯಾಗಿ) ಜೀವನ ಸಾ... ವರು. ಹೊಸತಾಗಿ ಮದುವೆಯಾದ ಗಂಡಹೆಂಡಿರಲ್ಲಿ ... ದಾಂಪತ್ಯವಿಚ್ಛೇದವಾದರೆ ? ಮುಂದೆ ಹೇಗೆ ವಿಭಾಗಿಸ... ರೆಂಬುದು ತಿಳಿಯಲಿಲ್ಲ.

ಮಂಗಗಳು ಚಾಕರಿ ಮಾಡಬಲ್ಲವು!

ಮನುಷ್ಯನ ಜಾತಿ ಮಂಗಜಾತಿಯೆಂದು ಡಾರ್ವಿನ್... ಅಂದನು. ಬಾಲವೊಂದನ್ನುಳಿದು ಮಿಕ್ಕ ಮಂಗನ ದೇ... ಮನುಷ್ಯ ದೇಹವನ್ನು ಹೋ... ದೆಂಬುದನ್ನು ನಾವೂ ಒ... ಮಂಗನ ಬುದ್ಧಿ ಮಾತ್ರ ಮ... ಷ್ಯನ ಬುದ್ಧಿಗೆ ಸರಿತೂಗುವ ... ರ್ಶನವನ್ನು ನಾವು ಎ... ಎಂದೂ ಕೇಳಿಲ್ಲ. ಆದರೂ ಮಂಗಗಳೂ ಈಗ ಸ... ಮನುಷ್ಯನನ್ನು ಮೀರಬೇಕೆಂದು ನಿರ್ಧರಿಸಿರುವ... ಏನೋ! ಏಕೆಂದರೆ ಸ್ಟ್ರೇಟ್ ಸೆಟಲ್‌ಮೆಂಟಿನ ಸ... ದವರು ಮಂಗಗಳನ್ನು ಆಳುಗಳನ್ನಾಗಿ ನಿಯಮಿಸಿ... ತ್ತಿದ್ದಾರೆ. ವನಸ್ಪತಿಶಾಲೆಯ ಶಾಖೆಯವರಿಗೆ ... ಮತ್ತು ವಿವಿಧ ಸಸ್ಯವೃಕ್ಷಗಳ ಎಲೆ, ಹೂ, ಕಾ... ಮಾದರಿ ಬೇಕಾಗುತ್ತವೆ. ಅವನ್ನು ಸಂಪಾದಿಸಲು ...

ದೊಡ್ಡ ಮರಗಳನ್ನು ಕಷ್ಟಪಟ್ಟು ಏರಿಹೋಗಬೇಕಾಗು ತ್ತದೆ. ಇಲ್ಲವೆ ಗುಂಡಿನಿಂದ ಎಲೆಗಳನ್ನೂ ಟೊಂಗೆಗಳನ್ನೂ ಕೆಳಗೆ ಕೆಡುಹಬೇಕು. ಇದೆಲ್ಲ ವೆಚ್ಚದ ವಿಷಯ. ಕೆಲ್ಯಾಂಟನ್ ಪ್ರದೇಶದಲ್ಲಿಯ ಹಳ್ಳಿಗರು ಮಂಗಗಳನ್ನು ಸಾಕಿ ಅವುಗಳಿಂದ ತಮಗೆ ಬೇಕಾದ ತೆಂಗಿನಕಾಯಿಗಳನ್ನು ಮರದಿಂದ ತೆಗಿಸಿಕೊಳ್ಳುವರಲ್ಲದೆ ಇನ್ನೂ ಅನೇಕ ಕೆಲಸ ಗಳನ್ನು ಮಾಡಿಸಿಕೊಳ್ಳುವರು. ಇದನ್ನರಿತ ಸರಕಾರದವರು ಈಗ ಅವರಿಂದ ಮಂಗಗಳನ್ನು ಕೊಂಡುಕೊಂಡು ಅವುಗ ಳನ್ನು ತಮಗೆ ಬೇಕಾದ ಮರಗಳ ಮೇಲೆ ಹತ್ತಿಸಿ ಬೇಕಾದ ಹೂ,ಎಲೆ, ಹಣ್ಣು ಕಾಯಿಗಳನ್ನು ತರಿಸುವರು. ಮಲಯ ಭಾಷೆಯಲ್ಲಿ ಹೇಳಿದರೆ ಆ ಮಂಗಗಳಿಗೆಲ್ಲ ಅರ್ಥವಾಗುವ ದಂತೆ!

ಇಂಗ್ರೇಜಿಯ ಮುಂದಾಳುತನ

೧೫೫೦ರಲ್ಲಿ ಒಬ್ಬ ಇಂಗ್ರೇಜಿ ಶಿಕ್ಷಕನು 'ನಮ್ಮ ಇಂಗ್ಲಿಶ್ ಭಾಷೆಯು ಬ್ರಿಟನ್ ದ್ವೀಪದ ಮೇರೆ ದಾಟಿ ಹೊರಗೆಂದೂ ಹೋಗಲಾರದು' ಎಂದು ಅಂದಿದ್ದನಂತೆ. ಈ ಇಪ್ಪತ್ತನೆ ಶತಮಾನದ ಪರಿಸ್ಥಿತಿಯಲ್ಲಿ ಆ ಮಾತು ನಗೆಗೀಡೆನಿಸುವದು. ಆ ಮಾತನ್ನು ಬರೆದಾಗ ಇಂಗ್ರೇಜಿಗಿಂತ ಮುಂದುವರಿದ ಫ್ರೆಂಚ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಶ್ ಮುಂತಾದ ಭಾಷೆಗಳಿದ್ದವು. ಆದರೆ ಕಾಲಪ್ರಭಾವ ದಿಂದಲೂ ಇಂಗ್ಲಿಶರ ಮನಃಪ್ರಭಾವದಿಂದಲೂ ೧೯ನೆ ಶತ ಮಾನದ ಮಧ್ಯಕಾಲದೊಳಗಾಗಿ ಇಂಗ್ರೇಜಿ ಜಗತ್ತಿನಲ್ಲೆಲ್ಲ ಅಗ್ರೇಸರವಾದ ಭಾಷೆಯಾಯಿತು. ಮತ್ತು ಇಂದು 'ರಶಿಯನ್ ಮತ್ತು ಜರ್ಮನ್ ಭಾಷೆಗಳನ್ನಾಡುವ ಒಟ್ಟು ಜನರಿಗಿಂತ ಹೆಮ್ಮಡಿಯಷ್ಟು ಜನರು ಇಂಗ್ರೇಜಿಯನ್ನು ಮಾತಾಡು ತ್ತಾರೆ. ಇಡಿ ಜಗತ್ತಿನ ಮುಕ್ಕಾಲುಪಾಲು ಪತ್ರವ್ಯವಹಾರ ದಲ್ಲಿ ಇಂಗ್ರೇಜಿಯೆ ಉಪಯೋಗಿಸಲ್ಪಡುತ್ತಿದೆ. ಜಗತ್ತಿನ ಅರ್ಧಕ್ಕಿಂತ ಹೆಚ್ಚು ಪತ್ರಿಕೆಗಳಲ್ಲಿ ಇಂಗ್ರೇಜಿಯು ಪ್ರಚುರ ವಾಗಿದೆ. ಜಗತ್ತಿನ ರೇಡಿಯೋ ಸ್ಟೇಶನ್ನುಗಳನ್ನು ಒಂದಾಗಿ ವಿಂಗಡಿಸಿದರೆ ಮೂರು ಪಾಲಿಗಿಂತ ಹೆಚ್ಚು ಕಡೆ ಇಂಗ್ರೇಜಿಯೆ ಪ್ರಬಲವಾಗಿದೆ. ಜಗತ್ತಿನ ಸುಪ್ರಸಿದ್ಧ ಗ್ರಂಥಗಳ ಭಾಷೆಗಳೆಲ್ಲ ಇಂಗ್ರೇಜಿಯ ಕಲಸುಮೇಲೋಗರ ಗಳಾಗುತ್ತಿವೆ. ಮೊದಲು ಇಂಗ್ರೇಜಿಯ ವಿದ್ವೇಷಿಗಳಾ ಗಿದ್ದ ಜರ್ಮನಿ, ಫ್ರಾನ್ಸ್, ಜಪಾನಗಳ ಶಾಲೆಗಳಲ್ಲಿ ಈಗ ಇಂಗ್ರೇಜಿಯು ಒತ್ತಾಯದಿಂದ ಕಲಿಸಲ್ಪಡುತ್ತಿದೆ. ಭಾರ ತೀಯ ಭಾಷೆಗಳು ಜಗದ್ವ್ಯಾಪಿಯಾಗುವದಂತೂ ಹಾಗಿ ರಲಿ, ಭಾರತದಲ್ಲಿಯೆ ಅಂತಃಪ್ರಾಂತೀಯ ಭಾಷೆಯೊಂದು ಆಗುವ ಕಾಲವು ಸಮೀಪವಾಗಿದೆಯೇ?

ಕೋರೀ ಹುಳಕ್ಕೊಂದು ಸ್ಮಾರಕ!

ಮನುಷ್ಯರು ಸತ್ತ ಮೇಲೆ ಅವರ ಸ್ಮಾರಕವಾಗಬೇಕಾದರೆ ಅವರು ತಮ್ಮ ಜೀವಮಾನದಲ್ಲಿ ಮಹಾ ಮಹಾ ಕಾರ್ಯ ಗಳನ್ನು ಮಾಡಿರಬೇಕು; ಅವರ ಕಾರ್ಯಗಳು ಜನರ ಮನಸ್ಸಿಗೆ ಬರಬೇಕು. ಇಷ್ಟಾಗಿಯೂ ಎಲ್ಲ ಮಹಾ ಸ್ತ್ರೀ ಪುರುಷರಿಗೆ ಸ್ಮಾರಕ ಗಳು ಆಗಿಯೆ ತೀರುವವೆಂದೆನ್ನಲಾಗದು. ಆದರೆ ಕ್ವೀನ್ಸ್‌ಲಂಡಿನಲ್ಲಿ ಒಂದು ಆರ್ಜೆಂಟ್ಯಾಯನ್ ಕೋರೀ ಹುಳದ ಸ್ಮಾರಕವನ್ನು ಸ್ಥಾಪಿಸುವ ನಿರ್ಣಯವಾಗಿದೆ. ಹಿಂದಕ್ಕೆ ಆಸ್ಟ್ರೇಲಿಯದಲ್ಲಿ ಡಬ್ಬುಗಳಿ (ಪಾಪಾಸುಕಳ್ಳಿ)ಯು ಎಲ್ಲೆಲ್ಲೂ ಬೆಳೆಯಹತ್ತಿ ವಸತಿ ಸಾಗು ವಳಿಗಳಿಗೆ ಬಹಳ ತೊಂದರೆಯಾಯಿತು. ಆದರಿಂದ ಹನೆರಡು ವರ್ಷಗಳಲ್ಲಿ ೬೫೦೦೦೦೦೦ ಎಕರೆ ನೆಲವು ಕೆಟ್ಟು ಹೋಯಿತು. ಆಗ ವಿಜ್ಞಾನಿಗಳು ಆರ್ಜೆಂಟಾಯಿನಿನ ಸಂಣ ಕೋರೀಹುಳವನ್ನು ತಂದುಬಿಡಲಾಗಿ ಅದರ ಸಂತಾನವು ಬೆಳೆದು ಕಳ್ಳಿಯನ್ನೆಲ್ಲ ನಾಶಗೊಳಿಸಿ ಆಸ್ಟ್ರೇಲಿಯವನ್ನು ಪಡಬೀಳದಂತೆ ರಕ್ಷಿಸಿತು. ಆದುದರಿಂದ ಆ ಕೋರೀಹುಳದ ಸ್ಮಾರಕವು ಇನ್ನುಮೇಲೆ ಆಗುವದಿದೆ.

ಸಮಾಜದ ಶಿಖರದಲ್ಲಿ ಸಂತತಿ ನಿಯಮನ

ಹುಟ್ಟಿದ ಮಕ್ಕಳು ಸುಖವಾಗಿರಬೇಕು. ಹೆಚ್ಚು ಮಕ್ಕಳಾದರೆ ಅವುಗಳನ್ನು ಸುಖವಾಗಿಡುವದು ಕಷ್ಟ, ಎಂಬ ಹೊಣೆಯನ್ನು ಬಲ್ಲ ಸುಶಿಕ್ಷಿತರು ಹಲವು ವಿಧಗಳಿಂದ ಸಂತತಿ ನಿಯಮನವನ್ನು ಮಾಡಿಕೊಳ್ಳುತ್ತಿದ್ದಾರೆ. ಸಮಾಜದ ಆ ವರ್ಗದಲ್ಲಿ ಪ್ರತಿಮನೆಗೆ ಒಂದೆರಡು ಮಕ್ಕಳಿಗಿಂತಹೆಚ್ಚಾಗಿರುವದೆ ಇಲ್ಲ. ಆದರೆ ದುರ್ದೈವದಿಂದ ಅಶಿಕ್ಷಿತರೂ ಆಶ್ರಯಹೀನರೂ ಆ ಬಗೆಯ ಸಂಯಮವನ್ನಿಟ್ಟುಕೊಂಡಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಪರಾಶ್ರಿತ ಕುಟುಂಬ ಗಳಲ್ಲಿಯೆ ಹೆಚ್ಚು ಮಕ್ಕಳಾಗುತ್ತಿವೆ. ಆಸ್ತಿ, ಶಿಕ್ಷಣ, ಸಂಸ್ಕೃತಿಗಳ ಬರಗಾಲವಿರುವ ಕುಟುಂಬಗಳಲ್ಲಿಯೆ ಮಕ್ಕಳು ಮಿತಿಮೀರಿ ಹುಟ್ಟುತ್ತಿವೆ. ಮೇಲಿನೆಲ್ಲ ಅನುಕೂಲತೆಗಳು ಸಮೃದ್ಧವಾಗಿರುವ ಮನೆಗಳಲ್ಲಿ ತೀರ ಕಡಿಮೆ

ಮಕ್ಕಳು ಹುಟ್ಟುತ್ತಿವೆ. ಸಂತತಿ ನಿಯಮನದ ಉದ್ದೇಶವು ಕೂಳಿದ್ದಷ್ಟೆ ಮಕ್ಕಳನ್ನು ಪಡೆಯುವದಾಗಿದೆ. ಮತ್ತು ಸುಶಿಕ್ಷಿತ ವರ್ಗದಲ್ಲಿ ಹುಟ್ಟಿದ ಮಕ್ಕಳು ಸಮಾಜಕ್ಕೂ ಯೋಗ್ಯ ಸೇವೆಯನ್ನು ಸಲ್ಲಿಸಬಹುದು. ಆದರೆ ಜಡ, ರೋಗಿ, ಅಜ್ಞಾನಿಗಳಾದವರ ಮಕ್ಕಳು ಸಮಾಜದ ಹೊಣೆಯನ್ನು ತಿಳಿಯಲಾರವು. ಮತ್ತು ಆ ವರ್ಗದವರಿಗೆ ಸಂತತಿ ನಿಯಮನದ ಜ್ಞಾನವೂ ಇರುವದಿಲ್ಲ. ಹೀಗೆ ಸಂತತಿ ನಿಯಮನದ ವ್ಯಸ್ತ ಪ್ರಸರಣದಿಂದ ಸಮಾಜದ ಶಿಖರವು ಬಾಡುತ್ತಿದೆ ಎಂದು ಡಾ. ಗ್ಲಕ್ಕರು ಅನ್ನುತ್ತಾರೆ.



ಬುದ್ಧಿಯೋಗ: ಅಥವಾ ಗೀತೆಯ "ಗುಹ್ಯ" ಅಧ್ಯಾತ್ಮಶಾಸ್ತ್ರ ಬರೆದವರು ಮುಗದಲ ರಾಮಚಂದ್ರ. ಬೆಲೆ ೧॥ ರೂ. ಆಕಾರ ಡೆಮಿ ಅಷ್ಟಪತ್ರ. ೩೮೦ ಪುಟಗಳು.

ಗೀತೆಯ ಮೇಲೆ ಅಸಂಖ್ಯ ಪುಸ್ತಕಗಳಿದ್ದರೂ ಈ ಹೊಸ ಪುಸ್ತಕವನ್ನು ಬರೆಯುವದರಲ್ಲಿ ಯಾವ ವಿಶೇಷ ಉದ್ದೇಶ ಇದೆ ಎಂಬುದನ್ನು ಗ್ರಂಥಕರ್ತರು ಮುನ್ನುಡಿಯಲ್ಲಿಯೂ ಅದಕ್ಕೂ ಹೆಚ್ಚು ಸಮರ್ಪಕವಾಗಿ ಉಪೋದ್ಘಾತದಲ್ಲಿಯೂ ಸ್ಪಷ್ಟಮಾಡಿದ್ದಾರೆ. ಸನಾತನಿಗಳ ಗೀತೆಯ ಅಭ್ಯಾಸ ಎಂದರೆ ಯಾವದೊಂದು ಮತಪ್ರಚಾರಕರಾದ ಆಚಾರ್ಯರ ಭಾಷ್ಯವನ್ನು ಮುಂದಿಟ್ಟುಕೊಂಡು ಗೀತೆಯನ್ನು ತಿಳಿದುಕೊಳ್ಳುವದಷ್ಟೆ. ಆದರೆ ಈ ಮತಗಳು ಒಂದಕ್ಕೊಂದು ವಿರುದ್ಧಾರ್ಥವನ್ನು ಹೇಳುವವಾದ್ದರಿಂದ ಯಾವುದನ್ನು ನಂಬಿ ನಡೆಯಬೇಕೆಂಬದು ತಿಳಿಯದೆ ವಿಚಾರಶೀಲರಾದ ಜನರು ಕಂಗೆಡುವರು. ಅಲ್ಲದೆ ಗೀತೆಯು ಉಪನಿಷತ್ತುಗಳಲ್ಲಿನ ವೇದಾಂತವನ್ನೇ ಮತ್ತಷ್ಟು ಬಲಪಡಿಸುವದೆಂದೂ ಅವುಗಳಿಂದ ಗೀತೆಯನ್ನು ಬೇರೆ ಮಾಡಿ ಅದರ ಅರ್ಥಹಚ್ಚಲಿಕ್ಕೆ ಹೋಗಬಾರದೆಂದೂ ದೊಡ್ಡ ಸಂಪ್ರದಾಯವೊಂದು ನಡೆದು ಬಂದಿದೆ. ಈ ಸಂಪ್ರದಾಯವನ್ನು ಸ್ವಲ್ಪ ಬದಿಗಿಟ್ಟು ಗೀತೆಯ ತತ್ವಜ್ಞಾನವು ಸ್ವತಂತ್ರವೂ ಪರಿಪೂರ್ಣವಾದುದೂ ಎಂದು ತಿಳಿದು ಅದರಲ್ಲಿನ ಪೂರ್ವಾಪರ ವಾಕ್ಯಗಳ ಭಾವವನ್ನು ಸರಿಯಾಗಿ ಗ್ರಹಿಸಲಿಕ್ಕೆ ಪ್ರಯತ್ನಪಡುವದು ಇಷ್ಟವಾದುದೆಂದೂ ಹಾಗೆ ಮಾಡಿದವರ ಪ್ರಯತ್ನವು ನಿಷ್ಫಲವಾಗದೆಂದೂ ಸಾರಿ ಹೇಳುವದೇ ಪ್ರಸ್ತುತ ಗ್ರಂಥದ ಹೊಸ ದೃಷ್ಟಿಕೋನವೂ ಅತಏವ ಸಾರ್ಥಕ್ಯವೂ ಆಗಿದೆ.

ಉಪೋದ್ಘಾತದಲ್ಲಿ ಇವರು ತಿಳಿದುಕೊಂಡಿರುವ ಗೀತೆಯ ತತ್ವಜ್ಞಾನವನ್ನು ಸಂಕ್ಷೇಪದಿಂದ ವಿವರಿಸಿರುವರು. ಇದನ್ನು ಆದಷ್ಟು ಪಂಡಿತ ಪಾಮರರೆಲ್ಲರಿಗೂ ತಿಳಿಯುವಂತೆ ಸುಲಭ ಶೈಲಿಯಲ್ಲಿಯೂ ಅವಶ್ಯವಿದ್ದಷ್ಟೇ ಪರಿಭಾಷೆಯ ಸಹಾಯದಿಂದಲೂ ಮಾಡಿರುವರು. ಇದು ಬಹು ಉದ್ಬೋಧಕವಾಗಿರುವದು. "ಬುದ್ಧಿಯೋಗ" ವೆಂಬ ಹೆಸರು ಈ ಪುಸ್ತಕಕ್ಕೆ ಎಷ್ಟು ಸಮಂಜಸವಾದುದೆಂಬುದನ್ನು ೨.೩೯ ಏಷಾತೇ, ಽಭಿಹಿತಾ ಸಾಂಖ್ಯೇ ಎಂಬ ಶ್ಲೋಕದ ಮುಂದಿನ ವಿವರಣೆಯಲ್ಲಿ ಕಂಡುಕೊಳ್ಳಬಹುದು. "ವ್ಯಕ್ತಿಭೂತನಾದ ಭಗವಂತನನ್ನು —ಪುರುಷೋತ್ತಮ ಶ್ರೀಕೃಷ್ಣನನ್ನು— ಒಪ್ಪಿಕೊಳ್ಳುವದೇ ಗೀತೆಯ ಬುದ್ಧಿಯೋಗಶಾಸ್ತ್ರದ ವೈಶಿಷ್ಟ್ಯವಾಗಿದೆ. ಬುದ್ಧಿಯಲ್ಲಿ ಅಂಕುರಿಸಿ ಬೆಳೆದ ಆ ಭಗವಂತನಲ್ಲಿಯ ಶ್ರದ್ಧೆಯೂ ತದನುಸಾರವಾಗಿ ಬುದ್ಧಿಯಲ್ಲಿ ಪರಿಣಮಿಸುವ ಯೋಗಯುಕ್ತತೆಯೂ ಈ ಬುದ್ಧಿಯೋಗದ ಮುಖ್ಯ ಲಕ್ಷಣಗಳಾಗಿವೆ."

೪೬ನೆಯ ಪುಟದಲ್ಲಿ ಕೊಟ್ಟ ವಿಶ್ವವೃಕ್ಷದ ವರ್ಗೀಕರಣವು ಗೀತೆಯ ಸಂದೇಶವನ್ನು ತಿಳಿಯಾಗಿ ತಿಳಿಸುವದು. "ಅಧ್ಯಾತ್ಮ" ಎಂಬ ಶಬ್ದದ ಅರ್ಥವನ್ನೂ, ನಿತ್ಯಸತ್ವ ಎಂಬ ಮಾತಿನ ಅರ್ಥವನ್ನೂ, ಸತ್‌ಭಾವ ಎಂಬುದರ ಅರ್ಥವನ್ನೂ, ಕ್ಷರ-ಅಕ್ಷರ ಪರಿಭಾಷೆಯ ಅರ್ಥವನ್ನೂ ಬಹಳ ಸಮಂಜಸವಾಗಿ ವಿವರಿಸಿಯಿದೆ. ಇದರಂತೆಯೆ ಚತುರ್ಮುಖ ಬ್ರಹ್ಮನ ಅಧ್ಯಾತ್ಮ ಭಾವಕ್ಕೂ ಜೀವರ ಅಧ್ಯಾತ್ಮಭಾವಕ್ಕೂ ಇರುವ ವ್ಯತ್ಯಾಸವನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾರೆ. "ಪ್ರಕೃತಿಯ ಸಂಸಾರಗ್ರಂಥಿಯಲ್ಲಿ ಸಿಲುಕಿದ ಪುರುಷಪ್ರಾಣಿಯನ್ನು ತನ್ನ ಅಧ್ಯಾತ್ಮಭಾವವು ಒಂದು ಕಡೆಗೂ ಪ್ರಕೃತಿಯು ಅಂತಃಕರಣಮೂಲಕವಾದ ಭಾವಗಳು ಮತ್ತೊಂದು ಕಡೆಗೂ ಎಳೆಯುವವು............ಅಧ್ಯಾತ್ಮಭಾವದ ಮತ್ತು ಪ್ರಕೃತಿಸ್ವಭಾವದ ಈ ಹೋರಾಟದಲ್ಲಿ ಜೀವಪುರುಷನು ಅಸಾಮಾನ್ಯವಾದ ಧೃತಿಯಿಂದ ಅಧ್ಯಾತ್ಮಭಾವವನ್ನು ಕಾಪಾಡಿಕೊಳ್ಳದೆ ಹೋದರೆ, ಪ್ರಕೃತಿಯು ಅಜ್ಞಾನಮಯ ಸಂಸಾರದಲ್ಲಿ ಒದ್ದಾಡುತ್ತ ದುಃಖಗಳಿಗೆ ಈಡಾಗುವನು. ಹೀಗೆ ಅಧ್ಯಾತ್ಮಸ್ವಭಾವವನ್ನು ಕಳೆದುಕೊಳ್ಳುವದರಿಂದಲೇ ಇವನಿಗೆ ಕ್ಷರನೆಂದು ಹೆಸರು. ಹೀಗೆ ಕ್ಷರನಾದನೆಂದು ಇವನು ಹಲುಬುವ ಅಥವಾ ಹತಾಶನಾಗುವ ಕಾರಣವಿಲ್ಲ. ಬ್ರಹ್ಮಪುರುಷೋತ್ತಮರಿಗೆ ಅಕ್ಷರ ಸ್ಥಿತಿಯು ಅಥವಾ ನಿತ್ಯಸತ್ವಸ್ಥ ಸ್ಥಿತಿಯು ಸ್ವಭಾವಸಹಜವಾಗಿರುವಂತೆ ಇವನಿಗೆ ಇರುವದಿಲ್ಲ. ಆದರೂ ಅದೇ ಸ್ಥಿತಿಯನ್ನು ಸ್ವಯಂಪ್ರೇರಣೆಯಿಂದಲೂ ಬುದ್ಧಿಪುರಃಸರವಾಗಿಯೂ ಕ್ಷಣಮಾತ್ರದಲ್ಲಿ ಇವನು ಪಡೆಯಬಹುದೆಂದು ಗೀತೆಯು ಸಾರುವದು."

ಗ್ರಂಥಕರ್ತರ ಬರೆಹದ ಶೈಲಿಯು ತಿಳಿಯಾಗಿಯೂ ಓಜಸ್ಸುಳ್ಳದಾಗಿಯೂ ಇರುವದು. ಮೂಲ ಸಂಸ್ಕೃತವನ್ನು ಓದಿ ಅರ್ಥಮಾಡಿಕೊಳ್ಳಲಿಕ್ಕೆ ಯೋಗ್ಯತೆಯಿಲ್ಲದವರು ಸಹ

ಶ್ಲೋಕಗಳ ಕೆಳಗಣ ವಿವರಣೆಯನ್ನು ಆದ್ಯಂತವಾಗಿ ಓದಿದರೆ ಗೀತೆಯ ಸಮಗ್ರ ಸಂದೇಶವು ಚೆನ್ನಾಗಿ ಲಕ್ಷದಲ್ಲಿ ಬರುವದು. ಶ್ರೀಕೃಷ್ಣಭಕ್ತಿಯನ್ನು ಔಪಪತ್ತಿಕವಾಗಿ ಸಮರ್ಥಿಸಿ ಪರಬ್ರಹ್ಮವಸ್ತುವು ಶ್ರೀಕೃಷ್ಣನೇ ಎಂದು ಒತ್ತಿ ಹೇಳಿ ವೈಷ್ಣವಸಮಾಜಕ್ಕೆ ವಿಶೇಷವಾಗಿ ಇವರು ಹೆಚ್ಚು ಪ್ರಿಯರಾಗಿದುವರು. ಗೀತೆಯ ಧರ್ಮವು ವಿಶ್ವಧರ್ಮವಾಗುವದಕ್ಕೆ ಅರ್ಹತೆಯನ್ನು ನಿರ್ಬಾಧವಾಗಿ ಪಡೆದಿದೆ ಎಂಬ ವಿಷಯವು ಈ ಪುಸ್ತಕವನ್ನು ಓದಿದವರೆಲ್ಲರಿಗೂ ಮನವರಿಕೆಯಾಗದಿರದು. ಒಂದು ಆಕ್ಷೇಪಣೆಯು ಮಾತ್ರ ಇವರ ಪುಸ್ತಕದ ಮೇಲೆ ಹುಟ್ಟುವದು. ಉಪನಿಷತ್ತುಗಳ ವೇದಾಂತವು ಬಹುತರವಾಗಿ ಅದ್ವೈತಪರವಾದುದೆಂದೂ ಗೀತೆಯು ಅದನ್ನು ವಿರೋಧಿಸಿ ಮುಖ್ಯತಃ ದ್ವೈತವನ್ನು ಪ್ರತಿ ಪಾದಿಸುವದೆಂದೂ ಗ್ರಂಥಕಾರರ ಅಭಿಪ್ರಾಯವಿದ್ದಂತೆ ಇವರ ಪುಸ್ತಕದ ಪೂರ್ವಾಪರ ಸೂಕ್ಷ್ಮ ಅವಲೋಕನದಿಂದ ಗೊತ್ತಾಗುವದು.

ಇವರು ಯಾವ ಸಮಸ್ಯೆಯನ್ನು ಬಿಡಿಸಲೆಂದು ಈ ಉಪಕ್ರಮಕ್ಕೆ ಕೈಯಿಕ್ಕಿರುವರೋ ಆ ಸಮಸ್ಯೆಗೆ ಅವರು ಮತ್ತಿಷ್ಟು ಉಗ್ರಸ್ವರೂಪವನ್ನಿತ್ತಂತಾಗಿದೆ. ಮತಮತಗಳ ಜಗಳ ಬೇಡವೆನ್ನುವ ಮಾತು ಈಗಿನ ದಿನದಲ್ಲಿ ಜನರಿಗೊಂದು ಕಳ್ಳನ ಕಂಬಳಿಯ ಮುಸುಕಾಗಿದೆ. ಎಂದರೆ ಯಾವ ಮತದ ತತ್ವಗಳಂತೆಯೂ ನಿರ್ಬಂಧದಿಂದ ನಡೆಯಲಿಕ್ಕೆ ಬೇಡಾದವರು ತಾವು ಮತದ ಸಂಕುಚಿತ ವೇದಾಂತವನ್ನು ಮೀರಿದವರೆಂದು ಹೆಮ್ಮೆ ಪಡುವದಕ್ಕೆ ಅದು ನಿಮಿತ್ತವೊಂದು ಮಾತ್ರವಾಗಿದೆ. ಆದರೆ ತತ್ವಜ್ಞಾನವು ಬೇಕಾದರೆ ಮತವು ಬೇಕು. ತತ್ವಜ್ಞಾನವು ಯಾವದಾದರೊಂದು ಬಣ್ಣದ್ದಿರಲೇ ಬೇಕು. ಅದು ಮನುಷ್ಯನ ಸ್ವಾಭಾವಿಕ ದೃಷ್ಟಿಕೋನಗಳ ವಿವಿಧತೆಯಿಂದ ವಿವಿಧವಾಗುವದು ಸಹಜವು. ದ್ವೈತ ಅದ್ವೈತ ಜಗಳವು ಲೋಕದಲ್ಲಿ ನಂದುವ ಕಾಲವು ಇದೀಗ ಬಂದಿದೆ ಎಂದು ತಿಳಿಯುವವರು ಕೇವಲ ಅಜ್ಞರೆಂದೇ ಹೇಳಬೇಕು. ಏಕೆಂದರೆ ಆ ಜಗಳವು ತೀರಿದರೆ ಮಾನವನು ಎಲ್ಲ ಜ್ಞಾನವಿಜ್ಞಾನಗಳ ಸೀಮೆಯನ್ನು ಸಂತತವಾಗಿ ಬೆಳೆಯಿಸುತ್ತಿರುವಂತೆ ತತ್ವಜ್ಞಾನದ ನಿಜಸ್ವರೂಪವನ್ನಾದರೂ ಹುಡುಕುವ ಸಾಹಸವನ್ನು ಬಿಟ್ಟುಬಿಟ್ಟನೆಂದೂ ಮನುಷ್ಯನ ಜಿಜ್ಞಾಸೆಯ ಸೆಲೆಯು ಬತ್ತಿತೆಂದೂ ತಿಳಿಯಬೇಕಾಗುವದು. ಅದು ಅಸಂಭವನೀಯವು. ಆದ್ದರಿಂದಲೇ ತತ್ವಜ್ಞಾನದ ಮುಖ್ಯ ಮೂರು ನಾಲ್ಕು ದೃಷ್ಟಿಕೋನಗಳು ಯಾವಾಗಲೂ ತಮ್ಮ ತಮ್ಮ ದೃಷ್ಟಿಯ ಸತ್ಯವನ್ನು ಪ್ರಸ್ಥಾಪಿಸುತ್ತಲೇ ಇರಬೇಕು. ನಾವು ಮನುಷ್ಯ[illegible]ರೆಲ್ಲರೂ ಆನೆಯನ್ನು ನೋಡಹೋದ ಕುರುಡರಂತೆ ಇ[illegible]ವೆವು. ನಮಗೆ ಕಾಣುವ ಆನೆಯ ಒಂದೊಂದು ಭಾಗ[illegible] ನಮಗೆ ಕಂಡಂತೆಯೇ ನಿಜವೆಂದು ಪ್ರಸ್ಥಾಪಿಸುವದು ಅ[illegible] ಮಾಣಿಕವಾಗದು. ಎರಡು ಪಕ್ಷ—ನಿಜವು ತಿಳಿಯಬೇಕಾ[illegible]ದ್ದಲ್ಲಿ ಕಣ್ಣುಳ್ಳವನು ಬೇಕು ಒಂದು—ಮನುಷ್ಯರೆಲ್ಲ[illegible] ಅರೆಯರೆಯಾಗಿ ಕುರುಡರೆಂದ ಮೇಲೆ ಮನುಷ್ಯ[illegible] ಅದು ಹೇಗೆ ತಿಳಿಯಲ್ಪಟ್ಟೀತು? ಅದು ಸಾಧ್ಯವಿಲ್ಲದಿ[illegible] ಪ್ರತಿಯೊಬ್ಬನು ತನಗೆ ಕಂಡ ಸತ್ಯವನ್ನು ಇನ್ನಿತರ[illegible] ಕಂಡ ಸತ್ಯಗಳೊಂದಿಗೆ ಜೊತೆಗೊಳಿಸಿ ಅವು ಕೂಡ [illegible] ಸತ್ಯಕ್ಕೆ ವಿರುದ್ಧವಾಗಿರದೆ ಅದಕ್ಕೆ ಪರಿಪೂರಕವೆ[illegible] ತಿಳಿದು ಆ ಸತ್ಯಾಂಶಗಳಿಂದ ಅಖಂಡ ಸತ್ಯದ ಹೊಳವನ್ನು ಹಾಕಬೇಕು.

"ಪರಬ್ರಹ್ಮನ ಕಲ್ಪನೆಯು ಗೀತೆಯಲ್ಲಿಲ್ಲ. ಪರಬ್ರಹ್ಮ[illegible] ಉಪಾಸನೆಯನ್ನು ಗೀತೆಯು ಹೇಳುವದಿಲ್ಲ; ಜೀವ[illegible] ಎಷ್ಟು ಉನ್ನತ ಜ್ಞಾನಾನುಭವಗಳನ್ನು ಪಡೆದರೂ ಪು[illegible]ಷೋತ್ತಮನೆಂದೂ ಆಗನು."

"ಆಸುರವೃತ್ತಿಯವರಾದ ಕೆಲವರಲ್ಲಿ ಉಪರತಿ[illegible] ಉಂಟಾಗುವದೇ ಇಲ್ಲ. ಅವರು ಅಧೋಗತಿಯಿಂದ[illegible] ಸಾಗುವರು. ಒಂದನ್ನೊಂದು ಮೀರುವಂಥ ಭಯಂ[illegible] ಕರ್ಮಗಳನ್ನು ಅಧಿಕವಾಗಿ ಮಾಡುತ್ತ ಕೊನೆಗೆ ಅವರು [illegible] ಮಾವಧಿಯ ಅಧಃಪತನವನ್ನು ಹೊಂದುವರು." "ಅನ್ಯ[illegible] ಉಪಾಸನೆಯನ್ನು ಮಾಡುವವರು ದುರ್ಗತಿಯನ್ನು ಹೊಂದುವರು."—ಈ ಮೊದಲಾದ ಮಾತುಗಳು ಇ[illegible] ಯಾವ ಮತಸತ್ಯವನ್ನು ಪುರಸ್ಕರಿಸುವರೆಂಬ ವಿಷಯ[illegible] ಸಂದೇಹಕ್ಕೆ ಆಸ್ಪದವನ್ನು ಕೊಡುವದಿಲ್ಲ. ಪುರಸ್ಕ[illegible] ನಾವು ಬೇಡವೆನ್ನುವದಿಲ್ಲ—ನಾವು ಬೇಡವೆಂದರೆ ಅ[illegible] ಕೇಳುವದೂ ಇಲ್ಲ. ಆದರೆ ಮತಸತ್ಯವನ್ನು ಸಮರ್ಥಿ[illegible]ವದಕ್ಕೆ ಹಿಂಜರಿಯುವ ಇವರ ಅಂಜುಬುರುಕತನವು ಮ[illegible] ಶ್ಲಾಘ್ಯವಾದುದಲ್ಲ. ಮತಸತ್ಯವಾವುದೂ ಅಖಂಡ[illegible] ವಲ್ಲ. ಈ ಸತ್ಯಾಂಶಗಳೆಲ್ಲವೂ ಒಂದಕ್ಕೊಂದು ಪೂ[illegible] ವಾಗಿರುವವೆಂದೂ. ಅವುಗಳ ಸಂಯೋಗ ಸಮನ್ವಯ[illegible] ನಿಜಸತ್ಯದ ದಿಕ್ಕನ್ನು ತೋರುವವೆಂದೂ ಹೇಳಿದೆ. [illegible] ದಿವಾಕರ ರಂಗರಾಯರು ತಮ್ಮ ಪುಸ್ತಕದಲ್ಲಿ ಎಲ್ಲ [illegible] ದರಿಗೆ ಒಪ್ಪಿಗೆಯಾಗುವಂತೆ ಗೀತೆಯ ಅರ್ಥವನ್ನು [illegible] ಯಲು ಯತ್ನಿಸಿದ್ದೇನೆ, ಎಂದು ಹೇಳಿದುದು [illegible] ಸದಿಚ್ಛೆಯನ್ನು ವ್ಯಕ್ತಗೊಳಿಸುತ್ತದೆ. (ಅದು ಸಾಧ್ಯವಿದೆ[illegible]

ಕ್ಷತೋ ಎಂಬ ವಿಚಾರವು ಬೇರೆ) ಎಂದರೆ ಎಲ್ಲ ಮತದವರೂ ತಮ್ಮ ಮುಖ್ಯ ಸಿದ್ಧಾಂತಗಳನ್ನು ಬಿಡದೆ ಸ್ವಲ್ಪ ವಿಶಾಲವಾದ ದೃಷ್ಟಿಯಿಂದ ಅರ್ಥಮಾಡಿದರೆ ಇತರ ಮತದವರ ಸಿದ್ಧಾಂತಗಳೂ ತಮ್ಮಂತೆಯೆ ಇರುವವೆಂದು ಮನವರಿಕೆಯಾಗದೆ ಇರದು ಎಂದು ಇದರ ಅಭಿಪ್ರಾಯವು. ಅನ್ಯಮತದವರು ಜಗಳಾಡಬಾರದೆಂಬ ಸದಿಚ್ಛೆಯು ಅದರಲ್ಲಿಯಲ್ಲಿದೆ. ಆದರೆ ಅವರ ಮಾರ್ಗವನ್ನೇ ಅನುಸರಿಸಿದವರೆಂದು ಹೇಳುವ ಪ್ರಕೃತಗ್ರಂಥಕರ್ತರು ಗೀತೆಯು ಉಪನಿಷತ್ತುಗಳ ಮುಖ್ಯ ಸಿದ್ಧಾಂತಗಳಿಗೆ ವಿರುದ್ಧವಾದುದೆಂದೂ—ಮೇಲೆ ಉದಾಹರಿಸಿರುವ ಮಾತುಗಳನ್ನು ಲಕ್ಷ್ಯಗೊಟ್ಟು ನೋಡಿರಿ—ಉಪನಿಷತ್ತುಗಳಲ್ಲಿ ಹೇಳಿದ ಮಾತುಗಳು ನಮಗೆ ಬೇಡ —ಅದು ನಿಜವಾದ ವೇದಾಂತವಲ್ಲ—ಇದು ನಿಜವಾದ ವೇದಾಂತವು—ಎಂದು ಅವನ್ನು—ಎಂದರೆ ಒಂದು ಸತ್ಯಾಂಶವನ್ನು ಇಲ್ಲವೆ ಹಲವು ಸತ್ಯಾಂಶಗಳನ್ನು ಒಪ್ಪುವ ವಿಚಾರಸರಣಿಯನ್ನಿವರು ಅನುಸರಿಸಿರುವದು ವಿಚಿತ್ರವಾಗಿದೆ. ಉಪನಿಷತ್ತುಗಳಲ್ಲಿ ಹೇಳಿರುವ ವೇದಾಂತವು ಬೇರೆ, ಗೀತೆಯ ವೇದಾಂತವು ಬೇರೆ ಎಂದು ಸಾರುವ ಸಾಹಸವನ್ನು ಮಾಡಿದವರೆಂದರೆ ಇವರೇ. ಅವರು ಪ್ರಾಮಾಣಿಕವಾಗಿ ಹಾಗೆ ಹೇಳುವರಾದ್ದರಿಂದ ಅವರ ಅವಹೇಲನವನ್ನು ಮಾಡುವದು ನಮ್ಮ ಉದ್ದೇಶವಲ್ಲ. ಹಲವು ಮಾತುಗಳಲ್ಲಿ ಆ ಎರಡೂ ತತ್ವಜ್ಞಾನಗಳಲ್ಲಿ ಐಕಮತ್ಯವು ಅಪಾತತಃ ಕಂಡುಬರದೆ ಇದ್ದ ಮಾತ್ರದಿಂದ ಉಪನಿಷತ್ತುಗಳಲ್ಲಿಯ ಹೆಚ್ಚಾಗಿ ಅದ್ವೈತಪರವಾದ ವಿಚಾರಗಳನ್ನು (ಗ್ರಂಥಕರ್ತರ ತಿಳುವಳಿಕೆಯಂತೆ) ಅಗ್ರಾಹ್ಯವಾದುವೆಂದು ಲಘುಬುದ್ಧಿಯಿಂದ ಹಿಂದೂಡುವದಕ್ಕೆ ಅವಕಾಶವು ಹಿಡಿಯುವದಿಲ್ಲ. ಇದರಿಂದ ಮತಮತಾಂತರಗಳ ನಡುವೆ ಒಕ್ಕಟ್ಟನ್ನು ಸ್ಥಾಪಿಸಿದಂತಾಗುವದಿಲ್ಲ. ದ್ವೈತಾದ್ವೈತಜಗಳವನ್ನು ತಿಳುಹಿದಂತಾಗುವದಿಲ್ಲ. ಅದ್ವೈತದಲ್ಲಿರುವ, ಆದರೆ ದ್ವೈತದಲ್ಲಿ ಸ್ಪಷ್ಟತಃ ಹೇಳದಿರುವ, ಹಾಗು ದ್ವೈತದಲ್ಲಿ ಪ್ರತಿಪಾದಿಸಿರುವ, ಆದರೆ ಅದ್ವೈತದಲ್ಲಿ ಸಾಕಷ್ಟು ಒತ್ತಿ ಹೇಳದಿರುವ ಅಂಶಗಳನ್ನು ಆಯ್ದು ಸಮಗ್ರದೃಷ್ಟಿಯನ್ನು ಪಡೆಯಲು ಯತ್ನಿಸುವದು ಬುದ್ಧಿವಂತರ ಲಕ್ಷಣವಾಗಿದೆ. ಇದಕ್ಕೆ ಈ ಗ್ರಂಥವು ಸಹಾಯಮಾಡುವದೆಂದು ನಮಗೆನಿಸುವದಿಲ್ಲ.

ಇನ್ನು ಕೆಲವು ಸಣ್ಣಪುಟ್ಟ ಸಂಶಯಗಳು ವಾಚಕರ ಮನಸ್ಸನ್ನು ಸ್ವಲ್ಪ ಅಲ್ಲಲ್ಲಿ ಕದಲಿಸುವವು. ವಿಚಾರಾಂತ್ಯದಲ್ಲಿ ಅವು ಬಿಡಬಹುದೆಂಬ ಆಸೆಯೂ ಇರುವದು. ಮೊದಲನೆಯದು, ಉಪನಿಷತ್ತುಗಳ ಮತಸ್ಥಾಪಕ ಆಚಾರ್ಯರ ಹಾಗು ವಿದ್ವಾಂಸರ ಋಣವನ್ನು ಇವರು ಅಲ್ಪವಾಗಿ ಪರಿಗಣಿಸಿದಂತೆ. ಇವರ ವಿವೇಚನೆಯಿಂದ ಹೊಳೆಯುವದು. ಒಂದು ವೇಳೆ ನಿಜಸ್ಥಿತಿಯು ಹಾಗಿರಲಿಕ್ಕಿಲ್ಲ. ವಾಚಕಮಹಾಶಯರು ತಮ್ಮಷ್ಟಕ್ಕೆ ತಾವೇ ಈ ಸಂಗತಿಯನ್ನು ನಿರ್ಧರಿಸಿಕೊಳ್ಳಬೇಕು. ಪುಟ ೭ ಸಾಲು ೨೦ ನೋಡಿರಿ. ತ್ರಿಮತಸ್ಥ ಆಚಾರ್ಯರನ್ನೂ ತಾರ್ಕಿಕವೈಯಾಕರಣಿಗಳನ್ನೂ ಒಂದೇ ಪಂಕ್ತಿಯಲ್ಲಿ ಕೂಡಿಸಿದ್ದಾರೆ. "ಗೀತೆಯನ್ನು ಪರಾಮರಿಸುವದರಲ್ಲಿ ಇವರ ಉದ್ದೇಶವು ಗೀತಾರ್ಥಗ್ರಹಣವಲ್ಲ." ಹೀಗೆನ್ನುವದು ಎಲ್ಲರಿಗೂ ಸಮಪ್ರಮಾಣದಲ್ಲಿ ಹತ್ತುವದೇ? ಆಚಾರ್ಯರು ಅಭ್ಯುದಯನಿಃಶ್ರೇಯಸದ ಮಾರ್ಗವನ್ನು ತೋರಿಸುವದರಲ್ಲಿ ಮಾಡಿರುವ ಅನಂತ ಉಪಕಾರವನ್ನು ಗ್ರಂಥಕರ್ತರು ಅರಿತಿಲ್ಲವೆಂತಿಲ್ಲ. ಆದರ ಪ್ರಸಕ್ತಿಯು ಇಲ್ಲಿ ಬಂದಿರಲಿಕ್ಕಿಲ್ಲವೆಂದೇ ಹಾಗೆ ಅವರ ವಿಷಯದಲ್ಲಿ ಹೇಳಿರಹುದು. ವೇದ ಉಪನಿಷತ್ತುಗಳ ಋಣಭಾರವನ್ನು ಇವರು ಖಂಡಿತವಾಗಿಯೂ ತಿಳಿದವರಾದರೂ ಹೆಚ್ಚಾಗಿ ಅವುಗಳ ಹೆಸರನ್ನಿಲ್ಲಿ ಎತ್ತಿರುವದಿಲ್ಲ. ಮುನ್ನುಡಿಯಲ್ಲಿ (೨ನೆಯ ಪುಟ ೬ನೆಯ ಸಾಲು) ಹೇಳಿದಂತೆ ಅದರ ಕಾರಣವು ಹೀಗಿರುವಂತೆ ತೋರುವದು: "ಗೀತೆಯನ್ನು ತತ್ಪೂರ್ವದ ವೇದಾಂತ ಕಲ್ಪನೆಗಳ ಭಾಂಡಾಗಾರವೆಂದು ಅವುಗಳನ್ನೇ ಅದರಲ್ಲಿ ಹುಡುಕಬಾರದು; ಆ ಕಲ್ಪನೆಗಳನ್ನು ತಿದ್ದಿ ಸರಿಪಡಿಸುವ ಅಧಿಕಾರವುಳ್ಳ ಗ್ರಂಥವೆಂದು ಅದನ್ನು ಭಾವಿಸಬೇಕು." ಇನ್ನೊಂದೆಡೆಗೆ ಅವರು ಹೀಗೆ ಹೇಳಿರುವರು. "ಗೀತೆಯ ತತ್ವಜ್ಞಾನವು ಉಪನಿಷತ್ತುಗಳಲ್ಲಿ ಅಡಗಿ ಹೋಗದೆ ಅವುಗಳ ತತ್ವಜ್ಞಾನಕ್ಕೆ ಪ್ರತಿಸ್ಪರ್ಧಿಯಾಗಿ ನಿಂತಿದ್ದರೆ ಸನಾತನ ಧರ್ಮದ ಇತಿಹಾಸವು ಬಹಳ ಉಜ್ವಲವಾಗುತ್ತಿತ್ತೆಂದು ನಮ್ಮ ನಂಬುಗೆ." ಹೀಗೆನ್ನುವದರಿಂದ, ಆಧ್ಯಾತ್ಮಯೋಗದ ರಹಸ್ಯವು ಉಪನಿಷತ್ತುಗಳಲ್ಲಿ ಸಿಕ್ಕುವದಿಲ್ಲವೆಂದೂ; ಒಂದು ವೇಳೆ ಗೀತೆಯಪುರುಷೋತ್ತಮ—ಶ್ರೀಕೃಷ್ಣನಲ್ಲಿ—ಭಕ್ತಿಯೋಗದಂತಹ ಭಕ್ತಿಯೋಗವು ಅದರಲ್ಲಿ ಎಲ್ಲಿಯಾದರೂ ಇದ್ದರೂ ಅದನ್ನು ಅಷ್ಟು ನಿಷ್ಕರ್ಷೆಯಾಗಿ ಅಲ್ಲಿ ಹೇಳಿಲ್ಲವೆಂದೂ ಈ (ಸ್ವಲ್ಪ ಸಂದಿಗ್ಧವಾದ) ಮಾತುಗಳ ಭಾವವಿರಬಹುದು. ಅಥವಾ ಒಂದು ವೇಳೆ ಉಪನಿಷತ್ತುಗಳಲ್ಲಿ ಪೌರುಷೇಯ ಪರಮೇಶ್ವರನನ್ನು ಹೇಳಿರುವದಿಲ್ಲವೆಂದೂ, ಹೇಳಿದ್ದರೂ ಅದಕ್ಕೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟಿಲ್ಲವೆಂದೂ, ಗ್ರಂಥಕರ್ತರು ಭಾವಿಸಿರಬಹುದು. ಹಾಗಿದ್ದಮಾತ್ರದಿಂದ ಗೀತೆಯು ಉಪನಿಷತ್ತುಗಳಲ್ಲಿಯ ಕಲ್ಪನೆಗಳನ್ನು ತಿದ್ದಿ

ಸಂಪಡಿಸುವದೆಂದೂ, ಅದಕ್ಕೆ ಅದು ಪ್ರತಿಸ್ಪರ್ಧಿಯಾಗಿ ಇರುವದೆಂದೂ, ಎನ್ನುವದು ವಿೂರಿದ ಹೊಣೆಯನ್ನು ತಲೆಯಮೇಲೆ ಹೊತ್ತುಕೊಂಡಂತೆ ನಮಗೆ ತೋರುವದು.

ಇನ್ನು ವೇದಗಳಲ್ಲಿ ಯಜ್ಞಯಾಗಾದಿ ಕರ್ಮಕಾಂಡವೇ ಮಾತ್ರವಲ್ಲ. ಆದರೆ ಸಾಧಕನಿಗೆ ಹಜ್ಜೆ ಹಜ್ಜೆಗೂ ಅದರಲ್ಲಿ ಅತ್ಯಂತ ಉಪಕಾರಕವಾದ ತತ್ವಜ್ಞಾನವು ಅಡಕವಾಗಿದೆ ಎಂದು ಶ್ರೀಮನ್ಮಧ್ವಾಚಾರ್ಯರೂ ಹಾಗೂ ಆಧುನಿಕರಲ್ಲಿ ಅರವಿಂದಯೋಗಿಗಳೂ ಕೇವಲ ಲೋಕಸಂಗ್ರಹ ದೃಷ್ಟಿಯಿಂದ ಹೇಳಿದ್ದಾರೆ. ಗೀತೆಗೂ ವೇದ ಉಪನಿಷತ್ತುಗಳಿಗೂ ವಿರೋಧವಿಲ್ಲೆಂದು ತೋರಿಸುವದೇ ಸಮ್ಮ ದೇಶದ ಜನರಿಗೆ ಮೋಕ್ಷಕ್ಕೆ ದಾರಿಯನ್ನು ತೋರಿಸಿಕೊಟ್ಟಂತಾಗುವದು ಎಂದು ನಮ್ಮ ನಂಬುಗೆ. "ಗೀತೆಯು ಪೂರ್ವದ ವೇದಾಂತ ಕಲ್ಪನೆಗಳ ಸಂಯೋಗವನ್ನು (ಸಮನ್ವಯವನ್ನು ?) (Synthesis) ಸಾಧಿಸಿರುವದು." ಎಂದು ಗ್ರಂಥಕರ್ತರೇ ಒಪ್ಪುವದರಿಂದ ಹಿಂದಿನ ವೇದಾಂತ ಕಲ್ಪನೆಗಳಿಗೂ ಗೀತೆಯ ಕಲ್ಪನೆಗಳಿಗೂ ವಿರೋಧವೆಲ್ಲಿಂದ ಬಂತು ? ವಿರೋಧಪರಿಹಾರವೇ ಸಮನ್ವಯವಲ್ಲವೇ ?

ಮೂರನೆಯ ಮಾತು : ಬಾಲಗಂಗಾಧರ ಟಿಳಕರವರು ಗೀತೆಯ ಮೂಲ ಶ್ಲೋಕಗಳ ಭಾಗವನ್ನು ಮರಾಠಿಯಲ್ಲಿ ತರುವದು ಬಹಳ ಕಷ್ಟವೆಂದು ಹೇಳಿದ್ದರ ಅನಿಷ್ಟ ಅರ್ಥವನ್ನು ಇವರು ಮಾಡಿರುವಂತೆ ತೋರುತ್ತದೆ. ಅವರಿಗೆ ಗೀತೆಯ ನಿಶ್ಚಿತವಾದ ಅರ್ಥಜ್ಞಾನವಾಗದೇ ಇದ್ದುದೇ ಹಾಗಾಗಲಿಕ್ಕೆ ಕಾರಣವೆಂದು ಇವರು ಹೇಳುವದು ಸ್ವಲ್ಪ ರಾಜಸವೃತ್ತಿಯಾಗಿ ತೋರುವದು.

ಇರಲಿ. ಇದೊಂದು ಕನ್ನಡದಲ್ಲಿ ಅಪೂರ್ವವಾದ ಗ್ರಂಥವು. ವೇದಾಂತದ ಭೂಮಿಕೆಯೊಂದನ್ನು ಮನಸ್ಸಿನಲ್ಲಿ ರಚಿಸಿಕೊಂಡು ಅದಕ್ಕೆ ಅನುಕೂಲವಾಗುವ ಹಾಗೆ ಗೀತೆಗೆ ಅರ್ಥಮಾಡುವ ಆಗ್ರಹವನ್ನು ಬಿಟ್ಟು ಅಥವಾ ಯಾವ ಪೂರ್ವಾಗ್ರಹವೂ ಇಲ್ಲದೆ ಗೀತೆಯನ್ನು ಅಭ್ಯಾಸಿಸಿ ಅದರ ತಿರುಳನ್ನು ಜನರೆದುರಿಗೆ ಇಟ್ಟ ಶ್ರೀ. ಮುಗದಲ ರಾಮಚಂದ್ರರಾಯರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು. ಗ್ರಂಥವು ಪ್ರತಿಯೊಬ್ಬ ಕನ್ನಡಿಗನಿಂದಲೂ ಸಂಗ್ರಾಹ್ಯವಾಗಿದೆ. ಇವರಿಂದ ಇನ್ನೂ ಇಂಥ ಅನೇಕ ಗ್ರಂಥಗಳು ಪ್ರಕಾಶಕ್ಕೆ ಬರಲೆಂದು ಹಾರೈಸಿ ಈ ವಿಮರ್ಶೆಯನ್ನು ಮುಗಿಸುವೆವು.

—ತಟ್ಟಿ ಶ್ಯಾಮರಾಯರು

Aryan Path (ಹಿಂದ ಸ್ವರಾಜ್ಯಾಂಕ):—'ಆರ್ಯನ್ ಪಾಥ್' ಎಂಬುದು ಮುಂಬೈ ೫೧.ಎಸ್ಪ್ಲೆನೇಡ್ [illegible] ದಿಂದ ಪ್ರಕಟವಾಗುತ್ತಿರುವ ಆರ್ಯಾಂಗ್ಲ ಪಂಡಿತ[illegible] ನಗಳನ್ನೊಳಗೊಂಡ ಇಂಗ್ಲಿಶ್ ಆಧ್ಯಾತ್ಮಿಕ [illegible] ಯಾಗಿದೆ. ಅದರ ಸಂಪಾದಕ ಮಂಡಲದವರು, ಮಹಾ[illegible] ಗಾಂಧಿಜಿಯವರಿಂದ ಮೂವತ್ತು ವರ್ಷಗಳ ಹಿಂದೆ [illegible] ಯಲ್ಪಟ್ಟ 'ಹಿಂದ ಸ್ವರಾಜ್ಯ' ಎಂಬ ಪುಸ್ತಕದ [illegible] ತತ್ವಗಳ ಗೌರವಾರ್ಥವಾಗಿ ದೇಶವಿದೇಶಗಳ [illegible] ವಿದ್ವಾಂಸರಿಂದ 'ಹಿಂದ ಸ್ವರಾಜ್ಯ'ದ ವಿಮರ್ಶೆ[illegible] ಮಾಡಿಸಿದ್ದಾರೆ. ಮಹಾತ್ಮರು ೧೯೦೮ರಲ್ಲಿಯೆ 'ಪಾಶ್ಚಾ[illegible] ಸಂಸ್ಕೃತಿಯು ಒಲವು ನೈತಿಕ ಜೀವನವನ್ನು [illegible] ಗೊಳಿಸುವ ಕಡೆಗಿದೆ; ಪಾಶ್ಚಾತ್ಯ ಸಂಸ್ಕೃತಿಯದು [illegible] ಯನ್ನು ಪ್ರಚುರಗೊಳಿಸುವ ಕಡೆಗಿದೆ. ಮೊದಲನೆ[illegible] ದೇವರ ಅಸ್ತಿತ್ವದಲ್ಲಿಯ ನಿಷ್ಠೆಯೆ ಆಧಾರ; ಎರಡನೆ[illegible] ದೇವಭಾವ ಹೀನವಾಗಿದೆ.' ಎಂದು 'ಹಿಂದ ಸ್ವರಾ[illegible] ದಲ್ಲಿ ಬರೆದಿದ್ದರು. 'ಮೂವತ್ತು ವರ್ಷಗಳ ತರು[illegible] ಇಂದಿಗೂ ಆ ಮಾತಿನಲ್ಲಿ ಮಾರ್ಪಡಿಸಬೇಕಾದು[illegible] ಇಲ್ಲವೆಂದು ನನಗನಿಸುತ್ತದೆ' ಎಂದು ಮಹಾತ್ಮ[illegible] ವರು ಈ ವಿಶೇಷಾಂಕಕ್ಕೆ ಸಂದೇಶವನ್ನು ಕಳುಹಿ[illegible] ಬರೆದಿದ್ದಾರೆ. ಮಹಾತ್ಮರೆಂದರೆ ಇಂದು ಹಿಂದೂ ಸಂ[illegible] ಯಲ್ಲಿ ಉತ್ತಮವಾದ ಅನೇಕ ವಿಷಯಗಳ [illegible] ಸ್ವರೂಪರಾಗಿದ್ದಾರೆ. ಅಂತಹ ದೈವೀಪುರುಷರು ಮೂ[illegible] ವರ್ಷಗಳಿಂದ ಘಂಟಾಘೋಷವಾಗಿ ಸಾರುತ್ತಿರುವ ತ[illegible] ವಿಷಯಕ್ಕೆ ಮತ್ತು ನಮ್ಮ ಪೂಜ್ಯ ಬಾಪೂಜಿಯವರ [illegible] ಯಕ್ಕೆ ಪ್ರಾಮಾಣಿಕರಾದ ದೇಶವಿದೇಶಗಳ ಗಣ್ಯ [illegible] ವ್ಯಕ್ತಿಗಳ ಅಭಿಪ್ರಾಯವೇನಿರಬಹುದು! ಎಂಬ ಕುತೂ[illegible] ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಸಹ[illegible] ಹುಟ್ಟುವದು. ಆ ಕುತೂಹಲದ ತೃಪ್ತಿಯು ಈ [illegible] ಸ್ವರಾಜ್ಯಾಂಕ'ದಲ್ಲಿ ಖಂಡಿತವಾಗಿ ದೊರೆಯುವದು. [illegible] ಯರಿಗೆ ತೀರ ಪ್ರಿಯರಾದ ಮಹಾತ್ಮರ ತತ್ವಗಳ [illegible] ನೆಯನ್ನು ಮಾನ್ಯ ಸಂಪಾದಕರು ಹೊಸ ದಾರಿಯಲ್ಲಿ [illegible] ತೋರಿಸಿದುದು ಅಭಿನಂದನೀಯ.

ವಿಚಾರವೇದಿಕೆ

ಅಥಾತೋ ರೋಗಮೀಮಾಂಸಾ

ಬೆಳಗಾವಿಯಲ್ಲಿ, ಧಾರವಾಡದಲ್ಲಿ—ಹೀಗೆ ಎರಡು ಕಡೆಗೆ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಗುಪ್ತ ಸಭೆಗಳು ಕಳೆದ ತಿಂಗಳು ನಡೆದವು. ಕಾಂಗ್ರೆಸ್ ಕಾರ್ಯಕಲಾಪ ಗಳಲ್ಲಿ ಪ್ರಸ್ತುತವಾಗುತ್ತಲಿರುವ ಜಾತ್ಯಂಧತೆಯನ್ನು ಹೇಗೆ ಹೋಗಲಾಡಿಸಬೇಕೆಂಬುದನ್ನು ಯೋಚಿಸುವುದೇ ಈ ಸಭೆ ಗಳ ಮುಖ್ಯ ಉದ್ದೇಶವಾಗಿತ್ತೆಂದು ತಿಳಿದುಬಂದಿದೆ. ಕಾಂಗ್ರೆಸ್ ಮುಖಂಡರು ಸಕಾಲಕ್ಕೆ ಎಚ್ಚತ್ತುದು ಸಂತೋ ಷದ ವಿಷಯ. ಜಾತೀಯ ಭಾವನೆಯನ್ನು ತೊಳೆದುಬಿಡು ವಷ್ಟು ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿಯಾಗಿಲ್ಲ ವೆಂದೂ ವೈಯಕ್ತಿಕ ಮುಖಂಡತ್ವದ ಮರೆಯಲ್ಲಿ ಅಹಂಕಾರ ಪ್ರೇರಿತ ಗುಂಪುಗಳು ಅಲ್ಲಲ್ಲಿ ನಮ್ಮ ನಾಡಿನ ಜೀವನವನ್ನು ಕಲಂಕಿಸುತ್ತಿವೆಯೆಂದೂ ನಾವು ಈ ವಿಚಾರವೇದಿಕೆಯಿಂದ ಹಲವು ಸಲ ಹೇಳಿದ್ದೇವೆ. ಕರ್ನಾಟಕದ ಮುನ್ನ ಡೆಗೆ ಅಡ್ಡಬರುತ್ತಲಿರುವ ತಡೆ ಯಾವುದು, ಅದರ ಸ್ವರೂಪ ವೇನು ಎಂಬುದು ಹೊಣೆಯರಿತ ಮುಖಂಡರಿಗೆ ವಿದಿತ ವಾಗುತ್ತಿರುವುದು ಸುಚಿಹ್ನೆಯೇ ಸರಿ. ೧೬-೯-೩೮ ರ ಸಂಯುಕ್ತಕರ್ನಾಟಕದಲ್ಲಿ ಶ್ರೀ. ದಿವಾಕರ ರಂಗರಾಯರು ಇದರ ದಿಗ್ದರ್ಶನೆಯನ್ನು ಈರೀತಿ ಮಾಡಿದ್ದಾರೆ:—

> ಜಾತೀಯತೆಯು ವ್ಯಕ್ತಿಗಳಲ್ಲಿ, ಸಮಾಜದಲ್ಲಿ; ಹಾಗು ಎಲ್ಲ ಕಾರ್ಯಕರ್ತರಲ್ಲಿ ಹೆಚ್ಚುಕಡಿಮೆ ಪ್ರಮಾಣದಲ್ಲಿ ಇರುವದೆಂದು ಹೇಳಬಹುದು. ಹಲವರು ಈ ಮಾತನ್ನು ಒಪ್ಪಬ ಹುದು; ಹಲವರು ಒಪ್ಪಲಿಕ್ಕಿಲ್ಲ. ಜ್ಞಾತವಾಗಿ ಹಲವರು ಅಜ್ಞಾತವಾಗಿ ಹಲವರು ಜಾತೀಯತೆಯ ಭೂತಕ್ಕೆ ಎಡೆಗೊಡು ತ್ತಿರಬಹುದು. ಆ ಭೂತದ ಕರಾಳ ಛಾಯೆಯು ಯಾರ ಮನ ಸನ್ನು ನಿರ್ದೋಷವಾಗಿಟ್ಟಿಲ್ಲ; ಹಲವರ ಮನಸ್ಸು ನಿರ್ಮಲವಿದೆ ಯೆಂದು ತಿಳಿದರೂ ಪ್ರತ್ಯಕ್ಷ ಕಾರ್ಯ ಮಾಡುವಾಗ ಜಾತೀಯ್ರ ತೆಯು ಅಸ್ತಿತ್ವವನ್ನು ಒಪ್ಪಿಕೊಂಡು ಚುನಾವಣೆ ಮುಂತಾದ ಕಾರ್ಯ ಗಳನ್ನು ವಿಶಿಷ್ಟ ರೀತಿಯಲ್ಲಿಯೇ ನಡಿಸಬೇಕಾಗುತ್ತದೆ. ಗುಣ ಕರ್ಮಕ್ಕೆ ಎಡೆಗೊಡದೆ, ಇಲ್ಲವೆ ಗುಣಕರ್ಮಗಳು ಗೌಣವೆಂದು ತಿಳಿಸಿ ಜಾತಿಗೆ ಮಹತ್ವಕೊಟ್ಟು, ತನ್ಮೂಲಕವೇ ಸ್ಥಾನ, ಪ್ರತಿಷ್ಠೆ, ಮಾನ ಇವುಗಳನ್ನು ಕೊಡಲು ಅಥವಾ ಪಡೆಯಲು ಯತ್ನಿಸುವದೇ ಜಾತೀಯತೆಯೆಂದು ಹೇಳಿದರೆ ಬಹಳ ತಪ್ಪಾಗಲಿಕ್ಕಿಲ್ಲ. ಜಾತೀಯ ತೆಯು ಪ್ರತ್ಯಕ್ಷ ಕಾರ್ಯಮಾಡುವಾಗ ಅಡ್ಡಬರುವದಿಲ್ಲವೆಂದು ಕೆಲವರು ಹೇಳಿದರೂ ಅದು ವಸ್ತುಸ್ಥಿತಿಗೆ ಸರಿಯಾಗಿಲ್ಲವೆಂದೇ ಅನ್ನ ಬೇಕಾಗುತ್ತದೆ. ಒಟ್ಟಿಗೆ ನೋಡಿದರೆ ಜಾತೀಯತೆ, ತನ್ನ ಜಾತಿಯಬಗ್ಗೆ ವಿಶೇಷ ಆಸ್ಥೆ, ತನ್ನ ಜಾತಿಯ ಹಿತವೇ ಹೆಚ್ಚು ಆಗಬೇಕು ಎಂಬ ಸಂಕುಚಿತ ಭಾವನೆ, ಇದು ನಮ್ಮಲ್ಲಿ ಇನ್ನೂ ಮನೆಮಾಡಿಕೊಂಡಿ ದೆಯೆಂಬುದನ್ನು ಲಕ್ಷ್ಯದಲ್ಲಿಟ್ಟೇ ಮುಂದಕ್ಕೆ ಸಾಗಬೇಕಾಗುವದು. ಮತ್ತು ಅದನ್ನು ಹೋಗಲಾಡಿಸುವ ಉಪಾಯಗಳನ್ನು ಯೋಚಿ ಸಬೇಕಾಗುವದು.

ಇವು ಸತ್ಯಸ್ಥಿತಿನಿದರ್ಶಕ ಮಾತುಗಳು. ರೋಗದ ಲಕ್ಷಣವನ್ನು ಕಂಡುಹಿಡಿದಂತಾಯಿತು; ಇನ್ನು ತಕ್ಕ ಉಪಾಯಗಳನ್ನು ಯೋಚಿಸುವುದು ಅಗತ್ಯ.

ಘೋಷಾ ಸಭೆಗಳ ಖಟಾಟೋಪ

ಹೆಣ್ಣುಮಕ್ಕಳ ಶೀಲ-ಸಭ್ಯತೆಗಳನ್ನು ಕಾಯಲು ಘೋಷಾ ಪದ್ಧತಿಯು ಹುಟ್ಟಿತೆಂಬುದು ಸುಪ್ರಸಿದ್ಧವಿದೆ; ಆದರೆ ತೆರೆಯ ಮರೆಯಲ್ಲಿಯೇ ಅನೀತಿ-ಅನಾಚಾರಗಳು ಬುಚು ಗಾಡುತ್ತವೆಂಬುದನ್ನು ಎಲ್ಲರೂ ಬಲ್ಲರು. ಪ್ರಕಟತೆಯೇ ನೀತಿಯ ರಕ್ಷಾಕವಚ. Light is the greatest germi-cide ಎಂದು ಐರಿಷ್ ಮಹಾಕವಿ ಎ. ಈ. ಹೇಳಿ ದ್ದಾನೆ. ಕಾಂಗ್ರೆಸ್ ಕಾರ್ಯಕರ್ತರು ಇತಿಹಾಸದಿಂದ ಈ ಕಟು ಸತ್ಯವನ್ನು ಕಲಿತುಕೊಳ್ಳಬೇಕು. ಘೋಷಾ ಸಭೆಯೊಳಗಿನ ನಿರ್ಣಯಗಳಿಂದ ಜಾತ್ಯಂಧತೆಯು ಎಂದಿಗೂ ನಷ್ಟವಾಗದು. ಬಯಲಿನಲ್ಲಿ ಬೆಳಕಿನಲ್ಲಿ ನಡೆಯ ಬೇಕಾದ ತೀರ್ಮಾನಗಳು ಮುಸುಕಿನಲ್ಲಿ ಮುಸಕಿನಲ್ಲಿ ಎಂದಿಗೂ ಸಮಂಜಸವಾಗಿ ಜರುಗಲಾರವು. ಸಭಾಪಂಡಿ ತರು ಚರ್ಚಿಸಿದ ವಿಷಯವು ಕಾಂಗ್ರೆಸಿನೊಳಗಿನ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿರದೆ ಇಡಿಯ ನಾಡಿಗೇ ತೊಡಕಾ ಗಿರುವ ಸಮಸ್ಯೆಯಾಗಿದೆ. ಇದನ್ನು ಬಹಿರಂಗವಾಗಿಯೇ ಚರ್ಚಿಸತಕ್ಕದ್ದು.

ಅಯ್ಯೋ ಈ ಜಾತೀಯತೆ !

—ಎಂಬ ಉದ್ಗಾರವನ್ನು ಮಹಾ ಮಹಾ ಅಖಿಲ ಭಾರ ತೀಯ ಮುಖಂಡರೂ ಮರಿಮುಖಂಡರೂ ಹಲವುಸಲ ಹೊರಡಿಸಿದ್ದಾರೆ. ನಾವು ಕರ್ನಾಟಕದ ಮಟ್ಟಿಗೆ ಯೋಚಿಸ ಬೇಕಾಗಿದೆ. ಕರ್ನಾಟಕವು ಈ ಸಮಸ್ಯೆಯನ್ನು ಬಗೆ

ಹರಿಸಿದರೆ, ಭಾರತಕ್ಕೇ ಅದು ದಾರಿತೋರುವುದೆಂದು ನಮ್ಮ ನಂಬಿಗೆ; ಏಕೆಂದರೆ ಕರ್ನಾಟಕವು ಭಾರತೀಯ ಪ್ರಮುಖ ಧರ್ಮ-ಮತಗಳ ಲೀಲಾರಂಗವೂ ಪುರಾತನ ಆಶ್ರಯಸ್ಥಾನವೂ ಆಗಿದೆ. ಧರ್ಮದ ಒಳಿತು ಕೆಡಕು ಪರಿಣಾಮವು ಕರ್ನಾಟಕದಲ್ಲಿ ಕಂಡುಬಂದಷ್ಟು ಭಾರತ ವರ್ಷದಲ್ಲಿ ಇನ್ನೆಲ್ಲಿಯೂ ತೋರಿಬಂದಿಲ್ಲವೆಂದು ನಮ್ಮ ತಿಳಿವಳಿಕೆ. ಆದುದರಿಂದ ಸನಾತನವಾದ ಧರ್ಮಕಲ್ಪನೆಗೂ ಅದ್ಯತನವಾದ ವಿಜ್ಞಾನಶಾಸ್ತ್ರಕ್ಕೂ ಘರ್ಷಣೆಯಾಗಿ, ಅವೆರಡರಲ್ಲಿಯ ಸಮಂಜಸಸಮನ್ವಯವು ಹೊರದೋರಲು ತಕ್ಕ ಕ್ಷೇತ್ರವು ಕರ್ನಾಟಕವೇ ಆಗಿದೆಯೆಂದು ನಮ್ಮ ವಿಶ್ವಾಸ. ಧರ್ಮದಲ್ಲಿಯ ಸತ್ಯಾಂಶವೂ ವಿಜ್ಞಾನದಲ್ಲಿಯ ಸತ್ಯಾಂಶವೂ ಮೂಲದಲ್ಲಿಯೂ ಪರಿಣಾಮದಲ್ಲಿಯೂ ಒಂದೇಯಾಗಿವೆ; ಆದರೆ ಜಾತಿಯ ಕೋತಿಯು ಮಾತ್ರ ನಡುವೆ ಬೂಟಾಟಿಕೆಯನ್ನು ಮಾಡುತ್ತದೆ. ಜಾತ್ಯಂಧತೆಗೆ ಮದ್ದೇನು ? —ಎಂಬ ಪ್ರಶ್ನೆಗೆ 'ಜಾತಿ ಹೋಗಬೇಕು' ಎಂಬುದೇ ನಮ್ಮ ಉತ್ತರವಾಗಿದೆ. ಜಾತಿ ಹೋಗುವುದರಿಂದ ಹಿಂದುತ್ವವು ಅಳಿಯುವದಿಲ್ಲ ವಷ್ಟೇ ಅಲ್ಲ, ಅದು ತೊಳಗಿ ಬೆಳಗುವುದು. ಬ್ರಾಹ್ಮಣ-ವೀರಶೈವ-ಜೈನ-ಕ್ಷಾತ್ರ ಮೊದಲಾದ ಕರ್ನಾಟಕದಲ್ಲಿಯ ಸಂಪ್ರದಾಯಗಳು ತಮ್ಮ ತಮ್ಮ ವೈಶಿಷ್ಟ್ಯವನ್ನೆ ಮುಂದು ಮಾಡದೆ ಎಲ್ಲರಿಗೂ ಸಾಮಾನ್ಯವಾದ ತತ್ವಪುಂಜಕ್ಕೆ ಒಪ್ಪಿಗೆ ಕೊಡುತ್ತ, ಅವನ್ನು ಆಚರಣೆಯಲ್ಲಿ ತರುವುದು ಅಗತ್ಯವಾಗಿದೆ; ಆದರೆ ಅದರ ಜತೆಗೆ ಈ ಸಂಪ್ರದಾಯಗಳನ್ನು ವಿಂಗಡಿಸುವ ವಿಶಿಷ್ಟಲಕ್ಷಣಗಳನ್ನು —ಅವಕ್ಕೇ ಜಾತಿಯೆಂದು ಹೆಸರು—ತೊಡೆದು ಹಾಕುವುದೂ ಅಗತ್ಯ. ಇದು ಕ್ರಾಂತಿಕಾರಿಯಾಗಿ ತೋರಬಹುದು; ಆದರೆ ಗತ್ಯಂತರವಿಲ್ಲ. ಬೇರೆ ಪ್ರಾಂತಗಳನ್ನು ನೋಡುತ್ತಿರಲಾಗಿ, ವಿಚಾರೋದಯ ಮೂಲಕ ಹುಟ್ಟುವ ಸಾಮಾಜಿಕ ಘರ್ಷಣೆಯು ನಮ್ಮಲ್ಲಿ ಇನ್ನೂ ತಲೆದೋರಿಯೇ ಇಲ್ಲವೆಂದು ಹೇಳಬಹುದು. ಅದನ್ನು 'ಆದಷ್ಟು ತ್ವರಿತವಾಗಿ ನಮ್ಮಲ್ಲಿ ಬರಮಾಡಿಕೊಳ್ಳುವುದು ಒಳಿತು. ಸಾಮಾಜಿಕ ಜಾಗೃತಿಯೇ ರಾಜಕೀಯ ಜೀವನಕ್ಕೆ ಪುಷ್ಟಿಯನ್ನೀಯುವುದು. ಸಾಮಾಜಿಕ ಜಾಗೃತಿ ವಿರಹಿತ ರಾಜಕೀಯ ಚಟುವಟಿಕೆಯು ಬರಿದ್ದು, ಬರಡು. ಅಂತಹ ರಾಜಕೀಯ ಚಟುವಟಿಕೆಯು ಕರ್ನಾಟಕದಲ್ಲಿ ಬೇಕಾದಷ್ಟಿದೆ; ಆದರೆ ಈ ವಂಧ್ಯಜೀವನವು ನಮಗಿನ್ನು ಬೇಡ. ನಮ್ಮ ರಾಜಕೀಯ ಮುಂದಾಳುಗಳು ಈ ಸಾಮಾಜಿಕ ಪುನರ್ಘಟನೆಯ ಆಂದೋಲನದಲ್ಲಿ ಹೆಚ್ಚಾಗಿ ಭಾಗವಹಿಸಬೇಕಾದುದು ಈಗಿನ ಸಂದುಕಟ್ಟಿನಲ್ಲಿ ಕೇವಲ ಅವರ ಕರ್ತವ್ಯವಾಗಿದೆ. ಮೇಗರೆಯ ಸುಧಾರಣೆಗಳಿಗಿಂತಲೂ, ಜಾತೀಯ ಐಕ್ಯದ ಪ್ರತಿಜ್ಞಾವಿಧಿಗಿಂತಲೂ ಈ ಕಾರ್ಯವು—ಸಮಾಜವನ್ನು ತಳಸೋಸಿ ಕಟ್ಟುವ ಕೆಲಸವು—ಮಹತ್ವದ್ದಾದುದು. ನಮ್ಮ ಮುಖಂಡರು ಇತ್ತ ಗಮನಕೊಡುವರೇ ?

ಗರ್ಭದಲ್ಲಿರುವಾಗಲೆ ಪಾಪದ ಆರೋಪ

ಸ್ವಾತಂತ್ರ್ಯದ ಗಾಳಿಯು ಭಾರತೀಯ ಸಂಸ್ಥಾನಗಳ ಮೇಲೆಲ್ಲ ಬೀಸತೊಡಗಿದೆ. ಮೈಸೂರ ಸಂಸ್ಥಾನದ ಸಂಗ್ರಾಮ ಮುಗಿಯುತ್ತಿರುವಾಗಲೆ ನಾಭಾ, ಉದಯಪುರ, ಕಾಶ್ಮೀರ, ತ್ರಾವಣಕೋರ ಮುಂತಾಗಿ ಇನ್ನೂ ಅನೇಕ ಸಣ್ಣದೊಡ್ಡ ಸಂಸ್ಥಾನಗಳಲ್ಲಿ ಪ್ರಜೆಗಳು ಸಾಂಕುಶಪ್ರಭುತ್ವದ ಬೇಡಿಕೆಗಳನ್ನು ಮುಂದೊಡಿದರು. ಆದರೆ ಶತಮಾನಗಳಿಂದ ಆಳಿದವರಿಗೆ ಹೆರರ ಹಿತವಾಕ್ಯಗಳನ್ನು ಕೇಳುವುದೇ ಅಪಮಾನ. ಆದುದರಿಂದಲೆ ಅಲ್ಲಲ್ಲಿಯ ಸರಕಾರಗಳು ಬಾಯಿಂದ ಸ್ವಸ್ತಿವಚನವನ್ನು ಹಾಡಿದರೂ ಕೈಯಿಂದ ಕುಸ್ತಿಭಾಜನರಾಗುತ್ತಲೇ ಇದ್ದಾರೆ. ನೈಜಾಮ ಹೈದರಾಬಾದದಲ್ಲಿಯಂತೂ, ಜನಿಸುವ ಪೂರ್ವದಲ್ಲಿಯೆ 'ಸಂಸ್ಥಾನ ಕಾಂಗ್ರೆಸ್ಸು' ನಿಯಮಬಾಹ್ಯವಾಯಿತು. ಏಕೆಂದರೆ ಅದರಲ್ಲಿ ಜಾತಿಭ್ರಾಂತರು ಸೇರಿದ್ದಾರೆ ಎಂಬ ನೆವ ಹೇಳುತ್ತಿದೆ ಸರಕಾರ. ಮಹಾತ್ಮಾ ಗಾಂಧಿಯವರು 'ಹರಿಜನ'ದಲ್ಲಿ ಈ ನೆವದ ಪೊಳ್ಳನ್ನು ತೋರಿದ್ದಾರೆ. 'ಕಾಶ್ಮೀರದಲ್ಲಿ ಮುಸಲ್ಮಾನರು ಹೆಚ್ಚಾಗಿರುವ ಸಂಘಗಳಿಗೆ ಜಾತಿಭ್ರಾಂತಿಯ ಆರೋಪ ಮಾಡುವದು ಎಷ್ಟು ಮೂರ್ಖತನವೋ ಅಷ್ಟೇ ಹೈದರಾಬಾದದಲ್ಲಿಯ ಹಿಂದುಗಳು ಹೆಚ್ಚಾಗಿರುವ ಸಂಘಗಳಿಗೆ ಜಾತಿನಿಷ್ಠೆಯನ್ನು ಆರೋಪಿಸುವದೂ ಮೂರ್ಖತನವಾಗುವದು. ಅಲ್ಲಿ ಆಯಾ ಧರ್ಮೀಯರ ಜನಸಂಖ್ಯೆಯೇ ಹೆಚ್ಚಾಗಿರುವಾಗ ಯಾವದೊಂದು ಸಂಘದಲ್ಲಿ ಅವರ ಸಂಖ್ಯೆ ಹೆಚ್ಚುವದು ಅನಿವಾರ್ಯ' ಎಂದು ಸ್ಪಷ್ಟೀಕರಿಸಿ ಆ ನೆವದ ಪೊಳ್ಳನ್ನು ಹೊರಪಡಿಸಿದ್ದಾರೆ. ಅಲ್ಲದೆ 'ಸಂಸ್ಥಾನ ಕಾಂಗ್ರೆಸ್ಸಿ'ನವರೇ ತಮ್ಮ ಸಭೆಯ ಗುರಿನಿರಿಗಳನ್ನು ನಿಸ್ಸಂದಿಗ್ಧ ವಾಕ್ಯಗಳಲ್ಲಿ ಹೀಗೆ ವರ್ಣಿಸಿದ್ದಾರೆ. " ನಮ್ಮ ಸಭೆಗೆ ಭಾರತೀಯ ಕಾಂಗ್ರೆಸ್ಸಿಗೂ ನಿತರಾಂ ಸಂಬಂಧವಿಲ್ಲ. ನೈಜಾಮ ಇಲಾಖೆಯ ಹೊರಗಿನ ಯಾವ ರಾಜಕೀಯ ಅಥವಾ ಧಾರ್ಮಿಕ ಸಂಸ್ಥೆಯೊಡನೆಯೂ ನಮ್ಮ ಸಂಬಂಧ

ಇದು ಕೇವಲ ಸ್ವಪ್ರಾಂತೀಯ ಸಂಸ್ಥೆ; ನಮ್ಮ ಚಟು ವಟಿಕೆಗಳೆಲ್ಲ ಆಸಫ್ ಜಾಹೀ ವಂಶಕ್ಕೆ ವಿನೀತವಾಗಿರುವ ವಲ್ಲದೆ ಬಾದಶಹರ ಗೌರವಾಧಿಕಾರಗಳನ್ನು ದಿನದಿನವೂ ವೃದ್ಧಿಂಗತವಾಗುವಂತೆ ಕ್ರಮಗೊಳಿಸಲಾಗುವವು. ನಮ್ಮ ಕಾಂಗ್ರೆಸ್ಸು ಯಾವಾಗಲೂ ಜಾತೀಯತೆಯ ಧೋರಣೆ ಯಿಂದ ನಿರ್ಲಿಪ್ತವಾಗಿರುವದು. ಅಂತರ್ಧರ್ಮ ವೈಮನಸ್ಯ ವನ್ನು ನಿವಾರಿಸಿ ಪ್ರೇಮ ಸಹಾನುಭೂತಿಗಳನ್ನು ಬೆಳಿಸಲು ನಾವು ಯತ್ನಿಸುವೆವು. ಅಲ್ಲದೆ ನಮ್ಮ ಸಂಸ್ಥೆಯು ಯಾವ ಸಭಾ ಸದನೂ ಮಿಶ್ರ ಜಾತಿಭ್ರಾಂತ ಸಂಸ್ಥೆಯಲ್ಲಾಗಲಿ, ರಾಜ ಕೀಯ ಆಂದೋಲನದಲ್ಲಿಯಾಗಲಿ ಯಾವ ರೀತಿಯಿಂದಲೂ ಪಾಲುಗೊಳ್ಳಬಾರದೆಂಬುದು ನಮ್ಮ ಕಟ್ಟಳೆಯಿದೆ" ಇಷ್ಟು ಸ್ಪಷ್ಟ ವಾಕ್ಯಗಳಲ್ಲಿ ಸಂಸ್ಥಾನ ಕಾಂಗ್ರೆಸ್ಸು ತನ್ನ ಧ್ಯೇಯವನ್ನು ಪ್ರಕಟಿಸಿದ್ದರೂ ಅದು ಹುಟ್ಟುವ ಪೂರ್ವದಲ್ಲಿಯೆ ಅದಕ್ಕೆ ಜಾತಿನಿಷ್ಠೆಯ ಆರೋಪ ಹೊರಿಸಿ ಗರ್ಭಸ್ರಾವ ಮಾಡಿಸುವು ದೆಂದರೆ ತಿಳಿಗೇಡಿತನದ ಪರಮಾವಧಿಯೋ ? ಅಧಿಕಾರ ದರ್ಪಾಂಧತೆಯೋ ? ಇದನ್ನು ಬರೆಯುತ್ತಿರುವಾಗಲೆ ಸಂಸ್ಥಾನ ಕಾಂಗ್ರೆಸ್ಸಿಗೆ ಹಾಕಿದ ನಿಯಮಬಾಹ್ಯತೆಯ ಕಾನೂನನ್ನು ನಿವಾರಿಸುವ ಯತ್ನ ನಡೆದಿದೆಯೆಂದು ಸುದ್ದಿ ಬಂದಿದೆ. ಅದೆಷ್ಟು ಮಟ್ಟಿಗೆ ಯಶಸ್ವಿಯಾಗಬಹುದೋ ಹೇಳಲಾರೆವು.

ಮನವಿದ್ದಲ್ಲಿ ಮಾರ್ಗವುಂಟು

ಒಂದೇ ಭಾಷೆಯನ್ನು ಮಾತನಾಡುವವರು ಒಂದಾಗು ವದು ರಾಷ್ಟ್ರಹಿತಕ್ಕಾಗಿ ಎಷ್ಟು ಅವಶ್ಯಕವೆಂಬುದನ್ನು ಇನ್ನೆನ್ನೂ ವಿವರಿಸಬೇಕಾಗಿಲ್ಲ. ಕರ್ನಾಟಕದ ಭಾಗಗಳೆಲ್ಲ ಸಿಡಿದು ಬಿದ್ದಿರುವುದರಿಂದಲೆ ಕರ್ನಾಟಕದ ಸರ್ವಾಂಗಾ ಭಿವೃದ್ಧಿಗೆ ಹೆಜ್ಜೆ ಹೆಜ್ಜೆಗೂ ತೊಂದರೆಯಾಗುತ್ತಿದೆ. ಕರ್ನಾ ಟಕ ಏಕೀಕರಣವು ಸಾಧಿಸಿದರೆ ಅದರ ರಾಜಧಾನಿಯು ಉತ್ತರ ಕರ್ನಾಟಕದಲ್ಲಿರಬೇಕೋ ? ದಕ್ಷಿಣ ಕರ್ನಾಟಕ ದಲ್ಲೋ ? ವಿಶ್ವವಿದ್ಯಾಲಯಗಳೂ, ಹಾಯಕೋರ್ಟುಗಳೂ ಎಲ್ಲಿರಬೇಕು ? ಎಂಬ ವಿಷಯಗಳ ಬಗ್ಗೆ ವಿವಾದಗಳು ಈಗಲೇ ಹುಟ್ಟುತ್ತಿವೆ. ಅವನ್ನು ತೃಪ್ತಿಕರವಾಗಿ ಶಾಂತಿ ಯಿಂದ ಬಗೆಹರಿಸುವುದಕ್ಕೆ ಮಹಾರಾಷ್ಟ್ರವನ್ನು ಏಕೀಕರಿ ಸುವ ಹಟತೊಟ್ಟವರ ವಿಚಾರಗಳು ತುಸು ಸಹಾಯಕವಾಗ ಬಹುದು. 'ಕೇಸರಿ'ಯಲ್ಲಿ ಮಹಾರಾಷ್ಟ್ರ ಏಕೀಕರಣಭಕ್ತ ರೊಬ್ಬರಾದ ರಾವಬಹಾದ್ದೂರ ಸರದಾರ ಮಾ.ವಿ. ಕಿಬೆ ಅವರು ಹೀಗೆ ಬರೆದಿದ್ದಾರೆ:—

ಮುಂಬೈ ಪ್ರಾಂತದ ಮಧ್ಯಭಾಗ, ವರ್ಹಾಡ ಮತ್ತು ಮಧ್ಯಪ್ರದೇಶದ ಮರಾಠಿ ಜಿಲ್ಹೆಗಳು ಒಂದಾದರೆ ಆರ್ಥಿಕ ಹಾಗೂ ಭೌಗೋಲಿಕ ದೃಷ್ಟಿಯಿಂದ ಪರಿಪೂರ್ಣವಾದ ಮಹಾರಾಷ್ಟ್ರವಾಗುವದು.......ಮುಂಬೈ ಪಟ್ಟಣವು ಬಹು ದೊಡ್ಡದಾದುದರಿಂದ ಅದನ್ನು ಸ್ವತಂತ್ರ ಪ್ರಾಂತದಂತೆಯೇ ವ್ಯವಸ್ಥೆಗೊಳಿಸಬೇಕು. ಅದರ ಆಡಳಿತಕ್ಕೆ ಸಂಬಂಧಿಸದ ಜಿಲ್ಲೆಗಳನ್ನು ಅದಕ್ಕೇ ಸೇರಿಸಬೇಕು...........ಮಹಾ ರಾಷ್ಟ್ರದ ರಾಜಧಾನಿಯಾಗಲಿಕ್ಕೆ ಪುಣೆಯು ಯೋಗ್ಯ ವಾಗಿದ್ದರೂ ಅದೊಂದು ಮೂಲೆಯಾಗುವದರಿಂದ ಪುಣೆ, ಮುಂಬೈ ಎರಡನ್ನೂ ರಾಜಧಾನಿಗಳನ್ನಾಗಿ ಮಾಡಬೇಕಲ್ಲದೆ ವಿಶ್ವವಿದ್ಯಾಲಯಗಳೂ, ಹಾಯ್‌ಕೋರ್ಟುಗಳೂ ಎರಡು ಕಡೆಗೂ ನಿರ್ಮಿಸಬೇಕು......ಇತ್ಯಾದಿ.

ಅಂದರೆ ಮನವಿದ್ದಲ್ಲಿ ಮಾರ್ಗವುಂಟು. ಏನೇನಾದ ರೊಂದು ಕಾರಣವನ್ನು ಕೆದರಿ ವಿವಾದ ಬೆಳೆಸುವುದಕ್ಕಿಂತ ವಿವೇಕಸಂಮತವಾಗುವಂತೆ ಯಾರಿಗೂ ಅನ್ಯಾಯವಾಗ ದಂತೆ ಏಕೀಕರಣವನ್ನು ಸಾಧಿಸುವುದು ಸಾಧ್ಯವಿದೆ. ನಿರ್ದಾಕ್ಷಿಣ್ಯವಾಗಿ ಮತ್ತು ನಿಷ್ಪಕ್ಷಪಾತತನದಿಂದ ನಾವು ಕಾರ್ಯೋನ್ಮುಖರಾದರೆ ಕರ್ನಾಟಕ ಏಕೀಕರಣವನ್ನು ಯಾವ ವಿಘ್ನವೂ ತಡೆಗಟ್ಟಲಾರದು.

ಡಾ. ಗಿಲ್ಡರರ ಹಿತಬುದ್ಧಿ

ಮುಂಬಯಿ ಇಲಾಖೆಯ ಆರೋಗ್ಯಮಂತ್ರಿಗಳಾದ ಡಾ. ಗಿಲ್ಡರರ ಹಟದಿಂದ ಆಯುರ್ವೇದ-ಯುನಾನಿ ವೈದ್ಯರನ್ನು ನೋಂದಾಯಿಸುವ ಬಿಲ್ಲೊಂದು ಸಿದ್ಧವಾಗಿದೆ ಯಷ್ಟೆ. 'ಕುವೈದ್ಯರನ್ನು ಬಗ್ಗುಬಡೆದು ಆಯುರ್ವೇದ ವನ್ನು ಆಧುನಿಕಕಾಲಕ್ಕೆ ಸಮೀಕರಿಸಿ ಸದ್ವೈದ್ಯರನ್ನು ಪ್ರೋತ್ಸಾಹಿಸುವ ಉದ್ದೇಶದಿಂದಲೆ ಈ ಬಿಲ್ಲು ಅಂಗೀಕೃತ ವಾಗುವದು ಅಗತ್ಯವೆಂದು ಡಾ. ಗಿಲ್ಡರರ ಹಟ. ಆದರೆ ಈಗಾಗಲೆ ನೋಂದಾಯಿಸಲ್ಪಟ್ಟ ಡಾಕ್ಟರರಲ್ಲಿಯೆ ಅಸಂಖ್ಯ 'ಕುವೈದ್ಯ'ರಿದ್ದಾರೆಂದ ಮೇಲೆ ನೋಂದಣಿಯಿಂದ 'ಕು ವೈದ್ಯಕಿ' ಯನ್ನು ನಿವಾರಿಸುವುದು ಸಾಧ್ಯವಿಲ್ಲವೆಂಬುದು ಡಾ. ಗಿಲ್ಡರರಿಗೆ ಏಕೆ ತಿಳಿಯಬಾರದು ? ಅಥವಾ ಇಂಗ್ಲಿಶ್ ಪದವಿಧರರಾದೊಡನೆ ಎಲ್ಲರೂ ಸದ್ವೈದ್ಯರಾಗುವರೆಂದು ಅವರ ತಿಳುವಳಿಕೆಯೋ ? ಸಂಯುಕ್ತಪ್ರಾಂತದ ಆರೋಗ್ಯ ಮಂತ್ರಿಣಿಯರಾದ ಶ್ರೀಮತಿ ವಿಜಯಲಕ್ಷ್ಮಿದೇವಿಯವರು "ಆಯುರ್ವೇದ ವೈದ್ಯಶಾಲೆಗಳೂ ಇಂಗ್ಲಿಶ್ ವೈದ್ಯಶಾಲೆ ಗಳೂ ಸಹಕಾರದಿಂದ ಕೆಲಸ ಮಾಡುವಂತಹ ಒಂದು

ಕೇಂದ್ರ ರುಗ್ಣಾಲಯವನ್ನು ಸ್ಥಾಪಿಸಬೇಕೆಂಬ ಯೋಚನೆಯಿದೆ." ಎಂದು ನ್ಯಾಯ ವಿಧಾಯಕ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ದೇಶೀ ವೈದ್ಯಪದ್ಧತಿಗಳ ವಿಷಯದಲ್ಲಿ ಎಂತಹ ಗೌರವವನ್ನು ವ್ಯಕ್ತಗೊಳಿಸಿದ್ದಾರೆ. ನೋಂದಣಿ ಬಿಲ್ಲೊಂದು ಬಂದು ಇನ್ನು ತಮ್ಮ ಕೊರಳಲ್ಲಿ ಒಂದು ಗುದ್ದೆಯಾಗುವದೆಂದು ಮನಗಂಡ ವೈದ್ಯ-ಹಕೀಮರೆಲ್ಲರೂ ಇಲಾಖೆಯ ತುಂಬ ಪರಿಷತ್ತುಗಳನ್ನು ಏರ್ಪಡಿಸಿ ಆ ಬಿಲ್ಲಿನಿಂದ ಆಯುರ್ವೇದ-ಯುನಾನಿ ವೈದ್ಯಕಕ್ಕೆ ಮತ್ತು ಬಡಜನರ ಚಿಕಿತ್ಸಾ ಸೌಲಭ್ಯಕ್ಕೆ ಆಗುವ ಅಪಾರ ಹಾನಿಯನ್ನು ಸ್ಪಷ್ಟೀಕರಿಸಿದ್ದಾರೆ. ಕಳೆದ ತಿಂಗಳ ೧೬-೧೭ ತಾರೀಕಿಗೆ ಪುಣೆಯಲ್ಲಿ ಕರ್ನಾಟಕ ವೈದ್ಯಮಾರ್ತಾಂಡರಾದ ಪಂಡಿತ ತಾರಾನಾಥರಾಯರ ಅಧ್ಯಕ್ಷತೆಯಲ್ಲಿ ಮುಂಬಯಿ ಇಲಾಖೆಯ ವೈದ್ಯ-ಹಕೀಮರ ಪರಿಷತ್ತು ನೆರೆದಿತ್ತು. ತಾರಾನಾಥಜಿಯವರು ತಮ್ಮ ವೈಜ್ಞಾನಿಕ ಹಾಗೂ ಆಯರ್ಾಂಗ್ಲ ವೈದ್ಯಪದ್ಧತಿಯ ಅನುಭವದಿಂದ ತುಂಬಿದ ಭಾಷಣದಲ್ಲಿ 'ಈ ನೋಂದಣಿ ಬಿಲ್ಲಿನಲ್ಲಿ ಆಯುರ್ವೇದ ಯುನಾನಿಗಳ ಪೋಷಕವಾದ ಒಂದು ವಿಧಿ ಕೂಡ ಇಲ್ಲ; ನಾಶಕವಾದುದೇ ಬೇಕಾದಷ್ಟು ಇದೆ' ಎಂದು ಖಂಡಿತವಾಗಿ ಹೇಳಿದರು. ಇವಾವನ್ನೂ ಲಕ್ಷಿಸದೆ ಡಾ. ಗಿಲ್ಡರರ ಪ್ರವೃತ್ತಿಯು 'ಡಬ್ಬುಕೊಡದ ಮೇಲೆ ಸುರಿದ ನೀರಿನಂತಾ'ಗಿದೆಯೆಂದು ಅನಿರ್ವಾಹವಾಗಿ ಹೇಳಬೇಕಾಗಿದೆ. ಈಗ ನೂರಕ್ಕೆ ೫೫ ಕ್ಕಿಂತ ಹೆಚ್ಚು ಭಾರತೀಯ ರೋಗಿಗಳಿಗೆ ಆಯುರ್ವೇದ-ಯುನಾನಿಗಳೇ ಯಶಸ್ವಿಯಾಗಿ ಚಿಕಿತ್ಸೆಯನ್ನು ಸಲ್ಲಿಸುತ್ತಿರುವಾಗ ನೋಂದಣಿಯ ಹೆಸರಿನಲ್ಲಿ ಡಾ. ಗಿಲ್ಡರರು ಅವುಗಳ ಸ್ವಾತಂತ್ರ್ಯಕ್ಕೆ ತಡೆಯನ್ನೊಡ್ಡಿ ಏಳು ಲಕ್ಷ ಹಳ್ಳಿಗಳ ಬಡ ಬೇಸಿಗರು ಆರೈಕೆಗಾಣದಂತೆ ಮಾಡದಿರಲಿ.

ಝೆಕ್—ಜರ್ಮನ್ ತಿಕ್ಕಾಟ

ಮಹಾಯುದ್ಧವು ಇಂದೋ ನಾಳೆಯೋ ಪ್ರಜ್ವಲಿತವಾಗಬೇಕೆನ್ನುತ್ತಿದೆ. 'ನಾವೂ ನೀವೂ' ನೆಂಟರು ನಮ್ಮ ಗಂಟಿಗೆ ಮಾತ್ರ ಕೈಹಚ್ಚಬೇಡಿ' ಎಂಬ ಧೋರಣವನ್ನು ಚೇಂಬರಲೇನರ ಮುಂದಾಳುತನದಲ್ಲಿ ಬ್ರಿಟಿಶರು ತಾಳಿದ್ದಾರೆ. ಸಪ್ತಸಮುದ್ರರಾಣಿಯೆನಿಸಿದ ಬ್ರಿಟನಿನ ಪ್ರಧಾನರು ಒಂದುಕಾಲಕ್ಕೆ ತಮ್ಮಿಂದಲೇ ಮಣ್ಣುಮುಕ್ಕಿದ ಜರ್ಮನಿಯ ಬಾಗಿಲಿಗೆ ಇಂದು ಎಡತಾಕುತ್ತಿರುವರು. ಅವರ ಸವಿಮಾತಿನಿಂದ ಸುಡೆಟನರಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡಲು ಝೆಕ್ಕರು ಸಿದ್ಧರಾದರು. ಆದ[illegible] ಹಿಟ್ಲರನು ಹಂಗೇರಿಯನ್-ಪೋಲಿಶ್ ಜನಾಂಗಗಳ[illegible] ಗುಟ್ಟಾಗಿ ಚಿವುಟಿ ಅವರಲ್ಲಿಯೂ ತಮ್ಮ ಸ್ವಾಯತ್ತ[illegible]ಯನ್ನು ಸಂಪಾದಿಸುವ ಹಟವನ್ನು ಹುಟ್ಟಿಸಿದ. '[illegible] ಸಿಕ್ಕರೆ ಹಚ್ಚಡ ನುಂಗುವ' ಹಿಟ್ಲರನ ಈ ಕುಯುಕ್ತಿ[illegible] ಝೆಕ್ಕರು ಸೊಪ್ಪುಹಾಕಲಿಲ್ಲ. ಅಲ್ಲದೆ ಸುಡೆಟಾನ ಪ್ರದೇಶ[illegible] ಜರ್ಮನ ದಂಗೆಗಾರರನ್ನು ಹಣಿಯುವುದಕ್ಕೆ ಸೈನ್ಯಶಕ್ತಿ[illegible]ಯನ್ನು ಏರ್ಪಡಿಸಿದರು. ಈಗ ಪುನಃ ಚೇಂಬರಲೇ[illegible] ಹಿಟ್ಲರನನ್ನು ರಮಿಸುತ್ತಿದ್ದಾರೆ. ಹಿಟ್ಲರನಂತೂ '[illegible]ಟನ ಜರ್ಮನರ ಸ್ವಾಯತ್ತತೆಯನ್ನು ರಕ್ಷಿಸು[illegible] ಮತ್ತೊಂದು ಮಹಾಯುದ್ಧವು ಆದರೂ ನಾನು ಹಿ[illegible]ಯುವದಿಲ್ಲವೆಂದಿದ್ದಾನೆ. ಈ ಸಂಧಾನದಲ್ಲಿಯ ಪ್ರಮು[illegible] ವ್ಯಕ್ತಿಗಳಾದ ಲಾರ್ಡರನ್ಸಿಮನ್ನರನ್ನು ಪತ್ರಿಕಾ ಪ್ರತಿ[illegible]ಗಳು ಕೇಳಿದ್ದಕ್ಕೆ 'ಮನುಷ್ಯಪ್ರಯತ್ನವೆಲ್ಲವೂ [illegible] ಈ ಸಮಸ್ಯೆಯೀಗ ದೇವರ ತಲೆಯ ಮೇಲೆ ಇ[illegible]ಟ್ಟಿದೆ' ಎಂದು ನಿಟ್ಟುಸಿರುಗರೆದರಂತೆ!

ಇದಾರ ತಪ್ಪು?

ಸರಕಾರವು ಕನ್ನಡದ ಪ್ರಗತಿಯನ್ನು ಪ್ರೋತ್ಸಾ[illegible]ತ್ತಿಲ್ಲವೆಂಬ ಮಾತನ್ನು ವಿವಿಧ ಪ್ರಾಂತಗಳ ಕನ್ನಡಿ[illegible] ಮನವರಿಕೆಯಾಗಿದೆ. ಆದರೆ ಸರಕಾರದಿಂದ ಕೊಟ್ಟ[illegible] ಅನುಕೂಲತೆಗಳನ್ನು ತಮ್ಮ ಪ್ರಗತಿಗೆ ಉಪಯೋ[illegible]ಕೊಳ್ಳುವ ಕನ್ನಡಿಗರೂ ಕಡಿಮೆಯೆಂಬ ಮಾತು, ಜ[illegible] ಒಬ್ಬ ಭಕ್ತರಿಂದ ಬಂದ ಕಾಗದದ ಈ ಅಂಶದಿಂದ ತಿ[illegible]ವದು:—

ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಬಿ.[illegible] ಆಗಲನುಕೂಲಿಸುವಂತೆ ನಿಯಮಾವಳಿಗಳ ರಚನೆ[illegible] ಆದರಂತೆ ತಮಿಳು, ತೆಲಗು, ಮಲೆಯಾಳಗಳ [illegible] ಏರ್ಪಾಡು ಇದೆ. ಇತರ ಭಾಷೆಯ ಬಿ. ಎ. ಪದವಿ[illegible] ವರ್ಷ ಒಂದಕ್ಕೆ ೧೦-೧೨ ಮಂದಿ ಗಳಿಸುತ್ತಿದ್ದರೂ [illegible] ಬಿ.ಎ. ಯಾಗಬೇಕೆಂದು ಯಾರೂ ಅಪೇಕ್ಷಿಸುವಂತೆ [illegible]ವುದಿಲ್ಲ. ಈ ಮಾತಿನ ಸತ್ಯತೆಯು ನನ್ನ ಸ್ವಂತ [illegible]ಭವಕ್ಕೆ ಬಂದುದರಿಂದ ಕನ್ನಡದ ಹಿತದ ದೃಷ್ಟಿಯಿ[illegible] ತಮಗೆ ತಿಳಿಸಲಾಶಿಸುತ್ತೇನೆ. ಉಪಾಧ್ಯಾಯರಾಗಿ[illegible] ಖಾಸಗಿಯಿಂದ ಬಿ. ಎ. ಪರೀಕ್ಷೆಗೆ ಕುಳಿತುಕೊ[illegible] ನಿಯಮದ ಉಪಯೋಗ ಪಡೆಯುವ ಇಚ್ಛೆಯಿಂ[illegible] ಬಿ. ಎ.ಯ ೧ನೇ, ೨ನೇ, ಭಾಗಗಳಲ್ಲಿ ಪರೀಕ್ಷೆಗೆ [illegible] ಉತ್ತೀರ್ಣನಾಗಿ ೩ನೇ ವಿಭಾಗದಲ್ಲಿ ಕನ್ನಡವನ್ನೆ [illegible]

ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ಪರೀಕ್ಷೆಗೆ ನಿಲ್ಲುವೆನೆಂದು ವಿ. ನಿಲಯದ ಅಧಿಕಾರಿಗಳಿಗೆ ಪತ್ರಮೂಲಕ ತಿಳಿಸಿದೆನು. "ಕನ್ನಡವನ್ನು ಯಾವ ಕಾಲೇಜ ವಿದ್ಯಾರ್ಥಿಗಳೂ ಐಚ್ಛಿಕ ವಿಷಯವನ್ನಾಗಿ ಆರಿಸದ ಕಾರಣ ಅನುಮತಿ ಅಸಂಭವ" ಎಂದು ಉತ್ತರ ಬಂತು.

ಇನ್ನೊಂದು ಮಾತು. ಮದ್ರಾಸ ಇಲಾಖೆಯ ಹಾಯಸ್ಕೂಲುಗಳಲ್ಲಿ ವಿಷಯಗಳನ್ನೆಲ್ಲ ಮಾತೃ ಭಾಷೆಯಲ್ಲಿ ಕಲಿಸಬೇಕೆಂದು ಸರಕಾರಿ ವಿಧಿಯಾಗಿದ್ದರೂ ಶಿಕ್ಷಕರು ವಿವಿಧ ನೆವಗಳನ್ನು ಹೇಳಿ ಕನ್ನಡವನ್ನು ಮಾಧ್ಯಮವನ್ನಾಗಿ ಉಪಯೋಗಿಸುತ್ತಿಲ್ಲವೆಂದೂ ತಿಳಿದು ಬಂದಿದೆ. ಇದಾರ ತಪ್ಪು?



ಕನ್ನಡದ ಮುನ್ನಡೆ

ಮೈಸೂರ ವೈದ್ಯರಿಗೆ ವಿದ್ಯಾರ್ಥಿ ವೇತನ

ಮೈಸೂರು ಗುಣಾಂಬಾ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಸಂಸ್ಥೆಯಲ್ಲಿ ವೈದ್ಯರಾಗಿರುವ ಶ್ರೀಯುತ ಬಿ. ಎಸ್. ರಾಮಣ್ಣನವರಿಗೆ ಕ್ಷಯರೋಗ ಚಿಕಿತ್ಸಾಕ್ರಮಗಳಲ್ಲಿ ಶಿಕ್ಷಣ ಹೊಂದಲು ಇಟಲೀ ದೇಶದಲ್ಲಿರುವ ಕಾರ್ಲೊ ಫೊರ್ಲ್ಲಾನಿನಿ ಸಂಸ್ಥೆಯವರು ೨೦೦೦ ಲೈರಾಗಳ ವೇತನವನ್ನು ಕೊಟ್ಟಿರುವರು. ಶ್ರೀಯುತ ರಾಮಣ್ಣನವರು ಇಷ್ಟರಲ್ಲಿಯೇ ರೋಂ ನಗರಕ್ಕೆ ಪ್ರಯಾಣ ಬೆಳೆಸುತ್ತಾರೆ. ಭಾರತೀಯರಿಗೆ ಈ ವೇತನ ದೊರೆತಿರುವದು ಬಹಳ ವಿರಳವೆಂದು ಹೇಳಲಾಗಿದೆ.

ಡಾ. ತೆಂಡೂಲಕರರು

ಇಂಜನಿಯರಿಂಗ ವಿದ್ಯೆಯಲ್ಲಿ ಜರ್ಮನಿಯಲ್ಲಿ ಪಾಂಡಿತ್ಯವನ್ನು ಪಡೆದು ಅಲ್ಲಿ ಅನೇಕ ವರ್ಷಗಳವರೆಗೆ ಕೆಲಸಮಾಡಿ ಡಾ. ಗಣಪತ ನಾರಾಯಣ ತೆಂಡೂಲಕರರು ಮೊನ್ನೆ ಆಗಷ್ಟ ೨೯ ನೇ ತಾರೀಖಿನ ದಿವಸ ತಿರುಗಿ ಬಂದು ಮುಂಬೈ ಸರಕಾರದ ಕಾಂಗ್ರೆಸ್ ಮಂತ್ರಿಮಂಡಳದಲ್ಲಿಯ ನಾ. ಬಾಳಾಸಾಹೇಬ ಖೇರ ಮತ್ತು ನಾ. ಅಣ್ಣಾಸಾಹೇಬ ಲಠ್ಠೆಯವರಿಗೆ ಭೆಟ್ಟಿಯಾಗಿ ಈ ಪ್ರಾಂತದಲ್ಲಿಯ ನೀರಾವರಿಯ ಯೋಜನೆಗಳ ಬಗ್ಗೆ ಚರ್ಚಿಸಿದರು. ಅವರು ಬೆಳಗಾವಿಗೆ ಬಂದಿದ್ದು ಬೆಳಗಾವಿಯಲ್ಲಿಯೇ ಚಿರಸ್ಥಾಯಿಯಾಗಿ ಸ್ವದೇಶ ಸೇವೆ ಮಾಡಬೇಕೆನ್ನುವರು. ಅವರ ಜ್ಞಾನದ ಉಪಯೋಗವನ್ನು ನೀರಾವರಿಯ ಯೋಜನೆಗಳ ಬಗ್ಗೆ ಮುಂಬಯಿ ಸರಕಾರದವರು ಮಾಡಿಕೊಳ್ಳುವರಾಗಿ ತಿಳಿಯುತ್ತದೆ.

ಇಂಥ ತಜ್ಞ ಕನ್ನಡಿಗರಿಗೆ ಸ್ವದೇಶದಲ್ಲಿ ಈ ಪುರಸ್ಕಾರ ಪ್ರೋತ್ಸಾಹ ಸಿಗಲೇ ಬೇಕು.

ಉದಾರದಾನ

ಪ್ರಸಿದ್ಧ ವರ್ತಕರಲ್ಲೊಬ್ಬರಾದ ಶ್ರೀ ಅಂದನೂರು ಮಲ್ಲೇಶಪ್ಪನವರು ಅನಾಥ ಬಡ ವೀರಶೈವ ವಿದ್ಯಾರ್ಥಿನಿಲಯಕ್ಕಾಗಿ ೧೫,೦೦೦ ರೂಪಾಯಿ ಉದಾರ ದಾನವಾಗಿ ಕೊಟ್ಟಿದ್ದು ಈ ವಿದ್ಯಾರ್ಥಿನಿಲಯವನ್ನು ಶಾಶ್ವತವಾಗಿ ನಡೆಸಿಕೊಂಡು ಹೋಗಲು ಶ್ರೀಗಳಾದ ಅಂದನೂರು ಬಸಪ್ಪ, ಟಿ. ಚಂದ್ರಣ್ಣ ಮತ್ತು ಬೇತೂರ ಗುರುಶಾಂತಪ್ಪ ಇವರುಗಳನ್ನು ಟ್ರಸ್ಟಿಗಳನ್ನಾಗಿ ನೇಮಿಸಿದ್ದಾರೆ.

ವ್ಯವಸಾಯಿ ಕನ್ನಡಿಗರು

ಬೆಂಗಳೂರಿನ ಜಯದೇವ ಹಾಸ್ಟೆಲ್ ವಿದ್ಯಾರ್ಥಿಗಳು ತಾ|| ೨೧-೮-೩೮ ನೇ ಭಾನುವಾರ ಸಂಜೆ ೪ ಗಂಟೆಗೆ ಲೀಡ್ಸ್ ಯೂನಿವರ್ಸಿಟಿಯಲ್ಲಿ ಪ್ರಿಂಟಿಂಗಿನಲ್ಲಿ ತೇರ್ಗಡೆ ಹೊಂದಿರುವ ಶ್ರೀ ಡಿ. ಎಸ್. ಗುರುಬಸಪ್ಪನವರನ್ನೂ ಎಡಿನ್‌ಬರೋ ಯೂನಿವರ್ಸಿಟಿಯಲ್ಲಿ ಅರಣ್ಯಶಾಖೆಯಲ್ಲಿ ತೇರ್ಗಡೆ ಹೊಂದಿ ಬಂದ ಶ್ರೀಯುತ ಡಿ. ನಂಜುಂಡಪ್ಪನವರನ್ನೂ ಮತ್ತು ಮ್ಯಾಂಚೆಸ್ಟರ್ ಯೂನಿವರ್ಸಿಟಿಯಲ್ಲಿ ಬಿ. ಎಸ್. ಸಿ. ಟೆಕ್‌ನಿಕ್ ವ್ಯಾಸಂಗ ಮಾಡಲು ಹೊರಟಿರುವ ಶ್ರೀಯುತ ಎಸ್. ಬಸಪ್ಪನವರನ್ನೂ ಬರಮಾಡಿಕೊಂಡು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು.

ಯಶಸ್ವಿ ಕನ್ನಡಿಗರು

ಮೈಸೂರಿನ ಶ್ರೀ. ಎ. ಎಲ್. ಚೆನ್ನರಾಜೇ ಅರಸಿನವರು ಆಸ್ಟ್ರೇಲಿಯದಲ್ಲಿ ಉಣ್ಣೆ ಮತ್ತು ಕುರಿಗಳ ಪೋಷಣೆ ವಿಷಯದಲ್ಲಿ ಉಚ್ಚ ಶಿಕ್ಷಣ ಪಡೆಯಲು ಆಸ್ಟ್ರೇಲಿಯದ ಸಿಡ್ನಿ ಕಾಲೇಜಿನಲ್ಲಿ ಶಿಕ್ಷಣ ಪಡೆದು, ಈಗ ಉತ್ತೀರ್ಣರಾಗಿರುತ್ತಾರೆ.

ಜರ್ಮನಿಯಲ್ಲಿ ಕಾಗದ ಕೈಗಾರಿಕೆಗಳ ಶಿಕ್ಷಣದಲ್ಲಿ ಉಚ್ಚ ಶಿಕ್ಷಣ ಪಡೆದು ಈಗ ಮಾತೃಭೂಮಿಗೆ ಶ್ರೀ. ಎ. [illegible] ಶೇಷಾದ್ರಿ ಅಯ್ಯಂಗಾರ್ಯರು ಹಿಂತಿರುಗಿರುವರು.

ಮಾನ್ಯ ಕನ್ನಡಿಗರಾದ ಪ್ರೊ. ಗೋಕಾಕ ಅವರು ಇಂಗ್ಲೆಂಡಿನಲ್ಲಿಯ ಉಚ್ಚ ಶಿಕ್ಷಣವನ್ನು ಪಡೆಯಲು ಹೋಗಿ, ತಮ್ಮ [illegible] ವಿದ್ವತ್ತೆ, ಓದುಗತನ, ಮತ್ತು ಆತ್ಮವಿಶ್ವಾಸದಿಂದ ಉಚ್ಚ [illegible] ಗತಿಯಲ್ಲಿ ತೇರ್ಗಡೆಹೊಂದಿ ಸುಖರೂಪವಾಗಿ ಬಂದು ಹಡಗವನ್ನಿಳಿದ ಕೂಡಲೆ ಮುಂಬಯಿಯಲ್ಲಿ ಅವರಿಗೆ ಸ್ವಾಗತ [illegible] ಸಿಕ್ಕಿದುದಲ್ಲದೆ ಮುಂದೆ ಹೋದಕಡೆಗಳಲ್ಲೆಲ್ಲ [illegible] ಗೌರವ ಪುರಸ್ಕಾರಗಳಾದವೆಂಬುದು ಜಯಕರ್ನಾಟಕಕ್ಕೆ ಅಭಿಮಾನದ ವಿಷಯ.

ಶ್ರೀಮತಿ ಕಮಲಾಬಾಯಿ ತ್ರಿಲೋಕೇಕರ

ಇವರನ್ನು ಮದನಪಲ್ಲಿಯ ಗೌರವ ಬೆಂಚಮ್ಯಾಜಿಸ್ಟ್ರೇಟ[illegible] ರನ್ನಾಗಿ ನಿಯಮಿಸಲಾಗಿದೆ. ಶ್ರೀಮತಿಯವರು ಕನ್ನ[illegible] ಯರಾಗಿದ್ದು ಮೈಸೂರ ಕಾಲೇಜಿನಲ್ಲಿ ಶಿಕ್ಷಣ ಪಡೆದು [illegible] ಬನಾರಸ ಹಿಂದೂ ವಿಶ್ವವಿದ್ಯಾಲಯದಿಂದ ಎಂ. ಎ. [illegible] ಯಲ್ಲಿ ಉತ್ತೀರ್ಣೆಯರಾದರು. ಇವರು ಮದನಪಲ್ಲಿ[illegible] 'ಬೇಬಿ ಹೋಮಿ'ನ ವಾಯ್ಸ್ ಪ್ರೆಸಿಡೆಂಟಾಗಿಯೂ ಇದ್ದಾರೆ.



ಪಂಡಿತ ತಾರಾನಾಥರಾಯರು

ಕಳೆದ ತಿಂಗಳ ೧೬-೧೭ ತಾರೀಕಿಗೆ ಪುಣೆಯಲ್ಲಿ ಮುಂಬಯಿ ಇಲಾಖೆಯ ವೈದ್ಯ ಮತ್ತು ಹಕೀಮರ ಪರಿಷತ್ತು ಸೇರಿತ್ತು. ಎಲ್ಲ ಪ್ರಾಂತಗಳಿಂದಲೂ ಬಂದ ಪ್ರೇಮಪ್ರಾರ್ಥನೆಯನ್ನು ಮನ್ನಿಸಿ ಕರ್ನಾಟಕದ ಓಜಸ್ವೀ ಪಂಡಿತರೂ 'ಪ್ರೇಮ ವಿದ್ಯಾಪೀಠ'ದ ಸಂಸ್ಥಾಪಕರೂ ಆದ ಪಂಡಿತ ತಾರಾನಾಥರಾಯರು ಅಧ್ಯಕ್ಷರಾಗಿ ಆ ಪರಿಷತ್ತಿನ ಕಾರ್ಯವನ್ನು ಬಹು ಯಶಸ್ವಿಯಾಗಿ ಸಾಂಗಗೊಳಿಸಿದರೆಂಬುದು ಕನ್ನಡಿಗರೆಲ್ಲರಿಗೂ ಹೆಮ್ಮೆಯವಿಷಯ.

ಶ್ರದ್ಧಾಂಜಲಿ

ಸ್ವ. ವಾ. ಶ್ರೀ. ಎಂ. ಎಸ್. ಕಾಮತರು

ಎಲ್ಲರಿಗೂ ಪ್ರಿಯವಾದ ಸಂಡೇ ಟಾಯಿಮ್ಸ (Sunday Times) ಇಂಗ್ಲೀಷ ವಾರಪತ್ರಿಕೆಯ ಸಂಪಾದಕರಾದ ಶ್ರೀ. ಎಂ. ಎಸ್ ಕಾಮತರು ಕಳೆದ ತಿಂಗಳ ೧೪ರಲ್ಲಿ ಹೃದಯವಿಕಾರದಿಂದ ಮರಣಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ಶ್ರೀ. ಎಂ. ಸುಬ್ರಾಯ ಕಾಮತರು ಮಂಗಳೂರಿನ ಕನ್ನಡಿಗರು. ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾರ್ಥಿದಶೆಯಲ್ಲಿರುವಾಗಲೇ ವೃತ್ತಪತ್ರಿಕೆಗಳಿಗೆ ಬರೆಯುತ್ತಿದ್ದರು. ಓದುವದಾದ ಬಳಿಕ ನ್ಯೂ ಇಂಡಿಯಾ ಪತ್ರಿಕೆಯ ಸಂಪಾದಕ ಮಂಡಲದಲ್ಲಿ ಸೇರಿದರು. ಆದರೆ ಇವರು ಪತ್ರಿಕಾ ವ್ಯವಸಾಯದ ಕಲೆಯನ್ನು ಕಲಿತದ್ದು ಡಾ. ಬೆಜಂಟರ ಕೈಯಲ್ಲಿ. ಆ ಮೇಲೆ 'ಇಂದು' ಎಂಬ ಸ್ವತಂತ್ರ ಪತ್ರಿಕೆ ಹೊರಡಿಸಿದರು. ಈಗ ಹೊರಡುತ್ತಿದ್ದ ಸಂಡೇ ಟಾಯಿಮ್ಸ ಪತ್ರಿಕೆಯು ಪೂರ್ಣ ಇವರದೇ. ಇವರ ಕರ್ತೃತ್ವ ಶಕ್ತಿಯಿಂದಲೇ ಅದು ಅಷ್ಟೊಂದು ಜನಪ್ರಿಯವಾಗಿದೆ. 'ಹಿಂದುಸ್ತಾನ' ಎಂಬ ತಮಿಳು ವಾರಪತ್ರಿಕೆಯನ್ನು ಸಹ ಹೊರಡಿಸಿದ್ದರು.

ಇವರು ರಮಣ ಮಹರ್ಷಿಯ ಪರಮ ಶಿಷ್ಯರು. ತಮ್ಮ ಪತ್ರಿಕೆಯಲ್ಲಿಯ ಅಧ್ಯಾತ್ಮಿಕ ಲೇಖನಗಳಿಂದ ಎಷ್ಟೋ ಜನರ ಮನಸ್ಸನ್ನು ಇತ್ತ ಕಡೆಗೆ ಸೆಳೆದಿದ್ದರು. ಮೇಲಾಗಿ ಇವರು ಮಹಾತ್ಮಾಜಿಯವರ ಭಕ್ತರು. ಇವರ ಕಾಂಗ್ರೆಸ ಸೇವೆಯು ಅಪಾರವಾದುದು. ಮರಣಸಮಯಕ್ಕೆ ಇವರಿಗೆ ೪೬ ವರ್ಷ.

ಇವರ ಮರಣದಿಂದ ಪತ್ರಿಕಾ ವ್ಯವಸಾಯಕ್ಕೂ, ಕಾಂಗ್ರೆಸ್ಸಿಗೂ ಅಪಾರ ಹಾನಿಯಾಗಿದೆ. ಇವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ.

ಸ್ವ. ವಾ. ವೈದ್ಯಶಾಸ್ತ್ರ ಶಂಕರಲಾಲ ಮಣಿಶಂಕರ ಜೋಶಿ

ಇವರು ಜಾಮನಗರದ ಆತಂಕನಿಗ್ರಹ ಫಾರ್ಮಸಿಯ ಯಜಮಾನರಾಗಿದ್ದರು. ಇವರು ೯-೮-೩೮ನೆ ದಿನ ಸ್ವರ್ಗವಾಸಿಯಾದರು. ಇವರು ೨೮ ವರ್ಷ ಮೇಲಣ ಫಾರ್ಮಸಿಯ ಯಾಜಮಾನ್ಯವನ್ನು ಯಶಸ್ವಿಯಾಗಿ ಸಾಗಿಸಿದ್ದುದಲ್ಲದೆ ಆಯುರ್ವೇದಕ್ಕೂ ಅಪೂರ್ವವಾದ ಸೇವೆಯನ್ನು ಸಲ್ಲಿಸಿದರು. ಬಡವರಲ್ಲಿ ಕನಿಕರವುಳ್ಳವರಾಗಿದ್ದರು. ಇವರ ಆತ್ಮಕ್ಕೂ ಕುಟುಂಬಕ್ಕೂ ಶಾಂತಿ ಸಿಗಲಿ.

ನಮ್ಮ ಮಾತು

ನಾಡಹಬ್ಬಕ್ಕೆ ಆಮಂತ್ರಣ

ಜಯಕರ್ನಾಟಕದ ಸಂಪಾದಕರಿಗೆ ನಾಡಹಬ್ಬದ ಉತ್ಸವ ದಲ್ಲಿ ವ್ಯಾಖ್ಯಾನಕೊಡಲಿಕ್ಕೆಂದು ಪುತ್ತೂರಿಂದ ಆಮಂತ್ರಣ ಬಂದ ಮೇರೆಗೆ ಜಯಕರ್ನಾಟಕದ ಸಂಪಾದಕರು ಪುತ್ತೂ ರಿಗೆ ಹೋಗಿದ್ದಾರೆ. ಸಂಪಾದಿಕೆಯರೂ ನಾಡಹಬ್ಬಕ್ಕೆ ಆಮಂತ್ರಿಸಲ್ಪಟ್ಟು ಮುಂಡಗಿರ, ಬೆಳಗಾವ, ಗೋಕಾಕ ಅತ್ತಕಡೆಗೆ ಹೋಗಿದ್ದಾರೆ.

ಸಾಹಿತ್ಯ ಪರಿಷತ್ತಿನ ಮುನ್ನಡೆ

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಬೆಂಗಳೂರಿನಿಂದ ಇದೆ ವಿಜಯದಶಮಿಯಿಂದ ಶ್ರೀ. ಅ. ನ. ಕೃಷ್ಣರಾಯರ ಸಂಪಾದಕತ್ವದಲ್ಲಿ 'ಕನ್ನಡ ನುಡಿ' ಎಂಬ ಕನ್ನಡ ನುಡಿ, ಅದರ ಪ್ರಚಾರ, ಅದರ ಏಳಿಗೆ ಇವಕ್ಕೇ ಮೀಸಲಾಗಿ ಕನ್ನ ಡಿಗರಿಗೆ ಕನ್ನಡದ ವಿಷಯವಾಗಿ, ಕನ್ನಡದ ಮೂಲಕ, ಎಲ್ಲ ತಿಳಿವಳಿಕೆ ಕೊಡುವ ಉದ್ದೇಶವನ್ನಿಟ್ಟುಕೊಂಡ ವಾರಪತ್ರಿಕೆಯನ್ನು ಹೊರಡಿಸುವವರಿದ್ದಾರೆ. ಸಾಹಿತ್ಯ ಪರಿಷತ್ತು ಕೈಕೊಂಡಮೇಲೆ ಅದರ ಶ್ರೇಯಸ್ಸಿನ ವಿಚಾರ ವಾಗಿ ಸಂದೇಹಗೊಳ್ಳಲೇ ಬೇಕಾಗಿಲ್ಲ. ಬರಲಿರುವ ನಮ್ಮ ವ್ಯವಸಾಯ ಬಂಧುವಿಗೆ ಹತ್ಪೂರ್ವಕ ಸ್ವಾಗತ.

ದಿ ಯುನೈಟೆಡ್ ಕರ್ನಾಟಕ ಇ. ಕಂಪನಿ ಲಿ.

'ಧಾರವಾಡದ ದಿ ಯುನೈಟೆಡ್ ಕರ್ನಾಟಕ ಇನ್ಶ್ಯೂರನ್ಸ್ ಕಂಪನಿಯ ೭ನೆಯ ವರ್ಷದ ವರದಿಯು ನಮ್ಮ ಕೈಸೇರಿದೆ. ವರದಿಯ ವರ್ಷದಲ್ಲಿ ೨,೧೭,೦೦೦ ರೂ. ಮೊತ್ತದ ಪಾಲಿಸಿಗಳು ತಯಾರಾಗಿರುವದಾಗಿ ಕಂಡುಬರುತ್ತದೆ. ಕಂಪನಿಯ ವಯೋಮಾನದಿಂದ ಈ ವ್ಯವಹಾರವು ಪ್ರ ಮಾನದಿಂದ ಹೇಳಿಕೊಳ್ಳುವಂತಹದೇನೂ ಅಲ್ಲವಾದರೂ ಒಟ್ಟಿನಲ್ಲಿ ಪ್ರಗತಿಪರವಾಗಿರುವುದೆಂದು ಹೇಳಬಹುದು.

ರದ್ದಾದ ಪಾಲಿಸಿಗಳ ಪ್ರಮಾಣವು ಈ ವರ್ಷ ಸರಾಸರಿಗಿಂತ ಬಹಳ ಕಡಿಮೆಯಾಗಿದ್ದುದೂ, ಆಡಳಿತ ವೆಚ್ಚದ ಪ್ರಮಾಣವನ್ನು ಇನ್ನೂ ಕಡಿಮೆ ಮಾಡ ಗುರಿಯೂ ಸ್ತುತ್ಯವಾಗಿವೆ.

ಕಂಪನಿಯ ಈ ವರ್ಷದ ಉತ್ಪನ್ನವು ೩೮,೨೭೦-೨-೧೧ ಆಗಿದ್ದು ಜೀವವಿಮಾ ನಿಧಿಯು ೨೪,೧೭೬-೧೫ ಆಗೆ ಮುಟ್ಟಿದೆ. ವಿಮೆದಾರರಲ್ಲಿ ಹಾಗೂ ಮಾರ್ಥಿಗಳಲ್ಲಿ ಕಂಪನಿಯ ಬಗ್ಗೆ ವಿಶ್ವಾಸವನ್ನು ಹುಟ್ಟಿ ಸಲು ಈ ಅಂಕೆಗಳು ಸಾಕಷ್ಟಿವೆಯೆನ್ನಬಹುದು.

ವರದಿಯಲ್ಲಿ ಕಾಣಿಸಿದಂತೆ 'ಕೆಲವು ತೊಂದರೆಗೊಳ ಪ್ರಸಂಗ'ಗಳು ಇದಕ್ಕೂ ಹೆಚ್ಚಿನ ಪ್ರಗತಿಗೆ ತಡೆಯಾ ಬಹುದು. ಆದರೂ ಮ್ಯಾನೇಜರರಾದ ಶ್ರೀಮಾ ಎಮ್., ಗೋವರ್ಧನರಾಯರ ನೇತೃತ್ವದಲ್ಲಿ ಕಂಪನಿ ಲೋಕಾದರಕ್ಕೆ ಹೆಚ್ಚು ಹೆಚ್ಚು ಪಾತ್ರವಾಗಿ ತುಸು ವ ಗಳಲ್ಲಿಯೇ ಘನವಾದ ಸಂಸ್ಥೆಯಾಗುವದೆಂದು ನ ನಂಬುಗೆ.

ಪ್ರಾಂತಾಭಿಮಾನವನ್ನು ತಾಳಿ, ಕಂಪನಿಯು ತಮ್ಮ ಒಂದು ಸಂಸ್ಥೆಯೆಂದು ಭಾವಿಸಿ, ಕರ್ನಾಟಕಸ್ಥ ಪಕ್ಷಪಾತದಿಂದ ಪ್ರೋತ್ಸಾಹಿಸಲೆಂದು ಸೂಚಿಸಬಯಸು

ಜಯ ಕರ್ನಾಟಕ



V. 1938

ಈ ಪತ್ರಿಕೆಯನ್ನು ಮಾಧವ ನಾರಾಯಣ ಮಂಗಳವೇಢಕರ, ಇವರು ಧಾರವಾಡದ ಕಲಾಸಿಂಧು ಮುದ್ರಣಾಲಯದಲ್ಲಿ ಮುದ್ರಿಸಿ ... ಕಾರ್ಯಾಲಯದಲ್ಲಿ ಪ್ರಕಟಿಸಿದರು.

ಪರಿವಿಡಿ

ಲೇಖನ	ಲೇಖಕರು	ಪುಟ
ನಂದೀದುರ್ಗ (ಮುಖಚಿತ್ರ)	....	....
ಕನ್ನಡಿಗನ ಕೂಗು (ಕವನ)	ಶ್ರೀ. ಬಾಲಪುರಂದರ	೮೧೯
ದಾನ ಮತ್ತು ವ್ರತ (ಅನುವಾದ)	ಶ್ರೀ. ಅರ್ಚಕ "ವೆಂಕಟೇಶ" ಹಾವೇರಿ	೮೨೦
ಗುಲಾಬಿ ಹೂ! (ಸಚಿತ್ರ ಕತೆ)	ಶ್ರೀ. ಬಸವರಾಜ ಕಟ್ಟೀಮನಿ	೮೨೬
ಸ್ತ್ರೀಯರ ಮೇಲೆ ಮನುವಿನ ಅಪಕಾರ! (ಅನುವಾದ)	ಶ್ರೀ. ಬಂಕಾಪೂರ ದತ್ತರಾಯರು	೮೩೫
ಆರೋಗ್ಯಬಿಂದು	....	೮೩೮
ಹಸ್ತಸಾಮುದ್ರಿಕ (ಸಚಿತ್ರ)	ಶ್ರೀ. ಜಿ. ಎನ್. ಕಲಮದಾನಿ	೮೩೯
ಸೋಯಾಬೀನಿನ ಮಹತ್ವ (ಸಚಿತ್ರ)	ಶ್ರೀ. ಆರ್. ಎಸ್. ಪಾಟೀಲ, ಬಡೋದಾ	೮೪೩
ಪರಿವರ್ತನೆ (ಸಚಿತ್ರ ಕತೆ)	ಶ್ರೀ. ಜಿ. ಜೆ. ಮಯ್ಯಾ	೮೪೯
ಪ್ರಚಂಡ ಚಂಡಾಂಶು	....	೮೫೫
ಆಕಾಶವಾಣಿ (ಸಚಿತ್ರ)	ಪ್ರೊ. ಎಂ. ಜಿ. ರಾವ್	೮೫೭
ಪ್ರಾಣಾಯಾಮ (ಸಚಿತ್ರ)	ಶ್ರೀ. ವಿ. ಆರ್. ಅಣ್ಣಾಸ್ವಾಮಿರಾವ, ಮುಂಬಯಿ	೮೬೨
ವಸುಂಧರಾಖ್ಯಾನ (ಸಚಿತ್ರ ಸಾದೃಶ್ಯ)	ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ.	೮೬೬
ನಗಬೇಡಿ!	....	೮೭೧
ದೀಪಾವಳಿ (ಕವನ)	ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ	೮೭೨
ಬಯಲಾಟ (ಕವನ)	ಶ್ರೀ. ಸಿಂಪಿ ಲಿಂಗಣ್ಣ	೮೭೩
ಸ್ತ್ರೀತ್ವದ ತಿರುಳು (ತಂಗಿಯರಿಗೆ ಒಂದು ಪತ್ರ)	....	೮೭೫
ಪ್ರತಿಫಲ (ಸಚಿತ್ರ ಕತೆ)	ಶ್ರೀ. ಎನ್. ಸೂರಪ್ಪ, ಚಿತ್ರದುರ್ಗ	೮೭೭
ಜ್ಞಾನವಿಜ್ಞಾನ	....	೮೮೩
....ಪುರಾತನ ಪಾಶ್ಚಾತ್ಯ ಚಿಕಿತ್ಸೆ—ಚಲಚ್ಚಿತ್ರ ಮತ್ತು ಪ್ರತ್ಯಕ್ಷ ಇತಿಹಾಸ—ಶೈಲಿಯೆಂದರೇನು ?—ತೂಗಾಡುವ		....
....ಉಗಿಬಂಡಿ—ಮೌನಾಶ್ರಮ—ಅಪರಾಧವನ್ನು ಶೋಧಿಸುವ ಕಲೆ—ಕಪ್ಪಾಗಿರುವವರು ಬೆಳ್ಳಗಾಗಬಹುದು—		....
....ಮನುಷ್ಯೇತರ ಪ್ರಾಣಿಗಳ ದಿವ್ಯದೃಷ್ಟಿ—ಹಾಡುವ ಮೀನು	....	....
ವೀಣಾವಿತಾನ	....	೮೮೮
ಕನ್ನಡದ ಮುನ್ನಡೆ	....	೮೯೩
ಶ್ರದ್ಧಾಂಜಲಿ	....	೮೯೪
ನಮ್ಮ ಮಾತು	....	,,
ಸಾದರಸ್ವೀಕಾರ	....	೮೯೫

ಕೊನೆಯ ೩ ಫಾರ್ಮುಗಳಿಗೆ ಕಾಗದಗಳು ಬೇಗನೆ ಸಿಗದ್ದರಿಂದ, ಸಂಚಿಕೆಯು ಹೊರಡುವುದಕ್ಕೆ ಅನಿರೀಕ್ಷಿತವಾಗಿ ವಿಲಂಬವಾಯಿತೆಂಬುದಕ್ಕಾಗಿ ವಿಷಾದಿಸುತ್ತೇವೆ. ಅದೇ ಕಾರಣಕ್ಕಾಗಿ ಬಿಡಿನುಡಿಗಳನ್ನು ಬರೆದಿಟ್ಟೂ ಪ್ರಕಟಿಸಲಿಲ್ಲ. —ಸಂ. ಜ. ಕ.

ಜಯಕರ್ನಾಟಕ ಗ್ರಂಥಮಾಲೆ

ಗ್ರಂಥಮಾಲೆಗೆ ೩ ವರ್ಷಗಳು ತುಂಬಿ, ನಾಲ್ಕನೆಯ ವರ್ಷದಲ್ಲಿ ಅದು ಹೆಜ್ಜೆಯಿಟ್ಟಿದೆ. ಸರಸ, ಸುಲಲಿತ, ಮನೋರಂಜಕ, ವಿನೋದಾತ್ಮಕ, ಉಪಯುಕ್ತ, ಪ್ರೌಢ ವಿಷಯಗಳ ಮೇಲೆ ಹಲವು ಪುಸ್ತಕಗಳನ್ನು ಕನ್ನಡಿಗರಿಗೆ ಸಲ್ಲಿಸಲಾಗುವುದು.

ಕ್ರಾ. ೧/೮ ಆಳತೆಯ ಸು. ನೂರಾಇಪ್ಪತ್ತು ಪುಟಗಳುಳ್ಳ ೬ ಗ್ರಂಥಗಳು ಚಂದಾದಾರರ ಕೈಸೇರುವವು. ವಾರ್ಷಿಕ ಚಂದಾ ಅ. ವೆ. ಸೇರಿ ರೂ. ೩—೪—೦. ಜಯಕರ್ನಾಟಕದ ಚಂದಾದಾರರಿದ್ದವರಿಗೆ ೩—೦—೦ ಮಾತ್ರ.

ಈಗ ಗ್ರಂಥಮಾಲೆಯ ಚಂದಾದಾರರಲ್ಲದವರಿಗೆ ಅಂಚೆಯ ವೆಚ್ಚ ಬೇರೆ. ನಡೆಯುವ ಮತ್ತು ಮುಂದಿನ ವರುಷದ ಚಂದಾದಾರರಾಗಬಹುದು. ಆದರೆ ಹಿಂದಿನ ಪ್ರಕಟನೆಗಳ ಬಗ್ಗೆ ಚಂದಾಸೌಲಭ್ಯವಿಲ್ಲ. ಇಂದಿನ ಚಂದಾದಾರರೂ ಕೂಡ ಹಿಂದಿನ ಪುಸ್ತಕಗಳ ಬೆಲೆಯನ್ನೂ ಅಂಚೆಯ ವೆಚ್ಚವನ್ನೂ ಸಹಿಸಬೇಕಾಗುವುದು.

ಪ್ರತಿ ಮನೆಯಲ್ಲಿಯೂ ವಾಚನಾಲಯದಲ್ಲಿಯೂ ಸಂಗ್ರಾಹ್ಯವಾದ ಗ್ರಂಥಗಳು

ಮುಂಚಿನ ಪ್ರಕಟನೆಗಳು

ಹರಟೆಗಳು: ಶ್ರೀ ಬೇಂದ್ರೆಯವರು ಬರೆದ ೫ ಹರಟೆಗಳು; ಪ್ರೊ. ಗೋಕಾಕ ಅವರ 'ಯುಗಾಂತರ' ಎಂಬ ಹಾಸ್ಯಪ್ರಬಂಧ ಸಹಿತ. ೦-೧೦-೦

ಅದೇನೆ ಇರಲಿ: ನೈಜಾಂ ಕರ್ನಾಟಕದ ಶ್ರೀ. ಮನ್ಸಬ್ದಾರರು ಬರೆದ ಸಾಮಾಜಿಕ ನಾಟಕ. ೦-೮-೦

ದರಿದ್ರನಾರಾಯಣ: ಪ್ರೊ. ಜಾಗೀರದಾರ ರಂಗಾಚಾರ್ಯರು ಬರೆದ ಸಾಮಾಜಿಕ ನಾಟಕ. ೦-೧೦-೦

ಜೀವನಸಂಗೀತ: ೧೪ ಲಾವಣಿಗಳು. ೦-೧೦-೦

ಮೂರನೆಯ ವರ್ಷದ ಪ್ರಕಟನೆಗಳು

ಮಾವಿನ ತೋಪು: ಶ್ರೀಮಾನ್ ಹ. ಪೀ. ಜೋಶಿ, ಬಿ. ಎ. ಅವರು ಬರೆದ ಸಾಮಾಜಿಕ ಕಾದಂಬರಿ. ೦-೧೦-೦

ತರಂಗಿಣಿ: ಶ್ರೀ. ಟೇಂಗ್ಸೆ ಗೋವಿಂದರಾಯರು ಬರೆದ ಕಾವ್ಯಮಯ ನಾಟ್ಯಚಿತ್ರ. ೦-೬-೦

ಬಂಗಾರದ ಡಾಬು: ಶ್ರೀಮಾನ್ ಕೆ. ಗೋಪಾಲಕೃಷ್ಣ ರಾಯರ ಕಥಾಸಂಗ್ರಹ. ೦-೧೦-

ಉದಯರಾಗ: ಶ್ರೀ. ಅ. ನ. ಕೃಷ್ಣರಾಯರು ಬರೆದ ಸಾಮಾಜಿಕ ಕಾದಂಬರಿ. ೦-೧೨-೦

ರಾಜವಲ್ಲಭ: ಶ್ರೀ. ಹ. ಪೀ. ಜೋಶಿ ವಿರಚಿತ ಸಂಗೀತ ಪೌರಾಣಿಕ ನಾಟಕ. ೦-೧೦-೦

ಕೆಲವು ನೀಳ್ಗತೆಗಳು: ಹೆಸರು ಪಡೆದ ಕತೆಗಾರರ ಆರು ಕತೆಗಳು. ೦-೧೦-೦

ಮಲ್ಲಿಗೆದಂಡೆ: (ಹಳ್ಳಿವಾಡಿನ ಗೃಹಿಣೀಗೀತಗಳು) ಸಂಗ್ರಾಹಕರು: ಶ್ರೀ. ಕಾಪಸೆ ರೇವಪ್ಪನವರು ಸಾದಾಪ್ರತಿ ೦-೧೨-೦
ಫೇದರವೇಟ ಕಾಗದದ ಕ್ಯಾಲಿಕೋ ಹೊದಿಕೆಯ ಪ್ರತಿಗೆ ೧-೨-೦

ನಾಲ್ಕನೆಯ ವರ್ಷದ ಪ್ರಕಟನೆಗಳು

ಪರಿಣೀತಾ: ವಿಶ್ವವಿಖ್ಯಾತ ವಂಗ ಕಾದಂಬರೀಕಾರರಾದ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಅತ್ಯಂತ ರಸಭರಿತ ಕಾದಂಬರಿ. ಶ್ರೀ. ಗುರುನಾಥ ಜೋಶಿಯವರು ಅನುವಾದಿಸಿದುದು. ೦-೧೦-೦

ಹೂಬಿಸಿಲು: ಸೌ॥ ಶ್ಯಾಮಲೆಯವರ ಸರಸ ಕಥಾಸಂಗ್ರಹ. ಶ್ರೀ. ಆನಂದಕಂದರ ಮುನ್ನುಡಿಯೊಡನೆ. ೦-೧೦-೦

ಸಾಲುದೀಪ: ಶ್ರೀಮಾನ್ ಜೈನೇಂದ್ರ ಕುಮಾರರ ಆಯ್ದು ಕತೆಗಳು. ಶ್ರೀ. ಗುರುನಾಥ ಜೋಶಿಯವರಿಂದ ಸರಸ ಕನ್ನಡದಲ್ಲಿ ಅನುವಾದಿಸಲ್ಪಟ್ಟಿವೆ. ೧—೦—೦

ಮುಂಬಯಿ ವಿದ್ಯಾಖಾತೆಯವರ ಮನ್ನಣೆಯನ್ನು ಪಡೆದ ನಮ್ಮ ಪ್ರಕಟನೆಗಳು

೧ ಉದಯರಾಗ ೨ ಮಲ್ಲಿಗೆದಂಡೆ ೩ ಜ. ಕ. ನಾಟ್ಯಾಂಕ ೪ ತರಂಗಿಣಿ ೫ ಅದೇನೆ ಇರಲಿ ೬ ಪರಿಣೀತಾ ೭ ಜೀವನಸಂಗೀತ ೮ ರಾಜವಲ್ಲಭ ೯ ಬಂಗಾರದ ಡಾಬು ೧೦ ದರಿದ್ರನಾರಾಯಣ


ರಾಜರಹಸ್ಯ ಶ್ರೀ. ರಾ. ನ. ಮಳಗಿಯವರು ಬರೆದ, ಅದ್ಭುತರಸಪೂರ್ಣವಾದ ಈ ಕಾದಂಬರಿಯ ಎರಡೂ ಭಾಗಗಳು ಸೇರಿ ೪೦೦ಕ್ಕಿಂತ ಹೆಚ್ಚು ಪುಟಗಳು. ಪ್ರತಿಭಾಗಕ್ಕೆ ೦.೧೨.೦

ಜಯಕರ್ನಾಟಕದ ವಿಜಯನಗರ ವಿಶೇಷಾಂಕ:

ವಿಜಯನಗರದ ಸ್ಮಾರಕೋತ್ಸವ ಕಾಲದಲ್ಲಿ ಸಾಹಿತ್ಯೋತ್ಸವದ ಅಧ್ಯಕ್ಷರಾದ ಪ್ರೊ. ಬಿ. ಎಂ. ಶ್ರೀಕಂಠಯ್ಯನವರ ಹಸ್ತದಿಂದ ಪ್ರಕಾಶಿತವಾದ ಈ ಸಂಚಿಕೆಯ ಪ್ರತಿಗಳೆಲ್ಲ ತೀರಲು ಬಂದಿವೆ. ೦—೬—೦

ಹುಬ್ಬಳ್ಳಿಯ ನಮ್ಮ ಏಜಂಟರು

ಎಂ. ಆರ್. ಬೆಳ್ಳೇರಿ
ಕರ್ನಾಟಕ ಬುಕ್‌ಡಿಪೊ,
ದುರ್ಗದ ಬೈಲು, ಹುಬ್ಬಳ್ಳಿ



ನಂದೀದುರ್ಗ

(ಮೈಸೂರು ಸರಕಾರದ ಕೃಪೆಯಿಂದ)

ಜಯಕರ್ನಾಟಕ

ಸಂಪುಟ ೧೬ | ಬಹುಧಾನ್ಯ ಸಂವತ್ಸರದ ಕಾರ್ತಿಕ ಕೃಷ್ಣ ೯ (೧—೧೧—೧೯೩೮) | ಸಂಚಿಕೆ ೧೧

ಕನ್ನಡಿಗನ ಕೂಗು

ಕನ್ನಡಿಗರೆ ಸಂಗಡಿಗರೆ
ನೋಡುವುದಿನ್ನೇನು ?
ಕನ್ನಡ ತಾಯ್ ಕರೆವಳು ನಡೆ
ನಡೆಯಿರಿ ನೀವಿನ್ನು !

ಏಳಿರಿ ಎದೆಗೆಚ್ಚಿನ ಗಂ
ಡಾಳುಗಳೆ ಪರಾಕು !
ನಾಳೆಯ ನೆಚ್ಚದೆ ಕಜ್ಜದೊ
ಳುಜ್ಜುಗಿಸಲೆ ಬೇಕು !

ಒಂದೇ ಬೆಳ್ಗೊಡೆಯಲಿ ಬೆಳೆ
ದೀಕನ್ನಡ ನಾಡು
ಇಂದೆಂತಿದೆ ? ಎತ್ತಲು ಹರಿ
ಹಂಚಾಗಿಹ ಪಾಡು !

ಜಡರಂದದಿ ಸುಮ್ಮನಿರ
ಲ್ಕಿದು ಸಮಯವೆ ಅಲ್ಲ;
ತಡಮಾಡುವುದೊಳ್ಳಿತೆ ಕ
ನ್ನಡಿಗರೆ ಅದು ಸಲ್ಲ.

ಒಂದೇ ನಡೆ ಒಂದೇ ನುಡಿ
ಇಂತಿರಲಿನ್ನೇನು ?
ಒಂದಾಗಿರಲಾರಿವೆ ನಾ
ಡೊಂದಾಗದೆ ತಾನು ?

ಒಂದಾಳಿಕೆ, ಒಂದಿರುವಿಕೆ
ಒಂದೊಡನಾಟಗಳ
ಇಂದೇ ಹೊಂದುವ ನಡೆಯಿರಿ
ಮುಂದಕೆ ಬಂಧುಗಳೇ !

ಮತಿಗೆಟ್ಟವರೊಬ್ಬಿಬ್ಬರು
ತಡೆದರೆ ನಿಲ್ಲುವುದೆ ?
ಗತಿಯಿನ್ನೇಂ ? ಛಲದಿಂದು
ನ್ನತಿಯನು ಸಾಧಿಪುದೆ !

ಸ್ವಾಯತ್ತದ ಪೌರುಷವನು
ಮೆರೆಯಿಸಲಿದೆ ಕಾಲ !
ತಾಯ್ನಾಡಿನ ಸೇವೆಗೆ ಮುಂ
ದಡಿಯಿಡುವುದೆ ಶೀಲ !

ಎಣ್ದೆಸೆಯಿಂ 'ಬಂದೆವಿದೋ'
ಎನ್ನಿರಿ; ತಾಯಡಿಯ
ಕಣ್ದೆರೆದೆರಗುತ, ಗೆಳೆಯರೆ
ತೊಡಿನೀವ್ ಗಂಡುಡೆಯ !

ತಡೆಗಟ್ಟಲಿದೈವವು ಹಿಂ
ದಡಿಯಿಡದಿರಿ, ಕಜ್ಜ
ಕಡೆಗಾಣಲಿ ! ಬಲ್ಮೆಯ ಕ
ನ್ನಡಿಗರೆ ಜಯಸಿದ್ಧ !!

—ಬಾಲಪುರಂದರ

ದಾನ ಮತ್ತು ವ್ರತ

ಅನುವಾದಕರು: ಶ್ರೀ. ಅರ್ಚಿಕ "ವೆಂಕಟೇಶ", ಹಾವೇರಿ.

★

ಶಿಕ್ಷಣಸಂಸ್ಥೆ, ವ್ಯಾಯಾಮಸಂಸ್ಥೆ, ಆರೋಗ್ಯಸಂಸ್ಥೆ, ಶರೀರಬಲಸಂವರ್ಧಕಸಂಸ್ಥೆ, ಶಿಸ್ತು ಮತ್ತು ಸಂಘಟನೆಯನ್ನು ಬೆಳೆಸುವ ಸಂಸ್ಥೆ, ಅನಾಥಾಲಯ, ಅರ್ಭಕಾಲಯ, ಅನಾಥ ಮಹಿಳಾಶ್ರಮ, ಮುಂತಾದ ಈಗಿನ ಸಂಸ್ಥೆಗಳೆಲ್ಲವೂ ಯೋಗ್ಯವಾಗಿರುವವಲ್ಲದೆ ಆದರಣೀಯವೂ ಆಗಿವೆ; ಆದರೆ ಬರಗಾಲದಲ್ಲಿ ಹೊಟ್ಟೆಗಿಲ್ಲದೆ ಸಾಯುವ ನಿರುದ್ಯೋಗಿಗಳಿಗೆ ಸಹಾಯ ಮಾಡುವ ಸಂಸ್ಥೆಯನ್ನು ಸ್ಥಾಪಿಸುವದು ಅತ್ಯಾವಶ್ಯವಾಗಿದೆ. ದಾನವು ಅದೃಷ್ಟ, ಪ್ರಾರಬ್ಧ, ಪಾಪ, ಪುಣ್ಯಗಳ ಭಾವನೆಯಿಂದ ಗಿಡ, ಕಲ್ಲು, ಮಣ್ಣು ಪಶು, ಪಕ್ಷಿ, ಕ್ರಿಮಿ, ಕೀಟಕ ದ್ವಿಪಾದ-ಚತುಷ್ಪಾದ ಮುಂತಾದವುಗಳ ಪ್ರೀತ್ಯರ್ಥವಾಗಿ ಮಾಡುವ ಕಾರ್ಯವಲ್ಲ! ಈ ಜಗತ್ತಿನಲ್ಲಿ ದೇವರಿದ್ದುದೇ ನಿಜವಾದರೆ ಅವನು ಮನುಷ್ಯನಲ್ಲಿಯೇ ಇದ್ದಾನೆ; ಮತ್ತು ಮನುಷ್ಯನು ಜಗತ್ತಿನ ಸರ್ವಪ್ರಾಣಿಗಳಲ್ಲಿ ಶ್ರೇಷ್ಠನು, ಬುದ್ಧಿವಂತನು, ಎಂಬ ಮಾತನ್ನು ಲಕ್ಷ್ಯದಲ್ಲಿಟ್ಟು ಯಾವಾಗಲೂ ಮಾನವೋನ್ನತಿಗಾಗಿಯೇ ದಾನದ ಉಪಯೋಗವಾಗುವಂತೆಯೇ ಏರ್ಪಾಡು ಮಾಡುವದು ಹಿತಕರವಲ್ಲವೇ?

★

ದಾನ ಕೊಡುವ ಪದ್ಧತಿಯು ನಮ್ಮ ಹಿಂದೂ ಸಮಾಜದಲ್ಲಿ ಪರಂಪರೆಯಿಂದ ಸಾಗಿ ಬಂದಿದೆ; ಮತ್ತು ಅದು ಧರ್ಮಾದಾಯ ಸಂಸ್ಥೆಯಾಗಿ ಪರಿಣಮಿಸಿರುವುದಲ್ಲದೆ, ಅತ್ಯಂತ ದೋಷಮಯವಾಗಿದೆ. ಇವತ್ತು ದೇವ-ಬ್ರಾಹ್ಮಣರ ಹೆಸರಿನಲ್ಲಿ; ಪುಣ್ಯದ ಹೆಸರಿನಲ್ಲಿ ಆಗುವ ದಾನವು ಸಂಪೂರ್ಣ ನಿರುಪಯುಕ್ತವಾದದ್ದಾಗಿದೆ.

ಪ್ರತಿಯೊಬ್ಬ ವ್ಯಾಪಾರಸ್ಥನು ತನ್ನ ಗಿರಾಕಿಯಿಂದ ಧರ್ಮಾದಾಯವೆಂದು ಸ್ವಲ್ಪ ಹಣವನ್ನು ತಕ್ಕೊಳ್ಳುವನು; ಗಿರಾಕಿಯು, ಆ ಹಣವನ್ನು ಯಾತಕ್ಕೋಸ್ಕರವಾಗಿ ಆ ವ್ಯಾಪಾರಸ್ಥನು ತಕ್ಕೊಳ್ಳುವನೆಂಬುದನ್ನು ಎಂದೂ ವಿಚಾರಿಸುವದಿಲ್ಲ. ಮುಂಬಯಿಂದ ಯಾವದಾದರೊಂದು ಮಾಲು ಬೇರೊಂದೂರಿಗೆ ಕಳಿಸಲ್ಪಡುವಾಗ ನೂರಕ್ಕೆ ನಾಲ್ಕೆಂಟಾಣೆಯಂತೆ ಕಮಿಶನ್ ಏಜಂಟರು ಧರ್ಮಾದಾಯವನ್ನು ತಕ್ಕೊಳ್ಳುವರು. ಹೀಗೆ ತಕ್ಕೊಂಡ ಧರ್ಮಾದಾಯ ಹಣವು ವರ್ಷದ ಕೊನೆಗೆ ೧೦೦೦—೧೨೦೦ ರೂಪಾಯಿಗಳ ವರೆಗೆ ಕೂಡಿಬೀಳುವದು. ಎಲ್ಲಿಯೂ ಖರ್ಚಾಗದಂತೆ ಕೂಡಿಬಿದ್ದ ಈ ಹಣದ ಉಪಯೋಗವು ಮಾತ್ರ ತೀರ ಕೆಟ್ಟ ರೀತಿಯಿಂದಾಗುವದು.

ಧರ್ಮಾದಾಯದ ಹಣದಂತೆ ದೇವರ ಹೆಸರಿನಲ್ಲಿ ಖರ್ಚು ಮಾಡಿದ ಹಣವೂ, ಬ್ರಾಹ್ಮಣರಿಗೆ ದಾನವೆಂದು ಕೊಟ್ಟ ಹಣವೂ ಕೂಡ ದುರ್ವ್ಯಯವಾಗಿಯೇ ಹೋಗುತ್ತದೆ. ದೇವರಿಗೆಂದು ಕೊಟ್ಟ ಮುಡುಪಿನ ಹಣವನ್ನು ಪೂಜಾರಿಗಳೂ, ಪಂಡಾ ಜನರೂ, ತಮ್ಮ 'ಚೈನಿ'ಯನ್ನು ಪೂರ್ತಿಗೊಳಿಸಲು ಉಪಯೋಗಿಸುತ್ತಾರೆ. ದೇವರು ತಮ್ಮ ಋಣಿಯಾಗಿದ್ದಾನೆಂಬ ಹುಚ್ಚು ಅಹಂಕಾರದ ಮಬ್ಬಿನಲ್ಲಿ ಮತ್ತರಾದ ಆಚಾರ್ಯರು, ಪೂಜಾರಿಗಳು, ಭಕ್ತರು ಕೊಟ್ಟ ಹಣವನ್ನು ತಮ್ಮ ಸ್ವಂತಕ್ಕೆ ಅದರಲ್ಲಿಯೂ ಬಹು ನೀಚ ಕಾರ್ಯಕ್ಕೆ ಉಪಯೋಗಿಸುತ್ತಾರೆ. ದೇವತೆಗಳ ಗುಡಿಯಲ್ಲಿ ಪೂಜೆಗೆಂದು ವಾಸವಾಗಿರುವ ಪೂಜಾರಿಗಳು ಬಹುತರವಾಗಿ ವಿದ್ಯಾವಿಹೀನರೂ, ಸಂಸ್ಕಾರಹೀನರೂ, ಅನಾಚಾರಿಗಳೂ, ದುಃಶೀಲರೂ, ಉನ್ಮತ್ತರೂ ಇರುತ್ತಾರೆಂಬ ಮಾತನ್ನು ಅನುಭವಪೂರ್ಣ ವಾಣಿಯಿಂದ ಹೇಳಬಹುದು. ದೇವಸ್ಥಾನಗಳೂ, ಪೀಠಗಳೂ, ಮಠಗಳೂ ಉತ್ಪನ್ನದ ದೃಷ್ಟಿಯಿಂದ ಸಮೃದ್ಧವಾಗಿರುವವೆಂದೇ ಅಲ್ಲಿ ನಾನಾತರಹದ [illegible] ಗಳು ಉತ್ಪನ್ನವಾಗುತ್ತಿರುತ್ತವೆ. ದೇವರ ಉತ್ಪನ್ನವನ್ನು ಬೆಳೆಸುವದಕ್ಕೆ ದೇವಾಲಯದ ಆವಾರದಲ್ಲಿಯೂ, [illegible] ಭಾಗದಲ್ಲಿಯೂ ತರತರದ ಸಾಮಾನುಗಳ ಅಂಗಡಿಗಳನ್ನು ಇಡಿಸುವರು; ಅಲ್ಲದೆ ಅದೇ ಉದ್ದೇಶದಿಂದ ದೇವಾಲಯದ ಹೊರಬದಿಗೆ ಈಗಿನ ದಿನಕ್ಕೆ ತಕ್ಕಂತೆ ಕಟ್ಟಿಸಿದ [illegible] ಗಳನ್ನು ವೇಶ್ಯಾಜನರಿಗೆ ಬಾಡಿಗೆ ಕೊಡುವರು. [illegible] ಲಯದ ಯಜಮಾನನಿಗೂ, ಪೂಜಾರಿಗೂ ಎಷ್ಟೇ [illegible] ಸಿಗುತ್ತಿದ್ದರೂ ಕೂಡ ದೇವಾಲಯದ ಸಮೀಪದಲ್ಲಿ [illegible]

ಅಂಗಡಿಯನ್ನಿಡಲಿಕ್ಕೂ ಸರಾಯಿ ಅಂಗಡಿಯ ಮಕ್ತೇದಾರರಿಂದ ಕೆಲವು ಹಣಪಡೆದು ಅಪ್ಪಣೆ ಕೊಡುವರು. ಚಹದ ಅಂಗಡಿಗಳ ವಿಷಯವನ್ನಂತೂ ಹೇಳುವ ಅವಶ್ಯಕತೆ ಇಲ್ಲ.

ಕೆಲವು ಸಮಾಜಗಳಲ್ಲಿ ಧರ್ಮಸಂಸ್ಥೆಯ ಪಾಲನ—ಪೋಷಣವನ್ನು ರಾಜನೇ ಮಾಡುತ್ತಿರುತ್ತಾನೆ. ರಾಜರು ಅನೇಕ ವಿಧದಿಂದ ದೊರಕಿಸಿದ ಹಣದ ಕೆಲವು ಭಾಗವನ್ನು ದಾನ ಕೊಡುವದಕ್ಕಾಗಿ ಖರ್ಚು ಮಾಡುತ್ತಾರೆ. ಸುಶಿಕ್ಷಿತ ಸಮಾಜವನ್ನು ಸಿದ್ಧಪಡಿಸಲೂ, ಆಧ್ಯಾತ್ಮ ಮಾರ್ಗವನ್ನು ಶೋಧಿಸಲೂ, ಅಧ್ಯಯನ-ಅಧ್ಯಾಪನ ಕಾರ್ಯಗಳನ್ನು ಮುಂದುವರಿಸಲೂ, ವಿರಕ್ತ ಮತ್ತು ತ್ಯಾಗಿಗಳಾಗಿದ್ದುಕೊಂಡು ಸಮಾಜಕ್ಕೆ ಉಪಯೋಗ ಬೀಳುವಂಥ ಜನರ ಯೋಗ್ಯ ಪರಾಮರ್ಶ ಮಾಡುವದೂ ರಾಜರಿಗೆ ಯೋಗ್ಯವಾದದ್ದೇ! ಆಗಿನ ಕಾಲಕ್ಕೆ ಪ್ರತಿಯೊಬ್ಬರೂ ತ್ಯಾಗಬುದ್ಧಿಯಿಂದ ಕಾರ್ಯಮಾಡುತ್ತಿದ್ದರು; ಅಂತೆಯೇ ರಾಜರು ವೆಚ್ಚಮಾಡುತ್ತಿದ್ದ ಹಣವು ಯೋಗ್ಯ ರೀತಿಯಿಂದ ಉಪಯೋಗವಾಗುತ್ತಿತ್ತು. ಆದರೆ ಬರಬರುತ್ತ ಮಠ-ಮಂದಿರಗಳು, ಆಶ್ರಮ, ಯತಿ, ಗೋಸಾವಿ, ಪೂಜಾರಿ, ಮುಲ್ಲಾ, ಮೌಲವಿ, ಪಾದ್ರಿ, ಬ್ರಾಹ್ಮಣ, ಪುರೋಹಿತ, ಧರ್ಮಗುರು ಮುಂತಾದವರಿಗೆ ಆಸ್ತಿಯಾಗಿಯೂ, ಜಹಗೀರಿಯಾಗಿಯೂ ಸಿಕ್ಕ ಮೇಲೆ ಜನರಿಗೆ ಈ ವರ್ಗದ ಕಡೆಗೆ ಒಲವು ಹೆಚ್ಚಾಗಹತ್ತಿತು. ಶಾರ್ಲವಿನ್ನನಂಥ ಸಮ್ರಾಟನೂ ಕೂಡ ತನ್ನ ೨/೩ ಭೂಮಿಯನ್ನು ಕ್ರಿಸ್ತೀ ಧರ್ಮಮಠಕ್ಕೆ ಅರ್ಪಣಮಾಡಿದನು. ಅರ್ವಾಚೀನ ಕ್ರಾಂತಿಯುಗದ ಪೂರ್ವದಲ್ಲಿ ಯುರೋಪದ ಪ್ರತಿಯೊಂದು ದೇಶದಲ್ಲಿಯೂ ಸಮಾನ ಅರ್ಧಭೂಮಿ ಧರ್ಮಮಠಗಳ ಅಂಕಿತದಲ್ಲಿಯೇ ಇದ್ದವು. ರಾಜಪುತಾನಾದಲ್ಲಿ ಸುಮಾರು ಪಂಚಮಾಂಶ ಜಮೀನು ಇಂದಿಗೂ ದೇವಸ್ಥಾನದ ಅಂಕಿತದಲ್ಲಿಯೇ ಇವೆ.

ಅದೃಷ್ಟ ಪಾರಲೌಕಿಕ ದೃಷ್ಟಿಯಿಂದ ಈ ದಾನದ ಉಪಯೋಗವೇನೆಂಬುದನ್ನು ಹೇಳುವದು ಕಠಿಣ. ಐಹಿಕ ಅಭ್ಯುದಯ ದೃಷ್ಟಿಯಿಂದ ಮಾತ್ರ ಮಠದ ಮಹಂತ, ಪೂಜಾರಿ, ಗೋಸಾವಿ, ಶ್ರಾವಕ, ಚಾರಣ, ಮುಲ್ಲಾ, ಮೌಲವಿ ಮತ್ತು ಪಾದ್ರಿ ಇವರ ಉಪಯೋಗ ಅವರ ಜಹಗೀರಿಯ ದೆಶೆಯಿಂದ ಉಪಯೋಗವಿದೆ. ಇಂಥ ಸ್ವಾರ್ಥಸಾಧಕರಿಂದ ಸಮಾಜಕ್ಕೆ ಒಂದು ಹುಲ್ಲುಕಡ್ಡಿಯಷ್ಟು ಸಹ ಉಪಯೋಗವಾಗುವದಿಲ್ಲ.

ಹಿಂದುಸ್ಥಾನದಲ್ಲಿ ಗಿರಿ, ಪುರಿ, ಠಾಕೋರ, ದ್ವಾರಕಾ, ನಾಥದ್ವಾರ, ವೃಂದಾವನ, ಮಥುರಾ ಎಂಬ ಅನೇಕ ಪ್ರಸಿದ್ಧವಾದ ಯಾತ್ರಾ ಸ್ಥಳಗಳಿವೆ. ಅಲ್ಲಿಯ ದೇವಾಲಯಗಳಲ್ಲಿ ಸಂಪತ್ತಿನ ಪ್ರವಾಹವು ಇನ್ನೂ ನಡೆದೇ ಇದೆ. ಅಲ್ಲಿಯ ದ್ರವ್ಯದ ಉಪಯೋಗವು ಯಾವ ರೀತಿಯಿಂದಾಗುತ್ತದೆಂಬುದರ ಬಗ್ಗೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ.

ರಾಜಪುತಾನಾದಲ್ಲಿ 'ನಾಥದ್ವಾರ'ವೆಂಬ ಸುಪ್ರಸಿದ್ಧ ದೇವಸ್ಥಾನವಿದೆ. ಔರಂಗಜೇಬನು ಹಿಂದೀಯರ ದೇವಸ್ಥಾನಗಳನ್ನು ಒಂದೇ ಸವನೆ ನಾಶಮಾಡಲು ಪ್ರಾರಂಭಿಸಿದಾಗ ಮಥುರೆಯ ಮೂರ್ತಿಯನ್ನು ರಾಣಾರಾಜಸಿಂಹನು ಭಯಂಕರ ಪರಾಕ್ರಮದಿಂದ ತಂದು ನಾಥದ್ವಾರದಲ್ಲಿ ಪ್ರತಿಷ್ಠಾಪನಮಾಡಿದನು. ಈ ದೇವಸ್ಥಾನಕ್ಕೆ ಅನೇಕ ಹಳ್ಳಿಗಳೂ, ಪಟ್ಟಣಗಳೂ, 'ಇನಾಮು'ಗಳಾಗಿ ಕೊಡಲ್ಪಟ್ಟಿವೆ. ಅವುಗಳ ವಸೂಲಿಯನ್ನು ಮಹಂತನೇ ಮಾಡುತ್ತಾನೆ. ಈ ಜಹಗಿರಿಯಲ್ಲಿ ಯಾವ ತರಹದ ಕರವೂ ಇಲ್ಲ. ಬರಹೋಗುವ ಮಾಲಿಗೆ ಸುಂಕವಿಲ್ಲ. ರಾಜನ ಕರವಿಲ್ಲ. ಇಲ್ಲಿ ಯಾರ ಅಧಿಕಾರವೂ ನಡೆಯುವ ಹಾಗಿಲ್ಲ. ಅಂದರೆ ಮಹಂತನೇ ಇಲ್ಲಿಯ ಸರ್ವಾಧಿಕಾರಿ! ನಾಥದ್ವಾರದ ಮಹಂತನ ಕೋಶಾಗಾರವು ದ್ರವ್ಯದಿಂದ ತುಂಬಿ ತುಳುಕುತ್ತದೆ! ಒಂದು ಕಾಲಕ್ಕೆ ಇದೇ ಮಹಂತನೇ ವಿರಕ್ತನೂ, ತ್ಯಾಗಿಯೂ ಆಗಿದ್ದನು; ಅತ್ಯಂತ ಶೂರನಾಗಿದ್ದನು. ಸ್ವತಂತ್ರ ಜೀವಿಯಾಗಿ ನಾಥದ್ವಾರ ದೇವಾಲಯವನ್ನು ರಕ್ಷಿಸುವದಕ್ಕೆ ಸೈನ್ಯ ಕೂಡಿಸಿ ಯುದ್ಧವನ್ನೂ ಮಾಡಿದ್ದಾನೆ; ಆದರೆ ಇವತ್ತು ಅವನಲ್ಲಿ ಯುಯುತ್ಸುವೃತ್ತಿಯೂ ಇಲ್ಲ! ತ್ಯಾಗವೃತ್ತಿಯೂ ಇಲ್ಲ!!

ಹಿಂದುಸ್ಥಾನದ ಮುಖ್ಯ ಅಧಿಕಾರಿ ವ್ಹಾಯಿಸರಾಯನು ಹೇಗೋ ಹಾಗೆಯೇ ಈ ಮಹಂತನೇ ದೇವಸ್ಥಾನದ ಉತ್ಪನ್ನದ ಮುಖ್ಯಾಧಿಕಾರಿ. ಬಹುತರವಾಗಿ ಈ ದೇವಸ್ಥಾನದ ಎಲ್ಲ ಹಣವೂ ದುರ್ವ್ಯಯವಾಗಿಯೇ ಹೋಗುತ್ತದೆ. ವ್ಯಸನಕ್ಕೂ, ಮಾಡಬಾರದ ಪಾಪಮಯ ಕಾರ್ಯಕ್ಕೂ ಈ ದೇವರ ಹಣವು ಖರ್ಚಾಗಿ ಹೋಗುತ್ತಿದೆ. ಅನುದಿನವೂ ಮಿಷ್ಟಾನ್ನಭೋಜನ—ಮಲಗಲು ಮಚ್ಛರದಾನಿಯಿಂದ ಸಹಿತವಾದ ಅತ್ಯುತ್ಕೃಷ್ಟ ಪಲ್ಲಂಗ, ಕೂಡಲು ಸಣ್ಣ ಗಾದಿ-ಗಿರ್ದಿಗಳು, ಲೋಡುಗಳು, ದೇಹಕ್ಕೆ ಕೇಶರ ಕಸ್ತೂರಿಗಳಿಂದ ಮಿಶ್ರವಾದ ಸುಗಂಧ

ಲೇಪನ, ಪ್ರವಾಸಮಾಡುವಾಗ ಪ್ರಥಮ ವರ್ಗದ ರೇಲ್ವೆ ಡಬ್ಬಿ, ಸೇವೆಗೆ ಸುಸ್ವರೂಪಿಗಳಾದ ತರುಣ ಸ್ತ್ರೀಯರು, ಕೇವಲ ಸ್ತುತಿಪಾಠಕರ ಗೆಳೆತನ, ಮೂರ್ಖರೂ-ಲೋಭಿಗಳೂ-ಆಲಸಿಗಳೂ ಆದ ಜನರೊಡನೆ ಹಗಲು ಹನ್ನೆರಡು ತಾಸು ಹರಟೆ, ಹೀಗೆ ಆಯುಷ್ಯವನ್ನು ಕಳೆಯುತ್ತಿರುವ, ಹೆಚ್ಚೇನು ಭೂಲೋಕದ ದೇವತೆಗಳಾಗಿ ಪರಿಣಮಿಸಿರುವ ಈ ಮಹಂತರಿಂದ ಸಮಾಜೋದ್ಧಾರದ ಯಾವ ಕಾರ್ಯ ಮಾಡಲಾದೀತು ? ಅಂತೆಯೇ ರಾಷ್ಟ್ರಕ್ಕೆ ಆಪತ್ತು ಬಂದಿತು, ದುಷ್ಕಾಲ-ದುರ್ದಶೆಯು ಎಲ್ಲೆಲ್ಲಿಯೂ ಹೆಚ್ಚಾಯಿತು, ಹೊಟ್ಟೆಗೆ ತುತ್ತು ಅನ್ನ ಸಿಗದೆ ಎಷ್ಟೋ ಜನರು ಪ್ರಾಣ ಬಿಡಹತ್ತಿದರು. ಆದರೆ ಇತ್ತ ಕಡೆಗೆ ಈ ಸುಖಲೋಲುಪರಾದ ಮಹಂತರು ಲಕ್ಷ ಕೊಟ್ಟಿರುವರೇ ? ಕೊಡುತ್ತಿರುವರೇ ? 'ಈಶ್ವರೇಚ್ಛೆಯ ವಿನಃ ಈ ಜಗತ್ತಿನಲ್ಲಿ ಯಾವ ಕಾರ್ಯವೂ ಜರುಗುವದಿಲ್ಲ !' ಎನ್ನುವವರು ತಮ್ಮ 'ಚೈನಿ'ಗೋಸುಗ ಸ್ವಲ್ಪನ್ನೂ ಕಡಿಮೆ ಮಾಡುವದಿಲ್ಲ. ಹಿಂದಕ್ಕೆ ಯಶವಂತರಾವ ಹೋಳಕರರು ಆಂಗ್ಲರೊಡನೆ ಹೋರಾಡುವಾಗ ಈ ಮಹಂತರ ಕಡೆಯಿಂದ ಎರಡು ಸಾರೆ ಮೂರು ಮೂರು ಲಕ್ಷ ರೂಪಾಯಿಗಳನ್ನು ಒತ್ತಾಯದಿಂದ ಸೆಳೆದರು. ಹೀಗೆಯೇ ಒತ್ತಾಯದಿಂದ ಈ ಮಹಂತರಿಂದ ತೆರಿಗೆ ಸೆಳೆದರೆ ಮಾತ್ರ ಸ್ವಲ್ಪ ಮಟ್ಟಿಗಾದರೂ ಆ ದ್ರವ್ಯದ ಸದುಪಯೋಗವಾಗುವದು.

ಎರಡನೇ ಉದಾಹರಣವೆಂದರೆ ಗುಜರಾಥದಲ್ಲಿಯ ಡಾಕೋರದ ದೇವರದು ! ಈ ದೇವರಿಗೆ ಯಾತ್ರಿಕರಿಂದ ಕರರೂಪವಾಗಿ ಬಂದ ಹಣವು ಲಕ್ಷಾಂತರ ರೂಪಾಯಿಯಾಗಿರುತ್ತದೆ. ಗುಜರಾಥ ಪ್ರಾಂತವು ಧನಸಂಪನ್ನವಾಗಿರುವದರಿಂದ ದೇವರಿಗಾದರೂ ಭೋಗನಿಮಿತ್ತವಾಗಿ ಬೇಕಾದಷ್ಟು ಹಣ ಬಂದು ಬೀಳುತ್ತದೆ. ಡಾಕೋರದ ದೇವರಿಗೆ ಭೋಗವಿಷಯದ ವಿನಃ ಮತ್ತೊಂದರ ಹವ್ಯಾಸವಿಲ್ಲ. ಯಾವಾಗಲೂ ಪಂಚಾಮೃತ ಅಭಿಷೇಕ, ಮಹಾಪೂಜಾ ಮತ್ತು ಮಹಾನೈವೇದ್ಯ ಇವುಗಳಲ್ಲಿಯೇ ಈ ದೇವನ ಆಸಕ್ತಿ ! ಯಾರಾದರೂ ಜಿಜ್ಞಾಸುಗಳು ಅಲ್ಲಿ ಭಕ್ತಿಯಿಂದ ೩—೪ ತಿಂಗಳು ಇದ್ದರೆ ಕೀರ್ತನ, ಪುರಾಣ, ಪುಣ್ಯಕಥೆ, ವ್ಯಾಖ್ಯಾನ, ಪ್ರವಚನಗಳ ನಿಮಿತ್ತ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಲಿಚ್ಛಿಸಿದರೆ ಅದು ಆಗುವ ಹಾಗೆಯೇ ಇಲ್ಲ; ಮತ್ತು ಅದು ಸಾಗುವ ಹಾಗೆಯೂ ಇಲ್ಲ. ದೇವರ ಕೀರ್ತನ ಭಜನಗಳನ್ನು ಮಾಡುವವರಾದರೂ ಕೂಡ ಅಲ್ಲಿಯ ವೈಶಿಷ್ಟ್ಯವನ್ನು ಅನುಸರಿಸಲೇಬೇಕು. ಅದೇನೆಂದರೆ: ತರತರದ ಪಕ್ವಾನ್ನಗಳ ವರ್ಣ... ಯನ್ನು ಅನುಭವಿಕ ವಾಣಿಯಿಂದ ಹೇಳಬೇಕು. ... ಯನ್ನು ಹಾಗೆ ಮಾಡಬೇಕು. ಶ್ರೀಮದ್ ಬ್ಯಾಳೆ ಹೋ... ಅನ್ನವು ಬಲು ರುಚಿಯಾಗುತ್ತದೆ. ಕರೆದ ಶ್ಯಾ... ಖೀರು ಬಹಳ ಸವಿ ! ಈ ತರಹದ ಮಾತ್ರ... ವಿಸ್ತರಿಸಿ ಹೇಳಬೇಕು. ಇಂಥ ಕೀರ್ತನ ಪುರಾಣ ಹೇಳ... ವವರಿಗೇ ಅಲ್ಲಿ ಎಡೆಯುಂಟು. ಕೇವಲ ದೇವರ ನಾಮ... ಸಂಕೀರ್ತನದಿಂದ ಅಲ್ಲಿಯ ದೇವರು ಒಲಿಯುವ... ಖಾದ್ಯಪದಾರ್ಥಗಳ ಶೋಧಕರಿಗೆ ಮಾತ್ರ ಅಲ್ಲಿಯ ದೇವ... ಬಹುಬೇಗ ಒಲಿಯುತ್ತಾನೆ; ಅವರೆದುರು ನಲಿ... ತ್ತಾನೆ. ಅಂತೆಯೇ ಆ ದೇವಾಲಯದಲ್ಲಿ ತಿನಿಸಿನ ಕಾರ್ಯಕ್ರಮಗಳೇ ನಡೆದಿರುತ್ತವೆ.

ಸೂರ್ಯೋದಯಕ್ಕೆ ಸರಿಯಾಗಿ ದೇವರು ಏಳುತ್ತಾನೆ. ಮೋರೆ ತೊಳೆಯಲು ಕೇಶರದ ನೀರು ಸಿದ್ಧವಾಗಿರುವ... ತದನಂತರ ಆವನಿಗೆ ನಾಲ್ಕು ಕೊಡ ಮಸಾಲೆ ಹಾ... ನೈವೇದ್ಯವಾಗಬೇಕು ! ಸರಿಯಾಗಿ ೯ ಗಂಟೆಗೆ ... ಎರಡು ಪರಾತ ಪುರಿ ಮತ್ತು ಎರಡು ಪಾತೇಲಿ ... ದಿಯ ನೈವೇದ್ಯ ! ಮುಂದೆ ಎರಡು ಪ್ರಹರಗಳು ಗತಿ... ಮೇಲೆ ಅನೇಕ ಪಕ್ವಾನ್ನಗಳು, ಪಲ್ಲೇ, ಕೋಸಂ... ಬುರಬುರಿ, ಒಡೆಗಳ ನೈವೇದ್ಯ ! ೩ನೇ ಪ್ರಹರಕ್ಕೆ ನಾ... ತರಹದ ಕುಂಬಳ ಆಕಾರದ ಉಂಡಿಗಳ ನೈವೇದ್ಯ... ಮುಂದೆ ೧೫ ನಿಮಿಷಕ್ಕೆ ವಿವಿಧ ಫರಾಳಗಳ ನೈವೇದ್ಯ... ಕೊನೆಗೆ ಸಾಯಂಕಾಲಕ್ಕೆ ಪುನಃ ಎರಡು ಪರಾತ ... ಮತ್ತು ಕೊಳಗ ಬಾಸುಂದಿ ಮತ್ತು ಕೊಡಗಟ್ಲೆ ಮಸಾ... ಹಾಲಿನ ನೈವೇದ್ಯ. ಇಷ್ಟೆಲ್ಲ ತಿನಿಸುಗಳನ್ನು ಕಂಟ... ಹೊಡೆದರೂ ದೇವರು ಇನ್ನೂ ತೃಪ್ತನಾಗುವದಿಲ್ಲ. ... ರಾತ್ರಿ ೧೦ ಗಂಟೆಗೆ ಸರಿಯಾಗಿ ಪಂಚಪಕ್ವಾನ್ನ... ನೈವೇದ್ಯ ಮಾಡದ ಹೊರ್ತು ದೇವರು ಮಲಗುವದೇ ... ಪಕ್ವಾನ್ನ ನೈವೇದ್ಯಾನಂತರದಲ್ಲಿ ದೇವನು ಹಂಸತೂಲಿ... ತಲ್ಪದಲ್ಲಿ ಸುಖದಿಂದ ಶಯನಮಾಡುವನು. ಇದು ... ದೇವನ ದಿನದ ಕಾರ್ಯಕ್ರಮ. ಈ ದೇವರಿಗೆ ಪ್ರತಿದಿ... ೨೦೦-೩೦೦ ರೂಪಾಯಿಗಳ ವೆಚ್ಚವಾಗುವದು. ಈ ... ತಿನಿಸುಗಳನ್ನು ಮನಬಂದ ಹಾಗೆ ಮಾರಿ ಪೂಜಾರಿಗ... ಪಂಡಾ ಜನರೂ, ಇಮ್ಮಡಿ ನಾಲ್ಮಡಿ ಹಣ ಗಳಿಸು... ಅಲ್ಲದೆ ದೇವರ ಹೆಸರಿನಲ್ಲಿ ಅತ್ತರ, ಗುಲಾಬ, ಶ್ರೀ... ಸುಗಂಧ ದ್ರವ್ಯಗಳನ್ನು ವಿಪುಲ ಹಣ ವೆಚ್ಚಮಾಡಿ ... ತ್ತಾರೆ. ಈ ಹಣವು ರಾಷ್ಟ್ರೋನ್ನತಿಗಾಗಿಯ...

ಸಮಾಜೋನ್ನತಿಗಾಗಿಯಾಗಲಿ ವ್ಯಯವಾಗುತ್ತಿದೆ ಎಂದು ಯಾವ ಸಮಂಜಸ ಮನುಷ್ಯನೂ ಅನ್ನುವದಿಲ್ಲ; ನಾನಂತೂ ಎಂದೂ ಅನ್ನಲಾರೆ.

ಆದರೆ ಸಮಾಜದಲ್ಲಿ ಇನ್ನೂ ಅಜ್ಞಾನವೂ, ಮರುಳುತನವೂ ನೆಲೆಯೂರಿವೆ. ಅದೃಷ್ಟ, ಪ್ರಾರಬ್ಧ, ಪುಣ್ಯ, ಪಾಪ, ಪರಲೋಕ ಮುಂತಾದವುಗಳ ವಿಚಿತ್ರ ಕಲ್ಪನೆಗಳವೆ. ಧರ್ಮದ ಹೆಸರಿನಿಂದ ಅದೆಷ್ಟೋ ಹಣವು ನೀರಿನ ಹಾಗೆ ವ್ಯಯವಾಗುತ್ತಿದೆ. ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿಯಲ್ಲಿ ವ್ರತಖಂಡ, ದಾನಖಂಡದ ವಿಷಯಕ್ಕೆ ಒಂದು ಭಾಗವಿದೆ. ದಾನಖಂಡದಲ್ಲಿಯೂ ಮತ್ತು ಸ್ಕಂದ, ಬ್ರಹ್ಮಾಂಡ ಪುರಾಣಗಳಲ್ಲಿಯೂ ಹೇಳಿದ ಅನೇಕ ಫಲಶ್ರುತಿಗಳು ಅತ್ಯಂತ ಹಾಸ್ಯವನ್ನುಂಟುಮಾಡುವ ಹಾಗಿವೆ. ಬಹುತರವಾಗಿ ಸಮಾಜದಲ್ಲಿಯ ೧೦೦ಕ್ಕೆ ೯೯ ಜನರು ಸಾರಾಸಾರ ವಿಚಾರ ಮಾಡದೆ ಫಲಶ್ರುತಿಯ ಸವಿಮಾತಿನಿಂದ ಮೂಢರಾಗಿ ತರತರದ ದಾನಧರ್ಮ ಮಾಡುವರು. ದಾನದ ಫಲಶ್ರುತಿಯ ವಿಷಯಕ್ಕೆ ನಿಜವಾದ ಕಲ್ಪನೆ ಬರಲೆಂದು ಇಲ್ಲಿ ಕೆಲವು ಉದಾಹರಣೆ ಕೊಡುತ್ತೇನೆ:—

ಶಿಶಿರಋತುವಿನ ಪ್ರಾರಂಭದಲ್ಲಿ ಯಾವನು ಬ್ರಾಹ್ಮಣನಿಗೆ (ಒಣ) ಕಟ್ಟಿಗೆಯ ದಾನಮಾಡುತ್ತಾನೋ ಅವನಿಗೆ ಯುದ್ಧದಲ್ಲಿ ಜಯಪ್ರಾಪ್ತವಾಗುವದು; ಮತ್ತು ಅವನು ಯಾವಾಗಲೂ ಧನಸಂಪನ್ನನಾಗುವನು ! ಎಂದು ಸಂವರ್ತಸ್ಮೃತಿ ಹೇಳುತ್ತದೆ. ಚಳಿಗಾಲದಲ್ಲಿ ಬಡ ಬ್ರಾಹ್ಮಣನಿಗೆ ತನ್ನ ಕುಟುಂಬವನ್ನು ಚಳಿಯಿಂದ ಸಂರಕ್ಷಣೆ ಮಾಡುವದು ಅಸಾಧ್ಯವಾಗಿದ್ದರೆ ಅವನ ಕುಟುಂಬ ರಕ್ಷಣೆಗೋಸುಗ ಒಣ ಕಟ್ಟಿಗೆಯ ದಾನ ಮಾಡುವದು ಸಯುಕ್ತಿಕವಾದದ್ದು; ಆದರೆ, ಹೀಗೆ ಮಾಡುವದರಿಂದ ಜಯ ಪ್ರಾಪ್ತವಾಗುವದೂ—ಯಾವಾಗಲೂ ಧನಧಾನ್ಯ ಸಂಪತ್ತು ಸಿಗುವದೂ ಮಾತ್ರ ತರ್ಕವಿರುದ್ಧವಾದ ವಿಚಾರಗಳಾಗಿವೆ.

'ಮಧ್ಯಾಹ್ನದ ಹೊತ್ತಿನಲ್ಲಿ (ವೈಶ್ವದೇವದ ಹೊತ್ತಿನಲ್ಲಿ) ನಾವು ಊಟಕ್ಕೆ ಕೂಡ್ರುವವರಿದ್ದರೂ, ಕುಳಿತಿದ್ದರೂ ಹೊರಗೆ ಯಾವನಾದರೂ ಅನ್ನಾರ್ಥಿಯಾಗಿ ಬಂದರೆ ಅವನಿಗೆ ನಾವು ಅನ್ನ ಕೊಡಬೇಕು; ಅದು ಸ್ವರ್ಗಪ್ರಾಪ್ತಿಯ ಸಾಧನವು ! ಅನ್ನಾರ್ಥಿಯು ಕಳ್ಳನಿರಲಿ, ಚಂಡಾಲನಿರಲಿ, ಶತ್ರುವಿರಲಿ, ಪಿತೃಘಾತಕನಿರಲಿ ಹೆಚ್ಚೇನು ಅವನು ಬ್ರಹ್ಮಘಾತಕನೇ ಇರಲಿ ಅವನಿಗೆ ಅನ್ನ ಕೊಡಬೇಕು' ಎಂದು ಪರಾಶರನು ಹೇಳಿದ್ದಾನೆ. ದಾನದ ದುರುಪಯೋಗವು ಯಾವಾಗ ಆಗುವದೆಂಬದನ್ನೂ ಹೇಳಿದ್ದಾನೆ. ಕಳ್ಳ, ಚಾಂಡಾಲ, ಸ್ತ್ರೀಯರನ್ನು ಓಡಿಸಿಕೊಂಡು ಹೋಗುವವರೂ, ದೇವಾಲಯವನ್ನು ನಾಶಮಾಡುವವರೂ, ಸ್ವಸಂಸ್ಕೃತಿಯನ್ನು ವಿಧ್ವಂಸಮಾಡುವ ಪೀರರೂ-ಫಕೀರರೂ; ಮುಂತಾದ ದುಷ್ಟರು ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಅನ್ನಾರ್ಥಿಯಾಗಿ ಬಂದರೆ ಈ ಭಯಂಕರ ಸರ್ಪಗಳಿಗೆ ಅನ್ನರೂಪಿ ದುಗ್ಧವನ್ನು ಕೊಟ್ಟು ಸ್ವರ್ಗಪ್ರಾಪ್ತಿ ಮಾಡಿಕೊಳ್ಳುವ ಕಲ್ಪನೆಯು ಯೋಗ್ಯವೋ ? ಅಯೋಗ್ಯವೋ ?

ವಿಷ್ಣುಧರ್ಮಸೂತ್ರಕಾರನು 'ಫಾಲ್ಗುಣ ಪೌರ್ಣಿಮೆಯ ದಿವಸ ಬ್ರಾಹ್ಮಣನಿಗೆ ಉತ್ತಮ ಶಯ್ಯಾದಾನ ಮಾಡಬೇಕು; ಅಂದರೆ ಸುಸ್ವರೂಪ ಹೆಂಡತಿ ಸಿಗುವಳು. ಚೈತ್ರ ಪೌರ್ಣಿಮೆಯ ದಿವಸ ಚಿತ್ರವಿಚಿತ್ರ ವಸ್ತ್ರದಾನ ಮಾಡಬೇಕು; ಅಂದರೆ ಸೌಭಾಗ್ಯ ಪ್ರಾಪ್ತವಾಗುತ್ತದೆ. ಜ್ಯೇಷ್ಠ ಪೌರ್ಣಿಮೆಯ ದಿವಸ ಕೊಡೆ ಮತ್ತು ಜೋಡು (ಕಾಲಮರೆ) ಬ್ರಾಹ್ಮಣನಿಗೆ ದಾನ ಕೊಡಬೇಕು; ಅಂದರೆ ಆ ಮನುಷ್ಯನು ಗವಾಧಿಪತ್ಯವನ್ನು ಹೊಂದುವನು' ಎಂದು ಹೇಳಿದ್ದಾನೆ.

ಬ್ರಾಹ್ಮಣನಿಗೆ ಶಯ್ಯಾದಾನ ಮಾಡಿದರೆ ಸುಸ್ವರೂಪಿಯಾದ ಹೆಂಡತಿ ಹೇಗೆ ದೊರೆತಾಳು ? ಸುಂದರಿಯಾದ ಹೆಂಡತಿಯು ಪ್ರಾಪ್ತಳಾಗುವಳೆಂದು ಮೂಢ ನಂಬಿಕೆಯಿಂದ ಮೇಲೆ ಹೇಳಿದಂತೆ ಯಾವನಾದರೂ ಬ್ರಾಹ್ಮಣನಿಗೆ ಶಯ್ಯಾದಾನ ಮಾಡಿಸಿ ಪತ್ನಿಗೋಸುಗ ಚಾತಕ ಪಕ್ಷಿಯಂತೆ ಬಾಯಿ ಬಿಡುತ್ತ ಕುಳಿತುಕೊಂಡರೆ ಅವನು ಪರಿಹಾಸ್ಯಕ್ಕೆ ಈಡಾಗುತ್ತಾನೆ ! ಚೈತ್ರ ಪೌರ್ಣಿಮೆಯ ದಾನದಿಂದ ಸ್ತ್ರೀಯರಿಗೆ ಸೌಭಾಗ್ಯ ಪ್ರಾಪ್ತಿಯಾಗುವದಾದರೂ ಹೇಗೆ ? ಜ್ಯೇಷ್ಠಪೌರ್ಣಿಮೆಯ ಮುಂದೆ ಬಿಸಿಲಿನ ಉಷ್ಣತೆಯು ಹೆಚ್ಚಾಗಿರುವದರಿಂದ ಒಬ್ಬ ಬಡ ಬ್ರಾಹ್ಮಣನಿಗೆ ಕೊಡೆಯನ್ನೂ ಜೋಡನ್ನೂ ದಾನ ಕೊಡುವದು ಯಥಾಯೋಗ್ಯವಾಗಿದೆ ! ಆದರೆ ಅದರಿಂದ ಗವಾಧಿಪತ್ಯವು ಎಂದೂ ಪ್ರಾಪ್ತವಾಗುವದಿಲ್ಲ; ಇಷ್ಟೇ ಅಲ್ಲ ಇಂಥ ವಿಚಾರಗಳಲ್ಲಿ ವಿಶ್ವಾಸವಿಡುವ ಮನುಷ್ಯನು ಮೂರ್ಖನೆಂದು ತಿಳಿಯಲ್ಪಡುತ್ತಾನೆ.

ಸಂವರ್ತಸ್ಮೃತಿಯಲ್ಲಿ ಇನ್ನೂ ಎರಡು ಮೂರು ಇಂಥ ಹಾಸ್ಯಾಸ್ಪದ ಫಲಶ್ರುತಿಗಳಿವೆ.

ಯಾಜ್ಞವಲ್ಕ್ಯಸ್ಮೃತಿಯ ಮೇಲೆ ಮಿತಾಕ್ಷರಾ ಮತ್ತು ಮಿತಾಕ್ಷರದ ಮೇಲೆ ಬಾಳಭಟ್ಟಿ ಎಂಬ ಟೀಕೆ ಇದೆ. ಆ ಬಾಳಭಟ್ಟಿಯಲ್ಲಿಯ ಬ್ರಹ್ಮಾಂಡ ಪುರಾಣದೊಳಗಿನ ದಾನದ ಫಲಶ್ರುತಿಯ ಶ್ಲೋಕಗಳನ್ನು ಓದಿದರೆ ಅತ್ಯಂತ ದುಃಖ

ವಾಗುತ್ತದೆ. ಆದರಲ್ಲಿ ದಾನದ ಕಡೆಗೆ ಎಲ್ಲರೂ ಗಮನ ಕೊಡುವಂತೆ ಶಬ್ದಕ್ಕೆ ಶಬ್ದ ಜೋಡಿಸಿ ಯಾರಿಂದಲೋ ಶ್ಲೋಕ ಬರೆಯಿಸಿದ ಹಾಗೆ ಕಾಣುತ್ತದೆ. ಜರಠಾವಸ್ಥೆಯು ಪ್ರಾಪ್ತವಾಗಬಾರದೆಂದು ಜೀರಿಗೆಯ ದಾನವನ್ನು ಮಾಡಬೇಕೆಂತಲೂ, ಹೂವು ನೋಡುವವರಿಂದ—ಅದರ ವಾಸನೆ ತಕ್ಕೊಳ್ಳುವದರಿಂದ ನಮಗೆ ಆನಂದವಾಗುತ್ತದೆಂದು—ಆನಂದ ಪ್ರಾಪ್ತಿಯ ಸಲುವಾಗಿ ಪುಷ್ಪದಾನ ಮಾಡಬೇಕೆಂತಲೂ, ಎಲ್ಲ ರಸಗಳಲ್ಲಿ ಇಕ್ಷು ರಸವು ಶ್ರೇಷ್ಠವಾಗಿರುವದರಿಂದ ಬೆಲ್ಲದ ಹಲಿಗೆಯನ್ನು ದಾನಮಾಡಬೇಕೆಂತಲೂ ಅಲ್ಲದೆ ಆ ಬೆಲ್ಲಕ್ಕೆ 'ಹೇ ಬೆಲ್ಲವೇ, ನನಗೆ ಲಕ್ಷ್ಮೀ ಪ್ರಾಪ್ತಿಯನ್ನು ಮಾಡಿಕೊಡು' ಎಂದು ಬೇಡಿಕೊಳ್ಳಬೇಕೆಂತಲೂ ಹೇಳಿದೆ !! ಬೆಲ್ಲವನ್ನು ದಾನ ಮಾಡುವದರಿಂದ ಲಕ್ಷ್ಮೀ ಪ್ರಾಪ್ತವಾಗುವ ಹಾಗಿದ್ದರೆ ಹಿಂದುಸ್ತಾನದಲ್ಲಿ ಬೆಳೆಯುವ ಎಲ್ಲ ಬೆಲ್ಲವನ್ನು ದಾನ ಮಾಡಿ ದೇಶವನ್ನು ಧನಸಂಪನ್ನವನ್ನಾಗಿ ಏಕೆ ಮಾಡಬಾರದು ? ವಿಷ್ಣುವಿನ ದೇಹದಿಂದ ಹುಟ್ಟಿದ ಉದ್ದು ದಾನ ಮಾಡಿದರೆ ಶಾಂತಿ ಪ್ರಾಪ್ತವಾಗುವದು. ಗೋವರ್ಧನೋದ್ಧರಣದ ಕಾಲಕ್ಕೆ ಪರಮೇಶ್ವರನು ಕಡ್ಲೆಯನ್ನು ರಕ್ಷಿಸಿದನೆಂದು ಕಡ್ಲೆಯ ದಾನ ಮಾಡಬೇಕು. ಅವರೆಯ ದಾನ ಮಾಡುವದರಿಂದ ಮನುಷ್ಯನು ನಿಷ್ಪಾಪನಾಗುತ್ತಾನೆ. ವಸ್ತ್ರದಾನ ಮಾಡಿದರೆ ತನ್ನ ಲಜ್ಜೆಯ ರಕ್ಷಣವಾಗುವದು. ಕಡ್ಲೆಬೇಳೆಯ ದಾನ ಮಾಡಿದರೆ ಕಾಂತಿ ಹೆಚ್ಚಾಗುತ್ತದೆ. ತಾತ್ಪರ್ಯ—ಯಾರಿಂದಲೋ ಏನೋ ಸಂಸ್ಕೃತ ಶ್ಲೋಕಗಳನ್ನು ಬರೆಯಿಸಿ ಈ ಎಲ್ಲ ದಾನಗಳ ಫಲಶ್ರುತಿಗಳನ್ನು ಬೇಕಾದ ಹಾಗೆ ಹೇಳಿದ್ದಾರೆ.

ಗೋದಾನದ ಮಹತ್ವವನ್ನು ನೋಡಿರಿ. ಆಕಳ ಹೊಟ್ಟೆಯಲ್ಲಿ ಎಷ್ಟೋ ದೇವತೆಗಳಿದ್ದಾರೆಂದು ಹೇಳಿದೆ. ತಲೆಯಲ್ಲಿ ಮಹದೇವರು, ಕಪಾಳದಲ್ಲಿ ಗೌರಿ, ಮೂಗಿನಲ್ಲಿ ಕಾರ್ತಿಕೇಯ, ಕಿವಿಯಲ್ಲಿ ಅಶ್ವಿನೀಕುಮಾರನು, ಕಣ್ಣುಗಳಲ್ಲಿ ಸೂರ್ಯ-ಚಂದ್ರರು, ಹಲ್ಲಿನಲ್ಲಿ ವಾಯು, ನಾಲಿಗೆಯಲ್ಲಿ ವರುಣ, ತುಟಿಯಲ್ಲಿ ಸಂಧ್ಯಾ, ಬಗಲಿನಲ್ಲಿ ರಾಕ್ಷಸರು, ಖುರದಲ್ಲಿ ಧರ್ಮ, ಬಾಲದಲ್ಲಿ ಸ್ವರ್ಗವಾಸಿಗಳಾದ ಪಿತೃಗಳು, ಕೂದಲದಲ್ಲಿ ಸೋಮ, ಗೋಮಯದಲ್ಲಿ ಗಂಗಾ, ಹೀಗೆ ಸಾವಿರಾರು ದೇವತೆಗಳು ಆ ಆಕಳದಲ್ಲಿ ವ್ಯಾಪ್ತರಾಗಿದ್ದಾರೆಂದು ತಿಳಿದುಕೊಂಡು ಪೂಜಾ ಮಾಡಬೇಕು. ಆಕಳ ಪುಚ್ಛದ ಮೇಲೆ ನೀರು ಹಾಕಿ ಪ್ರೋಕ್ಷಾಲನ ಮಾಡಿಕೊಂಡರೆ ಸ್ವರ್ಗೀಯ ಪಿತೃಗಳು ತೃಪ್ತರಾಗುವರೆಂದು ಹೇಳಿದೆ. ತಾಯಿಯ ಕಡೆಯ, ತಂದೆಯ ಕಡೆಯ, ಸರ್ಪದಂಶನದಿಂದ ಮರಣ ಹೊಂದಿದ, ಶಸ್ತ್ರಘಾತದಿಂದ ಸತ್ತ, ಸಂಸ್ಕಾರಶೂನ್ಯರಾದ, ರೌರವ ನರಕದಲ್ಲಿ ತೊಳಲುತ್ತಿರುವ ಪಿತೃವಂಶದಲ್ಲಿಯ ಅಜ್ಜ, ಮಾವ, ಅತ್ತೆ, ಗೆಳೆಯ, ಕಕ್ಕ, ಅತ್ತಿಗೆ, ನಾದಿನಿ ಮುಂತಾದವರೆಲ್ಲರೂ ಗೋಪುಚ್ಛೋದಕದಿಂದ ತೃಪ್ತರಾಗುವರೆಂದು ತಿಳಿದು ತರ್ಪಣ ಮಾಡಬೇಕು, ಮತ್ತು ಗೋದಾನ ಮಾಡಬೇಕೆಂದು ಹೇಳಿದೆ. ವಿಚಾರ ಮಾಡಿದರೆ ಮನುಷ್ಯನಿಗಿಂತ ಆಕಳು ಕಡಿಮೆ ಮಹತ್ವವುಳ್ಳ ಪ್ರಾಣಿ. ಅದು ದೇವತೆಯೂ ಅಲ್ಲ, ಮಾತೆಯೂ ಅಲ್ಲ! ಅದೊಂದು ಮನುಷ್ಯನಿಗೆ ಉಪಯುಕ್ತವಾದ ಪಶುವು ಎಂಬ ಮಾತನ್ನು ಲಕ್ಷದಲ್ಲಿಟ್ಟರೆ ಈ ಸಂಬಂಧದ ಶ್ಲೋಕಗಳ ವಿಷಯಕ್ಕೆ ಹೆಚ್ಚಿಗೆ ವಿವೇಚನ ಮಾಡುವ ಅವಶ್ಯಕತೆ ಇಲ್ಲ. ತಾತ್ಪರ್ಯ: ಪರಲೋಕ, ಅದೃಷ್ಟ, ಪ್ರಾರಬ್ಧ, ಪಾಪ, ಪುಣ್ಯಗಳ ಆಕಾಂಕ್ಷೆಯಿಂದ ದಾನ ಮಾಡದಿರುವುದೇ ಉತ್ತಮ !

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಶ್ರಾಂತಸಂವಾಹನಕ್ಕೆ, ರೋಗ ಪರಿಚರ್ಯೆಗೆ, ದೀನ, ಅಂಧ ಮುಂತಾದವರ ಪ್ರೀತ್ಯರ್ಥವಾಗಿಯೂ ಮತ್ತು ಅನಾಥ ಪ್ರೇತಸಂಸ್ಕಾರಾರ್ಥವಾಗಿಯೂ ದಾನಮಾಡಬೇಕೆಂದು ಹೇಳಿದೆ. ಶಿಕ್ಷಣ ಸಂಸ್ಥೆಗೆ ದಾನಮಾಡುವದು ಶ್ರೇಷ್ಠತರಗತಿಯ ದಾನ. ಈಗಿನ ಕಾಲದಲ್ಲಿಯೂ ಈ ದಾನವು ಸತ್ಪಾತ್ರದಾನ. ಸಮಾಜದ ಆರೋಗ್ಯಸುಧಾರಣೆಗೋಸುಗ ಮತ್ತು ಸಾಮಾನ್ಯ ಆರೋಗ್ಯ ಶಿಕ್ಷಣವನ್ನು ಕೊಡುವದಕ್ಕೆ ವಿವಿಧ ಸಂಸ್ಥೆಗಳ ಅವಶ್ಯಕತೆ ಇದೆ. ಕ್ಷಯರೋಗ ನಿವಾರಣೆಗಾಗಿಯೂ, ರೋಗಿಗಳ ಶುಶ್ರೂಷೆ ಮಾಡುವದಕ್ಕಾಗಿಯೂ ಔಷಧ ರುಗ್ಣಾಲಯವನ್ನು ಸ್ಥಾಪಿಸುವದಕ್ಕಾಗಿಯೂ ... ಲಯಗಳನ್ನು ತೆರೆಯುವದು ಎಷ್ಟು ಅವಶ್ಯವಿದೆ ... ವದನ್ನು ಹೇಳುವ ಅಗತ್ಯವಿಲ್ಲ. ಈ ಕಾರ್ಯಕ್ಕೋಸ್ಕರವಾಗಿ ಮಿಶನರಿ ಜನರು ಲಕ್ಷಗಟ್ಲೆ ಹಣವನ್ನು ... ಮಾಡಿ ರುಗ್ಣಪರಿಚರ್ಯದ್ವಾರದಿಂದ ಎಷ್ಟು ಲೋಕ... ಯನ್ನೂ, ಧರ್ಮಪ್ರಸಾರವನ್ನೂ ಮಾಡುತ್ತಾರೆಂಬುದನ್ನು ಪುನಃ ಹೇಳಬೇಕೆ? ಅನಾಥಾಲಯ, ಅನಾಥ ಬಾಲಿಕಾಶ್ರಮ, ಅನಾಥ ಮಹಿಲಾಶ್ರಮ, ಅನಾಥ ವಿದ್ಯಾರ್ಥಿಗೃಹ ... ಸಾವಿರಾರು ಸಂಸ್ಥೆಗಳನ್ನು ತೆರೆಯಬೇಕು. ಸಮಾಜದಲ್ಲಿ ಲಕ್ಷಾಂತರ ಅನಾಥರು ತೊಳಲುತ್ತಿದ್ದಾರೆ, ಹೊಟ್ಟೆಗಾಗಿ ಹೋರಾಡುತ್ತಿದ್ದಾರೆ. ಈ ನಮ್ಮ ಸಮಾಜದಲ್ಲಿ ... ಅನಾಥ, ಕುರುಡು, ಕುಂಟ, ಕೈಸಾಗದ ಜನರಿಗೆ ... ಸಿಗದ್ದರಿಂದ ನಿರ್ವಾಹವಿಲ್ಲದೆ ಪರಧರ್ಮ ಸ್ವೀಕ...

ಮಾಡುವ ಹೊತ್ತು ಬರುತ್ತದೆ. ಎಷ್ಟೋ ಮಂದಿ ಅನಾಥ ಸ್ತ್ರೀಯರು ದುಷ್ಟರ ಪಾಲಾಗುತ್ತಾರೆ. ಅಂತೆಯೇ ಕೇವಲ ದೀನರ ಉದ್ಧಾರಕ್ಕಾಗಿ ಇಂಥ ಸಂಸ್ಥೆಗಳನ್ನು ಸ್ಥಾಪಿಸಬೇಕು. ಎಲ್ಲ ಕಡೆಗೂ ಅನಾಥ ಪ್ರೇತಸಂಸ್ಕಾರದ ವಿಷಯವು ತೀರ ಶೋಚನೀಯವಾಗಿದೆ. ನಮ್ಮ ಸಮಾಜದಲ್ಲಿ ಅನಾಥನೊಬ್ಬನು ಸತ್ತರೆ ಅವನ ಅಂತ್ಯಸಂಸ್ಕಾರವಾಗುವದೇ ಕಠಿಣ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ಮಾತು. ಅಂತೆಯೆ ಅನಾಥರು ಪರಧರ್ಮಸ್ವೀಕಾರ ಮಾಡುತ್ತಾರೆಂಬ ಮಾತು ಮಿರಜಿಯಲ್ಲಿ ನಿದರ್ಶನಕ್ಕೆ ಬಂದಿದೆ. ಇಂಥ ಅಸಹಾಯ್ಯ ಆಪತ್ತಿನಲ್ಲಿ ಇದ್ದ ಮನುಷ್ಯನಿಗೆ ದುಃಖವು ಅತಿ ವೇದನೆ ಕೊಡಹತ್ತಿದ ಮೇಲೆ ಪರಧರ್ಮಸ್ವೀಕಾರದ ಹೊರತಃ ಅನ್ಯ ಕಾರ್ಯ ಯಾವುದಿದೆ? ಅಂತೆಯೇ ಅತ್ಯಾವಶ್ಯವಾಗಿ 'ಅನಾಥ ಪ್ರೇತಸಂಸ್ಕಾರ'ದ ಸಂಸ್ಥೆಯೊಂದನ್ನು ತೆಗೆದು ದೇವ-ಧರ್ಮಗಳ ಹೆಸರಿನಲ್ಲಿ ಆಗುತ್ತಿರುವ ದಾನವನ್ನು ಈ ಸಂಸ್ಥೆಯ ಉದ್ಧಾರಕ್ಕಾಗಿ ಮಾಡಬೇಕು!

ಶಿಕ್ಷಣಸಂಸ್ಥೆ, ವ್ಯಾಯಾಮಸಂಸ್ಥೆ, ಆರೋಗ್ಯಸಂಸ್ಥೆ' ಶರೀರಬಲ ಸಂವರ್ಧಕಸಂಸ್ಥೆ, ಸಿಸ್ತು ಮತ್ತು ಸಂಘಟನೆಯನ್ನು ಬೆಳಿಸುವ ಸಂಸ್ಥೆ, ಅನಾಥಾಲಯ, ಅರ್ಭಕಾಲಯ, ಅನಾಥ ಮಹಿಲಾಶ್ರಮ, ಮುಂತಾದ ಈಗಿನ ಸಂಸ್ಥೆಗಳೆಲ್ಲವೂ ಯೋಗ್ಯವಾಗಿರುವವಲ್ಲದೆ ಆದರಣೀಯವೂ ಆಗಿವೆ. ಆದರೆ ಬರಗಾಲದಲ್ಲಿ ಹೊಟ್ಟೆಗಿಲ್ಲದೆ ಸಾಯುವ ನಿರುದ್ಯೋಗಿಗಳಿಗೆ ಸಹಾಯ ಮಾಡುವ ಸಂಸ್ಥೆಯನ್ನು ಸ್ಥಾಪಿಸುವದು ಅತ್ಯಾವಶ್ಯವಾಗಿದೆ. ದಾನವು ಅದೃಷ್ಟ, ಪ್ರಾರಬ್ಧ, ಪಾಪ, ಪುಣ್ಯಗಳ ಭಾವನೆಯಿಂದ ಗಿಡ, ಕಲ್ಲು, ಮಣ್ಣು, ಪಶು, ಪಕ್ಷಿ, ಕ್ರಿಮಿ, ಕೀಟಕ ದ್ವಿಪಾದ—ಚತುಷ್ಪಾದ ಮುಂತಾದವುಗಳ ಪ್ರೀತ್ಯರ್ಥವಾಗಿ ಮಾಡುವ ಕಾರ್ಯವಲ್ಲ! ಈ ಜಗತ್ತಿನಲ್ಲಿ ದೇವರಿದ್ದುದೇ ನಿಜವಾದರೆ ಅವನು ಮನುಷ್ಯನಲ್ಲಿಯೇ ಇದ್ದಾನೆ; ಮತ್ತು ಮನುಷ್ಯನು ಜಗತ್ತಿನ ಸರ್ವ ಪ್ರಾಣಿಗಳಲ್ಲಿ ಶ್ರೇಷ್ಠನು, ಬುದ್ಧಿವಂತನು, ಎಂಬ ಮಾತನ್ನು ಲಕ್ಷದಲ್ಲಿಟ್ಟು ಯಾವಾಗಲೂ ಮಾನವೋನ್ನತಿಗಾಗಿಯೇ ದಾನದ ಉಪಯೋಗವಾಗುವಂತೆ ಏರ್ಪಾಡು ಮಾಡುವದು ಹಿತಕರವಲ್ಲವೇ?

[ಶ್ರೀ ಮಹದೇವಶಾಸ್ತ್ರಿ ದಿವೇಕರ ಅವರ ಲೇಖನದಿಂದ]

[ಕೆಳೆಯರ ಕೂಟದ 'ನನ್ನನುಡಿ'ಯಿಂದ]

* ಸಣ್ಣ ಕತೆ *

ಗುಲಾಬಿ ಹೂ !

ಕತೆಗಾರ :

ಬಸವರಾಜ ಕಟ್ಟೀಮನಿ.

ನಲ್ಲನ ಕೈಯಿಂದ ಹೂ ಮುಡಿಸಿಕೊಳ್ಳುವ ಹಂಬಲದಲ್ಲಿ ನೈಮರೆತ ನಲ್ಲೆ, ಅವನ ಪ್ರತಿಬಿಂಬವಾದ ಕಿಟ್ಟುವಿನ ಕೆನ್ನೆಗೆ ಏಟು ಕೊಡುತ್ತಾಳೆ. ನಲ್ಲನಲ್ಲೆಯರ ನಲ್ಮೆಯ ನಡುವೆ ಯಾರೂ ಬರಕೂಡದೆ ? ನಲ್ಲನ ದೃಷ್ಟಿ ನಲ್ಲೆಗೆ ಬಂದಾಗ ಅವಳಿಗೆ ತಿಳಿಯಿತು — ಕಿಟ್ಟುವು ತಮ್ಮಿಬ್ಬರ ಹೃದಯವನ್ನು ಜೋಡಿಸುವ ನಿರಪರಾಧಿ ಕೋಮಲ ತಂತುವೆಂದು.

೧

ಹುಣ್ಣಿಮೆಗೆ ಹಿಂದಿನ ದಿನದ ರಾತ್ರಿಯಾದುದರಿಂದ ಚಂದ್ರಮನ ಬೆಳದಿಂಗಳು ಹೊರಗಡೆ ತಾನೆತಾನಾಗಿ ಚೆಲ್ಲಿಕೊಂಡಿದ್ದಿತು.

ಕಿಟಕಿಯಿಂದ ಇಣಿಕಿ ಹೊರಕ್ಕೆ ದೃಷ್ಟಿ ತೂರಿದಳು ಕುಸುಮಾ.

ತಾಯಿಯ ಮಡಿಲಿನಲ್ಲಿ ಸುಖವಾಗಿ ನಿದ್ರೆಹೋದ ಎಳೆ ಮಗುವಿನ ಹಾಗೆ ಆ ಗುಲಾಬಿ ಹೂ ಅರೆತೆರೆದ ಹಾಗೆ ನಸುಬಾಗಿ ಗಿಡದಮೇಲೊರಗಿದ್ದಿತು.

ಅದು ದೃಷ್ಟಿಗೆ ಬೀಳುತ್ತಲೆ ಕುಸುಮೆಯ ಹೃದಯದಲ್ಲಿಯ ಕಳವಳ ಇನ್ನೂ ಹೆಚ್ಚಾಯಿತು.

ಆ ದಿನ ಬೆಳಗ್ಗೆ....

ಇದೀಗ ಬಾಗಿ ಗಿಡದ ಮೇಲೊರಗಿದ್ದ ಅದೇ ಆ ಗುಲಾಬಿ ಹೂ—ಆಗ ಬಾಲರವಿಯ ಸ್ವರ್ಣ ಕಿರಣಗಳ ಜ್ಯೋತಿಯಲ್ಲಿ ಅರಳಿ ಕುಲುಕುಲು ನಗುತ್ತಿದ್ದಿತು....

ಆ ನಂತರ ನಡೆದ ಘಟನೆ....

ಚಿತ್ರಪಟದಲ್ಲಿಯ ದೃಶ್ಯಗಳ ಹಾಗೆ ಅಂದು ನಡೆದುದೆಲ್ಲವೂ ಕುಸುಮೆಯ ಕಣ್ಣುಗಳೆದುರಿನಿಂದ ಸರಸರನೆ ಹಾಯ್ದು ಹೋಗತೊಡಗಿತು.

ಬೆಳಗ್ಗೆ ಎದ್ದು ಆ ಅರಳಿದ ಗುಲಾಬೀ ಹೂವನ್ನೇ ನಿಟ್ಟಿಸುತ್ತ—ಆಗಾಗ ಕನ್ನಡಿಯ ಕಡೆ ಹೊರಳಿ ಪ್ರತಿಬಿಂಬವನ್ನು ನೋಡಿಕೊಳ್ಳುತ್ತ—ಮಧ್ಯೆಮಧ್ಯೆ ಕೇಶರಾಶಿಯ ಮೇಲೆ ಬಾಚಣಿಕೆಯನ್ನಾಡಿಸುತ್ತಿದ್ದಳು ಕುಸುಮಾ. ಆ ಗುಲಾಬಿ ಹೂ ಆಕೆಯ ಹೃದಯವನ್ನು ಸೂರೆಗೊಂಡಿದ್ದಿತು.

—ಆಹಾಹಾ ! ಅದೆಷ್ಟು ಮೋಹಕವಾಗಿದೆ ಈ ಅರಳಿದ ಗುಲಾಬಿ ಹೂ ! ನನ್ನ ಕೆನ್ನೆಗಳೂ ಇಂತೆಯೆ ಮೋಹಕವಾಗಿವೆಯೆಂದು ಕಾಲೇಜಿನಲ್ಲಿ 'ಅವರು' ಹೇಳುತ್ತಿದ್ದ ಅಂದಿನ ಆ ದಿನಗಳು ! ಅವುಗಳನ್ನು ನೆನೆದೊಡನೆ [illegible] ಪುಲಕಿತವಾಗುತ್ತದೆ. ಆ ಸುಖಕಾರಕ ಸಮಯ [illegible] ಮರಳಿ ಮೊಗದೋರಬಹುದೇ....

ಒಮ್ಮಿಂದೊಮ್ಮೆಲೆ ಆಕೆಯ ಕೆನ್ನೆಗಳಿಗೆ ಕೆಂಪೇರಿದ್ದಿತು. ಚೆಂದುಟಿಗಳಲ್ಲಿ ನಾಚಿಕೆಯ ನಗೆ ಸುಳಿದಾಡಿದ್ದಿತು. ಕನ್ನಡಿಯಲ್ಲಿ ತನ್ನ ಚೆಲುವನ್ನು ತಾನೇ ನೋಡಿಕೊಳ್ಳುತ್ತ [illegible] ಆ ಅರಳಿದ ಗುಲಾಬಿ ಹೂವನ್ನು ನಿಟ್ಟಿಸುತ್ತ ಮೈಮರೆದಿದ್ದಳು.

—ಈ ಗುಲಾಬಿ ಹೂವಿಗೂ ನನ್ನ ಮುಖಕ್ಕೂ [illegible] ಭೇದವಿದೆ ?—ನಿಜ, 'ಅವರು' ಕಾಲೇಜಿನಲ್ಲಿದ್ದಾಗ ಹೇಳುತ್ತಿದ್ದ ಹಾಗೆ ' ಹೆಸರಿಗೆ ತಕ್ಕ ಹುಡುಗಿ ' ನಾನು ! ಇದರಲ್ಲೇನೂ ಸಂದೇಹವಿಲ್ಲ. ಈ ಕಣ್ಣುಗಳು!—ಈ ಕೆನ್ನೆಗಳು! ಈ ಚೆಂದುಟಿಗಳು ! ಈ ನೀಳವಾದ ನಾಸಿಕದ [illegible] ಆಹಾಹಾ !—

ಆಕೆಯ ಶರೀರ ಒಂದು ತರಹದ ಅನಿರ್ವಚನೀಯವಾದ ಸುಖಕಾರಕ ಲಹರಿಯಿಂದ ರೋಮಾಂಚಿತವಾಗಿದ್ದಿತು.

" ಈ ಗುಲಾಬಿ ಹೂ ನನ್ನ ಮುಡಿಯಲ್ಲಿ ಹೇಗೆ [illegible] ಸಬಹುದು ?—ನನ್ನೀ ಚೆಲುವಿಕೆ ಇನ್ನೂ ಹೆಚ್ಚಾಗ[illegible] ದಲ್ಲವ್ವೆ? 'ಅವರು' ಕಳ್ಳತನದಿಂದ ಆ ಹೂ ಹರಿದು [illegible] ಹಿಂದಿನಿಂದ ಬಂದು ನನ್ನ ಮುಡಿಯಲ್ಲಿಡಬಹುದು [illegible] ಇಟ್ಟರೆ ?....ಆಹಾಹಾ.... "

ಪುನಃ ಆಕೆಯ ಶರೀರ ಪುಲಕಿತವಾಗಿದ್ದಿತು. ಯಾವುದೋ [illegible] ಒಂದು ಮಾಸಪತ್ರಿಕೆಯಲ್ಲಿ ಓದಿದ್ದ ಕತೆಯೊಂದು [illegible] ಆಕೆಗೆ ಪಕ್ಕನೆ ನೆನಪಾಗಿದ್ದಿತು.

ಆ ಕತೆಯಲ್ಲಿಯ ನಾಯಕ-ನಾಯಿಕೆಯರಿಬ್ಬರೂ [illegible] ಹರಯದವರು. ಒಲವಿನ ನಲ್ಲ-ನಲ್ಲೆಯರು ! ಒಂದು [illegible] ಆಕೆ ಹೆಳಲು ಹಾಕಿಕೊಂಡು ಶೃಂಗಾರಾಗಿ ಕುಳಿತಾಗ ಆತನು ಅರಳಿದ ಒಂದು ಗುಲಾಬಿ ಹೂವನ್ನು [illegible] ಆಕೆಗೆ ಮುಡಿಸುವನು. ಮುಡಿಸಿಯಾದ ಬಳಿಕ [illegible] ನಿಡುದೋಳುಗಳನ್ನು ಸೆಳೆದು ತುಟಿಗಳಿಗೆ ಮುತ್ತಿಟ್ಟು ಮುಗುಳು ನಗು ಬೀರುತ್ತ ಕೇಳುವನು.

"ಅಬ್ಬ ! ಇದೇನೇ ಇದು ! ಅಲ್ಲೊಂದು ಗುಲಾಬಿ ಹೂ! ಇಲ್ಲೊಂದು ಗುಲಾಬಿ ಹೂ ! "

"ಎಲ್ಲಿ ?" ಆಕೆ ನಸುನಾಚಿಕೆಯಿಂದಲೂ ನಸುನಗೆಯಿಂದಲೂ ಕೇಳುವಳು.

"ಇಲ್ಲಿ." ಹೇಳುಹೇಳುತ್ತಲೇ ಆತನು ಆಕೆಯನ್ನು ಪ್ರೇಮಭರದಿಂದ ಪಟಪಟನೆ ಮುದ್ದಿಸುವನು.

"—'ನನ್ನವರೂ' ಹೀಗೆಯೆ ಈ ಅರಳಿದ ಹೂವನ್ನು ಮುಡಿಸಿ ನನಗೆ.... ಮುದ್ದಿಟ್ಟರೆ ? "

ಕುಸುಮೆಯ ಹೃದಯ ಆಶೆ-ಆಕಾಂಕ್ಷೆಗಳಿಂದ ತುಂಬಿ ಬಂದಿದ್ದಿತು. 'ಅವರ' ಕೈಲಿಂದ ಹೂ ಮುಡಿಮಕೊಳ್ಳಲು ಆಕೆಯ ಮುಡಿಯು ಆತುರವಾಗಿದ್ದಂತೆ 'ಅವರ' ಅಧರಗಳ ಸವಿಯನ್ನು ಹೀರಲು ಆಕೆಯ ಕೆಂದುಟಿಗಳು ಕಾತುರವಾಗಿದ್ದವು. ಆದರೆ....

ಹಾಯ ಹಾಯ್ !

ಆ ಆಶೆ, ಆಕಾಂಕ್ಷೆ, ಆತುರತೆ-ಕಾತರತೆಗಳೆಲ್ಲವನ್ನೂ ಕೊರೆಗೆಯ್ದು ಕುಸುಮೆಯ ಹೃದಯಕ್ಕೆ ನಿರಾಶೆ ಬಲವಾದ ಆಘಾತವನ್ನುಂಟುಮಾಡಿದ್ದಿತು.

ಬೆಳಗಿನ 'ವಾಕಿಂಗ್' ತೀರಿಸಿಕೊಂಡು ತೋಟದಲ್ಲೇ ಹಾಯ್ದು ಬಂದ ರಾಮು ಆ ಹೂವಿನ ಕಡೆ ಲಕ್ಷ್ಯಕೊಡದೆ ನೇರವಾಗಿ ಒಳಕ್ಕೆ ಕಿಟ್ಟೂವಿನ ಹತ್ತಿರ ಹೋಗಿದ್ದ. ಆತನಿಟ್ಟ ಒಂದೊಂದು ಅಡಿಗಳೂ ಆಕೆಯ ಆಶೆಯನ್ನು ಮೆಟ್ಟಿ ಮೆಟ್ಟಿ ಹೋದುವು.



ಆಕೆಯ ಕಂಣುಗಳಿಂದ ಕಂಬನಿಗಳುದುರಿದವು.

—ಕುಸುಮೆಗೆ ಆಗ ತಡೆಯಲಾರದಷ್ಟು ಕೋಪಬಂದು ಬಿಟ್ಟಿದ್ದಿತು. ಬಾಚಣಿಕೆಯನ್ನು ದೂರ ಬಿಸುಟೆ ಕನ್ನಡಿಯನ್ನು ಒಡೆದು ಚೂರುಚೂರು ಮಾಡಿ ಇಲ್ಲಿಂದ ತಕ್ಷಣ ಹೊರಟುಬಿಡಬೇಕೆಂದೂ ಒಂದು ಕ್ಷಣ ಆಕೆಯ ಮನಸ್ಸಿಗೆ ಬಂದಿದ್ದಿತು. 'ಪುರುಷರೆಂತಹ ಸ್ವಾರ್ಥಿಗಳು ! ಎಂತಹ ಕಠೋರ ಹೃದಯರು ! ಅವರಿಗೆ ಹೃದಯವಾದರೂ ಇದೆಯೆ ?—ತಮ್ಮ ಪ್ರೇಯಸಿಯರ ಆಶೆ-ಆಕಾಂಕ್ಷೆಗಳ ಕಡೆ ಲಕ್ಷ್ಯಕೊಡುವ ತಿಳಿವಳಿಕೆಯೂ ಅವರಿಗಿಲ್ಲವೆ ?—

ಇಡೀ ಪುರುಷಜಾತಿಯೇ ಆಕೆಯ ಶಾಪಕ್ಕೆ ಗುರಿಯಾಗಿದ್ದಿತು. ಆಕೆಯ ಕಂಠ ಬಿಗಿದುಬಂದಿದ್ದಿತು. ಆದರೆ ಅಷ್ಟರಲ್ಲಿ ಕಿಟ್ಟುವನ್ನು ಕರೆದುಕೊಂಡು ರಾಮು ಆಕೆಯ ಹತ್ತಿರ ಬಂದು ನಗೆಮೊಗದಿಂದ ಮಾತನಾಡಿದ.

"ಎಂಟು ಗಂಟೆ ಯಾಗುತ್ತ ಬಂದಿತು. ಇನ್ನೂ ಮುಗಿದಿಲ್ಲವೆ ರಾಣೀಸಾಹೇಬರ ಕೇಶಾಲಂಕಾರ ?"

ಆತನ ಆ ವಿನೋದದಿಂದ ಕುಸುಮೆಯ ಕೋಪ-ಶೋಕಗಳೆಲ್ಲ ಜರ್ರನೆ ಜಾರಿಹೋದುವು.

"ಹಂ ! ಇನ್ನೂ ಇದೆ !" ಗುಲಾಬಿ ಹೂವಿನ ಕಡೆ ಅರ್ಥಪೂರಿತ ದೃಷ್ಟಿ ಹೊರಳಿಸಿ ಆಕೆ ನಗುನಗುತ್ತ ಹೇಳಿದಳು. ಆದರೆ ರಾಮುವಿಗೆ ಆಕೆಯ ಆಶೆ ಅರ್ಥವಾಗಲಿಲ್ಲ.

"ಕಿಟ್ಟೂಗೆ ಇಂದು ಹೊಸ ಸೂಟು ಮಾಡಿಸಬೇಕು. ಕುಸುಮಾ, ನಾಳೆ ಆತನ ಶಾಲೆ ಪುನಃ ಪ್ರಾರಂಭವಾಗುತ್ತಲ್ಲ. ನಡೆ ನೀನೂ ಏನನ್ನಾದರೂ ತೆಗೆದುಕೊಳ್ಳುವಿಯಂತೆ."

ಆಗ ಮಾತ್ರ ಆ ಗುಲಾಬಿ ಹೂವಿನ ಆಶೆ ಬಿಟ್ಟು ಆಕೆ ಎದ್ದುಬಿಡಲೇಬೇಕಾಗಿ ಬಂದಿತು.

ಒಳಕ್ಕೆ ಹೋಗಿ ಪತ್ತಲವನ್ನುಟ್ಟುಕೊಂಡು ಕುಸುಮಾ ಹೊರಕ್ಕೆ ಬಂದಳು. ಕಿಟ್ಟೂ ರಾಮುವಿನ ಕಿರುಬೆರಳನ್ನು ಹಿಡಿದುಕೊಂಡು ಕಟ್ಟೆಯ ಮೆಟ್ಟಿಲುಗಳನ್ನು ಒಂದೊಂದಾಗಿ ಇಳಿಯುತ್ತಿದ್ದ. ಆತನ ದೃಷ್ಟಿ ತಟ್ಟನೆ ಆ ಗುಲಾಬಿ ಹೂವಿನ ಮೇಲೆ ಬಿದ್ದಿದ್ದಿತು. 'ಅಮ್ಮಾ.... ಆ ಹೂ.... ನನಗೆ.... ' ಎಂದು ಹೇಳುತ್ತಲೆ ಕಿಟ್ಟೂ ಒಂದೇ ಏಟಿಗೆ ಆ ಗುಲಾಬಿ ಗಿಡಕ್ಕೆ ನೆಗೆದುಬಿಟ್ಟ.

ತನ್ನನ್ನಿಷ್ಟು ನಿರಾಶೆಗೊಳಿಸಿದ ಆ ಗುಲಾಬಿ ಹೂ ಇನ್ನು ಈ ಕಿಡಿಗೇಡಿ ಕೈಗೆ ಬೀಳುತ್ತಲ್ಲ—ಎಂದು ಕುಸುಮೆಗೆ ಕೋಪವುಕ್ಕೇರಿತು. ರಾಮು ನೋಡುನೋಡುತ್ತಿದ್ದಂತೆಯೆ ಸರ್ರನೆ ಮುಂದಾಗಿ ಕಿಟ್ಟೂವಿನ ಕರಗಳನ್ನು ಗಟ್ಟಿಯಾಗಿ ಹಿಡಿದು ಚಪಾರನೆ ಆತನ ಕೆನ್ನೆಗೊಂದು ಏಟು ಬಿಗಿದಳು. ತಾನೇನು ಮಾಡುತ್ತಿರುವೆನೆಂಬುದರ ಅರಿವು ಆಕೆಗಿರಲಿಲ್ಲ.

'ಹೂವಂತೆ ಈತಸಿಗೆ ಹೂ! ನೀನೇನು ಹೆಣ್ಣೊ ? ಏನು ಮಾಡುತ್ತಿಯೆ ಆದನ್ನು ? " ಎಂದು ಗರ್ಜಿಸಿದಳು.

ಏಟು ಬಲವಾಗಿ ಬಿದ್ದುದರಿಂದ ಕಿಟ್ಟೂವಿನ ಕೋಮಲವಾದ ಕೆನ್ನೆಗಳು ಕೆಂಪೇರಿದುವು. ಬೆರಳುಗಳ ಪಡಿಯಚ್ಚು ಕೆನ್ನೆಯ ಮೇಲೆ ಸ್ಪಷ್ಟವಾಗಿ ಎದ್ದು ಕಾಣಿಸತೊಡಗಿತು.

ರಾಮು ಒಮ್ಮೆ ಕುಸುಮೆಯನ್ನು ತೀಕ್ಷ್ಣದೃಷ್ಟಿಯಿಂದ ನಿಟ್ಟಿಸಿ ನೋಡಿದ. ಅದೇ ಆಯಿತು. ಆ ನಂತರ ಪಿಟ್ಟೆಂದು ಮಾತನಾಡಲಿಲ್ಲ. ಆತನ ಆ ದೃಷ್ಟಿಯಲ್ಲಿ ಎಂತಹ ಕಳವಳ ತುಂಬಿದ್ದಿತು.

ಅತ್ತುಅತ್ತು ಕಿಟ್ಟೂವಿನ ಕಣ್ಣುಗಳೆರಡೂ ದಾಸಾಳ ಹೂಗಳಂತಾಗಿದ್ದುವು.

ಆನಂತರ ಆತನನ್ನು ಸಂತವಿಸಿ ಪೇಟೆಗೆ ಕರೆದೊಯ್ಯಬೇಕಾದರೆ ಒಂದು ಮಹಾಪುರಾಣವೇ ನಡೆಯಿತು !

ಅಂದು ಯಾರಿಗೂ ಊಟ ರುಚಿಯೆನಿಸಲಿಲ್ಲ. ' ಪಪಿ ' ನಾಯಿ ಮಾತ್ರ ಇಂದು ಹೊಟ್ಟೆತುಂಬಾ ಹೊಡೆದು ಮೂಲೆಯಲ್ಲಿ ಗೊರಗುಟ್ಟುತ್ತಾ ಬಿದ್ದಿದ್ದಿತು.

ಇಡೀ ದಿನವೆಲ್ಲ ಆಕೆ ಎದೆಯ ಕುದಿತದಲ್ಲೇ ಕಾಲ ಕಳೆದಿದ್ದಳು. ಈಗಲೂ ಅದೇ ಕಳವಳ ಆಕೆಯ ಹೃದಯವನ್ನು ಕೊರೆಯುತ್ತಿದ್ದಿತು. ಇಂತಹದರಲ್ಲಿ ಆಕೆಗೆ ನಿದ್ರೆಯಾದರೂ ಹೇಗೆ ಒಲಿಯಬೇಕು.

ಠಣ್! ಠಣ್! ಠಣ್!

—ಕುಸುಮಾ ಬೆಚ್ಚಿಬಿದ್ದು ಹಿಂತಿರುಗಿ ನೋಡಿದಳು ಗೋಡೆಗೆ ನೇತು ಹಾಕಿದ್ದ ಗಡಿಯಾರದಲ್ಲಿ ತಾಸಿನ ಮುಳ್ಳು—ನಿಮಿಷದ ಮುಳ್ಳುಗಳು ಒಂದನ್ನೊಂದು ಗಟ್ಟಿಯಾಗಿ ಅಪ್ಪಿಕೊಂಡಿದ್ದವು.

ಹನ್ನೆರಡು ಗಂಟೆಯಾಗಿದ್ದಿತು!

—ಮಧ್ಯರಾತ್ರಿ

—ಈ ಸಮಯದಲ್ಲಿ ಇಡೀ ವಿಶ್ವವೆಲ್ಲ ನಿದ್ರಾದೇವಿಯ ಮಡಿಲಿನಲ್ಲಿ ಸುಖವಾಗಿ ಒರಗಿಕೊಂಡಿರಬಹುದು. ಇಲ್ಲಿ—ಈ ಮಂಚದ ಮೇಲೆ ' ಅವರು ' ನಿದ್ರೆಮಾಡುತ್ತಿದ್ದಾರೆ. ಅಕ್ಕಪಕ್ಕದ ಮನೆಗಳವರೂ ಸುಖನಿದ್ರೆಯಲ್ಲಿ ತಲ್ಲೀನರಾಗಿದ್ದಾರೆ. ಸೂರ್ಯನೂ ಸಹ ಭೂಮಿತಾಯಿಯ ತೆರೆಯ ಮರೆಯಲ್ಲಿ ನಿದ್ರಾಧೀನರಾಗಿರಬಹುದು. ಈ ನದಿ, ಈ ಗುಡ್ಡಬೆಟ್ಟಗಳು, ಈ ಹೂದೋಟ, ಈ ತರುಲತೆಗಳು, ಈ ಗುಲಾಬಿ ಹೂ ಎಲ್ಲವೂ ನಿದ್ರಿಸುತ್ತಿವೆ ! ಶಾಂತವಾಗಿ-ಸುಖವಾಗಿ ನಿದ್ರಿಸುತ್ತಿವೆ !—ಆದರೆ ನಾನು ? ಹಾಯ ಹಾಯ್ ! ನನಗೆಲ್ಲಿಯ ನಿದ್ರೆ ? ಕಳವಳದ ಕ್ರೂರ ಬಾಣಗಳು ನನ್ನೆದೆಯನ್ನು ಕೊರೆಯುತ್ತಿವೆ. ನನ್ನ ಕರುಳನ್ನು ಕಿವಿಚುತ್ತಿವೆ ! ನಿದ್ರೆಯ ರುಂಡ ಚೆಂಡಾಡಿ ದೂರ ಹಾರಿಸುತ್ತಿವೆ !

—ಇಂದು ಬೆಳಿಗ್ಗೆ ಕಿಟ್ಟೂವಿನ ಕೆನ್ನೆಯ ಮೇಲೆ ಮೂಡಿದ್ದ ಬೆರಳುಗಳು!

—ಕೆಂಡದಂತಾಗಿದ್ದ ಆತನ ಕಣ್ಣುಗಳು!

—ಕರುಳನ್ನು ಕೊರೆಯುವ 'ಅವರ' ಆ ಆರ್ತದೃಷ್ಟಿ!

—ಹಾಯ್ ! ನನಗೆಲ್ಲಿಯ ನಿದ್ರೆ! ನಾನೆಂತು ನಿದ್ರೆ ಹೋಗಲಿ !....

ಕುಸುಮಾ ಅಸಹಾಯಳಾದಳು. ಕಿಟಕಿಯಲ್ಲಿ ತಲೆ[illegible] ನ್ನೊರಗಿಸಿ ಆಕೆ ಬಿಕ್ಕಿಬಿಕ್ಕಿ ಅಳತೊಡಗಿದಳು.

ತೆಂಗಾಳಿ ಸುಳಿಸುಳಿದು ಆಕೆಯ ತಲೆಗೆ ತಣ್ಣನ್ನೆರಚಿತು. ಅಳುವಿನಿಂದ ಆಕೆಯ ಕಳವಳವೂ ಕೊಂಚಕೊಂಚವಾಗಿ ಕಡಮೆಯಾಗತೊಡಗಿತು.

ಇನ್ನು ನಿದ್ರಿಸಬೇಕು. ಬಿಗಿಯಾಗಿ ಹೊದ್ದುಕೊಂಡು ಮಲಗಿಕೊಳ್ಳಬೇಕು. ಎಂದು ನಿರ್ಧರಿಸಿ ಹಾಸಿಗೆಯ ಮೇಲೆ ಬಂದು ಬಿದ್ದುಕೊಂಡಳು. ರಭಸದಿಂದ ಶಾಲನ್ನೆಳೆದುಕೊಂಡು ತಲೆತುಂಬ ಹೊದ್ದುಕೊಂಡಳು.

ಏನಾದರೇನು ?—

ಬಲಾತ್ಕಾರದಿಂದ ಎಂದಾದರೂ ನಿದ್ರಾದೇವಿ ಒಲಿಯುತ್ತಾಳೆಯೆ ? ಮಹಾ ಮಾಟಗಾತಿ ಆಕೆ! ಕುಸುಮೆಯ ನಿರ್ಧಾರಕ್ಕೆ ಯಶಸ್ಸು ದೊರೆಯುವುದು ಒಂದು [illegible] ಉಳಿದು ಆಕೆಯ ಶರೀರವೆಲ್ಲ ಬಿರ್ರನೆ ಬೆಮತುಬಿಟ್ಟಿತು.

ಎಡಕ್ಕೆ ಹೊರಳಿದಳು !—ಬಲಕ್ಕೆ ಹೊರಳಿದಳು— ' ಅಯ್ಯೋ ' ಎಂದಳು !—' ಅಮ್ಮಾ' ಎಂದಳು—

ಎಲ್ಲಿಯ ನಿದ್ರೆ !—

ತ್ವೇಷದಿಂದ ಎದ್ದು ಕುಳಿತಳು.

ನಿದ್ರೆ ಬರದಂತಾಗಲು ಏನನ್ನಾದರೂ ಓದುತ್ತ [illegible] ತಿರುವುದು ಆಕೆಯ ಪದ್ಧತಿ. ಓದುತ್ತ ಓದುತ್ತಿದ್ದಂತೆ ಕಣ್ಣುಗಳು ತಾವಾಗಿಯೆ ಮುಚ್ಚಿಕೊಳ್ಳುತ್ತಿದ್ದುವು. ಇಂದು ಸಹ ಹಾಗೆಯೆ ಮಾಡುವುದೆಂದುಕೊಂಡು ಚಟ್ಟನೆದ್ದು ಮೇಜಿನ ಬಳಿ ಬಂದು ದೀವಿಗೆಯನ್ನು ದೊಡ್ಡದಾಗಿ ಮಾಡಿದಳು. ಏನನ್ನು ಓದುವುದು ಎಂದು ಯೋಚಿಸುತ್ತಿದ್ದಂತೆ [illegible] ಗಲೇ ಮೇಜಿನ ಮೇಲೆ ಬಿದ್ದಿದ್ದ ಹಾಳೆಗಳ ಒಂದು [illegible] ಆಕೆಯ ಚಿತ್ತವನ್ನು ಸೆಳೆಯಿತು.

ಕುತೂಹಲ ತುಂಬಿದ ಕಣ್ಣುಗಳಿಂದ ಅದನ್ನು [illegible] ನೋಡಿದಳು.

ರಾಮುವಿನ ದಿನಚರಿ !

ರಾತ್ರಿ ಏನನ್ನೋ ಬರೆದು ಮರೆತು ಇಲ್ಲಿಯೆ ಬಿಟ್ಟಿರಬಹುದು ಎಂದುಕೊಂಡು ಧಡಧಡಿಸುವ ಹೃದಯದಿಂದ ಅದನ್ನು ಕೈಗೆತ್ತಿಕೊಂಡಳು.

ಇದುವರೆಗೆ ರಾಮುವಿನ ದಿನಚರಿ ಆಕೆಯ ಕೈಗೆ ಬಿದ್ದಿರಲಿಲ್ಲ. ಒಂದೆರಡು ಬಾರಿ ರಾಮು ದಿನಚರಿ ಬರೆಯುತ್ತ ಕೂತಿರುವುದನ್ನಾಕೆ ನೋಡಿದ್ದರೂ ಅದನ್ನು ಓದಲು ಆಕೆ ಉತ್ಸುಕಳಾಗಿರಲಿಲ್ಲ. ಆದರೆ ಏಕೊ ಏನೋ—ಈಗ ಸಾಧ್ಯವಿದ್ದಷ್ಟೂ ಓದಿಯೆ ತೀರಬೇಕೆಂದು ಆಕೆಗೆ ತುಂಬ ಅಪೇಕ್ಷೆಯಾಯಿತು. ಒಂದು ಬಾರಿ ನಿದ್ರೆ ಹೋಗಿದ್ದ ರಾಮುವಿನ ಕಡೆ ದೃಷ್ಟಿ ಹೊರಳಿಸಿದಳು. ಅತ್ತ ಕಡೆ ಬೆನ್ನು ಮಾಡಿ ರಾಮು ಗಾಢನಿದ್ರೆಯಲ್ಲಿ ಮಗ್ನನಾಗಿದ್ದ.

ನಡುಗುತ್ತಿರುವ ಕೈಗಳಿಂದ ಕುಸುಮಾ ಒಂದೊಂದೇ ಹಾಳೆಗಳನ್ನು ಮಗುಚಿ ಹಾಕತೊಡಗಿದಳು.

★

ಒಂದು ಹಾಳೆ ಹೀಗೆ ಆರಂಭವಾಗಿದ್ದಿತು.

ತಾ. ೨—೬—೩೪

ರಾತ್ರಿ ಹತ್ತು ಗಂಟೆ.

ಇಂದು ಶಾಮಲೆ ನನ್ನ ಕೈಬಿಟ್ಟು ಹೋದಳು. ದೂರ.... ದೂರ....ದೂರ ಹೋದಳು. ಆ ಕೋಮಲೆಯ ಶರೀರವನ್ನು ಬೆಂಕಿಯ ಜ್ವಾಲೆಗಳಿಗೆ ಬಲಿ ಕೊಟ್ಟು ಈಗ ತಾನೆ ಬಂದಿದ್ದೇನೆ. ಆಕೆ ಹೋದಳು. ಅದಕ್ಕೇನೂ ವಿಷಾದವೆನ್ನಿಸುತ್ತಿಲ್ಲ ನನಗೆ. ನಾನೂ ಒಂದು ದಿನ—ಹೀಗೆಯೆ ಬೆಂಕಿಯ ಜ್ವಾಲೆಗಳಿಗೆ ಬಲಿಯಾಗುವವನೇ ಅಲ್ಲವೆ? ಸತ್ತವರಿಗಾಗಿ ಮುಳುಮುಳು ಅಳುತ್ತ ಕೂತಿರುವುದು ಶುದ್ಧ ಮೂರ್ಖತನವಲ್ಲದೆ ಬೇರಿಲ್ಲ....ಆದರೆ ...ಸತ್ತ ಶಾಮಲೆಗಾಗಿ ಶೋಕಿಸುತ್ತಿದ್ದೇನೆಯೆ ನಾನು ?....ಇಲ್ಲ....ಇಲ್ಲ ಶಾಮಲೆಯ ಈ ಪ್ರತಿಮೂರ್ತಿ....ಈ ನನ್ನ ಮುದ್ದು ಕಂದ....ಏನನ್ನೂ ಅರಿಯದ ಹಸುಗೂಸು—ಇಂತಹ ವಯಸ್ಸಿನಲ್ಲಿ ಹೀಗೆ ಇದನ್ನು ಚೆಲ್ಲಿಕೊಟ್ಟು ಶಾಮಲೆ ಹೋದು ಬಿಟ್ಟಳು....ನಾನಿನ್ನೂ ಕಾಲೇಜು ವಿದ್ಯಾರ್ಥಿ.... ತರುಣ....ಇಂತಹ ವಯಸ್ಸಿನಲ್ಲಿ....ಇನ್ನು....ಈ ಅನಾಥ ಮಗುವಿನ—ತಾಯಿಯಿಲ್ಲದ ತಬ್ಬಲಿ ಮಗುವಿನ ಭವಿತವ್ಯವೇನು! ಇದಕ್ಕಾಗಿ ನಾನು ಶೋಕಿಸುತ್ತಿದ್ದೇನೆ. ಮರುಗುತ್ತಿದ್ದೇನೆ....ಕೊರಗುತ್ತಿದೇನೆ....ಕಣ್ಣೀರು ಹಾಕುತ್ತಿದ್ದೇನೆ....

ಶಾಮಲೆಯಂತೂ ಹೋದಳು....ಇನ್ನು ನನ್ನ ಬಾಳುವೆ ಸಹರಾ ಮರುಭೂಮಿಯಂತೆ. ಆ ಮರುಭೂಮಿಯಲ್ಲಿ ಈ ನನ್ನ ಕೋಮಲ ಕಂದ ಬೆಂದು ಹೋಗಬೇಕೇ ?

ಹಾಯ್ ! ಹಾಯ್ ! ಶಾಮಲೆ ! ನಿನ್ನನ್ನು ಕದ್ದೊಯ್ದ ಆ ವಿಧಿ ಎಂತಹ ಕಠೋರ ಹೃದಯದವನಾಗಿರಬಹುದು ! ಈ ಹಸುಳೆಯ ಮೇಲಾದರೂ ಕನಿಕರವಿಟ್ಟು ಆತನು ನಿನ್ನನ್ನು ಬಿಟ್ಟುಬಿಟ್ಟಿದ್ದರೆ ?—

ಆದರೆ....ಅದೆಲ್ಲಿ ಸಾಧ್ಯವಿದೆ !

ಮೃತ್ಯು ! ಕಠೋರ ಮೃತ್ಯು ! ಪಾಪಿ ! ಮಹಾ ಭಯಂಕರ ಪಿಶಾಚಿ !....ಅಯ್ಯೊ, ಈ ಮೃತ್ಯುವನ್ನು ಯಾರು ಕೊಲೆಗೆಯ್ಯಬಹುದು ?....

ಯಾರು ?

ಕುಸುಮೆಗೆ ಮುಂದಕ್ಕೆ ಓದಲಾಗಲಿಲ್ಲ. ಆಕೆಯ ಕಣ್ಣುಗಳು ಕಂಬನಿಗಳಿಂದ ತುಂಬಿದ್ದವು.

ಉದ್ವೇಗದ ಭರದಲ್ಲಿ ಮಧ್ಯೆ ಎಷ್ಟು ಹಾಳೆಗಳನ್ನು ಹಾಗೇ ಮಗುಚಿ ಹಾಕಿದಳೊ ತಿಳಿಯದು. ಕಂಬನಿಗಳನ್ನು ಮಿಡಿದುಕೊಂಡು ಇನ್ನೊಂದು ಹಾಳೆಯ ಮೇಲೆ ದೃಷ್ಟಿಯನ್ನು ಸ್ಥಿರವಾಗಿರಿಸಿದಳು.

ತಾ. ೪—೯—೩೭

ರಾತ್ರಿ ೨ ಗಂಟೆ.

ಏನು ಮಾಡಲಿ ?

ನಿದ್ರೆಯೇ ಬರುತ್ತಿಲ್ಲ.

ಬಿರುಗಾಳಿಗೆ ಸಿಕ್ಕಿ ಬಿದ್ದು ಭೀಕರ ಸಾಗರದಲ್ಲಿ ಅತ್ತ ಇತ್ತ ತೊಳಲುತ್ತಿರುವ ಹಡಗಿನಲ್ಲಿಯ ನಾವಿಕನಂತಾಗಿದೆ ನನ್ನ ಹೃದಯ !

ನನ್ನಂತಹ ದುರ್ದೈವಿ ಈ ಜಗತ್ತಿನಲ್ಲಿ ಇನ್ನೊಬ್ಬನಿರಬಹುದೇ ?

ನನಗೆ ಊಟಕ್ಕೆ ಕೊರತೆಯಿಲ್ಲ. ವಿಲಾಸಕ್ಕೆ ಕೊರತೆಯಿಲ್ಲ. ಕೂತು ಸುಖವಾಗಿ ಜೀವನ ಸಾಗಿಸಬಹುದಾದಷ್ಟು ಸಂಪತ್ತು ನನಗೆ ಇದೆ. ಆದರೆ ಆ ಸಂಪತ್ತು ತೆಗೆದುಕೊಂಡು ಏನು ಮಾಡಬೇಕಾಗಿದೆ ? ಯಾರಾದರೂ ಈ ಸಂಪತ್ತೆಲ್ಲವನ್ನೂ ತೆಗೆದುಕೊಂಡು ಅದರ ಬದಲಾಗಿ ಸುಖವನ್ನು ಕೊಡಬಹುದೇ ನನಗೆ ?

ಶಾಮಲೆಯೇನೋ ಸತ್ತು ಹೋದಳು. ಈ ಮಧ್ಯೆ ಕಾಲೇಜಿನಲ್ಲಿ ಈ ಕುಸುಮೆಯ ಸ್ನೇಹವಾಯಿತು. ಆ ಸ್ನೇಹ, ವಿವಾಹದಲ್ಲಿ ಪರಿಣಮಿಸಬಹುದೆಂದು ನನಗಾಗ ಎಲ್ಲಿ ತಿಳಿದಿದ್ದಿತು ?—ಆದರೆ ಏನೊ ಹೇಗೊ ನಮ್ಮಿಬ್ಬರ ಮದುವೆ

ಯಾಯಿತು. ಮೊದಲನೆಯ ಹೆಂಡತಿಯಿಂದ ಒಂದು ಮಗು ಇದ್ದರೂ ಕುಸುಮಾ ನನ್ನನ್ನು ವರಿಸಲು ಒಪ್ಪಿಕೊಂಡಳು. ಅದೆಂತಹ ಅಪಾರ ಪ್ರೀತಿ ಆಕೆಯದು ನನ್ನ ಮೇಲೆ! ನಾನೂ ಆಕೆಯ ರೂಪರಾಶಿಗೆ ಮಾರು ಹೋದೆ. ವಿವಾಹ ವಾದೆ. ಈಗ ಅದರ ಫಲವನ್ನನು ಭೋಗಿಸುತ್ತಿದ್ದೇನೆ.

'ಬಲತಾಯಿ ಎಷ್ಟೆಂದರೂ ಬಲತಾಯಿಯೆ' ಎಂದು ಜನ ರಾಡುವ ನುಡಿಯಲ್ಲಿ ಈಗ ಕಾಣಿಸುತ್ತಿದೆ ನನಗೆ ಸತ್ಯ. ಆಗ? ಆಗ ಅದೇಕೆ ಹೊಳೆಯಲಿಲ್ಲ ಈ ವಿಷಯ?.... ಆಗ ನನ್ನ ಕಣ್ಣುಗಳಿಗೆ ಮೋಹದ ಪರೆ ಬಂದಿದ್ದಿತಲ್ಲ!— ಕುಸುಮೆಯ ಹರಯದ ತುಂಬು ಶರೀರ ನನ್ನ ಕಣ್ಣು ಗಳನ್ನು ಸೆರೆ ಹಿಡಿದಿದ್ದಿತಲ್ಲ!....

ಕುಸುಮಾ ಕಿಟ್ಟೂವನ್ನು ಸೇರುತ್ತಿಲ್ಲವೆಂತಲ್ಲ. ಆತ ನನ್ನಾಕೆ ಪ್ರೀತಿಸುತ್ತಿಲ್ಲವೆಂತಲ್ಲ... ಆದರೆ ಆಕೆಯ ವರ್ತ ನೆಯೇ ವಿಚಿತ್ರವಾಗಿ ಬಿಟ್ಟಿದೆ. ನಾನು ಮನೆಗೆ ಬಂದಾಗಲೆಲ್ಲ ಕಿಟ್ಟೂ ಕಣ್ಣೀರು ಸುರಿಸುತ್ತಲೇ ಇರುತ್ತಾನೆ. ಆತನು ಅಪೇಕ್ಷಿಸಿದ ವಸ್ತು. ಆತನಿಗೆ ದೊರೆಯುವುದಿಲ್ಲ. ಅಪೇ ಕ್ಷಿಸದವುಗಳು ಮಾತ್ರ ಬೇಕಾದಷ್ಟು! ಅಲ್ಲದೆ ಅವು ಗಳನ್ನು ಕೊಡುವಾಗ ಬಲಾತ್ಕಾರ ಬೇರೆ. ಕುಸುಮೆಯ ಈ ವಿಕ್ಷಿಪ್ತ ವರ್ತನೆಗೆ ಏನೆನ್ನಬೇಕೊ ತಿಳಿಯದಾಗಿದೆ.

ನೆರೆಹೊರೆಯವರೆಲ್ಲ ಆಗಾಗ ಕದ್ದು ಮುಚ್ಚಿ ಕಿವಿಮಾತು ಗಳನ್ನಾಡುತ್ತಾರೆ. ನೀವು ಹೊರಕ್ಕೆ ಹೋದಾಗ ಕಸುಮಾ ಕಿಟ್ಟುವನ್ನು ಕೊಟಡಿಯಲ್ಲಿ ಹಾಕಿ ಏಟು ಕೊಡುತ್ತಾಳೆ ಎಂದು. ಇದನ್ನು ನಿಜವೆಂದು ನಂಬಲೇ?

ಕೋಮಲ ಹೃದಯದ ನನ್ನ ಕುಸುಮಾ ಇಂತಹ ಕೃತ್ಯ ವನ್ನು ಮಾಡುವಳೇ? ನಾನಾಕೆಯ ಹೃದಯವನ್ನರಿ ತಿಲ್ಲವೆ?—ನಾನಿದನ್ನು ಎಂತು ನಂಬಲಿ?

ಆದರೇನು, ಇವರೆಲ್ಲ ಹೇಳುವುದು ಸುಳ್ಳೆನ್ನಬೇಕೇ?— ಅಲ್ಲದೆ ಕಿಟ್ಟೂವಿನ ಕೆಂಪಗಾದ ಕೆನ್ನೆಗಳು, ದಾಸಾಳ ಹೂಗಳಂತಾಗುವ ಕಣ್ಣುಗಳು, ಒಡೆದ ಧ್ವನಿ ಬಾಡಿದ ಮೊಗ, ಕುಂದಿದ ಶರೀರ—ಇವೆಲ್ಲ ಏನು ಹೇಳುತ್ತವೆ?

ಕುಸುಮೆಯನ್ನು ನಾನು ಲಗ್ನವಾಗಬಾರದಾಗಿದ್ದಿತೆ?

ಅಯ್ಯೊ, ಈ ಸಮಸ್ಯೆಯನ್ನು ಪರಿಹರಿಸುವುದೆಂತು!

"ನನಗಿನ್ನು ಸುಖನಿದ್ರೆ ಬರುವುದೆಂತು?"

★

ಕುಸುಮೆಯ ಹೃದಯದಲ್ಲಿಯ ಉದ್ವೇಗ ಇನ್ನೂ ಹೆಚ್ಚಿ ಹೋಯಿತು. ರಭಸದಿಂದ ಎಲ್ಲ ಹಾಳೆಗಳನ್ನೂ ಮಗುಚಿ ಹಾಕಿದಳು. ಬರೆದಿದ್ದ ಕೊನೆಯ ಹಾಳೆ: ಅಂದು ರಾತ್ರಿ ರಾಮೂ ಬರೆದಿದ್ದುದು!—

ಕುಸುಮಾ ಓದತೊಡಗಿದಳು.

ತಾ. ೫—೩—೪೮

ರಾತ್ರಿ ಎಂಟು ಗಂಟೆ.

ಒಂದು ಗುಲಾಬಿ ಹೂವಿಗಾಗಿ!—

ಒಂದೇ ಒಂದು ಕ್ಷುದ್ರ ಗುಲಾಬಿ ಹೂವಿಗಾಗಿ ಇಂದು ಕಿಟ್ಟೂ ಏಟು ತಿಂದ!

ಕುಸುಮಾ ಹೇಗೆ ಆತನನ್ನು ಹೊಡೆದಳೊ ನನ್ನಿಗೆ ಅಚ್ಚರಿಯೆನಿಸುತ್ತಿದೆ. ಕಿಟ್ಟೂವಿನ ಕೆನ್ನೆಯ ಮೇಲೆ ಕುಸು ಮೆಯ ಬೆರಳುಗಳು ನಿಚ್ಚಳವಾಗಿ ಮೂಡಿದ್ದುವು. ಅವನ್ನು ನೋಡಿದ ಹಾಗೆಲ್ಲ ನನ್ನ ಕರುಳು ಕಿವುಚುತ್ತಿದ್ದಿತು. ಆದರೆ ನಾನು ಪಿಟ್ಟೆನ್ನಲಿಲ್ಲ.

ಹೇಗೆ 'ಪಿಟ್ಟೆನ್ನಲಿ?'—

ಆವೇಶದ ಭರದಲ್ಲಿ ಕುಸುಮಾ ವಿಪರೀತಕ್ಕೆ ಹೋಗಿ ಬಿಟ್ಟರೆ?

ಮೊದಲೇ ಕಾಲೇಜು ಕಲಿತ ಸುಶಿಕ್ಷಿತ ತರುಣಿ. ಸಿಟ್ಟು ಕೊಂಡು ತಟ್ಟನೆ ಹೊರಟು ಹೋಗಿಬಿಟ್ಟರೆ? ಹೋದರೆ ನಾನೇನೂ ಸತ್ತು ಹೋಗುವುದಿಲ್ಲ....ಆದರೆ ಜನರ ಮುಖ ಕಟ್ಟಬೇಕಲ್ಲ!....

ಆಕೆಗೂ ಈ ವಿಷಯವಾಗಿ ಪಶ್ಚಾತ್ತಾಪವಾಗಿರಬೇಕು.

ಕುಸುಮದಂತಹ ಹೃದಯ ಅವಳದು! ಏನೊ ಆವೇಶ ದಲ್ಲಿ ಏಟು ಕೊಟ್ಟಿರಬೇಕು! ಸ್ತ್ರೀಯರ ಹೃದಯ! ಅದ ರಷ್ಟು ವಿಚಿತ್ರವಾದುದು ಇನ್ನಾವುದೂ ಇಲ್ಲ!—ಕ್ಷಣಕ್ಕೆ ಕೋಪ, ಕ್ಷಣಕ್ಕೆ ಪ್ರೇಮ—

ಹೋಗಲಿ! ಹೆಂಗುಸರು ಎಷ್ಟು ಕಲಿತರೂ—ಎಷ್ಟು ಸುಧಾರಿಸಿದರೂ....ಅವರು ಹಾಗೆಯೇ!

ಅದೇನೊ ಎನ್ನುತ್ತಾರಲ್ಲ...."ಹುಟ್ಟು ಗುಣ..."

ಕುಸುಮೆಗೆ ಈಗ ತುಂಬಾ ಪಶ್ಚಾತ್ತಾಪವಾಗಿದ್ದಿತು. ಡೈರಿಯನ್ನು ಇದ್ದಕ್ಕಿದ್ದ ಹಾಗೆ ಇಟ್ಟು ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡು ಮುಖ ಕೆಳಕ್ಕೆ ಮಾಡಿ ಬಿಕ್ಕಿ ಅಳತೊಡಗಿದಳು.

ಇದ್ದುದಿದ್ದ ಹಾಗೆಯೆ ರಾಮೂಗೆ ಎಚ್ಚರವಾಯಿತು. ಪಕ್ಕಕ್ಕೆ ಹೊರಳಿ ನೋಡಿದ.

ಮೇಜಿನ ಮೇಲೆ ದೀವಿಗೆ ಇನ್ನೂ ಹಾಗೇ ಉರಿಯುತ್ತಿ ದ್ದಿತು!—ಕುಸುಮಾ ಬಿಕ್ಕಿಬಿಕ್ಕಿ ಅಳುತ್ತಿದ್ದಳು!

ತಟ್ಟನೆದ್ದು ಆಕೆಯ ಮಂಚದ ಹತ್ತಿರ ಹೋಗಿ ಆಕೆಯ ತಲೆಯನ್ನು ತೊಡೆಯ ಮೇಲೆ ತೆಗೆದುಕೊಂಡು ಕಂಬನಿಗಳ ನ್ನೊರೆಸುತ್ತ ಕೇಳಿದ.

"ಏಕೆ, ಕುಸುಮಾ ಅಳುತ್ತಿದ್ದೀಯೆ ?"

ಕುಸುಮಾ ಬಿಕ್ಕುತ್ತ ಬಿಕ್ಕುತ್ತ ರುದ್ಧಕಂಠದಲ್ಲಿ ಹೇಳಿ ದಳು.

"ನಾನು ಪಾಪಿ ! ನನ್ನನ್ನು ಕ್ಷಮಿಸಿ."

"ಪಾಪಿ ! ಅದೆಂತಹ ಪಾಪಿ ?—ಇದೇನಿದು ಕುಸುಮಾ ಏವಿಲ್ಲದ ಹುಚ್ಚು ಇಂದು ?—ಇದುವರೆಗೂ ಅಳುತ್ತಲೇ ಇದ್ದಿಯೆಂತ ತೋರುತ್ತೆ. ಇನ್ನೂ ನಿದ್ರಿಸಿಲ್ಲವೆ ?....ಅಯ್ಯೊ, ಹುಚ್ಚಿಯೇ ಹುಚ್ಚಿ !" ಎನ್ನುತ್ತಾ ಆಕೆಯನ್ನು ಎತ್ತಿ ಎದೆಗೆ ಒತ್ತಿಕೊಂಡು ಕೂದಲು ತೀಡುತ್ತಾ ಹೇಳಿದ.

"ಏನಾಯಿತೇ ಕುಸುಮಾ !....ಹೇಳು ಏನಾಯಿತು ?"

ಕುಸುಮಾ ಮಾತನಾಡಲಿಲ್ಲ. ಮೆಲ್ಲನೆ ಕರವನ್ನೆತ್ತಿ ಕಿಟಕಿಯಿಂದ ಇಣುಕಿ ಹಾಕುತ್ತಿದ್ದ ಆ ಗುಲಾಬಿ ಹೂವಿನ ಕಡೆ ಬೆರಳು ಮಾಡಿದಳು.

ರಾಮುವಿಗೆ ಆಗ ಎಲ್ಲವೂ ಅರ್ಥವಾಯಿತು. ಮೇಜಿನ ಕಡೆ ನೋಡಿದ. ದಿನಚರಿಯೂ ಅಲ್ಲೇ ಬಿದ್ದಿದ್ದಿತು. ಅಂತೂ ಅದನ್ನೆಲ್ಲ ಓದಿ ಬಿಟ್ಟಿರಬೇಕು—ಎಂದುಕೊಂಡು ಮೆಲ್ಲ ನೆದ್ದು ದೀವಿಗೆಯನ್ನು ಸಣ್ಣಗೆ ಮಾಡಿ ಆಕೆಯ ಹತ್ತಿರ ಬಂದ. 'ಇಂದು ಇಷ್ಟೆ ಸಾಕು. ಈಗ ನಿದ್ರಿಸುವಾ.' ಎಂದು ಹೇಳಿ ಆಕೆಯ ಕಂಬನಿಗಳನ್ನೊರಸಿ ಕೆನ್ನೆಗಳಿಗೆ ಮುತ್ತಿಟ್ಟು ಮಲಗಿಸಿದ. ಕುಸುಮಾ ಆತನ ಎದೆಗೆ ಎದೆ ಬಿನ್ನಿಟ್ಟು ಹಾಯಾಗಿ ಕಣ್ಣು ಮಿಡಿದುಕೊಂಡಳು.

ಠಣ್ !

ಗಡಿಯಾರದಲ್ಲಿ ಒಂದು ಗಂಟೆಯಾಯಿತು.

ಅದರೊಂದಿಗೆ ಆ ನಲ್ಲ-ನಲ್ಲೆಯರ ಆತ್ಮಗಳೆರಡೂ ಒಂದಾಗಿ ಬಿಟ್ಟವು !

[೨]

ಮಾರನೆ ದಿನ ಕುಸುಮಾ ಹಾಸಿಗೆ ಬಿಟ್ಟೆದ್ದಾಗ ಆಕೆಯ ಹೃದಯದಲ್ಲಿ ಅನನುಭೂತ ಆನಂದೋತ್ಸಾಹಗಳು ತುಂಬಿ ದ್ದುವು. ಎದ್ದೊಡನೆಯೆ ಸ್ಟೋವ್ ಹೊತ್ತಿಸಿ ಕಾಫಿಗೆ ಇಟ್ಟು ಕೂದಲು ಬಾಚಿಕೊಳ್ಳತೊಡಗಿದಳು. ರಾಮೂ ನಿತ್ಯದಂತೆ ಐದು ಗಂಟೆಗೇ ಎದ್ದು ನದೀ ತೀರಕ್ಕೆ 'ವಾಕಿಂಗ್' ಹೋಗಿದ್ದ.

ಏನೋ ತಟ್ಟನೆ ಸ್ಮರಣೆಯಾಗಲು ಕುಸುಮಾ ಕೂಗಿ ಕರೆದಳು.

'ಕಿಟ್ಟೂ, ಕಿಟ್ಟೂ, ಏ ಕಿಟ್ಟೂsss'

ಕಿಟ್ಟೂ ಎಲ್ಲಿದ್ದನೊ ಏನೊ, ಆಕೆಗೆ 'ಓ' ಕೊಡಲಿಲ್ಲ. ಕುಸುಮಾ ಪುನಃ ಲಲ್ಲೆವಾತಿನಲ್ಲಿ ಕೂಗಿ ಕರೆದಳು.

'ಕಿಟ್ಟೂ, ಕಿಟ್ಟೂ ಏ ಕೃಷ್ಣಾ.'

ಆದರೂ ಉತ್ತರವಿಲ್ಲ. ಕಿಟ್ಟೂವಿನ ಸುಳಿವೂ ಇಲ್ಲ.

"ಕಿಟ್ಟೂ, ಏ ಗೋಪಾಲಕೃಷ್ಣಾ."

ಕುಸುಮಾ ಆಗ ಮಾತ್ರ ಕೂತಲ್ಲಿಂದ ಎದ್ದುಬಿಟ್ಟಳು. ಬಂದು ನೋಡಿದರೆ ಕಿಟ್ಟೂ ಬಾಗಿಲಿನಲ್ಲಿ ನಿಂತು ಏನನ್ನೊ ಏಕಾಗ್ರಚಿತ್ತದಿಂದ ನೋಡುತ್ತಿದ್ದ.

ಕಿಟ್ಟೂವಿನ ದೃಷ್ಟಿ ಆ ಗುಲಾಬಿ ಹೂವಿನ ಮೇಲೆ ಸ್ಥಿರ ವಾಗಿದ್ದಿತು.

ಅದೇ—ಆ ಗುಲಾಬಿ ಹೂ—ನಿನ್ನೆ ದಿನ ಅಷ್ಟೆಲ್ಲ ಅನ ರ್ಥಕ್ಕೆ ಕಾರಣವಾಗಿದ್ದ ಆ ಹೂ—ಇಂದು ನಿನ್ನಿನಕಿಂತ ದೊಡ್ಡದಾಗಿ ಅದೇ ಮೇಲಕ್ಕೇರುತಿದ್ದ ಸೂರ್ಯನ ಸ್ವರ್ಣ ಕಿರಣಗಳಲ್ಲಿ ಅರಳಿ ಕುಲುಕುಲು ನಗುವಂತಿದ್ದಿತು.

ಕಿಟ್ಟೂವಿನ ಗದ್ದವನ್ನು ಹಿಡಿದೆತ್ತಿ ಕುಸುಮಾ ಮೆಲು ದನಿಯಲ್ಲಿ ಕೇಳಿದಳು.

"ಏನು ನೋಡುತ್ತಿದ್ದೀಯೆ ಕಿಟ್ಟೂ ?"

ಕಿಟ್ಟೂ ಕಣ್ಣು ಕುಣಿಸುತ್ತ ತೊದಲು ನುಡಿಯಲ್ಲಿ ಉತ್ತರವಿತ್ತ.

"ಆ ಗುಲಾಬಿ ಹೂ....ಅಮ್ಮಾ...."

"ಕಿಟ್ಟೂ, ನಿನಗೆ ಬೇಕೇ ಆ ಗುಲಾಬಿ ಹೂ?"

"ಹೌದು ಅಮ್ಮಾ, ನನಗೆ ಬೇಕು....ಆದರೆ....ಆದರೆ.... ನನಗೆ ಬೇಡ....ನೀನು ಹೊಡೆಯುತ್ತಿಯೆ" ಕಿಟ್ಟೂವಿನ ಕಣ್ಣುಗಳಲ್ಲಿ ಕಳವಳ ಹೊರಸೂಸುತ್ತಿದ್ದಿತು.

"ಇಲ್ಲಮ್ಮಾ ಕಿಟ್ಟೂ, ನಾನಿನ್ನು, ಹೊಡೆಯೋಲ್ಲ."

"ಹೊಡೆಯೋಲ್ಲವೆ ಅಮ್ಮಾ, ಎಂ-ದೆಂ-ದೂ ?"

"ಇಲ್ಲವಪ್ಪಾ, ಇನ್ನು ಎಂದೂ ನಿನ್ನ ಹೊಡೆಯೋ ದಿಲ್ಲ....ನಿನಗೆ ಕೈ ಕೂಡಾ ಹಚ್ಚೋಲ್ಲ....ನನ್ನ ಮುದ್ದು ನೀನು....ನನ್ನ ಹೃದಯಾಕಾಶದ ಚಂದ್ರಾಮ ನೀನು...." ಎಂದೆನ್ನುತ್ತ ಕುಸುಮಾ ಆತನನ್ನು ಎತ್ತಿ ಎದೆಗವಚಿ ಕೊಂಡಳು. ಆಕೆಯ ಕಣ್ಣುಗಳಿಂದ ಎರಡು ಕಂಬನಿಗಳು ಉದುರಿ ಬಿದ್ದವು.

'ಕಿಟ್ಟೂ ಆ ಹೂ ತೆಗೆದುಕೊಂಡೇನುಮಾಡುವಿ ?'

ಕಿಟ್ಟು ತಟ್ಟನೆ ಉತ್ತರವಿತ್ತ.

'ತಂಗಿಗೆ ಮುಡಿಸುತ್ತೇನೆ ಅಮ್ಮಾ, ... ನನಗೊಬ್ಬ ತಂಗೀನ್ನ ಕೊಡೇ, ಆ ಜಾಗಿರದಾರರ ಮನೋಹರ ನಿನ್ನೆ

ತನ್ನ ತಂಗಿಗೆ ಹೂ ಕೊಡುತ್ತಾ ಇದ್ದ. ನಾನೂ ನನ್ನ ತಂಗಿಗೆ ಕೊಡಬೇಕಂತ ಆಶೆಯಾಯ್ತು. ಅಮ್ಮಾ, ನೀನು ನನಗೆ ತಂಗೀನ್ನ ಕೊಡುತೀಯಾ ? ನಾನೂ ಆಕೆಗೆ ಹೂ ಮುಡಿಸುತ್ತೇನೆ....ಅಮ್ಮಾ....ಆಂ "

ಕುಸುಮಾ ಬೆಚ್ಚಿಬಿದ್ದಳು. ಇಷ್ಟು ಪುಟ್ಟ ಜೀವದ ಅಪೇಕ್ಷೆ ಎಂತಹದು ! ತಂಗಿ ಬೇಕಂತೆ! ತಂಗಿ ! ಆದರೆ ಆ ಭಾಗ್ಯ ಎಲ್ಲಿದೆ ನನಗೆ ?

ಆಕೆಯ ಹೃದಯದಲ್ಲಿ ಮಾತೃಪ್ರೇಮ ತುಂಬಿಬಂದಿತು. ' ಕಿಟ್ಟೂ, ನೀನೇ ತಂಗಿ, ಅಂಣ, ಎಲ್ಲಾ.... " ಎಂದು ಆತನನ್ನು ಮತ್ತೆಮತ್ತೆ ಮುತ್ತಿಟ್ಟಳು.

ಇಷ್ಟರಲ್ಲೆ ರಾಮು ಹೊರಗಿನಿಂದ ಬಂದು ತಾಯಿಮಕ್ಕಳ ಆಟವೆಲ್ಲವನ್ನೂ ನೋಡುತ್ತಿದ್ದ. ಒಮ್ಮಿದೊಮ್ಮೆಲೆ ಆತನ ಮನಸ್ಸಿನಲ್ಲಿ ಯಾವ ವಿಚಾರ ಬಂದಿತೊ ತಿಳಿಯದು. ಆ ಅರಳಿದ ಗುಲಾಬಿ ಹೂವನ್ನು ಮೆಲ್ಲಗೆ ಕಿತ್ತುಕೊಂಡು ಆಕೆಗೆ ತಿಳಿಯದಂತೆ ಹಿಂದಿನಿಂದ ಬಂದು ಆಕೆಯ ಮುಡಿಯಲ್ಲಿ ಸೇರಿಸಿದ. ಮೆಲ್ಲಗೆ ಬಾಗಿ ಆಕೆಯ ಚೆಂದುಟಿಗಳಿಗೆ ಒಂದು ಮುತ್ತನ್ನೊತ್ತಿದ.

ಕುಸುಮಾ ಚಕಿತಳಾಗಿ ಕತ್ತು ಹಾರಿಸಿ ನೋಡಿದಳು. ರಾಮೂ ನಗುನಗುತ್ತಾ ನಿಂತಿದ್ದ.

' ಏನಿದು ?' ಕುಸುಮಾ ನಾಚಿಕೆ ತುಂಬಿದ ಧ್ವನಿಯ[illegible] ಕೇಳಿದಳು.

" ಗುಲಾಬಿ ಹೂ ! " ರಾಮೂ ನಗುನಗುತ್ತ [illegible]ವಿತ್ತ.

" ಇದೊ....ಇಲ್ಲೊಂದು ಗುಲಾಬಿ ಹೂ ನಿನ್ನ [illegible]ಯಲ್ಲಿ ಶೋಭಿಸುತ್ತಿದೆ....ಇಲ್ಲೊಂದು ಗುಲಾಬಿ [illegible] ನಿನ್ನ ಕಂಕುಳಲ್ಲಿ ನಗುತ್ತಿದೆ....ಇನ್ನೊಂದು....ಇದೊ [illegible] ತುಟಿಗಳಿಗೆ ಮುತ್ತಿಡುತ್ತಿದೆ " ಹೇಳುಹೇಳುತ್ತಲೆ ಆಕೆ[illegible] ರಸದುಂಬಿದ ಚೆಂದುಟಿಗಳನ್ನು ಮತ್ತೊಂದು [illegible] ಮುತ್ತಿಟ್ಟ.

ಕುಸುಮೆಗೆ ತಟ್ಟನೆ ತಾನು ಓದಿದ್ದ ಆ ಕ[illegible] ಸ್ಮರಣೆಯಾಯಿತು. ಆಕೆಯ ಶರೀರವೆಲ್ಲ ನವಿರೆದ್ದು [illegible] ನರಗಳಲ್ಲೆಲ್ಲ ರೋಮಾಂಚವೆದ್ದಿತು.

" ಅದೊಂದು ಗುಲಾಬಿ ಹೂ....ಇದೊಂದು ಗು[illegible] ಹೂ.... " ನಗುವಿನಿಂದೊಡಗೂಡಿದ ' ತನ್ನವರ' [illegible] ಆಕೆಯ ಕಿವಿಗಳಲ್ಲಿ ಮತ್ತೆಮತ್ತೆ ಮೊರೆಯತೊಡಗಿತು.

ಕಲಿಯುಗ

ಕಾಮವಿಜ್ಞಾನ, ಆರೋಗ್ಯವಿಜ್ಞಾನ, ಸಮಾಜ ವಿಜ್ಞಾನಗಳಿಗೆ ಮೀಸಲಾದ, ಕನ್ನಡಸಾಹಿತ್ಯದ ಇತಿಹಾಸದಲ್ಲೇ

ಪ್ರಥಮ ಮಾಸಪತ್ರಿಕೆ

ಸಂಪಾದಕರು:

ಡಾ|| ಎಂ. ಗೋಪಾಲಕೃಷ್ಣರಾಯರು

ಸಂಚಾಲಕರು:

ಶ್ರೀ. ಬೆಳಗಾವಿ ರಾಮಚಂದ್ರರಾಯರು

ವಾರ್ಷಿಕ ಚಂದಾ ೧ ರೂ. ಬಿಡಿಸಂಚಿಕೆ ೧ ಆಣೆ

ಕಲಿಯುಗ ಕಾರ್ಯಾಲಯ, ಧಾರವಾಡ.

ನಕಲೀ ಮಾಲು ಕೊಂಡು ಮೋಸಹೋಗಬೇಡಿರಿ !!

ಆಸೇತುಹಿಮಾಚಲ



೫೦ ವರುಷ ಪರ್ಯಂತ

ಖ್ಯಾತಿಗೊಂಡ ಅಂಜನರಾಜ

ಅಮೃತಾಂಜನ

ಅಮೃತಾಂಜನ ಲಿಮಿಟೆಡ್

ಮದ್ರಾಸು, ಬೊಂಬಾಯಿ, ಕಲ್ಕತ್ತಾ.

AMRUTANJAN LTD., BANGALORE BRANCH

Krishna Building,
Avenue Road, Bangalore City

ಗರತಿಯ ಹಾಡು

ಹಳ್ಳಿಯ ಹೆಣ್ಣುಮಕ್ಕಳ ಭಾವಪೂರ್ಣ ತ್ರಿಪದಿಗಳು.

ಸಾದಾ: ೧೦ ಆಣೆ.] **[ಕ್ಯಾಲಿಕೊ: ೧ ರೂ.**

ಹೆಣ್ಣುಮಕ್ಕಳು ಬೀಸುವಾಗ ತೊಟ್ಟಿಲ ತೂಗುವಾಗ ಇ. ಪ್ರಸಂಗಗಳಲ್ಲಿ ಹಾಡುವ ತ್ರಿಪದಿಗಳ ಸಂಗ್ರಹ. ಮೊದಲನೆಯ ಆವೃತ್ತಿಯು ಮುಗಿದುಹೋದುದರಿಂದ ಎರಡನೆಯದನ್ನು ಅಚ್ಚುಹಾಕಿಸಿದೆ. ಉಪೋದ್ಘಾತರೂಪವಾಗಿ ಶ್ರೀಯುತರುಗಳಾದ ಬಿ. ಎಂ. ಶ್ರೀಕಂಠಯ್ಯ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶಯ್ಯಂಗಾರ್ ಇವರ ಬರಹಗಳು. ಅವು ಜನಪದಸಾಹಿತ್ಯದ ಮರ್ಮವನ್ನು ತಿಳಿಸತಕ್ಕ ಶ್ರೇಷ್ಠತರಗತಿಯ ಪ್ರಬಂಧಗಳೇ ಆಗಿವೆ. ಅಪರಿಚಿತ ಮತ್ತು ಬಳಕೆಯ ಮಾತಿನ ಪದಪ್ರಯೋಗಗಳ ಸಾರ್ಥ ವಿವರಣೆ. ಆ್ಯಂಟಿಕ್ ಕಾಗದದ ಮೇಲೆ ಮುದ್ದಾದ ಮುದ್ರಣ. ಹೊದಿಕೆಯ ಮೇಲೆ ಭಾವಗರ್ಭಿತವಾದ ಸುಂದರ ಚಿತ್ರ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ

ಹೊರಡುತ್ತದೆ ! **ಹೊರಡುತ್ತ[...]**

ಮಧುರ ಕರ್ನಾಟಕ

(ಉತ್ತಮ ವರ್ಗದ ಸವಿಗನ್ನಡ ಮಾಸಪತ್ರಿಕೆ)

ಆರಂಭ | ೧೯೩೪ | ನವೆಂಬರ್

ಮನೋಹರವಾದ ಕತೆಗಳು! ಪ[...] ವಾದ ಕವಿತೆಗಳು! ರಮಣೀಯ[...] ಗದ್ಯಚಿತ್ರಗಳು! ಕಲಾಪರಿಣತರ [...] ವಾಣಿ! ಕರ್ನಾಟಕದ ಇತಿಹಾಸ [...] ಚಯ! ಸೊಗಸಾದ ನಾಟಕಗಳ [...] ಲನ! ಮತ್ತು ಕನ್ನಡಿಗರಿಗೆ ಬೇ[...] ವಿವಿಧ ಸಾಹಿತ್ಯ ಸಾಮಗ್ರಿ!

ನಿಮ್ಮ ಸಂಚಿಕೆಯನ್ನು ಕಾಯ್ದಿಡಲು ಇಂದೇ ಚಂದಾದಾ[...] ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ. ವಿಶೇಷ ವಿ[...] ಒಂದಾಣೆ ಸ್ಟ್ಯಾಂಪಿನೊಡನೆ ಬರೆಯಿರಿ.

ಮಧುರ ಕರ್ನಾಟಕ ಕಾರ್ಯಾ[...]
೧೪೦೫, ಕೃಷ್ಣರಾಜ ಮೊಹ[...]
ಮೈಸೂರು

ಸ್ತ್ರೀಯರ ಮೇಲೆ ಮನುವಿನ ಅಪಕಾರ !

ಅನುವಾದಕರು: ಶ್ರೀ. ಬಂಕಾಪುರ ದತ್ತರಾಯರು, ಸಂಪಾದಕ 'ನನ್ನನುಡಿ' ಹಾವೇರಿ.

ಹಿಂದೂ ಸ್ಮೃತಿಶಾಸ್ತ್ರಕಾರನಾದ ಪೂಜ್ಯಮನುವು ತನ್ನ ಸ್ಮೃತಿಯಲ್ಲಿ ಸ್ತ್ರೀಯರ ಬಗ್ಗೆ ತನ್ನ ವಿಲಕ್ಷಣವಾದ ಭಿನ್ನಾಭಿಪ್ರಾಯಗಳನ್ನು ಕಾಣಿಸಿದ್ದಾನೆ. ಒಂದು ಸ್ಮೃತಿಯಲ್ಲಿ, 'ನಾರಿಯರು ಎಲ್ಲಿ ಗೌರವಿಸಲ್ಪಡುವರೋ ಅಲ್ಲಿ ದೇವತೆಗಳು ತುಷ್ಟರಾಗುವರು. ಎಲ್ಲಿ ಸನ್ಮಾನಿಸಲ್ಪಡುವುದಿಲ್ಲವೋ ಅಲ್ಲಿ ಎಲ್ಲವೂ ನಿಷ್ಫಲವೇ.' ಎಂದು ಹೇಳಿರುವನು. ಈ ಉದಾರ ತತ್ತ್ವವನ್ನು ಉಲ್ಲೇಖಿಸಿದ ಉದಾರ ಲೇಖನಿ(?)ಯು, 'ಬಾಲ್ಯದಲ್ಲಿ ಹುಡುಗಿಯು ತಂದೆಯ, ಯೌವನದಲ್ಲಿ ಪತಿಯ, ವೈಧವ್ಯಾವಸ್ಥೆಯಲ್ಲಿ ಮಗನ ಪಾಲನೆಯಲ್ಲಿರಬೇಕೆಂ'ದು ಏಕೆ ಬರೆಯಿತೋ ! ಅವನ ಈ ನಿಯಮವು ಭಾರತೀಯ ಸ್ತ್ರೀಪ್ರಪಂಚಕ್ಕೆ ಸದಾ ಸರ್ವಕಾಲದಲ್ಲಿಯೂ ಸ್ಥಾಯಿಯಾಗಿರುವ ಮಹಾ ಅಭಿಶಾಪವಾಗಿದೆ.

★

'ಯಾವುದೊಂದು ರಾಷ್ಟ್ರದ ಸಂಸ್ಕೃತಿಗೆ, ಪ್ರಗತಿಗೆ, ಸಮೃದ್ಧಿಗೆ ಆ ರಾಷ್ಟ್ರದಲ್ಲಿಯ ಸ್ತ್ರೀಯರ ಸ್ಥಾನವೇ ಅಡಿಗಲ್ಲು-ಒರೆಗಲ್ಲು' ಎಂಬ ತತ್ವವು ಎಲ್ಲ ರಾಜಕಾರಣಿಗಳಿಗೇಕೆ ಎಲ್ಲರ ವಿವೇಕಕ್ಕೂ ಸಮ್ಮತವಾದುದು. ಈ ತತ್ತ್ವವನ್ನು ಭಾರತೀಯ ಪುರುಷರು ಎಷ್ಟರ ಮಟ್ಟಿಗೆ ಮನ್ನಿಸುತ್ತಿದ್ದರು ಇಲ್ಲವೆ ಮನ್ನಿಸುತ್ತಿದ್ದಾರೆ ಎಂಬುದನ್ನು ಪರ್ಯಾಲೋಚಿಸುವುದೇ ಪ್ರಸ್ತುತ ವಿಷಯವಾಗಿದೆ.

ಸ್ತ್ರೀ ಸ್ವಾತಂತ್ರ್ಯದ ಪುರೋಗಾಮಿಗಳೊಬ್ಬರು "ಸ್ತ್ರೀಯರಾದ ನಾವು ವೇದಕಾಲದಿಂದಲೂ ಪುರುಷಾವಲಂಬನದ ಶೃಂಖಲೆಯಿಂದ ಬದ್ಧರಾಗಿಯೇ ಇದ್ದೇವೆ" ಎಂದು ಸಾರುತ್ತಾರೆ. ಮೊದಲು ಮೊದಲು ಈ ಅವಲಂಬನವು ತೀರ ಹೇಯವಾದ ತಿರಸ್ಕಾರದ ರೂಪವಲ್ಲಿಯೇ ಇತ್ತು.

ಸಮಾಜದಲ್ಲಿ ಸ್ತ್ರೀಯ ಸ್ಥಾನವನ್ನು ಪತ್ನಿ, ಮಾತೃ, ನಾಗರಿಕೆ ಈ ದೃಷ್ಟಿಯಿಂದ ಆಳವಾಗಿ ಅಭ್ಯಸಿಸಿ ನೋಡಲಾಗಿ, 'ಸ್ತ್ರೀಯರು ಪುರುಷರಿಗಿಂತಲೂ ಕೀಳು' ಎಂಬ ವಿಚಾರವು ಅಸಹ್ಯವಾಗಿದೆಯೆಂಬುದನ್ನು ಅಲ್ಲಗಳೆಯಲು ಅಸಾಧ್ಯವು. ಭಾರತವೊಂದೇ ಈ ದುರ್ವಿಚಾರದಿಂದ ದೂಷಿತವಾಗಿದೆಯೆಂದಲ್ಲ—ಪಾಶ್ಚಾತ್ಯ ಹಾಗು ಪೌರಸ್ತ್ಯ ದೇಶಗಳಲ್ಲಿ ಎಲ್ಲಿ ಸುಧಾರಣೆಯು, ಸುಸಂಸ್ಕೃತಿಯು, ನಾಗರಿಕತೆಯು ಬೆಳೆದಿರುವುದೋ ಅಲ್ಲೆಲ್ಲಕಡೆಯೂ ಈ ದುರ್ವಿಚಾರದ ದುರ್ಗಂಧವು ಹರಡಿದೆ.

ಅನಾದಿ ಕಾಲದಲ್ಲಿ, ಭಾರತೀಯರು ತಮ್ಮ ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಸ್ಥಾನವನ್ನೂ ಸಮಾನ ಅಧಿಕಾರವನ್ನೂ ಕೊಟ್ಟಿದ್ದರು. ಕ್ರಿ. ಶ. ಪೂ. ೧೫೦೦ ವರುಷಗಳ ಹಿಂದೆಯೇ ವೇದಕಾಲದಲ್ಲಿ ಸ್ತ್ರೀಯರು ಸ್ವಾತಂತ್ರ್ಯವನ್ನು ಪಡೆದಿದ್ದರು. ಸ್ತ್ರೀಪುರುಷರ ಸ್ಥಾನಮಾನಗಳ ಬಗ್ಗೆ ವೇದಗಳಲ್ಲಿ ಯಥಾರ್ಥ ಉಲ್ಲೇಖವಿರದಿದ್ದರೂ ಸ್ತ್ರೀಯರು ಆಗ ಕೌಟುಂಬಿಕ ಹಾಗೂ ಸಾಮಾಜಿಕ ಜೀವನಗಳಲ್ಲಿ ಉಚ್ಚವಾದ ಸನ್ಮಾನ್ಯವಾದ ಸ್ಥಾನವನ್ನು ಹೊಂದಿದ್ದರೆಂದು ಹೇಳಲು ಸಾಕಷ್ಟು ಪ್ರಮಾಣಗಳಿವೆ.

ಚತುರ್ವೇದಗಳಲ್ಲಿ ಪುರಾತನವಾದ ಋಗ್ವೇದದಲ್ಲಿ ಕನ್ಯಾ, ಭಾರ್ಯಾ, ಮಾತಾ ಎಂಬ ಸ್ತ್ರೀಯರ ಅವಸ್ಥಾತ್ರಯಗಳಲ್ಲಿ ಅವರವರ ಸ್ಥಾನ ಮಾನಗಳ ಬಗ್ಗೆ ಸಂಕ್ಷಿಪ್ತ ಉಲ್ಲೇಖವಿದೆ. ಹುಡುಗಿಯು ಹುಡುಗನಷ್ಟೇ ಶಿಕ್ಷಣದ ಸವಲತ್ತನ್ನು ಪಡೆದಿದ್ದಳು. ಸ್ತ್ರೀಪುರುಷರ ಲಗ್ನದ ವಿಧಿಯು ಇದರಲ್ಲಿ ಬಹು ಸರಸವಾಗಿ ಉಲ್ಲಿಖಿತವಾಗಿದೆ. ಭಾರತದಲ್ಲಿ ಎಲ್ಲೆಲ್ಲಿಯೂ ಈ ವಿಧಿಯನ್ನನುಸರಿಸಿಯೇ ಈಗಲೂ ಲಗ್ನಗಳು ಜರುಗುತ್ತಿವೆ. ವಧೂವರರಿಬ್ಬರೂ ಪ್ರೌಢವಯಸ್ಕರಾಗಿಯೇ ಅಂದರೆ 'ಅವರು ಹಿತಾಹಿತ, ಯೋಗ್ಯಾಯೋಗ್ಯ, ಸಾರಾಸಾರ ವಿಚಾರವನ್ನು ಮಾಡಲು ಶಕ್ತರಾದ ಮೇಲೆಯೇ ಲಗ್ನವಾಗಬೇಕು' ಎಂದು ಸ್ಪಷ್ಟ ಉಲ್ಲೇಖವಿದೆ. ಅಲ್ಲದೆ ವರನಿಗೆ ಎಷ್ಟು ಅಧಿಕಾರವೋ ವಧುವಿಗೂ ಅಷ್ಟೇ ಅಧಿಕಾರವಿದೆಯೆಂದು ಈ ವೇದವೇ ಸಾರುತ್ತಿದೆ. ತವರು ಮನೆಯಿಂದ ವಧುವು ಗಂಡನ ಮನೆಗೆ ಬಂದಾಗ, ಗಂಡನ ಕಡೆಯ ಹಿರಿಯರು, "ಬಾರಮ್ಮ ಸುಮಂಗಲೆಯೇ, ಸೌಮ್ಯಳೇ, ಪತಿಗೃಹವನ್ನು ಪ್ರವೇಶಿಸು. ಪತಿಗೃಹದ

ಭಾಗ್ಯಲಕ್ಷ್ಮಿಯಾಗಿರು; ವೀರಪುತ್ರರ ವೀರಮಾತೆಯಾಗು; ಸದಾ ಕಲ್ಯಾಣಿನಿಯಾಗಿರು." ಎಂದು ಹರಸುತ್ತಾರೆ. ಈ ಹರಕೆ ಕೌಟುಂಬಿಕ ಜೀವನದಲ್ಲಿ ಸ್ತ್ರೀಯರ ಸ್ಥಾನಮಾನಗಳ ಪುರಃ ಸೂಚನೆಯಾಗಿದೆಯಲ್ಲವೇ? ಈಗಲೂ ಹರಸುವ ವಾಡಿಕೆಯಿದೆ—ಪುರೋಹಿತನ ಮುಖಾಂತರ. ಆದರೆ ವಾಡಿಕೆಯು 'ವಾಡಿಕೆ'ಯ ರೂಪದಲ್ಲಿಯೇ ಇದೆ. ಮತಿಯಲ್ಲಿಯೂ ಇಲ್ಲ. ಕೃತಿಯಲ್ಲಂತೂ ಇಲ್ಲವೇ ಇಲ್ಲ.

ಪುರಾಣಯುಗದಲ್ಲಿ ಅಂದರೆ ಕ್ರಿ. ಶ. ಪೂ ೧೫೦೦ರಿಂದ ೫೦೦ರ ವರೆಗೆ, ಸ್ತ್ರೀಯರ ಸ್ಥಾನಮಾನಗಳು ಸ್ವಲ್ಪವೂ ಕುಂದಿರಲಿಲ್ಲ. ಈ ಕಾಲದಲ್ಲಿ ಸ್ತ್ರೀಯರು ಸುಧಾರಣೆಯ ಸುಸಂಸ್ಕೃತಿಯ ಮೇಲ್ಮಟ್ಟವನ್ನು ಮುಟ್ಟಿದ್ದರೆಂದು ಅನೇಕ ವಿದ್ವಾಂಸರ ಮತ. ವೇದಕಾಲದಲ್ಲಿಯಂತೆ ಪುರಾಣಕಾಲದಲ್ಲಿಯೂ ಮದುವೆಯ ವಿಚಾರದಲ್ಲಿ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯವಿದ್ದಿತು. ಆಗಿನ ರಾಜ-ಮಹಾರಾಜರು ತಮ್ಮ ಕುಮಾರಿಯ 'ಸ್ವಯಂ-ವರ' (ತಾನೇ ವರನನ್ನು ಆರಿಸಿಕೊಳ್ಳುವುದು)ವನ್ನು ಏರ್ಪಡಿಸುತ್ತಿದ್ದರೆಂಬುದೇ ಇದಕ್ಕೆ ತಕ್ಕ ಪ್ರಮಾಣ. ನೃತ್ಯ ಗಾಯನಗಳಲ್ಲಿಯೂ ಆನೆ ಕುದುರೆ ರಥ ಮುಂತಾದ ವಾಹನ ವಿಶೇಷಗಳನ್ನು ಉಪಯೋಗಿಸುವುದರಲ್ಲಿಯೂ ಸ್ತ್ರೀಯರು ಅತ್ಯಂತ ಕುಶಲರಿದ್ದರು. ಸಾರಥ್ಯವನ್ನು ವಹಿಸಿಕೊಂಡು ತಮ್ಮ ತಮ್ಮ ಗಂಡಂದಿರಿಗೆ ಯುದ್ಧದಲ್ಲಿಯೂ ನೆರವಾಗುತ್ತಿದ್ದರು. ಮಹಾಭಾರತದಲ್ಲಿಯ ಸುಭದ್ರೆಯೇ ಇದಕ್ಕೆ ಸಾಕ್ಷಿ. ಸನ್ಯಾಸಿಯ ವೇಷದಲ್ಲಿಯ ಅರ್ಜುನನ ಕೈಯೊಳಗಿನ ರಥದ ಕುದುರೆಗಳ ಕಡಿವಾಣಗಳನ್ನು ತನ್ನ ಕೈಯೊಳಗೆ ತೆಗೆದುಕೊಂಡು ಬೆಂಬತ್ತಿ ಬರುವ ತನ್ನ ತಂದೆಯ ಶೂರ ಸೈನಿಕರಿಗೂ ಸೊಪ್ಪು ಹಾಕದೆ ಮಹಾ ಮಹಾ ಯೋಧರು ಬೆರಳು ಕಚ್ಚುವಂತೆ ಸಾರಥ್ಯವನ್ನು ಮಾಡಿದ ಸುಭದ್ರೆಯ ಉದಾಹರಣೆಯೊಂದೇ ಇದಕ್ಕೆ ಸಾಕು.

ಆಗ ಸ್ತ್ರೀಯರು ಪುರುಷರಂತೆಯೇ ಸುಶಿಕ್ಷಿತೆಯರೂ, ವಿದುಷಿಯರೂ, ಶಿಕ್ಷಕಿಯರೂ ಆಗಿದ್ದರು. ಕೌಟುಂಬಿಕ ಜೀವನದಲ್ಲಿ ಅರ್ಧಾಂಗಿಯರು ನಿಜವಾಗಿಯೂ 'ಅರ್ಧಾಂಗಿ'ಯರೇ ಆಗಿದ್ದರು. 'ಪತಿ'-'ಪತ್ನಿ' ಎಂಬ ಶಬ್ದಗಳೇ ಸ್ತ್ರೀಪುರುಷರ ಸಮಾನಾಧಿಕಾರವನ್ನು ವ್ಯಕ್ತಪಡಿಸುತ್ತವೆ. ಧರ್ಮಕಾರ್ಯಗಳಲ್ಲಿಯೂ ಸ್ತ್ರೀಯರಿಗೆ ಸಮಾನ ಸ್ಥಾನವೇ. ಪತಿಪತ್ನಿಯರಿಬ್ಬರೂ ಒಂದುಗೂಡಿ ಭಾಗ ವಹಿಸದಿದ್ದ ಧರ್ಮಕಾರ್ಯವೇ ಇಲ್ಲ. ಶ್ರೀರಾಮಚಂದ್ರನು ರಾಜಸೂಯ ಯಾಗವನ್ನು ಮಾಡುವಾಗ ನಿಜವಾದ ಸೀತೆಯು ವನವಾಸ-ವನ್ನು ಭೋಗಿಸುತ್ತಿದ್ದುದರಿಂದ ಆಕೆಯ ಬಂಗಾರದ ಪ್ರತಿಮೆಯನ್ನಾದರೂ ಮಾಡಿಡಬೇಕಾಯ್ತೆಂಬುದು ರಾಮಾಯಣದ ಅವಲೋಕನ ಮಾಡಿದವರಿಗೆ ಗೊತ್ತಿರಲು ಸಾಕು.

ಪುರಾಣಕಾಲದಿಂದೀಚೆಗೆ, ಆರ್ಯರ ನಿಯಮವುಗಳೂ ಶಾಸ್ತ್ರಗಳೂ ಭಾರತದಲ್ಲಿ ವ್ಯವಸ್ಥಾಪಿತವಾದ ಮೇಲೆ, ಸ್ತ್ರೀಯರ ಬಗ್ಗೆ ಭಾರತೀಯ ಪುರುಷರ ದೃಷ್ಟಿಯು ತೀರ ವಿಲಕ್ಷಣವಾಗಿದೆಯೆಂದು ಕಂಡು ಬರುತ್ತದೆ. ಒಂದು ಕಡೆ ಸ್ತ್ರೀಯು ಪುರಾಣ ಕಾಲದ ಸನ್ಮಾನದ ಅತ್ಯುಚ್ಚ ಸ್ಥಾನಕ್ಕೇರಿದರೆ, ಮತ್ತೊಂದು ಕಡೆಗೆ ನಿಯಮಿತ ನಿಯಮಗಳ ಸಂಕೋಲೆಗೊಳಗಾಗಿ ಪುರುಷಾವಲಂಬನದ ಬೊಂಬೆಯಾಗಿ ಮನೆಯಲ್ಲಿ ಕೊಳೆಯುತ್ತಿದ್ದಾಳೆ. ಹಿಂದೂ ಸ್ಮೃತಿಕಾರನಾದ ಪೂಜ್ಯ ಮನುವು ತನ್ನ ಸ್ಮೃತಿಯಲ್ಲಿ ಸ್ತ್ರೀಯರ ಬಗ್ಗೆ ತನ್ನ ವಿಲಕ್ಷಣವಾದ ಭಿನ್ನಾಭಿಪ್ರಾಯಗಳನ್ನು ಕೊಟ್ಟಿದ್ದಾನೆ. ಒಂದು ಸ್ಮೃತಿಯಲ್ಲಿ, 'ನಾರಿಯರು ಎಲ್ಲಿ ಗೌರವಿಸಲ್ಪಡುವರೋ ಅಲ್ಲಿ ದೇವತೆಗಳು ತುಷ್ಟರಾಗುವರು. ಎಲ್ಲಿ ಸನ್ಮಾನಿಸಲ್ಪಡುವುದಿಲ್ಲವೋ ಅಲ್ಲಿ ಎಲ್ಲವೂ ನಿಷ್ಫಲ' ಎಂದು ಹೇಳಿರುವನು. ಈ ಉದಾರ ತತ್ವವನ್ನು ಉಲ್ಲೇಖಿಸಿದ ಉದಾರ ಲೇಖನಿ(?)ಯು, 'ಬಾಲ್ಯದಲ್ಲಿ ಹುಡುಗೆಯು ತಂದೆಯ, ಯೌವನದಲ್ಲಿ ಪತಿಯ, ವೃದ್ಧಾವಸ್ಥೆಯಲ್ಲಿ ಮಗನ ಪಾಲನೆಯಲ್ಲಿರಬೇಕೆಂದು ಏಕೆ ಬರೆಯಿತೋ !

ಇಂಗ್ಲಿಷಿನಲ್ಲಿ ಒಂದು ಗಾದೆಯಿದೆ, 'The evil that men do lives after them; The good is oft interred with their bones.' (ಮಾನವರು ಮಾಡಿದ ಪಾಪವು ಅವರು ಅಳಿದರೂ ಉಳಿದೇ ಇರುತ್ತದೆ. ಪುಣ್ಯವು ಅವರ ಬೂದಿಯಲ್ಲಿಯೇ ಮುಚ್ಚಿ ಹೋಗುತ್ತದೆ.) ಸ್ತ್ರೀಯರ ಮೇಲೆ ಮಾಡಿದ ಮನುವಿನ ಅಕ್ಷಮ್ಯ ಅಪಕಾರವು ಇಡೀ ಸ್ತ್ರೀಪ್ರಪಂಚಕ್ಕೆ ತಟ್ಟಿದೆ. ಸ್ತ್ರೀಸ್ವಾತಂತ್ರ್ಯದ ಸುಲಿಗೆಗಾರನಾದ ಮನುವು ಅಳಿದು ಹೋಗಿ ಎಷ್ಟೋ ವರುಷಗಳು ಆದರೂ ಅವನ ಈ ಅಪಕಾರವು ಮಾತ್ರ ಇನ್ನೂ ಉಳಿದಿದೆ. ಅವನ ಈ ನಿಯಮವು ಭಾರತೀಯ ಸ್ತ್ರೀಪ್ರಪಂಚಕ್ಕೆ ಸರ್ವಕಾಲದಲ್ಲಿಯೂ ಸ್ಥಾಯಿಯಾಗಿರುವ ಮಹಾ ಶಾಪವಾಗಿದೆ. ಸ್ತ್ರೀಸ್ವಾತಂತ್ರ್ಯಾಪಹರಣದ ಕುಹಕಬುದ್ಧಿಯು ಮನುವಿನ ಕಾಲದಿಂದಲೇ ನೆಲೆಗೊಂಡಿದ್ದು ಸುಗಮ ಪ್ರಗತಿಗೆ ವಜ್ರಾಘಾತವನ್ನಿತ್ತುದಲ್ಲದೆ

...ವಾದ ಸನ್ಮಾನ್ಯಸ್ಥಾನದಲ್ಲಿದ್ದ ಅವರನ್ನು ಕ್ರಮೇಣ ಅಧೋಗತಿಗೆ ತಂದು, ಅವರಿನ್ನೆಂದೂ ಸ್ವತಂತ್ರರಾಗಿ ಸಮಾಜದಲ್ಲಿ ತಲೆಯೆತ್ತದಂತೆಯೂ ಸದಾ ಪರಾನ್ನೋಪಜೀವಿಗಳಾಗಿ, ಪುರುಷರಿಗೆ ವಿಧೇಯರಾಗಿ ಅವರನ್ನು ಹಿಸ್ನೆಳಲಂತೆ ಹಿಂಬಾಲಿಸುವವರನ್ನಾಗಿಯೂ ಮಾಡಿದ ಮನುವಿನ ಅಪಕಾರವು ಅಷ್ಟಿಷ್ಟಲ್ಲ !!

(—ಶ್ರೀ. ಮಾಧುರೀದತ್ತರ ಲೇಖನದಿಂದ)

[ಹಾವೇರಿಯ ಕೆಳೆಯರ ಕೂಟದ 'ನನ್ನನುಡಿ'ಯಿಂದ]

ಆರೋಗ್ಯಬಿಂದು

ತೈಲಾಭ್ಯಂಗ

'ಕೊನೆಗೆ ವಾರಕ್ಕೊಮ್ಮೆಯಾದರೂ ಎಂಣೆ ಹಚ್ಚಿಕೊಂಡು ಅಭ್ಯಂಗಮಾಡದಿದ್ದರೆ ನನಗೆ ಸಮಾಧಾನವೆನಿಸುವದಿಲ್ಲ' ಎನ್ನುವ ಅನೇಕರಿದ್ದಾರೆ. ಸ್ನಾನ ಮಾಡುವ ಪೂರ್ವದಲ್ಲಿ ಎಂಣೆ ಹಚ್ಚಿಕೊಳ್ಳಲೇಬೇಕೆಂದು ಮಕ್ಕಳನ್ನು ಒತ್ತಾಯಪಡಿಸುವ ತಾಯಂದಿರಿದ್ದಾರೆ. ದಿನಾಲು ಎಂಣೆ ಮಜ್ಜನ ಮಾಡಿಕೊಳ್ಳುವ ಅನುಕೂಲವಿದ್ದವರು ಭಾಗ್ಯವಂತರೆಂದು ನಮ್ಮೆಲ್ಲರ ಭಾವನೆಯೂ ಇದೆ. ಆದರೆ ನಿಜವಾಗಿಯೂ ತೈಲಸ್ನಾನದಿಂದ ಏನಾದರೂ ಉಪಯೋಗವಿದೆಯೆ? ಶರೀರವಿಜ್ಞಾನಿಗಳು 'ಕೃತ್ರಿಮ ತೈಲಗಳಿಂದ ಶರೀರದ ನೈಜತೈಲಗಳ ಸೆಲೆಯು ಬತ್ತುವದು' ಎಂದು ಹೇಳುತ್ತಾರೆ. ಎಂದರೆ ನಮ್ಮ ಚರ್ಮದಲ್ಲಿ ನೈಜವಾದ ಒಂಧು ವಿಧದ ಎಂಣೆಯಿದ್ದೆ ಇರುತ್ತದೆ. ಕೃತ್ರಿಮವಾಗಿ ನಾವು ಎಂಣೆ ಹಚ್ಚುತ್ತ ಹೋದಂತೆ ಸಹಜವಾದ ಎಂಣೆಯ ಪ್ರಮಾಣವು ಕಡಿಮೆಯಾಗುತ್ತ ಹೋಗುವದು. ನಂತರ ನಾವು ಎಂಣೆ ಹಚ್ಚಿಕೊಳ್ಳುವದನ್ನು ನಿಲ್ಲಿಸಿದಾಗ ಸಹಜ ತೈಲವು ಕಡಿಮೆಯಾದುದರಿಂದ ಮೈಯಲ್ಲ ಹೊಟ್ಟೀಳ ಹತ್ತುವದು. ಕೃತ್ರಿಮತೈಲವನ್ನು ಉಪಯೋಗಿಸುತ್ತಿರುವವರೆಗೆ ಮೈಯೇನೋ ನುಣುಪಾಗಿರುವದು. ಆದರೆ ಅದನ್ನು ನಿಲ್ಲಿಸಿದ ಕೂಡಲೆ ಚರ್ಮವು ಒರಟಾಗುವದು. ಆದುದರಿಂದ ನಿತ್ಯವೂ ಎಂಣೆಹಚ್ಚಿ ಸ್ನಾನ ಮಾಡುವದು ಒಳಿತಲ್ಲ. ತೈಲಾಭ್ಯಂಗವು ಚಿಕಿತ್ಸಾದೃಷ್ಟಿಯಿಂದ ಒಳ್ಳೇದಾಗಬಹುದು. ಆದರೆ ಅದು ನಿತ್ಯವಿಧಿಯಾಗಬಾರದು.

ಚಹಾ, ಕಾಫಿ, ಕೋಕೋ

ಚಹಕ್ಕಿಂತ ಕಾಫಿ ಒಳ್ಳೇದು; ಕಾಫಿಗಿಂತ ಕೋಕೋ ಒಳ್ಳೇದು; ಎಂದು ಸಾಮಾನ್ಯರ ಗ್ರಹಿಕೆಯಿದೆ. ಆದ್ದರಿಂದ ಚಹದ ಚಟವಿದ್ದವರು ಕಾಫಿಯನ್ನು ಕುಡಿಯಲಾರಂಭಿಸಿ ತಾವು ಸುಧಾರಿಸಿದೆವೆಂದು ಸಮಾಧಾನ ತಂದುಕೊಳ್ಳುವರು. ವಸ್ತುತಃ ಅವೆಲ್ಲವೂ ಒಂದೇ ತೂಕದ ಚಟಗಳಾಗಿವೆ. ಅವೆಲ್ಲವೂ ಒಂದಿಲ್ಲೊಂದು ವಿಷವಸ್ತುವುಳ್ಳವುಗಳೆ ಆಗಿವೆ. ಅವುಗಳಲ್ಲಿ ತಾರತಮ್ಯವಿಲ್ಲ. ಚಹದ ಚಟದವರಿಗೆ ಕಾಫಿಯಿಂದಲೂ ಸಮಾಧಾನವಾಗುವದೇ[illegible] ಮೇಲೆ ಚಹದಲ್ಲಿರುವಂತಹ ಉತ್ತೇಜಕ ವಿಷವು [illegible]ಯಲ್ಲಿಯೂ ಇದೆಯೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತ[illegible] ಆ ವಿಷದ ಬಾಧೆಯಾಗಬಾರದೆಂತಲೆ ಚಹ ಕು[illegible]ಬಾರದು. ಆದುದರಿಂದ ಚಹ ಬೇಡವೆಂದರೆ ಕಾಫಿಯು ಬೇಡ ಕೋಕೋನೂ ಬೇಡವೆಂದರ್ಥ.

ಕಸಗೂಡಿಸುವದು

ಕಸವಿದ್ದರೆ ಹೇಸಿಕೆಯಾಗುವದೆಂದು ಅದನ್ನು ಗೂಡಿ[illegible] ಕೋಣೆಯನ್ನು ಹಸನಗೊಳಿಸುತ್ತೇವೆ. ಆದರೆ ಕಸಗೂಡಿ[illegible]ವಾಗ ಮೂಗು ಗಂಟಲೆಲ್ಲ ಕಸದಿಂದ ತುಂಬಿಕೊಳ್ಳುವ[illegible] ಇದ್ದಾರೆ. ಆವರು ಮನೆಯ ಹೊರಗೆ ಹಾಕಬೇಕಾ[illegible] ಕಸವನ್ನು ಗಂಟಲಲ್ಲಿ ಹಾಕಿಕೊಂಡಂತಾಗಲಿಲ್ಲವೆ? [illegible] ಕಸವು ಪುಪ್ಪುಸಗಳಲ್ಲಿ ಸೂಕ್ಷ್ಮವಾಗಿ ನೆಲೆಗೊಂಡು ಕ್ರಮೇ[illegible] ಕೆಮ್ಮು ದಮ್ಮುಗಳಿಗೆ ಕಾರಣವಾಗುವದು. ಆದಕ್ಕಾಗಿ ಕ[illegible]ಗೂಡಿಸುವ ಪೂರ್ವದಲ್ಲಿ ನೀರು ಸಿಂಪಡಿಸಬೇಕೆಂಬ[illegible] ಎಲ್ಲರಿಗೂ ಗೊತ್ತು. ನೀರು ಸಿಂಪಡಿಸಿದ ಮೇಲೂ ಗೂ[illegible]ಸುವಾಗ ಸೂಕ್ಷ್ಮವಾದ ಕಸವು ಗಾಳಿಯಲ್ಲಿ ತೇಲುತ್ತ[illegible] ಇರುವದು. ಕಸಗೂಡಿಸುವಾಗ ಗಾಳಿಬೀಸುವ ದಿಕ್ಕನ್ನ[illegible] ಲಕ್ಷಿಸಬೇಕು. ಗಾಳಿಗಿದಿರಾಗಿ ಗೂಡಿಸಿದರೆ ಪೊರಕೆ ಮು[illegible] ಮುಂದೆ ಹೋದರೂ ಕಸವು ಹಿಂದೆಹಿಂದೆಯೆ ಓಡುವ[illegible] ಆದುದರಿಂವ ಗಾಳಿಯ ದಿಕ್ಕನ್ನು ಹಿಡಿದು ಕಸಗೂಡಿ[illegible] ಕಸವೂ ಗುಂಪಾಗುವುದಲ್ಲದೆ ಮೂಗು ಗಂಟಲುಗಳಲ್ಲಿ [illegible] ವಿಳಿಯುವದೂ ತಪ್ಪುವದು.

ಸರ್ವಾಂಗ ವ್ಯಾಯಾಮ

ನಿತ್ಯ ವ್ಯಾಯಾಮ ಮಾಡುವ ಕ್ರಮವನ್ನಿಟ್ಟುಕೊ[illegible]ವರು ತಮ್ಮ ಶರೀರದ ಎಲ್ಲ ಅವಯವಗಳಿಗೂ ವ್ಯಾಯಾ[illegible] ಸಿಗುವಂತೆ ಲಕ್ಷಿಸಬೇಕು. ಬರಿ ರಟ್ಟೆಗಳೂ ತೊಡೆ[illegible] ಗಟ್ಟಿಮುಟ್ಟಾದರೆ ಸಾಲದು. ಅನೇಕ ವ್ಯಾಯಾಮ [illegible] ಕುತ್ತಿಗೆಯ ಸ್ನಾಯುಗಳು ದುರ್ಬಲವಾಗಿರುವವು. [illegible]ವಾಗಿ ಕುತ್ತಿಗೆಯ ಮಾಂಸಖಂಡಗಳೆ ಬಲಗೊಳ್ಳುವ[illegible] ಕೆಲವು ವ್ಯಾಯಾಮಗಳನ್ನು ಅವರು ಮಾಡಬೇಕು. [illegible] ಕಂಣುಗಳಿಗೂ ಸ್ನಾಯುಗಳಿವೆ. ಅವುಗಳಿಗೂ [illegible] ಕೊಡುವ ವ್ಯಾಯಾಮದ ಅಗತ್ಯವಿದೆ. ಹಲವು [illegible] ಸಾಧಕರ ದೇಹವೆಲ್ಲವೂ ಗಟ್ಟಿಯಾಗಿದ್ದರೂ ಬಹು[illegible] ಕಂಣಿನ ಕಸುವು ಕಡಿಮೆಯಾದ ಉದಾಹರಣೆಗಳಿವೆ.

ಹಸ್ತಸಾಮುದ್ರಿಕ

ಬರೆದವರು:—ಜಿ. ಎಸ್. ಕಲಮುದಾನಿ ಧಾರವಾಡ.

ಹಸ್ತಾಕೃತಿಯನ್ನು ಪರೀಕ್ಷಿಸಿ ವ್ಯಕ್ತಿಯ ಸ್ವಭಾವ, ರೀತಿ, ನಡಾವಳಿಗಳನ್ನು ತಿಳಿದುಕೊಳ್ಳಬಹುದೆಂದು ಹೋದ ಲೇಖನದಲ್ಲಿ ಸ್ಪಷ್ಟಪಡಿಸಿದ್ದೇನೆ. ಈಗ ಬೆರಳುಗಳ ಸಾಮುದ್ರಿಕವನ್ನು ಹೇಳುವೆನು—ಲೇಖಕ.

ಲೇಖನ ೨

ಬೆರಳುಗಳು

ಹೆಬ್ಬೆಟ್ಟು

ಬೆರಳುಗಳನ್ನು ಪರೀಕ್ಷಿಸಿ ವ್ಯಕ್ತಿಯ ಮಾನಸಿಕಸ್ಥಿತಿಯನ್ನು ತಿಳಿಯಬಹುದು. ಬೆರಳುಗಳಲ್ಲಿ ಮುಖ್ಯವಾದುದು ಹೆಬ್ಬೆಟ್ಟು. ಹೆಬ್ಬೆಟ್ಟಿನಲ್ಲಿ ನಾವು ಮೂರು ಭಾಗಗಳನ್ನು ಮಾಡಬಹುದು. ಹೆಬ್ಬೆಟ್ಟಿನ ಮೊದಲನೆಯ ಗಣ್ಣಿನ ಅಂತರದಿಂದ ವ್ಯಕ್ತಿಯಲ್ಲಿಯ ಪ್ರೀತಿಯ ಪರಿಮಾಣವನ್ನು ಕಾಣಬಹುದು. ನಡುಗಣ್ಣಿನ ಅಂತರದಿಂದ ವ್ಯಕ್ತಿಯ ತರ್ಕಶಕ್ತಿಯನ್ನಳೆಯಬಹುದು. ಮೂರನೆಯದು (ಬೆರಳತುದಿ ಭಾಗ) ಮನೋದಾರ್ಢ್ಯವನ್ನು ಸೂಚಿಸುವದು. ಗಣ್ಣಿನ ಅಂತರವು ಹೆಚ್ಚಿದಂತೆ ಗುಣಗಳು ಸಹ ಬಲವತ್ತರವಾಗುವವು.

ಹೆಬ್ಬೆಟ್ಟಿನಲ್ಲಿ ಎರಡು ವರ್ಗಗಳನ್ನು ಮಾಡಬಹುದು, ಮಿದುವುಗಣ್ಣಿನದು, ಬಿರುಸುಗಣ್ಣಿನದು ಎಂದು. (ಚಿ. ೩) ಮಿದುವುಗಣ್ಣಿನ ಹೆಬ್ಬೆಟ್ಟು ಹಸ್ತದಿಂದ ಹೊರಗೆ ಬಾಗಿದಂತೆ ತೋರುವದು. ಮತ್ತು ಮೂರನೆಯ ಗಣ್ಣು ಬಹು ಮೆತ್ತಗಿರುವದು. ಇಂತಹ ಹೆಬ್ಬೆಟ್ಟುಳ್ಳವರು ತಮ್ಮ ಜೊತೆಗಾರರು ಹೇಳಿದಂತೆಯೇ ವರ್ತಿಸುವರು. ಇವರು ಉದಾರ ಮನಸ್ಸಿನವರು. ಪೂರ್ವಾಚಾರಪದ್ಧತಿಗಳನ್ನು ತಿರಸ್ಕರಿಸುವವರು, ವಿಚಾರದಲ್ಲಿ ಚತುರರು, ಮತ್ತು ದುಂದುಗಾರರು. ಇವರ ಹಸ್ತದಲ್ಲಿಯ ಜ್ಞಾನರೇಖೆಯು ಡೊಂಕಾಗಿ ಕ್ರಮೇಣ ಕೆಳಗಿಳಿದಿದ್ದರೆ ಈ ಗುಣಗಳು ಇವರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುವವು. ಅದು ಡೊಂಕಾಗಿರದೆ ನೆಟ್ಟಗೆ ಇದ್ದರೆ ಆ ವ್ಯಕ್ತಿಯು ಪೂರ್ವಾಚಾರ ಪದ್ಧತಿಗಳನ್ನು ಅಕ್ಷರಶಃ ಪಾಲಿಸುವನು.


ಹೆಬ್ಬೆಟ್ಟು ಹಸ್ತಕ್ಕೆ ಅಂಟಿಕೊಂಡಿದ್ದರೆ, ಅಥವಾ ಉಳಿದ ಬೆರಳುಗಳ ಹಾಗೆ ಅದು ಹಸ್ತದಿಂದ ದೂರ ವಿಂಗಡಿಸಲು ಬಾರದಂತೆ ಕಂಡರೆ ವ್ಯಕ್ತಿಯು ಮಿತವ್ಯಯದಿಂದ ಜೀವನ ಸಾಗಿಸುವನು. ಇಂತಹ ಹೆಬ್ಬೆಟ್ಟಿನ ಮೂರನೆಯ ಗಣ್ಣು ಒಳಗಡೆಗೆ ಬಾಗಿದಂತೆ ತೋರಿದರೆ ಅವನು ಜೀನನಾಗುವನು.

ಮಿದುವುಗಣ್ಣಿನ ಹೆಬ್ಬೆಟ್ಟುಳ್ಳ ವ್ಯಕ್ತಿಯು ಪೂರ್ಣ ವಿಚಾರ ಮಾಡದೆ ಒಮ್ಮೆಲೇ ತನ್ನ ಅಭಿಪ್ರಾಯ ಕೊಡುವನು. ಇವನು ಸಹಾಯಮಾಡಲು ಒಪ್ಪಿದರೆ ಕೂಡಲೆ ಅವನಿಂದ ಕೆಲಸಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅವನು ತನ್ನ ಅಭಿಪ್ರಾಯವನ್ನು ಬದಲು ಮಾಡಬಹುದು. ಆದರೆ ಬಿರುಸುಗಣ್ಣಿನ ಹೆಬ್ಬೆಟ್ಟುಳ್ಳವನು ಮೊದಲು ಪೂರ್ಣವಿಚಾರ ಮಾಡುವನು. ಆ ಮೇಲೆ ಸಹಾಯ ಮಾಡಲು ಒಪ್ಪುವನು. ಮಾತು ಕೊಟ್ಟಮೇಲೆ ಬೇಕಾದ ವಿಘ್ನಗಳು ಬಂದರೂ ಅವಕ್ಕೆ ಎದೆಗೊಟ್ಟು ತನ್ನ ವಚನ ಪಾಲಿಸುವನು.

ಬಿರುಸುಗಣ್ಣಿನ ಹೆಬ್ಬೆಟ್ಟುಳ್ಳವನು ಸಹನಶೀಲನು. ಮೂರನೆಯಗಣ್ಣಿನ ಅಂತರವು ಹೆಚ್ಚು ಇದ್ದಂತೆ ಮನೋದಾರ್ಢ್ಯವು ಅವನಲ್ಲಿ ಹೆಚ್ಚು ಇರುವದು. ಮಿದುವುಗಣ್ಣಿನ ಹೆಬ್ಬೆಟ್ಟುಳ್ಳವನಂತೆ ಇವನು ಬೇಗನೆ ಹೆರವರೊಂದಿಗೆ ಸ್ನೇಹ ಬೆಳೆಸಲಾರನು. ಇವನಿಗೆ ಸ್ನೇಹಿತರು ತೀರ ಕಡಿಮೆ. ಕೂಡಿದವರ ಸಂಗಡ ಹರಟೆ ಕೊಚ್ಚಲಾರನು. ಯಾವುದಾದರೊಂದು ವಿಷಯವನ್ನೆತ್ತಿ ತರ್ಕಬದ್ಧವಾಗಿ ವಾದಿಸುವದರಲ್ಲಿ ಹೆಚ್ಚು ಆಸಕ್ತನೂ ಇದೇ ರೀತಿಯ ಹರಟೆ ಹೊಡೆಯುವವನೂ ಆಗಿರುವನು.

ಮಿದುವುಗಣ್ಣಿನ ಹೆಬ್ಬೆಟ್ಟುಳ್ಳವನು ಹರಟೆಮಲ್ಲನು, ಮತ್ತು ಗೆಳೆತನಕ್ಕೆ ಯೋಗ್ಯನು. ಪ್ರವಾಸಮಾಡುವಾಗ ಗಾಡಿಯಲ್ಲಿ ಉಳಿದ ಪ್ರಯಾಣಿಕರ ಸಂಗಡ ಬಹು ಬೇಗ ಸ್ನೇಹ ಬೆಳೆಸುವನು. ಹೆರವರ ಆಪತ್ತಿನಲ್ಲಿ ನೆರವಾಗುವನು.

ಗಂಟುಗಣ್ಣಿನ ಹೆಬ್ಬೆಟ್ಟು (ಚಿ. ೩) ಅಸಂಸ್ಕೃತ ಹಸ್ತದಲ್ಲಿರುವದನ್ನು ನಾವು ಕಾಣುವೆವು. ಈ ಹೆಬ್ಬೆಟ್ಟುಳ್ಳವರು



ಚಿತ್ರ ೩

೫

೧ ಗಂಟುಗಣ್ಣಿನ ಹೆಬ್ಬೆಟ್ಟು ೨ ಮಿದುವುಗಣ್ಣಿನದು. ೩ ಬಿರುಸುಗಣ್ಣಿನದು. ೪ ನಡುಸಣ್ಣಾದದ್ದು ೫. ನೀಟಾದದ್ದು. ೬ ಅಸಂಸ್ಕೃತ ವರ್ಗಕ್ಕೆ ಸೇರಿದ್ದು,

ಪಶುವಿನಂತೆ ಹುಂಬರಾಗಿರುವರು. ತಮ್ಮ ಮನಸ್ಸಿನ ವಿರುದ್ಧ ವರ್ತನೆಗಳಾದರೆ ಇವರು ಕ್ರೋಧಾವೇಶದಿಂದ ಮೂರ್ಖರಂತೆಯೂ, ಹುಚ್ಚರಂತೆಯೂ ಜಿಗಿದಾಡಿ ಅನರ್ಥವನ್ನುಂಟು ಮಾಡುವರು. ತಮ್ಮ ಮೇಲೆಯೆ ತಮಗೆ ಸ್ವಾಮಿತ್ವವಿರುವದಿಲ್ಲ. ಇವರು ಸಿಟ್ಟಿಗೆದ್ದಾಗ ಅಪಘಾತವನ್ನಾಗಲಿ ಭಯಂಕರ ಅಪರಾಧವನ್ನಾಗಲಿ ಮಾಡಬಹುದು. ಗಂಟುಗಣ್ಣಿನ ಹೆಬ್ಬೆಟ್ಟು ಕೊಲೆಗಡಕ ಪ್ರವೃತ್ತಿಯುಳ್ಳವರ ಹಸ್ತದಲ್ಲಿ ಕಾಣಬಹುದು. ಈ ಹೆಬ್ಬೆಟ್ಟುಳ್ಳವರು ಅಪರಾಧವನ್ನು ಮಾಡಬೇಕೆಂದು ಮೊದಲೆ ಯೋಚಿಸಿರುವದಿಲ್ಲ. ಏಕೆಂದರೆ ಇವರಿಗೆ ಸ್ಥೈರ್ಯ ಮತ್ತು ವಿಚಾರ ಶಕ್ತಿಗಳೇ ಇರುವದಿಲ್ಲ.

ನಡುಸಣ್ಣಾದ ಹೆಬ್ಬೆಟ್ಟುಳ್ಳವರು ಮತ್ತು ಸಮಾನಾಕೃತಿಯ ಹೆಬ್ಬೆಟ್ಟುಳ್ಳವರು (ಚಿ. ೩) ಸ್ವಭಾವದಲ್ಲಿ ಪರಸ್ಪರರ ವಿರುದ್ಧ ಮಾರ್ಗವನ್ನೇ ಅನುಸರಿಸುವರು. ಇದು ತರ್ಕ ಮತ್ತು ವಿಚಾರಶಕ್ತಿಗಳಲ್ಲಿ ಒಡೆದುಕಾಣುವದು. ನಡುಸಣ್ಣಾದ ಹೆಬ್ಬೆಟ್ಟುಳ್ಳವನು ತರ್ಕ ಅಥವಾ ವಿಚಾರಕ್ಕೆ ನಿಲ್ಲನು. ಯುಕ್ತಿ ಅಥವಾ ಕಪಟದಿಂದ ತನ್ನ ಕಾರ್ಯ ಸಾಧಿಸಿಕೊಳ್ಳುವನು. ಆದರೆ ನೀಟಾದ ಹೆಬ್ಬೆಟ್ಟುಳ್ಳವನು ಕೇವಲ ವಾದ ಅಥವಾ ಬೋಧದಿಂದ ತನ್ನ ಕೆಲಸ ಸಾಧಿಸುವನು.

ಹೆಬ್ಬೆಟ್ಟಿನ ಮೊದಲನೆಯ ಗಣ್ಣಿನ ಸ್ಥಳವು ಅಗಲಕ್ಕಿಂತ ಹೆಚ್ಚು ಉದ್ದವಿದ್ದರೆ ವ್ಯಕ್ತಿಯು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟಿರುವನು; ಗಿಡ್ಡ ಇದ್ದು ದಪ್ಪವಾಗಿದ್ದರೆ ಇಂದ್ರಿಯ ಭೋಗದಲ್ಲಿ ಪಶುಸಮಾನನಾಗುವನು.

ಉಳಿದ ಬೆರಳುಗಳು

ಹಸ್ತದಲ್ಲಿ ಹೆಬ್ಬೆಟ್ಟಾದ ಮೇಲೆ ಬರುವದೇ ಮೊದಲನೆಯ ಬೆರಳು. ಅದಕ್ಕೆ ಗುರುಬೆರಳು ಅನ್ನುವರು.

ಎರಡನೆಯದು ಶನಿಬೆರಳು.


ಮೂರನೆಯದು ಸೂರ್ಯಬೆರಳು.

ನಾಲ್ಕನೆಯದು (ಕಿರಿ) ಬುಧಬೆರಳು.

ಹಸ್ತದ ಆಕಾರದ ಪ್ರಮಾಣದಲ್ಲಿ ಬೆರಳುಗಳು ಬೇಕಾ[ಗು]ವವು. ಒಂದು ವೇಳೆ ಅವು ಉದ್ದ ಅಥವಾ ಗಿಡ್ಡವಾ[ಗಿರ]ಬಹುದು. ಗುರುಬೆರಳು ಉದ್ದವಿದೆ ಎಂದರೆ ಸೂರ್ಯಬೆರಳಿಗಿಂತ ಉದ್ದವಿರುವದೆಂದು ತಿಳಿಯಬೇಕು. [ಶನಿ]ಬೆರಳಿಗಿಂತ ಉದ್ದವಿರುವದೆಂದು ತಿಳಿಯಬಾರದು. ಸೂ[ರ್ಯ]ಬೆರಳು ಗಿಡ್ಡವಾಗಿದೆಯೆಂದು ಬರೆದಿದ್ದರೆ ಕಿರಿಬೆರಳಿ[ಗಿಂತ] ಗಿಡ್ಡ ಎಂದು ಅರ್ಥಮಾಡಿಕೊಳ್ಳಬಾರದು, ಸೂರ್ಯಬೆ[ರಳಿ]ಗಿಂತ ಗಿಡ್ಡ ಎಂದು ತಿಳಿಯಬೇಕು. ಯೋಗ್ಯಪ್ರಮಾಣದಲ್ಲಿದ್ದ ಹಸ್ತದ ಕಿರಿಬೆರಳು ಸುಮಾರು, ಸೂರ್ಯಬೆ[ರಳಿನ] ಅರ್ಧಕ್ಕೆ ಮುಟ್ಟುವದು. ಒಂದು ವೇಳೆ ಅದು ಸೂರ್ಯಬೆರಳಿನ ಎರಡನೆಯ ಗಣ್ಣಿನ ಮೇಲಿನ ಗೆರೆಗೆ ಮುಟ್ಟಿದ್ದರೆ ಕಿರಿಬೆರಳು ಆ ಹಸ್ತದಲ್ಲಿ ಉದ್ದವಿದೆಯೆಂದು ತಿಳಿಯಬೇಕು. ಈ ವಿಷಯವನ್ನು ಹಸ್ತಪರೀಕ್ಷಕನು ಅನೇಕ ಹಸ್ತಗಳನ್ನು ನೋಡಿಯಾಗಲಿ ಅಥವಾ ಹಸ್ತಸಾಮುದ್ರಿಕ ಬಲ್ಲವರಿಂದಾಗಲಿ ತಿಳಿಯಬಹುದು. ಇರಲಿ!

ಗುರುಬೆರಳು ಉದ್ದವಿದ್ದರೆ ಅಧಿಕಾರಿಯಾಗುವ ಮತ್ತು ದರ್ಪತೋರುವ ಆಶೆಯು ವ್ಯಕ್ತವಾಗುವದು. ಗಿಡ್ಡವಿದ್ದರೆ ಆ ವ್ಯಕ್ತಿಯು ತನ್ನ ಜೀವನದ ಹೊಣೆಗಾರಿಕೆಯನ್ನು ಅರಿಯದವನೂ, ನಿರಾಶಾವಾದಿಯೂ, ಆಗುವನು. ಶನಿಬೆರಳು ಉದ್ದವಿದ್ದರೆ ಜಾಣತನವನ್ನೂ, ಗಾಂಭೀರ್ಯವನ್ನೂ, ಏಕಾಂಗಿಯಾಗಿರುವ ಮತ್ತು ಸದಾಭ್ಯಾಸಿಯಾಗುವ ಒಲವನ್ನೂ ಸೂಚಿಸುವದು. ಗಿಡ್ಡವಾಗಿದ್ದ[ರೆ]

ವ್ಯಕ್ತಿಯು ಕೀಳು ಮನಸ್ಸಿನವನೂ, ಗಾಂಭೀರ್ಯರಹಿತನೂ ಆಗುವನು. ಸೂರ್ಯ ಬೆರಳು ಉದ್ದವಾಗಿದ್ದರೆ ಸುಂದರ ವಸ್ತುಗಳಲ್ಲಿ ಪ್ರೀತಿ, ವೈಭವ ಮತ್ತು ಕೀರ್ತಿ ಸಂಪಾದನೆಯ ಆಶೆಗಳನ್ನು ಸೂಚಿಸುವದು. ಆದರೆ ಅದು ಅತಿ ಉದ್ದವಿದ್ದರೆ ಆ ವ್ಯಕ್ತಿಯು ಅಪಕೀರ್ತಿಗೆ ಗುರಿಯಾಗುವನು; ಧನಲೋಭಿಯೂ ಜೂಜುಗಾರನೂ ಆಗುವನು; ಅವನಿಗೆ ವ್ಯವಹಾರದಲ್ಲಿ ಗಂಡಾಂತರಗಳು ಒದಗುವವು. ಆದರೆ ಅದು ಗಿಡ್ಡವಾಗಿದ್ದರೆ ವ್ಯಕ್ತಿಯು ಮೇಲೆ ಹೇಳಿದವುಗಳ ವಿರುದ್ಧ ಸ್ವಭಾವವುಳ್ಳವನಾಗಿರುವನು. ಬುಧ ಬೆರಳು ಉದ್ದವಾಗಿದ್ದರೆ ವ್ಯಕ್ತಿಯ ಜ್ಞಾನವು ಬೇಗನೆ ವೃದ್ಧಿಹೊಂದುವದು. ಅನೇಕ ಭಾಷೆಗಳನ್ನು ಅಲ್ಪಕಾಲದಲ್ಲಿಯೇ ಕಲಿಯುವನು. ಒಳ್ಳೇ ಭಾಷಣ ಮಾಡಿ ಶ್ರೋತೃಗಳ ಮನಸ್ಸಿನ ಮೇಲೆ ಸ್ಥಿರವಾಗಿ ಉಳಿಯುವಂತೆ ಪರಿಣಾಮವನ್ನುಂಟುಮಾಡುವನು. ಗಿಡ್ಡವಾಗಿದ್ದರೆ ಅವನು ಅತಿ ಮುಗ್ಧನಾಗುವನು. ಈ ಬೆರಳು ಅಂಕುಡೊಂಕಾಗಿದ್ದು ಜ್ಞಾನರೇಖೆಯು ಅಸ್ತವ್ಯಸ್ತವಾಗಿ ಹೊರಟಿದ್ದರೆ, ವ್ಯಕ್ತಿಯು ಮಾನಸಿಕ ವ್ಯಥೆಗಳಿಗೆ ಗುರಿಯಾಗುವನು.



ಚಿತ್ರ ೪

೧. ಸಟುಳಾಗಿ ಮೊಂಡಾದ ಬೆರಳು. ೨. ಚೂಪಾದ ಬೆರಳು. ೩. ಗಂಟು ಗಂಟಾದ ಬೆರಳು.

ಹಸ್ತಕ್ಕೆ ಸರಿ ಕಾಣುವಂತೆ ಬೆರಳುಗಳು ಉದ್ದವಾಗಿರಬೇಕು. 'ಹಾಗಿದ್ದರೆ ಮನುಷ್ಯನು ಹೆಚ್ಚು ಜಾಣನೂ, ಬುದ್ಧಿಶಾಲಿಯೂ ಆಗುವನು. ಗಿಡ್ಡ ಅಥವಾ ಗಂಟುಗಂಟಾಗಿದ್ದರೆ ಪಶು ಸ್ವಭಾವದವನೂ ತಿಳಿಗೇಡಿಯೂ ಆಗುವನು.

ಬೆರಳು, ಒಂದು ಮತ್ತೊಂದರ ಕಡೆಗೆ ಬಾಗಿರಬಹುದು. ಹಾಗಿದ್ದರೆ ಯಾವ ಬೆರಳಿನ ಕಡೆಗೆ ಬಾಗಿರುವದೋ ಆ ಬೆರಳಿನ ಗುಣಗಳನ್ನು ಬಾಗಿದ ಬೆರಳು ಗ್ರಹಿಸುವದು.

ಹೆಬ್ಬೆಟ್ಟಿಗೂ ಗುರುಬೆರಳಿಗೂ ಬಹು ಅಂತರವಿದ್ದರೆ ವ್ಯಕ್ತಿಯು ಸ್ವಾವಲಂಬಿಯೂ ಭಯರಹಿತನೂ, ಆಗುವನು. ಗುರುಬೆರಳಿಗೂ ಶನಿಬೆರಳಿಗೂ ನಡುವೆ ಬಹು ಅಂತರವಿದ್ದರೆ ವ್ಯಕ್ತಿಯು ಸ್ವತಃ ವಿಚಾರ ಮಾಡಿ ಕೆಲಸಮಾಡುವನು. ಶನಿ ಮತ್ತು ಸೂರ್ಯ ಬೆರಳುಗಳ ನಡುವೆ ಬಹು ಅಂತರವಿದ್ದರೆ ಹೆರವರ ಹೇಳಿಕೆಗೆ ಮರುಳಾಗದೇ ತನ್ನ ಹಾಸಿಗೆ ಇದ್ದಷ್ಟೇ ಕಾಲು ಚಾಚುವನು. ಸೂರ್ಯ ಮತ್ತು ಬುಧ ಬೆರಳುಗಳ ನಡುವೆ ಬಹು ಅಂತರವಿದ್ದರೆ ಕೇವಲ ಸ್ವಾವಲಂಬಿಯಾಗಿ ವ್ಯಕ್ತಿಯು ತನ್ನ ಕಾರ್ಯ ಸಾಗಿಸುವನು.

ಹಸ್ತವನ್ನು ಸ್ವಾಭಾವಿಕವಾಗಿ ಹಿಡಿದಾಗ ಬೆರಳುಗಳು ಮೇಲಕ್ಕೆ ಮಣಿದಂತೆ ಕಂಡರೆ ವ್ಯಕ್ತಿಯು ಉದಾರ ಮನಸ್ಸಿನವನಿರುವನು. ವಿಚಾರ ಮತ್ತು ಗ್ರಾಹಕ ಶಕ್ತಿಗಳು ಇವನಲ್ಲಿ ಚೆನ್ನಾಗಿರುವವು. ಆದರೆ ಕೈಕೊಂಡ ಕಾರ್ಯವನ್ನು ವ್ಯವಸ್ಥಿತ ರೀತಿಯಿಂದ ಮಾಡಲಾರನು.

ಹಸ್ತವನ್ನು ಸ್ವಾಭಾವಿಕವಾಗಿ ಹಿಡಿದಾಗ ಬೆರಳುಗಳು ಹಸ್ತದ ಒಳಬದಿಗೆ, ಅಂದರೆ ಅಂಗೈ ಇದ್ದ ಬದಿಗೆ ಬಾಗಿದಂತೆ ಕಂಡರೆ ವ್ಯಕ್ತಿಯು ಹೊಸ ವಿಚಾರವನ್ನು ತ್ಯಜಿಸಿ ಅವು ತನಗೆ ಅಂಟದಂತೆ ಎಚ್ಚರದಿಂದಿರುವನು. ತಾನು ಸರಿಯೆಂದು ತಿಳಿದ, ಅಥವಾ ತಾನು ಅನುಸರಿಸುತ್ತಿರುವ ರೀತಿ ನಡಾವಳಿಗಳನ್ನು ಎಂದೂ ಬಿಡನು.

ಸಬುಳಾದ ಬೆರಳುಳ್ಳವನಲ್ಲಿ ಗಂಟುಗಂಟಾದ ಬೆರಳುಳ್ಳವನಿಗಿಂತ ಹೆಚ್ಚು ಮುಂದುವರಿವ ಸ್ವಭಾವವು ಕಂಡುಬರುವದು. ಆದರೆ ಗಂಟುಗಂಟಾದ ಬೆರಳುಗಳುಳ್ಳವನ ಜ್ಞಾನದ ಜೋರಿನಿಂದ ಮುಂದೆ ಬರುವನು. ತನ್ನ ಕಾರ್ಯಕಲಾಪಗಳನ್ನು ಹೆರವರಿ ತಿಳಿಸಿ ಹೇಳಿ ಅವರಲ್ಲಿ ಹೊಸ ಜ್ಞಾನವನ್ನು ತುಂಬುವನು. ಹೊಸ ವಿಚಾರಪ್ರಚಾರಕರ ಮತ್ತು ಸಂಸ್ಥೆಗಳು ಸ್ಥಾಪಕರ ಹಸ್ತದಲ್ಲಿ ಇಂತಹ ಬೆರಳುಗಳನ್ನು ನಾವು ಕಾಣಬಹುದು.


(ಉಗುರು)

ಉಗುರಿನಿಂದ ವ್ಯಕ್ತಿಯಲ್ಲಿಯ ರೋಗವು ಗೊತ್ತಾಗುವದು. ಪುಪ್ಪುಸ, ಹೃದಯ, ಕರುಳು, ಮತ್ತು ಬೆನ್ನುಹುರಿಗಳಲ್ಲಿ ಹುಟ್ಟುವ ಅಥವಾ ತಾಯಿ ತಂದೆಗಳಿಂದ ಬಂದಂತಹ ರೋಗಗಳನ್ನು ಉಗುರಿನಿಂದ ತಿಳಿಯಬಹುದು.

ಉದ್ದವಾದ ಉಗುರು:—ಬೆರಳಿಗೆ ತಕ್ಕ ಉಗುರು ಇದ್ದರೆ ವ್ಯಕ್ತಿಯು ಆರೋಗ್ಯದಿಂದಿರುವನು. ಉಗುರು ಉದ್ದವಾಗಿದ್ದರೆ ಅವನು ಸದಾ ರೋಗಿಯಾಗುವನು.

ಫುಪ್ಫುಸ ಅಥವಾ ಹೃದಯದಲ್ಲಿ ಹುಟ್ಟಬಹುದಾದ ರೋಗಗಳಿಗೆ ಗುರಿಯಾಗುವನು. ಉದ್ದ ಉಗುರಿನ ಮೇಲೆ ಕೆಳಗಿನಿಂದ ಮೇಲಕ್ಕೆ ಹೋಗುವ ಗೆರೆಗಳಿದ್ದರೆ ಈ ತರಹದ ರೋಗವು ಇವನಿಗೆ ಬರುವದು ಖಂಡಿತ. ಇದೇ ತರಹದ ಉಗುರು ತುಸು ಗಿಡ್ಡವಾಗಿದ್ದರೆ ಕಂಠನಿತ್ರಾಣ, ಸ್ವರಭೇದ ರೋಗ, ಕುತ್ತಿಗೆಬಾವು, ಕೆಮ್ಮು ಮತ್ತು ದಮ್ಮು ಮೊದಲಾದ ವಿಕಾರಗಳು ಸಂಭವಿಸುವವು. ನೀಲಿ ವರ್ಣದ ಉದ್ದವಾದ ಉಗುರುಗಳುಳ್ಳವನು ತೀರ ಅಶಕ್ತನಿರುವನು. ರಕ್ತಪ್ರವಾಹದ ಗತಿಯು ಬಹಳ ಮಂದವಿರುವದು.

೧ ೨



ಚಿತ್ರ ೫

೩ ೪ ೫ ೬

(ಚಿತ್ರ ೫) ೧. ಚೌಕಾದ ಉಗುರು. ೨. ಬಟ್ಟಲಾಕೃತಿಯ ಉಗುರು ೩. ಗಂಟಲಿನಲ್ಲಿಯ ವಿಕಾರ ಸೂಚಕ ೪. ಕೆಮ್ಮು ಮತ್ತು ದಮ್ಮುಗಳನ್ನು ಸೂಚಿಸುವದು. ೫. ಫುಪ್ಫುಸದಲ್ಲಿ ಅಶಕ್ತತೆ. ೬. ಬೆನ್ನುಹುರಿಯಲ್ಲಿಯ ಅಶಕ್ತತೆ ಮತ್ತು ವಿಕಾರ ಸೂಚಿಸುವದು.

ಗಿಡ್ಡ ಉಗುರು:—ಗಿಡ್ಡ ಉಗುರುಳ್ಳ ವ್ಯಕ್ತಿಯ ಹೃದಯಕ್ರಿಯೆಯು ಮಂದವಿರುವದು. ಈ ಉಗುರುಗಳ ಮೇಲೆ ಅತಿ ಸೂಕ್ಷ್ಮವಾದ ಅಥವಾ ಮುಸುಕುಮುಸುಕಾದ ಬಿಳಿ ಚಿಕ್ಕೆಗಳಿದ್ದರೆ ಅದು ನಿಶ್ಚಿತವೆಂದು ತಿಳಿಯಬೇಕು. ಉಗುರುಗಳು ಸಪಾಟಾಗಿದ್ದು ಬೆರಳಿನಲ್ಲಿ ನಟ್ಟಂತೆ ಕಂಡರೆ ಕರುಳುಗಳಲ್ಲಿ ಹುಟ್ಟುವ ರೋಗಗಳಿಂದ ವ್ಯಕ್ತಿಯು ನರಳುವನು. ಈ ಉಗುರುಗಳ ಮೇಲೆ ಅಡ್ಡಗೆರೆಗಳಿದ್ದರೆ ಈ ರೋಗವು ನಿಶ್ಚಯವಾಗಿಯೂ ಬರುವದು.

ಹಸ್ತವು ಯಾವುದೇ ಆಕಾರದ್ದಿರಲಿ, ಉಗುರಿನ ಮೇಲೆ ಸ್ಪಷ್ಟವಾಗಿ ಕಾಣಿಸುವ ಅಡ್ಡ ಗೆರೆಗಳಿದ್ದರೆ ರಕ್ತನಾಳಗಳಲ್ಲಿ ಅಥವಾ ಕರುಳುಗಳಲ್ಲಿ ರೋಗವು ಹುಟ್ಟುವದು.

ಉಗುರು ಪೂರ್ಣ ಬೆಳೆಯಬೇಕಾದರೆ ಒಂಬತ್ತು ತಿಂಗಳುಗಳು ಬೇಕಾಗುವವು. ಅಡ್ಡ ಗೆರೆಗಳು ಉಗುರಿನ ತುದಿ... ಕಂಡರೆ ರೋಗವು ಬಂದು ಒಂಬತ್ತು ತಿಂಗಳುಗಳ ಮೇಲೆ ಆಯಿತೆಂದು ತಿಳಿಯಬೇಕು. ಉಗುರಿನ ನಡುವೆ ಅವು ಗೋಚರಿಸಿದರೆ ಸುಮಾರು ನಾಲ್ಕೈದು ತಿಂಗಳಾದವೆಂದು ಹೇಳಬೇಕು. ಬುಡದಲ್ಲಿ ಅಡ್ಡ ಗೆರೆಗಳು ಕಂಡರೆ ರೋಗವು ಬಂದು ಒಂದು ತಿಂಗಳಾಯಿತೆಂದು ಹೇಳಬೇಕು.

ಯಾವುದೇ ಆಕಾರದ ಉಗುರಿರಲಿ ಅದರ ಮೇಲೆ ಬಿ... ಚಿಕ್ಕೆಗಳಿದ್ದರೆ, ವ್ಯಕ್ತಿಯು ಅಶಕ್ತನಾಗುವನು, ಮತ್ತು ಕರುಳಿನ ಎಲ್ಲ ಕ್ರಿಯೆಗಳು ಮಂದವಾಗುವವು.

ಉದ್ದವಿರುವ ಸಂಕುಚಿತ ಉಗುರು:—ಸಂಕುಚಿತವಾದ ಉಗುರು ಬೆನ್ನು ಹುರಿಯಲ್ಲಿಯ ಅಶಕ್ತತೆಯನ್ನು ಸೂಚಿಸುವದು. ಈ ಉಗುರು ಅತಿ ಡೊಂಕಾಗಿ ಬ... ಬಾಗಿದ್ದರೆ ಮತ್ತು ತೆಳ್ಳಗಿದ್ದರೆ ವ್ಯಕ್ತಿಯ ಬೆನ್ನುಹುರಿ ವಕ್ರವಾಗಿ ಬಾಗಿರುವದು; ಮತ್ತು ಅವನ ಪ್ರಕೃತಿ ಸೂಕ್ಷ್ಮವಿರುವದು.

ಸಪಾಟಾದ ಉಗುರು:—ಸಪಾಟಾದ ಉಗುರು ತು... ಬೆರಳುಗಳಿಂದ ಮೇಲಕ್ಕೆದ್ದಂತಿದ್ದರೆ ವ್ಯಕ್ತಿಗೆ ಅರ್ಧಾಂಗ... ವಾಯು ಬರಬಹುದು. ಉಗುರು ಬಟ್ಟಲದಂತಿದ್ದು ... ದಲ್ಲಿ ಸಂಕುಚಿತವಾಗಿ ಹೊರಟಿದ್ದರೆ ಈ ಬೇನೆಯು ನಿ... ವಾಗಿಯೂ ಬರುವದು. ಇಂಥ ಉಗುರುಗಳ ಮೇಲೆ ... ಚಿಕ್ಕೆಗಳಿರದಿದ್ದರೆ ಅಥವಾ ಉಗುರು ನೀಲಿಬಣ್ಣದ್ದಿದ್ದರೆ ಈ ಬೇನೆಯು ವೈದ್ಯರ ಕೈಮೀರಿರುವದು.

ಚಿಕ್ಕೆಗಳು:—ಉಗುರಿನ ಮೇಲೆ ದೊಡ್ಡ ಬಿಳಿ ... ಗಳಿದ್ದರೆ ಹೃದಯಕ್ರಿಯೆಯು ಬಲವಾಗಿಯೂ, ರಕ್ತಪ್ರವಾ... ಹವು ತೀವ್ರವಾಗಿಯೂ ಆಗುವದು. ಅವು ಬಹಳ ದೊ... ವಿದ್ದರೆ ಹೃದಯಕ್ಕೆ ಬಹಳ ಜೋರುಬಿದ್ದು ಎದೆಯ ... ವಿಕೆಯು ತೀವ್ರವಾಗುವದು. ರಕ್ತಪ್ರವಾಹದ ... ಹೆಚ್ಚಿ ರಕ್ತನಾಳಗಳು ಒಡೆದು ಹೃದಯಕ್ಕಾಗಲಿ ... ಮಿದುಳಿಗಾಗಲಿ ಅಪಾಯ ತಟ್ಟುವದು. ಬಿಳಿ ಚಿಕ್ಕೆ... ಸಣ್ಣವಿದ್ದರೆ ಹಾಗೆ ಆಗಲಾರದು. ಆದರೆ ರಕ್ತಪ್ರ... ಹವು ಮಂದವಾಗುವದು; ಹೃದಯವು ಸಾವಕಾ... ಹಾರತೊಡಗುವದು; ಮತ್ತು ಮಿದುಳಿಗೆ ರಕ್ತಪೋಷಣೆ ಸಾಕಷ್ಟು ಆಗುವದಿಲ್ಲ.

ಮರಣ ಸಮೀಪಿಸಿದಾಗ ಈ ಚಿಕ್ಕೆಗಳು ನೀಲಿ... ವಾಗುವವು. ವ್ಯಕ್ತಿಯು ಮರಣಹೊಂದಿದ ಕೂಡಲೇ ... ರೆಲ್ಲ ನೀಲಿ ಅಥವಾ ಕಪ್ಪು ಬಣ್ಣದವಾಗುವವು.

ಸೋಯಾಬೀನಿನ ಮಹತ್ವ

ಲೇ:—ಶ್ರೀ. ಆರ್. ಎಸ್. ಪಾಟೀಲ ಬಿ. ಜಿ. ಬಿ. ಎಸ್. ಸಿ. (ಎಡಿನ್‌ಬರೋ)
ಪ್ರಿನ್ಸಿಪಾಲ್ ಆ್ಯಗ್ರಿಕಲ್ಚರ ಇನ್‌ಸ್ಟಿಟ್ಯೂಟ ಬಡೋದಾ

ಸೋಯಾಬೀನ್ ಮೂಲತಃ ಭಾರತದ ಧಾನ್ಯವಲ್ಲದಿದ್ದರೂ ತನ್ನ ಗುಣಗಳಿಂದ ಅದು ಇಂದು ಭಾರತಹಿತಕಾಂಕ್ಷಿಗಳಾದ ಆಹಾರ ವಿಜ್ಞಾನಿಗಳ ಮನವನ್ನು ಚನ್ನಾಗಿ ಸೆಳೆದಿದೆ. ಬಡವರು ತಮ್ಮ ದುಡಿಮೆಗೆ ತಕ್ಕ ಪೋಷಣೆಯನ್ನು ಆಹಾರದಲ್ಲಿ ಅಗ್ಗವಾಗಿ ಸೇರಿಸಿಕೊಳ್ಳಬೇಕಾದರೆ ಸೋಯಾಬೀನಿನಷ್ಟು ಉಪಯುಕ್ತವಾದ ಧಾನ್ಯ ಬೇರೊಂದಿಲ್ಲವೆಂದು ಬಲ್ಲವರ ಅಭಿಪ್ರಾಯವಾಗುತ್ತಿದೆ. ಭಾರತದಲ್ಲಿ ಗ್ರಾಮಪುನರುಜ್ಜೀವನದ ಆಂದೋಲನವು ಸೋಯಾಬೀನನ್ನು ಶಾಸ್ತ್ರೀಯ ವಿಮರ್ಶೆಗೆ ಹೆಚ್ಚಾಗಿ ಗುರಿಮಾಡಿದೆ. ವಿಮರ್ಶೆಯ ಪೂರ್ಣ ಫಲಿತಾಂಶಗಳು ಇನ್ನೂ ಹೊರ ಬೀಳದಿದ್ದರೂ ಸದ್ಯದಲ್ಲಿಯೆ ಸೋಯಾಬೀನ್ ವ್ಯಾಪಕವಾದ ಆಹಾರವಸ್ತುವಾಗುವ ಸಂಭವವು ಹೆಚ್ಚುತ್ತಿದೆ. ಮಾನ್ಯ ಲೇಖಕರು ಸೋಯಾಬೀನಿನ ಮಹತ್ವವನ್ನು ಆಹಾರ ದೃಷ್ಟಿಯಿಂದ .. ಲ್ಲದೆ ಐತಿಹಾಸಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಇಲ್ಲಿ ವಿವರಿಸಿದ್ದಾರೆ. ಸಂ. ..

(೧)

ಸೋಯಾಬೀನ್ ಪೈರು ಜಗತ್ತಿನಲ್ಲಿ ಮುಖ್ಯವಾದ ಪೈರಾಗುವ ಸಂಭವವಿದ್ದುದರಿಂದ, ವಿದ್ಯಾರ್ಥಿಗಳಿಗೂ ಒಕ್ಕಲಿಗರಿಗೂ ಮತ್ತು ವ್ಯವಸಾಯಿಗಳಿಗೂ ಈ ಧಾನ್ಯದ ಸದ್ಯದ ಪರಿಸ್ಥಿತಿಯ ತಿಳುವಳಿಕೆಯನ್ನು ಈ ಚಿಕ್ಕ ಲೇಖನದಲ್ಲಿ ಕೊಟ್ಟಿರುತ್ತೇವೆ. ಈ ಲೇಖನವನ್ನು ವ್ಯಾಪಾರ, ಒಕ್ಕಲತನವಷ್ಟೆ ಅಲ್ಲ ಐತಿಹಾಸಿಕ ಅಥವಾ ಸಸ್ಯಶಾಸ್ತ್ರದ ದೃಷ್ಟಿಯಿಂದಲೂ ಬರೆಯಲಾಗಿದೆ.

ಪೈರಿನ ಹೆಸರು:—ಸೋಯಾಬೀನ್ ಧಾನ್ಯಕ್ಕೆ ಅನೇಕ ಹೆಸರುಗಳುಂಟು. ಅವುಗಳಲ್ಲಿ ಇವು ಕೆಲವು (೧) ಸೋಯಾಬೀನ್ (೨) ಸೋಜಾಬೀನ್ (೩) ಸೋಯಬೀನ್ (೪) ರಾಮ ಕುಲಥಿ (ಬಂಗಾಲ) ಅಂದರೆ ದೊಡ್ಡ ಹುರುಳಿಯು.

ಈ ಪೈರು ನಮ್ಮಲ್ಲಿಯ ಹುರುಳಿಯ ಬೆಳೆಯನ್ನು ವಿಶೇಷವಾಗಿ ಹೋಲುತ್ತದೆ. ಇದರ ಬೀಜ ಕಾಯಿಗಳು ಕೂಡ ಹುರುಳಿಯ ಕಾಯಿ ಬೀಜಗಳಂತೆಯೆ ಇರುತ್ತವೆ. ಆದ್ದರಿಂದ ಇದಕ್ಕೆ ಹುರುಳಿಯ ದೊಡ್ಡಣ್ಣನೆಂದರೂ ಸಲ್ಲುವದು. ಸೋಯಾಬೀನ್ ಮೊದಲು, ಪೂರ್ವ ಏಶಿಯಾಖಂಡದಿಂದ ಬಂತು. ಇದು ಮೊದಲು ಚೀನ, ಮಂಚೋರಿಯಾ, ಮತ್ತು ಕೋರಿಯಾ ದೇಶಗಳ ಅಡವಿಗಳಲ್ಲಿ ಅಡವಿಯ ಕಸಗಳಂತೆ ಬೆಳೆಯುತ್ತಿತ್ತು. ಅಡವಿಯಲ್ಲಿದ್ದಾಗ ಇದು ಬಳ್ಳಿಯ ಹಾಗೆ ಕೋಮಲವಾಗಿ ಬೆಳೆಯುತ್ತಿದ್ದು ಈಗ ಒಕ್ಕಲತನದ ಪ್ರಗತಿಯಲ್ಲಿ ನೀಟಾದ ಗಿಡದಂತೆ ಬೆಳೆಯುತ್ತದೆ. (ಇದರ ಚಿತ್ರ ಮುಂದಿನ ಪುಟದಲ್ಲಿದೆ.)

ವ್ಯವಸಾಯ:— ಸೋಯಾಬೀನಿನ ವ್ಯವಸಾಯದ ವಿವರವು ಚೀನ್ ದೇಶದ ಹಳೇ ಗ್ರಂಥಗಳಲ್ಲಿ ಕಂಡು ಬರುತ್ತದೆ. ಆದರೆ ಇದರ ವ್ಯವಸಾಯವು ಗ್ರಂಥಗಳನ್ನು ಬರೆಯುವ ಪೂರ್ವದಲ್ಲಿ ಕೂಡ ಇತ್ತೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ಈಗಂತೂ ಸೋಯಾಬೀನ್ ಸಾಗುವಳಿಯ ವಿಷಯಕ್ಕೆ ಅನೇಕ ಲೇಖಕರು ಬೇರೆಬೇರೆ ಭಾಷೆಗಳ ವಾರಪತ್ರಿಕೆಗಳಲ್ಲಿಯೂ ಮಾಸಪತ್ರಿಕೆಗಳಲ್ಲಿಯೂ ಲೇಖನವನ್ನು ಬರೆದಿರುತ್ತಾರೆ.

ಆದಿಬುನಾದಿಕಾಲದಿಂದಲೂ ಸೋಯಾಬೀನ್ ಪೈರು ಚೀನ್, ಜಪಾನ ದೇಶದ ಜನರಿಗೆ ಪ್ರಾಮುಖ್ಯವಾದ ಪೈರಾಗಿರುತ್ತದೆ. ಯಾಕಂದರೆ (೧) ಸ್ನಾಯುಗಳಿಗೆ ಪುಷ್ಟಿಕೊಡುವಂಥ ಆಹಾರವಸ್ತುವು ಇದರಲ್ಲಿ ಹೆಚ್ಚಾಗಿ ಇರುತ್ತದೆ.

(೨) ಮನುಷ್ಯನಿಗಲ್ಲದೆ ಮಿಕ್ಕ ಅನೇಕ ಪ್ರಾಣಿಗಳಿಗೂ ಬೇಕಾದ ಆಹಾರಗಳಲ್ಲಿ ಇದೊಂದಾಗಿರುತ್ತದೆ.

ಉಪಯೋಗ ವಿಧಾನ:— ಚೀನ್, ಮಂಚೋರಿಯಾ ಮತ್ತು ಕೋರಿಯಾ ದೇಶಗಳ ಜನರು ವಿಶೇಷವಾಗಿ ಸೋಯಾಬೀನ್ ಧಾನ್ಯವನ್ನು ನೆನೆಯಿಟ್ಟು ಮೊಳಿಕೆ ಒಡೆದ



ಬಡೋದೆಯಲ್ಲಿ ೫೦೦ ಕಾಯಿಗಳನ್ನು ಬಿಟ್ಟ ಸೋಯಾಬೀನಿನ ಗಿಡ

ನಂತರ ಆಹಾರದಲ್ಲಿ ಉಪಯೋಗಿಸುವ ಪರಿಪಾಠವುಂಟು. ಆದರೆ ಕೆಲವೊಂದು ಸ್ಥಳಗಳಲ್ಲಿ ಪಾಶ್ಚಿಮಾತ್ಯ ಜನರು ಉಪಯೋಗಿಸುವಂತೆ ಹುರಿದು ತಿನ್ನುವ ರೂಢಿಯೂ ಉಂಟು. ಇದರ ಮೇಲಿಂದ ನೋಡಲಾಗಿ ಮಿಕ್ಕ ಬೇಳೆ ಕಾಳಿನ ಧಾನ್ಯಗಳಂತೆ ಸೋಯಾಬೀನನ್ನು ಆಹಾರದಲ್ಲಿ ಉಪಯೋಗಿಸುವದು, ಜನರ ಪ್ರಕೃತಿಗೆ ಅಯೋಗ್ಯವಾದುದೆಂದು ತಿಳಿಯುವ ಸಂಭವವುಂಟು. ಆದರೆ ನಿಜಸ್ಥಿತಿಯು ಬೇರೆಯಾಗಿದೆ. ಮಂಚೋರಿಯಾ ದೇಶದ ಜನರು ಧಾನ್ಯದಿಂದ ತಯಾರಿಸಿದ ಅನೇಕ ಪ್ರಕಾರದ ಆಹಾರಪದಾರ್ಥಗಳಲ್ಲಿ ಎಷ್ಟೋ ಪದಾರ್ಥಗಳು ಪಾಶ್ಚಿಮಾತ್ಯ ಜನರಿಗೆ ಗೊತ್ತೇ ಇಲ್ಲ. ಇತ್ತೀಚೆ ಯುರೋಪ ಮತ್ತು ಅಮೇರಿಕಾ ದೇಶಗಳಲ್ಲಿ ಈ ಧಾನ್ಯವನ್ನು ಆಹಾರಗಳಲ್ಲಿ ಬಹು ಪ್ರ...ವಾಗಿ ಉಪಯೋಗಿಸುವ ಮೂಲಕ ಕೆಲ... ಮಟ್ಟಿಗೆ ಈ ತಪ್ಪು ತಿಳುವಳಿಕೆ... ದೂರಾಗಿರುತ್ತದೆ.

ಸದ್ಯದ ಮಹತ್ವ:— ಸೋಯಾಬೀನ್ ಪೈರನ್ನು ಸದ್ಯಕ್ಕೆ ಜಪಾನ, ಮಂಚೋರಿಯಾ, ಮಂಗೋಲಿಯಾ ದೇಶಗಳ ಜನರು ಬಹಳವಾಗಿ ಬೆಳೆಯುತ್ತಾರೆ. ಅಮೇರಿಕೆಯಲ್ಲಿಯೂ ಮತ್ತು ಯುರೋಪದ ಕೆಲವು ಭಾಗಗಳಲ್ಲಿಯೂ ಇದಕ್ಕೆ ಮಹತ್ವವುಂಟು. ಅಲ್ಲದೆ ದಕ್ಷಿಣ ಆಫ್ರಿಕಾ, ಅರ್ಜಂಟಾಯಿನ್ ಮತ್ತು ಬ್ರಿಟಿಶ ಹಿಂದುಸ್ತಾನದಲ್ಲಿಯೂ ಇದು ಪ್ರಾಮುಖ್ಯತೆಯನ್ನು ಹೊಂದುತ್ತಿದೆ.

ಅಮೇರಿಕೆಯಲ್ಲಿಯ ವ್ಯವಸಾಯ:— ಸೋಯಾಬೀನ್ ಸಾಗುವಳಿಯು ೧೮೮೦ನೇ ಇಸ್ವಿಯಿಂದ ಅಮೇರಿಕೆಯಲ್ಲಿ ಬರೆ ಮೇವಿನ ಪೈರಾಗಿ ಬೆಳೆಯಲ್ಪಡುತ್ತಿತ್ತು. ಆದರೆ ಇದರ ಮಹತ್ವವು ಅಲ್ಲಿ ಈಗ ಇಮ್ಮಡಿಯಾಗುತ್ತಿದೆ. ಯಾಕೆಂದರೆ (೧) ಸೋಯಾಬೀನ್ ಕಾಳು ಎಲ್ಲ ದ್ವಿದಳ ಕಾಳುಗಳ ಸಾಗುವಳಿಗಿಂತ ಅಗ್ಗವಾಗಿದ್ದು ಪೈರು ಹೇರಳವಾಗಿ ಬೆಳೆಯುತ್ತದೆ. (೨) ಸೋಯಾಬೀನ್ ಧಾನ್ಯದಿಂದ ತಯಾರಿಸಿದ ಪದಾರ್ಥಗಳು ಮನುಷ್ಯರಿಗೆ ಉಪಯುಕ್ತ ಹಾಗೂ ಆಹಾರಗಳಾಗಿರುತ್ತವೆ. (೩) ಸೋಯಾಬೀನ್ ... ಕೂಡಲೆ ಸಿಗುವ ಲಾಭದಾಯಕ ಪದಾರ್ಥಗಳೆಂದರೆ ಎಣ್ಣೆ ಮತ್ತು ಹಿಂಡಿಗಳಾಗಿರುತ್ತವೆ. ಆದಕ್ಕೆ ಸಹಾಯಕ... ಕೂಲಿಗಿಂತಲೂ ಅಗ್ಗವಾದ ಯಂತ್ರಗಳ ಸಾಧನ... ವದರಿಂದ ಸೋಯಾಬೀನ್ ಪೈರು ಅಮೇರಿಕೆಯಲ್ಲಿ ಒಂದೇಸವನೆ ಹೇರಳವಾಗಿ ಬೆಳೆಸಲ್ಪಡುತ್ತಿದೆ. (೪) ... ಯಲ್ಲಿ ಇದರ ಎಂಣೆ, ಹಿಂಡಿ ಮತ್ತು ಎಂಣೆಯ ... ಗಳ ಪೂರೈಕೆಗಿಂತಲೂ ಗಿರಾಕಿಗಳ ಬೇಡಿಕೆ ಹೆಚ್ಚು... ತ್ತದೆ. ಸೆಜ್ಜೆ, ಜೋಳ, ರಾಗಿ, ಜವೆಗೋದಿ ಮುಂ...

ಎಲ್ಲ ಧಾನ್ಯಗಳ ಪೈರಿಗಿಂತಲೂ ಸೋಯಾಬೀನ್ ಪೈರಿನ ಸಾಗುವಳಿಯು ಹೆಚ್ಚು ಲಾಭದಾಯಕವೆಂದು ಕಂಡುಬರುತ್ತದೆ.

ಸೋಯಾಬೀನಿನಿಂದ ತಯಾರಾಗುವ ಪದಾರ್ಥಗಳು:— ಸಂಯುಕ್ತ ಅಮೇರಿಕ ದೇಶದ ಕಾರಖಾನೆಗಳಲ್ಲಿ ಇವು ತಯಾರಾಗುತ್ತವೆ. (೧) ಎಂಣೆ (೨) ಹಿಟ್ಟು (೩) ಬಿಸ್ಕೀಟ (೪) ಹಾಲು (ಹಾಲಿನಿಂದ ಹಿಟ್ಟು) (೫) ಚಾಕಲೆಟ್ಸ (ಮಿಠಾಯಿ) (೬) ಚಟ್ನಿ (೭) ಸಂಣ ಕೂಸುಗಳ ಮತ್ತು ಮಧುಮೇಹರೋಗಿಗಳ ಆಹಾರ. ಈ ಪದಾರ್ಥಗಳನ್ನು ತಯಾರಮಾಡುವದರಲ್ಲಿ ಅನೇಕ ಕಾರಖಾನೆಗಳು ಮಗ್ನವಾಗಿರುತ್ತವೆ.

(೨)

ವ್ಯವಸಾಯದ ಇತಿಹಾಸ

ಮಂಚೋರಿಯಾ ಮತ್ತು ಚೀನ್:— ಚೀನ್ ದೇಶದ ಸೋಯಾಬೀನಿನ ಉತ್ಪನ್ನವು ೧೯೨೧ನೇ ಇಸ್ವಿಯಲ್ಲಿ ಈ ಪೈರನ್ನು ಬೆಳೆಯುವ ಎಲ್ಲ ದೇಶಗಳಲ್ಲಿಯ ಹುಟ್ಟುವಳಿಯನ್ನು ಒಟ್ಟುಗೂಡಿಸಿದ ಉತ್ಪನ್ನಕ್ಕಿಂತಲೂ ಹೆಚ್ಚಾಗಿತ್ತು. ರಶಿಯಾ ಮತ್ತು ಜಪಾನ ಯುದ್ಧದ ಪೂರ್ವದಲ್ಲಿ ೧೯೦೪ನೇ ಇಸ್ವಿಯಲ್ಲಿ ಸೋಯಾಬೀನ್ ಧಾನ್ಯವು ಏಶಿಯಾಖಂಡದ ಎಲ್ಲ ದೇಶಗಳಿಗೂ ಹೋಗುತ್ತಿತ್ತು. ಇವುಗಳ ಮುಖ್ಯ ಪಡಮೂಲೆಯು ಜಪಾನ್ ದೇಶವಾಗಿತ್ತು. ಈ ಯುದ್ಧದ ವೇಳೆಯಲ್ಲಿ ಸ್ಥಾನಿಕ ಜನರಲ್ಲಿಯೆ ಈ ಧಾನ್ಯದ ಬೇಡಿಕೆ ಹೆಚ್ಚಾಗಿದ್ದುದರಿಂದ ಇದರ ವ್ಯವಸಾಯವು ಹೆಚ್ಚಿತು. ಮುಂದೆ ಯುದ್ಧ ನಿಂತ ಮೂಲಕ ಸೈನ್ಯವನ್ನು ಕಡಿಮೆಮಾಡಲಾಗಿ ಹೆಚ್ಚಾಗಿ ಬೆಳೆದ ಧಾನ್ಯದ ಬಗ್ಗೆ ಎರಡನೆ ದೇಶಗಳ ಪೇಟೆಯ ಕಡೆಗೆ ನೋಡುವ ಅವಶ್ಯಕತೆಯು ಬಂತು.

ಯುರೋಪಿನಲ್ಲಿ ಸೋಯಾಬೀನ್ ವ್ಯಾಪಾರ:— ೧೯೦೮ನೇ ಇಸ್ವಿಯಲ್ಲಿ ಜಪಾನ ವ್ಯಾಪಾರಸ್ಥರು ಸೋಯಾಬೀನ್ ಧಾನ್ಯವನ್ನು ಮಾದರಿಗಾಗಿ ಸ್ವಲ್ಪ ಮಾಲನ್ನು ಎಂಣೆ ತೆಗೆಯುವದರ ಸಲುವಾಗಿ ಯುರೋಪದ ಕೆಲವು ದೇಶಗಳಿಗೆ ಕಳಿಸಿಕೊಟ್ಟರು. ಆ ದೇಶಗಳಿಗೆ ಇದರ ಎಂಣೆ ಮತ್ತು ಹಿಂಡಿಯು ಹೆಚ್ಚು ಉಪಯುಕ್ತವೆಂದು ಕಂಡುಬಂದುದರಿಂದ ಈ ಮಾಲನ್ನು ಹೆಚ್ಚಾಗಿ ತರಿಸತೊಡಗಿದರು. ಅಂದಿನಿಂದ ಇದರ ವ್ಯಾಪಾರವು ಯುರೋಪದ ದೇಶಗಳಲ್ಲೆಲ್ಲ ಹಬ್ಬಿ ಅಮೇರಿಕಾದವರೆಗೂ ಬೆಳೆಯಿತು.

ಈ ವ್ಯಾಪಾರದ ಪ್ರಗತಿ ಧೋರಣವು ವಿಶೇಷವಾಗಿ ಕಂಡು ಬಂದದ್ದರಿಂದ ಮಂಚೂರಿಯಾ ಸರಕಾರವು, ಸೋಯಾಬೀನ್ ಸಾಗುವಳಿ ಮಾಡುವವರಿಗೆ ಉತ್ತೇಜನ ಕೊಟ್ಟ ಮೂಲಕ ಅಲ್ಲಿಯ ಒಕ್ಕಲತನ ಮತ್ತು ರೈತಾವಳಿ ಹೆಚ್ಚುತ್ತ ಹೋಯಿತು. ಅಲ್ಲಿಯ ಸರಕಾರವು ಈ ಧಾನ್ಯ ಬೆಳೆಯುವಂಥ ಮೊದಲಿನ ಹಳೇ ಪ್ರದೇಶಗಳನ್ನು ಪೂರ್ಣಾ



ಬಡೋದೆಯಲ್ಲಿ ಬೆಳೆದ 'ಮೊಮೊತ್' ಎಂಬ ಹಳದಿ ಜಾತಿಯ ಗಿಡಗಳು.

ವಸ್ಥೆಗೆ ತಂದು, ಹೊಸದಾಗಿ ಈ ಪೈರನ್ನು ಬೆಳೆಯುವ ಪ್ರದೇಶಗಳ ವ್ಯಾಪಾರದ ಏಳ್ಗೆಗಾಗಿ ಹೊಸದಾಗಿ ರೇಲ್ವೆ ಮತ್ತು ಉತ್ತಮ ತರಹದ ರಸ್ತೆ ಮುಂತಾಗಿ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿತು. ಮಂಚೂರಿಯಾ ದೇಶದ ಹವಾಮಾನ ಪರಿಸ್ಥಿತಿಯು ಕೂಡ ಸೋಯಾಬೀನ್ ವ್ಯವಸಾಯಕ್ಕೆ ಒಳ್ಳೆಯ ಮಾದರಿಯದಾಗಿರುತ್ತದೆ. ಅಲ್ಲದೆ ಅಲ್ಲಿಯ ಕೂಲಿಯೂ ಬಹಳ ಅಗ್ಗವಾಗಿರುತ್ತದೆ.

ಸೋಯಾಬೀನಿನಿಂದ ತಯಾರಿಸಲ್ಪಟ್ಟ ಪದಾರ್ಥಗಳನ್ನು ಕೊಂಡು ಕೊಳ್ಳುವದಕ್ಕಾಗಿ ಇಂಗ್ಲಂಡ ಮತ್ತು ಅಮೇರಿಕೆಗಳ ವ್ಯಾಪಾರಸ್ಥರ ಮೇಲಾಟವನ್ನು ನೋಡಲಾಗಿ ಇದರ ವ್ಯಾಪಾರ ಭದ್ರವಾಗಿದೆಯೆಂದನ್ನಲಿಕ್ಕೆ ಏನೂ ಅಡ್ಡಿಯಿಲ್ಲ.

೧ ಎಕರೆ ನೆಲದಲ್ಲಿ ಸುಮಾರು ೧೧೦೦ ಪೌಂಡು ಸೋಯಾಬೀನ್ ಉತ್ಪನ್ನವಾಗುತ್ತದೆ.

ಮಾರಾಟದ ಪದ್ಧತಿ:—ಸೋಯಾಬೀನ್ ಮಾರಾಟವು ನಮ್ಮ ದೇಶದಲ್ಲಿಯ ಹತ್ತಿ, ಮೆಣಸಿನಕಾಯಿ ಮುಂತಾದ ಬೆಳೆಗಳ ಮಾರಾಟದಂತೆ ಅಲ್ಲಿ ಕೂಡ ಕೋ|| ಸೊಸಾಯಿಟಿಗಳ ಮುಖಾಂತರ ನಡೆಯುತ್ತದೆ.

ಎಂಣೆ ಮತ್ತು ಹಿಂಡಿ:— ಮಂಚೋರಿಯಾ ದೇಶದಲ್ಲಿ ಎಂಣೆ ಮತ್ತು ಹಿಂಡಿಯನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಯಂತ್ರಸಹಾಯದಿಂದ ತೆಗೆಯುತ್ತಾರೆ. ಹಳ್ಳಿಗಳಲ್ಲಿ ಗಾಣಗಳಿಂದ ತೆಗೆಯುವ ರೂಢಿಯುಂಟು. ಎಂಣೆ ಮತ್ತು ಹಿಂಡಿಯು ಯುರೋಪ ಮತ್ತು ಅಮೇರಿಕಾ ದೇಶಗಳಿಗೆ ಹೋಗುವದರಿಂದ ಮಂಚೋರಿಯಾ ದೇಶದ ಎಂಣೆ ಮತ್ತು ಹಿಂಡಿ ತೆಗೆಯುವ ಉದ್ಯೋಗವು ಕ್ರಮೇಣ ಬೆಳೆಯಹತ್ತಿದೆ.

ಜಪಾನ ದೇಶದಲ್ಲಿ ಸೋಯಾಬೀನಿನ ಉಪಯೋಗ

ಸೋಯಾಬೀನ್, ಜಪಾನ ದೇಶದ ಜನರ ಆಹಾರ ಧಾನ್ಯಗಳಲ್ಲಿ ಮುಖ್ಯವಾದುದಾಗಿರುತ್ತದೆ. ಅಲ್ಲಿ ಈ ಕಾಳನ್ನು ಕುಚ್ಚಿ ಬೇಯಿಸಿ ಅಥವಾ ಇದರ ಪುಡಿಮಾಡಿ ಸಾರಿನಲ್ಲಾಗಲೀ ಅಥವಾ ಅನೇಕ ತೆಳ್ಳನ್ನ ಪದಾರ್ಥಗಳಲ್ಲಾಗಲೀ ಉಪಯೋಗಿಸಿ ತಿನ್ನುವ ರೂಢಿಯಿರುತ್ತದೆ. ಇದರ ಹಸಿಬೀಜದಿಂದ ಹುಳಿ, ಅಥವಾ ಉಸುಳಿ ಮಾಡಲು ಬರುತ್ತದೆ. ಜಪಾನಿನಲ್ಲಿ ದನಗಳು ಕಡಿಮೆಯಿರುವದರಿಂದ ಅಲ್ಲಿಯ ಜನರು ಸೋಯಾಬೀನಿನ ಹಾಲು ತೆಗೆದು ಅದರಿಂದ ಅನೇಕ ರುಚಿಕರ ಪದಾರ್ಥಗಳನ್ನು ತಯಾರು ಮಾಡುವದಲ್ಲದೆ ಹಾಲು ಆಟ್ಟಿಸಿ ಗಟ್ಟಿಮಾಡಿ ಕಾದಿಟ್ಟು (ಕಂಡೆನ್ಸಡ ಮಿಲ್ಕ) ಉಪಯೋಗಿಸುವ ರೂಢಿಯೂ ಕಂಡುಬರುತ್ತದೆ. [illegible] ಜನರು ಸೋಯಾಬೀನ್‌ದ ಆಹಾರವನ್ನು ದಿನಾಲು [illegible] ಯೋಗಿಸುತ್ತಾರೆ. ಮುಖ್ಯವಾಗಿ ಇದು ಅಲ್ಲಿಯ [illegible] ಆಹಾರವಾಗಿರುತ್ತದೆ. ಈ ಆಹಾರದಿಂದ ಸ್ನಾಯು[illegible] ಬಲಗೊಳ್ಳುತ್ತವೆ. ಇದರ ಎಂಣೆಯನ್ನು ತಿನ್ನ[illegible] ಉಪಯೋಗಿಸುವದಲ್ಲದೆ ಅನೇಕ ತರಹದ [illegible] ಗಳಲ್ಲಿ ಕೂಡ ಉಪಯೋಗಿಸಲಾಗುತ್ತದೆ. ಇದರ [illegible] ಮತ್ತು ಹಿಂಡಿಯನ್ನು ದನಗಳ ಆಹಾರವಾಗಿಯೂ [illegible] ಉತ್ತಮ ಗೊಬ್ಬರವಾಗಿಯೂ ಉಪಯೋಗಿಸುವದು[illegible]

ಯುರೋಪದಲ್ಲಿ ಸೋಯಾಬೀನ್ ಪ್ರಸಾ[illegible]

೧೯೦೮ನೇ ಇಸ್ವಿ ಲಾಗಾಯ್ತು ಯುರೋಪ [illegible] ಸೋಯಾಬೀನ್ ಪೈರಿನ ಸಾಗುವಳಿಯು ಆರ್ಥಿಕ [illegible] ಯಿಂದ ಮಹತ್ವದ್ದೆಂದು ತಿಳಿದುಬಂತು. [illegible] ಇಂಗ್ಲಂಡ ದೇಶದ ಕಾರಖಾನೆಗಳಲ್ಲಿ ಚೀನ್ ದೇ[illegible] ಬಂದ ಸೋಯಾಬೀನು ಎಂಣೆ ತೆಗೆಯುವದ[illegible] ಉಪಯೋಗವಾಗುತ್ತಿತ್ತು. ೧೯೦೦ನೇ ಇಸ್ವಿ ಸುಮಾ[illegible] ಇಂಗ್ಲಂಡ ವ್ಯಾಪಾರಸ್ಥರು ಬೀಜದಲ್ಲಿ ಹಿಟ್ಟಿನ ಪ್ರಮಾ[illegible] ಬಹಳೇ ಕಡಿಮೆ ಇರುವದರ ಮೂಲಕ ಮಧುಮೇಹ[illegible] ಗಳಿಗೆ ಯೋಗ್ಯ ಆಹಾರವಾಗಿರುವದೆಂದು ತಿಳಿದು [illegible] ರಿಂದ ಈ ಧಾನ್ಯವನ್ನು ಪರದೇಶದಿಂದ ಹೆಚ್ಚಾಗಿ [illegible] ಹತ್ತಿದರು. ಈ ಕಾರಣದಿಂದಲೇ ಜರ್ಮನ್ [illegible] ಹಾಲಂಡದ ವ್ಯಾಪಾರಸ್ಥರೂ ಈ ಕಾಳನ್ನು ತರಿಸ[illegible] ಇದರಿಂದ ಅನೇಕ ವಿಶಿಷ್ಟ ಪ್ರಕಾರದ ಪದಾರ್ಥ[illegible] ತಯಾರಿಸಹತ್ತಿದರು.

ಇದರ ಎಂಣೆ ಸಾಬೋನು ತಯಾರಿಸುವದಕ್ಕೆ [illegible] ಉಪಯುಕ್ತವೆಂದು ಕಂಡುಬಂದಿದೆ. ಎಂಣೆಯ [illegible] ಹೊರಟ ಹಿಂಡಿ ಮತ್ತು ಹಿಟ್ಟುಗಳಲ್ಲಿಯೂ ಆಹಾ[illegible] ವಿದ್ದ ಮೂಲಕ ಅವುಗಳಿಂದ ಅನೇಕ ಬಗೆಯ [illegible] ಹಾರವನ್ನು ತಯಾರು ಮಾಡಲಿಕ್ಕೆ ಬರುವದೆಂ[illegible] ದುಬಂತು. ೧೯೦೭ನೇ ಇಸ್ವಿ ಲಾಗಾಯ್ತು [illegible] ಬೀನ್ ಧಾನ್ಯವು ಹಡಗದಿಂದ ಉತ್ತಮವಾಗಿ ಬ[illegible] ಅದೇ ವರ್ಷ ಎಂಣೆಯ ಕಾಳುಗಳಾದ ಹತ್ತಿ ಮ[illegible] ಸೆಯ ಕೊರತೆಯಾದುದರಿಂದ ಸೋಯಾಬೀನ್ [illegible] ತರಿಸಲು ವ್ಯಾಪಾರಸ್ಥರಿಗೆ ಹೆಚ್ಚು ಹುರುಪು [illegible] ಸೋಯಾಬೀನ್ ವ್ಯಾಪಾರದ ಗುತ್ತಿಗೆ ಮೊದಲು [illegible] ಡಕ್ಕೇ ಇದ್ದಿತು. ಬಂದ ಯಾವತ್ತೂ ಮಾಲು [illegible] ಕೊಳ್ಳುತ್ತಿದುದರಿಂದ ಅಲ್ಲಿಯ ಎಂಣೆ ತೆಗೆಯುವ [illegible]

ಗಳು ಮುಂದೆ ಬಂದವು. ಅಲ್ಲದೆ ಅವು ಎಂಣೆ ತೆಗೆಯುವದ ಕ್ಷೆಯ ಮಗ್ನವಾದವು. ಅನೇಕ ಗಿರಣಿಗಳು ಎಂಣೆ, ಹಿಂಡಿ, ಮತ್ತು ಹಿಟ್ಟು ತೆಗೆದು ಅವುಗಳ ಮಹತ್ವವನ್ನು ಜನರ ಮುಂದೆ ಇಟ್ಟವು. ಸೋಯಾಬೀನ್ ಧಾನ್ಯವನ್ನು ಎಂಣೆ ತಗೆಯುವದರಲ್ಲಿಯೇ ಹೆಚ್ಚಾಗಿ ಉಪಯೋಗಿಸು ವದರಿಂದ ಇದರ ವ್ಯಾಪಾರಕ್ಕೆ ಉತ್ತೇಜನವಾಯಿತು.

ಈ ಧಾನ್ಯವನ್ನು ಮೊದಲು ಸಾದಾ ಬೇಳೆಯಕಾಳುಗಳ ಲ್ಲಿಯೆ ಗಣನೆ ಮಾಡಿದ್ದರಿಂದ ಇದರ ಪ್ರಸಾರ ಸಾಕಷ್ಟು ಆಗಲಿಲ್ಲ. ಯಾಕಂದರೆ ಜರ್ಮನಿ, ಫ್ರಾನ್ಸ ಮತ್ತು ಆಸ್ಟ್ರಿಯಾ ದೇಶಗಳಲ್ಲಿ ಎಂಣೆ ತೆಗೆಯುವ ಧಾನ್ಯಗಳ ಹೊರತು ಮಿಕ್ಕ ಯಾವತ್ತೂ ಆಹಾರದ ಧಾನ್ಯಗಳ ಮೇಲೆ ಸುಂಕ ಕೂಡಿಸುವ ಪದ್ಧತಿ ಇತ್ತು. ಆದರೆ ಎಂಣೆ ತೆಗೆಯುವ ಧಾನ್ಯಕ್ಕೆ ಮಾತ್ರ ಸುಂಕವಿದ್ದಿಲ್ಲ. ಈ ಧಾನ್ಯದಿಂದ ಎಂಣೆ ತೆಗೆಯಲು ಬರುವದೆಂದು ತಿಳಿದ ಕೂಡಲೆ ಈ ಧಾನ್ಯದ ಮೇಲಿನ ಸುಂಕವನ್ನು ತೆಗೆದು ಹಾಕಿದರು. ಕೂಡಲೆ ಇದರ ವ್ಯಾಪಾರ ಎರಡನೇ ದೇಶದಲ್ಲಿ ಬೆಳೆದದ್ದರಿಂದ ಇಂಗ್ಲಂಡದ ವ್ಯಾಪಾರಸ್ಥರ ಗುತ್ತಿಗೆಗೆ ಧಕ್ಕೆ ತಗಲಿತು. ಯುರೋಪದ ಎಲ್ಲ ದೇಶಗಳಲ್ಲಿ ಜಪಾನ ಮತ್ತು ಮಂಚೋರಿಯಾ ಮಾಲಿನ ಆಯಾತದ ಪ್ರಮಾಣವು ಹೆಚ್ಚಿತು. ೧೯೧೧ನೇ ಇಸ್ವಿಯಲ್ಲಿ ಯುರೋಪದ ಯಾವತ್ತೂ ದೇಶಗಳಲ್ಲಿ ಸೋಯಾಬೀನ್ ಆಯಾತವು ಒಟ್ಟು ೩೨೯೪೦ ಟನ್ನದ ವರೆಗೆ ಮುಟ್ಟಿತು. ಈ ಧಾನ್ಯದ ಎಂಣೆ ಮತ್ತು ಇದರಿಂದ ತಯಾರಿಸಿದ ಇತರ ಪದಾರ್ಥಗಳ ಮೇಲಾಟವು ಮಿಕ್ಕ ಎಂಣೆಯ ಕಾಳುಗಳಿಗಿಂತ ಹೆಚ್ಚಿತು.



ಬಡೋದಾ ಮಹಾರಾಜ ಶ್ರೀ. ಗಾಯಕವಾಡ ಸರಕಾರ ಅವರು ಸ್ವಹಸ್ತದಿಂದ ಬಡೋದಾ ಕೃಷಿಕ್ಷೇತ್ರದ ಮೇಲೆ ಸೋಯಾಬೀನಿನ ಪ್ರಥಮ ಬೀಜಾರೋಪಣಮಾಡಿದ ಚಿತ್ರ

✣ ಸಣ್ಣ ಕತೆ ✣

ಪರಿವರ್ತನೆ

ಲೇಖಕರು:—ಶ್ರೀ. ಜಿ. ಜೆ. ಮಯ್ಯಾ

★

ಸುತ್ತಲು ಆಡುತ್ತಿದ್ದ ಮಕ್ಕಳೆಲ್ಲ ಬಂದು ಬಹಳ ಗೇಲಿಮಾಡಿದರು. ಆಲದ ಬೀಳು ಕಡಿದು ನೆಲಕ್ಕುರುಳಿದ ಪೆಟ್ಟೊಂದು ಕಡೆ; ಈ ಪೋರರ ಕಾಟವೊಂದು ಕಡೆ. ಹೀಗೆ ಬಳಲುತ್ತಿರುವಾಗ ಆಕಸ್ಮಾತ್ತಾಗಿ ಖಾದಿ ವೇಷಧಾರಿಣಿಯಾಗಿ ವನದೇವತೆಯೆ ಬಂದಂತೆ ಒಬ್ಬ ಯುವತಿ ಬಂದಳು. ಅವಳು ನನ್ನ ಪೂರ್ವಪರಿಚಿತ ಲತೆಯೆ? ವಿಲಾಸಿನಿಯಾದ ಆ ಲತೆಯಲ್ಲಿ! ಸರಲತೆಯೆ ಮೈಗೊಂಡು ಬಂದ ಇವಳೆಲ್ಲಿ!


★

ಒಂದು ಭಾನುವಾರ. ಇಳಿ ಹೊತ್ತಿನಲ್ಲಿ ಸೈಕಲನ್ನೇರಿಕೊಂಡು ನಗರದಿಂದ ಉತ್ತರ ಪ್ರದೇಶದ ದಾರಿಯನ್ನು ಕ್ರಮಿಸತೊಡಗಿದೆ. ಆರೇಳು ಮೈಲು ದೂರದಲ್ಲಿ ಒಂದು ಹಳ್ಳಿ. ಸುಮಾರು ೨೦-೨೫ ಮನೆಗಳು ಕಂಗಳಿಗೆ ಗೋಚರಿಸುತ್ತಿದ್ದುವು. ರಸ್ತೆಯ ಪಾರ್ಶ್ವದಲ್ಲಿಯೆ ವಿಶಾಲವಾಗಿ ಬೆಳೆದ ಆಲದಮರವೊಂದು. ಸೈಕಲಿನಿಂದಿಳಿದು ಆ ಮರದಡಿಯಲ್ಲಿ ಕುಳಿತು, ಸೃಷ್ಟಿರಚನೆಯ ಕೌತುಕವನ್ನು ಕಣ್ಣುಗಳಿಂದ ಹೀರತೊಡಗಿದೆ. ಹಾಗೆಯೇ ನೋಡುತ್ತಿರುವಲ್ಲಿ ಆಲದ ಬೀಳಲುಗಳೆರಡನ್ನು ಒಂದಕ್ಕೊಂದು ಕಟ್ಟಿರುವುದು ಗೋಚರಿಸಿತು. ಯಾರೋ ಹುಡುಗರು ಆಟಕ್ಕಾಗಿ ಕಟ್ಟಿದ್ದಿರಬಹುದು. ನಾನೂ ನನ್ನ ಗೆಳೆಯರನ್ನು ಕೂಡಿಕೊಂಡು ಈ ಹಿಂದೆ, ನಾವು ಚಿಕ್ಕವರಿರುವಾಗ ಹೀಗೆಯೇ ಆಲದಮರದ ಬೀಳಲುಗಳನ್ನು ಒಂದಕ್ಕೊಂದು ಕಟ್ಟಿ ಉಯ್ಯಾಲೆಯನ್ನು ಮಾಡಿ ತೂಗಿಕೊಳ್ಳುತ್ತಿದ್ದ ಬಾಲ್ಯಜೀವನದ ನೆನಪು ನನ್ನನ್ನು ಬಾಲಕನನ್ನಾಗಿ ಮಾಡಿತು. ಎದ್ದು ನಿಂತು ಸುತ್ತಲೂ ನೋಡಿದೆ. ಆಲಿಸಿದೆ. ದೂರದಲ್ಲಿ ಮೇಯುವ ಮಂದೆಯೊಂದು ಮತ್ತು ಮರದ ಮೇಲೆ ಚಿಲಿಪಿಲಿಯೆಂದು ನಲಿಯುವ ಹಕ್ಕಿಗಳು. ಇವುಗಳನ್ನುಳಿದು ಪ್ರದೇಶವು ನಿರ್ಜನ, ನೀರವ. ಬೀಳಲುಗಳನ್ನು ಎಳೆದು ಹಿಡಿದು, ಹತ್ತಿ ಕುಳಿತು ತೂಗಿಕೊಳ್ಳತೊಡಗಿದೆ. ಆನಂದೋನ್ಮಾದವು ರಕ್ತದ ಬಿಂದುಬಿಂದುಗಳಲ್ಲಿಯೂ ಕಲೆತು ಅಂಗಾಂಗಗಳಲ್ಲಿ ಸಂಚರಿಸತೊಡಗಿತು. ಹಾಗೆಯೇ ಜಯದೇವನ ಗೀತಗೋವಿಂದದ ಹಲವು ಪದಗಳು ನೆನಪಾದುವು. ಆ ದೇವಮಾನವರ ನಿಷ್ಕಾಮ ಪ್ರೇಮಜೀವನದ ನೆನಪು! ಆ ದಿವ್ಯ ಪ್ರೇಮಜೀವನದ ಸವಿಯು ಕೇವಲ ಒಂದಾವರ್ತಿಯಾದರೂ ನಮ್ಮ ಜೀವನದಲ್ಲಿ ತಲೆದೋರಬಾರದೇ! ಹಾಗಾಗುವುದಾದರೆ ನಾವೆಷ್ಟು ಸುಖಿಗಳು! ಆ ಸುಖದ ಸವಿಯನ್ನು ಮನಸ್ಸು ಅನುಭವಿಸಿ ನಲಿಯತೊಡಗಿತು. ಆ ಆನಂದೋನ್ಮಾದದಲ್ಲಿ ಕಳೆದ ಸಮಯದ ಅರಿವಾಗಲೇ ಇಲ್ಲ.

ಸಮಯದ ಅರಿವಾಗುವ ವೇಳೆಗೆ ನಾನು ಮಾತ್ರ ಭೂಮಿಯ ಮಡಿಲಲ್ಲಿದ್ದೆ. ಬೀಳಲುಗಳು ತುಂಡಾಗಿದ್ದುವು. ಕಾಲುಗಂಟುಗಳು ಅಪ್ಪಳಿಸಿ ರಕ್ತವು ಧಾರಾಕಾರವಾಗಿ ಹರಿಯತೊಡಗಿದ್ದಿತು. ಕಣ್ಣುಗಳನ್ನು ಅರಳಿಸಿ ಸುತ್ತಲೂ ನೋಡುವಾಗ ವಿಶ್ವವೇ ಬುಗುರಿಯಂತೆ ತಿರುಗುವ ಹಾಗೆ ಕಾಣತೊಡಗಿತು. ಕೆಲವು ಬಾಲಕ ಬಾಲಿಕೆಯರು ನನ್ನ ಸುತ್ತಲೂ ಸೇರಿಕೊಂಡು ಕೈಕಟ್ಟಿ ನಗಾಡುತ್ತಿದ್ದರು. ಅರ್ಧ ತಿಳಿವಿನಲ್ಲಿದ್ದರೂ ಅವರ ಹಾಸ್ಯದ ನಗುವಿನ ಲಹರಿಗಳು ಶ್ರೋತ್ರೇಂದ್ರಿಯದ ಮೂಲಕ ನನ್ನ ಹೃದಯವನ್ನು ಹೊಕ್ಕು ಖೇದವನ್ನುಂಟುಮಾಡಿತು. ಸ್ವಲ್ಪವಾದರೂ ಚೈತನ್ಯವಿರುತ್ತಿದ್ದರೆ ಅವರೆಲ್ಲರನ್ನೂ ಒಂದೇಟಿಗೆ ಯಮನ ಅತಿಥಿಗಳಾಗಿ ಕಳುಹಿಸುತ್ತಿದ್ದೆನೆನ್ನಿಸಿತು. ಆದರೆ ನನ್ನ ದೇಹದ ಚೈತನ್ಯವು ಉಡುಗಿ ಹೋಗಿತ್ತು. ನೋವಿನಿಂದ ನರಳುವ ದೇಹ, ಖೇದ ನಾಚಿಕೆಗಳಿಂದ ತಪಿಸುವ ಮನಸ್ಸು ಬಾಲಕರ ಹಾಸ್ಯಪರಿಹಾಸ್ಯಗಳನ್ನು ಸಹಿಸವು. ಆದರೆ ಅವರದು ಬಾಲ್ಯ ವಯಸ್ಸು. ಕಣ್ಣಿಗೆ ಹಬ್ಬವಾಗಿರುವಾಗ ಅವರು ಆ ಆನಂದದ ಸವಿಯನ್ನು ಸವಿಯದೆ ಸುಮ್ಮನಿರಲಾರರು. ಇನ್ನೂ ನಗು! ಕೈಚಪ್ಪಾಳೆ! ನನಗೆ ಸಹಿಸಲಾರದಾಯ್ತು!

ಅಷ್ಟರಲ್ಲಿ ಅವರನ್ನು ವಿಚಾರಿಸಿಕೊಳ್ಳಲು ಯಾರೋ ಕೂಗಿ ಕೇಳುತ್ತಿದ್ದರು. ಸ್ತ್ರೀಯ ಕಂಠಧ್ವನಿ; ಅಲ್ಲದೆಯೂ ಪರಿಚಿತ ಧ್ವನಿಯಂತಿದೆ. ಯಾರಿರಬಹುದು! ಆ ಹಳ್ಳಿಯಲ್ಲಿ ನನ್ನ ಪರಿಚಯದವರಾರೂ ಇರುವುದು ನನಗೆ ತಿಳಿದಿಲ್ಲ. ಯಾರಿರಬಹುದೆಂದು ಯೋಚಿಸತೊಡಗಿದೆ. ಸ್ವಲ್ಪ ಸಮಯದಲ್ಲಿಯೇ ಓರ್ವ ಯುವತಿಯು ಅಲ್ಲಿಗೆ ಬಂದಳು. ಬಂದವಳು ನನ್ನನೀಕ್ಷಿಸದೆಯೇ ಹುಡುಗರನ್ನು ಗಲಾಟೆಗೆ ಕಾರಣವೇನೆಂದು ವಿಚಾರಿಸಿದಳು. ಅವಳ ಮಾತಿಗುತ್ತರ ಕೊಡುವುದನ್ನು ಬಿಟ್ಟು ಬಾಲಕರು ನನ್ನೆಡೆಗೆ ಕೈದೋರಿ ಮತ್ತು ದೊಡ್ಡದಾಗಿ ನಗಲು ಪ್ರಾರಂಭಿಸಿದರು. ನಗುವಿನ ಲಹರಿಯಲ್ಲಿ ಒಬ್ಬ ಬಾಲಕನು ಏನನ್ನೋ ಹೇಳತೊಡಗಿ

ದನು. ಅವನ ಮಾತಿಗೆದುರಾಗಿ ಯುವತಿಯು ಅವರನ್ನು ಮನೆಯತ್ತ ತೆರಳಿರೆಂದಳು. ಬಾಲಕರು ಮನೆಯತ್ತ ಹೊರಳಿದರು. ಆಗ ಅವಳು ನನ್ನನ್ನೇ ಅನಿಮಿಷನಯನೆಯಾಗಿ ನೋಡತೊಡಗಿದಳು. ಲಜ್ಜಾಭಾರದಿಂದ ನನ್ನ ಶಿರಸ್ಸು ಕುಂಠಿತವಾಗಿದ್ದರೂ ಮನಸ್ಸಿನ ಚಪಲತೆಯಿಂದ ಮೊಗವೆತ್ತಿ ಅವಳನ್ನು ದಿಟ್ಟಿಸಿದೆ.—ಅವಳು ಯುವತಿ· ಸೌಂದರ್ಯಮೂರ್ತಿಯಲ್ಲವಾದರೂ ಚೆಲುವೆ. ಉಟ್ಟಿರುವುದು ಆಕಾಶ ಬಣ್ಣದ ಖಾದಿಯ ಸೀರೆ. ಅರಸಿನ ಬಣ್ಣದ ಹೂವುಗಳಿಂದ ಶೋಭಿಸುವ ಬಿಳಿಯ ಖಾದಿಯ ರವಕೆಯನ್ನು ತೊಟ್ಟಿದ್ದಳು. ಕೈಯಲ್ಲಿ ಗಾಜಿನ ಬಳೆಗಳೆರಡೆರಡು. ಹಣೆಯಲ್ಲಿ ರಂಜಿಸುವ ಕುಂಕುಮದ ತಿಲಕ. ಒಟ್ಟಿನಲ್ಲಿ ಆಡಂಬರ ವಿಹೀನಳು. ಆದರೂ ಲಾವಣ್ಯಮಯಿ. ಅಲ್ಲದೆಯೂ ಪರಿಚಿತ ಮೊಗ. ಎಲ್ಲಿ ಯಾವಾಗ ಅವಳ ಪರಿಚಯವೆನ್ನುವುದು ಲಕ್ಷ್ಯದಲ್ಲಿ ಬರಲಿಲ್ಲ. ಮತ್ತೂ ಮತ್ತೂ ಯೋಚಿಸಿದೆ. ಮನಃಪಟಲದಲ್ಲಿ ಹಿಂದೆ ಅವಳನ್ನು ಸಂದರ್ಶಿಸಿದ ನೆನಪು ಬರತೊಡಗಿತು. ಅವಳ್ಯಾರೆಂದು ತಿಳಿಯಿತು. ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ನನ್ನನ್ನು ಕಾಮಿಸಿದ ನವಜವ್ವನದ ಚೆಲ್ವೆಯಾದ ಲತೆಯವಳೆಂದು ತಿಳಿಯಿತು....



ಲತಾ....ನಿನ್ನ ವರ್ತನೆಯು ಈ ಮೊದಲೇ ನನಗೆ ತಿಳಿದಿದೆ.

* * *

ನಾಲ್ಕೈದು ವರ್ಷಗಳಿಗೆಮುಂಚೆ, ನಾನು ವಿದ್ಯಾರ್ಥಿದೆಸೆಯಲ್ಲಿದ್ದಾಗ ಅವಳ ಪರಿಚಯವಾದುದು. ಆಕೆಯು ಸಿರಿವಂತರ ಮಗಳು. ಕುಲೀನ ಕುಟುಂಬದಲ್ಲೇ ಜನ್ಮ ಕಳೆದವಳು. ತಂದೆಯಿರಲಿಲ್ಲ. ತಾಯಿಯೊಬ್ಬಳು ಮುದುಕಿ. ಬಂಧುಗಳಿದ್ದಿರಬಹುದು. ನಾನಿರುವ ಮನೆಯ ಹಿಂಭಾಗದಲ್ಲಿರುವ ಮನೆಯೇ ಅವಳದು. ದೊಡ್ಡ ಮಹಡಿಯ, ಪಾಶ್ಚಾತ್ಯ ಪದ್ಧತಿಯಲ್ಲಿ ಸುಸಜ್ಜಿತವಾದ ಮನೆಯದು.

ಆಗ ಅವಳು ವಿದ್ಯಾರ್ಥಿನಿ. ಒಬ್ಬಳೇ ಮಗಳೆಂದು ತಾಯಿಯು ಅವಳಿಚ್ಛೆಗೆ ವಿರೋಧವಾಗಿ ಏನನ್ನೂ ನುಡಿಯದಿರುತ್ತಿದ್ದುದರಿಂದ ಲತೆಯು ಸ್ವೇಚ್ಛಾವಿಹಾರಿಗಳ ಪ್ರಮುಖಳಾದಳು. ಕಲಿಯುವಿಕೆಗೆ ತಿಲಾಂಜಲಿಯನ್ನಿತ್ತು; ನಿಂದ ರಕ್ಷಕರು ಕಳುಹಿಸುವ ಹಣದಲ್ಲಿ ಶೃಂಗಾರ ಮೆರೆಯುವ, ವಿಷಯಲೋಲುಪರಾದ ವಿದ್ಯಾರ್ಥಿಗಳಲ್ಲಿ ವರು ಅವಳ ನಚ್ಚಿನ ಗೆಳೆಯರು. ಅವಳ ಗೃಹ ಸ್ನೇಹಿತರಿಂದ ಶೂನ್ಯವಾಗಿರುತ್ತಿದ್ದಿಲ್ಲ. ಅವರನ್ನು ಮಾಡಿಕೊಳ್ಳುವುದು, ಕಾಫಿ ತಿಂಡಿಗಳಿಂದ ಅವರನ್ನು ರಿಸುವುದು, ಅವರೊಡನೆ ನಾಟಕ ಸಿನೆಮಾಗೃಹಗಳ ಸಂದರ್ಶಿಸುವುದು— ಇವೆಲ್ಲಾ ಅವಳ ದಿನಚರಿಯ ಪ್ರಮುಖ ಕೆಲಸಗಳು. ಅಕ್ಕಪಕ್ಕದ ಮನೆಯವರು ವಿಷಯವಾಗಿ ಬೇಕೆನಿಸುವಷ್ಟು ಹೇಳುತ್ತಿದ್ದರು. ಹಿತವಾದವುಗಳಲ್ಲ .... ದಿನಕ್ಕೊಮ್ಮೆಯಾದರೂ ಸಂದರ್ಶನವಾಗದಿರುತ್ತಿದ್ದಿ ನಾನಿರುವ ನಗರದಲ್ಲಿ ಸೆಕೆ. ಆ ಸೆಕೆಯ ಕ್ಕಾಗಿ ಬಿಸಿಲು ಯನ್ನೇರಿ ಸಾಯಂಕಾಲ ಕಾಲವನ್ನು ಕಳೆಯುತ್ತಿ ಸಮಯವನ್ನು ಸಾಧಿಸಿ ದರೂ ಬಿಸಿಲು ಪುಸ್ತಕಗಳನ್ನು ಕೊಂಡು ಬರುತ್ತಿ ನವೀನ ರೀತಿಯ ಸಿಂಗರ, ಕಾಮವಿ ಅವಳ ಹಾವಭಾವಗಳು, ಕ್ಷವೀಕ್ಷಣಗಳು, ನನ್ನ ಳೊಲವಿನತ್ತ ಸೆಳೆಯು ದ್ದುವು. ಕಾಲಾಂತರದಲ್ಲಿ ಅವಳ ದಾಸನಾಗುತ್ತಿದೆ.

ಒಂದು ದಿವಸ ಕೊಲೇಜಿನಿಂದ ಬರುತ್ತಿ ಸಿನೆಮಾ ಕರಪತ್ರಿಕೆಯೊಂದು ಕೈಯಲ್ಲಿ ಬಿತ್ತು ಕೊಂಡೆ. ದೇವದಾಸ—ಪ್ರೇಮಭಗ್ನ ಹೃದಯ ಇನ್ನು ನಟನಟಿಯರ ಹೆಸರುಗಳು ! ಶ್ರೀ ಚಟರ್ಜಿಯವರು ಈ ಕಥೆಯ ಲೇಖಕರೆಂದೂ, ನಿರ್ಮಾಣದಲ್ಲಿ ಅವರು ಬಂಗಾಳದ ಮೊಟ್ಟಮೊದ ರೆಂದೂ ಒಂದು ಪತ್ರಿಕೆಯಲ್ಲಿ ಓದಿದ್ದೆ. ಚಲಚ್ಚಿ ನೋಡುವ ಕುತೂಹಲವುಂಟಾಯಿತು. ಅಂದೇ ದಿವಸ. ಮೊದಲ ಆಟಕ್ಕೇ ಹೋದೆ.

ದೇವದಾಸ ಪಾರ್ವತಿಯರ ಬಾಲ್ಯದ ಸವಿಗನಸುಗಳಿಂದ ಕಥೆಯು ಪ್ರಾರಂಭಿಸುವುದು. ಅವರ ಎಣೆಯಿಲ್ಲದ ಪ್ರೇಮ ನುಡಿಗಳು. ಒಬ್ಬರನೊಬ್ಬರು ಅನುಸರಿಸಿಕೊಂಡೇ ತಮ್ಮ ಜೀವನವನ್ನು ಕಳೆಯಬೇಕೆಂದು ಅವಿರಿಬ್ಬರ ಮತ. ಲೋಕವು ತಿಳಿಯದಿದ್ದರೂ ಅವರು ದಂಪತಿಗಳಂತೆಯೇ ಇದ್ದರು. ಬಾಲ್ಯವು ಕಳೆಯಲು ದೇವದಾಸನನ್ನು ಕಲಕತ್ತೆಗೆ ವಿದ್ಯಾಭ್ಯಾಸಕ್ಕೆಂದು ರಕ್ಷಕರು ಕಳುಹಿಸುವ ಯತ್ನ ಮಾಡುವರು. ಪಾರ್ವತಿಯ ಸಂಗಕ್ಕಾಗಿ ದೇವದಾಸನು ಹೋಗಲಿಚ್ಛಿಸುವದಿಲ್ಲ. ಆದರೆ ಹೋಗಲೇಬೇಕೆನ್ನುವ ತಂದೆ, ತಾಯಿ, ಸಹೋದರ, ಸಮಾಜ ಇವರ ಮಾತನ್ನು ಮೀರಿಸುವುದು ಅವನಿಂದ ಸಾಧ್ಯವೇ? ಪಾರ್ವತಿಯನ್ನು ಬೀಳ್ಕೊಂಡು ಕಲ್ಕತ್ತೆಗೆ ಹೋಗುವನು.

ಕಲ್ಕತ್ತೆಯ ಜೀವನ! ಶ್ರೀಮಂತರ ಮಗನು ದೇವದಾಸ. ಸುಖಕ್ಕೆ ಕೊರತೆಯಿದೆಯೇ? ಸುಖವನ್ನು ತೋರಿಸಿ ಕೊಡುವ ಗೆಳೆಯರಿಗಾದರೂ ಕಲ್ಕತ್ತೆಯಲ್ಲಿ ಆಶ್ರಯವಿಲ್ಲ ದಿರುವುದೇ? ಗೆಳೆಯರೂ ಶ್ರೀಮಂತರೇ! ದೇವದಾಸನದು ವಿಶಾಲ ಹೃದಯ. ತನ್ನ ಗೆಳೆಯರು ಕಪಟವರ್ತನೆಯವರೆಂದು ಎಣಿಸಲಾರನು. ಅಂತೆಯೇ ಅವರೊಡನೆ ಸಲುಗೆಯಿಂದಲೇ ವರ್ತಿಸುತ್ತಿದ್ದನು. ಹೀಗಿರುವಾಗ ಒಂದು ರಾತ್ರಿ ಗೆಳೆಯನೊಬ್ಬನು ದೇವದಾಸನನ್ನು ವಾರಾಂಗನೆ ಯೋರ್ವಳ ಮನೆಗೆ ಕರೆದೊಯ್ಯುವನು. ದೇವದಾಸನಿಗೆ ಅಪ್ಸರದ್ರೂಪಿ ವಾರಾಂಗನೆಯ ಪ್ರೇಮಚೇಷ್ಟೆಗಳು ಅಸಹ್ಯವಾಗಿ ತೋರಿದುವು. ತನ್ನಿಂದ ಹಣವನ್ನು ಸುಲಿಗೆ ಮಾಡುವುದಕ್ಕಾಗಿ ಅವರದೀತರದ ವರ್ತನೆಯೆಂದು ತಿಳಿದು, ಅವಳೋಲವಿಗೆ ಮಣಿಯದೆ ಹಣದ ಪಾಕೀಟನ್ನು ಅವಳಿಗೆ ಕೊಟ್ಟು ಮನೆಗೆ ಮರಳುವನು. ಕಲ್ಕತ್ತೆಯ ಜೀವನದ ಸೊಬಗು ದೇವದಾಸನನ್ನು ನಿರ್ಜೀವಿಯನ್ನಾಗಿ ಮಾಡಿತು.... ಇತ್ತ ವಾರಾಂಗನೆ, ಇದು ವರೆಗೆ ಸಾವಿರಾರು ಜನರು ಅವಳ ರೂಪಕ್ಕೆ ಮರುಳಾಗಿ ಅವಳ ದಾಸರಾಗಿದ್ದರು. ಆದರೆ ಇಂದು, ಸಾವಿರಾರು ಜನರಿಂದ ಹೊಗಳಿಸಿಕೊಂಡಿದ್ದ ಅವಳ ರೂಪಲಾವಣ್ಯವು ದೇವದಾಸನಿಂದ ತಿರಸ್ಕೃತವಾಯ್ತು. ಅವಳ ನಾರೀ ಹೃದಯವು ಜಾಗೃತವಾಯ್ತು. ತನ್ನ ಜೀವನವನ್ನು ಪರಿವರ್ತಿಸಿಕೊಂಡಳು. ದೇವದಾಸನನ್ನು ಆರಾಧ್ಯ ದೇವತೆಯನ್ನಾಗಿ ಮಾಡಿಕೊಂಡಳು.

ಈ ದೃಶ್ಯವೇ ನನ್ನ ಮನಸ್ಸಿನಲ್ಲಿ ಬಹಳ ಪರಿಣಾಮವನ್ನುಂಟುಮಾಡಿತು. ಅವನು ಆದರ್ಶ ಮಾನವನಂತೆ ತೋರಿಬಂದನು. ಶಾರೀರಿಕ ಸೌಂದರ್ಯವು ಅವನನ್ನು ಮರುಳುಗೊಳಿಸಲಾರದಾದುವು. ಯುವತಿಯ ಒನಪು ಒಯ್ಯಾರಗಳೇ ಅವನನ್ನು ವಿರಕ್ತಿ ಮಾರ್ಗಕ್ಕೊಯ್ದ ಸಾಧನೆ. ಆದರೆ ಅವನು ಪ್ರೇಮಮೂರ್ತಿಯಲ್ಲವೇನು? ಪ್ರೇಮಮೂರ್ತಿಯಾದರೂ ಅವನ ಪ್ರೇಮವು ಏಕಗಾಮಿ. ಅದು ಪಾರ್ವತಿಗಾಗಿಯೇ ಕಾದಿರಿಸಲ್ಪಟ್ಟಿದೆ. ಈ ಏಕಗಾಮಿಯಾದ ಪ್ರೇಮವೇ ಮುಂದೆ ಅವನನ್ನು ಸಮಾಜಬಾಹಿರನನ್ನಾಗಿ ಮಾಡಲು ಕಾರಣ. ಸಮಾಜದೆದುರಿನಲ್ಲಿ ದೇವದಾಸನು ನೀಚ, ಚಾಂಡಾಲ, ಕುಡುಕ ಮತ್ತು ಸ್ತ್ರೀಲೋಲುಪ. ಆದರೆ ಅವನ ಜೀವನದಲ್ಲಿ ಲೀನರಾಗಿ ನೋಡುವವರಿಗೆ ಅವನೊಬ್ಬ ಮಹಾಪುರುಷನೆಂದೇ ತಿಳಿದುಬರುವುದು. ಮಧುಮಾಧವಿಯರ ಗುಲಾಮನಾಗುವನೇತಕ್ಕೆ? ಅವನ ಮನೋಮಂದಿರದ ರಾಣಿಯಾದ ಪಾರ್ವತಿಯನ್ನು ಮರೆಯಲೆಂದು. ಧನಸಂಪತ್ತಿಯನ್ನು ಕಳೆದುಕೊಳ್ಳುವನೇತಕ್ಕಾಗಿ? ಪಾರ್ವತಿಯಲ್ಲದೆ ಬೇರೆಯವಳೊಡನೆ ಸಂಸಾರ ಸುಖವನ್ನು ಹೊಂದಲಾರನವನು. ಬಾಲ್ಯದಲ್ಲಿ ಪಾರ್ವತಿಯು ತನ್ನ ಗೆಳತಿಯೊಡನೆ "ನನ್ನ ದೇವದಾಸನು ಅನ್ಯರಂತಲ್ಲ" ಎಂದು ಹೇಳುವಳು. ಪ್ರೇಮಜಾಲದಲ್ಲಿ ಸಿಲುಕಿ ಅವಳು ಹಾಗೆನ್ನುವಳೆಂದು ಮೊದಲು ನಮಗೆ ಭಾವನೆಯಾಗುತ್ತದೆ. ನಂತರವಾದರೂ ಅವಳ ಹೇಳಿಕೆಯು ಅನ್ಯಥಾ ಪರಿಣಮಿಸಲಿಲ್ಲ. ದೇವದಾಸನ ಜೀವನವು ಎಲ್ಲರ ಜೀವನದಂತಲ್ಲ. ಅದೊಂದು ಮಧುರ ಸಂಗೀತದಂತೆ.

ಅಂತೂ ಸೊಗಸಾದ ಜೀವನದ ನೈಜ ಸವಿಯನ್ನು ತಿಳಿಸುವ ಕಥೆಯದು. ಸಿನೇಮಾಗೃಹದಿಂದ ಮನೆಗೆ ಮರಳುವಾಗಲೂ ಒಂದೇ ಯೋಚನೆ. ದೇವದಾಸನಂತೆ, ಪಾರ್ವತಿಯಂತೆ, ಅಥವಾ ಚಂದ್ರೆಯಂತೆ ಎಷ್ಟು ಜನರು ನಮ್ಮ ಸಂಸಾರದಲ್ಲಿರುವರು? ಅವರ ಜೀವನದೊಡನೆ ನಮ್ಮ ಜೀವನವನ್ನು ಹೋಲಿಸಿದರೆ ನಮ್ಮ ಜೀವನವು ನಿಜವಾದ ಜೀವನವೆಂದೆನಿಸುವುದೇ? ಜೊತೆಯಲ್ಲಿ ಇನ್ನೂ ಒಂದು ಯೋಚನೆ. "ನಮ್ಮಲ್ಲಿ ಹಲವರು ಬಂಗಾಳಿ ಬಾಬುಗಳನ್ನು ಧೋತ್ರವನ್ನುಡುವುದರಲ್ಲಿ ಶರಾಯಿಯನ್ನು ತೊಡುವುದರಲ್ಲಿ ಅನುಕರಿಸುತ್ತೇವೆ. ಆದರೆ ಅವರ ತತ್ವಗಳನ್ನು ಅನುಕರಿಸಲು ಯತ್ನಿಸುವುದಿಲ್ಲ. ಅನುಕರಿಸುವುದು ಅನುಷ್ಠಾನದಲ್ಲಿ ತರುವುದು ಬಹಳ ದೂರದ ಮಾತು. ಅವುಗಳನ್ನು ತಿಳಿಯುವವರೆಷ್ಟು ಮಂದಿ? ತಿಳಿದವರಲ್ಲೂ 'ಅರ್ಥವಿಹೀನವಾದವು'ಗಳೆಂದು ಕಡೆಗಣಿಸುವವರೆಷ್ಟು ಜನರು!"

"ದೇವದಾಸ"ನ್ನು ನೋಡಿ ಒಂದು ವಾರ ಕಳೆದಿತ್ತು. ರಾತ್ರಿ ೧೨-೩೦,೧ರ ಸಮಯ. ನಿದ್ರೆಯು ಜೋರಾಗಿ

ಬಂದಿತ್ತು. ಯಾರೋ ದೇಹವನ್ನು ಸ್ಪರ್ಶಿಸಿದಂತೆ ಅನುಭವ. ಬಳೆಗಳ ಗುಲುಗುಲು ಶಬ್ದ. ಕಣ್ತೆರೆದು ಪಕ್ಕದಲ್ಲಿದ್ದ ಲಾಂದ್ರದ ಬತ್ತಿಯನ್ನು ದೊಡ್ಡದು ಮಾಡಿದೆ. ಹಾಸಿಗೆಯ ಮಗ್ಗುಲಲ್ಲಿ ಲತೆಯು ನಿಂತಿದ್ದಳು. ಈ ಗಾಡಾಂಧಕಾರ ರಾತ್ರಿಯಲ್ಲಿ ಅವಳು ಬಂದುದೇತಕ್ಕೆಂದು ಬೇರೆ ಹೇಳಬೇಕಾಗಿಲ್ಲ. ಕುಟಲೆಯೆನ್ನುವುದು ಮೊದಲಿನಿಂದಲೂ ತಿಳಿದಿದೆ. ಹೇಗಾದರೂ ಮಾಡಿ, ಅವಳೊಡನೆ ಮಾತಾಡಿ ಹೊರಕ್ಕೆ ಕಳುಹಿಸುವೆನೆಂದು ಯೋಚಿಸಿ ಮಾತನಾಡಲುದ್ಯುಕ್ತನಾದರೂ ಮಾತುಗಳು ಕಂಠದಲ್ಲಿಯೇ ಅಡಗಿ ಹೋಗುತ್ತಿದ್ದುವು. ಅವಳ ಧೈರ್ಯವನ್ನು, ಪರಪುರುಷನಲ್ಲಿಗೆ ಲಜ್ಜಾವಿಹೀನಳಾಗಿ, ಕಾಲಾಕಾಲಗಳ ಭೇದವಿಲ್ಲದೆ ಹೋಗುವ ಅವಳ ಧೈರ್ಯವನ್ನು ನೆನೆದು ಆಶ್ಚರ್ಯಪಟ್ಟೆನಾದರೂ ನನ್ನ ದೇಹವು ಕಂಪಿಸಲು ಪ್ರಾರಂಭಿಸಿತು. ಬೆವರ ಹನಿಗಳು ಅಂಗಾಂಗಗಳಲ್ಲಿ ಮೂಡಿದುವು. ಅವಳೇ ಮಾತಿಗೆ ಮೊದಲಿಟ್ಟಳು. ಚಾಟುಚಪಲೋಕ್ತಿಗಳು. ಬಹಳ ಹೇಳಿದಳು. "....ಬಹಳ ದಿವಸಗಳಿಂದಲೂ ಆಶಿಸಿದ...." ರೋಷವು ನನ್ನ ಅಂಗಾಂಗಗಳಲ್ಲೂ ನರ್ತಿಸತೊಡಗಿತು. ಅವಳ ಮಾತುಗಳನ್ನು ಕೇಳಿ ನನ್ನ ಸೈರಣೆಯೇ ಹಾರಿಹೋಯ್ತು. ಬಲಾತ್ಕಾರದಿಂದ ಅವಳನ್ನು ನನ್ನ ಕೋಣೆಯಿಂದ ಹೊರಗೆ ಎಳೆದು ಹಾಕಿಬಿಡುತ್ತೇನೆಂದುಕೊಂಡೆ. ಪುನಃ ಯೋಚನೆ. ಒತ್ತಾಯದಿಂದ ಅವಳನ್ನು ಕಳುಹಿಸುವೆನೆಂದರೆ ಅವಳಿರುವುದು ನನ್ನ ಕೋಣೆಯಲ್ಲಿ. ಏನಾದರೂ ವಿಪರೀತ ಗಲಾಟೆಯಾಯಿತೆಂದರೆ ಪರರು ಈ ಕೃತಿಯನ್ನು ನೋಡಿ ನನ್ನ ಮೇಲೆಯೇ ದೋಷಾರೋಪಣೆಯನ್ನು ಮಾಡಬಹುದು, ಅಬಲೆಯ ಮೇಲೆ ಕೈಮಾಡಿದನೆಂದು. ಇದನ್ನೆಲ್ಲಾ ನೆನೆದು ಶಾಂತವೃತ್ತಿಯಿಂದಲೇ ಅವಳೊಡನೆ "ಲತಾ.... ನಿನ್ನ ವರ್ತನೆಯು ಈ ಮೊದಲೇ ನನಗೆ ತಿಳಿದಿದೆ. ಪ್ರೇಮಸ್ವಾತಂತ್ರ್ಯ ನಿನ್ನ ಆಶಯವೆಲ್ಲವೇ? ಆದರಿಂದ ನಿನಗೆ ಲಾಭವಾಗುವುದಾದರೂ ಏನು? ಕೇವಲ ವಿಷಯ ತೃಷ್ಣೆಯು ಹಿಂಗಿರಬಹುದು. ಅದೇ ಲಾಭವೆಂದು ನಾನು ತಿಳಿದಿರಬಹುದು. ಆದರೆ ನಿಜವಾದ ಲಾಭವು ಅದಲ್ಲ. ಅದರ ಅನುಭವವಾಗುವುದು ನಿನಗೆ ಕಾಲಾಂತರದಲ್ಲಿ. ಆಗ ನನ್ನ ಮಾತುಗಳನ್ನು ನೀನು ನೆನಿಸಬಹುದು. ಈ ನಿನ್ನ ಜೀವನದ ಹಿಂದೆ ಅವಿತುಕೊಂಡು ಸಮಯವನ್ನು ಹೊಂಚುಹಾಕುತ್ತಿರುವ ಅಸಹ್ಯ ವೇದನೆ, ಅನಂತ ದುಃಖ ಇವುಗಳ ಎಣಿಕೆಯು ನಿನಗಿರುವುದೇ? ಅದನ್ನು ತಿಳಿದು ನಿನ್ನ ಜೀವನವನ್ನು ಬದಲಾಯಿಸು. ಹಾಗೆ ಮಾಡುವೆಯಾದರೆ ನಿನ್ನ ಜೀವನವು ಸುಖಮಯವಾಗುವುದು. ಇಲ್ಲವಾದಲ್ಲಿ ಬಾಡಿಬಿದ್ದ ಹೂವಿನಂತೆಯೇ ನಿನ್ನ ಜೀವನವೆಂದು ತಿಳಿ.... ನಿನ್ನೊಡನೆ ಹೆಚ್ಚು ಮಾತನಾಡಬೇಕಾದುದಿಲ್ಲ. ಬೇಗನೆ ಹೊರಡು ಇಲ್ಲಿಂದ." ಹೇಳುತ್ತಿರುವಾಗಲೇ ವಿಕಟನಗೆಯು ಅವಳ ತುಟಿಗಳಿಂದ ಹೊರಬಿದ್ದಿತು. "ಪ್ರೇಮವನ್ನೇ ತಿಳಿಯದ ನಿರ್ವೀರ್ಯ ಪುರುಷರ ಹಾಳು ವೇದಾಂತ ಬೋಧನೆ."

"ನಿರ್ವೀರ್ಯನು ನಾನೆಂದೇ ಸುಖಪಡುವೆನು. ನಿನ್ನೆದುರಿನಲ್ಲಿ ವೀರ್ಯವಂತನೆನಿಸಿಕೊಳ್ಳುವದಕ್ಕಿಂತಲೂ ನಿರ್ವೀರ್ಯನಾಗಿರುವುದೇ ಮೇಲು. ಅದೇ ನಿನ್ನ ಜಾಲಕ್ಕೆ ಬೀಳಲು ಅಡ್ಡ ಬರುವುದು.... ಇಲ್ಲಿಂದ ಮೊದಲು ಹೋಗು. ಇಲ್ಲದಿದ್ದಲ್ಲಿ ಬಲಾತ್ಕಾರದಿಂದ...."

"ಬಲಾತ್ಕರಿಸುವ ಮುನ್ನ ನಾವೆಲ್ಲಿರುವೆವೆನ್ನುವುದನ್ನು ಯೋಚಿಸು"—ವಿಲಕ್ಷಣ ಮಾತುಗಳು. ಬಲಾತ್ಕರಿಸಿದರೆ ನನ್ನ ಮೇಲೆ ಅಪವಾದ ಹೊರಿಸುವಳು. ಬಲಾತ್ಕಾರದಿಂದ ಕಳುಹುವುದೆಂದರೆ...." ಛಿ! ಅವಮಾನವನ್ನಾದರೂ ಸಹಿಸಬಹುದು, ಈ ಕುಲಟೆಯಲ್ಲಿ ಪ್ರೇಮ...." ಬಲಾತ್ಕಾರದಿಂದ ಹೊರಗೆ ತೆಳ್ಳಲೆಂದು ಅವಳ ತೋಳುಗಳನ್ನು ಹಿಡಿದು ಬಾಗಿಲತ್ತ ನಡೆದೆ. ಅದೇ ಮನೆಯಲ್ಲಿ ವಾಸಿಸುತ್ತಿದ್ದವರಲ್ಲೊಬ್ಬರು ಹೊರಗೆ ನಿಂತಿದ್ದು ನಾನು ಬಾಗಿಲತ್ತ ಬರುತ್ತಿದ್ದಂತೆ ಟೊಡನೆಯೇ ಅಲ್ಲಿಂದ ಮಾಯವಾದರು. ಆಗಿನ ನನ್ನ ಸ್ಥಿತಿಯನ್ನು ವರ್ಣಿಸಿ ಬರೆಯಲಾರೆ. ಶರೀರವು ಕಂಪಿಸತೊಡಗಿತು. ಬೆವರಿನಿಂದ ಸ್ನಾನಮಾಡಿದಂತಾಯ್ತು. ಲತೆಯ ಜೀವನವು ಬಾಡಿಬಿದ್ದ ಹೂವಿನಂತಾಗುವುದೆಂದು ತಿಳಿದುಕೊಂಡಿದ್ದೆ. ಆದರೆ ಅದಕ್ಕೆ ಮೊದಲೇ ನನ್ನ ಜೀವನವು ಬಾಡಿದ್ದ ಹೂವಿನಂತಾಯ್ತು. ನೋಡಿದವರು ಏನೆಂದು ಹೇಳುವರೊ? ಲತೆಯು ನೀಚಳೆ ಹೌದು. ಆದರೆ ಆ ನೀಚಳು ನನ್ನ ಕೋಣೆಯಲ್ಲಿರುತ್ತಿರುವಾಗ, ನಾನು ಆ ನೀಚಳಿಗಿಂತಲೂ ನೀಚನೆಂದು ತಿಳಿಯುವುದರಲ್ಲಿ ತಪ್ಪಿದೆಯೇ! ಕಣ್ಣುಗಳಿಂದ ಮೂಕಾಶ್ರುಬಿಂದುಗಳು ಕಾಲುವೆಯಂತೆ ಹರಿಯತೊಡಗಿದುವು. ಆಗ ನಗಾಡುತ್ತ ಲತೆಯು "ಇಷ್ಟಕ್ಕೆಲ್ಲಾ ಕಾರಣ ತಮ್ಮ ಹುರುಳಿಲ್ಲದ ವೇದಾಂತ ಬೋಧನೆ."

"ಹುರುಳಿಲ್ಲವೆಂದು ಪ್ರಕೃತ ತಿಳಿಯುವೆಯಾದರೂ ಮುಂದೆ ನನ್ನ ವಾಕ್ಯಗಳು ಸಾರಭೂತವಾದವುಗಳೆಂದು ತಿಳಿಯಬಲ್ಲೆ." ಎಂದು ಆ ಕುಟಲೆಯ ಮಾತಿಗೆ ಉತ್ತರವು ತಾನಾಗಿಯೇ ಕಂಠದಿಂದ ಎದ್ದು ಬಿದ್ದಿತು.

"ಮುಂದಾದರೂ ನನ್ನ ನೆನಪು ತಮಗಾಗದಿರದು"

"ನಾನು ಮರೆಯುವೆನಾದರೂ ನನ್ನಾತ್ಮವು ಎಂದೂ ಮರೆಯಲಿಕ್ಕಿಲ್ಲ. ಈಗ ಇಲ್ಲಿಂದ ಕಾಲ್ಕೀಳು. ನಿನ್ನ ಮಾತು ಗಳಾವುವೂ ಬೇಕಾಗಿಲ್ಲ" ಎಂದೆ. ಆಕೆಯು ತೆರಳಿದಳು, ವಿಫಲಮನೋರಥಳಾಗಿ. ಮನಸ್ಸನ್ನು ಸಾಂತ್ವನಗೊಳಿಸಿ ಕೊಂಡು ಮಲಗಿದೆ. ನಿದ್ರೆಬರಲಿಲ್ಲ. ಯೋಚನಾತರಂಗ ಗಳು ಒಂದರ ಹಿಂದೊಂದು ತಲೆಯೆತ್ತಿ ಹೃದಯವನ್ನು ಭೇದಿಸಿ ಜರ್ಜರಿತ ಮಾಡತೊಡಗಿದುವು— "ಸನ್ಮಾರ್ಗ ದಲ್ಲಿ ನಡೆಯುವೆನೆಂದು ಈ ರೀತಿ ವರ್ತಿಸಿದುದು ನನ್ನ ತಪ್ಪೇ! ಅಲ್ಲವಾದರೆ ಈಗ ನಡೆದುದೇನು? ವಿಧಿಯ ವಿಚಿತ್ರ ವಿಕಟವಿನ್ಯಾಸವೆಂದು ಸುಮ್ಮನಿರಲೇ? ಲೋಕವು ನನ್ನನ್ನು ಪತಿತನೆಂದು ತಿಳಿಯುವುದಿಲ್ಲವೇ? ಮುಂದಿನ ಪರಿಹಾಸ್ಯಮಯ ಜೀವನ!.... ತಿಳಿಯಲಿ; ಪತಿತನೇ ಎಂದು ತಿಳಿಯಲಿ. ನಾನು ಪವಿತ್ರನಿರುವೆನೆಂದು ನನ್ನಾತ್ಮವು ನನಗೆ ಸಾಕ್ಷಿಯಾಗಿದೆ. ಇನ್ನೇಕೆ ಜೆದರು ವುದು...." ಯೋಚನೆಯಲ್ಲಿರುವಾಗಲೇ ನಿದ್ರೆಯ ಜೊಂಪು ಬಾಧಿಸತೊಡಗಿತು. ಪಕ್ಕದ ಹಜಾರದಿಂದ ಮಾತುಗಳು ಕೇಳಬಂತು. ಆಲಿಸಿದೆ.

"ಯೋಗ್ಯನೆಂದೆಣಿಸಿಕೊಂಡಿದ್ದೆ. ಎಲ್ಲವೂ ಕಪಟ ವರ್ತನೆ. ಮುಂದೆ ನಾವು ಇಲ್ಲಿ ವಾಸಿಸಿಕೊಂಡಿರುವುದೂ ನಮಗೆ ಯೋಗ್ಯವಾದುದಲ್ಲ."

"ಹೌದು. ಆದಷ್ಟು ಜಾಗ್ರತೆಯಾಗಿ ಈ ವಸತಿ ಯನ್ನು ಬಿಡುವುದುತ್ತಮ." ಕರ್ಣಕಠೋರವಾದೀ ಮಾತು ಗಳು ನನ್ನ ಪರವಾಗಿ ಆಡಿದುವೆಂದು ಬೇರೆ ಹೇಳಬೇಕಾ ಗಿಲ್ಲ. ಒಮ್ಮೆ ಶಾಂತವಾದ ಹೃದಯವು ಪುನಃ ದಾರುಣ ಯಾತನಾಮಯವಾಯ್ತು. ಆ ಮನೆಯಲ್ಲಿ ಮುಂದೆ ಇರಲು ನನಗೆ ಇಷ್ಟವಿಲ್ಲದಾಯ್ತು. ರಾತ್ರಿಯೆಲ್ಲವನ್ನೂ ಆಳುವಿ ನಿಂದಲೇ ಕಳೆದು, ಮರುದಿನ ಮನೆಯವನಿಗೆ ಸೇರಬೇಕಾ ಗಿದ್ದ ಬಾಡಿಗೆ ಹಣವನ್ನು ಸಲ್ಲಿಸಿ, ಅದೇ ಊರಿನ ಇನ್ನೊಂದು ಭಾಗದಲ್ಲಿ ಇದ್ದ ನನ್ನ ಮಿತ್ರನ ಗೃಹಕ್ಕೆ ತೆರಳಿ ವಾಸಿಸತೊಡಗಿದೆ. ಹೋಗುವುದಕ್ಕೆ ಮುಂಚೆ ಲತೆಗೆ "ಹಿಂದೆ ನಡೆದುದನ್ನು ಪುನಃ ಎತ್ತಿ ಆಡುವುದರಿಂದ ಪ್ರಯೋಜನವಿಲ್ಲ. ಈಗಲಾದರೂ ನಾನು ನಿನಗೆ ಹೇಳುವು ದೇನೆಂದರೆ 'ಈಗಿನ ನಿನ್ನ ನಡತೆಯನ್ನು ಬದಲಾಯಿಸಿಕೊಂಡು ನೀನು ಜೀವಿಸಬಲ್ಲೆಯಾದರೆ ನೀನು ನಿಜವಾದ ಮಾನವಿ ಯಾಗುವೆ. ಇಲ್ಲವಾದಲ್ಲಿ ನಿನ್ನ ಜೀವನವು ನಿರ್ಗಂಧ ಕುಸುಮದಂತಾಗುವುದೆಂದು ತಿಳಿದಿರು. ಈ ಮಾತುಗಳನ್ನು ನೀನು ಲಕ್ಷ್ಯದಲ್ಲಿರಿಸಿಕೊಂಡು ನಡೆಯುವಿಯಾದರೆ ನಿನ್ನೆಯ ದಿನ ನನಗಾದ ಅವಮಾನವು ನನಗೆ ಸುಖದಾಯಕವಾಗ ಬಲ್ಲುದು—" ಎಂದು ಚೀಟಿಯನ್ನು ಬರೆದು ಅವಳ ಮನೆಯ ಆಳಿನ ವಶಕ್ಕೆ ಕೊಟ್ಟು ಹೋಗಿದ್ದೆ.

* * *

ಹಿಂದಿನ ವಿಷಯಗಳನ್ನೆಲ್ಲಾ ನೆನಸಿಕೊಂಡು ನೆಟ್ಟದೃಷ್ಟಿ ಯಿಂದ ಅವಳನ್ನೇ ನೋಡತೊಡಗಿದೆ. ರೂಪವು ಲತೆ ಯಂತೆಯೇ. ಆದರೆ ಹಿಂದಿನ ಲತೆಯು ಹೀಗಿದ್ದಿಲ್ಲ. ಅಂದು ಅವಳ ನಿಲುವಿನ ಭಂಗಿಗಳು ಪುರುಷನನ್ನು ಇಂದ್ರಿಯ ಲೋಲುಪನನ್ನಾಗಿಮಾಡಲು ಯತ್ನಿಸಿದವುಗಳು. ಇಂದು ಗುರುವಿನೆದುರು ನಿಲ್ಲುವ ಶಿಷ್ಯೆಯಂತೆ ನಿಂತಿದ್ದಾಳೆ. ಅಂದಿನ ಅವಳ ಅಕ್ಷಿದ್ವಯವು ನನ್ನನ್ನು ಮೋಹಜಾಲದಲ್ಲಿ ಕೆಡಹುವ ಉಪದೇಶ ಕೊಡುತ್ತಿತ್ತು. ಅದೇ ಅಕ್ಷಿದ್ವಯವಿಂದು ಅವಳ ಹೃದಯದ ಪಾವನತೆಯನ್ನು ಹೊರಸೂಸುತ್ತಿದೆ. ಹಾವ ಭಾವ ವಿಲಾಸವಿಭ್ರಮುಗಳಿಂದ ಕೂಡಿದವಳಿಂದು ಸವಿನಯ ಮೂರ್ತಿ. ಆ ಮಾಯಾಮೋಹಗಳ ಮೂರ್ತಿಯಾದ ಲತೆಯು ಇವಳೆಂದು ನಂಬಲಾರದಾದೆ. ಮನಸ್ಸು ಡೋಲಾಯ ಮಾನವಾಯ್ತು. ಅಷ್ಟರಲ್ಲಿ ಅವಳು ನನ್ನ ಬಳಿಗೆ ಬಂದು ತನ್ನ ಸೀರೆಯ ಸೆರಗಿನಿಂದ ಹರಿಯುತ್ತಿರುವ ರಕ್ತವನ್ನು ಒರಸತೊಡಗಿದಳು. ಅನ್ಯ ಸ್ತ್ರೀಯ ಕೈಯಿಂದ ಉಪಚರಿಸಿ ಕೊಳ್ಳಲು ನನ್ನ ಮನವು ಹಿಂಜರಿಯಿತು. ನನ್ನ ಕಾಲು ಗಳನ್ನು ಸರಿಸಿಕೊಂಡು,

"ಅಪರಿಚಿತಳಾದರೂ ಚಿರಪರಿಚಿತಳಂತೆ ಉಪಚರಿಸ ತೊಡಗಿರುವೆ. ಹಿರಿಯ ಕೆಲಸವಾದರೂ...."

"ಅಪರಿಚಿತಳೆಂಬು ತಾವು ತಿಳಿಯುವುದಾದರೂ ತಮ್ಮ ಪರಿಚಯವು ನನಗಿರುವುದು. ಅಲ್ಲದೆ ನನ್ನ ಸ್ವಾಮಿಯೆಂದೂ ತಿಳಿದಿರುವೆ."—'ನನ್ನ ಸ್ವಾಮಿಯೆಂದು ತಿಳಿದಿರುವೆ' ಇದರ ಅರ್ಥವೇನು? ತನ್ನ ಪಾಪವೃತ್ತಿಗೆ ಪಶ್ಚಾತ್ತಾಪ ಪಟ್ಟು ಸನ್ಮಾರ್ಗ ಪ್ರವರ್ತಕಳಾದ ಲತೆಯೇ ಇವಳಿರಬಹುದೇ!

"ಹಾಗಾದರೆ ನೀನು...."

"....ಲತಾ" ನನ್ನ ಮಾತನ್ನು ಅವಳೇ ಪೂರೈಸಿದಳು.

"ಲತಾ! ಗ್ರಾಮವಾಸಿಯಾದುದೇಕೆ? ನಗರವನ್ನು ತ್ಯಜಿಸಿ ದುದೆಂತು?...." ನನ್ನ ಮಾತುಗಳನ್ನು ಕೇಳಿ ಲತೆಯು ಸಣ್ಣಮಗುವಿನಂತೆ ಬಿಕ್ಕಿಬಿಕ್ಕಿ ಅಳತೊಡಗಿದಳು.

ಕತ್ತಲಾಯಿತು. ದೂರದಿಂದ ಹಕ್ಕಿಗಳು ಬಂದು ಆಲದ ಮರದ ಮೇಲಿರುವ ತಮ್ಮ ಗೂಡುಗಳನ್ನು ಸೇರಿ ಕೊಂಡುವು. ಹಳ್ಳಿಯ ಗುಡಿಸಲುಗಳಿಂದ ಒಂದೊಂದಾಗಿ ದೀಪಗಳು ಇಣಿಕಿ ನೋಡತೊಡಗಿದುವು. ಗ್ರಾಮಗುಡಿ

ಯಿಂದ ಶಂಖಜಾಗಟೆಗಳ ಧ್ವನಿಯು ಕೇಳಬರತೊಡಗಿತು. ....ಕಣ್ಣುಗಳಿಂದ ಸುರಿಯುತ್ತಿದ್ದ ಅಶ್ರುಜಲವನ್ನು ಒರೆಸಿಕೊಂಡು, ಲತೆಯು ತನ್ನ ಹಿಂದಿನ ಜೀವನದ ವಿಷಯವಾಗಿ ಹೇಳತೊಡಗಿದಳು. —ತನ್ನ ತಾಯಿಯ ತೀರಿಕೊಂಡುದು; ಸತ್ಯವಂತರೆಂದು ತೋರಿಸಿಕೊಳ್ಳುತ್ತಿದ್ದ ಗೆಳೆಯರ ಕಪಟ ನಡತೆಗಳು; ತಾಯಿಯು ತೀರಿಕೊಂಡನಂತರ ತನ್ನ ಸೋದರ ಮಾವನು ತನ್ನ ವಿವಾಹಕ್ಕೆ ಶತಪ್ರಯತ್ನ ಮಾಡಿ, ವಿಫಲಹೊಂದಿ ಕೊನೆಯಲ್ಲಿ ತನ್ನನ್ನು ತ್ಯಜಿಸಿದುದು; ಪ್ರೇಮಸ್ವಾತಂತ್ರ್ಯದ ಪರಿಣಾಮವಾಗಿ ಆಸ್ಪತ್ರೆಯ ಜೀವನ; ಜನರ ತಿರಸ್ಕಾರ; ತನ್ನ ಹೃದಯಲ್ಲಾದ ಪರಿವರ್ತನೆ; ಗ್ರಾಮಕ್ಕೆ ಬಂದು ಬಾಲಕಾಶ್ರಮವನ್ನು ತೆರೆದು ಅದರ ಏಳ್ಗೆಯಲ್ಲಿ ಪಾಲ್ಗೊಂಡು ಜೀವಿಸತೊಡಗಿದುದು —ಈ ಎಲ್ಲಾ ವಿಷಯಗಳನ್ನೂ ನ್ಯೂನತೆಯಿಲ್ಲದೆ ಬಿಚ್ಚಿದೆದೆಯಿಂದ ಹೇಳಿದಳು. ''ನನ್ನಲ್ಲಿ ಈತೆರನ ಪರಿವರ್ತನೆಯಾಗಿ ಗ್ರಾಮಕ್ಕೆ ಬಂದು ಇರತೊಡಗಿದಂದಿನಿಂದ ಸುಖದಿಂದಿರತೊಡಗಿದೆ. ಮನಶ್ಶಾಂತಿಯೂ ಲಭಿಸಿತು. ಆದರೆ ನನ್ನ ಹೊಸ ಜೀವನಕ್ಕೆ ಮೊದಲೇ ಮಾರ್ಗ ತೋರಿಸಿದ್ದ ತಮ್ಮ ಯೋಚನೆಯೊಂದು ನನಗೆ ವಿಪರೀತ ಕಳವಳವನ್ನುಂಟು ಮಾಡುತ್ತಿತ್ತು. ತಮ್ಮನ್ನೊಮ್ಮೆ ಸಂದರ್ಶಿಸಿ ತಮ್ಮೊಡನೆ ಕ್ಷಮೆಯನ್ನು ಬೇಡಿಕೊಳ್ಳಬೇಕೆಂಬ ಹಂಬಲವು ಹಿರಿದಾಗಿತ್ತು. ಆದರೆ ನಾನೆಷ್ಟು ಪ್ರಯತ್ನ ಪಟ್ಟೆನಾದರೂ ತಮ್ಮ ವಿಚಾರವು ನನಗೆ ತಿಳಿಯಲಿಲ್ಲ. ತಮ್ಮ ಸಂದರ್ಶನವು ಈ ಜನ್ಮದಲ್ಲೇ ಅಸಾಧ್ಯವೆಂದು ತಿಳಿದುಕೊಂಡೆ. ತಮ್ಮ ಕೊನೆಯ ಪತ್ರವನ್ನು ನೋಡಿಕೊಂಡು ಸುಖ ಸಮಾಧಾನವನ್ನು ಹೊಂದುತ್ತಿದ್ದೆ..... ಇಂದು ನನ್ನ ಮನದಾಶೆಯು ಫಲಿಸಿದಂತಾಯ್ತು. ನಾನು ಕ್ಷಮೆಗೆ ಅನರ್ಹಳಾದರೂ...."

'' ನೀನು ಕ್ಷಮೆಗೆ ಅನರ್ಹಳೆಂದು ನಾನು ತಿಳಿಯಲಾರೆ. ಇಂದಿನ ಸೇವಾಜೀವನ, ಕೃತಕರ್ಮದ ಬಗ್ಗೆ ಪಶ್ಚಾತ್ತಾಪ ಇವೆರಡು ನಿನ್ನನ್ನು ಪಾವನವಾಗಿ ಮಾಡಿವೆಯೆಂದು ನಾನ್ನು ನಿರ್ಧರಿಸುತ್ತೇನೆ. ಅಲ್ಲದೆ ಹಿಡಿದ ಕೆಲಸವನ್ನು ನ್ಯೂನತೆಯಿಲ್ಲದೆ ಶುದ್ಧಮನಸ್ಸಿನಿಂದ ನೆರವೇರಿಸುತ್ತಿರುವೆಯಾದರೆ ನಿನ್ನಿಂದಧಿಕ ಭಾಗ್ಯವಂತಳು ಬೇರೆ ಆರೂ ಇರಲಾರರೆಂದು ನನ್ನ ಭಾವನೆ.... ಲತಾ, "ಕ್ಷಮಿಸುವುದೆಂದರೆ ಮರೆಯುವುದು" ಎಂದು ಹೇಳುತ್ತಾರೆ. ಆದುದರಿಂದ ಹಿಂದಿನದನ್ನು ಮರೆತು ಮುಂದೆ ಸನ್ಮಾರ್ಗದಲ್ಲಿ ನಡೆಯುವುದೇ ನಿನ್ನ ಧ್ಯೇಯವಾಗಿರಲಿ."

" ಹಾಗಾದರೆ ನನ್ನನ್ನು ನೀವು ನಿಜವಾಗಿಯೂ ಕ್ಷಮಿ[illegible]ರುವಿರಾ."

" ನಾರೀ ಹೃದಯವು ಸದಾ ಚಂಚಲವೆನ್ನುವುದ[illegible] ನಿನ್ನ ಮಾತೇ ಸಾಕ್ಷಿ. "ನಿನ್ನನ್ನು ಕ್ಷಮಿಸಿದ್ದೇನೆ" ಎಂ[illegible] ಪುನಃ ಹೇಳುವ ಅಗತ್ಯವಿಲ್ಲ. ಹಿಂದಿನ ನನ್ನ ಪತ್ರ[illegible] ನಿನ್ನನ್ನು ಕ್ಷಮಿಸಿಯೇ ಇದೆ." ಸಂತೋಷವು ಅವಳ ಮು[illegible]ದಲ್ಲಿ ಲಾಸ್ಯವಾಡತೊಡಗಿತು. "ಲತಾ" ಎಂದೆ.

''ಏನು?"

"ನೀನೀ ಸೇವಾ ಕಾರ್ಯದಲ್ಲಿರುವಾಗಲೇ ನನಗೊಂ[illegible] ಸಹಾಯವನ್ನು ಮಾಡಬಲ್ಲೆಯಾ ?"

''ತಮಗೆ ಸಹಾಯಮಾಡಲು ನಾನೆಷ್ಟರವಳು? ತ[illegible] ಸೇವೆಯನ್ನು ಮಾಡಲು ನಾನು ಅನುರಕ್ತಳು."

"ನಿನ್ನಿಂದ ನನ್ನ ಸೇವೆಯಾಗಬೇಕಾದುದಿರುವು[illegible] ನನ್ನ ಮಾತಿನ ಮಾತಾಗಿ, ಉಸಿರಿನ ಉಸಿರಾಗಿ, ಹೃ[illegible]ಯದ ರಾಣಿಯಾಗಿ, ಚಿರಸಂಗಿನಿಯಾಗಿ ಈ ನನ್ನ ಜೀ[illegible] ಯಾತ್ರೆಯಲ್ಲಿ ಭಾಗಿಯಾಗುವೆಯಾದರೆ ಅಷ್ಟೆ ನನಗೆ ಸಾ[illegible] ಆದರಿಂದಲೇ ನನಗೆ ತೃಪ್ತಿ." ನನ್ನ ಮಾತನ್ನು ಕೇ[illegible]ತ್ತಿರುವಾಗಲೇ ರಕ್ತವು ಚಿಮ್ಮಿ ಅವಳ ಕಪೋಲ [illegible]ಗಳಲ್ಲಿ ಹರಿಯತೊಡಗಿ ಮುಖವನ್ನು ಶೋಭೆಗೊಳಿಸಿ[illegible] ಆದರೆ ಈ ಶೋಭೆಯು ಮರುನಿಮಿಷದಲ್ಲಿಯೇ ಮಾ[illegible]ಪಾಯ್ತು. ನಿರುತ್ಸಾಹದಿಂದ ಅವಳೆಂದಳು.

" ನಾನು ನಿಮ್ಮ ಪತ್ನಿಯಾಗುವಲ್ಲಿ " ಪತಿತಳೊ[illegible] ಸುಖ ಬಯಸಿದಿರೆ"ಂದು ನಿಮ ಶ್ರೇಯಸ್ಸಿಗೆ ಕಳಂಕ [illegible] ದೀತಲ್ಲವೇ ? "

" ಆ ವಿಚಾರ ನಿನಗೆ ಬೇಡ. ಲೋಕವು ನಿನ್ನ[illegible] ಪತಿತಳೆಂದು ತಿಳಿಯುವುದಾದರೂ ನಾನು 'ನೀನು ಪಾ[illegible]ಯೆಂದೇ ತಿಳಿಯುತ್ತೇನೆ. ನನ್ನ ಮಾತಿಗೆ ಸಂಮ[illegible]ವೆಯಾ ? "

" ತಮ್ಮ ಅನುಮತಿಯಂತೆ ನಡೆಯಲು ಸಿದ್ಧಳಿದ್ದೇ[illegible] ಆವುದಾದರೊಂದು ವಿಧದಲ್ಲಿ ತಮ್ಮ ಸೇವೆ ಮಾ[illegible] ಅನುವು ದೊರೆತರೆ ಅದು ನನ್ನ ಭಾಗ್ಯವೆಂದು ತಿ[illegible]ತ್ತೇನೆ. "

ಅವಳ ಕೈಗಳೆರಡನ್ನು ನನ್ನ ಕೈಯಲ್ಲಿ ತೆಗೆದುಕೊ[illegible] ವಕ್ಷಸ್ಥಲಕ್ಕೊತ್ತಿಕೊಂಡೆ. ವರ್ಣನಾತೀತವಾದ ಆ[illegible] ರಕ್ತದ ಬಿಂದುಬಿಂದುಗಳಲ್ಲಿಯೂ ಸೇರಿ ಅಂಗಾಂ[illegible] ಸಂಚರಿಸಿ ದೇಹವನ್ನು ಪುಲಕಿತ ಮಾಡಿತು.

ಪ್ರಚಂಡ ಚಂಡಾಂಶು

ಸೂರ್ಯಾಸ್ತ್ರ !

ಕ್ರಿಸ್ತಪೂರ್ವ ೨೧೪ರಲ್ಲಿ ಗ್ರೀಕ ಗಣಿತಜ್ಞನು ತನ್ನ ದೇಶವನ್ನು ರೋಮನರ ಮುತ್ತಿಗೆಯಿಂದ ಉಳಿಸಲು ಸೂರ್ಯಾಸ್ತ್ರವನ್ನು ಉಪಯೋಗಿಸಿದ್ದನು. ಹೇಗೆಂದರೆ ಸಮುದ್ರತೀರದಲ್ಲಿ ಸೂರ್ಯಕಿರಣಗಳನ್ನು ಪ್ರಖರವಾಗಿ ಪ್ರತಿಬಿಂಬಿಸುವ ಭೂತಕನ್ನಡಿಗಳನ್ನು ನೆಲೆಗೊಳಿಸಿ ಪ್ರತಿಬಿಂಬಗಳೆಲ್ಲವೂ ರೋಮನರ ಹಡಗುಗಳ ಮೇಲೆ ಕೇಂದ್ರೀಕರಿಸಿದನು. ಆದರಿಂದ ಹಡಗುಗಳೆಲ್ಲ ಸುಟ್ಟು ಬೂದಿಯಾದವಂತೆ !

*　　*　　*

ಲೋಹದ್ರಾವಣ

೧೭೪೭ರಲ್ಲಿ ಫ್ರಾನ್ಸಿನಲ್ಲಿ ಬಫೊನ್ ಎಂಬ ಸೃಷ್ಟಿವಿಜ್ಞಾನಿಯಿದ್ದ. ಅವನು ೧೬೮ ಕನ್ನಡಿಗಳಿಂದ ಪ್ರತಿಫಲಿತ ಸೂರ್ಯಕಿರಣಗಳನ್ನು ಒಂದುಗೂಡಿಸಿ ೭೦ ಮಾರು ದೂರದಿಂದ ಕಟ್ಟಿಗೆಯನ್ನು ಉರಿಸುತ್ತಿದ್ದ; ೩೩ ಮಾರು ದೂರದಿಂದ ಸೀಸವನ್ನು ೧೬ ಮಾರು ದೂರದಿಂದ ಬೆಳ್ಳಿಯನ್ನು ಕರಗಿಸುತ್ತಿದ್ದ !

*　　*　　*

ಅಡಿಗೆಯನ್ನು ಮಾಡಬಹುದು !

ಸಂಯುಕ್ತ ಅಮೆರಿಕದ ಪ್ರಸಿದ್ಧ ವಿಜ್ಞಾನಿಯಾದ ಡಾ. ಸಿ. ಜಿ. ಎಬೋಟನು ಉರಿಯಿಲ್ಲದೆ ಅಡಿಗೆ ಮಾಡುವ ಒಲೆಯನ್ನು ಶೋಧಿಸಿದ್ದಾನೆ. ಕುದಿವ ನೀರಿಗಿಂತ ೨೦೦ ಅಂಶಗಳ ವರೆಗೆ ಹೆಚ್ಚು ಉಷ್ಣತೆಯು ಸೂರ್ಯರಶ್ಮಿಯ ಪ್ರತಿಬಿಂಬದಿಂದ ಆ ಒಲೆಯಲ್ಲಿ ಹುಟ್ಟುವುದಂತೆ !

*　　*　　*

ವಾಯುರೂಪ ಧಾತುಗಳು

ನಮ್ಮ ಪೃಥ್ವಿಯು ಸುತ್ತಲೂ ಆವರಿಸಿರುವ ವಾತಾವರಣದಲ್ಲಿ ಪ್ರಾಣವಾಯು, ನೈಟ್ರೊಜನ್ ಮೊದಲಾದ ವಾಯುಗಳಿರುವಂತೆ ಸೂರ್ಯನ ಹತ್ತರದ ಆವರಣದಲ್ಲಿ ಸೀಸ, ತಾಮ್ರ, ಕಬ್ಬಿಣ, ಬೆಳ್ಳಿಗಳು ವಾಯುರೂಪದಲ್ಲಿ ತೇಲುತ್ತಿವೆ. !

*　　*　　*

ಸೂರ್ಯನ ಹೊಟ್ಟೆಕಿಚ್ಚು

ಸೂರ್ಯನ ಹೊರಭಾಗವನ್ನು ಅಗೆದು ಒಳಹೊಕ್ಕರೆ ಅಲ್ಲಿ ೮೦೦೦೦೦೦೦ ಅಂಶಗಳಷ್ಟು ಉಷ್ಣತೆಯಿದೆ. ಸೂರ್ಯನ ಹೊಟ್ಟೆಯಿಂದ ಹೊರಬಿದ್ದ ಆ ಕಿಚ್ಚಿನಿಂದ ಅಷ್ಟು ದೂರದಿಂದಲೆ ನಮ್ಮ ಪೃಥ್ವಿಯು ಕರಗಿ ಅದೃಶ್ಯವಾಗಿಬಿಡುವದು. ಅಷ್ಟಾಗಲಿಕ್ಕೆ ಬೆಂಕಿಯಲ್ಲಿ ಬಿದ್ದ ಬೆಂಣೆ ಕರಗುವಷ್ಟು ಸಮಯವೂ ಹಿಡಿಯಲಾರದು.

*　　*　　*

ಸೂಕ್ಷ್ಮಾತಿಸೂಕ್ಷ್ಮ

ಸೂರ್ಯನಿಂದ ಹುಟ್ಟುವ ಉಷ್ಣತೆಯನ್ನು ಹತ್ತು ಲಕ್ಷ ಪಾಲು ಮಾಡಿರಿ; ಅದರ ಒಂದು ಪಾಲಿನಲ್ಲಿ ಎರಡು ಸಾವಿರ ಪಾಲು ಮಾಡಿರಿ; ಆ ಒಂದೇ ಒಂದು ಪಾಲಿನ ಬಿಸಿ ತಾಗಿದರೂ ಸಾಕು ಮನುಷ್ಯನು ಬವಳಿ ಬಂದು ಸತ್ತೇ ಹೋಗುತ್ತಾನೆ !

ಆಕಾಶವಾಣಿ

ಲೇಖಕರು:
ಪ್ರೊ. ಎಂ. ಜಿ. ರಾವ್

ಪುರಾಣದ ವಿಷಯವೇನೇ ಇರಲಿ ಈಗಂತೂ ದಿನಾಲು ನಾವು ಪ್ರತ್ಯಕ್ಷವಾಗಿ ಆಕಾಶವಾಣಿಯ (ರೇಡಿಯೋ) ಮೂಲಕ ಸಾವಿರಾರು ಮೈಲು ದೂರದಲ್ಲಿರುವ ವ್ಯಕ್ತಿಗಳ ಭಾಷಣ, ಸಂಭಾಷಣ, ಗಾನ, ಕೀರ್ತನಗಳನ್ನು ಸ್ಪಷ್ಟವಾಗಿ ಕೇಳುತ್ತಿದ್ದೇವಷ್ಟೆ! ಅಹ! ಇದೆಂಹತ ಸೌಕರ್ಯ! ದೇಶದೇಶಗಳಲ್ಲಿ ಖಂಡಖಂಡಗಳಲ್ಲಿ ನಡೆದ ಸಂಗೀತ, ಸಂಭಾಷಣಗಳನ್ನು ಬೇಕಾದ ದೇಶದ .. .. ಬೇಕಾದ ಹಳ್ಳಿಗನು ಕೇಳುವಂತಾಯಿತು. .. ..

ಅದೆಲ್ಲ ಸರಿ; ಆದರೆ ಈ ಚಮತ್ಕಾರವು ನಡೆಯುವದು ಹೇಗೆ? ಅಷ್ಟು ದೂರದಿಂದ ಮಾತಾಡಿದವರ, ಹಾಡಿದವರ ಧ್ವನಿಯು ಅಚ್ಛಳಿಯದೆ ಸಾವಿರಾರು ಮೈಲು ಓಡುವದು ಹೇಗೆ? ಅದರ ಅವ್ಯಕ್ತ, ಕಾರಣ ಕಾರ್ಯಗಳ ಮೀಮಾಂಸೆಯೇನು? ಈ ಕುತೂಹಲದ ಪ್ರಶ್ನೆಗಳಿಗೆ ಸ್ಥೂಲವಾದರೂ ವೈಜ್ಞಾನಿಕವಾದ ರೀತಿಯಲ್ಲಿ ಉತ್ತರ ಕೊಡುವುದೆ ಈ ಲೇಖನದ ಉದ್ದೇಶ.


●

ನಾವು ಪುರಾಣಗಳಲ್ಲಿ ಆಕಾಶವಾಣಿಯ ವಿಷಯವನ್ನು ಓದಿದ್ದೇವೆ. ದುಷ್ಟರಿಗೆ ಅತ್ಯಾಚಾರಗಳಿಂದ ದೂರ ಇರುವುದಕ್ಕಾಗಲಿ ಶಿಷ್ಟರಿಗೆ ಸಂಕಷ್ಟಗಳಲ್ಲಿ ಧೈರ್ಯ ಕೊಡಲಿಕ್ಕಾಗಲಿ ಆಗ ಆಕಾಶವಾಣಿಗಳಾಗುತ್ತಿದ್ದವು. ಮತ್ತು ದುಷ್ಟರೂ ಶಿಷ್ಟರೂ ಆಕಾಶವಾಣಿಯ ಸತ್ಯತೆಯಲ್ಲಿ ನಂಬಿಕೆಯನ್ನಿಟ್ಟಿದ್ದರು. ನಾವು ಆ ಕತೆಗಳನ್ನು ಚಿಕ್ಕವರಿರುವಾಗ ಓದಿ ನಂಬುತ್ತಿದ್ದೆವು; ದೊಡ್ಡವರಾಗಿ ಇಂಗ್ರೇಜಿ ಕಲಿತ ಮೇಲೆ ಅವೆಲ್ಲ ಕಲ್ಪನಾವೈಚಿತ್ರ್ಯಗಳೆಂದು ಹೆಸರಿಡುತ್ತಿದ್ದೆವು. ಆದರೆ ವಿಜ್ಞಾನವು ಅಸಂಭಾವ್ಯವೆನಿಸಿದುದನ್ನೆಲ್ಲ ಸಂಭವನೀಯವಾಗಿಸುತ್ತಿದೆ. ವಿಮಾನಗಳು ಹುಟ್ಟಿ ರಾಮಾಯಣದ ಪುಷ್ಪಕ ವಿಮಾನದ ಸತ್ಯತೆಯ ಮನವರಿಕೆ ಮಾಡಿ ಕೊಟ್ಟಿತು. ವಿಷವಾಯು ಪ್ರಯೋಗಗಳು ರಣರಂಗಕ್ಕೆ ಬಂದು ವಾಯವ್ಯಾಸ್ತ್ರಗಳು ನಿಜವಿರಬೇಕೆನ್ನುವ ಹೊತ್ತು ಬಂತು. ಕ್ಲೊರೊಫಾರ್ಮ್ ಮುಂತಾದ ಸಂಜ್ಞಾಹರ ಔಷಧಗಳಿಂದ ಸಂಮೋಹನಾಸ್ತ್ರ ಸುಳ್ಳಿರಲಿಕ್ಕಿಲ್ಲವೆನ್ನುವಂತಾಯಿತು. ಉಗಿ, ವಿದ್ಯುತ್ ಮುಂತಾದವು ಉಪಯೋಗಕ್ಕೆ ಬಂದು ಪಂಚಮಹಾಭೂತಗಳು ರಾವಣನ ಮನೆಯಲ್ಲಿ ಆಳುಗಳಾಗಿದ್ದುದು ಹೇಗೆಂಬುದನ್ನು ತರ್ಕಿಸುವಂತಾಯಿತು. ಹಾಗೆಯೆ 'ರೇಡಿಯೋ' ಬಂದು ಪುರಾಣದಲ್ಲಿಯ 'ಆಕಾಶವಾಣಿಗಳು' ನಿಜವಾಗಿರಬಹುದಲ್ಲವೇ? ಎನ್ನು ಕೇಳುವ ಪ್ರಸಂಗ ಬಂತು. ನಿಜವೇಕಾಗಿರಬಾರದು? ಗಿರಿಕಂದರಗಳಲ್ಲಿ ಗುಪ್ತರಾಗಿ ವಾಸಿಸುತ್ತಿದ್ದ ಋಷಿ ಮುನಿಗಳು 'ದುಷ್ಟಶಿಕ್ಷೆ, ಶಿಷ್ಟರಕ್ಷಣಕ್ಕಾಗಿ ತಮ್ಮ ಪರಿಯ 'ರೇಡಿಯೋ' ವ್ಯವಸ್ಥೆಯನ್ನು ಏಕೆ ಮಾಡಿಕೊಂಡಿರಬಾರದು!

ಪುರಾಣದ ವಿಷಯವೇನೇ ಇರಲಿ, ಈಗಂತೂ ದಿನಾಲು ನಾವು ಪ್ರತ್ಯಕ್ಷವಾಗಿ ಆಕಾಶವಾಣಿಯ (ರೇಡಿಯೋ) ಮೂಲಕ ಸಾವಿರಾರು ಮೈಲು ದೂರದಲ್ಲಿರುವ ವ್ಯಕ್ತಿಗಳ ಭಾಷಣ, ಸಂಭಾಷಣ, ಗಾನ, ಕೀರ್ತನಗಳನ್ನು ಸ್ಪಷ್ಟವಾಗಿ ಕೇಳುತ್ತಿದ್ದೇವಷ್ಟೆ! ಅಹ! ಇದೆಂತಹ ಸೌಕರ್ಯ! ದೇಶದೇಶಗಳಲ್ಲಿ ಖಂಡಖಂಡಗಳಲ್ಲಿ ನಡೆದ ಸಂಗೀತ, ಸಂಭಾಷಣಗಳನ್ನು ಬೇಕಾದ ದೇಶದ ಬೇಕಾದ ಹಳ್ಳಿಗನು ಕೇಳುವಂತಾಯಿತು. ಒಬ್ಬ ಕಲಾವಿದನಿಗೆ ಒಂದೇ ಸಲಕ್ಕೆ ಸಕಲ ದೇಶದವರಿಗೂ ತನ್ನ ಕಲಾಪ್ರದರ್ಶನವನ್ನು ಮಾಡಲು ಅನುವಾಯಿತು. ಒಬ್ಬ ವಿಜ್ಞಾನಿಯು ಒಂದೇ ಸಲಕ್ಕೆ ಸಕಲ ದೇಶಗಳ ವಿಜ್ಞಾನಿಗಳಿಗೂ ತನ್ನ ಸಂಶೋಧನೆಯನ್ನು ವರ್ಣಿಸಿ ಹೇಳುವಂತಾಯಿತು. ಹಳ್ಳಿಯ ಬಡಬಗ್ಗರಿಗೂ (ಸರಕಾರದವರು ಅನುಕೂಲಪಡಿಸಿದರೆ) ಇದ್ದಲ್ಲಿಯೆ ಪಟ್ಟಣಗಳ ನಾದಗೀತಗಳ ವೈಭವವನ್ನು ಅನುಭವಿಸುವಂತಾಯಿತು.

ಅದೆಲ್ಲ ಸರಿ; ಆದರೆ ಆ ಚಮತ್ಕಾರವು ನಡೆಯುವದು ಹೇಗೆ? ಅಷ್ಟು ದೂರದಿಂದ ಮಾತಾಡಿದವರ, ಹಾಡಿದವರ ಧ್ವನಿಯು ಅಚ್ಛಳಿಯದೆ ಸಾವಿರಾರು ಮೈಲು ಓಡುವದು ಹೇಗೆ? ಅದರ ಅವ್ಯಕ್ತ ಕಾರಣಕಾರ್ಯಗಳ ಮೀಮಾಂಸೆಯೇನು? ಈ ಕುತೂಹಲದ ಪ್ರಶ್ನೆಗಳಿಗೆ ಸ್ಥೂಲವಾದರೂ ವೈಜ್ಞಾನಿಕವಾದ ರೀತಿಯಲ್ಲಿ ಉತ್ತರ ಕೊಡುವುದೆ ಈ ಲೇಖನದ ಉದ್ದೇಶ.

ಈ ವಿಷಯವನ್ನು ಚನ್ನಾಗಿ ತಿಳಿದುಕೊಳ್ಳಲು ಶಬ್ದದ ಉತ್ಪತ್ತಿ ಪ್ರಸರಣದ ರೀತಿಯನ್ನು ಅರಿತುಕೊಳ್ಳುವುದು ಅಗತ್ಯವಿದೆ. ನಾವು ಮಾತನಾಡಿದ್ದು ಇನ್ನೊಬ್ಬರಿಗೆ ಏಕೆ



ಕೇಳಬೇಕು ? ಒಬ್ಬ ಮನುಷ್ಯನನ್ನು ಒಂದು ಕೋಣೆಯಲ್ಲಿ ಹಾಕಿ ಅದರ ಬಾಗಿಲಿಗೆ ವಾಯುಪ್ರವೇಶವಾಗದಂತೆ ಒಂದು ಕಾಜಿನ ಬಾಗಿಲನ್ನು ಕೂಡಿಸಿದೆವೆಂದು ತಿಳಿಯುವಾ. ಆಗ ಒಳಗಿನ ಮನುಷ್ಯನು ಮಾತಾಡಿದರೆ ಅವನ ಬಾಯಿ ಅಲ್ಲಾಡಿದುದು ಕಾಣುವದಲ್ಲದೆ ಅವನ ಶಬ್ದವು ನಮಗೆ ಕೇಳುವದಿಲ್ಲ. ಇದರ ಮೇಲಿಂದ ಒಬ್ಬರಾಡಿದ ಮಾತು ಬೇರೆಯವರಿಗೆ ಕೇಳಬೇಕಾದರೆ ಮಧ್ಯಂತರದಲ್ಲಿ ವಾಯು ವಿನ ಅಗತ್ಯವಿದೆ. ಏಕೆಂದರೆ ವಾಯುವು ನಾದವಾಹಕ ವಾಗಿದೆ. ವಾಯುವು ನಾದವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಹೇಗೆ ಸಾಗಿಸುತ್ತದೆಂಬುದನ್ನು ತಿಳಿಯಲು ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳುವಾ.

ಪ್ರಶಾಂತವಾದ ನೀರಿನ ಮಟ್ಟವುಳ್ಳ ಒಂದು ಕೆರೆಯಲ್ಲಿ ಒಂದು ಕಲ್ಲನ್ನು ಒಗೆ ದರೆ ಅಲೆಗಳೇಳುವವಷ್ಟೇ ? ಕಲ್ಲು ಬಿದ್ದ ಸ್ಥಳದಲ್ಲಿ ದುಂಡಾಗಿ ಹುಟ್ಟಿದ ಅಲೆಗಳು ವಿಶಾಲವಾಗುತ್ತ ಕೆರೆಯ ದಂಡೆಯವರೆಗೆ ಹೋಗಿ ಮುಟ್ಟುವವು. ಅದನ್ನು ನೋಡಿ 'ಕಲ್ಲು ಬಿದ್ದ ಸ್ಥಳ ದಿಂದ ನೀರು ತೆರೆಯ ರೂಪದಲ್ಲಿ ದಂಡೆಯವರೆಗೆ ಹೋಗಿ ಮುಟ್ಟಿತು' ಎಂದು

ಪ್ರೇಷಕವ್ಯೂಹ

೧. ಊಷ್ಣತಾಜನಕ ಬ್ಯಾಟರಿ
೨. ಪ್ರೇಷಕ ನಲಿಕೆ
೩. ಸೂಕ್ಷ್ಮಧ್ವನಿ ಗ್ರಾಹಕ
೪. ಶ್ರುತಿಕಾರಕ ತಂತಿ
೫. ವಿದ್ಯುತ್ ಜನಕ

ನಾವು ಅನ್ನಬಹುದು. ಆದರೆ ಇದು ನಮ್ಮ ಭ್ರಮೆ. ವಸ್ತುತಃ ದಂಡೆಯ ವರೆಗೆ ಹೋದುದು ನೀರಲ್ಲ; ಅಲೆ ಮಾತ್ರ. ಈ ಸಂಗತಿ ಮನಗಾಣಬೇಕಾ ದರೆ ಆ ಅಲೆಗಳ ಮೇಲೆ ಒಂದು ಬೆಂಡನ್ನು ಚಲ್ಲಿರಿ. ಅದು ಅಲೆಯೊಡನೆ ದಂಡೆಯವರೆಗೆ ಹೋಗುವದೆಂದು ತಿಳಿ ದಿರುವಿರಾ ? ಇಲ್ಲ. ಅದು ಬಂದ ಬಂದ ಅಲೆಗಳನ್ನು ಮುಂದೆ ಸಾಗುಹಾಕಿ ತಾನು ಇದ್ದಲ್ಲಿಯೆ ಕುಣಿಯುತ್ತ ನಿಲ್ಲುವದು. ಕಲ್ಲು ಬಿದ್ದ ಸ್ಥಳ ದಿಂದ ನೀರೇ ದಂಡೆಯವರೆಗೆ ಸಾಗಿದ್ದರೆ ಅದರ ಮೇಲೆ ತೇಲುತ್ತಿರುವ ಬೆಂಡು ಕೂಡ ಮುಂದೆ ಸಾಗುತ್ತಿತ್ತು. ಈ ಉದಾಹರಣೆಯಿಂದ ಕಲ್ಲಿನಿಂದ ಹುಟ್ಟಿದ ಅಲೆ ದಂಡೆಯವರೆಗೆ ಸಾಗಿ ಹೋದರೂ ನೀರು ಇದ್ದಲ್ಲಿಯೆ ಇರುವದೆಂದು ಸ್ಪಷ್ಟವಾಯಿತು. ಇದೂ ಒಂದು ಆಶ್ಚರ್ಯ ವಲ್ಲವೇ ?

ಅದಕ್ಕೊಂದು ಕಾರಣವಿದೆ. ಕಲ್ಲು ಬಿದ್ದ ಸ್ಥಳದ ನೀರಿನ ಮಟ್ಟವು (Surface) ಕ್ಷಣಿಕವಾಗಿ ತಗ್ಗುವದು. ಆ ಮಟ್ಟವು ಪೂರ್ವಸ್ಥಿತಿಗೆ ಬರುವದರೊಳಗೆ ಅದರ ಹತ್ತಿರದ ಮಟ್ಟವು ತಗ್ಗುವದು. ಅದು ಏರುವದರೊಳಗೆ ಅದರ

ಮುಂದಿನ ಮಟ್ಟವು ತಗ್ಗುವದು. ಹೀಗೆ ನೀರಿನ ಮಟ್ಟವು ಮುಂದೆ ಮುಂದೆ ತಗ್ಗಿದಂತೆ ಹಿಂದೆ ಹಿಂದೆ ಏರುತ್ತ ಹೋಗುವದು. ನೀರಿನ ಮಟ್ಟದಲ್ಲಿ ಆಗುವ ಈ ವ್ಯತ್ಯಾಸಕ್ಕೆ ತೆರೆಗಳೆಂದು ನಾವನ್ನುತ್ತೇವೆ. ಹಾಗಾದರೆ ಕಲ್ಲು ಬಿದ್ದ ಸ್ಥಳದಿಂದ ಕೆರೆಯ ದಂಡೆಯವರೆಗೂ ನೀರಿನ ಮಟ್ಟದಲ್ಲಿ ತಗ್ಗು ಏರುಗಳನ್ನು ಯಾರು ಉಂಟು ಮಾಡಿದರು! ಅದೇ ಕಲ್ಲಿನ ಬೀಳುವಿಕೆಯಿಂದ ಉಂಟಾದ ಶಕ್ತಿ. ಆ ಶಕ್ತಿಯೆ ಕಲ್ಲು ಬಿದ್ದ ಸ್ಥಳದಿಂದ ಕೆರೆಯ ದಂಡೆಯವರೆಗೆ ಓಡಿತು. ಆ ಶಕ್ತಿಯು ಹಾಗೆ ಓಡುವಾಗ ನೀರಿನ ಮಟ್ಟವನ್ನು ಅಲುಗಾಡಿಸಿತು. ನೀರು ನಿಂತಲ್ಲಿಯೆ ನಿಂತಿತು.


ಮೇಲೆ ವಿವರಿಸಿದ ಅಲೆಗಳ ವಿಷಯವು ಚನ್ನಾಗಿ ತಿಳಿದರೆ ವಾತಾವರಣದಲ್ಲಿಯ ನಾದಪ್ರವಾಹದ ರೀತಿಯನ್ನು ತಿಳಿಯುವದು ಸುಲಭ. ವಾತಾವರಣವೆ ಕೆರೆಯ ನೀರಿನ ಮಟ್ಟದಂತೆ; ಮಾತುಗಳೇ ಕಲ್ಲುಗಳಂತೆ; ನಾದವೆ ಅಲೆಗಳಂತೆ. ಕಲ್ಲು ಬೀಳುವುದರಿಂದ ಹುಟ್ಟಿದ ಶಕ್ತಿಯ ಓಟದ ವ್ಯಕ್ತರೂಪವೆ ಅಲೆಗಳು. ಅದರಂತೆ ಮಾತಾಡುವುದರಿಂದ ಹುಟ್ಟಿದ ಶಕ್ತಿಯ

ಗ್ರಾಹಕವ್ಯೂಹ

೧ ಗ್ರಾಹಕ ನಲಿಕೆ
[illegible] ಫಿ | ರೆ | ಗ್ರಿ | ಸ್ಪಂದನ ಸ್ಪಷ್ಟೀಕರಣ ಸಾಧನ
[illegible] 'ಏರಿಯಲ್' ತಂತಿಯಸುರುಳಿ
[illegible] ಪ್ರತಿಕಾರಕ
[illegible] 'ಮೈಕ್ರಾಫೋನ್ ಆ್ಯಂಪ್ಲಿಫಾಯರ್' (ಪೆಟ್ಟಿಗೆಯ ಹಾಗಿದೆ)
೮ ನಾದವರ್ಧಕ

ಓಟದ ವ್ಯಕ್ತರೂಪವೆ ನಾದ-ಶಬ್ದವೆನ್ನಬೇಕು. ಅಂದರೆ ಕಲ್ಲು ಅಥವಾ ಮತ್ತಾವದರೊಂದು ವಸ್ತು ಬೀಳುವುದರಿಂದ ಹುಟ್ಟಿದ ಶಕ್ತಿಯು ದಂಡೆಯವರೆಗೆ ಹೇಗೆ ಓಡುವದೋ ಹಾಗೆಯೆ ಮಾತಾಡುವದು ಇಲ್ಲವೆ ವಸ್ತುಗಳ ಚಲನದಿಂದ ಹುಟ್ಟಿದ ಶಕ್ತಿಯು ನಾದರೂಪದಲ್ಲಿ ವಾತಾವರಣವಿರುವ ಪ್ರದೇಶಕ್ಕೆಲ್ಲ ಹರಡಿ ಹೋಗುವದು. ಈ ತತ್ವವನ್ನು ಆಧರಿಸಿಯೆ ಟೆಲಿಫೋನು, ರೇಡಿಯೋ (ವಿತಂತಿ) ಮುಂತಾದ ಸಂಶೋಧನೆಗಳು ಮಾಡಲ್ಪಟ್ಟವು.

ನಾದವು ಹುಟ್ಟುವ ಬಗೆ ತಿಳಿಯಿತು; ಅದು ಹರಡುವ ರೀತಿ ಗೊತ್ತಾಯಿತು. ಆ ನಾದತರಂಗವು ನಮ್ಮ ಕಿವಿಯೊಳಗಿನ ಸ್ನಾಯುವಿನ ನಗಾರೆಗೆ ತಗಲಿದ ಕೂಡಲೆ ಆ ನಗಾರೆಯಲ್ಲಿಯೂ ಅದೇ ನಾದವು ಬಂದು ನಮಗೆ ಆ ಶಬ್ದವು ಕೇಳುವದು. ನಾದವು ಹುಟ್ಟಿದ ಸ್ಥಳದಿಂದ ದೂರದೂರ ಹೋದಂತೆ ಅದು ದುರ್ಬಲವಾಗುವುದರಿಂದ ದೂರದಲ್ಲಿಯ ಶಬ್ದವು ನಮ್ಮ ಕರ್ಣ ತಮ್ಮಟವನ್ನು ಅಲುಗಿಸಲಾರದು. ಆದ್ದರಿಂದ ದೂರದ ಶಬ್ದ ನಮಗೆ ಕೇಳಬರುವದಿಲ್ಲ. ಇದು ಸಹಜವಾಗಿದೆ.



ಆದರೆ ಆಕಾಶವಾಣಿಯಿಂದ ಸಾವಿರಾರು ಮೈಲು ದೂರದಿಂದ ಹಾಡು ಮಾತುಗಳು ಕೇಳುವುದು ಹೇಗೆ ಎಂಬುದೇ ನಮ್ಮ ಮೊದಲಿನ ಪ್ರಶ್ನೆಯಲ್ಲವೇ? ಇಲ್ಲಿಯೆ ಇರುವದು ಮನುಷ್ಯನ ಬುದ್ಧಿಕೌಶಲ್ಯ. ಮನುಷ್ಯನು ಪ್ರಕೃತಿಯಲ್ಲಿಯ ತತ್ವಗಳನ್ನು ತಿಳಿದು ತನ್ನ ಬುದ್ಧಿಯನ್ನು ಉಪಯೋಗಿಸಿ ಅದ್ಭುತ ಚಮತ್ಕಾರಗಳನ್ನು ನಿರ್ಮಿಸುವನು. ಆ ಬುದ್ಧಿ ಕೌಶಲ್ಯದಿಂದಲೆ ಇಂದು ಮಾನವಲೋಕಕ್ಕೆ ಫೊನೊಗ್ರಾಫ್, ಚಲಚ್ಚಿತ್ರ, ಛಾವಚಿತ್ರ, ವಿದ್ಯುತ್, ವಿಮಾನ, ಉಗಿಬಂಡಿ ಮುಂತಾದ ಅಸಂಖ್ಯ ಸೌಲಭ್ಯಗಳು ದೊರಕಿವೆ. ಆ ಬುದ್ಧಿ ಕೌಶಲ್ಯದಿಂದಲೆ ನಾದಪ್ರವಾಹದ ಗುಟ್ಟನ್ನರಿತ ವಿಜ್ಞಾನಿಗಳು ಆಕಾಶವಾಣಿಯನ್ನು ಸಂಶೋಧಿಸಿದರು. ನಾದ ಪ್ರವಾಹವನ್ನು ಬೇಕಾದಷ್ಟು ದೂರ ಒಯ್ಯುವ ಬಗೆ, ಮಂದನಾದವನ್ನು ಉಚ್ಚವಾಗಿಸುವ ಬಗೆ, ವಾತಾವರಣದಲ್ಲಿ ಓಡುತ್ತಿರುವ ನಾದಗಳನ್ನು ಬೇಕಾದಲ್ಲಿ ಎಳೆದುಕೊಳ್ಳುವ ಬಗೆ ಮುಂತಾಗಿ ಪ್ರಕೃತಿಯ ನಾದತತ್ವವನ್ನೇ ಹಿಂಜಿ ಆಕಾಶವಾಣಿಯ ಅಭೂತಪೂರ್ವವಾದ ಚಮತ್ಕಾರವನ್ನು ಸೃಷ್ಟಿಸಿಕೊಂಡಿದ್ದಾನೆ ಮನುಷ್ಯ! ಸಹಜವಾಗಿ ಹೊರಟ ನಾದವನ್ನು ಕೃತ್ರಿಮವಾಗಿ ದೂರ ಕಳಿಸಿ ಅಲ್ಲಿ ಅದನ್ನು ಸ್ವೀಕರಿಸುವ ವ್ಯವಸ್ಥೆಯು ಹೇಗೆ ಮಾಡಲ್ಪಡುವುದೆಂಬುದನ್ನು ಇನ್ನು ನೋಡುವಾ.

ಒಂದು ಊರಲ್ಲಿ ಮಾತನಾಡಿದುದು ಮತ್ತೊಂದು ಊರಿನಲ್ಲಿ ಕೇಳಬೇಕಾದರೆ ಇಷ್ಟು ಸಂಗತಿಗಳು ನಡೆಯಬೇಕು:—ಮಾತಿನ ನಾದ ತರಂಗಗಳನ್ನು ಗ್ರಹಿಸುವ ಸಾಧನ ಬೇಕು; ಸ್ಪಂದನವನ್ನು ಸಾಕಷ್ಟು ದೂರ ವಾತಾವರಣದಲ್ಲಿ ಕಳಿಸುವ ಸಾಧನ ಬೇಕು; ವಾತಾವರಣದಲ್ಲಿ ಹರಿದು ಬಂದ ನಾದಸ್ಪಂದನಗಳನ್ನು ಗ್ರಹಿಸುವ ಸಾಧನ ಬೇಕು; ಗ್ರಹಿಸಿದ ಸ್ಪಂದನವನ್ನು ನಾದರೂಪಕ್ಕೆ ಮಾರ್ಪಡಿಸುವ ಸಾಧನ ಬೇಕು; ನಾದವನ್ನು ದೊಡ್ಡದಾಗಿಸುವ ಸಾಧನ ಬೇಕು; ಇಷ್ಟು ಸಾಧನಗಳನ್ನು ಆಯಾ ಸ್ಥಳಗಳಲ್ಲಿ ಸ್ಥಾಪಿಸಿದರೆ ಆಕಾಶವಾಣಿಯ ವ್ಯೂಹವು ಪೂರ್ಣವಾದಂತಾಯಿತು.

ಮೇಲಿನ ಸಾಧನಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಮಾಡಬಹುದು. (೧) ಮಾತನ್ನಾಗಲಿ ಹಾಡನ್ನಾಗಲಿ ವಾತಾವರಣದಲ್ಲಿ ಕಳಿಸುವ ವ್ಯವಸ್ಥೆಗೆ ಪ್ರೇಷಕ ವ್ಯೂಹವೆನ್ನುವಾ. (೨) ವಾತಾವರಣದಲ್ಲಿಯ ನಾದಸ್ಪಂದನಗಳನ್ನು ಸಂಗ್ರಹಿಸಿ ನಾದರೂಪಕ್ಕೆ ತಿರುಗಿಸುವ ವ್ಯವಸ್ಥೆಗೆ ಗ್ರಾಹಕ ವ್ಯೂಹವೆನ್ನುವಾ.

ಪ್ರೇಷಕವ್ಯೂಹ:— ಮಾತನಾಡುವವರಾಗಲಿ ಹಾಡುವವರಾಗಲಿ 'ಮೈಕ್ರಾಫೋನ್' ಅಂದರೆ ಸೂಕ್ಷ್ಮ ಧ್ವನಿಗ್ರಾಹಿಯ ಎದುರಿನಲ್ಲಿ ಧ್ವನಿಯನ್ನು ಹೊರಡಿಸಬೇಕು. ಅವರ ಧ್ವನಿಯ ಆಘಾತದಿಂದ ಮೈಕ್ರಾಫೋನಿನಲ್ಲಿ [illegible]ತ್ರಿನ ಮೂಲಕ ನಾದದಸ್ಪಂದನಗಳು ಹುಟ್ಟುವವು. [illegible] ಸ್ಪಂದನಗಳು ಆ್ಯಂಪ್ಲಿಫಾಯರ್ ಎಂಬ ಸಾಧನದಿಂದ ಬಲ ಪಟ್ಟು ಟ್ರ್ಯಾನ್ಸ್ ಮಿಟಿಂಗ್ ವಾಲ್ವ ಎಂಬ ಸಾಧನದಲ್ಲಿ ಸೇರಿಸಲಾಗುತ್ತದೆ. ಇದರಲ್ಲಿ ಸ್ಪಂದನಗಳು [illegible] ಹೆಚ್ಚು ತೀವ್ರವಾಗುತ್ತವೆ. ಆ ತೀವ್ರ ಸ್ಪಂದನಗಳನ್ನು 'ಏರಿಯಲ್ ಟ್ಯೂನಿಂಗ್‌ಕಾಯ್ಲ' ಎಂಬ ಸಾಧನದ್ವಾರಾ 'ಏರಿಯಲ್' ಎಂಬ ಮನೆಯ ಮೇಲುಗಡೆ ಸ್ಥಾಪಿಸಿದ ತಂತಿಗೆ ಮುಟ್ಟಿಸಿದರೆ ಆ ಸ್ಪಂದನಗಳು ವಾತಾವರಣದಲ್ಲಿ ಸಾವಿರಾರು ಮೈಲಿನ ವರೆಗೆ ಓಡುವವು. ಇಲ್ಲಿಗೆ ನಾದಸ್ಪಂದನಗಳನ್ನು ಕಳಿಸುವ ಕೆಲಸವಾಯಿತು.

ಗ್ರಾಹಕವ್ಯೂಹ:— ಪ್ರೇಷಕವ್ಯೂಹದ ಮನೆಯ ಮೇಲ್ಗಡೆಯಿರುವಂತೆ ಗ್ರಾಹಕವ್ಯೂಹದ ಮನೆಯ ಮೇಲ್ಗಡೆಯೂ ಒಂದು 'ಏರಿಯಲ್' ತಂತಿ ಹಾಕಲ್ಪಟ್ಟಿರುತ್ತದೆ. ಇಷ್ಟೆ ಆ ಪೆರಡೂ ತಂತಿಗಳು ಗುಣದಲ್ಲಿ ಬೇರೆಯಾಗಿರುತ್ತವೆ. ಪ್ರೇಷಕವ್ಯೂಹದ ಮೇಲಿನ ತಂತಿಯು ವಿಕ[illegible] (ವಿದ್ಯುತ್) ಗುಣವುಳ್ಳದ್ದಾಗಿರುವದು. ಗ್ರಾಹಕವ್ಯೂಹದ ಮೇಲಿನ ತಂತಿಯು ಆಕರ್ಷಕಗುಣವುಳ್ಳದ್ದಾಗಿದೆ. ಗ್ರಾಹಕವ್ಯೂಹದ ಮೇಲಿನ ತಂತಿಯು ಆಕಾಶದೊಳಗಿನ ವಿ[illegible] ತರಂಗಗಳನ್ನು ಆಕರ್ಷಿಸಿ ಸ್ಪಂದನರೂಪದಲ್ಲಿ [illegible] ಗ್ರಾಹಕವ್ಯೂಹಕ್ಕೆ ಕಳಿಸುವದು. ಇಲ್ಲಿ ಇನ್ನೊಂದು [illegible] ವಿಷಯವನ್ನು ತಿಳಿದುಕೊಳ್ಳಬೇಕು. ನಾದ ಸ್ಪಂದನಗಳ ವೇಗಕ್ಕನುಸರಿಸಿ ಅವುಗಳ ಅಲೆಯ ಉದ್ದಳತೆಯು [illegible] ಕಡಿಮೆಯಾಗುವದು. ಆದುದರಿಂದ ಪ್ರೇಷಣವ್ಯೂಹದಿಂದ [illegible] ಬಂದ ಸ್ಪಂದನಗಳು ಎಷ್ಟು ಉದ್ದಳತೆಯವಿರುತ್ತವೆಯೋ ಅಷ್ಟೇ ಉದ್ದದ ಸ್ಪಂದನಗಳನ್ನು ಸಂಗ್ರಹಿಸುವ ಸ್ಥಿತಿ ಗ್ರಾಹಕವ್ಯೂಹದಲ್ಲಿರಬೇಕು. ಇಲ್ಲಿಯ ನಾದ ಗ್ರಾಹಕ [illegible] ಬಂದ ಸ್ಪಂದನಗಳ ಉದ್ದಕ್ಕಿಂತ ಹೆಚ್ಚು ಅಥವಾ [illegible] ಉದ್ದದ ಅಲೆಗಳನ್ನು ಹಿಡಿಯುವಂತಹದಾಗಿದ್ದರೆ ಆ ಸ್ಪಂದನಗಳು ಸಂಗ್ರಹಿತವಾಗುವದೇ ಇಲ್ಲ. ಆದುದರಿಂದ ಪ್ರೇಷಕವ್ಯೂಹದಿಂದ ಬರುವ ನಾದಸ್ಪಂದನಗಳಿಗೆ [illegible] ಗ್ರಾಹಕವ್ಯೂಹವನ್ನೂ ಶ್ರುತಿಗೂಡಿಸುವುದಕ್ಕೆ 'ಟ್ಯೂನಿಂಗ್ ಕಾಂಡೆನ್ಸರ್' ಎಂಬ ಸಾಧನವಿದೆ. ಆದರಲ್ಲಿ ಶ್ರುತಿಗೂಡಿ ಬಂದ ಸ್ಪಂದನಗಳನ್ನು 'ಮೈಕ್ರಾಫೋನ್ ಆ್ಯಂಪ್ಲಿಫಾಯರ್'

ದ್ವಾರಾ ಬಲಪಡಿಸಲಾಗುವದು. ಹಾಗೆ ಸ್ಪಷ್ಟವಾಗಿ, ಬಲಗೊಂಡ ಸ್ಪಂದನಗಳನ್ನು 'ಸ್ವರವರ್ಧಕ' (ಲೌಡಸ್ಪೀಕರ) ದೊಳಗಿನಿಂದ ಹಾಯಿಸಿದರೆ ಸ್ಪಂದನಗಳಿಗೆ ನಾದರೂಪ ಬಂದು ನಮಗೆ ಹಾಡುಗಳೂ ಮಾತುಗಳೂ ಕೇಳುವವು. ಇಲ್ಲಿ ಆಕಾಶದಲ್ಲಿ ಹರಿದೋಡಿ ಬಂದ ನಾದದ ವಿದ್ಯುತ್ತರಂಗಗಳನ್ನು ಪುನಃ ನಾದರೂಪಕ್ಕೆ ಇಳಿಸಿದಂತಾಯಿತು. ಇಲ್ಲಿ ಕೊಟ್ಟ ಚಿತ್ರಗಳ ಸಹಾಯದಿಂದ ಮೇಲಿನ ವಿವರಣೆಯು ಕೊಂಚ ನಿಚ್ಚಳವಾಗುವದು. ಪ್ರತ್ಯಕ್ಷವಾಗಿ ಆಕಾಶವಾಣಿಯ ಗೃಹಗಳನ್ನೆ ನೋಡಿದರಂತೂ ವಿಷಯವು ಇನ್ನೂ ಹೆಚ್ಚು ಸ್ಪಷ್ಟವಾಗುವದು.

ಪ್ರಾಣಾಯಾಮ

ಲೇಖಕ:—ವಿ. ಆರ್. ಅಣ್ಣಾಸ್ವಾಮಿರಾವ್, ಮುಂಬ

ಪ್ರಾಣಾಯಾಮ ಯೋಗಾಸನಗಳು ಹಳೆಯ ಕಂತೆಗಳೆಂದು ತಾತ್ಸಾರ ಮಾಡುತ್ತಿದ್ದ ಕಾಲ ವೊಂದಿತ್ತು. ಮನೋವಿಜ್ಞಾನ, ಶರೀರವಿಜ್ಞಾನಗಳು ಬೆಳೆದಂತೆ ಭಾರತೀಯರ ಯೋಗವಿಜ್ಞಾನದ ಮೇಲೂ ಬೆಳಕು ಬಿದ್ದು ಅದರಲ್ಲಿಯ ಮಹತ್ವವು ವಿಜ್ಞಾನಿಗಳನ್ನು ಮುಗ್ಧರನ್ನಾಗಿ ಮಾಡು ತ್ತಿದೆ. ಉಬ್ಬಸ, ಕ್ಷಯ ಮುಂತಾದ ದೀರ್ಘರೋಗಗಳನ್ನು ಹಲವು ಪಾಶ್ಚಾತ್ಯ ವೈದ್ಯರು ಶ್ವಾಸಕ್ರಿಯಾಕ್ರಮದಿಂದ ಗುಣಪಡಿಸುತ್ತಿರುವರು. ಆದುದರಿಂದ ಭಾರತೀಯರಿಗೆ ಪ್ರಾಣಾ ಯಾಮದ ವಿಷಯವು ಹಳೆಯದಾದರೂ ಈ ವೈಜ್ಞಾನಿಕ ಯುಗದಲ್ಲಿ ಅದರ ಜ್ಞಾಪಕವಾಗ ಲೆಂದು ಈ ಲೇಖವನ್ನು ಪ್ರಕಟಿಸಲಾಗಿದೆ. ಸಂ.

ಸ್ವರ್ಣಾದಿ ಧಾತುಗಳು ಅಗ್ನಿಯಲ್ಲಿ ಕಾಯಿಸಿದರೆ ಹ್ಯಾಗೆ ನಿರ್ಮಲವಾಗುತ್ತವೋ ಅದರಂತೆಯೆ ನಾನಾ ತರಹದ ಪಾಪಗಳಿಂದ ಮಲಿನವಾದ ಮನಸಾದಿ ಇಂದ್ರಿಯಗಳೆಲ್ಲ ಪ್ರಾಣಾಯಾಮ ಮಾಡುವುದರಿಂದ ನಿರ್ಮಲವಾ ಗುತ್ತವೆ.

ಪ್ರಾಣಾಯಾಮವು ಎರಡು ಬಗೆಯದಾಗಿದೆ. ಯೋಗಿ ಗಳಿಗೆ, ತಪಸ್ವಿಗಳಿಗೆ ಅನುಗುಣವಾದ ಪ್ರಾಣಾಯಾಮ; ಮತ್ತೊಂದು ಲೌಕಿಕದಲ್ಲಿರುವ ಸಕಲ ಜನಾಂಗಗಳಿಗೂ ಉಪಯುಕ್ತವಾದ ಪ್ರಾಣಾಯಾಮ. ಮಾನವನ ಜೀವ ಧಾರಣೆಗೂ, ಮೋಕ್ಷಕ್ಕೂ ಇದು ಅತ್ಯಂತ ಅವಶ್ಯಕವಾ ದುದು. ಹರಿಕಥಾಮೃತಸಾರದ ಈ ವಚನಗಳಿಂದ ಪ್ರಾಣಾ ಯಾಮವು ಅನಾದಿಯಾದುದೆಂದೂ, ವೇದ ಮೂಲವೆಂದೂ ತಿಳಿದುಬರುತ್ತದೆ.

ಈ ಶರೀರ ಚತುಷ್ಟಯಗಳೊಳು। ಕೋಶಧಾತುಗ
ಭಾರತಿಪತಿಪ್ರಾ। ಣೇಶನಿಪ್ಪತ್ತೊಂದು ಸಾವಿರದಾರು
ನೂರೆನಿಪಾ ॥ ಶ್ವಾಸರೂಪಕ ಹಂಸಭಾಸ್ಕರ। ಭೇಶ
ರೊಳಗಿರ್ದವರ ಕೈವಿಡಿ। ದೀಸರೋಜ ಭವಾಂಡ
ದೊಳು ಸರ್ವತ್ರ ತುಂಬಿಹನೂ ॥ ೫ ॥

ಶಿರಗಳೈದೈದೆರಡು ಬಾಹುಗ। ಳೆರಡು ಪಾದಗ
ಳೊಂದು ಮಧ್ಯೋ। ದರದಿ ಶೋಭಿಪವಾಙ್ಮನೋ
ಮಯನೆನಿಪ ನಿತ್ಯದಲೀ ॥ ಕರಣಧಾತುಗಳಲ್ಲಿ
ಯಪ್ಪ। ತ್ತೆರಡು ಸಾವಿರ ನಾಡಿಗಳೊಳಿ।
ಪ್ಪರವಿದೂರನು ಭಾರತ ಪ್ರತಿಪಾದ್ಯನೆಂದೆನಿಸೀ ॥೬॥

ನಾಡಿಗಳು


ನಮ್ಮ ದೇಹದಲ್ಲಿಯ ಹೊಕ್ಕಳಸ್ಥಾನಕ್ಕೆ (ನಾಭಿ) ಕ[illegible] ಸ್ಥಾನವೆಂದು ಹೆಸರು. ಮೇಲೆ ಹೇಳಿದ ಎಪ್ಪತ್ತೆರಡು ಸಾ[illegible] ಯೋಗನಾಡಿಗಳು ನಾಭಿಯ ಸುತ್ತುಮುತ್ತಲಿಂದ ಸ[illegible] ಶರೀರದಲ್ಲೆಲ್ಲಾ ವ್ಯಾಪಿಸಿಕೊಂಡಿವೆ. ಇವುಗಳಲ್ಲಿ ಇ[illegible] ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿಜಿಹ್ವಾ, ಪೂ[illegible] ಯಶಸ್ವಿನಿ, ಅಲಂಬುಸಾ, ಕುಹೂ, ಶಂಖಿನೀ ಮೊದ[illegible] ಹತ್ತು ನಾಡಿಗಳು ಮುಖ್ಯವಾದುವು.

ಇಡಾನಾಡಿಯನ್ನು ಚಂದ್ರನಾಡಿಯೆಂತಲೂ, ಪಿಂ[illegible] ವನ್ನು ಸೂರ್ಯನಾಡಿಯೆಂದೂ ಕರೆಯುತ್ತಾರೆ. ಇವು[illegible] ಸುಷುಮ್ನಾವೆಂಬ ನಾಡಿಯಾದರೋ ಬ್ರಹ್ಮರಂ[illegible] ವರೆಗೂ ವ್ಯಾಪಿಸಿ, ನಮ್ಮ ಹೃದಯದಲ್ಲಿರುವ ಪ್ರಾ[illegible] ವಾಯುವಿನ ನಿರ್ಗಮಾಗಮಗಳಿಗೆ ದಾರಿಯಾಗಿದೆ.

ಈ ನಮ್ಮ ಶರೀರದಲ್ಲಿನ ವಾತ, ಪಿತ್ತ, ಕಫ, ಮು[illegible] ವುಗಳಿಂದ ಹುಟ್ಟುವ ರೋಗಗಳ ನಿವಾರಣೆಯು ಮೇಲ[illegible] ನಾಡಿಗಳ ಸ್ವಾಧೀನದಿಂದಲೇ ಆಗುವುದು. ಪ್ರಾಣಾಯಾ[illegible] ಪ್ರಕರಣವು ಬಹಳ ವಿಸ್ತಾರವಾದುದರಿಂದ, [illegible] ಉಪಯೋಗಕ್ಕೆ ಅನುಕೂಲವಾದ ಅಂಶಗಳೇ ಇಲ್ಲಿ [illegible] ಲ್ಪಟ್ಟಿವೆ.

ವಾಯುನಿರೂಪಣ

ನಾಡಿಗಳಲ್ಲದೆ ನಮ್ಮ ಶರೀರದಲ್ಲಿ ಪ್ರಾಣ, ಅ[illegible] ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, [illegible] ದೇವದತ್ತ, ಧನಂಜಯ ಎಂಬ ಹತ್ತು ವಿಧವಾದ ವಾ[illegible]



ಈ ನಕಾಶೆಯು, ನಮ್ಮ ದೇಹದಲ್ಲಿರುವ, ಮೂಲಾಧಾರ, ಮಣಿಪುರ, ಅನಾಹತ, ವಿಶುದ್ಧಿ, ಆಜ್ಞಾ, ಸಹಸ್ರಾರಗಳೆಂಬ ಚಕ್ರಗಳ ಸ್ಥಾನಗಳನ್ನು ತೋರಿಸುತ್ತದೆ ಹಠಯೋಗಿಯು ಈ ಚಕ್ರಗಳಲ್ಲಿ ಎಲ್ಲಿ ಬೇಕಾದರೂ ಪ್ರಾಣವಾಯುವನ್ನು ತಡೆದು, ಕೆಲವು ಸಿದ್ಧಿಗಳನ್ನು ಪಡೆಯುತ್ತಾನೆ. ಈ ಚಕ್ರಗಳ ಸ್ವಾಧೀನಕೆ, ಚಿತ್ರದಲ್ಲಿ ತೋರಿಸಿರುವ ವೇಗಸ್ ನರವೇ ಮುಖ್ಯವಾದುದು. ಇದು ನಮ್ಮ ಸ್ವಾಧೀನಕ್ಕೆ ಬಂದರೆ ಯೋಗದಲ್ಲಿ ಪ್ರಥಮಸಿದ್ಧಿಯಾದಂತೆ ಗಣನೆ.

ವಾಯುನಿರೋಧನೆಯಿಂದ, ಸಾಮಾನ್ಯವಾದ ಮನುಷ್ಯನ ಹೃದಯದ ಮೇಲೆ ಭಾರವಾದ ಗಾಡಿಯನ್ನು ಎಳೆಯುವುದು, ಕತ್ತಿ ಛಲ್ಲಿಗಳ ಮೇಲೆ ಮಲಗುವುದೇ ಮುಂತಾದ ವಿದ್ಯೆಗಳನ್ನು ನಾವು ಪ್ರತ್ಯಕ್ಷವಾಗಿ ನೋಡಿರುವೆವು. ಸರಿಯಾಗಿ ಪ್ರಾಣಾಯಾಮ, ಆಸನ, ಧೌತಿ, ಮುದ್ರೆಗಳನ್ನು ಮಾಡಿದಲ್ಲಿ ಚಿರಂಜೀವಿಯಾಗಿ, ಅಷ್ಟಸಿದ್ಧಿಗಳೂ ಲಭಿಸುವುದರಲ್ಲಿ ಸಂದೇಹವೇನಿದೆ ?

ಮುದ್ರಾಪ್ರಕರಣವೂ ಮತ್ತು ಮೇಲ್ಕಂಡ ಚಕ್ರಗಳಲ್ಲಿ ವಾಯುನಿರೋಧಿಸುವುದೂ ಹಠಯೋಗಿಗಳಿಗೆ ಮಾತ್ರವಾದುದರಿಂದಲೂ, ಇದಕ್ಕೆ ಗುರುವಿನ ಸಹಾಯ ಆವಶ್ಯಕವಾದುದರಿಂದಲೂ ಈ ಸಂಗತಿಗಳನ್ನು ಇಲ್ಲಿ ವಿವರಿಸಲಿಲ್ಲ.

ಗಳಿವೆ. ಇವುಗಳಲ್ಲಿ ಮುಖ್ಯವಾದ ಪ್ರಾಣವಾಯುವು ಹೃದಯದಲ್ಲಿದ್ದು, ಉಚ್ಛ್ವಾಸನಿಶ್ವಾಸಗಳಿಂದ ಶರೀರದೊಳಗಿನ ದುರ್ಮಲಗಳನ್ನು ಹೊರಗೆ ಹಾಕಿ, ಜಠರಾಗ್ನಿಯನ್ನು ಪ್ರಜ್ವಲಿಸಿ, ತನ್ಮೂಲಕ ಆಯುರ್ವೃದ್ಧಿಯನ್ನು ಮಾಡುತ್ತದೆ. ಹೀಗೆಯೆ ಮಿಕ್ಕ ಒಂಬತ್ತು ವಾಯುಗಳೂ ಶರೀರದಲ್ಲಿಯ ಉಪಯುಕ್ತವಾದ ಅನೇಕ ಕಾರ್ಯಗಳನ್ನು ಮಾಡಲು ನಿಯಮಿಸಲ್ಪಟ್ಟಿವೆ.

ಯೋಗಿಯು ದೇಹವನ್ನು ಸ್ನಾನಾದಿಗಳಿಂದ ಶುಚಿಮಾಡುವುದಲ್ಲದೆ, ನಾಡಿಗಳನ್ನು ಸಹ ಧೌತಿ, ಬಸ್ತಿ, ನೌಲಿ ತ್ರಾಟಿಕಾ ಮುಂತಾದ ಕ್ರಿಯೆಗಳಿಂದಲೂ, ಮಹಾಮುದ್ರಾ, ನಭೋಮುದ್ರಾ ಮುಂತಾದ ಇಪ್ಪತ್ತು ಮುದ್ರೆಗಳಿಂದಲೂ ಶುಚಿಮಾಡುವನು. ನಾಡಿಗಳ ಶುಚಿತ್ವದಿಂದ ದೇಹದಲ್ಲಿಯ ಶ್ವಾಸ, ಕಾಸ, ಪ್ಲೀಹ, ಮೇಹ, ಮೊದಲಾದ ಸಮಸ್ತ ರೋಗಗಳು ನಾಶವಾಗುವುವಲ್ಲದೆ, ವಜ್ರಕಾಯವುಂಟಾಗಿ ಅಕಾಲಮೃತ್ಯುವಿನ ಬಾಯಿಗೆ ತುತ್ತಾಗದೆ ಬಾಳುವನು.

ಶ್ವಾಸನಿರೋಧ, ಧೌತಿಕ್ರಿಯೆ, ಮುದ್ರೆಗಳು ಕಠಿಣವಾದುವುಗಳಾದಪ್ರಯುಕ್ತ ಗುರುವಿನ ಸಹಾಯವಿಲ್ಲದೆ ಮಾಡಬಾರದು. ಹಾಗೆ ಮಾಡುವಾಗ, ಕ್ರಿಯಾವ್ಯಂಗವಾದಲ್ಲಿ ದೇಹಕ್ಕೆ ಅಪಘಾತವಾಗುವುದು.

ಯೋಗಾಭ್ಯಾಸ ಮಾಡತಕ್ಕ ಸ್ಥಳ

ಧರ್ಮಭರಿತವಾಗಿ, ಅನ್ನ, ಜಲಗಳು ಸಮೃದ್ಧವಾಗಿ, ಇದ್ದು ದಯಾಪೂರ್ಣಹೃದಯವುಳ್ಳ ಜನರಿರುವ ದೇಶದಲ್ಲಿ ಜನರ ಗುಂಪು ಇಲ್ಲದ ಪುಣ್ಯ ನದೀತೀರದಲ್ಲಿ, ಸ್ವಚ್ಛವಾದ ಏಕಾಂತ ಸ್ಥಳದಲ್ಲಿ ಯೋಗಾಭ್ಯಾಸ ಮಾಡಬೇಕು. ಇಂತಹ ಸ್ಥಳದಲ್ಲಿ ಒಂದು ಭಾವಿಯನ್ನಾಗಲಿ, ಒಂದು ಕೊಳವನ್ನಾಗಲಿ, ಒಂದು ಕೆರೆಯನ್ನಾಗಲಿ ಕಟ್ಟಿಸಿ, ಅದರ ಸಮೀಪಕ್ಕೆ ಸುತ್ತಲೂ ಆವರಣವನ್ನೇರ್ಪಡಿಸಿ, ಆ ಆವರಣದ ನಡುವೆ ಬಹಳ ಎತ್ತರವಿಲ್ಲದೆಯೂ, ಬಹಳ ತಗ್ಗಿಲ್ಲದೆಯೂ ಮೆದುವಾದ ಸಮಪ್ರದೇಶದಲ್ಲಿ, ಸುಂದರವಾದ ಪರ್ಣಶಾಲೆಯನ್ನು ಕಟ್ಟಿಸಬೇಕು.


ಈ ರೀತಿಯಾಗಿ ಕಟ್ಟಿಸಿದ ಮಂದಿರದೊಳಗೆ ಇರುವೆ, ಸೊಳ್ಳೆ, ತಿಗಣೆ ಮೊದಲಾದ ರಕ್ತಪಾನ ಮಾಡುವ ಕ್ರಿಮಿಕೀಟಗಳು ಬಾರದಂತೆ ಮಾಡಿ ಪ್ರತಿನಿತ್ಯವೂ ಶುದ್ಧವಾದ ಹಸುವಿನ ಸಗಣಿಯಿಂದ ಸಾರಿಸಬೇಕು. ಮಂದಿರವು ವೈರಾಗ್ಯವನ್ನುಂಟುಮಾಡುವಂತಹದಾಗಿ ಋಷಿವರ್ಯರ ಚಿತ್ರ

ಗಳಿಂದ ಅಲಂಕೃತವಾಗಿರಬೇಕು. ಇಂತಹ ಪರ್ಣಶಾಲೆಯಲ್ಲಿ, ಶುಚಿಯಾದ ಮನಸ್ಸಿನಿಂದ, ಶುಭ್ರವಾದ ಆಸನದ ಮೇಲೆ ಪದ್ಮಾಸನಸ್ಥನಾಗಿ ಕುಳಿತು ಪ್ರಾಣಾಯಾಮ ಮಾಡಬೇಕು.

ರೇಚಕ-ಪೂರಕ-ಕುಂಭಕಗಳು

ಎದೆಯೊಳಗಿನ ವಾಯುವನ್ನು ಮೂಗಿನ ರಂಧ್ರದ ಮೂಲಕ ಹೊರಕ್ಕೆ ಬಿಡುವುದೆ ರೇಚಕವೆಂದು ಕರೆಯಲ್ಪಡುತ್ತದೆ. ಇದನ್ನು ೧೬ ವಿಘಳಿಗೆ (ಸೆಕೆಂಡುಗಳಷ್ಟು) ಕಾಲ ಮಾಡಬೇಕು.

ಬದ್ಧಪದ್ಮಾಸನ



ಪ್ರಾಣಾಯಾಮವನ್ನು ಚಿತ್ರದಲ್ಲಿ ಕಂಡ ರೀತಿ ಆಸನಸ್ಥನಾಗಿ ಕುಳಿತು, ದೃಷ್ಟಿಯನ್ನು ಮೂಗಿನ ಕೊನೆಗೆ ನಿಲ್ಲಿಸಿ ತಲೆ ಮೊದಲಾದ ಅವಯವಗಳನ್ನು ಅಲ್ಲಾಡಿಸದೆ, ಹಾಸ್ಯ ಮಾಡದೆ, ಮಾತಾಡದೆ, ವಿಷಯಾಸಕ್ತಿಯಲ್ಲೂ, ಇತರ ಆಲೋಚನೆಗಳಲ್ಲಿಯೂ ಮನಸ್ಸಿಡದೆ, ಆಲಸ್ಯ ನಿದ್ರೆ ಇವುಗಳಿಂದ ವಿರಹಿತನಾಗಿ, ಏಕಾಂತದಲ್ಲಿ ನೆಟ್ಟಗೆ ಕೂತುಕೊಂಡು, ಹಲ್ಲುಗಳನ್ನು ತೋರಿಸದೆ, ತುಟಿಗಳನ್ನು ಅಲ್ಲಾಡಿಸದೆ, ಗಟ್ಟಿಯಾಗಿ ಉಚ್ಚರಿಸದೆ, ಮನಸ್ಸಿನಲ್ಲೆ ಗಾಯತ್ರಿಯನ್ನು ೧೦,೨೮,೧೦೮ ಅಥವಾ ೧೦೦೦ ಸಲ ಶಕ್ತಿಯಿದ್ದಷ್ಟು ಕೈಯನ್ನು ವಸ್ತ್ರದಿಂದ ಮುಚ್ಚಿಕೊಂಡು, ಪ್ರಾತಃಕಾಲಕ್ಕೆ ನಾಭಿಸಮಾನವಾಗಿಯೂ, ಮಧ್ಯಾಹ್ನಕ್ಕೆ ಹೃದಯ ಸಮವಾಗಿಯೂ, ಸಾಯಾಹ್ನಕ್ಕೆ ಮೂಗಿಗೆ ಸಮವಾಗಿಯೂ, ಕೈಹಿಡಿದು, ಬೆರಳುಗಳ ಪರ್ವ (ಗಣ್ಣು) ಗಳಿಂದಾಗಲೀ, ತುಳಸೀ ಮಾಲೆಯಿಂದಾಗಲೀ ಲೆಕ್ಕಿಸುತ್ತಾ ಜಪಿಸಬೇಕು. ಗಣನೆ ಇಲ್ಲದೆಯಾಗಲಿ, ಧಾನ್ಯ, ಪುಷ್ಪ, ಕಲ್ಲು ಮೊದಲಾದವುಗಳಿಂದಾಗಲಿ ಎಣಿಸಿ ಜಪಮಾಡಬಾರದು.

ಹೊರಗಿನ ಗಾಳಿಯನ್ನು ಮೂಗಿನ ರಂಧ್ರದ ಮೂಲಕ ಎದೆಯೊಳಗೆ ಎಳೆದುಕೊಳ್ಳುವುದಕ್ಕೆ ಪೂರಕವೆಂದು ಹೆಸರು. ಇದನ್ನು ೩೨ ವಿಘಳಿಗೆ (ಸೆಕೆಂಡುಗಳಷ್ಟು) ಕಾಲ ಮಾಡಬೇಕು. ಎಳೆದುಕೊಂಡ ಗಾಳಿಯನ್ನು ಹೃದಯದಲ್ಲಿ ನಿಲ್ಲಿಸಿಕೊಳ್ಳುವುದಕ್ಕೆ ಕುಂಭಕವೆಂದು ಹೆಸರು. ಕುಂಭಕವನ್ನು ೬೪ ವಿಘಳಿಗೆ (ಸೆಕೆಂಡುಗಳ) ಕಾಲ ಆಚರಿಸಬೇಕು.

ಬ್ರಹ್ಮಚಾರಿಗಳು, ಸನ್ಯಾಸಿಗಳು ಹೆಬ್ಬೆರಳು, ೪ ನೆಯ ಬೆರಳುಗಳಿಂದ ಮೂಗನ್ನು ಅದುಮಿ ಕುಂಭಕ ಮಾಡತಕ್ಕದ್ದು.

ಸಗರ್ಭಪ್ರಾಣಾಯಾಮ

ರೇಚಕ, ಪೂರಕ, ಕುಂಭಕ ಕಾಲದಲ್ಲಿ ಪ್ರಣವವ್ಯಾಹೃತಿ ಸಹಿತ ಗಾಯತ್ರಿಯನ್ನು ಸಶಿರಸ್ಕವಾಗಿ ಅರ್ಥಾನುಸಂಧಾನ ಪೂರ್ವಕ ೩,೭,೯,೧೨ ಆವರ್ತಿ ಯಥಾಶಕ್ತಿಯಾಗಿ ಜಪ ಮಾಡಬೇಕು. ಇದಕ್ಕೆ ಸಗರ್ಭಪ್ರಾಣಾಯಾಮವೆಂದು ಹೆಸರು.

ಅಗರ್ಭಪ್ರಾಣಾಯಾಮ

ಕೇವಲ ರೇಚಕ ಮಾಡಿ, ಪೂರಕ ಕುಂಭಕಗಳನ್ನು ಮಾಡುವ ಪ್ರಾಣಾಯಾಮಕ್ಕೆ ಅಗರ್ಭ ಪ್ರಾಣಾಯಾಮವೆಂದು ಹೆಸರು.

ಸಗರ್ಭ ಪ್ರಾಣಾಯಾಮವು ಮೋಕ್ಷದಾಯಕವಾಗಿ, ಅಗರ್ಭ ಪ್ರಾಣಾಯಾಮವು ಸ್ವರ್ಗಾದಿ ಕ್ಷಣಿಕ ಸುಖವನ್ನುಂಟುಮಾಡುತ್ತದೆ.

ವಿಶೇಷ ಸೂಚನೆ

ಪ್ರಾಣಾಯಾಮವನ್ನು ಅಭ್ಯಾಸ ಮಾಡುವ ಮೊದಲು ಶ್ವಾಸಕೋಶಗಳ ಬಲಾಬಲಗಳನ್ನು ತಿಳಿಯುವುದು ಅತ್ಯಾವಶ್ಯಕ. ಅಶಕ್ತರು, ರೋಗಿಗಳು, ಶ್ವಾಸಕೋಶಗಳನ್ನು ಸಾಧಾರಣ ಸಾಧನೆಗಳಿಂದ ಬಲಪಡಿಸಿ ಪ್ರಾಣಾಯಾಮ ಮಾಡಬೇಕು. ಬಯಲು ಪ್ರದೇಶ, ನಿರ್ಮಲವಾದ ಗಾಳಿ ಬರುವ ಸ್ಥಳಗಳಲ್ಲಿ ಪ್ರತಿದಿನವೂ ಮಧ್ಯಾಹ್ನ, ಸಾಯಂಕಾಲ, ರಾತ್ರಿಗಳಲ್ಲಿ ನಿಂತು ನಿಂದ ಸಾಕಾದಷ್ಟು ಗಾಳಿಯನ್ನು ಒಳಗೆ ಎಳೆಯಬೇಕು, ನಂತರ ಬೆರಳುಗಳಿಂದ ಮೂಗಿನ ಹೊಳ್ಳೆ ಸಾಧ್ಯವಾದಷ್ಟು ಕಾಲ ಮುಚ್ಚಿ, ಎಡಮೂಗಿನಿಂದ ಗಾಳಿಯನ್ನು ಹೊರಗೆ ಬಿಡಬೇಕು. ಹೀಗೆ ೪-೫ ಸಲ ಮೂವತ್ತು ದಿನಗಳು ಮಾಡಿದಲ್ಲಿ ಶ್ವಾಸಕೋಶಗಳು ಯನ್ನೈದಿ ಪ್ರಾಣಾಯಾಮಕ್ಕೆ ಅರ್ಹವಾಗುತ್ತವೆ.

ನಿಯಮಗಳು

ಪ್ರಾಣಾಯಾಮವನ್ನು ಆಹಾರ ತೆಗೆದುಕೊಂಡ ಕೂಡಲೆ ಮಾಡಬಾರದು.

ಇದಕ್ಕಾಗಿ ಪ್ರತ್ಯೇಕವಾದ ಕೋಣೆಯನ್ನು ಏರ್ಪಡಿಸಬೇಕು.

ಸ್ನಾನವಾದ ನಂತರ ಈ ಕೋಣೆಗೆ ಪ್ರವೇಶಿಸಬೇಕು. ಶುಚಿಯಾದ ದೇಹವೂ ಮತ್ತು ಮನಸ್ಸೂ ಅತ್ಯಾವಶ್ಯಕ. ಕೋಣೆಯಲ್ಲಿ ವಿಶೇಷವಾಗಿ ಹೂವುಗಳನ್ನು ಇಡಬೇಕು, ಸುಗಂಧವಾದ ಊದಬತ್ತಿ ಕರ್ಪೂರಗಳನ್ನು ಹಚ್ಚಬೇಕು. ಜಗಳವಾಡದೆ, ಶಾಂತಮನಸ್ಸಿನಿಂದ ಕೋಣೆಗೆ ಪ್ರವೇಶಿಸಬೇಕು.

ಪರಿಶುದ್ಧವಾದ ಪ್ರದೇಶದಲ್ಲಿ, ದರ್ಭಾಸನವನ್ನು ಮಾಡಿ, ಅದರ ಮೇಲೆ ವ್ಯಾಘ್ರಚರ್ಮ ಅಥವಾ ಕೃಷ್ಣಾಜಿನವನ್ನೂ ಬಿಳುಪು ವಸ್ತ್ರವನ್ನೂ ಹಾಕಿ, ಚಿತ್ರದಲ್ಲಿ ಕಂಡಂತೆ ಬದ್ಧಪದ್ಮಾಸನಸ್ಥನಾಗಿ ಪ್ರಾಣಾಯಾಮ ಮಾಡಬೇಕು. ಮನಸ್ಸಿನಲ್ಲಿ "ಸರ್ವೇಜನಾಃ ಸುಖಿನೋ ಭವಂತು" ಅಂದರೆ ನನ್ನ ಸುಖಕ್ಕಲ್ಲ, ಪ್ರಪಂಚದ ವಿಶ್ವದ ಕಲ್ಯಾಣಕ್ಕಾಗಿ ಪ್ರಾಣಾಯಾಮವನ್ನು ಮಾಡುತ್ತೇವೆಂಬ ಭಾವವಿರಬೇಕು.

ತನ್ಮೂಲಕ ಹೃದಯದಲ್ಲಿರುವ ಅಂತರಾತ್ಮನನ್ನು ತ್ರಿಕರಣ ಶುದ್ಧಿಯಿಂದ ಧ್ಯಾನಿಸಬೇಕು. ಇಂತಹ ಪ್ರಾಣಾಯಾಮ ಮತ್ತು ಭಗವತ್ ಚಿಂತನೆಯಿಂದ ಉಂಟಾಗುವ ಆನಂದವನ್ನು, ಭಗವದನುಗ್ರಹವಿಲ್ಲದೆ ರಸಭರಿತವಾಗಿ ವಿವರಿಸುವುದು ಸಾಧ್ಯವಿಲ್ಲ.

ನಿಯಮಾನುಸಾರವಾಗಿ ಪ್ರಾಣಾಯಾಮವನ್ನು ತ್ರಿಕಾಲ ಸಂಧ್ಯಾವಂದನೆಯ ಸಂಗಡ ಮಾಡತಕ್ಕವರು ಯಾವ ಪಾಪಗಳಿಗೂ ಅವಕಾಶ ಕೊಡದೆ, ತನ್ಮೂಲಕ ಜ್ಞಾನ, ಭಕ್ತಿ, ವೈರಾಗ್ಯ, ಸಂಪತ್ತುಗಳೆಂಬ ಸಾಧನಗಳನ್ನು ಸಂಪಾದಿಸುವುದಲ್ಲದೆ, ಅಪರೋಕ್ಷಜ್ಞಾನವನ್ನು ಹೊಂದುವರೆಂಬ ವಿಷಯದಲ್ಲಿ ಸಂದೇಹವಿಲ್ಲ. ಆಯುರಾರೋಗ್ಯೈಶ್ವರ್ಯಾದಿಗಳು ಕ್ರಮೇಣ ಅಭಿವೃದ್ಧಿಯಾಗಲಿಕ್ಕೆ ಆಸನ, ಪ್ರಾಣಾಯಾಮಗಳಿಗಿಂತಲೂ ಶ್ರೇಯಸ್ಕರವಾದ ಸಾಧನವು ಮತ್ತೊಂದಿಲ್ಲವೆಂದು, ಸಕಲ, ಶ್ರುತಿ, ಸ್ಮೃತಿ, ಪುರಾಣೇತಿಹಾಸಗಳ ಆಧಾರಗಳಿಂದ ಶಪಥಪೂರ್ವಕವಾಗಿ ಮತ್ತೊಂದಾವರ್ತಿ ಘಂಟಾಘೋಷವಾಗಿ ಹೇಳಿ ಈ ನನ್ನ ಲೇಖನವನ್ನು ಇಲ್ಲಿಗೆ ಮುಗಿಸಿ ಶ್ರೀ ಪರಮಾತ್ಮನ ಪಾದಾರವಿಂದಗಳಲ್ಲಿ ಸಮರ್ಪಿಸಿದ್ದೇನೆ.

ಒಂದು ಸಾದೃಶ್ಯ

ವಸುಂಧರಾಖ್ಯಾನ*

ಲೇಖಕರು: ಶ್ರೀ ಎಸ್. ಕೆ.. ಕುಲಕರ್ಣಿ, ಎ. ಎ.

೧ ವಸುಂಧರೆ—ನೋಡಬಂದ ಅನೇಕ ವರರಿಂದ ನಿರಾಶೆ ಹೊಂದಿ, ಸ್ತ್ರೀಸ್ವಾತಂತ್ರ್ಯ ಸೇವಾಸಂಘ ವನ್ನು ಸ್ಥಾಪಿಸಲುದ್ಯುಕ್ತಳಾದ ನಾಯಿಕೆ.

೨ ಗಂಗಾ (ಮಿಸ್ ಗ್ಯಾಂಜಿಸ್)—ಮದುವೆಯಿಲ್ಲದೆ ಕೊರಗುತ್ತಿರುವ ಕುವರಿ.

೩ ಸರಸ್ವತಿ—'ಅತ್ತೆಯ ಕಾಟ ತಪ್ಪಿಸಿಕೊಳ್ಳಲಿಕ್ಕೆ ಜೀವ ಕಳೆದುಕೊಳ್ಳಲುದ್ಯುಕ್ತಳಾದ ಮಾನಿನಿ'

೪ ಅರುಂಧತಿ—ಮದುವೆಯಾಗಿ ದಾಂಪತ್ಯಜೀವನದ ಸುಖವಿಲ್ಲದ ಸುಮಂಗಲೆ.

೫ ಗಿರಿಜಾ—ತಕ್ಕ ಗಂಡನಿಗಾಗಿ ತಪಸ್ಸು ನಡೆಸಿರುವ ತರುಣಿ

೬ ಬಾತ್ಮಿದಾರ

[ದೃಶ್ಯ— ಊರ ಹೊರಗಿನ ಒಂದು ರಮಣೀಯ ನೋಟ. ಜನರ ಸುಳಿದಾಟವಿಲ್ಲದಿದ್ದರೂ ದೂರದಿಂದ ಯಾವುದೋ ಒಂದು ವಾದ್ಯವನ್ನು ಬಾರಿಸುವ ನಾದ ಮಾತ್ರ ಕೇಳಬರುತ್ತಿದೆ. ಆ ನಾದವೇ ನಾರೀ ರೂಪದಲ್ಲಿ ಒಡಮೂಡಿ ನಿಂತಂತೆ ಒಬ್ಬ ಸ್ತ್ರೀ ವ್ಯಕ್ತಿಯು ದೂರದಿಂದ ಕಾಣುತ್ತಿದ್ದಾಳೆ. ಆ ದಿವ್ಯ ನಾದದ ಶೋಕ ರಾಗವೇ ಅವಳ ಕಣ್ಣುಗಳಲ್ಲಿ ಧಾರೆಯಾಗಿ ಹರಿಯುವಂತೆ ಕಣ್ಣೀರು ಹರಿಯುತ್ತಿರುವುದು ಕಾಣಬರುತ್ತಿದೆ. ಅವಳುಟ್ಟ ಹಸಿರು ಸೀರೆಯು ಮೇಲಿಂದ ಧಾನ್ಯದ ಖಣಿಯಾದ ಗಂಧವತಿ ಪೃಥ್ವಿಯೆ ಮಯ್ಯಾಂತು ನಿಂತಿರುವಂತೆ ಕಾಣುತ್ತದೆ. ವಾದ್ಯದ ನಾದ ನಿಂತಮೇಲೆ ಆಕೆಮುಂದೆ ಬರುವಳು. ಹಾ, ಈಗ ತಿಳಿಯಿತು—ಅವಳು ವಸುಂಧರೆ.]

ವಸುಂಧರೆ— ಬಾವಿಯಲ್ಲಿ ಹಾರಬೇಕೆಂದರೆ ಬಾವಿ ತುಂಬ ಸಹ ನೀರಿಲ್ಲ. ....ಕಣ್ಣೊಳಗಿದ್ದಷ್ಟು ನೀರು ಬಾವಿಯಲ್ಲಿಲ್ಲ....ದೇವರೆ, ಹೆಂಗಸರೆಂಬವರನ್ನೆಲ್ಲಾ ಮಲೆನಾಡಿನಲ್ಲಿಯೆ ಯಾಕೆ ಹುಟ್ಟಿಸಲಿಲ್ಲಾ ಅಂತೇನೆ........ಪ್ರಾಣವನ್ನಾದರೂ ಕಳೆದುಕೊಂಡು ಕಷ್ಟವನ್ನು ನೀಗಬೇಕೆಂದರೆ ಅದಕ್ಕೂ ಕೂಡ ಕರುಣೆಯಿಲ್ಲ ಈ ದೇವರಿಗೆ........ ಮಳೆಯಾಗಿ ಕೆರೆಬಾವಿಗಳು ತುಂಬಿದರೆ ಹೆಂಗಸರು ಹಾರಿಕೊಳ್ಳುವರೆಂದು ಮಳೆಯನ್ನೆ ಕೊಡುವದು ಬಿಟ್ಟನೇನೋ ಆ ಕ್ರೂರ ದೇವರು ! ಸತ್ತರು ಸಹ ಸಹನವಿಲ್ಲವಲ್ಲ ಈ ಕಲ್ಲು ದೇವರಿಗೆ....ಇಂಥಾ ದೇವರೇನೊ ಪ್ರಳಯಕಾಲ ತರತಾನಂತೆ !....ದೇವರೆ ಅಂಥಾ ಪ್ರಳಯಕಾಲವನ್ನೊಮ್ಮೆ ತಂದು ಈ ವಸುಂಧರೆಯನ್ನು ಮುಳಗಿಸಿಬಿಡಬಾರದೆ ?.... ಅಂದರಾದರೂ ಕಾಲಹಾದಿಯಂತೆ ಗಂಡಸರ ಕಾಲಿಂದ ತುಳಿಸಿಕೊಳ್ಳುವುದೊಮ್ಮೆ ತಪ್ಪುತ್ತದೆ.......................
(ಖಿನ್ನಳಾಗಿ ಕಣ್ಣೀರೊರೆಸುತ್ತ ನಿಲ್ಲುವಳು.)

ಅರುಂಧತಿ—(ಪ್ರವೇಶಿಸಿ)ಮೇಘರಾಜನು ಪ್ರಳಯವನ್ನು ಮಾಡಿದರೂ ಈ ಕೃಷ್ಣನೊಬ್ಬನು ಅಡ್ಡಬಂದು ಬಟ್ಟನಿಂದ ಬೆಟ್ಟವನ್ನೆತ್ತಿದನಂತೆ........ಹಾಗೆಯೇ ಇಂದಿನ ಸರಕಾರ! ತನ್ನ ಜೀವ ಸಾಕಾಗಿ ತಾನು ಆತ್ಮಹತ್ಯಮಾಡಿಕೊಂಡರೆ ಅದು ಕಾಯದೆಯ ವಿರುದ್ಧವಂತೆ !....ಕಾಯದೆಯ ವಿರುದ್ಧವೆನ್ನುವ ಗಂಡಸರು ಹೆಂಗಸಿನ ಕಷ್ಟವನ್ನು ಕೇಳ... ಮಾತ್ರ ಕಿವಿ ಮುಚ್ಚಿಕೊಳ್ಳುತಾರೆ....ನೀಚರಮ್ಮಾ ನೀ... ಈ ಜಾಲಗಾರರು !........ಧರ್ಮಾರ್ಥ ಸಂಸ್ಥೆಗಳನ್ನೇ... ಸುವ ಈ ಸರಕಾರ ಧರ್ಮಾರ್ಥ ಒಂದು ದೊಡ್ಡ ಕೆರೆ... ಕಡಿಸಬಾರದೆ ಎಂದೂ ಬತ್ತಿಹೋಗದಂಥಾದ್ದು!... ಹೆಂಗಸರು ಬಾವಿಗಳಲ್ಲಿ ಹಾರಿಕೊಳ್ಳುತಾರೆ ಅಂತ ಇದ್ದ ... ಗಳನ್ನು ಮುಚ್ಚಿಸಿ ನಳಗಳನ್ನು ಮಾಡಿದ್ದಾರೆ ಈ ... ದವರು....ಗಂಡಸರ ನೀಚತನದ ಪರಮಾವಧಿಗೆ ಇ... ಹೆಚ್ಚಿನ ಪ್ರಮಾಣ ಬೇಕೆ? ಮತ್ತೆ ಹೆಂಗಸಿಗೆ ... ಯಂತೆ ತಾಳ್ಮೆ ಬೇಕು ಎಂದು ಹೇಳುವವರೂ ಇವರೆ.

ವಸುಂಧರೆ— (ಅರುಂಧತಿಯನ್ನು ನೋಡುತ್ತ) ... ಯಂತೆ ತಾಳ್ಮೆಯೆ ?.... ಅಂತೆಯೆ ಆ ಪೃಥ್ವಿಯ... ಎರಡನೆಯವರ ಬೊಗಸೆಯ ನೀರು ಕುಡಿಯುವಂತಾ...

ಅರುಂಧತಿ—ನೀನಾರು ದೇವಿ ?

ವಸುಂಧರೆ— ದೇವಿಯಲ್ಲ ತಾಯಿ, ನಾನೊ... ದೇಶಿ. ನಾನೇ ಆ ವಸುಂಧರೆ.

---

* ಇದನ್ನು ಮೊದಲುಸಾರೆ ಯಶಸ್ವಿಯಾಗಿ ಅಭಿನಯಿ... ಗಿನ ಸಮಿತಿ ಹಾಯಸ್ಕೂಲಿನ ಕುಮಾರಿಯರಿಗೆ ಅಭಿನಂದ...

ಅರುಧಂತಿ—ವಸುಂಧರೆ! ವಸುಂಧರೆಯು ರಾಜರ ಸಪತ್ನಿಯಾಗುವುದು ಬಿಟ್ಟು ಇಲ್ಲಿಗೇಕೆ ಬಂದಳು ಅಡವಿ ಪಾಲಾಗಿ?

ವಸುಂಧರೆ—ಮತ್ತಾವ ಪಾಲಾಗಬೇಕು? ಪಾಲು ಗಾರಿಕೆಯ ವಸ್ತುವಿನಂತೆ ನನ್ನನ್ನು ರಾಜರು ನಡಿಸಿಕೊಳ್ಳು ವಾಗ ನಾನು ಯಾವ ಅಡವಿಯ ಪಾಲಾಗಲಿ? ನಾನೊಬ್ಬ ಪ್ರಾಣವುಳ್ಳ ಪ್ರಾಣಿಯೆಂಬುದನ್ನು ಸಹ ಮರೆತಿದ್ದಾರೆ... ಸಪತ್ನಿಯಾಗಿಯೂ ಒಬ್ಬ ರಾಜನ ಸೊತ್ತಾಗದೆ ಹಲವು ರಾಜರ ತೊತ್ತಾಗಬೇಕಾಯಿತು ನಾನು.......

ಅರುಂಧತಿ--ಎಂದರೆ?

ವಸುಂಧರೆ— ಎಂದರೇನು, ಮದುವೆಯಾಗದ ವಧು ವಲ್ಲವೆ ನಾನು? ಒಬ್ಬ ವರನಾದರೂ ನನ್ನನ್ನು ಆರಿಸಿಕೊಳ್ಳದೆ ಎಲ್ಲರೂ ನೋಡಿನೋಡಿ, ಚಹದ ಪಟ್ಟಿ ಯನ್ನು ಮಾತ್ರ ನಮ್ಮ ತಂದೆಯ ತಲೆಗೆ ಹಚ್ಚಿ ಹೋದರು.... ... ಮದುವೆಯಾಗದ ಹೆಣ್ಣಿನ ಮನೆ ಯೆಂದರೆ ಧರ್ಮಾರ್ಥ ವಿಶ್ರಾಂತಿ ಗೃಹವೆಂದು ತಿಳಿದಿದ್ದಾರೆ ಈ ನೀಚ ಗಂಡಸರು.

ಅರುಂಧತಿ—ಹಿಂದಿನ ವಸುಂಧರೆಯ ಹಾಡು ಇಂದಿನ ವಧುವಿಗೆ ಒದಗಿತಲ್ಲವೆ? ....ಹೆಣ್ಣೆಂದರೆ ಜನನಿಯಾಗತಕ್ಕವಳಂತೆ!

ವಸುಂಧರೆ—ಅಂತೆಯೆ ಪಡೆದ ಕಷ್ಟವನ್ನೆಲ್ಲ ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು ಅವಳು. ....ಹೊನ್ನ ಹೆದಿಬದೆಯ ಧರ್ಮವನ್ನೋದುವ ಗಂಡಸರು 'ಬರ್ಥ ಕಂಟ್ರೋಲ್'ದಿಂದ, ಪಡೆದ ತಾಯಿ ಪೆಣ್ಣೆಂಬ ಗೌರವವನ್ನು ಪೊಳ್ಳುಗಳೆಯುತ್ತಿದ್ದಾರೆ....ವಧುಗಳ ಗೋಳನ್ನು ಯಾವ ಕಿವಿಯು ಕೇಳಬೇಕೊ!

ಅರುಂಧತಿ— ಮತ್ತೆ ಮದುವೆಯಾದ ಮಾನಿನಿಯರ ಗೋಳನ್ನಾದರೂ ಯಾರು ಕೇಳುವರು?

ವಸುಂಧರೆ— (ಚಕಿತಳಾಗಿ) ಮದುವೆಯಾದ ಮಾನಿನಿಯು! ಆ ಮಾನಿನಿ ನೀನಾರು ತಾಯಿ?


ಅರುಂಧತಿ— ಎಲ್ಲ ವಧುವರರಿಗೂ ಆದರ್ಶವೆಂದು ತೋರಿಸುವ ಅರುಂಧತಿ ನಾನು. ಯಾಕೆ ತೋರಿಸುತ್ತಾರೊ ಪರಸ್ತ್ರೀಯರನ್ನು ಹೀಗೆ ಬೊಟ್ಟುಮಾಡಿ.

ವಸುಂಧರೆ— ಅರುಂಧತಿದೇವಿಯೆ? ಆಕಾಶದಲ್ಲಿ ನಕ್ಷತ್ರವಾಗಿ ಮೆರೆಯುವ ನೀನು ಭೂಲೋಕಕ್ಕೇಕೆ ಬಂದೆ?

ಅರುಂಧತಿ— ಯಾಕೇನು? ಆಕಾಶದ ನಕ್ಷತ್ರಗಳೆಲ್ಲ ಸಿನೇಮಾಸಾಮ್ರಾಜ್ಯವನ್ನು ಸೇರಹತ್ತಿದ ಮೇಲೆ ಅಲ್ಲಿ ಯಾರಿರಬೇಕು ಹಸಿವೆ ನಿದ್ರೆಗಳಿಲ್ಲದೆ.

ವಸುಂಧರೆ—ಏನು ಹಸಿವೆ ನಿದ್ರೆಗಳಿಲ್ಲವೆ?

ಅರುಂಧತಿ— ಅಂತಹಾ ಸ್ವರ್ಗ ಸೌಖ್ಯ! ಅಮೃತದ ಹೊರತು ಒಂದು ಕಪ್ಪು ಚಹಾ ಸಹ ಸಿಗುವಹಾಗಿಲ್ಲ. ಸಂಸಾರವೆಂದರೆ ಸಂಸಾರ; ಸನ್ಯಾಸಿಯು ಕೂಡ! ಪತಿವ್ರತೆಯ ನಿಯಮಗಳಂತೆ! ತಾಯೀ ಆ ನಿಯಮಗಳನ್ನು ನೆನೆದರೆ ಮೈಗೆ ಮುಳ್ಳು ಚುಚ್ಚಿದಂತಾಗುತ್ತದೆ........ ಹೆಜ್ಜೆ ಹೆಜ್ಜೆಗೂ ಹೆಂಗಸು ಗಂಡನ ಗುಲಾಮಳಾಗಿರುವುದೇ ಈ ಪತಿವ್ರತೆಯರ ಧರ್ಮವಂತೆ....ಅವರು ಮಾತ್ರ ಸತಿವ್ರತರಾಗಬಾರದೇನೋ?.... ಗಂಡನ ಊಟವಾದ ಮೇಲೇ ನಾವು ಊಟ ಮಾಡಬೇಕಂತೆ! ....ನಾವೇ ಅಡಿಗೆ ಮಾಡಿ ನಮಗೇ ಬಿಸಿ ಅನ್ನ ಸಿಗಬಾರದೆ? ಅದೂ ಒಂದು ದಿವಸವಾದರೂ?....ತಲೆಬೇನೆಯಾದರೂ ಸಹ ಒಂದು ದಿನವೂ ನಾವು ಮೊದಲು ಮಲಗಬಾರದೆ? ....ಈ ಗಂಡಸರು ಸಿನೇಮಾ ನಾಟಕಗಳಿಗೆ ಹೋದರೂ ಅವರು ಬರುವವರೆಗೆ ನಾವು ಹಾಗೇ ಕಣ್ಣು ತೆರೆದುಕೊಂಡು ಕೂಡಬೇಕಂತೆ, ಬಿಡುಗಣ್ಣರಂತೆ! ಹೇಗಿದೆ ನೋಡಿದೆಯಾ ಗಂಡಸರ ಸ್ವಾರ್ಥ? ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲಿಕ್ಕೇ ನಮಗೆ ಪತಿವ್ರತಾಧರ್ಮವೆಂಬ ಮೋಸದ ಮುಸುಕನ್ನು ಹಾಕೋದು....ಕಲಿತರೆ ನಮಗೆ ತಿಳುವಳಿಕೆ ಬಂದೀತೆಂಬ ಭೀತಿಯಿಂದ ನಾವು ಮನೆಬಿಟ್ಟು ಹೊಸ್ತಲದ ಹೊರಗೆ ಕಾಲಿಕ್ಕಬಾರದೆಂದು ಕಾಯಿದೆ ಮಾಡಿದ್ದಾರೆ ಈ



ಶೋಕರಾಗವೆ ಅವಳ ಕಂಣಲ್ಲಿ............

ಗಂಡಸರು. ಈ ಸನ್ಯಾಸಿಗಳ ಮಂತ್ರ ಹಿಂದೂ ಹೆಂಗಳೆಯರಿಗಷ್ಟೆ ನಾಟಿತೆಂದು . ತೋರುತ್ತದೆ. ಯಾಕೆಂದರೆ ಉಳಿದ ದೇಶಗಳಲ್ಲಿ ಸ್ತ್ರೀಯರು ಸುಧಾರಿಸಿರುವದರಿಂದ ಇವರ ಹಾಗೆ ಮುಗ್ಧರಿರುವದಿಲ್ಲ..... ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕರೂ ಹಿಂದೂ ಹೆಂಗಳೆಯರಿಗೆ ಮಾತ್ರ ಸ್ವರಾಜ್ಯವಿಲ್ಲವಂತೆ, 'ನ ಸ್ತ್ರೀ ಸ್ವಾತಂತ್ರ್ಯ ಮಹರ್ತಿ' ಎಂಬ ಕಲಮಿನ ಪ್ರಕಾರ!....ಯುಗ ಬದಲಾದಂತೆ ಯುವತಿಯೂ ಬದಲಾಗುವರೆಂಬ ತತ್ವ ತಿಳಿದಿಲ್ಲವೆ ಈ ಗಂಡಸರಿಗೆ?

ವಸುಂಧರೆ—ನೀನೀಗ ಬಯಸುವುದಾದರೂ ಏನು?

ಅರುಂಧತಿ— ಬಯಸಿದ್ದೆಲ್ಲ ಜವಣಿಯೆ ಆಗಹತ್ತಿದ ಮೇಲೆ ಬಯಸುವುದೇನಿದೆ? ಬಯಸುವ ಬಯಕೆಯೆಂದರೆ ಸಾವೊಂದೇ ಉಳಿದಿದೆ ಈಗ ಹೆಂಗಸಿಗೆ.

ವಸುಂಧರೆ—ಸಾಯುವುದಕ್ಕೆ ಹಾದಿಯಾದರೂ ಏನಿದೆ? ....ಬಾವಿಯಲ್ಲಿ ಹಾರುವುದಕ್ಕೆ ನೀರಿಲ್ಲ, ಉರ್ಲು ಹಾಕಿಕೊಳ್ಳುವುದಕ್ಕೆ ಹಗ್ಗವಿಲ್ಲ,—ವಿಷಕ್ಕೆ ರೊಕ್ಕವಿಲ್ಲ........ ಪಂಚಿಮೆಗೊಮ್ಮೆ ಹಾಲನೆರೆದರೂ ಕರೆದಾಗ ಕಚ್ಚುವ ಹಾಗಿಲ್ಲ ಈ ನಾಗರಾಜ.......ದೇವರೆ ಸಾಯುವುದಕ್ಕೂ ಸ್ವಾತಂತ್ರ್ಯವಿಲ್ಲದ ಹೆಂಗಸು ಏನು ಸಾಯಬೇಕೆ?

ಗಂಗಾ—(ಪ್ರವೇಶಿಸುತ್ತ) ಹೇಗೆ ಸಾಯಬೇಕು?........ ಒಮ್ಮೆ ಸ್ವರ್ಗಕ್ಕೆ ಹೋಗಿ ಭೂಲೋಕಕ್ಕೆ ಬಂದ ಹೇಡಿ ಹೆಂಗುಸಿಗೆ ಗಂಡಸಿನ ತಲೆಯ ಹೊರತು ಮತ್ತೊಂದು ಮಾರ್ಗವೆಲ್ಲಿದೆ?

ವಸುಂಧರೆ—(ದಿಟ್ಟಿಸಿ ನೋಡಿ) ಮತ್ತಾವ ಅಬಲೆಯು ಅಡವಿಪಾಲಾದಳು?

ಗಂಗಾ— ನಾನೇ ಆ ಗಂಗಾದೇವಿ ....ಗಂಡನನ್ನು ಕಾಣದೆ ಸ್ವರ್ಗಕ್ಕೆ ಸೇರಿದ ನನ್ನನ್ನು ಆ ಭಗೀರಥನು ಭೂಲೋಕಕ್ಕಿಳಿಸಿಬಿಟ್ಟನು........ಶಿವನ ಶಿರವನ್ನು ಬಿಟ್ಟು ಮತ್ತೊಂದು ಮಾರ್ಗವಿಲ್ಲದೆ, ಮದುವೆಯ ಮಾರಿಯಿಲ್ಲದೆ ಕೊರಗುತ್ತಲಿರುವೆ ....ಕಲಿತರಾದರೂ ವರರು ಸಿಗುವರೇನೋ ಎಂದು ಮಿಸ್ ಗ್ಯಾಂಜಿಸ್‌ಳಾಗಿ ಕಲಿಯಲಾರಂಭಿಸಿದೆ. ಆದರೂ ಕಣ್ಣೀರ ಧಾರೆತಪ್ಪಲಿಲ್ಲ.

ಅರುಂಧತಿ—ನಿನ್ನ ಕಣ್ಣೀರ ಧಾರೆಯಿಂದಲೆ ಅಲ್ಲವೆ ಪಾಪಾತ್ಮರು ಪುನೀತರಾಗುವದು?

ಗಂಗಾ—ಅಹುದು. ವರರೇ ಆ ಪಾಪಾತ್ಮರಾಗಿ ನನ್ನ ಕಣ್ಣೀರ ಧಾರೆಯನ್ನು ಹೆಚ್ಚಿಸುತ್ತಿದ್ದಾರೆ ....ಮದುವೆಗಾಗಿ ಕಲಿತೆ; ಆದರೂ ಮದುವೆಯಾಗಲಿಲ್ಲ ....ಕಲಿತ ತಪ್ಪಿಗಾಗಿ ಈಗ ಮದುವೆಯಾಗಲೇ ಬೇಕಾಗಿದೆ....ಮೊದಲಿನ... ಹಾಗೇ ಉಳಿದರೆ ಸ್ತ್ರೀ ಧರ್ಮದಿಂದ ಬಹಿಷ್ಕೃತ... ಬಹುದು ಈಗ.

ವಸುಂಧರೆ—ಹೆಂಗಸರ ಕಷ್ಟ ಹೆಂಗಸರಿಗೇ ಗೊತ್ತು ....ಗಂಡಸರಲ್ಲಿ ಕ್ರಾಂತಿ ಪುರುಷರಾದಂತೆ ಹೆಂಗಸ... ಯಾರು ಹುಟ್ಟಿದ್ದಾರೆ ಇಲ್ಲಿಯ ವರೆಗೆ? 'ಸಂಭವಾಮಿ ಯುಗೇಯುಗೇ' ಎಂದು ಶ್ರೀಕೃಷ್ಣನು ಆಣೆ ಮಾಡಿದ... ರುಕ್ಮಿಣಿ ಯಾಕೆ ಮಾಡಲಿಲ್ಲಾ ಅಂತೀನಿ........ಬೇಕು... ರುಕ್ಮಿಣಿ ಇಂದು ನಾನೇ ಆಗತೀನೆ....(ಅಟೆಗೆ ನೋಡಿ ... ಸಿಂದ) ಎಲ, ಇದೇನು ಮತ್ತಾರೊ ವೀರಕಾಂಕ್ಷಿಣಿ ... ಬರುವಂತೆ ಕಾಣುತ್ತದೆ. (ಅಡ್ಡಗಟ್ಟಿದ ಸೀರೆಯುಟ್ಟು ... ಗಿರಿಜೆಯು ಪ್ರವೇಶಿಸಲು—) ವ್ಯರ್ಥವಾಗಿ ಸೀರೆಯನ್ನ... ಅಡ್ಡಗಟ್ಟಿರುವೆ?

ಗಿರಿಜೆ— ವ್ಯರ್ಥವಾಗಿ ಅಲ್ಲ, ಸ್ವಾರ್ಥ ಸಾಧನ... ಇಂದು ತನ್ನ ಸಾರ್ಥವನ್ನು ತಾನೇ ಸ್ವಾಧಿಸಿಕೊಳ್ಳ... ಗಿದೆ ಸ್ತ್ರೀಯು.

ವಸುಂಧರೆ—ಆ ಶಕ್ತಿ ನಿನ್ನಲ್ಲಿದೆಯೆ?

ಗಿರಿಜೆ— ಶಕ್ತಿಯಿಲ್ಲದಿದ್ದರೆ ಶಕ್ತಿವರ್ಧಕ ಟಾ... ತೆಗೆದುಕೊಳ್ಳುತ್ತೇನೆ. ಹೆಸರಿಗಷ್ಟೆ ಗಿರಿಜೆಯಲ್ಲ ನಾ... ಶಕ್ತಿಯಿಂದಲೂ ಗಿರಿಜೆ; ನನ್ನ ಮನಸ್ಸಿಗೆ ಬಂದ ವರ... ಬಿಟ್ಟು ಬೇರೆಯವರಿಗೆ ಮದುವೆಮಾಡಲು ಸಿದ್ಧರಾಗಿ... ....ಬಿಡಿರಿ, ಬಿಡಿರಿ ನನ್ನನ್ನು. ನಾನು ಅರಣ್ಯಕ್ಕೆ ಹೋ... ತಪಸ್ಸು ಮಾಡುತ್ತೇನೆ....ಬಡವನೇ ಇರಲಿ. ಅವನ... ನಾನು ಮದುವೆಯಾಗತಕ್ಕವಳು.

ಗಂಗಾ—ಏನು, ವರನಾದರೂ ನಿನ್ನನ್ನು ಪಾಸ್ ಮಾ... ರುವನೆ?

ಗಿರಿಜೆ—ವರನು ವಧುವನ್ನು ಪಾಸ್ ಮಾಡಿ... ಹಿರಿಯರು ವರನನ್ನು ಪಾಸ್ ಮಾಡಿಲ್ಲವಂತೆ.

ಗಂಗಾ—ಯಾಕೆ?

ಗಿರಿಜೆ—ಯಾಕೆಂದರೆ ಅವರು ನನ್ನನ್ನು ರೊಕ್ಕ... ಮದುವೆಮಾಡುವವರಿದ್ದಾರಂತೆ ....ಇಂದಿನ ... ಯೆಂದರೆ ಗಂಡಹೆಂಡಿರ ಪ್ರೀತಿಸಂಪಾದನೆಗಾಗಿ ಅಲ್ಲ... ಬ್ಬರ ದ್ರವ್ಯಸಂಪಾದನೆಗಾಗಿ ....ಈ ಕುರುಡು ... ನನಗೆ ಬೇಡವೆಂತಲೇ ಓಡಿಬಂದಿರುವೆ. ಹಿರಿಯರ ... ಲೆಕ್ಕಿಸಧೆ.

ವಸುಂಧರೆ— ಮದುವೆಯಾಗದ ಮೊದಲು ... ತಾಯಿಗಳಿಗೆ ಅಧೀನ—ಮದುವೆಯಾದ ಮೇಲೆ ...

ಕೊಂಡವರ ಸ್ವಾಧೀನ ....ಸಾಕಿದ ಪ್ರಾಣಿಗೆ ಸಾಕುವ ನೊದಲಾದರೂ ಸ್ವಾತಂತ್ರ್ಯವಿರುತ್ತದೆ....ಆದರೆ ಕುಲಕ್ಕೆ ಹೊರತಾದ ಹೆಣ್ಣು ಜಗತ್ತಿಗೆ ಹೊರತಾಗಿದೆ ಇಂದು.

ಸರಸ್ವತಿ—(ಕೈಯಲ್ಲಿ ಹಗ್ಗ ಹಿಡಿದುಕೊಂಡು ಧಾವಿಸುತ್ತ ಬರುವಳು. ಉಳಿದವರನ್ನು ನೋಡಿ) ಅಯ್ಯೋ ಇಲ್ಲಿಯೂ ವಿಘ್ನವೇ ಈ ಸರಸ್ವತಿಗೆ !

ವಸುಂಧರೆ— ಯಾರು ? ಸರಸ್ವತಿಯೆ ? ಲಕ್ಷ್ಮಂ ಬಾಯಿಯ ಸೊಸೆಯಾದ ಸರಸ್ವತೀನೆ ?

ಸರಸ್ವತಿ—ಹೆಂಗಸೆಂಬುವವರೆಲ್ಲ ಲಕ್ಷ್ಮಂಬಾಯಿಯಂತೆ ಕಾಣುತ್ತಿದ್ದಾರೆ ನನಗೆ....(ಸ್ವಗತ) ಉರ್ಲು ಹಾಕಿಕೊಂಡು ಉದ್ಧಾರವಾಗಬೇಕೆಂದರೆ ಹಾಕಿಕೊಳ್ಳುವ ರೀತಿ ಸಹ ಗೊತ್ತಿಲ್ಲ. ಹಡೆದವಳನ್ನೆ ಸಂಭ್ರಮದಿಂದ ಮಾಡಿಕೊಂಡವರು ಸಾಯುವ ಕತೆಯನ್ನಾದರೂ ಕಲಿಸಬಾರದಾಗಿತ್ತೆ—ಒಂದು ತಲೆಯಿಂದಾದರೂ. ಹಗ್ಗ ಹಚ್ಚಿಕೊಂಡು ಸಾಯುವ ಸರಸವನ್ನಾದರೂ ಹೆಂಗಸರಿಗೆ ಹೇಳಬಾರದೆ ಈ ಗಂಡಸರು. ಎಲ್ಲಿಯವರೆಗಮ್ಮಾ ಇವರ ಸ್ವಾರ್ಥ!....(ಹಗ್ಗವನ್ನು ಬಿಸಾಕಿ) ಹಗ್ಗವೇ, ನೀನೆ ಒಂದು ಹಾವಾಗಬಾರದಾಗಿತ್ತೆ ?

ವಸುಂಧರೆ—ಹೇಳು ತಾಯಿ ನಿನ್ನ ಹಾಡನ್ನು.

ಸರಸ್ವತಿ—ಏನು ? ಹಾಡು ಹೇಳಲೆ ? ಕಿವಿಯಿದೆಯೆ ನಿಮಗೆ ? ಹೆಂಗಸಿನ ಹಾಡು ಕೇಳುವ ಕಿವಿಯು ಅಡವಿಯಲ್ಲಾದರೂ ದೊರೆಯಿತೇ ನನಗೆ !........ಬೇಡಿರಿ, ನನ್ನ ಹಾಡು ಕೇಳಬೇಡಿರಿ. ನನ್ನ ಹಾಡು ಕೇಳಿದರೆ ಆ ಗಾಯನದ ವಿಷವು ನಿಮ್ಮ ಕಿವಿಯೊಳಗೆ ಹೋದಿತು....ಹೆಂಗಸು ಹುಟ್ಟಿದರೆ ಒಂದು ಪಾಪ ! ಹೆಂಗಸು ಹೆಂಡತಿಯಾದರೆ ಒಂದು ದೋಷ....ಹೆಂಗಸು ಸೊಸೆಯಾದರೆ ಒಂದು ಸಾವು!

ವಸುಂಧರೆ—ಸಾಯಬೇಡ ಸರಸ್ವತಿ. ಜಗತ್ತೆ ನಿನ್ನಿಂದ ಬೆಳಕಿಗೆ ಬರುವದು.

ಸರಸ್ವತಿ—ನಾನು ಬದುಕಬೇಕಾದರೆ ಚಂಚಲಮನದ ನನ್ನ ಅತ್ತೆಯನ್ನು ಕೆರೆಯಲ್ಲಿ ನೂಕಲೆ ?

ಗಂಗಾ—ಸಮುದ್ರದಲ್ಲಿಯೆ ಹುಟ್ಟಿದ ಅತ್ತೆಗೆ ಕೆರೆಯ ಭೀತಿಯಲ್ಲಿದೆ?

ಸರಸ್ವತಿ—ಹಾಗಾದರೆ ?

ವಸುಂಧರೆ— ಯಾರೂ ಸಾಯಬೇಡಿರಿ. ಲಕ್ಷ್ಮಿ ಎಂದರೆ ಗಾಳಿ, ಸರಸ್ವತಿಯೆಂದರೆ ಬೆಳಕು, ಗಂಗೆಯೆಂದರೆ ನೀರು, ಅರುಂಧತಿಯೆಂದರೆ ತೇಜ, ವಸುಂಧರೆಯೆಂದರೆ ಭೂಮಿ, ಪಾರ್ವತಿಯೆಂದರೆ ಆಕಾಶದ ಶಕ್ತಿ. ಗಂಡಸಿನ ಜೀವನಕ್ಕೆ ನಾವು ಪಂಚಭೂತಗಳಂತೆ ಅಲ್ಲವೆ ?

ಸರಸ್ವತಿ—ಅವೇ ಪಂಚಭೂತಗಳು ಕೂಡಿ ಪಂಚತ್ವಕ್ಕೆ ಹೋಗುವ ಹೊತ್ತು ಬಂದಿದೆಯಲ್ಲ.

ಗಿರಿಜೆ—ಬಂದಿದೆ. ಆದರೆ ಅದನ್ನು ಹೊಡೆದುಹಾಕುವ ಶಕ್ತಿ ನಮ್ಮಲ್ಲಿದೆ.

ವಸುಂಧರೆ—ಕೇಳಿರಿ ಈ ವಸುಂಧರೆಯ ಘೋಷವನ್ನು. ಇವತ್ತಿನ ದಿವಸ ಇಲ್ಲಿಯೆ ಸ್ತ್ರೀಸ್ವಾತಂತ್ರ್ಯ ಸೇವಾಸಂಘವನ್ನು ನಾನು ಸ್ಥಾಪಿಸುತ್ತೇನೆ. ಇದಕ್ಕೆ ನಿಮ್ಮೆಲ್ಲರ ಒಪ್ಪಿಗೆಯೆ ?

ಎಲ್ಲರೂ—ಇದೆ ! ಇದೆ !!

ಸರಸ್ವತಿ— ವಸುಂಧರೆಯೆಂದರೆ ಜಗತ್ತಿಗೇ ಆಧಾರ. ಆದ್ದರಿಂದ ಅವರು ಈ ಸಂಘದ ಅಧ್ಯಕ್ಷರಾಗಿ ತಮ್ಮ ಠರಾವುಗಳನ್ನು ಹೇಳಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಗಂಗಾ—ಇದಕ್ಕೆ ನನ್ನ ಅನುಮೋದನವಿದೆ.

ವಸುಂಧರೆ—ಈ ಸಂಘದ ಮೊದಲನೆಯ ಕರ್ತವ್ಯವೆಂದರೆ ಗಂಡಸರಿಂದಾಗುವ ಹಿಂಸೆಯನ್ನು ಅಹಿಂಸಾವ್ರತದಿಂದ ಖಂಡಿಸುವುದು.

ಅರುಂಧತಿ—ಹಿಯರ್, ಹಿಯರ್ !........ಆದರೆ ಅದು ಹೇಗೆ ಖಂಡನೆಮಾಡುವುದು ?

ವಸುಂಧರೆ—ಹೇಗೆಂದರೇನು ? ಗಂಡಸರಿಗೆ ಮೊದಲು ಒಂದು ನೋಟೀಸು ಕೊಟ್ಟು ಅವರೊಡನೆ ಸಂಪು ಮಾಡುವುದು.

ಗಂಗಾ— ಗಂಡಸರೆಂದರೆ? ಮದುವೆಯಾದವರೋ, ಆಗದವರೋ ?

ವಸುಂಧರೆ— ಮದುವೆಯಾದ ಮುದಿಹಿರಿಯರಿಗೂ, ಮದುವೆಯಾಗದ ಮುದ್ದು ವರರಿಗೂ —ಎಲ್ಲರಿಗೂ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ— ಹೆಣ್ಣೆಂದರೆ ಕಾಲದಾರಿಯಂತೆ ನೀವು ತುಳಿಯುವಿರಿ. ಆದರೆ ಆ ಕಾಲದಾರಿಯಿಲ್ಲದೆ ನಿಮಗೆ ಮಾರ್ಗವಿಲ್ಲ. ಮಣ್ಣಿನ ಕಾಲದಾರಿಯಿಂದಲೆ ಮನೆಯನ್ನು ಕಟ್ಟುವಿರಿ. ಮಣ್ಣಿನ ಕಾಲದಾರಿಯಿಂದಲೆ ಹೊನ್ನು ತೆಗೆಯುವಿರಿ. ಹೆಣ್ಣು ಮಣ್ಣಾದರೂ ಮಣ್ಣಿಲ್ಲದೆ ಬದುಕಿಲ್ಲ. ಹೆಣ್ಣಿನಿಂದಲೆ ಜಗತ್ತಿನ ಏಳ್ಗೆ. ಆದ್ದರಿಂದ ಈ ಹೆಣ್ಣಿಗೆ ಸಮವಾದ ಅಧಿಕಾರವನ್ನು ನೀವು ಕೊಡುವ ವರೆಗೆ ನಾವು ನಿಮ್ಮೊಡನೆ ಸಂಪುಮಾಡುತ್ತೇವೆ —ಅಂತಾ ಬರಕೊಟ್ಟ ನೋಟೀಸು.

ಗಂಗಾ—ಸಮವಾದ ಅಧಿಕಾರವೆಂದರೆ ?

ವಸುಂಧರೆ—ಇದನ್ನು ಅರುಂಧತಿಯವರು ಹೇಳಬೇಕೆಂದು ಬೇಡಿಕೊಳ್ಳುತ್ತೇನೆ.

ಅರುಂಧತಿ— (ಮುಂದೆಬಂದು) ಇಲ್ಲಿಯ ವರೆಗೆ ವಧುಗಳನ್ನು ನೋಡಲು ವರರು ಬಂದಿದ್ದಾರೆ. ಇನ್ನು ಮೇಲಿಂದ ವರರನ್ನು ನೋಡಲಿಕ್ಕೆ ವಧುಗಳೇ ಹೋಗಬೇಕು. ಹೀಗೆ ವರರನ್ನು ನೋಡಲಿಕ್ಕೆ ಹೋಗಿಬರುವ ಗಾಡಿಯ ಖರ್ಚು ಮತ್ತು ಚಹಾದ ಖರ್ಚು ವರರೇ ಪೂರೈಸಬೇಕು—ಯಾಕೆಂದರೆ ಹೆಂಗಸು ದುಡಿಯುವದಿಲ್ಲ. ಆದ್ದರಿಂದ ಅವಳ ಹತ್ತಿರ ರೊಕ್ಕವಿರುವದಿಲ್ಲ.

ಗಂಗಾ—ಮತ್ತೆ ಮದುವೆಯಾಗತಕ್ಕ ಗಂಡಸರಾದರೂ ಏನು ದುಡಿಯತಾರೆ ಈಗಿನ ದಿನದಲ್ಲಿ?

ಗಿರಿಜಾ—ದುಡಿಯದಿದ್ದರೂ ಕೊಡಲಿಕ್ಕೇ ಬೇಕು.

ವಸುಂಧರೆ—ಮತ್ತೇನಾದರೂ ಸೂಚನೆಗಳಿವೆಯೊ?

ಗಂಗಾ—ವಧುಗಳು ಸುಂದರಿಯರಿರದಿದ್ದರೂ ವರರು ಅವರನ್ನು ಮದುವೆಯಾಗಲೇಬೇಕು.

ಗಿರಿಜೆ— ವರದಕ್ಷಿಣೆಯನ್ನು ತೆಗೆದುಕೊಳ್ಳುವವರಿಗೆ ಒಂದು ವರುಷ ಸಶ್ರಮ ಶಿಕ್ಷೆಯಾಗಬೇಕು. ಇಲ್ಲವೆ ವರದಕ್ಷಿಣೆಯಷ್ಟು ದಂಡವಾಗಬೇಕು.

ವಸುಂಧರೆ—ಮತ್ತು ಆ ದಂಡವು ವಧುಗಳಿಗೇ ಸಲ್ಲಬೇಕು.

ಸರಸ್ವತಿ— ಕಲಿಯದಿದ್ದ ಸ್ತ್ರೀಯರನ್ನು ಯಾರೂ ಮದುವೆಯಾಗಬಾರದು.

ಅರುಂಧತಿ— ಸ್ತ್ರೀಯರಿಗೆ ಕೇನ್ ಎಂದೂ ಉಪಯೋಗಿಸಬಾರದು. ಊಟದ ಕಾಲಕ್ಕೆ ಹೆಂಡತಿಗೂ ಒಂದು ಬೇರೆ ತಾಟು ಇರಬೇಕು. ಗಂಡನು ಊರಲ್ಲಿಲ್ಲದಿದ್ದರೂ ಹೆಂಡತಿಯು ಹೆಳಲು ಹಾಕಿಕೊಳ್ಳಬೇಕು.

(ಒಬ್ಬರು ಗಂಡಸರು ಒಂದು ಬದಿಗೆ ಬಂದು ಏನೇನೋ ಬರೆದುಕೊಳ್ಳುತ್ತ.—)

ಗಂಡಸು—ಪ್ರೇಕ್ಷಕರಿಂದ ಇರ್ಮಡಿ ಚಪ್ಪಾಳೆ ಮತ್ತು ಹಿಯರ್, ಹಿಯರ್.

ವಸುಂಧರೆ—(ಬೆರಗಾಗಿ) ಅಮ್ಮಾ! ಇಲ್ಲಿಯೂ ಅಸ್ಪೃಶ್ಯರ ಸುಳಿವೆ?

ಗಂಡಸು—ಆದರೆ ಈ ಸಭೆಯಿಂದ ಲಕ್ಷ್ಮೀದೇವಿಯನ್ನೆ ಹೊರಗೆ ಹಾಕಿದ್ದು ಗೌಣವೆಂದು ಸಂಪಾದಕರ ಪರವಾಗಿ ನಾವು ಅಭಿಪ್ರಾಯಪಡುತ್ತೇವೆ.

ಸರಸ್ವತಿ:—(ದುರುದುರನೆ ನೋಡಿ) ಯಾವ ಅಧಿಕಾರದ ಪುರುಷರು ತಾವು?

ಗಂಡಸು:— ಅಂs.... (ತಲೆತುರಿಸುತ್ತ) ನಾವು ಅಧಿ ಕಾರದ ಪುರುಷರಲ್ಲ, ಬಾತ್ಮೀದಾರರು. ದಯಮಾಡಿ ತಪ್ಪಿ ದೊಂದು ಬ್ಲಾಕು.

ವಸುಂಧರೆ— ಅಡವಿಯಲ್ಲಿಯೂ ಈ ಬಾತ್ಮೀದಾ ಹಾವಳಿ ತಪ್ಪಿಲ್ಲವೆ....ಗಂಡಸರ ಪಿಡುಗಿನಿಂದೊಮ್ಮೆ ಪಾ ಗುವ, ನಡೆಯಿರಿ. (ಎಲ್ಲರೂ ಬೇಗನೆ ಹೋಗುವಾಗ)

ಗಂಡಸು—ಅಯ್ಯೋ ತಡೆಯಿರಿ. ಬ್ಲಾಕಿಗಾಗಿ ಒ ಫೋಟೊ (ಕ್ಯಾಮರಾ ಹಿಡಿದು ಕೊಂಡು ಧಾವಿಸುವಾಗ)

—ಶ

ಬಯಲಾಟ

★

ಆಟ! ಇದು ಬಯಲಾಟ! ಇಗೊ ನಾವು ಹಿಗ್ಗಿನಲಿ
ನಲಿದುಲಿದು ಕೂಗುವಾ ಕುಣಿದಾಟ !! ನೋಡಿಲ್ಲಿ
ಬಣ್ಣಬಣ್ಣದ ಪರದೆ—ಸೊಬಗು ಬೀರುವ ಪಕ್ಕ !
ಕಣ್ಣನುರಿ ಕುಕ್ಕಿಸುವ ಮಿಂಚುದೀಪದ ಬೆಳಕು !
ಕುರುಡುಗೊಳಿಸುವ ಕಾಳಕಗ್ಗತ್ತಲೆಯ ಮೊತ್ತು !
ಮೊರೆದುಲಿವ ಸಂಗೀತ ರಾಗದಾಲಾಪಗಳು !

ಈಯಾಟನೋಡಲಿಕೆ ನೆರೆದು ಕುಳಿತವರೆಷ್ಟು ?
ಕಲ್ಲುಕಲ್ಲಿಗು ಕಣ್ಣು ಹುಲ್ಲುಕಡ್ಡಿಗು ಕಿವಿಯು !
ಮೇಳದಲಿ ಒಂದಿನಿತು ಕೊಂಕಿದರು ನಗೆಗೇಡು.
ಜಾಣಜಾಣರು ನೆರೆದು ಈ ಆಟ ನೋಡುವರು.

ಎಂದು ನಾಂದಿಯೊ ಇದಕೆ—ಏಕೆ ಮೊದಲಾಯಿತೊ ?
ಇಂದೆ ಮುಗಿಯುವುದೆಂದು ಹೇಳಲಹುದೆ ?
ಬಂದ ಪಾತ್ರಗಳೆಲ್ಲ ಕುಣಿದು ಮರೆಯಾಗುತಿವೆ.
ಹಿಂದೆ ಬಹ ಪಾತ್ರಗಳ ಎಣಿಕೆಯಿಲ್ಲ.

ಜೀವನದ ಕಲಹಗಳು, ಸುಖದುಃಖ ರೋಗಗಳು,
ವಿರಹವ್ಯಾಧಿಗಳೆಲ್ಲ, ನೆತ್ತರವನುಕ್ಕಿಸುವ
ಕೊಲೆಸುಲಿಗೆ ಯುದ್ಧಗಳು, ಅನುರಾಗ ಪ್ರೀತಿಗಳು,
ಪ್ರೇಮದಾಲಾಪಗಳು ಮರಣಭಯ ಕ್ರೋಧಾವೇಶ
ಮೊದಲಾಗಿ ಸರ್ವವೂ ನಾಟಕದ ಸನ್ನಿವೇಶ !!

ಎದೆಯೊಲವನುಕ್ಕಿಸುವ ಇನಿಗೊರಲ ಕೂಗುಗಳು!
ಎದೆಗೆಡಿಸಿ ಬಿಕ್ಕಿಸುವ ಗುಡುಗುಗದ್ದರಣೆಗಳು !

ನುಣ್ದನಿಯ ಸರಸ ಸಂಗೀತಗಳು—ಉಲಿವುಗಳು !
ಕೂಸುಗಳ ಕೊಳಲದನಿ ಮುದ್ದುಮುದ್ದಿನ ಮಾಟ !

ನಲಿಯುವೆವು ಒಲ್ಮೆಯಲಿ ಒಮ್ಮೆ ಸತಿಪತಿಯಾಗಿ
ಕೆಲೆಯುವೆವು ಹಿಗ್ಗಿನಲಿ ಒಲಿದ ಸಖಸಖರಾಗಿ
ಕುಣಿದು ಕೂಸುಗಳಂತೆ ತಣಿದು ತರುಣನ ತೆರದಿ
ದಣಿಯುವೆವು ಹೋರಾಡಿ ಸಂಸಾರರಂಗದಲಿ !

ಅರಸುರಾಣಿಯಲೊಮ್ಮೆ ಮೈಮರೆವ ಸುಖದೊಟ್ಟು
ವಿರಸಜೀವನವೊಮ್ಮೆ ಉರಿಗಿಚ್ಚು ಮರೆಯಿಸುವದು !

* * *

ನಲಿವು ಕೆಲೆ ಹರುಷ ಹಿರಿಹಿಗ್ಗುಗಳು ನಮಗೇಕೆ ?
ಕೊಲೆಯ ಭಯ ಕಾಳಗದ ಆವೇಗ ಇವು ಬೇಕೆ ?
ನಾವಾರು ? ಈ ಒಂದು ಇರುಳಾಟದಲಿ ಕುಣಿದು
ನಲಿಯಲಿಕೆ ಬಂದವರು ಬೆಳಗಿನಲಿ ಮೇಳಯಿಸಿ
ರಾತ್ರಿಯಾಟವ ನೆನೆದು ಕೈತಟ್ಟಿ ನಗುವವರು.
ವೇಷದುಡುಗೆಗಳನ್ನು ಕಳೆದಿಟ್ಟು ಕಣ್ತೆರೆದು
ಗುರುತರಿತು ನಾವೆಲ್ಲ ಹಿಗ್ಗಿನಲಿ ಬೆರೆಯುವವರು.
ಈ ಆಟದಲಿ ನಲಿದು ಹಿಗ್ಗಲಿಕೆ ಬಂದವರು.
ನಾಳೆ ನೆನೆನೆನೆದಿದನು ಹಿಗ್ಗಿನಲಿ ಬೆರೆವವರು.
ತೊಟ್ಟ ವೇಷದಲಿನಿತು ಕಲೆಯು ಕಳೆಗೊಳುವಂತೆ
ಮೈಮರೆಯೆ ಹಿಗ್ಗಿನಾವೇಶವದು ಬೇಡವೇನು ?

—ಸಿಂಪಿ ಲಿಂಗಣ್ಣ



ಮಕ್ಕಳಿಗೆ

ಡೋಂಗರೆ

ಇವರ

ಬಾಲಾಮೃತ

ಕೊಡುವುದರಿಂದ

ಶಕ್ತಿಯೂ

ಪುಷ್ಟಿಯೂ

ಉಂಟಾಗುವವಲ್ಲದೆ,

ಆರೋಗ್ಯವೂ

ಬಲಪಡುತ್ತದೆ.

ಡಾ. ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧನಶ್ಯದ ಪುಡಿಯಿಂದ ಪನಸಿ, ಒಂಟೆತಲೆನೋವು, ಮುಂತಾದ ವ್ಯಾಧಿಗಳು ಪರಿಹಾರವಾಗುವವು. ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳು ಅಡಗಿ, ಜ್ಞಾಪಕಶಕ್ತಿ ಬೆಳೆಯುವದು. ಮೂರು ಬಟ್ಟಿನ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರಸಿದರೆ ಎಲ್ಲವೂ ಪರಿಮಳವಾಗುವದು. ಅನೇಕರು ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.



ಬುಡ್ಡಿ ೧ಕ್ಕೆ ರೂ. ೦-೪-೦

ವ್ಹಿ. ಪಿ. ೦-೪-೦ ಡಜನ್ ೧ಕ್ಕೆ ಕ್ರಯ ರೂ. ೨-೦-೦

ವ್ಹಿ. ಪಿ. ಚಾರ್ಜ ೮ ಆಣೆ

ಗುರುಬಸವ ಆ್ಯಂಡ ಕಂಪನಿ, ಲಿಮಿಟೆಡ್,

ಪೋಸ್ಟ ಬಾಕ್ಸ ೮೧೦, ಮದರಾಸು

ನಪುಂಸಕತ್ವವು

ರೋಗವಲ್ಲ; ಕಳೆದ ಜನ್ಮಗಳ ಪಾಪಕರ್ಮಗಳ ಫ[illegible]
ವಾಗಿದೆ. ರೋಗವಾಗಿದ್ದರೆ ಈ ವರೆಗೆ ಹಲವು ವೈದ್ಯ-ಪ[illegible]
ರರ ಔಷಧಗಳು ಗುಣಕಾರಿಯಾಗುತ್ತಿದ್ದವು. ಆದ್ದ[illegible]
ತಮಗೆ ಪೂರ್ಣ ಪುರುಷತ್ವವು ಪ್ರಾಪ್ತವಾಗ[illegible]
ನಾವೊಂದು ದೈವಿಕ ಉಪಾಯ (ತಾಯಿತ) ವನ್ನು [illegible]
ಕೊಡುವೆವು. ಯಾವ ನಿರ್ಬಂಧಗಳನ್ನೂ ಪಾಲಿಸ[illegible]
ಗಿಲ್ಲ. ಬೆಲೆ ಅಂಚೇ ವೆಚ್ಚ ಸಹಿತ ೭॥ ರೂ.[illegible]
ಮುಂಗಡ ಮನಿಯಾರ್ಡರಿನಿಂದ ಕಳಿಸಿರಿ; ಕೂಡಲೆ [illegible]
ಸಿದ್ಧತೆಗೆ ತೊಡಗಿ, ೮ನೆಯ ದಿನ ಇಲ್ಲಿಂದ ರಜಿ[illegible]
ಪಾರ್ಸಲಿನಿಂದ ಕಳಿಸುವೆವು. (ವ್ಹಿ. ಪಿ. ಇಲ್ಲ.) ಈ [illegible]
ತಾವು ಸಾವಿರಾರು ರೂಪಾಯಿ ವೆಚ್ಚ ಮಾಡಿ[illegible]
ಕೊನೆಯ ಈ ದೈವಿಕ ಉಪಾಯವನ್ನು ಮಾಡಿ ನೋ[illegible]
ಒತ್ತಾಯವಿಲ್ಲ. ಜೋತಿಷಕ್ಕೆ ಸಂಭಂಧಿಸಿದ ಎಲ್ಲ [illegible]
ಗಳನ್ನೂ ಮಾಡುವೆವು. ಉತ್ತರಕ್ಕೆ ಅಂಚೇ ಚೀಟಿ [illegible]

Yashavant Jyotish Karyalaya, (J.[illegible]

P. O. Thalakawadi, Dist. Belgaum

ಸ್ತ್ರೀತ್ವದ ತಿರುಳು

(ತಂಗಿಯರಿಗೆ ಒಂದು ಪತ್ರ)

●

ತಂಗೀ! ಇದೀಗ ಸ್ತ್ರೀತ್ವದ ಕಾಲ. ಜಗತ್ತೆಲ್ಲ ದಿಕ್ಕುದಿಕ್ಕಿನಿಂದ ಅಂಜಿಸಿ ಅಣಕಿಸುವ, ಪ್ರಲಯದ ಗರ್ಜನೆಯಿಂದ ಕೆಕ್ಕಾವಿಕ್ಕಿಯಾಗಿದೆ; ದೈನ್ಯದಿಂದ ಏನನ್ನೋ ಹುಡುಕುತ್ತಿದೆ. ಅದಕ್ಕೆ ಶಾಂತಿಯ ಸುಗಂಧ ಬೇಕು; ಸಹಾನುಭೂತಿಯ ಸುಳಿಗಾಳಿ ಬೇಕು; ಪ್ರೇಮದ ಪ್ರಖರವಾದ, ಪ್ರಶಾಂತವಾದ ಬೆಳದಿಂಗಳು ಬೇಕು. ಹೆಂಣು ಅವೆಲ್ಲ ಗುಣಗಳನ್ನು ಅಟ್ಟಿಕೊಂಡಿದೆ; ಆ ಹೆಣ್ತನವು ನಿನ್ನಲ್ಲಿದೆ. ಅಂಥ ಹೆಮ್ಮೆಗೆ ಯೋಗ್ಯವಾದ, ಜಗದುದ್ಧಾರಕವಾದ ಹೆಣ್ತನದಲ್ಲಿ, ಹೆಂಣಾದ ನಿನಗೇ ಹೇಸಿಕೆಯೇ!

●

ತಂಗೀ

ಹಿಂದಿನ ಓಲೆಯಲ್ಲಿ 'ಪ್ರಕೃತಿ'ಯ ವಿಷಯವನ್ನು ತಿಳಿಸಿದೆ. ಆದರಿಂದ ಪ್ರಕೃತಿಯೆಂದರೆ 'ವ್ಯತ್ಯಾಸ ಹೊಂದದ ವಿಶ್ವದ ನಿಯಮುಗಳ ಸಮುದಾಯ'ವೆಂದು ನಿನಗೆ ತಿಳಿದಿರಬಹುದು. ಮತ್ತು "ಹೆಣ್ತನ"ವು ನಿನ್ನ 'ಪ್ರಕೃತಿ' ಯಾದ್ದರಿಂದ, ಅದನ್ನು ಹಳಿದು ಹಳಹಳಿಸುವದಕ್ಕಿಂತ, ಅದರ ಮರ್ಮವನ್ನು ತಿಳಿದು ಅಂದವಾಗಿ ಬಾಳುವದರಲ್ಲೇ ಸೊಬಗಿದೆಯೆಂದೂ, ನಿನಗೆ ಮನಗಂಡಿರಬಹುದು.

ಹೌದು! ಹೆಣ್ತನವೇ ಜಗದ ಜೀವಾಳ; ಅದರ ಪ್ರಕೃತಿಯಲ್ಲಿಯೇ ಜಗದ ಸುಸ್ಥಿತಿ. ವಿಶ್ವದ ಅಣುರೇಣು ಗಳಲ್ಲಿಯೂ ಹೆಣ್ತನವು ತುಂಬಿದೆ. ಅದರ ವರದ ಹಸ್ತವೇ ಜಗದ ಬಾಳುವೆಗೊಂದು ಬೆಡಗನೀಯುವದು. ತನಗಾಗಿ, ತನ್ನವರಿಗಾಗಿ, ಬಾಳಬೇಕು ಎಂಬ ಆಸೆಯೇ ಹೆಣ್ತನದ ಕುರುಹು. ಹಸಿವು ಬೇಸರಿಕೆಗಳಲ್ಲಿ, ಸಾವು ನೋವುಗಳಲ್ಲಿ, ಚಿಂತನ ಬಳಲಿಕೆಗಳಲ್ಲಿ, ಜಗದ 'ಉಳಿವು' ತತ್ತರಿಸುತ್ತಿರು ವಾಗ "ಬಾಳು! ಬಾಳು!!" ಎಂಬ ಹೆಂಣಿನ, ತಾಯಿಗರುಳಿನ ಸಾಂತ್ವನವಾಣಿಯೇ, ಬಾಳುವವರಿಗೆ ದೂರದ ಆಸೆಯ ಒಂದು ಮಿಂಚನ್ನು ಹೊಳೆಯಿಸುವದು. ಕಷ್ಟ ನಿಷ್ಠುರಗಳೆಷ್ಟಿದ್ದರೂ ಬಾಳನ್ನು ಬಿಗಿದಪ್ಪುವದು, ಜೀವಿಗಳ ಪ್ರಕೃತಿ. ಚಳಿ ಮಳೆ ಬಿಸಿಲುಗಳ ಕೆರಳಿದ ಕಡಲಲ್ಲಿ, ಜೀವವು ಸಾವಿ ನೊಡನೆ ಸಂಗರಿಸುವಾಗ, ತಾಳಲೆಂದು ಬಾಳಲೆಂದು ಹೆಣ ಗುವದು ಜೀವಿಗಳ ಪ್ರಕೃತಿ. ಬಾಳು ಬೇಕಾದರೆ ತಾಳ ಬೇಕು; "ತಾಳಿದವರೇ ಬಾಳುವರು." ನಿಟ್ಟು ನಿಟ್ಟಿಗೂ ಅಟ್ಟಿಕೊಂಡು ಬರುವ, ಕುಟ್ಟಿಕೊಂಡು ಬರುವ ವಿಶ್ವ ನಿಯಮುಗಳ ದಟ್ಟಣೆಯಲ್ಲಿ, 'ತಾಳುವೆನು' ಎಂದು ಎದೆ ತಟ್ಟಿಕೊಳ್ಳುವದು ಗಟ್ಟಿಗತನವಲ್ಲವೇ? ಅದಕ್ಕೆ ಎಂಥ ಕಸುವು ಬೇಕು! ಎಂಥ ತಾಳ್ಮೆ ಬೇಕು! ಅಂಥ ಕಸುವು, ತಾಳ್ಮೆಗಳಿಂದ ಕೂಡಿದ, ಸಂಧಾರಣಾತ್ಮಕ, ಯಾವದೋ ಮಾತೃಶಕ್ತಿಯು ಜಗವನ್ನು 'ಬಾಳಿಸು'ವದಾದ್ದರಿಂದಲೇ ನಾವು ಬಾಳುತ್ತಿದ್ದೇವೆ. ತಂಗೀ! ನಾನು ಹೇಳುವ ಹೆಣ್ತನದ ಪ್ರಕೃತಿಯೂ, ಪ್ರಕೃತಿಯ ಜೀವಾಳದ ಹೆಣ್ತನವೂ ಇದೇ. ತಾಯಿಗರುಳು ಆ ಹೆಣ್ತನದ ಕುರುಹು; ತಾಳ್ಮೆಯ ತಿರುಳೂ ಅದರಲ್ಲಿದೆ. ಬಾಳ್ವೆಯ ಬಲವೂ ಅದರಲ್ಲಿದೆ. ಮತ್ತು ವಿಶ್ವಜೀವದಲ್ಲಿ ಅದು ಅನಿವಾರ್ಯವಿದ್ದಂತೆ ವ್ಯಕ್ತಿಯ ಜೀವನದಲ್ಲಿಯೂ ಅದರ ಅಗತ್ಯವಿದೆ. ಅದಿಲ್ಲದೆ ಗಂಡು ಶಕ್ತಿಗಳಾದ ಬುದ್ಧಿ, ಸಾಹಸ, ಕ್ರಾಂತಿಗಳ ಬಿರುಗಾಳಿಯಲ್ಲಿ, ಬಂಡವಲಿಲ್ಲದ ಬೇಸಾಯಿಯಂತೆ, ಬಂದದ್ದೆಲ್ಲ ತಿಂದು, ವಿಶ್ವವು ವಿನಾಶದ ದಾರಿ ಹಿಡಿದೀತು. ಜೀವನವೆಂದರೆ ಸಮತೂಕ (Balance); ಮತ್ತು ಶಾಂತಿ, ಸಹನೆ, ಸಹಾನುಭೂತಿಗಳೇ ಸಮತೂಕಕ್ಕೆ ಆಧಾರ. ಹೆಣ್ತನವು ಅವೆಲ್ಲವುಗಳ ನೆಲೆವನೆಯೆಂದು ಬೇರೆ ಹೇಳಬೇಕೇ!

ಬಾಳಿನ ಬೆಳಕು ಹರಿಯುವ ಮೊದಲು ನಾವೆಲ್ಲಿ ಮಲಗಿದ್ದೆವು? ಸಾರ್ವಭೌಮನ ಹಂಸತಲ್ಪಕ್ಕಿಂತ, ಅಮ್ಮನ ಒಡಲು ಹೆಚ್ಚು ಮಿದುವು. ಅವಳ ರಕ್ತದ ಸಾರವೇ ನಮಗೆ ಕಸುವು ಕೊಡುತ್ತಿದ್ದ ತಿನಿಸು. ಅವಳ ಉಸಿರು ನಮ್ಮ ಉಸಿರು; ಅವಳ ಜೀವ ನಮ್ಮ ಜೀವ. ಅವಳ ಅಳು ನಗುಗಳಿಂದಲೇ ನಮ್ಮ ಸುಖದುಃಖಗಳು. ಅಹಹ! ಎಂಥ ಸಮರಸತೆ! ಎಂಥ ಐಕ್ಯ! ಜಗತ್ತು ಜೀವನದ ತೊಡಕುಗಳಲ್ಲಿ ಕಂಗೆಟ್ಟು, ಕಗ್ಗತ್ತಲಲ್ಲಿ ಮುಗ್ಗರಿಸುವಾಗ ತಮ್ಮ ಸಚ್ಚರಿತ್ರಗಳ ದೀವಟಿಗೆಯಿಂದ ದಾರಿಯಲ್ಲಿ ಬೆಳಕು ಕೆಡಹಿದ, ಭವ್ಯವಿಭೂತಿಗಳನ್ನು, ದಿವ್ಯಸ್ತ್ರೀಯರನ್ನು, ನವ ಮಾಸ ಬಸಿರಲ್ಲಿಟ್ಟುಕೊಂಡು, ಅವರ ನೆಮ್ಮದಿಗಾಗಿ ಅನೇಕ ವ್ರತೋಪವಾಸಗಳಿಂದ ಸೊರಗಿ ಕೊರಗುವ ತಾಯಿಯ ಕರುಳು ಅದೆಷ್ಟು ಪವಿತ್ರ! ಮಗು ಹುಟ್ಟಿ, ಅದು ತನ್ನ ಅಂಗಾಂಗಗಳನ್ನು ತಾನಾಗಿ ಉಪಯೋಗಿಸಲು ಕಲಿಯುವವರೆಗೆ, ಅದರ ಮಲಮೂತ್ರಗಳನ್ನು ಬಳಿದು, 'ಮುಟ್ಟಿದರೆ ಮಾಸೀತು; ಇಟ್ಟರೆ ಕೆಟ್ಟೀತು' ಎಂಬ ಮಮತೆಯಿಂದ ಎದೆಗವಚಿಕೊಂಡ ಹೃದಯವು ಯಾವ ಭಕ್ತಾಗ್ರಣಿಯ -

ಭಕ್ತಿಗೆ ಕಡಿಮೆಯಾಗಿದೆ! ಮಕ್ಕಳಿಗೆ ಕಾಯಿಲೆ, ಕೆಮ್ಮು, ನೆಗಡಿಗಳಾಗಿ ಕಸವಿಸಿಪಡುತ್ತಿರುವಾಗ, ಹಗಲಿರುಳು ಕಂಣು ಮುಚ್ಚದೆ, ಹಸಿವೆ ಬಾಯಾರಿಕೆಗಳನ್ನು ಮರೆತು, ಅವುಗಳಿಗೆ ಮಾಡುವ ಶುಶ್ರೂಷೆಯು ಯಾವ ಶಿಷ್ಯನ ಗುರುಸೇವೆಗೆ ಕಡಿಮೆಯಾಗಿದೆ! ಮಗುವು ತನ್ನ ಮಾಟಾದ ಕೈಕಾಲುಗಳಿಂದ ಏನಾದರೂ ಕೌಶಲ್ಯವನ್ನು ತೋರಿದಾಗ ಇಲ್ಲವೆ ಅದು ತನ್ನಷ್ಟಕ್ಕೆ ತಾನೇ ನಕ್ಕು ಆಡುತ್ತಿರುವಾಗ ಓಡಿ ಬಂದು ಅದಕ್ಕೆ ಮುದ್ದಿಟ್ಟು ಮೈಮರೆತು ಪಡುವ ಆನಂದವು ಯಾವ ಯೋಗಿಯ ಸಮಾಧಿ ಸೌಖ್ಯಕ್ಕೆ ಕಡಿಮೆಯಾಗಿದೆ! ಮಗುವನ್ನು ಯಾರಾದರೂ ಹೊಡೆದರೆ, ಅದು ಎಲ್ಲಿಯಾದರೂ ಬಿದ್ದು ಗಾಯಗೊಂಡರೆ ಇಲ್ಲವೆ ಕತ್ತಲಲ್ಲಿ 'ಗುಮ್ಮ'ನ ಕಂಡು ಬೆದರಿ ಚೀರುತ್ತ ಬಂದು ಅಮ್ಮಾ ಎಂದು ತೆಕ್ಕೆ ಬಿದ್ದಾಗ, ಅದನ್ನು ಬಿಗಿದಪ್ಪಿ, ಜಗದ ಅರಿಷ್ಟವು ಅದಕ್ಕೆ ಬಡೆಯದಿರಲೆಂದು ತನ್ನ ಸೆರಗನ್ನು ಹೊಚ್ಚಿ ಮುಚ್ಚುವಷ್ಟು ವಾತ್ಸಲ್ಯದಿಂದ, ವೇಗದಿಂದ ಯಾವ ದೇವರು ಓಡಿ ಬಂದು ತನ್ನ ಭಕ್ತನನ್ನು ಸಂತೈಸಿದ್ದಾನೆ!

ತಂಗೀ! ಇವೆಲ್ಲ ಹೆಣ್ತನದ ಗುಣಗಳು. ಬಾಳಿನ ಮುಂಜಾವಿನಲ್ಲಿ ಇಂಥ ಸಂರಕ್ಷಕ ಶಕ್ತಿಯಿಲ್ಲದಿದ್ದರೆ, ಜೀವನದ ಬೆಳೆಯು ಹುಳತಿಂದು ಕಳೆಗುಂದಿ, ನಿಟ್ಟುಸಿರ ಬೇಗೆಯಲ್ಲೇ ಉಗಿಯಾಗಿ ಹೋಗಬಹುದು. ತಾಯಿಯು ಹೀಗೆ ಶಾಂತಿ, ಸಹನೆ, ವಾತ್ಸಲ್ಯಗಳಿಂದ ಸಾಕಿ ಬೆಳಿಸಿದ ಮೇಲೆ, ಗಂಡು, ತನ್ನ ಬುದ್ಧಿ, ಸಾಹಸ, ಶೌರ್ಯಗಳನ್ನು ಪ್ರಕಾಶಕ್ಕೆ ತರಬಹುದು. ಆದರೆ ಬುದ್ಧಿ, ಸಾಹಸಗಳಿಗೆ ಪ್ರೇಮದ ಕಡಿವಾಣವಿಲ್ಲದಿದ್ದರೆ ಜೀವನವು ಮರಳಿನ ಗೊಂಡಾರಣ್ಯ; ಕೊಲೆ, ಸುಲಿಗೆ, ಯುದ್ಧಗಳ ಸುಡುಗಾಡಾಗುವದು. ಬುದ್ಧಿ ಎಷ್ಟು ಬೆಳೆದರೇನು? ವಿಜ್ಞಾನವು ಎಷ್ಟು ಬೆಳಗಿದರೇನು? ಚಿಕ್ಕಂದಿನಲ್ಲಿ ಆ ಅಕ್ಕರೆಯ ಸಂಸ್ಕಾರವಿಲ್ಲದ್ದರಿಂದಲೇ ನಿರಾಶೆ, ಅತೃಪ್ತಿ, ದ್ವೇಷ, ಕ್ರೌರ್ಯಗಳು, ಜಗದ ರಣರಂಗದಲ್ಲಿಂದು ಭೂತನಾಟ್ಯವನ್ನು ನಡೆಸಿವೆ.

ಅಬ್ಬಬ್ಬ! ಎಂಥ ಭೀಕರ ನೋಟವಿದು! ಜಾ[illegible] ಧರ್ಮ, ವರ್ಣಾಭಿಮಾನಗಳ ಕಾರ್ಮೋಡಗಳು, ಪ್ರ[illegible] ಚದ ಆಗಸವನ್ನು ಮುತ್ತಿ ಗುಡುಗಾಡುತ್ತಿವೆ. [illegible] ಸಾಮ್ರಾಜ್ಯಗಳ ಉರಿಮಿಂಚು, ಚಕಚಕಿಸಿ, ಕಡುಕಾಳಗ[illegible] ಸಿಡಿಲು, ಖಡಖಡಲೆಂದು ಒಡೆಯುವೆನೆನ್ನುತ್ತಿದೆ. [illegible] ಗರುಳನ್ನು ಕಳೆದುಕೊಂಡ ಗಂಡುಮಿದುಳು ಮಸಣದ [illegible] ಗಳಂತೆ ವಿಕಟಹಾಸ್ಯ ಮಾಡುತ್ತಿದೆ. ಜೀವಿಗಳಿಗೆಲ್ಲ ಸಂ[illegible] ವನವನ್ನೆರೆವ ಜಗನ್ಮಾತೆಯು, ಮೂಢಭಾವನೆ, ಅಜ್ಞಾ[illegible] ಅವರತ್ವ (Inferiority Complex) ಗಳ ಕತ್ತಲ ಕಂ[illegible] ದಲ್ಲಿ ಬಿದ್ದು ನರಳುತ್ತಿದ್ದಾಳೆ. ಇಂಥ ನಿಶಾವೃತ ಸ್ಮಶಾ[illegible] ದಲ್ಲಿಯೂ ಆಗೋ ಒಂದೆರಡು ನಕ್ಷತ್ರಗಳು ಮಿನುಗುತ್ತಿ[illegible] ಭವ್ಯ ಸುಖಜೀವನದ ಶ್ರುತಿಗೂಡಿಸುತ್ತಿವೆ.

ತಂಗೀ! ಇದೀಗ ಸ್ತ್ರೀತ್ವದ ಕಾಲ. ಜಗತ್ತೆಲ್ಲ ದಿಕ್ಕು ದಿಕ್ಕಿನಿಂದ ಅಂಜಿಸಿ ಅಣಕಿಸುವ, ಪ್ರಲಯದ ಗರ್ಜನೆಯ[illegible] ಕಕ್ಕಾವಿಕ್ಕಿಯಾಗಿದೆ; ದೈನ್ಯದಿಂದ ಏನನ್ನೋ ಹುಡು[illegible] ತ್ತಿದೆ. ಅದಕ್ಕೆ ಶಾಂತಿಯ ಸುಗಂಧಬೇಕು; ಸಹಾನುಭೂ[illegible] ಸುಳಿಗಾಳಿ ಬೇಕು; ಪ್ರೇಮದ ಪ್ರಖರವಾದ, ಪ್ರಶಾ[illegible] ವಾದ ಬೆಳದಿಂಗಳು ಬೇಕು. ಹೆಂಣು ಆವೆಲ್ಲ ಗುಣಗಳ[illegible] ಇಟ್ಟುಕೊಂಡಿದೆ; ಆ ಹೆಣ್ತನವು ನಿನ್ನಲ್ಲಿದೆ. [illegible] ಹೆಮ್ಮೆಗೆ ಯೋಗ್ಯವಾದ, ಜಗದುದ್ಧಾರಕವಾದ ಹೆಣ್ತನ[illegible] ಹೆಂಣಾದ ನಿನಗೇ ಹೇಸಿಕೆಯೇ! ಛೇ! ಛೆ! [illegible] ಸೆರಗು ಕಟ್ಟು! ಮನಸ್ಸನ್ನು ಬಿಗಿಮಾಡು! ನಿನ್ನ[illegible] ನೀನು ನೋಡಿಕೋ! ತಿಳಿದುಕೋ! ಹೆಣ್ತನದ ನೈ[illegible] ಮಹತ್ವಗಳನ್ನರಿತು, ಜಗಕ್ಕೆ ಕವಿದ ಕಾರ್ಮೋಡಗಳ[illegible] ಚದರಿಸಿ, ಬಗೆಗೆಟ್ಟು, ಬವಳಿ ಬಂದು ಬಿದ್ದ ಮಾನವ[illegible] ಪ್ರೇಮಸುಧೆಯನ್ನಿಕ್ಕಿ ರಕ್ಷಿಸು. ಹೆಂಣಾದುದಕ್ಕಾಗಿ [illegible] ಪಡು!

ಇತಿ ನಿನ್ನ ಪ್ರೇಮದ [illegible]

ತಾರಾದಾಸ

ಸಣ್ಣ ಕತೆಯೊಂದು

★ "ಪ್ರತಿಫಲ" ★

ಲೇಖಕರು: ಎನ್. ಸೂರಪ್ಪ. ಚಿತ್ರದುರ್ಗ

"ಅಮ್ಮಾ ಇದುವರಿವಿಗೂ ರೋಗಕ್ಕೆ ಪಕ್ಷಪಾತವಿತ್ತು; ಈಗ ಇಲ್ಲ" ಎಂದು ಪುಟ್ಟು ಹೇಳಿದ. ಪದ್ಮಮ್ಮನವರು "ಪುಟ್ಟೊ ಹಾಗಂದ್ರೆ ಏನೋ" ಎಂದರು. ಅದಕ್ಕೆ "ನೋಡಮ್ಮಾ ಹಳ್ಳೀಲಿ ಇರೋ ಎಷ್ಟೋ ಜನಗಳಿಗೆ ಬಂತು. ಪ್ರತಿಯೊಬ್ಬರ ಮನೆಗೂ ಬಂತು. ನಮ್ಮ ಮನೇಗೆ ಬಂದಿರಲಿಲ್ಲ. ಈಗ ನನಗೆ ಬಂದಿರೋದರಿಂದ ಹಾಗೆ ಹೇಳಿದೆ" ಎಂದ. ಪುಟ್ಟುವಿನ ಮಾತುಗಳಿಗೆ ಬೆರಗಾಗಿ ಪದ್ಮಮ್ಮನವರು "ಪುಟ್ಟು, ರೋಗಕ್ಕೆ ಪಕ್ಷಪಾತವೆಲ್ಲಿದೆ, ಎಲ್ಲರಿಗೂ ಬಂದಿತ್ತು. ನಿನಗೂ ಆಗಿದೆ. ಎಲ್ಲರಿಗೂ ಗುಣವಾದ ಹಾಗೆ ನಿನಗೂ ಆಗುತ್ತೆ."

"ಪುಟ್ಟೊ, ಪುಟ್ಟೊ, ಎಲ್ಲಿ ಹೋಗಿದ್ಯೋ, ಹೀಗೆ ಓಡಿಬರ್ತಾಯಿದ್ದೀಯಾ."

"ಎಲ್ಲೂ ಇಲ್ಲಮ್ಮಾ, ಅಪ್ಪನ ಜತೇಲಿ ಸುಬ್ಬರಾಯರ ಮನೆಗೆ ಹೋಗಿದ್ದೆ, ಇಂಜಕ್ಷನ್ ಟ್ಯೂಬನ್ನು ತೆಗೆದುಕೊಂಡು ಬಾ, ಎಂದು ಹೇಳಿ ಕಳುಹಿಸಿದ."

"ಹಾಗೇ ಈ ಪೋಲ್ಟಿಸನ್ನು ಸಿದ್ಧಪ್ಪನ ಮನೆಗೆ ಕೊಟ್ಟು ಹೋಗು. ಪಾಪ ಅವರ ಮನೆಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಯಾರೂ ಇಲ್ಲವಂತೆ."

"ಹಾಗೇ ಆಗ್ಲಿಮ್ಮಾ, ಹೋಗ್ತಾ ದಾರಿಯಲ್ಲೆ ಅವರ ಮನೆಯಿದೆ, ಕೊಟ್ಟು ಹೋಗ್ತೀನಿ" ಎಂದು ಹೇಳಿ ಪುಟ್ಟು ಪೋಲ್ಟಿಸನ್ನೂ, ಇಂಜಕ್ಷನ್ ಟ್ಯೂಬನ್ನು ತೆಗೆದುಕೊಂಡು ಓಡಿದ.

* * *

ಎಲ್ಲರ ಬಾಯಲ್ಲೂ, ಈ ಸಾರಿ ಪ್ಲೇಗು ಅವಾಂತ್ರ ಮಾಡ್ತಾಯಿರೋಷ್ಟು, ನಮ್ಮ ತಾಲ್ಲೂಖಿನಲ್ಲಿ ಯಾವಾಗ್ಲೂ ಮಾಡಿರಲಿಲ್ಲಾ, ಅನ್ನೊ ಮಾತೇ. ನಮ್ಮ ಅಜ್ಜಂದಿರೂ ಕೂಡಾ ಈಗ ೩೦ ವರುಷಗಳಿಂದಲೂ ಹೀಗೆ ಆಗಿರಲಿಲ್ಲಾ ಎಂದು ಹೇಳುತ್ತಾರೆ.

ಮೊದಲು ಹಿರೇಹಳ್ಳಿಯಲ್ಲಿ ಪ್ರಾರಂಭಿಸಿದ್ದು, ಅಲ್ಲಿ ಸತ್ತು ಇಪ್ಪತ್ತು ಜನರನ್ನು ತೆಗೆದುಕೊಂಡು, ಜಾಡ್ಯವು ...ಹಳ್ಳಿಯನ್ನೂ ಹೊಕ್ಕಿತ್ತು. ಹೀಗೆ ತನ್ನ ದಾರಿಯನ್ನು ...ಕುತ್ತಾ, ಕೊನೆಗೆ ನಮ್ಮ ಹಳ್ಳಿಗೂ ಬಂದೇ ಬಂದಿತು. ...ಕಳವಳವನ್ನು ಹೇಳತೀರದು. ನಮ್ಮ ಹಳ್ಳಿಯಲ್ಲಿ ಸುಮಾರು ೫೦೦ ಮನೆಗಳಿವೆ. ಎಲ್ಲರ ಎದೆಯೂ, ಮೊದಲು ಬಿದ್ದ ಇಲಿಯ ವಾರ್ತೆಯನ್ನು ಕೇಳಿ, ನಡುಗಿ ಹೋಯಿತು.

ವೈದ್ಯ ಇಲಾಖೆಯವರು, ಹಳ್ಳಿಯವರಿಗೆ ಆದಷ್ಟು ಸಹಾಯ ಮಾಡಲೇಬೇಕೆಂದು ಡಾಕ್ಟರ್ ಸುಂದರರಾಯರನ್ನು ನಮ್ಮ ಹಳ್ಳಿಗೆ ಕಳುಹಿಸಿದರು.

ಸುಂದರರಾಯರು, ತಮ್ಮ ಜೀವನದಲ್ಲಿ ಮುಖ್ಯ ಗುರಿಯೆಂದರೆ ಪರೋಪಕಾರವೇ, ಎಂಬ ಭಾವನೆಯನ್ನು ಚೆನ್ನಾಗಿ ಅಧ್ಯಯನಮಾಡಿಟ್ಟುಕೊಂಡಿದ್ದರು. ಅವರು ಹೊಸ ಕೆಲಸಕ್ಕೆ ಸ್ವಲ್ಪವೂ ನಿಧಾನಿಸದೆ ತಮ್ಮ ಕುಟುಂಬವನ್ನು ಕರೆದುಕೊಂಡು ಬಂದು, ನಮ್ಮ ಶ್ಯಾನುಭೋಗರ ಮನೆಯಲ್ಲಿ ನಿಂತರು. ಸುಂದರರಾಯರಿಗೆ ಒಬ್ಬನೇ ಮಗ ಪುಟ್ಟು. ಅವರ ಪತ್ನಿಯಾದ ಪದ್ಮಮ್ಮನವರೂ ಸಹಾ ಪತಿಯಂತೆ ಜನಪ್ರೇಮಿಗಳು. ಯಾವ ಪ್ರಾಣಿಯು ಕಷ್ಟದಲ್ಲಿದ್ದರೂ ಅವರ ಮನಸ್ಸು ಮರುಗುತ್ತಿತ್ತು. ತಮ್ಮ ಕೈಲಾದಷ್ಟು ಸಹಾಯಮಾಡದೆ ಅವರೆಂದಿಗೂ ಸುಮ್ಮನಿರುತ್ತಿರಲಿಲ್ಲ. ಸುಂದರರಾಯರು ನಮ್ಮ ಹಳ್ಳಿಗೆ ಬಂದ ಕೂಡಲೆ ಹಗಲೂ ಇರುಳೂ ಎನ್ನದೆ ಜನಗಳಿಗೆಲ್ಲಾ ಇನ್ಯಾಕ್ಯುಲೇಶನ್ ಮಾಡಲು ಪಕ್ರಮಿಸಿದರು. ಕೇವಲ ೩ ದಿವಸಗಳಲ್ಲೇ ೭೦೦-೮೦೦ ಜನರಿಗೆ ಮಾಡಿ ಜಾಡ್ಯಕ್ಕೆ ಪ್ರಥಮ ತಡೆಗಟ್ಟನ್ನು ಹಾಕಿದರು. ಆದರೂ ಜಾಡ್ಯವನ್ನು ಎದುರಿಸುವುದಕ್ಕೆ ಆಗುತ್ತದೆಯೇ ?

* * *

"ಈವತ್ತು ಎಷ್ಟು ಕೇಸೂಂದ್ರೇ?"


"ಹೊಸದಾಗಿ ಹತ್ತು ಜನರಿಗೆ ಆಗಿದೆ. ಆದರೆ ಎಲ್ಲರೂ ಸೌಖ್ಯವಾಗಿದ್ದಾರೆ."

"ಸ್ವಲ್ಪ ಮುತುವರ್ಜಿ ವಹಿಸಿ ಕೆಲಸ ಮಾಡಿದರೆ ಎಲ್ಲಾ ಗುಣವಾಗಬಹುದಲ್ವೆ?"

"ಗುಣವಾಗದೆ ಏನೇ, ಎಲ್ಲವೂ ಸರಿಹೋಗುತ್ತೆ... ಈ ಜನರು ಹಳ್ಳಿಗಾಡಿನವರಾದುದರಿಂದ, ಏನೂ ತಿಳಿಯದು. ಪೋಲ್ಟಿಸನ್ನು ಮಾಡಲು ಸಹಾ ಬರುವುದಿಲ್ಲ. ಸರಿಯಾಗಿ ನಿರ್ಮಲವಾಗಿ ಮನೆಗಳನ್ನು ಇಡಲು ಸಹಾ ತಿಳಿಯದು."

"ಏನ್ಮಾಡೋದೂಂದ್ರೆ, ದೇವರು ಒಬ್ಬೊಬ್ಬರಿಗೆ ಒಂದೊಂದು ತರಹ ಶಕ್ತಿಯನ್ನೂ, ಬುದ್ಧಿಯನ್ನೂ ಕೊಟ್ಟಿದ್ದಾನೆ. ಅವರೆಲ್ಲಾ ಅದನ್ನು ಒಟ್ಟು ಮಾಡಿ, ಪರಸ್ಪರ ಸಹಾಯಮಾಡಿದರೆ, ಯಾವುದಕ್ಕೆ ತಾನೇ ಕುಂದು ಕೊರತೆಯಾಗುತ್ತೆ."

ಎಂದು ಡಾಕ್ಟರು ಮತ್ತು ಪದ್ಮಮ್ಮನವರೂ ಮಾತಾಡುತ್ತಾ ಕುಳಿತಿರುವಾಗ, ಬಾಗಿಲಲ್ಲಿ ಯಾರೋ "ಸ್ವಾಮಿ ಸ್ವಾಮಿ" ಎಂದು ಕೂಗಿದರು. ಪದ್ಮಮ್ಮನವರು ತಕ್ಷಣ ಎದ್ದು ಹೋಗಿ "ಯಾರಪ್ಪಾ" ಎಂದು ಕೇಳಿದರು. ಹೊರಗೆ ನಿಂತಿದ್ದ ಬೋರನು "ಅಮ್ಮಾ, ನಾನು ತೋಟ ಬೋರ. ನನ್ನ ಹೆಂಡ್ತಿಗೆ ಗಡ್ಡೆ ಬಂದಿದೇ ತಾಯಿ. ಸ್ವಾಮಿಯವರಿಗೆ ಹೇಳೋಣಾಂತ ಬಂದೆ. ನನಗೆ ದಿಕ್ಕೇ ತೋಚದಂತೆ ಆಗಿದೆ, ನಮ್ಮ ಗುಡಿಸಲಿಗೆಲ್ಲಾ ನಾವಿಬ್ಬರೇ, ನನ್ನ ಗತಿ ಏನು!" ಎಂದು ದುಃಖಪಟ್ಟ. ಪದ್ಮಮ್ಮನವರು ತುಂಬಾ ಕನಿಕರ ಪಟ್ಟುಕೊಂಡು "ಡಾಕ್ಟರನ್ನು ಈಗ್ಲೇ ಕಳುಹಿಸುತ್ತೇನಪ್ಪಾ. ನೀನೂ ಇಲ್ಲೇ ಇದ್ದು ಕರೆದುಕೊಂಡು ಹೋಗು."



ಎಲ್ಲರಿಗೂ ಗುಣವಾದ ಹಾಗೆ ನಿನಗೂ ಆಗುತ್ತೆ.

ಎಂದು ಹೇಳಿ ಒಳಗೆ ಹೋಗಲು ಉದ್ಯುಕ್ತರಾದರು. ಅಷ್ಟರಲ್ಲಿ ಬೋರನು "ತಾಯಿ, ನಾವು ಹೊರಗಿನ ಜನ, ಸ್ವಾಮಿಗಳು ನಮ್ಮ ಗುಡಿಸಲಿಗೆ ಬರ್ತಾರ್ಯೆ. ಗಡ್ಡೇಗೆ ಏನ್ಮಾಡ್ಬೇಕೊ ಹೇಳಿದ್ರೆ ಹಾಗೆ ಮಾಡ್ತೀನವ್ವಾ ಔಷದಿ ಕೊಟ್ರೆ ನಾನೇ ಹಾಕ್ತೀನಪ್ಪಾ" ಎಂದ. ಪದ್ಮಮ್ಮನವರ ಅಂತಃಕರಣವು ಚಲಿಸಿತು. "ಬೋರಾ, ಹೊರಗಿನವರು ಯಾರು? ಒಳಗಿನವರು ಯಾರು? ರೋಗಕ್ಕೆ ಆ ಭೇದವಿದೆಯೇ? ನೀನೂ ಮನುಷ್ಯನಲ್ಲವೆ? ದೇವರು ನಮ್ಮನ್ನು ಸೃಷ್ಟಿಸಿರೋದು ನಿಮ್ಮಂಥವರಿಗೆ ಸಹಾಯ ಮಾಡುವುದಕ್ಕೆ" ಎಂದು ಒಳಗೆ ಬಂದು ಸುಂದರರಾವ್... ಸಮಾಚಾರವನ್ನು ತಿಳಿಸಿದರು. ಡಾಕ್ಟರರು ಸ್ವಲ್ಪ... ವಿಳಂಬಮಾಡದೆ, ತಮ್ಮ ಕೋಟನ್ನು ಹಾಕಿಕೊಂ... "ಪದ್ದೂ ಸ್ವಲ್ಪ ಬಿಸಿನೀರು ಬೇಕಾಗಬಹುದು. ಅವ... ಮನೆಯಲ್ಲಿ ಇರುತ್ತೋ ಇಲ್ವೋ, ಕಾಸಿ ಕೊಡ್ತೀಯೋ" ಎಂದರು. "ನಾನು ಕಾಸಿ ಕಳುಹಿಸುತ್ತೇನೆ, ನೀವು ಹೋಗಿ ನೋಡೀಂದ್ರೆ, ಹ್ಯಾಗಿದೆಯೋ ಏನೋ" ಎಂ... ಪದ್ಮಮ್ಮನವರು ಸ್ಟೌವ್ ಹಚ್ಚಲು ಒಳಗೆ ಹೋದರು.

* * *

ಡಾಕ್ಟರು ನಮ್ಮ ಹಳ್ಳಿಗೆ ಬಂದ ಮೇಲೆ, ಅವರಿಗೆ ಒಂ... ಕ್ಷಣವಾದರೂ ಪುರಸತ್ತಿರುತ್ತಿರಲಿಲ್ಲ. ರಾತ್ರಿ ಹಗಲು... ಮೇಲೂ ಕೀಳೂ, ಬಡವ... ಬಲ್ಲಿದವರೂ ಎಂಬ ಭೇದ... ವಿಲ್ಲದೆ ಅವರ ಸಂಸಾರ... ಭಯ ಹೊಂದಿದ್ದ ಹಳ್ಳಿಯ... ರಿಗೆ ಸಹಾಯಮಾಡುತ್ತಿ... ಡಾಕ್ಟರು ಹಗಲೆಲ್ಲಾ ನೂರ... ಮನೆಗಳನ್ನು ಸುತ್ತಿ, ... ಯನ್ನು ಕೊಟ್ಟು, ಸ... ಮನೆಗೆ ಬಂದು ಸ್ವಲ್ಪ ... ಸಿಕೊಳ್ಳೋಣವೆಂದರೆ, ... ಲಲ್ಲಿ ಕೂಗು ಇರುತ್ತಿ... ಯಿತ್ತು. ಇಡೀ ಹಳ್ಳಿ... ಏನಾದರೂ ಆಗ ಡಾಕ್ಟ... ಗತಿ. ಯಾವ ಸಣ್ಣ... ವಿಚಾರಕ್ಕೂ ಡಾಕ್ಟರೇ ... ಬೇಕು. ಪ್ಲೇಗು ಆಗ... ಆಗದೇ ಇರಲಿ ಸ್ವಲ್ಪ ... ಮಾನ ಬಂದರೆ ಸಾಕು, ಡಾಕ್ಟರನ್ನು ತಕ್ಷಣ ಬರ... ಕೊಳ್ಳುತ್ತಿದ್ದೆವು. ಅವರ ದೇಹಕ್ಕೆ ಶ್ರಮವಾಗು... ದ್ದರೂ, ಅವರು ಸ್ವಲ್ಪವೂ ಬೇಜಾರುಪಡುತ್ತಿರಲಿಲ್ಲ... ಕಾಲದಲ್ಲಿ ದೇವರು ಕಳುಹಿಸಿದ್ದ ಅನಾಥ ರಕ್ಷಕರೇ ... ಅವರ ಸಂಸಾರವೂ ನಮಗೆಲ್ಲಾ ಆಗಿತ್ತು. ಸ್ವತಃ ... ಎಷ್ಟು ಕಷ್ಟ ಬಿದ್ದು, ನಾಗರಿಕ ಸಂಪರ್ಕವಿಲ್ಲದ... ಕೇವಲ ಮೂಢರಾದ ಜನರಿಗೆ ಸಹಾಯ ಮಾಡುತ್ತಿ... ಅದಕ್ಕಿಂತ ಮಿಗಿಲಾಗಿ ಪದ್ಮಮ್ಮನವರೂ ಮತ್ತು ... ಮಾಡುತ್ತಿದ್ದರು. ಪದ್ಮಮ್ಮನವರಿಗೆ ಊಟ ...

ಸಹಾ ವಿರಾಮವಿರುತ್ತಿರಲಿಲ್ಲ. ಪತಿಯ ಯೋಗಕ್ಷೇಮ ವನ್ನು ವಿಚಾರಿಸಲು ಕೂಡಾ ಆಗುತ್ತಿರಲಿಲ್ಲ.

* * *

"ಅಮ್ಮಾ, ಅಮ್ಮಾ, ನೀ ಕೊಟ್ಟ "ಅಲ್ಯೂಮಿನ್ ವಾಟರ್"ನ್ನು ಅವರ ಮನೆಗೆ ಕೊಟ್ಟು ಬಂದೆ."

"ಸರಿ ಮಗೂ, ಈಗ್ಲೆ ಹೋಗಿ, ಈ ಬಿಸಿನೀರ್ನ ಬೋರನ ಮನೆಗೆ ಕೊಟ್ಟು ಬಾ."

"ಅಮ್ಮಾ, ಬೋರ ಯಾರು, ಅವನ ಮನೆ ಎಲ್ಲಿದೆ?"

"ಊರ ಹೊರಗೆ ಗುಡಿಸಲು ಹಾಕಿಕೊಂಡಿದ್ದಾನಂತೆ. ಅಲ್ಲಿಗೆ ಹೋಗಿ ಯಾರನ್ನಾದರೂ ಕೇಳು "ತೋಟ ಬೋರನ ಗುಡಿಸಲು ಯಾವದೂಂತಾ" ಅಲ್ಲೆ ನಿಮ್ಮಪ್ಪಂದೆ ಅವರೂ ಇದ್ದಾರೆ."

"ಹಾಗಾದ್ರೆ ಸರಿಯಮ್ಮಾ, ಕೊಟ್ಟು ಬರ್‍ತೀನಿ. ನಾನು ಬರೋಷ್ಟರೊಳಗೆ ತಿಂಡಿ ಮಾಡಿರುತ್ತೀಯೇನಮ್ಮಾ?"

"ಆಗ್ಲಿ ಪುಟ್ಟೂ, ಮೊದಲು ಬಿಸಿ ನೀರು ಕೊಟ್ಟು ನೀನೂ ಅವರ ಜತೆಯಲ್ಲೇ ಬಾ."

ಎಂದು ಪದ್ಮಮ್ಮನವರು ಬಿಸಿ ನೀರನ್ನು ಕೊಟ್ಟು ಪುಟ್ಟುವನ್ನು ಕಳುಹಿಸಿದರು.

* * *

ಪದ್ಮಮ್ಮನವರಿಗೆ ಮನೆಯಲ್ಲಿ ಬಿಸಿನೀರು ಕಾಯಿಸೋದು ಅಲ್ಯೂಮಿನ್ ವಾಟರ್ ಮತ್ತು ಪೋಲ್ಟಿಸನ್ನು ಮಾಡುವುದ ರಲ್ಲೇ ಹೊತ್ತು ಹೋಗುತ್ತಿತ್ತು. ನಮ್ಮ ಹಳ್ಳಿಯವರಿಗೆ ಪೋಲ್ಟಿಸನ್ನು ಮಾಡಲು ಸಹಾ ಗೊತ್ತಿರಲಿಲ್ಲ. ಅಲ್ಯುಮಿನ್ ವಾಟರ್ ಅನ್ನೊ ಹೆಸರನ್ನೇ ಕೇಳಿರಲಿಲ್ಲ. ಇವುಗಳೆಲ್ಲಾ ಬಡವರ ರೋಗಿಗಳಿಗೆ ಸ್ವಲ್ಪ ಒಳ್ಳೆಯದೆಂದು ಡಾಕ್ಟರು ಹೇಳುತ್ತಿದ್ದರು. ನಮ್ಮ ಹಳ್ಳಿಯವರ ಮೂಢತೆಗೆ ಮರುಗಿ, ಇವರಿರಾಯರು ತಮ್ಮ ಪತ್ನಿಯ ಕೈಯಿಂದಲೇ, ತಮ್ಮ ಸ್ವಂತ ಖರ್ಚಿನಿಂದ ಮಾಡಿಸುತ್ತಿದ್ದರು.

ನಮ್ಮ ಪುಟ್ಟು. ಅವನಿಗೆ ಕೇವಲ ೧೨ ವರ್ಷಗಳೇ ಆಗಿದ್ದರೂ ತಂದೆ ತಾಯಿಗಳಂತೆ ಮನಸ್ಸುಳ್ಳವನು. ಆ ವಯಸ್ಸಿಗೆ ತಕ್ಕ ಆಟಪಾಟಗಳನ್ನು ಕೂಡ ಬಿಟ್ಟು, ಗೆಳೆಯರೊಂದಿಗೆ ಸೇರದೆ ತನ್ನ ತಿಂಡಿ ಮತ್ತು ಬಟ್ಟೆಗಳ ಕಡೆ ಲಕ್ಷ್ಯವಿಡದೆ, ತಾಯಿತಂದೆಗಳಿಗೆ ನೆರವಾಗುತ್ತಿದ್ದ. ಅವರೇನಾದರು ಏನನ್ನು ಮರೆತಿದ್ದರೂ ಇವನೇ ತೆಗೆದು ಕೊಂಡು ಹೋಗಬೇಕು. ಪದ್ಮಮ್ಮನವರು ಮಾಡಿಕೊಟ್ಟ ಪೋಲ್ಟಿಸು, ಬಿಸಿನೀರು, ಗಂಜಿ ಮುಂತಾದುವುಗಳನ್ನು ಆಯಾ ರೋಗಿಗಳ ಮನೆಗಳಿಗೆ ಕೊಟ್ಟು, ಅವುಗಳನ್ನು ಉಪಯೋಗಿಸುವ ವಿಧಾನವನ್ನು ತಿಳಿಸಬೇಕು. ಇತರರು ಯಾರಾದರೂ ಅವಸರದಿಂದ ಡಾಕ್ಟರನ್ನು ಹುಡುಕಿಕೊಂಡು ಬಂದರೆ, ಡಾಕ್ಟರಿರುವ ಸ್ಥಳಕ್ಕೆ ಓಡಿಹೋಗಿ ಅವರಿಗೆ ಮೊದಲು ಸಮಾಚಾರವನ್ನು ತಿಳಿಸಬೇಕು. ಇವೇ ಮೊದ ಲಾದ ಕೆಲಸಗಳು ಪುಟ್ಟುವಿನ ದಿನಚರಿಯಾಗಿತ್ತು.

* * *

"ಪುಟ್ಟೂ, ಬಿಸಿನೀರು ಕೊಟ್ಯಾ?"

"ಕೊಟ್ಟೇಮ್ಮಾ."

"ಹಾಗಾದ್ರೆ ಅವರೆಲ್ಲಿ ಬರ್‍ಲೇಯಿಲ್ಲಾ?"

"ಅಮ್ಮಾ ಬೋರನ ಮನೇಲಿ ಅವನ ಹೆಂಡತೀನ ಪರೀಕ್ಷಿಸುತ್ತಿರುವಷ್ಟರಲ್ಲಿ, ಯಾರೋ ಇಬ್ಬರು ಬಂದು "ತಕ್ಷಣ ಮನೇಗೆ ಬರಬೇಕು, ಮಗೂಗೆ ಕಾಯಿಲೆ ಜೋರಾ ಗಿದೆ" ಎಂದು ಹೇಳಿದರು. ಅದಕ್ಕೆ ಅಪ್ಪ, "ನೀ ಹೋಗು ಪುಟ್ಟೂ, ನಾನು ಆ ಮೇಲೆ ಬರ್‍ತೀನಿ" ಎಂದು ಹೇಳಿ ಹೊರಟುಹೋದರು."

"ಪುಟ್ಟೂ, ಅವರೂ ಬಂದ ಮೇಲೆ ಊಟ ಮಾಡೋಣ ಅದುವರಿಗೂ ಸ್ವಲ್ಪ ಉಪ್ಪಿಟ್ಟು ತಿಂದು ಇರುತ್ತೀಯಾ",

"ಕೊಡಮ್ಮಾ, ನಾನೂ ಅಪ್ಪನ ಜತೇಲ್ಲೆ ಊಟ ಮಾಡೋಣ ಅಂತ ಹೇಳ್ಬೇಕೂಂತಿದ್ದೆ. ಅಮ್ಮ, ಅಮ್ಮ, ಬೋರನ ಮನೆಯಿಂದ ಬರೋವಾಗ ಹಾಗೆ ಸಿದ್ಧಪ್ಪನ ಮನೆಗೂ, ಪಟೇಲ್ರ ಮನೆಗೂ ಹೋಗಿ ಬಂದೆ."

"ಹೇಗಿದೆ ಪುಟ್ಟು, ಸಿದ್ಧಪ್ಪನಿಗೆ ಮತ್ತು ಪಟೇಲ್ರ ಹೆಂಡ್ತೀಗೆ"

"ಪಟೇಲ್ರ ಹೆಂಡ್ತಿಗೆ, ಗಡ್ಡೆ ಒಡಿತಂತೇ, ಸಿದ್ಧಪ್ಪನಿಗೆ ಇಂಗಿ ಹೋಯಿತಂತೆ, ಗುಣವಾಗ್ತಾಯಿದೆಯಂತೆ"

"ಸಧ್ಯ ದೇವರ ದಯದಿಂದ ರೋಗ ತಗುಲಿರೋವ ರೆಲ್ಲಾ ಗುಣಮುಖರಾದ್ರೆ ಸರಿಯಪ್ಪ."

* * *

ಪುಟ್ಟು ಕೇವಲ ಬಾಲಕನಾಗಿದ್ದರೂ ಅವನ ತಾಯಿ ತಂದೆಗಳು ಅವನನ್ನು ನೀರು, ಪೋಲ್ಟಿಸು ಮುಂತಾದು ವನ್ನು ಕೊಡುವುದಕ್ಕೆ ರೋಗಿಗಳ ಮನೆಗಳಿಗೆ ಕಳುಹಿಸು ತ್ತಿದ್ದರು. ಒಬ್ಬನೇ ಮಗನಲ್ಲಾ, ರೋಗಿಗಳ ಮನೆಗಳಿಗೆ ಹೋದರೆ ಅಂಟು ಜಾಡ್ಯವು ಎಲ್ಲಿ ತಲೆದೋರುತ್ತೋ ಎಂಬ ಭಯವು ಅವರಿಗೆ ಲೇಶಮಾತ್ರವೂ ಇರಲಿಲ್ಲ. ಅವರ ಧ್ಯೇಯವೆಲ್ಲ ಪರೋಪಕಾರ. ಪರೋಪಕಾರವೆಂದರೆ ತಮ್ಮ ಜೀವಗಳನ್ನು ಕೊಡಲೂ ಸಿದ್ಧರಾಗಿದ್ದರು.

ಸುಂದರರಾಯರು ರೋಗಿಗಳನ್ನು ನೋಡಲು ಹೊರಗೆ ಹೋದ ಕೂಡಲೇ ನಮ್ಮ ಹಳ್ಳಿಯ ಹೆಂಗಸರು ಗು-ಪು ಗುಂಪಾಗಿ, ಅವರ ಮನೆಗೆ ಹೋಗಿ ಪದ್ಮಮ್ಮನವರೊಂದಿಗೆ, ಅವರ ಮನಸ್ಸಿನ ತವಕಗಳನ್ನೂ ಜಾಡ್ಯದಿಂದಾಗಿರುವ ಭಯವನ್ನೂ ಹೇಳಿಕೊಳ್ಳುತ್ತಿದ್ದರು. ಪದ್ಮಮ್ಮನವರು, ಇವರು ಹಳ್ಳಿಯ ಕೊಳಕು ಹೆಂಗಸರು, ನಾಗರಿಕತೆಯಿಲ್ಲದವರು ಎಂಬ ಅಹಂಭಾವವಿಲ್ಲದೆ, ಬಂದವರನ್ನೆಲ್ಲಾ ಮನೆಯಲ್ಲಿ ಕೂಡಿಸಿಕೊಂಡು, ಅವರಿಗೆ, ರೋಗಿಗಳನ್ನು ಶುಶ್ರೂಷೆಯಿಂದ ಕಾಪಾಡುವುದು ಹೇಗೆ? ಮನೆಗಳನ್ನು ಹೇಗೆ ಶುಚಿಯಾಗಿಟ್ಟಿರಬೇಕು? ಔಷಧೋಪಚಾರಗಳನ್ನು ಹೇಗೆ ಮಾಡಬೇಕು? ಯಾವ ರೀತಿ ಅಧೈರ್ಯಪಡದೆ ತಮ್ಮ ಕೆಲಸಗಳನ್ನು ಒಮ್ಮನಸ್ಸಿನಿಂದ ಮಾಡಿದರೆ ದೇವರ ಅನುಗ್ರಹದಿಂದ ರೋಗವು ವಾಸಿಯಾಗುತ್ತೆ, ಎಂಬ ಅನೇಕ ಬುದ್ಧಿವಾದಗಳನ್ನು ಮನಸ್ಸಿಗೆ ಬೇಸರವಿಲ್ಲದೆ ಹೇಳುತ್ತಿದ್ದರು. ಹೆಚ್ಚೇನು, ಆ ಸ್ಥಿತಿಯಲ್ಲಿ ನಮ್ಮ ಹಳ್ಳಿಗೆ ಸುಂದರರಾಯರು ತಂದೆಯಂತೆಯೂ, ಪದ್ಮಮ್ಮನವರು ತಾಯಿಯಂತೆಯೂ, ಪುಟ್ಟುವು ಆಕಸ್ಮಿಕ ಕಾಲದಲ್ಲಿ, ಅನಿರೀಕ್ಷಿತವಾಗಿ, ಅಪೇಕ್ಷಿಸದೆಯೇ ಬಂದು ಒದಗುವ ದೈವ ಸಹಾಯದಂತೆಯೂ ಇದ್ದರು.

* * *

"ಈವತ್ತು ಎಷ್ಟು ಜನಕ್ಕೆ ತಗುಲಿದೇಂದ್ರೆ ?"

"ಐದು ಜನಕ್ಕೆ ಆಗಿದೆ."

"ಮೊದಲು ತಗುಲಿದ್ದವರಿಗೆಲ್ಲಾ, ಗುಣಮುಖವಾಗುತ್ತಿದೆಯೇ ?"

"ಎಲ್ಲರೂ ಗುಣಮುಖರಾಗುತ್ತಿದ್ದಾರೆ, ಆದರೆ ಕೃಷ್ಣರಾಯರ ಮಗಳಿಗೆ ಮಾತ್ರ ಯಥಾಪ್ರಕಾರವಿದೆ."

"ಎಲ್ಲಾ ಸರಿಹೋಗುತ್ತೆ ಕಣೇ, ಆ ಹುಡಗೀಗೂ ವಾಸಿಯಾಗಬಹುದು ಸ್ವಲ್ಪ ಸರಿಯಾಗಿ ನೋಡಿಕೊಂಡ್ರೆ."

"ಇಲ್ಲಿವರಿವಿಗೂ ಈ ಉರ್‍ನಲ್ಲಿ ಎಷ್ಟು ಜನಕ್ಕೆ ತಗುಲಿದ ಹಾಗಾಯ್ತು ?"

"ಎಲ್ಲಾ ಒಟ್ಟು ೩೦ ಕೇಸಾಗಿತ್ತು. ಆದರ ಪೈಕಿ ೨೦ ಜನರಿಗೆ ಸರಿಯಾಗಿ ಗುಣವಾಗಿದೆ, ಉಳಿದವರಿಗೆ ಇನ್ನೂ ಸರಿಯಾಗಿ ವಾಸಿಯಾಗಿಲ್ಲ."

"ನಾವು ದೇವರ ಮೇಲೆ ಭಾರಹಾಕಿ ಔಷಧಿ ಕೊಟ್ರೆ, ಈ ಊರ್‍ನಲ್ಲಿ ಒಂದು ಕೇಸೂ ಖಾಲಿಯಾಗದೆ ಎಲ್ಲಾ ವಾಸಿಯಾಗುತ್ತೆಂದು ನನಗೆ ತೋರ್‍ತಾಯಿದೇಂದ್ರೆ !"

"ಹೌದು ಪದ್ದೂ, ಅದಕ್ಕೇ ನಾನೂ ನನ್ನ ಕೈಲಾ[illegible] ಮಟ್ಟಿಗೂ ಸಹಾಯಮಾಡ್ತಾಯಿರೋದು."

* * *

ಈ ದಿವಸ ಆಸ್ಪತ್ರೆಯಲ್ಲಿ ಬಿಡುವೇ ಇಲ್ಲದಷ್ಟು ಜ[illegible] ತುಂಬಿದ್ದಾರೆ. ಡಾಕ್ಟರು ಎಷ್ಟು ಶ್ರಮವಾದರೂ ಬೇ[illegible] ಗೊಳ್ಳದೆ ಎಲ್ಲರನ್ನೂ ನಿಧಾನವಾಗಿ ವಿಚಾರಿಸಿ ಔಷಧಿಯನ್ನು ಕೊಟ್ಟು ಕಳುಹಿಸುತ್ತಿದ್ದರು. ಈ ಪೈಕಿ ಮೊ[illegible] ಪ್ಲೇಗು ತಗುಲಿ ಗಡ್ಡೆ ಒಡೆದು, ವಾಸಿಯಾಗಿ ತಿರು[illegible] ಶಕ್ತಿ ಬಂದಿದ್ದಂಥಾ ಕೆಲವರು ಸಹಾ ಆಸ್ಪತ್ರೆಗೆ [illegible] ತಮ್ಮ ವಂದನೆಗಳನ್ನು ಸುಂದರರಾಯರಿಗೆ ಸಲ್ಲಿಸಿ, ಮು[illegible] ಆಹಾರ ಪಾನೀಯಗಳಲ್ಲಿ ಯಾವ ರೀತಿ ಪಥ್ಯವಿರಬೇಕೆ[illegible] ಕೇಳಿಕೊಂಡು ಹೋಗುತ್ತಿದ್ದರು. ತಂಡೋಪತಂಡ[illegible] ಬರುತ್ತಿದ್ದ ಜನರನ್ನು ಸಂತೈಸಿ ಕಳುಹಿಸುವದರಲ್ಲಿ ಡಾಕ್ಟ[illegible] ಊಟಕ್ಕೆ ಹೋಗಲೂ ಪುರಸತ್ತಿರಲಿಲ್ಲ. ಮನೆಯಲ್ಲಿ ಪ[illegible] ಮ್ಮನವರು ಒಂದು ಘಂಟೆಯವರಿವಿಗೆ ಎದುರು ನೋ[illegible] ಇನ್ನೂ ಬರುವ ಸುಳಿವನ್ನು ಕಾಣದೆ, ಪುಟ್ಟುವನ್ನು ಕ[illegible] ದರು. ಪುಟ್ಟುವು ಯಾರ ಮನೆಗೋ ಔಷಧವನ್ನು ಕೊ[illegible] ಕೊಂಡು ಹೋಗಿದ್ದವನು, ಉರಿಬಿಸಲಿಗೆ ಬೇಸತ್ತು, ಮು[illegible] ಮೇಲೆ ಬರುತ್ತಿದ್ದ ಬೆವರನ್ನು ತನ್ನ ಪರ್ಟಿನಿಂದ [illegible] ಕೊಳ್ಳುತ್ತಾ ಓಡಿಬಂದ. ಪುಟ್ಟುವು ಬಂದುದನ್ನು ನೋ[illegible] ಪದ್ಮಮ್ಮನವರು, ಅವನನ್ನು ಮುದ್ದಿಸಿ ತಂದೆಯವ[illegible] ಊಟಕ್ಕೆ ಕರೆದುಕೊಂಡು ಬರುವಂತೆ ಹೇಳಿದರು. ಪು[illegible] ತಕ್ಷಣವೇ ಆಸ್ಪತ್ರೆಯ ಕಡೆಗೆ ಓಡಿದ. ಆಸ್ಪತ್ರೆ[illegible] ಜನರು ಇನ್ನೂ ತುಂಬಿದ್ದರು. ಕೆಲವರು ಡಾಕ್ಟರನ್ನು ಮ[illegible] ಕರೆದುಕೊಂಡು ಹೋಗಿ ರೋಗಿಗಳನ್ನು ತೋರಿಸಬೇಕೆ[illegible] ಅಲ್ಲಿಯೇ ಕುಳಿತಿದ್ದರು. ಪುಟ್ಟು ಬಂದು ಊಟಕ್ಕೆ [illegible] ವಂತೆ ಹೇಳಿದ. ಸುಂದರರಾಯರು ಪುರಸತ್ತಿಲ್ಲವಾದ[illegible] ಬರುವುದಕ್ಕಾಗುವುದಿಲ್ಲವೆಂದೂ, ಮತ್ತು ಪುಟ್ಟೂ, ಪ[illegible] ನವರು ಊಟಮಾಡಬೇಕೆಂದೂ ಹೇಳಿದರು. [illegible] ಸ್ಥಿತಿಯನ್ನರಿತ ಪುಟ್ಟುವು "ಅಪ್ಪ, ನಾನು ಸ್ವಲ್ಪ [illegible] "ಟಿಫಿನ್ ಕ್ಯಾರಿಯರಿ"ನಲ್ಲಿ [illegible] ಸಾರನ್ನು ಇಲ್ಲಿಗೇ ತ[illegible] ನೀನು ಇಲ್ಲೇ ಊಟಮಾಡಿ ಆ ಮೇಲೆ ಕೇಸುಗ[illegible] ನೋಡು" ಎಂದು ಹೇಳಿ ಮನೆಯ ಕಡೆಗೆ ಓಡಿದ.

ಬಾಗಿಲಲ್ಲೇ ಪದ್ಮಮ್ಮನವರು ಡಾಕ್ಟರ ಮತ್ತು [illegible] ಬರುವಿಕೆಯನ್ನೇ ಎದುರು ನೋಡುತ್ತಿದ್ದರು. [illegible] ಒಬ್ಬನೇ ಬಂದುದನ್ನು ನೋಡಿ "ಅವರೆಲ್ಲಿ [illegible] ಕೇಳಿದರು. ಅದಕ್ಕೆ ಪುಟ್ಟು ಅನ್ನ ಸಾರನ್ನು

ಸ್ಟಾರಿಯರಿ"ನಲ್ಲಿ ಹಾಕಿಕೊಡುವಂತೆ ಹೇಳಿದ. ಆದರಂತೆ, ಅಲ್ಲಿಯ ವಿಚಾರಗಳನ್ನರಿತುಕೊಂಡ ಪದ್ಮಮ್ಮನವರು ಹಾಗೇ ಮಾಡಿದ್ದರು. ಪುಟ್ಟು ಅದನ್ನು ತೆಗೆದುಕೊಂಡು ಹೋಗಿ ತಂದೆಗೆ ಕೊಟ್ಟು ಮನೆಗೆ ಹಿಂತಿರುಗಿದ.

ಕೆಲವು ದಿವಸಗಳು ಅವಿಶ್ರಾಂತಿಯಿಂದ ಕೆಲಸಮಾಡಿದ ಮೇಲೆ ಹಳ್ಳಿಯ ಕೇಸುಗಳೆಲ್ಲಾ ತಹಬಂದಿಗೆ ಬಂದವು. ಒಂದು ಪ್ರಾಣವೂ ನಷ್ಟವಾಗದಂತೆ ಎಲ್ಲರೂ ಗುಣಮುಖರಾಗುತ್ತಾ ಬಂದರು. ಒಟ್ಟು ೪೫ ಜನರಿಗೆ ಪ್ಲೇಗು ತಗಲಿ, ಕೆಲವರಿಗೆ ಗಡ್ಡೆ ಒಡೆದು ಉಳಿದವರಿಗೆ ಔಷಧಿಯ ಬಲದಿಂದ ಇಂಗಿ ಹೋಗಿ, ಎಲ್ಲರೂ ಎದ್ದು ತಾರಾಡುವಂತೆ ಆಗಿದ್ದರು. ಇನ್ನು ಅವರವರೇ ಶುಶ್ರೂಷೆ ಮಾಡಿಕೊಂಡರೂ ಭಯವಿಲ್ಲ ಎಂಬ ಸ್ಥಿತಿಗೆ ಬಂದಿತ್ತು. ಸುಂದರರಾಯರಿಗೂ ಸ್ವಲ್ಪ ವಿಶ್ರಾಂತಿ ದೊರಕಿದಂತೆ ಆಯಿತು. ಆದರೂ ಆಸ್ಪತ್ರೆಯಲ್ಲಿ ಜನಗಳು ತುಂಬಿರುತ್ತಲೇ ಇದ್ದರು. ಪುಟ್ಟುವೇ ಅವರಿಗೆ ಎರಡು ಮೂರು ದಿವಸಗಳು ಊಟವನ್ನು ತೆಗೆದುಕೊಂಡು ಹೋಗಿ ಕೊಟ್ಟ.


ಹೀಗೆ ಕೇವಲ ಬಾಲಕನಾದ ಪುಟ್ಟುವು ಒಂದೇ ಸಮನಾಗಿ ಸುಮಾರು ಒಂದು ತಿಂಗಳವರಿವಿಗೆ ಶ್ರಮಪಟ್ಟುದರಿಂದ ಸ್ವಲ್ಪ ಆಲಸ್ಯವಾದಂತೆ ಆಯಿತು. ಎರಡು ಮೂರು ದಿವಸಗಳು ಮನೆಯಲ್ಲಿ ಹೇಳದೆ ತನ್ನ ಕೆಲಸಗಳನ್ನು ಮಾಡುತ್ತಲೇ ಇದ್ದ. ಕೊನೆಗೆ ಒಂದು ದಿನ ರಾತ್ರಿ ಪುಟ್ಟುವು ಮಲಗಿಕೊಂಡಿದ್ದಾಗ, ಪದ್ಮಮ್ಮನವರು ಎದ್ದು, ಅಸ್ತವ್ಯಸ್ತವಾಗಿದ್ದ ಅವನ ಹೊದ್ದಿಕೆಯನ್ನು ಸರಿಮಾಡಲು ಹೋದರು. ಆಕಸ್ಮಾತ್ತಾಗಿ ಅವನ ಹಣೆಯ ಮೇಲೆ ಪದ್ಮಮ್ಮನವರ ಕೈ ಸೋಕಿತು. ಹಣೆಯು ಅತ್ಯಂತ ಬಿಸಿಯಾಗಿತ್ತು. ಪದ್ಮಮ್ಮನವರು ಹಾಗೆಯೇ ಮೈಯೆಲ್ಲಾ ಮುಟ್ಟಿ ನೋಡಿದರು. ದೇಹಾದ್ಯಂತವೂ ಬಿಸಿಯಾಗಿತ್ತು. ಮಾರನೆಯ ದಿವಸವೂ ಪುಟ್ಟು ತನ್ನ ಕೆಲಸದಲ್ಲೇ ಮಗ್ನನಾಗಿದ್ದ. ಬೆಳಿಗ್ಗೆ ಕಾಫಿ ಕುಡಿಯುತ್ತಿದ್ದಾಗ ಪದ್ಮಮ್ಮನವರು ಡಾಕ್ಟರರಿಗೆ ಪುಟ್ಟುವಿನ ವಿಚಾರವನ್ನು ಹೇಳಿದರು. ಸುಂದರರಾಯರು ಆಲಸ್ಯದಿಂದುಂಟಾಗಿರಬಹುದೆಂದೂ, ಒಂದೆರಡು ದಿನಗಳಲ್ಲಿ ಸರಿ ಹೋಗುವುದೆಂದೂ, ಸಮಾಧಾನಮಾಡಿದರು.

ನಾಲ್ಕೈದು ದಿನಗಳು ಕಳೆದ ಮೇಲೆ ಪುಟ್ಟುವು ಹಾಸಿಗೆ ಹಿಡಿದು ಮಲಗಲೇಬೇಕಾಯ್ತು. ಡಾಕ್ಟರು, ಇತರ ಯಾವ ಕೆಲಸಗಳೂ ಹೆಚ್ಚಾಗಿ ಇಲ್ಲದುದರಿಂದ, ಮಗನನ್ನು ಶುಶ್ರೂಷೆ ಮಾಡಲು ತೊಡಗಿದರು. ಮೊದಲು ಮೊದಲು ಕೇವಲ ಜ್ವರದ ಸೂಚನೆಗಳು ಮಾತ್ರ ಇದ್ದವು. ಕೊನೆಗೆ ಗಡ್ಡೆ ಬರುವ ಚಿಹ್ನೆಯೂ ಕಂಡು ಬಂದಿತು. ಪದ್ಮಮ್ಮನವರಿಗೆ ದಿಕ್ಕೇ ತೋಚದಂತೆ ಆಯಿತು. ಆದರೂ ಪತಿಯ ಸಮಾಧಾನದಿಂದ ಧೈರ್ಯಹೊಂದಿ ಒಂದೇ ಸಮನಾಗಿ ಮಗನನ್ನು ಉಪಚರಿಸುತ್ತಿದ್ದರು. ಡಾಕ್ಟರು ಮನೆಗೆ ಬಂದಾಗಲೆಲ್ಲಾ ಪದ್ಮಮ್ಮನವರು ಮಗನ ಸ್ಥಿತಿಯು ಹೇಗಿದೆಯೆಂದು ಆತುರತೆಯಿಂದ ಕೇಳುತ್ತಲೇ ಇದ್ದರು. ಸುಂದರರಾಯರು ಗುಣವಾಗುವ ಸೂಚನೆಗಳನ್ನು ಕಂಡು ಧೈರ್ಯ ಹೊಂದಿದ್ದರು. ಪದ್ಮಮ್ಮನವರಿಗೆ ಮನಸ್ಸಿನಲ್ಲಿ ಒಂದು ಬಗೆಯ ಸಮಾಧಾನವಿತ್ತು. ಹಳ್ಳಿಯಲ್ಲಿ ನೂರಾರು ಕೇಸುಗಳಾಗಿದ್ದರೂ ದೇವರು ಒಂದನ್ನೂ ಖಾಲಿ ಮಾಡದೆ ಗುಣಮಾಡಿರುವಾಗ ತಮ್ಮ ಪುಟ್ಟುವನ್ನು ಖಂಡಿತವಾಗಿಯೂ ಗುಣಮಾಡುವನೆಂಬ ಭಾವನೆ ಅವರಿಗೆ ಧೈರ್ಯವನ್ನು ಹೇಳುತ್ತಿತ್ತು.

ಡಾಕ್ಟರ ಊಹೆಯಂತೆ ಪುಟ್ಟುವಿಗೆ ಕೆಲವು ದಿವಸಗಳಲ್ಲಿ ಗಡ್ಡೆಯು ಬಂದೇ ಬಂದಿತು, ಬಂದರೂ, ಎಲ್ಲರಿಗೂ ಇದುವರಿವಿಗೂ ಉಪಚರಿಸುತ್ತಿದಂತೆ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಗಡ್ಡೆಗಳನ್ನು ಹಗಲೂ ಇರುಳೂ ನೋಡುತ್ತಿದ್ದ ಅವರಿಗೆ ಪುಟ್ಟುವಿನ ಗಡ್ಡೆಯೂ ಮಿಕ್ಕವುಗಳಂತೆ ವಾಸಿಯಾಗುವುದರಲ್ಲಿ ಸಂದೇಹವಿಲ್ಲವೆಂಬ ಭರವಸೆಯಿತ್ತು.

ಗಡ್ಡೆಯು ಬಂದ ಎರಡು ದಿವಸಗಳಲ್ಲಿ ಪುಟ್ಟುವಿಗೆ ಸಂಪೂರ್ಣ ನಿಶ್ಶಕ್ತಿಯುಂಟಾಯಿತು. ಪದ್ಮಮ್ಮನವರು ಹಾಸಿಗೆಯ ಹತ್ತಿರವೇ ಸದಾ ಕುಳಿತಿರುತ್ತಿದ್ದರು. ಒಂದು ದಿವಸ ಪುಟ್ಟುವು ತುಂಬಾ ನಿಶ್ಶಕ್ತನಾಗಿದ್ದರೂ "ಅಮ್ಮಾ ಇದುವರಿವಿಗೂ ರೋಗಕ್ಕೆ ಪಕ್ಷಪಾತವಿತ್ತು, ಈಗ ಇಲ್ಲ" ಎಂದು ಹೇಳಿದ. ಪದ್ಮಮ್ಮನವರು "ಪುಟ್ಟು ಹಾಗಂದ್ರೆ ಏನೋ" ಎಂದರು. ಅದಕ್ಕೆ "ನೋಡಮ್ಮಾ ಹಳ್ಳೀಲಿ ಇರೋ ಜನಗಳಿಗೆ ಬಂತು. ಪ್ರತಿಯೊಬ್ಬರ ಮನೆಗೂ ಬಂತು. ನಮ್ಮ ಮನೇಗೆ ಬಂದಿರಲಿಲ್ಲ. ಈಗ ನನಗೆ ಬಂದಿರೋದರಿಂದ ಹಾಗೆ ಹೇಳಿದೆ" ಎಂದ. ಪುಟ್ಟುವಿನ ಮಾತುಗಳಿಗೆ ಬೆರಗಾಗಿ ಪದ್ಮಮ್ಮನವರು "ಪುಟ್ಟು, ರೋಗಕ್ಕೆ ಪಕ್ಷಪಾತವೆಲ್ಲಿದೆ? ಎಲ್ಲರಿಗೂ ಬಂದಿತ್ತು. ನಿನಗೂ ಆಗಿದೆ. ಎಲ್ಲರಿಗೂ ಗುಣವಾದ ಹಾಗೆ ನಿನಗೂ ಆಗುತ್ತೆ." ಎಂದು ಹೇಳಿ ಸ್ವಲ್ಪ ಹಾಲನ್ನು ಕುಡಿಯಲು ಕೊಟ್ಟರು. ಪತಿಯು ಮನೆಗೆ ಬಂದ ಮೇಲೆ ಪುಟ್ಟುವು ಇಂದು ಬಹಳ ಗುಣಮುಖನಾಗಿದ್ದಾನೆಂದೂ, ಸರಿಯಾಗಿ ಬಹಳ ಹೊತ್ತು ಮಾತಾಡಿದ

ನೆಂದೂ ಹೇಳಿದರು. ಪದ್ಮಮ್ಮನವರು ತಮ್ಮ ಮಾತನ್ನು ಕೇಳಿ ಪತಿಯು ಸಂತೋಷ ಪಡುವರೆಂದು ತಿಳಿದಿದ್ದರು. ಆದರೆ ಡಾಕ್ಟರ ಮುಖವು ಖಿನ್ನವಾಯಿತು, ಸ್ವಲ್ಪಹೊತ್ತು ಯೋಚಿಸಿ ನಂತರ ಎದ್ದು ಮಗನನ್ನು ಒಂದೇ ದೃಷ್ಟಿಯಿಂದ ನೋಡಿದರು. ಪುಟ್ಟುವು ಕಂಣ್ಣುಗಳನ್ನು ಬಿಟ್ಟು "ಎಲ್ಲಿ ಹೋಗಿದ್ದೆ ಅಪ್ಪಾ" ಎಂದ. ಡಾಕ್ಟರು ಪುಟ್ಟುವಿನ ಕಣ್ಣುಗಳನ್ನು ನೋಡಿದ ಒಡನೆಯೇ ಅವನ ಮಾತಿಗೂ ಉತ್ತರವನ್ನು ಕೊಡದೆ ತಕ್ಷಣ ತಮ್ಮ ಇಂಜಕ್ಷನ್ 'ಸಿರಿಂಜ್' ತೆಗೆದುಕೊಂಡು ಬಿಸಿನೀರಲ್ಲಿ ಕಾಸಿ ಅಣಿ ಮಾಡಿಕೊಂಡರು. ಸುಂದರರಾಯರ ಚರ್ಯವನ್ನು ನೋಡುತ್ತಿದ್ದ ಪದ್ಮಮ್ಮನವರಿಗೆ ಏನೂ ತೋರದಂತೆ ಆಯಿತು. ಅವರೂ ಪುಟ್ಟುವಿನ ಹಾಸಿಗೆಯ ಮೇಲೆ ಬಂದು ಕುಳಿತುಕೊಂಡರು. ಸ್ವಲ್ಪ ಹೊತ್ತಾದ ಮೇಲೆ ಡಾಕ್ಟರು ಇಂಜಕ್ಷನ್ ಕೊಡುವುದಕ್ಕೆಂದು ಮಗನ ಹತ್ತಿರ ಬಂದರು. ಅಷ್ಟರಲ್ಲಿ ಪುಟ್ಟುವು ಕಣ್ಣುಗಳನ್ನು ತೆರೆದು "ಅಪ್ಪ ಬೇಡ ಬೇಡ" ಎಂದು ಹೇಳಿ ಕಣ್ಣನ್ನು ಮುಚ್ಚಿಕೊಂಡ. ಪುಟ್ಟುವು ಕಣ್ಣನ್ನು ಪುನಃ ತೆರೆಯಲೇ ಇಲ್ಲಿ. ಡಾಕ್ಟರು ಕೈಯಲ್ಲಿದ್ದ 'ಸಿರಿಂಜ'ನ್ನು ಬಿಸಾಡಿ ದೊಪ್ಪನೆ ಖುರ್ಚಿಯ ಮೇಲೆ ಕುಳಿತುಕೊಂಡರು. ಪದ್ಮಮ್ಮನವರ ಸ್ಥಿತಿಯನ್ನು ಹೇಳತೀರದು. ಉಕ್ಕಿಬರುವ ಸಂಕಟವನ್ನು ತಡೆದುಕೊಳ್ಳಲು ಶಕ್ತಿಯೇ ಇಲ್ಲದಂತಾಯ್ತು. ಮೇಲಿಂದ ಮೇಲೆ ಬರುತ್ತಿರುವ ಕಣ್ಣೀರನ್ನು ಒರೆಸಿಕೊಳ್ಳುತ್ತಾ, "ನಿಮ್ಮ ಕೆಲಸಕ್ಕೆ ಕಾರ್ಯಕ್ಕೆ ಅಸ್ವಾರ್ಥತೆಗೆ, ಜನಸೇವೆಗೆ, ಇದೇ ದೇವರು ಕೊಟ್ಟ ಪ್ರತಿಫಲವೇ" ಎಂದರು. ಡಾಕ್ಟರ ಬಾಯಿಂದ ಮಾತೇ ಹೊರಡಲಿಲ್ಲ. ಟೇಬಲ್ಲಿನಮೇಲಿದ್ದ ಇಂಜಕ್ಷನ್ ಟ್ಯೂಬುಗಳನ್ನೂ, ಔಷಧಿ ಸಾಮುಗ್ರಿಗಳನ್ನೂ ಸ್ತಿತಸ್ತ್ಯೋಪನ್ನು ಏಕಾಗ್ರ ದೃಷ್ಟಿಯಿಂದ ನೋಡುತ್ತಿದ್ದರು.



ಜ್ಞಾನ—ವಿಜ್ಞಾನ

ಪುರಾತನ ಪಾಶ್ಚಾತ್ಯ ಚಿಕಿತ್ಸೆ

ಪುರಾತನ ಬ್ಯಾಬಿಲೋನಿಯದಲ್ಲಿ ವೈದ್ಯರಿರಲಿಲ್ಲ. ಆಗ ರೋಗಿಯನ್ನು ಸಂತೆ ಪೇಟೆಗಳಲ್ಲಿ ತಂದಿಡುತ್ತಿದ್ದರು. ಅಲ್ಲಿ ಓಡಾಡುತ್ತಿರುವ ಪ್ರತಿಯೊಬ್ಬರು ಅವನನ್ನು ತೊಂದರೆಪಡಿಸುತ್ತಿರುವ ಪೀಡೆಗಳನ್ನು ಕೇಳಬೇಕೆಂದು ಅಲ್ಲಿ ಶಿಷ್ಟಾಚಾರವಿತ್ತು. ಆ ಪೀಡೆಗೆ ಉಪಚಾರವನ್ನು ಓಡಾಡುವವರಲ್ಲಿ ಯಾರಾದರೂ ಬಲ್ಲವರಿದ್ದರೆ ಅವರು ರೋಗಿಗೆ ಆ ಉಪಚಾರವನ್ನು ಉಪದೇಶಿಸುತ್ತಿದ್ದರು. ಇಜಿಪ್ತದಲ್ಲಿ ಚಿಕಿತ್ಸಾಜ್ಞಾನವು ಬಹಳ ಮುಂದುವರಿದಿತ್ತು. ಚಿಕಿತ್ಸೆಗಳೆಲ್ಲ ಪವಿತ್ರವಾದ ಪುಸ್ತಕಗಳಲ್ಲಿ ಬರೆದಿಡಲ್ಪಡುತ್ತಿದ್ದವು. ಪ್ರತಿಯೊಬ್ಬ ವೈದ್ಯನೂ ಪುಸ್ತಕದೊಳಗಿನ ಚಿಕಿತ್ಸೆಯನ್ನೆ ಉಪಯೋಗಿಸಬೇಕಿತ್ತಲ್ಲದೆ ತನಗೆ ಮನಬಂದಂತೆ ಚಿಕಿತ್ಸೆಮಾಡುವ ಅಧಿಕಾರ ಅವನಿಗಿರಲಿಲ್ಲ. ರೋಗಿಯು ಸತ್ತರೆ ಅವನ ಚಿಕಿತ್ಸೆಗಾಗಿ ವೈದ್ಯನು ಪುಸ್ತಕದಲ್ಲಿಲ್ಲದ ಉಪಚಾರವನ್ನು ಮಾಡಿದ್ದರೆ ಅವನಿಗೆ ಕಠೋರ ಶಿಕ್ಷೆಯಾಗುತ್ತಿತ್ತು. ಪರ್ಶಿಯದಲ್ಲಿ ವೈದ್ಯನಾಗುವದಕ್ಕೆ ಯೋಗ್ಯತೆ ಬೇಕಿತ್ತು. ವೈದ್ಯನಾಗ ಬಯಸುವವನು ಮೊದಲು ಮೂರು ಮಂದಿ ನಾಸ್ತಿಕರನ್ನು ತನ್ನ ಚಿಕಿತ್ಸೆಯಿಂದ ಗುಣಪಡಿಸಿದರೆ ಅವನಿಗೆ ವೈದ್ಯಕಿಯನ್ನು ಮಾಡುವ ಅಧಿಕಾರ ಕೊಡಲಾಗುತ್ತಿತ್ತು. ಉಪಚಾರಕ್ಕೆ ಪ್ರತಿಫಲವಾಗಿ ಜನರು ತಮ್ಮ ದರ್ಜೆಗೆ ಯೋಗ್ಯವಾದ ಒಂದು ಪ್ರಾಣಿಯನ್ನು ವೈದ್ಯನಿಗೆ ಸಲ್ಲಿಸುತ್ತಿದ್ದರು. ಚೀನದಲ್ಲಿ ಪ್ರೇತಗಳನ್ನು ವೈದ್ಯಜ್ಞಾನಕ್ಕಾಗಿ ಕೊಯ್ಯಲ್ಪಡುತ್ತಿರಲಿಲ್ಲ. ಏಕೆಂದರೆ ಯಾರ ಪ್ರೇತವು ಕೊಯ್ಯಲ್ಪಡಿಯೋ ಅವರ ಆತ್ಮವು ಪೂರ್ವಜರ ಆತ್ಮಗಳೊಡನೆ ಸೇರುವದಿಲ್ಲವೆಂದು ಅವರ ನಂಬಿಕೆಯಿತ್ತು. ಚೀನದಲ್ಲಿ ಪ್ರತಿಯೊಂದು ಪ್ರಾಣಿಯನ್ನೂ ಒಂದೊಂದು ರೋಗಕ್ಕಾಗಿ ಔಷಧವೆಂದು ಉಪಯೋಗಿಸಲಾಗುತ್ತಿತ್ತು.

ಚಲಚ್ಚಿತ್ರ ಮತ್ತು ಪ್ರತ್ಯಕ್ಷ ಇತಿಹಾಸ

ಈಗಿನ ಚಲಚ್ಚಿತ್ರಗಳಲ್ಲಿ ಐತಿಹಾಸಿಕ ಕಥೆಗಳೂ ಕೆಲವು ಇವೆ. ಆದರೆ ಅವನ್ನು ಸಿದ್ಧಗೊಳಿಸಿ ಪ್ರೇಕ್ಷಕರಿಗೆ ಆ ಇತಿಹಾಸಕಾಲದ ಸನ್ನಿವೇಶದ ಪ್ರತ್ಯಕ್ಷದರ್ಶನ ಮಾಡಿ ಕೊಡುವದು ಸುಲಭವಲ್ಲ. ಏಕೆಂದರೆ ಆ ಕಾಲದ ವ್ಯಕ್ತಿಗಳ ಉಡಿಗೆತೊಡಿಗೆ, ಸಾಮಾಜಿಕ ಆಹಾರ ವಿಹಾರಗಳ ಸಮರ್ಪಕವಾದ ಜ್ಞಾನವಿರುವದೂ ಸುಲಭವಲ್ಲ. ಆ ವಿಧದ ಸರಿಯಾದ ಜ್ಞಾನವಿಲ್ಲದಿರುವಾಗ ಬರಿ ಊಹೆಯಿಂದ ಆ ಕಾಲದ ಉಡಿಗೆ ತೊಡಿಗೆಗಳನ್ನು ಏರ್ಪಡಿಸಬೇಕಾಗುವದು. ಈ ವಿಷಯದಲ್ಲಿ ಮತಭೇದವಿದ್ದಾಗ ಆ ಕಾಲದ ಸ್ತ್ರೀಯ ಪಾತ್ರ ವಹಿಸಿದವಳು ರವಕೆಯನ್ನು ತೊಡಬೇಕೋ ಕೂಡದೋ ಎಂಬಂತಹ ಚರ್ಚೆಗಳು ಹುಟ್ಟುತ್ತವೆ. ಈ ತೊಂದರೆಗಳು ನಮ್ಮ ಮುಂದಿನ ಜನಾಂಗದವರಿಗೆ ಬರಕೂಡದು; ಈಗಿನ ಆಚಾರ ವಿಚಾರ, ಉಡಿಗೆ ತೊಡಿಗೆ, ಆಹಾರ ವಿಹಾರಗಳೆಲ್ಲ ಇನ್ನು ಎರಡು ಸಾವಿರ ವರ್ಷಗಳ ನಂತರವೂ ಅಚ್ಚಳಿಯದೆ ಮುಂದಿನವರಿಗೆ ಪ್ರತ್ಯಕ್ಷವಾಗಿ ನೋಡ ಸಿಗುವಂತಾಗಬೇಕಾದರೆ ಈಗಿನ ಚಲಚ್ಚಿತ್ರಗಳು ಅಲ್ಲಿಯ ವರೆಗೆ ತಾಳಿಕೆಯಿಂದ ಬಾಳಬೇಕು. ಸಂಯುಕ್ತ ಅಮೇರಿಕೆಯ ಬ್ಯೂರೊ ಆಫ್ ಸ್ಟ್ಯಾಂಡರ್ಡ್ಸದ ವಿಜ್ಞಾನಿಗಳು ಅದರ ಸಾಧನದಲ್ಲಿ ತೊಡಗಿದ್ದಾರೆ. ಅವರು ಚಿತ್ರದ ಪಟ್ಟಿಯನ್ನು ಒಂದು ವಾರದಲ್ಲಿ ರಾಸಾಯನಿಕ ಸಂಯೋಗದಿಂದ ಐವತ್ತು ವರ್ಷಗಳ ಹಳೆಯವನ್ನಾಗಿ ಮಾಡಬಲ್ಲರು. ಹಾಗೆ ಹಳೆಗೊಳಿಸಿ ಚಿತ್ರಪಟ್ಟಿಯ ತಾಳಿಕೆಯನ್ನು ಪರೀಕ್ಷಿಸಲಾಗಿ ಈಗಿನ ಸೆಲ್ಯೂಲೋಸ್‌ದ ಚಿತ್ರಪಟ್ಟಿಗಳು ಐವತ್ತರಿಂದ ನೂರು ವರ್ಷಗಳ ವರೆಗೆ ಮಾತ್ರ ತಾಳಿಕೆ ಬರುವವೆಂದು ತಿಳಿದು ಬಂದಿದೆ. ತೀರ ಇತ್ತೀಚೆಗೆ ತಯಾರಾದ ಸೇಫ್ಟಿ ಆ್ಯಸಿಟೇಟ ಫಿಲ್ಮನ್ನು ಇನ್ನೂ ಹೆಚ್ಚು ನೂರು ವರ್ಷಗಳ ವರೆಗೆ ಬಾಳಿಸಬಹುದೆಂದು ಗೊತ್ತಾಗಿದೆ. ಆ ಚಿತ್ರಪಟ್ಟಿಗಳನ್ನು ಸಾವಿರಾರು ವರ್ಷಗಳ ವರೆಗೆ ಕಾದಿಡಲಿಕ್ಕೆ ಪ್ರತ್ಯೇಕವಾದ ಮನೆಗಳು ನಿರ್ಮಿಸಲ್ಪಡುತ್ತಿವೆ. ಅಲ್ಲಿಯ ವಾಯುವಿನ ಉಷ್ಣವೂ ದ್ರವವೂ ಏಕರೀತಿಯಾಗಿರುವಂತೆ ಏರ್ಪಡಿಸಲಾಗಿದೆ.

ವಾಚನಾಭಿರುಚಿಯುಳ್ಳವರು ಹಲಕೆಲವರ ಶೈಲಿಗಳನ್ನು ಮೆಚ್ಚಿರುತ್ತಾರೆ. ಶೈಲಿಯೆಂದರೆ ಬರಿ ಶಬ್ದಾಲಂಕಾರವಲ್ಲ.

ಶೈಲಿಯೆಂದರೇನು?

ಮಹಾತ್ಮಾ ಗಾಂಧಿಯವರ ಭಾಷೆಯಲ್ಲಿ ಶಬ್ದಗಳ ಬೆಡಗಿಲ್ಲದಿದ್ದರೂ ಅವರ ಶೈಲಿಯಲ್ಲಿ ಬಿಗಿಯೂ, ಸರಲತೆಯೂ, ಸ್ಪಷ್ಟತೆಯೂ ಇವೆ. ಬಹುತರವಾಗಿ ಜಗತ್ತಿನಲ್ಲಿ ಮಹಾ ಮಹಾ ಸಾಹಿತಿಗಳೆನಿಸಿದವರಿಗೆಲ್ಲ ತಮ್ಮದಾದ ಸ್ವತಂತ್ರಶೈಲಿಯಿದ್ದೇ ಇರುತ್ತದೆ. ಶೈಲಿಯು ಬರಿ ಸಾಹಿತಿಗಳಿಗಲ್ಲ, ಪ್ರತಿಯೊಬ್ಬ ಮಾತಾಡುವ ಮನುಷ್ಯನಲ್ಲಿಯೂ ಇದೆ. ಒಬ್ಬ ಹಳ್ಳಿಗನ ಮಾತು ಹಾಡುಗಳಲ್ಲಿಯೂ ವಿಶಿಷ್ಟವಾದ ಶೈಲಿಯಿದೆ. ಆದುದರಿಂದ ಮನುಷ್ಯರಿದ್ದಷ್ಟು ಶೈಲಿಗಳು ಎಂದು ಕೂಡ ಬಲ್ಲವರು ಹೇಳುತ್ತಾರೆ. ಹಾಗಾದರೆ ಶೈಲಿಯೆಂದರೇನು? ಈ ವಿಷಯದಲ್ಲಿ ಜಾನ ಲ್ಯಾಡಿಂಗ್ ಟನ್ನರು 'ಸಂಡೆ ಲ್ಯಾಟ್ ಹೋಮ'ನಲ್ಲಿ ಹೀಗೆ ಬರೆಯುತ್ತಾರೆ:—

ಕೆಲವು ಮನುಷ್ಯರನ್ನು ಹುಟ್ಟಿದಾಗಿನಿಂದ ಒಂದೆ ಪರಿಸ್ಥಿತಿಯಲ್ಲಿಡುವಾ; ಒಂದೇ ಪ್ರಕಾರದ ಆಹಾರ ವಿಹಾರ ಉಡಿಗೆತೊಡಿಗೆಗಳನ್ನು ಅವರಿಗೆ ಕೊಡುವಾ; ಎಲ್ಲರಿಗೂ ಒಂದೇ ಭಾಷೆಯನ್ನು ಇಲ್ಲವೆ ಹಲವು ಭಾಷೆಗಳ ಸಮಾನವಾದ ಜ್ಞಾನವನ್ನು ಕೊಡುವಾ; ನಂತರ ಅವರಿಗೆ ಒಂದು ವಿಷಯದ ಮೇಲೆ ವ್ಯಾಖ್ಯಾನ ಕೊಡಲು ಇಲ್ಲವೆ ಲೇಖನ ಬರೆಯಲು ಹೇಳುವಾ; ಅಂದರೆ ಅವರೆಲ್ಲರ ಶೈಲಿಯೂ ಒಂದೆ ಪ್ರಕಾರದ್ದಾಗುವದೆಂದು ತಿಳಿದಿರುವಿರಾ? ಎಂದಿಗೂ ಸಾಧ್ಯವಿಲ್ಲ. ಮೇಲ್ಕಂಡ ಯಾವ ಪರಿಶ್ರಮವನ್ನು ನಾವು ವಹಿಸದಿದ್ದರೂ ಅವರ ಶೈಲಿಯಲ್ಲಿ ಆಗ ಬಹುದಾಗಿದ್ದ ವ್ಯತ್ಯಾಸವೇ ಈಗಲೂ ಕಂಡುಬರುವದು ಖಂಡಿತ. ಆದುದರಿಂದ ಶೈಲಿಯೆಂದರೆ ಪ್ರತಿಯೊಬ್ಬ ಮನುಷ್ಯನ ದೇಹ ಮನಸ್ಸುಗಳ ಪ್ರಕೃತಿಯಲ್ಲಿಯೆ ಹುಟ್ಟುತ್ತದೆಂದೆನ್ನಬೇಕು.

ತೂಗಾಡುವ ಉಗಿಬಂಡಿ

ಮನುಷ್ಯನ ಮಿದುಳು ಇಷ್ಟು ವಿಧದ ವಾಹನಗಳನ್ನು ನಿರ್ಮಿಸಿಯೂ ತಣಿಯಲಿಲ್ಲ. ಪ್ರತಿಯೊಂದು ವಿಧದ ವಾಹನದಲ್ಲೂ ಅನೇಕ ಪ್ರಕಾರಗಳನ್ನು ಶೋಧಿಸಲಾಗುತ್ತಿದೆ. ಉಗಿಬಂಡಿಗಳು ತೀರ ಮೊದಲು ಹುಟ್ಟುವಾಗ ಗಂಟಿಗೆ ಹದಿನೈದು ಮೈಲು ವೇಗವುಳ್ಳವುಗಳಾಗಿದ್ದವು. ಆ ವೇಗವನ್ನು ಹೆಚ್ಚಿಸಲು, ಅನುಕೂಲವನ್ನು ಹೆಚ್ಚಿಸಲು, ವೆ[illegible]ವನ್ನು ಕಡಿಮೆಮಾಡಲು ಒಂದೇ ಕಂಬಿಯ ಮೇಲೆ ಓಡು[illegible] ಉಗಿಬಂಡಿಗಳನ್ನು ಶೋಧಿಸಲಾಯಿತು. ಅಂತಹ [illegible] ೧೦೦-೧೨೦ ಮೈಲುಗಳ ವರೆಗೆ ಓಡಬಲ್ಲ ಬಂಡಿಗಳು [illegible]ತ್ತಿನಲ್ಲೆಲ್ಲ ಕಂಡುಬರುತ್ತಿವೆ. ಅಷ್ಟಕ್ಕೂ ತೃಪ್ತಿಪ[illegible] ಸ್ಕಾಟಲಂಡಿನಲ್ಲಿ ಇತ್ತೀಚೆ ಗಂಟೆಗೆ ೨೦೦ ಮೈಲು ಓಡು[illegible] ಬಂಡಿಗಳು ನಿರ್ಮಿಸಲ್ಪಟ್ಟಿವೆ. ಆದರೆ ಅವು ನೆಲದಲ್ಲಿ [illegible]ವದಿಲ್ಲ. ಆಕಾಶದಲ್ಲಿ ಓಡುತ್ತಿವೆ! ಅಂದರೆ ವಿಮಾನಗಳೆ[illegible] ತಿಳಿಯಬೇಡಿ. ಆ ಉಗಿಬಂಡಿಗಳ ಕಂಬಿಗಳು ನೆಲ[illegible]ರುವದಿಲ್ಲ; ಎತ್ತರದಲ್ಲಿ ತೂಗಾಡುತ್ತಿರುತ್ತವೆ. [illegible]ದ್ದಕ್ಕೂ ನಿಲ್ಲಿಸಿರುವ ಕಂಬಗಳ ಆಧಾರದಿಂದ ಆ ಕಂ[illegible]ಗಳನ್ನು ಎತ್ತರದಲ್ಲಿ ತೂಗುಹಾಕಿರುತ್ತಾರೆ. ಬಂಡಿಗ[illegible] ಆ ಕಂಬಿಗಳ ಮೇಲೆ ಓಡಾಡುವದಿಲ್ಲ. ಆ ಕಂಬಿಗಳ[illegible] ನೇತಾಡುತ್ತ ಬಂಡಿಗಳು ಓಡುತ್ತವೆ. ಬಂಡಿಗಳಿಗೂ ಕಂ[illegible]ಗಳಿಗೂ ಸಂಧಿಸುವ ಸ್ಥಳದಲ್ಲಿ ವಿದ್ಯುತ್ತು ಹುಟ್ಟು[illegible] ಏರ್ಪಾಡಿದೆ. ವಿದ್ಯುತ್ತಿನ ಬಲದಿಂದ ಬಂಡಿಗಳು ನ[illegible]ಲ್ಪಡುತ್ತವೆ.

ಮೌನಾಶ್ರಮ

ಕೆನಡಾದಿಂದ ಐವತ್ತು ಮೈಲು ದೂರದಲ್ಲಿ ಓಕಾ ಎ[illegible] ಒಂದು ಮೌನಾಶ್ರಮವಿದೆ. ಅಲ್ಲಿರುವವರೆಲ್ಲ ಬರಿ ಗ[illegible]ಸರು. ಅವರೆಂದೂ ಮಾತ[illegible]ವುದೆ ಇಲ್ಲ. ಅವರ ದಿನ[illegible] ಏಕಾಂತ ಮತ್ತು ಪ್ರಾರ್ಥನೆ[illegible]ಲ್ಲಿಯೆ ಕಳೆದುಹೋಗುತ್ತವೆ. ಅವರು ರಾತ್ರಿ ಎರಡು ಗಂ[illegible] ಹಾಸಿಗೆ ಬಿಟ್ಟೇಳುತ್ತಾರೆ. ಎದ್ದ ಕೂಡಲೆ ಒಂದು ಕ[illegible] ಸೇರಿ ಪ್ರಾರ್ಥನೆ ಮಾಡುತ್ತಾರೆ. ಅವರ ಪ್ರಾರ್ಥನೆ[illegible] ಒಂದೂವರೆ ಸಾವಿರ ವರ್ಷ ಹಿಂದಿನದು. ಎಲ್ಲರೂ [illegible] ಒಂದೇ ಸ್ವರದಲ್ಲಿ ಅದನ್ನು ಗಂಭೀರವಾಗಿ ಅನ್ನುತ್ತಾ[illegible] ನಡುವೆ ಅರ್ಧ ಗಂಟೆ ನಿಸ್ತಬ್ಧತೆ! ಆಗ ಪಿಸುಮಾ[illegible] ಪ್ರಾರ್ಥನೆ ಮಾಡುವರು. ಪುನಃ ಉಚ್ಚಸ್ವರದ ಪ್ರಾ[illegible] ಹೀಗೆ ಸೂರ್ಯೋದಯದ ವರೆಗೆ ಪ್ರಾರ್ಥನೆ ನಡೆಯುತ್ತ[illegible] ಏಳು ಗಂಟೆಗೆ ಬೆಳಗಿನ ಫಲಾಹಾರ. ಫಲಾಹಾರಕ್ಕೆ ಕ[illegible] ಕುಳಿತಾಗ ಬರಿ ತಟ್ಟೆಗಳ ಶಬ್ದವೆ ಶಬ್ದ! ಬಾಯ್ಮ[illegible] ಎಂಟು ಗಂಟೆಗೆ ಹೊಲದಲ್ಲಿ ದುಡಿಯಲು ಹೊರಡು[illegible] ಮಧ್ಯಾಹ್ನ ೧೧ ಗಂಟೆಗೆ ಸಂಜೆಗೆ ೫||ಗೆ ಊಟ. [illegible] ಮೊದಲೂ ನಂತರವೂ ಪ್ರಾರ್ಥನೆ. ಮಧ್ಯಾಹ್ನದ ನಂತ[illegible] ಹೊತ್ತಿಗೆ ಅನೇಕ ವಿಧದ ಉದ್ಯೋಗ ವ್ಯವಸಾಯಗಳ[illegible]

ತೊಡಗುವರು. ಆಶ್ರಮಕ್ಕೆ ಬೇಕಾಗುವ ಎಲ್ಲ ಕಾಳು ಕಡಿಗಳೂ, ವಸ್ತ್ರ ವಸ್ತುಗಳೂ ಅಲ್ಲಿಯೆ ತಯಾರಾಗುತ್ತವೆ. ಕತ್ತಲಾದ ಕೂಡಲೆ ಆಶ್ರಮದಲ್ಲಿ ಮುಂಕಾದ ಒಂದು ಮೇಣ ಬತ್ತಿಯನ್ನು ಅಂಟಿಸುತ್ತಾರೆ. ನಂತರ ಪ್ರಾರ್ಥನೆಮಾಡಿ ಒಂದೆ ದೊಡ್ಡ ಕೋಣೆಯಲ್ಲಿ ಮಲಗುತ್ತಾರೆ. ಅವರ ಹಾಸಿಗೆಯೆಂದರೆ ಒಂದು ಕಟ್ಟಿಗೆಯ ಹಲಗೆ. ಅದರ ಮೇಲೊಂದು ತೆಳುವಾದ ಜಮುಖಾನೆ. ಈ ಆಶ್ರಮದಲ್ಲಿ ಬೆಳೆಸಲ್ಪಟ್ಟ ಕಾಳುಕಡಿಗಳೂ ಸಿದ್ಧವಾದ ವಸ್ತುಗಳೂ ವಸ್ತ್ರಗಳೂ ಅಮೇರಿಕೆಯಲ್ಲಿ ಉತ್ತಮವೆಂದು ಹೇಳಲಾಗುತ್ತಿದೆ.

ಅಪರಾಧವನ್ನು ಶೋಧಿಸುವ ಕಲೆ

ಮೋಸಗಾರರನ್ನೂ ಕಳ್ಳರನ್ನೂ ಗೊತ್ತುಪಡಿಸಲು ಪುರಾತನಕಾಲದಿಂದ ಅನೇಕ ಹಂಚಿಕೆಗಳು ಹೊರಟಿವೆ. ಭಾವ ಚಿತ್ರಗಳನ್ನು ತೆಗೆದಿಟ್ಟುಕೊಳ್ಳಲು ಸಾಧ್ಯವಾದಾಗಿನಿಂದ ವಂಚಕರ ಶೋಧನಕ್ಕೆ ಬಹಳ ಅನುಕೂಲ ವಾಯಿತು. ಏಕೆಂದರೆ ಮುಖ ಒಂದೆ ಅಲ್ಲದೆ ಬೇಕಾದ ಅಂಗದ ಭಾವಚಿತ್ರವನ್ನು ತೆಗೆದಿಟ್ಟು ವಂಚಕನು ವೇಷ ಬದಲಾಯಿಸಿದರೂ ಗೊತ್ತು ಹಚ್ಚಲು ಬರುವಂತಾಯಿತು. ಆದರೆ ಕಳ್ಳರೂ ವಿಜ್ಞಾನಿಗಳಾಗಹತ್ತಿದಂದಿನಿಂದ ಅವರನ್ನು ಶೋಧಿಸುವದು ಕಷ್ಟವಾಯಿತು. ಬೀಗದ ಮೇಲೆ ಮೂಡಿದ ಕೈಗುರುತನ್ನು ಕಂಡುಹಿಡಿಯುವ ಹಂಚಿಕೆ ಹೊರಟಕೂಡಲೆ ಕಳ್ಳರು ರಾಸಾಯನಿಕ ವಸ್ತುಗಳಿಂದ ಬೀಗಗಳನ್ನೆ ಕರಗಿಸುವ ಹಂಚಿಕೆಯನ್ನು ಹುಡುಕಿದರು. ಮುಖಭಾವದಿಂದ ತಮ್ಮನ್ನು ಗೊತ್ತು ಹಚ್ಚಬಾರದೆಂದು ' ಪ್ಲ್ಯಾಸ್ಟಿಕ್ ಸರ್ಜರಿ 'ಯಿಂದ ಮೂಗು ಕಿವಿಗಳ ಆಕಾರಗಳನ್ನು ಬದಲಿಸಿಕೊಳ್ಳುವ ಹಂಚಿಕೆ ಹುಡುಕಿದರು. ಆದರೂ ವಿಜ್ಞಾನಿಗಳು ವಂಚಕರನ್ನು ಗೊತ್ತು ಹಚ್ಚುವ ಯುಕ್ತಿಯನ್ನು ದಿನಕ್ಕೊಂದಾಗಿ ಹುಡುಕಿ ತೆಗೆಯುತ್ತಿರುವರು. ಈಗ ಒಬ್ಬ ಅಪರಾಧಿಯು ಸಿಕ್ಕಕೂಡಲೆ ಅವನ ಕುಲಗೋತ್ರಗಳನ್ನೆಲ್ಲ ಕೇಳುವದಲ್ಲದೆ ಒಂದು ಮಿದುವಾದ ವಸ್ತುವಿನ ಹಲಿಗೆಯನ್ನು ಕಚ್ಚಲಿಕ್ಕೆ ಅವನಿಗೆ ಹೇಳುವರು. ಆ ಹಲ್ಲಿನ ಗುರುತು ಅದನ್ನು ಕಾದಿಡುವರು. ಸೂಕ್ಷ್ಮರೀತಿಯಲ್ಲಿ ಪ್ರತಿಯೊಬ್ಬ ಮನುಷ್ಯನ ಹಲ್ಲಿನ ಅಂಚಿನ ಆಕಾರದಲ್ಲೂ ವ್ಯತ್ಯಾಸವಿದೆ. ಅವನ ಕಂಣಿನ ಬಿಳಿಭಾಗದಲ್ಲಿ ಸೂಕ್ಷ್ಮವಾಗಿ ಹರಡಿರುವ ನರಗಳ ಭಾವಚಿತ್ರವೂ ಅಪರಾಧಿ ಸಂಶೋಧನದಲ್ಲಿ ಒಳ್ಳೆ ಸಹಾಯಕವಾಗಿದೆ. ಪ್ರತಿಯೊಬ್ಬನ ಕಂಣಿನಲ್ಲಿಯ ರಕ್ತನಲಿಕೆಗಳು ಪಸರಿಸಿರುವ ರೀತಿಯೇ ಬೇರೆಯಾಗಿರುವದು. ' ಕ್ಷ ' ಕಿರಣಗಳೂ ಈ ಸಂಶೋಧನದಲ್ಲಿ ಅತ್ಯುಪಯುಕ್ತವಾಗಿವೆ. ಆ ಕಿರಣಗಳಿಂದ ಅಪರಾಧಿಯ ದೇಹದೊಳಗಿನ ಎಲುಬುಗಳ ಆಕಾರ ಉದ್ದಗಳೆಲ್ಲವೂ ತಿಳಿಯುತ್ತವೆ. ಮತ್ತು ಅಪರಾಧಿಗೆ ಅವುಗಳನ್ನು ವ್ಯತ್ಯಾಸಗೊಳಿಸಲೂ ಬರುವಂತಿಲ್ಲ. ಬೆರಳುಗಳ ಮುದ್ರೆಯೊತ್ತುವದೂ ಸಂಶೋಧನದಲ್ಲಿ ಚನ್ನಾಗಿ ಸಹಾಯವಾಗುತ್ತಿದೆ. ವಿಜ್ಞಾನವು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದೆ ಈಗ. ಬೆರಳ ತುದಿಯ ತೀರ ಚಿಕ್ಕ ಪ್ರದೇಶದಲ್ಲಿರುವ ರಂಧ್ರಗಳ ಸಂಖ್ಯೆ, ಆಕಾರಗಳನ್ನು ಲೆಕ್ಕದಲ್ಲಿಟ್ಟಿರುವರು. ಮೊನ್ನೆ ಮಾರ್ಸೆಲಿಯಲ್ಲಿ ಒಂದು ಮೇಣಬತ್ತಿಯ ಮೇಲೆ ಮೂಡಿದ ಚರ್ಮರಂಧ್ರಗಳ ಗುರುತಿನ ಸಹಾಯದಿಂದಲೆ ಒಬ್ಬ ಕಳ್ಳನನ್ನು ಹುಡುಕಿ ಹಿಡಿಯಲಾಯಿತು.

ಕಪ್ಪಾಗಿರುವವರು ಬೆಳ್ಳಗಾಗಬಹುದು.

' ಕರಿನಾಯಿ ಬಿಳಿದಾಗಬಲ್ಲದೇ ?' ಎಂಬುದು ಬಹು ಹಿಂದಿನಿಂದ ಬಂದ ಮಾತು. ಎಂದರೆ ಪ್ರಾಣಿಗಳ ವೈಬಂಣವನ್ನು ಪಲ್ಲಟಿಸುವದು ಅಸಾಧ್ಯವೆಂದರ್ಥ. ಗೌರವರ್ಣಕ್ಕೆ ಕರಿಯರಲ್ಲಿಯೂ ಮಾನವಿದೆಯೆಂದ ಮೇಲೆ ಕರಿ ಚರ್ಮವನ್ನು ಬಿಳಿಗೊಳಿಸುವ ಹಂಚಿಕೆಯನ್ನು ಯಾರಾದರೂ ಸಂಶೋಧಿಸಿದರೆ ಕರಿಜನರೆಲ್ಲ ಒಂದಿಲ್ಲೊಂದು ದಿನ ಬಿಳಿಯರಾಗುವ ಆಸೆಯನ್ನಿಟ್ಟುಕೊಳ್ಳಬಹುದು. ನಿರಾಸೆ ಹೊಂದಬೇಡಿ; ಅಮೆರಿಕೆಯ ಪ್ರೊ. ಎಫ್. ಶಿರೋಕೌರ್ ಅವರು ಅಂತಹದೊಂದು ಸಿದ್ಧಿಯನ್ನು ಸಾಧಿಸುವದರಲ್ಲಿಯೇ ತೊಡಗಿದ್ದಾರೆ. ಪ್ರೊ. ಝೊಂಡೆಕ್ ಮತ್ತು ಪ್ರೊ. ಬಾಯರ್ ಅವರು ಈ ಮೊದಲು ಹಲವು ಪ್ರಯೋಗಗಳನ್ನು ಮಾಡಿ ಕರಿಯರನ್ನು ಬಿಳಿಯರನ್ನಾಗಿ ಮಾಡುವದು ಸಾಧ್ಯವಿದೆಯೆಂಬ ಆಸೆಯನ್ನು ವ್ಯಕ್ತಪಡಿಸಿದ್ದರು. ಕೆಲವು ಪಕ್ಷಿಗಳು ರತಿಯ ಕಾಲದಲ್ಲಿ ಗೌರವರ್ಣಕ್ಕೆ ತಿರುಗುತ್ತಿರುವದನ್ನು ನೋಡಿ ವಿಜ್ಞಾನಿಗಳು ವೈಬಂಣಕ್ಕೂ ಓಜೋಗ್ರಂಥಿಗಳಿಗೂ ಸಂಬಂಧವಿದೆಯೆಂದು ಊಹಿಸಿದರು. ಓಜೋಗ್ರಂಥಿಗಳು ಸ್ರವಿಸುವ ವಿಶಿಷ್ಟ ಸತ್ವದಿಂದ ಚರ್ಮಕ್ಕೆ, ಕೂದಲಿಗೆ ವಿಶಿಷ್ಟ ವರ್ಣವುಂಟಾಗುವವೆಂದು ಅವರು ಸಿದ್ಧಾಂತಿಸಿದರು. ಗರ್ಭಿಣಿಯ ವರ್ಣವು ತುಸು ಕಂದಿಗೆ ತಿರುಗುವದೂ ಆ ಓಜೋಗ್ರಂಥಿ ಸತ್ವದಿಂದಲೆ ಎಂದು ಅವರ ಅಭಿಪ್ರಾಯ. ಇತ್ತೀಚೆ

ಮೇಲ್ಕಂಡ ಪ್ರೊಫೆಸರರು ಒಂದು ಸಸ್ತನಪ್ರಾಣಿಯ ಓಜೋಗ್ರಂಥಿ ಸತ್ವವನ್ನು ತೆಗೆದು ಒಂದು ಮೀನಿನ ಮೈಯಲ್ಲಿ ಹಾಕಲಾಗಿ ಅದರಿಂದ ನಾಸಿಪುಡಿ ಬಣ್ಣದ ಆ ಮೀನು ಒಳ್ಳೆ ಹೊಂಬಣ್ಣದ ಕೆಂಪಿಗೆ ತಿರುಗಿತು. ಇದೆ ಪ್ರಯೋಗವನ್ನು ಕಪ್ಪೆಗಳ ಮೇಲೆ ಮಾಡಲಾಗಿ ಅಗಲೂ ಅದು ಯಶಸ್ವಿಯಾಯಿತು. ಆಫ್ರಿಕೆಯ ಜನಾಂಗಗಳ ಮೈಬಣ್ಣವು ಕಪ್ಪಾಗಿರುವುದಕ್ಕೆ ಅವರ ಓಜಃಸತ್ವಗಳೆ ಕಾರಣವೆಂದು ಜೀವವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದುದರಿಂದ ನಿಗ್ರೋ ಮನುಷ್ಯನ ದೇಹದಲ್ಲಿ ಗೌರವರ್ಣದ ಜನಾಂಗಗಳಲ್ಲಿಯ ಓಜಃಸತ್ವವು ಹುಟ್ಟುವಂತೆ ಮಾಡಿದರೆ ಅವನೂ ಗೌರವರ್ಣಿಯಾಗಲೇಬೇಕು. ಪ್ರೊ. ಶಿರೋಕೌರರು ಈಗಾಗಲೆ ಐದು ನಿಗ್ರೋಗಳನ್ನು ಗೌರವರ್ಣಕ್ಕೆ ತಿರುಗಿಸಿದ್ದಾರೆ.

ಮನುಷ್ಯೇತರ ಪ್ರಾಣಿಗಳ ದಿವ್ಯದೃಷ್ಟಿ

ಮುಂದೆ ನಡೆಯುವ ಸಂಗತಿಗಳು ಈಗಲೆ ಯಾರಿಗೆ ತಿಳಿಯುತ್ತವೆಯೋ ಅವರಿಗೆ ದಿವ್ಯದೃಷ್ಟಿಯಿದೆಯೆಂದು ನಾವು ಅನ್ನುತ್ತೇವೆ. ಪೂರ್ವಜನ್ಮ ಸಂಸ್ಕಾರದಿಂದಲೂ ತಪಃಪ್ರಭಾವದಿಂದಲೂ ಅಂತಹ ದೃಷ್ಟಿ ಬರುವದೆಂದು ಕೆಲವರೆನ್ನುತ್ತಾರೆ. ಆದರೆ ಅಂತಹ ಯಾವ ಪ್ರಭಾವವಿಲ್ಲದೆಯೆ ನೈಸರ್ಗಿಕವಾಗಿಯೆ ಕೆಲವು ಮನುಷ್ಯೇತರ ಪ್ರಾಣಿಗಳಲ್ಲಿ ಆ ದಿವ್ಯದೃಷ್ಟಿಯಿರುತ್ತದೆಂದು ಜೀವವಿಜ್ಞಾನಿಗಳು ಹೇಳುತ್ತಾರೆ. ಮೊನ್ನೆ ಅಮೇರಿಕೆಯ ಒಂದು ವಸತಿಗೃಹದವರು ನಿತ್ಯದಂತೆ ತಿರುಗಾಡಿ ಬರಲೆಂದು ತಮ್ಮ ನಾಯಿಗಳೊಡನೆ ಹೊರಟರು. ದಿನವೂ ಹೀಗೆ ಹೊರಟಾಗ ನಾಯಿಗಳು ಹುರುಪಿನಿಂದಿರುತ್ತಿದ್ದವು. ಇಂದು ಮಾತ್ರ ಅವು ಮುಂದುವರಿಯಲಿಲ್ಲ. ಏನು ಮಾಡಿದರೂ ಅವು ಹಿಂದೆಯೆ ಎಳೆದುಕೊಳ್ಳಹತ್ತಿದವು. ಈ ಸಂಗತಿ ನಡೆದ ಒಂದು ಗಂಟೆಯ ಮೇಲೆ ಈ ಇಪ್ಪತ್ತು ವರ್ಷಗಳಿಂದ ಕಾಣದಂತಹ ಭಯಂಕರವಾದ ಬಿರುಗಾಳಿಯು ಮಂಜಿನ ಮಳೆಯಿಂದ ಕೂಡಿ ಬಂತಂತೆ! ಇದರ ವಾಸನೆ ಆ ನಾಯಿಗಳಿಗೆ ಮೊದಲೆ ಬಂದಿತ್ತೊ ಏನೋ! ಪೀಲೀ ಪರ್ವತದ ಭೂಕಂಪವಾಗುವ ಕೆಲವು ದಿನಗಳ ಮೊದಲು ಆ ದ್ವೀಪದಲ್ಲಿರುತ್ತಿದ್ದ ಕುದುರೆ, ಆಕಳು ಮುಂತಾಗಿ ಎಲ್ಲ ಪ್ರಾಣಿಗಳೂ ಬಹಳ ಉದ್ವಿಗ್ನಾವಸ್ಥೆಯಲ್ಲಿದ್ದವಂತೆ. 'ಟ್ಯೂರಿನ'ನ ನಾಟ್ಯಗೃಹಕ್ಕೆ ಬೆಂಕಿ ಬೀಳುವ ಪೂರ್ವದಲ್ಲಿ ಸಂಜೆಯಲ್ಲಿ ರಂಗಸ್ಥಳಕ್ಕೆ ಬರಬೇಕಾದ ಆಡು, ಕೋಳಿಗಳು ಬಹಳ ಗಾ… ಗಾಬರಿಯಾಗಿ ಓಡುತ್ತಿದ್ದುವಂತೆ. ಪ್ರಾಣಿಗಳ ಆತ್ಮ… ತಮ್ಮ ಮನೆಯವರ ಮರಣವು ಪೂರ್ವಭಾವಿಯಾಗಿ ತಿ… ಯುತ್ತದೆಂದು ಹಿಂದಿನವರು ಹೇಳುತ್ತಿದ್ದುದನ್ನು ನಾವು ಕೇಳಿದ್ದೇವೆ. ಆದರದು ಮೂಢಭಾವನೆಯಲ್ಲ. ಪ್ರೊ… ಆರ್ನೆಸ್ಟೊ ಬೋರ್ಝಾನೋ ಎಂಬವರು 'ಮನೆಯವ… ಮರಣ ಸಮೀಪಿಸಿದಾಗ ಪ್ರಾಣಿಗಳು ಒಂದು ವಿಶಿಷ್ಟ… ರೀತಿಯಿಂದ ಗುರುಗುಡುವವೆ'ಂದು ಹೇಳುತ್ತಾರೆ.


ನದೀ ತೀರದ ಸಂಗೀತದಲ್ಲಿ ಕಾವ್ಯವನ್ನು ಅನುಭವಿಸು… ವರು ಅನೇಕರಿದ್ದಾರೆ. ಆದರಲ್ಲಿಯೂ ಆ ಧ್ವನಿಯು ಒಬ್ಬ ಸ್ತ್ರೀಯ ಕೋಮಲ ಕಂ… ದಿಂದ ಹೊರಟು ಬರುತ್ತಿದ್ದ… ಆ ಸಂಗೀತಕ್ಕಿನ್ನೂ ಬೆಲೆಯುಂಟು.

ಹಾಡುವ ಮೀನು

ಹಾಗೆಂದರೆ ಸಮುದ್ರತೀರದಲ್ಲಿ ಕೇಳಬರುವ ಸಂಗೀತವು… ಕೋಮಲೆಯರ ಕಂಠದಿಂದಲೆ ಬರುತ್ತಿದೆಯೆಂದು ಭ್ರಮೆಗೊಳ್ಳಬೇಡಿರಿ. ಏಕೆಂದರೆ ಮೀನಗಳೂ ಹಾಡುವವು… ಮನುಷ್ಯರಂತೆ ಸ, ರಿ, ಗ, ಮ, ಗಳಿರದಿದ್ದರೂ ಮನೋ… ಹರವಾದ ಧ್ವನಿಯನ್ನು ಕೆಲವು ಮೀನಗಳು ಹೊರಡಿಸ… ಬಲ್ಲವು. 'ಸ್ಯಾಪ್ರೊ' ಎಂಬುದು ಆ ಮೀನದ ಜಾತಿಯ… ಹೆಸರು. ಅವುಗಳ ವಾಯುಕೋಶಗಳಿಂದ ಭ್ರಮರದಂತೆ… ಒಂದು ಗುಂಜಾರವವು ಹೊರಡುತ್ತದೆ. ದಿನದ ಬಹು… ಭಾಗವನ್ನೆಲ್ಲ ಅದು ಬಂಡೆಗಳ ಬುಡದಲ್ಲಿ ಕುಳಿತು ಹಾಡು… ವದರಲ್ಲಿಯೇ ಕಳೆಯುತ್ತದೆ.

ಪಶ್ಚಿಮ ಆಫ್ರಿಕದ 'ಹಿಪ್ಪೊಪೊಟ್ಯಾಮಸ್' ಎಂಬ… ಮೀನವು ಹಾಡಲಾರದು; ಆದರೆ ಅದು ಗಿಡಗಳ ಮೇಲೆ… ಏರಬಲ್ಲದು. ಅದಕ್ಕೆ ಹಸಿವೆಯಾದಾಗ ಅದು ನೀರನ್ನು… ಬಿಟ್ಟು ಹತ್ತರದ ಗಿಡದ ಮೇಲೆ ಆಹಾರವನ್ನು ಹುಡುಕ… ಹೋಗುತ್ತದೆ. ಅಲ್ಲಿ ಸಿಕ್ಕ ಸಣ್ಣಪುಟ್ಟ ಕ್ರಿಮಿಕೀಟ… ಗಳನ್ನು ಅದು ತಿನ್ನುತ್ತದೆ. ಗಿಡದ ಮೇಲೆ ಹತ್ತಿದಾಗ… ಮೈ ಒಣಗೀತೆಂಬ ಭೀತಿಯಿಂದ ಅದು ಬಾಯಲ್ಲಿ ನೀರನ್ನು… ಹಿಡಿದುಕೊಂಡೆ ಹೋಗುತ್ತದೆ. ತನಗೆ ಬೇಕಾದಾಗ… ನೀರನ್ನು ಮೈತುಂಬ ಉಗುಳಿಕೊಳ್ಳುತ್ತದೆ.

ಇದಲ್ಲದೆ ಹಾರುವ ಮೀನಗಳೂ ಇವೆ. ಅವು ಮೂ… ನೂರು ಮಾರುಗಳ ವರೆಗೆ ಹಾರಬಲ್ಲವು! 'ಕಾ' … ಮೀನಕ್ಕೆ ಕೋಡುಗಳಿರುತ್ತವೆ. ಆ ಕೋಡುಗಳ ಉಪ… ಯೋಗವೇನೆಂಬುದು ಇನ್ನೂ ತಿಳಿದಿಲ್ಲ.



ನಗಬೇಡಿ

[illegible]ಯರು:—ಏ ಜಟ್ಕಾ, ಕೋರ್ಟಿಗೆ ಬಾರೋ

[illegible]ಟಕ:—ಕೋರ್ಟಿಗೆ ಬರೋದಕ್ಕೆ ನಾನು ಏನು ತಪ್ಪು [illegible]ಡಿಲ್ಲ ಬುದ್ಧಿ.

* * *

[illegible]ತ್ತೆ:—(ಸೊಸೆಯ ಸಂಗಡ) ಲೇ ರತ್ನ, ನಿನ್ನ ಗಂಡ [illegible] ದಿವಸ ಕರೆದುಕೊಂಡು ಹೋದ ನಾಟಕವನ್ನು ನಾನು [illegible]ದೂ ನೋಡಿರಲಿಲ್ಲ ಕಣೆ.

ಸೊಸೆ:—ಅದೇಕೆ ?

ಅತ್ತೆ:—ನನಗೆ ನಕ್ಕು, ನಕ್ಕು, ಅರ್ಧ ಉಸಿರೆ [illegible]ಟ್ಟಿದ್ರು ಕಣೆ.

[illegible]:—ಹಾಗಾದರೆ, ಇವತ್ತೂ ಹೊಗಿ ಬನ್ನಿ

* * *

[illegible]:—(ಸಪ್ಲೈ ಮಾಡುವನ ಸಂಗಡ) ನಾನು ಇನ್ನು [illegible] ಹೋಟಲಿನಲ್ಲಿ ಕಾಫಿ ಕುಡಿಯೋದಿಲ್ಲಯ್ಯ.

ಸಪ್ಲೈ:—ಏಕೆ, ಸ್ವಾಮಿ ?

[illegible]:—ನನಗೆ ಇಷ್ಟವಿಲ್ಲ.

ಸಪ್ಲೈ:—ತಮಗೆ ಹೋಟಲಿನಲ್ಲಿ ಕುಡಿಯುವುದಕ್ಕೆ ಇಷ್ಟವಿಲ್ಲದಿದ್ದರೆ ಮನೆಗೆ ತಗೊಂಡು ಹೋಗಿ ಕುಡಿಯ[illegible]ದಲ್ಲ.

—ಕಂ. ಸುಬ್ರಹ್ಮಣ್ಯಶಾಸ್ತ್ರಿ, ಮೈಸೂರು

[illegible] ಡಾಕ್ಟರರನ್ನು ನೋಡಲು ಹೋದಳು. ಬಾಗಿ[illegible] ದಢಮ್ಮನೆ ತೆರೆದು ಒಳಗೆ ಓಡಿಹೋಗಿ:—

"ಡಾಕ್ಟರ್ ನನಗೇನು ಆಗಿದೆ, ಮುಚ್ಚುಮರೆ ಮಾಡದೆ [illegible] ಹೇಳಿ."

[illegible] ಅವಳನ್ನು ತಲೆಯಿಂದ ಕಾಲ್ತುದಿಯ ವರೆಗೆ [illegible] ನೋಡಿ:—

"[illegible]ದಲು ನಿಮ್ಮ ತೂಕವು ಕನಿಷ್ಠ ಐವತ್ತು ಪೌಂಡು [illegible] ಕಡಿಮೆಯಾಗಬೇಕು. ಎರಡನೆಯದಾಗಿ ನೀವು ಸಾಬೋನು ನೀರುಗಳ ಉಪಯೋಗವನ್ನು ಇನ್ನು ಹೆಚ್ಚಾಗಿ ಮಾಡಬೇಕು. ಕೊನೆಯ ಮಾತೆಂದರೆ ನಾನು ಚಿತ್ರಗಾರನಾಗಿದ್ದೇನೆ. ಡಾಕ್ಟರರು ಇರುವುದು ಮುಂದಿನ ಮನೆಯಲ್ಲಿ"

* * *

ಗಿರಾಕಿ (ಮಾರುವವನಿಗೆ):—ನಿಮ್ಮ ಮ್ಯಾನೇಜರರನ್ನು ಕರೆಯಿರಿ. ನಿಮಗಿಂತ ಅವರಿಗೆ ಸ್ವಲ್ಪ ಹೆಚ್ಚು ಬುದ್ಧಿಯಿರಬಹುದು.

ಮಾರುವವ:—ಹೌದು. ನಿಮ್ಮನ್ನು ನೋಡಿ ಅವರು ಇದೇ ಈಗ ಹೊರಗೆ ಹೋದರು.

* * *

"ಮಾಮಾ, ನೀನು ಪಿಯಾನು ಕೊಟ್ಟದ್ದು ಬಹಳ ಒಳ್ಳೇದಾಯಿತು."

"ಹೀಗೇನು ! ನೀನು ದಿನಾಲು ಬಾರಿಸಲಿಕ್ಕೆ ಹತ್ತೀದಿ ಹಾಗಾದರೆ ?"

"ಅದಕ್ಕಲ್ಲ ಮಾಮಾ ! ಅದನ್ನ ಬಾರಿಸದೆ ಇದ್ದರೆ ಅವ್ವನು ದಿನಕ್ಕೊಂದು ಬಿಲ್ಲಿ ಕೊಡುತ್ತಾಳೆ ನನಗೆ.

* * *

ಶಿಕ್ಷಕ (ವಿದ್ಯಾರ್ಥಿ ಮನೆಯಿಂದ ಬರೆದು ತಂದುದನ್ನು ತಿದ್ದುತ್ತ):—ಅಲ್ಲೋ ರಂಗ್ಯಾ, ಒಬ್ಬನು ಇಷ್ಟು ತಪ್ಪು ಮಾಡಿದರೆ ಗತಿಯೇನೋ ?

ರಂಗ್ಯಾ:—ಇಲ್ರಿ, ನಮ್ಮಪ್ಪನೂ ನಾನೂ ಕೂಡಿಯೆ ಬರೆದಿದ್ದೇವೆ ಅದನ್ನು.

* * *

ಯಜಮಾನಿ (ದಾಸಿಗೆ):—ಅತಿಥಿಗಳು ಬಂದಾಗ ನೀನು ಆ ಮುತ್ತಿನ ಹಾರಗಳನ್ನು ಹಾಕಿಕೊಳ್ಳಬೇಡ.

ದಾಸಿ:—ಅವು ಸುಳ್ಳು ಮುತ್ತು ಬಾಯಿಯವರೆ, ಅಂಜಿಕೆಯೇನೂ ಇಲ್ಲ.

* * *

ಸ್ವಲ್ಪ ಮಂದದೃಷ್ಟಿಯುಳ್ಳ ಗಿರಾಕಿಯು ಮೂರ್ತಿಗಳನ್ನು ಮಾರುವ ಅಂಗಡಿಗೆ ಹೋಗಿ ಬಲುಹೊತ್ತಿನ ವರೆಗೆ ಎಲ್ಲ ಮೂರ್ತಿಗಳನ್ನು ನೋಡಿ ಕೊನೆಗೊಂದನ್ನು ಕೊಂಡುಕೊಳಬೇಕೆಂದು ಮಾರುವವನಿಗೆ:—

ಆ ಬಾಗಿಲಲ್ಲಿ ನಿಲ್ಲಿಸಿದ ಡೊಂಕುಮೂಗಿನ ಕಿಸಿದಕಂಣಿನ ಕರೆ ಮೂರ್ತಿಗೇನು ಬೆಲೆ? ಅದನ್ನು ಅಂಗಳದಲ್ಲಿ ನಿಲ್ಲಿಸಿದರೆ ಕಳ್ಳರೇನೂ ಬರುವಂತಿಲ್ಲ.

ಮಾರುವವ (ಗಿರಾಕಿಯ ಕಿವಿಯಲ್ಲಿ):—ಮೂರ್ತಿ ಅಲ್ರೀ ಅದು! ಅವರು ಈ ಅಂಗಡಿ ಯಜಮಾನರು!



ನಗಬೇಡಿ

ವಳು:—ಇಂದು ಮಧ್ಯಾಹ್ನ ನಮಗೆ ಮದುವೆಯಾದ ತರ ಅಪ್ಪನು ಬ್ಯಾಂಕಿನೊಳಗಿನ ಹಣವನ್ನೆಲ್ಲ ನನ್ನ ಗೆ ಬರುವಂತೆ ಮಾಡುತ್ತಾನೆ.

ವನು:—ಹೂಂ ಹಾಗಾದರೆ ನಮ್ಮ ಮದುವೆ ಈಗಲೆ . ಮಧ್ಯಾಹ್ನ ಸೂಟಿ ಇದೆ. ಇಂದು ಬ್ಯಾಂಕಿನವರು ತ್ತ ಕೊಡುವದಿಲ್ಲ.

* * *

ಡ:—ನಿನಗೆ ಅಡಿಗೆ ಚನ್ನಾಗಿ ಮಾಡಲಿಕ್ಕೆ ಬಂದರೆ ನ ಹಣವುಳಿಸಬಹುದಾಗಿತ್ತು.

ಡತಿ:—ನಿಮಗೆ ಹಣವುಳಿಸಲಿಕ್ಕೆ ಬರುತ್ತಿದ್ದರೆ ಬ್ಬ ಅಡಿಗೆಯವನನ್ನು ಇಟ್ಟುಕೊಳ್ಳಬಹುದಿತ್ತು

* * *

:—ನನ್ನ ಹೆಂಡತಿಯ ನಗುಮೊಗವನ್ನು ನೋಡಿ ಹಾಡುಗಳನ್ನು ಕಟ್ಟುತ್ತೇನೆ.

:—ಅದೇನು ಮಹಾ! ನಾನು ಮೊದಲು ಹಾಡು ತ್ತೇನೆ. ಅದನ್ನು ಕೇಳಿ ನನ್ನ ಹೆಂಡತಿ ನಗುತ್ತಾಳೆ.

* * *

ಆಫೀಸರ ಸೇವಕನು:—ಸ್ವಾಮಿ, ತಮ್ಮನ್ನು ಲಿಕ್ಕೆ ಹೊರಗೆ ಡಾಕ್ಟರು ಬಂದಿದ್ದಾರೆ

ಸರು ನಿತ್ಯದ ಸೊಕ್ಕಿನಲ್ಲಿ ಮೈಮರೆತು:—ನನ್ನ ಚನ್ನಾಗಿಲ್ಲವಾದುದರಿಂದ ನೋಡಲಿಕ್ಕೆ ಸಾಧ್ಯ ಹೇಳು.

* * *

—ಹಾಗಾದರೆ ನೀನು ಚಹ ಕುಡಿಯುವದನ್ನು ! ಬಲು ಗಟ್ಟಿ ಮನಸ್ಸಯ್ಯ ನಿನ್ನದು!

—ಗಟ್ಟಿ ಮನಸ್ಸು ನನ್ನದಲ್ಲ, ನನ್ನ ಹೆಂಡತಿ

* * *

ಆತ:—ಮನುಷ್ಯನಿಗೆ ಗೊತ್ತಿರುವ ದೊಡ್ಡ ಜಲಶಕ್ತಿ ಯಾವದು?

ಈತ:—ಹೆಂಡತಿಯ ಅಶ್ರುಜಲ.

* * *

ಮಾಸ್ತರು:—ನಮ್ಮ ಮನಸ್ಸಿನ ಬಲದಿಂದಲೆ ಬೆಳಿಗ್ಗೆ ಬೇಗ ಏಳುವ ಅಭ್ಯಾಸವನ್ನೇಕೆ ಮಾಡಬೇಕು?

ಶಿಷ್ಯ:—ಗಡಿಯಾರ ಮೇಲಿಂದ ಮೇಲೆ ಕೆಡುತ್ತಿರುತ್ತದೆ ಅದಕ್ಕೆ.

* * *

ಮೂವರು ಮೋಟರಿನಲ್ಲಿ ವೇಗವಾಗಿ ಸಾಗುವಾಗ ಒಬ್ಬರ ಮಾತು ಇನ್ನೊಬ್ಬರಿಗೆ ಕೇಳುತ್ತಿದ್ದಿಲ್ಲ. ಆಗ ಅವರಲ್ಲಿ ಒಬ್ಬನೆಂದ:—ಇದೇ ಕಾರವಾರವೋ?

ಇನ್ನೊಬ್ಬ:—ಛೇ ಛೇ ಇಂದು ಶನಿವಾರವಪ್ಪಾ!

ಮತ್ತೊಬ್ಬ:—ಫಲಾಹಾರ ಸಿಗಬೇಕಾದರೆ ಇನ್ನೂ ನಾಲ್ಕು ಮೈಲು ಮುಂದೆ ಹೋಗಬೇಕು. ನನಗೂ ಹಸಿವೆಯಾಗಿದೆ.

* * *

ರೋಗಿ:—ಬಹಳ ತೊಂದರೆಯ ಶಸ್ತ್ರಚಿಕಿತ್ಸೆಯಾಗಬೇಕೋ?

ಡಾಕ್ಟರ:—ಅಷ್ಟೇನೂ ತೊಂದರೆ ಇಲ್ಲ; ಐವತ್ತು ರೂಪಾಯಿ ಕೊಟ್ಟರೆ ಸಾಕು.

* * *

ರಂಗ:—ಅವಳ ಬೆನ್ನು ಹತ್ತಿ ತಿರುಗುವದು ಬಿಟ್ಟಿಲ್ಲ ನೀನಿನ್ನೂ?

ಮಂಗ:—ಹೋದ ವಾರದಿಂದ ಬಿಟ್ಟಿದ್ದೇನಪ್ಪ.

ರಂಗ:—ಶಾಬಾಸ್ ಆ ಸ್ವೈರಿಣಿಯಿಂದ ನೀನು ಪಾರಾದೆ ಹೇಗೋ?

ಮಂಗ (ಗಾಬರಿಯಾಗಿ):—ಅಂ! ನಾನವಳನ್ನು ಮದುವೆಯಾದೆ!!

* * *

ಉಪಾಧ್ಯಾಯ:—ಯಾವ ತಿಂಗಳಲ್ಲಿ ೨೮ ದಿನಗಳಿವೆಯೋ ಸೀನ್ಯಾ?

ಸೀನ್ಯಾ:—(ಯೋಚಿಸಿ) ಎಲ್ಲಾ ತಿಂಗಳಲ್ಲಿಯೂ ೨೮ ದಿನಗಳು ಅವೆ.

* * *

ಯಜಮಾನಿ:—ಎಲ್ಲವ್ವಾ 'ಸೌಂದರ್ಯವರ್ಧಕ' ಎಂಬ ಪುಸ್ತಕವನ್ನು ಈಗಲೇ ಪೇಟಿಯಿಂದ ತಾ.

ಎಲ್ಲವ್ವ:—ಓಹೋ ಅದು ನಮ್ಮ ಬಾಯಿಯವರಿಗೆ ಬಹಳ ಅಗತ್ಯ ಅದೆಯೆಂದು ಹೇಳಿ ಕೂಡಲೆ ತರುತ್ತೇನೆ.

ದೀಪಾವಳಿ

★

ಇದೊ ಬಂತು ದೀಪಾವಳಿಯ ಹಬ್ಬವಿಂದು ಹ।
ಬ್ಬಿದೆ ನಾಡೊಳುತ್ಸವಂ, ದೀಪಾಳಿ ಬೆಳಗಿ ತೊಳ।
ಗಿದೆ ದಿಗ್ದಿಂಗತಮಂ; ಚೆದರುತಿದೆ ತಿಮಿರವಗ್ಗಳಿಸುತಿದೆ ಜಗದ ಸೊಬಗು

ಮುದಮಲ್ಲಿ ಮುದಮಿಲ್ಲಿ ತುಂಬಿ ತುಳುಕಿದೆ ನಾಡಿ।
ನೆದೆಯೊಳಾವುದೊ ನವ್ಯ ತೇಜ ಮುಗ್ಗಡಿಸುವಂ।
ತಿದೆ ಹಾಸಪರಿಹಾಸ ವಿಭ್ರಮವಿಲಾಸಂಗಳಿಂದೊಸಗೆ ಮಸಗುತಿರಲು ॥೧॥

ಇಂದದೇನೊಸಗೆ ಕನ್ನಡಕೆ ? ಕನ್ನಡ ತಾಯ।
ಬಂಧನಂ ಪರಿದುದೇ ? ಶೋಕವಡಗಿತೆ ? ನಾಡ।
ನೊಂದಿರ್ದ ಘೋರತಿಮಿರಂ ತೊಲಗಿತೇ ? ನವ್ಯ ಜೀವನಂ ಸ್ಫುರಿಸುತಿಹುದೇ ? ॥

ಒಂದಾಗಿ ಕನ್ನಡರು ನಿಂದರೇ ? ನಿಂದು ತರಿ।
ಸಂದು ತಮ್ಮುದ್ಧಾರಕಾಗಿ ಹೋರಾಡುವರೆ ?
ಹಂದೆಗಳ ತೆರದೊಳನಿತೊಂದನೆಸಗದೆ ವೃಥಾನಕ್ಕು ನಗೆಗೀಡಾಗರೆ ? ॥೨॥

ಒಂದಿರುಳಿನೊಸಗೆಯಿದು: ಒರಿಯ ಕಣ್ಮನಗಳಿಗೆ।
ಹೊಂದಿ ಮರೆಯಾಗುವಾನಂದವಿದು; ಜೀವನದ
ಸಿಂಧುವಿನ ಮೇಲ್ಮೈಯ್ಯೊಳೊಗೆವ ತೆರೆ; ಮಿಂಚಿ ಮರೆಯಾಗುತಿರುವೊಂದು ಬೆಳಕು! ॥

ಇಂದೆಮ್ಮ ಬಾಳು ಕಳ್ತಲೆಯ ಬಿಣ್ಪೊರೆಗೆ ಕಳೆ
ಗುಂದುತಿದೆ; ನಂದುತಿದೆ ಪೌರುಷಂ; ದೀನತೆಗೆ
ಸಂದು ಹೋಗಿದೆ ಜೀವಮಿಂತಿರಲದೇನೊಸಗೆಯೋ ನಮ್ಮ ನಾಡ ಜನಕೆ ॥೩॥

ಬರಿಯ ಬಯಲಾಡಂಬರದ ದೀಪಗಳ ಸಾಲ।
ನುರಿಸುವಿರದೇಕೆ, ಕನ್ನಡರೆ ? ನೀವಿಂದು ಸಿಂ।
ಗರಿಸಿರೈ ಕರ್ಣಾಟಕಾಭಿಮಾನಜ್ಯೋತಿಯಿಂದೆ ನಿಮ್ಮೆದೆವನೆಯನು ॥

ಹರಿದು ಹಸಗೆಟ್ಟ ನಾಡಿದನೊಂದುಗೂಡಿಸುತೆ,।
ನೆರೆನಾಡಿಗರ ಕೂಡೆ ತಲೆಯೆತ್ತಿ ನಿಂತು ಬಿ—,
ತ್ತರಿಸಿರೊಸಗೆಗಳನಂದೇ ಸಾರ್ಥಮಹುದು ದೀವಳಿಗೆ ನಮ್ಮಾ ನಾಡಿಗೆ ॥೪॥

—ಮೋಗೇರಿ ಗೋಪಾಲಕೃಷ್ಣ ಅಡಿಗ

ವಿಮೆಯಿಳಿಸುವುದೆಲ್ಲಿ ??

ಲಾಂಗ್ ಲಾಯಿಫ್

ಇನ್ಶ್ಯುರನ್ಸ ಕಂ. ಲಿ. (ಪುಣೆ)ಯಲ್ಲಿ !!!

ಪ್ರಥಮ ಮೌಲ್ಯಮಾಪನೆ (Valuation)

ಎಂಡೌಮೆಂಟ್	ಪೂರ್ಣಾಯುಷ್ಯ
ರೂ. ೧೦	ರೂ. ೨೧॥

ಬೋನಸ್ಸನ್ನು ಹಂಚಿದ್ದು.

★

ಮುಖ್ಯ ಕಚೇರಿ:—
ಲಕ್ಷ್ಮೀರೋಡ, ಪುಣೆ ನಂ. ೨.

ಶಾಖಾಕಚೇರಿಗಳು:—
ದಾದರ, ಮುಂಬಯಿ ನಂ. ೧೪.
ಬಂದರರೋಡ್, ಕರಾಚಿ

... ... **ಯಾಕೆ ??**


೧. ಸುಲಭ ವಿಮಾದರಗಳು

೨. ಭದ್ರವಾದ ಆರ್ಥಿಕ ಸ್ಥಿತಿ

೩. ಅತ್ಯಲ್ಪ ಪಾಲಿಸಿಗಳು ರದ್ದಾಗುವಿಕೆ

೪. ಸ್ತ್ರೀವಿಮೆದಾರರಿಗೆ ವಿಶೇಷಸೌಕರ್ಯಗಳು

೫. ರಾಷ್ಟ್ರೋದ್ಧಾರ ನಿಧಿ




ಅಖಿಲ ಭಾರತೀಯ ಪ್ರದರ್ಶನಗಳಲ್ಲಿ ಸುವರ್ಣಪದಕಗಳನ್ನು ಪಡೆದ

ಸಿದ್ಧೇಶ್ವರ ಮತ್ತು ಕಂಪನಿ, ಹುಬ್ಬಳ್ಳಿ

(ಹಿಂದುಸ್ತಾನ ಸರಕಾರದಲ್ಲಿ ರಜಿಸ್ಟರ ಆಗಿದೆ.)

ಸಿದ್ಧೇಶ್ವರ ತಿಜೋರಿಗಳು ಯುರೋಪಿಯನ್ ಮತ್ತು ಅಮೇರಿಕನ್ ಕಾರಖಾನೆಗಳಲ್ಲಿ ಬಳಕೆಯಲ್ಲಿರುವ ಅತ್ಯಾಧುನಿಕ ಸುಧಾರಿಸಿದ ಪದ್ಧತಿಯಿಂದ ತಯಾರಿಸಲ್ಪಡುತ್ತವೆ. ....



● ಅಖಂಡ ಉಕ್ಕಿನ ಒಂದೇ ತಗಡಿನಲ್ಲಿ, ಜಾಯಿಂಟ ಮಾಡದೆ, ೨೫೦ ಟನ್ ಪ್ರೆಸರ ಕೊಡುವ ಯಂತ್ರಶಕ್ತಿಯಿಂದ ೧೨ ಮೂಲೆಗಳನ್ನು ಬಾಗಿಸಿ ತಯಾರಿಸುತ್ತೇವೆ. ....

● ಅತ್ಯುತ್ಕೃಷ್ಟ ಪರದೇಶೀ ತಿಜೋರಿಗಳಿಗೆ ಅವು ಸರಿಗಟ್ಟುತ್ತವೆ. ಕದುದರಿಂದ ಹಿಂದುಸ್ತಾನದಲ್ಲೆಲ್ಲಾ ಸರಕಾರಿ ಆಫೀಸುಗಳಲ್ಲಿ, ಬ್ಯಾಂಕು-ಕಚೇರಿಗಳಲ್ಲಿ, ಸರಾಫ-ಸಾಹುಕಾರರಲ್ಲಿ ಹಗಲಿರುಳೂ ಉಪಯೋಗಿಸಲ್ಪಡುತ್ತವೆ. ....

● ನಾವು ತಯಾರಿಸುವ ತಿಜೋರಿ, ಉಕ್ಕಿನ ಕಪಾಟು, ಕ್ಯಾಶಬಾಕ್ಸ ಮತ್ತು ಕೀಲಿಕೈಗಳು ಕೈಗಾರಿಕೆಯಲ್ಲಿಯೂ ತಾಳಿಕೆ-ಭದ್ರತೆಗಳಲ್ಲಿಯೂ ಅದ್ವಿತೀಯವಾಗಿವೆ. ....



ವಿಜ್ಞಾನ:— ಬರೆದವರು ಜಿ. ಹನುಮಂತರಾವ್. ಪ್ರಕಾಶಕರು ಕರ್ನಾಟಕ ಸಂಘ ಶಿವಮೊಗ್ಗೆ. ಪುಟ ೧೯೯. ಬೆಲೆ ೧೨ ಆಣೆ.

ಇದು, ವಿಜ್ಞಾನವು ಮಾನವ ಸಂಸ್ಕೃತಿಯೊಡನೆ ಹೇಗೆ ಬೆಳೆದು ಬಂದಿತೆಂಬುದನ್ನು ವಿವರಿಸುವ ಪುಸ್ತಕ. ಸಾಮಾನ್ಯವಾಗಿ ಈ ಮಾದರಿಯ ಇಂಗ್ರೇಜಿ ಪುಸ್ತಕಗಳೆಲ್ಲ ವಿಶೇಷವಾಗಿ ಪಾಶ್ಚಿಮಾತ್ಯ ಜನಾಂಗಗಳ ಇತಿಹಾಸವನ್ನು ಆಧರಿಸಿ ಬರೆದವುಗಳೇ ಆಗಿರುತ್ತವೆ. ಅವುಗಳನ್ನು ಓದಿದವರಿಗೆ ವಿಜ್ಞಾನವು ಪಾಶ್ಚಿಮಾತ್ಯರ ಸೊತ್ತು ಎಂದು ಅನಿಸುತ್ತದೆ. ಆದರೆ ಪ್ರಕೃತ ಪುಸ್ತಕದ ಮಾನ್ಯ ಲೇಖಕರು ವಿಜ್ಞಾನದ ಬೆಳಿಗೆಯಲ್ಲಿ ಪೌರಸ್ತ್ಯಜನಾಂಗಗಳೂ ಸಲ್ಲಿಸಿದ ಸೇವೆಯನ್ನು ವಿವರಿಸಿದುದು ಸ್ತುತ್ಯವಾದುದು. ಭಾರತೀಯ ವಿಜ್ಞಾನಿಗಳಾದ ಸರ್ ಜಗದೀಶಚಂದ್ರ ಬೋಸ, ಸರ್ ಸಿ. ವಿ. ರಾಮನ್, ಪಿ. ಸಿ. ರೇಯವರ ಪರಿಶೋಧನೆಗಳ ಗುಟ್ಟುಗುರಿಗಳ ವಿಷಯವನ್ನು ತುಸು ವಿಸ್ತರವಾಗಿ ಈ ಪುಸ್ತಕದಲ್ಲಿ ಸೇರಿಸಿದ್ದರೆ ಭಾರತೀಯ ವಾಚಕರಿಗೆ ಹೆಚ್ಚು ಸ್ವಾಭಿಮಾನೋತ್ತೇಜಕವಾಗಬಹುದಿತ್ತು. ಲೇಖಕರ ಶೈಲಿಯು ಸರಲವೂ ಸುಲಭವೂ ಆದುದರಿಂದ ಕೆಲವು ಗಹನ ವಿಷಯಗಳೂ ವಾಚಕರ ತಿಳಿವಿಗೆ ಬೇಗ ಮುಟ್ಟುವವು. 'ಸಮಾಜ ಮತ್ತು ವಿಜ್ಞಾನ' ಮತ್ತು 'ವಿಜ್ಞಾನ ಮತ್ತು ತತ್ವಜ್ಞಾನ' ಎಂಬ ವಿಭಾಗಗಳು 'ವಿಜ್ಞಾನ'ದ ವಿಶ್ವವ್ಯಾಪಕತೆಯನ್ನು ಚನ್ನಾಗಿ ಸೂಚಿಸುತ್ತವೆ. ಪುಸ್ತಕದ ಅಚ್ಚೂ ಕಟ್ಟೂ ಚನ್ನಾಗಿವೆ.

ಮಿಂಚಿದ ಮಹಿಳೆಯರು:—ಮಿಂಚಿನ ಬಳ್ಳಿಯ ಮೂರನೆಯ ಕುಡಿ. ಬರೆದವರು ದೇಸಾಯಿ ಪಾಂಡುರಂಗರಾಯರು ಎಂ. ಎ. ಪುಟ ೧೪೦. ಬೆಲೆ ೧ ರೂ.

ಕರ್ನಾಟಕವು ಮಿಕ್ಕೆಲ್ಲ ಪ್ರಾಂತಗಳಂತೆಯೆ ಅಥವಾ ಒಂದು ತೂಕ ಹೆಚ್ಚಾಗಿಯೆ ಜೀವನದ ವಿವಿಧ ರಂಗಗಳಲ್ಲಿಯ ತಮ್ಮ ಕರ್ತೃತ್ವದಿಂದ ಜಗತ್ತಿನ ಕಣ್ಣುಕುಕ್ಕಿಸುವ ವ್ಯಕ್ತಿಗಳನ್ನು ಪಡೆದಿದೆ. ಆದರೆ ಕಾಲನ ಕ್ರೂರತನದಲ್ಲಿ ಆ ವ್ಯಕ್ತಿಗಳ ಹೆಸರುಗಳು ಕೂಡ ಹಲವು ಸಲ ನಮಗೆ ತಿಳಿದಿರುವದಿಲ್ಲ. ಮಿಕ್ಕ ಪ್ರಾಂತಗಳವರು ತಮ್ಮ ಐತಿಹಾಸಿಕ ಸ್ತ್ರೀಪುರುಷರ ಗುಣಕಾರ್ಯಗಳ ವರ್ಣನೆ ನಡೆಸಿರುವಾಗ ಕನ್ನಡ ವಿದ್ಯಾರ್ಥಿಗಳು ತಮ್ಮ ಅಜ್ಞಾನದ ಮೂಲಕ ತಲೆ ಕೆಳಗೆ ಹಾಕುವ ಪ್ರಸಂಗಬರುವದು. ಅದ[illegible] ಕರ್ನಾಟಕ ಇತಿಹಾಸ ಸಂಶೋಧಕರ ಪರಿಶ್ರಮ[illegible] ಇತ್ತೀಚೆ ನಮ್ಮ ನಾಲಿಗೆಗೆ 'ಕೃಷ್ಣರಾಜ, ಪುಲಿಕೇಶಿ' [illegible] ಒಂದೆರಡು ಹೆಸರುಗಳು ಬರುತ್ತಿವೆ. ಆದರೆ ಇದು [illegible] ಸ್ವಾತಂತ್ರ್ಯದ ಯುಗ. ಈಗಿನ ಕನ್ನಡ ಹೆಂಗಳೆಯ[illegible] ಯಾವ ಐತಿಹಾಸಿಕ ವೀರರಮಣಿಯ ಹೆಸರು ಹೇಳಿ ಸ್ವಾ[illegible]ಮಾನ ಧೈರ್ಯಗಳನ್ನು ಹೆಚ್ಚಿಸಬೇಕೆಂಬುದು ಇ[illegible] ಅನೇಕ ಶಿಕ್ಷಕಿಯರಿಗೆ, ತಾಯಂದಿರಿಗೆ ತಿಳಿದಿಲ್ಲ. ಈ[illegible] ಖಂಡಿತವಾಗಿಯೂ ಶ್ರೀ. ದೇಸಾಯಿ ಪಾಂಡುರಂಗರಾ[illegible] ಕನ್ನಡ ನಾಡಿನ 'ಮಿಂಚಿದ ಮಹಿಳೆಯರು' ನೆರವಾ[illegible]ದಲ್ಲದೆ ಕನ್ನಡ ತರುಣರಿಗೂ 'ನಾವು ಇಂತಹ [illegible] ಕುಶಲ, ಕಲಾವತಿಯರಾದ ಮಾತೆಯರ ಸಂತಾನ' [illegible] ಹೆಮ್ಮೆಯನ್ನು ಉಕ್ಕೇರಿಸುವುದರಲ್ಲಿ ಸಂದೇಹವಿಲ್ಲ. [illegible] ಲೇಖಕರ ಭಾಷೆಯು ಬಿಗಿಯುಳ್ಳದ್ದೂ ಬಲವ[illegible] ಆಗಿರುವುದು. ಪುಟಪುಟದಲ್ಲಿಯೂ ವಾಚಕರು [illegible]ವರಾಗಿಯೂ ನಮಗರಿಯದ ಕನ್ನಡಿತಿಯರ ಮಾ[illegible]ವನ್ನು ಸಾಕ್ಷಾತ್ಕರಿಸುವರು. ಪ್ರತಿಯೊಂದು ಕುಟುಂ[illegible] ಬಾಲಬಾಲಿಕೆಯರಿಗೂ ಈ ಪುಸ್ತಕವು ಓದಲಿಕ್ಕೆ ದೊ[illegible]ಲೆಂದು ಹಾರೈಸುವೆವು.

ಕೆಂದನ ಕವಿತೆ:—ನಾಲ್ಕು ಜನ ಬರೆಹಗಾರರಿಂದ ಮ[illegible]ಗಾಗಿ ಬರೆಯಲ್ಪಟ್ಟು ಹಾಸನದ ಉಪಾಧ್ಯಾಯ ಸಂಘದಿಂದ ಕ[illegible]ಲ್ಪಟ್ಟ ಕವಿತಾಸಂಗ್ರಹ. ಪುಟ ೨೪. ಬೆಲೆ ೧ ಆಣೆ.

ಬರೆಹಗಾರರು ಆರಿಸಿಕೊಂಡ ವಿಷಯಗಳು ಮ[illegible] ಮನಸ್ಸಿಗೆ ಆಕರ್ಷಕವಾಗಿವೆ. ಆದರೂ ಕಸಬು [illegible] ಕಲ್ಲು ಎಂಬೆರಡು ವಿಷಯಗಳ ಕವಿತೆಗಳು [illegible] ಮಿದುಳನ್ನು ಮೀರಿವೆ. ಮಕ್ಕಳನ್ನು ಆನಂದ[illegible]ವದು ಬರಿ ವಿಷಯವಲ್ಲ. ವಿಶೇಷತಃ ಕವಿತೆಯಲ್ಲಿ [illegible] ಪದಗತಿ ಮತ್ತು ಶಬ್ದ ಸೌಂದರ್ಯವು ಮಕ್ಕಳಿಗೆ [illegible]ವಾಗುವವು. ಮೆಚ್ಚಿನ ತಾಲ, ಶಬ್ದಗಳಲ್ಲಿದ್ದ [illegible] ಮಕ್ಕಳ ಬಾಯಲ್ಲಿ ಬೇರೂರಿ ಬಿಡುವದು. [illegible]

ಯಿಂದ ಈ ಕವಿತಾ ಸಂಗ್ರಹವು ನಿರಾಶೆಯನ್ನು ಹುಟ್ಟಿಸುವದು. ಭಾವಪ್ರಕಟನೆಗೆ ತೊಂದರೆಯಾದಾಗ ಪ್ರಾಸಿನ ಬಂಧನವನ್ನು ಬಿಡಿಸಿಕೊಳ್ಳುವದು ಒಳಿತಾದರೂ ಮಕ್ಕಳ ಕವಿತೆಗಳಲ್ಲಿ ಆದಿ-ಅಂತ್ಯಪ್ರಾಸಗಳು ಹೆಚ್ಚು ಸವಿಯನ್ನು ಹುಟ್ಟಿಸುವವುಗಳಾಗುತ್ತವೆ. ಆದರೆ ಈ ಕವಿತೆಗಳಲ್ಲಿ ಪ್ರಾಸಿನ ಕಡೆಗೆ ಅಲಕ್ಷ್ಯವಾದುದು ಕಂಡು ಬರುತ್ತದೆ. ವೃತ್ತದೋಷಗಳೂ, ಭಾಷಾದೋಷಗಳೂ, ಅಲ್ಲಲ್ಲಿ ಎದ್ದು ಕಾಣುವಂತಿವೆ. ಬರೆಹಗಾರರು ತಮ್ಮ ಮುಂದಿನ ಕೃತಿಗಳಲ್ಲಿ ಈ ಸಂಗತಿಗಳನ್ನು ಗಮನಕ್ಕೆ ತಂದುಕೊಂಡರೆ ಅವರಿಂದ ಕನ್ನಡ ಮಕ್ಕಳಿಗೆ ಇನ್ನೂ ಹೆಚ್ಚು ರುಚಿಯಾದ ಕವಿತೆಗಳು ಸಿಗುವವೆಂದು ನಂಬಿಗೆಯಿದೆ.

ಮುಂಬಯಿ ಕನ್ನಡಿಗ:—ಮುಂಬಯಿಯಲ್ಲಿ ಪ್ರಕಟವಾಗುವ ಕನ್ನಡ ರಾಷ್ಟ್ರೀಯ ವಾರಪತ್ರಿಕೆ. ಪು. ೩೨. ವಾ. ಚ. ೩ ರೂ. ೮ ಆ. ಲೋಕಮಾನ್ಯರ ಪುಣ್ಯತಿಥಿಯ ನಿಮಿತ್ತ ಹೊರಡಿಸಿದ ವಿಶೇಷ ಸಂಚಿಕೆಯು ವಿಮರ್ಶೆಗೆ ಬಂದಿದೆ. ಪತ್ರಿಕೆಯು ಹೊರಟು ಹದಿನಾಲ್ಕೇ ವಾರಗಳಲ್ಲಿ ಇಷ್ಟು ಸುಂದರವಾದುದು ಅಭಿನಂದನೀಯ. ಇದರಲ್ಲಿ ರಾಜಕೀಯವಲ್ಲದೆ ಮಿಕ್ಕ ವಿಷಯಗಳ ಲೇಖನಗಳೂ ಬರುತ್ತಿವೆ. ಪತ್ರಿಕೆಯು ವೃದ್ಧಿಂಗತವಾಗಲಿ.

ಮಾನಸಾಂಕ—(ಪ್ರಥಮ ಖಂಡ): 'ಕಲ್ಯಾಣ' ಎಂಬ ಹಿಂದಿ ಮಾಸಪತ್ರಿಕೆಯ ವಿಶೇಷಾಂಕ. ಪುಟ ೯೨೮. ಬೆಲೆ. ಇನ್ನೆರಡು ಖಂಡಗಳನ್ನು ಸೇರಿಸಿ ೪ ರೂಪಾಯಿ.

ಇದು ಶ್ರೀ ತುಲಸೀದಾಸರ 'ರಾಮಚರಿತ ಮಾನಸ' ಎಂಬ ಹಿಂದೀ ಪದ್ಯರಾಮಾಯಣದ ಟೀಕಾಗ್ರಂಥವಾಗಿದೆ. 'ಗೀತಾ ಪ್ರೆಸ್ಸಿ'ನ ಪ್ರಕಟನೆಯೆಂದ ಮೇಲೆ ಆದರ ಅಂದ ಚಂದದ ವಿಷಯಕ್ಕೆ ಬೇರೆ ಹೇಳಬೇಕಾದುದೇ ಇಲ್ಲ. ಪುಸ್ತಕವು ನೂರಾರು ದ್ವಿವರ್ಣ ತ್ರಿವರ್ಣ ಚಿತ್ರಗಳಿಂದ ಮನೋಹರವಾಗಿದೆ. ರಾಮಾಯಣದಲ್ಲಿಯ ಬಹುತರ ಎಲ್ಲ ಸಂದರ್ಭಗಳೂ ಭಾವಪೂರ್ಣವಾದ ರೇಖಾವರ್ಣಗಳಿಂದ ಚಿತ್ರಿಸಲ್ಪಟ್ಟಿವೆ. ಪ್ರತಿಯೊಂದು ಪದ್ಯಕ್ಕೂ ಸರಲ ಮತ್ತು ಸುಬೋಧವಾದ ಅರ್ಥ ಬರೆಯಲ್ಪಟ್ಟಿದೆ. ತುಲಸೀರಾಮಾಯಣದ ಅಭ್ಯಾಸಿಗಳಿಗೆ ಈ ಗ್ರಂಥವು ಒಳ್ಳೇ ಸಹಾಯಕವು.

Student's Modern Practical Dictionary (ಇಂಗ್ಲಿಷ—ಕನ್ನಡ):— ಸಂಪಾದಕರು ಶ್ರೀ. ಡಿ. ಕೆ. ಭಾರದ್ವಾಜ ಎಂ. ಡಿ. (ಆಯುರ್ವೇದ). ಪ್ರಕಾಶಕರು ಶ್ರೀ. ಪಿ. ಸಿ. ಶಾಬಾದಿಮಠ ಬುಕ್‌ಡಿಪೋ ಗದಗು. ಪುಟ ೧೧೮೪. ಬೆಲೆ ೩ ರೂ.

'ಸ್ಟುಡೆಂಟ್ಸ್ ಮೊಡೆರ್ನ್ ಕನ್‌ಸ್ಟ್ರಾಜ್ ಡಿಕ್ಶನರಿ' ಯನ್ನು ಬರೆದು ಒಂದು ವರುಷದೊಳಗಾಗಿ ಈ ಹೊಸ ನಿಘಂಟನ್ನು ಬರೆದು ಪ್ರಸಿದ್ಧಿಸಿರುವ ಶ್ರೀ. ದ. ಕೃ. ಭಾರದ್ವಾಜ ಮತ್ತು ಶ್ರೀ. ಶಾಬಾದಿಮಠ ಅವರ ಉತ್ಸಾಹವು ಶ್ಲಾಘನೀಯವಾದುದು. ಕತೆ ಕವಿತೆಗಳ ಕಾವ್ಯಮಯ ವಾತಾವರಣವನ್ನೆ ಬಯಸುತ್ತ ನೈಮರಿತ ಕನ್ನಡ ಸಾಹಿತಿಗಳಿಗೆ ಇಂತಹ ನಿಘಂಟುಗಳನ್ನು ಬರೆದವರು ಒಳ್ಳೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಭಾಷೆ ಬೆಳೆದಂತೆ ಅದರ ಅರ್ಥ-ಭಾವಗಳ ವಿವರಣೆಗೆ ಹೊಸ ನಿಘಂಟುಗಳ ಅವಶ್ಯಕತೆಯುಂಟಾಗುತ್ತದೆ. ಕರ್ನಾಟಕವು ಹೊಸಕಾಲದ ನವ ಸಾಹಿತ್ಯವನ್ನು ಕಂಡು ೩೦-೪೦ ವರುಷಗಳ ಮೇಲಾಗುತ್ತ ಬಂದರೂ ಸಮರ್ಪಕವಾದ ಹೊಸ ನಿಘಂಟು ನಿರ್ಮಾಣಕ್ಕೆ ಈ ವರೆಗೆ ಯಾರೂ ಕೈಹಾಕದಿದ್ದುದು ದುರ್ದೈವದ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯದವರು ಪರಿಪೂರ್ಣವಾದ ನಿಘಂಟುವನ್ನು ನಿರ್ಮಿಸಲು ನಿಶ್ಚಯಿಸಿ ಕಾರ್ಯಪ್ರವೃತ್ತರಾದುದು ಅಭಿನಂದನೀಯ. ಅದು ಮುಗಿಯುವ ಪೂರ್ವದಲ್ಲಿಯೆ ವಿದ್ಯಾರ್ಥಿಗಳಿಗೆ ಸುಲಭವಾಗಿ ಶೀಘ್ರವಾಗಿ ಇಂಗ್ಲಿಶ್ ಶಬ್ದಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ಅಗ್ಗವಾದ ಒಂದು ನಿಘಂಟುವಿನ ಆವಶ್ಯಕತೆಯಿತ್ತು. ಅದನ್ನು ಶ್ರೀಮಾನ್ ದ. ಕೃ. ಭಾರದ್ವಾಜರು ಪೂರೈಸಿದುದಕ್ಕಾಗಿ ಕನ್ನಡಿಗರು ಅವರಿಗೆ ಕೃತಜ್ಞರಾಗಿರತಕ್ಕದ್ದು.

ಜೀವನ- ರಸಾಯನ- ಚಿಕಿತ್ಸಾಶಾಸ್ತ್ರ:— ಬರೆದವರು ಮತ್ತು ಪ್ರಕಾಶಕರು ಡಾ. ಗೋ.ಸ. ಪಳಸುಲೆ ೨೨ ಬುಧವಾರ ಪುಣೆ ಕನ್ನಡಕ್ಕೆ ಅನುವಾದಿಸಿದವರು ಶ್ರೀ. ನಾ. ತಿ. ದಾತಾರ. ನಂ. ೨ ಪುಟ ೮೩೬. ಬೆಲೆ ೩ ರೂ.

ಮನುಷ್ಯ ದೇಹವು ಹನ್ನೆರಡು ಕ್ಷಾರಗಳಿಂದ ಸಿದ್ಧವಾಗಿದೆ; ಆ ಕ್ಷಾರಗಳ ಪರಿಮಾಣ ವ್ಯತ್ಯಾಸವೇ ರೋಗಕ್ಕೆ ಕಾರಣವೆಂದು ಜೀವನ-ರಸಾಯನಶಾಸ್ತ್ರದ ಅಭಿಪ್ರಾಯವಾಗಿದೆ. ಜರ್ಮನಿಯ ಡಾ. ಶುಶ್ಲರ್‌ನು ಅದರ ಮೂಲ ಸಂಶೋಧಕನು. ಮೊದಮೊದಲು ಅವನ ಸಂಶೋಧನೆಗಳ ವಿಷಯಕ್ಕೆ ವಿಜ್ಞಾನಿಗಳು ಕೂಡ ಹಾಸ್ಯಮಾಡುತ್ತಿದ್ದರು. ಆದರೆ ಕ್ರಮೇಣ ಜೀವನ-ರಸಾಯನದ ತತ್ವಗಳು ಚಿಕಿತ್ಸಾಶಾಸ್ತ್ರಜ್ಞರಿಗೆ ಮನವರಿಕೆಯಾದವು. ಈಗ ಸಾಮಾನ್ಯವಾಗಿ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಅದು ಪ್ರಚಾರ

ದಲ್ಲಿದೆ. ಭಾರತದ ವಿವಿಧ ಭಾಷೆಗಳಲ್ಲಿ ಈ ವಿಷಯದ ಗ್ರಂಥಗಳಾಗಿವೆ. ಕನ್ನಡದಲ್ಲಿ ಫಾದರ್ ಮುಲ್ಲರರ ಪುಸ್ತಕವೊಂದಲ್ಲದೆ ಬೇರೆಯಾವದೂ ಇಲ್ಲ. ಪ್ರಸ್ತುತ ಶ್ರೀ. ಪಳಸುಲೆಯವರ ವಿಸ್ತಾರವಾದ ಗ್ರಂಥವು ಕನ್ನಡಕ್ಕೆ ಪರಿವರ್ತಿತವಾದುದು ಪ್ರಶಂಸನೀಯ. ಜೀವನ-ರಸಾಯನ ಚಿಕಿತ್ಸಾ ಪದ್ಧತಿಗೆ ಸಂಬಂಧಿಸಿದ ಬಹುತರ ಎಲ್ಲ ವಿಷಯಗಳೂ ಇದರಲ್ಲಿ ವಿಶದವಾಗಿ ಬಂದಿವೆ. ಪುಸ್ತಕದ ಅಚ್ಚೂ ಕಟ್ಟೂ ಚನ್ನಾಗಿದೆ. ಆದರೆ ದುರ್ದೈವದಿಂದ ಮೊದಲಿನಿಂದ ಕೊನೆಯ ವರೆಗೆ ಮರಾಠಿ ಭಾಷೆಯು ಕನ್ನಡ ವೇಷವನ್ನು ಹಾಕಿಕೊಂಡು ನಿಂತಂತಿದೆ. ಶಾಶ್ವತವಾಗಿ ಬದುಕಬೇಕಾದ ಇಂತಹ ಗ್ರಂಥಗಳ ಭಾಷೆಯು ಪರಿಷ್ಕೃತವಾಗಿರಬೇಕಾದುದು ಅತ್ಯಾವಶ್ಯಕ. ಪ್ರಕಾಶಕರು ಈ ಗ್ರಂಥದ ಪುನರ್ಮುದ್ರಣದಲ್ಲಿ ಖಂಡಿತವಾಗಿ ಈ ವಿಷಯವನ್ನು ಲಕ್ಷ್ಯದಲ್ಲಿಡುವರೆಂದು ನಂಬಿದ್ದೇವೆ.

ಪ್ರದರ್ಶನದ ದಿಗ್ದರ್ಶನ: ಇದು ಬೆಳಗಾವಿಯ ' ಹಳ್ಳಿಯ ಆಳಿನ ವಿಶೇಷಾಂಕ. ಸಂಗ್ರಾಹಕರು ಶ್ರೀ. ಈಶ್ವರ ಮ. ಸಣಕಲ್ಲ. ಪುಟ ೩೬೬. ಸಹಕಾರಿಗಳಲ್ಲಿ ಹಂಚಲಿಕ್ಕಾಗಿ ಪ್ರಕಟಿಸಲಾಗಿರುವದರಿಂದ ಬೆಲೆಯನ್ನು ಎಲ್ಲಿಯೂ ಕಾಣಿಸಿಲ್ಲ.

ಕಳೆದ ಜನೆವರಿಯಲ್ಲಿ ಬೆಳಗಾವಿಯಲ್ಲಿ ಯಶಸ್ವಿಯಾಗಿ ಜರುಗಿದ ಕರ್ನಾಟಕ ಒಕ್ಕಲತನದ ಪ್ರದರ್ಶನದ ವಿಷಯಗಳನ್ನು ಸಚಿತ್ರವಾಗಿ ವ್ಯವಸ್ಥಿತವಾಗಿ ವಿವರಿಸುವ ಸಂಗ್ರಹ ಪುಸ್ತಕವಿದು. ಇದರಲ್ಲಿ ಆರೋಗ್ಯ, ಸಹಕಾರ, ಬೆಳೆಗಳು, ಗ್ರಾಮಸುಧಾರಣೆ, ಒಕ್ಕಲುತನಕ್ಕೆ ಉಪಯುಕ್ತ ಯಂತ್ರಗಳು ಮುಂತಾಗಿ ಅನೇಕ ವಿಷಯಗಳು ಒಳಗೊಂಡಿವೆ. ಮುಖ್ಯವಾಗಿ ಗ್ರಾಮಪುನರುಜ್ಜೀವನದ ತಪಶ್ಚರ್ಯೆಯನ್ನು ಕೈಕೊಳ್ಳುವವರಿಗೆ ಈ ಪುಸ್ತಕವು ಒಳ್ಳೆ ಸಹಾಯಕವಾಗಿದೆ. ನಡುನಡುವೆ ಆಯಾ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಕವಿತೆಯ ತುಂಡುಗಳೂ ಪುಸ್ತಕಕ್ಕೆ ಒಪ್ಪನ್ನು ಕೊಟ್ಟಿವೆ.

ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ : ಸಂಸ್ಕರಿಸಿದವರು: ವೈ ಸುಬ್ಬರಾವ್.

ಒಬ್ಬ ಅಜ್ಞಾತಕರ್ತೃವಿನ ಗ್ರಂಥಗಳಿವು. ಛಾಂದೋಗ್ಯೋಪನಿಷತ್ತಿನಲ್ಲಿರುವ ಮಹಾವಾಕ್ಯಗಳೆಂದು ಹೆಸರಾದ ವಾಕ್ಯಗಳಲ್ಲಿ ಒಂದಾದ 'ತತ್ತ್ವಮಸಿ' ಎಂಬುದರ ಅರ್ಥವನ್ನು ತಿಳಿದುಕೊಳ್ಳಬೇಕೆಂಬುದೇ ಈ ಎರಡು ಚಿಕ್ಕ ಗ್ರಂಥಗಳ ಗುಂಪಿನ ಉದ್ದೇಶ. ವೈ. ಸುಬ್ಬರಾಯರು ಇವುಗಳನ್ನು ಅನುವಾದ ಟಿಪ್ಪಣಿಗಳೊಡನೆ ಪ್ರಕಾಶಕ್ಕೆ ತಂದಿದ್ದಾರೆ. ಅಲ್ಲದೆ ಸಾ... ಧನ ಮಾಡುವವರಿಗೆ ಅನುಕೂಲವಾಗಲೆಂದು ಒಂದು ... ಶಾರ್ತ್ಮಕ ಪೀಠಿಕೆಯನ್ನೂ ಹಲವು ಪರಿಶಿಷ್ಟಗಳ... ಜೋಡಿಸಿದ್ದಾರೆ. ಸದ್ಯೋಮುಕ್ತಿ, ಜೀವನ್ಮುಕ್ತಿ ... ಬಗ್ಗೆಯೂ ಮಹಾವಾಕ್ಯದ ಜ್ಞಾನದಿಂದಲೇ ಬ್ರಹ್ಮ... ಕ್ಷವು ಆಗುವದೋ ಇಲ್ಲವೋ ಎಂಬುದರ ಬಗ್ಗೆ ... ವೇದಾಂತಿಗಳಲ್ಲಿರುವ ಮತಭೇದವನ್ನು ತೋರಿಸಿ... 'ತತ್ತ್ವಮಸಿ' ಎಂಬ ಮಹಾವಾಕ್ಯಕ್ಕೆ ಭಾಗತ್ಯಾಗ... (ಎರಡು ವಸ್ತುಗಳಿಗೆ ಐಕ್ಯವನ್ನು ಹೇಳುವಾಗ ... ವಾದಷ್ಟು ವಾಚ್ಯಾರ್ಥವನ್ನು ಬಿಟ್ಟುಬಿಡುವ ಲಕ್ಷ... ಯಿಂದ ಹೇಗೆ ಅದ್ವೈತ-ಮತೀಯರು ಅರ್ಥಮಾಡು... ಎಂಬುದೂ ಅದರಲ್ಲಿ ಬರುವ ಇನ್ನೂ ಕೆಲವು ... ವಿಷಯಗಳೂ ಈ ಪುಸ್ತಕವನ್ನು ಓದುವವರಿಂದ ಗೊತ್ತಾ... ಗುವವು. ಮುದ್ರಣವು ಮುದ್ದಾಗಿದೆ.

ವೈ. ಸುಬ್ಬರಾಯರ ಕನ್ನಡ ಶೈಲಿಯು ಬಹು ... ದುದೂ, ಸರಳವಾದುದೂ, ತಿಳಿಯಾದುದೂ ಎಂ... ಆಧ್ಯಾತ್ಮಪ್ರಕಾಶವೆಂಬ ಮಾಸಪತ್ರಿಕೆಯನ್ನು ... ರೆಲ್ಲರೂ ಬಲ್ಲರು. ಆಧ್ಯಾತ್ಮಪ್ರಕಾಶ ಕಾರ್ಯಾಲಯ... ಹೊರಟ ವೇದಾಂತದ (ಅದ್ವೈತ) ಕೆಚ್ಚನ್ನು ... ತೋರಿಸುವ ಪುಟ್ಟ ಪುಸ್ತಕಗಳಲ್ಲಿ ಇದೂ ... ಬೇಲೆ ೩ ಆಣೆ. ಜಿಜ್ಞಾಸುಗಳೂ, ಸಂಶೋಧಕರೂ ... ವಾಗಿ ಸಂಗ್ರಹಿಸಬೇಕಾಗಿರುವ ಪುಸ್ತಕ.

ತಟ್ಟ ಶ್ಯಾ...

ಜಯಕರ್ನಾಟಕ

ಚಂದಾದಾರರಲ್ಲಿ

ವಾರ್ಷಿಕ ಚಂದಾ (ಅಂಚೆಯವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೭-೦-೦ ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೩-೮-೦; ಬಿಡಿ ಸಂಚಿಕೆ ೦-೬-೦; ವ್ಹಿ.ಪಿ.ವೆಚ್ಚ ಬೇರೆ.

'ಜಯಕರ್ನಾಟಕ'ವು ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳ ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡವಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡವಾದವರು ಮುಂಚಿತ ತಿಳಿಸುವುದರ ಅಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕಂದರೆ ಅದರಿಂದ ವ್ಯರ್ಥ ವ್ಹಿ. ಪಿ. ವೆಚ್ಚಕ್ಕೆ ಗುರಿಯಾಗುವುದು. ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ೧೫ನೆಯ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

ಜಾಹೀರಾತುದಾರರಲ್ಲಿ

ಜಯಕರ್ನಾಟಕವು ಕರ್ನಾಟಕದಲ್ಲೆಲ್ಲ ಸಂಚರಿಸುವುದಲ್ಲದೆ, ಪರಪ್ರಾಂತ-ಪರದೇಶಗಳಲ್ಲಿಯೂ ಹೋಗುವುದರಿಂದ, ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕೆ ಉತ್ತಮ ಮಾಧ್ಯಮ.

ಜಾಹೀರಾತುದಾರರು ೫೦% ಹಣವನ್ನು ಮುಂಗಡ ಕಳಿಸಲೇ ಬೇಕು. ಒಂದೇ ಸಲ ಪ್ರಕಟನೆ ಕೊಡಲಪೇಕ್ಷಿಸುವವರು ಇಡಿಯ ಹಣವನ್ನು ಕಳಿಸಬೇಕು. ೨೦ನೆಯ ತಾ. ನ ಒಳಗಾಗಿ, ಜಾಹೀರಾತು ಕಾರ್ಯಾಲಯಕ್ಕೆ ತಲುಪಬೇಕು.

ಪ್ರಕಟನೆಯ ದರಗಳು

ಒಂದು ಪುಟಕ್ಕೆ	ಒಂದು ಸಲಕ್ಕೆ	೨೦ ರೂ
ಅರ್ಧ ಪುಟಕ್ಕೆ	,, ,,	೧೨ ,,
೧|೪ ಪುಟಕ್ಕೆ	,, ,,	೭ ,,
೧|೮ ಪುಟಕ್ಕೆ	,, ,,	೪ ,,

ವಿಶೇಷ ಸ್ಥಳ ಬೇಕಾದಲ್ಲಿ ಮತ್ತು ದೀರ್ಘಾವಧಿ ಜಾಹಿರಾತುಗಳ ದರಗಳಿಗಾಗಿ ಬರೆದು ತಿಳಿದುಕೊಳ್ಳಬೇಕು.

ಬರೆಹಗಾರರಲ್ಲಿ

(೧) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬ ಬಗ್ಗೆ ತಿಳಿದುಕೊಳ್ಳಲು ಬಯಸುವ ಬರೆಹಗಾರರು, ತಮ್ಮ ಲೇಖನದೊಡನೆ ಅಂಚೆಯ ವೆಚ್ಚಕ್ಕಾಗಿ ಮೂರು ಬಿಲ್ಲೆಗಳ ಟಕೀಟೊಂದನ್ನು ಇಡಬೇಕು. (೨) ತಮ್ಮ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆವೆಚ್ಚದಷ್ಟು ಟಕೀಟುಗಳನ್ನು ಅದರೊಂದಿಗೆ ಇಡಬೇಕು. (೩) ಲೇಖನವು ಒಂದೇ ಮಗ್ಗಲಿಗೆ ಸುವಾಚ್ಯವಾದ ಅಕ್ಷರಗಳಲ್ಲಿ ಬರೆಯಬೇಕು. ಸಾಕಷ್ಟು 'ಮಾರ್ಜಿನ' ಬಿಡಬೇಕು. (೪) ಲೇಖನದ ಹಸ್ತಪ್ರತಿಯು ಜ. ಕ. ದ ನಾಲ್ಕು ಪುಟಗಳನ್ನು ಸಾಮಾನ್ಯವಾಗಿ ಮಿಕ್ಕಬಾರದು. (೫) ಜಯಕರ್ನಾಟಕಕ್ಕೆ ಬರುವ ಲೇಖನಗಳು ಜಯಕರ್ನಾಟಕಕ್ಕೆಂದೇ ಇರಬೇಕು. ಇಲ್ಲಿ ಪ್ರಕಟವಾಗುವ ಮೊದಲು ಇನ್ನೆಲ್ಲಿಯೂ ಪ್ರಕಟವಾಗಿರಬಾರದು. ಆ ಮೇಲೂ ಬೇರೆಕಡೆ ಪ್ರಕಟವಾಗುವ ಪಕ್ಷದಲ್ಲಿ ಸಂಪಾದಕರ ಅನುಮತಿಯನ್ನು ಪಡೆಯಬೇಕು. (೬) ಜಯಕರ್ನಾಟಕಕ್ಕೆಂದು ಬಂದ ಲೇಖನವು ಉದ್ಧೃತ ಇಲ್ಲವೆ ಅನ್ಯಭಾಷೆಯಿಂದ ಪರಿವರ್ತಿತವಿದ್ದಲ್ಲಿ ಮೂಲವನ್ನು ಉಲ್ಲೇಖಿಸಬೇಕು.

ಸಾಮಾನ್ಯ

ಚೆಕ್ಕುಗಳು, ಮನಿಯಾರ್ಡರುಗಳು, ಬೇರೆ ಬಗೆಯ ಹಣದ ವ್ಯವಹಾರ ಇವನ್ನು ಮತ್ತು ಲೇಖನಾದಿಗಳ ಪತ್ರವ್ಯವಹಾರವನ್ನು "ಸಂಪಾದಕ ಜಯಕರ್ನಾಟಕ, ಧಾರವಾಡ" ಇವರ ಹೆಸರಿನಲ್ಲಿಯೂ, ಜಾಹೀರಾತಿನ ಪತ್ರವ್ಯವಹಾರವನ್ನು "ಕಾರ್ಯದರ್ಶಿ, ಜ. ಕ. ಪ್ರಕಟನಾ ವಿಭಾಗ" ಇವರ ಹೆಸರಿನಲ್ಲಿಯೂ, ಬೇರೆ ಕಾರ್ಯಾಲಯದ ವ್ಯವಹಾರವನ್ನು "ವ್ಯವಸ್ಥಾಪಕ"ರ ಹೆಸರಿನಲ್ಲಿಯೂ ನಡೆಯಿಸಬೇಕು.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಕನ್ನಡದ ಮುನ್ನಡೆ


★

ಕನ್ನಡ ಮಹಿಳೆಯರು

'ಸರಸ್ವತಿ' ಎಂಬ ಕನ್ನಡ ಮಾಸಪತ್ರಿಕೆಯನ್ನು ೧೬ ವರ್ಷಗಳಿಂದ ಯಶಸ್ವಿಯಾಗಿ ನಡೆಸುತ್ತ ಬಂದಿರುವ ಅವಿಶ್ರಾಂತ ಸಮಾಜಸೇವಿಕೆಯರೂ, ಸಾಹಿತ್ಯಸೇವಿಕೆಯರೂ ಆಗಿರುವ ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮ ಅವರ ಪ್ರಜಾಸೇವಾಕಾರ್ಯಕ್ಕಾಗಿ ಮೈಸೂರಿನ ಶ್ರೀಮನ್ಮಹಾರಾಜರು ಅವರಿಗೆ ಪ್ರಥಮವರ್ಗದ 'ಪಬ್ಲಿಕ್ ಸರ್ವಿಸ್' ಪದಕವನ್ನು ದಯಪಾಲಿಸಿದ್ದಾರೆ.

ಬೆಂಗಳೂರಿನ ಶ್ರೀಮತಿ ಸಿ. ಎಸ್. ರತ್ನಮ್ಮ ಅವರು ಈಸಲ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಶ್ರೀಮತಿ ಕೆ. ಎನ್. ಜಯಮ್ಮ ಅವರು ಬಿ. ಎ. ಪರೀಕ್ಷೆಯಲ್ಲಿ 'ಸಂಸ್ಕೃತ ಆನರ್ಸ್' ಆಗಿ ಉತ್ತೀರ್ಣರಾದರು.

ದಕ್ಷಿಣಕನ್ನಡದ ಡಾ. ಮಿಸ್ ವೆಂಕಟರಾವ್ ಶೆಟ್ಟಿಯವರು ಮುಂಬೈ ವಿಶ್ವವಿದ್ಯಾಲಯದಲ್ಲಿ ಉಚ್ಚ ವೈದ್ಯ



ಡಾಕ್ಟರ ಮಿಸ್ ಶೆಟ್ಟಿ

[illegible] ಶಿಕ್ಷಣ ಪಡೆದು ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ [illegible] ಹೊಂದಿ ಈಗ ವೈದ್ಯವಿದ್ಯೆಯಲ್ಲಿ ಇನ್ನೂ ಹೆಚ್ಚಿನ ಅನುಭವ ಪಡೆಯಲು ಇಂಗ್ಲಂಡಿಗೆ ತೆರಳಿರುವರು.

'ಶ್ರೀ'ಯವರ ಸತ್ಕಾರ

"ಆಧುನಿಕ ಕನ್ನಡದ ಕಾವ್ಯ ಕುಲಪತಿ" ಗಳಾದ ಶ್ರೀಮಾನ್ ಬೆಳ್ಳೂರ ಮೈಲಾರ ಶ್ರೀಕಂಠಯ್ಯನವರ ಅದ್ವಿತೀಯ ಭಾಷಾಸೇವೆಯನ್ನು ಮೆಚ್ಚಿ ಮೈಸೂರ ಮಹಾರಾಜರು ಅವರಿಗೆ "ರಾಜಸೇವಾಸಕ್ತ" ಎಂಬ ಬಿರುದನ್ನಿತ್ತು ಮನ್ನಿಸಿರುವದು ಸಮಸ್ತ ಕನ್ನಡಿಗರಿಗೂ ಆನಂದದಾಯಕವಾಗಿದೆ. ಶ್ರೀಮಾನ್ ಶ್ರೀಕಂಠಯ್ಯನವರ ನಯ ವಿನಯ ಸೌಜನ್ಯ ಸಚ್ಛೀಲ ಸದಾಚಾರಗಳು ಅಖಿಲ ಕನ್ನಡಿಗರಿಗೂ ಮಾರ್ಗದರ್ಶಕಗಳಾಗಿವೆ. ಕನ್ನಡ ನಾಡು ನುಡಿಗಳ ಮುನ್ನಡೆಗಾಗಿ ಬದುಕನ್ನೇ ಮುಡುಪಾಗಿಟ್ಟ ಪ್ರಶಾಂತ ಗಂಭೀರರಾದ ಶ್ರೀ|| ಶ್ರೀಕಂಠಯ್ಯನವರು ರಾಜಸೇವಾಸಕ್ತರಷ್ಟೆ ಅಲ್ಲ, "ಕರ್ನಾಟಕ ರಾಷ್ಟ್ರಸೇವಾಸಕ್ತ" ರೆಂಬಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಅವರ ಹೃದಯ ವಿಶ್ವವಿಶಾಲ. ವಿದ್ವತ್ಕಲಾಪ್ರೌಢರೂ, ಉಜ್ವಲ ಕನ್ನಡ ಕವಿಗಳೂ, ಪ್ರೇಮ ಮೂರ್ತಿಗಳೂ ಆದ ಶ್ರೀಮಾನ್ ಶ್ರೀಕಂಠಯ್ಯನವರನ್ನು ನಾವು ಅಭಿನಂದಿಸುವೆವಲ್ಲದೆ, ಅವರಿಗೆ ಚಿರವಾದ ಆಯುರಾರೋಗ್ಯಗಳು ಲಭಿಸಿ ಕನ್ನಡ ತಾಯಿಗೆ ಅಮಿತಾನಂದವನ್ನುಂಟುಮಾಡಲೆಂದು ಪ್ರಾರ್ಥಿಸುವೆವು.

ಶ್ರೀಮಾನ್ ಉಮ್ಮರ್ಜಿಯವರು

ಬಾಗಲಕೋಟೆಯ ವಾಸುದೇವ ಅಮೆಚೂರ ನಾಟಕ ಸಭೆಯವರು ಮೊನ್ನಿನ ಎಂ. ಎಸ್. ಸಿ. ಪರೀಕ್ಷೆಯಲ್ಲಿ ಇಡೀ ಮುಂಬಯಿ ವಿಶ್ವವಿದ್ಯಾಲಯಕ್ಕೆ ಮೊದಲನೇ ನಂಬರ ಬಂದ ಶ್ರೀಮಾನ್ ಆರ್. ಆರ್. ಉಮ್ಮರ್ಜಿಯವರಿಗೆ ಹಾರ್ಡಿಂಜ ಲಾಯಬ್ರರಿಯಲ್ಲಿ ನಾಗರಿಕರ ಸಭೆ ಕರೆದು ಯಥೋಚಿತ ಸನ್ಮಾನ ಮಾಡಿದರು. ಉಮ್ಮರ್ಜಿಯವರು ವಿದ್ವಾಂಸರು. ಈ ವರೆಗೆ ಅನೇಕ ಶಿಷ್ಯವೃತ್ತಿ, ಪಾರಿತೋಷಕಗಳನ್ನು ಸಂಪಾದಿಸಿ ಎಂ. ಎಸ್. ಸಿ. ಯಲ್ಲಿ ಮೊದಲನೆ ನಂಬರ ಬಂದು ಕರ್ನಾಟಕಕ್ಕೆ ಕೀರ್ತಿ ತಂದರು.

ಮೈಸೂರು ಸಂಸ್ಥಾನದ ವಿದ್ಯಾರ್ಥಿ ಸಮ್ಮೇಲನ

ಕಳೆದ ತಿಂಗಳ ೧೫ನೇ ತಾರೀಕಿಗೆ ಮೈಸೂರಲ್ಲಿ ಶ್ರೀ ಶರತ್ ಚಂದ್ರ ಬೋಸರವರ ಅಧ್ಯಕ್ಷತೆಯಲ್ಲಿ ಮೈಸೂರು ವಿದ್ಯಾರ್ಥಿ ಸಮ್ಮೇಲನವು ಬಹು ಯಶಸ್ವಿಯಾಗಿ ನೆರವೇರಿತು. ಶ್ರೀ ಬೋಸರು ಆಧುನಿಕ ಕಾಲಕ್ಕೆ ತಕ್ಕಂತೆ ವಿದ್ಯಾರ್ಥಿಗಳು ನವೋತ್ಸಾಹದಿಂದ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಜಾತಿ

ವರ್ಣಭೇದವಿಲ್ಲದೆ ಪಾಲುಗಾರರಾಗಬೇಕೆಂದು ಬೋಧಿಸಿದರು.

ಕರ್ನಾಟಕ ಸಂಘ ಚಿತ್ರದುರ್ಗ

ಚಿತ್ರದುರ್ಗದ ಕರ್ನಾಟಕ ಸಂಘವು ತಾ. ೯-೧೨-೩೩ರಲ್ಲಿ ಸ್ಥಾಪಿತವಾಗಿ ಕ್ರಮೇಣ ಜನರಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸುವ ಚಟುವಟಿಕೆಗಳನ್ನು ನಡೆಸುತ್ತಿದೆ.

ಈ ವರೆಗೆ ಈ ಸಂಘದ ಆಶ್ರಯದಲ್ಲಿ ಒಟ್ಟು ... ಗಳು ಜರುಗಿರುತ್ತವೆ. ಅವುಗಳಲ್ಲಿ ಉಪನ್ಯಾಸಗಳು ... ಭಾರತವಾಚನಗಳು ೬, ನಾಟಕಾಭಿನಯಗಳು ೫, ... ವಾಚನಗಳು ೭, ವಿಶೇಷೋತ್ಸವಗಳು ೮, ಸಂಗೀತ ... ಹರಿಕಥಾ ೪.

ಸಂಘವು ಚಂದಾಹಣದಿಂದಲೂ, ನಾಟಕಾಭಿನಯ... ಬಂದ ಹಣದಿಂದಲೂ ಕೆಲಸ ನಡೆಸಿರುತ್ತದೆ.

ಶ್ರದ್ಧಾಂಜಲಿ

ಶ್ರೀಮತಿ ಟಿ. ಕನಕಲಕ್ಷ್ಮಮ್ಮ

ಮೈಸೂರು ಮಹಾರಾಣೀ ಕಾಲೇಜದಲ್ಲಿ ಇಂಗ್ಲೀಷ ಭಾಷಾ ಸಹಾಧ್ಯಾಪಿಕೆಯರಾಗಿದ್ದ ಶ್ರೀಮತಿ ಟಿ. ಕನಕಲಕ್ಷ್ಮಮ್ಮನವರು ಕಳೆದ ತಿಂಗಳ ೮ನೇ ತಾರೀಕಿನ ರಾತ್ರಿ ಮರಣಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಅವರಿಗೆ ೪೧ ವರ್ಷ ವಯಸ್ಸಾಗಿದ್ದಿತು. ಮೈಸೂರು ಮತ್ತು ಲಂಡನ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ ಪಡೆದು ಅವರು ೧೯೩೪ರಲ್ಲಿ ಮೈಸೂರ ಸರಕಾರದಲ್ಲಿ ಉದ್ಯೋಗಕ್ಕೆ ಸೇರಿದರು. ಕೆಲವು ಕಾಲ ಬಾಲಿಕಾ ಪಾಠಶಾಲೆಗಳ ಡೆಪ್ಯುಟಿ ಇನಸ್ಪೆಕ್ಟ್ರೆಸ್ ಆಗಿಯೂ ಮಹಾರಾಣೀ ಹಾಯ್‌ಸ್ಕೂಲಿನ ಮುಖ್ಯೋಪಾಧ್ಯಾಯಿನಿಯರಾಗಿಯೂ ಇದ್ದರು. ಅವರು ವಿದ್ಯಾರ್ಥಿನಿಯರುಗಳಿಗೆ ಬಹಳ ಬೇಕಾಗಿದ್ದವರಾಗಿದ್ದರು. ಅವರಿಗೆ ಸಂಗೀತದಲ್ಲಿಯೂ ನಾಟ್ಯಕಲೆಯಲ್ಲಿಯೂ ಬಹಳ ಅಭಿರುಚಿಯಿತ್ತು. ಗತಿಸಿದ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರ ಸಮೀಪದ ಬಂಧುಗಳಾಗಿದ್ದ ... ವರದಾಚಾರ್ಯರ ಸ್ಮಾರಕಕ್ಕಾಗಿ ಬಹಳ ಸೇವೆ ... ತ್ತಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ.


'ಮುಂಬಯಿ ಕನ್ನಡಿಗ'ದ ಉತ್ಪಾದಕರು

'ಮುಂಬಯಿ ಕನ್ನಡಿಗ' ಪತ್ರದ ಉತ್ಪಾದಕರಾದ ... ಜಗನ್ನಾಥ ಮಹಾಲೆಯವರು ಕಳೆದ ಒಂದು ತಿಂಗ... ವಿಷಮಜ್ವರದಿಂದ ಹಾಸಿಗೆ ಹಿಡಿದು ೨೦-೧೦-೩೮ ... ಕಾಲ ತೀರಿಕೊಂಡರು. ಇವರು ಕಳೆದ ಸತ್ಯಾ... ಸಮರದಲ್ಲಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಮೈ... ದುಡಿದು ಸೆರೆಮನೆವಾಸವನ್ನು ಸಹ ಅನುಭವಿಸಿದರು. ... ಕೊನೆಯವರೆಗೆ ತಮ್ಮ ಸಾರ್ವಜನಿಕ ಚಟುವಟಿಕೆಗ... ಬಿಡಲಿಲ್ಲ. ಅದರಲ್ಲಿಯೇ ತಮ್ಮ ದೇಹವನ್ನು ... ಅವರ ಆತ್ಮಕ್ಕೆ ಶಾಂತಿ ಸಿಗಲಿ.

ನಮ್ಮ ಮಾತು

ನಾಡಹಬ್ಬ

ನವರಾತ್ರಿಯನ್ನು ಕನ್ನಡ ನಾಡಹಬ್ಬವೆಂದು ಅದನ್ನು ಕನ್ನಡನಾಡು ಪುನಃ ವಿಜೃಂಭಣೆಯಿಂದ ಆಚರಿಸಲಾರಂಭಿಸಿ ೬—೭ ವರ್ಷಗಳಾದವು. ಕಳೆದ ವರ್ಷ ೨೦ ಊರುಗಳಲ್ಲಿ ನಡೆದ ನಾಡಹಬ್ಬವು ಈ ವರ್ಷ ೩೪ ಊರುಗಳಲ್ಲಿ ನಡೆದುದು ಕನ್ನಡಿಗರಲ್ಲಿ ಆತ್ಮಜಾಗೃತಿಯಾದುದರ ಲಕ್ಷಣವಲ್ಲವೇ ?



ಸಂಪಾದಿಕೆಯರ ಸನ್ಮಾನ

ಜಯಕರ್ನಾಟಕದ ಸಂಪಾದಿ... ರಾದ ಶ್ರೀ. ಸೌ. ಶ್ಯಾಮಲಾದೇವಿ... ಬಳ್ಳಾರಿಯಲ್ಲಿ ಕೂಡಿದ ಬಳ್ಳಾರಿ ಜಿ... ಮಹಿಳಾ ಪರಿಷತ್ತಿನ ಅಧ್ಯಕ್ಷತೆ... ವಹಿಸಿದರು. ಅವರು ತಮ್ಮ ... ದಲ್ಲಿ ಮಹಿಳೆಯರ ಚಳವಳಿಯ ... ಕತೆಯನ್ನು ವಿವರಿಸಿದರು. ಅಲ್ಲದೆ ... ಈ ಸಲದ ಧಾರವಾಡ ನಗ... ಚುನಾವಣೆಯಲ್ಲಿ ನಾಲ್ಕನೆ ವಾ... ಸದಸ್ಯೆಯರಾಗಿ ಆರಿಸಿ ಬಂದರು.

ಸಾದರಸ್ವೀಕಾರ

★

೭೭. **ಅಖಿಲ ಕರ್ನಾಟಕ ಮಕ್ಕಳಕೂಟ** (ಕನ್ನಡಿಗರ ಕಣಜ)ದ ಕಾರ್ಯಕ್ರಮ ಪತ್ರಿಕೆ. ಕಾರ್ಯದರ್ಶಿ: ಶ್ರೀ. ಟಿ. ಎಸ್. ಆರ್. ಸ್ವಾಮಿ. ವ್ಯವಸ್ಥಾಪಕರು: ಶ್ರೀಮತಿ ಆರ್. ಕಲ್ಯಾಣಮ್ಮ. ಚಾಮರಾಜಪೇಟೆ, ಬೆಂಗಳೂರು ಸಿಟಿ. ಕ್ರಾ. ೧|೪ದ ೨೩೬ ಪುಟಗಳು. ವಾರ್ಷಿಕ ಚಂದಾ ೦—೬—೦.

೭೮. **ಕನ್ನಡ ಬಾವುಟ** (ಕವಿತೆಗಳು) ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿತವಾದುದು. ಡೆ. ೧|೮ದ ೧೫೫ ಪುಟಗಳು. ೧—೦—೦.

೭೯. **ಪರಿವರ್ತನೆ**— (ಕಥೆಗಳು) ಬರೆದವರು: ಶ್ರೀ. ಕುಸಬೆಟು ರಾಮರಾಯರು; ಎಂ. ಎ. ಎಲ್. ಟಿ. ಹೊಸಪೇಟೆ. ಪ್ರಕಾಶಕರು: ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಕ್ರಾ. ೧|೮ದ ೯೯ ಪುಟಗಳು. ೦—೮—೦.

೮೦. **ಭೌತಶಾಸ್ತ್ರದ ಪ್ರಥಮ ಪಾಠಗಳು**, ಭಾಗ ೨ ಲೇಖಕರು: ಶ್ರೀ. ಸಿ. ಎಸ್. ಶ್ರೀನಿವಾಸರಾವ, ಬಿ. ಎ., ಬಿ. ಟಿ. ಡಿ. ೧|೮ದ ೧೮೦ ಪುಟ. ೦—೧೨—೦.

೮೧. **ಉಯ್ಯಾಲೆ**— (ಕವಿತೆಗಳು) ಲೇಖಕರು: ಅಂಬಿಕಾತನಯದತ್ತ. ಪ್ರಕಾಶಕರು: ಶ್ರೀ. ಬಿ. ಜಿ. ಹುಮ್ಮಲಿಗಿ. ಕ್ರಾ. ೧|೮ದ ೧೧೨ ಪುಟ. ೧—೦—೦.

೮೨. **ಪ್ರತಿಜ್ಞಾ ಯೌಗಂಧರಾಯಣ**— (ನಾಟಕ) ಅನುವಾದಕರು: ಶ್ರೀ. ಎಲ್. ಗುಂಡಪ್ಪ, ಎಮ್. ಎ. ಕ್ರಾ. ೧|೮ದ ೬೮ ಪುಟ. ೦—೧೦—೦.

೮೩. **Mysore Information Bulletin**— ಮೈಸೂರ ಸರಕಾರದ ಪ್ರಕಟನಾ ಕಚೇರಿಯವರಿಂದ ಪ್ರಕಟಿಸಲ್ಪಟ್ಟದ್ದು. ಪುಟ. ೩೦.

೮೪. **ಧರ್ಮಸಂಕಟ**— (ಏಕಾಂಕನಾಟಕ) ನಾಟಕಕಾರರು: ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ಕ್ರಾ. ೧|೮ದ ೪೨ ಪುಟ. ೦—೪—೦.

೮೫. **ಉಪನಿಷತ್ತಿನ ಕಥೆಗಳು**— ಅನುವಾದಕರು: ಶ್ರೀ. ಕೆ. ಸಂಪದ್ಗಿರಿರಾಯರು. ಪ್ರಕಾಶಕರು: ಸತ್ಯಶೋಧನ ಪುಸ್ತಕ ಭಾಂಡಾರ, ಬೆಂಗಳೂರು. ಕ್ರಾ. ೧|೮ದ ೭೬ ಪುಟ. ೦—೬—೦.

೮೭. **ಕವಿ ಕನಕದಾಸರು**— ಲೇಖಕರು: ಕಟ್ಟಿ ಶೇಷಾಚಾರ್ಯರು ಬೆಳಗಾವ ಕ್ರಾ. ೧|೮ದ ೨೫೮ ಪುಟಗಳು ಬೆಲೆ ೧—೮—೦.

೮೮. **ಚಾಮರಸಕೃತ ಪ್ರಭುಲಿಂಗ ಲೀಲೆ**, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ ಧಾರವಾಡ ಡೆ೧|೮ದ ೩೨೬ ಪುಟಗಳು ಸಾದಾ ಪ್ರತಿ ೨—೦—೦

ಕ್ಯಾಲಿಕೊ ,, ೨—೮—೦

೯೦. **Baroda and its Libraries**—ಲೇಖಕರು: ನ್ಯೂಟನ್ ಮೋಹನ್‌ದತ್ತ ಬಡೋದಾ. ರಾಯಲ ೧|೮ದ ೧೯+೬ ಪುಟಗಳು.

೯೧. **ದೇಶಭಕ್ತ**—(ನಾಟಕ) ಬರೆದವರು: ಕೆ. ಕೆ. ಶೆಟ್ಟಿ. ಪ್ರಕಾಶಕರು: ಕಿರಿಯರ ಪ್ರಪಂಚ ಉಡುಪಿ. ಕ್ರಾ. ೧|೪ದ ೧೪೮+೧೨ ಪುಟಗಳು. ಬೆಲೆ ೦—೧೦—೦.

೯೨. **ನಂದಾದೀಪ**—ಬರೆದವರು: ಕೊರಡ್ಕಲ್ ಶ್ರೀನಿವಾಸರಾವ. ಪ್ರಕಾಶಕರು: ಕಿರಿಯರ ಪ್ರಪಂಚ ಉಡುಪಿ. ಕ್ರಾ. ೧|೪ದ ೮೦ ಪುಟಗಳು. ಬೆಲೆ ೦—೮—೦.

೯೪. **ಪೂರ್ಣಯೋಗ**—ಅನುವಾದಕರು: ಮಧುರಚೆನ್ನ. ಪ್ರಕಾಶಕರು: ಅರವಿಂದ ಗ್ರಂಥಮಾಲೆ ಹಲಸಂಗಿ ಕ್ರಾ. ೧|೪ ದ ೧೧೦ ಪುಟಗಳು. ವಾ. ಚಂ. ೩—೮—೦.

೯೫. **ಅಮಾತ್ಯನಂದಿನಿ**—ಲೇಖಕರು: 'ಭಾರತೀಸುತ' ಕ್ರಾ. ೧|೪ ದ ೨೯ ಪುಟಗಳು. ಬೆಲೆ ೧—೪—೦.

೧೦೦. **ಭಾರತೀಯ ನೂತನ ಸಂಯುಕ್ತ ರಾಜ್ಯಘಟನೆ**—ಲೇಖಕರು ಮತ್ತು ಪ್ರಕಾಶಕರು: ಶ್ರೀ. ಶಿವರಾಯ ಭೋಜಪ್ರಭು ಪಾಟೀಲ ಮಾಸ್ತರ ಹಿರಿಯ ಬಾಗೆವಾಡಿ. ಕ್ರಾ. ೧|೮ ದ ೫೬ ಪುಟಗಳು. ಬೆಲೆ ೦—೪—೦.

೧೦೧. **ನಮ್ಮೂರ ನಡತೆ**—(ನಾಟಕ) ಲೇಖಕರು: ಶ್ರೀಕೃಷ್ಣ ಪಾಟೀಲ, ಪ್ರಕಾಶಕರು: ವ. ಭೀ. ಪಾಟೀಲ ಬೆಳಗಾಂವ. ಕ್ರಾ. ೧|೮ ದ ೫೦ ಪುಟಗಳು.

ಬೆಲೆ ೦—೪—೦.

ಪರಿವಿಡಿ

ಕಾವೇರಿಯ ಜಲಪ್ರಪಾತ (ಮುಖಚಿತ್ರ) ....

ಮೈಸೂರಿನ ದಿವಾಣ ಸಾಹೇಬರವರ ಸಂದೇಶ ....

ಮುಂಬಯಿಯ ಮಂತ್ರಿವರ್ಯರ ಸಂದೇಶ ....

ಕಂಸಶಿಲೆ (ಕವನ) .... ಶ್ರೀ. ಕೆ. ವಿ. ಪುಟ್ಟಪ್ಪ ....

ವೃತ್ತಿಗಾಗಿ ಶಿಕ್ಷಣ .... ರಾಜಕಾರ್ಯಪ್ರವೀಣ ಶ್ರೀ. ಎನ್. ಎಸ್. ಸುಬ್ಬರಾವ್ ಎಂ. ಎ. ಬಾರ್-ಆ್ಯಟ್-ಲಾ ....
.... ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸಲರ್ ಅವರು ೮೯೫

ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು .... ಶ್ರೀ. ದಿನಕರ ದೇಸಾಯಿ ಎಂ. ಎ. ಎಲ್‌ಎಲ್. ಬಿ. ೮೯೯

ಶಿಕ್ಷಣವು ಸ್ವಾವಲಂಬಿಯಾಗಬಲ್ಲುದು .... ಶ್ರೀ. ಸ್ವಾಮಿ ಭರತಾನಂದರು ೯೦೯

ಅಮೆರಿಕೆಯ ಶಿಕ್ಷಣಧೋರಣೆ ....ಮಿ. ಜೇಮ್ಸ ಟ್ರಸ್ಲೊ ಆಡ್ಯಾಮ್ಸ್ ೯೧೧

ವರ್ಧಾ ಶಿಕ್ಷಣ ವರದಿಯ ವಿಮರ್ಶೆ .... ಶ್ರೀ. ಜಿ. ಹನುಮಂತರಾವ್ ಎಂ. ಎ. ೯೧೩

ಬಡಹುಡುಗಿ (ಕವನ).... .... ಶ್ರೀ. ಜಿ. ವರದರಾಜರಾವ್ ೯೧೯

ವರ್ಧಾಶಿಕ್ಷಣ ಯೋಜನೆ (ಆಕ್ಷೇಪಗಳಿಗೆ ಉತ್ತರಗಳು) .... ಶ್ರೀ. ರಾ. ಶ್ರೀ. ಹುಕ್ಕೇರಿಕರ ಎಂ. ಎ. ೯೨೦

ಶಿಕ್ಷಣದ ಗೊತ್ತುಗುರಿಗಳು .... ಶ್ರೀ. ದಿವಾಕರ ರಂಗರಾಯರು ಎಂ. ಎ. ಎಲ್‌ಎಲ್. ಬಿ. ೯೨೫

ನಮ್ಮ ಹಿರಿಯ ಸಮಸ್ಯೆ .... ಶ್ರೀ. ಬಿ. ಜೆ. ಜಿ. ಶಾಸ್ತ್ರಿ, ಮುಂಬಯಿ ಪ್ರಾಂ. ದಕ್ಷಿಣಭಾಗದ,.. ....
.... ಎಜುಕೇಶನಲ್ ಇನ್‌ಸ್ಪೆಕ್ಟರರು ೯೨೬

ಶಿಕ್ಷಣ ವಿರಾಣ್ಮೂರ್ತಿ (ಕವನ) .... ಶ್ರೀ. ಈಶ್ವರ ಸಣಕಲ್ಲ ,,

ಶಿಕ್ಷಣದಿಂದ ರಾಷ್ಟ್ರೈಕ್ಯ .... ಡಾ. ಜಿ. ಎಸ್. ಕೃಷ್ಣಯ್ಯ ಎಂ. ಎ., ಪಿಎಚ್.-ಡಿ. ೯೨೭

ಶಿಕ್ಷಣಕ್ಕೆ ಧ್ಯೇಯವಿರಬೇಕೇ? .... ಪ್ರೊ. ಆರ್. ವಿ. ಜಾಗಿರದಾರ ಎಂ. ಎ. (ಲಂಡನ್) ೯೩೧

ಭಾರತಕ್ಕೆ ರಾಷ್ಟ್ರೀಯ ಶಿಕ್ಷಣ (ಶ್ರೀ ಅ್ಯನಿ ಬೆಜಂಟರ ಕಲ್ಪನೆ ಮತ್ತು ಕಾರ್ಯ) ಶ್ರೀ. ಎಂ. ಎಸ್. ಮಾಧವರಾವ್
ನಮ್ಮ ಶಿಕ್ಷಣಪದ್ಧತಿಯ ದೋಷವೆಲ್ಲಿ? .... ಶ್ರೀ. ಕಾ. ಗ. ವರ್ಟಿ ಎಂ. ಎ. ಬಿ. ಟಿ.
ಸೆರೆಯಾಳುಗಳ ಶಿಕ್ಷಣ .... 'ತಾರಾದಾಸ'
ನಾಝೀ ಶಿಕ್ಷಣ .... 'ವಿಶ್ವವಿಹಾರಿ'
ಆಸ್ಟ್ರಿಯದಲ್ಲಿಯ ಶಿಕ್ಷಣ .... ಶ್ರೀ. ಹನುಮಂತರಾವ್ ಮಾಂಜರೇಕರ ಬಿ. ಎ.
ಸುಶಿಕ್ಷಿತ ಸ್ತ್ರೀಯರ ದೇಶಗಳು ....ಶ್ರೀ. ಎಂ. ಪಿ. ತಿರುಮಲ ಅಚಾರ್ಯ
ಪುಸ್ತಕಗಳಿಂದ ರೋಗಪರಿಹಾರ .... ಪ್ರೊ. ಎಂ. ಜಿ. ರಾವ್
ಪ್ರೊ. ಕೆ. ವಿ. ಅಯ್ಯರ್ (ಚಿತ್ರ) ....
ವಿದ್ಯಾರ್ಥಿಯೂ ವ್ಯಾಯಾಮವೂ .... ಪ್ರೊ. ಕೆ. ವಿ. ಅಯ್ಯರ್ ಡಿ. ಪಿಎಚ್. ಇ.
ಚಿಕ್ಕವರ ಅಪರಾಧಪ್ರವೃತ್ತಿ, ಮತ್ತದನ್ನು ತಿದ್ದುವ ಬಗೆ.... ಶ್ರೀ. ಬಿ. ಡಿ. ಸಾವರಕರ ಬಿ. ಎ., ಎಂ. ಇಡಿ. (ಲೀಡ್ಸ್)
ವಯಸ್ಕರ ಶಿಕ್ಷಣ .... ಶ್ರೀ. ನಾ. ಕಸ್ತೂರಿ ಎಂ. ಎ. ಬಿ. ಎಲ್.
ಕಾಮುಶಿಕ್ಷಣವೆಂದರೇನು? .... ಡಾ. ಎಂ. ಗೋಪಾಲಕೃಷ್ಣರಾಯರು, ಸಂಪಾದಕ ಕಲಿಯುಗ
ಸಹಶಿಕ್ಷಣ .... ಶ್ರೀ. ಎ. ಸಿ. ದೇವೇಗೌಡ ಎಂ. ಎ. (ಕೊಲಂಬಿಯ), ಬಿ. ಟಿ., ಎಂ. ಇಡಿ. (ಲೀಡ್ಸ್)
ಗುರುಕುಲ ಶಿಕ್ಷಣ .... ಶ್ರೀ. ಎಸ್. ಆರ್. ದಿಡ್ಡಿ ಬಿ. ಎಸ್‌ಸಿ., ಬಿ. ಟಿ.....
ಪ್ರಾಚೀನ ವಿದ್ಯಾಭ್ಯಾಸಕ್ರಮದ ಒಂದು ಚಿತ್ರ .... ಶ್ರೀ. ಜಿ. ಪಿ. ರಾಜರತ್ನಂ ಎಂ. ಎ.
ಕುಲಪತಿ (ಕವನ) .... ಶ್ರೀ. ಶಂಕರ ನಾರಾಯಣ, ವಿದ್ವಾನ್
ಶಿಕ್ಷಣವೂ ಚಲಚ್ಚಿತ್ರಗಳೂ .... ಡಾ. ಫ್ರೆಡ್ರಿಕ್ ಎಂ. ಥ್ರ್ಯಾಶರ್
ಆಗರ್ಭ ಶಿಶುಸಂಸ್ಕಾರ .... 'ಶ್ಯಾಮಸುಂದರ'
ಒಬ್ಬ ಹೆಂಣುಮಗಳು ಕಂಡ ಹಾಗೆ—.... .... ಶ್ರೀಮತಿ ಸೌ. ಎಂ. ರಮಾಬಾಯಿ
ಅತಿ ಮುದ್ದಿಸಿದ ಮಗು .... ಶ್ರೀ. ಸಿ. ವಿ. ಶ್ರೀನಿವಾಸಮೂರ್ತಿ ಎಂ. ಎ.
ಮೈಸೂರಿನಲ್ಲಿಯ ಶಿಶುವಿಹಾರದ ದೃಶ್ಯಗಳು (ಚಿತ್ರಗಳು) ....
ಶಿಶುಶಾಲೆಗಳು ಬೇಕು! .... ಡಾ. ಜಿ. ಎಸ್. ಕೃಷ್ಣಯ್ಯ ಎಂ. ಎ. ಪಿಎಚ್. ಡಿ.
ಡಾಲ್ಟನ್ ವಿದ್ಯಾಭ್ಯಾಸಕ್ರಮ .... ಶ್ರೀ. ಕೆ. ಶ್ರೀನಿವಾಸ ಆಚಾರ್ಲು ಎಂ. ಎ. ಬಿ. ಟಿ.
ಹೀಗೇ ಮುನ್ನಡೆದರೆ ನಿರಕ್ಷರತೆಯು ದೂರವಾದೀತೇ? .... ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು
ಆಟಗೆಗಳು .... ಶ್ರೀ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ.
ಕ್ರೀಡಾವನ .... ಶ್ರೀ. ಬಿ. ಕುಪ್ಪುಸ್ವಾಮಿ ಎಂ. ಎ.
ಮಕ್ಕಳಿಗೆ ಕಲಾಶಿಕ್ಷಣ .... ಶ್ರೀ. ಶಿವರಾಮ ಕಾರಂತ
ಪ್ರೌಢಶಿಕ್ಷಣ .... ಶ್ರೀ. ಜೆ. ಪಿ. ನಾಯಿಕ ಬಿ. ಎ. (ಆನರ್ಸ್)
ನಮ್ಮ ಶಿಕ್ಷಣಕ್ರಮದಲ್ಲಿ ಕರ್ನಾಟಕ .... ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ.
ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಅಭ್ಯಾಸ .... ಶ್ರೀ. ಎಸ್. ಎಸ್. ಮಾಳವಾಡ ಎಂ. ಎ.
ಕರ್ನಾಟಕ ಶಿಕ್ಷಣ ಪರಿಷತ್ತು .... 'ನಿರೀಕ್ಷಕ'
ಮಾತೃಭಾಷೆಯ ಶಿಕ್ಷಣ ....ಶ್ರೀ. ನಾರಾಯಣ ಭಟ್ಟ, ವಿದ್ವಾನ್
ವಾಚಕರೊಡನೆ— .... ಸಂಪಾದಕರಿಂದ
ಬಿಡಿನುಡಿಗಳು .... "



ಕಾವೇರಿಯ ಜಲಪ್ರಪಾತ

ಮೈಸೂರು ದಸರಾ ಪ್ರದರ್ಶನ ಸಮಿತಿಯವರ ಕೃ

ಜಯಕರ್ನಾಟಕ

ಶಿಕ್ಷಣಾಂಕ

ಸಂಪುಟ ೧೬ ● ಬಹುಧಾನ್ಯ ಸಂ. ಮಾರ್ಗಶಿರ ಶುಕ್ಲ ೯ (೧-೧೨-೧೯೩೮) ● ಸಂಚಿಕೆ ೧೨

೧೯೩೮ರ ವಿಶೇಷಸಂಚಿಕೆ





ಮೈಸೂರಿನ ದಿವಾಣಸಾಹೇಬರವರ ಸಂದೇಶ

BANGALORE

1st November 1938.

....

The problems of Indian education are increasing in their variety and complexity and, naturally, they have been exercising some of the best minds in the country.

I hope that the effort of Mr. Belgaumkar to bring out a special number dealing with education in "the most liberal and comprehensive sense of the term" may serve to elucidate and clarify the thoughts which have been expressed on the subject.

Mr. Belgaumkar has my best wishes for the success of his enterprise.

Mirza M. Ismail

DEWAN OF MYSORE.

ಮುಂಬಯಿಯ ಮಂತ್ರಿವರ್ಯರ ಸಂದೇಶ



I send my best wishes for the special education issue of your magazine. I hope it will be a great success.

[illegible]

ಕಂಸಶಿಲೆ

ನೀನೊಬ್ಬನೆಯೆ ಅಲ್ಲ, ಸಾವಿನಳುಕಿಗೆ ಸಿಕ್ಕಿ,
ಮುದ್ದಾಡಲರ್ಹವಹ ಶಿಶುಗಳೇಳನು ಶಿಲೆಗೆ
ಬಡಿದು ಕೊಂದೆಂಟನೆಯದರ ಕೈಲಿ ಸೀಳ್ಗೊಲಿಗೆ
ತುತ್ತಾದವನು, ಕಂಸ ! ನಮ್ಮೆದೆಗಳಸು ಕುಕ್ಕಿ

ನೋಡಿದರೆ ಕಾಣುವುದು ಮಕ್ಕಳೆಲುಬಿನ ರಾಶಿ !
ಒಂದೊಂದು ಹೃದಯವೂ ಕಂಸಶಿಲೆ: ನೂರಾರು
ಹೊಂಗನಸಿನಾದರ್ಶ ಶಿಶುಗಳಾಯೆಡೆ ಚೂರು
ಚೂರಾದರೇನ್ ? ತುದಿಗೆ ಗೆಲುವನಸುರದ್ವೇಷಿ

ಧ್ವಂಸಗೈದಾ ದೇವವೈರಿಯಂ. — ಬಾಲ್ಯದಿಂ
ಕಟ್ಟುವೆವು, ಕೆಡಹುವೆವು; ಹಳಿವೆವೊಲಿವೆವು ಮತ್ತೆ;
ಕಿಚ್ಚಿಟ್ಟೊಲುಮೆ ಬೂದಿಯಾಗೆ ಮತ್ತೊಂದೊಲುಮೆ

ಮೋಹಿಪುದು ಬಿಗಿದಪ್ಪಿ. ರುಚಿಯ ಚಾಪಲ್ಯದಿಂ
ತುಟಿಯಿಡುವೆವಾ ಕೊಳಕೆ ಈ ಕೊಳದ ನೀರ್ ಬತ್ತೆ. —
ಕೃಷ್ಣನೈತರ್ಪನ್ನೆಗಂ ಕಂಸನೆದೆ ಕುಲುಮೆ !

—ಕೆ. ವಿ. ಪುಟ್ಟಪ್ಪ

ವೃತ್ತಿಗಾಗಿ ಶಿಕ್ಷಣ

(Education for a Vocation)

ಲೇಖಕರು:

ರಾಜಕಾರ್ಯಪ್ರವೀಣ

ಶ್ರೀ. ಎನ್. ಎಸ್. ಸುಬ್ಬರಾವ್,

ಎಂ. ಎ., ಬಾರ್-ಆ್ಯಟ್-ಲಾ,

ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸಲರ್ ಅವರು

★

- ಮೈಸೂರು ಸಂಸ್ಥಾನದ ವಿದ್ಯಾಕ್ಷೇತ್ರದಲ್ಲಿ ವಿವಿಧ ಸ್ಥಾನಗಳಲ್ಲಿ ವಿವಿಧ ಅನುಭವಗಳನ್ನು ಪಡೆಯುತ್ತ ಇದೀಗ ಅಲ್ಲಿಯ ಅತ್ಯುಚ್ಚ ವಿದ್ಯಾಧಿಕಾರಿಗಳಾಗಿ ಮೆರೆಯುತ್ತಿರುವ ಈ ಮಹನೀಯರ ಲೇಖನವು ಎಲ್ಲರ ಸಾದರ ಪರಿಶೀಲನೆಗೆ ಅರ್ಹವಾಗಿದೆಯೆಂಬುದರಲ್ಲಿ ಸಂಶಯವಿಲ್ಲ.
- ಶ್ರೀಯುತರು ಮೈಸೂರು ಸಂಸ್ಥಾನ-ಕರ್ನಾಟಕ-ಭರತಖಂಡಗಳಿಗೆ ಮಾತ್ರ ಭೂಷಣರಾಗಿರದೆ, ತಮ್ಮ ಅರ್ಥಶಾಸ್ತ್ರ ಪಾಂಡಿತ್ಯದಿಂದ, ಉದಾರ ವಿಚಾರಸರಣಿಯಿಂದ, ಹಾಗೂ ಜಾಗತಿಕ ಪರಿಸ್ಥಿತಿಯ ಸಮ್ಯಗಾಲೋಚನೆಯಿಂದ ಆಂತರರಾಷ್ಟ್ರೀಯ ಸ್ಥಾನವನ್ನೂ ಪಡೆದಿರುವರು.
- ನಮ್ಮ ಶಿಕ್ಷಣದ ಪುನರ್ಘಟನೆಯು ಎಂತು ಅನಿವಾರ್ಯವಾಗಿದೆ? 'ವೃತ್ತಿಶಿಕ್ಷಣ'ದ ಏರ್ಪಾಡನ್ನು ತ್ವರಿತವಾಗಿ ಮಾಡುವುದು, ದೇಶದಲ್ಲಿಯ ಇಂದು-ಮುಂದಿನ ಉದ್ಯೋಗಗಳ ಪರಿಸ್ಥಿತಿಗೆ ಸರಿಹೊಂದುವಂತೆ ಆ ಶಿಕ್ಷಣದ ಸ್ವರೂಪವನ್ನು ತಯಾರಿಸುವುದು ಎಂತು ಅಗತ್ಯವಿದೆ? —ಎಂಬುದನ್ನು ಈ ಚಿಕ್ಕ ಲೇಖನದಲ್ಲಿ ಶ್ರೀಯುತರು ಬಹುಸಮರ್ಪಕವಾಗಿ ತೋರಿಸಿದ್ದಾರೆ.

ನಮ್ಮ ಮಕ್ಕಳಿಗೆ ನಾವು ಯಾವ ಶಿಕ್ಷಣವನ್ನು ಕೊಡಬೇಕೆಂಬ ಬಗ್ಗೆ ನಮ್ಮ ವಿಚಾರಗಳು ತುಂಬಾ ಹೊರಬುರುಗಿನವೂ ಅಸ್ಪಷ್ಟವೂ ಆಗಿವೆಯೆಂಬುದು ವಿಸ್ಮಯಜನಕವಾಗಿದೆ. ಶಿಕ್ಷಣಾವಧಿ ಮುಗಿದಕೂಡಲೆ ನಮ್ಮ ಮಕ್ಕಳು ಜೀವನೋಪಾಯವನ್ನು ಕಂಡುಕೊಂಡವರಾಗಬೇಕೆಂಬುದು ನಮ್ಮೆಲ್ಲರ ಬಯಕೆಯಾಗಿದೆ; ಆದರೆ ನಮ್ಮ ಹೈಸ್ಕೂಲು-ಕಾಲೇಜುಗಳಲ್ಲಿ ಸಿಕ್ಕುವ ಶಿಕ್ಷಣವು, ಭವಿಷ್ಯಜೀವನದಲ್ಲಿ ಅವರು ಕೈಕೊಳ್ಳಬಹುದಾದ ಉದ್ಯೋಗಗಳ ಕಡೆಗೆ ಸ್ವಲ್ಪವಾದರೂ ಗಮನ ಕೊಡಬೇಕೆಂದು ಯಾರಾದರೂ ಸೂಚನೆಯನ್ನು ಮಾಡಿದರೆ, 'ಅಯ್ಯೋ! ಶಿಕ್ಷಣದ ಪವಿತ್ರ ಉದ್ದೇಶದ ವಿಡಂಬನೆಯಾಗುತ್ತಿದೆ!' ಎಂಬ ಒಂದೇ ಒಂದು ಕೂಗು ಕೇಳಬರುವುದು. ಆದರೂ ಹೀಗೆ ಗುಲ್ಲೆಬ್ಬಿಸುವವರೇ ಪ್ರಸಂಗ ಬಂದಾಗ, ಹೊರಳಿಬೀಳುವರೆಂಬುದೂ ಸ್ಪಷ್ಟವಿದೆ; ದಿನದಿನಕ್ಕೆ ಭರದಿಂದ ಹೊರಬೀಳುತ್ತಿರುವ ಪದವೀಧರರ ಪಡೆಯನ್ನು ನಮ್ಮ ಸಮಾಜದ ಆರ್ಥಿಕ ವ್ಯವಸ್ಥೆಯು ಅರಗಿಸಿಕೊಳ್ಳದಿರುವುದರ ದೋಷವನ್ನೆಲ್ಲ ಈಗಿನ ಶಿಕ್ಷಣಪದ್ಧತಿಯ ಮೇಲೆಯೆ ಹೊರಿಸಲು ಅವರು ಹಿಂಜರಿಯಲಾರರು. ಹೀಗೆ ಕೆಲವು ಜನರ ಮನಸ್ಸಿನಲ್ಲಿರುವ ಮತಸಂಕರಕ್ಕೆ ಸಾಮಾನ್ಯವಾಗಿ ನಮ್ಮಲ್ಲಿ ನೆಲೆಗೊಂಡ ಒಂದು ಗ್ರಹಿಕೆಯೆ ಕಾರಣವಾಗಿದೆ; ಅದೆಂದರೆ, 'ಔದ್ಯೋಗಿಕ ಶಿಕ್ಷಣದಲ್ಲಿ ಏನೋ ಒಂದು ಕೀಳ್ತನವಿದೆ; ಸಂಸ್ಕೃತಿಗಾಗಿ ಕೊಡುವ ಶಿಕ್ಷಣಕ್ಕಿಂತ ಅದು ಕಡಿಮೆದರ್ಜೆಯದು; ಮತ್ತು ಚರಿತಾರ್ಥಕ್ಕಾಗಿ ಕೊಡುವ ಶಿಕ್ಷಣವೂ ಸಂಸ್ಕೃತಿಗಾಗಿ ಕೊಡುವ ಶಿಕ್ಷಣವೂ ಪರಸ್ಪರ ವಿಸಂಗತವಾಗಿವೆ' ಎಂಬುದು.

ಈ ವಿಚಾರವೈಷಮ್ಯವಿರಬೇಕಾದುದು ವಿಷಾದದ ಸಂಗತಿಯಾಗಿದೆ. ವಾಸ್ತವವಾಗಿ, ಶಿಕ್ಷಣದ ಸಾಂಸ್ಕೃತಿಕ ಮತ್ತು ವೃತ್ತಿಪ್ರಧಾನ (Cultural and Vocational) ಧ್ಯೇಯಗಳೆರಡನ್ನೂ ಮೇಳಯಿಸುವುದು ಶಕ್ಯವಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಯಾವುದಾದರೊಂದು ವೃತ್ತಿಯನ್ನು ಅನುಸರಿಸುತ್ತಿರುವಾಗಲೇ ಸಂಸ್ಕೃತಿಯ ಒಂದು ಮಟ್ಟವನ್ನು ಪಡೆಯಲು ಪ್ರಯತ್ನಿಸುತ್ತಲೇ ಇಲ್ಲವೇ? ಸಂಸ್ಕೃತಿಯು ವ್ಯಕ್ತಿಯದೇ ಇರಲಿ, ಸಮಾಜದ್ದೇ ಆಗಲಿ, ರಾಷ್ಟ್ರದ್ದೇ ಆಗಲಿ,—ಅದಕ್ಕೊಂದು ಆರ್ಥಿಕ ತಳಹದಿಯಿದ್ದೇ ಇರುವುದು. ಉಚ್ಚ ಕಲಾವ್ಯಾಸಂಗವು ತಕ್ಕ ಐಹಿಕ ಸೌಕರ್ಯಗಳಿಲ್ಲದೆ ಸಾಗದು; ಕೇವಲ ಏಕಾಂತಿಕ ವಿಚಾರದಲ್ಲಿಯೆ ತೊಡಗಿದವರೂ ಜೀವನದ ಪುಶ್ಚೆಯನ್ನು ತಾವೆ ಬಿಡಿಸಿಕೊಳ್ಳಬೇಕಾಗುವುದು,

ಇಲ್ಲವೆ ಆಬಗ್ಗೆ ಸಮಾಜದ ಮೇಲೆ ಅವಲಂಬಿಸಿರಬೇಕಾಗುವುದು; —ಸಮಾಜವು ಅಂಥವರ ಯೋಗಕ್ಷೇಮವನ್ನು ನೋಡಿಕೊಳ್ಳುವುದಾದರೂ ಅವರ ವಿಚಾರಸಾಧನಕ್ಕೆ ಸಾಮಾಜಿಕ ಬೆಲೆಯೊಂದು ಇರುತ್ತದೆಂತಲೇ.

ಆದುದರಿಂದ ನಮ್ಮ ಹೈಸ್ಕೂಲು-ಕಾಲೇಜುಗಳಲ್ಲಿಯ ಶಿಕ್ಷಣಕ್ಕೆ ಔದ್ಯೋಗಿಕ ಸಂಸ್ಕಾರವನ್ನು ಕೊಡುವುದು ಇದೀಗ ಅತ್ಯಗತ್ಯವಾಗಿದೆಯೆಂದು ಒತ್ತಿಹೇಳಲಿಕ್ಕೆ ಸ್ವಲ್ಪವೂ ಸಂಕೋಚಪಡಬೇಕಾಗಿಲ್ಲ. ವಿದ್ಯಾಭ್ಯಾಸದ ಇನ್ನು ಬೇರೆಯ ಗುರಿಗಳಾದ ಸಂಸ್ಕೃತಿಸಂಪಾದನೆ ಮತ್ತು ಯೋಗ್ಯ ನಾಗರಿಕನಾಗುವುದರ ತಯಾರಿ—ಇವನ್ನೇನೂ ಈ ಬದಲಾವಣೆಯು ಕಿತ್ತೊಗೆಯಲೆಳಸುವುದಿಲ್ಲ; ಆ ಉದ್ದೇಶಸಾಧನೆಗಳಿಗೆ ಇದೊಂದು ಒಳ್ಳೆಯ ಜತೆಯೆ ಆಗುವುದು. ಪ್ರತಿಯೊಬ್ಬನೂ ಸಂಸ್ಕೃತಿಯ ಔನ್ನತ್ಯವನ್ನು ತಕ್ಕಮಟ್ಟಿಗೆ ಮುಟ್ಟಲೆಬೇಕೆಂಬುದೂ ತಾನಿರುವ ಸಮಾಜದಲ್ಲಿಯ ತನ್ನ ಅಸ್ತಿತ್ವವನ್ನೂ ಹೊಣೆಗಾರಿಕೆಯನ್ನೂ ಅರಿತುಕೊಳ್ಳಲೆಬೇಕೆಂಬುದೂ ಎಷ್ಟು ಆವಶ್ಯಕವಿದೆಯೋ, ಅಷ್ಟೇ—ಅದಕ್ಕಿಂತ ಹೆಚ್ಚಾಗಿ—ಅವನು ತನ್ನ ಕಾಲಮೇಲೆ ತಾನು ನಿಂತುಕೊಂಡು ಹೊಟ್ಟೆಹೊರಕೊಳ್ಳಬೇಕೆಂಬುದೂ ಮಹತ್ವದ್ದಿದೆ. ಆದುದರಿಂದ ತೀರ ಏಕಾಂಗೀನವಾಗಿರುವ ನಮ್ಮ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಯೋಗ್ಯ ತಿದ್ದುಪಡೆಯನ್ನು ಮಾಡಿ, ಅದು ವೃತ್ತಿಶಿಕ್ಷಣದ ಮಹತ್ವವನ್ನು ಬೇಗನೆ ಅರಿಯುವಂತೆ ಮಾಡುವುದು ತುಂಬಾ ಅಗತ್ಯವಾಗಿದೆ. ಈ ಚಿಕ್ಕ ಬರೆವಣಿಗೆಯಲ್ಲಿ ಎಲ್ಲಾ ವಿವರಗಳನ್ನು ತಿಳಿಯಪಡಿಸುವುದು ಸಾಧ್ಯವಿಲ್ಲ, ಆದರೆ ಇಷ್ಟನ್ನು ಸೂಚಿಸಬಹುದು:—

ಪ್ರಾಥಮಿಕ ವಿದ್ಯಾಭ್ಯಾಸವನ್ನು ವಿಚಾರಪೂರ್ವಕವಾದ ರೀತಿಯಲ್ಲಿ ರಚಿಸಬೇಕು; ಅದರ ಸಮರ್ಪಕವಾದ ತಳಹದಿಯ ಮೇಲೆ ಮುಂದಿನ ಶಿಕ್ಷಣದ ಎರಡು ಸಮಾಂತರ ಪದ್ಧತಿಗಳನ್ನು ಕಲ್ಪಿಸಬೇಕು. ಅವುಗಳಲ್ಲಿ ಒಂದು ಕೇವಲ ವೃತ್ತಿವಿಷಯಕ (Vocational) ವಾಗಿದ್ದು, ಕುಶಲ ಕೈಗಾರಿಕೆಗಳನ್ನು ಬಲ್ಲವರನ್ನಾಗಿ ತಯಾರಿಸುವುದು ಅದರ ಗುರಿಯಾಗಿರಬೇಕು; ಇನ್ನೊಂದು 'ಸಾಮಾನ್ಯಜ್ಞಾನಪ್ರಧಾನ' (literary) ವಾಗಿದ್ದು, (ಈಗಿನ) ಸಾಮಾನ್ಯ ಹೈಸ್ಕೂಲ್, ಇಲ್ಲವೆ ಔದ್ಯೋಗಿಕ ಹೈಸ್ಕೂಲ್ (the general High-School or the Vocational High-School) ಗಳಿಗೆ ಸೋಪಾನದೋಪಾದಿಯಲ್ಲಿರಬೇಕು. ಹೈಸ್ಕೂಲ್ ತರಗತಿಗೆ ಬಂದಾಗ, ಔದ್ಯೋಗಿಕ ಹೈಸ್ಕೂಲುಗಳು ಕುಶಲ ಕೆಲಸಗಾರರನ್ನು (superior workmen), ಇಲ್ಲವೆ ಕಾರ್ಖಾನೆಗಳಲ್ಲಿಯ ಮೇಸ್ತ್ರಿಗಳನ್ನು (Foremen) ತಯಾರಿಸುವಂತಹವು ಆಗಿರಬೇಕು; ಹಾಗೂ ಸಾಮಾನ್ಯ ಹೈಸ್ಕೂಲುಗಳು ಈಗಿನ ವಿಶ್ವವಿದ್ಯಾಲಯಗಳ ಅಭ್ಯಾಸಕ್ರಮಕ್ಕಾಗಲಿ ಇಲ್ಲವೆ ಹೈಸ್ಕೂಲ್ ತರಗತಿಯ ತರುವಾಯದ ಔದ್ಯೋಗಿಕ ಶಿಕ್ಷಣಕ್ರಮಕ್ಕಾಗಲಿ ತರಬೇತುಗೊಳಿಸುವಂತಹವು ಆಗಬೇಕು.

ಈರೀತಿ, ಹೈಸ್ಕೂಲ್ ಶಿಕ್ಷಣಕ್ರಮವು ಮುಗಿಯುವಷ್ಟರಲ್ಲಿ ದೇಶಕ್ಕೆ ಬೇಕಾಗುವ ಫೋರ್ಮೆನ್ ಅಥವಾ ಮೇಸ್ತ್ರಿಗಳನ್ನು ಖಂಡಿತವಾಗಿ ಪೂರೈಸಬಲ್ಲ, 'ಡಿಪ್ಲೊಮಾ' ತರಗತಿಗೇರಿಸಿ ಕಲಿಯಬಹುದಾದ ಔದ್ಯೋಗಿಕ ಶಿಕ್ಷಣಕ್ರಮವು ಪ್ರಾರಂಭವಾಗುವುದು. ಇಂಗ್ಲಂಡಿನಲ್ಲಿಯ ತಜ್ಞರು, ಈ ಜಾತಿಯ ತಾಂತ್ರಿಕ ಶಿಕ್ಷಣ (Technical Education) ದ ಪದ್ಧತಿಯನ್ನು ಒತ್ತಿಯೊತ್ತಿ ಹೇಳಿದ್ದಾರೆ. ಈ ಅಭ್ಯಾಸಕ್ರಮವನ್ನು ಕೌಶಲ್ಯದಿಂದ ವಿರಚಿಸಿ, ದೇಶದಲ್ಲಿ ಇದೀಗ ಪ್ರಚಲಿತವಿರುವ ಹಾಗೂ ಈ ಮುಂದೆ ಉಂಟಾಗಬಹುದಾದ ಉದ್ಯೋಗಗಳ ಪರಿಸ್ಥಿತಿಗೆ (occupational pattern of the country) ಹೊಂದಿಕೆಯಾಗುವಂತೆ ಅದನ್ನು ಏರ್ಪಡಿಸಿದರೆ, ಈಗಿನ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯಸಂಸ್ಕೃತಿಯ ತರಗತಿ (literary courses) ಗಳಲ್ಲಿ ಕಂಡುಬರುವ ವಿದ್ಯಾರ್ಥಿಗಳ ವಿಪರೀತ ನುಗ್ಗಾಟವು ಕಡಿಮೆಯಾದೀತೆಂದು ಅಪೇಕ್ಷಿಸುವುದು ತಪ್ಪಾಗಲಾರದು. ಒಂದುಕಡೆಗೆ ದೇಶಕ್ಕೆ ಉಪಯೋಗಬೀಳುವ ನಾಗರಿಕರು ಹೆಚ್ಚುಹೆಚ್ಚಾಗಿ ತಯಾರಾಗುವರು; ಇನ್ನೊಂದು ಕಡೆ ವಿಶ್ವವಿದ್ಯಾಲಯದ ಪದವೀಧರರ ಸಾಮಾನ್ಯ ಸಂಸ್ಕೃತಿಯ ದರ್ಜೆಯೂ ಎತ್ತರವಾಗುವುದು.

ನಮ್ಮ ದೇಶದಲ್ಲಿ ಶಿಕ್ಷಣಕ್ಕಾಗಿ ಬೇಡಿಕೆ ಹೆಚ್ಚುತ್ತಿದೆಯೆಂಬುದನ್ನು ನಾವು ಮರೆಯಲಾಗದು; ಆದುದರಿಂದ ಈಗ ನಮ್ಮ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯಷ್ಟೇ ಮಾತ್ರವಲ್ಲ, ಅತ್ಯಧಿಕವಾಗಿ ಬೆಳೆದ ನಮ್ಮ ದೇಶದ ಹುಡುಗ ಹುಡುಗಿಯರ ಒಟ್ಟು ಸಂಖ್ಯೆಯನ್ನೂ ನಾವು ಗಮನಿಸಬೇಕು. ಈ ಸಂಖ್ಯೆಯಲ್ಲಿ ನೂರಕ್ಕೆ ೫೦. ರಷ್ಟು ಮಕ್ಕಳು ಶಾಲೆಗೆ ಹೋಗುತ್ತಲೇ ಇಲ್ಲ; ಪ್ರಾಥಮಿಕ ಶಾಲೆಗೆ ಹೋಗುವ ಇನ್ನುಳಿದ ೫೦ ರಲ್ಲಿ ಒಂದು ಐದನೆಯ ಭಾಗದಷ್ಟು ಮಾತ್ರ ಪ್ರಾಥಮಿಕ ಶಾಲಾಭ್ಯಾಸಕ್ರಮವನ್ನು ಪೂರ್ತಿಯಾಗಿ ಮುಗಿಸುವರು. ಈಗಿನ ನಮ್ಮ ವಿದ್ಯಾವಂತರ ನಿರುದ್ಯೋಗ ಸಮಸ್ಯೆಯ ಘೋರಸ್ವರೂಪವನ್ನು ...

ತಿಳಿದುಕೊಳ್ಳಬೇಕಾದರೆ ಈ ಮಾತನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು: ಅದೆಂದರೆ, ನೂರಕ್ಕೆ ೧೦ ರಷ್ಟು ಮಂದಿ ಮಾತ್ರ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸುವರು; ಅವರಲ್ಲಿಯೂ ಈ ಮುಂದಿನ ಶಿಕ್ಷಣದಲ್ಲಿ ಕಾಲಿಡುವವರ ಸಂಖ್ಯೆಯು ಕೊರಗುತ್ತಲೇ ಹೋಗುವುದು; ಹೀಗೆ ಕಡಿಮೆಯಾಗುತ್ತಲೆ ನಡೆದ ವಿದ್ಯಾಪೇಕ್ಷಿಗಳ ಶಿಕ್ಷಣದ ರೀತಿಯು ಊನವೂ ಏಕಾಂಗೀನವೂ ಆಗಿರುವುದು. ಹೀಗೆ ವಿದ್ಯೆ ಪಡೆಯುವ ಅತ್ಯಲ್ಪ ಜನರ ಶಿಕ್ಷಣವು ಸದೋಷವಾಗಿರುವುದರಿಂದಲೇ ಈ ಘೋರ ಸಮಸ್ಯೆಯು ಹುಟ್ಟಿರುವಾಗ, ತರುಣ ಪೀಳಿಗೆಯಲ್ಲಿ ನೂರಕ್ಕೆ ಐವತ್ತು-ಅರುವತ್ತರಷ್ಟು ಮಂದಿ ಪ್ರಾಥಮಿಕ ಅಭ್ಯಾಸಕ್ರಮವನ್ನು ಮುಗಿಸಿ ಹೈಸ್ಕೂಲು-ಕಾಲೇಜುಗಳಲ್ಲಿ ನುಗ್ಗಿದರೆ, ಮತ್ತು ಈಗಿನ ಶಿಕ್ಷಣಪದ್ಧತಿಯಲ್ಲಿ ಏನೂ ಸುಧಾರಣೆಯಾಗದೆ ಅದು ಹಾಗೇ ಉಳಿದರೆ, ಎಂತಹ ಬಗೆಹರಿಯದ ಬಿಕ್ಕಟ್ಟು ಉಂಟಾದೀತೆಂಬುದನ್ನು ಕಲ್ಪನೆಯಿಂದಲೆ ಊಹಿಸಬೇಕು !

ಜನಸಾಮಾನ್ಯರು ತಮ್ಮ ಹಕ್ಕು-ಯೋಗ್ಯತೆಗಳ ಬಗ್ಗೆ ಹೆಚ್ಚುಹೆಚ್ಚಾಗಿ ಅರಿವುಳ್ಳವರಾಗುತ್ತಿದ್ದಾಗ, ಅಧಿಕಾರದಲ್ಲಿದ್ದವರು ದೇಶದ ಮುಂದಿರುವ ಪ್ರಶ್ನೆಗಳನ್ನು ಚೆನ್ನಾಗಿ ಪರಿಶೀಲಿಸಿ, ಸಮಾಜದ ಪುನರ್ಘಟನೆಗಾಗಿ ಸಮರ್ಪಕ ಯೋಜನೆಗಳನ್ನು ತಯಾರಿಸುವುದು ಅವರ ಆದ್ಯಕರ್ತವ್ಯವಾಗಿದೆ. ಇಂತಹ ಪುನರ್ಘಟನೆಯಲ್ಲಿ ದೇಶದ ಉದ್ಯೋಗಗಳ ಪರಿಸ್ಥಿತಿಗೆ ನಿಕಟವಾಗಿ ಹೊಂದಿಕೊಂಡಿರುವ ವೃತ್ತಿಶಿಕ್ಷಣದ ಯೋಜನೆಯೊಂದನ್ನು ತೃಪ್ತಿಕರವಾಗಿ ತಯಾರಿಸುವುದು ಅತಿಪ್ರಮುಖವಾದ ಅಂಗವಾಗಿದೆ.

ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು

ಲೇಖಕರು:—ಶ್ರೀಮಾನ್ ದಿನಕರ ದೇಸಾಯಿ, ಎಂ. ಎ., ಎಲ್‌ಎಲ್. ಬಿ.,
ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿ, ಮುಂಬಯಿ

★

ಸಾಕ್ಷರತಾಪ್ರಸಾರವು ಶೀಘ್ರವಾಗಬೇಕು — ಸರ್ವವ್ಯಾಪಿಯಾಗಬೇಕು — ಮಿತವ್ಯಯಿಯಾಗಬೇಕು — ಯಶಸ್ವಿಯಾಗಬೇಕು; ಹೀಗಾಗಬೇಕಾದರೆ ಪ್ರಾಥಮಿಕ ಶಿಕ್ಷಣಪ್ರಸಾರವು ನೂರ್ಮಡಿ ವೇಗದಿಂದ ಸಾಗಬೇಕು. ಇದು ಸಾಧ್ಯವಾಗಲು ಯಾವ ಯಾವ ಉಪಾಯಗಳನ್ನು ತ್ವರಿತ ಕೈಕೊಳ್ಳಬೇಕೆಂಬುದನ್ನು ಅಂಕಿಸಂಖ್ಯೆಗಳಿಂದ ತೋರಿಸುವ ಲೇಖನವಿದು. ಪ್ರಚಲಿತ ವಿಚಾರಗಳಿಗೆ ಸರಿಹೊಂದದ ಮತಗಳನ್ನು ಅಲ್ಲಲ್ಲಿ ಪ್ರದರ್ಶಿಸುತ್ತಿದ್ದರೂ, ಸ್ವತಂತ್ರ ದೃಷ್ಟಿಕೋನದಿಂದ ಬರೆದುದೂ ವಿಚಾರಾರ್ಹವೂ ಆಗಿದೆ.

★

ಪೀಠಿಕೆ

ಒಂದು ದೇಶದ ರಾಜಕೀಯ ಮತ್ತು ಸಾಮಾಜಿಕ ಅಭ್ಯುದಯಕ್ಕೆ ವ್ಯಾಪಕವಾದ ಪ್ರಾಥಮಿಕ ಶಿಕ್ಷಣವು ಅತ್ಯಾವಶ್ಯಕವೆಂಬುದು ಸರ್ವಸಮ್ಮತವಾದ ವಿಷಯ. ಮಹಾನುಭಾವರಾದ ಗೋಪಾಲ ಕೃಷ್ಣ ಗೋಖಲೆ ಅವರು ೧೯೧೧ ರಲ್ಲಿಯೆ 'ಭಾರತದ ಕೋಟ್ಯವಧಿ ಬಾಲಬಾಲಿಕೆಯರ ಭಾವೀ ಸೌಖ್ಯವು ಶಿಕ್ಷಣದ ವರಪ್ರದಾನವನ್ನವಲಂಬಿಸಿದೆ' ಎಂದು ನುಡಿದಿದ್ದರು. ಆ ಮಾತಾಗಿ ಇಂದಿಗೆ ಕಾಲು ಶತಮಾನ ಕಳೆದರೂ ಭಾರತದ ಶೈಕ್ಷಣಿಕ ಅವಸ್ಥೆಯು ಯಥಾಪ್ರಕಾರವಾಗಿದೆ. ಹ್ಯಾರ್‌ಟೊಗ್ ಕಮಿಟಿಯ ವರದಿಗನುಸರಿಸಿ ೧೮೯೩ ರಲ್ಲಿ ಭಾರತದಲ್ಲಿ ಪುರುಷರ ಸಾಕ್ಷರತೆಯು ನೂರಕ್ಕೆ ೧೩ ಇದ್ದುದು ೧೯೩೩ ರಲ್ಲಿ ೧೫ ಕ್ಕೆ ಏರಿತು; ಸ್ತ್ರೀಯರದು ೦.೭ ಇದ್ದುದು ೨.೦ ಕ್ಕೆ ಏರಿತು. ಅಂದರೆ ೪೦ ವರ್ಷದ ಅವಧಿಯಲ್ಲಿ ಒಟ್ಟು ಸ್ತ್ರೀಪುರುಷರ ಸಾಕ್ಷರತೆಯು ನೂರಕ್ಕೆ ೭ ಇದ್ದುದು ೮ ಕ್ಕೆ ಏರಿತು ಅಷ್ಟೆ. ಈ ವೇಗದಲ್ಲಿ ಸಾಗಿದರೆ ಭಾರತವು ಪೂರ್ಣ ಸಾಕ್ಷರವಾಗುವುದು ಇನ್ನೆಷ್ಟು ಶತಮಾನಗಳಿಗೆ? ಸದ್ಯಕ್ಕೆ ಭಾರತದಲ್ಲಿ ೪ ಕೋಟಿ ೩೬ ಲಕ್ಷ, ಸಾಲೆಗೆ ಹೋಗುವ ವಯಸ್ಸಿನ ಮಕ್ಕಳು ಇದ್ದಾರೆ: ಅವರಲ್ಲಿ ೧ ಕೋಟಿ ೪ ಲಕ್ಷ ಮಕ್ಕಳು ಮಾತ್ರ ಸಾಲೆಗೆ ಹೋಗುತ್ತಿದ್ದಾರೆ. ಅಂದರೆ ನೂರಕ್ಕೆ ೭೦ ರಷ್ಟು ಮಕ್ಕಳು ಇನ್ನೂ ಸಾಲೆಗೆ ಹೋಗುತ್ತಿಲ್ಲ. ಇಂತಹ ಹಾಸ್ಯಾಸ್ಪದ ಪರಿಸ್ಥಿತಿಯಿರುವಾಗ ಪ್ರಾಥಮಿಕ ಶಿಕ್ಷಣದ ಪ್ರಚಾರಕ್ಕಾಗಿ ಪ್ರತಿಯೊಬ್ಬರೂ ಪ್ರಯತ್ನಿಸುವುದು ಕರ್ತವ್ಯವಲ್ಲವೆ? ದೇಶದ ಮುಂದಿನ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲ ನಾಗರಿಕರನ್ನು ಅಣಿಗೊಳಿಸಲು ಪ್ರಾಥಮಿಕ ಶಿಕ್ಷಣವೆ ಹೆದ್ದಾರಿಯಲ್ಲವೆ?

ಒತ್ತಾಯದ ಶಿಕ್ಷಣ

೧೯೧೮ ರಿಂದ ೧೯೩೬ ರೊಳಗೆ ಭಾರತದ ಅನೇಕ ಪ್ರಾಂತಗಳಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಗಳೇನೊ ಅಂಗೀಕೃತವಾದವು. ಆ ಮೇರೆಗೆ ಸ್ಥಾನಿಕ ಅಧಿಕಾರಿಗಳಿಗೆ ಒತ್ತಾಯದ ಶಿಕ್ಷಣದ ಅಧಿಕಾರಗಳೂ ಕೊಡಲ್ಪಟ್ಟವು. ಆದರೆ ಅವು ಕಾರ್ಯರೂಪಕ್ಕೆ ಮಾತ್ರ ಇಳಿಯಲಿಲ್ಲವೆಂಬುದೆ ಖೇದಜನಕ ವಿಷಯ. ೧೯೩೫-೩೬ ರಲ್ಲಿ ಆ ಕಾಯದೆಯ ಕಕ್ಷೆಗೊಳಗಾದ ೧೫೬೮ ಪಟ್ಟಣಗಳಲ್ಲಿ ಬರಿ ೧೬೦ ರಲ್ಲಿ ಮಾತ್ರ ಅದನ್ನು ಕಾರ್ಯರೂಪಕ್ಕಿಳಿಸಲಾಯಿತು; ೪,೯೯,೫೪೯ ಹಳ್ಳಿಗಳೊಳಗೆ ಬರಿ ೧೦,೫೫೫ ರಲ್ಲಿ ಮಾತ್ರ ಆ ಕಾಯದೆಯ ಪ್ರಯೋಗ ಮಾಡಲಾಯಿತು.

ಒತ್ತಾಯದ ಶಿಕ್ಷಣವು ಪ್ರಚಾರದಲ್ಲಿ ತರಲ್ಪಟ್ಟ ಪ್ರದೇಶಗಳಲ್ಲಿಯ ವಿದ್ಯಾರ್ಥಿಗಳ ಹಾಗೂ ಅದು ಪ್ರಚಾರದಲ್ಲಿಲ್ಲದ ಪ್ರದೇಶಗಳಲ್ಲಿಯ ವಿದ್ಯಾರ್ಥಿಗಳ ಜ್ಞಾನಪ್ರಗತಿಯ ತುಲನೆ ಮಾಡಿ ಕೆಲವರು, ಒತ್ತಾಯದ ಶಿಕ್ಷಣವು ನಿರುಪಯುಕ್ತವೆಂದು ಟೀಕಿಸುವುದುಂಟು. ಹಿಂದುಸ್ತಾನ ಸರಕಾರದ ಶಿಕ್ಷಣ ಕಮಿಶನರರು 'ಹಿಂದುಸ್ತಾನದ ಈಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಒತ್ತಾಯದ ಶಿಕ್ಷಣದ ಕಾಯದೆಯನ್ನು ಪ್ರಚುರಗೊಳಿಸಿದರೆ ಈಗಿದ್ದುದಕ್ಕಿಂತ ಹೆಚ್ಚಿನ ತೊಂದರೆಗಳು ಹುಟ್ಟಿಕೊಳ್ಳುವುದು ಖಂಡಿತ' ಎಂದು ಹೇಳಿದುದನ್ನು ನೋಡಿದರೆ ಈ ಅಭಿಪ್ರಾಯವು ದೊಡ್ಡ ಹೊಣೆಗಾರಿಕೆಯ

ಅಧಿಕಾರಿಗಳಲ್ಲಿಯೂ ಮನೆ ಮಾಡಿದೆಯೆಂದು ಸ್ಪಷ್ಟವಾಗುವುದು. ಆದರೆ ಮಧ್ಯಪ್ರಾಂತ ಹಾಗೂ ಬಿಹಾರ-ಓರಿಸಗಳಲ್ಲಿಯ ಅನುಭವವು ಇದಕ್ಕೆ ತೀರ ವಿರುದ್ಧವಾಗಿದೆ. ಅಲ್ಲಿ ಒತ್ತಾಯದ ಶಿಕ್ಷಣವು ಉತ್ಕೃಷ್ಟವಾಗಿ ಫಲಿಸಿದೆಯೆಂದು ವರದಿಯಿಂದ ವ್ಯಕ್ತವಾಗುತ್ತದೆ. ಇದರಿಂದ ಯೋಗ್ಯರೀತಿಯಲ್ಲಿಯೂ, ಪ್ರಾಮಾಣಿಕ ಪ್ರಯತ್ನದಿಂದಲೂ ಒತ್ತಾಯದ ಶಿಕ್ಷಣವು ಉಪಯುಕ್ತವಾಗಬಲ್ಲದೆಂದು ವ್ಯಕ್ತವಾಗುತ್ತದೆ. ಅಲ್ಲದೆ ಬಡೋದಾ ಸಂಸ್ಥಾನದಲ್ಲಿ ಒತ್ತಾಯದ ಶಿಕ್ಷಣದಿಂದಲೆ ನೂರಕ್ಕೆ ೮೧ ರಷ್ಟು ಮಕ್ಕಳು ಸಾಕ್ಷರರಾಗಿರುವರೆಂಬ ಅನುಭವವು ನಮಗೆ ದಿಗ್ದರ್ಶಕವಾಗಿಲ್ಲವೆ? ಬಡೋದೆಯಲ್ಲಿ ಸಾಧಿಸಿದುದು ಭಾರತದ ಬೇರೆ ಕಡೆಗಳಲ್ಲಿ ಏಕೆ ಸಾಧಿಸಬಾರದು?

ಇಂಗ್ಲಂಡದಲ್ಲಿಯೂ ಒತ್ತಾಯದ ಶಿಕ್ಷಣವು ಪ್ರಾರಂಭದಲ್ಲಿ ನಿರಾಶೆಯನ್ನು ಹುಟ್ಟಿಸಿತ್ತು. ೧೮೯೫ ರಲ್ಲಿ ನೂರಕ್ಕೆ ೮೧ ರಷ್ಟೆ ವಿದ್ಯಾರ್ಥಿಗಳು ಸಾಲೆಗೆ ಬರುತ್ತಿದ್ದರು. ಆಗ ಇಂಗ್ಲಂಡಿನಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿ ೩೯ ವರ್ಷಗಳಾದಮೇಲೂ ಈ ಸ್ಥಿತಿಯಿದ್ದಿತೆಂದ ಮೇಲೆ ಭಾರತೀಯರು ನಿರಾಶೆಹೊಂದುವುದೇಕೆ? ಇಲ್ಲಿಯೂ ನೂರಕ್ಕೆ ೭೫ ರಿಂದ ೮೦ ರಷ್ಟು ವಿದ್ಯಾರ್ಥಿಗಳೆ ಸಾಲೆಗೆ ಬರುತ್ತಾರೆ. ೧೮೯೩ ರಲ್ಲಿ ಜಪಾನಿನಲ್ಲಿ ವಿದ್ಯಾರ್ಥಿಗಳ ಹಾಜರಿಯು ಬರಿ ನೂರಕ್ಕೆ ೫೮ ರಂತೆ ಇತ್ತು. ಫ್ರಾನ್ಸಿನಲ್ಲಿ ಹಳ್ಳಿಗಳಲ್ಲಿ ೧೯೦೨ ರಲ್ಲಿ ನೂರಕ್ಕೆ ೪೯ ರಷ್ಟೆ ಹಾಜರಿಯಿರುತ್ತಿತ್ತು. ೧೯೧೧ ರಲ್ಲಿಯೂ ಅಲ್ಲಿ ಒಂದು ಐದನೇ ಅಂಶದಷ್ಟು ವಿದ್ಯಾರ್ಥಿ ಸಮುದಾಯವು ಸಾಲೆ ತಪ್ಪಿಸುತ್ತಲೆ ಇತ್ತು. ಅಯರ್ಲಂಡಿನಲ್ಲಿ ೧೯೦೯ ರಲ್ಲಿ ನೂರಕ್ಕೆ ೬೯ ರಷ್ಟೆ ಹುಡುಗರು ಸಾಲೆಗೆ ಬರುತ್ತಿದ್ದರು. ಮೇಲಿನ ಎಲ್ಲ ಲೆಕ್ಕಗಳು ಒತ್ತಾಯದಿಂದ ಹುಡುಗರನ್ನು ಸಾಲೆಯಲ್ಲಿ ದಾಖಲು ಮಾಡಿದ ಮೇಲೆ ಕಂಡುಬಂದ ಅವಸ್ಥೆಯನ್ನು ತೋರಿಸುತ್ತವೆ. ಭಾರತದಲ್ಲಿ ಹಾಜರಿಯ ಪ್ರಮಾಣವು ನೂರಕ್ಕೆ ೮೦ ರ ಹತ್ತರದಲ್ಲಿರುವಾಗ ಒತ್ತಾಯದ ಶಿಕ್ಷಣದ ವಿಷಯಕ್ಕೆ ಉದಾಸೀನರಾಗುವುದು ಯೋಗ್ಯವಾಗಲಾರದು.

ಒತ್ತಾಯದ ಶಿಕ್ಷಣವು ಅಯಶಸ್ವಿಯಾಗಿದೆಯೆಂದು ಹೇಳುವ ಮೊದಲು ಒತ್ತಾಯದ ಕಾಯದೆಯನ್ನು ಕಾರ್ಯರೂಪದಲ್ಲಿ ಎಷ್ಟರಮಟ್ಟಿಗೆ ಇಳಿಸಲಾಗಿದೆಯೆಂಬುದನ್ನು ನೋಡಬೇಕು. ಮುಂಬಯಿಯ ಶಿಕ್ಷಣದ ವರದಿಯಲ್ಲಿ "ತಾಯಿತಂದೆಗಳಿಗೆ ನೋಟೀಸನ್ನು ಕೊಡುವುದರ ಹೊರತು ಬೇರೆ ಯಾವ ಪ್ರಯತ್ನವನ್ನೂ ಕೈಕೊಳ್ಳಲಿಲ್ಲ" ಎಂದು ಬರೆದಿದೆ. "ಸ್ಥಾನಿಕ ಅಧಿಕಾರಿಗಳು ಒತ್ತಾಯವನ್ನು ಮನಃಪೂರ್ವಕವಾಗಿ ಕೈಕೊಳ್ಳದ್ದರಿಂದಲೆ ಒತ್ತಾಯದ ಶಿಕ್ಷಣವು ಅಯಶಸ್ವಿಯಾಯಿತು" ಎಂದು ಸರಕಾರ[illegible] ಶಿಕ್ಷಣ ಕಮಿಶನರರ ವರದಿಯಿದೆ. "ಒತ್ತಾಯವು ಕಾಯದೆಯಲ್ಲಿದೆ; ಆಚಾರದಲ್ಲಿಲ್ಲ. ಸಾಲೆಗೆ ಹೋ[illegible]ದಿದ್ದುದಕ್ಕಾಗಿ ಕೋರ್ಟಿಗೆ ಕರೆಯಲ್ಪಟ್ಟ ಹುಡುಗ[illegible] ಅಥವಾ ಮಗನನ್ನು ಸಾಲೆಗೆ ಕಳಿಸಲಿಲ್ಲವೆಂದು [illegible]ಸಲ್ಪಟ್ಟ ತಂದೆತಾಯಿಗಳ ಒಂದಾದರೂ ನಿದರ್ಶ[illegible]ವಿದೆಯೇ? ಹಾಗಾದರೆ ಒತ್ತಾಯದ ಶಿಕ್ಷಣವು ನಮ್ಮ[illegible] ಎಂದು ಏಕೆ ಕೊಚ್ಚಿಕೊಳ್ಳುವುದು?" ಎಂದು ಮುಂಬೈ[illegible] ಮುಖ್ಯಪ್ರಧಾನರಾದ ಶ್ರೀ. ಬಿ. ಜಿ. ಖೇರರು ಅಂದಿದ್ದಾ[illegible] ಆದರೆ ಬಡೋದೆಯ ಕಡೆಗೆ ನೋಡಿರಿ. ಅಲ್ಲಿ ೧೯೩೩-[illegible]ರಲ್ಲಿ ಒತ್ತಾಯದ ಶಿಕ್ಷಣದ ಕಾಯದೆಗನುಸರಿಸಿ ನಡೆ[illegible]ದಿದ್ದವರಿಗೆ ಒಟ್ಟು ೩೬,೪೨೩ ರೂಪಾಯಿಗಳ ದಂಡ ವಿಧಿ[illegible]ಲಾಗಿದೆ. ಅದರ ಫಲಿತಾಂಶವೂ ಅಲ್ಲಿ ಚನ್ನಾಗಿಯೆ ಆ[illegible]

ಆದುದರಿಂದ ಒತ್ತಾಯವನ್ನು ಬರಿಮಾತಿನಲ್ಲಿಡದೆ ಕೃ[illegible]ಯಲ್ಲಿಯೂ ತರಬೇಕಾದರೆ ಕೆಲವು ಉಪಾಯಗಳ[illegible] ಮಾಡಬೇಕಾಗುತ್ತದೆ. ಶಿಕ್ಷಣವನ್ನು ಕೊಡುವ ವೇಳೆ[illegible] ಅನುಕೂಲವಾದುದಾಗಿರಬೇಕು. ಹುಡುಗರಿಗೆ [illegible] ಗೆಲಸಗಳಲ್ಲಿ ಸುಗ್ಗಿಯಲ್ಲಿ ತಂದೆತಾಯಿಗಳಿಗೆ ಸಹಾ[illegible] ಮಾಡಲು ಅವಕಾಶವಿರುವಂತೆ ಶಿಕ್ಷಣಸಮಯವನ್ನು [illegible] ಮಿಸಬೇಕು. ಅಲ್ಲದೆ ಒತ್ತಾಯದ ಅವಧಿಯನ್ನು ಕಡಿ[illegible] ಮಾಡಬೇಕು. ೧೯೩೮ ರಲ್ಲಿ ಆದ ಮುಂಬೈಯ ಕಾ[illegible]ದೆಯು ಏಳು ವರ್ಷಗಳ ಶಿಕ್ಷಣವನ್ನು ವಿಧಿಸಿದೆ. ಅದ[illegible] ನಾಲ್ಕು ವರ್ಷಗಳದಾಗಿ ಮಾಡಬೇಕು. ಅಂದರೆ ಮಕ್ಕ[illegible] ಏಳರಿಂದ ಹನ್ನೊಂದನೆಯ ವಯಸ್ಸಿನ ವರೆಗೆ ಶಿ[illegible] ಪಡೆದು ಗೃಹಕೃತ್ಯಗಳಲ್ಲಿ ಸಹಾಯಕರಾಗಲು ಸಿದ್ಧ[illegible]ವರು. ಪ್ರಾಥಮಿಕ ಶಿಕ್ಷಣವನ್ನು ಧರ್ಮಾರ್ಥವಾಗಿಡುವ[illegible] ಒಳ್ಳೆಯ ಉಪಾಯವೆ ಸೈ. ಬಡಮಕ್ಕಳಿಗೆ ಸಾಲೆಯಲ್ಲಿ[illegible] ಪಾಟಿ, ಕಡ್ಡಿಗಳನ್ನು ಒದಗಿಸಬೇಕು. ಸಾಧ್ಯ[illegible] ಸಾಲೆಯಲ್ಲಿ ಹಾಕಿಕೊಳ್ಳಲು ವಸ್ತ್ರಗಳನ್ನು ಅವರಿಗೆ [illegible]ಗಿಸಬೇಕು.

ಮಂದಪ್ರಗತಿ

ಒತ್ತಾಯದಿಂದ ಮಕ್ಕಳನ್ನು ಸಾಲೆಗೆ ಹಾಕಿದರೆ [illegible]ಲಿಲ್ಲ. ಒಂದೆರಡು ವರ್ಷಗಳಲ್ಲಿ ಪುನಃ ಅವರು [illegible] ಬಿಟ್ಟುಬಿಡಬಹುದು. ಈ ಭಿನ್ನ ಪ್ರಗತಿಯು ಎಷ್ಟು [illegible]ವಾಗಿದೆಯೆಂಬುದನ್ನು ಸರಕಾರಿ ವರದಿಗಳು ಹೇಳುತ್ತ[illegible]

ಮೊದಲನೆಯ ತರಗತಿಯನ್ನು ಸೇರಿದ ೧೦೦ ಹುಡುಗರಲ್ಲಿ ೩೯ ಮಾತ್ರ ನಾಲ್ಕನೆಯ ತರಗತಿಯ ವರೆಗೆ ಮುಟ್ಟುತ್ತಿವೆ. ಹುಡುಗಿಯರಂತೂ ನೂರಕ್ಕೆ ಹದಿನಾಲ್ಕರಷ್ಟೆ ೪ನೆಯ ತರಗತಿಗೆ ಮುಟ್ಟುತ್ತಾರೆ. ಆದುದರಿಂದ ಸಾಕ್ಷರತೆಯ ಪ್ರಚಾರವು ಪರಿಣಾಮಕಾರಿಯಾಗಬೇಕಾದರೆ ನಡುವೇ ಸಾಲೆಯನ್ನು ಬಿಡುವ ಈ ಗುಣವನ್ನು ತಪ್ಪಿಸಬೇಕು. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಸಾಲೆಗಳು ಒಬ್ಬೊಬ್ಬ ಶಿಕ್ಷಕ ನಿಂದಲೆ ನಡೆಸಲ್ಪಡುತ್ತಿರುವುದು ಇದರ ಮುಖ್ಯ ಕಾರಣ ವಾಗಿದೆ. ಬಂಗಾಲದಲ್ಲಿ ನೂರಕ್ಕೆ ೮೦ ಸಾಲೆಗಳು ಏಕಾಧ್ಯಾಪಕಗಳಾಗಿವೆ. ಅಲ್ಲಿ ನೂರಕ್ಕೆ ೮೩ ಮಕ್ಕಳು ನಡುವೆ ಸಾಲೆಯನ್ನು ಬಿಡುತ್ತಾರೆ. ಆದರೆ ಮಧ್ಯಪ್ರಾಂತದಲ್ಲಿ ನೂರಕ್ಕೆ ೨೨ ಏಕಾಧ್ಯಾಪಕ ಸಾಲೆಗಳಿವೆಯಾದುದರಿಂದ ಅಲ್ಲಿ ನಡುವೆ ಸಾಲೆ ಬಿಡುವ ಹುಡುಗರು ನೂರಕ್ಕೆ ೫೪ ಮಾತ್ರವಾಗಿವೆ. ಏಕಾಧ್ಯಾಪಕ ಸಾಲೆಗಳಲ್ಲಿ ಎಲ್ಲ ವರ್ಗ ಗಳನ್ನು ಒಬ್ಬರೆ ನೋಡಿಕೊಳ್ಳಲಾಗದೆ ಅವರ ಶಿಕ್ಷಣವೂ ಮಕ್ಕಳಿಗೆ ಆಕರ್ಷಕವಾಗುವುದಿಲ್ಲ. ಆದರಿಂದ ಅವರು ಸಾಲೆಯನ್ನಾದರೂ ಬಿಡುವರು; ಇಲ್ಲವೆ ಉತ್ತೀರ್ಣರಾಗದೆ ಒಂದೆ ವರ್ಗದಲ್ಲಿ ಮಲೆತು ಕೂಡುವರು.

ಏಕಾಧ್ಯಾಪಕ ಸಾಲೆಗಳಿಂದ ವಿದ್ಯಾರ್ಥಿಗಳು ಭಿನ್ನ ಪ್ರಗತಿಯನ್ನು ಹೊಂದುವವರಾದರೂ ಭಾರತದ ಈಗಿನ ಪರಿಸ್ಥಿತಿಯಲ್ಲಿ ಶಿಕ್ಷಕರ ಸಂಖ್ಯೆಯನ್ನು ಏರಿಸುವುದು ಒಮ್ಮೆಲೆ ಸಾಧ್ಯವಿಲ್ಲ. ಆದುದರಿಂದ ಇದಕ್ಕೆ ಮೊದಲನೆಯ ಉಪಾಯ ವೆಂದರೆ ಪ್ರಾಥಮಿಕ ಶಿಕ್ಷಣವನ್ನು ೫-೬-೭ ವರ್ಷಗಳ ವರೆಗೆ ಕೊಡದೆ ನಾಲ್ಕೇ ವರ್ಗಗಳಿಗೆ ಮಿತಗೊಳಿಸಬೇಕು. ವರ್ಗಗಳು ಕಡಿಮೆಯಾದರೆ ಶಿಕ್ಷಕರಿಗೆ ಸಹಜವಾಗಿ ಅವನ್ನು ನಡೆಸುವ ಹಿಡಿತ ಸಿಗುತ್ತದೆ. ಎರಡನೆಯ ಉಪಾಯ, ಕಲಿಸುವ ಸಮಯವನ್ನು ವಿಭಜಿಸುವುದು. ನಾಲ್ಕು ವರ್ಗಗಳಲ್ಲಿ ಎರಡು ವರ್ಗಗಳಿಗೆ ಮುಂಜಾನೆ, ಎರಡು ವರ್ಗಗಳಿಗೆ ಸಂಜೆಗೆ ಕಲಿಸಬೇಕು. ಅಂದರೆ ಒಂದು ಸಲಕ್ಕೆ ಎರಡೆ ವರ್ಗಗಳನ್ನು ನಡೆಸುವುದು ಶಿಕ್ಷಕರಿಗೆ ಇನ್ನೂ ಸುಲಭವಾಗುವುದು. ಮಧ್ಯಪ್ರಾಂತದಲ್ಲಿ ಈ ಪ್ರಯೋಗವು ಒಳ್ಳೆ ಯಶಸ್ವಿಯಾಗಿದೆ.

೬ರ ಚಿಕ್ಕ ಮಕ್ಕಳನ್ನು ಸಾಲೆಗೆ ತೆಗೆದುಕೊಳ್ಳುವುದ ರಿಂದಲೂ ಪ್ರಗತಿಯು ಕುಂಠಿತವಾಗುವುದು. ಬಯಲಲ್ಲಿ ಆಟವಾಡಬೇಕಾದ ಕಂದರು ಸಾಲೆಗೆ ಹಾಕಲ್ಪಟ್ಟರೆ ಅವರು ಕಲಿಯಬೇಕೇನು! ಶಿಕ್ಷಕರು ಕಲಿಸಬೇಕೇನು! ಸಾಲೆಯ ಶುಷ್ಕ ವಾತಾವರಣದಿಂದ ಬೇಸತ್ತು ಅವರು ಬೇಗ ಸಾಲೆ ಬಿಟ್ಟರೆ ಆಶ್ಚರ್ಯವೇನೂ ಇಲ್ಲ. ಆದುದರಿಂದ ಏಳು ವರ್ಷಕ್ಕೆ ಮೇಲ್ಪಟ್ಟವರನ್ನಷ್ಟೆ ಪ್ರಾಥಮಿಕ ಸಾಲೆಗಳಲ್ಲಿ ಸ್ವೀಕರಿಸಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಅನಿಯಮಿತ ಕಾಲಗಳಲ್ಲಿ ಮಕ್ಕಳನ್ನು ಸಾಲೆಗೆ ಸ್ವೀಕರಿಸುವುದರಿಂದಲೂ ಅವರ ಪ್ರಗತಿಯು ಕುಂಠಿತವಾಗುತ್ತದೆ. ಅಪೂರ್ಣ ಶಾಲೆಗಳು, ಅಂದರೆ ಒಂದೆ ಎರಡೆ ವರ್ಗಗಳುಳ್ಳ ಶಾಲೆಗಳಿಂದಲೂ ಅನೇಕ ಮಕ್ಕಳು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ. ಬಂಗಾಲದಲ್ಲಿಯೇ ೬೪,೦೦೦ ಶಾಲೆಗಳಲ್ಲಿ ೫೪,೦೦೦ ಅಪೂರ್ಣವಾಗಿವೆ. ಆದ್ದರಿಂದಲೆ ಅಲ್ಲಿಯ ಭಿನ್ನಪ್ರಗತಿಯೂ (Wastage) ಎಲ್ಲಕ್ಕಿಂತ ಹೆಚ್ಚಾಗಿದೆ. ಆದ್ದರಿಂದ ಅಪೂರ್ಣ ಶಾಲೆಗಳನ್ನು ಪೂರ್ಣಗೊಳಿಸಬೇಕು. ಅನಾವಶ್ಯಕವಾದ ಅಭ್ಯಾಸಭಾರವನ್ನು ಕಡಿಮೆ ಮಾಡಬೇಕು. ಸಾಲೆಯನ್ನು ಅನಾಕರ್ಷಕವನ್ನಾಗಿ ಮಾಡುವ ಕಾರಣವೂ ಅನಾವಶ್ಯಕವಾದ ಅಭ್ಯಾಸವೇ.

ಈ ವಿಷಯಗಳನ್ನು ಲಕ್ಷ್ಯದಲ್ಲಿಟ್ಟು ಸರಕಾರವು ಒತ್ತಾಯವನ್ನು ಕಾರ್ಯರೂಪದಲ್ಲಿಳಿಸಿದರೆ ಮಾತ್ರ ಅದು ಪರಿಣಾಮಕಾರಿಯಾಗುವುದು. ಅಲ್ಲದೆ ಮಕ್ಕಳು ಒಂದು ವರ್ಷಕ್ಕಿಂತ ಹೆಚ್ಚಾಗಿ ಒಂದು ವರ್ಗದಲ್ಲಿರದಂತೆ ಕಲಿಸುವ ಏರ್ಪಾಡಿರಬೇಕು. ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮಕ್ಕಳಿಗೆ ಸಕಾಲದಲ್ಲಿ ಶಿಕ್ಷಣಕೊಟ್ಟು ಅವರು ಮೇಲಿನ ತರಗತಿಗೆ ಹೋಗುವಂತೆ ಮಾಡಬೇಕು.

ಬಡತನವೂ ಮಕ್ಕಳ ಭಿನ್ನಪ್ರಗತಿಗೆ ಕಾರಣವಾಗಿದೆ. ಹೊಟ್ಟೆತಕ್ಕೆ ಹಚ್ಚುವುದಕ್ಕಾಗಿ ಬಡ ತಂದೆತಾಯಿಗಳು ಮಕ್ಕಳನ್ನು ಬೇಗ ಶಾಲೆಬಿಡಿಸುತ್ತಾರೆ. ಅಲ್ಲದೆ ಸಾಕಷ್ಟು ಅನ್ನವಸ್ತ್ರಗಳಿಲ್ಲದ ದೀನ ಬಾಲಕರು ಸಾಲೆಗೆ ಬಂದರೆ ವಿದ್ಯೆಯನ್ನು ಗ್ರಹಿಸುವ ಕಸುವಾದರೂ ಅವರ ಮನಸ್ಸಿಗೆಲ್ಲಿಂದ ಬರಬೇಕು! ಆದರೂ ಸುಶಿಕ್ಷಿತ ಶಿಕ್ಷಕರು, ಮೇಲ್ವಿಚಾರಣೆ ಮತ್ತು ಆಕರ್ಷಕವಾದ ಶಿಕ್ಷಣ ಪದ್ಧತಿಗಳನ್ನು ಕೈಕೊಂಡರೆ ಶಿಕ್ಷಣಪ್ರಚಾರವು ಸಿದ್ಧಿಸದಿರಲಾರದು; ಆದುದರಿಂದ ಶಿಕ್ಷಣಕಮಿಶನರಾದ ಜೆ. ಇ. ಪಾರ್ಕಿನ್‌ಸನ್ನರು ಇಲ್ಲವೆ ಈಗಿನ ದಿ. ಬ. ಲಕ್ಷ್ಮಿ ಅವರು ಹೇಳುವಂತೆ, "ಈ ಸಾಲೆ ಬಿಡುವ ಗುಣವು ಕಡಿಮೆಯಾಗುವ ವರೆಗೆ ಒತ್ತಾಯದ ಶಿಕ್ಷಣವು ನಿಷ್ಪ್ರಯೋಜಕ" ಎಂದು ಹೇಳುವುದು ಒಳಿತಲ್ಲ. ಇಂಗ್ಲಂಡಿನಲ್ಲಿ ನೂರಕ್ಕೆ ಇಪ್ಪತ್ತೈದೆ ಹುಡುಗರು ನಾಲ್ಕನೆಯ ವರ್ಗದ ವರೆಗೆ ಮುಟ್ಟುತ್ತಿದ್ದರೂ ಅಲ್ಲಿಯವರು ಎದೆಗುಂದದಿರುವಾಗ, ಭಾರತದಲ್ಲಿ ಆ ಪ್ರಮಾಣವು

ನೂರಕ್ಕೆ ೨೭ ಇರುವಾಗ ನಾವೇಕೆ ಅಂಜಬೇಕು? ಆದ್ದರಿಂದ ಒತ್ತಾಯದ ಮಾತಿಗಿಂತ ಕೃತಿಯು ಶಿಕ್ಷಣಪ್ರಚಾರಕ್ಕೆ ಆವಶ್ಯಕವೆಂಬುದನ್ನು ನಾವು ಅರಿತಿರಬೇಕು.

ಲಘುಶಿಕ್ಷಣಾವಧಿ

ಈಗ ಭಾರತದ ವಿವಿಧ ಪ್ರಾಂತಗಳಲ್ಲಿ ವಿವಿಧ ಸಂಖ್ಯೆಯ ಪ್ರಾಥಮಿಕ ವರ್ಗಗಳಿವೆ; ಆರೇಳು ವರ್ಷಗಳ ವರೆಗೆ ಪ್ರಾಥಮಿಕ ಶಿಕ್ಷಣವನ್ನು ಬೆಳಿಸಿದರೆ ದೇಶಕ್ಕೆ ಒಳಿತೆಂಬುದು ತಜ್ಞರ ಮತವಿದೆ. ಆದರೆ ಹಾಸಿಗೆಯಿದ್ದಷ್ಟೆ ಕಾಲು ಚಾಚಬೇಕಲ್ಲವೆ? ಅವಧಿ ಬೆಳಿಸಿದರೆ ವೆಚ್ಚವೂ ಬೆಳೆಯುವುದು. ಆದ್ದರಿಂದ ಅವಧಿಯನ್ನು ಕಡಿಮೆ ಮಾಡಿ ಹೆಚ್ಚು ಹುಡುಗರಿಗೆ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುವುದೆ ನಮ್ಮ ದೇಶಕ್ಕೆ ಒಗ್ಗುವ ಉಪಾಯವಾಗಿದೆ. ಭಾರತದಲ್ಲಿ ಈಗಾಗಲೆ ಮಧ್ಯಪ್ರಾಂತ, ಪಂಜಾಬ, ವಾಯುವ್ಯಪ್ರಾಂತಗಳಲ್ಲಿ ನಾಲ್ಕೆ ವರ್ಷದ ಅವಧಿಯು ಪ್ರಚಲಿತವಾಗಿದೆ. ಅಲ್ಲಿಯ ಶಿಕ್ಷಣವು ಮಿಕ್ಕ ಪ್ರಾಂತಗಳಿಗೆ ಯಾವ ರೀತಿಯಲ್ಲಿಯೂ ಹಿಂದೆ ಬಿದ್ದಿಲ್ಲವೆಂದು ಕಂಡುಬಂದಿದೆ. "ಮಕ್ಕಳು ಸಮಯಶೀಲರಾಗಿ ಸಾಲೆಗೆ ಬರುವ ವ್ಯವಸ್ಥೆಯಾದರೆ ಭಾರತಕ್ಕೆ ನಾಲ್ಕೆ ವರ್ಷಾವಧಿಯ ಪ್ರಾಥಮಿಕ ಶಿಕ್ಷಣವು ಬೇಕಾದಷ್ಟಾಗುವುದು" ಎಂದು ಮಿ. ಆರ್ಥರ್ ಮೇಹ್ಯೂ ಅಂದಿದ್ದಾನೆ.

'ಭಾರತದ ಪರಿಸ್ಥಿತಿಯನ್ನು ನೋಡಲಾಗಿ ನಾಲ್ಕೆವರ್ಷದ ಪ್ರಾಥಮಿಕ ಶಿಕ್ಷಣವು ಸಾಕೆಂದು ಶ್ರೀ. ಗೋಪಾಲ ಕೃಷ್ಣ ಗೋಖಲೆಯವರು ಅಂದಿದ್ದಾರೆ. ರಾಯಲ್ ಕಮಿಶನ್, ಆಕ್ಸಿಲಿಯರಿ ಕಮಿಟ, ಬಿಹಾರ-ಓರಿಸಾ ಸರಕಾರದ ಕಮಿಟಿ ಮುಂತಾದುವೆಲ್ಲ ನಾಲ್ಕು ವರ್ಷಾವಧಿಯನ್ನೆ ಮೆಚ್ಚಿವೆ. ಜಪಾನಿನ ಶಿಕ್ಷಣವಿಜ್ಞಾನಿಯಾದ ಬ್ಯಾರನ್ ಕಿಕುಚಿಯು 'ಅಲ್ಪಾವಧಿಯಲ್ಲಿ ಉತ್ತಮ ಶಿಕ್ಷಣವನ್ನು ಅಲ್ಪವೆಚ್ಚದಲ್ಲಿ ಸಾಧಿಸುವುದೆ ಚತುರ್ವರ್ಷಾವಧಿಯ ಉದ್ದೇಶ' ಎಂದಿದ್ದಾನೆ. ಇಟಲಿಯಲ್ಲಿ ಈ ಅವಧಿ ಮೂರೆ ವರ್ಷವಿದೆ. ಆಸ್ಟ್ರಿಯಾ, ಜರ್ಮನಿ, ರುಮಾನಿಯಾ, ಕೋಲಂಬಿಯ, ಅಮೆರಿಕಗಳಲ್ಲಿಯೂ ನಾಲ್ಕೆ ವರ್ಷವಿದೆ. ರಶಿಯವು ನಾಲ್ಕು ವರ್ಷದ ಅವಧಿಯಲ್ಲಿಯೆ ಪ್ರಚಂಡವಾದ ಪ್ರಗತಿಯಾಗುವುದನ್ನು ತೋರಿಸಿದೆ. ಪರಿಸ್ಥಿತಿಯಲ್ಲಿ ಭಾರತಕ್ಕೆ ಸರಿತೂಗುವ ಚೀನದಲ್ಲಿಯೂ ಚತುರ್ವರ್ಷಾವಧಿಯೆ ಮೆಚ್ಚಿಗೆಯದಾಗಿದೆ. ೧೯೩೪ ರಲ್ಲಿ ಮುಂಬೈ ಸರಕಾರವು ಚತುರ್ವರ್ಷಾವಧಿಗೆ ತೀವ್ರ ವಿರೋಧ ತೋರಿಸಿತು. ಆದರೆ ೧೯೨೧-೩೧ರ ವರೆಗೆ ಮುಂಬೈ ಪ್ರಾಂತದಲ್ಲಿ ಪಂಚವರ್ಷಾವಧಿಯ ಪ್ರಾಥಮಿಕ ಶಿಕ್ಷಣದಿಂದ ಸಾಕ್ಷರತೆಯು ನೂರಕ್ಕೆ ೧೪ ರಷ್ಟು ಹೆಚ್ಚಿತು. ಆದರೆ ಚತುರ್ವರ್ಷಾವಧಿಯು ಪ್ರಚುರವಾಗಿದ್ದ ಪಂಜಾಬ, ಮಧ್ಯಪ್ರಾಂತಗಳಲ್ಲಿ ಸಾಕ್ಷರತೆಯು ಅದೇ ಸಮಯಕ್ಕೆ ನೂರಕ್ಕೆ ೩೭ ರಷ್ಟು ಹೆಚ್ಚಿದುದು ನಾಲ್ಕು ವರ್ಷಾವಧಿಯನ್ನು ಸಮರ್ಥಿಸುವುದಿಲ್ಲವೇ?

ಹೀಗೆ ಶಿಕ್ಷಣಾವಧಿಯನ್ನು ತಗ್ಗಿಸುವುದರಿಂದ ಹೆಚ್ಚಿನ ಅವಧಿಯ ವೆಚ್ಚವು ಮಿಗುವುದು. ಮಿಕ್ಕ ಹಣವು ಶಿಕ್ಷಣಪ್ರಚಾರಕ್ಕೆ ಸಹಾಯವಾಗುವುದು. ಶಿಕ್ಷಣವು ಹೆಚ್ಚು ಸಿಕ್ಕಷ್ಟು ಮಕ್ಕಳ ಭಾವೀ ಜೀವನಕ್ಕೆ ಒಳಿತೇ ಸರಿ. ಆದರೆ ಭಾರತದಲ್ಲಿ ಮೂಲೆಮೂಲೆಗೂ ಶಿಕ್ಷಣವನ್ನು ಹಬ್ಬಿಸುವ ಗುರಿಯು, ಅವಧಿಯನ್ನು ತಗ್ಗಿಸುವುದರಿಂದ ಸಾಧಿಸುವುದು. ಕ್ರಮೇಣ ದೇಶದ ಆರ್ಥಿಕ ಪರಿಸ್ಥಿತಿಯು ಅನುಕೂಲವಾದಾಗ ಅವಧಿಯನ್ನು ಬೆಳೆಸುವುದೂ ಸಾಧ್ಯವಿದೆ.

ಶಾಲಾಪ್ರವೇಶದ ವಯಸ್ಸು

ಭಾರತದ ವಿವಿಧ ಪ್ರಾಂತಗಳಲ್ಲಿ ಮಕ್ಕಳ ಶಾಲಾ ಪ್ರವೇಶದ ವಯಸ್ಸು ೬ ಆಗಿರಬೇಕೆಂದು ಕಾಯದೆಯಿದೆ. ಕೆಲ ಪ್ರಾಂತಗಳಲ್ಲಿ ವಯಸ್ಸಿನ ನಿರ್ಧಾರವನ್ನು ಸ್ಥಾನಿಕ ಅಧಿಕಾರಿಗಳಿಗೆ ಬಿಡಲಾಗಿದೆ. ಅಲ್ಲಿ ೩-೪ ವರ್ಷದ ಮಕ್ಕಳು ಸಾಲೆಗೆ ಬಂದರೂ ಬೇಡವೆನ್ನುವಂತಿಲ್ಲ. ಇದೊಂದು ದೊಡ್ಡ ದೋಷವೆ.

ವಯಸ್ಸನ್ನು ನಿರ್ಧರಿಸುವಾಗ ಎರಡು ಮಾತುಗಳನ್ನು ಲಕ್ಷ್ಯದಲ್ಲಿಡಬೇಕು. (೧) ಮಗುವಿನ ದೈಹಿಕ-ಮಾನಸಿಕ ಯೋಗ್ಯತೆ. (೨) ಸಾಲೆಯೊಗಿನ ವ್ಯವಸ್ಥೆ. ಜಗತ್ತಿನ ಮಹಾ ಶಿಕ್ಷಣಶಾಸ್ತ್ರಿಗಳೆಲ್ಲ ಶಾರೀರಿಕ ಹಾಗೂ ಮಾನಸಿಕ ದೃಷ್ಟಿಯಿಂದ ಬಾಳಿನಲ್ಲಿ ಮೊದಲಿನ ಏಳು ವರ್ಷಗಳನ್ನು ಒಂದು ವಿಶಿಷ್ಟ ಯುಗವನ್ನಾಗಿ ವಿಂಗಡಿಸಿದ್ದಾರೆ. ಆ ಯುಗದಲ್ಲಿ ಮಕ್ಕಳನ್ನು ನೈಸರ್ಗಿಕವಾಗಿ, ಆನಂದಪೂರ್ಣವಾಗಿ ಬೆಳೆಯಗೊಡಬೇಕು. ಏಳು ವರ್ಷಕ್ಕೆ ಮೊದಲು ಮಕ್ಕಳಿಗೆ ಕಲಿಸಲೇಕೂಡದು. ಸ್ವಿಟ್ಜರ್ಲಂಡದ ಶಿಕ್ಷಣ... ಕಮಿಟಿಯು ಈ ವಿಷಯದಲ್ಲಿ ಹೀಗೆನ್ನುತ್ತದೆ: "...ಮಗುವಿನಲ್ಲಿ ಇಂದ್ರಿಯಗಳು ಪೂರ್ಣಾವಸ್ಥೆಗೆ ಮುಟ್ಟಿರುವುದಿಲ್ಲ. ಅದರ ಕಂಣು ದೂರ-ದೃಷ್ಟಿಯುಳ್ಳದ್ದಾಗಿರುವುದರಿಂದ ಪುಸ್ತಕವನ್ನು ಹತ್ತರ ಹಿಡಿದು ಅದರ ಕಂಣು ...ತ್ತವೆ. ಸಾಲೆಯಲ್ಲಿ ಆವಶ್ಯಕವಾದ ಏಕಾಗ್ರ... ಅದರ ನರಮಂಡಲವು ಕುಗ್ಗುತ್ತದೆ. ಈ ವಯಸ್ಸಿನಲ್ಲಿ ಅದು ಸಾಲೆಗೆ ಯೋಗ್ಯವಾಗಿರುವುದಿಲ್ಲ." ಜಗತ್ತಿನ...

ಮಹಾ ರಾಷ್ಟ್ರಗಳಲ್ಲೆಲ್ಲ ಶಾಲಾವಯಸ್ಸು ಏಳು ವರ್ಷಗಳೆಂದು ನಿರ್ಧರವಾಗಿದೆ. ಅದಕ್ಕಿಂತ ಕಡಿಮೆ ವಯಸ್ಸಿನ ಶಾಲೆಗಳಲ್ಲಿ ಆಟ ಕುಣಿತಗಳ ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಮಕ್ಕಳ ಆರೋಗ್ಯವನ್ನು ಕೆಡಿಸಿ, ಸಾಲೆಯಲ್ಲಿ ತೊಡಕುಗಳನ್ನು ಹೆಚ್ಚಿಸುವಂತೆ ಚಿಕ್ಕ ಹಸುಳೆಗಳನ್ನು ಪ್ರಾಥಮಿಕ ಸಾಲೆಗಳಲ್ಲಿ ಸ್ವೀಕರಿಸಬಾರದು. ಏಳನೆಯ ವರ್ಷವೆ ಶಾಲಾಪ್ರವೇಶಕ್ಕೆ ಯೋಗ್ಯವಾದ ವಯಸ್ಸಾಗಿದೆ. ವರ್ಧಾ ಶಿಕ್ಷಣಸಮಿತಿಯವರೂ ಇದಕ್ಕೆ ಒಪ್ಪಿದ್ದಾರೆ. ನಾವು ಹಿಂದೆ ಹೇಳಿದಂತೆ ನಾಲ್ಕೇ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಯಬೇಕಾಗಿದ್ದರೆ ಮಕ್ಕಳು ಅಧ್ಯಾಪಕರು ಹೇಳಿದುದನ್ನು ಗ್ರಹಿಸುವ ಶಕ್ತಿಯುಳ್ಳವರಾಗಿರಬೇಕು. ಏಳನೆಯ ವರ್ಷವೆ ಅದಕ್ಕೆ ಯೋಗ್ಯವಾದುದು. ವಿವಿಧ ವಯಸ್ಸಿನವರು ಒಂದೇ ವರ್ಗದಲ್ಲಿರುವುದರಿಂದ ಅಭ್ಯಾಸದ ಪ್ರಗತಿಗೆ ತಡೆಯಾಗುತ್ತದೆ. ಮುಂಬೈ ಮತ್ತು ಮದ್ರಾಸ ಸರಕಾರಗಳ ವರದಿಗಳಿಂದ ಈ ವಿಷಯವು ಸ್ಪಷ್ಟವಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಮಕ್ಕಳನ್ನು ಸಾಲೆಗೆ ಹಾಕಿ ಅಲ್ಲಿಯ ಒಣ ವಾತಾವರಣದಿಂದ ಒಮ್ಮೆ ಅವರಿಗೆ ತಲೆಬೇಸರಿಕೆಯಾಯಿತೆಂದರೆ ಅವರು ಸಾಲೆಯನ್ನು ದ್ವೇಷಿಸಿ ಬಿಟ್ಟುಬಿಡುತ್ತಾರೆ. ಮುಂಬೈ ಪ್ರಾಂತದಲ್ಲಿ ನೂರಕ್ಕೆ ೪೦ ರಷ್ಟು ವಿದ್ಯಾರ್ಥಿಗಳು ಏಳು ವರ್ಷಕ್ಕಿಂತ ಚಿಕ್ಕವರಿದ್ದಾರೆ. ಅದರಿಂದ ಮೊದಲನೆಯ ತರಗತಿಯಿಂದ ಎರಡನೆಯ ತರಗತಿಗೆ ತೀರ ಕಡಿಮೆ ಹುಡುಗರು ಹೋಗುತ್ತಾರೆ. ಚೀನದ ಶಿಕ್ಷಣ ವ್ಯವಸ್ಥೆಯ ವಿಷಯದಲ್ಲಿ ಕೊಟ್ಟ ಸಲಹೆಗಳಲ್ಲಿ ಲೀಗ್ ಆಫ್ ನೇಶನ್‌ದವರು ಏಳು ವರ್ಷ ವಯಸ್ಸನ್ನೆ ಸಮರ್ಥಿಸಿದ್ದಾರೆ. ಒಟ್ಟಿನಲ್ಲಿ ಮಕ್ಕಳನ್ನು ಏಳು ವರ್ಷಕ್ಕೆ ಮೊದಲು ಶಿಸುವಿಹಾರಗಳಿಗೂ ಏಳನೆಯ ವರ್ಷದಿಂದ ಹನ್ನೊಂದು ವರ್ಷದ ವರೆಗೆ ಪ್ರಾಥಮಿಕ ಶಾಲೆಗಳಿಗೂ ಕಳಿಸಬೇಕು.

ವರ್ಗದ ಆಕಾರ

ಪ್ರಾಥಮಿಕ ಶಿಕ್ಷಣದ ಕಾಯದೆಗಳಲ್ಲಿ ಒಂದು ವರ್ಗದಲ್ಲಿ ೩೦ ರಿಂದ ೪೦ ರ ವರೆಗೆ ವಿದ್ಯಾರ್ಥಿಗಳಿರಬೇಕೆಂದಿದೆ. ಆದರೆ ಒಟ್ಟಿನಲ್ಲಿ ಮುಂಬೈಪ್ರಾಂತದಲ್ಲಿ ಸರಾಸರಿ ಒಂದು ವರ್ಗಕ್ಕೆ ೨೭ ರಂತೆ ವಿದ್ಯಾರ್ಥಿಗಳಿದ್ದಾರೆ. ಕಡಿಮೆ ವಿದ್ಯಾರ್ಥಿಗಳಿದ್ದರೆ ಶಿಕ್ಷಕರಿಗೆ ಸುಲಭವಾಗುವುದೆಂಬುದು ನಿಜವಾದರೂ ಸರಾಸರಿ ಸಂಖ್ಯೆಯು ಕಡಿಮೆಯಾಗಿದ್ದರೆ ಶಿಕ್ಷಕರ ಸಂಖ್ಯೆಯು ಹೆಚ್ಚಬೇಕಾಗುವುದು. ಅದನ್ನು ಹೆಚ್ಚಿಸುವುದು ಬಡದೇಶಕ್ಕೆ ಸುಲಭಸಾಧ್ಯವಿಲ್ಲ. ಆದುದರಿಂದ ಸರಾಸರಿ ಸಂಖ್ಯೆಯನ್ನು ಹೆಚ್ಚಿಸಿದರೆ ಕಡಿಮೆ ಶಿಕ್ಷಕರಿಂದಲೆ ಹೆಚ್ಚು ಹುಡುಗರ ಶಿಕ್ಷಣವು ಅಣಿಗೊಳ್ಳುವುದು. ೧೮೭೦ ರಲ್ಲಿ ಇಂಗ್ಲಂಡಿನಲ್ಲಿ ಸರಾಸರಿ ಪ್ರತಿವರ್ಗದಲ್ಲಿ ೬೦ ರಿಂದ ೧೨೦ರ ವರೆಗೆ ಹುಡುಗರಿದ್ದರು; ಜರ್ಮನಿ, ಝೆಕೊಸ್ಲೊವಾಕಿಯ, ಜಪಾನ, ಸ್ವಿಟ್ಝರ್ಲಂಡಗಳಲ್ಲಿ ಆ ಸಂಖ್ಯೆ ೭೦ಕ್ಕಿಂತ ಹೆಚ್ಚೇ ಆಗಿತ್ತು. ಲೀಗ್ ಆಫ್ ನೇಶನ್ಸದವರು ಪ್ರತಿ ವರ್ಗಕ್ಕೆ ೬೦ ವಿದ್ಯಾರ್ಥಿಗಳಿರಬೇಕೆಂದು ಚೀನಕ್ಕೆ ಸಲಹೆ ಕೊಟ್ಟಿದ್ದಾರೆ. ಆದುದರಿಂದ ಈ ಸರಾಸರಿ ಸಂಖ್ಯೆಯನ್ನು ೫೦ ಕ್ಕೆ ಏರಿಸಿದರೆ ಈಗಿದ್ದ ಶಿಕ್ಷಕರ ಸಹಾಯದಿಂದಲೆ ಇಮ್ಮಡಿಯಷ್ಟು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲಿಕ್ಕೆ ಸಾಧ್ಯವಾಗುತ್ತದೆ.

ಕಾಲವಿಭಜನ

ವರ್ಗಗಳನ್ನು ಎರಡು ಗುಂಪುಗಳಾಗಿಸಿ, ಎರಡು ವರ್ಗಗಳಿಗೆ ಬೆಳಿಗ್ಗೆ, ಮಿಕ್ಕ ಎರಡು ವರ್ಗಗಳಿಗೆ ಸಂಜೆಗೆ ಕಲಿಸುವ ವ್ಯವಸ್ಥೆಯು ಅತ್ಯುಪಯುಕ್ತವಾದುದೆಂದು ಹಿಂದೆಯೆ ಹೇಳಿದೆ. ಏಕೆಂದರೆ (೧) ಏಕಾಧ್ಯಾಪಕ ಶಾಲೆಗಳಲ್ಲಿ ಈ ಯೋಜನೆಯಿಂದ ಶಿಕ್ಷಕರ ಕೆಲಸವೂ ಸುಲಭವಾಗುವುದು. ಶಿಕ್ಷಕರ ಸಂಖ್ಯೆ ಹೆಚ್ಚಿಸಲು ಸಾಧ್ಯವಿಲ್ಲವೆಂದಮೇಲೆ ಅವರ ಕೆಲಸವನ್ನು ಸುಲಭಗೊಳಿಸಬೇಕಲ್ಲವೆ? (೨) ಶಿಕ್ಷಕರ ಕೆಲಸ ಸುಲಭವಾದರೆ ಈಗಿನ ಎರಡರಷ್ಟು ವಿದ್ಯಾರ್ಥಿಗಳಿಗೆ ಇದ್ದ ಸಾಲೆಗಳೆ ಸಾಕಾಗುತ್ತವೆ. (೩) ಈಗಿನ ಸಾಲೆಯ ಕಟ್ಟಡಗಳು ಇಕ್ಕಟ್ಟಾಗಿರುವುದರಿಂದ ಕಾಲವಿಭಜನದಿಂದ ಒಂದೊಂದು ಹೊತ್ತಿಗೆ ಕಡಿಮೆ ಹುಡುಗರು ಸಾಲೆಗೆ ಬಂದು ಪ್ರಶಸ್ತವಾಗಿ ಕೂಡಲು ಅನುಕೂಲವಾಗುವುದು; ಮತ್ತು ಕೂಡಲೆ ಹೊಸ ಕಟ್ಟಡಗಳನ್ನು ಕಟ್ಟುವ ಆವಶ್ಯಕತೆಯೂ ಅಷ್ಟು ತೀವ್ರವಾಗುವುದಿಲ್ಲ. (೪) ಬಡತನದ ಮೂಲಕ ಮಕ್ಕಳು ಮನೆಯಲ್ಲಿಯೂ ಹೊಲದಲ್ಲಿಯೂ ತುಸು ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಅವರಿಗೆ ಒಪ್ಪೊತ್ತು ಸಾಲೆಗೆ ಹೋಗಿ ಮಿಕ್ಕ ವೇಳೆಯಲ್ಲಿ ಕೆಲಸಕ್ಕೆ ಹೋಗಲು ಅನುವಾಗುವುದು. ಇದರಿಂದ ಅವರಿಗೆ ತಪ್ಪದೆ ಸಾಲೆಗೆ ಬರಲು ಅನುಕೂಲವಾಗಿ, ನಡುವೆ ಸಾಲೆ ಬಿಡುವ ಚಟವು ಕಡಿಮೆಯಾಗುತ್ತದೆ.

ಈ ಕಾಲವಿಭಜನ (Shift System) ಪದ್ಧತಿಯ ವಿಷಯಕ್ಕೆ ಅನೇಕರ, ಮುಖ್ಯವಾಗಿ ವಿವಿಧಪ್ರಾಂತದ ಬೋರ್ಡುಗಳ ಅಧಿಕಾರಿಗಳ ವಿರುದ್ಧಾಭಿಪ್ರಾಯವಿರುವುದು ದುರ್ದೈವದ ಸಂಗತಿಯಾಗಿದೆ. ಮಕ್ಕಳ ಪಾಲಕರೂ ಇದಕ್ಕೆ ವಿರುದ್ಧರಾಗಿದ್ದಾರೆಂದು ಅವರೆನ್ನುತ್ತಾರೆ. ಆದರೆ ಇದರ ಮೂಲ ಕಾರಣಗಳನ್ನು ಹುಡುಕಿ ತೆಗೆಯದೆ ಈ

ಪದ್ಧತಿಯನ್ನು ತಿರಸ್ಕರಿಸುವುದು ಒಳಿತಲ್ಲ; ಈ ಪದ್ಧತಿಯು ಹಲವು ಪ್ರಾಂತಗಳಲ್ಲಿ ಅಯಶಸ್ವಿಯಾಗುವುದಕ್ಕೆ ಮುಖ್ಯ ಕಾರಣಗಳು ಎರಡು: (೧) ಪಾಲಕರು ಬೇಡವೆನ್ನುತ್ತಾರೆ. (೨) ಅಭ್ಯಾಸವಿಷಯಗಳು ಮಿತಿಮೀರಿವೆ. ಇವುಗಳಲ್ಲಿ ಮೊದಲನೆಯ ಕಾರಣವನ್ನು ಮುಂದೆ ಮಾಡುವವರು ಬಹುತರವಾಗಿ ಶ್ರೀಮಂತರೆ ಆಗಿರುವರು. ಅವರಿಗೆ ತಾವು ಕಚೇರಿಗೆ ಹೋದ ಸಮಯದಲ್ಲಿ ಮಕ್ಕಳು ಒಪ್ಪೊತ್ತು ಮನೆಯಲ್ಲಿ ಉಳಿದು ತೊಂದರೆಪಡಿಸುವುದು ಬೇಡವಾಗಿರುತ್ತದೆ. ಆದರೆ ಭಾರತದಲ್ಲಿ ಸಿರಿವಂತರ ಸಂಖ್ಯೆ ತೀರ ಕಡಿಮೆ. ಆದುದರಿಂದ ಅವರಿಗೆ ಇಷ್ಟವಾದ ರೀತಿಯಲ್ಲಿ ಶಾಲಾನಿಯಮಗಳನ್ನು ರೂಪುಗೊಳಿಸುವುದು ಒಳಿತಲ್ಲ. ಶಿಕ್ಷಕರು ಹೊಸ ಪದ್ಧತಿಗನುಸರಿಸಿ ದಿನಕ್ಕೆ ೫ ಗಂಟೆಯ ಬದಲು ೬ ಗಂಟೆ ದುಡಿಯಬೇಕಾಗುವುದರಿಂದ ಅವರೂ ವಿರೋಧವನ್ನು ಪ್ರಕಟಿಸಬಹುದು. ಆದರೆ ಅವರ ವೇತನವನ್ನು ತುಸು ಹೆಚ್ಚಿಸಿದರೆ ಅವರು ಖಂಡಿತವಾಗಿ ಒಪ್ಪದಿರರು. ಇನ್ನು ಅಭ್ಯಾಸಕ್ರಮವು ಬಹಳ ಭಾರವಾಗಿದೆಯೆಂಬುದನ್ನು ಯಾರಾದರೂ ಒಪ್ಪುವ ಮಾತು. ಮುಂಬೈ ಮುನಿಸಿಪಲ್ ಸ್ಕೂಲು ಕಮಿಟಿಯೂ ಸಂಯುಕ್ತ ಪ್ರಾಂತದ ಸ್ಕೂಲುಗಳ ಡೈರೆಕ್ಟರರೂ 'ಮಕ್ಕಳು ಪ್ರತಿವರ್ಷ ವ್ಯಾಸಂಗವನ್ನು ಪೂರ್ಣವಾಗಿ ಮುಗಿಸಬೇಕೆಂದರೆ ಅಭ್ಯಾಸವಿಷಯ ಸಂಕ್ಷಿಪ್ತಗೊಳಿಸುವುದು ಅಗತ್ಯ' ಎಂದು ಅಭಿಪ್ರಾಯಪಟ್ಟಿದ್ದಾರೆ. ಮಕ್ಕಳ ಭಾವೀ ಜೀವನಕ್ಕೆ ಅನುಪಯುಕ್ತವಾದ ವಿಷಯಗಳನ್ನು ಅಭ್ಯಾಸಕ್ರಮದಿಂದ ತೆಗೆದುಬಿಟ್ಟರೆ ಒಪ್ಪೊತ್ತಿನ ಶಾಲೆಯಿಂದಲೆ ಅವರ ಅಭ್ಯಾಸವು ಪೂರ್ಣಗೊಳ್ಳುವುದರಲ್ಲಿ ಸಂದೇಹವಿಲ್ಲ. ಮುಂಬೈ ಪ್ರಾಂತದ ಶಿಕ್ಷಣಶಾಖೆಯವರು ಈ ಕಾಲವಿಭಜನ ಪದ್ಧತಿಯನ್ನು ಅಂಗೀಕರಿಸಬೇಕೆಂದು ಈಗ ನಿರ್ಧರಿಸಿದ್ದಾರೆಂಬುದು ಶುಭವಾರ್ತೆಯಾಗಿದೆ.

ಈ 'ಶಿಫ್ಟ' ಪದ್ಧತಿಯಲ್ಲದೆ 'ಪ್ರಯಾಣಿಕ ಶಿಕ್ಷಕ'ರನ್ನಿಡುವ ಒಂದು ಹೊಸ ಪದ್ಧತಿಯು ಕೆಲವು ದೇಶಗಳಲ್ಲಿ ರೂಢವಾಗಿದೆ. ತೀರ ಚಿಕ್ಕದಾಗಿ ದೂರದೂರವಾಗಿ ಇರುವ ಹಳ್ಳಿಗಳಲ್ಲಿ ವಾರದಲ್ಲಿ ೨ ದಿನ ಇಲ್ಲವೆ ೩ ದಿನ ಶಾಲೆಯನ್ನು ತೆರೆಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಶಿಕ್ಷಕನು ಇಂತಹ ೨-೩ ಶಾಲೆಗಳಲ್ಲಿ ಒಂದು ವಾರದಲ್ಲಿ ಕಲಿಸಿ ಬರುತ್ತಾನೆ. ಈ ಪದ್ಧತಿಯೂ ಭಾರತಕ್ಕೆ ಅನುಕರಣೀಯವಾಗಿದೆ.

ಟ್ರೇನ್ಡ್ ಶಿಕ್ಷಕರು

೧೯೩೬ ರಲ್ಲಿ ಬ್ರಿಟಿಶ್ ಹಿಂದುಸ್ತಾನದಲ್ಲಿ ನೂರಕ್ಕೆ ೫೬-೫೮ ಶಿಕ್ಷಕ ಶಿಕ್ಷಕಿಯರಿದ್ದರು. ಈ ಮೊದಲು ಮುಂಬೈ ವಿಧಿಮಂಡಲದಲ್ಲಿ ನಡೆದ ಚರ್ಚೆಗಳಲ್ಲಿ ಬಹುತರ ಸಭಾಸದರೂ, ತರಬೇತಾದ ಶಿಕ್ಷಕರೇ ಕಲಿಸುವ ಅಧಿಕಾರವನ್ನು ಹೊಂದಬೇಕೆಂದು ಗರ್ಜಿಸಿದರು. ೧೯೧೧ರಲ್ಲಿ ಶ್ರೀ. ಗೋಖಲೆಯವರು ಒತ್ತಾಯದ ಪ್ರಾಥಮಿಕ ಶಿಕ್ಷಣದ ಬಿಲ್ಲನ್ನು ಮಂಡಿಸಿದಾಗ ಸಭಾಸದರು ಇದೆ ಅಭಿಪ್ರಾಯವನ್ನು ಮುಂದೆ ಮಾಡಿದರು. ಆದರೆ ಗೋಖಲೆಯವರು 'ತರಬೇತಾಗದ ಶಿಕ್ಷಕರು ಕಲಿಸಲಿಕ್ಕೆ ಯೋಗ್ಯರೆ ಅಲ್ಲವೆಂಬುದು ಒಳಿತಲ್ಲ. ಚಿಕ್ಕಮಕ್ಕಳಿಗೆ ಕಲಿಸಲು ತರಬೇತು ಹೊಂದದ ಅನೇಕ ಶಿಕ್ಷಕರೂ ಸಮರ್ಥರಾಗಿದ್ದಾರೆ. ನಮಗೆ ತರಬೇತು ಹೊಂದಿದ ಶಿಕ್ಷಕರು ಹೆಚ್ಚುಹೆಚ್ಚಾಗಿ ಬೇಕೆಂಬುದು ನಿಜವಾದರೂ ಅಂತಹ ಶಿಕ್ಷಕರು ಸಿಗುವವರೆಗೆ ಶಿಕ್ಷಣವನ್ನು ಮುಂದೂಡುವುದು ಒಳ್ಳೆಯದಲ್ಲ' ಎಂದು ಹೇಳಿದರು. ಇಂಗ್ಲಂಡಿನಲ್ಲಿ ೧೮೭೦ರಲ್ಲಿ ನೂರಕ್ಕೆ ೪೫ರಷ್ಟು ಟ್ರೇನ್ಡ ಶಿಕ್ಷಕರಿದ್ದರು. ಆಯರ್ಲಂಡಿನಲ್ಲಿ ಇಂದಿಗೂ ನೂರಕ್ಕೆ ೫೫ರಷ್ಟು ಟ್ರೇನ್ಡ ಶಿಕ್ಷಕರಿದ್ದಾರೆ. ಆದರೆ ಭಾರತದಲ್ಲಿ ಸರಾಸರಿಯಾಗಿ ನೂರಕ್ಕೆ ೫೮ರಷ್ಟು ಟ್ರೇನ್ಡ ಶಿಕ್ಷಕರಿದ್ದು, ಪಂಜಾಬ, ವಾಯುವ್ಯ ಮತ್ತು ಸಂಯುಕ್ತಪ್ರಾಂತಗಳಲ್ಲಿ ೭೫ರಿಂದ ೮೦ರ ವರೆಗೆ ಟ್ರೇನ್ಡ ಆಗಿರುವಾಗ, ನಾವೇಕೆ ಒತ್ತಾಯದ ಶಿಕ್ಷಣ ಪ್ರಸಾರಕ್ಕೆ ಅಂಜಬೇಕು? ಹಣವು ಒದಗಿದಂತೆ ಕ್ರಮೇಣ ಶಿಕ್ಷಕರನ್ನು ತರಬೇತುಗೊಳಿಸಬಹುದು. ಟ್ರೇನ್ಡ ಶಿಕ್ಷಕರ ಸಂಖ್ಯೆಯನ್ನು ಬೆಳೆಸುವುದಕ್ಕೆ ಹಲವು ಯುಕ್ತಿಗಳನ್ನು ಮಾಡಬೇಕು. (೧) ಟ್ರೇನಿಂಗನ್ನು ಎರಡೇ ವರ್ಷಗಳಿಗೆ ಮಿತಗೊಳಿಸಬೇಕು. (೨) ಮೇಲಿನ ವರ್ಗದ ವಿದ್ಯಾರ್ಥಿಯು ಶಿಕ್ಷಕನಾಗಲು ಸಮರ್ಥನಾಗುವಂತೆ ಒಂದು ವರ್ಷದ ಟ್ರೇನಿಂಗ್ ವರ್ಗಗಳನ್ನು ತೆರೆಯಬೇಕು. (೩) ಶಿಕ್ಷಕರು ತಮ್ಮ ಉದ್ಯೋಗದಲ್ಲಿರುವಾಗಲೆ ರಜೆಯ ದಿನಗಳಲ್ಲಿ ಟ್ರೇನಿಂಗ್ ಪಡೆಯುವ ವ್ಯವಸ್ಥೆ ಮಾಡಬೇಕು. ಈ ಎಲ್ಲ ಯುಕ್ತಿಗಳಿಂದ ಶಿಕ್ಷಣಪ್ರಚಾರಕ್ಕೆ ತಡೆಯಾಗದೆ ತರಬೇತು ಹೊಂದುವುದಕ್ಕೂ ಪ್ರೋತ್ಸಾಹ ಸಿಗುತ್ತದೆ.

ಶಿಕ್ಷಕರನ್ನು ಬರಿ ತರಬೇತುಗೊಳಿಸಿ ಉಪಯೋಗವಿಲ್ಲ. ಅವರ ಶಿಕ್ಷಣವು ಆಕರ್ಷಕವಾಗಬೇಕಾದರೆ ಅವರಿಗೆ ಸಾಕಷ್ಟು ವೇತನವನ್ನು ಕೊಡಬೇಕಾಗುವುದು. ಹಾರ್ಟೊಗ ಕಮಿಟಿಯವರು ಪ್ರಸಿದ್ಧಿಸಿದ ವರದಿಯಿಂದ ವಿವಿಧ ಪ್ರಾಂತಗಳ ಸರಾಸರಿ ವೇತನವು ತಿಂಗಳಿಗೆ ೮/ ರೂಪಾಯಿಗಳು

ರೂಪಾಯಿಯ ವರೆಗಿದೆ. ಮುಂಬೈ ಪ್ರಾಂತದಲ್ಲಿ ೪೭, ಪಂಜಾಬ ೨೫, ಮದ್ರಾಸ ೧೫, ಬಂಗಾಲ ೮-೬-೦ ಈ ರೀತಿಯಾಗಿ ಸರಾಸರಿ ವೇತನವಿದೆ. ಆ ವರದಿಯಾದ ಮೇಲೆ ಬಂಗಾಲದಲ್ಲಿ ಸರಾಸರಿ ವೇತನವು ೬॥ರೂಪಾಯಿ ಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರಿಗೆ ವಿದ್ಯಾದಾನದ ಹುರುಪೆಲ್ಲಿಂದ ಬರಬೇಕು ! ಆದುದರಿಂದ ಶಿಕ್ಷಕರ ವೇತನ ವನ್ನು ಹೆಚ್ಚಿಸುವ ಕಡೆಗೂ ಹೆಚ್ಚು ಗಮನ ಕೊಡುವುದು ಬಹಳ ಅಗತ್ಯವಾಗಿದೆ.

ಅಭ್ಯಾಸಕ್ರಮ

ವರ್ಧಾಶಿಕ್ಷಣ ಪ್ರಣಾಲಿ:—ಝಾಕೀರ ಹುಸೇನ ಕಮಿಟಿಯಿಂದ ತಯಾರಿಸಲ್ಪಟ್ಟ ವರ್ಧಾಶಿಕ್ಷಣ ಪ್ರಣಾಲಿಯು ಕಾಂಗ್ರೆಸ್ ಸರಕಾರದ ಆಧಿಪತ್ಯದಲ್ಲಿ ಬೇಗ ಕಾರ್ಯರೂಪ ತಾಳುವ ಸಂಭವವಿದ್ದುದರಿಂದ ಅದರ ವಿಷಯದಲ್ಲಿ ಕೊಂಚ ವಿಚಾರಮಾಡುವುದು ಅಗತ್ಯವಾಗಿದೆ.

ಇದು ಏಳನೆಯ ವಯಸ್ಸಿನಿಂದ ಆರಂಭಿಸಿ ಏಳು ವರ್ಷಾವಧಿಯ ವರೆಗೆ ಸಾಗುವ ಪ್ರಣಾಲಿಯಾಗಿದೆ. ಅದರಲ್ಲಿ (೧) ಜೀವವ್ಯವಸಾಯ * (Basic Craft) (೨) ಗಣಿತ (೩) ಮಾತೃಭಾಷೆ (೪) ಹಿಂದುಸ್ತಾನಿ (೫) ಚಿತ್ರಕಲಾ (೬) ಸಂಗೀತ (೭) ಇತಿಹಾಸ ಭೂಗೋಲಗಳನ್ನೊಳಗೊಳ್ಳುವ ಸಾಮಾಜಿಕ ವಿಷಯಗಳು (೮) ಪ್ರಕೃತಿ, ಸಸ್ಯ, ಪ್ರಾಣಿ, ಶರೀರ, ಆರೋಗ್ಯ, ವ್ಯಾಯಾಮ, ಜ್ಯೋತಿ, ಕಥೆಗಳು, ರಸಾಯನ ಮುಂತಾದ ವಿಷಯಗಳನ್ನೊಳಗೊಂಡ ಸಾಮಾನ್ಯ ವಿಜ್ಞಾನ, ಇಷ್ಟು ವಿಷಯಗಳ ಸಮಾವೇಶವಾಗುತ್ತದೆ. ಆದರೆ ಎಲ್ಲ ವಿಷಯಗಳ ಶಿಕ್ಷಣವನ್ನೂ ಒಂದು ಜೀವವ್ಯವಸಾಯದ ಮೂಲಕವೇ ಕೊಡಬೇಕೆಂಬುದು ಕಮಿಟಿಯವರ ಅಭಿಪ್ರಾಯವಾಗಿದೆ. ಕಮಿಟಿಯವರು ಒಪ್ಪಿದ ಜೀವವ್ಯವಸಾಯಗಳು ಆರು: (೧) ನೂಲುವುದು ನೇಯುವುದು (೨) ಬಡಿಗತನ (೩) ಒಕ್ಕಲುತನ (೪) ತೋಟಪಟ್ಟಿ (೫) ಚರ್ಮಗಾರಿಕೆ (೬) ಸ್ಥಾನಿಕವಾಗಿ ಉಪಯುಕ್ತವಾಗುವ ಬೇರೆ ಯಾವುದಾದರೊಂದು ಉದ್ಯೋಗ. ಅಲ್ಲದೆ ನೂಲುವ ನೇಯುವ ಅಥವಾ ಒಕ್ಕಲುತನದ ಹೊರತು ಬೇರೆ ವ್ಯವಸಾಯವನ್ನು ತೆಗೆದುಕೊಂಡವರು ಇವೆರಡರ ಸಾಮಾನ್ಯಜ್ಞಾನವನ್ನು ಪಡೆಯಲೆಬೇಕು.

ಈ ಪ್ರಣಾಲಿಯಲ್ಲಿ ದಿನದ ೫ ಗಂಟೆ ೨೦ ಮಿನಿಟಿನ ಕಲಿಸುವ ಕಾಲಾವಧಿಯಲ್ಲಿ ೩ ಗಂಟೆ ೨೦ ಮಿನಿಟುಗಳು ವ್ಯವಸಾಯಶಿಕ್ಷಣದಲ್ಲಿಯೆ ಕಳೆಯುತ್ತವೆ. ಶಿಕ್ಷಣದಲ್ಲಿ ವ್ಯವಸಾಯವನ್ನು ಸೇರ್ಪಡಿಸುವುದು ದೇಶವಿದೇಶಗಳಲ್ಲಿಯೂ ಪ್ರಚುರವಾದ ಪದ್ಧತಿಯಾಗಿದೆ. ಆದರೆ ವರ್ಧಾ ಪ್ರಣಾಲಿಯಲ್ಲಿ ವ್ಯವಸಾಯದ ಮೇಲೆಯೆ ಶಿಕ್ಷಣಮಂದಿರವನ್ನು ಕಟ್ಟುವ ವಿಚಾರವು ಜಗತ್ತಿನ ಪ್ರಣಾಲಿಗಳಲ್ಲಿಯೆ ಹೊಸ ಮಾದರಿಯಾಗಿದೆ. ಈ ಪ್ರಣಾಲಿಯಲ್ಲಿ ವ್ಯವಸಾಯಕ್ಕೆ ಕೊಡಲ್ಪಟ್ಟ ಪ್ರಾಮುಖ್ಯತೆಯಿಂದ ಶಿಕ್ಷಣವೆ ಕಣ್ಮರೆಯಾಗುವ ಸಂಭವ ಹೆಚ್ಚಾಗಿದೆ. ಇದರಿಂದ ಆ ಪ್ರಣಾಲಿಯು ಶಿಕ್ಷಣವೆಂದರೆ ಮಕ್ಕಳ ಕೂಲಿಕೆಲಸವಾಗುವ ಅಂಜಿಕೆಯಿದೆ. ಏಳು ವರ್ಷದ ಮಗುವು ದಿನಕ್ಕೆ ೩ ಗಂಟೆ ೨೦ ಮಿನಿಟುಗಳಂತೆ ತಿಂಗಳಲ್ಲಿ ೨೪ ದಿನಗಳು ಒಂದು ವ್ಯವಸಾಯದಲ್ಲಿ ದುಡಿಯುವುದಕ್ಕೆ ಶಿಕ್ಷಣವೆನ್ನುವ ಬದಲು ಮಕ್ಕಳ ಕೂಲಿಕೆಲಸಕ್ಕೆ ಶಿಕ್ಷಣವೆಂತಲೂ, ಕಾರಖಾನೆಗಳಿಗೆ ಸಾಲೆಗಳೆಂತಲೂ ಕರೆಯುವುದು ಮೇಲು. ಅದಕ್ಕೆ ವ್ಯವಸಾಯ ಶಿಕ್ಷಣವೆಂಬ ಹೆಸರೂ ಒಪ್ಪುವುದಿಲ್ಲ. ಏಕೆಂದರೆ ಮಹಾಮಹಾ ಶಿಕ್ಷಣ ವಿಜ್ಞಾನಿಗಳೂ, ರಾಬರ್ಟ್ ಡೊಟ್ರೆನ್ಸರೂ 'ವ್ಯವಸಾಯ ಶಿಕ್ಷಣವನ್ನು ಪ್ರಾಥಮಿಕ ವರ್ಗಗಳಲ್ಲಿ ಕೊಟ್ಟರೆ ಫಲಕಾರಿಯಾಗುವುದಿಲ್ಲ'ವೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಹ್ಯಾಡೋ ಕಮಿಟಿಯು 'ಮಕ್ಕಳಲ್ಲಿ ಕುತೂಹಲವನ್ನೂ, ಇಂದ್ರಿಯಕೌಶಲ್ಯವನ್ನೂ ಹೆಚ್ಚಿಸುವುದಕ್ಕೆ ವಾರದಲ್ಲಿ ೩-೪ ಗಂಟೆಗಳಿಗಿಂತ ಹೆಚ್ಚಾಗಿ ವ್ಯವಸಾಯ ಶಿಕ್ಷಣವನ್ನು ಕೊಡಲಾಗದು' ಎಂದಿದೆ. ಮಗುವನ್ನು ಒತ್ತಾಯದಿಂದ ನೂಲು, ನೆಯಿಗೆ, ಒಕ್ಕಲುತನದ ಕೆಲಸಗಳಲ್ಲಿ ತೊಡಗಿಸುವುದು ವರ್ಧಾಪ್ರಣಾಲಿಯ ಒಂದು ದೋಷವಾಗಿದೆ. ಏಕೆಂದರೆ 'ಮಕ್ಕಳ ಒಲವು ಪೂರ್ಣವಾಗಿ ವ್ಯಕ್ತವಾಗುವವರೆಗೆ ಅವರನ್ನು ಯಾವುದೊಂದು ಉದ್ಯೋಗದಲ್ಲಿಯೂ ಒತ್ತಾಯದಿಂದ ತೊಡಗಿಸುವುದು ಯೋಗ್ಯವಲ್ಲ'ವೆಂದು ಭಾರತವ್ಯವಸಾಯ ಶಿಕ್ಷಣಸಮಿತಿಯವರು (Committee on Vocational Education in India) ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಮಗುವಿಗೆ ತಾನು ಒಂದು ಕೆಲಸವನ್ನು ಪೂರ್ಣವಾಗಿ ಮಾಡುವ ಹೆಮ್ಮೆಯಿರುತ್ತದೆ; ಹಾಗೆ ಮಾಡಿ ಆನಂದಪಟ್ಟರೆ ಅದಕ್ಕೆ ಆ ಕೆಲಸದಲ್ಲಿ ಪ್ರೀತಿ ಹುಟ್ಟುತ್ತದೆ. ಉದಾಹರಣಾರ್ಥವಾಗಿ, ಕಾಗದ-ಕಾರ್ಡುಬೋರ್ಡುಗಳಲ್ಲಿ ತರತರದ ಆಕೃತಿಗಳನ್ನು ತಯಾರಿಸುವುದನ್ನು ಕಲಿಸುವಾಗ, ಕ್ಯಾಲೆಂಡರು-ಬರೆಯುವ ಪ್ಯಾಡ್ಡುಗಳು-ಬೈಂಡಾದ ಪುಸ್ತಕಗಳು ಮೊದಲಾದ ಪೂರ್ಣವಸ್ತುಗಳು ತಯಾರಾಗುವವರೆಗೂ ಆ ಕಲಿಸುವಿಕೆ ಸಾಗಬೇಕು. ಆದರೆ ವರ್ಧಾಪ್ರಣಾಲಿ

* ಇಲ್ಲಿ 'ವ್ಯವಸಾಯ'ವನ್ನು Craft (ಕೈಗಾರಿಕೆ) ಎಂಬರ್ಥದಲ್ಲಿ ಉಪಯೋಗಿಸಿದೆ.

ಯಲ್ಲಿ ಒಬ್ಬ ಮಗುವಿನಿಂದಲೆ ಒಂದು ಪೂರ್ಣವಸ್ತ್ರ ವನ್ನು ಮಾಡಿಸುವ ವ್ಯವಸ್ಥೆಯಿಲ್ಲ. ನೂಲುವ ಮಗುವಿನ ಕೈಯಿಂದಲೆ ವಸ್ತ್ರ ನೆಯಿಸಿ ಹೊಲಿಸಿ ಉಡಿಗೆಗಳನ್ನು ಮಾಡಿ ಸುವುದಿಲ್ಲ; ಮುಂಚಿನ ೫ ವರ್ಷ ಮಗು ಬರಿ ನೂಲಬೇಕು ಮಾತ್ರ. ಆದುದರಿಂದ ಅದಕ್ಕೆ ವ್ಯವಸಾಯದಲ್ಲಿ ಬೇಸರ ಹುಟ್ಟುವುದು. ಇದೂ ಒಂದು ದೋಷವೆ. ವರ್ಧಾ ಪ್ರಣಾಲಿಯು ಸಮಂಜಸವಾದುದಲ್ಲವೆಂದು ತಿಳಿದ ಮೇಲೆ ಅದನ್ನಿಲ್ಲಿ ವಿವೇಚಿಸುವುದರಲ್ಲಿ ಅರ್ಥವಿಲ್ಲ.

ಆದುದರಿಂದ ವರ್ಧಾಪ್ರಣಾಲಿಯಲ್ಲಿಯ ಶಿಕ್ಷಣವಿಷಯ ಗಳನ್ನೆ ನಿರ್ದುಷ್ಟವಾಗಿ ಹೇಗೆ ಕಲಿಸಬಹುದೆಂಬುದನ್ನು ನೋಡುವಾ. ವ್ಯವಸಾಯಶಿಕ್ಷಣದ ಹೊರತಾಗಿ ಮಿಕ್ಕೆಲ್ಲ ವಿಷಯಗಳು ನಾಲ್ಕು ವರ್ಷಗಳಲ್ಲಿ ಸುಲಭವಾಗಿ ಮುಗಿ ಯುವಂತೆ ಅಭ್ಯಾಸಕ್ರಮವನ್ನು ಏರ್ಪಡಿಸಬೇಕು. ಅದ ಕ್ಕಾಗಿ (೧) ಅಭ್ಯಾಸದ ವಿಷಯಗಳು ಮಕ್ಕಳ ಸುತ್ತಲಿನ ಪರಿಸ್ಥಿತಿಗೆ ಸಂಬಂಧಿತವಾಗಿರಬೇಕು. (೨) ವಿಷಯಗಳು ಸುಲಭವಾಗಿರಬೇಕು; ಅವುಗಳ ಪರಿಮಾಣವು ಅಳತೆ ಯೊಳಗಿರಬೇಕು. (೩) ವ್ಯವಸಾಯಶಿಕ್ಷಣವು ಮಕ್ಕಳಲ್ಲಿ ವ್ಯವಹಾರಜ್ಞಾನವನ್ನು ಹೆಚ್ಚಿಸಿದರೆ ಸಾಕು. ಅವರು ಪೂರ್ಣ ವ್ಯವಸಾಯಿಗಳಾಗಬೇಕಾಗಿಲ್ಲ. ಇವಲ್ಲದೆ ಮಕ್ಕ ಳಲ್ಲಿ ಚೆನ್ನಾಗಿ ಮಾತನಾಡುವ, ವಿಚಾರಗಳನ್ನು ಪರಿಣಾಮ ಕರವಾಗಿ ಪ್ರಕಟಿಸುವ, ಓದುವ ಮತ್ತು ಬರೆಯುವ ಶಕ್ತಿಯೂ ಬರುವಂತೆ ಶಿಕ್ಷಣಕ್ರಮವಿರಬೇಕು.

ಮುಖ್ಯವಾಗಿ ಯಾವುದೆ ವಿಷಯವನ್ನು ಕಲಿಸಲಿ, ಅದರಲ್ಲಿ ಮಕ್ಕಳ ಮನಸ್ಸನ್ನು ಹಿಡಿಯುವ ವೈವಿಧ್ಯವೂ, ಆಕರ್ಷಣೆಯೂ ಇರಬೇಕು. ಇತಿಹಾಸವನ್ನು ಕಥೆಗಳ ಮೂಲಕ, ಭೂಗೋಲವನ್ನು ಮ್ಯಾಜಿಕ್ ಲ್ಯಾಂಟರ್ನ್, ಚಿಕ್ಕ ಪ್ರಯಾಣಗಳ ಮೂಲಕ, ಗಣಿತವನ್ನು ಚಿಕ್ಕ ಉಪ ಯುಕ್ತ ಲೆಕ್ಕಗಳಿಂದ, ಪ್ರಕೃತಿವಿಜ್ಞಾನವನ್ನು ಸುಂದರ ದೃಶ್ಯಗಳ ಮೂಲಕ, ಆರೋಗ್ಯ ವ್ಯಾಯಾಮಗಳನ್ನು ಆಟಗಳ ಮೂಲಕ, ವ್ಯವಸಾಯಗಳನ್ನು ಚಿತ್ರವಿಚಿತ್ರವಾದ ಸಣ್ಣ ಕೈಗಾರಿಕೆಯ ಕೃತಿಗಳಿಂದ ಕಲಿಸಬೇಕು. ಅಲ್ಲದೆ ಸಂಗೀತವನ್ನು ಮನೋರಂಜಕವಾಗುವಂತೆ ಕಲಿಸಿಯೆ ತೀರಬೇಕು.

ಬೇರೆ ಕೆಲವು ಸಲಹೆಗಳು

(೧) **ಕಟ್ಟಡಗಳು:** ಸಾಲೆಯ ಕಟ್ಟಡವು ಸಾಕಷ್ಟು ಗಾಳಿ ಬೆಳಕುಗಳಿಗೆ ಆಸ್ಪದವಿರುವ ಪ್ರಶಸ್ತವಾದ ಸ್ಥಳ ವಾಗಿರಬೇಕೆಂಬುದರ ಬಗ್ಗೆ ವಿವಾದವಿಲ್ಲ. ಆದರೆ ಭಾರತಕ್ಕೆ ಈಗಲೆ ಅಂತಹ ಸಾಲೆಯ ಕಟ್ಟಡಗಳನ್ನು ನಿರ್ಮಿಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಶಿಕ್ಷಣವನ್ನು ಮುಂದೂಡುವುದು ಮಾತ್ರ ಜಾಣತನವಾಗಲಾರದು. ಮಿಕ್ಕ ದೇಶಗಳ ಶಿಕ್ಷ ಣದ ಇತಿಹಾಸವನ್ನು ನೋಡಿದರೆ ಅಲ್ಲಿ ಎಂತಹ ಹೊಲಸು ಗೂಡುಗಳಲ್ಲಿ ಸಾಲೆಗಳನ್ನು ಹಾಕುತ್ತಿದ್ದರೆಂಬುದು ತಿಳಿದು ಬರುತ್ತದೆ. ಬಡತನದಲ್ಲಿ ಅದು ಅನಿವಾರ್ಯ. (೧) ಹಣವು ಒದಗಿದಾಗ ಒಳ್ಳೆಯ ಕಟ್ಟಡಗಳನ್ನೆ ಕಟ್ಟಿಸಬೇಕು. (೨) ಇಲ್ಲದಿದ್ದಾಗ ಬಾಡಿಗೆಯ ಮನೆಗಳಲ್ಲಿಯೂ ಸಾಲೆ ಹಾಕಬಹುದು. (೩) ಅಷ್ಟು ದುಡ್ಡಿಲ್ಲದಾಗ ಸಾರ್ವಜನಿಕ ದೇವಾಲಯ, ಛತ್ರ, ಮಸೀದಿ, ಚಾವಡಿಗಳಲ್ಲಿ ಸಾಲೆ ಹಾಕ ಬೇಕು. ಚೀನದಲ್ಲಿ ಅನೇಕ ದೇವಾಲಯಗಳಲ್ಲಿಯು ಇಂದಿಗೂ ಸಾಲೆಗಳಿವೆ. ಇಂತಹ ಸಾಲೆಗಳಿಗೆ ಬರಲು ಅಸ್ಪೃಶ್ಯರಿಗೆ ತೊಂದರೆಯಾಗದಂತೆ ಸರಕಾರವು ವ್ಯವಸ್ಥೆ ಗೊಳಿಸಬೇಕು. (೪) ಮಳೆ ಕಡಿಮೆಯಾಗಿರುವ ಪ್ರಾಂತ ಗಳಲ್ಲಿ ಬಯಲುಸಾಲೆಗಳನ್ನು ಹಾಕಬೇಕು.

(೨) **ಬಾಲಿಕೆಯರ ಶಿಕ್ಷಣ:** ಮುಂಬೈ ಪ್ರಾಂತದಲ್ಲಿ ಬಾಲಿಕೆಯರಿಗಾಗಿಯೆ ಪ್ರತ್ಯೇಕವಾಗಿ ಬೇಕಾದಷ್ಟು ಸಾಲೆ ಗಳಿವೆ; ಸಾಕಷ್ಟು ಮಾತ್ರವಿಲ್ಲ. ಪ್ರತ್ಯೇಕ ಸಾಲೆಗಳಿದ್ದರೂ ಅಲ್ಲಿಯೂ ಬಾಲಿಕೆಯರು ಗಂಡುಹುಡುಗರ ಸಾಲೆಗೆ ಹೋಗಿ ಕಲಿಯುತ್ತಿರುವುದೂ ಉಂಟು. ಬಾಲಬಾಲಿಕೆಯರ ಸಹಶಿಕ್ಷ ಣದ ವಿಷಯಕ್ಕೆ ಮತಭೇದವು ವಿಶೇಷವಾಗಿಲ್ಲವಾದ್ದರಿಂದ ಬಾಲಿಕೆಯರಿಗೆ ಪ್ರತ್ಯೇಕ ಸಾಲೆಗಳಿಲ್ಲದಾಗ ಅವರ ಶಿಕ್ಷಣ ವನ್ನು ತಡೆದು ಹಿಡಿಯುವುದು ಒಳಿತಲ್ಲ. ಮಿಶ್ರಶಾಲೆಗಳಿಗೆ ಬಾಲಿಕೆಯರು ಹೋಗಲು ಉತ್ತೇಜನ ಸಿಗಬೇಕಾದರೆ ಅಲ್ಲಿ ಕೆಲವು ಶಿಕ್ಷಿಕೆಯರನ್ನೂ ನಿಯೋಜಿಸುವುದು ಒಳ್ಳೆಯದು. 'ಸಾಲೆಗಳಲ್ಲಿ ಶಿಕ್ಷಿಕೆಯರು ಇರುವುದರಿಂದ ಬಾಲಿಕೆಯರು ನಡುವೆ ಸಾಲೆ ಬಿಡದೆ ಹೆಚ್ಚು ದಿನ ಕಲಿಯಲು ಉತ್ತೇ ಜನ ಸಿಗುವುದು' ಎಂಬ ಮುಂಬೈಯ ಒಬ್ಬ ಇನ್‌ಸ್ಪೆಕ್ಟ ರ್‍ನ ಅಭಿಪ್ರಾಯವು ತಥ್ಯಪೂರ್ಣವಾಗಿದೆ. ಭಾರತದಲ್ಲಿ ಬಾಲಕರಿಗಿಂತ ಬಾಲಿಕೆಯರ ಶಿಕ್ಷಣದ ಕಡೆಗೆ ಹೆಚ್ಚು ಗಮನಕೊಡುವುದು ಅವಶ್ಯವಿದೆ. ಏಕೆಂದರೆ ಅವರು ಮುಂದೆ ತಾಯಂದಿರಾದಾಗ ತಮ್ಮ ಮಕ್ಕಳನ್ನು ಅಶಿಕ್ಷಿತ ರನ್ನಾಗಿ ಎಂದೂ ಮಾಡಗೊಡಲಾರರು.

(೩) **ಅಸ್ಪೃಶ್ಯರ ಶಿಕ್ಷಣ:** ಜಾತಿಗೊಂದು ಸಾಲೆಯನ್ನು ತೆರೆಯುವುದು ಆರ್ಥಿಕ ದೃಷ್ಟಿಯಿಂದ ಅಯೋಗ್ಯವಾದ ದೇಶದ ಪ್ರಗತಿ ಐಕ್ಯಗಳ ದೃಷ್ಟಿಯಿಂದಲೂ ಒಳ್ಳೆಯದಲ್ಲ. ಆಯಾ ಭಿನ್ನ ಸಾಲೆಗಳಿಂದ ಭಿನ್ನತೆಯೆ ಬೆಳೆಯುತ್ತದೆ.

೦ದ ಭಿನ್ನ ಶಾಲೆಗಳಿಗೆ ಸರಕಾರವು ಪ್ರೋತ್ಸಾಹ ಕೊಡದೆ ಮಿಶ್ರಶಾಲೆಗಳಲ್ಲಿ ಹರಿಜನರಿಗಾಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕು.

(೪) **ಶಿಕ್ಷಣದ ಸ್ಥಿರೀಕರಣ:** ಪ್ರಾಥಮಿಕ ಶಿಕ್ಷಣವನ್ನು ಪಡೆದು ಶಾಲೆ ಬಿಟ್ಟು ಐದು ವರ್ಷಗಳೊಳಗಾಗಿ ನೂರಕ್ಕೆ ೩೯ರಷ್ಟು ಬಾಲಬಾಲಿಕೆಯರು ಅಶಿಕ್ಷಿತಾವಸ್ಥೆಗಿಳಿಯುವರೆಂದು ತಿಳಿದು ಬಂದಿದೆ. ಇಷ್ಟು ಕಷ್ಟಪಟ್ಟು ಕೊಟ್ಟ ಶಿಕ್ಷಣವು ನಿರರ್ಥಕವಾಗದಂತೆ ಪ್ರತಿಬಂಧಿಸುವುದೂ ಶಿಕ್ಷಣ ಪ್ರಚಾರಕರ ಕರ್ತವ್ಯವಾಗಿದೆ. ಶಾಲೆ ಬಿಟ್ಟವರಿಗೆ ಪುಸ್ತಕ ಪತ್ರಿಕೆಗಳನ್ನು ಓದುವ ಚಟವನ್ನು ಹಚ್ಚಬೇಕು. ಅದಕ್ಕಾಗಿ (೧) ಸಂಚಾರಿ ವಾಚನಾಲಯಗಳ ಏರ್ಪಾಡು ಮಾಡಬೇಕು. ೧೯೩೨ರಲ್ಲಿ ಬಡೋದಾ ಸಂಸ್ಥಾನದಲ್ಲಿ ನೂರಕ್ಕೆ ೫೦ರಷ್ಟು ಹಳ್ಳಿಗಳಿಗೆ ಸಂಚಾರಿ ವಾಚನಾಲಯಗಳ ಉಪಯೋಗವನ್ನು ಮಾಡಿ ಕೊಡಲಾಯಿತು. (೨) ರಾತ್ರಿಶಾಲೆಗಳೂ ಚಿಕ್ಕ ಸಿನೆಮಾ, ಮ್ಯಾಜಿಕ್ ಲ್ಯಾಂಟರ್ನಗಳೂ ಸಾಕ್ಷರತೆಯನ್ನು ಕಾಪಾಡುವ ಉತ್ಕೃಷ್ಟ ಸಾಧನಗಳಾಗಿವೆ.

ಶಿಕ್ಷಣಸಂಸ್ಥೆಗಳ ಆಡಳಿತ

೧೯೧೮ರ ನಂತರ ಗವರ್ನ್‌ಮೆಂಟ್ ಆಫ್ ಇಂಡಿಯಾ ಆ್ಯಕ್ಟಿನ ಬಲದಿಂದ ಕ್ರಮೇಣ ಪ್ರಾಥಮಿಕ ಶಾಲೆಗಳ ಆಡಳಿತವು ಸ್ಥಾನಿಕ ಸ್ಕೂಲುಬೋರ್ಡುಗಳ ಕೈಗೆ ಬಂದಿತು. ಜನತೆಗೆ ಕಾರಭಾರ ನಡೆಸುವ ಅಧಿಕಾರವನ್ನು ಕೊಡುವುದು ತಾತ್ವಿಕವಾಗಿ ಸರಿಯೆನಿಸಿದರೂ ಸರಕಾರವು ಶಿಕ್ಷಣದಂತಹ ಪ್ರಮುಖ ವಿಷಯಗಳನ್ನು ಅಲಕ್ಷಿಸುವುದು ಒಳಿತಲ್ಲ. ಸ್ಕೂಲುಬೋರ್ಡುಗಳಿಗೆ ಆಡಳಿತವನ್ನು ಒಪ್ಪಿಸಿದುದರ ಪರಿಣಾಮವು ಒಳಿತಾಗಲಿಲ್ಲವೆಂದು ಅನೇಕ ತಜ್ಞರ ಅಭಿಪ್ರಾಯವಾಗಿದೆ. ಸ್ಥಾನಿಕ ಅಧಿಕಾರಿಗಳು ಶಿಕ್ಷಣಪ್ರಚಾರಕ್ಕಿಂತ ಜಾತೀಯತೆಯ ಪ್ರಸಾರವನ್ನೆ ಮಾಡಿದರೆಂಬುದು ಅನೇಕರ ಅನುಭವಕ್ಕೆ ಬಂದಿದೆ. ೧೯೨೯ರಲ್ಲಿ ಹಾರ್ಟೊಗ್ ಕಮಿಟಿಯೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಈಗಂತೂ ಪ್ರಾಂತಗಳಿಗೆ ಸ್ವಾಯತ್ತತೆ ಬಂದಿರುವುದರಿಂದ ಸರಕಾರಕ್ಕೂ ಸ್ಥಾನಿಕ ಸಂಸ್ಥೆಗಳಿಗೂ ವಿಶೇಷ ವ್ಯತ್ಯಾಸವಿಲ್ಲವಾಗಿದೆ. ಆದ್ದರಿಂದ ಶಿಕ್ಷಣದ ಆಡಳಿತವನ್ನು ಪ್ರಾಂತಿಕ ಸರಕಾರವೆ ಕೈಕೊಳ್ಳುವುದು ಯೋಗ್ಯವಾಗಿದೆಯೆಂಬ ಶಿಕ್ಷಣಾಭಿಮಾನಿಗಳ ಅಭಿಪ್ರಾಯವು ಗಮನಾರ್ಹವಾಗಿದೆ. ಆದರೆ ಸ್ಥಾನಿಕ ಸ್ವರಾಜ್ಯಸಂಸ್ಥೆಗಳ ಅಧಿಕಾರವನ್ನು ಅಲ್ಲಗಳೆಯುವುದು ಸಮಂಜಸವಾದುದಲ್ಲ. ಸರಕಾರವು ಕ್ರಮಕ್ರಮವಾಗಿ ಸ್ಥಾನಿಕ ಸಂಸ್ಥೆಗಳನ್ನೆ ಆಡಳಿತಕ್ಕೆ ಸಿದ್ಧವಾಗುವಂತೆ ಏರ್ಪಡಿಸುವುದೇ ಯೋಗ್ಯವಾದ ದಾರಿಯಾಗಿದೆ. ಆದುದರಿಂದ ಶಿಕ್ಷಣದ ಆಡಳಿತವನ್ನು ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸಿದ ಮೇಲೂ ಸರಕಾರವು ಮೇಲಿಂದ ಮೇಲೆ ಸಲಹೆಗಳನ್ನು ಕೊಟ್ಟು ಶಿಕ್ಷಣಪ್ರಚಾರವು ತೀವ್ರವಾಗಿ ಸಾಗುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ (೧) ಸಮರ್ಥರಾದ ಇನ್‌ಸ್ಪೆಕ್ಟರರನ್ನು ನಿಯೋಜಿಸಬೇಕು; (೨) ಸ್ಥಾನಿಕ ಬೋರ್ಡುಗಳಿಗೆ ಸದಸ್ಯರಾಗುವವರ ವಿದ್ಯಾಯೋಗ್ಯತೆಯನ್ನು ಹೆಚ್ಚಿಸಬೇಕು; (೩) ಇನ್‌ಸ್ಪೆಕ್ಟರರಿಗೆ ನಿರ್ದಾಕ್ಷಿಣ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅನುಗೊಳಿಸಬೇಕು; (೪) ಸ್ಥಾನಿಕ ಸಂಸ್ಥೆಗಳಲ್ಲಿಯ ಜಾತಿಭೂತವನ್ನು ತೊಲಗಿಸಬೇಕು; (೫) ಮುಂಬೈಯಲ್ಲಿಯಂತೆಯೆ ಮಿಕ್ಕ ಪ್ರಾಂತಗಳಲ್ಲಿಯೂ 'ಪ್ರಾವಿನ್ಶಿಯಲ್ ಬೋರ್ಡ್ ಆಫ್ ಎಜ್ಯುಕೇಶನ್' ಸ್ಥಾಪಿಸಬೇಕು.

ಶಿಕ್ಷಣಕ್ಕಾಗಿ ವೆಚ್ಚ

ಇದೇ ಶತಮಾನದ ಆದಿಯಲ್ಲಿ ಭಾರತದ ಶಿಕ್ಷಣದ ಡಿರೆಕ್ಟರ್ ಜನರಲ್ ಮಿ. ಓರೆಂಜರು 'ಭಾರತದ ಒಂದು ಮಗುವಿನ ಪ್ರಾಥಮಿಕ ಶಿಕ್ಷಣದ ವೆಚ್ಚವು ಒಂದು ವರ್ಷಕ್ಕೆ ೫ ರೂಪಾಯಿಯಾಗುವುದೆಂ'ದು ಹೇಳಿದರು. ಶ್ರೀ. ಗೋಖಲೆಯವರೂ ಅದು ಸರಿಯೆಂದು ಒಪ್ಪಿದ್ದರು. ಇತ್ತೀಚೆ ಮುಂಬೈಯ ಡಿರೆಕ್ಟರ್ ಆಫ್ ಪಬ್ಲಿಕ್ ಇನ್‌-ಸ್ಟ್ರಕ್ಶನ್ ಅವರು ಪ್ರಾಥಮಿಕ ವಿದ್ಯಾರ್ಥಿಯ ಸರಾಸರಿ ವಾರ್ಷಿಕ ವೆಚ್ಚವು ೭ ರೂಪಾಯಿಯಾಗುವದು ಎಂದಿದ್ದಾರೆ. ಆದರೆ ಈ ಮೊದಲು ಕೊಟ್ಟ ಎಲ್ಲ ಸಲಹೆಗಳನ್ನು ಕಾರ್ಯರೂಪಕ್ಕಿಳಿಸಿದರೆ ಸರಾಸರಿ ವೆಚ್ಚವನ್ನು ೭ ರೂ.ಯ ಬದಲು ೬ ರೂ.ಗೆ ಇಳಿಸಬಹುದು.

ಈಗ ಭಾರತದಲ್ಲಿ ನೂರಕ್ಕೆ ೧೨ರಷ್ಟು ಅಂದರೆ ೩ ಕೋಟಿ, ೨೬ ಲಕ್ಷ ಬಾಲಬಾಲಿಕೆಯರು ಶಾಲೆಯ ವಯಸ್ಸಿನವರಿದ್ದಾರೆ. ಒಬ್ಬರಿಗೆ ೬ ರೂ.ಯಂತೆ ಅವರೆಲ್ಲರಿಗೂ ಒಂದು ವರ್ಷಕ್ಕೆ ೧೯ ಕೋಟಿ ೫೬ ಲಕ್ಷ ರೂ.ಗಳು ಶಿಕ್ಷಣಕ್ಕಾಗಿ ಬೇಕು. ಈಗ ಸರಕಾರವು ೮ ಕೋಟಿ ೨೦ ಲಕ್ಷ ರೂ.ಗಳನ್ನು ವೆಚ್ಚಮಾಡುತ್ತಲಿದೆ. ಅಂದಮೇಲೆ ಇನ್ನೂ ೧೧ ಕೋಟಿ ೩೬ ಲಕ್ಷ ರೂ.ಗಳನ್ನು ವೆಚ್ಚಿಸಬೇಕು. ಆ ಹೆಚ್ಚಿನ ಹಣವು ಎಲ್ಲಿಂದ ಬರಬೇಕು? ಅದಕ್ಕಾಗಿ (೧) ಪ್ರತಿಯೊಂದು ಪ್ರಾಂತದ ಸರಕಾರವೂ ತನ್ನ ಉತ್ಪನ್ನದ ನೂರಕ್ಕೆ ೧೬ ರಷ್ಟನ್ನು ಪ್ರಾಥಮಿಕ ಶಿಕ್ಷಣಕ್ಕೆ ವೆಚ್ಚಿಸುವ ನಿಶ್ಚಯಮಾಡಬೇಕು. ಇದರಿಂದ

೧ ಕೋಟಿ ೯೦ ಲಕ್ಷ ರೂ.ಗಳು ಹೆಚ್ಚಿಗೆ ದೊರಕುವವು. (೨) ಮಿಕ್ಕ ದೇಶಗಳು ಮಾಡುವಂತೆ ಒಟ್ಟು ಶಿಕ್ಷಣ ವೆಚ್ಚದಲ್ಲಿ ನೂರಕ್ಕೆ ೬೦ರಷ್ಟನ್ನಾದರೂ ಪ್ರಾಥಮಿಕ ಶಿಕ್ಷಣಕ್ಕೆ ಮೀಸಲಾಗಿಡಬೇಕು. ಇದರಿಂದ ೩೧೦ ಲಕ್ಷ ರೂ.ಗಳು ಹೆಚ್ಚಿಗೆ ದೊರಕುವವು. ಈ ವಿಷಯದಲ್ಲಿ 'ಪ್ರಾಥಮಿಕ ಶಿಕ್ಷಣದ ಭಾರವನ್ನಷ್ಟೆ ಪೂರ್ಣವಾಗಿ ವಹಿಸುವುದು ಸರಕಾರದ ಅನಿವಾರ್ಯ ಕರ್ತವ್ಯವಾಗಿದೆ. ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣದ ವೆಚ್ಚವನ್ನು ಬೇಕಾದರೆ ಜನತೆಯೆ ವಹಿಸಬೇಕು' ಎಂಬ ಮುಂಬೈ ಗವರ್ನರರ ಮಾತು ಮನನೀಯವಾಗಿದೆ. (೩) ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯದ ಶಿಕ್ಷಣದ ಭಾರವನ್ನು ಜನತೆಯಿಂದಲೇ ನಿರ್ವಹಿಸಲ್ಪಡುವ ಶಿಕ್ಷಣಸಂಘಗಳಿಗೆ ಒಪ್ಪಿಸಿದರೆ ತುಂಬಾ ಉಳಿತಾಯವಾಗುವುದು. ಕೆಳಗಿನ ಅಂಕೆಗಳಿಂದ ಇದು ಸ್ಪಷ್ಟವಾಗುವುದು. ೧೯೩೬-೩೭ರಲ್ಲಿ ಒಂದು ಸರಕಾರಿ ಆರ್ಟ್ಸ್ ಕಾಲೇಜಿನಲ್ಲಿಯ ಪ್ರತಿ ವಿದ್ಯಾರ್ಥಿಯ ಮೇಲೆ ಒಂದು ವರ್ಷಕ್ಕೆ ಸರಕಾರವು ೧೦೪ ರೂ.ಗಳನ್ನು ವೆಚ್ಚ ಮಾಡಿತು; ಸರಕಾರದಿಂದ ಸಹಾಯ ಪಡೆದ ಒಂದು ಖಾಸಗಿ ಕಾಲೇಜಿನಲ್ಲಿ ಅದೇ ವೆಚ್ಚವು ೨೧ ರೂ. ಮಾತ್ರ! ಅದೇ ಮೇರೆಗೆ ಸರಕಾರಿ ಹೈಸ್ಕೂಲಿನಲ್ಲಿಯ ವಿದ್ಯಾರ್ಥಿಗೆ ೪೬ ರೂ.ಯೂ ಖಾಸಗಿ ಹೈಸ್ಕೂಲಿನ ವಿದ್ಯಾರ್ಥಿಗೆ ೮ ರೂ. ಮಾತ್ರವೂ ಇದ್ದಿತು! (೪) ಹೊಸ ಕರಗಳನ್ನು ಹೇರಬೇಕು; ಆದರೆ 'ಅದರ ಭಾರವು ಬಡವರ ಮೇಲೆ ಬೀಳದಂತೆ ನೋಡಿಕೊಳ್ಳಬೇಕು' ಎಂಬ ಶ್ರೀ. ಗೋಖಲೆಯವರ ಎಚ್ಚರಿಕೆಯನ್ನೂ ಲಕ್ಷ್ಯದಲ್ಲಿಡಬೇಕು. (೫) ಕೇಂದ್ರಸರಕಾರದಿಂದ ಪ್ರಾಂತೀಯ ಸರಕಾರಕ್ಕೆ ಬರುವ ಇನ್‌ಕಮ್ ಟ್ಯಾಕ್ಸಿನ ಹಣವನ್ನೆಲ್ಲ ಪ್ರಾಥಮಿಕ ಶಿಕ್ಷಣಕ್ಕಾಗಿಯೆ ಮೀಸಲಾಗಿಡಬೇಕು.

ಸಾರಾಂಶ

ಭಾರತೀಯರು ಸ್ವರಾಜ್ಯಕ್ಕಾಗಿ ಹೋರಾಡಹತ್ತಿ ಅರ್ಧ ಶತಮಾನಕ್ಕೆ ಮಿಕ್ಕಿತು. ಸ್ವಾಯತ್ತತೆಯು ಪ್ರತಿಯೊಂದು ದೇಶದ ಹಕ್ಕು. ಆದರೆ ಅದನ್ನು ದೊರಕಿಸಿ ದಕ್ಕಿಸಿಕೊಳ್ಳಬೇಕಾದರೆ ಜನತೆಯು ವ್ಯಾಪಕವಾಗಿ ಶಿಕ್ಷಣವನ್ನು ಪಡೆಯುವುದು ಅತ್ಯಾವಶ್ಯಕವಾಗಿದೆ. 'ರಾಜ್ಯಕಾರಭಾರಕ್ಕೆ ಹೊಣೆಗಾರರಾದ ಅಧಿಕಾರಿಗಳನ್ನು ಆರಿಸಬೇಕಾದರೆ ಜನತೆಗೂ ತಮ್ಮ ಮತದಾನದ ಹೊಣೆಯೂ, ಯೋಗ್ಯತೆಯೂ ತಿಳಿದಿರಬೇಕೆ'ಂದು ಸ್ಟ್ಯಾಟ್ಯೂಟರಿ ಕಮಿಶನ್ ನುಡಿದುದರಲ್ಲಿ ತಥ್ಯವಿದೆ. ಆ ಹೊಣೆಗಾರಿಕೆಯೂ ಯೋಗ್ಯತೆಯೂ ಜನತೆಯಲ್ಲಿ ಬರಬೇಕಾದರೆ ವ್ಯಾಪಕವಾದ ಪ್ರಾಥಮಿಕ ಶಿಕ್ಷಣವು ಅತ್ಯಾವಶ್ಯಕವಾಗಿದೆ. ಆದುದರಿಂದ ವಿಘ್ನಸಹಸ್ರಗಳು ಬಂದರೂ ತಡೆಯದೆ ಪ್ರಾಥಮಿಕ ಶಿಕ್ಷಣವನ್ನು ದೇಶದಲ್ಲೆಲ್ಲಾ ಪ್ರಚುರಗೊಳಿಸುವುದು ಸರಕಾರದ ಮತ್ತು ಪ್ರಜೆಗಳ ಪ್ರಥಮ ಕರ್ತವ್ಯವಾಗಿದೆ.

---

* ಲೇಖಕರು ತಮ್ಮ ಹಲವು ಕವನ-ಲೇಖನಗಳಿಂದ ಕರ್ನಾಟಕಕ್ಕೂ ಜಯಕರ್ನಾಟಕಕ್ಕೂ ಪರಿಚಿತರಾಗಿದ್ದಾರೆ. ಸಮಾಜಸೇವಾ ಪ್ರೇಮವು ಅವರನ್ನು ವಕೀಲಿಯ ದಾರಿಯಿಂದ ಬಿಡಿಸಿ, 'ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಆಜೀವಸದಸ್ಯರನ್ನಾಗಿ ಮಾಡಿತು. ಮುಂಬಯಿಯಲ್ಲಿ ಕೂಲಿಕಾರ ಸಂಘಟನೆಯ ಕೆಲಸದಲ್ಲಿ ಅವರು ತೊಡಗಿರುವರು. ಈ ಪ್ರಬಂಧದೊಳಗಿನ ವಿಚಾರಗಳು, ಅವರು ಈಚೆಗೆ ಬರೆದ "Primary Education in India" ಎಂಬ ಪುಸ್ತಕದಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿವೆ.

ಶಿಕ್ಷಣವು ಸ್ವಾವಲಂಬಿಯಾಗಬಲ್ಲುದು

ಲೇಖಕರು: ಶ್ರೀ. ಸ್ವಾಮಿ ಭರತಾನಂದರು,
ಗವರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿಯ ಸುಪರಿಂಟೆಂಡೆಂಟರು, ಬೆಂಗಳೂರು

ವ್ಯಾಪಕವಾದ ಶಿಕ್ಷಣಪ್ರಸಾರವನ್ನು ಕೈಕೊಳ್ಳದೆ ರಾಷ್ಟ್ರವು ಅಭಿವೃದ್ಧಿ ಹೊಂದಲಾರದೆಂಬುದು ನಿರ್ವಿವಾದ. ಅದನ್ನು ಕೈಕೊಳ್ಳಲು ಅವಶ್ಯಕವಾದ ದುಡ್ಡು ಇಲ್ಲವೆಂದು ಸರಕಾರವು ನುಡಿದಾಗ ಮಾತ್ರ ನಾವು ಮುಂದುಗಾಣದೆ ಹೋಗುವೆವು. ಆದರೆ ಶಿಕ್ಷಣ ಪ್ರಸಾರವೂ ಧನ ಸಂಪಾದನವೂ ಜೊತೆ ಜೊತೆಯಾಗಿಯೆ ನಡೆಯುವುದು ಸಾಧ್ಯವಿದೆಯೆಂಬುದನ್ನು ಮಾನ್ಯಲೇಖಕರು ತೋರಿಸಿದ್ದಾರೆ.

ಭಾರತದಲ್ಲಿ ವ್ಯಾಪಕವಾದ ಶಿಕ್ಷಣಪ್ರಸಾರದ ಸಮಸ್ಯೆಯು ಬರಿ ಆರ್ಥಿಕವಾಗಿದೆ. ಇಲ್ಲಿ ಶಿಕ್ಷಕರಾಗಲರ್ಹರಾದ ಮೇಧಾವಿಗಳಿಗೆ ಕೊರತೆಯಿಲ್ಲ. ಶಿಕ್ಷಣದ ಬೇಡಿಕೆಯೂ ಹೆಚ್ಚುತ್ತಲಿದೆ.

ಶಾಲೆಯು ಮಕ್ಕಳ ದೈಹಿಕ, ಮಾನಸಿಕ, ನೈತಿಕ, ಸಾಮಾಜಿಕ ಬೆಳೆಗೆಯ ಕಡೆಗೆ ಯೋಗ್ಯವಾದ ಲಕ್ಷ್ಯವನ್ನು ಪೂರೈಸಬೇಕು. ಪ್ರತಿಯೊಂದು ಮಗುವಿಗೂ ಬೌದ್ಧಿಕ, ಔದ್ಯೋಗಿಕ ಶಿಕ್ಷಣದೊಡನೆ ಕನಿಷ್ಠ ಒಂದಾದರೂ ಆರೋಗ್ಯವರ್ಧಕ, ವಿಜ್ಞಾನಸಮ್ಮತವಾದ ಊಟವು ಒದಗಿಸಲ್ಪಡಬೇಕು. ಅದಿಲ್ಲದೆ, ಶಿಕ್ಷಣದ ತಳಹದಿಯಾದ, ಶ್ರಮ-ರೋಗಗಳನ್ನು ಜಯಿಸಬಲ್ಲ, ಕಸುವುಳ್ಳ ಶರೀರವೆ ಇಲ್ಲದಂತಾಗುವುದು. ಶಾಲೆಯಲ್ಲಿ ಒದಗುವ ಆಹಾರವು ಪಾರಂಪರಿಕವಾಗಿರದೆ ಶಾಸ್ತ್ರಸಿದ್ಧವೂ ಸಾದಾ ಮತ್ತು ಪೋಷಕವೂ ಆಗಿದ್ದರೆ ಮಕ್ಕಳಿಗೆ ಯೋಗ್ಯ ಆಹಾರದ ರುಚಿಯೂ, ಅದನ್ನು ತಯಾರಿಸುವ ರೀತಿಯೂ ಮನವರಿಕೆಯಾಗುವುದು.

ಇಂತಹ ಶಾಲೆಗಳನ್ನು ನಡೆಸಲಿಕ್ಕೆ ಪ್ರತಿಯೊಂದು ಮಗುವಿಗೆ ಒಂದು ವರ್ಷಕ್ಕೆ ೪೦ ರೂ. ಯಂತೆ ವೆಚ್ಚ ಬರುವುದು. ಹೇಗೆಂದರೆ:—

ಒಂದು ತಿಂಗಳಿಗೆ

೧ ಊಟಕ್ಕೆ ೧ ಆಣೆಯಂತೆ ೩೦ ಊಟಗಳಿಗೆ	೧—೧೪—೦
ಪ್ರತಿಯೊಂದು ಮಗುವಿನ ಲೆಕ್ಕದಿಂದ ಶಿಕ್ಷಕನ ಸಂಬಳ	೧— ೦—೦
ಪುಸ್ತಕ ಮತ್ತು ಶಾಲೆಯ ಸಲಕರಣೆಗಳು.	೦— ೬—೦
ಶಾಲೆಯ ಬಿಡಿ ವೆಚ್ಚಕ್ಕೆ	೦— ೨—೦
ಶಿಕ್ಷಕನ ಜೀವವಿಮೆ	೦— ೨—೦
ಒಟ್ಟು, ತಿಂಗಳಿಗೆ	೩— ೮—೦

ಅಂದರೆ ವರ್ಷಕ್ಕೆ ೪೦ ರೂ. ಆಯಿತು. ಹಾಗಾದರೆ ಮೈಸೂರು ಸಂಸ್ಥಾನದಲ್ಲಿರುವ ೧೨ ಲಕ್ಷ ಮಕ್ಕಳಿಗೂ ಶಿಕ್ಷಣದ ವ್ಯವಸ್ಥೆ ಮಾಡುವುದಾದರೆ ೪೮೦ ಲಕ್ಷ ಅರ್ಥಾತ್ ೫ ಕೋಟಿ ರೂ.ಗಳನ್ನು ವೆಚ್ಚಿಸಬೇಕಾದೀತು! ಆದರೆ ಇದು ಪ್ರಸ್ತುತ ಸರಕಾರದ ಉತ್ಪನ್ನದಿಂದ ಅಸಾಧ್ಯ. ಪ್ರತಿಯೊಬ್ಬ ಪ್ರಜೆಯ ಉತ್ಪನ್ನವನ್ನು ಹೆಚ್ಚಿಸದೆ ಸಾರ್ವತ್ರಿಕ ಶಿಕ್ಷಣವು ಅಸಾಧ್ಯ; ಶಿಕ್ಷಣವಿಲ್ಲದೆ ಉತ್ಪನ್ನವಾಗುವುದು ಕಠಿನ. ಇದೊಂದು ಪಾರಾಗಲಾಗದ ದುರ್ವ್ಯೂಹ. ಇನ್ನು ಉತ್ಪನ್ನಕ್ಕಿಂತ ಪ್ರಜಾಸಂಖ್ಯೆ ಹೆಚ್ಚಿದರಂತೂ ದೇವರೇ ಗತಿ.

ಬಡತನವು ಶಿಕ್ಷಣದ ವೈರಿ. ಬಡತನದೊಡನೆ ಹೋರಾಟವೆಂದರೆ ಅಶಿಕ್ಷಣದೊಡನೆ ಹೋರಾಟವೂ ಹೌದು. ಆದರೂ ಅಕ್ಷರಜ್ಞಾನವಿಲ್ಲದೆ ಬಡತನದೊಡನೆ ಹೋರಾಡುವುದು ಕಠಿಣ. ಆದ್ದರಿಂದ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಯು ಜೊತೆಯಾಗಿಯೆ ಸಾಗಬೇಕು.

ಮೇಲೆ ಹೇಳಿದಷ್ಟು ರೂಪಾಯಿಗಳು ನಾಣ್ಯದ ರೂಪದಲ್ಲಿಯೆ ಬೇಕೆಂದಲ್ಲ. ಶಾಲೆಗೆ ಬೇಕಾದ ಧಾನ್ಯ, ಕಾಯಿಪಲ್ಲೆ, ಫಲ, ಹಾಲು, ಮೊಸರು, ಬೆಂಣೆ, ಎಂಣೆ, ಕಟ್ಟಿಗೆ, ಅರಿವೆ, ಮನೆ, ಕಾಗದ,ಪುಸ್ತಕ ಮತ್ತು ಮಿಕ್ಕ ಆವಶ್ಯಕತೆಗಳ ಒಟ್ಟು ಬೆಲೆಯು ಅದಾಗಿದೆ. ಇವೆಲ್ಲ ವಸ್ತುಗಳನ್ನು ದೊರಕಿಸಬೇಕಾದರೆ ಈ ಕೆಳಗಿನ ಅನುಕೂಲತೆಗಳಿದ್ದರಾಯಿತು:—

(೧) ಸಾಗುವಳಿಗೂ, ತೋಟಪಟ್ಟಿಗೂ ಯೋಗ್ಯವಾದ ಭೂಮಿ, ಒಂದು ಮಗುವಿಗೆ ಅರ್ಧ ಎಕರೆಯಿಂದ ೧ ಎಕರೆ.

(೨) ಪ್ರತಿಯೊಂದು ಮಗುವಿಗೆ ದಿನಕ್ಕೆ ಅರ್ಧ ಸೇರು ಹಾಲು ಪೂರೈಸುವಷ್ಟು ಆಕಳುಗಳು.

(೩) ಸಾಗುವಳಿ ಮತ್ತು ತೋಟಪಟ್ಟಿಗಳ ಸಾಧನಗಳು.

(೪) ಉಳುವ ಹೋರಿಗಳು (ಎತ್ತು)ಮತ್ತು ಚಕ್ಕಡಿಗಳು

(೫) ಬಡಿಗತನ-ಕಮ್ಮಾರತನ ಮುಂತಾದ ಕೈಗೆಲಸದ ಸಾಧನಗಳು.

(೬) ಪ್ರಾರಂಭದಲ್ಲಿ ಆವಶ್ಯಕವಾದ ಕಟ್ಟಡಗಳು.

(೭) ಮನೆ-ಕೈಗಾರಿಕೆಗಳನ್ನು ಆರಂಭಿಸಲು ತುಸು ಬಂಡವಾಳ.

ಇವೆಲ್ಲವನ್ನು ಹೊಂದಿದ ಗ್ರಾಮಶಾಲೆಯು ಸ್ವಾವಲಂಬಿಯಾಗಬಲ್ಲುದು. ಶಿಕ್ಷಕನು ಮಕ್ಕಳೊಡನೆ ಶಾಲೆಯನ್ನು ನಡೆಸುವನು. ಅವರು ಭೂಮಿಯನ್ನು ಸಾಗುಮಾಡುವರು; ದನಗಳನ್ನು ಸಾಕುವರು; ಬೆಳೆಯನ್ನು ಉಂಣುವರು;

ಹಾಲನ್ನು ಕುಡಿಯುವರು. ನೂಲುವರು; ಬಟ್ಟೆಗಳನ್ನು ನೇಯುವರು. ಮನೆ-ಗುಡಿಸಲುಗಳನ್ನು ಕಟ್ಟುವರು; ದುರುಸ್ತಿ ಮಾಡುವರು. ತಮ್ಮ ಕಾಗದ ಮಸಿಗಳನ್ನು ತಯಾರಿಸುವರು. ಗಲಗಿನ (Reed) ಲೆಕ್ಕಣಿಕೆಗಳನ್ನು ತಯಾರಿಸುವರು. ಕೆಳಗಿನ ವರ್ಗಗಳಿಗೆ ಶಿಕ್ಷಣಸಾಧನಗಳನ್ನು ತಯಾರಿಸುವರು. ಇಷ್ಟಕ್ಕೆ ಮಿಕ್ಕಿ ಅವರಿಗೆ ಅಗತ್ಯಬೀಳುವ ತುಸು ಹಣಕ್ಕಾಗಿ ಸಣ್ಣ ಉದ್ಯೋಗಗಳನ್ನು ನಡೆಸಿ ಸಿದ್ಧವಸ್ತುಗಳನ್ನು ಪೇಟೆಗಳಿಗೆ ಕಳಿಸುವರು.

ಇಷ್ಟು ಮೂಲಸಾಧನಗಳಿದ್ದ ಮೇಲೆ ಈ ವ್ಯವಸ್ಥೆಯ ಯಶಸ್ಸು ಶಿಕ್ಷಕನ ಸ್ವಭಾವ-ಸಂಸ್ಕಾರಗಳನ್ನು ಅವಲಂಬಿಸಿದೆ. ಕಲಿಸುವ ಗುಣ ಮತ್ತು ಶಿಕ್ಷಣಪ್ರಶಸ್ತಿಗಳಲ್ಲದೆ ಶಿಕ್ಷಕನಲ್ಲಿ ಕಾರ್ಯಪ್ರಿಯತೆಯೂ ಬೇಕು. ಕೆಲಸ ಮಾಡುತ್ತಿರುವಾಗಲೆ ಶಿಕ್ಷಣವನ್ನು ಕೊಡುವ ಯೋಗ್ಯತೆಯು ಅವನಲ್ಲಿರಬೇಕು. ಏಕೆಂದರೆ ಕಸಬುಗಳ ವರ್ಗಗಳ ಹೊರತಾಗಿ ಶಿಕ್ಷಣಕ್ಕಾಗಿ ಬೇರೆ ವೇಳೆಯು ವಿಶೇಷ ಉಳಿಯುವುದಿಲ್ಲ.

ಬೇಕೆಂದ ಕೂಡಲೆ ಇಂತಹ ಶಿಕ್ಷಕರು ಸಿಗಲಾರರು. ಅವರನ್ನು ತರಬೇತುಗೊಳಿಸಬೇಕಾಗುತ್ತದೆ. ಆದ್ದರಿಂದ ಸ್ವಾವಲಂಬಿಯಾದ ಗ್ರಾಮಶಾಲೆಗಳ ಶಿಕ್ಷಕರನ್ನು ಸಿದ್ಧಗೊಳಿಸುವ ಸಂಸ್ಥೆಯನ್ನು ಹೊರಡಿಸುವುದು ಮೊದಲನೆಯ ಹೆಜ್ಜೆ. ಈ ಸಂಸ್ಥೆಯೂ ಸ್ವಾವಲಂಬಿಯಾಗಿಯೆ ಇರಬೇಕು. ಕಟ್ಟಡ, ದನಗಳು, ಸಲಕರಣೆಗಳನ್ನೊಳಗೊಂಡ ಸಾಕಷ್ಟು ವಿಸ್ತಾರವಾದ ಹುಲುಸಾದ ಭೂಮಿಯನ್ನು ದೊರಕಿಸಬೇಕು. ತರಬೇತುಹೊಂದುವ ಶಿಕ್ಷಕರೂ ಮೇಲೆ ಹೇಳಿದಂತೆ ತಮ್ಮ ಆಹಾರವನ್ನು ಬೆಳೆದುಕೊಂಡು ನೂಲು-ನೆಯಿಗೆಗಳನ್ನು ಸಾಗಿಸಿ, ಹೈನವನ್ನು ಹುಟ್ಟಿಸಿ, ಹಣಕ್ಕಾಗಿ ಸಣ್ಣ ಉದ್ಯೋಗಗಳನ್ನು ನಡೆಸುವರು. ಶಿಕ್ಷಕರು ಇಂತಹ ಸಂಸ್ಥೆಗಳಲ್ಲಿ ಸಪತ್ನೀಕರಾಗಿದ್ದು ಶಿಕ್ಷಣಕಲೆಯು ತಮ್ಮ ಪತ್ನಿಯರಿಗೂ ಸಿಗುವಂತೆ ಮಾಡಬೇಕು. ಅವರಿಗೆ ಮಕ್ಕಳಿದ್ದರೆ ಅವರ ಆರೈಕೆಯನ್ನೂ ಶಿಕ್ಷಣವನ್ನೂ ಸಂಸ್ಥೆಯು ಕೈಕೊಳ್ಳಬೇಕು. ಒಕ್ಕಲುತನ, ತೋಟಪಟ್ಟಿ, ನೂಲು-ನೆಯಿಗೆ, ಬಡಿಗತನ, ಕಮ್ಮಾರಿಕೆಗಳ ಪ್ರತ್ಯಕ್ಷ ಜ್ಞಾನವನ್ನು ಶಿಕ್ಷಣದೊಡನೆ ಕೊಡಬೇಕು. ಹಳ್ಳಿಗಳಿಗೆ ಉಪಯುಕ್ತವಾದ ಉದ್ಯೋಗಗಳನ್ನು ಲಾಭಕರವಾಗಿ ನಡೆಸಿ ತೋರಿಸಬೇಕು

ಒಟ್ಟನಲ್ಲಿ ಭಾರತದ ಅವಿನಾಶಿ ಸಂಸ್ಕೃತಿಯ ತಾಯಿಯಾದ ಗುರುಕುಲ ಶಿಕ್ಷಣಕ್ರಮವನ್ನು ಆಧುನಿಕ ಪರಿಸ್ಥಿತಿಗೆ ಒಗ್ಗುವಂತೆ ಪುನರುಜ್ಜೀವನಗೊಳಿಸಬೇಕು. ಮುಖ್ಯವಾಗಿ, (೧) ಸಂಸ್ಥೆಗಳು ಒಕ್ಕಲುತನ ಮತ್ತು ಉದ್ಯೋಗಗಳನ್ನು ಅವಲಂಬಿಸಬೇಕಲ್ಲದೆ ದಾನಧರ್ಮಗಳನ್ನಲ್ಲ. (೨) ಗಂಡ ಹೆಂಡಿರಿಬ್ಬರಿಗೂ ಒಮ್ಮತದಿಂದ ಒಂದು ಸಾರ್ವಜನಿಕ ಕೆಲಸವನ್ನು ಮಾಡಲು ಸಿದ್ಧಗೊಳಿಸಬೇಕು.

ಹೀಗೆ ಗಂಡಹೆಂಡಿರಿಬ್ಬರೂ ಸಿದ್ಧರಾದರೆ ಹಳ್ಳಿಗಳ ದಂಪತಿಗಳೆಲ್ಲ ಒಮ್ಮೆಲೆ ಶಿಕ್ಷಣ ಸಂಪಾದನಕ್ಕೆ ಆಕೃಷ್ಟರಾಗಲಿಕ್ಕೆ ಅನುಕೂಲವಾಗುವುದು. ಪ್ರತಿಯೊಂದು ಗ್ರಾಮ ಸಂಸ್ಥೆಯಲ್ಲಿಯ ಮಕ್ಕಳೂ ಸಾಗುವಳಿಯನ್ನು ಕೈಕೊಳ್ಳಬೇಕು. ಅವಶ್ಯವಾದರೆ ಹಳ್ಳಿಗರೂ ಆ ಹೊಲಗಳಲ್ಲಿ ಬಂದು ದುಡಿಯಬೇಕು. ಮೂಲದಲ್ಲಿ ಅಗತ್ಯವಿರುವ ಭೂಮಿಯು ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಸಾಕಷ್ಟು ಆಹಾರವನ್ನು ಒದಗಿಸುವಷ್ಟು ದೊಡ್ಡದಾಗಿರಬೇಕು. ಪ್ರಾರಂಭದಲ್ಲಿ ಬೇಕಾಗುವ ದುಡ್ಡು, ಭೂಮಿ, ಸಲಕರಣೆಗಳನ್ನು ಸರಕಾರ ಪೂರೈಸಬೇಕು; ಇಲ್ಲವೆ ಧರ್ಮಾದಾಯವೆಂದು ಸಿರಿವಂತರು ಕೊಡಬೇಕು; ಅಥವಾ ಕ್ರಮಶಃ ಸಣ್ಣ ಕಂತುಗಳಿಂದ ಬೆಲೆಯನ್ನು ಮುಟ್ಟಿಸುವ ವ್ಯವಸ್ಥೆಯಿಂದ ಕೊಂಡುಕೊಳ್ಳಬೇಕು. ಏಕೆಂದರೆ ಒಮ್ಮೆ ಸಂಸ್ಥೆಯು ಪ್ರಾರಂಭವಾದಮೇಲೆ ಅಲ್ಲಿಯ ಕೆಲಸಗಾರರಿಗೆ ಮೇಲಿಂದ ಮೇಲೆ ದಾನಕ್ಕಾಗಿ ಕೈಯೊಡ್ಡುವ ಪ್ರಸಂಗ ಬರಬಾರದು.

ಇಂತಹ ಸಂಸ್ಥೆಗಳಲ್ಲಿ ಸೇರುವವರಲ್ಲಿ ಮೂರು ಗುಣಗಳಿರಬೇಕು. ೧. ಶಿಕ್ಷಣಕ್ಕೂ ಉತ್ಪಾದಕಕಾರ್ಯಕ್ಕೂ ಅವಶ್ಯವಾದ ದೈಹಿಕ ಮಾನಸಿಕ ಯೋಗ್ಯತೆಯುಳ್ಳವರಾಗಿರಬೇಕು. ೨. ಗ್ರಾಮೋದ್ಧಾರ-ಶಿಕ್ಷಣಗಳೆ ತಮ್ಮ ಜೀವನಧ್ಯೇಯವುಳ್ಳವರಾಗಿರಬೇಕು. ೩. ದುಡಿಮೆಗೂ ಆರೋಗ್ಯಕ್ಕೂ ಅವಶ್ಯಕವಿದ್ದಷ್ಟೆ ಜೀವನಸೌಕರ್ಯಗಳಿಂದ ತೃಪ್ತರಾಗಿರಬೇಕು.

ಬೌದ್ಧಿಕ ಜ್ಞಾನವೃದ್ಧಿಗೆ ಸಾಧಕವಾದ ಶಿಕ್ಷಣದೊಡನೆ ಕೈಗಾರಿಕೆಗಳ ಶಿಕ್ಷಣದ ವ್ಯವಸ್ಥೆಯೂ ಆಗಬೇಕು. ನೂಲುವುದು, ನೆಯಿಗೆ; ಬಡಿಗತನ, ಕೆತ್ತನೆಯ ಕೆಲಸ, ಸಾಗುವಳಿಯ ಸಾಧನಗಳನ್ನು ತಯಾರಿಸುವುದು, ತಾಮ್ರ ಹಿತ್ತಾಳೆಗಳ ಪಾತ್ರೆಗಳನ್ನು ಮಾಡುವುದು, ಮಕ್ಕಳ ಆಟಿಗೆಗಳನ್ನು ತಯಾರಿಸುವುದು, ಮಸಿ, ಬಣ್ಣ, ಬೆಲ್ಲ, ಎಣ್ಣೆ, ಜವಖಾನೆ ಮುಂತಾದ ಉಪಯುಕ್ತ ಸಾಮಾನುಗಳನ್ನು ತಯಾರಿಸುವುದು, ತೊಗಲಿನ ಕೆಲಸ, ಕಾಗದ-ಬಳೆ ಮಾಡುವುದು ಮುಂತಾದ ಅನೇಕ ಸಣ್ಣ ಉದ್ಯೋಗಗಳನ್ನು ಹೊರಡಿಸಿ ಸಂಸ್ಥೆಯು ಸ್ವಾವಲಂಬಿಯಾಗಿ ಬೆಳೆಯುವುದು ಖಂಡಿತ.

ಮೇಲೆ ಹೇಳಿದ ಎಲ್ಲ ಉದ್ಯೋಗಗಳನ್ನೂ ಒಂದೆ ಶಾಲೆಯಲ್ಲಿ ನಡೆಸಬೇಕೆಂದಲ್ಲ. ಆಯಾ ಗ್ರಾಮದ ಅಗತ್ಯ ಅನುಕೂಲತೆಗಳನ್ನು ನೋಡಿಕೊಂಡು ಯೋಗ್ಯವೆನಿಸಿದ

ಧಾಯಗಳನ್ನೆ ಸಾಗಿಸುವುದು ಒಳಿತು. ಇಂತಹ ಗ್ರಾಮ ಸಂಸ್ಥೆಗಳು ಒಮ್ಮೆ ನಡೆಯಹತ್ತಿದವೆಂದರೆ ಮುಂದೆ ಹೊರಗಿನ ಸಹಾಯವಿಲ್ಲವೆ ಸ್ವತಂತ್ರವಾಗಿ ಚಿರವಾಗಿ ನಡೆಯಬಲ್ಲವು. ಸಂಸ್ಥೆಯಲ್ಲಿ ದುಡಿಯುವವರೆಲ್ಲರಲ್ಲಿಯೂ ಒಂದೆ ಮನೆಯವರೆಂಬ ಭಾವನೆಯುಂಟಾಗಿ ಸಂಸ್ಥೆಯು ಒಂದು ಸಮುದಾಯದ ಆಸ್ತಿಯಾಗುವುದರಿಂದ ಪ್ರತ್ಯೇಕ ಆಸ್ತಿ ಪಾಸ್ತಿಗಳಲ್ಲಾಗುವ ಹಿಂಸೆಗಳು ಇಲ್ಲಿ ತಲೆದೋರಲಾರವು.*

* ಲೇಖಕರ ಪೂರ್ವಾಶ್ರಮದ ಹೆಸರು Maurice Frydman (ಮೊರಿಸ್ ಫ್ರಿಡ್ಮನ್) ಎಂದು. ಇವರು ಪೋಲಂಡ್ ದೇಶದವರು. ಫ್ರಾನ್ಸದಲ್ಲಿಯೂ ಕೆಲವು ಸಮಯ ಇದ್ದರು. ಪೂರ್ವಾಶ್ರಮದಲ್ಲಿ ಇವರು ಇಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದರು. ಇವರು ಐದು ವರ್ಷಗಳ ಹಿಂದೆ ಭಾರತಕ್ಕೆ ಬಂದು ಬೆಂಗಳೂರಿನಲ್ಲಿ ಮೈಸೂರು ಸರಕಾರಕ್ಕಾಗಿ ವಿದ್ಯುತ್ ಕಾರಖಾನೆಯನ್ನು ಪ್ರಾರಂಭಿಸಿದರು. ಅದರ ಸುಪರಿಂಟೆಂಡೆಂಟರೂ ಅವರೇ ಆಗಿದ್ದಾರೆ. ತಿರುವಣ್ಣಾಮಲೈಯ ಶ್ರೀ ರಮಣ ಮಹರ್ಷಿಗಳ ಪರಿಚಯವಾದಾಗಿನಿಂದ ಇವರು ಸನ್ಯಾಸವನ್ನು ಸ್ವೀಕರಿಸಿ ಸ್ವಾರ್ಥವನ್ನು ಪೂರ್ಣವಾಗಿ ತ್ಯಾಗ ಮಾಡಿದರು. ಈಗ ಗ್ರಾಮೋದ್ಯೋಗಗಳಿಗೆ ಸಂಬಂಧಿಸಿದ ಎಂಜಿನಿಯರಿಂಗ್ ಕೆಲಸಗಳಲ್ಲಿ ತೊಡಗಿದ್ದಾರೆ. ಇವರು ಅನೇಕಾವರ್ತಿ ಶೇಗಾಂವಿಗೆ ಹೋಗಿದ್ದಾರಲ್ಲದೆ ಮಹಾತ್ಮಾ ಗಾಂಧಿಯವರ ಧ್ಯೇಯಗಳೊಡನೆ ಚೆನ್ನಾಗಿ ಪರಿಚಿತರಾಗಿದ್ದಾರೆ. ಇವರ ವಯಸ್ಸು ೩೭.

ಅಮೇರಿಕೆಯ ಶಿಕ್ಷಣಧೋರಣೆ ★

(ವಿದ್ಯಾರ್ಜನೆಯು ಸ್ವಾವಲಂಬಿಯಾಗುವಂತೆ ಅಮೇರಿಕನ್ನರು ನಿರ್ಮಿಸಿದುದರ ವರ್ಣನೆ)

ಮೊದಲು ಅಮೇರಿಕೆಯಲ್ಲಿ ರಾಜ್ಯಾಡಳಿತಕ್ಕೆ ಒಳಪಡುವ ವಿಷಯಗಳಲ್ಲಿ ಮಾತ್ರ ಅಧಿಕಾರಿಗಳಿಗೆ ಉಪಯುಕ್ತವಾದ ಶಿಕ್ಷಣದ ವ್ಯವಸ್ಥೆಯಿತ್ತು. ಸಂಸ್ಕೃತಿ-ಧರ್ಮಸ್ಥಾನಗಳ ಬೆಳಿಗೆಗಾಗಿ ಶಿಕ್ಷಣವೆಂಬ ಕಲ್ಪನೆ ಆಗ ಇತ್ತಾದರೂ, ಅದರ ಪ್ರಚಾರ ವಿಶೇಷವಾಗಿರಲಿಲ್ಲ. ಆದ್ದರಿಂದ ಓದುವದು, ಬರೆಯುವದು, ಗಣಿತ, ತುಸು ಇತಿಹಾಸ ಇಷ್ಟಾದರೆ ಶಿಕ್ಷಣವು ಆಗ ಮುಗಿದಂತಾಗುತ್ತಿತ್ತು. ಆದರೆ ಕ್ರಮೇಣ ೧೮೫೦ ರ ನಂತರ ಬಡಜನರೂ ತಮಗೆ ಶಿಕ್ಷಣಬೇಕೆಂಬ ಬೇಡಿಕೆಯನ್ನು ಮುಂದುಮಾಡಹತ್ತಿದರು. ಅಲ್ಲಿಂದ ಈವರೆಗೆ ಆ ಬೇಡಿಕೆಯು ಬೆಳೆಯುತ್ತಲೆ ಬಂದಿದೆ. ಆ ಬೇಡಿಕೆಗೆ ತಕ್ಕ ಅನುಕೂಲತೆಗಳೂ ಇಲ್ಲಿ ಉಂಟಾಗುತ್ತ ಬಂದಿವೆ. ಅದರಿಂದ ಈಗ ಅಮೇರಿಕೆಯಲ್ಲಿ ೯ ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷ ೧೫೦ ಕೋಟಿ ರೂಪಾಯಿಗಳನ್ನು ಸ್ಥಾನಿಕ ಸರಕಾರಗಳು ವೆಚ್ಚಿಸುತ್ತಿವೆ. ದುಡಿಬರುತ್ತ ಶಿಕ್ಷಣವನ್ನು ಸಾರ್ವಜನಿಕ ವೆಚ್ಚದಿಂದ ಸಂಪಾದಿಸುವ ಪ್ರವೃತ್ತಿಯೂ ಇಲ್ಲಿ ಕಡಿಮೆಯಾಗುತ್ತಿದೆ. ಉದಾಹರಣಾರ್ಥ, ಅನೇಕ ವರ್ಷಗಳ ಹಿಂದೆಯೆ ಮೌಂಟ್ ಹರ್ಮನಿನಲ್ಲಿ ಇವೆಂಜಲಿಸ್ಟ್ ಡಿ. ಎಲ್. ಮೂಡಿ ಅವರು ಹುಡುಗರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದರು. ಅಲ್ಲಿಯ ಹುಡುಗರು ಅರ್ಧ ಸಮಯವನ್ನು ವಿದ್ಯಾರ್ಜನೆಯಲ್ಲಿಯೂ ಮಿಕ್ಕ ಸಮಯವನ್ನು ಹೊಲದ ಕೆಲಸದಿಂದ ತಮ್ಮ ವೆಚ್ಚವನ್ನು ಪೂರೈಸುವದರಲ್ಲಿಯೂ ಕಳೆಯುವರು. ಹೈಸ್ಕೂಲಿನಲ್ಲಿಯೂ ಇದೆ ಪದ್ಧತಿಯಿದೆ. ಪಾಲಕರು ತಮ್ಮ ಕೈಯಿಂದಾದಷ್ಟು ಹಣವನ್ನು ಗುಟ್ಟಾಗಿ ಹೆಡ್ ಮಾಸ್ತರರಿಗೆ ಮುಟ್ಟಿಸುತ್ತಾರೆ. ಹೆಚ್ಚಿಗೆ ಬೇಕಾದ ಹಣವು ಮಕ್ಕಳ ಕೆಲಸಗಳಿಂದ ತುಂಬಿ ಬರುತ್ತದೆ. ಪಾಲಕರು ಮುಟ್ಟಿಸಿದ ಹಣವೆಷ್ಟೆಂಬುದು ಯಾರಿಗೂ ತಿಳಿಯುವದಿಲ್ಲ. ಆದ್ದರಿಂದ ಹುಡುಗರಲ್ಲಿ ಸಿರಿವಂತ-ಬಡವ ಎಂಬ ಭೇದವು ತೋರದೆ ಅವರು ಒಮ್ಮನಸ್ಸಿನಿಂದ ದುಡಿಯುತ್ತಾರೆ.

ಇನ್ನು ಕೆಲವು ಶಾಲೆ-ಕಾಲೇಜುಗಳವರು ವಿದ್ಯಾರ್ಥಿಗಳಿಗೆ ಶಿಕ್ಷಣಾವಧಿಯಲ್ಲಿಯೆ ದ್ರವ್ಯಾರ್ಜನೆಗೂ ಅನುಕೂಲವಾಗುವಂತಹ ಉದ್ಯೋಗಗಳನ್ನು ಕೊಡಿಸುತ್ತಾರೆ. ಮಕ್ಕಳಿಗೆ ಪಾಠ ಹೇಳುವದು, ಉಪಹಾರ ಗೃಹಗಳಲ್ಲಿಯ ದುಡಿಮೆ ಮುಂತಾದವುಗಳು ಅವರ ಮೆಚ್ಚಿಗೆಯವು. ಇತ್ತೀಚೆ ಪಾಲಕರ ವೆಚ್ಚದಿಂದ ವಿದ್ಯೆ ಗಳಿಸುವದು ನಾಚಿಕೆಗೇಡು ಎಂಬ ಭಾವನೆಯು ಇಲ್ಲಿಯ ವಿದ್ಯಾರ್ಥಿಗಳಲ್ಲಿ ಮನೆಮಾಡುತ್ತಿದೆ.

ಹೀಗೆ ಸ್ವಾವಲಂಬನದಿಂದ ವಿದ್ಯಾರ್ಜನೆಗೈಯುವ ಅನುಕೂಲತೆಗಳುಳ್ಳ ಸಂಸ್ಥೆಗಳಲ್ಲಿ; ೧೯೨೧ ರಿಂದ ಯಶಸ್ವಿಯಾಗಿ ಸಾಗಿರುವ ಆ್ಯಂಟಿಯೊಕ್ ಕಾಲೇಜಿನ ಪ್ರಯತ್ನವು ಶ್ಲಾಘನೀಯವಾಗಿದೆ. ಆ ಕಾಲೇಜು ನೂರು ವರ್ಷ ಹಿಂದಿನದಾಗಿದೆ. ಇಲ್ಲಿ ಮಿ. ಅರ್ಥರ್ ಈ. ಮೊರ್ಗನ್ ಅವರು ಕಸಬುಗಳನ್ನು ಶಿಕ್ಷಣದೊಡನೆ ಜೋಡಿಸುವ ಪ್ರಯೋಗವನ್ನು ಪ್ರಾರಂಭಮಾಡಿದರು. ಇಲ್ಲಿ ವಿದ್ಯಾರ್ಥಿಯ ಕಾಲೇಜಿನ ಅಭ್ಯಾಸಕ್ರಮದಲ್ಲಿಯೆ ಒಂದೆರಡು ಕಸಬುಗಳನ್ನೂ ಸಮಾವೇಶಗೊಳಿಸುತ್ತಾರೆ. ವಿದ್ಯಾರ್ಥಿಯು ಶಿಕ್ಷಣಶುಲ್ಕವನ್ನು ಕೆಲಸದ ರೂಪದಲ್ಲಿ ಮುಟ್ಟಿಸುವದಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿದ್ದಾರೆಂದು ಹಲವರು ಅಭಿಪ್ರಾಯ ಪಡುತ್ತಾರೆ. ಆದರೆ ಅದು ತಪ್ಪು-ಗ್ರಹಿಕೆ.

ವಸ್ತುತಃ ಅವರ ಅಭ್ಯಾಸಕ್ಕೂ ಅವರು ಕೈಕೊಳ್ಳುವ ಉದ್ಯೋಗಕ್ಕೂ ವಿಶೇಷ ಸಂಬಂಧವಿರುವದಿಲ್ಲ. ಈ

ಪ್ರಯೋಗದ ನಿರ್ಮಾತರ ಮುಖ್ಯ ಉದ್ದೇಶವು ಆರ್ಥಿಕ ವಾಗಿಲ್ಲ. ವಿದ್ಯಾರ್ಥಿಯ ಮನಸ್ಸಿನ ಮೇಲೆ ಕಸಬಿನಿಂದಾ ಗುವ ಸಂಸ್ಕಾರವೇ ಈ ಪ್ರಯೋಗದ ಗುರಿಯಾಗಿದೆ. ಶಿಕ್ಷಣ ವನ್ನು ಪಡೆದ ಮೇಲೆ ವಿದ್ಯಾರ್ಥಿಗಳು ವಿವೇಕದಿಂದ, ಕಲ್ಪನಾಬಲದಿಂದ, ಅನುಭವದಿಂದ ಯಾವದೊಂದು ಉದ್ಯೋಗದಲ್ಲಿ ತೊಡಗುವಂತಹ ಸಂಸ್ಕಾರವನ್ನು ಪೂರೈ ಸುವದೂ ಶಿಕ್ಷಣದ ಉದ್ದೇಶವಾಗಿರಬೇಕೆಂದು ಮೊರ್ಗನರ ಅಭಿಪ್ರಾಯವಾಗಿದೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವರು ಕಾಲೇಜಿನ ಅಭ್ಯಾಸಾವಧಿಯನ್ನು ನಾಲ್ಕು ವರ್ಷ ದಿಂದ ಆರು ವರ್ಷಕ್ಕೇರಿಸಿದರು.

ಈ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸರತಿ ಯಿಂದ ೫ ಇಲ್ಲವೆ ೧೦ ವಾರ ಔದ್ಯೋಗಿಕ ಮತ್ತು ಬೌದ್ಧಿಕ ಶಿಕ್ಷಣವನ್ನು ಪಡೆಯುತ್ತಾರೆ. ಉದ್ಯೋಗಗಳಲ್ಲಿ ತೊಡಗಿ ದಾಗ ಅವರಿಗೆ ಸಂಬಳವನ್ನು ಕೊಡುತ್ತಾರೆ. ಆದರೆ ಸಂಬಳ ಬೇಡವಾದವರು ಉದ್ಯೋಗಗಳನ್ನು ಬಿಡುವಂತಿಲ್ಲ. ಏಕೆಂದರೆ ಆಯಾ ಉದ್ಯೋಗಗಳಲ್ಲಿಯ ತರಬೇತನ್ನು ಅವರು ಪೂರ್ತಿಗೊಳಿಸದಿದ್ದರೆ ಅವರಿಗೆ 'ಪದವಿ'ಯು ಕೊಡಲ್ಪಡುವದಿಲ್ಲ.

ಉದ್ಯೋಗಗಳಲ್ಲಿ ತೊಡಗಿದ ವಿದ್ಯಾರ್ಥಿಗಳಿಗೆ ದೇಶದ ವಿವಿಧ ಉದ್ಯೋಗಕುಶಲರ ಸಹವಾಸ ಲಭಿಸುತ್ತದೆ. ಈ ಕ್ರಮವಿದ್ದಿಲ್ಲವಾದರೆ ದೇಶದ ಉದ್ಯೋಗವಿಶಾರದರಿಗೂ ಶಿಕ್ಷಿತ ನಾಗರಿಕರಿಗೂ ದರ್ಶನ ಕೂಡ ಆಗುತ್ತಿರಲಿಲ್ಲ. ಆರು ವರ್ಷಗಳಲ್ಲಿ ವಿದ್ಯಾರ್ಥಿಯು ಒಂದು ಉದ್ಯೋಗದ ಹಲವು ಅಂಗಗಳಲ್ಲಿ ತೊಡಗುವದರಿಂದ ಆಯಾ ಅಂಗಗಳಿಗೆ ಸಂಬಂಧಿಸಿದ ಅಮೇರಿಕೆಯ ಜೀವನದ ಜ್ಞಾನವಾಗುವದು. ಈ ಜ್ಞಾನದ ಲಾಭವು ಖಂಡಿತವಾಗಿ ಶಿಕ್ಷಣ ಮುಗಿದ ನಂತರ ಅವರಿಗೆ ಆಗದಿರದು.

ಮೊದಮೊದಲು ವಿವಿಧ ವಿದ್ಯಾರ್ಥಿಗಳ ಒಲವಿಗೆ ತಕ್ಕಂತಹ ಅನೇಕ ಉದ್ಯೋಗಗಳ ಶಿಕ್ಷಣವ್ಯವಸ್ಥೆಯನ್ನು ಮಾಡುವದು ಕಾಲೇಜಿಗೆ ಕಠಿನವಾಗಿತ್ತು. ಏಕೆಂದರೆ ಕಾರಖಾನೆಗಳವರು ಬರಿ ೫ ರಿಂದ ೧೦ ವಾರಗಳ ವರೆಗೆ ದುಡಿಯುವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗಾಗಿ ಅಷ್ಟು ಮಹತ್ವವನ್ನು ಕೊಡುತ್ತಿರಲಿಲ್ಲ. ಈ ತೊಂದರೆಯನ್ನು ಈಗ ಕಾಲವಿಭಜನೆಯಿಂದ ನಿವಾರಿಸಿದ್ದಾರೆ. ವಿದ್ಯಾರ್ಥಿ ಗಳ ಒಂದು ಗುಂಪು ಬೌದ್ಧಿಕ ಶಿಕ್ಷಣದಲ್ಲಿ ತೊಡಗಿದಾಗ ಮತ್ತೊಂದು ಗುಂಪು ಕಾರಖಾನೆಗೆ ಹೋಗುವದು. ಮೊದ ಲಿನ ಗುಂಪು ಕಾರಖಾನೆಗೆ ಬಂದಾಗ ಎರಡನೆಯ ಗುಂಪು ಬೌದ್ಧಿಕ ಶಿಕ್ಷಣ ಪಡೆಯುವದಕ್ಕೆ ಹೋಗುವದು. ಈ ಕ್ರಮ ದಿಂದ ಕಾರಖಾನೆಗಳವರು ಬಹಳ ಉತ್ಸಾಹವುಳ್ಳವರಾ ಗಿದ್ದಾರೆ. ಆರು ವರ್ಷ ಈ ಮಾದರಿಯ ಶಿಕ್ಷಣ ಪಡೆದ ನುರಿತ ವಿದ್ಯಾರ್ಥಿಗಳನ್ನು ಕಾರಖಾನೆಗಳವರು ತಮ್ಮಲ್ಲಿ ಹೊಣೆಗಾರಿಕೆಯ ಕೆಲಸಗಳಿಗೆ ನಿಯಮಿಸಿಕೊಳ್ಳುತ್ತಾರೆ. ಈ ಕ್ರಮದ ಉಪಯುಕ್ತತೆಯನ್ನು ಮನವರಿತು ಇಂದು ಅಮೇರಿಕೆಯ ೨೫೦ ಕಾರಖಾನೆಗಳವರು ತಮ್ಮಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಎಡೆಗೊಟ್ಟಿದ್ದಾರೆ. ಇದರಿಂದ ವ್ಯಾಪಾರ, ಪತ್ರಿಕಾವ್ಯವಸಾಯ, ವೈದ್ಯಕ, ಪ್ರಕಾಶನ, ವಾಚನಾಲಯ, ವಿಚಿತ್ರ ವಸ್ತುಸಂಗ್ರಹಾಲಯ, ಸಮಾಜಸೇವಾ ಸಂಘ, ವಿವಿಧಕಾರಖಾನೆಗಳು ಮುಂತಾದ ಅಮೇರಿಕೆಯ ಎಲ್ಲ ವಿಧದ ಜೀವನವನ್ನು ನೋಡಿ, ಕಲಿತು, ಪರಿಚಯ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುವಾಗಿ

ಇಂತಹ ಕಾಲೇಜಿನಲ್ಲಿ ವಿವಿಧ ಉದ್ಯಮಗಳ ತರಬೇತಿ ನಲ್ಲಿ ತೊಡಗುವ ವಿದ್ಯಾರ್ಥಿಗಳು ಆರು ವರ್ಷಗಳ ಪ ಒಂದೆಡೆಗೆ ಕಲಿತು, ಚರ್ಚಿಸಿ, ಅನುಭವಗಳ ವಿನಿಮ ವನ್ನು ಮಾಡಿಕೊಂಡ ಮೇಲೆ, ಅವರು ಬರಿ ಬೌದ್ಧಿಕ ನಿತ್ಯಜೀವನಕ್ಕೆ ಅಸಂಬದ್ಧವೆನಿಸುವ ವಿಷಯಗಳ ನಾಲ್ಕು ವರ್ಷ ಕಲಿತು ಹೊರಬೀಳುವ ಬೇರೆ ಕಾಲೇಜಿ ವಿದ್ಯಾರ್ಥಿಗಳಿಗಿಂತ ಹೆಚ್ಚಿನ, ಉಪಯುಕ್ತ ನಾಗರಿಕ ವದರಲ್ಲಿ ಸಂದೇಹವಿಲ್ಲ. ಈ ಆ್ಯಂಟಿಯೊಕ್ ಕಾ ಜಿನ ಬೌದ್ಧಿಕಶಿಕ್ಷಣದ ಮಟ್ಟವು ಮಿಕ್ಕ ಕಾಲೇಜುಗ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ.

ಶಿಕ್ಷಣ ವಿಷಯವು ಈಗಿನಷ್ಟು ಹಿಂದೆಂದೂ ಚರ್ಚಿಸ ಡಲಿಲ್ಲ. 'ಮ್ಯಾನ್' ನು ಅಂದಿದ್ದಾನೆ: 'ದಿನದ ಯಷ್ಟೆ ನಮಗೆ ಜ್ಞಾನ ಸ್ಥೈರ್ಯಗಳ ಆವಶ್ಯಕತೆಯಿದೆ. ಗಾಲದಿಂದ ನಮ್ಮ ಆರೋಗ್ಯ ಮತ್ತು ಜೀವನ ಆಗುವ ಅಪಾಯಕ್ಕಿಂತ ಹೆಚ್ಚಿನ ನಾಶವು ನಮ್ಮ ಕೀಯ ಜೀವನಕ್ಕೆ ಜ್ಞಾನಾಭಾವದಿಂದ ಆಗುತ್ತದೆ.'

ಜ್ಞಾನ, ಗುಣ, ತಿಳುವಳಿಕೆಗಳು ಬರಿ ಕಲಿಯುವದ ಬರುವದಿಲ್ಲ; ಪರೀಕ್ಷಾ-ಪದವಿಗಳಿಂದ ಬರುವದಿಲ್ಲ. ಗುಣಗಳನ್ನು ಅಮೇರಿಕೆಯ ಭಾವೀ ನಾಗರಿಕರಲ್ಲಿ ವದೆ ಅಮೇರಿಕೆಯ ಶಿಕ್ಷಣಶಾಸ್ತ್ರಿಗಳ ಇನ್ನು ದಿರುವ ಗುರಿಯಾಗಿದೆ. ತನ್ನನ್ನು ತಾನು ಪ್ರಜೆಗಳು ಸ್ವತಂತ್ರರಾಗಬೇಕಾದರೆ ಸಮರ್ಪಕ ಅಗತ್ಯವಿದೆಯೆಂಬುದು ಇನ್ನೂ ಸಾಕ್ಷಾತ್ಕ ಬೇಕಾದ ಅಮೇರಿಕೆಯ ಕನಸಾಗಿದೆ. ಇದನ್ನು ಹಟವುಳ್ಳವರೂ ಇಲ್ಲಿಯವರಾಗಿದ್ದಾರೆ.

—Mr. James Truslow Adams in The Atlan[tic]

ವರ್ಧಾಶಿಕ್ಷಣ ವರದಿಯ ವಿಮರ್ಶೆ

ವರ್ಧಾಕ್ರಮವು ಭಾರತೀಯರ ವಿಚಾರಗಳನ್ನು ಹೊಡೆದೆಬ್ಬಿಸಿದೆ. ಆಲೋಚನಾಶೀಲರ ತಲೆಗಳಲ್ಲೇಳುವ ಶಂಕೆಗಳನ್ನು ಲೇಖಕರು ಸಮರ್ಥವಾಗಿ ಸಂಗ್ರಹವಾಗಿ ಇಲ್ಲಿ ನಿರೂಪಿಸಿದ್ದಾರೆ. ಇವು ಎಲ್ಲರಿಗೂ ಒಪ್ಪಿಗೆಯಾಗಲಿಕ್ಕಿಲ್ಲ; ಆದರೆ ವರ್ಧಾಕ್ರಮವು ಅನುಷ್ಠಾನಕ್ಕೆ ಬಂದಾಗ, ಇವುಗಳಿಗೆಲ್ಲ ಸಮಾಧಾನವನ್ನು ಅದು ಕೊಡಲೇಬೇಕಾಗುವುದು.

ಲೇಖಕರು: ಶ್ರೀ. ಜಿ. ಹನುಮಂತರಾವ್ ಎಂ. ಎ., ತತ್ವಶಾಸ್ತ್ರಶಾಖೆ, ಮಹಾರಾಜಾ ಕಾಲೇಜು, ಮೈಸೂರು

ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ವಿಚಾರವಾಗಿ ಆಸಕ್ತಿ ಕಡಮೆ. ಆದರೆ ವರ್ಧಾ ಶಿಕ್ಷಣವರದಿ ಹೊರಬಿದ್ದಂದಿನಿಂದ ಜನರು ವಿದ್ಯಾಭ್ಯಾಸದ ಸಮಸ್ಯೆಗಳನ್ನು ವಿಶೇಷವಾದ ಉತ್ಸಾಹದಿಂದ ವಿಚಾರಮಾಡತೊಡಗಿರುವರು. ಹೀಗೆ ವಿದ್ಯಾವಿಚಾರವಾಗಿ ಜನರಲ್ಲಿ ಒಂದು ಹೊಸ ಜಾಗೃತಿಯನ್ನುಂಟುಮಾಡಿರುವುದು ವರದಿಯ ಒಂದು ಮಾಹಾತ್ಮ್ಯ. ಈಗಾಗಲೇ ಇದರ ವಿಚಾರವಾಗಿ ನೂರಾರು ವಿಮರ್ಶೆಗಳು ಪ್ರಕಟವಾಗಿವೆ. ಅದನ್ನು ವಿಮರ್ಶೆಮಾಡುವುದು ಒಂದು ಕಟ್ಟಳೆಯೂ ಆಗಿದೆ. ಆದುದರಿಂದ ಇನ್ನೊಂದು ವಿಮರ್ಶೆ ಬರೆದರೆ ಅದಕ್ಕೆ ಕಾರಣ ಕೊಡಬೇಕಾದ ಆವಶ್ಯಕತೆ ಇರುವುದಿಲ್ಲ. ವರ್ಧಾಕ್ರಮವು ಜನರಿಗೆ ಎಷ್ಟೋ ಚೆನ್ನಾಗಿ ಪರಿಚಯವಾಗಿರಲಿ, ಅದನ್ನು ವಿಮರ್ಶೆ ಮಾಡುವ ಮುಂಚೆ ಅದರ ಮೂಲ ಅಂಶಗಳನ್ನು ಮೊದಲಲ್ಲಿ ಸಂಗ್ರಹವಾಗಿ ಹೇಳಿ ಅನಂತರ ಅದರ ವಿಮರ್ಶೆಗೆ ಕೈಹಾಕುವುದು ಯುಕ್ತವಾಗಿದೆ.

೧

ವರ್ಧಾ ಶಿಕ್ಷಣ ಏರ್ಪಾಡಿನ ಮುಖ್ಯಾಂಶಗಳು

೧. ನಮ್ಮಲ್ಲಿ ಈಗ ಪ್ರಚಾರದಲ್ಲಿರುವ ವಿದ್ಯಾಭ್ಯಾಸ ಕ್ರಮವು ಅನೇಕ ವಿಧದಲ್ಲಿ ಅಸಮರ್ಪಕವಾಗಿದೆ. ಅದರ ಮೂಲಕ ವಿದ್ಯೆ ಕಲಿತವರಿಗೆ ಇಹವೂ ಇಲ್ಲ ಪರವೂ ಇಲ್ಲ; ಸ್ವಾತಂತ್ರ್ಯಾಪೇಕ್ಷೆಯೂ ಇಲ್ಲ, ಸ್ವಾವಲಂಬನ ಪ್ರಯತ್ನವೂ ಇಲ್ಲ. ನಿಸ್ಸತ್ವವೂ ನಿರಾಶಾಜನಕವೂ ಆದ ಈ ವಿದ್ಯಾಭ್ಯಾಸಕ್ರಮದ ಬದಲು ಬಲಿಷ್ಠರೂ ಸ್ವಾವಲಂಬಿಗಳೂ, ಸತ್ಯಕಾಮರೂ ಅಹಿಂಸಾನಿಷ್ಠರೂ ಆದ ಸತ್ಪ್ರಜೆಗಳನ್ನು ತಯಾರಿ ಮಾಡುವ ಒಂದು ಹೊಸ ಶಿಕ್ಷಣಕ್ರಮವನ್ನು ಏರ್ಪಡಿಸುವುದೇ ವರ್ಧಾ ವರದಿಯ ಉದ್ದೇಶ.

೨. ಒಂದು ಕಸಬನ್ನೇ ವಿದ್ಯಾಭ್ಯಾಸದ ಮೂಲವಾಗಿಟ್ಟುಕೊಂಡು ತನ್ಮೂಲಕ ವಿದ್ಯೆ ಕಲಿಸುವುದು ಈ ಏರ್ಪಾಡಿನ ಮುಖ್ಯ ವೈಶಿಷ್ಟ್ಯ. ನೂಲುವುದು ಮತ್ತು ನೇಯುವುದು, ಮರಗೆಲಸ, ಬೇಸಾಯ, ತೋಟದ ಕೆಲಸ, ಚರ್ಮದ ಕೆಲಸ, ಲೋಹವಿದ್ಯೆ ಇತ್ಯಾದಿ ಕಸಬುಗಳಲ್ಲಿ ಒಂದನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಏಳು ವರ್ಷ ಕಾಲ ಅಗತ್ಯವಾಗಿ ಕಲಿಯಬೇಕು. ಅದನ್ನು ಅಭ್ಯಾಸ ಮಾಡುತ್ತಿದ್ದ ಹಾಗೆಯೇ ಅದಕ್ಕೆ ಸಂಬಂಧಪಟ್ಟಂತೆ ಗಣಿತ, ಸಮಾಜ ವಿಜ್ಞಾನ, ಪ್ರಕೃತಿವಿಜ್ಞಾನ, ಭಾಷೆ, ಚರಿತ್ರೆ, ಚಿತ್ರಕಲೆ, ಸಂಗೀತ ಮುಂತಾದ ವಿದ್ಯೆಗಳನ್ನೂ ಕಲೆಗಳನ್ನೂ ಕಲಿಯಬೇಕು. ಹೀಗೆ ವಿದ್ಯಾರ್ಥಿಯು ಏಳು ವರ್ಷಗಳ ಕಾಲದಲ್ಲಿ ವಿದ್ಯೆಯನ್ನು ಕಲಿತು ಮುಂದಿನ ಜೀವನೋಪಾಯಕ್ಕೆ ಒಂದು ದಾರಿ ಮಾಡಿಕೊಳ್ಳುವನಲ್ಲದೆ, ತಾನು ಮಾಡಿದ ದಾರದಿಂದ ಅಥವಾ ನೆಯ್ದ ಬಟ್ಟೆಯಿಂದ, ಆಥವಾ ಬೆಳೆದ ಬೆಳೆಯಿಂದ ತನ್ನ ಗುರುವಿನ ವೇತನಕ್ಕೆ ಸಾಕಾಗುವಷ್ಟು ಗುರುದಕ್ಷಿಣೆಯನ್ನೂ ಸಂಪಾದಿಸುವನು.

೩. ವರ್ಧಾಶಿಕ್ಷಣದ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯೂ ಎರಡು ಭಾಷೆಗಳನ್ನು ಕಲಿಯಬೇಕು; ಮೊದಲನೆಯದು ಮಾತೃಭಾಷೆ, ಎರಡನೆಯದು ರಾಷ್ಟ್ರಭಾಷೆಯಾದ ಹಿಂದಿ. ಮಾತೃಭಾಷೆಯನ್ನು ಮೊದಲಿನಿಂದ ಕೊನೆಯವರೆಗೆ ಏಳು ವರ್ಷಗಳೂ ಕಲಿಯಬೇಕು, ಹಿಂದಿಯನ್ನು ಮಾತ್ರ ಕೊನೆಯ ಎರಡು ವರ್ಷಗಳ ಮಟ್ಟಿಗೆ ಕಲಿತರೆ ಸಾಕು.

೪. ಬಾಲಕರಿಗೂ ಬಾಲಿಕೆಯರಿಗೂ-ಇಬ್ಬರಿಗೂ ಮೊದಲನೆಯ ಐದು ವರ್ಷಗಳ ವರೆಗೆ ಒಂದೇ ಶಿಕ್ಷಣ; ಐದು ವರ್ಷಗಳ ವಿದ್ಯಾಭ್ಯಾಸವಾದ ಮೇಲೆ, ಹುಡುಗಿಯರು ಗೃಹಕಾರ್ಯಕಲೆಯನ್ನು ಕಲಿಯಬಹುದು ಅಥವಾ ಅಲ್ಲಿಗೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬಹುದು. ಹುಡುಗನಾದರೋ ಇನ್ನೂ ಎರಡು ವರ್ಷಗಳ ಕಾಲ ತಾನು ಹಿಡಿದ ಕಸಬನ್ನೂ ತದಂಗವಾದ ವಿದ್ಯೆಯನ್ನೂ ಕಡ್ಡಾಯವಾಗಿ ಕಲಿಯಬೇಕು.

೫. ಒಂದು ವರ್ಷದಲ್ಲಿ ಪಾಠಶಾಲೆಯು ನಡೆಯುವ ದಿನಗಳ ಸಂಖ್ಯೆ ಸರಾಸರಿ ೨೮೦; ಪ್ರತಿ ದಿನವೂ ಪಾಠಶಾಲೆ

ನಡೆಯುವ ಕಾಲ ೫ ಘಂಟೆ ೩೦ ನಿಮಿಷಗಳು. ಇದರಲ್ಲಿ ಮೂಲ ಕಸಬಿಗೆ ೩ ಘಂಟೆ ೨೦ ನಿಮಿಷ, ಸಂಗೀತ, ಚರಿತ್ರೆ, ಗಣಿತ ಈ ಮೂರಕ್ಕೆ ೪೦ ನಿಮಿಷ, ಮಾತೃಭಾಷೆಗೆ ೪೦ ನಿಮಿಷ, ಸಮಾಜವಿಜ್ಞಾನ ಮತ್ತು ಪ್ರಕೃತಿವಿಜ್ಞಾನ ಇವೆರಡಕ್ಕೂ ೩೦ ನಿಮಿಷಗಳು, ವ್ಯಾಯಾಮಕ್ಕೆ ಮತ್ತು ವಿರಾಮಕ್ಕೆ ಹತ್ತು ಹತ್ತು ನಿಮಿಷಗಳು ಹೀಗೆ ಕಾಲವನ್ನು ಹಂಚಿಕೆ ಮಾಡಿದೆ.

೬. ಈ ಶಿಕ್ಷಣ ಏರ್ಪಾಡಿನಲ್ಲಿ ಇನ್ನೊಂದು ವಿಶೇಷ ಸಂಗತಿ; ಪರೀಕ್ಷೆಗಳಿಲ್ಲ. ಪರೀಕ್ಷೆಗಳಿಲ್ಲದ ಮಾತ್ರಕ್ಕೇ ಹುಡುಗನ ಯೋಗ್ಯತೆಯನ್ನೂ ನಿರ್ಧರಿಸುವ ಏರ್ಪಾಡೇ ಇಲ್ಲವೆಂದು ತಿಳಿಯಕೂಡದು. ಆರು ತಿಂಗಳಿಗೊಂದು ಸಲವೋ ವರ್ಷಕ್ಕೊಂದು ಸಲವೋ ಎರಡು ಮೂರು ದಿವಸಗಳು ಪರೀಕ್ಷೆಯನ್ನು ನಡೆಸಿ, ವಿದ್ಯಾರ್ಥಿಯು ಕೊಟ್ಟ ಉತ್ತರಗಳಿಂದ ಅವನ ಯೋಗ್ಯತೆ ಕಂಡುಹಿಡಿಯುವುದು ಈಗಿನ ಪದ್ಧತಿ. ವರ್ಧಾ ಪದ್ಧತಿ ಹಾಗಲ್ಲ. ಪ್ರತಿ ದಿನವೂ ಹುಡುಗನು ಮಾಡಿದ ಕೆಲಸ, ಕಲಿತ ವಿಷಯವನ್ನು ದಾಖಲೆ ಇಟ್ಟು ಅದರ ಆಧಾರದ ಮೇಲೆ ಅವನ ಯೋಗ್ಯತೆಯನ್ನು ಗೊತ್ತುಮಾಡುವುದು. ಇದನ್ನು ಗೊತ್ತುಮಾಡುವ ಅಧಿಕಾರವನ್ನು ವರ್ಧಾ ಸಮಿತಿಯವರು ಶಾಲಾಮಂಡಲಕ್ಕೆ ಒಪ್ಪಿಸಿರುತ್ತಾರೆ.

೭. ವರ್ಧಾ ಶಿಕ್ಷಣದ ಏರ್ಪಾಡು ಬರಿಯ ವಿದ್ಯಾರ್ಥಿಗಳ ಶಿಕ್ಷಣ ಮಾತ್ರವೇ ಅಲ್ಲ; ಅದಕ್ಕೆ ಸಾಧನವಾಗಿ ಶಿಕ್ಷಕರ ಶಿಕ್ಷಣವೂ, ಮೇಲ್ವಿಚಾರಕರ ಶಿಕ್ಷಣವೂ ಅದರಲ್ಲಿ ಸೇರಿವೆ. ಪ್ರತಿಯೊಬ್ಬ ಉಪಾಧ್ಯಾಯನೂ ಒಂದು ಕಸಬು ಮತ್ತು ಇತರ ಬೋಧನೆಯ ವಿಷಯಗಳು—ಇವುಗಳಲ್ಲಿ ಮೂರು ವರ್ಷಗಳ ಕಾಲ ಶಿಕ್ಷಣ ಪಡೆಯಬೇಕು. ಅವನು ಮೇಲ್ವಿಚಾರಕನಾಗಬೇಕಾದರೆ ಈ ಶಿಕ್ಷಣವನ್ನು ಪಡೆಯುವುದಲ್ಲದೆ ಎರಡು ವರ್ಷಗಳ ಕಾಲ ಪಾಠಶಾಲೆಯ ಕೆಲಸ-ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಿರಬೇಕು.

ಇದೇ ವರ್ಧಾ ಶಿಕ್ಷಣಕ್ರಮದ ಸಂಕ್ಷಿಪ್ತಸಾರ.

ವರ್ಧಾ ಶಿಕ್ಷಣ ಏರ್ಪಾಡಿನ ಒಂದೆರಡು ಅಂಶಗಳ ವಿಮರ್ಶೆ

ಒಟ್ಟಿನಲ್ಲಿ ಈಗ ನಡವಳಿಕೆಯಲ್ಲಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ರಮಗಳಿಗಿಂತಲೂ ವರ್ಧಾಕ್ರಮವು ಅನೇಕ ವಿಧದಲ್ಲಿ ಉತ್ತಮವಾಗಿದೆ. ಇದರ ತತ್ವ ಬಹುಮಟ್ಟಿಗೆ ವಿದ್ಯಾಶಾಸ್ತ್ರಸಮ್ಮತವಾಗಿದೆ; ವಿದ್ಯಾರ್ಥಿಯ ವ್ಯಕ್ತಿತ್ವವು ಹೆಚ್ಚುಕಡಮೆ ಸರ್ವತೋಮುಖವಾಗಿ ಬೆಳೆಯಲು ಸಹಕಾರಿಯಾಗಿದೆ; ಮೂವತ್ತು ನಲವತ್ತು ವರ್ಷಗಳ ಕಾಲ ಇದು ಸುಸೂತ್ರವಾಗಿ ನಡೆದುಕೊಂಡು ಬಂದರೆ ಭಾರತೀಯರು ಪ್ರಗತಿಮಾರ್ಗವನ್ನು ಹಿಡಿಯುವರೆಂಬುವದಕ್ಕೆ ಸಂಶಯವಿಲ್ಲ. ಆದರೂ ಇದನ್ನು ವಿವೇಚನೆ ಮಾಡಿನೋಡಿದರೆ ಇದು ಕೆಲವು ಅಂಶಗಳಲ್ಲಿ ಆಧುನಿಕ ವಿದ್ಯಾಶಾಸ್ತ್ರತತ್ವಗಳಿಗೆ ಅನುಗುಣವಾಗಿಲ್ಲ; ಇದರ ಮೂಲ ಕಸಬಿನ ತತ್ವವು ಇನ್ನೂ ವಿಶಾಲವಾಗಬಹುದಾಗಿತ್ತು; ಇದನ್ನು ಕಾರ್ಯರೂಪಕ್ಕೆ ತರುವ ವಿಚಾರ, ಇದಕ್ಕೆ ಸಂಬಂಧಪಟ್ಟ ಹಣಕಾಸಿನ ವಿಚಾರ, ಶಿಕ್ಷಕರನ್ನು ಒದಗಿಸುವ ವಿಚಾರ, ಈಗ ಪ್ರಚಾರದಲ್ಲಿರುವ ಪಾಠಶಾಲೆಗಳನ್ನು ಬದಲಾಯಿಸುವ ವಿಚಾರ ಇವನ್ನು ಕುರಿತು ಸಮಿತಿಯವರು ಇನ್ನೂ ವಿಸ್ತಾರವಾಗಿಯೂ ಕೂಲಂಕಷವಾಗಿಯೂ ಆಲೋಚಿಸಬೇಕಾಗಿತ್ತೆಂದು ಭಾಸವಾಗುವುದು.

೧. ಇದರ ಮೂಲ ವೃತ್ತಿತತ್ವವನ್ನು ತೆಗೆದುಕೊಳ್ಳೋಣ. ಈ ತತ್ವವನ್ನು ಪ್ರತಿಪಾದಿಸುವುದರಲ್ಲಿ ವರ್ಧಾ ಸಮಿತಿಯವರು ಬಹುಶಃ ಪ್ರಾಜೆಕ್ಟ್ ವಿದ್ಯಾತತ್ವವನ್ನು ಉಪಯೋಗಿಸಿಕೊಂಡ ಹಾಗೆ ತೋರುವುದು. ಕೆಲಸಮಾಡುವುದರ ಮೂಲಕ ಕಲಿಯುವುದು (Learning by doing) ಪ್ರಾಜೆಕ್ಟ್ ಕ್ರಮದ ಮೂಲತತ್ವ. ಅಂಗಡಿ ಇಡುವುದು, ಮನೆ ಕಟ್ಟುವುದು, ತೋಟಮಾಡುವುದು, ಇಂಥಾ ಕೆಲಸಗಳನ್ನು ಆಧಾರವಾಗಿ ಇಟ್ಟುಕೊಂಡು ಅದಕ್ಕೆ ಸಂಬಂಧಿಸಿದಂತೆ ಭಾಷೆ, ಜ್ಞಾನ, ಗಣಿತ, ವಿಜ್ಞಾನ, ಕಲೆ, ಸಮಾಜಶೀಲ ಮುಂತಾದವುಗಳನ್ನು ಬೆಳೆಸುವುದು ಅದರ ವಿಧಾನ. ಇದಕ್ಕೂ ವರ್ಧಾ ಶಿಕ್ಷಣ ವಿಧಾನಕ್ಕೂ ಬಹುಮಟ್ಟಿಗೆ ಹೋಲಿಕೆ ಇದೆ. ಆದರೆ ಇವೆರಡೂ ಒಂದೇ ಅಲ್ಲ ಎಂಬುದನ್ನು ಮಾತ್ರ ಸ್ಪಷ್ಟವಾಗಿ ತಿಳಿಯಬೇಕು. ಪ್ರಾಜೆಕ್ಟ್ ಶಿಕ್ಷಣಕ್ರಮದ ಕೆಲಸಗಳು ಆಟದಂತೆ ನಿಷ್ಕಾಮ ಕರ್ಮಗಳು; ಕೆಲಸವು ಒಂದು ಸಾಧನ ಅಲ್ಲ; ಆದರಿಂದ ಪ್ರತಿಫಲ ಪಡೆಯಬೇಕೆಂಬ ಭಾವನೆ ಪ್ರಾಜೆಕ್ಟ್ ಪಾಠಶಾಲೆಯ ವಿದ್ಯಾರ್ಥಿಗೂ ಇಲ್ಲ, ಉಪಾಧ್ಯಾಯನಿಗೂ ಇಲ್ಲ; ಒಂದು ವೇಳೆ ಪ್ರತಿಫಲಾಪೇಕ್ಷೆಯಿದ್ದರೂ ಅದು ಅಷ್ಟು ಮುಖ್ಯವಲ್ಲ. ಅಲ್ಲದೆ ಪ್ರಾಜೆಕ್ಟ್ ಕ್ರಮವನ್ನು ಅನುಷ್ಠಾನದಲ್ಲಿಟ್ಟುಕೊಂಡಿರುವವರು ಯಾವ ಒಂದು ಕೆಲಸವನ್ನು ಏಳು ವರ್ಷಗಳ ಕಾಲ ವಿದ್ಯಾಭ್ಯಾಸದ ಆಧಾರವಾಗಿ ಇಟ್ಟುಕೊಂಡಿರುವುದಿಲ್ಲ. ಹಾಗೆ ಮಾಡಿದರೆ ವಿದ್ಯಾಪ್ರೇರಕವಾದ ಆಸಕ್ತಿಯನ್ನೇ ಕೊಂದ ಹಾಗಾಗುತ್ತದೆ. ಬಾಲಕನಿಗೆ ಒಂದು ಕೆಲಸದಲ್ಲಿ ಮೂರು ತಿಂಗಳ ಕಾಲ ಆಸಕ್ತಿ ಚುರುಕಾಗಬಹುದು; ಬಹಳ ಆಸಕ್ತಿ

ವಾದ ಸನ್ನಿವೇಶಗಳನ್ನು ಕಲ್ಪಿಸಿಕೊಟ್ಟರೆ ಅದನ್ನೂ ಆರು ತಿಂಗಳ ಕಾಲ ಎಚ್ಚರವಾಗಿ ಇಟ್ಟುಕೊಳ್ಳಬಹುದು, ಆದರೆ ಏಳು ವರ್ಷಗಳ ಕಾಲ ನಿರಂತರವಾಗಿ ಬಾಲಕನ ಆಸಕ್ತಿಯನ್ನು ನೂಲುವುದರಲ್ಲಿ, ನೇಯ್ಗೆಯಲ್ಲಿ ನಿಲ್ಲಿಸುವುದು ಮಹಾತ್ಮರಿಗೂ ಅಸಾಧ್ಯವಾದ ಕೆಲಸವಲ್ಲವೆ? ಅದೂ ಅಲ್ಲದೆ ಒಂದೇ ಕೆಲಸದ ಮೂಲಕ ವಿದ್ಯಾಭ್ಯಾಸ ಮಾಡಿಸುವುದರಿಂದ ಬಾಲಕನ ದೃಷ್ಟಿಕೋನವು ಕಿರಿದಾಗಬಹುದು, ಬುದ್ಧಿಯೂ ಕೂಡ ಮಂಕಾಗಬಹುದು. ಆದುದರಿಂದಲೇ ಪ್ರಾಜೆಕ್ಟ್ ಕ್ರಮದಲ್ಲಿ ನಾಲ್ಕಾರು ಕೆಲಸಗಳನ್ನು ವಿದ್ಯಾಭ್ಯಾಸದ ಅಂಗಗಳಾಗಿ ಇಟ್ಟುಕೊಂಡಿರುವುದು. ಅವುಗಳನ್ನು ಆರಿಸುವುದರಲ್ಲೂ ಕೂಡ ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯವಿದೆ. ಅಂಥಾ ಸ್ವಾತಂತ್ರ್ಯಕ್ಕೆ ವರ್ಧಾ ಶಿಕ್ಷಣದಲ್ಲಿ ಅವಕಾಶವಿಲ್ಲ. ಅದು ಆಚರಣೆಗೆ ಬಂದಾಗ ಒಂದು ಶಾಲೆಯಲ್ಲಿ ಬಹುಶಃ ಒಂದು ಕೆಲಸಕ್ಕಿಂತಲೂ ಹೆಚ್ಚಾಗಿ ಕಲಿಸಲು ಅವಕಾಶವಿರುವುದಿಲ್ಲ; ಆದುದರಿಂದ ವಿದ್ಯಾರ್ಥಿಯು ತನಗೆ ಒಪ್ಪುವ ವಿಷಯವನ್ನು ಆಯ್ದುಕೊಳ್ಳಲು ಅವಕಾಶವಿಲ್ಲ.

ವರ್ಧಾಶಿಕ್ಷಣಕ್ರಮವು ಪ್ರಾಜೆಕ್ಟ್ ಶಿಕ್ಷಣಕ್ರಮವಲ್ಲ; ಅದರ ಪರಿವರ್ತನೆ. ವರ್ಧಾಶಿಕ್ಷಣದ ಮಾನಸಿಕ ತಳಹದಿಯೇ ಬೇರೆ, ಪ್ರಾಜೆಕ್ಟ್ ಶಿಕ್ಷಣದ ಮಾನಸಿಕ ತಳಹದಿಯೇ ಬೇರೆ. ವರ್ಧಾಶಿಕ್ಷಣದಲ್ಲಿ ಹದಿನಾರಾಣೆಯು ವೃತ್ತಿಶಿಕ್ಷಣ, ಅದರ ಜತೆಗೆ ವಿದ್ಯಾಭ್ಯಾಸ. ಪ್ರಾಜೆಕ್ಟ್ ಶಿಕ್ಷಣಕ್ರಮವಾದರೋ ವೃತ್ತಿಶಿಕ್ಷಣವಲ್ಲವೇ ಅಲ್ಲ; ಹದಿನಾರಾಣೆಯೂ ವಿದ್ಯಾಭ್ಯಾಸ. ಮೊನ್ನೆ ಮಾರ್ಚಿ ತಿಂಗಳಲ್ಲಿ ಮಹಾತ್ಮ ಗಾಂಧಿಯವರ ಮುನ್ನುಡಿಯೊಡನೆ ಪ್ರಕಟವಾಗಿರುವ ವರದಿಯಲ್ಲಿ ವರ್ಧಾ ಸಮಿತಿಯವರು ಈ ಆಕ್ಷೇಪಣೆಗೆ ಹೀಗೆ ಸಮಾಧಾನ ಹೇಳಿರುತ್ತಾರೆ. "The object of the scheme is not primarily to produce craftsmen **mechanically** but to exploit the resources iniplicit in craft-work for education purposes." ಈ ಸಮಾಧಾನದ ಮಾತಿನಲ್ಲಿ ಇಂಗ್ಲಿಷ್ ಭಾಷೆಗೆ ಸಹಜವಾದ ಚಮತ್ಕಾರವಿದೆ; ಆದರೆ ಸತ್ಯಾಂಶ ಕಡಮೆ. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದ ದರ್ಜೆಗಳಲ್ಲಿ ವರ್ಧಾ ಸಮಿತಿಯವರು ವೃತ್ತಿಶಿಕ್ಷಣಕ್ಕೆ ಕೊಟ್ಟಿರುವಷ್ಟು ಪ್ರಾಶಸ್ತ್ಯವನ್ನು ಪ್ರಪಂಚದ ಇನ್ನು ಯಾವ ವಿದ್ಯಾಶಾಸ್ತ್ರಜ್ಞರೂ ಕೊಟ್ಟಿರುವುದಿಲ್ಲ.* ವಿದ್ಯಾರ್ಥಿಯನ್ನು ನೆಯ್ಗೆಯವನನ್ನಾಗಿ, ಬಡಗಿಯನ್ನಾಗಿ ಅಥವಾ ರೈತನನ್ನಾಗಿ ಮಾಡುವುದು ಸಮಿತಿಯವರ ಉದ್ದೇಶವಲ್ಲದ ಪಕ್ಷದಲ್ಲಿ ಏಳು ವರ್ಷಗಳ ಕಾಲ ಅವನನ್ನು ಒಂದು ವೃತ್ತಿಗೆ ಹಾಕಿ ಏತಕ್ಕೆ ಅರೆಯಬೇಕು?

ಸಮಿತಿಯ ವಾದವೇನಾದರೂ ಆಗಲಿ, ವಾಸ್ತವವಾಗಿ ವರ್ಧಾಶಿಕ್ಷಣವು ಮುಖ್ಯವಾಗಿ ವೃತ್ತಿಶಿಕ್ಷಣ; ಅದರ ಜತೆಗೆ ವಿದ್ಯಾಭ್ಯಾಸ. ಇದನ್ನು ಮರೆಮಾಚಿ ಪ್ರಯೋಜನವಿಲ್ಲ; ಧೈರ್ಯವಾಗಿ, ಘಂಟಾಘೋಷವಾಗಿ ಹೇಳಬಹುದು: ಈ ಶಿಕ್ಷಣವು ಆಧುನಿಕ ಶಿಕ್ಷಣವೂ ಅಲ್ಲ ಆದರ್ಶ ಶಿಕ್ಷಣವೂ ಅಲ್ಲ, ನಮ್ಮ ದೇಶಕಾಲಗಳ ಕುಂದುಕೊರತೆಗಳಿಗೆ ಅನುಗುಣವಾಗಿ ಏರ್ಪಡಿಸಿರುವ ಶಿಕ್ಷಣಪದ್ಧತಿ. ನಾವು ಬಡವರು; ಆದುದರಿಂದ ನಮ್ಮ ಮಕ್ಕಳು ದುಡಿಯಲೂ ಬೇಕು, ಕಲಿಯಲೂ ಬೇಕು. ಗುರುದಕ್ಷಿಣೆಯ ಬದಲು, ಕೆಲವು ವೇಳೆ ಅದರ ಜತೆಗೆ, ಗುರುವಿನ ಮನೆಯಲ್ಲಿ ನಾಲ್ಕಾರು ವರ್ಷಗಳು ಕೆಲಸಮಾಡಿ, ಗುರುವಿಗಾಗಿ ಭಿಕ್ಷೆ ಮಾಡಿ, ಗುರುವಿನ ಜೀವನವನ್ನೂ ನಡೆಸಿ ವಿದ್ಯೆ ಕಲಿಯುವುದು ಆರ್ಷೇಯವಾಗಿ ಬಂದ ನಮ್ಮ ಸಂಪ್ರದಾಯ. ಬಡತನವು ನಮಗೆ ಅನಿವಾರ್ಯ; ಆದುದರಿಂದ ನಮ್ಮ ವಿದ್ಯಾಭ್ಯಾಸಕ್ರಮವೂ ಅದಕ್ಕೆ ತಕ್ಕಂತೆ ಇರಬೇಕಾದುದೂ ಅನಿವಾರ್ಯವೇ. ಈ ದೃಷ್ಟಿಯಿಂದ ವರ್ಧಾ ಏರ್ಪಾಡನ್ನು ನಾವು ಒಪ್ಪಬೇಕು; ಮೂಲ ಕಸಬಿಗೆ ಮೂರು ಘಂಟೆಗಳು ಇಪ್ಪತ್ತು ನಿಮಿಷಗಳ ಕಾಲ ಕೊಟ್ಟಿರುವುದು ಹೆಚ್ಚೇನೂ ಅಲ್ಲ. ಅಷ್ಟು ಹೊತ್ತು ಕೆಲಸಮಾಡುವುದು ವಿದ್ಯಾರ್ಥಿಗಳಿಗೂ ಒಂದು ಭಾಗದಲ್ಲಿ ಒಳ್ಳೆಯದೆ; ಈಗಿನ ಹಾಗೆ ಅವರು ಸೋಮಾರಿಗಳಾಗುವುದಿಲ್ಲ.

೩. ವಿದ್ಯಾಭ್ಯಾಸದ ಅಂಗವಾಗಿ ಕಸಬುಗಳನ್ನು ಏರ್ಪಡಿಸುವಾಗ ವ್ಯವಸಾಯ, ನೂಲುವುದು, ನೆಯ್ಗೆ ಇವುಗಳಂತೆಯೇ ಯಂತ್ರ ನಡೆಸುವ ಕೆಲಸ (ಯಂತ್ರವೃತ್ತಿ) ವನ್ನೂ ಒಂದು ಮೂಲವೃತ್ತಿಯಾಗಿ ಇಟ್ಟುಕೊಳ್ಳಬೇಕಾದುದು ಅತ್ಯಾವಶ್ಯಕ. ಇದನ್ನು ಯೋಚಿಸದಿರುವುದು ವರ್ಧಾ ವರದಿಯ ಗುರುತರವಾದ ಲೋಪ. ನಾವು ಇರುವುದು ಯಂತ್ರಯುಗದಲ್ಲಿ; ಯಂತ್ರಗಳು ನಮ್ಮ ಜೀವನದಲ್ಲಿ ದಿನೇ ದಿನೇ ವ್ಯಾಪಿಸುತ್ತಿವೆ. ಇವುಗಳನ್ನು ಬಿಟ್ಟು ಬಾಳುವುದು ಅಸಾಧ್ಯವಾಗಿದೆ. ಅಲ್ಲದೆ ನಾವು ಇವುಗಳನ್ನು ಬಿಡಲು ಪ್ರಯತ್ನಪಟ್ಟಷ್ಟೂ, ನಾವು ಹಿಂದೆ ಬೀಳುತ್ತೇವೆ; ನಮ್ಮ ಬಡತನ ಹೆಚ್ಚುತ್ತದೆ. ಕಸಬನ್ನೇ ಮೂಲತತ್ವವನ್ನಾಗಿ ಇಟ್ಟುಕೊಂಡಿರುವ ವರ್ಧಾ ಸಮಿತಿಯವರು ಯಂತ್ರವೃತ್ತಿ

---

*ಡ್ಯೂಯಿ ಅವರು ಇಂಥಾ ಪಾಠಶಾಲೆಯೊಂದನ್ನು ಸ್ವಲ್ಪ ಕಾಲ ನಡೆಸಿದರಂತೆ. ಆದರೆ ಅದು ಈಗ ನಡೆಯುತ್ತಿಲ್ಲ.

ಯನ್ನು ಬಾಲ್ಯದಿಂದ ಕಲಿಸುವ ಯೋಜನೆ ಮಾಡದಿರುವುದು ಅತ್ಯಾಶ್ಚರ್ಯಕರವಾಗಿದೆ. ಇದನ್ನು ಸೇರಿಸದಿರುವುದನ್ನು ನೋಡಿದರೆ ವರ್ಧಾ ಸಮಿತಿಯವರ ಜೀವನ ತತ್ವವು ಬಹಳ ಸಂಕೋಚವಾದುದೆಂದು ಹೇಳಬೇಕು.

ಯಂತ್ರವಿದ್ಯೆಯನ್ನೂ, ಯಂತ್ರಕಲೆಯನ್ನೂ ಅವರ ಏರ್ಪಾಡಿನಲ್ಲಿ ಸೇರಿಸದಿರುವುದಕ್ಕೆ ಅವರು ಕೊಟ್ಟಿರುವ ಉತ್ತರವೂ ಅಷ್ಟು ಸಮಂಜಸವಾಗಿಲ್ಲ: ಯಂತ್ರವಿದ್ಯೆ, ಯಂತ್ರಕಲೆ ಇವು ವಯಸ್ಕರ ವಿದ್ಯಾಭ್ಯಾಸದೊಡನೆ ಯೋಚಿಸಬೇಕಾದ ಅಂಶಗಳು; ಆದುದರಿಂದ ಇವಕ್ಕೆ ತಮ್ಮ ಏರ್ಪಾಡಿನಲ್ಲಿ ಸ್ಥಳವಿಲ್ಲವೆಂದು ಹೇಳಿರುವರು. ವ್ಯವಸಾಯ ವನ್ನು, ನೇಯ್ಗೆಯನ್ನು ಏರ್ಪಾಡಿನಲ್ಲಿ ಸೇರಿಸಬಹುದಾದರೆ ಯಂತ್ರವಿದ್ಯೆಯನ್ನು ಏತಕ್ಕೆ ಸೇರಿಸಬಾರದೋ ಗೊತ್ತಾಗು ವುದಿಲ್ಲ. ಇವುಗಳಲ್ಲೂ ಸರಳಶಿಕ್ಷಣ ಸಾಧ್ಯ; ಯಂತ್ರ ವಿದ್ಯೆಯಲ್ಲೂ ಸರಳಶಿಕ್ಷಣ ಸಾಧ್ಯ; ಇವುಗಳಲ್ಲೂ ಪ್ರೌಢ ಶಿಕ್ಷಣವಿದೆ, ಯಂತ್ರವಿದ್ಯೆಯಲ್ಲೂ ಪ್ರೌಢಶಿಕ್ಷಣವಿದೆ. ಯಂತ್ರವಿದ್ಯೆ ಮಾತ್ರ ಪ್ರೌಢವಿದ್ಯೆ, ವ್ಯವಸಾಯ ಮಾತ್ರ ಸುಲಭವಿದ್ಯೆ ಎಂದು ಇವರು ವಿಂಗಡಣೆ ಮಾಡುವುದು ತರ್ಕಶಾಸ್ತ್ರ ವಿರುದ್ಧವಾಗಿದೆ. ಬಾಲವಿದ್ಯಾಭ್ಯಾಸದಲ್ಲಿ ವೃತ್ತಿ ಶಿಕ್ಷಣಕ್ಕೆ ಅವಕಾಶ ಕೊಡಬಹುದಾದರೆ, ಯಂತ್ರಕಲೆಯ ಶಿಕ್ಷಣಕ್ಕೂ ಏತಕ್ಕೆ ಅವಕಾಶ ಕೊಡಬಾರದು? ಉಳು ವುದು, ಬಿತ್ತುವುದು, ಕಣಮಾಡುವುದು ಮುಂತಾದ ಕೆಲಸ ಗಳನ್ನು ಹುಡುಗರಿಂದ ಮಾಡಿಸಲು ಸಾಧ್ಯವಾಗುವುದಾದರೆ, ಸಣ್ಣಪುಟ್ಟ ಯಂತ್ರಗಳನ್ನು ನಡೆಸುವುದು, ಕೆಟ್ಟು ಹೋದ ಯಂತ್ರಗಳನ್ನು ಸರಿಪಡಿಸುವುದು—ಇವುಗಳನ್ನು ಕಲಿಸು ವುದು ಏತಕ್ಕೆ ಸಾಧ್ಯವಿಲ್ಲ?

ಹಳ್ಳಿಹಳ್ಳಿಗಳಲ್ಲೂ ಯಂತ್ರಗಳನ್ನು ಉಪಯೋಗಿಸುವ ಕಾಲ ಈಗ ಒದಗಿದೆ. ನೀರು ಎತ್ತುವುದಕ್ಕೆ, ಎಣ್ಣೆ ತೆಗೆಯು ವುದಕ್ಕೆ, ಬೀಸುವುದಕ್ಕೆ ಕುಟ್ಟುವುದಕ್ಕೆ, ನೂಲುವುದಕ್ಕೆ ಯಂತ್ರಗಳನ್ನು ಉಪಯೋಗಿಸುವುದು ಸ್ವಲ್ಪಸ್ವಲ್ಪವಾಗಿ ರೂಢಿಗೆ ಬರುತ್ತಿದೆ. ಇವುಗಳನ್ನು ಸರಿಯಾಗಿ ನಡೆಸುವು ದನ್ನೂ ಕೆಟ್ಟು ಹೋದಾಗ ಸರಿಮಾಡುವುದನ್ನೂ ಹಳ್ಳಿ ಯವರಿಗೆ ಕಲಿಸಿದರೆ ಇವುಗಳು ಇನ್ನೂ ಹೆಚ್ಚಾಗಿ ಪ್ರಚಾ ರಕ್ಕೆ ಬರುತ್ತವೆ. ಹಳ್ಳಿಯವರಿಗೆ ಈ ಯಂತ್ರಗಳ ತಿಳಿವಳಿಕೆ ಇಲ್ಲದಿರುವುದು ಅವು ಪ್ರಚಾರಕ್ಕೆ ಬರುವುದಕ್ಕೆ ಅಡ ಚಣೆಯಾಗಿದೆ. ಇಂಥಾ ಯಂತ್ರಗಳನ್ನು ಜಪಾನರು ಹಳ್ಳಿ ಹಳ್ಳಿಗಳಲ್ಲೂ ಮನೆಮನೆಗಳಲ್ಲೂ ಉಪಯೋಗಿಸುತ್ತಿರುವುದ ರಿಂದಲ್ಲವೆ ಅವರು ತಲೆ ಎತ್ತಿರುವುದು. ಆದುದರಿಂದ ನಮ್ಮ ದೇಶವೂ ಕೂಡ ಅದೇ ರೀತಿಯಾಗಿ ಅಭಿವೃದ್ಧಿಗೆ ಬ[illegible] ಬೇಕಾದರೆ ವರ್ಧಾ ಸಮಿತಿಯವರೂ ಯಂತ್ರಕಲೆಯನ್ನು ತಮ್ಮ ವಿದ್ಯಾಭ್ಯಾಸದ ಏರ್ಪಾಡಿನಲ್ಲಿ ಸೇರಿಸುವುದು ಅತ್ಯಾ ವಶ್ಯಕ.

ಯಂತ್ರವಿದ್ಯೆಯನ್ನು ಈ ಏರ್ಪಾಡಿನಲ್ಲಿ ಸೇರಿಸಬೇಕಾ ದುದಕ್ಕೆ ಇನ್ನೂ ಒಂದು ಕಾರಣವುಂಟು. ನಮ್ಮ ದೇಶದವರಿಗೆ ಯಂತ್ರಗಳ ಉಪಯೋಗದಲ್ಲಿ ಉತ್ಸಾಹವಿಲ್ಲ ಅದರ ಕಡೆ ಅವರ ಮನಸ್ಸೂ ಕೂಡ ಅಷ್ಟು ಸುಲಭವಾ[illegible] ಓಡುವುದಿಲ್ಲ. ಈ ಜಡತ್ವನ್ನು ನೀಗಿ ಯಂತ್ರವಿದ್ಯೆಯು ನಮ್ಮವರ ಮನಸ್ಸು ಚುರುಕಾಗಿ ಪ್ರವೇಶ ಮಾಡಬೇಕಾದ[illegible] ಬಾಲ್ಯದಿಂದ ಅವರಿಗೆ ಯಂತ್ರಪರಿಚಯ ಮಾಡಿಕೊ[illegible] ಬೇಕು. ಪಾಶ್ಚಾತ್ಯ ದೇಶದವರು ಕೈಗಾರಿಕೆಯಲ್ಲಿ ಪ[illegible] ಮುಂದುವರಿದಿರುವುದಕ್ಕೆ ಅವರ ಹುಡುಗರಿಗೆ ಬಾಲ್ಯದಿ[illegible] ಯಂತ್ರಗಳೊಡನೆ ಆಡುವುದಕ್ಕೆ ಅವಕಾಶವಿರುವು[illegible] ಮುಖ್ಯ ಕಾರಣ. ನಾವು ನಮ್ಮ ಮಕ್ಕಳಿಗೆ ಯಂತ್ರ[illegible] ಆವರಣವನ್ನು ಕಲ್ಪಿಸದೆ ಹೋದರೆ, ನಮ್ಮ ಮಕ್ಕ[illegible] ನಮ್ಮಂತೆಯೇ ಕೈಗಾರಿಕೆಯಲ್ಲಿ ಹಿಂದೆ ಬೀಳುವರಲ್ಲದೆ ವ್ಯ[illegible] ಸಾಯದಲ್ಲೂ ಹಿಂದೆ ಬೀಳುವರು. ಏಕೆಂದರೆ ಆಧು[illegible] ವ್ಯವಸಾಯವು ಯಂತ್ರಗಳ ಸಹಾಯದಿಂದ ನಡೆಸು[illegible] ಕೈಗಾರಿಕೆಯಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ರೈತರು ಯಂ[illegible] ಬಲದಿಂದ ವ್ಯವಸಾಯ ಮಾಡಿ ತಾವು ಬೆಳೆಯುವ [illegible] ಯನ್ನು ಒಂದಕ್ಕೆ ಎರಡು ಮೂರರಷ್ಟು ಹೆಚ್ಚಿಸಲು [illegible] ರಾಗಿರುತ್ತಾರೆ. ಹೀಗೆ ಅವರ ಯಂತ್ರಬಲ ಹೆಚ್ಚು[illegible] ಹೆಚ್ಚುತ್ತ ತಮಗೆ ಬೇಕಾದುದಕ್ಕಿಂತ ಹೆಚ್ಚಾಗಿ [illegible] ಕೈಗಾರಿಕೆಯ ಪದಾರ್ಥಗಳನ್ನು ನಮ್ಮ ಮೇಲೆ ಧುಮುಕಿ[illegible] ತ್ತಿರುವಂತೆಯೇ ದವಸಧಾನ್ಯಗಳನ್ನೂ ಹಣ್ಣು ಕಾ[illegible] ಗಳನ್ನೂ ನಮ್ಮ ಮೇಲೆ ಧುಮುಕಿಸುವ ಸಂಭವವುಂ[illegible] ಕಬ್ಬಿನ ಬೆಳೆಯಲ್ಲಿ ಜಾವಾದವರಿಗಿಂತ ನಾವು ಹಿಂದೆ ಬಿದ್ದು[illegible] ಅವರೊಡನೆ ಸಮತೂಗಲಾರದೆ ಸಕ್ಕರೆಯ ಕೈಗಾರಿ[illegible] ಸಂರಕ್ಷಣೆ ಬೇಕೆಂದು ಅಂಗಲಾಚುತ್ತಿದ್ದೇವೆ. ಆದುದ[illegible] ಈಗಲೇ ನಾವು ಎಚ್ಚತ್ತು ವೈಜ್ಞಾನಿಕ ಉಪಕರಣಗಳ[illegible] ವ್ಯವಸಾಯಕ್ಕಾಗಿ ಹೆಚ್ಚು ಹೆಚ್ಚಾಗಿ ಉಪಯೋ[illegible] ಕೊಳ್ಳದೇ ಹೋದರೆ ಇನ್ನು ಹತ್ತಿಪ್ಪತ್ತು ವರ್ಷಗ[illegible] ರಷ್ಯಾದವರು, ಅಮೇರಿಕಾದವರು, ಆಸ್ಟ್ರೇಲಿಯಾದವರು [illegible] ಗಳನ್ನು ಯಥೇಚ್ಛವಾಗಿ ಬೆಳೆದು ನಾವು ಮಾರ[illegible] ಬೆಲೆಯಲ್ಲಿ ಅರ್ಧಕ್ಕೆ ಮಾರಿ ನಮ್ಮ ವ್ಯವಸಾಯ[illegible] ಯನ್ನು ಹಾಳು ಮಾಡಬಹುದು. ಯಂತ್ರಗಳ ಉಪ[illegible]

...ವ ಕೈಗಾರಿಕೆ ವ್ಯವಸಾಯಗಳನ್ನು ನಡೆಸುವ ವಿಚಾರ ...ಲ್ಲಿ ಮಹಾತ್ಮ ಗಾಂಧಿಯವರು ಪ್ರಚಾರ ಮಾಡುತ್ತಿರುವ ತತ್ವಗಳು ಭಾರತದ ಆರ್ಥಿಕ ಅಭ್ಯುದಯಕ್ಕೆ ಅಡಚಣೆಗಳಾ...ವೆ. ವರ್ಧಾಶಿಕ್ಷಣ ಸಮಿತಿಯವರು ಇವರ ತತ್ವಗಳಿಗೆ ...ಳಾಗಿರುವುದು ಅವರು ಯಂತ್ರವಿದ್ಯೆಯ ಕಡೆ ಗಮನ ಕೊಡದಿರುವುದು ಸಹಜವಾಗಿದೆ. ಸರ್. ಎಂ. ವಿಶ್ವೇಶ್ವರಯ್ಯ, ಡಾ|| ಮೇಘನಾದ ಶಹಾ ಇಂಥವರು ಆ ಸಮಿತಿಯಲ್ಲಿದ್ದಿದ್ದರೆ ಬಹುಶಃ ಸಮಿತಿಯವರ ಮನೋಭಾವದಲ್ಲಿರುವ ಈ ನ್ಯೂನತೆಯನ್ನು ವಿಶದಪಡಿಸುತ್ತಿದ್ದರು.

ಯಂತ್ರೋಪಯೋಗವನ್ನು ನಿಷೇಧಿಸುವವರು, ಅವುಗಳ ಉಪಯೋಗದಿಂದ ಪಾಶ್ಚಾತ್ಯರು ನಿರೀಶ್ವರರಾಗಿರುತ್ತಾರೆ, ಹಿಂಸಾಪ್ರವರ್ತಕರಾಗಿರುತ್ತಾರೆ, ಬಂಡವಾಳಗಾರರ ಬಲೆಗೆ ಸಿಕ್ಕಿಕೊಂಡಿರುತ್ತಾರೆ, ಆದುದರಿಂದ ಇವನ್ನು ತಮ್ಮ ಸಮಾಜದಲ್ಲಿ ರೂಢಿಗೆ ತರಬಾರದು ಎಂದು ವಾದಿಸುವುದುಂಟು. ಈ ವಾದ ಸರಿಯಾಗಿದ್ದ ಪಕ್ಷದಲ್ಲಿ, —ಮತಶ್ರದ್ಧೆಯು ಭಾರತೀಯರನ್ನು ಮೂಢರನ್ನಾಗಿ ಮಾಡಿದೆ, ಆದುದರಿಂದ ಮತಶ್ರದ್ಧೆಯು ಕೆಟ್ಟದು ಎಂದು ಹೇಳುವುದೂ ಸರಿಯೇ ಅಲ್ಲವೆ ? ಯಂತ್ರಗಳ ಉಪಯೋಗಕ್ಕೂ ನಿರೀಶ್ವರವಾದಕ್ಕೂ, ಯಂತ್ರಗಳ ಉಪಯೋಗಕ್ಕೂ ಹಿಂಸಾಪ್ರವೃತ್ತಿಗೂ, ಯಂತ್ರಗಳ ಉಪಯೋಗಕ್ಕೂ ಬಂಡವಾಳಗಾರರು ಹೆಚ್ಚಿಕೊಳ್ಳುವುದಕ್ಕೂ ನಿಜವಾದ ಸಂಬಂಧವಿಲ್ಲ. ಯಂತ್ರಗಳ ಉಪಯೋಗ ಕಡಿಮೆಯಾಗಿರುವ ನಮ್ಮ ದೇಶದಲ್ಲಿ ಬಂಡವಾಳಗಾರರಿಲ್ಲವೆ ? ಯಂತ್ರಗಳನ್ನು ಉಪಯೋಗಿಸಿದರೂ ಬಂಡವಾಳಗಾರರು ಇರಬೇಕಾದುದಿಲ್ಲ ವೆಂಬುವನ್ನು ಇಂದಿನ ರಷ್ಯಾ ಜನಾಂಗವು ನಿದರ್ಶಿಸಿಲ್ಲವೆ ? ಅಹಿಂಸಾವಾದಿಗಳೂ, ದೈವಭಕ್ತರೂ ಆದ ನಾವು ಯಂತ್ರಗಳನ್ನು ಉಪಯೋಗಿಸಿ, ಯಂತ್ರಗಳನ್ನು ಉಪಯೋಗಿಸಿದ ಮಾತ್ರಕ್ಕೇ ಜನರು ಹಿಂಸಾಪ್ರವರ್ತಕರೂ ನೀರಿಶ್ವರವಾದಿಗಳೂ ಆಗಬೇಕಾದ್ದಿಲ್ಲವೆಂಬುದನ್ನು ತೋರಿಸಬಹುದು.

ವರ್ಧಾಶಿಕ್ಷಣ ಏರ್ಪಾಡಿನಲ್ಲಿ ಯಂತ್ರವಿದ್ಯೆಯನ್ನು ಮೂಲ ಕಸಬಾಗಿ ಸೇರಿಸಬೇಕಾಗಿತ್ತು ಎಂದು ನಾವು ಹೇಳುವಾಗ ಅದಕ್ಕೆ ಯಾವ ಪ್ರಮಾಣದಲ್ಲಿ ಪ್ರಾಮುಖ್ಯ ಕೊಡಬೇಕೆಂಬುದನ್ನು ಸೂಚಿಸುವುದು ಆವಶ್ಯಕ; ಏಕೆಂದರೆ ಯಂತ್ರವಿದ್ಯೆಯನ್ನು ಪ್ರತಿಯೊಂದು ಪಾಠಶಾಲೆಯಲ್ಲೂ ಕಲಿಸಬೇಕೆಂದು ಇಲ್ಲಿ ವಾದಮಾಡುತ್ತಿರುವೆವೆಂಬ ಶಂಕೆ ಹುಟ್ಟಬಹುದು. ಯಂತ್ರಮನೋಧರ್ಮವನ್ನು ನಮ್ಮವರಲ್ಲಿ ಹುಟ್ಟಿಸಬೇಕಾದುದು ಆವಶ್ಯಕವಾದರೂ, ನಮ್ಮಲ್ಲಿರಬೇಕಾದುದು ಅದೊಂದು ಮನೋಧರ್ಮ ಮಾತ್ರವೇ ಅಲ್ಲ. ಅಲ್ಲದೆ ಈ ವಿದ್ಯೆಯನ್ನು ಕಲಿಸುವ ಪಾಠಶಾಲೆಗಳ ಖರ್ಚು ವ್ಯವಸಾಯವನ್ನು ಮೂಲವೃತ್ತಿಯಾಗಿ ಇಟ್ಟುಕೊಂಡಿರುವ ಪಾಠಶಾಲೆಯ ಖರ್ಚಿಗಿಂತಲೂ ಎರಡು ಮೂರರಷ್ಟಾದರೂ ಆಗುವುದರಿಂದ ಯಂತ್ರವಿದ್ಯೆ ಕಲಿಸುವ ಪಾಠಶಾಲೆಗಳನ್ನು ಹೆಚ್ಚಾಗಿ ಸ್ಥಾಪಿಸಲೂ ಆಗುವುದಿಲ್ಲ, ಅಷ್ಟು ಪಾಠಶಾಲೆಗಳ ಆವಶ್ಯಕತೆಯೂ ಇರುವುದಿಲ್ಲ. ಒಂದು ಪ್ರದೇಶದಲ್ಲಿ ವ್ಯವಸಾಯವನ್ನು ಮೂಲವೃತ್ತಿಯಾಗಿ ಇಟ್ಟುಕೊಂಡಿರುವ ಪಾಠಶಾಲೆಗಳು ಹತ್ತಿದ್ದರೆ, ನೂಲುವ ನೇಯ್ಗೆಯ ಕಸಬನ್ನು ಮೂಲ ಕಸಬಾಗಿ ಇಟ್ಟುಕೊಂಡಿರುವ ಪಾಠಶಾಲೆಗಳು ಐದಿದ್ದರೆ, ಯಂತ್ರವಿದ್ಯೆಯನ್ನು ಮೂಲ ಕೆಲಸವಾಗಿ ಇಟ್ಟುಕೊಂಡಿರುವ ಪಾಠಶಾಲೆಯು ಒಂದಿದ್ದರೆ ಸಾಕು. ಈ ಪಾಠಶಾಲೆಯಲ್ಲಿ ಮೊದಲನೆಯ ಮೂರು ವರ್ಷಗಳಲ್ಲಿ ರಟ್ಟಿನ ಕೆಲಸ, ಅಥವಾ ವ್ಯವಸಾಯದ ಕೆಲಸ, ಅಥವಾ ನೂಲುವ ಕೆಲಸವನ್ನು ಹೇಳಿಕೊಟ್ಟು ನಾಲ್ಕನೆಯ ವರ್ಷದಿಂದ ಏಳನೆಯ ವರ್ಷದ ವರೆಗೆ ಯಂತ್ರವಿದ್ಯೆಯನ್ನು ಅಭ್ಯಾಸ ಮಾಡಿಸಿದರೂ ಸಾಕು.

೩. ವರ್ಧಾಸಮಿತಿಯ ವರದಿಯು ಪ್ರಕಟವಾದಂದಿನಿಂದಲೂ ಇದರ ವಾಸ್ತವವಾದ ಆಚರಣೆಯ ಬಗ್ಗೆ, ಆಡಳಿತದ ಬಗ್ಗೆ ವಿದ್ಯಾಶಾಸ್ತ್ರಜ್ಞರ ಮನಸ್ಸಿನಲ್ಲಿ ತರಂಗತರಂಗವಾಗಿ ಅನೇಕ ಸಂಶಯಗಳು ತೋರಿಬರುತ್ತಿವೆ. ಅವು ಉಪನ್ಯಾಸಗಳ ಮೂಲಕವೂ, ಲೇಖನಗಳ ಮೂಲಕವೂ ಹೊರಬೀಳುತ್ತಿವೆ. ಅವುಗಳಲ್ಲಿ ಕೆಲವನ್ನು ಸಮಿತಿಯವರು ತಮ್ಮ ವರದಿಯಲ್ಲಿ ಪರಿಹರಿಸಲು ಪ್ರಯತ್ನಪಟ್ಟಿರುತ್ತಾರೆ. ಆದರೂ ಅವರು ಪರಿಹರಿಸದ ಸಂಶಯಗಳು ಇನ್ನೂ ಇದ್ದೇ ಇವೆ.

೧. ನಮ್ಮ ದೇಶಾಭಿಮಾನ, ದಾನಧರ್ಮ ಬುದ್ಧಿ, ವಿದ್ಯಾಭ್ಯಾಸದ ಆಡಳಿತದಲ್ಲಿ ಕಾರ್ಯದಕ್ಷತೆ, ಸರಕಾರದವರ ಪೂರ್ಣ ಸಹಾಯ ಮತ್ತು ಬೆಂಬಲ—ಇವೆಲ್ಲವನ್ನು ಉಪಯೋಗಿಸಿಕೊಂಡರೂ ಈ ಏರ್ಪಾಡನ್ನು ಸಮಿತಿಯವರು ಆಶಿಸುವಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರಲು ಸಾಧ್ಯವೆ ಎಂಬುದು ಒಂದು ದೊಡ್ಡ ಸಂದೇಹ. ಏಕೆಂದರೆ ವರ್ಧಾಶಿಕ್ಷಣ ಏರ್ಪಾಡು ಬರಿಯ ಯೋಚನೆ ಮಾತ್ರವಾಗಿದೆ. * ಅದನ್ನು ಒಂದುಕಡೆಯೂ ಪೂರ್ಣವಾಗಿ ನಡೆಸಿ

---

* ಇದರಂತಹ ಏರ್ಪಾಡುಗಳು ಕಾಕಾ ಕಾಲೇಲ್ಕರ್ ಮುಂತಾದವರ ಪಾಠಶಾಲೆಗಳಲ್ಲಿ ನಡವಳಿಕೆಯಲ್ಲಿವೆ ಎಂದು ಕೆಲವರು ಹೇಳು

(ಮುಂದಿನ ಪುಟ ನೋಡಿರಿ)

ನೋಡಿಲ್ಲ. ನಡವಳಿಕೆಯಲ್ಲಿ ಇದರ ಕಷ್ಟ ಸುಖಗಳೇನು ಎಂಬುದು ವಾಸ್ತವವಾಗಿ ಯಾರಿಗೂ ಗೊತ್ತಿಲ್ಲ.* ಅವನ್ನು ಸಮಿತಿಯವರು ಊಹಿಸುವ ಪ್ರಯತ್ನ ಕೂಡ ಮಾಡಿರುವುದಿಲ್ಲ. ಇದನ್ನು ಕೆಲವು ಕಡೆಗಳಲ್ಲಾದರೂ ನಡೆಸಿದುವನ್ನು ಕಣ್ಣಾರ ನೋಡಿದುದಲ್ಲದೆ ವಿದ್ಯಾಭ್ಯಾಸದ ಆಡಳಿತದ ಜವಾಬ್ದಾರಿಯನ್ನು ಹೊತ್ತಿರುವವರು ಯಾರೂ ಅದನ್ನು ಆಚರಣೆಗೆ ತರಲು ಒಪ್ಪುವುದಿಲ್ಲ; ಒಂದೆರಡು ಪಾಠಶಾಲೆಗಳನ್ನು ನಡೆಸಲು ಸಹಾಯ ಮಾಡಲು ಒಪ್ಪಬಹುದು. ನಾಲ್ಕಾರು ಕಡೆಗಳಲ್ಲಿ ಇವನ್ನು ನಡೆಸಿ ವರದಿ ಮಾಡಿದರೆ ಆಗ ಇದರ ಸಾಧಕ ಬಾಧಕಗಳನ್ನು ತಿಳಿದು ಸಮಯೋಚಿತವಾಗಿ ಸಾಧ್ಯವಾದ ಮಟ್ಟಿಗೆ ಆಚರಣೆಗೆ ತರಲು ಪ್ರಯತ್ನ ಪಡುವರು.

ಒಂದು ಏರ್ಪಾಡನ್ನು ಸೂಚಿಸುವುದೇನೂ ಅಷ್ಟು ಕಷ್ಟವಲ್ಲ; ವಿದ್ಯಾಭ್ಯಾಸದ ವಿಚಾರವಾಗಿ ಸಲಹೆಗಳಿಗೆ ನಮ್ಮಲ್ಲಿ ಏನೂ ಕ್ಷಾಮವಿಲ್ಲ. ನಮ್ಮಲ್ಲಿ ಅಭಾವವಾಗಿರುವುದು ಅಧ್ಯವಸಾಯ, ಅನುಷ್ಠಾನ, ಪ್ರಯೋಗ. ಈಗ ಪ್ರಪಂಚದಲ್ಲಿ ಪ್ರಖ್ಯಾತಿ ಪಡೆದಿರುವ ಮತ್ತು ಆಚರಣೆಗೆ ಬಂದಿರುವ ವಿದ್ಯಾಭ್ಯಾಸ ಕ್ರಮಗಳು ಒಂದೊಂದೂ, ಒಬ್ಬೊಬ್ಬ ಮಹಾವ್ಯಕ್ತಿಯ ಮತ್ತು ಅವನ **ಸಹೃದಯರ** ಜೀವಾವಧಿಯ ಪ್ರಯೋಗದಿಂದ ಹುಟ್ಟಿದುವು. ನಮ್ಮ ದೇಶದಲ್ಲಿ ವಿದ್ಯಾ ಏರ್ಪಾಡುಗಳಿಗೆ ಪ್ರಯೋಗದ ತಳಹದಿ ಅನೇಕ ವೇಳೆ ಇರುವುದಿಲ್ಲ; ಅವು ವಿದ್ಯಾಶಾಸ್ತ್ರ, ಪಾಂಡಿತ್ಯದ ಬೆವರಿನಿಂದ ಹುಟ್ಟುವುವೇ ಹೊರತು ಪ್ರಯೋಗದ ಬೆವರಿನಿಂದ ಹುಟ್ಟುವುದಿಲ್ಲ. ವಿದ್ಯಾಭ್ಯಾಸ ವಿಚಾರದಲ್ಲಿ ಒಂದು ಮಣದ ಆಲೋಚನೆಗಿಂತ ಒಂದು ಗುಲಗಂಜಿ ತೂಕದ ಅಧ್ಯವಸಾಯಕ್ಕೆ ಬೆಲೆ ಹೆಚ್ಚು. ನಮ್ಮ ವಿದ್ಯಾಭ್ಯಾಸ ವ್ಯವಹಾರಗಳಲ್ಲಿ ಒಂದು ಹೊಸ ಕ್ರಮವನ್ನು ಏರ್ಪಡಿಸಿದಾಗ ಅದನ್ನು ಬಹಳ ಅವಸರದಿಂದ ಕಾರ್ಯರೂಪಕ್ಕೆ ತರುವವರು. ನೂಲುವ ನೇಯ್ಗೆಯ ವಿಚಾರವಾಗಿ ಬಹುಶಃ ಈ ಪಾಠಶಾಲೆಗಳು ವಾಸ್ತವವಾಗಿ ಹೇಗೆ ನಡೆಯಬಹುದು ಎಂಬುದನ್ನು ಊಹಿಸುವುದಕ್ಕೆ ಸಾಕಾದಷ್ಟು ಪ್ರತ್ಯಕ್ಷ ಮತ್ತು ಪ್ರಾಯೋಗಿಕ ಪ್ರಮಾಣವಿದೆ. ಆದರೆ ಇತರ ವಿಚಾರಗಳಲ್ಲೂ ಈ ವಿಧವಾದ ಪ್ರಮಾಣವಿದೆಯೆಂಬುದಕ್ಕೆ ಆಧಾರವಿಲ್ಲ. ಹಾಗೆ ಇದ್ದ ಪಕ್ಷದಲ್ಲಿ ಅವುಗಳನ್ನು ಸಂಗ್ರಹವಾಗಿಯಾದರೂ ವಿವರಿಸಬೇಕಾದದ್ದು ಸಮಿತಿಯವರ ಕರ್ತವ್ಯ.

ಪ್ರಯತ್ನ ಮಾಡುತ್ತಾರೆ. ಸರಿಯಾದ ಸಾಧನಗಳನ್ನು ಮತ್ತು ಶಿಕ್ಷಕರನ್ನೂ ಒದಗಿಸಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ವರ್ಧಾಸಮಿತಿಯವರು ಈಗ ಉಪಾಧ್ಯಾಯರ ಶಿಕ್ಷಣಶಾಲೆಯೊಂದನ್ನು ಏರ್ಪಡಿಸುವುದಕ್ಕೆ ಹೇಳಿದ್ದಾರೆ. ಇದರಲ್ಲಿ ಶಿಕ್ಷಣಪಡೆಯುವವರನ್ನು ಸರಿಯಾಗಿ ಚುನಾಯಿಸಬೇಕು. ಬರಿಯ ನೂಲುವ ವಿದ್ಯೆ ಬಲ್ಲ ಮಾತ್ರಕ್ಕೆ ಅವನು ಉಪಾಧ್ಯಾಯನಾಗುವುದಕ್ಕೆ ಯೋಗ್ಯನೆಂದು ಹೇಳುವುದಕ್ಕಾಗುವುದಿಲ್ಲ. ನೂಲುವುದಕ್ಕೆ ಬರುತ್ತದೆ, ಹಿಂದಿ ಬರುತ್ತದೆ, ಉತ್ಸಾಹವಿದೆ ಎಂದು ಆಳ್ಳುಗಳನ್ನು ಇಳ್ಳೊಬ್ಬನನ್ನು ಚುನಾಯಿಸಿ ಆರು ತಿಂಗಳ ಕಾಲ ಅಪಕ್ವವಾದ ಶಿಕ್ಷಣಕೊಟ್ಟು, ದೇಶದ ಮೂಲೆಮೂಲೆಗೆ ಅವರನ್ನು ಕಳುಹಿಸಿಕೊಡುವ ಪ್ರಯತ್ನ ಮಾಡುತ್ತಿರುವುದು ಸರಿಯಲ್ಲ. ಮೊದಲು ಸಮಿತಿಯವರು ಅಥವಾ ಅವರ ನೇಮಕವಾದವರು ನಾಲ್ಕಾರು ವಿಧವಾದ ಪಾಠಶಾಲೆಗಳನ್ನು ಏಳು ವರ್ಷಗಳ ಕಾಲ ನಡೆಯಿಸಿ, ಅವುಗಳನ್ನು ಆದರ್ಶ ಪಾಠಶಾಲೆಗಳನ್ನಾಗಿ ಮಾಡಿ ಅನಂತರ ಅವಕ್ಕೆ ಸೇರಿದಂತೆ ಇಂದು ಶಿಕ್ಷಕರ ಪಾಠಶಾಲೆಯೊಂದನ್ನು ಸ್ಥಾಪಿಸಬೇಕು. ಇಷ್ಟೆಲ್ಲಾ ಮಾಡಬೇಕಾದರೆ ನಿಧಾನವಾಗುತ್ತದೆ ಎಂಬ ಸಮಾಧಾನ ಹೇಳುವುದು ಸರಿಯಲ್ಲ. ನಿಧಾನವಾಗದೆ ಇಷ್ಟು ಕೆಲಸ ಸರಿಹೋಗುವುದೇ ಇಲ್ಲ; ಬರಿಯ ಚುಟಿಕೆಯ ಮಂತ್ರದಿಂದ ಒಂದು ದೇಶದ ವಿದ್ಯಾಭ್ಯಾಸವನ್ನು ಜಡತ್ವದಿಂದ ಜಾಗ್ರದವಸ್ಥೆಗೆ ತರಲು ಸಾಧ್ಯವಿಲ್ಲ.

ತರ್ಕ, ಪ್ರಯೋಗ, ಈ ಪ್ರಮಾಣಗಳ ಆವಶ್ಯಕತೆಯನ್ನು ಎಣಿಸದೆ ಕೇವಲ ಭಕ್ತಿಭಾವದಿಂದ ಪ್ರಾಂತಿಕ ಸರ್ಕಾರದವರು ವರ್ಧಾಶಿಕ್ಷಣ ಏರ್ಪಾಡನ್ನು ಆಚರಣೆಗೆ ತರಲು ಒಂದು ಪಕ್ಷ ಒಪ್ಪುವರೆಂದಿಟ್ಟುಕೊಳ್ಳೋಣ. ಆಗ ಈಗಿರುವ ಪಾಠಶಾಲೆಗಳನ್ನು ಏನು ಮಾಡಬೇಕು? ಇವುಗಳಲ್ಲಿರುವ ಉಪಾಧ್ಯಾಯರನ್ನು ಅಟ್ಟಿಬಿಟ್ಟು ಹೊಸ ಉಪಾಧ್ಯಾಯರನ್ನು ನೇಮಕಮಾಡುವುದೆ? ಅಥವಾ ಈಗಿರುವ ಉಪಾಧ್ಯಾಯರನ್ನೇ ಪಳಗಿಸಿಕೊಳ್ಳುವುದೆ? ಹಾಗೆ ಅವರನ್ನು ಪಳಗಿಸಿಕೊಳ್ಳಲು ಸಾಧ್ಯವೇ? ಇಪ್ಪತ್ತು ರೂಪಾಯಿಗಳ ವೇತನಕ್ಕೆ ವರ್ಧಾ ಪಾಠಶಾಲೆಗಳನ್ನು ನಿರ್ವಹಿಸುವಷ್ಟು ಸಮರ್ಥರಾದ ಉಪಾಧ್ಯಾಯರು ಸಿಕ್ಕುವರೆ? ಉಜ್ವಲ ದೇಶಾಭಿಮಾನಿಗಳೂ ತ್ಯಾಗಿಗಳೂ ವಿದ್ಯಾಭ್ಯಾಸದಲ್ಲಿ ಉತ್ಸಾಹ ನಿಪುಣತೆಗಳನ್ನುಳ್ಳವರೂ ಹಲಕೆಲವರು ಸಿಕ್ಕಬಹುದು; ಆದರೆ ನಮಗೆ ಬೇಕಾಗಿರುವುದು ಇಂಥವರ ಒಂದು ದೊಡ್ಡ ಸೈನ್ಯ. ಭಾರತೀಯರ ಮಾನುಷತ್ವವನ್ನು ಪರಿವರ್ತಿಸಿವಲ್ಲದೆ ಇದು ಸಾಧ್ಯವಿಲ್ಲ.

*ಸಮಿತಿಯ ಸದಸ್ಯರಲ್ಲಿ ಒಬ್ಬೊಬ್ಬರು ತಮ್ಮದೇ ಪಾಠಶಾಲೆಗಳನ್ನು ನಡೆಸುತ್ತಿರುವರೆಂದು ತಿಳಿದುಬಂದಿದೆ. ಅವಕ್ಕೂ ವರ್ಧಾ ವಿದ್ಯಾಕ್ರಮಕ್ಕೂ ಸಂಬಂಧವಿರುವುದಾದರೆ ಅದನ್ನು ಸಮಿತಿಯವರು ವಿಶದಪಡಿಸಬಹುದಾಗಿತ್ತು.

ಪ್ರವೆ? ವರ್ಧಾ ಶಿಕ್ಷಣವನ್ನು ಪ್ರತಿಯೊಬ್ಬ ಹುಡುಗಿಗೂ ಹುಡುಗನಿಗೂ ಬಲಾತ್ಕಾರದಿಂದ ಕೊಡಲು ಸಾಧ್ಯವೆ? ಅವಕ್ಕೆ ಬೇಕಾಗುವಷ್ಟು ಹಣ ಒದಗುತ್ತದೆಯೆ? ಬಲಾತ್ಕಾರದ ನಿಬಂಧನೆಗಳನ್ನು ಎಷ್ಟು ಮಟ್ಟಿಗೆ ಜಾರಿಗೆ ತರಬಹುದು? ಬಲಾತ್ಕಾರ ವಿದ್ಯಾಮಸೂದೆಯನ್ನು ಕಾರ್ಯರೂಪಕ್ಕೆ ತರಲು ಪ್ರತಿಜ್ಞೆ ಮಾಡಿದ ಸರ್ಕಾರಗಳು ಎಷ್ಟು ಮಟ್ಟಿಗೆ ಜಯಪ್ರದವಾಗಿವೆ? ಮೈಸೂರು ಸರ್ಕಾರದವರು ಹತ್ತು ವರ್ಷಗಳ ಕಾಲದಿಂದ ಇದನ್ನು ಸಾಧಿಸಲು ಸಾಹಸಪಡುತ್ತಿದ್ದರೂ ಅವರ ಪ್ರತಿಜ್ಞೆಯು ಏತಕ್ಕೆ ಸಾಗಿಲ್ಲ? ಇದರ ವಿಚಾರವಾಗಿ ಹಾರ್ಟಾಗ್ ಸಮಿತಿಯ ಅಭಿಪ್ರಾಯಗಳನ್ನು ಸ್ವಲ್ಪ ಮಟ್ಟಿಗಾದರೂ ವರ್ಧಾ ಸಮಿತಿಯವರು ವಿಮರ್ಶಿಸಬಹುದಾಗಿತ್ತಲ್ಲವೆ? ಇವೇ ಮುಂತಾದ ಪ್ರಶ್ನೆಗಳು ನಮ್ಮನ್ನು ಬಾಧಿಸುತ್ತಿರುವುವು. ಇವುಗಳನ್ನು ಸ್ವಲ್ಪ ಮಟ್ಟಿಗಾದರೂ ಸಮಿತಿಯವರು ಪರಿಶೀಲಿಸಬಹುದಾಗಿತ್ತು, ಪರಿಹಾರ ಮಾಡುವ ಪ್ರಯತ್ನ ಮಾಡಬಹುದಾಗಿತ್ತು. ಇವುಗಳನ್ನೆಲ್ಲಾ ಸಾವಧಾನದಿಂದ ವಿಚಾರ ಮಾಡಿದ ಹೊರತು ವರ್ಧಾ ಸಮಿತಿಯವರ ಕೆಲಸ ಮುಗಿಯಿತೆಂದು ಹೇಳುವ ಹಾಗಿಲ್ಲ. ಇವರು ಇನ್ನು ಹತ್ತು ವರ್ಷಗಳು ತಮ್ಮ ಶಿಕ್ಷಣ ಕ್ರಮದ ಪ್ರಯೋಗದ ಕೆಲಸದಲ್ಲಿ, ಅದನ್ನು ಆದರ್ಶ ರೂಪಕ್ಕೆ ತರುವ ಸಂವಿಧಾನದ ಕೆಲಸದಲ್ಲಿ ನಿರತ ಮೇಲೆ ಇನ್ನೊಂದು ಇನ್ನೂ ವಿಶಾಲವಾದ ವರದಿಯನ್ನು ಬರೆಯಬೇಕಾಗುವುದು.*

* ಲೇಖಕರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ತತ್ವಶಾಸ್ತ್ರ ಶಾಖೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಬಹು ಕಾಲ ಮೈಸೂರು ಎಜುಕೇಶನ್ ಅಸೋಸಿಯೇಶನ್ನಿನ ಕಾರ್ಯದರ್ಶಿಗಳಾಗಿದ್ದರು; ಹಾಗೂ 'ವಿದ್ಯಾದಾಯಿನಿ'ಯ ಸಹಾಯಸಂಪಾದಕರಾಗಿದ್ದರು. 'ಪ್ರಬುದ್ಧ ಕರ್ಣಾಟಕ'ದಲ್ಲಿಯೂ ಬೇರೆಕಡೆಗೂ ಬೆಲೆಬಾಳುವ ಬರೆಹಗಳನ್ನು ಪ್ರಸಿದ್ಧಿಸಿದ್ದಾರೆ.

ಬಡ ಹುಡುಗಿ

[ಕವನದಲ್ಲಿ ಚಿತ್ರಿಸಿರುವ ಘಟನೆಯು ನಡೆದದ್ದು, ಇದೇ ಊರಿನಲ್ಲಿ. ಎಳೆಯ ಹೆಣ್ಣುಮಗಳೊಬ್ಬಳು ಬಂದು ಕಾಸು ಕೇಳುವುದು ಹೆಚ್ಚಲ್ಲ! ಅದರಲ್ಲೂ ಅವಳೊಬ್ಬಳು ತಬ್ಬಲಿಯಾಗಿರುವಾಗ ವಿಧಿಯಿಲ್ಲ! ನನ್ನ ದೃಷ್ಟಿಯಲ್ಲಾದರೋ ಆಕೆ ಅಂದು ಕೇಳಿದುದು ಹಿರಿಮೆಯುಳ್ಳ. ಏಕೆಂದರೆ, ಆ ಸಣ್ಣ ಮಗು, ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳಲು ಕಾಸು ಕೇಳದೆ, ಕೇವಲ ವಿದ್ಯಾರ್ಜನೆಗಾಗಿ, ಪುಸ್ತಕವನ್ನು ಕೊಂಡುಕೊಳ್ಳುವುದಕ್ಕಾಗಿ ಕೇಳಿದುದು, ಒಂದು ಆಶ್ಚರ್ಯವೇ ಸರಿ. ಸಾಮಾನ್ಯವಾಗಿ ಇಂತಹ ಪ್ರಸಂಗಗಳು ಒದಗುವುದು ವಿರಳವೆಂದು ನನ್ನ ಅಭಿಪ್ರಾಯ.]

"ಬಡ ಹುಡುಗಿ, ಗತಿಯಿಲ್ಲ, ತಂದೆತಾಯಿಯರಿಲ್ಲ
ನಾನೊಬ್ಬಳೇ, ಸಲಹುವರ ಓದುತಿಹೆನು,
ಪುಸ್ತಕವ ಕೊಂಡುಕೊಳಲೆನಗೊಂದು ಕಾಸಿಲ್ಲ
ದಯೆ ತೋರಿ, ಕಾಪಾಡಿ, ಕೇಳಿಕೊಳ್ಳುವೆನು"
ಎಂದು, ನಡುದಾರಿಯಲಿ ಹುಡುಗಿಯೊಬ್ಬಳು ಬಂದು
ಕೈನೀಡಿ, ನನ್ನೆದುರಿನಲಿ ನಿಂತಳವಳು.
ಮಾತುಗಳೆ ಬರವು; ತಾ, ತಲೆ ತಗ್ಗಿಸುತ ನಿಂದು
ದೈನ್ಯದಲಿ ಕಳೆಗುಂದಿ ಕೇಳಿದಳು ಅವಳು.

ಬಡತನದ ಬಿರುಗಾಳಿ ಬೀಸಿ ಬರುತಿರಲಂದು
ನಡುಗಿ, ತತ್ತರಿಸುತಿತ್ತವಳೆದೆಯ ಅರಳು.
ಚಿಂತೆ ಚಿತೆಯಲಿ ಕುದಿದು, ಬಸವಳಿದು, ಬಲುಬೆಂದು
ಜೀವವೇ ನೊಂದಿರಲು ಹರಡಿತ್ತು ಕುರುಳು.
ಮೊಗದೊಳಗೆ ಎಳೆತನದ ಹೊಳಪು ಅಳಿಸಿರಲಿಲ್ಲ,
ಇನ್ನು ಬಿರಿದಿರಲಿಲ್ಲ ಆಶೆಗಳ ನನೆಯು.
ದುಃಖದಲಿ ಕಂಬನಿಗಳುದುರಿ ಕೆನ್ನೆಗಳೆಲ್ಲ
ತೊಯ್ದಿತ್ತು, ಕಂಡುಬಂದುದು ನಿಂತಕರೆಯು

* * * *

"ವಿದ್ಯಾಧಿದೇವತೆಯೆ! ಸರಸತಿಯೆ! ತಾಯಿ!
ಬಡತನದ ಸೆರೆಯಿಂದ ತಬ್ಬಲಿಯ ಕಾಯಿ.
ನಿನ್ನ ನಂಬಿಹಳವಳು" ಎಂದು ನಾ ಬೇಡಿ
ಮನ ಮರುಗಿ, ತೆರಳಿದೆನು ಪುಡಿಕಾಸ ನೀಡಿ.

—ಬಿ. ವರದರಾಜರಾವ್, ಬೆಂಗಳೂರು

ವರ್ಧಾ ಶಿಕ್ಷಣ ಯೋಜನೆ

(ಆಕ್ಷೇಪಗಳಿಗೆ ಉತ್ತರಗಳು)

ಪ್ರಚಲಿತವಿರುವ ಶಿಕ್ಷಣ ಪದ್ಧತಿಯು ಶತಮಾನ ಮೀರಿದ್ದರೂ ದೇಶದಲ್ಲಿ ಸಾಕಷ್ಟು ಸಾಕ್ಷರತೆಯು ಸಾಧ್ಯವಾಗದಿರುವದೂ, ಪಡೆದ ಶಿಕ್ಷಣವು ಜೀವನಕ್ಕೆ ಪ್ರತ್ಯಕ್ಷ ಪ್ರಯೋಜನಕಾರಿಯಾಗದಿರುವದೂ ಇಂದಿನ ಶಿಕ್ಷಣ ಕ್ರಮದ ಮಹಾದೋಷಗಳಾಗಿವೆ. ಎಂತಲೇ ಶಿಕ್ಷಣತಜ್ಞರು ಅದು ಮಾರ್ಪಡಬೇಕೆಂದು ಬಯಸುತ್ತಾರೆ. ಸರಕಾರವೂ ತನ್ನ ಸಾವಕಾಶವಾದ ರೀತಿಯಲ್ಲಿ ಈಬಗ್ಗೆ ಕಮಿಟಿಗಳನ್ನು ನೇಮಿಸಿ ಪರಿಶೋಧನೆ ಮಾಡಲು ಯತ್ನಿಸಿದೆ. ಅನೇಕರು ಅನೇಕ ಮಾರ್ಪಾಡುಗಳನ್ನು ಸೂಚಿಸಿದ್ದಾರೆ. ಇತ್ತೀಚೆ ದೇಶೀಯ ಆಂದೋಲನವು ಸುರುವಾದಂದಿನಿಂದ ಇಂದಿನ ಶಾಲೆಗಳು ರಾಷ್ಟ್ರೀಯತ್ವಕ್ಕೆ ಪೋಷಕವಿಲ್ಲವೆಂದು ದೇಶದಲ್ಲಿ ಅಲ್ಲಲ್ಲಿ ರಾಷ್ಟ್ರೀಯ ಶಾಲೆಗಳು ತೆರೆಯಲ್ಪಟ್ಟವು. ಸಾಕಷ್ಟು ಸಹಾಯ ದೊರೆಯದೆ ಅವುಗಳಿಂದಾಗಬೇಕಾದ ಪ್ರಯೋಜನವು ಹೇಳಿಕೊಳ್ಳುವಂತಾಗಲಿಲ್ಲ. ಇಚ್ಛಿತವಾದ ಮಾರ್ಪಾಡು ಬರಲು ಅಪಾರವಾದ ಪ್ರಮಾಣದಲ್ಲಿ ಪ್ರಯತ್ನ ಬೇಕಾಗುವದೆಂದು ಮನಗಂಡು ಮಹಾತ್ಮಾ ಗಾಂಧಿಯವರು ಶಿಕ್ಷಣಯೋಜನೆಯೊಂದನ್ನು ಜನರೆದುರಿನಲ್ಲಿ ಇರಿಸಿದರು. ಇದೇ ವರ್ಧಾ ಯೋಜನೆಯು. ಇದನ್ನು ಪರಿಶೀಲಿಸಿ ಸರಿಯಾಗಿ ಜನರೆದುರಿಡಲು ಝಕೀರ ಹುಸೇನರ ಅಧ್ಯಕ್ಷತೆಯಲ್ಲಿ ಶಿಕ್ಷಣತಜ್ಞರ ಸಮಿತಿಯನ್ನು ನೇಮಿಸಿದರು. ಒಂದು ವರ್ಷದ ಹಿಂದೆ ಝಕೀರ ಹುಸೇನ್ ವರದಿಯು ಹೊರಬಿದ್ದಂದಿನಿಂದ ಅದರ ವಿಷಯ-ವಿವರಗಳ ಬಗ್ಗೆ ಅನೇಕ ಟೀಕೆ-ಟಿಪ್ಪಣೆಗಳಾಗಿವೆ. ಸೂಕ್ತವಾದ ಸಲಹೆ-ಸೂಚನೆಗಳನ್ನು ಅದರೊಳಗೆ ಸಮಾವೇಶಗೊಳಿಸಿಕೊಂಡರೂ,ಅದರ ಮೇಲೆ ಹಲವಾರು ಆಕ್ಷೇಪಣೆಗಳು ಇನ್ನೂ ನಡೆಯುತ್ತಲಿವೆ. ಅಂತಹವುಗಳಿಗೆ ಉತ್ತ[ರ] ಕೊಡುವದೇ ಈ ಲೇಖನದ ಉದ್ದೇಶವು.

ವಿಚಾರವಂತರ ತಲೆಯಲ್ಲಿ ಸುಳಿಯುವ ಶಂಕೆಗಳಿಗೆ ಸಮಾಧಾನ ಹೇಳಲು ಮಾಡಿದ ಸುಂದರ ಪ್ರಯತ್ನವಿದು. ವರ್ಧಾಕ್ರಮವು ಬೌದ್ಧಿಕ ಪ್ರಗತಿಗೆ ವಿಘಾತಕ, ಶಾರೀರಿಕಶ್ರಮ-ದ್ರವ್ಯಾರ್ಜನೆಗಳಿಗೆ ಪ್ರಾಶಸ್ತ್ಯಕೊಡುವುದು, ವಿದ್ಯಾರ್ಥಿಯ ದೃಷ್ಟಿಕೋನವನ್ನು ಸಂಕುಚಿತಗೊಳಿಸುವುದು, ಪ್ರಪಂಚಪರಿಜ್ಞಾನದಿಂದಲೂ ಇಂದಿನ ಯುಗಧರ್ಮವಾದ ಯಾಂತ್ರಿಕನಾಗರಿಕತೆಯಿಂದಲೂ ನಿವೃತ್ತಗೊಳಿಸುವುದು—ಎಂಬಿವೇ ಮೊದಲಾದ ಸಾಧಾರ ಸಂದೇಹಗಳಿಗೆ .... ಜಾಣ್ಮೆಯ ಉತ್ತರಗಳು ಇಲ್ಲಿವೆ. ....

ವರ್ಧಾಯೋಜನೆಯ ಮೇಲಿನ ದೊಡ್ಡ ಆಕ್ಷೇಪ[ಣೆ]ಯೆಂದರೆ, ಬುದ್ಧಿಪ್ರಚೋದನೆಗಿಂತ ಶಾರೀರಿಕ ಕೆಲಸಗ[ಳಿಗೆ] ಅದು ಹೆಚ್ಚು ಲಕ್ಷ್ಯಗೊ[ಡು]ತ್ತದೆ ಎಂಬುದು. ಕೈಕೆಲಸ[ವಿಲ್ಲದ ಗೋಜು]ಗೆಡೆಯಿಲ್ಲದ ಶಾಲೆಗಳಲ್ಲಿ ಬೆ[ಳೆ]ದುಬಂದಿರುವ ನಮಗೆ ಹೀ[ಗೆ] ಕಾಣುವದು ಸಹಜ. ಆ[ದರೆ] ಕೂಲಂಕಷವಾಗಿ ನಿರೀಕ್ಷ[ಣೆ] ಮಾಡಿದಲ್ಲಿ ನಮ್ಮ ಈ ತಿಳ[ುವಳಿ]ಕೆಯು ಸರಿಯಾಗಿಲ್ಲವೆಂ[ಬುದು] ಕಂಡುಬಾರದಿರದು. ಇಂ[ದಿನ] ಶಿಕ್ಷಣವು ಹೊತ್ತಿಗೆಯ ಹೇ[ರಿಕೆ]ಯಾಗಿದ್ದು, ಹೊಟ್ಟೆಯ ಹೋ[]ರಾಟಕ್ಕೆ ನಮ್ಮನ್ನು ನಿಟ[]ನ್ನಾಗಿ ಮಾಡಿದೆ ಎಂಬುದ[ನ್ನು] ಎಲ್ಲರೂ ಒಪ್ಪುವರು. ಸಣ್ಣಂದಿನಿಂದಲೇ ದೈಹಿಕಮಾನಸಿ[ಕ] ಮನಸ್ಸೊಡಂಬಡುವದಕ್ಕೆ ಶಾಲೆಗಳಲ್ಲಿ ಕೈಕೆಲಸಕ್ಕೆ [] ಮಾಡುವದು ಅವಶ್ಯವಾಗಿದೆ. ಇದಕ್ಕಾಗಿಯೇ ಮೀಸಲಾ[ದ] ಬೇರೆ ಶಾಲೆಗಳನ್ನು ತೆರೆಯಿರೆನ್ನಬಹುದು. ಆದರೆ ಇದು ಅ[]ವಹಾರ್ಯವು. ಯಾಕಂದರೆ ಎಳೆಯ ಮಕ್ಕಳ ಬೆಳವಣಿಗೆಯು ಇಡಿಯಾಗಿ ಆಗಬೇಕಾಗಿದೆ; ಮತ್ತು ಬೌದ್ಧಿಕ ಶಿಕ್ಷಣ[ಕ್ಕೆ] ಇಲ್ಲಿ ಬೆಲೆ ಕೊಟ್ಟಲ್ಲವೆಂಬುದು ತಪ್ಪು ತಿಳುವಳಿಕೆಯಾ[ಗಿದೆ]. ಇಂದಿನ ಅಭ್ಯಾಸವಿಷಯಗಳನ್ನೂ ಈ ಯೋಜನೆಯಲ್ಲಿನ ಅಭ್ಯಾಸವಿಷಯಗಳನ್ನೂ ಹೋಲಿಸಿ ನೋಡಿದರೆ, ಬೌದ್ಧಿ[ಕ] ಅಭ್ಯಾಸಕ್ರಮದಲ್ಲಿ ಯಾವುದನ್ನೂ ಕಡಿಮೆಗೊಳಿಸದೆ ಕೆಲ[] ಹೆಚ್ಚಿನ ವಿಷಯಗಳನ್ನು ಸೇರಿಸಿದೆಯೆಂಬುದು ಗೊತ್ತಾಗ[ದಿ]ರದು. ಗಣಿತ, ಭೂಗೋಲ ಮುಂತಾದ ವಿಷಯಗಳನ್ನು [] ಸದ ಮೂಲಕ ಕಲಿಸಿ ಮಕ್ಕಳ ಮನಸ್ಸನ್ನು ವಿಕಾಸಗೊಳಿ[ಸು]ವದೇ ಅದರ ಮುಖ್ಯ ಉದ್ದೇಶವಾಗಿದೆ. 'ವಿಷ[]

ಲೇಖಕರು:—ಶ್ರೀಮಾನ್ ರಾ. ಶ್ರೀ. ಹುಕ್ಕೇರಿಕರ ಎಂ. ಎ. ಧಾರವಾಡ

ತಾಳು ರಗಳೆಗಳು' ಎಂದೆನಿಸದಂತೆ ಮಾಡಲು ಇದು ಅವಶ್ಯವಿದೆ. ಪ್ರಪಂಚದಲ್ಲಿ ಸರಿಯಾಗಿ ಸಾಗಿ ನಡೆಯಲು ಬೇಕಾಗುವ ಯೋಗ್ಯತೆಯ ಒಂದು ಮಟ್ಟಕ್ಕೆ ಮಕ್ಕಳು ಬಂದ ಮೇಲೆ ತಮ್ಮ ಒಲವಿರುವತ್ತ ಸಾಗಬಹುದು. ವರ್ಧಾ ಯೋಜನೆಯು ಇದನ್ನೇನು ತಡೆದಿಲ್ಲ. ಮಕ್ಕಳನ್ನು ಬುದ್ಧಿ ಬಲವಿಲ್ಲದ ಕಲ್ಲುಬಂಡೆಗಳನ್ನಾಗಿ ಮಾಡಲು ಬಯಸುವ ದಿಲ್ಲ. ಸಮನಾದ ಬೆಳವಣಿಗೆಯಾಗಿ ಮಕ್ಕಳ ಸರ್ವಾಂಗೀನ ಉನ್ನತಿಯಾಗಬೇಕೆಂಬುದೇ ಅದರ ಉದ್ದೇಶ.

ವರ್ಧಾಯೋಜನೆಯ ಶಾಲೆಗಳಲ್ಲಿ ಕೈಕೆಲಸಕ್ಕೆ ಬಹು ಕಾಲ ಕೊಡಲ್ಪಟ್ಟಿರುವದೆಂಬ ಆಪಾದನೆಯನ್ನು ಸ್ವಲ್ಪ ವಿಚಾರಿಸುವಾ. ಮುಂಜಾನೆ ಮತ್ತು ಸಂಜೆ ಕೂಡಿ, ಅಥವಾ ಪಟ್ಟಣಗಳಲ್ಲಿ ಕೆಲನೆಡೆ ೧೧ ಗಂಟೆಯಿಂದ ನಡುವೆ ಒಂದು ತಾಸಿನ ಸೂಟಿ ಹಿಡಿದು ೫ ಗಂಟೆಯ ವರೆಗೆ, ಇಂದಿನ ಶಾಲೆ ಗಳಲ್ಲಿ ಮಕ್ಕಳು ಐದು ತಾಸು ಕಳೆಯುತ್ತಾರೆ. ವರ್ಧಾ ಯೋಜನೆಯ ಶಾಲೆಗಳಲ್ಲಿ, ಕೆಲಸಕ್ಕೆ ಸುಮಾರು ೩ ತಾಸು, ಉಳಿದ ವಿಷಯಗಳಿಗೆ ೨ ತಾಸು, ಹೀಗಿರುವದರಿಂದ ಬುದ್ಧಿಯ ವಿಷಯಗಳಿಗೆ ಸಾಕಷ್ಟು ಗಮನ ಕೊಟ್ಟಿಲ್ಲವೆಂದು ಅನ್ನುವರು. ಮತ್ತು ಒಂದೇ ಸಮನೆ ಕೆಲಸಮಾಡು ವದರಿಂದ ಮಕ್ಕಳ ಮನಸ್ಸು ಬೇಜಾರಾಗುವದು ಎನ್ನು ವರು. ಐದು ಗಂಟೆಗಳ ಕಾಲ ಬೌದ್ಧಿಕ ಶ್ರಮದಿಂದ ಬೇಜಾರಾಗದ ಮನಸ್ಸು ಸುಮಾರು ೩ ತಾಸಿನ ಹವಣಾದ ದುಡಿಮೆಯಿಂದ ಹೇಗೆ ಬೇಜಾರಗೊಳ್ಳುವದೋ ತಿಳಿಯ ದಾಗಿದೆ. ಮತ್ತು ಮಕ್ಕಳ ಶಕ್ತಿಗುಂದಿಸುವಂತಹ ಕಠಿಣ ತರವಾದ ದುಡಿಮೆಯನ್ನು ಹಚ್ಚಬೇಕೆಂದಿಲ್ಲ. ಮಕ್ಕಳು ಸಹಜವಾಗಿ ಮಾಡಬಲ್ಲ ಮತ್ತು ಅವರ ಕುತೂಹಲ ವನ್ನು ಬಯಲಿಗೆಳೆಯುವ ಸಂಣ ಕೆಲಸಗಳನ್ನೇ ಕೊಡ ಬೇಕೆಂದಿರುವದು. ಅಲ್ಲದೆ ಒಂದೇ ಸಮನಾಗಿ ಕೆಲಸ ಮಾಡಬೇಕೆಂದೂ ಇಲ್ಲ. ಕೆಲಹೊತ್ತು ಕೆಲಸ, ಕೆಲ ಹೊತ್ತು ಬೌದ್ಧಿಕ ಪರಿಶ್ರಮ, ಹೀಗೆ ಯೋಜಿಸಿದೆ. ಕೇವಲ ಬೌದ್ಧಿಕ ಪರಿಶ್ರಮದಲ್ಲಿ ತೊಡಗುವದಕ್ಕೆ ಮಕ್ಕಳ ಮನಸ್ಸೊಡಂಬಡುವದಿಲ್ಲವೆಂಬುದನ್ನು ಶಿಕ್ಷಣದಲ್ಲಿ ಪರಿಶ್ರಮ ವುಳ್ಳವರು ಬಲ್ಲರು. ಕೆಲಸ ಮಾಡುತ್ತ ಕಲಿಯಲೊಪ್ಪುವ ದನ್ನು ಮಕ್ಕಳ ಮನವನ್ನರಿತವರು ಕಂಡಿರುವರು. ಇಂದಿನ ಶಾಲೆಗಳಲ್ಲಿಯ ಶಿಕ್ಷಕನು ೩-೪ ಇಯತ್ತೆಗಳನ್ನು ಕಲಿಸುತ್ತ ಒಂದು ಇಯತ್ತೆಯ ಮಕ್ಕಳಿಗೆ ೨ ತಾಸುಗಳ ಕ್ಕಿಂತ ಹೆಚ್ಚು ಕೊಡಲಾರನೆಂದೆನಿಸುತ್ತದೆ. ಇಲ್ಲಿ ಎರಡು ತಾಸು ಕೊಡುವದಲ್ಲದೆ, ಕೆಲಸ ನಡೆದಿರುವಾಗಲೂ ಬುದ್ಧಿಯ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸಿರುವದು, ಸಾಕಷ್ಟು ಕಾಲ ಬೌದ್ಧಿಕ ವಿಷಯಗಳಿಗೆ ಕೊಟ್ಟಂತಾಗ ದಿರದು. ಆದ್ದರಿಂದ ಇವರ ಈ ಆಕ್ಷೇಪಣೆಯೂ ಆಧಾರ ವಿಲ್ಲದ್ದೆಂದು ಕಂಡುಬರುವದು.

ಕೈಯ ನಯದಲ್ಲಿ ನೈಪುಣ್ಯ ಪಡೆಯುವದಾದರೆ ಪ್ರಾಜೆಕ್ಟ್ ಪದ್ಧತಿಯ ಶಾಲೆಗಳಿವೆ; ಅವುಗಳಿಗಿಂತ ಇವುಗಳ ಹೆಚ್ಚಿನ ವೈಶಿಷ್ಟ್ಯವೇನು?—ಎಂದು ಕೇಳಬಹುದು. ಮತ್ತು ನೂಲು ವದು ನೇಯುವದು ಇವೆರಡಕ್ಕಿಂತ ಹೆಚ್ಚು ವೈವಿಧ್ಯವಿದ್ದ ಶಾಲೆಗಳು ಇದಕ್ಕಿಂತ ಒಳ್ಳೆತಲ್ಲವೇ ಎಂದೂ ಅನ್ನ ಬಹುದು. ಕೈಕೆಲಸದಲ್ಲಿ ಪ್ರಾವೀಣ್ಯತೆ ಪಡೆಯುವದಕ್ಕಿಂತ ಕೆಲಸ ಮಾಡುತ್ತ ಕಲಿಯುವದು ಯೋಜನೆಯ ಮೂಲ ಉದ್ದಿಶ್ಯವಾಗಿದೆಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು. ಪ್ರಾವೀ ಣ್ಯತೆ ಪಡೆಯಲಿಕ್ಕೆ ಮಕ್ಕಳು ಬಲಿತ ಮೇಲೆ ಕಲಿಯಲು ಬೇರೆ ಶಾಲೆಗಳೇ ಇವೆ. ಇಲ್ಲಿ ಬುದ್ಧಿಯ ವಿಕಾಸದ ಮಟ್ಟಿಗೆ ಮಾತ್ರ ಕೈಕುಸುರು ಇರುವದು. ಇನ್ನು ನೂಲುವದು ನೇಯುವದು, ಎಲ್ಲ ಮಕ್ಕಳನ್ನು ನೇಕಾರರನ್ನಾಗಿ ಮಾಡ ಬೇಕೆಂದಿಲ್ಲ. ಅಲ್ಲಲ್ಲಿಯ ಮುಖ್ಯ ಜೀವನೋದ್ಯೋಗಗಳ ಬಗ್ಗೆ ತಕ್ಕ ತಿಳಿವು ಬರುವಂತೆ ಬೇರೆ ವ್ಯವಸಾಯಗಳ ಮೂಲ ಕವೂ ಕಲಿಸಬಹುದು. ಒಂದು ಹತ್ತಿಪ್ಪತ್ತು ಚದರು ಮೈಲಿನ ಪ್ರದೇಶದಲ್ಲಿ ಒಂದು ಕಡೆಗೆ ನೂಲುವದು, ಇನ್ನೊಂದು ಕಡೆ ನೆಯಿಗೆ, ಮತ್ತೊಂದು ಕಡೆ ಕೃಷಿ, ನಾಲ್ಕನೆಯ ಕಡೆ ಬಡಿಗತನ—ಹೀಗೆ ನಾಲ್ಕಾರು ಮುಖ್ಯ ಕಸಬುಗಳುಳ್ಳ ಶಾಲೆಗಳನ್ನು, ಸಮೀಪದ ಅಂತರದಲ್ಲಿ ಸ್ಥಾಪಿಸಬಹುದು. ಈ ಶಾಲೆಗಳಿಗೆ ಹೋಗುವ ಬಾಲಕರು ಆ ಎಲ್ಲಾ ಶಾಲೆಗಳಲ್ಲಿಯ ಶಿಕ್ಷಣಗಳ ಪರಸ್ಪರ ಸಂಬಂಧವನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವಂತೆ ಅವಕಾಶವನ್ನು ಕಲ್ಪಿಸ ಬಹುದಾಗಿದೆ. ಕೃಷಿ, ನೆಯಿಗೆ, ಬಡಿಗತನ—ಈ ಕಸಬು ಗಳಂತೂ ಬಹಳ ವ್ಯಾಪಕಸ್ವರೂಪದವುಗಳಿವೆ. ಕೃಷಿಯನ್ನು (ವ್ಯವಸಾಯವನ್ನು) ಕಲಿಯುವಾಗ, ಪ್ರಕೃತಿವಿಜ್ಞಾನ, ಸಸ್ಯಶಾಸ್ತ್ರ, ಹೊಸತರದ ಗೊಬ್ಬರಗಳೇ ಮೊದಲಾದ ಆಧು ನಿಕ ರೀತಿಗಳು ಇವನ್ನೆಲ್ಲ ಕಲಿಸಲು ಬರುವದು. ನೆಯಿಗೆ ಯನ್ನು ಕಲಿಸುವಾಗ, ವಿದ್ಯುಚ್ಛಕ್ತಿಯಿಂದ ಮಗ್ಗಗಳನ್ನು ನಡಿಸುವದು (ಇದರ ಜೊತೆಗೆಯೆ ವಿದ್ಯುಚ್ಛಕ್ತಿಯನ್ನು ಯಂತ್ರಗಳಿಗೆ ಪ್ರಯೋಗಿಸುವ ರೀತಿ), ವಿಧವಿಧದ ಅಚ್ಚು ಗಳನ್ನು (designs) ಬಟ್ಟೆಗಳಿಗೆ ಹಾಕಲು ಬೇಕಾಗುವ ಕಲಾನೈಪುಣ್ಯ, ಮಗ್ಗದ ಯಂತ್ರಗಾರಿಕೆ (mechanism)— ಇಂತಹ ನೂರಾರು ಅಂಶಗಳು ಒಳಗೊಳ್ಳುವವು. ಇದೆ

ಬಡಿಗತನಕ್ಕೂ ಅಸ್ಪಯಿಸುವದು. ಇಂತಹ ಒಂದೇ ಕಸಬಿನಲ್ಲಿ ಪಾರಂಗತನಾಗುವದರಿಂದ ವಿದ್ಯಾರ್ಥಿಯು ಸ್ವಜೀವನಕ್ಕೆ, ಸಮಾಜ ಜೀವನಕ್ಕೆ ಉಪಯುಕ್ತವಾದ ಎಷ್ಟು ಅಂಶಗಳನ್ನು ಕಲಿಯಬಹುದೆಂಬುದನ್ನು, ಅವನ ಜ್ಞಾನವು ಎಷ್ಟು ವಿಸ್ತೀರ್ಣವಾಗುವದೆಂಬುದನ್ನು, ಅವನ ಕೈ-ಮೈಗಳು, ಬುದ್ಧಿ-ಭಾವನೆಗಳು ಎಷ್ಟು ಚುರುಕಾಗುವವೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ. ಪಾಶ್ಚಾತ್ಯರ ಯಾಂತ್ರಿಕ ನಾಗರಿಕತೆಗೂ ವರ್ಧಾಪ್ರಣೀತ ಹಸ್ತಕೌಶಲ-ಗ್ರಾಮೋದ್ಯೋಗಪ್ರಧಾನ ಶಿಕ್ಷಣಪ್ರಣಾಲಿಗೂ ಜಲ-ತೈಲಗಳಂತೆ ಪರಸ್ಪರ ವೈಷಮ್ಯವಿದೆಯೆಂದು ತಿಳಿಯುವದು ತಪ್ಪಾಗುವದು. ಈಗಿನ ರಾಟಿ-ಮಗ್ಗಗಳನ್ನು ಆಧುನಿಕ ವಿಜ್ಞಾನದ ಸಹಾಯದಿಂದ ಸುಧಾರಿಸಕೂಡದೆಂದು ವರ್ಧಾಯೋಜನೆಯು ಹೇಳುತ್ತಿಲ್ಲ. ಭಾರತೀಯರು ಪಾಶ್ಚಾತ್ಯರಂತೆ ಯಾಂತ್ರಿಕ ನಾಗರಿಕತೆಯ ಕೇವಲ ಗುಲಾಮರಾಗಬಾರದು, ಕೈ-ಮೈಗಳ ದುಡಿಮೆಯ ಮತ್ತು ಪಾರಂಪರಿಕ ಹಸ್ತಕೌಶಲದ ಮಹತ್ವವನ್ನು ಅಳವಡಿಸಿಕೊಳ್ಳಬೇಕು ಎಂಬುದೆ ಅದರ ಗುರಿಯಾಗಿದೆ. ಇದನ್ನು ರಕ್ತಗತವಾಗಿಸಿಕೊಂಡು ಪಾಶ್ಚಾತ್ಯ ಯಂತ್ರಸಂಸ್ಕೃತಿಯನ್ನೂ ಸಂಪಾದಿಸಿಕೊಳ್ಳುವದಕ್ಕೆ ವರ್ಧಾಕ್ರಮದ ಪ್ರಕಾರ ಅವಕಾಶವಿದೆಯೆಂದು ನಮ್ಮ ಮತ. ದೊಡ್ಡ ಉದ್ಯೋಗಗಳಿಗೂ ಸಣ್ಣ ಕೈಗಾರಿಕೆಗಳಿಗೂ ಪರಸ್ಪರ ವೈರವಿರಬೇಕಾದುದಿಲ್ಲ, ಅವೆರಡನ್ನೂ ಪರಸ್ಪರ ಪ್ರಯೋಜನಕಾರಿಯಾಗುವಂತೆ ಹೊಂದಿಸಿಕೊಳ್ಳಬಹುದಾಗಿದೆಯೆಂದು ಶ್ರೀ. ಸುಭಾಸ-ಜವಾಹರರು ಪ್ರತಿಪಾದಿಸುತ್ತಿರುವದರಲ್ಲಿ ಹುರುಳಿಲ್ಲದೆ ಇಲ್ಲ.

ವರ್ಧಾ ಯೋಜನೆಯ ಮೇಲಿನ ಇನ್ನೊಂದು ದೊಡ್ಡ ಆರೋಪವು ಶಾಲೆಗಳನ್ನು ಆರ್ಥಿಕವಾಗಿ ಸ್ವತಂತ್ರವಾಗಿಸಬೇಕೆನ್ನುವ ಬಗ್ಗೆ ಇರುವದು. ಮಕ್ಕಳ ಶಿಕ್ಷಣದ ಭಾರವನ್ನು ಹೊರುವದು ಸರಕಾರದ ಕರ್ತವ್ಯವಾಗಿದೆ; ಮಕ್ಕಳ ದುಡಿಮೆಯಿಂದ ಶಾಲೆ ನಡೆಯುವದು ಅಯೋಗ್ಯ ಮತ್ತು ಅವ್ಯವಹಾರ್ಯ; ಸಾಕ್ಷರತೆಯು ಈ ರೀತಿಯಿಂದ ಸಾಕಷ್ಟು ಶೀಘ್ರವಾಗಿ ಸಾಧ್ಯವಾಗದು—ಎಂದು ಮುಂತಾಗಿ ಬಲವಾದ ಆಕ್ಷೇಪಣೆಯನ್ನು ಹಲವರು ಮುಂದು ಮಾಡಿದ್ದಾರೆ. ಕೂಡಲೆ ಝಕೀರ ಹುಸೇನ್ ಕಮಿಟಿಯು ಈ ಬಗ್ಗೆಯ ತಪ್ಪು ತಿಳುವಳಿಕೆಯನ್ನು ದೂರಮಾಡಲೆತ್ನಿಸಿ, ನ್ಯಾಯ್ಯವಾದ ಸೂಚನೆಗಳನ್ನು ಸ್ವೀಕರಿಸಿತು. ಶಾಲೆಯ ಶಿಕ್ಷಕನು ಮಕ್ಕಳ ಶಿಕ್ಷಣವನ್ನು ಅಲಕ್ಷಿಸಿ, ತನ್ನ ಸಂಬಳವು ಪೂರೈಸಲೆಂದು ಮಕ್ಕಳನ್ನು ಅನಿಷ್ಟವಾದ ರೀತಿಯಲ್ಲಿ ದುಡಿಸಿಯಾನೆಂಬ ಭಯವನ್ನು ದೂರಮಾಡಲೆಂದೂ, ಸಂಬಳ ದೊರೆಯದೆ —ದೊರೆತರೂ ನಿಯಮಿತ ಕಾಲಕ್ಕೆ ದೊರೆಯದೆ— ಶಿಕ್ಷಕನ ಉತ್ಸಾಹವು ಕುಗ್ಗಿ ಮಕ್ಕಳ ಶಿಕ್ಷಣವು ಸರಿಯಾಗಿ ಸಾಗದಿರಬಹುದಾದ ಸಂದರ್ಭವನ್ನು ತಡೆಯಲೆಂದೂ, ಶಾಲೆಗಳ ಕಾರಭಾರ ಶಿಕ್ಷಕರ ಪಗಾರ ಮುಂತಾದವುಗಳನ್ನು ಸರಕಾರವೇ ನೋಡಿಕೊಳ್ಳುವ ಭರವಸೆಯನ್ನು ಕೊಟ್ಟಿತು.

ಇನ್ನು ಸಾಕ್ಷರತೆಯ ಪ್ರಸಾರವಾಗುವದು ಅವಶ್ಯವಿದ್ದರೂ, ಅದು ವರ್ಧಾ ಶಿಕ್ಷಣಯೋಜನೆಯ ಪ್ರಧಾನ ಉದ್ದೇಶವಲ್ಲ. ಸಾಧ್ಯವಿದ್ದಮಟ್ಟಿಗೆಲ್ಲ ಈ ಬಗ್ಗೆ ಯತ್ನಿಸಬಹುದಾದರೂ ಅದರ ಮೂಲ ಉದ್ದೇಶವು ಶಿಕ್ಷಣವನ್ನು ತಳಸೋಸಿ ಕಟ್ಟುವದಾಗಿದೆ. ಮಧ್ಯಪ್ರಾಂತದ ವಿದ್ಯಾಮಂದಿರಯೋಜನೆಗೂ ವರ್ಧಾಯೋಜನೆಗೂ ಇಲ್ಲೆ ವ್ಯತ್ಯಾಸವಿರುತ್ತದೆ. ವಿದ್ಯಾಮಂದಿರಗಳು ಪ್ರಾಥಮಿಕ ಶಿಕ್ಷಣಪ್ರಸಾರವನ್ನು ಭರದಿಂದ ಸಾಗಿಸಿ, ನಿರ್ದಿಷ್ಟ ಅವಧಿಯಲ್ಲಿ ನಿರಕ್ಷರತೆಯನ್ನು ನಿರ್ಮೂಲಗೊಳಿಸಲು ಏರ್ಪಟ್ಟಿವೆ. ವರ್ಧಾಕ್ರಮವು ನಾಗರಿಕತ್ವವನ್ನು ಸಾಮಾನ್ಯರಿಗೂ ಸುಲಭವಾಗಿ ತಂದುಕೊಡುವಂತಹ ಯೋಗ್ಯ ಶಿಕ್ಷಣದ ಆವಶ್ಯಕತೆಯನ್ನು ಪ್ರಾಮುಖ್ಯವಾಗಿಟ್ಟುಕೊಂಡಿದೆ. ಯೋಗ್ಯ ಶಿಕ್ಷಣವು ಸ್ವಲ್ಪ ಸಾವಕಾಶವಾಗಿ ಸಾಧಿಸಿದರೂ ಚಿಂತೆ ಇಲ್ಲ; ಜೀಡವಾಗಿರುವ ಶಿಕ್ಷಣದ ಪ್ರಸಾರವಾಗಿ ದೊರೆಯುವ ಅಕ್ಷರಪರಿಚಿತಿಯಿಂದ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚಿದೆ. ಇಂದಿನ ವರೆಗಿನ ಸಾಕ್ಷರತಾ ಪ್ರಸಾರ ಪ್ರಯತ್ನಗಳ ನಿಷ್ಫಲತೆಯು ಈ ಮಾತನ್ನು ಬಲಪಡಿಸುತ್ತದೆ.

ಇವೆಲ್ಲವನ್ನು ಒಪ್ಪಿದರೂ, ಹೊಸ ಪದ್ಧತಿಯ ಪ್ರಕಾರ ಕಲಿಸಲು ಸಾಕಷ್ಟು ಶಿಕ್ಷಕರೆಲ್ಲಿ? ಈಗಿದ್ದ ಶಿಕ್ಷಕರನ್ನು ತಿಗೆದೊಗೆಯಬೇಕೇ? ಇಪ್ಪತ್ತು ರೂಪಾಯಿಗಳ ... ವೇತನವು ಎಷ್ಟು ಜನ ಉತ್ತಮ ಶಿಕ್ಷಕರನ್ನು ... ಕೊಳ್ಳಬಲ್ಲದು ಎಂದು ಮುಂತಾದ ಶಂಕೆಗಳೇಳುತ್ತವೆ. ಇವುಗಳಿಗೆ ಉತ್ತರವೀಯುವದವಶ್ಯವಿದೆ. ಶಿಕ್ಷಣದಲ್ಲಿ ವರ್ಧಾಯೋಜನೆಯು ಕ್ರಾಂತಿಕರವಿದೆ ಎಂಬುದು ನಿಜ. ... ಭಾರತವು ಕ್ರಾಂತಿಪ್ರಸೂತಿಯ ವೇದನೆಗಳನ್ನು ... ತ್ತಿರುವದು. ಯಾವದೊಂದು ಜನಾಂಗದ ಕ್ರಾಂತಿಯು ... ದಲ್ಲಿ ಕಾಣಿಸಿಕೊಳ್ಳುವದು ಸಹಜ ಮತ್ತು ... ರಿಂದ ಹಿಂದಿನಿಂದ ನಡೆದುಬಂದುದರಲ್ಲಿ ವ್ಯತ್ಯಾಸ ... ತೆಂದು ಭಯಪಡುವ ಕಾರಣವಿಲ್ಲ. ವರ್ಧಾಯೋಜನೆ ... ಕ್ರಾಂತಿಕರವಿದ್ದರೂ ಇಂದಿರುವದೆಲ್ಲವನ್ನು ಒಮ್ಮೆಲೆ ...

ತೆಗೆದು ಅದರ ಸ್ಥಳದಲ್ಲಿ ಹೊಸದೊಂದನ್ನು ಸ್ಥಾಪಿಸ ಬೇಕೆಂದಿಲ್ಲ. ಜನಾಂಗದ ಜೀವಾಳದಂತಿರುವ ಶಿಕ್ಷಣವಿಷಯ ದಲ್ಲಿ ಹೀಗೆಮಾಡುವದು ಯುಕ್ತವೂ ಅಲ್ಲ, ಹಿತಕರವೂ ಅಲ್ಲ ಎಂಬುವನ್ನು ಅದು ಮರೆತಿಲ್ಲ. ಹಳೆಯ ಶಿಕ್ಷಕರು ಹೊಸ ಪದ್ಧತಿಯಂತೆ ಕಲಿಸಲಾರರಾದರೂ ಅವರೆಲ್ಲರನ್ನು ತೆಗೆ ದುಗೆದು ಬರಿ ಉತ್ಸಾಹಪೂರಿತರಾದ ತರುಣ ಶಿಕ್ಷಕರ ಕೈಯಲ್ಲಿ ಶಾಲೆಗಳನ್ನು ಕೊಡಬೇಕೆಂದಿಲ್ಲ. ಒಂದು ರೀತಿ ಯಿಂದ,ಇಂದಿನ ಶಿಕ್ಷಕರೂ ಮುಂದೆ ಆಗಬೇಕಾದ ಶಿಕ್ಷಕರೂ ಒಂದೇ ಎನ್ನಬಹುದು. ಈ ಪದ್ಧತಿಗೆ ಇಬ್ಬರೂ ಹೊಸಬರೇ. ಆದ್ದರಿಂದ ಇಂದಿನ ಶಿಕ್ಷಕರಲ್ಲಿಯೇ ಹೊಸದನ್ನು ಹಿಡಿಯಬಲ್ಲ ಶಿಕ್ಷಣೋತ್ಸಾಹಿಗಳನ್ನು ಅಲ್ಲಲ್ಲಿ ಆರಿಸಿ ಅವರಿಗೆ ಹೊಸ ಪದ್ಧತಿಯ ಜ್ಞಾನವನ್ನು ಮಾಡಿಕೊಡುವ ಯೋಜನೆಯೊಂದನ್ನು ಮಾಡಿದೆ. ಒಂದೊಂದು ಪ್ರದೇಶದಲ್ಲಿ ಒಂದು ವಿಶಿಷ್ಟ ಭಾಗದಲ್ಲಿ ವರ್ಧಾ ಪದ್ಧತಿಯ ಪ್ರಕಾರ ಶಿಕ್ಷಣ ಪ್ರಾರಂಭ ಮಾಡುವದಾಗಿ ನಿರ್ಧರಿಸಿದೆ. ಅದಕ್ಕಾಗಿ ಅಲ್ಲಿಯ ಬಿ. ಟಿ. ಶಿಕ್ಷಕರನ್ನು (ಶಿಕ್ಷಣ ವಿದ್ಯಾ ವಿಶಾರದರನ್ನು) ಅವಶ್ಯ ವಾದ ಅನುಭವ ಪಡೆಯುವದಕ್ಕಾಗಿ ವರ್ಧೆಯಲ್ಲಿಯ ಶಿಕ್ಷಣ ಕೇಂದ್ರಕ್ಕೆ ಕಳಿಸಬೇಕೆಂದಿದೆ. ಅಲ್ಲಿ ಮೂರು ತಿಂಗಳು ಶಿಕ್ಷಣ ಪಡೆದು ಮರಳಿ ಬಂದನಂತರ ಅವರು ತಮ್ಮಲ್ಲಿಯ ಉಳಿದ ಶಿಕ್ಷಕರಿಗೆ ಆರು ತಿಂಗಳು ಶಿಕ್ಷಣ ಕೊಟ್ಟು, ವರ್ಧೆಯ ಲ್ಲಿ ತಾವು ಪಡೆದ ಜ್ಞಾನಾನುಭವವನ್ನು ಕೊಡುವರು. ಹೀಗೆ ಹೊಸ ಪದ್ಧತಿಯ ಪ್ರಕಾರ ಕಲಿಸಬಲ್ಲ ಶಿಕ್ಷಕರ ಸಂಖ್ಯೆಯು ಬೆಳೆಯುತ್ತ ಹೋಗುವದು. ಒಂದು ಭಾಗಕ್ಕೆ ಸಾಕಷ್ಟು ಶಿಕ್ಷಕರನ್ನು ಪೂರೈಸಿದ ಮೇಲೆ ಅದಕ್ಕೆ ಹೊಂದಿದ ಭಾಗದಲ್ಲಿ ಇದೇ ಪ್ರಕಾರದ ಶಿಕ್ಷಣಪದ್ಧತಿಯನ್ನ ನುಸರಿಸಲಾಗುವದು. ಇಲ್ಲವೆ ಹಳಬರು ನಿವೃತ್ತರಾಗಿ ಹೊಸಬರು ಬರುವಾಗ ಹೊಸ ಪದ್ಧತಿಯನ್ನು ಬಲ್ಲವರನ್ನೇ ಆರಿಸುವರು. ಹೀಗೆ ಬಹು ದೂರವಲ್ಲದ ಕಾಲದಲ್ಲಿ ಶಿಕ್ಷಕರ ಕೊರತೆಯು ನೀಗ ಬಹುದು. ಇಂತಹ ಶಿಕ್ಷಕರು ಅಲ್ಲಲ್ಲಿಯ ವ್ಯವಸಾಯಗಳ ಮೂಲಕ ಕಲಿಸುತ್ತ ಹೋದಂತೆ ಶಿಕ್ಷಣಪ್ರಸಾರವಾಗಿ, ಇಂದಿನ ಯುವಕರಲ್ಲಿಯ ನಿಸ್ಸಾರತೆಯು ನಾಶವಾಗಿ, ದೇಶ ದಲ್ಲಿ ಹೊಸ ನಾಗರಿಕತ್ವದ ಉದಯವಾಗದಿರದು.

ಇನ್ನು ವೇತನದ ಅಲ್ಪತೆಯ ವಿಷಯವನ್ನು ಸ್ವಲ್ಪ ವಿವೇ ಚಿಸಾ. ಇಂದು ಶಿಕ್ಷಕನಿಗೆ ದೊರೆಯುವ ಸಂಬಳದ ಒರೆ ಹಚ್ಚಿ ನೋಡಿದರೆ ಹೊಸ ಯೋಜನೆಯಿಂದ ಕೊಡ ಬೇಕೆನ್ನುವ ಸಂಬಳವು ಕಡಿಮೆಯೇ ಸರಿ. ಆದರೆ ನಾವು ಕೊಡುವ ಎಲ್ಲಾ ಸಂಬಳಗಳು—ಬಹಳ ಕೆಳಗಿನವುಗಳನ್ನು ಹೊರತುಪಡಿಸಿ—ನಮ್ಮ ಬಡತನಕ್ಕೆ ಭಾರವಾದವು, ಅವು ಗಳಲ್ಲಿ ದೇಶಹಿತೈಕ ದೃಷ್ಟಿಯಿಂದ ಕಡಿತವಾಗಲೇಬೇಕೆಂಬು ದನ್ನು ಎಲ್ಲರೂ ಒಪ್ಪುವರು. ಇದು ಶಿಕ್ಷಣಖಾತೆಗೂ ಅನ್ವಯಿಸುವದು. ಹಳ್ಳಿಗಳಲ್ಲಿ ಶಿಕ್ಷಕನು ೨೦ ರೂಪಾಯಿ ಗಳಲ್ಲಿ ತನ್ನ ಕುಟುಂಬ ಜೀವನವನ್ನು ತಕ್ಕ ಮಟ್ಟಿಗೆ ಸರಿ ಯಾಗಿಯೇ ಸಾಗಿಸಿಕೊಂಡು ಹೋಗಬಲ್ಲನು. ಆ ಲೆಕ್ಕ ದಂತೆ ನೋಡಿದರೆ, ಎಷ್ಟು ಮಂದಿ ಒಕ್ಕಲಿಗರಿಗೆ ವರುಷಕ್ಕೆ ೨೪೦ ರೂಪಾಯಿಗಳಿಗೆ ಮೇಲ್ಪಟ್ಟ ಉತ್ಪನ್ನ ದೊರೆಯು ವದು ? ಹಾಗಾದರೆ ಇದಕ್ಕೂ ಹೆಚ್ಚಿನ ವೇತನ ಕೊಡ ಕೂಡದೋ—ಎಂದು ಕೇಳಬಹುದು. ಹಾಗೆ ತಿಳಿಯ ಕೂಡದು. ಸಾಧ್ಯವಿದ್ದಲ್ಲಿ ಮತ್ತು ದೇಶದ ದುಡ್ಡಿನ ಬಲವು ಹೆಚ್ಚಿದಂತೆ ಹೆಚ್ಚು ವೇತನ ಕೊಡುವದಕ್ಕೆ ಯಾರದೂ ಅಡ್ಡಿಯಿಲ್ಲ, ಯಾವ ಆತಂಕವೂ ಇಲ್ಲ. ಈ ವೇತನವು ಇಂದಿನ ಸ್ಥಿತಿಗತಿಗಳಿಗನುಸರಿಸಿ ಸರಿಯಾಗಿದೆ ಎಂಬುದಿಷ್ಟೇ ಅಭಿಪ್ರಾಯ. ಇನ್ನೂ ಒಂದು ವಿಷಯ. ಸಾಧಾರಣವಾಗಿ ಎಲ್ಲ ನೌಕರಿಗಳಲ್ಲಿ ಸೇವಾಬುದ್ಧಿ ಇದೆ ಎನ್ನಬಹುದಾದರೂ ಈ ಮಾತು ಶಿಕ್ಷಕನಿಗೆ ಅನ್ವಯಿಸುವಷ್ಟು ಇನ್ನಾರಿಗೂ ಅನ್ವಯಿಸುವದಿಲ್ಲ. ಶಿಕ್ಷಕನು ಸಜ್ಜನನು, ನಿರುಪದ್ರವನು. ಅವನಲ್ಲಿ ಈ ಗುಣಗಳು, ಅವನು 'ವ್ಯವಹಾರಜ್ಞಾನವಿಲ್ಲ ದವನು' ಎಂದು ಅವನನ್ನು ಈ ಕೊಂಕುಡೊಂಕುಳ್ಳ ಜಗತ್ತು ಕರೆಯುವ ಮಟ್ಟಿಗೂ ಹೆಚ್ಚಿವೆ. ನಿಜವಾದ ಸೇವೆಯು ಪ್ರತಿಫಲವನ್ನು ಬಯಸುವದಿಲ್ಲ. ಹೊಟ್ಟೆಬಟ್ಟೆ ನಡೆದರೆ ತೀರಿತು, ಹೆಚ್ಚಿನಾಶೆಯನ್ನು ಅವನು ಮಾಡುವ ದಿಲ್ಲ. ಅವನಿಗೆ ಸೇವೆಯೇ ಸಮಾಧಾನ. ಶಿಕ್ಷಕನು ಅತ್ಯಲ್ಪ ವೇತನವುಳ್ಳವನಾಗಿದ್ದರೂ ಸಮಾಜದಿಂದ ಗೌರವ ವನ್ನು ಪಡೆಯುವ ಸುದಿನಗಳು ಬರಲಿಕ್ಕಿಲ್ಲವೇ !

ವರ್ಧಾಶಿಕ್ಷಣಯೋಜನೆಯು ಬುದ್ಧಿಗೆ ಬರೆಕೊಟ್ಟು,ಮಕ್ಕ ಳನ್ನು ಮಣ್ಣುಮುದ್ದೆಯನ್ನಾಗಿಮಾಡಬೇಕೆಂದಿಲ್ಲ. ಶಾಲೆ ಗಳನ್ನು ನೇಕಾರನ ಕುಣಿಕೆಯನ್ನಾಗಿಯಾಗಲಿ, ಕಮ್ಮಾರನ ಗೂಡನ್ನಾಗಿಯಾಗಲಿ ಮಾಡಬಯಸುವದಿಲ್ಲ. ಅದು ಕೇವಲ ದೈಹಿಕ ದಂಡನೆಯಾಗಿರದೆ, ಬುದ್ಧಿಯ ಬಾಗಿಲನ್ನು ಸರಿ ಯಾಗಿ ತೆರೆಯಲು ಯತ್ನಿಸುತ್ತದೆ. ಪರಭಾಷೆಯ ಮೂಲಕ ಕಲಿಯುವ ಬವಣೆಯನ್ನು ದೂರಮಾಡುತ್ತದೆ. ಇಂಗ್ಲಿಷು ಶಾಲೆಗಳಲ್ಲಿ 'ಮ್ಯಾಟ್ರಿಕ್' ವರೆಗಾದರೂ ಕಲಿತವನೆ ಸುಶಿ ಕ್ಷಿತನು ಎಂಬ ಭ್ರಮೆಯನ್ನು ಬಯಲುಮಾಡುತ್ತದೆ. ಇಂದಿನ ಮ್ಯಾಟ್ರಿಕ್ಕನು ರಿಣಗೂಳು ತಿನ್ನುವ ಹೊತ್ತು ಬಂದಿರುವದನ್ನು ನಿಲ್ಲಿಸಬೇಕೆನ್ನುತ್ತದೆ. ಇಂಗ್ಲಿಷನ್ನು ಕಲಿ


ಯದಿದ್ದರೂ— ಬೇಕಾದರೆ ಕಲಿಯಬಹುದು—ರಾಜನೀತಿ, ಸಮಾಜಶಾಸ್ತ್ರಗಳಂತಹ ಉಪಯುಕ್ತ ಉದ್ದಾಮ ವಿಷಯಗಳ ರೂಪರೇಷೆಗಳ ಪರಿಚಯಮಾಡಿಕೊಟ್ಟು, ಇಂದಿನ ಮ್ಯಾಟ್ರಿಕ್ಯನಿಗಿಂತ ಜ್ಞಾನವಂತನನ್ನಾಗಿ ಮಾಡುತ್ತದೆ. ಶಾಲೆಯಲ್ಲಿನಿರವಿಗೂ ಹೊರಗಿನಿರವಿಗೂ ಹೊಂದಿಕೆಯಾಗುವಂತೆ ಮಾಡಲೆಳಸುತ್ತದೆ. ಇಂದು ಶಾಲೆಯಿಂದ ಹೊರಬಂದ ಕೂಡಲೆ ಕಾಲ್ಪಪ್ಪಿದವನಾಗುವ ದುರಂತ ದೃಶ್ಯವನ್ನು ತಪ್ಪಿಸಬೇಕೆನ್ನುತ್ತದೆ. ಶಾಲೆಯಲ್ಲಿ ಕಲಿತದ್ದನ್ನು ಹೊರಗೆ ಬಂದಕೂಡಲೆ ಮರೆಯಬೇಕಾಗುವ ಅವ್ಯವಸ್ಥೆಯನ್ನು ತೊಲಗಿಸಬೇಕೆನ್ನುತ್ತದೆ. ಅಂತೂ ಮಕ್ಕಳ ಮನೋವಿಕಾಸ ಯಾವ ಯಾವ ರೀತಿಯಿಂದ ಆಗಬಹುದೋ ಅದೆಲ್ಲಕ್ಕೂ ಎಡೆಗೊಟ್ಟಿದೆ. ನಮ್ಮ ಮಕ್ಕಳು ಒಳ್ಳೆಯ ನಾಗರಿಕರ ಸಲ್ಲಕ್ಷಣಗಳಿಂದ ಕಂಗೊಳಿಸುವಂತೆ ಮಾಡಲು ಹಾತೊರೆಯುತ್ತದೆ.

ಒಟ್ಟಿನಲ್ಲಿ ಇಷ್ಟು ಹೇಳಬಹುದು. ಹೊಸದೆಂದು ಹಳಿಯಬೇಡಿ, ಕೊಳೆತಿದ್ದರೂ ಹಳೆಯದೆಂದು ಕಾದಿಟ್ಟುಕೊಳ್ಳಬೇಡಿ. ಹೊಸದೆಂದು ಹೆದರಬೇಡಿ, ಹಳೆಯದೆಂದು ಹೂಳಿಟ್ಟುಕೊಳ್ಳಬೇಡಿ. ಹಳೆಯದು ಹೋಗಿ ಹೊಸದು ಬರಲೇಬೇಕು. ಮೇಲೆ ಹೇಳಿದಂತೆ ಇಂದು ಕ್ರಾಂತಿಕಾಲ. ಕ್ರಾಂತಿಯ ಕಡಲಲ್ಲಿ ಹಳೆಯ ಕೊಳೆಯೆಲ್ಲವೂ ತೊಳೆದು ಹೋಗಬೇಕಾಗಿದೆ. ಈ ಮಾತು ನಾಗರಿಕತೆಯ ಬುನಾದಿಯಾಗಿರುವ ಶಿಕ್ಷಣಕ್ಕೆ ಎಲ್ಲಕ್ಕೂ ಹೆಚ್ಚು ಅನ್ವಯಿಸುವುದು. ಈ ಕಡಲಲ್ಲಿ ಎಲ್ಲರೂ ತೇಲಿ ಮೇಲೆ ಬರೋಣ.*

* ಲೇಖಕರು ಕರ್ನಾಟಕದಲ್ಲಿಯ ಪ್ರಸಿದ್ಧ ಕಾಂಗ್ರೆಸ್ ಮುಖಂಡರುಗಳಲ್ಲೊಬ್ಬರು. ಅಸಹಕಾರ ಚಳವಳಿಯಲ್ಲಿ ಸೇರುವ ಮೊದಲು ಹಲವು ವರ್ಷ ಕಾಲ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನ ಪ್ರಿನ್ಸಿಪಾಲರಿದ್ದರು. ಕರ್ನಾಟಕದೃಷ್ಟಿಯಿಂದ ರಾಷ್ಟ್ರೀಯ ಸಂಘಟನೆಯನ್ನು ನಡೆಯಿಸಬೇಕೆಂದು ಪ್ರಯತ್ನಿಸುವವರಲ್ಲೊಬ್ಬರು. Uni-ted Karnatak ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ನಡೆಸಿದ್ದಾರೆ. ವಿಧಾಯಕಕಾರ್ಯಚತುರರೆಂದು ಪ್ರಸಿದ್ಧರು.

○ ಶಿಕ್ಷಣದ ಗೊತ್ತು-ಗುರಿಗಳು ○

ಶಿಕ್ಷಣವೆಂದರೆ ಸಂಸ್ಕಾರ. ಯಾವುದರಿಂದ ನಮ್ಮ ದೇಹ, ಮನ, ನೀತಿ, ಆತ್ಮ ಇವುಗಳಲ್ಲಿ ಮಾರ್ಪಾಡುಗಳಾಗುವವೋ ಅದು ಸಂಸ್ಕಾರ. ಒಳ್ಳೇ ಮಾರ್ಪಾಡುಗಳಾಗಿ ನಾವು ಮುಂದರಿದರೆ, ಪ್ರಗತಿ ಹೊಂದಿದರೆ, ಅದು ಒಳ್ಳೇ ಸಂಸ್ಕಾರ, ಒಳ್ಳೇ ಶಿಕ್ಷಣ. ಇಲ್ಲದಿದ್ದರೆ ಅದು ಕಾಡು, ಕೀಳು ಶಿಕ್ಷಣ.



ಶಾಲೆ - ಕಾಲೇಜುಗಳಲ್ಲಿ ಮಾತ್ರವೇ ಶಿಕ್ಷಣವು ದೊರೆಯುವದು ಎಂದು ತಿಳಿಯುವದು ತಪ್ಪು. ಪ್ರತಿಕ್ಷಣದಲ್ಲಿಯೂ ನಾವು ಶಿಕ್ಷಣ ಪಡೆಯುತ್ತಿರುವೆವು, ಸಂಸ್ಕಾರವನ್ನು ಹೊಂದುತ್ತಿರುವೆವು. ಸದ್ಯಕ್ಕೆ ನಾವು ಶಾಲೆಕಾಲೇಜುಗಳಲ್ಲಿ ಪಡೆಯುತ್ತಲಿರುವ ಶಿಕ್ಷಣವು ಕಲ್ಪನಿರುವದು, ಪ್ರತ್ಯಕ್ಷ ಜೀವನಕ್ಕೆ ವಿಶೇಷ ಸಂಬಂಧ ಇಲ್ಲದ್ದಿರುವದು. ಆದುದರಿಂದಲೆ ಈಗೀನ ಶಿಕ್ಷಣಪದ್ಧತಿಯು ಅಯಶಸ್ವಿಯಾಗಿರುವದೆಂದು ಹೇಳಬೇಕಾಗಿದೆ. ಕೇವಲ ಪುಸ್ತಕೀಯ ಶಿಕ್ಷಣವು ಎಂದೂ ಯಶಸ್ವಿಯಾಗುವದು ಸಾಧ್ಯವಿಲ್ಲ. ಪ್ರತ್ಯಕ್ಷ ಜೀವನದೊಡನೆ ಸಂಬಂಧವಿದ್ದ ಹಾಗೂ ಪ್ರತ್ಯಕ್ಷ ಅನುಭವದಿಂದ ನಾವು ಪಡೆಯುವ ಜ್ಞಾನವು ಹೆಚ್ಚು ಫಲಕಾರಿಯಾಗುವದು.

ಶಿಕ್ಷಣಕ್ಕೆ, ಸಂಸ್ಕಾರಕ್ಕೆ ಒಂದು ಗುರಿ ಬೇಕು. ಗುರಿಯಿಲ್ಲದ ಶಿಕ್ಷಣವೂ ಅರ್ಥವಿಲ್ಲದ ಶಬ್ದರಚನೆಯೂ ಒಂದೇ. ಮೂರ್ತಿಕಾರನು ಮೆತ್ತನ್ನ ಮಣ್ಣನ್ನು ಹದಮಾಡಿ ತೀಡಿ ತೀಡಿ ಅದಕ್ಕೆ ಸಂಸ್ಕಾರ ಕೊಟ್ಟು ಅದರಲ್ಲಿ ಜೀವಕಳೆ ತುಂಬುವನು. ಇಂತಹ ಮೂರ್ತಿ ಮಾಡಬೇಕೆಂದು ಅವನು ಮೊದಲೇ ಕಲ್ಪಿಸಿ ಕೆಲಸಕ್ಕೆ ಕೈಹಾಕುವನು. ಇಂತಹ ಗುರಿ ಇಲ್ಲದ್ದರೆ ಅವನು ಒಂದು ಮೂರ್ತಿಯನ್ನು ಮಾಡಲಾರನು. ಗುರಿಯು ಅವಶ್ಯವಿಲ್ಲ, ಇಲ್ಲವೆ ಗುರಿಯನ್ನು ಇಟ್ಟುಕೊಳ್ಳುವದು ತಪ್ಪು ಎಂದು ಹಲವರು ಹೇಳುವರು. ಆದರೆ ಗುರಿ ಇಲ್ಲದೆ ಹೋದರೆ ಆ ಮೂರ್ತಿ ಆಗದು. ಗುರಿ ಇಲ್ಲವೆ ಹೊರಟರೆ ಒಂದೇ ಮೂರ್ತಿಯಲ್ಲಿ ಮನುಷ್ಯನ ತಲೆ, ಕತ್ತೆಯ ಕಾಲು, ಕುದುರೆಯ ಮೋತಿ ಹೀಗೆ ಆಗುವ ಸಂಭವವಿದೆ!

ಶಿಕ್ಷಕನು ಕಲಾವಂತನಿಗಿಂತ ಎಷ್ಟೋ ಪಾಲು ಜಾಣನಿರಬೇಕಾಗುವದು—ಅವನು ನಿಜವಾದ ಶಿಕ್ಷಕನಾಗಿರಬೇಕಾದರೆ. ದೊಡ್ಡಿಯಲ್ಲಿ ದನಗಳನ್ನು ಹಾಕಿ ಬಾಗಿಲಲ್ಲಿ ನಿಲ್ಲುವವನಂತೆ ಹುಡುಗರನ್ನು ಶಾಲೆಯಲ್ಲಿ ತುಂಬಿ ಅಲ್ಲಿ ಅವರನ್ನು ತಡೆಯುವದಷ್ಟೇ ತನ್ನ ಕೆಲಸವೆಂದು ತಿಳಿಯುವ ಶಿಕ್ಷಕರೇ ಸದ್ಯಕ್ಕೆ ಬಹಳ. ಆ ಕಲ್ಪನೆಯು ಹೋಗಲಿಕ್ಕೆ ಬೇಕು. ಬಾಲಬಾಲೆಯರೆಂದರೆ ಬೆಳೆಯುವ ಜೀವಗಳು. ಅವುಗಳಿಗೆ ತಕ್ಕ ಸಂಸ್ಕಾರಗಳನ್ನು ಕೊಡುವದೇ ಶಿಕ್ಷಕನ ಪವಿತ್ರವಾದ ಕೆಲಸವು. ಮಣ್ಣು ತೀಡುವಾಗ ಮೂರ್ತಿಕಾರನು ತೀಡುವಷ್ಟೆ, ಹೆಚ್ಚುಕಡಿಮೆ ಅದರಲ್ಲಿ ಆಗುವದು. ಆದರೆ ಜೀವಂತವಿರುವ ಹಾಗೂ ಹಲವೊಂದು ಪೂರ್ವ ಸಂಸ್ಕಾರಗಳನ್ನು ಆ ಮೊದಲೇ ಪಡೆದ ಹುಡುಗ ಹುಡುಗಿಯರ ಸಂಗತಿಯು ಹಾಗಿರುವದಿಲ್ಲ. ಶಿಕ್ಷಕರು ತೀಡುತ್ತಿರುವಾಗಲೆ ಆ ಮೂರ್ತಿಯಲ್ಲಿ ತನ್ನಷ್ಟಕ್ಕೆ ತಾನೇ ಎಷ್ಟೋ ಬದಲಾವಣೆಗಳಾಗುವವು! ಅವುಗಳನ್ನೆಲ್ಲ ಅಭ್ಯಸಿಸಿ ಶಿಕ್ಷಕನು ಸಾಗಬೇಕಾಗುವದು. ಹಾಗೆ ಮಾಡದಿದ್ದರೆ ಅವನು ಶಿಕ್ಷಕನೇ ಅಲ್ಲ.

ಸದ್ಯಕ್ಕೆ ನಮ್ಮ ಶಿಕ್ಷಣಕ್ಕೆ ಗುರಿಯೇ ಇಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 'ನೀನು ಕಲಿತು ಏನು ಮಾಡುವಿ' ಎಂದು ಯಾವದೊಂದು ವಿದ್ಯಾರ್ಥಿಯನ್ನು ಕೇಳಿದರೆ, 'ನೋಕರಿ ಹುಡುಕುವೆ' ಎಂದು ಹೇಳುವನು. ಇನ್ನೊಂದು ಉತ್ತರವೇ ಇಲ್ಲ! ವಿದ್ಯಾರ್ಥಿಗಳು ಸ್ವಾವಲಂಬಿಗಳಾಗುವಂತೆ, ಆತ್ಮವಿಶ್ವಾಸವುಳ್ಳವರಾಗುವಂತೆ ಮಾಡುವದು ಶಿಕ್ಷಣದ ಉದ್ದೇಶವಿರಬೇಕು. ಆ ದೃಷ್ಟಿಯಿಂದ ಈಗಿನ ಶಿಕ್ಷ

(ಮುಂದಿನ ಪುಟ ನೋಡಿರಿ)

ನಮ್ಮ ಹಿರಿಯ ಸಮಸ್ಯೆ

ಲೇ:—ಶ್ರೀ. ಬಿ. ಜೆ. ಜಿ. ಶಾಸ್ತ್ರಿ, ಮುಂಬಯಿ ಪ್ರಾಂ. ದಕ್ಷಿಣಭಾಗದ ಎಜುಕೇಶನಲ್ ಇನ್‌ಸ್ಪೆಕ್ಟರರು

ಭರತಖಂಡವು ಜಗತ್ತಿನಲ್ಲಿ ಸಮಾನಸ್ಕಂಧತೆಯಿಂದ ಬಾಳುವುದಾದರೆ, ಸರ್ವವಿಧವಾದ ಪ್ರಗತಿಯನ್ನು ಅದು ಬಹುಶೀಘ್ರವಾಗಿ ಮಾಡಿಕೊಳ್ಳಬೇಕು. ೧೦೦ಕ್ಕೆ ೯೦ ಜನ ಪ್ರಜೆಗಳು ಅಕ್ಷರಜ್ಞಾನವನ್ನು ಕೂಡ ಪಡೆದಿರದಿದ್ದರೆ ಇದು ಹೇಗೆ ಸಾಧ್ಯ? ಆದುದರಿಂದ ನಿರಕ್ಷರತಾನಿವಾರಣೆಯು ಕೂಡಲೆ ಜರುಗಬೇಕಾದ ಕೆಲಸ. ಹಲವು ಪ್ರಾಂತೀಯ ಸರಕಾರಗಳು ಇದನ್ನು ಮಾಡಲು ಎಸಗುತ್ತಿವೆ; ಆದರೆ ಧನಾಭಾವದಿಂದ ಪ್ರಗತಿಯು ಅತಿಮಂದವಾಗುವುದು ಅನಿವಾರ್ಯವಾಗಿದೆ. ಆದುದರಿಂದ ಜನತೆಯೆ ಮುಂದು ಬಂದು ಈ ಕೆಲಸಕ್ಕೆ ನೆರವಾಗಬೇಕು. ಎಲ್ಲ ವಿದ್ಯಾವಂತರೂ —ಹಿರಿಯರು, ಕಿರಿಯರು, ಶಾಲೆ-ಕಾಲೇಜುಗಳಲ್ಲಿಯ ಮೇಲಿನ ತರಗತಿಗಳಲ್ಲಿಯ ಹುಡುಗರು —ಎಲ್ಲರೂ ಈ ಪವಿತ್ರಕಾರ್ಯಕ್ಕೆ ತೊಡಗಿದರೆ, ದೃಶ್ಯಫಲವು ಬೇಗನೆ ಕಣ್ಣಿಗೆ ಬೀಳದಿರದು. ಬೇರೆಬೇರೆ ಪ್ರಾಂತೀಯ ಸರಕಾರಗಳು ಈ ಪ್ರಶ್ನೆಯನ್ನು ಕೂಡಲೆ ಕೈಕೊಳ್ಳುವರೆಂದು ಆಶಿಸುವುದು ಅಯುಕ್ತವಾಗಲಾರದು.

ಶಿಕ್ಷಣದ ಗೊತ್ತುಗುರಿಗಳು

ಣದ ಪದ್ಧತಿಯಲ್ಲಿ ಮಾರ್ಪಾಟುಗಳಾಗಬೇಕು. ಪ್ರತಿಯೊಂದು ವ್ಯಕ್ತಿಯಲ್ಲಿಯ ಗುಣಗಳ ವಿಕಾಸವಾಗುವಂತೆ, ಕರ್ಮಶಕ್ತಿಗೆ ಅವಕಾಶ ದೊರೆಯುವಂತೆ ಶಿಕ್ಷಣಕ್ರಮವನ್ನು ನಾವು ಏರ್ಪಡಿಸಲಿಕ್ಕೆ ಬೇಕು. ಅದೇ ಕಾಲಕ್ಕೆ ಸಮಾಜವಿರೋಧಿಯಾದ ದುರ್ಗುಣಗಳು ವ್ಯಕ್ತಿಗಳಲ್ಲಿ ಬಲಗೊಳ್ಳದಂತೆ ನಾವು ಎಚ್ಚರಪಡಲಿಕ್ಕೆ ಬೇಕು. ಅಂದರೆ ಶಿಕ್ಷಣವು ಯೋಗ್ಯ ಪರಿಣಾಮವನ್ನುಂಟು ಮಾಡುವದು ಮತ್ತು ಉತ್ತಮ ನಾಗರಿಕರನ್ನು ತಯಾರುಮಾಡುವದು.

ಪ್ರಸ್ತುತ ಇನ್ನೊಂದು ಮಹತ್ವದ ವಿಷಯವೆಂದರೆ, ಪ್ರಾಥಮಿಕ ಶಿಕ್ಷಣದ ಕಡೆಗೆ ನಾವು ಹೆಚ್ಚು ಲಕ್ಷ್ಯಗೊಡಲಿಕ್ಕೆ ಬೇಕು. ಈವರೆಗೆ ನಾವು ಅತ್ತ ಲಕ್ಷ್ಯಗೊಟ್ಟಿಲ್ಲವೆಂದೇ ಹೇಳಬಹುದು. ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕ ಹಾಗೂ ಒತ್ತಾಯದ್ದು ಆಗಬೇಕು; ಇಷ್ಟೇ ಅಲ್ಲ. ಅದು ನಿಜವಾದ ಶಿಕ್ಷಣವಾಗಲಿಕ್ಕೆ ಬೇಕು. ಸದ್ಯಕ್ಕೆ ವಿದ್ಯಾರ್ಥಿಗಳು ನಾಲ್ಕನೆಯ ಈಯತ್ತೆಯ ವರೆಗೆ ಕೂಡ ಕಲಿಯದೆ ನಡುವೆ ಬಿಟ್ಟುಬಿಡುವರು. ನಾಲ್ಕನೆಯ ಈಯತ್ತೆ ಕಲಿತವರು ಕೂಡ ಮುಂದೆ ಓದುಬರಹವನ್ನು ಬಿಟ್ಟುಬಿಟ್ಟು ಮತ್ತೆ ನಿರಕ್ಷರರೇ ಆಗುವರು!

ಈ ವಿಷಯವನ್ನು ಈ ದೃಷ್ಟಿಯಿಂದ ಅಭ್ಯಸಿಸಿ ಅದಕ್ಕೆ ಯೋಗ್ಯ ಉಪಾಯವೆಂದು ವರ್ಧಾಯೋಜನೆಯ ಪ್ರಯೋಗವು ನಡೆದಿದೆ. ಅತ್ತಕಡೆಗೆ ಲಕ್ಷ್ಯಗೊಟ್ಟು ನಾವು ತಪ್ಪಿದ ದಾರಿಯನ್ನು ಬಿಟ್ಟು ಹೊಸದಾರಿಯನ್ನು ಹಿಡಿಯುವದು ಅವಶ್ಯ ಕಾಣುವದು.

—ರಂಗನಾಥ ದಿವಾಕರ

ಶಿಕ್ಷಣ-ವಿರಾಣ್ಮೂರ್ತಿ

●

ನೆಲಮುಗಿಲ ಮಿಕ್ಕಿರುವ ಬಗೆಯ ಜಗುಲಿಯ ಮೇಲೆ
ನೀ ನಿಂತು ನಲಿವೆ ಓ ಶಿಕ್ಷಣ-ವಿರಾಣ್ಮೂರ್ತಿ!
ವಿಶ್ವ–ನರ–ನರಗಳಲಿ ನಿನ್ನ ನೃತ್ಯದ ಸ್ಫೂರ್ತಿ
ಚಿಮ್ಮುತಿದೆ ಸಂತತಂ ಯತ್ನರಂಗದ ಹೋಲಿ!

ಪದ್ಮಪದ! ಪದ್ಮಕರ! ಪದ್ಮಾಕ್ಷ! ಪದ್ಮಮುಖ!
ದಿವ್ಯಪ್ರಭಾವಳಿಯು ಪರ್ಬಿರಲು, ಸರ್ವಸಖ,
ನಖಶಿಖಾಂತಂ, ನೀನು ಮೆರೆಯುತಿಹೆ ಶಿಕ್ಷಣವೆ!
ಪ್ರತಿ ದೇವದೇವನೊಲು, ಸಲ್ಲಕ್ಷ ಲಕ್ಷಣವೆ!

ಎಮೆ ಹಳಚೆ, ಜ್ಞಾನಲೋಕಾನಂತ ದರ್ಶನಂ!
ಕೈ ಬೀಸೆ, ಸೌಖ್ಯ–ಶಾಂತ್ಯಾನಂದ ಸ್ಪರ್ಶನಂ!
ನೀ ಕುಣಿಯೆ, ವೈಷಮ್ಯ ದುಃಖ ಕುಲ ನಾಶನಂ!
ಗತಿ ಪ್ರಗತಿ; ಕೃತಿಯು ಲೋಕೋಪಕೃತಿ
ಪೋಷಣಂ!

ಸ್ಥಿತಿಯುನ್ನತಿಯು; ಪಥ ... ನಂತಪಥ; ಗುರಿ ...
ಈ ಜಗವು ಬಾಳಿ ಬೆಳ... ಗುವೊಡೆ, ನೀನೇ ಮುಖ್ಯ!

—ಈಶ್ವರ ಸಣಕ...

ಶಿಕ್ಷಣದಿಂದ ರಾಷ್ಟ್ರೈಕ್ಯ

ಲೇಖಕರು:—ಡಾ. ಜಿ. ಎಸ್. ಕೃಷ್ಣಯ್ಯ, ಎಮ್. ಎ., ಪಿ ಎಚ್. ಡಿ., ಟೀಚರ್ಸ್ ಕಾಲೇಜ್, ಕೊಲ್ಹಾಪೂರ

★

ದೃಷ್ಟಿವೈಶಾಲ್ಯವನ್ನೂ ವಿಸ್ತೃತ ರಾಷ್ಟ್ರಾಭಿಮಾನವನ್ನೂ ಉನ್ನತ ವಿಚಾರಗಳನ್ನೂ ವಿದ್ಯಾರ್ಥಿಗಳಲ್ಲಿ ಬಿತ್ತದ ಸಾಲೆ ಕಾಲೇಜುಗಳು ರಾಷ್ಟ್ರಕ್ಕೆ ಖಂಡಿತವಾಗಿ ದ್ರೋಹವನ್ನು ಬಗೆಯುತ್ತಿವೆ. ಭಾರತದ ಭಾವೀಪ್ರಜೆಗಳು ಒಂದು ರಾಷ್ಟ್ರವಾಗಬೇಕಾದರೆ, ಜಾತಿಜಾತಿಗಳಲ್ಲಿ ಪ್ರೇಮವನ್ನು ಬೆಳಿಸಿಕೊಳ್ಳಬೇಕಾದರೆ, ದುರ್ಬಲ ರಾಷ್ಟ್ರಗಳಿಗೆ ಸಹಾಯ ನೀಡಲು ಸಮರ್ಥರಾಗಬೇಕಾದರೆ, ಜಗತ್ತಿನ ಪ್ರಗತಿಯಲ್ಲಿ ತಮ್ಮ ಕರ್ತವ್ಯವನ್ನು ಪಾಲಿಸಬೇಕಾದರೆ ಅವರಲ್ಲಿ ರಾಷ್ಟ್ರೈಕ್ಯಭಾವವೂ ರಾಷ್ಟ್ರಭಕ್ತಿಯೂ ಪ್ರಖರವಾಗಿ ಬೆಳಗಿಸಲ್ಪಡಲೇಬೇಕು. ... ...

* *

ಸಾಲೆ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳ ತಲೆಯಲ್ಲಿ ವಂಶಾನುಗತವಾಗಿ ಬಂದಿರುವ ಜಾತಿಭ್ರಮೆಯನ್ನು ದೂರಗೊಳಿಸುವದು ಸುಲಭವಲ್ಲ. ಆದರೆ ರಾಷ್ಟ್ರದ ಮುಂದಾಳುಗಳಿಗೆ ಅಂತಹ ಜಟಿಲಸಮಸ್ಯೆಗಳನ್ನು ಬಿಡಿಸುವದೆ ನಿತ್ಯಕರ್ಮವಲ್ಲವೇ? ದಿನದಿನವೂ ಸ್ಥೂಲ ಸೂಕ್ಷ್ಮ ವೈಜ್ಞಾನಿಕ ಪವಾಡಗಳು ನಡೆಯುತ್ತಿರುವ ಈ ದಿನಗಳಲ್ಲಿ ರಾಷ್ಟ್ರೈಕ್ಯವೊಂದು ಮಹಾ ಅಸಂಭನೀಯ ಸಂಗತಿಯೇ? ... ...

★

"ಭಾರತ ರಾಷ್ಟ್ರದ ಅಭ್ಯುದಯವನ್ನು ಕುರಿತು ಮಾತನಾಡುವವರು, ಭಾರತವೆಂಬುದು ಬರಿ ಭೌಗೋಲಿಕ ಸೀಮೆಗಳಿಂದ ಸುತ್ತುವರಿಯಲ್ಪಟ್ಟ ಒಂದು ಪ್ರದೇಶವೆಂಬ ಸಂಗತಿಯನ್ನು ಮರೆಯುತ್ತಾರೆ. 'ಭಾರತ'ವು ಅನೇಕ ಜನಾಂಗಗಳು ಮತ್ತು ರಾಷ್ಟ್ರಗಳಿಂದ ಕೂಡಿದ ಒಂದು ಸಂಯುಕ್ತ ರಾಷ್ಟ್ರ" ಎಂದು ಒಂದು ಆಂಗ್ಲೋ-ಇಂಡಿಯನ್ ಪತ್ರಿಕೆಯಲ್ಲಿ ಬರೆದಿತ್ತು. ಹಾಗಾದರೆ ಈಗ ಒಂದು ಶತಮಾನದಿಂದ ಭಾರತದಲ್ಲಿ ಪ್ರಚುರವಾಗಿರುವ ಶಿಕ್ಷಣಕ್ರಮವು ಈ ಸಂಗತಿಯನ್ನು ಅನುಲಕ್ಷಿಸಿರುವುದೇ? ಮಿಕ್ಕ ರಾಷ್ಟ್ರಗಳೆಲ್ಲ ಶಿಕ್ಷಣವನ್ನು ರಾಷ್ಟ್ರೀಯ ಐಕ್ಯಕ್ಕಾಗಿ ಒಂದು ಸಾಧನವನ್ನಾಗಿ ಮಾಡಿಕೊಳ್ಳುತ್ತಿರಲು ಭಾರತೀಯ ಶಿಕ್ಷಣವು ಈ ಭಾರತ ರಾಷ್ಟ್ರದ ಒಂದುತನವನ್ನು ಐಕ್ಯಭಾವವನ್ನು ಬೆಳೆಸಲು ಸಹಾಯಕವಾಗುತ್ತಿದೆಯೇ? ಭಾರತದ ಹಿತಚಿಂತಕರ ಲಕ್ಷ್ಯವೆಲ್ಲ ರಾಷ್ಟ್ರೀಯ ಶಿಕ್ಷಣ ನಿರ್ಮಾಣದಲ್ಲಿ ಈಗ ಕೇಂದ್ರಿತವಾಗಿದೆ. ಈ ಪರ್ವದಲ್ಲಿಯೆ ನಮ್ಮ ವಿದ್ಯಾಲಯಗಳು ಭಾರತಕ್ಕೆ ಸುಸಂಘಟಿತ ಪ್ರಜೆಗಳನ್ನು ಸಿದ್ಧಗೊಳಿಸುವ ಬಗೆ ಹೇಗೆಂಬುದನ್ನು ಆಲೋಚಿಸುವುದು ಅಸಂಗತವಾಗಲಾರದು.

ಬೇರೆ ಬೇರೆ ಮತ ಜಾತಿಗಳ ಅನುಯಾಯಿಗಳನ್ನು ಒಂದು ರಾಷ್ಟ್ರವನ್ನಾಗಿ ಹೊಂದಿಸುವ ಸಮಸ್ಯೆಯು ಜಗತ್ತಿನ ಮಿಕ್ಕ ರಾಷ್ಟ್ರಗಳಿಗೆ ಅಪರಿಚಿತವಾದುದೇನೂ ಅಲ್ಲ. ಸಂಯುಕ್ತ ಅಮೇರಿಕದಲ್ಲಿ ಅನೇಕ ಜನಾಂಗಗಳಿದ್ದರೂ ಅದಿಂದು ಒಂದು ಪ್ರಬಲ ರಾಷ್ಟ್ರವಾಗಿ ನಿಂತಿದೆ. ಸ್ವೀಡನ್ ರಾಷ್ಟ್ರವು ಫ್ರೆಂಚ್, ಜರ್ಮನ್, ಇಟಾಲಿಯನ್ ಭಾಷೆಗಳನ್ನಾಡುವ ಜಿಲ್ಲೆಗಳನ್ನು ಒಳಗೊಂಡಿದ್ದರೂ ಒಂದೇ ರಾಷ್ಟ್ರವಾಗಿದೆ. ಧಾರ್ಮಿಕ ಕಲಹಗಳ ಗಲಾಟೆಯೆಷ್ಟಿದ್ದರೂ ಇಂಗ್ಲಂಡು ಒಂದು ರಾಷ್ಟ್ರವಾಗಿ ಅಪೂರ್ವವಾದ ಸಾಮ್ರಾಜ್ಯವನ್ನು ಕಟ್ಟಿದೆ. "ಐಕಮತ್ಯದಿಂದ ಸಾಧಿಸಿದ ವೀರಕೃತಿಗಳಿಂದ, ಸ್ಥೈರ್ಯದಿಂದ ಅನುಭವಿಸಿದ ಸಂಕಷ್ಟಗಳಿಂದ ರಾಷ್ಟ್ರದಲ್ಲಿ ಒಂದುತನವು ಪುಷ್ಟವಾಗಿ ಬೆಳೆಯುತ್ತದೆ"ಂದು ರ್‍ಯಾಮ್ಸೆ ಮೂರನು ತನ್ನ 'ರಾಷ್ಟ್ರೀಯತೆ ಮತ್ತು ಅಂತರ್‌ರಾಷ್ಟ್ರೀಯತೆ' ಎಂಬ ಗ್ರಂಥದಲ್ಲಿ ಬರೆದಿದ್ದಾನೆ. ಜರ್ಮನಿ-ಇಟಲಿಗಳೂ ವಿಷಮ-ವೈರಿಗಳುಳ್ಳ ಜನಾಂಗಗಳಿಂದಲೆ ರಚಿತವಾಗಿವೆಯಾದರೂ ಅವು ಎರಡೇ ಪೀಳಿಗೆಗಳಲ್ಲಿ ಪ್ರಪಂಚವೆ ನಡುಗುವಂತೆ ಗುಡುಗಾಡಲು ಇಂದು ಸಮರ್ಥವಾಗಿವೆ. ಏಕೆಂದರೆ ಮೇಲಿನೆಲ್ಲ ರಾಷ್ಟ್ರಗಳಿಗೂ ಪ್ರಜೆಗಳಲ್ಲಿ ಐಕ್ಯಭಾವವನ್ನು ಹುಟ್ಟಿಸುವ ಶಿಕ್ಷಣಕ್ರಮದ ಆವಶ್ಯಕತೆಯು ಬಹು ಬೇಗ ಹೊಳೆಯಿತು. ಅದಕ್ಕೆ ಸಾಧಕವಾದುದನ್ನು ಕಾರ್ಯಕ್ಷೇತ್ರಕ್ಕಿಳಿಸಿ ಯಶಸ್ವಿಯಾಗಿ, ಅವಿಂದು ಒಂದೊಂದು ಅನಿರ್ಭೇದ್ಯ ರಾಷ್ಟ್ರಗಳಾಗಿವೆ.

ಆದುದರಿಂದ ಭಾರತವು ನಿರಾಶೆಗೊಳ್ಳುವ ಪರಿಸ್ಥಿತಿಯೇನೂ ಇಲ್ಲ. ಪ್ರಜೆಗಳಲ್ಲಿ ನಿರ್ದುಷ್ಟವಾದ ರಾಷ್ಟ್ರಾಭಿ

ಮಾನವನ್ನು ಬೆಳೆಸುವ, ಮತ ಜಾತಿ ಭಿನ್ನತೆಗಳನ್ನು ಮರೆಯಿಸಿ ಒಂದುತನವನ್ನು ಮೈಗೂಡಿಸುವ ಶಿಕ್ಷಣಕ್ರಮವನ್ನು ಪ್ರಚಾರದಲ್ಲಿ ತರುವುದು ಅತ್ಯಾವಶ್ಯಕವಾಗಿದೆ.

ಇದರ ಸಾಧನದಲ್ಲಿ ಮೊದಲ ಹೆಜ್ಜೆಯೆಂದರೆ **ಸ್ವೇತಿಹಾಸ ಜ್ಞಾನ.** ಪ್ರಾಚೀನ ಭಾರತದ ಸಾಮಾಜಿಕ, ಸಾಂಸ್ಕೃತಿಕ ಪ್ರಗತಿಯ ಅರಿವು ಪ್ರತಿಯೊಬ್ಬ ಭಾರತೀಯನಿಗೂ ಇರಲೇ ಬೇಕು. ಭಾವೀ ರಾಷ್ಟ್ರದ ಯೋಗ್ಯತೆಯುಳ್ಳ ಪ್ರಜೆಗಳಾಗುವ ವಿದ್ಯಾರ್ಥಿಗಳಿಗೆ ಅದರಿಂದ ಸ್ವದೇಶದ ವಿಷಯಕ್ಕೆ ಪವಿತ್ರವಾದ ಅಭಿಮಾನ ಹುಟ್ಟುವುದು. ಪ್ರಾಚೀನರ ತಪ್ಪು ತಡೆಗಳನ್ನು ನಿಷ್ಪಕ್ಷಪಾತವಾಗಿ ಅವರಿಗೆ ತೋರಿಸಬೇಕು. ಅದರಿಂದ ಮುಂದೆ ಅಂತಹ ತಪ್ಪುಗಳನ್ನು ಮಾಡದೆ ಅಭಿವೃದ್ಧಿಯನ್ನು ಸಾಧಿಸುವ ಅರಿವು ಅವರಿಗಾಗುವುದು.

ಪ್ರಕೃತದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನಂತೂ ವಿದ್ಯಾರ್ಥಿಗಳು ನಿಚ್ಚಳವಾಗಿ ತಿಳಿದುಕೊಳ್ಳಲೆಬೇಕು. ಅದಕ್ಕಾಗಿ ನಾಗರಿಕ ಕರ್ತವ್ಯಕರ್ಮಗಳ ವಿಷಯಕ್ಕೆ ಅವರಿಗೆ ಅನಿವಾರ್ಯವಾದ ಶಿಕ್ಷಣವನ್ನು ಕೊಡಬೇಕು. ಒಂದು ವಿಶಾಲ ಭೂ ಖಂ ಡ ಸ ದೃ ಶ ವಾ ದ ಕೋಟ್ಯವಧಿ ಜನಸಂಖ್ಯೆಯುಳ್ಳ ಭಾರತದ ವಿವಿಧ ಧರ್ಮ ಸಂಸ್ಕೃತಿಗಳು ಸಮರಸವಾಗಿ ಹೊಂದಿಕೊಂಡು ಒಂದಾದರೆ ಜಗತ್ತಿನಲ್ಲಿ ಅದೆಂತಹ ಅಭೂತಪೂರ್ವವಾದ ಸಾಮರ್ಥ್ಯವುಳ್ಳ ರಾಷ್ಟ್ರವಾಗಬಲ್ಲುದೆಂಬ ಕಲ್ಪನೆಯನ್ನು ಹುರಿಗೊಳಿಸುವಂತೆ ಶಿಕ್ಷಣದ ಎತ್ತುಗಡೆಯಿರಬೇಕು. ಭಾರತೀಯರ ಬಡತನ, ಅಜ್ಞಾನ, ಬೇನೆಗಳು, ಮತ ಭ್ರಾಂತಿಗಳಂತಹ ಭಯಂಕರ ಪ್ರಮೇಯಗಳನ್ನು ಬಿಡಿಸುವ ರಾಷ್ಟ್ರದೃಷ್ಟಿಯನ್ನು ಅವರಿಗೆ ಕೊಡಬೇಕು.



ಲೇಖಕರು

ಭಾರತವು ವಿಶಾಲವಾದ ದೇಶ; ನೂರಾರು ಸಮಸ್ಯೆಗಳು ಅದರ ಪ್ರಗತಿಗಿಂದು ತಡೆಗಳಾಗಿ ಕೂತಿವೆ. ಅವನ್ನು ಬಿಡಿಸುವಲ್ಲಿ ಸಂಕುಚಿತ ಬುದ್ಧಿಯಿಂದ ಬರಿ ಬ್ರಿಟನ್ನಿನ ಮೋರೆ ನೋಡುವ ಪ್ರವೃತ್ತಿಯು ದೂರವಾಗಿ ಸಮಗ್ರ ಜಗತ್ತಿನ ವಿವಿಧ ರಾಷ್ಟ್ರಗಳ ಆಧುನಿಕ ಚಟುವಟಿಕೆಗಳ ಸಿಂಹಾವಲೋಕನವು ನಮ್ಮ ವಿದ್ಯಾರ್ಥಿಗಳಿಗಾಗಬೇಕು.

ಪ್ರಚಲಿತ ಶಿಕ್ಷಣಕ್ರಮವು ಭಾರತೀಯ ಧ್ಯೇಯ ಸ್ವಭಾವಗಳಿಗೆ ಅಸಂಗತವಾಗಿದೆ. ಅವುಗಳ ಮೇಲೆಯೆ ಶಿಕ್ಷಣವನ್ನು ನಿಲ್ಲಿಸಿ ಭಾರತೀಯರಲ್ಲಿ ಶಾಂತಿಸ್ನೇಹಗಳು ಮೂಡುವಂತೆ ಮಾಡಬೇಕು. ಬ ಬುದ್ಧಿಸಂಸ್ಕಾರವು ಸಾಲದು ಹೃದಯವನ್ನು ಎಚ್ಚರಿಸಬೇಕು. ಇತಿಹಾಸವನ್ನು ಕಲಿಸುವ ರೀತಿ ಹೊಸತಾಗಬೇಕು. ರಕ್ತರಂಜಿತ ಕ್ರೌರ್ಯತನವೂ, ದೇಶದ್ರೋಹಿಯಾದ ಬುದ್ಧಿಯ ಗೌರವವೂ ಚ್ಯುತವಾಗಬೇಕು. ಒಂದೆ ಒಂದು ರಾಷ್ಟ್ರದ ಭಾವಪುಷ್ಟಿಯಾಗಬೇಕು. ಅದಕ್ಕಾಗಿ ಇತಿಹಾಸಗಳನ್ನು ಬರೆಯುವವರು ಸ್ವರಾಷ್ಟ್ರದ ಅಭಿಮಾನ ಪ್ರೇಮಗಳಿಂದ ತುಂಬಿದವರಾಗಿರಬೇಕು. ಇತಿಹಾಸ ಪಠ್ಯಪುಸ್ತಕಗಳೂ ರಾಷ್ಟ್ರಪ್ರೇಮಿಗಳ ಸಮಿತಿಯೊಂದರಿಂದ ಅಂಗೀಕೃತವಾದವುಗಳಾಗಿರಬೇಕು. ಚಿಕ್ಕವರಿಗೆ ಕಲಿಸುವ ಇತಿಹಾಸ ಪಾಠಗಳು ವಿವಿಧ ಮತ ಪಂಗಡಗಳವರು ಭಾರತರಾಷ್ಟ್ರದ ಸ್ವಾತಂತ್ರ್ಯಕ್ಕೆ ಒಮ್ಮನಸ್ಸಿನಿಂದ ಹೇಗೆ ಹೋರಾಡಿದರೆಂಬುದನ್ನು ಮನಗಾಣಿಸುವಂತಿರಬೇಕು. ಜಾತಿ ಪ್ರಾಂತಗಳ ನಿರ್ಬಂಧವಿಲ್ಲದೆ ಎಲ್ಲ ಶ್ರೇಷ್ಠ ಸ್ತ್ರೀಪುರುಷರ ಚರಿತ್ರೆಗಳನ್ನು ಕಲಿಸಿ ಪರಧರ್ಮ ಸಹಿಷ್ಣುತೆ, ಸಮಗ್ರ ರಾಷ್ಟ್ರಪ್ರೇಮಗಳನ್ನು ಜಾಗೃತಗೊಳಿಸಬೇಕು. ಅಂಜಿಕೆ, ಹೇಡಿತನ, ಕಚ್ಚಾಟ ಕಲಹಗಳನ್ನು ಹೊತ್ತಿಸುವ ಇತಿಹಾಸವನ್ನು ಕಲಿಸದಿದ್ದರೇನು ನಷ್ಟ?

ಗುಡ್ಡದಂತಹ ಮಾತುಗಳಿಗಿಂತ ಕಡ್ಡಿಯಂತಹ ಕೃತಿಯು ಮೇಲು. ಆದುದರಿಂದ ಪುಸ್ತಕಗಳಲ್ಲಿ ರಮ್ಯವಾಗಿ ವರ್ಣಿಸಲ್ಪಟ್ಟ ಸಹಿಷ್ಣುತೆ, ಸಹಾನುಭೂತಿ, ರಾಷ್ಟ್ರಪ್ರೇಮಗಳು ಕಾರ್ಯರಂಗಕ್ಕಿಳಿಯುವಂತೆ ಏರ್ಪಾಡಿರಬೇಕು. ವಿದ್ಯಾರ್ಥಿದೆಸೆಯಲ್ಲಿರುವಾಗಲೆ ಬಾಲಕರನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿ ಸಂಕಟದಲ್ಲಿ ಸ್ವರಾಷ್ಟ್ರದ ಪ್ರಜೆಗಳಿಗೆ ನೆರವಾಗುವ ಪ್ರತ್ಯಕ್ಷಪಾಠವನ್ನು ಕಲಿಸಬೇಕು. ಮಿಕ್ಕ ರಾಷ್ಟ್ರಗಳಲ್ಲಿರುವಂತೆ ಭಾರತದ ಮಕ್ಕಳಿಗೂ ತಮ್ಮ ಸ್ವಾತಂತ್ರ್ಯಪ್ರೀತಿಯನ್ನು ಅನಿರುದ್ಧವಾಗಿ ಆಚಾರರಂಗಕ್ಕಿಳಿಸಲಿಕ್ಕೆ ಅನುಕೂಲತೆಗಳಿರಬೇಕು. ರಾಷ್ಟ್ರಗೀತಗಳನ್ನು ಹಾಡುವುದು, ರಾಷ್ಟ್ರವೀರರನ್ನು ಗೌರವಿಸುವುದು, ರಾಷ್ಟ್ರಕವಿ-ನೃಪ-ಮುನಿ-ಯೋಗಿಗಳ ವರ್ಧಂತಿಗಳನ್ನು ಜರುಗಿಸುವುದು, ರಾಷ್ಟ್ರೋತ್ಸವಗಳನ್ನು ನೆರವೇರಿಸುವುದು ಮುಂತಾದ ಕಾರ್ಯಕ್ರಮಗಳಿಂದ ವಿದೇಶಗಳಲ್ಲಿ ರಾಷ್ಟ್ರಾಭಿಮಾನವನ್ನು ಬಿತ್ತರಿಸುವಂತೆ ಭಾರತದಲ್ಲಿಯೂ ಅದರ ವ್ಯವಸ್ಥೆಯಾಗಬೇಕು. ರಾಷ್ಟ್ರಧ್ವಜದ ವಿಷಯಕ್ಕೆ ಪವಿತ್ರವಾದ ಭಕ್ತಿ ನೆಲೆಗೊಳ್ಳಬೇಕು. ನಾಳೆ ಪ್ರಜೆಗಳಾಗಿ ಬೆಳೆದು ರಾಷ್ಟ್ರದ ಆಡಳಿತವನ್ನು ಕೈಗೊಳ್ಳುವ ವಿದ್ಯಾರ್ಥಿಗಳಲ್ಲಿ ಇಂದಿನಿಂದಲೇ, ಸಾಧ್ಯವಾದ ಎಲ್ಲ ರೀತಿಗಳಿಂದಲೂ ರಾಷ್ಟ್ರಭಾವದ ಸಸಿಯೊಡೆಯುವಂತೆ ಸಂಸ್ಕರಿಸಬೇಕು.

ಇಂಗ್ಲಂಡ್ ಮತ್ತು ಅಮೇರಿಕೆಯ ಶಿಕ್ಷಣಕ್ರಮಗಳಲ್ಲಿ ಸಮಾಜಸೇವೆಯ ಮೂಲಕ ನಾಗರಿಕ ಶಿಕ್ಷಣವನ್ನು ಸಾಧಿಸುವ ಯುಕ್ತಿಯನ್ನು ಶೋಧಿಸಿದ್ದಾರೆ. ಭಾರತೀಯರೂ ಸರಿಕಂಡಂತೆ ಅದನ್ನು ಅನುಕರಿಸಬಹುದು. ಸದ್ಗುಣಗಳು ಕತ್ತಲಕೋಣೆಯಲ್ಲಿ ಬೆಳೆಯುವುದಿಲ್ಲ. ಸ್ವಾರ್ಥರಹಿತಸೇವೆ, ಸಹಕಾರ,ಸಹಿಷ್ಣುತೆ ಮತ್ತು ನಿಜವಾದ ಪ್ರಜಾಪ್ರಭುತ್ವಗಳು ಪ್ರತ್ಯಕ್ಷವಾದ ಸಾಮಾಜಿಕ ಸನ್ನಿವೇಶಗಳಲ್ಲಿಯೆ ಹುಟ್ಟಿ ಬೆಳೆಯುತ್ತವೆ. ವಿಧಿ ಮತ್ತು ಕಾರ್ಯಕಾರಿ ಮಂಡಲಗಳ ಪ್ರವೃತ್ತಿ ಮಾದರಿಯು ಶಾಲೆಗಳಲ್ಲಿಯೆ ಆರಂಭವಾಗಬೇಕು. ಸ್ಕೌಟ್, ಆಟ, ಚರ್ಚೆ, ಪ್ರವಾಸಗಳ ಮೂಲಕ ರಾಷ್ಟ್ರಭಕ್ತಿಯನ್ನು ತರುಣರಲ್ಲಿ ಬೇರೂರಿಸಬೇಕು. ಅಂದರೆ ಮುಂದಿನ [illegible]ದ ಜ್ಞಾನವು ಈಗಲೆ ಆಗುವುದಲ್ಲದೆ ಅಧಿಕಾರಿಗಳಲ್ಲಿ [illegible]ವಾಗಿ ಇರಬೇಕಾದ ಮೈತ್ರಿ, ಸಹಾನುಭೂತಿಗಳ [illegible]ವನ್ನು ಒಳ್ಳೆ ಸಂತೋಷದಾಯಕವಾದ ಸನ್ನಿವೇಶ[illegible] ಕಲಿಸಬಹುದು.

ಇಂತಹ ರಾಷ್ಟ್ರಭಾವನೆಯ ಆವಶ್ಯಕತೆಯನ್ನು ಹೆಚ್ಚಾಗಿ ವಿವರಿಸುವ ಅಗತ್ಯವಿಲ್ಲ. ಅಸಂಖ್ಯ ಭಾಷೆಗಳು, ಅನೇಕ ಧರ್ಮಗಳು, ವಿವಿಧ ಜನಾಂಗಗಳಿಂದ ಕಿಕ್ಕಿರಿದ ವಿಶಾಲ ಭಾರತದಲ್ಲಿ ಉದಯವಾದ ರಾಷ್ಟ್ರಭಾವನೆಯೆಂದರೆ ಆಂತರರಾಷ್ಟ್ರೀಯ ಭಾವನೆಯೆ ಸೈ. ಯುರೋಪಿನಲ್ಲಿಯ ಜರ್ಮನಿ, ಫ್ರಾನ್ಸ್, ಇಟಲಿ, ರಶಿಯಗಳೆಲ್ಲವನ್ನೂ ಒಂದೇ ರಾಷ್ಟ್ರದಲ್ಲಿ ಹೆಣೆಯುವುದೆಷ್ಟು ಕಠಿನವೋ ಸುಮಾರು ಅಷ್ಟೆ, ಭಾರತವನ್ನು ಒಂದು ರಾಷ್ಟ್ರವನ್ನಾಗಿ ಮಾಡುವುದಾಗಿದೆ. ಆದರೆ ಇಡಿ ಭಾರತಕ್ಕೊಂದೆ ಸಂಸ್ಕೃತಿಯಿದೆಯೆಂದ ಮೇಲೆ ಅವನ್ನು ಒಂದು ರಾಷ್ಟ್ರವನ್ನಾಗಿಸುವಲ್ಲಿ ಎಂತಹ ಎಡರುಗಳು ಬಂದರೂ ಭಾರತವು ಒಂದಾಗಬೇಕೆಂದು ಪ್ರತಿಯೊಬ್ಬ ಭಾರತಪುತ್ರನೂ-ಪುತ್ರಿಯೂ ಬಯಸಲೇ ಬೇಕಲ್ಲವೇ ?

ಅಲ್ಲದೆ ಒಂದು ರಾಷ್ಟ್ರದ ಸತ್ಪ್ರಜೆಗಳನ್ನು ಸಿದ್ಧಗೊಳಿಸುವುದೆಂದರೆ ಇಡಿ ಜಗತ್ತಿಗೇ ಉತ್ತಮರಾದ ಪ್ರಜೆಗಳನ್ನು ಸಿದ್ಧಗೊಳಿಸಿದಂತೆಯಲ್ಲವೇ ? “ವಿಶ್ವಪ್ರೇಮದ ಸೋಗುಹಾಕಿ ಸ್ವರಾಷ್ಟ್ರಾಭಿಮಾನವನ್ನು ತೆಗಳುವವರು, ಏಣಿಯನ್ನು ತೆಗಳಿ ಅಟ್ಟಕ್ಕೆ ಹಾರುವ ಹವಣಿಕೆಯಲ್ಲಿ ಧ್ವಂತೆಯೆ ಸರಿ” ಎಂದು ಪ್ರೊ. ರೋಜ್ ಅವರು ಹೇಳುತ್ತಾರೆ. ಯುರೋಪಿನಲ್ಲಿ ರಕ್ತಪ್ರವಾಹದಲ್ಲಿ ಪರಿಣಮಿಸುತ್ತಿರುವ ರಾಷ್ಟ್ರಾಭಿಮಾನವನ್ನಲ್ಲ, ವಿಶ್ವಪ್ರೇಮದಲ್ಲಿ ಅರಳುವ ರಾಷ್ಟ್ರಾಭಿಮಾನವನ್ನು ಪ್ರೋತ್ಸಾಹಿಸುವುದು ಪ್ರಗತಿಗೆ ಅತ್ಯಾವಶ್ಯಕವಾಗಿದೆ. ವಿವಿಧ ಜನಾಂಗಗಳ ಸಮಷ್ಟಿಯಾದ ಸಮಗ್ರ ಮಾನವಲೋಕದ ಸುಖಶಾಂತಿಗಳಿಗೆ ಸಾಧಕವಾದ ವೃತ್ತಿ ಪ್ರವೃತ್ತಿಗಳು ಪ್ರತಿಯೊಂದು ಜನಾಂಗದಲ್ಲಿಯೂ ಇರುತ್ತವೆ. ಅವನ್ನು ಸಮಷ್ಟಿಯ ಧ್ಯೇಯಸಿದ್ಧಿಗೆ ಅಣಿಗೊಳಿಸುವುದೆ ರಾಷ್ಟ್ರಾಭಿಮಾನದ ಗುರಿಯಾಗಿದೆ. ‘ಮ್ಯಾಝಿನಿ’ ಎಂಬ ಸುಪ್ರಸಿದ್ಧ ರಾಷ್ಟ್ರಾಭಿಮಾನಿಯು “ಪ್ರತಿಯೊಂದು ಜನಾಂಗಕ್ಕೂ ಒಂದು ವೈಶಿಷ್ಟ್ಯವಿದೆ. ಅದನ್ನು ಮಾನವಲೋಕದ ಧ್ಯೇಯಸಿದ್ಧಿಗಾಗಿ ಕಾಣಿಕೆಯೆಂದು ಕೊಡುವುದೆ ಅದರ ಸಾರ್ಥಕತೆ. ಆ ಕಾಣಿಕೆಯೆ ಆ ಜನಾಂಗದ ರಾಷ್ಟ್ರೀಯತೆಯ ಕುರುಹು” ಎಂದು ಹೇಳಿದ್ದಾನೆ.

ಸಾರಾಂಶ, ದೃಷ್ಟಿವೈಶಾಲ್ಯವನ್ನೂ ವಿಸ್ತೃತ ರಾಷ್ಟ್ರಾಭಿಮಾನವನ್ನೂ ಉನ್ನತವಿಚಾರಗಳನ್ನೂ ವಿದ್ಯಾರ್ಥಿಗಳಲ್ಲಿ ಬಿತ್ತದ ಸಾಲೆ ಕಾಲೇಜುಗಳು ರಾಷ್ಟ್ರಕ್ಕೆ ಖಂಡಿತವಾಗಿ ದ್ರೋಹವನ್ನು ಬಗೆಯುತ್ತಿವೆ. ಭಾರತದ ಭಾವೀಪ್ರಜೆಗಳು ಒಂದು ರಾಷ್ಟ್ರವಾಗಬೇಕಾದರೆ,ಅಂತರ್ಜಾತೀಯಪ್ರೇಮವನ್ನು ಬೆಳೆಸಿಕೊಳ್ಳಬೇಕಾದರೆ, ದುರ್ಬಲರಾಷ್ಟ್ರಗಳಿಗೆ ಸಹಾಯ ನೀಡಲು

ಸಮರ್ಥರಾಗಬೇಕಾದರೆ, ಜಗತ್ತಿನ ಪ್ರಗತಿಯಲ್ಲಿ ತಮ್ಮ ಕರ್ತವ್ಯವನ್ನು ಪಾಲಿಸಬೇಕಾದರೆ ಅವರಲ್ಲಿ ರಾಷ್ಟ್ರೈಕ್ಯ ಭಾವವೂ ರಾಷ್ಟ್ರಭಕ್ತಿಯೂ ಪ್ರಖರವಾಗಿ ಬೆಳಗಿಸಲ್ಪಡಲೇಬೇಕು. ಶಾಲೆ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳ ತಲೆಯಲ್ಲಿ ವಂಶಾನುಗತವಾಗಿ ಬಂದಿರುವ ಜಾತಿಭ್ರಾಂತಿಯನ್ನು ದೂರಗೊಳಿಸುವದು ಸುಲಭವಲ್ಲ. ಆದರೆ ರಾಷ್ಟ್ರದ ಮುಂದಾಳುಗಳಿಗೆ ಅಂತಹ ಜಟಿಲಸಮಸ್ಯೆಗಳನ್ನು ಬಿಡಿಸುವದೆ ನಿತ್ಯಕರ್ಮವಲ್ಲವೇ? ದಿನದಿನವೂ ಸ್ತೂಲ ಸೂಕ್ಷ್ಮ ವೈಜ್ಞಾನಿಕ ಪವಾಡಗಳು ನಡೆಯುತ್ತಿರುವ ಈ ದಿನಗಳಲ್ಲಿ ರಾಷ್ಟ್ರೈಕ್ಯವೊಂದು ಮಹಾ ಅಸಂಭವನೀಯ ಸಂಗತಿಯೇ?

---

*ಡಾ. ಜಿ. ಎಸ್. ಕೃಷ್ಣಯ್ಯ ಅವರು ಸದ್ಯಕ್ಕೆ ಕೊಲ್ಲಾಪುರದ ಟೀಚರ್ಸ್ ಕಾಲೇಜಿನಲ್ಲಿ ವೈಸ್-ಪ್ರಿನ್ಸಿಪಾಲರಾಗಿದ್ದಾರೆ. ಕೆಲ ವರ್ಷಗಳ ಹಿಂದೆ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಪ್ರೊಫೆಸರ್ ಆಫ್ ಎಜುಕೇಶನ್' ಆಗಿದ್ದರು. ಅವರು ಮದ್ರಾಸಿನ ತತ್ವಜ್ಞಾನದ ಎಮ್. ಎ. ಪದವಿಯನ್ನು ಪಡೆದು, ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ೫ ವರ್ಷ ಶಿಕ್ಷಣದ ವಿಷಯದ ಪ್ರತ್ಯೇಕ ವ್ಯಾಸಂಗ ಮಾಡಿ ಅಲ್ಲಿಯ ಎಂ.ಎ. ಪಿಎಚ್.ಡಿ ಪದವಿಯನ್ನು ಹೊಂದಿ, ಅಮೇರಿಕದ ಜೀವನ ಮತ್ತು ಸಂಸ್ಕೃತಿಯ ಜ್ಞಾನ ಸಂಪಾದನೆಗಾಗಿ ಅತ್ತ ಕಡೆಗೆ ಸಂಚಾರ ಮಾಡಿದರು. ಮೇಲ್ಕಂಡ ವಿಶ್ವವಿದ್ಯಾನಿಲಯದವರು ಹ್ಯಾಂಪ್‌ಟನ್, ಟಸ್ಕೀಜಿ ಮುಂತಾದ ಕೃಷಿ ಶಿಕ್ಷಣವಿಷಯಕ ವಿಶ್ವವಿದ್ಯಾಲಯಗಳ ವಿಷಯಗಳನ್ನು ಅರಿತುಕೊಳ್ಳಲೆಂದು ಅವರನ್ನು ಕಳಿಸಿಕೊಟ್ಟರು. ಆ ವಿದ್ಯಾನಿಲಯಗಳು ಮತ್ತು ಅವುಗಳಿಂದ ಭಾರತವು ಏನು ಕಲಿಯಬಹುದೆಂಬುದು, ಅವರು ಬರೆದ (ಅಸೋಸಿಯೇಟೆಡ್ ಪ್ರೆಸ್ಸಿನಿಂದ ಪ್ರಕಾಶಿತವಾದ) 'The Rural Community and the School' ಮತ್ತು (ಆಕ್ಸ್‌ಫೊರ್ಡ್ ವಿ.ವಿದ್ಯಾನಿಲಯ ಪ್ರೆಸ್ಸಿನಿಂದ ಪ್ರಕಾಶಿತವಾದ) 'Citizenship Training in School' ಎಂಬ ಪುಸ್ತಕಗಳಲ್ಲಿ ಚೆನ್ನಾಗಿ ವರ್ಣಿತವಾಗಿವೆ. ಮದ್ರಾಸ ಮತ್ತು ಮುಂಬೈ ವಿಶ್ವವಿದ್ಯಾಲಯದವರು ತಮ್ಮ ವಿವಿಧ ಶಿಕ್ಷಣವಿಷಯಕ ವ್ಯವಸ್ಥೆಗಳಲ್ಲಿ ಡಾ. ಕೃಷ್ಣಯ್ಯ ಅವರ ಅಮೋಘವಾದ ಸಲಹೆಗಳನ್ನು ಹೆಚ್ಚೆಹೆಚ್ಚಿಗೂ ಪಡೆಯುತ್ತಾರೆ.

ಶಿಕ್ಷಣಕ್ಕೆ ಧ್ಯೇಯವಿರಬೇಕೆ?*

ಲೇಖಕರು :
ಪ್ರೊ. ಆರ್. ವ್ಹಿ. ಜಾಗೀರದಾರ
ಎಂ. ಎ. (ಲಂಡನ್)



ಸಮಗ್ರಸೃಷ್ಟಿಯ ಜ್ಞಾನವು ಅಶಕ್ಯ, ಅನಗತ್ಯ, ಅನುಪಯುಕ್ತ....ಬಾಲ್ಯದಲ್ಲಿ ಕಲಿತ ಪಾಠಗಳು ವ್ಯವಹಾರದಲ್ಲಿ ನಿಷ್ಪ್ರಯೋಜಕವಾಗುವವು...ಸಾಮಾನ್ಯ ಮಾನವನ ನಿತ್ಯಜೀವನಕ್ಕೂ ಶಿಕ್ಷಣದ ಉಚ್ಚಸಂಸ್ಕಾರದಾನೋದ್ದೇಶಕ್ಕೂ ಅಗತ್ಯದ ಸಂಬಂಧವಿಲ್ಲ...ದೇಶಕಾಲಪರಿಸ್ಥಿತಿಗನುಗುಣವಾಗಿ ನೀತಿಯು ಭಿನ್ನಭಿನ್ನವಾಗಿರುವುದು; ಆದ್ದರಿಂದ 'ನೀತಿ'ಯ ಉದ್ದೇಶವೂ ವಿಫಲವು....ನಮಗಿಂದು ಸತ್ಯವೆನಿಸಿದ್ದು ನಮ್ಮ ಮಕ್ಕಳಿಗೂ ಸತ್ಯವೆನಿಸುವುದೆನ್ನುವುದು ದುರಾಗ್ರಹ; ಅದೇ ಮಾತು ವರ್ಧಾ ಯೋಜನೆಯಲ್ಲಿಯ 'ಅಹಿಂಸಾ-ಬೋಧೆ'ಗೂ ಅನ್ವಯಿಸುವುದು; ಸತ್ಯ-ಅಹಿಂಸೆಗಳು ಕೂಡ ಶಿಕ್ಷಣದ ಧ್ಯೇಯವಾಗಲಾರವು....ಶಿಕ್ಷಣಕ್ಕೆ ಧ್ಯೇಯವಿರಕೂಡದೆಂದರೆ ಶಿಕ್ಷಣವೆ ಅಗತ್ಯವಿಲ್ಲ ಎಂದಲ್ಲ.

ಶಿಕ್ಷಣಕ್ಕೆ ಯಾವುದೊಂದೂ ಧ್ಯೇಯವಿರಕೂಡದು; ಧ್ಯೇಯವಿರುವುದು ಅನಾವಶ್ಯಕ, ಅವ್ಯವಹಾರ್ಯ, ಇಷ್ಟೇ ಅಲ್ಲ ಅಯೋಗ್ಯ ಎಂದು ನನ್ನ ಅಭಿಪ್ರಾಯ.

ಈ ವಿಶೇಷಾಂಕದಲ್ಲಿ ಸ್ಥಲನಿರ್ಬಂಧವಿದೆ ಎಂದು ಸಂಪಾದಕರು ಹೇಳಿದ್ದಿಲ್ಲವಾದರೆ ಈ ನನ್ನ ಅಭಿಪ್ರಾಯಕ್ಕೆ ಸಮರ್ಥಕವೆನಿಸುವ ಅನೇಕ ಕಾರಣಗಳನ್ನು ತೋರಿಸಬಹುದಾಗಿತ್ತು; ಸದ್ಯಕ್ಕೆ ಧ್ಯೇಯವು ಇರುವುದಾದರೆ ಅದು ಹೇಗೆ ಅಸಮಂಜಸವೆನಿಸುವುದೆಂಬುದನ್ನು ಕೆಲವು ದೃಷ್ಟಾಂತಗಳಿಂದ ತೋರಿಸಿಕೊಡುವೆ.

(೧) ಶಿಕ್ಷಣದ ಉದ್ದಿಷ್ಟವು ಜ್ಞಾನಸಂಪಾದನೆ ಎಂದು ಸಾಮಾನ್ಯವಾಗಿ ಬಹುಜನರು ತಿಳಿಯುತ್ತಾರೆ. ಜ್ಞಾನಸಂಪಾದನೆಯೆ ಉದ್ದಿಷ್ಟವಾದರೆ ಶಿಕ್ಷಣಕ್ಕೆ ಯಾವ ಸ್ವರೂಪ ಬರಬಹುದಾಗಿತ್ತು? ಜ್ಞಾನವೆಂಬುದು ಈ ವಿಸ್ತೃತ ಮತ್ತು ಸಂತತವಾದ ಪ್ರಪಂಚದಲ್ಲಿ ಅಗಮ್ಯವಾದ ವಸ್ತು ಎನಿಸುವುದು. ಇಡಿಯ ಸೃಷ್ಟಿಯ ಜ್ಞಾನವು ಮಾನವನಿಗೆ ಶಕ್ಯವಾಗಬಹುದೋ? ಶಕ್ಯವಾದರೂ ಒಂದೇ ಆಯುಷ್ಯದಲ್ಲಿ ಅದನ್ನು ಸಂಪಾದಿಸಿ ಆಮೇಲೆ ಉಪಯೋಗಿಸಲು ಅವಕಾಶ ದೊರೆಯಬಹುದೊ? ಒಬ್ಬ ಇಲ್ಲವೆ ಪ್ರತಿಯೊಬ್ಬ ಮಾನವನಿಗೆ ಇಡಿಯ ಸೃಷ್ಟಿಯ ಜ್ಞಾನ ಆವಶ್ಯಕವಲ್ಲ; ಪ್ರತಿಯೊಬ್ಬನು ತನಗೆ ಸಂಬಂಧಿಸಿದ ಸೃಷ್ಟಿಯ ಜ್ಞಾನವನ್ನು ಸಂಪಾದಿಸತಕ್ಕದ್ದು ಎಂದು ಯಾರಾದರೂ ಹೇಳಬಹುದು. ಆ ಮಾತು ನಿಜವಾದರೆ ಪ್ರತಿಯೊಬ್ಬನ ಶಿಕ್ಷಣವೂ ಅನುಸಾರವಾಗಿ ಜ್ಞಾನವೂ ಬೇರೆ ಎನಿಸಿ, ವೈಯಕ್ತಿಕ ವ್ಯಕ್ತಿವ್ಯಕ್ತಿಗಳ ಜ್ಞಾನಗಳಲ್ಲಿ ವಿರೋಧ ಕೂಡ ಬರಬಹುದು. ಸದ್ಯಕ್ಕೆ ನಮ್ಮಲ್ಲಿ ರೂಢವಾದ ಶಿಕ್ಷಣ ಹೋಗಲಿ, ಯಾವ ಶಿಕ್ಷಣದಿಂದಲೂ ಜ್ಞಾನಸಂಪಾದನೆಯಾಗುವುದು ಶಕ್ಯವಿಲ್ಲ; ಜ್ಞಾನಸಂಪಾದನೆಯಾಗಿದೆ ಎಂಬ ಮಿಥ್ಯಾಗ್ರಹಿಕೆ ಮಾತ್ರ ಹುಟ್ಟಿ ಅಪಾಯ ಸಂಭವಿಸಬಹುದು.

(೨) ಪ್ರತಿಯೊಬ್ಬ ಮಾನವನು ತನ್ನ ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ಪರಿಸ್ಥಿತಿಯನ್ನು ಮುಂದರಿಸುವ ನಾಗರಿಕನಾಗುವಂತೆ ಮಾಡುವುದೆ ಶಿಕ್ಷಣದ ಧ್ಯೇಯ ಎಂದು ಕೆಲವರು ಹೇಳುತ್ತಾರೆ. ಸ್ವಲ್ಪ ವಿಚಾರಮಾಡಿದರೆ ಈ ಮಾತು ಅರ್ಥವಿಲ್ಲದ್ದು ಎಂದು ಕಂಡುಬರುವುದು. ವ್ಯವಹಾರದಲ್ಲಿ ಕಾಲಿಡುವಾಗ ವ್ಯಕ್ತಿಗೆ ಒಂದು ವಯಸ್ಸಿರುತ್ತದೆ; ಈ ವಯಸ್ಸಿಗೆ ತಕ್ಕ ಬುದ್ಧಿ-ವಿಚಾರಗಳು ಬೆಳೆದಿರುತ್ತವೆ. ಬಾಲ್ಯದಲ್ಲಿ, ಆಟಗೆಯ ವ್ಯವಹಾರದಲ್ಲಿ, ಕೆನೆಗಟ್ಟದ ಬುದ್ಧಿಯಿಂದ ಕಲಿತ ಪಾಠವನ್ನು ನಿಜವಾದ ವ್ಯವಹಾರದಲ್ಲಿ ಉಪಯೋಗಿಸಬಹುದೆಂದು ನಂಬೋಣವೆ? ದಿನದ ವ್ಯಾಯಾಮಗಳಲ್ಲಿ ಕಾಲ್ಪನಿಕ ಶತ್ರುಗಳೊಡನೆ ಹೋರಾಡಿ ಯುದ್ಧನೀತಿಯನ್ನು ಕಲಿತ ಸೈನಿಕನು ಶತ್ರುಗಳು ಸಮಕ್ಷ ಇದಿರಿಸುವಾಗ ಪಾಠಕಲಿತಂತೆಯೆ ಯುದ್ಧಮಾಡಿದರೆ ನಗೆಗೀಡಲ್ಲವೆ, ಜೀವಕ್ಕೆರವಾಗುವನು. ಯುದ್ಧದ ವಿದ್ಯೆಯು ರಣಾಂಗಣದಲ್ಲಿಯೆ ಬರುವುದು; ಇದಿರಾದ ಶತ್ರುಗಳ ವ್ಯೂಹಕ್ಕನುಸರಿಸಿ ಇವನಿಗೆ ಯುದ್ಧನೀತಿಯ ಜ್ಞಾನವಾಗುವುದು. 'ಎಡದ ಹೆಜ್ಜೆಯಾ ಮುಂದೆ ತನ್ನಿರಿ' ಎಂದು ದಿನಾಲು ಕವಿತೆ ನುಡಿದ ಮಾತ್ರಕ್ಕೆ ಬೇಕಾದಾಗ ಎಡದ ಹೆಜ್ಜೆ ಮುಂದೆ ಬಂದೀತೆಂಬ ಭರವಸೆ ಇಲ್ಲ. ಇಂದಿನ ಕಾಲದಲ್ಲಂತೂ ಮಾನವನ ವ್ಯವಹಾರವು ದಿನದಿನಕ್ಕೆ ಬದಲಾಯಿಸುತ್ತಿದೆ. ಈ ವ್ಯವಹಾರಕ್ಕೆ — ಹತ್ತಾರು ವರ್ಷ

ಕುಳಿತಲ್ಲಿಯೆ ಕುಳಿತು ಹಿಂದಿನ ಕಾಲಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆದ ಬುದ್ಧಿಯು ಎಷ್ಟರ ಮಟ್ಟಿಗೆ ಉಪಯುಕ್ತವೆನಿಸೀತು ?

(೩) ಶಿಕ್ಷಣವು ಸಿದ್ಧಿಯಲ್ಲ, ಸಾಧನ; ಶಿಕ್ಷಣದಿಂದ ದೊರಕಿಸುವುದು ನಿಧಿಯಲ್ಲ, ಶಕ್ತಿ; ಶಿಕ್ಷಣವನ್ನು ಪಡೆವಾಗ ಬುದ್ಧಿಗೆ ಒಂದು ತೆರದ ಸಂಸ್ಕಾರ ಬರುವುದು (ಬುದ್ಧಿಗೆ ಕೆಲವೊಂದು ಚಟಗಳು ಸಾಧಿಸುವುವೆನ್ನಿ); ಈ ಸಂಸ್ಕಾರದಿಂದ ಮನುಷ್ಯನಿಗೆ ಒಂದು ಧೋರಣೆ, ಒಂದು ದೃಷ್ಟಿ ಲಭಿಸುವುದು; ಈ ಧೋರಣೆಯಿಂದ ಮತ್ತು ಈ ಸಂಸ್ಕಾರದಿಂದ ಮನುಷ್ಯನು ತನ್ನ ವ್ಯವಹಾರದ ಸಮಸ್ಯೆಗಳನ್ನು ಎದುರಿಸಲು ಶಕ್ತಿಯುಳ್ಳವನಾಗುತ್ತಾನೆ ಎಂದು ಇನ್ನೂ ಕೆಲವರು ಅಭಿಪ್ರಾಯಪಡುತ್ತಾರೆ. ಸಾಮಾನ್ಯ ಮಾನವನ ಜೀವನವನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಅಭಿಪ್ರಾಯವನ್ನು ಪರೀಕ್ಷಿಸಿದರೆ ಇದು ಕೇವಲ ಶಬ್ದಾಡಂಬರ, ಬುದ್ಧಿಯ ಸಮಾಧಾನ ಎಂದು ತಿಳಿದುಬರುವುದು. ಸಾಮಾನ್ಯ ಮನುಷ್ಯನ ಜೀವನಕ್ಕೂ ಯಾವ ಕಾಲದ, ಯಾವ ದೇಶದ ಶಿಕ್ಷಣಪದ್ಧತಿಗೂ ಹೊಂದಿಕೆಯೆ ಇಲ್ಲ — ಎಂದಿಗೂ ಇದ್ದಿಲ್ಲ. ಭಾಷೆ-ಸಾಹಿತ್ಯ, ಇತಿಹಾಸ-ಭೂಗೋಲ, ಗಣಿತ-ಶಾಸ್ತ್ರೀಯ ವಿಷಯ ಇವೇ—ಶಿಕ್ಷಣ ಪದ್ಧತಿ ಎಂತಹದೇ ಇರಲಿ—ಕಲಿಯತಕ್ಕ ವಿಷಯಗಳು. ಕಾವ್ಯ-ಅಲಂಕಾರ-ವ್ಯಾಕರಣ ಇವುಗಳ ಜ್ಞಾನಕ್ಕೂ ನಿತ್ಯಜೀವನದ ಭಾಷೆಗೂ ಎಷ್ಟು ಸಂಬಂಧವಿದೆ ? ಕಾವ್ಯ-ಅಲಂಕಾರ-ವ್ಯಾಕರಣಗಳನ್ನು ಸಶಾಸ್ತ್ರೀಯವಾಗಿ ಕಲಿಯದವನು ನಿರಾತಂಕವಾಗಿ ತನ್ನ ಭಾಷೆಯಲ್ಲಿ ತನ್ನ ವ್ಯವಹಾರವನ್ನು ನಡೆಸುವನು. ಇತಿಹಾಸ-ಭೂಗೋಲಗಳ ಜ್ಞಾನವಿಲ್ಲದಿದ್ದರೂ ತನ್ನವರಲ್ಲಿ ಅಭಿಮಾನ ತಾಳಿ ಕಾಲಕಾಲಕ್ಕೆ ಹೊಲವನ್ನು ಸಾಗುವಳಿ ಮಾಡಿಕೊಳ್ಳುತ್ತ ಯಾವ ಕೊರತೆಯನ್ನೂ ಕಾಣದೆ ಒಕ್ಕಲಿಗನು ಬಾಳುವನು. ನಿಜವಿದ್ದ ಮಾತೆಂದರೆ ನಿತ್ಯಜೀವನಕ್ಕೂ ಶಿಕ್ಷಣದ ಶಾಸ್ತ್ರಗಳಿಗೂ ಅಗತ್ಯವಾದ ಸಂಬಂಧವಿಲ್ಲ. ಇಷ್ಟೇಕೆ ? 'ಶಿಕ್ಷಿತ' ರೆನಿಸಿಕೊಳ್ಳುವವರಲ್ಲಿ ಸಹಜಜೀವನದ ಶಕ್ತಿಯಾಗಲಿ ವ್ಯವಸಾಯಬುದ್ಧಿಯಾಗಲಿ ಇರುವುದಿಲ್ಲೆಂಬುದಕ್ಕೆ ಇಂದಿನ ಹಿಂದುಸ್ತಾನದಲ್ಲಿಯೆ ಲಕ್ಷಾವಧಿ ತರುಣರು ಜೀವನ್ಮೃತ ದೃಷ್ಟಾಂತವೆನಿಸಿದ್ದಾರೆ. ಹೀಗಿರುವಾಗ ಶಿಕ್ಷಣದಿಂದ ದಿನನಿತ್ಯಜೀವನಕ್ಕೆ ಅಗತ್ಯವಾದ ಶಕ್ತಿಯಾಗಲಿ ಸಂಸ್ಕಾರವಾಗಲಿ ಲಭಿಸುವುದು ಎಂದು ಹೇಳುವಂತಿಲ್ಲ.

(೪) ಮಾನವನು ಹುಟ್ಟಿನಿಂದ ಪಶುಜೀವಿ, ಸ್ವಾರ್ಥಿ; ಅನ್ಯರೊಡನೆ ಬೆರೆತು, ಬೆಳೆದು ಬಾಳುವಂತಹ ಕಲೆ ಅವನಿಗೆ ಶಿಕ್ಷಣದಿಂದ ಬರುವುದು ಎಂದು ನೀತಿಬೋಧಕರು ಹೇಳುತ್ತಾರೆ. ಉದಾಹರಣಾರ್ಥವಾಗಿ ದೇವನಲ್ಲಿ ವಿಶ್ವಾಸ, ಧರ್ಮಕ್ಕಾಗಿ ಹೆದರಿಕೆ, ಸಮಾಜಕ್ಕಾಗಿ ಕರ್ತವ್ಯತತ್ಪರತೆ, ದೇಶಕ್ಕಾಗಿ ಅಭಿಮಾನ — ಇಂತಹ ಸದ್ಗುಣಗಳು ಶಿಕ್ಷಣದಿಂದಲೆ, ಬಾಲ್ಯದಲ್ಲಿ ಬಿಂಬಿಸಿದ ಪಾಠಗಳಿಂದಲೆ ಬರುವವೆಂದೂ, ಇಂತಹ ಸದ್ಗುಣಗಳಿಂದಲೆ ಮಾನವನು ಯೋಗಕ್ಷೇಮಗಳಿಂದೊಡಗೂಡಿ ಬಾಳುವನೆಂದೂ, ಇಲ್ಲವಾದರೆ ದೊಡ್ಡ ಮೀನವು ಸಣ್ಣ ಮೀನವನ್ನು ನುಂಗುವುದೆಂಬ ನ್ಯಾಯದಂತೆ ಪ್ರಪಂಚವು ಹತ್ಯಾತ್ಮಕವಾಗುತ್ತಿತ್ತೆಂದೂ ಈ ನೀತಿಬೋಧಕರು ತಿಳಿಸಿಹೇಳುತ್ತಾರೆ. ಬೋಧಕರ ಹೃದಯವು ಪ್ರಾಮಾಣಿಕವಿರಬಹುದು, ಆದರೆ ಅವರ ನೀತಿ ಮಾತ್ರ ಪ್ರಾಮಾಣಿಕವಾದುದೆಂದು ಕಂಡುಬಂದಿಲ್ಲ ಎಂದು ಹೇಳಬಹುದು. ಯಾಕೆ ? ನೀತಿ ಎಂಬುದು ಒಂದೇ ಒಂದಾದ ವಸ್ತುವಲ್ಲ. ಬೇರೆಬೇರೆ ದೇಶಗಳ ನೀತಿ ಬೇರೆಬೇರೆಯಾಗಿದೆ. ಅಷ್ಟೇಕೆ ? ಒಂದೇ ಸಮಾಜದಲ್ಲಿ ಬೇರೆಬೇರೆ ಕಾಲಗಳ ನೀತಿ ಬೇರೆ ಬೇರೆಯಾಗಿದೆ. ಆದಕ್ಕಾಗಿಯೆ ಎಲ್ಲರಿಗೂ ಒಬ್ಬನೇ ದೇವನೆನಿಸಲಿಲ್ಲ; ಬೇರೆಬೇರೆ ದೇವರುಗಳಿಗಾಗಿ ರಣಾಂಗಣದಲ್ಲಿ ರಕ್ತದ ಕಾಲಿವೆಗಳನ್ನು ಹರಿಸಬೇಕಾಯಿತು. ಧರ್ಮವು ಇಡಿದ ವಿಶ್ವಕ್ಕೆ ಅನ್ವಯಿಸಲಿಲ್ಲ; ಬೇರೆಬೇರೆ ಮತಾನುಯಾಯಿಗಳು ಹತಾನುಹತಕರಾಗಬೇಕಾಯಿತು. ದೇಶಾಭಿಮಾನದ ಉದಾಹರಣೆಯನ್ನೆ ನೋಡೋಣ. ತನ್ನ ದೇಶವನ್ನು ಹೆಚ್ಚೆಚ್ಚು ಪ್ರೀತಿಸುವಂತೆ ಅನ್ಯದೇಶವನ್ನು ಹೆಚ್ಚೆಚ್ಚು ದ್ವೇಷಿಸಬೇಕಾಗುವುದೆಂಬುದು ಇಂದಿನ ಇಟಲಿ, ಜರ್ಮನಿ ಗಳ ಉದಾಹರಣೆಯಿಂದ ಕಾಣಬಹುದು. ಹೀಗೆ ನೀತಿಬೋಧಕರು ಸದ್ಗುಣ ಎಂದು ತಿಳಿದ ಪ್ರವೃತ್ತಿಗಳು ಹತ್ಯಾತ್ಮಕವೆನಿಸಿ, ಪರಸ್ಪರವಿರೋಧಕವೆನಿಸಿ ಮಾನವನ ಬೆಳವಣಿಗೆಯನ್ನು ಒಂದು ದೃಷ್ಟಿಯಿಂದ ತಡೆದುವು ಎಂದು ಹೇಳಬಹುದು. ಇಂತಹ 'ಸದ್ಗುಣ'ವನ್ನು ಧ್ಯೇಯವೆಂದಿಟ್ಟುಕೊಳ್ಳಬಹುದೆ ?

(೫) ಕೊನೆಯದಾಗಿ ನಮ್ಮ ದೇಶದ ಇತ್ತೀಚಿನ ಉದಾಹರಣೆಯೊಂದನ್ನು ಕೊಡಬಹುದು. ಸದ್ಯಕ್ಕೆ ಎಲ್ಲರ ತಲೆಯನ್ನೂ ತುಂಬಿಕೊಂಡ ಶಿಕ್ಷಣವಿಷಯವೆಂದರೆ ವಾರ್ಧಾ ಯೋಜನೆ. ದೇಶಾಭಿಮಾನ ಮೊದಲಾದ ಗುರಿಗಳನ್ನು ... ಅಂತಹ ಗುರಿಗಳ ನಿ... ಈ ಯೋಜನೆಯಲ್ಲಿ ಕಾಣಿಸಿದೆ.

ಮೇಲಿನ ನಾಲ್ಕು ದೃಷ್ಟಾಂತಗಳಲ್ಲಿ ಅಡಕವಾಗಿದೆ. ಆದರೆ ಎಲ್ಲಕ್ಕೂ ಹೊಸತೆನಿಸುವ ಒಂದು ಗುರಿಯನ್ನು ಕಾಣಿಸಿದೆ. ಅದು ಈ ವಾಕ್ಯದಲ್ಲಿದೆ: 'Our children will therefore need to be taught the superiority of non-violence over violence' (ಹಿಂಸೆಗಿಂತ ಅಹಿಂಸೆ ಶ್ರೇಷ್ಠವಾದುದೆಂದು ನಮ್ಮ ಮಕ್ಕಳಿಗೆ ಅಗತ್ಯವಾಗಿ ಕಲಿಸಲೇ ಬೇಕಾಗುವುದು). ಈ ಮಾತಿನ ವಿಚಾರದ ಮುಂಚೆ ಒಂದು ಸಂಗತಿಯನ್ನು ನೆನಪಿನಲ್ಲಿಡತಕ್ಕುದು.'ಅಹಿಂಸೆ' ಎಂಬುದರ ಜೊತೆಗೆ 'ಸತ್ಯ' ವನ್ನೂ ಸೇರಿಸಬೇಕು; ಅರ್ಥಾತ್ ಸತ್ಯ ಮತ್ತು ಅಹಿಂಸೆ ಇವೆರಡರ ಶ್ರೇಷ್ಠತೆಯನ್ನೂ ಕಲಿಸಬೇಕಾಗುವುದು. ಈ ಮಾತನ್ನು ನಾವು ಒಪ್ಪಬಹುದಾಗಿತ್ತು. 'ಸತ್ಯ ಮತ್ತು ಅಹಿಂಸೆ ಶ್ರೇಷ್ಠ ಎಂದು ನಾವು ಕಲಿಯಬೇಕು' ಎಂದರೆ ಒಪ್ಪಬಹುದಾಗಿತ್ತು; 'ನಮ್ಮ ಮಕ್ಕಳಿಗೆ ಕಲಿಸಬೇಕು' ಎಂದರೆ ಮಾತ್ರ ಒಪ್ಪಬೇಕೆನಿಸುವುದಿಲ್ಲ. ಪ್ರಪಂಚವು ಒಂದು ಸ್ಥಿರವಸ್ತು ಎಂದು ನಮ್ಮ ಕಲ್ಪನೆಯಿದೆಯೆ? ಪ್ರಪಂಚವು ಅಂದಿನಿಂದ ಇಂದಿನವರೆಗೆ, ಎಂದೆಂದಿಗೂ ಸ್ಥಿರವಾದುದು, ಸುಸ್ಥಿರವಾದುದು ಎಂದರೆ ಮಾತ್ರ ಅಂದಿನ ಸತ್ಯ ಇಂದಿಗೂ ಸತ್ಯ, ಇಂದಿನ ಸತ್ಯ ಎಂದಿಗೂ ಸತ್ಯ ಎನಬಹುದಾಗಿತ್ತು. ಆದರೆ ಪ್ರಪಂಚವು ಸಂತತವಾದುದು, ಸ್ಥಿರವಾದುದಲ್ಲ ಎಂದು ಕ್ಷಣಕ್ಷಣ ಬದಲಾಯಿಸುವ ಭಾವನೆಗಳಿಂದ ಹೇಳುವಂತಿದ್ದಾಗ ನಮಗೆ ಸತ್ಯವೆನಿಸಿದ್ದು ನಮ್ಮ ಮಕ್ಕಳಿಗೂ ಸತ್ಯವೆನಿಸಲೇಬೇಕು ಎನುವುದು ದುರಾಗ್ರಹವಾಗುವುದು. ಇದು ಶಿಕ್ಷಣವಲ್ಲ, ಪ್ರಚಾರ (Propaganda). ಸತ್ಯವು ತ್ರಿಕಾಲಾಬಾಧಿತ-ಅದು-ಇದು ಎಂದು ಯಾರಾದರೂ ಶಬ್ದಸಾಗರತರಂಗಗಳನ್ನು ರುಳಿಸಿದರೆ ಅದು ಬರಿಯ ಭಾವನಾಬುರುಗು ಎಂದು ಹೇಳಬಹುದು. ಸತ್ಯವು ಪರಿಸ್ಥಿತಿಯ ಪರಿಣಾಮ; ಪರಿಸ್ಥಿತಿಯನ್ನನುಸರಿಸುವ ಪರಿಣಾಮ, ಆದುದರಿಂದ ದೇಶ-ಕಾಲಗಳಲ್ಲಿ ನಿತ್ಯವಾಗಿ ಭಿನ್ನಸ್ವರೂಪವಾದುದು. ಸತ್ಯದ ವಿಷಯವಾಗಿ ಹೇಳಿದ ಮಾತುಗಳು ಅಹಿಂಸೆಗೂ ಅನ್ವಯಿಸುವವು. ಆದುದರಿಂದ ಸತ್ಯ-ಅಹಿಂಸೆಗಳು ಕೂಡ ಶಿಕ್ಷಣದ ಧ್ಯೇಯವಾಗಲಾರವು ಎಂದೇ ಹೇಳಬೇಕಾಗುವುದು.

ಹೀಗಾಗಿ ಶಿಕ್ಷಣಕ್ಕೆ ಧ್ಯೇಯವಿರುವುದು ಸಯುಕ್ತಿಕವಲ್ಲ ಎಂದು ಮತ್ತೊಮ್ಮೆ ಹೇಳುವೆ.

ಶಿಕ್ಷಣಕ್ಕೆ ಧ್ಯೇಯವಿಲ್ಲ ಎಂಬ ಮಾತಿನಿಂದ ಶಿಕ್ಷಣವೆ ಶಕ್ಯವಿಲ್ಲ, ಶಿಕ್ಷಣವೆಂಬುದು ಶಕ್ಯವಲ್ಲ ಎಂದು ಕಂಡು ಬರುವುದೆಂದು ಯಾರಾದರೂ ತಿಳಿದರೆ ಅವರ ತರ್ಕಸರಣಿ ತಪ್ಪು ಎಂದಿಷ್ಟೆ ಇಲ್ಲಿ ಹೇಳುವೆವು. ಧ್ಯೇಯವಿಲ್ಲದಲ್ಲಿ ಗತಿಯೆ (movement) ಬೇಕಿಲ್ಲ ಎನುವಂತಿದ್ದರೆ ಇಡಿಯ ಪ್ರಪಂಚವನ್ನೆ ಅಲ್ಲಗಳೆದಂತಾಗುವುದು. ಚರಾಚರವಸ್ತುಗಳು ಯಾವ ಧ್ಯೇಯವನ್ನಿಟ್ಟುಕೊಂಡು ಹುಟ್ಟವೆ?

ಭಾರತಕ್ಕೆ ರಾಷ್ಟ್ರೀಯ ಶಿಕ್ಷಣ

ಶ್ರೀ ಆ್ಯನಿ ಬೆಜಂಟರ ಕಲ್ಪನೆ ಮತ್ತು ಕಾರ್ಯ

ಲೇಖಕರು:--ಶ್ರೀಮಾನ್ ಎಂ. ಎಸ್. ಮಾಧವರಾವ್, ಮಂಗಳೂರು



ಶ್ರೀ ಆ್ಯನಿ ಬೆಜಂಟ್

★

ಭಾರತವು ತನ್ನ ಪ್ರಾಚೀನ ಧ್ಯೇಯದರ್ಶನಗಳನ್ನು ಅರಿತು, ಆಧುನಿಕ ಜೀವನಕ್ಕೆ ಅವು ಅನ್ವಯಿಸುವಂತೆ ಮಾಡಬೇಕು—ಎಂಬುದೇ ಶ್ರೀ ಆನಿ ಬೆಜಂಟರ ರಾಷ್ಟ್ರೀಯ ಶಿಕ್ಷಣ ಪ್ರಯೋಗಗಳ ಲಕ್ಷ್ಯವಾಗಿದ್ದಿತು. ಅದಕ್ಕಾಗಿ ಅವರು ಉತ್ತರ-ದಕ್ಷಿಣ ಭಾರತಗಳಲ್ಲಿ, ಸರಕಾರ-ಸಮಾಜಗಳ ಅನಾಸ್ಥೆಯನ್ನು ಎದುರಿಸಿಯೂ, ಎಂತು ಶ್ರಮಬಟ್ಟರು ? .. ..

“ಆತ್ಮಾಭಿಮಾನ, ಆತ್ಮಜ್ಞಾನ, ಆತ್ಮಸಂಯಮಗಳೆ ಜೀವನವನ್ನು 'ಮಹಾಶಕ್ತಿ'ಯನ್ನಾಗಿಸುತ್ತವೆ” ಎಂದು ಟೆನಿಸನ್ ಎಂಬ ಆಂಗ್ಲ ಕವಿ ಹಾಡಿದನು. ಈ ಹಾಡು ವ್ಯಕ್ತಿಗೂ ರಾಷ್ಟ್ರಕ್ಕೂ ಅನ್ವಯಿಸುವಂತಹದು. ಜಗತ್ತಿನ ಶ್ರೇಷ್ಠತಮ ಕರ್ಮಯೋಗಿನಿಯಾದ ಡಾ. ಆ್ಯನಿ ಬೆಜಂಟರು ಅನೇಕ ವ್ಯಕ್ತಿಗಳನ್ನೂ ರಾಷ್ಟ್ರಗಳನ್ನೂ ಪ್ರೋತ್ಸಾಹಿಸಿ ಆ 'ಮಹಾಶಕ್ತಿ'ಯ ದರ್ಶನ ಮಾಡಿಸಿದರು. ಭಾರತಕ್ಕೆ ಅವರ ಪರಿಪಕ್ವ ಜೀವನವೂ ಅನುಭವವೂ ಮೀಸಲಾದವು. ಅವರ ಇಲ್ಲಿಯ ಜೀವನದ ಪ್ರತಿಯೊಂದು ಹೆಜ್ಜೆಯೂ ಆ ಶಕ್ತಿಯ ಸಾಧನವಾಗಿತ್ತು. ಭಾರತೀಯ ಕವಯಿತ್ರಿಯಾದ ಶ್ರೀಮತಿ ಸರೋಜಿನಿ ದೇವಿಯು ಬೆಜಂಟರ ವಿಷಯಕ್ಕೆ 'ತನ್ನ ಧ್ಯೇಯ-ಸ್ವಪ್ನಗಳ ಬಗ್ಗೆ ಭಾರತದ ಭಕ್ತಿ-ಅಭಿಮಾನಗಳನ್ನು ಪುನಃ ಪ್ರಜ್ವಲಿಸುವಂತೆ ಮಾಡಿದ ದಿವ್ಯ ಆತ್ಮವಿದು' ಎಂದು ಹಾಡಿದುದು ಎಷ್ಟು ತಥ್ಯಪೂರ್ಣವಾಗಿದೆ !

ಇದರ ಸಿದ್ಧಿಗಾಗಿ ಆ್ಯನಿ ಬೆಜಂಟರು ಶಿಕ್ಷಣವನ್ನೆ ಮುಖ್ಯ ಸಾಧನವನ್ನಾಗಿ ಉಪಯೋಗಿಸಿದರು. ರಾಷ್ಟ್ರೀಯ ಪುನರುದ್ಧಾರದಲ್ಲಿ ಶಿಕ್ಷಣವೆ ಅವರ ಪ್ರಥಮ ಪ್ರಯತ್ನವಾಗಿತ್ತಲ್ಲದೆ ಆಮರಣವೂ ತಮ್ಮ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯವಾದ ಎಲ್ಲ ಚಟುವಟಿಕೆಗಳಲ್ಲೂ ಜಗತ್ತಿನ ರಾಷ್ಟ್ರಗಳ ಧ್ಯೇಯದರ್ಶನದಲ್ಲಿ ಭಾರತವೂ ಪಾಲುಗೊಳ್ಳುವಂತೆ ಅದಕ್ಕೆ ಶಿಕ್ಷಣವನ್ನು ಒದಗಿಸುವುದನ್ನೆ ತಮ್ಮ ಗುರಿಯನ್ನಾಗಿಟ್ಟುಕೊಂಡಿದ್ದರು.

ಸೆಂಟ್ರಲ್ ಹಿಂದೂ ಕಾಲೇಜ್

೧೯ನೆಯ ಶತಮಾನದಲ್ಲಿ ಆ್ಯನಿ ಬೆಜಂಟರು ಭಾರತಕ್ಕೆ ಬಂದಾಗ ಇಲ್ಲಿ ಎಂತಹ ಶೋಚನೀಯ ಪರಿಸ್ಥಿತಿಯಿತ್ತು! ಜನತೆಗೆ ತಮ್ಮ ಧರ್ಮ, ಧ್ಯೇಯ, ಜೀವನಕ್ರಮಗಳಲ್ಲಿ ಹೇಸಿಕೆ, ಜೀವನದಲ್ಲಿ ಬೇಸರಿಕೆ; ಶ್ರೇಷ್ಠರೆನಿಸಿದವರ ದಾಸ್ಯ-ಅನುಕರಣಗಳ ಪ್ರವೃತ್ತಿ; ಇವೆಲ್ಲದರ ಪರಿಣಾಮವಾಗಿ ದೇಶವು ನೈತಿಕ ಸಾಮಾಜಿಕ ಪರಾಧೀನತೆಯಲ್ಲಿ ಮುಳುಗಿತ್ತು. ಈ ತಾಮಸಿಕತೆಯನ್ನು ನಿವಾರಿಸಿ ಸ್ವದೇಶದ ಇತಿಹಾಸ ಸಂಸ್ಕೃತಿಗಳಲ್ಲಿ ಅಭಿಮಾನಿಯಾಗಿ ಅದರ ಸೇವೆಯಲ್ಲಿ ಹೆಮ್ಮೆಯನ್ನು ಅನುಭವಿಸುವ ಜನಾಂಗವನ್ನು ನಿರ್ಮಿಸಲಿಕ್ಕೆಂದೆ ಕಾಶಿಯಲ್ಲಿ ಸೆಂಟ್ರಲ್ ಹಿಂದೂ ಕಾಲೇಜ್ ಸ್ಥಾಪಿಸಲ್ಪಟ್ಟಿತು.

ಮಿಕ್ಕ ರಾಷ್ಟ್ರಗಳೊಡನೆ ಸಮಾನತೆಯಿಂದ ಹೆಗಲು ಜೋಡಿಸಿ ಭಾರತವೂ ಪುರೋಗಾಮಿಯಾಗಬೇಕೆಂಬ ಪ್ರಬಲವಾದ ಉದ್ದೇಶದಿಂದ ಭಾರತವು ತನ್ನ ಪ್ರಾಚೀನ ಧ್ಯೇಯದರ್ಶನಗಳನ್ನು ತಿಳಿದು ಆಧುನಿಕ ಜೀವನಕ್ಕೆ ಸಮನ್ವಯಿಸುವಂತೆ ಮಾಡಿದ ಸಾಧನಗಳಲ್ಲಿ ಬೆಜಂಟರ ಕಾಲೇಜು ಮೊದಲನೆಯದು. ಅಲ್ಲಿ ಧರ್ಮಕ್ಕೆ ಅಗ್ರಸ್ಥಾನ. ಮೂಢ, ಗತಾನುಗತಿಕ ಧರ್ಮವಲ್ಲ; ತ್ರಿಕಾಲಾಬಾಧಿತವಾದ ಜೀವನತತ್ವಗಳನ್ನು ಅರಿತು ಸ್ವಜನ, ದೇಶ, ಜಗತ್ತುಗಳಿಗೆ ಸ್ವಾರ್ಥರಹಿತ ಜ್ಞಾನಪೂರ್ಣ ಸೇವೆಯನ್ನು ಸಲ್ಲಿಸಿ ಆತ್ಮವಿಕಾಸವನ್ನು ಮಾಡಿಕೊಳ್ಳುವ ಧರ್ಮ. ವಿವಾಹಿತರಿಗೆ ಆ ಸಂಸ್ಥೆಯಲ್ಲಿ ಪ್ರವೇಶವಿರಲಿಲ್ಲ; ಜಾತಿಭೇದಕ್ಕೆ ಎಡೆ

ಯಿರಲಿಲ್ಲ. ಸಮರ್ಥರಾದ ಸ್ವಾರ್ಥತ್ಯಾಗಿಗಳಾದ ಹಲವು ಯುರೋಪಿಯನ್ ಮತ್ತು ಭಾರತೀಯ ಶಿಕ್ಷಕರು ಅನಿರ್ಬಂಧವಾಗಿ ಉಚ್ಚನೀಚ ಭಾವವಿಲ್ಲದೆ ಅಲ್ಲಿಯೆ ಕಲೆತುಕೊಂಡಿದ್ದು, ಮಾನವರೆಲ್ಲ ಒಂದು, ಗುರುಶಿಷ್ಯರು ಸಮಾನರು ಎಂಬ ಭಾವನೆಯನ್ನು ತಮ್ಮ ವರ್ತನದಿಂದಲೆ ಕಲಿಸುತ್ತಿದ್ದರು.

ಅಲ್ಲಿಯ ರಾಷ್ಟ್ರೀಯ ಶಿಕ್ಷಣದ ಉಚ್ಚದರ್ಜೆಯಿಂದ ಮಾತ್ರವಲ್ಲ, ವಿದ್ಯಾರ್ಥಿಗಳಲ್ಲಿ ಬಿತ್ತಲ್ಪಡುವ ಆತ್ಮಾಭಿಮಾನ ಆತ್ಮವಿಕಾಸಗಳ ಭಾವನೆಯಿಂದಲೂ ಅಲ್ಲಿಯ ಕೆಲಸಗಾರರಲ್ಲಿ ಹಾಗೂ ವಿಶಾಲಭಾರತದಲ್ಲಿ ಹೊತ್ತಿಸಲ್ಪಟ್ಟ ಸ್ವಾರ್ಥತ್ಯಾಗದ ಸ್ಫೂರ್ತಿಯಿಂದಲೂ ಸೆಂಟ್ರಲ್ ಹಿಂದೂ ಕಾಲೇಜು ಬಹುಬೇಗ ಭಾರತಕ್ಕೆ ಅತಿಪ್ರಸಿದ್ಧ ಅತಿಜನಪ್ರಿಯ ಸಂಸ್ಥೆಯಾಯಿತು. ಇಂತಹ ಸಂಸ್ಥೆಯಿಂದಲೆ ಮುಂದೆ ರಾಷ್ಟ್ರೀಯ ಹಿಂದೂ ವಿಶ್ವವಿದ್ಯಾಲಯದ ಕಲ್ಪನೆಯು ಕೊನರಿದುದು ಆಶ್ಚರ್ಯವೇನೂ ಅಲ್ಲ. ಮತ್ತು ಆ್ಯನಿ ಬೆಸಂಟರೂ ತಮ್ಮ ಸಂಸ್ಥೆಯನ್ನು ಪ್ರಾರಂಭದಲ್ಲಿಯೆ ಆ ವಿಶ್ವವಿದ್ಯಾನಿಲಯದ ಮೊದಲಮುಡಿಪನ್ನಾಗಿಸಲು ಒಪ್ಪಿದುದೂ ಸಹಜವೆ.

ಕಾಲೇಜ್ ಹಾಲಿನಲ್ಲಿರುವ ಬೆಸಂಟರ ಭಾವಚಿತ್ರದ ಕೆಳಗಡೆಯಲ್ಲಿ—

> ಸದ್ಬುದ್ಧಿಮುಗ್ಧವಾಣೀನ-ವಾತ್ಸಲ್ಯಸ್ತೋತ್ರಮೇನ ಚ ।
> ಮಾತೇಯಂ, ಮಾತರೋಸ್ಮಾಕಂ ಕೇವಲಂ ಜನ್ಮಹೇತವಃ ॥

ಎಂದರೆ 'ನಮ್ಮ ತಾಯಂದಿರು ಬರಿ ಜನ್ಮಕೊಟ್ಟವರು ಆದರೆ ಈ ಮಾತೆಯು ಸದ್ಬುದ್ಧಿ ಮತ್ತು ವಾತ್ಸಲ್ಯಗಳ ಹಾಲಿನಿಂದ ಪೋಷಿಸಿದವಳು' ಎಂದು ಅಲ್ಲಿಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಒಮ್ಮತದಿಂದ ಬರೆದು ಹಾಕಬೇಕಾದರೆ ಬೆಸಂಟರ ವಿಷಯಕ್ಕೆ ಅವರಿಗಿದ್ದ ಆದರ ಭಕ್ತಿಗಳು ವ್ಯಕ್ತವಾಗುತ್ತವೆ. ಬೆಸಂಟರಿಗೆ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಗೌರವಾರ್ಥ ಪದವಿಗಳು ದೊರೆತಿದ್ದವು. ಆದರೆ ಹಿಂದೂ ವಿಶ್ವವಿದ್ಯಾನಿಲಯದಿಂದ ತಮಗೆ ಅರ್ಪಿಸಲ್ಪಟ್ಟ 'ಡಾಕ್ಟರ್ ಆಫ್ ಲಾಜ್' ಎಂಬ ಪದವಿಯ ವಿಷಯಕ್ಕೆ ಅವರಿಗೆ ಹೆಚ್ಚಿನ ಹೆಮ್ಮೆ ಮತ್ತು ಪ್ರೇಮವೆನಿಸುತ್ತಿತ್ತು.

ದಕ್ಷಿಣಭಾರತದಲ್ಲಿ

ಆ್ಯನಿ ಬೆಸಂಟರು ಥಿಯೊಸೊಫಿಕಲ್ ಸೊಸಾಯಿಟಿಯ ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟು ಅವರ ಕಾರ್ಯಕೇಂದ್ರವು ಅಡ್ಯಾರಕ್ಕೆ ಸಾಗಿಸಲ್ಪಟ್ಟುದರಿಂದ ಉತ್ತರಭಾರತದಲ್ಲಿ ಮುಖ್ಯವಾಗಿ ಇದುವರೆಗೆ ನಡೆದ ಅವರ ಶೈಕ್ಷಣಿಕ ಚಟುವಟಿಕೆಗಳು ಈಗ ದಕ್ಷಿಣಭಾರತಕ್ಕೂ ಹಬ್ಬಿದವು. ಮದನಪಲ್ಲಿಯಲ್ಲಿ ಸ್ಥಾಪಿಸಲ್ಪಟ್ಟ ಒಂದು ಹೈಸ್ಕೂಲೆ ಅದರ ಪ್ರಥಮ ಕೇಂದ್ರವಾಯಿತು; ಬಹು ಬೇಗ ಅದು ಕಾಲೇಜು ಆಯಿತು. ಉತ್ತರದಲ್ಲಿ ಅರಿತು ನುರಿತ ಹಲವು ಕೆಲಸಗಾರರೆ ಇಲ್ಲಿಗೆ ಬಂದು ದುಡಿಯಹತ್ತಿದರು. ಶೀಘ್ರದಲ್ಲಿ ಮದನಪಲ್ಲಿಯು ಕಾಶಿಯಷ್ಟೆ ಊರ್ಜಿತಾವಸ್ಥೆಗೆ ಬಂದು ದೂರದೂರದ ಜ್ಞಾನಭಿಕ್ಷುಗಳನ್ನು ಆಕರ್ಷಿಸತೊಡಗಿತು.

ರಾಷ್ಟ್ರೀಯ ವಿಶ್ವವಿದ್ಯಾನಿಲಯ

ಆ್ಯನಿ ಬೆಸಂಟರು ಹೋಮರೂಲ್ (ಸ್ವರಾಜ) ಆಂದೋಲನವನ್ನು ಉಗ್ರವಾಗಿ ನಡೆಸುತ್ತಿರುವಾಗಲೆ, ಸರಕಾರದ ಯಾವ ವಿಧದ ಸಹಾಯವನ್ನೂ ಅಪೇಕ್ಷಿಸದೆ ಕಾರ್ಯ ಮಾಡುವ ಒಂದು ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಸಂಕಲ್ಪವು ಮಾಡಲ್ಪಟ್ಟಿತು. ಜನತೆಯ ರಾಷ್ಟ್ರ ಜಾಗೃತಿಯಿಂದ ಆ ಸಂಕಲ್ಪಕ್ಕೆ ಬೆಂಬಲವೂ ಸಿಕ್ಕಿತು. ...ರಲ್ಲಿ ಅಡ್ಯಾರದಲ್ಲಿ ರಾಷ್ಟ್ರೀಯ ಶಿಕ್ಷಣ ಪ್ರಸಾರಕ್ಕಾಗಿ ಸಂಘವು ರವೀಂದ್ರನಾಥ ಠಾಕೂರರಿಂದ ಸ್ಥಾಪಿಸಲ್ಪಟ್ಟಿತು. ರವೀಂದ್ರರೆ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಆ ವಿಶ್ವವಿದ್ಯಾನಿಲಯದ ಸಂಸ್ಥೆಗಳು ಅಡ್ಯಾರದಲ್ಲಿಯೂ ಮದ್ರಾಸಿನಲ್ಲಿಯೂ ಇದ್ದುದಲ್ಲದೆ ಬೇರೆ ಊರುಗಳಲ್ಲಿ ಅದರ ಅನೇಕ ಅಂಗಸಂಸ್ಥೆಗಳೂ ಇದ್ದವು. ಮಾನವಪ್ರಕೃತಿಗೆ ತಕ್ಕಂತೆ ಬಾಲ್ಯದಿಂದ ಪ್ರೌಢನಾಗುವವರೆಗೆ ಯೋಗ್ಯವಾದ ಪದ್ಧತಿಯಲ್ಲಿ ತಾನಿರುವ ಸಮಾಜ-ದೇಶಗಳ ಸತ್ಪ್ರಜೆಯಾಗಿ ಜಗತ್ತಿಗೆ ತನ್ನದೊಂದು ವಿಶಿಷ್ಟ ಸಂದೇಶವನ್ನು ಬೀರಲು ವಿದ್ಯಾರ್ಥಿಗಳು ಸಮರ್ಥರಾಗುವಂತೆ ಅಲ್ಲಿಯ ಅಭ್ಯಾಸಕ್ರಮಗಳು ಸಿದ್ಧಗೊಳಿಸಲ್ಪಟ್ಟಿದ್ದವು. ಪ್ರಾಥಮಿಕ ಶಿಕ್ಷಣ, ಉಚ್ಚ ಶಿಕ್ಷಣ ಮೊದಲ್ಗೊಂಡು ಉಚ್ಚ ವೈಜ್ಞಾನಿಕ, ವ್ಯಾವಸಾಯಿಕ ಶಿಕ್ಷಣದ ವರೆಗೂ! ವಿಶೇಷ ಮಾಡಲ್ಪಟ್ಟಿತ್ತು. ಬೌದ್ಧಿಕವಲ್ಲದೆ ಒಕ್ಕಲುತನ, ಉದ್ಯೋಗ, ರಸಾಯನಶಾಸ್ತ್ರ, ಶಿಕ್ಷಣಕಲೆ, ವ್ಯಾಪಾರ, ಪತ್ರಿಕಾವ್ಯವಸಾಯ ಮೊದಲಾದ ಶಿಕ್ಷಣಗಳಿಗೂ ವಿವಿಧ ಕಾಲೇಜುಗಳು ಏರ್ಪಟ್ಟಿದ್ದವು. ... ಶಿಕ್ಷಣವನ್ನು ಹೊಂದಿದ ವಿದ್ಯಾರ್ಥಿಯು ವಿಶ... ತನಗೆ ಮೆಚ್ಚುಗೆಯೆನಿಸಿದ ಬೇಕಾದ ವ್ಯವಸಾಯದಲ್ಲಿ ಜೀವನವನ್ನು ಸಾಗಿಸಲು ಸಮರ್ಥನಾಗುವಂತೆ ಶಿಕ್ಷಣವು ಅಲ್ಲಿ ಸಾಗುತ್ತಿತ್ತು. ಅಲ್ಲಿಂದ ಹೊರಬಂದವರು ವಿಶಾಲವಾದ ರಾಷ್ಟ್ರನಿರ್ಮಿತಿಯಲ್ಲಿ ಉತ್ಸಾಹದ ಮುಂದಾಳು 'ಫೆಲೊ...'ರಾಗಲರ್ಹರಾಗಿದ್ದರು.

ಮತ್ತು 'ನ್ಯೂ ಎರಾ' ಎಂಬ ಜನಪ್ರಿಯ ಶಾಲೆಗಳೂ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಸಿದ್ಧರಾದ ಶಿಕ್ಷಕರಿಂದ ನಡೆಸಿದವು. ಸಾದಾ, ಕಲಾಪೂರ್ಣ, ಮಿತವ್ಯಯಿ, ಸ್ವಾವಲಂಬಿಯಾದ ಜೀವನಕ್ಕೂ ಭಾವನಾತ್ಮಕ, ಬೌದ್ಧಿಕ, ಶಾರೀರಿಕ ಪ್ರಗತಿಗೂ ಅನುಕೂಲಿಸುವಂತಹ ವಸತಿಗೃಹಗಳು ತೆರೆಯಲ್ಪಟ್ಟಿದ್ದವು. ಆ ಶಾಲೆಗಳೊಳಗಿನ ಕಲ್ಪನೆಗಳೂ ಕಾರ್ಯಗಳೂ ಬಹಳ ಪರಿಣಾಮಕಾರಿಯಾದುದರಿಂದಲೆ ಸರಕಾರದವರೂ ಇತ್ತೀಚೆ ಅವನ್ನು ಅನುಕರಿಸುತ್ತಾರೆ.

ರಾಜಕೀಯ ರಂಗದ ಪರಿಣಾಮ

ಆದರೆ ರಾಜಕೀಯ ಪರಿಸ್ಥಿತಿಯು ವ್ಯತ್ಯಸ್ತವಾದಂತೆ ಜನರ ರಾಷ್ಟ್ರೀಯ ಶಿಕ್ಷಣ ಪ್ರೇಮವೂ ಮಸುಳಿಸಹತ್ತಿತು. ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಸರಕಾರವು ಮನ್ನಿಸದ್ದುದು ವಿದ್ಯಾರ್ಥಿಗಳ ಪಾಲಕರಿಗೆ ದೊಡ್ಡ ತೊಂದರೆ ಎನಿಸಿತು. ಫಂಡು ಕಡಿಮೆಯಾಗಹತ್ತಿದ್ದರಿಂದ ವೆಚ್ಚದ ಹೊಣೆಯೆಲ್ಲ ಆ್ಯನಿ ಬೆಜಂಟರ ಮೇಲೆಯೆ ಬಿತ್ತು. ಸಾರ್ವಜನಿಕರು ರಾಜಕೀಯ ಚಳವಳಿಯ ಪ್ರಚಾರದೃಷ್ಟಿಯಿಂದ ಮಾತ್ರ ರಾಷ್ಟ್ರೀಯ ಶಿಕ್ಷಣಕ್ಕೆ ಬೆಂಬಲಕೊಟ್ಟರೇ ಹೊರತು ಶಿಕ್ಷಣಕ್ರಮದಲ್ಲಿ ವ್ಯತ್ಯಾಸವಾಗಬೇಕೆಂಬ ಆವಶ್ಯಕತೆಯನ್ನೆ ಮನಗಂಡಿರಲಿಲ್ಲ. ಈ ಸಂಗತಿಯು ಅಸಹಕಾರ ಚಳವಳಿಯು ಪ್ರಾರಂಭವಾದ ಮೇಲೆ ಸ್ಪಷ್ಟವಾಯಿತು. ಆಗ ವಿದ್ಯಾರ್ಥಿಗಳು ಸರಕಾರಿ ಶಾಲೆಕಾಲೇಜುಗಳಿಗೆ ಬಹಿಷ್ಕಾರ ಹಾಕಿ ಹೊರಬಿದ್ದರು. ರಾಜಕೀಯ ಮುಂದಾಳುಗಳು ಈಗಾಗಲೆ ಸ್ಥಾಪಿಸಲ್ಪಟ್ಟಿರುವ ರಾಷ್ಟ್ರೀಯ ಸಂಸ್ಥೆಗಳಿಗೆ ಸಹಾಯವನ್ನು ಮಾಡಲಿಲ್ಲ. ಹೊಸ ಸಂಸ್ಥೆಗಳನ್ನು ಹೊರಡಿಸುವದರಲ್ಲಿ ಧನದ ಅಪವ್ಯಯ ಮಾಡಿದರು; ಹೊಸ ಸಂಸ್ಥೆಗಳ ಬಗ್ಗೆ ಆವಶ್ಯಕವಾದ ಪರಿಹಾರವನ್ನೂ ಮಾಡದೆ ವಿದ್ಯಾರ್ಥಿಗಳನ್ನು ನಡುನೀರಲ್ಲಿ ಕೈಬಿಟ್ಟರು. ಬೆಜಂಟರ ಸಂಸ್ಥೆಗಳಲ್ಲಿ ಮಾತ್ರ ಹಿಂದೀ, ಔದ್ಯೋಗಿಕ ಶಿಕ್ಷಣ ಮುಂತಾದ ಈಗಿನ ಯೋಜನೆಗಳೂ ಕಾರ್ಯರೂಪದಲ್ಲಿ ಇಳಿಸಲ್ಪಟ್ಟಿದ್ದವು. ಸರಕಾರದೊಡನೆ ಯಾವ ಸಂಬಂಧವೂ ಇರಲಿಲ್ಲ. ಆ್ಯನಿ ಬೆಜಂಟರು ಅಸಹಕಾರಿಗಳಾಗದಿದ್ದುದೆ ಜನತೆಯ ಈ ಅತಿಸ್ಥಿತಿಕ್ಕೆ ಕಾರಣವೆನ್ನಬಹುದು.

ಜೀವಧಾರಣೆ

ಸಾರ್ವಜನಿಕ ಪ್ರೋತ್ಸಾಹ ಕಡಿಮೆಯಾದುದರಿಂದ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಅನೇಕ ಚಟುವಟಿಕೆಗಳನ್ನು ತಗ್ಗಿಸಿ ಬೆಜಂಟರ ಇಷ್ಟಾನುಸಾರ ಸ್ವಲ್ಪವಿದಿಂದ ಸ್ವಾರ್ಥತ್ಯಾಗದಿಂದ ಕೆಲಸ ಮಾಡಬಲ್ಲ ತುಸು ಮಂದಿಗೆ ಸಾಧಿಸುವಷ್ಟೆ ಚಟುವಟಿಕೆಗಳನ್ನು ಇಟ್ಟುಕೊಳ್ಳಲಾಯಿತು. ಆದ್ದರಿಂದ ಅಡ್ಯಾರದ ಹೈಸ್ಕೂಲು, ಮಂಗಳೂರಿನ ಬಾಲಿಕಾಶಾಲೆ, ಮದನಪಲ್ಲಿಯ ಶಾಲೆ-ಕಾಲೇಜುಗಳು, ಕಾಶಿಯ ಇಂಟರ್ ಆರ್ಟ್ಸ್ ಮತ್ತು ಸ್ತ್ರೀಯರ ಆರ್ಟ್ಸ್ ಕಾಲೇಜು ಈವರೆಗೂ ಜೀವಧಾರಣ ಮಾಡಿಕೊಂಡಿವೆ. ಇವು ಈಗ ಅಷ್ಟು ಸರ್ವಜನಪ್ರಿಯವಾಗಿಲ್ಲವಾದರೂ ಇವುಗಳಲ್ಲಿಯ ಕೆಲಸಗಾರರಲ್ಲಿಯ ಮತ್ತು ವಿದ್ಯಾರ್ಥಿಗಳಲ್ಲಿಯ ಸ್ಫೂರ್ತಿ ಅಭಿಮಾನಗಳೆ ಇವುಗಳ ಮಹತ್ವಕ್ಕೆ ಸಾಕ್ಷಿಯಾಗಿವೆ.

ಕ್ರಮವಾಗಿ ಈ ಸಂಸ್ಥೆಗಳಲ್ಲಿ ಮಕ್ಕಳು ಮತ್ತು ಅವುಗಳ ಸ್ವಭಾವದ ಕಡೆಗೆ ಪ್ರಾಮುಖ್ಯವಾಗಿ ಗಮನವನ್ನು ಕೊಡಬೇಕಾದುದು ಅತ್ಯಾವಶ್ಯಕವೆಂಬುದನ್ನು ಮನವರಿತು ಅದಕ್ಕನುಸರಿಸಿ ಶಿಕ್ಷಣದ ಏರ್ಪಾಡುಗಳು ಮಾಡಲ್ಪಡುತ್ತಿವೆ. ಧಾರ್ಮಿಕ, ಸಾಮಾಜಿಕ ಪರಂಪರೆ ಇಲ್ಲವೆ ಮೂಢ ಭಾವನೆಗಳಿಂದ ಮಕ್ಕಳ ಮನಸ್ಸು ಕಲುಷಿತವಾಗದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗುತ್ತಿದೆ. ಸ್ವಂತ ಅನುಭವದಿಂದ ಆತ್ಮಪ್ರೇರಿತ ನಿರ್ಲಿಪ್ತ ಚಟುವಟಿಕೆಗಳಿಂದ ಉಂಟಾದ ಜ್ಞಾನದ ಮೇಲೆ ಮಿದುಳೂ ಕ್ರಿಯಾಶಕ್ತಿಯೂ ಎಚ್ಚರಿಸಲ್ಪಡುತ್ತವೆ. ಭಾವೀ ಸಂಸ್ಕೃತಿಗೆ ತಕ್ಕವರಾಗಿ ಸಮರ್ಥರಾದ ಸ್ತ್ರೀಪುರುಷರಾಗುವಂತೆ ಮಕ್ಕಳಿಗೆ ಶಿಕ್ಷಣ ಕೊಡಲ್ಪಡುತ್ತಿದೆ. ಧರ್ಮದ ಹೆಸರಿನಲ್ಲಿ ಮಾನವಲೋಕವನ್ನು ವಿವಿಧ ರೀತಿಯಲ್ಲಿ ಕಷ್ಟಪರಂಪರೆಗಳಿಗೆ ಗುರಿಮಾಡಿದ ಮತ-ಪಂಥಗಳ ಭ್ರಾಂತಿಗಳು ಇಲ್ಲಿ ತಲೆ ಹಾಕುವಂತಿಲ್ಲ. ಭಾರತೀಯ ಪ್ರಜೆಗಳು ತಮ್ಮ ಅಹಿಂಸೆ, ನಿಸ್ಪೃಹತೆಗಳ ಸಂದೇಶವನ್ನು ಜಗತ್ತಿಗೆ ನೀಡುವಂತೆ ಸಮರ್ಥರನ್ನಾಗಿ ಮಾಡುವದೆ ಈ ಸಂಸ್ಥೆಗಳ ಉದ್ದೇಶವೆಂಬುದು ಇಲ್ಲಿಯ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಹವಾಸದಿಂದ ಸ್ಪಷ್ಟವಾಗದಿರದು.

ಸರ್ವೋಪಾಸನೆ

ಅಹಿಂಸೆ ಮತ್ತು ನಿಸ್ಪೃಹತೆಗಳಿಲ್ಲದಿದ್ದರೆ ಅಂತರಾಷ್ಟ್ರೀಯ ಕುಲಗೆಟ್ಟು, ಪರಪೀಡೆಯ ಆಸುರೀವೃತ್ತಿಯುಳ್ಳದಾಗುವದು. ಜಪಾನ, ಜರ್ಮನಿ, ಇಟಲಿ ಮುಂತಾದ ದೇಶಗಳು ಕ್ರಮೇಣ ಅತ್ತಕಡೆಗೆ ಜಾರುತ್ತಿರುವದು ಈಗ ತೋರುವದಿಲ್ಲವೇ? 'ಟೆನಿಸನ್' ಕವಿ ಇದನ್ನೂ ತಿಳಿದವನಾಗಿದ್ದ. ಆದುದರಿಂದಲೆ 'ಮಹಾಶಕ್ತಿ' ಎಂಬ ಶಬ್ದದ ಮುಂದೆಯೆ

ಅವನು ಹೀಗೆ ಜೋಡಿಸಿದ್ದಾನೆ: "ಶಕ್ತಿಯು ಅಧಿಕಾರ ಕ್ಕಾಗಿಯಲ್ಲ; ಸತ್ಯವು ಚಿರಂಜೀವಿಯಾದುದರಿಂದ ಪರಿಣಾಮವನ್ನು ಲೆಕ್ಕಿಸದೆ ಸತ್ಯವನ್ನೆ ಅನುಸರಿಸುವದಕ್ಕೇ ಆ ಮಹಾಶಕ್ತಿ.' ಜೀವನದ ಜಂಜಾಲದೊಳಗಿಂದ ಸತ್ಯವನ್ನು ಹುಡುಕಿ ಅದನ್ನನುಸರಿಸುವ ಗುಣವನ್ನು ಮಗುವಿನಲ್ಲಿ ಬೀರುವದೆ ಶಿಕ್ಷಣದ ಗುರಿ. ಆ್ಯನಿ ಬೆಜಂಟರ ದಿವ್ಯ ದೃಷ್ಟಿಯು ಭಾರತದ ಮತ್ತು ಜಗದ ಭವಿತವ್ಯವನ್ನು ಕಂಡು ದರಿಂದಲೆ ಭಾರತವು ತನ್ನ ಸೇವೆಯನ್ನು ಜಗಕ್ಕೆ ಸಲ್ಲಿಸಲು ಅನುವಾಗುವಂತಹ ಶಿಕ್ಷಣಕ್ರಮವನ್ನು ಅವರು ಕಲ್ಪಿಸಿದರು. ಅವರ ಸ್ವಾರ್ಥತ್ಯಾಗ ಹಾಗೂ ವ್ಯವಸ್ಥಾಪ್ರಭಾವಗಳೆ ಅವರು ಕೈಕೊಂಡ ಕಾರ್ಯಗಳು ಮೂಲದಲ್ಲಿಯೆ ಫಲಿಸುವಂತೆ ಮಾಡಿದವು.*

---

* ಲೇಖಕರು ಶ್ರೀ ಆನಿ ಬೆಜಂಟರ ಸಂಗಡಿಗರು; ಅಡ್ಯಾರದಲ್ಲಿಯ ಶಿಕ್ಷಣಪ್ರಯೋಗಗಳಲ್ಲಿ ಸಹಕಾರಿಗಳು. ಮ. ಗಾಂಧಿಯವರ ಹರಿಜನ ಆಂದೋಲನ ಪ್ರಾರಂಭವಾಗುವ ಮೊದಲೆ ಬಹುಕಾಲದಿಂದ ಮಂಗಳೂರಿನಲ್ಲಿ ಯಶಸ್ವಿಯಾಗಿ ನಡೆದುಬಂದ 'ಡಿಪ್ರೆಸ್ಡ್ ಕ್ಲಾಸಿಸ್ ಮಿಶನ' ಸಂಸ್ಥೆಯ ಮೇಲ್ವಿಚಾರಕರಾಗಿ ಮೊನ್ನೆಮೊನ್ನೆಯವರೆಗೆ ಕೆಲಸಮಾಡಿರುವರು.

ನಮ್ಮ ಶಿಕ್ಷಣಪದ್ಧತಿಯ ದೋಷವೆಲ್ಲಿ ?

ಲೇಖಕರು:—ಶ್ರೀ. ಕಾ. ಗ. ವರ್ಟಿ, ಎಂ. ಎ., ಬಿ. ಟಿ., ಹೆಡ್‌ಮಾಸ್ಟರ್ ಹೈಸ್ಕೂಲ್, ಗೋಕಾಕ

ಶ್ರೀಯುತರು ಉತ್ತರಕರ್ನಾಟಕದ ಹೆಸರುವಾಸಿಯಾದ ಶಿಕ್ಷಕರೂ ಶಿಕ್ಷಣತಜ್ಞರೂ ಆಗಿರುವರು. ಈಗಿನ ಶಿಕ್ಷಣಕ್ರಮವು ವಿಶೇಷ ಸದೋಷವಾದುದಾಗಲಿ ಅನ್ಯರಾಷ್ಟ್ರಗಳೊಡನೆ ಹೋಲಿಸಿದರೆ ಕಡಿಮೆಯದಾಗಲಿ ಇಲ್ಲವೆಂದು ಅವರ ಅಭಿಪ್ರಾಯ. ಪರರಾಷ್ಟ್ರಗಳಲ್ಲಿರುವ ಸುಸಂಪನ್ನತೆಯ ಅಭಾವ, ಮಾತೃಭಾಷೆಯು ಮಾಧ್ಯಮವಾಗದಿರುವಿಕೆ, ಇದ್ದ ಪದ್ಧತಿಯನ್ನೆ ಸಜೀವವಾಗಿ ಸರಸವಾಗಿ ಉಪಯೋಗಿಸದಿರುವಿಕೆ, ಪಠ್ಯವಿಷಯಗಳಿಗೂ ವ್ಯವಹಾರಕ್ಕೂ ಸಂಯೋಗವನ್ನುಂಟುಮಾಡದಿರುವಿಕೆ—ಇವೆ ಈಗಣ ಕ್ರಮವು ಬಂಜೆಯಾಗಲಿಕ್ಕೆ ಕಾರಣವೆಂದು ಅವರು ಹೇಳುವರು. ಶಿಕ್ಷಕರಿಗೆ ವೃತ್ತಿಸ್ಥೈರ್ಯವನ್ನು ಕಲ್ಪಿಸಿಕೊಡುವುದು ಆದ್ಯಕರ್ತವ್ಯವೆಂದು ಅವರು ಒತ್ತಿ ಹೇಳುವರು.

ಶಿಕ್ಷಣತಜ್ಞರೂ ಶಿಕ್ಷಕರೂ ಮತ್ತು ಶಿಕ್ಷಣದಂಥ ಸಾಮಾನ್ಯ ವಿಷಯದ ಮೇಲೆ ವಿಚಾರ ಮಾಡುವ ಬೇರೆ ಜನರೂ ನಮ್ಮ ಬಾಲಕರ ಶಿಕ್ಷಣದಲ್ಲಿ ಅವಶ್ಯವಿದ್ದ ...ತ್ಯಂತಿಕ ಸುಧಾರಣೆಗಳನ್ನು ಕುರಿತು, ಎಷ್ಟೋ ಸಾರೆ ...ಖನಗಳನ್ನೂ ವ್ಯಾಖ್ಯಾನಗಳನ್ನೂ ಪ್ರಕಟಿಸಿದ್ದಾರೆ. ...ವರೂ ಶಿಕ್ಷಣತಜ್ಞರಾಗಲಿ, ಅಥವಾ ಶಿಕ್ಷಣಾಧಿಕಾರಿ...ಗಳಾಗಲಿ, ಏರ್ಪಡಿಸಿದ ಸುಧಾರಣೆಗಳು, ಇನ್ನೂ ಅಪೂರ್ಣ...ವಾಗಿರುವಂತೆ ಕಾಣುವದು. ಸದ್ಯದ ಶಿಕ್ಷಣಪದ್ಧತಿಯು ...ದೋಷವಿದ್ದು, ಶಿಕ್ಷಣ ಕ್ರಮದಲ್ಲಿ ಬದಲಾವಣೆಯಾದ ...ಹೊರತು ಹುಡುಗರಿಗೆ ದೊರಕುವ ಶಿಕ್ಷಣವು ಪರಿಣಾಮ...ದಾಗುವದಿಲ್ಲೆಂದು ಹಲವರು ಹೇಳುವರು. ಇನ್ನು ಕೆಲ...ವರು, ನಮ್ಮ ಶಿಕ್ಷಣಕ್ರಮದಲ್ಲಿ ರಾಷ್ಟ್ರೀಯತ್ವದ ಸಂಪೂರ್ಣ ...ಅಭಾವವಿದ್ದದರಿಂದ ಈ ಶಿಕ್ಷಣವು ನಿರುಪಯೋಗವಾಗು...ವದು, ಅದನ್ನು ತೆಗೆದುಹಾಕಿ ಅದರ ಸ್ಥಳದಲ್ಲಿ ಹೊಸ...ದಾಗಿ ತಯಾರಿಸಿದ ಯೋಜನೆಯನ್ನು ಅನುಸರಿಸ...ಬೇಕೆಂದು ಪ್ರತಿಪಾದಿಸುವರು. ಇವೆಲ್ಲ ಸಂಗತಿ ಸೂಚನೆಗಳ ...ಗೊಂದಲದಲ್ಲಿ, ಸಾಮಾನ್ಯ ಜನರಿಗೆ, ನಮ್ಮ ಶಿಕ್ಷಣದ ಮುಖ್ಯಪ್ರಶ್ನೆ ಯಾವದು ಮತ್ತು ಅದನ್ನು ಬಿಡಿಸಲಿಕ್ಕೆ ...ಪಾಯಗಳಾವವು ಎಂಬ ವಿಷಯದಲ್ಲಿ ಸ್ಪಷ್ಟವಾಗಿ ತಿಳಿ...ಯದಂತಾಗಿದೆ. ಶಿಕ್ಷಣತಜ್ಞರಲ್ಲಿ, ಶಿಕ್ಷಣಾಧಿಕಾರಿಗಳಲ್ಲಿ ...ಸರಕಾರದ ಶಿಕ್ಷಣಮಂತ್ರಿಗಳಲ್ಲಿ ಇನ್ನೂ ಒಮ್ಮನ...ವಿಲ್ಲಂತೆ ಕಾಣುತ್ತದೆ. ಪ್ರಾಯಶಃ ಈ ಕಾರಣ... ಈ ಪ್ರಶ್ನೆ ಬಿಡಿಸುವದನ್ನು ಮುಂದೆ ಹಾಕುವ ...ನಿಂದ, ಮುಂಬಯಿ ಸರಕಾರದವರು ಸಹ ಕೆಲವು ...ಣಸಮಿತಿಗಳನ್ನು ನೇಮಿಸಿ ಅವುಗಳ ಅಭಿಪ್ರಾಯಗಳನ್ನು ದೊರಕಿಸಿರುವರು. ಹೀಗಾದಾಗ್ಯೂ ಈ ಪ್ರಶ್ನೆಯನ್ನು ತಕ್ಕರೀತಿಯಿಂದ ಬಿಡಿಸುವದಂತೂ ಒತ್ತಟ್ಟಿಗಿರಲಿ, ಆದರೆ ಇದರಿಂದ ಭಿನ್ನಾಭಿಪ್ರಾಯಗಳೇ ಹೆಚ್ಚುತ್ತ ನಡೆದಿರುತ್ತವೆ.

ಶಿಕ್ಷಣದ ಕಾರ್ಯಕ್ಷಮತೆಯು ಅಥವಾ ಉತ್ಪಾದಕತ್ವವು ವಿಶೇಷವಾಗಿ ನಾಲ್ಕು ಸಂಗತಿಗಳನ್ನು ಅವಲಂಬಿಸಿರುತ್ತದೆ. ಅವುಗಳಲ್ಲಿ ಶಿಕ್ಷಣದ ಉದ್ದೇಶವು ಮೊದಲನೆಯದು. ದೇಶದೊಳಗಿನ ಶಿಕ್ಷಣಪದ್ಧತಿಯ ರಾಷ್ಟ್ರೀಯತ್ವ ಅಥವಾ ಅರಾಷ್ಟ್ರೀಯತ್ವವನ್ನು ನಿಶ್ಚಯಿಸಬೇಕಾದರೆ ಅದರ ಅಂತಿಮ ಉದ್ದೇಶವನ್ನೇ ಪರಿಶೀಲಿಸಬೇಕಾಗುವದು. ನಮ್ಮ ಸರ್ವಸಾಧಾರಣ ಭಾವನೆಯ ಪ್ರಕಾರ ಇಂಗ್ಲಂಡ್, ಜರ್ಮನಿ, ಫ್ರಾನ್ಸ್ ಮುಂತಾದ ಮುಂದುವರಿದ ದೇಶಗಳ ಶಿಕ್ಷಣಪದ್ಧತಿಗಳು ರಾಷ್ಟ್ರೀಯವೆಂದು ನಾವು ತಿಳಿಯುವೆವು. ಆದರೂ ಆ ಎಲ್ಲ ಶಿಕ್ಷಣಪದ್ಧತಿಗಳ ಮುಖ್ಯ ಉದ್ದೇಶಗಳೆಂದರೆ ರಾಷ್ಟ್ರದೊಳಗಿನ ವಿದ್ಯಾರ್ಥಿಗಳಲ್ಲಿ ಸಂಪೂರ್ಣವಾದ ವ್ಯಕ್ತಿತ್ವವನ್ನು ಬೆಳೆಸುವದು, ತಮ್ಮ ತಮ್ಮ ಸಂಘಗಳಲ್ಲಿ ಉಪಯುಕ್ತವಾದ ವ್ಯಕ್ತಿಗಳನ್ನು ನಿರ್ಮಾಣಮಾಡುವದು ಮತ್ತು ತಮ್ಮ ದೇಶದ ಜನರನ್ನು ನಾಗರಿಕರನ್ನಾಗಿ ಮಾಡುವದು, ಮೊದಲಾದವುಗಳಾಗಿರುತ್ತವೆ. ಹಿಂದುಸ್ತಾನದಲ್ಲಿ ಪ್ರಚಲಿತವಾದ ಶಿಕ್ಷಣಪದ್ಧತಿಯನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸಲಾಗಿ ಈ ಪದ್ಧತಿಯ ಆದ್ಯ ಪ್ರವರ್ತಕರಾದ ಲಾರ್ಡ್ ಮೇಕಾಲೆ ಮತ್ತು ಲಾರ್ಡ್ ಬೆಂಟಿಂಕ್ ಅವರ ಮುಖ್ಯ ಉದ್ದೇಶವು ಕಂಪನಿ ಸರಕಾರದವರಿಗೆ ಬೇಕಾಗುವ ಇಂಗ್ಲಿಷ್ ಬಲ್ಲ ಕಾರಕೂನರನ್ನು ತಯಾರಿಸುವದಿದ್ದಾಗ್ಯೂ ರಾಜಕಾರಣ

ದಲ್ಲಿ ಪ್ರಮುಖ ಭಾಗವನ್ನು ವಹಿಸಿ ರಾಜ್ಯಕಾರಭಾರ ದಲ್ಲಿ ಸಹ ತಮ್ಮ ನೈಪುಣ್ಯವನ್ನು ತೋರಿಸುವ ಮುಂದಾಳು ಗಳನ್ನೂ ಈ ಪದ್ಧತಿಯು ತಯಾರುಮಾಡಿದೆ. ಆದ್ದರಿಂದ ಈಗಿನ ಶಿಕ್ಷಣಪದ್ಧತಿಯ ಮೇಲೆ ಟೀಕೆ ಮಾಡುವವರು ಹೇಳುವಷ್ಟು ಅದು ಸದೋಷವಾಗಿಲ್ಲೆಂದು ಹೇಳಬಹುದು. ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಓದಲಿಕ್ಕೆ ಮತ್ತು ಬರೆಯಲಿಕ್ಕೆ ಕಲಿಸುವದೂ ಗಣಿತ ವಿಷಯದ ಪ್ರಾಥ ಮಿಕ ಜ್ಞಾನವನ್ನೂ ಮಾಡಿಕೊಡುವದೂ ಸರ್ವಸಾಧಾರಣ ನಿಯಮವಾಗಿದೆ. ಕೆಲವೆಡೆಯಲ್ಲಿ ಪ್ರಾಥಮಿಕ ಶಿಕ್ಷಣದ ಕಾಲಮರ್ಯಾದೆಯು ನಾಲ್ಕು ವರ್ಷ ಮತ್ತು ಕೆಲವೆಡೆಯಲ್ಲಿ ಆರು ಅಥವಾ ಏಳು ವರ್ಷಗಳಿದ್ದು ರಾಷ್ಟ್ರದ ಸಾಂಪತ್ತಿಕ ಸ್ಥಿತಿಯನ್ನನುಸರಿಸಿ ಕೆಲವು ವರ್ಷಗಳ ವರೆಗೆ ಈ ಶಿಕ್ಷ ಣವು ಒತ್ತಾಯದಿಂದ ಮತ್ತು ಪುಕ್ಕಟೆಯಾಗಿ ಕೊಡುವ ಏರ್ಪಾಡಾಗಿರುವದು. ಕಾರಣವೇನೆ ಇರಲಿ, ನಮ್ಮ ಸಾಂಪ ತ್ತಿಕ ಸ್ಥಿತಿಯು ಅಷ್ಟು ಚನ್ನಾಗಿಲ್ಲದ್ದರಿಂದ ಆ ದೇಶಗಳು ಅನುಭವಿಸುವ ಶಿಕ್ಷಣಸೌಕರ್ಯವು ನಮಗೆ ದೊರಕ ಲಾರದು.

ಶಿಕ್ಷಣಪದ್ಧತಿಯಲ್ಲಿ ಅನುಸರಿಸುವ ಅಭ್ಯಾಸಕ್ರಮವು ಎರಡನೇ ಸಂಗತಿಯು. ಅದು ಸಹ ಕೆಲವು ಸಣ್ಣಪುಟ್ಟ ಕೊರತೆಗಳನ್ನು ಬಿಟ್ಟರೆ ವಿಶೇಷವಾಗಿ ಸದೋಷವಾಗಿಲ್ಲ. ಸರಕಾರದವರು ಪ್ರಕಟಿಸಿದ ಅಭ್ಯಾಸ ಪತ್ರಿಕೆಯನ್ನು ನೋಡಲಾಗಿ ಬೇರೆ ರಾಷ್ಟ್ರಗಳ ಅಭ್ಯಾಸಕ್ರಮಕ್ಕಿಂತ ಅದು ನ್ಯೂನತೆಯುಳ್ಳದ್ದಾಗಿಲ್ಲೆಂದು ಕಂಡುಬರುವದು. ಜಗತ್ತಿನ ವ್ಯವಹಾರಗಳಲ್ಲಿ ಯೋಗ್ಯರೀತಿಯಿಂದ ನಡೆಯಬೇಕಾದರೆ ಪ್ರತಿಯೊಬ್ಬನಿಗೆ ಕೆಲವು ವಿಷಯಗಳ ಜ್ಞಾನವು ಅವಶ್ಯ ವಾಗಿದೆ. ಮಾತೃಭಾಷೆಯ ಜ್ಞಾನ ಅಥವಾ ರಾಜಭಾಷೆಯ ಜ್ಞಾನದ ಅವಶ್ಯಕತೆಯನ್ನು ಯಾರೂ ಅಲ್ಲಗಳೆಯಲಾರರು. ಇತಿಹಾಸ, ಭೂಗೋಲ, ವಿಜ್ಞಾನ ಅಥವಾ ಗಣಿತ ಮುಂತಾದ ಸರ್ವಸಾಧಾರಣ ವಿಷಯಗಳ ಜ್ಞಾನವು ಪ್ರತಿ ಯೊಬ್ಬ ನಾಗರಿಕನಿಗೆ ಇರಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯ ವಿಲ್ಲ. ಇವೇ ವಿಷಯಗಳು ಹಿಂದುಸ್ತಾನದಲ್ಲಿ ಹಾಗೂ ಬೇರೆ ದೇಶಗಳಲ್ಲಿ ಶಾಲೆಯ ಹುಡುಗರಿಗೆ ಕಲಿಸಲ್ಪಡು ವವು. ರಾಷ್ಟ್ರಗಳ ಅಭ್ಯಾಸಕ್ರಮಗಳಲ್ಲಿ ಹೆಚ್ಚು ಕಡಿಮೆ ಇರಬಹುದು. ಆದರೆ ಇಷ್ಟರ ಮೇಲಿಂದಲೇ ನಮ್ಮ ಅಭ್ಯಾಸ ಕ್ರಮದಲ್ಲಿ ವಿಶೇಷ ಕೊರತೆಯುಂಟೆಂದು ಹೇಳುವದು ಯೋಗ್ಯವಲ್ಲ. ನಮ್ಮ ಪ್ರಾಥಮಿಕ, ಮಾಧ್ಯಮಿಕ ಶಾಲೆ ಗಳಲ್ಲಿ ಅಥವಾ ವಿಶ್ವವಿದ್ಯಾಲಯಗಳಲ್ಲಿ ಕಲಿಸಲ್ಪಡುವ ವಿಷಯಗಳೇ ಪರರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಕಲಿ ಸಲ್ಪಡುತ್ತವೆಂದು ಎಲ್ಲರಿಗೂ ಗೊತ್ತಿದ್ದ ಸಂಗತಿಯು.

ಇಲ್ಲಿಯ ಮತ್ತು ಪರರಾಷ್ಟ್ರಗಳ ಶಿಕ್ಷಣ ಪದ್ಧತಿಗಳಲ್ಲಿ ಹಾಗೂ ಅಭ್ಯಾಸ ಪತ್ರಿಕೆಗಳಲ್ಲಿ ವಿಶೇಷವಾಗಿ ಹೆಚ್ಚು ಕಡಿಮೆಗಳು ಕಂಡುಬರದಿದ್ದರೂ ನಮ್ಮಲ್ಲಿದ್ದ ಒಂದು ವಿಶಿಷ್ಟ ದೋಷವು ಬೇರೆ ಶಿಕ್ಷಣಪದ್ಧತಿಗಳಲ್ಲಿ ಇರುವದಿಲ್ಲ. ಪರದೇಶಗಳಲ್ಲಿ ಸ್ವಾತಂತ್ರ್ಯವಿರುವದರಿಂದ ಅವರು ಎಲ್ಲ ಶಿಕ್ಷಣವನ್ನು ಮಾತೃಭಾಷೆಗಳಲ್ಲಿ ಕೊಡುವರು. ನಮ್ಮ ದೇಶವು ಪರತಂತ್ರವಾಗಿರುವದರಿಂದ ನಮ್ಮ ಮಾತೃಭಾಷೆ ಯಲ್ಲಿ ಈ ಜ್ಞಾನವನ್ನು ಪಡೆಯುವ ಭಾಗ್ಯವು ನಮಗೆ ಇನ್ನೂ ದೊರಕಿರುವದಿಲ್ಲ. ಆದ್ದರಿಂದ ಶಿಕ್ಷಣಪದ್ಧ ಯಿಂದ ಲಭಿಸಬೇಕಾಗಿದ್ದ ಪೂರ್ಣಜ್ಞಾನದ ಮತ್ತು ಕಾರ್ಯ ಕ್ಷಮತೆಯ ಅಭಾವವಾಗಿ ನಮ್ಮ ವೈಯಕ್ತಿಕ ಮತ್ತು ರಾಷ್ಟ್ರದ ಉನ್ನತಿಗಳಿಗೆ ಸದ್ಯದ ಪದ್ಧತಿಯು ಹೇ ಕೊಳ್ಳುವಷ್ಟು ಪೋಷಕವಾಗಿಲ್ಲ. ಶಿಕ್ಷಣದ ಮಾಧ್ಯಮ ನಮ್ಮ ದೇಶಭಾಷೆಯೇ ಆಗಿ ಶಾಲೆ ಮತ್ತು ವಿಶ್ವವಿದ್ಯಾ ಲಯಗಳಲ್ಲಿ ನಮ್ಮ ಪರಿಸ್ಥಿತಿಗೆ ಅನುಕೂಲವಾದ ಅಧ್ಯಾ ಪನ ರೀತಿಗಳನ್ನು ನಾವು ಅವಲಂಬಿಸಿದರೆ ಸದ್ಯದ ಶಿಕ್ಷಣ ಪದ್ಧತಿಯಿಂದಲೇ ನಮಗೆ ಸಾಕಷ್ಟು ಲಾಭವೂ ರಾಷ್ಟ್ರ ಕ್ಕವೂ ಲಭಿಸಬಹುದಾಗಿತ್ತು. ಆದರೆ ನಮ್ಮ ಶಿಕ್ಷಣ ಕಾರ್ಯವು ಮೊಟ್ಟಮೊದಲು ಪರಕೀಯ ಶಿಕ್ಷಕರಿಂದ ಆರಂಭವಾಯಿತು. ಅವರು ತೋರಿಸಿದ ಮಾರ್ಗಗಳನ್ನೇ ನಮ್ಮ ದೇಶದ ಶಿಕ್ಷಕರು ಅನುಸರಿಸಿದ್ದರಿಂದ ನಮ್ಮ ಶಿಕ್ಷಣವು ಸದೋಷವಾಗಿರುತ್ತದೆ. ನಮ್ಮ ಶಿಕ್ಷಣತಜ್ಞ ರಲ್ಲಿ ಎಷ್ಟೋ ಜನರು ಜಪಾನ, ಜರ್ಮನಿ, ಇಂಗ್ಲಂಡ, ಅಮೇರಿಕಾ, ಫ್ರಾನ್ಸ್ ಮುಂತಾದ ಶಿಕ್ಷಣದಲ್ಲಿ ಪ್ರಸಿ ಪಡೆದ ಪರದೇಶಗಳಿಗೆ ಹೋಗಿ ಅಲ್ಲಿಯ ಶಿಕ್ಷಣಪದ್ಧ ಗಳನ್ನೂ ಶೈಕ್ಷಣಿಕ ರೀತಿಗಳನ್ನೂ ಬೇರೆ ಅನೇಕ ಶಿಕ್ಷಣವಿಷಯಕ ಪ್ರಶ್ನೆಗಳನ್ನೂ ಅಭ್ಯಸಿಸಿ ತಿರುಗಿ ಹಿಂದು ಸ್ತಾನಕ್ಕೆ ಬಂದು ತಮ್ಮ ಅನುಭವದ ಸಂಗತಿಗಳನ್ನು ಲೇಖನದ್ವಾರಾ ಅಥವಾ ಪುಸ್ತಕಗಳ ರೂಪದಿಂದ ಪ್ರಕಟಿ ಸುತ್ತಾರೆ. ಆದರೆ ನಮ್ಮ ಪರಿಸ್ಥಿತಿಗನುಕೂಲವಾಗಿ ಅವ ವಾಗಿರುವ ಸುಧಾರಣೆಗಳ ವಿಷಯವಾಗಿ ಅವರು ಸೂಚನೆಗಳನ್ನು ಕೊಟ್ಟಂತೆ ತೋರುವದಿಲ್ಲ. ರಾಷ್ಟ್ರ ಶಿಕ್ಷಣಪದ್ಧತಿಯನ್ನು ಅನುಸರಿಸುವ ಪರರಾಷ್ಟ್ರಗಳಲ್ಲಿ ಯೋಗದಲ್ಲಿರುವ ರೀತಿಗಳಲ್ಲಿ ಮತ್ತು ನಮ್ಮಲ್ಲಿರುವ ರೀತಿ ಗಳಲ್ಲಿ ಒಂದು ವೇಳೆ ವಿಶೇಷ ಅಂತರವು ಇರಲಿಕ್ಕೆ

ತಂತರವಿದ್ದ ಪಕ್ಷದಲ್ಲಿ ಈ ತಜ್ಞರ ಕಡೆಯಿಂದ ಸೂಚನೆ ಗಳು ಬರುತ್ತಿದ್ದವು. ಹೀಗಿದ್ದರೂ ನಮ್ಮಲ್ಲಿಯ ಪದ್ಧತಿಯು ನಮ್ಮ ಶಿಕ್ಷಣದ ಉದ್ದೇಶವನ್ನು ಸಾಧಿಸಲು ಅನು ಕೂಲವಿಲ್ಲೆಂಬುದು ನಿಜ. ಮುಂಬಯಿ ಸರಕಾರದವ ರಿಂದ ನೇಮಿಸಲ್ಪಟ್ಟ 'ಜೋಶಿ ಕಮಿಟಿ'ಯು ಬಣ್ಣಿ ಸಿದ ಶಾಲೆಯ ಸ್ಥಿತಿಯು ಅಕ್ಷರಶಃ ನಿಜವಾಗಿದೆ. ನಮ್ಮ ಶಿಕ್ಷಣದಲ್ಲಿ ಪುಸ್ತಕೀಯ ಜ್ಞಾನದ ಅತಿರೇಕವಾಗಿ ರುವದರಿಂದ ನಮ್ಮ ಹುಡುಗರು ಯಾವಾಗಲೂ ನಾಲ್ಕು ಗೋಡೆ ಗಳ ಮರ್ಯಾದಿತವಾದ ಕೋಣೆಯಲ್ಲಿಯೇ ಕೂತು ಕೊಂಡು ತಮ್ಮ ಪಠ್ಯಪುಸ್ತಕಗಳಲ್ಲಿ, ಹಾಗೆಯೇ ಶಿಕ್ಷಕರು ಕೊಟ್ಟ ಟಿಪ್ಪಣಿಗಳನ್ನು ಬರೆದ ಪಟ್ಟಿಗಳಲ್ಲಿ ತಮ್ಮ ತಲೆ ಹಾಕಿ ವಾಚನ, ಲೇಖನ, ಪಠಣಗಳನ್ನು ಕಲಿಯುವರು. ಶಿಕ್ಷಕರು ಸಹ ತಮ್ಮ ನೀರಸವಾದ ಮತ್ತು ಅನಭಿರುಚಿ ಯನ್ನು ಹುಟ್ಟಿಸುವ ವಾಣಿಯಿಂದ ಕಲಿಸುವದನ್ನು ನಾವು ಪ್ರತಿಯೊಂದು ಸಾಲೆಯಲ್ಲಿ ನೋಡುವೆವು. ಪುಸ್ತಕದೊಳ ಗಿನ ಜ್ಞಾನಕ್ಕೂ ಸಾಲೆಯ ಹೊರಗಿನ ಜಗತ್ತಿಗೂ ಸಾಮ್ಯ ತ್ವವನ್ನುಂಟುಮಾಡುವ ಪ್ರಯತ್ನಗಳನ್ನು ಮಾಡದ್ದರಿಂದ ನಮ್ಮ ಶಿಕ್ಷಣವು ಅವ್ಯಾವಹಾರಿಕವಾಗಿದೆ.

ಹಲಕೆಲವು ಜನರು ಔದ್ಯೋಗಿಕ ಶಿಕ್ಷಣವನ್ನು ಪ್ರಾಥ ಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕೊಡಬೇಕೆಂದು ಸೂಚಿಸುವರು. ಆದರೆ ಆದರಿಂದ ಮೇಲೆ ಹೇಳಿದ ದೋಷ ಗಳನ್ನು ನಿವಾರಿಸುವ ಶಕ್ಯಾಶಕ್ಯತೆಯ ಬಗ್ಗೆ ಸಂದೇಹ ವಿದೆ. ಅಮೇರಿಕೆಯಂಥ ದೇಶಗಳಲ್ಲಿ ಈ ತರದ ಔದ್ಯೋ ಗಿಕ ಶಿಕ್ಷಣವು ಅನೇಕ ಮಾಧ್ಯಮಿಕ ಶಾಲೆಗಳಲ್ಲಿ ಸಹ ಕೊಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಆದರೆ ಅದು ಕ್ರಮದಲ್ಲಿಯ ಆವಶ್ಯಕವಿಷಯವಾಗಿರದೆ ಆಯಾ ವಿಷಯ ಗಳನ್ನು ಕಲಿಯಲಿಚ್ಛಿಸುವ ವಿದ್ಯಾರ್ಥಿಗಳ ಸಲುವಾಗಿ ಐಚ್ಛಿಕ ವಿಷಯವಾಗಿರುತ್ತದೆ. ನಮ್ಮ ದೇಶದಲ್ಲಿ ಸಹ ಉದ್ಯೋಗ ವ್ಯವಸಾಯಗಳು ಬೆಳೆದು ಅಂಥ ಶಿಕ್ಷಣವನ್ನು ಪಡೆದ ಜನರ ಆವಶ್ಯಕತೆಯು ತೋರಿದಾಗ ಔದ್ಯೋಗಿಕ ಶಾಲೆ ಗಳು ಸಹಜವಾಗಿಯೇ ಅಸ್ತಿತ್ವದಲ್ಲಿ ಬರುವವು. ನಮ್ಮ ಈಗಿನ ರಾಷ್ಟ್ರೀಯ ಸರಕಾರದವರಿಗೆ ಸಹ ಈ ತರದ ಶಾಲೆ ಗಳನ್ನು ಪ್ರಾರಂಭಿಸುವದು ಅಸಾಧ್ಯವಲ್ಲ. ಉದ್ಯೋಗ ವ್ಯವಸಾಯಗಳಿಗೆ ಮತ್ತು ಅವುಗಳನ್ನು ಆರಂಭಿಸಲಿಕ್ಕೆ ಬೇಕಾಗುವ ಬಂಡವಾಳದ ಅಭಾವದಲ್ಲಿ ಪ್ರತಿಯೊಬ್ಬನಿಗೆ ಸರಕಾರದ ಒತ್ತಾಯದಿಂದ ಔದ್ಯೋಗಿಕ ಶಿಕ್ಷಣವನ್ನು ಕೊಟ್ಟರೆ ನಮ್ಮಲ್ಲಿಯ ಈಗಿನ ನಿರುದ್ಯೋಗವೂ ಅಸಂತೋ ಷವೂ ಹೆಚ್ಚಾಗಿ ಸರಕಾರದವರು ಮಾಡಿದ ವೆಚ್ಚವು ನಿಷ್ಫ್ರ ಯೋಜಕವಾಗುವದು. ಆದ್ದರಿಂದ ಈ ಶಿಕ್ಷಣಪ್ರಶ್ನೆ ಯನ್ನು ಬಿಡಿಸುವದಾದರೆ ಪ್ರಚಲಿತವಾದ ಪದ್ಧತಿ ಅಥವಾ ಅಭ್ಯಾಸಕ್ರಮದಲ್ಲಿ ವಿಶೇಷವಾಗಿ ಬದಲಾವಣೆ ಮಾಡದೆ ಶಿಕ್ಷಕರು ಅನುಸರಿಸುವ ರೀತಿಗಳಲ್ಲಿಯೇ ಕ್ರಾಂತಿಯಾಗ ಬೇಕು. ಶಿಕ್ಷಣ ಸುಧಾರಣೆಯ ಪ್ರಶ್ನೆಗಳಲ್ಲಿ ಇದು ಅತ್ಯಂತ ಮಹತ್ವವುಳ್ಳ ಸಂಗತಿಯಾಗಿದ್ದು ಇದರ ಮೇಲೆ ಶಿಕ್ಷಣದ ಕಾರ್ಯಕ್ಷಮತೆಯು ಅವಲಂಬಿಸಿರುವದು.

ಶಿಕ್ಷಣವನ್ನು ಮಾತೃಭಾಷೆಯ ಮಾಧ್ಯಮದಲ್ಲಿ ಕೊಡುವ ವ್ಯವಸ್ಥೆಯನ್ನು ಮಾಡುವದು ಅಧ್ಯಾಪನ ಪದ್ಧತಿ ಗಳಲ್ಲಿ ಮಾಡಬೇಕಾದ ಮೊದಲನೇ ಸುಧಾರಣೆಯಾಗಿದೆ. ಈ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದವರು ಪ್ರವೇಶ ಪರೀಕ್ಷೆಯ ತನಕ ಇಂಗ್ಲಿಷ್ ಹೊರತಾಗಿ ಎಲ್ಲ ವಿಷಯಗಳನ್ನು ದೇಶ ಭಾಷೆಗಳಲ್ಲಿ ಕಲಿಸುವದಕ್ಕೆ ಮತ್ತು ಪರೀಕ್ಷಿಸುವದಕ್ಕೆ ಸಮ್ಮತಿಕೊಟ್ಟಿರುವದರಿಂದ ಇದಕ್ಕೆ ಸ್ವಲ್ಪ ಮಟ್ಟಿಗೆ ಚಾಲ ನೆಯೂ ಸಿಕ್ಕಿದೆ. ಮರಾಠಿಗರು ಹಾಗು ಗುಜರಾಥಿ, ಸಿಂಧಿ ಜನರು ಈ ಅನುಕೂಲತೆಯ ಲಾಭವನ್ನು ತಕ್ಕೊಂಡಷ್ಟು ಕನ್ನಡಿಗರು ಈವರೆಗೂ ತಕ್ಕೊಂಡಿಲ್ಲವೆಂಬದು ಮಾತ್ರ ಖೇದ ಜನಕವಾಗಿದೆ. ಶಿಕ್ಷಕವರ್ಗವು ತಮ್ಮ ಭಾಷೆಯ ಯೋಗ್ಯ ವಾದ ಅಭಿಮಾನವನ್ನು ತಾಳಿದರೆ ಈ ಕಾರ್ಯವು ಸುಲಭ ವಾಗುವುದು. ಅಧ್ಯಾಪನ ಪದ್ಧತಿಗಳಲ್ಲಿ ತಾತ್ವಿಕ ಅಥವಾ ಪುಸ್ತಕೀಯ ಪದ್ಧತಿಗಳನ್ನು ಬಿಟ್ಟು ಸ್ವಲ್ಪ ವ್ಯಾವಹಾರಿಕ ಸಂಗತಿಗಳನ್ನು ಸೇರಿಸುವದು ಎರಡನೇ ಸುಧಾರಣೆಯಾಗಿದೆ. ಶಾಲೆಯಲ್ಲಿ ಕಲಿಸಲ್ಪಡುವ ಪ್ರತಿಯೊಂದು ಸಂಗತಿಯು ವ್ಯಾವಹಾರಿಕ ಜಗತ್ತಿನ ಪರಿಸ್ಥಿತಿಯೊಡನೆ ಸಂಯೋಗಿಸಿ ಹಾಗೂ ಬೇರೆ ಬೇರೆ ವಿಷಯಗಳಲ್ಲಿರುವ ತಾತ್ವಿಕ ಅಥವಾ ವ್ಯಾವಹಾರಿಕ ಸಂಬಂಧವನ್ನು ತೋರಿಸಿ ತಮ್ಮ ಪಠ್ಯ ಪುಸ್ತಕದೊಳಗಿನ ಸಿದ್ಧಾಂತ ವೃತ್ತಾಂತಗಳನ್ನು ಕಲಿಸುವ ಪ್ರಯತ್ನಗಳನ್ನು ನಡಿಸಿದರೆ ಈಗಿನ ಶಿಕ್ಷಣವು ಎಷ್ಟೋ ರೀತಿಯಿಂದ ಉಪಯುಕ್ತವಾಗುವದು: ವಿದ್ಯಾರ್ಥಿಗಳಲ್ಲಿ ನಿಜವಾದ ಅಭಿರುಚಿಯನ್ನು ಹುಟ್ಟಿಸುವದಾದರೆ ಶಾಲೆ ಗಳಲ್ಲಿ ಅಭ್ಯಾಸಕ್ರಮದ ಹೊರತು ಬೇರೆ ಶೈಕ್ಷಣಿಕ ಚಟು ವಟಿಕೆಗಳನ್ನೂ ಪ್ರಾರಂಭಿಸುವದು ಆವಶ್ಯವಾಗಿದೆ. ಇದ ರಲ್ಲಿ ಬಾಲಚಮೂ ಪದ್ಧತಿ, ಐತಿಹಾಸಿಕ, ಭೌಗೋಲಿಕ ಮತ್ತು ಪ್ರಾಕೃತಿಕ ಸೌಂದರ್ಯದ ಮಹತ್ವವುಳ್ಳ ಸ್ಥಳಗಳಿಗೆ ಚಿಕ್ಕ ಚಿಕ್ಕ ಪಯಣಗಳನ್ನು ಏರ್ಪಡಿಸುವದು, ಕೋರ್ಟು, ಕಚೇರಿ, ಪೋಸ್ಟ್ ಆಫೀಸ್, ಕಾರಖಾನೆ ಮುಂತಾದವು

ಗಳನ್ನು ತೋರಿಸಿ ಅವುಗಳ ಕಾರ್ಯಗಳ ಬಗ್ಗೆ ಜ್ಞಾನ ಮಾಡಿಕೊಡುವದು ಇತ್ಯಾದಿ ಚಟುವಟಿಕೆಗಳನ್ನೂ ಶಾಲೆಗಳೇ ನಡಿಸಬೇಕು. ಕೇವಲ ಪುಸ್ತಕಗಳೊಳಗಿನ ಜ್ಞಾನಕ್ಕಾಗಿ ಐದಾರು ಗಂಟೆ ವೇಳೆಯನ್ನು ನಿರರ್ಥಕವಾಗಿ ಕಳೆಯುವದಕ್ಕಿಂತ ಪ್ರತಿ ದಿನ ಒಂದೆರಡು ಗಂಟೆಗಳನ್ನು ಈ ಚಟುವಟಿಕೆಗಳಲ್ಲಿ ಕಳೆಯುವದು ನಿಪ್ಪ್ರಯೋಜಕವಾಗಲಾರದು. ಶಾಲೆಗಳಲ್ಲಿ ಎಷ್ಟೋ ಶಿಕ್ಷಕರು ಆವಶ್ಯಕತೆಗಿಂತ ಹೆಚ್ಚು ವೇಳೆ ಅಧ್ಯಾಪನದಲ್ಲಿ ಕಳೆಯುತ್ತಿರುವುದು ನಮ್ಮ ಶಿಕ್ಷಣಪದ್ಧತಿಯಲ್ಲಿಯ ಅತ್ಯಂತ ಮಹತ್ವದ ದೋಷವಾಗಿದೆ. ಅದನ್ನು ನಿವಾರಿಸುವದು ನಮ್ಮ ಆದ್ಯ ಕರ್ತವ್ಯವಾಗಿದೆ.

ಅಧ್ಯಾಪನ ಪದ್ಧತಿಗಳ ಸುಧಾರಣೆಯು ಮೂರನೇ ಮಹತ್ವದ ಸಂಗತಿಯಾಗಿದ್ದರೂ ಶಿಕ್ಷಣಕ್ರಮದ ಯಶಸ್ಸು ಅಥವಾ ಅಪಯಶಸ್ಸು ಶಿಕ್ಷಕರ ಕಾರ್ಯಗಳ ಮೇಲೆಯೂ ಅವರು ಅನುಸರಿಸುವ ಧೋರಣದ ಮೇಲೆಯೂ ವಿಶೇಷವಾಗಿ ಅವಲಂಬಿಸಿರುತ್ತದೆ. ಕೆಟ್ಟ ಪದ್ಧತಿಯಿಂದ ಸಹ ಸುಪರಿಣಾಮವನ್ನು ಪಡೆಯಬಹುದು; ಹಾಗೆಯೇ ಒಳ್ಳೇ ಪದ್ಧತಿಯನ್ನು ನಿರುಪಯುಕ್ತವಾಗಿ ಮಾಡುವದು ಶಿಕ್ಷಕರ ಕೈಯೊಳಗಿನ ಮಾತಾಗಿರುವದು. ಆದ್ದರಿಂದ ಶಿಕ್ಷಕರು ತಮ್ಮ ಸನ್ಮಾನ್ಯವಾದ ಕರ್ತವ್ಯವನ್ನು ಜರುಗಿಸುವಾಗ ಅವರಿಗೆ ಬೇರೆ ಯಾವ ಚಿಂತೆಯೂ ಇರದಂತೆ ಅವರ ಸ್ಥಿತಿಯನ್ನು ಸುಧಾರಿಸುವದು ಸರಕಾರದವರ ಮುಖ್ಯ ಕರ್ತವ್ಯವಾಗಿರುತ್ತದೆ. ಶಿಕ್ಷಣದ ಪುನರ್ಘಟನೆಯನ್ನು ಆರಂಭಿಸಿದ ಯಾವತ್ತೂ ದೇಶಗಳಲ್ಲಿ ಶಿಕ್ಷಕರ ಸಾಂಪತ್ತಿಕ ಸುಧಾರಣೆಯನ್ನು ಮೊದಲುಮಾಡಿ, ಅವರು ಒಮ್ಮನಸ್ಸಿನಿಂದ ಬಾಲಕರ ಶಿಕ್ಷಣದಲ್ಲಿ ದುಡಿಯುವ ಪರಿಸ್ಥಿತಿಯನ್ನುಂಟುಮಾಡಿ, ನಂತರ ಉಳಿದ ಸುಧಾರಣೆಗಳ ಕಡೆಗೆ ಅಧಿಕಾರಿಗಳು ಲಕ್ಷ್ಯಹಾಕಿರುವರು; ಆದರೆ ನಮ್ಮ ಪರಿಸ್ಥಿತಿಯು ಇದಕ್ಕೆ ವಿಪರೀತವಾಗಿರುವದು. ಶಿಕ್ಷಕರ ವೇತನ, ಅವರ ವಾರ್ಧಕ್ಯದಲ್ಲಿ ಬೇಕಾಗಿದ್ದ ಚರಿತಾರ್ಥದ ವ್ಯವಸ್ಥೆ, ನೌಕರಿಯ ಶಾಶ್ವತತೆ ಮೊದಲಾದ ಪ್ರಶ್ನೆಗಳ ವಿಚಾರವನ್ನು ಮಾಡದೆ ಶಿಕ್ಷಣಪದ್ಧತಿಯ ಪುನರ್ಘಟನೆಯ ಪ್ರಯತ್ನಗಳನ್ನು ನಮ್ಮ ಸರಕಾರದವರು ಆರಂಭಿಸಿರುವರು. ಪದ್ಧತಿಗಳನ್ನು ಬದಲುಮಾಡುವ ಶ್ರೇಯವನ್ನು ಸರಕಾರದವರು ಪಡೆದರೂ, ಆ ಪದ್ಧತಿಗಳನ್ನು ಉಪಯೋಗ ಮಾಡುವ ಶಿಕ್ಷಕರ ಪರಿಸ್ಥಿತಿಯು ಸುಧಾರಿಸಿದ ಹೊರತು ಶಿಕ್ಷಣದ ಕಾರ್ಯಕ್ಷಮತೆಯಾಗಲಿ ಅದರ ಉಪಯುಕ್ತತೆಯಾಗಲಿ ಎಳ್ಳಷ್ಟಾದರೂ ಬೆಳೆಯಲಾರದೆಂದು ಖಂಡಿತವಾಗಿ ಹೇಳಬಹುದು.

ಸೆರೆಯಾಳುಗಳ ಶಿಕ್ಷಣ

ಲೇ:— ತಾರಾದಾಸ

★

ಪರಿಸ್ಥಿತಿಯ ಒತ್ತಾಯದಿಂದ ಇಚ್ಛಾವಿರುದ್ಧವಾಗಿಯೂ ಅನೇಕ ಅಪರಾಧಗಳು ಆಗುತ್ತವೆ. ಅದನ್ನು ಮಾಡಿದವರು ಒಮ್ಮೆ ಸೆರೆಮನೆಯಲ್ಲಿ ಬಂಧಿತರಾದರೆಂದರೆ ಅವರ ಬಾಳಿನ ಆಶೆಯೆ ಕಮರಿ ಹೋಗುತ್ತದೆ. ಪರಾಧೀನತೆ! ಅಧಿಕಾರಿಗಳ ಕೂಗಿನಿಂದ ಪ್ರತಿಧ್ವನಿಸುವ ವಾತಾವರಣ! ಇಂತಹ ಪರಿಸ್ಥಿತಿಯಲ್ಲಿ ವರ್ಷಗಟ್ಲೆ ಕಳೆಯುವವರು ನೈಜ ಸಾಮಾಜಿಕ ಜೀವನಕ್ಕೆ ತಿರುಗುವುದೆಂತು? ಅಂಥವರನ್ನು ಯೋಗ್ಯ ಸಾಮಾಜಿಕ ಜೀವಿಗಳನ್ನಾಗಿ ಮಾರ್ಪಡಿಸಬಹುದೆಂಬುದೆ .... ಈ ಲೇಖನದ ಸಾರಾಂಶವಾಗಿದೆ. ....

ಸುಮಾರು ಹದಿನಾರು ವರ್ಷಗಳ ಹಿಂದೆ ಇಂಗ್ಲಂಡಿನಲ್ಲಿಯೂ ಸೆರೆಮನೆಗಳು ಭಾರತದ ಸೆರೆಮನೆಗಳಂತೆಯೆ ಇದ್ದವು. ಆದರೆ ಕಾಲಚಕ್ರವು ಅಲ್ಲಿಯ ಸೆರೆಮನೆಗಳಲ್ಲಿಯೂ ಬೆಳಕನ್ನು ಕೆಡಹಿತು. ಸೆರೆಮನೆಗಳ ಪೋಷಕರುಗಳೆಲ್ಲ ಸೇರಿ ಒಂದು ಸಾಹಸದ ಪ್ರಯೋಗಕ್ಕೆ ಕೈ ಹಾಕಿದರು. ಸೆರೆಮನೆಯ ಅಧಿಕಾರಿವರ್ಗದ ಹೊರಗಿನ ಕೆಲವು ಸಭ್ಯಗೃಹಸ್ಥರನ್ನು ಅವರು ಅದಕ್ಕಾಗಿ ಆಮಂತ್ರಿಸಿದರು. ಪ್ರತಿಯೊಬ್ಬರಿಗೂ ಒಂದೊಂದು ಸೆರೆಕೋಣೆಯ ಬೀಗದಕೈಯನ್ನು ಕೊಟ್ಟು ಸ್ವತಂತ್ರವಾಗಿ ಸೆರೆಯಾಳುಗಳನ್ನು ಕಾಣಲು ಅನುಗೊಳಿಸಿದರು. ಸೆರೆಮನೆಯಲ್ಲಿಯೂ ಸ್ವಾಭಿಮಾನವನ್ನು ಉಳಿಸಿಕೊಂಡು ಬಾಳುವ ಸಾಧ್ಯತೆಯನ್ನು ಸೆರೆಯಾಳುಗಳಿಗೆ ಮನವರಿಕೆ ಮಾಡಿ ಕೊಡುವದೆ ಈ ಹಂಚಿಕೆಯ ಗುರಿ.

ಆ ಪ್ರಯೋಗವು ಯಶಸ್ವಿಯಾಯಿತು. ಇಂದು ಸುಮಾರು ಆರುನೂರು ಸಭ್ಯ ಸ್ತ್ರೀಪುರುಷರು ಸ್ವತಂತ್ರವಾಗಿ ಸೆರೆಮನೆಗಳಿಗೆ ಹೋಗಿ ಸೆರೆಯಾಳುಗಳಿಗೆ ಗೆಳೆತನದ ವಾತಾವರಣವನ್ನು ಕಲ್ಪಿಸಿ ಬರುತ್ತಿದ್ದಾರೆ. ಇವರು ಸಂಬಳ ತೆಗೆದುಕೊಳ್ಳುವದಿಲ್ಲ. ಇವರು ಅಲ್ಲಿ ಹೋಗುವದು ಅಧಿಕಾರ ನಡೆಸಲಿಕ್ಕಲ್ಲ. ಸೆರೆಯಾಳುಗಳ ಸುಖದುಃಖಗಳಲ್ಲಿ ಸಹಾನುಭೂತಿಯನ್ನು ತೋರಿಸಿ ಸೆರೆಮನೆಯ ಭೀಕರತೆಯನ್ನು ನಿವಾರಿಸುವುದೆ ಇವರ ಗುರಿ.

ಪ್ರತಿಯೊಬ್ಬ ಸೆರೆಯಾಳುವಿಗೂ ಗೆಳೆಯರು ಬೇಕು. ಮೊದಲು ಸೆರೆಮನೆ ಹೊಕ್ಕಾಗ ಅವನು 'ತಾನೊಬ್ಬ ಸಮಾಜಘಾತಕ; ಪ್ರತಿಯೊಬ್ಬ ಸ್ತ್ರೀಗೂ ಪುರುಷನಿಗೂ ನಾನೊಬ್ಬ ಶತ್ರು' ಎಂಬ ಭಾವನೆಯುಳ್ಳವನಾಗಿರುತ್ತಾನೆ. ಅವನ ಮನೆಯಲ್ಲಿ ಬಹಳ ಕೆಡುಗಾಲವಿದ್ದಿರಬಹುದು. ಅವನ ಮಕ್ಕಳು ಉಪವಾಸವಿದ್ದಿರಬಹುದು. ಸೆರೆಮನೆಯ ಅಧಿಕಾರಿಗಳೂ ತನ್ನ ಶತ್ರುಗಳೇ ಎಂದು ಅವನ ಭಾವನೆ. ಇಂತಹ ಮನೋವೈಕಲ್ಯದಿಂದ ಸೆರೆಯಾಳು ಉದಾಸೀನನಾದಾಗ ಅಧಿಕಾರಿಯಲ್ಲದ ಸಭ್ಯ ಗೃಹಸ್ಥನು ಅಲ್ಲಿ ಬರುವನು.

ಒಳಗೆ ಹೋದವನೆ ಮೊದಲು ಬಂದಿಯ ಕೈಕುಲುಕುವನು; ಅವನೊಡನೆ ಹತ್ತರ ಒಂದು ಕುರ್ಚಿಯಲ್ಲಿ ಕೂಡುವನು. ಅಧಿಕಾರಿಗಳ ಅಂಗರಕ್ಷಕರಂತಹ ಹಿಮ್ಮೇಳದವರಾರೂ ಅಲ್ಲಿ ಬಂದಿರುವದಿಲ್ಲ. ಇಬ್ಬರಿಗೂ ಒಂದೊಂದು ಕುರ್ಚಿ ಇರುವದರಿಂದ ಸೆರೆಯಾಳುವಿಗೆ ಅಸಮಾನತೆಯ ಭಾವನೆ ಹುಟ್ಟುವದಿಲ್ಲ.

ಗೃಹಸ್ಥನು ತಾನಾಗಿ ಯಾವ ಹರಟೆಯನ್ನೂ ಆರಂಭಿಸುವದಿಲ್ಲ. ಏಕೆಂದರೆ ಅದರಲ್ಲಿ ಬಂದಿಯ ಮನಸ್ಸು ನೋಯುವ ಸಂಗತಿಗಳಿರಬಹುದು. ಬಂದಿಯು ತಾನಾಗಿ ಹುರುಪಿನಿಂದ ವಿಶ್ವಾಸದಿಂದ ಆರಂಭಿಸಿದ ವಿಷಯವನ್ನೇ ಆ ಗೃಹಸ್ಥನೂ ಮುಂದುವರಿಸುವನು. ಉಪದೇಶವು ಯಾರಿಗೂ ಸೇರುವದಿಲ್ಲ. ತಾತ್ವಿಕ ನೈತಿಕ ಉಪದೇಶವನ್ನು ಕೊಡುವ ಗೃಹಸ್ಥನು ಮರ್ಯಾದೆಯನ್ನು ಗಳಿಸಬಹುದು; ಸೆರೆಯಾಳುವಿನ ನಂಬಿಗೆಯನ್ನು ಗಳಿಸಲಾರ. ಪ್ರೇಕ್ಷಕನು ಬಂದಿಯ ರಹಸ್ಯಸಂಶೋಧನಕ್ಕೆ ತೊಡಗಿದರೆ ಬಂಧಿಯು ಸುಳ್ಳು ಹೇಳುವದು ಸಹಜವಾಗಿದೆ. ಯಾವನೊಬ್ಬ ಸಭ್ಯ ಪ್ರೇಕ್ಷಕನೂ ಅಲ್ಲಿ ನಡೆದ ಸಂಗತಿಗಳನ್ನು ಬರೆದಿಡಲು ಒಯ್ದಿರುವ ಟಿಪ್ಪಣಿಪುಸ್ತಕವನ್ನು ಬಂದಿಗೆ ತೋರಿಸಬಾರದು.

ಬಂದಿಯ ಮಕ್ಕಳು ಮನೆಗಳಿಗೆ ಸಂಬಂಧಿಸಿದ ಪ್ರಶ್ನೆಯು ಅವರ ವಿಶ್ವಾಸವನ್ನು ಗಳಿಸುವದಕ್ಕೆ ಒಳ್ಳೆ ಉಪಾಯ. ಅಧಿಕಾರಿಗಳು 'ಮದುವೆಯಾಗಿದೆಯೆ? ಆಗಿದ್ದರೆ ಮಕ್ಕಳೆಷ್ಟು' ಎಂಬ ಯಾಂತ್ರಿಕ ಪ್ರಶ್ನೆಗಳನ್ನು ಕೇಳುವರು. ಆದರೆ ಈ ಮಿತ್ರರು, ಮಕ್ಕಳ ವಯಸ್ಸು, ಗಂಡೆಷ್ಟು ಹೆಣ್ಣೆಷ್ಟು, ಯಾವ ಶಾಲೆಗೆ ಹೋಗುತ್ತಾರೆ, ಮುಂತಾಗಿ ಆಪ್ತ ಪ್ರಶ್ನೆಗಳನ್ನು ಕೇಳುವರು. ಅಲ್ಲದೆ ಪ್ರತಿಸಲ ಬಂದಾಗ ಮಕ್ಕಳ ಆರೋಗ್ಯ ಪ್ರಗತಿಗಳ ವಿಷಯಕ್ಕೆ ಬಂದಿಗೆ ತಿಳಿದಿರುವ ಸಂಗತಿಗಳನ್ನು ಕೇಳಿ ಸಹಾನು

ಭೂತಿಯನ್ನು ವ್ಯಕ್ತಪಡಿಸುವರು. ಇದರಿಂದ ಶುಭಚಿಂತನದ ದೀರ್ಘವ್ಯಾಖ್ಯಾನಕ್ಕಿಂತ ಹೆಚ್ಚಿನ ಪರಿಣಾಮವು ಬಂದಿಯ ಪಿತೃಹೃದಯದ ಮೇಲಾಗುವದು.

ಈಗ ನಿರಕ್ಷರಿಯಾದ ಬಂದಿಗಳು ಸಿಗುವುದೆ ಅಪರೂಪ. ಆದುದರಿಂದ ಪುಸ್ತಕಗಳ ವಿಷಯದ ಚರ್ಚೆಯೂ ಲಾಭದಾಯಕವಾಗಿದೆ. ಸೆರೆಮನೆಗಳಲ್ಲಿ ಇತ್ತೀಚೆ ಉತ್ತಮವಾದ ಪುಸ್ತಕಭಂಡಾರಗಳೂ ಏರ್ಪಟ್ಟಿವೆ. ಆದುದರಿಂದ ಮಿತ್ರನು ಬಂದಿಗಳಿಗೆ ಮನಃಶಾಂತಿಯನ್ನು ತರುವ ಪುಸ್ತಕಗಳಲ್ಲಿ ಅಭಿರುಚಿಯನ್ನು ಹುಟ್ಟಿಸುವನು. ಉಪದೇಶದಿಂದಲ್ಲ; ತಾನು ಓದಿದ ಕಥೆಗಳನ್ನು ಪರಿಣಾಮಕರವಾಗಿ ಹೇಳುವದರಿಂದ; ಗೀತಗಳನ್ನು ಹಾಡಿತೋರಿಸುವುದರಿಂದ.

ಬಂದಿಗೆ ಮೆಚ್ಚಿಕೆಯೆನಿಸಿದ ಆಟ ನೋಟಗಳ ವಿಷಯವೂ ಮನರಂಜನೆಗೆ ಒಳ್ಳೆ ಸಹಾಯಕವಾಗುತ್ತದೆ. ಆದುದರಿಂದ ಆ ಮಿತ್ರನು ಬಂದಿಗೆ ರುಚಿಯೆನಿಸಿದ ಆಟದ ವಿಷಯಗಳನ್ನು ತಾನೂ ತಿಳಿದುಕೊಂಡು ಅದರ ಸುದ್ದಿ ಸಂಗತಿಗಳ ವಿಷಯಕ್ಕೆ ಆಹ್ಲಾದಕರವಾದ ಚರ್ಚೆಯನ್ನು ಮಾಡುವನು.

ಹೀಗೆ ಕ್ರಮೇಣ ಬಂದಿಯ ಮಿತ್ರನು ಅವನ ವಿಶ್ವಾಸಕ್ಕೆ ಪಾತ್ರನಾಗುವನು. ಆಗ ಬಂದಿಯು, ಕೇಳದೆಯೆ ತನ್ನ ಜೀವನದ ತೊಡಕುಗಳನ್ನು ವರ್ಣಿಸಬಹುದು. ತೀರ ಮೊದಲು ಹೇಳಿದ ಸಂಗತಿಗೂ ಈಗ ಹೇಳುತ್ತಿರುವ ಸಂಗತಿಗೂ ಅಂತರ ತೋರಿ ಬರಬಹುದು. ಆದರೆ ಮಿತ್ರನು ಅದನ್ನೆಲ್ಲ ಶಾಂತಿಯಿಂದ ಸಹಾನುಭೂತಿಯಿಂದ ಕೇಳಬೇಕೆ ಹೊರತು ಹೆಜ್ಜೆ ಹೆಜ್ಜೆಗೂ ವಿರೋಧಿಸಬಾರದು. ಬಂದಿಯ ಜೀವನಕ್ಕೆ ಹೋಲುವ ಸಂಗತಿಗಳನ್ನು ಮಿತ್ರನು ತನ್ನ ಜೀವನದಿಂದಲೂ ಎತ್ತಿ ಹೇಳಿ ಬಂದಿಯಲ್ಲಿ ಭಾವೀ ಜೀವನದ ಬಗ್ಗೆ ಆತ್ಮವಿಶ್ವಾಸವನ್ನು ಹುಟ್ಟಿಸುವನು.

ಪ್ರೇಕ್ಷಕ ಮಿತ್ರರು ಬಂದಿಗಳಿಗೆ ಧರ್ಮೋಪದೇಶವನ್ನಾಗಲಿ ಆಧ್ಯಾತ್ಮಿಕ ದೀಕ್ಷೆಯನ್ನಾಗಲಿ ಕೊಡಬಾರದೆಂದು ಅವರಿಗೆ ಮೊದಲೆ ಸೂಚನೆಯನ್ನು ಕೊಡಲಾಗಿರುತ್ತದೆ. ಚರ್ಚೆಯಲ್ಲಿ ಮತಭೇದವನ್ನು ತರುವ ಅಂಶಗಳನ್ನು ದೂರೀಕರಿಸಬೇಕು. ಆದರೆ ಮನಸ್ಸಿಗೆ ಸಮಾಧಾನವನ್ನು ಕೊಡುವ ಧಾರ್ಮಿಕ ವಿಚಾರಗಳಲ್ಲಿ ಅವಶ್ಯವಾಗಿ ಹೊತ್ತುಗಳೆಯಬಹುದು.

ಮಿತ್ರನು ತಾನು ಬರುವೆನೆಂದು ಹೇಳಿದ ದಿನ ತಪ್ಪದೆ ಬಂದಿಯನ್ನು ಹೋಗಿ ಕಾಣಲೇಬೇಕು. ಬಂದಿಯು ತಿಳಿದು ಬರಹೇಳಿದ ಸಂಗತಿಗಳನ್ನು ತಪ್ಪದೆ ತಿಳಿದುಕೊಂಡು ಬಂದಿರಬೇಕು.

ಸೆರೆಮನೆಗಳಿಗೆ ಸಂಬಂಧಿಸಿಯೆ 'ಸಹಾಯಕ ಸಂಘ' ಎಂಬುವುಗಳಿವೆ. ಬಂದಿಗಳು ಬಿಡುಗಡೆ ಹೊಂದಿದ ಮೇಲೆ ಆ ಸಂಘದಲ್ಲಿ ಅವರಿಗೆ ನೌಕರಿಯನ್ನು ಕೊಡುತ್ತಾರೆ. ಅನೇಕ ಕಡೆಗಳಲ್ಲಿ ಪ್ರೇಕ್ಷಕ ಮಿತ್ರರಿಂದಲೆ ಆ ಸಹಾಯಕ ಸಂಘಗಳು ರಚಿತವಾಗಿರುತ್ತವೆ.

ಷೋಲ್ಕಂಡ ಸೆರೆಮನೆಯ ಸುಧಾರಣೆಯಲ್ಲಿ 'ಅಪರಾಧಕ್ಕೆ ಶಿಕ್ಷೆಯಲ್ಲ, ಅಪರಾಧಿವೃತ್ತಿಯನ್ನೆ ಮಾರ್ಪಡಿಸುವದು ಒಳ್ಳೆಯ ಮದ್ದು" ಎಂಬ ತತ್ವವು ಮೂಲದಲ್ಲಿದೆ. ಅಪರಾಧಿಗಳೂ ಮನುಷ್ಯರೇ. ಕುಸಂಸ್ಕಾರ ಇಲ್ಲವೆ ಪರಿಸ್ಥಿತಿಯ ಒತ್ತಾಯದಿಂದ ಅವರು ಅಪರಾಧಗಳಿಗೆ ಪ್ರವೃತ್ತರಾಗುತ್ತಾರೆ. ಆದುದರಿಂದ ಅವರ ಅಪರಾಧವೃತ್ತಿಗಳನ್ನು ಇನ್ನೂ ಹೆಚ್ಚಿಸುವ ಉದಾಸೀನತೆ, ಮಾತ್ಸರ್ಯ, ಕ್ರೌರ್ಯಗಳಿಂದ ಸೆರೆಮನೆಗಳನ್ನು ತುಂಬಿದರೆ ಬಂದಿಗಳು ಪುನಃ ಸಾಮಾಜಿಕ ಜೀವಿಗಳಾಗುವದೆಂತು? ಬ್ರಿಟನ್ ಸ್ವತಂತ್ರ ರಾಷ್ಟ್ರ. ಇಂದಿಲ್ಲ ನಾಳೆಯಾದರೂ ಅದು ಈಗ ಕೈಕೊಂಡ ಬಂಧಿತರ ಶಿಕ್ಷಣದ ಧ್ಯೇಯವನ್ನು ಸಾಧಿಸಬಹುದು. ಆದರೆ ಭಾರತೀಯ ಸೆರೆಯಾಳುಗಳು ಆ ಸುದಿನವನ್ನು ಎದುರು ನೋಡಬಹುದೇ? ನಮ್ಮ ಶಾಲೆಗಳು ಸೆರೆಮನೆಗಳಂತಿರುವಾಗ, ಸೆರೆಮನೆಗಳು ಶಾಲೆಗಳಾಗಬೇಕೆಂದು ಊಹಿಸುವದಕ್ಕೆ ಬಹಳ ಆಶಾವಾದಿತ್ವ ಬೇಕು.*

*(ಜಿ. ಎ. ಎಫ್. ವ್ಯಾಟ್‌ಸನ್ನರ ಲೇಖನದ ಆಧಾರದಿಂದ)

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟದೆ)

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ

ಅಮೋಘವಾದ ಮಧುರ ದ್ರವರಸಾಯನ

ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ

—: ಸುಲಭವಾಗಿರುವದು :—

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೫ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು.

ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಎಮ್. ವಿ. ಶಾಸ್ತ್ರಿ, ಆಯುರ್ವೇದಭೂಷಣ

ನಂ. 15 **ಕೊಡಿಯಾಲಬೈಲು**, ದ. ಕ.


ಮೈಸೂರು ಸ್ಟೇಟಿನ ನಮ್ಮ ಏಜಂಟರು:— **ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.**

ಗಜಕರ್ಣ, ಹುರುಕು, ತದ್ದು, ಸಡ ಮುಂತಾದ ಚರ್ಮರೋಗಗಳಿಂದ ಪೀಡಿತ ಜನರಿಗೆ ಒಂದೇ ಉಪಾಯವು.

ರಜಿಸ್ಟರ್ಡ್

ಗುಣ ಬರದಿದ್ದರೆ ಹಣ ತಿರುಗಿ ಕೊಡುವೆವು. ಬಾಟಲಿಯ ಬೆಲೆ ೪ ಆಣೆ

ಸ್ಟಾರ್ ಕಂಪನಿ, ಬೆಳಗಾವಿ



ನಾಝೀ ಶಿಕ್ಷಣ

ಲೇಖಕರು:—ವಿಶ್ವನಿಹಾರಿ

ಮಹಾಯುದ್ಧವು ಕೊನೆಗಂಡಾಗ ಜರ್ಮನಿಯು ಹಿರಿಯ ರಾಷ್ಟ್ರಗಳ ನಿಯಮಗಳಿಂದ ಬಂಧಿತವಾಗಿತ್ತು. ಸಾಲದ ಹೊರೆಯಿಂದ ಉಸುರಾಡುವದು ಕಠಿಣವಾಗಿತ್ತು. ರಾಷ್ಟ್ರದ ಪುನರ್ನಿರ್ಮಾಣಕ್ಕೆ ಯೊಗ್ಯರಾದ ಜನರಿಲ್ಲ. ವ್ಯಾಪಾರ ವ್ಯವಸಾಯಗಳ ಪುನರುಜ್ಜೀವನಕ್ಕೆ ದುಡ್ಡಿಲ್ಲ; ಹುಟ್ಟಿಸಿದ ಸಂಪತ್ತು ಸಾಲ ಮುಟ್ಟಿಸಲಿಕ್ಕೆ ಹೊರಟು ಹೋಗುತ್ತಿತ್ತು. ಮಹಾಯುದ್ಧದ ನಾಲ್ಕು ವರ್ಷ ಜಗತ್ತನ್ನೆಲ್ಲ ನಡುಗಿಸಿದ ಜರ್ಮನಿಯ ಅವತಾರವಿಂದು ಸಮಾಪ್ತವಾಯಿತು, ಎಂದು ಎಲ್ಲರೂ ಅಂದುಬಿಟ್ಟರು.

ಹಿರಿಯ ರಾಷ್ಟ್ರದ ನಿರ್ಮಾಣಕ್ಕೆ ಮಹತ್ವಾಕಾಂಕ್ಷಿಗಳು ಬೇಕು. ಜರ್ಮನಿಯು ಎಲ್ಲಿಯವರೆಗೆ ಪರರಾಷ್ಟ್ರಗಳ ಇಚ್ಛಾನುವರ್ತಿಯಾಗಿ ತಾನು ಉಪವಾಸಬಿದ್ದು ಪರರ ಒತ್ತಾಯದ ಸಾಲವನ್ನು ಮುಟ್ಟಿಸಲು ಯತ್ನಿಸುತ್ತಿತ್ತೋ ಅಲ್ಲಿಯವರೆಗೆ ಅದರ ಭವಿಷ್ಯಕ್ಕೆ ನಿರಾಶೆಯ ಕತ್ತಲು ಕವಿದಿತ್ತು. ಜರ್ಮನಿಯಲ್ಲಿ ವಿದ್ವಾಂಸರಿಗೂ ಜಾಣರಿಗೂ ಕೊರತೆಯಿದ್ದಿಲ್ಲವಾದರೂ, ರಾಷ್ಟ್ರವನ್ನು ಸಾಲದ ಉರುಲಿನಿಂದ ಬದುಕಿಸುವ ಹಂಚಿಕೆಯು ಯಾರಿಗೂ ಹೊಳೆಯಲಿಲ್ಲ. ಮತ್ತು ಜರ್ಮನಿಯು ತನ್ನ ಒಡಂಬಡಿಕೆಗೆ ಪ್ರಾಮಾಣಿಕವಾಗಿ ವರ್ತಿಸುತ್ತ ಹೋಗಿದ್ದರೆ ಎಂತಹ ರಾಜಕಾರಪಟುವಿಗೂ ಜರ್ಮನಿಯನ್ನು ಋಣಮುಕ್ತವನ್ನಾಗಿ ಮಾಡುವದು ಅಸಾಧ್ಯವಾಗಿತ್ತು. ಅಂದ ಮೇಲೆ ಜರ್ಮನಿಗೆ ಉಳಿದುದು ಒಂದೇ ದಾರಿ; ಅದೆಂದರೆ ಹುಂಬ ಹಠಮಾರಿತನ. 'ಸಾಲ ಮುಟ್ಟಿಸುವದು ನಮ್ಮಿಂದ ಸಾಧ್ಯವಿಲ್ಲ; ಆದ್ದರಿಂದ ಇನ್ನು ಮೇಲೆ ನಿಮ್ಮ ದುಡ್ಡಿನ ಆಶೆ ಬಿಡಿ' ಎಂದು ದಿಟ್ಟತನದಿಂದ ಉದ್ಧಟತನದಿಂದ ಹೇಳುವ ಒಬ್ಬ ಮುಂದಾಳು ಬೇಕಾಗಿದ್ದ ಜರ್ಮನಿಗೆ. ಹಿಟ್ಲರನು ಅಂತಹ ಮುಂದಾಳಾಗಿ ಸರ್ವಾಧಿಕಾರಿಯ ಪಟ್ಟಕ್ಕೇರಿದುದು ಜರ್ಮನಿಯ ಪುನರ್ಜೀವಸಂಚಾರಕ್ಕೆ ಕಾರಣವಾಯಿತು.

ಮಹಾಯುದ್ಧದ ಒಡಂಬಡಿಕೆಯನ್ನು ಹಿಟ್ಲರನು ಮೊದಲು ಅಲಕ್ಷ್ಯಮಾಡುತ್ತ ಕೊನೆಗೆ ಪ್ರಕಟವಾಗಿ ಅದನ್ನು ಕಸದಬುಟ್ಟಿಗೆಸೆದನು. 'ಜರ್ಮನಿಗೆ ಸಾಲವಿಲ್ಲ; ಜರ್ಮನಿಯು

ಮೇಲಣ ಚಿತ್ರವು, ನಾಝಿಜರ್ಮನಿಯು ತನ್ನ ನವತರುಣರಿಗೆ ಕೊಡುವ ಹೊಸ ವ್ಯಾಯಾಮಶಿಕ್ಷಣಕ್ಕೆ ಸಂಬಂಧಿಸಿದೆ. "Strength through Joy Movement" —'ಉಲ್ಲಾಸವನ್ನು ಬಲವನ್ನು ಹೊಂಳಯಿಸುವ ಚಳವಳಿ' ಯೆಂದು ಅದರ ಹೆಸರು. ಅಂಗವಿನ್ಯಾಸಯುಕ್ತವಾದ ಈ ವ್ಯಾಯಾಮವು ನೋಡುವವರಿಗೂ ಮಾಡುವವರಿಗೂ ಕೂಡಿಯೇ ಹಬ್ಬವಾಗಿದೆಯಲ್ಲವೇ?

ತನ್ನದಾದುದನ್ನೆಲ್ಲ ಪುನಃ ಸಂಪಾದಿಸುವದು; ಜರ್ಮನಿಯು ಯಥಾಪೂರ್ವವಾಗಿ ಶುದ್ಧ ಬಲಿಷ್ಠ ರಾಷ್ಟ್ರವಾಗುವಲ್ಲಿ ಹರಿಹರಬ್ರಹ್ಮರೂ ಅಡ್ಡಿಯಾಗುವಂತಿಲ್ಲ' ಎಂದು ಘೋಷಿಸಬೇಕಾದರೆ ಹಿಟ್ಲರನ ಒಳಹಂಚಿಕೆಯೇನಿರಬಹುದು?

ಪ್ರತಿಯೊಂದು ದೇಶದಲ್ಲಿಯೂ ಕೆಲವರು ಸಾಧುಗಳಿರುತ್ತಾರೆ. ಅವರು ಹಿಟ್ಲರಸಂಘದವರಿಗೆ ನ್ಯಾಯ, ಪ್ರಾಮಾಣಿಕತನಗಳ ಬುದ್ಧಿವಾದ ಹೇಳುತ್ತಾರೆ. ಅವರ ಮಾತಿಗೆ ಕಿವಿಗೊಡುವವರೂ ಬಹಳವಾಗಿರುತ್ತಾರೆ. ಆದುದರಿಂದ ಹಿಟ್ಲರನು ರಾಷ್ಟ್ರವಾದ (ನಾಝಿತತ್ವ) ಎಂಬ ಹೊಸ ಧರ್ಮವನ್ನೆ ಪ್ರಾರಂಭಿಸಬೇಕಾಯಿತು. 'ಜರ್ಮನರು ಉಚ್ಚ ಆರ್ಯವಂಶಜರು; ಅವರು ಆಳುವದಕ್ಕೆ ಹುಟ್ಟಿದ್ದಾರೆ; ಆದುದರಿಂದ ಮಾನವಲೋಕದ ಕಲ್ಯಾಣಕ್ಕಾಗಿಯೆ ಜರ್ಮನ್ ವಂಶವು ಬದುಕಬೇಕಷ್ಟೇ ಅಲ್ಲ, ಅದು ಎಲ್ಲರನ್ನೂ ಆಳುವಂತಾಗಬೇಕು. ಮಿಕ್ಕ ರಾಷ್ಟ್ರಗಳ ಬಲಿದಾನವಾದರೂ ಚಿಂತೆಯಿಲ್ಲ, ಜರ್ಮನರು ಬದುಕಬೇಕು. ನಮ್ಮನ್ನು ಜಗತ್ತಿನಲ್ಲಿ ಚಿರಸ್ಥಾಯಿಗಳಾಗಿಸುವದೇ ನಮ್ಮ ದೇವದತ್ತವಾದ ಧರ್ಮವಾಗಿದೆ. ಈ ಧರ್ಮಕ್ಕೆ ವಿರುದ್ಧವಾಗಿ ವರ್ತಿಸುವವರು ಪಾಪಿಗಳು. ಅವರನ್ನು ಶಿಕ್ಷಿಸುವದೂ ನಮ್ಮ ಪವಿತ್ರ ಕರ್ತವ್ಯವಾಗಿದೆ' ಎಂಬವೇ ಹಿಟ್ಲರನ ನಾಝಿತತ್ವದ ಸೂತ್ರಗಳಾಗಿವೆ. ಆ ಸೂತ್ರಗಳ ಪ್ರಚಾರವೆ ಹತ್ತು ವರ್ಷಗಳಲ್ಲಿ ಜರ್ಮನರಿಗೆ ಸೆಡವಿನಿಂದ ಮೆರೆಯಲೂ—ಉರಿಯಲೂ—ಇಂದು ಪ್ರೇರಕವಾಗಿದೆ.

ಯಾವದೆ ತತ್ವವು ರಾಷ್ಟ್ರದಲ್ಲಿ ವ್ಯಾಪಕವಾಗಿ ಬೇರೂರಬೇಕಾದರೆ ಶಿಕ್ಷಣಕ್ರಮದಲ್ಲಿ ಅದರ ಸಮಾವೇಶವಾಗಬೇಕು. ಶಾಲೆಗಳಲ್ಲಿಯ ಆಟಪಾಟ, ಓದುಹಾಡುಗಳಲ್ಲಿ ಆ ತತ್ವವು ಹೆಣೆದುಕೊಂಡಿರಬೇಕು. ಅಂದರೆ ಶಿಕ್ಷಣ ಮುಗಿಯುವದರೊಳಗಾಗಿ ವಿದ್ಯಾರ್ಥಿಗಳು ಅಜ್ಞಾತವಾಗಿ ಆ ತತ್ವದ ಭಕ್ತರಾಗುತ್ತಾರೆ. ಹಿಟ್ಲರನು ಈ ಗುಟ್ಟನ್ನು ಚನ್ನಾಗಿ ಮನಗಂಡಿದ್ದ. ಆದುದರಿಂದಲೆ ಅಧಿಕಾರ ಸೂತ್ರಗಳು ಕೈಗೆ ಬಂದಕೂಡಲೆ ಅವನು ತನ್ನ ನವ ರಾಷ್ಟ್ರಧರ್ಮದ ತತ್ವಗಳನ್ನು ಶಿಕ್ಷಣಕ್ರಮದಲ್ಲಿ ಸೇರ್ಪಡಿಸಿ ವಿದ್ಯಾರ್ಥಿಗಳ ಮಾನಸಲೋಕದಲ್ಲೊಂದು ಅಪೂರ್ವ ಕ್ರಾಂತಿಯನ್ನುಂಟು ಮಾಡಿದ. ಯಾವುದೊಂದು ರಾಷ್ಟ್ರೀಯ ವಿಷಯದಲ್ಲಿ ಮೂಲತಃ ಪಲ್ಲಟವಾಗಬೇಕಾದರೆ ಅದಕ್ಕೆ ಒಬ್ಬನೆ ಒಬ್ಬ ಸರ್ವಾಧಿಕಾರಿ ಬೇಕು. ನೂರಾರು ಜನರನ್ನು ಕೇಳಿದರೆ ನೂರಾರು ಅಭಿಪ್ರಾಯಗಳಾಗಿ ಹೆಜ್ಜೆಯಿಡುವದು ದುಸ್ತರವಾಗುವದು. ಇದನ್ನರಿತೆ ಹಿಟ್ಲರನು ಶಿಕ್ಷಣದ ಸೂತ್ರಗಳನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡಿದ್ದಾನೆ.

ಮೊದಲು ಜರ್ಮನಿಯಲ್ಲಿ ಪ್ರಚುರವಾಗಿದ್ದ ಶಿಕ್ಷಣಕ್ಕೂ ಪ್ರತ್ಯಕ್ಷಜೀವನಕ್ಕೂ ಏನೂ ಸಂಬಂಧವಿರಲಿಲ್ಲ. ಬರಿ ಬುದ್ಧಿಯನ್ನು ಬೆಳೆಸಿಕೊಂಡ ಸುಶಿಕ್ಷಿತರಿಂದ ದೇಶಕ್ಕೇನು ಪ್ರಯೋಜನವೆಂಬುದೆ ಹಿಟ್ಲರನ ಪ್ರಶ್ನೆ. ಆದುದರಿಂದ ನಾಝಿ ಶಿಕ್ಷಣದಲ್ಲಿ ಪ್ರತ್ಯಕ್ಷವಾಗಿ ರಾಷ್ಟ್ರನಿರ್ಮಾಣಕ್ಕೆ ಸಾಧಕವಾದ ವಿಷಯಗಳನ್ನೆ ಸಮಾವಿಷ್ಟಗೊಳಿಸಲಾಗಿದೆ. ಶಿಕ್ಷಣವನ್ನು ಹೊಂದುತ್ತಿರುವಾಗಲೆ ವಿದ್ಯಾರ್ಥಿಗಳಲ್ಲಿ ದೇಶಾಭಿಮಾನವೂ ಬೆಳೆಯುವಂತೆ ಏರ್ಪಾಡು ಮಾಡಲಾಗಿದೆ. ಸ್ವರಾಷ್ಟ್ರಕ್ಕೆ ಸಂಬಂಧಿಸಿದ ಸರ್ವಾಂಗೀನ ಜ್ಞಾನಕ್ಕೆ ಪ್ರಾಮುಖ್ಯತೆಯಿದೆ ನಾಝಿ ಶಿಕ್ಷಣದಲ್ಲಿ. ಮತ್ತು ಪ್ರಾಥಮಿಕ ಶಿಕ್ಷಣದಲ್ಲಿಯೆ ಅದರ ಬೀಜಗಳು ಬಿತ್ತಲ್ಪಡುವವು.

ಮಾಧ್ಯಮಿಕ ಶಿಕ್ಷಣದಲ್ಲಿ ಸಂಸ್ಕೃತಿಯ ಕಡೆಗೆ ಹೆಚ್ಚು ಗಮನ ಕೊಡಲಾಗುವದು. ಜರ್ಮನ್ ವಂಶದ ವಿಷಯಕ್ಕೂ ಪರಂಪರೆಯ ವಿಷಯಕ್ಕೂ ಅಭಿಮಾನವನ್ನು ಉಕ್ಕೇರಿಸುವಂತಹ ಪಾಠಕ್ರಮವಿದೆ. ಪರರಾಷ್ಟ್ರಗಳ ಸಂಸ್ಕೃತಿಯ ಜ್ಞಾನಕ್ಕಾಗಿ ಪರಭಾಷೆಗಳನ್ನೂ ತುಸು ಕಲಿಸುವರು. ಆದರೂ ಪರಸಂಸ್ಕೃತಿಯೊಡನೆ ತುಲನೆ ಮಾಡಿದರೆ ಜರ್ಮನ್ ಸಂಸ್ಕೃತಿಯೆ ಉಚ್ಚವಾದುದೆಂದು ತೋರಿಸಿ ಅದರ ವಿಷಯಕ್ಕೆ ಅಭಿಮಾನವೆನಿಸುವ ಹಂಚಿಕೆಯಿಂದಲೆ ಶಿಕ್ಷಣದ ವ್ಯವಸ್ಥೆಯಿದೆ. ಸಮಾಜಶಾಸ್ತ್ರವೂ, ವಂಶಶಾಸ್ತ್ರವೂ ಅನಿವಾರ್ಯವಾಗಿ ಕಲಿಸಲ್ಪಡುತ್ತಿವೆ. ಜಗತ್ತಿನಲ್ಲೆಲ್ಲ ಜರ್ಮನ್‌ವಂಶವೇ ಸಂಸ್ಕೃತಿ ಹಾಗೂ ಇತಿಹಾಸಗಳ ದೃಷ್ಟಿಯಿಂದ ಶ್ರೇಷ್ಠವಾದುದಾಗಿದೆಯೆಂಬುದು ಆ ಸಮಾಜಶಾಸ್ತ್ರದ ತಿರುಳಾಗಿದೆ.

ಇತ್ತೀಚಿನ ಶಿಕ್ಷಣ ವಿಷಯದ ಪ್ರಯೋಗಗಳಲ್ಲಿ 'ವರ್ಕ್ ಕ್ಯಾಂಪ್' ಎಂಬ ಸಂಸ್ಥೆಯು ಹೆಚ್ಚು ಮಹತ್ವ

ನಾಝಿ ಶಿಕ್ಷಣದಲ್ಲಿ ಪ್ರತ್ಯಕ್ಷ ರಾಷ್ಟ್ರನಿರ್ಮಾಣಕ್ಕೆ ಸಾಧಕವಾದ ವಿಷಯಗಳನ್ನೆ ಸಮಾವಿಷ್ಟಗೊಳಿಸಲಾಗಿದೆ. ಶಿಕ್ಷಣ ಹೊಂದುತ್ತಿರುವಾಗಲೆ ದೇಶಾಭಿಮಾನವೂ ಬೆಳೆಯಬೇಕು; ಸ್ವರಾಷ್ಟ್ರಕ್ಕೆ ಸಂಬಂಧಿಸಿದ ಸರ್ವಾಂಗೀನ ಜ್ಞಾನ ದೊರೆಯಬೇಕು. ಜರ್ಮನ್ ವಂಶಶುದ್ಧಿ-ಸಂಸ್ಕೃತಿಗಳ ಬಗ್ಗೆ ಹೆಮ್ಮೆ, ಜರ್ಮನ್ ಸರ್ವಶ್ರೇಷ್ಠತೆಯಲ್ಲಿ ಶ್ರದ್ಧೆ, ಜರ್ಮನಿಗಾಗಿ ನಿಃಸ್ವಾರ್ಥದಲ್ಲಿ ಬಲಿದಾನದ ಸಿದ್ಧತೆ ಇವು ಬೇರೂರಬೇಕು.



ಜರ್ಮನ್ ಜಾನಪದ ನೃತ್ಯೋತ್ಸವ

ಜರ್ಮನಿಯು ತಾನು 'ಆರ್ಯ' ವೆಂದು ಕಂಡುಹಿಡಿದಂದಿನಿಂದ, ಕ್ರಿಸ್ತೀ ವರ್ಚಸ್ಸಿನ ಸಂಪರ್ಕವಿರದ ಹಳೆಯ ಹಳ್ಳಿಗಾಡಿನ ಆಟ-ಪಾಟ-ಕುಣಿತಗಳ ಪುನರುಜ್ಜೀವನೆಯು ಭರದಿಂದ ನಡೆದಿದೆ.

ಷ್ಟಾಗಿದೆ. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಮುಗಿದ ನಂತರ ಪ್ರತಿಯೊಬ್ಬ ವಿದ್ಯಾರ್ಥಿ(ನಿ)ಯೂ ಒಂದು ವರ್ಷದ ವರೆಗೆ ಆ 'ವರ್ಕ್‌ಕ್ಯಾಂಪಿ'ನಲ್ಲಿ ಸೇರಲೇಬೇಕೆಂಬ ನಿರ್ಬಂಧವಿದೆ. ಅವರಲ್ಲಿ ಪ್ರವೇಶಿಸುವವರಿಗೆ ಹದಿನೆಂಟು ವರ್ಷ ತುಂಬಿರಬೇಕು. ವಿದ್ಯಾರ್ಥಿಗಳಲ್ಲಿ ಶ್ರಮಸಹಿಷ್ಣುತೆ, ಕಷ್ಟಕರವಾದ ತೊಡಕಿನ ಕೆಲಸಗಳಲ್ಲಿ ಇರಬೇಕಾದ ಎಚ್ಚರಿಕೆ, ಜೀವನದಲ್ಲಿ ಅನಿವಾರ್ಯವಾದ ಸಂಕಟಗಳ ವಿಷಯಕ್ಕೆ ಪ್ರೀತಿ, ಬಡವ ಬಲ್ಲಿದರಲ್ಲಿ ಸಮಾನತೆ ಮುಂತಾದ ಸಾಮಾಜಿಕ, ರಾಷ್ಟ್ರೋಪಯುಕ್ತವಾದ ಗುಣಗಳನ್ನು ಬೆಳೆಸುವದು 'ವರ್ಕ್ ಕ್ಯಾಂಪು' ಗಳ ಕೆಲಸವಾಗಿದೆ. ಅವರೆಲ್ಲರೂ ಆಗ ನಾಝಿ ಗಣವೇಷ(ಯುನಿಫಾರ್ಮ್)ವನ್ನೆ ತೊಟ್ಟಿರುತ್ತಾರೆ. ಅರಣ್ಯದಲ್ಲಿ ಮರಗಳನ್ನು ಕಡಿಯುವದು, ಕಣಿವೆಗಳನ್ನು ಸಮನಾಡುವದು, ಮಾರ್ಗಗಳನ್ನು ನಿರ್ಮಿಸುವದು, ಉಗಿಬಂಡಿಯ ದಾರಿಗಳನ್ನು ನಿರ್ಮಿಸುವದು ಮುಂತಾದ ಕಷ್ಟದ ಕೆಲಸಗಳನ್ನು ದಿನಕ್ಕೆ ಆರು ಗಂಟೆಯಂತೆ ಅವರು ಮಾಡಲೇಬೇಕಾಗುವದರಿಂದ ಅವರಲ್ಲಿ ಕೂಲಿಕಾರ-ಶ್ರೀಮಂತ ಎಂಬ ಭೇದಭಾವವುಳಿಯುವದಿಲ್ಲ; ದುಡಿವ ಬಡವರ ವಿಷಯಕ್ಕೆ ಸಹಾನುಭೂತಿ ಹುಟ್ಟುತ್ತದೆ.

ವರ್ಕ್‌ಕ್ಯಾಂಪುಗಳಲ್ಲಿ ಬಲವರ್ಧಕವಾದ ಆಟಗಳನ್ನೂ ಸೈನಿಕ ಕವಾಯಿತನ್ನೂ ಕಲಿಸುವರು. ರಾಜನೀತಿಶಾಸ್ತ್ರವನ್ನೂ ಆಗಲೇ ಕಲಿಸುವದರಿಂದ ಈ ಶಿಕ್ಷಣದ ಮುಂದಿನ ನಾಝಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವದು.

ಭಾರತದಲ್ಲಿ ಉಚ್ಚ ಶಿಕ್ಷಣ ಪಡೆದವರ ಸಂಖ್ಯೆ ಅಪರಿಮಿತವಾಗಿ ಬೆಳೆಯುತ್ತಿರುವದರಿಂದ ನೌಕರಿಗಳಿಗೆ ಬರಗಾಲವಾಗಿದೆ. ಜೀವನ ಸಂಗ್ರಾಮವು ದಿನೇ ದಿನೇ ಕಡುತರವಾಗುತ್ತಿರುವುದರಿಂದ ನೌಕರಿಯ ಅಭಾವದಲ್ಲಿ ಶಿಕ್ಷಿತರು ಅಶಿಕ್ಷಿತರಿಗಿಂತ ಕೀಳಾದ ಪರಿಸ್ಥಿತಿಗಿಳಿಯುವರು. ತುಸು ಕೀಳೆಯ ಕೆಲಸಗಳನ್ನು ಮಾಡುವ ಜಾಣ್ಮೆಯೂ ಅವರಲ್ಲಿ ಇರುವದಿಲ್ಲ; ಅಂತಹ ಕೆಲಸಗಳು ಕೀಳು (?) ಎಂಬ ಭಾವನೆಯ ಮೂಲಕ ಅವನ್ನು ಕೈಕೊಳ್ಳುವ ವಿನಯವೂ ಅವರಲ್ಲಿ ಇರುವದಿಲ್ಲ. ಈ ಸಮಸ್ಯೆಯನ್ನು ಜರ್ಮನಿಯ ವರ್ಕ್‌ಕ್ಯಾಂಪುಗಳು ಚನ್ನಾಗಿ ಬಿಡಿಸುತ್ತವೆ. ಒಂದು ವರ್ಷದ ಅನುಭವದಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೆಲಸಗಳ ಲ್ಲಿಯ 'ಮೇಲು, ಕೀಳು' ಎಂಬ ಭಾವನೆಯು ದೂರವಾಗುವದರಿಂದ ಅವರಲ್ಲಿ ಸ್ವಾವಲಂಬನದ ಧೈರ್ಯವು ಬೆಳೆಯುವದು. ಹಾಗೆ ಸ್ವಾವಲಂಬಿಗಳಾಗಬಲ್ಲೆವೆಂದು ತೋರಿಸಿಕೊಡಿಸಿದವರಿಗೆ ಮಾತ್ರ ಅಲ್ಲಿ ಕಾಲೇಜಿನ ಉಚ್ಚ ಶಿಕ್ಷಣಕ್ಕೆ ಆಸ್ಪದ ಸಿಗುತ್ತಿದೆ. ವರ್ಕ್‌ಕ್ಯಾಂಪುಗಳು ಹೆಚ್ಚಾಗಿ ಒಕ್ಕಲುತನದ ಪ್ರದೇಶಗಳಲ್ಲಿಯೆ ಇರುವದರಿಂದ ವಿದ್ಯಾರ್ಥಿಗಳಿಗೆ ಒಕ್ಕಲುತನದ ಪೂರ್ಣ ಪರಿಚಯವೂ ಸಾಮುದಾಯಿಕ ದುಡಿತದ ರೂಢಿಯೂ ಆಗುತ್ತದೆ.

ಅಲ್ಲದೆ 'ಹಿಟ್ಲರ್ ತರುಣ ಸಂಘ' ಎಂಬುದು ಜರ್ಮನಿಯ ತುಂಬ ಶಾಖೆಗಳುಳ್ಳದ್ದಾಗಿದೆ. ಪ್ರತಿಯೊಬ್ಬ ತರುಣನೂ ತರುಣಿಯೂ ಇದರ ಸಭಾಸದರಾಗಲೇಬೇಕೆಂಬ ಕಟ್ಟಪ್ಪಣೆಯಿದೆ. ಈ ಸಂಘವು ರಾಷ್ಟ್ರವಾದಿ (ಫ್ಯಾಸಿಸ್ಟ) ಸಂಘಕ್ಕೆ ಜೋಡಿಸಲ್ಪಟ್ಟಿರುವದರಿಂದ, ವಿದ್ಯಾರ್ಥಿ ದೆಸೆಯಲ್ಲಿಯೆ ರಾಜನೈತಿಕ ತೊಡಕುಗಳ ಜ್ಞಾನವಾಗಲನುವಾಗಿದೆ. 'ವಿದ್ಯಾರ್ಥಿಗಳು ರಾಜಕಾರಣದಲ್ಲಿ ತಲೆ ಹಾಕಬಾರದು' ಎಂಬ ಮಾತಿಗೆ ಜರ್ಮನಿಯಲ್ಲಿ ಎಡೆಯಿಲ್ಲ. ಈ ಸಾಂಘಿಕ ಚಟುವಟಿಕೆಗಳಿಂದ ಇಡೀ ರಾಷ್ಟ್ರವನ್ನು ಒಂದೇ ರಾಷ್ಟ್ರವಾಧಿ ಧ್ವಜದ ಕೆಳಗೆ ಒಂದುಗೂಡಿಸುವ ಹಿಟ್ಲರನ ಉದ್ದೇಶ ಫಲಿಸುತ್ತಿದೆ.

ಜರ್ಮನಿಗೆ ವಿಜ್ಞಾನಿಗಳ, ವಿದ್ವಾಂಸರ ವಿಷಯಕ್ಕೆ ಬೇಸರ ಹುಟ್ಟಿದೆ. ಶಾಂತಿವಾದಿಗಳು ಹೇಡಿಗಳೆಂದು ಹೀಗಳಿಯಲ್ಪಡುತ್ತಿದ್ದಾರೆ. ಅಲ್ಲಿ ಶೂರ ಧೀರ ವಿಭೂತಿಗಳ ಪೂಜೆಯು ಪ್ರಚುರವಾಗುತ್ತಲಿದೆ. ತಮ್ಮ ರಾಷ್ಟ್ರದ ಕಡೆಗೆ ಆಸೆಯಿಂದ ನೋಡುವವರ ಕಂಣು ಕೀಳುವ ಕಸುವು ತಮ್ಮಲ್ಲಿದ್ದರೇ ನೆರೆಯ ರಾಷ್ಟ್ರಗಳು ಶಾಂತಿಯನ್ನು ಕಲಿಯುವವು; ಆದುದರಿಂದ ಬೇಕಾದಾಗ ರಾಷ್ಟ್ರಕ್ಕೆ ರಾಷ್ಟ್ರವೆ ಸಂಗ್ರಾಮಕ್ಕೆ ಸಿದ್ಧವಾಗಿರಬೇಕು. ಸಮರಸನ್ನಾಹವೇ ಶಾಂತಿಗೆ ದಾರಿಯೆಂಬುದು ನಾಝಿ ತರುಣ ತರುಣಿಯರ ರಾಷ್ಟ್ರಗೀತವಾದಂತಾಗಿದೆ. ಆದುದರಿಂದ ಸಾಮುದಾಯಿಕವಾದ ಭೀಕರವಾದ ಆಟಗಳು, ಸೈನಿಕ ಚಲನವಲನ, ಶಿಸ್ತುಗಳ ಅಭ್ಯಾಸಗಳೆ ಹಿಟ್ಲರ ತರುಣ ಸಂಘದ ಶಿಕ್ಷಣ ಕ್ರಮವಾಗಿದೆ.

ಆದರೆ ತರುಣಿಯರಿಗೆ ವಿಶೇಷವಾಗಿ ಗೃಹಿಣಿಯರೂ ಕುಶಲ ತಾಯಂದಿರೂ ಆಗುವ ಶಿಕ್ಷಣವನ್ನೆ ಹೆಚ್ಚಾಗಿ ಕೊಡಲಾಗುತ್ತಿದೆ. ನಾಝಿರಾಜ್ಯದಲ್ಲಿ ಸಹಶಿಕ್ಷಣಕ್ಕೆ ಎಡೆಯಿಲ್ಲ. ಆದರೂ ಸ್ತ್ರೀಯರು ಮದುವೆಯಾಗುವ ಪೂರ್ವದಲ್ಲಿಯೆ ಅವರ ಶಾರೀರಿಕ ಶಕ್ತಿವರ್ಧನಕ್ಕೆ ಅನುಕೂಲವಾದ ಶಿಕ್ಷಣವನ್ನು ಕೊಡಲಾಗುವದು. ಯುದ್ಧವಾಗುವ ಸಂದರ್ಭಗಳಲ್ಲಿ ಗಾಯಾಳುಗಳ ಆರೈಕೆಯನ್ನು ಮಾಡಲು ಸಮರ್ಥರಾಗುವಂತೆಯೂ ಅವರು ಶಿಕ್ಷಣವನ್ನು ಹೊಂದಲೇಬೇಕೆಂಬ ನಿರ್ಬಂಧವಿದೆ.

ಆಸ್ಟ್ರಿಯದಲ್ಲಿಯ ಶಿಕ್ಷಣ

ಹಿಟ್ಲರನು ನಿರಾಯಾಸವಾಗಿ ನುಂಗಿದ ಆಸ್ಟ್ರಿಯದಲ್ಲಿ ಈವರೆಗಿದ್ದ ಶಿಕ್ಷಣಕ್ರಮದ ಸಂಕ್ಷಿಪ್ತ ವರ್ಣನೆಯಿದು. ವಿದ್ಯಾರ್ಥಿ, ವಿದ್ಯೆ, ಅಧ್ಯಾಪಕ ಎಂಬ ಮೂರು ಶಿಕ್ಷಣದ ಘಟನೆಗಳ ವಿಷಯಕ್ಕೆ ಅಲ್ಲಿ ಎಂತಹ ವೈಜ್ಞಾನಿಕವಾದ ವ್ಯವಸ್ಥೆ .. .. ಏರ್ಪಟ್ಟಿತ್ತೆಂಬುದು ಇಲ್ಲಿ ಸ್ಪಷ್ಟವಾಗಿದೆ. .. ..

ಲೇಖಕರು : ಶ್ರೀ. ಹನುಮಂತರಾವ್ ಮಾಂಜರೇಕರ, ಬಿ. ಎ., ಸುಂಕೇರಿ, ಕಾರವಾರ

ಹಿಂದುಸ್ಥಾನದಲ್ಲಿ ಈಗ ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿ ...ಶಾಲಿ. ಜನತೆಯ ಹೊಸ ಆಶೆ-ಆಕಾಂಕ್ಷೆಗಳಿಗನುಸಾರ ...ವಾಗಿ ಶಿಕ್ಷಣದ ಗೊತ್ತು-ಗುರಿಗಳು ರೀತಿ-ನೀತಿಗಳು ಮಾರ್ಪಡಿಸಬೇಕಾದ ಕಾಲವಿದು. ಹಿಂದೆ ಪರಕೀಯ ಸರ...ರಕ್ಕೆ ಬೇಕಾದ ಶಿಕ್ಷಣವನ್ನು ಜನತೆಯು ಪಡೆಯುತ್ತಿತ್ತು. ...ದು ಜನತೆಗೆ ಬೇಕಾದ ಶಿಕ್ಷಣವನ್ನು ಸರಕಾರವು ಕೊಡ...ಬೇಕಾಗಿದೆ. ಶ್ರದ್ಧಾನಂದರ ಗುರುಕುಲ, ರವೀಂದ್ರನಾಥರ ಶಾಂತಿನಿಕೇತನ ಮೊದಲಾದ ಹಲಕೆಲವು ಪ್ರಯ...ತ್ನಗಳನ್ನು ಬಿಟ್ಟರೆ, ನಮ್ಮ ನಾಡಿನ ಶಿಕ್ಷಣವು ಪ್ರಾಯೋಗಿಕವಾಗಿ ವಿಕಾಸಗೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವರ್ಧಾ ಶಿಕ್ಷಣಯೋಜನೆಯೂ ಪ್ರಯೋಗಗಳ ಮೂಲಕ ವಿಕಾಸಗೊಂಡ ಪದ್ಧತಿಯಲ್ಲ; ಪ್ರಯೋಗ ಮಾಡಿನೋಡಿ ಯಶಸ್ವಿತೆಯನ್ನು ಅಳೆಯಬೇಕಾದ ಪ್ರಣಾಲಿ. ಇಂತಹ ಶಿಕ್ಷಣಯೋಜನೆಯು ನಮ್ಮ ಮುಂದಿ...ರುವಾಗ, ನಾವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಚಾರದಲ್ಲಿ...ರುವ ಶಿಕ್ಷಣಪದ್ಧತಿಗಳ ಪರಿಚಯಮಾಡಿಕೊಳ್ಳುವುದು ಅವಶ್ಯವಿದೆ. ಆ ದೃಷ್ಟಿಯಿಂದ ಈ ಬರೆಹದಲ್ಲಿ ಆಸ್ಟ್ರಿಯಾ ದೇಶದ ಶಿಕ್ಷಾ-ಪ್ರಣಾಲಿಯ ಸ್ಥೂಲ ಪರಿಚಯವನ್ನು ಮಾಡಿ ಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಈಗ ಹಿಟ್ಲರನು ನುಂಗಿದ ಆಸ್ಟ್ರಿಯಾ ದೇಶದಲ್ಲಿ, ಮಹಾಯುದ್ಧೋತ್ತರಕಾಲದಲ್ಲಿ ಪ್ರಚಲಿತವಾದ ಹೊಸ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಕನಿಗೆ ಹೆಚ್ಚು ಸ್ವಾತಂತ್ರ್ಯವೂ ಸಂಯೋಜಕತೆಯೂ ಕೊಡಲಾಗಿದ್ದುವು. ಪ್ರಾಥಮಿಕ ಶಿಕ್ಷಣವು ...ಕನ ಆರನೆಯ ವರ್ಷದಿಂದ ಪ್ರಾರಂಭವಾಗುತ್ತಿತ್ತು. ...ಸಕ್ರಮದ ಮೊದಲಿನ ನಾಲ್ಕು ವರ್ಷಗಳಲ್ಲಿ ಮೊದಲು ...ಮಾಡಿದ ವೇಳಾಪತ್ರಿಕೆಗಳಿರಲಿಲ್ಲ. ಪ್ರತಿದಿನದ ... ವಿವರಗಳನ್ನು ಮೊದಲು ಬರೆದಿಡಬೇಕಾಗು... ಇವುಗಳನ್ನು ಅಣಿಮಾಡುವಾಗ ವಿದ್ಯಾರ್ಥಿಗಳು ...ಡೆರಡು ದಿನಗಳ ಕೆಳಗೆ ಕೇಳಿದ ಸಂಗತಿಗಳ ಕಡೆಗೆ ಶಿಕ್ಷಕನು ಲಕ್ಷ್ಯ ಪೂರೈಸುತ್ತಿದ್ದನಲ್ಲದೆ, ಹುಡುಗರಿಗೆ ಸಹ ಯಾವ ವಿಷಯವನ್ನು ಕುರಿತು ಮರುದಿನ ಚರ್ಚಿಸಬಹುದೆಂದು ಕೇಳುತ್ತಿದ್ದನು. ಅವರು ದಿನದ ಬಹು ದೊಡ್ಡ ಭಾಗವನ್ನು ಅಂಗಡಿಗಳಲ್ಲಾಗಲಿ, ತಮಾಷೆಬಂಗಲೆ, ಓಣಿ, ನದಿಯ ದಂಡೆ, ತೋಟಗಳಲ್ಲಾಗಲಿ ಕಳೆಯುತ್ತಿದ್ದರು.

ಹತ್ತುವರ್ಷ ವಯಸ್ಸಾಗಲು ಹುಡುಗರು ಮೇಲಿನ ಪ್ರಾಥಮಿಕ ಶಾಲೆಯನ್ನಾಗಲಿ, ಕೆಳಗಿನ ಮಾಧ್ಯಮಿಕ ಶಾಲೆಯನ್ನಾಗಲಿ ಸೇರಬಹುದು. ವಿದ್ಯಾರ್ಥಿಗಳು ಹದಿನಾಲ್ಕು ವರ್ಷ ವಯಸ್ಸಾಗುವವರೆಗೆ ಒಂದೇ ಸಾಲೆಯಲ್ಲಿರುವುದು ಯೋಗ್ಯವೆಂದು ಕಂಡುಹಿಡಿಯಲಾಗಿದೆ. ಯಾಕೆಂದರೆ ಆ ವಯಸ್ಸಿನ ಹುಡುಗರಿಗೆ ಸಾಮಾನ್ಯ ಜ್ಞಾನವೂ ಬೋಧನೆಯೂ ಇಷ್ಟವಿರುವುವಲ್ಲದೆ, ಮುಂದೆ ಅವರು ಯಾವ ಉದ್ಯೋಗವನ್ನು ಕೈಕೊಳ್ಳಬಹುದೆಂಬ ಸಂಗತಿಯನ್ನು ಮೊದಲೇ ಗೊತ್ತುಮಾಡಲು ಸಾಧ್ಯವಿರುವದಿಲ್ಲ.

ಆಸ್ಟ್ರಿಯಾದಲ್ಲಿಯ ಈ ಹೊಸ ಶಾಲೆಗಳ ಗುರಿಯು ಪ್ರಜಾಪ್ರಭುತ್ವವು. ಅವುಗಳಲ್ಲಿ ಒಂದರ ಹಿಂದೊಂದು ಸಾಲಿನಲ್ಲಿರಿಸಿದ ಡೆಸ್ಕು ಬೆಂಚುಗಳಿರಲಿಲ್ಲ. ವಿದ್ಯಾರ್ಥಿಗಳು ಕುರ್ಚಿಯ ಮುಂದೆ ಮೇಜನ್ನಿಟ್ಟು ಅರ್ಧವರ್ತುಲಾಕಾರವಾಗಿ ಕುಳಿತುಕೊಳ್ಳುವರು; ಅಂದರೆ ಇದರಿಂದ ಜಾಗೆಯ ಮೇಲಿಂದ ಕದಲದೆ ಪರಸ್ಪರ ಸಂಭಾಷಣ ಸೌಲಭ್ಯವೂ ಸಾಧಿಸುವುದು. ಶಿಕ್ಷಕನು ವಿದ್ಯಾರ್ಥಿಗಳ ಮಿತ್ರನು, ಸಹಾಯಕನು. ಶಿಕ್ಷಕನ ಅಧಿಕಾರದರ್ಶಕವಾದ ಯಾವ ಕುರುಹುಗಳೂ ಅಲ್ಲಿರಲಿಲ್ಲ. ಹುಡುಗರೇ ತಮ್ಮ ಅನುಭವದಿಂದ ಅವಶ್ಯವಿದ್ದ ನಿಯಮಗಳನ್ನು ಗೊತ್ತುಮಾಡುವರು. ತಡಮಾಡಿ ಬರುವವರಿಂದ ತಾನು ಬರುವ ಮೊದಲು ನಡೆದ ವೃತ್ತಾಂತವು ತಿಳಿಯುವುದಿಲ್ಲವಾದುದರಿಂದ, ನಿಯಮಿತ ಹೊತ್ತಿಗೆ ಬರಬೇಕೆಂಬ ನಿಯಮವನ್ನು ಅವನು ಕಲಿಯುತ್ತಾನೆ. ವರ್ಗದಲ್ಲಿ ಗದ್ದಲ ಮಾಡಿದರೆ ಏನೂ ಕೇಳದೆ

ಇರುವದರಿಂದ, ಹೊತ್ತಿಗೆ ಒಬ್ಬನೇ ಮಾತನಾಡಬೇಕೆಂಬ ನಿಯಮವನ್ನು ಅವನು ಕಲಿಯುತ್ತಾನೆ.

ಸಾಮಾನ್ಯವಾದ ಅಭ್ಯಾಸಕ್ರಮದ ಜೊತೆಗೆ ಹಸ್ತ ಕೌಶಲ್ಯದ ಶಿಕ್ಷಣವೂ ಆವಶ್ಯಕವಾಗಿ ಏರ್ಪಡಿಸಲ್ಪಟ್ಟಿತ್ತು. ಬೌದ್ಧಿಕಶಿಕ್ಷಣ ಪಡೆದವನಿಗೆ ಹಸ್ತಕೌಶಲ್ಯವೂ ಬೇಕೆಂಬುದೇ ಇದರ ಉದ್ದೇಶ.

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣಕ್ಕಾಗಲಿ, ಪುಸ್ತಕಗಳಿಗಾಗಲಿ, ಉಪಕರಣಗಳಿಗಾಗಲಿ ವಿದ್ಯಾರ್ಥಿಗಳು ಏನೂ ಕೊಡಬೇಕಾಗಿರಲಿಲ್ಲ. ಹಿಂದಿನ ಪದ್ಧತಿಯಂತೆ ಒಂದೇ ಪುಸ್ತಕವನ್ನು— ಅದರಲ್ಲಿ ಆಸಕ್ತಿ ಅಳಿದ ಮೇಲೆಯೂ ಇಡೀ ವರುಷ— ವಿದ್ಯಾರ್ಥಿಯು ಓದಬೇಕಾಗುತ್ತಿತ್ತು; ಈಗ ಅವನಿಗೆ ೧೦-೧೫ ಪುಸ್ತಕಗಳು ಓದಲು ಸಿಕ್ಕಿದವು; ಅಂದರೆ ಸಾಧಾರಣವಾಗಿ ನಾಲ್ಕು ವರುಷಗಳ ಕಾಲದಲ್ಲಿ ಸುಮಾರು ೧೫೦ ಉತ್ತಮವಾದ ಪುಸ್ತಕಗಳನ್ನು ಅವನು ಓದುವನು. ಯುದ್ಧಪ್ರಬೋಧಕವಾದ, ಇಲ್ಲವೆ ಜಾತಿಪಂಥೋತ್ತೇಜಕವಾದ ಯಾವ ಪುಸ್ತಕಕ್ಕೂ ಅಲ್ಲಿಯ ಸಾಲೆಗಳಲ್ಲಿ ಎಡೆಯಿಲ್ಲ! (ಹೀಗಾದುದರಿಂದಲೇ ಹಿಟ್ಲರನು ಆಸ್ಟ್ರಿಯವನ್ನು ನುಂಗಿಬಿಟ್ಟನೋ ಏನೋ?) ಹಿಟ್ಲರನ ಆಳಿಕೆಯಲ್ಲಿ ಶಾಂತಿಪಾಠಗಳು ಕೈಲಾಗದವರ ಕನವರಿಕೆಗಳು; ಯಹೂದಿ ದ್ವೇಷವು ರಾಷ್ಟ್ರೀಯ ಧರ್ಮವು. ವಿದ್ಯಾರ್ಥಿಗಳ ಯೋಗ್ಯತಾ ಮಾಪನದ ಇಂದಿನ ಪದ್ಧತಿಯು ಅಲ್ಲಿಯ ಉಪಾಧ್ಯಾಯರಿಗೆ ಮಾನ್ಯವಿರಲಿಲ್ಲ. ಇಂದಿನ (ಸರ್ಟಿಫಿಕೇಟ) ಪ್ರಶಸ್ತಿಪತ್ರವನ್ನು ಕೊಡುವ ಪದ್ಧತಿಯನ್ನು ನಿಲ್ಲಿಸಿ, ವಿದ್ಯಾರ್ಥಿಯ ವರ್ಣನಾತ್ಮಕವಾದ ಲೇಖನಗಳನ್ನು ಪ್ರಾರಂಭಿಸಬೇಕೆಂದು ಅವರ ಮತ. ಈ ವರ್ಣಕಗಳಲ್ಲಿ ವಿದ್ಯಾರ್ಥಿಯ ಜೀವನದೊಳಗಿನ ಮಹತ್ವದ ಸಂಗತಿಗಳ ಉಲ್ಲೇಖವಿರಬೇಕಲ್ಲದೆ, ಅವುಗಳಿಗೆ ಕಾರಣವಾದ ಸಂದರ್ಭಗಳನ್ನೂ ಕೃತ್ಯಗಳ ಹಿನ್ನೆಲೆಯನ್ನೂ ಅವು ಹೇಳುವಂಥವು ಇರಬೇಕು.

ಔದ್ಯೋಗಿಕ ವ್ಯಾಪಾರೀ ಶಾಲೆಗಳಲ್ಲಿ ಉದ್ಯೋಗ ಶಿಕ್ಷಣದ ಜೊತೆಗೆ ವ್ಯಾಯಾಮ, ಈಸುವಿಕೆ, ಆಟಗಳು, ಕುಣಿತ ಮೊದಲಾದ ಸಾಧನಗಳ ಮೂಲಕ ಶಾರೀರಿಕ ದಾರ್ಢ್ಯದ ಕಡೆಗೂ ಲಕ್ಷ್ಯ ಪೂರೈಸಲಾಗುತ್ತಿತ್ತು. ಪ್ರತಿಯೊಂದು ಶಾಲೆಗೂ ಒಂದೊಂದು ತಾಯಿತಂದೆಗಳ ಸಮಿತಿ (Parents' Council) ಅವಶ್ಯವಾಗಿ ಏರ್ಪಡಿಸಿದ್ದಿರುವುದರಿಂದ ಎಲ್ಲ ಶಾಲೆಗಳೂ ಏಕರೀತಿಯಾಗಿ ನಿರ್ವಹಿಸಲ್ಪಡುತ್ತಿದ್ದವು. ಆಸ್ಟ್ರಿಯದಲ್ಲಿ ಶಿಶುವಿಹಾರಗಳೂ ಬಹಳ ಅವೆ. ಇವು ಇಡೀ ವರುಷ ತೆರೆದಿರುತ್ತವೆ. ಬೇಸಗೆಯ ವಿರಾಮ ಕಾಲದಲ್ಲಿಯೂ ಇವುಗಳಲ್ಲಿ ಶಿಕ್ಷಕರು ವಾರಕ್ಕೆ ೩೩ ತಾಸು ಕೆಲಸಮಾಡುತ್ತಿದ್ದರು.

ಪ್ರತಿಯೊಬ್ಬ ಶಿಕ್ಷಕನಿಗೆ ಎರಡು ವರುಷಗಳ ಶಿಕ್ಷಣವು ಆವಶ್ಯಕವಿದ್ದಿತಲ್ಲದೆ, ಮೂರು ತಿಂಗಳ ಪಾಠಕ್ರಮಗಳು ಹೊಸ ಶೋಧಗಳ ಪರಿಚಯ ಮಾಡಿಕೊಡುವವಕ್ಕಾಗಿ ಆಗಾಗ ಏರ್ಪಡಿಸಲಾಗುತ್ತಿದ್ದವು. ಶಿಶುವಿಹಾರಗಳೊಳಗಿನ ಶಿಕ್ಷಕರೆಲ್ಲರೂ ವಾರಕ್ಕೊಮ್ಮೆ ಒಂದುಗೂಡಿ ವಿವಿಧ ಸಂಗತಿಗಳನ್ನು ಚರ್ಚಿಸುತ್ತಿದ್ದರು.

ಇದಾಯಿತು ಹಿಂದಿನ ಮಾತು. ಇಂದಿನ ನಾಝಿ ಆಸ್ಟ್ರಿಯದಲ್ಲಿ ಯಾವ ಯಾವ ಮಾರ್ಪಾಟುಗಳಾಗಿವೆಯೋ ಏನೋ!*

*ಹಿಟ್ಲರನು ಆಸ್ಟ್ರಿಯದಲ್ಲಿಯ ಕ್ಯಾಥೊಲಿಕ್ ಹಾಗೂ ನಾಝಿ ವಿರೋಧಿ ವರ್ಗವನ್ನು ಅಡಗಿಸಲೆಂದು, ಕ್ಯಾಥೊಲಿಕ್ ಚರ್ಚಿನ ಮೇಲ್ ಚಾರಣೆಯಲ್ಲಿ ನಡೆದ ಹಾಗೂ ಅನ್ಯಾಶಕ್ತೀಯ ಶಿಕ್ಷಣಸಂಸ್ಥೆನ್ನೆಲ್ಲ ಈಚೆಗೆ ಮುಚ್ಚಿಬಿಟ್ಟನೆಂಬುದು ವೃತ್ತಪತ್ರಿಕೆಗಳನ್ನು ಓದುವರಿಗೆ ತಿಳಿದೇ ಇದೆ. --ಸಂ.

ಸುಶಿಕ್ಷಿತ ಸ್ತ್ರೀಯರ ದೇಶಗಳು

ಲೇ:—ಶ್ರೀ. ಎಂ. ಪಿ. ತಿರುಮಲ ಆಚಾರ್ಯ, ಮುಂಬಯಿ

★

ವಿಶ್ವವಿದ್ಯಾನಿಲಯದ ಪದವಿಗಳು ಬೇರೆ, ಶಿಕ್ಷಣ ದಿಂದೊದಗುವ ಸಂಸ್ಕಾರ-ವ್ಯವಹಾರಜ್ಞಾನಗಳು ಬೇರೆ. ಜರ್ಮನಿಯಲ್ಲಿಯ ಸಾಮಾನ್ಯ ಸ್ತ್ರೀವರ್ಗ -ಸ್ವೀಡನ್‌ದಲ್ಲಿಯ ಪರಿಚಾರಿಕೆಯರು, ಒಳ್ಳೊಳ್ಳೆ ಪದವೀಧರರಿಗಿಂತ ಸುಸಂಸ್ಕಾರವಂತಿಯರು !



ಮಹಾಯುದ್ಧ ಪೂರ್ವದಲ್ಲಿ ನಾನು ಇಂಗ್ಲಂಡ್, ಫ್ರಾನ್ಸ್, ಜರ್ಮನಿಗಳ ಕಡೆಗಿದ್ದೆ. ಆಗ ಜಗತ್ತಿನ ಪ್ರಗತಿಪರ ದೇಶಗಳಲ್ಲೆಲ್ಲ ಇವುಗಳೆ ಶಿಕ್ಷಣದಲ್ಲಿ ಹೆಚ್ಚು ಮುಂದುವರಿದವುಗಳಾಗಿವೆ ಎಂದು ನನ್ನ ಕಲ್ಪನೆಯಾಗಿತ್ತು. ಆದರೆ ವಸ್ತುತಃ ಸ್ವತಂತ್ರ, ಪ್ರಗತದೇಶಗಳೆಂದು ಜಗತ್ಪ್ರಸಿದ್ಧವಾದ ಇಂಗ್ಲೆಂಡ್, ಫ್ರಾನ್ಸ್‌ಗಳಿಗಿಂತ ಕೈಸರನ ಜರ್ಮನಿಯೆ ಹೆಚ್ಚು ಸುಶಿಕ್ಷಿತವಾಗಿತ್ತು. ಮಿಕ್ಕ ಕಡೆಗಳಲ್ಲಿ ಸಾಕ್ಷರತೆಯು ಹೆಚ್ಚಾಗಿ ಇದ್ದಿತೆಂಬುದು ನಿಜ; ಆದರೆ ಜರ್ಮನಿಯಲ್ಲಿಯಂತೆ ವಿಷಯತಜ್ಞತೆಯು ಅಲ್ಲೆಲ್ಲ ತೋರಿಬರುತ್ತಿರಲಿಲ್ಲ. 'ಕೆಲವುಗಳಲ್ಲಿ ಎಲ್ಲವನ್ನೂ ಎಲ್ಲವುಗಳಲ್ಲಿ ಕೆಲವನ್ನೂ' ಕಲಿಸಬೇಕೆಂಬುದು ಬರಿ ಕಾಗದದಲ್ಲಿಯ ನಿರ್ಧಾರವಾಗಿತ್ತು. ಆ 'ತಜ್ಞತೆ' ಇಲ್ಲದಿದ್ದರೆ ಜಗತ್ತಿನ ಪೇಟೆಗಳಲ್ಲಿ ಜರ್ಮನಿಯು ಫ್ರಾನ್ಸ್, ಇಂಗ್ಲಂಡ್‌ಗಳನ್ನು ಸೋಲಿಸುತ್ತಿರಲಿಲ್ಲ.

ಇಂಗ್ಲೆಂಡ್, ಫ್ರಾನ್ಸ್‌ಗಳಿಗಿಂತ ಜರ್ಮನಿಯು ಹೆಚ್ಚು ತಂತ್ರವಾಗಿರಲಿಲ್ಲ; ಮತ್ತು ಅದು ವಿಶೇಷವಾಗಿ ಗತಾ ತ್ಮಕವಾಗಿತ್ತು — ಎಂಬುವೇನೋ ನಿಜ. ಆದರೆ ತಂತ್ರಗಳ ವಿಷಯದಲ್ಲಿ ನಾವೀನ್ಯವನ್ನೂ, ಷಯನ್ನೂ ಉಂಟುಮಾಡುವವರಲ್ಲಿ ಜರ್ಮನಿಯು ಗಳಿಗಿಂತ ಬಹುವಾಗಿ ಸ್ವತಂತ್ರವಾಗಿತ್ತು. ಮೊನ್ನೆಯವರೆಗೆ ಇಂಗ್ಲಂಡಿನ ತೀರ ಮೊದಲಿನ ವ್ಯವಸಾಯವಾದ ಕಲ್ಲಿದ್ದಲಿಕಣಿಗಳ ವ್ಯವಸ್ಥೆಯಲ್ಲಿ ವಿಜ್ಞಾನವೂ ತಲೆಹಾಕಿರಲಿಲ್ಲ; ಅರ್ಥಶಾಸ್ತ್ರವೂ ಪ್ರಯೋಗಿಸಲ್ಪಟ್ಟಿರಲಿಲ್ಲ. ನಾವೀನ್ಯವಿಲ್ಲದಿದ್ದರೂ ಅವರ ವ್ಯವಸಾಯಗಳು ಬಾಧೆಯಿಲ್ಲದೆ ಸಾಗಿದುದು ಅವರ ದೈವವೇ ಸೈ. ಇಂಗ್ಲಂಡಿನ ಮತ್ತೊಂದು ಹಳೆಯ ವ್ಯವಸಾಯ ನೂಲು-ಬಟ್ಟೆಗಳದು. ಪುಟ್ಟ ಜಪಾನ ಕೂಡ ತನ್ನ ವೈಜ್ಞಾನಿಕ ನಾವೀನ್ಯದಿಂದ ಇಂಗ್ಲಂಡಿನ ವ್ಯವಸಾಯವನ್ನು ನಡುಗಿಸಿತು. ಇಂಗ್ಲಂಡು ಕಾರಖಾನೆಗಳನ್ನು ಮುಚ್ಚಿ ಯಂತ್ರಗಳನ್ನು ಮುರುಕು ಕಬ್ಬಿಣ ತುಂಡುಗಳಂತೆ ಮಾರಹತ್ತಿತು!

ಸಾಮಾಜಿಕ ವಿಷಯಗಳಲ್ಲಿಯೂ ಜರ್ಮನಿಯು ಬಹಳ ಮುಂದುವರಿದಿತ್ತು. ರೋಗಿಗಳ ಮತ್ತು ನಿರುದ್ಯೋಗಿಗಳ ಜೀವವಿಮೆಯ ಕಾಯದೆಯು ಮಿಕ್ಕ ದೇಶಗಳಿಗಿಂತ ಜರ್ಮನಿಯಲ್ಲಿಯೆ ಮೊದಲಾಯಿತೆಂಬುದು ಸರ್ವಶ್ರುತವಷ್ಟೆ. ಅಸ್ವತಂತ್ರವಾದ ಜರ್ಮನಿಯಲ್ಲಿ ಜಗತ್ತಿಗೆ ಅತಿ ದೊಡ್ಡದಾದ ಸಾಮ್ಯವಾದಸಂಘವೂ, ವಣಿಕ್ ಸಂಘವೂ ಇದ್ದವು. ಅವೆರಡು ಸಂಘಗಳನ್ನು ಸಂದರ್ಶಿಸುವ ಅವಕಾಶವು ನನಗೆ ಸಿಕ್ಕಿತ್ತು. ಅಲ್ಲಿಯ ಕೆಲಸಗಾರರಲ್ಲಿಯ ಸೈನಿಕಶಿಸ್ತೂ, ಆರ್ಥಿಕ ಸುವ್ಯವಸ್ಥೆಯೂ ನನ್ನನ್ನು ವಿಸ್ಮಿತಗೊಳಿಸಿದವು. ಯುದ್ಧಸಮಯದಲ್ಲಿ ಆ ಸಾಮ್ಯವಾದಿಗಳೂ ಕೈಸರನ ಪಕ್ಷವನ್ನೆ ವಹಿಸಿದ್ದರೆಂಬುದು ನಿಜ. ಆದರೆ ಆ ಕ್ರಮ ವ್ಯವಸ್ಥೆಗಳು ಅವರ ವಿದ್ಯಾರ್ಥಿದೆಸೆಯಿಂದಲೆ ಬೆಳೆದುಬಂದವುಗಳಾಗಿವೆ. ಕ್ರಮ, ವ್ಯವಸ್ಥೆಗಳು ಜರ್ಮನಿ, ಜಪಾನಗಳ ಉಸುರುಗಳಾಗಿವೆ. ಈ ವಿಷಯದಲ್ಲಿ ಭಾರತದ ಬಿ. ಎ. ಪದವೀಧರನಿಗಿಂತ ಜರ್ಮನಿಯ ಶಾಲೆಯ ಹುಡುಗನೊಬ್ಬನು ಹೆಚ್ಚು ಬಲ್ಲವನಾಗಿದ್ದಾನೆ. ಅಲ್ಲಿಯ ಪ್ರಜಾಪ್ರಭುತ್ವದ ದೇಶಗಳಲ್ಲಿಯಂತೂ ವಿದ್ಯಾರ್ಥಿಗಳಿಗೂ ದೇಶದ ಆರ್ಥಿಕ ಸಮಸ್ಯೆ

ಗಳು ತಿಳಿದಿದ್ದವನಲ್ಲದೆ ಅವರು ವಿದ್ಯಾಭ್ಯಾಸ ಮುಗಿದನಂತರ ದೇಶದ ಜೀವನವನ್ನು ಸುಧಾರಿಸಲಿಕ್ಕೆ ಸಾಂಘಿಕವಾಗಿ ಯತ್ನಿಸಲು ಸಿದ್ಧರಾಗಿರುತ್ತಿದ್ದರು. ಜರ್ಮನಿಯ ವಿಶ್ವವಿದ್ಯಾಲಯಗಳಲ್ಲಿಯ ಭಾರತೀಯ ವಿದ್ಯಾರ್ಥಿಗಳೋ, ಮೊದಲು ತಮ್ಮ ಅಭ್ಯಾಸ, ಪರೀಕ್ಷೆಗಳ ಕಡೆಗೇ ಗಮನ. ಅಲ್ಲಿಯ ಮಿಕ್ಕ ವಿದ್ಯಾರ್ಥಿಗಳ ಸುಖದುಃಖಗಳ ವಿಷಯಕ್ಕೆ ಇವರು ಕೊಂಚವೂ ಯೋಚಿಸುವದಿಲ್ಲ.

ಕೈಸರ-ಜರ್ಮನಿಯ ಸ್ತ್ರೀಯರು ಫ್ರಾನ್ಸ್, ಇಂಗ್ಲಂಡ್‌ಗಳ ಸ್ತ್ರೀಯರಿಗಿಂತ ಮುಂದುವರಿದವರಾಗಿದ್ದರು; ಅವರು ಹೆಚ್ಚು ವ್ಯಾಸಂಗಿಗಳಾಗಿದ್ದರು. ಆದರೆ 'ಹಿಂದುಳಿದ' ರಶಿಯದ ಸ್ತ್ರೀಯರು ಮಾತ್ರ ಜರ್ಮನ್ ಸ್ತ್ರೀಯರ ಸರಿಸಮಾನರೇ ಆಗಿದ್ದರು. ಆಗಿನ ಯುರೋಪದ ವಿಶ್ವವಿದ್ಯಾಲಯಗಳಲ್ಲಿ ರಶಿಯನ್ ಸ್ತ್ರೀಯರೇ ವಿಶೇಷವಾಗಿದ್ದರು.

ಪಶ್ಚಿಮ ಯುರೋಪೀಯ ಸ್ತ್ರೀಯರಲ್ಲಿ ಶಿಕ್ಷಣವೆಷ್ಟು ಪ್ರಚುರವಾಗಿತ್ತೆಂದರೂ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದೊಂದೆ ಅವರ ಗುರಿಯಾಗಿತ್ತು. ಹೊಟ್ಟೆಗಾಗಿ ದುಡಿಯುತ್ತಿರುವ ಸ್ತ್ರೀಯರಲ್ಲಿ ಮಾತ್ರ ಅನೇಕರು ಸಮಾಜದ ಕೆಲಸಗಾರರ ಸುಧಾರಣೆಯಲ್ಲಿ ಅಭಿರುಚಿಯುಳ್ಳವರಾಗಿದ್ದರು. ಆದರೆ ಅವರಿಗೆ ಉಚ್ಚಶಿಕ್ಷಣದ ಅವಕಾಶವೂ ಹಣವೂ ಇರಲಿಲ್ಲ. ಆದರೂ ಕೈಸರ-ಜರ್ಮನಿಯಲ್ಲಿ ಬರಿ ಸಿರಿವಂತರನ್ನು ಮದುವೆಯಾಗಿ ತಮ್ಮ ಸಾಮಾಜಿಕ ದರ್ಜೆಯನ್ನು ಎತ್ತರಿಸುವ ಮೋಹಕ್ಕೆ ಬಲಿ ಬೀಳದೆ ಸಮಾಜದ ಸುಖ ಪ್ರಗತಿಗಳಿಗಾಗಿ ಹೆಣಗುವ ಹಲಕೆಲವು ಶ್ರೇಷ್ಠ ನಾರಿಯರು ಪ್ರಕಾಶಿಸದಿರಲಿಲ್ಲ. ಯುದ್ಧವಿರೋಧಕ ಚಳವಳಿಗಾರಳಾದ 'ಬರ್ಥಾ ವಾನ್ ಸೂಟ್ನರ'ಳ ಹೆಸರು ಶಿಕ್ಷಿತರಿಗೆ ಒಳ್ಳೆ ಪರಿಚಿತವಾಗಿದೆ. ಅವಳು ಬರೆದ ಪುಸ್ತಕಗಳ ಪ್ರಚಾರವು ನಿರ್ಬಂಧಿಸಲ್ಪಟ್ಟಿತ್ತಲ್ಲದೆ, ಅವಳೂ ದೇಶಕ್ಕೆ ಮತ್ತು ಸಮಾಜಕ್ಕೆ ಗಂಡಾಂತರ ತರುವಳೆಂದು ಬಂಧಿಸಲ್ಪಟ್ಟಿದ್ದಳು. ಅನೌರಸ ಸಂತಾನದ ಬಡತಾಯಂದಿರ ಉದ್ಧಾರಕ್ಕಾಗಿ ಮಿಸೆಸ್ ಡಾ. ಹೆಲೆನ್ ಸ್ಟೊಕರ್ ಎಂಬವಳು ಆಂದೋಲನವನ್ನು ಸಾಗಿಸಿದ್ದಳು. ಸಂಪ್ರದಾಯಬದ್ಧ, ಯುದ್ಧಪ್ರಿಯವಾದ ಜರ್ಮನಿಯಲ್ಲಿ ಈ ಕೆಲಸವು ಎಂತಹ ಬಿಕ್ಕಟ್ಟಿನದು! ಕುಲೀನರೆಂದು ಜಂಬಕೊಚ್ಚುವ ಸಿರಿವಂತ ವರ್ಗದ ಸ್ತ್ರೀಯರ ಕಾಮಜೀವನವನ್ನು ಟೀಕಿಸಿ ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಮಿಸೆಸ್ ರೋಸಾ ಮೆರೆಡರ್ ಎಂಬವಳು ಬರೆದಳು. ಸಾಮ್ಯವಾದಿ ಕಾದಂಬರಿ ಲೇಖಿಕೆಯಾದ ಕ್ಲೇರಾ ವಿಬಿಗ್‌ಳ ಹೆಸರು ಜಗತ್ತಿನ ಕಾದಂಬರಿ ವಾಚಕರಿಗೆಲ್ಲ ಗೊತ್ತು. ಅಲ್ಲದೆ ಪೋಲೀಸರಿಂದ ಕೊಲ್ಲಲ್ಪಟ್ಟ ಕ್ರಾಂತಿಕಾರಿಯಾದ ಕ್ಲೇರಾ ಲಕ್ಸೆಂಬರ್ಗ ಮತ್ತು ಮಾರ್ಕ್ಸ್‌ವಾದಕ್ಕಾಗಿ ಸಾಯುವವರೆಗೆ ಹೆಣಗಿದ ಕ್ಲೆರಾ ಲೆಟ್ಕಿನ್ ಅವರ ವಿಷಯವನ್ನು ನಾವೆಲ್ಲರೂ ಬಲ್ಲೆವು.

ಜರ್ಮನಿಯಲ್ಲಿ ವಿಜ್ಞಾನವು ಸ್ವತಂತ್ರವಾಗಿತ್ತೆಂಬ ಬಗ್ಗೆ ಇನ್ನೊಂದು ನಿದರ್ಶನ: ಇಂಗ್ಲಂಡ್, ಅಮೇರಿಕಗಳಲ್ಲಿ ಹ್ಯಾವ್‌ಲೋಕ್ ಎಲಿಸನ ಕಾಮವಿಜ್ಞಾನದ ಗ್ರಂಥಗಳಿಗೆ ಬಹಿಷ್ಕಾರವಿರುವಾಗಲೆ ಜರ್ಮನಿಯಲ್ಲಿ ಅವು ಅಗ್ಗವಾಗಿ ಯಾವ ನಿರ್ಬಂಧವೂ ಇಲ್ಲದೆ ಮಾರಲ್ಪಡುತ್ತಿದ್ದವು. ಮುಂದುವರಿದ ಫ್ರಾನ್ಸ್, ಇಂಗ್ಲಂಡ್‌ಗಳಲ್ಲಿ ಬಹುತರ ಎಲ್ಲ ಸಾಮಾಜಿಕ ಚಳವಳಿಗಳಿಗೂ ವೈಜ್ಞಾನಿಕ ಗ್ರಂಥಕರ್ತರಿಗೂ ಗಣ್ಯಸ್ಥಾನವಿರಲಿಲ್ಲ. ಇಂಗ್ಲಂಡಿನಲ್ಲಿ ಮಿಸೆಸ ಕ್ರಿಷ್ಟಾಬೆಲ್ ಪ್ಯಾಂಕರ್ಸ್ಟ್‌ಳಿಂದ ನಡೆಸಲ್ಪಟ್ಟ 'ಸ್ತ್ರೀಮತಾಧಿಕಾರ'ದ ಚಳವಳಿಯು ಅಲ್ಪಾಯುಷಿಯಾಗಿತ್ತು. ಅವಳೂ ಯುದ್ಧಕಾಲದಲ್ಲಿ ತನ್ನ ಚಳವಳಿಯನ್ನು ನಿಲ್ಲಿಸಿ ಯುದ್ಧಪ್ರಿಯರ ಸೂತ್ರದಂತೆ ಕುಣಿದಳು.

ಯುದ್ಧಕಾಲದಲ್ಲಿ ಜರ್ಮನ್ ಸ್ತ್ರೀಯರು ಪುರುಷರು ಮಾಡುತ್ತಿದ್ದ ಎಲ್ಲ ಕೆಲಸಗಳನ್ನು ಮಾಡಬೇಕಾಯಿತು. ವಾಹನಗಳಲ್ಲಿ, ರೈಲುಗಳಲ್ಲಿ, ಕಾರಖಾನೆಗಳಲ್ಲಿ, ಮುನಿ ಪಾಲಿಟಿಗಳಲ್ಲೆಲ್ಲ ಶ್ರೇಷ್ಠಕನಿಷ್ಠ ಕೆಲಸಗಾರರು ಬರಿ ಸ್ತ್ರೀಯರೆ ಸಮವಸ್ತ್ರಗಳನ್ನು ಧರಿಸಿದವರಾಗಿದ್ದುದು ಸಾ[illegible] ಕಂಡುಬಂತು.

ಯುದ್ಧಕಾಲದಲ್ಲಿ ನಾನು ಜರ್ಮನಿಯಿಂದ ಸ್ವೀಡನ್ನಿಗೆ ಹೋದೆ. ಅಲ್ಲಿಯ ಸ್ತ್ರೀಯರು ಜರ್ಮನ್ ಸ್ತ್ರೀಯರಿಗಿಂತ ಹೆಚ್ಚಿನ ಕೆಲಸಗಳನ್ನು ಸೈನ್ಯಸಹಾಯವಿಲ್ಲದೆ ಜರುಗಿಸುತ್ತಿದ್ದುದನ್ನು ಕಂಡು ನಾನು ಅಚ್ಚರಿಗೊಂಡೆ. ಸ್ವೀಡಿಶ ಸ್ತ್ರೀಯರು ಕರ್ಮಕುಶಲೆಯರಾಗಿದ್ದುದಲ್ಲದೆ ಮಿಕ್ಕ ದೇಶಗಳ ನಾರಿಯರಿಗಿಂತ ಹೆಚ್ಚು ಸುಶಿಕ್ಷಿತರಾಗಿದ್ದರು. ಸ್ವೀಡನ್ ತೀರ ಉತ್ತರದಲ್ಲಿರುವ ೨ ಕೋಟಿ ಜನಸಂಖ್ಯೆಯುಳ್ಳ ಒಂದು ಚಿಕ್ಕ ದೇಶ. ಸ್ಟೊಕ್‌ಹೋಮವು ಬರಿ ಮೂರು ಲಕ್ಷ ಜನರುಳ್ಳ ಒಂದು ನಗರವಾದರೂ ಯುದ್ಧಪೂರ್ವದಲ್ಲಿಯೆ ಅಲ್ಲಿ ಹನ್ನೆರಡಕ್ಕಿಂತ ಹೆಚ್ಚಾಗಿ ದೊಡ್ಡ ದೈನಿಕ ಪತ್ರಿಕೆಗಳಿದ್ದವು. ವ್ಯವಸಾಯದಲ್ಲಿ ಜರ್ಮನಿ, ಸ್ವೀ[illegible] ಗಳಲ್ಲಿ ಹೋಲಿಕೆಯಿದ್ದರೂ ವಸ್ತುತಃ ಜರ್ಮನಿ[illegible] ಸ್ವೀಡನ್ನೇ ಹೆಚ್ಚು ಉತ್ಸಾಹಿಯೂ ಉದ್ಯೋಗಿ[illegible]

ಶಿಕ್ಷಿತವಾಗಿತ್ತು. ಸ್ವೀಡನ್ ಅಲಿಪ್ತವಾದ ದೇಶವಾಗಿದ್ದರೂ ಅಗಿತ್ತು. ಅಲ್ಲಿ ಸ್ತ್ರೀಪುರುಷರ ಸಹಶಿಕ್ಷಣವಿದೆ; ಇಬ್ಬರಿಗೂ ಒಂದೇ ಅಭ್ಯಾಸಕ್ರಮವಿದೆ; ಅಲ್ಲದೆ ವಿವಿಧ ಆಟ ವ್ಯಾಯಾಮಗಳನ್ನು ಸ್ತ್ರೀಪುರುಷರು ಕಲೆತೇ ಸಾಗಿ ಸುತ್ತಾರೆ. ಆದುದರಿಂದ ಸಹಜವಾಗಿ ಅಲ್ಲಿಯ ಸ್ತ್ರೀಪುರುಷರ ಬುದ್ಧಿಯ ದರ್ಜೆಯಲ್ಲಿ ಹೆಚ್ಚು ಸಮಾನತೆಯುಂಟಾಗಿದೆ. ಸ್ವೀಡನ್ ಕೂಡ ಸಂಪ್ರದಾಯಪ್ರಿಯ ಕರ್ಮಠ ಕ್ರಿಸ್ತರ ದೇಶವೇ; ಆದರೂ ಅಲ್ಲಿ ವಿಜ್ಞಾನ ವಿದ್ಯೆಗಳು ಮೂಲೆಗುಂಪಾಗಲಿಲ್ಲ.

ಸ್ಟಾಕ್‌ಹೋಮಿನ ಪತ್ರಿಕಾಸಂಘದ ಎರಡುನೂರು ಸದಸ್ಯರಲ್ಲಿ ಸ್ತ್ರೀಯರೇ ವಿಶೇಷವಾಗಿದ್ದರು. ಜಗತ್ತಿನ ಬೇರೆ ಯಾವ ದೇಶದಲ್ಲಿಯೂ ಇಷ್ಟು ಪ್ರಮಾಣದಲ್ಲಿ ಪತ್ರಿಕಾ ಸಂಘದ ಸ್ತ್ರೀಸದಸ್ಯರಿಲ್ಲ. ನೋಬೆಲ್ ಬಹುಮಾನಪಡೆದ ಗ್ರಂಥಕರ್ತ್ರಿ ಸೆಲ್ಮಾ ಲೆಜರ್‌ಲಾಫ್ ಮತ್ತು ಪ್ರಸಿದ್ಧ ಸಮಾಜಸುಧಾರಕ ಲೇಖಿಕೆಯಾದ ಎಲೆನ್ ಕೀ ಅವರ ಪುಸ್ತಕಗಳು ಎಲ್ಲ ದೇಶಗಳಲ್ಲಿ ಪ್ರಸಿದ್ಧವಾಗಿವೆ. ಎಲೆನ್ ಕೀ ಅವರನ್ನು ಯುಂಜೋಪಿಂಗ್‌ದ ಹತ್ತರ ಸರೋವರತೀರದಲ್ಲಿಯ ಅವಳ ಶಾಂತವಾದ ಮನೆಯಲ್ಲಿ ಕಾಣುವ ಸುಯೋಗವು ನನಗೆ ಲಭಿಸಿತ್ತು. ಆ ಸಾಧುವಾದ ಮುದುಕಿಯ ಮನೆಗೆ ಜಗತ್ತಿನ ದೊಡ್ಡದೊಡ್ಡ ವ್ಯಕ್ತಿಗಳೂ ವಿಚಾರವಿನಿಮಯಕ್ಕಾಗಿ ಬರುವರು. ಅವಳು ಭಾರತದ ವಿಷಯಕ್ಕೆ ನಾನು ಹೇಳಿದ ಸಂಗತಿಗಳನ್ನೆಲ್ಲ ಒಳ್ಳೆ ಪ್ರೇಮ ಸಹಾನುಭೂತಿಯಿಂದ ಕೇಳಿಕೊಂಡಳು. ಅವಳು ಶುದ್ಧ ಶಾಕಾಹಾರಿಯಾಗಿದ್ದಳು. ತೀರ ಸಾದಾ ವಸ್ತ್ರಗಳನ್ನು ಧರಿಸಿದ್ದಳು. ಕ್ರಿಯಾಶೀಲವಾದ ಸಮಾಜಸುಧಾರಕಳಾದರೂ ಧಾರ್ಮಿಕ ಶಾಂತಿಮಾರ್ಗದಲ್ಲಿ ನಂಬಿಗೆಯುಳ್ಳವಳಾಗಿದ್ದಳು. ಅವಳ "ಮಿಸ್-ಯೂಜ್ಡ್ ವಿಮೆನ್ಸ್ ಪಾವರ್ಸ್" (ಸ್ತ್ರೀಶಕ್ತಿಗಳ ದುರುಪಯೋಗ) ಎಂಬ ಪುಸ್ತಕವು ಬಹಳ ಪ್ರಸಿದ್ಧವಾಗಿದೆ.

ನಮ್ಮ ದೇಶದ ಸುಶಿಕ್ಷಿತರಿಗಿಂತ ಸ್ವೀಡನ್ನಿನ ಉಪಹಾರಗೃಹಗಳಲ್ಲಿಯ ಸೇವಕರು ಭಾರತೀಯ ಅಥವಾ ಚೀನದ ಧರ್ಮಗಳ ವಿಷಯಕ್ಕೆ ಹೆಚ್ಚು ಬಲ್ಲವರಾಗಿದ್ದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಜರ್ಮನಿಯ ವಿಶ್ವವಿದ್ಯಾಲಯಗಳ ಪದವೀಧರರಿಗಿಂತ ಸ್ವೀಡನ್ನಿನ ಸೇವಿಕೆಯರೊಡನೆ ಮಾತಾಡಿದರೆ ನನಗೆ ಹೆಚ್ಚು ವಿಷಯಜ್ಞಾನವಾಗುತ್ತಿತ್ತು.

ಸ್ವೀಡನ್ನಿನ ಸಿರಿವಂತರ ಮನೆಯ ಮಾನಿನಿಯರೂ ಅಲ್ಲಿಯ ಉಪಹಾರಗೃಹಗಳಲ್ಲಿ ಸೇವಿಕೆಯರಾಗಬಯಸುತ್ತಾರೆ! ಸ್ವೀಡನ್ನಿನಲ್ಲಿ ಆ ಕೆಲಸವನ್ನು ಕೀಳೆಂದು ಭಾವಿಸುತ್ತಾರೆ. ಏಕೆಂದರೆ ಉಪಹಾರಗೃಹಗಳಿಗೆ ಬಂದ ಪ್ರತಿಯೊಬ್ಬ ಉಚ್ಚ ನೀಚ ಮನುಷ್ಯನನ್ನೂ ಆ ಸೇವಿಕೆಯರು ಮರ್ಯಾದೆಯಿಂದ, ಮುಗುಳುನಗೆಯಿಂದ ಬರಮಾಡಿ ಅವರನ್ನು ಸಂತುಷ್ಟರನ್ನಾಗಿಸಬೇಕಾಗುತ್ತದೆ. ಆದರೆ ಸಿರಿವಂತ ಸ್ವೀಡಸ್ತ್ರೀಯರಿಗೆ ಮನೆಯಲ್ಲಿ ಕೂತು ಸೋಮಾರಿಗಳಾಗುವದು ಬೇಡವಾಗಿರುತ್ತದೆ. ಅಲ್ಲಿಯ ಒಬ್ಬ ಎಂಜಿನಿಯರನ ಪರಿಚಯ ನನಗಿತ್ತು. ಅವನು ಸಾಕಷ್ಟು ಗಳಿಸುತ್ತಿದರೂ ಅವನ ಹೆಂಡತಿಯು ಒಂದು ಕಚೇರಿಯಲ್ಲಿ ಸೇವಿಕೆಯ ಕೆಲಸವನ್ನು ಮಾಡುತ್ತಿದ್ದಳು. ನಾನು ಕಾರಣವನ್ನು ಕೇಳಲಾಗಿ "ನಾವು ತರುಣರಾಗಿ ನಿರೋಗಿಗಳಾಗಿರುವಾಗಲೆ ಮುಂದಿನ ಉಪಯೋಗಕ್ಕೆಂದು ಏಕೆ ಹಣ ಗಳಿಸಿಡಬಾರದು?" ಎಂದು ಅವಳೆಂದಳು. ಬೇರೆ ದೇಶಗಳಲ್ಲೋ, ಗಂಡನು ಮೈಮುರಿ ದುಡಿಯಬೇಕು; ಹೆಂಡತಿಯು ಸುಖವಾಗಿ ಆಲಸ್ಯದಲ್ಲಿ ಕಾಲ ಕಳೆಯಬೇಕು.

ನಿಮ್ಮಲ್ಲಿ ಯುರೋಪ್ ಪ್ರವಾಸ ಮಾಡುವ ಸುಯೋಗವು ಯಾರಿಗಾದರೂ ಲಭಿಸಿದರೆ ಸ್ವೀಡನ್ನನ್ನು ವಿಶೇಷವಾಗಿ ಅಲ್ಲಿಯ ನಿರೋಗಿ, ಗಟ್ಟಿಮುಟ್ಟಾದ ಸ್ತ್ರೀಯರ ಜೀವನ, ಚಟುವಟಿಕೆಗಳನ್ನು ಕಣ್ಣಾರೆ ನೋಡಲಿಕ್ಕೆ ಸಾಕಷ್ಟು ಸಮಯವನ್ನು ಉಪಯೋಗಿಸಲೇಬೇಕು.*

---

* ಪ್ರಸ್ತುತ ಲೇಖಕರು ಅಂತರರಾಷ್ಟ್ರೀಯ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಿ, ಭಾರತೀಯ ಸ್ವಾತಂತ್ರ್ಯ ಧ್ವಜವನ್ನು ಎತ್ತರವಾಗಿ ಹಾರಾಡಿಸಿದ ತೀರ ಸ್ವಲ್ಪ ಜನರಲ್ಲೊಬ್ಬರು. ಶ್ರೀ. ವೀರೇಂದ್ರನಾಥ ಚಟ್ಟೋಪಾಧ್ಯಾಯ, ಬ್ಯಾ.ಸಾವರಕರ, ಮಾದಾಮು ಕಾಮಾ ಮೊದಲಾದವರ ಸಹಕಾರಿಗಳೂ ಮಿತ್ರರೂ ಇವರು ಆಗಿದ್ದರು. ಇಂತಹವರು ಕನ್ನಡಿಗರಾಗಿದ್ದಾರೆಂಬುದು ವಿಶೇಷ ಹೆಮ್ಮೆಯ ವಿಷಯ. ಕ್ರಾಂತಿಕಾರರೆಂದರೆ ಕೇವಲ ತಲೆತಿರುಕರು, ತೀವ್ರವಿಚಾರಪಂಥಿಗಳು ಎಂದು ಸಾಮಾನ್ಯವಾದ ಕಲ್ಪನೆ; ಆದರೆ ಇವರು ಎಷ್ಟು ಸಮಂಜಸ-ಸಮತೋಲ-ಪ್ರತ್ಯುತ್ಪನ್ನಬುದ್ಧಿಯವರಾಗಿದ್ದಾರೆಂಬುದಕ್ಕೆ ಇವರ ಲೇಖನವೇ ಸಾಕ್ಷಿಯಾಗಿದೆ. —ಸಂ.

★ ಪುಸ್ತಕಗಳಿಂದ ರೋಗಪರಿಹಾರ ★

ಭೌತಿಕವಿಜ್ಞಾನಿಗಳ ಅಭಿಪ್ರಾಯದಲ್ಲಿ ಬುದ್ಧಿಯು ಮಿದುಳಿನ ರಚನೆಯ ಪರಿಣಾಮವಾಗಿದೆ. ಮಿದುಳಿನ ರಚನೆ, ಕಾರ್ಯಗಳು ರಕ್ತದಲ್ಲಿರುವ ಗುಣದಿಂದ ಪ್ರಭಾವಿತವಾಗುತ್ತವೆ. ರಕ್ತದ ಗುಣವು ಆಹಾರದ ಗುಣವನ್ನವಲಂಬಿಸಿದೆ. ಆದುದರಿಂದ ಯಾರಾದರೂ ಇಂತಹ ಆಹಾರದಿಂದ ಅಸ್ವಸ್ಥತನವು ದೂರಾಗುವುದು ಎಂದರೆ ನಮಗೆ ಆಶ್ಚರ್ಯವೆನಿಸುವದಿಲ್ಲ. ಇದೆ ಉದಾಹರಣೆಯನ್ನು ತಿರುವುಮುರುವಾಗಿ ಇಟ್ಟರೆ ಇನ್ನೊಂದು ಸಂಗತಿಯು ನಮಗೆ ತಿಳಿಯುವದು. ಪುಸ್ತಕಗಳನ್ನು ಓದುವದರಿಂದ ಮಿದುಳಿನಲ್ಲಿ ವಿಚಾರಗಳು ಹುಟ್ಟುತ್ತವೆ. ವಿಚಾರದಿಂದ ಉತ್ತೇಜಿತವಾದ ಮಿದುಳಿನ ಕೇಂದ್ರಗಳು ರಕ್ತನಳಿಕೆ, ಪಾಚಕಾಂಗ, ಶ್ವಾಸಕೋಶ ಮುಂತಾದ ದೇಹಾಂಗಗಳ ಮೇಲೆ ಪರಿಣಾಮವನ್ನು ಮಾಡುತ್ತವೆ. ಅದು ದುಷ್ಪರಿಣಾಮವಾಗಿದ್ದರೆ ಆಯಾ ಅಂಗಗಳು ರೋಗಗ್ರಸ್ತವಾಗುವವು; ಸತ್ಪರಿಣಾಮವಾಗಿದ್ದರೆ ನಿರೋಗಿಯಾಗುವವು. ಆದುದರಿಂದ ಯಾರಾದರೂ 'ಇಂತಹ ಪುಸ್ತಕದಿಂದ ಇಂತಹ ರೋಗವು ಗುಣವಾಗುವದು' ಎಂದರೆ ಏಕೆ ನಗಬೇಕು?

ಆದುದರಿಂದ ಅಜ್ಞಾನವನ್ನು ಪರಿಹರಿಸುವುದಕ್ಕೆ ಹೇಗೆ ಶಾಲೆಗಳನ್ನು ತೆರೆಯಲಾಗಿದೆಯೋ ಹಾಗೆಯೆ ವಿಶಿಷ್ಟ ರೋಗಗಳನ್ನು ನಿವಾರಿಸಲಿಕ್ಕೂ ವಿಶಿಷ್ಟ ರೀತಿಯಿಂದ ಮಿದುಳನ್ನು ಸಂಸ್ಕರಿಸುವ ಶಾಲೆಗಳನ್ನು ತೆರೆಯುವುದು ಅವಶ್ಯಕವಲ್ಲವೆ? ಇದಕ್ಕೆ ನೀವು ಉತ್ತರಿಸುವ ಪೂರ್ವದಲ್ಲಿಯೆ, ಇಂತಹ ಪ್ರಯತ್ನಗಳು ವಿದೇಶಗಳಲ್ಲಿ ನಡೆದಿವೆ; ಮತ್ತು ಅವು ಯಶಸ್ವಿಯಾಗಿವೆಯೆಂಬುದನ್ನು ನೀವು ಅರಿತಿರಬೇಕು. ಆ ಪ್ರಯೋಗಗಳಿಗೆ 'ಬೈಬ್ಲಿಯೊ-ಥೆರಪಿ' (ಪುಸ್ತಕ ಚಿಕಿತ್ಸಾ) ಎಂದು ಹೆಸರು.

ಅಜ್ಞಾನವೂ ಮೂರ್ಖತನವೂ ಮನಸ್ಸಿನ ರೋಗಗಳಾಗಿವೆ. ಅವುಗಳನ್ನು ಗುಣಪಡಿಸಲು ಪುಸ್ತಕಗಳನ್ನು ಉಪಯೋಗಿಸಬೇಕೆಂದರೆ ಯಾರಾದರೂ ಒಪ್ಪಬಹುದು. ಆದರೆ ಕ್ಷಯ ಕೆಮ್ಮು ದಮ್ಮುಗಳು ಪುಸ್ತಕಗಳಿಂದ ಗುಣಪಡುತ್ತವೆಂದು ಅಂದರೆ ಮಾತ್ರ ನಗದಿರುವವರು ಕಡಿಮೆ. ಆದರೂ ಅದು ನಗುವಂತಹ ಮಾತಲ್ಲವೆಂದು ಈಗಿನ ಪ್ರಯೋಗಗಳಿಂದ ಕಂಡುಬಂದಿದೆ. ಅಂತಹ ಒಂದು ಪ್ರಯೋಗದ .. ವಿಚಾರವಾಗಿಯೆ ಈ ಲೇಖನವಿದೆ. ..

'ಅಲಬಾಮಾ'ದಲ್ಲಿಯ 'ವೆಟೆರನ್ಸ್ ಹೊಸ್ಪಿಟಲ್' ಎಂಬ ಸವರ್ಣೀಯರ ರೋಗಿನಿಲಯದಲ್ಲಿ ಪುಸ್ತಕಚಿಕಿತ್ಸಾ ವಿಭಾಗವೊಂದನ್ನು ಬೇರೆಯಾಗಿಯೆ ಏರ್ಪಡಿಸಿದ್ದಾರೆ. ಮಿಸೆಸ್ ಸಾಡಿ ಪೆಟರ್‌ಸನ್ ಎಂಬವಳು ನ್ಯೂಯಾರ್ಕಿನ ಪಬ್ಲಿಕ್ ಲ್ಯಾಬ್ರರಿಯಲ್ಲಿ ವಾಚನಾಲಯದ ವಿಷಯಕ್ಕೆ ವಿಶಾಲವಾದ ಅನುಭವವನ್ನು ಪಡೆದು ನಂತರ ಮಾನಸೋಪಚಾರದಲ್ಲಿಯೂ ಘನವಾದ ವ್ಯಾಸಂಗಮಾಡಿ ಅನುಭವವನ್ನು ಪಡೆದಳು. ಅವಳೇ ಈಗ ಮೇಲ್ಕಂಡ ರುಗ್ಣಾಲಯದಲ್ಲಿ ಪುಸ್ತಕಚಿಕಿತ್ಸಾವಿಭಾಗಕ್ಕೆ ಸೂತ್ರಧಾರಿಣಿಯಾಗಿದ್ದಾಳೆ.

ಪ್ರತಿಯೊಂದು ರೋಗವನ್ನೂ ಮನಸ್ಸಿನ ಔದಾಸೀನ್ಯ, ಚಿಂತೆಗಳು ಬೆಳೆಯುವಂತೆ ಮಾಡುವವೆಂಬುದು ಈಗ ವೈದ್ಯಪ್ರಪಂಚಕ್ಕೆ ತಿಳಿದ ಮಾತಾಗಿದೆ. ಸಂತೋಷ ಉತ್ಸಾಹಗಳು ಬೇನೆಗಳನ್ನು ಹಗುರವಾಗಿಸುವವೆಂಬುದೂ ಗೊತ್ತಿದೆ. ಅಂತಹ ಉಲ್ಲಾಸವನ್ನು ಬೇನೆಯ ರೀತಿಗನುಸರಿಸಿ ಆರಿಸಲ್ಪಟ್ಟ ಪುಸ್ತಕಗಳಿಂದ ಹುಟ್ಟಿಸುವುದು ಸಾಧ್ಯವಿದೆಯೆಂದು ಮೇಲ್ಕಂಡ ಆಸ್ಪತ್ರೆಯಲ್ಲಿ ಅನುಭವಕ್ಕೆ ಬಂದಿದೆ.

ಚಿಕಿತ್ಸೆಗಾಗಿ ಉಪಯೋಗಿಸುವ ಪುಸ್ತಕವನ್ನು ರೋಗಿಯ ಜೀವನವನ್ನು ಪೂರ್ಣವಾಗಿ ತಿಳಿದು ಆರಿಸಬೇಕಾಗುತ್ತದೆ. ಉದಾಹರಣಾರ್ಥ, ಥಾಯ್‌ರಾಯ್ಡ್ ಗ್ರಂಥಿಯ ರೋಗದಿಂದ ಬಳಲುವವನಿಗೆ ಭಾವೋದ್ರೇಕಕರವಾದ ಪುಸ್ತಕಗಳನ್ನು ಕೊಡಕೂಡದು. ಮೇಲ್ಕಂಡ ರುಗ್ಣಾಲಯದಲ್ಲಿ ರೋಗಿ ಮಲಗಿರುವಲ್ಲಿಯೆ ಪುಸ್ತಕಗಳನ್ನು ತರುತ್ತಾರೆ; ಕಸುವಿರುವವರು ಪುಸ್ತಕಾಲಯಕ್ಕೆ ಹೋಗುತ್ತಾರೆ. ಅಲ್ಲಿ ಅವರು ಇಷ್ಟಬಂದ ಪುಸ್ತಕಗಳನ್ನು ಆರಿಸಿಕೊಳ್ಳಬಹುದು. ಆದರೆ ಅವರು ತಮಗೆ ಬಾಧಕವಾದ ಪುಸ್ತಕಗಳನ್ನು ಆರಿಸದಂತೆ

ಲೇಖಕರು: ಪ್ರೊ. ಎಂ. ಜಿ. ರಾವ್

ಅನೇಕ ಹಂಚಿಕೆಗಳನ್ನು ಮಾಡಲಾಗಿದೆ. ಈ ಹಂಚಿಕೆಗಳು ರೋಗಿಗಳಿಗೆ ತಿಳಿಯದಂತೆ ಏರ್ಪಾಡಿರುತ್ತವೆ.

ಪುಸ್ತಕಭಾಂಡಾರಿ(Librarian) ಯು ಇಂಪಾದ ಮಾತುಗಳಿಂದಲೂ, ಹರಟೆಯಿಂದಲೂ ರೋಗಿಗಳಲ್ಲಿ ಓದುವ ಬಯಕೆಯನ್ನು ಉತ್ತೇಜಿಸುತ್ತಾನೆ. ಮನೋರೋಗಿಗಳಿಗೂ ಹುಚ್ಚರಿಗೂ ಈ ರುಗ್ಣಾಲಯದಲ್ಲಿ ಶೀಘ್ರವಾಗಿ ಗುಣವಾಗುವ ಏರ್ಪಾಡುಗಳಿವೆ. ಹುಚ್ಚರ ಜೀವನದಲ್ಲಿಯ ಯಾವುದೋ ಒಂದು ಘಟನೆಯಿಂದ ಅವರ ಮಿದುಳಿನ ತೂಕ ತಪ್ಪಿ ಹೋಗಿರುತ್ತದೆ. ಮುಂದೆ ಸಮಾಜದ ಅಲಕ್ಷ್ಯದಿಂದ ಅವರಿನ್ನೂ ಅವ್ಯವಸ್ಥಿತಚಿತ್ತರಾಗುತ್ತಾರೆ. ಆದುದರಿಂದ ಇಲ್ಲಿ ಹುಚ್ಚರ ಮಿದುಳಿಗೆ ಬೇರೆ ಹೊಸ ವಿಷಯಗಳ ಚುರುಕುಕೊಟ್ಟು ಅದನ್ನು ಎಚ್ಚರಿಸುವ ಅನೇಕ ಯುಕ್ತಿಗಳನ್ನು ಪುಸ್ತಕಗಳ ಮೂಲಕವೆ ಇಲ್ಲಿ ಮಾಡಲಾಗುತ್ತಿದೆ. ಅವರ ಮನಸ್ಸು ಒಂದಾವರ್ತಿ ಹೊಸ ವಿಷಯಗಳಲ್ಲಿ ಉದ್ರಿಕ್ತವಾಗಿ ಕೆಲವು ಸಮಯ ಅನ್ಯಮನಸ್ಕವಾಯಿತೆಂದರೆ ಮೊದಲು ಉಂಟಾದ ಮಿದುಳಿನ ಧಕ್ಕೆಯು ಮಾಯಲಾರಂಭಿಸುವುದು. ಮತ್ತು ಒಂದುಸಲ ಅವರಿಗೆ ತಾವು ಸಾಮಾನ್ಯ ಮನುಷ್ಯರಂತೆ ಆಗಬಲ್ಲೆವೆಂಬ ವಿಶ್ವಾಸವು ಹುಟ್ಟಿದರೆ ಅವರು ಅರ್ಧಭಾಗ ಗುಣವಾದಂತೆಯೆ ಸೈ.

ವಾಚನಾಲಯದ ವಾತಾವರಣವನ್ನು ಬಹು ಮೋಹಕವಾಗಿ ಇಡಲಾಗಿರುವದರಿಂದ ರೋಗಿಗಳು (ಹುಚ್ಚರು) ಒಳಹೊಕ್ಕಕೂಡಲೆ ಅವರ ಕೆರಳಿದ ನರಮಂಡಲವು ತನ್ನಷ್ಟಕ್ಕೆ ತಾನೇ ಶಾಂತಿಗಾನ ಮಾಡಹತ್ತುವದು. ಅವರು ಮೊದಲು ಶಾಂತರಾಗಿ ಸದ್ದಿಲ್ಲದೆ ಕೂತುಬಿಡುವರು. ನಂತರ ಅಲ್ಲಿಯ ಸುಂದರ ಚಿತ್ರಗಳಿಂದ ತುಂಬಿದ ಪುಸ್ತಕಗಳನ್ನು ಅವರು ನೋಡಹತ್ತುವರು. ಅವರಿಗೆ ಯಾವದಾದರೊಂದು ವಿಷಯದಲ್ಲಿ ಕುತೂಹಲವುಂಟಾದುದನ್ನು ಕಂಡಕೂಡಲೆ ವಾಚನಾಲಯದ ಕಾರ್ಯದರ್ಶಿಯು ಅದೆ ವಿಷಯಕ್ಕೆ ಸಂಬಂಧಿಸಿದ ಸುದ್ದಿಗಳನ್ನೂ ಚಿತ್ರಗಳನ್ನೂ ಎಲ್ಲ ಕಡೆಯಿಂದ ಸಂಗ್ರಹಿಸಿ ಅವರಿಗೆ ಒದಗಿಸುತ್ತಾನೆ.

ಇಲ್ಲಿಗೆ ಒಬ್ಬ ಹುಚ್ಚನು ಬಂದಿದ್ದ. ಅವನಿಗೆ ತಾನು ಕೂಸಾಗಿದ್ದೇನೆಂಬ ಭ್ರಮೆಯಿತ್ತು. ಅವನು ಎದ್ದು ನಡೆದಾಡದೆ ಕೂಸಿನಂತೆ ಅಂಬೆಗಾಲಿಟ್ಟು ಅಲೆಯುತ್ತಿದ್ದ. ಅವನನ್ನು, ಶಾಂತವಾಗಿ ವಿಶಿಷ್ಟ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ಒಂದೊಂದು ಕಾಗದದಲ್ಲಿ ಅಂಟಿಸುವಂತೆ ಉತ್ತೇಜಿಸಲಾಯಿತು. ಮುಂದೆ ಆ ಚಿತ್ರವನ್ನಂಟಿಸಿದ ಕಾಗದಗಳನ್ನೆಲ್ಲ ಕೂಡಿಸಿ ಅವನು ಪುಸ್ತಕಗಳನ್ನು ಕಟ್ಟಹತ್ತಿದ. ಬರುತ್ತ ಬರುತ್ತ ಪುಸ್ತಕಗಳನ್ನು ಸುಂದರವಾಗಿ ಕಟ್ಟುವ ಕಡೆಗೆ ಅವನ ಪ್ರವೃತ್ತಿಯಾಗಿ 'ಶಿಶುಭ್ರಮೆ'ಯಿಂದ ಅವನು ಕ್ರಮೇಣ ಬಿಡುಗಡೆಹೊಂದಿದ. ಇನ್ನೊಬ್ಬ ಕಲಾವಿದನು ಉನ್ಮತ್ತನಾಗಿದ್ದುದರಿಂದ ರುಗ್ಣಾಲಯದಲ್ಲಿ ಅವನನ್ನು ಬಂಧಿಸಿದ್ದರು. ಅವನೂ ವಾಚನಾಲಯಕ್ಕೆ ಬರುತ್ತಿದ್ದನು. ಕಾರ್ಯದರ್ಶಿಯು ಅವನ ಜೀವನವೃತ್ತಾಂತವನ್ನು ತಿಳಿದು ಅವನು ವಾಚನಾಲಯಕ್ಕೆ ಬಂದಕೂಡಲೆ ಕಾಗದಗಳನ್ನೂ ಬಣ್ಣಬಣ್ಣದ ಪೆನ್ಸಿಲುಗಳನ್ನೂ ಅವನ ಕೈಗೆ ಕೊಡುತ್ತಿದ್ದನು. ಅವನು ಮೊದಮೊದಲು ಸಿಕ್ಕಸಿಕ್ಕ ಹಾಗೆ ಗೀಚುತ್ತಿದ್ದನಾದರೂ ಕ್ರಮೇಣ ಸೊಗಸಾದ ಚಿತ್ರಗಳನ್ನು ಬರೆಯಹತ್ತಿ ಸ್ವಸ್ಥಚಿತ್ತನಾದನು. ಈಗ ಅವನ ಕೈಗೆ ರುಗ್ಣಾಲಯಕ್ಕೆ ಬೇಕಾದ ಚಿತ್ರಕೆಲಸಗಳನ್ನು ಒಪ್ಪಿಸಿದ್ದಾರೆ.

ಇಂಗ್ರೇಜಿಯಲ್ಲಿ 'ರಿ-ಎಜುಕೇಶನ್', ಎಂದರೆ 'ಪುನಃಶಿಕ್ಷಣ'ವು ಈ ಹುಚ್ಚರಿಗೆ ಆವಶ್ಯಕವಾದ ಮದ್ದು. ಅವರು ಅಶಿಕ್ಷಿತರಾಗಿರುವದಿಲ್ಲ. ಪಡೆದ ಶಿಕ್ಷಣವು ಅವರ ಭ್ರಮೆಯಿಂದ ಮುಸಳಿಸಿ ಹೋಗಿರುತ್ತದೆ. ಅದಕ್ಕೆ ಪುನರುತ್ತೇಜನ ಕೊಡುವುದೆ 'ಪುನಃಶಿಕ್ಷಣ'ದ ಗುರಿಯಾಗಿದೆ. ('ಗ್ಲ್ಯಾಡಿಸ್ ಓಪೆನ್‌ಹೀಮ್'ರ ಲೇಖನದ ಆಧಾರದಿಂದ)




ಬೇಟೆಗಾತಿ

(ಬೇಲೂರಿನ ದೇವಾಲಯದಲ್ಲಿಯ ಕಂಭದ
ಮೇಲ್ಗಡೆಯ ಮೂರ್ತಿಯೊಂದು)

(ಮೈಸೂರು ಸರಕಾರದ ಕೃಪೆಯಿಂದ)

ಈ ಸುದೃಢ ಸುಂದರ ಆಕೃತಿ

ನಿಮ್ಮ ಆದರ್ಶವಾಗಿರಲಿ!



ಪ್ರೊ. ಕೆ. ವಿ. ಅಯ್ಯರ್

ವಿದ್ಯಾರ್ಥಿಯೂ ವ್ಯಾಯಾಮವೂ

ಲೇ: ಪ್ರೊ. ಕೆ. ವಿ. ಅಯ್ಯರ್ ಡಿ. ಪಿಎಚ್. ಇ.

✱ ವಯಸ್ಸಿಗೆ ಅನುಕೂಲವಾದ, ಅವಕಾಶಕ್ಕೆ ತಕ್ಕಂತಹ ವ್ಯಾಯಾಮವನ್ನು ಅನುಸರಿಸಬೇಕು. 'ಜಗಜಟ್ಟಿ'ಯಾಗಬೇಕೆಂದಲ್ಲ,

✱ ಯೋಗಾಸನ-ಸೂರ್ಯನಮಸ್ಕಾರ ಇ. ನಮ್ಮ ಪ್ರಾಚೀನಪದ್ಧತಿಗಳು ನಮ್ಮ ಮನುತೆಗೇನೋ ಅರ್ಹಗಳೆ; ಆದರೆ ಅವಕ್ಕೆ ಯಮನಿಯಮಗಳ ಬಂಧನವಿದೆ. ಬೆಳೆಯುವ ತರುಣನಿಗೆ ಕಡುತರ ವ್ಯಾಯಾಮ ಬೇಕು. ಅವನ ದೇಹ ಕೃಶವಾಗಬಾರದು. ಎದೆ ಅಗಲವಾಗಬೇಕು; ತೋಳುಗಳು ಹುರಿಗೊಳ್ಳಬೇಕು; .. ಕೈ-ಕಾಲು-ಸೊಂಟ ಬಲಗೊಳ್ಳಬೇಕು. ..

ಪ್ರತಿಯೊಬ್ಬ ವಿದ್ಯಾರ್ಥಿಯೂ, ವಿದ್ಯಾರ್ಜನೆಗಾಗಿ ಮಾಡುವ ದಿನಸ್ವ್ಯಯದ ಇಪ್ಪತ್ತರ ಒಂದೇ ಭಾಗದಷ್ಟು ಕಾಲವನ್ನಾದರೂ, ಶರೀರಶಿಕ್ಷಣಕ್ಕೆ ಮೀಸಲಾಗಿರಿಸಿದರೆ, ಅವನು ಜೀವಿಸಿರುವ ವರೆಗೂ, ಆರೋಗ್ಯವಂತನಾಗಿಯೂ, ದೃಢಕಾಯನಾಗಿಯೂ ಇರಬಹುದು. ತರುಣರು ಆರೋಗ್ಯಭಾಗ್ಯವನ್ನೂ ದೃಢಕಾಯವನ್ನೂ ತಮ್ಮ ವಿದ್ಯಾರ್ಥಿಜೀವನದಲ್ಲಿಯೇ ಸಂಪಾದಿಸಿಕೊಳ್ಳಬೇಕು. ಸಂಪಾದಿಸಿಕೊಳ್ಳುವದೊಂದೇ ಮುಖ್ಯವಲ್ಲ, ಕಾಪಾಡಿಕೊಳ್ಳಬೇಕು.

ಹಣವನ್ನು ಸಂಪಾದಿಸಬಹುದು. ಕಬ್ಬಿಣದ ಪೆಟ್ಟಿಗೆಯಲ್ಲಿಯೋ, ಬ್ಯಾಂಕಿನಲ್ಲಿಯೋ ಕಳ್ಳನ ಕೈಗೆ ಸಿಗದ ಹಾಗೆ ಇಟ್ಟು, ಅದನ್ನು ಕಾಪಾಡಬಹುದು. ಆದರೆ ಒಂದಾವರ್ತಿ ಸಂಪಾದಿಸಿಕೊಂಡ ಆರೋಗ್ಯವು, ಚಿರಸ್ಥಾಯಿಯಾಗಿರಲಾರದು. ಆರೋಗ್ಯವು ಅನರ್ಘ್ಯವಾದ ಒಂದು ರತ್ನ. ಇದನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಂಡು ಬರಬೇಕು. ಇದಕ್ಕೆ ಮಸುಕು ಹಿಡಿಯದಂತೆ, ಕೊಳೆಯು ಸೇರದಂತೆ ನೋಡಿಕೊಂಡಿದ್ದರೆ ಯಾವಾಗಲೂ ಪ್ರಕಾಶಮಾನವಾಗಿ ಪ್ರಜ್ವಲಿಸುವುದು.

ಶರೀರದಲ್ಲಿ ಕೊಳೆಗಳು ಅಥವಾ ಮಲಗಳು ಸದಾ ಉತ್ಪನ್ನವಾಗುತ್ತಲೇ ಇರುತ್ತವೆ. ಶರೀರದ ಅಂಗಗಳು ಸದಾ ಕೆಲಸಮಾಡಿ, ನಶಿಸಿಹೋದ ಭಾಗಗಳು ವಿರೂಪಹೊಂದಿ, ಪರಿವರ್ತನ ಹೊಂದಿ, ಶರೀರದ ಮಲರೂಪದಲ್ಲಿ, ಚರ್ಮ, ಮೂತ್ರ, ಶ್ವಾಸಕೋಶಗಳ ಮೂಲಕ ಸದಾ ಹೊರಬೀಳುತ್ತಲೇ ಇರುತ್ತವೆ. ಇವು ಶರೀರಧರ್ಮಾನುಸಾರವಾಗಿ, ಯಥಾರೀತಿಯಾಗಿ ನಡೆಯುತ್ತಲೇ ಇರುತ್ತವೆ. ಹೀಗಿದ್ದರೂ ಈ ಕ್ರಿಯೆಯು, ಮನುಜಶರೀರದ ಚಲನವಲನಗಳನ್ನೂ ಸ್ನಾನಶೌಚಾದಿಗಳನ್ನೂ ಅವಲಂಬಿಸಿದೆ. ಇವುಗಳ ಲೋಪದಿಂದಲೇ ಶರೀರಕ್ಕೆ ರೋಗಾದಿಗಳ ಬಾಧೆ ಉಂಟಾಗುವುವು. ಶರೀರವು ಕೃಶವಾಗುವುದು. ವಯಸ್ಸಿಗೆ ಅನುಗುಣವಾದ ದೇಹದಾರ್ಢ್ಯವೂ, ಶಕ್ತಿಸಾಮರ್ಥ್ಯವೂ, ಧೈರ್ಯೋತ್ಸಾಹಗಳೂ ಎಲ್ಲವೂ ನಾಶವಾಗಿ ಮನುಷ್ಯ ಸಜೀವಶವವಾಗುವನು. ಈ ಜೀವಿಯಿಂದ ಮನೆಗೆ, ಕುಲಕ್ಕೆ, ಸಮಾಜಕ್ಕೆ, ದೇಶಕ್ಕೆ ಆಗುವ ಉಪಕಾರವೇನು?

ವಿದ್ಯಾರ್ಥಿಯ ಬುದ್ಧಿವಿಕಾಸಕ್ಕೆ ಒದಗಿಸುತ್ತಿರುವ ಅವಕಾಶದಲ್ಲಿ, ಅನುಕೂಲದಲ್ಲಿ ಹತ್ತರಲ್ಲೊಂದು ಪಾಲಿನಷ್ಟಾದರೂ ಈಗಿನ ಶಾಲೆಗಳು ವಿದ್ಯಾರ್ಥಿಗಳ ದೇಹದಾರ್ಢ್ಯಕ್ಕೂ, ಆರೋಗ್ಯಕ್ಕೂ ಕೊಡುತ್ತಿಲ್ಲ. ಅದರಿಂದ ನಮ್ಮ ಕಲಾಶಾಲೆಗಳಿಂದ ಪದವೀಧರರಾಗಿ ಹೊರಡತಕ್ಕ ವಿದ್ಯಾರ್ಥಿಗಳನೇಕರು ಉತ್ಸಾಹರಹಿತರಾಗಿ "ಲೇಖನಿ ಹಿಡಿಯುವ ಕೆಲಸವೊಂದು ಸಿಕ್ಕರೆ ಸಾಕಪ್ಪಾ" ಎನ್ನುವಂತಾದರು. ವಿದ್ಯಾದಾನಕ್ಕೇ ಸಾಕಾದಷ್ಟು ಹಣವಿಲ್ಲದಿರುವಾಗ, ಇನ್ನು ವಿದ್ಯಾರ್ಥಿಗಳ ಆರೋಗ್ಯಸಂಪಾದನೆಗೆ ಸಾಕಾದಷ್ಟು ಸಲಕರಣೆಗಳನ್ನು ಒದಗಿಸಲು ಹೇಗೆ ಸಾಧ್ಯವೆಂದು ಹೇಳುವ ವಿದ್ಯಾಇಲಾಖೆಯವರ ಕಾರಣವೂ ಸಾಧುವಾದದ್ದೇ. ಆದುದರಿಂದಲೇ ಈ ಕರ್ತವ್ಯವು ವಿದ್ಯಾರ್ಥಿಯ ಪಾಲಿಗೇ ಬಂದಿತು. ಅವನೇ ಆರೋಗ್ಯವನ್ನು ಸಂಪಾದಿಸಿಕೊಳ್ಳಬೇಕಾಗಿ ಬಂತು, ಕಾಪಾಡಿಕೊಳ್ಳಬೇಕಾಗಿ ಬಂತು. ವ್ಯಾಯಾಮದಿಂದ ಶರೀರವನ್ನು ದೃಢಪಡಿಸಿಕೊಳ್ಳಬೇಕು, ವೃದ್ಧಿಪಡಿಸಿಕೊಳ್ಳಬೇಕು.

ಆದರೆ ಎಲ್ಲಿಯ ವರೆಗೆ ? ಎಷ್ಟರ ವರೆಗೆ ? ಎಂಬ ಪ್ರಶ್ನೆಗಳು ಸಾಧಾರಣವಾಗಿ ಏಳಬಹುದು. ವಿದ್ಯೆಯನ್ನು ಕಲಿಯುವುದರಲ್ಲಿಯೂ, ಎಲ್ಲಿಯ ವರೆಗೆ, ಎಷ್ಟರ ಮಟ್ಟಿಗೆ, ಎಂದು ಕೇಳಬಹುದೇ ? ಇವು ವ್ಯಕ್ತಿಯ ಆಸಕ್ತಿ, ಆರ್ಥಿಕಸ್ಥಿತಿ, ಅವಕಾಶ, ಇವುಗಳನ್ನು ಅವಲಂಬಿಸಿರುತ್ತವೆ. ವ್ಯಾಯಾಮದ ವಿಷಯದಲ್ಲೂ ಅಷ್ಟೆ. ಆದರೆ ಒಂದು ವಿಷಯದಲ್ಲಿ ಮಾತ್ರ ಎಚ್ಚರಿಕೆ ತೆಗೆದುಕೊಳ್ಳಬೇಕಾಗುವುದು. ಪ್ರಾರಂಭವನ್ನು ಸೂಕ್ಷ್ಮವಾಗಿಯೇ ಮಾಡಿ, ಕ್ರಮೇಣ

ರೂಢಿಯಾದಂತೆ ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು. ಬುದ್ಧಿಯೇ ಮಾನವನಿಗೆ ಪ್ರಧಾನವಾದುದರಿಂದ ಅದಕ್ಕೇ ಪ್ರಥಮಸ್ಥಾನವನ್ನೂ ಪೂಜ್ಯತೆಯನ್ನೂ ಕೊಡಬೇಕು. ವಯಸ್ಸಿಗೆ ಅನುಗುಣವಾದ, ಉದ್ಯೋಗಕ್ಕೆ ಅನುಕೂಲವಾದ, ಅವಕಾಶಕ್ಕೆ ತಕ್ಕಂತಹ ವ್ಯಾಯಾಮವನ್ನು ಅನುಸರಿಸಬೇಕು. 'ಜಗಜಟ್ಟಿ'ಯಾಗಬೇಕೆಂದಲ್ಲ.

ವ್ಯಾಯಾಮವು ಶರೀರವನ್ನು ಕಾಪಾಡಿಕೊಳ್ಳುವುದಕ್ಕೆ ಒಂದುಪಾಯವೇ ಹೊರತು ಅದೇ ಒಂದು ಧ್ಯೇಯವಾಗಕೂಡದು. "ಅತಿ ಸರ್ವತ್ರ ವರ್ಜಯೇತ್" ಎಂಬ ಆರ್ಯೋಕ್ತಿಯನ್ನು ವ್ಯಾಯಾಮದ ವಿಷಯದಲ್ಲಿ ಮರೆಯಬಾರದು. ಅತಿ ವ್ಯಾಯಾಮವು ಶರೀರದ ಉಷ್ಣತೆಯನ್ನು ಹೆಚ್ಚಿಸಿ ಶರೀರಾರೋಗ್ಯವನ್ನು ಕೆಡಿಸುತ್ತದೆ. ಆದರೆ ಇಂಥ ಉದಾರಣೆಗಳು ಸಾವಿರಕ್ಕೆ ಒಂದಾದರೆ, ವ್ಯಾಯಾಮವಿಲ್ಲದೆ ಅನಾರೋಗ್ಯದಿಂದ ನರಳುವವರು ಒಂಬೈನೂರ ತೊಂಬಂತ್ತೊಂಬತ್ತು.

ಇತ್ತೀಚೆಗೆ ಯೋಗಾಸನ, ಸೂರ್ಯನಮಸ್ಕಾರ ಮುಂತಾದ ಪ್ರಾಚೀನ ಪದ್ಧತಿಗಳು ಹೆಚ್ಚುಹೆಚ್ಚಾಗಿ ರೂಢಿಗೆ ಬರುತ್ತಿವೆ. ಆರೋಗ್ಯಸಾಧನೆಗೆ ಇವು ಸುಲಭಸಾಧ್ಯಗಳೂ ಸುಲಭೋಪಾಯಗಳೂ ಆಗಿರುವುವು. ನಮ್ಮದೆಂದೇ ಇವುಗಳಲ್ಲಿ ನಮಗೆ ಮಮತೆ ಹೆಚ್ಚು. ನಾನಿವುಗಳನ್ನು ಆದಷ್ಟು ಕೂಲಂಕಷವಾಗಿ ಕಲಿತವನು; ಅಭ್ಯಾಸದಲ್ಲಿಟ್ಟಿರುವವನು. ಆದ್ದರಿಂದ ಈ ವಿಷಯದಲ್ಲಿ ನನ್ನ ಒಂದೆರಡು ಎಚ್ಚರಿಕೆಯ ಮಾತುಗಳನ್ನು ಆದರದಿಂದ ವಿಮರ್ಶಿಸುವಿರೆಂಬ ನಂಬಿಗೆಯ ಮೇಲೆ ಅದನ್ನಿಲ್ಲಿ ಪ್ರಸ್ತಾಪಿಸಿರುವೆನು.

ನಲವತ್ತು ವರ್ಷ ಮೇಲ್ಪಟ್ಟವರಿಗೆ, ದುರ್ಬಲರಿಗೆ, ಅಜೀರ್ಣಾದಿ ರೋಗಾವೃತರಿಗೆ, ಸ್ಥೂಲದೇಹಿಗಳಿಗೆ, ಯೋಗಾಸನಗಳು ಸರ್ವಶ್ರೇಷ್ಠವಾಗಿವೆ. ಆದರೆ ಬೆಳೆಯುತ್ತಿರುವ, ಯೌವನದ ಹೊಸಲನ್ನು ಮುಟ್ಟುತ್ತಿರುವ ಹುಡುಗನಿಗೆ, ಯೌವನಸ್ಥನಿಗೆ ಕಡುತರದ ವ್ಯಾಯಾಮವು ಆವಶ್ಯಕ. ಅವನ ದೇಹವು ಕೃಶವಾಗಬಾರದು. ವೃದ್ಧಿಹೊಂದಬೇಕು. ಎದೆಯು ಅಗಲವಾಗಬೇಕು. ತೋಳುಗಳು ಹುರಿಗೊಳ್ಳಬೇಕು. ಕೈಕಾಲುಗಳಲ್ಲೂ ಸೊಂಟದಲ್ಲೂ ಬಲವು ಬರಬೇಕು. ಪ್ರತಿ ಅಂಗಾಂಗಗಳೂ ಪುಷ್ಟವಾಗಬೇಕು. ಪರಿಪೂರ್ಣವಾಗಬೇಕು. ಆಹಾರ, ನಿದ್ರೆಗಳು ಜೀವಿಗೆ ಎಷ್ಟು ಆವಶ್ಯಕವೋ ವ್ಯಾಯಾಮವೂ ಅಷ್ಟೇ ಆವಶ್ಯಕವೆಂದು ಪ್ರತಿ ವಿದ್ಯಾರ್ಥಿಯೂ ಅರಿತುಕೊಳ್ಳಬೇಕು. ಬಾಲಕನಿಗೆ, ವ್ಯಾಯಾಮದ ಆವಶ್ಯಕತೆಯು ತೋರುವುದಿಲ್ಲ; ಆದ್ದರಿಂದ ತಂದೆತಾಯಿಗಳು ಮಕ್ಕಳನ್ನು ಚಿಕ್ಕಂದಿನಲ್ಲಿಯೇ, ಚೆ... ಯುವ ಕಾಲವಲ್ಲಿಯೇ ಪುಷ್ಟಿಕರವಾದ ಆಹಾರವನ್ನು ಕೊಟ್ಟು ಚನ್ನಾಗಿ ಬೆಳಸಬೇಕು. ರೋಗಾದಿಗಳು ಬಾ... ದಂತೆ ನೋಡಿಕೊಳ್ಳಬೇಕು. ಚಿಕ್ಕಂದಿನಲ್ಲಿಯೇ ರೋಗಾ... ಗಳಿಗೆ ತುತ್ತಾದ, ಸಾಕಾದಷ್ಟು ಆಹಾರಾದಿಗಳಿಲ್ಲದೆ ಅಕ್ಕ... ಯಿಲ್ಲದೆ ಬೆಳೆದ ಶರೀರಗಳು ಬಹುಬೇಗ ಕೃಶಿಸಿ ಸೊ... ಹೋಗುವುವು. ಹರೆಯದ ನಡುಹಗಲು ಕಗ್ಗತ್ತಲಾಗುವುದು. ಆಶೆ, ಉತ್ಸಾಹ, ಧೈರ್ಯಸಾಹಸಾದಿಗಳು ನಾ... ವಾಗುವುವು. ಒಂದುವೇಳೆ ಕಾರಣಾಂತರಗಳಿಂದ ಬಾ... ದಲ್ಲಿ ಶರೀರದ ಬೆಳೆವಣಿಗೆಗೆ ಅಡಚಣೆ ಬಂದಿದ್ದರೂ ಅದನ್ನು ಯೌವನಕ್ಕೆ ಸ್ವಲ್ಪ ಮುಂಚಿತವಾಗಿಯೇ ಕ್ರಮ... ಪಡಿಸಿಕೊಳ್ಳಬಹುದು. ಇದು ಎಲ್ಲಾ ವಿದ್ಯಾರ್ಥಿಗಳ ಕರ್ತವ್ಯ.

ಚಿಕ್ಕಂದಿನಲ್ಲಿಯೇ ಪ್ರಾರಂಭಿಸಿದ ವ್ಯಾಯಾಮವು ಮನಸ್ಸಿನ ಮೇಲೆ ಒಳ್ಳೇ ಪರಿಣಾಮಕಾರಿಯಾಗುವುದು. ವಾ... ಮಾರ್ಗಗಳಲ್ಲಿ ಮನಸ್ಸು ಪ್ರವೇಶಿಸದಂತೆ ಅದು ತಡೆಯುತ್ತದೆ. ತಮ್ಮ ಶರೀರದ ಮೇಲೆ ಪ್ರೇಮವನ್ನು ಹುಟ್ಟಿಸುತ್ತದೆ. ಪ್ರಬಲ ರಾಷ್ಟ್ರಜನಾಂಗಗಳು ತಮ್ಮ ದೇಹಸೌಷ್ಠ... ವನ್ನೂ, ಶಕ್ತಿಸಾಮರ್ಥ್ಯಗಳನ್ನೂ ಹೇಗೆ ಬೆಳೆಸಿಕೊ... ತಿವೆ ಎಂಬುದನ್ನು ನಾವು ಮರೆಯಬಾರದು. ನಮ್ಮ ಜನಾಂ... ವಾದರೋ ವರ್ಷೇವರ್ಷೇ ಕುಂದುತ್ತಿರುವುದು. ಎತ್ತ... ದಲ್ಲಿಯೂ ಗಾತ್ರದಲ್ಲಿಯೂ ವಾಮನಮೂರ್ತಿಗಳೂ, ಕುಚೇಲಕಾಯರೂ ಆಗುತ್ತಿರುವೆವು. ಮುಂದಿನ ರಾಷ್ಟ್ರೀ... ಯತೆಯಲ್ಲಿ ಅಭಿಮಾನವುಳ್ಳ ನಾವು, ಬರೀ ಯೋಗಾ... ಸನಗಳಿಂದ ಒಂದು ಜನಾಂಗವನ್ನು ಧೃಡಕಾಯವನ್ನಾ... ಮಾಡಲಾಗುವುದಿಲ್ಲ.

ಸಾಧಾರಣವಾಗಿ ವಿದ್ಯಾರ್ಥಿಯೊಬ್ಬನಿಗೆ ದಿನಕ್ಕೆ ಅರ್ಧ... ಘಂಟೆಗಿಂತ ಹೆಚ್ಚಾಗಿ ವ್ಯಾಯಾಮಕ್ಕಾಗಿ ಬೇಕಿಲ್ಲ. ಪ್ರತಿ... ಅಂಗಾಂಗಕ್ಕೂ ತಕ್ಕಷ್ಟು ವ್ಯಾಯಾಮವನ್ನು ಕೊಡಬೇಕು. ಯಾವುದೊಂದೇ ಭಾಗವನ್ನೇ ಹೆಚ್ಚಾಗಿ ವೃದ್ಧಿಪಡಿಸ... ಬಾರದು. ಅಂಗಾಂಗಗಳೆಲ್ಲಾ ಸಮಾನಸೌಷ್ಠವನ್ನು ಹೊಂದಿ, ಕಣ್ಣಿಗೆ ಯಾವುದೊಂದೂ ವಿಕಾರವಿಲ್ಲದೆ ಸುಂದರ... ವಾಗಿ ಕಾಣಬೇಕು. ಇದಕ್ಕೆ ಅನುಗುಣವಾದ ವ್ಯಾಯಾಮ... ವನ್ನೇ ಅವಲಂಬಿಸಬೇಕು. ವ್ಯಾಯಾಮವನ್ನು ಅಭ್ಯಾಸಿಸು... ಮೊದಮೊದಲು ದೇಹಕ್ಕೆ ಶ್ರಮವು ಕಾಣುವುದು ಸ... ಇದೇ ಕಾರಣದಿಂದಲೇ ಅನೇಕರು ವ್ಯಾಯಾಮವನ್ನು ಹುರುಪಿನಿಂದ ಮೊದಲುಮಾಡಿದರೂ, ಸ್ವಲ್ಪ ಮ...

ನೋವಾದೊಡನೆ ನಿಲ್ಲಿಸಿಬಿಡುವರು. ಸ್ವಲ್ಪ ನಡೆದ ಮಾತ್ರಕ್ಕೇ ಕಾಲುಗಳು ನೋಯುವುವೆಂದೂ, ಬಿಸಿಲು ತಾಗಿದರೆ ಮೈಮುಖಗಳು ಬಾಡುವುವೆಂದೂ, ಗಾಳಿಯು ಸೋಕಿದರೆ ನೆಗಡಿಯಾಗುವುದೆಂದೂ ಹೇಳುವ ಕುಸುಮ ಕೋಮಲರವರು. "ಮಂಗಳಾರ್ತಿ ತೆಗೆದುಕೊಂಡರೆ ಉಷ್ಣ, ತೀರ್ಥಪ್ರಸಾದ ತೆಗೆದುಕೊಂಡರೆ ಶೀತ' ಎನ್ನುವ ಗಾದೆಯು ಇವರಿಂದಲೇ ಪ್ರಪಂಚಕ್ಕೆ ಬಂದಿತು. ಇಂಥವರ ಆರೋಗ್ಯವು ಹಗಲುರಾತ್ರಿಗಳನ್ನನುಸರಿಸಿಯೂ, ಬಿಸಿಲು, ಗಾಳಿ, ಮಳೆಗಳನ್ನನುಸರಿಸಿಯೂ, ವಾತಾವರಣದ ವ್ಯತ್ಯಾಸ ವಾದಂತೆಲ್ಲಾ ವ್ಯತ್ಯಾಸವಾಗುತ್ತಲೂ ಇರುವುದಲ್ಲದೆ, ಇಂಥವರ ಮನೋವಾಕ್ಕಾಯ ಕರ್ಮಗಳೂ ಹೀಗೆಯೇ ನಿಮಿಷ ನಿಮಿಷವೂ ವ್ಯತ್ಯಾಸಹೊಂದುತ್ತಿರುವುವು.

ಇನ್ನು ಕೆಲವರು ಹಂಸತೂಲಿಕಾತಲ್ಪಗಳ ಮೇಲೆಯೇ ಜೀವಿಸುವ ಶ್ರೀಮಂತರು, ಸುಖಜೀವಿಗಳು. ಮನೆಯ ಹೊಸಲು ದಾಟಿದರೆ ವಾಹನಗಳು ಇವರಿಗಾಗಿ ಕಾದಿರುವುವು. ಮೈ ದಣಿದರೆ ಜ್ವರಬರುವುದು. ಅಲಸಿಕೆಯಾಗುವುದು. ಇಂಥವರ ಆರೋಗ್ಯಕ್ಕೆ ಡಾಕ್ಟರುಗಳೇ ಪರಮಗತಿ. ಇನ್ನು ಕೆಲವು ಮೇಧಾವಿಗಳಿಗೂ ವ್ಯಾಯಾಮಕ್ಕೂ ಆಕಾಶ ಪಾತಾಳಗಳಷ್ಟೇ ಅಂತರ. ಹಾಗಾಗಿ ಹೀಗಾಗಿ ಭಾರತೀಯನ ಆಯುಃಪರಿಮಿತಿಯು, ಶರೀರಸೌಷ್ಠವವು ಕುಗ್ಗುತ್ತಿರುವುದು ಈ ಮೇಧಾವಿಗಳ ಎಣಿಕೆಗೇ ಬಂದಿರುವುದಿಲ್ಲ.


ವಿದ್ಯಾರ್ಥಿಯು ಯಾವ ಪ್ರಕಾರದಿಂದಲಾಗಲಿ ತನ್ನ ದೇಹಶಿಕ್ಷಣದ ಕಡೆಗೆ ಸಾಕಾದಷ್ಟು ಗಮನವನ್ನು ಕೊಟ್ಟೇ ತೀರಬೇಕು. ತಾನು ರಾಷ್ಟ್ರದ ಮುಂದಿನ ಸಂತಾನದ ಹಿರಿ ತಂದೆಯೆಂಬುದನ್ನು ಅವನು ಮರೆಯಕೂಡದು. ಆ ಸಂತಾನಶ್ರೀಯು ಅವನ ಮೇಧೋಬಲವನ್ನೂ, ದೇಹ ಬಲವನ್ನೂ ಅನುಸರಿಸುತ್ತವೆಯೆಂಬುದನ್ನು ಸದಾ ನೆನಪಿನಲ್ಲಿಡಬೇಕು.

ಮುಂದಿನ ರಾಷ್ಟ್ರಾಭಿವೃದ್ಧಿಯಲ್ಲಿಯೂ, ಜನಾಂಗದ ಅಭಿವೃದ್ಧಿಯಲ್ಲಿಯೂ ಆಶೆಯುಳ್ಳ ಪ್ರತಿಯೊಬ್ಬ ಭಾರತೀಯ ವಿದ್ಯಾರ್ಥಿಯ ಪ್ರಥಮ ಹಾಗೂ ಪವಿತ್ರತಮ ಕರ್ತವ್ಯವಿದೆಂಬುದನ್ನು ಮರೆಯಬಾರದು— ಮರೆಯಬಾರದು ಮರೆಯಬಾರದು.

ಚಿಕ್ಕವರ ಅಪರಾಧ ಪ್ರವೃತ್ತಿ, ಮತ್ತದನ್ನು ತಿದ್ದುವ ಬಗೆ

ಶ್ರೀಮಾನ್ ಬಿ. ಡಿ. ಸಾವರಕರ ಬಿ. ಎ., ಎಂ. ಇಡಿ (ಲೀಡ್ಸ್), ಬೋರ್‍ಸ್ಟಲ್ ಸ್ಕೂಲ್, ಧಾರವಾಡ .

ಪ್ರಾಚೀನ ಕಾಲದಲ್ಲಿ ಅಪರಾಧಿಯನ್ನು ಶಿಕ್ಷಿಸುವ ತತ್ವವು 'ಶಠಂ ಪ್ರತಿ ಶಾಠ್ಯಂ' (an eye for an eye, and a tooth for a tooth) ಎಂಬುದಾಗಿತ್ತು. ನಾಗರಿಕತೆಯು ಪ್ರಗತಿ ಹೊಂದಿದಂತೆ ಹಳೆಯ ಪದ್ಧತಿಗಳು ಹೊರಟುಹೋದುವು; ವಿಶೇಷವಾಗಿ 'ಅಪರಾಧ ಮತ್ತು ದಂಡನೆ' ಎಂಬೀ ಕ್ಷೇತ್ರದಲ್ಲಿ ಅನೇಕ ಸುಧಾರಣೆಯಾಗತೊಡಗಿ, ಒಂದು ಕಾಲಕ್ಕೆ ಕೇವಲ ಕ್ರೌರ್ಯಪೂರ್ಣವೆನಿಸಬಹುದಾದ ಭೂತದಯಾಪ್ರೇರಿತ ಶಿಕ್ಷೆ, ದಂಡನೆಯ ತತ್ವವು ಪ್ರಚಾರದಲ್ಲಿ ಬರತೊಡಗಿತು. ಈ ಚಿಕ್ಕ ಲೇಖನದಲ್ಲಿ, ಇಂತಹ ಪರಿವರ್ತನೆಯು ಕ್ರಮವಾಗಿ ಎಂತುಂಟಾಯಿತೆಂಬುದನ್ನು ವಿವರಿಸುವುದು ಅಸಾಧ್ಯ. ಉಚ್ಚ ಆದರ್ಶ ಪ್ರೇರಿತರಾದ ಹಲವು ಮಾನವಸೇವಕರು ವರ್ಷಗಟ್ಟಲೆ ಪರಿಶ್ರಮಿಸಿ, ಈ ಸುಧಾರಣೆಗಳನ್ನು ಕೃತಿಯಲ್ಲಿ ತಂದಿರುವರು. 'ಅಪರಾಧದ ಕಾರಣ ಮೀಮಾಂಸೆ'ಯು ಅವರ ವಿಚಾರದ ವಿಷಯವಾಗಿದ್ದಿತು. ಇದನ್ನವರು ಬೇರೆ ಬೇರೆ ದೃಷ್ಟಿಕೋನಗಳಿಂದ ಪರೀಕ್ಷಿಸಿದರು. ಈ ಶೋಧನೆಯಲ್ಲಿ ತೊಡಗಿದಾಗ, ಮಾನವನ ಮನೋಗತಿಯನ್ನು ಕುರಿತು ಹಲವು ಹೊಸ ವಿಷಯಗಳನ್ನು ಅವರು ಕಂಡುಹಿಡಿದರು. 'ಮರುಳರೊಡನೆ ಮರುಳರಂತೆಯೆ ನಡೆಯಬೇಕು' ಎಂಬ ತತ್ವಜ್ಞಾನವು (the Principle of Retribution) ಸೇಡಿನ ಬುದ್ಧಿಯಿಂದ ಪ್ರೇರಿತವಾಗಿದ್ದಿತು; ಅಪರಾಧಿಗಳೊಡನೆ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಸಮಾಜವು ತನ್ನ ಬಾಲ್ಯಾವಸ್ಥೆಯಲ್ಲಿ ಒಂದು ಸ್ಥೂಲ ನಿರ್ಣಯಕ್ಕೆ ಬಂದುದರ ಗುರುತು ಅದಾಗಿತ್ತು. ಈ ವಿಚಾರಸರಣಿಯು, ಅಪರಾಧದ ಮಹತ್ವವನ್ನು ಕಡಿಮೆಗೊಳಿಸುವ ಇನ್ನಿತರ ಸನ್ನಿವೇಶಗಳನ್ನು ತೀರಾ ದುರ್ಲಕ್ಷಿಸಿದ್ದಿತು. ಸುಧಾರಕರ ಪ್ರಯತ್ನದಿಂದ ಇದರಲ್ಲಿ ಬದಲಾವಣೆಯುಂಟಾಯಿತು. ಸಮಾಜಕ್ಕೆ ಅನಿವಾರ್ಯವಾಗಿ ಬೇಕಾದವರು ಮಾತ್ರವಲ್ಲ, ದುರ್ಬಲರೂ ಧನಾರ್ಜನೆ ಮಾಡುವವರ ಮೇಲೆ ಕೇವಲ ಹೊರೆಯೋಪಾದಿಯಲ್ಲಿರುವವರೂ ಸಮಾಜದ ಮುಂದಾಳುಗಳ ವಿಶೇಷ ಚಿಕಿತ್ಸೆಗೆ ಅರ್ಹರು— ಎಂಬ ಹೊಸ ದೃಷ್ಟಿಯುದಯಿಸಿತು. ಕುರುಡರು, ಕಿವುಡರು, ಮೂಕರು, ಊನರು. ಮನೋವಿಕಾಸವನ್ನು



ಲೇಖಕರು

'ಶಠಂ ಪ್ರತಿ ಶಾಠ್ಯಂ' ಎಂಬ ಹಿಂದಿನ ಶಿಕ್ಷಾನೀತಿಯ ಸೂತ್ರವು ಸುಧಾರಕರ ಪ್ರಯತ್ನದಿಂದ ಬದಲಾವಣೆ ಹೊಂದಿತು. ಸಮಾಜಕ್ಕೆ ಹೊರೆಯಂತಿರುವ ಊನರು, ಮನೋವಿಕಾಸವನ್ನು ಸಾಕಷ್ಟು ಹೊಂದದವರು, ಸಮಾಜಪೀಡಕರು ಇವರನ್ನೆಲ್ಲ ಸಮಾಜವು ಆಸ್ಥೆಯಿಂದ ಉಪಚರಿಸತೊಡಗಿತು. ಈ ಅಭಾಗಿಗಳಲ್ಲಿ ಚಿಕ್ಕ ಅಪರಾಧಿಗಳಿಗೊಂದು ಸ್ವತಂತ್ರ ಸ್ಥಾನವಿದೆ. ಇವರ ಅಪರಾಧಪ್ರವೃತ್ತಿಯ ಕಾರಣಮೀಮಾಂಸೆ, ಉಪಾಯ ಯೋಜನೆ, ಬೋರ್‍ಸ್ಟಲ್ ಶಾಲೆಯಲ್ಲಿಯ ಅವರ ಜೀವನಕ್ರಮ ಇವೆಲ್ಲ ಇಲ್ಲಿ ಮಾರ್ಮಿಕವಾಗಿ ವರ್ಣಿಸಲ್ಪಟ್ಟಿವೆ.

ಸಾಕಷ್ಟು ಹೊಂದಿದವರು, ಸಮಾಜಪೀಡಕರು ಇವರೆಲ್ಲ ವಿಚಾರಿಗಳ ಜಿಜ್ಞಾಸೆಗೆ ಪಾತ್ರರಾದರು. ಅಂತೂ, ಕೇವಲ ಪ್ರಯೋಜಕತ್ವವೊಂದೇ ಒರೆಯಾಗುಳಿಯದೆ, ಮನುಷ್ಯ ಜೀವನಕ್ಕೊಂದು ಸ್ವತಂತ್ರವಾದ ಬೆಲೆಬಂದಿತು. ಈ ಸಿದ್ಧಾಂತವೊಮ್ಮೆ ಸ್ವೀಕೃತವಾದೊಡನೆ, ಈ ಅಭಾಗಿಗಳ ಅಂತಃಶಕ್ತಿಗಳನ್ನು ವಿಕಾಸಗೊಳಿಸುವ ಬಗ್ಗೆ ಪ್ರಯತ್ನಗಳು ನಡೆದವು.

ವಯಸ್ಕರಾದ, ತಿದ್ದುಪಡೆಯ ಅವಸ್ಥೆಯನ್ನು ದಾಟಿರುವ, ಸಮಾಜಕಂಟಕ ಜೀವನಕ್ರಮವನ್ನು ವ್ಯವಸ್ಥಿತವಾಗಿ ನಡೆಯಿಸಿಕೊಂಡು ಬಂದು ಅದರೊಡನೆಯೆ ಸಮರಸರಾಗಿರುವ ಅಪರಾಧಿಗಳ ಪ್ರಶ್ನೆಯೂ ಎಳೆವಯಸ್ಸಿನ ಅಪರಾಧಿಗಳ ಪ್ರಶ್ನೆಯೂ (ದುರ್ವೃತ್ತಿಯನ್ನು ತಿದ್ದುವ ದೃಷ್ಟಿಯಿಂದ) ಬೇರೆಬೇರೆಯಾಗಿವೆ. ಇನ್ನು ಚಿಕ್ಕವರ ಅಪರಾಧ ಪ್ರವೃತ್ತಿಯೆ ದೊಡ್ಡವರ ಸ್ವಭಾವವಾಗಿ ಪರಿಣಮಿಸುತ್ತದೆಂಬುದು ಬೇರೆ ಮಾತು.

ಹಲವು ಕಾರಣಗಳು ಕೂಡಿಕೊಂಡು ಒಂದು ಕೃತಿಯಾಗುತ್ತದೆ. ಆ ಕೃತಿಯ ಉದ್ದೇಶವನ್ನು ಎಂದೂ ಮರೆಯಕೂಡದು. ಆದರೆ ಸಮಾಜದ್ರೋಹಿಯಾದ ಒಂದು ಕೃತಿಯ ಮೀಮಾಂಸೆಯನ್ನು ಮಾಡುವಾಗ ಅದರ 'ಉದ್ದೇಶ'ವೊಂದನ್ನೆ ಅಳೆಗೋಲನ್ನಾಗಿಟ್ಟುಕೊಂಡರೆ, ಪರಿಸ್ಥಿತಿಯ ಸಮ್ಯಗ್ಜ್ಞಾನವಾಗಲಾರದು. ಸಮಾಜ ವಿರೋಧಕ ಕೃತಿಯನ್ನು ಒಬ್ಬ ಬಾಲಕನು ಆಚರಿಸಿದ್ದರೆ, ಅದಕ್ಕೆ ಹಲವು ಕಾರಣಗಳಿರುತ್ತವೆ. ಅಪರಾಧಿಯ ಪ್ರತ್ಯಕ್ಷ ಕೃತಿಗೆ, ಅದರ ಸ್ವರೂಪವನ್ನು ನಿರ್ಧರಿಸುವ ಹಿಂದಣ ಕಾರಣಪರಂಪರೆಗಿಂತ ತೀರ ಕಡಿಮೆ ಮಹತ್ವವಿದೆ. 'ಚಿಕ್ಕವರ ಅಪರಾಧಪ್ರವೃತ್ತಿ'ಯ ಸಮಸ್ಯೆಯನ್ನು ವಿಚಾರಿಸುವಾಗ, ಅಪರಾಧಿಬಾಲಕನ ಪೂರ್ವ ಚರಿತ್ರೆಯನ್ನೆಲ್ಲ ಸಾಧ್ಯವಿದ್ದಷ್ಟು ಬೇರೆ ಬೇರೆ ದೃಷ್ಟಿಕೋನಗಳಿಂದ ಅಭ್ಯಾಸಿಸುವುದು ಅಗತ್ಯವಾಗಿರುವುದು. ಇವನ್ನೆ ಸಂಗ್ರಹವಾಗಿ, "ಕಾರಣಗಳನ್ನು ನಿವಾರಿಸಿರಿ, ಉಪಾಯ ಯೋಜನೆಯು ತಾನೆತಾನಾಗಿ ಆಗುವುದು" ಎಂಬ ಶಬ್ದಗಳಲ್ಲಿ ಹೇಳಬಹುದು.

ಈ ತಾತ್ವಿಕ ಪಾರ್ಶ್ವಭೂಮಿಯಲ್ಲಿ ನಮ್ಮ ಉದ್ದೇಶವೂ ಪ್ರತಿಬಿಂಬಿತವಾಗಿದೆ. ಪರಿಸ್ಥಿತಿಗನುಗುಣವಾಗಿ ಉಪಾಯವೂ ಬದಲಾಗಲೇಬೇಕು. ಒಬ್ಬ ಹುಡುಗನು ಒಂದು ಸಮಾಜವಿದ್ರೋಹಿ ಕೃತ್ಯವನ್ನು ಆಚರಿಸಿದನೆಂದು ತಿಳಿಯುವಾ; ಅದಕ್ಕೆ ಪರಿಸ್ಥಿತಿ-ಸನ್ನಿವೇಶಗಳಿಗೆ ಸಂಬಂಧಿಸಿದ ನೂರಾರು ಸಂಗತಿಗಳು ಕಾರಣವಾಗಿರುತ್ತವೆ. ಬಡತನ, ಮನೆಯಲ್ಲಿಯ ಅವ್ಯವಸ್ಥೆ, ಕೆಟ್ಟ ಜತೆಗಾರರು, ಅಯೋಗ್ಯ ವಾತಾವರಣ ಅಥವಾ ಶಿಕ್ಷಣದ ಅಭಾವವು ಕಾರಣವಾಗಬಹುದು. ಇಲ್ಲಿ ನೆನಪಿಡಬೇಕಾದ ಒಂದು ಸಂಗತಿಯಿದೆ: ಅದೆಂದರೆ, ಮನಸ್ಸಿನೊಳಗಿನ ತುಮುಲವು (Mental Conflict) ಅಪರಾಧಗಳಿಗೆ ಬಹುಮಟ್ಟಿಗೆ ಕಾರಣವಾಗಿರುತ್ತದೆ. ಯಾವನೊಬ್ಬನ ಭಾವನೆಗಳು (ಅಂತಃಕರಣದ ಧರ್ಮಗಳು — emotional qualities) ಎಷ್ಟು ಸೂಕ್ಷ್ಮವಾಗಿರುತ್ತವೆಯೋ ಈ ತುಮುಲಜನ್ಯ ವೇದನೆಯೂ ಅಷ್ಟು ತೀವ್ರವಾಗಿರುತ್ತದೆ. ಅಪರಾಧಗಳಲ್ಲಿಯ ವೈಚಿತ್ರ್ಯವೂ (ಎಂದರೆ ಚಿಕ್ಕಂದಿನಲ್ಲಿಯೆ ದೃಢಮೂಲವಾದ ಕೆಟ್ಟ ನಡತೆಯಿಂದ ಘೋರಕೃತಿಗಳ ವರೆಗೆ) ಈ ಸೂಕ್ಷ್ಮಕಾರಣದಿಂದಲೆ ಹುಟ್ಟಿರುತ್ತದೆ. ಇಂತಹ ಉದಾಹರಣೆಗಳಲ್ಲೆಲ್ಲ, ಅಪರಾಧಗಳು ತಮ್ಮಷ್ಟಕ್ಕೆ ತಾವೆ ಜರುಗಿರದೆ, ಒಳಗಿನ ಒಂದು ಅನಿವಾರ್ಯ ಕಾರಣಕ್ಕಾಗಿ ಜರುಗಿದ್ದುದು ಕಂಡುಬರುವುದು. ಸಂತೋಷದಿಂದೇನೂ ಅವನ್ನು ಮಾಡಿರುವುದಿಲ್ಲ.

ಮೇಲಣ ಸಂಗತಿಗಳಿಂದ, ಎಳೆಪ್ರಾಯದ ತಪ್ಪಿತಸ್ಥರನ್ನು ಒಂದೆಡೆಗೆ ತಂದು ಸರಿಯಾಗಿ ಶಿಕ್ಷಣ ಕೊಡತಕ್ಕ ಒಂದು ಏಕತ್ರವಾಸಸ್ಥಳವು ಇಲ್ಲವೆ ಸಂಸ್ಥೆಯು ಅಗತ್ಯವೆಂದು ಮನವರಿಕೆಯಾಗದಿರದು. 'ತಾನು ಯಾವಾಗಲೂ ಹೀನ, ತನ್ನ ಪ್ರಯತ್ನಗಳು ಯಾವಾಗಲೂ ವಿಫಲ' ಎಂಬ ಭಾವನೆಯಿಂದ (the feeling of inferiority complex, or continuous frustration) ಹುಡುಗರು ದಿಙ್ಮೂಢರಾಗಿರುವುದುಂಟು; ಅದನ್ನು ತೆಗೆದುಹಾಕಬೇಕಾಗುವುದು. ಹಿರಿಯರ ಕಾನೂನುಗಳು ಚಿಕ್ಕವರ ಮನಸ್ಸಿನಲ್ಲಿ, ನಿರ್ದಿಷ್ಟ ಪರಿಸ್ಥಿತಿಯಲ್ಲಿ ಯಾವ ದಾರಿಯಲ್ಲಿ ನಡೆಯಬೇಕೆಂಬ ಬಗ್ಗೆ ಗೊಂದಲವನ್ನುಂಟುಮಾಡುವವು. ಇದರಿಂದ ಹಲವುಸಲ ತಿಳಿಯದೆಯೆ ಅವರು ಕಾನೂನಿನ ಬಲೆಯಲ್ಲಿ ಸಿಕ್ಕಿಬೀಳುವರು. ಮೊದಮೊದಲು ಅವರಿಗಿದರಿಂದ ವಿಸ್ಮಯವುಂಟಾಗುವುದು, ಆದರೆ ಕಾಲವುರುಳುತ್ತ ಹೋದಂತೆ ಅದು ಸಮಾಜದ ಬಗ್ಗೆ ದ್ವೇಷದಲ್ಲಿ ಪರಿಣಮಿಸುವುದು. ತಮ್ಮನ್ನು ತೀರ ಅಸಹಾನುಭೂತಿಯಿಂದ ನಡೆಯಿಸಿಕೊಳ್ಳುವ 'ಜಾಣ'ರಿಗೂ ತಮಗೂ ಸಮಾನವಾದುದೇನೂ ಇಲ್ಲ ಎಂದು ಅವರು ಭಾವಿಸತೊಡಗುತ್ತಾರೆ. ಆಗ ಅವರು ಸಮಾಜದ ವಿರುದ್ಧವಾಗಿ ಬಂಡು ಹೂಡುವರು; —ಇಕೊಳ್ಳಿ, ಮುಂದಿನ 'ಪ್ರಬುದ್ಧ ಅಪರಾಧಿ'ಯ ತಯಾರಿಯು ಇಲ್ಲಿ ನಡೆದಿದೆ!

ಈ ಲೇಖನದ ಪುಟ್ಟಿಗೆ ತೀರ ಚಿಕ್ಕ ತಪ್ಪಿತಸ್ಥರ ವಿಚಾರವನ್ನು ಬಿಟ್ಟುಕೊಟ್ಟು, ತರುಣ ತಪ್ಪುಗಾರರ (young delinquents) ಪ್ರಶ್ನೆಯನ್ನಷ್ಟೆ ತೆಗೆದುಕೊಳ್ಳುವುದು ಯೋಗ್ಯವಾಗುವುದು. ೩ ರಿಂದ ೫ ವರ್ಷಗಳ ವರೆಗೆ 'ನಿರ್ಬಂಧಕ್ಕೆ' ಗುರಿಯಾಗುವ, ೧೬ ರಿಂದ ೨೧ ನೆಯ ವಯಸ್ಸಿನ ಒಳಗಿನ ಹುಡುಗರಿಗೆ, ನಮ್ಮ ಧಾರವಾಡದಲ್ಲಿಯ ಬೋರ್ಸ್ಟಲ್ ಸ್ಕೂಲಿನಲ್ಲಿ ಪ್ರವೇಶವಿದೆ. ೧೯೦೮ ರಲ್ಲಿ ಇಂಗ್ಲಂಡಿನಲ್ಲಿಯ 'ಬೋರ್ಸ್ಟಲ್' ಎಂಬ ಹಳ್ಳಿಯಲ್ಲಿ ಇಂತಹ ತರುಣ ತಪ್ಪುಗಾರರಿಗಾಗಿ ಶಾಲೆಯನ್ನು ಪ್ರಾರಂಭಿಸಲಾಯಿತು; ಅಂದಿನಿಂದ ಇಂತಹ ಶಾಲೆಗಳಿಗೆಲ್ಲ ಈ ಹೆಸರು ಬಂದಿದೆ. ಈಗಿನ ಆ ಶಾಲೆಗಳಲ್ಲಿ ಅನುಸರಿಸುವ ವಿಶಿಷ್ಟ ಸುಧಾರಣಾ ಪದ್ಧತಿಗೆ ಈ ಹೆಸರು ಬಂದಿದೆ. Bombay Borstal Schools Act No. XVIII of 1929—ಎಂಬ ಕಾನೂನಿಗೆ ಈ ಸಂಸ್ಥೆಗೆ ತಳಹದಿಯಾಗಿದೆ. ಅದರ ಮೂರನೆಯ ಕಲಮಿನನ್ವಯ, ತರುಣ ತಪ್ಪುಗಾರರು ನಿರ್ಬಂಧದ ಅವಧಿಯಲ್ಲಿ ಸುಧಾರಣೆ ಹೊಂದಿ ಅಪರಾಧಪ್ರವೃತ್ತಿಯನ್ನು ಬಿಟ್ಟುಕೊಡುವಂತೆ, ಅವರಿಗೆ ಔದ್ಯೋಗಿಕ ಹಾಗೂ ಇನ್ನಿತರ ಶಿಕ್ಷಣವನ್ನೂ ಶಿಸ್ತಿನ ಮತ್ತು ನೈತಿಕ ಸಂಸ್ಕಾರಗಳನ್ನೂ ಕೊಡಲಾಗುವುದು.

ಬೋರ್ಸ್ಟಲ್ ಶಿಕ್ಷಣದಲ್ಲಿ ೨ ಸಿದ್ಧಾಂತಗಳನ್ನು ಗ್ರಹಿಸಲಾಗಿದೆ: ಪ್ರತಿಯೊಬ್ಬನಲ್ಲಿಯೂ ಒಳ್ಳೆಯದೆಂಬುದು ಇದ್ದೇ ಇದೆ; ಮತ್ತು ಬಹುಶಃ ಎಲ್ಲರಲ್ಲಿಯೂ ಸಮುದಾಯನಿಷ್ಠೆಯು (Corporate Spirit) ಸ್ವಭಾವಗತವಾಗಿ ಇರುವುದು— ತಕ್ಕ ರೀತಿಯಲ್ಲಿ ಎಚ್ಚರಿಸಿದಾಗ ಅದು ತಾನಾಗಿ ಪ್ರಕಟವಾಗುವುದು.

ಇನ್ನು ಬೋರ್ಸ್ಟಲ್ ಶಾಲೆಯಲ್ಲಿಯ ಹುಡುಗನ ಜೀವನಕ್ರಮವನ್ನು ಅಲ್ಲವನು ಕಾಲಿಟ್ಟಾಗಿನಿಂದಲೂ ನಿರೀಕ್ಷಿಸುವಾ. ಪ್ರವೇಶಸಮಯದಲ್ಲಿ ಸಾಮಾನ್ಯವಾಗಿ ಎಲ್ಲಾ ಹುಡುಗರು ಅಶಕ್ತರೂ ಅಸ್ವಚ್ಛರೂ ನಿರಕ್ಷರರೂ ಶಿಸ್ತನ್ನು ತೀರಾ ಅರಿಯದವರೂ ಆಗಿರುವರು. ಕೆಲವರಿಗೆ ತಪ್ಪು ಮಾಡುವುದು ಚಟ ಪಡ್ಡೇ ಬಿದ್ದಿರುತ್ತದೆ, ಮೂರುಮೂರು ನಾಲ್ಕು ನಾಲ್ಕು ಶಿಕ್ಷೆಗಳನ್ನು ಅವರು ಅನುಭವಿಸಿರುತ್ತಾರೆ; ಇವರು ತೀರಾ ಅವಿಧೇಯರೂ ಮನೆಯ ವೃತ್ತಾಂತವನ್ನು ಹೇಳಲು ಒಲ್ಲದವರೂ ಆಗಿರುತ್ತಾರೆ. ಇಂಥವರು ಅಧಿಕಾರಿವರ್ಗಕ್ಕೊಂದು ಸಮಸ್ಯೆಯೆ ಆಗುವರು. ಕೆಲವರಂತೂ ತೀರಾ ಶಕ್ತಿಗೆಟ್ಟವರೂ ಹೆಜ್ಜೆಹೆಜ್ಜೆಗೆ ಬಳಲುವವರೂ ಆಗಿರುವರು; ಇವರ ಭವಿಷ್ಯತ್ತಿನ ಬಗ್ಗೆ ಯಾವ ವಿಚಾರವೂ ಇರುವುದಿಲ್ಲ.

ಪ್ರವೇಶವಾದ ಕೂಡಲೆ ಹುಡುಗನಿಗೆ ಕ್ಷೌರ, ಸ್ನಾನ, ಬಟ್ಟೆಬದಲಾವಣೆ ಮತ್ತು ಸಾಕಷ್ಟು ಒಳ್ಳೆಯ ಆಹಾರ ಸೇವನೆ, ಇವನ್ನು ಮಾಡಿಸಲಾಗುವುದು. ಇದರಿಂದ ಅವನಿಗೆ ಹುರುಪೂ ಹೊಸತನವೂ ಉತ್ತೇಜನವೂ ಎನಿಸಿ, ಅವನ ಸ್ವಾಭಿಮಾನವೂ ತಕ್ಕಮಟ್ಟಿಗೆ ಜಾಗೃತವಾಗುವುದು. ಮರುದಿನ ಅವನನ್ನು ಗವರ್ನರ ಮತ್ತು ಡೆಪ್ಯುಟಿಗವರ್ನರರ ಎದುರಿನಲ್ಲಿ ತರುವರು; ಅವರು ಅವನ ಮನೆ, ಮಂದಿ, ಮುಂಚಿನ ಜೀವನ ಇ.ಗಳನ್ನು ಕುರಿತು ವಿಚಾರಿಸಿ, ಟಿಪ್ಪಣಿಗಳನ್ನು ಸ್ವಂತವಾಗಿ ಬರೆದಿಟ್ಟುಕೊಳ್ಳುವರು. ಆ ಮೇಲೆ ಅವನನ್ನು ಒಬ್ಬ "ಗೃಹಪತಿ" ಯ (House-master) ವಶಕ್ಕೆ ಕೊಡಲಾಗುವುದು. ಹೊಸದಾಗಿ ಬರುವವರನ್ನು ನೋಡಿಕೊಳ್ಳುವ ಈ ಗೃಹಪತಿಯ ಕರ್ತವ್ಯವು ತುಂಬಾ ಹೊಣೆಗಾರಿಕೆಯದು. ಹುಡುಗನ ವಿಶ್ವಾಸವನ್ನು ಸಂಪಾದಿಸಿ, ಅವನ ಗೆಳೆಯನಾಗುವುದು ಇವನ ಕೆಲಸ. ಇವನು ಶೀಲಚಾರಿತ್ರ್ಯಸಂಪನ್ನನೂ ಉಚ್ಚಗುಣಯುತನೂ ಆಗಿರಬೇಕು. ಬೋರ್ಸ್ಟಲ್ ಕ್ರಮಕ್ಕೆ ಬೋರ್ಸ್ಟಲ್ ಅಧಿಕಾರಿವರ್ಗವೇ ಜೀವಾಳ. ತಪ್ಪು ದಾರಿ ಹಿಡಿದ ಎಳೆಯರ ಹೃದಯಪರಿವರ್ತನೆ ಮಾಡಿಸುವ ಕೆಲಸವು ಚಾರಿತ್ರ್ಯವಂತರಿಂದಲೆ ಆಗಬಹುದಲ್ಲದೆ, ಬರಿ ಕಟ್ಟಡಗಳ ರಾಶಿಗಳಿಂದಲ್ಲ. ಬೋರ್ಸ್ಟಲ್ ಅಧಿಕಾರಿಗೆ ತನ್ನ ಕೆಲಸದಲ್ಲಿ ಅಭಿರುಚಿಯಿರಬೇಕು; ಅವನ ಸತ್ಪ್ರವೃತ್ತಿಗಳಿಗೆ ಅದು ಒಗ್ಗುವಂತಹದಿರಬೇಕು. ಆದುದರಿಂದ ಹೊಸ ಹುಡುಗರ ಪಾಲಕನಾದ 'ಗೃಹಪತಿ'ಯು, ಹುಡುಗನ ಮನೋಧರ್ಮವನ್ನು ಹೆಜ್ಜೆಹೆಜ್ಜೆಗೂ ತಿಳಿದುಕೊಳ್ಳುವನು; ಹಗಲಿನಲ್ಲಿ ಯಾರ ಕೈಯಲ್ಲಿ ಅವನು ಕೆಲಸಮಾಡಬೇಕಾಗುವುದೊ ಅವರ ಸಹಾಯದಿಂದ ಅವನ ಸ್ವಭಾವದ ಬಗ್ಗೆ ಒಂದು ಸ್ಥೂಲಕಲ್ಪನೆಯನ್ನು ಮಾಡಿಕೊಳ್ಳಲಾಗುವುದು; ತರುವಾಯ ಅವನು ತನ್ನ ಮೊದಲಿನ ದಾರಿ ಬಿಡುವಂತೆ ತಮ್ಮ ಕೈಯಲ್ಲಿರುವ ಯಾವ ಉಪಾಯಗಳನ್ನು ಯೋಜಿಸಬೇಕೆಂಬ ಬಗ್ಗೆ ಶಾಲಾಧಿಕಾರಿಗಳು ಯೋಚಿಸುವರು. ಅಂತೂ, ಹುಡುಗನು ವಾಸಿಸುವ 'ಗೃಹ'ದ ವಾತಾವರಣವು ಶುಭವಾಗಿರುವಂತೆ ಗೃಹಪತಿಯು ನೋಡಿಕೊಳ್ಳುವನು.

ಮೊದಲಿನ ಐದಾರು ತಿಂಗಳು ಹುಡುಗನು ಶಾಲಾ ಸೇವಕನ ಕೆಲಸವನ್ನು ಮಾಡುವನು. ಕಸಗುಡಿಸುವುದು, ನೀರು ಸೇದುವುದು, ಅಡುವುದು, ಬೀಸುವುದು ಇ. ಅವನ ಕೆಲಸಗಳು. ಸಾರಾಂಶ, ಅವನು ಮೊದಲು ತುಂಬಾ ಶ್ರಮದ ಕೆಲಸ ಮಾಡಲೂ ಆಜ್ಞೆಗಳನ್ನು ಪಾಲಿ

ಸಲೂ ಕಲಿಯಬೇಕು. ಇಂತಹ ಕೊಂಚ ಶ್ರಮದ ಕೆಲಸವು ಅವನಿಗೆ ಹಿತವನ್ನೆ ಮಾಡುತ್ತದೆ. ಕಷ್ಟಸಹನೆಯ ಬಗ್ಗೆ ಆದರವೂ ಅನ್ಯರಿಗಾಗಿ ಶ್ರಮಿಸುವ ಅಭ್ಯಾಸವೂ ಅವನಲ್ಲಿ ಉಂಟಾಗಿ, ಚಂಚಲ ಸುಖಪ್ರಿಯ ಜೀವಕ್ಕೆ ಕೊಂಚ ಸ್ಥಿರತೆಯುಂಟಾಗುವುದು.

ಹೀಗೆ ಎರಡು ತಿಂಗಳು ಕಳೆದ ಮೇಲೆ, ಅನುರೂಪ ಸ್ವಭಾವದ ಕೆಲವು ಹುಡುಗರ ಗುಂಪಿನಲ್ಲಿ ಅವನನ್ನು ಇಡಲಾಗುವುದು; ಆಗ ಅವನು, ಸ್ವಂತದ ಯಜಮಾನನುಳ್ಳ 'ಮನೆ'ಯೊಂದಕ್ಕೆ ಸೇರುವನು. ಇಲ್ಲಿ, ತನ್ನ ಸ್ವಂತದ ವರ್ಚಸ್ಸಿನಿಂದ ಹುಡುಗರ ಮೇಲೆ ಪರಿಣಾಮ ಮಾಡುವ 'ಗೃಹಪತಿ'ಯು ಇವನಿಗೆ ಮಾರ್ಗದರ್ಶಕನಾಗುವನು. 'ಗೃಹ'ದಲ್ಲಿಯ ಅದೃಶ್ಯಶಕ್ತಿಯು ಅತಿ ಕೆಟ್ಟ ಹುಡುಗನಲ್ಲಿ ಕೂಡ ಅತಿ ಒಳ್ಳೆಯ ಅಂಶವನ್ನೆ ಹೊರತರುವುದು; ಮೇಲಿನಿಂದ ಹೇರಲ್ಪಟ್ಟ ಅಧಿಕಾರಿಗೆ ಬಗ್ಗದವನು ತನ್ನ ಜತೆಗಾರರ ಗುಂಪಿಗಾಗಿ ಬೇಕಾದುದನ್ನು ಮಾಡಲು ಸಿದ್ಧನಾಗುವನು. ಶಿಸ್ತು ಅವನಿಗೆ ಮೈಯುಣ್ಣುವುದು; ಅವನು ವಿಧೇಯನಾಗಿರಬೇಕಾಗಿದ್ದರೂ, ತಾನೊಬ್ಬ ಆ ಇಡಿಯ ರಚನೆಯ ಸಜೀವ ಅಂಗವಾಗಿರುವನು.

ಶಾಲಾಪ್ರವೇಶವಾದ ಐದಾರು ತಿಂಗಳ ತರುವಾಯ, ಹುಡುಗನು "ವಿಶೇಷ ತರಗತಿ"ಗೆ ಹೋಗುವನು. ಇಲ್ಲಿ ಅವನ ಗತಿ, ಅಭಿರುಚಿ, ಮನೆತನದ ದರ್ಜೆಗಳ ಪ್ರಕಾರ ವಿಶಿಷ್ಟ ಉದ್ಯೋಗದ ಶಿಕ್ಷಣವನ್ನು ಕೊಡಲಾಗುವುದು. ಬೋರ್ಸ್ಟಲ್ ಔದ್ಯೋಗಿಕ ಶಿಕ್ಷಣದ ಉದ್ದೇಶವು, ಒಳ್ಳೇ ತರಬೇತಾದ ಬಡಿಗ, ಉಪ್ಪಾರ, ತೋಟಿಗ, ನೇಕಾರರನ್ನು ತಯಾರಿಸುವುದಲ್ಲ; ಯಾವುದೊಂದು ಉದ್ಯೋಗಕ್ಕೆ ಹತ್ತಿ ಪರಿಶ್ರಮ-ಪ್ರಯತ್ನ-ಸತತೋದ್ಯೋಗಗಳನ್ನು ಹುಡುಗನು ಕಲಿತರೆ ಈ ಶಾಲೆಯ ಉದ್ದೇಶವು ಸಫಲವಾದಂತಾಯಿತು. ಬೋರ್ಸ್ಟಲ್ ಶಾಲೆಯು ಧನಾರ್ಜನೆಯ ಸಂಸ್ಥೆಯಾಗಬೇಕೆಂದು ಅಪೇಕ್ಷಿಸುವುದು ತಪ್ಪಾಗುವುದು; —ಅದೇಕೆ, ನಿಜವಾಗಿ ನೋಡಿದರೆ ಅದೊಂದು ಧನವ್ಯಯ ಮಾಡುವ ಸಂಸ್ಥೆಯೆ ಆಗಿದೆ.

ಮುಂದಿನ ತರಗತಿಯು "Star-Special Grade" ಎಂಬುದು. ಇಲ್ಲಿ ಹುಡುಗನಿಗೆ ಹೆಚ್ಚಿನ ಆಚಾರಸ್ವಾತಂತ್ರ್ಯವಿದೆ. ಅವನ ಮೇಲೆ ಕೆಲಸದ ಜವಾಬ್ದಾರಿಯನ್ನು ಹೊರಿಸಲಾಗುವುದು, ಹೊರಕ್ಕೆ ಸಂಚಾರಕ್ಕೆ ಒಯ್ಯಲಾಗುವುದು, ಕೆಳಗಿನ ತರಗತಿಯ ಹುಡುಗರಂತೆ ಹೊರಬೀಗ ಹಾಕಿದ ಕೋಣೆಯಲ್ಲಿ ಮಲಗಬೇಕಾಗಿರದೆ, ಹೊರಗೆ ಮಲಗಲು ಕೊಡಲಾಗುವುದು. ವೈಶಿಷ್ಟ್ಯಪ್ರದರ್ಶಕ ಹಿತ್ತಾಳೆಯ ನಕ್ಷತ್ರವನ್ನು ಅವನು ಟೊಪ್ಪಿಗೆಯ ಮೇಲೆ ಧರಿಸುವನು.

ವಿಶ್ವಾಸಪಾತ್ರರಾದ ಒಳ್ಳೆಯ ನಡತೆಯ ಹುಡುಗರಿಗೆ 'ಹಿರೇಹುದ್ದರಿ'ಯ (Monitor) ತರಗತಿಯನ್ನು ಕೊಡಲಾಗುವುದು. ಅವರು ಖಾಕಿಬಟ್ಟೆಯನ್ನು ಧರಿಸುವರು. ಕೆಳತರಗತಿಯ ಹುಡುಗರಿಗೆ ಅವರವರ ಗೃಹವಿಭಾಗಗಳಲ್ಲಿ ಮಾರ್ಗದರ್ಶಕರೂ ಶಾಲೆಯ ವಿಶ್ವಸ್ತ ಕಾರ್ಯಕರ್ತರೂ ಆಗಿರುವರು. ಸ್ವಂತದ ಕ್ಲಬ್ಬೊಂದನ್ನು ಮಾಡಿಕೊಂಡು, ಆಟ-ಪಾಟ-ವಿನೋದನ-ಪುಸ್ತಕವಾಚನಗಳನ್ನು ಸಾ[illegible]ಸುವರು (ರಾತ್ರಿ ೯ ರ ವರೆಗೆ—ಏಕೆಂದರೆ ಆಗ ಎಲ್ಲ ಹುಡುಗರೂ ಮಲಗಲೇಬೇಕು).

ಬೋರ್ಸ್ಟಲ್ ದಿನಚರಿಯು ಸುದೀರ್ಘವೂ ಉದ್ಯೋಗಭರಿತವೂ ಆಗಿರುತ್ತದೆ. ಬೆಳಗಿನಿಂದ ರಾತ್ರಿಯ ವರೆಗು ಒಂದಿಲ್ಲ ಒಂದರಲ್ಲಿ ಹುಡುಗನು ತೊಡಗಿರಲೇಬೇಕಾಗುತ್ತದೆ. ಹಳೆಯದನ್ನು ನೆನೆಯಲು ಅವನಿಗೆ ಅವಕಾಶವನ್ನೆ ಕೊಡುವುದಿಲ್ಲ.—ಅವನು ಕೆಲಸಮಾಡಬೇಕು, ಇಲ್ಲವೆ ಆಡಬೇಕು.

ದುರ್ವೃತ್ತಿಯನ್ನು ತಿದ್ದುವ ಶಿಕ್ಷಣದಲ್ಲಿ ಇದು ಒಂದು ಭಾಗ ಮಾತ್ರ. ಶಾಲೆಯಲ್ಲಿ ಸು. ೨ ವರ್ಷಗಳು ಕಳೆದ ಮೇಲೆ, ಅನುಮತಿ (ಲೈಸೆನ್ಸ) ಪಡೆದು ಹುಡುಗನು ಮುಕ್ತನಾಗುವನು. ಸಾಮಾನ್ಯವಾಗಿ ಅವನನ್ನು ಮನೆಗೆ ಕ[illegible]ಸುವರು. ಉಳಿದ ನಿರ್ಬಂಧಾವಧಿಯಲ್ಲಿ ಪ್ರೊಬೇಶನ್ ಆಫಿಸರ್ ಎಂಬ ಅಧಿಕಾರಿಯು ಅವನ ಯೋಗಕ್ಷೇಮವನ್ನು ವಿಚಾರಿಸುವನು, ಇದರಿಂದ ಸ್ಥಿರವೃತ್ತಿಯನ್ನು ಸ್ವೀಕರಿಸಲು ಅವನಿಗೆ ಅನುಕೂಲವಾಗುವುದು. ಇದಾ[illegible]ತೆಂದರೆ ಆ ಹುಡುಗನ ಸಮಸ್ಯೆಯು ಬಿಟ್ಟಂತಾಗುವುದು. Probation Systemನ ವಿವರಗಳನ್ನು ವರ್ಣಿಸುವುದು ಈ ಲೇಖನದಲ್ಲಿ ಸಾಧ್ಯವಿಲ್ಲ. After-care (ಪಶ್ಚಾತ್-ಯೋಗಕ್ಷೇಮ) ವಿಚಾರವು ದೊಡ್ಡ ಜವಾಬ್ದಾರಿಯದು. ಅದನ್ನು ಸ್ವತಂತ್ರವಾಗಿಯೇ ಚರ್ಚಿಸಬೇಕಾಗುವುದು.

ವಯಸ್ಕರ ಶಿಕ್ಷಣ

ಲೇಖಕರು:
ಶ್ರೀಮಾನ್ ನಾ. ಕಸ್ತೂರಿ ಎಂ. ಎ. ಬಿ. ಎಲ್.
ಮಹಾರಾಜಾ ಕಾಲೇಜು, ಮೈಸೂರು

ಬಾಲಕರು ಓದುಬರಹ ಕಲಿತು ಕೆಲವು ದಿನಗಳಾಗುವುದರೊಳಗಾಗಿಯೆ ಅಕ್ಷರಜ್ಞಾನ ಕಳೆದುಕೊಂಡು ಮತ್ತೆ ನಿರಕ್ಷರಕುಕ್ಷಿಗಳಾಗುವುದು ನಮ್ಮ ಜನಾಂಗದ ಒಂದು ಹಿರಿಯ ಶಿಕ್ಷಣಸಮಸ್ಯೆಯಾಗಿದೆ. ಆದುದರಿಂದ ವಯಸ್ಕರ (ಪ್ರೌಢರ) ಶಿಕ್ಷಣವು ಬಾಲಕರ ಶಿಕ್ಷಣಕ್ಕಿಂತ ಭಿನ್ನವಾದುದಾಗಿದೆ. ಶ್ರೀಯುತರು ಇಂತಹ ಪ್ರಯತ್ನವೊಂದರಲ್ಲಿ ತೊಡಗಿದಾಗಿನ ಅನುಭವಸಾರವನ್ನು ಈ ಲೇಖನದಲ್ಲಿ ಕೊಟ್ಟಿದ್ದಾರೆ. ಹಳ್ಳಿನಾಡದವರ ವಿಶ್ವಾಸವನ್ನು ಸಂಪಾದಿಸುವುದು, ಅವರ ಶ್ರದ್ಧಾಭಕ್ತಿಗಳಿಗೆ ಪೋಷಕವಾಗುವಂತೆ ಉತ್ಸವಾದಿಗಳನ್ನು ನಡಸುವುದು, ತಕ್ಕ ಪಠ್ಯಪುಸ್ತಕಗಳನ್ನು ರಚಿಸುವುದು, ರೈತರಿಗೆ ಉಪಯೋಗ ಬೀಳುವ ವಿಶಿಷ್ಟರೀತಿಯ ಪತ್ರಿಕೆಯನ್ನು ಹೊರಡಿಸುವುದು—ಈ ಮುಂತಾದ .... ಸಲಹೆಯನ್ನು ಈ ಲೇಖನದಲ್ಲಿ ಮಾಡಿದ್ದಾರೆ. ....

ಹಿಂದುಸ್ತಾನವನ್ನು ಮುತ್ತಿ ಮುಸುಕುತ್ತಿರುವ ಪತನ, ದಾಸ್ಯ, ತಮಸ್ಸು ಮುಂತಾದ ಎಲ್ಲಾ ಕಾರ್ಮೋಡಗಳಿಗೂ ವಿದ್ಯಾಭ್ಯಾಸವೇ ಸೂರ್ಯ. ಪ್ರಜಾಪ್ರಭುತ್ವದ ಪ್ರಥಮಸೋಪಾನದಲ್ಲಿ ಕಾಲಿರಿಸಿ, ಅದರಿಂದಲೇ ಸತ್ಯ ಮತ್ತು ಅಹಿಂಸೆ ಎಂಬ ಗುರಿಗಳನ್ನು ಸಾಧಿಸಿ, ಜಗತ್ತಿಗೆ ಆದರ್ಶಪ್ರಾಯವಾಗಬೇಕೆಂದು ಬಯಸುತ್ತಿರುವ ನಮ್ಮ ಜನಾಂಗವು ಇಂದು ಒಂದು ವಿಶೇಷ ಜವಾಬ್ದಾರಿಯನ್ನು ಹೊಂದಿದೆ. ಹಸಿವು, ಬೆತ್ತಲೆ, ದ್ವೇಷ, ತಿಳಿಗೇಡಿತನಗಳಿಂದ ಕಳೆಗುಂದಿರುವ ಭಾರತೀಯರನ್ನು, ಸಂಪದಭಿವೃದ್ಧಿಯಿಂದಲೂ, ರಾಷ್ಟ್ರೀಯ ಜಾಗೃತಿಯಿಂದಲೂ, ಸೇವಾಬುದ್ಧಿಯ ಬೆಳವಣಿಗೆಯಿಂದಲೂ, ಮತ್ತೆ ಒಂದಾಗಿ, ಮುಂದಾಗಿ ನಿಲ್ಲಿಸುವ ಭಾರವು ನಮ್ಮದಾಗಿದೆ. ಇದಕ್ಕೆ ಮುಖ್ಯವಾದ ಸಾಧನವು ವಿದ್ಯಾಭ್ಯಾಸ, ಶಿಕ್ಷಣ. ಅಂದರೆ ದೇಶದ ಬಾಲಬಾಲಿಕೆಯರಿಗೆ ಮಾತ್ರ ಆರೇಳು ವರ್ಷಗಳ ಕಾಲ ಅಕ್ಷರಶಿಕ್ಷಣವನ್ನಾಗಲಿ, ಇನ್ನೂ ಉತ್ತಮತರವಾದ ವೃತ್ತಿಶಿಕ್ಷಣವನ್ನಾಗಲಿ ಕೊಡುವುದರಿಂದ ಈ ಕೆಲಸವು ಸಾಂಗವಾಗಿ ನೆರವೇರುವುದಿಲ್ಲ. ಚಿಕ್ಕಂದಿನಲ್ಲಿ ಶಾಲೆಗಳಿಗೆ ಹೋಗಿ ಓದುಬರಹ ಕಲಿತವರು ತಮ್ಮ ವಿದ್ಯೆಯನ್ನು ಉಳಿಸಿಕೊಳ್ಳಲಾರದೆ, ಬಹುಬೇಗ ಅನಕ್ಷರಸ್ಥರಾಗಿಬಿಡುವರೆಂಬುದನ್ನು ನಾವು ಮರೆಯಲಾಗುವುದಿಲ್ಲ. ಈಗಿನ ವಿದ್ಯಾಕ್ರಮವೂ, ಅದಕ್ಕೆ ತಗಲುವ ಅಪಾರವಾದ ಹಣವೂ, ಮರಳಿನಲ್ಲಿ ಬಿದ್ದ ಮಳೆಯಂತೆ ವ್ಯರ್ಥವಾಗುತ್ತಿವೆ ಎಂದು ಅನೇಕರು ಅಭಿಪ್ರಾಯಪಡುತ್ತಿದ್ದಾರೆ. ಆದ್ದರಿಂದ, ವಿದ್ಯಾಭ್ಯಾಸಕ್ಕೆ ಅಲ್ಪಸ್ವಲ್ಪ ಅವಕಾಶ ದೊರೆತಿರುವ ಜನರಿಗೂ, ಹೆಂಗಸರಿಗೂ, ಅನ್ವಯಿಸುವಂತಹ ಒಂದು ವಯಸ್ಕರ ಶಿಕ್ಷಣ ಕ್ರಮವನ್ನು ಕೈಕೊಂಡು, ದೇಶದ ಮೂಲೆಮೂಲೆಗಳಲ್ಲಿಯೂ ಬೆಳಕನ್ನು ಹರಡಬೇಕಾಗಿದೆ.

ವಯಸ್ಕರ ವಿದ್ಯಾಭ್ಯಾಸದಲ್ಲಿ ಭಾಗವಹಿಸಲು ಈಚೆಗೆ ಉತ್ಸಾಹವೇನೋ ಹೆಚ್ಚುತ್ತಿದೆ. ಸಂಯುಕ್ತಪ್ರಾಂತ್ಯ, ಬಿಹಾರ, ಮದ್ರಾಸ ಮುಂತಾದ ಕಡೆಗಳಲ್ಲಿ ನಗರಗಳಲ್ಲಿರುವ ಪದವೀಧರರನ್ನೂ ವಿದ್ಯಾವಂತರನ್ನೂ ಈ ಕೆಲಸಕ್ಕಾಗಿ ಉಪಯೋಗಿಸುವ ಏರ್ಪಾಟುಗಳು ನಡೆಯುತ್ತಿವೆ. ಪಟ್ಟಣಗಳಲ್ಲಿರುವ ಅನಕ್ಷರಸ್ಥರ ಶಿಕ್ಷಣಕ್ಕೂ, ಗ್ರಾಮಗಳಲ್ಲಿರುವವರ ಶಿಕ್ಷಣಕ್ಕೂ ಭೇದವಿರಬೇಕಾದದ್ದು ಸಹಜ. ಹಾಗೆಯೇ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕಾರು ವರ್ಷಗಳ ತನಕ ವ್ಯಾಸಂಗಮಾಡಿದ ನಂತರ ವಿದ್ಯಾವಂತರ ಸಂಸರ್ಗಕ್ಕೆ ಅವಕಾಶವಿಲ್ಲದೆ, ವೃತ್ತಪತ್ರಿಕೆಗಳನ್ನಾಗಲಿ, ಪುಸ್ತಕಗಳನ್ನಾಗಲಿ ಓದಿ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶವಿಲ್ಲದೆ, ಆಧುನಿಕ ಪ್ರಪಂಚದ ಕಲ್ಲೋಲಕಲ್ಲೋಲಗಳಿಗೆ ದೂರವಾಗಿ ಬದುಕಿಬಾಳುವುದರಿಂದ ತಮ್ಮ ವಿದ್ಯೆಯನ್ನು ಕಳೆದುಕೊಂಡಿರುವವರ ಸಂಖ್ಯೆಯು ವಿಪರೀತವಾಗಿದೆ. ಇಂತಹವರನ್ನು ವಿದ್ಯಾವಂತರಾಗಿ ಮಾಡುವ ಕೆಲಸವು ಅತ್ಯಾವಶ್ಯಕವಾದದ್ದು. ಆದರೆ, ಈ ಲೇಖನದಲ್ಲಿ ಹಳ್ಳಿಗರನ್ನೂ, ಅನಕ್ಷರಸ್ಥರನ್ನೂ ಹೇಗೆ, ಎಷ್ಟರ ಮಟ್ಟಿಗೆ, ವಿದ್ಯಾವಂತರಾಗಿ ಮಾಡಬಹುದು ಎಂಬುದನ್ನು ಮಾತ್ರ ಸೂಚಿಸಲು ಪ್ರಯತ್ನಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಸಂಘದವರು ಕಳೆದ ಎರಡುವರ್ಷಗಳಿಂದಲೂ ಒಂದು ಗ್ರಾಮದಲ್ಲಿ ಮಾಡಿರುವ ಪ್ರಯತ್ನದ ಅನುಭವದಿಂದ ಹಲವು ಮಾತುಗಳನ್ನು ಇತರರಿಗೆ ಹೇಳುವ ಸಾಹಸಕ್ಕೆ ಮೊದಲುಮಾಡಿದ್ದೇನೆ.

(೧) ಹಳ್ಳಿ ಜನರ ಸಂಪ್ರದಾಯಗಳನ್ನೂ, ಅವರ ಕಷ್ಟ ಸುಖಗಳನ್ನೂ, ಅವರ ಏಳಿಗೆಗೆ ಅಡಚಣೆಯಾಗಿರುವ ಅನೇಕ ಆತಂಕಗಳನ್ನೂ ಚೆನ್ನಾಗಿ ಮನವರಿತು, ಅವರ ಜೊತೆಗಾರರಾಗಿ ನಿಂತು, ಅವರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದ ಹೊರತು, ಪಟ್ಟಣಿಗರಿಂದ ಯಾವ ಗ್ರಾಮ ಸೇವಾಕಾರ್ಯವೂ ಸಾಂಗವಾಗಿ ನೆರವೇರುವ ಹಾಗಿಲ್ಲ. ಅವರ ಮನಸ್ಸಿನಲ್ಲಿ ಸಹಜವಾಗಿ ಮೂಡಿಬರುವ ಅಪನಂಬಿಕೆಯನ್ನು ಅನೇಕ ತಿಂಗಳ ಸಹವಾಸದಿಂದಲೂ, ಸ್ನೇಹದಿಂದಲೂ ತೊಲಗಿಸಿ, ಕೇವಲ ಸಹಾನುಭೂತಿಯಿಂದ ಅವರನ್ನು ಒಲಿಸಿದ ಹೊರತು, ಯಾವ ಕಾರ್ಯಕ್ರಮವನ್ನೂ ಕೈಕೊಳ್ಳಲಾಗುವುದಿಲ್ಲ. ಅನೇಕ ಶತಮಾನಗಳ ವರೆಗೂ ವಿದ್ಯಾವಂತರೂ, ಶ್ರೀಮಂತರೂ ಹಳ್ಳಿಜನರ ತಿಳಿಗೇಡಿತನವನ್ನು ಕಾಪಾಡಿಕೊಂಡು ಬಂದು, ಅವರಲ್ಲಿರುವ ಒಳಜಗಳಗಳನ್ನು ಬೆಳೆಸಿ, ಅವರ ಹಣವನ್ನು ಸುಲಿಗೆ ಮಾಡುತ್ತಾ ಕೊಬ್ಬಿದಾರೆ. ಈ ರೀತಿಯ ಸಂಪರ್ಕವನ್ನು ಅವರು ಕಾಲಮಹಿಮೆ ಎಂದು ನಂಬಿ ಸಹಿಸಿಕೊಂಡು ಬಂದಿದಾರೆ. ಆದ್ದರಿಂದ, ಒಮ್ಮಿಂದೊಮ್ಮೆ ಅವರ ದೃಷ್ಟಿಯನ್ನು ಬದಲಾಯಿಸುವಹಾಗಿಲ್ಲ.... ಅಲ್ಲದೆ ಹಳ್ಳಿಜನರು ಒಬ್ಬ ವ್ಯಕ್ತಿಯ ಸ್ನೇಹವನ್ನೂ, ತ್ಯಾಗವನ್ನೂ, ಸೇವಾತತ್ಪರತೆಯನ್ನೂ ಮನಗಾಣುವಷ್ಟು ಸುಲಭವಾಗಿ, ಸದಸ್ಯರು ಆಗಾಗ ಮಾರ್ಪಡುವ ಒಂದು ಸಂಸ್ಥೆಯನ್ನೂ ಅದರ ನಿಸ್ಪೃಹತೆಯನ್ನೂ ಅರಿತುಕೊಳ್ಳಲಾರರು. ಆದ್ದರಿಂದ, ಒಬ್ಬ ವ್ಯಕ್ತಿಯ ಮುಂದಾಳುತನದಲ್ಲಿ, ಒಂದು ಗ್ರಾಮವನ್ನಾರಿಸಿಕೊಂಡು, ಕೆಲವು ಕಾಲ ಇತರ ಸೇವಾಕಾರ್ಯಗಳನ್ನು ನಡೆಸಿ, ಅವರ ಒಲವನ್ನು ಗಳಿಸಿದ ಮೇಲೆ, ಅನಂತರ ಕ್ರಮವಾದ ಶಿಕ್ಷಣವನ್ನು ಪ್ರಾರಂಭಿಸಬೇಕಾಗಿದೆ.

(೨) ನಮ್ಮ ದೇಶದ ರೈತರ ಮನಸ್ಸನ್ನು ಸೆಳೆಯಬೇಕಾದರೆ ಧರ್ಮ ಮತ ಗ್ರಂಥಗಳು, ಪುರಾಣ ಸ್ತ್ರೀಪುರುಷರು, ಆಧ್ಯಾತ್ಮಿಕ ವಿಷಯ—ಇವುಗಳಷ್ಟು ಒಳ್ಳೆಯ ಸಾಧನಗಳು ಬೇರೆ ಯಾವುವೂ ಇಲ್ಲ. ಯಾವ ಸಭೆಯಲ್ಲಾಗಲಿ, ಸಮ್ಮೇಳನದಲ್ಲಾಗಲಿ, ಒಂದು ದೇವರ ಪಟವನ್ನಿಟ್ಟು, ಕರ್ಪೂರಾರತಿಯನ್ನು ಮಾಡಿ, ನಾಲ್ಕು ಭಜನೆ ಹಾಡುಗಳನ್ನು ಹಾಡದೆ ಹೋದಲ್ಲಿ, ರೈತರಿಗೆ ಕೆಲಸವು ಸಂಪೂರ್ಣವೆನಿಸುವುದಿಲ್ಲ. ಧರ್ಮಬೋಧಕರ ಜಯಂತಿಗಳನ್ನು ಕೊಂಡಾಡುವುದರಲ್ಲಿಯೂ, ಗಣೇಶಪೂಜೆ, ಸರಸ್ವತಿಪೂಜೆ, ಶರನ್ನವರಾತ್ರಿ ಮುಂತಾದ ಉತ್ಸವಗಳಲ್ಲಿಯೂ ಅವರು ಎಷ್ಟು ಆಸಕ್ತಿಯನ್ನೂ ಭಕ್ತಿಯನ್ನೂ ತೋರಿಸುತ್ತಾರೆ! ಆದ್ದರಿಂದ ಅಕ್ಷರಶಿಕ್ಷಣವನ್ನು ವಯಸ್ಕರಿಗೆ ನೀಡುವಾಗ, ಕೇವಲ ಲೌಕಿಕ ಸನ್ನಿವೇಶವನ್ನು ಕಲ್ಪಿಸಿಕೊಳ್ಳದೆ, ಶುಕ್ರವಾರ ಶುಕ್ರವಾರ ಸರಸ್ವತೀಪೂಜೆ ಮಾಡುವುದರಿಂದಾಗಲಿ, ವಿಜಯದಶಮಿ ದಿನ ಪ್ರಾರಂಭಿಸುವುದರಿಂದಾಗಲಿ, ದಿನವೂ ದೇವತಾಪ್ರಾರ್ಥನೆಯಿಂದ ಮೊದಲು ಮಾಡುವುದರಿಂದಾಗಲಿ, ಅದಕ್ಕೆ ಒಂದು ದೈವಿಕವಾದ ಕಳೆಯನ್ನು ಕೊಡುವುದರಿಂದ ಹಳ್ಳಿಜನರ ಮನಸ್ಸನ್ನು ಬೇಗ ಹಿಡಿಯಬಹುದಾಗಿದೆ.

(೩) ಪಠ್ಯಪುಸ್ತಕಗಳಲ್ಲಿಯೂ ಕೂಡ ರಾಮ, ಕೃಷ್ಣ, ಕಬೀರ, ಕ್ರಿಸ್ತ, ಮಹಮ್ಮದ್ ಪೈಗಂಬರ್ ಮುಂತಾದವರ ಜೀವನ ಚರಿತ್ರೆಗಳನ್ನು ಸೇರಿಸಿದರೆ, ಹೆಚ್ಚು ಅನುಕೂಲವುಂಟು. ಇಲಿ, ಬೆಕ್ಕು, ನಾಯಿ, ಗುಬ್ಬಿ ಮುಂತಾದುವನ್ನು ಕುರಿತ ಪಾಠಗಳು ಮಕ್ಕಳಿಗೆ ರುಚಿಸಬಹುದು. ಆದರೆ ಧರ್ಮಪುರುಷರ ವಿಷಯವು ವಯಸ್ಕರಿಗೆ ಆಕರ್ಷಣೀಯವಾಗಿರುತ್ತದೆ. "ದೀನ ನಾನು, ಸಮಸ್ತಲೋಕಕ್ಕೆ ದಾನಿ ನೀನು," "ಏನು ಸುಖ, ಇದು ಏನು ಸುಖ" ಎಂಬಿವೇ ಮುಂತಾದ ಹಾಡುಗಳಿಂದಲೂ, ಕಥೆಗಳ ಹಿನ್ನೆಲೆಯಾಗಿರುವ ತಾಳ್ಮೆ, ಬೇಸರಿಕೆಗಳಿಂದ ಉತ್ಸಾಹ, ಸಂತೋಷ, ಹುರುಪು, ಆತ್ಮಾವಲಂಬನೆಗಳನ್ನು ಹೂಡುವ ಪದ್ಯಗಳನ್ನೂ, "ಲೋಕವೆಂಬುದು ಕರ್ತಾರನ ಕಮ್ಮಟ"ವೆಂಬ ಭಾವನೆಯನ್ನು ಬಿತ್ತಿ, ಸಮ್ಮ ಒಡಹುಟ್ಟುಗಳಾದ ದೋಷಗಳನ್ನು ತೊಡೆದುಹಾಕುವ ಪಾಠಗಳನ್ನೂ ಸೇರಿಸಿ, ವಯಸ್ಕರಿಗೆ ಹೊಸ ಪಾಠ ಪುಸ್ತಕಗಳನ್ನೇ ನಾವು ತಯಾರಿಸಬೇಕಾಗಿದೆ. ಅಲ್ಲದೆ ಮಕ್ಕಳು ಓದುವ ಪುಸ್ತಕಗಳನ್ನೇ ದೊಡ್ಡವರಿಗೂ ಉಪಯೋಗಿಸಿದರೆ ಅವರಿಗೆ ಸಂಕೋಚವೂ ಹೆಚ್ಚುವುದು. ವಯಸ್ಕರಿಗಿರುವ ಹೆಚ್ಚು ಅನುಭವವನ್ನೂ ಒಳಗೊಂಡು, ಅವರ ಈಗಿನ ಮನೋಭಾವವನ್ನೇ ಆಧಾರವಾಗಿಟ್ಟುಕೊಂಡು, ಅದನ್ನು ಶುದ್ಧೀಕರಿಸಿ, ಪುಷ್ಟೀಕರಿಸಿ, ಅವರನ್ನು ಮುಂದಕ್ಕೆ ತರುವ ಗ್ರಂಥಗಳು ನಮಗೆ ಬೇಕಾಗಿವೆ.

(೪) ಹೊಸದಾಗಿ ಓದುಬರಹವನ್ನು ಕಲಿತವರಿಗೂ, ಕಲಿತು ಮರೆತ ಇತರರಿಗೂ, ಪ್ರಪಂಚದ ಈಗಿನ ಸ್ಥಿತಿಗತಿಗಳನ್ನು ತಿಳಿಸಿ, ಜನತೆಯಲ್ಲಿ ಬೇರೂರಿರುವ ಅಸಡ್ಡೆಯನ್ನು ಹೋಗಲಾಡಿಸಿ, ಸುತ್ತಲಿಂದಲೂ ಹರಿದು ಬರುವ ಜ್ಞಾನವಾಹಿನಿಯನ್ನು ಅವರ ಎದೆಯಲ್ಲಿ ತುಂಬಲು, ಗ್ರಾಮಸ್ಥರಿಗಾಗಿಯೇ ಹೊರಡುವ ಒಂದು ವೃತ್ತಪತ್ರಿಕೆಯೂ,

ಕ್ಷೇತ್ರದ ಈಗಿನ ಸನ್ನಿವೇಶದಲ್ಲಿ ಅತ್ಯಾವಶ್ಯಕ. ಕಥೆಗಳು, ಪ್ರಾಣ ಪುರುಷರ ಜೀವನಚರಿತ್ರೆಗಳು ಮುಂತಾದುವನ್ನು ತಿಳಿಸುವುದರ ಮೂಲಕವೇ ಆತ್ಮಗೌರವ, ಮೈತ್ರಿ, ಪರೋಪಕಾರ ಬುದ್ಧಿ, ಮೂಢನಂಬಿಕೆಗಳ ತಿರಸ್ಕಾರ, ಹಳೆಯದನ್ನು ಬಿಟ್ಟು ಹೊಸದನ್ನು ಅಂಗೀಕರಿಸುವ ಧೈರ್ಯ, ಇವುಗಳನ್ನು ಈ ವೃತ್ತಪತ್ರಿಕೆಯು ಉಪದೇಶಮಾಡಬೇಕು. ಈಗ, ಕನ್ನಡನಾಡಿನಲ್ಲಿ, ಏಕೆ, ಹಿಂದುಸ್ತಾನದಲ್ಲಿ ಇಂತಹ ಪತ್ರಿಕೆಯೇ ಇಲ್ಲ. ಈಗಿರುವ ಪತ್ರಿಕೆಗಳಲ್ಲಿನ ಪ್ರಪಂಚವೇ ಬೇರೆ; ರೈತನ ಪ್ರಪಂಚವೇ ಬೇರೆ. ಕೊಲೆ, ಕಳ್ಳತನ, ಮುಸ್ಸ ಅನಾಹುತಗಳು, ಕೋಮುವಾರು ದ್ವೇಷಗಳು, ಇವುಗಳ ಪಟ್ಟಿಯಿಂದ ಹಳ್ಳಿ ಜನರಿಗೆ ಬೇಸರವೂ, ಭಯವೂ ಇಲ್ಲದೆ, ಮತ್ತೆ ಯಾವ ಪ್ರಯೋಜನವೂ ಇಲ್ಲ. ಆದರೆ ಯಾವ ಯಾವ ಹಳ್ಳಿಗಳಲ್ಲಿ, ಯಾವ ಯಾವ ರೈತರು ಹೊಸ ಬೆಳೆಗಳನ್ನು ಹೊಸ ರೀತಿಯಲ್ಲಿ ಬೆಳೆದರು, ಹೇಗೆ ಅವರಂತಹ ಜನರು ಒಗ್ಗಟ್ಟಿನಿಂದ ದೊಡ್ಡ ಕೆಲಸಗಳನ್ನು ಸಾಧಿಸಿದರು, ಎಲ್ಲಿ ದುಂದುವೆಚ್ಚವಿಲ್ಲದೆ ಮದುವೆ ಮುಂತಾದುವುಗಳನ್ನು ನಡೆಸಿದರು, ಈ ರೀತಿಯ ಸಮಾಚಾರಗಳು ಹಳ್ಳಿಯವರಿಗೆ ತಿಳಿಯಬೇಕಾದದ್ದು, ಮತ್ತು ಅವರ ಮನಸ್ಸನ್ನು ಒಲಿಸುವಂಥಾದ್ದು. ಅಲ್ಲದೆ, ವೃತ್ತಪತ್ರಿಕೆಯ ಶೈಲಿಯು ಮಾತ್ರ ತಿಳಿಯಾಗಿ, ರಸವತ್ತಾಗಿ ಇರಬೇಕಾಗಿದೆ. ಈ ಲೇಖನವನ್ನು ಹಳ್ಳಿಯ ಜನರು ಓದಿ ತಿಳಿಯಬೇಕಾದರೆ ತುಂಬಾ ಕಷ್ಟಪಡುತ್ತಾರೆ. ಅವರ ಮಟ್ಟಕ್ಕೆ ಇಳಿದಲ್ಲದೆ, ನಮ್ಮಿಂದ ಅವರನ್ನು ಮೇಲೆತ್ತಲು ಸಾಧ್ಯವಿಲ್ಲ........ ಆದರೆ ಒಂದೇ ಒಂದು ಪ್ರಶ್ನೆ. ಹಾಗೆ ಅವರ ಹೃದಯವನ್ನು ಅರಿಯಬಲ್ಲವರು, ಅವರ ಮಟ್ಟಕ್ಕೆ ಇಳಿಯಬಲ್ಲವರು ನಮ್ಮಲ್ಲಿ ಎಷ್ಟು ಜನರಿದ್ದಾರೆ ?*

---

* ಲೇಖಕರು ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕ ಸಮಿತಿಯ ಜತೆ ಕಾರ್ಯದರ್ಶಿಗಳಾಗಿದ್ದಾರೆ. ಅಲ್ಲದೆ ವಿಶ್ವವಿದ್ಯಾಲಯ ಸಂಘದ 'ಸಮಾಜಸೇವಾ ಸಮಿತಿ'ಯ ಕಾರ್ಯದರ್ಶಿಗಳೂ ಆಗಿದ್ದಾರೆ. ವಿಶ್ವವಿದ್ಯಾಲಯದ ಪರವಾಗಿ ಸಾಗಿದ 'ಸಮಾಜಸಂಪರ್ಕ', ಚಟುವಟಿಕೆಗಳಲ್ಲಿ ಪ್ರಮುಖ ಭಾಗವನ್ನು ವಹಿಸುತ್ತಾರೆ.

ಕಾಮಶಿಕ್ಷಣವೆಂದರೇನು ?

ಲೇಖಕರು : ಡಾ. ಎಂ. ಗೋಪಾಲಕೃಷ್ಣರಾಯರು, ಸಂಪಾದಕ ಕಲಿಯುಗ, ಧಾರವಾಡ

★

ಕೆಲವರೆನ್ನುತ್ತಾರೆ, ಪಶು, ಪಕ್ಷಿ, ವನಸ್ಪತಿಗಳ ಉದಾಹರಣೆಯಿಂದ ಮನುಷ್ಯನ ಕಾಮಾಂಗಗಳ ವಿಷಯವನ್ನು ಕಲಿಸಬೇಕೆಂದು. ಬೇರೆ ಕೆಲವರೆನ್ನುತ್ತಾರೆ, 'ಆ ವಿಧದ ಮುಚ್ಚು ಮರೆ ಏಕೆ? ಕಲಿಸುವುದನ್ನೆಲ್ಲ ಸ್ಪಷ್ಟವೂ ಶುದ್ಧವೂ ಆದ ರೀತಿಯಲ್ಲಿಯೆ ಕಲಿಸಬೇಕು' ಎಂದು. ಅಂತೂ ಹೇಗೂ ಕಲಿಸಲಿ; ಕಲಿಸಬೇಕೆನ್ನುವ ವಿಷಯಕ್ಕೆ ಈಗ ಮತಭೇದವು ಕಡಿಮೆಯಾಗುತ್ತಿದೆ. ಒಂದು ಸಲ ಕಾಮಶಿಕ್ಷಣವು ಶಿಕ್ಷಣಕ್ರಮದಲ್ಲಿಯ ಬಿಡಲಾರದೊಂದು ಭಾಗವೆಂದು ಶಿಕ್ಷಣ ವ್ಯವಸಾಯಿಗಳಿಗೆ ಮನವರಿಕೆಯಾದರೆ ಸಾಕು. ಅದನ್ನು ಹೇಗೆ ಕೊಡಬೇಕೆಂಬುದನ್ನು ಶಿಕ್ಷಣ ಶಾಸ್ತ್ರಿಗಳು ಇನ್ನುಮುಂದೆ ನಿರ್ಧರಿಸಲಿ.

★

ಮನುಷ್ಯರ ವಂದನೆ ನಿಂದನೆಗಳ ಬುಡದಲ್ಲಿ ವಿಮರ್ಶೆಯಿರಬೇಕಾಗುತ್ತದೆ. ವ್ಯಕ್ತಿ ವ್ಯಕ್ತಿಗೂ ಅಭಿಪ್ರಾಯ ಭಿನ್ನತೆಯಾಗುವದು ಸಾಧ್ಯವಿದೆ. ಅದರೆ ಒಂದು ಮಾತಿನ ವಿಷಯಕ್ಕೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಪೂರ್ವದಲ್ಲಿ ಅದನ್ನು 'ನಿರ್ಮಲ' ಮನಸ್ಸಿನಿಂದ ಯೋಚಿಸಬೇಕು. ಕಾಲ ಪರಿಸ್ಥಿತಿಗಳ ಮೂಲಕ ಉಂಟಾದ ದುರಭಿಪ್ರಾಯವನ್ನು ಆರೋಪಿಸಿಯೆ ಯಾವದೊಂದು ಮಾತಿನ ವಿವೇಚನೆಗೆ ಇಳಿಯಬಾರದು. ನೀತಿಗೆಟ್ಟ ಸುಶಿಕ್ಷಿತ ಸ್ತ್ರೀಯರನ್ನು ಒಬ್ಬಿಬ್ಬರನ್ನು ನೋಡಿ 'ಶಿಕ್ಷಣದಿಂದ ಸ್ತ್ರೀಯರು ನೀತಿಗೇಡಿಗಳಾಗುತ್ತಾರೆ' ಎನ್ನುವದು ಅಸಂಗತವಲ್ಲವೇ? ಹಾಗೆಯೆ ಯಾವುದೋ ಕೀಳುಹೊತ್ತಿಗೆಯೊಳಗಿನ 'ಕೊಳಕು ಕಾಮ ವಿಜ್ಞಾನ'ವನ್ನು ಓದಿ ಸಮಾಜಘಾತಕರಾಗಿ ವರ್ತಿಸುವವರನ್ನು ನೋಡಿ, 'ಕಾಮಕ್ಕೆ ಸಂಬಂಧಿಸಿದುದೆಲ್ಲ ಅನೀತಿ' ಎಂದು ಅಭಿಪ್ರಾಯವನ್ನು ಕಟ್ಟುವದೂ ಅವಿವೇಕವಲ್ಲವೇ?

'ಕಾಮಶಿಕ್ಷಣ' ಎಂಬ ಶಬ್ದವನ್ನು ಉಚ್ಚರಿಸಿದ ಕೂಡಲೆ 'ಕಾಮದ ವಿಷಯಕ್ಕೂ ಶಿಕ್ಷಣ ಬೇಕೇ?' 'ಈಗಿನ ಸಂಸಾರಿಗಳೆಲ್ಲ ಕಾಮಶಿಕ್ಷಣವನ್ನು ಪಡೆದಿದ್ದಾರೆಯೆ?' 'ಅಂದರೆ ಶಾಲೆಯಲ್ಲಿ ಗಂಡಹೆಂಡಿರಾಟವನ್ನು ಕಲಿಸಬೇಕೆನ್ನುವಿರಾ?' ಎಂದು ಹಲವು ವಿಧದ ಪ್ರಶ್ನೆಗಳನ್ನು ಕೇಳುವವರು ಅನೇಕರಿದ್ದಾರೆ. ಈ ರೀತಿಯ ಪ್ರಶ್ನೆಗಳಲ್ಲೆಲ್ಲ ಒಂದು ಮಾತು ಪ್ರಾಮುಖ್ಯವಾಗಿ ಸೂಚಿತವಾಗಿರುತ್ತದೆ; ಅದೆಂದರೆ 'ಸಂಭೋಗ'! ಈ ಶಬ್ದವನ್ನು ನಾಲ್ಕು ಜನರೆದುರಿನಲ್ಲಿ ಪ್ರಕಟವಾಗಿ ಉಚ್ಚರಿಸುವ ಧೈರ್ಯವೂ ಬಹು ತುಸು ಜನರಿಗಿದೆ. ಹಾಗೆ ನಾಚಿಕೆ ಪಡುವವರು ಎರಡು ಮಾತುಗಳನ್ನು ಅರಿತುಕೊಳ್ಳಬೇಕು; (೧) ಕಾಮಶಿಕ್ಷಣವೆಂದರೆ ಬರಿ ಸಂಭೋಗಶಿಕ್ಷಣವಲ್ಲ. (೨) ಸಂಭೋಗವು ನಾಚಿಕೆ ಪಡುವಂತಹ, ಹೇಸಿಕೆ ಪಡುವಂತಹ ಕೀಳುಕೆಲಸವಲ್ಲ.


ಈಗ ಸಂಭೋಗದ ವಿಷಯವನ್ನಷ್ಟು ಬದಿಗಿರಿಸು[...] ಅದನ್ನು ಬಿಡು ಕಾಮವಿಜ್ಞಾನದಲ್ಲಿ ಇನ್ನೂ ಏನೇನಿದೆಯೆಂ[...]ದನ್ನು ನೋಡುವಾ. ನೀವು ಯಾರನ್ನಾದರೂ 'ಕಾಮವೆಂ[...]ರೇನು?' ಎಂದು ಕೇಳಿ ನೋಡಿರಿ. ಅದಕ್ಕವರು ಒಂದೇ ಮಾ[...]ನಲ್ಲಿ 'ಸಂಭೋಗೇಚ್ಛೆ' ಎಂದು ಉತ್ತರಕೊಡದಿರಲಾರ[...] ತಪ್ಪು ತಿಳುವಳಿಕೆಯ ಮೂಲವಿಲ್ಲಿದೆ. ಸಂಭೋಗದ ಕಲ್ಪನೆ ಕೂಡ ಮಿದುಳಿನಲ್ಲಿ ಸುಳಿಯುವದಕ್ಕೆ ಕೆಲವು ವರ್ಷಗಳ ಪೂರ್ವದಲ್ಲಿಯೆ ದೇಹದಲ್ಲಿ ಕಾಮೋದಯವಾಗುವದೆಂ[...] ಸಂಗತಿ ಅವರಿಗೆ ತಿಳಿಯದು. ಫ್ರಾಡ್, ಎಲಿಸ್ ಮೊದಲಾ[...] ಕಾಮವಿಜ್ಞಾನಿಗಳು, 'ಮಕ್ಕಳ ಹುಟ್ಟಿನಿಂದ ಮೊದಲ್ಗೊಂ[...] ಹರೆಯದ ವರೆಗೆ ಕಾಮವು ಅವ್ಯಕ್ತವಾಗಿ ವಿವಿಧರೂಪದ[...] ವ್ಯಕ್ತವಾಗುತ್ತಿರುತ್ತದೆ' ಎಂಬ ಅಭಿಪ್ರಾಯವುಳ್ಳವರಾ[...]ದ್ದಾರೆ. ಆಯುರ್ವೇದದಲ್ಲಿ ಬಾಲ್ಯದ ಗುಪ್ತಕಾಮಕ್ಕೆ 'ಸಶುಕ್ರ' 'ವಿಶುಕ್ರ'ವೆಂದೂ ತಾರುಣ್ಯದ ವ್ಯಕ್ತಕಾಮಕ್ಕೆ 'ಸಶುಕ್ರ[...]'ವೆಂದೂ ಕರೆದಿದ್ದಾರೆ. ಅಂದರೆ ಮಕ್ಕಳ ಮೈತುಂಬ ಕಾಮ[...] ಸಂಚಾರವಾಗುತ್ತಿದ್ದರೂ ಅವರ ಕಾಮಾಂಗಗಳಲ್ಲಿ ಶುಕ್ರ[...] (ಸ್ತ್ರೀಯರಲ್ಲಿ ರಜಸ್ಸು) ಸ್ರವಿಸುತ್ತಿರುವದಿಲ್ಲ. ತಾರುಣ್ಯ[...]ದಲ್ಲಿ ಶುಕ್ರ-ರಜಸ್ಸುಗಳ ಸ್ರಾವಗಳು ಮೊದಲಾಗುವ[...] ಆಗಿನಿಂದಲೆ ಯುವಕ ಯುವತಿಯರಿಗೆ ಸಂಭೋಗೇಚ್ಛೆ[...] ಯಾಗುವದು. ಆದುದರಿಂದ 'ಕಾಮ' ಶಬ್ದಕ್ಕೆ ಸಂ[...] ಗೇಚ್ಛೆಯೆಂಬ ಅರ್ಥ ಹಚ್ಚಿ ಮೂಗು ಮುಚ್ಚಿಕೊ[...] ಅವೈಜ್ಞಾನಿಕ ಸ್ವಭಾವವಾಗಿದೆ. ಸಂಭೋಗವು ಕಾಮ[...] ಕೊನೆಯ ರಂಗವಾಗಿದೆ, ಅದರ ಪೂರ್ವರಂಗಗಳ[...]

ಇವೆ. ಆ ಪೂರ್ವರಂಗಗಳ ಜ್ಞಾನ ಸಾಧನಗಳ ಮೇಲೆ ಬಾಳಿನ ಬಲವು ನಿಂತಿದೆ. ಅವುಗಳ ಸರಿಯಾದ ಅರಿವಿನಿಂದಲೆ ಮನುಷ್ಯನು ಪವಿತ್ರವಾದ ಕೊನೆಯ ರಂಗಕ್ಕೆಳಿಯಬೇಕಾಗುತ್ತದೆ. ಆ ಅರಿವಿಲ್ಲದೆ ಕೊನೆಯ ರಂಗಕ್ಕೆ ಒಮ್ಮೆಲೆ ಹಾರಿಕೊಂಡವರು ಸಂಭೋಗವೆಂದರೆ ಅನಿವಾರ್ಯವಾದ ನರಕಕೂಪವೆಂಬ ಭಾವನೆಯುಳ್ಳವರಾಗುತ್ತಾರೆ.

ವೈಜ್ಞಾನಿಕವಾಗಿ ಕಾಮವೆಂದರೆ 'ಹುಟ್ಟಿದ ಮೊದಲ್ಗೊಂಡು ಮಕ್ಕಳಲ್ಲಿ, ಕ್ರಮವಾಗಿ ಸ್ತ್ರೀಲಿಂಗ, ಪುಲ್ಲಿಂಗಗಳನ್ನು ಅರಳಿಸುವ, ಒಂದು ಸೂಕ್ಷ್ಮಶಕ್ತಿ' ಎಂದೆನ್ನಬಹುದು. ಶರೀರದಲ್ಲಿಯ ವಿವಿಧ ಓಜೋಗ್ರಂಥಿಗಳ ಚಟುವಟಿಕೆಯ ಪರಿಣಾಮವೆ ಆ ಶಕ್ತಿಯಾಗಿದೆ. ಆ ಎಲ್ಲ ಗ್ರಂಥಿಗಳ ಕ್ರಿಯೆ, ಆರೋಗ್ಯ, ಬಲಗಳು ಒಂದರಲ್ಲೊಂದು ಹೆಣೆದುಕೊಂಡಿವೆ. ಅವುಗಳಿಗೆ ಕಾಮವಿಕಾಸವಲ್ಲದೆ ಶರೀರ ಸ್ವಾಸ್ಥ್ಯದ ಹೊಣೆಯೂ ಇದೆ. ಆದುದರಿಂದ ಚಿಕ್ಕಮಕ್ಕಳ ನಗೆ ಉಲ್ಲಾಸಗಳೂ ಆರೋಗ್ಯ ಸೌಂದರ್ಯಗಳೂ, ದೊಡ್ಡ ಮಕ್ಕಳ ಕಲ್ಪನೆ ಕುತೂಹಲಗಳೂ ಅಭಿಮಾನ 'ಅಹಂ'ಕಾರಗಳೂ ಆ ಗ್ರಂಥಿಗಳಿಂದಲೆ ಪರಿಣಮಿಸುವವಾದುದರಿಂದ ಅವು ಗುಪ್ತಕಾಮದ ಲಕ್ಷಣಗಳೂ ಆಗಿವೆಯೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಏಕೆಂದರೆ ನಗೆ ಉಲ್ಲಾಸಗಳನ್ನೂ ಕಲ್ಪನೆ ಕುತೂಹಲಗಳನ್ನೂ ಒತ್ತಿಡುವಂತಹ ಸಂಕೋಚ ಭೀತಿಗಳ ಪರಿಸ್ಥಿತಿಯಲ್ಲಿ ಬೆಳೆದ ಮಕ್ಕಳು ಮುಂದೆ ಕಾಮಜೀವನದಲ್ಲಿ ಉನ್ಮತ್ತರೋ ವಿಕೃತರೋ ಆಗುವರೆಂದು ಮನೋವಿಜ್ಞಾನಿಗಳಿಗೆ ಕಂಡುಬಂದಿದೆ. ಆದುದರಿಂದ ಬಾಲಕರಲ್ಲಾಗಲಿ ಯುವಕರಲ್ಲಾಗಲಿ ಕಂಡುಬರುವ ಇಷ್ಟವಾದ ಅಭ್ಯುದಯ ಸಾಧಕವಾದ ಎಲ್ಲ ಸ್ವಭಾವಗಳ ಮೂಲದಲ್ಲಿ ಅವ್ಯಕ್ತವಾದ 'ವಿಶುಕ್ರ'ವಾದ ಕಾಮವಿದೆಯೆಂದು ಒಂದೆ ಮಾತಿನಲ್ಲಿ ಹೇಳಬಹುದು.

ಹೀಗೆ ಸಹಜವಾಗಿ ಜನ್ಮತಃ ಜೊತೆಗೆ ಬಂದ ಕಾಮಕ್ಕೆ ಕೆಲವು ಪ್ರವೃತ್ತಿಗಳಿವೆ. ಅದು ಸ್ತ್ರೀಪುರುಷರಲ್ಲಿ ತಾರುಣ್ಯೋದಯಕ್ಕಿಂತ ಮೊದಲೆ ಪರಸ್ಪರರಲ್ಲಿ ಆಕರ್ಷಣವನ್ನು ಹುಟ್ಟಿಸುತ್ತದೆ; ಸಂಭೋಗವನ್ನಲ್ಲದಿದ್ದರೂ ಸಹವಾಸದ ಬಯಕೆಯನ್ನು ಹುಟ್ಟಿಸುತ್ತದೆ. ಜನನೇಂದ್ರಿಯಗಳ ಉದ್ರೇಕದಲ್ಲಿ ಆನಂದದ ಸಂವೇದನೆಯನ್ನು ಕೊಡುತ್ತದೆ. ಜನನೇಂದ್ರಿಯಗಳ ರಚನೆ-ಕ್ರಿಯೆಗಳ ವಿಷಯಕ್ಕೆ ಕುತೂಹಲದ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಮಿಕ್ಕ ಯಾವ ವಿಷಯಗಳಲ್ಲಿಯೂ ಅನುಭವಕ್ಕೆ ಬರದ ಸೊಗಸು, ಜನನೇಂದ್ರಿಯಗಳೊಡನೆ ಆಡುವ ಆಟದಲ್ಲಿ ಹುಡುಗ ಹುಡುಗಿಯರಿಗೆ ಬರಹತ್ತುವದು. ಒಟ್ಟಿನಲ್ಲಿ ಕಾಮಪ್ರಚೋದಿತವಾದ ಈ ಎಲ್ಲ ಪ್ರವೃತ್ತಿಗಳೂ ಅದಮ್ಯವಾಗುವಷ್ಟು ಕಸುವುಳ್ಳವಾಗಿವೆ; ಆದುದರಿಂದ ಅವನ್ನು ಅಲಕ್ಷ್ಯಮಾಡಲೂ ಆಗದು; ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯಲ್ಲಿ ಅವನ್ನು ಇದ್ದಕ್ಕಿದ್ದಂತೆ ಅನಿರ್ಬಂಧವಾಗಿ ಮುಂದುವರಿಯಗೊಡಲೂ ಆಗದು.

ಹಾಗಾದರೆ ಅನಿವಾರ್ಯವಾದ 'ಕಾಮ'ದ ಪ್ರವೃತ್ತಿಗಳನ್ನು ತಿಳಿದು, ಸಮಾಜಘಾತಕವಾಗದಂತಹ ರೀತಿಯಲ್ಲಿ ಅವುಗಳನ್ನು ಅರಳಿಸುವದೆ ನಮಗುಳಿದ ದಾರಿಯಲ್ಲವೆ? ಆ ಪ್ರವೃತ್ತಿಗಳ ತಿಳುವಳಿಕೆ, ಮಾರ್ಗದರ್ಶನಗಳಿಗೆ 'ಕಾಮಶಿಕ್ಷಣ'ವೆಂದು ನಾವೆನ್ನುವದು. ಅದರಲ್ಲಿ ಓಜೋಗ್ರಂಥಿ,




ಈ ಆಕೃತಿಗಳಲ್ಲಿ ಕಪ್ಪು ಚುಕ್ಕೆಗಳಿಂದ ಗುರುತಿಸಿದವು ಓಜೋಗ್ರಂಥಿಗಳಿರುವ ಸ್ಥಾನಗಳಾಗಿವೆ. ಅವು ಕಾಮಜನನದಷ್ಟೆ ಆರೋಗ್ಯ ಬಲಗಳಿಗೆ ಅವಶ್ಯವಾಗಿವೆ.

ಜನನೇಂದ್ರಿಯಗಳು, ಮನೋವೃತ್ತಿಗಳು, ಕುತೂಹಲದಿಂದ ಹುಟ್ಟುವ ಪ್ರಶ್ನೆಗಳು, ಸಮಾಜನಿಯಮಗಳು ಮುಂತಾಗಿ ಹಲವು ವಿಷಯಗಳು ಸಮಾವಿಷ್ಟವಾಗಿವೆ. ಸಕಾಲದಲ್ಲಿ ಅವುಗಳ ಅರಿವು ಮಕ್ಕಳಿಗೆ ಆದರೆ ಅವುಗಳ ಕುತೂಹಲ ಕಲ್ಪನೆಗಳು ಬೇರೆ ವಿಷಯಗಳ ಕಡೆಗೆ ಹರಿಯಲು ಅನುವಾಗುವದು. ಇಲ್ಲದಿದ್ದರೆ ಬಚ್ಚಿಟ್ಟ ವಿಷಯಗಳ ಚಿಂತನದಲ್ಲಿಯೆ ಮಕ್ಕಳ ಕಲ್ಪನಾಶಕ್ತಿಯು ಹೆಚ್ಚವಾಗಹತ್ತುವದು. ಬಚ್ಚಿಟ್ಟ ಮಾತ್ರಕ್ಕೆ ಅವರ ಕುತೂಹಲವೇನೂ ಕುಗ್ಗಲಾರದು. ಕದ್ದು ಮುಚ್ಚಿ ಆಡಿದ ಪಿಸುಮಾತುಗಳನ್ನು ಸಂಗ್ರಹಿಸಿ ಮಕ್ಕಳು ಕಾಮಾಂಗಗಳ ವಿಷಯಕ್ಕೆ ತಮ್ಮ ವಿಲಕ್ಷಣಕಲ್ಪನೆಗಳನ್ನು ಕಟ್ಟಿಕೊಂಡು ಬಿಡುತ್ತಾರೆ. ಅವು ನಿರಪಾಯಕಾರಿಯಾದ ಕಲ್ಪನೆಗಳಾಗಿದ್ದರೆ ನಾವು ವಿಶೇಷ ಯೋಚಿಸುವ ಕಾರಣವಿರಲಿಲ್ಲ. ಆದರೆ ಅನೇಕ ಯುವಕ ಯುವತಿಯರು ಅನ್ಯಥಾ ಕಲ್ಪನೆಗಳಿಂದ ತಮ್ಮ ಬಾಳನ್ನೆ ಹಾಳುಮಾಡಿಕೊಂಡಿದ್ದಾರೆ.

ಸ್ವರತಿ (Auto-sexuality), ಸಮರತಿ (Homo-sexuality) ಗಳಿಂದ ಬಾಲಬಾಲಿಕೆಯರು ಹಾಳಾಗುತ್ತಿರುವದು ಸೂಕ್ಷ್ಮದರ್ಶಿಗಳಿಗೆ ಕಾಣುವ ವಿಷಯ. ಸ್ವರತಿಯ ಕಡ್ಡಿಗಾತ್ರ ಪಾಪವನ್ನು ಗುಡ್ಡಗಾತ್ರವಾಗಿ ಕಂಡು ಕೊರಗುವ ಯುವಕ ಯುವತಿಯರು ಅಸಂಖ್ಯವಾಗಿದ್ದಾರೆ. ಅಜ್ಞಾನದಿಂದ ಸಂಭೋಗದಲ್ಲಿ ಜಾರಿ ಉಪದಂಶ,ಪ್ರಮೇಹಗಳನ್ನಂಟಿಸಿಕೊಂಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೇಕಾದಷ್ಟಿದ್ದಾರೆ. ಮುಟ್ಟೆಂಬುದೊಂದು ಮಹಾಮೈಲಿಗೆಯೆಂಬ ಕಲ್ಪನೆಯಿಂದ ಮುಟ್ಟನವರ ನೆರಳಿನಿಂದ ಮಕ್ಕಳಿಗೆ ಮುಟ್ಟುದೋಷವಾಗಿದೆಯೆಂದು ಔಷಧ ಕೊಡಿಸದೆ ಮಂತ್ರ ತಂತ್ರಗಳಿಂದಲೇ ಸಾಯಿಸುವ ತಾಯ್ತಂದೆಗಳಿದ್ದಾರೆ. ಬಸುರಿಯಾಗಿರುವಾಗ ಔಷಧ ತೆಗೆದುಕೊಳ್ಳಬಾರದೆಂಬ ಕಲ್ಪನೆಯಿಂದ ಅನೇಕ ಪೀಡೆಗಳನ್ನು ಅಲಕ್ಷಿಸಿ ಗರ್ಭಸ್ಥ ಶಿಶುವನ್ನೂ ಪೀಡಿಸಿ ತಾವೂ ಮುಂದೆ ಬಾಣಂತಿರೋಗಕ್ಕೆ ಗುರಿಯಾಗುವ ಗರ್ಭಿಣಿಯರಿದ್ದಾರೆ. ಕುಮಾರಿಯರೊಡನೆ ಸಂಭೋಗಿಸುವದರಿಂದ ಪ್ರಮೇಹವು ಗುಣವಾಗುವದೆಂಬ ಹುಚ್ಚು ಕಲ್ಪನೆಯಿಂದ ಅನೇಕ ಕುಮಾರಿಕೆಯರಿಗೆ ಆ ರೋಗಗಳನ್ನಂಟಿಸಿದ ಮಹಾಮೂರ್ಖರಿದ್ದಾರೆ. ಹೀಗೆ 'ಕಾಮ'ದ ಅಜ್ಞಾನ, ಕಾಮಶಿಕ್ಷಣದ ಅಭಾವದಿಂದ ಸಮಾಜದಲ್ಲಿ ನೆಲೆಸಿರುವ ಭಯಂಕರ ಪೀಡೆಗಳನ್ನೆ ಬರೆದರೊಂದು ಪುಸ್ತಕವಾಗಬಹುದು. ಇಷ್ಟೆಲ್ಲ ಅನಾಹುತಗಳಿಗೆ ಕಾರಣವಾದ ಅಜ್ಞಾನವನ್ನು ಹೋಗಲಾಡಿಸುವದು ಶಿಕ್ಷಣದ ಕರ್ತವ್ಯವಲ್ಲವೆ? ಮನಸ್ಸಿಗೆ ಸಂಸ್ಕಾರ ಕೊಟ್ಟು ಮನುಷ್ಯನನ್ನಾಗಿ ಮಾಡುವ ಶಿಕ್ಷಣದಲ್ಲಿ, ಆ ಶಿಕ್ಷಣದ ಜೀವನಸ್ಸುರಿಗಳೆನಿಸುವ ಓಜೋಗ್ರಂಥಿಗಳಿಂದಲೇ ಹುಟ್ಟಿದ ಕಾಮಕ್ಕೆ, 'ಜೀವನಕ್ರಮದ ಕಲೆ, ಬಾಳಿನಲ್ಲಿಯ ಸೌಂದರ್ಯಗಳ ಮೂಲಸೆಲೆ' ಯೆನಿಸುವ ಕಾಮಕ್ಕೆ ಎಡೆಯಿಲ್ಲವೇ? ಮನಸ್ಸಿನ ರಂಗ-ತರಂಗಗಳೆಲ್ಲ ಆ 'ಕಾಮ'ದ ಪರಿಣಾಮವಾಗಿವೆಯೆಂದು ಮನೋವಿಜ್ಞಾನವು ಅನ್ನುತ್ತಿರುವ ಈ ಕಾಲದಲ್ಲಿಯೂ ಕಾಮಶಿಕ್ಷಣವು ತ್ಯಾಜ್ಯವೇ?

ದಾಂಪತ್ಯದ ಸ್ಥಿರತೆಗೆ, ಸಾಮರಸ್ಯಕ್ಕೆ, ಸುಪ್ರಜಾಜನನಕ್ಕೆ, ವ್ಯಭಿಚಾರ ಒತ್ತಾಯಗಳ ನಿವಾರಣಕ್ಕೆ, ಗರ್ಭಪಾತ ಸ್ರಾವಗಳ ನಿಲುಗಡೆಗೆ, ಶಿಶುಮರಣ ಸೂತಿಕಾರೋಗಗಳ ನಿರೋಧಕ್ಕೆ ಸಂಭೋಗಕಲೆಯ ಜ್ಞಾನವು ಅತ್ಯಗತ್ಯವಾಗಿದೆಯೆಂದು ಕಾಮವಿಜ್ಞಾನಿಗಳ ಅಭಿಪ್ರಾಯವಿದೆ. ಸುಶಿಕ್ಷಿತರು ಈ ಸಾಮಾಜಿಕ ಸಂಕಷ್ಟಗಳ ನಿವಾರಣೆಗೆ ಸಹಾಯಕವಾಗುವದು ಕರ್ತವ್ಯವಾಗಿದ್ದರೆ ಸಂಭೋಗದ ವಿಷಯವನ್ನು ಶಿಕ್ಷಣದಲ್ಲಿ ಸೇರಿಸುವದು ಬೇಡವೇ?

ಇನ್ನುಳಿಯಿತು ಕಾಮಶಿಕ್ಷಣವನ್ನು ಕೊಡುವ ಕ್ರಮ. ಕೆಲವರೆನ್ನುತ್ತಾರೆ— ಪಶು, ಪಕ್ಷಿ, ವನಸ್ಪತಿಗಳ ಉದಾಹರಣೆಯಿಂದ ಮನುಷ್ಯನ ಕಾಮಾಂಗಗಳ ವಿಷಯವನ್ನು ಕಲಿಸಬೇಕೆಂದು. ಬೇರೆ ಕೆಲವರೆನ್ನುತ್ತಾರೆ— 'ಆ ವಿಧದ ಮುಚ್ಚುಮರೆ ಏಕೆ? ಕಲಿಸುವದನ್ನೆಲ್ಲ ಸ್ಪಷ್ಟವೂ ಶುದ್ಧವೂ ಆದ ರೀತಿಯಲ್ಲಿಯೆ ಕಲಿಸಬೇಕು' ಎಂದು. ಅಂತೂ ಹೇಗೂ ಕಲಿಸಲಿ; ಕಲಿಸಬೇಕೆನ್ನುವ ವಿಷಯಕ್ಕೆ ಈಗ ಮತಭೇದವು ಕಡಿಮೆಯಾಗುತ್ತಿದೆ. ಒಂದು ಸಲ ಕಾಮಶಿಕ್ಷಣವೂ ಶಿಕಣಕ್ರಮದಲ್ಲಿಯ ಬಿಡಲಾರದೊಂದು ಭಾಗವೆಂದು ಶಿಕ್ಷಣವ್ಯವಸಾಯಿಗಳಿಗೆ ಮನವರಿಕೆಯಾದರೆ ಸಾಕು. ಅದನ್ನು ಹೇಗೆ ಕೊಡಬೇಕೆಂಬುದನ್ನು ಶಿಕ್ಷಣಶಾಸ್ತ್ರಿಗಳು ಇನ್ನು ಮುಂದೆ ನಿರ್ಧರಿಸಲಿ.



★ ಸಹಶಿಕ್ಷಣ ★

ಶ್ರೀ. ಎ. ಸಿ. ದೇವೇಗೌಡ, ಎಂ. ಎ. (ಕೊಲಂಬಿಯ), ಬಿ. ಟಿ.,
ಎಂ. ಇ ಡಿ. (ಲೀಡ್ಸ್), ಟ್ರೇನಿಂಗ್ ಕಾಲೇಜು, ಮೈಸೂರು

ಸಹಶಿಕ್ಷಣದ (Co-education) ಬಗ್ಗೆ ಯಾವಯಾವ ಭಿನ್ನಾಭಿಪ್ರಾಯಗಳಿವೆ? ಅವಕ್ಕೆ ಕಾರಣಗಳಾವವು? ಹಿಂದುಸ್ಥಾನದಲ್ಲಿ ಸಹಶಿಕ್ಷಣದ ಬಗ್ಗೆ ಈಗಿರುವ ಅನಾಸ್ಥೆಗೆ, ಅನುತ್ತೇಜನಕ್ಕೆ ಪರಿಸ್ಥಿತಿಯು ಎಷ್ಟರ ಮಟ್ಟಿಗೆ ಕಾರಣವಾಗಿದೆ? ಬರುಬರುತ್ತ ಸಹಶಿಕ್ಷಣವನ್ನೆ ನಾವು ಭಾರತೀಯರು ಪುರಸ್ಕರಿಸುವುದು ಅಗತ್ಯವೆಂತು? ಎಂಬುದರ ಸಾಧಾರ ವಿವರಣೆ.

ಬಾಲಕ ಬಾಲಕಿಯರು ಒಂದೇ ಪಾಠಶಾಲೆಯಲ್ಲಿ ಒಂದೇ ತರಗತಿಯಲ್ಲಿ ಒಟ್ಟಿಗೆ ಶಿಕ್ಷಣವನ್ನು ಪಡೆಯುವುದು ಸಹಶಿಕ್ಷಣ. ಈ ಪದ್ಧತಿಯು ನಮ್ಮ ಹಿಂದೂದೇಶದಲ್ಲಿ ಎಷ್ಟರಮಟ್ಟಿಗೆ ಜಾರಿಯಲ್ಲಿದೆ ಎಂದು ವಿಚಾರಿಸಿದರೆ, ಬಾಲಕ ಬಾಲಕಿಯರು ಪ್ರತ್ಯೇಕವಾದ ಶಾಲೆಗಳಲ್ಲಿ ವ್ಯಾಸಂಗ ಮಾಡುವುದೇ ಹೆಚ್ಚೆಂದೂ, ಒಂದೇ ಶಾಲೆಯಲ್ಲಿ ವ್ಯಾಸಂಗ ಮಾಡುವದು ಅತಿ ವಿರಳವೆಂದೂ ಕೂಡಲೆ ತಿಳಿಯುತ್ತದೆ. ನಾವು ಮೈಸೂರು ದೇಶವನ್ನು ಉದಾಹರಣೆಗಾಗಿ ತೆಗೆದುಕೊಂಡರೆ, ೧೯೪೮-೪೯ನೇ ವರ್ಷದಲ್ಲಿ ಒಟ್ಟು ೬೬,೩೭೯ ಜನ ಬಾಲಕಿಯರು ಶಿಕ್ಷಣವನ್ನು ಪಡೆಯುತ್ತಿದ್ದರೆಂದು ಸರ್ಕಾರಿ ರಿಪೋರ್ಟಿನಿಂದ ತಿಳಿಯುವದು. ಇದರಲ್ಲಿ ೩೫,೫೩೫ ಜನ ಬಾಲಕಿಯರು, ಬಾಲಕಿಯರಿಗೋಸ್ಕರವಾಗಿಯೇ ಪ್ರತ್ಯೇಕವಾಗಿ ಏರ್ಪಡಿಸಿರುವ ವಿದ್ಯಾಶಾಲೆಗಳಲ್ಲಿ ವ್ಯಾಸಂಗಮಾಡುತ್ತಿದ್ದರು. ಉಳಿದ ೩೦,೮೪೪ ಜನ ಬಾಲಕಿಯರು ಬಾಲಕರ ಶಾಲೆಗಳಲ್ಲಿದ್ದರು. ಕೆಳಗಿನ ಪಟ್ಟಿಯಲ್ಲಿ ಹೆಚ್ಚು ವಿವರಗಳನ್ನು ಕೊಟ್ಟಿದೆ.

ಒಟ್ಟು ವಿದ್ಯಾರ್ಥಿನಿಯರಲ್ಲಿ ಶೇಕಡ ೪೬ ಮಂದಿ ಬಾಲಕರ ಶಾಲೆಗಳಲ್ಲಿ ವ್ಯಾಸಂಗಮಾಡುತ್ತಿದ್ದರೆಂದು ಮೇಲಿನ ಪಟ್ಟಿಯಿಂದ ತಿಳಿಯುತ್ತಿದೆ. ಇದರಿಂದ ನಾವು ನಮ್ಮ ದೇಶದಲ್ಲಿ ಸಹಶಿಕ್ಷಣವು ಬಹಳಮಟ್ಟಿಗೆ ಮುಂದುವರಿದಿದೆಯೆಂದು ಭಾವಿಸುವುದಕ್ಕೆ ಅವಕಾಶವುಂಟು. ಆದರೆ ಈ ಪಟ್ಟಿಯನ್ನು ಚೆನ್ನಾಗಿ ಪರಿಶೀಲಿಸಿದರೆ ನಿಜವಾದ ಅಂಶಗಳು ಗೋಚರವಾಗುತ್ತವೆ. ಸಹಶಿಕ್ಷಣವು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಬಹಳಮಟ್ಟಿಗೆ ರೂಢಿಗೆ ಬಂದಿದೆ

ವಿದ್ಯಾಸಂಸ್ಥೆಗಳು	ಬಾಲಕಿಯರ ಸಂಖ್ಯೆ		ಒಟ್ಟು	ಶೇಕಡ ಸಹಶಿಕ್ಷಣ
	ಬಾಲಕಿಯರ ಶಾಲೆಗಳಲ್ಲಿ	ಬಾಲಕರ ಶಾಲೆಗಳಲ್ಲಿ		
ವಿಶ್ವವಿದ್ಯಾನಿಲಯ	೯೮	೪೭	೧೪೫	೩೨
ಹೈಸ್ಕೂಲುಗಳು	೪೮೫	೫೧	೫೩೬	೧೦
ಮಾಧ್ಯಮಿಕ ಶಾಲೆಗಳು	೨,೬೯೮	೮೩೧	೩,೫೨೯	೨೩
ಪ್ರಾಥಮಿಕ ಶಾಲೆಗಳು	೩೧,೯೫೨	೨೯,೭೨೬	೬೧,೬೭೮	೪೮
ಇತರ ಶಾಲೆಗಳು	೩೦೨	೧೮೯	೪೯೧	೩೮
ಒಟ್ಟು	೩೫,೫೩೫	೩೦,೮೪೪	೬೬,೩೭೯	೪೬

ಯೆಂದೂ, ಇತರ ದರ್ಜೆಯ ಶಾಲೆಗಳಲ್ಲಿ ಸ್ವಲ್ಪಮಟ್ಟಿಗೆ ಮಾತ್ರ ಇದೆಯೆಂದೂ ತಿಳಿಯುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಹೈಸ್ಕೂಲುಗಳಿಗಿಂತ ಹೆಚ್ಚಾಗಿ ಸಹಶಿಕ್ಷಣವು ನಡೆಯುತ್ತಿದೆ. ಈ ಪರಿಸ್ಥಿತಿಗೆ ನಾವು ಒಂದೆರಡು ಕಾರಣಗಳನ್ನು ಸುಲಭವಾಗಿ ಊಹಿಸಬಹುದು. ನಮ್ಮ ದೇಶದಲ್ಲಿ ಜನಾಭಿಪ್ರಾಯವು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಸಹ-ಶಿಕ್ಷಣವನ್ನು ಒಪ್ಪುವಂತಿದೆ. ಮಾಧ್ಯಮಿಕ ಶಾಲೆಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಸಹಶಿಕ್ಷಣಕ್ಕೆ ಅನುಮತಿಯನ್ನು ಕೊಡುವಂತಿಲ್ಲ. ಇದೇ ಅಭಿಪ್ರಾಯವನ್ನು ವಿದ್ಯಾಶಾಖೆಯ ನಿಯಮಗಳೂ ಕೂಡ ಪ್ರತಿಬಿಂಬಿಸುತ್ತವೆ. ಸಹಶಿಕ್ಷಣದ ವಿಷಯದಲ್ಲಿ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ನಿಯಮವು ಈ ರೀತಿ ಇದೆ:—

"ಬಾಲಕಿಯರಿಗೆ ಪ್ರತ್ಯೇಕವಾದ ಶಾಲೆಗಳು ಇಲ್ಲದ ಗ್ರಾಮಗಳಲ್ಲಿ ಹತ್ತು ವರ್ಷಕ್ಕೆ ಹೆಚ್ಚು ಇಲ್ಲದ ಬಾಲಕಿಯರನ್ನು ಬಾಲಕರ ಶಾಲೆಗಳಿಗೆ ಸೇರಿಸಬಹುದಲ್ಲದೆ ಆ ರೀತಿ ಸೇರುವುದಕ್ಕೆ ವಿದ್ಯಾಶಾಖೆಯ ಅಧಿಕಾರಿಗಳು, ಉಪಾಧ್ಯಾಯರುಗಳು ಮತ್ತು ಶಾಲಾಸಮಿತಿಯ ಸದಸ್ಯರುಗಳು ಆದಷ್ಟು ಉತ್ತೇಜನವನ್ನು ಕೊಡಬೇಕು. ಪಟ್ಟಣದ ಶಾಲೆಗಳಲ್ಲಿ ಕೂಡ ಪ್ರಾಥಮಿಕ ಒಂದನೇ ಮತ್ತು ಎರಡನೇ ತರಗತಿಗಳಲ್ಲಿ ಸಹಶಿಕ್ಷಣವನ್ನು ನಡಸುವುದಕ್ಕೆ ಉತ್ತೇಜನವನ್ನು ಕೊಡಬಹುದು. ಆದರೆ ವಯಸ್ಸಾದ ಬಾಲಕಿಯರನ್ನು ಬಾಲಕರ ಮಾಧ್ಯಮಿಕ ಪಾಠಶಾಲೆಗಳಿಗೆ ವಿದ್ಯಾ ಇಲಾಖೆಯ ಜಿಲ್ಲಾ ಅಧಿಕಾರಿಗಳ (District Education Officer) ಅನುಮತಿಯಿಲ್ಲದೆ ಸೇರಿಸಕೂಡದು. ಈ ಅಧಿಕಾರಿಗಳು ತಮ್ಮ ಅನುಮತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೊಡಬೇಕು."

ಜನಾಭಿಪ್ರಾಯವೂ, ಸರ್ಕಾರಿ ನಿಯಮಗಳೂ ಹೀಗಿರುವಾಗ ಸಹಶಿಕ್ಷಣವು ನಮ್ಮ ದೇಶದಲ್ಲಿ ಬಹಳಮಟ್ಟಿಗೆ ಮುಂದುವರಿಯದೇ ಇರುವುದು ಆಶ್ಚರ್ಯವೇನೂ ಅಲ್ಲ.

ಸಹಶಿಕ್ಷಣದ ವಿಷಯದಲ್ಲಿ ವಿದೇಶಗಳಲ್ಲಿ ಪರಿಸ್ಥಿತಿಯು ಹೇಗಿದೆ ಎಂಬುದನ್ನು ಸ್ವಲ್ಪ ಪರಿಶೀಲಿಸಿ ನೋಡೋಣ. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಮತ್ತು ಜಪಾನ್ ದೇಶಗಳಲ್ಲಿ ಪ್ರಾಥಮಿಕಶಾಲೆಗಳಲ್ಲಿ ಸಹಶಿಕ್ಷಣವು ಬಹಳ ಮಟ್ಟಿಗೆ ಆಚರಣೆಯಲ್ಲಿದೆ. ಮಾಧ್ಯಮಿಕಶಾಲೆಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿಯೂ ಕೂಡ ಸಹಶಿಕ್ಷಣವು ಸ್ವಲ್ಪಮಟ್ಟಿಗೆ ಕಾಣುತ್ತದೆ. ಆದರೆ ಇದಕ್ಕೆ ಕಾರಣವು ಶಿಕ್ಷಣತತ್ವದಲ್ಲಿಲ್ಲ. ಆರ್ಥಿಕಸ್ಥಿತಿಯಲ್ಲಿದೆ. ಅಂದರೆ ಎಲ್ಲಿ ಬಾಲಕಿಯರಿಗೆ ಪ್ರತ್ಯೇಕವಾದ ಶಾಲೆಗಳನ್ನು ಏರ್ಪಡಿಸಲು ಹಣಕಾಸಿನ ದೃಷ್ಟಿಯಿಂದ ಸಾಧ್ಯವಿಲ್ಲವೋ ಅಲ್ಲಿ ಸಹಶಿಕ್ಷಣಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಸಹಶಿಕ್ಷಣವು ಬಹಳ ಸಾಮಾನ್ಯವಾದ ವಿಷಯವಾಗಿದೆ. ಈ ದೇಶಗಳಲ್ಲಿ ಅನೇಕ ಪ್ರಯೋಗಶಾಲೆಗಳಲ್ಲಿ (Experimental Schools) ಸಹಶಿಕ್ಷಣವು ನಡೆಯುತ್ತಾ ಇದೆ. ಜರ್ಮನಿಯಲ್ಲಿ ಹಿಟ್ಲರನು ಬರುವುದಕ್ಕೆ ಮುಂಚೆ ಸಹಶಿಕ್ಷಣವು ವರ್ಷೇ ವರ್ಷೇ ಮುಂದರಿಯುತ್ತಾ ಇತ್ತು. ಆದರೆ ಹಿಟ್ಲರನು ಬಂದು ತನ್ನ ನಾಟ್ಸಿ (Nazi) ತತ್ವವನ್ನು ಜಾರಿಗೆ ತರಲು ಉಪಕ್ರಮಿಸಿದ ಮೇಲೆ ಬಾಲಕರ ಶಾಲೆಗಳಿಗೆ ಬಾಲಕಿಯರನ್ನು ಸೇರಿಸುವುದು ಬಹಳ ಕಡಿಮೆಯಾಗಿದೆ. ಅಷ್ಟೇ ಅಲ್ಲ, ಬಾಲಕಿಯರಿಗೆ ವಿದ್ಯಾಭ್ಯಾಸಕ್ಕೆ ಅವಕಾಶಗಳೇ ಸ್ವಲ್ಪಮಟ್ಟಿಗೆ ಕಡಿಮೆಯಾಗಿವೆ. ಸ್ತ್ರೀಯರ ಕರ್ತವ್ಯವು ದೇವರ ಗುಡಿಯಲ್ಲಿ, ಅಡಿಗೆಯ ಮನೆಯಲ್ಲಿ ಮತ್ತು ಮಕ್ಕಳು ಸಾಕುವುದರಲ್ಲಿ ಮಾತ್ರ(Kirche, Kuche Kinder) ಎಂಬುದು ಹಿಟ್ಲರನ ತತ್ವದ ಒಂದು ಭಾಗ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸಹಶಿಕ್ಷಣವು ಪ್ರಾಥಮಿಕ ಶಾಲೆಗಳಿಂದ ಮೊದಲ್ಗೊಂಡು ವಿಶ್ವವಿದ್ಯಾನಿಲಯದ ವರೆಗೂ ಒಂದೇ ಸಮವಾಗಿ ನಡೆಯುತ್ತಿದೆ. ಪ್ರತ್ಯೇಕಶಾಲೆಗಳ ಸಂಖ್ಯೆಯು ಬಹಳ ಕಡಿಮೆ. ರಷ್ಯಾ ದೇಶದಲ್ಲಿ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳೇ ಇಲ್ಲ. ಎಲ್ಲೆಲ್ಲಿಯೂ ಸಹಶಿಕ್ಷಣವೇ ನಡೆಯುತ್ತಾ ಇದೆ. ಸಹಶಿಕ್ಷಣ ತತ್ವವನ್ನು ರಷ್ಯಾ ದೇಶವು ಜಾರಿಗೆ ತಂದಿರುವಷ್ಟುಮಟ್ಟಿಗೆ ಇನ್ನಾವ ದೇಶವೂ ತಂದಿಲ್ಲ.

ಸಹಶಿಕ್ಷಣದ ವಿಷಯದಲ್ಲಿ ಶಿಕ್ಷಣತತ್ವಜ್ಞರು ಭಿನ್ನಾಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಪುರುಷರು ಮತ್ತು ಸ್ತ್ರೀಯರು ಸಮಾಜದಲ್ಲಿ ಒಬ್ಬರೊಡನೆ ಒಬ್ಬರು ಕಲೆತು ಜೀವಿಸಬೇಕಾಗಿರುವುದರಿಂದ ಬಾಲಕಬಾಲಿಕೆಯರೂ ಕೂಡ ಒಬ್ಬರೊಡನೆ ಒಬ್ಬರು ಕಲೆತು ಒಂದೇ ಶಾಲೆಯಲ್ಲಿ ವ್ಯಾಸಂಗಮಾಡುವುದು ಸ್ವಭಾವಸಿದ್ಧವೆಂದು ಸಹಶಿಕ್ಷಣವನ್ನು ಅನುಮೋದಿಸುವವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವು 'ಶಾಲೆಯು ಒಂದು ಚಿಕ್ಕ ಪ್ರಪಂಚ' (School is a miniature world) ಎಂಬ ತತ್ವಕ್ಕೆ ಅನುಸಾರವಾಗಿದೆ. ಆದರೆ ಈ ಅಭಿಪ್ರಾಯವು ನಮ್ಮ ಹಿಂದೂ ದೇಶದ ಸನ್ನಿವೇಶವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಏಕಶಿಕ್ಷಣಕ್ಕೆ ಬೆಂಬಲವನ್ನು ಕೊಡುವುದಿಲ್ಲ; ಏಕೆಂದರೆ ನಮ್ಮ ಸಮಾಜದಲ್ಲಿ ಸ್ತ್ರೀಯರು ಇನ್ನೂ ಮುಂದುವರೆದಿ

ಹೀಗೀಗ ಅವರು ಕಣ್ಣು ತೆರೆದು ಪುರುಷರ ಜೊತೆಯಲ್ಲಿ ಸೇರಿ ಸಮಾಜಸೇವೆಗೆ ಪ್ರಾರಂಭಮಾಡಿದ್ದಾರೆ. ಸಮಾಜದಲ್ಲಿ ಹೆಂಗಸರೂ, ಗಂಡಸರೂ ಪ್ರತ್ಯೇಕವಾಗಿರುವದರಿಂದ ಶಾಲೆಗಳಲ್ಲಿ ಸಹಶಿಕ್ಷಣವು ಅಪರೂಪವಾಗಿರುವದು ನ್ಯಾಯವೇ ಇದೆ.

ಆರೋಗ್ಯದೃಷ್ಟಿಯಿಂದಲೂ, ನೈತಿಕದೃಷ್ಟಿಯಿಂದಲೂ ಬಾಲಕ ಬಾಲಕಿಯರಲ್ಲಿ ಇರಬೇಕಾದ ಪರಸ್ಪರ ಸಂಬಂಧಗಳು (Mutual relations) ಒಳ್ಳೆಯ ರೀತಿಯಲ್ಲಿ ಬೆಳೆಯಲು ಸಹಶಿಕ್ಷಣವು ಅನುಕೂಲಗಳನ್ನು ಒದಗಿಸುವುದೆಂದೂ, ಬಾಲಕ ಬಾಲಕಿಯರು ಪ್ರತ್ಯೇಕವಾದ ಶಾಲೆಗಳಲ್ಲಿ ವ್ಯಾಸಂಗಮಾಡುವುದರಿಂದ ಅನೇಕ ಸಂದರ್ಭಗಳಲ್ಲಿ ಆರೋಗ್ಯಕ್ಕೂ ಮತ್ತು ನೀತಿಗೂ ಹೆಚ್ಚು ಹಾನಿಯುಂಟಾಗುವುದೆಂದೂ ಕೆಲವರ ಅಭಿಪ್ರಾಯ. ಪುರುಷರು ಸ್ತ್ರೀಯರ ವಿಷಯದಲ್ಲಿ ಅನಾವಶ್ಯಕವಾದ ಕುತೂಹಲವನ್ನು (Unhealthy Curiosity) ತೋರಿಸುವ ಮತ್ತು ಸ್ತ್ರೀಯ ಜೀವ ಮಾತ್ರಕ್ಕೆ ರೋಮಾಂಚವುಂಟಾಗುವ ಅಸಮರ್ಪಕವಾದ ಪರಿಸ್ಥಿತಿಗಳು ಸಹಶಿಕ್ಷಣದಿಂದ ಕಡಿಮೆಯಾಗುವವೆಂದೂ ಮತ್ತೆ ಕೆಲವರು ಹೇಳುತ್ತಾರೆ. ಶಾಲೆಯ ಆಡಳಿತ ಮತ್ತು ಶಿಸ್ತಿನ (Discipline) ವಿಷಯದಲ್ಲಿಯೂ ಕೂಡ ಸಹಶಿಕ್ಷಣವು ಉತ್ತಮವೆಂದು ಹೇಳುವುದುಂಟು. ಏಕೆಂದರೆ ಸಹಶಿಕ್ಷಣವು ನಡೆಯುತ್ತಿರುವ ಶಾಲೆಗಳಲ್ಲಿ ಬಾಲಕ ಬಾಲಕಿಯರ ಆಚಾರ ನಡತೆಗಳನ್ನು ಒಂದು ಕಟ್ಟುಬಿಟ್ಟಿನೊಳಗೆ ಇಡುವುದು ಸುಲಭ; ಪ್ರತ್ಯೇಕವಾದ ಶಾಲೆಗಳಲ್ಲಿ ನಡತೆಯು ಕೆಲವು ವೇಳೆ ಮಿತಿಮೀರಿ ಹೋಗುವುದುಂಟು. ಬಾಲಕಿಯರು ಇರುವ ಕಡೆ ಬಾಲಕರೂ, ಬಾಲಕರು ಇರುವ ಕಡೆ ಬಾಲಕಿಯರೂ ತಮ್ಮ ತಮ್ಮ ನಡತೆಯನ್ನು ತಮ್ಮಷ್ಟಕ್ಕೆ ತಾವೇ ಸರಿಪಡಿಸಿಕೊಳ್ಳುವುದು ಅನುಭವಸಿದ್ಧವಾಗಿಯೇ ಇದೆ. ಕೊನೆಯದಾಗಿ ಸಹಶಿಕ್ಷಣ ಶಾಲೆಗಳು ಆರ್ಥಿಕದೃಷ್ಟಿಯಿಂದ ಬಹಳ ಲಾಭಕರವಾದುವೆಂದೂ ಕೊಂಚವಾದರೂ ಅನುಮಾನವಿಲ್ಲದೆ ಹೇಳಬಹುದು. ಸಣ್ಣ ಪುಟ್ಟ ಹಳ್ಳಿಗಳಲ್ಲಿ ಬಾಲಕ ಬಾಲಕಿಯರಿಗೆ ಬೇರೆ ಬೇರೆ ಶಾಲೆಗಳನ್ನು ಏರ್ಪಡಿಸುವುದಕ್ಕಿಂತ ಒಂದೇ ಸಹಶಿಕ್ಷಣದ ಶಾಲೆಯನ್ನು ಸ್ಥಾಪಿಸುವುದು ಸರ್ಕಾರಕ್ಕೆ ಬಹಳ ಲಾಭಕರ. ಅಷ್ಟೇ ಅಲ್ಲ, ಬಾಲಕಿಯರ ಶಾಲೆಗಳು ಬಾಲಕರ ಶಾಲೆಗಳಿಗಿಂತ ಯಾವಾಗಲೂ ಹೆಚ್ಚು ವೆಚ್ಚವು ಖರ್ಚಾಗುತ್ತದೆ. ಮೈಸೂರು ದೇಶದಲ್ಲಿ ಬಾಲಕಿಯರ ಹೈಸ್ಕೂಲುಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಗೂ ವರ್ಷ ಒಂದಕ್ಕೆ ೧೮೧ ರೂಪಾಯಿಗಳು ಖರ್ಚಾಗುತ್ತವೆ. ಆದರೆ ಬಾಲಕರ ಹೈಸ್ಕೂಲುಗಳಲ್ಲಿ ವರ್ಷ ಒಂದಕ್ಕೆ ಪ್ರತಿಯೊಬ್ಬ ಹುಡುಗನಿಗೂ ೯೪ ರೂಪಾಯಿಗಳು ಮಾತ್ರ ಖರ್ಚಾಗುತ್ತವೆ. ಹೀಗೆಯೇ ಬಾಲಕಿಯರ ಮಾಧ್ಯಮಿಕ ಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಗೂ ಪ್ರತಿವರ್ಷವೂ ೫೭ ರೂಪಾಯಿಗಳೂ ಬಾಲಕರ ಮಾಧ್ಯಮಿಕ ಶಾಲೆಗಳಲ್ಲಿ ಪ್ರತಿಯೊಬ್ಬ ಹುಡುಗನಿಗೆ ೨೮ ರೂಪಾಯಿಗಳೂ ಖರ್ಚಾಗುತ್ತವೆ. ಸಹಶಿಕ್ಷಣವನ್ನು ಹೆಚ್ಚಾಗಿ ರೂಢಿಗೆ ತರುವುದರಿಂದ ವಿದ್ಯಾ ಇಲಾಖೆಯವರು ಖರ್ಚನ್ನು ಕಡಿಮೆಮಾಡಬಹುದು. ಇವೆಲ್ಲಾ ಸಹಶಿಕ್ಷಣದ ಪರವಾಗಿ ವಾದಿಸುವವರು ಕೊಡುವ ಅಭಿಪ್ರಾಯಗಳು.

ಬಾಲಕರನ್ನು ಹೆಣ್ಣಿಗರನ್ನಾಗಿಯೂ, ಬಾಲಕಿಯರನ್ನು ಗಂಡುಬೀರಿಯರನ್ನಾಗಿಯೂ ಸಹಶಿಕ್ಷಣವು ಮಾಡುತ್ತದೆಂದು ಸಹಶಿಕ್ಷಣದ ವಿರೋಧಿಗಳು ಅಭಿಪ್ರಾಯಪಡುತ್ತಾರೆ. ಆದರೆ ಈಗ ೮೦ ವರ್ಷಗಳಿಂದಲೂ ಸಹಶಿಕ್ಷಣವು ತಪ್ಪದೆ ನಡೆದುಬರುತ್ತಿರುವ ಅಮೇರಿಕಾ ಸಂಯುಕ್ತಸಂಸ್ಥಾನದ ಅನುಭವದಲ್ಲಿ ಈ ಪರಿಣಾಮವು ಕಂಡುಬಂದಿಲ್ಲ. ಬಾಲಕಿಯರ ಬುದ್ಧಿಶಕ್ತಿಯು (Intelligence) ಬಾಲಕರಿಗಿಂತ ಕಡಿಮೆಯೆಂದೂ, ಆದುದರಿಂದ ಪ್ರತ್ಯೇಕ ಶಾಲೆಗಳಿರಬೇಕೆಂದೂ ಕೆಲವರು ಹೇಳುತ್ತಾರೆ. ಆದರೆ ಬಾಲಕ ಬಾಲಕಿಯರ ಬುದ್ಧಿಶಕ್ತಿಯನ್ನು ಪರೀಕ್ಷೆಮಾಡಿ ಹೋಲಿಸಿ ನೋಡಿರುವ ಪಾಶ್ಚಾತ್ಯ ಮನಃಶಾಸ್ತ್ರಜ್ಞರು (Psychologists) ಈ ಅಭಿಪ್ರಾಯವನ್ನು ಖಂಡಿಸುತ್ತಾರೆ. ಅವರು ಬುದ್ಧಿಶಕ್ತಿಯ ಪರೀಕ್ಷೆಗಳನ್ನು (Intelligence Tests) ಪ್ರಯೋಗಿಸಿ, ಬಾಲಕ ಬಾಲಕಿಯರಿಗೆ ಕಂಡುಬರುವ ವ್ಯತ್ಯಾಸವು ಲೆಕ್ಕಕ್ಕೆ ತೆಗೆದುಕೊಳ್ಳುವಷ್ಟು ಇಲ್ಲವೆಂದು ನಿರ್ಧರಿಸಿದ್ದಾರೆ. ನಮ್ಮ ಹಿಂದೂದೇಶದ ಬಾಲಕ ಬಾಲಕಿಯರಿಗೂ ಕೂಡ ಇದು ಅನ್ವಯಿಸುತ್ತದೆ ಎಂದು ನಾವು ಊಹಿಸಿದರೆ ತಪ್ಪೇನೂ ಆಗಲಾರದು. ಬಾಲಕ ಬಾಲಕಿಯರುಗಳಿಗೆ ಬೇರೆ ಬೇರೆ ಅಭಿರುಚಿಗಳೂ ಮತ್ತು ಆಸಕ್ತಿಗಳೂ ಇರುವುದರಿಂದ ಪ್ರತ್ಯೇಕವಾದ ಶಾಲೆಗಳೇ ಇರಬೇಕೆಂದು ಕೆಲವರು ವಾದಿಸುವರು. ಅಭಿರುಚಿಗಳೂ ಆಸಕ್ತಿಗಳೂ ಬೇರೆ ಬೇರೆಯಾಗಿರುವುವೇನೋ ನಿಜ. ಆದರೆ ಇದು ನಮಗೆ ಒಂದು ದೊಡ್ಡ ಸಮಸ್ಯೆಯಾಗಲಾರದು. ಏಕೆಂದರೆ ಒಂದೇ ಶಾಲೆಯಲ್ಲಿ ಭಿನ್ನ ರುಚಿಗಳಿಗೆ ಅನುಸಾರವಾಗಿ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಒದಗಿಸಿಕೊಡಬಹುದು. ಈಗಿರುವ ಪ್ರತ್ಯೇಕ ಶಾಲೆಗಳಲ್ಲಿಯೂ ಕೂಡ ನಾವು ಬಾಲಕ

ಬಾಲಕಿಯರ ಅಭಿರುಚಿಗಳಿಗನುಸಾರವಾಗಿ ಅನುಕೂಲಗಳನ್ನು ಕಲ್ಪಿಸಿಕೊಡಲು ಪ್ರಯತ್ನಮಾಡಿಲ್ಲವೆ? ಸಹ-ಶಿಕ್ಷಣ ಶಾಲೆಗಳಲ್ಲಿ ಶಾಲಾ ಅಧ್ಯಾಪಕರನ್ನು ನೇಮಿಸುವ ಸಮಸ್ಯೆಯು ಬಹಳ ತೊಂದರೆಯನ್ನು ಕೊಡುವುದೆಂದು ವಾದಿಸುವವರು ಕೆಲವರಿದ್ದಾರೆ. ಆದರೆ ಇದು ಪರಿಹರಿಸಲು ಅಸಾಧ್ಯವಾದ ಸಮಸ್ಯೆಯಲ್ಲ. ಏಕೆಂದರೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಶಾಲೆಗಳಲ್ಲಿಯೂ, ಮತ್ತು ನಮ್ಮ ದೇಶದ ಅನೇಕ ಪ್ರಾಥಮಿಕ ಶಾಲೆಗಳಲ್ಲಿಯೂ ಇರುವ ಹಾಗೆ ಸಹಶಿಕ್ಷಣಶಾಲೆಗಳಲ್ಲಿ ಕೆಲವು ಜನ ಗಂಡಸರನ್ನೂ ಮತ್ತೆ ಕೆಲವು ಜನ ಸ್ತ್ರೀಯರನ್ನೂ ಅಧ್ಯಾಪಕರನ್ನಾಗಿ ಮಾಡಬಹುದು.

ಸಹಶಿಕ್ಷಣದ ವಿರೋಧಿಗಳು ಅದರ ಮೇಲೆ ಹೊರಿಸುವ ಆಪಾದನೆಗಳಲ್ಲೆಲ್ಲಾ ಅತಿ ಮುಖ್ಯವಾದದ್ದು, ಬಾಲಕ ಬಾಲಕಿಯರ ನಡತೆಗೆ ಸಂಬಂಧಪಟ್ಟದ್ದು. ವಯಸ್ಸಾದ ಬಾಲಕ ಬಾಲಕಿಯರು ಯಾವಾಗಲೂ ಒಬ್ಬರ ಸಮೀಪದಲ್ಲಿ ಒಬ್ಬರಿದ್ದರೆ ಮನಸ್ಸು ವಿಕಲ್ಪಹೊಂದಿ ಕೆಟ್ಟ ನಡತೆಗೆ ಆಸ್ಪದವಾಗುತ್ತದೆಂದು ಅವರು ಹೇಳುವರು. ಪ್ರಾಥಮಿಕ ಶಾಲೆಗಳಲ್ಲಿ ಸಹಶಿಕ್ಷಣಕ್ಕೆ ಯಾರ ಅಭ್ಯಂತರವೂ ಇಲ್ಲ. ಅಲ್ಲಿರುವ ಮಕ್ಕಳೆಲ್ಲಾ ಅತಿ ಚಿಕ್ಕ ವಯಸ್ಸಿನವು. ವಿಶ್ವವಿದ್ಯಾನಿಲಯಗಳಲ್ಲಿ ಸಹಶಿಕ್ಷಣಕ್ಕೆ ಹೆಚ್ಚು ಅಭ್ಯಂತರವಿಲ್ಲ. ಏಕೆಂದರೆ ಬಾಲಕ ಬಾಲಕಿಯರು ವಿಶ್ವವಿದ್ಯಾನಿಲಯಕ್ಕೆ ಬರುವ ವೇಳೆಗೆ ಅವರು ಬುದ್ಧಿ ಬಲಿತವರಾಗಿ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತವರಾಗಿರುತ್ತಾರೆ. ಯಾವ ಕಾರ್ಯವನ್ನು ಮಾಡಬೇಕಾದರೂ ಆಲೋಚಿಸಿ ಮಾಡುವ ಶಕ್ತಿಯು ಬಂದಿರುತ್ತದೆ. ಆದರೆ ಮಾಧ್ಯಮಿಕ ಶಾಲೆಗಳಲ್ಲಿಯೂ, ಹೈಸ್ಕೂಲುಗಳಲ್ಲಿಯೂ ಇರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇನ್ನೂ ಚಿಕ್ಕ ವಯಸ್ಸಿನವರು. ಅನುಭವ ಸಾಲದವರು. ಆದುದರಿಂದ ಅವರು ದುರಾಲೋಚನೆಯಿಲ್ಲದೆ ದುಡುಕಿ ಮುಂದೆ ತಾವು ವ್ಯಸನಪಡಬಹುದಾದ ಕಾರ್ಯಗಳನ್ನು ಮಾಡಬಹುದು. ಈ ರೀತಿ ವಾದಿಸುವುದರಲ್ಲಿ ಬಹಳ ಮಟ್ಟಿನ ಸತ್ಯವಿದೆ. ಆದರೆ ಪ್ರತ್ಯೇಕ ಶಾಲೆಗಳಲ್ಲಿ ಆರೋಗ್ಯದೃಷ್ಟಿಯಿಂದಲೂ, ನೈತಿಕದೃಷ್ಟಿಯಿಂದಲೂ ಕೆಟ್ಟವೆನಿಸುವ ನಡತೆಗಳು ಇಲ್ಲವೇ ಇಲ್ಲವೆಂದು ಯಾರೂ ಹೇಳಲಾರರು. ಈ ದುರಭ್ಯಾಸಗಳು ಉಪಾಧ್ಯಾಯರಾದವರ ಗಮನಕ್ಕೆ ಆಗಾಗ್ಗೆ ಬರುತ್ತಲೇ ಇರುತ್ತವೆ. ಸಹಶಿಕ್ಷಣವು ಬಹಳವಾಗಿ ರೂಢಿಯಲ್ಲಿರುವ ಅಮೆರಿಕಾ ಸಂಯುಕ್ತಸಂಸ್ಥಾನದಲ್ಲಿ ಲೆಕ್ಕಾಚಾರ ಹಾಕಿ ನೋಡಿದರೆ ಕೆಟ್ಟನಡತೆಗೆ ಅವಕಾಶವನ್ನು ಕೊಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆಯು ಅತಿ ಚಿಕ್ಕದೆಂದು ನಮಗೆ ತಿಳಿಯುತ್ತದೆ. ಹಾಗೆ ನೋಡಿದರೆ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳಿರುವ ದೇಶಗಳಲ್ಲಿಯೂ ಕೂಡ ಆಗಾಗ್ಗೆ ಕೆಟ್ಟನಡತೆಯ ವರ್ತಮಾನವನ್ನು ನಾವು ಕೇಳುತ್ತಲೇ ಇರುತ್ತೇವೆ. ಕೆಟ್ಟನಡತೆಗೆ ಎಲ್ಲೆಲ್ಲಿಯೂ ಅವಕಾಶವುಂಟು. ಆ ಅವಕಾಶಗಳನ್ನು ಉಪಯೋಗಿಸುವುದು, ಉಪಯೋಗಿಸದೆ ಇರುವುದು ಆಯಾ ಬಾಲಕ ಬಾಲಕಿಯರ ಶೀಲ (Character)ದ ಮೇಲೆ ಹೋಗುತ್ತದೆ. ಶಾಲೆಯ ಅಧಿಕಾರಿಗಳು ಜಾಗರೂಕತೆಯಿಂದ ಸರಿಯಾದ ಏರ್ಪಾಡುಗಳನ್ನು ಮಾಡಿದರೆ ಸಹಶಿಕ್ಷಣ ಶಾಲೆಗಳಲ್ಲಿ ಯಾವ ಕೆಟ್ಟ ನಡತೆಗೂ ಅವಕಾಶವಿಲ್ಲದಂತೆ ಮಾಡಬಹುದು.

ಸ್ತ್ರೀಯರು ಬಹಳ ಮುಂದುವರಿದು ಪುರುಷರ ಜೊತೆಯಲ್ಲಿ ಸೇರಿ ಸಮಾಜಸೇವೆಯನ್ನು ನಾನಾವಿಧಗಳಲ್ಲಿ ಸಲ್ಲಿಸುತ್ತಿರುವ ಪಾಶ್ಚಾತ್ಯ ದೇಶಗಳಲ್ಲಿಯೇ ಈರೀತಿ ಭಿನ್ನಾಭಿಪ್ರಾಯಗಳು ಇರುವಾಗ ನಮ್ಮ ದೇಶದಲ್ಲಿ ಪ್ರಜಾಭಿಪ್ರಾಯವು ಸಹಶಿಕ್ಷಣಕ್ಕೆ ವಿರೋಧವಾಗಿರುವುದು ಆಶ್ಚರ್ಯಕರವಾದ ವಿಷಯವೇನೂ ಅಲ್ಲ. ಈ ಸಂದರ್ಭದಲ್ಲಿ ಸಹಶಿಕ್ಷಣವು ಈಗಿರುವಷ್ಟುಮಟ್ಟಿಗಾದರೂ ನಮ್ಮ ದೇಶದಲ್ಲಿರುವುದೇ ಆಶ್ಚರ್ಯ. ನಮ್ಮ ದೇಶದಲ್ಲಿ ಸಾಮಾಜಿಕ [illegible] ಸ್ಥಿತಿಯು ಬದಲಾವಣೆಹೊಂದಿ ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯವು ಸಿಕ್ಕುವವರೆಗೂ ಸಹಶಿಕ್ಷಣದ ವಿಷಯದಲ್ಲಿ ಜನಾಭಿಪ್ರಾಯವು ಬದಲಾಯಿಸುತ್ತದೆಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಸ್ತ್ರೀಯರ ವಿಷಯದಲ್ಲಿ ಪುರುಷರಿಗಿರುವ ಮನೋವೃತ್ತಿಯನ್ನು ಬದಲಾಯಿಸಿ, ಸ್ತ್ರೀಯರನ್ನು ಪ್ರತ್ಯೇಕಿಸಿ ಸಮಾಜದಲ್ಲಿ ಅವರಿಗೆ ಕೀಳಾದ ಸ್ಥಾನವನ್ನು ಕೊಡುವ ಪದ್ಧತಿಯನ್ನು ಹೋಗಲಾಡಿಸಿ, ಸಹಶಿಕ್ಷಣದ ವಿಷಯದಲ್ಲಿ ಪ್ರಜಾಭಿಪ್ರಾಯವನ್ನು ಸರಿಯಾಗಿ ತಿದ್ದಿ, ಸಹಶಿಕ್ಷಣವು ಇನ್ನೂ ಹೆಚ್ಚಾಗಿ ರೂಢಿಗೆ ಬರುವಂತೆ ಮಾಡುವುದು ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳ ಮತ್ತು ನಮ್ಮ ಮಾತೃಭೂಮಿಯ ಹಿತವನ್ನು ಬಯಸುವ ನಮ್ಮೆಲ್ಲರ ಕರ್ತವ್ಯವಾಗಿದೆ.

ಗುರುಕುಲ ಶಿಕ್ಷಣ

ವೇದಕಾಲದಿಂದಲೂ ಗುಣ-ಕಾರ್ಯಗಳ ಮೇಲೆ ಆಧೃತವಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ವಿಭಾಗಗಳಿದ್ದವು. ಅವರವರ ಗುಣ-ಕಾರ್ಯಗಳಿಗೆ ತಕ್ಕಂತೆ ಪ್ರತಿಯೊಬ್ಬರಿಗೂ ಶಿಕ್ಷಣವು ಕೊಡಲ್ಪಡುತ್ತಿತ್ತು. ವಿವೇಚನೆಗೆ ಅನುಕೂಲವಾಗಲೆಂದು ಶಿಕ್ಷಣದ ಇತಿಹಾಸವನ್ನು ವೇದಕಾಲ, ಇತಿಹಾಸಕಾಲ, ಸೂತ್ರಕಾಲ, ಪುರಾಣಕಾಲ ಎಂದು ವಿಭಾಗಿಸಿ ಆಯಾ ಕಾಲದಲ್ಲಿ ಪ್ರತಿಯೊಂದು ಪಂಗಡದವರಿಗೆ ಎಂತಹ ಶಿಕ್ಷಣವನ್ನು ಕೊಡಲಾಗುತ್ತಿತ್ತು ಎಂಬುದನ್ನು ಇಲ್ಲಿ ವರ್ಣಿಸಿದೆ.

ಲೇಖಕರು:—ಶ್ರೀಮಾನ್ ಎಸ್. ಆರ್. ದಿಡ್ಡಿ ಬಿ. ಎಸ್‌ಸಿ., ಬಿ. ಟಿ., ಹಾವೇರಿ

ವೇದಕಾಲದ ಆರ್ಯರಲ್ಲಿ ಜಾತಿಬಂಧನಗಳು ಇರಲಿಲ್ಲ. ಈಗಿನಂತೆ ಬ್ರಾಹ್ಮಣನ ಮಗ ಬ್ರಾಹ್ಮಣ ಎಂಬ ಭಾವನೆ ಆಗ ಇರಲಿಲ್ಲ. ವೇದಮಂತ್ರಗಳನ್ನು ರಚಿಸುವವನೇ ಬ್ರಾಹ್ಮಣ, ಯುದ್ಧಮಾಡುವವನೇ ಕ್ಷತ್ರಿಯ, ಉದ್ಯೋಗಮಾಡುವವನೇ ವೈಶ್ಯ ಎಂದು ಗುರುತಿಸುತ್ತಿದ್ದರು. ಆದುದರಿಂದ ಒಂದೇ ಕುಟುಂಬದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮೂವರೂ ಇರುವ ಸಂಭವವಿತ್ತು. ಮೂವರ ಶಿಕ್ಷಣದ ಉದ್ದೇಶವೂ ಒಂದೆ; ಎಂದರೆ ಆಧ್ಯಾತ್ಮಿಕ ಪ್ರಗತಿ. ಆದರೆ ಲೌಕಿಕ ಜೀವನವು ಅಲಕ್ಷಿಸಲ್ಪಡುತ್ತಿರಲಿಲ್ಲ. ಆದುದರಿಂದ ಸ್ವಭಾವಸಂವರ್ಧನವೂ, ಉಪಯುಕ್ತತೆಯೂ ಆಗಿನ ಶಿಕ್ಷಣದ ಧ್ಯೇಯಗಳಲ್ಲಿ ಸಮಾವಿಷ್ಟವಾಗಿದ್ದವು. ಗುರುಕುಲಗಳೇ ಆಗಿನ ಶಿಕ್ಷಣಸಂಸ್ಥೆಗಳಾಗಿದ್ದವು. ಅಲ್ಲಿ ಪರಾಪರ ವಿದ್ಯೆಗಳೆರಡೂ ಕೊಡಲ್ಪಡುತ್ತಿದ್ದವು. ಗುರುಕುಲಗಳು ಪುರಾಣಕಾಲದ ವರೆಗೂ ನಡೆದುಬಂದವಾದರೂ ಅವುಗಳ ಶಿಕ್ಷಣಪ್ರಣಾಲಿಯಲ್ಲಿ ಕಾಲಕ್ರಮೇಣ ವ್ಯತ್ಯಾಸವಾಗುತ್ತ ಬಂತು.

ವೇದಕಾಲ

(ಕ್ರಿ. ಪೂ. ೩೦೦೦ ವರ್ಷಗಳ ಹಿಂದಿನ ಕಾಲ)

ವೇದಕಾಲದಲ್ಲಿ ಬ್ರಾಹ್ಮಣರ ಮಕ್ಕಳು ಚಿಕ್ಕಂದಿನಲ್ಲಿ ತಮ್ಮ ತಂದೆಯಿಂದಲೆ ಶಿಕ್ಷಣವನ್ನು ಪಡೆಯುತ್ತಿದ್ದರು. ಅವರು ವೇದಗಳನ್ನು ಹಾಡುತ್ತಿದ್ದರು. ಅವುಗಳ ಅರ್ಥ ತಿಳಿದುಕೊಳ್ಳುತ್ತಿದ್ದರೋ ಇಲ್ಲವೋ ಎಂಬುದು ತಿಳಿಯದು. ಆ ಕಾಲದಲ್ಲಿ ಸಂಸ್ಕೃತವೆ ಬಹುಶಃ ವ್ಯಾವಹಾರಿಕ ಭಾಷೆಯಾಗಿದ್ದುದರಿಂದ ಅವರಿಗೆ ಸುಲಭವಾಗಿ ತಿಳಿಯುತ್ತಿರಬಹುದು. ಆಗಿನ್ನೂ ಲಿಪಿಯು ಹುಟ್ಟಿರಲಿಲ್ಲ. ವಿದ್ವತ್ಸಭೆಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಉತ್ತೀರ್ಣರಾದವರಿಗೆ ಅಧ್ಯಾಪನದ ಅಧಿಕಾರವನ್ನು ಕೊಡುತ್ತಿದ್ದರು. ನದೀತೀರದ ಗುಡಿಸಲುಗಳಲ್ಲಿ ಗುರುಗಳೊಡನೆ ವಾಸಿಸುತ್ತಿದ್ದುದರಿಂದ ವಿದ್ಯಾರ್ಥಿಗಳ ಜೀವನವು ಹೆಚ್ಚು ನೈಸರ್ಗಿಕವಾಗಿತ್ತು. ಗುರುವು ಹತ್ತರದ ಹೊಲಗಳಲ್ಲಿ ಶಿಷ್ಯರೊಡನೆ ದುಡಿಯುತ್ತಿದ್ದನು.

ವೇದಕಾಲದಲ್ಲಿ ಕ್ಷತ್ರಿಯವೃತ್ತಿಯವರಿಗೆ ಪ್ರತ್ಯಕ್ಷವಾಗಿ ಯಾವ ಶಿಕ್ಷಣವೂ ಕೊಡಲ್ಪಡುತ್ತಿರಲಿಲ್ಲ. ಅವರಿಗಿದ್ದ ಅಲ್ಪಸ್ವಲ್ಪ ಜ್ಞಾನವು ಅನುಕರಣದಿಂದ ಬಂದುದು. ವೈಶ್ಯವೃತ್ತಿಯಲ್ಲಿದ್ದವರಿಗೂ ಪ್ರತ್ಯಕ್ಷ ಶಿಕ್ಷಣದ ಏರ್ಪಾಡಿರಲಿಲ್ಲ; ಅನುಕರಣದಿಂದಲೂ ಬ್ರಾಹ್ಮಣರ ಸಹವಾಸದಿಂದಲೂ ತುಸು ಶಿಕ್ಷಣವನ್ನು ಅವರು ಸಂಪಾದಿಸಿದರು.


ಪುರಾಣಕಾಲ

(ಕ್ರಿ. ಪೂ. ೩೦೦೦ರಿಂದ ೧೦೦೦ದ ವರೆಗೆ)

ಈ ಕಾಲದಲ್ಲಿ ಬ್ರಾಹ್ಮಣ ಬಾಲಕನು ವಿದ್ಯಾರ್ಜನೆಯ ಪೂರ್ವದಲ್ಲಿ ಉಪನಯನಸಂಸ್ಕಾರವನ್ನು ಹೊಂದಬೇಕೆಂಬ ನಿಯಮವು ರೂಢಿಗೆ ಬಂತು. 'ಉಪನಯನ'ವೆಂದರೆ ಬಾಲಕನನ್ನು ವಿದ್ಯಾರ್ಜನೆಗಾಗಿ ಗುರುವಿನ 'ಸನ್ನಿಧಿಗೆ ಒಯ್ಯುವದು' ಎಂದರ್ಥ. ಉಪನಯನವಾದನಂತರ ಹುಡುಗನು ಗುರುವಿನೊಡನೆ ವಾಸಿಸಿ ಬೇಕಾದ ವಿಷಯಗಳನ್ನು ಕಲಿಯುತ್ತಿದ್ದನು. ವಿದ್ಯಾರ್ಥಿಗಳು ತಮಗೆ ಇಷ್ಟವಾದ ವಿಷಯಗಳಲ್ಲಿ ತಜ್ಞನಾದ ಗುರುವನ್ನು ಹುಡುಕಿಕೊಂಡು ಹೋಗುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗ 'ಮಾಧುಕರೀ' ವೃತ್ತಿಯಿಂದ ತಮ್ಮ ಮತ್ತು ಗುರುಗಳ ಉಪಜೀವಿಕೆಯನ್ನು ವಿದ್ಯಾರ್ಥಿಗಳೆ ಸಾಗಿಸಬೇಕಾಗಿತ್ತು. ಈಗಾಗಲೆ ವೈದಿಕ ಸಾಹಿತ್ಯವು ಬಹಳ ಬೆಳೆದಿದ್ದುದರಿಂದ ಅವರಲ್ಲಿಯ ಕೆಲವೇ ವಿಷಯಗಳಲ್ಲಿ ಪಾರಂಗತರಾಗಲು

ವಿದ್ಯಾರ್ಥಿಗಳು ಯತ್ನಿಸುತ್ತಿದ್ದರು. ಆದರೂ ವಿದ್ಯೆಯ ಮುಖ್ಯಗುರಿಯು ಯಜ್ಞಯಾಗಗಳನ್ನು ನೆರವೇರಿಸುವದೆ ಆಗಿತ್ತು.

ಮಹಾಭಾರತಕಾಲದಲ್ಲಿ ಗುರುಕುಲ ಸಂಸ್ಥೆಗಳು ಬಹಳ ಊರ್ಜಿತಾವಸ್ಥೆಗೇರಿದ್ದವು. ಕಣ್ವಋಷಿಯ ವಿಶ್ವವಿದ್ಯಾಲಯದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳಿದ್ದರೆಂಬ ಉಲ್ಲೇಖಗಳಿವೆ. ವಿದ್ಯಾಸಂಸ್ಥೆಗಳು ಪೂರ್ಣವಾಗಿ ಗುರುಗಳ ಆಡಳಿತಕ್ಕೇ ಸೇರಿದ್ದವು. ಆದುದರಿಂದ ಅಭ್ಯಾಸಕ್ರಮವು ಗುರುಗಳಿಗೆ ಅಧೀನವಾಗಿತ್ತು. ರಾಜರಿಗೆ ಗುರುಕುಲಗಳ ಮೇಲೆ ಅಧಿಕಾರವಿರಲಿಲ್ಲ. ಯಜ್ಞಕಾಲಗಳಲ್ಲಿ ಗುರುಸಮುದಾಯದ ಸಭೆ ಸೇರಿ ಶಿಕ್ಷಣಕ್ರಮ ಸುಧಾರಣೆಗಳನ್ನು ಚರ್ಚಿಸಲಾಗುತ್ತಿತ್ತು.



ಲೇಖಕರು

ಕ್ಷತ್ರಿಯರೂ ವೈಶ್ಯರೂ ಉಪನೀತರಾಗಲೇಬೇಕೆಂಬ ನಿಯಮವಿತ್ತಾದುದರಿಂದ ಶಿಕ್ಷಣವೂ ಎಲ್ಲರಿಗೆ ಅನಿವಾರ್ಯವಾಗಿತ್ತೆಂದು ತೋರುತ್ತದೆ. ರಾಜಕುಮಾರರೂ ಗುರುಕುಲದಲ್ಲಿ ವಾಸಿಸಿ ಶ್ರಮದ ಕೆಲಸಗಳನ್ನು ಮಾಡಿ ವಿದ್ಯಾರ್ಜನೆ ಮಾಡುತ್ತಿದ್ದರು. ಆದರೆ ಬರುಬರುತ್ತ ಗುರುಗಳಿಗೆ ರಾಜಗೃಹದಲ್ಲಿ ನೆಲಸಿ ಶಿಕ್ಷಣವನ್ನು ಕೊಡುವದು ಪರಿಪಾಠವಾಯಿತು. ಕ್ಷತ್ರಿಯರಿಗೆ ಮೊದಲು ಋಗ್ವೇದದ ಕೆಲವು ಭಾಗಗಳನ್ನು ಹೇಳಿಕೊಟ್ಟು 'ಧನುರ್ವೇದ' ಮುಂತಾದ ಕ್ಷಾತ್ರವಿದ್ಯೆಗಳನ್ನು ಕಲಿಸಲಾಗುತ್ತಿತ್ತು.

ವೈಶ್ಯರೂ ಮೊದಲು ವೈದಿಕಸಾಹಿತ್ಯದ ಸಂಕ್ಷಿಪ್ತ ಜ್ಞಾನವನ್ನು ಹೊಂದಿ ನಂತರ ತಮ್ಮ ವ್ಯವಸಾಯಕ್ಕೆ ಉಪಯುಕ್ತವಾದ 'ವಸ್ತುವೇದ'ದ ಅಧ್ಯಯನ ಮಾಡುತ್ತಿದ್ದರು

ಸೂತ್ರಕಾಲ

(ಕ್ರಿ. ಪೂ. ೧೦೦೦ ವರ್ಷ)

ಈ ಕಾಲದಲ್ಲಿ ಬ್ರಾಹ್ಮಣನ ಉಪನಯನವು ೭ ನೆಯ ವರ್ಷಕ್ಕೆ ಆಗುತ್ತಿತ್ತು. ಉಪನೀತನಿಗೆ ಆಹಾರ, ವಿಹಾರ, ನಿದ್ರೆ, ಅಭ್ಯಾಸ, ಗುರುಸೇವೆಗಳ ವಿಷಯಕ್ಕೆ ಕೊಡಲ್ಪಡುತ್ತಿದ್ದ ಉಪದೇಶಗಳು ಮನುಸ್ಮೃತಿಯಲ್ಲಿ ವಿವರವಾಗಿ ಬಂದಿವೆ. ಈ ಕಾಲದಲ್ಲಿ ವೇದಗಳಲ್ಲದೆ ವೇದಾಂಗಗಳೆಂಬ ಹೆಸರಿನಲ್ಲಿ ಅನೇಕ ಲೌಕಿಕ ವಿಷಯಗಳೂ ಕಲಿಸಲ್ಪಡುತ್ತಿದ್ದವು. ಅಧ್ಯಾಪನ ಅಧ್ಯಯನಗಳು ಧಾರ್ಮಿಕ ಕಾರ್ಯಗಳಾದವು. ರಾಜರು ವಿದ್ಯಾಸಂಸ್ಥೆಗಳಲ್ಲಿ ಕೈಹಾಕಹತ್ತಿದರು. ಗುರುಶಿಷ್ಯರು ಕರ್ತವ್ಯಭ್ರಷ್ಟರಾದರೆ ಅವರನ್ನು ಶಿಕ್ಷಿಸುವ ಅಧಿಕಾರವನ್ನು ರಾಜರು ಕೈಕೊಂಡರು. ಶಿಷ್ಯನ ಅಪರಾಧಕ್ಕೆ ಹೊಡೆತ, ಉಪವಾಸಗಳು ಶಿಕ್ಷೆಯಾಗಿದ್ದವು. ಗುರುವಿನ ಅಪರಾಧಕ್ಕೆ ಪಾತಬಹಿಷ್ಕಾರವು ಶಿಕ್ಷೆಯಾಗಿತ್ತು.

ಕ್ಷತ್ರಿಯನಿಗೆ ೧೧ನೆಯವರ್ಷಕ್ಕೆ ಉಪನಯನವಾಗುತ್ತಿತ್ತು. ೧೧ ರಿಂದ ೧೬ ನೆಯ ವರ್ಷದವರೆಗೆ ವೇದ ಮತ್ತು ಧನುರ್ವೇದಗಳನ್ನು ಅಭ್ಯಸಿಸಿ ಸಂತರ ಮದುವೆಯಾಗುತ್ತಿದ್ದರು. ಕ್ರಿ. ಪೂ. ೩೦೦ರ ಸುಮಾರಿಗೆ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಕ್ಷತ್ರಿಯರು ವಾಣಿಜ್ಯ, ದಂಡನೀತಿ, ರಾಜನೀತಿ, ತರ್ಕ, ತತ್ವಜ್ಞಾನಗಳನ್ನೂ ಅಭ್ಯಸಿಸಬೇಕು' ಎಂದು ವಿಧಿಸಿದೆ. ಬೇರೆ ಯುದ್ಧಕಲೆಯೂ ಮಧ್ಯಾಸ್ತ ಬೌದ್ಧಿಕವಿದ್ಯೆಯೂ ಕಲಿಸಲ್ಪಡುತ್ತಿದ್ದವು.

ವೈಶ್ಯನ ಉಪನಯನವು ೧೨ ನೆಯ ವರ್ಷಕ್ಕೆ ಆಗುತ್ತಿತ್ತಾದರೂ ಅವನು ಗುರುಕುಲದಲ್ಲಿ ವಿಶೇಷವಾಗಿ ಇರುತ್ತಿದ್ದಿಲ್ಲ. ಬಾಲ್ಯದಿಂದಲೆ ತಂದೆಯೊಡನಿದ್ದು ತನ್ನ ವ್ಯವಸಾಯದ ಜ್ಞಾನವನ್ನು ಸಂಪಾದಿಸುತ್ತಿದ್ದನು. 'ವಾಣಿಜ್ಯ, ಭೂಗೋಲ, ನಾಣ್ಯಗಳು, ಆಯವ್ಯಯ, ತೂಕ ಅಳತೆ, ಸಾಗುವಳಿ ಮುಂತಾದ ವಿಷಯಗಳನ್ನು ವೈಶ್ಯನು ತಿಳಿದುಕೊಳ್ಳಬೇಕು' ಎಂದು ಮನುವು ಹೇಳಿದ್ದಾನೆ.

ಇತಿಹಾಸಕಾಲ

(ಕ್ರಿಸ್ತಾರಂಭದ ೧೦೦೦ ವರ್ಷಗಳು)

ಈ ಕಾಲದಲ್ಲಿ ಉಪನಯನವು ಬರಿ ನಾಮಮಾತ್ರವಾಯಿತು. ವಿದ್ಯಾರ್ಥಿಗಳು ಗುರುಗೃಹದಲ್ಲಿ ವಾಸಿಸು

ವನ್ನು ಬಿಟ್ಟರು. ಮನೆಯಲ್ಲಿದ್ದು ವಿದ್ಯಾರ್ಜನೆಗಾಗಿ ಮಾತ್ರ ಗುರುಗಳ ಮನೆಗೆ ಹೋಗಹತ್ತಿದರು. ಈ ಕಾಲದಲ್ಲಿ ವೈದಿಕ ಮತ್ತು ಬೌದ್ಧಧರ್ಮಗಳ ಸೆಣಸಾಟವಾರಂಭವಾಯಿತು. ವೈದಿಕ ಶಾಲೆಗಳಲ್ಲಿ ಸಂಸ್ಕೃತಕ್ಕೂ ಬೌದ್ಧ ವಿದ್ಯಾಸಂಸ್ಥೆಗಳಲ್ಲಿ ಪ್ರಾಕೃತಕ್ಕೂ (ಮುಖ್ಯವಾಗಿ ಪಾಲಿಗೂ) ಪ್ರಾಮುಖ್ಯ ದೊರಕಿತು. ಸ್ಪರ್ಧೆಗಾಗಿ ಎರಡೂ ವಿದ್ಯಾಸಂಸ್ಥೆಗಳಲ್ಲಿಯೂ ಎರಡೂ ಧರ್ಮಗಳ ವಿಷಯಕ್ಕೆ ಸಾಕಷ್ಟು ಜ್ಞಾನವನ್ನು ಕೊಡುವ ವ್ಯವಸ್ಥೆಯಾಗಿತ್ತು. ಈ ಕಾಲದಲ್ಲಿಯೆ ಲಿಪಿಯು ವಿಶೇಷವಾಗಿ ಪ್ರಚಾರದಲ್ಲಿ ಬಂದಿತು. ಇಂತಹ ಮಾರ್ಮಿಕ ಸಮಯದಲ್ಲಿ ವೇದಾಧ್ಯಯನವು ಕೊಂಚ ಹಿಂದೆ ಬಿದ್ದದು ಸಹಜ. ಲೌಕಿಕ ಸಾಹಿತ್ಯವು ಈ ಕಾಲದಲ್ಲಿ ವಿಶೇಷವಾಗಿ ರಚಿಸಲ್ಪಟ್ಟಿತು. ರಸಾಯನಶಾಸ್ತ್ರ, ಆಯುರ್ವೇದ, ಶಸ್ತ್ರಚಿಕಿತ್ಸಾಶಾಸ್ತ್ರಗಳ ವಿಷಯದಲ್ಲಿ ಅನೇಕ ಗ್ರಂಥಗಳು ರಚಿಸಲ್ಪಟ್ಟವದರಿಂದ ಆಗಿನ ಶಿಕ್ಷಣಸಂಸ್ಥೆಗಳಲ್ಲಿ ಈ ಎಲ್ಲ ವಿಷಯಗಳೂ ಸಮಾವಿಷ್ಟವಾಗಿದ್ದವೆಂದು ವ್ಯಕ್ತವಾಗುವದು.

ಈ ಕಾಲದಲ್ಲಿ ವಿಶಿಷ್ಟವಾಗಿ ಕ್ಷತ್ರಿಯರಿಗೆ ಬೇರೆ ಶಿಕ್ಷಣದ ವ್ಯವಸ್ಥೆಯೇನೂ ಇರಲಿಲ್ಲ. ಆಗಿನ ಶಿಕ್ಷಣದೊಳಗಿನ ಪ್ರಬೋಧ, ವಿಕಾಸ, ವಿನಯ ಎಂಬ ಶಬ್ದಗಳಿಂದ ಶಿಕ್ಷಣವು ಬರಿ ಧರ್ಮವನ್ನ ನುಸರಿಸದೆ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಒಳಗೊಂಡಿತ್ತೆಂದು ವ್ಯಕ್ತವಾಗುವದು. ಆದರೆ ಬೌದ್ಧಧರ್ಮದ ಪ್ರಭಾವದಿಂದ ಕ್ಷತ್ರಿಯ ರನೇಕರು 'ಅಹಿಂಸೆ'ಯ ಉಪಾಸಕರಾದುದರಿಂದ ಯುದ್ಧ ಕಲೆಯ ಶಿಕ್ಷಣವು ಈ ಕಾಲದಲ್ಲಿ ನಿರ್ನಾಮವಾಯಿತು.

ವೈಶ್ಯರು ಗುರುಕುಲಗಳಿಗೆ ಹೋಗುವದನ್ನೆ ನಿಲ್ಲಿಸಿದರು. ವ್ಯವಸಾಯಕ್ಕೆ ಪ್ರಾಕೃತಭಾಷೆಗಳು ಉಪಯುಕ್ತವಾದುದರಿಂದ ಅವನ್ನು ಅವರು ಕಲಿಯುತ್ತಿದ್ದರು. ಮತ್ತು ಲೆಕ್ಕಪತ್ರಗಳ ತಿಳುವಳಿಕೆಗಾಗಿ ಛತ್ರ ದೇವಾಲಯಗಳಲ್ಲಿ ಪ್ರಾಕೃತ ಭಾಷೆಗಳಲ್ಲಿ ಕೊಡಲ್ಪಡುತ್ತಿದ್ದ ವಿದ್ಯೆಯನ್ನು ವೈಶ್ಯರು ಸಂಪಾದಿಸಹತ್ತಿದ್ದರು. ಪ್ರತಿಯೊಂದನ್ನೂ ಕಂಠಪಾಠ ಮಾಡುವದೆ ಆಗಿನ ಶಿಕ್ಷಣದ ಪದ್ಧತಿಯಾಗಿತ್ತು. ಶಿಕ್ಷಕರು ಸಾಕಷ್ಟು ಜ್ಞಾನಿಗಳಾಗಿರುತ್ತಿರಲಿಲ್ಲ; ಶಿಷ್ಯರು ಗುರುಗಳಿಗೆ ಗೌರವವನ್ನು ಕೊಡುತ್ತಿರಲಿಲ್ಲ. ಆದುದರಿಂದ ವರ್ಗದಲ್ಲಿ ಹಲವು ವಿಧದ ಕ್ರೂರಶಿಕ್ಷೆಗಳನ್ನೂ ಗುರುಗಳು ಶಿಷ್ಯರಿಗೆ ಕೊಡುತ್ತಿದ್ದರು.

ಈ ಗತಿಗೆಟ್ಟ ಶಾಲೆಗಳನ್ನೆ ಉದಾಹರಿಸಿ ಅನೇಕ ಲೇಖಕರು ಭಾರತೀಯ ಪ್ರಾಚೀನ ಶಿಕ್ಷಣದ ಮೇಲೆ ಟೀಕಾಸ್ತ್ರಗಳನ್ನು ಬಿಟ್ಟಿದ್ದಾರೆ. ಆದೇ ಸಮಯಕ್ಕೆ ಪ್ರಚಾರದಲ್ಲಿದ್ದ ಸಂಸ್ಕೃತ ಪಾಠಶಾಲೆಗಳಲ್ಲಿಯ ಉಚ್ಚಶಿಕ್ಷಣದ ವಿಷಯಕ್ಕೆ ಅವರು ಒಂದಾದರೂ ಪ್ರಶಂಸೆಯ ಮಾತನ್ನು ಆಡಿಲ್ಲ. ಆ ವಿಷಯದಲ್ಲಿ ಅವರು ಅಜ್ಞಾನಿಗಳಾಗಿರಲೂ ಸಾಕು. ಅಲ್ಲಿಯ ಶಿಕ್ಷಣವು ಬಹಳ ಮೇಲಿನ ತರಗತಿಯದಾಗಿತ್ತು. ಗುರುಗಳು ಧರ್ಮಮೂರ್ತಿಗಳಾಗಿದ್ದರು; ಶಿಷ್ಯರಿಗೆ ಆದರ್ಶಪ್ರಾಯರಾಗಿದ್ದರು. ಗ್ರಾಮಸ್ಥರು ಇಂತಹ ವಿದ್ಯಾಸಂಸ್ಥೆಗಳಿಗೆ ಕೊಟ್ಟ ಹೊಲ ತೋಟಗಳ ಮೂಲಕವೆ ಆ ಗುರುಗಳ ಉಪಜೀವಿಕೆ. ಗುರುಗಳ, ವಿದ್ಯೆಯ ಮತ್ತು ಧರ್ಮದ ವಿಷಯಕ್ಕೆ ಭಕ್ತಿಯನ್ನು ಹುಟ್ಟಿಸುವಂತಹ ವಾತಾವರಣವೆ ಆ ಪಾಠಶಾಲೆಗಳಲ್ಲಿರುತ್ತಿತ್ತು.

ಈ ಕಾಲದಲ್ಲಿ ಶಿಕ್ಷಣವು ಅನಿವಾರ್ಯವಾಗಿರದ್ದರಿಂದ ಅನೇಕ ಕ್ಷತ್ರಿಯರೂ ವೈಶ್ಯರೂ ಅಶಿಕ್ಷಿತರಾಗಿ ಉಳಿದರು. ಆದರೂ ಪ್ರೌಢ ಶಿಕ್ಷಣಸಂಸ್ಥೆಗಳಲ್ಲಿ ೬೪ ವಿಧದ ಕಲೆಗಳನ್ನು ಕಲಿಸುವದು ಪ್ರಚಾರದಲ್ಲಿದ್ದಿತು. ಈ ಕಾಲದಲ್ಲಿ ಕಾವ್ಯ, ಚಿತ್ರ, ಶಿಲ್ಪ, ಲಲಿತಕಲೆ ಬಹು ಉಜ್ಜ್ವಲದರ್ಜೆಗೇರಿದವು.

ಸ್ತ್ರೀಯರು

ವೇದಕಾಲದಲ್ಲಿ ಸ್ತ್ರೀಯರು ಪುರುಷರಷ್ಟೆ ವಿದ್ಯಾವತಿಯರಾಗಿರುತ್ತಿದ್ದರು. ವಿದ್ವತ್ ಸಭೆಗಳಲ್ಲಿ ಅವರು ಪಾಲುಗೊಳ್ಳುತ್ತಿದ್ದರಲ್ಲದೆ ವೇದಸೂಕ್ತಗಳನ್ನೂ ಅವರು ರಚಿಸಿದ್ದಾರೆ. ಆದರೆ ಸೂತ್ರಕಾಲದಲ್ಲಿ ಸ್ತ್ರೀಯರು ವಿದ್ಯೆಗೆ ಅನರ್ಹರೆಂದು ನಿರ್ಧರಿಸಲಾಯಿತು. ಗುರುಕುಲವು ಪ್ರಚಾರದಲ್ಲಿದ್ದಾಗ ಸ್ತ್ರೀಯರು ಶ್ರವಣದಿಂದ ಕಲಿಯುತ್ತಿದ್ದರು. ಗುರುಗಳು ಸಂಚಾರಕ್ಕೆ ಹೋದಾಗ ಬ್ರಾಹ್ಮಣ ಸ್ತ್ರೀಯರು ಶಿಷ್ಯರಿಗೆ ಪಾಠಹೇಳುವಷ್ಟು ಜ್ಞಾನಿಗಳಾಗಿದ್ದರು. ಬರುಬರುತ್ತ ಕ್ಷತ್ರಿಯ ಹಾಗು ವೈಶ್ಯ ಸ್ತ್ರೀಯರು ಅಶಿಕ್ಷಿತರಾಗಿಯೆ ಉಳಿದರು. ರಾಜಮಹಾರಾಜರ, ಸಿರಿವಂತರ ಮನೆಯವರ ಸ್ತ್ರೀಯರ ಶಿಕ್ಷಣಕ್ಕಾಗಿ ಶಿಕ್ಷಕರನ್ನು ನಿಯೋಜಿಸುತ್ತಿದ್ದರು.

ಲೇಖಕರು ೧೯೩೬ರಿಂದ ಹಾವೇರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಶಾಸ್ತ್ರೀಯ ಮತ್ತು ಗಣಿತವಿಷಯಗಳ ಮುಖ್ಯ ಅಧ್ಯಾಪಕರಾಗಿದ್ದಾರೆ. ೧೯೪೪ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಬಿ.ಟಿ. ಪರೀಕ್ಷೆಯನ್ನು ಪಾಸಾದರು. ಅಂದಿನಿಂದ ಇವರು ಶಿಕ್ಷಣದ ಮೇಲೆ ಹಲವು ಲೇಖನಗಳನ್ನು ಬರೆದಿದ್ದಾರೆ. ಶಿಕ್ಷಣಪದ್ಧತಿಯಲ್ಲಿ ಹೊಸ ಪದ್ಧತಿಗಳನ್ನು ಕಂಡುಹಿಡಿದು ಅವುಗಳನ್ನು ವರ್ಗದಲ್ಲಿ ಪರಿಶೀಲಿಸಿ ನೋಡಿರುವರು. ಇವರ ಲೇಖನಗಳ ಸಲುವಾಗಿ J. E. Parkinson, Educational Commissioner with the Government of India ಮತ್ತು ರಾಜಮಹೇಂದ್ರಿಯ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಉತ್ತಮ ಅಭಿಪ್ರಾಯ ಕೊಟ್ಟಿದ್ದಾರೆ.

ಪ್ರಾಚೀನ ವಿದ್ಯಾಭ್ಯಾಸಕ್ರಮದ ಒಂದು ಚಿತ್ರ

ಲೇಖಕರು: ಶ್ರೀ. ಜಿ. ಪಿ. ರಾಜರತ್ನಂ ಎಂ. ಎ., ಇಂಟರಮೀಡಿಯೆಟ್ ಕಾಲೇಜು, ಮೈಸೂರು

ಹಿಂದೆ, ವಾರಣಾಸಿಯಲ್ಲಿ ರಾಜ್ಯವಾಳುತ್ತಿದ್ದ ಬ್ರಹ್ಮದತ್ತನಿಗೆ ಬ್ರಹ್ಮದತ್ತಕುಮಾರನೆಂಬ ಮಗನಿದ್ದನು.

ಹಿಂದಿನ ಕಾಲದ ರಾಜರು "ಈ ರೀತಿಯಲ್ಲಿ ಇವರ ಮಾನದರ್ಪಗಳು ಅಡಗುವುವು. ಇವರು ಶೀತೋಷ್ಣಗಳನ್ನು ಸಹಿಸುವರು. ಇವರು ಲೋಕದ ರೀತಿಯನ್ನು ತಿಳಿಯುವರು" ಎಂದು, ತಮ್ಮ ನಗರದಲ್ಲಿ ದಿಗಂತಕೀರ್ತಿಯಾದ ಆಚಾರ್ಯನಿದ್ದರೂ ತಮ್ಮ ಮಕ್ಕಳನ್ನು ಶಿಲ್ಪ ಕಲಿಯುವುದಕ್ಕಾಗಿ ದೂರದ ಆಚೆ ರಾಷ್ಟ್ರಕ್ಕೆ ಕಳುಹಿಸುತ್ತಿದ್ದರು.

ಆದ್ದರಿಂದ, ಬ್ರಹ್ಮದತ್ತರಾಜನು ಕೂಡ ತನ್ನ ಹದಿನಾರು ವರ್ಷದ ಮಗನನ್ನು ಕರೆಕಳುಹಿ, ಒಂದುಪದರದ ಮೆಟ್ಟನ್ನೂ ಪರ್ಣಛತ್ರವನ್ನೂ ಸಾವಿರ ನಾಣ್ಯಗಳನ್ನೂ ಕೊಟ್ಟು, "ಅಪ್ಪ, ತಕ್ಷಶಿಲೆಗೆ ಹೋಗಿ ಶಿಲ್ಪ ಕಲಿ" ಎಂದು ಕಳುಹಿಸಿದನು.

ಅವನು "ಒಳ್ಳೆಯದು" ಎಂದು, ತಾಯಿತಂದೆಗೆ ವಂದಿಸಿ, ಹೊರಟು, ಕ್ರಮವಾಗಿ ತಕ್ಷಶಿಲೆಯನ್ನು ಮುಟ್ಟಿ, ಆಚಾರ್ಯನ ಮನೆಯನ್ನು ಕೇಳಿ; ಆಚಾರ್ಯನು ಶಿಷ್ಯರಿಗೆ ಶಿಲ್ಪವನ್ನು ಓದಿಸಿ, ಎದ್ದು, ಮನೆಯ ಬಾಗಿಲಲ್ಲಿ ತಿರುಗಾಡುತ್ತಿರುವಾಗ ಅವನ ಮನೆಗೆ ಹೋಗಿ; ಆಚಾರ್ಯನನ್ನು ಕಂಡ ಕಡೆಯಲ್ಲಿಯೇ ಮೆಟ್ಟನ್ನು ಕಳಚಿಟ್ಟು, ಛತ್ರವನ್ನು ಕೆಳಗಿಳಿಸಿ, ಆಚಾರ್ಯನಿಗೆ ವಂದಿಸಿ, ನಿಂತನು.

ಆಚಾರ್ಯನು, ಅವನು ಕ್ಲೇಶಗೊಂಡಿರುವುದನ್ನು ತಿಳಿದು, ಬಂದವರಿಗೆ ಮಾಡುವ ಸತ್ಕಾರವನ್ನು ನಡೆಸಿದನು. ಕುಮಾರನು ಊಟವುಂಡು, ಸ್ವಲ್ಪ ವಿಶ್ರಮಿಸಿ, ಆಚಾರ್ಯನ ಬಳಿಸಾರಿ, ವಂದಿಸಿ ನಿಂತನು.

"ಎಲ್ಲಿಂದ ಬಂದೆ, ಅಪ್ಪ?"

"ವಾರಣಾಸಿಯಿಂದ."

"ನೀನು ಯಾರ ಮಗ?"

"ವಾರಣಾಸಿರಾಜನ ಮಗ"

"ಏನು ಕಾರಣ ಬಂದೆ?"

"ಶಿಲ್ಪವನ್ನು ಕಲಿಯಲು."

"ಆಚಾರ್ಯಭಾಗವನ್ನು ತಂದಿರುವೆಯೊ? ಅಥವಾ ಧರ್ಮಶಿಷ್ಯನಾಗಲು ಬಯಸುವೆಯೊ?"

"ಆಚಾರ್ಯಭಾಗವನ್ನು ತಂದಿರುವೆನು."

ಹೀಗೆಂದು, ಬ್ರಹ್ಮದತ್ತಕುಮಾರನು ಆಚಾರ್ಯನ ಪಾದಮೂಲದಲ್ಲಿ ಸಾವಿರನಾಣ್ಯಗಳ ಚೀಲವನ್ನಿರಿಸಿ ವಂದಿಸಿದನು.

ಧರ್ಮಶಿಷ್ಯರು ಹಗಲು ಆಚಾರ್ಯನ ಕೆಲಸ ಮಾಡಿ, ರಾತ್ರಿ ಶಿಲ್ಪವನ್ನು ಕಲಿಯುವರು. ಆಚಾರ್ಯಭಾಗ ಕೊಟ್ಟವರು ಮನೆಯ ಹಿರಿಯ ಮಕ್ಕಳಂತಾಗಿ ಶಿಲ್ಪವನ್ನು ಮಾತ್ರ ಕಲಿಯುವರು.

ಅದರಂತೆ, ಆ ಆಚಾರ್ಯನು ಕೂಡ ಆ ಕುಮಾರನಿಗೆ ಶುಭನಕ್ಷತ್ರದಲ್ಲಿ ಶಿಲ್ಪ ಕಲಿಸಲು ತೊಡಗಿದನು.

(ಬೌದ್ಧರ ಜಾತಕ ಕತೆಗಳಲ್ಲಿ ಒಂದರ ಆಧಾರದಿಂದ)

ಕುಲಪತಿ*

(ಅಷ್ಟ-ಷಟ್‌ಪದಿ)

ಶಾಂತಿಸೌರಭ ಮಿಲಿತ, ಲಲಿತ ಹರ್ಷೋತ್ಕಲಿತ,
ಮುದಿತ ಶುಕ-ಪಿಕ-ಶಾರಿಕಾದಿ ಪಕ್ಷಿಸ್ತೋಮ
ಕಲಕಲ ನಿನಾದಯುತ, ವಿವಿಧ ಪುಷ್ಪಿತ ಕುಸುಮ-
ನಿಚಯ ಮಧುಸಂಗ್ರಹೋದ್ಯುಕ್ತ ಷಟ್ಪದ ನದಿತ,
ಶುದ್ಧ ಪುಣ್ಯಾರಣ್ಯ ಭೂಮಿಯೆಸುವುದದೊಂದು;
ಅಲ್ಲಿ ಕುಲಪತಿಯೋರ್ವನಿರುವ ಸಾರಸ್ವತಾ-
ರಾಧನೋದ್ಯೋಗ ತತ್ಪರನಾಗಿ! ಅವನು ತಾ-
ನೋರ್ವನೇ ಹತ್ತು ಸಾವಿರ ಮಂದಿ ಮುನಿ ಬಂಧು
ಶಿಕ್ಷಾರ್ಥಿ-ವಿದ್ಯಾರ್ಥಿ ವೃಂದಕ್ಕೆ ಸರಿಯಾಗಿ
ಅನ್ನ-ವಸ್ತ್ರಾದಿಗಳನಿತ್ತು, ವೇತನರಹಿತ
ಶಿಕ್ಷಣಾಧ್ಯಾಪನವನೊಲಿದೆಸಗುವನು ಸತತ.
ಸೌಲಭ್ಯಕಾಗಿ ಶಿಷ್ಯರು ಪರಸ್ಪರವಾಗಿ
ಸಹಕರಿಸುತಿರಬಹುದು; ನೃಪಸಾಹ್ಯವಿರಬಹುದು.
ಪೂರ್ವಿಕರ ವಿಶ್ವವಿದ್ಯಾನಿಲಯವಿದು! ಸಾಧು!!

—ಶ್ರೀ. ಶಂಕರ ನಾರಾಯಣ, ವಿದ್ವಾನ್, ಅಮ್ಮೆಂಬಳ, ದ.ಕ.

---

* "ಮುನೀನಾಂ ದಶಸಾಹಸ್ರಂ ಯೋಽನ್ನದಾನಾದಿಭಿಃ ಸದಾ। ಅಧ್ಯಾಪಯತಿ ವಿಪ್ರರ್ಷಿರಸೌ ಕುಲಪತಿಃ ಸ್ಮೃತಃ॥" (ಹತ್ತು ಸಾವಿರ ಮುನಿಗಳಿಗೆ ಅನ್ನದಾನ ಮೊದಲಾದವುಗಳಿಂದ ಯಾವಾಗಲೂ ವಿದ್ಯೆ ಹೇಳಿಕೊಡುತ್ತಿರುವ ಬ್ರಾಹ್ಮಣ ಋಷಿಗೆ ಕುಲಪತಿಯೆಂದು ಹೆಸರು.) 'ಅಭಿಜ್ಞಾನ ಶಾಕುಂತಲ'ದ ಕಣ್ವನು ಇಂತಹ ಕುಲಪತಿಯು. ಇದೊಂದು ಪ್ರಾಚೀನ ಶಿಕ್ಷಣಪ್ರಣಾಲಿ.

ಶಿಕ್ಷಣವೂ ಚಲಚ್ಚಿತ್ರಗಳೂ

ಲೇಖಕರು: ಡಾ. ಫ್ರೆಡ್ರಿಕ್ ಎಂ. ಥ್ರಾಶರ್

★

ನೂರಾರು ಸಾಮಾಜಿಕ ಸಮಸ್ಯೆಗಳು ಇಂದಿನ ಜೀವನವನ್ನು ಜಟಿಲವಾಗಿ ಮಾಡಿವೆ. ಕೂಲಿ-ಬಂಡವಾಳ, ನಗರನೈರ್ಮಲ್ಯ, ಸ್ತ್ರೀಪುರುಷ ಸಂಬಂಧ, ಆಡಳಿತ, ಸಂಸ್ಕೃತಿ ಘರ್ಷಣೆ, ಸಾಮ್ರಾಜ್ಯವಾದ ಇ. ಪ್ರಶ್ನೆಗಳು ಹಗಲಿರುಳು ನಮ್ಮನ್ನೆದುರಿಸಿವೆ. ಆದುದರಿಂದ ಇಂದಿನ ಶಿಕ್ಷಣದಲ್ಲಿ ಸಮಾಜಶಾಸ್ತ್ರವೂ ಅವಶ್ಯಕವಾಗಿ ಸಮಾವಿಷ್ಟವಾಗಲೆಬೇಕು. ಈ ಉದ್ದೇಶ ಸಾಧನೆಗೆ ಚಲಚ್ಚಿತ್ರಗಳಂತಹ ಸಾಧನವು ಇನ್ನೊಂದಿಲ್ಲ.

★

ಉತ್ತಮ ಚಲಚ್ಚಿತ್ರಗಳು ಪರಿಣಾಮಕಾರಿಯಾದ ಶಿಕ್ಷಣಸಾಧನಗಳಾಗಿವೆ. ಅವುಗಳಿಂದ ಜ್ಞಾನಪ್ರಚಾರ ಮಾಡಬಹುದಲ್ಲದೆ ಭಾವನೆಯನ್ನು ಜಾಗೃತಗೊಳಿಸಿ ಸಾಮಾಜಿಕ ರೀತಿನೀತಿಗಳನ್ನೂ ತೀವ್ರವಾಗಿ ಪಲ್ಲಟಿಸಬಹುದು. ಸೋವಿಯೆಟ್ ರಶಿಯವು ಈ ವಿಷಯವನ್ನು ಚೆನ್ನಾಗಿ ಮನಗಂಡು ಸಾಮಾಜಿಕ ಸುಧಾರಣೆಯಲ್ಲಿ ಚಲಚ್ಚಿತ್ರಗಳನ್ನು ಉಪಯೋಗಿಸಿಕೊಳ್ಳುತ್ತಿದೆ.

ಸಮಾಜದಲ್ಲಿಯ ಅಪರಾಧಗಳೂ ಯುವಕರ ದುಷ್ಪ್ರವೃತ್ತಿಯೂ ಚಲಚ್ಚಿತ್ರಗಳ ಪರಿಣಾಮಗಳಾಗಿವೆಯೆಂದು ಅನೇಕರು ಹೇಳುವದುಂಟು. ಆದರೆ ಈ ಕೆಡಕುಗಳು ಸಮಾಜದಲ್ಲಿಯ ಅವ್ಯವಸ್ಥೆಯ ಫಲಗಳಾಗಿವೆ. ಸಮಾಜವು ಅವನ್ನು ಮೂಲೋತ್ಪಾಟನ ಮಾಡಲು ಸರಿಯಾದ ಯಾವ ಉಪಾಯವನ್ನೂ ಮಾಡದಿರುವದರಿಂದಲೆ ಅವು ನೆಲೆಗೊಂಡಿವೆ. ಸಾಮಾಜಿಕ ಶಿಕ್ಷಣದ ಅಭಾವವೆ ಇದಕ್ಕೆ ಕಾರಣ.

ಸಾಮಾಜಿಕ ಸಮಸ್ಯೆಗಳಿಗೂ ಲೆಕ್ಕವೆ ಇಲ್ಲ. ಬಂಡವಾಳ-ಕೂಲಿ, ನಿರುದ್ಯೋಗ, ನಗರಸ್ವಚ್ಛತೆ, ಆರೋಗ್ಯದಾಯಕ ಕಾರಖಾನೆಗಳ ಪರಿಸ್ಥಿತಿ ಮುಂತಾದ ಹಲವು ವಿಷಯಗಳು ಕಣ್ಣೆದುರಲ್ಲಿ ಬರುತ್ತವೆ. ಅಲ್ಲದೆ ಪ್ರಜಾಧಿಪತ್ಯಕ್ಕೆ ಸೇರಿದ ಸಾಮ್ರಾಜ್ಯವಾದ, ಕೇಂದ್ರಿತ ಇಲ್ಲವೆ ಸ್ವಾಯತ್ತ ರಾಜ್ಯಭಾರ, ನಗರಸಭೆ-ಸ್ಥಾನಿಕಸ್ವರಾಜ್ಯಸಂಸ್ಥೆಗಳಲ್ಲಿಯ ತೊಡಕುಗಳು ಮುಂತಾದ ವಿಷಯಗಳೂ, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಘಟಸ್ಫೋಟ (Divorce), ಜಾತಿಕಲಹ, ಪರಂಪರೆ, ಸಂಸ್ಕೃತಿ, ಅನೀತಿ, ವರ್ಣಸಂಕರ ಮುಂತಾದ ವಿಷಯಗಳೂ ಸಾಮಾಜಿಕ ಸಮಸ್ಯೆಗಳ ವಿಸ್ತಾರವನ್ನು ಸೂಚಿಸುತ್ತವೆ. ಈ ತೊಡಕುಗಳ ನಿವಾರಣೆಗೆ ಯುವಕಯುವತಿಯರು ಸಿದ್ಧರಾಗಬೇಕಾದರೆ ಅವರಿಗೆ ಮೊದಲಿನಿಂದಲೆ ಅವುಗಳ ಸ್ಪಷ್ಟವಾದ ಅರಿವಾಗಬೇಕು. ಅಂದರೆ ಬುದ್ಧಿವಂತಿಕೆಯಿಂದ ವರ್ತಿಸಲು ಅವರು ಸಮರ್ಥರಾಗುವರು. ಆದುದರಿಂದ ಶಿಕ್ಷಣದಲ್ಲಿ ಸಮಾಜಶಾಸ್ತ್ರವೂ ಅವಶ್ಯವಾಗಿ ಸಮಾವಿಷ್ಟವಾಗಬೇಕು. ಮತ್ತು ಸಮಾಜಶಾಸ್ತ್ರದ ಶಿಕ್ಷಣದಲ್ಲಿ ಚಲಚ್ಚಿತ್ರದಂತಹ ಸಾಧನವು ಬೇರೊಂದಿಲ್ಲ.

ಶಾಲೆಯ ವರ್ಗಗಳಲ್ಲಿ ನಗರನೀತಿ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳನ್ನು ಕಲಿಸುವದು ತೀರ ನೀರಸವೆನಿಸುವದು. ಇಂತಹ ಪಾಠಗಳನ್ನು ಅಭ್ಯಸಿಸಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬಹುದು. ಆದರೆ ಬರಿ ತತ್ವಗಳನ್ನೋದಿದವರು ಸಮಾಜದಲ್ಲಿ ಸತ್ವಶಾಲಿಗಳಾಗರು. ಸಮಾಜಶಾಸ್ತ್ರವನ್ನು ಕಲಿಸಬೇಕಾದರೆ ಸಮಾಜದ ಚಿತ್ರವೇ ಕಣ್ಣಮುಂದೆ ನಿಲ್ಲಬೇಕಾಗುವದು. ಚಲಚ್ಚಿತ್ರವು ಅಂತಹ ಗುಣವುಳ್ಳದಾಗಿದೆ. ಪ್ರಜಾಧಿಪತ್ಯದ ತತ್ವಗಳು ಪ್ರತ್ಯಕ್ಷವಾಗಿ, ಆದರ್ಶರೀತಿಯಲ್ಲಿ, ಸ್ಪಷ್ಟವಾಗಿ, ಅಳಿಸಿಹೋಗದಂತೆ ವಿದ್ಯಾರ್ಥಿಗಳ ಮೃದುವಾದ ಮಿದುಳಿನಲ್ಲಿ ಮೂಡುವಂತೆ ಚಲಚ್ಚಿತ್ರವು ಯತ್ನಿಸಬೇಕು. ದೃಶ್ಯಸಾಧಕರ, ಛಾಯಾಚಿತ್ರಗಾರರ, ನಿರ್ದೇಶಕರ, ನಟರ ಮತ್ತು ಲೇಖಕರ ಚಾತುರ್ಯದಿಂದ ತತ್ವಗಳ ನ್ಯಾಯಾನ್ಯಾಯತೆಯು ಚಿತ್ರಸೃಷ್ಟಿಯಲ್ಲಿ ಪರಿಣಾಮಕರವಾದ ರೀತಿಯಲ್ಲಿ ವ್ಯಕ್ತವಾಗಬೇಕು.

ಶಿಕ್ಷಣದಲ್ಲಿ ಚಲಚ್ಚಿತ್ರಗಳಿಂದ ಎರಡು ಗುರಿಗಳು ಸಾಧಿಸುತ್ತವೆ. (೧) ತತ್ವಗಳ ಸ್ಪಷ್ಟೀಕರಣ. ಚಿತ್ರದಲ್ಲಿಯ ಪ್ರವೇಶಗಳ ಪ್ರಭಾವದಿಂದ ತತ್ವಗಳ ತಿರುಳು ನಿಚ್ಚಳವಾಗುವದು; ಅವುಗಳ ಯೋಗ್ಯತೆಯು ಮನಗಾಣುವದು. (೨) ಆದರೆ ಬರಿ ತತ್ವಗಳ ಸಮಂಜಸತೆಯ ಮನವರಿಕೆಯಾಗಿ ಮುಗಿಯಲಿಲ್ಲ. ಅರಿತ ತತ್ವಗಳನ್ನು ಆಚಾರದಲ್ಲಿಳಿ

ಸುವ ಪ್ರವೃತ್ತಿಯೂ ಹುಟ್ಟಬೇಕು. ನೋಟಕರಲ್ಲಿ ಬರಿ ತತ್ವಜ್ಞಾನವನ್ನು ತುಂಬಿದರಾಗಲಿಲ್ಲ; ಭಾವಾವೇಶದಿಂದ ಅನಿರುದ್ಧರಾಗಿ ಅವರು ಆಚಾರರಂಗಕ್ಕಿಳಿಯಬೇಕು. ಚಿತ್ರಸೃಷ್ಟಿಯ ಸಚೇತನ ಸನ್ನಿವೇಶಗಳು ಈ ಕಾರ್ಯವನ್ನೂ ಚನ್ನಾಗಿ ಮಾಡಬಲ್ಲವು.

ಶಿಕ್ಷಣದಲ್ಲಿ ಚಲಚ್ಚಿತ್ರಗಳಿಗೆ ಇಂತಹ ಮಹತ್ಕಾರ್ಯಗಳಿವೆ. ಅವುಗಳು ಭಾವನೆಗಳನ್ನು ಪಲ್ಲಟಿಸುವವಾದುದರಿಂದ ಸಾಮಾಜಿಕ ರೀತಿ ನೀತಿಗಳ ವಿಷಯಕ್ಕೆ ನಮಗಿರುವ ಅಭಿಪ್ರಾಯಗಳನ್ನೂ ಬದಲಿಸುವವು. ಚಲಚ್ಚಿತ್ರಗಳು, ಒಬ್ಬ 'ನಿಗ್ರೊ'ವನ್ನು ಕಂಡೊಡನೆ ನಾವು ಹೇಸಿ ಹಿಂದೆ ಸರಿಯುವಂತೆಯೂ ಮಾಡಬಲ್ಲವು; 'ನಿಗ್ರೊ'ವೂ ಒಬ್ಬ ಮನುಷ್ಯನೇ ಆದುದರಿಂದ ಅವನಲ್ಲಿ ಸಹಾನುಭೂತಿಯನ್ನು ತೋರಿಸುವದೂ, ಅವನೊಡನೆ ಸಹಕರಿಸುವದೂ ಸಾಧು ಮಾರ್ಗವೆಂಬ ಭಾವನೆಯನ್ನೂ ಹುಟ್ಟಿಸಬಲ್ಲವು. ಅವು ಗುರುಹಿರಿಯರ ವಿಷಯಕ್ಕೆ ನಮ್ಮಲ್ಲಿ ಆದರಬುದ್ಧಿಯನ್ನು ಹೆಚ್ಚಿಸಬಲ್ಲವು. ಅವು ನಮ್ಮನ್ನು ಸಮರಪ್ರಿಯರನ್ನಾಗಿ ಇಲ್ಲವೆ ಶಾಂತಿಪ್ರಿಯರನ್ನಾಗಿ ಮಾಡಬಲ್ಲವು. ಅವು ನಮ್ಮಲ್ಲಿ ವಿವಿಧ ಜಾತಿ-ಜನಾಂಗಗಳ ವಿಷಯಕ್ಕೆ ಪ್ರೇಮಾದರಗಳನ್ನು ಹುಟ್ಟಿಸಬಲ್ಲವು; ಇಲ್ಲವೆ ಪರಸ್ಪರರಲ್ಲಿ ಭೀತಿ, ಅವಿಶ್ವಾಸ, ತಿರಸ್ಕಾರಗಳನ್ನು ಚಿಗುರಿಸಿ ಪ್ರಜ್ವಲಿತಗೊಳಿಸಬಲ್ಲವು; ವೈಜ್ಞಾನಿಕ ಸಂಶೋಧನಗಳನ್ನು ನಮಗೆ ತಿಳಿಯುವಂತೆ ಕಂಣಮುಂದಿರಿಸಬಲ್ಲವು; ಅವನ್ನು ಸಾಮಾಜಿಕ ಸುಖ, ಶಾಂತಿ, ಪ್ರಗತಿಗಳಿಗೆ ಸಾಧಕವಾಗುವಂತೆ ಉಪಯೋಗಿಸಲು ಪ್ರೇರಿಸಬಲ್ಲವು.

ಹೊಲಿವುಡ್ಡಿನವರು ೧೯೩೬ ರಲ್ಲಿ ತಯಾರಿಸಿದ 'ದಿ ಸ್ಟೋರಿ ಆಫ್ ಲುಯಿ ಪಾಸ್ಚರ್' ಎಂಬ ವೈಜ್ಞಾನಿಕ ವಾಕ್‌ಚಿತ್ರವು ಉತ್ಕೃಷ್ಟವಾಗಿದೆ. ಅದರಲ್ಲಿ ವೈಜ್ಞಾನಿಕ ತತ್ವಗಳನ್ನು ನಿಚ್ಚಳವಾಗಿ ತಿಳಿಯಪಡಿಸಿದ್ದಾರೆಂದು ಮಾತ್ರ ನಾವು ಅದನ್ನು ಹೊಗಳುತ್ತಿಲ್ಲ. ಆದರೆ ದರ್ಶಕರನ್ನು ಸಹಾನುಭೂತಿಯ ಅಶ್ರುಗಳಲ್ಲಿ ಮಿಾಯಿಸಿ ವೈಜ್ಞಾನಿಕ ತಥ್ಯವನ್ನು ತೋರ್ಪಡಿಸುವಂತೆ ಹೆಣೆದ ಚಿತ್ರುವದು. ಇಜಿಪ್ತ, ಅಸ್ಸೆರಿಯ ಮತ್ತು ಪೂರ್ವಪ್ರದೇಶಗಳಲ್ಲಿಯ ಪ್ರಾಚೀನ ಮನುಷ್ಯಸಮಾಜವನ್ನು ಪ್ರತ್ಯಕ್ಷೀಕರಿಸುವ ಡಾ. ಬ್ರೆಸ್ಟೆಡ್‌ರ ಪ್ರಯತ್ನವನ್ನು 'ದಿ ಹ್ಯೂಮನ್ ಆ್ಯಡ್‌ವೆಂಚರ್' ಎಂಬ ವೈಜ್ಞಾನಿಕ ವಾಕ್ಚಿತ್ರವು ಬಹು ಪರಿಣಾಮಕರವಾಗಿಯೂ ವಿವೇಚನಾತ್ಮಕವಾಗಿಯೂ ಪ್ರದರ್ಶಿಸಿದೆ. ಈ ಎರಡು ಅಪೂರ್ವ ಚಿತ್ರಗಳಿಂದ ವಿದ್ಯಾರ್ಥಿಗಳಿಗಾಗುವ ಜ್ಞಾನ ಲಾಭವು ಅಮೌಲ್ಯವಾದುದು.

ಚಲಚ್ಚಿತ್ರವು ಒಂದು ಪ್ರಬಲವಾದ ಆಯುಧವಾಗಿದೆ. ಅದನ್ನು ಲೋಕಹಿತಚಿಂತಕರು ಸಮಾಜದಲ್ಲಿ ಒಕ್ಕಟ್ಟು, ಸಮರಸತೆ, ಶಾಂತಿಗಳು ನೆಲೆಗೊಳ್ಳುವಂತೆ ಉಪಯೋಗಿಸಲೂ ಬಹುದು; ಸ್ವಾರ್ಥಿಗಳ ಜಾತಿಭ್ರಾಂತಿ, ರಾಷ್ಟ್ರದ್ವೇಷಗಳನ್ನು ಪ್ರಜ್ವಲಿತಗೊಳಿಸಲೂ ಉಪಯೋಗಿಸಬಹುದು. ಚಲಚ್ಚಿತ್ರದ ಸದುಪಯೋಗ ಮಾಡಿಕೊಂಡರೆ ಬಾಲಕರನ್ನು ನಗರನೀತಿ, ಸಮಾಜಸಮಸ್ಯೆಗಳ ವಿಷಯಕ್ಕೆ ಪೂರ್ಣ ಹೊಣೆಯನ್ನು ಎಚ್ಚರಿಸಿ ಕರ್ಮಸಮರ್ಥರನ್ನಾಗಿ ಮಾಡುವದು ಬಹು ಸುಲಭ.

'ಚಲಚ್ಚಿತ್ರಗಳಲ್ಲಿ ಸಮಾಜಶಾಸ್ತ್ರವನ್ನು ಸೇರಿಸಿದರೆ ಅದು ಕಲೆಯಾಗದೆ ಮತಪ್ರಚಾರವಾಗುವ ಸಂಭವವಿದೆ. ಮತಪ್ರಚಾರಕ ಚಿತ್ರಗಳಿಂದ ಪ್ರೇಕ್ಷಕರಲ್ಲಿ ಸಮಾಜ ಪ್ರೇಮವು ನೆಲೆಗೊಳ್ಳಲಾರದು' ಎಂದು ಕೆಲವರು ಸಂಶಯ ಪಡುವವರುಂಟು. ಇಲ್ಲಿ ಮತಪ್ರಚಾರ ಹಾಗೂ ಕಲೆ ಎಂದು ಯಾವದಕ್ಕೆನ್ನಬೇಕು ಎಂಬ ಬಗ್ಗೆ ಅಭಿಪ್ರಾಯ ಭೇದವಿದೆ. ಸ್ವಾರ್ಥಸಾಧನೆಗಾಗಿ ಪ್ರೇಕ್ಷಕರಿಗೆ ಮೋಸ ದಿಂದ ಕೊಡುವ ವಿಚಾರಗಳಿಗೆ ಬೇಕಾದರೆ ಮತಪ್ರಚಾರ ವೆಂದು ಹೆಸರಿಡಿರಿ. ಆದರೆ ಪ್ರತ್ಯಕ್ಷ ಸಹಜ ಸಾಮಾಜಿಕ ಸನ್ನಿವೇಶಗಳಲ್ಲಿ ನಿಷ್ಪಕ್ಷಪಾತವಾದ ಸಾಮಾಜಿಕ ನೀತಿಗಳನ್ನು ಹೆಣೆದು ತೋರಿಸುವದು ಮತಪ್ರಚಾರದ ದೋಷಕ್ಕೆ ಗುರಿಯಾಗಲಾರದು.

ವಿರುದ್ಧ ಅಭಿಪ್ರಾಯಗಳಿಗೆ ಗುರಿಯಾಗಿರುವ ವಿಷಯಗಳಲ್ಲಿ ಚಲಚ್ಚಿತ್ರವು, ಇದು ಹೀಗೇ ಸರಿ ಎಂದು ನಿರ್ಧಾರವಾಗಿ ಹೇಳಬಾರದು. ಆದರೂ ಸಾಧ್ಯವಾದಷ್ಟು ನಿಷ್ಪಕ್ಷಪಾತವಾಗಿ ಸನ್ನಿವೇಶಗಳನ್ನು ಪ್ರದರ್ಶಿಸುವದೇನೂ ತಪ್ಪಲ್ಲ. 'ದಿ ಮಾರ್ಚ್ ಆಫ್ ಟಾಯಿಮ್' ಎಂಬ ಚಿತ್ರದಲ್ಲಿ ಆಧುನಿಕ ಜಗತ್ತಿನ ಸಂಗತಿಗಳನ್ನು ಕ್ರೂರವಾಗಿ ಚಿತ್ರಿಸಿದ್ದರೂ ಪ್ರೇಕ್ಷಕರು ಪ್ರಚಲಿತ ಸಂಗತಿಗಳ ವಿಷಯಕ್ಕೆ ತಮ್ಮ ದೊಂದು ನಿರ್ಧಾರಕ್ಕೆ ಮುಟ್ಟಲು ಆದರಿಂದ ಹುಸುಮಷ್ಟಾದರೂ ಸಹಾಯವಾಗದಿರದು.

ವಿಜ್ಞಾನದಲ್ಲಿ ಮುಂದುವರಿದ ದೇಶಗಳಲ್ಲಿ ಕೂಡ ಶಿಕ್ಷಣದಲ್ಲಿ ಚಲಚ್ಚಿತ್ರದ ಉಪಯೋಗವು ಸಾಕಷ್ಟು ಮಾಡಲ್ಪಡುತ್ತಿಲ್ಲ. ಆದರೂ ಎಂ. ಜಿ. ಎಂ. ಕಂಪನಿಯವರ ಚಿತ್ರಗಳು, The Road to Life, The Mayor of Hell, Wild Boys of the Road, Are These our Children

ಎಂಬ ವಾಕ್ಚಿತ್ರಗಳು ನಿಜವಾಗಿ ಸಮಾಜದಲ್ಲಿ ಅಪರಾಧ ಗಳ ಹುಟ್ಟಿನ ಮೂಲವನ್ನು ಸಂಶೋಧಿಸಿ ತಿಳಿಸುವಂತಹ ವೆ ಎಂಬುದನ್ನು ನಾವು ಮರೆಯಲಾಗದು. ಅಮೇರಿಕೆಯ ಸಮಾಜಸ್ವಾಸ್ಥ್ಯವಿಷಯಕ 'ಡ್ಯಾಮೇಜ್ಡ್ ಲೈವ್ಜ್' ಎಂಬ ವಾಕ್ಚಿತ್ರವು ಆರೋಗ್ಯಶಿಕ್ಷಣದಲ್ಲಿ ಉತ್ತಮವಾದ ಪ್ರಾರಂಭಪ್ರಯತ್ನವಾಗಿದೆ.

ಈ ವಿಷಯದಲ್ಲಿ ಶಿಕ್ಷಣಶಾಸ್ತ್ರಿಗಳು ಹೆಚ್ಚುಹೆಚ್ಚಾಗಿ ಗಮನಕೊಟ್ಟು, ಯಾವ ಮಾದರಿಯ ಚಿತ್ರಗಳನ್ನು ಯಾವ ರೀತಿಯಾಗಿ ಶಿಕ್ಷಣದಲ್ಲಿ ಉಪಯೋಗಿಸಬೇಕೆಂಬುದನ್ನು ವೈಜ್ಞಾನಿಕವಾಗಿ ಚರ್ಚಿಸಿ ಕಾರ್ಯಕ್ಕಿಳಿಯುವದು ಅಗತ್ಯ ವಿದೆ. ಸಮಾಜಶಾಸ್ತ್ರದ ಗೂಢತತ್ವಗಳನ್ನು ಕುರಿತು ಕಥೆಗಳೂ, ದೃಶ್ಯಗಳೂ, ಸನ್ನಿವೇಶಗಳೂ ಇನ್ನೂ ಚಲ ಚ್ಚಿತ್ರಪ್ರಪಂಚದಲ್ಲಿ ನಿರ್ಮಿಸಲ್ಪಡಬೇಕಾಗಿದೆ. ಅಂತಹ ಬುದ್ಧಿಪೂರ್ವಕವಾದ ಪ್ರಯತ್ನಗಳಾದರೆ ಭಾವೀಪ್ರಜೆ ಗಳಾದ ಬಾಲಕರಲ್ಲಿ ಸಮಾಜಸೇವೆ, ನಗರನೀತಿ, ಆರೋಗ್ಯ, ಶಾಂತಿಗಳ ತತ್ವಗಳು ಗಾಢವಾಗಿ ಬೇರೂರದಿರಲಾರವು.

('ನ್ಯಾಶನಲ್ ಬೋರ್ಡ ಆಫ್ ರಿವ್ಯೂ'ದಿಂದ)



ಆಗರ್ಭ ಶಿಶುಸಂಸ್ಕಾರ ★

ಲೇಖಕರು:
ಶ್ರೀ. "ಶ್ಯಾಮಸುಂದರ"

ಕಿಡಿಗೇಡಿ ಮಕ್ಕಳನ್ನು ನೋಡಿ ಒಂದೊಂದು ಸಲ ತಂದೆ ತಾಯಿಗಳಿಗೂ ರೇಗುವದುಂಟು. ಹಟಮಾರಿತನ, ಆಶೆಬುರುಕತನ, ಕಳ್ಳತನ, ಸುಳ್ಳುತನಗಳು ಮಕ್ಕಳ ಸ್ವಭಾವದಲ್ಲಿ ಬೇರೂರುವದನ್ನು ನೋಡಿಯಂತೂ ತಾಯಿ ತಂದೆಗಳಿಗೆ ದಿಕ್ಕೇ ತಪ್ಪುತ್ತದೆ. ಆ ದುರ್ಗುಣಗಳನ್ನು ಹಲವು ಸಲ ತಿದ್ದಿಯೂ, ಅವಕ್ಕಾಗಿ ಅನೇಕಸಲ ಶಿಕ್ಷಿಸಿಯೂ ಅವು ಯಥಾಪ್ರಕಾರವಾಗಿ ಬೆಳೆಯುವದನ್ನು ಕಂಡು ತಾಯಿ ತಂದೆಗಳು ಮಕ್ಕಳ ಭಾವೀಪ್ರಗತಿಯ ವಿಷಯದಲ್ಲಿ ಆಶೆಯನ್ನೆ ತೊರೆದು ಬಹಳ ಸಂತಾಪಪಡುತ್ತಾರೆ. ಹಲವು ಸಿರಿವಂತ ತಂದೆಯರು ಮಕ್ಕಳ ದುರ್ಗುಣಗಳಿಂದ ರೇಗಿ ಸಾಯುವಾಗ ತಮ್ಮ ಆಸ್ತಿಯ ಪಾಲನ್ನು ಕೂಡ ಅವರಿಗೆ ಸೇರದಂತೆ ಮೃತ್ಯುಪತ್ರವನ್ನು ರಚಿಸಿ ಬಿಡುತ್ತಾರೆ. ಇನ್ನು ಕೈಕಾಲು ಮುರಿದು ಹೋಗುವಂತಹ ಕ್ರೂರ ಶಿಕ್ಷೆಗಳಿಗಂತೂ ಲೆಕ್ಕವೆ ಇಲ್ಲ.

ಇಲ್ಲಿ ಶಿಕ್ಷೆಯ ವಿಷಯಕ್ಕೆ ಒಂದೇ ಮಾತಿನಲ್ಲಿ ಒಂದು ಆವಶ್ಯಕ ಸಂಗತಿಯನ್ನು ತಿಳಿದುಕೊಳ್ಳಬೇಕಾದುದು ಏನೆಂದರೆ ಉದ್ದೇಶಪೂರ್ವಕವಾಗಿ, ಹಟದಿಂದ ಅಪರಾಧ ಮಾಡುವವನಿಗೆ ... ವನ್ನು ... ಶಿಕ್ಷೆಯು ಯೋಗ್ಯವಾದುದು. ಅಜ್ಞಾನದಿಂದ, ನಿರುದ್ದೇಶವಾಗಿ, ಅಪ್ಪಿತಪ್ಪಿ ಆವ ಅಪರಾಧವು ಶಿಕ್ಷೆಗೆ ಯೋಗ್ಯವಾದುದಲ್ಲ. ಅಲ್ಲಿ ಅಪರಾಧಿಗೆ ಶಿಕ್ಷೆ... ಉದ್ದೇಶವೆ ... ತಿಳಿಯ... ಉದ್ದೇಶ ತಿಳಿಯದಿರುವಾಗ ... ಶಿಕ್ಷೆ... ರಾಧಿಯಲ್ಲಿ,

---

ನಿದ್ರೆಯಲ್ಲಿ ಮಗು ಎಷ್ಟು ಮುದ್ದಾಗಿರುವುದು! 'ಸ್ವಾನಂದಲೀಲಾವಿಲೋಲ' ಪರಮಾತ್ಮನ ಪ್ರತೀಕವಲ್ಲವೆ ಅದು! ಈ ಸೊಗಸು-ಸೊಬಗು ಅಳಿಯದಂತೆ, ಈ ಸುಖಸ್ವಪ್ನವು ಕರಗದಂತೆ ಮಕ್ಕಳ ಮೈಮನಗಳನ್ನು ತಿದ್ದಿ ಮುದ್ದಿಸುವುದು ಃಃ ತಾಯಿತಂದೆಗಳ ಕರ್ತವ್ಯವಲ್ಲವೆ? ಃಃ

ಉಂಟಾಗುವದು ಭೀತಿಯೆ ಹೊರತು ವೃತ್ತಿಯ ಸುಧಾರಣೆಯಲ್ಲ. ಬೆಳೆದ ಅಪರಾಧಿಗಳಿಗೇ ಈ ಮಾತು ಅನ್ವಯಿಸುವದೆಂದ ಮೇಲೆ ಚಿಕ್ಕಮಕ್ಕಳ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಮಕ್ಕಳು ನೂರು ಸಲ ತಪ್ಪಲಿ, ಸಾವಿರ ತಪ್ಪುಗಳನ್ನು ಮಾಡಲಿ ಅವುಗಳಲ್ಲಿ ದುಷ್ಟ ಉದ್ದೇಶವು ಸಹಸಾ ಇರುವದಿಲ್ಲವೆಂದು ಈಗ ಮನೋವಿಜ್ಞಾನಿಗಳ ಖಂಡಿತಾಭಿಪ್ರಾಯವಾಗಿದೆ.

ಇತ್ತೀಚಿನ ಸಂಶೋಧನಗಳಿಂದ ಅಪರಾಧಿಗಳಿಗೆ ನಿದ್ದೆ ಚನ್ನಾಗಿ ಬರುವದಿಲ್ಲವೆಂಬುದು ನಿರ್ಧರವಾಗಿದೆ. ದಿನವೆಲ್ಲ ಹಲವು ವಿಧದ ಅತ್ಯಾಚಾರ ಅನಾಚಾರಗಳಲ್ಲಿ ಕಳೆಯುವ ಅಪರಾಧಿಯ ನರಮಂಡಲವೆಲ್ಲ ಉದ್ವೇಗಪೂರ್ಣವಾಗಿರುತ್ತದೆ. ಅವನ ನುಡಿಯಲ್ಲಿ, ನಡೆಯಲ್ಲಿ, ಮುಖಭಾವದಲ್ಲಿ ದುರುದ್ದೇಶದ ಬಣ್ಣವು ಒಡೆದು ಕಾಣುತ್ತದೆ. ಮನದಲ್ಲಿ ಶಾಂತಿಯಿಲ್ಲದುದರಿಂದ ನಿದ್ರೆಯೂ ಚನ್ನಾಗಿ ಬರುವದಿಲ್ಲ. ಮಲಗಿದಾಗಲೂ ಅಂತರಂಗದ ದುರ್ಭಾವಗಳ ತರಂಗಗಳು ಮುಖದ ಪರದೆಯ ಮೇಲೆ ಬಂದುಬಂದು ಹೋಗುತ್ತವೆ. ಆದರೆ ತೀರ ಉಡಾಳ, ಕಿಡಿಗೇಡಿ, ದುರ್ಗುಣಿ, ಹಟಮಾರಿ ಎನಿಸಿದ ಮಗುವನ್ನು ನೀವು ಅದಕ್ಕೆ ತಿಳಿಯದಂತೆ ಹೋಗಿ ನೋಡಿರುವಿರಾ? ಅದರಲ್ಲಿ ದುರ್ಭಾವವು ಎಳ್ಳಷ್ಟೂ ತೋರಿ ಬರದು. ಆದರ ಶಾಂತ, ಮುಗ್ಧವಾದ ಮುದ್ರೆಯು ಎಂತಹ ಬಿರುಸಾದ ಕರುಳನ್ನೂ ಕರಗಿಸುತ್ತದೆ. ಇನ್ನು ನಿರೋಗಿ ಯಾವ ಮಗುವಿಗೆ ನಿದ್ರೆಬರಲಿಲ್ಲವೆಂಬುದನ್ನು ನೀವು ಕೇಳಿರುವಿರಾ? ಎಚ್ಚತ್ತಿರುವಾಗ ಅದು ತಿಳಿಯದೆ ಸಾವಿರ ತಪ್ಪುಗಳನ್ನು ಮಾಡಿದ್ದರೂ ಆದರ ಹೃದಯವು ನಿರ್ವಿಕಾರ. ಆದುದರಿಂದ ಗಾಢವಾದ ನಿದ್ರೆಯು ಅದಕ್ಕೆ ಪ್ರಕೃತಿದತ್ತವಾದ ವರವಾಗಿದೆ. ಹಾಗೆ ಸುಖವಾಗಿ ನಿದ್ರಿಸುತ್ತಿರುವ ಮಗುವು ನಮ್ಮ ವೈರಿಯದಾದರೂ ಆದರ ನಿರ್ವಿಕಾರ ಮುದ್ರೆಯನ್ನು ನೋಡಿದೊಡನೆ ನಮ್ಮ ವೈರವು ಅಲ್ಲಿಂದಲ್ಲಿಯೆ ನೀರಾಗುವದು.

ಹಾಗಾದರೆ ಮಕ್ಕಳು ತಪ್ಪು ಮಾಡುವದೇಕೆ? ಉದ್ದೇಶವಿಲ್ಲದಿದ್ದರೂ ಅವನ್ನು ಕೆಡುಕು ಹಾದಿಗೆ ಎಳೆಯುವವರು ಯಾರು? ಇದಕ್ಕೆ ಉತ್ತರವೆ 'ಕುಸಂಸ್ಕಾರಗಳು' ಎಂಬುದು. ಶಿಸು ಬೆಳೆದ ಮಕ್ಕಳ ಆಚಾರ, ವಿಚಾರ, ಆಹಾರ, ವಿಹಾರಗಳಲ್ಲಿ ಕಂಡುಬರುವ ಅಕ್ರಮವೆಲ್ಲ ಅವರ ಶೈಶವದ, ಗರ್ಭಕಾಲದ ಕುಸಂಸ್ಕಾರಗಳ ಫಲವಾಗಿದೆ. ಆದುದರಿಂದ ಬೆಳೆದ ಮಕ್ಕಳ ಮಹಾಪರಾಧಗಳನ್ನು ಕಂಡು ರೇಗಿ ಕೂಗುವವರು, ಕ್ರೂರ ಶಿಕ್ಷೆಯನ್ನು ಕೊಡಲು ಪ್ರವರ್ತಿಸುವವರು ಗರ್ಭಕಾಲದಿಂದಲೆ ಸುಸಂತಾನದ ಸಾಧನೆಯನ್ನು ಮಾಡಬೇಕು.

ಶಿಶುವು ಗರ್ಭದಲ್ಲಿರುವಾಗಲೆ ಕೆಟ್ಟ ಗುಣಗಳನ್ನು ಕಲಿಯುವದೆಂದರೆ ಈಗಲೂ ಅನೇಕರು ಅದೊಂದು ಪುರಾಣಶ್ರದ್ಧೆಯೆಂದು ಅಲ್ಲಗಳೆಯುತ್ತಾರೆ.ಆದರೆ ತಾಯಿಯ ದೇಹಮನಸ್ಸುಗಳ ಕ್ರಿಯೆಗಳ ಪರಿಣಾಮವು ಗರ್ಭದಲ್ಲಿರುವ ಮಗುವಿನ ಮೇಲೆ ಪೂರ್ಣವಾಗಿ ಆಗುವದೆಂಬುದು ಈಗ ವೈಜ್ಞಾನಿಕ ಸಿದ್ಧಾಂತವಾಗಿದೆ. ಸ್ತ್ರೀಯು ಗರ್ಭಿಣಿಯಾಗಿರುವಾಗ ಉಂಟಾದ ಅತಿ ಕಾಮವಿಕಾರ, ಚಿಂತೆ, ದಿಗಿಲು, ಶೋಕ, ಭೀತಿಗಳಿಂದ ಮುಂದೆ ಹುಟ್ಟಿದ ಮಗುವಿನ ನರಮಂಡಲವು ಹಸಗೆಟ್ಟು ಬಾಲಗ್ರಹ, ದೌರ್ಬಲ್ಯ, ಹೇಡಿತನಗಳಿಗೆ ತುತ್ತಾಗುತ್ತಿರುವದು ಈಗ ಪ್ರತ್ಯಕ್ಷವಾಗಿ ಕಂಡುಬಂದ ಸಂಗತಿಯಾಗಿದೆ. ಆದುದರಿಂದ ಮಗು ಹುಟ್ಟಿದ ಮೇಲೆ ಅದರ ಆರೈಕೆಗಾಗಿ ವಹಿಸುವಷ್ಟೆ ಶ್ರದ್ಧೆಯನ್ನು ಅದು ಹುಟ್ಟುವ ಪೂರ್ವದಲ್ಲಿಯೂ ವಹಿಸಬೇಕು.

ಆಯುರ್ವೇದದಲ್ಲಿಯೂ ಹೇಳಿದೆ 'ಮಾತೃಜಂ ಹ್ಯಸ್ಯ ಹೃದಯಂ, ಮಾತುಶ್ಚ ಹೃದಯೇನ ತತ್ ಸಂಬದ್ಧಂ'

ಶಿಕ್ಷಣವೆಂದರೆ ಸಂಸ್ಕಾರವೆಂಬುದು ಈಗ ಎಲ್ಲರಿಗೂ ತಿಳಿದಿದೆ. ಆದರೆ ಸಂಸ್ಕಾರವು ಮಗು ಹುಟ್ಟಿದ ಮೇಲೆಯೆ ಪ್ರಾರಂಭವಾಗುವುದೆಂಬುದು ತಪ್ಪು ಗ್ರಹಿಕೆಯಾಗಿದೆ. ಗರ್ಭಸ್ಥ ಶಿಶುವೂ ಸಂಸ್ಕಾರಗಳನ್ನು ಪಡೆಯುವುದು. ಆದುದರಿಂದ ಶಿಶುವಿನ ಶಿಕ್ಷಣವು ವಸ್ತುತಃ ಆಗರ್ಭವಾಗಿಯೆ ಆರಂಭವಾಗುವುದು. .. ..

ಗರ್ಭದಲ್ಲಿರುವಾಗ ಉಂಟಾದ ಸಂಸ್ಕಾರಗಳೂ ಜನಿಸಿದ ನಂತರ ಮಾಡುವ ಸಂಸ್ಕಾರಗಳೂ ವಿರುದ್ಧವಾಗಿರಬಾರದು. ಒಮ್ಮೆ ಉಂಟಾದ ಸಂಸ್ಕಾರಗಳನ್ನು ಅಳಿಸುವುದು ಕಠಿನವಾಗಿರುವುದರಿಂದ ಗರ್ಭಾದಾನ ಕಾಲದಿಂದಲೆ ಒಳ್ಳೆಯ ಸಂಸ್ಕಾರಗಳನ್ನು ಕೊಡುವುದೊಳಿತು ! ..

ಎಂದರೆ ಶಿಶುವಿನ ಹೃದಯವು (ಅರ್ಥಾತ್ ನರಮಂಡಲವು, 'ಹಾರ್ಟ್' ಅಲ್ಲ) ತಾಯಿಯಿಂದ ಹುಟ್ಟಿರುವುದರಿಂದ ತಾಯಿಯ ನರಮಂಡಲದೊಡನೆ ಅದು ಸಂಬದ್ಧವಾಗಿದೆ. ಆದುದರಿಂದಲೆ ಸುಸಂತಾನೋತ್ಪತ್ತಿಗಾಗಿ 'ಗರ್ಭಿಣೀ ಪ್ರಥಮ ದಿವಸಾತ್ ಪ್ರಭೃತಿ ನಿತ್ಯಂ ಶುಚ್ಯಲಂಕೃತಾ ಶುಕ್ಲವಸನಾ ಭವೇತ್, ಉದ್ವೇಜನೀಯಾಪ್ಸ ಕಥಾಃ.... ಕ್ರೋಧಭಯಸಂಕರಾಂಪ್ಪ ಪರಿಹರೇತ್' ಎಂದು ಬಸುರಿಯು ಪಾಲಿಸಬೇಕಾದ ನಿಯಮುಗಳನ್ನೂ ಹೇಳಿದ್ದಾರೆ. ಅಲ್ಲದೆ ಮಕ್ಕಳಲ್ಲಿ ಯಾವ ವಿಧದ ಗುಣಗಳನ್ನು ಬೆಳೆಸಲು ಬಯಸುವಳೋ ಅಂತಹ ಗುಣವುಳ್ಳ ವ್ಯಕ್ತಿ ಪರಿಸ್ಥಿತಿಗಳ ಸಂಪರ್ಕದಲ್ಲಿಯೇ ಇರಬೇಕೆಂದೂ ಹೇಳಿದ್ದಾರೆ. (ಇಚ್ಛೇತಾಂ ಯಾದೃಶಂ ಪುತ್ರಂ ತದುಪಚರಿತಾಂಶ್ಚ ಚಿಂತಯೇತಾಂ॥) ಆದುದರಿಂದ ಶಿಕ್ಷಣವಿಷಯಕ ಸುಧಾರಣೆಗಳನ್ನು ಸಾಧಿಸಬಯಸುವವರು ಗರ್ಭಿಣಿಯರನ್ನು ಶಾಂತ, ತುಷ್ಟ, ಪುಷ್ಟರನ್ನಾಗಿ ಇಡುವದರ ಕಡೆಗೆ ಗಮನಕೊಡುವದು ಆದ್ಯಕರ್ತವ್ಯವಾಗಿದೆ.

ಇನ್ನು ನವೋದಿತವಾದ ಕಿಂಡರ್‌ಗಾರ್ಟನ್, ಮೊಂಟೆಸರಿ, ನರ್ಸರಿ ಮುಂತಾದ ಶಿಶುಶಿಕ್ಷಣ ಕ್ರಮುಗಳು ಓಡಾಡುವ, ಮಾತಾಡುವ ಮಕ್ಕಳಿಗೆ ಅನ್ವಯಿಸುವಂತಹವುಗಳಾಗಿವೆ. ಆದರೆ ಅದಕ್ಕಿಂತ ಪೂರ್ವದಲ್ಲಿಯೂ ಅಂದರೆ ೧ ರಿಂದ ೩ ವರ್ಷಗಳ ವರೆಗೂ ಮಕ್ಕಳಿಗೆ ಒಳ್ಳೆ ಸಂಸ್ಕಾರಗಳನ್ನು ಮಾಡಲಿಕ್ಕೆ ಬಹಳವಾಗಿ ಎಡೆಯಿದೆ. ಅನೇಕ ಮಕ್ಕಳಿಗೆ ಬಡತನದ ಮೂಲಕ ಇಲ್ಲವೆ ತಾಯಂದಿರ ಅಶಕ್ತಿಯ ಮೂಲಕ ಸಾಕಷ್ಟು ಹಾಲೆ ಸಿಗುವದಿಲ್ಲ. ಅದು ಹಸಿವೆಯಿಂದ ಅತ್ತು ಅತ್ತು ದಿನಾಲು ಹೈರಾಣಾದರೆ ಅದರ ನರಮಂಡಲವೆಲ್ಲ ನುಗ್ಗುನುಗ್ಗಾಗದೆ ಉಳಿದೀತೇ! ಒಮ್ಮೆ ನರಮಂಡಲಕ್ಕೆ ಅಭ್ಯಸ್ತವಾದ ಅತೃಪ್ತಿಯೆ ಮುಂದೆ ಮಕ್ಕಳನ್ನು ಕಳ್ಳತನಕ್ಕೆ ಪ್ರವೃತ್ತರನ್ನಾಗಿ ಮಾಡುವದು. ಆದುದರಿಂದ ಶಿಶುಗಳಿಗೆ ಸಾಕಷ್ಟು ಆಹಾರವನ್ನು ಒದಗಿಸುವ ವ್ಯವಸ್ಥೆ ಬೇಕು. ತಾಯಿಯ ಹಾಲಿಲ್ಲದಾಗ ಕೃತ್ರಿಮ ಹಾಲಿನ ವ್ಯವಸ್ಥೆಯಾಗಬೇಕು. ಪಾಶ್ಚಾತ್ಯ ದೇಶಗಳಲ್ಲಿ ಮುಂದೆ ಮದುವೆಯಾಗಲಿಚ್ಛಿಸುವ ತರುಣಿಯರಿಗೆ ಮಕ್ಕಳನ್ನು ಪೋಷಿಸುವ, ಮಕ್ಕಳಿಗೆ ನಿರ್ಮಲವಾದ ರೀತಿಯಲ್ಲಿ ಆಹಾರ ವುಣಿಸುವ ಶಿಕ್ಷಣವನ್ನು ಕೊಡುವ ಶಾಲೆಗಳಿವೆ. ಅನಾಥಾಲಯದ ಮಕ್ಕಳನ್ನು ಅವರು ಪೋಷಿಸಬೇಕಾಗುತ್ತದೆ. ಶಿಶುಗಳು ಹುಟ್ಟಿದಾಗಿನಿಂದ ಸ್ವಚ್ಛವಾದ ವಸ್ತ್ರ, ನಿರ್ದುಷ್ಟವಾದ ಆಹಾರ, ನಿರ್ಮಲವಾದ ಪರಿಸ್ಥಿತಿಗಳಲ್ಲಿಯೆ ಬೇಡ, ಮುಂದೆ ಅವಕ್ಕೆ ಆರೋಗ್ಯದ ಪಾಠಗಳನ್ನು ಹೇಳುವ ಅವಶ್ಯಕತೆಯೆ ಬರುವದಿಲ್ಲ.

ಬೆಳಿಗ್ಗೆ ಎದ್ದಕೂಡಲೆ ಮಲಮೂತ್ರವಿಸರ್ಜನಗಳು ಶಿಶುಗಳಿಗೆ ನೈಸರ್ಗಿಕವಾಗಿಯೆ ಆಗುತ್ತವೆ. ಆದರೆ ಮುಖ ತೊಳೆಯುವದು, ಸ್ನಾನ ಮಾಡುವದು, ಹಲ್ಲು ತಿಕ್ಕುವದು ಮುಂತಾದ ನಿತ್ಯಕ್ರಿಯೆಗಳು ಅವಕ್ಕೆ ಅಭ್ಯಸ್ತವಾಗಬೇಕಾದರೆ ತಾಯಿಯು ಅದನ್ನೆಲ್ಲ ಬೇಸರಿಯದೆ ಮಾಡಬೇಕು. ಅತ್ತಾಗಲೊಮ್ಮೆ ಅದಕ್ಕೆ ಸ್ತನಪಾನ ಮಾಡಿಸಿದರೆ ಶಿಶುಸಂಗೋಪನವು ಪೂರ್ಣವಾಗಲಿಲ್ಲ. ಆದುದರಿಂದ ತಾಯಿಯಾಗಬಯಸುವವರಿಗೆ ಶಿಶುವಿನ ಆಹಾರ, ಪೋಷಣ ವಿಷಯವನ್ನು ಕಲಿಸುವ ಶಾಲೆಗಳನ್ನು ತೆರೆಯುವದು ಶಿಕ್ಷಣಶಾಸ್ತ್ರಿಗಳ ಲಕ್ಷ್ಯದಲ್ಲಿ ಆವಶ್ಯವಾಗಿರಬೇಕು. ಏಕೆಂದರೆ ಹುಟ್ಟುಗುಣ ಸುಟ್ಟರೂ ಹೋಗದು.

ಒಬ್ಬ ಹೆಣ್ಣುಮಗಳು ಕಂಡ ಹಾಗೆ—

ಶ್ರೀಮತಿ ಸೌ. ಎಂ. ರಮಾಬಾಯಿ
ಗೌರವ ಸಂಚಾಲಿಕಾ,
ಬೆಝೊಂಟ್ ನ್ಯಾಶನಲ್ ಗರ್ಲ್ಸ್‌ಸ್ಕೂಲ್, ಮಂಗಳೂರು

ಮಕ್ಕಳು ಮಂಕಾಗಿರುವುದು

ನಮ್ಮ ದೇಶದ ಶಾಲೆಗಳಲ್ಲಿ ಪ್ರಾಮುಖ್ಯವಾಗಿ ಕಾಣುವ ಒಂದು ದೋಷವೆಂದರೆ, ಮಕ್ಕಳು ಶಾಲೆಯಲ್ಲಿ ಮಂಕಾಗಿರುವುದು. ತಾಯಿ ತಂದೆಗಳ ಅಜ್ಞಾನದಿಂದಲೊ ಬಡತನದಿಂದಲೊ ಹಲವು ಮಕ್ಕಳು ಮನೆಯಲ್ಲಿಯೂ ದುಃಖಿಗಳೆ ಆಗಿರುತ್ತಾರೆಂಬುದು ನಿಜ. ಆದರೆ ಅವರು ಶಾಲೆಗಳಲ್ಲಿಯೂ ಉಲ್ಲಾಸರಹಿತ ರಾಗಿಯೆ ಇದ್ದು, ಶಾಲೆಯಿಂದ ಓಡಿಹೋಗುವಷ್ಟು ಬೇಸರ ಪಟ್ಟವರಾಗಿರುತ್ತಿದ್ದುದು ದುರ್ದೈವದ ಸಂಗತಿ ! ಇನ್ನು ಮನೆಯಲ್ಲಿ ಉತ್ಸಾಹಿಗಳಾಗಿದ್ದ ಮಕ್ಕಳು ಶಾಲೆಯಲ್ಲಿ ದುಃಖಿಗಳಾಗಿರುವುದೆಂದರೆ ಬಹು ವಿಷಾದದಾಯಕ ಪರಿಸ್ಥಿತಿಯೆ ಸೈ.

ಸಾಮಾನ್ಯ ಕಾರಣಗಳು

ಶಾಲೆಗಳಿಗೆ ಅವುಗಳ ಶಕ್ತಿಮೀರಿದ ಹೊಣೆಗಾರಿಕೆಯಿರುವುದು; ಆ ಹೊಣೆಯನ್ನು ನಿರ್ವಹಿಸುವುದರಲ್ಲಿ ಅವುಗಳಿಗೆ ಹೊರಗಿನ ಸಹಾಯವು ಕೊಂಚವೂ ಸಿಗುತ್ತಿಲ್ಲ. ಆಧುನಿಕ ಮಾದರಿಯ ಶಾಲೆಗಳು ಪ್ರಾರಂಭವಾದಾಗ ಮೊದ ಮೊದಲು ಅವುಗಳ ಗುರಿಯು ಸರಳವಾಗಿತ್ತು. ಗಂಡು ಹುಡುಗರಿಗೆ (ಕ್ರಮೇಣ ಹುಡುಗಿಯರಿಗೂ) ಓದು ಬರಹವನ್ನು ಕಲಿಸುವುದು; ಯಾವುದಾದರೊಂದು ಉಪಜೀವಿಕೆಯ ದಾರಿಯನ್ನು ಹಿಡಿಯಲು ಸಮರ್ಥರನ್ನಾಗಿ ಮಾಡುವುದು ಇದೆ ಶಿಕ್ಷಣದ ಧ್ಯೇಯವಾಗಿತ್ತು. ಬರಬರುತ್ತ ಪಾಶ್ಚಾತ್ಯಶಿಕ್ಷಣದ ಪರಿಣಾಮವಾಗಿಯೂ, ನಮ್ಮ ಪ್ರಾಚೀನ ಶಿಕ್ಷಣಕ್ರಮದ ಪುನರಾಲೋಕನದಿಂದಲೂ ಹೊಸ ಹೊಸ ಕಲ್ಪನೆಗಳು ಶಾಲೆಗಳಲ್ಲಿ ತಲೆಹಾಕಿದವು. ಅವೆಲ್ಲ ಕಲ್ಪನೆಗಳೂ ಕಾರ್ಯರೂಪದಲ್ಲಿಳಿಯಬೇಕೆಂಬುದು ನಮ್ಮ ಹಟ. ಆದರೆ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಮಾತ್ರ ನಾವು ಕಲ್ಪಿಸುತ್ತಿಲ್ಲ.

ಧ್ಯೇಯಗಳಲ್ಲಿ ತೊಡಕು

ನಮ್ಮ ಬಾಲಿಕೆಯರ ಮದುವೆಯು ಅನಿವಾರ್ಯಕಾರಣಗಳಿಂದ ಬಹಳ ತಡವಾದರೆ, ಇಲ್ಲವೆ ಮದುವೆಯಾದ ನಂತರವೂ ಅವರ ದಾಂಪತ್ಯದಲ್ಲಿ ವೈಷಮ್ಯವುಂಟಾದರೆ, ಅವರು ಪುರುಷರಂತೆಯೆ ಸ್ವಾವಲಂಬಿಗಳಾಗುವಂತಹ ಸಮಾನ ಶಿಕ್ಷಣವನ್ನು ಕೊಡಬೇಕೆಂದು ಒಮ್ಮೆ ನಾವು ಬಯಸುತ್ತೇವೆ. ಅದರೊಡನೆಯೆ ಅವರು ಒಳ್ಳೆ ಗೃಹಿಣಿಯರೂ ಕಲಾವತಿಯರೂ ಸಂಸ್ಕೃತಮನಿಹೆಯರೂ ಆಗಬೇಕೆಂದು ಅಪೇಕ್ಷಿಸುತ್ತೇವೆ. ಇಂತಹ ಧ್ಯೇಯ-ಸಮುದಾಯವನ್ನು ಪೂರೈಸುವ ಶಿಕ್ಷಣಸಂಸ್ಥೆಗಳಿವೆಯೇ? ಇರುವುದು ಸಾಧ್ಯವೇ? ಇಷ್ಟೆಲ್ಲ ಬಯಕೆಗಳನ್ನು ಕೈಗೂಡಿಸಿಕೊಳ್ಳುವುದು ಬಾಲಿಕೆಯರ ದೈಹಿಕ ಮಾನಸಿಕ ಅಂಕೆಯೊಳಗಿನ ಮಾತೇ? ಇದರ ಪರಿಣಾಮವು ಒಳ್ಳೆಯದಾಗಬಹುದೇ? ಈ ಪ್ರಶ್ನೆಗಳನ್ನು ಕೇಳುವವರೂ ಇಲ್ಲ, ಉತ್ತರಿಸುವವರೂ ಇಲ್ಲ.

ಹುಡುಗರ ವಿಷಯವೂ ಅಷ್ಟೆ. 'ಔದ್ಯೋಗಿಕ ಶಿಕ್ಷಣ' ವೆಂಬುದೊಂದು ಇಂದಿನ ಬೆಡಗಿನ ಕೂಗೇ ಆಗಿದೆ. ಅಲ್ಲದೆ ಶಾರೀರಿಕಶಿಕ್ಷಣ, ವಿವಿಧಭಾಷಾಶಿಕ್ಷಣ, ಸ್ಕೌಟ್‌ಶಿಕ್ಷಣ, ಕಲಾಶಿಕ್ಷಣ ಹೀಗೆ ನೂರಾರು ವಿಷಯಗಳು ! ಆದರೆ ಅವುಗಳಿಗಾಗಿ ವಿಚಾರಪೂರಿತವಾಗಿ ಕಲ್ಪಿಸಿದ ಶಿಕ್ಷಣಕ್ರಮಗಳೂ, ಸಂಸ್ಥೆಗಳೂ ಶಿಕ್ಷಕರೂ ಎಲ್ಲಿದ್ದಾರೆ ?

ಪ್ರಾಥಮಿಕ ಸಂಗತಿಗಳ ಅಲಕ್ಷ್ಯ

ಸಾಮಾನ್ಯ ಶಾಲೆಯಲ್ಲಿ ಮಗುವಿಗೆ ಆನಂದವನ್ನು ಹುಟ್ಟಿ

ಹೊಟೆಸರಿ ಮುಂತಾದ ಕ್ರಮಗಳಿಂದ ಸಿದ್ಧರಾದ ವ್ಯಕ್ತಿಗಳಿಂದ ತುಂಬಿದ ಸಮಾಜದ ಒಂದು ಮಸುಕಾದ ಚಿತ್ರವು ನಮ್ಮ ಮನದೆದುರಿನಲ್ಲಿದೆ. ಆದರೆ ಆ ಕನಸನ್ನು ಕಾರ್ಯಭೂಮಿಗಿಳಿಸುವಂತಹ ಮನೋಬಲ ನಮಗೆಲ್ಲಿದೆ ? ಆದ್ದರಿಂದಲೆ 'ಶಿಶುವಿಹಾರ, ಸ್ವತಂತ್ರಶಿಕ್ಷಣ'ಗಳ ಕ್ಷಣಿಕ ಸ್ವಪ್ನಲೀಲೆ ಮುಗಿದ ಕೂಡಲೆ ಬಾಲಬಾಲಿಕೆಯರು ಕಷ್ಟನಿಷ್ಠುರಗಳ ಕಠೋರ ಸತ್ಯದಿಂದ ತುಂಬಿದ ಜೀವನಸಮರವನ್ನು ಎದುರಿಸಬೇಕಾಗುತ್ತದೆ. ಸಮಾಜದ ಮುಂದಾಳುಗಳು ಶಿಕ್ಷಣದ ಧ್ಯೇಯಸಾಧನೆಯನ್ನು ನಿಚ್ಚಳವಾಗಿ ಕಲ್ಪಿಸುವ ವರೆಗೆ ಎಡ್ಮಂಡ್ ಹೋಮ್ಸ್ ಹೇಳುವಂತೆ .... ಮಕ್ಕಳಿಗೆ 'ಶಿಕ್ಷಣವು ಒಂದು ದುರಂತ ನಾಟಕ'ವಾಗುವುದು. ....

ಷುವ, ಇದ್ದ ಆನಂದವನ್ನು ಉಳಿಸುವ ಯಾವ ವಿಷಯವೂ ಇರುವುದಿಲ್ಲ. ಕಟ್ಟಡಗಳು ಚೆನ್ನಾಗಿರುವುದಿಲ್ಲ. ಕೋಣೆಗಳು ಸಂಕುಚಿತವಾಗಿಯೂ ಗಾಳಿ ಬೆಳಕುಗಳಿಗೆ ಸಾಕಷ್ಟು ಎಡೆ ಯಿಲ್ಲದೆಯೂ ಇರುತ್ತವೆ. ಆಸನಗಳು ಮಕ್ಕಳ ಕೋಮಲಾಂಗಗಳಿಗೆ ಪೀಡೆಕೊಡುವಂತಹವು. ಇಂತಹ ಶಾಲೆಗಳಲ್ಲಿ ನಗುವ ಮಗುವೂ ಮಂಕಾಗುವುದು. ಇವುಗಳೊಡನೆ ಭಾರತೀಯ ತಾಯಿತಂದೆಗಳ ದಾರಿದ್ರ್ಯ, ಅಜ್ಞಾನ. ಮಲಿನ ಪರಿಸ್ಥಿತಿಯಲ್ಲಿ ಬೆಳೆಮದರಿಂದ ಒಂದಿಲ್ಲೊಂದು ಬೇನೆಯೂ ಮಗುವನ್ನು ಕಾಡುತ್ತಿರುವುದು ಸಹಜವೆ. ಪೋಷಣೆಯು ಸಾಕಷ್ಟು ಇಲ್ಲವೆ ಕೊಂಚವೂ ಇಲ್ಲದಿರುವುದರಿಂದಲೆ ಮಕ್ಕಳು ನಿರುತ್ಸಾಹಿಗಳೂ ಜಡರೂ ಆಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರಿಗೆ ಈ ಪ್ರಾಥಮಿಕ ಸಂಗತಿಗಳನ್ನು ಲಕ್ಷಿಸುವುದು ಸಾಧ್ಯವಿಲ್ಲ. ಇವನ್ನು ನಿವಾರಿಸುವುದಂತೂ ಅವರ ಶಕ್ತಿಯ ಹೊರಗಿನ ಮಾತು. ಶಾಲೆಗಳ ವ್ಯವಸ್ಥಾಪಕರು ಧನಸಂಗ್ರಹದಲ್ಲಿ ತೊಡಗಬೇಕಾದುದರಿಂದ ಅವರಿಗೂ ಈ ವಿಷಯಗಳ ಅರಿವೆ ಇರುವುದಿಲ್ಲ.

ಶಿಕ್ಷಕರದೂ ಅದೆ ಹಣೆಬರೆಹ !

ಪ್ರತಿಯೊಂದರಲ್ಲಿ ಶಿಕ್ಷಕರೆ ನಿಂದೆಗೆ ಗುರಿಯಾಗುತ್ತಾರೆ. ಆದರೆ ಅವರ ಅಪರಾಧಗಳಿಗಿಂತ ಅವರ ಮೇಲಿನ ಆರೋಪಗಳೆ ಹೆಚ್ಚು. ಅವರ ಜೀವನವೆ, ಶಾಲೆಯ ನಿಯಮಗಳೆ ಅವರನ್ನು ನಿರುತ್ಸಾಹಿಗಳನ್ನಾಗಿಸುತ್ತಿರುವಾಗ ಅವರೆಲ್ಲಿಂದ ಶಾಲೆಗಳಲ್ಲಿ ಉಲ್ಲಾಸವನ್ನು ತಂದಾರು ! ಕಲ್ಪನಾಲೋಕದ ಧ್ಯೇಯವೊಂದು ಕಡೆ; ಜೀವನದ ಪ್ರತ್ಯಕ್ಷ ಅನುಭವವೊಂದು ಕಡೆ ಅವರನ್ನು ಜಗ್ಗಿ ಹಂಬುಗೊಳಿಸುತ್ತಿರುತ್ತವೆ. ಇಂತಹ ಹೋರಾಟದಲ್ಲಿ ಅವರು ಬಾಳುತ್ತಿದ್ದುದೆ ಆಶ್ಚರ್ಯ ! ತಾನೆ ಸಂಕಷ್ಟಸಾಗರದಲ್ಲಿ ಗುಟುಕರಿಸುತ್ತಿರುವವರು ತಮ್ಮ ಸುತ್ತಲಿನ ಮಕ್ಕಳಿಗೆ ಸಂತೋಷವನ್ನೆಲ್ಲಿಂದ ಬೀರುವರು ?

ಶಿಕ್ಷಿಕೆಯರ ಗತಿಯೂ ಅದೇ !

ಶಿಕ್ಷಕನಿಗಿಂತ ಶಿಕ್ಷಿಕೆಯರ ಗತಿ ಕಷ್ಟತರ. ಸೇವಿಕೆಯನ್ನು ಇಟ್ಟುಕೊಳ್ಳಲು ದುಡ್ಡಿಲ್ಲದುದರಿಂದ ಮನೆಯಲ್ಲಿ ದುಡಿಯಬೇಕು; ವಿವಾಹಿತೆಯಾಗಿದ್ದರೆ ಮಕ್ಕಳ ಮತ್ತು ಗಂಡನ ಆರೈಕೆಯನ್ನು ಮಾಡಬೇಕು; ಬಸುರು ಬಾಣಂತಿತನಗಳ ಶ್ರಮ ಬೇರೆ. ಇಂತಹ ದೈಹಿಕ ಮಾನಸಿಕ ಕಷ್ಟಗಳಿಂದ ಅವಳೇ ಬೇನೆಯಿಂದ ಕುಸಿಬೀಳುತ್ತಿದ್ದರೆ ಶಾಲೆಯ ಮಕ್ಕಳಿಗೆ ಹೇಗೆ ಅವಳಿಂದ ಆನಂದೋತ್ಸಾಹಗಳು ಸಿಗಬೇಕು ? ವಿಧವೆಯಾಗಿದ್ದು ಇಲ್ಲವೆ ಬ್ರಹ್ಮಚಾರಿಣಿಯಾಗಿದ್ದು ಶಿಕ್ಷಿಕೆಯಾಗಿದ್ದವಳ ಜೀವನವಾದರೂ ನಿರಾಶೆಯಿಂದಲೆ ತುಂಬಿ

ರುತ್ತದೆ. ರೋಮನ್ ಕ್ಯಾಥೊಲಿಕ್ ಬ್ರಹ್ಮಚಾರಿಣಿಯರು ಉಲ್ಲಾಸವಾಗಿರುವುದಿಲ್ಲವೇ?—ಎಂದು ಕೆಲವರು ಕೇಳುವರು. ಸಾಮಾಜಿಕ ಬಂಧನಗಳಿಂದ ನುಗ್ಗಾದ ಜೀವಿಗಳಿಂದ ಅಂತಹ ಆತ್ಮಪ್ರೇರಿತ ಸ್ವಾರ್ಥತ್ಯಾಗವನ್ನು ನಾವು ಬಯಸುವುದೆ ಹುಚ್ಚುತನ. ಮದ್ರಾಸಿನಲ್ಲಿದ್ದಂತೆ ವಿವಾಹಿತೆಯರಿಗಿಂತ ಬ್ರಹ್ಮಚಾರಿಣಿ ಇಲ್ಲವೆ ವಿಧವೆಯರೇ ಶಿಕ್ಷಿಕೆಯರ ಕೆಲಸಕ್ಕೆ ಯೋಗ್ಯರೆಂಬ ಸರಕಾರಿ ಒಣ ನಿಯಮಗಳಿಂದ ಈ ಸ್ಥಿತಿಯೇನೂ ಸುಧಾರಿಸುವಂತಿಲ್ಲ. ಬರಿ ಗೌನು, ಮುಖಾವಗುಂಠನ ಹಾಕಿಕೊಂಡರೆ ಸ್ವಾರ್ಥತ್ಯಾಗದ ಪ್ರವೃತ್ತಿಯುಂಟಾಗಲಾರದೆಂಬುದು ಕಂಡ ಮಾತಾಗಿದೆ.

ಬಾಲ್ಯಾವಸ್ಥೆಯ ಅಪವ್ಯಯ


ಮಕ್ಕಳ ಚಿಕ್ಕಂದಿನ ಶಿಕ್ಷಣದಲ್ಲಿ ಅವರ ಬಾಲ್ಯದ ಅಪವ್ಯಯವಾಗುತ್ತಿರುವುದಿನ್ನೊಂದು ಗಮನಾರ್ಹವಾದ ವಿಷಯ. ಇತ್ತೀಚೆ ಕಿಂಡರ್‌ಗಾರ್ಟನ್ ಮತ್ತು ಮೊಂಟೆಸರಿ ಶಿಕ್ಷಣ ಕ್ರಮಗಳನ್ನು ಅತ್ಯುತ್ಸಾಹದಿಂದಲೂ ಅತಿವೆಚ್ಚದಿಂದಲೂ ಅನುಸರಿಸುವ ಪ್ರವೃತ್ತಿಯಾಗುತ್ತಿದೆ. ವ್ಯಕ್ತಿವಿಕಾಸ ಕಲ್ಪನಾಶಕ್ತಿ , ಸಹಕಾರಿತೆ, ನಿರ್ಭೀತಿ ಮತ್ತು ಜೀವನವನ್ನು ಉನ್ನತ ಹಾಗೂ ಸುಖಮಯವನ್ನಾಗಿಸುವ ಪ್ರತಿಯೊಂದು ಗುಣವೂ ಮಕ್ಕಳಲ್ಲಿ ನೆಡಲ್ಪಟ್ಟು ಪ್ರೋತ್ಸಾಹಿಸಲ್ಪಡುತ್ತಿದೆ; ಆದರೆ ಅದೆಲ್ಲ ಪ್ರಾಥಮಿಕ ವರ್ಗಗಳ ಹೊಸ್ತಿಲು ದಾಟುವವರೆಗೆ ಮಾತ್ರ! ಮಗುವು ತಾರುಣ್ಯದ ಬಾಗಿಲಿಗೆ ಬರುವುದರೊಳಗಾಗಿ ಅದು ಈವರೆಗೆ ಕಲಿತ ಉನ್ನತಗುಣಗಳನ್ನು ಮರೆಯಬೇಕಾಗುವುದಲ್ಲದೆ ಜಗತ್ತಿನ ಕಟ್ಟುಕಟ್ಟಳೆ ಪರಾಧೀನತೆಗಳು ಅದನ್ನು ಬೆದರಿಸಲಾರಂಭಿಸುತ್ತವೆ. ಈ ವಿರುದ್ಧ ಪರಿಸ್ಥಿತಿಯಲ್ಲಿಯೂ ಬಾಲಬಾಲಿಕೆಯರು ನುಗ್ಗಾಗವೆ ಇರುವುದು ಅವರಲ್ಲಿರುವ ಅಸಾಮಾನ್ಯ ಶಕ್ತಿಯ ದ್ಯೋತಕವಾಗಿದೆ ಅಷ್ಟೆ. ಆದರೆ ಅವರು ಬಗ್ಗುವರು; ಅವರ ಭಾವನೆಗಳು ಹುಡಿಯಾಗುವವು; ಮನೋಬಲವು ತತ್ತರಿಸುವುದು ! ಇದನ್ನೆಲ್ಲ ನೋಡಿ ನಾವು ಶಿಕ್ಷಣಕ್ಕೆ ಹೆಸರಿಡುತ್ತೇವೆ !

ಶಿಕ್ಷಣದ ದುರಂತ

ವಸ್ತುತಃ ಶಿಕ್ಷಣದ ವಿಷಯಕ್ಕೆ ನಮ್ಮ ಕಲ್ಪನೆಗಳೆ ನಿಚ್ಚಳವಾಗಿಲ್ಲ. ನಮಗೆ ಎಂತಹ ಸಮಾಜವನ್ನು ಕಟ್ಟಬೇಕಾಗಿದೆ ! ಮೊಂಟೆಸರಿ ಮುಂತಾದ ಕ್ರಮಗಳಿಂದ ಸಿದ್ಧರಾದ ವ್ಯಕ್ತಿಗಳಿಂದ ತುಂಬಿದ ಸಮಾಜದ ಮಸುಕಾದ ಚಿತ್ರವು ನಮ್ಮ ಮನದೆದುರಿನಲ್ಲಿದೆ. ಅವರ ಕನಸನ್ನು ಕಾರ್ಯಭೂಮಿಗಿಳಿಸುವಂತಹ ಮನೋ

ಹಮಗೆಲ್ಲಿದೆ? ಆದ್ದರಿಂದಲೆ 'ಶಿಶುವಿಹಾರ, ಸ್ವತಂತ್ರಶಿಕ್ಷಣ' ಗಳ ಕ್ಷಣಿಕ ಸ್ವಪ್ನಲೀಲೆ ಮುಗಿದಕೂಡಲೆ ಬಾಲಬಾಲಿಕೆ ಯರು ಕಷ್ಟನಿಷ್ಠುರಗಳ ಕಠಿಣ ಸತ್ಯದಿಂದ ತುಂಬಿದ ಜೀವನಸಮರವನ್ನು ಎದುರಿಸಬೇಕಾಗುತ್ತದೆ. ಸಮಾಜದ ಮುಂದಾಳುಗಳು ಶಿಕ್ಷಣದ ಧ್ಯೇಯಸಾಧನಗಳನ್ನು ನಿಚ್ಚಳ ವಾಗಿ ಕಲ್ಪಿಸುವವರೆಗೆ ಎಡ್ಮಂಡ್ ಹೋಮ್ಸ್ ಹೇಳುವಂತೆ ಮಕ್ಕಳಿಗೆ 'ಶಿಕ್ಷಣವು ಒಂದು ದುರಂತನಾಟಕ' ವಾಗು ವುದು.*

* ಲೇಖಿಕೆಯರು ಮಂಗಳೂರಿನ ಶ್ರೀ. ಎಂ. ಎಸ್. ಮಾಧವ ರಾವ್ ಅವರ ಸುವಿದ್ಯ ಪತ್ನಿಯವರು. (ಶ್ರೀ. ಮಾಧವರಾಯರ ಲೇಖನವು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಬಂದಿದೆ.) ಬೆಜಂಟ್ ಶಾಲೆಯ ಗೌರವ ಸುಪರಿಂಟೆಂಡಂಟರೂ ಮಹಿಳೆಯರ ಸಂಘಟನೆಗಳಲ್ಲಿ ಪ್ರಮುಖ ಭಾಗ ವಹಿಸುವವರೂ ಆಗಿದ್ದಾರೆ.


ಭಿಷಗ್ರತ್ನ ಆಯುರ್ವೇದವಿದ್ವಾನ್ ಬಿ.ವಿ. ಪಂಡಿತರ
ಶ್ರೀ ಕರಕಸ್ತೂರಿಮಾತ್ರೆ
ಮಕ್ಕಳ ಮತ್ತು ದೊಡ್ಡವರ ಸಮಸ್ತ ಶೀತ ವಾತ ರೋಗಗಳಿಗೂ ಸಂಜೀವನ
4 ಆಣೆ
ಬಾಲಸಂಜೀವಿನಿ
ಮಕ್ಕಳಿಗೆ ಸುಖವಾಗಿ ಭೇದಿಮಾಡಿಸಿ ಅಜೀರ್ಣ ಜ್ವರಗಳನ್ನು ನಿಲ್ಲಿಸುತ್ತ
4 ಆಣೆ
ಸದ್ವೈದ್ಯ ಶಾಲಾ ನಂಜನಗೂಡು

ಅತಿ ಮುದ್ದಿಸಿದ ಮಗು

ಲೇ: ಶ್ರೀ. ಸಿ. ವಿ. ಶ್ರೀನಿವಾಸಮೂರ್ತಿ, ಎಂ. ಎ.,
ಮಹಾರಾಜಾ ಕಾಲೇಜು, ಮೈಸೂರು

ತಮ್ಮ ಮಕ್ಕಳು ಮುಂದಕ್ಕೆ ಬರಬೇಕು, ವಂಶದ ಹೆಸರನ್ನು ಎತ್ತಿಹಿಡಿಯಬೇಕು, ಆದರ್ಶಪುರುಷರಾಗಬೇಕು, ಮಹಾತ್ಮಾ ಗಾಂಧಿಯವರಂತಾಗಬೇಕು, ಎಂಬ ಆಶೆ ಎಲ್ಲ ತಂದೆತಾಯಿಗಳಿಗೂ ಇರುತ್ತದೆ. ಆದರೆ ಅನೇಕರಿಗೆ ಆ ಆಶೆಗಳಿದ್ದರೂ, ಅವುಗಳಿಗನುಗುಣವಾಗಿ ಮಕ್ಕಳನ್ನು ಸಾಕಬೇಕೆಂಬ ಆಸಕ್ತಿಯಿರುವುದಿಲ್ಲ. ಆಸಕ್ತಿಯಿದ್ದ ಕೆಲವರಿಗೆ ಸರಿಯಾದ ಮಾರ್ಗಗಳ ಪರಿಚಯವಿರುವುದಿಲ್ಲ. ಇವೆರಡೂ ನಮ್ಮ ತಾಯಿತಂದೆಗಳಲ್ಲಿರುವ ಕುಂದು ಕೊರತೆಗಳು. ಇವುಗಳನ್ನು ನಿವಾರಣೆ ಮಾಡಿಕೊಳ್ಳಲು ಈಗ ಅನುಕೂಲಗಳು ಒದಗಿವೆಯೆನ್ನಬಹುದು. ಮನಶ್ಶಾಸ್ತ್ರಜ್ಞರೂ ಮತ್ತು ವಿದ್ಯಾಶಾಸ್ತ್ರಜ್ಞರೂ ಮಕ್ಕಳ ಬೆಳವಣಿಗೆಯ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟು, ಅನೇಕ ಶೋಧನೆಗಳನ್ನು ನಡೆಸಿ ಉಪಕಾರಮಾಡಿದ್ದಾರೆ. ಅವರು ಮಾಡಿರುವ ಶೋಧನೆಗಳನ್ನು ಜನಸಾಮಾನ್ಯವು ತಿಳಿಯುವುದು ಆವಶ್ಯಕ.

ಮಕ್ಕಳ ಬೆಳವಣಿಗೆಯ ವಿಷಯ ಬಹು ದೊಡ್ಡ ವಿಷಯ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಮುಂದಿನ ಪ್ರಜೆಗಳನ್ನು ಸರಿಯಾಗಿ ತರಪೇತು ಮಾಡಬೇಕಾದರೆ ಏನೇನು ಮಾಡಬೇಕೆಂದು ಎಷ್ಟು ಹೇಳಿದರೂ ಸಾಲದು. ಆದುದರಿಂದ ಈ ಮುಖ್ಯ ಸಮಸ್ಯೆಯ ಒಂದು ಭಾಗವನ್ನು ಮಾತ್ರ ಇಲ್ಲಿ ತಿಳಿಸಲಾಗುವುದು. ಇದು ಮಗುವನ್ನು ಪ್ರೀತಿಸುವ, ಮುದ್ದಿಡುವ ವಿಷಯ. ಅತಿಯಾಗಿ, ವಿವೇಕವಿಲ್ಲದೆ, ಮುದ್ದಿಸಿದ ಮಗುವಿನ ವಿಷಯ.

ಮಗುವನ್ನು ಹೆಚ್ಚಾಗಿ ಪ್ರೀತಿಸುವವರು ತಾಯಿ ಎಂದು ಬೇರೆ ಹೇಳಬೇಕಾಗಿಲ್ಲ. ಇದನ್ನು ಓದುವವರಲ್ಲಿ ಯಾರಾದರೂ ತಾಯಿಯರಿದ್ದರೆ ನನ್ನ ಮೇಲೆ ಹೀಗಂದನೆಂದು ರೇಗಬಾರದು. ಅವರೇ ಈ ವಿಷಯವನ್ನು ಸ್ವಲ್ಪ ವಿಚಾರಮಾಡಿ ನೋಡಿದರೆ ನಾನು ಹೇಳುವುದು ನಿಜವೆಂದು ಒಪ್ಪಿಕೊಳ್ಳುವರು. ಒಂದೇ ಒಂದು ಮಗುವು ಇರುವ ಕುಟುಂಬಗಳಲ್ಲಿ ಅದರಲ್ಲೂ ಒಂದೇ ಒಂದು ಗಂಡುಮಗುವಿರುವ ಕುಟುಂಬದಲ್ಲಿ ಈ ಅತಿಮುದ್ದಿನ ಹಾವಳಿ ಜಾಸ್ತಿ. ಇದು ಆ ಮಗುವಿನ ಬೆಳವಣಿಗೆಗೆ ಅನೇಕ ತೊಂದರೆಗಳನ್ನುಂಟು ಮಾಡುತ್ತದೆ.

> ಮಗುವಿಗೇ ಸ್ವಾತಂತ್ರ್ಯ ಕೊಟ್ಟು, ಮಗು ಮಾಡಬಲ್ಲ ಎಲ್ಲ ಕೆಲಸಗಳನ್ನು ಅದಕ್ಕೇ ಮಾಡಲು ಅವಕಾಶ ಕೊಟ್ಟರೆ ಹುಟ್ಟುಗುಣ ಬೆಳೆಯಲು ಸಹಾಯ ಮಾಡಿದಂತಾಗುತ್ತದೆ. ಮಗು ಮೊದಲು ತನ್ನ ಸುತ್ತಮುತ್ತಲಿರುವ ಸಾಮಾನುಗಳನ್ನು ನೋಡಿ, ಅವುಗಳ ಸ್ವರೂಪವನ್ನು ತಿಳಿಯುತ್ತದೆ. ಆ ಮೇಲೆ ಪದಾರ್ಥಗಳ ವಿಷಯಜ್ಞಾನ ಪಡೆಯುತ್ತದೆ. ಇನ್ನೂ ಸ್ವಲ್ಪ ವಯಸ್ಸಾದ ಮೇಲೆ ಸ್ವತಃ ಕೆಲಸ ಮಾಡುವುದನ್ನೂ ಅದರಿಂದ ಸಂತೋಷ ಪಡುವುದನ್ನೂ ಕಲಿಯುತ್ತದೆ. ಮಗುವನ್ನು ಅತಿಯಾಗಿ ಮುದ್ದಿಸಿ ಒಂದೇ ಕಡೆ ಇಟ್ಟರೆ, ಈ ಗುಣಗಳು ಅದರಲ್ಲಿ ಬೆಳೆಯಲಾರವು.

ಮಗುವನ್ನು ಪ್ರೀತಿಸುವುದು ತಪ್ಪೇ? ಎಂದು ಕೇಳಬಹುದು. ಪ್ರೀತಿಸುವುದು ತಪ್ಪಲ್ಲ. ಅದರಲ್ಲಿಯೂ ಒಂದು ಕ್ರಮವಿದೆ ಎಂದು ತಿಳಿಯದಿರುವುದು ತಪ್ಪು. ಪ್ರೀತಿಯಿಂದ ಮಗುವಿಗೆ ಒಳ್ಳೆಯದಾಗಬೇಕೇ ಹೊರತು ಕೆಟ್ಟದ್ದಾಗಬಾರದು. ಮಗುವಿನ ಮೇಲಿನ ಪ್ರೀತಿಯಿಂದ ಅದು ಕೇಳಿದಾಗಲೆಲ್ಲಾ ತಿಂಡಿಯನ್ನು ಕೊಟ್ಟರೆ ಅದಕ್ಕೆ ಹೊಟ್ಟೆಯುಬ್ಬರಿಸಿಕೊಳ್ಳುತ್ತದೆ. ಆಗ ನಮ್ಮ ಪ್ರೀತಿಯಿಂದ ಕೆಡುಕಾದಂತಾಗಲಿಲ್ಲವೆ? ಮಗುವಿನ ಮೇಲಿನ ಪ್ರೀತಿಯಿಂದ ಮಿತವಾಗಿ ಆಹಾರ ಕೊಟ್ಟರೆ ಅದಕ್ಕೆ ಒಳ್ಳೆಯದಾಗುವುದರಲ್ಲಿ ಸಂದೇಹವಿಲ್ಲ. ಮಗು ಅತ್ತಾಗಲೆಲ್ಲ ಆಹಾರವನ್ನು ಕೊಡುವುದು ನಮಗೆ ರೂಢಿಯಾಗಿ ಹೋಗಿದೆ. ಹಸಿವಿನಿಂದಲೇ ಮಗು ಅಳುತ್ತದೆ ಎಂಬ ಭಾವನೆ ನಮ್ಮಲ್ಲಿರುವಂತೆ ಕಾಣುತ್ತದೆ. ಈ ಭಾವನೆಯಿಂದ ಮಗುವಿನ ಬೆಳವಣಿಗೆಗೆ ಅನೇಕ ತೊಂದರೆಗಳುಂಟಾಗುವುದರಲ್ಲಿ ಸಂದೇಹವಿಲ್ಲ. ದೇಹಕ್ಕೇನಾದರೂ ನೋವುಂಟಾದರೆ ಮಗು ಅಳುತ್ತದೆ. ಇರುವೆ ಕಚ್ಚಿದರೆ, ಸೊಳ್ಳೆ ಕಡಿತದಿಂದ ನಿದ್ದೆ ಬರದಿದ್ದರೆ, ಅಳಬಹುದು. ಕತ್ತಲೆಕೋಣೆಯಲ್ಲಿ ಮಲಗಿದ ಮಗು ಕಣ್ಣು ಬಿಟ್ಟು ಹೆದರಿಕೆಯಿಂದ ಅಳಬಹುದು. ತಾಯಿಯ ಜೊತೆಯಲ್ಲಿಯೇ ಬೆಳೆದು ತಾಯಿಯ ಅಭ್ಯಾಸವೇ ಜಾಸ್ತಿಯಾದ ಅತಿ ಮುದ್ದಿನ ಮಗು ತಾಯಿಯನ್ನು

ಬಿಟ್ಟಿರಲು ಒಪ್ಪುವುದಿಲ್ಲ. ಜೊತೆಯಲ್ಲಿರಬೇಕೆಂಬ ಆದರಿಷ್ಟ ನೆರವೇರದಿದ್ದರೆ ಮಗು ಅಳುವುದು. ಅದು ಹಸಿವಿನಿಂದಲೇ ಅಳುತ್ತದೆ ಎಂಬ ಭಾವನೆ ತಪ್ಪು. ಮಗು ಒಂದು ಮೂಕ ಜಂತು; ಹಸಿವಾದರೆ ಏನು ತಿಳಿಯುತ್ತೆ? ಎಂದು ಯೋಚಿಸಿ ಹಸಿವಿಗೂ ಅದರ ಅಳುವಿಗೂ ಗಂಟುಹಾಕಿ ಮಗುವಿನ ಮನಸ್ಸಿನಲ್ಲಿ ಆಹಾರ ಬೇಕಾದಾಗಲೆಲ್ಲಾ ಅಳಬೇಕು ಎಂಬ ತಪ್ಪು ಅಭಿಪ್ರಾಯವನ್ನು ಉಂಟುಮಾಡಿಕೊಡಬಾರದು. ಮಗುವು ಬೆಳೆದ ಮೇಲೂ ತನಗೆ ಬೇಕಾದುದನ್ನು ಸಾಧಿಸುವುದಕ್ಕೆ ಅಳುವೇ ಪರಮೌಷಧವೆಂದು ತಿಳಿಯುವುದು. ಮನುಷ್ಯನಾದಮೇಲೂ ಈ ಅಭ್ಯಾಸವು ಬಿಡದಿರುವ ಸಂಭವವುಂಟು. ಈ ಕೆಟ್ಟ ಚಾಳಿಯನ್ನು ಬಿಡಿಸುವುದು ಬಹಳ ಕಷ್ಟ. ಬಿಡಿಸದಿದ್ದರೆ ಇನ್ನೂ ಕಷ್ಟ. ಇಂತಹ ಮಕ್ಕಳಿಗೆ ಇಂಗ್ಲೀಷಿನಲ್ಲಿ "Problem Children" ಸಮಸ್ಯೆಯ ಮಕ್ಕಳೆಂದು ಹೇಳುತ್ತಾರೆ. ಈತರಹ ಸಮಸ್ಯೆಯ ಮಕ್ಕಳು ಅನೇಕ ಮನೆಗಳಲ್ಲಿದ್ದಾರೆ. ಈ ಪರಿಸ್ಥಿತಿಯು ತಪ್ಪಬೇಕಾದರೆ ಶಾಸ್ತ್ರೀಯವಾದ ತಿಳುವಳಿಕೆಯನ್ನು ತಂದೆತಾಯಿಗಳು ಪಡೆಯಬೇಕು. ಹಸುಮಗುವಿನ ಸ್ವಭಾವವನ್ನು ಅರಿಯಬೇಕು. ಎಳೆಮಗುವಿಗೆ ಮಾತು ಬರುವುದಿಲ್ಲ. ನಿಜ. ಆದರೆ ಅದನ್ನು ಮೂಕಪ್ರಾಣಿಗಳೊಂದಿಗೆ ಸೇರಿಸಿಬಿಡಬಾರದು. ಮಗುವಿಗೂ ಆಲೋಚನಾಶಕ್ತಿಯಿದೆ, ಭಾಷೆಯನ್ನು ಕಲಿಯುವ ಶಕ್ತಿಯಿದೆ. ಪ್ರಾಣಿಗಳಿಗೆ ಈ ಶಕ್ತಿಗಳಿಲ್ಲ. ಮಗುವಿನ ಮನಸ್ಸು ಬಹುಸೂಕ್ಷ್ಮವಾದುದು. ಅದರ ಮನಸ್ಸನ್ನರಿತು, ಕೆಲಸಮಾಡುದನ್ನು ನಾವು ಕಲಿಯಬೇಕು. ಮಗುವನ್ನು ಅಳಬೇಕಾಗುವ ಸನ್ನಿವೇಶಗಳಿಂದ ದೂರಮಾಡಬೇಕು. ಅದರ ಮನಸ್ಸನ್ನು ಯಾವಾಗಲೂ ಶಾಂತರೀತಿಯಲ್ಲಿಟ್ಟಿರಬೇಕು.

ತಾಯಿಯು ಮಗುವಿನ ಮೇಲಿನ ಪ್ರೇಮದಿಂದ ಅದರ ಸುಖಕ್ಕಾಗಿ ಯಾವಾಗಲೂ ದುಡಿಯುವಳು. ಮಗುವಿಗೆ ಯಾವ ವಿಧವಾದ ತೊಂದರೆಯೂ ಇರಕೂಡದು, ಅದರ ಜೀವನವು ಸುಖಮಯವಾದದ್ದಾಗಿರಬೇಕು; ಎಂದು ಪ್ರತಿದಿನವೂ ಅದರ ಕೆಲಸವನ್ನು ತಾನೇ ಮಾಡುವಳು. ಮಗುವಿಗೆ ಹಲ್ಲುಜ್ಜುವುದು, ಮುಖತೊಳೆಸುವುದು, ಬಟ್ಟೆಹಾಕುವುದು, ಇತ್ಯಾದಿ ತಾಯಿಯೇ ಮಾಡುವಳು. ಇದರಿಂದ ಮಗುವಿಗೆ ತಾನು ಏನೂ ಮಾಡಕೂಡದೆಂಬ ಭಾವನೆ ಹುಟ್ಟುವುದು. ಅಷ್ಟೇ ಅಲ್ಲ; ಮಗುವಿಗೆ ಸ್ವತಂತ್ರವಾಗಿ ಓಡಾಡುವುದು, ಆಟವಾಡುವುದು, ಆಟವಾಡಿ ಸಂತೋಷಪಡುವುದು ಮುಂತಾದವುಗಳು ಅನುಭವಕ್ಕೆ ಬರಲು ಅವ

ಕಾಶವೇ ದೊರೆಯುವುದಿಲ್ಲ. ನಾಲ್ಕು ಮಕ್ಕಳೊಂದಿಗೆ ಸೇರಿ, ಇಂತಹ ಅತ್ಯಾವಶ್ಯಕವಾದ ಅನುಭವಗಳನ್ನು ಹೊಂದಿದ ಮಗು ಸಮಾಜದಲ್ಲಿ ಸುಖಜೀವಿಯಾಗಿ, ಸತ್ಪ್ರಜೆಯಾಗಿ ಬಾಳುತ್ತಾನೆಂದು ಹೇಳುವುದು ಕಷ್ಟ. ಹೀಗೆ ಬೆಳೆದ ಮಗು ಸಾಧಾರಣವಾಗಿ ಹಿಂದೆಬೀಳುವುದೆಂದೇ ಹೇಳಬಹುದು.

ಯಾವ ಮನುಷ್ಯನಿಗೇ ಆಗಲಿ, ಸ್ವಪ್ರಯತ್ನದಿಂದ ಮಾಡಿದ ಕಾರ್ಯದಲ್ಲಿ, ಸ್ವಪ್ರಯತ್ನದಿಂದ ಪಡೆದ ಫಲದಲ್ಲಿ ಪ್ರೇಮ ಹೆಚ್ಚು. ಪ್ರೇಮವುಮಾತ್ರವಲ್ಲ; ಮನಸ್ಸಿಗೂ ಅತಿಶಯವಾದ ಸಂತೋಷ. ಇದರಿಂದ ಮನಸ್ಸು ವಿಕಾಸಗೊಳ್ಳುವುದು. ಕಷ್ಟಪಟ್ಟು ಮನೆಯಲ್ಲಿ ಬೆಳೆಸಿದ ಕಾಯಿಪಲ್ಯಗಳ ರುಚಿ ಕೊಂಡುತಂದುದಕ್ಕೆ ಬರದು. ನಾವೇ ನೂತ ನೂಲಿನಿಂದ ತಯಾರಾದ ಖಾದಿಯ ಬಟ್ಟೆಯನ್ನು ಹಾಕಿಕೊಳ್ಳುವ ಸಂತೋಷವು ಯಂತ್ರದ ಬಟ್ಟೆಯಿಂದುಂಟಾಗಲಾರದು. ಈ ವಿಧವಾದ ಸಂತೋಷಕ್ಕೆ ಕಾರಣವೇನು? ನಮ್ಮ ವ್ಯಕ್ತಿತ್ವವು ಎಲ್ಲುಂಟೋ ಅಲ್ಲಿ ನಮಗೆ ಪ್ರೇಮವೂ ಸಂತೋಷವೂ ಹೆಚ್ಚು. ಈ ವ್ಯಕ್ತಿತ್ವವು ದೊಡ್ಡವರಲ್ಲಿ ಹೇಗೋ ಹುಡುಗರಲ್ಲಿಯೂ ಹಾಗೆಯೇ. ಈ ವ್ಯಕ್ತಿತ್ವವನ್ನು ಸರಿಯಾದ ಪೋಷಣೆಯಿಂದಲೂ, ವಿದ್ಯಾಭ್ಯಾಸದಿಂದಲೂ ವೃದ್ಧಿಗೊಳಿಸುವುದು, ತಂದೆತಾಯಿಗಳ ಕರ್ತವ್ಯ. ಅತಿ ಮುದ್ದು, ಕ್ರಮವಿಲ್ಲದ ಮುದ್ದು ಈ ವ್ಯಕ್ತಿತ್ವವನ್ನು ಮೊಟಕುಮಾಡುತ್ತದೆ.

ಮಗುವು ತನ್ನಷ್ಟಕ್ಕೆ ತಾನೇ ನಡೆಯುವುದರಲ್ಲಿ, ಬಟ್ಟೆ ಹಾಕಿಕೊಳ್ಳುವುದರಲ್ಲಿ, ಸ್ನಾನ ಮಾಡುವುದರಲ್ಲಿ, ಎಷ್ಟೋ ಸಂತೋಷಪಡುತ್ತದೆ. ಅತಿ ಮುದ್ದಿಸುವ ತಾಯಿಯು ತನ್ನ ಮಗುವು ಸಾಮಾನ್ಯವಾಗಿ ಪಡೆಯಬಹುದಾದ ಸುಖ ಸಂತೋಷಗಳಿಗೆ ಅಡ್ಡಿಯಾಗುವಳು. ಈ ರೀತಿಯ ಬೆಳವಣಿಗೆಯಿಂದ, ದೇಹವನ್ನು ಶುಚಿಯಾಗಿಟ್ಟುಕೊಳ್ಳುವುದಕ್ಕೆ ಸಹಾಯಕವಾದ ಸಣ್ಣ ಪುಟ್ಟ ಕೆಲಸಗಳಲ್ಲಿ ಕೂಡ ಕೆಲವು ದಿನಗಳಾದಮೇಲೆ ಮಗುವಿಗೆ ಬೇಸರ ಹುಟ್ಟುವುದು. ಅಲ್ಲದೆ ಮಾನಸಿಕ ಸಂಬಂಧವಾದ ಬೆಳವಣಿಗೆಗೆ ಅಡ್ಡಿಯುಂಟಾಗುವುದು.

ಮನುಷ್ಯನಿಗೆ ಸಾಮಾನ್ಯವಾಗಿ ಕೆಲವು ಹುಟ್ಟುಗುಣಗಳಿವೆ. ಆಹಾರವನ್ನು ಒದಗಿಸಿಕೊಳ್ಳುವುದು, ಅಸಹ್ಯಪಡುವುದು, ರೇಗುವುದು, ಆಶ್ರಯಿಸುವುದು, ವಿಷಯಗಳನ್ನು ತಿಳಿಯಲು ಇಚ್ಛಿಸುವುದು, ನಗುವುದು, ಜನರೊಡನೆ ಸೇರುವುದು, ಮಕ್ಕಳನ್ನು ಪ್ರೀತಿಸುವುದು ಮೊದಲಾದ

ಹುಟ್ಟುಗುಣಗಳೆನ್ನ ಬಹುದು. ಒಂದು ಮಗುವು ಯೋಗ್ಯ ನಾದ ಪ್ರಜೆಯಾಗಬೇಕಾದರೆ, ಈ ಹುಟ್ಟುಗುಣಗಳನ್ನು ತೊರೆಗೆಡಹಲು ಬೇಕಾಗುವ ಸನ್ನಿವೇಶಗಳನ್ನು ಒದಗಿಸಿ ಕೊಡಬೇಕು. ಈ ಹುಟ್ಟುಗುಣಗಳನ್ನು ನಾವು ಮಗುವಿನ ಮನಸ್ಸಿನಲ್ಲಿ ಅಡಗಿರುವ ಅನೇಕ ವಿಧವಾದ ಶಕ್ತಿಗಳೆಂದು ಹೇಳಬಹುದು. ಅವುಗಳಿಗೆ ಯೋಗ್ಯವಾದ ಸನ್ನಿವೇಶಗಳೊ ದಗಿದಲ್ಲಿ ಅವು ಹೊರಬಿದ್ದು ಜನತೆಯ ಏಳಿಗೆಗೆ ನೆರವಾಗು ವುವು. ಅವುಗಳಿಗೆ ವ್ಯತಿರಿಕ್ತವಾದ ಸಂದರ್ಭಗಳು ಒದಗಿದಲ್ಲಿ ಆ ಹುಟ್ಟುಗುಣಗಳನ್ನು ನಾವು ಅದುಮಿದಂತಾಗಿ, ಅವುಗಳ ಬೆಳೆಯನ್ನು ಮೊಟಕುಮಾಡಿದಂತಾಗುವುದು. ಅಷ್ಟೇ ಅಲ್ಲ, ಅವು ತಮ್ಮ ಏಳಿಗೆಗೆ ಅನನುಕೂಲವಾದ ಮಾರ್ಗ ದಲ್ಲಿ ಕೆಲಸಮಾಡಲಾರಂಭಿಸುವುವು.

ಈ ಹುಟ್ಟುಗುಣಗಳಲ್ಲಿ ಮಗುವನ್ನು ಪ್ರೀತಿಸುವುದೂ ಒಂದು ಹುಟ್ಟುಗುಣ. ಈ ಗುಣವು ಯಾರಲ್ಲಿ ಮಿತಿಮೀರಿ ಬೆಳೆದಿರುತ್ತದೆಯೋ ಅವರ ಮಕ್ಕಳು ಮುಂದಕ್ಕೆ ಬರಲು ಅಡಚಣೆಗಳು ಬಹು ಹೆಚ್ಚು. ಮಗುವಿನ ಸುಖವನ್ನು ಬಯಸಿ, ಮಗು ಮಾಡಬಲ್ಲ ಎಲ್ಲ ಕೆಲಸವನ್ನೂ ತಾನೇ ಮಾಡಬಯಸುವ, ಅತಿಯಾಗಿ ಮುದ್ದಿಸುವ ತಾಯಿಯು, ಮಗುವಿನಲ್ಲಿರುವ ಶಕ್ತಿಯು ಕಾಣಿಸಿಕೊಳ್ಳದಂತೆ ಮಾಡು ತ್ತಾಳೆ. ಮಗುವಿಗೇ ಸ್ವಾತಂತ್ರ್ಯಕೊಟ್ಟು ಮಗು ಮಾಡ ಬಲ್ಲ ಎಲ್ಲ ಕೆಲಸಗಳನ್ನೂ ಅದಕ್ಕೇ ಮಾಡಲು ಅವಕಾಶ ಕೊಟ್ಟಲ್ಲಿ, ಹುಟ್ಟುಗುಣ ಬೆಳೆಯಲು ಸಹಾಯಮಾಡಿದಂತಾ ಗುತ್ತದೆ. ಮಗು ಮೊದಲು ತನ್ನ ಸುತ್ತಮುತ್ತಲಿರುವ ಸಾಮಾನುಗಳನ್ನು ನೋಡಿ, ಅವುಗಳ ಸ್ವರೂಪವನ್ನು ತಿಳಿ ಯುತ್ತದೆ. ಆಮೇಲೆ ಪದಾರ್ಥಗಳ ವಿಷಯಜ್ಞಾನವನ್ನು ಪಡೆಯುತ್ತದೆ. ಇನ್ನೂ ಸ್ವಲ್ಪ ವಯಸ್ಸಾದ ಮೇಲೆ, ಸ್ವತಃ ಕೆಲಸಮಾಡುವುದನ್ನೂ, ಅದರಿಂದ ಸಂತೋಷಪಡುವು ದನ್ನೂ ಕಲಿಯುತ್ತದೆ. ಮಗುವನ್ನು ಅತಿಯಾಗಿ ಮುದ್ದಿಸಿ ಒಂದೆಕಡೆ ಇಟ್ಟಿದ್ದರೆ, ಈ ಗುಣಗಳು ಅದರಲ್ಲಿ ಬೆಳೆಯ ಲಾರವು. ಪ್ರಪಂಚದ ಜ್ಞಾನ ಅದಕ್ಕೆ ದೊರೆಯುವುದಿಲ್ಲ. ಅದಕ್ಕೆ ಹೆದರಿಕೆ, ಅಭ್ಯಾಸವಿಲ್ಲದಿರುವಿಕೆ ಇವೆರಡೇ ಕಾರಣ.

ಒಬ್ಬ ತಾಯಿಯು ತನ್ನ ಮಗುವನ್ನು ಅತಿಯಾಗಿ ಪ್ರೀತಿ ಸುತ್ತಿದ್ದಳು. ಒಂಭತ್ತು ವರುಷ ವಯಸ್ಸಾದರೂ, ಅವಳೇ ಸ್ನಾನ ಮಾಡಿಸುವುದು, ಹಲ್ಲುಜ್ಜುವುದು, ಊಟಮಾಡಿಸುವುದು, ಬಟ್ಟೆ ಹಾಕುವುದು. ಈ ಮಗುವಿಗೆ ಇತರ ಮಕ್ಕಳೊಂದಿಗೆ ಸೇರಿ ಆಟವಾಡುವುದು ಕೂಡ ಬರು ತ್ತಿರಲಿಲ್ಲ, ಇತರ ಹುಡುಗರನ್ನು ಕಂಡರೆ ನಾಚಿಕೆ. ಸ್ಕೂಲಿಗೆ ಹೋದರೆ ಇತರರು ನೋಡಿ ಅಪಹಾಸ್ಯಮಾಡುವ ರೆಂಬ ಭಯ. ಕೆಲವು ವರುಷಗಳಾದ ಮೇಲೆ ಅವನು ನಾಲ್ಕೈದನೆಯ ತರಗತಿಗಳಲ್ಲಿ ಓದುತ್ತಿದ್ದಾಗ ಹಿಂದೆ ಬೀಳಲಾರಂಭಿಸಿದನು. ಈ ಹುಡುಗ ಉಪಾಧ್ಯಾಯರಿಗೆ ಸ್ವಲ್ಪ ವಿಚಿತ್ರವಾಗಿ ತೋರಿದ. ತಾಯಿಗೂ ಈ ವಿಷಯ ಗಮನಕ್ಕೆ ಬಂತು. ಮನಶ್ಶಾಸ್ತ್ರಜ್ಞರ ಸಲಹೆಯನ್ನು ತೆಗೆದು ಕೊಂಡಮೇಲೆ ತಾನು ಮಗುವನ್ನು ಚಿಕ್ಕಂದಿನಲ್ಲಿ ಅತಿ ಯಾಗಿ ಮುದ್ದಿಸಿದ ಪರಿಣಾಮವಿದೆಂದು ತಿಳಿಯಬಂತು. ಮಗುವಿನ ಪೋಷಣೆಯ ಕ್ರಮದಲ್ಲಿ ಆಗ ಬದಲಾವಣೆ ಮಾಡಿದಳು. ಆ ಮೇಲೆ ಮಗು ಸ್ವತಂತ್ರವಾಗಿ ಬೆಳೆಯಿತು. ಇದನ್ನು ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರೊಬ್ಬರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ.

ತಾಯಿ ಪ್ರತಿ ಮಗುವನ್ನೂ, ಅದರ ನಡೆನುಡಿಗಳನ್ನೂ ಚೆನ್ನಾಗಿ ಗಮನಿಸಿ ನೋಡಿ ಅದಕ್ಕೆ ಅನುಗುಣವಾಗಿ ಪೋಷಣೆಯ ಕ್ರಮವನ್ನು ಅನುಸರಿಸಬೇಕು. ಎಲ್ಲ ಮಕ್ಕ ಳಿಗೂ ಅನ್ವಯಿಸುವ ಒಂದೇ ತೆರನಾದ ಸಲಹೆಗಳನ್ನು ಯಾರೂ ಕೊಡಲಾರರು. ಹಾಗೆ ನಿರ್ಧರಿಸಲು ಸಾಧ್ಯ ವಾಗಲಾರದು. ಏಕೆಂದರೆ ಎಲ್ಲ ಮಕ್ಕಳ ಅನುಭವ ಗಳೂ ಹುಟ್ಟುಗುಣಗಳೂ ಒಂದೇಸಮನಾಗಿರುವುದಿಲ್ಲ. ಒಂದು ಮಗುವಿಗೆ ಒಳ್ಳೆ ದೇಹಶಕ್ತಿ ಇರಬಹುದು. ಶರೀರಬಲದಿಂದ ಕೆಲಸಗಳನ್ನು ಸಾಧಿಸಬಲ್ಲ ಚಿಹ್ನೆಗಳು ಕಂಡುಬರಬಹುದು. ಇನ್ನೊಂದು ಮಗುವಿಗೆ ನಾಲ್ಕು ಜನರೊಂದಿಗೆ ಸೇರಿ ಅವರನ್ನು ಮೆಚ್ಚಿಸುವ ಶಕ್ತಿಯು ಚಿಹ್ನೆ ಗಳಿರಬಹುದು. ಹುಟ್ಟುಗುಣಗಳಿಗೆ ತಕ್ಕಂತೆ ಪರಿಸ್ಥಿತಿ ಗಳನ್ನು ಒದಗಿಸಿಕೊಡುವುದು ತಾಯಿತಂದೆಯರ ಕರ್ತವ್ಯ. ಅನೇಕವೇಳೆ ನಮ್ಮ ಪ್ರೀತಿಯಿಂದ ಮಗು ಮೊಂಡಾಗು ವುದು; ಮಡ್ಡಿಯಾಗುವುದು. ಮಗುವಿನ ಸ್ವಭಾವಲಕ್ಷಣ ಗಳಿಗನುಸಾರವಾಗಿ ಪೋಷಣಕ್ರಮ ಮತ್ತು ವಿದ್ಯಾ ಭ್ಯಾಸದ ಕ್ರಮವನ್ನು ನಾವನುಸರಿಸಬೇಕು.

ಅತಿಮುದ್ದಿನಿಂದ ಮಗುವಿಗೆ ಉಂಟಾಗುವ ತೊಂದರೆ ಯನ್ನು ಕುರಿತು ಇದುವರೆಗೂ ಪ್ರಸ್ತಾಪಮಾಡಿಯಾಯಿತು. ಈ ತೊಂದರೆಯಿಂದ ಪಾರಾಗಬೇಕಾದರೆ, ತಾಯಿ ಮತ್ತು ಪೋಷಕರು ಕೆಲವು ಮುಖ್ಯ ವಿಷಯಗಳನ್ನು ಗಮನದಲ್ಲಿಡ ಬೇಕೆಂದು ಸೂಚಿಸಬೇಕಾಗಿದೆ: ಅಂತಹವುಗಳಲ್ಲಿ ಇವು ಕೆಲವು.

೧ ಮಗುವಿನ ವಿದ್ಯಾಭ್ಯಾಸ, ಮಗುವಿಗೆ ಐದು ವರ್ಷ ತುಂಬಿದ ಮೇಲಲ್ಲ ಆರಂಭವಾಗುವುದು.—ಮಗು ಹುಟ್ಟಿದಂದಿನಿಂದಲೆ ಅದರ ವಿದ್ಯಾಭ್ಯಾಸ ಪ್ರಾರಂಭ ವಾಗುತ್ತದೆ.

೨ ಮಗುವೊಂದು ಮೂಕಜಂತುವಲ್ಲ. ಅದರ ಮನಸ್ಸು ಬಹು ಸೂಕ್ಷ್ಮವಾದುದು. ಅದರ ಸುತ್ತುಮುತ್ತಲಿನ ವ್ಯಾಪಾರವೆಲ್ಲವೂ ಅದರ ಮನಸ್ಸಿನಮೇಲೆ ಪರಿಣಾಮ ಮಾಡುತ್ತದೆ. ಆದ್ದರಿಂದ ಆ ಸುತ್ತುಮುತ್ತಲ ವ್ಯಾಪಾರವನ್ನು ಜಾಗರೂಕತೆಯಿಂದ ನೋಡುತ್ತಿರಬೇಕು.


೩ ಮಗು ಯಾವಾಗಲೂ ತಾಯಿಯ ಕಂಕುಳಲ್ಲೋ ಅಥವಾ ತಾತನ ತೊಡೆಯ ಮೇಲೆಯೋ ಬೆಳೆಯ ಬಾರದು. ಇತರ ಮಕ್ಕಳೊಡನೆ ಓಡಾಡುವ, ಬಿದ್ದು, ಎದ್ದು, ವಿಷಯಗಳನ್ನು ತಿಳಿಯುವ ಅಭ್ಯಾಸಮಾಡಿಸಬೇಕು. ಶಕ್ತಿ, ಗೌರವ, ಸಂತೋಷ, ಮೊದಲಾದವುಗಳ ಪರಿಚಯ ಇವುಗಳಿಂದ ಮಗುವಿಗೆ ಉಂಟಾಗುತ್ತದೆ.

೪ ಮಗುವಿಗೆ ಸ್ವಾವಲಂಬನ ಶಕ್ತಿಯನ್ನು ಕಲ್ಪಿಸಿಕೊಡಲು ಯಾವಾಗಲೂ ಪ್ರಯತ್ನಿಸಬೇಕು. ಮಗು ಬೆಳೆಬೆಳೆದಂತೆ ತಾಯಿಯಿಂದ ದೂರಮಾಡಬೇಕು. ಹೀಗೆಂದ ಮಾತ್ರಕ್ಕೆ ತಾಯಿಯ ಬಳಿ ಮಗುವಿರಬಾರದೆಂದಲ್ಲ, ತಾಯಿಯ ನಿರೀಕ್ಷಣೆಯಲ್ಲಿ ಮಗು ಬೆಳೆಯಬೇಕು.

ತಾಯಿಯರು ಹೆಚ್ಚಿನ ಜವಾಬ್ದಾರಿಯಿಂದ ಶಾಸ್ತ್ರೀಯವಾದ ರೀತಿಯಲ್ಲಿ ಮಗುವಿನ ಮನಸ್ಸನ್ನರಿತು, ತಕ್ಕ ಪರಿಸ್ಥಿತಿಗಳನ್ನು ಒದಗಿಸಿಕೊಡಬೇಕು. ಶಕ್ತಿಯುತವಾದ ರಾಷ್ಟ್ರದ ನಿರ್ಮಾಣವು ನಮ್ಮ ಹೆಂಗಸರ ಕೈಯಲ್ಲಿದೆ. ಅತಿಯಾಗಿ ಮಕ್ಕಳನ್ನು ಮುದ್ದಿಸದ ತಾಯಿಯರಿಂದಲೇ ನಮ್ಮ ದೇಶದ ಕಲ್ಯಾಣ. *

* ಶ್ರೀಯುತರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ತತ್ವಶಾಸ್ತ್ರ ಶಾಖೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿ ಮನಃಶಾಸ್ತ್ರವನ್ನು ವ್ಯಾಸಂಗಮಾಡಿದ್ದಾರೆ. ಮೈಸೂರಿನ 'ಆಕಾಶವಾಣಿ' ಯಲ್ಲಿ ಶಿಕ್ಷಣದ ವಿಷಯದಲ್ಲಿ ಮಾತನಾಡಿದ್ದಾರೆ.


ಮೈಸೂರಿನಲ್ಲಿಯ ಶಿಶುವಿಹಾರದ ದೃಶ್ಯಗಳು



ಕೈಕೆಲಸದ ತರಗತಿ



ವಿವಿಧ ಕೈಕೆಲಸಗಳ ತರಗತಿ



ಹೊಲಿಗೆಯ ತರಗತಿ



ಕಿನ್ನರ ನೃತ್ಯ

ಶಿಶುಶಾಲೆಗಳು ಬೇಕು !

ಲೇಖಕರು: ಡಾ. ಜಿ. ಎಸ್. ಕೃಷ್ಣಯ್ಯ ಎಂ. ಎ., ಪಿ ಎಚ್. ಡಿ., ವೈಸ್‌ಪ್ರಿನ್ಸಿಪಾಲ, ಟೀಚರ್ಸ್ ಕಾಲೇಜು, ಕೊಲ್ಲಾಪುರ

ತಾಯಿಯ ಕೈಬಿಟ್ಟು ಆಡುತ್ತಿರುತ್ತವೆ, ಆದರೆ ಶಾಲೆಗೆ ಹೋಗುವ ವಯಸ್ಸಾಗಿರುವುದಿಲ್ಲ. ಇಂತಹ ೫ ವರ್ಷಗಳ ಕೆಳಗಿನ, ಆಡುವ ಓಡುವ ಮಕ್ಕಳ ಸುಖಸೌಕರ್ಯಗಳನ್ನು ಸಮಾಜವು ನೋಡಿಕೊಳ್ಳಬೇಕಲ್ಲವೆ ? ಈ ವಯಸ್ಸಿನಲ್ಲಿ ಮನಸ್ಸು ಬಹು ಸೂಕ್ಷ್ಮಗ್ರಾಹಿಯಾಗಿರುವುದು. 'ಶೀಲ' ರಚನೆಯ ಕಾಲವಿದು. ಆಟ-ಪಾಟ-ನೋಟಗಳ ವೈವಿಧ್ಯ-ವೈಚಿತ್ರ್ಯಗಳು ಈ ವಯಸ್ಸಿಗೆ ಬೇಕು. ಕಣ್ಣು-ಕಿವಿ-ಕೈ-ನ್ಮೈಗಳ ಕೌಶಲ್ಯಗಳನ್ನು ಸಂಪಾದಿಸುವ ಕಾಲವಿದು. ಪಾಶ್ಚಾತ್ಯ ದೇಶಗಳಲ್ಲಿ ಮಗುಗಳನ್ನು ನೋಡಿಕೊಳ್ಳಲು ಅರಿತ ನುರಿತ ಪರಿಚಾರಿಕೆಯರಿದ್ದ ಸಂಸ್ಥೆಗಳಿವೆ. Nursery Schools ಎಂದು ಅವುಗಳ ಹೆಸರು: 'ಶಿಶುಶಾಲೆ, ಶಿಶುವಿಹಾರ' ಎಂದು ನಾವು ಕರೆಯಬಹುದು. ಹಿಂದುಸ್ತಾನದಲ್ಲಿ ಇಂತಹ ಸಂಸ್ಥೆಗಳ ಅಗತ್ಯವಿದೆಯೆಂದು ಲೇಖಕರು ಪ್ರತಿಪಾದಿಸುತ್ತಾರೆ: ಕಾರ್ಖಾನೆ, ಸಿನೆಮಾ ಮಂದಿರ, ಕ್ಲಬ್ಬುಗಳಿಗೆ ಕೂಡ ಇವುಗಳನ್ನು ಜೋಡಿಸಬಹುದೆಂದು ಅವರು ಸೂಚಿಸುತ್ತಾರೆ

ಐದು ವರ್ಷದ ಮೇಲಿನ ಹುಡುಗರ ಯೋಗಕ್ಷೇಮವನ್ನು ಶಾಲೆಗಳಲ್ಲಿ ನೋಡಿಕೊಳ್ಳುತ್ತಾರೆ. ಅವರ ದೇಹದ ಹಾಗು ಮನಸ್ಸಿನ ಪೋಷಣೆಗೆ ಅವಶ್ಯವಿದ್ದ ಅನುಕೂಲಗಳನ್ನು ಒದಗಿಸುವ ವ್ಯವಸ್ಥೆಯನ್ನು ಸಮಾಜವು ನೋಡಿಕೊಳ್ಳುತ್ತದೆ. ಆದರೆ ಐದು ವರ್ಷದ ಕೆಳಗಿನ ಹುಡುಗರ ಪಾಡೇನು? ಈ ವಯಸ್ಸಿನ ಮಕ್ಕಳು ಅತಿ ತೀವ್ರಗ್ರಾಹಿಯಾದ ಮನೋಧರ್ಮದವರಿರುವರೆಂದು ಎಲ್ಲರಿಗೂ ಗೊತ್ತಿದೆ; ಅವರು ಹೊಸ ಸಂಗತಿಗಳನ್ನು ಬಹು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವರು; ಇಟ್ಟುಕೊಂಡದ್ದನ್ನು ಬೇಗನೆ ಮರೆಯುವದಿಲ್ಲ. ಇಂತಹ ಮಗುವಿಗೆ ನಿರಂತರವಾಗಿ ಪದಾರ್ಥಗಳ ಗುಣದೋಷಗಳ ಜ್ಞಾನಮಾಡಿಕೊಳ್ಳುವದು ವಸ್ತುನಿರ್ಮಾಣ ಕೌಶಲವನ್ನು ಸಂಪಾದಿಸುವದೂ ಅವಶ್ಯಕವಾಗುತ್ತಿರುತ್ತವೆ; ಅದು ಸುತ್ತಲಿನ ಜನರೊಡನೆ ಸೌಜನ್ಯದಿಂದ ವರ್ತಿಸಿ ಅವರಿಗೆ ತನ್ನ ಕೈಲಾದಷ್ಟು ಉಪಯೋಗ ಬೀಳಲಿಕ್ಕೆ ಕಲಿಯುತ್ತಿರುವದು. ಈ ಅಭ್ಯಾಸಗಳೆ ಶಿಶುವು ಮುಂದೆ ಸಂಪಾದಿಸುವ ವಿದ್ಯಾ-ಕೌಶಲಗಳಿಗೆ ತಳಗಲ್ಲಾಗಿರುತ್ತವೆ. ನಾವು ಕಲಿಸಲಿ, ಕಲಿಸದಿರಲಿ, ಶಿಶುವಿಗೆ ಕೆಲವು ರೂಢಿಗಳುಂಟಾಗುತ್ತಿರುತ್ತವೆ; ಒಳ್ಳೆಯ ರೂಢಿಗಳು ಪ್ರಾಪ್ತವಾಗದಿದ್ದರೆ ದುಷ್ಟಗಳು ನೆಲೆಗೊಳ್ಳುವವು. ಪ್ರಸಿದ್ಧ ವಿಲ್ಯಮ್ ಜೇಮ್ಸನು ಹೇಳುವಂತೆ, 'ಅದು ನಮ್ಮನ್ನು ನರಮಂಡಲವೆ ತನ್ನ ಮಿತ್ರನು ಇಲ್ಲವೆ ಶತ್ರುವು ಆಗುವಂತೆ ಮಾಡಿಕೊಳ್ಳುತ್ತಿರುತ್ತದೆ.' ಹಸ್ತಕೌಶಲ, ವಾಕ್ಚಾಪಲ, ನರ್ತನ, ಗಾಯನ, ನಯವಾಗಿ ಮಾತನಾಡುವದು, ಆಹ್ಲಾದಕರವಾಗಿ ಓಡಾಡುವ ಠೀವಿ, ಆಟದಲ್ಲಿ ಉತ್ಸಾಹ, ಕೆಲಸದಲ್ಲಿ ಆನಂದ; ಖಗಮೃಗಸಸ್ಯಾದಿಗಳ ಅಗತ್ಯಗಳನ್ನು ತಿಳಿದುಕೊಂಡು ಅವುಗಳನ್ನು ಸಂವರ್ಧಿಸುವದು; ಯಾವ ಕೆಲಸಗಳನ್ನು ಮಾಡುವದರಿಂದ ನಿರ್ದುಷ್ಟವೂ ಹಿತಕರವೂ ಆದ ಬಾಳುವೆಯು ಸಾಧಿಸುವದೋ ಆ ಪ್ರತಿನಿತ್ಯದ ಕೆಲಸಗಳನ್ನು ಮಾಡುತ್ತ ಹೋಗುವದು—ಇವೆಲ್ಲ ಈ ವಯಸ್ಸಿಗೆ ಯೋಗ್ಯವಾದ ವ್ಯವಸಾಯಗಳು. ಇವನ್ನು ಮೇಲೆ ನಿಂತು ನೋಡಿಕೊಳ್ಳುವವರು ತಜ್ಞರಾಗಿರಬೇಕೋ ಅನಭಿಜ್ಞರಾಗಿರಬೇಕೋ ಎಂಬದೇ ಮುಖ್ಯ ಪ್ರಶ್ನೆಯು.

ಮನೆಗಳೊಳಗಿನ ಸನ್ನಿವೇಶವು ಪ್ರಾಯಃ ಸಾಧುವಾಗಿರುವದಿಲ್ಲ.

ಕೇವಲ ಹುಟ್ಟುಗುಣಗಳನ್ನು (instincts) ನೆಚ್ಚಿಕೊಂಡಿರುವದರಿಂದ ಸರಿಯಾದ ಶಿಕ್ಷಣವು ಲಭಿಸುವದಿಲ್ಲವೆಂದು ಆಧುನಿಕ ಶಿಕ್ಷಣತಜ್ಞರು ಅಭಿಪ್ರಾಯಪಡುತ್ತಾರೆ. ಹಡೆದ ತಾಯಿಗಿಂತಲೂ ಶಿಶುಸಂಗೋಪನವನ್ನು ಹೆಚ್ಚು ಚೆನ್ನಾಗಿ ಯಾರು ಮಾಡಬಲ್ಲರು ?—ಹೀಗಿದ್ದರೂ ದಿವಸದಲ್ಲಿ ಕೆಲಹೊತ್ತು ಮಗುವನ್ನು ಅಭಿಜ್ಞರಾದ ಅನ್ಯರ ಕೈಯಲ್ಲಿ ಒಪ್ಪಿಸುವ ಅಗತ್ಯವಿರುತ್ತದೆ. ತಾಯಂದಿರು ತಜ್ಞರಾಗಿದ್ದ ಪಕ್ಷದಲ್ಲಿಯೂ— ಇಂಥ ಎಷ್ಟು ಮಂದಿ ತಾಯಂದಿರು ಹೊರಡ

ಬಹುದು?— ತಾವು ತಿಳಿದುಕೊಂಡಿರುವ ತತ್ವಗಳನ್ನು ಜಾರಿಯಲ್ಲಿ ತರುವದಕ್ಕೆ ಅವರಿಗೆ ಕಾಲವೂ ಬಲವೂ ಒದಗುವದಿಲ್ಲ. ಏಕೆಂದರೆ ಅವರು ಮಾಡತಕ್ಕ ದಿನದ ಕೆಲಸದ ಬಹುಭಾಗವು ಜ್ಞಾನದ ಬೆನ್ನು ಹತ್ತುವದು ಆಗಿರದೆ, ಮನೆಯಲ್ಲಿನ ಕಸ-ಕೊಳೆ ಇವುಗಳ ಬೆನ್ನು ಹತ್ತುವದಾಗಿರುವದು. ಚುರುಕು ಬುದ್ಧಿಯ ೩ ಹಾಗು ೫ ವಯಸ್ಸಿನ ನಡುವಿನ ಮಗುಗಳಿಗೆ ಶಾರೀರಿಕ ಹಾಗು ಮಾನಸಿಕ ಚಟುವಟಿಕೆಯು ಹೆಚ್ಚು ಬೇಕಾಗುವದು. ಅನೇಕ ಕೆಲಸಗಳುಳ್ಳ ಮನೆಯವರಿಂದ ಈ ಚಟುವಟಿಕೆಗೆ ಅವಕಾಶವನ್ನು ಕಲ್ಪಿಸಲಾಗುವದಿಲ್ಲ; ಅಲ್ಲದೆ ತಾಯಿ-ಮಗು ಇವರ ಸಂತತವೂ ನಿರಂತರವೂ ಆದ ಸಹವಾಸವು ಇಬ್ಬರಿಗೂ ಅಷ್ಟೊಂದು ಹಿತಕರವಲ್ಲ. ಕೆಲವು ಸ್ತ್ರೀಯರಿಗೆ ತಮ್ಮ ಅಧಿಕಾರವನ್ನು ನಡೆಯಿಸುವದರಲ್ಲಿಯೇ ಪ್ರೀತಿ; ಇನ್ನು ಕೆಲವರಿಗೆ ಯಾವ ಕೆಲಸಕ್ಕೂ ಆತ್ಮವಿಶ್ವಾಸ ಸಾಲದು; ಬೇರೆ ಕೆಲವರು ಅನ್ಯರ ಭಾವನೆಗಳ ನೆರಳಿನಂತೆ ಇರುವರು. ಒಂದು ವೇಳೆ ಅವರಲ್ಲಿರಬೇಕಾದ ಎಲ್ಲ ಗುಣಗಳು ಇದ್ದರೂ ತಾಯಿ ಮಕ್ಕಳ ನಿರಂತರವಾದ ಸಹವಾಸದಿಂದ ಅನ್ಯೋನ್ಯ ಆಕರ್ಷಣೆಯೆ ಇಲ್ಲದಂತಾಗುವದು. ತಾಯಿಗೆ ಬಗಲಲ್ಲಿ ಎತ್ತಿಕೊಂಡಿರಬೇಕಾದ ಮತ್ತೊಂದು ಕೂಸು ಇಲ್ಲದಿದ್ದರೂ (ಇಂತಹ ಉದಾಹರಣೆಯೆ ನಮ್ಮಲ್ಲಿ ಅಪರೂಪ!) ಅಥವಾ ಕೂಸನ್ನು ಕರೆದುಕೊಳ್ಳಲಿಕ್ಕೆ ದಾಯಿಯು ಇರುತ್ತಿದ್ದರೂ ಸಾಮಾನ್ಯವಾಗಿ ಆಕೆಗೆ ತನ್ನ ಮಕ್ಕಳಿಗೆ ವಿದ್ಯೆ ಹೇಳುವಷ್ಟು ಸಾಮರ್ಥ್ಯವಾಗಲಿ ಅವಕಾಶವಾಗಲಿ ಇರುವದಿಲ್ಲ.

ಮಗುವಿನ ಸಂಪೂರ್ಣ ಬೆಳವಣಿಗೆಗೆ ಅನುಕೂಲ ಸನ್ನಿವೇಶವು ಬೇಕಾಗುವದು; ಇಂಥ ಸನ್ನಿವೇಶವು ಎಷ್ಟೋ ಮನೆಗಳಲ್ಲಿ ದೊರೆಯುವದು ಪರಮದುರ್ಲಭ. ಇರಲಿಕ್ಕೆ ಪರಿಶುದ್ಧವಾದ ಬಯಲು ಹವೆ, ಅತ್ತಿತ್ತ ಓಡಾಡಲಿಕ್ಕೆ ಬೇಕಾದಷ್ಟು ಸ್ಥಳ, ಸೂರ್ಯಪ್ರಕಾಶಕ್ಕೆ ಚೆನ್ನಾಗಿ ತೆರೆದಿದ್ದ ಕೋಣೆಗಳು, ವಿಶ್ರಾಂತಿಗೂ ನಿದ್ರೆಗೂ ತಕ್ಕ ಅನುಕೂಲಗಳು —ಮುಖ್ಯವಾಗಿ ಇವು ಬೇಕು. ಶಾರೀರಿಕ ಬಲ, ಬುದ್ಧಿಯ ಪ್ರಭಾವ ಇವುಗಳಿಗೆ ಉತ್ತೇಜನ ಸಿಕ್ಕುವಂಥ ಸನ್ನಿವೇಶವು ಮಗುವಿನ ಸುತ್ತಲೂ ಇರುವದು ಆವಶ್ಯಕ. ಇದರಿಂದ ಅದರ ತಲೆಯಲ್ಲಿ ಇಷ್ಟವಾದ ವಿಚಾರಗಳೆಷ್ಟೋ ಹುಟ್ಟುವವು. ತೋಟದಲ್ಲಿ ಕೆಲಸಮಾಡುವದರಿಂದ ಮನೆಬಿಟ್ಟು ಹೊರಗೆ ಇರುವ[illegible]ಕ್ಕಂತೂ ಅವಕಾಶ ಸಿಕ್ಕೇ ಸಿಕ್ಕುವದು; ಅಲ್ಲದೆ ಸಸ್ಯಾದಿಗಳ ಜೀವನ, ಅವುಗಳ ಬೆಳಿಗೆ, ರೂಪ ಬಣ್ಣಗಳ ಕಲ್ಪನೆ— ಹೀಗೆ ತೋಟವು ಸಾವಿರಾರು ವಿಚಾರಗಳ [illegible]ಯಾಗಿರುವದು. ತೃಣ-ಕುಸುಮ-ಗಗನಗಳನ್ನು [illegible]ಕ್ಷಿಸುತ್ತ ನಿರಾತಂಕವಾಗಿ [illegible]ದಾಡುವಾಗ ಮಗುವಿನ ಮನಸ್ಸಿನ ಮೇಲೆ ಆಗುವ [illegible]ಕ್ಷಣ ಪರಿಣಾಮವನ್ನು [illegible] ಇಷ್ಟೆಂದು ಅಳತೆಮಾಡಲಾರೆವು. ಕೌತುಕಪೂರ್ಣವಾದ ಸುರುಚಿರವಾದ [illegible]ಗಳು ಅವನಲ್ಲಿ ಬೆರಗು [illegible]ಣಗಳನ್ನು ಹುಟ್ಟಿಸುವ[illegible] ಮಕ್ಕಳಿಗಾಗಿಯೇ ವಿಚಾರಿ[illegible] ವಿರಚಿಸಿದ ಸನ್ನಿವೇಶವಿ[illegible]ವದು ಅಗತ್ಯವಾದದ್ದು —ಊಟ ಉಡಿಗೆಗಳಿಗೆ ಬೇ[illegible]ಗುವ ಮಾಟವಾದ ಮನೆಬಳಕೆಯ ಸಲಕರಣೆಗಳು, ಒಳ್ಳೆಯ ವಿಚಾರಗಳನ್ನು ಹುಟ್ಟಿಸುವ ಚಿತ್ರಗಳು, ವಸ್ತು[illegible]ಗಳು, ಬೇಕಾದಷ್ಟು ಆಟದ ಉಪಕರಣಗಳು—ಇವುಗಳನ್ನು ಮಕ್ಕಳು ಬೇಕಾದ ಹಾಗೆ ಹಿಡಿದು ನೋಡುವದಕ್ಕೆ ಆತಂಕವಿರಬಾರದು. ಕಥೆ, ಸಂಭಾಷಣೆ, ಸರಳವೂ ಸುರಸವೂ ಆದ ಸಂಗೀತ, ಮನಸ್ಸನ್ನು ಆಕರ್ಷಿಸುವ ಹಾಡುಗಳು, ಮೈಮರೆಯಿಸುವ ಆಟಗಳು ಇವೆಲ್ಲ ಮಗುವಿನ ಅನುಭವದ ಕ್ಷಿತಿಜವನ್ನು ವಿಸ್ತರಿಸುವವು; ಮ[illegible] ಆದ ಜೀವನವು ಹೆಚ್ಚು ಸಂಪನ್ನವೂ ಸಮೃದ್ಧವೂ



ಲೇಖಕರು



ನ್ಯೂಯಾರ್ಕ್ ನಗರದ ಶಿಶುಶಾಲೆಯೊಂದರಲ್ಲಿಯ ದೃಶ್ಯ

ಹುಟ್ಟಿದ ೩ ವಾರಗಳಿಂದ ಎಷ್ಟೋ ತಿಂಗಳವರೆಗೆ, ಬಡ ತಾಯ್ತಂದೆಗಳು ತಮ್ಮ ಕೂಸುಗಳನ್ನು ಈ ಸಂಸ್ಥೆಗೆ ಸಂತೋಷದಿಂದ ಒಪ್ಪಿಸುತ್ತಾರೆ. ರಾತ್ರಿಯಲ್ಲಿ ಮಗುಗಳನ್ನು ಮನೆಗೆ ಮುಟ್ಟಿಸುತ್ತಾರೆ. ಈ ಶಾಲೆಯಲ್ಲಿ ಶಿಶುಸಂಗೋಪನೆಯ ಆತ್ಯಾಧುನಿಕ ರೀತಿಗಳನ್ನು ಕಲಿಸಲಾಗುತ್ತಿದೆ; ತಜ್ಞರಾದ ಡಾಕ್ಟರನ ಹಾಗೂ ಪದವೀಧರ ದಾಯಿಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಚೆನ್ನಾಗಿ ತರಬೇತಾಗುತ್ತಾರೆ. ಇದೇ ರೀತಿ, ಬೆಳೆದ ಮಗುಗಳ ಯೋಗಕ್ಷೇಮವನ್ನು ವಿಚಾರಿಸುವ ಸಂಸ್ಥೆಗಳೂ ಇವೆ.

ವಿನ ಆಗತ್ಯಾಂಶಗಳಲ್ಲಿ ಮುಖ್ಯವಾದುದು. ತನ್ನ ಓರಿಗೆಯವರ ಸಹವಾಸವು ಅವನಿಗೆ ಬೇಕು. ಸಾಮಾಜಿಕ ಸಹವಾಸವಿಲ್ಲದೆ ಸಾಮಾಜಿಕ ನಡತೆಯು ಬರಲಾರದು. ಸಮಾಜದ ಧಕ್ಕೆಮುಕ್ಕೆಗಳು ಇಲ್ಲದ ಕೃತ್ರಿಮ ವಾತಾವರಣದಲ್ಲಿ ಖಂಡಿತವಾಗಿ ನಡತೆಯು ಸಂಸ್ಕಾರವನ್ನು ಪಡೆಯಲಾರದು. ಸಂಗಡಿಗನಾಗುವದರಲ್ಲಿ ಆತ್ಮನಿಯಮನವುಂಟು. ಸಂಗಡಿಗನಾದವನು ಮನೆಯಲ್ಲಿದ್ದಾಗ ಮಾಡಲಾಗದೆ ಇದ್ದ ಎಷ್ಟೋ ಕರ್ತವ್ಯಗಳನ್ನು ಲೀಲೆಯಿಂದ ನಿರ್ವಹಿಸುವನು. ತನ್ನ ಓರಿಗೆಯ ಗೆಳೆಯರಲ್ಲದೆ ತನಗಿಂತ ಎಷ್ಟೋ ವರ್ಷಗಳಿಂದ ದೊಡ್ಡವರಾದ ಹಲವರು 'ಸ್ನೇಹಿತ'ರೂ ಮಗುವಿಗಿರಬೇಕಾಗ್ಗುವವು. ಮಗು ಕೇಳುವ ಅನಂತಾನಂತ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ವಿದ್ಯೆಯೂ, ಆಸ್ಥೆಯೂ, ವೇಳೆಯೂ ಅವರಿಗೆ ಇರಬೇಕು; ತನ್ನ ಪ್ರತಿನಿತ್ಯದ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಲಿಕ್ಕೆ ಕಲಿಯುತ್ತಿರುವಾಗ ತಾಳ್ಮೆಯಿಂದ ನೋಡುತ್ತಿರಬೇಕು; ಮಗುವಿನ ಮೈಮನಗಳು ಸ್ವಚ್ಛ ಸ್ವಸ್ಥವಾಗಿರುವದಕ್ಕೆ ಅವಶ್ಯವಿರುವ ಸಂಗತಿಗಳನ್ನು ಈ ಹಿರಿಯರು ಅನುಭವದಿಂದ ಬಿಡಿಸಬಲ್ಲವರಾಗಿರಬೇಕು.

ಶಿಶುಶಾಲೆಗಳು ಪೂರೈಸುವ ಅನುಕೂಲತೆಗಳು

ಈ ಅನುಕೂಲ್ಯಗಳನ್ನು ಒದಗಿಸುವದೇ ಶಿಶುಶಾಲೆಗಳ ಮುಖ್ಯ ಧ್ಯೇಯವಾಗಿರುವದು. ಇದು ಮನೆಯಿಂದಾಗುವ ಕಾರ್ಯದಿಂದ ಭಿನ್ನವಾದುದು. ಇಲ್ಲಿ ಹುಡುಗರಿರುವ ಕೋಣೆಯು ದೊಡ್ಡದೂ ಸೂರ್ಯಪ್ರಕಾಶಕ್ಕೆ ಇಂಬಾಗಿಯೂ ಇರುವುದು. ನೆಲವು ಸಮನಾಗಿದ್ದು ನೆಲದ ಮೇಲೆ ಭಾರವಾದ ಭಾರಿಯ ಮೇಜು ಕುರ್ಚಿ ಮೊದಲಾದವುಗಳಿರುವದಿಲ್ಲ. ಎತ್ತಾಡಲಿಕ್ಕೆ ಬರುವಂಥ ಸಣ್ಣ ಕುರ್ಚಿ ಮೇಜುಗಳು ಅಲ್ಲಲ್ಲಿ ನೆಲದ ಮೇಲೆ ಇರುವವು. ಗೋಡೆಗಳ ಮೇಲೆ ಮಕ್ಕಳ ಅನುಭವಗಳನ್ನು ನೆನಪಿಗೆ ತಂದುಕೊಡುವಂಥ ಸರಳ ಸುಂದರವಾದ ಚಿತ್ರಗಳಿರುವವು. ಕೋಣೆಯ ಸುತ್ತಲು ಕಿರಿಯಗಲದ ಒಂದು ಎತ್ತರ ಕಟ್ಟೆಯ ಮೇಲೆಯೂ ಹಲಕೆಲವು ಕಪಾಟುಗಳಲ್ಲಿಯೂ ಮನಸ್ಸಿ ಆಡಲಿಕ್ಕೆ ಬೇಕಾದಷ್ಟು ಆಟಗೆಗಳೂ, ಗುಡಿಗೋಪುರಗಳನ್ನು ಕಟ್ಟಿ ನೋಡಲಿಕ್ಕೆ ಬರುವಂಥ ಸಲಕರಣೆಗಳೂ ತುಂಬಿರುವವು. ಒಮ್ಮೊಮ್ಮೆ ಹುಡುಗರೆಲ್ಲ ಒಂದೇ ಆಟ ಆಡುತ್ತಿರುವರು, ಒಂದೇ ಹಾಡು ಹಾಡುತ್ತಿರುವರು, ಮಣ್ಣಿನಿಂದ ಸಾಮಾನುಗಳನ್ನು ಮಾಡುತ್ತಿರುವರು, ಕಂದು ಬಣ್ಣದ ಕಾಗದದ ಮೇಲೆ ಬಣ್ಣದ ಸೀಮೆ ಸುಣ್ಣದಿಂದ ಬರೆಯುತ್ತಿರುವರು, ಮರದ ಇಟ್ಟಿಗೆಗಳಿಂದ ಮನೆಕಟ್ಟುತ್ತಿರುವರು, ಇಲ್ಲವೆ ಚಿತ್ರಗಳನ್ನು ಕತ್ತರಿಸಿ ತೆಗೆಯುತ್ತಿರುವರು. ಇನ್ನಿತರ ಸಮಯದಲ್ಲಿ ಮಕ್ಕಳು ತಂತಮ್ಮ ಒಲವುಗಳಿಗನುಸರಿಸಿ ಬೇರೆಬೇರೆ ಕಾರ್ಯಗಳಲ್ಲಿ ಆಸಕ್ತರಾಗಿರಬಹುದು. ತಮ್ಮ ಕೋಣೆಯಲ್ಲಿ ಓಡಾಡಿ ಸಂಗಡಿಗರು ಮಾಡುತ್ತಿರುವ ಕೆಲಸವನ್ನು ನೋಡುತ್ತಲೂ ಅವರಿಂದ ಹೇಳಿಸಿಕೊಳ್ಳುತ್ತಲೂ ಶಿಕ್ಷಕರಿಗೆ ತಮ್ಮ ಕೆಲಸವನ್ನು ತೋರಿಸಿ ಅವರ ಸಲಹೆಯನ್ನು ಕೇಳುತ್ತಲೂ ಇರುವರು. ಪ್ರತಿಯೊಬ್ಬನಿಗೂ ಅವನಿಗೆ ಸಾಧ್ಯವಿದ್ದಷ್ಟು ಮನಃಪೂರ್ವಕವಾಗಿ ಪ್ರಯತ್ನ ಮಾಡಲಿಕ್ಕೆ ಪ್ರೋತ್ಸಾಹನವಿರುವದು; ಅವನಿಂದಾದ ಅತ್ಯುತ್ತಮ ಪ್ರಯತ್ನಕ್ಕೆ, ಅದು ಎಷ್ಟು ನಿಕೃಷ್ಟವಾಗಿದ್ದರೂ, ಮಾನ್ಯತೆ ದೊರೆಯುವದು. ಹೀಗೆ ಯಾವ ಶಾಲೆಯ ಗುರಿಯೂ ಸಾಧನವೂ ನಿರ್ದುಷ್ಟವಾಗಿರುವವೋ ಅಲ್ಲಿಯ ಮಕ್ಕಳು ತಮ್ಮ ವಯೋಧರ್ಮಕ್ಕನುಸರಿಸಿ ಉಲ್ಲಾಸ, ಕುತೂಹಲ, ಮೈತ್ರಿ, ಸಾಹಸಬುದ್ಧಿ ಇವುಗಳನ್ನು ವ್ಯಕ್ತಮಾಡುವನೆಂದು ಸ್ವಲ್ಪದರಲ್ಲಿ ಹೇಳಬಹುದು. ಅವರು ಸುವ್ಯಥರೂ ಸಶಕ್ತರೂ ಚಪಲರೂ ನಡೆನುಡಿಗಳಲ್ಲಿ ಲಕ್ಷಣವಂತರೂ ತಮ್ಮ ಕೈಬೆರಳುಗಳ ಉಪಯೋಗದಲ್ಲಿ ಕುಶಲರೂ, ತನ್ನ ಮಾತನ್ನು ತಡೆಯಿಲ್ಲದೆ ಆಡುವವರೂ, ಹೊಸದನ್ನು ಕಲಿಯಲಿಕ್ಕೆ ಉತ್ಸುಕರೂ, ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳಲಿಕ್ಕೆ ಸಮರ್ಥರೂ, ಪರರ ಸಂಗಡಿಗರಾಗಿ ಕೆಲಸ ಮಾಡುವವರೂ, ಇತರರ ಹಕ್ಕು ಬಾಧ್ಯತೆಗಳನ್ನು ಗೌರವಿಸುವವರೂ— ಎಂದರೆ ಒಂದೇ ಮಾತಿನಲ್ಲಿ, ಮುಂದೆ ಶಾಲೆಯಲ್ಲಿ ಹೊಂದಲಿರುವ ಶಿಕ್ಷಣಕ್ಕೆ ಎಲ್ಲ ರೀತಿಯಿಂದಲೂ ಪೂರ್ವಸಿದ್ಧತೆಯನ್ನು ಪಡೆದವರೂ ಆಗಿರುವರು. ಹೀಗೆ ಪ್ರಾಯಃ ಮನೆಗಳಿಂದ ಪಡೆಯಲಾಗದ ಸೌಕರ್ಯವಿಶೇಷವನ್ನೂ ಶಿಕ್ಷಣವನ್ನೂ ಶಿಶುಶಾಲೆಯು ಪೂರೈಸುವದರಿಂದ ಅದು ಮನೆಗೆ ಸಹಾಯಕವಾಗಿದೆಯೇ ವಿನಾ ಮನೆಯ ಸ್ಥಾನವನ್ನು ತಾನು ಆಕ್ರಮಿಸುವದಿಲ್ಲ. ಅದು ಮನೆಗೆ ಪ್ರತಿಸ್ಪರ್ಧಿಯಾಗಿರುವದಿಲ್ಲ, ಮನೆಗೆ ಪೂರಕವಾಗಿರುತ್ತದೆ. ಅಂತೂ ದಿನದ ಕೆಲಭಾಗದಲ್ಲಿ ಮಗುವಿಗೆ ತಕ್ಕ ಹಾಗೂ ಸಾಧುವಾದ ಸನ್ನಿವೇಶವನ್ನು ಒದಗಿಸಿಕೊಡಲಿಕ್ಕೆ ಅದು ಸಮರ್ಥವಿರುವದರಿಂದ ಅದನ್ನು ಮನೆಯ ಕಾರ್ಯಕ್ಷೇತ್ರದ ವಿಸ್ತೃತರೂಪವೆಂದೇ ಭಾವಿಸಬೇಕು.

ಕಾರಖಾನೆಗಳಿಗೆ ಶಿಶುಶಾಲೆಗಳಿಂದ ಉಪಕಾರವು

ಇದುವರೆಗೂ ದಿನದ ಕೆಲಹೊತ್ತಾದರೂ ತನ್ನ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಂಸ್ಥೆಯೊಂದು ಹೇಳಿದು... ಯಿಂದ ತಾಯಿಗಾಗುವ ಉಪಕಾರವನ್ನು

ಕಾರಖಾನೆಯಲ್ಲಿ ಕೆಲಸಮಾಡುವವರಿಗಂತೂ ಇದೊಂದು ಭಾಗ್ಯೋದಯವೇ. ಇಂಥ ತಾಯಂದಿರು ಬಡತನದ ಮೂಲಕ ದಾಯಿಗಳನ್ನಿಟ್ಟುಕೊಳ್ಳಲಾರರು; ಮನೆಯಲ್ಲಿ ಮಕ್ಕಳನ್ನು ಬಿಟ್ಟು ಹೋಗಲೂ ಆರರು. ಈ ಮಹತ್ತರವಾದ ಅಡಚಣೆಯ ಮೂಲಕ ಸುಧಾರಿಸಿದ ದೇಶಗಳಲ್ಲಿ ಎಷ್ಟೋ ಕಾರಖಾನೆಗಳಿಗೆ ಒಂದು ಶಿಶುಶಾಲೆಯು ಜೋಡಿಸಿದ್ದಿರುವದು. ಅಲ್ಲಿ ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಸುರಕ್ಷಿತವಾಗಿ ಬಿಟ್ಟು ತಮ್ಮ ಕೆಲಸವನ್ನು ನಿಶ್ಚಿಂತೆಯಿಂದ ಮಾಡಬಹುದು; ನಡುವೆ ಸ್ವಲ್ಪ ಸಮಯ ದೊರೆತರೆ ಒಂದು ಗಳಿಗೆ ಮಕ್ಕಳು ಏನು ಮಾಡುತ್ತಿರುವರೆಂದು ನೋಡಬಹುದು. ಸಮಾಜದಲ್ಲಿ ಕಾರಖಾನೆಗಳ ಅಂಗವೆಂದು ಈ ತರದ ಶಿಶುಗೃಹಗಳನ್ನು ಸ್ಥಾಪಿಸುವದರಿಂದ ಒಂದು ತೊಡಕು ಬಿಡುವದು; ಇಂಥ ಗೃಹದಲ್ಲಿ ಒಬ್ಬಿಬ್ಬ ಟ್ರೇಂಡರಾದ ದಾಯಿಗಳಿದ್ದರಾಯಿತು; ಅಲ್ಲಿ ಕೆಲವು ಆಟದ ಸಲಕರಣೆಗಳನ್ನಿಡಬೇಕು; ಯಾರೂ ಅವರಿಗೆ ಅಲ್ಲಿ ತೋಂದರೆ ಕೊಡದಂಥ, ಮನೋಹರವಾದ ಒಂದು ಆಟದ ಸ್ಥಳವಿರಬೇಕು. ಈ ತರದ ವ್ಯವಸ್ಥೆಯನ್ನು ಮಾಡಿಕೊಡುವದರಿಂದ ಕಾರಖಾನೆಯ ಚಾಲಕರು ಬಡವರ ಮೇಲೆ ದಯೆತೋರಿಸಿದಂತಾಗುವದಲ್ಲದೆ ಕಾರಖಾನೆಯು ಕೆಲಸದ ವೇಳೆಯಲ್ಲಿ ಕೂಲಿಕಾರರು ಮನೆಯ ಯೋಚನೆ ಇಲ್ಲದೆ ನಿಶ್ಚಿಂತರಾಗಿ ಕೆಲಸಮಾಡಬಲ್ಲರು.

ಸಿನೆಮಾಗೃಹಗಳಿಗೆ

ಬೇರೊಂದು ದೃಷ್ಟಿಯಿಂದ ವಿಚಾರಿಸಿದರೆ ಸಿನೆಮಾಗೃಹಗಳಲ್ಲಿ ಶಿಶುಗೃಹಗಳ ಆವಶ್ಯಕತೆಯು ಕಂಡುಬರುವದು. ಈ ದೇಶದಲ್ಲಿ 'ಟಾಕೀ' ಗೃಹಗಳಲ್ಲಿ ಅಳುವ ಕೂಸುಗಳೂ ಮನೆಗೆ ಹೋಗೋಣವೆಂದು ಪೀಡಿಸುವ ಸಣ್ಣ ಮಕ್ಕಳೂ ಇವರನ್ನು ನೋಡುವದು ಅಪರೂಪವಲ್ಲ. ಇವರು ತಾಯಂದಿರಿಗೂ ಇತರರಿಗೂ ಕೂಡಿಯೇ ಬೇಸರವಾಗುವರು. ಇದು ಮಾತ್ರವಲ್ಲದೆ ಜನರಿಂದ ಕಿಕ್ಕಿರಿದ ಸಿನೆಮಾಗೃಹದ ಅನಾರೋಗ್ಯಕರವಾದ ವಾತಾವರಣವು ಮಕ್ಕಳಿಗೆ ಅಪಾಯಕರವೆಂದು ಹೇಳುವದು ಬೇಡ. ಇದಕ್ಕಿಂತಲೂ ಹೆಚ್ಚಿನ ಅನಿಷ್ಟವೆಂದರೆ ಆ ಮಕ್ಕಳೆದುರಿಗೆ ಒಮ್ಮೊಮ್ಮೆ ಬರುವ ದೃಶ್ಯಗಳು. ಭಯೋತ್ಪಾದಕವಾದ, ಮದ್ಯಪಾನದ, ಕೊಲೆಸುಲಿಗೆಯ, ಪ್ರಣಯಪ್ರಸಂಗಗಳ ದೃಶ್ಯಗಳು ಎಂಥ ದೊಡ್ಡವರಿಗೆ ಕೂಡ ನೀತಿಯ ದೃಷ್ಟಿಯಿದ ನೋಡಲನರ್ಹವು;—ಚಿಕ್ಕಮಕ್ಕಳ ಕೋಮಲವಾದ ಅಂತಃಕರಣದ ಮೇಲಂತೂ ಅವುಗಳ ಪರಿಣಾಮಮಾಡಗೊಡಲೇಬಾರದು. ಕೆಲ ಚಿತ್ರಗಳಿಗೆ ಎಳೆಮಕ್ಕಳು ಹೋಗಕೂಡದೆಂಬ ಶಾಸನವಿರಬೇಕು. ಚಿತ್ರಪಟಗಳಿಗೆ ತೋರಿಸಲಪ್ಪಣೆಕೊಡುವಾಗ ಮಕ್ಕಳ ಹಿತಾಹಿತಗಳನ್ನು ಸಹ ವಿಚಾರಿಸಬೇಕು. ಇರಲಿ. ಶಿಶುಗೃಹಗಳ ವಿಷಯವಾಗಿ ಹೇಳುವದೆಂದರೆ, ತಮ್ಮ ಮಕ್ಕಳನ್ನು ದಾಯಿಗಳ ಕೈಯಲ್ಲಿ ಕೊಟ್ಟು ಆಟಿಗೆ ಮೊದಲಾದ ಸಾಮುಗ್ರಿಯಿಂದ ಅವರು ಕೂಸುಗಳನ್ನು ಆನಂದ ಸಮಾಧಾನಗಳಲ್ಲಿಡುವರೆಂದು ಆಶಿಸಲನುವಾದರೆ ತಾಯಂದಿರಿಗೆ ಅದೊಂದು ತಲೆಯ ಮೇಲಿನ ದೊಡ್ಡ ಭಾರವನ್ನು ಇಳಿಸಿದಂತಾಗುವದು. ಕಾಯಕಷ್ಟ ಮಾಡುವ ಹೆಣ್ಣುಮಕ್ಕಳಿಗೂ ಕೆಲಹೊತ್ತು ವಿರಾಮವಿನೋದಗಳು ಬೇಕೇ ಬೇಕು. ಈ ಬಗೆಯ ಅನುಕೂಲಗಳನ್ನು ಸ್ವಲ್ಪ ಖರ್ಚಿನಲ್ಲಿ ಅವರಿಗೆ ಒದಗಿಸಿಕೊಟ್ಟರೆ ಹೆಚ್ಚು ಬಡಜನರು ನಾಟಕಗೃಹ ಮೊದಲಾದ ವಿನೋದಸಾಧನಗಳ ಲಾಭವನ್ನು ಪಡೆದುಕೊಳ್ಳುವರು. ಮಕ್ಕಳು ಸಹ ಒಳ್ಳೆಯಸನ್ನಿವೇಶದಲ್ಲಿ ಉಲ್ಲಾಸದಿಂದ ವೇಳೆಕಳೆಯುವರು. ಇದಿಲ್ಲದಿದ್ದರೆ ದುಷ್ಟ ಸನ್ನಿವೇಶದಲ್ಲಿ ಮಕ್ಕಳ ಮೈಮನಸ್ಸುಗಳೆರಡೂ ಅನಾರೋಗ್ಯಕ್ಕೀಡಾಗಿ, ಬೇರೆಯವರಿಗೂ ಬಾಧೆಯನ್ನುಂಟುಮಾಡಬಹುದಾಗಿದೆ.

ಕ್ಲಬ್ಬುಗಳಿಗೆ

ಗಂಡಸರು ಹಾಗೂ ಹೆಂಗಸರು ವಿನೋದವಿರಾಮಗಳಿಗಾಗಿ ಮಾಡಿಕೊಂಡ ಕ್ಲಬ್ಬುಗಳಲ್ಲಿಯೂ ಶಿಶುಗೃಹಗಳ ಯೋಜನೆಯು ತೀರಾ ಉಪಕಾರಿಯಾಗಿರುವದು. ಮಕ್ಕಳಿಗಾಗಿಯೇ ಇಂಥ ವಿಶ್ರಾಂತಿಸಂಸ್ಥೆಗಳು ಪ್ರತ್ಯೇಕವಾದವುಗಳಿರದೆ ಹೋದರೂ ದೊಡ್ಡವರ ಕ್ಲಬ್ಬುಗಳಲ್ಲಿಯೇ ಒಂದು ಭಾಗವನ್ನು ಮಕ್ಕಳಿಗಾಗಿ ಮೀಸಲಾಗಿರಿಸಬೇಕು; ಇವು ಸ್ತ್ರೀಯರ ಕ್ಲಬ್ಬುಗಳಾದರೆ ಇನ್ನಿಷ್ಟು ಮೇಲು. ಕೆಲವು ಸ್ಥಳಗಳಲ್ಲಿ 'ಮಕ್ಕಳ ದಿನ' ಗಳನ್ನು ಆಚರಿಸುವರು. ತಂದೆತಾಯ್ಗಳು ಕೊಂಚ ಹೆಚ್ಚು ವೆಚ್ಚವನ್ನು ಸಹಿಸಿದರೆ, ಮಕ್ಕಳನ್ನು ತಮ್ಮೊಡನೆ ಕರೆದುಕೊಂಡು ಬರಬಹುದು; ಅಲ್ಲಿ ಅವರಿಗಾಗಿ ಕಲ್ಪಿಸಿದ ರಮ್ಯವಾದ ಆಟಪಾಟಗಳಲ್ಲಿ ಮಕ್ಕಳ ಹೊತ್ತು ಆನಂದದಿಂದ ಹೋಗುವದು. ಆಟದ ಉಪಕರಣಗಳನ್ನು ಈ 'ಸಮಾಜ' ಗಳಲ್ಲಿ ತಂದಿಡುವದಕ್ಕೆ ಅಷ್ಟೊಂದು ವಿಶೇಷ ವೆಚ್ಚ ಬರಲಾರದು. ಮೇಲೆ ವಿಚಾರಿಸಲು ಒಬ್ಬ ಆಳನ್ನು ನಿಯಮಿಸಿದರಾಯಿತು. ಹಿಂದುಸ್ಥಾನದ ಕ್ಲಬ್ಬುಗಳ ಚರಿತ್ರದಲ್ಲಿ ಇದು ಮುಂದಿನ ಮೆಟ್ಟು. ಇದರಿಂದ ಮನೆಯಲ್ಲಿಯ 'ನಿಷೇಧಪರ ಶಾಸನ' ಗಳಿಂದ ಮಕ್ಕಳಿಗೆ ಬಿಡುಗಡೆ ಸಿಕ್ಕುವದು, ಸಮಾನಶೀಲರಾದ ಬೇರೆ ಓರಿಗೆಯವರ ಜೊತೆಯಲ್ಲಿ ಸುಖದಿಂದ ಕಾಲಕಳೆಯುವದರಿಂದ ದೇಹ-ಮನಸ್ಸುಗಳಿಗೆ ಆಹ್ಲಾದಕರವಾದ ಚಟುವಟಿಕೆಯೂ ದೊರೆಯುವದು.

ಶಿವರಾಮ ಕಾರಂತ

ವಿ ರ ಚಿ ತ



ಈ ನಾಡಿನ ಆಬಾಲವೃದ್ಧರಿಗೆ ಅರ್ಪಿಸಲ್ಪಟ್ಟ ಗ್ರಂಥ

- ಹೊಸ ಯುಗದ ಪ್ರತಿಯೊಂದು ಬಗೆಯ ಜೀವನ.
- ಆಧುನಿಕ ವೈಜ್ಞಾನಿಕ, ಔದ್ಯೋಗಿಕ ಸಾಹಸಗಳು
- ಕಲಾಮಾರ್ಗಗಳು
- ಸಂಸ್ಕೃತಿಯ ವಿಕಾಸ,—ಹೆಚ್ಚೇನು
- ಬಾಳ್ವೆಯ ಸ್ವಾರಸ್ಯ

ಇವೆಲ್ಲವನ್ನು ಸಾವಿರಾರು ರಮಣೀಯ ಚಿತ್ರಗಳಿಂದ ಲಲಿತವಾದ ಭಾಷಾ ಶೈಲಿಯಿಂದ ಬಣ್ಣಿಸಿ ಬರೆದ ಗ್ರಂಥ.

ಚೆಲುವು ಕಾಗದ, ಸೊಗಸಾದ ಮುದ್ರಣ ಗಟ್ಟಿಯಾದ, ಸುಂದರವಾದ ಬೈಂಡಿಂಗು

ಮೂರು ಸಂಪುಟಗಳಿಂದ

1,800 ಪುಟಗಳು

ಬೆಲೆ — 36 ರೂಪಾಯಿಗಳು

ರಾಯಚೂರಿನಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಸುಪ್ರಸಿದ್ಧ ಕನ್ನಡ ಸಾಹಿತಿಗಳೂ ಆದ **ಶ್ರೀಯುತ ಪಂಜೆ ಮಂಗೇಶರಾಯರ ಸಂದೇಶ**:—

"ಇದು ದೊಡ್ಡ ಕಾರ್ಯ, ಇಂಥ ಸತ್ಕಾರ್ಯವು ನನ್ನ ಜೀವಮಾನದಲ್ಲಿ ನಮ್ಮ ವಿದ್ಯಾರ್ಥಿಗಳ, ನಮ್ಮ ಹಳ್ಳಿಯ ಶಾಲಾ ಉಪಾಧ್ಯಾಯರ, ನಮ್ಮ ಮನೆಯ ಹೆಂಗಸರ ಉಪಯೋಗಾರ್ಥವಾಗಿ, ಜ್ಞಾನವೃದ್ಧಿಗಾಗಿ, ಹಳ್ಳಿಯ ಬಾಳನ್ನು ಬೆಳಗಿಸುವುದಕ್ಕೆ .. .. ನಡೆಯುವ ಹಾಗೆ ಆಯಿತಲ್ಲ ಎಂಬುದೇ ನನಗೊಂದು ಹೆಮ್ಮೆ. .. .."

ನಮ್ಮಲ್ಲಿ ಎಲ್ಲ ಪುಸ್ತಕಗಳೂ ದೊರೆಯುತ್ತವೆ.

ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ

ಡಾಲ್ಟನ್ ವಿದ್ಯಾಭ್ಯಾಸಕ್ರಮ

ಲೇಖಕರು: ಶ್ರೀಮಾನ್ ಕೆ. ಶ್ರೀನಿವಾಸ ಆಚಾರ್ಲು ಎಂ. ಎ. ಬಿ. ಟಿ., ಹೆಡ್‌ಮಾಸ್ಟರ್, ಡಿ. ನಾರ್ಮಲ್‌ಸ್ಕೂಲ್, ತುಮಕೂರು

★

● ಲೇಖಕರು ಮೈಸೂರು ಸಂಸ್ಥಾನದ ಶಿಕ್ಷಕವರ್ಗದಲ್ಲಿಯೂ ಶಿಕ್ಷಣತಜ್ಞರಲ್ಲಿಯೂ ಆದರಣೀಯ ಸ್ಥಾನವನ್ನು ಪಡೆದಿದ್ದಾರೆ. ಅವರು ಡಾಲ್ಟನ್ ಪದ್ಧತಿಯನ್ನು ಬರಿ ಪುಸ್ತಕಗಳಿಂದ ಅರಿತು ತೃಪ್ತರಾಗಿರದೆ, ಅದನ್ನು ಬಹುದಿನಗಳ ವರೆಗೆ ಪ್ರಯೋಗಿಸಿ ನೋಡಿದ್ದಾರೆ. ಆದುದರಿಂದ .. .. ಈ ಲೇಖನ ಬರೆಯುವುದಕ್ಕೆ ಅವರ ಅಧಿಕಾರ ದೊಡ್ಡದು. .. ..

● 'ಸ್ವಾತಂತ್ರ್ಯ, ಆಸಕ್ತಿ, ಸಹಕಾರ'—ಎಂಬ ಮುಪ್ಪುರಿಯಿಂದ ಬಿಗಿದ ಡಾಲ್ಟನ್ ಪದ್ಧತಿಯನ್ನೂ ಅದರ 'ತಂತ್ರ' (Technique)ವನ್ನೂ ಈ ಲೇಖನದಲ್ಲಿ ವಿಶದವಾಗಿ ವಿವರಿಸಿದ್ದಾರಲ್ಲದೆ, ತಮ್ಮ ಅನುಭವದಲ್ಲಿ ಕಂಡುಬಂದ ಗುಣದೋಷಗಳನ್ನೂ ವಿವೇಚಿಸಿದ್ದಾರೆ; ವಿದ್ಯಾರ್ಥಿಗಳನ್ನು ಈ ದಾರಿಯಲ್ಲಿ ಲಲಿತವಾಗಿ ನಡೆಯಿಸಬೇಕಾದರೆ, ಉಪಾಧ್ಯಾಯನ ಯೋಗ್ಯತೆಯೂ ಜವಾಬ್ದಾರಿಯೂ ಹಿರಿದಾದುದಾಗಿರಬೇಕೆಂಬುದನ್ನು ತೋರಿಸಿದ್ದಾರೆ. .. ..

★

ಈಗಿನ ವಿದ್ಯಾಭ್ಯಾಸಕ್ರಮದ ತಳಹದಿಯು ಉತ್ತಮವಾದ ಧ್ಯೇಯಗಳ ಮೇಲೆ ನಿಂತಿಲ್ಲವೆಂದೂ, ಅದರ ಆಚರಣೆಯಲ್ಲಿ ಅನೇಕ ದೋಷಗಳಿವೆಯೆಂದೂ ಆಧುನಿಕ ವಿದ್ಯಾಶಾಸ್ತ್ರಜ್ಞರು ಒತ್ತಿಹೇಳುತ್ತಿದ್ದಾರೆ. ಅವರು ಯಾವ ದೇಶದವರಾಗಲಿ, ಅವರ ಟೀಕೆಯ ಪಲ್ಲವಿಯು ಒಂದೇ ಒಂದು—"ನಮ್ಮ ಈಗಿನ ವಿದ್ಯಾಭ್ಯಾಸಕ್ರಮವು ಚೆನ್ನಾಗಿಲ್ಲ" ಎಂಬುದು. ನಮ್ಮ ಮಕ್ಕಳು ಹತ್ತಾರುವರ್ಷ ಶಾಲೆಗೆ ಹೋಗಿ ಕಲಿಯುವುದೇನು —ಶಬ್ದಗಳು; ಅವರ ತಲೆಯ ತುಂಬ ಬರಿಯ ಶಬ್ದಗಳೇ. ಸಮಾಜದ ಉನ್ನತಿಗೂ, ವ್ಯಕ್ತಿಯ ಬೆಳವಣಿಗೆಗೂ ಅನುಪಯುಕ್ತವಾದ ಬರಿಯ ಶಬ್ದಗಳೇ. ಆದುದರಿಂದಲೇ ನಾವು ಮಾತಿನ ಮಲ್ಲರೆನಿಸಿಕೊಂಡಿರುವೆವು. ಕಾರ್ಯರಂಗದಲ್ಲಿ ನಮಗೆ ಸ್ಥಾನವಿಲ್ಲ; ಸಾಹಸವೂ ಇಲ್ಲ.

ಅಮೆರಿಕದ ವಿದುಷೀಮಣಿಗಳಲ್ಲಿ "ಪಾರ್ಕ್‌ಹರ್ಸ್ಟ್ ಕನ್ಯೆ" ಮುಂದಾಳು. ಈಕೆಯು ಈಗಿನ ವಿದ್ಯಾಭ್ಯಾಸಕ್ರಮವನ್ನು ಸಂಪೂರ್ಣವಾಗಿ ಬದಲಾಯಿಸಬೇಕೆಂಬ ಸಂಕಲ್ಪದಿಂದ ತನ್ನ ಶಾಲೆಯಲ್ಲಿ ಒಂದು ನೂತನ ಸಂವಿಧಾನವನ್ನು ಏರ್ಪಡಿಸಿದಳು. ಈ ಏರ್ಪಾಡು ಆಕೆಯ ಊರಾದ ಡಾಲ್ಟನ್ ಎಂಬಲ್ಲಿ ಪ್ರಾರಂಭವಾಯಿತು. ಆದುದ[illegible] ಈ ಪದ್ಧತಿಗೆ "ಡಾಲ್ಟನ್ ಪದ್ಧತಿ" ಎಂದು ಹೆಸರು ಬಂದಿತು.

ಈ ಡಾಲ್ಟನ್ ಪದ್ಧತಿಯ ಮುಖ್ಯ ಸೂತ್ರಗಳಾವುವು ಎಂಬುದನ್ನು ವಿಚಾರಮಾಡೋಣ.

೧) ಸ್ವಾತಂತ್ರ್ಯ:— ಕಲಿಯುವಾಗ ಮಕ್ಕಳು ಸ್ವಾತಂತ್ರ್ಯಾಭಿಲಾಷಿಗಳಾಗಿರಬೇಕು. ಯಾವ ಮಕ್ಕಳಿಗೆ ಯಾವ ವಿಷಯದಲ್ಲಿ ಎಷ್ಟರಮಟ್ಟಿಗೆ ಕಲಿಯಬೇಕೆಂಬ ಅಪೇಕ್ಷೆಯಿದೆಯೋ, ಆ ಮಕ್ಕಳಿಗೆ ಆ ವಿಷಯದಲ್ಲಿ ಅಷ್ಟುಮಟ್ಟಿಗೆ ಅವಕಾಶವನ್ನು ಕಲ್ಪಿಸಿಕೊಡದೆ ಹೋದಾಗ, ಅವರು ಇತರರ ಒತ್ತಾಯದಿಂದ ಕಲಿತ ಅಂಶಗಳನ್ನು ಜೀರ್ಣಿಸಿಕೊಳ್ಳಲಾರರು. ಆಸಕ್ತಿಯಿಲ್ಲದ ವಿಷಯಾರ್ಜನೆಯು ಅಸಹ್ಯವಾಗಿ ಪರಿಣಮಿಸುವುದು. ಈಗಿನ ಕ್ರಮದಲ್ಲಿ ಕಾಣುವುದೇನು? ಗಂಟೆ ಹೊಡೆದೊಡನೆಯೇ ಮಕ್ಕಳೆಲ್ಲರೂ ಒಂದು ತರಗತಿಯಲ್ಲಿ ಸೇರುವುದು, ಉಪಾಧ್ಯಾಯರ ಆಗಮನ, ವೇಳಾಪತ್ರಿಕೆಯ ಸೂಚನೆಯಂತೆ ಯಾವುದೋ ಒಂದು ಚುಟುಕೆ ಜ್ಞಾನಚೂರ್ಣವನ್ನು ಮಕ್ಕಳಿಗೆ ಹಂಚುವುದು, ಇನ್ನೊಂದು ಗಂಟೆಯ ಸದ್ದು ಕೇಳಿದಕೂಡಲೇ ಏನೋ ಪ್ರಮಾದ ನಡೆದಂತೆ ಭಾವಿಸಿ, ಸೀಮೆಯ ಸುಣ್ಣವನ್ನು ಬಿಸಾಡಿ, ಉಪಾಧ್ಯಾಯರು ಹೊರಡುವುದು, ಪುನಃ ಇನ್ನೊಂದು ರಸಾಸ್ವಾದನೆಯ ಅಂಕದ ಪ್ರಾರಂಭ—ಇವೇ ಅಲ್ಲವೇ? ಈ ಬಗೆಯ ವೇಳಾಪತ್ರಿಕೆಯ ಕ್ರಮದಿಂದ ಮಕ್ಕಳಲ್ಲಿ ಆಸಕ್ತಿಗೆ ಪ್ರತಿಯಾಗಿ ಬೇಸರವು ಹೆಚ್ಚುವುದಕ್ಕೆ ಅವಕಾಶವು ಹೆಚ್ಚು. ತನ್ನ ಕಾಲವನ್ನು

ತನಗೆ ಯುಕ್ತವೆಂದು ತೋರುವ ರೀತಿಯಲ್ಲಿ ಉಪಯೋಗಿಸಿಕೊಳ್ಳದಿರುವುದು ಸ್ವಾತಂತ್ರ್ಯವೆನಿಸಿಕೊಂಡೀತೇ?

೨) ಸಹಕಾರ:— ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಜ್ಞಾನಾರ್ಜನೆಯಲ್ಲಿ ಮಾತ್ರ ಬದ್ಧಾದರರಾಗಿರುವರು. ತಮ್ಮ ಸಹಪಾಠಿಗಳ ಕಲಿಯುವಿಕೆಯಲ್ಲಿ ಅವರಿಗೆ ಪಾತ್ರವಿಲ್ಲ. ಆಟದ ಮೈದಾನದಲ್ಲಿ ಮಾತ್ರ ಸಹಪಾಠಿಗಳೊಡನೆ ಸಹಕರಿಸಿ ವರ್ತಿಸುವರು. ಇತರ ಇನ್ನಾವ ಪಾಠಗಳಲ್ಲೂ ಪರಸ್ಪರ ಸಹಕಾರವಿಲ್ಲ. ಇರಲಿ. ಈ ವಿದ್ಯಾರ್ಥಿಗಳ ಭಾವಿ ಜೀವನದ ಪರಿಯಾದರೋ ಸಾಂಘಿಕವಾದುದು; ಇವರು ಈಗ ಅಭ್ಯಸಿಸುವ ಪದ್ಧತಿಯಾದರೋ ಸ್ವಾರ್ಥಪರವಾದುದು. ಹೀಗಾಗಿ ಈಗಿನ ಮತ್ತು ಮುಂದಿನ ಜೀವನದಲ್ಲಿ ಮಕ್ಕಳು ಭಿನ್ನ ಭಿನ್ನ ಸನ್ನಿವೇಶದಲ್ಲಿರಬೇಕಾಗಿರುವುದು. ಬಾಲ್ಯದಿಂದ ಅಭ್ಯಾಸವಿಲ್ಲದ ಸಹಕಾರವು ಮುಂದಿನ ಅವರ ಜೀವನದಲ್ಲಿ ಪರಿಣಾಮಕಾರಿಯಾಗದು. ಅಲ್ಲದೆ ವಿದ್ಯಾರ್ಜನೆಯಲ್ಲೂ ಸಹಕಾರವು ಆದಿಯಿಂದ ಅಭ್ಯಾಸವಾದಾಗ ಅದಕ್ಕೆ ಪೂರ್ಣತೆಯುಂಟು. ಅದು ಸಮಷ್ಟಿ ದೃಷ್ಟಿಯಿಂದ ಉತ್ತಮವಾದ ಪರಿಣಾಮವನ್ನು ಉಂಟುಮಾಡುವುದರಲ್ಲಿ ಸಂಶಯವಿಲ್ಲ. ಅಲ್ಲದೆ ವೈಯಕ್ತಿಕವಾಗಿಯೂ ಮೇಲಾದುದೇ.

ಈ ಡಾಲ್ಟನ್ ಪದ್ಧತಿಯ ಸ್ವಾತಂತ್ರ್ಯ, ಆಸಕ್ತಿ ಮತ್ತು ಸಹಕಾರ ಈ ಅಂಶಗಳನ್ನೊಳಗೊಂಡ ವಿದ್ಯಾಭ್ಯಾಸಕ್ರಮವು ಯಾವ ಸಂವಿಧಾನದಿಂದ ನಿರ್ವಹಿಸಲ್ಪಡುತ್ತದೆ ಎಂಬುದನ್ನು ವಿಚಾರಿಸೋಣ.

೧) ಡಾಲ್ಟನ್ ಶಾಲೆಯಲ್ಲಿ ತರಗತಿಗಳಿಲ್ಲ; ವೇಳಾಪತ್ರಿಕೆಯಿಲ್ಲ; ಅಡಿಗಡಿಗೆ ಗಂಟೆಹೊಡೆಯಬೇಕಾಗಿಲ್ಲ. ಒಂದೊಂದು ವಿಷಯವನ್ನು ಕಲಿಯುವುದಕ್ಕೂ ಒಂದೊಂದು ಕೊಠಡಿಯಿರುವುದು. ಈ ಕೊಠಡಿಗಳನ್ನು "ಪ್ರಯೋಗಶಾಲೆಗಳು" ಎಂದು ಕರೆಯುವರು. ಹೀಗೆಂದ ಮಾತ್ರಕ್ಕೆ ಆ ಕೊಠಡಿಗಳಲ್ಲಿ ಗಾಜಿನ ಕೊಳವೆಗಳು, ವಿವಿಧ ರಸಾಯನ ವಸ್ತುಗಳು—ಮುಂತಾದವು ಇರುವುವೆಂದು ಭಾವಿಸಬಾರದು. ಎಲ್ಲೆಲ್ಲಿ ಕಲಿಯುವಿಕೆಯು ಶಾಸ್ತ್ರೀಯವಾಗಿ ನಡೆಯುವುದೋ ಅವೆಲ್ಲವೂ ಪ್ರಯೋಗಶಾಲೆಗಳೇ. ಪ್ರತಿಯೊಂದು ಪ್ರಯೋಗಶಾಲೆಯಲ್ಲಿಯೂ ಆಯಾ ವಿಷಯವನ್ನು ಸಂಪೂರ್ಣವಾಗಿ ಅರಿತು ನುರಿತ ಉಪಾಧ್ಯಾಯರಿರುವರು. ಅಲ್ಲದೆ ಆಯಾ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು, ಪಠಗಳು ಚಿತ್ರಗಳು, ಮತ್ತು ಇತರ ಉಪಕರಣಗಳು, ಮಕ್ಕಳು ಸ್ವೇಚ್ಛೆಯಾಗಿ ಉಪಯೋಗಿಸಲು ಅನುಕೂಲಿಸುವಂತೆ ಶೇಖರಿಸಲ್ಪಟ್ಟಿರುವುವು. ಮಕ್ಕಳು ಈ ಪ್ರಯೋಗಶಾಲೆಗಳಲ್ಲಿ ತಮಗೆ ಆಯಾ ದಿನ ಇಷ್ಟವಾದುದನ್ನು ಆರಿಸಿಕೊಂಡು ಸ್ವತಃ ವಿಷಯಗಳನ್ನು ಓದಿ, ತಿಳಿದು, ಪರೀಕ್ಷಿಸಿ, ಸಂಗ್ರಹಿಸಿ ತಿಳಿಯದುದನ್ನು ಉಪಾಧ್ಯಾಯರಿಂದ ತಿಳಿದುಕೊಂಡು ತೃಪ್ತರಾಗುವರು. ಈ ಸಂದರ್ಭದಲ್ಲಿ ಪ್ರತಿಯೊಬ್ಬನೂ ಒಂಟಿಯಾಗಿ ವಿಷಯ ಸಂಗ್ರಹಕ್ಕೆ ತೊಡಗುವುದಿಲ್ಲ. ನಾಲ್ಕಾರು ಮಕ್ಕಳು ಒಂದೇ ವಿಷಯವನ್ನು ತಿಳಿಯಲು ತೊಡಗಿ ಅದನ್ನು ಶೋಧಿಸಿ ಪರಸ್ಪರ ಸಹಕಾರದಿಂದ ಮುಂದುವರಿಯುವರು. ತಮಗೆ ಅಸಾಧ್ಯವಾದುದನ್ನು ಮಾತ್ರ ಉಪಾಧ್ಯಾಯರ ಅವಗಾಹನೆಗೆ ತಂದು ಅವರ ಸಲಹೆಯಂತೆ ಶೋಧನೆಗೆ ತೊಡಗುವರು.

ಹೀಗಾದರೆ ಈ ಶಾಲೆಯಲ್ಲಿ ಉಪಾಧ್ಯಾಯರ ಕೆಲಸವೇನು? ಸುಮ್ಮನೆ ಕುಳಿತಿರುವುದು ಮಾತ್ರವೆ? ಅಲ್ಲ. ಇವರು ಪ್ರಯೋಗಶಾಲೆಯಲ್ಲಿರುವಷ್ಟು ಕಾಲವೂ ಮಕ್ಕಳ ಅಭ್ಯಾಸದ ಕಡೆಗೆ ಗಮನವಿಟ್ಟಿರಬೇಕು. ಕೆಲವು ಮಕ್ಕಳು ಇವರ ಹತ್ತಿರ ಸಲಹೆಗೆ ಬರುವರು. ಅಂತಹವರಿಗೆ ಉಚಿತ ಮಾರ್ಗವನ್ನು ನಿರ್ದೇಶಿಸಬೇಕು. ಇನ್ನು ಕೆಲವರಿಗೆ ಗ್ರಂಥಪರಿಚಯ ಮಾಡಿಕೊಡಬೇಕು. ಸೋಮಾರಿತನದ ಕುರುಹು ಕಂಡಕಡೆ ಅವರು ಹೆಚ್ಚಾಗಿ ಗಮನವಿಟ್ಟಿರಬೇಕು. ಈ ಶಾಲೆಗಳಲ್ಲಿ ಕಂಠಶೋಷಣೆಯಿಲ್ಲದಿದ್ದರೂ ಉಪಾಧ್ಯಾಯರ ಕೆಲಸಕ್ಕೆ ಆದ್ಯಂತಗಳಿಲ್ಲ. ಇಲ್ಲಿ ನಡೆವ ಕೆಲಸವು ಜೇನುಹುಟ್ಟಿನಲ್ಲಿ ನಡೆವ ಕೆಲಸದಂತಿದೆ. ಇಲ್ಲಿ ನಡೆವ ಪ್ರತಿಯೊಂದು ಕೆಲಸವೂ ವೈಯಕ್ತಿಕವು ಹೇಗೋ ಹಾಗೆಯೇ ಸಾಮೂಹಿಕವೂ ಆಗಿದೆ.

೨) ಮಕ್ಕಳು ಪ್ರಯೋಗಶಾಲೆಯಲ್ಲಿ ಕಲಿಯುವುದೇನು ಎಂಬುದನ್ನು ತಿಳಿಯುವ. ಕಲಿಯುತ್ತೇನೆಂದು ಶಾಲೆಯಲ್ಲಿರುವಷ್ಟು ಕಾಲವನ್ನು ಯಾವುದೋ ಬಗೆಯಿಂದ ಕಳೆಯುವುದಲ್ಲ. ಮಕ್ಕಳ ಯೋಗ್ಯತೆಯನ್ನನುಸರಿಸಿ ಆಯಾ ಕಾಲಗಳಲ್ಲಿ ಎಷ್ಟೆಷ್ಟು ಅಂಶಗಳನ್ನು ಕಲಿಯಬೇಕೆಂಬುದಕ್ಕೆ ಒಂದು ಮಾನವು ಬೇಕು. ಈ ಬಗೆಯ ಮಾನವು ಇಲ್ಲಿದೆ. ಮಕ್ಕಳು ಒಂದು ತಿಂಗಳಿಗೆ ಎಷ್ಟು ಕಲಿಯಬಹುದು ಎಂಬುದನ್ನು ಉಪಾಧ್ಯಾಯರು ನಿರ್ಧರಿಸಿ, ಆ ವಿಷಯದ ಜ್ಞಾನಕ್ಕಾಗಿ ಯಾವ ಯಾವ ಪುಸ್ತಕಗಳನ್ನು ಓದಬೇಕು, ಯಾವ ಯಾವ ಚಿತ್ರಗಳನ್ನು ಪರಿಶೀಲಿಸಬೇಕು, ಯಾವ ಕ್ರಮದಲ್ಲಿ ಮುಂದುವರಿಯಬೇಕು—ಮುಂತಾದ ಅಂಶಗಳನ್ನೊಳಗೊಂಡ ಸೂಚನಾಪತ್ರವನ್ನು ಉಪಾಧ್ಯಾ

ಯು ಪ್ರತಿಯೊಬ್ಬ ವಿದ್ಯಾರ್ಥಿಗೂ ಕೊಡುವರು. ಪ್ರತಿ ವಿಷಯಕ್ಕೂ ಪ್ರತಿತಿಂಗಳಲ್ಲಿಯೂ ಬೇರೆ ಬೇರೆ ಸೂಚನಾ ಪತ್ರಗಳುಂಟು. ಇವುಗಳ ಆಧಾರದ ಮೇಲೆ ಮಕ್ಕಳ ಓದು ಸುಲಭವಾಗಿ ಮುಂದುವರಿಯುವುದು.

೩) ಈ ಸೂಚನಾಪತ್ರಗಳ ತಯಾರಿಯು ಸುಲಭವಾದ ಕೆಲಸವಲ್ಲ. ವಿಚಾರಮಾಡಿ ನೋಡಿದರೆ ಡಾಲ್ಟನ್ ಪದ್ಧತಿಯಲ್ಲಿ ಇದು ಬಹು ಗಣ್ಯ ಸ್ಥಾನವನ್ನು ಪಡೆದಿದೆ. ಸುಮ್ಮನೆ ಇಂತಹ ಪುಸ್ತಕದ ಇಂತಹ ಭಾಗವನ್ನು ಓದಬೇಕೆಂದು ಸೂಚಿಸುವುದರಿಂದ ಮಾತ್ರ ಉಪಾಧ್ಯಾಯರು ತಮ್ಮ ಕೆಲಸವನ್ನು ನಿರ್ವಹಿಸಿದಂತಾಗುವುದಿಲ್ಲ. ಮಕ್ಕಳು ಅವುಗಳ ಸ್ಸಹಾದಿ ಪ್ರಸ್ತುತ ಸಮಸ್ಯೆಗಳನ್ನು ಬಿಡಿಸಲು ಬೇಕಾದ ವಿಷಯುಕ್ತ ಸಲಹೆಗಳೂ ಈ ಸೂಚೀಪತ್ರದಲ್ಲಿ ಅಡಕವಾಗಿರಬೇಕು. ಈ ಸೂಚೀಪತ್ರಗಳಲ್ಲಿ ಉಪಾಧ್ಯಾಯನ ವ್ಯಕ್ತಿತ್ವವು ಪೂರ್ಣವಾಗಿ ಅಡಕವಾಗಿರಬೇಕು. ಇಷ್ಟೇ ಅಲ್ಲದೆ ಎಲ್ಲಾ ಮಕ್ಕಳಿಗೂ ಒಂದೇಬಗೆಯ ಸೂಚನಾಪತ್ರಗಳು ಪ್ರಯೋಜನಕಾರಿಗಳಲ್ಲ. ಒಂದೊಂದು ಬುದ್ಧಿಯ ಅಂತಸ್ತನ್ನೂ ಅರಿತು ನಿರ್ಮಿಸಿದ ಸೂಚನಾಪತ್ರಗಳೂ ಅವಶ್ಯಕ.

೪) ಡಾಲ್ಟನ್‌ಪದ್ಧತಿಯಲ್ಲಿರುವ ಮತ್ತೊಂದು ವಿಶೇಷವೇನೆಂದರೆ ಮಕ್ಕಳು ದಿನೇ ದಿನೇ ಕಲಿವುದನ್ನು ಅಳೆಯುವುದು. ಇದನ್ನು ಗ್ರಾಫ್ ಪದ್ಧತಿ ಎನ್ನುವರು. ಒಂದೊಂದು ಪ್ರಯೋಗಶಾಲೆಯಲ್ಲಿಯೂ ಮಕ್ಕಳು ಎಷ್ಟರಮಟ್ಟಿಗೆ ವಿದ್ಯಾರ್ಜನೆ ಮಾಡಿರುವರು ಎಂಬುದನ್ನು ತೋರಿಸಲು ಒಂದು ಗ್ರಾಫ್ ಇರುವುದು. ಅದನ್ನು ನೋಡಿದೊಡನೆಯೇ ಮಕ್ಕಳಲ್ಲಿ ಯಾರು ಚೆನ್ನಾಗಿ ಕೆಲಸಮಾಡಿದರು, ಯಾರು ಕೆಲಸದಲ್ಲಿ ಹಿಂದೆ ಬಿದ್ದಿರುವರು ಎಂಬ ಅಂಶಗಳನ್ನು ಸುಲಭವಾಗಿ ಗೊತ್ತುಹಚ್ಚಬಹುದು. ಅಲ್ಲದೆ ವೈಯಕ್ತಿಕವಾಗಿ ಮಾಡಿದ ಕೆಲಸದ ಪ್ರಮಾಣವನ್ನು ಸೂಚಿಸಲು ಪ್ರತಿಯೊಬ್ಬ ಬಾಲಕನಲ್ಲಿಯೂ ಒಂದೊಂದು ಗ್ರಾಫ್ ಇರುವುದು. ಈ ಗ್ರಾಫ್‌ಗಳ ಮೂಲಕವಾಗಿ ಉಪಾಧ್ಯಾಯರೂ ಪೋಷಕರೂ ಬಾಲಕರ ವಿದ್ಯಾಭಿವೃದ್ಧಿಯನ್ನು ಸುಲಭವಾಗಿ ತಿಳಿಯುವರು.

ಈ ಕ್ರಮವನ್ನು "ಮೈಸೂರು ಮಹಾರಾಜ ಹೈಸ್ಕೂಲ್" ನಲ್ಲಿ ಮೂರು ವರ್ಷಗಳ ಕಾಲ ಆಚರಣೆಗೆ ತರಲು ಅವಕಾಶವಿತ್ತು. ವಿದ್ಯಾಭ್ಯಾಸದ ಇಲಾಖೆಯವರು ಆಗ ನಮಗೆ ಬೇಕಾಗಿದ್ದ ಸಲಕರಣೆಗಳನ್ನೂ, ಅನುಕೂಲಗಳನ್ನೂ ಒದಗಿಸಿಕೊಟ್ಟಿದ್ದರು. ಇಂಗ್ಲಿಷ್, ಗಣಿತ, ಚರಿತ್ರೆ, ಭೂವಿವರಣೆ, ವಿಜ್ಞಾನ-ಇವುಗಳ ಅಭ್ಯಾಸಕ್ಕಾಗಿ ೫ ಪ್ರಯೋಗಶಾಲೆಗಳು ಸಿದ್ಧವಾಗಿದ್ದವು. ಒಂದೊಂದರಲ್ಲೂ ಆಯಾ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳು, ಪಠಗಳು, ಚಿತ್ರಗಳು ಮುತ್ತು ಇತರ ಉಪಕರಣಗಳು ಒದಗಿಸಲ್ಪಟ್ಟಿದ್ದುವು. ಪ್ರತಿದಿನವೂ ಶಾಲೆಯು ಆರಂಭವಾದೊಡನೆಯೇ ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಪ್ರಯೋಗಶಾಲೆಯಲ್ಲಿ ಪ್ರವೇಶಿಸಿ ವಿಷಯಗಳನ್ನು ಕಲಿಯುತ್ತಿದ್ದರು. ಅಲ್ಲಿ ಅವರ ಸ್ವಾತಂತ್ರ್ಯಕ್ಕೆ ಯಾವ ಬಗೆಯ ಅಡ್ಡಿ ಆತಂಕಗಳೂ ಇರಲಿಲ್ಲ. ಕಲಿತ ವಿಷಯಗಳಲ್ಲಿ ಅವರ ಯೋಗ್ಯತಾನುಸಾರವಾಗಿ ಪೂರ್ಣತೆಯು ಕಾಣಬಂದಿತು.

ನಮ್ಮ ಅನುಭವದಿಂದ ಈ ಪದ್ಧತಿಯಲ್ಲಿ ಕಂಡುಬಂದ ಗುಣದೋಷಗಳನ್ನು ವಿಚಾರಮಾಡುವ.

೧) ಇಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳು ಉಪಾಧ್ಯಾಯರ ಅವಲಂಬನೆಯನ್ನೇ ಸದಾ ನಿರೀಕ್ಷಿಸದೆ ತಾವಾಗಿಯೇ ಧೈರ್ಯವಾಗಿ ಮುಂದುವರಿದು ವಿಷಯಗಳನ್ನು ಸಂಗ್ರಹಿಸುತ್ತಿದ್ದರು. ತಮಗೆ ಕಷ್ಟವಾಗಿ ತೋರಿದ ಪಾಠಕ್ಕೆ ಹೆಚ್ಚು ಕಾಲವನ್ನೂ, ಸುಲಭವಾಗಿ ತೋರಿದ ಪಾಠಕ್ಕೆ ಅಲ್ಪ ಕಾಲವನ್ನೂ ವಿನಿಯೋಗಿಸಿಕೊಂಡು ತಮ್ಮ ವ್ಯಾಸಂಗ ಕಾಲವನ್ನು ತಾವೇ ಹಂಚಿಕೊಳ್ಳುತ್ತಿದ್ದರು. ಅಂದರೆ ಈ ಪದ್ಧತಿಯಲ್ಲಿ ತರಪೇತಾದ ವಿದ್ಯಾರ್ಥಿಗಳು ಒಂದೇ ಅಚ್ಚಿನ ಎರಕಗಳಾಗಲಿಲ್ಲ.

೨) ಇಂಗ್ಲಿಷ್ ಭಾಷೆಯಲ್ಲಿಯೂ, ಗಣಿತದಲ್ಲಿಯೂ ಅಸಾಧಾರಣವಾದ ಅನುಭವವನ್ನೂ ಅಭ್ಯಾಸವನ್ನೂ ಈ ವಿದ್ಯಾರ್ಥಿಗಳು ಪಡೆದರೆಂದು ನಮ್ಮ ನಂಬಿಕೆ. ಇಂಗ್ಲಿಷಿನಲ್ಲಿ ಇವರು ಇತರ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಗ್ರಂಥ ಪರಿಚಯ ಮಾಡಿಕೊಂಡುದಲ್ಲದೆ, ಭಾಷಾಪರಿಚಯ, ಪದ ಸಂಯೋಜನ, ವ್ಯಾಸರಚನೆ—ಇವುಗಳಲ್ಲಿ ಇದೇ ಅಂತಸ್ತಿನ ಇತರ ವಿದ್ಯಾರ್ಥಿಗಳನ್ನು ಮೀರಿಸಿದರು.

೩) ಲೇಖನಭಾಗವು ಹೆಚ್ಚಾಗಿದ್ದುದರಿಂದ ಮಕ್ಕಳ ಬರವಣಿಗೆಯಲ್ಲಿ ಶುದ್ಧತೆ, ಅಂದಚಂದಗಳು, ಕ್ರಮ-ಮುಂತಾದವು ವೃದ್ಧಿಯಾದುವು.

೪) ನಮ್ಮಲ್ಲಿ ಕೆಲವರಿಗೆ ಒಂದು ಸಂಶಯವಿತ್ತು: ಬುದ್ಧಿಯಲ್ಲಿ ಮೇಲಾದ ಮಕ್ಕಳಿಗೂ ಮುತ್ತು ಬುದ್ಧಿಯಲ್ಲಿ ಕೀಳಾದ ಮಕ್ಕಳಿಗೂ ಈ ಪದ್ಧತಿಯಲ್ಲಿ ಉಪಯೋಗವು ಎಷ್ಟೆಂಬುದು. ನಮ್ಮ ಅನುಭವದಲ್ಲಿ ಮೇಲ್ತರಹೆಯ ಮಕ್ಕಳು ಅದೇ ಅಂತಸ್ತಿನ ಇತರ ಮಕ್ಕಳಿಗಿಂತ ೩-೪ ರಷ್ಟು ಕೆಲಸಮಾಡಿ ಹೆಚ್ಚು ವಿಷಯಗಳನ್ನು ಸಂಗ್ರಹಿಸಿದರೆಂದು ತೋರಿಬಂದಿತು.

ಬುದ್ಧಿಯಲ್ಲಿ ಮಟ್ಟವಾದ ವಿದ್ಯಾರ್ಥಿಗಳು ಇತರ ಶಾಲೆಗಳಲ್ಲಿ ಮೊಂಡರಾಗಿಯೋ, ಅವಿಧೇಯರಾಗಿಯೋ, ತುಂಟರಾಗಿಯೋ ಇರುವರಷ್ಟೆ. ಇಂತಹವರು ಕೂಡ ಈ ಪದ್ಧತಿಯಲ್ಲಿ ತಮ್ಮ ಜವಾಬ್‌ದಾರಿಯನ್ನರಿತು ವೃಥಾ ಕಾಲಹರಣ ಮಾಡದೆ ತಮ್ಮ ಯೋಗ್ಯತೆಗೆ ತಕ್ಕಂತೆ ವಿದ್ಯಾರ್ಜನೆ ಮಾಡಿದರೆಂದು ಧಾರಾಳವಾಗಿ ಹೇಳಬಹುದು. "ಈ ಪಾಠವು ನನಗೆ ತಿಳಿಯಲಿಲ್ಲ"ಎಂದು ಗೊಣಗುಟ್ಟುವ ವಿದ್ಯಾರ್ಥಿಗಳ ಸಂಖ್ಯೆಯು ಸಾಮಾನ್ಯ ಶಾಲೆಗಳಲ್ಲಿ ಅಧಿಕವಾಗಿಯೇ ಇರುವುದು ಎಲ್ಲರ ಅನುಭವ. ಆದರೆ ಡಾಲ್ಟನ್ ಪದ್ಧತಿಯಲ್ಲಿ ಈ ತೆರನಾದ ಜಿಗುಪ್ಸೆಗೆ ಅವಕಾಶವೇ ಇಲ್ಲ. ಬುದ್ಧಿವಂತನು ತನ್ನ ಬುದ್ಧಿತೀಕ್ಷ್ಣತೆಗೆ ಸಾಕಾದಷ್ಟು ಅವಕಾಶವನ್ನು ಕಲ್ಪಿಸಿಕೊಂಡನು. ಸಾಮಾನ್ಯ ಬುದ್ಧಿಯವನು ತನ್ನ ಮಟ್ಟದ ಇತರ ಬಾಲಕರಿಗಿಂತ ಮೇಲಾಗಿದ್ದುದಲ್ಲದೆ ತನ್ನ ವ್ಯಾಸಂಗದಲ್ಲಿ ನ್ಯೂನತೆಯಿಲ್ಲವೆಂಬ ಧೈರ್ಯ ಸಂತೋಷಗಳನ್ನೂ ಪಡೆದಿದ್ದನು.

ನಮ್ಮ ನಾಡು ಪರೀಕ್ಷೆಯ ನಾಡು. ಸಾಮಾನ್ಯ ಶಾಲೆಗಳಲ್ಲಿ ಬಾಲಕರು ತಮ್ಮ ಪಠ್ಯಪುಸ್ತಕಗಳ ಮೇಲೆ ನೋಟ್ಸಿಗಾಗಿ ಉಪಾಧ್ಯಾಯರನ್ನು ಪೀಡಿಸುವರು. ಪರೀಕ್ಷೆಗಳಲ್ಲಿ ಅವರಿಂದ ಪಡೆದ ನೋಟ್ಸಿನ ವಾಕ್ಯಗಳನ್ನು ಕಕ್ಕಿ ಹೇಗೋ ಪಾರಾಗುವ ಯೋಚನೆ ಬಾಲಕರಿಗಿವೆ. ನಮ್ಮ ವಿದ್ಯಾಭ್ಯಾಸದ ಬೆಲೆಯನ್ನು ತಗ್ಗಿಸಿ ಅಗೌರವವನ್ನು ತಂದಿರುವುದೇ ಈ ನೋಟ್ಸುಗಳು—ಉಪಾಧ್ಯಾಯರಿಂದ ತಯಾರಿಸಲ್ಪಟ್ಟ ಈ ಬಗೆಯ ಗುಳಿಗೆಗಳು. ಡಾಲ್ಟನ್ ವಿದ್ಯಾರ್ಥಿಗಳು ಮೂರು ವರ್ಷಗಳ ಕಾಲದಲ್ಲಿ ಒಂದು ದಿನವಾದರೂ ಹೀಗೆ ನೋಟ್ಸಿಗಾಗಿ ಗೋಗರೆಯಲಿಲ್ಲ. ಸ್ವಾವಲಂಬನೆಯಿಂದ ತಾವೇ ನೋಟ್ಸನ್ನು ತಯಾರಿಸುವ ಇವರಿಗೆ ಉಪಾಧ್ಯಾಯರ ನೋಟ್ಸ್ ಏಕೆ ? ಸಹಜಮಾರ್ಗದಲ್ಲಿ ಕಲಿವ ಇವರಿಗೆ ಪರೀಕ್ಷೆಯ ಭಯವೆಲ್ಲಿಂದ ಬರಬೇಕು ?

ಇದುವರೆಗೆ ಡಾಲ್ಟನ್ ಪದ್ಧತಿಯಲ್ಲಿ ಕಂಡುಬಂದ ಗುಣಾಂಶಗಳನ್ನು ಮಾತ್ರ ವಿಮರ್ಶಿಸಿದೆವು. ಇನ್ನು ಈ ಪದ್ಧತಿಯಲ್ಲಿ ತೋರಿಬರುವ ಕೆಲವು ದೋಷಗಳನ್ನು ವಿಚಾರಮಾಡೋಣ.

೧) ಸೂಚನಾಪತ್ರಗಳು ಉಪಾಧ್ಯಾಯರ ಯೋಗ್ಯತೆಯನ್ನು ಅಳೆಯುವ ಅಡಿಗಡ್ಡಿ. ನಾನಾ ದರ್ಜೆಯ ಮಕ್ಕಳಿಗೆ ಅನ್ವಯಿಸುವಂತೆ ಇವುಗಳನ್ನು ತಯಾರಿಸುವುದು ಸುಲಭವಲ್ಲ. ಇವು ಉಪಾಧ್ಯಾಯರ ವಿದ್ಯಾ, ಬುದ್ಧಿ, ವ್ಯಾಸಂಗ ಮತ್ತು ಅನುಭವ—ಇವುಗಳ ಪ್ರಮಾಣವನ್ನು ಬೈಲಿಗೆಳೆದು ಪ್ರದರ್ಶಿಸುವ ಜಾಹಿರಾತುಗಳು. ಇಂತಹ ಕಠಿಣ ಪ್ರಸಂಗದಲ್ಲಿ ಉಪಾಧ್ಯಾಯರು ತಮ್ಮ ಕರ್ತವ್ಯವನ್ನು ಉಚಿತ ರೀತಿಯಲ್ಲಿ ನಿರ್ವಹಿಸುವುದು ಸಾಧ್ಯವೇ ಎಂಬ ಸಮಸ್ಯೆಯು ಎದ್ದುನಿಲ್ಲುವುದು. ಆದಿಯಲ್ಲಿ ಉಪಾಧ್ಯಾಯರಿಗೆ ಸ್ವಲ್ಪ ಶ್ರಮ ಹೆಚ್ಚಿದರೂ ಅನುಭವವು ನೆರವಾಗಿ ಅವರ ಕೆಲಸವು ಕ್ರಮೇಣ ಹಗುರವಾಗುವುದೆಂಬುದು ಅನುಭವದ ಮಾತು.

೨) ಈ ಪದ್ಧತಿಯ ಶಿಷ್ಯವರ್ಗದಲ್ಲಿ ಕೆಲವರು ನೋಟ್ಸನ್ನು ತಯಾರಿಸುವಾಗ ಅಚ್ಚಿನ ಪುಸ್ತಕಗಳಿಂದ ವಾಕ್ಯಗಳನ್ನು ನಕಲುಮಾಡುತ್ತಿದ್ದುದು ಗೋಚರವಾಯಿತು. ಈ ಗಿಳಿಪಾಠವನ್ನು ತಡೆಗಟ್ಟುವುದಕ್ಕೆ ಉಪಾಧ್ಯಾಯರು ಒಂದು ಉಪಾಯವನ್ನು ಹುಡುಕಬೇಕಾಯಿತು. ಅಂತಹ ವಿದ್ಯಾರ್ಥಿಯನ್ನು ಕಂಡುಹಿಡಿದ ಕೂಡಲೆ ಆತನನ್ನು ಕರೆದು ಆ ವಿಷಯವಾಗಿ ಅವನಿಗೆ ವಾಚಾ ಕೆಲವು ಪ್ರಶ್ನೆಗಳನ್ನು ಹಾಕಿದರು. ಆಗ ಅವನ ಗುಟ್ಟು ರಟ್ಟಾಗಿ ಆ ವಿದ್ಯಾರ್ಥಿಯು ತನ್ನ ರೀತಿಯನ್ನು ಬದಲಾಯಿಸಿಕೊಂಡನು.

೩) ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಇಟ್ಟಿದ್ದ ಕೆಲವು ಪುಸ್ತಕಗಳು ಕಳವಾದುವು. ನಾನಾ ಸನ್ನಿವೇಶದಲ್ಲಿ ಬೆಳೆದ ನಾನಾ ಸ್ವಭಾವವುಳ್ಳ ಮಕ್ಕಳು ಸೇರುವ ಸ್ಥಳಗಳಲ್ಲೆಲ್ಲ ಈ ಬಗೆಯ ನಡವಳಿಯು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ನೀತಿ ಒಲವು ನೆಲಸುವ ವರೆಗೆ ಇದನ್ನು ನಿಲ್ಲಿಸುವುದು ದುಸ್ಸಾಧ್ಯ.

೪) ಈ ಪದ್ಧತಿಯಂತೆ ವ್ಯಾಸಂಗಮಾಡುವ ಬಾಲಕರು ಮೌನವಾಗಿ ಓದುಬರಹಗಳಲ್ಲಿ ತೊಡಗಿರುವುದರಿಂದ ಅವರ ವಾಕ್ಪಾಟವಕ್ಕೆ ಉತ್ತೇಜನವಿಲ್ಲವಾಯಿತು. ತಿಳಿದುದನ್ನು ಧಾರಾಳವಾಗಿ ಸ್ವಂತಮಾತುಗಳಿಂದ ಬರೆಯಬಲ್ಲವರಾದರೂ ಬಾಯಲ್ಲಿ ಹೇಳಲಾರದ ಇವರಲ್ಲಿ ಒಂದು ನ್ಯೂನತೆಯು ನೆಲಸಿತು. ಈ ನ್ಯೂನತೆಯನ್ನು ಪರಿಹರಿಸಿ ಇವರಲ್ಲಿ ವಾಕ್ಪಾಟವವು ನೆಲಸುವಂತೆ ಮಾಡುವುದಕ್ಕಾಗಿ ಇಂತಹ ಶಾಲೆಗಳಲ್ಲಿ ವಾರಕ್ಕೆ ೨-೩ ಗಂಟೆಗಳ ಕಾಲವನ್ನು ಮೊಸಲಾಗಿರಿಸಬೇಕಾದ ಪ್ರಸಂಗವು ಒದಗಿತು. ತಾವು ಕಲಿತ ಅಥವಾ ಪ್ರಾಪಂಚಿಕವಾದ ಯಾವುದಾದರೊಂದು ಅಂಶವನ್ನು ವಿದ್ಯಾರ್ಥಿಸಭೆಯಲ್ಲಿ ಚರ್ಚಿಸುವುದರಿಂದ ವಾಕ್ಪಾಟವವೂ ಈ ವಿದ್ಯಾರ್ಥಿಗಳಲ್ಲಿ ನೆಲಸಲು ಅವಕಾಶವುಂಟು.

ನಮ್ಮ ಮೂರು ವರ್ಷಗಳ ಕಾಲದ ಅನುಭವದಿಂದ ಹೇಳುವುದಾದರೆ ಈ ಪದ್ಧತಿಯಲ್ಲಿ ಗುಣಾಂಶಗಳು ಹೇರಳವಾಗಿವೆಯೇ ವಿನಾ ಅಪರಿಹಾರ್ಯವಾದ ದೋಷವಾವುದೂ ಇದ್ದಂತೆ ನಮ್ಮ ಗಮನಕ್ಕೆ ಬರಲಿಲ್ಲ. ಈ ಪದ್ಧತಿಯಲ್ಲಿ ಅನು

ನವು ಹೆಚ್ಚಿದ ಹಾಗೆಲ್ಲ ಉಪಾಧ್ಯಾಯರಿಗೆ ಹೊಸ ಹೊಸ ಸುಹೆಗಳು ತಾವಾಗಿ ಹೊಳೆಯುತ್ತ ಹೋಗುವವು. ಅವನ್ನು ಪಯೋಗಿಸಿಕೊಂಡು ಉಪಾಧ್ಯಾಯರು ಈ ಪದ್ಧತಿಯು ಬಾಲಕರ ಏಳಿಗೆಗೆ ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾರ್ಪಡಿಸಿಕೊಳ್ಳಬಹುದಾಗಿದೆ. ಬಾಲಕರಲ್ಲಿರಬೇಕಾದ ಜ್ಞಾನಾರ್ಜನಾಸಕ್ತಿ, ಸ್ವಾತಂತ್ರ್ಯ, ಸ್ವಾವಲಂಬನೆ, ಸಹ ಕಾರ, ಕಾರ್ಯತತ್ಪರತೆ —ಮುಂತಾದುವು ಅವರಲ್ಲಿ ನೆಲಸು ವಂತೆ ಮಾಡಲವಕಾಶವಿರುವುದರಿಂದ ಈ ಪದ್ಧತಿಯು ಅತ್ಯು ತ್ತಮ ಫಲಕಾರಿಯೆಂದು ಧಾರಾಳವಾಗಿ ಹೇಳಲವಕಾಶ ವಿದೆ. ಮುಖ್ಯವಾಗಿ ಮಕ್ಕಳ ಶ್ರೇಯಸ್ಸೇ ತನ್ನ ಧ್ಯೇಯ ವೆಂದೂ ಅವರನ್ನು ತರಪೇತು ಮಾಡುವುದಕ್ಕಿಂತಲೂ ಉತ್ತಮವಾದ ಕಾರ್ಯವು—ಸೇವೆಯು—ಮತ್ತಾವುದೂ ಇಲ್ಲ ವೆಂತಲೂ ಭಾವಿಸಿರುವ ಆಸ್ತಿಕನೂ ಉತ್ಸಾಹಶಾಲಿಯೂ ಆದ ಉಪಾಧ್ಯಾಯನ ಕೈಯಲ್ಲಿ ಆಡಳಿತಸೂತ್ರವಿದ್ದಾಗ ಈ ಪದ್ಧತಿಗೆ ಅತ್ಯುತ್ತಮವಾದ ಫಲವಿದೆ. ಅಂತಹ ವ್ಯಕ್ತಿಯೇ ಈ ಬಗೆಯ ಶಾಲೆಗೆ ಉಪಾಧ್ಯಾಯನಾಗಲು ಅರ್ಹನು.

ಹೀಗೇ ಮುನ್ನಡೆದರೆ ನಿರಕ್ಷರತೆಯು ದೂರವಾದೀತೇ?

ಅಜ್ಞಾನಸ್ವರೂಪಿಯಾದ ನಿರಕ್ಷರತೆಯ ಮಾರಿಯನ್ನು ಊರಿಂದಟ್ಟಿಬಿಡಬೇಕೆಂಬುದು ಇಂದಿನ ಸ್ಫೂರ್ತಿ. ಮುಂದಿನ ಜನಾಂಗವಾದ ಇಂದಿನ ಮಕ್ಕಳಿಗೆ ಅಕ್ಷರಾಭ್ಯಾಸ ವನ್ನು ಕಾನೂನಿನ ಒತ್ತಾಯದಿಂದಾದರೂ ಮಾಡಿಸಿ ಮುಂದೆ ನಿರಕ್ಷರಿಗಳಿಲ್ಲದಂತೆ ನೋಡಿಕೊಳ್ಳಬೇಕೆಂಬುದು ನಾಡಿನ ಮೇಲ್ಮೆಗಾಗಿ ದುಡಿ ಯುವವರೆಲ್ಲರ ಇಂದಿನ ಒಡ್ಡಾಟ. ಈ ಹುರುಪಿನ ಭರ ದಿಂದ ಹೊರಬೀಳುವ ಯೋಜನೆ ಗಳಿಗೂ ಪ್ರಯೋಗಗಳಿಗೂ ಸಲಹೆ ಸೂಚನೆಗಳಿಗೂ ತುದಿ ಮೊದಲಿಲ್ಲ. ಆದರೆ ನಿರಕ್ಷರತೆ ಯನ್ನು ನಿವಾರಿಸುವುದೆಂದ ರೇನೆಂಬುದನ್ನು ಹಲವರು ತಿಳಿ ದಿಲ್ಲ. ಮಕ್ಕಳಿಗೊಂದಿಷ್ಟು ಓದಲು ಬರೆಯಲು ಬಂತೆಂದ ಮಾತ್ರಕ್ಕೆ ಅದರಿಂದ ಯಾವ ಧ್ಯೇಯಪ್ರಾಪ್ತಿಯೂ ಆಗುವು ದಿಲ್ಲ. ಅದೊಂದು ಧ್ಯೇಯಪ್ರಾಪ್ತಿಯ ಸಾಧನ ಮಾತ್ರ. ಶಾಲೆ ಬಿಡುವ ಮಕ್ಕಳ ಮುಂದಿನ ಜೀವನದಲ್ಲಿ ಬೆಂಬಲವಾಗಿ ನಿಲ್ಲಲಾಪ ಜ್ಞಾನವಿಜ್ಞಾನ, ಬುದ್ಧಿಚಾತುರ್ಯ, ವಿಚಾರ ವಿವೇಕ, ಇವನ್ನೆಲ್ಲ ಅವರ ಕೈಯಲ್ಲಿ ಬುತ್ತಿಕಟ್ಟಿಕೊಟ್ಟು ಕಳುಹಿಸಲು ಸಾಧ್ಯವೇ? ಬುತ್ತಿಯಲ್ಲೇನೋ ಒಂದಿಷ್ಟು ಹಾಕಿಕೊಡಲಾಗುವುದು. ಆದರೆ ಆ ಬುತ್ತಿಯನ್ನು ಅಕ್ಷಯ ಪಾತ್ರೆಯನ್ನಾಗಿ ಮಾಡಿಕೊಳ್ಳುವಂತೆ ನಾವು ಕೊಡುವ ಸಾಧನವೇ ಓದುಬರೆಹ. ವಿಶ್ವದ ಸಾಹಿತ್ಯ-ಕಲಾ-ಸಂಸ್ಕೃತಿ-ಜ್ಞಾನ-ವಿಜ್ಞಾನಗಳ ಭಂಡಾರದ ಬೀಗದ-ಕೈಯಂತಿರುವ ಓದಿನ ಸಾಧನವನ್ನು ಮಕ್ಕಳ ಕೈಯಲ್ಲಿಟ್ಟು ಕಳುಹಿಸುತ್ತೇವೆ. ಆ ಭಂಡಾರದ ಬಾಗಿಲನ್ನು ತೆರೆದು ಅವರವರ ಜೀವನದ ಆಯಾ ಸಂದರ್ಭ ಪರಿಸ್ಥಿತಿಗಳಿಗೇ ನೇನು ಬೇಕೋ ಅದನ್ನು ಆಯ್ದು ತೆಗೆದು ಉಪಯೋಗಿಸಿದ ರೇನೇ ನಾವು ಬೀಗದಕೈಯನ್ನು ಕೊಟ್ಟುದರ ಹಾಗೂ ಅವರು ಪಡೆದುದರ ಉದ್ದೇಶವು ಸಾರ್ಥಕ. ಓದುಬರೆಹ ಕಲಿಸುವುದೆಂದರೆ, ಮಕ್ಕಳು ಮುಂದೆ ತಮ್ಮ ಜೀವನದಲ್ಲಿ ಪರಮಾವಧಿ ಶಾಂತಿ ಸುಖ ಸಂತೋಷಗಳನ್ನು ಹೊಂದಲು ಜಗತ್ತಿನ ಜ್ಞಾನಾನುಭವದ ಗನಿಯಿಂದ ಎಂತೆಂತಹ ಅಮೌಲ್ಯ ರತ್ನಗಳು ಸಿಕ್ಕ ವವೋ ಅವನ್ನು ಹುಡುಕಿ ತೆಗೆಯಲಿಕ್ಕೆ ಅವರ ಕೈಯಲ್ಲಿ ಕೊಡುವ ದೀವಟಿಗೆ. ಆದ ಆ ದೀವಟಿಗೆಯನ್ನು ಹೊಂ ದವರು ಅದನ್ನು ಕರಿಗಟ್ಟಿ ದರ್ರೆ, ನಂದಿಸಿದರೆ, ಬಿಸ ತೆಗೆದು ಬಿಸುಟಿದರೆ ಕೊಟ್ಟೇನು ಪ್ರಯೋಜನ? ಪಡೆದೇನು ಪುರುಷಾರ್ಥ? ಉಭಯ ಪಕ್ಷಗಳೂ ಧನವ್ಯಯ ಶ್ರಮವ್ಯ ಕಾಲವ್ಯಯ ಮಾಡಿದ್ದೇ ಬಂತು. ಅಲ್ಲವೆ?

> ಓದಿನಲ್ಲೊಂದು ಆನಂದವಿರಬೇಕು; ಓದಿನಲ್ಲಿ ಲವಲವಿಕೆಯಿರಬೇಕು.. ಪಾಶ್ಚಾತ್ಯರು ಇದನ್ನು ಅರಿತಿರುವರು. ಅಲ್ಲಿಯವರು ಬಾಲ ವಾಙ್ಮಯದ ಬಲವಾದ ಬುನಾದಿಯನ್ನು ಹಾಕಿಕೊಂಡೇ ಭಾಷೋನ್ನತಿಯ, ಜ್ಞಾನೋನ್ನತಿಯ, ದೇಶೋನ್ನತಿಯ ಮಹಾಪ್ರಾಸಾದಗಳನ್ನು ಯಶಸ್ವಿಯಾಗಿ ಕಟ್ಟಿದ್ದಾರೆ. ನಾವು ಬುನಾದಿ ಹಾಕದೆ ಮರಳುರಾಶಿಯ ಮೇಲೆ ಕಟ್ಟಡ ಕಟ್ಟಲೆಸಗುತ್ತಿದ್ದೇವೆ. ::

ಆದರೆ ಇಂದು ಎಲ್ಲರೂ ನಿರಕ್ಷರತೆಯನ್ನು ನಾಡಿನಿಂದೋ ಡಿಸುವ ಅತ್ಯಾತುರದ ಅವಸರದಿಂದ ಮುನ್ನೋಟವಿಟ್ಟು ಓಟ ಓಡುತ್ತಿದ್ದಾರೇ ವಿನಾ ಹಿಂದಿನಿಂದೇನಾಗುತ್ತ ಬಂದಿ ಯೆಂಬುದರ ಕಡೆಗೆ ದೃಷ್ಟಿ ತಿರುಗಿಸಿದವರು ವಿರಳ. ಹಾ ಹಿನ್ನೋಟವಿಟ್ಟವರಿಗೆ ಮಾತ್ರ ತಮ್ಮ ಶ್ರಮವೆಲ್ಲ ನಿರರ್ಥ ವಾಗುತ್ತಿದೆಂಬುದು ತಿಳಿದುಬರುತ್ತೆ. ತಾವು ಯಾರನ್ನ ಅಕ್ಷರಸ್ಥರನ್ನಾಗಿ ಮಾಡಿ ಮುಂದುವರೆದಿಡುವರೋ ಅವರ ಹೆಚ್ಚಿನವರಿಗೆ ನಿರಕ್ಷರತೆಯ ರೋಗವು ಮರುಕೋ ಹಿಡಿದಿದೆಯೆಂಬದು ಸ್ಪಷ್ಟವಾಗುತ್ತಿದೆ. ಹೆಚ್ಚಾಗಿ ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಓದು ಮುಗಿಸಿ ಮನೆಸೇರಿದ ಮಕ್ಕಳು ಈಗೇನು ಮಾಡುತ್ತಿರುವರು? ಅಂದಿನಿಂದ ಇಂದಿನ ವರೆಗೆ ಎಷ್ಟು ಪುಸ್ತಕಗಳನ್ನು ಓದಿದ್ದಾರೆ? ಅವರ ಮನೆಯಲ್ಲಿ ಎಷ್ಟು ಪುಸ್ತಕಗಳಿವೆ? ಈಗ ಯಾವ ಪುಸ್ತ

ಲೇಖಕರು: ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು, ಬೋರ್ಡ್ ಹೈಸ್ಕೂಲ್, ಉಡುಪಿ

ಅವರ ಕೈಯಲ್ಲಿದೆ ? ಯಾವುದಾದರೊಂದು ಪತ್ರಿಕೆಯು ಅವರ ಕೈ ಸೋಂಕದೆ ಎಷ್ಟು ಕಾಲವಾಗಿರಬಹುದು? ಅವರು ಶಾಲೆಬಿಟ್ಟಂದಿನಿಂದ ಇಂದಿಗೆ ಲೋಕವು ಎಷ್ಟು ಮಾರ್ಪಾಟ ವಾಗಿದೆಯೆಂಬುದನ್ನು ಅವರು ಓದಿ ತಿಳಿದಿದ್ದಾರೆಯೇ? ಅವರು ಅಂದು ಕಲಿತ 'ಸಿವಿಕ್ಸ್' ಈಗೆಷ್ಟು ಸುಧಾರಿಸಿ ಮುಂದುವರಿದಿದೆಯೆಂಬುದು ಅವರಿಗೆ ಗೊತ್ತಿದೆಯೇ? ಅವರ ಬುದ್ಧಿ ಜ್ಞಾನ ವಿಚಾರಗಳು ವಿಕಾಸಗೊಂಡಿವೆಯೋ? ಅವರ ಊರಲ್ಲಿ ಪುಸ್ತಕಭಂಡಾರವುಂಟೇ? ವಾಚನಾಲಯ ವಿದೆಯೇ? ಎಷ್ಟು ಪತ್ರಿಕೆಗಳು ಆ ಊರಿಗೆ ಬರುತ್ತಿವೆ? ಅಲ್ಲಿ ಓದು ಕಲಿತವರೆಷ್ಟು? ದಿನಾಲು ಒಂದರೆ ತಾಸಾದರೂ ಓದುವವರೆಷ್ಟು? ಪುಸ್ತಕವನ್ನು ಕೈಯಿಂದ ಹಿಡಿಯುವವ ರೆಷ್ಟು? ಇವನ್ನೆಲ್ಲ ಹಳ್ಳಿಗಳಿದು ಅಂಕೆ ಸಂಖ್ಯೆ ತೆಗೆದು ನೋಡಬೇಕು. ಆಗ ಗೊತ್ತಾಗುತ್ತೆ, ಓದು ಕಲಿತವರಲ್ಲಿ ಹೆಚ್ಚಿನವರೆಲ್ಲ ಪುನಃ ನಿರಕ್ಷರತೆಯ ರೋಗಕ್ಕೆ ತುತ್ತಾಗಿದ್ದಾ ರೆಂಬುದು. ಅಕ್ಷರಜ್ಞತೆಯ ಪ್ರಯೋಜನವನ್ನು ಅವರು ಹೊಂದಲಿಲ್ಲವೆಂಬುದು ಆಗ ಸ್ಪಷ್ಟವಾಗುತ್ತೆ! ಮತದಾನದ (ವೋಟಿನ) ಹಕ್ಕುಳ್ಳವರೆಂಬು ದಕ್ಕೆ ಬೇಕಷ್ಟು ಸಾಕ್ಷರತೆ ಮಾತ್ರ ಅವರಲ್ಲೀಗ ಉಳಿದಿದೆ! ಆದರೆ ಅವರೆಲ್ಲರಿಗೆ ಓದು ಬರಹ ಕಲಿಸಿದುದರ ಉದ್ದೇಶವು ಇಷ್ಟೋ? ಅವರು ಮುಂದೆಯೂ ಓದುತ್ತ ಓದುತ್ತ ತಮ್ಮ ವ್ಯಕ್ತಿತ್ವ ವನ್ನು ವಿಕಾಸಗೊಳಿಸಿಕೊಂಡು ಒಳ್ಳೆಯ ನಾಗರಿಕರಾಗಿ ಬಾಳಲೆಂದಲ್ಲವೇ ಕಲಿಸಿದುದು?

> ಮಕ್ಕಳು ತಿನ್ನುವ ತಿಂಡಿಯನ್ನೂ, ಉಣ್ಣುವ ಊಟವನ್ನೂ ಬಿಟ್ಟು ಅತ್ಯಾತುರದಿಂದ ಓದುವ ಸೋಪಾನಕ್ರಮದಲ್ಲಿ ರಚಿಸಿದ ಪುಸ್ತಕಗಳು ಪಾಶ್ಚಾತ್ಯರ ಶಿಶುಸಾಹಿತ್ಯಭಂಡಾರಗಳಲ್ಲಿ ಅಸಂಖ್ಯಾತವಿವೆ. ನಮ್ಮ ಕನ್ನಡ ಶಾಲೆಗಳಲ್ಲಿ ಮಕ್ಕಳಿಗೆ ಓದೆಂದು ಕುಡಿಸುವುದು 'ಇಳಿಸಿದುಷ್ಣದ ಹಾಲಿನಂತಾ'ಗಿರದೆ ಸುಡುಸುಡು ಹಾಲಾಗಿದೆ. ನಮ್ಮ ಮಕ್ಕಳು ಬೆಳೆದು ಗಡ್ಡ ಹಣ್ಣಾದರೂ ❖ 'ತೆನ್ನಾಲಿ ರಾಮನ ಬೆಕ್ಕುಗಳೇ'! ❖

ಹಾಗಾದರೆ ಅವರೇಕೆ ಓದುವುದಿಲ್ಲ? ಬಿಡುವಿಲ್ಲವೆಂದೋ? ದುಡಿದ ಹೊತ್ತು ಮುಳುಗಲಿಲ್ಲವಲ್ಲಾ ಎಂದು ಹಾಕ ಳಿಸುತ್ತಿರುವವರು ಅವರಲ್ಲಿ ಎಷ್ಟು! ಕೆಲವೇ ಕೆಲವು ಪುಸ್ತಕ ಪತ್ರಿಕೆಗಳನ್ನಾದರೂ ಕೊಂಡುಕೊಳ್ಳಲಾರದಷ್ಟು ಅಥವಾ ಊರು ಕೂಡಿ ಒಂದು ಪುಸ್ತಕಭಂಡಾರವನ್ನಾಗಲೀ ವಾಚ ನಾಲಯವನ್ನಾಗಲೀ ಸ್ಥಾಪಿಸಲಾರದಷ್ಟು ಅವರಲ್ಲಿ ಬಡತನ ಬಂದಿದೆಯೆಂದೋ? ಹಾಗೂ ಅಲ್ಲ. ಅವರು ಊರ ಜಾತ್ರೆಗೆ ಹೋದಾಗ, ಹಳ್ಳಿಯ ಪೇಟೆ ಸುತ್ತಿದಾಗ, ಕಾಫೀ ಹೋಟೆಲನ್ನು ಹತ್ತಿದಾಗ, ಸಂತೆಯುತ್ಸವಗಳಲ್ಲಿ ಜೂಜಾ ಟದ ಮಣೆಗಳ ಬಳಿ ನಿಂತಾಗ ಅವರ ಕೈಯಿಂದ ಸೋರಿ ಹೋಗುವ ದುಡ್ಡೆಷ್ಟು! ಆಡಂಬರಕ್ಕಾಗಿ ವಿಲಾಸದ ಜೀವನ ಕ್ಕಾಗಿ ಹಾಸಿಗೆ ಮೀರಿ ಕಾಲುನೀಡಿದ ದುಂದುಗಾರಿಕೆಯಲ್ಲಿ ಇಳಿಯುವ ಇವರು ತಮ್ಮ ಇಡೀ ಜೀವಮಾನದಲ್ಲಿ ನಾಲ್ಕಾ ರಾಣೆಯ ಎಂಟು ಹತ್ತು ಪುಸ್ತಕಗಳನ್ನಾದರೂ ಕೊಂಡು ಕೊಳ್ಳಲಾರದಷ್ಟು ಬಡವರಾಗಿರುವರೇ ? ಇಲ್ಲ. ಅವರು ಓದದಿರುವುದು ಬಿಡುವಿಲ್ಲವೆಂದಲ್ಲ; ದುಡ್ಡಿಲ್ಲವೆಂದಲ್ಲ. ಓದ ಬೇಕೆಂಬ ಲವಲವಿಕೆಯಿಲ್ಲದಿದ್ದುದರಿಂದ. ಓದಿನಲ್ಲೊಂದು ಆನಂದವಿದೆಯೆಂಬುದು ಗೊತ್ತಿಲ್ಲದಿದ್ದುದರಿಂದ.

ಆದರೆ ಐರೋಪ್ಯ ದೇಶಗಳಲ್ಲಿ ಬಡ ದಿನಗೂಲಿಯವರೂ ಓದುವುದಿಲ್ಲವೇ? ಬಿಡುವಿಲ್ಲದಿದ್ದರೂ ಕೆಲಸಕ್ಕೆ ಹೋಗು ವಾಗ ಅಲ್ಲಿಂದ ಬರುವಾಗ ಓದಿಕೊಳ್ಳುತ್ತ ಬಿಡುಮಾಡಿ ಕೊಳ್ಳುವುದಿಲ್ಲವೇ? ಬಡವರಾದರೂ ಅನುದಿನದ ರೊಟ್ಟಿ ಯನ್ನು ಕೊಂಡುಕೊಳ್ಳುವಾಗ ಅದನ್ನು ತುಸು ಕಡಿಮೆ ಮಾಡಿಕೊಂಡಾದರೂ ಒಂದು ಪತ್ರಿಕೆಯನ್ನೋ ಪುಸ್ತಕ ವನ್ನೋ ತೆಗೆದುಕೊಳ್ಳಲು ದುಡ್ಡು ಮಾಡಿಕೊಳ್ಳುವು ದಿಲ್ಲವೇ ? ಅವರಲ್ಲಿ ಓದಬೇಕೆಂಬ ಲವಲವಿಕೆಯಿದೆ. ಆ ಲವಲವಿಕೆಯೇ ಅವರಿಗೆ ಬಿಡುವನ್ನೂ ದುಡ್ಡನ್ನು ತೋರಿಸಿ ಕೊಡುತ್ತದೆ. ಮನಸಿದ್ದಲ್ಲಿ ಮಾರ್ಗವಿಲ್ಲವೇ? ನಮ್ಮವರಲ್ಲಿ ಆ ಮನಸ್ಸಿಲ್ಲ; ಆದುದರಿಂದ ಹಾದಿ ತೋರುವುದಿಲ್ಲ. ಅಲ್ಲಿ ಹಾಗೆ, ಇಲ್ಲಿ ಹೀಗೆ, ಏಕಾಯಿತು?

ಅಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ಓದನ್ನು ಕಲಿಸುವುದರ ಜೊತೆಗೇ ಓದಿನ ರುಚಿಯನ್ನೂ ತೋರಿಸಿಕೊಡುತ್ತಾರೆ. ಅದಕ್ಕೆ ತಕ್ಕ ಸಾಧನಗಳೂ ಅವರಲ್ಲಿವೆ. ಅವುಗಳ ಮೂಲಕ ಮಕ್ಕಳಲ್ಲಿ ವಾಚನಪ್ರೇಮವನ್ನು ನೆಲೆಗೊಳಿಸುತ್ತಾರೆ. ಹಾಗೆ ಓದುಕಲಿಯುವುದರೊಡನೆ ವಾಚನಾಭಿರುಚಿಯನ್ನೂ ಪ್ರೇಮವನ್ನೂ ಗಳಿಸಿಕೊಂಡ ಮಕ್ಕಳಿಗೆ ಮುಂದೆ ಅವರ ಹೊಟ್ಟೆಯು ಹಸಿದು ರೊಟ್ಟಿಗೆ ಕೂಗಿದಂತೆ, ಬುದ್ಧಿ ಹೃದಯಗಳೂ ಪುಸ್ತಕಗಳಿಗಾಗಿ ಕೂಗುತ್ತವೆ. ಒಂದನ್ನು ತಣಿಸಿ ಮತ್ತೊಂದನ್ನು ಉಪವಾಸವಿರಿಸಿದರೆ ಅವರಿಗೆ ನಿದ್ದೆಯೇ ಹತ್ತದು. ಆ ರೀತಿಯಲ್ಲಿ ಮಕ್ಕಳಿಗೆ ಓದಿನ ಸವಿತೋರಿಸಿಬಿಡುವ ಅವರ ಸಾಧನವು ಯಾವುದು? ಶಿಶುಸಾಹಿತ್ಯದ ಪುಸ್ತಕಭಂಡಾರವೇ.

ಅಲ್ಲಿಯ ಶಿಶುಸಾಹಿತ್ಯ ಪುಸ್ತಕಭಂಡಾರಗಳಲ್ಲಿ ಮಕ್ಕಳು

ತಿನ್ನುವ ತಿಂಡಿಯನ್ನೂ ಉಣ್ಣುವ ಊಟವನ್ನೂ ಬಿಟ್ಟು ಆತ್ಯಾತುರದಿಂದ ಓದುವ ಪುಸ್ತಕಗಳು ಅಸಂಖ್ಯಾತವಿವೆ. ಓದಲು ಕಲಿಯುವ ಮುಂಚಿತವಾಗಿಯೇ ಶಿಶುವಿನಲ್ಲಿ ಪುಸ್ತಕ ಪ್ರೇಮವು ಉಂಟಾಗುವಂತೆ, ಹರಿಯಲಾಗದ ಬಟ್ಟೆಯ ಪುಟಗಳ, ಬಣ್ಣದ ಚಿತ್ರಗಳ ಪುಸ್ತಕಗಳೆಷ್ಟಿವೆ! ನೋಡಿದಾಗಲೇ ಹಸಿಹಸಿದು ಚಂಡಿಹಿಡಿದು ಅಳುವ ಕೂಸೂ ನಗುನಗುತ್ತ ಕೈನೀಡಬೇಕು ಅಂತಹ ಪುಸ್ತಕದ ಕಡೆಗೆ! ಹೀಗೆ ಓದತೊಡಗುವ ಮೊದಲಾಗಿಯೇ ಪುಸ್ತಕದಲ್ಲಿ ಪ್ರೀತಿಯನ್ನುಂಟುಮಾಡಿ ಓದುಕಲಿಯಬೇಕೆಂಬ ಕುತೂಹಲವೆಬ್ಬಿಸಿ ಮಗುವು ಓದತೊಡಗಿದಾಗ ಅದು ಕೆಡದಂತೆ ಮಕ್ಕಳ ಆಯಾ ವಯೋಧರ್ಮಕ್ಕೆ, ಬುದ್ಧಿಯ ಮಟ್ಟಕ್ಕೆ, ಅನುಭವಕ್ಕೆ, ಗ್ರಹಣಶಕ್ತಿಗೆ, ಅಭಿರುಚಿಗೆ, ವಿಚಾರವಿಕಾಸಕ್ಕೆ, ಮಕ್ಕಳ ಲೋಕಕ್ಕೆ, ವಾಚನಾತುರತೆಯ ಬೆಳವಣಿಗೆಗೆ, ಮೇಲಾಗಿ ಆನಂದಾನುಭವಕ್ಕೆ ತಕ್ಕಂತೆ ಸೋಪಾನ ಸೂತ್ರಬದ್ಧವಾದ (graded) ಬಗೆಬಗೆಯ ಪುಸ್ತಕಾವಳಿಗಳಿವೆ. ಮಕ್ಕಳು ಮನೆಯಲ್ಲಿ ತಿಂಡಿಗಾಗಿ ನುಗ್ಗುವಂತೆ ಕಾಡಿಬೇಡುವಂತೆ ಕಾದಾಟವಾಡುವಂತೆ ತಿಂದುನಲಿಯುವಂತೆ ಶಾಲೆಯಲ್ಲಿ ಇಂತಹ ಶಿಶುಸಾಹಿತ್ಯ ಪುಸ್ತಕಭಾಂಡಾರದೆದುರು ಪುಸ್ತಕಗಳಿಗಾಗಿ ನುಗ್ಗುತ್ತಾರೆ, ಕಾಡಿಬೇಡುತ್ತಾರೆ, ಕಾದಾಟಮಾಡುತ್ತಾರೆ, ಓದಿಯೋದಿನಲಿಯುತ್ತಾರೆ. ಇಂಗ್ಲೆಂಡಿನಲ್ಲಿ ಮಕ್ಕಳ ಕೈಗೆಸಿಕ್ಕುವ ಪುಸ್ತಕಮಾಲೆಗಳೆಷ್ಟು!

ಅಲ್ಲಿಯ ಮಕ್ಕಳ ಪುಸ್ತಕಗಳ ಕೂಲಂಕಷ ವಿಚಾರಗಳನ್ನೆಲ್ಲ ಇಲ್ಲಿ ಹೇಳುತ್ತ ಲೇಖವಿಸ್ತಾರ ಮಾಡಬೇಕಾಗಿಲ್ಲ. ಆ ಪುಸ್ತಕಮಾಲೆಗಳ ಹೆಸರುಗಳನ್ನು ಹೇಳಿದರೇನೇ ಅವುಗಳಲ್ಲಿರುವ ಸ್ವಾರಸ್ಯ, ಅವುಗಳ ವಿಷಯ ವೈವಿಧ್ಯ, ಆ ವಿಷಯಗಳನ್ನು ಆಯ್ದುಕೊಂಡ ಕ್ಷೇತ್ರವೈಶಾಲ್ಯ, ಮಕ್ಕಳಲ್ಲಿ ಜ್ಞಾನಾರ್ಜನೆಯ ಲವಲವಿಕೆಯನ್ನುಂಟು ಮಾಡಲು ಅವು ಉದ್ರೇಕಿಸುವ ಕುತೂಹಲ —ಬೀರುವ ಪ್ರೇರಣೆ— ತೋರುವ ಆಕರ್ಷಣೆ, ಇವೆಲ್ಲ ಸ್ಥೂಲರೂಪದಲ್ಲಿ ತಾವಾಗಿ ಒಡೆದು ಕಾಣುತ್ತವೆ. ಬ್ಲೇಕ್ಕೀ ಎಂಡ್ ಸನ್ಸ್ ಎಂಬ ಪುಸ್ತಕಪ್ರಕಟನಾ ಸಂಘದವರ ಶಿಶುಸಾಹಿತ್ಯ ಪುಸ್ತಕಮಾಲೆಗಳ ಹೆಸರುಗಳನ್ನು ಕೇಳಿ —The Joy Books, The Gingle Reading Books, Nature Story Readers, Graded Story-Books, Story Book-Readers, Combined Story-Book Readers, Stories Old & New, The Rambler Nature Books, The Rambler Travel Books, Rambles among Industries, Rambles through History & Myth, Rambles in Science, Rambles in Biography. ಈ ಪುಸ್ತಕಮಾಲೆಗಳಲ್ಲಿ ಹಲವಕ್ಕೆ ಐದು ವರುಷದ ಮಗುವಿಂದ ಹದಿನಾಲ್ಕು ವರುಷದ ಬಾಲಕನ ವರೆಗೆ ಪ್ರತಿಯೊಂದು ಪ್ರಾಯದ ಮಗುವಿನ ಅಭಿರುಚಿಗೆ ಹಾಗೂ ಬುದ್ಧಿಯನುಭವಗಳ ಮಟ್ಟಕ್ಕೆ ತಕ್ಕಂತಹ ಉಪಮಾಲಾವಳಿಗಳಿವೆ!

ಹೀಗೆಯೇ ಶಿಶುಸಾಹಿತ್ಯದ ಹಲವು ಪುಸ್ತಕಮಾಲೆಗಳನ್ನೂ ಉಪಮಾಲೆಗಳನ್ನೂ ಲಾಂಗ್‌ಮ್ಯಾನ್ ಗ್ರೀನ್ ಎಂಡ ಕೋ ಎಂಬ ಮತ್ತೊಂದು ಸಂಸ್ಥೆಯು ಹೊರಡಿಸಿದೆ —The Children's Picture Stories, Big Picture Story Readers, Dainty Tales of Other Lands, Reading for Pleasure Series, Pleasant Stories for the Little Ones, Tiny Tales for Tiny Tots, Bell's Tiny Stories for Infants, Bell's Continuous Stories, Collin's Graded Reader Series, Folk Stories for Young Readers, Long-man's Fairy Tales Readers, Arnold's Every child's Stories, Arnold's Graded Story Readers. ಇನ್ನು ಮೆಕ್ಮಿಲ್ಲನ್ ಎಂಡ ಕೊ ಎಂಬ ಸಂಸ್ಥೆಯು ಪ್ರಕಟಿಸಿರುವ ಮಕ್ಕಳ ಪುಸ್ತಕಗಳೆಷ್ಟು! The Children's classics (Graded Series), The 'A. L.' Story Readers, The 'A. L.' Bright Story Readers (Graded Series), The Real Story Readers, The Happy Children' Stories, Little People in far off Lands, Then & Now, Here and There, How & Why, Children of Other Days, Sunshine Stories, People and Places, The 'A. L.' Object Lesson-Tiny-Gem-Little- Little folks-Real Story-Readers ಈ ಮೂರು ಪ್ರಾಮುಖ್ಯ ಸಂಸ್ಥೆಗಳು ಪ್ರಕಟಿಸಿರುವ ಶಿಶುಸಾಹಿತ್ಯದ ಕೆಲವು ಪುಸ್ತಕಮಾಲೆಗಳನ್ನು ಮಾತ್ರ ಇಲ್ಲಿ ಹೆಸರಿಸಲಾಗಿದೆ. ಇನ್ನೆಷ್ಟೋ ಇವೆ. ಬೇರೆ ಸಂಸ್ಥೆಗಳದ್ದೂ ರಾಶಿ ರಾಶಿ ಇವೆ. ಒಟ್ಟಿನ ಮೇಲೆ ಇಂತಹ ಮಾಲೆಗಳಲ್ಲಿ ಮ... ಪುಸ್ತಕಗಳ ಮೊದಮೊದಲ

> **ಕನ್ನಡದಲ್ಲಿ ಹೊಸ ಶಿಶುಸಾಹಿತ್ಯ ನಿರ್ಮಾಣವಾಗಬೇಕು. ಅದು ಮುಂದಿನ ಕನ್ನಡರಾಷ್ಟ್ರದ ದಾರ್ಢ್ಯವನ್ನು ನಿರ್ಧರಿಸುವ ನಾಡಿಯಾದೀತು. ಅಂತಹ ಸಾಹಿತ್ಯನಿರ್ಮಾಣಮಾಡಬಲ್ಲ ಕಲೋಪಾಸಕರಿಲ್ಲವೆಂತಲ್ಲ; ಸರಕಾರದ ನೀತಿಯು ಅವರಿಗೆ ಪ್ರೋತ್ಸಾಹದಾಯಕವಾಗಿರಬೇಕು.**

ಪ್ರಪಂಚವೇ ಕಾಣುವುದರಿಂದ ಮಕ್ಕಳು ಆಕರ್ಷಿತರಾಗು ತ್ತಾರೆ. ನೋಡಿ ನೋಡಿ ಓದಿಯೋದಿ ಆನಂದಿಸುತ್ತಾರೆ. ಮತ್ತೂ ಮತ್ತೂ ಓದುತ್ತ ಮುಂದುವರಿದಂತೆ ಆ ಲೋಕವು ವಿಸ್ತೃತವಾಗುತ್ತ ಬರುತ್ತೆ. ಆಗ ಆ ಲೋಕದೊಳಗೆ ಏನಿದೆ ಏನಿಲ್ಲವೆನ್ನಲು ಬರುವುದಿಲ್ಲ. ಭೂವ್ಯಾಕಾಶ ಸಮುದ್ರ ಪಾತಾಳಗಳೊಳಗಿನ ಎಲ್ಲ ವಿಷಯಗಳೂ ಅಲ್ಲಿವೆ. ಅವನ್ನೆಲ್ಲ ತಿಳಿಯಬೇಕೆಂಬ ಕುತೂಹಲವು ಉದ್ರೇಕವಾಗು ವಂತಹ, ಓದಿದರೆ ತಿಳಿಯುವಂತಹ, ಓದುವುದೊಂದು ಆನಂದವೆಂಬ ಮನವರಿಕೆಯಾಗುವಂತಹ ಶೈಲಿಯಲ್ಲಿ ಸಚಿತ್ರವಾಗಿ ಅವೆಲ್ಲ ಮಕ್ಕಳ ಮುಂದೆ ಇಡಲ್ಪಟ್ಟಿವೆ. ಅವ ನ್ನೋದುವುದರಿಂದ ಮಕ್ಕಳಲ್ಲಿ ವಾಚನಾಭಿರುಚಿಯುಂಟಾ ಗುವುದಲ್ಲದೆ ವಿಶ್ವಪರಿಚಯವನ್ನು ಮಾಡಿಕೊಳ್ಳಬೇಕೆಂಬ ಆತುರ, ಪ್ರಕೃತಿಯ ರಹಸ್ಯಗಳನ್ನು ತಿಳಿಯಬೇಕೆಂಬ ಶೋಧಕ ಬುದ್ಧಿ, ವಿಜ್ಞಾನಯುಗದ ಅದ್ಭುತಗಳನ್ನು ತಿಳಿಯಬೇಕೆಂಬ ಕುತೂಹಲ, ಪ್ರತಿಯೊಂದು ವಿಷಯ ದಲ್ಲಿಯೂ ಅಂದು-ಇಂದು, ಎಲ್ಲಿ-ಏನು, ಹೇಗೆ-ಏಕೆ, ಎಂಬ ಜ್ಞಾನಾಸಕ್ತಿ, ವಿಚಾರಮನೋವೃತ್ತಿ ಇವೆಲ್ಲ ಉಂಟಾಗು ತ್ತವೆ. ಆ ಮುಟ್ಟವನ್ನು ಮುಟ್ಟಿದಾಗ ಅವರನ್ನು ಮುಂದೊ ಯ್ಯಲು ಪ್ರೌಢತರ-ತಮ ಪುಸ್ತಕಮಾಲಾವಳಿಗಳು ಕಾದೇ ಕುಳಿತಿವೆ. ಹೀಗಿರುವಲ್ಲಿ ಆ ಮಕ್ಕಳು ಪ್ರಾಥಮಿಕ ವಿದ್ಯಾ ಭ್ಯಾಸ ಮುಗಿಸಿ ಮನೆ ಸೇರಿದಾಗ ಅವರ ಹಿಂದೆಯೇ ಬೆಂಬ ತ್ತಿ ಹೋಗುವ ಆ ವಾಚನಪ್ರೇಮದ ದೆಸೆಯಿಂದ ಅವರು ಜನ್ಮಾಂತ ವಿದ್ಯಾರ್ಥಿಗಳಾಗಿಯೇ ಬಾಳುವರು. ವಿಶ್ವವೇ ಅವರ ಶಾಲೆ, ವಿಶ್ವಸಾಹಿತ್ಯವೇ ಅವರ ಗುರು, ಓದುವೇ ಅವರ ಜ್ಞಾನಾರ್ಜನೆಯ ಸಾಧನ. ಅವರ ಅನುದಿನದ ಜೀವನ. ಸಮಸ್ಯೆಯು ಅದೆಷ್ಟು ಕಷ್ಟನಿಷ್ಠುರದ್ದಿದ್ದರೂ ಓದುವು ಅದರ ಕಹಿಯನ್ನು ತೊಳೆದು ಆನಂದೋಲ್ಲಾಸ ಧೈರ್ಯಸ್ಥೈರ್ಯ ಶಾಂತಿಸಮಾಧಾನಗಳ ಮಧುರಸುಧೆ ಯನ್ನು ಎರೆಯುವುದು. ಓದುವು ಅವರ ಜೀವನಯಾತ್ರೆ ಯಲ್ಲಿ ಅಸದೃಶವಾದ ಸೇವಕನು, ಗೆಳೆಯನು, ಗುರುವು, ಮಾರ್ಗದರ್ಶಿಯು, ಮುಂದಾಳುವು, ಎಲ್ಲವೂ ತಾನಾಗಿ ಬಾಳಿನ ಸಾರ್ಥಕ್ಯವನ್ನು ತೋರುವುದು.

ಆದುದರಿಂದ ಅಲ್ಲಿಯವರು ಬಾಲವಾಙ್ಮಯದ ಬಲವಾದ ಅಡಿಪಾಯನ್ನು ಹಾಕಿಕೊಂಡೇ ಭಾಷೋನ್ನತಿಯ, ಜ್ಞಾನೋನ್ನತಿಯ, ದೇಶೋನ್ನತಿಯ ಮಹಾಪ್ರಾಸಾದ ವನ್ನು ಯಶಸ್ವಿಯಾಗಿ ಕಟ್ಟಿದ್ದಾರೆ, ಕಟ್ಟುತ್ತಲಿದ್ದಾರೆ. ನಾವೋ ಬುನಾದಿ ಹಾಕದೇ ಮರಳರಾಶಿಯ ಮೇಲೆ ಕಟ್ಟಡ ಕಟ್ಟುತ್ತ 'ಅಯ್ಯೋ, ಉರುಳುರುಳಿ ಬೀಳುತ್ತಲ್ಲಾ ಇದು!' ಎಂದು ಬೆರಗಾಗಿ ನೋಡುತ್ತ ನಿಂತಿದ್ದೇವೆ ಮಾತ್ರ. ನಮ್ಮ ಶಾಲೆಗಳಲ್ಲಿ ಚಿಕ್ಕಮಕ್ಕಳನ್ನು ಆಕರ್ಷಿಸುವ ಪುಸ್ತಕಗಳೇ ನಿವೆ? ಮಕ್ಕಳಲ್ಲಿ ಓದಿನ ರುಚಿಯನ್ನು ನೆಲೆಗೊಳಿಸುವ ಸಾಧನಗಳೇನಿವೆ! ಆದುದರಿಂದ ಓದಿನ ಮಹತ್ವವನ್ನು ಮಂದಿಯು ಮನಗಂಡಿಲ್ಲ. ಓದು ಕಲಿಯುವುದೇಕೆಂದು ಅವ ರನ್ನು ಕೇಳಿದರೆ ಏನೆನ್ನುತ್ತಾರೆ ಗೊತ್ತೋ? ಯಾರಿಂದಾದ ರೊಂದು ಕಾಗದ ಬಂದರೆ ಓದುವುದಕ್ಕೆ, ಯಾರಿಗಾದ ರೊಂದು ಕಾಗದ ಬರೆಯುವುದಕ್ಕೆ, ಏನಾದರೊಂದು ಪತ್ರಕ್ಕೆ ಸಹಿ ಹಾಕಲಿಕ್ಕೆ, ಬರಹ ಬಲ್ಲವನೆಂದು ವೋಟು ಕೊಡುವ ಹಕ್ಕುಳ್ಳವನಾಗಲಿಕ್ಕೆ! 'ಅಯ್ಯೋ! ಅರಮನೆಯ ತೋಳಿಗಾಗುವ ಮರವನ್ನು ಕೀಲಿನ ಮರವೆನ್ನುತ್ತಾರಲ್ಲ! ಎಂತಹ ದೃಷ್ಟಿಸಂಕೋಚ! ಓದುವು ಇಹಪರಸಾಧನ ಸಂಪತ್ತೆಂಬುದನ್ನು ಬಗೆಗಂಡು ಅನುಭವಿಸಲಾರದೆ ಪಶುವಿ ನಂತೆ ಬಾಳುತ್ತಾರಲ್ಲಾ, ಅಯ್ಯೋ!' ಅನ್ನಿಸುತ್ತೆ ನಮಗೆ. ಶಾಲೆಗಳಲ್ಲಿ ಅವರಿಗೆ ಧಾರಾಳವಾಗಿ ಮಕ್ಕಳ ಪುಸ್ತಕಗಳು ದೊರೆತಿದ್ದರೆ ಅವರಿಂದು ಹಾಗೆನ್ನುತ್ತಿದ್ದರೇ? ಬಾಳಿನಲ್ಲಿ ಬೆಳಕನ್ನು ಬೀರುವ ಓದಿನ ಕೈದೀವಟಗೆಯಿಂದ ಅವರು ಹೀಗೆ ವಂಚಿತರಾಗುತ್ತಿದ್ದರೇ? ಮಕ್ಕಳ ಮೆಚ್ಚಿನ ಪುಸ್ತಕ ಗಳು ಶಾಲೆಯಲ್ಲಿ ದೊರೆಯದಿದ್ದುದರಿಂದಲೇ ಓದಿನಲ್ಲೇನಿದೆ ಯೆಂಬುದರ ರುಚಿಯನ್ನವರು ಕಾಣದಿದ್ದುದರಿಂದಲೇ ಅವರು ತಿರುಗಿ ನಿರಕ್ಷರಕುಕ್ಷಿಗಳಾಗುತ್ತ ಬರುತ್ತಿದ್ದಾರೆಂಬುದರಲ್ಲಿ ಸಂದೇಹವೇನಾದರೂ ಇನ್ನೂ ಇದ್ದರೆ, ನಮ್ಮ ಸೆಕಂಡರಿ ಶಾಲೆಗಳಲ್ಲಿ ಇಂಗ್ಲೀಷು ಓದಿ ಮುಗಿಸಿದವರು ಓದಾಳುಗಳಾ ಗಿರುವುದರ ಕಾರಣವನ್ನು ಪರಿಶೋಧಿಸಿದಾಗ ಅಂತಹ ಸಂಶಯವು ನಿವಾರಣೆಯಾಗದಿರದು. 'ಮೇಲೆ ಹೇಳಿದ ಆಂಗ್ಲ ಶಿಶುಸಾಹಿತ್ಯದ ಪುಸ್ತಕಗಳು ನಮ್ಮ ಸಂಸ್ಕೃತಿ ವಾತಾ ವರಣಗಳಿಗೆ ಅಷ್ಟೊಂದು ಸರಿಹೋಗದಿದ್ದರೂ ಅವು ಸೆಕಂಡರೀ ಶಾಲೆಯ ಮಕ್ಕಳ ಕೈಗೆ ಧಾರಾಳವಾಗಿ ಸಿಗುತ್ತ ಬಂದಿರುವುದರಿಂದ ಅವನ್ನೋದಿಯೋದಿ ಆ ಭಾಷೆಯ ಪುಸ್ತಕ ಪ್ರವಚನದ ಅಭಿರುಚಿಯು ಅವರಲ್ಲಿ ನೆಲೆಯಾಗಿ ಲ್ಲವೇ? ಅವರಿಗೆ ದಿನವೂ ಇಂಗ್ಲೀಷು ಪುಸ್ತಕವನ್ನಾಗಲೀ ಪತ್ರಿಕೆಯನ್ನಾಗಲೀ ಓದದಿದ್ದರೆ ತಿಂದುದು ಮೈಗೆ ಹಿಡಿ ದಂತಾಗುವುದೇ ಇಲ್ಲವಲ್ಲ! ಹಾಗಾದರೆ ಇಂಗ್ಲೀಷು ಶಾಲೆಗೆ ಹೋದವರನ್ನು ಓದುಗರನ್ನಾಗಿಯೂ ಕನ್ನಡ ಶಾಲೆಗೆ ಹೋದವರನ್ನು ಪುಸ್ತಕ ಹಿಡಿಯದಂತೆಯೂ ಮಾಡಿದುದು ಯಾವುದು? ಒಂದು ಕಡೆಯಲ್ಲಿ ಶಿಶುಸಾಹಿತ್ಯದ ಸಮೃದ್ಧಿ,

ಮತ್ತೊಂದು ಕಡೆಯಲ್ಲಿ ಅದರ ಬರಗಾಲ; ಅಲ್ಲದೆ ಮತ್ತಾವುದೂ ಮುಖ್ಯ ಕಾರಣವಲ್ಲ.

ನಮ್ಮ ಕನ್ನಡ ಶಾಲೆಗಳಲ್ಲಿ ಮಕ್ಕಳನ್ನು ಆಕರ್ಷಿಸಿ, ಮನಮೆಚ್ಚಿಸಿ, ಓದಹಚ್ಚಿಸುವ ಬಾಲವಾಙ್ಮಯವಿಲ್ಲದೆ, ಅವರಿಗೆ ನಾವು ಓದೆಂದು ಕುಡಿಸಿದುದು 'ಇಳಿಸಿದುಷ್ಣದ ಹಾಲಿನಂತಾ'ಗಿರದೆ ಸುಡುಸುಡು ಹಾಲಾಗಿತ್ತು. ಅದನ್ನು ಕುಡಿದು ಬಾಯಿ ಸುಟ್ಟುಕೊಂಡಿದ್ದಾರೆ ಅವರು. ಅಂದಿನಿಂದ ಇಂದಿನವರೆಗೂ ಇನ್ನು ಮುಂದೆಯೂ ಅಂತಹ ಮಕ್ಕಳೆಲ್ಲ ಬೆಳೆದು ಗಡ್ಡ ಹಣ್ಣಾದರೂ ತೆನ್ನಾಲೀರಾಮನ ಬೆಕ್ಕುಗಳೇ. ಹೀಗಾದುದಕ್ಕೆ, ಇನ್ನೂ ಹೀಗಾಗುವುದಕ್ಕೆ ಉಪಾಧ್ಯಾಯ ವರ್ಗವು ಹೊಣೆಯಲ್ಲ. ಕನ್ನಡದಲ್ಲಿ ಮಕ್ಕಳ ಚೊಕ್ಕ ಪುಸ್ತಕಗಳೇ ಇಲ್ಲದಿರುವಾಗ ಅವರೇನು ಮಾಡಿಯಾರು? ಆದರೆ ಅಂತಹ ಪುಸ್ತಕಗಳನ್ನು ಬರೆಯಬಲ್ಲವರಿಲ್ಲವೇ? ಪ್ರಕಟಿಸುವವರಿಲ್ಲವೇ? ಎಲ್ಲ ಇದ್ದಾರೆ. ಒಂದೆರಡು ವರುಷಗಳಲ್ಲಿ ಕನ್ನಡ ಬಾಲವಾಙ್ಮಯ ಭಾಂಡಾರದ ಚೆಲ್ಲಾಟವಾಗುವಂತೆ ಮಾಡಬಹುದು. ಆಂಗ್ಲ ಶಿಶುಸಾಹಿತ್ಯದ ವಾನರಾನುಕರಣೆ ಮಾಡದೆ ಅದರ ಮೂಲಭೂತ ತತ್ವಗಳನ್ನು ಕಣ್ಣಮುಂದಿಟ್ಟುಕೊಂಡು ನಮ್ಮ ದೇಶ, ನಮ್ಮ ವಾತಾವರಣ, ನಮ್ಮ ಸಾಹಿತ್ಯ, ನಮ್ಮ ಕಲಾಸಂಸ್ಕೃತಿ, ಇಂದಿನ ವಿಚಾರವಿಜ್ಞಾನಯುಗದ ನೋಟ, ಇಂದಿನ ವಿಶ್ವವ್ಯಾಪಕ ದೃಷ್ಟಿ, ಇಂದಿನ ರಾಷ್ಟ್ರೀಯ ಜಾಗೃತಿ, ಇಂದಿನ ನಮ್ಮ ಆಶಾಕಾಂಕ್ಷೆ ಇವಕ್ಕೆಲ್ಲ ಸರಿಹೋಗುವಂತೆ ಬಾಲವಾಙ್ಮಯ ನಿರ್ಮಾಣವಾದೀತು. ಅದು ಮುಂದಿನ ಕನ್ನಡಿಗರ ಯೋಗ್ಯತೆಯನ್ನು ಪರೀಕ್ಷಿಸುವ ಒರೆಗಲ್ಲಾಗಿ ನಿಂತೀತು. ಮುಂದಿನ ಕನ್ನಡ ರಾಷ್ಟ್ರದ ದಾರ್ಢ್ಯವನ್ನು ನಿರ್ಧರಿಸುವ ನಾಡಿಯಾದೀತು. ಆದರೆ ಬೇಡಿಕೆಯಿದ್ದರಲ್ಲವೇ ಪೂರೈಕೆ? ಬೇಡಿಕೆಯಿಲ್ಲದ ಸರಕಿನ ಪೂರೈಕೆಗೆ ಕೈಯಿಕ್ಕಿ ಗೋಳಿನ ಬಾಳಿಗಿಳಿಯಲು ಬರೆಹಗಾರರೂ ಪ್ರಕಟಣಾಕರ್ತರೂ ಹಿಂಜರಿಯುವುದು ಸಹಜವಲ್ಲವೆ? ಏನು ಮಾಡುವುದು, ಬೇರೆಕಡೆಗಳಲ್ಲಿ ವಿದ್ಯೆಗಾಗಿ ಮೊದಲು ದುಡ್ಡು ತೆಗೆದಿಡುವುದಿದ್ದರೆ ನಮ್ಮಲ್ಲಿ ಎಲ್ಲಕ್ಕೂ ಧಾರಾಳವಾಗಿ ಆದಮೇಲೆ, ಕಡೆಗೆ, ಏನಾದರೂ ಉಳಿದರೆ! ಉಳಿಯದಿದ್ದರೆ ಕಾಸಿಲ್ಲದೆ ಹೊಳೆ ದಾಟುವ ಯೋಜನೆಗಳನ್ನು ಉಪಾಧ್ಯಾಯವರ್ಗದ ಮುಂದಿಟ್ಟು 'ಹೇಗಾದರೂ ಮಾಡಿ ಬೇಗಬೇಗ ಹೊಳೆದಾಟಿಸಿ ಬಿಡಿಯಪ್ಪಾ! ನಿಮ್ಮ ಈ (noblest profession) ಗೌರವತಮ ವೃತ್ತಿಗೆ ಆ ಲೋಕದಲ್ಲಿ ಸ್ಥಾನಮಾನ ಸುಖಸಂಪತ್ತುಗಳೆಲ್ಲ ಮೀಸಲಾಗಿರಿಸಲ್ಪಟ್ಟಿವೆ!' ಎನ್ನುವವರೇ ಹೆಚ್ಚು. ಗಗನದಲ್ಲಿ ಹೊಳೆದಾಟುವ ಅಂಬಿಗತನವನ್ನು ಬೋಧಿಸುವವರೇ ಅಧಿಕ. ಆದರೆ ಅಂಬಿಗನಿರುವುದು ಈ ನಾಡಿನಲ್ಲಿ. ಈ ನಾಡಿನ ಹೊಳೆಹಾಯಿಸಬೇಕು ಅವನು. ಅವಕ್ಕೆ ಅವನಿಗೆ ಕೊಟ್ಟಿರುವುದು ಹರುಕು ದೋಣಿ, ಮುರುಕು ಹುಟ್ಟು; ಮೇಲಾಗಿ, ಅವನ ಹೊಟ್ಟೆ ಬೆನ್ನಿಗೆ ಹಿಡಿದಿದೆ! ಆದರೆ ಈ ಕಡೆಗೆ ಗಮನವಿಡದೆ ಮುಂದಿನ ದಡದಲ್ಲೇ ದೃಷ್ಟಿ ನೆಟ್ಟು 'ಹೋಗಲಿ ದೋಣಿ! ಇನ್ನೂ ರಭಸದಿಂದ! ಮತ್ತೂ ಭರದಿಂದ! ಆಚೆಯಾಚೆಯ ದೋಣಿಗಳೆಲ್ಲ ಹೇಗೆ ಮುಂದಾಗಿವೆ ನೋಡು! ಹಾಗೆ ಹುಟ್ಟು ಹೊಡೆಯಬೇಕು, ಹೀಗೆ ಹುಟ್ಟು ಹಿಡಿಯಬೇಕು, ದೋಣಿ ಸಾಗದೆ ಎಲ್ಲಿ ಹೋದೀತು?' ಎಂದು ದಡದಲ್ಲಿ ನಿಂತವರೆಲ್ಲ, ದೋಣಿ ಹತ್ತಿಹತ್ತಿದವರೆಲ್ಲ ಹುಟ್ಟು ಹಿಡಿಯುವ ಗುಟ್ಟು ಅರಿಯದವರೆಲ್ಲ ಅಂಬಿಗನ ಗುರುವಾಗಿ ಕೂಗತೊಡಗಿದರೆ, ಹೋದಷ್ಟೇ ಹೋದೀತು ದೋಣಿ! ಅಲ್ಲವೇ?

ಈ ಲೇಖಕರಿಂದ ಬರೆಯಲ್ಪಟ್ಟ 'ಕಿರಿಯರ ಪ್ರಪಂಚ, ಉಡುಪಿ' ಇವರಲ್ಲಿ ದೊರಕುವ 'ಬಾಲವಾಙ್ಮಯ' (ಬೆಲೆ ೩ ಆಣೆ) ಎಂಬ ಪುಸ್ತಕದಲ್ಲಿ ಈ ವಿಷಯವು ಇನ್ನೂ ವಿಚಾರದ್ಯೋತಕವಾಗಿ ಸವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆ.

ಒಬ್ಬ ಹೊಸಜವ್ವನದ ಯುವಕ—

ತನ್ನ ಬುದ್ಧಿವಂತಿಕೆಯನ್ನು, ತನ್ನ ಸರ್ವಸ್ವವನು ದಲಿತ-ಬಂಧುಗಳ ಉದ್ಧಾರಕ್ಕಾಗಿ ಧಾರೆಯೆರೆಯಲು ಅವನ ಸಿದ್ಧತೆಯಿದ್ದಿತು—

ಅದಕ್ಕಾಗಿ ಅವನು ಮನೆಮಾರು, ತಾಯಿತಂದೆ— ಎಲ್ಲವನ್ನೂ ತ್ಯಜಿಸಿದನು; ಇಷ್ಟೆ ಅಲ್ಲ, ತನಗಾಗಿ ಪ್ರೀತಿದಾನ ಮಾಡಿದ ಒಬ್ಬ ಸುಂದರಿಯ ಮೋಹವನ್ನೂ ದೂರ ಸರಿಸಿದನು—



ದಿಗ್ದರ್ಶಕ:

ಕೆ. ನಾರಾಯಣ ಕಾಳೆ

★

ಭೂಮಿಕೆ:

ಸೌ. ಶಾಂತಾ ಹುಬಳೀಕರ,

ಮಾಮಾ ಭಟ್,

ಉಲ್ಹಾಸ, ವಸಂತ ಠೇಂಗಡಿ

ಇ. ಇ.

★

MY SON

ಪ್ರಭಾತದ ಸಾಮಾಜಿಕ ಸಂಗೀತ ವಾಕ್ಪಟ

- ಉತ್ಕೃಷ್ಟ ಕಥಾವಸ್ತು !
- ಇಂಪಾದ ಹಾಡುಗಳು !!
- ಹೊಸ ಟೆಕ್ನಿಕ್ !!!

ಸೆಂಟ್ರಲ್ ಸಿನೆಮಾ-ಮುಂಬಯಿ

ಇಲ್ಲಿ ಅಸಾಧ್ಯ ಜನಸಂದಣಿ ನೆರೆಯುತ್ತಿದೆ—

ಆಟಿಗೆಗಳು

(Children's Toys)

ಲೇಖಕರು: ಶ್ರೀ. ಎಸ್. ಎನ್. ನಾರಾಯಣಶಾಸ್ತ್ರಿ ಎಂ. ಎ., ಮನಃಶಾಸ್ತ್ರಶಾಖೆ, ಮಹಾರಾಜಾ ಕಾಲೇಜು, ಮೈಸೂರು



ಮಕ್ಕಳ ಮೇಲಿನ ಮಮತೆಯಿಂದ ಪ್ರತಿಯೊಬ್ಬನೂ ಅವುಗಳಿಗೆ ಎಂದಾದರೊಮ್ಮೆ ಆಟಿಗೆಗಳನ್ನು ಕೊಂಡುಕೊಡುತ್ತಾರೆ. ಅನುಕೂಲಸ್ಥರು ವಿಶೇಷ ಬೆಲೆಬಾಳುವ ಆಟಿಗೆಗಳನ್ನು, ಬೆಲೆಯೋ ಮಮತೆಯ ಅಳತೆಯೋ ಎನ್ನುವಂತೆ ಕೊಂಡುಕೊಡುತ್ತಾರೆ. ಉಳಿದವರು ಅನುಕೂಲಸ್ಥರ ಅನುಕರಣೆಯಲ್ಲಿ ತಮ್ಮ ಮಮತೆಯನ್ನು ಹೊರಗೆಡಹುತ್ತಾರೆ. ಮಕ್ಕಳಿಗೆ ಸ್ವಾಭಾವಿಕವಾಗಿ ಆಟಿಗೆಗಳಲ್ಲಿ ಆಶೆಯಿದೆ; ತಂದೆತಾಯಿಗಳಿಗೆ ಅವುಗಳನ್ನು ಕೊಡಬೇಕೆಂಬ ಮಮತೆಯಿದೆ. ಇದನ್ನು ಕಂಡೇ ಕೆಲವರು ಹಣಪಿಶಾಚಿಗಳು, ಕೆಲವು ಆಟಿಗೆಗಳಿಂದ ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಎಷ್ಟೇ ತೊಂದರೆಯಾದರೂ ಲಕ್ಷಿಸದೆ, ಹಣದ ಮೇಲಿನ ಆಶೆಯಿಂದ ಅಂತಹ ಆಟಿಗೆಗಳನ್ನು ತಯಾರುಮಾಡಿ ಮಾರುತ್ತಿರುವರು. ತಿಳುವಳಿಕೆಯಿಲ್ಲದ ತಂದೆತಾಯಿಗಳು ಅವುಗಳನ್ನೇ ಕೊಂಡುಕೊಡುವರು. ಯಾವ ತೆರನಾದ ಆಟಿಗೆಗಳು ಯೋಗ್ಯವಾದುವು, ಮಕ್ಕಳ ಮನಸ್ಸಿನ ಬೆಳವಣಿಗೆಯು ಇವುಗಳಿಂದ ಹೇಗೆ ಉತ್ತೇಜನಗೊಳ್ಳುವುದು ಎಂಬುದನ್ನು ಪರಿಶೀಲಿಸಿದರೆ, ಆಗ ಮಕ್ಕಳಿಗೆ ಯೋಗ್ಯವಾದ ಆಟಿಗೆಗಳನ್ನು ನಾವು ಆರಿಸಬಹುದು.

ಮಗುವು, ಹುಟ್ಟಿದ ಕೆಲವು ದಿನಗಳಲ್ಲಿ ವಸ್ತುಗಳನ್ನು ಗಮನಿಸಿ ನೋಡುವ ಯೋಗ್ಯತೆಯನ್ನು ಪಡೆಯುತ್ತದೆ. ಮೊದಲು ಸುತ್ತಲಿನ ಅರ್ಥರಹಿತವಾದ ಸನ್ನಿವೇಶದ ಹಿನ್ನೆಲೆಯಲ್ಲಿ ತನ್ನ ತಾಯಮುಖವನ್ನು ಗಮನಿಸುವ ಯೋಗ್ಯತೆಯು ಮಗುವಿಗೆ ಬರುತ್ತದೆ. ಈಗ ಕಣ್ಣಿನ ಸುತ್ತಮುತ್ತಲಿನ ಮಾಂಸಖಂಡಗಳನ್ನು ಬಿಗಿಹಿಡಿಯುವ ಯೋಗ್ಯತೆಯು ಮಗುವಿಗೆ ಬರುತ್ತದೆ. ಆದುದರಿಂದ ಈ ಕಾಲದಲ್ಲಿ ಅದರ ಕಣ್ಣಿಗೆ ಬೀಳುವಂತೆ ಬಣ್ಣಬಣ್ಣದ, ಪ್ರಕಾಶವುಳ್ಳ ವಸ್ತುಗಳನ್ನು ತೊಟ್ಟಿಲಿನ ಮೇಲೆ ಆಡುವಂತೆ ಕಟ್ಟಬಹುದು. ನಮ್ಮಲ್ಲಿ ಪೂರ್ವದಿಂದಲೂ ವಾಡಿಕೆಯಾಗಿದ್ದು, ಈಗ ನಾಗರಿಕರೆಂದೆನಿಸಿಕೊಂಡ ಆ ನಾಗರಿಕ ಹೆಣ್ಣು

ನಮ್ಮಲ್ಲಿ ಅನೇಕರು-ತಂದೆತಾಯಿಗಳು-ಮಕ್ಕಳ ಆಟಿಗೆಗಳ (ಆಟದ ಸಾಮಾನುಗಳ) ವಿಷಯವಾಗಿ ಹೊಸದಾಗಿ ತಿಳಿಯಬೇಕಾದುದು ಏನೂ ಇಲ್ಲವೆಂದು ನಂಬಿದ್ದೇವೆ. ಆದರೂ ಆಧುನಿಕ ಮನಶ್ಶಾಸ್ತ್ರದ ಬಲದ ಮೇಲೆ ಕೆಲವು ಶಾಸ್ತ್ರಜ್ಞರು, ಆಟಿಗೆಗಳಿಂದ ಮಕ್ಕಳ ಮನಸ್ಸಿನ ಮೇಲೆ ಎಂತಹ ಪರಿಣಾಮವುಂಟಾಗುವುದೆಂಬುದನ್ನೂ, ಆದುದರಿಂದ ಎಂತಹ ಆಟಿಗೆಗಳನ್ನು ಮಕ್ಕಳಿಗೆ ಕೊಡಬೇಕೆಂಬುದನ್ನೂ ನಿರ್ಧರಿಸಿದ್ದಾರೆ. ಬೇರೆ ಬೇರೆ ವಯಸ್ಸಿನ ಮಕ್ಕಳಿಗೆ ಆ ವಯೋಧರ್ಮಕ್ಕೂ ಮನೋಧರ್ಮಕ್ಕೂ ಅನುಸಾರವಾಗಿರುವ ಆಟಿಗೆಗಳು ಬೇಕು. ಅವುಗಳಲ್ಲಿ ಕೆಲವನ್ನಿಲ್ಲಿ ವಿವರಿಸಿದೆ.

ಮಕ್ಕಳ ಯಾಜಮಾನ್ಯವು ಬಂದಮೇಲೆ ಮಾಯವಾಗಿರುವ, **ಗಿಣಿಮಂಚವು** ಅದಕ್ಕೆ ಅತ್ಯುತ್ತಮ ನಿದರ್ಶನ. ಹೆಣ್ಣುಮಕ್ಕಳು ಇದನ್ನು ಸಾಧಾರಣವಾಗಿ ತಾವೇ ಮಾಡುತ್ತಿದ್ದರು. ಒಂದು ಚೌಕನೆಯ ಹಲಿಗೆಗೆ ಬಣ್ಣಬಣ್ಣದ ಬಟ್ಟೆಯನ್ನು ಹೊದಿಸಿ, ಅದಕ್ಕೆ ಬಣ್ಣಬಣ್ಣದ ಗಿಣಿಗಳನ್ನು ಮಾಡಿ, ನೇತುಹಾಕಿ, ಈ ಮಂಚವನ್ನು ತೊಟ್ಟಿಲಿನ ಮೇಲೆ ಕಟ್ಟಿದ್ದರೆ, ಮಗುವಿಗೆ ಗಮನವನ್ನು ಹತೋಟಿಗೆ ತರುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ.

ಇನ್ನು ಕೆಲವು ಕಾಲವಾದ ಮೇಲೆ ಕೈಯಿಂದ ಗ್ರಹಣ ಮಾಡುವ ಯೋಗ್ಯತೆಯನ್ನು ಮಗುವು ಪಡೆಯುತ್ತದೆ. ಈ ಕಾಲದಲ್ಲಿ ಯಾವ ಪದಾರ್ಥವನ್ನಾದರೂ ಸರಿಯೆ, ಮಗುವು ಕೈಯಲ್ಲಿ ಹಿಡಿದು ಬಾಯಿಗೆ ಒಯ್ಯುತ್ತದೆ. ಇದು ಸ್ವಾಭಾವಿಕಗುಣ. ಈ ಕಾಲದಲ್ಲಿ ಕೊಡುವ ಆಟಗೆಯೂ ಅನುಗುಣವಾಗಿರಬೇಕು. ಪೂರ್ವದಲ್ಲಿ ಉಪಯೋಗಿಸುತ್ತಿದ್ದ **ರಂಗಾಣಿಯು** ಅತ್ಯುತ್ತಮವಾದುದು. ಅದು ಗಟ್ಟಿಯಾಗಿರುತ್ತದೆ, ಮತ್ತು ಮಗುವು ಕಡಿದರೂ ಏನೂ ಅಪಾಯವಾಗುವುದಿಲ್ಲ. ಈಗ ಕೊಡುವ ಆಟಗೆಗಳಲ್ಲಿ ಮೊನೆಚಾದ ಕೊನೆಗಳಿರಬಾರದು. ಅದು ನುಣುಪಾಗಿರಬೇಕು. ಹೊಳೆಯುವಂತಿರಬೇಕು. ಈ ಎಲ್ಲ ಕಾರಣಗಳಿಂದ ಈ ಕಾಲಕ್ಕೆ ರಂಗಾಣಿಯೇ ಯೋಗ್ಯವಾದುದು. **ಗಿಲಗಿ** ಅಥವಾ ಗಿಲಗಚ್ಚಿಯು ಶಬ್ದಮಾಡುವುದರಿಂದ ಇನ್ನು ಕೆಲವು ಕಾಲವಾದಮೇಲೆ ಕೊಡಬಹುದು.

ಸ್ಪರ್ಶವು ಮಗುವಿಗೆ ಮುಖ್ಯವಾದುದು. ಈ ತಿಸುಭವದ ಅಸ್ತಿಭಾರದ ಮೇಲೆಯೇ ಮಕ್ಕಳ ಶಿಕ್ಷಣವು ಹೆಚ್ಚಾಗಿ ವ್ಯವಸ್ಥಿತವಾಗಿದೆ. ಬೆರಳನ್ನು ಆಡಿಸುವುದರಿಂದ ಮಗುವು ನಲಿಯುತ್ತದೆ. ಆದುದರಿಂದ ಆಟಗೆಯನ್ನು ಮಗುವು ಕೈಯಲ್ಲಿ ಹಿಡಿದು ಆಡಿಸುವಂತಿರಬೇಕು. ಸುಲಭವಾಗಿ ಮುರಿದು ಹೋಗಬಾರದು. ಜಪಾನಿನ ಕರ್ಪೂರದ (ಸೆಲ್ಯುಲಾಯಿಡ್) ರಂಗಾಣಿ, ಗಿಲಗಿ ಇವು ಖಂಡಿತ ಬೇಡ. ಮಗುವು ಆಟಗೆಯನ್ನು ಬಾಯಲ್ಲಿ ಇಟ್ಟುಕೊಳ್ಳುತ್ತಾದುದರಿಂದ ಅದು ಅಖಂಡವಾಗಿರಬೇಕು. ಗೋಲಿ, ನಾಣ್ಯ, ಗೋಟು ಅಡಿಕೆ ಮುಂತಾದ ಚಿಕ್ಕ ಪದಾರ್ಥಗಳನ್ನು ಈ ಕಾಲದಲ್ಲಿ ಮಗುವಿಗೆ ಕೊಡಬಾರದು. ಕೂದಲು ಅಥವಾ ಉಣ್ಣೆ ಅಂಟಿಸಿರುವ ಆಟಗೆಗಳನ್ನೂ ಕೊಡಬಾರದು. ಕೂದಲನ್ನು ಕಿತ್ತುತಿಂದು ಮಕ್ಕಳಿಗೆ ಅಪಾಯವಾಗಿದೆ.

ಮಗುವು ಸ್ತನ್ಯಪಾನವನ್ನು ಬಿಡುವ ಕಾಲದಲ್ಲಿ ಆಟಗೆ ಹೆಚ್ಚು ಬೇಕು. ಈಗಾಗಲೇ ಮಗುವು ಅಂಬೆಗಾಲಿಡುವುದರಿಂದ ಓಡಾಡಲು ಅನುಕೂಲವಾದ ಆಟಗೆ ಉತ್ತಮ. **ಬಣ್ಣದ ಚಂಡು** ಈಗ ಸರಿಯಾದುದು. ಕೆಲವರು ವಿಲಕ್ಷಣವಾದ ಚಂಡನ್ನು ಮಕ್ಕಳಿಗೆ ತಂದುಕೊಡುತ್ತಾರೆ. ಈ ಚಂಡಿನ ಮೇಲೆ ಮನುಷ್ಯನ ಮುಖವನ್ನು ಚಿತ್ರಿಸಿರುತ್ತಾರೆ. ಮಕ್ಕಳ ಗಮನವು ಕಣ್ಣು ಕಿವಿ ಮುಂತಾದ ಸೂಕ್ಷ್ಮ ಆಕಾರಗಳನ್ನು ಗ್ರಹಿಸುವುದಿಲ್ಲ. ಸ್ಥೂಲವೇ ಈಗ ಬೇಕಾದುದು. ಈ ಚಂಡನ್ನು ಅದುಮಿದರೆ ಅದರಿಂದ ಶಿಳ್ಳೆಂದು ಶಬ್ದವಾಗಿ, ಆ ಮುಖದ ಚಕ್ರದ ಬಾಯಿಂದ ನಾಲಿಗೆಯು ಹೊರಕ್ಕೆ ಬರುತ್ತದೆ. ಈ ವಿಲಕ್ಷಣಗಳನ್ನು ಕಂಡು ಮಗುವು ವಿಶೇಷವಾಗಿ ಹೆದರುವುದು. ದೊಡ್ಡವರಿಗೆ ನಗುವು ಬರುವ ಆಟಗೆಯು ಮಕ್ಕಳಿಗೆ ಯೋಗ್ಯವೆಂದು ಹೇಳಲಾಗುವುದಿಲ್ಲ.

ದೊಡ್ಡವರು ತಮ್ಮ ಸೌಕರ್ಯಕ್ಕಾಗಿ ಕೆಲವು ಆಟಗೆಗಳನ್ನು ಮಕ್ಕಳಿಗೆ ತಂದುಕೊಡುತ್ತಾರೆ. ಮಕ್ಕಳು ಬಾಯಲ್ಲಿ ಸದಾ ಚೀಪುವುದಕ್ಕೆ ಅನುಕೂಲವಾಗಿರುವ ರಬ್ಬರಿನ ತುಡುವನ್ನು ಅನೇಕರು ಕೊಡುತ್ತಾರೆ. ಇದರಿಂದ ಆಗುವಷ್ಟು ಹಾನಿಯು ಬೇರೆ ಯಾವುದರಿಂದಲೂ ಆಗುವುದಿಲ್ಲ. ಮಗುವೇನೋ ಅದನ್ನು ಚೀಪುತ್ತಾ ನಿದ್ದೆಮಾಡುತ್ತದೆ. ತಾಯಿಗೆ ಕೆಲಸ ಮಾಡಲು ಅನುಕೂಲ. ಆದರೆ ಮಗುವಿನ ಆರೋಗ್ಯವು ಇದರಿಂದ ಕೆಡುತ್ತದೆಂಬುದನ್ನು ಅನೇಕ ವೈದ್ಯರು ಹೇಳುತ್ತಾರೆ.

ಸುಮಾರು ಒಂದೂವರೆ ಎರಡು ವರ್ಷದ ಮಗುವಿಗೆ ಬೇರೆ ಆಟಗೆಗಳು ಬೇಕು. ಈಗ ಆಟಗೆಗಳು ಬುದ್ಧಿಶಕ್ತಿಯೂ ಮನಸ್ಸೂ ಬೆಳೆಯುವುದಕ್ಕೆ ಅನುಕೂಲವಾಗಿ ಬೇಕು. ಹುಡುಗರಿಗೂ ಹುಡುಗಿಯರಿಗೂ ಬೇರೆ ಬೇರೆ ಆಟಗೆಗಳನ್ನು ಕೊಡುವುದು ಉತ್ತಮ. ತೊಪ್ಪೆತೊಪ್ಪೆಯಾಗಿದ್ದರೂ **ತಿರುಪತಿಯ ಚಂದನಬೊಂಬೆಯು** ಈಗ ಯೋಗ್ಯವಾದುದು. ಆದರೆ ಈ ಬೊಂಬೆಗಳಲ್ಲಿ ಮುಖ್ಯವಾದ ಅವಯವಗಳು ಎಂದರೆ ಕೈ, ಕಾಲು, ತಲೆ ಇವುಗಳನ್ನು ತಿರುಗಿಸುವ ಹಾಗೆ ಕೀಲುಗಳಿರಬೇಕು. ಈಗಾಗಲೇ ಮಗುವಿನ ಕಲ್ಪನಾಶಕ್ತಿಯು ವೃದ್ಧಿಯಾಗುತ್ತಿದೆ. ಕೈ ಕಾಲುಗಳನ್ನು ವಿಧವಿಧವಾಗಿ ತಿರುಗಿಸಿ 'ಈಗ ಓಡುತ್ತಿದೆ, ಈಗ ಕು... ತ್ತದೆ' ಎಂಬುದಾಗಿ ಮಗುವು ಬೊಂಬೆಯನ್ನು ವರ್ಣಿಸುತ್ತದೆ. ಓಡಾಡಲು ಅನುಕೂಲವಾಗಿರುವ ಆಟಗೆಗಳೂ ಈಗ ಬೇಕು—**ಸಣ್ಣ ಕೈಗಾಡಿ, ಕೋಲು ಕುದುರೆ, ಬಸವ** ಇನೇ ಮುಂತಾದುವು.

ಸುಮಾರು ಮೂರು ವರ್ಷ ಮೇಲ್ಪಟ್ಟನಂತರ ಮಗುವಿಗೆ ಬೇಕಾದ ಆಟಗೆಗಳೇ ಬೇರೆ. ಪೋಣಿಸಲು ಅನುಕೂಲ...

ಬಣ್ಣದ **ಮಣಿಗಳು,** ಬಣ್ಣದ **ಕಡ್ಡಿಗಳು,** ಮರದ ಚೌಕನೆಯ **ಘನಗಳು** ಇವು ಮುಖ್ಯವಾದುವು. ಮಣಿಗಳನ್ನು ಪೋಣಿಸುವುದು ಮಕ್ಕಳಿಗೆ ಉತ್ತಮವಾದ ಕ್ರೀಡೆ. ಇದರಲ್ಲಿ ಸ್ವಾಭಾವಿಕವಾಗಿ ವರ್ಣಜ್ಞಾನವೂ, ಎಣಿಕೆಯೂ ಗೊತ್ತಾಗುತ್ತದೆ. ಕಡ್ಡಿಗಳನ್ನು ಬೇರೆ ಬೇರೆ ಆಕಾರಗಳಲ್ಲಿ ಇಡುವುದರಿಂದ ಕಲ್ಪನಾಸಾಮರ್ಥ್ಯವು ಬೆಳೆಯುತ್ತದೆ. ಮರದ ತುಂಡುಗಳು ಬಹು ಮುಖ್ಯವಾದುವು. ಇವುಗಳನ್ನು ಒಂದರಮೇಲೊಂದಿಟ್ಟು ವಿಧವಿಧವಾದ ಗೋಪುರಗಳನ್ನು ಕಟ್ಟುವುದರಿಂದ, ಬುದ್ಧಿಶಕ್ತಿಯಲ್ಲಿ ಮುಖ್ಯವಾದ, ಪದಾರ್ಥಗಳ ಪರಸ್ಪರ ಸಂಬಂಧದ ಗ್ರಹಿಕೆಯು ಮಗುವಿಗೆ ಬರುತ್ತದೆ. ಇವುಗಳಿಗೆ ಅಪಾಯವಿಲ್ಲದ ಬಣ್ಣಗಳನ್ನು ಹಚ್ಚಿದ್ದರೆ ಇನ್ನೂ ಅನುಕೂಲ. ವಿಧವಿಧವಾದ ಗೋಪುರಗಳನ್ನು ಕಟ್ಟಿ ಮಗುವು ಅವುಗಳನ್ನು ಕೆಡಿಸಿ ಪುನಃ ಕಟ್ಟುವುದು. ಇದೂ ಮುಖ್ಯ. ಆಟಿಗೆಗಳನ್ನು ಹೀಗೆ ಬದಲಾಯಿಸುವ ಸೌಲಭ್ಯವಿರಬೇಕು. ಹಿಂದೆ ಹೇಳಿದಂತೆ ಮಗುವಿಗೆ ಪ್ರಚಂಡವಾದ ಕಲ್ಪನಾಶಕ್ತಿಯಿದೆ. ಗಾಳಿಗೋಪುರ ಕಟ್ಟುವುದರಲ್ಲಿ ಅವನು ನಿಸ್ಸೀಮ. ಆದರೆ ಈ ಕಾಲದಲ್ಲಿ ಇದಕ್ಕೆ ಸ್ವಲ್ಪ ಆಧಾರ ಬೇಕು. ಈ ವಯಸ್ಸಿನಲ್ಲಿ ಪ್ರಾಣಿಗಳ ಬೊಂಬೆಗಳನ್ನು ಕೊಡಬೇಕು. ಆದರೆ ಅವು ಒಡೆದು ಹೋಗುವ, ಸುಟ್ಟುಹೋಗುವ ಜಪಾನೀ ಸೆಲ್ಯುಲಾಯಿಡಿನ ಬೊಂಬೆಗಳಾಗಿರಬಾರದು. ಮರದಲ್ಲಿ ಮಾಡಿ, ಸ್ಥೂಲವಾದ ರೂಪನ್ನು ಹೊಂದಿ, ಮುಖ್ಯವಾದ ಒಂದೆರಡು ಕೀಲುಗಳನ್ನು ಹೊಂದಿರಬೇಕು. ಕೈ, ಕಾಲು, ಬಾಲ ಮುಂತಾದವುಗಳನ್ನು ತಿರುಗಿಸಿ ಪ್ರಾಣಿಯಲ್ಲಿ ಭಾವೋದ್ರೇಕವಾಗುವುದನ್ನು ಮಗುವು ಕಾಣುತ್ತದೆ. ಈ ತರದ ಆಟಿಗೆಗಳು ಮಕ್ಕಳಿಗೆ ಬಹಳ ಆನಂದದಾಯಕವಾದುವು. ಭಾವಶಿಕ್ಷಣಕ್ಕೆ ಬಹಳ ಉತ್ತಮವಾದುವು.

ಕೆಲವು ಬೊಂಬೆಗಳಲ್ಲಿ, ಹೆಚ್ಚು ಹೆಚ್ಚು ಸಾದೃಶ್ಯವನ್ನು ಸಾಧಿಸುವುದಕ್ಕೋಸ್ಕರ, ಅಮುಕಿದರೆ ಕೂಗುವಂತೆ ಮಾಡಿರುತ್ತಾರೆ. ಇಂತಹವುಗಳನ್ನು ದೊಡ್ಡವರು ತಮಗಾಗಿ ಚುನಾಯಿಸಿಕೊಳ್ಳುತ್ತಾರೆ. ಮಗುವಿಗೆ ಸಾದೃಶ್ಯವು ಅಷ್ಟು ಬೇಡ— ಇಲ್ಲದಿದ್ದರೂ ಒಳ್ಳೆಯದೇ! ಮರದ ನಾಯಿಯನ್ನು ಹಿಡಿದುಕೊಂಡು ಮಗುವು ತಾನು 'ಬೊವ್' ಎಂದು ಕೂಗುತ್ತದೆ. ಅದು ಬಿಟ್ಟು, ಆ ನಾಯಿಯ ಹೊಟ್ಟೆಯಲ್ಲಿ ಯಂತ್ರವಿಟ್ಟು ಅಮುಕಿದರೆ ಕೂಗುವ ಹಾಗೆ ಇದ್ದರೆ, ತಾನು ಕೂಗಿದಷ್ಟು ಸುಖವು ಮಗುವಿಗೆ ಬರುವುದಿಲ್ಲ. ಸ್ವಲ್ಪ ಆಶ್ಚರ್ಯವೇನೋ ಉಂಟಾಗುತ್ತದೆ. ಆದರೆ ಈ ಯಂತ್ರಗಳೆಲ್ಲ ಸುಲಭವಾಗಿ ಹಾಳಾಗಬೇಕಷ್ಟೆ! ಆಗ ಮಗುವಿಗೆ ಆಶಾಭಂಗವಾಗುತ್ತದೆ. ಹೆಚ್ಚು ಹೆಚ್ಚು ನಾಜೋಕಾದ ಆಟಿಗೆಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ತೊಂದರೆ ಮಾಡಬಹುದು. ಸಾದೃಶ್ಯವನ್ನು ಸಾಧಿಸಲು ಮಗುವಿಗೆ ಕಲ್ಪನಾಶಕ್ತಿಯಿದೆ.

ಐದುವರ್ಷದ ಮಗುವಿಗೇ ಬೇರೆಯ ಆಟಿಗೆಗಳು ಬೇಕು. ಈಗ ಅವನು ವಿಶ್ವಾಮಿತ್ರನಂತೆ ತನ್ನದೇ ಪ್ರಪಂಚವನ್ನು ಸೃಷ್ಟಿಸುವ ಯೋಗ್ಯತೆಯನ್ನು ಹೊಂದಿದ್ದಾನೆ. ಆದರೆ ಅವನ ಪ್ರಪಂಚದಲ್ಲಿ ವಸ್ತುಗಳು ಅವನು ಹೇಳಿದ ಹಾಗೆ ಕೇಳಬೇಕು. ಸಾದೃಶ್ಯವು ಹೆಚ್ಚು ಬೇಡವೆಂದು ಮಾತ್ರಕ್ಕೆ ಸಾದೃಶ್ಯವನ್ನೇ ಬಿಡಬೇಕೆಂದಲ್ಲ. ರೈಲುಗಾಡಿಯನ್ನು ತಂದುಕೊಟ್ಟರೆ, ಮಗುವು ಇಂಜಿನ್ ನಡೆಸುವವನಾಗುತ್ತಾನೆ. ರೈಲು ಸರಿಯಾಗಿ ಓಡುವಂತಿರಬೇಕು. ಹಿಂದಿನ ಗಾಡಿಗಳೆಲ್ಲಾ ಪ್ರತಿಸಲವೂ ಉರುಳಿಬೀಳುತ್ತಿದ್ದರೆ ಮಗುವಿಗೆ ರೇಗುತ್ತದೆ. ನಮಗೆ ಅದು ಆಟವೆಂದು ತೋರಿದರೂ, ಅದರಲ್ಲಿ ಮುಳುಗಿರುವ ಮಗುವಿಗೆ ಆಟದಲ್ಲಿ ಹೆಚ್ಚು ವಿಶ್ವಾಸವಿದೆ. ಸಂಪೂರ್ಣ ಗಮನವಿಟ್ಟು, ಉದ್ಯೋಗಕ್ಕಿಂತಲೂ ಹೆಚ್ಚಿನ ಬೆಲೆಯನ್ನು ಮಗುವು ಆಟಕ್ಕೆ ಹಚ್ಚುವನು.

ಮರದಲ್ಲಿ ಮಾಡಿರುವ ವಿಧವಿಧವಾದ ತುಂಡುಗಳಿರುವ ಮನೆಕಟ್ಟುವ ಸಾಮಾನಿನ ಪೆಟ್ಟಿಗೆಯನ್ನು ಈಗ ಕೊಡಬಹುದು. ಇದರಲ್ಲಿ ಐದು ತರಹದವು ಇವೆ. ಇಂಗ್ಲೀಷಿನಲ್ಲಿ ಈ ಪೆಟ್ಟಿಗೆಗಳಿಗೆ **ಫ್ರಾಯ್ಬೆಲ್ಲಿನ** ಇನಾಮು ಎನ್ನುತ್ತಾರೆ. ಫ್ರಾಯ್ಬೆಲ್ಲನು ಮಕ್ಕಳ ಶಿಕ್ಷಣಕ್ಕಾಗಿ ತನ್ನ ಜೀವಮಾನವನ್ನು ಕಳೆದ ಮಹಾವ್ಯಕ್ತಿ. ಇವನು ಮಕ್ಕಳಿಗೆ ಕೊಟ್ಟಿರುವ ಇನಾಮುಗಳು ಇವು. ಇವುಗಳ ಸಹಾಯದಿಂದ ವಿಧವಿಧವಾದ ಸುಂದರ ಮಂದಿರಗಳನ್ನು ಮಗುವು ಕಟ್ಟುತ್ತದೆ, ಬುದ್ಧಿಶಕ್ತಿಯ ಬೆಳವಣಿಗೆಗೆ ಈ ಕಾಲದಲ್ಲಿ ಇದು ಉತ್ತಮ ಸಾಧನ. ಯಂತ್ರಗಳನ್ನು ಕಟ್ಟಲು ಅನುಕೂಲವಾದ **ಮೆಕ್ಯಾನೋ** ಪೆಟ್ಟಿಗೆಗಳನ್ನು ಇನ್ನೂ ವಯಸ್ಸಾದ—ಎಂಟು ವರ್ಷ ಮೇಲ್ಪಟ್ಟ—ಮಕ್ಕಳಿಗೆ ಕೊಡಬೇಕು.

ಹೊಸ ಆಟಿಗೆಯನ್ನು ಕೊಡುವಾಗ ಜಾಗರೂಕರಾಗಿರಬೇಕು. ಪೇಟೆಯಲ್ಲಿ ಕೊಂಡ ಆಟಿಗೆಯನ್ನು, ನಮ್ಮ ಉತ್ಸಾಹದ ಭರದಿಂದ, ಮನೆಗೆ ಬಂದ ಒಡನೆಯೇ ಮಗುವಿನ ಮುಂದೆ ಚೆಲ್ಲಬಾರದು. ನೂತನವಾದುದು, ಆಕಸ್ಮಾತ್ ಶಬ್ದಮಾಡುವುದು—ಇಂತಹ ವಸ್ತುಗಳು ಮಕ್ಕಳಿಗೆ ಭಯಪ್ರಚೋದಕವಾದುವು. ಆಟಿಗೆಗಳನ್ನು ಸರಿಯಾಗಿ ಜೋಡಿಸಿ ಗೊತ್ತಾದ ಜಾಗದಲ್ಲಿ ಇಡುವ ಹಾಗೆ ಮಗುವಿಗೆ ತೋರಿಸಿಕೊಡಬೇಕು. ಆಟವಾದ ಮೇಲೆ ಚೆಲ್ಲಾಪಿಲ್ಲಿಯಾಗಿ

ಆಟಿಗೆಗಳನ್ನು ಬಿಸಾಡಿರ ಬಾರದು. ಭಾವೀ ಜೀವ ಮಾನದಲ್ಲಿ ಇರಬೇಕಾದ ಒಂದು ಶಿಸ್ತನ್ನು ಮಗುವು ಈಗ ಕಲಿಯುತ್ತದೆ. ಈಗ ನಮ್ಮ ದೇಶದಲ್ಲಿ ಮಕ್ಕಳಿಗೆ ಆಟಿಗೆಗಳಲ್ಲಿ ಸಿಪಾಯಿಗಳ ಬೊಂಬೆಗಳನ್ನು ಸೇರಿಸುವುದು ಒಳ್ಳೆಯದು. ತಾನು ಸೇನಾನಾಯಕನೆಂದು ಭಾವಿಸಿ ಆ ಸಿಪಾಯಿಗಳ ಸಹಾಯದಿಂದ ಮಗುವು ಭಾರೀ ಕದನಗಳನ್ನು ಗೆಲ್ಲುವನು. ಹತ್ತು ವರ್ಷ ವಯಸ್ಸಾದ ಮೇಲೆ ನಮ್ಮದೇಶದ ಪೂಜ್ಯತೆವಡೆದ ಭಾರತ ಮಾತೆ, ಮಹಾತ್ಮಾಜೀ ಮುಂತಾದವರುಗಳ ಪ್ರತಿಕೃತಿಗಳನ್ನು ಬೊಂಬೆಗಳಲ್ಲಿ ಸೇರಿಸಿ, 'ತಾನು ಭಾರತಾಂಬೆಯ ಪುತ್ರ, ತಾನು ಎಲ್ಲರಿಗೂ ಮೇಲು' ಎಂಬ ಭಾವನೆಯು ಮೊದಲಿಂದ ಬೆಳೆದು ಬರಲು ಸಹಾಯ ಮಾಡಬೇಕು.*

---

* ಲೇಖಕರು ಮೈಸೂರಿನ ಮಹಾರಾಜಾಕಾಲೇಜಿನಲ್ಲಿ ಮನಃಶಾಸ್ತ್ರದ ಪ್ರಾಧ್ಯಾಪಕರು. ಈ ವಿಷಯದ ಮೇಲೆ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ. ಜ.ಕ.ದ ೧೯೩೩ರ ವಿಶೇಷ ಸಂಚಿಕೆಯಲ್ಲಿ 'ಪ್ರಾಯೋಗಿಕ ಮನಃಶಾಸ್ತ್ರದ ಪರಿಚಯ'ವೆಂಬ ಇವರ ಲೇಖನ ಬಂದಿದೆ. 'ಭಾವನೆಗಳಿಗೆ ಸಂಬಂಧಪಟ್ಟ ಮನಃಶಾಸ್ತ್ರ' (Psychology of Emotions)ವನ್ನು ಇವರು ವಿಶೇಷವಾಗಿ ವ್ಯಾಸಂಗಿಸಿದ್ದಾರೆ.

ಕ್ರೀಡಾವನ

(ಮಕ್ಕಳ ಆಟದ ತೋಟ)*


ಶಾಲೆಗೆ ಹೋಗಲು ಇನ್ನೂ ವಯಸ್ಸಾಗಿಲ್ಲದ ಎಳೆಮಕ್ಕಳನ್ನು ಎಲ್ಲರೂ ಮರೆತಂತಿದೆ. ಕೈಕಾಲಾಡಿಸಲು ಮನೆಸಾಲದು—ಶಾಲೆಗೆ ಹೋಗಲು ಇನ್ನೂ ವಯಸ್ಸಿಲ್ಲ. ಐಶ್ವರ್ಯವಂತರ ಮನೆಗಿರುವಂತೆ ಸುತ್ತಲೂ ಕಾಂಪೌಂಡಿರುವುದಿಲ್ಲ; ಮನೆ ಬಿಟ್ಟು ರಸ್ತೆಗೆ ಬರಬೇಕಾಗುತ್ತದೆ. ಸಮಾಜವಿದನ್ನು ಗಮನಿಸಬೇಕು. ಬರಿ ಜಾಗ ಮಾತ್ರವಲ್ಲ, ಮಕ್ಕಳಿಗೆ ಆನಂದ-ವ್ಯಾಯಾಮ ದೊರೆಯುವಂತೆ ಆಟದ ಸಲಕರಣೆಗಳನ್ನೂ ಒದಗಿಸಬೇಕು.

ಮೈಸೂರಿನ ಮಹಾರಾಜಾ ಕಾಲೇಜಿನ ಮ॥ ರಾ॥ ಬಿ. ಕುಪ್ಪುಸ್ವಾಮಿ, ಎಂ. ಎ. ಯವರ ಮೂಲ ಇಂಗ್ಲಿಷ್ ಲೇಖನದಿಂದ
ಅನುವಾದಿಸಿದವರು: ಶ್ರೀನಿವಾಸ್ ಎಸ್ ಎಸ್. ನಾರಾಯಣಶಾಸ್ತ್ರಿ, ಎಂ. ಎ., ಮಹಾರಾಜಾ ಕಾಲೇಜು, ಮೈಸೂರು


ಸಾಧಾರಣವಾಗಿ ಪ್ರತಿಯೊಂದು ನಗರದಲ್ಲಿಯೂ ಅಲ್ಲಲ್ಲಿ ನಿರ್ಮಲವಾದ ವಾಯುಸೇವನೆಗೆ ಅನುಕೂಲವಾಗಿ ಕೆಲವು ಸ್ಥಳಗಳನ್ನು ಗೊತ್ತುಮಾಡಿರುವರು. ಇಂತಹವುಗಳು ಒತ್ತೊತ್ತಾಗಿ ಮನೆಗಳಿರುವ ನಗರಗಳಲ್ಲಿ ಅತ್ಯಾವಶ್ಯಕವೆಂಬುದನ್ನು ಸರ್ಕಾರದವರು ಮನಗಂಡಿರುವರು. ಹಾಗೆಯೇ ಮಕ್ಕಳಿಗೆ ಆಟವಾಡಲು ಅನುಕೂಲವಾಗುವಂತೆ ಅಲ್ಲಲ್ಲಿ ಸ್ಥಳಗಳನ್ನು ಏರ್ಪಡಿಸಬೇಕೆಂಬುದನ್ನೂ ಮನಗಂಡಿರುವರು. ಅದಕ್ಕಾಗಿಯೇ ವಿದ್ಯಾಭ್ಯಾಸದ ಇಲಾಖೆಯವರು ಇಂತಹ ಸ್ಥಳಗಳನ್ನು ಏರ್ಪಡಿಸುವಂತೆ ಸರ್ಕಾರದವರು ಹೆಚ್ಚುಹೆಚ್ಚಾಗಿ ಪ್ರೋತ್ಸಾಹಿಸುತ್ತಿರುವರು.

ಆದರೆ ಈ ಗಡಿಬಿಡಿಯಲ್ಲಿ ಎಳೆಯ ಮಕ್ಕಳನ್ನು—ಸ್ಕೂಲಿಗೆ ಹೋಗಲು ಇನ್ನೂ ವಯಸ್ಸಾಗಿಲ್ಲದುವನ್ನು—ಎಲ್ಲರೂ ಮರೆತಂತಿದೆ. ಕೈಕಾಲಾಡಿಸಲು ಅವನಿಗೆ ಮನೆಯು ಸಾಲದು. ಸ್ಕೂಲಿಗೆ ಹೋಗಲು ಇನ್ನೂ ವಯಸ್ಸಿಲ್ಲ. ಐಶ್ವರ್ಯವಂತರ ಮನೆಗೇನೋ ಸುತ್ತಲೂ ಕಾಂಪೌಂಡಿರುತ್ತದೆ. ಆದರೆ ಅನೇಕ ಬಡವರ ಮಕ್ಕಳಿಗೆ ಇಂತಹ ಸ್ಥಳಗಳಲ್ಲಿ ಓಡಾಡುವ ಸಂಯೋಗವಿರುವುದಿಲ್ಲ. ಅವು ಆಡಲೇ ಬೇಕಾದುದರಿಂದ, ಮನೆಯನ್ನು ಬಿಟ್ಟು ರಸ್ತೆಗೆ ಬರುತ್ತವೆ. ಇದು ಸಂಘಜೀವನಕ್ಕೆ ತೊಂದರೆ, ಅಲ್ಲದೆ ಮಗುವಿಗೆ ಅಪಾಯಕರ. ಇಷ್ಟೂ ಅಲ್ಲದೆ, ಮಗುವಿಗೆ ಪೂರ್ಣವಾದ ಆನಂದವೂ ವ್ಯಾಯಾಮವೂ ಸಿಗಲು ಬರಿ ಜಾಗ ಸಾಲದು, ಆಟದ ಸಲಕರಣೆಗಳೂ ಬೇಕು.

ಎರಡು ವರ್ಷದಿಂದ ಏಳು ವರ್ಷದ ಒಳಗಿರುವ ಮಗುವು ಆಟವಾಡಲು ಅನುಕೂಲವಾಗಿರುವ ಸ್ಥಳವನ್ನೂ ಸಲಕರಣೆಗಳನ್ನೂ ಒದಗಿಸಿಕೊಡುವಂತಹ ಚಳುವಳಿಯನ್ನು ನಾವು ಎಬ್ಬಿಸಬೇಕು. ಕ್ರೀಡಾವನಗಳನ್ನು ಎಲ್ಲೆಲ್ಲೂ ಏರ್ಪಡಿಸಬೇಕು. ಮೈಸೂರಿನಲ್ಲಿ ನಮ್ಮ ಅನುಭವವನ್ನು ನೋಡಿದರೆ, ಹೆಚ್ಚು ಹಣವನ್ನು ವ್ಯಯಮಾಡದೆಯೇ ಕ್ರೀಡಾವನಗಳನ್ನು ಏರ್ಪಡಿಸಬಹುದೆಂದು ತೋರುತ್ತದೆ. ಮಕ್ಕಳಿಗೆ ಇದರಿಂದ ಆಗುವ ಆನಂದ, ಪ್ರಯೋಜನವನ್ನು ನೋಡಿದರೆ ಹಣದ ವ್ಯಯವು ಏನೂ ಹೆಚ್ಚಲ್ಲ. ಮಕ್ಕಳಿಗೆ ಇವುಗಳಿಂದ ಆನಂದವು ಉಂಟಾಗುವುದಲ್ಲದೆ ದೈಹಿಕ ಬೆಳವಣಿಗೆಯ ಸಾಧನೆಯೂ ಆಗುತ್ತದೆ. ನಮ್ಮ ದೇಶದಲ್ಲಿ ಎಲ್ಲೆಲ್ಲೂ ಕಣ್ಣಿಗೆ ಬೀಳುವ, ಸರಿಯಾಗಿ ಬೆಳೆದಿರದಿರುವ ಮಗುವನ್ನು ನೋಡಿ!— ಅದು ಆರೀತಿಯಾಗಿರುವುದಕ್ಕೆ ಪುಷ್ಟಿಯಾದ ಆಹಾರವೂ ತಕ್ಕ ವ್ಯಾಯಾಮವೂ ಇಲ್ಲದಿರುವುದೇ ಕಾರಣ. ಸರಿಯಾದ ದೈಹಿಕ ಬೆಳವಣಿಗೆಗೆ ಆಹಾರವೂ ವ್ಯಾಯಾಮವೂ ಎರಡೂ ಬೇಕು. ಆಹಾರವೂ ಅನು



ಕೂಲವಾಗಿರುವುದಿಲ್ಲ; ವ್ಯಾಯಾಮಕ್ಕೆ ಸರಿಯಾಗಿ ಕೈ ಕಾಲು ಆಡಿಸಲು ಯೋಗ್ಯವಾದ ಸ್ಥಳವೂ ಇಲ್ಲ—ಹೀಗಿದ್ದರೆ ಮಕ್ಕಳು ಹೇಗೆ ತಾನೇ ಸರಿಯಾಗಿ ಬೆಳೆಯುತ್ತವೆ? ದೇಹದ ಅಂಗಾಂಗಗಳನ್ನು ಪುಷ್ಟವನ್ನಾಗಿ ಮಾಡಲು ಅವಕಾಶವೇ ಇಲ್ಲ.




ರಾಟೆ (See-Saw)

ಸಾಧಾರಣವಾಗಿ ಒಂದುನೂರ ಐವತ್ತು ಅಡಿ ಉದ್ದ, ಒಂದು ನೂರ ಅಡಿ ಅಗಲವಿರುವ ಸಮಪ್ರದೇಶವು ಕ್ರೀಡಾವನಕ್ಕೆ ಉತ್ತಮವಾದುದು. ಸುತ್ತಲೂ ಬೇಲಿಯನ್ನು ಹಾಕಬೇಕು. ಒಳಗಿರುವ ಆಟದ ಸಾಮಾನುಗಳೂ ಹೂವಿನ ಗಿಡಗಳೂ ಸುರಕ್ಷಿತವಾಗಿರುತ್ತವೆ.

ಮಕ್ಕಳ ದೈಹಿಕ ಬೆಳವಣಿಗೆಗೆ ಸಾಧಕವಾಗಿರುವುದು ಹಾರಲೂ ಜಾರಲೂ ಇರುವ ಅನುಕೂಲಗಳು. ಸುಲಭದಲ್ಲಿ ಹಾರಲೂ ಜಾರಲೂ ಅನುಕೂಲವಾದ **ಜಾರುಗುಪ್ಪೆಯನ್ನು** ಕಟ್ಟಬಹುದು. ಇಟ್ಟಿಗೆ ಗಾರೆಯಿಂದ ಕಟ್ಟಿದ್ದರೆ ಕೆಲವು ಕಾಲ ಬಾಳಿಕೆ ಬರುತ್ತದೆ. ಕ್ರೀಡಾವನದ ಮಧ್ಯದಲ್ಲಿ ಇದನ್ನು ಕಟ್ಟಬೇಕು. ಕಲ್ಲುಗುಂಡುಗಳ ನೆಲಗಟ್ಟಿನ ಮೇಲೆ, ನಾಲ್ಕುವರೆ ಅಡಿ ಉದ್ದ ಮೂರುವರೆ ಅಡಿ ಅಗಲವಿರುವ ಒಂದು ಚೌಕವನ್ನು ಇಟ್ಟಿಗೆಯಲ್ಲಿ ಕಟ್ಟಬೇಕು. ನೆಲದಿಂದ ಒಂದುವರೆ ಅಡಿ ಎತ್ತರ ಕಟ್ಟಡವಾದ ಮೇಲೆ, ಒಂದು ಪಾರ್ಶ್ವದಲ್ಲಿ ಒಂದೂ ಕಾಲು ಅಡಿ ಅಗಲವಿರುವ ಹಂತವನ್ನು ಮಾಡಬೇಕು. ಈ ಹಂತದಿಂದ ನೆಲಕ್ಕೆ ಮಕ್ಕಳು ಹಾರುವರು. ಕಟ್ಟಡವು ಎರಡುವರೆ ಅಡಿ ಎತ್ತರವಾದ ಮೇಲೆ, ಒಂದು ಕಾಲು ಅಡಿ ಅಗಲವಿರುವ ಇನ್ನೊಂದು ಹಂತವನ್ನು ಮಾಡಬೇಕು. ಮೂರುವರೆ ಅಡಿ ಎತ್ತರದಲ್ಲಿ ಮೂರನೆಯ ಹಂತವು ಬರಬೇಕು. ಈ ಮೂರು ಹಂತಗಳೂ ಮೂರು ಪಾರ್ಶ್ವಗಳಲ್ಲಿ ಬರುತ್ತವೆ. ನಾಲ್ಕನೆಯ ಕಡೆ, ನೆಲದಿಂದ ಐದಡಿ ಎತ್ತರದಲ್ಲಿ ಅರವತ್ತು ಡಿಗ್ರಿ ಕೋಣದಲ್ಲಿ ಜಾರುಗುಪ್ಪೆಯನ್ನು ಮಾಡಬೇಕು. ಹೀಗೆ ಮಾಡಿದ್ದಲ್ಲಿ ಚಿಕ್ಕಮಕ್ಕಳು ಒಂದನೆಯ ಹಂತದಿಂದಲೂ ದೊಡ್ಡ ಮಕ್ಕಳು ಎರಡು ಮೂರನೆಯ ಹಂತದಿಂದಲೂ ಹಾರಬಹುದು. ಎಲ್ಲರೂ ಜಾರುಗುಪ್ಪೆಯಲ್ಲಿ ಜಾರಬಹುದು. ಜಾರುಗುಪ್ಪೆಯ ಮೇಲ್ಗಡೆ ಶೀಕವು ಎರಡಡಿ ಉದ್ದ, ಎರಡುಕಾಲು ಅಡಿ ಅಗಲವಾಗಿರುತ್ತದೆ.

ಈ ಜಾರುಗುಪ್ಪೆಯನ್ನು ಸಿಮೆಂಟಿನಲ್ಲಿ ಗಾರೆಹಾಕಬೇಕು. ಅಂದರೆ ಕಟ್ಟಡವು ಭದ್ರವಾಗಿ ಬಾಳಿಕೆಬರುವುದು. ಕಟ್ಟಡದ ಸುತ್ತ ಎರಡು ಮೂರು ಅಡಿಯಷ್ಟು ಜಾಗದಲ್ಲಿ ಅರ್ಧ ಅಡಿ ಮಣ್ಣನ್ನು ಅಗೆದು ಹಾಕಿ, ಮರಳನ್ನು ತುಂಬಬೇಕು. ಜಾರುಗುಪ್ಪೆಯ ಅಡಿಯಲ್ಲಿಯ ಮೂರಡಿ ಅಗಲದವರೆಗೂ ಒಂಭತ್ತು ಅಂಗುಲ ಮಣ್ಣನ್ನು ತೆಗೆದು ಮರಳನ್ನು ಹಾಕಿರಬೇಕು. ಜಾರುವ ಪ್ರದೇಶದಲ್ಲಿ ಎರಡು ಕಡೆಯೂ ಅಂಚುಕಟ್ಟಿದ್ದರೆ ಮಕ್ಕಳು ಎಡಬಲಗಡೆಗಳಲ್ಲಿ ಉರುಳುವುದಿಲ್ಲ.

ಕ್ರೀಡಾವನದ ಇನ್ನೊಂದೆಡೆ ಒಂದು ಸಾಧಾರಣವಾದ ರಾಟೆ (ಸೀಸಾ—See-saw) ಯನ್ನು ಹಾಕಬಹುದು. ನೆಲದಿಂದ ಒಂದುವರೆ ಅಡಿ ಎತ್ತರವಾಗಿ ಆರಂಗುಲ ಬಿಟ್ಟು ಎರಡು ಕಬ್ಬಿಣದ ಗಡಾರಿಗಳನ್ನೋ ಮರದ ಕಂಭಗಳನ್ನೋ ನಿಲ್ಲಿಸಿ, ಅವುಗಳ ಮಧ್ಯೆ ಒಂದು ಆರಡಿ ಉದ್ದದ ಮರದ ಜಂತಿಯನ್ನು ಕೀಲುಹಾಕಿ ಸಿಕ್ಕಿಸಬೇಕು. ಈ ಅಡ್ಡ ಗೋಲಿನ ಮೇಲೆ ಒಂದೊಂದು ಕೊನೆಯಲ್ಲಿ ಒಂದೊಂದು



ತೂಗುಮಣೆ

ಮಗುವು ಕುಳಿತುಕೊಂಡು ರಾಟೆಯನ್ನು ಮೇಲಕ್ಕೆ ಕೆಳಕ್ಕೆ ಆಡಿಸಬಹುದು.


ಹತ್ತಡಿ ಅಂತರವಲ್ಲಿ ಎರಡು ಕಂಭಗಳನ್ನು ನೆಟ್ಟು, ನೆಲದಿಂದ ಆರಡಿ ಎತ್ತರದಲ್ಲಿ ಅಡ್ಡಲಾಗಿ ಒಂದು ದೊಂಬನ್ನು ಕಟ್ಟಿ ಅದಕ್ಕೆ ಒಂದು ಸಣ್ಣ ತೂಗುಮಣೆಯನ್ನು ಕಟ್ಟಬೇಕು. ಮಕ್ಕಳು ಈ ಮಣೆಯ ಮೇಲೆ ಕುಳಿತು ಉಯ್ಯಾಲೆಯಾಡುವಂತಿರಬೇಕು. ಮಣೆ ಸಿಗದಿದ್ದರೆ ಮೋಟಾರಿನ ಹಳೆಯ ಎರಡು ಟೈರನ್ನು ಉಪಯೋಗಿಸಬಹುದು.

ಮರಳಲ್ಲಿ ಆಡುವುದಕ್ಕೆ ಮಕ್ಕಳಿಗೆ ಬಹಳ ಇಷ್ಟ. ಆದುದರಿಂದ ಕ್ರೀಡಾವನದ ಇನ್ನೊಂದು ಕಡೆ ಮರಳನ್ನು ಹಾಕಿಸಿರಬೇಕು. ಸುಮಾರು ಇಪ್ಪತ್ತೈದು ಮೂವತ್ತು ಅಡಿ ವ್ಯಾಸವಿರುವ ಒಂದು ವರ್ತುಳವನ್ನು ಗುರುತುಮಾಡಿ, ಒಂಭತ್ತು ಅಂಗುಲ ಮಣ್ಣನ್ನು ಅಗೆಸಿ ತೆಗೆದುಹಾಕಿ, ಮೂರು ನಾಲ್ಕು ಗಾಡಿ ಮರಳನ್ನು ಹಾಕಿಸಿ ಭರ್ತಿ ಮಾಡಿಸಬೇಕು. ಕಪ್ಪೆಗೂಡು, ಗೋಪುರ ಮುಂತಾದುವುಗಳನ್ನು ಮಕ್ಕಳು ಕಟ್ಟುತ್ತಾರೆ. ಚಿಕ್ಕ ಬಕೇಟು, ಡಬ್ಬಿಗಳನ್ನು ಒದಗಿಸಿಕೊಟ್ಟಲ್ಲಿ ನೀರು ಹಾಕಿ, ಹಸಿಮರಳಿನಿಂದ ಕಡುಬನ್ನು ಕಟ್ಟಿ ಆನಂದಿಸುತ್ತವೆ.

ಈ ಸಾಮಾನುಗಳನ್ನು ಸದಾ ಕಾವಲಿದ್ದು ರಕ್ಷಿಸಬೇಕಾಗಿಲ್ಲ. ಓಡಾಡಲೂ, ಹಾರಲೂ, ಜಾರಲೂ ಮಕ್ಕಳಿಗೆ ಬೇಕಾದಷ್ಟು ಅವಕಾಶವಿದೆ. ಹಾಗೆ ಮಕ್ಕಳು ಆಡುತ್ತಿರುವಾಗ ನೋಡುವವರಿಗೂ ಎಷ್ಟೋ ಆನಂದವಾಗುತ್ತದೆ. ಇಂತಹ ಒಂದು ಕ್ರೀಡಾವನವನ್ನು ಏರ್ಪಡಿಸುವುದಕ್ಕೆ ಸುಮಾರಾಗಿ ಒಂದುನೂರು ಇಪ್ಪತ್ತೈದು ಅಥವಾ ಐವತ್ತು ರೂಪಾಯಿ ಖರ್ಚಾಗಬಹುದು.

ಪ್ರತಿಯೊಂದು ಗ್ರಾಮ ಪಂಚಾಯಿತಿಯೂ, ನಗರಗಳ ಪ್ರತಿಯೊಂದು ಮೊಹಲ್ಲವೂ ಈ ಕ್ರೀಡಾವನಗಳನ್ನು ಏರ್ಪಡಿಸಬೇಕು. ಹಳ್ಳಿಯಲ್ಲಿ ಜಾಗಕ್ಕೆ ಸಂಕೋಚವಿಲ್ಲ. ಯಾರಾದರೂ ಪುಣ್ಯಾತ್ಮರು ಮುಂದೆ ಬಂದು ಸಾಕಾಗುವಷ್ಟು ಧನಸಹಾಯವನ್ನು ಮಾಡಬೇಕು. ಇದರಿಂದ ಮಕ್ಕಳಿಗೆ ಆನಂದವೂ, ಯೋಗ್ಯರೀತಿಯಲ್ಲಿ ಪುಷ್ಟರಾಗುವ ಸಾಧನವಿಶೇಷವೂ ಸಿಕ್ಕಿದಂತಾಗುತ್ತದೆ.

ಇನ್ನೂ ಹೆಚ್ಚಿನ ಮಾಹಿತಿಗೆ ಈ ಲೇಖಕನಿಗೆ ಬರೆದರೆ, ಅಗತ್ಯವಾಗಿ ತಿಳಿಸಲ್ಪಡುವುದು.



ಚಿಕ್ಕಮಕ್ಕಳ ನಾಟಕವೊಂದರ ದೃಶ್ಯ. ಇಲ್ಲಿಯ ಮಾತು, ರೀತಿ, ಉಡುಗೆ ಎಲ್ಲ ಅವರವೇ ಕೃತಿಗಳು.

ಮಕ್ಕಳಿಗೆ ಕಲಾಶಿಕ್ಷಣ

ಲೇಖಕರು:—ಶ್ರೀ. ಶಿವರಾಮ ಕಾರಂತ, ಪುತ್ತೂರು

ಶಿಕ್ಷಣದ ವಿಚಾರದಲ್ಲಿ ಜನರಿಗೆ ಹಿಂದೆ ಇರುತ್ತಿದ್ದ ದೃಷ್ಟಿಯು ಈಗ ತೀರ ಬದಲಿಸಿದೆ. ಗುರುವು ತನ್ನ ಜ್ಞಾನವನ್ನು ಮಕ್ಕಳಲ್ಲಿ ತುಂಬಿಸುವುದೇ ಶಿಕ್ಷಣ ಎಂದು ಹಿಂದಿನವರು ತಿಳಿದಿದ್ದರೆ, ಈಗಿನ ದಿನದಲ್ಲಿ ಗುರುವಿನ ಕೆಲಸ ‘ಮಗುವಿನ ಯಾವತ್ತು ಶಕ್ತಿಗಳನ್ನು ಅರಳಿಸುವುದು’ ಎಂದು ಆಗಿದೆ. ಎಲ್ಲ ಮಕ್ಕಳಲ್ಲಿ ನೈಸರ್ಗಿಕವಾದ ಭಾವನಾ, ಕ್ರಿಯಾ, ಉತ್ಪಾದನಾ ಶಕ್ತಿಗಳಿರುತ್ತವೆ. ಇವು ಒಂದೊಂದು ಶಿಶುವಿನಲ್ಲಿರಬಹುದಾದರೂ, ಶಿಕ್ಷಕನಾದವನು ಅವನ್ನೆ ಆದಷ್ಟು ಒಳ್ಳೆಯ ರೀತಿಯಿಂದ ವಿಕಸಿಸಲು ಯತ್ನಿಸಬೇಕೆಂದು ತಿಳಿಯುತ್ತಾರೆ.

ಶಿಕ್ಷಣದ ಹಳೆ ಹಾದಿಯಲ್ಲಿ ಉಪಾಧ್ಯಾಯನು ‘ಮಗು, ಹೀಗೆ ಮಾಡು’ ಎನ್ನುವುದರಲ್ಲೇ ತೃಪ್ತನಾಗಿದ್ದರೆ, ಈಗಿನವನು ಹಾಗಿರಲಾರನು. ಅವನು ಜ್ಞಾನವನ್ನು ಮಗುವಿನಲ್ಲಿ ‘ತುಂಬಿಸುವ’ ಯತ್ನಕ್ಕೆ ಹೋಗದೆ, ಅದು ಸಹಜವಾಗಿ ಬೆಳೆಯಲು ಬೇಕಾದ ಆವರಣವನ್ನು ಕಲ್ಪಿಸಬೇಕು. ಮಗುವಿಗೆ ತಾನು ತಿಳಿಸುವುದಕ್ಕಿಂತ, ಅದು ತಾನು ತಿಳಿಯಬೇಕು, ತಿಳಿದುದನ್ನು ತಾನಾಗಿ ಹೇಳಬೇಕು—ಎಂಬ ವಿಚಾರಗಳಲ್ಲಿ ಅವನು ಶ್ರಮಪಡಬೇಕಾಗುವುದು.

‘ಮಗು ಇದನ್ನೆ ಬರೆ, ಈ ಚಿತ್ರ ಬಿಡಿಸು’ ಅನ್ನುವುದರ ಬದಲು, ಅದು ತನ್ನ ಮನಸ್ಸಿನಿಂದಲೇ ಬರೆಯಲು ಉತ್ಸಾಹ ಪಡುವಂತೆ ಅವನು ಅವಕಾಶ ಕಲ್ಪಿಸಬೇಕು. ನಾವಿನ್ನು ಭಾಷಾಶಿಕ್ಷಣದ ರೀತಿಯನ್ನು ಪರಿಶೀಲಿಸುವ: ಚಿಕ್ಕಮಕ್ಕಳಿಗೆ ಮೊದಲೇ ಅ-ಆ-ಇ ಎಂಬ ಅರ್ಥವಿಲ್ಲದ ಅಕ್ಷರಗಳನ್ನೂ, ಮಾತುಗಳನ್ನೂ ಆದಿಯಲ್ಲಿ ಕಲಿಸುವ ರೂಢಿಗೆ ನಾವು ಈವರೆಗೆ ನಕ ಬಿದ್ದಿರುವೆವು. ಅದರಂತೆ ಗಣಿತ ಕಲಿಯುವ ಮಗುವಿನ ಪಾಲಿಗೆ ಈ ಯತ್ನಗಳಲ್ಲಿ ಅರ್ಥ ಕಾಣುವುದಿಲ್ಲ. ಅಂಥ ಯತ್ನಗಳಿಂದ ನಾವು ಹಸುಮಕ್ಕಳ ಮನಸ್ಸನ್ನೆ ದಣಿಸುವೆವು; ಅವುಗಳ ಉತ್ಸಾಹ ಕುಗ್ಗುವುದು. ‘ತಾನು ತಿಳಿಯಬೇಕು’ ಎಂಬ ಜ್ಞಾನದ ಲಾಲಸೆಗೆ ಈ ಕ್ರಮಗಳು ತೊಡಕು ತರುವುವು. ಕ್ರಮಗಳಿರುವುದು ಜ್ಞಾನಲಾಲಸೆ ಬೆಳೆಸಲು ಎಂದು ನಾವು ಒಡಂಬಡುವೆವಾದರೆ, ಕ್ರಮಗಳು ಪ್ರಥಮ ಸ್ಥಾನವನ್ನು ಶಿಶುಶಿಕ್ಷಣದಲ್ಲಿ ಪಡೆಯಲಾರವು.

ಕಲಾಶಿಕ್ಷಣದಲ್ಲಿ ಈ ಮಾತು ಇನ್ನಷ್ಟು ಹೆಚ್ಚಿಗೆ ಅನ್ವಯಿಸುತ್ತದೆ. ಕಲಾಶಿಕ್ಷಣದ ಉದ್ದೇಶ ಮಗುವಿನ ಭಾವನೆಗಳ ಪ್ರಕಾಶನ; ಅದರ ಕ್ರಿಯಾ, ಉತ್ಪಾದಕ ಶಕ್ತಿಗಳನ್ನು ಅರಳಿಸುವುದು. ಮಗು ಭಾವನಾರಾಜ್ಯದಲ್ಲಿ ತೇಲಬೇಕಾದುದು ಮುಖ್ಯ. ಅದು ತೇಲಿದರೆ ಮಾತ್ರ, ತನ್ನ ಭಾವನೆಗಳನ್ನು ಅದು ಚಿತ್ರಿಸಲು ಯತ್ನಿಸುವುದಾದರೆ ಮಾತ್ರ ಸಾಧನೆಗಳು ಅದಕ್ಕೆ ಬೇಕು. ನಾವು ಈ ಮಾತನ್ನು ಮಗು ಚಿತ್ರ ಬರೆಯುವ ರೀತಿಯನ್ನೆ, ಹಾಡುವ ರೀ

ಕಲಾಶಿಕ್ಷಣದ ಉದ್ದೇಶ ಮಗುವಿನ ಭಾವನೆಗಳ ಪ್ರಕಾಶನ; ಅದರ ಕ್ರಿಯಾ, ಉತ್ಪಾದಕ ಶಕ್ತಿಗಳನ್ನು ಅರಳಿಸುವುದು. ಮಗು ಭಾವನಾರಾಜ್ಯದಲ್ಲಿ ತೇಲಬೇಕಾದುದು ಮುಖ್ಯ. ಅದು ತೇಲಿದರೆ ಮಾತ್ರ ತನ್ನ ಭಾವನೆಗಳನ್ನು ಅದು ಚಿತ್ರಿಸಲು ಯತ್ನಿಸುವುದು. ಚಿತ್ರಿಸಲು ಯತ್ನಿಸುವುದಾದರೆ ಮಾತ್ರ ಸಾಧನೆಗಳು ಅದಕ್ಕೆ ಬೇಕು. ನಾವು ಈ ಮಾತನ್ನು ಮರೆತು ಚಿತ್ರ ಬರೆಯುವ ರೀತಿಯನ್ನು, ಹಾಡುವ ರೀತಿಯನ್ನು ಮೊದಲಿಗೆ ಹೇಳಿದರೆ ಪ್ರಯೋಜನವೇನು ?

ಯನ್ನು ಮೊದಲಿಗೆ ಹೇಳಿದರೆ ಪ್ರಯೋಜನವೇನು? ಪ್ರಯೋಜನದ ಬದಲು ಹಾನಿಯಾಗುವ ಪ್ರಸಂಗಗಳೇ ಅಧಿಕ.

ಒಂದು ಹೊಳೆ, ಒಂದು ಹೂ, ಒಂದು ಹಕ್ಕಿ—ಹೀಗೆ ಏನೇತರೂ ಮಗು ಅವನ್ನು ಉತ್ಸಾಹದಿಂದ ಕಾಣುತ್ತದೆ, ಪರಿಶೀಲಿಸುತ್ತದೆ, ಆನಂದಿಸುತ್ತದೆ. ಕೊನೆಗೆ ಅವನ್ನು ಚಿತ್ರಿಸುವುದಕ್ಕೋ, ಹಕ್ಕಿಯ ಕೂಗನ್ನು ಅನುಕರಿಸುವುದಕ್ಕೋ ಯತ್ನಿಸುತ್ತದೆ. ಮಗು ಕಾಣುವ ವಸ್ತುಗಳನ್ನು ಚಿತ್ರಿಸಲು ನಾವು ಅವಕಾಶ ಕಲ್ಪಿಸಬೇಕು.. ಅದು ಮುಖ್ಯ.

ಉಪಾಧ್ಯಾಯನ ಮೊದಲನೆಯ ಕೆಲಸವೆಂದರೆ —ಈ ಅವಕಾಶಗಳನ್ನು ಹೆಚ್ಚಾಗಿ ಕಲ್ಪಿಸುವುದು. ಮಗುವೇ ತಾನಾಗಿ ತನ್ನ ಅನುಭವವನ್ನು ತನಗೆ ಸಹಜವಾದ ರೀತಿ, ಶೈಲಿಗಳಲ್ಲಿ ಚಿತ್ರಿಸಲು ಸ್ವಾತಂತ್ರ್ಯ ಕೊಡಬೇಕು. ಗುರುವು ಒಂದು ತರಗತಿಯ ಮುಂದೆ ಕುಳಿತು 'ಮಕ್ಕಳೇ, ಬೋರ್ಡಿನ ಮೇಲೆ ನಾನು ಬರೆದ ಹುಂಜಕೋಳಿಯನ್ನು ಬರೆಯಿರಿ' ಎಂದರೆ; ಕಲಾಶಿಕ್ಷಣವಾಯಿತೇ ? ಹುಂಜಕೋಳಿ ಮಗುವಿನ ಇಷ್ಟ ವಾಗಿ ಕಂಡರೆ, ಉಪಾಧ್ಯಾಯನು ಬರೆದ ಚಿತ್ರ ತಾನು ಕಂಡ ಬಾತುಕೋಳಿಗೆ ಸಮನಾಗಿದ್ದರೆ ಮಾತ್ರ ಅದು ಬರೆಯುತ್ತದೋ ಏನೋ, ಇಲ್ಲವಾದರೆ ಹೇಗೆ ಬರೆದೀತು. ಉಪಾಧ್ಯಾಯನ ದಾಕ್ಷಿಣ್ಯ, ಹಿಂಸೆಗಳಿಂದ ಬರೆಯುವುವು ಚಿತ್ರಗಳಾಗುವ ಬದಲು ಚಿತ್ರವಧೆಗಳಾಗುವುವು. ಈಗ ಎಷ್ಟು ಮಕ್ಕಳು ಡ್ರಾಯಿಂಗ್ ಪಾಠಗಳಲ್ಲಿ ಉತ್ಸಾಹಪಡುತ್ತವೆ ?

ಇದರ ಮೂಲ ಕಾರಣವೆಂದರೆ —ಮಕ್ಕಳು ತಾವು ಒಪ್ಪುವ, ಇಚ್ಛಿಸುವ ವಸ್ತುಗಳನ್ನೆ ಚಿತ್ರಿಸಬಹುದು; ಅಲ್ಲದೆ ಉಪಾಧ್ಯಾಯನ ಬಯಕೆಯನ್ನು ನೆರವೇರಿಸಲಾರವು. ನಮ್ಮ ಮನಸ್ಸಿಗೆ ಬಾರದ ವಿಷಯವನ್ನೆ ನಾವೇ ಉತ್ಸಾಹದಿಂದ ಹೇಳಬಲ್ಲೆವೇ ? ಮಗುವು ತನಗೆ ಇಷ್ಟ ಕಂಡ ವಸ್ತುಗಳನ್ನು ಚಿತ್ರಿಸಲು ಅವಕಾಶ ಕಲ್ಪಿಸುವಾಗ, ಗುರುವು ಕೇವಲ ವಿಮರ್ಶಕನು; ತಿದ್ದುವವನೂ ಸಹ ಅಲ್ಲ. ಕಾರಣ—ಮನಶ್ಶಾಸ್ತ್ರ ಬಲ್ಲವರಿಗೆ ತಿಳಿದಿದೆ: ಮಕ್ಕಳು ಕಾಣುವ ರೀತಿಗೂ ವಸ್ತುಗಳನ್ನು ಕಾಣುವಾಗ ಅವರಿಂದ ಮಕ್ಕಳ ಮನಸ್ಸಿನಲ್ಲಿ ಬರುವ ಕಲ್ಪನಾಚಿತ್ರ(Vision)ಕ್ಕೂ, ಹಿರಿಯರ ದೃಷ್ಟಿಗೂ ವ್ಯತ್ಯಾಸವಿದೆ. ಬರಿಯ ರೂಪವನ್ನೇ ಬರೆಯುವುದು ಚಿತ್ರವಲ್ಲ. ಅಲ್ಲದೆ ಬರಿಯ ರೂಪವನ್ನು ಸಹ—ಹಿರಿಯರೂ, ಮಕ್ಕಳೂ ಒಂದೇ ರೀತಿಯಾಗಿ ಕಾಣುವುದಿಲ್ಲ.



ಚಿಕ್ಕವರ ನಾಟಕದ ಇನ್ನೊಂದು ದೃಶ್ಯ



ಆಫ್ರಿಕದ ನಿಗ್ರೋ ಬಾಲಕರ ಜೀವನದ ರೀತಿಯನ್ನು ಕೇಳಿದ ಬಳಿಕ ಮಕ್ಕಳು ತಾವಾಗಿ ಅವರ ಉಡುಗೆ, ಕಲ್ಪನೆಯ ಮಾತುಗಳನ್ನು ರಚಿಸಿಕೊಂಡು ತೋರಿಸಿದ ದೃಶ್ಯಾವಳಿಯ ಒಂದು ನೋಟ. ಈ ಎಲ್ಲ ಪ್ರಯೋಗಗಳಲ್ಲಿ ಗುರುವಿನ ಪ್ರತ್ಯಕ್ಷ ಶಿಕ್ಷಣ ಇಲ್ಲವೇ ಇಲ್ಲ.

ಚಿತ್ರಿಸುವ ಸಾಧನಗಳಲ್ಲೂ ಸ್ವಾತಂತ್ರ್ಯ ಬೇಕು. ಕೆಲವು ಮಕ್ಕಳಿಗೆ ಮಣ್ಣಿನಲ್ಲಿ ಚಿತ್ರ ಬರೆಯಲು ಇಷ್ಟವಾಗುವುದು. ಇನ್ನೊಂದೆರಡು ಬಣ್ಣದ ಕಾಗದ ಕತ್ತರಿಸಿ ಅಂಟಿಸಿ ಚಿತ್ರ ಬರೆಯಬಹುದು. ಕೆಲವು ಜಲವರ್ಣವನ್ನು, ಪೆನ್ಸಿಲನ್ನು ಹಿಡಿಯಬಹುದು. ಒಂದೇ ಮಗು ಬೇರೆಬೇರೆ ದಿನಗಳಲ್ಲಿ ಬೇರೆ ಸಾಧನಗಳನ್ನು ಬಯಸಬಹುದು. ಇವಕ್ಕೂ ನಾವು ತೊಡಕಿರಿಸಬಾರದು, ಹಾಗೆ ಇರಿಸಿದಲ್ಲಿ ಅವುಗಳ ಚಿತ್ರ ಲೇಖನದ ಉತ್ಸಾಹಕ್ಕೆ ಕೊರತೆ ಬರುವುದು.

ಚಿತ್ರಬಿಡಿಸುವ ರೀತಿಯನ್ನು ಹೇಳಿಕೊಡುವುದು ಗುರುವಿನ ಕರ್ತವ್ಯವಲ್ಲವೇ ಎಂದು ಕೇಳಿದರೆ—ಸರಿ, ರೀತಿಯುಂಟು. ಹಾಗೇ ಅದನ್ನು ಕಲಿಸಲು ಕಾಲಮರ್ಯಾದೆಯೂ ಇದೆ. ಚಿತ್ರಶಾಸ್ತ್ರ ಲೇಖನ (Technic) ದೊಡ್ಡ ವಿಷಯ. ಇದರ ನೇಮ, ಇದಕ್ಕೆ ಬೇಕಾದ ಶ್ರಮ ಚಿಕ್ಕ ಮಕ್ಕಳ ರಾಜ್ಯಕ್ಕೆ ಒಪ್ಪುವುದಿಲ್ಲ. ಸಾಮಾನ್ಯ ೧೪-೧೬ ವಯಸ್ಸಿಗೆ ಮೇಲ್ಪಟ್ಟು ಅದು ತಿಳಿಯಲು ಯೋಗ್ಯವಾದುದು. ಮೊದಲಿಗೇ ತಂದರೆ, ಅದನ್ನು ಅಭ್ಯಸಿಸುವ ಶ್ರಮಕ್ಕೆ ಮಗುವು ಹೆದರಿ ಚಿತ್ರದಿಂದಲೇ ದೂರಾಗುವುದು.

ಸಂಗೀತವಾದರೂ ಹೀಗೇನೆ. ಸಂಗೀತವೆಂದರೆ ವಿವಿಧ ರಾಗ ತಾಳ ಜ್ಞಾನಗಳಾಗಲಿ, ಬರಿ ಕೇಳು ಧ್ವನಿಯಾಗಲಿ ಅಲ್ಲ. ಯಾವನಾದರೊಬ್ಬನ ಕೃತಿಯನ್ನು ಶ್ರುತಿ, ತಾಳ, ಲಯ ಬಿಡದೆ ಹಾಡಿದರೆ ಗಾನಕಲೆಯಾಗುವುದೂ ಇಲ್ಲ. ಚಿತ್ರದಂತೆ ಸಂಗೀತ ಸಹ ವ್ಯಕ್ತಿಯ ಭಾವನೆಯ ಪ್ರಕಾಶನಕ್ಕೆ ಅಡಿಯಾಳಾದ ಸಾಧನ. ಭಾವನೆಗೆ ಸ್ಥಾನವಿಡದೆ ಸಾಧನೆಗೆ ಮಾನವಿಡುವ ಸಾಧನಗಳು ಸ್ವರರಾಜ್ಯದ ಕಸರತ್ತುಗಳು. ಈ ಕಸರತ್ತನ್ನೆ ಮಗುವು ಮಾಡಿ ದಣಿದರೆ, ಮದುವೆಯಾದೊಡನೆ ಸಂಸಾರಕ್ಕೆ ಪೂರ್ಣವಿರಾಮ ತಂದಂತೆ ಸಂಗೀತ. ಕಾರಣ—ಅದರ ಜೀವನದ ಲಾಲಸೆಯಾಗಿ ಸಂಗೀತ ಬೆಳೆದು ಬರಲಿಲ್ಲ. ಬರಿಯ ಶಾಸ್ತ್ರ ದೊರೆಯಿತು. ಅದೇ ಜಿಗುಪ್ಸೆಯುಂಟುಮಾಡುವಷ್ಟು ದೊರೆಯಿತು. ಜೀವನ ಬರಿದಾಗಿರಲು—ಈ ಶಾಸ್ತ್ರ ಏನು ಮಾಡೀತು ? ನಮ್ಮ ಕ್ರಮವೆ ತಿರುಗುಮುರುಗ. ಗಾಡಿ ಮುಂದೆ; ಕುದುರೆ ಹಿಂದೆ!

ಮಕ್ಕಳ ಕತೆ, ನಾಟಕ, ಹಾಡುಗಳು ಕಲಾರಾಜ್ಯದ ನಿಯಮವನ್ನು ಅನುಸರಿಸುವುವು. ಅವರು ಕೇಳುವ ಕತೆ ... ಮನಸ್ಸಿನ ಮೇಲೆ ಉಂಟಾಗುವ ... ಗಳು, ಅವುಗಳಿಂದ ... ಣಾಮಗಳು ಬೇರೆ. ರಾಮಾಯಣದ ಕಥೆ ಕೇಳಿದ ... ರಾಮನು ಬಲು ದೊಡ್ಡವನಾಗಿ ಕಂಡರೂ, ಮಗುವಿನ ಮನಸ್ಸಿನಲ್ಲಿ ಹನುಮ-ದಶಕಂಠರಿಗೆ ದೊರೆಯುವ ...

ರಾಮನಿಗೆ ಸಿಗುವುದು ಕಠಿಣ. ಮಕ್ಕಳಿಗೆ ಕೊಡುವ ಕಥೆಗಳು ಸಹ, ಅವರ ಭಾವನೆ ಕಲ್ಪನೆಗಳಿಗೆ ಒಪ್ಪುವುವಾಗಿರಬೇಕು.

ನಮ್ಮ ನಾಡಿನಲ್ಲಿ ಮಕ್ಕಳ ನಾಟಕಗಳಿಗೆ ತುಂಬ ಕೊರತೆ. ಮಕ್ಕಳ ನಾಟಕವೆಂದರೆ "ರಾಮರಾಜ್ಯವಿಯೋಗ, ಪ್ರಹ್ಲಾದ ಚರಿತ್ರೆ." ಪ್ರಹ್ಲಾದ, ಭರತರು ಚಿಕ್ಕ ಕಾಯದವರಾದರೂ ಬೆಳೆದ ಬುದ್ಧಿಯವರು ಎಂದು ನಮ್ಮ ನೆನಪಿನಲ್ಲಿರಬೇಕು. ಅಂಥ ನಾಟಕಗಳನ್ನು ಮಗುವಿನಿಂದ ಉರುಹಾಕಿಸಿದರೆ, ಯಾವ ಪುರುಷಾರ್ಥವೂ ಆಗಲಾರದು. ಅವರು ಆಡುವ ನಾಟಕದ ಭಾವನೆಗಳು ಅವರ ಮಿತಿಗೆ ಸಿಕ್ಕಿರಬೇಕು.

ಅಲ್ಲದೆ ಮಕ್ಕಳ ನಾಟಕಗಳು, ಹಿಂದೆ ಹೇಳಿದ ಸ್ವತಂತ್ರ ಮಾರ್ಗವು ಆಗಿದ್ದರೇನೆ ಒಳಿತು. [ಅವರ ಮಾತುಗಳೇ ಅವರ ಬಾಯಿಂದ ಬಂದರೆ, ಅವರು ಏನು ಕಲ್ಪಿಸುತ್ತಿದ್ದಾರೆ ಎಂದು ನಮಗೂ ತಿಳಿಯುವುದು: ಅಲ್ಲದೆ ಈ ಸ್ವತಂತ್ರವಾಗಿ, ಅಲ್ಲಿಂದಲ್ಲೇ ಮಕ್ಕಳು ಆಡುವ ನಾಟಕ ಭಾಷೆಯ (extempore plays) ನೈಸರ್ಗಿಕ ರೀತಿಯು, ಉರುಹಾಕಿ ಉಗುಳಿದ ಮಾತುಗಳಿಂದ ಎಂದೂ ಬರಲಾರದು.

ಈ ನನ್ನ ಎಲ್ಲ ಉದಾಹರಣೆಗಳು ಹಲವು ವರ್ಷ ಮಕ್ಕಳೊಡನೆ ನಲಿದು, ನೂರಾರು ಬಾಲಕರನ್ನು ಕಲೆಯ



ಬಾಲಕನೊಬ್ಬನು ಅಭಿನಯಗೀತೆಯಲ್ಲಿ ತಲ್ಲೀನನಾದ ಚಿತ್ರ


ಹಾಕಿ, ಅವರಿಂದಲೇ ಆಡಿಸಿದ ನಾಟಕ, ಹಾಡಿಸಿದ ಕವನ, ಬರೆಯಿಸಿದ ಚಿತ್ರಗಳಿಂದ ಬಂದುವು. ನಾವು ಪರಿಶೀಲಿಸಿದಾಗಲೆಲ್ಲ ಚಿಕ್ಕ ಬಾಲಕರು—ದೊಡ್ಡವರನ್ನು ಬೆರಗು ಮಾಡುವಷ್ಟು ಕ್ರಿಯಾ, ಉತ್ಪಾದಕ ಶಕ್ತಿಗಳನ್ನು ತೋರ್ಪಡಿಸಿದ್ದಾರೆ. ಅವರ ಸೃಷ್ಟಿಗಳಿಗೆ ಅಧಿಕ ವೇಳೆಯೂ ಬೇಡ; ಮುಖ್ಯ ಬೇಕಾದುದು ಮನಸ್ಸು, ಲಹರಿಗಳು ಮಾತ್ರ.

ವಿಯನ್ನದಲ್ಲಿ ಪ್ರೊ. ಸಿಜೆಕ್ ಎಂಬವರು ಅಲ್ಲಿನ ಬಾಲಕರಿಂದ, ಅನೇಕ ಅದ್ಭುತ ಕ್ರಿಯೆಗಳನ್ನು ಮಾಡಿಸಿದ್ದಾರೆ. ಇದು ಮಕ್ಕಳಿಗೆ ಹಿರಿಯರು ಕೊಟ್ಟ ಅವಕಾಶ, ಆವರಣ, ಸ್ವಾತಂತ್ರ್ಯಗಳಿಂದ ಬಂದುದಲ್ಲದೆ—ನಮ್ಮ ರೂಢಿಯ ಶಿಕ್ಷಣದಿಂದಲ್ಲ. ನಮ್ಮ ದೇಶವೂ ಇಂಥ ದಿನಗಳನ್ನು ಬರಮಾಡಲಾರದೇ !



ಬಣ್ಣಬಣ್ಣದ ಮಣ್ಣಿನ ಪುಡಿಗಳಿಂದ ನೆಲದ ಮೇಲೆ ರಂಗವಲ್ಲಿಯಂತೆ ಚಿತ್ರಿಸಿದ ಒಂದು ಕತ್ತೆ

ಜಲಮಾರ್ಗದಿಂದ ಮುಂಬಯಿಗೆ ಹೋಗಿರಿ—



- ಕೊಂಕಣದ ಬಂದರಗಳು ಮತ್ತು ಮುಂಬಯಿ—ಈ ನಡುವೆ ಹಡಗುಗಳ ಪ್ರಯಾಣದ ದರಗಳು ಇಳಿದಿರುವುದರಿಂದ ಕರ್‍ಹಾಡ, ಕೊಲ್ಲಾಪುರ, ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮೊದಲಾದ ಊರುಗಳ ಸುತ್ತುಮುತ್ತಲಿನ ಭಾಗದಿಂದ ಮುಂಬಯಿಗೆ ಹೋಗಬಯಸುವ ಜನರಿಗೆ, ಕೊಂಕಣದ ಬಂದರಗಳಿಂದ ಸಮುದ್ರಮಾರ್ಗವಾಗಿ ಪ್ರವಾಸಮಾಡುವುದು ಕಾಲದ ಮತ್ತು ಹಣದ ದೃಷ್ಟಿಯಿಂದ ಬಹಳ ಲಾಭಕರವಾಗಿದೆ. ಮುಂಬಯಿಗೆ ಪ್ರಯಾಣ ಬೆಳಸುವ ಕರ್‍ಹಾಡ, ಕೊಲ್ಹಾಪುರ ಭಾಗಗಳಲ್ಲಿಯ ಜನರಿಗೆ ರತ್ನಾಗಿರಿ; ಮತ್ತು ಬೆಳಗಾವಿ, ಹುಬ್ಬಳ್ಳಿ, ಧಾರವಾಡಗಳ ಕಡೆಯ ಜನರಿಗೆ ವೆಂಗುರ್ಲೆ; —ಈ ಎರಡು ಬಂದರಗಳು ಬಹಳ ಅಲ್ಪವೆಚ್ಚದವು ಮತ್ತು ಅನುಕೂಲವಾಗಿವೆ.

- ಬಿ. ಎಸ್. ಎನ್. ಕಂಪನಿಯು ಕೊಂಕಣ ತೀರ ಪ್ರದೇಶದಲ್ಲಿ ೬೦ ವರ್ಷ ಕಾಲ ಸೇವೆ ನಡೆಸಿದ ಹಾಗೂ ಎಲ್ಲಕ್ಕಿಂತ ಹಳೆಯ ಸ್ವದೇಶಿ ಉಗೆಹಡಗಿನ ಕಂಪನಿಯಾಗಿದೆ; ಈ ಕಂಪನಿಯ ಹಡಗುಗಳು ಕೊಂಕಣದ ಬಂದರಗಳು ಮತ್ತು ಮುಂಬಯಿಗಳ ನಡುವೆ ದಿನಾಲು ಹೋಗಿಬರುತ್ತವೆ. ಕೊಂಕಣದ ಪ್ರವಾಸಕ್ಕಾಗಿಯೇ ಬೇಕೆಂತ ಆ ಹಡಗುಗಳನ್ನು ಕಟ್ಟಿಸಿರುವುದರಿಂದ, ಅವು ಹೆಚ್ಚಾಗಿ ತೂಗಾಡುವುದಿಲ್ಲ; ಮತ್ತು ಬಹು ವೇಗದಿಂದ ಸಾಗುತ್ತವೆ. ಹಾಗೆಂವೇ ಈ ಹಡಗುಗಳಲ್ಲಿಯ ಪ್ರವಾಸವು ಪ್ರಯಾಣಿಕರಿಗೆ ಬಹಳ ಸುಖಪ್ರದವಾಗುತ್ತದೆ.

- ಕೊಂಕಣದ ಬಂದರಗಳಲ್ಲಿ ಬಿ. ಎಸ್. ಎನ್. ಕಂಪನಿಯು ಪ್ರಯಾಣಿಕರಿಗೆ ಇಳಿದುಕೊಳ್ಳಲು ಸ್ಥಳಗಳನ್ನು ಕಟ್ಟಿಸಿರುವುದರಿಂದ, ಹಡಗು ಬರುವವರೆಗೂ ಅವರು ವಿಶ್ರಾಂತಿಯನ್ನು ಅನುಭವಿಸಬಹುದಾಗಿದೆ. ಕಂಪನಿಯ ಕಚೇರಿಗಳೊಳಗಿನ ಕೆಲಸಗಾರರು ಪ್ರಯಾಣಿಕರ ತೊಂದರೆ-ತಡೆಗಳ ಕಡೆಗೆ ಲಕ್ಷ್ಯ ಕೊಡುವುದರಲ್ಲಿ ಮತ್ತು ಬೇಕಾದ ಮಾಹಿತಿಯನ್ನು ಕೊಡುವುದರಲ್ಲಿ ತತ್ಪರರಿರುತ್ತಾರೆ. ಹಡಗುಗಳ ಮೇಲೆ ಕೂಡಾ ಕಂಪನಿಯವರು " ಪ್ಯಾಸೆಂಜರ ಗೈಡ್ " ಎಂಬ ಸ್ವತಂತ್ರ ಅಧಿಕಾರಿಯನ್ನು ಪ್ರಯಾಣಿಕರಿಗೆ ನೆರವಾಗುವ ಸಲುವಾಗಿಯೆ ನಿಯಮಿಸಿದ್ದು, ಹಡಗುಗಳಲ್ಲಿಯ ಪ್ರಯಾಣಿಕರ ಸೌಕರ್ಯವನ್ನು ಆಸ್ಥೆಯಿಂದ ನೋಡಿಕೊಳ್ಳುವುದೆ ಅವನ ಕರ್ತವ್ಯವಾಗಿರುತ್ತದೆ.

ದಿ ಬಾಂಬೆ ಸ್ಟೀಮ್ ನ್ಯಾವಿಗೇಶನ್ ಕಂಪನಿ ಲಿಮಿಟೆಡ್

೧೦೦, ಫ್ರಿಅರ್ ರೋಡ್, ಮುಂಬಯಿ : : : ಟೆಲಿಫೋನ್ ನಂ. ೨೫೦೬೧

ಪ್ರೌಢ ಶಿಕ್ಷಣ

ಲೇಖಕರು:—ಶ್ರೀಮಾನ್ ಜೆ. ಪಿ. ನಾಯಿಕ, ಬಿ. ಎ. (ಆನರ್ಸ್)
ಮುಂಬಯಿ ಪ್ರಾಂತದ ಪ್ರೌಢಶಿಕ್ಷಣಸಮಿತಿಯ ಸದಸ್ಯರು

★

ಭಾರತೀಯರ ಜನಸಾಮಾನ್ಯರ ನಿತಾಂತವಾದ ನಿರಕ್ಷರತೆಯನ್ನು ಯೋಚಿಸಿದವರಾರೂ ಪ್ರೌಢರ ಶಿಕ್ಷಣದ ಅಗತ್ಯವನ್ನು ನಿರಾಕರಿಸಲಾರರು. ಬ್ರಿಟಿಷ್ ಹಿಂದುಸ್ತಾನದಲ್ಲಿಯ ಸಾಕ್ಷರತೆಯ ಪ್ರಮಾಣವು, ನೂರಕ್ಕೆ ೮.೬ ಇದೆ; ಮುಂಬೈ ಕರ್ನಾಟಕದಲ್ಲಿ ೬.೯ ಇದೆ. ಗಂಡಸರ ಸ್ಥಿತಿಯು ಸ್ವಲ್ಪ ಒಳ್ಳೆಯದಾಗಿದೆ. ಬ್ರಿ. ಹಿಂದುಸ್ತಾನದಲ್ಲಿ ಗಂಡಸರಲ್ಲಿ ಸಾಕ್ಷರತೆಯು ೧೦೦ ಕ್ಕೆ ೧೪.೩ ಇದ್ದರೆ, ಹೆಂಗಸರಲ್ಲಿ ೩.೪ ಇದೆ. ಮುಂಬಯಿ ಕರ್ನಾಟಕದ ಸ್ಥಿತಿಯು ಇನ್ನು ಶೋಚನೀಯವು. ಇಲ್ಲಿಯ ಗಂಡಸರಲ್ಲಿ ನೂರಕ್ಕೆ ೧೨.೩ ಮತ್ತು ಹೆಂಗಸರಲ್ಲಿ ೧.೬ ಮಾತ್ರ ಸಾಕ್ಷರರಾಗಿದ್ದಾರೆ. ಇದರ ಪರಿಣಾಮವನ್ನು ವರ್ಣಿಸಬೇಕಾಗಿಲ್ಲ. ನಿರಕ್ಷರಿಗಳಲ್ಲಿ, ಆಧುನಿಕ ಪ್ರಚಾರದ ಪ್ರಚಂಡ ಸಾಧನಗಳಾದ ಪುಸ್ತಕ-ಪತ್ರಿಕೆಗಳು ನಿಷ್ಪ್ರಯೋಜಕವಾಗಿವೆ; ಚುನಾವಣೆಗಳ ಉಪಯೋಗವನ್ನು ನಿರಕ್ಷರಿಗಳು ಸಮರ್ಪಕವಾಗಿ ಮಾಡಿಕೊಳ್ಳರಾದುದರಿಂದ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸುಗಮವಾಗಿ ನಾಗವು. ಓಬೀರಾಯನ ಕಾಲದ ವಿಚಾರಗಳೆ ಅವರಿಗೆ ಪ್ರೇರಕಶಕ್ತಿ. ಆದರಿಂದ ನಮ್ಮ ದೇಶವು ಮಿಕ್ಕ ಪೌರಸ್ತ್ಯ-ಪಾಶ್ಚಾತ್ಯ ದೇಶಗಳಿಗಿಂತ ಯೋಜನಗಟ್ಟಲೆ ಹಿಂದೆಬಿದ್ದಿದೆ.

ಈ ಸಾಮಾನ್ಯ ಮಾತನ್ನು ಎಲ್ಲರೂ ಒಪ್ಪುವರಾದರೂ ಇದಕ್ಕೆ ಉಪಾಯಗಳನ್ನು ಚರ್ಚಿಸುವಾಗ ಮಾತ್ರ ಮತಭೇದವಾಗುತ್ತದೆ. ಅಶಿಕ್ಷಿತರಾದ ಪ್ರೌಢರನ್ನು ಬಿಟ್ಟುಬಿಡಿ, ಮೊದಲು ಎಲ್ಲ ಬಾಲಬಾಲಿಕೆಯರಿಗೂ ಒತ್ತಾಯದ ಶಿಕ್ಷಣವನ್ನು ಕೊಡಿರಿ, ಎಂದು ಕೆಲವರೆನ್ನುತ್ತಾರೆ. ಇದ್ದ ತುಸು ದುಡ್ಡನ್ನು ಪ್ರೌಢರಿಗೆ ಮತ್ತು ಮಕ್ಕಳಿಗೆ ಹಂಚುವದು ಅವರಿಗೆ ಒಪ್ಪಿಗೆಯಿಲ್ಲ. ಆದ್ದರಿಂದ ಸಿಕ್ಕಷ್ಟು ದುಡ್ಡನ್ನು ಪ್ರಾಥಮಿಕ ಶಿಕ್ಷಣಕ್ಕೆ ವೆಚ್ಚಿಸಬೇಕೆಂದು ಅವರ ಬಯಕೆ. ಇದಕ್ಕೆ ಎರಡು ಆಕ್ಷೇಪಗಳಿವೆ. ಒಂದನೆಯದಾಗಿ, ಪ್ರಾಥಮಿಕ ಶಿಕ್ಷಣದ ಫಲವನ್ನು ಕಾಣಲು ೩೦-೩೫ ವರ್ಷಗಳಾದರೂ ಬೇಕು; ಎರಡನೆಯದಾಗಿ, ಮಕ್ಕಳನ್ನು ಸಾಕ್ಷರರನ್ನಾಗಿ ಮಾಡಲಿಕ್ಕೆ ಪ್ರೌಢರಿಗಿಂತ ಹೆಚ್ಚು ವೆಚ್ಚ ಬೇಕು. ಆದ್ದರಿಂದ ಪ್ರೌಢರ ಶಿಕ್ಷಣವನ್ನು ಮೊದಲು ಕೈಕೊಂಡು ಬಹುಭಾಗದ ನಿರಕ್ಷರತೆಯನ್ನು ಹತ್ತು ವರ್ಷಗಳಲ್ಲಿ ನಾಶಗೊಳಿಸುವದು ಹೆಚ್ಚು ಒಳಿತಾಗುವದು. ಪ್ರೌಢ ಜನಸಾಮಾನ್ಯರೊಮ್ಮೆ ಸಾಕ್ಷರರಾದರೆ ನಾಗರಿಕರ ಜೀವನವರ್ಜೆಯೂ ರಾಜ್ಯಭಾರವೂ ಉತ್ತಮಗೊಳ್ಳುವವು; ಮತ್ತು ನಮ್ಮನ್ನು ಪೀಡಿಸುವ ಬಹುಮಟ್ಟಿನ ಸಾಮಾಜಿಕ ಸಮಸ್ಯೆಗಳು ಸುಲಭಗೊಳ್ಳುವವು. ಅಲ್ಲದೆ ಇದರಿಂದ ಪ್ರಾಥಮಿಕ ಶಿಕ್ಷಣಕ್ಕೂ ಉತ್ತೇಜನ ಸಿಗುವದು. ಏಕೆಂದರೆ ಶಿಕ್ಷಿತ ತಂದೆ ಮತ್ತು ವಿಶೇಷವಾಗಿ ತಾಯಿಯು ತಮ್ಮ ಮಕ್ಕಳನ್ನು ನಿರಕ್ಷರಿಗಳಾಗಿ ಎಂದೂ ಉಳಿಯಗೊಡರು. ಹಿರಿಯರು ಶಿಕ್ಷಣ-ಸಂಸ್ಕಾರಗಳನ್ನು ಪಡೆದವರಾಗಿರುವದರಿಂದ ಕಿರಿಯರು ಸಾಲೆ ಬಿಟ್ಟ ನಂತರ ಪುನಃ ಅಶಿಕ್ಷಿತಾವಸ್ಥೆಗೆ ಇಳಿಯುವದಿಲ್ಲ. ಏಕೆಂದರೆ ಸಾಲೆ ಬಿಟ್ಟರೂ ಶಿಕ್ಷಿತರ ವಾತಾವರಣದಲ್ಲಿಯೆ ಅವರು ಉಳಿಯುವರು. ಪ್ರಾಥಮಿಕ ಶಾಲೆಗಳ ಹಾಜರಿಯು ಬೆಳೆಯುವದು; ಹೆಚ್ಚು ದಿನ ಉಳಿಯುವದು. ಆದುದರಿಂದ

● ಪ್ರೌಢಶಿಕ್ಷಣ ಸಮಸ್ಯೆಯ ಆಳ-ವ್ಯಾಪ್ತಿ-ಜಟಿಲತೆಗಳನ್ನು ತೋರಿಸಿ, ಅದನ್ನು ಬಿಡಿಸುವ ಅಗತ್ಯವನ್ನೂ ಅದರ ಬೇರೆಬೇರೆ ಯುಕ್ತಿ ರೀತಿಗಳನ್ನೂ ವಿವರಿಸುವ ಲೇಖನವಿದು. ...

● ಲೇಖಕರು ಧಾರವಾಡ ತಾಲೂಕಿನ ಒಂದು ಹಳ್ಳಿವಾಡದಲ್ಲಿ ಪ್ರೌಢಶಿಕ್ಷಣ ಕಾರ್ಯದಲ್ಲಿ ಈ ಕೆಲವು ವರ್ಷಗಳಿಂದ ಅಖಂಡವಾಗಿ ತೊಡಗಿದವರು. ತುಂಬ ಸ್ವಾರ್ಥತ್ಯಾಗದಿಂದ, ಹಳ್ಳಿಗರೊಡನೆ ಬೆರೆತುಕೊಂಡು, ಅವರ ಉದ್ಧಾರಕ್ಕಾಗಿ ದುಡಿಯುತ್ತಿರುವವರು. ಅವರು ಆಡಿದ ಪ್ರತಿಯೊಂದು ಮಾತಿಗೂ, ಬರೆದ ಪ್ರತಿಯೊಂದು ಶಬ್ದಕ್ಕೂ ಸ್ವಾನುಭವದ ಬೆಲೆಯಿದೆ. ಅವರ ಕಾರ್ಯಕೌಶಲವು ಸರಕಾರದ ಗಮನವನ್ನೆಳೆದುಕೊಂಡು, 'ಮುಂಬಯಿ ಪ್ರಾಂತದ ಪ್ರೌಢಶಿಕ್ಷಣ ಸಮಿತಿ'ಯ ಸದಸ್ಯರಾಗಿ ನಿಯಮಿಸಲ್ಪಡುವಂತೆ ಮಾಡಿತು. ... ...

ಪ್ರಾಥಮಿಕ ಶಿಕ್ಷಣ ಪ್ರಸಾರದೊಡನೆ ಪ್ರೌಢರನ್ನು ಹತ್ತು ವರ್ಷಗಳಲ್ಲಿ ಸಾಕ್ಷರರನ್ನಾಗಿ ಮಾಡುವ ಬಲವಾದ ಯತ್ನವನ್ನೂ ಮಾಡಬೇಕೆಂದು ನಮ್ಮ ಅಭಿಪ್ರಾಯವಾಗಿದೆ.

ಈಗ ಪ್ರೌಢರ ಶಿಕ್ಷಣದ ವ್ಯಾಪಕತೆಯನ್ನು ಗಮನಿಸುವಾ. ಪ್ರೌಢರ ಶಿಕ್ಷಣವೆಂದರೆ ಬರಿ ಸಾಕ್ಷರತೆಯಲ್ಲ. ಶಿಕ್ಷಣವು ಜೀವಮಾನವನ್ನೆಲ್ಲ ವ್ಯಾಪಿಸುವಂತಹದು. ಸಾಕ್ಷರತೆಯು ಆ ಜೀವನಸಾಕ್ಷಾತ್ಕಾರದ ಅತ್ಯುನ್ನತ ಶಿಖರವನ್ನು ಮುಟ್ಟುವ ಪ್ರಥಮ ಸೋಪಾನವಾಗಿದೆ. ವಿಶಾಲಾರ್ಥದಲ್ಲಿ ಪ್ರೌಢರ ಶಿಕ್ಷಣವು, ಅವರವರ ಅಪೇಕ್ಷೆಯಂತೆ ಸಾಮಾನ್ಯಜ್ಞಾನದಾಯಕ ಶಿಕ್ಷಣ ಇಲ್ಲವೆ ವೃತ್ತಿಶಿಕ್ಷಣ (Liberal or Vocational Education), ನಾಗರಿಕತೆಯ ಶಿಕ್ಷಣ, ಸಂಸ್ಕೃತಿವರ್ಧನ ಮತ್ತು ಮನೋವಿನೋದನಾತ್ಮಕ ಚಟುವಟಿಕೆಗಳನ್ನು ಕೂಡ ಒಳಗೊಳ್ಳುವದು. ಮೊದಲನೆಯ ವಿಭಾಗದಲ್ಲಿ ಅಕ್ಷರಜ್ಞಾನದ ವರ್ಗಗಳೂ, ಅದರ ಮುಂದಿನ ತರಗತಿಗಳೂ, ವಿವಿಧ ಧಂಧೆ-ಕೈಗಾರಿಕೆಗಳಲ್ಲಿ ಉಮೇದುವಾರಿಕೆಯ ಅಭ್ಯಾಸಕ್ರಮಗಳೂ ಬರುವವು. ಎರಡನೆಯ ವಿಭಾಗದಲ್ಲಿ ಬರುವ ಶಿಕ್ಷಣದ ರೀತಿಯನ್ನು, ಮುಂಬಯಿಯ Nagapada Neighbourhood House ದವರ ಹಾಗೂ ಮುಂಬಯಿ ನಗರದಲ್ಲಿಯ ಮುಂಬಯಿಪ್ರಾಂತ ಪ್ರೌಢಶಿಕ್ಷಣ ಸಮಿತಿಯವರ ಕಾರ್ಯದಿಂದ ತಿಳಿದುಕೊಳ್ಳಬಹುದಾಗಿದೆ. ಈ ವಿಭಾಗದ ಕಾರ್ಯವನ್ನು ಕೆಳಗೆ ವಿವರಿಸಿದ ಧ್ಯೇಯಮಾಲಿಕೆಯಿಂದ ಸೂಚಿಸಬಹುದಾಗಿದೆ:—

(೧) ' ಪೂರ್ಣಮಾನವ ' ನನ್ನು ಸಿದ್ಧಗೊಳಿಸುವಂತೆ ಶಿಕ್ಷಣ ಕೊಡುವದು ಮತ್ತು ಜೀವನಕ್ಕೆ ಏಕಸೂತ್ರತೆಯನ್ನು ಒದಗಿಸುವದು.

(೨) ಮನುಷ್ಯರ ಮನಸ್ಸು ಹೊಸ ವಿಚಾರಗಳಿಗೆ ಯಾವಾಗಲೂ ತೆರೆದಿರುವಂತೆ ಮಾಡುವದು.

(೩) ವಸ್ತುಸ್ಥಿತಿಯ ಆಧಾರದಿಂದ ತೀರ್ಮಾನಗಳಿಗೆ ಬರುವಂತೆ ದಾರಿತೋರಿಸುವದು.

(೪) ಅನುದಿನಕ್ಕೆ ಹೊರಬರುವ ನವೀನಜ್ಞಾನವನ್ನು ಗ್ರಹಣಮಾಡುವಂತೆ ಸಿದ್ಧರನ್ನಾಗಿ ಮಾಡುವದು.

(೫) ಸಮಾಜಸ್ಥೈರ್ಯವನ್ನು ಕಾಯುವದು, ಹಾಗೂ

(೬) ಯೋಗ್ಯ ಸಾಮಾಜಿಕ ಬದಲಾವಣೆಗಳನ್ನು ನಿರ್ದೇಶಿಸುವದು.

(೭) ಮನುಷ್ಯರ ದೃಷ್ಟಿ ವಿಸ್ತಾರಹೊಂದುವಂತೆ ಮಾಡುವದು.

(೮) ಹೊಸ ಉದ್ಯೋಗಗಳಿಗೆ ಅಣಿಗೊಳಿಸುವದು.

ಕೊನೆಯದಾಗಿ, ಆಟನೋಟಗಳಿಗೂ ಪ್ರೌಢಶಿಕ್ಷಣದಲ್ಲಿ ಅವಕಾಶವಿದೆ. ಯಾಕೆಂದರೆ ಬಿಡುವಿನ ಸಮಯದಲ್ಲಿ ಉಂಟಾದ ಉಲ್ಲಾಸದ ಪರಿಣಾಮವು ಮನುಷ್ಯನ ಸಮಗ್ರ ಜೀವನದ ಮೇಲೆ ಮತ್ತು ಒಟ್ಟಿನಲ್ಲಿ ದೇಶದ ಸ್ಥಿತಿಯ ಮೇಲೆ ಸತ್ಪರಿಣಾಮವನ್ನುಂಟುಮಾಡುವದು. ಇವುಗಳಲ್ಲಿ ಸರಕಾರವು ಮೊದಲನೆಯ ವಿಭಾಗದ ಜವಾಬ್ದಾರಿಯನ್ನು ಕೈಕೊಳ್ಳಬಹುದು; ಮತ್ತು ಮಿಕ್ಕ ವಿಷಯಗಳಲ್ಲಿ ಅಪ್ರತ್ಯಕ್ಷವಾಗಿ ಸಹಾಯವನ್ನು ಇಲ್ಲವೆ ನಿಯಂತ್ರಣವನ್ನು ಒದಗಿಸಬಹುದು. ಆದರೆ ಭಾರತದ ಸದ್ಯದ ವಿಶಿಷ್ಟ ಪರಿಸ್ಥಿತಿಯಲ್ಲಿ ಇನ್ನು ಕೆಲವು ವರ್ಷಗಳ ವರೆಗೂ ಕೇವಲ ಸಾಕ್ಷರತಾಪ್ರಚಾರದ ಕಡೆಗೆ ನಾವು ಲಕ್ಷ್ಯ ಕೊಡಬೇಕಾಗಿದೆ. ನೂರಕ್ಕೆ ೯೦ರಷ್ಟು ಜನತೆಗೆ ಇನ್ನೂ ಅ, ಆ, ಕೂಡ ಗೊತ್ತಿಲ್ಲದಿರುವಾಗ ಮೇಲ್ತರಗತಿಯ ಪ್ರೌಢರ ಶಿಕ್ಷಣದ ವಿಷಯಕ್ಕೆ ಮಾತೆತ್ತುವದರಲ್ಲಿ ಹುರುಳಿಲ್ಲ. ಸರಕಾರವು ಶಿಕ್ಷಣಕ್ಕಾಗಿ ವ್ಯಯಿಸುವ ಹಣವು ನೂರಕ್ಕೆ ಬರಿ ಹತ್ತೇ ಜನರಿಗೆ ಮುಟ್ಟುತ್ತಿದೆ. ಅಲ್ಲದೆ ನಮಗೆ ದೊರೆಯಬಹುದಾದ ಹಣವನ್ನೆಲ್ಲ ಈ ೧೦ರ ಹೆಚ್ಚಿನ ಶಿಕ್ಷಣಕ್ಕಾಗಿ ವೆಚ್ಚಿಸುವದನ್ನು ಬಿಟ್ಟು, ಇನ್ನುಳಿದ ೯೦ ಜನರ ಅನಿವಾರ್ಯ ಪ್ರಥಮಶಿಕ್ಷಣಕ್ಕೆ (elementary education) ವಿನಿಯೋಗಿಸುವದು ಅಗತ್ಯವಿದೆ.

ಆದರೆ ಸರಕಾರವೊಂದೇ ಈ ಸಮಸ್ಯೆಗಳನ್ನೆಲ್ಲ ಕಡೆಹಾಯಿಸಲು ಸಮರ್ಥವಾಗಿದೆಯೆ ? ಒಬ್ಬ ಪ್ರೌಢನಿಗೆ ಶಿಕ್ಷಣ ಕೊಡಲಿಕ್ಕೆ ವರ್ಷಕ್ಕೆ ಸುಮಾರು ೮ರೂ.ಗಳು ಬೇಕು. ಮುಂಬೈ ಪ್ರಾಂತದಲ್ಲಿ ಅಶಿಕ್ಷಿತ ಪ್ರೌಢರ ಸಂಖ್ಯೆ ೭೫ ಲಕ್ಷವಿದೆ. ಅವರೆಲ್ಲರ ಶಿಕ್ಷಣಕ್ಕೆ ೬ ಕೋಟಿ ರೂ.ಗಳು ಬೇಕು. ಸರಕಾರವು ಈ ಭಾರವನ್ನು ಹೊರಲಾರದು. ಜನತೆಯು ಅದಕ್ಕೆ ನೆರವಾಗಬೇಕು; ದುಡ್ಡು ಕೂಡಿಸಬೇಕು; ಸಂಸ್ಥೆಗಳನ್ನು ತೆರೆಯಬೇಕು. ಅಂದರೆ ಲಗುಬಗೆಯಿಂದ ಕೆಲಸವಾಗುವದು ಸಾಧ್ಯವಿದೆ.

ನಮಗೆ ಸಾಧ್ಯವಾದಷ್ಟು ಜನ-ಧನ-ಬಲಗಳಿಂದ ಈ ಸಮಸ್ಯೆಯನ್ನು ಎದುರಿಸುವದು ತೀರಾ ಅಗತ್ಯವಿದೆ. ಸರಕಾರವು ವೆಚ್ಚದ ಬಹುಭಾಗವನ್ನು ವಹಿಸಿ ದಾರಿತೋರಬೇಕು. ಎಲ್ಲ ಸ್ಥಳೀಯ ಸ್ವಾಯತ್ತ ಸಂಸ್ಥೆಗಳೂ ತಮ್ಮ ಶಕ್ತಿಸ್ವಾತಂತ್ರ್ಯಗಳನ್ನು ನಿರಕ್ಷರತಾನಿವಾರಣೆಯ ಉಪಯುಕ್ತ ವಲ್ಲಿಳಿಸಬೇಕು. ಜನತೆಯು ದುಡ್ಡನ್ನೂ, ಹೆಚ್ಚು ದುಡಿಮೆ ಸಾಮಗ್ರಿಯನ್ನೂ ಕೂಡಿಸಬೇಕು.

ಯಾಳುಗಳುಳ್ಳ ಧನಿಕರು ತಮ್ಮ ಆಳುಗಳನ್ನು ಅಕ್ಷರಸ್ಥರನ್ನಾಗಿ ಮಾಡುವದು ತಮ್ಮ ಕರ್ತವ್ಯವೆಂಬುದನ್ನು ಅರಿಯಬೇಕು; ಅದಕ್ಕೆ ಸಾಧನಗಳನ್ನೂ ಅನುಕೂಲಗಳನ್ನೂ ಕಲ್ಪಿಸಬೇಕು; ನಿರಕ್ಷರರಿಗಿಂತ ಸಾಕ್ಷರರನ್ನು ಕೆಲಸಕ್ಕೆ ಹೆಚ್ಚಾಗಿ ಸೇರಿಸಿಕೊಳ್ಳಬೇಕು. ಇದರಿಂದ ದುಡಿಯುವವರಲ್ಲಿ ಕಲಿಯುವ ಬಯಕೆಯು ಉತ್ತೇಜಿತವಾಗುವದು. ದೇಶದ ತರುಣರ ಸಹಾಯವನ್ನು ಈ ವಿಷಯದಲ್ಲಿ ಪಡೆಯಬೇಕು. ಯಾವದೊಂದು ಸರಕಾರಿ ನೌಕರಿಗಾಗಿ ಯತ್ನಿಸುವ ತರುಣನು ಕನಿಷ್ಠ ಒಂದು ವರ್ಷವಾದರೂ ಸಾಕ್ಷರತಾ ಪ್ರಚಾರ ಸಂಸ್ಥೆಗಳಲ್ಲಿ ದುಡಿಯಬೇಕೆಂದು ಕಟ್ಟು ಮಾಡಬೇಕು. ಅದಕ್ಕಾಗಿ ಯುವಕಸಂಘಗಳು ಸ್ಥಾಪಿತವಾಗಬೇಕು; ಪ್ರತಿಯೊಬ್ಬ ಯುವಕನೂ ತನ್ನ ಕುಟುಂಬದಲ್ಲಿಯೇ ಮೊದಲು ಅಶಿಕ್ಷಣವನ್ನು ನಿರ್ಮೂಲಗೊಳಿಸಬೇಕು. ಯಾವ ಹಳ್ಳಿಗಳಲ್ಲಿ ಹೆಚ್ಚುಹೆಚ್ಚಾಗಿ ಜನರು ಶಿಕ್ಷಿತರಾಗುವರೋ ಆ ಹಳ್ಳಿಗಳಿಗೆ ಸರಕಾರವು ಕೆಲವು ರಿಯಾಯತಿಗಳನ್ನು ಕೊಡಬೇಕು. ಸಹಕಾರಿ ಸಂಸ್ಥೆಗಳು ರಾತ್ರಿಶಾಲೆಗಳನ್ನು ನಡೆಸಿ ತಮ್ಮ ಸದಸ್ಯರೆಲ್ಲರನ್ನು ಶಿಕ್ಷಿತರನ್ನಾಗಿಸಬೇಕು. ದೈನಂದಿನ-ಸಾಮಯಿಕ ಪತ್ರಿಕೆಗಳೂ ಶಿಕ್ಷಣಪ್ರಚಾರವನ್ನು ಕೈಕೊಳ್ಳಬೇಕಲ್ಲದೆ, ನವಶಿಕ್ಷಿತರಿಗೆ ಓದಲಿಕ್ಕೆ ಯೋಗ್ಯವಾದ ಕೆಲವು ವಿಭಾಗಗಳನ್ನು ಏರ್ಪಡಿಸಬೇಕು. ಪ್ರೌಢರ ಶಿಕ್ಷಣಕ್ಕಾಗಿ ಏರ್ಪಡಿಸಿದ ವರ್ಗಗಳೆ ತಮ್ಮ ವೆಚ್ಚವನ್ನು ವಹಿಸಬೇಕು; ಸ್ವಾರ್ಥತ್ಯಾಗ ಮಾಡದೆ ಈ ಕೆಲಸ ಬೇಗನೆ ನೆರವೇರಲಾರದು.

ಶಿಕ್ಷಣದ ಕ್ರಮ ಸಾಧನಗಳ ವಿಷಯದಲ್ಲಿ ಹೆಚ್ಚಿನ ಸಂಶೋಧನವಾಗಬೇಕು. ಪ್ರೌಢರ ಮನೋವಿಜ್ಞಾನವೊಂದು ವಿಶಾಲಕ್ಷೇತ್ರ. ಅದರ ಕಡೆಗೆ ಇನ್ನೂ ಸಾಕಷ್ಟು ಗಮನ ಕೊಡಲ್ಪಟ್ಟಿಲ್ಲ. ಪ್ರೌಢರಿಗೆ ಕಲಿಸುವ ಯುಕ್ತಿಗಳ-ತಂತ್ರದ ವಿಷಯಕ್ಕೆ ನಮ್ಮ ಜ್ಞಾನವು ತೀರ ತುಸು. ಮತ್ತು ದೀರ್ಘವಾದ ಪ್ರಯೋಗ ಸಂಶೋಧನಗಳಿಲ್ಲದೆ ಯೋಗ್ಯ ಯುಕ್ತಿಗಳು ಹೊಳೆಯುವದಿಲ್ಲ. ವ್ಯವಹಾರದಲ್ಲಿ ಸತತೋಪಯುಕ್ತವಾಗುವ ಮತ್ತು ಮೌಲಿಕ ಸ್ವರೂಪದ (Basic) ಶಬ್ದಗಳನ್ನೆಲ್ಲ ಒಂದುಗೂಡಿಸಿ ಪ್ರೌಢರ ಕೋಶಗಳನ್ನು ತಯಾರಿಸಬೇಕು; ಪ್ರೌಢರಿಗಾಗಿ ಸಹಾಯಕ ಮತ್ತು ಪಠ್ಯ ಪುಸ್ತಕಗಳನ್ನು ರಚಿಸಿ ಸಾಧ್ಯವಿದ್ದಷ್ಟು ಕಡಿಮೆ ಬೆಲೆಯನ್ನು ಅವಕ್ಕಿಡಬೇಕು. ಪ್ರೌಢರ ಶಿಕ್ಷಕರನ್ನು ಸಿದ್ಧಗೊಳಿಸುವ ಕೇಂದ್ರಗಳನ್ನು ತೆರೆಯಬೇಕು; ಮತ್ತು ಶಕ್ಯವಾದಷ್ಟು ವಿನಾಮೂಲ್ಯವಾದ ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕು.

ಈ ವಿಷಯದಲ್ಲಿ ರಶಿಯವು ನಮ್ಮ ಕಣ್ಣು ತೆರೆಯಿಸುವ ಒಂದು ಒಳ್ಳೆ ಉದಾಹರಣೆಯಾಗಿದೆ. ಅಲ್ಲಿ ನಿರಕ್ಷರತೆಯು ನಮ್ಮಲ್ಲಿಯಷ್ಟೆ ಪ್ರಗಾಢವಾಗಿತ್ತು; ಹತ್ತೇ ವರ್ಷಗಳಲ್ಲಿ ಅವರು ಅದನ್ನು ನಿರ್ನಾಮಗೊಳಿಸಿದರು. ಭಾರತದಲ್ಲಿಯೆ ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಈ ವಿಷಯಕ್ಕೆ ಮಾದರಿಯ ಕೆಲಸಗಳು ನಡೆದಿವೆ. ಆದುದರಿಂದ ನಮ್ಮ ಅನಿವಾರ್ಯ ಕರ್ತವ್ಯಗಳಲ್ಲಿ ಪ್ರೌಢರ ಶಿಕ್ಷಣವೂ ಒಂದು ಎಂಬುದನ್ನು ಮನಗಂಡು, ಅದಕ್ಕೆ ಅನುಕೂಲವಿದ್ದ ಸಹಾಯವನ್ನೆಲ್ಲ ಒದಗಿಸಬೇಕೆಂದು ಅಂತಃಕರಣಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

---

* ಈ ಲೇಖನದ ಜತೆಗೆ, ಶ್ರೀಮಾನ್ ನಾ. ಕಸ್ತೂರಿಯವರ 'ವಯಸ್ಕರ ಶಿಕ್ಷಣ' ಎಂಬ ಲೇಖನವನ್ನೂ ಓದಬೇಕು. —ಸಂ.

ನಿಮ್ಮ ಕುಟುಂಬದ ಜೀವನವು ನಿಶ್ಚಿಂತವಾಗಿ ಸಾಗಲು ಏರ್ಪಡಿಸುವುದು ಉಚಿತವಲ್ಲವೇ ?

ನಿಮ್ಮ ಕುಟುಂಬ, ನಿಮ್ಮ ಆಶ್ರಿತರು ಇವರೆಲ್ಲರ ಜೀವನವು ರೂಪಾಯಿಗೆ ಹದಿನಾರಾಣೆಯಷ್ಟು ಸುರಕ್ಷಿತವಾಗಬೇಕಾದರೆ ಪ್ರೀಮಿಯಮ್ ಕಂತುಗಳ ಮೂಲಕ ಚಿಕ್ಕ ಚಿಕ್ಕ ಮೊಬಲಗನ್ನು ಒಂದುಗೂಡಿಸುವುದಕ್ಕೆ ಜೀವವಿಮೆಯಷ್ಟು ವಿಶ್ವಾಸಾರ್ಹವಾದ ಅನುಕೂಲತೆಯು ಬೇರೊಂದಿಲ್ಲವೆಂದು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಈಗ ಮುಂದಟ್ಟಾಗುತ್ತಿದೆ.

ನಿಮಗೇನಾದರೂ ಅನಿರೀಕ್ಷಿತ ಅನಿಷ್ಟ ಸಂಭವಿಸಿತು ಎನ್ನೋಣ. ಆಗ ನಿಮ್ಮ ಕುಟುಂಬಸಂರಕ್ಷಣೆಯ ಕಾರ್ಯವು ಸರಾಗವಾಗಿ ನಡೆಯಲಿಕ್ಕೆ ಸಾಕಷ್ಟು ಮೊಬಲಗನ್ನು ಜೀವವಿಮೆ ಮೂಲಕ ಕಾದಿಟ್ಟಿರುವಿರಾ ? ಇಲ್ಲವಾದರೆ ಏನು ಮಾಡಬೇಕೆಂದು 'ಪೊಪ್ಯುಲರ್' ವಿಮೆ ಕಂಪನಿಯವರೊಡನೆ ವಿಚಾರಿಸಿರಿ. ಅವರು ನಿಮ್ಮ ದ್ರವ್ಯಾನುಕೂಲ ಮತ್ತು ನಿಮ್ಮ ಆವಶ್ಯಕತೆಗಳಿಗೆ ಸರಿಯಾದ ವಿಮಾಪತ್ರಗಳು ಯಾವವೆಂದು ನಿರ್ಧರಿಸಿ ಅವುಗಳಿಗೆ ಅನುಕೂಲವಾದವುಗಳನ್ನು ಒದಗಿಸುತ್ತಾರೆ.

ಬೋನಸ್ (ಲಾಭಾಂಶ)—ಪ್ರಥಮ ಐದು ವರ್ಷಗಳ ಆರ್ಥಿಕ ಸ್ಥಿತಿಯ ಮೇಲಿಂದ ಪ್ರತಿ ವರ್ಷಕ್ಕೆ ಪ್ರತಿ ೧.೦೦೦ ರೂಪಾಯಿ ವಿಮೆ ಮೊಬಲಗಿಗೆ ೧೦ ರೂಪಾಯಿಯಷ್ಟು ಲಾಭಾಂಶ ಕೊಡಿಸಿಕೊಟ್ಟಿದೆ.

ಮೈಸೂರು, ದಕ್ಷಿಣ ಮಹಾರಾಷ್ಟ್ರ, ಮತ್ತು ನಮ್ಮ ಪ್ರತಿನಿಧಿಗಳಿಲ್ಲದ ಇತರ ಪ್ರದೇಶಗಳಲ್ಲಿ ಮುಖ್ಯ ಮತ್ತು ಸ್ಪೆಶಲ್ ಏಜಂಟರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಅತ್ಯುತ್ತಮ ಶರತ್ತುಗಳು ದೊರಕುವವು.

ಪ್ರೊಸ್'ಪೆಕ್ಟಸ್', ನಿಯಮ ನಿಬಂಧನಗಳು ಇತ್ಯಾದಿಗಳ ಬಗ್ಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ:—

ದಿ ಪೊಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೆಡ್ ಆಫೀಸು, ಮಂಗಳೂರು

ಅಥವಾ

ಬ್ರೇಂಚ್ ಸೆಕ್ರೆಟರಿ, ಪ್ರೊಸ್'ಪೆಕ್ಟ್ ಚೇಂಬರ್ಸ್, ಹೊರ್ನಬೀ ರೋಡ್, ಮುಂಬಯಿ.

ನಮ್ಮ ಶಿಕ್ಷಣಕ್ರಮದಲ್ಲಿ ಕರ್ನಾಟಕ

ಲೇ:—ಶ್ರೀ. ದೇಸಾಯಿ ಪಾಂಡುರಂಗರಾಯರು ಎಂ. ಎ. ಧಾರವಾಡ

ನಮ್ಮ ಕರ್ನಾಟಕಕ್ಕೆ ಐತಿಹಾಸಿಕ, ಚಾರಿತ್ರಿಕ, ಸಾಂಸ್ಕೃತಿಕ ವೈಶಿಷ್ಟ್ಯವಿದೆ; ಆದರೆ ಶಿಕ್ಷಣಕ್ರಮದಲ್ಲಿ ಅದರ ಸುಳಿವಿಲ್ಲ. ಈ ವಿಸಂಗತಿದೋಷವನ್ನು ಪರಿಹರಿಸಲು ಲೇಖಕರು ವಿಧಾಯಕ ಸೂಚನೆಗಳನ್ನು ಮಾಡಿರುವರು.

ಸರ್ವವಿಧದಿಂದಲೂ ರಾಷ್ಟ್ರದ ಅಭಿವೃದ್ಧಿಯನ್ನು ಮುಂದುವರಿಸಲು ಸಮರ್ಥರಾದ ನಾಗರಿಕರನ್ನು ನಿರ್ಮಿಸುವುದೆ ಶಿಕ್ಷಣದ ಹೆಗ್ಗುರಿ. ರಾಷ್ಟ್ರೀಯ ಭಾವನೆಯು ಪ್ರತಿಯೊಬ್ಬ ನಾಗರಿಕನಲ್ಲಿ ಓತಪ್ರೋತವಾಗಿ ತುಂಬಿತುಳುಕದೆ ಈ ಗುರಿಯನ್ನು ಸಾಧಿಸುವುದೆಂತು? ರಾಷ್ಟ್ರದ ಬಗೆಗೆ ಯಥಾರ್ಥವಾದ ಜ್ಞಾನ ಅಭಿಮಾನಗಳು ಉಂಟಾಗದೆ ರಾಷ್ಟ್ರೀಯ ಭಾವನೆಯು ಒಡಮೂಡುವುದು ಹೇಗೆ? ಸಂಸ್ಕೃತಿ ಮತ್ತು ಚರಿತ್ರೆಯ ಪರಿಚಯವಿಲ್ಲದೆ ರಾಷ್ಟ್ರದ ಯಥಾರ್ಥಜ್ಞಾನ ಅಭಿಮಾನಗಳು ಹುಟ್ಟುವ ಪರಿಯಾವುದು? ಶಿಕ್ಷಣಕ್ರಮದಲ್ಲಿ ಸಂಸ್ಕೃತಿ ಮತ್ತು ಚರಿತ್ರೆಯ ವ್ಯಾಸಂಗಕ್ಕೆ ಅವಕಾಶವಿರದಿದ್ದರೆ ಉಚಿತವಾಗಿ ಅವುಗಳ ಪರಿಚಯವಾಗುವ ಬಗೆ ಯಾವುದು?

ಈಗಿನ ನಮ್ಮ ಶಿಕ್ಷಣಕ್ರಮದಲ್ಲಿ ನಮ್ಮ ನಾಡಿನ ಚರಿತ್ರೆ ಮತ್ತು ಸಂಸ್ಕೃತಿ ಇವುಗಳ ಪರಿಚಯಕ್ಕೆ ಯಾವೆಡೆಯಲ್ಲಿ ಎಷ್ಟು ಆಸ್ಪದವಿದೆ? ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿಯ ಪರಿಜ್ಞಾನವಿದ್ದವರು ನಮ್ಮ ಶಿಕ್ಷಣಕ್ರಮವನ್ನು ರಚಿಸಿದುದು ಆಗಿದ್ದರೆ, ನಮ್ಮ ಶಿಕ್ಷಣಕ್ರಮದಲ್ಲಿ ನಮ್ಮ ಚರಿತ್ರೆ ಮತ್ತು ಸಂಸ್ಕೃತಿಗೆ ತಕ್ಕುದಾದ ಸ್ಥಾನವು ದೊರೆಯಬಹುದಾಗಿತ್ತು. ಕರ್ನಾಟಕವೆಂಬುದೊಂದು ಸ್ವತಂತ್ರವಾದ ಜನಾಂಗವಿದ್ದು, ಅದಕ್ಕೆ ಘನವಾದ ಒಂದು ಚರಿತ್ರೆಯೂ ಸಂಸ್ಕೃತಿಯೂ ಇದೆ ಎಂಬುದರ ಅರಿವು ಕೂಡ ಇಲ್ಲದ ಮಹಾಜನಗಳು ನಮ್ಮ ಬಾಲಕರ ಶಿಕ್ಷಣದ ನಿಯಾಮಕ ನಿಯೋಜಕರಿದ್ದುದರಿಂದ ನಮ್ಮ ಶಿಕ್ಷಣಕ್ರಮದಲ್ಲಿ ಕರ್ನಾಟಕದ ಪರಿಶೀಲನಕ್ಕೆ ಎಲ್ಲಿಯೂ ಎಡೆಯಿಲ್ಲದಾಗಿದೆ. ಇದಲ್ಲದೆ ಕರ್ನಾಟಕದ ಪರಿಸ್ಥಿತಿ ವಿಶಿಷ್ಟತೆಯನ್ನು ಲಕ್ಷಿಸಿ ನಮ್ಮ ಶಿಕ್ಷಣಕ್ರಮವನ್ನು ಸ್ವತಂತ್ರವಾಗಿ ರೂಪಡಿಸುವ ಭಾಗವಾದರೂ ನಮ್ಮವರಿಗೆ ಎಲ್ಲಿದೆ? ಕರ್ನಾಟಕದ ಎಲ್ಲ ವಿಷಯುಗಳು ಮಿಾಯುವವರ ಮಗ್ಗುಲಲ್ಲಿ ಮುದುಗಿಕೊಳ್ಳುವ ರೀತಿಯಲ್ಲಿ ನಡೆದಿರುವಾಗ ನಮ್ಮ ಶಿಕ್ಷಣಕ್ರಮದಲ್ಲಿಯಾದರೂ ವಿಶೇಷತೆಯನ್ನು ಕಾಣುವ ಮಾತೇಕೆ?

ಸ್ವಾತಂತ್ರ್ಯವೀರನಾದ ಶಿವಾಜಿಯ ಹೆಸರು ನಮ್ಮ ಕಿವಿಗಳನ್ನು ತುಡುಕಿದ ಕೂಡಲೆ ನಮ್ಮ ಬಾಹುಗಳು ಸ್ಫುರಣ ಹೊಂದಿ ನಮಗೆ ರೋಮಾಂಚಗಳು ಏಳುವುವು. ಅದೇ ಶಿವಾಜಿಗಿಂತ ನೂರ್ಮಡಿ ತೇಜಸ್ವಿಯಾದ, ದೀರ್ಘಜೀವಿಯಾದ, ಸ್ವಾತಂತ್ರ್ಯಕಾರ್ಯವನ್ನು ಎಸಗಿದ ಹಿಂದುರಾಯ ಸುರತ್ರಾಣ ಹುಕ್ಕ-ಬುಕ್ಕರ ಹೆಸರು ನಮ್ಮಲ್ಲಿ ಒಂದು ಶತಾಂಶವಷ್ಟು ಸ್ವಾಭಿಮಾನವನ್ನು ಜಾಗರಿಸಲು ಸಮರ್ಥವಾಗುವುದಿಲ್ಲ! ಅಕಬರನ ಉದಾರ ರಾಜನೀತಿಯನ್ನು ಕುರಿತು ಗಂಟೆಗಳ ವರೆಗೆ ವ್ಯಾಖ್ಯಾನ ಹೇಳಬಲ್ಲ ನಮ್ಮ ಉಚ್ಚ ಪದವೀಧರರಿಗೆ ಮಹಾನುಭಾವ ಕೃಷ್ಣದೇವರಾಯನ ರಾಜ್ಯಕ್ರಮದ ಬಗೆಗೆ ಎಷ್ಟು ಜ್ಞಾನವಿದೆ? ಕರ್ನಾಟಕ ಸಂಸ್ಕೃತಿ, ಕರ್ನಾಟಕ ಕಲೆ, ಕರ್ನಾಟಕ ವಿದ್ಯೆ, ಕರ್ನಾಟಕ ಸಾಹಿತ್ಯ, ಕರ್ನಾಟಕದ ಮಹಾಪುರುಷರು ಇವರುಗಳ ವಿಷಯದಲ್ಲಿ ಇಂದಿನ ನಮ್ಮ ನಾಯಕಾಗ್ರಣಿಗಳೆನಿಸುವವರಲ್ಲಿಯಾದರೂ ಎಷ್ಟು ಆಳವಾದ ಜ್ಞಾನಭಾಂಡಾರವಿದೆ? ಅವರೆ ಪ್ರಮಾಣಪೂರ್ವಕ ಹೇಳಲಿ. ಬಾವಿಯಲ್ಲಿ ಇಲ್ಲದುದು ಕೊಡದಲ್ಲಿ ಬರುವುದು ಹೇಗೆ ಎಂಬಂತೆ ತಮಗೇ ಕರ್ನಾಟಕವು ಎಂತು ಎಂಬ ಗೊತ್ತುಗುರಿಯಿಲ್ಲದವರು ನಮಗೆ ದಾರಿಯನ್ನು ತೋರಿಸಿ ನಮ್ಮ ನಾಡನ್ನು ಕಟ್ಟುವ ಆಸೆ ಎಷ್ಟರದು?

ಇವೆಲ್ಲದರ ಮೂಲವೆಲ್ಲಿ? ದೋಷವೆಲ್ಲಿ? ನಮ್ಮ ಶಿಕ್ಷಣಕ್ರಮದಲ್ಲಿ ಕರ್ನಾಟಕಕ್ಕೆ ಸ್ಥಾನವಿಲ್ಲದುದು. ನಮಗೆ ನಮ್ಮ ಚರಿತ್ರೆಯ ನಮ್ಮ ಸಂಸ್ಕೃತಿಯ ಜ್ಞಾನವಿಲ್ಲದುದು.

ಬಾಲಪಾಠದಿಂದ ಪದವೀಪಾಂಡಿತ್ಯದ ವರೆಗೆ ನಮ್ಮ ಪಠ್ಯಕ್ರಮವನ್ನು ಪರೀಕ್ಷಿಸಿರಿ. ಎಳಮಕ್ಕಳಲ್ಲಿಯೂ ಪ್ರೌಢ ವಿದ್ಯಾರ್ಥಿಗಳಲ್ಲಿಯೂ ಕರ್ನಾಟಕದ ಬಗೆಗೆ ಅಭಿಮಾನ ಪಡುವಂತಹ, ಆಸ್ಥೆಯಿಂದ ಅಭ್ಯಾಸಮಾಡುವಂತಹ, ಎಷ್ಟು ಸಂಗತಿಗಳು ಅವರಲ್ಲಿ ಸಿಕ್ಕುತ್ತವೆ? ನಮ್ಮ ಪಠ್ಯಪುಸ್ತಕ

ಗಳಲ್ಲಿ ಕನ್ನಡ ಅರಸರ, ವೀರರ, ನಾಯಕರ, ಕವಿಗಳ, ಸತ್ಪುರುಷರ ಚರಿತ್ರೆಗಳೆಷ್ಟು ಅಡಕವಾಗಿವೆ? ಕರ್ನಾಟಕದ ಚಾರಿತ್ರಕ, ಭೌಗೋಲಿಕ, ಆರ್ಥಿಕ, ಸಾಮಾಜಿಕ ಸಂದರ್ಭ ಗಳನ್ನು ವಿಶದವಾಗಿ ತಿಳಿದುಕೊಳ್ಳಲು ಯಾವೆಡೆಯಲ್ಲಿ ಎಷ್ಟು ಸೌಕರ್ಯವಿದೆ? ಪ್ರಪಂಚದ ಮಿಕ್ಕ ವಿದ್ಯೆಗಳ ಜೊತೆಗೆ ನಮ್ಮ ನಾಡಿನ ವಿದ್ಯೆಗೆ ನಮ್ಮ ಶಿಕ್ಷಣಕ್ರಮದಲ್ಲಿ ತಕ್ಕಷ್ಟಾದರೂ ಸ್ಥಾನವು ಬೇಡವೆ? ನಮಗೆ ಎಲ್ಲ ಲೋಕದ ಅರಿವು ಬೇಕು. ಅದೆಲ್ಲಕ್ಕೂ ಮೊದಲು ನಮಗೆ ನಮ್ಮದರ ಅರಿವು ಬೇಕು. ಅದು ನಮ್ಮ ಶಿಕ್ಷಣಸೂತ್ರದಲ್ಲಿ ಬೆರೆತು ಬೆಳೆಯಬೇಕು. ಅಂದರೆಯೆ ಕರ್ನಾಟಕವು ಒಂದು ರಾಷ್ಟ್ರ ವಾಗಿ ನಿಲ್ಲಬಹುದು. ನಿಂತು ನಲಿಯಬಹುದು.

ಸ್ವಾಭಾವಿಕತೆ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಭಾರ ತೀಯ ಶಿಕ್ಷಣವಿಧಾನವು ಆಮೂಲಾಗ್ರವಾಗಿ ಪರಿವರ್ತನೆ ಹೊಂದುವುದು ಅಗತ್ಯವಿದ್ದಂತೆ **ಕರ್ನಾಟಕ ದೃಷ್ಟಿಯಿಂದ ಕರ್ನಾಟಕದ ಶಿಕ್ಷಣಕ್ರಮದಲ್ಲಿ ಕ್ರಾಂತಿಯಾಗುವುದು** ಅಪರಿಹಾರ್ಯವಾಗಿದೆ. ಈ ವಿಚಾರದಂತೆ ನಮ್ಮ ಶಿಕ್ಷಣ ಕ್ರಮದಲ್ಲಿ ಕರ್ನಾಟಕತ್ವವನ್ನು ಹೇಗೆ ಅರಳಿಸಬೇಕು ಎಂಬುದನ್ನು ಕುರಿತು ಕೆಲವು ಸೂಚನೆಗಳನ್ನು ಮಾಡುವೆನು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ರಮ

೧) ಕರ್ನಾಟಕದ ಪ್ರಾಕೃತಿಕ ರಚನೆ, ಭೂಮಿ, ವನ ಸ್ಪತಿ, ಪ್ರಾಣಿ, ನೀರು, ಗಾಳಿ, ತೊರೆ, ಬೆಟ್ಟ, ಅಡವಿ, ಬೆಳೆ, ಉದ್ಯೋಗ ಮುಂತಾದ ವಿಷಯಗಳು ಭೂಗೋಲ ಪಾಠಗಳ ರೂಪದಿಂದಲೂ ಸೃಷ್ಟಿ ಪರಿ ಚಯದ ರೂಪದಿಂದಲೂ ಪ್ರಾಥಮಿಕ ವರ್ಗಗಳಲ್ಲಿ ಯಥಾಕ್ರಮ ಪರಿಚಯವಾಗುವಂತೆ ನೋಡಿಕೊಳ್ಳ ಬೇಕು. ಹೆಚ್ಚು ಗಡಚಾದ ಅಂಶಗಳನ್ನು ಮಾಧ್ಯ ಮಿಕ ವರ್ಗಗಳಲ್ಲಿಯೂ ಸೇರಿಸಬಹುದು.

೨) ಕರ್ನಾಟಕದ ಜನರು, ಸಮಾಜರಚನೆ, ಜನಗಳ ರೀತಿನೀತಿ, ಜಾತಿ ಮತ ಧರ್ಮಗಳು, ಭಾಷೆಗಳು ಮುಂತಾದುವುಗಳು ಮಾಧ್ಯಮಿಕ ವರ್ಗಗಳಲ್ಲಿ ಪರಿಚಯವಾಗುವಂತೆ ಏರ್ಪಡಿಸಬೇಕು.

೩) ಬಾಲಬೋಧೆಯಿಂದ ಪ್ರೌಢ ಪಠ್ಯಪುಸ್ತಕದೊಳ ಗಿನ ಪಾಠಗಳು ಮೇಲಿನ ವಿಷಯಗಳನ್ನು ಒಳ ಕೊಂಡವುಗಳು ಆಗಬೇಕು. ಪ್ರತಿಯೊಂದು ಪಠ್ಯ ಪುಸ್ತಕದಲ್ಲಿಯ ಕನಿಷ್ಠ ಅರ್ಧದಷ್ಟು ಪಾಠಗಳು ಕರ್ನಾಟಕಕ್ಕೆ ಸಂಬಂಧಪಟ್ಟುವು ಆಗಿರಬೇಕು.

ಇದಲ್ಲದೆ ಕರ್ನಾಟಕದ ಮಹಾಪುರುಷರು, ಅರಸರು, ವೀರರು, ಕವಿಗಳು, ಆಚಾರ್ಯರು, ಶರಣರು, ಕಲಾವಿದರು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಗಣ್ಯರಾದವರನ್ನು ಕುರಿತು ಸಾಕಷ್ಟು ಪರಿಚಯವಾಗುವಂತೆ ಕಾವ್ಯ, ಕಥೆ, ಚಿಕ್ಕ ನಾಟಕ ಮುಂತಾದ ರೂಪದಿಂದ ಪಾಠಗಳನ್ನು ಸೇರಿಸಬೇಕು.

೪) ಮಾಧ್ಯಮಿಕ ಕ್ರಮದ ಮಧ್ಯಕ್ಕೆ ತಲಪುವಷ್ಟರಲ್ಲಿ (ಉದಾ: ಈಗಿನ ಇಂಗ್ಲಿಶ ೪—೫ ನೆಯ ಇಯತ್ತೆ ಇಲ್ಲವೆ ಲೋವರ ಸೆಕೆಂಡರಿ), ಕರ್ನಾಟಕದ ಭೂಗೋಲ ಮತ್ತು ಇತಿಹಾಸದ ಪೂರ್ಣಜ್ಞಾನವು (ಅರ್ಥಾತ್ ಸ್ಥೂಲವಾಗಿ) ಆಗಬೇಕು. ಈಗಿನ ಶಿಕ್ಷಣಕ್ರಮದಲ್ಲಿ ಕರ್ನಾಟಕ ಚರಿತ್ರೆಗೆ ಕನ್ನಡ ನಾಲ್ಕನೆಯ ಇಯತ್ತೆಯನ್ನು ಬಿಟ್ಟು ಎಲ್ಲಿಯೂ ಸ್ಥಾನ ವಿಲ್ಲ. ಮಾಧ್ಯಮಿಕ ಕ್ರಮದ ಕೊನೆಗೆ ಬರುವಷ್ಟ ರಲ್ಲಿ (ಉದಾ: ಇಂಗ್ಲಿಶ ೫—೬ ನೆಯ ವರ್ಗಗಳಲ್ಲಿ) **ಭಾರತೀಯ ಚರಿತ್ರೆಯಲ್ಲಿ ಕರ್ನಾಟಕದ ಅಗ್ರ ಸ್ಥಾನ ಮತ್ತು ಕರ್ನಾಟಕ ಯುಗದ ಘನತೆ** (The Age of Karnataka in Indian History) ಇವುಗಳ ಜ್ಞಾನವು ಲಭಿಸಬೇಕು.

ಉಚ್ಚ ಶಿಕ್ಷಣಕ್ರಮ

೧) ಇವರಲ್ಲಿ ಕೊನೆಯ ವರೆಗೆ ಕರ್ನಾಟಕ ಸಾಹಿತ್ಯ, ಚರಿತ್ರೆ, ಸಂಸ್ಕೃತಿ ಇವುಗಳಿಗೆ ಸಂಬಂಧಪಟ್ಟ ಒಂದು ಸಾಮಾನ್ಯ ವಿಷಯವನ್ನು ಕಡ್ಡಾಯವಾಗಿ ಇಡ ಬೇಕು.

೨) ಪದವೀ ಪರೀಕ್ಷೆಗೆ (ಬಿ. ಎ.) ಸೇರಬಹುದಾದ ಐಚ್ಛಿಕ ವಿಷಯಗಳಲ್ಲಿ ಕರ್ನಾಟಕ ಸಂಸ್ಕೃತಿಗೆ ಪ್ರಧಾನಸ್ಥಾನವಿರಬೇಕು. ಅದರಲ್ಲಿ ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯವನ್ನು ಕುರಿತು ಸುದೀರ್ಘ ವ್ಯಾಸಂಗವು ನಡೆಯಬೇಕು.

೩) ಪ್ರಾವೀಣ್ಯ ಕ್ರಮಗಳಲ್ಲಿ (M. A. & Ph. D.) ಮೇಲಿನ ಮೂರು ವಿಷಯಗಳಲ್ಲಿ ಒಂದನ್ನು ಕುರಿತು ಕೂಲಂಕಷ ಪರಿಶೋಧನೆ ಮಾಡಲು ಅವಕಾಶವೂ ಸೌಕರ್ಯವೂ ಇರಬೇಕು.

ಈ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಹೊಸ ದೃಷ್ಟಿಯಿಂದ ಪೂರ್ಣ ಹೊಸವಾದ ಪಠ್ಯಪುಸ್ತಕಗಳು ರಚನೆ ಯಾಗುವುದು ಆವಶ್ಯಕವಾಗಿದೆ. ಕರ್ನಾಟಕವು ಪುನ ಸೃಷ್ಟಿಯಾಗಬೇಕಾದರೆ ಶಿಕ್ಷಣಕ್ರಮದಲ್ಲಿಯೂ ನವರಚನೆ ಯಾಗದೆ ಗತ್ಯಂತರವೇ ಇಲ್ಲ.

ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಅಭ್ಯಾಸ

ಲೇ: ಶ್ರೀ. ಎಸ್. ಎಸ್. ಮಾಳವಾಡ ಎಂ. ಎ., ಕನ್ನಡದ ಪ್ರಾಧ್ಯಾಪಕರು, ಕರ್ನಾಟಕ ಕಾಲೇಜ್ ಧಾರವಾಡ

●

ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಇದುವರೆಗಿದ್ದ ಅಸಡ್ಡೆಯ ವಾಸ್ತವಚಿತ್ರವಿದು. ಬಿ. ಎ.ಕ್ಕೆ ಕನ್ನಡ ಆನರ್ಸ್, ಮ್ಯಾಟ್ರಿಕ್ಕಿಗೆ ಕನ್ನಡ ಕಡ್ಡಾಯ, ಉಳಿದ ತರಗತಿಗಳಲ್ಲೂ ಕನ್ನಡದ ಪ್ರವೇಶವಾಗಲು ವಿಶ್ವವಿದ್ಯಾನಿಲಯ ಸ್ಥಾಪನೆಯಾದಂದಿನಿಂದ ೭೫-೮೦ ವರ್ಷಗಳು ಬೇಕಾದವು. ಅದರ ಚರಿತ್ರೆಯನ್ನಿಲ್ಲಿ ವಿವರವಾಗಿ ತಿಳಿಸಿ, ಈ ಮುಂದೆ ವಿ. ವಿದ್ಯಾನಿಲಯದಲ್ಲಿ ಕನ್ನಡಕ್ಕೆ ಭದ್ರ ... ಸ್ಥಾನ ಕಲ್ಪಿಸಲು ಆವಶ್ಯಕ ಸೂಚನೆಗಳನ್ನು ಮಾನ್ಯ ಲೇಖಕರು ಮಾಡಿದ್ದಾರೆ. ...

●

ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಅಭ್ಯಾಸವು ಸೇರ್ಪಡೆಯಾದ ಕತೆಯು ಒಳ್ಳೇ ಮನೋರಂಜಕವಾಗಿದೆ. ನಮ್ಮ ವಿಶ್ವವಿದ್ಯಾನಿಲಯವು ೧೮೫೭ರಲ್ಲಿ ಸ್ಥಾಪಿತವಾಯಿತು. ವಿಶ್ವವಿದ್ಯಾನಿಲಯದ ಅಂಕಿತದಲ್ಲಿ ಮ್ಯಾಟ್ರಿಕ್ಯುಲೇಶನದಿಂದ ಎಂ. ಎ. ವರೆಗಿನ ಪರೀಕ್ಷೆಗಳ ಸಮಾವೇಶವಾಗುತ್ತದೆ. ಆದರೆ ೧೯೨೦ಕ್ಕೆ ಮೊದಲು ಬಿ. ಎ. ಇತ್ಯಾದಿ ವರ್ಗಗಳಿಗೆ ಕನ್ನಡವನ್ನು ತೆಗೆದುಕೊಳ್ಳಲು ಬರುವಂತಿರಲಿಲ್ಲ. ೧೯೦೬ರಿಂದ ಎಂ. ಎ. ಪರೀಕ್ಷೆಗೆ ಮಾತ್ರ ಕನ್ನಡ ತೆಗೆದುಕೊಳ್ಳಲು ಅವಕಾಶ ದೊರೆಯಿತು. ಅಂದರೆ ಅಭ್ಯಾಸಕ್ರಮದ ಪ್ರವೇಶವು ಮೇಲಿನಿಂದ ಕೆಳಕ್ಕೆ ಇಳಿದ ವಿಚಿತ್ರ ಉದಾಹರಣೆಯು ಇಲ್ಲಿದೆ. ಮೇಲೆ ಎಂ. ಎ. ಪರೀಕ್ಷೆಗೆ, ಕೆಳಗೆ ಸ್ಕೂಲ್-ಲೀವ್ಹಿಂಗ್ ಪರೀಕ್ಷೆಗೆ—ಅಂದರೆ ಶಾಲೆಯನ್ನು ಬಿಟ್ಟು ಹೋಗಿ ನೌಕರಿ ಸೇರುವವರಿಗೆ—ಮಾತ್ರ ಕನ್ನಡವನ್ನು ತೆಗೆದುಕೊಳ್ಳುವ ಅನುಕೂಲತೆಯಿತ್ತು. ಎಂ. ಎ. ಪರೀಕ್ಷೆಗಳಿಗೆ ನಿಯಮಿತವಾದ ವರ್ಗಗಳಾಗಲಿ, ಲೆಕ್ಚರರುಗಳಾಗಲಿ ಆಗ ಇದ್ದಿರಲಿಲ್ಲ. ಅರ್ಥಾತ್ ೧೯೨೦ರ ವರೆಗೆ ನಮ್ಮ ಕಾಲೇಜುಗಳಲ್ಲಿ ಕನ್ನಡಕ್ಕೆ ಪ್ರವೇಶವೇ ಇದ್ದಿರಲಿಲ್ಲ. ಬಿ. ಎ. ಪದವಿಯನ್ನು ಗಳಿಸಿಕೊಂಡ ನಂತರ ಕಾಲೇಜು ಬಿಟ್ಟು ಹೋಗುವವರೂ ಹಾಗೂ ಕಾಲೇಜಕ್ಕೆ ಬಾರದೆ ಶಾಲೆಯನ್ನೇ ಬಿಟ್ಟು ಹೋಗುವವರೂ ಮಾತ್ರ ಕನ್ನಡದ ಅಭ್ಯಾಸ ಮಾಡಬಹುದಾಗಿತ್ತು. ಇದರಿಂದ ಕನ್ನಡಕ್ಕೆ ದೊರೆಯಬೇಕಾದ ಪ್ರೋತ್ಸಾಹನವಿಲ್ಲದೆ ಹೋಯಿತು. ಕನ್ನಡದ ಈ ಪರಿಸ್ಥಿತಿಯು ನಮ್ಮ ಇಲಾಖೆಯ ಇತರ ಮಾತೃಭಾಷೆಗಳಿಗೆ ಅನ್ವಯಿಸುತ್ತಿದ್ದರೂ ಕೂಡ, ಮರಾಠಿ ಗುಜರಾತಿಗಳು ಕೆಲವೊಂದು ಅನುಕೂಲತೆಗಳ ಮೂಲಕ ಕನ್ನಡದಷ್ಟು ಬವಣೆ ಪಡಬೇಕಾದ ಪ್ರಸಂಗವಿರಲಿಲ್ಲ.

೧೯೨೦ರಿಂದ ಬಿ. ಎ.ಕ್ಕೆ ಕನ್ನಡವು ಪ್ರಾರಂಭವಾಯಿತು. ಆದರೆ ೧೯೨೧ನೆಯ ಜೂನ್‌ದಿಂದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಕಲಿಸುವ ವ್ಯವಸ್ಥೆಯಾಯಿತು. ಕರ್ನಾಟಕದ ಹೆಚ್ಚು ವಿದ್ಯಾರ್ಥಿಗಳು ಇರುತ್ತಿದ್ದ ಡೆಕ್ಕನ್ ಕಾಲೇಜಿನಲ್ಲಿ ಕನ್ನಡ ಕಲಿಸುವ ವ್ಯವಸ್ಥೆಯು ಇಲ್ಲದೆ ವಿದ್ಯಾರ್ಥಿಗಳು ತಾವೇ ಕನ್ನಡವನ್ನು ಕಲಿತುಕೊಳ್ಳಬೇಕಾಗುತ್ತಿತ್ತು. ಪ್ರೀವಿಯಸ್ ಮತ್ತು ಇಂಟರ್ ಪರೀಕ್ಷೆಗಳಿಗೆ ಇಲ್ಲದೆ, ಒಮ್ಮೆಲೆ ಬಿ. ಎ. ವರ್ಗಕ್ಕೆ ಮಾತ್ರ ಕನ್ನಡದ ಪ್ರವೇಶ ದೊರೆಯಿತು. ಅಂದರೆ ಇದುವರೆಗೆ ಎಂ. ಎ.ಕ್ಕೆ ಇದ್ದ ಅನುಕೂಲತೆ ಬಿ. ಎ.ಕ್ಕೆ ದೊರೆಯಿತು. ಬಿ. ಎ.ಕ್ಕೆ ಕನ್ನಡದ ಪ್ರವೇಶವಾಗಿದ್ದರೂ, ಅದನ್ನು ಮುಖ್ಯ ವಿಷಯವೆಂದು ಆನರ್ಸ್ ತೆಗೆದುಕೊಳ್ಳುವ ವ್ಯವಸ್ಥೆ ಆಗ ಆಗಲಿಲ್ಲ. ಕನ್ನಡವು ಯಾವುದೋ ಒಂದು ಅಮುಖ್ಯವಾದ ವಿಷಯವಾಗಿ ಗಣಿಸಲ್ಪಡುತ್ತಿತ್ತು. ೧೯೩೩ನೆಯ ಇಸವಿಯ ಜೂನ್‌ದಿಂದ ಈ ಅನುಕೂಲತೆಯೊದಗಿತು. ಕನ್ನಡದ ಉಚ್ಚ ಹಾಗೂ ಬಹುಮುಖದ ಅಭ್ಯಾಸವು ವಿಶ್ವವಿದ್ಯಾನಿಲಯದ ಅಭ್ಯಾಸಕ್ರಮಗಳಲ್ಲಿ ಒಂದಾಯಿತು. ಅಂದರೆ ಮುಂಬಯಿ ವಿಶ್ವವಿದ್ಯಾನಿಲಯವು ೧೮೫೭ರಲ್ಲಿ ಪ್ರಾರಂಭವಾದರೂ ಅದರಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ದೊರೆಯಬೇಕಾದರೆ ಕನ್ನಡಿಗರು ೭೫ ವರುಷ ದಾರಿನೋಡಬೇಕಾಯಿತು.

೧೯೩೩ರಲ್ಲಿ ಪ್ರಾರಂಭವಾದ ಯೋಜನೆಯೂ ಕೂಡ ಸಮಾಧಾನಕಾರಕವಾಗಿರಲಿಲ್ಲ. ಏಕೆಂದರೆ ಕಾಲೇಜದ ಮೊದಲಿನ ಎರಡು ವರುಷಗಳ ಅಭ್ಯಾಸಕ್ರಮದಲ್ಲಿ ಕನ್ನಡದ ಸ್ಪರ್ಶವೂ ಕೂಡ ಇಲ್ಲದೆ ಒಮ್ಮೆಲೆ ಬಿ. ಎ.ದಲ್ಲಿ ಕನ್ನಡದ ಉಚ್ಚ ಅಭ್ಯಾಸವನ್ನು ಕೈಕೊಳ್ಳಬೇಕಾಗುತ್ತಿತ್ತು. ಅದೆಷ್ಟೋ ಸಲ "ಹರಹರಾ ಶ್ರೀಚೆನ್ನ ಸೋಮೇಶ್ವರಾ" ಎಂಬ ಕವಿತಾ ಭಾಗವನ್ನು ಕನ್ನಡ ನಾಲ್ಕನೆಯ ಪುಸ್ತಕದಲ್ಲಿ ಓದಿದ

ವಿದ್ಯಾರ್ಥಿಗಳು ಒಮ್ಮೆಲೆ ಬಿ. ಎ. ಪರೀಕ್ಷೆಗೆ "ಶ್ರೀ ವಾಗ್ದೇವಿಗೆ ಶಬ್ದದಿನಾವಾವಿಂದ್ರಿಯದ ವಿಷಯಮಂ" ಎಂದು ಮುಂತಾಗಿ ಶಬ್ದಮಣಿದರ್ಪಣದ ಅಭ್ಯಾಸವನ್ನು ಆರಂಭಿಸಬೇಕಾಗುತ್ತಿತ್ತು. ಏಕೆಂದರೆ ೧೯೩೫ರ ವರೆಗೆ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೂ ಕೂಡ ಕನ್ನಡವು ಕಡ್ಡಾಯವಾಗಿರಲಿಲ್ಲ. ೧೯೩೫ನೆಯ ವರುಷದಿಂದ ಮಾತ್ರ ಮಾತೃಭಾಷೆಗಳಿಗೆ ಯೋಗ್ಯಸ್ಥಾನ ದೊರೆಯಿತು. ೧೯೩೬ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ತಮ್ಮ ಮಾಧ್ಯಮಿಕ ಶಾಲೆಯ ಎಲ್ಲ ವರ್ಗಗಳಲ್ಲಿ ಕನ್ನಡವನ್ನು ಅಭ್ಯಾಸ ಮಾಡಬೇಕಾಯಿತು. ಮತ್ತು ೧೯೩೭ನೆಯ ಜೂನ್ ದಿಂದ ಫರ್ಸ್ಟ್ ಈಯರ್ ವರ್ಗಕ್ಕೆ, ೧೯೩೮ನೆಯ ಜೂನ್ ದಿಂದ ಇಂಟರಮೀಡಿಯೇಟ್ ವರ್ಗಕ್ಕೆ ಕನ್ನಡವನ್ನು ಅಭ್ಯಾಸ ವಿಷಯವನ್ನಾಗಿ ತೆಗೆದುಕೊಳ್ಳುವ ವ್ಯವಸ್ಥೆ ಪ್ರಾರಂಭವಾಯಿತು. ಇದರಿಂದ ಮಾತೃಭಾಷೆಗಳಿಗೆ ಒಂದು ರೀತಿಯ ಉತ್ತೇಜನ ದೊರೆಯಹತ್ತಿತೆಂದು ಹೇಳಬೇಕು. ೧೯೩೭ನೆಯ ವರುಷಕ್ಕೆ ಮೊದಲು ನಮ್ಮ ಕಾಲೇಜುಗಳಲ್ಲಿ ಕನ್ನಡದವರೆಂದು ಹೇಳಿಕೊಳ್ಳಬಹುದಾದ ವಿದ್ಯಾರ್ಥಿಗಳು ಬೆರಳ ಮೇಲೆ ಎಣಿಸುವಷ್ಟು ಇರುತ್ತಿದ್ದರು. ಈಗ ಕಾಲೇಜಿನಲ್ಲಿ ಕನ್ನಡವನ್ನು ತೆಗೆದುಕೊಂಡ ವಿದ್ಯಾರ್ಥಿಗಳ ಸಂಖ್ಯೆ ನೂರಾರು ಇರುವದು ಕಂಡುಬರುವದು. ಅಂದರೆ ಕನ್ನಡವೂ ಕಾಲೇಜಿನಲ್ಲಿಯ ಅಭ್ಯಾಸಕ್ರಮದಲ್ಲಿಯ ಒಂದು ವಿಷಯವೆಂಬ ಕಲ್ಪನೆ ಈಗ ಸರಿಯಾಗಿ ಬರುತ್ತಿದೆ. ಈ ನಿರೀಕ್ಷಣೆಯಿಂದ ಕನ್ನಡವು ಮೇಲಿನ ವರ್ಗಗಳಲ್ಲಿ ಮೊದಲು ಸಮಾವೇಶವಾಗಿ ನಂತರ ಕೆಳಗಿನ ವರ್ಗಗಳಿಗೆ, ಅಂದರೆ ಮೊದಲು ಎಂ. ಎ., ಆ ಮೇಲೆ ಬಿ. ಎ., ನಂತರ ಪ್ರೀವ್ಹಿಯಸ್ ಇಂಟರ ಪರೀಕ್ಷೆಗಳಿಗೆ ಸೇರಿಸಲ್ಪಟ್ಟ ದೃಶ್ಯವು ಕಂಡುಬರುತ್ತದೆ. ಇದು ವಿಚಿತ್ರವೆಂದು ತೋರದಿರಲಾರದು. ಈಗ ಪ್ರೀವ್ಹಿಯಸ್, ಇಂಟರಗಳಿಗೆ ಕನ್ನಡವು ಸೇರಿಸಲ್ಪಟ್ಟಿದ್ದರೂ ಕನ್ನಡವು ಕಡ್ಡಾಯವಾಗಿದೆಯೆಂದು ಹೇಳಲಿಕ್ಕೆ ಬರುವದಿಲ್ಲ. ಏಕೆಂದರೆ ಇಂಗ್ಲಿಷ್ ಕಾಂಪೋಜಿಶನ್ ಪೇಪರಿಗೆ ಪ್ರತಿಯಾಗಿ ಮಾತೃಭಾಷೆಗಳನ್ನು ತೆಗೆದುಕೊಳ್ಳಬಹುದಾಗಿದೆ. ಅರ್ಥಾತ್, ಇಂಗ್ಲಿಷ್ ಮತ್ತು ಮಾತೃಭಾಷೆ ಇವುಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬಹುದು. ಒಮ್ಮೊಮ್ಮೆ ಇಂಗ್ಲಿಷ ಭಾಷೆಯ ಆಕರ್ಷಣವು ಹೆಚ್ಚಾಗಿ ಕಂಡುಬರಬಹುದು. ಇತ್ತೀಚಿನ ತರುಣ ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನವು ಹೆಚ್ಚು ಜಾಗೃತವಾಗಿದ್ದರೂ ಅವರ ಪಾಲಕರಾದ ಹಿಂದಿನ ತಲೆಯುವರಿಗೆ ಕನ್ನಡದ ವಿಷಯವಾಗಿ ಅಷ್ಟೊಂದು ಪ್ರೇಮವಿಲ್ಲವೆಂಬ ಮಾತಿನ ಅನುಭವ ಒಮ್ಮೊಮ್ಮೆ ನಮಗೆ ಬರುತ್ತದೆ. ಕಾಲೇಜಿನ ಮೊದಲಿನ ಎರಡು ವರ್ಗಗಳಲ್ಲಿ ಕನ್ನಡವು ಹೊಸದಾಗಿ ಸಮಾವೇಶವಾದಾಗ ವಿದ್ಯಾರ್ಥಿಗಳು ಅಭಿಮಾನದಿಂದ ಕನ್ನಡವನ್ನೇ ತೆಗೆದುಕೊಂಡಿದ್ದರೂ ಕೂಡ ಕೆಲದಿನ ನಂತರ ತಮ್ಮ ಪಾಲಕರ ಇಂಗ್ಲಿಷದ ಮೋಹದ ಒತ್ತಾಯಕ್ಕೆ ಒಳಗಾಗಿ ಇಂಗ್ಲಿಷ ವಿಷಯವನ್ನು ಆರಿಸಿಕೊಳ್ಳಬೇಕಾದ ಸಂದರ್ಭಗಳ ಅನುಭವ ನಮಗೆ ಕೆಲವು ಬಂದಿದೆ. ಆದರೆ ಬರುಬರುತ್ತ ಕನ್ನಡವನ್ನೇ ಹೆಚ್ಚಾಗಿ ತೆಗೆದುಕೊಳ್ಳುವವರ ಸಂಖ್ಯೆಯೇ ಬೆಳೆಯುವದೆಂದು ನಿ ವಾದವಾಗಿ ಹೇಳಲಿಕ್ಕೆ ಅಡ್ಡಿ ಇಲ್ಲ.

೧೯೩೭ನೆಯ ಇಸವಿಯಿಂದ ಕಾಲೇಜಿನ ಅಭ್ಯಾಸಕ್ರಮಗಳಲ್ಲಿ ದ್ವಿದಳ ಭಾಗದ ಪ್ರವೇಶವಾದ ಮೇಲೆ ಪ್ರೀವ್ಹಿಯಸ್, ಇಂಟರಗಳಿಗೆ ಕನ್ನಡ ವಿಷಯದ ಸಮಾವೇಶವಾ ಆದರೆ ಈ ವ್ಯವಸ್ಥೆಯಲ್ಲಿ ನಾನು ಇನ್ನೂ ಒಂದು ಸುಧಾರ ಯನ್ನು ವಿಶ್ವವಿದ್ಯಾನಿಲಯಕ್ಕೆ ಸೂಚಿಸುತ್ತಿದ್ದೇನೆ. ಅದೇನು ಪ್ರೀವ್ಹಿಯಸ್, ಇಂಟರ್ ವರ್ಗಗಳಲ್ಲಿ, ಇಂಗ್ಲಿಷ ಮ ನೆಯ ಪೇಪರಿಗೆ (ಕಾಂಪೋಜಿಶನ್‌ಕ್ಕೆ) ಪ್ರತಿಯಾಗಿ ಕನ್ನ ವನ್ನು ತೆಗೆದುಕೊಳ್ಳುವ ಏರ್ಪಾಡು ಇರುವಂತೆ ಬಿ. ಎ. ವರ್ಗದಲ್ಲಿಯೂ ಆಗಬೇಕು. ಅಂದರೆ ಕನ್ನಡದ ಅಭ್ಯಾ ಕ್ರಮದಲ್ಲಿ ಒಂದು ಸುಸಂಬದ್ಧತೆಯುಂಟಾಗುವದು. ಈ ಕಾಲೇಜಿನ ಮೊದಲಿನ ಎರಡು ವರ್ಗಗಳಲ್ಲಿ ಕನ್ನ ವನ್ನು ತೆಗೆದುಕೊಂಡವರಿಗೆ. ಬಿ. ಎ. ವರ್ಗದಲ್ಲಿ ಇಂಗ್ಲಿಷ ವಿಷಯವನ್ನು ಒತ್ತಾಯದಿಂದ ಹೇರಿದಂತಾಗುತ್ತ ಇದು ಒಂದು ದೃಷ್ಟಿಯಿಂದ ಅನ್ಯಾಯವೇ ಸರಿ. ಕನ್ನ ರಿಂದ ಬಿ. ಎ.ಗೆ ಇರುವ ಮೂರು ಕಡ್ಡಾಯದ ಇಂಗ್ಲಿಷ ಪೇಪರುಗಳಿಗೆ ಪ್ರತಿಯಾಗಿ ಎರಡು ಇಂಗ್ಲಿಷ ಒಂದು ಕನ್ನ ಹೀಗೆ ಇಡಬೇಕಾಗಿ ನನ್ನ ಸೂಚನೆಯಿದೆ. ಇಂತಹ ಒಂ ವ್ಯವಸ್ಥೆಯು ಮೈಸೂರು ವಿಶ್ವವಿದ್ಯಾನಿಲಯದ ಅಭ್ಯಾ ಕ್ರಮದಲ್ಲಿ ಇದೆ. ಇಂತಹ ಏರ್ಪಾಡು ನಮ್ಮ ವಿಶ್ವವಿದ್ಯಾ ನಿಲಯದಲ್ಲಿಯೂ ಬಂದರೆ ಒಂದು ರೀತಿಯ ಅನ್ಯಾಯ ದೂರವಾಗುವದಲ್ಲದೆ ವಿಶ್ವವಿದ್ಯಾನಿಲಯದ ಅಭ್ಯಾಸಕ್ರಮ ದಲ್ಲಿ ಸುಸಂಬದ್ಧತೆ ಉಂಟಾಗುವದು. ಅಲ್ಲದೆ ಹೊಸಗನ್ನಡ ಅಭ್ಯಾಸಕ್ಕೆ ಹೆಚ್ಚು ಅನುಕೂಲತೆಯನ್ನೂ, ಕನ್ನಡ ಗ್ರಂ ಗಳಿಗೆ ಒಂದು ರೀತಿಯ ಉತ್ತೇಜನವನ್ನೂ ಕೊಟ್ಟ ಆಗುವದು. ಈಗ ಬಿ. ಎ. ಪರೀಕ್ಷೆಗೆ ಕನ್ನಡವು ಐಚ್ಛಿ ವಾಗಿರುವದೇನೋ ನಿಜ. ಆದರೆ ಕನ್ನಡವನ್ನೇ ತಮ

ಮುಖ್ಯ ಅಭ್ಯಾಸವಿಷಯವನ್ನು ಮಾಡಿಕೊಳ್ಳುವವರು ಹಾಗೂ ಕನ್ನಡದಲ್ಲಿ ಸ್ವಲ್ಪ ಪ್ರಗತಿಯಿದ್ದು ಹಳೆಗನ್ನಡವನ್ನು ಅಭ್ಯಾಸ ಮಾಡಬೇಕೆನ್ನುವವರು ಮಾತ್ರ ಕನ್ನಡವನ್ನು ಐಚ್ಛಿಕವನ್ನಾಗಿ ತೆಗೆದುಕೊಳ್ಳುವರು. ಇಂತಹರ ಸಂಖ್ಯೆ ಸಣ್ಣದು ಇರುತ್ತದೆ ಎಂಬ ಮಾತು ೧೯೩೦ರಿಂದ ಈವರೆಗೆ ನಡೆದ ಬಿ. ಎ. ಪರೀಕ್ಷೆಯಲ್ಲಿ ಕನ್ನಡ ತೆಗೆದುಕೊಂಡ ವಿದ್ಯಾರ್ಥಿಗಳ ಸಂಖ್ಯೆಯಿಂದ ತಾನೇ ಸಿದ್ಧವಾಗುತ್ತದೆ. ಹೀಗೆ ಐಚ್ಛಿಕವನ್ನು ತೆಗೆದುಕೊಳ್ಳದೆ ಇನ್ನುಳಿದ ಅನೇಕ ವಿಷಯಗಳನ್ನು ತೆಗೆದುಕೊಳ್ಳುವ ಆಕರ್ಷಣೆಯೂ ಇರುತ್ತದೆ. ಆದ್ದರಿಂದಲೆ ವಿಶ್ವವಿದ್ಯಾಲಯದ ಉಚ್ಚ ಪದವಿಗಳನ್ನು ಗಳಿಸಿಕೊಂಡ ಅನೇಕ ಕನ್ನಡಿಗರು ಕನ್ನಡದಲ್ಲಿ ತಮ್ಮ ವಿಚಾರಗಳನ್ನು ನಿರೂಪಿಸಲು ಅಸಮರ್ಥರಾಗಿರುವದನ್ನು ಇದುವರೆಗೆ ನೋಡುತ್ತಿದ್ದೇವೆ. ಅಂತಹರು ಕನ್ನಡ ಪುಸ್ತಕಗಳನ್ನು ಓದುವ ಗೋಜಿಗೂ ಹೋಗುತ್ತಿರುವದಿಲ್ಲ. ಈ ಪರಿಸ್ಥಿತಿಯು ಇಲ್ಲದಂತಾಗಬೇಕಾದರೆ ಈಗ ಕಾಲೇಜಿನ ಮೊದಲಿನ ವರ್ಗಗಳಲ್ಲಿ ಕನ್ನಡವನ್ನು ತೆಗೆದುಕೊಳ್ಳುವ ಅನುಕೂಲತೆ ಇರುವಂತೆ ಬಿ. ಎ. ವರ್ಗದಲ್ಲಿಯೂ ಇರಬೇಕೆಂಬುದು ನನ್ನ ಮೊದಲನೆಯ ಸೂಚನೆಯಾಗಿದೆ. ಈ ಸೂಚನೆಯು ಕಾರ್ಯಕಾರಿಯಾಗುವದಾದರೆ ಅದಕ್ಕೆ ಅನ್ವಯಿಸುವಂತೆಯೇ ಕನ್ನಡ ಅಭ್ಯಾಸಕ್ರಮದಲ್ಲಿ ಇನ್ನೂ ಒಂದೆರಡು ಸುಧಾರಣೆಗಳನ್ನು ಸೂಚಿಸಬೇಕೆಂದಿದ್ದೇನೆ.

ನನ್ನ ಎರಡನೆಯ ಸೂಚನೆಯು ಹೀಗೆ ಇದೆ:—ಇಂಗ್ಲಿಷ್ ಕಾಂಪೋಜಿಶನ್‌ದ ಪ್ರತಿಯಾಗಿ ಕನ್ನಡವನ್ನು ಈಗ ತೆಗೆದುಕೊಳ್ಳಬಹುದಷ್ಟೇ; ಇದಕ್ಕೆ ಬದಲಾಗಿ ಕನ್ನಡವು ಮಾತೃಭಾಷೆಯಾಗಿರುವವರೆಲ್ಲರೂ ಒಂದು ಕನ್ನಡ ಪೇಪರವನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕೆಂದು ವಿಧಿಸುವದು. ಅಂದರೆ ಈಗಿನ ವ್ಯವಸ್ಥೆಯಲ್ಲಿ ಮೂರು ಕಡ್ಡಾಯದ ಇಂಗ್ಲಿಷ್ ಪೇಪರುಗಳು —ಅವುಗಳಲ್ಲಿ ಒಂದಕ್ಕೆ (ಕಾಂಪೋಜಿಶನ್) ಪ್ರತಿಯಾಗಿ ದೇಶಭಾಷೆಯನ್ನು ತೆಗೆದುಕೊಳ್ಳುವ ವ್ಯವಸ್ಥೆಗೆ ಬದಲಾಗಿ ಎರಡು ಕಡ್ಡಾಯದ ಇಂಗ್ಲಿಷ್ ಪೇಪರುಗಳು, ಒಂದು ಕಡ್ಡಾಯದ ಮಾತೃಭಾಷೆಯ ಪೇಪರು ಇರಬೇಕು. ಈ ವ್ಯವಸ್ಥೆಯು ಪ್ರೀವ್ಹಿಯಸ್, ಇಂಟರ್, ಬಿ. ಎ. ಹೀಗೆ ಎಲ್ಲ ವರ್ಗಗಳಿಗೆ ಇರಬೇಕು. ಈ ಯೋಜನೆಯು ಕಾರ್ಯರೂಪದಲ್ಲಿ ಬರುವದಾದರೆ ಕನ್ನಡ ಭಾಷೆಯ ಪ್ರಗತಿಗೆ ವಿಶೇಷ ಸಹಾಯವಾಗುವದೆಂದು ನನಗೆ ಅನಿಸುತ್ತದೆ. ಇದರಿಂದ ಕಾಲೇಜುಗಳಲ್ಲಿ ಕನ್ನಡದ ವಿಮರ್ಶಾತ್ಮಕ ಅಭ್ಯಾಸಕ್ಕೆ ಅನುಕೂಲತೆ ದೊರೆಯುವದು. ಅದರಿಂದ ಸಾಹಿತ್ಯ, ವಿಮರ್ಶೆ, ಸಾಹಿತ್ಯ ಶಾಸ್ತ್ರಗಳ ಮೇಲೆ ಗ್ರಂಥಗಳು ಹೊರಡಲು ಅನುಕೂಲವಾಗುತ್ತದೆ. ಹಾಗೆ ಹೊರಟ ಗ್ರಂಥಗಳನ್ನು ಒತ್ತಾಯದಿಂದಲಾದರೂ ವಿದ್ಯಾರ್ಥಿಗಳು ಓದಬೇಕಾಗುತ್ತದೆ. ಹೋದ ವರುಷ ಕನ್ನಡವು ಮೊದಲನೆಯ ಸಲ ಪ್ರೀವ್ಹಿಯಸ್ ವರ್ಗದಲ್ಲಿ ಪ್ರವೇಶವಾಯಿತು. ಆ ವರುಷ ಕನ್ನಡದ ಸಣ್ಣಕತೆಗಳನ್ನು ವಿದ್ಯಾರ್ಥಿಗಳು ಓದಬೇಕಾಗಿತ್ತು. ಆಗ "ಶ್ರೀರಂಗರು ಕನ್ನಡ ಸಣ್ಣ ಕತೆಗಳ ಜನಕರು, ಶ್ರೀ. ಅಂಬಿಕಾತನಯದತ್ತರು ಕನ್ನಡದ ಸಣ್ಣಕತೆಗಾರರಲ್ಲಿ ಅದ್ವಿತೀಯರು" ಎಂಬುದಾಗಿ ಕೆಲವು ವಿದ್ಯಾರ್ಥಿಗಳು ಉತ್ತರ ಬರೆದುದರ ಅನುಭವ ನನಗೆ ಇದೆ. ಹೊಸಗನ್ನಡದ ವಿಮರ್ಶಾತ್ಮಕ ಅಭ್ಯಾಸ ಬೆಳೆದಂತೆ, ಅದಕ್ಕೆ ಅನುಕೂಲವಾಗುವ ಗ್ರಂಥಗಳು ಹುಟ್ಟಿದಂತೆ, ಈ ಪರಿಸ್ಥಿತಿಯು ಸುಧಾರಿಸಬಹುದು.

ಇನ್ನು ನಾನು ಸೂಚಿಸಬೇಕಾಗಿರುವ ಮೂರನೆಯ ಸುಧಾರಣೆಯು ಬಿ. ಎ. ಪರೀಕ್ಷೆಯ ಐಚ್ಛಿಕ ಕನ್ನಡ ವಿಷಯವನ್ನು ಕುರಿತು. ಈಗಿರುವ ಕನ್ನಡ ಐಚ್ಛಿಕ ಪಾಸ್ ಹಾಗೂ ಆನರ್ಸ್ ವಿಭಾಗದಲ್ಲಿ ಹಳಗನ್ನಡದ ಲಕ್ಷಣ ಗ್ರಂಥಗಳಿಗೇ ಹೆಚ್ಚು ಪ್ರಾಶಸ್ತ್ಯ ಕೊಡಲ್ಪಟ್ಟಿದೆ. ಕಾವ್ಯದೃಷ್ಟಿಯಿಂದ ಉಪಯುಕ್ತವಾಗುವ ಗ್ರಂಥಗಳ ಅಭ್ಯಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತರೆ ಈ ವಿಭಾಗವು ಹೆಚ್ಚು ಆಕರ್ಷಕವಾಗುವದು. ಅಲ್ಲದೆ ಬಿ. ಎ.ದ ಕನ್ನಡ ಅಭ್ಯಾಸಕ್ರಮದಲ್ಲಿ ಶ್ರೇಷ್ಠ ಹೊಸಗನ್ನಡ ಗ್ರಂಥಗಳ ಸಮಾವೇಶವೂ ಆಗಬೇಕಾದುದು ಅವಶ್ಯ. ಈಗಿರುವ ಅಭ್ಯಾಸಕ್ರಮದಲ್ಲಿ ಹಳೆಗನ್ನಡ, ಲಕ್ಷಣಗ್ರಂಥ ಇವುಗಳಿಗೆ ಹೆಚ್ಚಿನ ಸ್ಥಾನ ದೊರೆತಿರುವದರಿಂದ ಅಭ್ಯಾಸಕ್ರಮವು ಉಳಿದ ವಿಷಯಗಳಿಗಿಂತ ಹೆಚ್ಚು ಗಡಚಾಗಿದೆ ಎಂಬ ಅಭಿಪ್ರಾಯ ವಿದ್ಯಾರ್ಥಿಗಳಲ್ಲಿ ಬಳೆಯುತ್ತಲಿದೆ. ಅಭ್ಯಾಸಕ್ರಮವು ಓದುವವರಿಗೆ ಮನೋರಂಜಕವೂ ಉಪಯುಕ್ತವೂ ಆಗುವದು ಸಾಧ್ಯವಿದ್ದರೆ ಹಾಗೇಕೆ ಮಾಡಬಾರದು? ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ಹಾಗೂ ಇನ್ನುಳಿದ ಭಾಷೆಗಳ ತುಲನಾತ್ಮಕ ಆನರ್ಸ್ ಅಭ್ಯಾಸಕ್ರಮವನ್ನು ನಾವು ಇಲ್ಲಿ ಅವಲೋಕಿಸಬಹುದು.

ಮರಾಠಿ ಮತ್ತು ಗುಜರಾಥಿ

೧ನೆಯ ಪೇಪರು—ಒಂದು ಆರಿಸಿದ ಯುಗದ ಸಾಹಿತ್ಯದ ವಿಶೇಷಾಭ್ಯಾಸ.

೨ನೆಯ ,, ಅಲಂಕಾರ ಇತ್ಯಾದಿ.

೩ನೆಯ ,, ಸಾಹಿತ್ಯದ ಇತಿಹಾಸ, ನಿಬಂಧ ಲೇಖನ.

ಕನ್ನಡ

೧ನೆಯ ಪೇಪರು—ವ್ಯಾಕರಣ, ಭಾಷಾಶಾಸ್ತ್ರ.
೨ನೆಯ ,, ಅಲಂಕಾರ, ಛಂದಸ್ಸು ಇತ್ಯಾದಿ.
೩ನೆಯ ,, ಸಾಹಿತ್ಯದ ಇತಿಹಾಸ, ನಿಬಂಧಲೇಖನ

(Vide R. 26— Hand-Book of the University of Bombay)

ಮರಾಠಿ, ಗುಜರಾತಿಗಳಲ್ಲಿರುವಂತೆ ಕನ್ನಡದ ಆನರ್ಸ ವಿಭಾಗದಲ್ಲಿ ಸಾಹಿತ್ಯದ ವಿಶೇಷ ಅಭ್ಯಾಸವಿರದೆ, ಲಕ್ಷಣಗ್ರಂಥಗಳ ಭಾರವು ಹೆಚ್ಚಾಗಿದ್ದುದು ಇಲ್ಲಿ ಕಂಡು ಬರುತ್ತದೆ. ಆದ್ದರಿಂದ ಈಗ ೧ನೆಯ, ೨ನೆಯ ಪೇಪರುಗಳಲ್ಲಿಯ ಲಕ್ಷಣಗ್ರಂಥಗಳ ಅಭ್ಯಾಸವನ್ನು ಕೊಂಚ ಕಡಮೆ ಮಾಡಿ ಆ ವಿಷಯಗಳನ್ನು ಒಂದೇ ಪೇಪರಿನಲ್ಲಿ ಸಮಾವೇಶಗೊಳಿಸಿ, ಇನ್ನೊಂದು ಪೇಪರಿನಲ್ಲಿ ಗುಜರಾಥಿ ಮರಾಠಿಗಳಲ್ಲಿರುವಂತೆ ಯಾವುದೊಂದು ಯುಗದ ಪದ್ಯ ಗದ್ಯ ಸಾಹಿತ್ಯದ ಅಭ್ಯಾಸವನ್ನು ಸೇರಿಸುವದು ಅವಶ್ಯವಾಗಿದೆ. ಈ ರೀತಿಯ ಸುಧಾರಣೆ ಆಗುವದಾದರೆ ಕನ್ನಡ ಆನರ್ಸ ಅಭ್ಯಾಸಕ್ರಮವು ಹೆಚ್ಚು ಆದರಕ್ಕೂ ಪಾತ್ರವಾಗಬಹುದು. ನಾನು ಸೂಚಿಸಿದ ಈ ಮಾರ್ಪಾಡನ್ನು ಕನ್ನಡ ಅಭ್ಯಾಸ ನಿಯಾಮುಕ ಮಂಡಳದವರು ಮಾಡಬಹುದಾಗಿದೆ. ಇಡಿಯ ವಿಶ್ವವಿದ್ಯಾನಿಲಯದ ಆಡಳತೆಯ ವಿಚಾರಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ.

ನನ್ನ ನಾಲ್ಕನೆಯ ಸೂಚನೆಯ ವಿಚಾರ. ಬಿ. ಎ. ವರ್ಗದಲ್ಲಿ ಇಂಗ್ಲಿಷ ಹಾಗೂ ಸಂಸ್ಕೃತ ವಿಷಯಗಳನ್ನು ತೆಗೆದುಕೊಂಡವರು ನಾಲ್ಕು ಪಾಸು ಹಾಗೂ ಮೂರು ಆನರ್ಸ್ ಹೀಗೆ ಏಳೂ ಪೇಪರುಗಳನ್ನು ಒಂದೇ ಭಾಷೆಯಲ್ಲಿ ತೆಗೆದುಕೊಳ್ಳಬಹುದು, ಆದರೆ ಕನ್ನಡ ತೆಗೆದುಕೊಳ್ಳುವವರಿಗೆ ಈ ಅನುಕೂಲತೆ ಇಲ್ಲ. ಇಂತಹ ಅನುಕೂಲತೆ ಇದ್ದರೆ ಒಂದೇ ಭಾಷೆಯ ಹೆಚ್ಚಾದ ಅಭ್ಯಾಸಕ್ಕೆ ಅನುಕೂಲವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಎಲ್ಲ ಅಭ್ಯಾಸವನ್ನು ಕನ್ನಡದ ಕಡೆಗೆ ಕೇಂದ್ರೀಕರಿಸಲು ಇದರಿಂದ ಸಾಧ್ಯವಾಗುತ್ತದೆ. ಇನ್ನು ನನ್ನ ಐದನೆಯ ಸೂಚನೆಯೆಂದರೆ ಎಂ. ಎ. ಪರೀಕ್ಷೆಗೂ ಕೂಡ ಮೇಲೆ ಸೂಚಿಸಿದ ಅನುಕೂಲತೆಯನ್ನು ಒದಗಿಸಿಕೊಡುವದು. ಅಂದರೆ ಈಗಿರುವಂತೆ ಮುಖ್ಯ ಭಾಷೆಯೊಂದು ಅಮುಖ್ಯ ಭಾಷೆಯೊಂದು ಹೀಗೆ ಬೇಕಾದವರು ತೆಗೆದುಕೊಳ್ಳಬಹುದು. ಆದರೆ ಅದಕ್ಕೆ ಪ್ರತಿಯಾಗಿ ಎಲ್ಲ ಪೇಪರುಗಳನ್ನೂ ಕನ್ನಡ ಭಾಷೆಯಲ್ಲಿಯೇ ತೆಗೆದುಕೊಳ್ಳಬೇಕೆನ್ನುವವರಿಗೆ ಅವಕಾಶವೂ ಇರಬೇಕು.

ನಾನು ಸೂಚಿಸಿದ ಈ ಐದು ಸೂಚನೆಗಳು ಕಾರ್ಯರೂಪದಲ್ಲಿ ಬಂದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾತೃಭಾಷೆಗಳಿಗೆ ಯೋಗ್ಯ ಸ್ಥಾನ ದೊರೆತಂತೆ ಆಗುವದು. ಹಾಗೂ ಕನ್ನಡ ಭಾಷೆಯ ಬೆಳವಣಿಗೆಗೆ ಹೆಚ್ಚಿನ ಅವಕಾಶ ದೊರೆಯುವದು. ಮಾತೃಭಾಷೆಗಳಿಗೆ ಪ್ರಾಧಾನ್ಯ ದೊರೆಯಬೇಕೆಂದು ಕೂಗು ಕೇಳಬರುತ್ತಿರುವ ಈಗಿನ ಕಾಲದಲ್ಲಿ ಇಂತಹ ಯೋಜನೆಗಳನ್ನು ವಿಶ್ವವಿದ್ಯಾನಿಲಯದವರು ಕೈಕೊಳ್ಳುವದು ಉಚಿತವಾಗಿದೆ; ಕ್ರಮಪ್ರಾಪ್ತವಾಗಿದೆ.

ಕರ್ನಾಟಕ ಶಿಕ್ಷಣಪರಿಷತ್ತು

'ನಿರೀಕ್ಷಕ'ರಿಂದ

ಇದೇ ತಿಂಗಳ ೮ ಮತ್ತು ೯ನೆಯ ತಾರೀಖುಗಳಲ್ಲಿ ಜರುಗಿದ ಕರ್ನಾಟಕ ಶಿಕ್ಷಣ ಪರಿಷತ್ತು ಅನೇಕ ದೃಷ್ಟಿಗಳಿಂದ ಅಪೂರ್ವವಾಗಿತ್ತು. ಅಖಿಲಕರ್ನಾಟಕದ ಶಿಕ್ಷಣ ಸಮಸ್ಯೆಗಳನ್ನು ಪರಿಶೀಲಿಸಲು ಕೂಡಿದ ಪರಿಷತ್ತು ಇದೇ ಮೊದಲಿನದು. ಮಂಗಳೂರು, ಬಳ್ಳಾರಿ ಮುಂತಾದ ಪ್ರದೇಶಗಳಲ್ಲಿಯ ಕನ್ನಡ ಶಿಕ್ಷಣವ್ಯವಸಾಯಿಗಳು ಒಂದೆಡೆ ಸೇರಿ, ತಮ್ಮ ತಮ್ಮ ಶೈಕ್ಷಣಿಕ ಬೇಕುಬಯಕೆಗಳನ್ನು ಅನೇಕ ಸಾರೆ ಚರ್ಚಿಸಿರುವರು. ಶಿಕ್ಷಣಪ್ರಪಂಚವನ್ನು ಸುಧಾರಿಸಲು ಅವರು ಮಂಗಳೂರು ಜಿಲ್ಲಾ ಶಿಕ್ಷಕರ ಗಿಲ್ಡಿನಂತಹ ನಿರಂತರ ಸಂಸ್ಥೆಗಳನ್ನು ಕೂಡ ಏರ್ಪಡಿಸಿರುವರು. ಇದರಂತೆಯೇ ಮುಂಬಯಿ ಕರ್ನಾಟಕದವರು ಕರ್ನಾಟಕ ಶಿಕ್ಷಕ ಸಮಿತಿಯ ಮುಖಾಂತರ ತಮ್ಮ ಶೈಕ್ಷಣಿಕ ಪ್ರಶ್ನೆಗಳನ್ನು ವಿಚಾರಿಸುವದು ಎಲ್ಲರಿಗೂ ಪರಿಚಿತವಾದ ಮಾತು. ಈರೀತಿ ಸಂಘಟಿತ ಪ್ರಯತ್ನ ಮಾಡುವವರು ಎಷ್ಟೇ ಸ್ತುತಿಗೆ ಪಾತ್ರರಾಗಿದ್ದರೂ, ಇಡೀ ಕನ್ನಡ ಜನಾಂಗದ ಏಳ್ಗೆಯ ಫಲಾಪೇಕ್ಷೆಯಲ್ಲಿ ಅವರು 'ಉಬ್ಬಾಹುವ ವಾಮನ'ನಂತೆಯೇ. ಇದಲ್ಲದೆ ಮೇಲ್ಕಾಣಿಸಿದ ಭಾಗಗಳಲ್ಲಿಯ ಕನ್ನಡಿಗರು ಆಯಾ ಆಡಳಿತಗಳಲ್ಲಿ ಅಲ್ಪಸಂಖ್ಯಾಕರಾದುದರಿಂದ ಅವರ ಕೂಗಳತೆಯು ತಮ್ಮ ತುಟಿಗಳ ವರೆಗೆ ಮಾತ್ರ; ಅದು ಅವರ ಭಾಗ್ಯವಿಧಾತರಾದ ಆಡಳಿತಗಾರರ ಕಿವಿಗಳ ವರೆಗೆ ಮುಟ್ಟುವದಿಲ್ಲ. ಇದುವೇ ಶಿಕ್ಷಣದಲ್ಲಿ ಕನ್ನಡಿಗರು ಹಿಂದುಳಿದದ್ದರ ಮೂಲಕಾರಣವು. ಈ ಪರಿಸ್ಥಿತಿಯನ್ನು ಸುಧಾರಿಸುವದಾದರೆ ಅಖಿಲ ಕರ್ನಾಟಕವನ್ನು ಕಣ್ಮುಂದಿಟ್ಟು ಶೈಕ್ಷಣಿಕ ಯೋಜನೆಯನ್ನು ಮಾಡುವದವಶ್ಯವೆಂದು ಮನಗಂಡು ಈ ಪರಿಷತ್ತನ್ನು ಕರೆಯಲಾಯಿತು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಂತಹ ಪ್ರಾತಿನಿಧಿಕ ಸಂಸ್ಥೆಯು ಈ ಪರಿಷತ್ತನ್ನು ಜರುಗಿಸಿದ್ದುದು ಇನ್ನೊಂದು ಬಗೆಯ ಅಪೂರ್ವತೆ. ಇದುವರೆಗೆ ಕಾಂಗ್ರೆಸ್ಸಿನವರು ಕೈಕೊಂಡ ವಿಧಾಯಕ ಕಾರ್ಯಕ್ರಮಗಳಲ್ಲಿ ಶಿಕ್ಷಣವು ಪ್ರತ್ಯಕ್ಷವಾಗಿ ಒಳಪಟ್ಟಿರ್ದಿಲ್ಲ. ಈಗ ಬ್ರಿಟಿಶ್ ಕರ್ನಾಟಕಕ್ಕೆ ಸಂಬಂಧಿಸಿದ ಸರಕಾರಗಳು ಕಾಂಗ್ರೆಸ್ ಪಕ್ಷದವರಿರುವದರಿಂದ ದೇಶದ ಶಿಕ್ಷಣೋನ್ನತಿಗಾಗಿ ಅವರು ಮಾಡುತ್ತಿರುವ ಪ್ರಯತ್ನಗಳು ಒಳ್ಳೇ ಫಲಕಾರಿಗಳಾಗುವಂತೆ ಸಹಕರಿಸುವದು ಆಯಾ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪರಿಷತ್ತಿನ ಪರವಾಗಿ ಸರಿಯಾಗಿ ಪಾಲಿಸಿದಂತಾಗಿದೆ. ಮುಂಬಯಿ, ಮದ್ರಾಸ, ಕೊಡಗು ಮೊದಲಾದ ಕಡೆಯ ಸರಕಾರದವರು ಕೈಕೊಂಡ ಶೈಕ್ಷಣಿಕ ಯೋಜನೆಗಳು ಕರ್ನಾಟಕದ ಹಿತವನ್ನು ಎಷ್ಟರ ಮಟ್ಟಿಗೆ ಸಾಧಿಸುವವು, ಅವುಗಳಲ್ಲಿ ಕುಂದುಕೊರತೆಗಳಿದ್ದರೆ ಅವಾವವು, ತುಂಡತುಂಡಾದ ಕರ್ನಾಟಕವನ್ನು ಅಚಿರಾದೇವ ಅಖಂಡವಾಗಿ ರಚಿಸುವ ದೃಷ್ಟಿಯಿಂದ ಈ ಯೋಜನೆಗಳಲ್ಲಿ ಯಾವ ತಿದ್ದುಪಾಟಗಳನ್ನು ಮಾಡುವದವಶ್ಯವು, ಇನ್ನಾವ ಹೊಸ ಯೋಜನೆಗಳನ್ನು ಇದೇ ದೃಷ್ಟಿಯಿಂದ ಸರಕಾರದವರು ಕೈಕೊಳ್ಳಬಹುದು ಎಂಬ ಸಮಸ್ಯೆಗಳನ್ನು ಸಾರಾಸಾರವಾಗಿ ಪರಿಶೀಲಿಸಿ, ಅವುಗಳನ್ನು ಆಯಾ ಸರಕಾರದವರೆದುರಿಗೆ ಮಂಡಿಸಲು ಬೇಕಾದ ಅಧಿಕಾರವಾಣಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಿರುವಷ್ಟು ಇನ್ನಾವ ಸಂಸ್ಥೆಗೂ ಇಲ್ಲ. ಇದರಿಂದ ಪರಿಷತ್ತಿಗೆ ಒದಗಿದ ಪ್ರಾಶಸ್ತ್ಯ-ಪ್ರಾತಿನಿಧ್ಯಗಳು ಅಪೂರ್ವವಾದವುಗಳಾಗಿದ್ದವು.

ಪರಿಷತ್ತಿನ ನಿಯಮಿತ ದಿನಗಳಲ್ಲಿ ಅನೇಕ ಸಾರೆ ಬದಲಾವಣೆಗಳಾದವು. ಕೊನೆಯಲ್ಲಿ ನಿರ್ದಿಷ್ಟವಾದ ದಿನಗಳು ಕೂಡ ಶಾಲೆಕಾಲೇಜುಗಳ ಶಿಕ್ಷಕ-ಪ್ರಾಧ್ಯಾಪಕರಿಗೆ ಬಹಳೇ ಅನನುಕೂಲವಾಗಿದ್ದವು. ಹೀಗಿದ್ದರೂ ಪರಿಷತ್ತಿನಲ್ಲಿ ಭಾಗವಹಿಸಿದ ಶಿಕ್ಷಣಾಭಿಮಾನಿಗಳ ಸಂಖ್ಯೆ ಅಚ್ಚರಿಗೊಳಿಸುವಷ್ಟು ದೊಡ್ಡದಾಗಿತ್ತು. ಕರ್ನಾಟಕದ ಎಲ್ಲ ಭಾಗಗಳಿಂದ ಸುಮಾರು ಐದು ನೂರರಷ್ಟು ಶಿಕ್ಷಕರೂ ಶಿಕ್ಷಣತಜ್ಞರೂ ದಯಮಾಡಿಸಿದ್ದರು. ಮೈಸೂರು ಸಂಸ್ಥಾನದ ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲ್, ಶ್ರೀ. ಸಿ. ಹಯವದನರಾವ, ಶ್ರೀಮತಿ ಕಮಲಾದೇವಿ, ಪಂಡಿತ ತಾರಾನಾಥ, ಶ್ರೀ. ಜಿನರಾಜ ಹೆಗಡೆ, ಶ್ರೀ. ವಾರ್ಕಿ, ಶ್ರೀ. ಜಸ್ಟಿಸ್ ಲೋಕೂರ, ಶ್ರೀ. ಉಲ್ಲಾಳ ಮಂಗೇಶರಾವ, ರೆ. ಫಾದರ ಗನ್‌ಸಾಲ್ವಿಸ್, ರಾಜಕಾರ್ಯಪ್ರಸಕ್ತ ಶ್ರೀ. ಬಿ. ಎಮ್. ಶ್ರೀಕಂಠಯ್ಯ, ಮುಂಬಯಿ ವಿದ್ಯಾಪೀಠದ ವ್ಹಾಯಿಸ್ ಚಾನ್ಸೆಲರರಾದ ಶ್ರೀ. ಚಂದಾವರಕರ, ಶ್ರೀ. ಡಿ. ಸಿ. ಪಾವಟೆ, ಮುಂಬಯಿ ಪ್ರಾಂತದ ಡಾಯರೆಕ್ಟರ್ ಮತ್ತು ಅಸಿ. ಡಾಯರೆಕ್ಟರರುಗಳಾದ ಮಿ. ಗ್ರೀವ್ಸ್ ಮತ್ತು ಸಯ್ಯದ ನೂರುಲ್ಲಾ ಸಾಹೇಬರವರು, ಮೈಸೂರು ಸಂಸ್ಥಾನದ ಡಾಯರೆಕ್ಟರರು ಮುಂತಾದ ಮಹನೀಯರು ಪರಿಷತ್ತಿಗೆ ಶುಭಾಶೀರ್ವಾದಗಳನ್ನು ದಯಪಾಲಿಸಿದ್ದರು. ಇದಲ್ಲದೆ

ಅಲ್ಲಲ್ಲಿಯ ಕರ್ನಾಟಕಾಭಿಮಾನಿಗಳೂ ಶಿಕ್ಷಣತಜ್ಞರೂ ಸಲಹೆಸೂಚನೆಗಳನ್ನು ಕಳಿಸಿದ್ದರು.

ಪರಿಷತ್ತಿನ ಪ್ರಾರಂಭವು ಬಹಳೇ ಸ್ಫೂರ್ತಿದಾಯಕವಾಗಿತ್ತು. ಬಂದವರನ್ನು ಸ್ವಾಗತಿಸಿದವರು ಕರ್ನಾಟಕದ ಲೋಕವಂದಿತ ಮುಂದಾಳುಗಳಾದ ದೇಶವತ್ಸಲ ಶ್ರೀ. ರಂಗನಾಥ ದಿವಾಕರರು. ಮುಂಬಯಿ ಪ್ರಾಂತದ ಪ್ರಧಾನಮಂತ್ರಿಗಳೂ ಶಿಕ್ಷಣಮಂತ್ರಿಗಳೂ ಆದ ಮಾನ್ಯ ಶ್ರೀ. ಬಾಳಾಸಾಹೇಬ ಖೇರರು ಪರಿಷತ್ತಿನ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಹುರುಪಿನ ಮೂರ್ತಿಗಳೂ ವಿದ್ವನ್ಮಣಿಗಳೂ ಆದ ಶ್ರೀ. ಡಾ. ವಿಜಯೀಂದ್ರರಾವ್ ಅವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಎಲ್ಲ ಪ್ರಾರಂಭಗಳು ಫಲಾನುಮೇಯಗಳೆಂದು ಮಹಾಕವಿ ಕಾಳಿದಾಸನು ಸೂಕ್ತವಾಗಿ ನುಡಿದಿದ್ದಾನೆ. ಆದುದರಿಂದ ಪರಿಷತ್ತಿನ ಯಶಸ್ವಿತೆಯ ಬಗ್ಗೆ ಈಗಾಗಲೆ ಮತಕೊಡುವದು ಸಮಂಜಸವಾಗಲಿಕ್ಕಿಲ್ಲ. ಆದರೂ ಸುಪ್ರಾರಬ್ಧವು ಸುಫಲದಾಯಿಯಾಗುವದು ನಿಃಸಂದೇಹವಾದುದರಿಂದ ಪರಿಷತ್ತಿನಲ್ಲಿ ಜರುಗಿದ ಚರ್ಚೆ ಕಾರ್ಯರಂಗಕ್ಕೆ ತೀವ್ರದಲ್ಲಿಯೇ ಬರುವದೆಂದು ತಿಳಿದವರು ಭಾವಿಸಿದ್ದಾರೆ. ಪರಿಷತ್ತಿನ ತೀರ್ಮಾನಗಳು ಅಲ್ಲಿ ಕೂಡಿದ ವಿದ್ವಾಂಸರ ಕರ್ನಾಟಕ ಏಕೈಕದೃಷ್ಟಿ, ಶೈಕ್ಷಣಿಕ ಸಮಸ್ಯೆಗಳ ಆಮೂಲಾಗ್ರಜ್ಞಾನ, ಮುನ್ನೋಟ, ಗಾಂಭೀರ್ಯ, ವಿವೇಚನ ಕೌಶಲ್ಯ ಮುಂತಾದ ಸದ್ಗುಣಗಳನ್ನು ಚನ್ನಾಗಿ ಮನಗಾಣಿಸುವಂತಹವಿವೆ.

ಒಟ್ಟಿನಲ್ಲಿ ಇಪ್ಪತ್ತೈದು ಗೊತ್ತುವಳಿಗಳು ಅಂಗೀಕೃತವಾದವು. ಅವುಗಳಲ್ಲಿ, ಅಖಿಲ ಕರ್ನಾಟಕ ದೃಷ್ಟಿಯಿಂದ ಎಲ್ಲಾ ಶೈಕ್ಷಣಿಕ ಸಮಸ್ಯೆಗಳನ್ನು ವಿಚಾರಿಸುವದು, ಇಂತಹ ಸಮಸ್ಯೆಗಳನ್ನು ಬಿಡಿಸುವಾಗ ಆಯಾ ಸರಕಾರದವರೂ ವಿದ್ಯಾಪೀಠದವರೂ, ಆಪ್ತಾಲೋಚನೆಯನ್ನೂ ಪರಸ್ಪರ ಸಹಕಾರವನ್ನೂ ಮಾಡುವದರ ಔಚಿತ್ಯ, ಬೇರೆ ಬೇರೆ ಆಡಳಿತಗಳಲ್ಲಿ ಸೇರ್ಪಟ್ಟ ಕನ್ನಡಿಗರು ಶಿಕ್ಷಣಪ್ರಪಂಚದಲ್ಲಿ ಸಮಾನ ಹಕ್ಕುಬಾಧ್ಯತೆಗಳನ್ನು ಉಪಭೋಗಿಸಲು ಅಗತ್ಯವಿರುವ ಸೌಕರ್ಯಗಳು, ಕರ್ನಾಟಕದ ಸರ್ವಾಂಗೀಣವಾದ ಉನ್ನತಿಗೆ ಅತ್ಯಗತ್ಯವಾಗಿ ಸದ್ಯದಲ್ಲಿಯೇ ಬೇಕಾಗಿರುವ ವಿವಿಧ ಶಿಕ್ಷಣ ಸಂಸ್ಥೆಗಳು, ಸರಕಾರದವರು ಈಗ ತೆರೆಯಬೇಕೆನ್ನುತ್ತಿರುವ ಎಸ್. ಟಿ. ಕಾಲೇಜಿನಂತಹ ಹೊಸ ಸಂಸ್ಥೆಗಳ ಸಂದರ್ಭದಲ್ಲಿ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ಆಗಬಾರದೆಂದು ಮಾಡಿದ ಸೂಚನೆಗಳು, ಗಡಿನಾಡುಗಳಲ್ಲಿಯ ಕನ್ನಡಿಗರ ಗೋಳನ್ನು ದೂರಮಾಡುವದಕ್ಕಾಗಿ ಆಯಾ ಸರಕಾರದವರು ಕೈಕೊಳ್ಳತಕ್ಕ ಉಪಾಯಗಳು ಮುಂತಾದವುಗಳ ಬಗ್ಗೆ ಮಾಡಿದ ತೀರ್ಮಾನಗಳು ಮನನೀಯವಾದವುಗಳಾಗಿವೆ. ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳನ್ನು ಮೊದಲು ಮಾಡಿಕೊಂಡು ಅಖಿಲ ಕರ್ನಾಟಕ ವಿದ್ಯಾಪೀಠದ ಯೋಜನೆಯ ವರೆಗಿದ್ದ ಎಲ್ಲ ಸಮಸ್ಯೆಗಳ ಪರಾಮರ್ಶವನ್ನು ಪರಿಷತ್ತಿನವರು ಒಳ್ಳೇ ವಿಧಾಯಕ ಸ್ವರೂಪದಲ್ಲಿ ಮಾಡಿದ್ದಾರೆ. ಪರಿಷತ್ತಿನ ಗೊತ್ತುವಳಿಗಳ ಪತ್ರಿಕೆಯು ಕರ್ನಾಟಕ ಶಿಕ್ಷಣ ಪ್ರಪಂಚ ಪ್ರಕಾಶಿಕೆಯೆಂದರೆ ತಪ್ಪಾಗದು.

ಪರಿಷತ್ತಿನಲ್ಲಿ ಜರುಗಿದ ಎಲ್ಲಕ್ಕೂ ಮಹತ್ವದ ಘಟನೆಯೆಂದರೆ 'ಅಖಿಲ ಕರ್ನಾಟಕ ಶಿಕ್ಷಣ ಮಂಡಲ'ದ ನಿರ್ಮಾಣ. ಪರಿಷತ್ತಿನ ಗೊತ್ತುವಳಿಗಳು ವರದಿಯ ಹೊತ್ತಿಗೆಯಲ್ಲಿಯೇ ಅಡಗಿ ಹೋಗದೆ ಅವು ಕಾರ್ಯರಂಗಕ್ಕೆ ಬರುವಂತೆ ಮಾಡಲು ನಿರ್ಮಿಸಿದ ಕಾರ್ಯಕಾರಿ ಮಂಡಲವಿದು. ಡಾ. ವಿಜಯೀಂದ್ರರಾವ್ ಅವರು ಈ ಮಂಡಲದ ಅಧ್ಯಕ್ಷರಾಗಿದ್ದಾರೆ. ಉಪಾಧ್ಯಕ್ಷರು ಶ್ರೀ. ದಿವಾಕರ ರಂಗನಾಥರು. ಕೃಷ್ಣಾರ್ಜುನರನ್ನು ಹೋಲುವ ಇವರೀರ್ವರನ್ನೆ ತಕ್ಕೊಂಡರೂ ಪರಿಷತ್ತಿನ ಗೊತ್ತುವಳಿಗಳು ಪರಿಣಾಮಕಾರಿಗಳಾಗುವಂತೆ ಅವರು ಮಾಡದಿರಲಾರರೆಂದು ಧಾರಾಳವಾಗಿ ಹೇಳಬಹುದು. ಇದಲ್ಲದೆ ಶ್ರೀಮಾನ್ ಬಿ. ಎಮ್. ಶ್ರೀಕಂಠಯ್ಯ, ಶ್ರೀ. ಕೆ. ಆರ್. ಕಾರಂತ, ಶ್ರೀ. ದಾತಾರ ಬಳವಂತರಾಯರು, ಪ್ರೊ. ಗೋಕಾಕ, ಪ್ರೊ. ವಾರ್ಕೆ, ಬ್ಯಾ. ಸರದಾರ, ಶ್ರೀ. ಎಸ್. ಸೋಮಣ್ಣ, ಶ್ರೀ. ಹುಕ್ಕೇರಿಕರ ಮೊದಲಾದ ವೀರಕನ್ನಡಿಗರೂ, ತಂತ್ರಜ್ಞರೂ ಮಂಡಲವನ್ನು ಶೋಭಿಸುವುದನ್ನು ನೋಡಿದರೆ, ಕನ್ನಡಿಗರ ಶಿಕ್ಷಣಸಮಸ್ಯೆಗಳು ಸರಿಯಾದ ರೀತಿಯಲ್ಲಿ ಬಿಡುಗಡೆ ಹೊಂದುವವು ಮತ್ತು ತೀವ್ರದಲ್ಲಿಯೇ ಅಖಂಡ ಕರ್ನಾಟಕ ರಾಷ್ಟ್ರನಿರ್ಮಾಣವು ಆಗುವದು ಎಂದು ಭಾವಿಸಲು ಸಾಧ್ಯವಾಗಿದೆ.

ಪರಿಷತ್ತಿನ ವಿಮರ್ಶೆಯನ್ನು ಮುಗಿಸುವದರ ಪೂರ್ವದಲ್ಲಿ ಕನ್ನಡಿಗರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುವ ಚಾಪಲ್ಯವನ್ನು ಅವರು ದಯೆಯಿಟ್ಟು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇವೆ. ಅಖಿಲ ಕರ್ನಾಟಕದವರು ಪರಿಷತ್ತಿನ ಗೊತ್ತುವಳಿಗೆ ತಮ್ಮ ಬಲವತ್ತಾದ ಬೆಂಬಲವಿದೆಯೆಂದು ತಕ್ಕ ಮಾರ್ಗಗಳಿಂದ ಆಯಾ ಸರಕಾರದವರ ಗಮನಕ್ಕೆ [illegible] ಅದರಂತೆ [illegible] ಆದ್ಯಕರ್ತವ್ಯವಾಗಿದೆ.

ಮೇಲ್ಕಾಣಿಸಿವ ಕರ್ನಾಟಕ ಶಿಕ್ಷಣಮಂಡಲದ ಕೂಡ ಕರ್ನಾಟಕದಲ್ಲಿಯ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಶಿಕ್ಷಣಾಭಿಮಾನಿಗಳು ಸಹಕರಿಸಿ, ಮಂಡಲದವರು ಹೊತ್ತ ಒಜ್ಜೆಯನ್ನು ಹಗುರು ಮಾಡಬೇಕಾಗಿದೆ. ಮಂಡಲದವರಿಗೆ ಬೇಕಾದ ಅಂಕಿಪಟ್ಟಿಗಳನ್ನು ಪೂರಯಿಸಿ, ತಮ್ಮ ಬೇಕು-ಬಯಕೆಗಳನ್ನು, ತಮ್ಮ ಮಾರ್ಗದಲ್ಲಿದ್ದ ತೊಡರುಗಳನ್ನು ಕಾಲೋಚಿತವಾಗಿ ಅವರ ನಿದರ್ಶನಕ್ಕೆ ತಂದುಕೊಟ್ಟು, ಸರಕಾರದವರು ಶೈಕ್ಷಣಿಕ ಯೋಜನೆಗಳನ್ನು ಕೈಕೊಳ್ಳುವ ಮೊದಲು ಮಂಡಲದವರ ಸಲಹೆಯನ್ನು ಪಡೆಯಲುತ್ಸುಕರಾಗುವಂತೆ ಅವರು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಕೈಕೊಳ್ಳಬೇಕು.

ಮಾತೃಭಾಷೆಯ ಶಿಕ್ಷಣ ★

ಲೇಖಕರು: ಶ್ರೀ. ನಾರಾಯಣ ಭಟ್ಟ, ವಿದ್ವಾನ್, ಕೆನರಾ ಹೈಸ್ಕೂಲು, ಮಂಗಳೂರು

ತಾಯ್ನುಡಿಯ ಅಭ್ಯಾಸವು ಇತರ ಅಭ್ಯಾಸಗಳಂತಿರದೆ, ಅದು ನಾಡಿಗರ ಉಸಿರಿನಂತೆ ನಿರಂತರ ನಡೆಯುವಂತಹದು. ಇತರ ಪಾಠಗಳ ಪ್ರಯೋಜನವು ಅಭ್ಯಾಸಿಯು ಅನುಸರಿಸುವ ವ್ಯವಹಾರ ಕ್ಷೇತ್ರವನ್ನನುಸರಿಸಿ ಅನುಭವಕ್ಕೆ ಬರಲೂಬಹುದು; ಬಾರದಿರಲೂಬಹುದು. ಆದರೆ ತಾಯ್ನುಡಿಯ ಶಿಕ್ಷಣದಲ್ಲಿ ಸಫಲತೆಯನ್ನು ಪಡೆದರೆ ಶಿಕ್ಷಣದ ಮುಖ್ಯಾಂಶವನ್ನೆ ಪೂರೈಸಿದಂತಾಗುವುದು.

ತಿಳಿವಳಿಕೆಯನ್ನು ಹೆಚ್ಚಿಸುವುದು ಶಿಕ್ಷಣದ ಒಂದು ಗುರಿಯೆಂಬುದು ಎಲ್ಲರೂ ಅರಿತ ಸಂಗತಿ. ಆ ಗುರಿಯನ್ನು ಸಾಧಿಸುವುದಕ್ಕೆ ಒಪ್ಪುವಂತಹ ಶಿಕ್ಷಣದ ಸಾಧನವಾದ ಭಾಷೆಯ ಕೆಲಸವು ಹಿರಿದಾದುದು. ಹೇಳಿ ತಿಳಿಸುವುದಕ್ಕೆ ಸಮರ್ಥವಾದ ತಮ್ಮದಾದ ನುಡಿಯಿಲ್ಲದಿರುವ ಜನರ ತಿಳಿವು ಅಸ್ವತಂತ್ರವಾಗಿಯೇ ಉಳಿಯಬಹುದು. ನಮ್ಮ ಶಾಲೆಗಳಲ್ಲಿ ಇಂಗ್ಲನುಡಿಯ ಮೂಲಕ ವಿದ್ಯಾಭ್ಯಾಸವಾಗುವುದು ಬಂದಂದಿನಿಂದ ನಾಡಿಗರು ಪರಾವಲಂಬಿಗಳಾಗಿರುತ್ತಾರೆ. ಇಂಗ್ಲ ನುಡಿಯ ಒಡೆತನದ ನೆರಳಲ್ಲಿ ಬಳೆದ, ಬಳೆಯುತ್ತಿರುವ ಈಗಳಿನ ಶಿಕ್ಷಣವು ಚೆನ್ನೆನಿಸದಿರುವುದು ಆಶ್ಚರ್ಯವಲ್ಲ. ಈ ಮಾತಿನಲ್ಲಿ ಇಂಗ್ಲನುಡಿಯನ್ನು ಕೀಳ್ಗಳೆಯುವ ಎಣಿಕೆ ಇಲ್ಲ. ಅದರ ಸೊಗಸನ್ನು ಬಲ್ಲವರು ಬಲ್ಲರು. ಅದಕ್ಕೆ ಹಿರಿಮೆಯುಂಟು, ಮನ್ನಣೆಯುಂಟು. ಅದು ಲೋಕದ ಹೆಚ್ಚಿನ ಕಡೆಗಳಲ್ಲಿ ಹರಡಿಕೊಂಡಿದೆ. ಹಾಗಿದ್ದರೂ ಅದು ಹಬ್ಬಿರುವ ಎಲ್ಲೆಡೆಗಳಲ್ಲೂ ಆ ನುಡಿಯ ಮೂಲಕವಾಗಿಯೇ ಶಿಕ್ಷಣವನ್ನು ಸಲ್ಲಿಸುವ ಹವಣಿಕೆ ಸರಿಯಲ್ಲವೆಂಬುದನ್ನು ಆಯಾ ಕಡೆಯ ಜನರು ತಿಳಿದುಕೊಂಡಿದ್ದಾರೆ. ಜನರ ತಾಯ್ನುಡಿಯೆಂಬುದೊಂದಿದ್ದರೆ, ಆ ಮೂಲಕವಾಗಿಯೇ ಆಯಾ ಜನರಿಗೆ ಶಿಕ್ಷಣ ಸಲ್ಲಬೇಕೆಂಬ ಚಳವಳವು ಇತ್ತೀಚೆ ಬಲವಾಗಿ ನಡೆದಿದೆ. ಆದುದರಿಂದ ಈಗ ಆಳುವ ಜನರ-ಕಡೆಯ-ಸರಕಾರಗಳು (ಕಾಂಗ್ರೆಸು ಸರಕಾರಗಳು) ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಏರ್ಪಡಿಸುವ ಹಂಚಿಕೆಯನ್ನು ಮಾಡುತ್ತಲಿದ್ದಾರೆ. ಶಿಕ್ಷಣ ಹೊಂದಿಸಬೇಕಾದ ಎಲ್ಲ ವಿಷಯಗಳನ್ನೂ ತಾಯ್ನುಡಿಯ ಮೂಲಕವಾಗಿಯೇ ಹೇಳಿತಿಳಿಸಿ ತಿಳಿಯುವಂತೆ ಮಾಡುವುದು ಈ ಹಂಚಿಕೆಯ ಗುರಿಯಷ್ಟೆ! ಭಾಷೇತರ ವಿಷಯಗಳನ್ನು ತಾಯ್ನುಡಿಯ ಮೂಲಕ ಹೇಳಿಕೊಡುವುದರಿಂದ ಒಳ್ಳೆಯದುಂಟು. ತಾಯ್ನುಡಿಯನ್ನು ಕೂಡ ಒಳ್ಳೆಯ ರೀತಿಯಲ್ಲಿ ಕಲಿಸುವುದರಿಂದ ಮತ್ತಷ್ಟು ಒಳ್ಳೆಯದುಂಟು.

ತಾಯ್ನುಡಿಯನ್ನು ಹೇಳಿಕೊಡುವ ಅವಶ್ಯವೇನಿದೆ? ಅದನ್ನು ಹೇಗಾದರೂ ತನ್ನಂತೆಯೆ ಕಲಿತುಕೊಳ್ಳಬಹುದಲ್ಲವೆ? ಎಂದು ಕೇಳುವವರು ಕೆಲವರಿದ್ದಾರೆ. ಅವರಲ್ಲಿ ಕಲಿಸುವುದಕ್ಕೇನೂ ಇಲ್ಲ; ಆದುದರಿಂದ ಅದನ್ನು ಕಲಿಸಲಾಗುವುದೆ? ಎಂದೆನ್ನುವವರು ಕೆಲಕೆಲವರಿದ್ದಾರೆ. ಆದರೆ, ತಾಯ್ನುಡಿಯನ್ನೂ ಅದರ ಸಾಹಿತ್ಯವನ್ನೂ ಒಪ್ಪಾಗಿ ಕಲಿಸಬೇಕು, ಚೆನ್ನಾಗಿ ಕಲಿಯಬೇಕು ಎಂಬ ಚಳವಳದ ನಡುವೆ ನಾವೀಗ ಸೇರಿರುವುದರಿಂದ ಮೇಲಣ ಹೇಳಿಕೆಗಳಲ್ಲಿ ಹುರುಳಿಲ್ಲವೆಂದು ಅವನ್ನು ಕಡೆಗಣಿಸಬಹುದಾಗಿದೆ. ಈ ಚಳವಳವು ಹೆಚ್ಚಿರುವುದರಿಂದಲ್ಲವೆ, ತಾಯ್ನುಡಿಗೆ ಉತ್ತೇಜನ ಕೊಡಬೇಕೆಂಬ ಒತ್ತಾಯವು ತೊಡಗಿರುವುದು? ಇದರ ಪರಿಣಾಮವು, ಒಂದು ವೇಳೆ, ಆರಂಭದಲ್ಲಿ ಸಾಕಷ್ಟು ಆಗದೆ ಹೋದರೆ, ತಮ್ಮ ನುಡಿಯ ನೆಲೆಯನ್ನು ಕುರಿತು ಇನ್ನಷ್ಟು ಜಾಗರೂಕರಾಗಿರುವುದೂ ತನುಗೆ ಅದರಲ್ಲಿರುವ ಅಕ್ಕರೆಯನ್ನು ಇನ್ನಷ್ಟು ಬಳೆಯಿಸುವುದೂ ಆಯಾ ಜನರ ಕೆಲಸವಾಗಿದೆ. ನಮ್ಮ

ಅಲ್ಲಲ್ಲಿಯ ಕರ್ನಾಟಕಾಭಿಮಾನಿಗಳೂ ಶಿಕ್ಷಣತಜ್ಞರೂ ಸಲಹೆಸೂಚನೆಗಳನ್ನು ಕಳಿಸಿದ್ದರು.

ಪರಿಷತ್ತಿನ ಪ್ರಾರಂಭವು ಬಹಳೇ ಸ್ಫೂರ್ತಿದಾಯಕವಾಗಿತ್ತು. ಬಂದವರನ್ನು ಸ್ವಾಗತಿಸಿದವರು ಕರ್ನಾಟಕದ ಲೋಕವಂದಿತ ಮುಂದಾಳುಗಳಾದ ದೇಶವತ್ಸಲ ಶ್ರೀ: ರಂಗನಾಥ ದಿವಾಕರರು. ಮುಂಬಯಿ ಪ್ರಾಂತದ ಪ್ರಧಾನಮಂತ್ರಿಗಳೂ ಶಿಕ್ಷಣಮಂತ್ರಿಗಳೂ ಆದ ಮಾನ್ಯ ಶ್ರೀ. ಬಾಳಾಸಾಹೇಬ ಖೇರರು ಪರಿಷತ್ತಿನ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಹುರುಪಿನ ಮೂರ್ತಿಗಳೂ ವಿದ್ವನ್ಮಣಿಗಳೂ ಆದ ಶ್ರೀ. ಡಾ. ವಿಜಯೀಂದ್ರರಾವ್ ಅವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಎಲ್ಲ ಪ್ರಾರಂಭಗಳು ಫಲಾನುಮೇಯಗಳೆಂದು ಮಹಾಕವಿ ಕಾಳಿದಾಸನು ಸೂಕ್ತವಾಗಿ ನುಡಿದಿದ್ದಾನೆ. ಆದುದರಿಂದ ಪರಿಷತ್ತಿನ ಯಶಸ್ವಿತೆಯ ಬಗ್ಗೆ ಈಗಾಗಲೆ ಮತಕೊಡುವದು ಸಮಂಜಸವಾಗಲಿಕ್ಕಿಲ್ಲ. ಆದರೂ ಸುಪ್ರಾರಬ್ಧವು ಸುಫಲದಾಯಿಯಾಗುವದು ನಿಃಸಂದೇಹವಾದುದರಿಂದ ಪರಿಷತ್ತಿನಲ್ಲಿ ಜರುಗಿದ ಚರ್ಚೆ ಕಾರ್ಯರಂಗಕ್ಕೆ ತೀವ್ರದಲ್ಲಿಯೇ ಬರುವದೆಂದು ತಿಳಿದವರು ಭಾವಿಸಿದ್ದಾರೆ. ಪರಿಷತ್ತಿನ ತೀರ್ಮಾನಗಳು ಅಲ್ಲಿ ಕೂಡಿದ ವಿದ್ವಾಂಸರ ಕರ್ನಾಟಕ ಹಿತೈಕದೃಷ್ಟಿ, ಶೈಕ್ಷಣಿಕ ಸಮಸ್ಯೆಗಳ ಆಮೂಲಾಗ್ರಜ್ಞಾನ, ಮುನ್ನೋಟ, ಗಾಂಭೀರ್ಯ, ವಿವೇಚನಕೌಶಲ್ಯ ಮುಂತಾದ ಸದ್ಗುಣಗಳನ್ನು ಚನ್ನಾಗಿ ಮನಗಾಣಿಸುವಂತಹವಿವೆ.

ಒಟ್ಟಿನಲ್ಲಿ ಇಪ್ಪತ್ತೈದು ಗೊತ್ತುವಳಿಗಳು ಅಂಗೀಕೃತವಾದವು. ಅವುಗಳಲ್ಲಿ, ಅಖಿಲ ಕರ್ನಾಟಕ ದೃಷ್ಟಿಯಿಂದ ಎಲ್ಲಾ ಶೈಕ್ಷಣಿಕ ಸಮಸ್ಯೆಗಳನ್ನು ವಿಚಾರಿಸುವದು, ಇಂತಹ ಸಮಸ್ಯೆಗಳನ್ನು ಬಿಡಿಸುವಾಗ ಆಯಾ ಸರಕಾರದವರೂ ವಿದ್ಯಾಪೀಠದವರೂ, ಆಪ್ತಾಲೋಚನೆಯನ್ನೂ ಪರಸ್ಪರ ಸಹಕಾರವನ್ನೂ ಮಾಡುವದರ ಔಚಿತ್ಯ, ಬೇರೆ ಬೇರೆ ಆಡಳಿತಗಳಲ್ಲಿ ಸೇರ್ಪಟ್ಟ ಕನ್ನಡಿಗರು ಶಿಕ್ಷಣಪ್ರಪಂಚದಲ್ಲಿ ಸಮಾನ ಹಕ್ಕುಬಾಧ್ಯತೆಗಳನ್ನು ಉಪಭೋಗಿಸಲು ಅಗತ್ಯವಿರುವ ಸೌಕರ್ಯಗಳು, ಕರ್ನಾಟಕದ ಸರ್ವಾಂಗೀಣವಾದ ಉನ್ನತಿಗೆ ಅತ್ಯಗತ್ಯವಾಗಿ ಸದ್ಯದಲ್ಲಿಯೇ ಬೇಕಾಗಿರುವ ವಿವಿಧ ಶಿಕ್ಷಣ ಸಂಸ್ಥೆಗಳು, ಸರಕಾರದವರು ಈಗ ತೆರೆಯಬೇಕೆನ್ನುತ್ತಿರುವ ಎಸ್. ಟಿ. ಕಾಲೇಜಿನಂತಹ ಹೊಸ ಸಂಸ್ಥೆಗಳ ಸಂದರ್ಭದಲ್ಲಿ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ಆಗಬಾರದೆಂದು ಮಾಡಿದ ಸೂಚನೆಗಳು, ಗಡಿನಾಡುಗಳಲ್ಲಿಯ ಕನ್ನಡಿಗರ ಗೋಳನ್ನು ದೂರಮಾಡುವದಕ್ಕಾಗಿ ಆಯಾ ಸರಕಾರದವರು ಕೈಕೊಳ್ಳತಕ್ಕ ಉಪಾಯಗಳು ಮುಂತಾದವುಗಳ ಬಗ್ಗೆ ಮಾಡಿದ ತೀರ್ಮಾನಗಳು ಮನನೀಯವಾದವುಗಳಿವೆ. ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳನ್ನು ಮೊದಲು ಮಾಡಿಕೊಂಡು ಅಖಿಲ ಕರ್ನಾಟಕ ವಿದ್ಯಾಪೀಠದ ಯೋಜನೆಯ ವರೆಗಿದ್ದ ಎಲ್ಲ ಸಮಸ್ಯೆಗಳ ಪರಾಮರ್ಶವನ್ನು ಪರಿಷತ್ತಿನವರು ಒಳ್ಳೇ ವಿಧಾಯಕ ಸ್ವರೂಪದಲ್ಲಿ ಮಾಡಿದ್ದಾರೆ. ಪರಿಷತ್ತಿನ ಗೊತ್ತುವಳಿಗಳ ಪತ್ರಿಕೆಯು ಕರ್ನಾಟಕ ಶಿಕ್ಷಣಪ್ರಪಂಚ ಪ್ರಕಾಶಿಕೆಯೆಂದರೆ ತಪ್ಪಾಗದು.

ಪರಿಷತ್ತಿನಲ್ಲಿ ಜರುಗಿದ ಎಲ್ಲಕ್ಕೂ ಮಹತ್ವದ ಘಟನೆಯೆಂದರೆ 'ಅಖಿಲ ಕರ್ನಾಟಕ ಶಿಕ್ಷಣ ಮಂಡಲ'ದ ನಿರ್ಮಾಣ. ಪರಿಷತ್ತಿನ ಗೊತ್ತುವಳಿಗಳು ವರದಿಯ ಹೊತ್ತಿಗೆಯಲ್ಲಿಯೇ ಅಡಗಿ ಹೋಗದೆ ಅವು ಕಾರ್ಯರಂಗಕ್ಕೆ ಬರುವಂತೆ ಮಾಡಲು ನಿರ್ಮಿಸಿದ ಕಾರ್ಯಕಾರಿ ಮಂಡಲವಿದು. ಡಾ. ವಿಜಯೀಂದ್ರರಾವ್ ಅವರು ಈ ಮಂಡಲದ ಅಧ್ಯಕ್ಷರಾಗಿದ್ದಾರೆ. ಉಪಾಧ್ಯಕ್ಷರು ಶ್ರೀ. ದಿವಾಕರ ರಂಗನಾಥರು. ಕೃಷ್ಣಾರ್ಜುನರನ್ನು ಹೋಲುವ ಇವರೀರ್ವರನ್ನೆ ತಕ್ಕೊಂಡರೂ ಪರಿಷತ್ತಿನ ಗೊತ್ತುವಳಿಗಳು ಪರಿಣಾಮಕಾರಿಗಳಾಗುವಂತೆ ಅವರು ಮಾಡದಿರಲಾರರೆಂದು ಧಾರಾಳವಾಗಿ ಹೇಳಬಹುದು. ಇದಲ್ಲದೆ ಶ್ರೀಮಾನ್ ಬಿ. ಎಮ್. ಶ್ರೀಕಂಠಯ್ಯ, ಶ್ರೀ. ಕೆ. ಆರ್. ಕಾರಂತ, ಶ್ರೀ. ದಾತಾರ ಬಳವಂತರಾಯರು, ಪ್ರೊ. ಗೋಕಾಕ, ಪ್ರೊ. ವಾರ್ಕೆ, ಬ್ಯಾ. ಸರದಾರ, ಶ್ರೀ. ಎನ್. ಸೋಮಣ್ಣ, ಶ್ರೀ. ಹುಕ್ಕೇರಿಕರ ಮೊದಲಾದ ವೀರಗನ್ನಡಿಗರೂ, ತಂತ್ರಜ್ಞರೆಲ್ಲರೂ ಮಂಡಲವನ್ನು ಶೋಭಿಸುವುದನ್ನು ನೋಡಿದರೆ, ಕನ್ನಡಿಗರ ಶಿಕ್ಷಣಸಮಸ್ಯೆಗಳು ಸರಿಯಾದ ರೀತಿಯಲ್ಲಿ ಬಿಡುಗಡೆ ಹೊಂದುವವು ಮತ್ತು ತೀವ್ರದಲ್ಲಿಯೇ ಅಖಂಡ ಕರ್ನಾಟಕ ರಾಷ್ಟ್ರನಿರ್ಮಾಣವು ಆಗುವದು ಎಂದು ಭಾವಿಸಲು ಸಾಧ್ಯವಾಗಿದೆ.

ಪರಿಷತ್ತಿನ ವಿಮರ್ಶೆಯನ್ನು ಮುಗಿಸುವದರ ಪೂರ್ವದಲ್ಲಿ ಕನ್ನಡಿಗರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುವ ಚಾಪಲ್ಯವನ್ನು ಅವರು ದಯೆಯಿಟ್ಟು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇವೆ. ಅಖಿಲ ಕರ್ನಾಟಕದವರು ಪರಿಷತ್ತಿನ ಗೊತ್ತುವಳಿಗೆ ತಮ್ಮ ಬಲವತ್ತಾದ ಬೆಂಬಲವಿದೆಯೆಂಬುದನ್ನು ತಕ್ಕ ಮಾರ್ಗಗಳಿಂದ ಆಯಾ ಸರಕಾರದವರ ಗಮನಕ್ಕೆ ತರುವದು ಅವರ ಆದ್ಯಕರ್ತವ್ಯವಾಗಿದೆ. ಅದರಂತೆ

ಮೇಲ್ಕಾಣಿಸಿವ ಕರ್ನಾಟಕ ಶಿಕ್ಷಣಮಂಡಲದ ಕೂಡ ಕರ್ನಾಟಕದಲ್ಲಿಯ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಶಿಕ್ಷಣಾಭಿಮಾನಿಗಳು ಸಹಕರಿಸಿ, ಮಂಡಲದವರು ಹೊತ್ತ ಒಜ್ಜೆಯನ್ನು ಹಗುರು ಮಾಡಬೇಕಾಗಿದೆ. ಮಂಡಲದವರಿಗೆ ಬೇಕಾದ ಅಂಕಿಪಟ್ಟಿಗಳನ್ನು ಪೂರಯಿಸಿ, ತಮ್ಮ ಬೇಕು-ಬಯಕೆಗಳನ್ನು, ತಮ್ಮ ಮಾರ್ಗದಲ್ಲಿದ್ದ ತೊಡರುಗಳನ್ನು ಕಾಲೋಚಿತವಾಗಿ ಅವರ ನಿದರ್ಶನಕ್ಕೆ ತಂದುಕೊಟ್ಟು, ಸರಕಾರದವರು ಶೈಕ್ಷಣಿಕ ಯೋಜನೆಗಳನ್ನು ಕೈಕೊಳ್ಳುವ ಮೊದಲು ಮಂಡಲದವರ ಸಲಹೆಯನ್ನು ಪಡೆಯಲುತ್ಸುಕರಾಗುವಂತೆ ಅವರು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಕೈಕೊಳ್ಳಬೇಕು.

ಮಾತೃಭಾಷೆಯ ಶಿಕ್ಷಣ ★

ಲೇಖಕರು: ಶ್ರೀ. ನಾರಾಯಣ ಭಟ್ಟ, ವಿದ್ವಾನ್,
ಕೆನರಾ ಹೈಸ್ಕೂಲು, ಮಂಗಳೂರು

ತಾಯ್ನುಡಿಯ ಅಭ್ಯಾಸವು ಇತರ ಅಭ್ಯಾಸಗಳಂತಿರದೆ, ಅದು ನಾಡಿಗರ ಉಸಿರಿನಂತೆ ನಿರಂತರ ನಡೆಯುನಂತಹದು. ಇತರ ಪಾಠಗಳ ಪ್ರಯೋಜನವು ಅಭ್ಯಾಸಿಯು ಅನುಸರಿಸುವ ವ್ಯವಹಾರ ಕ್ಷೇತ್ರವನ್ನನುಸರಿಸಿ ಅನುಭವಕ್ಕೆ ಬರಲೂಬಹುದು; ಬಾರದಿರಲೂಬಹುದು. ಆದರೆ ತಾಯ್ನುಡಿಯ ಶಿಕ್ಷಣದಲ್ಲಿ ಸಫಲತೆಯನ್ನು ಪಡೆದರೆ ಶಿಕ್ಷಣದ ಮುಖ್ಯಾಂಶವನ್ನೆ ಪೂರೈಸಿದಂತಾಗುವುದು.

ತ್ರಿಳಿವಳಿಕೆಯನ್ನು ಹೆಚ್ಚಿಸುವುದು ಶಿಕ್ಷಣದ ಒಂದು ಗುರಿಯೆಂಬುದು ಎಲ್ಲರೂ ಅರಿತ ಸಂಗತಿ. ಆ ಗುರಿಯನ್ನು ಸಾಧಿಸುವುದಕ್ಕೆ ಒಪ್ಪುವಂತಹ ಶಿಕ್ಷಣದ ಸಾಧನವಾದ ಭಾಷೆಯ ಕೆಲಸವು ಹಿರಿದಾದುದು. ಹೇಳಿ ತಿಳಿಸುವುದಕ್ಕೆ ಸಮರ್ಥವಾದ ತಮ್ಮದಾದ ನುಡಿಯಿಲ್ಲದಿರುವ ಜನರ ತಿಳಿವು ಅಸ್ವತಂತ್ರವಾಗಿಯೇ ಉಳಿಯಬಹುದು. ನಮ್ಮ ಶಾಲೆಗಳಲ್ಲಿ ಇಂಗ್ಲನುಡಿಯ ಮೂಲಕ ವಿದ್ಯಾಭ್ಯಾಸವಾಗುವುದು ಬಂದಂದಿನಿಂದ ನಾಡಿಗರು ಪರಾವಲಂಬಿಗಳಾಗಿರುತ್ತಾರೆ. ಇಂಗ್ಲ ನುಡಿಯ ಒಡೆತನದ ನೆರಳಲ್ಲಿ ಬಳೆದ, ಬಳೆಯುತ್ತಿರುವ ಈಗಳಿನ ಶಿಕ್ಷಣವು ಚೆನ್ನೆನಿಸದಿರುವುದು ಆಶ್ಚರ್ಯವಲ್ಲ. ಈ ಮಾತಿನಲ್ಲಿ ಇಂಗ್ಲನುಡಿಯನ್ನು ಕೀಳ್ಗಳೆಯುವ ಎಣಿಕೆ ಇಲ್ಲ. ಅದರ ಸೊಗಸನ್ನು ಬಲ್ಲವರು ಬಲ್ಲರು. ಅದಕ್ಕೆ ಹಿರಿಮೆಯುಂಟು, ಮನ್ನಣೆಯುಂಟು. ಅದು ಲೋಕದ ಹೆಚ್ಚಿನ ಕಡೆಗಳಲ್ಲಿ ಹರಡಿಕೊಂಡಿದೆ. ಹಾಗಿದ್ದರೂ ಅದು ಹಬ್ಬಿರುವ ಎಲ್ಲೆಡೆಗಳಲ್ಲೂ ಆ ನುಡಿಯ ಮೂಲಕವಾಗಿಯೇ ಶಿಕ್ಷಣವನ್ನು ಸಲ್ಲಿಸುವ ಹವಣಿಕೆ ಸರಿಯಲ್ಲವೆಂಬುದನ್ನು ಆಯಾ ಕಡೆಯ ಜನರು ತಿಳಿದುಕೊಂಡಿದ್ದಾರೆ. ಜನರ ತಾಯ್ನುಡಿಯೆಂಬುದೊಂದಿದ್ದರೆ, ಆ ಮೂಲಕವಾಗಿಯೇ ಆಯಾ ಜನರಿಗೆ ಶಿಕ್ಷಣ ಸಲ್ಲಬೇಕೆಂಬ ಚಳವಳವು ಇತ್ತೀಚೆ ಬಲವಾಗಿ ನಡೆದಿದೆ. ಆದುದರಿಂದ ಈಗ ಆಳುವ ಜನರ-ಕಡೆಯ-ಸರಕಾರಗಳು (ಕಾಂಗ್ರೆಸು ಸರಕಾರಗಳು) ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಏರ್ಪಡಿಸುವ ಹಂಚಿಕೆಯನ್ನು ಮಾಡುತ್ತಲಿದ್ದಾರೆ. ಶಿಕ್ಷಣ ಹೊಂದಿಸಬೇಕಾದ ಎಲ್ಲ ವಿಷಯಗಳನ್ನೂ ತಾಯ್ನುಡಿಯ ಮೂಲಕವಾಗಿಯೇ ಹೇಳಿತಿಳಿಸಿ ತಿಳಿಯುವಂತೆ ಮಾಡುವುದು ಈ ಹಂಚಿಕೆಯ ಗುರಿಯಷ್ಟೆ! ಭಾಷೇತರ ವಿಷಯಗಳನ್ನು ತಾಯ್ನುಡಿಯ ಮೂಲಕ ಹೇಳಿಕೊಡುವುದರಿಂದ ಒಳ್ಳೆಯದುಂಟು. ತಾಯ್ನುಡಿಯನ್ನು ಕೂಡ ಒಳ್ಳೆಯ ರೀತಿಯಲ್ಲಿ ಕಲಿಸುವುದರಿಂದ ಮತ್ತಷ್ಟು ಒಳ್ಳೆಯದುಂಟು.

ತಾಯ್ನುಡಿಯನ್ನು ಹೇಳಿಕೊಡುವ ಅವಶ್ಯವೇನಿದೆ? ಅದನ್ನು ಹೇಗಾದರೂ ತನ್ನಂತೆಯೆ ಕಲಿತುಕೊಳ್ಳಬಹುದಲ್ಲವೆ? ಎಂದು ಕೇಳುವವರು ಕೆಲವರಿದ್ದಾರೆ. ಅದರಲ್ಲಿ ಕಲಿಸುವುದಕ್ಕೇನೂ ಇಲ್ಲ; ಆದುದರಿಂದ ಅದನ್ನು ಕಲಿಸಲಾಗುವುದೆ? ಎಂದೆನ್ನುವವರು ಕೆಲಕೆಲವರಿದ್ದಾರೆ. ಆದರೆ, ತಾಯ್ನುಡಿಯನ್ನೂ ಅದರ ಸಾಹಿತ್ಯವನ್ನೂ ಒಪ್ಪಾಗಿ ಕಲಿಸಬೇಕು, ಚೆನ್ನಾಗಿ ಕಲಿಯಬೇಕು ಎಂಬ ಚಳವಳದ ನಡುವೆ ನಾವೀಗ ಸೇರಿರುವುದರಿಂದ ಮೇಲಣ ಹೇಳಿಕೆಗಳಲ್ಲಿ ಹುರುಳಿಲ್ಲವೆಂದು ಅವನ್ನು ಕಡೆಗಣಿಸಬಹುದಾಗಿದೆ. ಈ ಚಳವಳವು ಹೆಚ್ಚಿರುವುದರಿಂದಲ್ಲವೆ, ತಾಯ್ನುಡಿಗೆ ಉತ್ತೇಜನ ಕೊಡಬೇಕೆಂಬ ಒತ್ತಾಯವು ತೊಡಗಿರುವುದು? ಇದರ ಪರಿಣಾಮವು, ಒಂದು ವೇಳೆ, ಆರಂಭದಲ್ಲಿ ಸಾಕಷ್ಟು ಆಗದೆ ಹೋದರೆ, ತಮ್ಮ ನುಡಿಯ ನೆಲೆಯನ್ನು ಕುರಿತು ಇನ್ನಷ್ಟು ಜಾಗರೂಕರಾಗಿರುವುದೂ ತನುಗೆ ಅದರಲ್ಲಿರುವ ಅಕ್ಕರೆಯನ್ನು ಇನ್ನಷ್ಟು ಬಳೆಯಿಸುವುದೂ ಆಯಾ ಜನರ ಕೆಲಸವಾಗಿದೆ. ನಮ್ಮ

ನುಡಿ, ನಮ್ಮ ಸಾಹಿತ್ಯಗಳ ಅತಿ ಪರಿಚಯದಿಂದ ನಮಗೆ ಅವುಗಳಲ್ಲಿ ಬೇಸರಿಕೆಯುಂಟಾಗುವುದರ ಬದಲು ಮನ್ನಣೆಯೂ ಮಮತೆಯೂ ಹೆಚ್ಚುವುವು. ಅಭ್ಯಾಸ ಮಾಡುವ ಇತರ ವಿಷಯಗಳಿಗೂ ತಾಯ್ನುಡಿಗೂ ಹೆಚ್ಚುಕಡಮೆ ಇದೆ. ತಾಯ್ನುಡಿಯನ್ನು ಕಲಿಯುವುದೇ ಒಂದು ಗುರಿ ಮಾತ್ರವಲ್ಲ, ಇತರ ವಿಷಯಗಳ ಅಭ್ಯಾಸಕ್ಕೂ ಅದು ಸಾಧನವಾಗಿದೆ. ಆದುದರಿಂದ ಯಾವುದನ್ನು ಕಲಿಸಿದರೂ ತಾಯ್ನುಡಿಯನ್ನು ಕಲಿಸಿದಂತೆ; ಪ್ರತಿಯೊಂದು ಪಾಠವನ್ನೂ ತಾಯ್ನುಡಿಯ ಪಾಠವನ್ನಾಗಿ ಮಾಡಬಹುದು ಮಾತ್ರವಲ್ಲ, ಮಾಡಬೇಕು.

ಇಲ್ಲಿ ಕುರಿತಾಗಿ ಪ್ರಸ್ತಾವಿಸಲಿರುವುದು ಕನ್ನಡ ನುಡಿಯ ಶಿಕ್ಷಣ ವಿಚಾರವು. ಕನ್ನಡ ನಾಡಿಗರಿಗೆ, ಹೆಚ್ಚು ಕಡಮೆ, ಕನ್ನಡವೇ ತಾಯ್ನುಡಿಯೆಂಬ ಎಣಿಕೆಯನ್ನಿಟ್ಟುಕೊಳ್ಳಬೇಕು. ಆದರೆ ಈ ನಾಡಿನಲ್ಲಿ ತುಳು ಕೊಂಕಣಿ ಮುಂತಾದುವುಗಳು ಮನೆಮಾತಾಗಿರುವ ಜನರು ಇದ್ದಾರೆ. ಅವರ ಸಂಖ್ಯೆ ಕಡಮೆ, ಆ ನುಡಿಗಳಲ್ಲಿ ಲಿಪಿಸಾಹಿತ್ಯಗಳಿಲ್ಲ. ಆದುದರಿಂದ ಅವುಗಳು ಸಾರ್ವಜನಿಕ ವ್ಯವಹಾರಕ್ಕೆ ಸಲ್ಲವು. ಕನ್ನಡನಾಡಿನಲ್ಲಿರುವ, ಕನ್ನಡವು ತಮ್ಮ ಮನೆಮಾತಾಗಿರದ ಜನರು, ಅದು ತಮ್ಮ ದೇಶಭಾಷೆಯೆಂಬ ಮಮತೆಯಿಂದ ಅದನ್ನು ತಮ್ಮದೆಂದೆಣಿಸಬೇಕು. [ಈ ಲೇಖದಲ್ಲಿ ಕನ್ನಡವು ತಾಯ್ನುಡಿಯೆಂದಿರುವಲ್ಲಿ ಅವರವನ್ನು 'ನಾಡನುಡಿಯೆಂದು ಓದಿಕೊಳ್ಳುವರಲ್ಲದೆ, ತಿಳಿದುಕೊಳ್ಳುವರೆಂಬ ನಂಬಿಕೆಯಿಂದ ಹಾಗೆ ಬರೆದಿರುವುದು.] ತಾಯ್ನುಡಿಯನ್ನು ಕಲಿಯುವ ಉದ್ದೇಶವೇನೆಂಬುದಕ್ಕೆ ಸುಲಭವಾಗಿ ಉತ್ತರವೀಯಬಹುದು. ಶಿಕ್ಷಣದಲ್ಲಿ ಯಾವುದೇ ಆಗಲಿ—ಭಾಷೆಯ ಅಭ್ಯಾಸಕ್ಕೆ ಹೆಚ್ಚಿನ ಬೆಲೆ ಇದೆ. ಒಬ್ಬ ಮನುಷ್ಯನಿಗೆ ಬೆಲೆಗಟ್ಟುವುದಕ್ಕೆ ಆತನ ಮಾತಿನಷ್ಟು ಸುಲಭವಾಗಿ ದೊರೆಯುವ ಸಾಧನವು ಬೇರೊಂದಿಲ್ಲ. ಆದುದರಿಂದ ಕನ್ನಡನಾಡಿಗನಿಗೆ ಸಾಮಾನ್ಯ ವ್ಯವಹಾರಕ್ಕೆ ಉಪಯೋಗವಾಗುವಂಥ ಶುದ್ಧ ಕನ್ನಡವನ್ನು ಮಾತಾಡುವುದಕ್ಕೂ ಬರೆಯುವುದಕ್ಕೂ ಗೊತ್ತಾಗುವಂತೆ ಮಾಡುವುದು ಅದನ್ನು ಕಲಿಯುವ ಮೂಲೋದ್ದೇಶ. ಅದು ಕೇವಲ ವ್ಯವಹಾರದ ಉಪಯೋಗಕ್ಕಾಗಿರುವುದೆಂದು ತೋರಿದರೂ ಅದರ ಉಪಯೋಗವು ಅವರವರನ್ನು ಹೊಂದಿಕೊಂಡು ಹೆಚ್ಚುಕಡಮೆಯಾಗುವುದು. ಪರಸ್ಪರ ಯೋಗಕ್ಷೇಮವನ್ನು ಕೇಳಿ ತಿಳಿದುಕೊಳ್ಳುವುದರಿಂದ ಹಿಡಿದು ಉತ್ತಮ ಕಾವ್ಯಸಾಹಿತ್ಯಗಳನ್ನು ಹುಟ್ಟಿಸಿ ಜನೋಪಕಾರವನ್ನು ಸಾಧಿಸುವ ವರೆಗೆ ಅದರ ಶಕ್ತಿ ಬೆಳೆಯಬಲ್ಲುದು. ಪ್ರತಿಯೊಬ್ಬ ಕನ್ನಡಿಗ ಬಾಲಕನ ಮಾನಸಿಕ ಮಟ್ಟವನ್ನನುಸರಿಸಿಕೊಂಡು, ಕನ್ನಡನುಡಿಯನ್ನು ವಿಚಾರವಿನಿಮಯದ ಮುಖ್ಯಸಾಧನವನ್ನಾಗಿ ಪ್ರಯೋಗಿಸಬೇಕು. ಕನ್ನಡವು ಬಾಳಿಕೊಂಡಿರುವ ನುಡಿ. ಅದು ಮೃತಭಾಷೆಯಲ್ಲ. ಆದುದರಿಂದ ನುಡಿಯೋಜರು ಅದನ್ನು ತಮ್ಮ ಪ್ರತಿಭೆಗೆ ತಕ್ಕಂತೆ ಮಾರ್ಪಡಿಸಿಕೊಂಡು ಅದಕ್ಕೆ ಅಷ್ಟಿಷ್ಟು ಶಕ್ತಿಯನ್ನು ಕೂಡಿಸಿದ್ದುಂಟು. ಕನ್ನಡವನ್ನು ಚೆನ್ನಾಗಿಯೂ ಸರಿಯಾಗಿಯೂ ಕಲಿಯುವುದೇ ಒಂದು ಕಲೆಯನ್ನು ಅಭ್ಯಾಸಮಾಡಿದಂತೆ. ಅದಕ್ಕಷ್ಟು ಶ್ರಮವಿದೆ; ಅದರಿಂದಷ್ಟು ಸುಖವೂ ಇದೆ.

ಭಾಷೆಗಳನ್ನು ಕಲಿಸುವಲ್ಲಿ ಉಂಟಾಗುವ ತೊಡಕುಗಳು ಹೆಚ್ಚುಕಡಮೆ ಎಲ್ಲಾ ಭಾಷೆಗಳಿಗೂ ಹೊಂದಿಕೆಯಾಗುತ್ತವೆ. ತಾಯ್ನುಡಿಯ ವ್ಯವಸಾಯದಲ್ಲಿ ತೊಡಕುಗಳು ಮತ್ತಷ್ಟು ಹೆಚ್ಚಲ್ಲದೆ ಕಡಮೆಯಲ್ಲ. ಭಾಷಾಪಾಠದಲ್ಲಿ ವ್ಯಾಕರಣದ ಸ್ಥಾನವಾವುದು? ವ್ಯಾಕರಣದ ಅಭ್ಯಾಸವನ್ನು ಎಷ್ಟರ ಮಟ್ಟಿಗೆ ಯಾವಯಾವ ತರಗತಿಗಳಲ್ಲಿ ಪ್ರಯೋಗಿಸಬೇಕು? ವಿದ್ಯಾರ್ಥಿಯ ಬರವಣಿಗೆಯನ್ನು ತಿದ್ದಿ ತಿದ್ದಿಸುವ ಕೆಲಸವು ಹೇಗೆ ನಡೆಯಬೇಕು? ಓದಿದುದನ್ನು ತಿಳಿಯುವುದು, ಸರಿಯಾಗಿ ಬರೆಯುವುದು, ಮಾತಾಡುವುದು,—ಇಷ್ಟರಲ್ಲೇ ಭಾಷಾಭ್ಯಾಸದ ಪ್ರಯೋಜನವು ಮುಗಿಯಿತೆ? ಇವುಗಳಿಗಿಂತ ಮೇಲಾಗಿ ಆಂತರಿಕ ಬುದ್ಧಿಭಾವಗಳನ್ನು ಹದಗೊಳಿಸಿ ಬೆಳೆಸುವುದರಲ್ಲಿ, ಮನಸ್ಸಿನ ಕೆಚ್ಚುನೆಚ್ಚುಗಳಿಗೆ ಪರಿಪಾಕವನ್ನುಂಟುಮಾಡುವುದರಲ್ಲಿ ಭಾಷಾಪಾಠದ ಕಾರ್ಯಭಾಗವೇನು? ಇವೇ ಮುಂತಾದ ಕೆಲವು ಪ್ರಶ್ನೆಗಳು ಮಾತೃಭಾಷೆಯ ಶಿಕ್ಷಣ ವಿಚಾರದಲ್ಲಿ ವಿಶೇಷವಾಗಿ ಮುಂದೆ ಬರುತ್ತವೆ. ಶಿಕ್ಷಣತಜ್ಞರು ಇವುಗಳಿಗೆಲ್ಲ ಸಾಕಷ್ಟು ಸಮರ್ಪಕವಾಗಿ ಉತ್ತರವೀಯಲು ಯತ್ನಿಸಿದ್ದಾರೆ. ಒಂದೊಂದು ವಿಷಯದಲ್ಲೂ ಭಿನ್ನಾಭಿಪ್ರಾಯಗಳಿಲ್ಲದೆ ಇಲ್ಲ. ಶಿಕ್ಷಣದಲ್ಲಿ ಮುಖ್ಯ ಸಂಗತಿಯೆಂದರೆ ಶಿಕ್ಷಕನ ವ್ಯಕ್ತಿತ್ವ. ಶಿಕ್ಷಣ ವಿಧಾನಗಳು ಸಂದರ್ಭಾನುಸಾರವಾಗಿ ಬೇರೆ ಬೇರೆ ತೆರದವುಗಳಾಗಿರಬಹುದು. ತಾಯ್ನುಡಿಯ ಅಭ್ಯಾಸವು ಇತರ ಅಭ್ಯಾಸಗಳಂತಿರದೆ, ಅದು ನಾಡಿಗನ ಉಸಿರಿನಂತೆ ನಿರಂತರ ನಡೆಯುವಂತಹದು. ಇತರ ಪಾಠಗಳ ಪ್ರಯೋಜನವು ಅಭ್ಯಾಸಿಯು ಅನುಸರಿಸುವ ವ್ಯವಹಾರಕ್ಷೇತ್ರವನ್ನನುಸರಿಸಿ ಅನುಭವಕ್ಕೆ ಬರಲೂ ಬಹುದು; ಬಾರದಿರಲೂ ಬಹುದು. ಆದರೆ ತಾಯ್ನುಡಿಯ ಪ್ರಯೋಜನವು ಅಂತಲ್ಲ. ತಾಯ್ನುಡಿಯ ಶಿಕ್ಷಣದಲ್ಲಿ ಸಫಲತೆಯನ್ನು ಪಡೆದರೆ ಶಿಕ್ಷಣದ ಮುಖ್ಯೋದ್ದೇಶವನ್ನು ಪೂರೈಸಿದಂತಾಗುವುದೆಂದು ಎಣಿಸಬಹುದು.

ಸ್ವಲ್ಪ ಸ್ವವಿಷಯ:—ಕೊನೆಗೊಮ್ಮೆ 'ಶಿಕ್ಷಣಾಂಕ'ದ ಕೆಲಸವನ್ನು ಮುಗಿಸಿ, ವಾಚಕರ ಕೈಯಲ್ಲಿ ಅದನ್ನು ಒಪ್ಪಿಸಿರುವೆವು. ಇದರಲ್ಲಿಯ ಲೋಕ-ದೋಷಗಳ ಅರಿವು ನಮಗೆ ತುಂಬಾ ಇದೆ. ಮೊದಲನೆಯದು, ಕಾಗದದ ವಿಷಯ. ಇದಕ್ಕಾಗಿ ಬೆಳ್ಳನೆಯ, ದಪ್ಪನೆಯ ಕಾಗದಕ್ಕಾಗಿಯೆ ಆರ್ಡರು ಕೊಟ್ಟಿದ್ದೆವು; ಆದರೆ ಮುದ್ರಣ ಪ್ರಾರಂಭವಾಗುವ ಹೊತ್ತಿಗೆ ನಮಗೆ ಕಾಗದ ಪೂರೈಸುವವರು ಇಲ್ಲಿ ಉಪಯೋಗಿಸಿದ ಕಾಗದವನ್ನೆ ಕೊಟ್ಟಿದ್ದರಿಂದ ನಿರುಪಾಯರಾದೆವು. ಮುಂದಿನ ತಿಂಗಳಿಂದ ಹೀಗಾಗಲಿಕ್ಕಿಲ್ಲವೆಂದು ಭರವಸೆ ಕೊಡುತ್ತೇವೆ. ಎರಡನೆಯದು, ಪ್ರಕಟನೆಯಲ್ಲಾದ ವಿಲಂಬ. ಈ ಬಗ್ಗೆ ಕ್ಷಮಾಪಣೆಯನ್ನು ಕೋರುತ್ತಲೆ, ಒಂದೆರಡು ಮಾತುಗಳನ್ನು ತಿಳಿಸಲಪೇಕ್ಷಿಸುವೆವು. ಸಂಚಿಕೆಯ ಮುದ್ರಣ ಮುಗಿಮುಗಿಯುವ ಹೊತ್ತಿಗೆ, ಅನಿವಾರ್ಯವಾಗಿ ಬೇಕಾದ ಒಂದೆರಡು ಲೇಖನಗಳು ಕೈಸೇರಿವೆ ! ಮೊದಲೇ ಶಿಕ್ಷಣವಿಷಯ ಹೊಸದು; ಅಧಿಕೃತ ಲೇಖಕರಿಂದಲೇ ಬರೆಹಗಳನ್ನು ಪಡೆಯುವುದು ಅನಿವಾರ್ಯವಾಗಿತ್ತು. ಸ್ವಲ್ಪ ತಡವಾದರೂ ಸರಿ, ತಕ್ಕ ಲೇಖನಗಳ ಸಹಿತವಾಗಿಯೆ ಶಿಕ್ಷಣಾಂಕವನ್ನು ಹೊರಡಿಸುವುದು ಯುಕ್ತವೆಂದು ನಮಗೆ ತೋರಿತು. ಅಲ್ಲದೆ ಸಂಚಿಕೆಯನ್ನು ಮೊದಲಿನಿಂದ ಕೊನೆಯವರೆಗೆ ಒಮ್ಮೆ ಕಣ್ಣಿಟ್ಟು ನೋಡಿದರೆ, ಎಷ್ಟು ಬಗೆಯ ಸಲಕರಣೆಗಳು ಬೇಕಾಗಿದ್ದವೆಂಬುದು ಮನವರಿಕೆಯಾಗದಿರದು. ಈ ಕುಂದುಕೊರತೆಗಳಿದ್ದರೂ ಒಟ್ಟಿನಲ್ಲಿ ಸಂಚಿಕೆಯು ವಾಚಕರಿಗೆ ತೃಪ್ತಿಕರವಾಗಬಹುದೆಂದು ತಿಳಿದುಕೊಂಡಿದ್ದೇವೆ. ಇದರ ಕಾರಣವೆಂದರೆ, ನಮಗೇ ಒಂದು ಬಗೆಯ ತೃಪ್ತಿಯೆನಿಸಿದೆ. ಮೂರು ತಿಂಗಳ ಹಿಂದೆ ಕಾರ್ಯಾರಂಭ ಮಾಡಿದಾಗ ಹಾಕಿಕೊಂಡ ಸಂಚಿಕೆಯ ಹೊಳಹು ತಕ್ಕ ಮಟ್ಟಿಗಾದರೂ ರೂಪುಗೊಂಡಿತೆಂದು ಸಂತೋಷವೆನಿಸಿದೆ. ಈ ಕೆಲಸದ ನಿಮಿತ್ತವಾಗಿ ಮಂಗಳೂರು-ಮೈಸೂರು-ಉತ್ತರ ಕರ್ನಾಟಕಗಳನ್ನು ಸುತ್ತುಹಾಕುವ ಸುಯೋಗವು ದೊರೆಯಿತು. ಅನೇಕ ಹೊಸ ಪರಿಚಯಗಳಾದವು; ಹೊಸ ಅನುಭವ ಬಂದಿತು. ಶಿಕ್ಷಣತಜ್ಞರೊಡನೆ ಚರ್ಚೆ ನಡೆಯಿಸಿದುದರಿಂದ, ಹಲವು ಶಿಕ್ಷಣಸಮಸ್ಯೆಗಳ ಬಗ್ಗೆ ಪರಿಜ್ಞಾನವುಂಟಾಯಿತು. ಇದರಲ್ಲಿಯ ಮುಕ್ಕಾಲುಪಾಲು ಲೇಖನಗಳನ್ನು ಏಕಾಂತ ಬರೆಯಿಸಿಕೊಂಡುವು; ಇಲ್ಲವೆ ತರಿಸಿಕೊಂಡುವು. ಸಾಧ್ಯವಿದ್ದ ಮಟ್ಟಿಗೂ. ಒಂದು ಯೋಜನೆಯ ಪ್ರಕಾರ ಲೇಖನಗಳನ್ನು ಕೊಡಲಾಗಿದೆ. ವೃತ್ತಿಶಿಕ್ಷಣ, ಪ್ರಾಥಮಿಕ ಶಿಕ್ಷಣ, ಸ್ವಾವಲಂಬಿಶಿಕ್ಷಣ, ವರ್ಧಾಯೋಜನೆ, ಮುಂತಾದ ಹಿರಿಯ ಸಮಸ್ಯೆಗಳು; ಶಿಕ್ಷಣದ ಧ್ಯೇಯ-ಧೋರಣೆಗಳು; ಪರದೇಶಗಳಲ್ಲಿಯ ಶಿಕ್ಷಣಪದ್ಧತಿಗಳು; ಶಾರೀರಿಕಶಿಕ್ಷಣ, ಕಿರಿಯ ಅಪರಾಧಿಗಳ ಶಿಕ್ಷಣ, ಹಿರಿಯರ ಶಿಕ್ಷಣ, ಸಹಶಿಕ್ಷಣ, ಚಲಚ್ಚಿತ್ರಗಳ ಮೂಲಕ ಶಿಕ್ಷಣ ಮೊದಲಾದ ಶಿಕ್ಷಣವಿಷಯದ ಅಂಗೋಪಾಂಗಗಳು; ಮಕ್ಕಳ ಶಿಕ್ಷಣ; ಶಾಲೆಕಾಲೇಜುಗಳಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿಕೊಳ್ಳಲು ಮಾಡಬೇಕಾದ ಹಂಚಿಕೆ-ಹವಣಿಕೆಗಳು—ಎಂಬೀ ಬಗೆಯಾಗಿ ಈ ನಕ್ಷೆಯನ್ನು ಬಣ್ಣಿಸಬಹುದು. (ತೀರ ಕೆಲವು ಲೇಖನಗಳು ಹಿಂದುಮುಂದಾಗಿವೆ. ಉ:—ಶ್ರೀ. ನಾಯಿಕರವರ 'ಪ್ರೌಢಶಿಕ್ಷಣ.') ಎಲ್ಲಾ ಲೇಖನಗಳೂ ಆಯಾ ವಿಷಯಗಳಲ್ಲಿ ಪರಿಣತಮತಿಗಳಾಗಿದ್ದವರಿಂದಲೆ ಬರೆಯಲ್ಪಟ್ಟವೆಯೆಂಬುದನ್ನು ವಾಚಕರು ಮನಗಾಣದಿರರು. ಸಂಚಿಕೆ ತುಂಬಲು ಹಾಕಿದ ಬರೆವಣಿಗೆಯು ಬಹುಶಃ ಇಲ್ಲವೇ ಇಲ್ಲವೆಂದು ಧೈರ್ಯದಿಂದ ಹೇಳಬಲ್ಲೆವು. 'ಮಕ್ಕಳ ಶಿಕ್ಷಣ'ಕ್ಕೆ ಸಂಬಂಧಿಸಿದ ವಿಭಾಗವು (ಪುಟ ೯೮೪ರಿಂದ ೧೦೩೧) ಅತ್ಯುಪಯುಕ್ತವಾದುದೆಂದೂ ಅವಶ್ಯ ವಾಚನೀಯವೆಂದೂ ಸೂಚಿಸಲಪೇಕ್ಷಿಸುತ್ತೇವೆ. ಮಕ್ಕಳ ವಿದ್ಯಾಭ್ಯಾಸದ ಬಗೆಗೂ ಅವರಲ್ಲಿ ಜೀವಕಳೆ ತುಂಬಲು ಬೇಕಾಗುವ ಜೋಡಣೆಗಳ ಬಗೆಗೂ ಹಲವು ಲೇಖಕರು, ಸೂಚಿಸಿದ ಮಾತ್ರಕ್ಕೆ ಬರೆಯಲು ಮುಂದುಬಂದುದು ಒಂದು ವಿಶೇಷವು. ಮಕ್ಕಳ ತರಬೇತಿಗಾಗಿ ತಕ್ಕ ಎಚ್ಚರಿಕೆ ವಹಿಸುವುದೆ ಶಿಕ್ಷಣದ ತಳಹದಿಯಾಗಿರುವುದರಿಂದ, ಈ ಲೇಖನಗಳಲ್ಲಿ ಮಾನ್ಯ ಲೇಖಕರು ಮಾಡಿದ ಸಲಹೆಸೂಚನೆಗಳನ್ನು ನಮ್ಮ ನಾಡಿನ ಹಿರಿಯರು ಆದರದಿಂದ ಪರಾಮರ್ಶಿಸುವರೆಂದು ನಂಬಿದ್ದೇವೆ.

ಶುಭಾಶಿಸ್ಸುಗಳು:—ನಾವು ಬಿನ್ನವಿಸಿದೊಡನೆ, ವಿಶೇಷ ಸಂಚಿಕೆಯ ಕಾರ್ಯಕಲಾಪಗಳಿಗೆ ಯಶಸ್ಸನ್ನು ಕೋರಿ, ಮುಂಬಯಿಯ ಮುಖ್ಯಮಂತ್ರಿಗಳೂ ಶಿಕ್ಷಣಮಂತ್ರಿಗಳೂ ಆದ ಮಾನ್ಯವರ ಖೇರ ಅವರೂ ಮೈಸೂರಿನ ದಿವಾಣ ಸಾಹೇಬರವರಾದ ಸರ್ ಮಿರ್ಝಾ ಎಂ. ಇಸ್ಮಾಯಿಲ್ ಅವರೂ ಉಚಿತ ಸಂದೇಶಗಳನ್ನು ದಯಪಾಲಿಸಿದ್ದಕ್ಕೆ ಅವರಿಗೆ ನಮ್ಮ ಕೃತಜ್ಞತೆಯನ್ನು ಸೂಚಿಸದಿರಲಾರೆವು. ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸೆಲರರಾದ ಶ್ರೀ. ಎನ್. ಎಸ್. ಸುಬ್ಬರಾವ್ ಅವರು ನಮ್ಮ ಅಧ್ಯ

ರ್ಥನೆಯನ್ನು ಮನ್ನಿಸಿ, ಚಿಕ್ಕ ಲೇಖನರೂಪವಾಗಿಯೇ ಆಗಲಿ, ಅಧಿಕಾರವಾಣಿಯಿಂದ ತಮ್ಮ ಅಭಿಮತವನ್ನು ಬರೆದುಕಳಿಸಿದುದಕ್ಕಾಗಿಯೂ; ಮುಂಬಯಿ ದಕ್ಷಿಣಭಾಗದ ಎಜುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಬಿ. ಜೆ. ಜಿ. ಶಾಸ್ತ್ರಿಯವರೂ, ವಂದನೀಯ ರಾಷ್ಟ್ರಮುಖಂಡರೂ ಈ ಸಲದ ಸಾಹಿತ್ಯಸಮ್ಮೇಲನದ ನಿಯೋಜಿತ ಅಧ್ಯಕ್ಷರೂ ಆದ ಶ್ರೀಮಾನ್ ರಂಗನಾಥ ದಿವಾಕರ ಅವರೂ, ತಮ್ಮ ಕಾರ್ಯಭಾರದಲ್ಲಿ ಬಿಡುವು ಮಾಡಿಕೊಂಡು, ಸಂದೇಶ ರೂಪವಾದ ಚಿಕ್ಕ ಲೇಖನಗಳನ್ನು ಬರೆದುಕೊಟ್ಟುದಕ್ಕಾಗಿಯೂ ಅವರಿಗೆ ನಮ್ಮ ವಂದನೆಯನ್ನು ಸಮರ್ಪಿಸುವೆವು.

ಆಯಾ ವಿಷಯಗಳಲ್ಲಿ ನಿರ್ವಿವಾದ ಅಧಿಕಾರವುಳ್ಳವರನ್ನೆ ಲೇಖನಗಳಿಗಾಗಿ ಪ್ರಾರ್ಥಿಸಿದೆವೆಂಬ ಮಾತನ್ನು ಮೇಲೆಯೆ ಹೇಳಿರುವೆವು. ೪—೫ ಲೇಖನಗಳನ್ನು ಬಿಟ್ಟರೆ, ಉಳಿದುವೆಲ್ಲ ೩ರಿಂದ ೪ ಪುಟಗಳಿಗೆ ಮಿಕ್ಕದಂತೆಯೆ ಇವೆ. (ಆ ೪-೫ ಲೇಖನಗಳು ಬೆಳೆದುದರ ಕಾರಣವು ವಿಷಯಗಳ ಗಹನತೆಯೆ ಆಗಿದೆ.) ಈ ಮಿತಿ-ಮರ್ಯಾದೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಗಂಭೀರವಿಷಯಗಳನ್ನು ಸಾಮಾನ್ಯರಿಗೂ ಸುಬೋಧವಾಗುವ ರೀತಿಯಲ್ಲಿ ಬರೆದು ಕಳಿಸಿದ ಮಹನೀಯರೆಲ್ಲರಿಗೆ ನಮ್ಮ ವಿಶೇಷ ಕೃತಜ್ಞತೆಯನ್ನು ಸೂಚಿಸುವೆವು.

ಶಿಕ್ಷಣಸಮಸ್ಯೆಗಳ ಕೈಪಿಡಿ:—ನಮ್ಮ ದೇಶದ ಸಮಗ್ರ ಜೀವನವೆ ಒಂದು ಕಾದೆಣ್ಣೆಯ ಕಡಾಯಿಯಂತಾಗಿದೆ. ಬಾಳಿನ ಪ್ರತಿಯೊಂದು ಅಂಗವೂ ಕ್ಷಣಕ್ಷಣಕ್ಕೆ ಪಲ್ಲಟಿಸುತ್ತಿದೆ. ಮುಂಚಿನಂತೆ 'ಶಿಕ್ಷಣ' ವಿಷಯವು ಕೇವಲ ಉಪಾಧ್ಯಾಯರ-ವಿದ್ಯಾಮಂದಿರಗಳ ಸೊತ್ತಾಗಿ, ಮಡಿಯಾಗಿ, ಬಿಡಿಯಾಗಿ ಉಳಿದಿಲ್ಲ. ಬೇರೆ ಜೀವನರಂಗಗಳಿಗೂ ಶಿಕ್ಷಣಕ್ಕೂ ಪ್ರತಿನಿಮಿಷಕ್ಕೂ ನಿಕಟ ಸಂಪರ್ಕ ಬರುತ್ತಿದೆ. ಶಿಕ್ಷಕರು-ಶಿಕ್ಷಣತಜ್ಞರು ಮಾತ್ರವಲ್ಲ, ರಾಜಕೀಯ ಮುಖಂಡರೂ—ಅದೇಕೆ ಸಾಮಾನ್ಯ ಸಾಮಾಜಿಕರು ಕೂಡ—ಶಿಕ್ಷಣದ ಬಗ್ಗೆ ತುಂಬಾ ಆಲೋಚನೆಯನ್ನು ನಡೆಯಿಸಿದ್ದಾರೆ. ಬೆಳೆಯುವ ಮಕ್ಕಳೆ ನಾಳೆಯ ರಾಷ್ಟ್ರದ ಸತ್ಪ್ರಜೆಗಳಾಗುವರು; ಆ ಮಕ್ಕಳ ಬೆಳವಣಿಗೆಯನ್ನು ಸರ್ವತೋಮುಖವಾಗಿ ಪರ್ಯಾಲೋಚಿಸುವುದೆ 'ಶಿಕ್ಷಣ'ದ ಜೀವನಕಾರ್ಯವಾಗಿದೆ. ಇಂತಹ ಶಿಕ್ಷಣವಿಷಯವನ್ನು ತಳಸೋಸಿ ಕಟ್ಟಬೇಕೆಂದು ಮಹಾತ್ಮ ಗಾಂಧಿ, ಶ್ರೀ. ಆರ್ಯನಾಯಕಂ ಪ್ರಭೃತಿಯವರು ಭಗೀರಥ ಪ್ರಯತ್ನವನ್ನು ನಡೆಯಿಸಿದ್ದಾಗ ಪ್ರತಿಯೊಬ್ಬರೂ ಈ ವಿಷಯವನ್ನು ಕುರಿತು ತುಂಬಾ ಯೋಚಿಸತೊಡಗಿದ್ದರೆ ಸೋಜಿಗವೇನು? ಇಲ್ಲಿಗೆ ಹೊಸ ಗಾದ ರಾಷ್ಟ್ರೀಯ ಜಾಗೃತಿಯಿಂದ,ಅಲ್ಪಾಂಶದ್ದೇ ಆಗಲಿ—ಸ್ವರಾಜ್ಯಲಾಭದಿಂದ, ರಾಷ್ಟ್ರಹಿತಚಿಂತಕರೆಲ್ಲರು ನಮ್ಮ ದೇಶದ ಶಿಕ್ಷಣಸಮಸ್ಯೆಯ ಮೇಲೆ ತಮ್ಮ ವಿಮರ್ಶೆ-ವಿವೇಚನೆಗಳ ಪ್ರಖರ ಪ್ರಕಾಶವನ್ನು ಕೆಡಹುತ್ತಲಿರುವರು. ರಶಿಯವು ತನ್ನ ಪ್ರಗಾಢ ನಿರಕ್ಷರತೆಯನ್ನು ೧೦ ವರ್ಷಗಳಲ್ಲಿ ನಿರ್ಮೂಲಗೊಳಿಸಿತು, ನಾವೇಕೆ ಹಾಗೆ ಮಾಡಲು ಶಕ್ತರಾಗಬಾರದು ? ನಮ್ಮ ಸುಶಿಕ್ಷಿತ ನಿರುದ್ಯೋಗಿಗಳ ಘೋರ ಸಮಸ್ಯೆಯನ್ನು ಪರಿಹರಿಸುವ ಉಪಾಯ ಯಾವುದು ? ಮೆದುಳನ್ನು ಮಾತ್ರ ಬೆಳಸಿಕೊಂಡು, ಕೈಕಾಲು ಅಲ್ಲಾಡಿಸಲೂ-ಪ್ರಪಂಚದಲ್ಲಿ ತಲೆಯೆತ್ತಿ ವ್ಯವಹರಿಸಲೂ ಅಸಮರ್ಥರಾದ ಪದವೀಧರರನ್ನು ವರ್ಷವರ್ಷವೂ ಲಕ್ಷಗಟ್ಟಲೆ ಹಡೆಯುವ ನಮ್ಮ ವಿದ್ಯಾಮಾತೃಕೆಗೆ ಯಾವ ಪ್ರಕಾರದ ಚಿಕಿತ್ಸೆಯನ್ನು ನಡೆಯಿಸಬೇಕು ? ದ್ರವ್ಯಾಭಾವದ ನಿಮಿತ್ತವನ್ನು ಮುಂದುಮಾಡಿ, ನಮ್ಮ ಮಕ್ಕಳ ಶಿಕ್ಷಣವನ್ನು ಈಗಿನಂತೆಯೆ—ಅಥವಾ ಇದಕ್ಕಿಂತ ಹೆಚ್ಚಾಗಿ—ನೀರಸ-ನಿರ್ಜೀವ-ನಿರುಲ್ಲಾಸವನ್ನಾಗಿಯೆ ಮಾಡಬೇಕೊ, ಅದರಲ್ಲಿ ಸುಖ, ಸಂತೋಷ, ಸೊಬಗು, ಸೊಗಸು, ಉಲ್ಲಾಸ, ಉತ್ಸಾಹ ಹುಟ್ಟುವಂತೆ ಮಾಡಲು ಏನಾದರೂ ಉಪಾಯವಿದೆಯೊ ? ನಮ್ಮ ದೇಶದ 'ಬಳೆದ ಹುಡುಗ'ರ—ಅಲ್ಲ ಪ್ರೌಢರ—ಶಿಕ್ಷಣದ ಗತಿಯೇನು ? ಎಂಬಿವೇ ಮುಂತಾದ ದೇಶದ ಹಿತಕ್ಕೆ ಸಂಬಂಧಿಸಿದ ಜೀವಾಳದ ಪ್ರಶ್ನೆಗಳನ್ನು ಪ್ರತಿಯೊಬ್ಬರೂ ತಮ್ಮತಮ್ಮ ಪರಿಯಿಂದ ಗಂಭೀರವಾಗಿ ಆಲೋಚಿಸುತ್ತಿರುವರು. ವಿಶೇಷ ಸಂಚಿಕೆಯಲ್ಲಿ ಈ ವಿವಿಧ ವಿಚಾರತರಂಗಗಳು ವಿಶದವಾಗಿ ಪ್ರತಿಬಿಂಬಿತವಾಗಿವೆಯೆಂದು ನಮ್ಮ ನಂಬುಗೆ. ಒಬ್ಬರ ವಿಚಾರಸರಣಿ ಇನ್ನೊಬ್ಬರಿಗೆ ಮಾನ್ಯವಾಗದಿರುವುದು ಕಂಡುಬರಬಹುದು; ಆದರೆ ಅವೆಲ್ಲ ಅವರವರ ಉತ್ಕಟತೆಯ ಮೂಲಕ ಹುಟ್ಟಿದ ಪ್ರಾಮಾಣಿಕ ಮತಭೇದಗಳಿವೆ. ಒಟ್ಟಿನಲ್ಲಿ ವಾಚಕರು ಈ ಜ್ವಲತ್ಸಮಸ್ಯೆಗಳ ಮೇಲೆ ತಮ್ಮತಮ್ಮ ಅಭಿಪ್ರಾಯಗಳನ್ನು ಖಂಡಿತಪಡಿಸಿಕೊಳ್ಳುವಷ್ಟು ಸಾಮಗ್ರಿಯು ಈ ಸಂಚಿಕೆಯಲ್ಲಿ ಬಂದಿದೆಯೆಂದು ನಮ್ಮ ತಿಳಿವಳಿಕೆ. ಶಿಕ್ಷಣಸಂಚಿಕೆಯೆಂದರೆ, ಶಿಕ್ಷಣವಿಶಾರದರ ಜ್ಞಾನ-ಪಾಂಡಿತ್ಯಗಳನ್ನು ವರದಿಯ ರೂಪವಾಗಿ ಪ್ರದರ್ಶಿಸುವ ಹೊತ್ತಿಗೆ ಎಂದು ಹಲವರು ಕಲ್ಪನೆಮಾಡಿಕೊಂಡಿರಬಹುದು. ಹಾಗಾಗಬಾರದೆಂದು ಮೊದಲಿನಿಂದಲೂ ನಾವು ಪ್ರಯತ್ನಿಸಿದೆವು. ದೇಶದ ಮುಂದಿರುವ ಶೈಕ್ಷಣಿಕ ಮಹಾಸಮಸ್ಯೆಗಳಲ್ಲಿ ಸಾಮಾನ್ಯರಿಗೆ ಅಪರಿಚಿತವಾಗಿರುವ 'ಶಿಕ್ಷಣ'ದ ಅಂಗೋ

ಪಾಂಗಗಳಲ್ಲಿ ಒಂದನ್ನು ಎತ್ತಿಕೊಂಡು, ಅನಭಿಜ್ಞ ವಾಚಕ ರಿಗೆ ಕೂಡ ಒಂದು ದೃಷ್ಟಿ ಉಂಟಾಗುವಂತೆ, ಒಂದು ಹೊಸ ತಿಳವಳಿಕೆ ಹುಟ್ಟುವಂತೆ ಸರಲ-ಸರಸ ರೀತಿಯಲ್ಲಿ ಬರೆದು ಕಳಿಸಬೇಕೆಂದು ಎಲ್ಲರಿಗೂ ನಾವು ವಿನಂತಿ ಮಾಡಿ ಕೊಂಡಿದ್ದೆವು; ಪ್ರತಿಯೊಬ್ಬರೂ ಆದರಂತೆಯೆ ಲೇಖನ ಗಳನ್ನು ಬರೆಯಲು ಪ್ರಯತ್ನಿಸಿರುವರೊ ಇಲ್ಲವೊ ಎಂಬು ದನ್ನು ವಾಚಕರೆ ಪರೀಕ್ಷಿಸಲಿ.

ಶಿಕ್ಷಣದ ಅಂಗೋಪಾಂಗಗಳು:— ಸಾಂಪ್ರದಾಯಿಕ ಅರ್ಥದಲ್ಲಿ, ಶಾಲೆ-ಕಾಲೇಜುಗಳಲ್ಲಿ ದೊರೆಯುವ ಶಿಕ್ಷಣವೆ ಶಿಕ್ಷಣವೆಂಬ ಕಲ್ಪನೆಯು ನೆಲೆಗೊಂಡಿದೆ. ವ್ಯವಹಾರದಲ್ಲಿ ಇದು ಮುಖ್ಯವಾಗಿದ್ದರೂ, ಇದಕ್ಕಿಂತ ಹೆಚ್ಚಿನ ಎಷ್ಟೋ ಅಂಗಗಳು, ಸಾಮಾನ್ಯವಾಗಿ ಎಲ್ಲರ ಕಣ್ಣಿಗೆ ಬೀಳ ದುವು—ಶಿಕ್ಷಣಕ್ಕುಂಟು. ಅವುಗಳ ಪರಿಚಯವನ್ನು ಮಾಡಿ ಕೊಡುವುದೂ ನಮ್ಮೊಂದು ಗುರಿಯಾಗಿದ್ದಿತು: ತಿದ್ದಲ ಸಾಧ್ಯವೆಂದು ತಿಳಿಯಲ್ಪಡುವ ಅಪರಾಧಿಗಳನ್ನೂ ತಿದ್ದ ಬಹುದು, ತಪ್ಪು ಹಾದಿ ಹಿಡಿದ ಕಿರಿಯರನ್ನು ಸುಧಾರಿಸ ಬಹುದು, ಹುಚ್ಚರನ್ನೂ ತಿಳಿವಳಿಕೆಯುಳ್ಳವರನ್ನಾಗಿ ಮಾಡ ಬಹುದು, ಮುದುಕರನ್ನೂ ಅಕ್ಷರಿಗರನ್ನಾಗಿ ಮಾಡಬಹುದು, ಕಾಮಶಿಕ್ಷಣ ಕೂಡ 'ಶಿಕ್ಷಣ'ದ ಅಂಗವಾಗಬಹುದಾಗಿದೆ, ಚಲಚ್ಚಿತ್ರಗಳೂ ಶಿಕ್ಷಣದ ಉತ್ತಮ ಸಾಧನಗಳು— ಎಂಬಿವೇ, ಮೊದಲಾದ ಹಲವು ಅಂಗ-ಪ್ರತ್ಯಂಗಗಳಲ್ಲಿ ಕೆಲವನ್ನಾದರೂ ಇಲ್ಲಿ ಚರ್ಚಿಸಲು ಸಾಧ್ಯವಾದುದಕ್ಕೆ ಸಮಾ ಧಾನವೆನಿಸುತ್ತದೆ. ಶಿಕ್ಷಣದ ಒಂದೇ ಮುಖವನ್ನು ನಾವೀ ವರೆಗೆ ನೋಡುತ್ತಿದ್ದುದು; ಅದಕ್ಕೆ ಇನ್ನೂ ಬೇರೆ ಸಹಸ್ರ ಮುಖಗಳಿವೆ ಎಂಬ ಮಾತು ವಾಚಕರಿಗೆ ಕೊಂಚ ಮನ ವರಿಕೆಯಾದರೂ ನಮ್ಮ ಪ್ರಯತ್ನವು ಸಾರ್ಥಕವಾಯಿತು.

ಒಂದೆರಡು ಕೊರತೆಗಳು:— ಹೆಣ್ಣುಮಕ್ಕಳ ಶಿಕ್ಷಣ, ವಿಶ್ವವಿದ್ಯಾಲಯದ ಶಿಕ್ಷಣ ಎಂಬ ಕೆಲವು ವಿಷಯಗಳು ಇದರಲ್ಲಿ ಬಾರದಿದ್ದುದಕ್ಕೆ ಖೇದವೆನಿಸುತ್ತದೆ. ಸ್ತ್ರೀಶಿಕ್ಷಣ ವನ್ನು ಕುರಿತು ಒಬ್ಬ ಲೇಖಿಕೆಯರೆ ಲೇಖನವು ತಡಮಾಡಿ ಬಂದುದಕ್ಕೆ ಅದನ್ನು ಪ್ರಕಟಿಸಲಾಗಲಿಲ್ಲ. ಈ ಕೊರತೆ ಗಳನ್ನು ಮುಂದಿನ ಸಂಚಿಕೆಗಳಲ್ಲೊಂದು ಸಲ ಪೂರೈಸುವೆ ವೆಂದು ಭರವಸೆಯುಳ್ಳವರಾಗಿದ್ದೇವೆ. ಇನ್ನು ಕೆಲವು ಅತ್ಯುತ್ತಮ ಲೇಖನಗಳನ್ನು ಸ್ಥಲಾಭಾವಕ್ಕಾಗಿ ಬದಿಗಿರಿಸ ಬೇಕಾಯಿತು. ಆಯಾ ಲೇಖಕರು ಸಹೃದಯರಾಗಿ ಕ್ಷಮಿಸಬೇಕೆಂದು ಕೋರುತ್ತೇವೆ.

ಶಿಕ್ಷಣದ ವ್ಯಾಪಕತೆ:— ಲೇಖಕರನ್ನು ಬರೆಹಗಳಿಗಾಗಿ ಕೇಳಿಕೊಳ್ಳುವಾಗ, ಅವರ ಅವಗಾಹನೆಗಾಗಿ ಶಿಕ್ಷಣದ ವ್ಯಾಖ್ಯೆಯೊಂದನ್ನು ತಯಾರಿಸಲು ಪ್ರಯತ್ನಪಟ್ಟಿದ್ದೆವು:-

There have been so many attempts at defining EDUCATION. Shall we offer one?

"EDUCATION is the thoughtful care bestowed on the Human Being by Society in an organised and systematic manner, so that he or she may develop into a civilized, cultured, useful and social member of the Body Politic."

As such EDUCATION embraces all the stages and ages in the human life, --from birth to death from the Body to the Spirit.

(ಪ್ರತಿಯೊಂದು ವ್ಯಕ್ತಿಯು ಸುಧಾರಿಸಿದ, ಸುಸಂಸ್ಕೃತ, ಉಪಯುಕ್ತ, ಸಾಮಾಜಿಕ ಜೀವಿಯಾಗಿ ಬೆಳವಣಿಗೆ ಹೊಂದುವಂತೆ, ಸಮಾಜವು ಅವನ (ಅವಳ) ಬಗ್ಗೆ ಆಸ್ಥೆ ಪೂರ್ವಕವಾಗಿ ಎಚ್ಚರಿಕೆ ವಹಿಸುವುದೆ **ಶಿಕ್ಷಣವು**.... ಆದುದರಿಂದ ಶಿಕ್ಷಣದಲ್ಲಿ, ಜನ್ಮದಿಂದ ಮೃತ್ಯುವಿನ ವರೆಗೆ, ದೇಹದಿಂದ ಒಳಗಿನ ಚೈತನ್ಯದ ವರೆಗೆ ಎಲ್ಲ ಅವಸ್ಥೆಗಳೂ, ಎಲ್ಲ ಅಂತಸ್ತುಗಳೂ ಒಳಪಡುವವು.)

ವಿಶೇಷಸಂಚಿಕೆಯು ಶಿಕ್ಷಣದ ಈ ವಿಶ್ವರೂಪವನ್ನು ಯಥಾರ್ಥವಾಗಿ ಪ್ರಕಟಿಸುತ್ತದೆ ಎಂದು ಹೇಳುವುದು ಒಣಹೆಮ್ಮೆಯ ಮಾತಾಗುವುದು. ಅದು ಹಾಗೆ ಮಾಡಲು ಹೊರಟಿಲ್ಲ; ಮಾಡಲು ಹವಣಿಸಿಯೂ ಇಲ್ಲ. ಎಲ್ಲ ಲೇಖನ ಗಳನ್ನು ಓದಿದ ತರುವಾಯ, ಶಿಕ್ಷಣದ ಸತ್ಯಸ್ವರೂಪವನ್ನು ಕುರಿತು ತಿಳಿಯಬೇಕಾದುದು ಇನ್ನೂ ಎಷ್ಟೆಷ್ಟೋ ಇದೆ— ಇದರಲ್ಲಿ ಪ್ರತಿಫಲಿತವಾದುದು ಅದರ ಅಂಚಿನ ಮಿಂಚು ಮಾತ್ರ, ಎಂಬ ಅಸಮಾಧಾನ ಹುಟ್ಟಿದರೆ ಈ ಸಂಚಿಕೆಯ ಉದ್ದಿಷ್ಟವು ಸಫಲವಾಯಿತು. 'On the earth, the broken arcs; in the Heavens, a perfect round' ಎಂದು ಬ್ರೌನಿಂಗನು ಹೇಳಿಲ್ಲವೆ?

ಜಯಕರ್ನಾಟಕದ ವೈಶಿಷ್ಟ್ಯ:— ಈ ಸಂಚಿಕೆಯ ಕೆಲಸವನ್ನು ಕೈಕೊಂಡಮೇಲೆ ಕರ್ನಾಟಕ ಪತ್ರಿಕಾ ಪ್ರಪಂಚದಲ್ಲಿ ಜ.ಕ. ಕ್ಕೊಂದು ವಿಶಿಷ್ಟ ಸ್ಥಾನವಿದೆಯೆಂಬ ಮಾತು ನಮಗೆ ಇನ್ನಷ್ಟು ಮನವರಿಕೆಯಾಗುತ್ತಿದೆ; ಇತರ ರಿಗೂ ಹಾಗಾಗುವುದೆಂದು ಭಾವಿಸಿದ್ದೇವೆ. ಅಗ್ಗ ಪತ್ರಿಕೆ ಗಳ ಸ್ಪರ್ಧೆಯ ಈ ಕಾಲದಲ್ಲಿ ಜ. ಕ. ದ ತರಗತಿಯನ್ನು

ಇಳಿಸಬೇಕೆಂದು, ಬದಲಾಯಿಸಬೇಕೆಂದು ಹಲವು ಸೂಚನೆಗಳು ಬಂದವು; ಆದರೆ ಅವುಗಳಲ್ಲಾವನ್ನೂ ನಾವು ಗಮನಿಸಲಿಲ್ಲ. ಅಗ್ಗ ಪತ್ರಿಕೆಗಳು ಹೆಚ್ಚು ಹೆಚ್ಚು ಹುಟ್ಟಿದಷ್ಟು ಜ. ಕ. ದ ಸ್ಥಾನವು ಮತ್ತಷ್ಟು ಸ್ಪಷ್ಟವಾಗುತ್ತದೆ. ವಿವಿಧಾಂಗೀನವಾದ ಜನತಾಶಿಕ್ಷಣವೆ ಜಯಕರ್ನಾಟಕದ ಗುರಿ. ಅದನ್ನು ಹೆಚ್ಚುಹೆಚ್ಚು ಸಮರ್ಪಕವಾಗಿ, ಆಕರ್ಷಕವಾಗಿ, ಸುಂದರವಾಗಿ, ಮಾಡುವ ದಾರಿಯಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಮಾಡುವೆವಲ್ಲದೆ, ಇತರ ಪತ್ರಿಕೆಗಳು ಮಾಡುತ್ತವೆಂತ ಮಾಡುವುದಿಲ್ಲ. ಜ. ಕ. ವು ತನ್ನ ದಾರಿಯನ್ನು ಬಿಡದೆ, ತನ್ನ ಕಾರ್ಯವನ್ನು ಹೆಚ್ಚುಹೆಚ್ಚಾಗಿ ಜನರ ಮನಸ್ಸು ಹಿಡಿಯುವಂತೆ ಮಾಡುವುದು ಸಾಧ್ಯವಿದೆಯೆಂದು ನಮ್ಮ ನಂಬುಗೆ. ಕನ್ನಡಿಗರಿಗೆ ಇಂತಹ ಒಂದೇ ಒಂದು ಪತ್ರಿಕೆಯನ್ನು ಎತ್ತಿಹಿಡಿಯಬೇಕೆಂಬ ಮನಸ್ಸಿಲ್ಲವೆಂದು ತಿಳಿಯುವಷ್ಟು ನಾವು ಉದಾಸೀನರಾಗಿಲ್ಲ.

'ಜನಾಂಗ ಶಿಕ್ಷಣ':— ಈ ಸಂಚಿಕೆಯ ಕಾರ್ಯಕಲಾಪಗಳಲ್ಲಿ ತೊಡಗಿರುವಾಗ ಹೊಳೆದಂತೆ, ಮುಂದಿನ ವರ್ಷದ ಜನವರಿ ಸಂಚಿಕೆಯಿಂದಲೆ, 'ಜನಾಂಗ ಶಿಕ್ಷಣ'ವೆಂಬ ಹೊಸ ವಿಭಾಗವನ್ನು ಜಯಕರ್ನಾಟಕದಲ್ಲಿ ಏರ್ಪಡಿಸುವೆವು. ಅದರ ಸಲುವಾಗಿ ೩-೪ ಪುಟಗಳನ್ನಾದರೂ ಪತ್ರಿಸಲ ಕಾದಿಡುವೆವು. ಅದರಲ್ಲಿ ಸಹಕಾರ, ಗ್ರಾಮೋದ್ಯೋಗ, ಗ್ರಾಮಸಂಘಟನೆ, ಕೃಷಿ, ನಿರಕ್ಷರತಾ ನಿವಾರಣೆ, ಕೂಲಿಕಾರರ ಶಿಕ್ಷಣ, ಪ್ರೌಢಶಿಕ್ಷಣ, ಜನಸಾಮಾನ್ಯರ ಶಿಕ್ಷಣ ಈ ಮುಂತಾದ ವಿಷಯಗಳನ್ನೇ ಪ್ರಾಮುಖ್ಯವಾಗಿ ಚರ್ಚಿಸುವೆವು. ಬಲ್ಲವರ ನೆರವು ವಾಗ್ದತ್ತವಾಗಿರುವುದರಿಂದ ಆ ಅಂಕಣವು ಆಕರ್ಷಕವಾಗುವುದರಲ್ಲಿ ಸಂದೇಹವಿಲ್ಲ.

ಉಪಕಾರಸ್ಮರಣೆ:— ಕೆಳಗಿನ ಚಿತ್ರಗಳ ಪಡಿಯಚ್ಚುಗಳನ್ನು ಎರವಲಾಗಿ ಕೊಟ್ಟ ಸಂಸ್ಥೆಗಳಿಗೆ ಮತ್ತು ಮಹನೀಯರಿಗೆ ನಮ್ಮ ಕೃತಜ್ಞತೆಯನ್ನು ಸೂಚಿಸುವೆವು.

ಕಾವೇರಿಯ ಜಲಪ್ರಪಾತ .... ಮೈಸೂರು ದಸರಾ ಪ್ರದರ್ಶನ ಸಮಿತಿ
ಮೈಸೂರಿನ ಶಿಶುವಿಹಾರದ ದೃಶ್ಯಗಳು " "
ನಾ|| ಬಿ. ಜಿ. ಖೇರ.... ಲೋಕಶಿಕ್ಷಣಕಾರ್ಯಾಲಯ, ಪುಣೆ
ಶ್ರೀ ಆ್ಯನಿ ಬೆಜಂಟ.. ಸಂಯುಕ್ತಕರ್ನಾಟಕ ಕಾರ್ಯಾಲಯ
ಶ್ರೀ.ಎಂ.ಪಿ.ಟಿ. ಆಚಾರ್ಯ.......ಜಯಂತಿಕಾರ್ಯಾಲಯ
ಪ್ರೊ. ಕೆ. ವಿ. ಅಯ್ಯರ.... ಶ್ರೀ. ಡಿ. ವಿ. ಶೇಂಡೆ ಧಾರವಾಡ.

— ಬೆಳಗಾವಿ ರಾಮಚಂದ್ರರಾಯ

ಬಿಡಿನುಡಿಗಳು

ವರ್ಧಾಯೋಜನೆ:— ಇದು ಅನುಕೂಲ ಪ್ರತಿಕೂಲ ವಿಮರ್ಶೆಗೆ ಗುರಿಯಾಗುತ್ತಿದ್ದುದು ಸ್ವಾಭಾವಿಕವಾಗಿದೆ. ಈವರೆಗಿನ ಶಿಕ್ಷಣಪದ್ಧತಿಗೆ ತೀರ ಹೊಸವೆನಿಸುವ ತತ್ವವೂ ಕ್ರಮವೂ ಸಮಾವೇಶವಾಗಿರುವುದೇ ಇದರ ಕಾರಣವು. ಮುಂಬಯಿಯ ಮಂತ್ರಿಮರ್ಯ ನಾ. ಖೇರ ಅವರ ಕಾರ್ಯಾಧ್ಯಕ್ಷತೆಯಲ್ಲಿ ನಿಯಮಿಸಲ್ಪಟ್ಟ ಹಿಂದುಸ್ತಾನ ಸರಕಾರದ ಸಮಿತಿಯು ಈಚೆಗೆ ಹೊರಡಿಸಿದ ವರದಿಯಲ್ಲಿ, ಈ ತತ್ವವನ್ನು "Education through Activity" ಎಂದು ಬಣ್ಣಿಸಿರುವರು. ಇದು ಎಲ್ಲರಿಗೂ ಮಾನ್ಯವಾಗಬಹುದಾಗಿದೆ. ವರ್ಧಾ ಕ್ರಮವನ್ನು ಮೊಟ್ಟಮೊದಲು ನಿರೂಪಿಸಿದಾಗ ಅತಿ ವಿಲಕ್ಷಣವಾಗಿ ತೋರಿದ ಅದರಲ್ಲಿಯ ಅಂಶಗಳು ಪಲ್ಲಟ ಹೊಂದಿವೆ, ಇನ್ನೂ ಪಲ್ಲಟ ಹೊಂದಲೇಬೇಕೆಂದು ನಮ್ಮ ಮತ. ಜೀವನದ ಅನಿರುದ್ಧಗತಿಯು ತಕ್ಕ ಬದಲಾವಣೆಗಳನ್ನು ಮಾಡಿಸಿಯೆ ಬಿಡುವುದು. 'ಅಮೇರಿಕೆಯ ಶಿಕ್ಷಣ ಧೋರಣೆ' ಎಂಬ ಲೇಖನದಲ್ಲಿ (ಪು. ೯೧೧) ವರ್ಣಿತವಾದ The Antioch System ಎಂಬುದಕ್ಕೂ ಈಗಿನ ವರ್ಧಾಯೋಜನೆಯ ಸ್ವರೂಪಕ್ಕೂ ನಡುವೆ ಒಂದುಕಡೆ ಈ ವಿದ್ಯಾಪ್ರಣಾಲಿಯು ಬಂದು ನಿಲ್ಲುವುದೆಂದು ನಮಗೆ ತೋರುತ್ತಿದೆ. ಶಿಕ್ಷಣದ ಈಗಿನ ಅತಿಭೌದ್ಧಿಕ ಸ್ವರೂಪವು ಕಡಿಮೆಯಾಗುವುದು; ಕೈಕೆಲಸಕ್ಕೂ ಶಾರೀರಿಕ ಶ್ರಮಕ್ಕೂ ಕೈಯ ನಯಕ್ಕೂ ಪಾರಂಪರಿಕವಾಗಿ ಬಂದ ಮಹತ್ವದ ಕಸಬುಗಳಿಗೂ ಯೋಗ್ಯ ಪ್ರಾಶಸ್ತ್ಯ ಬರುವುದು; ಯಂತ್ರಪ್ರಾಧಾನ್ಯ-ಯಂತ್ರಗೌಣತೆ ಎಂಬ ಈಗಿನ ವೈಷಮ್ಯವು ಅಳಿಯುವುದು— ಮಿತವಾದ ಹಿತವಾದ ಮಧ್ಯಮ ಸ್ಥಿತಿಗೆ ಬಂದು ನಿಲ್ಲುವುದು. Transference of emphasis ಎಂದೊಬ್ಬರು ವರ್ಣಿಸಿದ್ದರು— ಅದು ನಿಜವಾಗುವುದು. ವಿದ್ಯಾರ್ಥಿಯು ತನ್ನ ಗಳಿಕೆಯಿಂದ ವಿದ್ಯಾರ್ಜನೆಯನ್ನು ಮಾಡಿಕೊಳ್ಳುವುದು ಮೂಲತಃ ದುಷ್ಟತತ್ವವೆಂದು ನಾವೆನ್ನಲಾರೆವು; ಈ ವಿಚಾರಸರಣಿಯಲ್ಲಿ ಬುದ್ಧಿಜೀವಿಗಳ ಮಡಿವಂತಿಕೆ— ಆ ಹಳೆಯ ಬ್ರಾಹ್ಮಣ-ಶೂದ್ರವಾದವು ಹೊಸ ಸ್ವರೂಪದಲ್ಲಿ—ಅಡಗಿದೆಯೆಂದು ನಮ್ಮ ಭಾವನೆ. ಇದನ್ನೇ ಅತಿಯಾಗಿ ಮಾಡಬಾರದು ಎಂಬುದನ್ನಷ್ಟು ನೋಡಿಕೊಳ್ಳಬೇಕು. ಅಮೇರಿಕೆಯ ವಿದ್ಯಾರ್ಥಿಗಳಲ್ಲಿ, ತಂದೆತಾಯಂದಿರ ದುಡ್ಡಿನಿಂದ ವಿದ್ಯೆ ಗಳಿಸಬಾರದು, ಸ್ವಂತದ ದುಡಿಮೆಯಿಂದ ವಿದ್ಯಾರ್ಜನೆ ಮಾಡಿಕೊಳ್ಳಬೇಕು ಎಂಬ ಸ್ತುತ್ಯ ಪ್ರವೃತ್ತಿ ಹುಟ್ಟಿದೆ; ನಮ್ಮಲ್ಲೂ ಈ ಮಾನವಂತರ ಸಂಪ್ರದಾಯ ಏಕೆ ನೆಲೆಗೊಳ್ಳಬಾರದು? ಜೀವನದಲ್ಲಿ ಆರ್ಥಿಕ ಪ್ರಶ್ನೆಯು ಮಹತ್ತರವಾದ ಸ್ಥಾನವನ್ನು ಪಡೆದಿರುವಾಗ ವಿದ್ಯಾರ್ಥಿಗೆ ವಿದ್ಯಾಭ್ಯಾಸದ ಅಂಗವಾಗಿಯೆ ಜೀವನದ ಹೋರಾಟ ಸಾಗಿಸಲು ಯೋಗ್ಯತೆ ಬರುವಂತೆ ಮಾಡಬಾರದೆಂಬುದು ಎಲ್ಲಿಯ ನ್ಯಾಯ?

ಮಕ್ಕಳ ಶಿಕ್ಷಣ:— ವರ್ಧಾಯೋಜನೆಯು ೭ ವರ್ಷಗಳ ಮೇಲಿನ ಬಾಲಕರ ಶಿಕ್ಷಣವನ್ನು ಮಾತ್ರ ಒಳಗೊಂಡಿದೆ. ಅದಕ್ಕಿಂತ ಚಿಕ್ಕ ವಯಸ್ಸಿನ ಬಾಲಬಾಲಿಕೆಯರ ಯೋಗಕ್ಷೇಮವನ್ನು ಎಂತು ವಿಚಾರಿಸಬೇಕೆಂಬ ಬಗ್ಗೆ ಈ ಸಂಚಿಕೆಯಲ್ಲಿ ಸುಮಾರು ೧೦ ಲೇಖನಗಳು ಬಂದಿವೆ. 'ಬಾಲಕರಿಗಾಗಿ ಒಳ್ಳೆಯ ಶಾಲೆಯ ಕಟ್ಟಡಗಳು, ಒಳ್ಳೆಯ ಆಟದ ಬಯಲುಗಳು, ಒಳ್ಳೆಯ ಕ್ರೀಡಾವನಗಳು' ಎಂಬ ಚಳವಳಿಯನ್ನು ನಾವು ಹೂಡಲುಬೇಕು. ಪ್ರತಿನಗರದಲ್ಲಿಯೂ ಮಧ್ಯಮದರ್ಜೆಯ ಹಳ್ಳಿಗಳಲ್ಲಿಯೂ ಮಕ್ಕಳಿಗಾಗಿ 'ಆಟದ ತೋಟ'ಗಳನ್ನು (ಅವರ ವಿಶಿಷ್ಟ ಆಟದ ಸಾಹಿತ್ಯಗಳೊಡನೆ) ಏರ್ಪಡಿಸುವುದು, ಸಾರ್ವಜನಿಕರು ಮನಸ್ಸು ಮಾಡಿದರೆ ಅಸಾಧ್ಯವಿಲ್ಲ. ಎಂತೆಂತಹ ಮಾತುಗಳ ಬಗ್ಗೆ ಎಷ್ಟೋ ದುಂದುಮಾಡುತ್ತಾರೆ; ಮಕ್ಕಳ ಆಟದ ತೋಟಗಳನ್ನು ನಗರದ ಬೇರೆಬೇರೆ ಭಾಗಗಳಲ್ಲಿ ಏರ್ಪಡಿಸಲು ಅಲ್ಲಲ್ಲಿಯ ಪೌರಸಭೆಗಳಾಗಲಿ, ಧರ್ಮಶೀಲ ಧನಿಕರಾಗಲಿ ಹಣದ ಸಹಾಯವನ್ನು ಮಾಡಲಾರರೆ? ಮಕ್ಕಳ ಶಿಕ್ಷಣವೇ ಎಲ್ಲಾ ಶಿಕ್ಷಣದ ಅಡಿಗಲ್ಲು ಎಂಬ ಮಾತು ಮಾತ್ರ ತಿಳುವಳಿಕೆಯುಳ್ಳವರ ಮನಸ್ಸಿನಲ್ಲಿ ದೃಢಮೂಲವಾಗಬೇಕು; ಆಗ ಎಲ್ಲರೂ ತಾವೇ ಕಾರ್ಯಪ್ರವೃತ್ತರಾಗುವರು. ಅದೇಪ್ರಕಾರ ಸುಸ್ಥಿತಿಯ ಮಧ್ಯಮವರ್ಗದವರು ಶಿಶುವಿಹಾರಗಳನ್ನೂ ಶಿಶುಶಾಲೆಗಳನ್ನೂ ಅಲ್ಲಲ್ಲಿ ಸ್ಥಾಪಿಸಬೇಕು. ಮೈಸೂರಿನ ಶಿಶುವಿಹಾರವನ್ನು ನಾವು ನೋಡಿಕೊಂಡು ಬಂದಿರುವೆವು. ಮಕ್ಕಳು ಆಡುತ್ತಲೇ ಹೇಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯುವರೆಂಬುದನ್ನು ನಾವು ಕಂಡಿರುವೆವು. ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಕೆಲ

ಕೆಲವು ಮಾರ್ಪಾಡುಗಳನ್ನು ಮಾಡಬೇಕಾದೀತು; ಆದರೆ ಸಾಧಾರಣ ಪ್ರತಿಯ ವೆಚ್ಚದಲ್ಲಿ ಒಳ್ಳೆಯ ಶಿಶುವಿಹಾರಗಳನ್ನೂ ಶಿಶುಶಾಲೆಗಳನ್ನೂ ಏರ್ಪಡಿಸುವುದು ಸಾಧ್ಯವಿದೆಯೆಂದು ನಮ್ಮ ಭಾವನೆ. ಸಾಮಾಜಿಕ ಕಾರ್ಯಾಸಕ್ತಿಯಿರುವ ಮಹಿಳೆಯರೂ ವಿದ್ಯಾಭ್ಯಾಸದಲ್ಲಿ ಅಭಿರುಚಿಯಿರುವ ಸಾರ್ವಜನಿಕರೂ ಇತ್ತಕಡೆ ಮನಸ್ಸು ಕೊಟ್ಟರೆ, ಇದು ಅಸಾಧ್ಯವಾದ ಪ್ರಶ್ನೆಯೇನೂ ಆಗಲಾರದು.

ಬಾಲಿಕೆಯರ ವಿದ್ಯಾಭ್ಯಾಸ:— ಕರ್ನಾಟಕ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ವ್ಹಿ. ಕೆ. ಆರ್. ವಿಜಯೀಂದ್ರರಾವ್ ಅವರು, ಮುಂಬಯಿ ಕರ್ನಾಟಕದಲ್ಲಿ ಸ್ತ್ರೀಶಿಕ್ಷಣವು ಎಂತಹ ಘೋರ ಪ್ರಮಾಣದಲ್ಲಿ ಹಿಂದು ಬಿದ್ದಿದೆಯೆಂಬುದನ್ನು ಅಂಕಿ ಪಟ್ಟಿಗಳಿಂದ ಸಿದ್ಧಮಾಡಿ ತೋರಿಸಿದ್ದಾರೆ. ಬಳ್ಳಾರಿ, ಮಂಗಳೂರುಗಳ ಸ್ಥಿತಿ ತಕ್ಕಷ್ಟುಗೆ ನೆಟ್ಟಗಿದೆ. ಆದರೆ ನಮ್ಮಲ್ಲಿಯ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರಕಾರವಾಗಲಿ, ಉದಾರ ಧನಿಕರಾಗಲಿ ಸಾಕಷ್ಟು ಗಮನ ಕೊಟ್ಟಿಲ್ಲ. ಬರಿ ಬಾಲಿಕೆಯರ ಶಿಕ್ಷಣವೆಂತಲೇ ಅಲ್ಲ, ಬೇರೆ ಯಾವ ಶಿಕ್ಷಣದ ಕಡೆಗೂ ನಮ್ಮಲ್ಲಿಯ ಧನಿಕರ ದಾನಧರ್ಮ ಪ್ರವಾಹವು ಹರಿದಿಲ್ಲ; ವೈಯಕ್ತಿಕ ಸಂಘಟಿತ ಪ್ರಯತ್ನಗಳೂ ಸಾಕಷ್ಟಾಗಿಲ್ಲ— ಎಂದು ಶ್ರೀ. ರಾವ್ ಅವರು ಒತ್ತಿಯೊತ್ತಿ ಹೇಳಿದ್ದಾರೆ. ಇದು ತುಂಬಾ ಗರ್ಹಣೀಯವಾದ ಸಂಗತಿ. ಉಳಿದ ಪ್ರಾಂತಗಳ ಜತೆಜತೆಗೆ ನಮ್ಮ ಪ್ರಾಂತವೂ ಎದೆಸೆಟೆಸಿ, ತಲೆಯೆತ್ತಿ ನಿಲ್ಲಬೇಕಾದರೆ, ಹೆಣ್ಣುಮಕ್ಕಳ ಶಿಕ್ಷಣದ ಈ ಅಕ್ಷಮ್ಯ ಉಪೇಕ್ಷಣೆಯು ಇನ್ನು ಮಾಯವಾಗಬೇಕು.

ಸಾರ್ವಜನಿಕರು ಕರ್ತವ್ಯಪರರಾಗಬೇಕು:— ಶಿಕ್ಷಣವೆಂದ ಕೂಡಲೆ, ಅದು ಉಪಾಧ್ಯಾಯರ ವಿಷಯ, ಇಲ್ಲವೆ ಸರಕಾರದ ಶಿಕ್ಷಣಖಾತೆಯ ವಿಷಯವೆಂದು ತಾತ್ಸಾರಿಸಿ ಬಿಡುವುದು ಸರ್ವಸಾಮಾನ್ಯರ ಸ್ವಭಾವ. ಇದರಲ್ಲಿ ಸುಧಾರಣೆಯಾಗಬೇಕು. ಜನಾಂಗ ಶಿಕ್ಷಣವು ಪ್ರತಿಯೊಬ್ಬರ ಆಸ್ಥಾಪೂರ್ವಕವಾದ ಆಲೋಚನೆಗೆ ಯೋಗ್ಯವಾಗಿದೆ ಎಂಬ ಮಾತನ್ನು ಸಾರ್ವಜನಿಕರು ಅರಿಯಬೇಕು. ಶಿಶುಶಿಕ್ಷಣ, ಬಾಲಿಕೆಯರ ಶಿಕ್ಷಣ. ಪ್ರೌಢಶಿಕ್ಷಣ, ನಿರಕ್ಷರತಾ ನಿವಾರಣೆ, ಶಾರೀರಿಕ ಶಿಕ್ಷಣ, ಕಲಾಶಿಕ್ಷಣ—ಇವೆಲ್ಲ ಕೇವಲ ಸರಕಾರಿ ವಿದ್ಯಾಖಾತೆಗಳ ಪ್ರಯತ್ನದಿಂದಲೆ ಸುಧಾರಣೆ ಹೊಂದುವುದು ಸಾಧ್ಯವಿಲ್ಲ. ಪ್ರತಿ ತಂದೆ-ತಾಯಿಯೂ ಪಾಲಕನೂ, ಇದು ತನಗೆ ಸಂಬಂಧಿಸಿದ ವಿಷಯವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಕೆಲಕೆಲವು ವಿಷಯಗಳಲ್ಲಿ ಸರಕಾರವು ಧನಾಭಾವದಿಂದ ಅಸಮರ್ಥವಾಗಿರುತ್ತದೆ; ಇಲ್ಲವೆ ಅದೊಂದು ಅನಿವಾರ್ಯ ಜಡತ್ವದಿಂದ ಉಪೇಕ್ಷಾ ಭಾವವನ್ನು ತಳೆದಿರುತ್ತದೆ. ಉಪಾಧ್ಯಾಯರೋ, ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುತ್ತಾರೆ; ಕೆಲಸದ ಹೊರೆಯನ್ನು ಹೊತ್ತು, ಆಚೆ ಸ್ವಲ್ಪ ದೃಷ್ಟಿಕ್ಷೇಪ ಮಾಡಿ, ಅಗತ್ಯವಿದ್ದ ಸುಧಾರಣೆಗಳನ್ನು ಮಾಡಬೇಕೆನ್ನುವವರಿಗೆ (ಈಗಿನ ಕಡಿಮೆ ಪ್ರಮಾಣದ ಸಂಬಳಗಳ ಮೂಲಕ) ಆರ್ಥಿಕ ಅನುಕೂಲತೆಯಿರುವುದಿಲ್ಲ. ಆದುದರಿಂದ ಸಮಾಜ ಸೇವಕರೂ, ವೃತ್ತ ಪತ್ರಿಕೆಗಳೂ ಈ ವಿಷಯಗಳಲ್ಲಿ ತಕ್ಕ ಜಾಗೃತಿಯನ್ನು ಆಗಾಗ ಹುಟ್ಟಿಸುವುದು ಅನಿವಾರ್ಯವಾಗುವುದು. ಪ್ರೌಢಶಿಕ್ಷಣ, ಸಾಕ್ಷರತಾಪ್ರಸಾರ— ಇವನ್ನಂತೂ 'ಯುವಕ'ರೆಂದು ಹೆಮ್ಮೆಪಟ್ಟುಕೊಳ್ಳುವವರು ಅಗತ್ಯವಾಗಿ ನಡೆಯಿಸಬೇಕಾದ ಕೆಲಸಗಳು. ಚೀನದ ತರುಣರು ಏನು ಮಾಡಿದರು, ನಾವೇನು ಮಾಡುತ್ತಿದ್ದೇವೆ? ಸಾರ್ವಜನಿಕ ಸೇವಾಭಾವವು ಇನ್ನೂ ಕರ್ನಾಟಕದಲ್ಲಿ ಉದಯಿಸಬೇಕಾಗಿದೆ. ಅದೊಂದು ಮೂಡಿದ್ದರೆ, ಸರಕಾರವನ್ನು ಕಾರಣವಿರಲಿ, ಇರದಿರಲಿ ಬಯ್ಯುವುದು ನಿಲ್ಲುತ್ತಿತ್ತು; ಮತ್ತು ಹೆಚ್ಚು ಕೆಲಸವಾಗುತ್ತಿತ್ತು.

ಹೊಸ ವಿಚಾರಾಂದೋಲನ:— ವಿಶ್ವವಿದ್ಯಾಲಯಗಳ ವಿಶಾಲ ಪ್ರಾಂಗಣಗಳಲ್ಲಿ ಸುಖವಾಗಿ ಸುಳಿದಾಡುವ ಪ್ರಾಧ್ಯಾಪಕರು ಏನೆ ಅನ್ನಲಿ, ಕೆಲವು ಮಾತುಗಳು ವೇದದ ನಿಜವಾದ ಹಿತಚಿಂತಕರಲ್ಲಿ ನಿರ್ವಿವಾದ ಮಾನ್ಯತೆಯನ್ನು ಪಡೆದಿವೆ. ನಮ್ಮದು ಬಡದೇಶ; ಬಡದೇಶದ ಸ್ಥಿತಿಗತಿಗೆ ಅನ್ವಯಿಸುವಂತೆಯೆ ನಮ್ಮ ಶಿಕ್ಷಣದ ನವಮಂದಿರವನ್ನು ನಿರ್ಮಿಸಬೇಕು. ಶಿಕ್ಷಣ ಪ್ರಸಾರವು ಭರದಿಂದ ಸಾಗಬೇಕು. ನಿರಕ್ಷರತೆಯು ಅಲ್ಪಕಾಲದಲ್ಲಿಯೆ ಬಹುಮಟ್ಟಿಗಾದರೂ ನಿರ್ಮೂಲವಾಗಬೇಕು. ದೊಡ್ಡದೊಡ್ಡ ಪಟ್ಟಣಗಳಲ್ಲಿಯ ವಿದ್ಯಾಮಂದಿರಗಳಿಗೂ ಅದರಿಂದ ಹೊರಬರುವ ಪದವೀಧರರ ಆಢ್ಯತೆಗೂ ಮತ್ತು ಹಳ್ಳಿವಾಡದಲ್ಲಿಯ ನಿರಕ್ಷರಿಗಳಾದ ಬಡಪಾಯಿಗಳಿಗೂ, ಜೀವನದರ್ಜೆ, ಜೀವನರೀತಿ, ಜೀವನದೃಷ್ಟಿ— ಈ ಎಲ್ಲಾ ಅಂಶಗಳಲ್ಲಿ ಘೋರ ವೈಷಮ್ಯವು ಉಂಟಾಗಿದೆ; ಇದು ಕಡಿಮೆಯಾಗಬೇಕು. ಶಿಕ್ಷಣವು ಸರ್ವವ್ಯಾಪ್ತಿಯಾಗುವಂತೆ ಹೊಸ ಯುಕ್ತಿ-ರೀತಿಗಳನ್ನು ಅವಲಂಬಿಸಬೇಕು. ನಮ್ಮ ಸುತ್ತ

ನಿರುದ್ಯೋಗಿಗಳ ಅನುಕಂಪನೀಯ ಸ್ಥಿತಿಯು ತೊಲಗಬೇಕು. ದೇಶದ ಪುನರ್ಘಟನೆಯ ಕಾರ್ಯದಲ್ಲಿ ಈ ಕೆಲಸಗೇಡಿ ಜಾಣರ ಪಡೆಯನ್ನು ವಿನಿಯೋಗಿಸುವಂತೆ ಏರ್ಪಾಡುಗಳನ್ನು ಕಲ್ಪಿಸಬೇಕು. ಅಂತೂ ಈಗಿನ ಜಾಡ್ಯ-ಮೌಢ್ಯ-ತಮಸ್ಸು-ಅಶಕ್ತಿ- ನಿರಭಿಮಾನತೆ- ದಾಸ್ಯಮನೋವೃತ್ತಿ- ಅಶಿಕ್ಷಣ- ಅಸಂಸ್ಕೃತಿ- ಪರಂಪರಾಪ್ರೀತಿ ಇವೆಲ್ಲ ಹಳಮಾತಾಗಬೇಕು............ಈ ಎಲ್ಲ ಮಾತುಗಳಲ್ಲೂ ನಮ್ಮ ನಾಡಿನ ಹಿರಿಯರು—ಅವರು ಯಾವ ವಿಚಾರ ಪ್ರಣಾಲಿಯವರೇ ಆಗಿರಲಿ— ಐಕಮತ್ಯವುಳ್ಳವರಾಗಿದ್ದಾರೆ. ಗಾಂಧಿಜಿ, ಜವಾಹರಲಾಲ—ಗಾಂಧಿ ಭಕ್ತರು, ಸಾಮ್ಯವಾದಿಗಳು—ತತ್ವನಿಷ್ಠರು, ಕರ್ಮವಾದಿಗಳು....... ಎಲ್ಲರೂ ಈ ಬೀಜಮಾತುಗಳಲ್ಲಿ ಒಮ್ಮತದವರಾಗಿದ್ದಾರೆ; ಮಾರ್ಗಗಳೇನೋ ಕೊಂಚ ಭಿನ್ನ ಭಿನ್ನ ವಾಗಿವೆ. ಈ ವಿಚಾರಾಂದೋಲನದ ಪರಿಣಾಮದಾಗಿ ಕೆಲ ದಿನಗಳಲ್ಲಿಯೆ ಈಗಿನ ನಮ್ಮ ಶಿಕ್ಷಣ ವ್ಯವಸ್ಥೆಯು ತೀರಾ ಪಲ್ಲಟಗೊಳ್ಳುವುದು ಖಂಡಿತ. ಎಲ್ಲಾ ಮಾತುಗಳೂ ಎಲ್ಲರಿಗೂ ಸೇರಿಕೆಯಾಗಲಿಕ್ಕಿಲ್ಲ. ಆದರೆ ಹೊಸದೆಂದ ಮಾತ್ರಕ್ಕೆ ಗಾಬರಿಗೊಳ್ಳ ಬಾರದು. ಹೊಸದನ್ನೂ ತಿಳಿದುಕೊಳ್ಳಲು, ತಕ್ಕುದನ್ನು ಸ್ವೀಕರಿಸಲು ನಾವು ಸಿದ್ಧರಾಗಿರಬೇಕು.

ಶಿಕ್ಷಕ ಶಿಕ್ಷಣಾಲಯ (**Secondary Teachers' College**):— ಮುಂಬಯಿ ಸರಕಾರದವರು ಈ ಸಂಸ್ಥೆಯನ್ನು ಕರ್ನಾಟಕದಲ್ಲಿ ಸ್ಥಾಪಿಸಬೇಕೆಂದಿದ್ದಾರೆ. ಅದು ಎಲ್ಲಿರಬೇಕು ಎಂಬ ಬಗ್ಗೆ ಪತ್ರಿಕೆಗಳಲ್ಲಿ ಬಹುದಿನಗಳಿಂದ ವಾದ ಬೆಳೆದುಬಂದಿದೆ. ಮೊನ್ನೆಯ ಶಿಕ್ಷಣಪರಿಷತ್ತಿನಲ್ಲಿ ಈ ಪ್ರಶ್ನೆಯ ಮೇಲೆ ಐಕಮತ್ಯದ ತೀರ್ಮಾನವೊಂದು ಸ್ವೀಕೃತವಾಗಿದೆ. ಭವಿಷ್ಯದ್ವಿಶ್ವವಿದ್ಯಾಲಯದ ಸ್ಥಾನವಾಗಲರ್ಹತೆಯುಳ್ಳ ಪಟ್ಟಣದಲ್ಲಿಯೆ—ಎಂದರೆ ಈಗಿನ ಮಟ್ಟಿಗೆ ಧಾರವಾಡದಲ್ಲಿಯೆ ಅದನ್ನು ಸ್ಥಾಪಿಸಬೇಕು, ಎಂದಾ ನಿರ್ಣಯವು ಹೇಳುತ್ತಿದೆ. ಪರಿಷತ್ತಿನಲ್ಲಿ ಈ ಬಗ್ಗೆ ನಡೆದ ಚರ್ಚೆಯನ್ನು ನಾವು ಕೇಳಿರುವೆವು. ಬೆಳಗಾವಿಯ ಬಹುಶಃ ಎಲ್ಲ ಮುಂದಾಳುಗಳೂ ಧಾರವಾಡವೇ ಆ ಸಂಸ್ಥೆಯ ಸ್ಥಳವಾಗಬೇಕೆಂದು ವಾದಿಸಿದುದು ಅರ್ಥಪೂರ್ಣವಾಗಿದೆ. ಧಾರವಾಡದಲ್ಲಿ ಈಗಾಗಲೇ ಪ್ರಾಥಮಿಕ ಶಿಕ್ಷಕರ (ಗಂಡಸರ ಮತ್ತು ಹೆಂಗಸರ) ಶಿಕ್ಷಣಾಲಯಗಳಿವೆ. ಪ್ರಾಥಮಿಕ ವಿದ್ಯಾಭ್ಯಾಸ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸಗಳ ಪ್ರಸಾರದ ದೃಷ್ಟಿಯಿಂದಲೂ. ಸರಕಾರಿ ಕಾಲೇಜಿನ ಸನ್ನಿಧಿಯಿಂದಲೂ ಇದು ತಾನೆತಾನಾಗಿ ಕರ್ನಾಟಕದ ಶಿಕ್ಷಣಕೇಂದ್ರವಾಗುವುದರಲ್ಲಿದೆ. ಅಲ್ಲದೆ ವಿದ್ಯಾ ವಿತರಣಕ್ಕೆ ಬೇಕಾಗುವ ಅನುಕೂಲ ಸನ್ನಿವೇಶಗಳೂ ಇಲ್ಲಿವೆ. ಇನ್ನೂ ಹಲವು ಕಾರಣಗಳಿವೆ. ಸರಕಾರವು ಈ ಮಾತುಗಳನ್ನೆಲ್ಲ ಚಿತ್ತಕ್ಕೆ ತಂದುಕೊಂಡು ಯೋಗ್ಯವಾದುದನ್ನೇ ಮಾಡಲು ಹಿಂಜರಿಯಲಿಕ್ಕಿಲ್ಲವೆಂದು ಭಾವಿಸಿದ್ದೇವೆ.

ಶಿಕ್ಷಣ ಪರಿಷತ್ತಿನ ಫಲಶ್ರುತಿ:— ಡಾ. ರಾವ್ ಅವರು, ಕರ್ನಾಟಕವು (ವಿಶೇಷತಃ ಮುಂಬಯಿ ಕರ್ನಾಟಕವು) ಶಿಕ್ಷಣದಲ್ಲಿ ಎಷ್ಟು ತುಚ್ಛಪ್ರಗತಿಯನ್ನು ಪಡೆದಿದೆಯೆಂಬುದನ್ನು ಅಂಕೆಟಿಪ್ಪಣಿಗಳ ಆಧಾರದಿಂದ ತೋರಿಸಿರುವರು. ಪ್ರಾಥಮಿಕ-ಮಾಧ್ಯಮಿಕ-ಉಚ್ಚ-ಔದ್ಯೋಗಿಕ-ತಾಂತ್ರಿಕ (technical), ಪ್ರತಿಯೊಂದು ವಿಭಾಗದಲ್ಲಿಯೂ ನಾವು ಹಿಂದೆಬಿದ್ದಿರುವೆವು. ಜನತೆಯ ಕಡೆಗೆ ತಪ್ಪೆಷ್ಟೇ ಇರಲಿ, ಸರಕಾರದ ಈವರೆಗಿನ ಅನಾದರವು ನಿಷೇಧಾರ್ಹವಾದುದು. ಈಗಿನ ರಾಷ್ಟ್ರೀಯ ಸರಕಾರವು ಈ ಪರಿಸ್ಥಿತಿಯನ್ನು ಕೂಡಲೇ ಸುಧಾರಿಸುವುದೆಂದು ಭರವಸೆಯಿಟ್ಟುಕೊಳ್ಳೋಣವೇ ? ತಮ್ಮ ಕಾರ್ಯತತ್ಪರತೆಗೆ ಅನುರೂಪವಾಗಿ ಡಾ. ರಾವ್ ಅವರು ಮಂತ್ರಿವರ್ಯ ಖೇರ ಅವರನ್ನು ಕಂಡು, ಪರಿಷತ್ತಿನ ಫಲಶ್ರುತಿಯನ್ನು ತಿಳಿಸಿಯೂ ಬಿಟ್ಟಿರುವರು. ಸಚ್ಛೀಲರೂ ಸಮಂಜಸರೂ ಸ್ವಂತ ಶಿಕ್ಷಣಮಂತ್ರಿಗಳೂ ಆದ ಮುಖ್ಯಮಂತ್ರಿಗಳು ಈ ಬೇಡಿಕೆಗಳನ್ನು ಸಾಧ್ಯವಿದ್ದಮಟ್ಟಿಗೂ ಪೂರೈಸುವರೆಂದು ಭಾವಿಸೋಣವೇ ?

ಸ್ವಾಗತಾಧ್ಯಕ್ಷರಾದ ಶ್ರೀ. ದಿವಾಕರ ರಂಗರಾಯರು ಪರಿಷತ್ತಿನ ಉದ್ದೇಶವನ್ನು ಅಚ್ಚುಕಟ್ಟಾಗಿ ಹೇಳಿದರು:— "ಈ ಸಂದುಕಟ್ಟಿನಲ್ಲಿ, ನಮ್ಮ ಮುಖ್ಯ ಉದ್ದೇಶವು, ಪರಿಣಾಮದಲ್ಲಿ ಅಖಿಲ ಕರ್ನಾಟಕಕ್ಕೂ ಪ್ರಕೃತದಲ್ಲಿ ಬ್ರಿಟಿಷ್ ಕರ್ನಾಟಕಕ್ಕೂ ಒಂದೇ ರೀತಿಯಲ್ಲಿ ಅನ್ವಯಿಸುವ ಒಂದು ಸಾಮಾನ್ಯ ಶಿಕ್ಷಣನೀತಿಯನ್ನು ಏರ್ಪಡಿಸುವುದಾಗಿದೆ. ಕೊನೆಗೊಮ್ಮೆ ನಮಗೊಂದು ವಿಶ್ವವಿದ್ಯಾಲಯವು ದೊರೆಯಲೇಬೇಕು, — ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಒಂದು ಸರ್ವಸೌಕರ್ಯಗಳನ್ನುಳ್ಳ, ವಿಕಾಸಾನುಕೂಲ ಕೇಂದ್ರವನ್ನು ನಾವು ಬೆಳೆಯಿಸಬೇಕು. ಶಿಕ್ಷಣದ ಎಲ್ಲಾ ಮೆಟ್ಟಲುಗಳಲ್ಲೂ ಒಂದಿಲ್ಲ ಒಂದು ದಿನ ಕನ್ನಡವು ಮಾಧ್ಯಮವಾಗಲೇ ಬೇಕು, — ಆ ಧೋರಣೆಯಿಂದಲೇ ನಮ್ಮ ಮಾಧ್ಯಮಿಕ ಶಾಲೆಗಳನ್ನು ನಾವು

ಅಣಿಗೊಳಿಸಬೇಕು. ಬೇರೆ ಬೇರೆ ಆಡಳಿತಗಳಲ್ಲಿರುವ ಕನ್ನಡ ವಿಭಾಗಗಳಲ್ಲಿ ನಮ್ಮ ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳ ಭಾಷೆಯು ಒಂದೇ ಬಗೆಯದಾಗುವಂತೆ ನೋಡಿಕೊಳ್ಳಬೇಕು. ಎಲ್ಲ ಕನ್ನಡ ಪುಸ್ತಕಗಳೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆಗಳ ಮೇಲಿನ ಎಲ್ಲ ಗ್ರಂಥಗಳೂ ಒಂದೆಡೆಗೆ ಸಿಗುವಂತೆ ಒಂದು ಕೇಂದ್ರ ಕನ್ನಡ ಗ್ರಂಥಾಲಯವನ್ನು ಏರ್ಪಡಿಸಿಕೊಳ್ಳಬೇಕು. ಕನ್ನಡ ಟ್ರೇನಿಂಗ್ ಕಾಲೇಜುಗಳ ಮತ್ತು ಇಂಗ್ಲಿಷ್ ಟ್ರೇನಿಂಗ್ ಕಾಲೇಜುಗಳ ಪ್ರಶ್ನೆಯನ್ನು ನಾವು ಬಿಡಿಸಲೆತ್ನಿಸಬೇಕು; ಅವು ಕೊನೆಯಲ್ಲಿ, ಕನ್ನಡವೇ ಮಾಧ್ಯಮವಾಗಿರುವ ಒಂದೇ ಸ್ವರೂಪದ ಕನ್ನಡ ಟ್ರೇನಿಂಗ್ ಕಾಲೇಜುಗಳಾಗುವಂತೆ ಎತ್ತುಗಡೆ ಮಾಡಬೇಕು." ಪರಿಷತ್ತಿನಲ್ಲಿಯ ವಿವಿಧ ನಿರ್ಣಯಗಳೂ ಅವುಗಳನ್ನು ಕಾರ್ಯರೂಪದಲ್ಲಿ ತರಲು ಏರ್ಪಟ್ಟ ಶಿಕ್ಷಣಮಂಡಳವೂ, ಮೇಲಣ ಉದ್ದೇಶಗಳನ್ನು ಚೆನ್ನಾಗಿಯೇ ಸಿದ್ಧಿಗೊಳಿಸುವವೆಂದು ನಂಬಲವಕಾಶವಿದೆ.

ಪರಿಷತ್ತಿನ ಎಲ್ಲಾ ನಿರ್ಣಯಗಳೂ ಒಂದೂ ಭಿನ್ನಾಭಿಪ್ರಾಯವಿಲ್ಲದೆ ಸ್ವೀಕೃತವಾದುದೊಂದು ವಿಶೇಷ ಸಂಗತಿ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ಪರಿಷತ್ತಿನ ಕಲ್ಪನೆಯನ್ನು ಪುರಸ್ಕರಿಸಿದ್ದುದು, ಕಾಂಗ್ರೆಸ್ ಮುಂದಾಳುಗಳು ಕನ್ನಡ-ಕರ್ನಾಟಕಗಳ ಬಗ್ಗೆ ಅಷ್ಟು ಆತ್ಮೀಯತೆಯುಳ್ಳವರಾಗಿಲ್ಲ ಎಂದು ಅಲ್ಲಲ್ಲಿ ಗೊಣಗುಟ್ಟುತ್ತಿರುವುದಕ್ಕೆ ತಕ್ಕ ಸಮಾಧಾನವಾಗಿದೆ. ಇದೇ ದೃಷ್ಟಿ ಕಾಂಗ್ರೆಸ್ಸಿನ ಪ್ರತಿಯೊಂದು ಚಟುವಟಿಕೆಯಲ್ಲೂ ಗೋಚರಿಸಲಿಯೆಂದು ನಮ್ಮ ಹಾರಯಿಕೆ. ವಿಶೇಷವಾಗಿ ಮಾನ್ಯ ಶ್ರೀ. ದಿವಾಕರ ಅವರು ಪರಿಷತ್ತಿಗೆ ತಮ್ಮ ವ್ಯಕ್ತಿತ್ವ-ಕರ್ತೃತ್ವಗಳ ಬೆಂಬಲಕೊಟ್ಟು, ಅದರ ನಿರ್ಣಯಗಳಿಗೆ (ಸರಕಾರದ ದೃಷ್ಟಿಯಲ್ಲಿ ಕೂಡ) ನಿಜವಾದ ಮಹತ್ವ-ಗುರುತ್ವ-ಘನತ್ವ ಬರುವಂತೆ ಮಾಡಿದುದಕ್ಕೆ ಅವರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. (ಇದೇ ಸಂದರ್ಭದಲ್ಲಿ ಶ್ರೀಯುತರು ಬರಲಿರುವ ಸಾ. ಸಮ್ಮೇಲನದ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದಕ್ಕೆ ನಮ್ಮ ಸಂತೋಷವನ್ನು ಸೂಚಿಸುತ್ತೇವೆ.) ಇದೇ ರೀತಿಯಾಗಿ ಕರ್ನಾಟಕದ ಬೇರೆ ಹಿರಿಯ ಸಮಸ್ಯೆಗಳನ್ನೂ ಶ್ರೀ.ರಂಗರಾಯರು ಆತ್ಮೀಯತೆಯಿಂದ ಬಿಡಿಸಲು ಮುಂದುಬರಲೆಂದು ಕೋರುತ್ತೇವೆ.

ಕರ್ನಾಟಕದ ಮುಸಲ್ಮಾನರೂ ಉರ್ದುವೂ:—

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸುಮಾರು ೨೦ ವರ್ಷ ಕಾಲ ಪರ್ಶಿಯನ್ ಭಾಷೆಯ ಪ್ರೊಫೆಸರರಾಗಿದ್ದು ಇಲ್ಲಿಯ ಹಿಂದು-ಮುಸಲ್ಮಾನ ವ್ಯಕ್ತಿ-ಸಂಸ್ಥೆಗಳೊಡನೆ ತುಂಬಾ ಸಂಬಂಧ ಬಂದವರಾದ ಶ್ರೀ. ಮೌಲ್ವಿ ಸಾಹೇಬರವರು, ಮುಂಬಯಿಯ ಕರ್ನಾಟಕ ಸಂಘದಲ್ಲಿ ನವೆಂಬರ ೨೬ ನೆಯ ತಾ. ನ ದಿನ ಒಂದು ಭಾಷಣವನ್ನಿತ್ತರು. ಅದರಲ್ಲಿ ಅವರು ಹೇಳಿದ ಹಲವಾರು ಮಾತುಗಳಲ್ಲಿ ಒಂದನ್ನಿಲ್ಲಿ ಉದಾಹರಿಸುವೆವು:—

"ಕಳೆದ ೧೦ ವರ್ಷಗಳಲ್ಲಿ ಮುಸಲ್ಮಾನ ಬಾಂಧವರು ಬಹಳ ಮಟ್ಟಿಗೆ ಮುಂದುವರಿದಿದ್ದಾರೆ. ಇನ್ನೂ ಅವರು ಹಿಂದುಳಿದರೆ ಅದಕ್ಕೆ ಹಿಂದುಗಳ ತಪ್ಪಲ್ಲ; ಮುಸಲ್ಮಾನರೇ ಅದಕ್ಕೆ ಹೊಣೆಗಾರರು. ಮುಸಲ್ಮಾನರಲ್ಲಿ ಮಹತ್ವಾಕಾಂಕ್ಷೆ ಮತ್ತು ಸಂಘಟನೆ ಇಲ್ಲದಿರುವದು ಕೆಲಮಟ್ಟಿಗೆ ಮುಸಲ್ಮಾನರು ಹಿಂದುಳಿಯಲು ಕಾರಣವೆಂದು ಹೇಳಬಹುದು. ಉರ್ದು ಶಾಲೆಗಳಿದ್ದುದೂ ಮುಸಲ್ಮಾನರು ಹಿಂದೆಬೀಳಲು ಒಂದು ಕಾರಣವಾಗಿದೆಂದು ನನ್ನ ಅಭಿಪ್ರಾಯ. ಕರ್ನಾಟಕದಲ್ಲಿ ನೂರಕ್ಕೆ ೫೦ ರಷ್ಟು ಮುಸಲ್ಮಾನ ವಿದ್ಯಾರ್ಥಿಗಳು ಮನೆಗಳಲ್ಲಿ ಅಚ್ಚಗನ್ನಡ ಮಾತಾಡುತ್ತಾರೆ. ಉಳಿದ ೫೦ ರಷ್ಟು ವಿದ್ಯಾರ್ಥಿಗಳು ಕನ್ನಡ ಮತ್ತು ಉರ್ದು ಭಾಷೆಯಾಡುವರು. ಆದರೆ ಇವರಾಡುವ ಉರ್ದುಭಾಷೆಯು ಉತ್ತರ ಹಿಂದುಸ್ಥಾನದಲ್ಲಿಯ ಸುಸಂಸ್ಕೃತ ಉರ್ದುವಲ್ಲ; ಆದರೆ ಸ್ಥಳೀಕ ಉರ್ದು. ಉರ್ದುಶಾಲೆಗಳಲ್ಲಿ ಶಿಕ್ಷಣಪಡೆವ ಮುಸಲ್ಮಾನ ವಿದ್ಯಾರ್ಥಿಗಳಿಗೆ ಉರ್ದು ಭಾಷೆಯಲ್ಲಿ ಬರೆದ ಗ್ರಂಥಗಳು, ಪಠ್ಯ ಪುಸ್ತಕಗಳು ತಿಳಿಯುವುದಿಲ್ಲ. ತಮಗೆ ಹೊಸದಾದ ಮತ್ತು ಭಾವೀ ಜೀವನದಲ್ಲಿ ಉಪಯೋಗ ಮಾಡಿಕೊಳ್ಳಲು ಬಾರದಂತಹ ಭಾಷೆ ಕಲಿಯಲು ಮುಸಲ್ಮಾನ ವಿದ್ಯಾರ್ಥಿಗಳ ವೇಳೆ ಮತ್ತು ಉತ್ಸಾಹಗಳು ಅತಿಯಾಗಿ ವ್ಯಯವಾಗುವವು. ಇಂಗ್ಲಿಷ್ ಶಾಲೆಗಳ ಕೆಳಗಿನ ಇಯತ್ತೆಗಳಲ್ಲಿ ಕನ್ನಡವೇ ಬೋಧಭಾಷೆಯಾಗಿರುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಶಾಲೆಗಳಿಗೆ ಸೇರುವುದೇ ದುಸ್ತರವಾಗುವುದು. ಕೋರ್ಟು ಕಚೇರಿಗಳ ಭಾಷೆ ಕನ್ನಡವಿದ್ದುದರಿಂದ ಮುಸಲ್ಮಾನ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು. ವ್ಯಾಪಾರಿ ಫರ್ಮುಗಳಲ್ಲಿಯೂ ಅವರಿಗೆ ತೊಂದರೆಯಾಗುತ್ತದೆ. ಅಲ್ಲಲ್ಲಿ ಲೋಕಲ್‌ಬೋರ್ಡಿನವರು ಮತ್ತು ಖಾಸಗಿ ಸಂಸ್ಥೆಗಳವರು ಆ್ಯಂಗ್ಲೋ-ವ್ಹರ್ನಾಕ್ಯುಲರ ಮಿಡಲ್-ಸ್ಕೂಲುಗಳನ್ನು ತೆರೆದಿದ್ದರೂ ಅವುಗಳಿಂದ ಮುಸಲ್ಮಾನ ವಿದ್ಯಾರ್ಥಿಗಳ

ಉಪಯೋಗವಿಲ್ಲ. ಕರ್ನಾಟಕದಲ್ಲಿ ಹುಬ್ಬಳ್ಳಿಯೊಂದರಲ್ಲಿ ಮಾತ್ರ ಆ್ಯಂಗ್ಲೊ-ಉರ್ದು ಹಾಯಸ್ಕೂಲ ಇದ್ದು ಅದರಿಂದ ಕರ್ನಾಟಕದಲ್ಲಿಯ ಮುಸಲ್ಮಾನರ ಆವಶ್ಯಕತೆಗಳು ಪೂರಯಿಸಲ್ಪಡಲಾರವು. ಕಾರವಾರ ಮತ್ತು ಬೆಳಗಾವಿ ಜಿಲ್ಲೆಗಳ ವಿದ್ಯಾರ್ಥಿಗಳು ಹುಬ್ಬಳ್ಳಿಗೆ ಬಂದು ವಿದ್ಯಾಭ್ಯಾಸ ಮಾಡುವುದು ಬಹಳ ವೆಚ್ಚದ್ದಾಗುವುದು. ಹಿಂದುಸ್ಥಾನದಲ್ಲಿಯ ಮುಸಲ್ಮಾನರನ್ನು ಐಕ್ಯದಿಂದಿಡಲು ಉರ್ದು ಕಲಿಯಲಿಕ್ಕೇ ಬೇಕೆಂಬುದು ಅವಶ್ಯವಿಲ್ಲ. ಪರಸ್ಪರರಲ್ಲಿ ಐಕಮತ್ಯವುಂಟಾಗುವಂತೆ ಮಾಡಲು ಭಾಷೆಯೊಂದೇ ಸಾಧನವಲ್ಲ. ಸಿಂಧದಲ್ಲಿ ಉರ್ದು ಶಾಲೆಗಳಿಲ್ಲದಿದ್ದರೂ ಅಲ್ಲಿನ ಮುಸಲ್ಮಾನರು ಹಿಂದುಸ್ತಾನದಲ್ಲಿಯ ಮುಸಲ್ಮಾನರಿಂದ ಸ್ವಲ್ಪಾದರೂ ದೂರವಿಲ್ಲ. ಹಿಂದುಸ್ತಾನದಲ್ಲಿಯ ಬಹಳ ಸ್ವಲ್ಪ ಜನ ಮುಸಲ್ಮಾನರಿಗೆ ಅರಬಿ ಮತ್ತು ತುರ್ಕಿ ಭಾಷೆಗಳು ಬರುತ್ತವೆ. ಆದರೂ ಅರಬಸ್ತಾನ-ತುರ್ಕಸ್ತಾನಗಳಲ್ಲಿಯ ಮುಸಲ್ಮಾನರಿಗೆ ಅವಶ್ಯಬಿದ್ದಾಗೆಲ್ಲ ನಾವು ಸಹಾಯ ಸಹಕಾರ ಮಾಡುತ್ತಲೆ ಬಂದಿರುವೆವು."

ಮೌಲ್ವಿ ಸಾಹೇಬರವರ ಮಾತುಗಳು ಮುತ್ತಿನಂತಹವು, ಅವರ ಮನೋಧೈರ್ಯವನ್ನೂ ಉದಾರವಿಚಾರಗಳನ್ನೂ ಪ್ರದರ್ಶಿಸುವವು. ಇಂದಿಲ್ಲ,ನಾಳೆ, ತಿಳಿವಳಿಕೆಯುಳ್ಳ ಮುಸಲ್ಮಾನರು ಇವನ್ನು ಒಪ್ಪಿಯೆ ಒಪ್ಪುವರು. ಆಗಲೆ ಕರ್ನಾಟಕದ, ಅದೇಕೆ ಭರತಖಂಡದ ಹಿಂದೂ-ಮುಸಲ್ಮಾನರ ಶಿಕ್ಷಣದ ತೊಡಕು ಬಿಡುವುದು.

ಅಭಿನಂದನೀಯ ದಾನ:— ನವಲಗುಂದದ ಹತ್ತರದ ಮೂಡಲಗಿ ಗ್ರಾಮದ ನಾಗರಿಕರಾದ ಶ್ರೀ. ಕೃಷ್ಣಾಜಿ ಹಣಮಂತ ದೇಶಪಾಂಡೆಯವರು ತಾ. ೯-೧೧-೩೪ ನೆಯ ದಿನ ಸ್ವರ್ಗಸ್ಥರಾದರು. ಅವರು ೮-೧೧-೩೪ ನೆಯ ದಿನ ಬರೆದಿಟ್ಟ ತಮ್ಮ ಮೃತ್ಯುಪತ್ರದಲ್ಲಿ ಕನ್ನಡದ ಅಭ್ಯಾಸಿಗಳಿಗೆ ಉತ್ತೇಜನ ದೊರೆಯಲೆಂದು ೫೦೦ ರೂ. ಗಳನ್ನು ಸರಕಾರದ ವಶಕ್ಕೆ ಕೊಟ್ಟಿರುವರು. ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಯಲ್ಲಿಯ ಸರಕಾರಮಾನ್ಯ ಹೈಸ್ಕೂಲಿನಿಂದ ಕನ್ನಡ ವಿಷಯವನ್ನು ತೆಗೆದುಕೊಂಡು ಅದರಲ್ಲಿ ಎಲ್ಲಕ್ಕೂ ಹೆಚ್ಚು ಗುಣಗಳನ್ನು ಪಡೆದ ವಿದ್ಯಾರ್ಥಿಗೆ ಆ ಹಣದ ಮೇಲಿನ ಬಡ್ಡಿಯನ್ನು ಪಾರಿತೋಷಕವಾಗಿ ಕೊಡಲಾಗುವದು. ಈ ಸಂಗತಿಯು ಮುಂಬಯಿ ಸರಕಾರದ ೩-೮-೧೯೩೪ ರ ಗ್ಯಾಜೆಟ್ಟಿನಲ್ಲಿ ಪ್ರಕಟವಾಗಿದೆ. ಬಹುಮಾನದ ರಕಮು ಸು. ೧೮॥ ರೂ.ಯಾಗುವುದು. ಜಾತಿಮತಗಳನ್ನು ನಿರ್ದೇಶಿಸದೆ ಕೇವಲ ಕನ್ನಡದ ಪ್ರೇಮದಿಂದ ಈ ಬಗೆಯ ದಾನವನ್ನು ಮಾಡಿದುದು ಅಪೂರ್ವವು. ಇಂತಹ ಉದಾಹರಣೆಗಳು ಇನ್ನೂ ಹೆಚ್ಚಲಿ.

ಜಯಕರ್ನಾಟಕ

ವಾರ್ಷಿಕ ಚಂದಾ (ಅಂಚೆಯ ವೆಚ್ಚ ಸೇರಿ) ಒಳದೇಶ ೪-೮-೦; ಪರದೇಶ ೧೧ ಶಿಲಿಂಗು

ಅರ್ಧವಾರ್ಷಿಕ—ಒಳದೇಶ ೨-೪-೦; ಪರದೇಶ ೫ ಶಿಲಿಂಗು; ಬಿಡಿಸಂಚಿಕೆ ೦-೬-೦.

ವ್ಹಿ. ಪಿ. ವೆಚ್ಚ ಬೇರೆ

'ಜಯಕರ್ನಾಟಕ'ವು ಪ್ರತಿ ತಿಂಗಳ ಮೊದಲನೆಯ ವಾರದಲ್ಲಿ ಪ್ರಕಟವಾಗುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಲು ಬರುವುದು. ಚಂದಾಹಣವನ್ನು ಮುಂಚಿತವಾಗಿಯೇ ಕಳಿಸಬೇಕು. ಇಲ್ಲವೆ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಚಂದಾ ಅವಧಿ ಮುಗಿಯುವ ಮೊದಲು ಒಂದು ತಿಂಗಳು ಚಂದಾದಾರರಿಗೆ ತಿಳಿಸಲಾಗುವುದು. ಪತ್ರಿಕೆ ಬೇಡಾದವರು ಹಾಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ವರ್ಷದ ಚಂದಾ ಹಣಕ್ಕಾಗಿ ವ್ಹಿ. ಪಿ. ಯನ್ನು ಕಳಿಸಲಾಗುವುದು. ಬೇಡಾದವರು ಮುಂಚಿತ ತಿಳಿಸುವುದರ ಆಗತ್ಯದ ಕಡೆಗೆ ಚಂದಾದಾರರ ಲಕ್ಷ್ಯವನ್ನು ಎಳೆಯುತ್ತೇವೆ. ಯಾಕೆಂದರೆ ಅದರಿಂದ ವ್ಯರ್ಥ ವ್ಹಿ. ಪಿ. ವೆಚ್ಚಕ್ಕೆ ಗುರಿಯಾಗುವುದು ನಮಗೆ ತಪ್ಪುವುದು. ಪತ್ರಿಕೆ ಬಾರದಿದ್ದವರು ಆ ತಿಂಗಳ ೧೫ ನೆಯ ತಾರೀಖಿನೊಳಗೆ ತಿಳಿಸಬೇಕು. ಮುಂದಿನ ತಕರಾರುಗಳಿಗೆ ನಾವು ಹೊಣೆಗಾರರಲ್ಲ.

—ವ್ಯವಸ್ಥಾಪಕ

ಜಯಕರ್ನಾಟಕ ಗ್ರಂಥಮಾಲೆ

ಗ್ರಂಥಮಾಲೆಗೆ ೩ ವರ್ಷಗಳು ತುಂಬಿ, ನಾಲ್ಕನೆಯ ವರ್ಷದಲ್ಲಿ ಅದು ಹೆಜ್ಜೆಯಿಟ್ಟಿದೆ. ಸರಸ, ಸುಲಲಿತ, ಮನೋರಂಜಕ, ವಿನೋದಾತ್ಮಕ, ಉಪಯುಕ್ತ, ಪ್ರೌಢ ವಿಷಯಗಳ ಮೇಲೆ ಹಲವು ಪುಸ್ತಕಗಳನ್ನು ಕನ್ನಡಿಗರಿಗೆ ಸಲ್ಲಿಸಲಾಗುವುದು.

ಕ್ರಾ. ೧/೮ ಆಳತೆಯ ಸು. ನೂರಾಇಪ್ಪತ್ತು ಪುಟಗಳುಳ್ಳ ೬ ಗ್ರಂಥಗಳು ಚಂದಾದಾರರ ಕೈಸೇರುವವು. ವಾರ್ಷಿಕ ಚಂದಾ ೪೦. ವೆ. ಸೇರಿ **ರೂ. ೩-೪-೦. ಜಯಕರ್ನಾಟಕದ ಚಂದಾದಾರರಿದ್ದವರಿಗೆ ೩-೦-೦ ಮಾತ್ರ.**

ಈಗ ಗ್ರಂಥಮಾಲೆಯ ಚಂದಾದಾರರಲ್ಲದವರಿಗೆ ಅಂಚೆಯ ವೆಚ್ಚ ಬೇರೆ. ನಡೆಯುವ ಮತ್ತು ಮುಂದಿನ ವರುಷದ ಚಂದಾದಾರರಾಗಬಹುದು. ಆದರೆ ಹಿಂದಿನ ಪ್ರಕಟನೆಗಳ ಬಗ್ಗೆ ಚಂದಾಸೌಲಭ್ಯವಿಲ್ಲ. ಇಂದಿನ ಚಂದಾದಾರರೂ ಕೂಡ ಹಿಂದಿನ ಪುಸ್ತಕಗಳ ಬೆಲೆಯನ್ನೂ ಅಂಚೆಯ ವೆಚ್ಚವನ್ನೂ ಸಹಿಸಬೇಕಾಗುವುದು.

ಪ್ರತಿ ಮನೆಯಲ್ಲಿಯೂ ವಾಚನಾಲಯದಲ್ಲಿಯೂ ಸಂಗ್ರಾಹ್ಯವಾದ ಗ್ರಂಥಗಳು

ಮುಂಚಿನ ಪ್ರಕಟನೆಗಳು

ಹರಟೆಗಳು: ಶ್ರೀ ಬೇಂದ್ರೆಯವರು ಬರೆದ ೫ ಹರಟೆಗಳು; ಪ್ರೊ. ಗೋಕಾಕ ಅವರ 'ಯುಗಾಂತರ' ಎಂಬ ಹಾಸ್ಯಪ್ರಬಂಧ ಸಹಿತ. ೦-೧೦-೦

ಅದೇನೆ ಇರಲಿ: ನೈಜಾಂ ಕರ್ನಾಟಕದ ಶ್ರೀ. ಮನ್ಸಬ್ದಾರರು ಬರೆದ ಸಾಮಾಜಿಕ ನಾಟಕ. ೦-೪-೦

ದರಿದ್ರನಾರಾಯಣ: ಪ್ರೊ. ಜಾಗೀರದಾರ ರಂಗಾಚಾರ್ಯರು ಬರೆದ ಸಾಮಾಜಿಕ ನಾಟಕ. ೦-೧೦-೦

ಜೀವನಸಂಗೀತ: ೧೪ ಲಾವಣಿಗಳು. ೦-೧೦-೦

ಮೂರನೆಯ ವರ್ಷದ ಪ್ರಕಟನೆಗಳು

ಮಾವಿನ ತೋಪು: ಶ್ರೀಮಾನ್ ಹ. ಪೀ. ಜೋಶಿ ಬಿ. ಎ. ಅವರು ಬರೆದ ಸಾಮಾಜಿಕ ಕಾದಂಬರಿ. ೦-೧೦-೦

ತರಂಗಿಣಿ: ಶ್ರೀ. ಟೇಂಗ್ಸೆ ಗೋವಿಂದರಾಯರು ಬರೆದ ಕಾವ್ಯಮಯ ನಾಟ್ಯಚಿತ್ರ. ೦-೬-೦

ಬಂಗಾರದ ಡಾಬು: ಶ್ರೀಮಾನ್ ಕೆ. ಗೋಪಾಲಕೃಷ್ಣ ರಾಯರ ಕಥಾಸಂಗ್ರಹ. ೦-೧೦-೦

ಉದಯರಾಗ: ಶ್ರೀ. ಅ. ನ. ಕೃಷ್ಣರಾಯರು ಬರೆದ ಸಾಮಾಜಿಕ ಕಾದಂಬರಿ. ೦-೧೨-೦

ರಾಜವಲ್ಲಭ: ಶ್ರೀ. ಹ. ಪೀ. ಜೋಶಿ ವಿರಚಿತ ಸಂಗೀತ ಪೌರಾಣಿಕ ನಾಟಕ. ೦-೧೦-೦

ಕೆಲವು ನೀಳ್ಗತೆಗಳು: ಹೆಸರು ಪಡೆದ ಕತೆಗಾರರ ಆಯ್ದ ಕತೆಗಳು. ೦-೧೦-೦

ಮುಲ್ಲಿಗೆದಂಡೆ: (ಹಳ್ಳಿವಾಡಿನ ಗೃಹಿಣೀಗೀತಗಳು) ಸಂಗ್ರಾಹಕರು: ಶ್ರೀ. ಕಾಪಸೆ ರೇವಪ್ಪನವರು. ಸಾದಾಪ್ರತಿ ೦-೧೨-೦ ಕ್ರೇವರವೇಟ ಕಾಗದದ ಕ್ಯಾಲಿಕೋ ಹೊದಿಕೆಯ ಪ್ರತಿಗೆ ೧-೮-೦

ನಾಲ್ಕನೆಯ ವರ್ಷದ ಪ್ರಕಟನೆಗಳು

ಪರಿಣೀತಾ: ವಿಶ್ವವಿಖ್ಯಾತ ವಂಗ ಕಾದಂಬರೀಕಾರರಾದ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಅತ್ಯಂತ ರಸಭರಿತ ಕಾದಂಬರಿ. ಶ್ರೀ. ಗುರುನಾಥ ಜೋಶಿಯವರು ಅನುವಾದಿಸಿರುವರು. ೦-೧೦-೦

ಹೂಬಿಸಿಲು: ಸೌ॥ ಶ್ಯಾಮಲೆಯವರ ಸರಸ ಕಥಾಸಂಗ್ರಹ. ಶ್ರೀ. ಆನಂದಕಂದರ ಮುನ್ನುಡಿಯೊಡನೆ. ೦-೧೦-೦

ಸಾಲುದೀಪ: ಶ್ರೀಮಾನ್ ಜೈನೇಂದ್ರ ಕುಮಾರರ ಆಯ್ದ ಕತೆಗಳು. ಶ್ರೀ. ಗುರುನಾಥ ಜೋಶಿಯವರಿಂದ ಸರಸ ಕನ್ನಡದಲ್ಲಿ ಅನುವಾದಿಸಲ್ಪಟ್ಟವೆ. ೧-೦-೦

ಮುಂಬಯಿ ವಿದ್ಯಾಖಾತೆಯವರ ಮನ್ನಣೆಯನ್ನು ಪಡೆದ ನಮ್ಮ ಪ್ರಕಟನೆಗಳು

೧ ಉದಯರಾಗ ೨ ಮುಲ್ಲಿಗೆದಂಡೆ ೩ ಜ. ಕ. ಸಾಹಿತ್ಯ... ೪ ತರಂಗಿಣಿ ೫ ಅದೇನೆ ಇರಲಿ ೬ ಪರಿಣೀತಾ ೭ ಜೀವನಸಂಗೀತ ೮ ರಾಜವಲ್ಲಭ ೯ ಬಂಗಾರದ ಡಾಬು ೧೦ ದರಿದ್ರನಾರಾಯಣ

ರಾಜರಹಸ್ಯ ಶ್ರೀ. ರಾ. ನ. ಮಳಗಿಯವರು ಬರೆದ ಅದ್ಭುತರಸಪೂರ್ಣವಾದ ಈ ಕಾದಂಬರಿಯ ೧ನೆಯ ಭಾಗವು ಸಿದ್ಧವಾಗಿದೆ. ೦-೧೨-೦


ಜಯಕರ್ನಾಟಕದ ವಿಜಯನಗರ ವಿಶೇಷಾಂಕ ಸಾಹಿತ್ಯೋತ್ಸವ ವಿಜಯನಗರದ ಸ್ಮಾರಕೋತ್ಸವ ಕಾಲದಲ್ಲಿ ಸಾಹಿತ್ಯೋತ್ಸವದ ಅಧ್ಯಕ್ಷರಾದ ಪ್ರೊ. ಬಿ. ಎಂ. ಶ್ರೀಕಂಠಯ್ಯನವರ ಹಸ್ತದಿಂದ ಪ್ರಕಾಶಿತವಾದ ಈ ಸಂಚಿಕೆಯ ಪ್ರತಿಗಳೆಲ್ಲ ತೀರಲು ಬಂದಿವೆ. ೦-೬-೦

ಹುಬ್ಬಳ್ಳಿಯ ನಮ್ಮ ಏಜಂಟರು

ಎಂ. ಆರ್. ಬೆಳ್ಳೇರಿ
ಕರ್ನಾಟಕ ಬುಕ್‌ಡಿಪೊ,
ಹುಬ್ಬಳ್ಳಿ.



ಕುಟುಂಬದಲ್ಲಿಯ ಸರ್ವಮಂಡಳಿಗೆ
ಬಾಲಕರ ದೆಶೆಯಿಂದ — ಬಾಲಜೀವನ
ಸ್ತ್ರೀಯರ ರೋಗದ ಮೇಲೆ.. ಅಶೋಕಾರಿಷ್ಟ
ಶಕ್ತಿವರ್ಧಕ .... ಚ್ಯವನಪ್ರಾಶ್ಯಾವಲೇಹ
ನಿತ್ಯೋಪಯೋಗಿ .... ಸ್ವಾದಿಷ್ಟ ಪಾಚಕಚೂರ್ಣ
ಶ್ರೀ ಧೂತಪಾಪೇಶ್ವರ, ಪನವೇಲ, ಲಿಮಿಟೆಡ್
ಪನವೇಲ (ಕ-ಲಾಬಾ)


BUILT TO LAST
ಇಕೊಳ್ಳಿ ಹೊಸ "ವೆಸ್ಟ್ ಎಂಡ್" ಅಲಾರ್ಮ ಟೈಂಪೀಸ — "ಇಂಡ್" ಹೆಸರಿನದು. ಚೊಕ್ಕಟ ಮಾಟ ಆಕೃತಿಯು ಇದರ ನುರಿತ ರಚನೆಯು, ಉತ್ತಮ ಕೈಗಾರಿಕೆಯ ನಿದರ್ಶನವಾಗಿದೆ. ಎಷ್ಟೋ ವರ್ಷ ತಾಳುವಂತೆ, ಸರಿಯಾಗಿ ಕೆಲಸ ಕೊಡುವಂತೆ ತಯಾರಿಸಲಾಗಿದೆ ಇದರ ಅಲಾರ್ಮ ಗಂಟೆ ನಿಂತು ನಿಂತು ಬಿಟ್ಟೂ ಬಿಡದೆ ಬಾರಿಸಬಲ್ಲದು; ನಂಬಲರ್ಹ. "ಇಂಡ್" ಕೊಂಡುಕೊಂಡರೆ, ಬೆಲೆಗೆ ತಕ್ಕ ಫಲ.
ಎಚ್ಚರಿಕೆ! ನಿಜವಾದ'ಇಂಡ್' ಅಲಾರ್ಮಗಳ ಮೇಲೆಲ್ಲಾ 'ವೆಸ್ಟ್ ಎಂಡ್ ವಾಚ್ ಕಂ.'ಯ ಪೂರ್ಣ ಹೆಸರಿದೆ.
ದಿ 'ಇಂಡ್' ಅಲಾರ್ಮ
(ಬಿಟ್ಟೂ ಬಿಡದೆ ಮತ್ತು ನಿಂತುನಿಂತು ಬಾರಿಸುವುದು)
ಅರೆಬಿಕ್ ಡಾಯಲ್....ರೂ.೭
ರೇಡಿಯಂ .... ರೂ.೮
ಕ್ಯಾಟಲಾಗು ಉಚಿತ
ವೆಸ್ಟ್ ಎಂಡ್ ವಾಚ್ ಕಂಪನಿ:
ಮುಂಬಯಿ, ಕಲ್ಕತ್ತೆ
WEST END "IND" ALARM
12 1 2 3 4 5 6 7 8 9 10 11
IND
WEST END WATCH Co
CONTINUOUS INTERMITTENT ALARM
WEST END WATCH Co
BOMBAY CALCUTTA